M. 3618

ನವಯುಗ

ಸಂಪುಟ ೩೪ | ಉಡುಪಿ, 2—6—1955 | ಸಂಚಿಕೆ ೩೮

VOL. 34 | NO. 38

ಸುಧಾರಣೆಯ ನಾಗಾಲೋಟ

ಹೋಟೆಲು ಮಾಲಕನ ಬಳಿಗೆ ಮಾಣಿ ಬಂದು, 'ಈಗ ಮತ್ತೆ ಮತ್ತು ಮಂದಿ ಊಟಕ್ಕೆ ಬಂದಿದ್ದಾರೆ ಸಾರು ಮುಂತಾದವು ಸಾಕಾಗುತ್ತದೋ ಇಲ್ಲವೋ' ಎಂದು ಹೇಳಿದ.

ಅದಕ್ಕೆ ಯಜಮಾನ 'ಬಕೆ ಸಾಕಾಗುವುದಿಲ್ಲ. ಹೋಗ, ಸಾರಿಗೆ ಎರಡು ತಂಬಿಗೆ ಬಿಸಿ ನೀರು, ಒಂದಷ್ಟು ಬಾರದ ಸುಡಿ, ಮತ್ತಿಷ್ಟು ಉಮ್ಮಡಾಕು ಅವರಿಗೆ ಬೇಕಾದಷ್ಟಾಗುತ್ತದೆ' ಎಂದು ಹೇಳಿ, ಕಳಿಸಿದ'

ಈಗಿನದನ್ನು ಸುಧಾರಣೆಯ ಯುಗವೆಂದು ನಾವು ಕರೆದರೆ ತಪ್ಪಾಗಲಾರದು. ಏಕೆಂದರೆ, ಪ್ರತಿನಿತ್ಯವೂ ಪ್ರಗತಿಸರವಾದ ಸಮಾಜವನ್ನು ಕಟ್ಟುವ ದೃಢ ನಿರ್ಧಾರದಿಂದ ಅನೇಕ ಬಗೆಯ ಪ್ರಯತ್ನಗಳು ಕೈಗೊಳ್ಳಲ್ಪಡುವುದನ್ನು ನಾವು ಕಾಣುತ್ತೇವೆ. ಸ್ವಾತಂತ್ರ್ಯೋತ್ತರದಲ್ಲಿ ನಮ್ಮ ರಾಜ್ಯಗಳ ಮತ್ತು ಕೇಂದ್ರದ ಶಾಸನ ಸಭೆಗಳು ಸುಧಾರಣೆಯ ಗುರಿಯನ್ನಿಟ್ಟುಕೊಂಡು ರಚಿಸಿದ ಶಾಸನಗಳೂ ನಮ್ಮನ್ನು ಈ ನಿಶ್ಚಯಕ್ಕೆ ಮುಟ್ಟಿಸುತ್ತವೆ. ನಮ್ಮ ಓಟುಗಳನ್ನು ಪಡೆದು ಶಾಸನಕರ್ತರಾಗಿ ಮೆರೆಯುವ ಮಹಾನುಭಾವರು ನವಭಾರತದ ಅಡಿಗಲ್ಲುಗಳಂತಿರುವ ಶಾಸನಗಳ ನಿರ್ಮಾಣಕ್ಕೆ ಬಹಳ ಮಹತ್ವ ಕೊಡುತ್ತಿರುವಂತೆ ಭಾಸವಾಗುತ್ತದೆ. ಎಲ್ಲ ಬಗೆಯ ಸುಧಾರಣೆಗಳನ್ನೂ ಒಮ್ಮೆಲೇ ಮಾಡಿ ಮುಗಿಸುವ ಹಂಬಲ. ಎಲ್ಲ ದೇಶದ "ಪ್ರಗತಿಶೀಲ ಶಾಸನ"ಗಳೂ ನಮ್ಮಲ್ಲಿ ಅಳವಡಿಸಲ್ಪಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಅವರು ತುಂಬಿರುವಂತೆ ತೋರುತ್ತದೆ.

ಶಾಸನಕರ್ತರ ಮತ್ತು ಸಲಹೆಗಳ ಆತುರದ ಪರಿಣಾಮವಾಗಿ ಜನರ ಮುಂದೆ ಸುಧಾರಣೆಯ ನೋಗು ಹಾಕಿಕೊಂಡ ಅನೇಕಾನೇಕ ಶಾಸನಗಳು ಪ್ರತಿವರ್ಷ ಕಾಣಿಸಿಕೊಳ್ಳುತ್ತವೆ. ಈ ಶಾಸನಗಳಲ್ಲಿ ಪ್ರತಿಯೊಂದು ಶಬ್ದಕ್ಕೂ ಒಂದು ನಿಶ್ಚಿತ ಅರ್ಥ ಅಥವಾ ವ್ಯಾಖ್ಯೆ ಇರುತ್ತದೆ. ಅದನ್ನು ಅನ್ವಯಿಸಿ ನ್ಯಾಯಸ್ಥಾನಗಳು ವಿವಾದ ಪ್ರಕರಣಗಳಲ್ಲಿ ತೀರ್ಪು ಹೇಳಿದಾಗ ಶಾಸನ ಕರ್ತರು ತಮ್ಮ ಉದ್ದೇಶ ತೀರ್ಪು ಹೇಳಿದ ನ್ಯಾಯಾಧೀಶರು ಅರ್ಥವಿಸಿಕೊಂಡುದಕ್ಕಿಂತ ಭಿನ್ನವಾದುದೆಂದು ಹೇಳುತ್ತಾ ತೀರ್ಪುಗಳನ್ನು ಮಂಡಿಸುತ್ತಾರೆ. ಹೀಗೆ ಹೊಸ ಸುಧಾರಣೆಯ ಶಾಸನಗಳು ಮತ್ತು ಅವುಗಳಿಗೆ ರಂದ ತೀರ್ಪುಗಳು ಸಂದಲದಲ್ಲಿ ಮುಳುಗೇಳುತ್ತಿರುವುದೇ ಜನರ ಪ್ರತಿನಿಧಿಗಳ ಕೆಲಸವಾಗುತ್ತದೆ. ಜನರ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಮಾಡುವ ಭೀಷಣ ಭಾಷಣಗಳಿಂದ ಮನೋರಂಜನೆಯನ್ನು ಪಡೆಯುವ ಜನರನ್ನು ಬಿಟ್ಟರೆ ಉಳಿದ ಸಾಮಾನ್ಯರಿಗೆ ಈ ಶಾಸನಗಳು ದಿಗ್ಭ್ರಮೆ ಹಿಡಿಸುತ್ತವೆ; ಕಾಯಿದೆ ಪಂಡಿತರಿಗೆ ಹೊಸ ಶಾಸನಗಳ ಮನನವು ಬೇಸರ ಬರಿಸಿ, ಮಲಗಿಯದ ಕೆಲಸವೆನಿಸುತ್ತವೆ

ಹೊಸ ಶಾಸನಗಳು ಮಾಡುವ ಸುಧಾರಣೆಯಾದರೂ ಏನು? ಹರಿಜನರಿಗೆ ದೇವಾಲಯ ಪ್ರವೇಶ; ಹಿಂದುಗಳಲ್ಲಿ ಅಂತರ್ಜಾತೀಯ ವಿವಾಹ ದಾಂಪತ್ಯ ವಿಚ್ಛೇದನದ ಹಕ್ಕು, ಗಂಡಸಿಗೆ ಬಿಡುಗಡೆಹೊಂದಿದ ಪೆಂಡತಿಯಿಂದ ಜೀವನಾಧಾರ ಇತ್ಯಾದಿ ಇತ್ಯಾದಿ. ಇವುಗಳನ್ನು ಜನರು ಸ್ವೀಕರಿಸಲು ಸಿದ್ಧರಿದ್ದಾರೋ ಏನೆಂದು ಜನರ ಪ್ರತಿನಿಧಿಗಳಾದವರು ವಿಚಾರಿಸಲು ಹೋಗುವುದಿಲ್ಲ. ಹರಿಜನರು ದೇವಾಲಯ ಪ್ರವೇಶಿಸುವುದಕ್ಕೆ ಕಾನೂನು ಪ್ರಕಾರದ ಅಡ್ಡಿ ಇದ್ದರೆ ಮಾತ್ರ ಅದನ್ನು ತೆಗೆಯಬೇಕು ಎಂದೇನೂ ಅವರು ಆಲೋಚಿಸುವುದಿಲ್ಲ ಶಾಸನಗಳು ಮಾಡಬಹುದಾದ ಸುಧಾರಣೆಗೊಂದು ಮಿತಿ ಇದೆ ಎಂದೂ ಅವರು ತಿಳಿಯುವುದಿಲ್ಲ. ಜನರ ಒಟ್ಟಿಗೆ ದೊರಕದ, ಅವರು ಮನ್ನಿಸದ, ಶಾಸನಗಳು ಹೆಸರಿಗಷ್ಟೇ ಉಳಿಯುತ್ತವೆ ಎಂಬುದನ್ನೂ ಅವರು ಗಮನಿಸುವುದಿಲ್ಲ. ನಮ್ಮ ಕಾನೂನು ಗ್ರಂಥಗಳಲ್ಲಿ ಎಷ್ಟು ಹೆಚ್ಚು ಶಾಸನಗಳು ಸೇರಿಸಲ್ಪಟ್ಟವೋ ಅಷ್ಟು ಮಟ್ಟಿಗೆ ಸಮಾಜದ ಸುಧಾರಣೆ ಮಾಡಿದಂತೆ, ಮತ್ತು ಪ್ರಗತಿವರವಾದಂತೆ ಎಂದವರು ಭಾವಿಸಿರುವರೋ ಏನೋ, ಗೊತ್ತಾಗುವುದಿಲ್ಲ. ಹಳೆಯ ಕಾಲದಿಂದ ನಡೆದು ಬಂದ ಎಲ್ಲ ಪದ್ಧತಿಗಳನ್ನೂ "ಬಂಧನ"ವೆಂದು ಬಗೆದು ಅ ಕಟ್ಟನ್ನು ಪರಿದೊಗೆಯಲು ಶಾಸನಗಳ ರಚನೆ ಮಾಡುವ ಈ ಶೂರರು ಜನರ ಮನೋಭಾವನೆಯಲ್ಲಿ ಬದಲಾವಣೆಯಾಗ ಬೇಡವೆ? ಎಂಬ ಮೂಲಭೂತ ಪ್ರಶ್ನೆಯನ್ನು ಉತ್ತರಿಸುವುದಿಲ್ಲ. ಆ ಗೊಡವೆಯೇ ಅವರಿಗೆ ಪ್ರಾಯಶಃ ಬೇಡ.

ಇಷ್ಟೆಲ್ಲ ಶಾಸನಗಳಾಗಿವೆ — ಅವುಗಳ ಉದ್ದೇಶ ಮತ್ತು ಪ್ರಯೋಜನದ ಕುರಿತು ಜನರು ಏನನ್ನು ತಿಳಿದುಕೊಂಡಿದ್ದಾರೆ ಎಂದು ಶಾಸನಕರ್ತರು ನೋಡುತ್ತಿದ್ದರೆ, ಸುಧಾರಣೆಯ ನಾಗಲೋಟಕ್ಕೆ "ಬ್ರೇಕು" ಹಾಕಬೇಕಾದ ಆವಶ್ಯಕತೆ ಇದೆ ಎಂದು ಎಲ್ಲರಿಗೆ ತೋರದಿರುತ್ತಿರಲಿಲ್ಲ. ಹೊಸ ಹೊಸ ಶಾಸನಗಳ ಹೊಡೆತದಿಂದ ಸಾಮಾನ್ಯ ಪ್ರಜೆ ಈಗ ನಜ್ಜುಗುಜ್ಜಾಗಿ ಹೋಗಿದ್ದಾನೆ ಈ ಶಾಸನಗಳಾದರೂ ಆರೆಬೆಂದ ಅನ್ನದಂತೆ ಅವಸರದಿಂದ ತಯಾರಿಸಲ್ಪಟ್ಟಿದ್ದು, ಅವುಗಳಲ್ಲಿ ಸಾದಕಾಂಶಗಳಿಗಿಂತಲೂ ಬಾಧಕಾಂಶಗಳೇ ಹೆಚ್ಚು ಶಾಸನಗಳ ಚಾಲದಲ್ಲಿ ಬಿದ್ದ ಸಾಮಾನ್ಯ ಪ್ರಜೆಗೆ ತನ್ನ ನಡತೆ ಹೇಗಿದ್ದರೆ ಶಾಸನಾನುಸಾರ ಸರಿಯಾದೀತೆಂದು ತಿಳಿದಿರದಷ್ಟು ಈ ಶಾಸನಗಳು ಜಟಿಲವಾಗಿವೆ, ಮತ್ತು ಪರಸ್ಪರ ವಿರೋಧಾಭಾಸವನ್ನು ಪ್ರಕಟಪಡಿಸುತ್ತವೆ ಇಂದು ಜ್ಯಾರಿಯಲ್ಲಿದ್ದ ಶಾಸನಕ್ಕೆ ನಾಳೆ ತಿದ್ದುಪಡಿಯಾಗುವುದರಿಂದ, ಇದತ್ತು ಕಷ್ಟನಷ್ಟು ದೂಷಿಸಿಕೊಂಡುದನ್ನು ನಾಳೆ ಮರೆತು, ಹೊಸ ಆವರಣಕ್ಕೆ ಹೊಂದಿಕೊಳ್ಳಬೇಕಾಗುತ್ತದೆ.

ಸುಧಾರಣೆಯ ಈ ಭಯಂಕರ ವ್ಯಾಧಿಯು ನಿಜವಾಗಿಯೂ ಸಾಮಾನ್ಯ ಪ್ರಜೆಯನ್ನು ಕಳವಳಕ್ಕೆ ಗುರಿಮಾಡಿದೆ ಅವನಿಗೆ ಇಷ್ಟು ಹೆಚ್ಚು ಶಾಸನಗಳ ಬೇಕಾಗಿಲ್ಲ — ಪ್ರತಿಯೊಂದೂ ವರ್ತನೆಗೆ ಶಾಸನದ ಮಾದ್ರಿಯೊತ್ತುವ ಮಹತ್ವಾಕಾಂಕ್ಷೆಯೂ ತಿಳಿಸಿಗೆ ರುಚಿಸುವುದಿಲ್ಲ. ಇಷ್ಟು ಶಾಸನಗಳು ರೂಪಗೊಂಡವು—ಅವುಗಳಲ್ಲಿ ಅವನಿಗೆ ತಿಳಿದಿರುವ ಅಂಶವೆಷ್ಟು ಎಂಬುದನ್ನು ಯಾರಾದರೂ ಸಾಮಾಜಿಕ ಕಾರ್ಯಕರ್ತರು ಸಂಗ್ರಹಿಸಲು ಪ್ರಯತ್ನಿಸಿದರೆ ಇದು ಗೊಶಾಪ್ರದೀತು. ಗಾಂಧಿ, ನೆಹರೂಗಳಂಥ ಮಹಾ ಸುರುಪರ ಹೆಸರನ್ನೆ ಕೇಳಿಗೊತ್ತಿಲ್ಲದ ಜನರಿರುವ ಈ ಭಾರತದಲ್ಲಿ ದಿನಕ್ಕೊಂದರಂತೆ ಶಾಸನಾಗಿ ಬರುವ ಶಾಸನಗಳ ಹೊಲಬರಿತ "ಸರ್ವಜ್ಞ" ವಕೀಲರೂ ಸಿಗಲಿಕ್ಕಿಲ್ಲ. ಹೀಗಿರುತ್ತಾ ಸಾಮಾನ್ಯ ಪ್ರಜೆಯ ಪಾಡೇನು?

ಜನರ ಪ್ರತಿನಿಧಿಗಳು ಇಷ್ಟೆಲ್ಲ ಶಾಸನಗಳನ್ನು ಮಾಡುವುದರ ಅರ್ಥವಾದರೂ ಏನು? ನಿಜವಾಗಿ ನಮಗೆ ಈ ಶಾಸನಗಳೆಲ್ಲ ಬೇಕಾಗಿವೆಯೆ? ಅವುಗಳಿಲ್ಲದಿದ್ದರೆ ನಮಗೆ ನಿತ್ಯ ವ್ಯವಹಾರವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗಲು ಸಾಧ್ಯವಿಲ್ಲವೆ?—ಈ ಅಂಶವನ್ನು ಪ್ರತಿಯೊಬ್ಬನೂ ಪರ್ಯಾಲೋಚಿಸಬೇಕು. ಜನರ ಪ್ರತಿನಿಧಿಗಳೂ ಸರಕಾರದವರೂ ಹೆಚ್ಚು ಮಹತ್ವವನ್ನು ಈ ವಿಷಯಕ್ಕೆ ಕೊಡಬೇಕು. ಶಾಸನಗಳನ್ನು ರಚಿಸಿದ ಮಾತ್ರಕ್ಕೆ ಏನೂ ಆದಂತಾಗಲಿಲ್ಲ—ಅದನ್ನು ತಿಳಿದವರೇ ಇಲ್ಲದ ಬಳಿಕ ಶಾಸನಗಳಿಂದ ಏನುಪ್ರಯೋಜನ? ತಿಳಿಸಿ ಹೇಳುವವರಾದರೂ ಯಾರು? ಒಕ್ಕಲುಗಳನ್ನು ಎಬ್ಬಿಸಬಾರದೆಂದು ಶಾಸನ ಮಾಡಲಾಯಿತು—ಒಕ್ಕಲೆಬ್ಬಿಸುವುದು ಮಾತ್ರ ಅಲ್ಲಿಗೆ ನಿಲ್ಲಲಿಲ್ಲ. ಅಂಥದೊಂದು ಶಾಸನ ಬಂದಿದೆ ಎಂದು ಒಕ್ಕಲುಗಳಿಗೆ ಹೇಳಲು ಹೊರಟವರೂ ವಿರಳ! ನಮ್ಮ ನಿಜವಾದ ಪರಿಸ್ಥಿತಿ ಹೀಗಿರುವಾಗ ಶಾಸನಗಳ ಸುರಿ ಮಳೆ ಯಾವ ಹಿತವನ್ನೂ ತರಲಾರದು ಸಾಧ್ಯವಾದರೂ ಶಾಸನ ಮಾಡಿದರೆ, ಅದು ಸಮಾಜದ ಬಹುಜನರಿಗೆ ಹಿತವನ್ನು ಮಾಡಬೇಕು ಅವರಿಗದರ ಪ್ರಯೋಜನ ಹೊಳೆದಿಂಬೇಕು. ಆ ಅವಸರದ ಶಾಸನದಿಂದ ಅವಾಂತರವಾಗುವುದು. ತಪ್ಪು.

— ಕಾರ್ತಿಕೇಯ.

ಶಾಸನಗಳ ಮೂಲಕ ಸಮಾಜದ ಸುಧಾರಣೆಯನ್ನು ಮಾಡುವಾಗ ಪ್ರಚಲಿತ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಅದರ ಮೇಲೆ ನ್ಯಾಯವು ಬದ್ಧವಾದ ರೀತಿಯಲ್ಲಿ ಸುಧಾರಣೆಯನ್ನು ಅಳವಡಿಸಬೇಕಾಗುತ್ತದೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಬಹುಜನರ ಸಮ್ಮತಿಯೂ ಅದಕ್ಕೆ ಅವಶ್ಯವೆನಿಸುತ್ತದೆ. ಜನರು ತಮ್ಮಲ್ಲಿ ಅದನ್ನು ಬಹಳವಾಗಿ ಚರ್ಚಿಸಿಕೊಂಡು ಭವ್ಯ ಸ್ವಾಗತ ನೀಡಲು ಸಿದ್ಧರಿರಬೇಕಾಗುತ್ತದೆ.

—ಆಚಾರ್ಯ ಕೃಪಲಾನಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ
ವಿಶೇಷ ಸೌಕರ್ಯಗಳುಳ್ಳ ಸೇವಿಂಗ್ಸ್ ಬ್ಯಾಂಕಿನ
ವ್ಯವಸ್ಥೆ ಮಾಡಿರುವೆವು.

ಹೆಚ್ಚಿನ ಮಾಹಿತಿಗೆ
ನಿಮಗೆ ಸಮೀಪವಿರುವ 'ಸಿಂಡಿಕೇಟ್' ಬ್ಯಾಂಕಿನ' ಶಾಖೆಯಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S. India

ದಾಂಪತ್ಯ ವಿಚ್ಛೇದನದ ಹಕ್ಕು

ಹಿಂದು ವಿವಾಹ ಶಾಸನದ ಅನಿವಾರ್ಯ ಕೆಡುಕು

ತನ್ನ ಕೆಳದ ಅಧಿವೇಶನದಲ್ಲಿ ಸಂಸತ್ತು ಅಂಗೀಕರಿಸಿದ ಹಿಂದು ವಿವಾಹ ವಿಧೇಯಕಕ್ಕೆ ರಾಷ್ಟ್ರಾಧ್ಯಕ್ಷರ ಸಮ್ಮತಿಯೂ ದೊರೆತಿದೆ. ಹೀಗೆ ಹೊಸ ಶಾಸನವೊಂದು ಜಾರಿಗೆಬಂದಿದೆ. ಆದರೆ, ಇದರಷ್ಟು ವಿವಾದಾಸ್ಪದವಾದ ಶಾಸನವು ಬೇರೊಂದಿಲ್ಲವೆಂದು ಸಿರೀಕ್ಷಕರ ಸಾಮಾನ್ಯ ಅಭಿಪ್ರಾಯ. ಹಿಂದು ಶಾಸನಗಳನ್ನು ಕ್ರೋಢೀಕರಿಸುವ ಉದ್ದೇಶವನ್ನು ಸರಕಾರ ಇಟ್ಟುಕೊಂಡಿದೆ ಎಂದು ಗೊತ್ತಾದ ಗಳಿಗೆಯಿಂದ ದೇಶದಲ್ಲಿ ಬಹಳ ಸ್ವಾರಸ್ಯವಾದ ಚರ್ಚೆ ನಡೆದ ಅನೇಕ ನಿದರ್ಶನಗಳಿವೆ. ಸುಧಾರಕರು ಸರಕಾರದ ಕ್ರಮ ಸಾಕಷ್ಟು ಪ್ರಗತಿಶೀಲವೂ ಕ್ರಾಂತಿಕಾರಿಯೂ ಆಗಿಲ್ಲವೆನ್ನುತ್ತಾರೆ, ಅದೇ ಸಮಯದಲ್ಲಿ ಸಂಪ್ರದಾಯವಾದಿಗಳು ಸನಾತನ ಧರ್ಮಕ್ಕೆ ವಿರೋಧವಾಗಿ ಹೋಗುವಹವ್ಯಾಸವಿದೆಂದು ಖಂಡಿಸುತ್ತಾರೆ. ರಾಷ್ಟ್ರಾಧ್ಯಕ್ಷರ ಸಮ್ಮತಿಯಿಂದ ಹಿಂದು ವಿವಾಹ ಶಾಸನ ಜಾರಿಗೆ ಬಂದಿತೆಂದ ಮಾತ್ರಕ್ಕೆ ಈ ಅಭಿಪ್ರಾಯಗಳಿಗೆ ಇನ್ನು ಬೆಲೆ ಇಲ್ಲವೆಂದು ಹೇಳಲಾಗದು. ಶಾಸನಗಳನ್ನು ಯಾವ ಕಾಲಕ್ಕೂ ತಿದ್ದುವುದು ಸಾಧ್ಯವಷ್ಟೇ!

ಹಿಂದು ಶಾಸನಗಳ ಕ್ರೋಢೀಕರಣವನ್ನು ಮೂರು ಪ್ರತ್ಯೇಕ ಶಾಸನಗಳ ಮೂಲಕ ಮಾಡಲು ಸರಕಾರ ನಿರ್ಧರಿಸಿದುದಕ್ಕೆ ಅನುಕೂಲತೆಯ ದೃಷ್ಟಿಯೊಂದೇ ಕಾರಣವಲ್ಲ—ವಿರೋಧಕರ ಶಕ್ತಿ ಗುಂದಿಸಲು ಸಾಧ್ಯವೆಂದು ತೋರಿದುದರಿಂದಲೇ ಈ ಉಪಾಯ ಅನುಸರಿಸಲ್ಪಟ್ಟಿತು. ಹಿಂದು ವಿವಾಹ ಶಾಸನವು ಮುಖ್ಯವಾಗಿ ಮೂರು ಸಂಗತಿಗಳನ್ನು ಪ್ರಸ್ತಾಪಿಸುತ್ತದೆ. (೧) ಅದು ಹಿಂದುಗಳಲ್ಲಿ ಅಂತರ್ಜಾತೀಯ ವಿವಾಹವನ್ನು ಮನ್ನಿಸುತ್ತದೆ. "ಹಿಂದು" ಶಬ್ದದ ವ್ಯಾಖ್ಯೆಯು ಸಿಕ್ಖರು, ಜೈನರು ಮುಂತಾದವರನ್ನೊಳಗೊಳ್ಳುವಷ್ಟು ವ್ಯಾಪಕವಾಗಿದೆ ಎಂಬುದನ್ನಿಲ್ಲಿ ಗಮನಿಸಬೇಕು. (೨) ಅದು ಏಕಪತಿ—ಏಕ ಪತ್ನಿ ಪದ್ಧತಿಯನ್ನು ವಿಧಿಸುತ್ತದೆ. (೩) ಅದೇ ಸಮಯದಲ್ಲಿ ಈ ಶಾಸನವು ದಾಂಪತ್ಯ ವಿಚ್ಛೇದನದ ಹಕ್ಕುಗಳನ್ನು ಕೆಲವು ಕಠಿಣ ಪ್ರಸಂಗಗಳಲ್ಲಿ ವಿವಾಹಿತರಿಗೆ ಕೊಡುತ್ತದೆ.

ಸಾಮಾನ್ಯವಾಗಿ ಹೇಳುವುದಾದರೆ ದೇಶದಲ್ಲಿ ಮೊದಲಿನೆರಡು ಸುಧಾರಣೆಗಳ ಕುರಿತು ಯಾರೂ ವಿರೋಧ ಪ್ರಕಟಿಸುವುದಿಲ್ಲ. ಏಕ ಪತ್ನಿ—ಏಕ ಪತಿ ಪದ್ಧತಿಯು ನಮ್ಮ ಸಮಾಜಕ್ಕೆ ಹೊಸತಲ್ಲ; ಅಂತರ್ಜಾತೀಯ ವಿವಾಹಗಳ ವಿಷಯದಲ್ಲಿ ಸಹ ನಮ್ಮ ಸಮಾಜವು ಈಗ ಹೆಚ್ಚು ಹೆಚ್ಚು ಸಹನಶೀಲತೆಯನ್ನು ತೋರಿಸುತ್ತಿರುವುದು ಅನುಭವಸಿದ್ಧವಾದ ವಿಷಯ. ಆದರೆ, ದಾಂಪತ್ಯವಿಚ್ಛೇದನದ ಹಕ್ಕನ್ನು ವಿವಾಹಿತರಿಗೆ ಕೊಟ್ಟುದು ಮಾತ್ರ ಹಿಂದು ಸಂಸ್ಕೃತಿಯ ಬುಡಕಟ್ಟನ್ನೆ ಅಲುಗಾಡಿಸಿದಂತೆ ಎಂದು ಹೇಳಲಾಗುತ್ತದೆ. ಹೀಗೆ ವಿರೋಧಿಸುವವರು ಹಿಂದುಗಳಲ್ಲಿ ಮದುವೆಯು ಪಾಶ್ಚಾತ್ಯ ದೇಶಗಳ ಪದ್ಧತಿಯಿಂದ ಅನುಮೋದಿಸಿ ಬರುವುದಾದಂತೆ ಒಂದು "ಕರಾರು" ಆಗಿಲ್ಲ, ಅಜೀವನ ಗಟ್ಟಿಯಾಗಿ ಉಳಿಯುವ "ಪವಿತ್ರ" ಬಂಧನ ಅದು ಎಂದು ಹೇಳುತ್ತಾರೆ. ಆದುದರಿಂದ ದಾಂಪತ್ಯ ವಿಚ್ಛೇದನದ ಹಕ್ಕು ಹಿಂದು ಸಮಾಜದ ಅಧಃಪತನವನ್ನು ತರುತ್ತದೆ ಎಂದವರ ವಾದ.

ಸಂಸತ್ತಿನಲ್ಲಿ ಈ ಕುರಿತು ಚರ್ಚೆ ನಡೆದಿದ್ದಾಗ ವಿರೋಧಕರ ಮತ್ತು ಸುಧಾರಕರ ಅಭಿಪ್ರಾಯಗಳು ಚೆನ್ನಾಗಿ ವ್ಯಕ್ತವಾಗಿದ್ದವು. ಹಿಂದು ಮಹಾಸಭೆ ಮುಂತಾದ "ಜಾತೀಯ" ಸಂಗಡಗಳ ಪ್ರಭೃತಿಗಳು ಇದನ್ನು ಬಲವಾಗಿ ಟೀಕಿಸಿದ್ದರು. ಮಹಿಳೆಯರು ದಾಂಪತ್ಯ ವಿಚ್ಛೇದನದ ಹಕ್ಕನ್ನು ಸಂತೋಷದಿಂದ ಸ್ವಾಗತಿಸಿದ್ದರು. ಆಚಾರ್ಯ ಕೃಪಲಾನಿಯಂಥವರು ದಾಂಪತ್ಯ ವಿಚ್ಛೇದನದ ಹಕ್ಕನ್ನು ಸ್ತ್ರೀಯರಿಗೆ ಮಾತ್ರ ಕೊಡಬೇಕು ಎಂದು ಪ್ರತಿವಾದಿಸಿದ್ದರು. ಮೊದಲನೆ ಸಂಗಡದವರು ಬ್ರಿಟಿಷರಾಗಲೀ ಔರಂಗಜೇಬನಂಥ ಉಗ್ರ ಮುಸ್ಲಿಮನಾಗಲೀ ಮಾಡದ ಸಾಹಸವನ್ನು ಕಾಂಗ್ರೆಸು ಸರಕಾರ ಮಾಡುತ್ತಿದೆ ಎಂದು ಆರೋಪಿಸಿದರು ದಾಂಪತ್ಯ ವಿಚ್ಛೇದನವು ಅಮೇರಿಕ, ಜರ್ಮನಿ, ರಷಿಯ ಇತ್ಯಾದಿಗಳಲ್ಲಿ ಮಕ್ಕಳ ಪಾಲನೆ ಪೋಷಣೆಯ ಮೇಲೆ ಭಯಂಕರ ಬುಷ್ಟರಿಣಾಮವನ್ನು ಮಾಡಿದೆ ಎಂದು ಅವರು ಎಚ್ಚರಿಸಿದರು. ಎರಡನೆ ಗುಂಪಿನವರು ದಾಂಪತ್ಯ ವಿಚ್ಛೇದನದ ಹಕ್ಕನ್ನು ಛೇದಿಯ ಔಷಧದೊದನೆ ಹೋಲಿಸಿ, ಅವಶ್ಯಕ ಪ್ರಸಂಗದಲ್ಲಿಯಷ್ಟೆ ಅದನ್ನು ಉಪಯೋಗಿಸಲಾಗುವುದು ಎಂದರು. ಮನುಷ್ಯನ ವ್ಯವಹಾರ ಕ್ಷೇತ್ರದಲ್ಲಿ ಪ್ರತಿಯೊಂದೂ ಸಂಬಂಧದಲ್ಲಿ ಪಾವಿತ್ರ್ಯದ ಅಂಶವಿದೆಯೆಂದೂ ಜಗಳಾಡುತ್ತಾ ಕಚ್ಚಾಡುತ್ತಾ ದಂಪತಿಗಳು ದಿನಗಳೆಯುತ್ತಿದ್ದರೆ ಅದು "ಪವಿತ್ರ" ಸಂಬಂಧವಾಗಿ ಬಾರದೆಂದೂ ವಿರೋಧಕರಿಗೆ ಸುಧಾರಕರು ಉತ್ತರ ಕೊಟ್ಟರು. ಈ ಗದ್ದಲದಲ್ಲಿ ಮೂರನೆಯ ತಂಡದವರ ವಿವೇಕದ ಮಾತನ್ನು ಯಾರೂ ಗಮನಿಸಲಿಲ್ಲ.

ದಾಂಪತ್ಯ ವಿಚ್ಛೇದನದ ಮಟ್ಟಿಗೆ ವಿರೋಧವನ್ನು ವ್ಯಕ್ತಪಡಿಸುವವರು ಹಿಂದು ಸಂಸ್ಕೃತಿಯ ಆಶ್ರಯ ಪಡೆಯುವುದು ಅಷ್ಟು ಇಷ್ಟವಾಗಲಾರದು. ಏಕೆಂದರೆ ಹಿಂದು ಸಂಸ್ಕೃತಿಗೆ ದಾಂಪತ್ಯ ವಿಚ್ಛೇದನವು ಎಷ್ಟಕ್ಕೂ ಕೊನತಲ್ಲ. ಈಗಿನ ಪರಿಸ್ಥಿತಿಯಲ್ಲಿ ಹಿಂದುಗಳಲ್ಲಿ "ಕೆಳ ಜಾತಿ"ಯವರಲ್ಲಿ, ಅಂದರೆ—ಹಿಂದುಗಳಲ್ಲಿ ಐದರಲ್ಲಿ ನಾಲ್ಕು ಮಂದಿಯಲ್ಲಿ—ಅದು ರೂಢಿಯಾಗಿದೆ. ಮೇಲ್ಜಾತಿಯವರೆನಿಸಿಕೊಂಡು ವೈದಿಕ ಧರ್ಮದ ಪ್ರಭಾವದಿಂದ ಪೂರ್ಣ ಮುಕ್ತರಾಗದವರಲ್ಲಿ ಮಾತ್ರ ಈ ಪದ್ಧತಿ ನೆಲೆಯೂರಿಲ್ಲ. ಸನಾತನ ಕಾಲದಲ್ಲಿ ಸಹ ದಾಂಪತ್ಯ ವಿಚ್ಛೇದನದ ಹಕ್ಕು ಚಲಾಯಿಸಲ್ಪಡುತ್ತಿತ್ತೆಂಬುದನ್ನು ಇವರ ಗಮನಕ್ಕೆ ತಂದು ಕೊಟ್ಟರೆ ಅವರ ವಿರೋಧ ಬಹು ದುರ್ಬಲವಾಗದಿರದು. ಕೌಟಿಲ್ಯನ ಅರ್ಥಶಾಸ್ತ್ರದಂತೆ ದಂಪತಿಗಳು ಪರಸ್ಪರ ಸಮ್ಮತಿಯಿಂದ ವಿಚ್ಛೇದನೆ ಪಡೆಯಬಲ್ಲರು. ಯಾಜ್ಞವಲ್ಕ್ಯ, ನಾರದ, ಪರಾಶರ ಮುಂತಾದವರ ಸ್ಮೃತಿಗಳು ಗಂಡನಿಗೂ ಹೆಂಡತಿಗೂ ಬೇರೆ ಬೇರೆ ಕಾರಣಗಳ ಮೇಲೆ ವಿವಾಹ ಬಂಧನದಿಂದ ಬಿಡುಗಡೆಯನ್ನು ಕೊಡಲು ಒಪ್ಪುತ್ತವೆ.

ಆದುದರಿಂದ ದಾಂಪತ್ಯ ವಿಚ್ಛೇದನೆಯನ್ನು ಸನಾತನಿಗಳು ಆಕ್ಷೇಪಿಸುವುದು ಆಶ್ಚರ್ಯಕರವಾಗಿ ತೋರುತ್ತದೆ. ಮಧ್ಯಯುಗದಲ್ಲಿ ಹಿಂದು ಸ್ತ್ರೀಯರ ಹಕ್ಕುಗಳಲ್ಲಿ ಬಹಳಷ್ಟು ಕಡಿತವಾದುದೇ ಇವರ ಆಕ್ಷೇಪಕ್ಕೆ ಹಿನ್ನೆಲೆಯಾಗಿರಬಹುದೆಂದು ಊಹಿಸ ಬೇಕೋ ಏನೋ ತಿಳಿಯದು ಆದರೆ ಹಿಂದು ಸಂಗತಿ ಮಾತ್ರ ನಿಜ—ಸನಾತನ ಕಾಲದಲ್ಲಿ ಗಂಡಿನು ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳಲು ಅಧಿಕಾರ ಪಡೆದಿದ್ದನು; ಆದರೆ, ಹೆಂಗಸಿಗೆ ಮನರ್ವಿವಾಹವಾಗಲು ಅನುಮತಿ ಸಿಗುತ್ತಿರಲಿಲ್ಲ. ಆದುದರಿಂದ ದಾಂಪತ್ಯ ವಿಚ್ಛೇದನದ ಹಕ್ಕನ್ನು ಹೆಂಗಸು ಚಲಾಯಿಸಿದರೂ ಮನಃ ದಾಂಪತ್ಯ ಜೀವನ ನಡೆಸಲು ಅವಕಾಶ ಸಿಗುತ್ತಿರಲಿಲ್ಲ; ಗಂಡಸಿನ ಮಟ್ಟಿಗೆ, ಅವನಿಗೆ ಒಬ್ಬಳಲ್ಲಿ ಒಗೆತನ ಕೂಡಿ ಬರದಿದ್ದರೆ, ಇನ್ನೊಬ್ಬಳೂಡನೆ ಬಾಳ್ವೆ ಹೂಡಲು ವಿಚ್ಛೇದನೆ ಇಲ್ಲದೆಯೇ ಅಧಿಕಾರ ದೊರಕುತ್ತಿದ್ದುದರಿಂದ ಯಾವ ನಷ್ಟವೂ ಆಗುತ್ತಿರಲಿಲ್ಲ.

ಮಧ್ಯಯುಗದ ಕಠಿಣ ಕ್ರಮಗಳ ಪರಿಣಾಮವಾಗಿ ಹೆಂಗಸರಿಗೆ ದಾಂಪತ್ಯ ವಿಚ್ಛೇದನದ ಹಕ್ಕು ನಿರಾಕರಿಸಲ್ಪಟ್ಟಿರುವಂತೆ ತೋರಿತು. ಆಗ ಬ್ರಿಟಿಷರು ಇಷ್ಟೆನೇ ಇ ಸನಿಯಲ್ಲಿ ಮಾಡಿದ ಕಾನೂನಿನ ಆಶ್ರಯ ಪಡೆದು ಹೆಂಗಸರು ಧರ್ಮಾಂತರ ಹೊಂದಿ, ಮೊದಲಿನ ದಾಂಪತ್ಯದಿಂದ ವಿಚ್ಛೇದನೆ ಪಡೆದು, ತಾವೊಲಿದವರನ್ನು ಮರಳಿ ಲಗ್ನವಾಗುವ ಉಪಾಯವನ್ನು ಅನುಸರಿಸ ಹತ್ತಿದರು. ಆದರೆ ನ್ಯಾಯಾಲಯಗಳಲ್ಲಿ ಇಂಥ ಪ್ರಕರಣಗಳು ಒಂದೇ ರೀತಿಯಾಗಿ ತೀರ್ಮಾನಿಸಲ್ಪಡಲಿಲ್ಲ. ಕೆಲವು ಪ್ರಸಂಗಗಳಲ್ಲಿ ದಾಂಪತ್ಯ ವಿಚ್ಛೇದನದ ಹಕ್ಕು ಕೊಡಲ್ಪಟ್ಟಿರೆ, ಬೇರೆ ಕೆಲವು ಸಂದರ್ಭಗಳಲ್ಲಿ ಧರ್ಮಾಂತರವು ದಾಂಪತ್ಯ ವಿಚ್ಛೇದನಕ್ಕೆ ಕಾರಣವಾಗಲಾರದೆಂದು ತೀರ್ಮಾ ಹೇಳಲಾಯಿತು. ಅದೂ ಅಲ್ಲದೆ, ಹೀಗೆ ಧರ್ಮಾಂತರದ ಉಪಾಯವನ್ನು ಕೆಲವೇ ದಿಟ್ಟೆಯರು ಅನುಸರಿಸಿದರು; ಹೊರತು, ಸಾರ್ವತ್ರಿಕವಾಗಿ ಅದು ಜಾರಿಗೆ ಬರಲಿಲ್ಲ. ಬ್ರಿಟಿಷರು ಸಹಗಮನ ಪದ್ಧತಿಯನ್ನು ನಿಲ್ಲಿಸುವ ಶಾಸನ ಮಾಡಿದುದರಿಂದ, ಗಂಡನ ಚಿತೆಯಲ್ಲಿ ಒಲ್ಲದ ಮನಸ್ಸಿನಿಂದ ಹಾರಿಕೊಳ್ಳುವ ಒತ್ತಾಯದಿಂದ ಸ್ತ್ರೀಯರು ಮುಕ್ತರಾದರು. ಆದರೆ, ವಿಧವೆಯರ ಮನರ್ವಿವಾಹಕ್ಕೆ ಮನ್ನಣೆಕೊಡಲು ಅವರು ಮಾಡಿದ ಶಾಸನವು ಅಷ್ಟು ಜನಪ್ರಿಯತೆಯನ್ನು ಸಂಪಾದಿಸಲಿಲ್ಲ. ಕೆಲವು ಬಾಲವಿಧವೆಯರಲ್ಲದೆ, ಮೊದಲಿನ ದಾಂಪತ್ಯದಿಂದ ಮಕ್ಕಳಿರುವ ಮಧ್ಯ ವಯಸ್ಸಿನ ವಿಧವೆಯರಿಗೆ ಮನರ್ವಿವಾಹದ ಅವಕಾಶವೇನೂ ಹೇಳಿಕೊಳ್ಳುವಷ್ಟು ಹೆಚ್ಚು ಪ್ರಮಾಣದಲ್ಲಿ ಸಿಗಲಿಲ್ಲ

ನಮ್ಮ ತಿಳಿವಳಿಕೆ ಹೋಗುವಷ್ಟರ ಮಟ್ಟಿಗೆ ಹೆಂಗಸರಲ್ಲಿ ದಾಂಪತ್ಯ ವಿಚ್ಛೇದನದ ಹಕ್ಕು ವಿಧವೆಯರ ಮನರ್ವಿವಾಹಕ್ಕೆ ಕೊಡಲಾದ ಮನ್ನಣೆಯಷ್ಟೆ ಅಲ್ಪ ಜನಪ್ರಿಯವಾಗಬಹುದಲ್ಲದೆ, ಸಾರ್ವತ್ರಿಕವಾಗಿ, ಮಿತಿಗಿಂತ ಹೆಚ್ಚು ಪ್ರಮಾಣದಲ್ಲಿ ಅದು ಉಪಯೋಗಿ

(೧೨ನೇ ಪುಟ ನೋಡಿರಿ)

THE CANARA MUTUAL
Assurance Company Limited
Managing Director. T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಕೊಟ್ಟಿದೆ ಕಂಪೆನಿ.
CHIEF AGENTS:
THE COMMERCIAL CORPORATION OF INDIA LTD,
"Mukund Niwas" UDIPI, S. India.

ಸತ್ಯಾಗ್ರಹಿಗಳ ಮೇಲೆ ಪೋರ್ಚುಗೀಜರಿಂದ ಅತ್ಯಾಚಾರ

ಗೋವೆಯ ಕುರಿತು ವಿವೇಕ ತೊರೆಯದಿರಲು ನೆಹರುಗಳ ಬೋಧನೆ

ಪೂರ್ವ ನಿಶ್ಚಿತ ಕಾರ್ಯಕ್ರಮದಂತೆ ಗೋವೆಯ ವಿಮೋಚನೆಗಾಗಿ ಸಕ್ರಿಯ ಪಾತ್ರವನ್ನು ವಹಿಸಲು ಸಿದ್ಧರಾದ ಸತ್ಯಾಗ್ರಹಿಗಳು ಗೋವೆಯನ್ನು ಕಳೆದ ವಾರ ಮತ್ತು ಆದಕ್ಕೆ ಹಿಂದಿನ ವಾರದಲ್ಲಿ ಪ್ರವೇಶಿಸಿದರು. ಸೇನಾಪತಿ ಬಾಪಟ ಮತ್ತು ಪ್ರಜಾ ಸಮಾಜವಾದಿ ಧುರೀಣ ಗೋರೆಯವರ ನೇತೃತ್ವದಲ್ಲಿ ಹೊರಟ ಪ್ರಥಮ ತಂಡದ ಮೇಲೆ ಪೋರ್ಚುಗೀಜರು ಗುಂಡು ಹಾರಿಸಿದರು. ಗೋರೆ ಮತ್ತಿತರ ನಾಲ್ವರು ಈಗ ಗೋವೆಯ ಆಸ್ಪತ್ರೆಯಲ್ಲಿರುವರೆಂದು ತಿಳಿದು ಬರುತ್ತದೆ.

ಪೈಶಾಚಿಕ ಕೃತ್ಯ

ಉಳಿದವರ ಬೆಡುಗಡೆಯಾಗಿದ್ದರೂ ಪೋರ್ಚುಗೀಜರು ತಲೆ ಕೂದಲನ್ನು ಕೀಳುವುದು, ಅಮಾನುಷ ರೀತಿಯಲ್ಲಿ ಒದೆಯುವುದು, ಹಿಂಸಿಸುವುದು ಮುಂತಾದ ಕೃತ್ಯಗಳಿಂದ ಸತ್ಯಾಗ್ರಹಿಗಳನ್ನು ಛಳಿಸಿದ್ದರು. ಅತ್ಯಂತ ಕ್ರೂರವಾದ ಪೈಶಾಚಿಕ ಅತ್ಯಾಚಾರಗಳಿಂದ ಸತ್ಯಾಗ್ರಹಿಗಳನ್ನು ಬೆದರಿಸಿ ಓಡಿಸುವ ಹಂಚಿಕೆ ಅವರಿತ್ತೆಂದು ತೋರುತ್ತದೆ. ಇದನ್ನು ಭಾರತ ಸರಕಾರ ಬಲವಾಗಿ ಖಂಡಿಸಿ, ತನ್ನ ಪ್ರತಿಭಟನೆಯನ್ನು ಸೂಚಿಸಿದೆ.

ಇನ್ನೊಂದು ತಂಡದ ಪ್ರವೇಶ

ಸತ್ಯಾಗ್ರಹಿಗಳು ಪೋರ್ಚುಗೀಜರ ಹಿಂಸೆಯಿಂದ ಹೆದರಿಲ್ಲ. ಅವರ ಸಂಕಲ್ಪ ಮತ್ತಷ್ಟು ದೃಢವಾಗಿದೆ; ಮತ್ತು ಇದೀಗ ಶ್ರೀ ಶಿರುಧಾವಲಿಮಯೆ ಎಂಬ ಇನ್ನೊಬ್ಬ ಧುರೀಣರ ನೇತೃತ್ವದಲ್ಲಿ ಸತ್ಯಾಗ್ರಹಿಗಳ ತಂಡವೊಂದು ಗೋವೆಯನ್ನು ಪ್ರವೇಶಿಸಿದೆ. ಪೋರ್ಚುಗೀಜರು ಇವರನ್ನು ಬಂಧನದಲ್ಲಿಟ್ಟಿರುವರೆಂದು ವರದಿಗಳು ಹೇಳುತ್ತವೆ. ಆದರೆ ಗೋಳೀಬಾರು ನಡೆದ ಸುದ್ದಿ ಮಾತ್ರ ಬರಲಿಲ್ಲ.

ಧೋರಣೆಯ ಬದಲಾವಣೆ

ಭಾರತ ಸರಕಾರವು ಸತ್ಯಾಗ್ರಹಿಗಳನ್ನು ತಡೆಯದಿರುವುದನ್ನು ನೋಡಿದರೆ ಅದರ ನಿಲುಮೆಯಲ್ಲಿ ಪರಿವರ್ತನೆಯಾದಂತೆ ಕಂಡು ಬರುತ್ತದೆ. ಆದರೂ ಕೆಲವು ಜನರು ತೃಪ್ತಿಹೊಂದದೆ ಹೈದರಾಬಾದಿನ ಪೇಲೆ ಮಾಡಿದಂತೆ ಪೋಲೀಸು ಕಾರ್ಯಚರನೆಯಿಂದ ಗೋವೆ ಮತ್ತಿತರ ಪೋರ್ಚುಗೀಜರ ಕೈಯಲ್ಲಿರುವ ಭಾರತದಲ್ಲಿನ ವಸಾಹತುಗಳ ಸಮಸ್ಯೆಯನ್ನು ತೀರ್ಮಾನಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಎಲ್ಲ ಪಕ್ಷಗಳ ಪರಿಷತ್ತು

ಮುಂಬಯಿ ಮತ್ತು ಕಲ್ಕತ್ತಗಳಲ್ಲಿ ಪಾರ್ಲಿಮೆಂಟಿನ ಸರ್ವ ಪಕ್ಷೀಯ ಸಮ್ಮೇಳನಗಳು ಜರಗಿದಾಗಲೂ ಭಾರತ ಸರಕಾರ ಹೆಚ್ಚು ಆಸಕ್ತಿಯಿಂದ ಗೋವೆಯ ಪ್ರಶ್ನೆಗೆ ಸೂಕ್ತ ಪರಿಹಾರ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳಲಾಯಿತು. ಗೋವಾಂತಕರಾದ ಕ್ರೈಸ್ತರು ಭಾರತದಲ್ಲಿ ಸೇರ್ಪಡೆಹೊಂದುವುದರಿಂದ ತಮಗೆ ಹಾನಿಯಾಗುವುದೆಂದು ಎಷ್ಟು ಮಾತ್ರಕ್ಕೂ ಭಾವಿಸಬಾರದಾಗಿ ಆಂಗ್ಲೊ ಇಂಡಿಯನ್ನರ ಧುರೀಣ ಶ್ರೀ ಫ್ರಾಂಕ್ ಅಂಥೋನಿಯವರು ಸಾರಿದರು

ಪೋರ್ಚುಗಾಲದ ಹೆದರಿಕೆ

ಪೋರ್ಚುಗೀಜರು ಗೋವಾಂತಕರ ಮೇಲಿನ ವಿಶ್ವಾಸವನ್ನೆ ಕಳೆದುಕೊಳ್ಳುತ್ತಿದ್ದಾರೆಂದು ಗೊತ್ತಾಗುತ್ತದೆ. ಸ್ವಶ್ವಸ್ತರಾದ ಸತ್ಯಾಗ್ರಹಿಗಳ ಮೇಲೆ ಗುಂಡುಹಾರಿಸಿ, ಅಮಾನುಷ ರೀತಿಯಲ್ಲಿ ನಡೆದುಕೊಳ್ಳಬೇಕಾಗಿ ಬಂದುದಕ್ಕೆ ಗೋವೆಯ ಪೋಲೀಸರೂ ಸೈನಿಕರೂ ಪಶ್ಚಾತ್ತಾಪಪಟ್ಟಿರುವರೆಂದು ಒಂದು ವರದಿ ತಿಳಿಸುತ್ತದೆ. ಇಡೀ ಜಗತ್ತು ನೆಹರುಗಳು ರಚಿಯದ ಧುರೀಣರೊಡನೆ ಸದ್ಯದಲ್ಲಿ ನಡೆಸಲಿರುವ ಮಾತುಕತೆಗೆ ಮಹತ್ವ ಕೊಡುತ್ತಿರುವಾಗ ಪೋರ್ಚುಗಾಲವು ಮಾತ್ರ ನೆಹರುಗಳು ರೋಮಿನಲ್ಲಿ ಪೋಪರೊಡನೆ ನಡೆಸುವ ಸಂದರ್ಶನಕ್ಕೆ ಪ್ರಾಮುಖ್ಯತೆ ನೀಡುತ್ತಿದೆಯೆಂದು ಕೇಳುತ್ತೇವೆ.

ನೆಹರುಗಳ ವಿವರಣೆ

ನೆಹರುಗಳು ಗೋವೆಯ ಕುರಿತು ಭಾರತ ಸರಕಾರ ವಹಿಸಿದ ನಿಲುಮೆಯೇ ಯೋಗ್ಯವಾದುದೆಂದು ಸುಸ್ಪಷ್ಟ ಸಾರಿದ್ದಾರೆ. ವಿವೇಕ ಬಾಹಿರವಾದ ಅನುಚಿತ ವಿಧಾನದಿಂದ ಗೋವೆಯ ಪ್ರಶ್ನೆಯನ್ನು ಭಾರತ ಬಿಡಿಸಲು ಹೋಗಲಾರದೆಂದು ಅವರು ಮತ್ತೆ ಸ್ಪಷ್ಟೀಕರಿಸಿದ್ದಾರೆ. ಕಾಂಗ್ರೆಸಾಧ್ಯಕ್ಷ ಢೇಬರರು ಸಹ ಗೋವೆ ಮತ್ತಿತರ ಪೋರ್ಚುಗೀಜರ ಕೈಯಲ್ಲಿ ಭಾರತದಲ್ಲಿರುವ ವಸಾಹತುಗಳನ್ನು ವಿಮೋಚನೆ ಗೊಳಿಸಬೆ ಕ್ಷಿತರಲಾರೆವೆಂದೂ ಆದರೆ ದುಡುಕುವುದು ಇಷ್ಟವಲ್ಲವೆಂದೂ ಹೇಳಿದ್ದಾರೆ. ಏಕೆಂದರೆ, ಲೋಕ ಸಭೆಯ ಅಧ್ಯಕ್ಷ ಮಾವಳಣಕರರು ಹೇಳಿದಂತೆ, ಅವಸರಪಟ್ಟರೆ ಭಾರತವು ಅಂತಾರಾಷ್ಟ್ರೀಯ ಸಹಾನುಭೂತಿಗೆಯಾರವಾಗಬಹುದು.

---

೩೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನ—೧೯೫೫

ಮೈಸೂರು ನಗರದಲ್ಲಿ ಇದೇ ಜೂನ್ ೧೦, ೧೧, ೧೨ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಗೋಷ್ಠಿಗಳು

ತಾ|| ೧೦—೬—೫೫ ನೇ ಶುಕ್ರವಾರ ಬೆಳಗ್ಗೆ ಸಮ್ಮೇಳನದ ಪ್ರಾರಂಭೋತ್ಸವವೂ ತರುವಾಯ ೧೦, ೧೧ ನೇ ತಾರೀಕುಗಳಲ್ಲಿ ಕೈದರಾಬಾದಿನ ಶ್ರೀ ಸಿದ್ದಯ್ಯ ಪುರಾಣಿಕರವರ ಅಧ್ಯಕ್ಷತೆಯಲ್ಲಿ ಲೇಖಕರ ಗೋಷ್ಠಿ. ಪ್ರೊ|| ಆರ್. ಎಲ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಶಾಸ್ತ್ರ ಸಾಹಿತ್ಯ ಗೋಷ್ಠಿ, ಪ್ರೊ|| ರಂ. ಶ್ರೀ ಮುಗಳಿಯವರ ಅಧ್ಯಕ್ಷತೆಯಲ್ಲಿ ವಿಮರ್ಶಾ ಗೋಷ್ಠಿಗಳು ನಡೆಯುತ್ತವೆ.

"ಕವಿಮೇಳ"

ಕವಿವರ್ಯ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ 'ಮೈಸೂರ' ಮಾದರಿಯ ಕವಿಮೇಳ ಎಂಬ ವಿಶೇಷ ಕಾರ್ಯಕ್ರಮವೊಂದು ತಾ|| ೧೨—೬—೫೫ ಭಾನುವಾರ ಬೆಳಗ್ಗೆ ಏರ್ಪಟ್ಟಿದೆ. ಕನ್ನಡ ನಾಡಿನ ಸುಪ್ರಸಿದ್ಧ ಕವಿಗಳು ತಮ್ಮ ಕೃತಿಗಳನ್ನು ಈ ಗೋಷ್ಠಿಯಲ್ಲಿ ವಾಚನ ಮಾಡುವರು.

ಮನೋರಂಜನ ಕಾರ್ಯಕ್ರಮ ಮತ್ತು ಪ್ರದರ್ಶನ

ತಾ|| ೧೦, ೧೧ ನೆಯ ತಾರೀಕುಗಳಲ್ಲಿ ಸಂಜೆ ಸಮ್ಮೇಳನದ ಸಾರ್ವಜನಿಕ ಸಮಾವೇಶಗಳೂ. ರಾತ್ರಿ ಕಾವ್ಯವಾಚನ, ಸಂಗೀತ, ನೃತ್ಯ, ನಾಟಕಗಳ ಕಾರ್ಯಕ್ರಮಗಳೂ ನಡೆಯುತ್ತವೆ. ಈ ಮೂರು ದಿನಗಳಲ್ಲಿ ಕನ್ನಡ ಸಾಹಿತ್ಯ ಪ್ರದರ್ಶನವೊಂದನ್ನು ಏರ್ಪಡಿಸಲಾಗಿದೆ

ಸಹೃದಯ ಕನ್ನಡಿಗರು ಅಧಿಕ ಸಂಖ್ಯೆಯಲ್ಲಿ ಸಮ್ಮೇಳನಕ್ಕೆ ದಯಮಾಡಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ವಿನಯ ಪ್ರಾರ್ಥನೆ.

ಕೆ. ವಿ. ರಾಘವಾಚಾರ್
ಕೆ. ಎಸ್. ನಾರಾಯಣಸ್ವಾಮಿ
ಕಾರ್ಯದರ್ಶಿಗಳು.

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು—

ನಗೆ ನೋಟಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)

ಲೇಖಕರು: ಕೆ. ವಿಟ್ಠಲ ರೆಣ್ಣೈ, ಬಿ. ಎ., ಎಲ್. ಟಿ.

(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)

ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.

ಬೆಲೆ: ೧—೪—೦ (ಟಿ. ಖರ್ಚು ಬೇರೆ)

ಕಿರಿಯರ ಪ್ರಪಂಚ ಉಡುಪಿ, ದ. ಕ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ,

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳು ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟ್ಯಾಕ್ಸು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟ್ಯಾಕ್ಸು ಖರ್ಚು ಬೇರೆ)

ಪ್ರತಿಗಳು ಸಿಗುವಸ್ಥಳ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀವಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧಾ

ನಮ್ಮ "ಆನಂದ ಸುಧಾ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಟೈಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ವಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಿ ವಿಜಯ ಬೇಂಕ್ ಲಿಮಿಟೆಡ್, ಕಾಪು, ದ. ಕ.
ಏಲಂ ನೋಟೀಸು

ಈ ಕೆಳಗೆ ಯೆಸರು ಕಾಡಿಸಿದ ಮಹನೀಯರು ನಮ್ಮ ಬೇಂಕಿನಿಂದ ಬಿನ್ನಾಭರಣಗಳ ಈದಿನ ಮೇಲೆ ಸಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅನ್ಸಲ್ ವ ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿ ಮಾಡಿ ಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಕಾರಣಾಂತರಗಳಿಂದ ಬಾಪಾಸು ಬಂದಿರುವುದರಿಂದಲೂ, ಸದ್ರಿಯವರು ಆಪರಾಧ್ನ ಘಂಟೆ 10ಕ್ಕೆ ಯಾ ಅನಂತರ ಬೇಂಕಿಗೆ ಯುಕ್ತಕಂದ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದರಲಿ.

ಸಾಲದ ನಂಬ್ರ	ಸಾಲಗಾರರ ವಿಳಾಸ	ಅಸಲು	ಮೊಬಲಗು	
509/53	ಫ್ಯಾಜ್ ಮೊಹಮ್ಮದ್, ಅದಮ್ ಸಹೋದರ ಮಗ, ಗುಜ್ಜಿ ಮನೆ, ಸುಲ್ಲಾರು ಗ್ರಾಮ, ಪೋಸ್ಟು ಸುಲ್ಲಾರು	12	8	0
14/54	— ಡಿ —	56	14	7
611/53	ಆಕ್ಕು ಪೂಜಾರ್ತಿ, ಚನ್ನು ಪೂಜಾರ್ತಿಯ ಮಗಳು, ಸುಲ್ಲಾರು ಮೇಲಿನ ಮನೆ, ಪೋಸ್ಟು ಸುಲ್ಲಾರು	69	2	0
763/53	ಶ್ರೀನಿವಾಸ ಮಿತ್ತಂತಾಯ, ವೆಂಕಟಕೃಷ್ಣ ಮಿತ್ತಂತಾಯರ ಮಗ, ಇನ್ನಂಜೆ ಗ್ರಾಮ, ಪೋಸ್ಟು ಇನ್ನಂಜೆ.	54	9	0
904/53	ವಾದಿರಾಜ ಭಟ್, ಚಂಕಟರಮಣ ಭಟ್ರ ಮಗ, ಮೈರೆ ಕಟ್ಟೆ, ಇನ್ನಂಜೆ ಗ್ರಾಮ, ಪೋಸ್ಟು ಇನ್ನಂಜೆ	116	1	0
105/53	— ಡಿ —	131	9	0
860/53	ದಾಬ ಸೆಟ್ಟಿ, ಚಿಂಗ ಸೆಟ್ರ ಆಳಿಯ, ರಾಮಯ್ಯ ಸೆಟ್ರಮನೆ ಪದು ಗ್ರಾಮ, ಪೋಸ್ಟು ಕಾಪು.	156	1	0
575/53	— ಡಿ —	107	2	0
378/51	ಬಾಡು ಪೂಜಾರಿ, ಲೋಕು ಪೂಜಾರಿಯವರ ಮಗ, ತೊಟ್ಟಂಬು ತೋಟ, ಮೂಲೂರು ಗ್ರಾಮ, ಪೋಸ್ಟು ಉಚ್ಚಿಲ, ದ. ಕ.	15	8	0

Office of the Bank
Kaup, 27-5-1955.

K. Sitharama Shetty,
Agent.

JANATHA SHIKSHANA SAMITI'S LAW COLLEGE, DHARWAR.

The college will open on the 15th June 1955. The Law Preliminary class and 1st LL B. class will be conducted in the first instance. The classes will be conducted in some of the Buildings of the Janatha Shikshana Samiti, on the Mailarling Hill.

Students desirous to join this college should send their applications early. Printed application Forms will be supplied on demand. Hostel accomodation also will be provided. Further particulars can be supplied on enquiry.

The college office will be working from 7-30 a. m. to 1-30 p. m. every day.

Dharwar,
27—5—1955.

N. B. Kulkarni,
Principal.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ಸರಗಳ ಇನ್ಫ್ಲೂಎಂಜಾ ಮತ್ತು ಸರ್ವಸಾಮಾನ್ಯ ಆಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರವಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ಇರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾಟ್ಲಿಗೆ ರೂ. 7—8—0. ಕಾಲು ರಾಟ್ಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯದೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮಠಾರ ಗಲ್ಲಿ, ಹುಬ್ಬಳ್ಳಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೧-೬-೧೯೫೫	ಸಂಚಿಕೆ ೩೭

ಹೇಯ ರಾಜಕೀಯ ಸೇಡು

ಈಚೆಗೆ ಇಂಡೋನೇಶಿಯದ ಬಾಂಡುಂಗಿನಲ್ಲಿ ಏಶಿಯ ಮತ್ತು ಆಫ್ರಿಕದ ಪ್ರಧಾನ ಮಂತ್ರಿಗಳ ಸಮ್ಮೇಳನ ಜರಗುವುದಕ್ಕೆ ಕೆಲವು ದಿನಗಳ ಮೊದಲಲ್ಲಿ ದೊಡ್ಡದೊಂದು ದುರಂತ ಸಂಭವಿಸಿದ್ದಿತು. ಎಪ್ರೀಲಿನ ೧೧ನೇ ದಿನಾಂಕ ಸಾರವಾಕಿನ ತೀರದಲ್ಲಿ "ಕಾಶ್ಮೀರ್ ಪ್ರಿನ್ಸೆಸ್" ಎಂಬ ಭಾರತೀಯ ವಿಮಾನವು ಮುರಿದು ಬಿದ್ದು, ಅದರಲ್ಲಿದ್ದ ಎಂಟು ಮಂದಿ ಚೀನೀ ಅಧಿಕಾರಿಗಳನ್ನೊಳಗೊಂಡು ಸುಮಾರು ಇಪ್ಪತ್ತು ಮಂದಿ ಸತ್ತರು. ವೈಮಾನಿಕರಲ್ಲಿ ಮಾತ್ರ ಮೂವರು ಬಹಳ ಶ್ರಮಪಟ್ಟು ಜೀವ ರಕ್ಷಿಸಿಕೊಂಡರು. ವಿಮಾನದಲ್ಲಿದ್ದ ಚೀನೀ ಅಧಿಕಾರಿಗಳು ಬಾಂಡುಂಗಿನ ಪರಿಷತ್ತಿನಲ್ಲಿ ಭಾಗವಹಿಸುವುದಕ್ಕೆ ತಕ್ಕ ಪೂರ್ವ ಸಿದ್ಧತೆ ನಡೆಸಲು ಉದ್ದೇಶಿಸಿದ್ದರು. ಆದುದರಿಂದ ಅವರ ಜೀವನಾಶವು ಸಹಜವಾಗಿಯೇ ಚೀನದ ಜನತಾ ರಾಜ್ಯಕ್ಕೆ ಕ್ಷೋಭೆಯನ್ನು ತಂದಿತು. ಹೀಗೆ ವಿಮಾನ ಅಪಘಾತವಾಗಲು ಏನು ಕಾರಣ? ಎಂದು ಎಲ್ಲರೂ ಕೇಳುತ್ತಿದ್ದಂತೆಯೇ ಚೀನವು ಇದು ಕುತಂತ್ರಿಗಳ ವಿಧ್ವಂಸಕ ಕೃತ್ಯದ ಫಲ ಎಂದು ಆರೋಪಿಸಿತು. ಇದರ ಸತ್ಯವನ್ನು ಯೋಗ್ಯ ಪರಿಶೀಲನೆಗಳಿಲ್ಲದೆ ಮಾನ್ಯಮಾಡುವುದು ನ್ಯಾಯವಾಗಿರಲಿಲ್ಲ. ಆದರೂ ಅಮೇರಿಕವು ಇದು ಕಮ್ಯುನಿಸ್ಟರ ಅಪಪ್ರಚಾರ ಎಂದಿತು. ಬ್ರಿಟಿಷರ ವಶದಲ್ಲಿರುವ ಹಾಂಗ್‌ಕಾಂಗ್‌ನಲ್ಲಿ ಈ ವಿಮಾನವು ಇಳಿದಿದ್ದಾಗ ಯಾರೋ ದುರಾತ್ಮರು ವಿಧ್ವಂಸಕ ಕೃತ್ಯದ ಬೀಜ ಬಿತ್ತಿರಬೇಕೆಂದು ಕಮ್ಯುನಿಸ್ಟರು ಹೇಳಿದುದನ್ನು ಬ್ರಿಟನಿನ ಪ್ರಧಾನ ಮಂತ್ರಿಗಳು ಸಹ ಖಂಡಿಸಿ ಮಾತನಾಡಿದರು. ಪರಿಶೀಲನೆಯಾಗದೆ ಏನನ್ನೂ ನಿರ್ಣಯಿಸಲಾಗದು ಎಂದವರು ವಾದಿಸಿದರು. ಆದರೂ ಹಲವರು ಕುತಂತ್ರವೇ ಅಪಘಾತದ ಕಾರಣವೆಂದು ನಂಬಿದರು; ಕೆಲವರ ಮನಸ್ಸಿನಲ್ಲಿ ಮಾತ್ರ ಭಾರತೀಯ ವಿಮಾನದ ದೋಷವೇ ಈ ದುರಂತಕ್ಕೆ ಹೇತುವಾಗಿರಬಹುದೆಂಬ ವಿಚಾರವೂ ಗೊಳಗೊಳಗೆ ಇದ್ದಿತು. ಇದು ಭಾರತದ ಪ್ರತಿಷ್ಠೆಗೆ ಧಕ್ಕೆ ತಗಲುವ ವಿಚಾರವಲ್ಲವೆ? ಹೀಗಾಗಿ ಭಾರತ ಸರಕಾರ ಸಹಜವಾಗಿಯೇ ಚಿಂತೆಗೆ ಗುರಿಯಾಯಿತು. ಇಂಥ ಪರಿಸ್ಥಿತಿಯಲ್ಲಿ ಇಂಡೋನೇಶಿಯದ ಸರಕಾರವು ಅಪಘಾತ ಘಟಿಸಿದ ಸ್ಥಳದಲ್ಲಿಯೂ ಬೇರೆ ರೀತಿಯಿಂದಲೂ ಸಂಪೂರ್ಣ ಪರಿಶೀಲನೆ ಮತ್ತು ಶೋಧನೆಗಳನ್ನು ನಡೆಸಿ, ಈಗ ತಾನೆ ಹೊಸದೆಸೆಯಲಿ ಮತ್ತು ಜಕಾರ್ತಗಳಿಂದ ಏಕಕಾಲಕ್ಕೆ ಪ್ರಕಟಿಸಲಾಗಿರುವ ವರದಿಯು ಭಾರತದ ಚಿಂತೆಗೆ ಕಾರಣವಿಲ್ಲವೆಂದಿದೆ; ಅಲ್ಲದೆ ಚೀನವು ಆರೋಪಿಸಿದ್ದಂತೆ ವಿಧ್ವಂಸಕ ಕೃತ್ಯವೇ ಅಪಘಾತಕ್ಕೆ ನೆಪವಾಯಿತೆಂದು ಸಾರಿದೆ ಯು ಪ್ರಕಾರ, ವಿಮಾನವು ಉಡ್ಡಾಣಕ್ಕೆ ಯೋಗ್ಯವಾಗಿತ್ತಲ್ಲದೆ ಆದರ ಭಾರತೀಯ ವೈಮಾನಿಕರು ನುರಿತವರೂ ಅನುಭವಿಗಳೂ ಆಗಿದ್ದರು. ವಿಮಾನದಲ್ಲಿ ಹೇರಿದ್ದ ಭಾರವೂ ಮಿತಿಯನ್ನು ಮೀರಿರಲಿಲ್ಲ. ಆದು ಹಾಂಗ್‌ಕಾಂಗ್‌ನಿಂದ ಹಾರಿದ ಐದು ಗಂಟೆಗಳ ವರೆಗೆ ಯಾವ ತೊಂದರೆಯೂ ಸಂಭವಿಸಿರಲಿಲ್ಲ. ಆದರೆ ಅಷ್ಟರಲ್ಲಿ ಸಾರವಾಕಿನ ತೀರದಲ್ಲಿ ೧೮೦೦೦ ಅಡಿ ಎತ್ತರದಲ್ಲಿ ಹಾರುತ್ತಿರುವಾಗ ನಿಶ್ಚಿತ ಅವಧಿಯಲ್ಲಿ ಸ್ಫೋಟಗೊಳ್ಳುವ ಒಂದು ಬಾಂಬು ತನ್ನ ಪ್ರತಾಪವನ್ನು ತೋರಿಸಿದುದರಿಂದ ವಿಮಾನಕ್ಕೆ ಬೆಂಕಿ ಹತ್ತಿತು; ಮತ್ತು ಗಂಡಾಂತರ ಕಾಲದ ಕ್ರಮಗಳನ್ನು ವೈಮಾನಿಕರು ದಕ್ಷತೆಯಿಂದ ಕೈಗೊಳ್ಳುತ್ತಿದ್ದಂತೆಯೇ ವಿಮಾನವು ಸಮುದ್ರದಲ್ಲಿ ಇಳಿದು, ಮುಳುಗಿತು. ಅವಧಿಯು ಮಿತಿಯುಳ್ಳ ಬಾಂಬಿನಿಂದಲೇ ಸ್ಫೋಟಸಂಭವಿಸಿದೆಯೆಂಬುದಕ್ಕೆ ವರದಿಯು ಎಷ್ಟಕ್ಕೂ ನಿರಾಕರಿಸಲಾಗದ ಮೂರು ಮಾದಾವೆಗಳನ್ನು ಕೊಡುತ್ತದೆ- (೧) ಸ್ಫೋಟವಾದ ಸ್ಥಳದಲ್ಲಿನ ತಗಡು ಇತ್ಯಾದಿ ಹೊರಬಾಗಿರುತ್ತದೆ; (೨) ಸ್ಫೋಟದಲ್ಲಿ ಸಿಡಿದ ಚೂರುಗಳಿಂದ ಸರ್ತ್ತಲಿನ ತಗಡಿನ ಮೇಲೆ ಕಲೆಗಳು ಬಿದ್ದಿವೆ; ಮತ್ತು (೩) ಮೂರನೇ ನಂಬ್ರದ ಪೆಟ್ರೋಲಿನ ಟಾಂಕಿಗೆ ತೂತು ಬಿದ್ದಿದ್ದು ಉದು ಒಳಗೆ ಬಾಗಿರುತ್ತದೆ. ಆದುದರಿಂದ ವಿಧ್ವಂಸಕ ಕೃತ್ಯದ ಫಲವಿದೆಂದು ಎಷ್ಟಕ್ಕೂ ಅಲ್ಲಗಳೆಯಲು ಇನ್ನು ಸಾಧ್ಯವಿಲ್ಲ. ಇದಕ್ಕೆ ಕಾರಣವಾದ ಬಾಂಬನ್ನು ಹಾಂಗ್‌ಕಾಂಗ್‌ನಲ್ಲಿ ಇರಿಸಲಾಯಿತೆಂಬುದನ್ನೂ ನಿರಾಕರಿಸುವಂತಿಲ್ಲ. ಹಾಂಗ್‌ಕಾಂಗ್ ಸರಕಾರವು ಈಗ ವರದಿಯ ನಿರ್ಣಯಗಳು ಸರಿಯಾಗಿರಬಹುದೆಂದು ಒಪ್ಪಿರುತ್ತದೆ; ಮತ್ತು ಇದಕ್ಕೆ ಕಾರಣರಾದವರ ಪತ್ತೆ ಮಾಡಲೂ ಸ್ವಯತ್ನಶೀಲವಾಗಿದೆ. ಹೆಚ್ಚಿನವರು ಅನುಮಾನದಂತೆ ಹಾಂಗ್‌ಕಾಂಗ್‌ನಲ್ಲಿ ಬೀಡು ಬಿಟ್ಟಿರುವ ಕಮ್ಯೂನಿಸ್ಟರ ದ್ವೇಷಿಗಳಾದ ರಾಷ್ಟ್ರೀಯ ಚೀನೀಯರ ಕೈವಾಡವೇ ಅಂತರಾಂತ್ರೀಯ ಸ್ವರೂಪದ ಈ ಘೋರ ರಾಜಕೀಯ ಅಪರಾಧದಲ್ಲಿದೆ. ಬಾಂಡುಂಗಿನಲ್ಲಿ ಚೀನದ ಕಮ್ಯುನಿಸ್ಟರು ಭಾಗವಹಿಸಬಾರದೆಂಬ ದುರುದ್ದೇಶದಿಂದ ರಾಷ್ಟ್ರೀಯ ಚೀನೀಯರು ಒಳಸಂಚು ನಡೆಸಿ ವಿಮಾನವು ಹಾಂಗ್‌ಕಾಂಗ್ ನಿಲ್ದಾಣದಲ್ಲಿ ಇಳಿದಿದ್ದಾಗ ಅದರಲ್ಲಿ ಯಾರಿಗೂ ತಿಳಿಯದಂತೆ ಬಾಂಬನ್ನು ಇರಿಸಿರಬಹುದು. ರಾಷ್ಟ್ರೀಯ ಚೀನದ ಈ ಹೇಯ ಉದ್ದೇಶ ಎಷ್ಟಕ್ಕೂ ಮೆಚ್ಚಿಗೆಗಳಿಸಲಾರದು. ರಾಜಕೀಯ ಮತಭೇದಗಳನ್ನು ಈ ಬಗೆಯ ಒಳಸಂಚಿನಿಂದ ನಿವಾಂಚಲೆತ್ನಿಸುವವರು ಕೊಲೆಗಡುಕರೆಂದು ಕರೆಯಲ್ಪಡುವುದಕ್ಕೆ ಯೋಗ್ಯರು. ಹೊರತು ಎಷ್ಟಕ್ಕೂ ಸ್ವಾತ್ಮದ್ವಿಗಳೆಂದು ಅವರನ್ನು ಪರಿಗಣಿಸಲಾಗದು. ಆದುದರಿಂದ ಹಾಂಗ್‌ಕಾಂಗ್ ಸರಕಾರ ಒಳಸಂಚುಕಾರರ ಶೋಧ ನಡೆಸಿ, ಅಯೋಗ್ಯ ಕ್ರಮಗಳನ್ನು ಕೈಗೊಳ್ಳಬೇಕಾದುದು ಕರ್ತವ್ಯ. ಇದಲ್ಲದೆ ಹಲವರ ಚಿಂತೆಗೆ ಕಾರಣವಿಲ್ಲದೆ ಅದೂ ಮತ್ತೆ ಮತ್ತೆ ಹೊರಟಿದ್ದ ಈ ಚುನಾವಣೆಯ ಸೂರ್ವಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ರತಿಯಕ್ಕೆ ನೆಹರು

ಪ್ರಧಾನ ಮಂತ್ರಿ ನೆಹರುಗಳು ಇದೇ ೨೧ನೇ ತಾರೀಕಿಗೆ ಚುನಾವಣೆ ನಡೆಯುವುದೆಂದು ಗವರ್ನರ ಜನರಲರ ಪ್ರಕಟಣೆ ಹೊರಟಿದೆ. ಆ ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಪೂರ್ವ ಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ಶಾಸನ ಸಭಾಧಿವೇಶನ

ಇದೇ ಜುಲಾಯಿ ತಿಂಗಳಲ್ಲಿ ವಿಶೇಷ ಶಾಸನಸಭಾಧಿವೇಶನವನ್ನು ನೆರೆಯಿಸಿ, ಮದ್ರಾಸು ರಾಜ್ಯದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕಾದಿರುವ ಅಭಿವೃದ್ಧಿ ಕ್ರಮಗಳ ಚರ್ಚೆ ನಡೆಸಲಾಗುವುದೆಂದು ತಿಳಿದುಬರುತ್ತದೆ. ಭೂಸುಧಾರಣೆಯ ಮಸೂದೆ ಆಗೋಸ್ತಿನಲ್ಲಿ ಮಂಡಿಸಲ್ಪಡುತ್ತದೆ.

ಈಡನರಿಗೆ ಬಹುಮತದ ಬೆಂಬಲ

ಬ್ರಿಟನಿನ ಚುನಾವಣೆಯ ಫಲಶ್ರುತಿ

ಬ್ರಿಟನಿನಲ್ಲಿ ಮೊನ್ನೆ ಗುರುವಾರ ಮಹಾ ಚುನಾವಣೆ ನಡೆಯಿತು. ಅದರಲ್ಲಿ ಈಡನ್ನರ ಕನ್ಸರ್ವೇಟಿವ್ ಪಕ್ಷವು ಪ್ರಚಂಡ ಬಹುಮತವನ್ನು ಗಳಿಸಿತು. ಪ್ರತಿಪಕ್ಷಗಳಿಗಿಂತ ಅದು ೦೦ ಹೆಚ್ಚು ಸ್ಥಾನಗಳನ್ನು ಸಂಪಾದಿಸಿತು. ಇದರಿಂದ ಕಳೆದ ಐದು ವರ್ಷಗಳಲ್ಲಿ ಬಹುಮತದ ವಿಷಯದಲ್ಲಿದ್ದ ನಾಜೂಕು ಪರಿಸ್ಥಿತಿಯು ನಿವಾರಣೆ ಕೊಂಡಿದಂತಾಯಿತು.

ಘಟನಾ ಸಮಿತಿ

ಪಾಕಿಸ್ತಾನದ ಘಟನಾ ಸಮಿತಿಗೆ ಇದೇ ೨೧ನೇ ತಾರೀಕಿಗೆ ಚುನಾವಣೆ ನಡೆಯುವುದೆಂದು ಗವರ್ನರ ಜನರಲರ ಪ್ರಕಟಣೆ ಹೊರಟಿದೆ. ಆ ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಪೂರ್ವ ಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ರತಿಯಕ್ಕೆ ನೆಹರು

ಪ್ರಧಾನ ಮಂತ್ರಿ ನೆಹರುಗಳು ಇದೇ ೨೧ನೇ ತಾರೀಕಿಗೆ ಚುನಾವಣೆ ನಡೆಯುವುದೆಂದು ಗವರ್ನರ ಜನರಲರ ಪ್ರಕಟಣೆ ಹೊರಟಿದೆ. ಆ ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಪೂರ್ವ ಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ರತಿಯಕ್ಕೆ ನೆಹರು

ಪ್ರಧಾನ ಮಂತ್ರಿ ನೆಹರುಗಳು ಇದೇ ೨೧ನೇ ತಾರೀಕಿಗೆ ಚುನಾವಣೆ ನಡೆಯುವುದೆಂದು ಗವರ್ನರ ಜನರಲರ ಪ್ರಕಟಣೆ ಹೊರಟಿದೆ. ಆ ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಪೂರ್ವ ಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ರತಿಯಕ್ಕೆ ನೆಹರು

ಪ್ರಧಾನ ಮಂತ್ರಿ ನೆಹರುಗಳು ಇದೇ ೨೧ನೇ ತಾರೀಕಿಗೆ ಚುನಾವಣೆ ನಡೆಯುವುದೆಂದು ಗವರ್ನರ ಜನರಲರ ಪ್ರಕಟಣೆ ಹೊರಟಿದೆ. ಆ ಸ್ಥಾನಗಳಿಗೆ ನಡೆಯುವ ಈ ಚುನಾವಣೆಯಲ್ಲಿ ಪೂರ್ವ ಬಂಗಾಳಕ್ಕೆ ೪೦ ಸ್ಥಾನಗಳು ಮಾತ್ರ ಸಿಗದಿಯಾಗಿವೆ.

ದುದಕ್ಕೂ ವಿಮಾನದ ನಾಶಕ್ಕೂ ಪರಿಹಾರ ರೂಪದಲ್ಲಿ ದ್ರವ್ಯ ಸಹಾಯದ ವ್ಯವಸ್ಥೆಯನ್ನೂ ಅದು ಕೈಗೊಳ್ಳುವುದು ಅಪೇಕ್ಷಣೀಯ. ಎಲ್ಲಕ್ಕಿಂತ ಹೆಚ್ಚಾಗಿ, ಹಾಂಗ್‌ಕಾಂಗ್ ವಿಮಾನ ನಿಲ್ದಾಣದಲ್ಲಿ ಕುತಂತ್ರಿಗಳ ಕೈವಾಡಕ್ಕೆ ಇನ್ನು ಮುಂದೆ ಅವಕಾಶವಿಲ್ಲದಂತೆ ಅದು ನೋಡಿಕೊಳ್ಳಬೇಕಾಗಿದೆ. ಅಲ್ಲಿ ಕಮ್ಯುನಿಸ್ಟರ ಪಕ್ಷಪಾತಿಗಳು ಅಥವಾ ಸ್ನೇಹಿತರ ಗುಂಪು ಮತ್ತು ವಿರೋಧಿಕರ ಗುಂಪು ಎಂದೆರಡು ಪಂಗಡಗಳೇ ತಲೆ ಎತ್ತಿವೆಯೆಂದೂ ನಿತ್ಯದ ಉಡ್ಡಾಣದಲ್ಲಿ ಸಹ ಇದರ ಪರಿಣಾಮ ಗೋಚರಿಸುತ್ತಿದೆಯೆಂದೂ ಹೇಳಲಾಗುತ್ತದೆ. ಇದು ನಿಜವಿದ್ದರೆ, ಸಂಬಂಧಪಟ್ಟ ಅಧಿಕಾರಿಗಳು ವಿಮಾನ ಸಂಚಾರಿಗಳು ರಾಜಕೀಯ ಸೇಡಿಗೆ ಬಲಿಯಾಗದಂತೆ ಪೂರ್ಣ ಮುಂಜಾಗರೂಕತೆಯ ಕ್ರಮಗಳನ್ನು ವಿಳಂಬವಿಲ್ಲದೆ ತೆಗೆದುಕೊಳ್ಳಬೇಕಾದುದು ಅವಶ್ಯವಿದೆ. ವಿಮಾನಗಳಿಗೆ ಯೋಗ್ಯ ರಕ್ಷಣೆಯನ್ನು ನೀಡಬೇಕಲ್ಲದೆ ವಿಮಾನವನ್ನು ಒಳ ಹೊಕ್ಕು ಪರೀಕ್ಷಿಸುವ ತಾಂತ್ರಿಕರು ನಿಷ್ಠಾವಂತ ಪಾತ್ರರೇ ಅಥವಾ ರಾಜಕೀಯ ವಿಕಾರದಿಂದ ಪೀಡಿತರೇ ಹೇಗೆಂದು ಸಹ ವಿಮಾನ ನಿಲ್ದಾಣದ ಅಧಿಕಾರಿಗಳು ಕಂದು ಹಿಡಿಯ ರಾಜಕೀಯ ಸೇಡಿಗೆ ಗುರಿಯಾಗುವ ಗಂಡಾಂತರವಿಲ್ಲವೆಂದು ಎಲ್ಲರಿಗೂ ಖಚಿತ ಪಡಿಸಬೇಕಾಗಿದೆ. ವಿಶ್ವಾಸ ಹುಟ್ಟಿಸುವ ರೀತಿಯಲ್ಲಿ ಸಂಘಾಟನೆಯಾಗದಿದ್ದರೆ ದೂರ ಪ್ರಯಾಣದ ಪ್ರಯಾಣದಲ್ಲಿ ಮೈಜುಮ್ಮೆನ್ನುವ ಪ್ರಸಂಗ ಭವಿಷ್ಯದಲ್ಲಿಯೂ ತಪ್ಪದು.

ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಜಿಲ್ಲಾಭಿವೃದ್ಧಿ ಕಾರ್ಯಗಳಿಗಾಗಿ ಸೂಚನೆಗಳು

ಜಿಲ್ಲಾ ಬೋರ್ಡು ಅಧ್ಯಕ್ಷರಾದ ಕೆ. ಕೆ. ಹೆಗ್ಡೆಯವರ ಸಂಚಾಲಕತ್ವದಲ್ಲಿ ಜಿಲ್ಲಾಬೋರ್ಡು ಸಭಾಭವನದಲ್ಲಿ ದಿನಾಂಕ ೨೧ರಂದು ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ ಯವರ ಅಧ್ಯಕ್ಷತೆಯಲ್ಲಿ ಜನ ಪ್ರತಿನಿಧಿಗಳ ಒಂದು ಸಭೆಯು ಜರಗಿತು. ಸಭೆಯು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಜಿಲ್ಲೆಯ ಆವಶ್ಯಕತೆಗಳ ಕುರಿತು ಕರಡು ತಯಾರಿಸುವ ಬಗ್ಗೆ ಚರ್ಚಿಸಿತು. ಮುಖ್ಯವಾಗಿ ಸಭೆಯು ಮಲೆನಾಡಿನ ಅಭಿವೃದ್ಧಿ ಬಗ್ಗೆ ಒಂದು ಬೋರ್ಡನ್ನು ಸ್ಥಾಪಿಸಬೇಕೆಂಬ ಒತ್ತಿಹೇಳಿಕೆಯೊಂದು ಗೊತ್ತಾಗಿರುತ್ತದೆ. ಸಭೆಯಲ್ಲಿ ಜಿಲ್ಲಾ ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಇಷ್ಟು ಮಾತ್ರವಲ್ಲದೆ ದ. ಕ. ಜಿಲ್ಲೆಯಲ್ಲೊಂದು ಪ್ರಬುದ್ಧ ಬಂದರಿನ ಅಭಿವೃದ್ಧಿ, ನೇತ್ರಾವತಿ, ಕಲ್ಯಾಣಪುರ, ಮಾಬುಕಳ, ಗಂಗೊಳ್ಳಿ, ಉಪ್ಪುಂದ ನದಿಗಳಿಗೆ ಸೇತುವೆ ರಚನೆ. ಹಾಸನ- ಮಂಗಳೂರು; ಉಡುಪಿ-ಮಂಗಳೂರು ತಾಳಗುಪ್ಪಗಳಿಗೆ ರೇಲ್ವೇ ರಸ್ತೆ, ಮಣಿಪಾಲ ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು ಕೇಂದ್ರ ಸರಕಾರವೇ ನಡೆಸುವ ಬಗ್ಗೆ, ಮಲ್ಪೆ ಮೊದಲಾದ ಕಡೆ ಮೀನು ಹಿಡಿಯುವ ಬಗ್ಗೆ ಪರಿಶೀಲನೆ, ಮಂಗಳೂರಿಗೆ ಭೂಗತ ಚರಂಡಿ ಹಾಗೂ ಉಡುಪಿಗೆ ನಳ್ಳಿ, ನೀರು ಮತ್ತು ಭೂಗತ ಚರಂಡಿಗಳ ರಚನೆಗಳ ಬಗ್ಗೆ ಯೋಜನೆ ಕೈಗೊಳ್ಳುವ ಕುರಿತು ಸಲಹೆಯೀಯಲಾಯಿತು

ಉಳ್ಳಾಲದಿಂದ ಚಿತ್ತಾರಿನ ತನಕ ಇರುವ ನದಿಗಳಿಗೆ ಸೇತುವೆಗಳನ್ನು ರಚಿಸಬೇಕು, ಜಿಲ್ಲೆಯಲ್ಲೆಲ್ಲಾ ರಸ್ತೆಗಳಿಗೆ ತಾರು ಅಥವಾ ಕಾಂಕ್ರೀಟು ಹಾಕಬೇಕು. ಶಾಲಾ ಕಟ್ಟಡ, ಆಸ್ಪತ್ರೆಗಳನ್ನು ರಚಿಸಬೇಕು. ಕರ್ನಾಟಕ ಪೊಲಿ ಟೆಕ್ನಿಕನ್ನು ಇಂಜೀನಿಯರಿಂಗ್ ಕಾಲೇಜಾಗಿ ಪರಿವರ್ತಿಸಬೇಕು. ಸರಕಾರಿ ತರಬೇತಿ ಕಾಲೇಜಿಗೊಂದು ಯೋಗ್ಯ ಕಟ್ಟಡ, ಮೈನ್ಸ್ ಇಂಜೀನಿಯರಿಂಗ್ ಮತ್ತು ಸಾಗರ ವಿಜ್ಞಾನ ತರಬೇತಿ ವರ್ಗಗಳನ್ನು ತೆರೆಯಬೇಕು. ಹಂಚಿನ ಹಾಗೂ ಮಣ್ಣಿನ ಸಂಶೋಧನೆಗಳನ್ನು ಕೈಗೊಳ್ಳಬೇಕು. ಇವೆ ನೊವಲಾದ ಸೂಚನೆಗಳು ಮುಂದಿಡಲ್ಪಟ್ಟವು. ಅಲ್ಲದೆ ಪಟಂದೆ ಬರಲಿರುವ ಸೂಚನೆಗಳ ಪರಿಶೀಲನೆ ಬಗ್ಗೆ ಪ್ರತಿ ಪಕ್ಷಗಳಿಂದ ಓರ್ವ ಪ್ರತಿನಿಧಿಯಂತೆಯೂ, ಜಿಲ್ಲಾ ಬೋರ್ಡು ಅಧ್ಯಕ್ಷ, ಜಿಲ್ಲಾ ಅಭಿವೃದ್ಧಿ ಸಂಘದ ಕಾರ್ಯದರ್ಶಿ, ಮಂಗಳೂರು ನಗರ ಸಭಾಪತಿ ಮತ್ತು ಶಾಸನಾ ಸಭಾ ಹಾಗು ಲೋಕ ಸಭೆಗಳ ಸದಸ್ಯರುಗಳನ್ನೊಳಗೊಂಡ ಒಂದು ಉಪಸಮಿತಿಯು ರಚಿಸಲ್ಪಟ್ಟಿತು.

ಹುಮ್ಸೂರಲ್ಲಿ ಧ. ಕ. ಜಿಲ್ಲಾ ರಾಜಕೀಯ ಪರಿಷತ್ತು—ಧ. ಕ. ಜಿಲ್ಲಾ ರಾಜಕೀಯ ಪರಿಷತ್ತು ಕಳೆದ ತಾ. 29ರಲ್ಲು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಪರಿಷತ್ತನ್ನು ಉದ್ಘಾಟಿಸುತ್ತಾ, ದ್ವಿತೀಯ ಪಂಚವಾರ್ಷಿಕ ಯೋಜನೆಯ ತುರಿತು ಪ್ರಸ್ತಾಪಿಸಿ, ಕೆಲಸಕಾಲಕ್ಕೆ—ಹತ್ತು ವರ್ಷಗಳ ಸರಿಗಾಲದೊಳಗೆ ನವಪ್ರಾಂತ ರಚನೆಯ ಪ್ರಕ್ರಿಯೆನ್ನು ಮುಂದುವರಿಸುವುದು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಹಿತಕರವೆಂದರು. ಸಭಾಧ್ಯಕ್ಷ ಶ್ರೀ ಹನುಮಂತಯ್ಯನವರು ಕೂಡಾ ತಮ್ಮ ಭಾಷಣದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಪ್ರಾಂತಿಕ ವಿಭಜನೆ ಸರಿಯೆನಿಸುವುದಿಲ್ಲವೆಂದರು. ಪ್ರಾಂತರಚನೆಗಾಗಿ ವಿಶಾಲನೆಯನ್ನು ಹರಿಗೊಳ್ಳಬಾರದು. ವಿಶಾಲನೆ ನಿವಾರಣೆಯಾಗದೆ ಪ್ರಾಂತರಚನೆ ಸಲ್ಲದು. ಮೈಸೂರು ಜನತೆಯ ಸಮ್ಮತಿಗೊಳಪಟ್ಟು ವ. ಕ. ಜಿಲ್ಲೆಯ ಜನತೆಗೆ ಮೈಸೂರನ್ನು ಸೇರಿಕೊಳ್ಳುವ ಬಯಕೆಯಿದ್ದರೆ ತಾನದನ್ನು ಸ್ವೀಕರಿಸಿಕೊಳ್ಳಲು ಸಿದ್ಧನಿದ್ದೇನೆ ಎಂದು ಹೇಳಿದರು.

ಆರಂಭದಲ್ಲಿ ಶ್ರೀ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ. ಅವರು ಅತಿಥಿಗಳ ಪರಿಚಯಮಾಡಿಕೊಟ್ಟರು. ಸ್ವಾಗತಾಧ್ಯಕ್ಷ ಶ್ರೀ ಕೆ. ವೇಣು ಗೋಪಾಲ ನಾಯ್ಕರು ಸ್ವಾಗತಭಾಷಣಮಾಡಿದರು ಜತೆ ಕಾರ್ಯದರ್ಶಿ ಶ್ರೀ ಸಿತಲದಾಸ ಸೆಟ್ಟರು ರಾಜಕುಮಾರಿ ಅಮೃತ ಕೌರ್, ಶ್ರೀ ಎ. ಬಿ. ಸೆಟ್ಟಿ, ಶ್ರೀ ಎಸ್. ರಾಧಾಕೃಷ್ಣನ್ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು.

ಪರಿಷತ್ತಿನ ಅಂಗವಾಗಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ಡಾ| ಯು. ಸಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲಸಗಾರರ ಸಂಖ್ಯೆಗಿಂತ ಶಕ್ತಿಯೇ ಮುಖ್ಯ ವೆಂದು ಅವರು ಹೇಳಿದರು. ಮಹಿಳಾ ಸಮ್ಮೇಳನವನ್ನು ಶ್ರೀಮತಿ ಸಾವಿತ್ರಿ ಬಾಯಿ ನಾಗಣ್ಣಗೌಡರು ಉದ್ಘಾಟಿಸುತ್ತಾ, ಇನ್ನು ಮುಂದೆ ಸ್ವತಂತ್ರ ಭಾರತದಲ್ಲಿ ಸ್ತ್ರೀಯರು ವಹಿಸಬೇಕಾಗಿರುವ ಕರ್ತವ್ಯಗಳೇನೆಂಬುದನ್ನು ವಿವರಿಸಿದರು. ಸ್ತ್ರೀಪುರುಷರ ಸಮಾನತೆಯ ಆವಶ್ಯಕತೆಯನ್ನು ಮನಗಂಡಿಸಿ ಸಮ್ಮೇಳನಾಧ್ಯಕ್ಷ ಶ್ರೀಮತಿ ಉಮಾ ವಿ. ಕಾಮತರು ಭಾಷಣವಿತ್ತರು ಅರಂಭದಲ್ಲಿ ಶ್ರೀಮತಿ ಕಮಲಾ ಚಿದಂಬರರಾಯರು ವೀರಸೇನೆಯಲ್ಲಿ ಮಹಿಳೆಯರ ಜವಾಬ್ದಾರಿಯನ್ನು ವಿವರಿಸಿ ಸ್ವಾಗತಭಾಷಣ ಮಾಡಿದರು. ಯುವಕ ಸಮ್ಮೇಳನವು ಶ್ರೀ ಟಿ. ಎ. ಪೈ, ಎಂ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ಸ್ವತಂತ್ರ ರಾಷ್ಟ್ರದ ಭವಿಷ್ಯದ ಯಶಸ್ಸಿಗೆ ಯುವಕರು ಮುಡಿಯಬೇಕೆಂದರು.

ಪರಿಷತ್ ನಿರ್ಣಯಗಳು— ರಾಷ್ಟ್ರ ಕಾರ್ಯದಲ್ಲಿ ಅಕಾಲ ಮರಣಕ್ಕೀಡಾತ್ತಾದವರ ಬಗ್ಗೆ ಮೌನ ಸೂಚಿಸುವ ಆವದಿ ನಿರ್ಣಯಗಳಿಗೆ ಬೆಂಬಲ ವೀಯುವ, ಗೋವಾ ವಿಮೋಚನೆಗೆ ಬೆಂಬಲ ಹಾಗೂ ಪೋರ್ಚುಗೀಸರ ದಬ್ಬಾಳಿಕೆಯನ್ನು ಖಂಡಿಸುವ, ಕರ್ನಾಟಕ ಪ್ರಾಂತ ರಚನೆಯ ಸಂಬಂಧ ಪ್ರಾದೇಶಿಕ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಧೋರಣೆ ಸಮರ್ಥಿಸುವ, ಪ್ರಾಂತ ರಚನೆಯಿಂದ ಪ್ರಭುತ್ವ ಸಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳ ಕಾರ್ಯಾಚರಣೆಗೆ ಭಾದಕವಿಲ್ಲವೆಂದು ಸೂಚಿಸುವ ಇತ್ಯಾದಿ ನಿರ್ಣಯಗಳಾದುವು.

ಕಾಪು ಪಡುಪಂಚಾಯತ ಬೋರ್ಡಿನ ಕಡೆಯಿಂದ ಕಾಪು ಸಮೀಪದ ನದಿಗೆ ಪಾಕಲಾದ ಅಶೋಕ ಸಂತೆಸನ್ನು ಕಳೆದ ತಾ 24 ರಲ್ಲು ಉಡುಪಿ ತಹಶಿಲ್ದಾರ್ ಶ್ರೀ. ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ ಪೈ. ಎಮ್. ಎಲ್. ಎ, ಅವರು ಉದ್ಘಾಟಿಸಿದರು, ಶ್ರೀ ಮುಕುಂದರಾಯ ಶೆಟ್ಟಿಯವರು ಸ್ವಾಗತಭಾಷಣಮಾಡಿದರು

ಶಿರ್ವ—ಬಂಟರ ಯಾನೆ ನಾಡವರ ಸಿಧ್ಯವಳಕ ಸಂಘ, ರಿಜಿಸ್ಟರ್ಡ್, ಇದರ ಮಹಾ ಸಭೆಯು ವಕೀಲ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ತಾ 25 ರಲ್ಲಿ ಸೇರಿ ಹಿಂದೂ ಹೈಸ್ಕೂಲು ಮತ್ತು ಇತರ ಶಾಲೆಗಳ ಸರ್ವತೋಮುಖ ಅಭಿವೃದ್ಧಿ ಬಗ್ಗೆ ತೀವ್ರ ಕಾರ್ಯಕ್ರಮ ಕೈಗೊಳ್ಳುವ ವಿಷಯ ಪರ್ಯಾಲೋಚಿಸಿದುದಲ್ಲದೆ ಈ ಕೆಳಗಿನ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ವಕೀಲ ಶ್ರೀ ಕೆ. ಜೆ. ಬಲ್ಲಾಳ ಅಧ್ಯಕ್ಷ, ಡಾ| ವೈ. ಆರ್. ಸೆಟ್ಟಿ, ಉಪಾಧ್ಯಕ್ಷ, ಶ್ರೀ ಯಸ್. ಅಣ್ಣಯ್ಯ ಹೆಗ್ಡೆ, ಸೆಕ್ರೆಟರಿ, ಶ್ರೀ ಯಂ. ರಾಜು ಹೆಗ್ಡೆ, ಕೋಶಾಧಿಕಾರಿ, ಕಲ್ಲು ಚೆಟ್ಟಿ ಗುತ್ತು ಶ್ರೀ ವಾಸು ಸೆಟ್ಟಿ, ಸೂಡಾ ಪರೇಲ್ ಶ್ರೀ. ಶೀನಪ್ಪ ಹೆಗ್ಡೆ, ಪಯ್ಯಾರು ಶ್ರೀ ಸುಬ್ರಣ್ಣ ಸೆಟ್ಟಿ, ಕಾಫಿ ಪ್ಲಾಂಟರ್ ಶ್ರೀ ಕೆ. ಗಣಪಯ್ಯ ಸೆಟ್ಟಿ ಮತ್ತು ಶ್ರೀಮತಿ ಲೀಲಾವತಿ ರೈ, ಇವರು ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಶ್ರೀ ಯಸ್. ಅಣ್ಣಯ್ಯ ಹೆಗ್ಡೆಯವರನ್ನು ಶಿರ್ವಾ ಹಿಂದೂ ಹೈಸ್ಕೂಲು ಮತ್ತು ಸಂಘದ ಇತರಶಾಲೆಗಳ ಕರೆಸ್ಪೋಂಡೆಂಟರಾಗಿಯೂ ಸರ್ವಾನು ಮತದಿಂದ ಆರಿಸಲ್ಪಟ್ಟಿತು. ಎಲ್ಲಾ ಶಾಲೆಗಳನ್ನು ಯಥಾ ಪ್ರಕಾರ ನಡೆಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಗಿದೆ.

ಹಿರೆಬೆಟ್ಟು:—ಕಳೆದ ತಾ. 19ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ಹಿರೆಬೆಟ್ಟಿನಲ್ಲಿ ಸ್ಥಾನಿಕ ಯೋಜನೆ ರೀತ್ಯಾ ಕಟ್ಟಲ್ಪಟ್ಟ ಎಯಿಡೆಡ್ ಎಲಿಮೆಂಟರಿ ಶಾಲೆಯ ಕಟ್ಟಡವನ್ನು ಉದ್ಘಾಟಿಸಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮೆನೇಜರ್ ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ಸ್ವಾಗತಮಾತುಗಳನ್ನಾಡಿ ಸಂದೇಶವಾಚನಮಾಡಿದರು. ಶಾಲಾ ಕಟ್ಟಡಕ್ಕೆ ರೂ ಪಾಯಿ 1000- ಕ್ಕಿಂತ ಹೆಚ್ಚಿಗೆ ಧನಸಹಾಯವಿತ್ತ ಶ್ರೀಮತಿ ಲಕ್ಷ್ಮಿ ಯಾನೆ ವೀರಮ್ಮ ಹೆಗ್ಗಡ್ತಿ (ಪಟೇಲ್ ಶ್ರೀ ಎಚ್. ತಿಮ್ಮಪ್ಪ ಹೆಗ್ಡೆರ ತಾಯಿ) ಮತ್ತು ಶ್ರೀಗಳಾದ ಎಚ್. ಸದಾಶಿವ ಹೆಗ್ಡೆ ಮತ್ತು ರಾಮಚಂದ್ರ ಹೆಗ್ಡೆಯವರ ತಂದೆ ಕೀರ್ತಿಶೇಷ ಚಂದಯ್ಯ ಹೆಗ್ಡೆಯವರ ಭಾವಚಿತ್ರಗಳನ್ನು ಡಾ| ಸಿ. ಆರ್. ನಾಯಕರು ಅನಾವರಣ ಮಾಡಿದರು. ಶ್ರೀಗಳಾದ ಯು. ಕೃಷ್ಣರಾವ್, ಎ. ಜೆ. ಆಳ್ವ, ಪಂಡಿತ್ ಟಿ. ಎನ್. ಕೇಳುಸಂಬಿಯಾರ್, ಶ್ರೀಪತಿ ಆಚಾರ್, ಎಂ. ಗೋವಿಂದ ಸೆಟ್ಟಿ ಮೊದಲಾದವರು ಭಾಷಣವಿತ್ತರು.

ಕುದಿಗ್ರಾಮ—ಜಯ ಭಾರತಿ ಕಲಾಮಂದಿಯ ವರ್ದಂತ್ಯುತ್ಸವವು ಕಳೆದ ತಾ. 15 ರಲ್ಲಿ ಶ್ರೀ ಕೆ. ಸಣ್ಣಯ್ಯ ನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಗಣಪಯ್ಯ ಸೆಟ್ಟಿ, ಪಾಂಡುರಂಗ ಶಾಸ್ತ್ರಿ ಮೊದಲಾದವರ ಭಾಷಣಗಳಾದುವು. ಶ್ರೀ ಕೆ. ಜಯವರನ ಕಾಟಿಂ ತಾಯರು ಪಂದನೆಗಳನ್ನಿತ್ತರು.

ಕಳ್ಳಂಜ ಚಾಳಿಲು—ಇಲ್ಲಿಯ ಯುವಕರ ಸಂಘದ ಗ್ರಾಮಬಂಧು ಪತ್ರ ಪತ್ರಿಕೆಯ ವಿಶೇಷಾಂಕವು ಮುಂದಿನ ಜುಲಾಯಿ ತಿಂಗಳಲ್ಲಿ ಪ್ರಕಟವಾಗಲಿದ್ದು ಅಭಿಮಾನಿ ಲೇಖನ, ಕಥೆ, ಕವಿತೆ ಮೊದಲಾದುವನ್ನು ಕಳುಹಿಸಬಯಸುವವರು ಜೂನ್ ತಾ 10 ರೊಳಗಾಗಿ ಸಂಘದ ಕಾರ್ಯದರ್ಶಿಯವರಿಗೆ ಕಳ್ಪಿಸಬಹುದು.

ಕಡಿಯೊರು ಸ್ಥಳೀಯ ಹಾ ಎ ಶಾಲಾ ಪಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ತಾ. 26ರಲ್ಲಿ ಶ್ರೀ ಟಿ. ಎ. ಪೈ, ಎಮ್ ಎಲ್. ಎ; ಅವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು.

ಕಲ್ಯಾಣಪುರ-ಸಂತೆಕಟ್ಟೆ ಶ್ರೀ ಲಕ್ಷ್ಮಿ ವೆಂಕಟೇಶ ಯಕ್ಷಗಾನ ಕಲಾ ಮಂಡಳಿಯ ವಾರ್ಷಿಕೋತ್ಸವವು ಕಳೆದ ತಾ 21 ರಲ್ಲು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತ್ತು. ಶ್ರೀ ಕೃಷ್ಣ ವಿವಾಹ ವೆಂಬ ನಾಟಕಾಭಿನಯವಿತ್ತು.

ಭೈರಂಜೆ—ಸ್ಥಳೀಯ ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 13 ರಲ್ಲು ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಕುರುಕಾಲು ಸ್ಥಳೀಯ ಮಹಿಳೋದ್ಧಾರ ಹಾಗೂ ಶಿಶು ಸಂಗೋಪನಾ ಸಮಿತಿ ಆಶ್ರಯದಲ್ಲಿ ಕಳೆದ ತಾ. 25ರಲ್ಲಿ ಶ್ರೀಮತಿ ಸ್ವೊತೆಸ್ತಾ ಪ್ರೇರರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ಜರಗಿ ವಿವಿಧ ಕಾರ್ಯಕ್ರಮಗಳಾದುವು.

ಉಡುಪಿ ತಾಲೂಕು ಮಹಿಳಾ ಕೇಂದ್ರಗಳ ಮೇಲ್ವಿಚಾರಿಣಿಗೆ ಶ್ರೀಮತಿ ಕಮಲಾರಾಯರು ಹಾಜರಿದ್ದರು. ಸಭಾರಂಭದಲ್ಲಿ ಗ್ರಾಮ ಸೇವಾ ನಿರತರಾದ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರು ಸ್ಥಳೀಯ ಕೇಂದ್ರಕ್ಕೆ ಜನತೆಯ ಬೆಂಬಲವನ್ನು ಕೋರಿ ಭಾಷಣವಿತ್ತರು. ಶ್ರೀ ಎಮ್. ಎನ್. ಮೆನೋನ್, ಅವರು ಕನ್ನಡ ಚಲಚಿತ್ರದ ಕುರಿತು ಇಂಗ್ಲಿಷಿನಲ್ಲಿ ಭಾಷಣವಿತ್ತರು. ಶ್ರೀ ವಾಸು ಸೆಟ್ಟರು ಕನ್ನಡದಲ್ಲಿ ತರ್ಜುಮೆ ಮಾಡಿದರು.

ಅಂಬಲಪಾಡಿ— ಉಡುಪಿ ಕಲಾವೃಂದದ ಅಂಬಲಪಾಡಿ ಶಾಖೆಯ ಆಶ್ರಯದಲ್ಲಿ ಕಳೆದ ತಾ 29 ರಲ್ಲು ಸಾಹಿತ್ಯೋತ್ಸವವು ಶ್ರೀ ಬನ್ನಂಜೆ ರಾಮಾಚಾರ್ಯರ ಹಿರಿತನದಲ್ಲಿ ಯಶಸ್ವಿಯಾಗಿ ಜರಗಿತು.

ಉಡುಪಿ

ವಿದಾಯ ಸತ್ಕಾರ ಸಮಾರಂಭ—ಉಡುಪಿ ಪ್ರೆಸ್ಸಿನ ಮೆನೇಜರ್ ರೆ| ಬ್ರದರ್ ಅಂಡ್ರ್ಯೂ, ಬ. ಸಿ, ಅವರು ವರ್ಗವಾಗಿ ಹೋಗಲಿರುವ ಕಾರಣ ಅವರಿಗೆ ವಿದಾಯ ಸತ್ಕಾರವನ್ನಿಯುವ ಸಮಾರಂಭವೊಂದು ಕಳೆದ ತಾ 29ರಲ್ಲು ಸೈಂಟ್ ಸಿಸಿಲೀಸ್ ಶಾಲಾ ಭವನದಲ್ಲಿ ರೆ| ಫಾ| ಜೆ. ಎಮ್. ಲೋಬೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಸಿ. ರೇಗೋರವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ರೋಕ್ ಫೆರ್ನಾಂಡೀಸರು ಪ್ರಮುಖ ಭಾಷಣಕಾರರಿದ್ದು, ಮುಖ್ಯ ಅತಿಥಿಯ ಜನಪ್ರಿಯತೆ, ಜನಸೇವೆ ಸಂಯಮಿನಯಾದಿಗುಣಗಳನ್ನು ವಿವರಿಸಿದರು. ಡಾ| ಸೋಮ ನದಾಸ ಪೈ, ಶ್ರೀಗಳಾದ ವಿಲಿಯಮ್ ಅಲ್ವ, ಜಗನ್ನಾಥ ಸೆಟ್ಟಿ, ಮಿಸ್. ನಾನ್ಸಿ ಆಂದ್ರಾಡೆ, ಫಾ| ಕರ್ನೆಲಿಯೊ ಮೊದಲಾದವರು ಕೂಡಾ ಮುಖ್ಯ ಅತಿಥಿಯ ಗುಣಗಾನ ಮಾಡಿದರು. ಮುಖ್ಯ ಅತಿಥಿಯ ಆಭಾರ ಸೂಚಕ ಮಾತುಗಳಾಗಿ, ಸಭಾಧ್ಯಕ್ಷರ ಭಾಷಣವಾಯಿತು. ಮುಖ್ಯಾತಿಥಿಗೆ ರಿಸ್ಟುವಾಚು ಪಾರಿತೋಷಣವೀಯಲಾಯಿತು. ಸರ್ವ ಜಾತಿಯ ನಾಗರಿಕರ ನೇಕರು ಆಮಂತ್ರಿತರಾಗಿದ್ದರು.

ಉದ್ಘಾಟನೆ - ಉಡುಪಿಗೆ ಸಮೀಪದ ಅರ್ತ್ಯತ್ತಗುಂಡಿ ಸಂಕವನ್ನು ಕಳೆದ 19ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ತಹಶಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಹುಟ್ಟುಹಬ್ಬ—ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ತಮ್ಮ 36ನೆ ಹುಟ್ಟು ಹಬ್ಬದ ದಿನವನ್ನು ಕಳೆದ ತಾ 22ರಲ್ಲು ವೈಭವದಿಂದ ಆಚರಿಸಿದರು.

ನಡಿಯುವ ಚಿತ್ರ.

ಕನ್ನಡ ಚಿತ್ರರಂಗದಲ್ಲಿ ಹೊಸ ಚರಿತ್ರೆ ನಿರ್ಮಾಣ ಮಾಡಿದ

ಸಂತ ಸಖಿ

ಪಂಡರೀ ಬಾಯಿ, ಪೈನಾನಾತಿ; ಸಿ. ಕೆ. ಸರಸ್ವತಿ, ಸುಮತಿ, ಕಮಲಾ, ಹನುಮಂತಾಚಾರ್, ಎಂ. ವಿ. ಧಾನ್ ಮೊದಲಾದವರು.

ಬರುವ ಚಿತ್ರ ಮರ್ಮಯೋಗಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ

ಮಂಗಳೂರು

ಶ್ರೀ ಕೆ. ಆರ್. ಗುರುಗಳ ನಿಧನ-ಮಂಗಳೂರು ಪೈಮಸಿ ಬೇಂಕಿನ ಜನ್ಮದಾತರೂ, ಜಿಲ್ಲಾ ಬಿಲ್ಲವ ಯೂನಿಯನ್ ಕಾರ್ಯದರ್ಶಿಗಳಾಗಿ ಸಮಾಜ ಸೇವೆಯನ್ನೂ ಶ್ರೀ ಗೋಕರ್ಣನಾಥ ದೇವಸ್ಥಾನದ ಪೇಷಮಾಗಿಯನ್ನೂ ಶ್ರದ್ಧಾ ಭಕ್ತಿಪೂರ್ವಕ ಸಲ್ಲಿಸಿದ ಶ್ರೀ ಕೆ. ಆರ್. ಗುರು ಅವರು ತನ್ನ 60ನೇ ವರ್ಷ ಪ್ರಾಯದಲ್ಲಿ ಹೃದ್ರೋಗದಿಂದ ನಿಧನವೊಂದಿದರೆನ್ನಲು ವಿಷಾದಿಸುತ್ತೇವೆ.

ಪತ್ರಿಕಾ ಸುದ್ದಿಗಾರರೊಡನೆ ಕೇಂದ್ರ ರೈಲ್ವೆ ಮಂತ್ರಿಗಳು—ಕೇಂದ್ರದ ರೈಲ್ವೆ ಮತ್ತು ಸಾರಿಗೆ ಸಂಪರ್ಕ ಶಾಖೆಯ ಮಾನ್ಯ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕಳೆದ ತಾ 30ರಲ್ಲು ಜೊಂಬಾಯಿಗೆ ತೆರಳುವ ಮುನ್ನ ಬಜ್ಪೆ ವಿಮಾನ ನಿಲ್ದಾಣದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತುಕತೆ ನಡೆಸುತ್ತಾ, ಈಗಿನ ಯೋಜನೆಯಂತೆ ಕಾಸರಗೋಡಿನಿಂದ ನಿಲ, ಬಂಟ್ವಾಳಕ್ಕಾಗಿ ಹೋಗುವ ರಾಷ್ಟ್ರೀಯ ಹೆದ್ದಾರಿಯನ್ನು ಕಾಸರಗೋಡಿನಿಂದ ಕರಾವಳಿ ಮಾರ್ಗವಾಗಿ ಮಂಗಳೂರನ್ನು ಹಾದು ಮೋಗುವಂತೆ ತಿರುಗಿಸುವ ಕುರಿತು ಆಲೋಚನೆ ಮಾಡಲಾಗುವುದು. ಇದರಿಂದಾಗಿ ನೇತ್ರಾವತಿ, ತಲಪಾಡಿ, ಶಿರಿಯ ಮೊದಲಾದ ನದಿಗಳಿಗೆ ಸೇತುವೆ ಹಾಕುವ ವ್ಯವಸ್ಥೆಯಾಗಲಿಬೆ ಎಂದು ಹೇಳಿದರು.

ವಾರ್ಷಿಕೋತ್ಸವ— ಸ್ಥಳೀಯ ಶ್ರೀ ಮಂಜುನಾಥ ಕೃಪಾ ಪೋಷಿತ ನಾಟಕ ಸಭೆಯ ವಾರ್ಷಿಕೋತ್ಸವವು ಕಳೆದ ತಾ 22 ರಲ್ಲು ಶ್ರೀ ಟಿ. ಎ. ಪೈ, ಎಂ ಎಲ್. ಎ, ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಎಲ್. ಸೆಟ್ಟರು ಸ್ವಾಗತಿಸಿದ ಬಳಿಕ ವರದಿ ವಾಚನ, ಬಹುಮಾನ ವಿತರಣೆ ನಡೆಯಿತು. ಅಧ್ಯಕ್ಷರು ವಿಚಾರಪರ ಭಾಷಣಮಾಡಿ ಕನ್ನಡಿಗರು ಕನ್ನಡದ ಸೇವೆಮಾಡಿ ಅದನ್ನು ಬೆಳೆಸಬೇಕೆಂದರು.

ಉದಕ ಮಂಡಲದಲ್ಲಿ ಮಕ್ಕಳ ಕೂಟಉದಕ ಮಂಡಲ ಮೊದರ್ನ್ ಹಿಂದೂ ಹೊಟೆಲ್ ಪಾಸ ಪ್ರಕಾರದಲ್ಲಿ ಕಳೆದ ತಾ. 23ರಲ್ಲಿ ಮಕ್ಕಳಕೂಟ ಸಮಾರಂಭವು ಸೌರಾಷ್ಟ್ರ ರಾಜಪ್ರಮುಖರಾದ ನವ ನಗರದ ಜಾಂಸಾಹೇಬ್ ಮಹಾರಾಜರ ಅಧ್ಯಕ್ಷತೆಯಲ್ಲಿ ರಜಗಿತು. ಮದ್ರಾಸಿನ ಆರ್ಥಿಕಮಂತ್ರಿ ಶ್ರೀ ಸಿ. ಸುಬ್ರಮ್ಮಣ್ಯಂ, ಆಂಧ್ರ ಪ್ರಾಂತದ ರೆವಿನ್ಯೂ ಬೋರ್ಡ್ ಮೆಂಬರ್ ಶ್ರೀ ಎಂ. ಪಿ. ಸೈ, ಮದ್ರಾಸಿನಡಾಸಂಜೀವಿ, ಜೊಂಬಾಯಿಯ ಶ್ರೀ ಕಾಂತಿಲಾಲ್ ಟಿ. ದೇಸಾಯಿ ಮೊದಲಾದವರು ಸಮಾರಂಭಕ್ಕೆ ಚೆತ್ತೈಸಿದ್ದರು. ಶ್ರೀ ಸೀತಾರಾಮ ರಾಯರು ಮುಖ್ಯ ಅತಿಥಿಗಳನ್ನೂ ಇನ್ನಿತರರನ್ನು ಸ್ವಾಗತಿಸಿದರು, ಮಕ್ಕಳ ಕೂಟದ ಸಮಿತಿಯ ಚೆರ್‌ಮೆನ್ ಡಾ| ಕೃಷ್ಣರಾಯರು ಸುಸ್ವಾಗತವನ್ನು ಬಯಸಿದರು. ಸಮಾರಂಭದ ಸಭಾಂಗಣ ಪರ್ಪಡಿಸಿದ ಪಂದ್ಯಾಟದಲ್ಲಿ ಗೆದ್ದ ಬಾಲ ಬಾಕ್ಸರಿಯರಿಗೆ ಬಹುಮಾನ ವಿತರಣೆಯಾಯಿತು. ಸಭಾಧ್ಯಕ್ಷರು ಶ್ರೀ ಸೀತಾರಾಮ ರಾಯರ ಮಕ್ಕಳಕೂಟ ಸಮಾರಂಭದ ಯೋಜನೆಯನ್ನು ಪ್ರಶಂಸಿಸಿದರು. ಶ್ರೀ ಸಿ. ಆರ್. ರಾಯರು ವಂದನೆಗಳನ್ನರ್ಪಿಸಿದರು.

ನೋಟೀಸು

ಜಿಲ್ಲಾ ಕಾಂಗ್ರೆಸ ಸಮಿತಿಗಳ ಅಧ್ಯಕ್ಷರು, ಕಾರ್ಯದರ್ಶಿಗಳ ಮತ್ತು ಕರ್ನಾಟಕ ಪ್ರ. ಕಾ. ಸ. ಕಾರ್ಯಕಾರಿ ಮಂಡಳದ ಸದಸ್ಯರ ಪರಿಷತ್ತು ದಿನಾಂಕ ೭-೬ ೫೫ ರಂದು ಮುಂಜಾನೆ ೮ ಗಂಟೆಗೆ ಬೆಳಗಾಂ ಜಿಲ್ಲಾ, ಬೈನಾಪುರದಲ್ಲಿ ಕೂಡುವದು.

ಬುಧವಾರ ತಾ. ೮-೬-೫೫ ರಂದು ಸಾಯಂಕಾಲ ೨ ಗಂಟೆಗೆ ಕ. ಪ್ರ. ಕಾಂ. ಸಮಿತಿಯ ವಿಶೇಷ ಸಭೆ ಜರಗಲಿದೆ. ಎಲ್ಲ ಸದಸ್ಯರು ಬರಬೇಕಾಗಿ ವಿನಂತಿ.

ಜಿ. ಕೆ. ಮೊಗಲಿ
ಪ್ರಧಾನ ಕಾರ್ಯದರ್ಶಿ.

CANARA WORKSHOPS LIMITED
MANGALORE-3.

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್, ಮಂಗಳೂರು-3.

ನವಯುಗ, ವಾರಪತ್ರಿಕೆ ❀ ಉಡುಪಿ ತಾ. 2-6-1955 ❀ ಉಚಿತ ಅನುಬಂಧ

ದೇಶೀಯ ಸ್ಪ್ರಿಂಗ್ ಉತ್ಪಾದನೋದ್ಯಮ

ಮುವತ್ತೈದು ವರ್ಷಗಳ ಮುನ್ನಡೆ

ಭಾರತ ಸರಕಾರದ ಸಾರಿಗೆ ಮತ್ತು ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ ದಿ ಕೆನರಾ ವರ್ಕ್‌ಶಾಪ್ಸ್ ಲಿಮಿಟೆಡ್‌ನ ಒಟೋ ಸ್ಪ್ರಿಂಗ್ ಶಾಖೆಯ ವಿಸ್ತರಣೆಯ ಆರಂಭೋತ್ಸವ ಮತ್ತು ಶೋಟ್ ಪೀನಿಂಗ್ ಯಂತ್ರದ ಉದ್ಘಾಟನೆ

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್, ಇದರ ಮೆನೇಜಿಂಗ್ ಡೈರೆಕ್ಟರರಾದ
ಶ್ರೀ ವಿ. ಎಸ್. ಕುಡ್ವರು.

ರಾಜಕೀಯ, ಸಾಹಿತ್ಯ, ವೈದ್ಯಕೀಯ ಮತ್ತು ಕಾನೂನು ಮೊದಲಾದ ಕ್ಷೇತ್ರಗಳಲ್ಲಿ ತನ್ನ ಆಟಿಯಬದಿ ಉತ್ತರ ಭಾರತಕ್ಕಿಂತ ಹೆಚ್ಚು ನಾಯಕರನ್ನು ದಕ್ಷಿಣ ಭಾರತವು ನಿರ್ಮಿಸಿದೆ ಎಂಬುದು ಚರಿತ್ರೆಯಿಂದ ತಿಳಿದು ಬರುತ್ತದೆ. ದಕ್ಷಿಣ ಭಾರತದ ಉದ್ದಿಮೇ ಅಭಿವೃದ್ಧಿಗೂ ಕೆಲ ಮಂದಿಯ ಜತುರ ಮೂಲಕೋಧನಾ ಸಾಮರ್ಥ್ಯವೇ ಕಾರಣ ಸ್ವಾತಂತ್ರ್ಯ ದೊರೆತ ಆಲ್ಪಾವಧಿಯೊಳಗೆ, ರಾಷ್ಟ್ರದ ಉದ್ದಿಮೆ ಪ್ರಗತಿ ರಂಗದಲ್ಲಿ, ವಿಶೇಷ ಶ್ಲಾಘನೆ ಗಳಿಸುವಂತಹ ಗಣನೀಯ ಅಭಿವೃದ್ಧಿಯನ್ನು ದಕ್ಷಿಣ ಭಾರತವು ಸಾಧಿಸಿದೆ. ನ್ಯಾಯ ಪ್ರಕಾರ ಉದ್ದಿಮೆಯ ಮೂಲಕರ್ತರೆಂದು ಹೇಳಿಸಿಕೊಂಡಿರುವ ಹಲವರು ದಕ್ಷಿಣದಲ್ಲಿದ್ದಾರೆ; ಆಟೊಮೊಬೈಲ್ ಸಾರಿಗೇ ವ್ಯವಸ್ಥೆ ಮತ್ತದಕ್ಕೆ ಸಂಬಂಧಿಸಿದ ಇತರ ಉದ್ಯಮಗಳ ಮೂಲ ಶಿಲ್ಪಿಯೊಬ್ಬರು ತನ್ನಲ್ಲಿದ್ದಾರೆಂಬ ಸಹಜ ಹೆಗ್ಗಳಿಕೆ ದಕ್ಷಿಣ ಕನ್ನಡದ ಸಾಲಿಗೂ ಇದೆ. ಆ ಮೂಲ ಶೋಧಕ ಮತ್ತು ನಾಯಕನ ಕಡೆಗೆ ಈ ಸುರವಣಿಯ ಮೂಲಕ ಪ್ರಕಾಶ ಚೆಲ್ಲಲಾಗಿದೆ.

ವಿಶೇಷ ದಿನ

ಈ ದಿನ—1955ನೇ ಮೇ ತಾ 30—ದಕ್ಷಿಣ ಕನ್ನಡದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಉಲ್ಲೇಖಿಸಲ್ಪಡಬೇಕಾದ ದಿನ. ತೀರಾ ಸಾಮಾನ್ಯ ರೀತಿಯಿಂದಾರಂಭಿಸಿ, ಈಗ ಕೆಲವೇ ಕಂಪೆನಿಗಳಿಗೆ ಮಾತ್ರ ಸಾಧ್ಯವಾಗಿರುವಂತಹ ಉಚ್ಚ ಮಟ್ಟಕ್ಕೇರಿ, ವಿಶಿಷ್ಟ ಪ್ರಕಾರ ಸರಕಾರ ಮತ್ತು ಜನತೆಯ ವಿಶ್ವಾಸಕ್ಕೆ ಪಾತ್ರವಾಗಿರುವ "ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್, ಮಂಗಳೂರು" ಇದರ ವಿಸ್ತರಣಾ ಹೊಸ ವಿಭಾಗವನ್ನು ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಇಂದು ಉದ್ಘಾಟಿಸುತ್ತಾರೆ.

ಕೆನರಾ ವರ್ಕ್‌ಶೋಪ್ಸಿನ ಈ ಹೊಸ ವಿಸ್ತರಣಾ ವಿಭಾಗವು ಮುಖ್ಯತಃ ಸ್ಪ್ರಿಂಗ್ ಉತ್ಪಾದನೆಯ "ಕ್ವಲಿಟಿ ಕಂಟ್ರೋಲ್ (quality control)"ಗಾಗಿ ಇದೆ. ಅತಿ ಹೆಚ್ಚಿನ "ಲೀಫ್ ಸ್ಪ್ರಿಂಗ್"ಗಳ ಉಪಯೋಗ ಸಡೆಯುವ ವಿಭಾಗವೆಂದರೆ ರೈಲ್ವೆಯಾದ್ದರಿಂದ ಸಾಮಾನ್ಯ ರೈಲ್ವೆ ಮಂತ್ರಿಗಳಿಂದಲೇ ಅದರ ಉದ್ಘಾಟನೆ ನೆರವೇರುವುದು ಸಮಂಜಸವಿದೆ. "ಸುಪೀರಿಯರ್" ಸ್ಪ್ರಿಂಗುಗಳನ್ನು ತಯಾರಿಸುತ್ತಿರುವ "ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್, ಮಂಗಳೂರು" ಇದರ ವರ್ಕ್‌ಶೋಪ್ಸ್ ಮತ್ತು ರಿಪೇರಿಯಲ್ಲಿ ಇನ್ನೂರಲ್ಲೇ ಅತ್ಯಾಧುನಿಕ ಯಂತ್ರೋಪಕರಣಗಳಿವೆ. ಅದರ ಸುಟ್ಟ, ಗುಣ ಮತ್ತು ಬ್ಯಾಳಿಕೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಸ್ಪ್ರಿಂಗುಗಳಿಗೆ ಸಮಾನವಾದ ಸ್ಪ್ರಿಂಗುಗಳನ್ನು ತಯಾರಿಸಬೇಕೆಂಬ ಸಮರ್ಥಾಕಾಂಕ್ಷೆಯಿಂದಲೇ ಸ್ಪ್ರಿಂಗುಗಳ ಕ್ವಲಿಟಿ ಕಂಟ್ರೋಲ್ ಸುಟ್ಟಿಗೆ ಉಚ್ಚತೆಯ ಪರಮಾವಧಿಯಾಗಿರುವ "ಶೋಟ್ ಪೀನಿಂಗ್" ಯಂತ್ರವನ್ನು ಅವರೀಗ ಸಂಪೂರ್ಣಪಕರಣ ಸಮೇತ ಪ್ರತಿಷ್ಠಾಪಿಸುತ್ತಿದ್ದಾರೆ.

ಅವರು ಸ್ಪ್ರಿಂಗುಗಳನ್ನು ಸರಿಗೊಳಿಸುವ ಪ್ರಯೋಗವನ್ನು ಸ್ವತಃ ಮಾಡಲಾರಂಭಿಸಿದರು. ಕಾಲ, ಸತತ ಪರಿಶ್ರಮ, ಉದ್ದಿಮೆ ಮತ್ತು ಪ್ರಯೋಗಾನುಭವವು, ಆಟೊಮೋಟಿವ್ ಸ್ಪ್ರಿಂಗುಗಳನ್ನು ತಯಾರಿಸುವ ಸಾಮರ್ಥ್ಯತೆಗಳನ್ನು ಮಾಡಿ ನೋಡುವ ಪ್ರಯತ್ನಕ್ಕೇನೇ ಅವರನ್ನೆಳಸಿತು; 1920ರಲ್ಲಿ ಅವರಿದನ್ನು ನೆರವೇರಿಸಿದರು. ಹೀಗಾಗಿ ಭಾರತದಲ್ಲಿ ಆಟೊ—ಸ್ಪ್ರಿಂಗುಗಳ ತಯಾರಿಯ ಮೂಲಕರ್ತರೆಂ ತಾಪ್ತ ಎಂದು, ಸಿ. ಪಿ. ಸಿ.ಯವರಿಂದ ಹೆಗ್ಗಳಿಕೆಪಟ್ಟಿರುದು ಸ್ವಾಭಾವಿಕ ವಸ್ತುಸ್ಥಿತಿ.

ಶ್ರೀ ಕಾಮತ್—ಶ್ರೀ ಕುಡ್ವರ ಪ್ರವೇಶ

ಪ್ರಾರಂಭಿಸಲ್ಪಟ್ಟಾಗಿನಿಂದ ಸಿ. ಪಿ. ಸಿ. ಪ್ರಥಮ ರೋಕ ಯುದ್ಧದ ಹೊತ್ತಿತಕ್ಕೇಡಾಯಿತು. ಆಟೊಮೊಬೈಲ್ ಭಾಗೋಪಭಾಗಗಳ ಸರಬರಾಯಿ ಸ್ಥಿತಿ ಬಾಳಾಯಿತು. ದೇಶದಲ್ಲಿದ್ದ ಸಾಮಾನ್ಯ ಆರ್ಥಿಕ ದುಸ್ಥಿತಿ ಮತ್ತು ಇತರ ವಿದ್ಯಮಾನಗಳು ಅಡಳಿತಗಾರರ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸಿದುವು ಈ ರೀತಿ ಕಂಪೆನಿಯ ಆಡಳಿತ ವರ್ಗದಲ್ಲೆದ್ದ ಸಮಸ್ಯೆಗಳಿಂದಾಗಿ ಮೆನೇಜ್‌ಮೆಂಟನ್ನಲ್ಲಿ ಬದಲಾವಣೆಯಾಗಬೇಕಾದುದು ಅನಿವಾರ್ಯವಾಯಿತು. ಮಾಲುಗಾರರ ಒತ್ತಾಯಕ್ಕೊಳಗಾಗಿ ಶ್ರೀ. ವಿ. ಎಸ್. ಕಾಮತರು ಆಡಳಿತೆಯ ಸೂತ್ರ ವಹಿಸಿಕೊಳ್ಳಬೇಕಾಯಿತು. ಸಂಬಂಧದ ಅಲ್ಲಾದ ಈ ಬದಲಾವಣೆಯಿಂದ ಕಂಪೆನಿಯಲ್ಲಿ ಸಂಚಲನವುಂಟಾಯಿತು ಶ್ರೀ. ಕಾಮತರ ಅವಿಶ್ರಾಂತ ಮತ್ತು ಅಜೇಯ ಪ್ರಯತ್ನಗಳ ಪರಿಣಾಮವಾಗಿ ಕಂಪೆನಿಯ ಶಕ್ತಿಯು ಎತ್ತರದಿಂದ ಎತ್ತರಕ್ಕೆ ಸಿರುತ್ತಾ ಹೋಯಿತು. ಬಸ್ಸು ಸರ್ವಿಸು ದಾದಿಗಳು ಹೆಚ್ಚಾದುವು. ಕಂಪೆನಿಯಲ್ಲಿ ಪರಿಣಾಮಕಾರಿ ಆಡಳಿತ ವಿಧಾನ ಬಂತು; ವರ್ಕ್‌ಶೋಪುಗಳು ವಿಸ್ತಾರಗೊಂಡವು; ಸಿ. ಪಿ. ಸಿ. ಮತ್ತು ಪ್ರಗತಿಪಥದಲ್ಲಿ ಹೆಜ್ಜೆಯಿಟ್ಟಿತು.

1926 ರಲ್ಲಿ ಶ್ರೀ ವಿ. ಎಸ್. ಕುಡ್ವರ ಪ್ರವೇಶವಾಯಿತು—ಸಿ. ಪಿ. ಸಿ. ಯ ಇಂಜಿನಿಯರ್-ಇನ್ ಚಾರ್ಜ್ ಆಗಿ ಅವರು ವರ್ಕ್‌ಶೋಪ್ಸಿನ ಪೂರ್ಣಾಧಿಕಾರ ವಹಿಸಿಕೊಂಡರು.

ಮೋಟಾರು ವಾಹನಗಳ ತಯಾರಿಕೆಯ ಕಡೆಗಿನ ಪ್ರಾಮುಖ್ಯ ಮತ್ತು ಮೊದಲ ಹೆಜ್ಜೆಯೆಂದು ಈ ಕಾಲದಲ್ಲಿ ಪರಿಗಣಿಸಲ್ಪಟ್ಟಿರುವ, ಸಿ. ಕೆ. ಡಿ. ಸ್ಥಿತಿಯ ಬಸ್ಸುಗಳ ಆಮದನ್ನು ಭಾರತದಲ್ಲಿ ಸರ್ವ ಪ್ರಥಮವಾಗಿ ಆರಂಭಿಸಿದವರು ಪ್ರಾಯಶಃ ಶ್ರೀ ಕುಡ್ವರೇ.

1938 ರಲ್ಲಿ ಈ ಪಟ್ಟಾಟು ಒಂದು ಟಿಯರು ಟ್ರಾನ್ಸ್ ಪೋರ್ಟ್ ಸಂಸ್ಥೆಯ ಅವಶ್ಯಕತೆಗಳ ಮೇರೆ ಮೀರಿ ಅಭಿವೃದ್ಧಿ ಹೊಂದಿದುದರಿಂದ "ಕೆನರಾ ಸೇಲ್ಸ್ ಕೋರ್ಪರೇಶನ್" ಲಿಮಿಟೆಡ್ ಎಂಬ ಒಂದು ಪ್ರತ್ಯೇಕ ಸಂಸ್ಥೆ ಸ್ಥಾಪನೆಗೊಂಡಿತು.

ಈ ರೀತಿ 1938 ರಲ್ಲಿ ಜನ್ಮ ತಾಳಿದ "ದಿ ಕೆನರಾ ಸೇಲ್ಸ್ ಕೋರ್ಪರೇಶನ್" ಅಂದಿನಿಂದಲೂ ಆಮದು ಮತ್ತು ಮಾರಾಟಗಳ ಕಡೆಗೆ ತನ್ನ ಲಕ್ಷ್ಯ ಹರಿಸಿ, ಸಂಸ್ಥೆಯ ಪ್ರಗತಿ ಪಥಿಯಲ್ಲಿ ಮುಂದುವರಿಯುತ್ತಿದೆ. ಈ ಸಂಸ್ಥೆಯು ಆಟೊಮೋಬಾಯಿಲ್ ಮತ್ತು ಉಪಭಾಗಗಳ ಮಟ್ಟಿಗೆ ದಕ್ಷಿಣ ಕನ್ನಡದಲ್ಲಿರುವ ಪ್ರಾಮುಖ್ಯ ಸಂಸ್ಥೆಗಳಲ್ಲಿ ಇದೊಂದಾಗಿದೆ.

ಕೆನರಾ ವರ್ಕ್‌ಶೋಪ್ಸಿನ ಉದಯ

ಎರಡನೇ ಜಾಗತಿಕ ಯುದ್ಧ ಸ್ಫೋಟಗೊಂಡಿತು; ಅದೆನ್ನನುಸರಿಸಿ ಆಮದುಗಳ ಮೇರೆ ನಿಯಂತ್ರಣ, ಆಫಾಸ, ಆಗೋಚರ ಮುಂತಾದ ಹಲವಾರು ಯುದ್ಧ ನಿರ್ಮಿತ ಅತಿತೆಗಳೊದಗಿದವು. ಈ ಪರಿಸ್ಥಿತಿಯು ಪ್ರಾಸಗೀ ಕಾರು ಮಾಲಂಗಳಿಂದ ಬಸ್ಸು ಸಂಚಾಲಕರ ಮೇಲೂ ತನ್ನ ಪ್ರಭಾವವನ್ನು ಬೀರಿತು. ಎಂತಹದ ವಿಸ್ಮಯಾನಸಲ್ಲದೆರೂ ಪ್ರತಿಯೊಬ್ಬನಿಗೂ ಸಾಧ್ಯವಿದ್ದನ್ನು ಪ್ರಯೋಜನಪಡಿಸುವುದನ್ನೇ ತನ್ನ ಧ್ಯೇಯವಾಗಿಟ್ಟುಕೊಂಡಿದ್ದ ಶ್ರೀ. ಕುಡ್ವರು ವರ್ಕ್‌ಶೋಪ್ಸನ್ನು ಸಿ. ಪಿ. ಸಿ. ಕಂಪೆನಿಯಿಂದ ಪ್ರತ್ಯೇಕಿಸಲು ನಿರ್ಧರಿಸಿದರು. ಅದು ಒಂದು ಸ್ವತಂತ್ರ ಸಂಸ್ಥೆಯಾಗಿ ರಚ್ಚಿಲ್ಲಾ ಅಧ್ಯಕ್ಷತೆಯನ್ನು ಸೇರಿಸಿ ಕೆಲೆಗೆ ಕೇಂದ್ರೀಕರಿಸಿ, ಸಂಸ್ಥೆಗಳ ಸ್ಥಾಪನೆಯ ಕೆಲಸ ಪ್ರಾರಂಭಿಸಿದರು. ಅದರಂತೆ ಸಂಸ್ಥೆಯ ಪರಿಣಾಮವಾಗಿ ವರ್ಕ್‌ಶೋಪ್ಸ್ 1943ರಲ್ಲಿ "ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್" ಎಂಬ ಹಾಕುಳಿಯಡಿಯಲ್ಲಿ ಒಂದು ಪಬ್ಲಿಕ್



ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್‌ನವರ ಹೊಸದಾಗಿ ಮಾರಾಟಗಳಿಗೆ ಸ್ಪ್ರಿಂಗ್‌ಗಳು ಇದ್ದ ವಿಸ್ತರಿಸಿದ "ಒಟೋ ಸ್ಪ್ರಿಂಗ್ ವಿಭಾಗ" ಶಾಖೆಯ ಮುನ್ನೋಟ.

ಭಾರತ ಸರಕಾರದ ಸಾರಿಗೆ ಮತ್ತು ರೈಲ್ವೆ ಮಂತ್ರಿಗಳಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ ಇಂದು ಒಟೋ ಸ್ಪ್ರಿಂಗ್ ಶಾಖೆಯ ವಿಸ್ತರಣೆಯ ಆರಂಭೋತ್ಸವ ಮತ್ತು ಶೋಟ್ ಪೀನಿಂಗ್ ಯಂತ್ರದ ಉದ್ಘಾಟನೆಯು ತಾ. 30—5—1955ರಂದು ನೆರವೇರಿತು.

ದೇಶೀಯ ಸ್ಪ್ರಿಂಗ್ ಉದ್ಯಮ

ಸಿ. ಸಿ. ಸಿ. ಕಂಪೆನಿ ಲಿಮಿಟೆಡ್,
ಇದರ 1915 ರಿಂದ 1932ರ ವರೆಗೆ
ಮೆನೇಜಿಂಗ್ ಡೈರೆಕ್ಟರಾಗಿದ್ದ
ದಿ॥ ಶ್ರೀ॥ ವಿ. ಎಸ್. ಕಾಮತ್ತರು.

(ಮೊದಲ ಪುಟದಿಂದ)

ಲಿಮಿಟೆಡ್ ಜ್ಯೊಯಿಂಟ್ ಸ್ಟೋಕ್ ಕಂಪೆನಿಯಾಗಿ ಮಾರ್ಪಟ್ಟಿತು. ತನ್ನ ಪಾಡಿಕೆಯಂತೆ ಶ್ರೀ ಕುದ್ದರು ಈ ವರ್ಕ್ ಶೋಪನ್ನು ಎಸ್ಟು ತೀವ್ರ ಗತಿಯಿಂದ ಅಭಿವೃದ್ಧಿಗೊಳಿಸಿದರೆಂದರೆ, ಯುದ್ಧಾವಧಿಯ ಬರುಸಾಗಳಲ್ಲಿ ಬಸ್ಸು ಮತ್ತು ಕಂಪೆನಿಗಳ ಮಾಲಕರಿಗೆ ಅದು ಸಲ್ಲಿಸಿದ ಅತ್ಯಮೂಲ್ಯ ಸೇವೆಯಿಂದಾಗಿ ಇಂದು ತನ್ನ ನಿರ್ವಾಹಕರ್ತೃಸ್ಥೇ ಅಲ್ಲ—ಇಡೀ ಆಟೊಮೋಬಾಯಿಲ್ ವ್ಯಾಪಾರೀ ಕ್ಷೇತ್ರದ ಪರಮಾವಧಿ ವಿಶ್ವಾಸಕ್ಕೆ ಪಾತ್ರವಾಗಿದೆ.

ಭಾರತ ಸರಕಾರ ಸಗಬರಾಯಿ ಮತ್ತು ಉದ್ದಿನ ಬಾಟೆಯ ಮೋಟಾರು ವಾಹನಗಳ ಭಾಗೋಪಭಾಗಗಳನ್ನು ಭಾರತದಲ್ಲೇ ತಯಾರಿಸುವ ಕುರಿತು ಪರಿಶೋಧನೆ ನಡಿಸಲು 1919ರಲ್ಲಿ ನೇಮಿಸಿದ್ದ ಉಪಸಮಿತಿಯ ವರದಿಯ ಶ್ರೀ॥ ಕುದ್ದರ ಮೇಲೆ ವಿಶೇಷ ಪ್ರಭಾವವನ್ನು ಬೀರಿತು ಆದರಲ್ಲಿಂದ ಈ ದೇಶದಲ್ಲಿ ನಿಜಕ್ಕೂ ತಯಾರಿಸಲು ಸಾಧ್ಯವಿರುವ ಅಂತಹ ಉಸಭಾಗಗಳ ತಯಾರಿಯನ್ನು ಭಾರತದಲ್ಲಿರುವ ಇಂಜಿನಿಯರಿಂಗ್ ಸಂಸ್ಥೆಗಳು ಕೈಕೊಳ್ಳಬೇಕೆಂ ಉಪಸಮಿತಿಯು ಮಾಡಿದ್ದ ಶಿಫಾರಸಿನಿಂದ ಪ್ರಭಾವಿತರಾದ ಶ್ರೀ॥ ವಿ. ಎಸ್. ಕುದ್ದರು, ಮೋಟಾರು ವಿಭಾಗಗಳ ಉತ್ಪಾದನೆಯಲ್ಲಿ ಕೆನರಾ ವರ್ಕ್ ಶೋಪ್ಸ್ ಪ್ರಾಮುಖ್ಯ ಸ್ಥಾನ ವಹಿಸುವಂತೆ ಮಾಡಬೇಕೆಂದು ದೃಢನಿರ್ಧಾರ ಕೈಕೊಂಡರು ಅದಕ್ಕಾಗಿ ಶ್ರೀ॥ ಕುದ್ದರು ಬ್ರಿಟನು ಮತ್ತು ಅಮೇರಿಕಗಳಲ್ಲಿ ನಾಲ್ಕು ವಿಂಗಳ ವಿಷಯ ವಿಶೇಷ ಪ್ರವಾಸ ಕೈಕೊಂಡರು. ಪಶ್ಚಿಮ ರಾಷ್ಟ್ರಗಳಲ್ಲಿರುವ ಆಟೊಮೋಬಾಯಿಲ್ ಇಂಜಿನಿಯರಿಂಗ್ ಕಾರ್ಖಾನೆಗಳಲ್ಲಾಗಿರುವ ಇತ್ತೀಚಿಗಿನ ಅಭಿವೃದ್ಧಿಗಳನ್ನು ಮತ್ತು ಅತ್ಯಾಧುನಿಕ ಕಾರ್ಯವಿಧಾನಗಳನ್ನು ಕಣ್ಣಾರೆ ಕಂಡು, ಅಭ್ಯಸಿಸಿ, ಇಲ್ಲಿಯೂ ಅವುಗಳನ್ನು ಜಾರಿಗೆ ತರಲಾಗುವಂತೆ ನೋಡುವುದೇ ಈ ಪ್ರಯಾಣದ ಉದ್ದೇಶವಾಗಿತ್ತು.

ಪಶ್ಚಿಮ ದೇಶಗಳ ಪ್ರವಾಸ

ಪಶ್ಚಿಮ ರಾಷ್ಟ್ರಗಳ ಪ್ರವಾಸ ಕೈಕೊಂಡಾಗ ಶ್ರೀ॥ ಕುದ್ದರ ಮನಸ್ಸಿನಲ್ಲಿ ಇದೆಲ್ಲಾ ವಿಷಯಗಳು ಮುಖ್ಯತಃ ಸುಳಿದಾಡಿಕೊಂಡಿದ್ದುವು. ಪಾಶ್ಚಾತ್ಯ ರಾಷ್ಟ್ರಗಳ ಸ್ಪ್ರಿಂಗ್ ತಯಾರಿಕೆಯನ್ನು ಮನನ ಮಾಡುವುದಕ್ಕೇನೇ ಅವರು ಅಲ್ಲಿಯ ತನ್ನ ಹೆಚ್ಚಿನ ಸಮಯವನ್ನೂ ಲಕ್ಷ್ಯವನ್ನೂ ಕೇಂದ್ರೀಕರಿಸಿದರು ಇಂಜಿನಿಯರಿಂಗಿನಲ್ಲಿ ಶ್ರೀ॥ ಕುದ್ದರಿಗಿದ್ದ ಕುಶಾಗ್ರಬುದ್ಧಿ ಮತ್ತು ಪ್ರತಿಭೆಯು, ಅಲ್ಲಿ ಅವರ ಕಣ್ಣುಗಳು ಪ್ರತ್ಯಕ್ಷ ಕಂಡುದಕ್ಕಿಂತಲೂ ಎಷ್ಟೋ ಪಾಲು ಹೆಚ್ಚಿನದನ್ನು ಅವರು ಗ್ರಹಿಸಿಕೊಳ್ಳುವಂತೆ ಮಾಡಿದುವು ಆಟೋ-ಸ್ಪ್ರಿಂಗ್ ಉತ್ಪಾದನಾ ಸಂಬಂಧವಾಗಿ, ಬುಡದಿಂದಾರಂಭಿಸಿ ತುದಿಯ ವರೆಗಿನ ವಿಷಯಗಳಲ್ಲಿ ಅವರು ಆದ್ಯತೆಯನ್ನು ಗಳಿಸಿಕೊಂಡರು. ಆಟೋ-ಸ್ಪ್ರಿಂಗು ಉತ್ಪಾದನೆಗವಶ್ಯವುಳ್ಳ ಉತ್ತಮ ದರ್ಜೆದ ಉಕ್ಕು ಇದರಲ್ಲಿ ದೊರೆಯುವುದು ಕಷ್ಟ ಸಾಧ್ಯವೆಂಬುದನ್ನರಿತಿದ್ದ ಅವರು ಉಕ್ಕು ಸರಬರಾಯಿ ಮಾಡುವಂತೆ ಅಮೇರಿಕದ ಉಕ್ಕು ಸರಬರಾಯಿ ಕಂಪೆನಿಯೊಂದಿಗೆ, ದಿ ಕೆನರಾ ವರ್ಕ್ಸ್ ಶೋಪಿನ ಪರವಾಗಿ ಒಂದು ಕಂಟ್ರಾಕ್ಟನ್ನು ಮಾಡಿಕೊಂಡರು. ಈ ಲಿಪ್ಯಮಾದ ಮೂಲಭೂತ ಆವಶ್ಯಕತೆಯಾಗಿರುವ ಕಚ್ಚಾ ಮಾಲಿನ ಸಮಸ್ಯೆಯು ಇದರಿಂದ ತೀರ್ಮಾನಗೊಂಡಂತಾಯಿತು.

ವಿಜಯಿ ಪ್ರಯೋಗಗಳು

1952ರಲ್ಲಿ ವಿಶೇಷ ಪ್ರಯಾಣದಿಂದ ಮರಳಿದೊಡನೆಯೇ, ಅವರು ತಾನು ಅಲ್ಲಿ ಪಡೆದಿದ್ದ ಅನುಭವಗಳಿಗೆ ಕಾರ್ಯರೂಪ ಕೊಡಲಾರಂಭಿಸಿದರು. ತಾನು ಸಂಗ್ರಹಿಸಿಕೊಂಡು ಬಂದಿದ್ದ ಜ್ಞಾನವನ್ನು ಓರ್ವ ಇಂಜಿನಿಯರನಾಗಿ ಪ್ರಯೋಗಕ್ಕೆ ಹಚ್ಚಿ ಪರೀಕ್ಷಿಸಲು ತೊಡಗಿದರು. ಅಮೆರಿಕಾ ಬರುತಿದ್ದ ವಿಶೇಷ ಸ್ಪ್ರಿಂಗುಗಳ ಮಟ್ಟ ಮತ್ತು ಮಾದರಿಯ ಆಟೊ-ಸ್ಪ್ರಿಂಗುಗಳನ್ನೇ ಉತ್ಪಾದಿಸಲು ಹವಾರು ಪ್ರಯೋಗಗಳು ನಡೆದವು. ಮುಖ್ಯವಾಗಿ ವಿವಿಧ ವರ್ಗದ ಉಕ್ಕುಗಳನ್ನು ಪಡೆಯ ತರುವುದರಲ್ಲಿ ವಿಶಿಷ್ಟ ಆಸ್ಥೆಯುಳ್ಳ ಇಂಜಿನಿಯರಾಗಿರುವ ಶ್ರೀ॥ ವಿ. ಎಸ್. ಕುದ್ದರ ಪ್ರವೀಣತೆಯಿಂದಾಗಿ, ಈ ಪ್ರಯೋಗಗಳು ಅತ್ಯಂತ ಜಯಶೀಲವಾದುವು. ದಿ ಕೆನರಾ ವರ್ಕ್ ಶೋಪಿನ ಸ್ಪ್ರಿಂಗ್ ಉತ್ಪಾದನಾ ವಿಭಾಗದಲ್ಲಿ ಆಟೊ-ಸ್ಪ್ರಿಂಗುಗಳ ಉತ್ಪಾದನೆ ಸೇನೇ ಪೂರ್ಣ ವಿಶಾಲಿಪಟ್ಟಿತು. ಸ್ಪ್ರಿಂಗುಗಳ ಗುಣಲಿಟ ಕಂಟ್ರೋಲಿಗಾಗಿ ಅವರಿಗೆ ಮತ್ತೆ ಬೇಕಾಗಿದ್ದದು ಕೆಲವೇ ಆಧುನಿಕ ಉಪಕರಣಗಳು ಮಾತ್ರವಿದ್ದು, ಭಾರತ ಸರಕಾರದ ಸಹಕಾರದಿಂದ ಅವುಗಳನ್ನೂ ಅಳವಡಿಸಿಕೊಳ್ಳಲಾಯಿತು. ಪ್ರತಿಯೊಬ್ಬನೂ ತನ್ನ ಉದ್ಯೋಗವನ್ನು ಪರಿಣಾಮಕಾರಿಯಾಗಿ ಮಾಡಲಾಗುವಂತೆ ವಿವಿಧ ಟೆಕ್ನಿಕಲ್ ಉದ್ಯೋಗಗಳಲ್ಲಿ ನಿಷ್ಣಾತರಾದವರನ್ನು ದೊರಕಿಸಿಕೊಳ್ಳಲು ಶ್ರೀ॥ ಕುದ್ದರವರು ವಿಶೇಷ ಶ್ರಮ ಪಟ್ಟರು. ಸರಿ, ಈ ಹೊಸ ಉದ್ಯಮ ಯಂತ್ರದ ಗಾಲಿಗಳು ತಿರುಗಹತ್ತಿದವು; 'ಸುಪೀರಿಯರ್' ಆಟೊ-ಸ್ಪ್ರಿಂಗ್ಸ್ ಎಂಬ ವ್ಯಾಪಾರೀ ನಾಮದಿಂದ, ಭಾರತದಲ್ಲಿ ಭಾರತೀಯರಿಂದಲೇ ತಯಾರಿಸಲ್ಪಟ್ಟ ಆಟೊ-ಸ್ಪ್ರಿಂಗುಗಳನ್ನು ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್ ಉತ್ಪಾದಿಸುತ್ತಿತು. ಮೋಟಾರು ವ್ಯಾಪಾರೀರಂಗದಲ್ಲಿ ಈ ಸ್ಪ್ರಿಂಗುಗಳಿಗೆ ಸುಸ್ವಾಗತ ದೊರೆಯಿತು. ಅವರು ಅವುಗಳನ್ನು ಪರೀಕ್ಷೆಮಾಡಿ ನೋಡಿ ಅವುಗಳ ಯೋಗ್ಯತೆಯ ಕುರಿತು ಸಮಾಧಾನಪಟ್ಟರು. "ಸುಪೀರಿಯರ್" ಸ್ಪ್ರಿಂಗುಗಳು ಜನಪ್ರಿಯವಾದುವು, ಈ ಜನಪ್ರಿಯತೆಯಿಂದಾಗಿ ಕೆನರಾ ವರ್ಕ್‌ಶೋಪ್ಸ್‌ನಲ್ಲಿ ತಯಾರಾದ ಸ್ಪ್ರಿಂಗುಗಳಿಗೆ ಹೆಚ್ಚು ಹೆಚ್ಚಾಗಿ ಬೇಡಿಕೆಗಳು ಬಂದುವು. ಗಿರಾಕಿಗಳು ಅಧಿಕಾಧಿಕವಾಗುತ್ತಾ ಬಂದುದಕ್ಕನುಗುಣವಾಗಿ, ಆ ಎಲ್ಲಾ ಬೇಡಿಕೆಗಳನ್ನು ಪೂರೈಸುವುದು ಅಸಾಧ್ಯವಾದುದರಿಂದ ಕಾರ್ಖಾನೆಯನ್ನು ಇನ್ನೂ ವಿಸ್ತರಿಸುವ, ಮತ್ತು ಸ್ಪ್ರಿಂಗುಗಳ ಗುಣ ಪರೀಕ್ಷೆಗಾಗಿ ಇನ್ನೂ ಹೆಚ್ಚಿನ ಆಧುನಿಕ ಹಂಬಕಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯೊದಗಿತು. ಯಂತ್ರ ಮತ್ತು ಉಪಕರಣಗಳನ್ನು ಅಮದುಮಾಡಿಸಿಕೊಂಡು, ಕೃಷರೂ ಅವುಗಳನ್ನು ಚಾಲನೆಯಲ್ಲಿಡಲಾಯಿತು.

ಪ್ರತಿಯೊಂದೂ ಅತ್ಯಂತ ನಾಜೋಕಾಗಿರ ಬೇಕೆಂಬ ತನ್ನ ಅಭಿರುಚಿಗನುಸಾರವಾಗಿ, ಕಳೆದ ಮೂರು ಐದುಪಗಳಲ್ಲಿ ಪ್ರತಿದಿನವೆಂಬಂತೆ ಉತ್ಪಾದನೆಯ ವಿವಿಧ ವಿಧಾನಗಳನ್ನು ಪ್ರಯೋಗಕ್ಕೆ ಇಟ್ಟು ಪರೀಕ್ಷಿಸುತ್ತಾ ಬಂದ ಶ್ರೀ॥ ಕುದ್ದರ ಪ್ರಯತ್ನದ ಪ್ರತ್ಯಕ್ಷ ಪರಿಣಾಮವಾಗಿ ಸ್ಪ್ರಿಂಗುಗಳ ಯೋಗ್ಯತೆಯು ಉಚ್ಚಮಟ್ಟದ್ದಾಯಿತು

ಇಂದು, ಈ ವರ್ಕ್‌ಶೋಪ್ಸಿನ ಕಾರ್ಖಾನೆಗಳಲ್ಲಿರುವ ಹಲವಾರು ಅತ್ಯಾಧುನಿಕ ಯಂತ್ರೋಪಕರಣಗಳಲ್ಲಿ ಬಿಗಿದ ಪರೀಕ್ಷಕ ಯಂತ್ರ, ಖಚಿತ ಮಾಪಕ ಮಾನ, ಭಾರದ ಯೋಗ್ಯತೆಯನ್ನು ಪರೀಕ್ಷಿಸುವ ಯಂತ್ರ, ಒತ್ತಡ ಪರೀಕ್ಷಕ ಯಂತ್ರೋಪಕರಣ, ಸ್ಲೇನಿಮಿಟರ್ಸ್, ಶೋಟ್‌ಪೀನಿಂಗ್ ಮಾದಲಾದ ಸಂಶೋಧನಾತ್ಮಕ ಹಾಗೂ ಕ್ವಲಿಟಿ ಕಂಟ್ರೋಲ್ ಸಂಬಂಧದ ಹಲವು ಪ್ರಾಮುಖ್ಯ ಉಪಕರಣಗಳೂ ಇವೆ.



ವಿದ್ಯುತ್ ಸಂಗ್ರಹಾಲಯ

ವರ್ಕ್‌ಶೋಪ್ಸ್‌ನೊಳಗಿನ ಕಾರ್ಖಾನೆಗಳಿಗೆ ಈಗ ವಿದ್ಯುತ್ತನ್ನೊದಗಿಸುವ ತನ್ನ ಸ್ವಂತ ಪವರ್ ಹೌಸನ್ನು ಕೆನರಾ ವರ್ಕ್ ಶೋಪ್ಸ್ ಸ್ಥಾಪಿಸಿಕೊಂಡಿದೆ ಅದರಲ್ಲಿ ಒಂದು ಬ್ಲೇಕ್ ಸೈಡ್‌ಎಂಜಿನ್, ಒಂದು ಜನರೇಟರ್ ಪೋಟಾರ್ಸ್ ಮತ್ತೊಂದು ಹಾಕ್ಸ್‌ಬಾಸ್ ರಿಕಾರ್ಡೋ ಸೆಟ್ ಇದ್ದು, ೨೨೦ ಕಿಲೋವೇಟ್ ವಿದ್ಯುತ್ ಉತ್ಪನ್ನಗುತ್ತದೆ ಈ ವಿದ್ಯುತ್ ಸಂಗ್ರಹಾಲಯವು ತಾ. 21-4-1949ರಲ್ಲಿ ಆಗ ಕೇಂದ್ರದ ಸಾರಿಗೇ ಉಪಮಂತ್ರಿಯಾಗಿದ್ದು, ಈಗ ವಿಂಧ್ಯ ಪ್ರದೇಶದ ರೆಸ್ಟಸೆಂಟ್ ಗವರ್ನರಾಗಿರುವ ಶ್ರೀ. ಕೆ ಸಂಜಾನಯರ ಹಸ್ತದಿಂದ ತೆರೆಯಲ್ಪಟ್ಟಿದ್ದು, 1 56ರಿಂದ ದೊರಕಬಹುದೆಂಬ ನೀರಿಕ್ಷೆಯಿರುವ ಜೋಗಿನ ವಿದ್ಯುಚ್ಛಕ್ತಿ ಬಂದ ಮೇಲೆ ಅನುಕೂಲತೆಗಳು ಮತ್ತಷ್ಟು ಆಗಿ ಕಂಪೆನಿಯ ಕಾರ್ಯಾಧಿಕ್ಯತೆಯು ವಿಪುಲವಾಗಿ ಹೆಚ್ಚಲಿಕ್ಕಿದೆ.

ಅಡಳಿತ ವರ್ಗ

ಯಾವುದೇ ಒಂದು ಮಹತ್ಕಾರ್ಯದ ವಿಜಯವು, ಸಂಪೂರ್ಣವಾಗಿ ಅದರ ಅಡಳಿತವನ್ನೇ ಅವಲಂಬಿಸಿದೆ ಕೆನರಾ ವರ್ಕ್ ಶೋಪ್ಸ್ ಲಿಮಿಟೆಡ್ ಮತ್ತದರ ಮಾತೃ ಸಂಸ್ಥೆಗಳ ಆಸಾಮಾನ್ಯ ವಿಜಯಕ್ಕೆ ಮುಖ್ಯತಃ—ಯಾಕೆ—ಸಂಪೂರ್ಣವಾಗಿ ಅದರ ಡೈರೆಕ್ಟರ್ ಮಂಡಲಿಯ ಒಮ್ಮತದ ಕಾರ್ಯಭಾರವೇ ಕಾರಣ, ಪ್ರೀತಿ ವಿಶ್ವಾಸಗಳೇ ಯಶಸ್ವೀ ವಿಜಯದ ಮೂಲ

ಕಂಪೆನಿಯ ಡೈರೆಕ್ಟರರಲ್ಲಿ ಪ್ರತಿಯೊಬ್ಬರೂ ದ. ಕ. ಜಿಲ್ಲೆಯ ಪ್ರಜಾಲಿತ ವ್ಯಾಪಾರ ಕುತ್ತು ವಾಣಿಜ್ಯ ಕ್ಷೇತ್ರದಲ್ಲಿ ಗಣ್ಯತೆ ಗಳಿಸಿದವರೇ, ತಮ್ಮ ಅನುಭವ, ಚಾತುರ್ಯ ಮತ್ತು ಸಾಮರ್ಥ್ಯಗಳಿಂದ ಕೀರ್ತಿ ಗಳಿಸಿದವರಿದ್ದಾರೆ

ವಿಜಯೀ ಸಂಸ್ಥೆಗಳ ಪೈಕಿ ಸರಕಾರಿ ತೊಂಬತ್ತೊಂಭತ್ತರ ಬೆಳವಣಿಗೆಗೆ ಅವುಗಳ ಸ್ಥಾಪಕರೇ ಕಾರಣ ಸ್ಥಾಪಕರ ಸಂಖ್ಯೆ, ಸಂಸ್ಥೆಯ ಆಧಾರವಾಗಿದ್ದ ಆ ತತ್ವಗಳು ಸ್ಥಾಪಕ್ಕೇರಲಾಗುವಂತೆ ಸಾಕಷ್ಟು ಸರಬೇತಿಪಡಿ[illegible]

[illegible] ಶ್ರೀ ಶ್ರೀನಿವಾಸ ಪೈ ಅವರ ಪುತ್ರ ಶ್ರೀ ಶ್ರೀನಿವಾಸ ಪೈ ಬಿ. ಎ, ಬಿ. ಟಿ. ಇಂಜಿನೀಯರಿಂಗ್ [illegible] ಶ್ರೀಂಗ್ ತಯಾರಿಕೆಯಲ್ಲಿ ಪ್ರಾವೀಣತೆ ಗಳಿಸಲು ಅಮೇರಿಕಕ್ಕೆ ಕಳುಹಿಸಲ್ಪಟ್ಟಿದ್ದಾರೆ ಪ್ರಕೃತ ಅಮೇರಿಕದಲ್ಲಿರುವ ಶ್ರೀ ಶ್ರೀನಿವಾಸ ಪೈ. ಕುಡ್ವರು ಪರಳಿ ಬಂದಾಗ ಶ್ರೀ ವಿ ಎಸ್. ಕುಡ್ವರ ಕೆಸರು ಕಾರ್ಯರೂಪಕ್ಕೆ ಬರುತ್ತದೆ—ಈಗ ತಂದೆಯ ಮೇಲಿರುವ ಹೊಣೆಗಾರಿಕೆಯ ಹೊರೆಯನ್ನು ಮಗ ಪಹಿಸಿಕೊಳ್ಳಲಿದ್ದಾರೆ ಶ್ರೀ ಶ್ರೀನಿವಾಸ ಪೈ. ಕುಡ್ವರ ಅಡಳಿತೆಯಡಿಯಲ್ಲಿ "ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್" ಎಂಬುದು ಮೋಟರ ಭಾಗಗಳ ಕಾರ್ಖಾನೆಯಾಗಿ ಪ್ರಾತಿನಿಧಿಸಬಹುದಾಗುವುದು ಸರ್ವ ಸಿದ್ಧ ವಿಷಯ.



ದಿ ಕೆನರಾ ವರ್ಕ್ ಶಾಪ್ಸ್ ಲಿಮಿಟೆಡ್, ಇದರ ಬೋರ್ಡ್ ಆಫ್ ಡಾರೆಕ್ಟರರ ಚಿತ್ರ

ಎಡದಿಂದ ಬಲಕ್ಕೆ ಶ್ರೀಯು ರಾಮಕೃಷ್ಣ ಮಲ್ಯ; ಶ್ರೀ ರಾಮರಾವ್, ಬಿ. ಎ, ಶ್ರೀ ಪದ್ಮನಾಭ ಶೆಣೈ ಎಂ. ಎ, ಅಧ್ಯಕ್ಷರು, ಶ್ರೀ ಎಚ್ ಲಕ್ಷ್ಮೀನಾರಾಯಣ ಕಾಮತ್, ಶ್ರೀ ಎಂ. ಸುಂದರೀಕ ನಾಯಕ್, ಮತ್ತು ಶ್ರೀ ವಿ ಎಸ್. ಕುಡ್ವ ಮೇನೇಜಿಂಗ್ ಡೈರೆಕ್ಟರ್.

ಕೆನರಾ ವರ್ಕ್ ಶೋಪ್ಸಿನ ಉದ್ಘಾಟನೆ

ಕೇಂದ್ರ ರೈಲ್ವೇ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳಿಂದ

ಮಂಗಳೂರು, ಮೆ, 30-"ಮೋಟಾರ್ ಸ್ಪ್ರಿಂಗ್ ತಯಾರಿಸುವ ಈ ಉದ್ಯಮವನ್ನು ಮಂಗಳೂರಲ್ಲಿ ಸ್ಥಾಪಿಸಿದ ಶ್ರೀ ಕುಡ್ವರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ದೇಶದಂತಹ ದೊಡ್ಡ ದೇಶದಲ್ಲಿ, ವಿವಿಧ ಉದ್ಯಮಗಳನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಸ್ಥಾಪಿಸಬೇಕಲ್ಲದೆ, ಕೆಲವೇ ನಗರಗಳಲ್ಲಿ ಅವನ್ನು ಕೇಂದ್ರೀಕರಿಸುವುದು ಉಚಿತವಲ್ಲ. ಶ್ರೀ ಕುಡ್ವರು ರೈಲ್ವೇ ಕೋಚ್ಚುಮಗಳ ಸ್ಥಾಪನೆಯ ಕುರಿತು ಹೇಳಿದ ವಿಚಾರಗಳನ್ನು ನಾನು ಸಂಪೂರ್ಣ ಒಪ್ಪುತ್ತೇನೆ ಸ್ಪ್ರಿಂಗ್ ತಯಾರಿಯ ಈ ಉದ್ಯಮವು ಸಾರಿಗೆಗೆ ಸಂಬಂಧಪಟ್ಟುದರಿಂದಾಗಿ ನನಗೆ ಇದರ ಬೆಳವಣಿಗೆಯಲ್ಲಿ ತುಂಬಾ ಆಸಕ್ತಿಯಿದೆ ಮೋಟಾರು ಭಾಗಗಳ ತಯಾರಿಯನ್ನು ಭಾರತದಲ್ಲಿ ಮಾಡುವ ಕುರಿತು ಭಾರತ ಸರಕಾರವು ನಿರ್ಧಾರಕ್ಕೆ ಬಂದಿರುವುದು. ನಮ್ಮ ದೇಶದಲ್ಲಿ ಮೋಟಾರು ಭಾಗಗಳ ಕೊರತೆಯಿದ್ದು ಅದರ ಉತ್ಪಾದನೆಯಲ್ಲಿ ನೀವು ತೊಡಗಿರುವುದು ಶ್ಲಾಘನೀಯ ಮೋಟಾರು ಭಾಗಗಳ ಕೊರತೆಯಿಂದಾಗಿ ನಮ್ಮ ದೇಶದಲ್ಲಿ ಮೋಟಾರು ರಿಪೇರಿ ನಗೈರೆಗಳಿಗೆ ತುಂಬಾ ತೊಡಕಾಗಿ ನಷ್ಟವು ಆಗುವಂತಾಗಿದೆ" ಎಂದು ಇಂದು ಸೂರ್ಯಾಕ್ಷ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್‌ನ ಪ್ರಥಮೋಳಿಯ ಮೋಟಾರ್ ಸ್ಪ್ರಿಂಗ್ ವಿಭಾಗದ ವಿಸ್ತೃತಾ ವಿಭಾಗದ ಮತ್ತು ಶೋಟ್ ಪೀನಿಂಗ್ ಯಂತ್ರದ ಉದ್ಘಾಟನೆ ಮಾಡುತ್ತಾ ಕೇಂದ್ರದ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಹೇಳಿದರು

"ಕಚ್ಚಾ ಸಾಮಾನುಗಳು ಮತ್ತು ಉತ್ಪಾದಿತ ಸರಕುಗಳನ್ನು ಸಾಗಿಸುವರೆ ಬೇಕಾದ ಸೌಕರ್ಯ ಒದಗಿಸುವ ಕುರಿತು ಉಲ್ಲೇಖಿಸಲಾಗಿದೆ. ರೈಲ್ವೆಯವರು ಈ ಬಗ್ಗೆ ಬೇಕಾದ ಬೇಗನ ಇತ್ಯಾದಿಗಳ ಸೌಕರ್ಯವನ್ನು ಒದಗಿಸಬೇಕಲ್ಲದೆ ತಮ್ಮ ಕರ್ತವ್ಯ ಮರೆತಂತಾಗುವುದು ಈಗ ರೈಲ್ವೇ ವಿಭಾಗದಲ್ಲೂ ತುಂಬಾ ತೊಡಕುಗಳಿದ್ದು ಅವರ ಜವಾಬ್ದಾರಿಯು ತುಂಬಾ ಇದ್ದು ಅವರು ಜನತೆಗೆ ಅನುಕೂಲತೆಗಳನ್ನು ಒದಗಿಸಲು ತಮ್ಮಿಂದಾದಷ್ಟು ಪ್ರಯತ್ನಿಸುತ್ತಿದ್ದಾರೆ. ನಾರ್ಕಕ ವರ್ಗದವರೂ, ಇತರರೂ ಕೆಲವೇ ವರ್ಷಗಳ ಹಿಂದೆ ರೈಲ್ವೆಯಲ್ಲಿ ಆಗ ಬಹುದಾದ ಕೆಲವು ಕುಂದುಕೊರತೆಗಳನ್ನು ಸಹಿಸಿದರೆ ಕೆಲವೇ ಕಾಲದಲ್ಲಿ ಅವುಗಳು ಸರಿಯಾಗುವುವೆಂಬುದರಲ್ಲಿ ನನಗೆ ಸಂಶಯವಿಲ್ಲ. ಈ ಕಾರ್ಖಾನೆಗೆ ಇದರ ಪ್ರಥಮದ ಸಿಟ್ಟದಲ್ಲಿ ಬೇಕಾದ ಸಹಾಯ ಸಹಕಾರಗಳನ್ನು ಒದಗಿಸಲಾಗುವುದೆಂಬ ಭರವಸೆ ನನಗಿದೆ ಈ ಕಾರ್ಖಾನೆಯ ಉದ್ಘಾಟನೆ ಮಾಡಲು ನನಗೆ ಸಂದರ್ಭವೊದಗಿಸಿದುದಕ್ಕಾಗಿ ನಾನೆ ಆಭಾರಿಯಾಗಿದ್ದೇನೆ ಎಂದು ಶ್ರೀ. ಶಾಸ್ತ್ರಿಗಳು ಹೇಳಿದರು.

ಆರಂಭದಲ್ಲಿ ಶ್ರೀ ಆಮೇನಾನಾಮಜಿಯವರಿಂದ ಪ್ರಾರ್ಥನೆ, ಶ್ರೀಮತಿ ಲೀಲಾ ಬ್ಯಾ ಬಾಳಿಗರಿಂದ ವಂದೇ ಮಾತರಂ ಗೀತೆಗಳಾದ ಬಳಿಕ ಶ್ರೀ ವಿ ಎಸ್ ಕುಡ್ವರು ಕೇಂದ್ರದ ಮಂತ್ರಿಗಳಾದ ಶ್ರೀ ಕೆ. ಸಿ ರೆಡ್ಡಿ, ಸರ್ದಾರ್ ಸ್ವರಣ್ ಸಿಂಗ್ ಉಪಮಂತ್ರಿ ಶ್ರೀ ಎಸ್ ಎನ್ ಸಹಾಯ್ ಕೊಡಗಿನ ಚೀಫ್ ಕಮಿಶನರ್ ಶ್ರೀ ಆಯಾ ಸಿಂಗ್ ಬೇದಿ ಮೊದಲಾದವರುಗಳ ಸಂದೇಶಗಳನ್ನು ಓದಿದರು

ಆ ಬಳಿಕ ಶ್ರೀ ಕುಡ್ವರು ಸ್ವಾಗತ ಭಾಷಣ ಮಾಡಿದರು.

ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ವಿಸ್ತೀರ್ಣಾ ವಿಭಾಗದ ಉದ್ಘಾಟನೆ ಗೈದರು

ಕೆನರಾ ವರ್ಕ್ ಶೋಪ್ಸ್ ಲಿಮಿಟೆಡ್‌ನ ಚೇರ್ ಮೇನ್ ಶ್ರೀ ಎಂ. ಪದ್ಮನಾಭ ರಘುನಾಥ ಶೈಗಳು ಧನ್ಯವಾದವಿತ್ತರು. ಶ್ರೀಮತಿ ಲೀಲಾ ಬ್ಯಾ ಬಾಳಿಗರು ರಾಷ್ಟ್ರಗೀತೆ ಹಾಡಿದರು.

ಆ ಬಳಿಕ ಮಂತ್ರಿಗಳೂ ಅತಿಥಿಗಳೂ ವರ್ಕ್ ಶೋಪ್ಸಿನಲ್ಲಿ ಸ್ಪ್ರಿಂಗ್ ತಯಾರಿಯ ವಿವಿಧ ವಿಭಾಗಗಳನ್ನು ವೀಕ್ಷಿಸಲಾಯಿತು

Modern Motor Service of Mysore Ltd.
Dewans Road, Mysore

[illegible]

The Canara Workshops Limited Mangalore

Wishing all prosperity and good future
to
The Canara Workshops Limited, Mangalore.
P. V. Motor Service Limited, Mangalore.

ಶೋಟ್ ಪೀನಿಂಗ್
(Shot Peening)

[ಕಬ್ಬಿಣದ ಗೋಲಿಕಣಗಳ ಹೊಡೆತದಿಂದ ಲೋಹವನ್ನು ಬಲಗೊಳಿಸುವ ವಿಧಾನ.]

ಇಂಜಿನಿಯರಿಂಗಿನ ರಚನಾ ಕ್ರಮದಲ್ಲಿ ಕ್ರಾಂತಿಯೆಸಗಿದ ಒಂದು ಕಾರ್ಯ ವಿಧಾನ–

ಶ್ರೀ ವಿ. ಎಸ್. ಕುಡ್ವಾ.

ಲೋಹವನ್ನು ಶುಭ್ರಗೊಳಿಸಲು, ಸೇಂಡ್ ಬ್ಲಾಸ್ಟಿಂಗ್ (Sand blasting) (ಮರಳಿನ ಬಿರುಸಿನ ಹೊಡೆತದಿಂದ ಲೋಹವನ್ನು ಶುಭ್ರಗೊಳಿಸುವ ವಿಧಾನ) ಕ್ರಮವನ್ನು ಈ ಶತಮಾನದ ಆದಿಯಿಂದಲೇ ಹೆಚ್ಚಾಗಿ ಬಳಸುತ್ತಿದ್ದು, ಆ ಕ್ರಮವು ಹೆಚ್ಚಾಗಿ ರೂಢಿಯಲ್ಲಿದೆ. ಆದರೆ ಆ ಕ್ರಮದಲ್ಲಿ ಕೆಲವೊಂದು ತೊಡಕುಗಳಿವೆ. ಮರಳ ಕಣಗಳು ಬೇಗನೇ ಒಡೆದು ಹೋಗುತ್ತವಲ್ಲದೇ, ಮರಳೆನ್ನು ಊದು ಕೊಳವೆಯ ಮೂತಿಯು ಬೇಗನೆ ಸವೆಯುತ್ತದೆ. ಇವಲ್ಲದೆ ತುಂಬಾ ಪ್ರಮಾಣದಲ್ಲಿ ಹೊಸ ಮರಳನ್ನು ಯಾವಾಗಲೂ ಭರ್ತಿಯಾಗಿಟ್ಟು ಕೊಂಡಿರಬೇಕಾಗುತ್ತದೆ. ಮೆದು ಎರಕ ಕಬ್ಬಿಣ (malleable cast iron) ದಿಂದ ಮಾಡಿದ ಕಣ (grit)ಗಳನ್ನು ಉಪಯೋಗಿಸಿದಲ್ಲಿ ತಕ್ಕ ಮಟ್ಟಿಗೆ ಉಳಿತಾಯವೂ, ಶುಭ್ರಗೊಳಿಸುವುದರಲ್ಲಿ ಹೆಚ್ಚಿನ ಸಫಲತೆಯೂ ಸಿಗುವುದೆಂದು ನುಂಡೆ ತಿಳಿದು ಬಂತು. ಸೇಂಡ್ ಬ್ಲಾಸ್ಟಿಂಗ್‌ನಂತೆ ಈ ವಿಧಾನದಲ್ಲಿಯೂ ಊದು ಕೊಳವೆಯ ಮೂತಿ ಬೇಗನೆ ಸವೆಯಬಾರಂಭವಾಗಿ, ಹೆಚ್ಚು ಹೆಚ್ಚು ತಗಲುವಂತಾಯಿತು. ಹೀಗಾಗಿ ಕಣಗಳ ಬದಲು ಮೆದು ಎರಕ ಕಬ್ಬಿಣದ ಉರುಟಾದ ಗೋಲಿ ಕಣಗಳನ್ನು (shot) ಉಪಯೋಗಿಸಲು ಆರಂಭಿಸಲಾಯಿತು. ಈ ಗೋಲಿ ಕಣಗಳಿಂದ ಶುಭ್ರಗೊಳಿಸುವ ವಿಧಾನವು ಶೋಟ್ ಬ್ಲಾಸ್ಟಿಂಗ್ (Shot Blasting) ಎಂದು ಕರೆಯಲ್ಪಟ್ಟಿತು.

ಕೋಯಿಲ್ ಸ್ಪ್ರಿಂಗ್ (Coil Spring) ಗಳನ್ನು ಶುಭ್ರಗೊಳಿಸಲು ಶೋಟ್ ಬ್ಲಾಸ್ಟಿಂಗ್ ವಿಧಾನವನ್ನು ಬಳಸಿದಾಗ ಕೋಯಿಲ್ ಸ್ಪ್ರಿಂಗ್‌ಗಳ ಬಾಳುವಿಕೆಯು ಅನಧಿಯು ಹೆಚ್ಚಾದುದು ತಿಳಿದುಬಂತು. ಈ ವಿಷಯವು, ಈ ಶತಮಾನದ ಮೂರನೇ ದಶಕದಲ್ಲಿ ಇಂಜಿನಿಯರರ ಮತ್ತು ಸಂಶೋಧಕರ ಗಮನವನ್ನು ಸೆಳೆದು, ಯಂತ್ರ ಭಾಗಗಳ ಲೋಪ ದೌರ್ಬಲ್ಯ ನಿವಾರಣೆ ಮತ್ತು ಲೋಪ ದೌರ್ಬಲ್ಯಕ್ಕೆ ಒಳಗಾಗುವ ಯಂತ್ರ ವಿಭಾಗಗಳಲ್ಲಿ ಶೋಟ್ ಬ್ಲಾಸ್ಟಿಂಗ್‌ನಿಂದ ಉಂಟಾಗುವ ಪರಿಣಾಮದ ಕುರಿತು ಹಲವಾರು ಸಂಶೋಧಕರು ಪರಿಶೀಲನೆ ಆರಂಭಿಸಿದರು.

ಕಳೆದ ಮಹಾಯುದ್ಧದ ವೇಳೆ, ಲೋಪಗಳ ರಕ್ಷಣೆಗೆ ಅತಿ ಪ್ರಾಮುಖ್ಯತೆ ಕೊಡಬೇಕಾಗಿ ಬಂದ ಸಂದರ್ಭದಲ್ಲಿ, ಈ ಕುರಿತಾದ ಅನ್ವೇಷಣೆಯು ಅಮೇರಿಕದಲ್ಲಿ ತೀವ್ರಗೊಳಿಸಲ್ಪಟ್ಟಿತು. ಇಂದು ಅಮೇರಿಕದಲ್ಲಿ ಈ ವಿಧಾನದ ಕುರಿತಾಗಿ ತುಂಬಾ ಸಾಹಿತ್ಯವು ಬೆಳೆದಿದೆ, ಮಾತ್ರವಲ್ಲ. ವಿಧಾನದ ಬಳಸುವಿಕೆಯಲ್ಲೂ ತುಂಬಾ ಪ್ರಗತಿ ಸಾಧಿಸಿದ್ದು, ದಕ್ಷ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡುವಂತಾಗಿದೆ. ಶೋಟ್ ಪೀನಿಂಗ್ ಎಂಬುದು ಲೋಹ ಭಾಗದ ಮೇಲೆ ಉಕ್ಕಿನ ಅಥವಾ ಎರಕ ಕಬ್ಬಿಣದ ಉರುಟಾದ ಚಿಕ್ಕ ಕಣಗಳನ್ನು ಕಾಯಿಸಿದ ಲೋಹದ ಮೇಲೆ ಅತಿ ಬಿರುಸಾಗಿ ಹೊಡೆಯುವ ಕಾರ್ಯಕ್ರಮ ವಿಧಾನವಾಗಿದೆ. ಪ್ರತಿಯೊಂದು ಗೋಲಿಯು ಹೊಡೆತವು ಒಂದು ಸಣ್ಣ ಸುತ್ತಿಗೆಯ ಹೊಡೆತವಾಂತಿದ್ದು, ಲೋಹ ಭಾಗದ ಹೊರ ಮೈಯ ಮೇಲೆ ಒಂದು ಸಣ್ಣ ಉರುಟು ಕಜ್ಜನ್ನು ಮಾಡುತ್ತದಲ್ಲದೆ, ಹೊಡೆತಕ್ಕೆ ಗುರಿಯಾದ ಮೇಲ್ಭಾಗದ ಮೈಯು ಎಲ್ಲಾ ದಿಕ್ಕಿನಲ್ಲಿಯೂ ಸಮವಾಗಿ ಪಸರಿಸುವಂತಾಗುವುದು. ಗೋಲಿಗಳ ನಿರಂತರವಾದ ಹೊಡೆತದಿಂದಾಗಿ ಲೋಹ ಭಾಗದ ಹೊರ ಮೈಯಲ್ಲಿ ಕಜ್ಜನಕಂತುಸಿಲಿಯು ಹೊರಭಾಗದ .005 ರಿಂದ .010 ಇಂಚುಗಳಷ್ಟು ಕೆಳಮಟ್ಟದ ವರೆಗೆ ಮುಟ್ಟುವುದು.

ಲೋಹ ಭಾಗದಲ್ಲಿ ದಣಿವಿನಿಂದಾಗುವ ಮುರಿಯುವಿಕೆಗೆ ಮೂರು ಕಾರಣಗಳಿವೆ: — (1) ಲೋಹ ಭಾಗದ ಮೇಲೆ ಆಗಾಗವಾಗಲಿ, ಸದಾಕಾಲವೂ ಏರಿಳಿತದ ಹೊರೆಗಳ ಶ್ರಮ ಉಂಟಾಗುವುದುಂಟು. ಈ ಕಾರಣದಿಂದ, ಎರಡನೆಯದಾಗಿ ಅದರ ಮೇಲೆ ಎಳೆತದ ಒತ್ತಡ (Tensile Stress) ಬರುವುದು. ಸಂಕುಚಿತ ಒತ್ತಡ (Compressive Stress)ದಿಂದ ಲೋಹವು ದಣಿವಿನ ಮುರಿಯುವಿಕೆಗೆ ಒಳಗಾಗುವುದಿಲ್ಲ. ಮೂರನೆಯದಾಗಿ ಈ ಎಳೆತದ ಒತ್ತಡಕ್ಕೆ ಗುರಿಯಾದ ಮೈಯ ಮೇಲ್ಭಾದಿಯಲ್ಲಿ ಬಿರುಕಿನ (Surface Crack) ಆರಂಭವಾಗುತ್ತದೆ.

ನಿಯಮಿತ ಕೆಲಸ ಮಾಡಬೇಕಾದ ಯಂತ್ರ ಭಾಗಕ್ಕೆ ಮೇಲೆ ಸೋಳಿದ ಮೊದಲನೆಯ ಕಾರಣವು ಸಹಜವಾಗಿದ್ದರೂ, ಮೂರನೆಯ ಕಾರಣದಿಂದ ಬರುವ ಲೋಪಕ್ಕೆ ಆ ಯಂತ್ರ ಭಾಗವನ್ನು ಲೋಪ ದೌರ್ಬಲ್ಯತೆಯ ನ್ಯೂನತೆಯಿಂದ ರಕ್ಷಿಸುವ ಕಾರ್ಯಕ್ರಮ ಕೈಕೊಂಡು ಸರಿಗೊಳಿಸಬೇಕು. ಎರಡನೇ ಕಾರಣದಲ್ಲಿ ತೋರುವಂತೆ, ಈ ಬಿರುಕು ಒಡೆಯುವಿಕೆಯು ಬರಲು ಆಗಾಗ ಏರುವ ಇಳಿಯುವ ಹೊರೆಗಳ ಎಳೆತದ ಒತ್ತಡ (Tensile Stress)ವೇ ಕಾರಣವಾಗಿದೆ. ಆದುದರಿಂದ ಹೊರಭಾಗದ ಎಳೆತದ ಒತ್ತಡವನ್ನು ಕಡಿಮೆ ಮಾಡಿದಲ್ಲಿ, ಹೊರಮೈಗೆ ಬಿರುಕು (Surface Cracks) ಗಳು ಬರುವುದನ್ನು ತಡೆದು ಯಂತ್ರಭಾಗಗಳು ಹೆಚ್ಚು ಕಾಲಬಾಳುವಂತೆ ಮಾಡಬಹುದೆಂಬುದನ್ನು ನುಗಣಾಣಬಹುದು.

ಶೋಟ್ ಪೀನಿಂಗ್ ಈ ವಿಧಾನವು ಈ ಉದ್ದೇಶವನ್ನೇ ಸಾಧಿಸುತ್ತದೆ. ಮೇಲೆ ವಿವರಿಸಿದಂತೆ ಗೋಲಿಗಳ ನಿರಂತರ ಪ್ರವಾಹ ಧಾರೆಯು ಹೊಡೆತವು ಯಂತ್ರಭಾಗದ ಹೊರ ಮೈಯನ್ನು ಅದರ ಮಿತಿಗೂ ಮಿಕ್ಕಿ ಸೀಡುತ್ತದೆ. (stretches) ಅದರೆ ಕೆಳಭಾಗಕ್ಕೆ ಗೋಲಿಗಳ ಹೊಡೆತದ ಶಕ್ತಿಯು ತಾಗದಿರುವುದರಿಂದಾಗಿ ಆ ಭಾಗವು ವಿಸ್ತರಣಹೊಂದುವುದಿಲ್ಲ. ಇದರಿಂದಾಗಿ ವಿಸ್ತರಿಸಿದ ಮೇಲ್ಭಾಗವು ಕೆಳಭಾಗದಿಂದ ಸಂಕುಚಿಸಲ್ಪಡುತ್ತದೆ. ಮತ್ತು ಕೆಳಭಾಗವು ಹೊಡೆಯಲ್ಪಟ್ಟ ಮೇಲ್ಭಾಗದಿಂದ ವಿಸ್ತರಿಸಲ್ಪಡುತ್ತದೆ ಮತ್ತು ಈ ಎರಡೂ ಶಕ್ತಿಗಳೂ, ಯಂತ್ರ ಭಾಗದಲ್ಲಿ ಉಳಿಕೆಯ ಒತ್ತಡ (residwal stresses)ಗಳಾಗಿ ಉಳಿಯುವುವು. ಹೀಗಾಗಿ ಶೋಟ್ ಪೀನ್ ಮಾಡಲ್ಪಟ್ಟ ಮೇಲ್ಭಾಗದಲ್ಲಿ ಉಳಿಕೆಯ ಸಂಕುಚಿತ ಒತ್ತಡವೂ, ಮತ್ತು ಅದರ ಕೆಳಗಿನ ಪಲಯದಲ್ಲಿ ಉಳಿಕೆಯ ಎಳೆತದ ಒತ್ತಡವೂ ಇರುವುವು.

ಯಂತ್ರ ಭಾಗವು ಕಾರ್ಯಗತವಾಗಿರುವಾಗ, ಅದರ ಮೇಲ್ಭಾಗಕ್ಕೆ ಬೀಳುವ ಎಳೆತದ ಒತ್ತಡವನ್ನು ತಡೆಗಟ್ಟಲು, ಶೋಟ್ ಪೀನ್ ಮಾಡಲ್ಪಟ್ಟ ಮೇಲ್ಭಾಗದಲ್ಲಿರುವ ಈ ಉಳಿಕೆಯ ಸಂಕುಚಿತ ಒತ್ತಡವೇ ಕಾರಣವಾಗಿದೆ. ಹೀಗೆ ಎಳೆತದ ಒತ್ತಡವು ಕಡಿಮೆಯಾಗುವುದರಿಂದಾಗಿ, ಪೀನ್ ಮಾಡಲ್ಪಟ್ಟ ಮೇಲ್ಭಾಗದಲ್ಲಿ ಬಿರುಕುಗಳು ಬೀಳುವುದನ್ನು ಹೆಚ್ಚು ಕಾಲ ತಡೆಗಟ್ಟಲು ಸಾಧ್ಯವಾದಂತಾಗುವುದು.

ಲೋಹ ದಣಿವಿಗೆ ಒಳಗಾಗುವ ಎಲ್ಲಾ ಯಂತ್ರ ಭಾಗಗಳಿಗೂ ಈಗ ಶೋಟ್ ಪೀನಿಂಗ್ ವಿಧಾನವನ್ನು ಕೈಕೊಳ್ಳಲಾಗುತ್ತದೆ. ಇದು ಅಂತಹ ಯಂತ್ರದ ಭಾಗಗಳು ಹೆಚ್ಚು ಬಾಳ್ವಿಕೆಯುಳುವಂತೆ ಮಾಡುತ್ತದಲ್ಲದೆ ಹೆಚ್ಚು ಕಾಲ ಬಾಳುವುದರಿಂದಾಗಿ ಯಂತ್ರ ಭಾಗಗಳ ಪ್ರಮಾಣ (size) ವನ್ನು ಕಡಿಮೆ ಮಾಡುವಂತಾಗಿ, ಲೋಹವನ್ನು ಉಳಿಸಲು ಸಹಾಯಕಾರಿಯಾಗಿದೆ. ಲೋಹ ಶ್ರಮಕ್ಕೆ ಒಳಗಾಗುವ ಎಲ್ಲಾ ವಿಧದ ಯಂತ್ರ ಭಾಗಗಳಿಗೂ, ಅದು ಮೋಟಾರು ವಾಹನವಿರಲಿ, ವಿಮಾನವಿರಲಿ, ಅಥವಾ ಯಾಂತ್ರಿಕ ಶಸ್ತ್ರ ಸಲಕರಣೆಗಳಿರಲಿ, ಇವಲ್ಲವುಗಳಲ್ಲಿರಬೇಕಾದ ದಣಿವಿಗೊಳಗಾಗುವ ಭಾಗಗಳ ಮೇಲೆ ಶೋಟ್ ಪೀನಿಂಗ್ ಮಾಡಲಾಗುತ್ತದೆ. ಎಕ್ಸಲ್ ಶಾಫ್ಟ್‌ಸ್, ಕ್ರೇಂಕ್ ಶಾಫ್ಟ್‌ಸ, ಕನೆಕ್ಟಿಂಗ್ ರೋಡ್ಸ್, ಗೀಯರ್ಸ್, ರೋಕರ್ ಆರ್ಮ್ಸ್, ಕೊಯಿಲ್ ಸ್ಪ್ರಿಂಗ್ಸ್ ಮತ್ತು ಎಲ್ಲಾ ವಿಧದ ಇತರ ಸ್ಪ್ರಿಂಗುಗಳು, ಸ್ಟ್ರಿಯರಿಂಗ್ ಸಕ್ಲ್ಸ್, ಮಿಲಿಟರಿ ಸಲಕರಣೆಗಳು ಅಲ್ಲದೆ ವೆಲ್ಡ್‌ಗಳಿಗೆ ಕೂಡಾ ಶೋಟ್ ಪೀನಿಂಗ್ ಮಾಡುವುದರಿಂದಾಗಿ ಅವುಗಳ ಬಾಳುವಿಕೆಯು ಸೇಕಡಾ 100 ರಿಂದ 3000 ದ ವರೆಗೆ ಹೆಚ್ಚಿದೆ.

ಈ ಶೋಟ್‌ಪೀನಿಂಗ್ ವಿಧಾನವು ಅಮೇರಿಕಾ ದೇಶದಲ್ಲಿ ಪರಿಪೂರ್ಣತೆಗೊಂಡಿದೆ. ಅದರ ಶೋಟ್‌ಪೀನಿಂಗಾನ ವಿಧಾನ ಮತ್ತು ರೀತಿಗಳಲ್ಲಿ ತುಂಬಾ ಪ್ರಗತಿ ಸಾಧಿಸಿದ್ದಾರೆ. ಶೋಟ್‌ಪೀನಿಂಗ್ ಸರಿಯಾಗಿ ಫಲಕಾರಿಯಾಗಿದೆಯೇ ಎಂದು ಪರೀಕ್ಷಿಸಲು ಸಲಕರಣೆಗಳನ್ನು ರೂಪಿಸಿದ್ದಾರೆ. ಶೋಟ್‌ಪೀನಿಂಗನ್ನು ಸರಿಯಾಗಿ ಮಾಡಿದ್ದಿದ್ದರೆ, ಅದರಿಂದ ಸಿಗಬೇಕಾದಲಾಭವು ಸಿಗದೆ, ಅದು ಬರೇ ಶುಭ್ರಗೊಳಿಸುವ ಕಾರ್ಯಕ್ರಮ ಮಾತ್ರವಾಗಿ ಪರಿಣಮಿಸುವುದು.

ಹೀಗೆ ಶೋಟ್‌ಪೀನಿಂಗಿನಿಂದ ಬರೇ ಶುಭ್ರಗೊಳಿಸುವ ಬದಲು, ಸರಿಯಾದ ಲಾಭನನ್ನು ಪಡೆಯಬೇಕಾದಲ್ಲಿ, ಸರಿಯಾದ ಸಲಕರಣೆಗಳ ಮತ್ತು ಗೋಲಿಗಳ ಆಯ್ಕೆ, ಗೋಲಿಗಳ ಬಿರುಸಿನ ಹೊಡೆತವನ್ನು ಹೊಂದಿಸುವ ಸಲಕರಣೆಗಳ ಸೌಲಭ್ಯ, ಗೋಲಿಗಳ ಹೊಡೆತದ ತೀವ್ರತೆ ಮತ್ತು ಶೋಟ್‌ಪೀನ್ ಮಾಡಿದ ಮೇಲ್ಭಾಗವನ್ನು ಪರೀಕ್ಷಿಸುವ ಸಲಕರಣೆಗಳು ಅತ್ಯಾವಶ್ಯಕವಾಗಿದೆ. ಪೀನ್ ಮಾಡಲ್ಪಟ್ಟ ಮೇಲ್ಭಾಗ ಮತ್ತು ಬರೇ ಶುಭ್ರಗೊಳಿಸಿದ ಮೇಲ್ಭಾಗಗಳಲ್ಲಿ ಬರೇ ಕಣ್ಣಿನಿಂದ ನೋಡುವಾಗ ಹೆಚ್ಚಿನ ವ್ಯತ್ಯಾಸವೇನೂ ಕಾಣದು. 5 ಪಾಲುಗಳಷ್ಟಾದರೂ ದೊಡ್ಡದು ಮಾಡಿ ತೋರಿಸುವ ಭೂತ ಕನ್ನಡಿಯಿಂದ ನೋಡಿದರೆ ಮಾತ್ರ ಪೀನ್ ಮಾಡಿರುವುದನ್ನು ಕಾಣಬಹುದು.

ಇದಲ್ಲದೆ ಪೀನಿಂಗ್ ಮಾಡಿದುದು ಫಲಕಾರಿಯಾಗಿದೆಯೋ ಎಂಬುದನ್ನು ಲೋಹ ಭಾಗಗಳ ಜೀವಮಾನ ನಿರ್ಣಾಯಕ ಯಂತ್ರಗಳಿಂದಲೇ ನಿಶ್ಚಯಿಸಬೇಕಾಗಿದೆ. ಆದುದರಿಂದ ಪೀನ್ ಮಾಡಲ್ಪಟ್ಟ ಯಂತ್ರ ಭಾಗಗಳನ್ನೂ, ಶೋಟ್‌ಪೀನಿಂಗಿನ ಸಫಲತೆಯನ್ನೂ ನಿಶ್ಚಯಿಸಲು ಆಗಾಗ ಶ್ರಮ ಜೀವಮಾನ ಪರೀಕ್ಷಕ ಯಂತ್ರ (fatigue testing machine)ಗಳಿಂದ ಪರಿಶೀಲಿಸಬೇಕಾಗಿದೆ.

ಇಂದೀಗ ಭಾರತದಲ್ಲಿ ಸರ್ವಪ್ರಥಮವಾಗಿ ದಿ ಕೆನರಾ ವರ್ಕ್ ಶಾಪ್ಸ್ ಲಿಮಿಟೆಡ್‌ನವರು ವಿಶಾಲವಾದ ಶಾಟ್ ಪೀನಿಂಗ್ ಸಲಕರಣೆ ಮತ್ತು ಅದರ ಸಫಲತೆಯನ್ನೂ ಪರೀಕ್ಷಿಸುವ ಎಲ್ಲಾ ಸಲಕರಣೆಗಳನ್ನು ತಮ್ಮ ವರ್ಕ್‌ಶಾಪ್ಸ್‌ನಲ್ಲಿ ಸ್ಥಾಪಿಸಿರುವರು. ಈ ಯಂತ್ರಗಳನ್ನು ಒದಗಿಸಿದ ಅಮೇರಿಕದ ಅಮೇರಿಕನ್ ಪೀಲ್ ಎಬ್ರಾಸಿವ್ ಎಂಡ್ ಎಕ್ವಿಪ್‌ಮೆಂಟ್ ಕಾರ್ಪೋರೇಶನ್ ಆಫ್ ಮಿಲವಾಕ, ಯು. ಎಸ್. ಎ. ಇವರು ಇದರ ಉಪಯೋಗಿಸುವ ವಿಧಾನ ಇತ್ಯಾದಿ ಎಲ್ಲಾ ವಿವರಗಳನ್ನೊಳಗೊಂಡ ಸಾಹಿತ್ಯವನ್ನು ಒದಗಿಸಿರುವರಲ್ಲದೆ, ಶ್ರೀ ವಿ. ಎಸ್. ಕುಡ್ವರ ಪುತ್ರ ಶ್ರೀ ಶ್ರೀನಿವಾಸ್ ವಿ. ಕುಡ್ವಾರಿಗೆ ತಮ್ಮ ಮಿಲವಾಕದ ಕಾರ್ಖಾನೆಯಲ್ಲಿ ಮೂರು ತಿಂಗಳ ತರಬೇತಿಯನ್ನು ಕೊಟ್ಟಿರುವರು.

ANNOUNCEMENT.

THE CANARA WORKSHOPS LTD.,

MANGALORE - 3.

have pleasure in announcing that

having effected a revolutionary change in the process of leaf spring manufacture, SUPERIOR Springs shot peened for double life will henceforth be known as

CANARA SPRINGS

CANARA SPRINGS are the same SUPERIOR springs, but with built-in double life.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

Kannada non-detailed Text Book for Higher Forms
ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

(Vide Page 7 of Fort St. George Gazette Part I B Dated 4—5—55

The book contains 30 essays and to quote a review that appeared in the columns of 'The Hindu', Madras, "these are designed to emphasise the duties and obligations of every individual to society, the State and the country in order that in the environmental and other complexities of modern life, one can live a full, purposeful and useful life. Each essay is introduced with a short story drawn from the literatures of the world, modern and ancient, with a view to bringing out clearly the import of the essay that follows. When it is recognised that the orderly progress of any State depends upon each individual conducting oneself with a fullrealisation of one's duties and obligations, the usefulness of this publication will be evident."

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಚತುರ್ ವಾರ್ಷಿಕ ಯೋಜನೆ.

!!! ಮಿತವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಧೆಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. **P. DEVEE**, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ಥರು: ಶಹಾಕಂಪನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾನಣಗೇರಿ ಆಯುರ್ವೇದ ಔಷಧಾಲಯ, ಗದಗ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರ್ಯ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ| ಯು. ಸುಂದರ ರಾಮ ಶೆಟ್ಟಿ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).
THE CANARA BANKING CORPORATION LIMITED

ಸ್ವಂತ ಜವಾಬ್ದಾರಿಯ ಮೇಲೆ ಸಾಲ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOMBAY 3-

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರೆಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಿಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಸೈಮಾಚಲ ಸಾಕ್ಷಿಗೃಹದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಖ್ರಿಸ್ತ ಮತ್ತು ಜಾಶ್ವತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೀತೆ ಮತ್ತು ಪರಾ	೧	೦
ಬಾಯಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಆಸ್ಮಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ANNOUNCEMENT

It is hereby announced that Vivekananda Commercial Corporation Ltd., Kaup, the Managing Agent of Bharath Industrial & Canning Company Ltd., Kaup, has applied to the Central Government for their approval for the transfer of 50 (Fifty) Ordinary Shares No.s 51 to 100, standing at present in the name of Sri. Ninjoor Shama Shetty, Shetty's Compound, Udipi to Sri. Kaup Sanjiva Shetty, Canara Nursery, P. O Salvadi, Coondapur Taluk, S. Kanara.

೧೦೦ ರೂ. ಬಹುಮಾನ ಆಶ್ಚರ್ಯಕಾರಕ

ಸಿದ್ಧ ಕವಚ

ಈ ಕವಚ ಧಾರಣೆಯಿಂದ ಅಸಾಧ್ಯಗಳೆಲ್ಲ ಸಾಧಿಸಿಕೊಳ್ಳಬಹುದು. ಇದರ ಸಿದ್ಧಿಗೆ ಯಾವ ಸಂಕಲ್ಪವೂ ಇಲ್ಲ; ಯಾವ ಸಿದ್ಧತೆಯೂ ಬೇಕಾಗಿಲ್ಲ. ಆದರೆ ಯಾವನು ನಿಮ್ಮ ವಶವರ್ತಿಯಾಗುವನು. ನಿಮಗೆ ಬೇಕಾದ ವ್ಯಕ್ತಿ ದುಷ್ಟ ಗ್ರಹ ಬಾಧೆಗಳನ್ನು ನಿವಾರಿಸುವದು. ವೈರಿಗಳನ್ನು ಸೋಲಿಸಿ, ಪರೀಕ್ಷೆ ವ್ಯಾಪಾರ, ಸ್ವಾಸ್ಥ್ಯ, ಸೊತ್ತಿನ, ಉದ್ಯೋಗ ಐಶ್ವರ್ಯಾದಿಗಳಲ್ಲಿ ಜಯವನ್ನೊದಗಿಸಿ ರೋಗದಿಂದ ಮತ್ತು ಸಾಲದಿಂದ ಉದ್ಧರಿಸುವದು, ಆದೃಷ್ಟವಾಲಿಗಳಾಗಿ ಮಾಡುವದು, ಇದು ಸುಳ್ಳೆಂದು ಸಿದ್ಧಪಡಿಸಿದವರಿಗೆ 100 ರೂ. ಬಹುಮಾನ. ತಾಮ್ರದ ರೂ. 2-8-0 ಬೆಳ್ಳಿಯ ರೂ. 5 ಚಿನ್ನ ರೂ. 15, for special Rs 25—0—0

Shree Panchavati Ashram
No. 8, P. O. KATRISARAI
(GAYA)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಜನರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿಯಮಿತ ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಗೀತೆಯ ಕೈಗನ್ನಡಿ

ಮೊಸಳೆರೆ ಚಿದಂಬರಯ್ಯನವರ ಭಗವದ್ಗೀತೆಯ ಸಮೂಲ ಭಾಷಾಂತರ.

ನವಯುಗ ಪ್ರೆಸ್ ಉಡುಪಿ.

ಮೂಲ್ಕಿ ಮತ್ತು ಉದ್ಯಾವರಗಳಲ್ಲಿ ಸಂಕ

ಜಿಲ್ಲೆಯಲ್ಲಿ ಸಾರಿಗೆ ಸೌಕರ್ಯದ ವಿಸ್ತರಣೆ

ಕೇಂದ್ರ ಸರಕಾರದ ರೈಲ್ವೆ ಮತ್ತು ಸಾರಿಗೆ ಮಂತ್ರಿ ಶ್ರೀ ಲಾಲ್ ಬಹಾದುರ್ ಶಾಸ್ತ್ರಿಗಳವರು ಕಳೆದ ವಾರ ನಮ್ಮ ಜಿಲ್ಲೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಇಟ್ಟು ಕೊಂಡಿದ್ದರು. ಅವರು ತಾ. ೨೮ರಂದು ಬೆಳಿಗ್ಗೆ ಮುಂಬಯಿಯಿಂದ ಮಂಗಳೂರಿನ ಬಜ್ಪೆ ವಿಮಾನ ನಿಲ್ದಾಣದಲ್ಲಿ ಇಳಿದರು. ಅಲ್ಲಿ ಪಾರ್ಲಿಮೆಂಟಿನ ಸದಸ್ಯರಾಗಿರುವ ಶ್ರೀಗಳಾದ ಯು. ಶ್ರೀನಿವಾಸ ಮಲ್ಯ ಮತ್ತು ಕೆ. ಸದಾನಂದ ಹೆಗ್ಡೆ ಮತ್ತಿತರರನ್ನೊಳಗೊಂಡು ಕಾರ್ಯಕ್ರಮದಂತೆ ಪ್ರವಾಸವನ್ನು ಕೈಗೊಂಡರು. ಶ್ರೀ ಟಿ. ಎ. ಪೈಗಳೂ ಅವರನ್ನು ಹಿಂದಿನಿಂದ ಕೂಡಿಕೊಂಡರು.

ಕೇಂದ್ರದಿಂದ ೩೮ ಲಕ್ಷ ವೆಚ್ಚ

ತಮ್ಮ ಸಂಚಾರ ಕಾಲದಲ್ಲಿ ಮಂತ್ರಿಗಳು ಮಾಡಿದ ಮುಖ್ಯ ಕೆಲಸಗಳಲ್ಲಿ ಮೂಲ್ಕಿ ಮತ್ತು ಉದ್ಯಾವರ ಹೊಳೆಗಳಿಗೆ ಹಾಕಬೇಕೆಂದಿರುವ ಸೇತುವೆಗಳ ಶಂಕುಸ್ಥಾಪನೆಯು ಉಲ್ಲೇಖನೀಯ. ಕೇಂದ್ರ ಸರಕಾರದವರು ನಮ್ಮ ಪ್ರತಿನಿಧಿಗಳ ಬೇಡಿಕೆಯನ್ನು ಮನ್ನಿಸಿ ಉಡುಪಿಯನ್ನು ಮಂಗಳೂರಿನೊಡನೆ ಸೇರಿಸಿ ವ ಉದ್ದೇಶದಿಂದ ಸೇತುವೆಗಳಿಲ್ಲದೆ ಸಾರಿಗೆಗೆ ತೊಂದರೆ ಕೊಡುತ್ತಿರುವ ಪಾವಂಜೆ, ಮೂಲ್ಕಿ ಮತ್ತು ಉದ್ಯಾವರ ಹೊಳೆಗಳಿಗೆ ಸೇತುವೆಗೆಂದು ೩೮ ಲಕ್ಷ ರೂಪಾಯಿಗಳ ಸಂಪೂರ್ಣ ವೆಚ್ಚವನ್ನು ಹೊರಲು ಒಪ್ಪಿದ್ದಾರೆ. ಪಾವಂಜೆಯ ಸೇತುವೆಯ ಶಂಕುಸ್ಥಾಪನೆಯನ್ನು ಮದ್ರಾಸಿನ ಮುಖ್ಯ ಮಂತ್ರಿಗಳು ಈಚೆಗೆ ನೆರವೇರಿಸಿದ್ದರು.

ಸೇತುವೆಗಳ ರಚನೆ

ಮೂಲ್ಕಿಯಲ್ಲಿ ಈ ಸೇತುವೆಯು ಈಗಿನ ಕಡವಿಗಿಂತ ಸುಮಾರು ಪಶ್ಚಿಮಕ್ಕೆ ಕಟ್ಟಲ್ಪಡುತ್ತದೆ. ಇದರ ಉದ್ದ ೫೭೦ ಅಡಿ; ಅಗಲ ೨೪ ಅಡಿ ನೆರೆ ನೀರಿನ ಮಟ್ಟಕ್ಕಿಂತ ಸೇತುವೆಯು ೪ ಅಡಿಗಳಷ್ಟು ಎತ್ತರವಿರುತ್ತದೆ. ಉದ್ಯಾವರದ ಸೇತುವೆಯನ್ನು ಸಹ ಈಗಿನ ಕಡವಿಗಿಂತ ೧೫೦ ಅಡಿಯಷ್ಟು ಪಶ್ಚಿಮದಲ್ಲಿ ಕಟ್ಟಲಾಗುತ್ತದೆ. ಉದ್ದವು ೮೧೦ ಅಡಿ; ಅಗಲ ೨೪ ಅಡಿ. ನೆರೆ ನೀರಿನ ಮಟ್ಟಕ್ಕಿಂತ ೧೫ ಅಡಿಗಳಷ್ಟು ಎತ್ತರ ಸೇತುವೆ ನಿಲ್ಲುತ್ತದೆ.

ಮಂತ್ರಿಗಳಿಗೆ ಕೃತಜ್ಞತೆ

ಶಂಕುಸ್ಥಾಪನೆಯ ಸಂದರ್ಭದಲ್ಲಿ ಏರ್ಪಡಿಸಲಾದ ಸಭೆಗಳಲ್ಲಿ ಮುಖ್ಯ ಇಂಜಿನಿಯರಾದ ಶ್ರೀ ಕೆ. ಕೆ. ನಂಬಿಯಾರರು ಮೇಲಿನ ವಿವರಗಳನ್ನು ಒಪ್ಪಿಸಿದ್ದರು. ಮೂಲ್ಕಿಯ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಸದಾನಂದ ಹೆಗ್ಗಡೆಯವರು ವಹಿಸಿದ್ದರು ಉದ್ಯಾವರದಲ್ಲಿ ನೆರೆದ ಸಭೆಗೆ ಶ್ರೀ ಯು ಶ್ರೀನಿವಾಸ ಮಲ್ಯರು ಅಧ್ಯಕ್ಷರಾಗಿದ್ದರು ಇವರಿಬ್ಬರೂ ಮಂತ್ರಿಗಳ ಸಹಾನುಭೂತಿಯನ್ನು ಮೆಚ್ಚಿ ಮಾತನಾಡಿದರು; ಅಲ್ಲದೆ ಈಚೆಗೆ ಕೆಲವು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಸಾಧಿಸಲಾದ ಪ್ರಗತಿಯನ್ನು ವಿವರಿಸಿದರು.

ಉತ್ತರ ಭಾಗದ ಅವಶ್ಯಕತೆ

ಮಂತ್ರಿಗಳು ಎರಡೂ ಸಭೆಗಳ ಮುಂದೆ ಮಾಡಿದ ಭಾಷಣಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹೊಳೆಗಳಿಗೆ ಸೇತುವೆ ಇಲ್ಲದಿರುವುದರಿಂದ ಸಾರಿಗೆ ವಸ್ತು ವ್ಯವಹಾರಕ್ಕೆ ತುಂಬ ತೊಂದರೆಯಾಗಿರುವುದನ್ನು ಒಪ್ಪಿಕೊಂಡರು. ದಕ್ಷಿಣ ಕನ್ನಡದ ಉತ್ತರ ತುದಿಯಲ್ಲಿರುವ ಉಪ್ಪುಂದ ಹೊಳೆಗೆ ಕೇಂದ್ರ ಸರಕಾರದಿಂದ ೪ ಲಕ್ಷ ಮತ್ತು ಮದ್ರಾಸು ಸರಕಾರದಿಂದ ೩ ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿಕೊಡು ಸೇತುವೆ ರಚಿಸಲಾಗುತ್ತದೆ. ಇದೇ ರೀತಿ ಕಲ್ಯಾಣಪುರ, ಮಾಬುಕಳ ಮತ್ತು ಗಂಗೊಳ್ಳಿ ಹೊಳೆಗಳಿಗೆ ಸಹ ಕೇಂದ್ರವು ಅರೆವಾಸಿಯಷ್ಟು, ಅಂದರೆ ೩೮ ಲಕ್ಷ ರೂಪಾಯಿಯಷ್ಟು, ಸಹಾಯ ನೀಡಲು ಈಗಲೇ ಸಿದ್ಧವಿದೆ ಎಂದರು.

ಪರಿಶೀಲನೆಯ ಭರವಸೆ

ಉಳಿದ ಅರ್ಧ ಸಹಾಯವು ಮದ್ರಾಸು ಸರಕಾರದಿಂದ ದೊರೆತರೆ ಸೇತುವೆಗಳ ರಚನೆಯನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿಯೇ ಸೇರಿಸಬಹುದು; ಆದರೆ ನಿಮ್ಮ ಪ್ರತಿನಿಧಿಗಳು ಪೂರಾ ಕರ್ಚನ್ನು ಕೇಂದ್ರ ಸರಕಾರವೇ ವಹಿಸಬೇಕು ಎಂದಿದ್ದಾರೆ; ಕಾರಣ, ಇನ್ನಷ್ಟು ವಿವರವಾಗಿ ಈ ಸ್ರಶ್ನೆಯನ್ನು ಪರಿಶೀಲಿಸಿ ಒಂದು ನಿರ್ಣಯಕ್ಕೆ ಬರಬೇಕಾಗಿದೆ ಎಂದರು. ಈ ನಡುವೆ ಕಲ್ಯಾಣಪುರ, ಮಾಬುಕಳ ಮತ್ತು ಉಪ್ಪುಂದ ಹೊಳೆಗಳ ಸೇತುವೆ ಕೆಲಸದ ಪ್ರಥಮ ಕಾರ್ಯಕ್ರಮವನ್ನು ತೀವ್ರಗೊಳಿಸಲು ಅವರು ಮುಖ್ಯ ಇಂಜಿನಿಯರರಿಗೆ ಸಲಹೆ ಮಾಡಿದರು. ೫೦ ಲಕ್ಷ ವೆಚ್ಚದ ಗಂಗೊಳ್ಳಿ ಸೇತುವೆಯ ಬಗ್ಗೆ ವಿಚಾರ ವಿನಿಮಯವನ್ನು ಹಿಂದಿನಿಂದ ನಡೆಸಲಾಗುವುದು ಎಂದರು.

ಬಂದರ ನಿರ್ಮಾಣ

ಪಶ್ಚಿಮ ಕರಾವಳಿಯಲ್ಲಿ ಬಂದರ ಅಭಿವೃದ್ಧಿಯ ಕುರಿತಾಗಿಯೂ ಮಂತ್ರಿಗಳು ಸರಕಾರದ ಅಭಿಪ್ರಾಯವನ್ನು ಉಡುಪಿ, ಕಾರ್ಕಳ ಮತ್ತು ಮಂಗಳೂರುಗಳಲ್ಲಿತ್ತ ಮಾನಪತ್ರಗಳಿಗೆ ಉತ್ತರವಾಗಿ ಪ್ರಕಟಿಸಿದರು. ಮಲ್ಪೆಯಲ್ಲಿ ಮಂಜುಶಟ್ಟುವ ಉದ್ಯಮವನ್ನು ಸ್ಥಾಪಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಬಹುದು ಎಂದರು. ಪ್ರಬುದ್ಧ ಬಂದರವೊಂದನ್ನು ಪಶ್ಚಿಮ ಕರಾವಳಿಯಲ್ಲಿ ರಚಿಸುವ ಬಗ್ಗೆ ಸುಜೆಯಲ್ಲಿ ಈಚೆಗೆ ತಜ್ಞರು ಮರಳಿ ಪರ್ಯಾಲೋಚನೆ ನಡೆಸಿದರು; ತತ್ಪರಿಣಾಮವಾಗಿ ಇನ್ನೊಂದು ಸಲ ಮಲ್ಪೆ ಮತ್ತಿತರ ಬಂದರುಗಳ ಪರಿಶೀಲನೆ ನಡೆಸಬೇಕೆಂದು ನಿರ್ಣಯಿಸಲ್ಪಟ್ಟಿತು. ಮುಂದಿನ ಪಂಚವಾರ್ಷಿಕಯೋಜನೆಯಲ್ಲಿ ಈ ಕೆಲಸ ನೆರವೇರುತ್ತದೆ ಎಂದು ತಿಳಿಸಿದರು.

ರೈಲ್ವೆಯ ವಿಸ್ತರಣೆ

ಜಿಲ್ಲೆಯಲ್ಲಿ ರೈಲ್ವೆ ವಿಸ್ತರಣೆಯ ಕುರಿತು ಮಾತನಾಡುತ್ತಾ ಹಾಸನ- ಮಂಗಳೂರುರೈಲ್ವೆಯಾದರೆ ಮಲೆನಾಡು ಮತ್ತು ಮೈಸೂರಿಗೆ ಪಶ್ಚಿಮ ಕರಾವಳಿಯಲ್ಲಿ ಯೋಗ್ಯ ಬಂದರೊಡನೆ ಸಂಪರ್ಕವಾಗುತ್ತದೆ. ಈ ರೈಲು ರಸ್ತೆಯ ಕುರಿತಾದ ಕೆಲಸ ಭರದಿಂದ ಮುನ್ನಡೆಯುತ್ತಿದೆ. ವ್ಯಾಪಾರಾಭಿವೃದ್ಧಿಯ ದೃಷ್ಟಿಯಿಂದ ಮಂಗಳೂರು ಬಂದರದ ಸೌಕರ್ಯವನ್ನು ಹೆಚ್ಚಿಸುವುದು ಯೋಗ್ಯ ಎಂದು ಮುಂತಾಗಿ ಹೇಳಿದರು. ಅಲ್ಲದೆ ಪಶ್ಚಿಮ ಕರಾವಳಿಯಲ್ಲಿ ಉದ್ದಕ್ಕೆ ಹೊಸ ರೈಲು ಮಾರ್ಗದ ವಿಚಾರವಿದೆಯೆಂದೂ ಸಕಲೇಶಪುರ — ಕಡೂರು, ಮಂಗಳೂರು- ಲೋಂಡಾ ರೈಲ್ವೆಯ ಪರಿಶೀಲನೆ ನಡೆಸಲ್ಪಡುತ್ತಿದೆಯೆಂದೂ ವಿದಿತಪಡಿಸಿದರು.

ಸಂಚಾರದ ವಿಶೇಷ

ಮಂತ್ರಿಗಳ ಸಂಚಾರ ಕಾಲದಲ್ಲಿ ಕಟೀಲು, ಕಿನ್ನಿಗೋಳಿ, ಪಡುಬಿದ್ರಿ, ಎಮ್ಮಾಳು, ಉಚ್ಚಿಲ, ಕಾಪು, ಪರ್ಕಳ, ಹಿರಿಯಡ್ಕ, ಬೈಲೂರು ಇತ್ಯಾದಿ ಕೇಂದ್ರಗಳಲ್ಲಿ ಸಾರ್ವಜನಿಕರು ಸ್ವಾಗತಿಸಿದರು. ಮೂಲ್ಕಿಯ ಪಂಚಾಯತು ಬೋರ್ಡು ಉಡುಪಿಯ ನಗರ ಸಭೆ ಮತ್ತು 'ಕಾಂಗ್ರೆಸು ಸಮಿತಿ' ಕಾರ್ಕಳದ ಪಂಚಾಯತು ಬೋರ್ಡು, ಮಂಗಳೂರಿನ ನಗರ ಸಭೆ ಮತ್ತು ಕೆಸರಿ ಚೇಂಬರ್ ಆಫ್ ಕಾಮರ್ಸ್ ಇತ್ಯಾದಿ ಸಂಸ್ಥೆಗಳಿಂದ ಮಾನಪತ್ರ ಸಮರ್ಪಿಸಲ್ಪಟ್ಟಿತು. ಉಡುಪಿಯಲ್ಲಿ ಶ್ರೀ ಕೃಷ್ಣ ದೇವರು, ಮತ್ತು ಕಾರ್ಕಳದಲ್ಲಿ ಗೋಮಟೇಶ್ವರನ ದರ್ಶನವನ್ನು ಮಂತ್ರಿಗಳು ಮಾಡಿದರು. ಮಣಿಪಾಲದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನೂ ಮೂಡಬಿದ್ರೆಯಲ್ಲಿ ಸಾವಿರ ಕಂಬದ ಬಸದಿಯನ್ನೂ ನೋಡಿದರು. ಮಲ್ಪೆಯ ಬಂದರು ಸ್ಥಳವನ್ನೂ ಮಂತ್ರಿಗಳು ವೀಕ್ಷಿಸಿದರು.

ದಕ್ಷಿಣ ಕನ್ನಡ ತೀಯಾ ಸಮಾಜದ ಅವಗಾಹನೆಗೆ.

ಮುಂಬಾಯಿ ತಿಯಾಸಮಾಜ ಪ್ರಸ್ತಜಾತಿ ಬಾಂಧವರ ವಿಧ್ಯಾರ್ಜನಾ ಸೌಲಭ್ಯತೆಗೆಂದು IV ರಿಂದ VI ನೇ Form ತನಕ ಕಲಿಯುವ ಬಡವರಾಗಿರುವ ಮತ್ತು ಆರ್ಥಿಕವಾಗಿರುವ ವಿಧ್ಯಾರ್ಥಿಗಳಿಗೆ 1955—1956ನೇ ವರ್ಷದ ವಿಧ್ಯಾರ್ಥಿವೇತನವನ್ನೀಯಲು ನಿರ್ಧರಿಸಿದೆ. ಇಚ್ಛಿಸುವ ವಿಧ್ಯಾರ್ಥಿಗಳು ವಿವರಗಳಿಗಾಗಿ ಸಮಾಜದ ಗೌರವ ಕಾರ್ಯದರ್ಶಿಯವರಿಗೆ ತಾ. 16—6—1955 ರೊಳಗೆ ಬರೆಯಬೇಕಾಗಿ ವಿನಂತಿ.

R. K. Narayan B A.
Hon General Secretary
Thiya Samaj Bombay
108 Bora Bazar Street
4 th floor Room No 25
Bombay 1



ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ. ಕೆ. ಹೊನ್ನಯ್ಯ ಶೆಟ್ಟರ
ಮುಗುಳು
ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಜೊಕ್ಕು ಪುಸ್ತಕ
ವಿದ್ಯಾರ್ಥಿಗಳು ಸಲಿಸಲಿದು ಓದುವುದು, ಓದಿ ಓದಿ ಸಲಿಪುವರಿಂದ
ಈಗ ೧೨ನೇ ಮುದ್ರಣವನ್ನು ಕಂದಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪ್ರಾಚೀನ ತುಳುನಾಡು
(ಎಸ್. ಎಸ್. ಕಿಟ್ಟಿ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ವೈಗಳ ಮುನ್ನುಡಿ)
160 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆವರಿಗೆ ಒಲಿದಿದ್ದ..ಇದು ಆವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ
ಮೇಲ್ತರೆಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೇವೆಗಾಗಿ ಯುವಕರಿಗೆ ಕರೆ

! ಅವರು ಮಾಡಬಹುದಾದ ಕೆಲಸಗಳು

[ಪುತ್ತೂರಿನಲ್ಲಿ ಜಿಲ್ಲೆಯ ರಾಜಕೀಯ, ಪರಿಷತ್ತಿನ ಅಂಗವಾಗಿ ಜರಗಿದ ಯುವಕ ಸಮ್ಮೇಳನದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಇವರು ಮಾಡಿದ ಅಧ್ಯಕ್ಷ ಭಾಷಣದಿಂದ.]

ಮುಸ್ಲಿಗೂ ಯೌವನಕ್ಕೂ ದುಸ್ತರವಾದ ಅಂತರವೇನೂ ಇಲ್ಲ. ಮಾನವನ ಸಾಧನೆಗೆ ಪ್ರಾಯದ ಮಿತಿ ಇದಿರಲ್ಲ. ಆದರೆ ಯುವಕರಲ್ಲಿ ಕೆಲವೊಂದು ಗುಣವಿಶೇಷಗಳಿವೆ. ಈ ಗುಣಗಳ ಸದ್ವಿನಿಯೋಗ ಸಮಾಜ ಕಲ್ಯಾಣಕ್ಕೆ ಪೋಷಕವಾಗುವುದು. ಯುವಕರ ದೇಹದಲ್ಲಿ ಸತ್ವವಿದೆ. ಅವರ ಭಾವನೆ, ಊಹನೆಗಳನ್ನು ಕೆರಳಿಸಿದರೆ ಅವು ಎಷ್ಟು ಉನ್ನತಕ್ಕೂ ಸೋಗಬಹುದು. ಅವರಲ್ಲಿ ಸಾಹಸವಿದೆ, ಸ್ಫೂರ್ತಿ ಇದೆ. ಅಂಥದನ್ನೆ ಅವರಲ್ಲಿ ಬೃಹತ್ ಭಾರತದ ರಚನೆಗೆ ಬೇಕಾದ ಗುಣಗಳೇ ಇವು. ಈ ಗುಣಗಳನ್ನು ಅಳವಡಿಸಿಕೊಂಡು, ತನ್ನ ಸರ್ವ ಶಕ್ತಿ-ಯುಕ್ತಿಗಳ ಪ್ರಯೋಗದಿಂದ ಕಾರ್ಯಕರ್ತೃರಾಗಬೇಕಾದುದು ಯುವಕರ ವಿಶಿಷ್ಟ ಹಕ್ಕೂ ಆದ್ಯಕರ್ತವ್ಯವೂ ಆಗಿರುತ್ತದೆ. ನಮ್ಮಲ್ಲಿ ಅನೇಕರ ಬುದ್ಧಿ ಶಕ್ತಿವಾಗಿಲ್ಲದಿರಬಹುದು, ನಮ್ಮ ಅನುಭವ ಸಾಲದಿರಬಹುದು. ಆದರೆ ನಮ್ಮಲ್ಲಿ ಉತ್ತಮ ಮಾರ್ಗದರ್ಶಕರಿಲ್ಲವೆ? ಅವರ ನಿರ್ದೇಶನದಿಂದ ಸ್ಫೂರ್ತಿ ಪಡೆದೋಣ, ಉದ್ದೇಶ ಸಾಧನೆಗೆ ನಮ್ಮ ಸಂಪೂರ್ಣ ಸತ್ವನನ್ನು ಮೀಸಲಾಗಿರಿಸೋಣ.

ನಮ್ಮ ಯುವಕರ ಶಕ್ತಿ, ಸಾಮರ್ಥ್ಯ, ಪ್ರತಿಭೆ ಹೆಚ್ಚು ಹೆಚ್ಚಾಗಿ ದೇಶಕಲ್ಯಾಣ ಕಾರ್ಯಕ್ಕೆ ದೊರೆಯಬೇಕಾಗಿದೆ. ಇದಕ್ಕೆ ಕ್ರಮಬದ್ಧ ರೀತಿಯಲ್ಲಿ ಯುವಕರ ಸಂಘಟನೆಯಾಗಬೇಕು. ಸರಕಾರದಿಂದಂತೂ 'ಕಲ್ಯಾಣರಾಷ್ಟ್ರ' ಸ್ಥಾಪನೆಯಾಗಲು ಸಾಧ್ಯವಿಲ್ಲವೆಂಬ ಅರಿವು ಈಗ ಉಂಟಾಗಿರುವುದು ನಮ್ಮ ಸುದೈವ. ಅಂತೆಯೇ ಇಂದು ಜನತೆಯ ಸ್ವಪ್ರಯತ್ನಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಲಾಗಿದೆ. ಭಾವೀ ರಾಷ್ಟ್ರದ ಸ್ಪಷ್ಟ ದರ್ಶನವೂ ನಮ್ಮ ಜನರಿಗಾಗಿದೆ. ನಮ್ಮ ಭಾವನೆಯಲ್ಲಿರುವ ಪ್ರಜಾಪ್ರಭುತ್ವವಲ್ಲಿ ಸ್ವಾರ್ಥ, ಅಧಿಕಾರಲಾಲಸೆಗೆ ಎಡೆ ಇರದು; ತಂದೆ ಪಂಡಿತರ ಕೈವಾಡಕ್ಕೆ ಅವಕಾಶವಿರದು; ಇಲ್ಲಿ ಪ್ರತಿಯೊಬ್ಬ ನಾಗರಿಕನೂ ರಾಷ್ಟ್ರಾಭಿವೃದ್ಧಿಯ ಮಹಾಕಾರ್ಯದಲ್ಲಿ ಜವಾಬ್ದಾರಿಯುತ ಪಾಲುಗಾರನು—ಇದೇ ಮುಖ್ಯ ತತ್ವ. ಈ ಧ್ಯೇಯಸಾಧನೆಯಲ್ಲಿ ನಾವು ತಪ್ಪುಮಾಡಬಹುದು. ಆದರೆ ಈ ಮಾದರಿಯ ಪ್ರಜಾಪ್ರಭುತ್ವವೇ ನಮ್ಮ ಘನ ಉದ್ದೇಶ ಮತ್ತು ಉತ್ಕೃಷ್ಟೇಚ್ಛೆಯಾಗಿರಲಿ; ನಮ್ಮ ಯುವಕರ ಸತ್ವಪರೀಕ್ಷೆಯ ಬರೆಗಲ್ಲಾಗಿರಲಿ!

ಇದು ನಮ್ಮ ರಾಷ್ಟ್ರದ ಮುಂದಿರುವ ಆಹ್ವಾನ. ಶ್ರಿಕರಣಸೂಚಕವಾಗಿ ಈ ಆಹ್ವಾನವನ್ನು ನಾವು ಸ್ವೀಕರಿಸಬೇಡವೆ? ನಮ್ಮ ಯುವಕರು ಅನೇಕಾನೇಕ ರೀತಿಯಲ್ಲಿ ರಾಷ್ಟ್ರಸೇವೆ ಸಲ್ಲಿಸಬಹುದು. ಇಂದು ವಿದ್ಯಾರ್ಥಿಗಳಿಗೆ ಸಮಾಜಸೇವೆಯನ್ನು ಸಲ್ಲಿಸಲು ಅಸಂಖ್ಯತ ಕಾರ್ಯ ರಂಗಗಳಿವೆ. ಅಖಿಲ ಭಾರತದಲ್ಲಿ ಈ ಸೀಗ ಸಾವಿರಾರು ಮಂದಿ ಶಾಲಾಕಾಲೇಜು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ, ನಿರಕ್ಷರ ಶಿಕ್ಷಣ, ರಸ್ತೆ ಸೇತುವೆಗಳ ನಿರ್ಮಾಣದೇ ಮೊದಲಾದ ಸಾಮಾಜಿಕ ಸೇವೆಯಲ್ಲಿ ತೊಡಗಿರುವರೆ. ಇದುತುಂಬ ಸಂತೋಷದ ವಿಷಯ. ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆಯೇ ಮೊದಲಾದ ಚಟುವಟಿಕೆಗಳಲ್ಲಿ ನಮ್ಮ ವಿದ್ಯಾರ್ಥಿಗಳೂ, ಯುವಕರೂ ಭಾಗವಹಿಸುತ್ತಿರುವುದು ಸಂತೃಪ್ತಿದಾಯಕವಾದ ಸಂಗತಿ. ಹೀಗೆ ಸಲ್ಲಿಸಿದ ಸೇವೆ ಅವರವರ ಅಂತರಿಕ, ಮಾನಸಿಕ ಸಂತೃಪ್ತಿಗೆ ಕಾರಣವಾಗುವುದು. ಅವರ ವ್ಯಕ್ತಿತ್ವಕ್ಕೊಂದು ಶೋಭೆ ತರುವುದು. ಮಾತ್ರವಲ್ಲ, ನಮ್ಮ ಪೂಜ್ಯ ದೇಶದ ಉತ್ತಮ ನಾಗರಿಕ ರಾಗುವಂತೆ ಅವರಲ್ಲಿ ತಕ್ಕ ಪರಿವರ್ತನೆಯನ್ನುಂಟುಮಾಡುವುದು.

ವಿದ್ಯಾವಂತ ಯುವಕರು ಶಾರೀರಿಕ ಶ್ರಮವೆಂದರೆ ಅಸಹ್ಯಪಡುತ್ತಾರೆ, ಕೀಳೀನತೆಯ ಜಂಬ ಇವರಲ್ಲಿದೆ, ಅಥವಾ ಇವರು ಸ್ವಾರ್ಥ ಮಗ್ನರು ಎಂಬ ಆಪಾದನೆ ಇಂದು ಸರಿಯೋಗುವುದಿಲ್ಲ. "ಎಲ್ಲಾ ಕೆಲಸವೂ ಪೂಜೆಯೇ" ಎಂದು ಕಾರ್ಲೈಲ್ ಹೇಳಿದ್ದ. ಕೆಲಸ ಕೆಲಸಗಳೊಳಗಣ ತಾರತಮ್ಯವನ್ನು ತನ್ನ ಉಜ್ವಲ ಆದರ್ಶದಿಂದ ಪೂಜ್ಯ ಬಾಪೂಜಿಯವರು ನಾಶಮಾಡಿದ್ದರು. ಸಮಾಜಸೇವೆ ಮಾಡುವ ನಮ್ಮ ಯುವಕರಿಗೆ ಈ ತತ್ವವೇ ಆದರ್ಶ.

ಪ್ರಚಾರಕ್ಕಾಗಿ ಇಲ್ಲದೆ ಇನ್ನಾವುದೋ ಅಂತರ್ಹೇತುವಿನಿಂದ ಸಮಾಜಸೇವೆ ಮಾಡುವವರಿದ್ದಾರೆ. ಆದರೆ ಅಂತಹ ಸಮಾಜಸೇವೆಯಲ್ಲಿ ಬಾಹುಬಿ ಮತ್ತ ಕೊರತ್ತಿದ್ದ ಪವಿತ್ರತೆ ಇರುವುದಿಲ್ಲ. ಆ ರೀತಿ ಸೇವೆಸಲ್ಲಿಸುವವರಿಗೆ ಅಂಗ್ಲ ಕವಿಯೊಬ್ಬ ಹೇಳಿದ "ದೇವರು ಅತ್ತದ ಆಳವನ್ನು ಮನ್ನಿಸುತ್ತಾನೆ, ಗದ್ದಲವನ್ನಲ್ಲ" ಎಂಬ ಮಾತನ್ನು ನೆನಪಿಗೆ ತಂದುಕೊಡಬಹುದು.

ಸಮಾಜಸೇವೆಗಾಗಿ ಯುವಕರನ್ನು ಸಂಘಟಿಸಿದ ಅನುಭವದಿಂದ ಕೆಲವೊಂದು ಸೂಚನೆಗಳನ್ನು ಮಂಡಿಸುವುದು ಅಪ್ರಸ್ತುತವಾಗದು—ಈ ಸೂಚನೆಗಳು ಕಾರ್ಯಕ್ಷೇತ್ರದ ಬಗೇ ಅವರಣ ಮಾತ್ರವೆನ್ನಬಹುದು. ಅದರೆ ಪ್ರತಿಯೊಂದು ಪಳ್ಳಿ ಅಥವಾ ಪಟ್ಟಣಗಳಲ್ಲಿ ಯುವಕ ಕಾಂಗ್ರೆಸನ್ನು ಸ್ಥಾಪಿಸಲು ಈ ಅವರಣ ಪ್ರಯೋಜನಕಾರಿಯಾಗದಿರದು. ನಿಸ್ವಾರ್ಥ ಧುರೀಣತ್ವದಿಂದ ಪ್ರತಿಯೊಂದು ಪಳ್ಳಿ ಅಥವಾ ಪಟ್ಟಣದನ್ನು ಯುವಕ ಕಾರ್ಯಕ್ಷೇತ್ರದ ಪ್ರಸರ್ತಕ ಕೇಂದ್ರವನ್ನಾಗಿ ರೂಪಿಸಬಹುದು. ಶಾಲಾಕಾಲೇಜುಗಳ ವಿದ್ಯಾರ್ಥಿಗಳು ಸಮಾಜ ಸೇವೆಯ ತರಬೇತಿ ಪಡೆಯಲು ತಮ್ಮ ತಮ್ಮ ಸಂಸ್ಥೆಗಳನ್ನೆ ತಾತ್ಕಾಲಿಕ ಕಾರ್ಯಕ್ಷೇತ್ರವಾಗಿಟ್ಟುಕೊಳ್ಳಬಹುದು. ಅಭ್ಯಾಸಕರು ಅವರಿಗೆ ತಕ್ಕ ಮಾರ್ಗದರ್ಶನವನ್ನೀಯಬಲ್ಲರು. ಶುಚಿತ್ವ, ಪ್ಯಾಯಾನು, ಹೂದೋಟ, ಫಲದೋಟಗಳನ್ನು ಬೆಳೆಯಿಸುವುದು ಅಥವಾ ಇಂತಹದೆ ಇನ್ನಿತರ ಚಟುವಟಿಕೆಗಳ ಕಾರ್ಯಕ್ರಮಗಳನ್ನಿಟ್ಟುಕೊಂಡು ವಿದ್ಯಾರ್ಥಿಗಳಿಗೆ ತಕ್ಕ ತರಬೇತಿಕೊಡಬಹುದು. ಶಾಲೆಯ ಕಟ್ಟಡ ವಿಸ್ತರಣೆ, ಗೋಡೆಗೆ ಸುಣ್ಣ ಬಳಿಯುವುದು, ಬಣ್ಣ ಕೊಡುವುದು, ಈಜಾಟದಕೊಳ ಅಥವಾ ವಂಪ್ಯಾಟಿದ ಮಂಟಪಗಳನಿರ್ಮಾಣವೇ ಮೊದಲಾದ ಕೆಲಸಗಳಲ್ಲಿ ವಿದ್ಯಾರ್ಥಿಗಳು ಸ್ವಯಂಸ್ಫೂರ್ತಿಯಿಂದ ದುಡಿಯುತ್ತಿರುವ ಅನೇಕ ನಿದರ್ಶನಗಳು ನಮ್ಮ ಮುಂದಿವೆ.

ಅಕ್ಕಪಕ್ಕದ ಪಳ್ಳಿಗಳಲ್ಲಿ ವಿದ್ಯಾರ್ಥಿಗಳು ಸೇವಾನಿರತರಾಗಬೇಕೆಂದು ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳು ಸಹಾಯವನ್ನೂ ಉತ್ತೇಜನವನ್ನೂ ಕೊಡುತ್ತಿವೆ. ಯುವಕರ ಸೇವಾಶಕ್ತಿ ಮತ್ತು ಪ್ರತಿಭೆಯನ್ನು ಈ ರೀತಿ ರಚನಾತ್ಮಕ ಕಾರ್ಯಗಳಲ್ಲಿ ಪ್ರವರ್ತಿಸುವುದರಿಂದ ಊರ ಜನರಿಗೆ ಬಹಳ ಪ್ರಯೋಜನವಿದೆ. ಇದು ವಿದ್ಯಾರ್ಥಿಗಳ ಶಿಸ್ತು ಮತ್ತು ಮನೋವಿಕಾಸಕ್ಕೂ ಕಾರಣವಾಗುವುದು. ಹೀಗಾಗಿ ವಿದ್ಯಾರ್ಥಿ ಮತ್ತು ಪಾಲಕರ ಸ್ನೇಹ ಉದ್ದೀಪನಗೊಳ್ಳುವುದು. ಸಮಾಜಸೇವೆಗೆ ಉಪಯೋಗವಾಗುವ ಬಯಸುವಿಕೆ ಕೆಲವರಲ್ಲಿ ವಿದ್ಯಾರ್ಥಿಗಳು, ಪ್ರಾಮಾಣಿಕವಾಗಿದರೆ ಪಳ್ಳಿಗರ ಮನಸ್ಸನ್ನು ಸೋಲಿಗಾಗುವಾದ ಪರಿಣಾಮವಾಗುವುದು ಸಾಧ್ಯವೂ. ಇದರಿಂದಲೆ ಸಂಸ್ಕಾರ ಶಿಕ್ಷಣ, ನಾಟಕ, ಯಕ್ಷಗಾನವೇ ಮೊದಲಾದ ವಿನೋದಾವಳಿಗಳು, ಅಂಚೆ ಪದ್ಯಾಟಿಗಳು-ಇವನ್ನು ರೂಢಿಕಾಲದಲ್ಲಿ ರಚಿಸಿಕೊಂಡ ಶಿಬಿರದ ಕಾರ್ಯಕ್ರಮಗಳಲ್ಲಿ ಸೇರಿಸಬಹುದು. ಇಂತಹ ವ್ಯವಸ್ಥಿತ ಚಟುವಟಿಕೆಗಳು ಮುಂದಿನ ವಿದ್ಯಾಭ್ಯಾಸದಷ್ಟೆ ಮಹತ್ವದ ಸ್ಥಾನ ಪಡೆಯಬೇಕು.

ಸಾಶ್ವತ್ವ ದೇಶಗಳಲ್ಲಿಯುವಕರ ಜೀವನ ಎಂಬುದು ಸಮಾಜದ್ದೆ ಪ್ರಮುಖ ಸತ್ವವನ್ನು ಪಡಿಸಿಕೊಂಡಿದೆ. ಭವ್ಯವಾಗಿ ಸಂಘಟಿಸಿರುವ ಯುವಕ ಸಂಸ್ಥೆಗಳು ಕಠಿಣ ಶಿಸ್ತಿಯಾಕಟ್ಟುಗಳನ್ನು ರಚನಾತ್ಮಕ ಕಾರ್ಯದಲ್ಲಿ ಪರಿಸಲು ಸ್ವತಂತ್ರ ಪ್ರಯತ್ನಶೀಲತ್ವವೆ. ಈ ಕೂಟಗಳು ಯಾವ ಕೆಲಸಕ್ಕೂ ಸಿದ್ಧವಾಗಿವೆ. ಇವುಗಳ ಆಟಿಸಲ್ಪಟ್ಟಿರುವ ಶೈಲಿ ವಿದ್ಯತೆ ಇದೆ. ಕಿರಿಯರ ಮೇಲೆ ಇವುಗಳಿಗಿರುವ ಪ್ರಭಾವ ಅಷ್ಟಿಷ್ಟಲ್ಲ. ಡೆನ್ಮಾರ್ಕಿನಲ್ಲಿ ಈ ಚಳವಳಿ ಅತ್ಯಂತ ಪ್ರಭಾವಶಾಲಿಯಾಗಿದೆ. ಇವರ ಪರ್ಶನ್ನಿನಿಂದ ಅಲ್ಲಿಯ ಯುವಜನರ ಗುಣಶೀಲಗಳು ಆದರ್ಶಪ್ರಾಯವಾಗಿ ರೂಪುಗೊಂಡಿವೆ. ಯುವಕರು ಒಂದುಗೂಡಿಕೊಂಡು ಬಿಚ್ಚು ಮನಸ್ಸಿನಿಂದ, ನಿರ್ವಿಕಾರ ಬುದ್ಧಿಯಿಂದ ತಮ್ಮ ಸ್ವಂತ ಸಮಸ್ಯೆಗಳನ್ನು ಚರ್ಚಿಸಿಕೊಳ್ಳುವರು. ದೇಶದ ಇಲ್ಲಿನ ಪ್ರಸಂಗದ ವಿಷಯಗಳ ಕುರಿತು ವಿಚಾರ ವಿನಿಮಯ ಮಾಡಿಕೊಳ್ಳುವರು. ಈ ಕಾರ್ಯಕ್ರಮದಿಂದ ಯುವಕರಲ್ಲಿ ನಿಷ್ಠೆ ಹುಟ್ಟುವುದು. ವಿಚಾರ ಪ್ರಚೋದನೆ ಸಾಧ್ಯವಾಗುವುದು. ಅಲ್ಲಿಯ ಯುವಕರಲ್ಲಿ ಮೆಚ್ಚುಗೆಯ ಅಭಿಮಾನ ಹೆಚ್ಚಿ ತನ್ನ ಪ್ರದರ್ಶನವಾಗುವುದು. ಪ್ರಯಾಣ, ನಡಿಗೆಯೋಜನೆ, ವಿಚಾರ-ಸಂಚಾರಗಳ ಮೂಲಕ ಯುವಕರಲ್ಲಿ ಸಾಮರಸ್ಯ ಬಾಂಧವ್ಯ, ಬೇಸನದಲ್ಲಿ ಉಲ್ಲಾಸ ಉಂಟಾಗಲು ಅನುಕೂಲವಾಗುವುದು.

ಅಮೇರಿಕದ ಮಾದರಿಯಲ್ಲಿ ಯುವಕರ ಕೂಟಗಳನ್ನು ಇಲ್ಲಿಯೂ ತೊಡಗಿದರೆ ತುಂಬಾ ಪ್ರಯೋಜನವಾಗಬಹುದು. ಪೋರ್ಟ್ ಹೆಂಡ್, ಟೈಪ್‌ರೈಟಿಂಗ್, ಆಟೀಸು ತರಬೇತಿ, ಹೊಲದ ಆದಾಯತಿ, ಮೋಟಾರು ಅಥವಾ ರೇಡಿಯೊ ರಿಪೇರಿಯೇ ಮೊದಲಾದ ಔದ್ಯೋಗಿಕ ಹಾಗೂ ಸಾಮಾನ್ಯ ವಿಜ್ಞಾನವನ್ನು ಈ ಮೂಲಕ ನಮ್ಮ ಯುವಕರಿಗೆ ಅವರವರ ಶಾಲಾ ಸಮಯದ ಬಳಿಕ ಬೋಧಿಸಬಹುದು. ಇದಕ್ಕಾಗಿಯೆ ಕಾರ್ಮಿಕರ ವಿದ್ಯಾ ಸಂಘವು ಆ ದೇಶದ ಕಾರ್ಮಿಕರಲ್ಲಿ ವಿದ್ಯಾಪ್ರಚಾರದಲ್ಲಿ ವಿಶೇಷ ಸಹಕಾರಿಯಾಗಿರುವುದು. ಜನ ಸಾಮಾನ್ಯರ ಬುದ್ಧಿ ಸುತ್ತು ಸಂಸ್ಕೃತಿಯ ಮಟ್ಟವನ್ನು ಹೆಚ್ಚಿಸಲು ಈ ಸಂಘ ಮುಖ್ಯ ಕಾರಣವಾಗಿದೆ ಎನ್ನಬಹುದು. ಅಮೇರಿಕ ಮತ್ತು ರಷ್ಯಾದೇಶಗಳಲ್ಲಿ ವಿವಿಧ ಪ್ರದೇಶಗಳ ಸಮಾಜಿಕ, ಆರ್ಥಿಕ ಸ್ಥಿತಿಗತಿಯ ವಿಚಾರ ಸಂಗ್ರಹದಲ್ಲಿ ಯುವಕ ಸಂಸ್ಥೆಗಳು ಭುಜಕ್ಕೆ ಭುಜಕೊಟ್ಟು ಸಹಕರಿಸುತ್ತಿವೆ. ಕಾರ್ಖಾನೆಯ ಕೆಲಸಗಾರರ ಜೀವನ ಸ್ಥಿತಿ, ಜನತೆಯ ಆರ್ಥಿಕ ಪರಿಸ್ಥಿತಿ ಶೋಷಣೆ, ಅಸ್ಪೃಶ್ಯತೆಗಳ ನಿವಾರಣೆವೇ ಮೊದಲಾದ ಕಾರ್ಯಗಳನ್ನು ಈ ಸಂಸ್ಥೆಗಳು ಆಸಕ್ತಿಯಿಂದ ನೆರವೇರಿಸುತ್ತಿವೆ. ಇದರಿಂದ ಸಮಾಜದಲ್ಲಿರುವ ಅಡ್ಡಿ ಅತಂಕಗಳೂ, ಅಸ್ಪೃಶ್ಯತೆಗಳೂ ಎಂಬ ಪರಿಚಯ ಯುವಕರಿಗೆ ತಾನಾಗಿಯೇ ಉಂಟಾಗುವುದು. ಈ ಬಗ್ಗೆ ತಾತ್ವ ಮಾಡತಕ್ಕ ರೀತಿ ನಾತ್ಮಕ ಕ್ರಿಯೆ ಸಲೆಂಬ ಪ್ರೇರಣೆಯೂ ಅವರಲ್ಲಿ ಹುಟ್ಟುವುದು. ಪ್ರಜಾಪ್ರಭುತ್ವ ಸಮಸ್ಯೆಗಳ ಕುರಿತು ಯುವಕರು ಚಾಣಾಗಳನ್ನೇರ್ಪಡಿಸುತ್ತಾರೆ. ಅಭ್ಯಾಸ ಕೇಂದ್ರಗಳನ್ನು ತೆರೆಯುತ್ತಾರೆ. ಇದರಿಂದ ಯುವಕರ ಅಸಮಾನತೆ ಅಸೂಯೆಗಳು ಮಾಯವಾಗುವ ಅವಕಾಶ ಹೆಚ್ಚುವುದು. ಪ್ರಜಾಪ್ರಭುತ್ವ ಸಮಸ್ಯೆಗಳ ಕುರಿತು ಯುವಕರು ಚಾಣಾಗಳನ್ನೇರ್ಪಡಿಸುತ್ತಾರೆ. ಅಭ್ಯಾಸ ಕೇಂದ್ರಗಳನ್ನು ತೆರೆಯುತ್ತಾರೆ. ಇದರಿಂದ ಯುವಕರ ಅಸಮಾನತೆ ಅಸೂಯೆ ಅಹಂಕಾರಗಳು ಮಾಯವಾಗುವ ಅವಕಾಶ ಹೆಚ್ಚುವುದು. ಅಲ್ಲದೆ ಡೆನ್ಮಾರ್ಕ್, ಲಕ್ಷಾ, ಅಮೇರಿಕಾ ಮತ್ತು ಇಂಗ್ಲಂಡ, ದೇಶಗಳಲ್ಲಿ ಶಾಲೆಗೆ ಹೋಗುವ ಅನುಕೂಲತೆ ಇಲ್ಲದಿದ್ದ ಕಾರ್ಮಿಕರಿಗೆ ಅವರವರ ಉದ್ಯೋಗಕ್ಕೆ ತಕ್ಕ ಮಾಹಿತಿಯನ್ನು ಕೊಡುವ ಯೋಗ್ಯ ತರಬೇತಿ ಕೇಂದ್ರಗಳೂ ಯುವಕ ಸಂಸ್ಥೆಗಳಿಂದಲೇ ನಡೆಯುತ್ತಿವೆ.

ಈ ಕಾಲದಲ್ಲಿ ಅಜ್ಞಾನವು ಬರೀ ಒಂದು ಹೊರೆ ಮಾತ್ರವಲ್ಲ, ಅಪಾಯಕಾರಿಯೂ ಹೌದು. ನಮ್ಮ ಯುವಕರಲ್ಲಿ ಚುರುಕು ಬುದ್ಧಿ ಇರಬೇಕು, ಜ್ಞಾನಸಂಗ್ರಹ ಬೇಕು. ಇಂದು ವಿದ್ಯಾಸುಟ್ಟವ ಕುಸಿದಿದೆ ಎನ್ನುತ್ತಾರೆ. ಕುತೂಹಲ ಶೂನ್ಯರಾದ ನಮ್ಮ ಯುವಕರ ಬುದ್ಧಿಶಕ್ತಿಯ ದಿವಾಳಿತ್ವ ಮತ್ತು ಮಾನಸಿಕ ಜಡತ್ವವೇ ಇದಕ್ಕೆ ಕಾರಣ. ಜ್ಞಾನ ಸಂಗ್ರಹದಲ್ಲಿ ನಮ್ಮ ಯುವಕ ಯುವತಿಯರು ಸಾಕಷ್ಟು ಆಸಕ್ತಿಯನ್ನು ತೋರಿಸುತ್ತಿಲ್ಲ. ಪಬ್ಲಿಕ್ ಸರ್ವಿಸ್ ಕಮಿಶನ್ ಪರೀಕ್ಷೆಗಳಲ್ಲಿ ನಮ್ಮ ಯುವಕರು ಕೊಡುತ್ತಿರುವ ಕೆಲವು ಉತ್ತರಗಳು ತೀರಾ ಹಾಸ್ಯಾಸ್ಪದವಾಗಿವೆ. ಪತ್ರಿಕೆಗಳಿಗೆ ವಿಶೇಷವಾಗಿ ನಮ್ಮ ವಿದ್ಯಾರ್ಥಿಗಳು ಅಂಟಿಕೊಳ್ಳುವುದರಿಂದ ಸಾಮಾನ್ಯ ವಿಜ್ಞಾನದ ಕಡೆ ಇರುವ ಉದಾಸೀನತೆ ಕುತೂಹಲ ತೋರಿಸುವುದಿಲ್ಲ. ಕಾಲಕಾಲಕ್ಕೂ ವಿಶೇಷ ಸುದ್ದಿಗಳನ್ನು ಬೇರೆಯೇ ಮತ್ತು ದರ್ಶಮಾನ ಪತ್ರಿಕೆಗಳು ಕೊಡುತ್ತಿವೆ. ಈ ಸಮಾಚಾರಗಳು ಬುದ್ಧಿ ತರಬೇತಿಯ ಸ್ಥಿರ ಸಾಧನೆಯಾಗಾವು ನಿಜ. ಆದರೆ ವಿಷಯ ಸಂಗ್ರಹಕ್ಕೆ ಬೇಕಾದ ಅನುಕೂಲತೆ ಇಲ್ಲದೆ ನಮ್ಮ ಹೆಚ್ಚಿನ ವಿದ್ಯಾರ್ಥಿಗಳೂ ಯುವಕರೂ ಸಿನಿಮಾನಟಿಯರ ಅಸ್ತವ್ಯವಹಾರ ಜೀವನ, ಕ್ರಿಕೆಟ್ (ಟ್ರಿಸ್ಟ್ ಪ್ಲೇಯರ್ಸ್) ರ ಚರಿತ್ರೆಯಲ್ಲಿ ತೃಪ್ತಿಪಡೆಯುತ್ತಾರೆ. ಅವರ ಸಾಹಿತ್ಯ ಆಸ್ವೇಷಣವು ಕೆಲವೊಂದು ಮಾಸಿಕ ಪತ್ರಿಕೆಗಳ ಶಿರೋನಾಮೆ, ಅಥವಾ ಚಲಚ್ಚಿತ್ರ ವಿಮರ್ಶೆಯ ಮಟ್ಟಕ್ಕಿಂತ ಮುಂದೆ ಹೋಗಿಲ್ಲ. ಪರಿಸ್ಥಿತಿ ಹೀಗಿದ್ದಾಗ ಅವರು ಇಂದಿನ ಯಾವುದೇ 'ಇಸಮ್' ಕುರಿತು ಸುಣ್ಣಗೆ, ಅಧಿಕಾರವಾಣಿಯಿಂದ ಮಾತನಾಡಬಲ್ಲ ಸಾಕ್ಷಿಗಳು! ಬೇಕಾಬಿಟ್ಟಿದಂತೆ ಆಣುಬಾಂಬು, ಸೈನಿಕತೆಯಿಂದ ಪರಿಸರಕ್ಕೆ ತನಕ ಯಾವುದೇ ವಿಷಯದ ಮೇಲೆ ಅರೆಕ್ಷಣದಲ್ಲಿ ತೀರ್ಪುನಕ್ಕೆ ಏರುವ ಹಾಸ್ಯಾಸ್ಪದ ಅವರಲ್ಲಿದೆ. ಈ ರೀತಿ ತೀರ್ಮಾನಕ್ಕೆ ಬರುವುದೊಂದೇ ಅವರುಮಟ್ಟಿಕೊಂಡಿರುವ ಬೌದ್ಧಿಕ ವ್ಯಾಯಾಮವೆನ್ನಬಹುದು. ಈ ಚಿತ್ರಕ್ಕೆ ಅನೇಕ ಅಪವಾದಗಳುಂಟು. ಆದರೆ ಸಾಮಾನ್ಯವಾಗಿ ನಮ್ಮ ಯುವಕರಲ್ಲಿ ಜ್ಞಾನಸಂಗ್ರಹ

ಈ ಮಟ್ಟದಲ್ಲಿವೆ ಆದುದರಿಂದ ನಮ್ಮ ಯುವಕರಲ್ಲಿರುವ ಕೊರತೆಯನ್ನು ನೀಗಿಸಲು ಉಪಯುಕ್ತ ವಿಷಯಗಳ ಮೇಲೆ ಬೆಳಕು ಹಾಯಿಸುವ ಯೋಗ್ಯ ಪುಸ್ತಕ ಭಂಡಾರಗಳು ಅತೀ ಅಗತ್ಯ.

ವಿದ್ಯಾಕ್ಷೇತ್ರ ವಿಸ್ತಾರವಾದಂತೆ ಬಡ ಕುಟುಂಬಗಳಿಂದ ಲೂ ಶಾಲಾ ಕಾಲೇಜುಗಳಿಗೆ ಸಹಸ್ರಾರು ವಿದ್ಯಾರ್ಥಿಗಳು ಬರತೊಡಗಿದುವರು. ಈ ವಿದ್ಯಾರ್ಥಿಗಳ ಮಿರ್ಮಾ ಪೆಚ್ಚವನ್ನು ಹೆತ್ತವರು ಪೆಹಿಸಿಕೊಳ್ಳಲು ಅಶಕ್ತರಿರುವರು. ಈ ವಿದ್ಯಾರ್ಥಿಗಳಿಗೆ ಸರಕಾರ ಕೂಡಿಸಿಷ್ಟು ಸಹಾಯಮಾಡುತ್ತದೆ. ಬ್ರಹದಾಕಾರದ ಈ ಸಮಸ್ಯೆಯು ಇಷ್ಟರಿಂದಲೇ ಬಗೆಹರಿಯುವಂತಿಲ್ಲ. ನಮ್ಮ ಜನರು ದಾನಧರ್ಮದಲ್ಲಿ ಶ್ರದ್ಧೆ ಉಳ್ಳವರು. ಆದರೆ ಸಲವಾರು ಬಾರಿ ಪಾತ್ರಾಪಾತ್ರವನ್ನರಿಯದೆ ದಾನಮಾಡುತ್ತಾರೆ. ಇದರಿಂದ ಎಣಿಸಿದ ಪ್ರಯೋಜನವಾಗುವುದಿಲ್ಲ. ತಾವು ಕೊಟ್ಟ ಹಣ ಸತ್ಪಾತ್ರದಲ್ಲಿ ಸದ್ವಿನಿಯೋಗವಾಗುವುದೆಂಬ ಭರವಸೆ ಅವರಲ್ಲಿ ಹುಟ್ಟಿದರೆ ಅವರ ಧರ್ಮಬುದ್ಧಿ ಇನ್ನಷ್ಟು ಹೆಚ್ಚುವುದು. ಖಾಸಗಿಯಾಗಿ ಸ್ವಚ್ಛಂದ ಹಾಗು ವಿವೇಚನಾ ಶೂನ್ಯ ದಾನಕ್ಕಿಂತ ಸಂಸ್ಥೆಗಳ ಮೂಲಕ ನೀಡುವ ನೆರವು ಹೆಚ್ಚು ಪ್ರಯೋಜನಕರ. ಆದುದರಿಂದ ಪ್ರತಿಯೊಂದು ಪೇಟೆ, ಪಟ್ಟಣಗಳಲ್ಲೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿದ್ಯಾಭಿಮಾನಿ ಪ್ರಮುಖರ ಬೆಂಬಲದನ್ನು ಸಡೆಕೊಂಡು ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವುದು ಅಗತ್ಯ. ತಮ್ಮ ಬಡ ಸಹಪಾಠಿಗಳ ಸಲುವಾಗಿ ಸಿರಿವಂತ ವಿದ್ಯಾರ್ಥಿಗಳು ಕಿಂಚಿತ್ ಸ್ವಾರ್ಥತ್ಯಾಗ ಮಾಡಿ ಹಣ ಸಹಾಯಮಾಡಬಹುದು, ಇತರರು ಈ ಸಂಘಗಳ ಮೂಲಕ ಮಡಿದು ನೆರವಾಗಬಹುದು.

ಮಾತೃಭೂಮಿಯ ಸಲುವಾಗಿ ನಮ್ಮ ಯುವಕರು ತಮ್ಮ ವೈಯಕ್ತಿಕ ಸೇವೆಯನ್ನು ಮೀಸಲಾಗಿರಿಸಬೇಕಾದ ಪರ್ವಕಾಲವಿದು. ರಾಷ್ಟ್ರದ ಮುಂದಿರುವ ಸಮಸ್ಯೆಗಳು ಬ್ರಹ್ಮಾಂಡ ಅಳತೆಯವು. ಯೋಗ್ಯದೃಷ್ಟಿ, ಸೂಕ್ತ ದೃಷ್ಟಿಕೋನ, ಯುಕ್ತ ಜೀವನತತ್ವಗಳಿಂದ ಸ್ಫೂರ್ತಿಗೊಂಡರೆ ನಮ್ಮ ಯುವಕರು ಈ ಸಂಧಿಕಾಲದಲ್ಲಿ ಯಶಸ್ವಿಯಾಗಿ ದುಡಿಯಬಲ್ಲರು. ಪ್ರಖ್ಯಾತ ಚರಿತ್ರಕಾರ ಪ್ರೊ. ಟೋನಾಬೀಯರು "ಸುಪಾಕಾಥನೆಗೆ ಪ್ರಬಲ ಪ್ರತಿವರ್ತನೆಬೇಕು" ಎಂದಿದ್ದಾರೆ. ನಮ್ಮ ಮುಂದಿರುವ ಉತ್ಪಾತ ಪ್ರಬಲವೇ ಸರಿ. ಆದುದರಿಂದ ನಮ್ಮ ಪ್ರತಿಕ್ರಿಯೆಯೂ ಪ್ರಬಲವಾಗಿರಬೇಕು. ಬರೀ ರಚನಾತ್ಮಕ ಕಾರ್ಯಪ್ರವರ್ತನೆಯಿಂದ ನಮ್ಮ ಪ್ರತಿವರ್ತನೆ ಪ್ರಬಲವಾಗುವುದಿಲ್ಲ. ನಮ್ಮ ನೋಟದಲ್ಲಿ ಆಮೂಲಾಗ್ರ ಬದಲಾವಣೆಯಾದರೆನೇ ಮಾನವದ ಕೆಲಸಕ್ಕೆ ತಕ್ಕ ಬಲ ಸಿಗಬಲ್ಲದು.

BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs 10/-. Postage Extra. AYURVEDA VAIDYA T. V JAYARAMA SASTRI, Veeri Ragava Vaidyasala, Srirangam, India.

(೨ನೇ ಪುಟದಿಂದ)

ಸಲ್ಪಡದು. ಇದಕ್ಕೆ ಸಂಸ್ಕೃತಿಯ ಹಿನ್ನೆಲೆಗಿಂತಲೂ ಸಾಮಾಜಿಕ ವದ್ಧತಿಯ ಇಂದಿನ ಸ್ವರೂಪವೇ ಹೇತು. ದುಃಖದಾಯಕವಾದ ವಿವಾಹ ಬಂಧನದಿಂದ ಬಿಡುಗಡೆಯನ್ನು ಹೊಂದ ಬಯಸುವುದರಲ್ಲಿ ಹೆಂಗಸರ ತಪ್ಪೇನೂ ಇಲ್ಲ (ಗಂಡಸರದೂ ಇಲ್ಲ!) ಅಗ್ನಿಸಾಕ್ಷಿಯಾಗಿ ಕೈಹಿಡಿದು, ಆವಳಿಗೆ ಪ್ರಾಮಾಣಿಕನಾಗಿರುವೆನೆಂದು ಮಾತುಕೊಟ್ಟು, ಹಿಂದಿನಿಂದ ಪತಿಯು ದ್ರೋಹ ಬಗೆದರೆ, ಹೀಗೆ ತನ್ನ ವಚನಕ್ಕೆ ತಪ್ಪಿದರೆ, ಹೆಂಗಸು ವಿವಾಹ ಬಂಧನಕ್ಕೆ ಅಂಟಿಕೊಂಡಿರಬೇಕೆಂದು ಹೇಳುವುದರಲ್ಲಿ ನ್ಯಾಯವಿಲ್ಲ. ತುಸು ಸಹನ ಶೀಲತೆಯಿಂದ ಅವಳು ಪತಿಯಾದವನನ್ನು ಸನ್ಮಾರ್ಗ ಪ್ರವೃತ್ತನಾಗಿ ಮಾಡಲು ಪ್ರಯತ್ನಿಸಬಾರದೆಂದು ಇದರ ಅರ್ಥವಲ್ಲ ಆದರೆ ಹಾಗೆ ತಾತ್ಕಾಲಿಕ ತೋರಿಸದಿದ್ದರೆ, ಆವಳ ಮೇಲೆ ತಪ್ಪು ಹೇರುವುದು ಮಾತ್ರ ಸರಿಯಲ್ಲ. ಇದೆಲ್ಲ ಹೌದಾದರೂ — ಹೆಂಗಸರಿಗೆ ದಾಂಪತ್ಯ ವಿಚ್ಛೇದನದ ಹಕ್ಕು ಒಳ್ಳೆಯದನ್ನು ಮಾಡಬಲ್ಲುದೆ? ಎಂಬ ಸಾಮಾಜಿಕ ಮಹತ್ವದ ಪ್ರಶ್ನೆಯನ್ನು ಉತ್ತರಿಸಿಯೇ ನಾವೊಂದು ಅಂತಿಮ ನಿರ್ಣಯಕ್ಕೆ ಬರಬೇಕಾಗುತ್ತದೆ.

ಹೆಂಗಸರು ಇಂದು ಹೇಗಿದ್ದಾರೆ? ಅವರು ಗಂಡಸರಿಂದ ದಮನಿಸಲ್ಪಟ್ಟಿದ್ದಾರೆ; ಅವರಿಗೆ ಮಾತೆತ್ತುವ ಶಕ್ತಿಯೂ ಇಲ್ಲ ಎಂದು ಹೇಳುವವರಿರಬಹುದು. ಆದರೆ ನಮ್ಮ ಕುಟುಂಬಗಳಲ್ಲಿ ತಂದೆಯ ಮಾತಿಗಿಂತಲೂ ತಾಯಿಯ ಮಾತೇ ವೇದವಾಕ್ಯವೆನಿಸುತ್ತದೆಂದು ಹೆಚ್ಚಿನವರ ಅನುಭವವು ಹೇಳುತ್ತದೆ. ಆದುದರಿಂದ ಹೆಂಗಸರು ತುಳಿಯಲ್ಪಟ್ಟಿದ್ದಾರೆ ಎಂಬ ಮಾತು ಅತಿಶಯೋಕ್ತಿ ಯಾದೀತಲ್ಲದೆ, ಸತ್ಯವಾಗಲಾರದು ಯೋಗ್ಯ ರೀತಿಯಿಂದ ಹೆಚ್ಚು ಹೆಂಗಸರು ತಮ್ಮ ಗಂಡಂದಿರೊಡನೆ ಕೂಡಿಕೊಂಡು ಹೋಗುತ್ತಿರುವರೆಂಬುದನ್ನು ಡಾ. ರಾಧಾಕೃಷ್ಣನ್ನರಂಥ ಪಂಡಿತರು ಒಪ್ಪಿದ್ದಾರೆ. ಲೋಕದಲ್ಲಿ ಬೇರೆಲ್ಲೂ ಕಂಡುಬರದಷ್ಟು ದೃಢವಾದ ದಾಂಪತ್ಯ ಜೀವನ ಭಾರತದಲ್ಲಿದೆ ಎಂದವರ ಅಭಿಪ್ರಾಯ. ಇದು ಸಾಮಾನ್ಯವಾಗಿ ಎಲ್ಲ ಹಿಂದುಗಳ ಅಭಿಪ್ರಾಯವೂ ಹೌದು. ಮನಸ್ತಾಪಗಳು ಬರುತ್ತವೆ; ಕ್ಲೇಶದಾಯಕ ಘಟನೆಗಳೂ ಜರಗುತ್ತವೆ; ಕಜ್ಜಾಟ, ಜಗಳಗಳೂ ಆಗುತ್ತಿರುತ್ತವೆ- ಆದರೆ ಎಲ್ಲವೂ ಕ್ಷಣಿಕ. ಉದ್ವೇಗ ಶಮನದ ಬೆನ್ನಿಗೆ ಮೊದಲಿನ ಪ್ರೀತಿಯ ಯೋಗಸೂತ್ರೆ ಗಂಡ ಹೆಂಡಂದಿರನ್ನು ಮುತ್ತಿ, ಬಿಟ್ಟು ಹತ್ತಿರಕ್ಕೆ ತರುತ್ತದೆ. ದಾಂಪತ್ಯ ವಿಚ್ಛೇದನ ತೀರ ಅಗತ್ಯವೆಂದು ಅವರಿಗೆ ಕಾಣುವುದಿಲ್ಲ.

ನಮ್ಮ ಹೆಚ್ಚಿನ ಹಿಂದು ಕುಟುಂಬಗಳ ರೀತಿ ಮೇಲಿನಂತಿದೆ ಎಂದರೆ ತಪ್ಪಾಗದು. ಆದರೆ ದಾಂಪತ್ಯ ವಿಚ್ಛೇದನ ತೀರ ಅಗತ್ಯವೆಂದು ಕೆಲವು ಪ್ರಸಂಗಗಳಲ್ಲಿ ವ್ಯಕ್ತವಾದೀತು. ಅಂದವರ ಉಪಯೋಗಕ್ಕೋಸ್ಕರ ಸ್ಮೃತಿ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟಷ್ಟೇ ಬಿಗಿಯಾದ ನಿರ್ಬಂಧಗಳಿಗೆ ಒಳಪಟ್ಟು ಈ ಹಕ್ಕನ್ನು ಸೀದುವುದು ಪ್ರಕೃತ ಶಾಸನದ ಉದ್ದೇಶವೆಂದು ಇಟ್ಟುಕೊಳ್ಳಬಹುದು. ಆದರೆ ಇದು ಹೆಂಗಸರಿಗೆ ಲಾಭನನ್ನೆಂತು ತರುವುದೋ ತಿಳಿಯದು. ಈಗ ಹೆಂಗಸು ಬಂಜೆಯಾದರೆ, ಆವಳನ್ನು ಯಾರೂ ಕುಟುಂಬದಿಂದ ಹೊರ ತಳ್ಳುವುದಿಲ್ಲ; ಅವಳು ರೋಗ ಗ್ರಸ್ತಳಾದರೂ ಕುಟುಂಬದವರು ಅವಳನ್ನು ಉಪೇಕ್ಷಿಸುವದಿಲ್ಲ. ಕಟ್ಟಿ ದಾರಿಯಲ್ಲಿ ಕಾಲು ಜಾರಿ ಎಲ್ಲಿಯಾದರೂ ಬಿದ್ದರೆ ಸಹ, ಕುಟುಂಬದವರು ಅದನ್ನು ಗೋಪ್ಯವಾಗಿಟ್ಟು ಪೂಸಿ ಕಾಯುತ್ತಾರೆ: ಮತ್ತು ಅವಳಿಗೆ ಬುದ್ಧಿ ಹೇಳಿ, ತಪ್ಪನ್ನು ಸರಿಪಡಿಸುತ್ತಾರೆ. ಒಟ್ಟಾರೆ, ಅವಳು ಕುಟುಂಬದ ಘಟಕವಾಗಿ ಸೇರಿಹೋಗುತ್ತಾಳೆ. ಸಾಯುವ ವರೆಗೆ ಕುಟುಂಬ ಅವಳನ್ನು ಬೇರ್ಪಡಿಸಲಾರದು. ದಾಂಪತ್ಯದ ಬಂಧನ ಹೀಗೆ ವಿಧಿಸುತ್ತದೆ.

ಇಂಥ ಪರಿಸ್ಥಿತಿಯಲ್ಲಿ ಹೆಂಗಸು ವಿಚ್ಛೇದನೆ ಹೊಂದಿ ಗಂಡನಿಂದ ದೂರ ವಿರಬೇಕಾಗಿ ಬಂದರೆ, ಅವಳಿಗೆ ಗಂಡನ "ಹಿಂಸೆ"ಯಿಂದ ಮುಕ್ತಿ ದೊರಕುವುದೇನೋ ನಿಜ; ಆದರೆ ಬೇರೆ ಸಾಮಾಜಿಕ ಹಾಗು ಆರ್ಥಿಕಸ್ವರೂಪದ ಹಿಂಸೆಗೆ ಅವಳು ಗುರಿಯಾಗಬೇಕಾಗುತ್ತದೆ. ಹೆಂಗಸು ತನ್ನ ಹೊಟ್ಟೆ ಬಟ್ಟೆಗಾಗಿ ಏನು ಮಾಡಬೇಕು? ಸಾಮಾನ್ಯವಾಗಿ ನಮ್ಮ ಹೆಂಗಸರಿಗೆ ವಿದ್ಯಾಭ್ಯಾಸವಿಲ್ಲ; ಮಧ್ಯಮ ಹಾಗು ಶ್ರೀಮಂತ ವರ್ಗದ ಹೆಂಗಸರಿಗೆ ಕೂಲಿ ಮಾಡಿ ಅನುಭವವಿರುವುದಿಲ್ಲ. ಹೀಗಿರುವಾಗ ಅವರ ಪಾಡೇನು? ಅವರ ಮಕ್ಕಳ ಪಾಡೇನು? ಅವರು ಇನ್ನೊಂದು ಮದುವೆಯಾಗಬಹುದು — ಆದರೆ ಹಾಗೆ ಮದುವೆ ಮಾಡಿಕೊಳ್ಳಲು ಯಾರು ಮುಂದೆ ಬರುತ್ತಾರೆ? ಹೆಚ್ಚಿನ ಗಂಡಸರು, ಲೋಕವೇ ತಿಳಿದಿರುವಂತೆ, ಕನ್ಯೆಯರ ಕೈ ಹಿಡಿಯ ಬಯಸುತ್ತಾರೆ; ಮೈತುಂಬಿದ ಪದಿನಾರು ವರ್ಷದ ಹುಡುಗಿಯನ್ನೆ ಮೆಚ್ಚುತ್ತಾರೆ. ಹೀಗಿರುವಾಗ ನಾಲ್ಕುಮಕ್ಕಳ ತಾಯಿಯಾಗಿ ಯೌವನದ ಆಕರ್ಷಣೆ ಕಳೆದು ಕೊಂಡವಳನ್ನು ಮೂಸಿ ನೋಡುವವರೂ ಇರಲಿಕ್ಕಿಲ್ಲ. ಅನಲ್ಲದೆ, ಗಂಡಸರಾದವರು ದಾಂಪತ್ಯವಿಚ್ಛೇದನದ ಹಕ್ಕು ತಮಗೆ ದೊರೆತುದನ್ನು ದುರುಪಯೋಗಿಸಿ, ಬೇಕೆಂದೇ ಈಗಿನ ಹೆಂಡತಿಯನ್ನು ಓಡಿಸಿ ಬಿಡಲು ತಳಪಡಿಸಾಕಬಹುದು. ಅವರು ಜೆಲುವೆಯಾದ ಹೊಸಬಳನ್ನು ಮದುವೆಯಾಗುವುದಕ್ಕೂ ಇನ್ನೊಂದು ಹೆಣ್ಣಿನ ಕಡೆಯವರ ವರದಕ್ಷಿಣೆಗೆ ಕೈಯೊಡ್ಡುವುದಕ್ಕೂ ಈ ಹಳಸಿದ ಹೆಣ್ಣಿನ ದಾಂಪತ್ಯ ವಿಚ್ಛೇದನೆಗೆ ಮನಸ್ಸುಮಾಡಬಹುದು. ಗಂಡಸರ ಕೈಯಲ್ಲಿ ಇಷ್ಟು ಅಖಾಯಿರವಾದ ಮತ್ತು ಸಾಮಾನ್ಯ ಹೆಂಗಸಿನ ಪಾಲಿಗೆ ನರಕಯಾತನೆಯನ್ನು ನೀಡುವ ದಾಂಪತ್ಯವಿಚ್ಛೇದನದ ಹಕ್ಕು ಒಳ್ಳೆಯದೆಂದು ಹೇಗೆ ಹೇಳೋಣ?

ಇದನ್ನು ಶಾಸನ ಕರ್ತರು ಗಮನಿಸಿದ್ದಾರೋ ಇಲ್ಲವೊ ಗೊತ್ತಾಗುವುದಿಲ್ಲ. ಸಂಸತ್ತಿನ ಮಹಿಳಾ ಸದಸ್ಯರು ಹೆಂಗಸು ತುಳಿಯಲ್ಪಟ್ಟಿದ್ದಾಳೆಂಬ ಪೂರ್ವ ಗ್ರಹ ಪೀಡಿತ ಭಾವನೆಯಿಂದ ದಾಂಪತ್ಯ ವಿಚ್ಛೇದನದ ಹಕ್ಕನ್ನು ಸ್ವಾಗತಿಸಿದರು. ಆದರೆ ಅವಳು ತುಳಿಯಲ್ಪಟ್ಟಿಲ್ಲ; ತಳಿಯಲ್ಪಟ್ಟ ಪ್ರಸಂಗಗಳಲ್ಲಿ ಸಹ ದಾಂಪತ್ಯ ವಿಚ್ಛೇದನವು ಅವಳಿಗೆ ಒಳಿತನ್ನು ಮಾಡಲಾರದು; ಅದರಲ್ಲೂ ಗಂಡನೇ ತಾನಾಗಿ ದಾಂಪತ್ಯವಿಚ್ಛೇದನದ ಹಕ್ಕನ್ನು ಚಲಾಯಿಸಬಹುದಾದ ಸಂದರ್ಭಗಳಲ್ಲಿ ಹೆಂಗಸಿಗೆ ಇದ್ದ ಮನಶ್ಶಾಂತಿಯೂ ಹೋಗಿ ಬಿಡಬಹುದು — ಎಂದು ಮೇಲಿನ ವಿವರಣೆಯಿಂದ ಗೊತ್ತಾಗುತ್ತದೆ. ಆರ್ಥಿಕ ಹಾಗು ಸಾಮಾಜಿಕ ದೃಷ್ಟಿಯಲ್ಲಿ ಗಂಡಸಿಗಿರುವ ಯೋಗ್ಯತೆಗಳು ಹೆಂಗಸಿಗೆ ಇನ್ನೂ ಬಂದಿಲ್ಲ. ಇದನ್ನು ಮಹಿಳೆಯರ ಧುರೀಣರು ಕೆಲಮಟ್ಟಿಗೆ ಮನಗಂಡಿದ್ದಾರೆ. ಆದರೆ ಸಮಾನತೆಯ ಮೋಹದಿಂದ ಅವರು ದಾಂಪತ್ಯ ವಿಚ್ಛೇದನದ ಹಕ್ಕನ್ನು ದಂಪತಿಗಳಲ್ಲಿ ಇಬ್ಬರಿಗೂ ಕೊಡುವುದಕ್ಕೆ ಮುಂದಾಗಿದ್ದಾರೆ. ಏಕಪತ್ನಿತ್ವವನ್ನು ಗಂಡಸರಿಗೆ ಹಿಂದು ವಿವಾಹ ಶಾಸನ ವಿಧಿಸಿರುವುದರಿಂದ ಅನಿವಾರ್ಯ ಕೆಡುಕಿನ ರೂಪದಲ್ಲಿ ಗಂಡಸರಿಗೆ ಸಹ ದಾಂಪತ್ಯ ವಿಚ್ಛೇದನದ ಹಕ್ಕನ್ನು ಕೊಡಬೇಕಾಗಿದೆ ಎಂದು ಸಮರ್ಥಿಸಿಕೊಳ್ಳಬಹುದು. ಆದರೆ ಸಮಾಜದ ಮೇಲಾಗುವ ಒಟ್ಟು ಪರಿಣಾಮವನ್ನು ನೋಡಿದರೆ, ಪೀಡಿತ ಗಂಡಸರಿಗೆ ಆಗುವ ಒಳ್ಳೆಯದಕ್ಕಿಂತ ತುಳಿಯಲ್ಪಟ್ಟ ಸ್ತ್ರೀಯರಿಗೆ ಆಗಬಹುದಾದ ಅನ್ಯಾಯವೇ ಹೆಚ್ಚೆಂದು ಸ್ಪಷ್ಟವಾಗುತ್ತದೆ. ಹೆಂಗಸರ ಉದ್ಧಾರಕ್ಕೆ ತಂದ ಈ ಶಾಸನ ಅವರ ಸ್ಥಿತಿಯನ್ನು ಮತ್ತಷ್ಟು ಶೋಚನೀಯವಾಗಿಸುತ್ತದೆ. ಹೆಂಗಸರಿಗೆ ಆಸ್ತಿಯಲ್ಲಿ ಪಾಲು ಇತ್ಯಾದಿಗಳು ಸಿಗುವಂತೆ ಮಾಡುವ ಬೇರೆ ಶಾಸನಗಳಾದಾಗ, ಕೆಲಮಟ್ಟಿಗೆ ಪರಿಸ್ಥಿತಿ ಸುಧಾರಿಸೀತು - ಅಗಲೂ ಹಿಂದು ವಿವಾಹ ಶಾಸನದ "ಅನಿವಾರ್ಯ ಕೆಡುಕು" ಎಂದಿಷ್ಟೇ ದಾಂಪತ್ಯ ವಿಚ್ಛೇದನದ ಹಕ್ಕನ್ನು ಭಾವಿಸಬಹುದು. ಹೊರತು, ಅದರ ಆಶ್ರಯಕ್ಕೆ ಹೋಗುವುದು ಹೆಂಗಸರಿಗೆ ಅಷ್ಟು ಇಷ್ಟವಾಗಲಾರದು. ಗಂಡಸರು ಹೋದರೆ ಹೆಂಗಸರು ತಮ್ಮ ಪ್ರಾರಬ್ಧವೆನ್ನಬೇಕಾದೀತು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50' or more and Rs. 3/-per column inch for casual advertisements.

Classified Adverlisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S K.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮುಖ್ಯಾಧ್ಯಾಪಕ ವಿದ್ಯಾಂಗದ ಸ್ಟೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ಪ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಧೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ,

Edited, Printed & Published By K. H. Shetty at the Navayuga Press, Udipi, S. India

M. 3818

Licensed to Post without Prepayment.

ನವಯುಗ

ಸಂಪುಟ ೩೪ VOL. 34

ಉಡುಪಿ, 9—6—1955

ಸಂಚಿಕೆ ೩೯ NO. 39

ಚಿಂತನೆ

ತಾನುಳಿಗಷ್ಟೇಹೂರ್ತ್ಯಿ ಕೊಂಡುಬಂದ ಪ್ರವಾಸದ ಕಥನವನ್ನುಹೆಂಡತಿಯೆದುರಿಗೆಉತ್ಸಾಹದಿಂದವರ್ಣಿಸುತ್ತಿದ್ದಗಂಡ "ಪ್ರಿಯೇ, ಆ ಪ್ರದೇಶದಲ್ಲಿ ಬಹಳ ಚುರುಕಾದ ಮಂಗಗಳು ಕಾಣಸಿಗುತ್ತವೆ. ನಾನೊಂದು ಮರಿಯನ್ನು ನಿನಗೋಸ್ಕರ ತರಬೇಕೆಂದು ಬಹಳ ಪ್ರಯತ್ನಿಸಿದೆ ಆದರೆ ಅಲ್ಲಿಂದ ಇಲ್ಲಿಗೆ ತರುವುದು ಸಾಧ್ಯವಾಗಲಿಲ್ಲ" ಎಂದು ವಿಷಾದದಿಂದ ಹೇಳಿದ.

"ಅಯ್ಯೋ, ಇದಕ್ಕೇಕೆ ಇಷ್ಟು ಮರುಗುತ್ತೀರಿ? ನೀವಿರುವಾಗ ನನಗೆಇನ್ನೊಂದು ಮಂಗ ಯಾಕೆ ಬೇಕು?" ಎಂದು ಹೆಂಡತಿ ಗಂಡನನ್ನು ಸಮಾಧಾನ ಪಡಿಸಿದಳು

ಮದ್ರಾಸಿನ ಟ್ರಿಪ್ಲಿಕೇನಿನಲ್ಲಿರುವ ಸಾಂಸ್ಕೃತಿಕ ಮಂಡಳದ ಮುಂದೆ ಕಳೆದ ವಾರ ಭಾಷಣ ಮಾಡುತ್ತಾ ರಾಜ್ಯದ ಶಾಸನಾಂಗದ ಕಾರ್ಯದರ್ಶಿಯಾಗಿ ದುಡಿದು ಈ ವರ್ಷ ನಿವೃತ್ತಿ ಹೊಂದಿರುವ ಶ್ರೀ ಆರ್. ವಿ ಕೃಷ್ಣ ಅಯ್ಯರರು ಮೇಲ್ಮನೆಗಳಿರುವುದು ಅನಾವಶ್ಯಕ ಎಂದು ಹೇಳಿರುವರಾಗಿ ತಿಳಿದು ಬರುತ್ತದೆ. ಇವುಗಳಿರುವುದರಿಂದ ಹಣದ ಅಪವ್ಯಯವಾಗುತ್ತದೆ. ಕೆಳಮನೆಯಲ್ಲಿ ಮಾಡಿದ ಭಾಷಣಗಳೇ ಮೇಲ್ಮನೆಯಲ್ಲೂ ನಡೆಯುತ್ತವೆ; ಅವೇ ಪ್ರಶ್ನೆಗಳು ಹಾಕಲ್ಪಡುತ್ತವೆ, ಚರ್ಚಿಸಲ್ಪಡುವ ವಿಷಯಗಳೂ ಒವೇಯಾಗಿರುತ್ತವೆ ಎಂದವರ ದೂರು. ಮಾಡಲು ಒಂದು ನಿಶ್ಚಿತ ಕಾರ್ಯವಿಲ್ಲದ ಮೇಲ್ಮನೆಯು, ತೀರ ಅನಾವಶ್ಯಕ ಕೆಳಮನೆಯೇ ಶಾಸನಗಳನ್ನು ಪರ್ಯಾಲೋಚಿಸಿ ಪಾಸು ಮಾಡಲು ಸಾಕು ಎಂದವರ ಅಭಿಪ್ರಾಯ

ಮೇಲ್ಮನೆಯು ಕೆಳಮನೆಯು ವ್ಯಕ್ತಗೊಳಿಸಿದ ಅಭಿಪ್ರಾಯಕ್ಕಿಂತ ಭಿನ್ನವಾದುದನ್ನು, ಏನಾದರೂ ಹೊಸ ಸಂಗತಿಯನ್ನು, ವ್ಯಕ್ತಪಡಿಸುವುದಾದರೆ ಒಂದು ಬಗೆ; ಆದರೆ ಹಾಗೆಲ್ಲೂ ಆವಂತಿಲ್ಲ. ಇದೇ ಮದ್ರಾಸು ರಾಜ್ಯದಲ್ಲಿ ಮೇಲ್ಮನೆಯು ೧೯೫೭ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಗಳಿಗೆಯಿಂದ ಒಂದೇ ಒಂದು ಶಾಸನವನ್ನಾದರೂ ಮೇಲ್ಮನೆ ಪ್ರತಿಭಟಿಸಲಿಲ್ಲ. ಕೇವಲ ಐದು ವಿಧೇಯಕಗಳಿಗೆ ಮಾತ್ರ ಚಿಲ್ಲರೆ ತಿದ್ದುಪಡಿಗಳನ್ನು ಅದು ಮಾಡಿತು. ಆದುದರಿಂದ ಶಾಸನಗಳು ಜ್ಯಾರಿಗೆ ಬರುವುದನ್ನು ತನ್ನ "ಅನಾವಶ್ಯಕ" ಚರ್ಚೆಯ ಮೂಲಕ ಮೇಲ್ಮನೆ ಮುಂದೂಡುತ್ತದೆ; ಅಥವಾ ತಡೆದು ಹಿಡಿಯುತ್ತದೆ ಎಂದು ಅಯ್ಯರರ ತೀರ್ಮಾನ.

ಆದರೆ ಅವರೆ ಮೇಲ್ಮನೆಗಳ ರಚನೆಯ ಉದ್ದೇಶಗಳಲ್ಲಿ ಶಾಸನಗಳು ಜ್ಯಾರಿಗೆ

ಶಾಸನ ಹಾಗು ಅಂಕುಶ

ಬರುವುದನ್ನು ವಿಳಂಬಿಸುವುದೂ ಒಂದೆಂಬ ಪ್ರೊಫೆಸರ್ ಬ್ರೈಸರ ಹೇಳಿಕೆಯನ್ನು ಉದ್ಧರಿಸಿದರು. ಬ್ರೈಸ್ ಹೇಳುವಂತೆ, ಮೇಲ್ಮನೆಯು ಕೆಳಮನೆಯು ಮಂಜೂರು ಮಾಡಿದ ವಿಧೇಯಕಗಳ ಪರಿಶೀಲನೆ ನಡೆಸಿ, ಯೋಗ್ಯ ತಿದ್ದುಪಡಿಗಳನ್ನು ಅವಶ್ಯವಿದ್ದ ಸಂದರ್ಭಗಳಲ್ಲಿ ಮಾಡಬೇಕು: ಚರ್ಚಾಸ್ಪದವಲ್ಲದ ಮಸೂದೆಗಳನ್ನು ತರಬೇಕು; ಮುನಃ ಪರಿಶೀಲನೆಗೆ ಸಹಾಯವಾಗುವಂತೆ ವಿಧೇಯಕಗಳು ಜ್ಯಾರಿಗೆ ಬರುವುದನ್ನು ಆದಷ್ಟು ಹೆಚ್ಚು ವಿಳಂಬಿಸಬೇಕು; ಮತ್ತು ಪ್ರಶಾಂತವಾದ ವಾತಾವರಣದಲ್ಲಿ ವಿಧೇಯಕಗಳ ಕೂಲಂಕಷವಾದ, ಬಿಚ್ಚು ಮನಸ್ಸಿನ ಚರ್ಚೆಯನ್ನು ನಡೆಸಬೇಕು. ಇದನ್ನು ತಪ್ಪೆಂದು ಹೇಳುವುದು ಸಾಧ್ಯವೇ ಎಂಬುದೇ ವಿಚಾರಿಸಬೇಕಾದ ವಿಷಯ.

ಶ್ರೀ ಅಯ್ಯರರೇ ಹೇಳಿರುವಂತೆ ಮೇಲ್ಮನೆಯನ್ನು ಉದ್ದೇಶ ಪೂರ್ವಕವಾಗಿ ರಚಿಸಿದ ದೇಶಗಳು ಜಗತ್ತಿನಲ್ಲಿ ಅನೇಕವಿವೆ ಇಂಗ್ಲೆಂಡಿನಲ್ಲಿ ಚಾರಿತ್ರಿಕ ಅಂಶಗಳು ಈ ಕುರಿತು ಪ್ರಭಾವ ಬೀರಿರಬಹುದು. ಆದರೆ ಹಿರಿಯರ ಸಭೆಯೊಂದು ಇರಬೇಕಾದ ಅವಶ್ಯಕತೆಯನ್ನು ಹೆಚ್ಚಿನ ರಾಜಕಾರಣಿಗಳು ಮನಗಂಡಿದ್ದರು. ಪ್ರೊ. ಹೆರಾಲ್ಡ್ ಲಾಸ್ಕಿಯವರು ಹೇಳಿರುವಂತೆ ರಾಜಕೀಯದಲ್ಲಿ, ಅಥವಾ ಶಾಸನಾಂಗದಲ್ಲಿ, ಬುದ್ಧಿವಂತರೂ ಅನುಭವಿಗಳೂ ದೂರದರ್ಶಿಗಳೂ ವಿವೇಕಿಗಳೂ ತುಂಬಿದ "ಹಿರಿಯರ ಸಭೆ" ಮೂಲಭೂತವಾದ ಅಂಶವೇ ಆಗಿದ್ದಿತು ಬಹಳ ಪ್ರಗತಿಪರವೆಂದು ಭಾವಿಸಲಾಗಿರುವ ಅಮೇರಿಕದಲ್ಲಿ ಸಹ ಜನರಿಗೆಯೇ ಎಲ್ಲ ಅಧಿಕಾರವನ್ನು ಬಿಟ್ಟು ಕೊಡುವಾಗ, ಅಧಿಕಾರ ಮದವು ಬುದ್ಧಿಗೆಡಿಸಬಹುದೆಂದೂ ಇದನ್ನು ನಿಯಂತ್ರಿಸುವುದಕ್ಕೋಸ್ಕರ ಅಧಿಕಾರವನ್ನು ಒಂದೇ ಘಟಕದ ಕೈಗೆ ಕೊಡದೆ, ಮೇಲ್ಮನೆಯನ್ನು ರಚಿಸಲಾಯಿತೆಂದೂ ಇದರಿಂದ ಸಮತೂಕವನ್ನು ಉಳಿಸಿಕೊಂಡು ಹೋಗಲು ನೆರವಾಯಿತೆಂದೂ ಮರೆಯಲಾಗದು.

ಆದುದರಿಂದ ಮೇಲ್ಮನೆಗೆ ನಿಶ್ಚಿತವಾದ ಕೆಲಸವಿಲ್ಲ ಎಂದು ಹೇಳುವುದನ್ನು ಒಪ್ಪುವುದು ಸಾಧ್ಯವಿಲ್ಲ. ಶಾಸನಗಳು ಜ್ಯಾರಿಗೆ ಬರುವುದನ್ನು ತಡೆಯ ಹಿಡಿಯುವ ಅದರ ಉದ್ದೇಶ ಯೋಗ್ಯವಾದುದಲ್ಲ ಎಂದು ಹೇಳುವುದೂ ಸಮಂಜಸವಾಗದು. ಏಕೆಂದರೆ, ಇಂದಿನ ಪರಿಸ್ಥಿತಿಯಲ್ಲಿ ಶಾಸನಗಳ ನಾಗಾಲೋಟೆ ನಡೆದಿದೆ. ಅಯ್ಯರರೇ ವಿಷಾದದಿಂದ ಹೇಳಿರುವಂತೆ ಮುಂಚಿನ ದಿನ ರಾತ್ರಿಯ ಗಜೆಟಿನಲ್ಲಿ ಒಂದು ವಿಧೇಯಕವನ್ನು ಪ್ರಕಟಿಸಿ, ಮರುದಿನ ಬೆಳಗ್ಗೆ ಮಂತ್ರಿಗಳು ಅದನ್ನು ಕೆಳಮನೆಯಲ್ಲಿ ಮಂಡಿಸಿ, ಸಾಯಂಕಾಲದೊಳಗೆ ಶಾಸನ ಸಭೆ ಅದನ್ನು ಚರ್ಚಿಸಿ ಮಂಜೂರಾತಿ ನೀಡುವ "ಅವಸರದ ನಿದರ್ಶನಗಳು ಹೇರಳವಾರು ಸಿಗುತ್ತವೆ. ಜನತೆಯ ಪ್ರತಿಕ್ರಿಯೆ ಏನೆಂಬುದು ಏನೇನೂ ವ್ಯಕ್ತವಾಗದಿರುವಾಗಲೇ ವಿಧೇಯಕಗಳು ಅಂಗೀಕೃತವಾಗಿರುತ್ತವೆ. ಇದು ಜಾಗೃತ ಪ್ರಜಾಪ್ರಭುತ್ವ ಪದ್ಧತಿಗೆ ಒಪ್ಪಿಗೆಯಾದ ಕ್ರಮವೆಂದು ಹೇಗೆ ಹೇಳೋಣ?

ಎರಡು ಮನೆಗಳಿದ್ದರೆ ಒಂದರಲ್ಲಿ ಚರ್ಚಿಸಲ್ಪಟ್ಟು ಅಂಗೀಕರಿಸಿದ ಬಳಿಕ, ಇನ್ನೊಂದರಲ್ಲಿ ಚರ್ಚೆ ಪ್ರಾರಂಭವಾಗುವ ಹೊತ್ತಿಗೆ ಪತ್ರಿಕೆಗಳ ಹಾಗು ಸಾರ್ವಜನಿಕ ಘೋಷಣೆಗಳ ಪ್ರತಿಕ್ರಿಯೆಯಾದರೂ ವ್ಯಕ್ತಗೊಳ್ಳಲು ಸ್ವಲ್ಪ ಮಟ್ಟಿನ ಅವಕಾಶ ಸಿಗುತ್ತದೆ ಈ ಪ್ರತಿಕ್ರಿಯೆಯನ್ನು ಶಾಸನಕರ್ತರು ನಿರೀಕ್ಷಿಸಿ, ಪರಿಶೀಲಿಸಿದ್ದರೆ, ಅವರು ರಚಿಸಿದ ಶಾಸನಗಳ ಪ್ರಯೋಜನಾಂಶ ಬಹಳವಾಗಿ ಕಡಿಮೆಯಾಗುತ್ತದೆ; ಅಂದರೆ, ಜನರು ಆ ಶಾಸನಗಳನ್ನು ಮನ್ನಿಸಿ, ಸ್ವೀಕರಿಸುವ ಸಂಭವ ಕಡಿಮೆಯಾಗುತ್ತದೆ. ಜನರು ಒಪ್ಪದ ಶಾಸನಗಳು ಇದ್ದರೇನು, ಇಲ್ಲದಿದ್ದರೇನು? ಆದುದರಿಂದ ಎರಡು ಮನೆಗಳಿದ್ದು, ವಿಧೇಯಕಗಳು ಶಾಸನವಾಗಿ ಬರುವುದು ಸಾಕಷ್ಟು ಯೋಗ್ಯ ಸಮಯದ ವರೆಗೆ ವಿಳಂಬಿಸಲ್ಪಡುವುದರಲ್ಲಿ ಅಹಿತಕರವಾದುದೇನೂ ಕಾಣುವುದಿಲ್ಲ. ಒಂದೇ ವಿಷಯದ ಚರ್ವಿತ ಚರ್ವಣವಾಗುವುದೆಂಬ ಆಕ್ಷೇಪವೂ ಸಾಧುವಲ್ಲ—ಏಕೆಂದರೆ ವಿಧೇಯಕಗಳು ಈಗ ಮಂಡಿಸಲ್ಪಡುವ ರೀತಿಯ ಪರಿಣಾಮವಾಗಿ ಒಂದಲ್ಲ, ಹತ್ತುಸಲ ಮಂತ್ರಿಗಳೂ ಸದಸ್ಯರೂ ವಿಧೇಯಕವೊಂದರ ಕುರಿತು ಭಾಷಣ ಬಿಗಿದರೂ ಜನರಿಗೆ ಅದರ ಸಾರವನ್ನು ಗ್ರಹಿಸಲು, ಮತ್ತು ನೆನಪಿಟ್ಟುಕೊಳ್ಳಲು ಕಷ್ಟವಾಗುವುದು ತಪ್ಪದು.

ಹೀಗಿದ್ದರೂ ನಮ್ಮ ಘಟನೆಯಲ್ಲಿ ರಾಜ್ಯದ ಕೆಳಮನೆಯು ನಿಶ್ಚಿತ ಕ್ರಮ ಹಾಗು ಬಹುಮತದಂತೆ ತೀರ್ಮಾನಿಸಿದರೆ, ಸಂಪತ್ತು ಮೇಲ್ಮನೆಯನ್ನು ವಿಸರ್ಜಿಸುವ ಶಾಸನ ಮಾಡಬಲ್ಲದೆಂದು ಹೇಳಲ್ಪಟ್ಟಿರುತ್ತದೆ ಇದರ ದೆಸೆಯಿಂದಲೇ ಮೇಲ್ಮನೆಗಳು ಅನಾವಶ್ಯಕವೆಂಬವರ ಕೈಯ ಬಲ ಸಿದ್ಧಾಗಿದೆ. ಜನರ ಕೈಗೆ ಎಲ್ಲ ಅಧಿಕಾರವನ್ನೂ ಒಪ್ಪಿಸಿಕೊಟ್ಟಿರುವ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರು ನೇರವಾಗಿ ಮತದಾನದ ಮೂಲಕ ಚುನಾ

(ಉಳಿದ ಪುಟ ನೋಡಿರಿ)

ಕೇಳ್ಮನೆಗಳಿರುವುದರಿಂದ ಕೆಲವಾದರೂ ಪ್ರಯೋಜನಗಳಿವೆ ಎಂದು ಸಾಮಾನ್ಯವಾಗಿ ಬೆಳಬರುವುದು. ಕುಟುಂಬವನ್ನು ನಡೆಸಿಕೊಂಡು ಹೋಗುವ ಕೆಲಸವನ್ನು ತನ್ನ ಮಗನಿಗೆ ಬಿಟ್ಟು ಕೊಟ್ಟಿರುವ ತಂದೆಯಂತೆ ಮೇಲ್ಮನೆಯಿದೆ. ತನ್ನ ಮಗನಿಗೆ ಸಲಹೆನೀಡುವುದು, ಅವನ ನೋಟೊಂದು ಕಟ್ಟಿಡುವುದು, ಕೆಲಸವೆಲ್ಲ ಸರಿಯಾಗಿ ನಡೆಯುತ್ತದೊ ಇಲ್ಲವೊ ಎಂದು ನೋಡಿ, ತಪ್ಪಿದ್ದಲ್ಲಿ ತಿದ್ದುವುದು ಈ ತಂದೆಯ ಕೆಲಸ. ಒಟ್ಟಿನಲ್ಲಿ ಬೇರೆ ಮೇಧಾವಿಗಳ ಬಳಗದೇ ಮೇಲ್ಮನೆಯಾಗಿದ್ದುದಾದ್ದರಿಂದ ಸಮಸ್ಯೆಗಳ ಮೇಲೆ ಇಲ್ಲಿಯ ಸದಸ್ಯರೇ ನಿಷ್ಪಕ್ಷಪಾತ ಅಭಿಪ್ರಾಯವನ್ನು ಕೊಡಬಲ್ಲರು

—ನ್ಯಾಯಮೂರ್ತಿ ಗೋಖಲೆ ಮೆನನ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ
ವಿಶೇಷ ಸೌಕರ್ಯಗಳುಳ್ಳ ಸೇವಿಂಗ್ಸ್ ಬ್ಯಾಂಕಿನ
ವ್ಯವಸ್ಥೆ ಮಾಡಿರುವೆವು.

ಹೆಚ್ಚಿನ ಮಾಹಿತಿಗೆ
ನಿಮಗೆ ಸಮೀಪವಿರುವ 'ಸಿಂಡಿಕೇಟ್' ಬ್ಯಾಂಕಿನ' ಶಾಖೆಯಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.
Estd: 1925 H. O UDIPI, S India

ರಶಿಯಕ್ಕೆ ಪ್ರಧಾನ ಮಂತ್ರಿಗಳ ಪ್ರಯಾಣ

ಅಲ್ಲಿಯ ವ್ಯವಹಾರ ಮತ್ತು ನಮ್ಮೊಡನೆ ಸ್ಥಾಪಿಸಿರುವ ಸ್ನೇಹ

ಕನ್ನಡದ ಕವಿಪುಂಗವರಾದ ಶ್ರೀ "ಕುವೆಂಪು"ರವರು ಬಹಳ ಸಮಯದ ಹಿಂದೆ "ಸೋವಿಯೆಟ್ ರಶಿಯಕ್ಕೆ ನಾನೊಮ್ಮೆ ಹೋಗಿದ್ದೆ..." ಎಂದು ಹಾಡಿದ್ದರು ಆದರೆ ಯಾವಾಗ ಎಂಬ ಪ್ರಶ್ನೆಗೆ "... ಬಂದಿರಲು ಗಾಢ ನಿದ್ರೆ ಕನಸಿನಲ್ಲಿ" ಎಂದಿದ್ದರು! ಆದುದರಿಂದಲೇ ಅವರು ಕೈಗೊಂಡ ಕನಸಿನ ಪ್ರಯಾಣದ ಅನುಭವಗಳು ಬಹಳ ಭಯಂಕರವಾಗಿ ಕಂಡು ಬರುತ್ತವೆ. ಹಾಗೆಂದು ಈ ವಾರದಲ್ಲಿ ಸೋವಿಯೆಟ್ ರಶಿಯದ ಪ್ರವಾಸವನ್ನು ಪ್ರಾರಂಭಿಸಿರುವ ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುಗಳ ಅನುಭವ ಯಾವ ಉದ್ವೇಗವನ್ನೂ ತರಲಿಕ್ಕಿಲ್ಲವೆಂದು ಊಹಿಸಬಹುದು ಜಗತ್ತನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುವ ಅವರಿಗೆ ಸೋವಿಯೆಟ್ ರಶಿಯ ರಾಕ್ಷಸಲೋಕವೆಂದು ಕಾಣಲಿಕ್ಕಿಲ್ಲ; ಹಾಗಯೇ ಸ್ವರ್ಗ ಸದೃಶವಾಗಿಯೂ ಗೋಚರಿಸಲಿಕ್ಕಿಲ್ಲ. ಎಲ್ಲ ದೇಶಗಳಂತೆ ಮಾನವ ಮಾತ್ರದವರಿಂದ ತುಂಬಿದ, ಮಾನವೀಯ ಭಾವನೆಗಳೇ ವ್ಯಕ್ತವಾಗುವ, ನಿತ್ಯ ಜೀವನದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ತತ್ಪರವಾಗಿರುವ ಸರಕಾರದಿಂದ ಕೂಡಿದ ಭೂಮಿಯಾಗಿ ಅದು ಕಂಗೊಳಿಸೀತು.

ರಶಿಯವೆಂದರೆ ಬೆದರುವವರು, ಅದು ಅಸ್ಪಿಕೊಂಡಿರುವ ಕಮ್ಯೂನಿಸಮ್ಮೆಂಬ 'ಕರಡಿ'ಯನ್ನು ತೋರಿಸುತ್ತಾರೆ. ಆದರೆ ಸ್ವಾತಂತ್ರ್ಯೋತ್ತರದಲ್ಲಿ ರಶಿಯವನ್ನು ಸಂದರ್ಶಿಸಿ, ಬಂದ ಅನೇಕ ಭಾರತೀಯರ ಅಭಿಪ್ರಾಯದಲ್ಲಿ ಕಮ್ಯೂನಿಸಮ್ಮನ್ನು ನಾವು ಮೆಚ್ಚದಿರಲು ಅನೇಕ ಕಾರಣಗಳಿರಬಹುದಾದರೂ ಜನರ ಬಾಲಿಗೆ ಅದು ಪೂರ್ಣ ನಾಶದ ಮಾರ್ಗವೆಂದೇನೂ ಹೇಳುವಂತಿಲ್ಲ. ರಶಿಯದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಪ್ರಿಯರು ಬಹಳ ಬೆಲೆ ಕೊಡುವ "ವೈಯಕ್ತಿಕ ಸ್ವಾತಂತ್ರ್ಯ" ನಾಶವಾಗಿದೆ ಎಂಬುದೇನೊ ನಿಜ, ಆದರೆ ವ್ಯಕ್ತಿಯ ಸಾಮಾನ್ಯ ಜೀವನ ಸುಖಕರವಾಗುವಂತೆ ಮಾಡುವ ಎಲ್ಲ ಹೊಣೆಯನ್ನೂ ಸರಕಾರ ಹೊತ್ತು ಕೊಂಡಿರುವುದರಿಂದ ತಮ್ಮ ಸ್ವಾತಂತ್ರ್ಯ ನಷ್ಟವಾಯಿತೆಂದು ಬುದ್ಧಿಜೀವಿಗಳ ಹೊರತು ಉಳಿದವರು ಪರಿತಪಿಸುವುದು ಅಲ್ಲಿ ವಿರಳ. ಅಲ್ಲಿಯ ಆರ್ಥಿಕ ವ್ಯವಸ್ಥೆಯಲ್ಲಿ ಏರುಪೇರುಗಳು ಈಗಲೂ ಇವೆ. ಸಮಾನತೆಯು ಸಿದ್ಧಾಂತದಲ್ಲಿಯಷ್ಟೇ ಉಳಿದಿದೆ; ಆದರೆ ಇನ್ನೊಬ್ಬನ ನೇರಾದ ಶೋಷಣೆಯಿಂದ ಬದುಕುವ ವರ್ಗದ ಉಚ್ಚಾಟನೆಯಾಗಿದೆ; ಕೈಕಸುಬದರೆ ಮಾತ್ರ ಬಾಯಿಗೆ ಮೊಸರು ಎಂಬ ತತ್ವವು ಎಲ್ಲ ಪ್ರಬುದ್ಧರಿಗೆ, ದುಡಿದು ಹೊಟ್ಟೆ ತುಂಬಿಸಿಕೊಳ್ಳಲು ಶಕ್ತರಾದವರಿಗೆ ಆನ್ವಯವಾಗಿದೆ.

ಸೋವಾರಿಯಾಗಿ ಕಾಲ ಕಳೆಯಲು ಯಾರಿಗೂ ರಶಿಯದಲ್ಲಿ ಆಸ್ಪದವಿಲ್ಲ. ಇಪ್ಪತ್ತು ವರ್ಷಗಳ ಪೂರ್ವದಲ್ಲಿ ಬಹಳ ಹಿಂದುಳಿದ್ದ ರಶಿಯವು ಜರ್ಮನರ ಆಕ್ರಮಣಕ್ಕೆ ಬಲವಾದ ಪ್ರತಿಭಟನೆಯನ್ನು ನೀಡಿ ಗೆದ್ದಿರುವುದಕ್ಕೆ ಮತ್ತು ದ್ವಿತೀಯ ಮಹಾಯುದ್ಧದ ಬಳಿಕ ಅಮೇರಿಕದ ಪ್ರಬಲ ಸ್ಪರ್ಧಿಯಾಗಿ ಮೆರೆಯುತ್ತಿರುವುದಕ್ಕೆ—ಅಲ್ಲಿಯ ಜನರು ಸಾಹಸದಿಂದ ತಮ್ಮ ನಾಡಿನ ಪುನಾರಚನೆಯಲ್ಲಿ ನಿರತರಾದುದೇ ಕಾರಣ. ಜನರು ತಮಗೆ ಬೇಕಿರಲಿ, ಬೇಡವಾಗಿರಲಿ— ಕಮ್ಯೂನಿಸಮ್ಮಿನ ಸಿದ್ಧಾಂತಾನುಸಾರ ಸರಕಾರದ ಆದೇಶದಂತೆ ಕಡ್ಡಾಯವಾಗಿ ಮಹಾಯೋಜನೆಗಳನ್ನು ಕಾರ್ಯಗತಗೊಳಿಸುವುದರಲ್ಲಿ ನಿರತವಾಗಲೇ ಬೇಕಾಯಿತು. ಇದರಿಂದ ಹೊಸ ಕಾರ್ಖಾನೆಗಳೂ ಹೊಲಗದ್ದೆಗಳೂ ಕಾಣಿಸಿಕೊಂಡು ಉತ್ಪಾದನೆ ಹೆಚ್ಚಿತು; ಸಂಪತ್ತಿನಿಂದ ಬೇರೆ ಸಮೃದ್ಧವಾಯಿತು, ಇದರಿಂದ ಅಮಿತ ಶಕ್ತಿಯ ಸಂಚಯವೂ ಆಯಿತು. ರಶಿಯದ ಉಜಬೇಕ್, ತಾಜಿಕ್, ಕಜಾಕ ಮುಂತಾದ ತೀರ ಹಿಂದುಳಿದಿದ್ದ ಭಾರತದ ರಾಜಪುತಾನದಂದ ರಾಜ್ಯಗಳ ಸಹ ಉತ್ಪಾದನೆಯ ಭವ್ಯ ಕೇಂದ್ರಗಳಾಗಿ ರೂಪಿಸಲ್ಪಟ್ಟಿರುವುದಕ್ಕೆ ಸರಕಾರವು ಒತ್ತಾಯ ಪೂರ್ವಕ ಜನರನ್ನು ಯೋಜನಾ ಮಾರ್ಗದಲ್ಲಿ ಕ್ರಮಿಸುವಂತೆ ನೋಡಿಕೊಂಡುದೇ ಹೇತು.

ಕಮ್ಯುನಿಸಮ್ಮಿನ ಪ್ರಭಾವದಿಂದ, ಆರ್ಥಿಕ ವೈಷಮ್ಯ ಬಹಳ ಮಟ್ಟಿಗೆ ರಶಿಯದಲ್ಲಿ ಕದಿಮೆಯಾಗಿದೆ. 'ಕ್ರೆಮಲಿನ್' ಮಾದರಿಯ ಭವ್ಯ ರಾಜ ಗೃಹಗಳು ರಾಜ್ಯದ ವರಿಷ್ಠರಿಗೆ ಉಳಿಕೊಳ್ಳಲು ಸಿಗುತ್ತಿವೆ; ಮತ್ತು ಅದೇ ಸಮಯದಲ್ಲಿ ಆರ್ಮೇನಿಯದಲ್ಲಿ ಕಳೆದ ಶತಮಾನದಲ್ಲಿ ಕಟ್ಟಲಾದ ಮುರುಕು ಮನೆಗಳಲ್ಲಿಯೇ ಈಗಿನ ಸೋವಿಯೆಟ್ ಪ್ರಜೆಗಳಲ್ಲಿ ಕೆಲವರು ಉಳಿದಿದ್ದಾರೆ ಎಂಬುದು ಸೂಕ್ಷ್ಮವಲೋಕನದಿಂದ ಸಿದ್ಧವಾಗುತ್ತದೆ. ಆದರೆ, ಅಸಮಾನತೆಯನ್ನು ದೂರೀಕರಿಸುವ ಪ್ರಯತ್ನ ಈಗಲೂ ನಡೆಯುತ್ತಿದೆ ಎಂಬುದು ಸುಳ್ಳಲ್ಲ. ಅಲ್ಲಿ ಸಂಬಳಕ್ಕೆ, ಅಥವಾ ದುಡ್ಡಿಗೆ ಇಲ್ಲಿಯಷ್ಟು ಮಹತ್ವ ಸಿಗುವುದಿಲ್ಲ. ಎಲ್ಲರಿಗೂ ಬುದ್ಧಿವಂತಿಕೆಯಿಂದ ತಮ್ಮ ಉದ್ಯೋಗದಲ್ಲಿ ಮೇಲೇರಲು ರಶಿಯದಲ್ಲಿ ಅವಕಾಶವಿದೆ; ಆದಕ್ಕೆ ಅವರಿಗೆ ಹೆಚ್ಚು ಸಂಬಳದ ಆಮಿಷವೂ ತೋರಿಸಲ್ಪಡುತ್ತದೆ. ಆದರೆ ಆ ಸಂಬಳವನ್ನು ಅವನು ಸ್ವಂತ ಜೀವನವನ್ನು ಎತ್ತರಿಸುವುದಕ್ಕಲ್ಲದೆ, ಬೇರೆ ರೀತಿಯಲ್ಲಿ —ಉದಾಹರಣೆಗೆ ನಮ್ಮಲ್ಲಿಯಂತೆ, ಹೊಸ ಕಾರಖಾನೆ ತೆರೆದು ಕೂಲಿಕಾರರನ್ನು ಹಿಂಡಿ—ಸಂಪತ್ತನ್ನು ಬೆಳೆಸಿಕೊಳ್ಳುವುದಕ್ಕೆ ಉಪಯೋಗಿಸಲಾರನು. ಎಲ್ಲ ಔದ್ಯೋಗಿಕ ಕೇಂದ್ರಗಳೂ ಸರಕಾರದಿಂದ ನಡೆಸಲ್ಪಡುತ್ತವೆ; ಮತ್ತು ಸರಕಾರವು ಈ ಕೇಂದ್ರಗಳಿಂದ "ಲಾಭ"ವನ್ನೇನಾದರೂ ಗಳಿಸಿದರೆ, ಅದನ್ನು ಔದ್ಯೋಗಿಕ ಕೇಂದ್ರಗಳ ವಿಸ್ತರಣೆ ಇತ್ಯಾದಿಗೆ ಉಪಯೋಗಿಸುತ್ತದೆ.

ವ್ಯಕ್ತಿಯ ಬಾಲಿಗೆ ರಶಿಯದಲ್ಲಿ ತೆರೆದಿರುವ ವ್ಯಾಪಾರ ವಿಷಯಗಳೆಂದರೆ, ಐಸ್ ಕ್ರೀಮ್, ಸೋಡಾ ಲೆಮನ್, ಚಾಕಲೇಟ್, ಹಣ್ಣುಹಂಪಲು ಇತ್ಯಾದಿಗಳ ಮಾರಾಟ, ಮೆಟ್ಟು ಕಟ್ಟುವುದು, ಅಲ್ಪಗಳ ಬಾಲಿಶನ್ನು ಮಾಡುವುದು ಇತ್ಯಾದಿ ಕೆಲಸ. ಇದರಿಂದ ಯಾರೂ ಜನರನ್ನು ಶೋಷಿಸುವುದು ಕಷ್ಟ. ಏಕೆಂದರೆ, ಇವುಗಳು ಜೀವನಾವಶ್ಯಕ ವಿಷಯಗಳಲ್ಲ. ದವಸಧಾನ್ಯಗಳ ಪೂರೈಕೆಯಿಂದ ಹಿಡಿದು, ವೈದ್ಯಕೀಯ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಸೌಲಭ್ಯಗಳ ವರೆಗೆ ಎಲ್ಲವನ್ನೂ ಸರಕಾರವೇ ಒದಗಿಸಿ ಕೊಡಲು ಬದ್ಧವಿರುವುದರಿಂದ ಈ "ಖಾಸಗಿ" ವ್ಯಾಪಾರಿಗಳು ಜೀವನದ ಪದ್ಧತಿಯಲ್ಲಿ ಮಹತ್ವದ ಪರಿಣಾಮ ಮಾಡಿಯಾರು? ಸಂಬಳ ತೆಗೆದುಕೊಳ್ಳುವ ಜನರು ಒಂದು ರೂ ಬಲನ್ನೂ ಕೂಡಿಡಲು ಹೋಗುವುದಿಲ್ಲ. ಏಕೆಂದರೆ ಹಾಗೆ ಧನ ಸಂಚಯ ಮಾಡಿದರೆ ಅವರಿಗೇನು ಪ್ರಯೋಜನ? ಯಾರಿಗೂ ನಾಳೆಯ ಚಿಂತೆ ಇದ್ದಂತಿಲ್ಲ. ತಮ್ಮ ಮಕ್ಕಳು ಮರಿಗಳ ಭವಿಷ್ಯದ ವಿಚಾರವೂ ಅವರನ್ನು ಕಾಡುವುದಿಲ್ಲ. ಎಲ್ಲರೂ ರಾಷ್ಟ್ರದ ಸೊತ್ತುಗಳು; ರಾಷ್ಟ್ರ ಅಥವಾ ಅದರ ಪ್ರತೀಕವಾದ ಸರಕಾರ ನಡೆಸಿದಂತೆ ನಡೆಯುವ ಗೊಂಬೆಗಳು ಎಂದರೆ ಅತಿಶಯೋಕ್ತಿಯಾಗದು.

ನಮಗೆ ವಿಚಿತ್ರವೆನಿಸಬಹುದಾದ ಇನ್ನೂ ಕೆಲವು ಪದ್ಧತಿಗಳು ರಶಿಯದಲ್ಲಿ ನೋಡಸಿಗುತ್ತವೆ, ಅಲ್ಲಿ ಮಕ್ಕಳಿಲ್ಲದವರ ಮೇಲೆ ತೆರಿಗೆ ಹೊರಿಸಲಾಗುತ್ತದೆ. ಮಕ್ಕಳು ಎಷ್ಟು ಹೆಚ್ಚೊ, ಅಷ್ಟು ತಾಯಂದಿರನ್ನು ಗೌರವಿಸಲಾಗುತ್ತದೆ. ೧೮ರಿಂದ ೫೦ ವರ್ಷದೊಳಗಿನ ಪುರುಷರು ಮತ್ತು ೧೮ರಿಂದ ೪೫ ವರ್ಷದೊಳಗಿನ ಸ್ತ್ರೀಯರು ಅವಿವಾಹಿತರಾಗಿದ್ದರೆ ಅವರೂ ತೆರಿಗೆ ಕೊಡಬೇಕಾಗುತ್ತದೆ. ಜನಸಂಖ್ಯೆ ವಿರಳವಾಗಿರುವುದರಿಂದಲೂ ಕಾರ್ಯಕ್ಷೇತ್ರ ವಿಶಾಲವಾಗಿರುವುದರಿಂದಲೂ ಇಂಥ ಕ್ರಮ ಅವಶ್ಯವೆಂದು ಸರಕಾರಕ್ಕೆ ತೋರಿರಬಹುದು. ಹೆಚ್ಚಾಗಿ ಮಹೋದ್ಯಮಗಳಲ್ಲಿ ಗಂಡಸರೂ ಸುಲಭೋದ್ಯಮಗಳಲ್ಲಿ ಹೆಂಗಸರೂ ದುಡಿಯುತ್ತಾರೆ. ಹೆಂಗಸರ ದುಡಿಮೆ ರಶಿಯದಲ್ಲಿದ್ದಷ್ಟು ಬೇರೆ ದೇಶದಲ್ಲಿ ಕಾಣಸಿಗುವುದಿಲ್ಲವೆಂದು ಭಾಸವಾಗುತ್ತದೆ—ರಸ್ತೆ ರಚಿಸುವುದು, ಅಗೆಯುವುದು, ಟ್ರ್ಯಾಕ್ಟರುಗಳನ್ನು ಗದ್ದೆಗಳಲ್ಲಿ ನಡೆಸುವುದು ಇತ್ಯಾದಿಗಳಲ್ಲಿ ಸ್ತ್ರೀಯರು ಮುಗ್ಗರು. ಸಾಂಸ್ಕೃತಿಕ ವಿಷಯಗಳಲ್ಲಿ ರಶಿಯ ವಾಸ್ತವವಾದಿಗಳ ಕೈವಾರಿಯಾಗಿದೆ—ಆದರೆ ಈ ವಾಸ್ತವಿಕತೆಯು ಕಮ್ಯೂನಿಸಮ್ಮನ್ನು ಜನರ ಮೇಲೆ ಹೇರುವುದಕ್ಕಲ್ಲದೆ,

(೮ನೇ ಪುಟ ನೋಡಿರಿ)

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಭಗವದ್ಗೀತೆಯ ಸಮೂಲ
ಭಾಷಾಂತರ.
ನವಯುಗ ಪ್ರೆಸ್ ಉಡುಪಿ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಧನ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ ೪½%

ಬಡವ ಬಲ್ಲಿದನೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಷರೆಯ ಕವಿತಾ ಕುಸುಮಾವಳಿ—
ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ ಕದೊರು ರಾಜಗೋಪಾಲ ಕೃಷ್ಣಾಚಾರ ಮುನ್ಸುಡಿ
ಬಾಲಕರ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಚ್ಚಲ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇತ್ಯಾದಿರೂ ಬೆಲೆ ೧—೬—೦ (ಟಿ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ಹೊರೆ ಎತ್ತವ.
ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಕಾಂಗ್ರೆಸಿಗರಿಗೆ ವರಿಷ್ಠರ ಪರಿಪತ್ರ

ಮುಂದಿನ ಚುನಾವಣೆಗಾಗಿ ಮಾಹಿತಿಗಳ ಸಂಕಲನ

ಮುಂದಿನ ಚುನಾವಣೆಗೆ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯವಿದ್ದಂತೆಯೇ ಕಾಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡು ಈಗಿಂದೀಗಲೇ ಅದರಲ್ಲಿ ಭಾಗವಹಿಸಲು ಶಕ್ತ ಸಿದ್ಧತೆಗಳನ್ನು ಮಾಡತೊಡಗಿದೆ. ಇದೇ ೩ನೇ ದಿನಾಂಕ ನೆಹರುಗಳ ಮನೆಯಲ್ಲಿ ಜರಗಿದ ಸಭೆಯು ಪಾರ್ಲಿಮೆಂಟು ಮತ್ತು ಎಸೆಂಬ್ಲಿಗಳ ಪ್ರತಿಯೊಂದೂ ಮತದಾರ ಘಟಕಗಳ ಕುರಿತಾದ ಸಮಸ್ಯೆಗಳ ಪರಿಚಯ ಮಾಡಿಕೊಳ್ಳಬೇಕೆಂದು ನಿರ್ಣಯಿಸಿತು.

ಸೇವೆಯ ದಾಖಲೆ

ಸಮಸ್ಯೆಗಳ ಪರ್ಯಾಲೋಚನೆ ನಡೆಸಲು ಅನುಕೂಲವಾಗುವಂತೆ ಈಗ ಕಾಂಗ್ರೆಸು ತಿಕೇಟಿನ ಮೇಲೆ ಗೆದ್ದು ಬಂದಿರುವ ಪ್ರತಿಯೊಬ್ಬ ಪಾರ್ಲಿಮೆಂಟು ಹಾಗು ಎಸೆಂಬ್ಲಿ ಸದಸ್ಯನೂ ತಾನು ತನ್ನ ಮತದಾರ ಪ್ರೇತ್ರಕ್ಕೆ ಸಲ್ಲಿಸಿದ ಸೇವೆ ಮತ್ತು ಮಾಡಿದ ಕೆಲಸಗಳ ಕುರಿತಾದ ವಿವರಗಳನ್ನು ಒಪ್ಪಿಸಬೇಕೆಂದು ಬೋರ್ಡು ಹೇಳಿತು. ಅಲ್ಲದೆ ಕಾಂಗ್ರೆಸು ಕಾರ್ಯಕರ್ತರು ರಚನಾತ್ಮಕ ವಿಭಾಗದಲ್ಲಿ ಯಾವ ಬಗೆಯ ಕೆಲಸಗಳನ್ನು ಕೈಗೊಂಡಿದ್ದಾರೆಂಬ ಪೂರ್ಣ ವಿವರಗಳನ್ನು ಸಂಗ್ರಹಿಸಲು ಅದು ನಿಶ್ಚಯಿಸಿತು.

ಜಾತೀಯತೆಯ ನಿರ್ಮೂಲ

ಇವೆಲ್ಲ ಮಾಹಿತಿಗಳನ್ನು ಕೂಡಿಸಲು ನಾಲ್ಕು ತಿಂಗಳ ಸಮಯ ಬೇಕಾಯಿತು. ಇದರಿಂದ ಮುಂದಿನ ಚುನಾವಣೆಗೆ ಉಮೇದುವಾರರನ್ನು ಆರಿಸಲು ನೆರವಾಗುವುದೆಂದು ಬೋರ್ಡಿನ ಅಭಿಪ್ರಾಯ. ಚುನಾವಣೆಗೆ ಹೀಗೆ ಸಿದ್ಧತೆ ನಡೆದಿದ್ದಂತೆಯೇ ಕಾಂಗ್ರೆಸು ಸಮಿತಿಯು ಒಂದು ಪರಿಪತ್ರವನ್ನು ಹೊರಡಿಸಿ ಕಾಂಗ್ರೆಸಿನ ಶುದ್ಧೀಕರಣದ ವಿಷಯದ ಗೊತ್ತುವಳಿಯನ್ವಯ ನೇಮಿಸಿದ್ದ ಸ್ಥಾಯಿ ಸಮಿತಿಯ ನಿರ್ಣಯಗಳಂತೆ ನಡೆದುಕೊಳ್ಳಲು ಕಾಂಗ್ರೆಸಿಗರನ್ನು ಕೇಳಿಕೊಂಡಿದೆ. ಧಾರ್ಮಿಕ ಸ್ವರೂಪದ, ಹಿಂದುಳಿದವರ ಉದ್ಧಾರಕ್ಕೆ ಸಂಬಂಧಿಸಿದ ಅಥವಾ ಸಾಮಾಜಿಕ ಮೂಢ ಪರಂಪರೆಗಳನ್ನು ನಿವಾರಿಸುವ ಉದ್ದೇಶವುಳ್ಳ ಕಾರ್ಯಕ್ರಮಗಳ ಹೊರತು ಇತರ ಬಗೆಯ ಜಾತೀಯ ವಾತಾವರಣದ ಕೆಲಸಗಳಲ್ಲಿ ಭಾಗವಹಿಸಕೂಡದೆಂದು ಪರಿಪತ್ರ ಉಪದೇಶಿಸುತ್ತದೆ.

ಒಕ್ಕಲೆಬ್ಬಿಸುವುದಕ್ಕೆ ವಿರೋಧ

ಒಬ್ಬ ವ್ಯಕ್ತಿಯು ಅದಷ್ಟು ಮಟ್ಟಿಗೆ ಒಂದಕ್ಕಿಂತ ಹೆಚ್ಚು ಸ್ಥಾನಗಳನ್ನು ಆಕ್ರಮಿಸಬಾರದು; ಮತ್ತು ಆ ಸ್ಥಾನದಲ್ಲಿ ಯಾವದೂ ಒಂದು ನಿಶ್ಚಿತ ಅವಧಿಗಿಂತ ಹೆಚ್ಚು ಸಮಯ ಉಳಿಯಲಾಗದು ಎಂದು ಪರಿಪತ್ರ ತಿಳಿಸುತ್ತದೆ. ಇದರಿಂದ ಅಧಿಕಾರ ಲಾಲಸೆಯ ಭಾವನೆ ತಗ್ಗುವದಲ್ಲದೆ ಹೊಸ ರಕ್ತದವರಿಗೆ ಆಡಳಿತದ ಅನುಭವವಾಗುವುದಕ್ಕೂ ಸಹಾಯ ದೊರಕುತ್ತದೆ ಎಂದದ್ದು ಹೇಳಿದೆ. ಕಾಂಗ್ರೆಸು ಸಮಿತಿಯು ಇನ್ನೊಂದು ಪರಿಪತ್ರದ ಮೂಲಕ ಒಕ್ಕಲೆಬ್ಬಿಸುವುದನ್ನು ತಡೆಯುಲು ಕಾಂಗ್ರೆಸಿಗರು ಶೀಘ್ರವಾದ ಮತ್ತು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಸೂಚಿಸಿದೆ. ಭೂಸುಧಾರಣೆಯ ಶಾಸನಗಳು ಜ್ಯಾರಿಗೆ ಬರುತ್ತಿರುವಾಗ ಒಕ್ಕಲೆಬ್ಬಿಸುವ ಹೇಯ ಕೃತ್ಯ ನಡೆಯುವುದನ್ನು ಸಹಿಸುವಂತಿಲ್ಲ ಎಂದು ಈಚೆಗೆ ನೆಹರುಗಳು ಬಹರ್ಹಾಂಪುರದಲ್ಲಿ ಹೇಳಿದ ಮಾತನ್ನು ಪರಿಪತ್ರ ನೆನಪಿಸುತ್ತದೆ.

ಫಜಲ ಅಲಿ ಆಯೋಗ

ಇದೇ ಜೂನಿನೊಳಗೆ ಕೈಸೇರಬಹುದೆಂದು ಮೊನ್ನೆ ಮೊನ್ನೆಯ ವರೆಗೂ ಹೇಳಲಾಗುತ್ತಿದ್ದ ಫಜಲ ಅಲಿ ಆಯೋಗದ ವರದಿಯು ಮೂರು ತಿಂಗಳ ಬಳಿಕ, ಅಂದರೆ ಸಪ್ಟಂಬರ ಮಾಸಾಂತ್ಯದಲ್ಲಿ ಸಿದ್ಧವಾಗಬಹುದೆಂದು ಗೃಹ ಮಂತ್ರಿ ಪಂತರು ಹೇಳಿದ್ದಾರೆ ಆಯೋಗದ ಕೇಳಿಕೆಯಂತೆ ಅವಧಿಯನ್ನು ಬೆಳೆಸಲಾಯಿತೆಂದೂ ಕಾಶ್ಮೀರದಲ್ಲಿ ಆಯೋಗದ ಸದಸ್ಯರು ತಮ್ಮ ವರದಿಯನ್ನು ಸಿದ್ಧಪಡಿಸುವರೆಂದೂ ಅವರು ತಿಳಿಸಿದ್ದಾರೆ. ಆಯೋಗದ ಸೂಚನೆಗಳನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರುವ ಕೆಲಸವು ಪಾರ್ಲಿಮೆಂಟು ಹಾಗು ಸರಕಾರದ್ದಾಗಿದೆ; ಸರಕಾರವು ಜನಾಭಿಪ್ರಾಯವನ್ನು ಒಕ್ಕೂದಲ್ಲಿಟ್ಟುಕೊಳ್ಳುತ್ತದೆ. ಆದುದರಿಂದ ಜನತೆ ಈ ವರದಿಯನ್ನು ಅಭ್ಯಸಿಸುವುದು ಅಪೇಕ್ಷಣೀಯ ಎಂದೂ ಅವರು ನುಡಿದರು.

"ಬಿಸಿಜಿ" ದಾಕು

ಕ್ಷಯರೋಗ ನಿರೋಧಕ್ಕೋಸ್ಕರ "ಬಿಸಿಜಿ" ದಾಕನ್ನು ಜನ ಸಮುದಾಯದ ಮೇಲೆ ಪ್ರಯೋಗಿಸುವ ಕುರಿತು ಈಚೆಗೆ ಶ್ರೀ ರಾಜಗೋಪಾಲಾಚಾರಿಯವರು ಬಹಳವಾಗಿ ಟೀಕೆಯನ್ನು ಮಾಡಿದ್ದರು. ದಾಕಿನ ಮೂಲಕ ಕ್ಷಯರೋಗದ ನಿರೋಧಕ ಶಕ್ತಿಯನ್ನು ಬೆಳೆಸುವ ಸದುದ್ದೇಶದಿಂದ ದೇಹದಲ್ಲಿ ತುಂಬಿಸುವ ಕ್ಷಯರೋಗದ ಸಜೀವ ಜಂತುಗಳಿಂದ ಅಪಾಯಕರ ಪರಿಣಾಮವಾಗುವುದಿಲ್ಲವೆಂದು ಖಚಿತವಾಗಿ ಹೇಳಲು ಬಾರದ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂಬುದೇ ರಾಜಾಜಿಯ ಆಕ್ಷೇಪದ ತಿರುಳು. ಆದರೆ ಮದ್ರಾಸು ಸರಕಾರದವರು ಹೊರಡಿಸಿದ ಪ್ರಕಟಣೆಯೊಂದು ರಾಜ್ಯದಲ್ಲಿಯೂ ಪಾಶ್ಚಾತ್ಯ ದೇಶಗಳಲ್ಲಿಯೂ ನಡೆಸಿದ ಪರೀಕ್ಷಣೆಗಳಿಂದ "ಬಿಸಿಜಿ" ದಾಕು ಯಾವ ಅಪಾಯವನ್ನೂ ಮಾಡುವುದಿಲ್ಲ ಎನ್ನುತ್ತದೆ.

ಯೋಜನೆಯ ಮನೋಭಾವ

ಪ್ರಧಾನ ಮಂತ್ರಿ ನೆಹರುಗಳು ತನ್ನ ರಷ್ಯಾ ಪ್ರಯಾಣಕ್ಕೆ ಮುಂಚೆ ಒಂದು ಪತ್ರಿಕಾ ಪರಿಪತ್ರನ್ನು ಕರೆದಿದ್ದರು. ಅಲ್ಲಿ ಮಾತನಾಡುತ್ತಾ ಕಳೆದ ಕೆಲವು ಸಮಯದಿಂದ ತನ್ನ ತಲೆಯಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಕುರಿತಾದ ವಿಚಾರಗಳೇ ಸುಳಿಯುತ್ತಿವೆ ಎಂದರು ಭಾರತದ ಜನರು ಸಹ ಯೋಜನೆಯಲ್ಲಿ ಆಸ್ಥೆ ವಹಿಸುವ ಮನೋಭಾವವನ್ನು ತೋರಿಸುತ್ತಿರುವುದಕ್ಕೆ ಅವರು ಸಂತೋಷವನ್ನು ವ್ಯಕ್ತಪಡಿಸಿದರು. ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಾಚರಣೆಗಿಳಿಸಿದ ಪ್ರಥಮದಿನಗಳಲ್ಲಿ ನನ್ನ ಸಹಾಯಕರಿಗೆ ಸಹ ಯೋಜನೆಯ ಕುರಿತು ವಿಶೇಷ ಜ್ಞಾನವಿರಲಿಲ್ಲ; ಆದರೆ ಈಗ ಸಾಮಾನ್ಯವಾಗಿ ಎಲ್ಲ ಜನರಿಗೂ ಯೋಜನೆಯ ಲಾಭಗಳು ಮನವರಿಕೆಯಾಗಿವೆ ಎಂದರು.

ಪ್ರಜಾಪ್ರಭುತ್ವ

ರಾಷ್ಟ್ರದ ಯೋಜನೆಯು ಸಾಮ್ಯವಾದ ಸ್ವರೂಪದ್ದಾಗುವುದೆಂದು ಕೆಲವರು ಟೀಕಿಸುವುದನ್ನು ನೆಹರು ಅಲ್ಲಗಳೆದರು. ಕಮ್ಯೂನಿಸಮ್ಮಿನೊಡನೆ ನಮಗೇನೂ ಮಾಡಲಿಕ್ಕಿಲ್ಲ ಎಂದವರು ಸಾರಿದರು. ಒಳ್ಳೆಯದು ಎಲ್ಲಿದ್ದರೂ ಅದನ್ನು ಹೆಕ್ಕಿಕೊಳ್ಳಲಾಗುವುದೆಂಬ ತಮ್ಮ ನಿಲುಮೆಯನ್ನು ಅವರು ಮನರುಚ್ಚರಿಸಿದರು. ನೆಹರುಗಳು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ತಮಗಿರುವ ವಿಶ್ವಾಸವನ್ನು ಪಾಳನೇ ಪುಟ ನೋಡಿರಿ

THE MANGALORE TRADING ASSOCIATION LIMITED,

(Proprietors of Sharada Press),

CAR STREET, MANGALORE 1.

(Phone: 328)

have been appointed from 1st April 1955 as our Agents for South Kanara District for quality inks, varnishes and other specialities manufactured by us. We request all Presses to kindly contact them fer their requirements. Thank you.

THE RAINBOW INK & VARNISH Manufacturing Co. Ltd.,

Suryodaya Mill Compound, Tardeo,

BOMBAY 7.

ಭರ್ತ ಕಂಟ್ರೋಲ

[ನುಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಸ್ವಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. no. 44/1955.

ಕಲ್ಯಾಣಿ ಹೆಗ್ಗಡ್ತಿ——ವಾದಿಳು

ಮತ್ತು

ಸುಬಾಬಲ ಹೆಗ್ಗಡೆ ಕೂಡಾ-ಪ್ರತಿವಾದಿಯವರೆಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ೭ನೇ ಪ್ರತಿವಾದಿ ಚಂದ್ರಪಾಲ ಹೆಗ್ಗಡೆಗೆ ಆಕ್ಷೇಪ ವ್ಯಾಜ್ಯದ ನೋಟೀಸು, ತಾ. 13-6-1955ಕ್ಕೆ ಇಟ್ಟಿರುವುದರಿಂದ-ಆ ದಿನ ಸದ್ರಿ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಪಡಿಸಿಕೊಳ್ಳತಕ್ಕದ್ದು—

P. Padamanabha Rao
Vakil For Plaintiff.

Udipi. Dated 6—6—1955

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ ಕಿಲ್ಲೆಯವರಿಗೆ ಬಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ಮರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆಬರೆದಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

(೩ನೇ ಪುಟದಿಂದ)

ಲಿಮೆಂಟರಿ ಸಮಾಚಾರದ ಪತ್ರಿಕೆಗಳಿಸಿದ ಸಂದೇಶದಲ್ಲಿಯೂ ಪ್ರಕಟಿಸಿದರು. ಪ್ರಜಾಪ್ರಭುತ್ವ ಪದ್ಧತಿಯಿಂದ ಶೀಘ್ರ ಸ್ವಯೋಜನೆಗಳು ಜನರಿಗೆ ಸಿಗುವುದಿಲ್ಲ ಎನ್ನಲಾಗುತ್ತದೆ. ನಮಗೆ ತ್ವರಿತ ಕಾರ್ಯಸಿದ್ಧಿಯಾಗಬೇಕೆಂದು ಆಗ್ರಹ ಪಡಲಾಗುತ್ತದೆ. ಆದರೆ ಶಾಶ್ವತ ಪರಿಣಾಮವನ್ನುಂಟುಮಾಡಬಲ್ಲ ರೀತಿಯಲ್ಲಿ ಪ್ರಗತಿ ಸಾಧಿಸುವುದು ಹೇಗೆಂಬುದೇ ಮುಖ್ಯವಾದ ವಿಷಯ: ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಕೆಲವು ಸಣ್ಣ ಮಟ್ಟದ ತಿದ್ದುಪಡಿ ಮಾಡಬೇಕಾದೀತು; ಆದರೆ ಭಾರತದ ಭವಿತೆಗೆ ಈ ಪದ್ಧತಿಯೇ ಯೋಗ್ಯ ಎಂದವರ ಅಭಿಪ್ರಾಯ.

ವಿನೋಬನೆಯ ಹೋರಾಟ

ಗೋವೆಯಲ್ಲಿ ಸತ್ಯಾಗ್ರಹಿಗಳ ತಂಡಗಳು ಈಗ ಬಿಡದೆ ಒಂದರ ಹಿಂದೊಂದೆಂಬಂತೆ ನುಗ್ಗುತ್ತಿವೆ ಈ ವಾರ ರೈತ ಕೂಲಿಕಾರ ಪಕ್ಷದ ಧುರೀಣರಾದ ಶ್ರೀ ಅತ್ಮಾರಾಮ ಪಾಟೀಲರ ನೇತೃತ್ವದಲ್ಲಿ ೭೫ ಮಂದಿಯ ತಂಡವೊಂದು ಸತ್ಯಾಗ್ರಹಕ್ಕಾಗಿ ಗೋವೆಯನ್ನು ಪ್ರವೇಶಿಸಿತು. ಇವರು ಗೋವೆಯ ಗಡಿಯೊಳಗೆ ಕೆಲವು ದೂರ ಗೋಮಾಂತಕರಿಗೆ ಕರಪತ್ರಗಳನ್ನು ಹಂಚುತ್ತಾ ವಿನೋಬನೆಯ ಹೋರಾಟದಲ್ಲಿ ಭಾಗವಹಿಸಲು ಹುರಿದುಂಬಿಸುತ್ತಾ ಸಾಗಿದರೆಂದು ತಿಳಿದು ಬರುತ್ತದೆ. ಆದರೆ ಮುಂದೆ ಅವರನ್ನು ಪೋರ್ಚುಗೀಜ ಪೋಲೀಸರು ತಡೆದರು; ಮತ್ತು ಪಾಟೀಲರನ್ನೂ ಇನ್ನೊಬ್ಬ ಧುರೀಣರನ್ನೂ ಬಂಧಿಸಿದರು; ಬೇರೆ ಎಲ್ಲ ಸತ್ಯಾಗ್ರಹಿಗಳನ್ನು ಗಡಿಯ ಬಳಿ ತಂದು ಬಿಟ್ಟರು. ಇನ್ನು ಮುಂದೆ ಯಾರಾದರೂ ಗೋವೆಯ ಗಡಿಯೊಳಗೆ ಸತ್ಯಾಗ್ರಹಕ್ಕಾಗಿ ನುಗ್ಗಿಬಂದರೆ, ಪೂರ್ವ ಆಫ್ರಿಕ ಮುಂತಾದೆಡೆ ಗಡೀಪಾರು ಮಾಡುವುದಾಗಿ ಅಂಜಿಸಲಾಯಿತು.

ನೆಹರುಗಳ ಹೇಳಿಕೆ.

ಸತ್ಯಾಗ್ರಹಿಗಳನ್ನು ಹೊಡೆದು, ಗೋಲೀಬಾರಿನಿಂದ ಘಾಸಿಗೊಳಿಸುವ ಅಮಾನುಷ ಕೃತ್ಯದಿಂದ ಭಾರತೀಯರ ಸಹಾನುಭೂತಿ ತಗ್ಗಿಲ್ಲವೆನ್ನುವುದು ಸಂತೋಷಜನಕವಾದ ವಿಚಾರ. ಭಾರತ ಸರಕಾರವು ವೈಯಕ್ತಿಕ ಸ್ವರೂಪದಲ್ಲಿ ಸತ್ಯಾಗ್ರಹಕ್ಕೆ ಧುಮುಕುವವರನ್ನು ತಡೆಯುವುದಿಲ್ಲವೆನ್ನುವುದೂ ಸಮಾಧಾನದ ವಿಷಯ. ಆದರೆ ನೆಹರುಗಳು ಸತ್ಯಾಗ್ರಹಿಗಳಿಗೆ ಒಂದು ಮಾತು ಹೇಳಿದ್ದಾರೆ— ಪೆಟ್ಟುತಿಂದು ಮರಳಿ ಬಂದ ಸತ್ಯಾಗ್ರಹಿಗಳು ಭಾರತ ಸರಕಾರ ಪೋಲೀಸು ಕ್ರಮವನ್ನು ಗೋವೆಯ ವಿಮೋಚನೆಗಾಗಿ ಕೈಗೊಳ್ಳಲಿ ಎಂದು ಹೇಳಬಾರದು; ಹಾಗೆ ಹೇಳಿದರೆ ಅವರು ಸತ್ಯಾಗ್ರಹಿಗಳೇ ಅಲ್ಲ ಎಂದು ನೆಹರುಗಳು ಸಾರಿದರು. ಭಾರತ ಸರಕಾರ ಪೋಲೀಸು ಕಾರ್ಯಾಚರಣೆಯನ್ನು ಕೈಗೊಳ್ಳಲಾರದು; ಆದರೆ ಆರ್ಥಿಕ ಸ್ವರೂಪದ ಉಗ್ರ ಕ್ರಮಗಳನ್ನು ಕೈಗೊಳ್ಳಲು ಅದು ಹಿಂಜರಿಯದು ಎಂದರು.

ಕ್ರೈಸ್ತರಿಗೆ ಆಹ್ವಾನ

ಗೋಮಾಂತಕರೇ ಸ್ವಾತಂತ್ರ್ಯಕ್ಕಾಗಿ ಅತುರರಿದ್ದಾರೆಂದು ಜಗತ್ತು ತಿಳಿಯಬೇಕಲ್ಲದೆ ಹೊರಗಿನವರು, ಅಂದರೆ ಗೋವೆಯ ಗಡಿಯ ಹೊರಗಿನ ಭಾರತದ ಪ್ರದೇಶದ ಜನರು, ಪ್ರೋತ್ಸಾಹದಿಂದ, ಅಥವಾ ಒತ್ತಾಯದಿಂದ, ಈ ವಿಮೋಚನೆಯ ಹೋರಾಟ ನಡೆಯುತ್ತಿದೆ ಎಂದು ಪೋರ್ಚುಗಾಲವು ಆಕ್ಷೇಪಿಸುವುದಕ್ಕೆ ಎಡೆಕೊಡಬಾರದು ಎಂದು ಭಾರತ ಸರಕಾರದ ನಿಲುಮೆಯ ತಿರುಳು. ಆದುದರಿಂದ ಗೋಮಾಂತಕರೇ ಸತ್ಯಾಗ್ರಹವನ್ನು ತೊಡಗಬೇಕೆಂದೂ ಪೋರ್ಚುಗೀಜರ ಸೊಗವನ್ನು ಎತ್ತಿ ಬಿಸುಡಬೇಕೆಂದೂ ಸ್ಪಷ್ಟವಾಗುತ್ತದೆ. ಗೋವೆಯಲ್ಲಿ ಈಗ ಬಹಳ ಸಂಖ್ಯೆಯಲ್ಲಿ (ಜನಸಂಖ್ಯೆಯ ಅರವಾಸಿಯಷ್ಟು) ಕ್ರೈಸ್ತರಿದ್ದಾರೆ; ಅವರು ಉತ್ಸಾಹದಿಂದ ಸತ್ಯಾಗ್ರಹದಲ್ಲಿ ಭಾಗ ವಹಿಸಬೇಕೆಂದು ಮುಂಬಯಿ ಮತ್ತು ಬೆಳಗಾಂವಿಗಳಲ್ಲಿರುವ ರಾಷ್ಟ್ರೀಯ ಗೋಮಾಂತಕ ಕಾಂಗ್ರೆಸಿನ ಧುರೀಣರು ಹುರಿದುಂಬಿಸುತ್ತಿದ್ದಾರೆ; ಇದು ಸ್ವಲ್ಪ ಮಟ್ಟಿಗೆ ಪರಿಣಾಮ ಮಾಡಿದೆ. ಆದರೆ ಪೋರ್ಚುಗೀಜರು ನಡೆಸಿದ ಅಮಾನುಷ ಕೃತ್ಯಗಳನ್ನು ಪೋಪರು ಖಂಡಿಸದಿರುವ ಕುರಿತಾಗಿಮಾತ್ರ ಆಶ್ಚರ್ಯ ಪಡಲಾಗುತ್ತದೆ.

ಬಿ. ಸಿ. ಜಿ. ದಾಕು ಜಯಪ್ರದವಾಗಿದೆ.

ರಾಜಾಜಿಯವರಿಗೆ ಅಮೃತ್ ಕೌರರ ಉತ್ತರ.

ಇದೇ ತಾ. ೫ರಂದು ರಾಜಕುಮಾರಿ ಅಮೃತ ಕೌರರು ನವದೆಹಲಿಯಲ್ಲಿರುವ 1900 ಅಡಿ ಎತ್ತರದ ಈದ್ಗಾಹ್ ಗುಡ್ಡದಲ್ಲಿ ಸ್ಥಾಪಿಸಲಾಗಿರುವ ಕ್ಷಯರೋಗ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ, ಭಾರತದ ಮಾಜಿ ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಬಿ. ಸಿ. ಜಿ. ದಾಕು ಹಾನಿಕರವಾದುದೆಂದು ಹೂಡಿದ ವಾದವನ್ನು ವಿರೋಧಿಸುತ್ತ ಲಕ್ಷ ಗಟ್ಟಲೆ ಮಕ್ಕಳಿಗೆ ಇದುವರೆಗೆ ಈ ದಾಕನ್ನು ಹಾಕಲಾಗಿದ್ದರೂ ಅದರಿಂದ ಯಾರಿಗೂ ಹಾನಿಯುಂಟಾಗಲಿಲ್ಲವೆಂದು ಹೇಳಿದರು.

ರಾಜಕುಮಾರಿಯವರು ಈಚೆಗೆ ಶ್ರೀ ರಾಜಾಜಿಯವರಿಗೆ ಪತ್ರವೊಂದನ್ನು ಬರೆದು, ಅಧಿಕ ಸಂಖ್ಯೆಯಲ್ಲಿ ಕ್ಷಯರೋಗಕ್ಕೆ ತುತ್ತಾಗಿ ಮರಣ ಸಂಭವಿಸುವ ಭಾರತದಂತಹ ದೇಶದಲ್ಲಿ ಬಿ. ಸಿ. ಜಿ. ದಾಕಿನಂತಹ ಕ್ಷಯರೋಗ ತಡೆಗಟ್ಟುವ ಉಪಾಯಗಳು ಅತ್ಯಾವಶ್ಯಕವೆಂದು ಹೇಳಿರುತ್ತಾರೆ. ಪ್ರತಿವರ್ಷ ಭಾರತದಲ್ಲಿ ಸಾಧಾರಣ ಐದು ಲಕ್ಷ ಜನರು ಕ್ಷಯರೋಗದಿಂದ ಮರಣಹೊಂದುತ್ತಿರುವಾಗ ಅದನ್ನು ತಡೆಗಟ್ಟಲು ಬಿ. ಸಿ. ಜಿ ದಾಕು ಪ್ರಬಲ ಸಾಧನವೆಂದು ಸೂಚಿಸಿರುತ್ತಾರೆ.

ಕೊಡಗಿನಲ್ಲಿ ಮಲೆನಾಡು ಸಮ್ಮೇಲನ

ಮಡಿಕೇರಿಯಲ್ಲಿ ಈಚೆಗೆ ಮಲೆನಾಡು ಸಮ್ಮೇಲನವು ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರದ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದೂರ್ ಶಾಸ್ತ್ರಿಗಳು ಸಮ್ಮೇಲನವನ್ನು ಉದ್ಘಾಟಿಸಿದರು. ಕೇಂದ್ರದ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅಖಿಲ ಭಾರತ ಮಲೆನಾಡು ವಸ್ತು ಪ್ರದರ್ಶನವನ್ನು ತೆರೆದರು. ಕೊಡಗನ್ನು ಸಂಪೂರ್ಣವಾಗಿಯೂ ಬೊಂಬಾಯಿ, ಮೈಸೂರು, ಮದ್ರಾಸು ಮತ್ತು ತಿರುಕೊಚ್ಚಿಯ ಕೆಲವು ಭಾಗಗಳನ್ನೂ ಒಳಗೊಂಡ ಈ ಮಲೆನಾಡು ಪ್ರದೇಶದ ಅಭಿವೃದ್ಧಿ ಕಾರ್ಯವನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆನ್ನುವ ಮೊದಲಾದ ನಿರ್ಣಯಗಳಾದುವು. ಮಂಗಳೂರು— ಬೊಂಬಾಯಿಯನ್ನು ಜೋಡಿಸುವ ಹೊಸ ಕರಾವಳಿ ರೈಲು ಮಾರ್ಗ, ಮೈಸೂರು— ಮಡಿಕೇರಿಗಳನ್ನು ಜೋಡಿಸುವ ರೈಲು ಮಾರ್ಗಗಳ ಕುರಿತು ಪರಿಶೀಲಿಸಲಾಗುವುದೆಂದು ಶಾಸ್ತ್ರಿಗಳು ಉದ್ಘಾಟನಾ ಭಾಷಣದಲ್ಲಿ ಹೇಳಿರುವರು.

Kannada non-detailed Text Book for Higher Forms

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

(Vide Page 7 of Fort St. George Gazette Part I B Dated 4—5—55

The book contains 30 essays and to quote a review that appeared in the columns of 'The Hindu', Madras, "these are designed to emphasise the duties and obligations of every individual to society, the State and the country in order that in the environmental and other complexities of modern life, one can live a full, purposeful and useful life. Each essay is introduced with a short story drawn from the literatures of the world, modern and ancient, with a view to bringing out clearly the import of the essay that follows. When it is recognised that the orderly progress of any State depends upon each individual conducting oneself with a full realisation of one's duties and obligations, the usefulness of this publication will be evident."

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿದುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ನೀಡಿದ ಕಂಪೆನಿ

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India

NAVAYUGA
Popular Kannada Weekly
Founder:—
Sri **A. B. SHETTY,** *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೯-೬-'೫೫	೩೮

ರಶಿಯದ ಸಂದರ್ಶನ

ಭಾರತದ ಕಣ್ಮಣಿ ಜವಾಹರ್ ಲಾಲ ನೆಹರುಗಳು ಈ ವಾರ ಇನ್ನೊಂದು ಮಹತ್ವದ ಪ್ರಯಾಣವನ್ನು ಕೈಗೊಂಡಿದ್ದಾರೆ. ಈಜೆಗೆ ಅವರು ಚೀನದ ಜನತಾ ರಾಜ್ಯದಲ್ಲಿ ಸಂಚರಿಸಿ ಬಂದಿದ್ದರು; ಇದೀಗ ರಶಿಯ, ಯುಗೊಸ್ಲಾವಿಯ ಝೆಕೊಸ್ಲೋವಾಕಿಯ, ಪೋಲೆಂಡುಗಳಿಗೆ ಸಂದರ್ಶನವೀಯಲು ಹೋಗಿದ್ದಾರೆ. ಅವರಿಗೆ ರಶಿಯದಲ್ಲೂ ಪೂರ್ವ ಯುರೋಪಿನ ಇತರ ರಾಷ್ಟ್ರಗಳಲ್ಲೂ ಭವ್ಯ ಸ್ವಾಗತ ದೊರಕಿದೆ ಎಂಬುದು ತುಂಬ ಸಂತೋಷದ ವಿಷಯ. ಭಾರತದ ಪರಿಚಯ ಮಾಡಿಕೊಡುವ, ಮತ್ತು ಭಾರತೀಯರ ಜನನಾಯಕ ನೆಹರುಗಳ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ವರ್ಣಿಸುವ ಲೇಖನಗಳನ್ನು ಅಲ್ಲಿಯ ಪತ್ರಿಕೆಗಳು ಈ ಸಂದರ್ಭದಲ್ಲಿ ಪ್ರಕಟಿಸಿ, ಭಾರತವನ್ನು ತಿಳಿಯಲು, ಜಾಗತಿಕ ಶಾಂತಿಗಾಗಿ ಅದು ಸಾಧಿಸಿದ ಕಾರ್ಯಗಳ ತಿರುಳನ್ನು ಮನವರಿಕೆ ಮಾಡಿಕೊಳ್ಳಲು, ಸಹಾಯ ನೀಡಿವೆ ಎಂದು ಕೇಳುತ್ತೇವೆ. ಹೀಗೆ ಹೆಗಲೊಂಡ ಆ ದೇಶಗಳವರ ಮನಸ್ಸು ನೆಹರುಗಳ ಸ್ವಾಗತ ಮತ್ತು ಅವರು ಕೊಂಡೊಯ್ಯುವ ಭಾರತೀಯರ ಪ್ರೀತಿಯ ಶುಭೇಚ್ಛೆಯ ಸ್ವೀಕಾರಗಳಿಗೆ ಉತ್ಸಾಹದಿಂದ ತವಕಿಸುವುದರಲ್ಲಿ ಆಶ್ಚರ್ಯವಿರಲಾರದು. ನೆಹರುಗಳು ಸಂಚಾರ ಕೈಗೊಂಡಿರುವ ದೇಶಗಳು ಸಾಮ್ಯವಾದವನ್ನು ಎತ್ತಿ ಹಿಡಿಯುತ್ತವೆ ಎಂಬುದು ನಿಜ. ಆದರೆ ಪಾಶ್ಚಾತ್ಯ ರಾಷ್ಟ್ರಗಳು ಯೋಚಿಸುತ್ತಿರುವಂತೆ, ಭಾರತವು ಕಮ್ಯೂನಿಸ್ಟರನ್ನು ಹರದಾರಿ ದೂರವಿಡಬೇಕೆಂದು ಭಾವಿಸುವುದಿಲ್ಲ. ಅದು ಸಹಜೀವನದ ತತ್ವವನ್ನು ಎತ್ತಿ ಹಿಡಿಯುತ್ತದೆ; ಈ ತತ್ವವನ್ನು ಕಮ್ಯೂನಿಸಮ್ಮನ್ನು ತಮ್ಮ ಆಡಳಿತ ಪದ್ಧತಿಯಾಗಿ ಅಳವಡಿಸಿಕೊಂಡಿರುವ ರಶಿಯ ಹಾಗು ಇತರ ಪೂರ್ವ ಯುರೋಪಿನ ರಾಷ್ಟ್ರಗಳೂ ಸುರಕ್ಷಿಸುತ್ತವೆ. ಈ ಸೌಹಾರ್ದ ಸಂದರ್ಶನವು ಯಾವುದೇ ಪೂರ್ವಗ್ರಹ ದೂಷಿತ ಮನೋಭಾವನೆಯನ್ನು ಒಳಗೊಂಡಿರದಿರುವುದಕ್ಕೆ ಇದರಿಂದ ತುಂಬ ನಿರವಾಗಿದೆ. ಕೇವಲ ಸ್ನೇಹ, ಸದಾಶಯ ಮತ್ತು ಶಾಂತಿಯುತ ಸಹಕಾರದ ಭಾವನೆಯೊಂದೇ ಈ ಸಂದರ್ಶನದ ಹಿನ್ನೆಲೆಯಲ್ಲಿದೆ. ಆದುದರಿಂದಲೇ ನೆಹರುಗಳುತಾನು ಯಾವದೇ ವಿಶಿಷ್ಟ ವಿಷಯದ ಚರ್ಚೆಯನ್ನು ನಡೆಸಲು ಉದ್ದೇಶಿಸಿಲ್ಲವಾಗಿ ಹೇಳುವಂತಾಯಿತು. ಚರ್ಚೆಸಲು ಬೇಕಾದಷ್ಟು ವಿಷಯಗಳಿರಬಹುದು—ಚರ್ಚೆಗಳೂ ನಡೆಯಬಹುದು. ಆದರೆ ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸುವ, ಒಬ್ಬರು ಇನ್ನೊಬ್ಬರ ನಿಲುಮೆಯನ್ನು ಮನವರಿಕೆ ಮಾಡಿಕೊಳ್ಳುವ ರೀತಿಯಲ್ಲಿಯಷ್ಟೇ ಈ ಚರ್ಚೆಗಳು ನಡೆದಾವು; ಹೊರತು, ಯಾವದೇ ಸಂಧಾನ ನಡೆಯುವ ಸಂಭವ ಇಲ್ಲಿಲ್ಲ. ಜಾಗತಿಕ ಶಾಂತಿಗೆ ಈ ಬಗೆಯ ಅನೌಪಚಾರಿಕ ಸಮಾಲೋಚನೆಗಳು ಕಾಲಾಂತರದಲ್ಲಿ ಮಾಡಬಹುದಾದ ಸತ್ಪರಿಣಾಮದಿಂದಲೇ ಈ ಚರ್ಚೆಗಳ ಮಹತ್ವವನ್ನು ಮನಗಾಣಬೇಕಷ್ಟೆ, ಈಗಿಂದೀಗ ಯಾವ ಸಮಸ್ಯೆಯ ಪರಿಹಾರವೂ ಗೋಚರವಾಗದು. ನೆಹರುಗಳು ಕೈಗೊಂಡಿದ್ದ ಚೀನದ ಪ್ರವಾಸವು ಆ ದೇಶಕ್ಕೆ ಭಾರತದ ಮೇಲಿದ್ದ ವಿಶ್ವಾಸವನ್ನು ಹೆಚ್ಚಿಸಿತು; ಭಾರತದ ಪಾಲಿಗೆ, ಚೀನದ ಪ್ರಗತಿ ಮಾರ್ಗ ಅನುಕರಣೀಯವೆಂದು ಕೆಲಮಟ್ಟಿಗೆ ತೋರಿತು. ನೆಹರುಗಳ ಸಮಾಜವಾದಿ ಮಾದರಿಯ ಸಮಾಜ ರಚನೆಯ ಭಾವನೆಯ ಪರಿಶುದ್ಧವಾದುದೇ ಚೀನದ ಸಂದರ್ಶನದ ಬಳಿಕ ಎಂದು ಹೇಳಲಾಗುತ್ತದೆ. ರಶಿಯದಲ್ಲಿ ಮುಕ್ತ ಮನಸ್ಸಿನಿಂದ ಪ್ರವಾಸ ಮಾಡಿ ಬಂದ ಬಳಿಕ, ನೆಹರುಗಳಿಗೆ ಭಾರತದ ಸಾರ್ವಾಂಗಿಕ ಅಭಿವೃದ್ಧಿಗಾಗಿ ಜನರನ್ನು ಹುರಿಗುಂಬಿಸಲು ಕೆಲವು ಒಳ್ಳೆಯ ಉಪಾಯಗಳು ಹೊಳೆಯಬಹುದು. ರಶಿಯದ ಪಾಲಿಗೆ, ಜಗತ್ತಿನಲ್ಲಿ ಯಾವ ಬಣಕ್ಕೂ ಸೇರದೆ ತೀರ ಸ್ವತಂತ್ರವಾದ ರೀತಿಯಲ್ಲಿ, ಶಾಂತಿಯ ಕೈವಾರಿಯಾಗಿ ನಡೆದುಕೊಳ್ಳುವ ಭಾರತದೊಡನೆ ನಿಕಟ ಸಂಬಂಧ ಬೆಳೆಯಲು ನೆಹರುಗಳ ಸಂದರ್ಶನ ಅವಕಾಶವೀಯುತ್ತದೆ. ರಶಿಯ-ಭಾರತಗಳ ಸಂಬಂಧ ಹೇಳಿಕೊಳ್ಳುವಷ್ಟು ಹೆಚ್ಚಿನದಾಗಿಲ್ಲ—ಚೀನದೊಡನೆ ಬಹಳ ಪ್ರಾಚೀನ ಕಾಲದಲ್ಲಾದರೂ ಭಾರತಕ್ಕೆ ಸಾಂಸ್ಕೃತಿಕ ಸಂಬಂಧವಿದ್ದಿತು; ನಡುವೆ ಅನೇಕ ಶತಮಾನಗಳಲ್ಲಿ ಭಾರತದೊಡನೆ ಚೀನದ ಸಂಪರ್ಕ ಬಹಳಷ್ಟು ಕಡಿದು ಹೋದರೂ ಸಹ ಬೌದ್ಧ ಧರ್ಮ ಮತ್ತಿತರ ಬಗೆಯ ಪ್ರಭಾವದಿಂದ ಈ ಗೊಣಸು ಮುರಿದು ಬೀಳಲಿಲ್ಲ. ಆದರೆ ರಶಿಯದೊಡನೆ ನಮ್ಮ ಸಂಪರ್ಕ ಹತ್ತಿರವಾದದ್ದು ಸ್ವಾತಂತ್ರ್ಯೋತ್ತರದಲ್ಲಿ ಮಾತ್ರ—ಹೀಗಿದ್ದರೂ ರಶಿಯದ ಧುರೀಣರು ನೆಹರುಗಳನ್ನು ಮೊಸ್ಕೋಗೆ ಬರುವಂತೆ ಆಮಂತ್ರಣ ಕೊಟ್ಟಿರುವುದು ಜಗತ್ತಿನಲ್ಲಿ ಭಾರತಕ್ಕಿರುವ ಗೌರವದ ಸ್ಥಾನವನ್ನು ಸ್ಪಷ್ಟಪಡಿಸುತ್ತದೆ; ನೆಹರುಗಳ ವಿವೇಕಪೂರ್ಣ ನಡವಳಿಕೆಗೆ ಇದು ಸಾಕ್ಷಿ ಹೇಳುತ್ತದೆ. ನೆಹರುಗಳು ರಶಿಯಕ್ಕೆ ಅನುಕೂಲವಾದ ಭಾವನೆಯನ್ನು ತಾಳಿ, ಆ ಗುಂಪಿಗೆ ಸೇರಿ ಹೋಗಬಹುದೋ ಎಂಬ ಅನುಮಾನ ಪಾಶ್ಚಾತ್ಯ ರಾಷ್ಟ್ರಗಳಿಗೆ ಆಗಬಹುದು—ಭಾರತೀಯರು ಮಾತ್ರ ಎಷ್ಟಕ್ಕೂ ಹಾಗೆ ಸಂಶಯ ಪಡಲಾರರು. ಏಕೆಂದರೆ, ಪ್ರೀತಿಯ ಸ್ವಾಗತದಿಂದ ಮೈಮರೆತು ಕರ್ತವ್ಯ ಮರೆಯುವ ವ್ಯಕ್ತಿ ನೆಹರುಗಳಲ್ಲ; ಕಂಡವರ ಮಾತಿನಂತೆ ತನ್ನ ಮಾರ್ಗ ಬದಲಾಯಿಸುವಷ್ಟು ದುರ್ಬಲರೂ ಅವರಲ್ಲ.

ಸುಬ್ರಹ್ಮಣ್ಯ—ಇಲ್ಲಿ ಹರಿಯುತ್ತಿರುವ ಪವಿತ್ರ ಕುಮಾರ ಧಾರಾನದಿಗೆ ಸಂಗಮ ತೀರ್ಥದಲ್ಲಿ ಶ್ರೀ ವಿ. ಎ. ಎಲ್. ಎಸ್. ರಾಮನಾಥನ್ ಚಿಟ್ಟಿಯಾರಿಂದ ಕಟ್ಟಿಸಲ್ಪಟ್ಟ ಸ್ನಾನ ಘಟ್ಟವನ್ನು ಕಳೆದ ತಾ. ೨೨ರಂದು ಶ್ರೀ ಸುಬ್ರಹ್ಮಣ್ಯ ಮಠದ ಹಿರಿಯ ಶ್ರೀ ಶ್ರೀ ಪಾದಂಗಳವರು ಉದ್ಘಾಟಿಸಿದರು.

ಟಿಟೋರೊಡನೆ ರಶಿಯದ ಧುರೀಣರ ಗೆಳೆತನ

ರಶಿಯದ ಧುರೀಣರು ಕಳೆದ ವಾರ ಯುಗೊಸ್ಲಾವಿಯದೊಡನೆಮೈತ್ರಿಯನ್ನಿರಿಸಿ ಕಾಲದಲ್ಲಿ ಮುರಿದು ಹೋಗಿದ್ದ ಸಂಬಂಧವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ನಡೆಸಿದರು. ಟಿಟೋರ ರಾಜಧಾನಿ ಬೆಲ್ಗ್ರೇಡಿಗೆ ತಾವೇ ಸ್ವತಃ ಹೋಗಿ, ಹಿಂದೆ ಸಂಬಂಧ ಮುರಿದು ಕೊಂಡುದಕ್ಕೆ "ದೇಶದ್ರೋಹ" ಬೆರಿಯರೇ ಕಾರಣರೆಂದೂ ರಶಿಯ ಹೀಗೆ ಕಪ್ಪುಮಾಡಿತೆಂದೂ ವಿಷಾದವನ್ನು ವ್ಯಕ್ತಪಡಿಸಿದರು.

ಒಪ್ಪಂದದ ತತ್ವ

ಪ್ರಾಯಶ್ಚಿತ್ತದ ಈ ಮಾತುಗಳನ್ನು ವಿಮಾನ ನಿಲ್ದಾಣದಲ್ಲಿ ಆಡಿದ ಬಳಿಕ ಟಿಟೋರೊಡನೆ ಸಮಾಧಾನದಿಂದ ಸಮಾಲೋಚಿಸಿದರು. ಕೊನೆಯಲ್ಲಿ ಹೊರಟ ಪ್ರಕಟಣೆಯು ಕಡಿದು ಹೋದ ಸಂಬಂಧವನ್ನು ಮರಳಿ ಸ್ಥಾಪಿಸಲು ಧುರೀಣರು ನಿರ್ಧರಿಸಿದರೆಂದು ಸ್ಪಷ್ಟಪಡಿಸುತ್ತದೆ. ಯುಗೊಸ್ಲಾವಿಯದ ಆಂತರಿಕ ವ್ಯವಹಾರದಲ್ಲಿ ರಶಿಯ ಕೈಹಾಕುವುದಿಲ್ಲ; ಉಭಯ ರಾಷ್ಟ್ರಗಳಲ್ಲಿ ವ್ಯಾಪಾರ ಸಂಬಂಧ ಹೆಚ್ಚುತ್ತದೆ.

ಪಾಶ್ಚಾತ್ಯರ ಭಯ

ಪಾಶ್ಚಾತ್ಯ ರಾಷ್ಟ್ರಗಳನ್ನು ಮೇಲಿನ ನಿರ್ಣಯಗಳು ಗಾಬರಿಪಡಿಸುವುದಿಲ್ಲ. ಆದರೆ ಪ್ರಕಟಣೆಯಲ್ಲಿ ಟಿಟೋರವರು ಫೊರ್ಮೋಸದ ಮೇಲೆ ಚೀನದ ಜನತಾ ರಾಜ್ಯಕ್ಕೆ ಅಧಿಕಾರವಿದೆ ಎಂದು ಒಪ್ಪಿರುವುದೂ ವಿಕೇಕೃತ ಜರ್ಮನಿಯ ಪ್ರಸ್ತಾಪ ಮಾಡಿರುವುದೂ ಪಾಶ್ಚಾತ್ಯ ರಾಷ್ಟ್ರಗಳ ಮನಸ್ಸಿಗೆ ಬಂದಿಲ್ಲ. ಇದರಿಂದ ಅಮೇರಿಕವು ಇಷ್ಟರ ವರೆಗೆ ಕೊಡುತ್ತಾ ಬಂದಿದ್ದ ಸಹಾಯವನ್ನು ನಿಲ್ಲಿಸಿಬಿಡಲು ಮುಂದಾದೀತು. ಯುಗೊಸ್ಲಾವಿಯವು ತಾನು ರಶಿಯದ ಬಣವನ್ನು ಸೇರಿಲ್ಲವೆಂದು ಹೇಳಿಕೊಂಡರೂ ಪಾಶ್ಚಾತ್ಯ ರಾಷ್ಟ್ರಗಳಿಗೆ ನಂಬಿಕೆಯಾಗದೆ ಹೋದೀತು.

ಬಂಧಿತರ ಬಿಡುಗಡೆ

ನೆಹರುಗಳ ಸಂಚಾರ ರಾಯಭಾರಿ ಕೃಷ್ಣ ಮೆನೊನ್ನರು ಚೀನದ ಸಂದರ್ಶನ ಮುಗಿಸಿ ಬಂದ ಬಳಿಕ ಅಲ್ಲಿ ಬಂಧನದಲ್ಲಿರುವ ಅಮೇರಿಕದ ವೈಮಾನಿಕರಲ್ಲಿ ನಾಲ್ವರ ಬಿಡುಗಡೆಯಾಗುವುದೆಂದು ಹೊಸ ದೆಹಲಿಯಲ್ಲಿ ತಿಳಿಸಿದರು. ಇದರಂತೆ ವೈಮಾನಿಕರ ಬಿಡುಗಡೆಯೂ ಹಿಂದಿನಿಂದ ಆಯಿತು. ಅಮೇರಿಕದ ವಿದೇಶ ಖಾತೆಯ ಕಾರ್ಯದರ್ಶಿ ಡಲ್ಲೇಸರು ಭಾರತವು ಈ ಬಗ್ಗೆ ನಡೆಸಿದ ಪ್ರಯತ್ನಗಳನ್ನು ಕೊಂಡಾಡಿದರು.

ಕೀರ್ತಿ ಯಾರಿಗೆ?

ಅಮೇರಿಕ—ಚೀನಗಳ ಮನಸ್ತಾಪವನ್ನು ಹೆಚ್ಚಿಸಿದ್ದ ವಿಷಯಗಳಲ್ಲಿ ವೈಮಾನಿಕರ ಬಂಧನವೂ ಒಂದು. ಕೃಷ್ಣ ಮೆನೊನ್ನರು ಉಳಿದ ವೈಮಾನಿಕರ ಬಿಡುಗಡೆಯೂ ಬೇಗನೇ ಆದೀತೆಂಬ ಸೂಚನೆ ಕೊಟ್ಟಿದ್ದಾರೆ. ಆದರೆ ಅಮೇರಿಕ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ಒಂದು ತಂತ್ರ ನಡೆದಿದೆ—ಭಾರತವು ಪಹಿಸಿದ ಪ್ರಾಯತ್ನವನ್ನು ಸಣ್ಣದು ಮಾಡಿ ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಗಳಿಗೆ ಈ ಕೀರ್ತಿಯನ್ನು ಅಲ್ಲಿ ಕೊಡಲಾಗುತ್ತದೆ ಆದರೆ, ಈ ಕಾರ್ಯದರ್ಶಿಗಳು ಪೇಕಿಂಗಿಗೆ ಕೈಗೊಂಡಿದ್ದ ಯಾತ್ರೆ ಕೇವಲ "ಆಶಾದಾಯಕ" ಪರಿಣಾಮವನ್ನಷ್ಟೇ ಮಾಡಿದ್ದಿತೆಂದು ಎಲ್ಲರೂ ಬಲ್ಲರು.

ಪೂರ್ವ ಬಂಗಾಲ

ಪಾಕಿಸ್ತಾನದಲ್ಲಿ ನಡೆಯುವ ಪ್ರತಿಯೊಂದು ಘಟನೆಯೂ ಜೋದ್ಯವನ್ನುಂಟುಮಾಡುತ್ತದೆ. ಪೂರ್ವ ಬಂಗಾಲದಲ್ಲಿ ಒಂದು ವರ್ಷದ ಹಿಂದೆ ಹಕ್ಕರ ಮಂತ್ರಿಮಂಡಳವನ್ನು ರದ್ದುಮಾಡಿ, ಗವರ್ನರರ ಆಳಿಕೆಯನ್ನು ಹೇರಲಾಯಿತು. ಮಹಮ್ಮದಾಲಿಗಳು ಹಕ್ಕರನ್ನು ದೇಶದ್ರೋಹಿ ಎಂದು ಕರೆದರು. ಆದರೆ ಈಗ ಗವರ್ನರರ ಆಳಿಕೆಯನ್ನು ರದ್ದುಗೊಳಿಸಿ, ಅದೇ ಹಕ್ಕರು ಹೆಸರಿಸಿದ ಅಬು ಹುಸೇನರ ಮಂತ್ರಿ ಮಂಡಳಕ್ಕೆ ಅಧಿಕಾರ ಒಪ್ಪಿಸಿ ಕೊಡಲಾಗಿದೆ.

ನೆನಪಿಗಾಗಿ

ಈ ವರೆಗೂ ಚಂದಾಹಣ ಕಳುಹಿಸದವರು ಈಗಲಾದರೂ ಕಳುಹಿಸುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ವಿ. ಪಿ. ಪಿ. ಮಾಡುವುದರಿಂದ ಹೆತ್ತಾಣೆ ಹೆಚ್ಚಿಗೆ ಬೀಳುವುದೆಂಬುದನ್ನು ತಿಳಿದು ಎಲ್ಲರೂ ಚಂದಾಹಣವನ್ನು ಕೂಡಲೇ ಮನಿಯಾರ್ಡರುಮಾಡಿ ಸಹಕರಿಸುವಂತೆ ವಿನಂತಿಸುತ್ತೇನೆ.

ಮೆನೇಜರ್.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೭—೦; ಸುಮಾರಾಣ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ನಡೆಯುವ ಚಿತ್ರ—

ಚಕ್ರಧಾರಿ (ಹಿಂದಿ)
ನಿರೂಪಣ್ಯಾ, ಸಾಹುಮೋದಕ್, ತ್ರಿಲೋಕ್ ಕಾಪೂರ್
ಮುಂದಿನ ಚಿತ್ರ— ಮರ್ಮಯೋಗಿ (ತಮಿಳು)
ಅಂಜಲಿ, ರಾಮಚಂದ್ರನ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶಿವರಾಮ ಕಾರಂತ

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಸಮಕಾಲೀನ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅಗ್ರ ಶ್ರೇಣಿಯನ್ನು ಅಲಂಕರಿಸಿದ ಹಿರಿಯ ಸಾಹಿತಿಗಳಲ್ಲಿ ಶಿವರಾಮಕಾರಂತರೊಬ್ಬರು ಅವರು ತಮ್ಮ ಕತೆ, ಕಾದಂಬರಿ, ನಾಟಕ, ಪ್ರಬಂಧ, ಹರಟೆ, ವಿಶ್ವಕೋಶ, ಎಲ್ಲಕ್ಕೂ ಮಿಗಿಲಾಗಿ ಅರ್ಥಕೋಶದಿಂದ ಕನ್ನಡ ಸಾಹಿತ್ಯ ಭಂಡಾರವನ್ನು ತುಂಬಿದ್ದಾರೆ ತಮ್ಮ ವಿಟ್ಟಿತನದ ಬರವಣಿಗೆ, ವಿದ್ವಗಾರಿಕೆಯ ನಿರೂಪಣೆ, ಗಂಡು ಶೈಲಿ, ವಿಶಿಷ್ಟ ಕಥಾನಕ, ನಿರೂಪಣಾ ಕೌಶಲ್ಯಗಳಿಂದ ಕಾರಂತರು ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾರೆ

ಕಾರಂತರ ಪ್ರತಿಭೆ ಬಹುಮುಖವುಳ್ಳದ್ದು ತಮ್ಮ ಅತೀವ ಕಲ್ಪನಾ ಸಾಮರ್ಥ್ಯ, ನಿರಂತರ ಪ್ರತಿಭೆಯಿಂದ ಪ್ರೇರಣೆಗೊಂಡ ಕಾರಂತರು ಬೇಸಿಸಿದ ನಾನಾ ರಂಗಗಳಲ್ಲಿ, ನಾನಾ ವೃತ್ತಿಗಳಲ್ಲಿ ಸಿಕಟವಾದ ಸಂಶ್ರಮ ಪಡೆದಿರುವ ಶ್ರೇಷ್ಠ ಕಲಾವಿದರೆನ್ನಿಸಿಕೊಂಡಿದ್ದಾರೆ

ಒಂದು ಕಾಲಕ್ಕೆ ಅವರು ರಾಜಕಾರಣಿಗಳಾಗಿದ್ದರು, ಸಮಾಜ ಸುಧಾರಕರಾಗಿದ್ದರು, ಶಿಕ್ಷಕರಾಗಿದ್ದರು, ಮಕ್ಕಳ ಆಟದ ಸಾಮಾನುಗಳನ್ನು ತಯಾರಿಸುತ್ತಿದ್ದರು ನೃತ್ಯ, ಅಭಿನಯ, ದಿಗ್ದರ್ಶನಗಳಲ್ಲಿಯೂ ಅವರು ಪ್ರಯೋಗ ನಡೆಸಿ ಕೀರ್ತಿಶಾಲಿಯಾಗಿದ್ದಾರೆ ವರ್ಣ ಶಿಲ್ಪ ಛಾಯಾ ಚಿತ್ರಗ್ರಹಣ, ಮುದ್ರಣ ಈ ವೃತ್ತಿಗಳಲ್ಲಿಯೂ ಅವರನ್ನು ಕೀರ್ತಿಕಾಮಿನಿಯೆಕೈ ಹಿಡಿಯದೆ ಬಿಟ್ಟಿಲ್ಲ ಲೇಖಕರಾಗಿಯೂ ಖ್ಯಾತನಾಮರಾಗಿದ್ದಾರೆ ಅವರು ಆನುಸರಿಸಿದ್ದು ಯಾವುದೇ ಕ್ಷೇತ್ರವಾದರೂ ಅಲ್ಲಿ ಅವರು ತಮ್ಮದೇ ಆದ ವಿಶಿಷ್ಟಕಲಾವಂತಿಕೆಯನ್ನು ಪ್ರಯೋಗಿಸದೆ ಬಿಟ್ಟಿಲ್ಲ.

ಮಕ್ಕಳಿಗೆ ಕಲಾಪೂರ್ಣವಾದ ಆಟದ ಸಾಮಾನುಗಳನ್ನು ತಯಾರಿಸುವುದರಿಂದ ಹಿಡಿದು ಮಕ್ಕಳಿಗೆ ಎರಡು ಸಂಪುಟಗಳ ವಿಶ್ವಕೋಶವನ್ನು ತಯಾರಿಸುವವರೆಗೂ ಅವರು ಶ್ರಮವಹಿಸಿದ್ದಾರೆ ಆ ವಿಶ್ವಕೋಶಗಳಲ್ಲಿರುವ ಸುಂದರ ಚಿತ್ರಗಳನ್ನು ಬಿಡಿಸಿರುವವರೂ ಕಾರಂತರೇ.

ಈ ಬೃಹತ್ ಪ್ರಯತ್ನಗಳನ್ನೆಲ್ಲಾ ಅವರೊಬ್ಬರೇ ಮಾಡಿದರೆಂದರೆ ಅಚ್ಚರ್ಯವೆನ್ನಿಸಬಹುದು ಇದೇ ರೀತಿಯ ಸಾಧನೆಯನ್ನು ಅವರು ಎಲ್ಲಾ ಕಲಾಕ್ಷೇತ್ರಗಳಲ್ಲಿಯೂ ಸಾಧಿಸಿದ್ದಾರೆ ಈ ಸಾಧನೆಯಲ್ಲಿ ಸಿದ್ಧಿಯನ್ನೂ ಪೊಂದಿದ್ದಾರೆ ಕಾರಂತರು ಕನ್ನಡ ನಾಡಿನಲ್ಲಿ ಜನ್ಮತಾಳಿದ್ದು, ಕನ್ನಡದಲ್ಲಿ ಬರೆಯತೊಡಗಿದ್ದು ಅವರ ಕೀರ್ತಿ ವ್ಯಾಪ್ತಿಗೆ ದಿಗ್ಬಂಧನ ಮಾಡಿದಂತಾಗಿದೆ

ಕಾರಂತರನ್ನು ನಾನಿಂದು ಪ್ರತಿಭಾವಂತ ಕಾದಂಬರಿಕಾರರೆಂದು ಕರೆಯುತ್ತೇನೆ, ನಿಜ ಆದರೆ ಕಾರಂತರು ತಮ್ಮ ಅರಂಭಿಸೆಯ ಕೀರ್ತಿಯನ್ನು ಗಳಿಸಿದ್ದು ಸಾಮಾಜಿಕ ನಾಟಕಗಳ ಕರ್ತೃಗಳಾಗಿ ಆನುಪಮ ವಿಂದಬಾಣಕ್ಕಿಯುಳ್ಳ ಕಾರಂತರ ನಾಟಕಗಳನ್ನೋದಿ ಜನರು ನಕ್ಕರು, ಅಳಲಾರದೆ ನಕ್ಕರು



ಕಾರಂತರು ಭವ್ಯ ಕನಸುಗಳನ್ನು ಕಾಣುವ ದೊಡ್ಡ ಕನಸುಗಾರ ಮಹತ್ಕಾರ್ಯಗಳಲ್ಲಿಯೇ ಮನಸ್ಸನ್ನಿಡುವ ಮಹಾನುಭಾವ ಅನೇಕ ವೇಳೆ ಅವರೇ ರಂಗಭೂಮಿಗೆ ಏರಿ, ತಮ್ಮ ಭವ್ಯ ಕನಸುಗಳನ್ನು ಯಶಸ್ವಿಯಾಗಿ ಚಿತ್ರಿಸಿ ತೋರಿಸಿದ್ದಾರೆ ನಾಟಕ ಪ್ರಯೋಗದಲ್ಲಿ ಅವರು ನಷೀನ ತಂತ್ರಗಳನ್ನು ಬಳಸಿದ್ದಾರೆ ಜನಪದ ಸಂಗೀತ, ನೃತ್ಯ, ರಾಗ ಮತ್ತು ಸಲ್ಲಾಪಗಳನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಅಳವಡಿಸಿ ಕೊಂಡಿದ್ದಾರೆ. ವಿಶೇಷ ಪರಿಣಾಮಕ್ಕಾಗಿ ಛಾಯಾ ತಂತ್ರಗಳನ್ನೂ ಬಳಸಿಕೊಳ್ಳದೆ ಬಿಟ್ಟಿಲ್ಲ.

ಉತ್ತಮ ನಾಟಕಕಾರರೆನ್ನಿಸಿಕೊಂಡಂತೆ ಕಾರಂತರು ಉತ್ತಮ ಕಾದಂಬರಿಕಾರರೂ ಹೌದು — ಅವರ ಮೊದಲ ಕಾದಂಬರಿಗಳು ಸಾಮಾಜಿಕ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತವೆ ಈಚೆಗೆ ಅವರ ಅನುಭವದ ಬಳಕೆವಾಗಿವಾಗಿದೆ, ಇದರಿಂದ ಪಾತ್ರ ಚಿತ್ರಣದ ಅಂದ ತುಂಬ ಹೆಚ್ಚಿದೆ. "ಚೋಮನ ದುಡಿ", "ಮರಳಿ ಮಣ್ಣಿಗೆ" ಕಾದಂಬರಿಗಳಷ್ಟು ಪರಿಣಾಮಕಾರಿಯಾದ ವಿಶ್ವ ಸಾಹಿತ್ಯಕ್ಕೆ ಕಾಣಿಕೆಯಾಗಬಲ್ಲ, ಕೃತಿ ಕನ್ನಡದಲ್ಲಿ ಬೇರೊಂದಿಲ್ಲ ತಮ್ಮ ಮನಸ್ಸನ್ನು ಅತ್ಯೀಯತೆಯಿಂದ, ಸಹೃದಯತೆಯಿಂದ ಅವರು ಚಿತ್ರಿಸುತ್ತಾರೆ, ಅನುಭವದ ರಸಸೇಚನೆಯಿಂದ ಅದರಲ್ಲಿ ಜೀವ ತುಂಬುತ್ತಾರೆ ಆದುದರಿಂದಲೇ ಉಳಿದ ಎಲ್ಲ ಕಾದಂಬರಿಕಾರರ ಕೃತಿಗಿಂತ ಲೂ ಕಾರಂತರ ಬರೆಹಗಳ ತೂಕ ಹೆಚ್ಚು

ಕಾರಂತರು ದರಿದ್ರ ಕನ್ನಡ ನಾಡಿನಲ್ಲಿ ಹುಟ್ಟಿದರು, ಹಿಗಾಗಿ ಅವರಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ ಅವರ ಕೃತಿಗಳ ಸೊಗಸು ಕರ್ನಾಟಕದ ದೊರೆಗಿನಜನರಿಗೆ ಉಣಬಲುದೊರಕಲಿಲ್ಲ ಕಾರಂತರ ಕೀರ್ತಿ ಕನ್ನಡದ ಸ್ಥಾನಮಾನವನ್ನು ಹೆಚ್ಚಿಸಿತು ಆದರೆ ಕಾರಂತರು ಕೀರ್ತಿಕಾಮಿಗಳಲ್ಲ ಅವರು ಈ ಸಲ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ, ನಿಜ ಹಾಗೆಂದು ಈ ಗೌರವದಿಂದ ಮೈಮರೆಯುವಷ್ಟು ಸಾಮಾನ್ಯ ವ್ಯಕ್ತಿ ಅವರಲ್ಲ

ಧನಾಢ್ಯರ ದುರಹಂಕಾರ--ದುರ್ವ್ಯಯ— ದುಸ್ಸಾಧನೆ—
ಮೊದಲಾದುವುಗಳನ್ನು ಚಿತ್ರಿಸುವ —
ಬಡವರ ಭೀಕರ ಪರಿಸ್ಥಿತಿಯನ್ನು—ನಿರಾವಸ್ಥೆಯನ್ನು—
ಹೃದ್ಯಾವಕವಾಗಿ ಪ್ರತಿಬಿಂಬಿಸುವ—

ನವೀನ ಸಾಮಾಜಿಕ ಕಾದಂಬರಿ—

ಜಮೀನ್ದಾರ

ಹಿಂದಿಯ ಮೂಲ ಲೇಖಕರು - ಪ್ರೊಫೆಸರ್ ಇಂದ್ರ, ವಿದ್ಯಾ ವಾಚಸ್ಪತಿ
ಅನುವಾದಕರು: ವಿದ್ವಾನ್ ಹೊಸಮನೆ ಗುಡ್ಡಪ್ಪ,
ರಾ ಭಾ. ವಿಶಾರದ (ಮದ್ರಾಸ್), ಎಚ್ ಟಿ ಸಿ (ಮುಂಬಯಿ)
ದನಿಕರೆನ್ನದೆ, ಬಡವರೆನ್ನದೆ ಓದಲೇಬೇಕಾದ ಜನತಾಸಾಹಿತ್ಯ.
ಬೆಲೆ - ೧ - ೮—೦. (ಟ ಖರ್ಚು ಬೇರೆ)
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ
ನವಭಾರತ ಪುಸ್ತಕ ಭಂಡಾರ, ಉಡುಪಿ- ಇವರಿಗೆ ಬರೆಯಿರಿ.

ಗವರ್ನರರ ರಾಜೀನಾಮೆ

ಹೀಗೆ ಮಾಡುವಾಗ, ಕೇಂದ್ರದ ಮಂತ್ರಿ ಮಂಡಳವನ್ನು ಪ್ರಧಾನಿಗಳು ವಿಚಾರಿಸಿಲ್ಲವೆಂದು ಹೇಳಲಾಗುತ್ತದೆ, ಅಲ್ಲದೆ, ಪೂರ್ವ ಬಂಗಾಲದ ಗವರ್ನರರೊಡನೆಯೂ ಚೆನ್ನಾಗಿ ವಿಚಾರಿಸಿಲ್ಲವೆಂದು ತಿಳಿದು ಬರುತ್ತದೆ. ತತ್ಪರಿಣಾಮವಾಗಿ ಗವರ್ನರರು "ಪ್ರಧಾನಿಗಳಿಗೆ ನನ್ನಲ್ಲಿ ವಿಶ್ವಾಸವಿದ್ದಂತೆ ತೋರುವುದಿಲ್ಲ" ಎಂಬ ನಪಮುಂದಿಟ್ಟು ರಾಜೀನಾಮೆ ಸಲ್ಲಿಸಿದ್ದಾರೆ.

ನೂನರ ವಿರೋಧ

ಹಕ್ಕರು ಇನ್ನು ಮುಂದೆ ರಾಷ್ಟ್ರಹಿತದ ಕಾರ್ಯಗಳಲ್ಲಿ ತಮ್ಮ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸುವುದಕ್ಕೆ ಮುಂದಾಗುವರೆಂದು ಹೇಳಲಾಗುತ್ತದೆ ಆದರೆ ಪೂರ್ವ ಬಂಗಾಲದಲ್ಲಿ ಅವರು ಹಿಂದೆ ಸಂಯುಕ್ತ ಮಂತ್ರಿ ಮಂಡಳ ರಚಿಸಿದ್ದರು, ಈ ಸಲ ಅವರ ಗುಂಪು ಮಾತ್ರ ಮಂತ್ರಿ ಮಂಡಳದಲ್ಲಿದೆ. ಆದುದರಿಂದ ಸ್ಥಿತಿಯ ನಿದ್ದೆಯನ್ನು ಮಾಡುವಂತಿಲ್ಲ. ರಾಷ್ಟ್ರಹಿತದತ್ತ ಹೊರಳಿದರೆ, ಪಂಜಾಬಿನ ಮುಖ್ಯ ಮಂತ್ರಿ ಸ್ಥಾನದಿಂದ ಪದಚ್ಯುತ ಹೊಂದಿದ ನೂನರಂಥ ಪ್ರಭಾವಿಗಳು ಮುಂಬರುವ ಘಟನಾ ಸಮಿತಿಯ ಚುನಾವಣೆಯ ವಿರುದ್ಧ ಬಲವಾದ ಟೀಕೆಯನ್ನು ಮಾಡುತ್ತಿದ್ದಾರೆ.

ಹಿಂದೀ ಆಯೋಗದ ನೇಮಕ

ಗೃಹ ಮಂತ್ರಿ ಪಂತರು ಕೆಲವು ದಿನಗಳ ಹಿಂದೆ ಸೂಚಿಸಿದ್ದ ಹಿಂದೀ ಆಯೋಗ (ಅರ್ಥಾತ್ ಸರಕಾರಿ ಭಾಷೆಯ ಮಂಡಳ)ದ ಸದಸ್ಯರ ನೇಮಕ ಈಗ ಮಾಡಲ್ಪಟ್ಟಿದೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಪಾವಟೆ, ಲೋಕಸಭೆಯ ಉಪಾಧ್ಯಕ್ಷ ಅಯ್ಯಂಗಾರ ಮುಂತಾದ ೨೦ ಸದಸ್ಯರುಳ್ಳ ಈ ಆಯೋಗಕ್ಕೆ ಶ್ರೀ ಬಿ ಜಿ ಖೇರರೇ ಅಧ್ಯಕ್ಷರು

ಸಂಸ್ಕೃತದ ಅಭ್ಯಾಸ

ಆಂದ್ರದಲ್ಲಿ ಎಲ್ಲ ಸೆಕೆಂಡರಿ ಶಾಲೆಗಳಲ್ಲೂ ಹಿಂದಿಯನ್ನು ಕಡ್ಡಾಯವಾಗಿ ಕಲಿಸಲಾಗುವುದು, ಅಲ್ಲದೆ ಸಂಸ್ಕೃತವನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ಹೇಳಿಕೊಡಲಾಗುವುದು ಎಂದು ಮುಖ್ಯಮಂತ್ರಿ ಗೋಪಾಲ ರೆಡ್ಡಿ ತಿಳಿಸಿದರು

ಶಿಕ್ಷಣದ ವೆಚ್ಚ

ಮದ್ರಾಸು ಸರಕಾರವು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೋಸ್ಕರ ೮೮ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಸಿದ್ಧಗೊಳಿಸಿದೆ ಇದರಲ್ಲಿ ೯ ಕೋಟಿ ರೂಪಾಯಿಗಳನ್ನು ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ ಕೊಡುವುದಕ್ಕೂ ಸುಮಾರು ೪ ಕೋಟಿಯಷ್ಟನ್ನು ಹೆಚ್ಚಿನ ಉಪಾಧ್ಯಾಯರ ತರಬೇತಿಗೂ ವ್ಯಯಿಸಲಾಗುತ್ತದೆ.

ಸ್ಟೇಟ್ ಬ್ಯಾಂಕ್

ಇದೇ ಜುಲೈ ೧ನೇ ತಾರೀಕಿನಿಂದ ಅಸ್ತಿತ್ವಕ್ಕೆ ಬರಲಿರುವ "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ"ದ ಕೇಂದ್ರ ಮಂಡಳಕ್ಕೆ ಹಿಂದೆ ಭಾರತದ ಅರ್ಥ ಸಚಿವರಾಗಿದ್ದ ಡಾ ಜಾನ್ ಮಥೈ ಅಧ್ಯಕ್ಷರಾಗಿ ನೇಮಕ ಹೊಂದಿದ್ದಾರೆ. ವೈಕುಂಠಲಾಲ ಮೆಹತರು ಮಂಡಳದ ಉಪಾಧ್ಯಕ್ಷರು

ಪರ್ವತಾರೋಹಿಗಳ ವಿಜಯ

ಹಿಮಾಲಯದಲ್ಲಿ ಇಷ್ಟರ ವರೆಗೆ ಹತ್ತಿರದಿದ್ದ ಅತಿ ಎತ್ತರದ (೨೮,೧೪೬ ಅಡಿ) ಶಿಖರ ಕಾಂಚನ ಗಂಗವನ್ನು ಬ್ರಿಟಿಸನ ತಂಡವೊಂದು ಯಶಸ್ವಿಯಾಗಿ ಆರೋಹಿಸಿತು. ಹಾಗೆಯೇ ಮಕಲು ಎಂಬ ಇನ್ನೊಂದು ದುರ್ಗಮ ಶಿಖರವನ್ನು ಫ್ರೆಂಚರ ತಂಡ ಹತ್ತಿತು. ಈ ತಂಡ "ಹಿಮಮಾನವ್ಯ"ನ ಹೆಜ್ಜೆಯ ಗುರುತುಗಳನ್ನು ಒಂದು ಮೈಲಿನಷ್ಟು ಉದ್ದಕ್ಕೆ ಕಂಡಿತೆಂದು ತಿಳಿದುಬರುತ್ತದೆ.

ಕೇಂದ್ರ ಸರಕಾರದ ವಿಶೇಷ ಖಾತೆಯ ಮಾನ್ಯಮಂತ್ರಿ ಡಾ| ಸಯ್ಯದ್ ಮಹಮದ್

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	8
4 ಕುಲಲವ	0	8
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	3	0
7 ಮುಂದಿನ ದೇವರು	0	4
8 ನೃಭಿಚಾರಿಣಿ ಯಾರು	1	4
9 ಹೆಂಡ್ತಿ ಗಂಡನಾದರೆ	0	4
10 ಪುರುಷ ಪಥ	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	1	0
13 ದೇಶಭಕ್ತ	1	4
14 ಪ್ರೇಮ ವಿಜಯ	1	4
15 ರಂಗಭೂಮಿ	0	10
16 ಸೇವಾಪಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾಶ	2	4
20 ಮೂರು ಪ್ರಹಸನಗಳು	1	4
21 ನಗೆ ನೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರ	ಳು 0	12
25 ಆಕಾಶ ಗಂಗೆ	2	8
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜಮೀನ್ದಾರ	1	8
33 ಬಾಳಿನ ಬೆಡಗು	1	4
34 ಲೋಪಾಮುದ್ರೆ	1	0
35 ಬೆಗರು	0	10
36 ನನ್ನ ಕಥೆಗಳು	0	10
37 ನಕ್ಕರೂ ನಗದಿರುವುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ
ಎಲ್ಲೆಡೆಯೂ ಸ್ವಾಕಿಸ್ಟರು ಬೇಕಾಗಿದ್ದಾರೆ
ಕೆರಿಯರ ಪ್ರಪಂಚ ಉಡುಪಿ
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಉಡುಪಿ

ಮಹಿಳಾ ಶಿಬಿರ:— ಭಾರತ ಸೇವಕ ಸಮಾಜದ ಕಡೆಯಿಂದ 21 ದಿವಸಗಳ ಪರ್ಯಂತ ನಡೆಸಲಾಗುವ ಮಹಿಳಾ ಶಿಬಿರವನ್ನು ಕಳದ ತಾ. 29ರಲ್ಲಿ ಶ್ರೀಮತಿ ಬ್ರಿಟೋರವರು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಉದ್ಘಾಟಿಸುತ್ತಾ, ಈ ಶಿಬಿರದಿಂದ ತರಬೇತುಹೊಂದಿ ಹೊರಹೋಗುವ ತರುಣಿಯರು ತಮ್ಮ ಭಾವೀ ಜೀವನದಲ್ಲಿ ನವಶುರುಹನ್ನು ಹೊಂದುವಂತಾಗಲೆಂದು ಹಾರೈಸಿದರು. ಸಮಾರಂಭದ ಅಧ್ಯಕ್ಷತೆವಹಿಸಿದ ಡಾ! ಟಿ. ಮಾಧವ ಸೈಗಳು ಮಾತನಾಡುತ್ತಾ, ಸರಕಾರವು ಈ ಶಿಬಿರದ ಬಗ್ಗೆ ಹೆಚ್ಚು ಮಾಡುವ ಹಣವು ಸಫಲವಾಗುವಂತೆ ತರುಣಿಯರು ಮನಸ್ಸಿನಲ್ಲಿಟ್ಟುಕೊಂಡು ತರಬೇತಿಯ ಪೂರ್ಣ ಅನುಭವವನ್ನು ಪಡೆದು ತಮ್ಮ ಜೀವನದಲ್ಲಿ ಹೊಸಬೆಳಕನ್ನು ಕಾಣುವಂತಾಗಬೇಕೆಂದರು.

ಆರಂಭದಲ್ಲಿ ಶಿಬಿರದ ಕನ್ವೀನರ್ ಶ್ರೀಮತಿ ಪ್ರೇಮಾ ಎ. ಪೈ ಅವರು ಶಿಬಿರದ ಗೊತ್ತುಗುರಿಗಳನ್ನು ವಿವರಿಸಿ 75 ಮಂದಿ ತರುಣಿಯರು ಜಿಲ್ಲೆಯ ಎಲ್ಲಾ ಭಾಗದಿಂದಲೂ ಬಂದಿರುವುದಾಗಿ ತಿಳಿಸಿ ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಟಿ. ಎ. ಪೈ, ಎಂ. ಎಲ್. ಎ; ಶ್ರೀಮತಿ ಆಚಾರ್ಯ, ಎ. ಜೆ. ಅಳ್ಳಿ, ಕೆ. ಲಿಂಗಪ್ಪಯ್ಯ, ಮಹಾಬಲ ಶೆಟ್ಟಿ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಶ್ರೀಮತಿ ಕಣ್ಣನ್ನರು ಧನ್ಯವಾದಗಳನ್ನರ್ಪಿಸಿದರು. ಶಿಬಿರದಲ್ಲಿ ದಿನಾಲೂ ಭಾಷಣಾದಿ ವಿವಿಧ ಕಾರ್ಯಕ್ರಮಗಳಿವೆ ಎಂದು ತಿಳಿಯಲಾಗುತ್ತದೆ.

ಡಾ! ಮಾಧವ ಸೈಗಳ ಆಯ್ಕೆ:— ಬೊಂಬಾಯಿ ಪ್ರಾಂತದಲ್ಲಿರುವ ಮೆಡಿಕಲ್ ಕಾಲೇಜುಗಳ ಪ್ರಾಧ್ಯಾಪಕರನ್ನು ನೇಮಿಸುವ ಬಗ್ಗೆ ಬೊಂಬಾಯಿ ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ಸ್ ಬೋರ್ಡಿಗೆ ಕರ್ನಾಟಕ ವಿಶ್ವವಿದ್ಯಾಲಯದ ಪರವಾಗಿ ಕರ್ನೂಲ್ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ! ಟಿ. ಮಾಧವ ಸೈಗಳು ಆರಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಎಮ್. ಜಿ. ಎಮ್. ಕಾಲೇಜಿನಲ್ಲಿ:— ಇಂಟರ್ ಮೀಡಿಯಟ್ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸೇಕಡಾ 70ರಷ್ಟು ಮಂದಿ ಪಾಸಾಗಿರುವರು 17ಮಂದಿ ಪ್ರಥಮಶ್ರೇಣಿಯಲ್ಲೂ 34 ಮಂದಿ ದ್ವಿತೀಯ ಶ್ರೇಣಿಯಲ್ಲೂ ಪಾಸಾಗಿರುವರು. ಅಲ್ಲದೆ 1ನೇ ಭಾಗದಲ್ಲಿ ಸೇಕಡಾ, 81ರಷ್ಟು 2ನೇ ಭಾಗದಲ್ಲಿ ಸೇಕಡಾ 95ರಷ್ಟು, 3ನೇ ಭಾಗದಲ್ಲಿ ಸೇಕಡಾ 74ರಷ್ಟು ಮಂದಿ ಉತ್ತೀರ್ಣರಾಗಿರುವರು.

ಕುಂದಾಪುರ— ಕಳದ ಇ. ಎಸ್. ಎಲ್. ಸಿ. ಪರೀಕ್ಷೆಗೆ ಕುಂದಾಪುರ ಬಿ. ಎಚ್. ಇ. ಶಾಲೆಯಿಂದ ಕುಳಿತ 42ರಲ್ಲಿ 11, ಕುಂದಾಪುರ ಹೆಮ್ಮಾಡಿ ಹೈಸ್ಕೂಲಿ ಎಚ್. ಇ. ಶಾಲೆಯ 8ರಲ್ಲಿ 6, ಸಂಗಮೇಶ್ವರ ಹೈ. ಎಚ್. ಇ. ಶಾಲೆಯ 24ರಲ್ಲಿ 14, ಉಪ್ಪುಂದ ಬಿ. ಎಚ್. ಇ. ಶಾಲೆಯ 48ರಲ್ಲಿ 19, ಶಾಸ್ತ್ರಿಗೋಡು ಬಿ. ಎಚ್. ಇ. ಶಾಲೆಯ 16ರಲ್ಲಿ 11, ಇಚ್ಲಂಪಾಡಿ ಎಚ್. ಇ. ಶಾಲೆಯ 14ರಲ್ಲಿ 10 ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

ಮಾಯಿಪಾಡಿ ಸರಕಾರೀ ಬುನಾದಿ ಶಾಲೆಯಿಂದ ಹಿರಿಯ ವಿಭಾಗದಲ್ಲಿ 38ರಲ್ಲಿ 30, ಕಿರಿಯ ವಿಭಾಗದಲ್ಲಿ 38ರಲ್ಲಿ 32 ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

ಎಡಪದವು- ಸ್ಥಳೀಯ ಬೋರ್ಡು ಹಾ! ಎ ಶಾಲಾ ಮಂದಿರದ ಪ್ರವೇಶೋತ್ಸವ ಮತ್ತು ಜಿತ್ತವರ ದಿನಾಚರಣೆಯು ಇದೇ ತಾ. 4ರಲ್ಲಿ ಪಿ. ಕೆ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ! ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಸಾರ್ಥಕವಾಗಿ ಜರಗಿತು.

ಅಂಬಲಪಾಡಿ- ಉಡುಪಿ ಕಲಾಸ್ಫೂರ್ತಿದಲ್ಲಿ ಅಂಬಲಪಾಡಿ ಶಾಲೆಯ ನೇತೃತ್ವದಲ್ಲಿ ಕಳದ ತಾ. 29ರಲ್ಲು ಶ್ರೀ. ಬನ್ನಂಜೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಜರಗಿತು. ಸ್ಫೂರ್ತಿದ ಕಾರ್ಯದರ್ಶಿ ಶ್ರೀ. ಎ. ವಾಸುದೇವ ಬಲ್ಲಾಳರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಶ್ರೀ. ಶ್ರೀಪ ಬಲ್ಲಾಳರು ಸ್ವಾಗತ ಮಾತು ಆಡಿದರು ಶ್ರೀ. ಶ್ರೀಪತಿ ಆಚಾರ್ಯರು ದಾಸರ ಪದಗಳನ್ನು ಹಾಡಿದರು. ಶ್ರೀ ಎನ್. ವ್ಯಾಕರಣ ಬಲ್ಲಾಳರು ‘ಹೊಸಗನ್ನಡದ ಕಾದಂಬರಿ ಕಾರರು’ ಎಂಬೀ ವಿಷಯದಲ್ಲಿ ವ್ಯಾಸಂಗಪೂರ್ಣವಾಗಿ ಉಪನ್ಯಾಸವಿತ್ತರು. ಶ್ರೀ ಕೆ. ರಂಗನಾಥ ಸುರಾಣಿಕರು ‘ಕಾದಂಬರಿಗಳ ಪ್ರಭಾವ’ ಎಂಬ ವಿಷಯದಲ್ಲಿ ಬರೆದು ತಂದ ಭಾಷಣವನ್ನೋದಿದರು. ಸಮಾರಂಭದ ಸಲುವಾಗಿ ಏರ್ಪಡಿಸಿದ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ಸಂದರ್ಭೋಚಿತ ಮಾತುಗಳನ್ನಾಡಿದರು ಶ್ರೀ ಎ. ವಾಸುದೇವ ಬಲ್ಲಾಳರ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಬಡಾನಿಡಿಯೂರು- ಸ್ಥಳೀಯ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಇದೇ ತಾ. 5ರಲ್ಲಿ ಶ್ರೀ ಕೆ. ವಿಶ್ವನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಮಾಧವರಾಯರು ಸ್ವಾಗತಭಾಷಣಮಾಡಿದ ಬಳಿಕ ಕಾರ್ಯದರ್ಶಿಯರು ಸಂಘದ ವರದಿಯನ್ನೋದಿದರು. ಶ್ರೀ ಬಿ. ಬಾಬುರಾಯರು ‘ಗದಾಯುದ್ಧ’ದ ಕೆಲವುಭಾಗಗಳನ್ನು ಅಯ್ಯುವಾಚನ ಮಾಡಿದರು. ವಕೀಲ್ ಶ್ರೀ ಪಂಕಪ್ಪ ಹೆಗ್ಡೆಯವರು ವ್ಯಾಸಭಾರತದ ಆಧಾರದಿಂದ ಅದರಲ್ಲಿರುವ ತತ್ವ ಮಾಹಾಂಸೆಯನ್ನು ಸಭಿಕರ ಮುಂದಿಟ್ಟರು. ಶ್ರೀ ಜಿ. ಶ್ರೀನಿವಾಸರಾಯರು ಕವಿತಾವಾಚನಮಾಡಿದರು. ಶ್ರೀ ಕೆ. ವಿಶ್ವಂಭರ ಉಪಾಧ್ಯಾಯರು ದಾಸ ಸಾಹಿತ್ಯದ ಕುರಿತು ಮಾತನಾಡಿದರು. ಶ್ರೀ ಬಿ. ಧನಾಜಿರಾಯರು ಜೈಮಿನಿ ಭಾರತದ ಕೆಲವಂಶವನ್ನೋದಿದರು ಶ್ರೀ ಶಂಕರ ಶೆಟ್ಟಿರು ಸಂಘದ ಧ್ಯೇಯಗಳನ್ನು ವಿವರಿಸಿ ಮಾತನಾಡಿದರು. ಶ್ರೀ ಕೃಷ್ಣರಾಯರು ಸಂಘದ ಜವಾಬ್ದಾರಿಯನ್ನು ವಿವರಿಸಿ ಮಾತನಾಡಿದರು. ಶ್ರೀ ಪೀತಾಂಬರ ಶೆಟ್ಟರು ಯಕ್ಷಗಾನದ ಕುರಿತು ಭಾಷಣವಿತ್ತರು. ನಂತರ ಅಧ್ಯಕ್ಷ ಭಾಷಣಾನಂತರ, ಯಕ್ಷಗಾನ ಕಾಲಕ್ಷೇಪ ನಡೆಯಿತು.

ಜಿಲ್ಲಾ ಬೋರ್ಡು ಸಭೆ:— ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಇದೇ ತಾ 15ನೇ ಬುಧವಾರ ಪೂರ್ವಾಹ್ನ 10 ಗಂಟೆಗೆ ಜಿಲ್ಲಾಬೋರ್ಡು ಹಾ! ಎ ಶಾಲೆಯಲ್ಲಿ ಜರಗುವುದಾಗಿ ಅಧ್ಯಕ್ಷರು ತಿಳಿಸುತ್ತಾರೆ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು—

ನಗೆ ನೋಟಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)

ಲೇಖಕರು: ಕೆ. ಪಿಟ್ಟಿಲ ಶೆಣೈ, ಬಿ. ಎ., ಎಲ್. ಟಿ.

(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)

ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.

ಬೆಲೆ: ೧—೪—೦ (ಟಿ. ಖರ್ಚು ಬೇರೆ)

ಕಿರಿಯರ ಪ್ರಪಂಚ ಉಡುಪಿ, ದ. ಕ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ,

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾಗಿದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ಸಂಕಾಂದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕಾಂತ ರೈ ವಿದ್ವಾನ್ ಇವರು ಬರೆದಿರುವ

ಪ್ರೌಢ ಶಾಲಾ ವ್ಯಾಕರಣ

ಮತ್ತು

ಛಂದೋಲಂಕಾರ ಸಾರ

ಎಂಬ ವ್ಯಾಕರಣ ಪುಸ್ತಕವು

ಹೈಸ್ಕೂಲಿನ IV, V, VIನೇ ಫಾರಮಿನ ವಿದ್ಯಾರ್ಥಿಗಳ ಪಠ್ಯಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಪುಟಗಳು: ೨೫೦ ಬೆಲೆ: ೧ ೧೨-೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಯ ಮುದ್ರಣಾಲಯ, ಮೂಡಬಿದಿರೆ. ದ. ಕ.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಪ್ರಯ: ದೊಡ್ಡಬಾಟ್ಲಿಗೆ ರೂ. ೨—೩—೦
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ಡಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮಂಗಳೂರು

ಆರು ವಿದ್ಯಾರ್ಥಿ ವೇತನಗಳು: ಮಂಗಳೂರು ಬಿ. ಇ. ಎಮ್. ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ನಿಧಿಯಿಂದ ಈ ಸಲ ದಮೊದಲ್ಗೊಂಡು, ಮಂಗಳೂರು ಬಿ. ಇ. ಎಮ್. ಹೈಸ್ಕೂಲಿನ ಆರು ಮಂದಿ ವಿದ್ಯಾರ್ಥಿಗಳಿಗೆ ಶಾಲಾ ಫೀ ಬಗ್ಗೆ ವಿದ್ಯಾರ್ಥಿ ವೇತನಗಳನ್ನು ಕೊಡಲು ನಿಶ್ಚಯಿಸಲಾಗಿದೆ. ನಾಲ್ಕನೇ ಫಾರ್ಮಿಗೆ ಎರಡು, ಐದನೇ ಫಾರ್ಮಿಗೆ ಎರಡು, ಆರನೇ ಫಾರ್ಮಿಗೆ ಎರಡು, ವಿದ್ಯಾರ್ಥಿ ವೇತನಗಳಲ್ಲದೆ ವರ್ಷಾವಧಿ ಪರೀಕ್ಷೆಬಗ್ಗೆ ಕಟ್ಟುವ ಸೊಬಲಗೂ, ಈ ನಿಧಿಯಿಂದ ಕೊಡಲ್ಪಡುವುವು. ವಿದ್ಯಾರ್ಥಿ ವೇತನಗಳನ್ನು ಕೊಡುವಾಗ ವಿದ್ಯಾರ್ಥಿಗಳ ಶಿಕ್ಷಣದ ಪ್ರಗತಿ ಇತ್ಯಾದಿಯನ್ನು ಬಡತನವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗುವುದು. ಆರ್ಜಿಗಳನ್ನು ಕೂಡಲೇ, "ಅಧ್ಯಕ್ಷ, ಬಿ. ಇ. ಎಮ್. ಹೈಸ್ಕೂಲು ಹಳೇವಿದ್ಯಾರ್ಥಿ ಸಂಘ, ಮಂಗಳೂರು," ಈ ವಿಳಾಸಕ್ಕೆ ಕಳಿಸಬೇಕಾಗಿ, ಅಧ್ಯಕ್ಷರಾದ ಡಾ| ಬಿ. ಆರ್. ಪೈಗೆಯವರು ತಿಳಿಸುತ್ತಾರೆ.

ಸತ್ಕಾರಕೂಟ:- ಸ್ಥಳೀಯ ಶ್ರೀ ಮಂಜುನಾಥ ಕೃಷ್ಣಾನೋಸಿತ ನಾಟಕ ಸಭೆಯ ಕಛೇರಿಯಿಂದ ತಾ. ೨೦ರಲ್ಲಿ ಸಂಘದ ಕಾರ್ಯಾಲಯದಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಸಂಗೀತ ಕಚೇರಿಯನ್ನು ಸಾಂಗಗೊಳಿಸಲು ಸಹಕರಿಸಿದವರಿಗೆ ಸತ್ಕಾರಕೂಟವೊಂದು ಶ್ರೀ ಎ. ಕಮಲಾಕ್ಷ ಪೈಯ ಅಧ್ಯಕ್ಷತೆಯಲ್ಲಿ ಜರಗಿತು.

ಅಂಚೆ ನೌಕರರ ಸಂಘದ ಪರಿಷತ್ತು:- ಅಖಿಲ ಭಾರತ ೩ನೇ ವರ್ಗದ ಅಂಚೆ ನೌಕರರ ಸಂಘದ ದ. ಕ. ಜಿಲ್ಲಾ ಶಾಖೆಯ ಪ್ರಥಮ ಜಿಲ್ಲಾ ಪರಿಷತ್ತು ತಾ. ೨೦ರಲ್ಲಿ ಸಂಜೆ ಶ್ರೀ ಕೆ. ಸದಾನಂದ ಹೆಗ್ಡೆ. ಎಂ. ಪಿ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಬಿ. ಗಂಗಾಧರ ಪಾಸರು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಕೆ. ಪಿ. ಆಚಾರ್ಯರು ಗತವರ್ಷದ ವರದಿಯನ್ನೋದಿದರು. ಶ್ರೀ ಎ. ಎಮ್. ಪ್ರಭುಗಳು ಸಂದೇಶವಾಚನಮಾಡಿದರು.

ಪ್ರೊಫೆಸರ್ ಸಿ. ಎ. ಸಾಲ್ಡಾಂಹಾರು ಪರಿಷತ್ತು ಉದ್ಘಾಟಿಸುತ್ತಾ, ಅಂಚೆ ನೌಕರರ ಹಲವು ಬೇಡಿಕೆಗಳ ಕಡೆಗೆ ಸರಕಾರವು ಇನ್ನೂ ಗಮನಕೊಡದಿದ್ದುದು ವಿಷಾದಕರವೆಂದರು. ಸಭಾಧ್ಯಕ್ಷತೆ ವಹಿಸಿದ ಶ್ರೀ ಕೆ. ಎಸ್. ಹೆಗ್ಡೆಯವರು ಮಾತನಾಡುತ್ತಾ, ಕೇಳಿಕೆ, ಬೇಡಿಕೆಗಳು ನ್ಯಾಯ ಸಮ್ಮತವಾಗಿದ್ದಲ್ಲಿ ಅವುಗಳಿಗೆ ಬೆಂಬಲ ಹಾಗೂ ಸಾಹಸ್ಯತೆಯೊರೆಯುವುದೆಂದರು. ಅಂಚೆ ನೌಕರರು ಸಾರ್ವಜನಿಕರ ಪ್ರೀತಿ ವಿಶ್ವಾಸಗಳನ್ನು ಗಳಿಸ ಬೇಕಾದ ಅವಶ್ಯಕತೆಯನ್ನು ಸೂಚಿಸಿದರು. ಡಾ/ ಕೆ. ನಾಗಪ್ಪ ಆಳ್ವ, ಡಾ/ ಕೆ. ಕೆ. ಹೆಗ್ಡೆ, ಶ್ರೀಗಳಾದ ಎಮ್. ಪೆಂಕಟ್ರಾಯ, ಪಿ. ಸದಾಶಿವರಾವ್, ಎಮ್. ಎಚ್. ಪಾಸುದೇವರಾವ್, ಮತ್ತು ಪೋಸ್ಟಲ್ ಸುಪರಿಂಟೆಂಡೆಂಟ್ ವಿ.ಪಿ. ನಾಯರ್ ಮೊದಲಾದವರು ಕಾಲೋಚಿತವಾದುದುಗಳನ್ನಾಡಿದರು.

ಹೊಸವರ್ಷಕ್ಕೆ ಶ್ರೀಗಳಾದ ಬಿ. ಗಂಗಾಧರದಾಸ್, ಅಧ್ಯಕ್ಷ; ಎ ಬಿ. ಶಂಕರರಾವ್ ಮತ್ತು ಕೆ. ಪತ್ತ ಭಟ್, ಉಪಾಧ್ಯಕ್ಷರು; ಕೆ. ಪಿ. ಆಚಾರ್, ಕಾರ್ಯದರ್ಶಿ; ಬಿ. ವಾಸುದೇವರಾವ್, ಕೋಶಾಧಿಕಾರಿ ಗಳಾಗಿಯೂ ಮತ್ತು 10 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರೂ, 11 ಮಂದಿ ಸಮೂಹ ಪ್ರತಿನಿಧಿಗಳೂ ಇರುವ ಕಾರ್ಯಕಾರಿ ಮಂಡಳಿ ರಚಿಸಲ್ಪಟ್ಟಿತು. ಕೊನೆಯಲ್ಲಿ ಶ್ರೀ ಕೆ. ಪಿ. ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಸಂತಾಪ ಸೂಚಕ ಸಭೆ-- ಪ್ರಸವಾನಂತ್ತು ಹಿಂದ್ ಮಜ್ದೂರ್ ಸಭೆಯ ನೇತೃತ್ವದಲ್ಲಿ ತಾ. ೧೮ಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎಮ್. ಎಸ್. ಡಿಮೊಕರರ ಅಧ್ಯಕ್ಷತೆಯಲ್ಲಿ ಜರಗಿ ದಿವಂಗತ ಶ್ರೀ ಎಸ್. ಎಮ್. ಜೋಶಿಯವರ ಆಕಾಲ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು. ಶ್ರೀಗಳಾದ ಬಾಲಪ್ಪ, ಡಿ. ಪೋಷನರಾವ್ ಮೊದಲಾದವರು ದಿವಂಗತರ ಗುಣಗಾನಮಾಡಿದರು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಭೆಯು ಕೊನೆಗೊಂಡಿತು.

ಶ್ರೀ ಬಿ. ಶ್ಯಾಮರಾಯ ಸೆಟ್ಟರು ವಿದ್ಯಾಕ್ಷೇತ್ರದಿಂದ ನಿವೃತ್ತರಾದರು- ಕಾರ್ಕಳ ಬೋರ್ಡು ಹೈಸ್ಕೂಲಿನಲ್ಲಿ ಸಮರ್ಥ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಬಿ. ಶ್ಯಾಮರಾಯ ಸೆಟ್ಟಿ ಬಿ. ಎ. ಎಲ್. ಟಿ; ಇವರು ಇದೀಗ ಈ ತಿಂಗಳಿಂದ ವಿದ್ಯಾಕ್ಷೇತ್ರದಿಂದ ನಿವೃತ್ತರಾದರು. ಶ್ರೀ ಸೆಟ್ಟರು ಕುಂದಾಪುರ, ಪುತ್ತೂರು ಹೈಸ್ಕೂಲುಗಳಲ್ಲಿಯೂ ಪೆಡ್ಡಾಸ್ತರರಾಗಿದ್ದು ಕೊಂಡು ಅಲ್ಲಲ್ಲಿಯ ಜನತೆಯ ಹಾಗೂ ವಿದ್ಯಾರ್ಥಿಗಳ ಪ್ರೀತಿಸಂಪಾದಿಸಿದ್ದರು. ದ. ಕ. ಜಿಲ್ಲೆಯ ಬೋರ್ಡು ಹೈಸ್ಕೂಲುಗಳ ಗಣನೀಯ ಮುಖ್ಯೋಪಾಧ್ಯಾಯರಲ್ಲಿ ಶ್ರೀ ಸೆಟ್ಟರು ಪ್ರಥಮ ಸಾಲಿಗೆ ಸೇರಿದವರೆನ್ನಬಹುದು.

ಕುಂಜಾಲು- ಸ್ಥಳೀಯ ವಿಶ್ವಕೀರ್ತಿ ಹಾಯರ್ ಎಲಿಮೆಂಟರಿ ಶಾಲೆಯ ಪ್ರಾರಂಭೋತ್ಸವವು ಇದೇ ತಾ. 1ರಲ್ಲಿ ಶ್ರೀ ಐ. ಸದಾಶಿವ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎ. ಕೆ. ಭಟ್ಟರು ಶಾಲೆಯ ಪ್ರಗತಿಪರ ವರದಿಯನ್ನೋದಿದರು. ಮೆನೇಜರ್ ಡಾ| ಕೆ. ಕೇಶವ ಕಲ್ಕೂರರು ಪಂದನೆಗಳನ್ನರ್ಪಿಸಿದರು. ಮಕ್ಕಳಿಗೆ ತಿಂಡಿ ಹಂಚೋಣವಾಗಿ, ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಪೆರ್ಡಾಲ- ತಾ. 31-5-1955ರಲ್ಲಿ ಪೆರ್ಡಾಲದ ಪ್ರಾಥಮಿಕ ಶಾಲಾಕಟ್ಟೋಣದ ಮತ್ತು ಸಂತಾರಿ ಅಸ್ತ್ರೆಯ ಸಹಾಯಾರ್ಥವಾಗಿ ಶ್ರೀ ಕೆ. ಸದಾನಂದ ಹೆಗ್ಡೆ, ಎಂ. ಪಿ. ಇವರ ಅಧ್ಯಕ್ಷತೆಯಲ್ಲಿ ಶ್ರೀದಾಮಪಟ್ಟಾಭಿಷೇಕ ಮತ್ತು ವಾಲಿಸಂಹಾರ ಎಂಬ ಯಕ್ಷಗಾನಕೂಟವು ಜರಗಿತು. ಶ್ರೀಗಳಾದ ಕವಿ ಭೂಷಣ ವೆಂಕಪ್ಪ ಶೆಟ್ಟಿ, ಪ್ರೊಫೆಸರ್ ಯಂ. ಆರ್. ಶಾಸ್ತ್ರಿಗಳು, ಶೇಣಿ ಗೋಪಾಲಕೃಷ್ಣ ಭಟ್ಟ, ಯೆಸ್. ಕೃಷ್ಣಭಟ್ಟ; ಕೆ. ಕಾಂತಕ್ಕೈಗಳು, ಪುಂಡೂರು ಪುಣಚಿತ್ತಾಯರು, ಕರಿಕಾಡು ವಿಷ್ಣು ಮಾಸ್ತರರು, ಶ್ರೀ ನಿಕ್ರಾಜೆ ಜಗನ್ನಾಥ ಸೆಟ್ಟಿ, ಕರಿಕಳ ಈಶ್ವರಪ್ಪಯ್ಯನವರು, ಮೊದಲಾದವರು ಇದರಲ್ಲಿ ಭಾಗವಹಿಸಿದ್ದರು. ಶಾಲೆ, ಔಷಧಾಲಯ ಮೊದಲಾದುವುಗಳ ಸಹಾಯಕ್ಕಾಗಿ ಮತ್ತು ನೀತಿಯನ್ನು ಬೋಧಿಸುವ ಇಂತಹ ಕಲೆಗಳ ಪ್ರೋತ್ಸಾಹಕ್ಕಾಗಿ ದುಡಿಯುವುದು ಸ್ವತಂತ್ರವಾದ ನಮ್ಮ ದೇಶಕ್ಕೆ ಅಗತ್ಯವಿದೆಯೆಂದು ಅಧ್ಯಕ್ಷರು ಮಾತಾಡಿ, ಸ್ವಾತಂತ್ರ್ಯಾನಂತರ ದೇಶದಲ್ಲಿ ಜಿಲ್ಲೆಯಲ್ಲಿ ಆದ ಪ್ರಗತಿ, ಇನ್ನೂ ಸಾಧಿಸಬೇಕಾದ ಕಾರ್ಯಗಳು ಮೊದಲಾದುವುಗಳ ಕುರಿತು ಮಾತಾಡಿದರು. ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ಎಲ್ಲರನ್ನು ಸ್ವಾಗತಿಸಿ ಪರಿಚಯಭಾಷಣಮಾಡಿದರು. ಸಂಘದ ಕಾರ್ಯದರ್ಶಿಗಳು ಧನ್ಯವಾದಾರ್ಪಣೆ ಮಾಡಿದರು.

ಬೊಂಬಾಯಿ

ಬಂಟರ ಯಾನೆ ನಾಡರ ಸಂಘದ ವಾರ್ಷಿಕ ಸ್ನೇಹಕೂಟ ಸಮಾರಂಭವು ಕಳೆದ ತಾ. 1ರಲ್ಲಿ ಶಿವಾಜಿ ಪಾರ್ಕಿನ ಮೈದಾನದಲ್ಲಿರುವ 'ದಿ ಬೋಂಬೆ ಸ್ಕೇಟ್ ಸ್ಕೂಟ್ ಎಂಡ್ ಗ್ಯಾಂಡ್ಸ್' ಹಾಲಿನಲ್ಲಿ ಡಾ| ಪಡುಬಿದ್ರೆ ಜಗನ್ನಾಥ ಸೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಕ್ಕೆ ಹೆಚ್ಚಿನ ಸದಸ್ಯರನ್ನು ಮಾಡಿದ ಶ್ರೀಗಳಾದ ಮೂಲ್ಕಿ ಗಂಗಯ್ಯ ಸೆಟ್ಟಿಗೂ ಮದ್ದಂಡಯ್ಯ ಸೆಟ್ಟಿಗೂ ಮತ್ತು ರಘು ಎನ್. ಸೆಟ್ಟಿಗೂ ಸಂಘದ ಕಡೆಯಿಂದ ಚಿನ್ನದ ಪಾರಿತೋಷಗಳು ಕೊಡಲ್ಪಟ್ಟವು. ಸಂಘಕ್ಕೆ ಒಂದು ಸಾವಿರ ಸಾಮಾನ್ಯ ಸದಸ್ಯರನ್ನು ಮಾಡಿದವರಿಗೆ ಒಂದು ಪವನು ಇನಾಮನ್ನು ಕೊಡುವುದಾಗಿ ವಾಗ್ದಾನವಿತ್ತ ಶ್ರೀ ಕಾಪು ಕಾಂತಪ್ಪ ಎಂ. ಸೆಟ್ಟಿರ ಒಂದು ಪವನು ಶ್ರೀ ಮೂಲ್ಕಿ ಗಂಗಯ್ಯ ಸೆಟ್ಟಿಗೆ ಕೊಡಲ್ಪಟ್ಟದ್ದನ್ನು ಅವರು ಸಂಘಕ್ಕೆ ಕೊಟ್ಟರು. ಅದನ್ನು ಏಲಂ ಮಾಡಲಾಗಿ ಶ್ರೀ ಎನ್. ಮಹಾಬಲ ಸೆಟ್ಟಿರು ರೂಪಾಯಿ 201/- ಕ್ಕೆ ವಹಿಸಿಕೊಂಡರು. ಈ ಹಣವನ್ನು ಸಂಘದ ಕಟ್ಟೋಣ ನಿಧಿಗೆ ಜಮಾಮಾಡಲಾಯಿತು. ಶ್ರೀಗಳಾದ ಆತ್ಮಾರಾಮ ಭೋಜ ಸೆಟ್ಟಿ ರೂ 201, ಎನ್. ಮಹಾಬಲ ಸೆಟ್ಟಿ ರೂ 201, ಸಯಾರ್ ರಾಜು ಸೆಟ್ಟಿ ರೂ 105, ಬೈಲೂರು ಗೋಪಾಲ ಸೆಟ್ಟಿ ರೂ.101, ನಾರಾಯಣನಾಯಕ್ ರೂ 101ನ್ನು ಸಂಘದ ಕಟ್ಟೋಣ ನಿಧಿಗೆ ಸಹಾಯನೀಯುವುದಾಗಿ ಸಭೆಯಲ್ಲಿ ಬಾಹೀರುಮಾಡಿದರು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ವಾರ್ಷಿಕ ಮಹಾಸಭೆ- ಬಂಟರಯಾನೆ ನಾಡವರ ಸಂಘದ ವಾರ್ಷಿಕಮಹಾಸಭೆಯು ಕಳೆದ ತಾ. 8ರಲ್ಲಿ ಬಜಾರ್ ಗೇಟ್ ಹೈಸ್ಕೂಲ್ ಹಾಲಿನಲ್ಲಿ ಜರಗಿತು. ಗೌರವ ಕಾರ್ಯದರ್ಶಿ ಶ್ರೀ ಕಟಪಾಡಿ ಮುದ್ದಣ್ಣ ಸೆಟ್ಟಿರು ಗತವರ್ಷದ ವರದಿಯನ್ನೋದಿದರು. ಹೊಸವರ್ಷದ ಆಡಳಿತ ಮಂಡಳಿಗೆ ಶ್ರೀಗಳಾದ ಪಾಂಗಾಳ ಮಹಾಬಲ ಸೆಟ್ಟಿ, ಅಧ್ಯಕ್ಷ; ಕಾಪು ಸುಬ್ರಯ್ಯ ಕೆ. ಸೆಟ್ಟಿ, ಉಪಾಧ್ಯಕ್ಷ; ಮೂಲ್ಕಿ ಗಂಗಯ್ಯ ಸೆಟ್ಟಿ, ಗೌರವ ಕಾರ್ಯದರ್ಶಿ; ಕೊಚಿಕಳಿ ಗೋಪಾಲ ಸೆಟ್ಟಿ, ಗೌ| ಉಪಕಾರ್ಯದರ್ಶಿ; ಎನ್ಮಾಳು ರಘು ಸೆಟ್ಟಿ, ಗೌ| ಕೋಶಾಧಿಕಾರಿ; ಕೆ. ಆನಂದ ಹೆಗ್ಡೆ ಗೌ| ಉಪಕೋಶಾಧಿಕಾರಿ ಮತ್ತು 26 ಮಂದಿ ಇತರ ಸದಸ್ಯರು ಆರಿಸಲ್ಪಟ್ಟರು.

ಸ್ಕೂಲ್ ಕಮಿಟಿಗೆ ಶ್ರೀಗಳಾದ ಸೂದ ಸಂಜೀವ ಸೆಟ್ಟಿ, ಚೆರ್‌ಮೆನ್; ರಘುನಾಥ ಎಮ್. ಸೆಟ್ಟಿ, ಗೌ| ಕಾರ್ಯದರ್ಶಿ; ರಘು ಎನ್. ಸೆಟ್ಟಿ, ಗೌ| ಕೋಶಾಧಿಕಾರಿ; ರಾಮ ಎಚ್. ಸೆಟ್ಟಿ, ಗೌ| ವಾಚನಾಲಯಾಧಿಕಾರಿ; ಮತ್ತು ಇತರ 8 ಮಂದಿ ಸದಸ್ಯರು ಆರಿಸಲ್ಪಟ್ಟರು.

ಪ್ರಕಟಣೆ

ಭಾರತ ಇಂಡಸ್ಟ್ರಿಯಲ್ ಎಂಡ್ ಕೇನಿಂಗ್ ಕಂಪೆನಿ ಲಿಮಿಟೆಡ್, ಕಾಪು, ಇದರ ಮೆನೇಜಿಂಗ್ ಏಜಂಟ್ ವಿವೇಕಾನಂದ ಕಮರ್ಶಿಯಲ್ ಕೋರ್ಪರೇಶನ್ ಲಿಮಿಟೆಡ್ ಕಾಪು ಇವರು ಶ್ರೀ ನಿಂಜೂರು ಶ್ಯಾಮ ಸೆಟ್ಟಿ, ಸೆಟ್ಟಿಸ್ ಕಂಪೌಂಡು, ಉಡುಪಿ ಇವರ ಹೆಸರಲ್ಲಿರುವ ಕಂಪೆನಿಯ 51ರಿಂದ 100ರ ವರೆಗಿನ 50 ಸಾಮಾನ್ಯ ಶೇರುಗಳನ್ನು ಶ್ರೀ ಕಾಪು ಸಂಜೀವ ಸೆಟ್ಟಿ, ಕೆನರಾ ನರ್ಸರಿ, ಸಲ್ವಾಡಿ ಪೋಸ್ಟು, ಕುಂದಾಪುರ ತಾಲೂಕು, ದ. ಕ. ಜಿಲ್ಲಾ, ಅವರ ಹೆಸರಿಗೆ ವರ್ಗಾಯಿಸುವರೆ ಕೇಂದ್ರ ಸರಕಾರದ ಮಂಜೂರಾತಿ ಬಗ್ಗೆ ಅರ್ಜಿಹಾಕಿರುತ್ತಾರೆ ಎಂಬುದನ್ನು ಈ ಮೂಲಕ ಪ್ರಕಟಿಸೋಣವಾಗಿದೆ.

ANNOUNCEMENT

It is hereby announced that Vivekananda Commercial Corporation Ltd., Kaup, the Managing Agent of Bharath Industrial & Canning Company Ltd., Kaup, has applied to the Central Government for their approval for the transfer of 50 (Fifty) Ordinary Shares No.s 51 to 100, standing at present in the name of Sri. Ninjoor Shama Shetty, Shetty's Compound, Udipi to Sri. Kaup Sanjiva Shetty, Canara Nursery, P. O Salvadi, Coondapur Taluk, S. Kanara.

ಹೊಸ ಪುಸ್ತಕ

ಶ್ರೀಮತಿ ಕೆ. ವೇಣಕ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆಸೋಟಗಳು---

ಸಾವಿರ ನಾಲಿಗೆಯವನು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾರಾ ಕದ್ದು ಪೋಣಿಸಿದ ಸಾಮಿತಿ ಇವರ ಚಿತ್ರವನ್ನೂ ಅಕ್ಕಸಕ್ಕದ ಮನೆಯವರ ಕಾಟ ಕೂಟದ ಸುರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕದ್ದು ಬರೇ ಪಧದಕ್ಷಿಣೆ ಇವರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ:ಹಾಗಾದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪೆಸ್, ಉಡುಪಿ,

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ನೈಪುಣ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮಲಾಡ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡಕಪ್ಪಿದ ಮತ್ತು ನಿಂತುಹೋದ ಮುಟ್ಟು
ಪೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾವಕವೂ ಉಂಟಾಗದೆ ತೀವ್ರ ಗುಣಿಯೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ಸಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ಟರು: ಶಯಾಕಂಪೆನಿ, ಮಂಗಳೂರು

ಭಾರತೀಯರ ಪಾಲಿನ ಸಂದರ್ಶನ

ಕಾಶ್ಮೀರವೇ ನನ್ನ ಭೂಸ್ವರ್ಗ

ನಮ್ಮಲ್ಲಿ ಈಗಾಗಲೇ ಮಳೆಗಾಲ ಪ್ರಾರಂಭವಾಗಿದೆ. ಜೂನಿನ ಮಧ್ಯದಲ್ಲಿ ಯವಾಗಲೂ ಬೀಳುವ ಮಳೆ ಈ ಸಲ ಮೂರುವಾರ ಮೊದಲೇ ಸುರಿದು, ನಮ್ಮ ವಸಂತಮಾಸದ ಅವಧಿಯನ್ನು ತಗ್ಗಿಸಿದೆ. ಮೊದಲೆ, ಸೋಜಿನ ಪಯಣ ಮುಂತಾದುವೆಲ್ಲವೂ ಮಳೆರಾಯನ ಸಿಟ್ಟಿನಿಂದ ತಮ್ಮ ಆಕರ್ಷಣೆಯನ್ನು ಕಳೆದುಕೊಂಡು, ಜನರಿಗೆ ಬೇಸರ ಬರಿಸಿದೆ.

ಒಟ್ಟಿನಲ್ಲಿ, ವಸಂತ ಋತುವಿನ ಉಳ್ಳು ಉಲ್ಲಾಸ ಸಡಗರಕಾಲ ಇರಬೇಕಾದ ಪ್ರದೇಶವೊಂದಕ್ಕೆ ಹೋಗುವ ಮನಸ್ಸು ನಮಗಾದೀತೆಲ್ಲಿಂದ? ದೀಪಾವಳಿಯ ಸಂದರ್ಶನದ ವರ್ಣನೆ ಕೇಳಿದ ಭಾರತೀಯರ ಪಾಲಿಗೆ ಕಾಶ್ಮೀರವೇ ಉಲ್ಲಾಸ ನೀಡುವ, ಸಂದರ್ಶಕರಿಗೆ ಆಕ್ಷರೆಯ ಸ್ವಾಗತವನ್ನು ಬಯಸುವ ರಾಜ್ಯ. ಅಲ್ಲಿ ಮಾರ್ಚಿಯಿಂದ ಮೇ ವರೆಗೆ ವಸಂತಾಗಮನದ ಸರ್ವಕಾಲ, ಮತ್ತು ಮೇ ಯಿಂದ ಆಗೋಸ್ತು ತಿಂಗಳ ವರೆಗೆ ವಸಂತರಾಜನ ಯೌವನದ ವೈಭವ ಕಂಡುಬರುತ್ತದೆ. ಆ ಪ್ರದೇಶದ ದರ್ಶನದ ತಿಂಗಳ ಜರಗೆ ಅಲ್ಲಿ ಸೊಗಸಿನ ಪ್ರವಾಸ ಕೈಗೊಳ್ಳುವುದು ಸಾಧ್ಯ.

ಇವರು ಎಲ್ಲರೂ ಹಾಲಿಗೂ ಸುಂದರ ಮುಖ ಕೆಂಪು ಮತ್ತು ಯೋಗ್ಯ ಅಂಗ ಸೌಷ್ಠವಗಳನ್ನು ಕರುಣಿಸಿಲ್ಲವೆಂಬುದು ನಿಜ, ಆದರೂ ತನ್ಮಾತ ರುಗ್ಮಿಣಿ ಸಿರಿಯಲ್ಲಿ ಎಲ್ಲರಲ್ಲೂ ರೂಪಲಾವಣ್ಯಗಳ ಕಳೆ ತುಂಬುತ್ತದೆಯೆನ್ನೇ! ನಿಸರ್ಗ ಸೌಂದರ್ಯ ಇಷ್ಟು ಪ್ರಭಾವಶಾಲಿಯಾಗಿರುವಾಗ, ನಿಜಕ್ಕೂ ಸುಂದರೆಯರು ದೇವರು ತಮ್ಮ ಆಕರ್ಷಣ ಮತ್ತು ಬಡಗು ಬಿನ್ನಾಣಗಳಿಂದ ಎಲ್ಲರನ್ನೂ ತನ್ನ ಕೆಡೆಗೆ ಸಳೆದುಕೊಳ್ಳುವುದೇನು ದೊಡ್ಡದು. ಕಾಶ್ಮೀರದ ಕಣಿವೆ ಸಹಜ ಸೌಂದರ್ಯದಿಂದ ಕೂಗಿದೆ; ಪರಾಪರಣ ಸುಂದರಿಗೆ ಸಿಂಗಾರ ಮಾಡಿದಂತೆ ವಸಂತ ರಾಜನು ಕಾಶ್ಮೀರದ ಚೆಲುವನ್ನು ಪೆಚ್ಚಿಸುತ್ತಾನೆ, ಎಂದಿಟ್ಟು ಕೊಳ್ಳೋಣ.

ಕೆಲವು ವರ್ಷಗಳ ಹಿಂದಲವರ ಕಾಶ್ಮೀರವು ಶ್ರೀಮಂತ ರಸಿಕರ ಪಾಲಿನ ರಸಗಂಟಿ ವಾಗಿತ್ತೇ ಹೊರತು ಸಾಮಾನ್ಯರಿಗೆ ಅಲ್ಲಿ ಪ್ರಯಾಣಿಸುವ ಭಾಗ್ಯ ದಕ್ಕುತ್ತಿರಲಿಲ್ಲ. ಆದರೆ ಇಂದು ಕಾಶ್ಮೀರದ ಬೆಟ್ಟಾಗಿಲು ಎಲ್ಲ ವರ್ಗದ ಜನರಿಗೂ ತೆರೆದಿದೆ. ಪರಾಣಕೋಟೆಯಿಂದ ೨೩೬ ಮೈಲು ದೂರ ಶ್ರೀನಗರಕ್ಕೆ ಹೋದರೆ, ಅಲ್ಲಿಂದ ಕಾಶ್ಮೀರದ ಯಾವ ಮೂಲೆಯನ್ನೂ ಸೇರಲು ಉತ್ತಮ ಸಾರ್ಕರ್ಯಗಳುಂಟು. ರಾಜ್ಯದ ಮುಖ್ಯ ಪಟ್ಟಣವಾದ ಶ್ರೀನಗರಕ್ಕೆ ಪ್ರಯಾಣಿಸುವಾಗಲೂ ಮೋಟಕವಾದು ಎಲ್ಲರ ಪಾಡಿ ಅನುಕೂಲತೆಗೂ ಒಪ್ಪುವ ವ್ಯವಸ್ಥೆಗಳಿರುವುದರಿಂದ ಎಷ್ಟಕ್ಕೂ ಬೇಸರ ವಾಗುವುದಿಲ್ಲ.

ಕಾಶ್ಮೀರವು ಪ್ರವಾಸಪ್ರಿಯರಿಗೆಷ್ಟೇ ಹೇಳಿದ ಪ್ರದೇಶವಲ್ಲ—ನಿಸರ್ಗದ ಶೋಭೆಕಾಣಬಯಸುವವರಿಗೆ ಇಲ್ಲಿ ಮನೋಹರವಾದ ಸರೋವರಗಳೂ ರಮಣೀಯವಾದ ಹೂದೋಟಗಳೂ ಇವೆ, ಸಾಹಸಿಗಳಿಗೆ ಕರೆಕೊಡುವ ಪರ್ವತಪ್ರದೇಶಗಳಿವೆ, ಆಟಗಾರರಿಗೆ ಸ್ವಾದಾಸುಗಳಿವೆ ಈಜುಗಾರರಿಗೆ ಸಾಹಸ ಕೊಳಗಳಿವೆ, ವಿಶ್ರಾಂತಿ ಬಯಸುವವರಿಗೆ ಉತ್ತಮ ಹವೆಯುಳ್ಳ ಆರೋಗ್ಯಧಾಮವಿದೆ, ತಂಪಾದ ನಿವಾಸ ಕಾಶ್ಮೀರದ ಬನದ ಹಳ್ಳಿಯಲ್ಲಾ ಸಿಗುತ್ತದೆ. ನಾಲ್ಕಾ ಪ್ರದೇಶಗಳನ್ನು ಶೈಗೊಳ್ಳಬಹುದು, ನಡೆದು ಹೆಜ್ಜೆಯಿಟ್ಟಗಳನ್ನು ಹತ್ತಿ ಇಳಿಯಬಹುದು, ಕುದುರೆ ಮುಂತಾದ ಪ್ರಾಣಿಗಳ ಬೆನ್ನ ಮೇಲೆ ಕುಳಿತು ಸವಾರಿಮಾಡಲೂ ಬರುವುದು.

ಅದುದರಿಂದ ಕಾಶ್ಮೀರದ ಪ್ರವಾಸವು ಪ್ರತಿಯೊಬ್ಬರೂ ಜೀವಮಾನದಲ್ಲಿ ಒಂದು ಸಲವಾದರೂ ಕೈಗೊಳ್ಳ ಬೇಕಾದ ವಿಷಯ ಇಷ್ಟಿಲಿಯ "ಸಕಲೈಶ್ವರ್ಯ ನೀಡಿದೆ ಸಾಯಬಾರದು" ಎಂದು ಪ್ರಾಚೀನ ಹೇಳಿಕೆಗಳ್ಳಿ ಗಾದೆ ಮಾತೊಂದಿದೆ, ಒಬ್ಬ ಭಾರತೀಯರಿಗೆ ಕಾಶ್ಮೀರ ಪ್ರವಾಸವು ಕಾಶೀಯಾತ್ರೆಯಷ್ಟೇ ಅನಿವಾರ್ಯವೆಂದ ಹಾಗೆ ಪ್ರಯಾಣ ಕೈಗೆಂಡು ಒಂದೆ ವರ ಹುಂಡಿತವಾದ ಅಭಿಪ್ರಾಯ ಈ ಪ್ರಯಾಣವನ್ನು ಬೇಗನೇ ಮುಗಿಸಬಹುದು, ಸಾರಿಗೆ ಸಂಪರ್ಕದ ವ್ಯವಸ್ಥೆ ಅಚ್ಚುಕಟ್ಟು ಎಷ್ಟೇ ಅಭಿರುಚಿದವರನ್ನೂ ತೃಪ್ತಿಪಡಿಸುತ್ತದೆ.

ಶ್ರೀನಗರವು ಜೀಲಂ ನದಿಯ ಇಕ್ಕೆಡೆಯ ಪ್ರದೇಶದಲ್ಲಿ ಸುಂದರವಾದ ಹಲವು ಕೆರೆಗಳು ನಗರದ ಹಂದುಗಳನ್ನು ನದಿಯ ಮೇಲಿಂದ ಹೊರಿಸುತ್ತವೆ. ನದಿಯಲ್ಲಿ ಕಾಶ್ಮೀರಕ್ಕೆ ವಿಶಿಷ್ಟವಾದ ದೋಣಿಯ ಮನೆಗಳು ಸಹಸ್ರ ಸಂಖ್ಯೆಯಲ್ಲಿ ಹಿಡಿಯಾಡುತ್ತವೆ. ಪ್ರವಾಸಿಕರು ಶಿಕ್ಷಾರಾ ಮಾದರಿಯ ದೋಣಿಗಳನ್ನು ಬಾಡಿಗೆಗೆ ಹಿಡಿದು ಕೆಲವು ದೂರದ ವರೆಗೆ ಪ್ರಯಾಣ ಮಾಡುತ್ತಾ ದೆಸೆಗಳ, ಅವುಗಳಾಯ ರಮ್ಯ ಪ್ರಾಕೃತಿಕ ದೃಶ್ಯಗಳನ್ನು ನೋಡಿ ಬರಬಲ್ಲರು. ಪ್ರತಿ ತುಂಬಿದ ಹೊಲಗದ್ದೆಗಳು ಅವರ ಕಣ್ಣಾಸೆಗಳನ್ನು ಆಗ ತಣಿಸುತ್ತವೆ. ಎರಡು ಮೂರು ದಿನಗಳ ಪ್ರಯಾಣದ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದರೆ, ಹೋಂಗಾ ಮಾದರಿಯ ದೋಣಿಯನ್ನು ಒಡಿಗೆಗೆ ಹಿಡಿಯಬೇಕು. ಒಳ್ಳೆಯದು. ಇದು ಅದುಗೆ, ಸ್ನಾನ ಮುಂತಾದುವಕ್ಕೆ ಅನುಕೂಲತೆಯಿರುವ ತೇಲುವ ಮನೆ.

ಮೊಗಲ ಅರಸರು ಕಾಶ್ಮೀರದ ಸೌಂದರ್ಯಕ್ಕೆ ಬಹಳವಾಗಿ ಮನ ಸೋತಿದ್ದರು ನಿರಾತ ಬಾಗ್ ಮತ್ತು ಶಾಲಿಮಾರ್ ಎಂಬ ದೊಡ್ಡ ಹೂದೋಟಗಳು ಅವರ ಕಲಾಪ್ರಿಯತೆಗೆ ಈಗಲೂ ಸಾಕ್ಷಿ ಹೇಳುತ್ತವೆ. ಇಲ್ಲಿ ಅರಳಿದ ಪುಷ್ಪಗಳಿಲ್ಲ, ಕಂದು ಬರದ ಬಣ್ಣಗಳಿಲ್ಲ, ದೊಡ್ಡ ಹೂಟದ ರಮಣೀಯತೆಯ ಅನುಭವವನ್ನು ಇಲ್ಲಿಯದ್ದು ಹತ್ತಿರದಲ್ಲಿಯೂ ವಿಶದವಾಗಿಯೂ ನಾವು ಬೆರಲ್ಲಾ ಮಾಡಿಕೊಳ್ಳಬಹುದೆಂದು ಭಾಸವಾಗುತ್ತದೆ. ಈ ಹೂದೋಟಗಳಲ್ಲಿ ಗಿಡಗಳ ಬೆಳ್ಳ ಬೆಳ್ಳಿಯ ಬಟ್ಟೆಗಳು, ಹಸಿರಿನಿಂದ ಕೇಳ ಸಕ್ತಿ ಸಂಕುಲದ ಗುಂಪು, ಕಲ್ಲಿದುರಿ ಬಣ್ಣದ ಬೋಳೆ ಇವುಗಳ ಸಂದರ್ಶಕರನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತವೆ.

ಶಾಲಿಮಾರಿನ ತೋಟದಿಂದ ಸಲ್ಪ ದೂರದಲ್ಲಿ ಸರ್ವತಕಗಳ ಪಕ್ಕಂತದಲ್ಲಿ ಒಂದು ಸರೋವರ ಕಂಗೊಳಿಸುತ್ತದೆ. ಚಿತ್ರಾಕಾರ ಎಂಬ ಇನ್ನೊಂದು ಹೂದೋಟದಲ್ಲಿ ಅಂತರಾಂತರಗಳಿಂದ ಕೊರೆದ ಒಸಜ ಪ್ರಸ್ಥಳ್ಳ ಕಾರಂಜಿಗಳು ಚಿಮ್ಮುವ ಬಗ್ಗೆ ಇದೆ. ಸರೋವರ ಪ್ರಯಾಣದ ನಿಜವಾದ ಸುಖ ಬೋಟ್ ಹತ್ತಿ ದಾಲ್ ಮತ್ತು ನಾಗಿನ್ ಸರೋವರಗಳಲ್ಲಿ ಪ್ರಯಾಣ ಮಾಡಬೇಕು. ದಾಲ್ ಸರೋವರದಲ್ಲಿ ಸುತ್ತಾಡುವಾಗ ಅತಿ ದೂರದಲ್ಲಿ ದರ್ಶನಾಕಾಂಕ್ಷಿಗಳು ಅಲ್ಲದ ಕತ್ತಿರದಲ್ಲಿ ಅಕ್ಕರೆಯ ಕೆಳಿಸಿದ ಕೋಟೆಗಳು ಕಂಗೊಳಿಸುವ ದೃಶ್ಯ ಪಡೆದೊಂದು ಚಿತ್ರವು ಕಣ್ಣಿಗೆ ಕಟ್ಟುತ್ತದೆ.

ಸುಮಾರು ೬೭೦ ಅಡಿ ಎತ್ತರ ಕ್ರಾಂತದಲ್ಲಿರುವ ಗುಲ್ಮರ್ಗವು ಅರಾಮ್ಯಾಣಕ್ಕೂ ವಿಶ್ರಾಂತಿಗೂ ಹೆಸರಾದ ಸ್ಥಳ. ಕೇಬಲ್ ಪೈಕ್ಷಗಳಿಂದ ಮುಂದಿನ ಕೊನೆ ಎಲ್ಲಿಯ ಅರಮನೆಯನ್ನು ಸೇರಿಸಿದ ಪ್ರದೇಶ ತಂಪಾದ ಹವಾಮಾನವು ಶಾಂತ ವಾತಾವರಣವು ಮನಸ್ಸಿಗೆ ಉಲ್ಲಾಸಕ್ಕೆ ಕಾರಣವಾದ ತ್ತವೆ. ಗೋಲ್ಫ್ ಎಂಬ ಆಟಕ್ಕೆ ಸುಲ್ಮರ್ಗವನ್ನು ಯೋಗ್ಯ ಕೇಂದ್ರ ಬೇರೆಸಿಗೆಂದರೆ ಹಿಮಾಲಯದ ವಾಯವ್ಯ ಮೂಲೆಯಲ್ಲಿರುವ ೨೬೦೦ ಅಡಿ ಎತ್ತರದ ಸಂಗಮರ್ಗತವು ಗುಲ್ಮರ್ಗದಿಂದ ಬಹಳ ಚೆನ್ನಾಗಿ ಗೋಚರಿಸುತ್ತದೆ. ಹಿಮ ಶಿಖರದ ಆ ಹೊಳಪು ನನ್ನನ್ನು ಕಣ್ಣು ಕಣ್ಣು ಬಿಡುವಂತೆ, ಬಿಟ್ಟೂ ಬಿಡದೆ ನೋಡುವಂತೆ ಪ್ರೇರಿಸುತ್ತದೆ.

ಜೀವನಾಗದ ಸರೋವರವು ಜಗತ್ತಿನ ಅದ್ಭುತಗಳಲ್ಲೊಂದು — ಎಲ್ಲ ಸರೋವರಗಳ ನೀರು ನೀಲವಾಗಿದ್ದರೆ ಇಲ್ಲಿಯದು ಸ್ಫಟಿಕದ ಪ್ರ ಬಿಳಿಯಾಗಿ ತೋರುತ್ತದೆ. ಸುತ್ತಲೂ ಹಿಮ ಕವಿದ ಬೆಟ್ಟಗಳಿದ್ದು ಅವುಗಳಿಂದ ಹೊರಟಿ ಬೆಳಕಿನ ಪ್ರತಿಫಲನದಿಂದ ಹೀಗಾಯಿತೆಂದು ಹೇಳಬರಿಗೆ ಗೊತ್ತೇ ಆಗುವುದಿಲ್ಲ. ಅಸ್ತಿಕ ಮಹಾಶಯರಿಗೆ ಹಪಾಲ್ಲಮಿನಿಂದ ಅಮರನಾಥದ ಗುಹೆಗೆ ಪ್ರಯಾಣ ಹೊರಡುವ ಹಂಬಲವುಂಟಾಗುತ್ತದೆ. ೧೨,೦೦ ಅಡಿ ಎತ್ತರ ಪ್ರದೇಶದಲ್ಲಿರುವ ಈ ಗುಹೆಯಲ್ಲಿ ಹಿಮದಿಂದಲೇ ರೂಪುಗೊಂಡ ಮನುಷ್ಯ ಪ್ರತಿಮಾವಾದ ಶಿವಲಿಂಗವಿದೆ, ಅಲ್ಲದೆ ಪಾರ್ವತಿ ಮತ್ತು ಗಣೇಶರ ಪ್ರತೀಕಗಳೆನಿಸಿ ಬೇರೆ ಎರಡು ಹಿಮ ಲಿಂಗಗಳೂ ಇವೆ. ಈ ಗುಹೆಯ ಒಳ ಮೈಯಲ್ಲಿ ಅನೇಕ ಸ್ಥಳಗಳಲ್ಲಿ ನೀರು ಒಸರುತ್ತಿದ್ದರೂ ಈ ಮೂರು ಲಿಂಗಗಳ ಮೇಲೆ ಬಿದ್ದ ಒರತೆಯ ಎಂದುಗಳು ಮಾತ್ರ ಹಿಮವಾಗಿ, ಲಿಂಗದೊರೆಗೆ ಕೇಡು ಹೊಗುವುದೆಂದು ಹೋಗಿದೆ!

ಅಮರನಾಥಕ್ಕೆ ೨೮ ಮೈಲು ದೂರ, ಪಹಲ್ಗಾಂವ್ ಅಂಬುದ್ದು, ಅತ್ತರ ಪ್ರದೇಶಗಳು ಸಮುದ್ರದಿಂದ ೨೦೦೦ ಅಡಿ ಎತ್ತರದ ಪ್ರದೇಶದ ಪ್ರಸ್ಥಲ್ಲಿದ್ದರೂ ಬೆಳ್ಳ ಹೆಜ್ಜೆಗಳ ಮೆಟ್ಟಿ ಹತ್ತಿ ಕೆಳಗೆ ಇಳಿಯ ಬೇಕಾದ ಪ್ರದೇಶ ಮಾಡು, ಕತ್ತಲೆಗಳ ಬಿಡಿಯುವ ಕತ್ತಲು ಕಳೆಯ ಬೆಳಗು ಉದ್ದಿನ ಬಾಗಿ ಬಂದ ಸಮಯ ಮಾಗಿದ ಪರಿಸರ ಪರಿಶ್ಯಕ್ತಿಗಳ ಕೆಳ ಇರಲಾರದು. ಬಿಳಿ ಕಾಶ್ಮೀರದ ಸಂದರ್ಶಿಗಳ ಅಲ್ಲಿಂದ ಒಳಗಿನವರೆಗೆ ಬಿಳಿಯ ಬಟ್ಟೆ ಬಿಳಿಯ ಕಪ್ಪು ಬಣ್ಣದಾಯ ಕಾರ ಕ್ರಮದ ಸಮುಂಬಿಕೆಯಿಂದ ತಂ ಪ್ರ ಪ್ರ ಪ್ರ

ಬೇರೆ ರೀತಿಯಲ್ಲಿ ಪ್ರಯೋಜನಕಾರಿಯಾಗಿ ನಮಗೆ ತೋರದು. ಉದಾಹರಣೆಗೆ, ಈಚೆಯವರೆಗೆ, ಸ್ಟಾಲಿನ್ನರ ಚಿತ್ರವನ್ನು ಬರೆಯುವುದೇ ರಶಿಯದ ಚಿತ್ರಕಾರನ ಆದರ್ಶ! ಕಮ್ಯೂನಿಸಮ್ಮಿನ ತತ್ವ ಪ್ರತಿಪಾದನೆಯೇ ಎಲ್ಲ ಸಾಹಿತ್ಯದ, ಮತ್ತು ಸಾಂಸ್ಕೃತಿಕ ಮಾಧ್ಯಮದ ಹೆಗ್ಗುರಿ! ವ್ಯಕ್ತಿ ಸಹಜವಾದ ಪ್ರೇಮ, ವಾತ್ಸಲ್ಯ ಮುಂತಾದ ಭಾವನೆಗಳೂ ಕಮ್ಯೂನಿಸಮ್ಮಿನ ಚೌಕಟ್ಟಿನಲ್ಲಿ, ಮೂಸೆಯಲ್ಲಿ, ರೂಪಿಸಲ್ಪಡಬೇಕೆಂದು ನಿಯಮ.

ಧರ್ಮ ಪ್ರಭಾವಿತವಾದ ಸರಕಾರ ರಶಿಯದ್ದಲ್ಲ—ಆದರೂ ರಶಿಯದಲ್ಲಿ ಕೆಲವು ಇಗರ್ಜಿಗಳು ಪ್ರಾಚೀನ ಕಾಲದ ಅವಶೇಷಗಳಂತೆ ನೋಡಸಿಗುತ್ತವೆ. ಅಲ್ಲಿ ಪಾದ್ರಿಗಳೂ ಅವರ ಶಿಷ್ಯ ಪರಿವಾರವೂ ಇದ್ದು, ಭಕ್ತರನ್ನು ಉತ್ಸರ್ಗಪಥಕ್ಕೊಯ್ಯಲು ಸಿದ್ಧರಾಗಿ ನಿಂತಿದ್ದಾರೆ. ಆದರೆ, ಪರಮಾರ್ಥ ಜ್ಞಾನಸಕಲಿಯುವ (ಹಾಗು ಕಲಿಸುವ) ಈ ಜನರಿಗೆ ಸಹ ಕಾರ್ಲ್ ಮಾರ್ಕ್ಸ್, ಲೆನಿನ್, ಸ್ಟಾಲಿನ್ ಮತ್ತು ಈಗಿನ ಬುಲ್ಗೇನಿನ್-ಇವರ ಕಮ್ಯೂನಿಸ್ಟ್ ಸಿದ್ಧಾಂತಗಳನ್ನು ಒತ್ತಾಯದಿಂದ ಗಿಳಿವಾರ ಮಾಡಿಸಲಾಗುತ್ತದೆ. ಕಾರ್ಲ್ ಮಾರ್ಕ್ಸ್ ಹಿಂದೊಮ್ಮೆ ಭಾರತದ ಪ್ರಚಂಡ ವೇದಾಂತಿ ಸ್ವಾಮಿ ವಿವೇಕಾನಂದರ ದರ್ಶನ ಪಡೆದಾಗ "ಎಲ್ಲರಿಗೂ ಯೋಗ್ಯತಾನುಸಾರ ಕೆಲಸ ಮತ್ತು ಅವಶ್ಯಕತೆಗನುಸಾರ ಹಣ" ಎಂಬ ತನ್ನ ಸಾಮ್ಯ ವಾದವು ಭಾರತೀಯ ವೇದಾಂತದಿಂದ ಸ್ಫೂರ್ತಿ ಪಡೆದ ಸಿದ್ಧಾಂತವಲ್ಲದೆ, ಹೊಸತೇನೂ ಅಲ್ಲವೆಂದು ಹೇಳಿದ್ದರು! ನಮ್ಮಲ್ಲಿ ಈ ಸಿದ್ಧಾಂತಕ್ಕೆ ಹಿನ್ನಲೆಯಾಗಿ ನಿಂತಿರುವುದು ಆಧ್ಯಾತ್ಮಿಕ ವಿಚಾರ; ಆದರೆ ರಶಿಯದಲ್ಲಿ ಕಂದುಬರುವ ಹಿನ್ನೆಲೆಯ ಸ್ವರೂಪ ಆದಿಭೌತಿಕ—ಎಂಬುದಿಷ್ಟೇ ವ್ಯತ್ಯಾಸ. ಗಾಂಧೀ-ವಿನೋಬಾರ ಹಾದಿಗೂ ಸ್ಟಾಲಿನ್, ಬುಲ್ಗೇನಿನ್ನರ ಮಾರ್ಗಕ್ಕೂ ಇರುವುದು ಇದೇ ಅಂತರ.

ಸಾಮ್ಯವಾದಕ್ಕೆ ಭಾರತವೇ ಸ್ಫೂರ್ತಿ ಕೊಡಲಿ, ಬಿಡಲಿ—ಭಾರತದೊಡನೆ ರಶಿಯದ ಸಂಬಂಧ ಸ್ವಾತಂತ್ರ್ಯೋತ್ತರದ್ದಷ್ಟೇ ಅಲ್ಲವೆಂಬುದನ್ನು ಸ್ಮರಿಸುವುದೊಳ್ಳೆಯದು. ಈ ಸಂಬಂಧ ಮುಗಲ ಬಾದಶಾಹರ ಕಾಲದಿಂದ ಬೆಳೆದು ಬಂದಿದೆ. ಭಾರತವನ್ನು ೧೫೨೬ನೇ ಇಸವಿಯಲ್ಲಿ ಮೊದಲನೆ ಪಾಣಿಪತದ ಯುದ್ಧದ ಮೂಲಕ ಆಕ್ರಮಿಸಿದ ಬಾಬರನು. ಈಗಿನ ರಶಿಯದ ಮುಸ್ಲಿಂ ರಾಜ್ಯದಿಂದ ಬಂದಿದ್ದನು. ಆಗ ರಶಿಯದಲ್ಲಿ ಝಾರ್ ಆಂಸನು ರಾಜ್ಯವಾಳುತ್ತಿದ್ದರು. "ಪೀಟರ್ ದಿ ಗ್ರೇಟ್" ಎಂಬ ಹೆಸರಾದ ಆರಸನ ತಂದೆ ಮುಗಲಬಾದಶಾಹ ಔರಂಜೇಬನಿದ್ದಲ್ಲಿಗೆ ರಾಯಸ ಕಳುಹಿಸಿ ರಾಯಭಾರ ಸಂಬಂಧವನ್ನು ಬೆಳೆಸುವ ಆತುರವನ್ನು ವ್ಯಕ್ತಪಡಿಸಿದ್ದನು. ೧೭೩೫ರ ಸುಮಾರಿಗೆ ರಶಿಯದಲ್ಲಿ ಮೊದಲನೆಯ ಸಲ ದೇವನಾಗರಿ ಲಿಪಿಯ ಪರಿಚಯಮಾಡಿಕೊಡುವ ಪುಸ್ತಕ ಪ್ರಕಟವಾಯಿತು. "ಮೂರು ಸಾಗರಗಳಾಚೆಯ ಪಯಣ" ಎಂಬ ಭಾರತವನ್ನು ಕುರಿತಾದ ರಶಿಯನ ನೊಬ್ಬನ ಪುಸ್ತಕ ಈ ದೇಶದ ಪರಿಚಯವನ್ನು ಚೆನ್ನಾಗಿ ಮಾಡಿಕೊಟ್ಟಿತು. ರಶಿಯದ ಸಂಗೀತಜ್ಞನೊಬ್ಬನು ೧೭೮೫—೯೬ನೇ ವರ್ಷಗಳ ವರೆಗೆ ಇಲ್ಲಿದ್ದು ಸಂಸ್ಕೃತ, ಬಂಗಾಳಿ ಮುಂತಾದ ಭಾಷೆಯನ್ನು ಕಲಿತುದಲ್ಲದೆ, ಶ್ರೀ ಮದ್ಭಗವದ್ಗೀತೆ ಮತ್ತು ಶಾಕುಂತಲದ ಅನುವಾದವನ್ನು ರಶಿಯದ ಭಾಷೆಯಲ್ಲಿ ಸಿದ್ಧಪಡಿಸಿದನು.

ಕಳೆದ ಶತಮಾನದಲ್ಲಿ ರಾಮಾಯಣ, ಮಹಾ ಭಾರತ, ವೇದಗಳು ಮುಂತಾದ ಪುಳ್ಳಿ ಅನೇಕ ಅಂಶವನ್ನು ರಶಿಯದ ಭಾಷೆಗೆ ಪರಿವರ್ತಿಸಲಾಯಿತು. ಬುದ್ಧ ಧರ್ಮದ ವಿಷಯದಲ್ಲೂ ರಶಿಯದ ಕೆಲವು ವಿದ್ವಾಂಸರು ಕೂತೂಹಲವನ್ನು ವ್ಯಕ್ತಪಡಿಸಿದರು. ಕ್ರಾಂತಿಯ ಬಳಿಕ ರಶಿಯದ ಸರಕಾರ ನೆಹರು, ಬಂಕಿಂಚಂದ್ರ, ರವೀಂದ್ರನಾಥ ಟಾಗೋರ, ಪ್ರೇಮಚಂದ್ರ, ಮುಲ್ಕರಾಜ ಆನಂದ, ಕೃಷ್ಣಚಂದ್ರ ಮುಂತಾದವರ ಕೃತಿಗಳ ಅನುವಾದಕ್ಕೆ ವ್ಯವಸ್ಥೆಮಾಡಿತು. ಭಾರತೀಯ ಭಾಷಾವಿಜ್ಞಾನದ ಪರಿಚಯ ಮಾಡಿಕೊಡುವುದಕ್ಕೂ ರಶಿಯದಲ್ಲಿ ಪ್ರಯತ್ನ ನಡೆಯಿತು. ಆದರೆ ಭಾರತದ ಪರಿಚಯ ಮಾಡಿಸಿಕೊಡುವ ಈ ಸಾಹಸಗಳು ಎಷ್ಟು ಪ್ರಾಮಾಣಿಕವಾಗಿದ್ದವೋ ಹೇಳಲು ಬಾರದು—ಏಕೆಂದರೆ ಮಹಾತ್ಮಾ ಗಾಂಧೀಯವರನ್ನು ಬ್ರಿಟಿಷರ ಏಜಂಟನೆಂದು ಕರೆದ ವಿಶ್ವಕೋಶವನ್ನು ರಶಿಯದ ತಜ್ಞರು ರಚಿಸಿರುವರೆಂಬುದು ನಮಗೆ ವಿದಿತವಿಲ್ಲ. ಆದರೆ ಮಹಾತ್ಮಾ ಗಾಂಧೀಯವರು ರಶಿಯದ ಸಾಹಿತ್ಯದಿಂದ ಬಹಳ ಸ್ಫೂರ್ತಿಪಡೆದಿದ್ದರೆಂಬುದು ಸ್ಮರಣೀಯವಾಗಿದೆ—ಅವರು ಕ್ರಾಂತಿಗೆ ಹಿಂದಿನ ಲೇಖಕರಾಗಿದ್ದ ಟಾಲ್‌ಸ್ಟಾಯರ ಪುಸ್ತಕಗಳನ್ನು ಬಹಳವಾಗಿ ಮೆಚ್ಚುತ್ತಿದ್ದರು; ಪ್ರಭಾವಿತರೂ ಆಗಿದ್ದರು. ಇಂದಿನ ಭಾರತದಲ್ಲಿ ಟಾಲ್‌ಸ್ಟಾಯ್, ಚೆಕೋಫ್ ಮುಂತಾದ ಹಿಂದಿನ ಶ್ರೇಷ್ಠರ ಕೃತಿಗಳಿಗಿಂತಲೂ ಕ್ರಾಂತಿಕಾಲದ ಲೇಖಕ ಗಾರ್ಕಿಯಂಥ ಉಗ್ರವಾದಿಗಳ ಬರೆಹ ಹೆಚ್ಚು ಪ್ರಚಾರದಲ್ಲಿದೆ. ಆದರೆ ರಶಿಯದ ಮೂಲದಿಂದ ಅನುವಾದಿತ ಕೃತಿಗಳು ಮಾತ್ರ ಇಲ್ಲ. ಏಕೆಂದರೆ ಭಾರತದಲ್ಲಿ ರಶಿಯದ ಭಾಷೆ ಕಲಿಸುವುದು ದಿಲ್ಲಿಯ ವಿಶ್ವ ವಿದ್ಯಾಲಯದಲ್ಲಿ ಮಾತ್ರ.

ಚಂದಾ ಹಣ ಬಾಕಿ ಇರುವವರು ದಯವಮಾಡಿ ಅದನ್ನು ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

ರಶಿಯಕ್ಕೆ ಪ್ರಧಾನ ಮಂತ್ರಿಗಳ ಪ್ರಯಾಣ

(೨ನೇ ಪುಟದಿಂದ

(೧ನೇ ಪುಟದಿಂದ

ಯಿಸಿದ ಕೆಳಮನೆಯ ಸದಸ್ಯರಲ್ಲಿ ಶಾಸನ ಕರ್ತರಾಗುವ ಎಲ್ಲ ಯೋಗ್ಯತೆ ತುಂಬಿಕೊಂಡಿದೆ ಎಂದೂ ಹೇಳುವುದಕ್ಕೂ ಈ ಸೂತ್ರವೊಂದು ನೆಪವಾಗುತ್ತದೆ. ಆದರೆ, ರಾಷ್ಟ್ರದ ಕಲ್ಯಾಣ ದೃಷ್ಟಿಯನ್ನಿಟ್ಟುಕೊಂಡವರಿಗೆ, ಜನರ ನೇರಾದ ಮತದಾನದ ಮೂಲಕ ಬಹುಮತದಿಂದ ಆರಿಸಲ್ಪಟ್ಟ ಉಮೇದ್ವಾರರೇ ಶಾಸನಾಂಗದಲ್ಲಿ ಶೋಭಿಸಲು ಯೋಗ್ಯರೆಂದು ತೋರುವುದಿಲ್ಲ. ಬುದ್ಧಿವಂತರು, ವಿವೇಕಿಗಳು, ದೂರದರ್ಶಿಗಳು, ಜ್ಞಾನಿಗಳು, ನಿಷ್ಪಕ್ಷಪಾತ ದೃಷ್ಟಿಯುಳ್ಳವರು, ಪಕ್ಷದ ಹಿತಕ್ಕಲ್ಲ, ರಾಷ್ಟ್ರದ ಹಿತಕ್ಕಾಗಿ ದುಡಿಯುವವರು ಬಹಳ ವಿರಳ. ಯೇಸು ಹೇಳಿದಂತೆ ಇವರೇ ಭೂಮಿಯುಲವಣ—ಶಾಸನಾಂಗದಲ್ಲಿ ಇವರಿಗೆ ಸ್ಥಾನ ಕೊಡದಿದ್ದರೆ, ರಾಷ್ಟ್ರದ ಪ್ರಗತಿ ಖಂಡಿತವಾಗಿಯೂ ಕುಂಠಿತವಾದೀತು. ಅಲ್ಲದೆ ಆರ್ಥಿಕ, ಔದ್ಯೋಗಿಕ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ಹಿತಸಂಬಂಧವುಳ್ಳ ವಿಶಿಷ್ಟ ಕ್ಷೇತ್ರಗಳಿಗೂ ಸ್ಥಾನವನ್ನು ಕಲ್ಪಿಸಿಕೊಡತಕ್ಕದ್ದು ಕರ್ತವ್ಯ. ಇವುಗಳಿಗಾಗಿಯಾದರೂ ನಾವು ವೆಲ್ಸನೆಯನ್ನು ಪುರಸ್ಕರಿಸಬೇಕು; ಕೆಳಮನೆಯ ಶಾಸನ ಕರ್ತರ ಮಂಗತನವನ್ನು ಗೊತ್ತಿದ್ದೂ ಮುಚ್ಚಿಡಲು ನೋಡಬಾರದು.

—ಕಾರ್ತಿಕೇಯ.

ದಕ್ಷಿಣ ಕನ್ನಡ ತೀಯಾ ಸಮಾಜದ ಅವಗಾಹನೆಗೆ.

ಮುಂಬಾಯಿ ತಿಯಾಸಮಾಜವು ಸ್ವಜಾತಿ ಬಾಂಧವರ ವಿದ್ಯಾರ್ಜನಾ ಸೌಲಭ್ಯತೆಗೆಂದು IV ರಿಂದ VI ನೇ Form ತನಕ ಕಲಿಯುವ ಬಡವರಾಗಿರುವ ಮತ್ತು ಆರ್ಹರಾಗಿರುವ ವಿದ್ಯಾರ್ಥಿಗಳಿಗೆ 1955—1956ನೇ ವರ್ಷದ ವಿದ್ಯಾರ್ಥಿವೇತನವನ್ನೀಯಲು ನಿರ್ಧರಿಸಿದೆ. ಇಚ್ಛಿಸುವ ವಿದ್ಯಾರ್ಥಿಗಳು ವಿವರಗಳಿಗಾಗಿ ಸಮಾಜದ ಗೌರವ ಕಾರ್ಯದರ್ಶಿಯವರಿಗೆ ತಾ. 16—6—1955 ರೊಳಗೆ ಬರೆಯಬೇಕಾಗಿ ವಿನಂತಿ.

R. K. Narayan B. A.
Hon General Secretary
Thiya Samaj Bombay
108 Bora Bazar Street
4 th floor Room No 25
Bombay 1

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಉತ್ತಮ ಕಾಗದದ
ಎಕ್ಸರಸೈಜ್ ಪುಸ್ತಕಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಧ್ಯಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ಪ. ಕ. ಜಿಲ್ಲಾ ಲೋಕಲ್ ಬೈಬ್ರೆರಿ ಆಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳ ಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

ನವಯುಗ

ಪ್ರಜಾರಾಜ್ಯ
ವಿಶೇಷಾಂಕ ೧೯೫೫
NAVAYUGA
Republic Day Special 195

ಕರ್ನಾಟಕದ ಜನತೆಗೆ

.... ..ಭಾರತ ಪ್ರಜಾರಾಜ್ಯದ ಐದನೆ ವಾರ್ಷಿಕೋತ್ಸವದ ದಿನಾಚರಣೆಯ ಸಂತೋಷ ಸಂದರ್ಭದಲ್ಲಿ
ನಮ್ಮ ಹಾರ್ದಿಕ ಶುಭಾಶಯಗಳು.

ನಮ್ಮ 29 ವರುಷಗಳ ಸುರಿತ ಅನುಭವವನ್ನೂ 92 ಶಾಖಾ ಕಚೇರಿಗಳ ಕಾರ್ಯಕ್ಷೇತ್ರದಿಂದ ನೆರವೇರುವ ಸಮರ್ಥ ಹಾಗು ಶೀಘ್ರ ಸಂಗ್ರಹದ ಅನುಕೂಲತೆಯನ್ನೂ ಜನತೆಯ ಮುಂದಿಡುತ್ತೇವೆ ಮುಂಬರುವ ವರುಷಗಳಲ್ಲೂ ತೃಪ್ತಿಕರವಾಗಿ ಜನತೆಗೆ ಸೇವೆಯನ್ನು ಸಲ್ಲಿಸಲು ಪ್ರತಿಜ್ಞಾಬದ್ಧರಾಗಿದ್ದೇವೆ.

ರೂಪಾಯಿ **6,50,00,000**ಕ್ಕೂ ಮಿಕ್ಕಿದ ಚಲಾವಣೆ ಭಂಡವಾಳ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ (ದ. ಭಾರತ.)

ಕರ್ನಾಟಕದಲ್ಲಿರುವ ನಮ್ಮ ಕೆಲವು ಶಾಖಾ ಕಚೇರಿಗಳು

ಕಾರವಾರ	ಗೋಕರ್ಣ	ಬ್ಯಾಡಗಿ	ಉಡುಪಿ ರಥಬೀದಿ	ಮೈಸೂರು	ದಾವಣಗೆರೆ
ಅಂಕೋಲ	ಬೆಳಗಾಂ	ಗದಗ	ಕುಂದಾಪುರ	ಬೆಂಗಳೂರು	ತರಿಕೆರೆ
ಕುಮಟಾ	ನಿಪ್ಪಾಣಿ	ಬಿಜಾಪುರ	ಬ್ರಹ್ಮಾವರ	ಹೊಸ ತರಗುಪೇಟೆ	ಚಿಕ್ಕಮಗಳೂರು
ಹೊನ್ನಾವರ	ಹೊಸಪೇಟೆ	ಬಾಗಲಕೋಟೆ	ಕಾರ್ಕಳ	ಸಾಗರ	ತಾಮರಾಜಪಟ್ಟಣ
ಭಟ್ಕಳ	ಧಾರವಾಡ	ಮಂಗಳೂರು	ಕಾವರಗೋಡು	ಶಿವಮೊಗ್ಗ	ಚಿತ್ರದುರ್ಗ
ಶಿರ್ಸಿ	ಹುಬ್ಬಳ್ಳಿ	ಉಡುಪಿ	ಕಾಂಚಾಗಾಡ	ರಿವನೆಕ್ಕ	ಒಳ್ಳಿರಿ ಇತ್ಯಾದಿ

THE CANARA INDUSTRIAL & BANKING SYNDICATE LTD.

Serving you these 45 years.....

and still eager and willing to give you the best in Insurance Policies or Representation!

For particulars apply to:-

Kochikar Brothers, Ltd.,

Chief Agents:

THE BOMBAY LIFE ASSURANCE COMPANY, LTD.,

BOMBAY LIFE BUILDING,

UDIPI, S. INDIA.

*****

OFFICES AT

MANGALORE, BANGALORE, TRIVANDRUM, CALICUT, COIMBATORE, MADURA & BOMBAY.

Bhuvanendra Products Limited,

KATAPADI, S. KANARA.

Regd.

Head Office & Factory: KATAPADI S.K.

Trade Mark

DEPOT:
1) Udipi, S. Kanara.
2) Mahatata Galli, Hubli,

ಮುಂದೆ ರಾಷ್ಟ್ರದ ಮಹಾನ್‌ವ್ಯಕ್ತಿಗಳಾಗಬಹುದಾದ ಮಕ್ಕಳು ಆರೋಗ್ಯ ವ ದೃಢಕಾಯರಾಗಿ ಬಾಳಬೇಕು. ಹೊಣೆಗಾರಿಕೆಯನ್ನು ಸುಸೂತ್ರವಾಗಿ ನಿರ್ವಹಿಸಬೇಕು.

*****

"ಭುವನೇಂದ್ರ" ಶಿವಾಮೋದಕ

ಮಕ್ಕಳ ಅತಿಸಾರ, ಅಜೀರ್ಣ, ಯಕೃತ್, ಪ್ಲೀಹ, ಮಲಬದ್ಧತೆ, ಗ್ರಹಣೀ ದೋಷಗಳನ್ನು ನಿವಾರಿಸಿ ಸವಚ್ಛೈತನ್ಯ ತುಂಬುವುದು. ಮಕ್ಕಳು ಉಲ್ಲಾಸದಿಂದ ಆರೋಗ್ಯದಿಂದ ನಲಿದಾಡುವಂತೆ ಸಹಾಯ ಮಾಡುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:— 1) ಉಡುಪಿ, ದ. ಕನ್ನಡ. 2) ಮಹಾತಗಲ್ಲಿ, ಹುಬ್ಬಳ್ಳಿ.

ನಿಮ್ಮ ತೆಂಗಿನ ಮರಗಳಿಂದ ಹೆಚ್ಚು ಫಲ ಸಿಗಲು

ಭಾರತದ ಕೇಂದ್ರ ತೆಂಗಿನ ಕಮಿಟಿಯ ಪ್ರಕಟಣೆಗಳನ್ನು ಓದಿರಿ.

(1) "ಬುಲ್ಲೆಟಿನ್"
(ಇಂಗ್ಲಿಷು, ಮಲೆಯಾಳ ಮತ್ತು ಕನ್ನಡದಲ್ಲಿ ಮಾಸಪತ್ರಿಕೆ.
ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ಆಣಾ ಮಾತ್ರ.
ಬಿಡಿ ಪ್ರತಿಗೆ ಒಂದಾಣೆ.

(2) "ಇಂಡಿಯನ್ ಕೋಕನಟ ಜರ್ನಲ್"
(ಇಂಗ್ಲಿಷಿನಲ್ಲಿ ತ್ರೈಮಾಸಿಕ)
ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ರೂ. 2/- ಮಾತ್ರ,
ಬಿಡಿ ಪ್ರತಿ ರೂ. 0—8—0.

(3) "ತೆಂಗಿನ ಕೃಷಿ" – ಕೈಪಿಡಿ- ಚಿತ್ರಸಹಿತವಾದದ್ದು.
(ಇಂಗ್ಲಿಷು, ಮಲೆಯಾಳ, ಕನ್ನಡ, ತಮಿಳು ಮತ್ತು ತೆಲುಗು ಸಂಚಿಕೆಗಳು)
ಪ್ರತಿ ಒಂದರ ಬೆಲೆ ರೂ. 0—10—0.
ಅಂಚೆ ವೆಚ್ಚ ರೂ. 0—8—0 ಪ್ರತ್ಯೇಕ.

ಹೆಚ್ಚಿನ ವಿವರಗಳಿಗೆ ಈ ಕಳಿಗನ ವಿಳಾಸಕ್ಕೆ ದಯವಾಡಿ ಬರೆಯಿರಿ.

ಸೆಕ್ರಿಟರಿ,

ಇಂಡ್ಯನ್ ಕೇಂದ್ರ ತೆಂಗಿನ ಕಮಿಟಿ,

ಎರ್ನಾಕುಳಂ.

Hearty greetings for the annual celebration of the Republic Day.

A NEW BRANCH AT
VISHWA BHAVAN BUILDING, HAMPANKATTA
HAS BEEN OPENED **FROM 23—12—1954.**

SCHOOL BOOK CO.,

BOOK SELLERS—PUBLISHERS & WHOLESALE PAPER DEALERS

Distributors: Mysore Paper Mills Ltd, & "Ganges" Printing Inks.

Head Office: **CAR STREET, MANGALORE-1.**

ಪ್ರಜಾರಾಜ್ಯ ಸ್ಥಾಪನಾ ಸಾಂವತ್ಸರಿಕ ದಿನಾಚರಣೆ ಸಂತಸ ಕಾಲದಲ್ಲಿ ಸರ್ವರಿಗೂ ಸುಖ ಸಂಪದಭ್ಯುದಯ ಉಂಟಾಗಲೆಂದು ಶುಭಾಶಯಗಳು.

ಸ್ಕೂಲ್ ಬುಕ್ ಕಂಪೆನಿ,

ರಥಬೀದಿ, ಮಂಗಳೂರು—1.

ಪುಸ್ತಕ ವ್ಯಾಪಾರಿಗಳು—ಪ್ರಕಾಶಕರು—ಕಾಗದ ವ್ಯಾಪಾರಿಗಳು.

ಮಂಗಳೂರು ಹಂಪನಕಟ್ಟೆಯ ವಿಶ್ವಭವನದ ಕಟ್ಟೋಣದಲ್ಲಿ ತಮ್ಮ ಹೊಸ ಶಾಖೆಯನ್ನು ತೆರೆದಿರುವರು.

Telegrams: "SCHOOLBOOK" Phone: 229

ಸಂ ೩೪.
೨೨

Vol. 34
No. 21

೩೬
ಪುಟಗಳು

ಬೆಲೆ:
೦—೨—೦

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೫೫

—oooo—

ಸಂಸ್ಥಾಪಕರು:
ಶ್ರೀ ಎ. ಬಿ ಶೆಟ್ಟಿ, ಎಂ.ಎಲ್ ಎ,
ಮದರಾಸು ಸರಕಾರದ ಆರೋಗ್ಯ ಮಂತ್ರಿಗಳು

* * *

ಸಂಚಾಲಕ-ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

* *

NAVAYUGA
REPUBLIC DAY SPECIAL 1955

ಪ್ರಜಾರಾಜ್ಯ ದಿನೋತ್ಸವ

ಪೂರ್ಣ ಸ್ವರಾಜ್ಯದ ಪ್ರತಿಜ್ಞೆಯನ್ನು ಕೈಗೊಂಡ ಭಾರತೀಯರು ಇದನ್ನು ಪೂರೈಸುವ ರೀತಿಯಲ್ಲಿ ಪ್ರಜಾ ಸತ್ತಾತ್ಮಕವಾದ ಸಾರ್ವಭೌಮ ರಾಜ್ಯವೆಂದು ಭಾರತವನ್ನು ಘೋಷಿಸಿ, ತಮಗೆ ತಾವೇ ರಾಜ್ಯಾಂಗ ಘಟನೆಯೊಂದನ್ನು ಅರ್ಪಿಸಿ, ಇಂದಿಗೆ ಐದು ವರ್ಷಗಳು ಸಂದು, ನಾವೀಗ ಆರನೇ ವರ್ಷದ ಹೊಸ್ತಿಲಲ್ಲಿ ಕಾಲಿಡುತ್ತಿದ್ದೇವೆ. ಸಹಜವಾಗಿಯೇ ನಾವೀ ಸಂದರ್ಭವನ್ನು ಇರು ವರೆಗಿನ ಆಗು ಹೋಗುಗಳ ಸಿಂಹಾವಲೋಕನಕ್ಕೂ ಭವಿಷ್ಯತ್ತಿನ ಚಿತ್ರಾಂಕನಕ್ಕೂ ಉಪಯೋಗಿಸುತ್ತೇವೆ. ನಮ್ಮ ಸಾಧನೆಗಳ ಮಾನವಂಡದಿಂದಲೇ ನಾಳೆಯ ಕಲ್ಪನೆಯನ್ನು ಸ್ಪಷ್ಟವಾಗಿ ಮಾಡಿಕೊಳ್ಳುವುದು ಸಾಧ್ಯವಾದುದರಿಂದ ಆತ್ಮ ನಿರೀಕ್ಷಣೆಯ ಕ್ರಮವನ್ನು ತಪ್ಪೆಂದು ಹೇಳುವಂತಿಲ್ಲ. ನಮ್ಮನ್ನು ನಾವೇ ವಿಮರ್ಶಿಸಿಕೊಳ್ಳುವುದು ಎಷ್ಟೋ ಸಂದರ್ಭಗಳಲ್ಲಿ ಪ್ರಯೋಜನಕರ. ಏನಿಲ್ಲದಿದ್ದರೂ ಅದರಿಂದ ಆತ್ಮ ವಿಶ್ವಾಸ ಹೆಚ್ಚುತ್ತದೆ

ಮೇಲಿನ ಉದ್ದೇಶದಿಂದ ಸಾಧನೆಯ ಸಿಂಹಾವಲೋಕನ ಮಾಡಿದರೆ ನಮಗೆ ತೃಪ್ತಿಕರವಾದ ಘಟನೆಗಳೇ ಕಂಡು ಬರುತ್ತವೆ. ನೆಹರು ಸರಕಾರದ ಮತ್ತು ಕಾಂಗ್ರೆಸಿನ ಧುರೀಣತ್ವದಲ್ಲಿ ಭಾರತವು ತೀಕ್ಷ್ಣವಾಗಿ ಪ್ರಗತಿಯನ್ನು ಸಾಧಿಸಿರುವುದೆಂಬ ಮತ್ತಿದು ಕೆಲವೇ ಕ್ಷೇತ್ರಗಳಿಗೆ ಸೀಮಿತವಿರದೆ ಸಾರ್ವಾಂಗಿಕವಾಗಿದೆಯೆಂಬ, ವಿದೇಶಗಳಿಂದ ಕುತೂಹಲ ವಶರಾಗಿ ಬಂದ ಎಲ್ಲ ಸಂದರ್ಶಕರ ಅಭಿಪ್ರಾಯದ ಮೊತ್ತವೇ ನಾವು ಸಮಾಧಾನ ಚಿತ್ತರಾಗುವಂತೆ ಮಾಡುತ್ತದೆ. ನೆಹರುಗಳು ಭಾರತೀಯ ಸಂಸ್ಕೃತಿಗೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಅನುಸರಿಸಿದ ನೀತಿಗೆ ಒಪ್ಪವಿಡುವಂತೆ ವಿದೇಶಾಂಗ ಧೋರಣೆಯನ್ನು ರೂಪಿಸಿಕೊಂಡು ಬಂದುದರಿಂದ ಭಾರತವು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅತ್ಯಂತ ಗೌರವದ ಸ್ಥಾನವನ್ನು ಹೊಂದುವಂತಾಯಿತು. ಪಂಚಶೀಲಾತತ್ವಗಳನ್ನು ಎತ್ತಿ ಹಿಡಿದ ನೆಹರುಗಳ ಧೋರಣೆಯು ಜಗತ್ತಿನ ಮುಂದೊಂದು ನೂತನ ಆದರ್ಶವನ್ನೆ ಮಂಡಿಸಿದೆಯಲ್ಲದೆ, ಶಾಂತಿಯನ್ನು ಕಾಯ್ದುಕೊಂಡು, ಉತ್ಕರ್ಷದ ದಾರಿಯಲ್ಲಿ ಮುನ್ನಡೆಯುವುದಕ್ಕೆ ಪ್ರೋತ್ಸಾಹವನ್ನೂ ಕೊಡುತ್ತದೆ. ಯುದ್ಧ ಭಯವನ್ನು ತಗ್ಗಿಸುವುದಕ್ಕೆ ನೆಹರುಗಳ ಧೀರ ವರ್ತನೆಯೇ ಬಹುಮಟ್ಟಿಗೆ ಕಾರಣವಾಗಿದೆಯೆಂದು ಅನಿಸುತ್ತದೆ.

ನೆಹರುಗಳು ಮನೆಯೊಳಗಿನ ವಾತಾವರಣವನ್ನು ಸಹ ಆಚ್ಛ ಶುಚಿಯಾಗಿಡಲು ಪ್ರಯತ್ನಿಸುತ್ತಿದ್ದು, ಸಮಾಜವಾದಿ ತತ್ವವನ್ನು ಕೆಲಮಟ್ಟಿಗೆ ಪರಸ್ಪರಿಸುವ ಹೊಸ ಪದ್ಧತಿಯೊಂದನ್ನು ಭಾರತದಲ್ಲಿ ಅನುಷ್ಠಾನಕ್ಕೆ ತರಲು ತವರು ಬಯಸಿರುವುದು ಇದಕ್ಕೆ ನಿದರ್ಶನ. ಐತಿಹಾಸಿಕ ಪೂರ್ವತ್ವದಿಂದ ಕೂಡಿದ ಈ ಘೋಷಣೆಯು ಭಾರತದ ನಿರ್ಮಾಣದಲ್ಲಿ ತೃತೀಯ ಹೆಜ್ಜೆಯಾಗಿ ಪರಿಗಣಿಸಲ್ಪಡುತ್ತದೆ ಪ್ರಜಾ ರಾಜ್ಯದ ಆರನೇ ವರ್ಷದಲ್ಲಿ ನಾವು ತೀವ್ರ ಬದಲಾವಣೆಯ ಹೊಸ ಅನುಭವವನ್ನು ಸಂಪಾದಿಸುವುದು ನಿಶ್ಚಯ. ಇದು ಆಹ್ಲಾದಕರವಾಗುವುದಲ್ಲದೆ, ಯುಗ ಧರ್ಮವನ್ನು ಎತ್ತಿ ಹಿಡಿಯುವ ಮಹತ್ವದ ಕೆಲಸವನ್ನು ಮಾಡುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಪ್ರೆಂಚ ಭಾರತದ ಹಸ್ತಾಂತರ ಹಾಗು ಇಂಡೋಚೀನದ ಕದನ ವಿರಾಮಗಳು ಭಾರತದ ವಿದೇಶ ಧೋರಣೆಯ ಸಮಂಜಸತೆಗೆ ಹೇಗೆ ಸಾಕ್ಷಿ ಕೊಡುತ್ತವೋ ಹಾಗೆ ಪಂಚವಾರ್ಷಿಕ ಯೋಜನೆಯ ಪ್ರಗತಿಯೂ ಜನರು ಅಭಿವೃದ್ಧಿ ಪ್ರಯತ್ನಗಳಲ್ಲಿ ತೋರಿಸುತ್ತಿರುವ ಉತ್ಸಾಹವೂ ನಮ್ಮ ಕರ್ತೃತ್ವ ಶಕ್ತಿಯನ್ನು ನಿರ್ದೇಶಿಸುತ್ತವೆ. ಇದು ಹೊಸ ಸಮಾಜ ರಚನೆಗೆ ಉಚಿತವಾದ ಹಿನ್ನೆಲೆಯನ್ನೊದಗಿಸುವುದು ಖಂಡಿತ.

ಪ್ರಜಾರಾಜ್ಯದ ಐದನೆಯ ವರ್ಷದಲ್ಲಿ ಅನೇಕ ಪ್ರಾಮುಖ್ಯ ಘಟನೆಗಳು ಜರಗಿದವು—ಭಾರತದ ಪ್ರತಿಷ್ಠೆ ಅವುಗಳಿಂದ ಬಹಳವಾಗಿ ಹೆಚ್ಚಿತು. ಆಹಾರ ಕ್ಷೇತ್ರದಲ್ಲಿಯೂ ಇತರ ಉತ್ಪಾದಕ ವರ್ಗದಲ್ಲಿಯೂ ಸ್ವಾವಲಂಬನದ ಗುರಿಯನ್ನು ಮುಟ್ಟಲಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಮಾತನ್ನಾಡುವುದಕ್ಕೂ ನಾವೀಗ ಧೈರ್ಯಗೊಂಡಿದ್ದೇವೆ. ಆದಾಗ್ಯೂ ನಮ್ಮನ್ನು ನಾವೇ ತಿದ್ದಿಕೊಳ್ಳುವ ಅವಶ್ಯಕತೆ ಇನ್ನೂ ಕಂಡು ಬರುತ್ತದೆ—ಮುಖ್ಯವಾಗಿ ನಮ್ಮ ಸಾಧನೆಯಲ್ಲಿ ಒಳಿಮಾನವುಂಟಾಗಬೇಕು, ಅದು ನಮ್ಮನ್ನು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಪ್ರೇರಿಸಬೇಕು; ಅಗದ ಮಾತುಗಳನ್ನೆ ಎತ್ತಿಕೊಂಡು ಟೀಕಿಸುವ ಜನಗಳ ಕಡೆಗಿನ ಆಕರ್ಷಣೆ ಕಡಿಮೆಯಾಗಬೇಕು

(೨೮ನೇ ಪುಟ ನೋಡಿರಿ)



ಜವಾಹರಲಾಲರು ಆಡಿದರೆಂದರೆ--

ಜವ್ಹಾರಲಾಲರು ಆಡಿದರೆಂದರೆ—
ಲೋಕವೆ ಆಲಿಸಿ ಕೇಳುವುದು!
ಭಾರತವಾಣಿಯು ಮೊಳಗುವುದು!
ಆಶೆಯ ಕುಡಿ ಚಿಗುರೇಳುವುದು!

ಅಖಂಡ ವಿಶ್ವವೆ ಆಡುಂಬೊಲವು
ಕನಸಿಗ, ನೆನಸಿಗ
ಜವ್ಹಾರಲಾಲರಿಗೆ!

ಜಗದಗಲದಲೆಲ್ಲ ಜಂಜಡ ಹಲವು!
ಬಗೆಮಿಗೆ ಬಿಗಿವುದು.
ಜಟಿ ಜಟಿಲವ ತೊಡಕುಗಳೆಲ್ಲೆಲ್ಲೂ!
ಗತಿ ಕಾಣದ ಲೋಕಕೆ ಭೀಕರದತಿ ಕಷ್ಟ!
ಧೃತಿ ಮಿಗಿದಿಹ ಹಿತ ಮಿತಿಯಾ ಧೃಷ್ಟ
ಮತಿಯ ಮಥಿಸಿ
ಬಗೆಯ ಹರಿಸಿ

ಒಡಲೊಡೆದು, ಮೈ ಮರೆತು
ಒರೆದೊ, ಬರೆದೊ

ಜವ್ಹಾರಲಾಲರು ಆಡಿದರೆಂದರೆ—
ಲೋಕವೆ ಆಲಿಸಿ ಕೇಳುವುದು!
ಭಾರತ ವಾಣಿಯು ಮೊಳಗುವುದು!
ಆಶೆಯ ಕುಡಿ ಚಿಗುರೇಳುವುದು!

ವಾಗ್ಘಟನಲ್ಲವೆ ಅಲ್ಲವು ನೆಹರು!
ಸಾಧನೆ ಛಲವು
ಜವ್ಹಾರಲಾಲರಿಗೆ

ಕಿಚ್ಚಿದೆ, ಕೆಚ್ಚಿದೆ, ಅಚ್ಚಿದೆ, ನೆಚ್ಚಿದೆ,
ಅವರಾ ನುಡಿಗಳಲಿ:—
"ವಿಕಾಸ ಸಮನ್ವಯ ಈ ಎರಡು
ಯುಮಳರ ತೆರದಲಿ ಕೂಡುತ ಮೆರೆದು
ಪ್ರಗತಿಯ ಪಥದಲಿ ತ್ವರಿತದಿ ನಡೆದು
ಕ್ರಾಂತಿಗೆ ಜಯವು!
ಭ್ರಾಂತಿಗೆ ಕ್ಷಯವು!"

ಕಳಕಳಿಪ, ನಳನಳಿಪ
ಮಾತುಗಳ, ಲೇಖಗಳ
ಒರೆದೊ, ಬರೆದೊ
ಜವ್ಹಾರಲಾಲರು ಆಡಿದರೆಂದರೆ—
ಲೋಕವೆ ಆಲಿಸಿ ಕೇಳುವುದು!
ಭಾರತವಾಣಿಯು ಮೊಳಗುವುದು!
ಆಶೆಯ ಕುಡಿ ಚಿಗುರೇಳುವುದು!

ಚಿಂತನೆಯಲ್ಲೆ ಸಂಚನೆ ಸಂಚಯ
ದಾತುರ ಕಾತರ
ಜವ್ಹಾರಲಾಲರಿಗೆ

ಚೇತನ ಚಿಲುಮೆಯು! ಹಿಗ್ಗಿನ ಬುಗ್ಗೆಯು
ಅಹುದಹುದು!
ಬಾಳ್ ಸಂಕಿತ! ಧರ್ಮದ ಸಂಕಟ!

ಕರ್ಮದ ಮರ್ಮದ ಸುಳಿಯಲೆ ತಡ ಬಡ!
ಧರ್ಮಕ್ಷೇತ್ರದ ಕಲಿಪಾರ್ಥನ ಅನುರೂಪ!
ಗಾಂಧಿಯ ಸಾರಥಿ,
ಗಾಂಧಿಯ ಗುರುವು!

ಕಳವಳ ಕಳೆದು, ಬೆಳಕನು ಪಡೆದು
ಎಚ್ಚೆತ್ತು, ಉಗಿಹೊತ್ತು
ಗುರ್ವಿಸಿಂ ಗರ್ಜಿಸಿ

ಜವ್ಹಾರಲಾಲರು ಆಡಿದರೆಂದರೆ—
ಲೋಕವೆ ಆಲಿಸಿ ಕೇಳುವುದು!
ಭಾರತವಾಣಿಯು ಮೊಳಗುವುದು!
ಆಶೆಯ ಕುಡಿ ಚಿಗುರೇಳುವುದು.

(ಶ್ರೀ. ದಾಮೋದರ ಬಾಳಿಗ, ಬಿ.ಎ. ಅವರಿಂದ ವಿರಚಿತವಾಗಿ ಸದ್ಯದಲ್ಲಿಯೇ ಪ್ರಕಟವಾಗಲಿರುವ "ಜವ್ಹಾರಲಾಲರು ಆಡಿದರೆಂದರೆ" ಎಂಬ ರೇಖಾಚಿತ್ರಯುಕ್ತವಾದ ಭಾವಗೀತೆಗಳ ಸಂಕಲನದಿಂದ)

ಸಮಾಜವಾದ - ಭಾರತದ ಮುಂದಿರುವ ಆದರ್ಶ

ಬರೆದವರು: ಶ್ರೀ ರಂಗನಾಥ ದಿವಾಕರ
ಬಿಹಾರದ ರಾಜ್ಯಪಾಲರು.

ಭಾರತದ ಸಂಸತ್ತು "ಸರಕಾರದ ಧೋರಣೆಯು ೧೯೪೮ನೇ ಇಸವಿಯ ಔದ್ಯೋಗಿಕ ಧೋರಣೆಗೆ ಸಂಬಂಧಿಸಿದ ಹೇಳಿಕೆಗೆ ಅನುಗುಣವಾಗಿದೆ; ನಮ್ಮ ಆರ್ಥಿಕ ಧೋರಣೆಯ ಉದ್ದೇಶವು ಸಮಾಜವಾದದ ತತ್ವಗಳನ್ನು ಅಂಗೀಕರಿಸಿದ ಸಮಾಜದ ರಚನೆಯಾಗಿದೆ; ಮತ್ತು ಸಾಮಾನ್ಯವಾಗಿ ನಮ್ಮ ಆರ್ಥಿಕ ಚಟುವಟಿಕೆಯನ್ನು ಹಾಗು ಮುಖ್ಯವಾಗಿ ಔದ್ಯೋಗಿಕ ಅಭಿವೃದ್ಧಿಯನ್ನು ಎಷ್ಟು ಹೆಚ್ಚು ಸಾಧ್ಯವೋ ಅಷ್ಟೂ ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದೆ" ಎಂಬ ಸೂಚನೆಗಳನ್ನು ಸ್ವೀಕರಿಸಿದಾಗ ಕೆಲವಂದಾದರೂ ತಮ್ಮ ಕಣ್ಣುಗಳನ್ನು ಉಜ್ಜಿಕೊಂಡಿರಬಹುದು.

ಮೇಲಿನ ಸೂಚನೆಗಳನ್ನು ಜಗತ್ತಿನಲ್ಲಿಯೇ ಹಿರಿದೆನಿಸಿದಸಂಸ್ಥೆಯಾದ ಭಾರತದ ರಾಷ್ಟ್ರೀಯ ಕಾಂಗ್ರೆಸು ಒಂದಲ್ಲ ಒಂದು ರೀತಿಯಲ್ಲಿ ಪುರಸ್ಕರಿಸಿರುವುದು ಅಪರಿಹಾರ್ಯವೇ ಆಗಿತ್ತು. ಅದಾಗ್ಯೂ ನೋಡಲಿಕ್ಕೆ ಕಣ್ಣುಗಳಿದ್ದ ಯಾರೇ ಆಗಲಿ ಭಾರತವು ಎತ್ತ ಹೋಗುತ್ತಿದೆ ಎಂಬುದನ್ನು ಬಹಳ ಮುಂಚೆಯೇ ನೋಡುವುದು ಸಾಧ್ಯವಿತ್ತು. ಪ್ರಗತಿಪರವೂದ, ಗತ್ಯಾತ್ಮಕವಾದ ಮತ್ತು ಪರಿಣಾಮಕರವಾದ ಭಾರತೀಯ ಚಿಕಿತ್ಸಕ ಬುದ್ಧಿಗೆ ಭಾರತದ ಗುರಿಯ ವಿಷಯದಲ್ಲಿ ಸಂದೇಹವೇನೂ ಇರಲಿಲ್ಲ; ಆದರೆ ಅದು ಇಷ್ಟೂ ಸಮಯವನ್ನು ನಿಜವಾಗಿಯೂ ಪ್ರಜಾಸ್ವಭುತ್ವ ಪದ್ಧತಿಗೆ ಸಮ್ಮತವಾದ, ಅಹಿಂಸಾತ್ಮಕ ಮಾರ್ಗಾನುಸರಣಿಯಾದ ವಿಧಾನವನ್ನು ಗುರಿ ಸೇರುವುದಕ್ಕೋಸ್ಕರ ಕಂಡುಕೊಳ್ಳಲು ಉಪಯೋಗಿಸಿತು. ರಕ್ತರಂಜಿತ ಕ್ರಾಂತಿಯನ್ನು ದೃಢವಾದ ಆದರೆ ನಿಜಕ್ಕೂ ಸಮಾಜವಾದವೆಂದೇ ಸ್ಪಷ್ಟವಾಗಿ ಹೇಳಬಹುದಾದ ಸಮಾಜವಾದಿ ತತ್ವಗಳನ್ನು ಅಂಗೀಕರಿಸಿದ ರಚನೆಯ ಕಡೆಗೆ ನಿರ್ದಿಷ್ಟವಾದ ಮುನ್ನಡೆಯಿಂದ ಹಿಮ್ಮೆಟ್ಟಿಸುವುದರಲ್ಲೇ ಭಾರತದ ಪ್ರತಿಭೆಯೂ ಬುದ್ಧಿವಂತಿಕೆಯೂ ಇರುತ್ತದೆ.

ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ಭಾರತದ ರಾಜಕೀಯ ಕಾರ್ಯದಲ್ಲಿ ಕೆಲವರು ಸಮಾಜವಾದಿಗಳು ಇದ್ದರು. ಸಮಾಜವಾದಿ ಪಕ್ಷವೂ ಇದ್ದಿತು. ಕೆಲವು ಕಮ್ಯುನಿಸ್ಟರು ಸಹ ಸೋವಿಯೆಟ್ ರಶ್ಯದ ಮಾದರಿಯ ಸಮಾಜವಾದವನ್ನು ಪ್ರಚಾರ ಮಾಡುತ್ತಿದ್ದರು. ಪಂಡಿತ ಜವಾಹರಲಾಲ ನೆಹರುಗಳು ತಮ್ಮ ಸಮಾಜವಾದಿ ದೃಷ್ಟಿಕೋಣವನ್ನು ಎಂದೂ ರಹಸ್ಯವಾಗಿಟ್ಟಿರಲಿಲ್ಲ. ಆದರೆ ಆ ಸಮಯದಲ್ಲಿ ಸ್ವಾತಂತ್ರ್ಯ ಸಂಪಾದನೆಯೆ ಮುಖ್ಯ ಕೆಲಸವಾಗಿತ್ತು ಮತ್ತು ವಿದೇಶಿ ಪ್ರಭುತ್ವವನ್ನು ಪರಿಣಾಮಕರವಾದ ರೀತಿಯಲ್ಲಿ ವಿರೋಧಿಸುವ ಬಗೆಯನ್ನು ಯಾರು ಸಂಘಟಿಸುತ್ತಿದ್ದರೊ ಅವರನ್ನೆ ಎಲ್ಲರೂ ಕೇಳುತ್ತಿದ್ದರು; ಮತ್ತು ಅನುಸರಿಸುತ್ತಿದ್ದರು. ಆಗ ಗಾಂಧೀಜಿಯೇ ಸರ್ವಸ್ವವಾಗಿದ್ದರು.

ಅವರ ಹಿಂದೆ ಹಲವಾರು ಅಂಶಗಳಿಂದ ಚಿತ್ರ ವಿಚಿತ್ರವಾಗಿ ಕಂಗೊಳಿಸುವ ಗುಂಪು ಇರುತ್ತಿದ್ದಿತು. ನಮ್ಮ ಕಲ್ಪನೆಯ ಪ್ರಾಚೀನ ಋಷಿಗಳ ಆಶ್ರಮದಲ್ಲಿರುವಂತೆ ಕಡಿಯುಗುಳುವ ಕ್ರಾಂತಿಪ್ರಿಯರು, ಕಲಬೆರಕೆಯನ್ನು ಸಹಿಸದ ಸಮಾಜವಾದಿಗಳು, ದೃಢಚಿತ್ತರಾದ ಭಂಡವಾಳಶಾಹಿಗಳು ಎಲ್ಲರೂ ಒಂದೇ ವ್ಯಕ್ತಿಯ ಮುಂದೆ ಸಿಲ್ಲುತ್ತಿದ್ದರು. ಆದರೆ ಅವರೆಲ್ಲರೂ ಗಾಂಧೀಜಿಯನ್ನು ಜೆನ್ನಾಗಿ ತಿಳಿದಿರಲಿಲ್ಲವೆಂದರೆಯೇ ಸರಿಯಾದೀತು. ಅದೇ ಸಮಯ ಬೇರೆ ಭಾಷೆಯನ್ನೆ ಉಪಯೋಗಿಸಿಯೇ ಆಗಲಿ ಗಾಂಧೀಜಿಯವರು ಪ್ರತಿಪಾದಿಸುತ್ತಿದ್ದ ಸಮಾಜವಾದವನ್ನು ಯಾರೂ ಕಳೆದುಕೊಳ್ಳುವಂತಿದ್ದಿಲ್ಲ. ಗಾಂಧೀಜಿಯವರಿಗೆ ಪ್ರತಿಯೊಂದನ್ನೂ ತಮ್ಮ ಸತ್ಯ ಮತ್ತು ಅಹಿಂಸೆಯ ಸಿದ್ಧಾಂತಕ್ಕೆ ಇಳಿಸಿಕೊಳ್ಳುವ ಅಭ್ಯಾಸವಿದ್ದಿತು. ಜಾತಿಮತ ಹಾಗು ವರ್ಗ ರಹಿತವಾದ ಸಮಾಜದ ಕುರಿತು ಅವರ ಒತ್ತಾಯ, ಒಬ್ಬನು ತನ ಆಸ್ತಿಯ ವಿಶ್ವಸ್ತನೆಂಬ ಅವರ ಸಿದ್ಧಾಂತ, ಪ್ರತಿಯೊಂದೂ ಬಗೆಯ ಶೋಷಣೆಯ ಕುರಿತು ಅವರ ಕ್ರೋಧ, ಕಾರ್ಮಿಕ ವರ್ಗದ ಪರವಾಗಿಯೂ ಭಂಡವಾಳ ಶಾಹಿಯೊಂದಿಗೆ ಆ ವರ್ಗದ ಸಮಾನತೆಗಾಗಿಯೂ ಅವರು ಮುಂದಿಟ್ಟ ವಾದ ಇವೆಲ್ಲವೂ ಸಮಾಜವಾದಿ ತತ್ವವನ್ನೆ ತಿರುಳಾಗಿ ಪಡೆದಿದ್ದವೆಂಬುದರಲ್ಲಿ ಯಾವ ಸಂದೇಹವೂ ಇರಲಾರದು. ಸಮಾಜವು ಅತ್ಯಂತ ಸ್ಪರ್ಶರೆನಿಸಿದ ಮಹಿಳೆಯರನ್ನೂ ಅಸ್ಪೃಶ್ಯರೆನಿಸಿದವರನ್ನೂ ಅನ್ಯಾಯವಾಗಿ ನಡೆಸಿಕೊಳ್ಳುತ್ತಿರುವುದನ್ನು ಕಂಡು ಗಾಂಧೀಜಿಯವರು ಅವರ ಹಿತದ ಸಲುವಾಗಿಯೂ ಒಳ್ಳೆಯ ಉತ್ಸಾಹದಿಂದ ದುಡಿದರು. ವ್ಯಕ್ತಿಗತವಾಗಿ ಅವರು ತಮ್ಮೆಲ್ಲ ಆಸ್ತಿಯನ್ನೂ ತ್ಯಜಿಸಿ, ಒಡವನಂತೆ ಜೀವಿಸಿದರು. ಹೀಗೆ ಅವರು ಹೆಸರೊಂದನ್ನು ಬಿಟ್ಟು ಬೇರೆಲ್ಲ ರೀತಿಯಲ್ಲೂ ಸಮಾಜವಾದಿಗಳಾಗಿದ್ದರು. ಹಿಂಸೆಯನ್ನು ತ್ಯಜಿಸಲಾದ ಕಮ್ಯುನಿಸಮ್ಮನ್ನು ಸಾಧ್ಯ ಅಂಗೀಕರಿಸುವುದಾಗಿಯೂ ಅವರು ಹೇಳಿದ್ದರು. ಇದೆಲ್ಲ

(೨೬ನೇ ಪುಟ ನೋಡಿರಿ)

ದಿ ಆರ್ಯ ವೈದ್ಯ ಶಾಲಾ,
ಕೋಟ್ಟಕಲ್
ಇವರು ಇತ್ತೀಚೆಗೆ ಕಟ್ಟಿಸಿದ ಸಂಪೂರ್ಣ ವಿದ್ಯುತ್ ಸಲಕರಣೆಗಳಿಂದಲೂ
ಆಧುನಿಕ ಆರೋಗ್ಯ ಸೌಕರ್ಯಗಳಿಂದಲೂ ಕೂಡಿರುವ
ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮಿನಲ್ಲಿ
ನರಳುವ ಜನಾಂಗಕ್ಕೆ
ಸುರಕ್ಷಿತ ಆಶ್ರಯವನ್ನು
ಒದಗಿಸುತ್ತಾರೆಂಬುದು ಇದೀಗ ದೃಢವಾಗಿದೆ.
ಧಾರಾ, ಫಿಜಿಶಿಲ್, ಶಿರೋವಸ್ತಿ ಇತ್ಯಾದಿ
ಕೇರಳ ಆಯುರ್ವೇದೀಯ ವಿಶೇಷ ಚಿಕಿತ್ಸೆಗಾಗಿ ವಿಶಿಷ್ಟ ಸೌಕರ್ಯಗಳಿವೆ.
ಧರ್ಮಾರ್ಥ ವಿವರಗಳಿಗೆ ಬರೆಯಿರಿ.
THE ARYA VAIDYA SALA,
KOTTAKAL.

ಅಣುಯುಗ ಹಾಗು ಮಾನವ ಜೀವನ

ಬರೆದವರು: ಪ್ರೊ. ಕೆ. ಎಸ್. ಸವಣೂರು, ಎಮ್.ಎಸ್‌ಸಿ.

ಪಾಸ್ತಾವಿಕ: ಇಂದು ವಿಜ್ಞಾನಿಗಳ ಶೋಧಗಳು ಅನೇಕ ಉಪಯುಕ್ತವಾದ ರೀತಿಗಳಲ್ಲಿ ಕಾರ್ಯಮಾಡತೊಡಗಿವೆ. ಮನುಷ್ಯನಿಗೆ ತನ್ನ ಬೇಡಿಕೆ ಹಾಗು ಆಶೆ-ಆಕಾಂಕ್ಷೆಗಳನ್ನು ಪೂರ್ತಿ ಮಾಡಿಕೊಳ್ಳುವ ಅನೇಕ ಸಲಕರಣೆಗಳು ಉಪಲಬ್ಧವಿದ್ದು, ಇಂದು ಅವನು ತನಗೆ ಬೇಕಾದ ನಾಗರಿಕತೆಯನ್ನು ನಿರ್ಮಿಸಿಕೊಂಡಿದ್ದಾನೆ. ನಿಸರ್ಗವು ಒದಗಿಸಿದ ಶಕ್ತಿಯನ್ನು ಹಿನ್ನೆಲೆಯಲ್ಲಿ ಇರಿಸಿ ಕಾರ್ಯಮಾಡಲಿರುವ ವಿಜ್ಞಾನವು ಇಂದು ಮಾನವನ ಆಯುರ್ಮರ್ಯಾದೆಯನ್ನು ಹೆಚ್ಚಿಸಿದೆಯಲ್ಲದೆ, ಜಗತ್ತಿನ ಜನಸಂಖ್ಯೆಯೂ ಹೆಚ್ಚತೊಡಗಿದೆ. ವಿಮಾನ, ರೇಡಿಯೊ ಇತ್ಯಾದಿಗಳ ಮೂಲಕ ಜಗತ್ತಿನೊಳಗಿನ ಎಲ್ಲ ರಾಷ್ಟ್ರರಾಷ್ಟ್ರಗಳೊಳಗಿನ ಅಂತರವು ಕಡಿಮೆಯಾದಂತೆ ಎನಿಸತೊಡಗಿದೆಯಲ್ಲದೆ, ಇಂದು ಜಗತ್ತೇ ಚಿಕ್ಕದೆಂದು ತೋರತೊಡಗಿದೆ. ಒಂದು ರಾಷ್ಟ್ರದೊಳಗಿನ ಆಗುಹೋಗುಗಳು ಬೇರೆ ರಾಷ್ಟ್ರಗಳ ಮೇಲೆ ತಮ್ಮ ಪ್ರಭಾವಗಳನ್ನು ಬೀರತೊಡಗಿವೆ. ಈ ಎಲ್ಲ ಕಾರಣಗಳಿಂದಾಗಿ ಹಾಗು ಅಣುಶಕ್ತಿಯ ಉದಯದಿಂದಾಗಿ, ನಾವೆಲ್ಲರೂ ಅಣ್ಣತಮ್ಮಂದಿರಂತೆ ಇರಲೇಬೇಕು ಇಲ್ಲವಾದರೆ ನಿರ್ನಾಮವಾಗಬೇಕು ಎಂಬ ಪರಿಸ್ಥಿತಿಯು ಇಂದು ಉದ್ಭವಿತವಾಗಿದೆ. ಮುಖ್ಯವಾಗಿ ವಿಜ್ಞಾನವು ಹೊರಗೆಡಹಿದ ಶಕ್ತಿಯು ಝರಿಗಳು ಯೋಗ್ಯವಾಗಿ ಹಾಗು ಮಾನವ ಜನಾಂಗದ ಹಿತಕ್ಕಾಗಿ ಎಂಬ ರೀತಿಯಲ್ಲಿ ಉಪಯೋಗವಾಗಲೇಬೇಕು ಎಂಬ ಪರಿಸ್ಥಿತಿಯೂ ನಿರ್ಮಾಣವಾಗಿದೆ.

ಅಣುಶಕ್ತಿಯ ಉದಯ: ಇಂದು ಅಣುಶಕ್ತಿಯನ್ನು ನಿಷೇಧಿಸುವ ಅನೇಕರು ಇರುವರು. ಸೂಕ್ಷ್ಮವಾಗಿ ವಿಸೇಚಿಸಿದಲ್ಲಿ, ಅಣುಶಕ್ತಿಯ ದುರುಪಯೋಗವನ್ನು ಎಲ್ಲರೂ ನಿಷೇಧಿಸಬೇಕು ಎಂಬುದೇ ಮಹತ್ವದ್ದು; ಆದರೆ ಇಂದು ವಿಜ್ಞಾನಿಗಳು ಅಣುಶಕ್ತಿಯೆಂಬ ಝರಿಯನ್ನು ಯಾವ ಪರಿಸ್ಥಿತಿಯಲ್ಲಿ ಪರಿಶ್ರಮಪಟ್ಟು ಹುಡುಕಿದ್ದಾರೆ ಹಾಗು ಇಂತಹ ಝರಿಯು ಶೋಧಿಸಲ್ಪಡದಿದ್ದರೆ ಈ ಶಕ್ತಿಯ ದುರುಪಯೋಗಕ್ಕಿಂತಲೂ ಹೆಚ್ಚಿನ ಅನಾಹುತವು ಕ್ರಮೇಣ ಆಗುತ್ತಲಿದ್ದಿತು ಎಂಬುದನ್ನು ನೆನೆದಾಗ, ನಿಸರ್ಗವು ಮಾನವ ಜನಾಂಗದ ಮೇಲೆ ಎಂತಹ ವರಪನ್ನು ನೀಡಿದೆ ಮತ್ತು ಇಂತಹ ನಿಸರ್ಗಕ್ಕೆ ನಾವು ಹೇಗೆ ಕೃತಜ್ಞರಾಗಿ ಉಳಿಯಬೇಕು ಎಂಬುದು ತಿಳಿದು ಬರುವುದು. ಇಂದು ಜಗತ್ತಿನಲ್ಲಿಯ ಎಲ್ಲ ಶಕ್ತಿಸಂಚಯದ ಹಿನ್ನೆಲೆಯಲ್ಲಿ ಕಲ್ಲಿದ್ದಲಿನ ಶಕ್ತಿಯೇ ಹೆಚ್ಚಾಗಿ ಇದೆ. ಅದೇ ಪ್ರಕಾರ ಕಲ್ಲಿದ್ದಲಿನ, ಪೆಟ್ರೋಲ್ ಮುಂತಾದವುಗಳ ಸಂಚಯವು ಇಂದು ತೀರತೊಡಗಿದೆ. ಸಾಧಾರಣವಾಗಿ ಇನ್ನು ೨೦೦ ರಿಂದ ೩೦೦ ವರುಷಗಳ ಒಳಗಾಗಿ ಮಾನವನ ಶಕ್ತಿಸಂಚಯದ ಬ್ಯಾಂಕು ದಿವಾಳಿಯ ಹಾದಿಯನ್ನು ಹಿಡಿಯುವ ದರಲ್ಲಿಯೇ ಇತ್ತು. ಈ ಶಕ್ತಿಯ ಬರವು ಬರುವ ಪೂರ್ವದಲ್ಲಿಯೇ ನಿಸರ್ಗವು ಮಾನವನ ಹೆಸರಿನಲ್ಲಿ ಅಕ್ಷಯವಾದ ಶಕ್ತಿಸಂಚಯವನ್ನು 'ಅಣುಶಕ್ತಿಯ ರೂಪದಲ್ಲಿ', ಈ ಶಕ್ತಿ ಬ್ಯಾಂಕಿನಲ್ಲಿ ಜಮೆಮಾಡಿದಂತೆ ಆಗಿದೆ. ಈ ಅಣುಶಕ್ತಿಯ ದುರುಪಯೋಗವು ಹೇಗೆ ಮಾನವ ಜನಾಂಗದ ಹೆಸರನ್ನೇ ಜಗತ್ತಿನಿಂದ ಅಳಿಸಲು ಶಕ್ಯವಿದೆ ಎಂಬುದನ್ನು ನೆನೆದಾಗ, ಮುಖ್ಯವಾಗಿ ಎರಡು ಸಂಗತಿಗಳು ನಮ್ಮೆದುರು ನಿಲ್ಲುತ್ತವೆ. ಈ ಶಕ್ತಿಯನ್ನು ಮಾನವ ಜನಾಂಗವು ತನ್ನ ಕಲ್ಯಾಣಕ್ಕೆ ಉಪಯೋಗಿಸಿಕೊಳ್ಳುವುದಲ್ಲದೆ, ಎಲ್ಲರೂ ತಮ್ಮ ತಮ್ಮಲ್ಲಿಯ ದುಷ್ಟಸ್ವಭಾವದ ಅಂಶವನ್ನು ಕಿತ್ತೊಗೆದು ಸುಖಬಾಳನ್ನು ಸಾಗಿಸಬೇಕು ಎಂಬವುಗಳೇ ಈ ಎರಡು ಸಂಗತಿಗಳು. ಅಣುಶಕ್ತಿಯ ದುರುಪಯೋಗದ ಭಯವು ಮಾನವ ಸ್ವಭಾವವನ್ನು ತಿದ್ದಿಯೇ ತೀರುವುದು, ಆದರೆ ಮಾನವನು ಇದೇ ಕೆಲಸವನ್ನು ಇಂತಹ ಬೆದರಿಕೆಯ ಹಿನ್ನೆಲೆಯಲ್ಲಿ ಮಾಡದೆ, ಆತ್ಮ ಸಂತೋಷದಿಂದ ಮಾಡುವುದು ಅವನ ಗೌರವಕ್ಕೆ ಸಲ್ಲುವ ಕಾರ್ಯವೆಂದು ಹೇಳಬಹುದು.

ಅಣುಯುಗ ಹಾಗು ಮಾನವನ ಆಶೆ--ಅಂಜಿಕೆಗಳು: ಇಂದಿನ ಜಾಗತಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ, ಮಾನವ ಸಮಾಜದ ರಚನೆಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸುವ ಸಮಯವು ಇದೀಗ ಅತ್ಯಗತ್ಯವಾಗಿದೆ ಎಂದು ಕಂಡುಬರುವುದು. ರಾಯಲ್ ಸೊಸಾಯಟಿಯ ಪ್ರೆಸಿಡೆಂಟರಾದ ಎಡ್ರಿಯಾನ್‌ರ ಅಭಿಪ್ರಾಯದಂತೆ- 'ಇಂದು ನಿಸರ್ಗದ ಮೇಲೆ ಮಾನವನು ದೊರಕಿಸಿದ ವಿಜಯವು ಅತ್ಯಪೂರ್ವವಾಗಿದ್ದು, ಕೇವಲ ಒಂದು ವಿದ್ಯುತ್ ಗುಂಡಿಯನ್ನು ಒತ್ತಿ ಜಗತ್ತಿನ ಮೂರರಲ್ಲಿಯ ಎರಡು ಭಾಗವನ್ನು ಹಾಳುಗೆಡವಬಹುದಾಗಿದೆ.' ಇಂದು ವಿಜ್ಞಾನವು ನಾಗರಿಕ ಜೀವನವನ್ನು ಸಾಗಿಸುವ ಕಲೆಯನ್ನು ನಮ್ಮೆಲ್ಲರಿಗೂ ಕಲಿಸಿದೆ ಎಂದು ಒಪ್ಪಿದರೂ, ನಮ್ಮ ಹೆಚ್ಚಿನ ಸುಧಾರಣೆಗೆ ಮಾನವ ಸ್ವಭಾವದ ಒಳನೋಟವೇ ಕಾರಣವಾಗಬಲ್ಲದು. ಎಂದರೆ ಇಂದು ವಿಜ್ಞಾನವು ಭೌತಿಕವಾಗಿ ಬೆಳೆದು ನಮಗೆ ಸುಖ ಸೌಕರ್ಯಗಳನ್ನು ನೀಡಿದ್ದರೂ, ಇವುಗಳನ್ನು ಅಳವಡಿಸಿಕೊಳ್ಳಲು ಬೇಕಾಗುವ ಮಾನವ ಸ್ವಭಾವದ ಪರಿಚಯವು ಇನ್ನೂ ನಮಗೆ ಪೂರ್ತಿಯಾಗಿ ಆಗಿಲ್ಲ. ಈ ಹಂತಕ್ಕೆ ಬರುವಂತೆ ಸಾಮಾಜಿಕ ವಿಜ್ಞಾನಗಳ ಬೆಳವಣಿಗೆಯು ಇಂದು ಅಗತ್ಯವಾಗಿದೆ.

ಇಂದು ಸಮಾಜ ವಿಜ್ಞಾನವು ಕಾರ್ಯವನ್ನೇನೋ ಪ್ರಾರಂಭಿಸಿದೆ. ಇಲ್ಲಿ ಸಾಧಿಸಲ್ಪಟ್ಟ ಪ್ರಗತಿಯು ಅತ್ಯಲ್ಪವಿದ್ದು, ಬೇರೆ ಬೇರೆ ದಿಶೆಯಲ್ಲಿ ಜರಗಲಿರುವ ಕಾರ್ಯಗ

(೨೫ನೇ ಪುಟ ನೋಡಿರಿ)

1954- ರಜತ ಮಹೋತ್ಸವ ವರ್ಷ

ಜೀವ ವಿಮೆಯ ಅತ್ಯುತ್ತಮ ಪ್ರಯೋಜನಗಳನ್ನು ಸಾರ್ವಜನಿಕರಿಗೆ ಒದಗಿಸುವ ಬಗ್ಗೆ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿಯು **1929**ನೆಯ ಇಸವಿಯಲ್ಲಿ ಸ್ಥಾಪಿತವಾಯಿತು.

ವರ್ಷದಿಂದ ವರ್ಷಕ್ಕೆ—ಅದು ತನ್ನ ವ್ಯವಸ್ಥೆಯನ್ನು ವಿಸ್ತರಿಸುತ್ತಾ ಬರುತ್ತಿದೆ. ಇಂದು ಪತ್ರಿಕೆಗಳೂ ವಿಮೆಗಾರರಾದ ಸಾರ್ವಜನಿಕರೂ ಈ ಕಂಪೆನಿಯು ಭದ್ರವಾದುದೆಂದೂ, ಸುವ್ಯವಸ್ಥಿತವಾದ ವಿಮಾ ಕಂಪೆನಿಯೆಂದೂ ಕೊಂಡಾಡುತ್ತಿರುವರು.

ಪೊಪ್ಯುಲರ್ ಕಂಪೆನಿಯ ಪ್ರಾತಿನಿಧ್ಯವನ್ನು ಸ್ವೀಕರಿಸಲು ನಿಮ್ಮನ್ನು ಕರೆಯುತ್ತೇವೆ. ಕಮಿಶನ್ನಿನ ಮೇಲೆ ಕೆಲಸ ಮಾಡುವುದಕ್ಕೆ ಉತ್ತಮವಾದ ವಿಶೇಷ ಅವಕಾಶಗಳಿವೆ.

ವೇತನ ದೊರೆಯುವ ಇನ್ಸ್‌ಪೆಕ್ಟರ್ ಅಥವಾ ಓರ್ಗನೈಜರ್ ಕೆಲಸದ ವಿವರಕ್ಕೆ ಬರೆದುಕೊಳ್ಳಿ.

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಹೆಡ್ ಆಫೀಸು: ಪೊಪ್ಯುಲರ್ ಬಿಲ್ಡಿಂಗ್ಸ್, ಮಂಗಳೂರು—1.

THE POPULAR INSURANCE COMPANY LTD.

Head Office: **Popular Buildings, MANGALORE—1.**

ಅಮೇರಿಕದಲ್ಲಿ ಕೃಷಿ ಮತ್ತು ಪಶು ಸಂಗೋಪನೆ

ಬರೆದವರು: ಶ್ರೀ ಕೆ. ಸದಾನಂದ ಹೆಗ್ಡೆ, ಎಂ.ಸಿ.

ನನ್ನ ಅಮೇರಿಕದ ಅನುಭವಗಳನ್ನು ಈ ಜಿಲ್ಲೆಯ ನನ್ನ ಬಾಂಧವರೊಡನೆ ಚರ್ಚಿಸಬೇಕೆಂದು ನನಗೆ ಆಸೆ ಇದೆ. ಆದರೆ ಅದಕ್ಕೆ ಸಾಲುವಷ್ಟು ಸಮಯ ನನಗೆ ಸಿಗದಿರುವ ನಿಮಿತ್ತ ನಾನು ಉದ್ದವಾದ ಪ್ರಬಂಧವನ್ನು ಬರೆಯದೆ ಸಣ್ಣ ಸುಟ್ಟ ಕೆಲ ಲೇಖನಗಳಿಂದಲೇ ತೃಪ್ತಿಪಡಬೇಕಾಗಿದೆ. ಪ್ರಕೃತದ ಲೇಖನದಲ್ಲಿ ನಾನು ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಕೃಷಿ ಮತ್ತು ಪಶು ಸಂಗೋಪನೆಯ ಕ್ರಮಗಳನ್ನು ವಿವರಿಸುತ್ತೇನೆ.

ನಾನು ಅಲ್ಲಿದ್ದಾಗ ಎಷ್ಟೋ ಕೃಷಿಕ್ಷೇತ್ರಗಳನ್ನೂ, ಪಶು ಕ್ಷೇತ್ರಗಳನ್ನೂ ಸಂದರ್ಶಿಸಿದ್ದುಂಟು. ದೊಡ್ಡ ಹೊಲಗಳನ್ನು ನೋಡಿದ್ದೇನೆ, ಚಿಕ್ಕವನ್ನೂ ಕಂಡಿದ್ದೇನೆ. ಜಾಸುವಾರು ಸಾಕಣೆಯಲ್ಲಿಯೂ ಹಾಗೆಯೇ ದೊಡ್ಡ ಕೇಂದ್ರಗಳು, ಸಣ್ಣ ಕೇಂದ್ರಗಳು—ಎರಡನ್ನೂ ನೋಡಿದ್ದೇನೆ. ಇವು ಭಾರತದಲ್ಲಿರುವ ಇಂಥ ಕೇಂದ್ರಗಳಿಗಿಂತ ತೀರ ಭಿನ್ನವಾದುವು ಎಂಬುದು ಮೊದಲ ನೋಟಕ್ಕೇ ತಿಳಿಯುತ್ತದೆ.

ನಮ್ಮ ಭಾರತದಲ್ಲಿ ಪಶುಗಳ ಸಂಖ್ಯೆಯೇನೋ ಕೋಟ್ಯಾಂತರ ಇರಬಹುದಾದರೂ, ನಮ್ಮ ಪಶು ಸಂಪತ್ತು ಅತಿ ಕ್ಷೀಣದೆಶೆಯಲ್ಲಿದೆ ಎಂಬುದನ್ನು ನಾವು ಒಪ್ಪಬೇಕಾಗಿದೆ. ಸಂಖ್ಯೆ ದೊಡ್ಡದಾದರೂ ಗುಣದಲ್ಲಿ ಕಡಮೆ—ಹೀಗಾಗಿದೆ ನಮ್ಮ ಅವಸ್ಥೆ. ಒಂದು ಸಾಧಾರಣ ದನ ಕೊಡುವಂಥ ಹಾಲು ಒಂದೆರಡು ಸೇರಿಗೆ ಮಿಗುವುದಿಲ್ಲ. ಎಮ್ಮೆ ಅದಕ್ಕಿಂತ ಸ್ವಲ್ಪ ಹೆಚ್ಚು ಕರೆಯುತ್ತದೆ. ಅಮೇರಿಕದಲ್ಲಿ ಒಂದು ಸೋಜಿಗ: ನನಗೆ ಅಲ್ಲಿ ಎಮ್ಮೆಗಳೇ ಕಾಣಸಲಿಲ್ಲ; ಆದರೆ ಅವರ ದನಗಳು ನಮ್ಮ ಎಮ್ಮೆಗಳಿಗಿಂತಲೂ ಹೃಷ್ಟ ಪುಷ್ಟವಾಗಿ, ಗಾತ್ರದಲ್ಲಿ ಎರಡೆಮ್ಮೆಗಳಂತೆ ಇರುತ್ತಿದ್ದುವು. ಅವರ ದನಗಳಲ್ಲಿ ಎರಡು ಬಗೆ (೧) ಮಾಂಸಕ್ಕಾಗಿ ಉಪಯೋಗಿಸಲ್ಪಡುವಂಥವು; (೨) ಹಾಲು ಕರೆಯುವಂಥವು. ಈ ಎರಡನೆಯದನ್ನು ಮಾಂಸಕ್ಕೋಸ್ಕರ ಪ್ರಾಯಃ ಉಪಯೋಗಿಸುವ ಕ್ರಮವಿಲ್ಲ. ಅಲ್ಲಿನ ಜನ ದನದ ಮಾಂಸವನ್ನು ಆಹಾರದಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ಈಚೆಗೆ ಮಾಂಸಕ್ಕೂ; ಹಾಲಿಗೂ ಎರಡಕ್ಕೂ ಯೋಗ್ಯವಾದ ದನಗಳ ತಳಿಯನ್ನು ಅವರು ತಯಾರಿಸುತ್ತಿದ್ದಾರೆಂದು ನಾನು ಕೇಳಿದೆ. ಆದರೆ ಈ ಜಾತಿ ದನ ಈಗಂತೂ ಅಲ್ಲಿ ವಿಶೇಷವಾಗಿ ಕಂಡು ಬರುವುದಿಲ್ಲ. ದನಗಳ ಸಾಕಣೆಯನ್ನು ಅಲ್ಲಿ ಬಹಳ ಚೆನ್ನಾಗಿ ಮಾಡುತ್ತಾರೆ. ಅವುಗಳಿಗೆ ತೀನಿ ಇಡುವುದರಲ್ಲಿ ವೈಜ್ಞಾನಿಕ ವಿಧಾನಗಳಿವೆ. ದನಗಳಿಗೂ ಮನುಷ್ಯರಂತೆ ಕ್ರಮಪ್ರಕಾರವಾಗಿ, ನಿಶ್ಚಿತಕಾಲದಲ್ಲಿ ಆಹಾರದ ಪೂರೈಕೆ ನಡೆಯಬೇಕು. ಅಮೇರಿಕದಲ್ಲಿ ಒಬ್ಬ ದೊಡ್ಡ ಮನುಷ್ಯರು ತಾವು ದನಗಳಿಗೆ ಧಾನ್ಯವನ್ನು ತಿನ್ನಿಸಿ, ಆ ದನಗಳನ್ನು ತಾವು ತಿನ್ನುತ್ತಾರೆಂದು ನನ್ನ ಹತ್ತಿರ ಹೇಳಿದರು. ಇದೇನೂ ಅತಿಶಯೋಕ್ತಿಯಲ್ಲ. ಅವರ ದನದ ಕೊಟ್ಟಿಗೆಗಳು ಸ್ವಚ್ಛವಾಗಿದ್ದು, ಸೂರ್ಯನ ಬೆಳಕಿಗೆ ಅವಕಾಶ ಕೊಡುತ್ತವೆ. ದನಗಳಿಗೆ ಮೇವು ಹಾಕುವ ಸಮಯದ ಒಂದು ಪಟ್ಟಿಯು ಅಲ್ಲೇ ಇರುತ್ತದೆ. ಹಾಲು ಕರೆಯಲು ವಿದ್ಯುತ್ತಿನ ಸಲಕರಣೆಯುಂಟು. ಐಂದಿಂದ ಐಂ ಸೇರಿನ ತನಕವೂ ಹಾಲು ಕರೆಯುವ ದನಗಳು ಅಲ್ಲಿ ಸಾಮಾನ್ಯ. ಕರುವಿಗೆ ತಾಯಿಯ ಮೊಲೆ ಹಾಲೂಡಿಸುವ ಪದ್ಧತಿ ಅಲ್ಲಿಲ್ಲ. ತಾಯಿಯ ಜತೆಗೆ ಕರು ಒಂದು ದಿನ ಇರುತ್ತದಂತೆ; ಆ ಮೇಲೆ ಅದನ್ನು ತಾಯಿಯಿಂದ ಬೇರ್ಪಡಿಸಿ, ಬಾಟ್ಲಿಯಲ್ಲಿ ಅದಕ್ಕೆ ಹಾಲು ಕುಡಿಸುತ್ತಾರೆ. ಕಂದ ಸಮಯದಲ್ಲಿ ಕರುವನ್ನು ತಾಯಿಯ ಹತ್ತಿರ ಬಿಡುವುದಕ್ಕಿಂತ ನಿಯಮಿತ ಕಾಲಕ್ಕೆ ಹಾಲು ಕುಡಿಸುವ ಈ ಕ್ರಮವು ಯೋಗ್ಯವೆಂದು ನನ್ನ ಭಾವನೆ. ಅದರಿಂದಲೇ ಕರುಗಳು ಸಾಯುವುದು ಕಡಮೆ. ಸಂಯುಕ್ತ ರಾಜ್ಯದಲ್ಲಿ ಹಾಲಿನ ಪೂರೈಕೆಯ ಗಾತ್ರ ವರ್ಣನಾತೀತ. ಬೆಣ್ಣೆಯೂ ಹಾಗೆಯೇ. ಹಾಲು, ಬೆಣ್ಣೆ ಹಾಳಾಗುವುದೆಂದಿಲ್ಲ, ಅವನ್ನು ಶೈತ್ಯೋಪಕರಣಗಳಲ್ಲಿಟ್ಟು ಜೋಪಾಸನೆ ಮಾಡುತ್ತಾರೆ. ಹೀಗೆ ಶೈತ್ಯದಲ್ಲಿಟ್ಟ ಹಾಲು ಹೈನದಿಂದಲೇ ಅವರು ಎರಡು ವರ್ಷ ಇಡಿ ಸಂಯುಕ್ತ ರಾಜ್ಯದಲ್ಲಿ ಸ್ರಜೆಗಳಿಗೆ ಸರಬರಾಯಿ ಮಾಡಬಹುದಂತೆ—ಇನ್ನು ದನಗಳನ್ನು ಮುಟ್ಟದೆಯೇ! ಹೋಟೆಲುಗಳಲ್ಲಿ ಕೇಳಿದಷ್ಟು ಬೆಣ್ಣೆಯನ್ನು ಧರ್ಮಾರ್ಥವಾಗಿ ಎಂಬಂತೆ ಕೊಡುತ್ತಾರೆ. ಬಿಸಿ ಹಾಲು, ತಣ್ಣಗೆ ಹಾಲು, ಶೈತ್ಯದಲ್ಲಿಟ್ಟ ಹಾಲು—ಹೀಗೆ ಮೂರು ವಿಧದ ಹಾಲು ಅಲ್ಲಿ ಸಿಗುತ್ತದೆ. ಹಾಲಿನ ಹಿಟ್ಟು ಹೇಗೂ ಇದ್ದೇ ಇದೆ. ಸಾಧಾರಣವಾಗಿ ಒಂದು ಸಾಮಾನ್ಯ ದನದ ಭಾರ ೨೦೦ರಿಂದ ೮೦೦ ರಾತಲುಗಳ ವರೆಗೂ ಇರಬಹುದಂತೆ. ನಮ್ಮ ದೇಶದಲ್ಲಿರುವ ಹಾಗೆ ಪೂರ್ಣೋಪವಾಸ ಅಥವಾ ಅರ್ಧೋಪವಾಸದಲ್ಲಿರುವಂಥ ದನ ಒಂದೇ ಒಂದು ನನ್ನ ಕಣ್ಣಿಗೆ ಬೀಳಲಿಲ್ಲ. ನಾವು ಗೋಪೂಜೆ ಮಾಡಿ ಅವನ್ನು ಉಪವಾಸ ಹಾಕುವವರು; ಅವರು ಅವುಗಳ ಮಾಂಸವನ್ನು ತಿಂದರೂ ಅವು ಬದುಕಿರುವಷ್ಟು ಕಾಲ ಅವುಗಳಿಗೆ ಸರಿಯಾಗಿ ತಿಂಡಿ ತೀರ್ಥ ಕೊಟ್ಟು, ಉಪಚರಿಸುವವರು. ನನಗೆ ನಮ್ಮ ಧೋರಣೆ ಅತಿ ವಿಚಿತ್ರವಾಗಿ ಕಾಣುತ್ತದೆ. ಯಾವ ಪಶುವನ್ನು ನಾವು ಪೂಜಿಸುತ್ತೇವೋ ಅವರ ವಿಷಯ ನಾವು ತೋರಿಸುವ ಉಲಕ್ಷ್ಯ ಇನ್ನಾವ ದೇಶದಲ್ಲಿದೆಯೋ?

ಹಂದಿ ಮತ್ತು ಕೋಳಿಗಳ ಸಾಕಣೆಯೂ ಅಲ್ಲಿ ಸುಧಾರಿತ ಕ್ರಮದಲ್ಲೇ ನಡೆಯುತ್ತದೆ. ನಾನು ನೋಡಿದ ಕೆಲವು ಹಂದಿಗಳು ಸಾಧಾರಣ ನಮ್ಮ ದನಗಳಿಗಿಂತ ಭಾರವಿರಬಹುದು. ೩೦೦ ರಾತಲಿನ ಹಂದಿಗಳನ್ನು ನಾನು ನೋಡಿದ್ದೇನೆ. ಕೋಳಿಗಳಿಗೂ ಕ್ರಮವಾಗಿ, ಚೆನ್ನಾಗಿ ತಿಂಡಿ ಹಾಕುತ್ತಾರೆ. ರೈತನಿಗೆ ಹಂದಿ ಕೋಳಿಗಳಿಂದ ಸ್ವಲ್ಪ ವಿಶೇಷ ಆದಾಯವು ದೊರೆಯುತ್ತದೆ. ಅವುಗಳನ್ನು ಕೊಲ್ಲುವುದಕ್ಕೆ ನಿಶ್ಚಿತವಾದ ಒಂದು ವಯಸ್ಸಿದೆ. ಮಾಂಸವನ್ನು ಶೈತ್ಯದಲ್ಲಿಟ್ಟು ಕಾಪಾಡುವುದರಿಂದ, ಕೊಳೆಯುವ ಮಾಂಸ ಅಲ್ಲಿ ಸಿಗುವುದೇ ಇಲ್ಲ. ರೈತರಲ್ಲಿ ಎಷ್ಟೋ ಜನರ ಹತ್ತಿರ ಸ್ವಂತ ಶೈತ್ಯೋಪಕರಣಗಳಿವೆ. ಅಂತೆಯೇ ಹೊಟ್ಟೆಗಳನ್ನು ಬಸ್ ಪ್ಲಾಂಟಿನಲ್ಲಿ ಹುತ್ತಾರೆ. ನಾವು ಹೊಟ್ಟೆಯನ್ನು ಕೊಂಡುಕೊಳ್ಳುವಾಗ ಅದು ಯಾವಾಗ ಹುಟ್ಟಿದ್ದೆಂಬ ತಾರೀಕನ್ನೂ ನಮಗೆ ತಿಳಿಸುತ್ತಾರೆ.

ಇನ್ನು ಅವರ ಕೃಷಿಯೋ, ನೂತನವಾದ ವಿಧಾನಗಳ ಬಳಸುವಿಕೆಯಿಂದ ಜರುಗುವ ಅಲ್ಲಿನ ಕೃಷಿ ಉನ್ನತಮಟ್ಟ ಅತ್ಯದ್ಭುತವಾದುದು. ಒಂದು ರೈತ ಕುಟುಂಬವು 40 ಎಕರೆಯಿಂದ 600 ಎಕರೆಯ ವರೆಗಿನ ಜಮೀನನ್ನು ನೋಡಿಕೊಳ್ಳುವುದೂ ಉಂಟು. ಕೃಷಿ ಎಂದರೆ ಅಲ್ಲಿ ಕೌಟುಂಬಿಕ ಕೃಷಿ. ದುಡಿಯುವವನೇ ಜಮೀನಿನ ಒಡೆಯ; ಅಥವಾ ಜಮೀನಿನ ಒಡೆಯನೇ ಪ್ರತ್ಯಕ್ಷವಾಗಿ ಕೃಷಿಕಾರ. ಕೃಷಿಗೆ ಕುದುರೆಯೋ ದನವೋ ಒಂದೂ ಬೇಡ. ಸಕಲವೂ ಯಂತ್ರಗಳಿಂದ ನಡೆಯುತ್ತದೆ. ಆಗೆಯುವುದು, ಉಳುವುದು, ಬೀಜ ಚಿಮ್ಮುವುದು, ಕೊಯ್ಯುವುದು, ಕುಟ್ಟುವುದು ಪ್ರತಿಯೊಂದಕ್ಕೆ ಯಂತ್ರಗಳು. ಒಬ್ಬ ಸಾಮಾನ್ಯ ರೈತನ ಹತ್ತಿರ ಇರುವ ಕೃಷಿ ಯಂತ್ರಗಳ ಮೌಲ್ಯವು 50,000 ರೂಪಾಯಿಗಳಿಂದ ರೂ. 1,00,000ದ ವರೆಗೂ ಇರುತ್ತದೆ. ಈಗ ದೊಡ್ಡ ದೊಡ್ಡ ಹೊಲಗಳಲ್ಲಿ ಹೆಲಿಕೋಪ್ಟರನ್ನು ಪಯೋಗಿಸಿ ಅಗೆಗಳನ್ನು ಬೀಸುತ್ತಾರಂತೆ. ಪ್ರತಿ ರೈತನಿಗೂ ತನ್ನ ಜಮೀನಿನಲ್ಲಿರುವ ಮಣ್ಣಿನ ವೈಜ್ಞಾನಿಕ ಗುಣ ತಿಳಿದಿರುತ್ತದೆ. ಯಾವ ಮಣ್ಣಿಗೆ ಯಾವ ಗೊಬ್ಬರ, ಯಾವ ಕೃಷಿಗೆ ಯಾವ ಗೊಬ್ಬರ ಇದೂ ಅವನಿಗೆ ತಿಳಿದಿರುತ್ತದೆ. ರಾಸಾಯನಿಕ ಗೊಬ್ಬರಗಳ ಬಳಕೆಯೇ ಅಲ್ಲಿ ಹೆಚ್ಚು. ರೈತನೂ ಅವನ ಕುಟುಂಬವೂ ಚೆನ್ನಾಗಿ ಮೈಮರಿದು ದುಡಿಯುವರು.

ಸಂಯುಕ್ತ ರಾಜ್ಯದಲ್ಲಿ ರೈತನೆಂದರೆ ಒಳ್ಳೆಯ ಗೌರವಾನ್ವಿತನಾದ ಪ್ರಜೆ. ಅಲ್ಲಿನ ರಾಜಕೀಯಸ್ಥರಿಗೆ ತಾವು ರೈತರೆಂದು ಹೇಳಿಕೊಳ್ಳುವುದು ಒಂದು ಹೆಮ್ಮೆಯ ವಿಷಯ; ವಸ್ತು ಸ್ಥಿತಿಯೂ ಹಾಗೆಯೇ ಇದೆ, ಹೆಚ್ಚಿನವರಿಗೆ ಹೊಲ ಜಮೀನು ಇದ್ದು ಪ್ರತ್ಯಕ್ಷವಾಗಿ ಕೃಷಿಕಾರರಾಗಿ ದುಡಿದ ಚರಿತ್ರೆಯೂ ಇರುತ್ತದೆ. ರೈತನನ್ನೆ ಅಲ್ಲಿಯ ರಾಜಕೀಯಸ್ಥರು ಕಡೆಗಣಿಸಿದರೆ ಅವರಿಗೆ ಅದೇ ಕಡೆಯಾದೀತು. ಆದ್ದರಿಂದ ಅಮೇರಿಕದ ಕೇಂದ್ರ ರಾಜಸಭೆಯಾದ 'ಕಾಂಗ್ರೆಸು' (ಪಾರ್ಲಿಮೆಂಟು) ಕೂಡ ಅವನಿಗೆ ಹೆದರಿ ನಡೆಯುತ್ತವೆ. ರೈತ ಸಂಘಟನೆಯಿದೆ; ರೈತ ಪ್ರತಿನಿಧಿಗಳು ಸೀನೇಟಿಗೂ, ಕಾಂಗ್ರೆಸಿಗೂ ಆರಿಸಿ ಬರುತ್ತಾರೆ. ದೇಶದ ಅತ್ಯಂತ ಕೃಷಿಯ ಕುರಿತು ನಿರಂತರವಾಗಿ ಸಂಶೋಧನೆ ನಡೆಯುತ್ತಲೇ ಇರುತ್ತದೆ. ಸಂಶೋಧನಾಲಯಗಳಿಂದ ಕೃಷಿಕನಿಗೆ ಬೇಕಾಗುವ ಅಂಶಗಳು ಹೊಲದಲ್ಲಿ ಪ್ರತ್ಯಕ್ಷ

(ಮುಂದೇ ಪುಟ ನೋಡಿರಿ)

ಕುಮಾರಿ ಬಿಲ್ಲೆಗಳು (ಸರಕಾರ ರಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ಎ.ಪಿ.ಸಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಶಾಕಂಪೆನಿ, ಮಂಗಳೂರು

ನೀವು ಈ ಗುರುತನ್ನು ನೋಡಿದೊಡನೆಯೇ

ನಿಮಗೆ ಅತ್ಯುತ್ತಮವಾದುದು ದೊರಿತಿದೆಯೆಂದು ತಿಳಿಯುವುದಿರಿ

SR

ಎಸ್. ಆರ್.

ಉತ್ತಮ ತಂಬಾಕು ಎಲೆಗಳಿಂದ ತಯಾರಿಸಲ್ಪಟ್ಟ ಬೀಡಿಗಳಾಗಿರುತ್ತವೆ.

S. R. Beedi Works UDIPI S.K.

ಎಲ್ಲಾ ಕಡೆಗಳಲ್ಲಿಯೂ ದೊರಕುವುದು.

ಲಘು ಉದ್ಯಮಗಳು

ಬರೆದವರು:
ಶ್ರೀ ಪಾಟೀಲ ಹನುಮಂತರಾಯ.

ಭಾರತದ ಆರ್ಥಿಕ ಅಭಿವೃದ್ಧಿಯ ಉದ್ದೇಶವನ್ನಿಟ್ಟುಕೊಂಡು ಮಾಡಿದ ಪ್ರಥಮ ಪಂಚವಾರ್ಷಿಕ ಯೋಜನೆಯು ಈಗ ಅಲಾಲಾವಧಿಯ ದೃಷ್ಟಿಯಿಂದಾದರೂ ಕೊನೆಗಾಣುತ್ತಲಿದೆ; ಅದರಲ್ಲಿ ಮುಖ್ಯ ಧ್ಯೇಯವಾದ ನದೀ ಕೊಳ್ಳಗಳ ಯೋಜನೆಗಳು ಮತ್ತು ಕೃಷಿಯ ವಿಕಾಸ ಇವು ಕೆಲಮಟ್ಟಿಗೆ ಕೈಗೂಡಿ ಬಂದಿರುವವು ಎಂದೆನ್ನಬಹುದು. ಅವುಗಳ ಜೊತೆಯಲ್ಲಿಯೆ ಜನಸಬೇಕೆಂದು ಮಾಡಿದ ಜನಜಾಗ್ರತಿ ಮತ್ತು ಪಡೆಯಬಹುದೆಂದು ಬಯಸಿದ ರಾಷ್ಟ್ರೀಯ ಉತ್ಪನ್ನದ ಹೆಚ್ಚಳ ಆ ಪ್ರಮಾಣದಲ್ಲಿ ಕಂಡುಬರದಿದ್ದರೂ ಪ್ರಮಾಣದ ಮೂಲಕ ರಾಷ್ಟ್ರೀಯ ವಿಸ್ತರಣ ಕಾರ್ಯಕ್ರಮಗಳಲ್ಲಿ ಜನರು ತೋರಿಸಿದ ಆಸಕ್ತಿ ಮತ್ತು ಸಾಮಾನ್ಯ ಜನತೆಯ ದೈನಂದಿನ ಜೀವನದಲ್ಲಿ ಅವರು ಕಾಣುತ್ತಿರುವ ಸಮಾಧಾನದ ಪ್ರವೃತ್ತಿ ಇವು ಪ್ರಥಮ ಪಂಚವಾರ್ಷಿಕ ಯೋಜನೆಯು ಸಾಧಿಸಿದ ಹಿರಿಯ ಗುರಿ ಎಂದು ಧಾರಾಳವಾಗಿ ಹೇಳಬಹುದು.

ಇನ್ನೀಗ ದ್ವಿತೀಯ ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಅಧಿಕಾರಿಗಳಲ್ಲಿ ವಿಚಾರ ವಿನಿಮಯ ನಡೆದಿದೆ; ಜನರಲ್ಲಿ ಊಹಾಪೋಹ ಕಾಣುತ್ತಿದೆ; ಇತರ ಕ್ಷೇತ್ರಗಳಲ್ಲಿ ಸಲಹೆ--ಸೂಚನೆಗಳು ತಲೆದೋರುತ್ತಲಿವೆ. ಇವುಗಳಲ್ಲಿ ಸಾಧಾರಣವಾಗಿ ಕಂಡುಬರುವ ಒಂದು ಯೋಚನೆಯೆಂದರೆ ಮೊದಲನೆಯ ಯೋಜನೆಯಲ್ಲಿ ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಹೆಚ್ಚು ಗಮನವನ್ನು ಕೊಟ್ಟಂತೆ ಈ ಎರಡನೆಯ ಯೋಜನೆಯು ಉದ್ಯಮಗಳ ಉತ್ಪತ್ತಿಯನ್ನು ಬೆಳೆಸುವಂತೆ ರಚಿಸಲ್ಪಡಬೇಕು ಎಂಬುದಾಗಿದೆ. ಉದ್ಯಮಗಳ ಬೆಳವಣಿಗೆಯು ಭರದಿಂದ ಆಗಬೇಕು; ಅದರಿಂದ ಮಾತ್ರ ನಮ್ಮ ದೇಶದಲ್ಲಿ ಹರಡಿದ ನಿರುದ್ಯೋಗವು ಮಾಯವಾಗಬಹುದು ಮತ್ತು ಕೇವಲ ಅದೇ ನಮ್ಮ ಉತ್ಪನ್ನವನ್ನು ಉಚಿತವಾಗಿ ಹೆಚ್ಚಿಸಬಲ್ಲದು ಎಂಬ ವಿಷಯವಾಗಿ ನಮ್ಮ ದೇಶದಲ್ಲಿ ಒಮ್ಮತವಿದ್ದರೂ ಉದ್ಯಮವು ಯಾವ ರೀತಿಯಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಬೆಳೆಯಬೇಕು ಎಂಬ ವಿಷಯದಲ್ಲಿ ಮಾತ್ರ ವ್ಯಕ್ತಿಪೊಬ್ಬನಿಗೆ ಒಂಗೊಂದು ಅಭಿಪ್ರಾಯವಿದ್ದಂತೆ ತೋರುತ್ತ

ಪಾಶ್ಚಾತ್ಯ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿಯು ಸಂಭವಿಸಿತು. ಅಲ್ಲಿ ಈಗ ೧೦೦--೨೦೦ ವರ್ಷಗಳಿಂದ ಧನದ ವ್ಯವಸ್ಥೆ, ಬ್ಯಾಂಕುಗಳ ಸೌಕರ್ಯ, ವಿಮಾ ವ್ಯವಸಾಯ ಇವೇ ಮೊದಲಾದ ಅಂಶಗಳ ಸಹಾಯದಿಂದ ಉದ್ಯಮಗಳು ಒಂದು ತಾಂತ್ರಿಕ ಉನ್ನತಿಯನ್ನು ಪಡೆದು ಯಂತ್ರಗಳ ಉಪಯೋಗದಿಂದ ಅವು ಉತ್ಪಾದನೆ ಮತ್ತು ಆ ಮೂಲಕ ಉತ್ಪನ್ನವು ಹೆಚ್ಚುವಂತೆ ಸಹಾಯಕವಾಗಿವೆ. ಇಡಿಯ ಈ ಅವಧಿಯಲ್ಲಿ ಮೊದಲು ತನಗೆ ಬೇಕಾಗುವ ವಸ್ತುಗಳನ್ನು ನಿರ್ಮಿಸುವ ಗೃಹೋದ್ಯಮ, ಆ ಮೇಲೆ ಮಾರಲಿಕ್ಕೆಂದು ನಿರ್ಮಿಸುವ ಸಾಮಗ್ರಿಗಳಿಗಾಗಿ ಲಘು ಉದ್ಯಮಗಳು, ಅನಂತರ ಅವುಗಳಲ್ಲಿಯ ಪ್ರಾವೀಣ್ಯವನ್ನು, ಹೆಚ್ಚು ಲಾಭವನ್ನು ಪಡೆಯಲಿಕ್ಕೆ ಅನುಕೂಲವಾಗಲಿಕ್ಕೆಂದು ಹುಟ್ಟಿದ ಯಂತ್ರೋಪಕರಣಗಳಿಂದ ನಡೆಯುವ ಉದ್ಯಮಗಳು ಮತ್ತು ಕೊನೆಯದಾಗಿ ದೊಡ್ಡ ಪ್ರಮಾಣದಲ್ಲಿ ಮತ್ತು ಅಲ್ಪ ಬೆಲೆಯಲ್ಲಿ ಸರಕುಗಳ ನಿರ್ಮಾಣವನ್ನು ಮಾಡಬಲ್ಲ ಬೃಹತ್ ಯಂತ್ರಗಳಿಂದ ನಡೆಯುವ ಘನ ಉದ್ಯಮಗಳು ಹೀಗೆ ಪ್ರಗತಿಯನ್ನು ಹೊಂದುತ್ತ, ಪ್ರೌಢಿಮೆಯನ್ನು ಪಡೆಯುತ್ತಾ ಉದ್ಯಮಗಳು ಪ್ರಬುದ್ಧವಾದಂತೆ ಸಮಾಜದಲ್ಲಿಯೂ ಪರಿವರ್ತನೆಯುಂಟಾಗಿ ಅದೊಂದು ನೂತನ ನಾಗರಿಕತೆಯ ರೂಪವನ್ನು ತಳೆದಿದೆ ಎನ್ನಬಹುದು.

ಇಂದು ನಮ್ಮ ದೇಶದಲ್ಲಿ—ಅಷ್ಟೆ ಏಕೆ ಅಪ್ರಬುದ್ಧ ಮತ್ತು ಅಲ್ಪ ವಿಕಸಿತ (Backward and under-developed) ದೇಶಗಳೆನಿಸಿದ ಆಫ್ರಿಕಾ ಮತ್ತು ಏಶಿಯಾ ಖಂಡಗಳ ರಾಷ್ಟ್ರಗಳಲ್ಲಿ, ಪಾಶ್ಚಾತ್ಯ ಸಮಾಜಗಳು ದಾಟಿದ ಪ್ರತಿಯೊಂದು ಘಟ್ಟವನ್ನು ದಾಟಿ, ಅವರು ಮಾಡಿದ ಎಲ್ಲ ತಪ್ಪುಗಳನ್ನು ಮಾಡಿ, ಅವರು ಪಡೆದ ಫಲಗಳನ್ನೆ ಪಡೆಯಬೇಕೆ? ಅಥವಾ ಅವರ ಅನುಭವದಿಂದ ನಾವು ಸಾಕವನ್ನು ಕಲಿತು, ಅವರು ಸಾಧಿಸಿದ ಮಹತ್ಕಾರ್ಯದ ರಹಸ್ಯವನ್ನು ತಿಳಿದು, ನಮ್ಮ ದೇಶಗಳ ಸರಿಸ್ಥಿತಿ ಮತ್ತು ವೈಯಕ್ತಿಕ ವೈಶಿಷ್ಟ್ಯ ಇವುಗಳನ್ನು ಲಕ್ಷ್ಯಕ್ಕೆ ತಂದುಕೊಂಡು, ಆ ಸಮಸ್ಯೆಗೆ ಸರಿಯಾದ ಯೋಜನೆಯನ್ನು ರಚಿಸಿಕೊಳ್ಳಬೇಕೆ? ಎಂಬುದು ಮಹತ್ವದ ಪ್ರಶ್ನೆಯಾಗಿದೆ.

ಪ್ರತಿಯೊಂದು ಸಮಾಜದಲ್ಲಿ ಶೀಘ್ರ ಉಪಾಯದ, ತತ್ಕ್ಷಣ ಪರಿಣಾಮವು ಕಾಣಬಲ್ಲ ಮತ್ತು ಅಲ್ಪಶ್ರಮದಿಂದ ಅತ್ಯಂತ ಫಲ ದೊರೆಯಬೇಕೆಂಬ ಕಾರ್ಯವನ್ನು ಕೈಕೊಳ್ಳಬೇಕು ಎಂದು ವಾದಿಸುವ ಪಂಗಡವು ಇದ್ದೇ ಇರುತ್ತದೆ. ಆ ಮೇರೆಗೆ ನಮ್ಮ ದೇಶದಲ್ಲಿಯೂ ಘನ ಉದ್ಯಮಗಳನ್ನು ದೇಶದ ತುಂಬೆಲ್ಲ ಸ್ಥಾಪಿಸಿ, ಇಡಿಯ ಪ್ರಸಂಚದಲ್ಲಿಯೆ ಕಂಡುಬರುವ ಅತ್ಯುಚ್ಚ ತಾಂತ್ರಿಕ ಸಂಶೋಧನೆಗಳ ಲಾಭವನ್ನು ಪಡೆದುಕೊಂಡು ನಮ್ಮ ದೇಶದ ಉತ್ಕರ್ಷವು ತ್ವರಿತವಾಗಿ ಜರುಗುವಂತೆ ಹೆಣಗಬೇಕು ಎಂದು ಉಪದೇಶಿಸುವ ಜನರು ಇದ್ದಾರೆ. ಅದರೆ ಈಗಿನ ಪರಿಸ್ಥಿತಿಯಲ್ಲಿ ಮತ್ತು ಆರ್ಥಿಕ ದೃಷ್ಟಿಯಿಂದ ಅಪ್ರಬುದ್ಧವಾದ ರಾಷ್ಟ್ರಗಳಲ್ಲಿ ಆ ಬಗೆಯ ಉಗ್ರ ಉಪಾಯಗಳು ಸಾಧ್ಯವೆ, ಉಚಿತವೆ ಎಂದು ಕೇಳಿಕೊಳ್ಳಬೇಕಾಗುತ್ತದೆ. ಅದರಲ್ಲಿಯೂ ಆಫ್ರಿಕ - ಏಶಿಯಗಳಲ್ಲಿ ಹೊಸತಾಗಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆದ ರಾಷ್ಟ್ರಗಳಲ್ಲಿ ಒಂದು ಬಗೆಯಿಂದ ತಮ್ಮ ರಾಜಕೀಯ ಸ್ವಾಮಿತ್ವವನ್ನು ಕಾಯಾಡಿಕೊಳ್ಳಬೇಕು ಎಂಬ ಉಜ್ವಲವಾದ ಮತ್ತು ಉತ್ಕಟವಾದ ಆಕಾಂಕ್ಷೆಯಿದ್ದಂತೆಯೆ ಆರ್ಥಿಕ ಉನ್ನತಿಯನ್ನು ಸಾಧಿಸಿಕೊಳ್ಳಬೇಕು ಎಂಬ ಉದಾತ್ತ ಧ್ಯೇಯವೂ ಇರುತ್ತದೆ ಮತ್ತು ಇನ್ನೊಂದು ಕಡೆಯಿಂದ ಸಾಮಾಜಿಕ ಶಾಂತಿಯನ್ನೂ ತೃಪ್ತಿಯನ್ನೂ ಕಂಡುಕೊಳ್ಳಬೇಕು ಎಂಬ ಉತ್ಸಾಹವೂ ಇರುತ್ತದೆ. ಅಂತೆಯೆ ಯಾವ ಬಗೆಯ ಯೋಜನೆಯನ್ನು ಆ ದೇಶಗಳಲ್ಲಿ ರಚಿಸುವದೇ ಇರಲಿ, ಅಂತಹ ಸಮಯದಲ್ಲಿ ಅಲ್ಲಿಯ ಆರ್ಥಿಕ ಸ್ಥಿತಿ ಮತ್ತು ಸಾಮಾಜಿಕ ಪರಿಣಾಮ ಇವುಗಳ ದೃಷ್ಟಿಯಿಂದ ಅದನ್ನು ಮೊದಲೇ ತೂಗಿ ನೋಡುವದು ಉಚಿತವೆನಿಸಬಹುದು.

ಸಾಮ್ರಾಜ್ಯವಾದ ಮತ್ತು ಉಪನಿವೇಶವಾದಗಳಿಂದ ಇದೇ ಈಗ ಪಾರಾಗಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿಕೊಂಡ ಭಾರತ, ಪಾಕಿಸ್ತಾನ, ಸಿಂಹಲ, ಬ್ರಹ್ಮ, ಇಂಡೋನೇಶಿಯ ಮೊದಲಾದ ರಾಷ್ಟ್ರಗಳಲ್ಲಿ ಮತ್ತು ಅಂತಃಕಲಹ, ಪರಸ್ಪರ ದ್ವೇಷಗಳಿಂದ ಜರ್ಜರಿತವಾದ ಇಂಡೋಚೈನಾ—ಚೀನ ಮೊದಲಾದ ರಾಷ್ಟ್ರಗಳಲ್ಲಿ ದ್ವಿಮುಖವಾದ ಒಂದು ವಿಚಿತ್ರ ಬಗೆಯ ನಾಗರಿಕತೆಯು ಅಸ್ತಿತ್ವದಲ್ಲಿರುವದೊಂದು ವಿಶೇಷವಾದ ಸನ್ನಿವೇಶವೆ ಆಗಿದೆ. ಒಂದು ಬದಿಯಿಂದ ಅತ್ಯಂತ ಮುಂದುವರಿದ ಸಾಧನ--ಸಾಮಗ್ರಿ --- ಜನಜೀವನವಿರುವ ಕೆಲವು ಪಟ್ಟಣಗಳು ಕಂಗೊಳಿಸುತ್ತಿದ್ದರೆ ಇನ್ನೊಂದು ಬದಿಯಿಂದ ಒಂದುಳಿದ, ನಿರಕ್ಷರಿಗಳಾದ ಹೊರಗಿನ ಜಗತ್ತಿನ ಸಂಪರ್ಕವೊತ್ತಟ್ಟಿಗಿರಲಿ, ಸಮಾಚಾರವು ಕೂಡ ಇರದ ಬಹುಜನ ಸಮಾಜವು ಗೋಚರವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಬಂಡವಲನ್ನು ತೊಡಕಿಸಿ, ಘನವಾದ ರೀತಿಯಲ್ಲಿ ನಡೆದ ಉದ್ಯಮಗಳು ಒಂದು ಸ್ಥಿತಿಯಲ್ಲಿ ಕಾಣುತ್ತಿದ್ದರೆ ತಮ್ಮ ಮನೆಯಲ್ಲಿಯೆ ಆಗಲಿ, ತಮ್ಮ ಸಮಾಜಕ್ಕೇ ಆಗಲಿ, ಆಣಿಯಾಗುವಂತಹ ಅಸಂಖ್ಯ ಲಘು ಉದ್ಯಮಗಳು ಇನ್ನೊಂದು—ಅಂದರೆ ಕಂಗೆಟ್ಟ—ಸ್ಥಿತಿಯಲ್ಲಿ ನೋಡ ಸಿಗುತ್ತವೆ. ಈ ಎಲ್ಲ ರಾಷ್ಟ್ರಗಳ ಶ್ರಮಿಕರ ಸಂಖ್ಯೆಯನ್ನು ವಿಭಜಿಸಿ, ವಿಂಗಡಿಸಿ ನೋಡಲಾಗಿ ಘನ ಉದ್ಯಮಗಳಲ್ಲಿ ಕೆಲಸಕ್ಕಿರುವ ಜನರಿಗಿಂತ ನಾಲ್ಕರಿಂದ ಹತ್ತು ಪಟ್ಟನ ವರೆಗೆ ಜನಸಂಖ್ಯೆಯು ಚಿಕ್ಕ ಪುಟ್ಟ ಉದ್ಯಮಗಳಿಂದ ತಮ್ಮ ಉಪಜೀವನವನ್ನು ಕಂಡುಕೊಳ್ಳುತ್ತಿರುವದು ತಿಳಿದು ಬರುತ್ತಿದೆ. ಆ ಎರಡು ಕ್ಷೇತ್ರಗಳಲ್ಲಿರುವ ಜನರ ಕೆಲಸಗಳಿಗೆ ನಾವು ಬಳಸುವ ಶಬ್ದಗಳಿಂದಲೇ ಸಮಾಜದಲ್ಲಿ ಅವರು ಯಾವ ಸ್ಥಾನಮಾನಗಳನ್ನು ಪಡೆದಿರುವರು ಮತ್ತು ಆ ಆ ಸಮಾಜದ ಸಂಸ್ಕಾರಗಳು ಎಂತಹವು ಎಂಬುದು ಸ್ಪಷ್ಟವಾಗುತ್ತದೆ. ನಗರದ ಕಾರ್ಯಾಲಯಗಳಲ್ಲಿ ಆಗಲಿ, ಕಾರಖಾನೆಗಳಲ್ಲಿ ಆಗಲಿ ದುಡಿಯುವದಕ್ಕೆ ನೋಕರಿ—ಚಾಕರಿ ಎನ್ನುತ್ತಿದ್ದರೆ ಗ್ರಾಮಗಳಲ್ಲಿ ನಡೆಯಿಸಿಕೊಂಡಿರುವ ಕೆಲಸಕ್ಕೆ ನಾವು ಉಪಜೀವನ ಎಂದೆನ್ನುತ್ತೇವೆ. ಅಲ್ಲಿ ಕೃಷಿಯು ಜೀವನವಾದರೆ, ಲಘು ಉದ್ಯಮಗಳು ಉಪಜೀವನ. ಒಟ್ಟಿನಲ್ಲಿ ಅದೊಂದು ಜೀವನದ ಮಾರ್ಗವೆನಿಸುತ್ತದೆ; ನಗರಗಳಲ್ಲಿಯ ದುಡಿಮೆಗಾರರು ಕೇವಲ ಜೀವಿಸುತ್ತಾರೆ-ಅಷ್ಟೆ!

ಇಂತಹ ಸನ್ನಿವೇಶದಲ್ಲಿ ಶೀಘ್ರ ಉಪಾಯಗಳಿಂದ ಸ್ಥಿತ್ಯಂತರವನ್ನು ಕಲ್ಪಿಸಿಕೊಳ್ಳುವದು ಸುಲಭವೆ ಮತ್ತು ಸಯುಕ್ತಿಕವೆ ಎಂಬುದನ್ನು ನೋಡಬೇಕು. ಪಾಶ್ಚಾತ್ಯ ದೇಶಗಳಲ್ಲಿ ಉದ್ಯಮಗಳ ಉತ್ಕರ್ಷವಾಗಲಿಕ್ಕೆ ಪ್ರಮುಖವಾದ ಸಾಧನ-ಉಗಿಯ ಉಪಯೋಗವಾಗಿತ್ತು. ಅಲ್ಲಿ ಕ್ರಮವಾಗಿ ಉತ್ಪತ್ತಿಯನ್ನು ಸಾಗಿಸಲಿಕ್ಕೆ ಬೇಕಾಗುವ ಮಾರ್ಗಗಳು, ರೈಲ್ವೆ—ಹಡಗು—ವಿಮಾನಗಳು, ಅವುಗಳ ವ್ಯವಹಾರಕ್ಕಾಗಿ ಅವಶ್ಯಕವಾದ ನಾಣ್ಯ ಪದ್ಧತಿ, ಬ್ಯಾಂಕಿನ ವ್ಯವಹಾರ ಮತ್ತು ವಿಮಾ ಸೌಕರ್ಯಗಳೇ ಮೊದಲಾದ ಸಾಧನಗಳು ಉದ್ಯಮಗಳ ಜೊತೆಯಲ್ಲಿಯೆ ವಿಕಾಸ ಹೊಂದಿದವು. ಆದರೆ ಇಂದು ವಿದ್ಯುತ್ತಿನ ಉತ್ಪಾದನದಿಂದ ಉದ್ಯಮಗಳ ಸ್ಥಿತಿಯೆ ಪರಿವರ್ತನೆಯನ್ನು ಹೊಂದಿದೆ ಆಗಿನಂತೆ ಕೆಲವು ಕಡೆಗಳಲ್ಲಿ ಮಾತ್ರ ಉದ್ಯಮಗಳನ್ನು ಸ್ಥಾಪಿಸಬಹುದು ಎಂಬ ನಿರ್ಬಂಧವು ಇಲ್ಲದಂತಾಗಿ ಈಗ ವಿದ್ಯುತ್ತಿನ ಸಹಾಯದಿಂದ ಉಚಿತವಾದ ಪ್ರಮಾಣದಲ್ಲಿ ಮತ್ತು ಅನುಕೂಲವಾದ ಸ್ಥಳಗಳಲ್ಲಿ ಯಾವುದೇ ಉದ್ಯಮವನ್ನು ನಡೆಸುವಂತಹ ಪರಿಸ್ಥಿತಿಯು ನಿರ್ಮಾಣವಾಗಿದೆ.

ಇದಕ್ಕೆ ಪ್ರತಿಯಾಗಿ ಇಂದಿನ ಮಿತಿಯಲ್ಲಿ ನಾವು ಕೇವಲ ಘನ ಉದ್ಯಮಗಳತ್ತ ನಮ್ಮ ದೃಷ್ಟಿಯನ್ನು ಹೊರಳಿಸುವದಾದರೆ ಅದಕ್ಕೆ ಬೇಕಾಗಬಹುದಾದ ಬಂಡವಲು ಎಷ್ಟು, ಅವುಗಳನ್ನು ನಡೆಸಬಲ್ಲ

(೨೪ನೇ ಪುಟ ನೋಡಿರಿ)

For
BOOKS
STATIONERY
PAPER & ALL SORTS OF
PRINTING REQUISITES
Please contact
U. R. SHENOY & SONS,
POST BOX 128, MANGALORE—3.

ಸಂಸ್ಕೃತಿ ಮತ್ತು ಪಡೆಮಾತು

ಬರೆದವರು: ಶ್ರೀ ಬಿ. ಎಚ್. ಶ್ರೀಧರ, ಎಂ.ಎ.

ಕೆಲ ಪಾಶ್ಚಾತ್ಯ ಪದ್ಧತಿ ಪ್ರಿಯರೂ ಸನಾತನಿಗಳೂ ಈಗ ಒಕ್ಕೊರಲಿಂದ ಭಾರತೀಯ ಸಂಸ್ಕೃತಿ ಹಾಗೂ ಧರ್ಮಗಳ ಹೆಸರೆತ್ತಿ ಯಥೇಷ್ಟ ಹೊಗಳುತ್ತಿರುವುದು ಅಲ್ಲಲ್ಲಿ ಕಂಡು ಬರುತ್ತಿದೆ. ಇದು ಕನಡದ ಪ್ರಾಚೀನ ಸಾಹಿತ್ಯವನ್ನು ಹೊಗಳಿದಂತೆಯೇ ಆಗಿದೆ. ಆಚರಣೆಗೆ ತರಲಾರದ, ಕೇವಲ ಸಭಾರಂಜನ ಪರವಾದ ಸ್ತೋತ್ರ ರತ್ನಾಕರವನ್ನು ರಚಿಸುವ ರಾಜಕೀಯ ನೇತೃಗಳ ತಂತ್ರವನ್ನೇ ಈ ಪ್ರಚಾರೋಪನ್ಯಾಸ ಮಾಲೆಯೂ ಅನುಸರಿಸುತ್ತಿದೆ.

ಪ್ರತ್ಯಕ್ಷ ಪ್ರಮಾಣವನ್ನು ಒತ್ತಿ ಹೇಳುವ ಕೆಲ ವಿಜ್ಞಾನ ಪ್ರಿಯರು ಕಣ್ಣೆದುರಿರುವುದನ್ನೇ ಅಲಕ್ಷಿಸಿ ಸಿದ್ಧಾಂತಗಳನ್ನು ರಚಿಸಿದಂತೆ ಭಾರತಾಭಿಮಾನದ ಹೆಸರಿನಲ್ಲಿ ಹೀಗೆ ವಾಗುಪಚಾರ ಸಲ್ಲಿಸುವ ಧ್ಯಾತ್ಮನ್ನು ಈಗ ಅಲ್ಲಿ ಇಲ್ಲಿ ತಲೆ ಹಾಕತೊಡಗಿದೆ. ಬುಗುಡಿ, ಬೆಂಡೋಲೆ, ಸರ, ಉಂಗುರಗಳಂತೆ, ವಿದ್ಯಾವಂತರಲ್ಲಿ ಕೆಲವರಿಗೆ ಕೆಲ ಅಭಿಪ್ರಾಯ ಅಭಿರುಚಿಗಳೂ ಆಲಂಕಾರ ಸಾಮಾಗ್ರಿಗಳೆನಿಸುತ್ತವೆ. "ವಾಗ್ ಭೂಷಣಂ ಭೂಷಣಂ" ಎಂಬುದು ಪ್ರಥಮ ಶ್ರವಣದ ಮಟ್ಟಿಗೆ ಸರಿಯೆಂದು ತೋರಬಹುದು. ಆನಂತರ 'ಸಭಾನುರಂಜನಾದ್ ಭಾಷಣಕಾರಃ' ಎಂಬ ಗುಟ್ಟು ಹೊರಬಿದ್ದ ಕೂಡಲೇ ವಾಕ್ ಒಂದು ಭೀಷಣ ಭೂಷಣವೆಂಬುದು ಗೊತ್ತಾಗುವುದು.

ನಡೆಗೆ ಬೆಕ್ಕು ಗುರು, ಓಟಕ್ಕೆ ಜಂಕೆ ಗುರು, ಕಚ್ಚಿ ಹಾರಿಸಿಕೊಂಡು ಹೋಗುವುದಕ್ಕೆ ಹದ್ದು ಗುರು, ಮಲಗಿದವರಲ್ಲಿ ಯಾರಿಗೆ ಎಚ್ಚರವಿದೆ ಯಾರಿಗಿಲ್ಲ ಎಂಬುದನ್ನು ಗುರುತಿಸುವವಿದ್ಯೆಗೆ ನಾಯಿ ಗುರು, ನುಸುಳುವುದಕ್ಕೆ ಹಾವು ಗುರು, ವೇಷಾಂತರಿಸಿಕೊಂಡು ತಿರುಗಾಡುವ ಕಲೆಗೆ ಹಾಗೂ ಅನ್ಯರ ವೇಷ, ಭಾಷೆ, ಆಚಾರಗಳ ನಟನೆಗೆ ಬೇಹಿನವ ಗುರು. ಇದೇ ಪ್ರಕಾರ ಮನಸ್ಸಿನಲ್ಲಿ ಆಚರಣೆಗೆ ತರಬೇಕೆಂದಿಲ್ಲದ ತತ್ವಗಳನ್ನು ಅನಾಸಕ್ತಿಯೋಗದಿಂದ ಕೇವಲ ಪರೋಪಕಾರ—ಜನೋದ್ಧಾರದ ದೃಷ್ಟಿಯಿಂದ ಬಣ್ಣಿಸುವುದಕ್ಕೆ ಗ್ರಾಮೋಫೋನು ಗುರುವೆನ್ನಬೇಕು.

ಗ್ರಾಮಸ್ಥರಿಗಿಂತಲೂ ಮಂದ ಗ್ರಹಣ ಶಕ್ತಿಯುಳ್ಳ ಅಸಂಖ್ಯ ಅಗ್ರಾಮಸ್ಥರಿಗೆ ಅಪ್ಪನಾಗುವ ವಾಗ್ವೀರ್ಯವತ್ತೆ ಇಂದಿನ ದೃಶ್ಯ-ಸ್ಪೃಶ್ಯ ಸಂಸ್ಕೃತಿ. ಹೀರೇಂದ್ರನಾಥ ದತ್ತರು ಹೇಳುತ್ತಾರೆ—Culture ಎಂಬ ಪದಕ್ಕೆ ಸಂಸ್ಕೃತಿ ಎಂಬುದು ಸರಿಯಾದ ಪರ್ಯಾಯವಲ್ಲ; ಕೃಷ್ಟಿ ಎಂಬುದೇ ಸರಿಯಾದ ಪರ್ಯಾಯ ಎಂದು. ಏಕೆಂದರೆ, Cultivation ಕೃಷಿ ಮಾಡುವುದೇ ಅದರ ಮೂಲ ಅರ್ಥ. ಅವರ ಮುನ್ನೋಟ ನೆಟ್ಟಗೆ ಇದೆ. ಮಾತುಗಾರಿಕೆಯನ್ನು ಅತಿಥಿತ್ವ ಲಾಭಕ್ಕಾಗಿ ಅಭ್ಯಾಸ ಮಾಡಿಕೊಳ್ಳುವ ಅಭ್ಯಾಸ ದೊಡ್ಡ ಲಕ್ಷಣವೆಂದು ತಿಳಿಯಲಾಗುತ್ತಿರುವ ವರೆಗೆ, 'ಕಲೆಗಾಗಿ ಕಲೆ' ಎಂಬ ಉದ್ಘೋಷದಂತೆಯೇ ಮಾತಿಗಾಗಿ ಮಾತು, ಜನಕ್ಕಾಗಿ ಮಾತು, ಪ್ರಸಿದ್ಧಿಗಾಗಿ ಮಾತು, ದಾನಕ್ಕಾಗಿ ಮಾತು—ಅಭಿಪ್ರಾಯ—ಕಲ್ಪನೆ—ಭಾವ ಇತ್ಯಾದಿಗಳು. ಎಲ್ಲ ದಾನಗಳಲ್ಲೂ ವಾಗ್ದಾನವೇ ಶ್ರೇಷ್ಠವೆಂದಾದ್ದು ಇದರಿಂದಲೇ. ವಾಕ್ಕು ದಾನ ಕೊಡಲಿಕ್ಕಾಗಿಯೇ ಆಡುವಂಥದಲ್ಲದೆ, ಸ್ವಾಚಾರ ನಿಷ್ಠೆಗಾಗಿ ಅಲ್ಲ. ಆಚಾರಕ್ಕೆ ವಿಚಾರವಿಲ್ಲ, ಉಚ್ಚಾರವಿಲ್ಲ; ಅದರ ರೂಪ ಮೌನ. ವಿಚಾರಕ್ಕೆ ಕೇವಲ ಉಚ್ಚಾರವಲ್ಲದೆ ಆಚಾರವಿಲ್ಲ; ಉಚ್ಚಾರಕ್ಕೆ ಪ್ರಸಿದ್ಧಿಯಷ್ಟೇ ಅಲ್ಲದೆ ಮತ್ತಾವ ಗುರಿಯೂ ಇಲ್ಲ!

ಮೊದಲು ಗತವೈಭವದ ಸ್ತೋತ್ರ ಕೇವಲ ಸನಾತನಿಗಳ ಸ್ವತ್ತಾಗಿತ್ತು. ಅದಕ್ಕೆ ಬೇರೆ ಬೇರುದಾರರಿರಲಿಲ್ಲ, ಆದರೀಗೀಗ ಹಿಂದೀ ವ್ರೇಮಿವರ್ಗ ಬೆಳೆಯಲಾರಂಭಿಸಿದಂದಿನಿಂದ ಸನಾತನೀತರರು ಅದಕ್ಕೆ ದಾಯಭಾಗಿಗಳಾಗ ತೊಡಗಿದ್ದಾರೆ. ಈ ಸಮನ್ವಯ ಮಾರ್ಗ ಭಾರತೀಯ ಸಂಸ್ಕೃತಿಯ ಹುಟ್ಟುಗುಣ. ಈ ಸಂಯೋಗದಿಂದ ಬಂದ ಹೊಸ ಸಂಸ್ಕೃತಿಯೇ Culturopathy ಅಥವಾ ಸಂಸ್ಕೃತಿ ವೈದ್ಯಶಾಸ್ತ್ರ. ಕಲೆ, ನೀತಿ, ರಾಜಕೀಯ ವಿವೇಕ, ಸಾಮಾಜಿಕ ಸುಧಾರಣೆ; ಸಂತತಿ ಪ್ರತಿಬಂಧ, ನೌಕರಿ ಮೃಗಯಾ ವಿನೋದ, ಲಂಚ ಪಂಚಾಮೃತ, ಸತ್ಯಮಥ ಮುಂತಾದ ಬೇರು, ನಾರು, ಉಪ್ಪು, ದ್ರಾವಕ, ರಸ, ವಿಷಗಳಿಂದ ಅಂಥ ನಸ್ಯ ಔಷಧಿ ಶಾಸ್ತ್ರ ರಾರಾಜಿಸುತ್ತದೆ.

Unity in Diversity ನಾನಾತ್ವಗತ ಏಕತ್ವ ಭಾರತೀಯ ಸಂಸ್ಕೃತಿಯ ಮತ್ತೊಂದು ಮೂಲ ಸೂತ್ರ. ಸಮರಸವೇ ಜೀವನ. ಆದುದರಿಂದ ಸಂಸ್ಕೃತಿಯೆಂಬ ಸಂಜೀವನೌಷಧಿಯ ತಯಾರಿಕೆಗೆ ಇಂಥ ವಸ್ತು ಆಗದು, ಇಂಥದೇ ಆಗಬೇಕು ಎಂದಿಲ್ಲ. ಅದೊಂದು Hold All ಇದ್ದ ಹಾಗೆ. ಸರ್ವ ಗ್ರಾಸಿಯಾದ ಈ ದಿವ್ಯ ಭೇಷಜ ಹಲವು ಅಂಗಗಳಿರುವುದರಿಂದ ಅನೇಕವೂ ಒಟ್ಟಿನಲ್ಲಿ ಏಕವೂ ಆಗಿದೆ. ಏಕವನ್ನು ಬೇಕಾದಾಗ ಅನೇಕಿಸಬಹುದು. ಅದಕ್ಕೆ 'ಏಕೋಽಹಂ ಬಹುಸ್ಯಾಂ ಪ್ರಜಾಯೇಯ' ಎಂಬ ಉಪನಿಷತ್ತಿನ ಆಧಾರವಿದೆ. ಇನ್ನು ಅನೇಕವನ್ನು ಬೇಕಾದಾಗ ಏಕೀಕರಿಸಬಹುದು ಕೇಕೀಕರಣದಲ್ಲಾದರೂ. ಅದಕ್ಕೆ 'ಏಕಮೇವಾದ್ವಿತೀಯಂ ಬ್ರಹ್ಮ....ನೇಹನಾನಾಸ್ತಿ ಕಿಂಚನ' ಇತ್ಯಾದಿ ಆಧಾರಗಳಿವೆ. ಒಂದನ್ನು ನೂರೆಂದರೂ ತಪ್ಪಾಗದು, ನೂರನ್ನು ಒಂದೆಂದರೂ ತಪ್ಪಾಗದು. ಭಾರತ ಸಂಸ್ಕೃತಿ ಒಂದೂ ಹೌದು, ಹಲವೂ ಹೌದು, ಕಳೆಯದೂ ಹೌದು, ಹೊಸದೂ ಹೌದು, ಅಂತಾರಾಷ್ಟ್ರೀಯವೂ ಹೌದು, ರಾಷ್ಟ್ರೀಯವೂ ಹೌದು, ಪರಮಾರ್ಥವೂ ಹೌದು, ವ್ಯವಹಾರವೂ ಹೌದು, ಹೌದೂ ಹೌದು, ಅಲ್ಲವೂ ಹೌದು!

Adaptability ಹೊಂದಿ ಕೊಂಬ ಲಕ್ಷಣ ಭಾರತೀಯತೆಯ ಮತ್ತೊಂದು ಕೋಡು. ಕೆಟ್ಟ 'ಮಾತಿನಲ್ಲಿ ಇದನ್ನು ಸಮಯ ಸಾಧಕತೆ ಎನ್ನುತ್ತಾರೆ. ಭಾರತೀಯ ಸಂಸ್ಕೃತಿ ಭಾರತದ ರಬ್ಬರಿನಂತೆ (ಗಾಳಿ ಬಂದಾಗ ತೂರಿಕೊಂಡು) ಉದ್ದನ್ನವರೆದುರಿಗೆ ಉದ್ದವಾಗಿಯೂ ಕುಳ್ಳರೆದುರಿಗೆ ಕುಳ್ಳವಾಗಿಯೂ ಬಿಳಿಯರೆದುರಿಗೆ ಬಿಳುಪಾಗಿಯೂ ಕರ್ರಗಿನವರೆದುರು ಕರ್ರಗಾಗಿಯೂ ಕಾಂಗ್ರೆಸ್ಸಿನಲ್ಲಿ ಕ್ರಾಂಗ್ರೆಸೀಯವಾಗಿಯೂ ಪ್ರಜಾ ಸೋಶಲಿಸ್ಟರೆದುರು ಸೋಶಲಿಸ್ಟೀಯವಾಗಿಯೂ ಬಂಡವಾಳಿಗರೆದುರು ಬಂಡವಾಗಿಯೂ ಕೂಲಿಕಾರರಲ್ಲಿ ಕೂಲಿಯಾಗಿಯೂ ಒಡೆಯರಲ್ಲಿ ಒಡೆಯತನವಾಗಿಯೂ ಒಕ್ಕಲಲ್ಲಿ ಒಕ್ಕಲಾಗಿಯೂ ನಿಲ್ಲಬಲ್ಲ ಮಹಾ ಶಕ್ತಿಯುಳ್ಳದು. ಆದುದರಿಂದಲೇ ಭಾರತೀಯ ಭಾಷಣ ವಿದ್ಯಾವಂತರಿಂದು ವಿಶ್ವರೂಪಿಗಳು. ಅವರ ಭ್ರಾತೃಗಳಾದ ಲೇಖಕರನ್ನೂ ಹಾಗೇ—ನೋಡಲು ದಿವ್ಯಚಕ್ಷುಸ್ಸೇ ಬೇಕಲ್ಲದೆ ಚರ್ಮಚಕ್ಷುಸ್ಸು ಸಾಲದು. ಎಲ್ಲದಕ್ಕೂ ಸಮಂಜಸವಾಗುವುದೇ 'Adaptability' ಅದೇ ಸುಸಂಸ್ಕೃತರ ಸಮಂಜಸ ದೃಷ್ಟಿ. ಅವರನ್ನೇ ಕುಚೇಷ್ಟೆಗಾರ 'ಹಾದಪ್ಪನ ಜಾವಡಿಯ ಸದಸ್ಯರೆನ್ನುವುದು.

ಹೀಗೆ ಗ್ರಹಿಷ್ಣುತೆ, ಸಮಂಜಸತೆಗಳಾದ ಬಳಿಕ ಸಹಿಷ್ಣುತೆ ಬರುತ್ತದೆ. ಭಾರತೀಯನು ವಿಶ್ವಪ್ರಜೆ ಎಂದುಕೊಳ್ಳುವ ಹಕ್ಕನ್ನು ಹೊಂದಿದ್ದು ಈ ಸಂಸ್ಕೃತಿ ತಂತ್ರದಿಂದಲೇ. ಭಾರತ Cosmopolitanismಗೆ ತವರೂರು. ಆದುದರಿಂದ ಇಲ್ಲಿಲ್ಲದ್ದು ಇನ್ನೆಲ್ಲೂ ಇಲ್ಲ, ಇನ್ನೆಲ್ಲಿ ಯಾವುದಿದ್ದರೂ ಅದಿಲ್ಲಿದೆ. ಈ ಮಹಾ ವಸ್ತು ಪ್ರದರ್ಶನಾಲಯದಲ್ಲಿ ಏನಿದೆ? ಏನಿಲ್ಲ? ಇದೇ 'ಎಲ್ಲೇಶೋಪಾಧ್ಯಾಯ ಸಿದ್ಧಾಂತ' (ಈ ಪದಕ್ಕೆ ಶ್ರೀ. ಮೋ. ರಂ. ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ನಾನು ಋಣಿ.) ಭಾರತೀಯನೆಂದರೆ ಎಲ್ಲಪ್ಪ—All-Father—ಸರ್ವ—ಬ್ರಹ್ಮ. 'ಅಹಂಬ್ರಹ್ಮಾಸ್ಮಿ' ಎಂದುದು ಆದರಿಂದಲೇ ಸಾರ್ಥಕ. ಭಾರತೀಯ ಸಂಸ್ಕೃತಿಯು ಔಷಧಿಯೂ ಹೌದು, ಪಥ್ಯವೂ ಹೌದು; ವಿಷಕ್ಕೂ ಹೌದು, ಅಮೃತಕ್ಕೂ ಹೌದು, ಅಸಲಪಿಸಿನ್ನೂ ಹೌದು—ಏಕೆಂದರೆ ಅದು ಎಲ್ಲ!

ಭಾರತೀಯ ಸಂಸ್ಕೃತಿ ಮೃತ್ಯುಂಜಯ, ಅಮರ, ಅದರ ಜನ್ಮಕರ್ಮಗಳು ದಿವ್ಯ. ಏಕೆಂದರೆ 'ನಾಯಂ ಹಂತಿ ನಹನ್ಯತೇ'—ಈ ಸಂಸ್ಕೃತಿ ಯಾರನ್ನೂ ಬಾಧಿಸದು, ಯಾರಿಂದಲೂ ಬಾಧಿಸಲ್ಪಡದು. ಇದು ಸಗುಣವೂ ಹೌದು, ನಿರ್ಗುಣವೂ ಹೌದು; ಸಾಂಘಿಕವೂ ಹೌದು, ಏಕಾಂತಿಕವೂ ಹೌದು; ಆದರಿಂದಲೇ ಭಾರತೀಯ ಸಂಸ್ಕೃತಿಯಲ್ಲಿ ಯಾವ ಮಸಾಲೆ ಬಿದ್ದರೂ ಸಾಗರದಂತೆ ಅದು ಜೀರ್ಣಿಸಿಕೊಳ್ಳಬಲ್ಲುದು. ಯಾವ ಮಾತಿಗೂ ಅದರಲ್ಲಿ ಸ್ಥಾನವಿದೆ. ಈ ವಿಶಿಷ್ಟ ದ್ವೈತವೇ Integral ಪೂರ್ಣತೆ. ಪೂರ್ಣಮಿದಂ

(ಮಾಸೇ ಸುಖ ಸೋಹಿಲ)

INDIAN AUTOMOBILES
AGENTS FOR:
"USHA SEWING" MACHINES.
STOCKISTS OF ALL AUTO-SPARES.
R. M. KARNAD BUILDINGS, UDIPI.
A Well equipped MODERN GARAGE attached.
Telegram: KARNAD. Telephone: 65.

ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು ರೂಪುಗೊಳಿಸುತ್ತಿರುವ ಶಕ್ತಿ

ಬರೆದವರು ಶ್ರೀ ಪಾರ್ಥಸಾರಥಿ.

"Adam dreamed and awoke to find it Truth"—ಆದಮನಿಗೆ ಕನಸಾಯಿತಂತೆ, ಎಚ್ಚೆತ್ತು ನೋಡಿದಾಗ ಅದು ಸತ್ಯವಾಗಿತ್ತಂತೆ!

ಭವ್ಯವಾದ ಕನಸನ್ನು ಕಾಣುವ ಭಾಗ್ಯ ಎಲ್ಲರಿಗೂ ಲಭಿಸುವುದಿಲ್ಲ. ಅದರಲ್ಲೂ ಕಂಡ ಕನಸು ಹೀಗೆ ಸತ್ಯವಾಗುವುದು ತೀರ ವಿರಳ

ಡಾಕ್ಟರ್ ಮಾಧವ ಪೈಗಳವರು ನಮ್ಮ ಜಿಲ್ಲೆಗೊಂದು ಮೆಡಿಕಲ್ ಕಾಲೇಜಿನ ಕನಸು ಕಂಡರು ಕನಸು ಕಂಡರು ಮಾತ್ರವಲ್ಲದೆ ಅದು ಸತ್ಯವಾದುದನ್ನು ಕಾಣುವುದಕ್ಕಾಗಿ ಮುದಿಯ ತೊಡಗಿದರು ಇನ್ನೂ ದುಡಿಯುತ್ತಲಿದ್ದಾರೆ ಸಾರ್ವಜನಿಕರಲ್ಲಿ ಹಲವರು ಇನ್ನೂ ಎಚ್ಚರಗೊಳ್ಳುವ ಮೊದಲೇ ಅವರ ಕನಸು ನನಸಾಗ ತೊಡಗಿತು ಮೆಡಿಕಲ್ ಕಾಲೇಜಿನ ಕಟ್ಟಡಗಳು ಮಣಿಪಾಲದ ಗುಡ್ಡದ ಮೇಲೆ ತಲೆಯೆತ್ತಿದವು ಈಗ ಈ ಸಂಸ್ಥೆಯು ಕರ್ನಾಟಕದ ಒಳಗೂ ಹೊರಗೂ ಸುಪರಿಚಿತವಾಗುತ್ತ ಬಂದಿದೆ ಒಂದು ಕಾಲದಲ್ಲಿ ಯಾರನ್ನು ನಮ್ಮ ಜಿಲ್ಲೆಯ ಪ್ರಮುಖ ವ್ಯಕ್ತಿಗಳಲ್ಲೊಬ್ಬರು ಎಂದನ್ನುತ್ತಿದ್ದೆವೋ ಅವರೀಗ—ಗೆಳೆಯರೊಬ್ಬರು ಬೇರೆಡೆಯಲ್ಲಿ ಪ್ರಸ್ತಾಪಿಸಿದಂತೆ—"ಕರ್ನಾಟಕದ ಸೊತ್ತಾಗಿದ್ದಾರೆ' ಒಟ್ಟು ದೇಶದ ಸೊತ್ತಾಗಿದ್ದಾರೆ ಎಂದು ಹೇಳಿದರೂ ಸರಿಯೆ

ಹಣಕಾಸಿನ ಕ್ಷೇತ್ರದಲ್ಲಿ ಡಾಕ್ಟರ್ ಪೈಗಳವರ ಹೆಸರು ಈ ಮೊದಲೇ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಸುಪರಿಚಿತವಾಗಿತ್ತು ವಿಕ್ಷಣ ಕ್ಷೇತ್ರಕ್ಕೆ ಹೊಂದಿಕೊಂಡು ಅವರ ಪ್ರಭಾವವು ನಮ್ಮ ಜಿಲ್ಲೆಯಲ್ಲಿ ಅಭಿವ್ಯಕ್ತವಾಗ ತೊಡಗಿದುದು ನಾಲ್ಕೈದು ವರ್ಷಗಳ ಹಿಂದೆ-- ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಸ್ಥಾಪಿತವಾದ ಮೇಲೆ ಆದರೆ ಅವರ ಯಶಸ್ಸು, ಜಿಲ್ಲೆಯ, ಪ್ರಾಂತ್ಯದ ಪರಿಮಿತಿಯನ್ನು ದಾಟಿ ಪರಿಮಳಿಸ ತೊಡಗಿರುವುದು ಕಸ್ತೂರ್ ಬಾ ಮೆಡಿಕಲ್ ಕಾಲೇಜು ರೂಪುಗೊಳ್ಳ ತೊಡಗಿದ ನಂತರ

ಕಾಲೇಜು ಪ್ರಾರಂಭವಾದ ಮೇಲೆ ಯೂ ಅವರ ವ್ಯಕ್ತಿತ್ವವನ್ನು ಒಪ್ಪಿಕೊಳ್ಳದ ಮನಸ್ಸು ಅದು ಬದುಕಿ ಉಳಿಯಬಲ್ಲದೆಂಬ ಭರವಸೆ, ಅದು ಬದುಕಿ ಉಳಿಯಬೇಕಂಬ ಶುಭಾಕಾಂಕ್ಷೆ ಇನ್ನೂ ಹಲವರಲ್ಲಿ ಉಂಟಾಗಿಲ್ಲ ಹಾಗೆ ಶಂಕೆಯಿರುವುದೂ ಸಹಜವೇ ಕಾಲೇಜಿನ ನಿಲುವು ಭದ್ರವಾಗಿ, ಅದು ಪರಿಪೂರ್ಣತೆಯನ್ನು ಪಡೆಯಲು ಇನ್ನೂ ಸಾಧಿಸಬೇಕಾದದ್ದು ಬಹಳವಿದೆ ಆದರೆ ಎರಡು ಮೂರು ವರ್ಷಗಳ ಹಿಂದ ಯಾವುದು ಅಸಾಧ್ಯ, ಅಸಂಭವ ಎಂದು ತಿಳಿಯಲಾಗಿತ್ತೋ ಅದನ್ನು ಇಷ್ಟೊಂದು ಶಿಘ್ರವಾಗಿ ಸಾಧ್ಯ, ಸಂಭಾವ್ಯ ಎಂದು ತೋರಿಸಿಕೊಟ್ಟ ಚೈತನ್ಯಕ್ಕೆ ತಾನು ಕೈಕೊಂಡ ಈ ಮಹಾ ಕಾರ್ಯವು ಯಶಸ್ವಿಯಾಗಿ ಪೂರೈಸುವುದು ಅಸಾಧ್ಯವೆನಿಸಲಾರದು ಆ ಚೈತನ್ಯದ ರಹಸ್ಯವೇನು? ಅದರ ಪೂರಕ ಶಕ್ತಿಗಳಾವುವು?

ಡಾಕ್ಟರ್ ಪೈಗಳವರು ಈ ಕಾಲೇಜಿನ ಸ್ಥಾಪನೆಗಾಗಿ ನಡೆಸಿದ ಸಾಧನೆಯ ಎಲ್ಲ ವಿವರಗಳನ್ನೂ ಇಲ್ಲಿ ಕೊಡುವಂತಿಲ್ಲ ಪ್ರತಿಯೊಬ್ಬ ಸಾರ್ವಜನಿಕ ಕಾರ್ಯ ಕರ್ತನಿಗೂ ಮಾರ್ಗದರ್ಶನವನ್ನು ನೀಡಬಲ್ಲ ಆ ವಿಷಯ ಸಂಗ್ರಹವು ಪ್ರಕಟವಾಗಬೇಕಾದ ಸಂದರ್ಭ ಬೇರೆಯೇ ಇದೆ. ಆದರೆ ಈ ತನಕ ಕಂಡ ಯಶಸ್ಸನ್ನು ಅವರಿಗೆ ದೊರಕಿಸಿಕೊಟ್ಟ ಶಕ್ತಿಗಳಾವುವು, ಸಾಧನಗಳಾವುವು ಎಂಬುದನ್ನು ಇಲ್ಲಿ ಸ್ಥೂಲವಾಗಿ ವಿವೇಚಿಸಬಹುದು ಡಾಕ್ಟರ್ ಪೈಗಳವರ ಸಾಹಸಗಳನ್ನು ಅನುಕರಿಸಲು ಪ್ರಯತ್ನಿಸುವವರು ಈ ಪ್ರಾಮುಖ್ಯ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.



ಡಾ ಟಿ ಮಾಧವ ಪೈ, ಎಂ ಬಿ ,ಬಿ ಎಸ್

ಕೇವಲ ಧನಬಲದಿಂದಲೇ ಡಾಕ್ಟರ್ ಪೈಗಳವರು ಮೆಡಿಕಲ್ ಕಾಲೇಜನ್ನು ಸ್ಥಾಪಿಸುವಂಥ ಅಸಮ ಸಾಹಸಕ್ಕೆ ಕೈಯಿಕ್ಕಿದರೆಂಬ ಅಭಿಪ್ರಾಯ ಹಲವರಲ್ಲಿರಬಹುದು ಇದು ಸರಿಯಲ್ಲ ಅವರು ಆ ಮೊದಲೇ ಸ್ಥಾಪಿಸಿದ ಸಂಸ್ಥೆಗಳಿಂದಾಗಿ—ಮುಖ್ಯವಾಗಿ ಬ್ಯಾಂಕಿಂಗ್ ಸಂಸ್ಥೆಗಳಿಂದಾಗಿ—ಅವರಿಗೆ ಯಶಸ್ಸು ದೊರೆಯಿತೆಂಬುದೂ ಅರ್ಧ ಸತ್ಯ. ಕಾಲೇಜಿನ ಸ್ಥಾಪನೆಗಾಗಿ ಹಾಗೂ ತದರ ಬಳವಣಿಗೆಗೆ ಬೇಕಾಗುವ ಎಲ್ಲ ದ್ರವ್ಯವನ್ನೂ ಮುಂದೆ ಅಲ್ಲಿ ವ್ಯಾಸಂಗ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿಂದಲೇ ಕೂಡಿಸಿಕೊಳ್ಳಬೇಕೆಂಬ ಧೋರಣೆಯೇ ಅವರ ಯೋಜನೆಯ ಮುಖ್ಯ ವೈಶಿಷ್ಟ್ಯವಾದುದರಿಂದ ದ್ರವ್ಯಾನುಕೂಲಕ್ಕಾಗಿ ಇತರ ಆಕರಗಳನ್ನು ನಂಬಿ ಅವುಗಳನ್ನು ಅವಲಂಬಿಸುವ ಪ್ರಶ್ನೆಯೇ ಇರಲಿಲ್ಲ ಆದರೆ ಡಾಕ್ಟರ್ ಪೈಗಳವರ ಇತರ ಸಂಸ್ಥೆಗಳ ಹಿನ್ನೆಲೆಯಿಂದ ತದರ ಕೆಲಸ ಸುಲಭವಾಯಿತೆಂಬುದೇನೋ ನಿಜ.

ಹಲವಾರು ವರ್ಷಗಳಿಂದ ದೇಶದ ನಾನಾ ಭಾಗಗಳಲ್ಲಿ ಪಸರಿಸಿರುವ "ಪೈ—ಸಂಸ್ಥೆಗಳ" ಬ್ಯಾಂಕಿಂಗ್ ಹಾಗೂ ಇನ್ಶೂರೆನ್ಸ್ ವ್ಯವಹಾರಗಳಿಂದಾಗಿ ಸಾವಿರಾರು ಜನರ ಸೌಹಾರ್ದ ಸಂಪಾದನೆಯಾಗಿದ್ದಿತು ಹೀಗೆ ಈ ಕ್ರಾಂತಿಕಾರಿಯಾದ ಯೋಜನೆಯನ್ನು ಕಾರ್ಯಗತ ಮಾಡಲು ಬೇಕಾದ ಬಹುಮುಖ್ಯವಾದುದೇನಿದ್ದಿತೋ ಅದು ಸಿದ್ಧವಾಗಿತ್ತು ನಮ್ಮ ಜಿಲ್ಲೆಗಿಂತಲೂ ಹೆಚ್ಚಾಗಿ ದೇಶದ ಇತರ ಭಾಗಗಳಲ್ಲಿ ಈ ಭರವಸೆ ವಿಶ್ವಾಸಗಳು ಚೆನ್ನಾಗಿ ವ್ಯಕ್ತಗೊಂಡು ಯೋಜನೆಗೆ ಸಾಕಷ್ಟು ಪ್ರೋತ್ಸಾಹವೂ ಬೆಂಬಲವೂ ದೊರೆಯಿತು ಯಾರ ವ್ಯಕ್ತಿತ್ವದ ಕುರಿತು ಆ ಮೊದಲೇ ನಂಬಿಕೆ ನೆಲೆಗೊಂಡಿತ್ತೋ, ಅಂಥವರು ಕಾಲೇಜಿನ ಈ ನವೀನ ಯೋಜನೆಯನ್ನು ಮುಂದಿಟ್ಟು ಕಾಲೇಜಿಗೆ ಸೇರ ಬಯಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಮೂರು ಸಾವಿರ ರೂಪಾಯಿಗಳನ್ನು ಮೊದಲು ದಾನವಾಗಿ ತೆರಬೇಕೆಂದು ಹೇಳಿದಾಗ ಉತ್ಸಾಹಿಗಳು ಹಿಂದು ಮುಂದು ನೋಡಲಿಲ್ಲ ಹೀಗೆ ನಾನಾ ಸಂಸ್ಥೆಗಳ ಸ್ಥಾಪಕರಾಗಿ, ಸಂಚಾಲಕರಾಗಿ, ಸಂಪರ್ಕವುಳ್ಳವರಾಗಿ ಡಾಕ್ಟರ್ ಪೈಗಳವರು ಗಳಿಸಿದ ಸಾರ್ವಜನಿಕ ವಿಶ್ವಾಸವೇ ಈ ಮೆಡಿಕಲ್ ಕಾಲೇಜಿಗೆ ಬೇಕಾದ ಎಲ್ಲ ಬಗೆಯ ಸಹಾಯವನ್ನೂ ಒದಗಿಸಿಕೊಡುತ್ತಲಿದೆ ಈ ಕಾಲೇಜಾದರೂ ಸರಿಯೇ, ಅವರ ಮುಂದಿನ ಸಾಹಸಗಳಿಗೆ ನೆರವನ್ನು ದೊರಕಿಸಿ ಕೊಡುವ ಇನ್ನೊಂದು ಸಂಸ್ಥೆಯಾಗಬಹುದು.

ಮಹಾಜನರ ಸೌಹಾರ್ದ ಸಹಕಾರಗಳಿಲ್ಲದೆ ಯಾವ ಮಹಾಕಾರ್ಯವೂ ಸಾಧ್ಯವಲ್ಲವೆಂಬುದನ್ನು ದೃಢವಾಗಿ ನಂಬಿದವರು ಡಾಕ್ಟರ್ ಪೈಗಳವರು ಇತ್ತೀಚೆಗೆ ಚೀನಾದಿಂದ ಹಿಂದಿರುಗಿದ ಪಂಡಿತ್ ನೆಹರೂರವರೂ ಜನತೆಯೊಡನೆ ಸಂಪರ್ಕ ಬೆಳೆಸಿ ಅವರ ವಿಶ್ವಾಸವನ್ನು ಗಳಿಸುವುದರ ಮಹತ್ತ್ವವನ್ನು ಸಾರಿ ಹೇಳಿದ್ದಾರೆ ಅಂಥ ವಿಶ್ವಾಸವನ್ನು ಗಳಿಸಲು ಡಾಕ್ಟರ್ ಪೈಗಳವರು ಎಷ್ಟು ಶ್ರಮವನ್ನಾದರೂ ಸಹಿಸುತ್ತಾರೆ ಮೆಡಿಕಲ್ ಕಾಲೇಜಿನ ಯೋಜನೆಯು ತವರ ಮನಸ್ಸಿನಲ್ಲಿ ಸಿದ್ಧವಾದಂದಿನಿಂದ, ಯಾರೊಡನಾದರೂ ಸರಿಯೇ, ಅವರ ಪ್ರಸ್ತಾಪ ಬಂದಿತೆಂದರೆ, ಯೋಜನೆಯ ಸಕಲ ಅಂಶಗಳನ್ನೂ ಸಂಪೂರ್ಣವಾಗಿ ವಿವರಿಸುವುದರಲ್ಲಿ ಅವರಿಗೆ ಬೇಸರವಿಲ್ಲ ಸುತ್ತ ಮುತ್ತಲಿನ ಯಾರೊಬ್ಬರೂ ಅವರ ಯೋಜನೆಯ ಕುರಿತು ಪ್ರಾಮಾಣಿಕ ಬರವಸೆಯುಳ್ಳವರಾಗಿರದ ಕಾಲದಲ್ಲಿಯೂ ಅವರು ಕಾಲೇಜಿನ ಸಾಧ್ಯತೆಯ ಕುರಿತು ತಮಗಿರುವ ವಿಶ್ವಾಸವನ್ನು ಕಾರಣಕೊಟ್ಟು ಶ್ರುತಪಡಿಸುತ್ತಲೇ ಇದ್ದರು ಉನ್ನತಾಧಿಕಾರಿಗಳೋ, ಚಿಲ್ಲರೆ ಪಲ್ಲರೆ ನೌಕರರೋ, ಮಂತ್ರಿಗಳೋ, ಧರ್ಮ ಗುರುಗಳೋ, ಸಾಹುಕಾರರೋ, ಪ್ರೊಫೆಸರರೋ, ಪಂಡಿತರೋ, ಪಾಮರರೋ, ಯಾರೊಡನಾದರೂ ಸರಿಯೆ ತನ್ನ ಯೋಜನೆಯ ಕುರಿತು ಚರ್ಚಿಸಲು ಡಾ. ಪೈಗಳವರಿಗೆ ಸಂಕೋಚವಿಲ್ಲ ಆಗಲೇ ಪೂರ್ತಿಯಾಗಿರುವ ಹಾಗೂ ಇನ್ನೂ ರೂಪುಗೊಳ್ಳುತ್ತಿರುವ ಕಟ್ಟಡಗಳ ಸುತ್ತ ಕರೆದುಕೊಂಡು ಹೋಗಿ, ನಡೆಯುತ್ತಿರುವ ಕೆಲಸಗಳನ್ನೆಲ್ಲ ವಿವರಿಸಿ, ತೋರಿಸಿ "ನೀವೇನು ಹೇಳುತ್ತೀರಿ?" ಎಂದು ಅವರು ಅಭಿಪ್ರಾಯ ಕೇಳಿದಾಗ, ಹಾಗೆ ಒಯ್ಯಲ್ಪಟ್ಟ ವ್ಯಕ್ತಿ ಕೇವಲ ಸಾಮಾನ್ಯನಾಗಿದ್ದರೆ, ಅದವಾ ಇಂಥ ದೊಡ್ಡ ವಿಷಯಗಳ ಕುರಿತು ರಚನಾತ್ಮಕ ಸಲಹೆಗಳನ್ನು ಕೊಡುವಷ್ಟು ಪ್ರತಿಭಾವಂತನಲ್ಲದಿದ್ದರೆ, ಅನುಭವಿಯಲ್ಲದಿದ್ದರೆ—ಅವನು ಬಹುಪಕ್ಷ ಒಳಗೊಳಗೇ ನಾಚುತ್ತಾನೆ ಅಥವಾ ಕೊಂಚ ಉಬ್ಬಿದರೂ ಉಬ್ಬಬಹುದು ಏನೇ ಇರಲಿ, ಸಾಮಾನ್ಯರಲ್ಲಿಯೂ ಆತ್ಮವಿಶ್ವಾಸವನ್ನು ತುಂಬುವ ಜಾದುಮಾನ ಡಾಕ್ಟರ್ ಪೈಗಳದು ಇತರರ ಆತ್ಮವಿಶ್ವಾಸವನ್ನು ವೃದ್ಧಿಗೊಳಿಸುವ ಸಾಮರ್ಥ್ಯ ವಿರುವವರಲ್ಲಿ ಯಾರಿಗೆ ತಾನೆ ಆತ್ಮೀಯತೆಯುಂಟಾಗದಿರುತ್ತದೆ? ಇಂಥವರ ಯೋಜನೆಗಳು ಯಶಸ್ವಿಯಾಗದಿರುವುದಾದರೂ ಹೇಗೆ?

ಸಾರ್ವಜನಿಕರೊಡನೆ ನಿಕಟ ಸಂಪರ್ಕ ಹಾಗೂ ತತ್ಫಲವಾದ ಸೌಹಾರ್ದ ಸಹಾನುಭೂತಿಗಳು ಡಾಕ್ಟರ್ ಪೈಗಳವರ ಸಾಮರ್ಥ್ಯದ ಒಂದಂಶವಾದರೆ ಅವರ ಕಾರ್ಯೋತ್ಸಾಹ ಎರಡನೆಯದು ಅವರ ಉತ್ಸಾಹ ಕೆಲವೊಮ್ಮೆ ಯುವಕರನ್ನೂ ನಾಚಿಸುತ್ತದೆ ನಡು ವಯಸ್ಸಿನವರಾದರೂ ಅವರ ನಡೆ ನುಡಿಯಲ್ಲಿ ಯೌವನ ಚಿಮ್ಮುತ್ತಿರುತ್ತದೆ. ಮನಸ್ಸಿಯವರ ಉತ್ಸಾಹದ ಕುರಿತು ರಾಜಾಜಿಯವರು "Internal combustion engine"—ಎಂದು ಹೇಳಿದುದು ಡಾಕ್ಟರ್ ಪೈಗಳವರಿಗೂ ಚೆನ್ನಾಗಿ ಒಪ್ಪತ್ತದೆಂಬುದು ಅವರನ್ನು ಬಲ್ಲವರಿಗೆಲ್ಲಾ ಗೊತ್ತು. ಕಾಲೇಜಿನ ಯೋಜನೆಯು ಇನ್ನೂ ಕಾಗದಗಳ ಮೇಲೆಯೇಇದ್ದಾಗ ಕೂಡ ಆಕುರಿತು ಅವರಿಗೆ ದಿನದಿನವೂ ಐವತ್ತರಿಂದ ನೂರರ ವರೆಗೆ ಪತ್ರಗಳು ಬರುತ್ತಿದ್ದವು. ದೇಶದ ನಾನಾ ಕಡೆಗಳಿಂದ ವಿದ್ಯಾರ್ಥಿಗಳೂ, ಅವರ ಹಿರಿಯರೂ, ಕಾಲೇಜಿನ ಕುರಿತು ವಿವರಗಳನ್ನು ತಿಳಿಯಲು ತವಕಪಟ್ಟು ಬರೆಯುತ್ತಿದ್ದರು. ಅವುಗಳಿಗೆಲ್ಲಾ ಒಡನೆಯೇ ಉತ್ತರ ಕೊಡುವ ಕಲಸವ

(ಮುಂದು ಪುಟ ನೋಡಿರಿ)

ಪರಿಹಾರ ದ್ರವ್ಯದ ಪ್ರಶ್ನೆ

ಬರೆದವರು: ಸೇವ ನಮಿರಾಜ ಮಲ್ಲ, ಎಂ. ಎ., ಬಿ. ಎಲ್.

ಐದು ವರ್ಷಗಳ ಹಿಂದೆ ಸ್ವೀಕೃತವಾದ ನಮ್ಮ ರಾಜ್ಯಾಂಗ ಘಟನೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂಬ ಮಸೂದೆಯು ಬಂದೊಡನೆ ತುಂಬಾ ಕೋಲಾಹಲವೆದ್ದಿದೆ. ಒಂದೆಡೆಯಿಂದ ಮೂಲಭೂತ ಹಕ್ಕುಗಳ ನಿರಾಕರಣೆಗಾಗಿ ನ್ಯಾಯಾಲಯಗಳು ಕೊಡಬಹುದಾದ ಪರಿಹಾರವನ್ನು ಕಿತ್ತು ಹಾಕುವ ಯತ್ನವನ್ನು ಧಿಕ್ಕರಿಸಲಾಗುತ್ತಿದೆ. ಇನ್ನೊಂದೆಡೆಯಿಂದ ರಾಜ್ಯಾಂಗ ಘಟನೆಯಲ್ಲಿ ಆಶ್ವಾಸನೆ ಕೊಡಲ್ಪಟ್ಟ ಖಾಸಗಿ ಸ್ವತ್ತುಗಳನ್ನು ವಶಪಡಿಸಿಕೊಳ್ಳುವಾಗ ಪರಿಹಾರ ದ್ರವ್ಯವನ್ನು ನೀಡುವ ಸರ್ಕಾರದ ಹೊಣೆಗಾರಿಕೆಯನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಆಕ್ರೋಶವೆದ್ದಿದೆ. ಇವುಗಳ ಮಹತ್ವವೇನೆಂಬುದನ್ನು ಜನ ಸಾಮಾನ್ಯರು ತಿಳಿದುಕೊಂಡಿರುವರೆಂದು ಹೇಳಲಾಗದು. ಈ ಹನಕ ಇವುಗಳ ವಿರುದ್ಧ ಪ್ರತಿಭಟನಾತ್ಮಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದವರಲ್ಲಿ ಹೆಚ್ಚಿನವರು ದೇಶದ ಉದ್ದಿಮೆಗಾರರು ಮತ್ತು ನ್ಯಾಯ ಶಾಸ್ತ್ರ ಪಂಡಿತರು ಮಾತ್ರ. ಆಳುವ ಸರ್ಕಾರೀ ಪಕ್ಷವೇ ಈ ತಿದ್ದುಪಡಿಗಳನ್ನು ತಂದಿರುವುದರಿಂದ ಇವುಗಳು ಜನರ ಮಟ್ಟಕ್ಕೆ ಬಾರದೇನೇ ರಾಜ್ಯಾಂಗ ಘಟನೆಯೊಳಗೆ ಸುಲಭವಾಗಿ ಸೇರಿಕೊಳ್ಳಬಹುದು.

ಇದಕ್ಕಾಗಿಯೇ ಪರಿಷ್ಯ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಶ್ರೀ ಪತಂಜಲಿ ಶಾಸ್ತ್ರಿಯವರು ಇಂಥ ತಿದ್ದುಪಡಿಗಳ ವಿಚಾರದಲ್ಲಿ ಜನಮತ ತೆಗೆಯಬೇಕೆಂದು ವಾದಿಸಿರುವರು. ಆದರೆ ಈ ಅಭಿಪ್ರಾಯಕ್ಕೆ ಇಂದು ನಮ್ಮಲ್ಲಿ ಹೆಚ್ಚಿನ ಪುರಸ್ಕಾರ ದೊರೆಯುವ ಚಿಹ್ನೆಗಳು ಕಾಣುವುದಿಲ್ಲ. ರಾಜ್ಯಾಂಗ ಘಟನೆಯು ಒಮ್ಮೆ ಸ್ವೀಕಾರವಾದ ಹತ್ತಿಪ್ಪತ್ತು ವರ್ಷಗಳ ತನಕ ಯಾವೊಂದು ತಿದ್ದುಪಡಿಯನ್ನು ಮಾಡುವುದೂ ಒಳ್ಳೆಯದಲ್ಲನೆಂದೂ, ಅದರ ಕಾರ್ಯಾಚರಣೆಯನ್ನು ಹಲವು ವರ್ಷಗಳ, ಹಲವು ಸನ್ನಿವೇಶಗಳ ಬೆಳಕಿನಲ್ಲಿ ಪರಿಶೀಲಿಸಬೇಕೆಂದೂ ಕೆಲವರು ಹೇಳುತ್ತಿದ್ದಾರೆ. ಇನಕ್ಕೆ ವಿರುದ್ಧವಾಗಿ ಶ್ರೀ. ವಿ. ಟಿ. ಕೃಷ್ಣಮಾಚಾರಿಯಂಥವರು ಐರ್ಲಂಡಿನ ರಾಜ್ಯಾಂಗ ಘಟನೆಯ ನಿದರ್ಶನವನ್ನೀಯುತ್ತ ಅಲ್ಲಿ ಘಟನೆಯು ಸ್ವೀಕೃತವಾದ ಎಂಟು ವರ್ಷಗಳ ವರೆಗೆ ಮಾತ್ರ ತಿದ್ದುಪಡಿಗಳನ್ನು ಮಾಡಬೇಕೆಂದು ವಿಧಿಸಲಾಗಿತ್ತು; ಮತ್ತೆ ಆ ಅವಧಿಯನ್ನು ಹದಿನಾರು ವರ್ಷಗಳ ತನಕ ಮುಂದುವರಿಸಲಾಯಿತು ಎಂದು ಹೇಳುತ್ತಾರೆ.

ಘಟನಾ ಸಮಿತಿಯು ಪರಿಹಾರ ದ್ರವ್ಯದ ಕುರಿತಾದ ೩೧ನೇ ನಿಬಂಧನೆಯನ್ನು ಸ್ವೀಕರಿಸುವಾಗ ತುಂಬಾ ಚರ್ಚೆನಡೆದಿತ್ತು. ಪರಿಹಾರ ಕೊಡುವ ಅಧಿಕಾರವು ಸರಕಾರಕ್ಕೇ ಪೂರ್ಣವಾಗಿ ಸೇರಿರಬೇಕೆಂದು ಕೆಲವರು ವಾದಿಸುತ್ತಿದ್ದರೆ, ಕೆಲವರು ಅದು ವ್ಯಕ್ತಿಯ ವಶವಿರಬೇಕೆಂದು ಹಠ ಹಿಡಿದರು. ಕೊನೆಗೆ ಪರಿಹಾರ ದ್ರವ್ಯ ಪಡೆಯುವ ಹಕ್ಕು ವ್ಯಕ್ತಿಗೆ ದೊರಕಿತು.

ರಾಜ್ಯಾಂಗ ಘಟನೆಯು ಸ್ವೀಕೃತವಾದ ಈ ಐದು ವರ್ಷಗಳಲ್ಲಿ ಸರ್ಕಾರವು ಭೂ ಹಿಡುವಳಿಯ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿದೆ. ಮದ್ರಾಸು ಮತ್ತು ಉತ್ತರ ಪ್ರದೇಶಗಳಲ್ಲಿ ಜಮೀನುದಾರೀ ನಿರ್ಮೂಲನ ಕಾಯಿದೆಗಳು ಅಚರಣೆಗೆ ಬಂದಿವೆ. ಇನ್ನೂ ಹೆಚ್ಚಿನ ಭೂಸುಧಾರಣೆಯನ್ನು ಮಾಡುವ ಸಂಕಲ್ಪವನ್ನು ಸರ್ಕಾರವು ಇಟ್ಟುಕೊಂಡಿದೆ. ಈ ಪ್ರಸಂಗದಲ್ಲಿ ಪರಿಹಾರ ದ್ರವ್ಯದ ಪ್ರಶ್ನೆಯನ್ನು ಸರ್ಕಾರ ಗಮನಕ್ಕೆ ತಂದುದು ವಾಸ್ತವಿಕವೇ ಆಗಿದೆಯೆನ್ನಲಡ್ಡಿಯಿಲ್ಲ. ಆದರೆ ಈ ಸರ್ಕಾರವು ರಾಜ್ಯಾಂಗ ಘಟನೆಯಲ್ಲಿ ನಿರೂಪಿತವಾದ ವಿಧಿಗಳನ್ನು ಮೀರಲು ಸಾಧ್ಯವಿಲ್ಲ. ಭಾರತವು ಪ್ರಜಾರಾಜ್ಯವಾಗಿ ಮಾರ್ಪಾಟು ಹೊಂದಿರುವುದಾದರೂ, ಅದು ಕೇವಲ ರಾಜಕೀಯ ವಿಚಾರದಲ್ಲಿ ಮಾತ್ರ. ದೇಶದ ಸಂಪತ್ತಿನ ವಿತರಣೆಯ ಸಂಬಂಧದಲ್ಲಿ ಅದು ಹಿಂದಿನ ಪರಂಪರೆಯನ್ನೇ ಹೆಚ್ಚು ಕಡಿಮೆ ಅನುಸರಿಸಿಕೊಂಡು ಬರಲು ನಿರ್ಧರಿಸಿದೆ. ತಲೆಗೊಂದು ಮತ ದಾನದ ಹಕ್ಕು ಎಂದೊಡನೆ, ಪ್ರತೀ ತಲೆಯನ್ನು ಧರಿಸಿರುವ ಹೊಟ್ಟೆಗೆ ಬೇಕಾದಷ್ಟು ಅನ್ನವೂ ಸಿಗಬೇಕೆಂಬುದರ ನಿರ್ಣಯವಾಗಲಿಲ್ಲ. ಆದರೆ ಸರ್ಕಾರ ಶೀಘ್ರದಲ್ಲಾಗಲೀ, ಕ್ರಮೇಣವಾಗಲೀ ಭೂಸುಧಾರಣೆ, ದೇಶದ ನೈಸರ್ಗಿಕ ಸಂಪತ್ತಿನ ಸಮಾನ ವಿತರಣೆ ಮುಂತಾದ ಜನಹಿತ ಕಾರ್ಯಗಳನ್ನು ಮಾಡಲು ಇಂದು ಬದ್ಧ ಕಂಕಣವಾಗಿದೆ. ಇದೇ ಧ್ಯೇಯವನ್ನು ಬೇರೆ ಬೇರೆ ರಾಜಕೀಯ ಪಕ್ಷಗಳು ಬೇರೆ ಬೇರೆ ವಿಧಿ – ವಿಧಾನಗಳಲ್ಲಿ ನಿರೂಪಿಸುತ್ತಿರುವುದಾದರೂ ಅವುಗಳೆಲ್ಲವುಗಳ ಅಂತಿಮ ಗುರಿಯಲ್ಲಿ ಭೇದವಿಲ್ಲ. ಹಿಂದೂ ಮಹಾಸಭೆಯಂಥ ಹದಿನಾರಾಣೆ ಜಾತೀಯ ವಾದೀ ಪಕ್ಷಕೂಡಾ ಸಮಾಜವಾದವನ್ನು ಸ್ಥಾಪಿಸುವ ಗುರಿಯನ್ನಿಟ್ಟುಕೊಂಡಿದೆಯೆಂದರೆ, ಪ್ರಧಾನಿ ಶ್ರೀ ನೆಹರೂರವರು ಭಾರತದಲ್ಲಿ ಹತ್ತಿಪ್ಪತ್ತು ವರ್ಷಗಳೊಳಗೆ ಸಂಪೂರ್ಣ ಸಮಾಜವಾದೀ ತತ್ವವು ಆಚರಣೆಗೆ ಬಂದೇ ಬರುವುದು ಎಂದು ನುಡಿದ ಅಧಿಕಾರಯುತ ಭವಿಷ್ಯ ವಾಣಿಯಲ್ಲಿ ಸೋಜಿಗದ ಅಂಶವೇನೂ ಇಲ್ಲ!

ಭಾರತವು ಕೃಷಿಪ್ರಧಾನ ದೇಶವಾದುದರಿಂದ ಇಲ್ಲಿ ಸಮಾಜವಾದದ ಮೊದಲನೆ ಹೆಜ್ಜೆಯು ಭೂಮಿಯ ಪುನರ್ಗಿತರಣೆಯಾಗ ಬೇಕೆಂಬುದರಲ್ಲಿ ಸಂಶಯವಿಲ್ಲ. ಇದರ ಹಿಂದೆಯೇ ಉದ್ಯಮಗಳ ರಾಷ್ಟ್ರೀಕರಣದ ಪ್ರಶ್ನೆಯೂ ಬರುವುದೆನ್ನಿ. ಆದರೆ ಪ್ರಕೃತ ಶಾಸನದ ಮೇರೆಗೆ ಪರಿಹಾರ ದ್ರವ್ಯ ತೆರಲು ಬೇಕಾದ ನಿಧಿಯನ್ನು ಮುಂದಾಗಿ ಸಂಗ್ರಹಿಸದೆ, ಸರ್ಕಾರ ಈ ಸುಧಾರಣೆಗಳನ್ನು ಆಚರಣೆಗೆ ತರಲು ಸಾಧ್ಯವಿಲ್ಲ. ಆದರೆ ಸರಕಾರವು ಸ್ವಾಧೀನ ಪಡಿಸಿಕೊಳ್ಳುವ ಎಲ್ಲಾ ಭೂಮಿಗಳಿಗೆ ಪರಿಹಾರ ದ್ರವ್ಯವನ್ನೀಯುವುದೆಂದರೆ ಸುಲಭದ ಮಾತಲ್ಲ. ಅದೂ ಭೂಮಿಯನ್ನು ವಶಪಡಿಸುವಾಗ ಸಾಕಷ್ಟು ಪರಿಹಾರ ದ್ರವ್ಯವನ್ನಿತ್ತರೆ, ಭೂ ಹಿಡುವಳಿಯು ಅಸಮಾನತೆ ಹೋಗಿ, ಮೊದಲೇ ಸಾಕಷ್ಟು ಪ್ರಬಲವಾಗಿರುವ ಆರ್ಥಿಕ ಅಸಮಾನತೆ ಇನ್ನೂ ಹೆಚ್ಚಾಗುವುದೆಂಬ ವಿಷಯವನ್ನೂ ಮರೆಯಲು ಸಾಧ್ಯವಿಲ್ಲ.

ಪರಿಹಾರ ದ್ರವ್ಯದ ಪ್ರಶ್ನೆಯನ್ನು ವಿವೇಚಿಸುವಾಗ ಖಾಸಗಿ ಸ್ವತ್ತಿನ ಕುರಿತಾಗಿ ಸ್ವಲ್ಪ ತಿಳಿದು ಕೊಳ್ಳುವುದೂ ಯುಕ್ತವಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯದೊಡನೆ ಆಸ್ತಿಯೂ ಸೇರಿಕೊಂಡಿದೆ. ಹದಿನೆಂಟನೇ ಶತಮಾನದಲ್ಲಿ ಫ್ರಾನ್ಸಿನ ಕ್ರಾಂತಿಯ ಸಮಯದಲ್ಲೂ ಆಸ್ತಿಯು ಸ್ವಾತಂತ್ರ್ಯದೊಡನೆ ಜತೆ ಮಾಡಲ್ಪಟ್ಟಿತ್ತು. ಈಗಲೂ ಖಾಸಗಿ ಆಸ್ತಿಯ ತತ್ವಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮುಖ್ಯವಾಗಿ ಅಮೆರಿಕದಲ್ಲಿ, ತುಂಬಾ ಪ್ರಾಧಾನ್ಯ ದೊರೆಯುತ್ತದೆ. ಭಾರತದ ಶಾಸನ ಪರಂಪರೆಯೂ ಇದೇ ತತ್ವವನ್ನು ಹೆಚ್ಚು ಕಡಿಮೆ ಅವಲಂಬಿಸಿದೆಯೆನ್ನಲಡ್ಡಿಯಿಲ್ಲ. ಆಸ್ತಿಯಿಲ್ಲದೆ ಸುಖಸನ್ನಿವೇಶವಿಸಲಾಗದು ಎಂಬುದನ್ನೇ ನಮ್ಮ ನ್ಯಾಯಾಲಯಗಳೂ ಸ್ವೀಕರಿಸಿವೆಯೆನ್ನಲಡ್ಡಿಯಿಲ್ಲ. ಅದೂ ಪರಿಷ್ಯ ನ್ಯಾಯಾಲಯದ ನ್ಯಾಯಾಧೀಶರು ಐವತ್ತು ವರ್ಷಕ್ಕಿಂತ ಮಿಕ್ಕಿದವರಾದುದರಿಂದ ಅವರ ದೃಷ್ಟಿಯಲ್ಲಿ ಆಸ್ತಿ ಸಹಿತವಾದ ಸುಖಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ ಎಂದು ಕೆಲವು ಗಣ್ಯ ಮಹನೀಯರುಗಳು ಹೇಳುವುದರಲ್ಲೂ ತಥ್ಯವಿಲ್ಲವೆನ್ನಲಾಗುವುದಿಲ್ಲ. ಮನುಷ್ಯನ ವಯೋಮಾನಕ್ಕನುಸರಿಸಿ ಹೆಚ್ಚಾಗಿ ಅವನ ದೃಷ್ಟಿ ಕೋನದ ಪರಿವರ್ತನೆಯು ಸಾಮರ್ಥ್ಯವು ಹೊಂದಿ ಕೊಂಡಿರುತ್ತದೆಯೆನ್ನುವುದು ಅನುಭವಸಿದ್ಧವಾದ ಮಾತು. ಆದ್ದರಿಂದ ನಮ್ಮ ದೇಶದ ನ್ಯಾಯಾಧೀಶರು ಪರಿಹಾರ ದ್ರವ್ಯದ ವಿಷಯದಲ್ಲಿ ತುಂಬಾ ಬಿಗುವಾಗಿರುವರೆಂಬುದರಲ್ಲಿ ಸಂಶಯವಿಲ್ಲ. ಪ್ರಜೆಗಳ ಆಸ್ತಿಯ ಸ್ವಾತಂತ್ರ್ಯವನ್ನು ಎಳ್ಳಷ್ಟೂ ಮೊಟಕುಗೊಳಿಸಲು ಅವರು ಸಿದ್ಧರಿಲ್ಲವೆಂಬುದು ಇತ್ತೀಚೆಗೆ ಈ ವಿಷಯದಲ್ಲಿ ಅವರು ಕೊಟ್ಟ ಕೆಲವು ತೀರ್ಪುಗಳಿಂದ ಗೊತ್ತಾಗಿದೆ.

ಭಾರತದಲ್ಲಿ ಹಿಂದೆ ಖಾಸಗಿ ಆಸ್ತಿಯು ವರಂವರೆ ಹೇಗಿದ್ದರೂ, ಬ್ರಿಟಿಷರ ಕಾಲದಲ್ಲಿ ಹೆಚ್ಚಾಗಿ ಭೂಮಿಗಳು ಸರ್ಕಾರಕ್ಕೆ ಸೇರಿದವುಗಳೆಂಬ ತತ್ವವನ್ನು ಕೆಲವು ಸಂದರ್ಭಗಳಲ್ಲಿ ಎತ್ತಿ ಹಿಡಿಯಲಾಗಿತ್ತು. ಜಮೀನುದಾರಿ, ಇನಾಮ್‌ದಾರಿ ಹಿಡುವಳಿಗಳು ಸರ್ಕಾರದಿಂದ ಅಲ್ಲಾ ಹಿಡುವಳಿದಾರರಿಗೆ ಕಂದಾಯ ವಸೂಲು ಮಾಡಿಕೊಡಲು ಬಿಟ್ಟದ್ದಾಗಿದ್ದವು. ಶೈತವಾರಿ ಹಿಡುವಳಿಗಳ ವಿಷಯದಲ್ಲೂ ಈ ಬಗ್ಗೆ ತುಂಬಾ ಚರ್ಚೆನಡೆದಿದೆ; ಸರ್ಕಾರಕ್ಕೆ ಕಡ್ಡಾಯವಾಗಿ ಬೇಕಾದ ಆಸ್ತಿಗಳನ್ನು ವಶಪಡಿಸಿ ಕೊಳ್ಳುವ ಹಕ್ಕು ಈಗಲೂ ಮಿತವಾಗಿ ಇದೆ ಎನ್ನಲಡ್ಡಿಯಿಲ್ಲ.

ಶ್ರೀ ನೆಹ್ರೂರವರು ಮುಖ್ಯವಾಗಿ ಚೀನ ಪ್ರವಾಸದ ಬಳಿಕ ಪದೇ ಪದೇ ಭಾರತದಲ್ಲಿ ಸಮಾಜವಾದೀ ಪದ್ಧತಿಯ ಆಚರಣೆಯ ಕುರಿತು ಪ್ರಸ್ತಾಪಿಸುತ್ತಿದ್ದಾರೆ. ಇದರಿಂದಾಗಿ ಖಾಸಗಿ ಉದ್ದಿಮೆದಾರರು ಮಾತ್ರವಲ್ಲದೆ, ಶ್ರೀ ನೆಹ್ರೂರವರ ಮಂತ್ರಿಮಂ

The Canara Mutual Assurance Company, Ltd

Managing Director: T. R. A. Pai

Head Office: UDIPI, S. INDIA.] [Estd: 1935.

ಹೊಸ ದಾಖಲೆ

ಕಂಪೆನಿಯು 1954ನೇ ವರ್ಷದಲ್ಲಿ ಮಾಡಿದ ಹೊಸ ವ್ಯವಹಾರ:-

ಬಂದ ಪ್ರೊಪೋಸಲುಗಳು: ರೂ. 1,02,73,700/-

ಹೊರಡಿಸಲಾದ ಪಾಲಿಸಿಗಳು: ರೂ. 88,29,450/-

ಇದು ಕಂಪೆನಿಯ ಹಿಂದಿನೆಲ್ಲ ದಾಖಲೆಗಳನ್ನೂ ಮೀರಿಸಿದೆ ಯಲ್ಲದೆ 1953ನೇ ವರ್ಷದ ವ್ಯವಹಾರದೊಡನೆ ಹೋಲಿಸಿದರೆ, 75%ಕ್ಕಿಂತಲೂ ಹೆಚ್ಚಾಗಿರುತ್ತದೆ.

31—12—1953ನೇ ತಾರೀಕಿಗಾದ ವಿಮಾಗಣನೆಯ ಫಲಿತಾಂಶ:-

ಲಾಭ ಸಹಿತ ಪಾಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ.18/- ಹೋಲ್ ಲೈಫ್ ಎಶ್ಯೂರೆನ್ಸಿಗೆ ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿಯತ್ತವೆ.

ಎ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾ.] [ಸ್ಥಾಪನೆ: ೧೯೩೫

ಸ್ಥಾಪನೆಯಾದದಿನದಿಂದಲೂ ಪ್ರತಿಯೊಂದು ವರ್ಷಕ್ಕೂ ಲಾಭ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.

Mukund Nivas, UDIPI, S. India.

ಡಲದಲ್ಲಿರುವ ಕೆಲವರೂ ಕಳವಳ ಗೊಂಡಿದ್ದಾರೆಂಬುದು ಸ್ಪಷ್ಟವಾಗಿದೆ. ನಗಿನ್ ದಾಸ್ ಮಾಸ್ತರ್, ಎ. ಡಿ. ಶ್ರೋಫ್ ಮುಂತಾದವರು ಖಾಸಗಿ ಉದ್ದಿಮೆದಾರರನ್ನು ಯಾವ ಸುಧಾರಣೆಯ ಕಾಲದಲ್ಲೂ ಮರೆಯಬಾರದೆಂದು ಸರ್ಕಾರಕ್ಕೆ ಕರೆಯಿತ್ತಿದ್ದಾರೆ. ಸಮಾಜವಾದೀ ತತ್ವದ ಪ್ರಕಾರ ಖಾಸಗಿ ಸ್ವತ್ತಿಗೆ ತುಂಬಾ ಇತಿಮಿತಿಗಳಿವೆ. ಭೂ ಮತ್ತು ಇತರ ಸಂಪತ್ತುಗಳು ಸಮಾಜಕ್ಕೇ ಸೇರಿದುದೆಂದು ಆ ತತ್ವದ ಮೇರೆಗೆ ಪರಿಗಣಿಸಲಾಗುತ್ತಿದೆ. ಸಮಾಜದೊಳಗಿರುವ ಆರ್ಥಿಕ ಅಸಮಾನತೆಯನ್ನು ನಿವಾರಿಸದಿದ್ದಲ್ಲಿ ಜನಹಿತ ರಾಜ್ಯದ ನಿರ್ಮಾಣವು ಅಸಾಧ್ಯವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಅದರ ವಿಧಾನ ಯಾವುದು ಎನ್ನುವುದೇ ಇಂದು ಚರ್ಚಾಸ್ಪದವಾದ ವಿಚಾರ.

ಇದಕ್ಕೆ ಶಾಸನದ ದಾರಿಯೂ ಇದೆ; ಶಾಸನ ಬಾಹಿರವಾದ ದಾರಿಯೂ ಇದೆ. ಜಗತ್ತಿನ ಸಮತಾವಾದಿ ರಾಷ್ಟ್ರಗಳು ಎರಡನೆಯ ದಾರಿಯನ್ನು ಸಮಾಜವಾದದ ಬೆಳವಣಿಗೆಗಾಗಿ ಹಿಡಿದಿದೆ. ಅವುಗಳು ಸಾಮಾನ್ಯವಾದ ನೈತಿಕ ಮೌಲ್ಯಗಳನ್ನು ಅನುಸರಿಸುವುದಿಲ್ಲ. ಕೊಲೆ—ರಕ್ತಪಾತಗಳಿಗೆ ಹೇಸುವುದಿಲ್ಲ. ಅಮಾನುಷತೆಯನ್ನು ಹೋಗಲಾಡಿಸಲು, ಹೊಡೆದೋಡಿಸಲು, ಅಮಾನುಷ ವಿಧಾನವನ್ನೇ ಪ್ರಯೋಗಿಸುತ್ತಿವೆ. ಇವುಗಳಿಂದ ಯಶಸ್ಸು ಸಿಕ್ಕಿದೆಯೆನ್ನಬಹುದು. ಭಾರತದಲ್ಲೂ ಇಂಥ ಉಗ್ರಗಾಮಿ ಸಂಥವಿಲ್ಲದಿಲ್ಲ. ಆ ಸಂಥವು ಪರಿಹಾರ ದ್ರವ್ಯದ ತತ್ವವನ್ನು ವಿರೋಧಿಸುತ್ತಿದೆ.

ಸಮಾಜವಾದೀ ರಾಷ್ಟ್ರದಲ್ಲಿ ಪರಿಹಾರ ದ್ರವ್ಯದ ಪ್ರಶ್ನೆಯೇ ಬರುವುದಿಲ್ಲ. ಎಲ್ಲರಿಗೂ ಉದ್ಯೋಗಗಳನ್ನು ಕಲ್ಪಿಸಿಕೊಟ್ಟು, ಅನ್ನ ಬಟ್ಟೆಯನ್ನೀಯುವ ಕ್ಷೇಮ ಚಿಂತನ ರಾಷ್ಟ್ರದ ಪ್ರಜೆಗಳಿಗೆ ಇದನ್ನು ಯೋಚಿಸುವಅವಶ್ಯಕತೆಯೇ ಇಲ್ಲವೆಂದೂ ತಪ್ಪಾಗಲಾರದು. ಇಂಗ್ಲೆಂಡಿನಲ್ಲಿ ಕೂಲಿಕಾರ ಸರ್ಕಾರವು ಶಾಸನ ಸಭೆಯ ಆಶ್ರಯದಲ್ಲಿ ಸಮಾಜವಾದದ ಪ್ರಯೋಗವನ್ನು ನಡೆಸಿತು. ಉಕ್ಕು ಕಲ್ಲಿದ್ದಲು ಮುಂತಾದ ಪ್ರಮುಖ ಉದ್ದಿಮೆಗಳನ್ನು ಅದು ರಾಷ್ಟ್ರೀಕರಣ ಮಾಡಿತು. ಅದಾಯದ ಪ್ರಮಾಣಕ್ಕನುಗುಣವಾದ ತೆರಿಗೆ, ಮರಣ ತೆರಿಗೆ ಇತ್ಯಾದಿಗಳನ್ನು ಹೊರಿಸಿ ಶ್ರೀಮಂತರ ಸಾಂಪತ್ತಿಕ ಶಕ್ತಿಯನ್ನು ಕುಗ್ಗಿಸಿತು. ಈ ಸುಧಾರಣೆಗಳೊಡನೆಯೇ ರಾಷ್ಟ್ರೀಯ ವಿಮಾ ಯೋಜನೆ, ಉಚಿತ ವೈದ್ಯಕೀಯ ಯೋಜನೆಗಳನ್ನೂ ಅದು ಆಚರಣೆಗೆ ತಂದಿತು. ಇನ್ನೂ ಅದು ಅಧಿಕಾರಕ್ಕೆ ಬಂದರೆ ಈ ಪ್ರಯೋಗವನ್ನು ಇನ್ನೂ ವ್ಯಾಪಿಸಬೇಕೆಂಬ ಉದ್ದೇಶದಲ್ಲಿದೆ.

ಈ ಸಂದರ್ಭದಲ್ಲಿ, ಭಾರತದಲ್ಲಿ ವಿನೋಬಾಜೀಯವರ ಮುಂದಾಳುತನದಲ್ಲಿ ನಡೆಸಲಾಗುತ್ತಿರುವ ಭೂದಾನ, ಸಂಪತ್ತುದಾನ ಚಳವಳಿಗಳನ್ನೂ ಉಲ್ಲೇಖಿಸುವುದು ಅಪ್ರಸ್ತುತವಾಗಲಾರದು. ವಿನೋಬಾಜೀಯವರದು ಹಿಂಸಾತ್ಮಕ ಚಳುವಳಿಯೂ ಅಲ್ಲ; ಶಾಸನದ ಬಲತ್ಕಾರದಿಂದ ಪ್ರಜೆಗಳ ಹಕ್ಕುಗಳನ್ನು ಕಸಿದುಕೊಳ್ಳುವ ಯತ್ನವೂ ಅಲ್ಲ, ಇಲ್ಲಿ ಅಹಿಂಸೆ, ದಯೆ, ತ್ಯಾಗ ಮುಂತಾದ ಮಾನವೀಯ ನೈತಿಕ ಪ್ರಶ್ನೆಗಳಿಗೆ ಮಾತ್ರ ಇಲ್ಲಿ ಪ್ರಾಶಸ್ತ್ಯ ಕೊಡಲಾಗುತ್ತದೆ. ಇದು ಜಗತ್ತಿನ ಇತಿಹಾಸದಲ್ಲೇ ನೂತನ ಪ್ರಯೋಗವಾದುದರಿಂದ, ಇತರ ರಾಷ್ಟ್ರಗಳು ಇನ್ನೂ ಈ ಕಡೆಗೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಈ ವಿಧಾನದಲ್ಲಿ ಸಮಾಜದ ಪುನಾರಚನೆಯನ್ನು ಕ್ಷಿಪ್ರವಾಗಿ ಸಾಧಿಸಬಹುದೆಂದು ಹೇಳಲಾಗದಿದ್ದರೂ, ಮಾನವ ಕೋಟಿಯ ಇತಿಹಾಸದಲ್ಲಿ ಇದಕ್ಕೊಂದು ಸ್ಥಾನ ಕಟ್ಟಿಟ್ಟದ್ದೇ.

ಪರಿಹಾರ ದ್ರವ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ನಿರಾಕರಿಸುವ ಈ ತಿದ್ದುಪಡಿ ಮನೋದೆಯ ಕ್ಷೇಮ ಚಿಂತನ ರಾಷ್ಟ್ರದ ಸಾಧನೆಗಾಗಿ ಅಗತ್ಯವಾದುದೇ ಎಂಬುದನ್ನು ಎಲ್ಲರೂ ಇಂದು ಮನಗಾಣ ಬೇಕಾಗಿದೆ. ಬಹು ವಿಧಗಳಿಂದ ಕೂಡಿಟ್ಟಿರುವ ತಮ್ಮ ಸಂಪತ್ತಿನ ಮೇಲೆ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡಿರುವ ನಮ್ಮ ಇಂದಿನ ಸಮಾಜದ ಭಾಗ್ಯವಂತರು ಅದರಿಂದಾಗಿ ತುಸು ಕಳವಳ ಗೊಳ್ಳಬಹುದಾದರೂ ಆ ಕಳವಳ ಕೇವಲ ಕ್ಷಣಿಕವಾದೀತೆಂದು ಭಾವಿಸಲು ಎಡೆಯಿದೆ. ಏಕೆಂದರೆ ಭಾರತೀಯರು ಎಂದೂ ವಿಶೇಷವಾದಲೌಕಿಕ ವಾದಿಗಳಾಗಿರಲಿಲ್ಲ. ಅಧ್ಯಾತ್ಮ ಚಿಂತನೆಯಿಂದ ದೊಡಗೂಡಿದ ನೈತಿಕ ಹಾಗೂ ಮಾನವೀಯದೃಷ್ಟಿಯು ಭಾರತ ಸಂಸ್ಕೃತಿಯ ವಿಶಿಷ್ಟ ಪರಂಪರೆಯಾಗಿದೆ. ಪರಕೀಯರ ಆಡಳಿತೆಯಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯಗಳೂ ದೊರೆತುದಿಲ್ಲವೆಂದೇ ಗಾಂಧಿಜೀಯಂಥ ಮುಂದಾಳುಗಳು ಸ್ವಾತಂತ್ರ್ಯ ಸಮರವನ್ನು ಹೊಡಿದುದು ವಿನ ಬಿಳಿ ಬಣ್ಣದ ಶೋಷಣೆಗಾರರ ಸ್ಥಾನದಲ್ಲಿ ಕರಿ ಬಣ್ಣದ ಶೋಷಣೆಗಾರರನ್ನು ನಿರ್ಮಿಸಲಿಕ್ಕಾಗಿ ಅಲ್ಲ ಎಂಬುದನ್ನು ನಾವು ಮರೆಯಬಾರದು.

ಕರ್ಮಯೋಗಿ--

ನಸುಕು ಹರಿದಿದೆ. ಬಾನಬದಿಯಲಿ
ಬೆಳಕಿ ನಾದರವೇರಿದೆ.
ಗುಸುಕು ಗೈಮೆಯ ಕವಿದ ಕತ್ತಲ
ಕಾಲ ಕೂಟವು ಸರಿದಿದೆ!

ಮುಸುಕು ಮುಚ್ಚಳ ತೆರೆದು ಹೂವಿನ
ಹೃದಯ ಹಚ್ಚನೆಯರಳಿದೆ.
ಬಿಸುಗಡಿರಿ ಬೆಚ್ಚನ್ನ ಕಿರಣದ
ಬೆರಳು ಮೆತ್ತನೆ ತೂರಿದೆ!

ನಾಕನರಕದ ಸಕಲ ಸಂಸದ
ಭವದ ಭೋಗಕೆ ಸುರಿದಿದೆ
ಲೋಕಲೋಕದ ನಿಭೃತಕಾಮನೆ
ಕಲ್ಪನೆಗೆ ಬಾಯಾರಿದೆ!

ಬೇಕು ಬೇಡೆಂದಾಡದಲೆ ಮೈ
ಮನಸು ಗುಂಜಿತ ವೆಸಗಿದೆ
ಸಾಕು ಸಾಕೆಂಬಾತ್ಮ ತೃಪ್ತಿಯ
ಮಾತು ಮೌನಕೆ ಸಂದಿದೆ!

ಕನಸು ಕಾಣುವ ಮನಸು ಮೆಲ್ಲನೆ
ನೆನಸಿನಲಿ ಕಾಲೂರಿದೆ
ನೆನಸು ಭೋಗದ ಭಾಂಡದಲಿ ಕೈ
ಸೋತುದೊಪ್ಪನೆ ಜಾರಿದೆ!
ಅರು ಕಾಣದ ಭೂರಿ ವೈಭವ
ವೇರಿಕೆಯ ಕೈಗೆಟಕಿದೆ
ಹೀರಲೆಳಸುವ ಜೆಲುವಿಕೆಯ ತುಟಿ
ಕೆರೆದು ತತ್ತರಗೊಂಡಿದೆ.

ನೋಡು ಮುಂದಕೆ! ಹೆಗಲ ಮೇಲಕೆ
ಹೊತ್ತ ಗೈಮೆಯ ಸಾಧನೆ
ನೀಡುಗೈಗಳ ಮಾಂಸ ಖಂಡದ
ಶ್ರಮದ ಗೈವಾರಾಧನೆ!
ಬೇಡಲಾರದ ಬಾಯ ಕೊನೆಯಲಿ
ಬಿಗಿದ ಧೃತಿಯ ನಿವೇದನೆ
ಸಾಗು ಸಾಗುತ ಸತ್ಯ ಲೋಕಕೆ
ಹೆಣಗುತಿಪ ಸಂಭಾವನೆ!

ಎಂದೊ ತುಂಬಿದ ಜೀವಯಾತ್ರೆ
ಬುತ್ತಿ ಭೋಗಕೆ ಬಾರದು
ಪುಣ್ಯಮಣ್ಣುಗಳಮರ ಗಾನವು
ಕಿವುಡು ಕಿವಿಯಲಿ ತೂರದು!

ಹಸಿವು! ತೀರದ ಹಸಿವು! ಹಸಿಹಸಿ
ಹರಣವೆಲ್ಲಾ ಹಸಿದಿದೆ!
ಬಿಸಿರಕುತ ಬರಡೆದೆಯ ಬೋಗುಣಿ —
ಯಲ್ಲಿ ಕುದಿಕುದಿದಾರಿದೆ!

ಅವನೆ ತೂರುವ ಗಾಳಿಪಟಗಳ
ಲವನದೇ ಕೈಕಾರಣ
ಅವನ ಭಾವನೆ ಬಿಗಿದು ಬದುಕನು
ಹಿಡಿದ ಸೂತ್ರ ನಿಯಂತ್ರಣ

ಅವನಿಗಾಗಿಯೆ ಮೆಲ್ಲ ಮೆಲ್ಲನೆ
ಹಾಡುತಿಹ ಹೃದಯಾಂಗಣ
ಅವನ ಕಣ್ ಕಣ್ಣೀರಲೇ ಬರೆ
ಬರೆದ ಕರುಣಾರಂಗಣ!

ಹಾಡದಿದೆ ಕುಕಿಲಾಡದಿದೆ ಗಿಳಿ
ಮೌನಗೊಂಡಿಹ ಮನ್ನಣೆ
ನೋಡ ನೋಡುತ ಜಗುಳ್ದ ಹೂವಿನ
ದೈನ್ಯತೆಯ ಧನ್ಯಾರ್ಪಣೆ!

ಮೂಡು ನೇಸರ ಬಿಸಿಲಿನಾ ಸಾರ
ವೇನೊ ಹುಮ್ಮಸು ತುಂಬಿದೆ
ಏನು ಕಜ್ಜವೊ—ಆತನುಜ್ಜುಗ
ಸಗ್ಗ ಬಾಗಿಲ ನೊಡೆದಿದೆ!
ನೋಡು ವಿಂದ್ರನ ಮೋಹ ಮದಿರೆಯ
ಮಾದಕದ ಮತ್ತಡಗಿತು!
ಹಾಡು ಬಿಜ್ಜಿಯ ಕುಣಿವ ಗೆಜ್ಜೆಯ
ಗಿಣಿಗಿಣಿರ ಗತಿಯುಡುಗಿತು!

ಸಗ್ಗವೆಂದೆದೆ ಹಿಗ್ಗಿ ಕುಳಿತಿಹ
ಜಗತ್ ಪೀಠವು ನಡುಗಿತು
ಅವನ ಗೈಮೆಯ ಹೊಡೆತದಲಿ ಹಳೆ—
ತನದ ಕೋಟೆಯು ಕೆಡೆಯಿತು!
ಎನಿತೊ ಪಪಿನ ಹೊದಿಕೆಯಲಿ ಬ-
ಚ್ಚಿಟ್ಟ ಬದುಕಿನ ಮಾಣಿಕ
ಅನಿತು ಕಲ್ಪವ ನೊಡೆದು ನೋಡುವ
ನವ್ಯತೆಯ ಚಿರಸಾಧಕ!

ಇದ್ದು ಬದುಕದ ಮೊದ್ದು ದೇವರು
ಬಿದ್ದಿರಲಿ ಭೂಭಾರಕೆ!
ಸತ್ತು ಸಾಯದ ದುಷ್ಟ ದೈತ್ಯರ
ತಲೆಯ ತುಳಿ ಪಾತಾಳಕೆ!
ನಸುಕು ಮೂಡುವ ಮುನ್ನ ಕಟ್ಟಿಹ
ಬುತ್ತಿ ಹೆಗಲನು ಹೇರಿದೆ
ಅವನ ನಡೆಯಲಿ ಸುಳ್ಳು ಸೋಲಿನ
ಮಾರ್ಗ ಪುಡಿ ಪುಡಿಯಾಗಿದೆ!

ಅವನ ಕರ್ಮದ ಕದನದಲಿ ಹುಸಿ
ಹುಸಿ ಹಸಿವು ಪುಟ್ಟಡಗಿದೆ
ಅಮೃತ ವೃಷ್ಟಿಯ ಬೆಮರಹನಿಯಲಿ
ಹೊಸತು ಸೃಷ್ಟಿಯು ತೊಡಗಿದೆ!

— ಯಸ್. ವೆಂಕಟರಾಜ

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೈಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವಹಾಗಿದ್ದರೂ, ಕಣ್ಣುಗಳು ಗುಳಿ ಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದವರೂ ದುಃಖವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರೂ, ಕೀಸು, ವ್ಯಾಧಿಗಳೇ ಮೊನಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು: ಇಂತಹ ಜೀವನಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0

ಮಾಲಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (TRIVANDRUM).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾರಿ.

ಎಸ್. ವೆಂಕಟರಾಜರ ಪುಸ್ತಕಗಳು.

ರಂಗಭೂಮಿ- ೦-೧೦-೦
ಸಕ್ಕಷ್ಟು ನಗಿಸುವ ಹಾಸ್ಯಭರಿತ ನಾಟಕ.

ಆಕಾಶಗಂಗೆ- ೨-೮-೦
ಸಾಹಿತ್ಯ ಪ್ರಧಾನವಾದ, ಹೃದಯ ಸ್ಪರ್ಶಿಯಾದ 20 ಕತೆಗಳ ಸಂಗ್ರಹ.

ಕವಿತಾಕಾಮಿನಿ- ೨-೦-೦
ಕಲ್ಪನಾತೀತ ಮಾಧುರ್ಯದಿಂದೊಡಗೂಡಿದ 75 ಕವನಗಳ ಸಂಗ್ರಹ.

ಸಪ್ತಸಾಗರ- ೦-೧೨-೦
ಜೀವನದ ಒಪ್ಪು—ತಪ್ಪುಗಳ ನವತನದ ಮನವರಿಕೆಯನ್ನುಂಟುಮಾಡುವ ಸುರಸ—ಸುಂದರ 7 ಕತೆಗಳ ಸಂಗ್ರಹ.

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತವೆ.

ಕನ್ಯಾರ್ಥಿಗಳು

(ಏಕಾಂಕ ನಾಟಕ)

ಪಾತ್ರವರ್ಗ:— ಶಾಮಣ್ಣ (ಮಧ್ಯವಯಸ್ಕ), ಶ್ಯಾಮ ಸುಂದರ (ತರುಣ), ರಾಜಶೇಖರ (ತೀರ ತರುಣ)- ಮೂವರು ಕನ್ಯಾರ್ಥಿಗಳು.
ಮನೆಯ ಒಡತಿ 'ಸೂರ್ಯಕುಮಾರಿ', ಎಂ. ಎಂ. ಓದಿದ ತರುಣಿ
'ಸೂರ್ಯಕುಮಾರಿಯ ಅಜ್ಜ'
ಜವರ- ಮನೆಯ ಕೆಲಸದ ಆಳು.
ಅಂಚಿಯವ- ಸಿರಿಯೂರಿನ ಜನಾರ್ದಾದಿ.

(ಸ್ಥಳ— ರಾಜಾರಾಮ ಬೀದಿಯಲ್ಲಿಂದು ಮನೆಯ ಮುಂಭಾಗ)

ಶ್ಯಾಮಣ್ಣ—ಇದೇ ಇರಬೇಕು ಮನೆ; ನೂರಾರನೇ ನಂಬ್ರದ ಮನೆ, ರಾಜಾರಾಮ ಬೀದಿ – ಎಂದರೆ ಇದೇ ಆಗಿರುತಲ್ಲ. ಎಷ್ಟೋ ಸಾರಿ ಈ ಕಾಡಿಯಲ್ಲಿ ಹೋಗಿದ್ದೆ —ಆದರೂ ಈ ಮನೆಯನ್ನು ಕಂಡ ನೆನಪಿಲ್ಲ. ಮನೆ ಇಲ್ಲೇ ಇದ್ದಿರಬೇಕು. ಈ ಮನೆಯಲ್ಲಿ ಇರುವವರು ಯಾರು? ಹೊರಗಿನ ಗೇಟಿನಲ್ಲೂ ಸೈನ್ ಬೋರ್ಡು ಹಾಕಿಲ್ಲ—ಬಾಗಿಲು ಹಾಕಿದೆ (ಬಂದು ವರಂಡಾ ಸೇರಿ ಕದ ತಟ್ಟುತ್ತ)-ಓ ಮನೆಯವರೇ.

ಕೆಲಸದವ—ಬಂದೆ (ಬಾಗಿಲು ತೆಗೆದು) ಬಂದೆ (ಒಂದು) ಯಾರು ಬೇಕು ನಿಮಗೆ?

ಶ್ಯಾಮಣ್ಣ—ಇದೇ ಅಲ್ಲವೆ ಮನೆ?

ಕೆಲಸದವ-- ಹೌದು—ಇದು ಮನೆಯೇ ..

ಶ್ಯಾಮಣ್ಣ—ಹಾಗಲ್ಲ—ರಾಜಾರಾಮಾ ಬೀದಿಯಲ್ಲಿ ೧೦೦ನೇ ನಂಬ್ರದ ಮನೆ ಇದಲ್ಲವೇ ಎಂದೆ.ಮಿ| xರವರು ಇರುವುದು?

ಕೆಲಸದವ—xರವರು?

ಶ್ಯಾಮಣ್ಣ—ಹಾಗಲ್ಲ xರವರು ಎಂದರೆ, ಅವರು ಹೆಸರನ್ನೆ ತಿಳಿಸಿಲ್ಲ. ಇಲ್ಲಿ ನೋಡಿ, ಅವರು ಕೊಟ್ಟ ಜಾಹೀರಾತನ್ನು 'ತರಬೇಕು'—'ಮೊಮ್ಮಗಳಿಗೆ ಯೋಗ್ಯನಾದ ವರಬೇಕು'—'ನೇರಾಗಿ ಬಂದು ಭೇಟಿಯಾಗುವುದು'—ಎಂದು ಪ್ರಕಟಿಸಿದ್ದಾರಲ್ಲ.

ಕೆಲಸದವ—ಹೋ ಆ ಮನೆ; ಹೋ- ಅವರು.

ಶ್ಯಾಮಣ್ಣ—ಅವರೆಂದರೆ ಇವರಲ್ಲವೆ?

ಕೆಲಸದವ—ನಾವು – ಇವರಿಗೇನೇ ಅವರೆನ್ನುವುದು; ನಮ್ಮ ಯಜಮಾನರಿಗೆ. ನೀವು ನಿಮ್ಮ ಬಗ್ಗೆ ಬಂದಿರೋ ಅಥವಾ..

ಶ್ಯಾಮಣ್ಣ—ನನ್ನ ಬಗ್ಗೆ ಅಲ್ಲದೆ ಯಾರ್ಯಾರ ಬಗ್ಗೆ ಯಾಕೆ ಬರುತ್ತೇನೆ?

ಕೆಲಸದವ—ಅಲ್ಲ ಕ್ಷಮಿಸಿ—ಸ್ವಲ್ಪ ವಯಸ್ಸು ಹೆಚ್ಚಿಗೆ ಕಾಣಿಸಿತು. ಹಾಗೆಂದೆ.

ಶ್ಯಾಮಣ್ಣ— ನೀನೇ ಅದೆಲ್ಲ ತನಖಿಗೆ ಹೊರಟರೆ ಹೇಗೆ? ಇರಲಿ-ಮನೆಯ ಯಜಮಾನರ ಹೆಸರೇನು?. ಅವರ ಮೊಮ್ಮಗಳು ಅಂದರೆ ಯಾರು? ಮನೆಯವರಿದ್ದಾರೆಯೇ? ಎಷ್ಟು ಹೊತ್ತಿಗೆ ಕಾಣಬಹುದು? ಅವರಿಗೆ ತಿಳಿಸುತ್ತೀಯಾ?

ಕೆಲಸದವ— ಅಯ್ಯೋ- ಒಂದೇ ಉಸಿರಿಗೆ ಐದಾರು ಪ್ರಶ್ನೆ ಕೇಳಿದರೆ.

ಶ್ಯಾಮ— ಇಲ್ಲಪ್ಪ- ಬೇರೆ, ಬೇರೆಯಾಗಿ ಕೇಳುತ್ತೇನೆ. ಮನೆಯ ಯಜಮಾನರಿಗಿಂತ ಮನೆ ಕೆಲಸದವರು ಮುಖ್ಯವಲ್ಲವೇ

ಕೆಲಸದವ— ಅದು ಒಂದು ಲೆಕ್ಕಕ್ಕೆ ನ್ಯಾಯವಲ್ಲವೇ? ಇಲ್ಲದೆ ಹೋದರೆ ಮನೆ ನಡೆಯುವುದು ಹೇಗೆ?

ನೋಡಿ, ನಮ್ಮ ಯಜಮಾನರಿಗೆ-ಬಹಳ ವಯಸ್ಸು; ಕಾಯಿಲೆ ಪ್ರಕೃತಿ; ಸ್ವಲ್ಪ ಆಚೀಚೆ ಹೋಗುವುದಕ್ಕೂ ಯಾರದ್ದಾದರೂ ಸಹಾಯ ಬೇಕೇ ಬೇಕು.

ಶ್ಯಾಮ – ವಯಸ್ಸು, ಕಾಯಿಲೆ-ಮುಖ್ಯವಲ್ಲ ತುಂಬ ಅನುಕೂಲವೇ?

ಕೆಲಸದವ— ಇರಬೇಕು ಅಂದರೆ— ಅವರ ಪಾಸುಬೂಕನ್ನು ಬೇಂಕಿಗೆ ಕೊಂಡುಹೋಗುವವನು ನಾನೇ. ಅದರೊಳಗೆ ಬರದಿರುವುದೆಲ್ಲವೂ— ಸಾವಿರ, ಲಕ್ಷದ ವ್ಯವಹಾರ. ನನಗೆ ಪಾತ್ರ ಕೊಡುವುದು ತಿಂಗಳಿಗೆ ಮುವತ್ತು.

ಶ್ಯಾಮ— ಮುವತ್ತು ಕೊಡುತ್ತಾರೆಯೇ!

ಕೆಲಸದವ— ಅಮ್ಮ ಹೆಚ್ಚೆ!

ಶ್ಯಾಮ— ಹೆಚ್ಚು ಅನ್ನಲಾರೆ... ಇರಲಿ, ಇನ್ನಾರ್ಯಾರು ಇದ್ದಾರೆ ಈ ಮನೆಯಲ್ಲಿ?

ಕೆಲಸ— ಅವರು; ಅವರ ಮೊಮ್ಮಗಳು; ಅವರಿಬ್ಬರೂ ಹೋದರೆ-ನಾನೇ.

ಶ್ಯಾಮ— ಮೊಮ್ಮಗಳಿಗೆ ವಯಸ್ಸು, ವಿದ್ಯೆ, ರೂಪ ಎಲ್ಲ ಇದೆಯೇ?

ಕೆಲಸ— ಮೊದಲು ಬಂದವರು ಇದೇ ಪ್ರಶ್ನೆ ಕೇಳಿದರು.

ಶ್ಯಾಮ— ಬಹಳ ಮಂದಿ ಬಂದಿದ್ದಾರೋ, ಹಾಗೆ, ವಿಚಾರಿಸಿ.

ಕೆಲಸ— ಪೇಪರಿನಲ್ಲಿ ಪ್ರಕಟಣೆ ಕೊಟ್ಟ ಮೇಲೆ!

ಶ್ಯಾಮ— ಇನ್ನೂ ಯಾವುದು ನಿಶ್ಚಯವಾಗಿಲ್ಲ ತಾನೆ? ನಾನು ಬಂದದ್ದು ತಡವಾಗಿಲ್ಲ ತಾನೇ! ಅಲ್ಲ-ನಾನು ಗಟ್ಟಿಯಾಗಿ ಮಾತಾಡುತ್ತಿದ್ದೇನೆ. ಒಳಗೆ ಬೇರೆಯಾರೂ ಇಲ್ಲವಲ್ಲ.

ಕೆಲಸ— ಇದ್ದರೆ, ನನ್ನ ಸ್ವರ ಇಷ್ಟು ಗಟ್ಟಿಯಾಗುತ್ತಿತ್ತೇ? ಆ ತಾಯಿ ಬಂದು ತಲೆಯ ಮೇಲೆ ಕುಟ್ಟಿ ಕೊಟ್ಟಾರು.

ಶ್ಯಾಮ— ಅಮ್ಮ ಜೋರಿನವಳೋ!

ಕೆಲಸ— ಜೋರೆಂದರೆ ಜೋರಲ್ಲ, ತುಂಬ ಓದಿದವರು ನೋಡಿ. ದುಡ್ಡೂ ಇದೆ— ರೂಪ ಇದೆ—ಮೂರೂ ಸೇರಿದರೆ ಜಂಭ ಬಾರದಿರುತ್ತದೆಯೇ?

ಶ್ಯಾಮ— ತುಂಬಾ ರೂಪವಿದೆಯೇ!

ಕೆಲಸ— ಅಂದರೆ— ನಿಮಗೆ ಕೊಡುವಷ್ಟಿಲ್ಲ; ಅವರಿಗೆ ಬೇಕೆನ್ನುವಷ್ಟಿದೆ! ಅಲ್ಲಿ ನೋಡ ಬಾರದೇ ಗೊಡೆಯಲ್ಲಿ ಫೋಟೋ ತೂಗ ಹಾಕಿದ್ದಾರಲ್ಲ.

ಶ್ಯಾಮಣ್ಣ— ಅದೇನೋ! ಅದೇ ಅವರ ಫೋಟೋವೋ! ·ಫೋಟೋ ಅವರದ್ದೇನೋ! ಓ-ಅವಳು ಎಂದರೆ ರಿಯಲ್ ಬ್ಯೂಟಿ!

ಕೆಲಸ—ಅದೇನು ಇಂಗ್ಲಿಷಿನಲ್ಲಿ ಬಯ್ಯುತ್ತಿದ್ದೀರಿ ಸ್ವಾಮಿ?

ಶ್ಯಾಮಣ್ಣ— "ಬ್ಯೂಟಿ" ಅಂದೆ- ಬ್ಯೂಟಿ ಎಂದರೆ 'ಸುಂದರಿ" ಎಂದು ಅರ್ಥ.

ಕೆಲಸ— ಫೋಟೋದಲ್ಲಿ ಇರುವ ಹಾಗೆ ಇಲ್ಲರೀ.

ಶ್ಯಾಮಣ್ಣ— ಇಲ್ಲದೆ ಹೇಗೆ ಬರುತ್ತದೆಯೋ ಫೋಟೋದಲ್ಲಿ.

ಕೆಲಸ— ಏನು ಸ್ವಾಮಿ, ಹಾಗೆನ್ನುತ್ತೀರಿ? ಫೋಟೋ ಎಚ್ಚರ ನಿಮಗೆ ತಿಳಿಯದೇ ಫೋಟೋದಲ್ಲಿ ಕಪ್ಪಿದ್ದುದು ಬೆಳ್ಳಗಾಗಿ ಬರುತ್ತದೆ ಎನ್ನುತ್ತಾರಲ್ಲ

ಶ್ಯಾಮಣ್ಣ— ಹಾಗಿದ್ದರೆ, ಅವಳು ಬೆಳ್ಳಗಿಲ್ಲ—ಎನ್ನುತ್ತೀಯ. ನಿನ್ನ ಬಣ್ಣವಾದರೂ ಇದೆಯೇ!

ಕೆಲಸ— ನನ್ನ ಬಣ್ಣ ಅವರಿಗೆ ಹೇಗೆ ಬರಬೇಕು ಸ್ವಾಮಿ? ನನ್ನದು ನನ್ನದೇ!

ಶ್ಯಾಮಣ್ಣ—(ಕಿಸೆಯಿಂದೊಂದು ರೂಪಾಯಿ ತೆಗೆದು ದೊಡ್ಡ ದೊಡ್ಡ ಆಫೀಸರುಗಳ ಹಾಗಿರಬೇಕು. ಇವರ ಮನೆ—ಪೇಡೆಯವರನ್ನೆ ಮೊದಲು ಒಲಿಸಬೇಕು—)ಇಕೊ ತೆಗೆದು ಕೋ, ಆ ಮೇಲೆ ಕಾಫಿ ಕುಡಿಯಬಹುದು... ಈಗ ನನಗೆ ಅವರ ಸಂಗತಿ ಸಮಾಚಾರಗಳನ್ನು ವಿವರವಾಗಿ ಹೇಳು. ..ಅವರ ಹತ್ತಿರವೇ ಕೇಳುವುದಕ್ಕೆ ಆಕ್ವರ್ಡ್ ಆಗುತ್ತದೆ.

ಕೆಲಸದವ—ಅಕ್ವರ್ಡ್— ಎಂದರೆ.

ಶ್ಯಾಮಣ್ಣ— ಮನಸ್ಸಿನಲ್ಲಿದ್ದುದನ್ನೆಲ್ಲ ಅವರೊಡನೆಯೇ ಕೇಳಲಿಕ್ಕೆ ಬರುತ್ತದೆಯೇನಯ್ಯ?

ಕೆಲಸದವ – ಏನು ಸ್ವಾಮಿ, ಕೇಳದೆ! ಅವರು ಸುಮ್ಮನೆ ಇದ್ದಾರೆಯೆ? ದೊಡ್ಡ ಯಜಮಾನರು ಸುಮ್ಮನಿದ್ದರೂ, ಪುಟ್ಟ ಯಜಮಾನಿಯರು, ಎಂ. ಎಂ. ಕಲಿತವರು, ಪಟ, ಪಟಾ—ಪ್ರಶ್ನೆ ಕೇಳಿಯೇ ಕೇಳುತ್ತಾರೆ.

ಶ್ಯಾಮ – ಹಾಗಿದೆಯೇ? ಅವರೇ ಕೇಳುತ್ತಾರೆಯೇ? ಹಿಂದೆ ಬಂದವರಿಗೆಲ್ಲ ಏನೇನು ಪ್ರಶ್ನೆ ಕೇಳಿದರೊ.

ಕೆಲಸ— ಏನು ಕೇಳುತ್ತಾರೋ ಅವರಿಗೇ ಗೊತ್ತು ಸ್ವಾಮಿ! ನಮ್ಮ ಹಳ್ಳಿಯಲ್ಲಿ ಹೆಂಗಸರು ಗಂಡಸರೆದುರು ಹಾಗೆ ಮಾತನಾಡಿದುದನ್ನು ನಾನು ಜನ್ಮದಲ್ಲಿ ಕಂಡಿರಲಿಲ್ಲ. ಈ ಅಮ್ಮ –ಒಂದನ್ನೂ ಬಚ್ಚಿಡದೆ ಪ್ರಶ್ನೆ ಕೇಳುವವರು! ನೀವು ಎಷ್ಟು ಓದಿದ್ದೀರಿ?' ಏನು—ಎಂ. ಎ. ಆಗಿದೆಯೇ? ಫಸ್ಟ್ ಕ್ಲಾಸೋ,? ಸೆಕೆಂಡೇ? ವಯಸ್ಸು ..? ರೂಪ ಏನೂಚೆನ್ನಾಗಿಲ್ಲವಲ್ಲ —! ನಾನೇ ಸಿಗದೆ ಹೋದರೆ ಇನ್ನೆಂಥವಳನ್ನು ಮದುವೆ ಯಾಗುತ್ತಿದ್ದಿರ! ಮದುವೆಯಾಯಿತು-ಎನ್ನುವ, ಆ ಮೇಲೆ ಹೆಂಡತಿಗೆ ಮನೆಯಲ್ಲಿ ನಿಮ್ಮಷ್ಟೇ ಸ್ವಾತಂತ್ರ್ಯ ಕೊಡುವವರೇ ನೀವು?

ನಿಮಗೆ ಎಷ್ಟು ಸಂಬಳ ಬರುತ್ತದೆ! ಎಷ್ಟು ಜನ ಕೆಲಸದವರನ್ನು ಇರಿಸಿಕೊಳ್ಳುವ ತ್ರಾಣವಿದೆ ನಿಮಗೆ..

ನನ್ನ ಅಜ್ಜ ನೋಡಿ—ಅವರ ಸಂಸಾರದೆಯನ್ನೆಲ್ಲ ನನಗೇ ಬಿಟ್ಟಿದ್ದಾರೆ—ಇದು ನನ್ನದಾಗಿಯೇ ಇರುವುದು –

ಶ್ಯಾಮಣ್ಣ—ಎಷ್ಟು ಬಿಟ್ಟಿದ್ದಾರೊ!

ಕೆಲಸ – ಬಿಟ್ಟಿರಬೇಕು ಸ್ವಾಮಿ – ತುಂಬ ಎರಡೋ ಮೂರೋ ಲಕ್ಷ.

ಶ್ಯಾಮ - ಅಷ್ಟು ಇದೆ ಅನ್ನುತ್ತೀಯಾ?

ಕೆಲಸ— ಇದ್ದರೆ ಏನು ಸ್ವಾಮಿ? ದುಡ್ಡು ಅವಳ ಕೈಯಲ್ಲಿ ಅಲ್ಲವೇ ಉಳಿಯುವುದು? ಈಗಲೂ ಹಾಗೆಯೇ! ಗಂಡನಿಗೆ ಅದರಲ್ಲಿ ಕಾಸು ಕೊಡುವ ಜಾತಿಯಲ್ಲ. ಹಾಗೆಯೇ ಬಾಯಿಬಿಟ್ಟು ಹೇಳುತ್ತಾಳೆ.

ಶ್ಯಾಮ— ಅದರೆ ಜಾಹೀರಾತಿನಲ್ಲಿ ಹಾಕಿದ್ದಾರೆ, ತುಂಬ ಶ್ರೀಮಂತರ ಮೊಮ್ಮಗಳು ಎಂದು.

ಕೆಲಸದವ— ಶ್ರೀಮಂತರ ಮೊಮ್ಮಗಳು- ಎಂದರೆ ತಪ್ಪೇನು! ಮೊಮ್ಮಗಳ ಕೈಯಲ್ಲಿ ಹಣ ಇದ್ದರೆ ನಿಮಗೆ ಹೇಗೆ ಸ್ವಾಮಿ ಅದು ಬರುವುದು?

ಶ್ಯಾಮ— ಮದುವೆ ಅದರೆ ಬರುವುದಿಲ್ಲವೇನಯ್ಯ?

ಕೆಲಸದವ— ಅವರು ಕೊಡಬೇಕು. ಮೊದಲೇ ಅವರು ಹೇಳುತ್ತಾರೆ- ನನ್ನ ದುಡ್ಡನ್ನು ನಂಬಿ ಮದುವೆಯಾಗುವುದಲ್ಲ ಅಜ್ಜನ ಕಾಲದ ಮೇಲೆ ನನಗೆ ಅದು ಸಿಗುವುದು ...ಸಿಕ್ಕಿದ ಮೇಲೆ ನಾನು ನನಗೆ ಕಂಡಂತೆ ಬರ್ಚು ಮಾಡುವವಳು ಎಂದು.

ಶ್ಯಾಮ - ಅಜ್ಜನ ಕಾಲದ ಮೇಲಿನ ಕತೆಯಲ್ಲವೋ

ಕೆಲಸ— ನೀವು ವಿಷಯ ಸಣ್ಣದು ಎಂದು ತಿಳಿಯಬೇಡಿ. ಮದುವೆಯಾಯಿತು ಎಂದು ತಿಳಿಯಿರಿ. ಈ ಅಮ್ಮ ಪೇಟೆ, ಊರು ಸುತ್ತುವವರು. ಆಗ ಕಾಯಿಲೆ ಅಜ್ಜನ ಚಾಕರಿ ನಿಮಗೆ ಗಂಟುಬಿದ್ದೀತು. ಅವರಿಗೆ ಒಂದೆರಡು ಕಾಯಿಲೆಯೇ? ಗೊರಲು, ಉಬ್ಬಸ, ವಾತ, ಡಯಬಿಟಿಸ್... ಈಗ ನಾನಿದ್ದೇನೆ, ನೋಡಿಕೊಳ್ಳುತ್ತಿದ್ದೇನೆ. ನಡೆಯುತ್ತದೆ ಅವರ ಆಟ .. ಆ ಮೇಲೆ ಮದುವೆಯಾದ ಗಂಡನಿಂದ ಅಷ್ಟೂ ಚಾಕರಿ ಮಾಡಿಸಿದರೆ...

ಶ್ಯಾಮ – ಅದರೆ ಬಹಳ ದಿನ ಆ ಮುದುಕ ಬದುಕಲಿಕ್ಕಿಲ್ಲ ಅಲ್ಲವೇ?

ಕೆಲಸ— ಅವರು ಬದುಕಲಿಕ್ಕಿಲ್ಲ. ಅದರೆ ಸಣ್ಣಯಜಮಾನಿಯರ ಕೈಯಲ್ಲಿ ನೀವು ಬದುಕಬೇಕಲ್ಲ.

ಶ್ಯಾಮಣ್ಣ— ಅಷ್ಟು ಜೋರಿನವರು ಅನ್ನುತ್ತೀಯ! ನಾಳೆ ಮದುವೆಯಾದ ಮೇಲೆ ಗಂಡನ ಮಾತೇ ಕೇಳಲಾರಳು ಅನ್ನುತ್ತೀಯ!

ಕೆಲಸ— ನಾಳೆ ಏನಾದೀತು, ಏನಾಗದು ಎಂದು ನಾನು ಹೇಗೆ ಹೇಳಲಿ! ಇಂದಿನ ಕತೆ ಹೇಳಿದೆ .. ಇರುಳು ಕಂಡ ಬಾವಿಯಲ್ಲಿ ಹೆಗಲು ಹಾಕಿದ ಹಾಗೆ ಆಗಬಾರದಲ್ಲ.



ರೇಖಕರು:—
ಶ್ರೀ. ಶಿವರಾಮ ಕಾರಂತ.

ಶ್ಯಾಮಣ್ಣ— ಹಾಗಾದರೆ ... ನಾನು ...ನಿಲ್ಲಲೇ; ಹೋಗಲೇ.

ಕೆಲಸ— ಅದನ್ನು ನಾನು ಹೇಗೆ ಹೇಳಲಿ? ಅವರು ಹೊರಗೆ ಹೊರಡುತ್ತ, ಯಾರಾದರೂ ನೋಡಲು ಬಂದರೆ 'ಕುಳ್ಳಿರಿಸಿಕೊಂಡಿರು' ಎಂದು ಹೇಳಿ ಹೋದರು ...ನಾನು ಏನೇನೋ ಹೊತ್ತುಹೋಗದ ಮಾತನಾಡಿ, ನಿಮಗೆ ಬೇಸರ ಬರಿಸಿದೆನೋ ಏನೋ!

ಶ್ಯಾಮ— ಬರಲು ತುಂಬ ವೇಳೆಯಾದೀತೇ!

ಕೆಲಸ - ಆದೀತು; ಆಗಲಾರದು! ಮುದುಕರನ್ನೂ ಕರೆದುಕೊಂಡುಹೋಗಿದ್ದಾರೆ. ಪಾರಿಯಲ್ಲಿ ಕೆಮ್ಮ ಗಿಮ್ಮ ಎಂದು ಅವರು ನಿಂತರೆ, ಇವರೂ ನಿಂತರೇ.

ಶ್ಯಾಮ— ಹೇಗೂ ಬಂದಿದ್ದೇನೆ; ಏನು ಸಂಗತಿಯೆಂದು ವಿಚಾರಿಸಿಕೊಂಡೇ ಹೋಗುತ್ತೇನೆ.

ಕೆಲಸ— ಕುಳಿತಿರಿ ಸ್ವಾಮಿ. ನೀವೊಂದೇನು ಹೆಚ್ಚೆ! ಉಳಿದವರಿಗೆ ಅದಂತೆ ನಿಮಗೂ.... ನನಗೆ ಒಳಗೆ ಕೆಲಸವಿದೆ ಹೋಗಲೇ?

ಶ್ಯಾಮ— ಈ ಹುಡುಗನನ್ನು ವಿಚಾರಿಸಿದ್ದರ ಮೇಲೆ ಹುಡುಗಿ ಸ್ವಲ್ಪ ಜೋರಿನವಳೇ ಎಂದು ಕಾಣುತ್ತದೆ. ಹೇಗೆ ಅಂದಾಳೋ ನನ್ನನ್ನು ಕಂಡರೆ—ನನಗೆ ರೂಪ ಇದೆ; ನನಗೆ ಸಾಕು! ಆದರೆ ಅವಳ ಮನಸ್ಸಿಗೆ ಬಾರದೆ ಹೋದರೆ.... ಅರೇ, ನಾನೊಬ್ಬನೇ ಎಂದು ತಿಳಿದು ಬಂದರೆ, ಇನ್ನೂ ಒಬ್ಬರು ಇಲ್ಲಿಗೇ ಬರುತ್ತಿದ್ದಾರೆ ...ಮನೆಯ ನಂಬರು ಓದಿದರು—ಚಿಂತೆಯಿಲ್ಲ...ಸುಟಿ ಸುಟೀ ಇದ್ದಾನೆ ಹುಡುಗ.

ಶ್ಯಾಮಸುಂದರ— (ಬಂದು) ಇದೇ ಏನ್ರಿ—

ಶ್ಯಾಮ - ಏನು ಇದೆ ಏನ್ರೀ!

ಶ್ಯಾಮಸು. — ಹೋ—ನೀವೂ ಹೊಸ ಬರಿರಬೇಕು! ಅಲ್ಲವೆ...? ಈ ಮನೆಯ xರವರು ನಿಮಗೆ ಏನಾಗಬೇಕು?

ಶ್ಯಾಮಣ್ಣ— y.

ಶ್ಯಾಮ ಸುಂ— ಏನು?

ಶ್ಯಾಮಣ್ಣ— ಅಲ್ರೀ, ಮನೆಗೆ ಬಂದವರೊಡನೆ, ಆಲ್ಜಿಬ್ರಾದಲ್ಲಿ ಹೇಳುವ ಹಾಗೆ ನೀವು x—ಎನ್ನುವಾಗ.

ಶ್ಯಾಮಸು — ಕ್ಷಮಿಸಿ ಸರ್, ನಾನು ನಿಮ್ಮನ್ನು ಇನ್‌ಸಲ್ಟ್ ಮಾಡಿದ್ದಲ್ಲ. ಈ ಮನೆಯವರು x - ಎಂದು ವಿಳಾಸ ಕೊಟ್ಟಿದ್ದರು. ನೋಡಿ—ಈ ಜಾಹೀರಾತನ್ನು.

ಶ್ಯಾಮಣ್ಣ—ಹೋ, ಈಗ ತಿಳಿಯಿತು. ಅದಕ್ಕೆ ಬಂದವರು ನೀವು! x ಎಂದರೆ ಈ ಮನೆಯವರೇ. ಬನ್ನಿ, ಕುಳಿತುಕೊಳ್ಳಿ.

ಶ್ಯಾಮ. ಸು— ಈ ಮನೆಯವರು ನಿಮಗೆ ಗೊತ್ತೇ?

ಶ್ಯಾಮಣ್ಣ — ತಕ್ಕ ಮಟ್ಟಿಗೆ.

ಶ್ಯಾಮ. ಸು – ಇಲ್ಲಿ ಯಾರ್‌ಯಾರು ಇರುವರು?

ಶ್ಯಾಮಣ್ಣ—ಸದ್ಯ ನಾನು; ಒಳಗೊಬ್ಬ ಕೆಲಸದವ, ನೀವು ...

ಶ್ಯಾಮ. ಸು—ಮನೆಯವರು?

ಶ್ಯಾಮಣ್ಣ — ಹೊರಗೆ ಹೋಗಿದ್ದಾರೆ.

ಶ್ಯಾಮ. ಸು — ಯಾರೆಲ್ಲ?

ಶ್ಯಾಮಣ್ಣ — ಮಿ| x, ಮಿಸ್ x.

ಶ್ಯಾಮ. ಸು – ಇಬ್ಬರೂನು

ಶ್ಯಾಮಣ್ಣ—ಇಬ್ಬರೂ ನೂ ನೂ ನೂ.

ಶ್ಯಾಮ. ಸು — ತಮ್ಮ ಹೆಸರು?

ಶ್ಯಾಮಣ್ಣ — ಶ್ಯಾಮಣ್ಣ ಅಂತ, ಕೆಳಗಿನ ಪೇಟೆ ಮೇಲ್ಮನೆ ಶ್ಯಾಮಣ್ಣ ಅಂತ.

ಶ್ಯಾಮ. ಸು— ತಾವು ಅವರಿಗೆ ಬೇಕಾದವರು ಹಾಗಾದರೆ!

ಶ್ಯಾಮ — ಇನ್ನೂ ಬೇಡಾದವರು ಆಗಿಲ್ಲ.

ಶ್ಯಾಮ. ಸು— ಹೋ- ಸಂಬಂಧಿಗಳು ಮಾತಾಡುವ ಧೋರಣೆಯಿಂದ ತುಸು ಅಂತಃಸ್ತಾಪ ಇರುವ ಹಾಗೆಯೇ ಕಾಣುತ್ತದೆ!

ಶ್ಯಾಮಣ್ಣ— ಸಂಬಂಧ ಮುಖ್ಯವಲ್ಲ, ಸ್ವಾಮಿ; ಋಣಸಂಬಂಧ ಅದಕ್ಕಿಂತ ಮುಖ್ಯ.

ಶ್ಯಾ. ಸು — ಅದೇ ಸರಿಯಾದ ಮಾತು ಇವರ ಪೊಮ್ಮಗಳ ವಿಚಾರ ತಮಗೆ ತಿಳಿದದ್ದೊ?

ಶ್ಯಾಮಣ್ಣ — ತಿಳಿಯದೆ ಉಂಟೇ! ಅಲ್ಲ ನೋಡಿ, ಗೋಡೆ ಮೇಲೆ.... ಫೋಟೋ.

ಶ್ಯಾಮ. ಸು.— Oh what a lovely maiden. ಛೀ ಛೀ....

ಪ್ರಾಣ ಹೋದರು ಚಿಂತೆಯಿಲ್ಲ. ಇಂಥ ವಳನ್ನೆ ಮದುವೆಯಾಗಬೇಕು. ನಾನು ಆ ಚೀಟಿಯವರನ್ನು ವಿಚಾರಿಸಿದೆ. ಅವರೂ ಅಂದರು- ಅವಳು ರಿಯಲ್ ಬ್ಯೂಟಿ! ಎಂದು.

ಶ್ಯಾಮಣ್ಣ—ಆ ದೃಷ್ಟಿಯಿಂದ ನೀವೂ ಕಡಿಮೆಯಿಲ್ಲ. ಹೇಡ್ಯಮ್ ಆಗಿದ್ದೀರಿ. ಏನು ಎಂ. ಎ. ಪಾಸು ಮಾಡಿದ್ದೀರಾ!

ಶ್ಯಾಮ. ಸು— ಇನ್ನೂ ಆಗಿಲ್ಲ. ಆಗಬಹುದು ಮುಂದೆ; ಇದ್ದೊಂದು ಸಂಬಂಧ ಸಿಕ್ಕಿದರೆ, ಇಂಗ್ಲೆಂಡು ಗಿಂಗ್ಲೆಂಡು-ಹೋಗಿ

ಶ್ಯಾಮ— ಹೂಂ. ಹೋಗಿ, ನೋಡಿ, ತಿರುಗಾಡಿಕೊಂಡು....

ಶ್ಯಾಮ ಸು.— ಹಾಗಲ್ಲರೀ-ಹೋಗಿ, ಹೈಯರ್ ಡಿಗ್ರಿ ತೆಗೆದುಕೊಂಡು ಬರಬಹುದು.

ಶ್ಯಾಮಣ್ಣ— ಅದು ಅಸಾಧ್ಯವಲ್ಲ.... ಅವಳೂ M. A; ಅದರಲ್ಲಿಯೂ M. A. Ist Class.

ಶ್ಯಾಮ ಸು.— ಎಂ. ಎ— ಆಗಿದ್ದಾಳೆಯೇ?

ಶ್ಯಾಮ – ನೀವು ಆಗದಿದ್ದರೆ ಅವಳು ಆಗಿರಬಾರದೇ!

ಶ್ಯಾಮ. ಸು – (ಆಚೀಚೆ ನೋಡಿ) ಯಾರಿಲ್ಲವಲ್ಲ ತಮ್ಮ ಹೆಸರು ಏನೆಂದಿರಿ ....ಶ್ಯಾಮಣ್ಣನವರುಎಂದಿರಲ್ಲವೆ ಅಲ್ಲವೇ. ನನ್ನ ಹೆಸರು ಶ್ಯಾಮ ಸುಂದರ ಸಂಗತಿ ಹೀಗೆ! ಹೆಂಗಸರು ಎಂ. ಎ. ಆಗಿ ಏನಾಗಬೇಕಾಗಿದೆ ಹೇಳಿ!

ಶ್ಯಾಮ— ಏನೂ ಆಗಬೇಕಾಗಿಲ್ಲ; ನಿಜ! ಆದರೆ ಅವಳು ಎಂ. ಎ. ಆಗಿಯಾಯಿತಲ್ಲ. ಇನ್ನೇನು ಮಾಡಲು ಬರುತ್ತದೆ ಹೇಳಿ.

ಶ್ಯಾಮ. ಸು— ಡಿಸ್ಕ್ವಾಲಿಫಿಕೇಶನ್ ಅಲ್ಲೆ— ಬಿಡಿ!

ಶ್ಯಾಮಣ್ಣ—(ಅಪ್ತತ್ವ ನಟಿಸಿ) ನಿಮಗೆ ಒಂದು ಸಂಗತಿ ಹೇಳುತ್ತೇನೆ ನೀವು ಜಾಹೀರಾತು ನೋಡಿದಿರಿ. ಪಣತೆ ನೋಡಿ ಹಾತೆ ಬರುವ ಹಾಗೆ ಇಲ್ಲಿಗೆ ಹಾರಿ ಬಂದಿರಿ. ನಿಮಗಿಂತ ಈ ಮನೆಯವರ ಗುಟ್ಟು ನನಗೆ ತುಸುವಾದರೂ ಹೆಚ್ಚಿಗೆ ತಿಳಿದಿದೆ. ಈ ಮನೆಯಲ್ಲಿ—ಒಂದು ಕಾಯಿಲೆ ಮುದುಕ...

ಶ್ಯಾಮ. ಸು - ಅದನ್ನು ನಾನೂ ಕೇಳಿದೆ! ಬಹಳ ದಿನ ಬದುಕಲಾರ ಎನ್ನುತ್ತಾರೆ—ಕಂಡವರು. ಆ ಮೇಲೆ ಅವನಿಗಿರುವ ಸಂಪತ್ತೆಲ್ಲ, ಅವಳನ್ನೇ ಮದುವೆಯಾಗುವವರಿಗೆ ಸಿಗಲೇ ಬೇಕಲ್ಲ.

ಶ್ಯಾಮಣ್ಣ—ಅದೂ ನಿಜವೇ, ಆದರೆ ನೀವು ಮುಖ್ಯವಾಗಿ ವಿಚಾರ ಮಾಡಬೇಕಾದ ಪಾಯಿಂಟು ಇದು! ಅವಳಿಗೂ ನಿಮಗೂ ಇರುವ ವಯಸ್ಸಿನ ಅಂತರ.

ಶ್ಯಾಮ. ಸು— ನನಗೀಗ ೨೮.

ಶ್ಯಾಮಣ್ಣ— ಅವಳಿಗೆ ೨೫ - ಎಂದಿಟ್ಟುಕೊಳ್ಳಿ.

ಶ್ಯಾಮ. ಸು – ಮದುವೆಯಾಗ ಬೇಕಾದದ್ದು ಮುಖ್ಯವಾಗಿರುವಾಗ ವಯಸ್ಸು ಮುಖ್ಯವಲ್ಲ. ಜೋಯಿಸರಿಗೆ ಹೇಳಿ ವರ್ಷ, ಸಂವತ್ಸರ ಸರಿಪಡಿಸಬಹುದು. ನನಗೆ ಒಂದು ಎಂಬಿಷನ್ ನೋಡಿ ಇಂಗ್ಲೆಂಡಿನ ತನಕವಾದರೂ ಹೋಗಿ, ಒಂದು ಫಾರಿನ್ ಡಿಗ್ರಿ ಗಳಿಸಿಕೊಂಡು ಬರಬೇಕು- ಎಂಬುದಾಗಿ. ಈಗಾಗಲೇ ನನಗೆ 10,000 ದತನಕವೂ ಡೌರಿ ಆಫರ್ ಬಂದಿದೆ! ಆದರೆ ಇಂಗ್ಲೆಂಡಿಗೆ ಹೋಗಿ ಬರಲು 10,000 ಸಾಲದು!

ಶ್ಯಾಮಣ್ಣ— ಆ ಕನ್ಯೆಯರೆಲ್ಲ ಹೇಗೆ? ಓದಿದವರೋ?

ಶ್ಯಾಮ ಸು.—ನನಗೆ ಅದೆಲ್ಲ ಮೈನರ್ ಕ್ವೆಶ್ಚನ್. ನಾನು ಹೆಂಗುಸರಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಬೇಡುವುದಿಲ್ಲ. ಅಂದರೆ ನೋಡಿ— ಓದಿದರೆ- ಸ್ವಾತಂತ್ರ್ಯ ಬೇಡುತ್ತಾರೆ; ಬಯಸುತ್ತಾರೆ!

ಶ್ಯಾಮಣ್ಣ— ಅದಕ್ಕೇ ಅಂದದ್ದು ನಾನು! ಇಲ್ಲೇ ನಿಮಗೆ ಬರುವ ತೊಡಕು. ಎಂ. ಎ. ಸ್ತ್ರೀ ಸ್ವಾತಂತ್ರ್ಯದ ಭಾಂಪಿಯನ್ನು. ಮೇಲೆ—ಅವಳ ಅಜ್ಜ ಕಾಯಿಲೆ. ಇವಳು ತಿರುಗಾಡಿಕೊಂಡಿರುವವಳು; ಅಜ್ಜನ ನರ್ಸಿಂಗ್ ನಿಮ್ಮ ಜವಾಬುದಾರಿಯಾಗುತ್ತದೆ. ಅವರು ತೀರಿಕೊಂಡರಾದರೂ ಸುಖವುಂಟೇ? ಅವರ ಬಳಿಕ ದುಡ್ಡು ಸೇರುವುದು ಅವಳ ಕೈಯಲ್ಲಿ.

ಶ್ಯಾಮ ಸು.—ಅದನ್ನು ನಾನು ಬಲ್ಲೆ. ಅವಳ ಕೈಯಲ್ಲಿ – ಎಂದರೆ ನನ್ನ ಕೈಗೆ ಬಂದ ಹಾಗೆ ಅಲ್ಲವೇನಿರೀ.

ಶ್ಯಾಮಣ್ಣ – ಅಲ್ಲೇ ತಪ್ಪುತ್ತೀರಿ ನೀವು. ಅವಳ ಕೈಗೆ —ಎಂದರೆ ಅವಳ ಕೈಗೇನೆ! ಆ ದುಡ್ಡನ್ನು ನೀವು ಅಪೇಕ್ಷೇನೆ ಮಾಡಬಾರದು ಎಂಬುದು ಅವಳ ಶರ್ತ.

ಶ್ಯಾಮ ಸು.— ಅಲ್ಲಿ; ಅದಕ್ಕೆಲ್ಲ ಭಯವಿಲ್ಲ. ಮದುವೆಯಾದ ಮೇಲೆ ಗಂಡನ ಮಾತು ಕೇಳುವುದಿಲ್ಲ ಎಂದರೆ ಆಗುತ್ತದೆಯೆ?

ಕೆಲಸದವ— (ಬಂದು) ಹೇ, ನೀವೂ ಬಂದಿರಾ! ಕುಳಿತಿರಿ...ಈಗ ಬಂದಾರು. ನಮ್ಮ ಯಜಮಾನರನ್ನು ಕಾಣಲಿಕ್ಕೆ ಬಂದದ್ದಲ್ಲವೇ?

ಶ್ಯಾಮ. ಸು – ಯಜಮಾನರನ್ನು ಅಂದರೆ ಮುಖ್ಯವಾಗಿ ...ಅವರ ಪೊಮ್ಮಗಳನ್ನು.

ಕೆಲಸ - ಯಜಮಾನರೆಂದು ನಾನು ಅವರಿಗೇ ಅಂದದ್ದು.

ಶ್ಯಾಮ. ಸು— ಯಜಮಾನರೆಂದರೆ ಅವರಿಗೇ ಅಂದದ್ದು ಅಂದರೆ...?

ಶ್ಯಾಮಣ್ಣ— ನಾನೇನೆಂದೆ ಸ್ವಾಮಿ ನಿಮಗೆ! ಅವರಿಗೇ ಅಂದರೆ....ಪೊಮ್ಮಗಳಿಗೆ! ಎಂ.ಎ.ಓದಿದವಳು. ಬಲು ಜೋರಿನ ಹುಡುಗಿ—ಬಂದ ಕನ್ಯಾರ್ಥಿಗಳೊಡನೆ ಏನೇನು ಪ್ರಶ್ನೆ ಕೇಳುವವಳಂತೆ.

(೧೭ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಹೊಸ ಧುರೀಣತೆಯ ಅರುಣೋದಯ

ಬರೆದವರು: ಶ್ರೀ ಕಾಕಾ ಸಾಹೇಬ ಕಾಲೇಲಕರ

ಸ್ವಾತಂತ್ರ್ಯೋತ್ತರದಲ್ಲಿ ರಾಷ್ಟ್ರದ ಮುಂದೆ ಹಿಂದುಳಿದ ವರ್ಗಗಳ ಪ್ರಶ್ನೆಯು ತೀವ್ರವಾಗಿ ನಿಂತಿತು. ವಿಧಿವಾದದ ಅವಲಿನಲ್ಲಿ ಸಾಲಿಗೆ ಬಂದುದರಲ್ಲೆ ತೃಪ್ತಿಯನ್ನು ಕಾಣುತಿದ್ದ ಹಿಂದುಳಿದ ಜನರ ಸಮುದಾಯದಲ್ಲಿ ಸರಕಾರ ನೇಮಿಸಿದ ಆಯೋಗದ ಪ್ರವಾಸದಿಂದ ಹಿಂದೆಂದೂ ಉಂಟಾಗಿರದ ಚೇತನ ಸಂಚರಿಸಿತು. ಪರಕೀಯ ಪ್ರಭುತ್ವವು ಕೊನೆಗೊಂಡು ಸ್ವರಾಜ್ಯ ಸ್ಥಾಪನೆಯಾದ ಪವಾಡವನ್ನು ಹಿಂದುಳಿದ ವರ್ಗಗಳವರೂ ಆಗ ತಮ್ಮ ಕಣ್ಣಾರೆಕಂಡರು. ನಮ್ಮ ಸರಕಾರವು ರಾಷ್ಟ್ರವನ್ನು ನೂತನವಾದರೀತಿಯಲ್ಲಿ ಪುನಾ ರಚಿಸುವುದಕ್ಕೆ ಪೋರಾಡುತ್ತಿದೆಯೆಂದು ಅವರು ತಿಳಿಯ ತೊಡಗಿದರು.

ಹಿಂದುಳಿದ ವರ್ಗಗಳ ಆಯೋಗವು ಹೊರಡಿಸಿದ್ದ ಪ್ರಶ್ನಾವಳಿಯು ಮಹತ್ತರವಾದ ಜ್ಞಾನ ಮೂಲ್ಯವನ್ನು ಹೊಂದಿತ್ತೆಂದರೆ ತಪ್ಪಲ್ಲ. ಭಾರತದ ಅಡಳಿತ ಇತಿಹಾಸದಲ್ಲಿ ಪ್ರಥಮತಃ ಪ್ರಶ್ನಾವಳಿಯೊಂದನ್ನು ಭಾರತೀಯ ಭಾಷೆಗಳಲ್ಲೆಲ್ಲ ಪರಿವರ್ತಿಸಲ್ಪಟ್ಟಿದ್ದಿತು. ತತ್ಪರಿಣಾಮವಾಗಿ ದೇಶದಲ್ಲೆಲ್ಲ ಪ್ರಜೆಗಳು ಅಂತಃ ನಿರೀಕ್ಷಣೆಯನ್ನು ಮಾಡಿಕೊಂಡು ತಮ್ಮ ಪರಿಸ್ಥಿತಿಗಳನ್ನು ತಾವೇ ಪುನರ್ವಿಮರ್ಶಿಸುವ ಅವಕಾಶ ಸಿಕ್ಕಿತು. ಆದರೆ ಇದರಿಂದ ಸಮಾಜದ ಉಚ್ಚವರ್ಗಗಳಲ್ಲಿ ಮಾತ್ರ ನಿರೀಕ್ಷಿಸಿದಷ್ಟು ಪರಿಣಾಮವಾಯಿತೆಂದು ಹೇಳಲಾಗದು.

ಇದರ ಕಾರಣವೇನು ಅಸ್ಪೃಶ್ಯರು ಅಥವಾ ಹರಿಜನರ ಮತ್ತು ಪರಿಶಿಷ್ಟ ವರ್ಗಗಳವರು ಅಥವಾ ಗಿರಿಜನರ ಸಮಸ್ಯೆಗಳಿಗೂ ಹಿಂದುಳಿದವರ ಸಮಸ್ಯೆಗಳಿಗೂ ಮಹದಂತರ ಉಂಟೆಂಬ ಸಂಗತಿಯನ್ನವರು ಗಮನಿಸಲಿಲ್ಲ. ಹರಿಜನರ ಮತ್ತು ಗಿರಿಜನರ ಸಮಸ್ಯೆ ಅಲ್ಪ ಸಂಖ್ಯಾಕರದಾಗುತ್ತದೆ; ಆದರೆ ಹಿಂದುಳಿದವರ ಸಮಸ್ಯೆ ಬಹು ಸಂಖ್ಯಾಕರದೆನಿಸುತ್ತದೆ. ರಾಷ್ಟ್ರದ ಪುನಾ ರಚನೆಯ ಸಮಸ್ಯೆಯೇ ಹಿಂದುಳಿದವರ ಸಮಸ್ಯೆಯಾಗುತ್ತದೆ. ಇವರೇ ರಾಷ್ಟ್ರದ ಬಹುಜನರಾಗುತ್ತಾರೆ; "ಬಹು ಜನ ಸುಖಾಯ, ಬಹುಜನ ಹಿತಾಯ" ಎಂದು ಬುದ್ಧ ದೇವನು ಹೇಳಿದಾಗ ಇವರನ್ನೇ ಉದ್ದೇಶಿಸಿದ್ದನು.

ರಾಷ್ಟ್ರದ ಅಡಳಿತವನ್ನು ನಡೆಸಿಕೊಂಡು ಬಂದವರನ್ನು ಮಹಾ ಜನರೆಂದು ಕರೆಯಬಹುದು. ಇವರು ಮುಂದಿದವರು, ಸುಸ್ಥಿತಿಕರು, ವ್ಯವಸ್ಥಿತರು, ಮತ್ತು ಪ್ರಬಲರೂ ಹೌದು. ಈ ಮಹಾ ಜನರ ಒಟ್ಟು ಆಲೋಚನೆ, ಪ್ರಯತ್ನ ಮತ್ತು ಸಾಧನೆಗಳಿಂದಲೇ ಭಾರತದ ನಾಗರಿಕತೆ ಇಂದಿನ ಮಟ್ಟವನ್ನು ಮುಟ್ಟಿತು. ಇದರಲ್ಲಿ ಬಹು ಜನರ ಭಾಗವು ಅಪ್ರತ್ಯಕ್ಷ ವಿಧದಲ್ಲೇ ಕಂಡುಬರುತ್ತದೆ. ಆದರೆ ಮಹಾತ್ಮಾ ಗಾಂಧೀಜಿಯವರು ವಯಸ್ಕರ ಮತದಾನ ಪದ್ಧತಿಯನ್ನು ಜ್ಯಾರಿಗೆ ತರಬೇಕೆಂದು ಸೂಚಿಸಿ, ಕ್ರಾಂತಿಕಾರಿಯಾದ ಹೆಜ್ಜೆಯನ್ನು ಭಾರತವು ಮುಂದಿಡುವಂತೆ ಮಾಡಿದುದರಿಂದ ಬಹು ಜನರು ಈಗ ಆತ್ಮ ಜಾಗೃತ ಸ್ಥಿತಿಗೆ ಬರುತ್ತಿರುವಂತೆ ಕಾಣಿಸುತ್ತದೆ.

ಎಲ್ಲ ಅಧಿಕಾರವನ್ನೂ ರಾಷ್ಟ್ರದ ಸೂತ್ರವನ್ನೂ ಮತದಾನವು ಬಹುಜನರಿಗೆ ಕೊಟ್ಟದ್ದು ಇದರಿಂದ ತಮ್ಮ ಜ್ಞಾನವನ್ನೂ ವಿದ್ಯೆಯನ್ನೂ ಸಾಮರ್ಥ್ಯವನ್ನೂ ಹೆಚ್ಚಿಸಿಕೊಳ್ಳುವುದಷ್ಟೆ ಉಳಿದಿರುವಂತೆ ತೋರುತ್ತದೆ. ಮಹಾಜನರು ಇನ್ನುಮುಂದೆ ಬಹು ಜನರನ್ನು ಧೈರ್ಯದಿಂದ ದುರ್ಲಕ್ಷಿಸುವುದು ಸಾಧ್ಯವಿಲ್ಲ. ಅಕ್ಬರನು ತಾನು ಪ್ರಾಯಪ್ರಬುದ್ಧನಾಗುವ ವರೆಗೆ ಖಾನ್ ಬಾಬಾ ಎಂಬಮಂತ್ರಿಯನ್ನು ಆಡಳಿತ ನೋಡಿಕೊಳ್ಳುವುದಕ್ಕೆ ನೇಮಿಸಿದ್ದನು. ಆದರೆ ತನ್ನ ಕೆಲಸಗಳನ್ನು ತಾನೇ ನೋಡಿಕೊಳ್ಳುವುದಕ್ಕೆಶಕ್ತನಾದಾಗ ಅಕ್ಬರನು ಖಾನ್ ಬಾಬಾನಿಗೆ ಮಕ್ಕದ ಯಾತ್ರೆಗೆ ಹೋಗುವುದಕ್ಕೆ ಸರಿಯಾದ ಕಾಲವೆಂದು ಸೂಚಿಸಿ, ಅಧಿಕಾರದಿಂದ ನಿವೃತ್ತಿಗೊಳಿಸಿದನು. ಇಂಥ ಸೂಚನೆ ಅಲ್ಪಾವಧಿಯಲ್ಲಿಯೇ ಬಹುಜನರಿಂದ ಬರುವುದೆಂದು ಮಹಾಜನರು ಈಗಲೇ ತಿಳಿದಿರುವುದು ಹಿತಕರ. ರಾಷ್ಟ್ರದಲ್ಲಿ ನವನಾಯಕತ್ವ ನೆಲೆಗೊಳ್ಳುವುದೆಂಬುದೇ ಇದರ ಅರ್ಥ. ಆಗ ಬಹುಜನರ ವಿಶ್ವಾಸ ಸಂಪಾದಿಸಿದವರಿಗೆ ಮಾತ್ರ ಸೇವೆಸಲ್ಲಿಸುವ ಸಾಲಭ್ಯ ಸಿಗುತ್ತದೆ.

ಜಾತೀಯತೆಯು ಇಂದು ಸರ್ವಶಕ್ತಿಯನ್ನು ಪಡೆದಿರುವಂತೆ ತೋರುತ್ತದೆ. ಜಾತೀಯ ತಳಹದಿಯ ಮೇಲೆ ಮಹಾಜನರು ರೂಪಿಸಿದ ವ್ಯವಸ್ಥೆ ಎಲ್ಲ ಇನ್ನು ಮುಂದೆ ಉಳಿಯಲಾರದು. ಜಾತೀಯ ಭಾವನೆ ಅದಿಮಾನವನ ಮನಶ್ಶಾಸ್ತ್ರದಲ್ಲಿ ಭದ್ರತೆ ಮತ್ತು ಕ್ಷೇಮ ದೃಷ್ಟಿಯಿಂದ ಮಹತ್ವ ಪಡೆದಿತ್ತೆಂಬುದೇನೋ ನಿಜ. ಆದರೆ ಇಂದು ಸಾಮಾಜಿಕ ಸಂಬಂಧವೆಲ್ಲ ಜಾತೀಯ ಭಾವನೆಯ ಪ್ರಭಾವಕ್ಕೆ ಒಳಗಾಗಿ ಸಮಾಜದ ಒಗ್ಗಟ್ಟನ್ನೇ ಅದು ಮುರಿದಿರುತ್ತದೆ. ಜಾತೀಯತೆಯನ್ನು ಅಂಗೀಕರಿಸದೆಯೇ ಅಭಿವೃದ್ಧಿಗೊಳ್ಳಲು ಇಂದು ಅಪೇಕ್ಷಿಸಲಾಗುತ್ತದೆ—ಇದಕ್ಕೆ ಸುಧಾರಕರಂತೆ ಮತಪ್ರವರ್ತಕರಿಂದಲೂ ಪ್ರಾಚೀನ ಕಾಲದಿಂದ ಬೆಂಬಲ ಸಿಕ್ಕಿರುವುದು; ಸಮಾಜವನ್ನು ಉಚ್ಚ ಹಾಗೂ ನೀಚ ವರ್ಗಗಳಾಗಿ ವಿಂಗಡಿಸಿರುವುದನ್ನು ಎಂದಿನಿಂದಲೂ ವಿರೋಧಿಸಿರುವುದು ಇದಕ್ಕೆ ನಿದರ್ಶನ. ಮತೀಯ ಹಾಗೂ ಸಾಮಾಜಿಕ ರಂಗದಲ್ಲಿ ನಡೆದ ಈ ವಿಪ್ಲವವನ್ನು ರಾಜಕೀಯ ಹಾಗು ಆರ್ಥಿಕ ರಂಗಕ್ಕೆ ಸಹ ವಿಸ್ತರಿಸಿದವರು ಮಹಾತ್ಮಾ ಗಾಂಧಿ— ಎಲ್ಲ ಶಕ್ತಿಗೂ ಮೂಲವಾದ ರಾಜಕೀಯ ಅಧಿಕಾರವನ್ನು ಇಷ್ಟರವರೆಗೆ ಹಿಂದುಳಿದವರೆನಿಸಿದ ಬಹು ಜನರು ಪಡೆದಿರುವ ಈ ಕಾಲದಲ್ಲಿ ಜಾತೀಯ ಭಾವನೆಯು ಉಚ್ಚಾಟನೆಯಾಗುವುದೆಂದು ಆಶಿಸಬಹುದು; ಹೊಸ ಧುರೀಣತೆಯು ರಾಷ್ಟ್ರವನ್ನು ಒಗ್ಗಟ್ಟಿನ ಸೂತ್ರದಲ್ಲಿ ಪೋಣಿಸುವ ಕ್ರಾಂತಿಕಾರಿ ವ್ಯವಸ್ಥೆಯನ್ನೇ ಮಾಡುವುದೆಂದೂ ಮಾನವೀಯತೆಯ ವಿಜಯವೇ ಇದಾಗುವುದೆಂದೂ ಆಗ ನಮ್ಮ ಸಂಸ್ಕೃತಿಯು ಉನ್ನತವಾಗುವುದೆಂತೂ ಹಾರೈಸೋಣ!

For

LINE & HALFTONE BLOCKS

AT MODERATE RATES

PLEASE CONTACT

FOTO-BLOCKS

Lower Car Street, MANGALORE.

ZANDU'S THREE GEMS of AYURVEDIC MEDICINES

ಝಾಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದೀರ್ಘಾವಧಿಯ ಕೆಮ್ಮು, ಸರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಆಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯುತ್ತಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಾಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ತೇಜ ಇತ್ಯಾದಿ ಬಹುಕಾಲದ ಮೂತ್ರ ರೋಗಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಾಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.

ಬೆಲೆ: 1 ರತ್ಲಿಗೆ ರೂ. 7—8—0. ಕಾಲು ರತ್ಲಿಗೆ ರೂ. 2—0—0.

ಝಾಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲೆ ಏಜಂಟರಿಗೆ ಬರೆಯಿರಿ.

DAMODAR & CO.,

113 Nainiappa Naicken Street, P. T.-MADRAS-3.

ಪೈಲಟ್

ನಾಮಧ್ಯೇಯವದ ಜಗದ್ವಿಖ್ಯಾತ

ಪೆನ್ನುಗಳು ಮತ್ತು ಶಾಯಿ

ಈಗ ತಾನೆ

ಇಂಡಿಯಾದಲ್ಲೆಲ್ಲೂ

ಪುನಃ ಸಿಗುತ್ತವೆ.

* * *

ನಾಜೂಕಿಗೆ ಗ್ಯಾರಂಟಿಯಿಜಿ.

* * *

ತಯಾರಿಕೆಗಾರರು:

ದಿ ಪೈಲಟ್ ಪೆನ್ ಕಂಪೆನಿ (ಇಂಡಿಯಾ)

ಕೆಥೋಲಿಕ್ ಸೆಂಟರ್, ಮದ್ರಾಸು—1.

For all your requirements in

PAPER, BOARDS, STATIONERY,

INKS PRINTING or WRITING

PLEASE ENQUIRE AT

Shrinivas Brothers,

WHOLESALE PAPER MERCHANTS

& STATIONERS,

CAR STREET, POST BOX NO. 139,

MANGALORE-1.

ಅಭಿವೃದ್ಧಿ ಪ್ರಯತ್ನಗಳಲ್ಲಿ ಪ್ರಜೆಗಳ ಉತ್ಸಾಹ

ಸಂತೋಷ ಸಮಾಂಭಗಳು ಜರಿಗಿದಾಗ, ಉತ್ಸವಗಳನ್ನು ನಡೆಸುತ್ತಿರುವಾಗ ಗ್ರಾಮಾಂತರ ಪ್ರದೇಶಗಳ ಜನರನ್ನೆಲ್ಲಿ ಕರೆಯಲು ನಗಾರಿಯನ್ನು ಬಾರಿಸುವುದು ನಮ್ಮ ಸಂಪ್ರದಾಯ. ಆದರೆ ಇಂದು ನ ನಚಾಗೃತಿಯನ್ನು ಹೊಂದಿದ ನಮ್ಮ ಪಳ್ಳಿಗಳಲ್ಲಿ ನಗಾರಿಯ ಕರೆಯು ಇನ್ನೂ ಹೆಚ್ಚಿನ ಅತ್ಯಂತ ಪ್ರಾಮುಖ್ಯವಾದ ಸಂಗತಿಯೊಂದನ್ನು ಸೂಚಿಸಬೇಕಾಗಿದೆ. ನಗಾರಿಯ ಬಾರಿಸುವಿಕೆಯು ಇಂದು ರಾಷ್ಟ್ರ ನಿರ್ಮಾಣದ ಮಹಾಕಾರ್ಯದಲ್ಲಿ ಜನತೆಯನ್ನು ಭಾಗವಹಿಸುವಂತೆ ಆಹ್ವಾನಿಸುವ ಮಹತ್ವದ ಕರೆಯಾಗಿ ಕಂಡು ಬರುತ್ತದೆ. ಇದಕ್ಕೆ ಹಿಗೊಟ್ಟು ಕೆಲಸ ಮಾಡುವ ಉತ್ಸಾಹಭರಿತ ಪ್ರಜೆಗಳಿಂದ ಹಳ್ಳಿಯ ವಾತಾವರಣವೇ ಬದಲಾಯಿಸಲ್ಪಡುತ್ತಿದ್ದು, ಹೊಸತಾಗಿ ಮಾರ್ಗಗಳೂ ಶಾಲೆಗಳೂ ಪಂಚಾಯತು ಸೇರುವ ಭವನಗಳೂ ಇತರ ಪ್ರಯೋಜನಕರ ಕೆಲಸಗಳೂ ನಿರ್ಮಾಣಗೊಳ್ಳುತ್ತಿವೆ.

ಸ್ವಯಂ ಸಹಾಯ ಯೋಜನೆಗಳ ದೆಸೆಯಿಂದ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಿಕೊಳ್ಳುವುದು ಇಂದು ಸಾಧ್ಯವಾಗಿದೆಯೆಂದರೆ ತಪ್ಪಲ್ಲ. ಜನರು ತಾವಾಗಿಯೇ ಯಾವುದೇ ತರದ ವಾಹ್ಯಾಣ್ಯವಿಲ್ಲದೆನೆಗದಾಗಿಯೋ ಮಡಿಮೆಯ ರೂಪದಲ್ಲೋ ಸಾಮಾಗ್ರಿಗಳನ್ನು ಒದಗಿಸಿಯೋ—ತನ್ನೆಲ್ಲ ಸಾಧನ ಸಂಪತ್ತುಗಳನ್ನು ಸಂಗ್ರಹಿಸಿ ಸ್ಥಳೀಯ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಭಾರತದ ಇಂದಿನ ವೈಶಿಷ್ಟ್ಯ. ಸಹಸ್ರಾರು ಗ್ರಾಮಗಳಲ್ಲಿ ಸ್ವೇಚ್ಛೆಯಿಂದ ಶ್ರಮದಾನ ಮಾಡುತ್ತಿರುವ ನಾಗರಿಕರನ್ನು ಸಂದರ್ಶಕರು ನೋಡಬಲ್ಲರು. ವಾರದಲ್ಲೋ, ಪಕ್ಷದಲ್ಲೋ ಒಂದು ದಿನವನ್ನು ಶ್ರಮದಾನಕ್ಕಾಗಿ ಮೀಸಲಿಟ್ಟ ಇವರನ್ನು ಕಂಡು ಭಾರತವು ಜಾಗೃತಿ ಹೊಂದಿದೆಯೆಂಬ ಸಂಗತಿ ಅವರಿಗೆ ವೇದ್ಯವಾಗದಿರದು. ನಿದರ್ಶನಕ್ಕಾಗಿ, ಬಿಹಾರಿನಲ್ಲಿ ಕೈಗೊಂಡಿರುವ ಕೋಸಿ ನದಿ ಯೋಜನೆಯನ್ನು ತ್ವರಿತದಲ್ಲಿ ಪೂರೈಸಲು ನಾವಿರ ಸಂಖ್ಯೆಯಲ್ಲಿ ಮುಂಬರುತ್ತಿರುವ ಸ್ವಯಂ ಸೇವಕರ ಉತ್ಸಾಹವನ್ನು ಉಲ್ಲೇಖಿಸಬಹುದು.

ಜನತೆಯ ಸಹಕಾರವನ್ನು ಸಂಪಾದಿಸುವ ಮಾರ್ಗಗಳನ್ನು ಕಂಡು ಕೊಳ್ಳುವುದಕ್ಕಾಗಿ ಅಲ್ಲಲ್ಲಿ ಸಂಘ ಸಂಸ್ಥೆಗಳಿದ್ದು ಬೇರೆ ಬೇರೆ ರಾಜ್ಯಗಳಲ್ಲಿ ಅವು ಬೇರೆ ಬೇರೆ ಹೆಸರುಗಳಿಂದ ಕೆಲಸ ಮಾಡುತ್ತಿವೆ. ಸಾಮಾಜಿಕ ಕಲ್ಯಾಣ ಮಂಡಳಗಳೂ ಈ ಕೆಲಸದಲ್ಲಿ ಸಹಕಾರವನ್ನು ನೀಡುತ್ತವೆ. ಭಾರತ ಸೇವಕ ಸಮಾಜವೆಂಬ ಅಖಿಲ ಭಾರತ ಸ್ವರೂಪದ ಖಾಸಗಿ ಸಂಸ್ಥೆಯೊಂದು ಪ್ರದೇಶ ಹಾಗು ಜಿಲ್ಲಾ ಸಮಿತಿಗಳ ಮೂಲಕ ಜನತೆಯು ಈಗ ಉಪಯೋಗಿಸದಿರುವ ಕಾಲವನ್ನೂ ಶಕ್ತಿಯನ್ನೂ ಸಾಧನ ಸಂಪತ್ತನ್ನೂ ಸಾಮಾಜಿಕ ಹಾಗು ಆರ್ಥಿಕ ಪುನಾರಚನೆಯ ಚಟುವಟಿಕೆಗಳಿಗಾಗಿ ವಿನಿಯೋಗಿಸುವಂತೆ ಒತ್ತಾಸೆ ಕೊಡುತ್ತಿದೆ. ಸೈನಿಕ ಶಿಕ್ಷಣವನ್ನು ಪಡೆಯುತ್ತಿರುವ ನಾಗರಿಕ ದಳಗಳು ಸಹ ಭಾವಿ ಮತ್ತು ಕಾಲುವೆಗಳನ್ನು ತೋಡುವುದೇ ಮುಂತಾದ ಕಠಿಣ ಕಾರ್ಯಕ್ರಮಗಳಲ್ಲಿ ನೆರವು ನೀಡುತ್ತಿವೆ. ಜನತೆಯ ಉತ್ಸಾಹಕ್ಕೆ ಸರಿಯಾಗಿಲಾದ ಉತ್ಸಾಹ ಇಲ್ಲಿ ಗೋಚರಿಸುತ್ತದೆ.

ಸ್ವಪ್ರೇರಣೆಯ ಈ ಪ್ರಯತ್ನಗಳನ್ನು ಉತ್ತೇಜಿಸುವುದಕ್ಕಾಗಿ ಸರಕಾರವು ಯೋಜನೆಗೆ ತಗಲುವ ವೆಚ್ಚದಲ್ಲಿ ಅರ್ಧದಷ್ಟನ್ನು ಜನರೇ ಒದಗಿಸಿಕೊಳ್ಳಬೇಕೆಂಬ ಶರತ್ತಿನ ಮೇಲೆ ಸಹಾಯ ಮಾಡುತ್ತದೆ. ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಕಲ್ಯಾಣ ಮಂಡಳಗಳ ಚಟುವಟಿಕೆಗಾಗಿ ನಾಲ್ಕು ಕೋಟಿ ರೂಪಾಯಿಗಳನ್ನೂ ಸ್ವಪ್ರೇರಣೆಯ ಕೆಲಸಗಳಿಗಾಗಿ ಹದಿನೈದು ಕೋಟಿ ರೂಪಾಯಿಗಳನ್ನೂ ತೆಗೆದಿಟ್ಟಿರುವರು. ಜನರು ಈ ಹಣದ ಸದುಪಯೋಗ ಮಾಡಿಕೊಳ್ಳುವುದಕ್ಕೋಸ್ಕರ ಅರ್ಧದಷ್ಟು ವೆಚ್ಚವನ್ನು ತಾವೇ ಮೈಸುವುದರಲ್ಲಿ ಹಿಂದುಳಿದಿಲ್ಲವೆಂಬ ಸಮಾಧಾನಕರವಾದ ಅಂಶವನ್ನು ಈಚೆಗೆ ಪ್ರಕಟಸಲಾದ ವರದಿಯು ಸೂಚಿಸುತ್ತದೆ. ಇಷ್ಟಲ್ಲದೆ ಅಭಿವೃದ್ಧಿ ಶಾಲಗಳಿಗೆ ಸಹ ಜನರು ತಮ್ಮ ಉಳಿತಾಯದ ಹಣವನ್ನು ಚಂದಾವಾಗಿ ಕೊಡಲು ಹಿಂಜರಿದಿಲ್ಲ. ಯೋಜನೆಯ ಮೊದಲಿನ ಮೂರು ವರ್ಷಗಳಲ್ಲಿ ರಾಜ್ಯ ಸರಕಾರಗಳಿಗೆ ೬೮ ಕೋಟಿ ರೂಪಾಯಿಗಳೂ ಕೇಂದ್ರಕ್ಕೆ ೧೫೦ ಕೋಟಿ ರೂಪಾಯಿಗಳೂ ಹೀಗೆ ಸಾಲವಾಗಿ ಸಿಕ್ಕಿದ್ದು, ಅಲ್ಪ ಉಳಿತಾಯದ ಬೇಂಕು ಮುಂತಾದವುಗಳಲ್ಲಿ ಮತ್ತೆ ೫೦ ಕೋಟಿ ರೂಪಾಯಿಗಳ ಸಂಗ್ರಹವಾಯಿತು.

ಆಹಾರದ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಜನತೆಯು ಅಗ್ರಸ್ಥಾನವನ್ನು ವಹಿಸಿರುವುದೆಂತಲೇ ನಿಯಂತ್ರಣಗಳನ್ನು ಕಿತ್ತೊಗೆಯುವುದು ಸಾಧ್ಯವಾಯಿತು. ಸರಕಾರದವರು ಒದಗಿಸಿದ ಉತ್ತಮ ಬೀಜಗಳನ್ನೂ ರಾಸಾಯನಿಕ ಕೃತಕ ಗೊಬ್ಬರವನ್ನೂ ಸುಧಾರಿತ ಸಲಕರಣೆಗಳನ್ನೂ ಉಪಯೋಗಿಸಿ, ನೀರಾವರಿಯ ಅನುಕೂಲತೆಯನ್ನು ಸಹ ಪಡೆದು ಒಟ್ಟು ಆಹಾರದ ಉತ್ಪಾದನೆಯನ್ನು ೬೫ ಲಕ್ಷ ಟನ್ನುಗಳಿಗೆ ನಮ್ಮ ರೈತರು ಏರಿಸಿದರು. ಆಹಾರದ ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸುವ ಸಲುವಾಗಿ ಸರಕಾರದವರು ತುಂಡಾಗಿ ಚದರಿಹೋಗಿರುವ ಭೂಮಿಗಳ ಸಂಯೋಜನೆ ನಡೆಸಲು ಉದ್ಯುಕ್ತರಾಗಿದ್ದು ಇಲ್ಲಿ ಸಹ ಜನರಿಂದ ಸಾಕಷ್ಟು ಸಹಕಾರ ವ್ಯಕ್ತವಾಯಿತು. ಒಂದುಕೋಟಿ ಎಕ್ರೆಗಿಂತಲೂ ಹೆಚ್ಚಿನ ಪ್ರದೇಶವು ಹೀಗೆ ಸಂಘಟನೆಗೊಂಡಿತು. ಯುಗಧರ್ಮವನ್ನು ಅನುಸರಿಸಿ ಆಸ್ತಿಯಮೇಲಿನ ಹೆಚ್ಚುಬಾಧ್ಯತೆಗಳನ್ನು ರೈತರಿಗೆಕೊಡಿಸುವ ಶಾಸನಗಳನ್ನು ಸರಕಾರ ಮಾಡಿದಂತೆಲ್ಲ ಸಹಕಾರದ ವೇಗವೂ ತೀವ್ರವಾಯಿತು. ಶಾಸನದ ಬಲವಿಲ್ಲದೆ ಸಹ, ಭೂಮಿಯಿಲ್ಲದವರಿಗೆ ದಾನವಾಗಿ ತಮ್ಮ ಆಸ್ತಿಯನ್ನು ನೀಡುವ ಜನರೂ ಕಂಡು ಬಂದರು. ವಿನೋಬಾಜಿಯ ಭೂದಾನ ಚಳವಳಿವು ೪೦ ಲಕ್ಷ ಎಕ್ರೆ ಭೂಮಿಯನ್ನು ಸಂಪಾದಿಸಿದ್ದು ಸಾಧ್ಯವಲ್ಲ—ಜನತಾ ಸಹಕಾರದ ಫಲ.

ಎಲ್ಲರೊಂದಿಗೆ ಕಾರ್ಮಿಕ ವರ್ಗವೂ ಸಹಾಯವನ್ನು ಸಲ್ಲಿಸಿತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಉತ್ಪಾದನೆ ಹೆಚ್ಚುವಂತೆ ಮತ್ತು ಹೊಸ ಉದ್ಯಮಗಳು ನೆಲೆಯೂರುವಂತೆ ಬಿಡುವಿಲ್ಲದೆ ದುಡಿಯುವುದರಲ್ಲಿ ಕೈಗಾರಿಕೆಯ ಕ್ಷೇತ್ರ ಮಗ್ನವಾಯಿತು. ಕೆಲಸದ ದಿನಗಳು ಹೆಚ್ಚಿಕೊಂಡುದರಿಂದ, ಅಂದರೆ, ಹೆಚ್ಚು ಜನರು ಹೆಚ್ಚು ಸಮಯದ ವರೆಗೆ ಕೆಲಸ ಮಾಡಲಾರಂಭಿಸಿದುದರಿಂದ, ರಾಷ್ಟ್ರದ ಸಮಗ್ರ ಕೈಗಾರಿಕೋತ್ಪಾದನೆಯು ದಾಖಲೆ ೧೯೫೪ನೇ ವರ್ಷದಲ್ಲಿ ತುತ್ತ ತುದಿಗೆ ಏರಿತು. ಆದರೆ ಇಷ್ಟೆಲ್ಲ ಕೆಲಸಗಳು ನಡೆದರೂ ನಾವು ತೃಪ್ತರಾಗುವುದು ಮಾತ್ರ ಉಚಿತವಲ್ಲ. ನವಭಾರತದ ನಿರ್ಮಾಣವೆಂಬ ಮಹಾ ಸಾಹಸವನ್ನು ನಾವು ಈಗಷ್ಟೇ ತೊಡಗಿದ್ದೇವೆ; ಮತ್ತು ಇದರಲ್ಲಿ ನಮ್ಮ ಕೆಲವೇ ಬಂಧುಗಳು ಈಗ ಕ್ರಿಯಾತ್ಮಕ ಪಾತ್ರವನ್ನು ವಹಿಸುತ್ತಿದ್ದಾರೆ. ಪರಿಸ್ಥಿತಿಯು ಇನ್ನಷ್ಟು ಸುಧಾರಿಸಿ ಪ್ರತಿಯೊಬ್ಬ ಪ್ರಾಯಸ್ಪ್ರಬುದ್ಧ ಪುರುಷನೂ ಮಹಿಳೆಯೂ ತನ್ನ ಕೈಲಾದಷ್ಟು ಮಟ್ಟಿಗೆ ರಾಷ್ಟ್ರದ ಪುನಾರಚನೆಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಾದರೆಯೇ ಗುರಿಯನ್ನು ಮುಟ್ಟಲಾಗೀತು. ಪ್ರಜ ರಾಜ್ಯ ದಿನೋತ್ಸವದ ಸಂಭ್ರಮದಲ್ಲಿ ಮೈಮರೆತು ನಾವಿದನ್ನು ಮರೆಯಲಾಗದು.

ಅಮೃತಾಂಜನ
ಎಲ್ಲಾ ನೋವುಗಳಿಗೆ ನಿವಾರಕ
ಎಲ್ಲಾಕಡೆ ಸಿಡಿತ ಮತ್ತು ನೋವುಗಳಿಗೆ
೩೦ ವರ್ಷ ಪ್ರಾಯದ
ಪಾಕೆಟ್ ಪ್ಯಾಕ್ ರ್
ಆಯುರ್ವೇದಿಕ ಔಷಧಾಲಯ ಮಂಗಳೂರು

ಉಡುಪಿಯ ಪ್ರಥಮ ಹಾಗೂ ಮೇಲ್ತರಗತಿಯ
ವಸತಿ ಮತ್ತು ಉಪಾಹಾರ ಗೃಹ—
ನಿಮ್ಮ ಮೆಚ್ಚುಗೆಯ
"ಸುಖ ನಿವಾಸ"
ತಾಲೂಕು ಕಚೇರಿ ಬಳಿ, ಉಡುಪಿ.
ಒಡೆಯರು: ಎಚ್. ವೆಂಕಟೇಶ ನಾಯಕ್.
SUKHA NIVAS
Boarding & Lodging,
UDIPI.

ದಿ ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್
(ಇಲೆಕ್ಟ್ರಿಕಲ್ ಎಂಜಿನಿಯರ್ಸ್ ಎಂಡ್ ಕಂಟ್ರಾಕ್ಟರ್ಸ್)
ಚರ್ಚ್ ರೋಡು, ಉಡುಪಿ.
ಇಲೆಕ್ಟ್ರಿಕ್ ವಯರಿಂಗ್, ಇಲೆಕ್ಟ್ರಿಕ್ ಮೋಟಾರ್ ಮತ್ತು ಪಂಪು ಸೆಟ್ಟುಗಳನ್ನು ಹಾಕುವ ಕೆಲಸಗಳನ್ನು ನಾಜೂಕಾಗಿ ಮಿತದರದಲ್ಲಿ ಪೂರೈಸಲಾಗುತ್ತದೆ.
ವಿಚಾರಿಸಿರಿ:
The Udipi Electric Stores,
Church Road, UDIPI, S. K.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಅವಡಿ ಅಧಿವೇಶನದ ಸಂದೇಶ

ಸಮಾಜವಾದಿ ಸ್ವರೂಪದ ಭಾರತದ ರಚನೆಯೇ ಧ್ಯೇಯ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅವಡಿ ಅಧಿವೇಶನವು ಚರಿತ್ರಾರ್ಹವಾದ ದಾಖಲೆಯನ್ನು ನಿರ್ಮಿಸಿತು. ದಿನಾಂಕ ೨೧ ರಿಂದ ಮೂರು ದಿನಗಳ ವರೆಗೆ ನಡೆದ ಬಹಿರಂಗ ಅಧಿವೇಶನವು ರಾಷ್ಟ್ರೀಯ ಐಕ್ಯವನ್ನು ಸಂವರ್ಧಿಸಿದ್ದಲ್ಲದೆ, ಕಾಂಗ್ರೆಸು ಜನತೆಗೆ ಕೊಟ್ಟ ಸಂದೇಶವನ್ನು ಪ್ರತಿಯೊಂದು ಹಳ್ಳಿಗೂ ಮುಟ್ಟಿಸುವ, ಪ್ರತಿಯೊಬ್ಬ ವ್ಯಕ್ತಿಗೂ ತಿಳಿಯಪಡಿಸುವ ಸಾಧನವಾಯಿತು. ಹತ್ತು ಲಕ್ಷ ರೂಪಾಯಿಗಳ ವೆಚ್ಚವನ್ನು ತಂದ ಈ ಅಧಿವೇಶನ ಕೆಲವರು ಹೇಳುವಂತೆ ರಾಜಕೀಯ ವನಭೋಜನ ಸಮಾರಂಭವಾಗಿರಲಿಲ್ಲ- ಅದು ದೇಶದ ಭವಿಷ್ಯತ್ತಿನ ಸ್ವರೂಪವನ್ನು ನಿರ್ಣಯಿಸುವ ಉದಾತ್ತ ಕಾರ್ಯವನ್ನು ಯಶಸ್ವಿಯಾಗಿಯೂ ಪರಿಣಾಮಕರವಾಗಿಯೂ ಮುಂದಿಸುವ ರಂಗಭೂಮಿಯಾಯಿತು. ಹೆಚ್ಚಿನವರು ನಿರೀಕ್ಷಿಸಿದಂತೆ, ಅದು ಭಾರತವನ್ನು ಮರಳಿ ಕಟ್ಟುವ ಮೂರನೆಯ ಘಟ್ಟದ ನಾಂದಿಯನ್ನು ಹಾಡಿತು. ಅಧಿಕಾರ ಸ್ಥಾನದಲ್ಲಿರುವ ಸರಕಾರಕ್ಕೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿ ಅದರ ಆತ್ಮ ವಿಶ್ವಾಸವನ್ನು ಹೆಚ್ಚಿಸಿದ್ದಲ್ಲದೆ, ಯೋಗ್ಯ ಮಾರ್ಗದರ್ಶನವನ್ನೂ ಮಾಡಿತು.

ಅವಡಿಯ ಅಧಿವೇಶನ ನೆರೆದ ಸ್ಥಳವನ್ನು ತಮಿಳು ನಾಡಿನ ಕಾಂಗ್ರೆಸು ಪ್ರಭೃತಿಗಳೂ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದವರೂ ಆದ ದಿವಂಗತ ಸತ್ಯಮೂರ್ತಿಗಳ ಸ್ಮಾರಕಾರ್ಥವಾಗಿ "ಸತ್ಯಮೂರ್ತಿ ನಗರ" ಎಂಬುದಾಗಿ ಹೆಸರಿಸಿದ್ದರು. ಒಂಭತ್ತನೆ ಶತಮಾನದ ದ್ರಾವಿಡ ಸಂಸ್ಕೃತಿಯ ಪ್ರತೀಕವಾದ ಪಲ್ಲವ ಪದ್ಧತಿಯ ಗೋಪುರ ರಚನೆಯನ್ನು ಪ್ರತಿನಿಧೀಕರಿಸುವ ಮಹಾದ್ವಾರದಿಂದ ಕಾಂಗ್ರೆಸು ಮಂಟಪವನ್ನು ಸಜ್ಜುಗೊಳಿಸಿದ್ದರು. ಇದರ ಇಕ್ಕೆಲಗಳಲ್ಲಿ ಒಂದು ಇಗರ್ಜಿಯನ್ನೂ ಮತ್ತೊಂದು ಮಸೀದಿಯನ್ನೂ ರಚಿಸಿದ್ದರು. ಮಂಟಪಕ್ಕೆ ಅರುವತ್ತು ದ್ವಾರಗಳನ್ನು ಏರ್ಪಡಿಸಿ, ಅಲ್ಲಿ ಹಿಂದಿನ ಕಾಂಗ್ರೆಸಾಧ್ಯಕ್ಷರ ಚಿತ್ರಗಳನ್ನು ತೂಗಹಾಕಿದ್ದರು. ಮಹಾದ್ವಾರದ ಮುಂದೆ ಮೂರಡಿ ಎತ್ತರದ ಸೀರೆದ ಮೇಲೆ ದಿವಂಗತ ಸತ್ಯಮೂರ್ತಿಗಳ ಸುಣ್ಣದಲ್ಲಿ ಕೆತ್ತಲಾದ ಪೂರ್ಣ ಪ್ರಮಾಣದ ಮೂರ್ತಿಯನ್ನು ಇಟ್ಟಿದ್ದರು. ಅದರ ಮುಂದೆ ಐಂಅಡಿ ಎತ್ತರದ ಧ್ವಜಸ್ತಂಭದಲ್ಲಿ ಚರಕಾದಿಂದ ರಾರಾಜಿಸುವ ತ್ರಿವರ್ಣ ಧ್ವಜವನ್ನು ಹಾರಾಡಿಸಿದ್ದರು.

ಹೊರಗಿನ ಈ ಶೋಭೆಗೆ ಒಪ್ಪವಿಡುವಂತೆ ಧುರೀಣರಿಗಾಗಿ ಮಂಟಪದೊಳಗೆ ರಚಿಸಲಾಗಿದ್ದ ವಿಶಾಲವಾದ ವೇದಿಕೆಯನ್ನು ಸಹ ಚೊಕ್ಕರೀತಿಯಲ್ಲಿ ಶೃಂಗರಿಸಿದ್ದರು. ಅದರಲ್ಲಿ ಒಂದು ಸಾವಿರ ಕಾಂಗ್ರೆಸು ಪ್ರಭೃತಿಗಳು ಕುಳಿತು ಕೊಳ್ಳಬಹುದಿತ್ತಲ್ಲದೆ, ಅಗತ್ಯ ಬಂದಾಗ ಹೊರಗೆಹೋಗಲು ಬಾಗಿಲುಗಳ ವ್ಯವಸ್ಥೆಯನ್ನೂ ಮಾಡಿದ್ದರು. ಹೂವಿನ ಕುಂಡಗಳನ್ನೂ ನಯನ ಮನೋಹರವಾಗಿ ವೇದಿಕೆಯಲ್ಲಿ ಇಟ್ಟಿದ್ದರು. ವ್ಯಾಸಪೀಠದ ಎರಡೂ ಮಗ್ಗುಲಲ್ಲಿ ಕಟ್ಟಿಸಿಂದ ತಯಾರಿಸಲಾದ ಎರಡು ಪೂರ್ಣ ಪ್ರಮಾಣದ ಆನೆಗಳನ್ನು ನಿಲ್ಲಿಸಿದ್ದರು. ಅಧ್ಯಕ್ಷರೇ ಮುಂತಾಗಿ ಹತ್ತೈವತ್ತು ಮಂದಿ ಪ್ರತಿಷ್ಠಿತವ್ಯಕ್ತಿಗಳು ಕುಳಿತುಕೊಳ್ಳುವುದಕ್ಕೆ ಒಂದು ಬಾಲ್ಕನಿಯನ್ನೂ ರಚಿಸಿದ್ದರು. ಒಟ್ಟು ಮೂರು ಲಕ್ಷದಷ್ಟು ಪ್ರೇಕ್ಷಕರು ಗ್ಯಾಲರಿಯಲ್ಲಿ ಕುಳಿತುಕೊಂಡು ಅಧಿವೇಶನದಲ್ಲಿ ಭಾಗವಹಿಸುವ ಧುರೀಣರನ್ನೂ ಪ್ರತಿನಿಧಿಗಳನ್ನೂ ವೀಕ್ಷಿಸುವಾಗ ಮಹಾತ್ಮಾ ಗಾಂಧೀಜಿಯವರ ನೆನಪು ಆಗದಿರುತ್ತದೆಯೆ? ಮಂಟಪದ ರಚಕರು ಗಾಂಧೀಜಿಯವರ ಚಿತ್ರಗಳನ್ನು ವೇದಿಕೆಗೆ ಹಿನ್ನೆಲೆಯಾಗಿ ನಿಲ್ಲಿಸಿ ಸ್ವತಃ ಮಹಾತ್ಮರೇ ಉಪಸ್ಥಿತರಿರುವರೆಂಬ ಕಲ್ಪನೆಯನ್ನು ಮೂಡಿಸಿದ್ದರು.

ಭವ್ಯವೂ ಉತ್ತೇಜಕವೂ ಉಲ್ಲಾಸಕರವೂ ಸೇವೆ ಹಾಗು ತ್ಯಾಗಗಳ ಮನೋಭಾವವನ್ನು ಮೂಡಿಸುವಂಥದೂ ಆದ ಈ ವಾತಾವರಣದಲ್ಲಿ ಸತ್ಯಮೂರ್ತಿಗಳ ಪ್ರತಿಮೆಯ ಅನಾವರಣವನ್ನು ಜರಗಿಸುವ ಮೂಲಕ ನೆಹರುಗಳೇ ಮೊತ್ತ ಮೊದಲಾಗಿ ಚೇತನವನ್ನು ತುಂಬಿದರು. ದಿವಂಗತ ಸತ್ಯಮೂರ್ತಿಗಳ ಪತ್ನಿ ಮತ್ತು ಮಗಳನ್ನೊಳಗೊಂಡು ದೊಡ್ಡ ಜನಸಮುದಾಯವು ಈ ಉತ್ಸವದಲ್ಲಿ ಭಾಗವಹಿಸಿತು. ನೆಹರುಗಳು ಸತ್ಯಮೂರ್ತಿಗಳು ಹಿರಿಯ ಶಾಸನ ಸಭಾಸದರಾಗಿದ್ದರೆಂದು ಹೇಳಿದ್ದಲ್ಲದೆ, ನಮ್ಮ ಗೌರವವನ್ನು ಸಂಪಾದಿಸುವುದಕ್ಕೆ ಯೋಗ್ಯರಾದ ಸ್ವಾತಂತ್ರ್ಯ ಯೋಧರೂ ಅವರಾಗಿದ್ದರೆಂದು ಜ್ಞಾಪಿಸಿದರು. ಹತ್ತು ವರ್ಷಗಳ ಹಿಂದೆ ಸೆರೆಮನೆಯಲ್ಲಿದ್ದಾಗ ಅವರು ಹಾಸಿಗೆ ಹಿಡಿದರೆಂದೂ ಈ ಕಾರಣಕ್ಕಾಗಿ ಬಿಡುಗಡೆಗೊಂಡ ಬೆನ್ನಿಗೇ ಮೃತ್ಯು ವಶರಾದರೆಂದೂ ನೆಹರು ತಿಳಿಸಿದರು. "ಕೇವಲ ಮೂರ್ತಿಯೊಂದನ್ನು ರಚಿಸಿ ನಿಲ್ಲಿಸುವುದರಿಂದ ದಿವಂಗತರಿಗೆ ಸ್ಮಾರಕ ರಚಿಸಿದಂತಾಗಲಿಲ್ಲ; ನಮ್ಮ ಜೀವನವನ್ನು ಅವರು ಪ್ರತಿಪಾದಿಸಿದ ತತ್ವಗಳಿಗೆ ತಕ್ಕಂತೆ ಹೊಂದಿಸಿಕೊಳ್ಳುವುದೇ ಯೋಗ್ಯ ಸ್ಮಾರಕ" ಎಂದು ನೆಹರು ಉಪದೇಶಿಸಿದರು.

ಬಹಿರಂಗ ಅಧಿವೇಶನದಂದು ವ್ಯಾತಿಕಾಲ ಧ್ವಜ ಸ್ತಂಭದ ಮೇಲೆ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಧೇಬರರು ಧ್ವಜವನ್ನು ಅರಳಿಸಿದರು. ಸುಮಾರು ೧೫ ಸಾವಿರ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. "ವಂದೇ ಮಾತರಂ" ಗೀತೆಯನ್ನು ಸ್ವಯಂ ಸೇವಕರು ಹಾಡಿದ ಬಳಿಕ ಧೇಬರರು ಧ್ವಜವನ್ನು ಅರಳಿಸಿದಾಗ ಕಾಂಗ್ರೆಸಿನಲ್ಲಿ ಶ್ರದ್ಧಾಭಕ್ತಿಯನ್ನಿಟ್ಟಿರುವ ವಿಶಾಲ ಜನ ಸಮುದಾಯ ಹರ್ಷೋದ್ಗಾರ ಗೈದಿತು. ಈ ಧ್ವಜದ ನೆರಳಲ್ಲಿ ನಾವು ಸ್ವಾತಂತ್ರ್ಯದ ಹೋರಾಟವನ್ನು ಅಹಿಂಸಾತ್ಮಕ ತತ್ವದ ತಳಹದಿಯ ಮೇಲೆ ನಡೆಸಿದ್ದೇವೆಂದೂ ಅದರಲ್ಲಿ ವಿಜಯಲಾಭವನ್ನು ಸಂಪಾದಿಸಿ, ಇದೀಗ ಆರ್ಥಿಕ ಹಾಗು ಸಾಮಾಜಿಕ ಪುನಾರಚನೆಯ ಗುರಿಯತ್ತ ಹೋಗುತ್ತಿದ್ದೇವೆಂದೂ ಧೇಬರರು ತಿಳಿಸಿದರು. ನಮ್ಮ ವಿಶ್ವಾಸವನ್ನು ಹುಸಿಗೊಳಿಸದೆ, ನಮ್ಮ ಪ್ರಯತ್ನಗಳಿಗೂ ಸಾಹಸಗಳಿಗೂ ಸಾಧನೆಗಳಿಗೂ ಸಾಕ್ಷಿ ಭೂತವಾಗಿ ನಿಂತ ಈ ಧ್ವಜವನ್ನು ನಾವು ಗೌರವಿಸಿ, ಸ್ಫೂರ್ತಿಯನ್ನು ಹೊಂದಬೇಕೆಂದು ಅವರು ಸಾರಿದರು. ನಮ್ಮ ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಧ್ಯೇಯ ಸಾಧನೆಯ ಪ್ರತಿಜ್ಞೆಯನ್ನು ಇದರಡಿ ಪುನರುಚ್ಚರಿಸಬೇಕೆಂದು ಅವರು ವಿನಂತಿಸಿದರು.

ಧೇಬರರ ಅಧ್ಯಕ್ಷ ಭಾಷಣವೂ ಇಷ್ಟೇ ಬೋಧಪ್ರದವಾಗಿದ್ದಿತು. ಒಟ್ಟಿಗೆ ಎರಡತ್ತು ನಿಮಿಷಗಳನ್ನು ತೆಗೆದುಕೊಂಡ ಎಂಟುಸಾವಿರ ಶಬ್ದಗಳ ಈ ಭಾಷಣವು ಕಾಂಗ್ರೆಸಿಗೂ ದೇಶಕ್ಕೂ ಪ್ರಗತಿಯ ದಿಸೆಯಲ್ಲಿ ಮುಂದರಿಯುವುದಕ್ಕೆ ಉಪಯುಕ್ತವಾದ, ದಿಗ್ದರ್ಶಕಸ್ವರೂಪದ ಸಲಹೆ ಸೂಚನೆಗಳಿಂದಲೂ ಹಿತೋಪದೇಶಗಳಿಂದಲೂ ಕೂಡಿದ್ದಿತು. ಧೇಬರರು ಪ್ರಾರಂಭದಲ್ಲಿ ತನ್ನಮೇಲೆ ರಾಷ್ಟ್ರೀಯ ಮಹತ್ವದ ಸ್ಥಾನವೊಂದರ ಹೊಣೆಯನ್ನು ಹೇರಿ, ವಿಶ್ವಾಸವನ್ನು ವ್ಯಕ್ತಪಡಿಸಿದುದಕ್ಕೆ ಆಭಾರವನ್ನು ಮನ್ನಿಸಿದರಲ್ಲದೆ, ಭಾರತದ ಇತಿಹಾಸದಲ್ಲಿಯೇ ಮೊದಲನೆಯಸಲ ರಾಷ್ಟ್ರೀಯ ಕಾಂಗ್ರೆಸಿನ ನೇತೃತ್ವದಲ್ಲಿ ಅಖಿಲಭಾರತದ ಜನತೆಯು ಒಟ್ಟಾಗಿ, ಒಂದೇ ಉದ್ದೇಶಕ್ಕಾಗಿ ಹೋರಾಡಿದ ಉಜ್ವಲ ಅಧ್ಯಾಯದ ನೆನಪನ್ನು ಮಾಡಿಕೊಟ್ಟರು. ಶಸ್ತ್ರಗಳೇನೂ ಇಲ್ಲದ, ನಿರಕ್ಷರ ಕುಕ್ಷಿಗಳಾದ ಕೋಟ್ಯಾಂತರ ಜನತೆಯಲ್ಲಿ ಆತ್ಮ ಜಾಗೃತಿಯ ಭಾವನೆಯನ್ನು ಕಾಂಗ್ರೆಸೊಂದೇ ಜಗತ್ತಿನಲ್ಲಿ ಮೂಡಿಸಿತೆಂದು ಅಭಿಮಾನದಿಂದ ಅವರು ಹೇಳಿದರು. ಇದು ಮಹಾತ್ಮಾ ಗಾಂಧೀಜಿಯವರ ಉದಾತ್ತ ತತ್ವಗಳ ಪ್ರಭಾವವೆಂದು ಹೇಳುತ್ತಾ ಧೇಬರರು ರಾಷ್ಟ್ರಪಿತನಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಕಾಂಗ್ರೆಸಿನ ದಿಗ್ದರ್ಶನದಲ್ಲಿ ಅಧಿಕಾರ ಚಲಾಯಿಸುವ ಭಾರತ ಸರಕಾರದ ಯಶಸ್ಸನ್ನು ಧೇಬರರು ಪ್ರಶಂಸನೀಯ ವಾಕ್ಯಗಳಿಂದ ಪ್ರಸ್ತಾಪಿಸಿದರು. ಶಾಂತಿ ಭಂಗವು ಪ್ರಜೆಗಳ ಉತ್ಕರ್ಷಕ್ಕೆ ದೊಡ್ಡ ಆತಂಕವೆಂದು ಸಾರಿದ್ದಲ್ಲದೆ, ಅಣುಶಸ್ತ್ರಗಳ ಉತ್ಪಾದನೆ ಮತ್ತು ಪ್ರಯೋಗಗಳು ಅಭಿವೃದ್ಧಿ ಪ್ರಯತ್ನಗಳನ್ನು ಕುಂಠಿತಗೊಳಿಸುವುದೆಂದೂ ನಾಗರಿಕತೆಯನ್ನೇ ನಾಶ ಮಾಡುತ್ತವೆಂದೂ ಅವರು ಅಭಿಪ್ರಾಯಪಟ್ಟರು. ಜಗತ್ತಿನ ಆರರಲ್ಲಿ ಒಂದಂಶ ಜನರನ್ನು ಹೊಂದಿದ ಭಾರತವು ಪರಿಸ್ಥಿತಿಯನ್ನು ಮೂಕ ಪ್ರೇಕ್ಷಕನಂತೆ ವೀಕ್ಷಿಸುತ್ತ ಕುಳಿತಿರಲಾರದೆಂದು ಅವರು ಹೇಳಿ ಶಾಂತಿ ಸಾಧನೆಗಾಗಿ ರಾಷ್ಟ್ರ ಸಂಘದ ಒಳಗೂ ಹೊರಗೂ ನೆಹರುಗಳ ಧುರೀಣತೆಯಲ್ಲಿ ಸರಕಾರ ನಡೆಸಿದ ಪ್ರಯತ್ನಗಳನ್ನು ಶ್ಲಾಘಿಸಿದರು. ಫ್ರೆಂಚ ಭಾರತದ ಹಸ್ತಾಂತರವನ್ನು ಶಾಂತ ರೀತಿಯಲ್ಲಿ ನಾಡಿಸಲಾಯಿತೆಂದೂ ಅವರು ಅತ್ಯಂತ ಆನಂದವನ್ನು ವ್ಯಕ್ತಪಡಿಸಿ ಆ ಬಂಧುಗಳಿಗೆ ಅಕ್ಕರೆಯ ಸ್ವಾಗತ ನೀಡಿದರು. ಅಲ್ಲಿಯ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗಲು ನಾವು ಬದ್ಧರಿದ್ದೇವೆಂದು ಅವರು ಆಶ್ವಾಸನೆ ಕೊಟ್ಟುದಲ್ಲದೆ, ಪೋರ್ಚುಗೀಜರ ವಶದಲ್ಲಿರುವ ಪ್ರದೇಶಗಳ ಹಸ್ತಾಂತರವೂ ಇದೇ ರೀತಿ ಕೈಗೂಡುವುದೆಂದೂ ಅದರಿಂದಲೇ ನಮ್ಮ ರಾಜಕೀಯ ಸ್ವಾತಂತ್ರ್ಯವು ಪರಿಪೂರ್ಣವಾಗುವುದೆಂದೂ ಒತ್ತಿ ಹೇಳಿದರು.

ಭಾರತಕ್ಕೆ ಈಗಲೂ ನೆಹರುಗಳೇ ನಾಯಕನೆಂಬ ತನ್ನ ಬೇರೊಂದು ಹೇಳಿಕೆಗೆ ಅನುಗುಣವಾದ ಮಾತನ್ನೆ ಧೇಬರರು ಅನಂತರ ಪುನರುಚ್ಚರಿಸಿದರು. ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಲ್ಲಿ ನಮ್ಮ ದೇಶದಲ್ಲಿ ವಿದ್ಯಮಾನವಿದ್ದ ಕೆಟ್ಟ ಪರಿಸ್ಥಿತಿಯ



ಸಮಾಜವಾದಿ ನೆಹರು.

ಪ್ರವಾಸಿಕರ ಅಚ್ಚುಮೆಚ್ಚಿನ ಸರ್ವಸೌಕರ್ಯಗಳನ್ನೊಳಗೊಂಡ ಭೋಜನ ಮತ್ತು ವಸತಿಗೃಹ-

ರಾಯಲ್ ಮಹಲ್

ಉಡುಪಿ.

ಕೆ. ವೆಂಕಟ್ರಮಣ ಭಟ್ಟ, ಪ್ರಾಲಕ.

ROYAL MAHAL

(REGD.)

BOARDING & LODGING HOUSE,

UDIPI, S. K.

ಸೇವೆ ಮತ್ತು ತ್ಯಾಗಗಳ ದೀಕ್ಷೆ

ಅಧ್ಯಕ್ಷ ಧೇಬರರ ನಲ್ನುಡಿ

ಸ್ಥಾಲಚಿತ್ರವನ್ನು ಅವರು ರೇಖಿಸುತ್ತಾ ಅತ್ತ ಸರಕಾರದ ಮತ್ತು ಇತ್ತ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ದಕ್ಷತೆಯಿಂದಲೂ ಉತ್ಸಾಹದಿಂದಲೂ ನೆಹರುಗಳು ನಡೆಸಿಕೊಂಡು ಹೋದುದಕ್ಕೆ ನಾವು ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಬೇಕೆಂದೂ ವಿಧೇಯತೆಯನ್ನು ತೋರಿಸಬೇಕೆಂದೂ ಹೇಳಿದರು. ಪಂಚವಾರ್ಷಿಕ ಯೋಜನೆಯಂತೆ ಕೈಗೊಳ್ಳಲಾದ ಕಾರ್ಯಕ್ರಮಗಳ ನೈಶಿಷ್ಟ್ಯವನ್ನು ವಿವರಿಸುತ್ತಾ ವಿಸ್ತಾರವಾದ ರಾಷ್ಟ್ರದಲ್ಲಿ ಅಭಿವೃದ್ಧಿ ಪ್ರಯತ್ನಗಳ ಹೊಣೆಹೊತ್ತ ಸಂಸ್ಥೆ ಆವಶ್ಯವೆಂದೂ ಜನರ ಸಹಕಾರದಿಂದಲೇ ಯಾವ ಒತ್ತಾಯವಿಲ್ಲದೆ ಪ್ರಜಾ ಸತ್ತಾತ್ಮಕರೀತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಬಹುದೆಂದೂ ಸಾಮಾಜಿಕ ಹಾಗು ಆರ್ಥಿಕ ಸುಧಾರಣೆಗಳನ್ನು ಜನರು ತೆರೆದ ಹೃದಯದಿಂದ ಸ್ವಾಗತಿಸುವರೆಂದೂ ಈಗ ಮನವರಿಕೆಯಾಗಿರುವುದಾಗಿ ವಿದಿತ ಪಡಿಸಿದರು. ಭೂಸುಧಾರಣೆಯ ಮೂಲ ಭೂತಪ್ರಶ್ನೆಯೂ ಕೈಗಾರಿಕಾ ಕ್ಷೇತ್ರ ಪ್ರಗತಿಯೂ ತೃಪ್ತಿಕರವಾಗಿ ಲಕ್ಷಿಸಲಾಗುತ್ತದೆಂದು ಅವರು ತಮ್ಮ ಸಮಾಧಾನವನ್ನು ಪ್ರಕಟಿಸಿದರು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ನೈಶಿಷ್ಟ್ಯವನ್ನು ವಿವರಿಸಲೂ ಅವರು ಪ್ರಯತ್ನಿಸಿದರು. ಪ್ರಥಮ ಯೋಜನೆಯು ಹಣಕಾಸಿನ ಯೋಜನೆಯಾಗಿತ್ತು; ಆದರೆ ಮುಂದಿನ ಯೋಜನೆಯು ಆವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡ ಕಾರ್ಯಕ್ರಮವಾಗುವುದು ಎನ್ನುತ್ತಾ ಅಷ್ಟುಮಟ್ಟಿಗೆ ವಾಸ್ತವಿಕ ಪರಿಸ್ಥಿತಿಗೆ ಹೊಂದಿಕೊಂಡ ಯೋಜನೆಯಾಗಿ ಅದು ರೂಪುಗೊಳ್ಳುವುದೆಂದರು. ಆರ್ಥಿಕ ಹಾಗು ಸಾಮಾಜಿಕ ಮನಾರಚನೆಯು ಸಾಮಾನ್ಯವಾಗಿ ಸಮಾಜವಾದದ ತತ್ವಗಳನ್ನೆ ಆಶ್ರಯಿಸುತ್ತಿದೆಯೆಂದು ಸೂಚಿಸಲೂ ಅವರು ಈ ಸಂದರ್ಭವನ್ನು ಉಪಯೋಗಿಸಿಕೊಂಡರು. ಆದರೆ ಬೇರೆ ದೇಶಗಳ ರೀತಿಯನ್ನು ಇದ್ದುದಿದ್ದಂತೆ ಅನುಸರಿಸುವುದು ಭಾರತಕ್ಕೆ ಅಷ್ಟು ಪ್ರಯೋಜಕವಾಗದೆಂದು ಸ್ಪಷ್ಟೀಕರಣವನ್ನೂ ಕೊಟ್ಟರು. ಮನುಷ್ಯನ ನೈತಿಕ ಭಾವನೆಯನ್ನು ಯೋಗ್ಯ ರೀತಿಯಲ್ಲಿ ಮನ್ನಿಸುವ ಸಂಸ್ಕೃತಿ ನಮ್ಮದೆಂದೂ ಅದು ಆರ್ಥಿಕ ಹಾಗು ಸಾಮಾಜಿಕ ಕ್ಷೇತ್ರವನ್ನು ಬಿಟ್ಟಿಲ್ಲವೆಂದೂ ಸ್ಮರಣೆಗೆ ತಂದುಕೊಡುತ್ತಾ ಇದರೊಂದಿಗೆ ವ್ಯಾವಹಾರಿಕ ತಾಪತ್ರಯಗಳನ್ನೂ ನಾವು ಗಮನಿಸಬೇಕೆಂದು ತಿಳಿಸಿದರು. ನಿರುದ್ಯೋಗ ನಿವಾರಣೆಗೆ ಅವರು ಮುಂದಿಟ್ಟ ಸೂಚನೆಗಳಿಗೆ ಇದೇ ತಳಹದಿಯನ್ನು ಒದಗಿಸಿತು.

ಅವರ ಅಭಿಪ್ರಾಯದಂತೆ ದೊಡ್ಡ ಕೈಗಾರಿಕೆಗಳಿಗಿಂತಲೂ ಗೃಹೋದ್ಯಮಗಳು ಹೆಚ್ಚು ಜನರಿಗೆ ಕೆಲಸವನ್ನು ಕೊಡುತ್ತವೆ; ಮತ್ತು ಕಡಿಮೆ ಬಂಡವಾಳದಿಂದಲೆ ತೃಪ್ತಿಪಡೆಯುತ್ತವೆ. ಆದುದರಿಂದ ಗೃಹೋದ್ಯಮಗಳ ಕ್ಷೇತ್ರದಲ್ಲಿ ಕಾಂಗ್ರೆಸು ಕಾರ್ಯಕರ್ತರೂ ಸಂಘಟಕರೂ ದುಡಿಯ ಬೇಕೆಂದು ಅವರು ಅಪೇಕ್ಷಿಸಿದರು. ಸಾಕಷ್ಟು ದೀರ್ಘ ಪರಿಕ್ಷಾ ಕಾಲವನ್ನು ಈ ಪ್ರಯೋಗಕ್ಕೆ ಕೊಡಬೇಕೆಂದು ಅವರು ಒತ್ತಾಯಿಸಿದ್ದಲ್ಲದೆ, ಸರ್ವೋದಯ ಕಾರ್ಯಕರ್ತರು ಸಹ ಗೃಹೋದ್ಯಮಗಳ ಲಘು ಯಂತ್ರಗಳನ್ನು ಪರಿಷ್ಕರಿಸುವುದಕ್ಕೆ ಪ್ರತಿಕೂಲರಾಗಿಲ್ಲವೆಂದೂ ಆದುದರಿಂದ ಯೋಗ್ಯ ಸುಧಾರಣೆಗಳನ್ನು ಯಾಂತ್ರಿಕ ಹಾಗು ತಾಂತ್ರಿಕ ವಿಭಾಗದಲ್ಲಿ ಕೈಗೊಂಡರೆ ತಪ್ಪುಗಳೆಂದೂ ನಿವೇದಿಸಿದರು. ಮೂಲ ಉದ್ಯೋಗಗಳನ್ನು ಸಹ ಇದೇ ಸಮಯ ಅಭಿವೃದ್ಧಿಪಡಿಸಬೇಕೆಂದು ಅವರು ಸೂಚಿಸಿ, ಖಾಸಗಿ ಉದ್ದಿಮೆದಾರರ ಕೈವಾಡಕ್ಕೂ ರಾಷ್ಟ್ರದಲ್ಲಿ ಆಸ್ಪದವಿದೆಯೆಂಬ ಭರವಸೆ ನೀಡಿದರು.

ಸಾಮಾಜಿಕ ಗುರಿಯ ಪ್ರಸ್ತಾಪವನ್ನು ಅವರು ಆ ಬಳಿಕ ಮಾಡಿದರು. ಸಮಾನತೆಯನ್ನು ಸ್ಥಾಪಿಸುವ ಹಂಬಲವು ಕೈಗೂಡಬೇಕಾದರೆ ಉತ್ಕರ್ಷಕ್ಕೆ ಸಮಾನ ಅವಕಾಶಗಳನ್ನು ಒದಗಿಸಿಕೊಡಬೇಕೆಂಬ ತತ್ವವನ್ನು ಅವರು ಎತ್ತಿ ಹಿಡಿದರು. ಶ್ರಮಜೀವಿಗಳಿಗೆ ಸಹ ಗೌರವ ಸಲ್ಲಬೇಕೆಂದು ಅವರು ಪ್ರತಿಪಾದಿಸಿದರು. ಜಾತೀಯ ಹಾಗು ಮತೀಯ ಭಾವನೆಯು ಸಾಮಾಜಿಕ ಹಾಗು ಆರ್ಥಿಕರಂಗದಲ್ಲಲ್ಲದೆ, ರಾಜಕೀಯ ಕ್ಷೇತ್ರದಲ್ಲೂ ಹಾಸಿಯನ್ನೆ ಮಾಡುತ್ತಿದೆ ಎಂದವರು ಎಚ್ಚರಿಸಿ, ಹೊಸ ಸಮಾಜ ರಚನೆಯಲ್ಲಿ ಜಾತಿ ಭೇದವನ್ನೆ ಅಳಿಸಿ ಬಿಡಬೇಕೆಂದರು. ಶೈಕ್ಷಣಿಕ ಕ್ಷೇತ್ರವನ್ನು ಉಪರೋಕ್ತ ಉದ್ದೇಶಗಳಿಗೆ ಸಮರ್ಪಕವಾಗಿ ಬಳಸಿಕೊಳ್ಳಬಹುದೆಂದೂ ಅದೇ ಮುಖ್ಯವಾದ ವಿಷಯವೆಂದೂ ಅವರು ವ್ಯಕ್ತಪಡಿಸಿದರು. ನಾವು ಯಾವ ಸಮಾಜದ ಚಿಂತನೆ ಮಾಡುತ್ತೇವೊ ಅದಕ್ಕೆ ಹೊಂದಿಕೊಂಡ, ಅಂದರೆ ವರ್ಗ ಹಾಗು ಜಾತಿಭೇದಕ್ಕೆ ಎಡೆ ಇಲ್ಲದ, ಶಿಸ್ತು ಮತ್ತು ಶೀಲವನ್ನು ರಕ್ಷಿಸುವ ಮತ್ತು ದೈಹಿಕ ಶ್ರಮವನ್ನು ಮನ್ನಿಸುವ ಶಿಕ್ಷಣಕ್ರಮ ರೂಪಿಸಲ್ಪಡಬೇಕೆಂದು ಘೋಷಿಸಿದರು.

ಕಾಂಗ್ರೆಸಿನ ಬಲ ಸಂವರ್ಧನೆ ಹಾಗು ರಾಜಕೀಯ ಹೊಣೆಗಾರಿಕೆಯ ಕುರಿತು ಅವರು ಮನನೀಯವಾದ ಮಾತುಗಳನ್ನು ಹೇಳಿದರು. ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಿಗೆ ಕಾಂಗ್ರೆಸಿನ ಮೇಲೆ ರಾಜಕೀಯ ಹೊಣೆಗಾರಿಕೆಯು ಬಿದ್ದುದರಿಂದ ಅನೇಕರು ಈ ಸಂದರ್ಭದ ದುರುಪಯೋಗ ಪಡೆಯ ಬಯಸಿ, ಕಾಂಗ್ರೆಸನ್ನು ಸೇರಿಕೊಂಡರು. ಕರ್ತವ್ಯ ಭಾವನೆಯಿಂದ ಪ್ರೇರಿತರಾದವರಿಗಿಂತಲೂ ಸ್ವಾರ್ಥಪರ ದೃಷ್ಟಿಕೋಣದಿಂದಲೇ ಸಂಸ್ಥೆಯನ್ನು ಆಶ್ರಯಿಸಿದವರು ಅಧಿಕ. ಕಲ್ಯಾಣ ರಾಷ್ಟ್ರದ ಧ್ಯೇಯವನ್ನು ಸರಕಾರ ಅಂಗೀಕರಿಸಿದ ಪ್ರಯುಕ್ತ ಈಗ ಕಾಂಗ್ರೆಸಿನ ವಿಧಾಯಕ ಚಟುವಟಿಕೆಗಳಲ್ಲಿ ಹೆಚ್ಚಿನವು ಸರಕಾರಿ ಮಟ್ಟದಲ್ಲಿ ನಡೆಯುತ್ತವೆ. ಕಾಂಗ್ರೆಸು ಕೇವಲ ರಾಜಕೀಯ ಪಕ್ಷವಾಗಿಯೇ ಉಳಿದಿರುವಂತೆ ಭಾಸವಾಗುತ್ತದೆ. ಆದರೆ ಇದು ಬೀಗೆಯೇ ಮುಂದರಿಯಬಾರದು—ಅಧಿಕಾರ ಸ್ಥಾನವು ಕಾಂಗ್ರೆಸಿನ ಕೈಯಲ್ಲಿಯೇ ಯಾವಾಗಲೂ ಉಳಿಯಲಿಕ್ಕಿಲ್ಲ. ನಮ್ಮ ಸಂಸ್ಥೆಯೊಂದೇ ಕೊನೆಯವರೆಗೆ ಉಳಿಯಬೇಕಾಗಿದ್ದು ಅದಕ್ಕಾಗಿ ಸೇವೆ ಮತ್ತು ತ್ಯಾಗಗಳ ದೀಕ್ಷೆಯನ್ನು ತೊಟ್ಟು ಜನ ಸಾಮಾನ್ಯರೊಡನೆ ಸಮರಸವಾಗಿ ಬೆರೆಯ ಬೇಕು. ಚುನಾವಣೆಗಳಲ್ಲಿ ನಾವು ಭಾಗವಹಿಸಬೇಕಾಗುವುದೇನೊ ನಿಜ; ಆದರೆ ಅದೊಂದು ಸಾಧನವಾಗಿದೆಯೇ ಹೊರತು, ಧ್ಯೇಯವಲ್ಲ. ಆಂತರಿಕವಾದ ನೈತಿಕ ಶಕ್ತಿಯನ್ನೂ ವರ್ಚಸ್ಸನ್ನೂ ಹೆಚ್ಚಿಸಿಕೊಳ್ಳುವುದೇ ಕಾಂಗ್ರೆಸಿನ ಕಾರ್ಯಕರ್ತರ ಉದ್ದೇಶ—ಎಂದವರು ಕರ್ತವ್ಯವನ್ನು ವಿವರಿಸಿದರು.

ರಾಷ್ಟ್ರದ ಅಭಿವೃದ್ಧಿಗಾಗಿ ನಾವು ಪೈಗೆ ಪೈ ಉಳಿಸಿ ಅದನ್ನು ಯೋಜನೆಯಲ್ಲಿ ಬಂಡವಾಳವಾಗಿ ವಿನಿಯೋಗಿಸಬೇಕೆಂದೂ ಬೌದ್ಧಿಕ ಹಾಗು ದೈಹಿಕ ಪರಿಶ್ರಮದ ಮೂಲಕ ಸ್ವೇಚ್ಛೆಯಿಂದ ಸಾಮಾಜಿಕ ಸೇವೆ ಸಲ್ಲಿಸಲು ಮುಂದಾಗಬೇಕೆಂದೂ ಅವರು ಕರೆ ಇತ್ತರು. ಬಲವಾದ ರಾಷ್ಟ್ರೀಯ ಸಂಸ್ಥೆಯೊಂದೇ ಸ್ಥಿರವಾದ ಸರಕಾರವನ್ನು ಸಹ ಕೊಡಬಲ್ಲುದೆಂದು ಹೇಳುತ್ತಾ ತಾತ್ವಿಕವಾಗಿ ನಾವು ತ್ಯಾಗ ಮತ್ತು ಸೇವೆಗಳಿಂದ ಶಕ್ತಿಯನ್ನು ಸಂವರ್ಧಿಸಿಕೊಳ್ಳಬೇಕೆಂದೂ ವ್ಯಾವಹಾರಿಕವಾಗಿ ವಿಧಾಯಕ ಕಾರ್ಯಗಳ ಮೂಲಕ ಜನತೆಯೊಡನೆ ಸಮರಸವಾಗಿ ಅವರ ಗೌರವಾದರಗಳನ್ನು ಸಂಪಾದಿಸಬೇಕೆಂದೂ ತಿಳಿಸಿದರು. ಚರಕವೂ ಖಾದಿಯೂ ಇದರ ಪ್ರತೀಕಗಳಾಗಿ ಗಾಂಧೀಜಿಯವರಿಂದ ಕೊಡಲಾದವು; ಆದರೆ ಸೇವೆಯ ಬೇರೆ ಹಲವು ಕ್ಷೇತ್ರಗಳೂ ಇವೆ—ಎಂದರು. ತಮ್ಮ ಭಾಷಣವನ್ನು ಮುಗಿಸುವುದಕ್ಕೆ ಮುಂಚೆ ಶ್ರೀ ಧೇಬರು ಜಗತ್ತಿನಲ್ಲಿ ಕವಿದಿರುವ ಕ್ರಾಂತಿಯ ವಾತಾವರಣವನ್ನು ಉಲ್ಲೇಖಿಸಿದರು. ಭಾರತದ ಕ್ರಾಂತಿಯ ಸ್ವರೂಪ ಬೇರೆಯಾಗಿದೆಯೆಂದೂ ಅದು ತಾನು ಅಹಿಂಸಾತ್ಮಕ ರೀತಿಯಲ್ಲಿ ಅಭಿವೃದ್ಧಿ ಹೊಂದುವುದಲ್ಲದೆ ಭೂಮಂಡಲದ ಬೇರೆ ದೇಶಗಳವರೂ ಆ ಮಾರ್ಗವನ್ನು ಅನುಸರಿಸುವಂತೆ ಮಾಡುವ ದಿವ್ಯ ಜ್ಯೋತಿಯಾಗುವುದೆಂದೂ ತಿಳಿಸಿದರು. ಈ ಉದ್ದೇಶಕ್ಕಾಗಿ ನಾವು ದೀಕ್ಷಾಬದ್ಧರಾಗಿ ಪ್ರಗತಿ ಪಥಗಾಮಿಗಳಾಗೋಣ ಎಂದವರು ಜಯಕಾರಗೈದರು.

ಸ್ವಾಗತಸಮಿತಿಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದ ಶ್ರೀಮತಿ ಅಂಬುಜಮ್ಮಾಳರು ಸಹ ಧೇಬರಷ್ಟೆ ಅಪರಿಚಿತರಾದ, ಅಂದರೆ ಬೆಳಕಿಗೆಬಾರದೆ ಎಲೆಮರೆಯಕಾಯಿಯಂತಿದ್ದ ವ್ಯಕ್ತಿ. ತಮ್ಮ ನೈತಿಕ ಹಾಗೂ ಕ್ರಿಯಾತ್ಮಕ ಶಕ್ತಿಗಳಿಂದ ಲೋಕಪ್ರಸಿದ್ಧರಾದ ನೆಹರು, ವಿನೋಬಾಜೀಗಳಂಥ ವ್ಯಕ್ತಿಗಳು ಒಬ್ಬೊಬ್ಬರಿದ್ದರೆ ಸಾಲದು; ಗಾಂಧೀಜಿಯ ನಿಜವಾದ ಅನುಯಾಯಿಗಳ ಸಂಖ್ಯಾಪ್ರಮಾಣ ಅಧಿಕವಾಗಬೇಕು ಎಂದವರು ಅಪೇಕ್ಷಿಸಿದರು. ತಮಿಳುನಾಡಿನಲ್ಲಿ ಕಾಂಗ್ರೆಸನ್ನು ಜನಪ್ರಿಯಗೊಳಿಸಿದ ಶ್ರೀನಿವಾಸ ಅಯ್ಯಂಗಾರರ ಈ ಮಗಳು ಹಳ್ಳಿಗಳ ಉದ್ಧಾರಕ್ಕೆ ಗಮನಿಸುವುದರಿಂದಲೇ ಕಾಂಗ್ರೆಸು ಸಂಸ್ಥೆ ಬಲಗೊಳ್ಳುವುದೆಂದು ಅಭಿಪ್ರಾಯಪಟ್ಟರು. ಮದ್ರಾಸಿನಲ್ಲಿ ರಾಷ್ಟ್ರೀಯ ಕಾಂಗ್ರೆಸಿನ ಸಭೆಜರಗುತ್ತಿರುವುದು ಇದು ಎಂಟನೆಯ ಸಲವೆಂದೂ ಹಿಂದೆ ನಡೆದ ಅಧಿವೇಶನವು (೧೯೩೬) ಡಾ॥ ಅನ್ಸಾರಿಯವರ ಅಧ್ಯಕ್ಷತೆಯಲ್ಲಿತ್ತೆಂದೂ ಅದು "ಪೂರ್ಣಸ್ವರಾಜ್ಯ" ದ ಪ್ರತಿಜ್ಞೆಗೆ ನಾಂದಿಯನ್ನು ಹಾಡಿತೆಂದೂ ಅವರು ವಿದಿತ ಪಡಿಸಿದರು. ಅಂದು ನೆಹರುಗಳು ಪೂರ್ಣಸ್ವರಾಜ್ಯದ ಗೊತ್ತುವಳಿ ಮಂಡಿಸುವುದರಲ್ಲಿ ಮಹತ್ವದ ಪಾತ್ರವಹಿಸಿದ್ದರು; ಅದೇ ನೆಹರುಗಳಿಂದು ಆರ್ಥಿಕ ಹಾಗು ಸಾಮಾಜಿಕ ಕ್ಷೇತ್ರದ ಪ್ರಗತಿಗಾಗಿ ಮಹತ್ವದ ನಿರ್ಣಯಗಳನ್ನು ಪ್ರತಿಪಾದಿಸುತ್ತಿರುವುದು ನಮ್ಮ ಸೌಭಾಗ್ಯ ಎಂದವರು ಉದ್ಗರಿಸಿದರು.

ನಿಜಕ್ಕೂ ನೆಹರುಗಳ ಹಿರಿತನದಲ್ಲಿ ನೆರೆದ ಅಧಿವೇಶನವು ತನ್ನ ಹದಿನಾಲ್ಕು ಗೊತ್ತುವಳಿಗಳ ಮೂಲಕ ಇತಿಹಾಸದ ಗತಿ ಬದಲಾಯಿಸುವ ಹೆಜ್ಜೆಯನ್ನಿಟ್ಟಿತು. ರಾಜಕೀಯ ಪ್ರಾಮುಖ್ಯತೆಗಿಂತಲೂ ಸಾಮಾಜಿಕ ಹಾಗೂ ಆರ್ಥಿಕ ಮಹತ್ವದಿಂದ ಈ ಸಲದ ಗೊತ್ತುವಳಿಗಳು ಕೂಡಿದ್ದವೆಂದು ನಿರೀಕ್ಷಕರ ಅಭಿಪ್ರಾಯ. ಸಮಾಜವಾದ ಸ್ವರೂಪದ ಸಮಾಜವನ್ನು ಭಾರತದಲ್ಲಿ ನೆಲೆಗೊಳಿಸುವುದೇ ರಾಷ್ಟ್ರೀಯ ಕಾಂಗ್ರೆಸಿನ ಧ್ಯೇಯವೆಂದು ಸ್ಪಷ್ಟವಾಗಿ ಸಾರುವ ಗೊತ್ತುವಳಿಯನ್ನು ಸ್ವತಃ ನೆಹರುಗಳೇ ಮಂಡಿಸಿದ್ದರು. ಇದು ಉತ್ಪಾದನೆಯ ಎಲ್ಲ ಸಾಧನೆಗಳೂ ಸಮಾಜದ ಒಡೆತನ ಅಥವಾ ನಿಯಂತ್ರಣದಲ್ಲಿದ್ದು ಸಂಪತ್ತಿನ ಸಮಾನ ವಿತರಣೆಯಾಗಬೇಕೆಂದು ಹೇಳುತ್ತದೆ. ಆದರೆ ಈ ಸಮಾಜವಾದವು ಸಾಮಾನ್ಯ ಸಮಾಜವಾದಕ್ಕಿಂತ ಭಿನ್ನ ಸ್ವರೂಪದ್ದಿದ್ದು— ಖಾಸಗಿರಂಗಕ್ಕೆ ಸಹ ಬೆಳೆಯಲು ಅವಕಾಶ ಕೊಟ್ಟಿರುವುದು ಭಾರತೀಯ ಭಾವಿನ ಸಮಾಜವಾದದ ವೈಶಿಷ್ಟ್ಯ. ರಾಷ್ಟ್ರೀಕರಣದ ಹವ್ಯಾಸಕ್ಕೆ ಅಷ್ಟಾಗಿ ಅಂಟಿಕೊಳ್ಳದೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅನುಕೂಲವಾದ ರೀತಿ ನಡೆದುಕೊಳ್ಳುವುದೇ ಕಾಂಗ್ರೆಸಿನ ಇಚ್ಛೆಯಾಗಿರುವಂತೆ ಗೊತ್ತುವಳಿಗಳಿಂದ ತಿಳಿದುಬರುತ್ತದೆ.

ಗ್ರಾಮಾಂತರ ಪ್ರದೇಶಗಳ ಕುರಿತಾಗಿ ವಿಶೇಷ ಗೊತ್ತುವಳಿಗಳನ್ನು ತಂದಿದ್ದರೂ ಅವು ಮೇಲಿನ ಉದ್ದೇಶಕ್ಕೆ ಅನುಗುಣವಾಗಿಯೇ, ಪೂರಕವಾಗಿಯೇ, ಮಂಡಿಸಲಾದುವೆನ್ನಬಹುದು. ಭೂಮಿಯು ಕೇವಲ ಕೆಲವೇ ಜನರ ಒಡೆತನದಲ್ಲಿರದಂತೆ ನೋಡಿಕೊಳ್ಳಬೇಕೆಂಬ ನಿಶ್ಚಯವನ್ನು ಗೊತ್ತುವಳಿಯೊಂದು ಪುನರುಚ್ಚರಿಸುತ್ತದೆ. ಅಲ್ಲದೆ, ಜಮೀನುದಾರಿ ಮುಂತಾದ ವರ್ಗಗಳ ನಾಶದಿಂದ ರೈತರಿಗೆ ಸಾಲದೊರಕುವುದು ಕಷ್ಟವಾಗಿರುವುದನ್ನು ಗಮನಿಸಿ ಅದಕ್ಕೆ ಯೋಗ್ಯಕ್ರಮ ಕೈಗೊಳ್ಳಬೇಕೆಂದೂ ಗೊತ್ತುವಳಿ ಸೂಚಿಸುತ್ತದೆ. ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದ ರಾಷ್ಟ್ರೀಕರಣವನ್ನೂ ರಾಜ್ಯಾಂಗ ಘಟನೆಗೆ ಸರಕಾರ ಮುಂಡಿಸ ಬಯಸುವ ತಿದ್ದುಪಡಿಯನ್ನೂ ಇದಕ್ಕಾಗಿಯೇ ಸ್ವಾಗತಿಸಲಾಯಿತು. ಕೃಷಿ ಉತ್ಪನ್ನಗಳ ಬೆಲೆಯು ತೀವ್ರವಾಗಿ ಇಳಿದು ರೈತರಿಗೆ ನಷ್ಟಸಂಭವಿಸದಂತೆಯೂ ಉತ್ಪಾದನೆ ಹೆಚ್ಚಿಸುವುದರಲ್ಲಿ ಅವರು ನಿರುತ್ಸಾಹರಾಗದಂತೆಯೂ ನೋಡಿಕೊಳ್ಳಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದೂ ಗೊತ್ತುವಳಿ ಅದೇತಿಳಿ



ಅತಿಥಿಯಾಗಿ ಬಂದ ಟಿಟೊ

ಶ್ತದೆ. ರಚನಾತ್ಮಕ ಹಾಗು ಅಭಿವೃದ್ಧಿ ಸ್ರಯತ್ನಗಳ ಗೊತ್ತುವಳಿಯು ಈ ದಿಸೆಯಲ್ಲಿ ಶ್ರಮಿಸುವಂತೆ ಸಾರ್ವಜನಿಕರನ್ನು ಹುರಿದುಂಬಿಸುತ್ತದೆ.

ಅಖಿಲ ಭಾರತದ ದೃಷ್ಟಿಯಿಂದ ಮಹತ್ವವಾದ ಗೊತ್ತುವಳಿಗಳಲ್ಲಿ ರಾಷ್ಟ್ರದ ಐಕ್ಯವನ್ನೂ ಭದ್ರತೆಯನ್ನೂ ಕಾಯ್ದುಕೊಂಡು ಹೋಗುವ ನಿರ್ಣಯವು ಉಲ್ಲೇಖನೀಯ. ಇದು ಜಾತೀಯ, ಮತೀಯ, ಪ್ರಾಂತೀಯ ಹಾಗು ಭಾಷೆಗೆ ಸಂಬಂಧಿಸಿದ ಜಗಳಗಳೆಲ್ಲ ಪ್ರತ್ಯೇಕತಾ ಭಾವನೆಯನ್ನು ಬಲಿಸುವುದರಿಂದ ಅವನ್ನು ನಿರುತ್ಸಾಹಗೊಳಿಸಬೇಕೆಂದು ಹೇಳುತ್ತದೆ. ಇನ್ನು ಹತ್ತು ವರ್ಷಗಳಲ್ಲಿ ಮೂಲ ಶಿಕ್ಷಣದ ಧ್ಯೇಯವನ್ನು ಕಾರ್ಯರೂಪದಲ್ಲಿಳಿಸಬೇಕೇದು ಸರಕಾರವನ್ನು ಕೇಳಿಕೊಳ್ಳುವ ಗೊತ್ತುವಳಿಯೂ ಮಹತ್ವ ಪಡೆಯುತ್ತದೆ. ಶರೀರ ಶ್ರಮವನ್ನು ತುಚ್ಛೀಕರಿಸುವ ಭಾವನೆಯನ್ನು ಹೋಗಲಾಡಿಸಿ, ರಾಷ್ಟ್ರದ ಅಭಿವೃದ್ಧಿಯನ್ನು ಕೈಗೂಡಿಸಲು ಪ್ರಯೋಜನಕರವಾದ ಶಿಕ್ಷಣ ಕ್ರಮವನ್ನು ಈಗಿನ ಪದ್ಧತಿಯ ಸ್ಥಾನದಲ್ಲಿ ಪ್ರತಿಷ್ಠೇಪಿಸಬೇಕೆಂದು ಗೊತ್ತುವಳಿಯ ಆಶಯ. ಅಂತಾರಾಷ್ಟ್ರೀಯ ದೃಷ್ಟಿಯಿಂದ ವ್ಯಾಮುಖ್ಯತೆ ಪಡೆದ ಗೊತ್ತುವಳಿಯು ಪಂಚಶೀಲಾ ತತ್ವಗಳೇ ಲೋಕ ಶಾಂತಿಯ ತಾರಕ ಮಂತ್ರವೆಂಬ ಅಣುಬಾಂಬುಗಳನ್ನು ಬಹಿಷ್ಕರಿಸುವುದೇ ಯೋಗ್ಯವೆಂಬ ಅಭಿಪ್ರಾಯವನ್ನು ಧ್ವನಿಸುತ್ತದೆ. ಅಂತಃಶಕ್ತಿ ಮತ್ತು ನಿಜವಾದ ತಿಳಿವಳಿಕೆಯೂ ಸೌಹಾರ್ದವೂ ಶಾಂತಿಗೆ ಪೋಷಕವೆಂದು ಗೊತ್ತುವಳಿಯ ಆಶಯ.

ಸಂಘಟನಾತ್ಮಕ ದೃಷ್ಟಿಯಿಂದ ಕಾಂಗ್ರೆಸಿನಲ್ಲಿ ವಿದ್ಯಮಾನವಾದುದು ಭ್ರಷ್ಟಾಚಾರವನ್ನು ಕಟುವಾಗಿ ಟೀಕಿಸುವ ಗೊತ್ತುವಳಿಯು ಒಂದು ಮೈಲುಗಲ್ಲು. ಕಾಂಗ್ರೆಸು ಚುನಾವಣೆಯ ರಂಗಕ್ಕೆ ಇಳಿದುದಿನಿಂದ ಕೊಳಚೆಯ ಬೀದಿಗಾದೆಯೆಂಬುದನ್ನು ಅಲ್ಲಿಗಳೆದು ಪ್ರಯೋಜನವಿಲ್ಲ; ಚುನಾವಣೆಗಳನ್ನು ನಡೆಸುವಾಗ ಅನುಸರಿಸಿದ ರೀತಿ ನೀತಿಗಳು ಪ್ರಾಮಾಣಿಕವಾಗಿರಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಬೇರೆಯವರ (ಅಂದರೆ ಇತರ ಪಕ್ಷಗಳ) ದೃಷ್ಟಿಯಲ್ಲಿ ನಾವು ಕೀಳರಾಗಿ ಕಾಣುತ್ತೇವೆಂದು ವಾಸ್ತವತೆಯನ್ನು ಉಪೇಕ್ಷಿಸುವುದು ಉಚಿತವಲ್ಲ. ಭ್ರಷ್ಟಾಚಾರಿಗಳನ್ನು ಚುನಾವಣೆಯ ಜಗಳಗಳನ್ನೂ ವಿಚಾರಿಸಿಕೊಳ್ಳಲು ಒಂದು ಸ್ಥಾಯೀ ಸಮಿತಿಯನ್ನು ನೇಮಿಸಲಾಗುವುದು ಎಂದು ಮುಂತಾಗಿ ಗೊತ್ತುವಳಿಯ ಸಮರ್ಥಕರು ತಿಳಿಸಿದರು. ಸ್ವಾರ್ಥ ಪರಾಯಣತೆಯನ್ನು ಬಿಟ್ಟು, ಸೇವಾ ಸ್ಫೂರ್ತಿಯನ್ನು ಕಟ್ಟಿಕೊಳ್ಳದಿದ್ದರೆ, ಗತಕಾಲದ ಕೀರ್ತಿ ಭಂಡಾರವನ್ನೇ ವಿನಿಯೋಗಿಸುತ್ತಿದ್ದರೆ – ಆ ಭಂಡಾರ ಬೇಗನೇ ಬರಿದಾಗಿ ಸಂಸ್ಥೆಯು ನಾಶವಾದೀತೆಂಬ ಸ್ಪಷ್ಟ ಎಚ್ಚರಿಕೆಯನ್ನು ನೆಹರುಗಳು ಕೊಟ್ಟರು. ಪ್ರಮುಖ ಕಾಂಗ್ರೆಸಿಗರೇ ಜಾತ್ಯಂಧರಾಗಿ ಮತ್ತು ನೀತಿಗೆಟ್ಟವರಾಗಿ ನಡೆಯುತ್ತಿದ್ದು ಅವರ ವಿರುದ್ಧ ವರಿಷ್ಠರೇನೂ ಕ್ರಮ ತೆಗೆದುಕೊಳ್ಳಲಾರದೆ ಹೋದರೆಂದೊಬ್ಬರು ಹೇಳಿದಾಗ, ಸಭೆಯಲ್ಲಿ ಕರತಾಡನವಾಯಿತು!

ಮುಕ್ತಾಯ ಭಾಷಣವನ್ನು ಮಾಡಿದ ಧೇಬರರು ಇಲ್ಲಿ ಸ್ವೀಕರಿಸಲಾದ ಹದಿನಾಲ್ಕು ಗೊತ್ತುವಳಿಗಳು ಒಂದು ನಿರ್ದಿಷ್ಟ ಉದ್ದೇಶಾಭಿಮುಖವಾದ ಅಖಂಡ ಅಧ್ಯಾಯವೆಂದೂ ಆ ಉದ್ದೇಶವೆಂದರೆ ನೈತಿಕ ನೆಲೆಗಟ್ಟಿನ ಮೇಲೆ ನಿಂತ ಸಮಾಜದ ರಚನೆಯೆಂದೂ ಹೇಳಿದರು. "ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಭದ್ರತೆಯ ಸ್ಥಾಪನೆಯ ಬಳಿಕ ಬರುವ ಸಾಮಾಜಿಕ ಹಾಗು ಆರ್ಥಿಕ ರಂಗದ ಪ್ರಗತಿ ಎಂಬ ಮೂರನೆಯ ಮಹತ್ವದ ಪ್ರಶ್ನೆಯ ಬಗ್ಗೆ ಉಚಿತ ಮಾರ್ಗದರ್ಶನವನ್ನು ಪಡೆದು ನೀವಿಲ್ಲಿಂದ ಹೋಗುತ್ತಿದ್ದೀರಿ. ಕಾಂಗ್ರೆಸಿನ ಈ ಸಂದೇಶವನ್ನು ಜನರಲ್ಲಿ ಪ್ರಚಾರ ಮಾಡುವುದೂ ನಿಮ್ಮ ಮುಂದಿನ ಕೆಲಸ" ಎಂದವರು ಉಪದೇಶಿಸಿದರು. ಆ ಬಳಿಕ ನೆಹರುಗಳು ಮಾತನಾಡುತ್ತ "ನಾವಿಲ್ಲಿ ಸ್ವೀಕರಿಸಿದ ಗೊತ್ತುವಳಿಗಳೇ ನಮ್ಮ ಪ್ರತಿಜ್ಞೆ. ರಾಷ್ಟ್ರದ ಪ್ರಗತಿಯೇ ವ್ಯಕ್ತಿಯ ಜೀವನ ಮಟ್ಟವನ್ನು ಎತ್ತರಿಸುತ್ತದೆ. ಅದರಿಂದಲೇ ಜೀವನಾನಂದ – ಆದುದರಿಂದ ನಾವು ಸ್ವೀಕರಿಸಿದ ಪ್ರತಿಜ್ಞೆಗೆ ನಿಷ್ಠರಾಗಿರೋಣ!" ಎಂದು ಎಲ್ಲರಿಗೂ ಶುಭ ಕೋರಿದರು. "ಜನಗಣಮನ" ರಾಷ್ಟ್ರಗೀತೆಯನ್ನು ಒಂದೊವರೆ ಲಕ್ಷ ಜನರು ಎದ್ದು ನಿಂತು ಹಾಡಿದ ಬಳಿಕ ಜಯಘೋಷದೊಡನೆ, ಅತ್ಯಂತ ಉತ್ಸಾಹದ ಮತ್ತು ತೃಪ್ತಿಕರವಾದ ವಾತಾವರಣದಲ್ಲಿ ಅವಡಿಯ ಈ ಅಧಿವೇಶನ ಕೊನೆಗೊಂಡಿತು.

ಕಾಂಗ್ರೆಸಿನ ರನ್ನ ಮಹೋತ್ಸವವನ್ನು ಹತ್ತು ವರ್ಷಗಳ ಹಿಂದೆ ಆಚರಿಸಿದ್ದರೂ ಅಧಿವೇಶನಗಳ ಮಟ್ಟಿಗೆ ಇದೇ ರನ್ನ ಮಹೋತ್ಸವವಾಗಿದ್ದಿತು. ಇಲ್ಲಿ ಪ್ರಧಾನ ಪಾತ್ರ ವಹಿಸಿದವರೆಂದರೆ ಜನನಾಯಕ ನೆಹರು—ಅವರ ಗಂಭೀರವಾಣಿಯು ಎಷ್ಟೋ ಜಟಿಲ ವಿಷಯಗಳಲ್ಲಿ ತಪ್ಪು ಕಲ್ಪನೆಯನ್ನು ನಿವಾರಿಸಿ, ಸಮಂಜಸವಾದ ಭಾವನೆಯನ್ನುಂಟು ಮಾಡಿತು ನೆಹರುಗಳಿಲ್ಲದಿದ್ದರೆ ಸಭೆಯೇ ಸಪ್ಪೆಯೊಂದು ಜನರು ಭಾವಿಸುತ್ತಿದ್ದರು "ನಿಮಗೇನುಬೇಕು?"ಎಂದು ಜನರನ್ನೊಮ್ಮೆ ಕೇಳಿದಾಗದ "ನೆಹರುಗಳು ಮುಂದೆ ಬರಲಿ" ಎಂಬ ಉತ್ತರ ಬಂತು. ಧೇಬರರು ಒಳ್ಳೆಯ ಶಿಸ್ತಿನಿಂದಲೂ ದಕ್ಷತೆಯಿಂದಲೂ ಅಧ್ಯಕ್ಷಪೀಠಗಾರಿಕೆಗಳನ್ನು ನಿರ್ವಹಿಸಿದರು – ಅವರು ಸಾಮಾನ್ಯ ಜನರಿಗೆ ಅವರ ಆಕರ್ಷಣೆಯೇ ಇದ್ದಂತೆ ಕಾಣಲಿಲ್ಲ. ತಲೆದಿಂಬನ್ನು ಎತ್ತಿ ಬೇರೆಯವರ ಮೇಲೆ ಬಗೆಯುತ್ತಿದ್ದ ಶುಂಟನಾಗಿ, ತನ್ನ ಪೆನ್ನನ್ನು ಬಡಿದು ಧ್ವನಿವರ್ಧಕವನ್ನು ಸರಿಗೊಳಿಸಿದ ಮಾಂತ್ರಿಕನಾಗಿ ನೆಹರು ಗಂಜಿಸಿದರು ಆದರೆ ಅವಡಿಯಲ್ಲಿಯೂ ಅವರಿಗೆ ತಮ್ಮ ನಿತ್ಯದ ಸರಕಾರಿ ಕೆಲಸದ ಹೊರೆ ಹೊರಬೇಕಾಯಿತು—ಕೃಷ್ಣ ಮೆನೊನ್ನರೊಡನೆ ಅವರು ಯಾವುದೋ ಗಂಭೀರ ವಿಷಯದ ವೇಳೆ ವೇದಿಕೆಯ ಹಿಂದೆ ಬೈಲುಗಳನ್ನು ತಿರುಗಿಸುತ್ತ ಮಾತಾಡುತ್ತಿದ್ದುದು ಇದಕ್ಕೆ ನಿದರ್ಶನ.

ಶ್ರೀ ಕೃಷ್ಣ ಮೆನೊನ್ನರು ಅಧ್ಯಕ್ಷರ ವಿಶೇಷ ಆಮಂತ್ರಣವನ್ನು ಮನ್ನಿಸಿ ವಿದೇಶ ಧೋರಣೆಯ ಕುರಿತು ಬಹಳ ಅಮೂಲ್ಯವಾದ ಮಾತುಗಳನ್ನಾಡಿದರು. ಅವರ ಮಾತುಗಳು ನೆಹರುಗಳ ವಾಕ್ಯಗಳಷ್ಟೇ ಖಚಿತವಾಗಿದ್ದು, ವಿದೇಶೀಯರ ಕಣ್ಣಿಗೆ ಅಂಜನ ಸ್ವರೂಪವಾಗಿತ್ತೆಂದರೆ ತಪ್ಪಲ್ಲ. ಆದರೆ ತಮ್ಮ ವಿನೋದ ಕತೆಗಳ ಮರೆಯಲ್ಲಿ ಕಟು ಸತ್ಯವನ್ನು ಆಡಿ ಜನರಲ್ಲಿ ಉತ್ಸಾಹದ ಧ್ವನಿಯನ್ನೆಬ್ಬಿಸಿದವರು ರಾಜಾಜಿ—ಅವರು ಅಣುಶಸ್ತ್ರಗಳಿಂದ ಶಾಂತಿ ರಕ್ಷಣೆ ಮಾಡುತ್ತೇವೆಂದು ಹೇಳುವವರ ವಾದವನ್ನು ತಮ್ಮ ಸಾಮತಿಗಳಿಂದ ಬಲವಾಗಿ ಖಂಡಿಸಿದರು. ಮನೆಯ ಕಾವಲಿಗೆ ನಾಯಿಯನ್ನು ಇಟ್ಟುಕೊಳ್ಳಬಹುದು; ಹುಲಿಯನ್ನಲ್ಲ ಎಂದರು. ಎರಡು ಮಂಗಗಳು ಕೈಯಲ್ಲಿ ಕೊಳ್ಳಿಯನ್ನು ಹಿಡಿದುಕೊಂಡು ಜಗತ್ತಿಗೆ ಹೊದಿಸಲಾದ ಮುಳಿ ಹುಲ್ಲಿನ ಮಾಡಿನ ಮೇಲೆ ಉರುಳಾಡುತ್ತಿವೆಯೆಂದು ಹೇಳಿದರು. ಹಾವಾಡಿಗರಿಬ್ಬರು ಇನ್ನೊಬ್ಬನನ್ನು ತನ್ನ ಹಾವಿನಿಂದ ಕಚ್ಚಿಸುವೆನೆಂದು ಭಾವಿಸಿದಂತೆ ತೋರುತ್ತದೆ— ಇನ್ನೊಬ್ಬನೊಡನೆಯೂ ತನ್ನಲ್ಲಿದ್ದ ಅಪ್ಪಣೆ ಇದೆಯೆಂಬುದನ್ನು ಮರೆತಂತೆ ಕಾಣುತ್ತದೆ ಎಂದು ಎಚ್ಚರಿಸಿದರು. ನಮ್ಮದು ತಟಸ್ಥ ನೀತಿಯಲ್ಲ; ಕ್ರಿಯಾತ್ಮಕವೂ ರಚನಾತ್ಮಕವೂ ಗತ್ಯಾತ್ಮಕವೂ ಆದುದೆಂದು ಹೇಳುತ್ತಾ ನೆಹರುಗಳು ಬೇರೆಯವರ ಜಗಳದಲ್ಲಿ ಹೆಚ್ಚು ಹಚ್ಚಿಗೆ ಕೈಹಾಕುವರೆಂದು ದೂರಲಾಗುತ್ತಿರುವುದೇ ಇದಕ್ಕೆ ನಿದರ್ಶನ ಎಂದರು. ಜೊತೆಗೆ ಈ ಮಧ್ಯಸ್ಥಿಕೆಯನ್ನು ಸ್ವಾಗತಿಸಲಾಗುವುದೇ ಅದರ ವೈಶಿಷ್ಟ್ಯ ಎನ್ನಲೂ ಮರೆಯಲಿಲ್ಲ.

ಅತಿಥಿಗಳಲ್ಲಿ ಯುಗೋಸ್ಲಾವಿಯದ ಅಧ್ಯಕ್ಷ ಟಿಟೋರನ್ನು ಹೆಸರಿಸಬಹುದು. ಇವರು ಸಭಾಂಗಣದಲ್ಲಿ ಪ್ರವೇಶಿಸಿ ಭವ್ಯಸ್ವಾಗತವನ್ನು ಪಡೆದರು. ನಿರ್ದಿಷ್ಟ ಸಮಯಕ್ಕಿಂತ ಹತ್ತುನಿಮಿಷ ಮೊದಲೇ ಬಂದಿದ್ದನ್ನು ಕಂಡು, ಸಭೆಯ ಕಾರ್ಯಕ್ರಮಕ್ಕೆ ತೊಂದರೆಯಾಗಬಾರದೆಂದು ಅವರು ಹೊರಗೆಯೇ ಅಡ್ಡಾಡುತ್ತಿರುವಷ್ಟು ಶಿಸ್ತನ್ನು ತೋರಿಸಿದರು. ಆದರೆ ಒಮ್ಮೆ ಒಳಗೆಬಂದ ಬಳಿಕ, ಮೂರುಲಕ್ಷ ಜನರೂ "ಸಮೀಪದಿಂದ" ನೋಡುವ ಹುಚ್ಚಿಗೆ ಸಿಕ್ಕಿ ಎದ್ದು ನಿಂತು ಎಲ್ಲ ವ್ಯವಸ್ಥೆಗಳನ್ನು ಮುರಿದು ವೇದಿಕೆಯತ್ತ ನುಗ್ಗಿ ಪತ್ರಿಕಾ ಪ್ರತಿನಿಧಿಗಳು ಕೆಲಸವನ್ನೆ ಮಾಡದಂತೆ ಗೊಂದಲ ಎಬ್ಬಿಸಿದಾಗ—ಟಿಟೋ ಭಾರತೀಯರ ಶಿಸ್ತಿನ ನಿಜವಾದ ಚಿತ್ರವನ್ನು ಕಂಡರು! ಅದಾಗ್ಯೂ ಅವರು ಜನರೊಡನೆ ಬೇಸರ ತೋರಲಿಲ್ಲ — ಅವರಿಗೆ ತಮ್ಮ ರಾಷ್ಟ್ರದ ಅಭಿನಂದನೆಯನ್ನು ಸಲ್ಲಿಸಿದರು; ಮತ್ತು "ಭಾರತದ ಮುಂದಾಳುಗಳು ನಿಮ್ಮನ್ನೆಲ್ಲ ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ; ನೀವವರಲ್ಲಿ ವಿಶ್ವಾಸವಿಡಬಹುದು" ಎಂದರು. ಸಮ್ಮೇಳನಕ್ಕೆ ಸಿಂಹಳ, ಬರ್ಮ, ಜಪಾನು, ಅಲ್ಜೀರಿಯಾ, ನೇಪಾಳ, ಉತ್ತರ ರೊಡೇಶಿಯಾ, ಸಿಕ್ಕಿಂ ಮೊದಲಾದ ರಾಷ್ಟ್ರಗಳ ಪ್ರತಿನಿಧಿಗಳೂ ಬಂದಿದ್ದರು. ಪರ್ಲ್ ಹಾರ್ಬರ್ ದುರಂತದ ಬಳಿಕ ಇದೀಗ ಮೊದಲನೆಸಲ ಬೌದ್ಧಭಿಕ್ಷುಗಳು ಶಾಂತಿಸಂದೇಶವನ್ನು ಕೆತ್ತಿದ ತಮ್ಮ ನಗಾರಿಯೊಡನೆ ಅಧಿವೇಶನದಲ್ಲಿ ಕಂಡು ಬಂದರು. ನಮ್ಮವರೇ ಆದರೂ ಜಗತ್ತು ಪಂಕೀಯ ರೆಂದು ಹೇಳುವ ಕಾಶ್ಮೀರದ ಮುಖ್ಯಮಂತ್ರಿ ಬಕ್ಷಿಯವರೂ ಅಧಿವೇಶನದಲ್ಲಿದ್ದು, ಭಾರತದಲ್ಲಿ ಕಾಶ್ಮೀರದ ಸೇರ್ಪಡೆಯು ಅವಿಭಾಜ್ಯವಾಗಿದೆಯೆಂದು ಮತ್ತೊಮ್ಮೆ ಸಾರಿದರು.

ಕಾಂಗ್ರೆಸಿನ ಇತಿಹಾಸದಲ್ಲಿಯೇ ಅವಡಿಯ ಅಧಿವೇಶನದ ಜನ ಸಮ್ಮರ್ದ ಹೊಸ ದಾಖಲೆಯನ್ನು ಮಾಡಿತು. ವ್ಯವಸ್ಥೆಗಳು ಬಹಳ ಚೊಕ್ಕಟವಾಗಿದ್ದವು—ಆದರೂ ಕೆಲವೊಮ್ಮೆ ಆತಂಕಗಳನ್ನು ಇದಿರಿಸಬೇಕಾಯಿತು. ಉದಾಹರಣೆಗೆ ಐದಾರು ತಾಸುಗಳ ವರೆಗೆ ಸುಡುಬಿಸಿಲಿನಲ್ಲಿ ನಿಲ್ಲಬೇಕಾಗಿದ್ದ ಪ್ರೇಕ್ಷಕರು ಕುಡಿಯಲು ನೀರು ನೀರೆಂದು ಬೊಬ್ಬಿಡುತ್ತಿದ್ದಾಗ, ಅವರನ್ನು ಕೃಪಿಗೊಳಿಸುವುದು ಅಸಾಧ್ಯವಾಯಿತು. ಎಲ್ಲ ಉತ್ಸವಗಳಲ್ಲಿ ಆಗುವಂತೆ ಇಲ್ಲೂ ಗಂಡನು ಹೆಂಡತಿಯನ್ನೂ ತಾಯಿ ಮಗುವನ್ನೂ ಕಳೆದುಕೊಂಡರೂ ಧ್ವನಿವರ್ಧಕದ ಸಹಾಯದಿಂದ ಅವರ ಪುನರ್ಮಿಲನಕ್ಕೆ ವ್ಯವಸ್ಥೆ ಮಾಡಲಾಯಿತು ಇವಲ್ಲದೆ, ಭೋಜನ ಕೆಲವು ಘಟನೆಗಳೂ ಜರಗಿ, ಸಭಿಕರನ್ನು ಆನಂದದಲ್ಲಿ ತೇಲಾಡಿಸಿತು. ನೆಹರುಗಳ ತಲೆಗೆ ಅವರು ದೇವರ ಅವತಾರ ಎಂದು ಹೇಳುತ್ತಾ ಆಂಧ್ರದ ರೈತ ಮಹಿಳೆಯೊಬ್ಬಳು ಎರಡು ಸಾವಿರ ರೂಪಾಯಿ ಬೆಲೆ ಬಾಳುವ ಚಿನ್ನದ ಕಿರೀಟವನ್ನಿಟ್ಟಳು! ಆಂಧ್ರ ಕೇಸರಿ ಪ್ರಕಾಶಮರು ತಮ್ಮ ರಾಜಕೀಯ ಜೀವನದಲ್ಲಿಯೆ ಮೊದಲ ಸಲವೆಂಬಂತೆ ಹಳೆಯ ಬೂದು ಬಣ್ಣದ ಸೂಟನ್ನೂ ಪ್ಯಾಂಟನ್ನೂ ತೊಟ್ಟು ಬಂದು ಯಾರಿಂದಲೂ ಕಿಕ್ಕನೆ ಗುರುತಿಸಲಾರದೆ ಹೋದರು! ನಮ್ಮ ದಕ್ಷಿಣ ಕನ್ನಡ ಬೆಲ್ಲಿಯಿಂದ ಹೋದ ಪ್ರತಿನಿಧಿಗಳಲ್ಲಿ ಶ್ರೀ. ಟಿ. ಎ. ಪೈಗಳು ಮಹಿಳೆಯರ ಮತ್ತು ಮಕ್ಕಳ ಕುರಿತಾಗಿಯೂ ಶ್ರೀ ಸುಬ್ಬಣ್ಣ ಶೆಟ್ಟರು ಕಾಂಗ್ರೆಸು ಕೃಷಿಕರಿಗೆ ಕೊಟ್ಟ ಮಾತಿಗೆ ತಪ್ಪದ ಬಗ್ಗೆಯೂ ಮಾತನಾಡಿದರು. ಆದರೆ, ಯಾವ ಪ್ರತಿನಿಧಿಯಿಂದಲೂ ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ಮಾತೇ ಕೇಳಲಿಲ್ಲ—ಇದು ಎಲ್ಲಕ್ಕಿಂತ ಸೋಜಿಗ!

ಕಾಂಗ್ರೆಸಿನ ಶುದ್ಧೀಕರಣದ ಪ್ರಯತ್ನ

ಅಪ್ರಾಮಾಣಿಕರಿಗೆ ನೆಹರುಗಳ ಎಚ್ಚರಿಕೆ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು ಸಂತಾನವನ್ನು ಕಲಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ ೪-೦-೦

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಮಿಂಡ ಪುಷ್ಟಿಯನ್ನು ಹೆಚ್ಚಿಸುವುದು ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ ೩—೦—೦

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಸಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೆ ಕಾಲು ಸಬ ದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪಜ್ರಾಯುಧವಾಗಿದೆ ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಸುತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ವೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿ ಯಾಗಿರುತ್ತದೆ ಸುಮಾರು ೦ ತಿಂಗಳಿಗೆ ಸರಿ ಹೋಗುವ ೫೦ ಗ್ರಾಮ್ ಸೀಸೆ ೧ ಕ್ಕೆ ರೂ 1—0—0

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ

ಬಾಲಚಂದ್ರ

ಶೈಕ್ಷಣಿಕ ಮಾಸಪತ್ರಿಕೆ,
ಉಡುಪಿ.

ಉಪಾಧ್ಯಾಯ ಉಪಾಧ್ಯಾಯಿನಿರಿಗೆ ಅತ್ಯುಪಯುಕ್ತವಾದುದು

THE MYSORE TYPE FOUNDRY,
LETTER FOUNDERS,
GANDHI NAGAR, BANGALORE-2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ' ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ,
ಇಂದೇ ವಿವರಗಳಿಗೆ ಬರೆಯಿರಿ

ಮೆನೇಜರ್,

ಮೈಸೂರು ಟೈಪ್ ಫೌಂಡ್ರಿ,

ಬೆಂಗಳೂರು—2.

ಅತ್ಯುತ್ತಮ ರುಚಿಯುಳ್ಳ—
ಶ್ರೇಷ್ಠ ತರಗತಿಯ ಸುವಾಸನೆಗೆ—
ನಾಡಿನಾದ್ಯಂತ ಜನಪ್ರಿಯತೆ ಪಡೆದ—

"ಕೇಲ್‌ಗೂರ್ ಟೀ"

ಯನ್ನೇ ಉಪಯೋಗಿಸಿರಿ.

ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ಅಧಿಕೃತ ವಿತರಣೆಗಾರರು

ಜೈ ಭಾರತ್ ಮಿಲ್ಸ್ ಲಿಮಿಟೆಡ್,

"ಚಿತ್ತರಂಜನ್ ಬಿಲ್ಡಿಂಗ್ಸ್", ಉಡುಪಿ, ದ ಭಾರತ.

ನ್ಯೂ ರೋಯಲ್ ಕೆಫೆ,

ಬೋರ್ಡಿಂಗ್ & ಲಾಜಿಂಗ್,
ಸಂತೆಕಟ್ಟೆ, ಉಡುಪಿ.

ಉಡುಪಿಯಲ್ಲಿ ಹಲವಾರು ವರ್ಷಗಳಿಂದ ಪ್ರತಿಯೊಂದು ವಿಷಯದಲ್ಲಿಯೂ ಹೆಸರು ಪಡೆದ ಹೋಟೆಲ್.

ನಗರದ ಕೇಂದ್ರ ಸ್ಥಾನದಲ್ಲಿದ್ದು, ಬಸ್ಸ್ ಸ್ಟಾಂಡಿಗೂ, ಶ್ರೀಕೃಷ್ಣ ಮಠಕ್ಕೂ, ಸಿನೇಮಾ ಮಂದಿರಕ್ಕೂ ಅತೀ ಸಮೀಪದಲ್ಲಿದ್ದು ಹೋಗಿ ಬರಲು ಅನುಕೂಲವಿದೆ

ಶುಚಿ—ರುಚಿಯ ತಿಂಡಿ ಪಾನೀಯಗಳಿಗೆ ಸುವಿಖ್ಯಾತವಾಗಿದೆ.

ತಾ. 1-2-1955ರಿಂದ ಊಟದ ದರವನ್ನು ಇಳಿಸಲಾಗುವುದು, ಹಾಗೂ ಲಾಜಿಂಗ್ ಬಾಡಿಗೆಯನ್ನೂ ಇಳಿಸಲಾಗುವುದು.

ಸಂದರ್ಶಿಸಿ ಸಂತೃಪ್ತರಾಗಿರಿ!

ವಿ ಸೂ. ಶಾಲಾ ಮಕ್ಕಳಿಗೂ ಕಾಯಂ ಊಟದವರಿಗೂ ರಿಯಾಯತಿ ದರವನ್ನು ತೋರಿಸಲಾಗುವುದು

ಎಂ. ಎನ್. ಭಟ್,
ಪ್ರೊಪ್ರೈಟರ್.

ಟ್ರೇಡ್ ಮಾರ್ಕ್



ಸಂ! AR ಅಯ್ಯರ್ ರವರು, ಸ್ಥಾಪಕರು.

ಮೈಸೂರು ಶ್ರೀಮನ್ ಮಹಾರಾಜ ನುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಆಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 96 ವರ್ಷ ಖ್ಯಾತಿಗಳಿಸಿದ ಎ ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ (ಸ್ತ್ರೀಯರಿಗೆ ಭಸ್ಮ) | **ಮದನ ವಿಲಾಸ** (ಪುರುಷರಿಗೆ ಗುಳಿಗೆ)

*ಭಸ್ಮತ್ರಿ ಬಹಿಷ್ಟೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾನಸಿಕದ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ. *ಈ ಗುಳಿಗೆಗಳು ಪುರುಷನ ಅತ್ಯುಷ್ಣತನ್ನು ಕಮ್ಮಿಮಾಡಿ, ಸ್ವಪ್ನ ಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ. ಮೇಲ್ಕಂಡ ಕಾಯಿಲೆಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಇಂದೇ ೧ ಸೆಟ್ (8 ಪೊಟ್ಲ + 4 ಗುಳಿಗೆ) ಅನುಷ್ಠಾನಪತ್ರಿಕೆಯ ಮೇರೆಗೆ ಸೇವಿಸಿರಿ.

ಕೋಭನವಾಗಿ 16—18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ ಕ್ರಯ. 2 ಔಷಧಿಗಳ 1 ಸೆಟ್ 7 ರೂ M O ಮಾಡಿರಿ ತಲಪಿದ ಒಡನೆ ರಿಜಿಸ್ಟರ್ ಪಾರ್ಸೆಲ್ ರವಾನೆ ವಿ ಪಿ. ಇಲ್ಲ ಕ್ಯಾಟಲಾಗ್ ಉಚಿತ ಮಾಹಿತಿಗೆ 2ಆಣೆ ಸ್ಟಾಂಪು ಕಳಿಸಿರಿ ವಿಳಾಸ —

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 ,,ಸಂತಾನ ಸಿಂಧೂರ ಸದನ ಚಾಮರಾಜ ರೋಡ್, ಸೌತ್ ಕ್ರಾಸ್, ಮೈಸೂರು (Mysore South India)

ಬೇಸಾಯಗಾರರ ನೆರವಿಗೆ ಭೂ ಸುಧಾರಣೆ

ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಭೂಮಿಯ ಒಡೆತನ ಮತ್ತು ಕೃಷಿಯ ಭವಿಷ್ಯವು ಭಾರತದ ಮಟ್ಟಿಗೆ ಮೂಲಭೂತ ಅಂಶವಾಗಿದೆ. ನಮ್ಮ ಆದಾಯದ ಶೇಕಡ ಐವತ್ತರಷ್ಟು ಭೂಮಿಯ ಸಾಗುವಳಿಯಿಂದಲೇ ದೊರಕುತ್ತದೆ. ಕೈಗಾರಿಕೆಗಳು ನೂರಕ್ಕೆ ಆರರಷ್ಟು. ಮತ್ತು ಗೃಹೋದ್ಯಮಗಳು ಹನ್ನೆರಡರಷ್ಟು ಮಾತ್ರ ಆದಾಯದಲ್ಲಿ ಪಾಲು ಪಡೆಯುತ್ತವೆ. ಆದುದರಿಂದ ಭೂಸುಧಾರಣೆಯ ಕ್ಷೇತ್ರದಲ್ಲಿ ನಾವೆಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ ಎಂಬ ವಿಷಯವನ್ನು ಪರ್ಯಾಲೋಚಿಸುವುದು ಸೂಕ್ತ. ಇದಕ್ಕೋಸ್ಕರ ನಾವು ಅದರ ವಿವರವಾದ ಪರಿಶೀಲನೆಯನ್ನು ತೊಡಗಬೇಕಾಗಿದ್ದ ಆರ್ಥಿಕ ಪ್ರಗತಿಗೆ ಭೂ ಸುಧಾರಣೆಯು ಕೊಡುವ ಉತ್ತೇಜನೆ, ಬೇಸಾಯಗಾರನಿಗೆ ಅದು ನೀಡುವ ಭದ್ರತೆ ಮತ್ತು ಅವನ ಶ್ರಮಕ್ಕೆ ತಕ್ಕ ಪ್ರತಿಫಲವನ್ನೊದಗಿಸಿ ಸಾಮಾಜಿಕ ನ್ಯಾಯವನ್ನು ಎತ್ತಿಹಿಡಿಯುವ ಕ್ರಮ ಮುಂತಾದುವು ಇಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ರಾಜ್ಯಾಂಗ ಘಟನೆಗೆ ಮಂಡಿಸಬೇಕೆಂದಿರುವ ತಿದ್ದುಪಡಿಯ ನೆನಪು ಮಾಡಿಕೊಂಡರಂತೂ ಈ ಸಲದ ಪ್ರಜಾರಾಜ್ಯೋತ್ಸವವು ರೈತರಿಗೆ ಹೆಚ್ಚಿನ ಭರವಸೆಗಳನ್ನು ಕೊಡುವ ಸಕಲ ಲಕ್ಷಣಗಳನ್ನೂ ಹೊರಹೊಮ್ಮುತ್ತಿದೆಯೆಂಬ ಭಾಸವಾಗುತ್ತದೆ.

ಭೂ ಸುಧಾರಣೆಯ ಹೆಜ್ಜೆಗಳನ್ನು ತೀವ್ರ ಗೊಳಿಸುವುದಕ್ಕೆ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ನಿರ್ದಿಷ್ಟ ಸೂಚನೆಗಳನ್ನು ಮಾಡಲಾಗಿದ್ದು ಇದು ಮುಂದಿನ ಕಾರ್ಯವನ್ನು ಸುಗಮ ಗೊಳಿಸುವುದು ನಿಶ್ಚಯ. ಯೋಜನಾ ಆಯೋಗದವರು ತಮ್ಮ ಸೂಚನೆಗಳನ್ನು ಮಾಡುವುದಕ್ಕೆ ಮುಂಚೆಯೇ, ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಿಗೆಯೇ, ಕೆಲವು ರಾಜ್ಯ ಸರಕಾರಗಳು ಭೂ ಸುಧಾರಣೆಯ ಶಾಸನಗಳನ್ನು ಮಾಡಿ, ಬೇಸಾಯಗಾರರ ಹಿತರಕ್ಷಣೆಗೆ ಸ್ತುತ್ಯಾರ್ಹವಾದ ಕ್ರಮಗಳನ್ನು ಕೈಗೊಂಡಿದ್ದುಂಟು. ಆದರೆ ಯೋಜನಾ ಆಯೋಗ ಸಮಸ್ತ ಭಾರತದ ದೃಷ್ಟಿಯಿಂದ ರಾಷ್ಟ್ರೀಯ ಮಹತ್ವದ ಕೆಲವು ಸಲಹೆಗಳನ್ನು ಕೊಟ್ಟಂದಿನಿಂದ ಅದಕ್ಕೆ ಹೊಂದಿಕೊಂಡೇ ಕಾರ್ಯಕ್ರಮಗಳು ಮುಂದೊತ್ತಲಾಗುತ್ತವೆ. ಇದು ಮುಖ್ಯವಾಗಿ ಮಧ್ಯಸ್ಥಿಗಾರರ ಅಸ್ತಿತ್ವವನ್ನು ರದ್ದುಗೊಳಿಸುವುದು, ಗೇಣಿಯನ್ನು ಒಟ್ಟು ಉತ್ಪಾದನೆಯ ಐದು ಅಥವಾ ನಾಲ್ಕರಲ್ಲಿ ಒಂದಂಶಕ್ಕೆ ತಗ್ಗಿಸುವುದು, ಭೂಮಾಲಿಕರಿಗೆ ಸ್ವಂತ ಸಾಗುವಳಿಗಾಗಿ ಕನಿಷ್ಠ ಪ್ರಮಾಣದಲ್ಲಿ ತಮ್ಮ ಆಸ್ತಿಯನ್ನು ಪಡೆಯುವ ಹಕ್ಕಿಗೊಳಪಟ್ಟು ಗೇಣಿದಾರರಿಗೆ ತಮ್ಮ ಬೇಸಾಯದ ಭೂಮಿಯ ಮೇಲೆ ಅಧಿಕಾರ, ಭೂಮಿಯ ಒಡೆತನದ ಪರಮಾವಧಿ ಮಿತಿಯನ್ನು ನಿರ್ಣಯಿಸಿ ಹೆಚ್ಚಿಗಿದ್ದುದನ್ನು ಪಡೆದು ಬೇಸಾಯಗಾರರಿಗೆ ಹಂಚುವುದು, ಸಣ್ಣ ಸಣ್ಣ ಹಿಡುವಳಿಗಳನ್ನು ಸಂಘಟಿಸುವುದು, ಸಹಕಾರ ಪದ್ಧತಿಯಂತೆ ಬೇಸಾಯ ಮಾಡುವುದು ಇತ್ಯಾದಿ ವ್ಯವಸ್ಥೆಗಳನ್ನೊಳಗೊಳ್ಳುತ್ತದೆ.

ನಮ್ಮ ದೇಶದಲ್ಲಿ ಗಮನಾರ್ಹವಾದ ಪ್ರಮಾಣದಲ್ಲಿ ಭೂಮಿಯು ರೈತರಿಗೂ ಸರಕಾರಕ್ಕೂ ಮಧ್ಯವರ್ತಿಗಳಾದ ಜನರ ಒಡೆತನಕ್ಕೆ ಸೇರಿರುತ್ತದೆ. ಇದನ್ನು ತಪ್ಪಿಸಲು ಶಾಸನ ಬದ್ಧವಾದ ಕ್ರಮಗಳನ್ನು ರಾಜ್ಯ ಸರಕಾರಗಳು ಕೈಗೊಳ್ಳಬೇಕೆಂದು ಯೋಜನಾ ಆಯೋಗ ಸೂಚಿಸಿತು. ಈ ದಿಸೆಯಲ್ಲಿ ಸಾಕಷ್ಟು ಪ್ರಗತಿಯೂಆಗಿದೆ. ಬಿಹಾರು, ಮಧ್ಯ ಪ್ರದೇಶ, ಆಂಧ್ರ ಸಹಿತವಾದ ಮದ್ರಾಸು, ಮುಂಬಯಿ ಉತ್ತರ ಪ್ರದೇಶಗಳಲ್ಲಿಯ ರೈತ್ವಾರಿ ಪದ್ಧತಿಗೆ ಹೊರಗಾದ ಗೇಣಿಯ ಹೊಲಗಳು ಮತ್ತು ಹೈದರಬಾದು ಹಾಗು ಪೆಪ್ಸುಗಳಲ್ಲಿಯ ಕೃಷಿ ಪ್ರದೇಶಗಳು ಮಧ್ಯಸ್ಥಿಕೆಯ ವ್ಯವಸ್ಥೆಯಿಂದ ೧೯೫೧ಕ್ಕೆ ಮೊದಲೇ ಮುಕ್ತವಾಗಿದ್ದವು. ಯೋಜನೆಯ ಅವಧಿಯಲ್ಲಿ ಅಸ್ಸಾಂ, ಒರಿಸ್ಸಾ, ಪಂಜಾಬು, ಬಂಗಾಳ, ಮಧ್ಯ ಭಾರತ, ರಾಜಸ್ಥಾನ, ಸೌರಾಷ್ಟ್ರ, ಭೋಪಾಳ, ದೆಹಲಿ, ಹಿಮಾಚಲ ಪ್ರದೇಶ ಮತ್ತು ವಿಂಧ್ಯ ಪ್ರದೇಶಗಳಲ್ಲಿ ಸಹ ಈ ಸಂಬಂಧದ ಶಾಸನಗಳನ್ನು ಅನುಷ್ಠಾನಕ್ಕೆ ತರಲಾಯಿತು. ಮಧ್ಯಸ್ಥಿಕೆಯ ಪದ್ಧತಿಯನ್ನು ರದ್ದುಗೊಳಿಸಿದ್ದರಿಂದ ಕೃಷಿಕರಿಗೆ ಹೆಚ್ಚಿನ ಸೌಲಭ್ಯಗಳು ದೊರಕಿದೆಯಲ್ಲದೆ, ಆಯಾ ರಾಜ್ಯ ಸರಕಾರಗಳಿಗೂ ಸ್ವಲ್ಪ ಮಟ್ಟಿನ ಆದಾಯವಾಯಿತು.

ಉತ್ತರ ಪ್ರದೇಶ ಮತ್ತು ದೆಹಲಿ ರಾಜ್ಯಗಳಲ್ಲಿ ಭೂಸುಧಾರಣೆಯ ಶಾಸನವು ಜಾರಿಯಲ್ಲಿ ತರಲ್ಪಟ್ಟಿರುತ್ತದೆ. ಇದರ ಪ್ರಕಾರ ರೈತರು ಭೂಮಿಯ ಒಡೆತನವನ್ನು ಪಡೆಯಲು ಅರ್ಹರು. ರಾಜಸ್ಥಾನ ಸರಕಾರವು ಕೃಷಿ ಭೂಮಿಗಳನ್ನು ಮಾರಲಾಗದೆಂಬ ಶಾಸನವನ್ನು ಮಾಡಿದ್ದರೆ, ಮಧ್ಯ ಭಾರತ ಸರಕಾರವು ಜಾಗೀರದಾರಿ ಹಾಗು ಜಮೀನುದಾರಿ ಕ್ಷೇತ್ರದ ಎಲ್ಲ ಗೇಣಿದಾರರಿಗೂ ತಮ್ಮ ಸಾಗುವಳಿ ಭೂಮಿಯ ಸ್ವಾಮ್ಯ ದೊರಕಿಸುವ ಹಕ್ಕನ್ನು ಕೊಟ್ಟಿರುತ್ತದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಯಾರೂ ಇಪ್ಪತ್ತಮೂರೂ ಮುಕ್ಕಾಲು ಎಕ್ರೆಗಿಂತ ಹೆಚ್ಚಾಗಿ ಭೂಮಿಯನ್ನು ಪಡೆದಿರಬಾರದೆಂಬ ಶಾಸನ ಜಾರಿಯಲ್ಲಿದೆಯಲ್ಲದೆ, ಅದಕ್ಕಿಂತಹೆಚ್ಚಿಗೆ ಇದ್ದುದನ್ನು ಪರಿಹಾರ ಧನವೇನನ್ನೂ ಕೊಡದೆ ವಶಪಡಿಸಿಕೊಂಡು, ರೈತರಲ್ಲಿ ಹಂಚಲಾಯಿತು. ಪಶ್ಚಿಮ ಬಂಗಾಳದಲ್ಲಿ ೫೫ ಎಕ್ರೆಗಿಂತ ಹೆಚ್ಚಿನದನ್ನು ಸರಕಾರ ಸ್ವಾಧೀನಕ್ಕೆ ತೆಗೆದ ಕೊಂಡು ಹಂಚುವ ಶಾಸನ ಮಾಡಲಾಯಿತು. ಸಂತತ ಹನ್ನೆರಡು ವರ್ಷಗಳವರೆಗೆ ಬೇಸಾಯ ಮಾಡುತ್ತಿದ್ದ ಭೂಮಿಯನ್ನು ಕೊಂಡುಕೊಳ್ಳುವ ಹಕ್ಕನ್ನು ಗೇಣಿದಾರರಿಗೆ ಪಂಜಾಬಿನ ಸರಕಾರ ಕೊಟ್ಟಿರುತ್ತದೆ. ಮಧ್ಯ ಪ್ರದೇಶ, ಮದ್ರಾಸು ಮು

In The Court of the District Munsif of Mangalore.

O. S. No. 445/ 1954.

Between:—

Vittamma Hengsu And Others—Plaintiffs,

And

Narayana Naik... Defendant

To,

Defendant:- Sri Narayana Naik, Nephew of Thyampu Shetty, residing at Talapady Doddamane in Talapady Village, Mangalore Taluk.

Please take notice that the above suit filed against you is posted for your appearance on 15-2-1955; if you fail to appear on that date either in person or by pleader at 11 a. m. before the above Court a decree in the above suit will be passed against you exparte.

(By Order)

P. Ramakrishna Mally,
Advocate for Plaintiffs.

Mangalore. 17—1—1955

ಜೀವ, ಬೆಂಕಿ, ನೌಕೆ ಮತ್ತು ಮೋಟಾರ್ ಇತ್ಯಾದಿ
ವಿಮಾ ಆವಶ್ಯಕತೆಗಳಿಗೆ
ವಿಚಾರಿಸಿರಿ:

ದಿ ಜಯಭಾರತ
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಚೇರಿ: ಬೊಂಬಾಯಿ.
ಶಾಖಾ ಕಚೇರಿ: ಹಂಪನಕಟ್ಟೆ, ಮಂಗಳೂರು 1.
ಶಾಖಾ ಕಾರ್ಯದರ್ಶಿ: ಕೆ. ಪಿ. ಭವಾನಿಶಂಕರ ಶೆಟ್ಟಿ.

For Insurance Requirements
CONSULT
THE JAYABHARAT
INSURANCE CO., LTD.
FOR
LIFE, FIRE, MARINE, & MOTOR ETC.
H. O. BOMBAY.
Branch Office: HAMPANKATTA—MANGALORE—1.
Branch Secretary: K. P. Bhavanishanker Shetty.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.
ಉಡುಪಿ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.
P. o. Box No. 3219, BOMBAY 3.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,
1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್‌ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ ಸಾಲದ ಹಣಕ್ಕೆ ಆಚೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ತ್ತು ಮೈಸೂರುಗಳು ಹಾಗೆ ಕೊಂಡುಕೊಳ್ಳುವ ಹಕ್ಕನ್ನು ರೈತರಿಗೆ ಕೊಡವಿದ್ದರೂ ಭೂಮಿಯನ್ನು ಮಾಲಿಕರು ವಾಪಾಸು ಕೇಳುವುದಕ್ಕೆ ಕೆಲವು ನಿರ್ಬಂಧಗಳನ್ನು ಹೇರಿರುತ್ತವೆ; ಮತ್ತು ಗೇಣಿದಾರರಿಗೆ ಕೆಲವು ಭದ್ರತೆಗಳನ್ನೂ ನೀಡಿರುತ್ತವೆ.

ಸಾರ್ವಜನಿಕರ ಗಮನವನ್ನು ಹೀಗೆ ಸಳೆದ ಭೂ ಸುಧಾರಣೆಯ ಕ್ರಮಗಳ ಮುಂದಿನ ಹಂತವು ಪ್ರಗತಿಪರವಾಗಿರುವುದು ನಿಶ್ಚಯ. ಈಗಾಗಲೇ ಭೂಮಿಯನ್ನು ಮಾಲಿಕನು ಕೇಳುವ ಹಕ್ಕು ಮಿತಿಗೊಳಗಾಗಿರಬೇಕೆಂದೂ ವ್ಯಕ್ತಿಯೊಬ್ಬನ ಪಶದಲ್ಲಿರುವ ಭೂಮಿಯ ಪರಮಾಪಧಿ ಪ್ರಮಾಣ ನಿರ್ಣಯವಾಗಬೇಕೆಂದೂ ನಿರ್ಧಾರವಾಗಿರುವುದು—ಈಗ ಭೂ ವಿತರಣೆ ಮತ್ತು ಸಹಕಾರ ಪದ್ಧತಿಯ ಅನುಷ್ಠಾನಗಳೆಂಬ ಅಂಶಗಳ ಕಡೆಗೆ ಗಮನ ಹರಿಸುವ ಅಗತ್ಯ ಎದ್ದು ಕಾಣುತ್ತದೆ. ರೈತರ ಸುಧಾರಣೆ ಮತ್ತು ಮನೆ ವ್ಯವಸ್ಥೆಗೆ ಹೈದರಾಬಾದು, ತಿರುಕೊಚ್ಚಿ ಮುಂತಾದ ರಾಜ್ಯಗಳು ಶಾಸನಗಳನ್ನೂ ಮಾಡಿದ್ದರೂ ಭೂಮಿಯ ಒಡೆತನವು ಹೆಚ್ಚಿ ಹೋಗಿರುವ ಬಗೆಯ ಕುರಿತು ಸಮರ್ಪಕವಾದ ವಿವರಗಳು ರಾಷ್ಟ್ರೀಯ ಮಟ್ಟದಲ್ಲಿ ದೊರಕುತ್ತಿಲ್ಲವೆಂಬುದೇ ಈಗಿನ ಮುಖ್ಯ ಆತಂಕ. ಅವಶ್ಯವಾಗಿ ಭೂಮಿಯ ಗಣನೆ ನಡೆಸಲು ಯೋಜನಾ ಆಯೋಗದಿಂದ ರಾಜ್ಯ ಸರಕಾರಗಳಿಗೆ ನಿರ್ದೇಶ ಬಂದಿದ್ದು, ಇನ್ನು ಕೆಲವೇ ತಿಂಗಳುಗಳಲ್ಲಿ ಈ ಕೆಲಸ ಮುಗಿಯುತ್ತದೆ. ಇದನ್ನು ಆದರಿಸಿಯೇ ಭೂಮಿಯ ವಿತರಣೆಯನ್ನು ನಡೆಸಲಾಗುವುದು. ಹಾಗೆ ನೂಡುವಾಗ ಉತ್ಪಾದನೆಯು ಕುಂಠಿತವಾಗದಂತೆ ಹಿಡುವಳಿಯನ್ನು ಮತ್ತೆ ಹಂಚಿಕೊಳ್ಳುವ ಬಗ್ಗೆ ಜಾಗ್ರತೆ ವಹಿಸಲಾಗುವುದು. ಉತ್ತರ ಪ್ರದೇಶ, ಹೈದರಾಬಾದು, ರಾಜಸ್ಥಾನ, ದೆಹಲಿ, ಮಧ್ಯ ಭಾರತ, ಭೋಪಾಳ ಮತ್ತು ವಿಂಧ್ಯ ಪ್ರದೇಶಗಳಲ್ಲಿ ಭೂಮಿಯ ಹಿಡುವಳಿಯನ್ನು ನಿರ್ದಿಷ್ಟ ಕನಿಷ್ಟ ಪ್ರಮಾಣಕ್ಕಿಂತ ಕಡಿಮೆಯಾಗುವಂತೆ ಹಂಚಲಾಗದೆಂಬ ಶಾಸನವುಂಟು.

ಈಗಿರುವ ತುಂಡು ಹಿಡುವಳಿಗಳನ್ನು ಸಂಘಟಿಸುವುದಕ್ಕೆ ಸಂಬಂಧಿಸಿದ ಶಾಸನವು ಮುಂಬಯಿ, ಪಂಜಾಬು, ಒರಿಸ್ಸ, ಮಧ್ಯ ಪ್ರದೇಶ, ಉತ್ತರ ಪ್ರದೇಶ ಮತ್ತು ದೆಹಲಿ ರಾಜ್ಯಗಳಲ್ಲಿರುತ್ತದೆ. ಮದ್ರಾಸು, ಜಮ್ಮು ಮತ್ತು ಕಾಶ್ಮೀರ ರಾಜ್ಯಗಳಲ್ಲಿ ಸಹಕಾರ ಸಂಘಗಳ ನೆರವನ್ನು ಇದಕ್ಕೆ ಪಡೆಯಲಾಗುತ್ತದೆ. ಹೈದರಾಬಾದು ಮತ್ತು ಅಜ್ಮೀರ ರಾಜ್ಯಗಳಲ್ಲಿ ಭೂ ಸಂಘಟನೆಯ ಕುರಿತಾದ ವಿಶೇಷ ನಿಯಮವೊಂದು ಗೇಣಿಗೆ ಸಂಬಂಧಿಸಿದ ಶಾಸನದಲ್ಲಿ ಸೇರಿರುತ್ತದೆ. ಸಹಕಾರ ರಂಗದಲ್ಲಿ ಮಾತ್ರ ಮುಂಬಯಿ ಮತ್ತು ಉತ್ತರ ಪ್ರದೇಶಗಳ ಹೊರತು ಇತರೆಡೆ ಗಮನಾರ್ಹವಾದ ಪ್ರಗತಿಯೇನೂ ಆಗಿಲ್ಲ. ಸಣ್ಣ ಪಟ್ಟ ಹಿಡುವಳಿದಾರರೆಲ್ಲ ಒಗ್ಗಟ್ಟಿನಿಂದ ಸಹಕಾರಿ ಪದ್ಧತಿಯ ಕೃಷಿ ಸಂಸ್ಥೆಯನ್ನು ಸ್ಥಾಪಿಸಿ ವ್ಯವಸಾಯವನ್ನು ನಡೆಸುವುದಕ್ಕೆ ಸರಕಾರದ ಪ್ರೋತ್ಸಾಹ ಸಿಗಬೇಕೆಂದೂ ಏಳು ವರ್ಷಗಳ ಅವಧಿಯಲ್ಲಿ ಈ ಕಾರ್ಯಕ್ರಮವು ಯಶಸ್ವಿಯಾಗಬೇಕೆಂದೂ ಯೋಜನಾ ಆಯೋಗ ರಾಜ್ಯ ಸರಕಾರಗಳಿಗೆ ಉಪದೇಶಿಸುತ್ತದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಾನ್ವಿತ ಗೊಳಿಸುವಾಗ ಇದರ ಬಗ್ಗೆ ವಿಶೇಷ ಗಮನವನ್ನು ಪೂರೈಸಲಾದೀತು—ಸಹಕಾರಿ ಪದ್ಧತಿಯ ಬೇಸಾಯ ಯಶಸ್ವಿಯಾಗಲಿ, ಬೆಡಲಿ, ರೈತರ ಅಂತಸ್ತನ್ನಂತೂ ಈಗಿನ ಶಾಸನಗಳು ಹೆಚ್ಚಿಸಿವೆಯೆಂಬುದರಲ್ಲಿ ಸಂದೇಹವಿಲ್ಲ. ಭೂಮಿಯ ವಿತರಣೆಯ ಮಹಾಕಾರ್ಯವೊಂದು ಚೆನ್ನಾಗಿ ನಡೆದು ಉತ್ತಮ ಫಲವಿತ್ತರೆ, ಸಹಕಾರ ಪದ್ಧತಿಯನ್ನು ಅನುಸರಿಸದಿದ್ದರೂ ತೊಂದರೆಯಾಗದು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು,

ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಅಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಪಾತಿ	೩	೧
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಹಿಂದುನೋಟದಲ್ಲಿ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈಪಿಡಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೩
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಶ್ರಾದ್ಧ ಮತ್ತು ಪಾರ್ವಾತ್ಮ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೧
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈಮಾಚಲ ಸಾನ್ನಿಧ್ಯದಲ್ಲಿ (ಪರಿವ್ರಾಜಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

20 ವರ್ಷಕ್ಕೂ ಮಿಕ್ಕಿದ ನುರಿತ ಅನುಭವ

ಸ್ತ್ರೀ ಮರುಷರು, ಬಾಲ ಬಾಲಕಿಯರು ಮನ ಸೆಳೆವ ಯಾವತ್ತೂ ಚಿನ್ನ ಬೆಳ್ಳಿಯ ಆಭರಣಗಳನ್ನು ಸಕಾಲದಲ್ಲಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಎನ್. ಜಿ. ಗೋಪಾಲ ಕೃಷ್ಣ ಶೇಟ್

ಚಿನ್ನ ಬೆಳ್ಳಿ ವ್ಯಾಪಾರಿ

ನವಯುಗ ಪ್ರೆಸ್ಸಿನ ಎದುರುಗಡೆ, ಸಂತೆಕಟ್ಟೆ, ಉಡುಪಿ.

ಮುಂಬಯಿಯಲ್ಲಿ

ಶಾಲಾ ವಿದ್ಯಾರ್ಥಿಗಳಿಗೆ ಬೇಕಾದ ಮತ್ತು ಕಥೆ, ಕಾದಂಬರಿ, ಪೌರಾಣಿಕ ಯಕ್ಷಗಾನ ಪುಸ್ತಕಗಳೂ, ವಾರ್ತಾಪತ್ರಿಕೆಗಳೂ, ದೊರೆಯುವ ಸ್ಥಳ:

ದಿ ಸ್ಟೂಡೆಂಟ್ಸ್ ಬುಕ್ ಡಿಪೋ,

ಪೀತಾ ಸ್ಟ್ರೀಟ್, ಕೋಟೆ, ಮುಂಬಯಿ.

ವ್ಯಾಪಾರಿಗಳು: ಕೋಟ್ಯಾನ್ ಸಹೋದರರು.

ಕಾಮ ಜೀವನ

ತರುಣ ತರುಣಿಯರಿಗೆ, ಗಂಡ ಹೆಂಡಿರಿಗೆ ಅಥವಾ ತಂದೆ ತಾಯಿಗಳಿಗೆ ತಮ್ಮ ಕಾಮ ಜೀವನದಲ್ಲಿ ತಡೆ ತೊಂದರೆಗಳೇನಾದರೂ ತೋರಿ ಬಂದರೆ ಕೂಡಲೇ ನಮ್ಮಿಂದ ಸಲಹೆ ಪಡೆಯಿರಿ. ಸ್ವಪ್ನಾವಸ್ಥೆ, ಶುಕ್ರನೋವು, ಗುಪ್ತರೋಗ, ಗರ್ಭಸ್ರಾವ, ಮುಟ್ಟುಶೂಲೆ, ಮಕ್ಕಳಾಗದಿರುವುದು, ಬಿಳಿಸೆರಗು, ಮುಂತಾದ ಯಾವ ಪೀಡೆಯಿದ್ದರೂ ನಾವು ಚಿಕಿತ್ಸೆಯ ಏರ್ಪಾಡು ಮಾಡುವೆವು. ಪತ್ರ ವ್ಯವಹಾರ ಮಾಡುವವರು ತಮ್ಮ ರೋಗದ ವಿವರ ಬರೆದು ಒಂದು ರೂಪಾಯಿ ಕಳುಹಿಸ ಬೇಕು. ವ್ಯವಹಾರವನ್ನು ಗುಟ್ಟಾಗಿಡುವೆವು.

ತಾರನಾಥ ಆಯುರ್ವೇದ ಮಂದಿರ,

ಕೊಡಿಯಾಲ ಬೈಲು, ಮಂಗಳೂರು—3

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಚಮತ್ಕಾರ

(ಬರೆದವರು: ಕುಮಾರಸ್ವಾಮಿ)

- ಬಾಳ್ವೆಯ ಪಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯ ಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ. ಒಂದೂವರೆ ರೂಪಾಯಿ.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

೧. ನವಯುಗ ಪ್ರೆಸ್, ಉಡುಪಿ.

ಕನ್ಯಾರ್ಥಿಗಳು

(೧೨ನೇ ಸುಟದಿಂದ)

ಶ್ಯಾಮ. ಸು— ಅಂತಹ ಅಪಮಾನ ನಾನು ಸಹಿಸಲಿಕ್ಕೆ ಬಂದವನಲ್ಲ (ಏಳು ತ್ತಾನೆ).

ಶ್ಯಾಮಣ್ಣ— ಸ್ವಾಮಿ, ಕುಳಿತಿರಿ, ನೋಪಿಸಿ ಕೊಳಬೇಡಿ ನಿಮಗೂ ಇದು ಗೂಡಿ ಬರುವ ಸಂದರ್ಭ ಅಲ್ಲ ಎಂಬು ದು ತಿಳಿಯಿತು. ಇನ್ನೂ ಯಾರ್ಯಾರು ಬ ರುತ್ತಾರೆ - ಎಂಥೆಂಥವರು? ಏನೇನಾಗು ತ್ತದೆ ...ಎಂದು ನೋಡಿದ ಹಾಗೂ ಆ ಗಿತು....., ಯಜಮಾನಿ ಎಂಥವಳೆಂದು ತಂದು ಖಾತ್ರಿಯಾದ ಹಾಗೂ ಆಯಿತು. ಕುಳಿತಿರುವ. ಇನ್ನು-ನಾವು ಬೇಡ—ಆ ದದು—ಎಂದು ಎಣಿಸಿದರೂ—ಆ ವಿಧಿ ಂಬುದಿದೆ, ಅದೃಷ್ಟ ಎಂಬುದಿದೆಯಲ್ಲ.... ದಕ್ಕೆ ಮಿಕ್ಕೆ ನಾವೇ? ನೀವೆ...? ಕ್ರಾಸ ರ್ಡಿಯಲ್ಲಿ 1st prize ಬಂದ ಹಾಗೆ... ವಳು ನಮಗೆ ಸಿಗಲೇ ಬಾರದು—ಎಂ ಬುದಿದೆಯೊ?

ಶ್ಯಾಮ. ಸು— ಆ ಮಾತೂ ನಿಜವೇ ನೀವೂ ಅದಕ್ಕೇ ಬಂದದ್ದಲ್ಲವಲ್ಲ....

ಶ್ಯಾಮಣ್ಣ—ನಾನು! ಸಂಬಂಧವೇ — ಂದಿರಿ ಆಗ; ಈಗ ಕೇಳುತ್ತೀರಿ ಹೀಗೆ.

ಶ್ಯಾಮಸು— ನಾನು ಸಂಬಂಧಿಯ ಸಂಬಂಧಿಯಾಗಿ ಕುಳಿತಿರುತ್ತೇನೆ-ಎಂಥ ಳು ಎಂದು ನೋಡಿಯಾದರೂ ಹೋಗು ತ್ತೇನೆ. ಪರವಾ ಇಲ್ಲತಾನೆ!

ಶ್ಯಾಮಣ್ಣ— ಹಾಗಿರಬೇಕು- ನೋ ಡುವ ದೃಷ್ಟಿ. It is all a theory relativity.

ಶ್ಯಾಮ ಸು — ಸರಿಯಾಗಿ ಹೇಳಿದಿರಿ! ಎಪ್ಸ್ಟೈನ್ (Epstein) ಅಲ್ಲವೆ ಆ ಮಾ ತು ಹೇಳಿದ್ದು?—

ಶ್ಯಾಮಣ್ಣ— ಅ ವ ನ ಮಾವ— mstein

ಶ್ಯಾಮ— ಎಂಥಾ ಮರೆವು ನನ್ನದು! ಟಿಕ್ಸ್ ವಿದ್ಯಾರ್ಥಿ ನಾನು—ಏಯಿನ್ ನ್ ಮರೆತುಬಿಟ್ಟು ಎಪ್ಸ್ಟೈನ್ ಎಂದು ಟ್ಟೆ.

ಶ್ಯಾಮಣ್ಣ— ಅವಳು, ಪಿಸಿಕ್ಸ್ ಎಂ. ಎ.

ಶ್ಯಾಮ. ಸು— ಹಾಗಿದ್ದರೆ— For God's Sake— ಈ ಸಂಬಂಧ ಬೇಡ! ಹೇ ಇನ್ನೂ ಯಾರೋ ಬರುತ್ತಿದ್ದಾರೆ. ಹೆಣ್ಣಿನಂಬರು ಓದಿದರು. ನಾವಿಬ್ಬರೂ ಳಿತೇಬಿಡುವ ಅನ್ನುತ್ತೀರಾ...? ನಮ್ಮೊ ಳ ಅಂಡಸ್ಟೇಂಡಿಂಗ್ ಚೆನ್ನಾಗಿ ಇರಲಿ

ಶ್ಯಾಮಣ್ಣ— It is simply understood.

ರಾಜಶೇಖರ— (ಬಂದು) ಇದೇ ಅಲ್ಲವೇ ಮನೆ!

ಶ್ಯಾಮ ಸು — ಹೌದು ಇದು ಮನೆ; ನಾವು ಜನ!

ರಾಜಶೇಖರ — ಕ್ಷಮಿಸಿ ಸರ್, ಕೇ ಳುವ ವಾಡಿಕೆಯಂತೆ ಕೇಳಿಬಿಟ್ಟೆ. ಅದು ತೀರ ಹುಚ್ಚಾಯಿತು ಎಂಬುದು ಈಗ ತಿಳಿಯಿತು ಮಿ| xರವರು ಇರುವ ಮನೆ ಇದೇ ಅಲ್ಲವೆ ಎಂದು ಕೇಳ ಬೇಕಾಗಿತ್ತು. ತಾವುಗಳು-

ಶ್ಯಾಮಣ್ಣ— y ಮತ್ತು z.

ರಾಜಶೇಖರ— ಸಂಬಂಧವೇ?

ಶ್ಯಾಮಣ್ಣ— xರವರಿಗೆ ಸಂಬಂಧ.

ರಾಜ ಶೇಖರ— ಅವರ ಬಂಧುಗಳು ಅನ್ನಿ.

ಶ್ಯಾಮಣ್ಣ — ಹಾಗೆ ಊಹಿಸಲು ಅ ಡಂಕವಿಲ್ಲ. ತಾವು ಬಂದ ಕಾರ್ಯ?

ರಾಜ— ಪೇಪರಿನಲ್ಲಿ ಒಂದು ಜಾಹೀ ರಾತು ನೋಡಿದೆ.

ಶ್ಯಾಮಣ್ಣ— ಹೋ ಅದು ... ನಮ್ಮ x ರವರು ಮಿಸ್ x ರವರ ವಿಚಾರದಲ್ಲಿ ಕೊಟ್ಟ ಪ್ರಕಟಣೆ.

ರಾಜ— ಮಿಸ್ x ರವರ ನಿಜವಾದ ಹೆಸರು.

ಶ್ಯಾಮಣ್ಣ— ಸೂರ್ಯ ಕುಮಾರಿ— ಎಂತ.

ರಾಜ— ಓ— ಪ್ರಸಿದ್ಧ ಸಿನೇಮ ತಾ ರೆಯ

ಶ್ಯಾಮಣ್ಣ— ಏನು ಪ್ರಸಿದ್ಧ ಸಿನೆಮಾ ತಾರೆ! ಶುದ್ಧ ಅಪಮಾನ ಆಕೆಗೆ— ನೋಡಿ ಅಲ್ಲಿ ಗೋಡೆಯ ಮೇಲೆ ಅವಳ ಚಿತ್ರವನ್ನು

ರಾಜ— ನೋಡಿ (ಒಂದು ಹಾಡನ್ನೆ ಹಾಡುತ್ತಾನೆ....)ಕ್ಷಮಿಸಿ ಸರ್....ನಾನು ನನ್ನನ್ನೇ ಮರೆತುಬಿಟ್ಟೆ. ಅವಳು ಇಷ್ಟೊಂ ದು ಫೇಮ್ ಆಗಿದ್ದಾಳೆ ಎಂಬುದು ತಿಳಿದೇ ಇರಲಿಲ್ಲ.

ಶ್ಯಾಮಣ್ಣ — ನೋ ಮಿಸ್ಟರ್; the photo is not fair to her.

ರಾಜ — ನಿಜವೇ! ನಾನು ಜೋಯಿಸರ ಹತ್ತಿರ ಒಳ್ಳೇಯ ಗಳಿಗೆ ವಿಚಾರಿಸಿಯೇ ಹೊಂಟಿದ್ದೆ. ಇರಲಿ- ತಾವು ಅವರ ಬಂಧು ಗಳೆಂದ ಮೇಲೆ, ತಮಗೆ ಎಲ್ಲಾ ಸಮಾ ಚಾರ ತಿಳಿದಿರಬೇಕು. ನನಗೆ ತುಸು ಹೇಳಿ... (ಆಚೀಜೆನೋಡಿ).... ಒಳಗೆ ಯಾರ್ರಿ ತಾನೇ?

ಶ್ಯಾಮಣ್ಣ- ತಿರುಗಾಡಲು ಹೋಗಿದ್ದಾ ರೆ; ಈಗ ಬರುತ್ತಾರೆ.... ಮೊದಲು ನಿಮ್ಮ ವಿಚಾರ ತಿಳಿಸಿ- ಅವರ ಸಂಗತಿಯನ್ನು ಆ ಮೇಲೆ ತಿಳಿಸುವ ...

ರಾಜ ಶೇಖರ—ನಾನು ನೋಡಿ-ಸಾಳೆ ಯ ಪಟ್ಟ ಜಮೀನುದಾರರ ಮಗ, ನಮ ಗೆ ತುಂಬಾ ಜಮೀನಿದೆ ಪಾಳೆಯ ಪಟ್ಟ ಯಲ್ಲಿ, ನಮ್ಮ ತಂದೆಗೆ ನಾನು ಒಬ್ಬನೇ... ನಮ್ಮ ಕುಮಾರನದ್ದರಲ್ಲಿ ಲಗ್ನವಾಗಬೇಕು. —ಎಂದು ನಮ್ಮ ತಂದೆಯವರ ಲಭಿಪ್ರಾ ಯ. ನಾನು ಸ್ವೀಟ್ ಮಾಡನ್ನೂ ಹುಡುಗಿ ನೋಡಲು ರೂಪವತಿಯಾಗಿರಬೇಕು. ಎಂಬುದು ನನ್ನ ಮನಸ್ಸು-. ನಮ್ಮ ಜಾತಿ ಯವರು ಅಷ್ಟೊಂದು ನೋಡಲಿಕ್ಕೆ ಚೆ ನ್ನಾಗಿಲ್ಲ. ಆದರಿಂದ ಈ ಯೋಜನೆ ಮಾ ಡಿದೆ. ಇವರೂ ಪೂರ್ ಅಲ್ಲ ಎನ್ನಿ.

ಶ್ಯಾಮಸುಂ-- Poor ಅಲ್ಲ ಅಂದ್ರೇ ನು? ತುಂಬಾರಿಚ್ಚು....ಅವರಿಗೆ ಜಮೀನು ಇರಲಾರದಾದರೂ, ಬಾಂಕಿನಲ್ಲಿ ಶ್ಯಾ ಶ್ ತುಂಬಾಇದೆ! ಈಗಿನ ಕಾಲದಲ್ಲಿ ನ ಮ್ಮ ಸರಕಾರ ಜಮೀನುದಾರರನ್ನು ನೇಕೆ ಡ್ ಆಗಿ Strip ಮಾಡುತ್ತಿರುವಾಗ, Cash in the Bank is worth more than Sand in the land. ಅಲ್ಲವೇ!

ರಾಜ ಶೇ - ಅದೂ ಸ್ವಲ್ಪ ನಿಜವೇ. ಆದರೆ ನಮ್ಮಲ್ಲಿ Cash ಉ ಇನ ಅಸ್ತಿ.... ನನಗೆ Cash ಗೀಶ್ ಮುಖ್ಯವಲ್ಲ. ನಾ ನು beauty Minded; Money minded ಅಲ್ಲ....ನಮ್ಮ ಅಪ್ಪನಿಗೆ ಹ ಣವಿದ್ದವರು ಬೇಕು. ಈ ಸಂಬಂಧವಾ ದರೆ ಎರಡು ಕೂಡಿಬಂದ ಹಾಗೆ ಅಲ್ಲವೇ!

ಶ್ಯಾಮಣ್ಣ—ಹಾಗಿದ್ದರೆ ತಾವುಇಲ್ಲಿಗೆ ಈ ಮೊದಲೇ ಬಂದು ವಿಚಾರಿಸಿ, ಮಾತ ನಾಡಿ ಹೋದ ಹಾಗಿದೆಯಲ್ಲ.

ರಾಜ ಶೇ— ಇಲ್ಲಲ್ಲ.... ಇಲ್ಲಿಗೆ ಬರು ವುದು ಇದೇ Ist time ಆದರೆ ಅಚೀ ಜೆ ವಿಚಾರಿಸಿದ್ದೆ.

ಶ್ಯಾಮಣ್ಣ— ವಿಚಾರಿಸಿದ್ದರೆ, ಹುಡು ಗಿಯ ಹೆಸರು ಮಾತ್ರ ಏನು ತಿಳಿಯಲಿಲ್ಲ.

ರಾಜ— ಅಂದರೆ ಅವಸರದಲ್ಲಿ ಕೇಳಿ ದ್ದು—ಅದೂ, ಬರುವ ಮುಂಚೆ, ಈಗ ಷ್ಟೆ, ನೆರಮನೆಯವರನ್ನೂ ಕೇಳಿದೆ. ಅದ ರಿಂದ ನೀವು ಅವರ ಬಂಧುಗಳು ಎಂದಮೇಲೆ ಅವರಿಗಿಂತಲೂ Reliable ನಿಮಗೆ ನಿ ಜವಾದ ಸಂಗತಿಯೇ ತಿಳಿದಿರುತ್ತದೆ.

ಶ್ಯಾಮಣ್ಣ— ನಮಗೆ ತಿಳಿದಷ್ಟು ತಿಳಿ ದಿದೆ. ಆದರೆ ನಾವು ಹೇಳುವ ಮಾತು ತ ಮಗೆ ಅಷ್ಟು ಉತ್ಸಾಹ ಹುಟ್ಟಿಸಲಾರದು.

ರಾಜ— ಇರಲಿ, ಅದೂ ಹೇಳಿ! ನಾ ನು ಕೆಲವು ಪ್ರಶ್ನೆ ಕೇಳುತ್ತೇನೆ— ನಿಮಗೆ ತಿಳಿದ ಸಮಾಚಾರ ಹೇಳಿ...ನಾ ನು ನಮ್ಮ ತಂದೆಗೆ ಒಬ್ಬನೇ ಮಗ—ಎಂ ದೆನಲ್ಲ.

ಶ್ಯಾಮಣ್ಣ— ಸರಿಯೇ, ಆದರೆ ನಿಮ್ಮ ಕುಟುಂಬದ ಅಸ್ತಿಗೆ, ನಿಮ್ಮತಂದೆ ಒಬ್ಬರೇ ಹಕ್ಕುದಾರರೋ?

ರಾಜ— ಅರೆಂಟುಮಂದಿ ಇದ್ದಾರೆ— ಬೇರೆ.

ಶ್ಯಾಮಣ್ಣ— ಅರೆಂಟು ಎಂದರೆ Exactly ಎಷ್ಟು?

ರಾಜ - Exactly. 1/12 ನಮ್ಮ ಶೇಕ.

ಶ್ಯಾಮಣ್ಣ— ಸಾಲಗೀಲ ಇದೆಯೇ?

ರಾಜ— ಬಹಳ ಇರಲಾರದು.

ಶಾಮಣ್ಣ — ಅಂದರೆ ನಿಮ್ಮ ತಂದೆ ಯವರ ವ್ಯವಹಾರ, ಸಾಲ, ಮೂಲ ತ ಮಗೇ ತಿಳಿದಿಲ್ಲ—ಎಂದ ಹಾಗಾಯಿತು.

ರಾಜ— ನಿಜಕ್ಕೂ ತಿಳಿಯದು. ನಾನು ಈ ಟೌನಿನಲ್ಲೇ ಇರುವುದು ಹೆಚ್ಚು—ಇಲ್ಲೇ ವಿದ್ಯಾಭ್ಯಾಸವೂ ಆಯಿತು,

ಶ್ಯಾಮ— ಎಷ್ಟು ಓದಿದ್ದೀರಾ!

ರಾಜ— ಇಂಟರಿನಲ್ಲಿ ಬಿಟ್ಟುಬಿಟ್ಟೆ ನ ಮ್ಮ ತಂದೆಗೆ ನಾನು ಓದುವುದು ಇಷ್ಟ ವಿಲ್ಲ.

ಶಾಮಣ್ಣ— ಈ ಸೂರ್ಯಕುಮಾರಿ M. A. ಗೊತ್ತೇ?

ರಾಜ— ಕೇಳಿದೆ. ಅದರಿಂದ ಸಂಬಂ ಧಕ್ಕೆ ತೊಂದರೆಯಿಲ್ಲ. ಹೆಂಡತಿ ಹೆಚ್ಚು ಓದಿಕೊಂಡಿರಬಾರದು ಎಂದಿಲ್ಲವಲ್ಲ.

ಶ್ಯಾಮ— ಅವಳಿಗೆ ಗಂಡ ಹೆಚ್ಚು ಓ ದಿರಬೇಕು—ಎನಿಸಿದರೆ!

ರಾಜ— ನಾನೇನು ನೌಕರಿ ಹುಡುಕಿ ಹೋಗಬೇಕೇ? ಜಮೀನುದಾರಿ ಇದೆ, ಗೇ ಣಿ ಬರುತ್ತದೆ! ಇಂಗ್ಲಿಷ್ ನಾಕಷ್ಟು ಅಧಾನವಾಗುತ್ತದೆ..... ಟಾಕಿಂಗ್ ಸ್ವಲ್ಪ Difficult ಆದರೂ....

ಶ್ಯಾಮಣ್ಣ— ಆಕೆಯದು ಸ್ವಲ್ಪ ಸ್ವ ತಂತ್ರ ಸ್ವಭಾವ —

ರಾಜ-- ಅದೇನು. ಹೆಚ್ಚು ಬಿಡಿ; ಇಂಡಿ ಯಾನೇ ಸ್ವತಂತ್ರ ಅದಮೇಲೆ ನಾವೆಲ್ಲ ರೂ ಸ್ವತಂತ್ರರೇ!

ಶ್ಯಾಮಣ್ಣ— ಆ ಸ್ವಾತಂತ್ರ್ಯ ಬೇರೆ; ಇದು ಬೇರೆ!

ರಾಜ— ಹೋಗಿ.ನಲ್ಲಿ ಸ್ತ್ರೀಯರು ಸ್ವ ತಂತ್ರರೇ. ಸ್ತ್ರೀಯರಿಗೆ ಸ್ವಾತಂತ್ರ್ಯ.ಬಂ ತು- ಎಂದರೂ, ಏನು ಆಗುವ ಹಾಗಿದೆ! ತಾವೇ ಅಂಗಡಿಗೆ ಹೋಗಿ ಒಂದಿಷ್ಟು ಪೌಡರು ಸೆಂಟು, ಸ್ನೋ,ಕೊಂಡಾರು....

ಶ್ಯಾಮಣ್ಣ—ಅದುಂತು-ಅಷ್ಟೇ ಅನ್ನಿ.ಇ ದರೂ ಈಕೆಯ ತರಹ ಬೇರೆ ಇವಳ ಅ ಜ್ಞನಿಂದ ಸಿಗುವ ಹಣ ಇದೆಯಲ್ಲ; ಅದ ನ್ನು ಅವಳೇ ಇರಿಸಿಕೊಳ್ಳುವವಳು; ಕುತಿ ಬಂದಂತೆ ಖರ್ಚುಮಾಡುವವಳು.

ರಾಜ— ಹಾಗೆನ್ನುತ್ತಾಳೆಯೇ.

ರಾಮಣ್ಣ— ನನ್ನ ಹೆತ್ತಿರವೇ ಹಾಗೆ ಹೇಳಿದ್ದಲ್ಲ. ಆದರೂ ತಿಳಿಯುವುದಿಲ್ಲವೇ

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನನಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಸಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಜಾಟಿ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ: ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0

ಕರಿಯರ ಪ್ರಪಂಚ, ಉಡುಪಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮುದ್ರಾಸಿನ ವಿದ್ಯಾಂಗದ ಲೈಬ್ರೆರಿಯನ್ನೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಡೋಕಲ್ ಲೈಬ್ರೆರಿ ಅಫೇರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿ ದೂತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತ ವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳು, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸ ಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ಸ್ವಭಾವ. ಬಹಳ ಸ್ವತಂತ್ರ ಬುದ್ಧಿ ಅವಳದ್ದು. ಗಂಡನೇ ತನ್ನಮಾತು ಕೇಳಿದ ರಾದೀತು ಎನ್ನುವ ಸ್ವಭಾವ. ಈ ಮದುವೆಯ ಯೋಚನೆಮಾಡುವ ಮೊದಲು, ನೀವು ಯೋಚನೆಮಾಡಬೇಕಾಗುವ ವಿಷಯ ಅದು— ಅಂದರೆ- ಅವಳೇ ನೆಟ್ಟಗೆ ನಿಮ್ಮೊಡನೆ ಅಂಥ ಎಲ್ಲ ಪ್ರಶ್ನೆ ಕೇಳಲು ತೊಡಗುವಾಗ, ಒಂದು ಹೆಣ್ಣು ಹೆಂಗಸಿನ ಮುಂದೆ, ನೀವು ಕೊಡುವ ಉತ್ತರ ಎಬದ, ತಬಡ ಆಗಬಾರದಲ್ಲ. ಆದರಲ್ಲಿ ಯೂ ಅವಳು ಎಂ. ಎ. ನೀರು ಕುಡಿದ ಹಾಗೆ ಇಂಗ್ಲೀಷ್ ಮಾತಾಡುತ್ತಾಳೆ!

ರಾಜಾ—ಚೇಷ್ಟೆಮಾಡುತ್ತೀರಿ. ಬಿಡಿ! ಯಾವುದಾದರೂ ಮದುವೆಯಾಗುವ ಹುಡುಗಿ, ಆಗುವ ವರನೊಡನೆ ಹಾಗೆ ಪ್ರಶ್ನೆ ಕೇಳಿಯಾಳೆಯೇ?

ಶ್ಯಾಮಣ್ಣ ಕೇಳಬಾರದು ನಿಜ; ಎಲ್ಲರಂತೆ ಈ ಸೂರ್ಯಕೂಮಾರಿಯಲ್ಲ. ಇವಳು ಕೇಳುವವಳೇ! ಮೊದಲಿಗೇ ಕೇಳುತ್ತಾಳೆ: ನೀವು ಎಷ್ಟು ಓದಿದ್ದೀರಿ? ಯಾವ ರ್‍ಯಾಂಕು— ಎಂಬುದಾಗಿ. ಆಗ!

ರಾಜ—ಹಾಗಿದ್ದರೆ ಅದು ಮೊದಲು ಕನಸಿಡರ್ ಮಾಡಬೇಕಾದ ವಿಚಾರವಾಯಿತು. (ಯೋಚಿಸಿ ಹೊರಡುತ್ತ) ಹಾಗಿದ್ದರೆ ನಾನು ವಿಚಾರ ಮಾಡಿ ಇನ್ನೊಮ್ಮೆ ಬರುತ್ತೇನೆ.

ಶ್ಯಾಮಣ್ಣ— ಯಾಕೆ, ಹೊರಟು ಬಿಟ್ಟರಲ್ಲ.

ರಾಜ—ಇಲ್ಲ; ಹುಡುಗಿಯನ್ನು ತಿಳಿದ ನೀವೇ ಇಷ್ಟೆಲ್ಲ ಹೇಳುವಾಗ....ಅವಳೇನಾದರೂ ಪ್ರಶ್ನೆ ಕೇಳಿದರೆ

ಶ್ಯಾಮಣ್ಣ— ಪ್ರಶ್ನೆ ಕೇಳಿದರೇನಂತೆ! ಗಂಡಸಲ್ಲವೇ ನೀವು! ಮೀಸೆ ಇಲ್ಲವೇ (ರಾಜಇಲ್ಲದಮೀಸೆಮುಟ್ಟಿನೋಡುವನು) ಬಂದಿದ್ದೀರಿ! ಕಣ್ಣಾರೆ ಕಂಡರೂ ಪರಾಂಬರಿಸಬೇಡವೇ! ನಿಮಗೆ ನಾವಿರುವುದರಿಂದ ಸಂಕೋಚವಾಗುವುದಾದರೆ, ನಾನೇ ಎದ್ದುಹೋಗುತ್ತೇನೆ.

ರಾಜ- ನನಗೋಸ್ಕರ ಏಳಬೇಡಿ! ಅಲ್ಲದೆ— ಯಾರೋ ಈ ಮನೆಗೇ ಬರುತ್ತಿದ್ದಾರೆ. ಅವರು ಬಂದಾಗ ನಾನು ಹೋದರೆ ಅವರ ಮುಂದೆ ಹೇಡಿಯಾಗಿ ಕಾಣಲೂಬಹುದು!

ಶ್ಯಾಮಣ್ಣ— ಹಾಗೆ ಧೈರ್ಯ ತುಂಬಿಸಿಕೊಳ್ಳಿ! ಅವರಿಗೆ, ನೀವೂ 'ಬಂಧುಗಳು' ಎಂದು ಬಿಡಿ.

ರಾಜ— ನೀವು ಇಬ್ಬರು ಬಂಧುಗಳ ಜತೆಯಲ್ಲಿ ನಾನು ಮೂರನೆಯ ಬಂಧುವಾಗುತ್ತೇನೆ.

ಶ್ಯಾಮಣ್ಣ— ಆಪದ್ಬಾಂಧವ್ಯ ಎಂದರೆ, ಇದೇನೆ!

(ಒಬ್ಬ ಮುದುಕರನ್ನು ಇನ್ನೊಬ್ಬ ತರುಣ ಕರೆದು ತರುತ್ತಾನೆ. ಈ ಮೂವರು ಏಳದೆ, ಅವರನ್ನೆ ನೋಡುತ್ತಾರೆ.)

ಮುದುಕ- ಬಂದು ಬಹಳ ಹೊತ್ತಾಯಿತೇ! (ಕೆಮ್ಮ) ನನಗೆ ಮೈ ಚೆನ್ನಾಗಿಲ್ಲ. ಕೆಮ್ಮಲು, ಉಬ್ಬಸ. ಮಾತನಾಡಲು ಕಷ್ಟವಾಗುತ್ತದೆ. ಪ್ರಕಟಣೆ ನೋಡಿ ಬಂದಿರೇನು...

ಶ್ಯಾಮಣ್ಣ— ನಾನಲ್ಲ, ಇವರು.

ಶ್ಯಾಮ— ನಾನೂ ಅಲ್ಲ, ಅವರೂ ಅಲ್ಲ; ಇವರು (ರಾಜನನ್ನು ತೋರಿಸಿ)

ರಾಜ—ನಾನು.....? (ಕಕ್ಕಾಬಿಕ್ಕಿಯಾಗಿ)

ಮುದುಕ- ಸರಿ, ಪರವಾಯಿಲ್ಲ. ಯಾರಾದರೇನು? ಕುಳಿತಿರಿ. ಮೊಮ್ಮಗಳನ್ನು ಕಳುಹಿಸಿ ಕೊಡುತ್ತೇನೆ. ಜವರಾ, ನನ್ನನ್ನು ಒಳಗೆ ಕರೆದುಕೊಂಡು ಹೋಗಿ ಬಿಟ್ಟ ಮೇಲೆ, ಅಮ್ಮನಿಗೆ ಹೇಳು—ಯಾರೋ ಬಂದಿದ್ದಾರೆ—ಎಂತ. ಅಷ್ಟರೊಳಗೆ ಅವರಿಗೆ ಬಾಯಾರಿಕೆಗೆ ಏನು ಬೇಕು ಎಂದು ವಿಚಾರಿಸು.

(ಆತ ಬಿಟ್ಟು ಬರುತ್ತಾನೆ)

ಜವರ—ಅಮ್ಮಾವರಿಗೆ ಹೇಳಿದ್ದೇನೆ. ಡ್ರೆಸ್ ಮಾಡುತ್ತಾ ಇದ್ದಾರೆ. ತಮಗೆ ಏನು ತಂದು ಕೊಡಲಿ, ಚಾವೊ, ಕಾಫಿಯೇ, ಕೊಕ್ಕೊ.....

ರಾಜ—ನನಗೇನೂ ಬೇಡಪ್ಪ.

ಶ್ಯಾಮಣ್ಣ—ಏನು ಸ್ವಾಮಿ ಹಾಗೆಂದರೆ! ಮರ್ಯಾದೆ ಅಲ್ಲವೇ? ಅನುಕೂಲವಂತರ ಮನೆ! ಏನೂ ಬೇಡ ಅಂದರೆ ಹೇಗೆ! ಜವರಾ—ನನಗೆ ಒಂದು ಸ್ಟ್ರಾಂಗು ಕಾಫಿ ಇರಲಿ. . . ನಿಮಗೆ

ಶಾ. ಸು.— ಡಿಟ್ಟೊ. (ಎಂದು ಶ್ಯಾಮಣ್ಣನೊಡನೆ) ಸ್ವಾಮಿ— ಹೋಗುವುದು ಲೇಸು; ಅವಳು ಒಳಗೇ ಇದ್ದಳೆಂತಲ್ಲ. ನಾವು ಏನೇನೋ ಆಡಿ, ಮಾಡಿ...

ಶ್ಯಾಮಣ್ಣ— ಜವರ, ಮೂವರಿಗೆ ಮೂರು ಕಾಫಿ ತಂದು ಬಿಡು.... ಪಂಕ್ತಿಭೇದ ಬೇಡ.

(ಜವರ ಹೋಗುತ್ತಾನೆ)

ರಾಜ—ಸ್ವಾಮಿ, ನೀವು ಬಂಧುಗಳು ಕುಳಿತಿರಿ, ನನಗೇಕೊ ಇಲ್ಲಿ ನಿಂತಿರಲು ಧೈರ್ಯವೇ ಆಗಲೊಲ್ಲದು.

ಶ್ಯಾಮಣ್ಣ—ಬಂದಿದ್ದೀರಿ- ಧೈರ್ಯಕ್ಕೆ ಕಾಫಿಯೂ ಬರುತ್ತದೆ. ಕುಡಿಯಿರಿ . ಕನ್ಯೆಯ ದರ್ಶನವಾದರೂ ಆಗಲಿ. ನಿಮಗೆ ಭಯವಾದರೆ—'ನನ್ನ ಬಂಧು' ಅನ್ನುತ್ತೇನೆ!

ರಾಜ ಹಾಗಿದ್ದರೆ ಪರವಾ ಇಲ್ಲ.

ಜವರ— (ಕಾಫಿ ತರುತ್ತಾನೆ, ಮೂವರು ಎತ್ತಿ ಕೊಳ್ಳುತ್ತಾರೆ.)

ಶ್ಯಾಮಣ್ಣ— ಜವರಾ, ಅಮ್ಮಾವರು ಒಳಗೇ ಇದ್ದರೇನೋ?

ಜವರ— ಹೌದು, ಇಲ್ಲೇ ಮಗ್ಗುಲು ಕೊಟಡಿಯಲ್ಲಿ ನೀವು ಬಂದದ್ದು ಅವರಿಗೆ ತಿಳಿದೇ ಇರಲಿಲ್ಲ. ನಾನು ಹೇಳಿದೆ....ಓದುತ್ತಾ ಇದ್ದರು ಒಳಗೆ....ಈಗ ಡ್ರೆಸ್ಸು ಮಾಡಿಕೊಂಡು ಬರುತ್ತಾರೆ.

ಶ್ಯಾಮಣ್ಣ— ಈ ಮನೆಯಲ್ಲಿ ಎಷ್ಟು ಜನ ಜವಾನರು, ಅಲ್ಲ ಕೆಲಸದವರು.

ಜವರ— ಅವರಿಗೇನು ಸ್ವಾಮಿ; ಎಷ್ಟೋಜನರನ್ನು ಕೆಲಸಕ್ಕೆಇರಿಸಿಕೊಂಡಾರು. ನೀವು ಕೆಲಸ ಹುಡುಕಿ ಬಂದವರೋ ಗುಮಾಸ್ತರೊಬ್ಬರು ಬೇಕು—ಎಂದು ಪೇಪರಿನಲ್ಲಿ ಪ್ರಕಟಣೆ ಕೊಟ್ಟಿದ್ದರು. ಅದನ್ನು ನೋಡಿ ಬಂದಿರೇ!

ಶ್ಯಾಮಣ್ಣ— ಹೂಂ, ಹುಂ—ನಾನಂತೂ ಅದಕ್ಕೆ ಬಂದದ್ದು....ಏನು ಸಂಬಳ ಕೊಡುತ್ತಾರೇ!

ಶ್ಯಾವ: ಸು.— ನಾನೂ ಅದಕ್ಕೇನೆ!

ರಾಜ— ನಾನು!

ಜವರ— ಮೂವರು ಒಂದೇ ಕೆಲಸಕ್ಕೆ, ಒಂದೇ ಸಾರಿ, ಒಟ್ಟೊಟ್ಟಿಗೇ ಬಂದರೆ! ಆಗಲಿ—ಯಾರ್‍ಯಾರ ಅದೃಷ್ಟ ಹ್ಯಾಗೆ ಹ್ಯಾಗೆ ಇದೆಯೋ!

(ಜವರ ಒಳಗೆ ಹೋಗುತ್ತಾನೆ).

ರಾಜ— ನೀವು ಅವರ ನಂಟರಲ್ಲವೇ! ನಂಟರೆಂದಿರಿ!

ಶ್ಯಾಮಣ್ಣ— ನಾನು ಹಾಗೆಂದೆನೆ! ನಂಟರು ಇರಬೇಕು—ಎಂದವರು ನೀವು! ನಾನು ಕೆಲಸ ಏನು—ಸಂಬಳ ಎಷ್ಟು— ಎಂದು ವಿಚಾರಿಸಲು ಬಂದವನು.

ರಾಜ — ನಾನು ಪಾರಾದೆ, ಅದಕ್ಕೆ— ಎಂದೆನಲ್ಲ.

ಶ್ಯಾಮಣ್ಣ— ಒಳ್ಳೆಯ ವ್ಯಾಪಾರ ನಿಮ್ಮದು; ನಿಮ್ಮಂತಹ ಸುಟಿಸುಟಿಯವರು ಇರುವಾಗ ನನ್ನನ್ನು ಆರಿಸುತ್ತಾರೆಯೇ! ನನ್ನ ಬದಲಿಗೆ ನಿಮ್ಮನ್ನು ಆರಿಸಿದರೆ ನಾನು ಕಾದು ಕುಳಿತು ಏನು ಬಂತು?

ರಾಜ— ಹಾಗೆ ಮಾಡಿಯಾಳು ಅನ್ನುತ್ತೀರಾ!

ಶ್ಯಾಮಣ್ಣ— ಸ್ವಲ್ಪ ಗೌರವವಾಗಿ ಮಾತನಾಡಿ-- ಯಜಮಾನರು ಆಗುವವರ ವಿಷಯದಲ್ಲಿ.

ರಾಜ— ತಪ್ಪಿದೆ, ಮಾಡಿಯಾರು ಅನ್ನುತ್ತೀರಾ? ಇಲ್ಲ— ಹೊರಟು ಹೋಗುತ್ತೇನೆ, ಕೆಲಸಕ್ಕೆ ಸಂಬಂಧ ಪಟ್ಟ ಪ್ರಶ್ನೆ ಕೇಳಿದರೂ ಕಷ್ಟವೇ.

ಶ್ಯಾಮಣ್ಣ— ಕೊಟ್ಟ ಕಾಫಿ ಕುಡಿಯುವತನಕ ನಿಂತು, ಈಗ ಅವರು ಬರುವಾಗ ಹೊರಟು ಹೋದರೆ

ರಾಜ— ಕೆಲಸಕ್ಕೆ ನಿಂತು ಬಿಡು— ಎಂದರೆ!

ಶ್ಯಾಮಣ್ಣ—ನಿಮ್ಮ Personality ಚೆನ್ನಾಗಿದೆ! ಮೊದಲು ಕೆಲಸಕ್ಕಾದರೆ ಕೆಲಸಕ್ಕೆ ನಿಲ್ಲಿ- ಕ್ರಮೇಣ, ಅನುಕೂಲ ಮಾಡಿಕೊಂಡು, ನೀವು ಜಮೀನುದಾರರು ಎಂಬುದನ್ನು ತಿಳಿಯ ಪಡಿಸಿ ಮದುವೆಯ Proposal ಹಾಕಿ...

ರಾಜ— ಅದೂ ಒಂದು ಚಾನ್ಸು ಇದೆಯಲ್ಲವೇ!

ಜವರ— ಅಮ್ಮ ಬಂದರು. ಕಾಫಿ ಕುಡಿದಾದರೆ, ಕಪ್ಪು ಬಸಿ ಹಿಡಿದು ಕೊಂಡು ಹೋಗುತ್ತೇನೆ.

(ಮೂವರು ಕಾಫಿ ಅವಸರನೆ ಕುಡಿದು ಬಾಯಿ ಸುಟ್ಟುಕೊಂಡು ಕೆಮ್ಮುವರು. ಕಾಲು ಸಪ್ಪಳ ಕೇಳಿ ನಿಲ್ಲುವರು! ನನು ಸ್ಮರಿಸುವರು.)

ರಾಜ— ನೋಡಿ ನೋಡಿ! ಏನೆನ್ನುತ್ತೀರಿ ರೂಪು! ರೂಪು ನೋಡುವಾಗ ನಿಲ್ಲುವ ಅನಿಸುತ್ತದೆ; ಪ್ರಶ್ನೆ ಕೇಳಿದರೆ ಓಡುವ ಅನಿಸುತ್ತದೆ! qualification ಏನು ಎಂದು ಕೇಳಿದರೆ ಹೇಳಬೇಕಲ್ಲ....

ಶ್ಯಾಮಣ್ಣ— ಹೇಳಿ ಸ್ವಾಮಿ, ಡಬಲ್ ಗ್ರೇಜ್ಯುಯೇಟ್—ಎಂದು.

ರಾಜ— ಇಂಗ್ಲಿಷಿನಲ್ಲೇ ಕೇಳಿದರೆ!

ಶ್ಯಾಮ—ದೇಶಭಕ್ತಿ ನನಗೆ ಹೆಚ್ಚು ಎಂದು ಕನ್ನಡದಲ್ಲೇ ಮಾತನಾಡಿ!

ರಾಜ—ನಡುವೆ ಇಂಗ್ಲಿಷ್ ಶಬ್ದಗಳು ಬಂದರೆ!

ಶ್ಯಾಮ— ಹಂಸ ಕ್ಷೀರ ನ್ಯಾಯದಂತೆ, ಇಂಗ್ಲಿಷ್ ಬಿಟ್ಟು, ಕನ್ನಡ ಸ್ವೀಕರಿಸಲಿ!

ಶ್ಯಾಮಣ್ಣ—ಸಾಕು ಮಹಾರಾಯ, ಸುಮ್ಮನಿರು, ಬಂದ್ಯು! ಆದರೆ ನೋಡು— ಶ್ಯಾಮಣ್ಣ— "next best to marriage is service"

ಸೂರ್ಯ— ಏನು ಬಂದಿ! ಕೆಲಸ ಹುಡುಕಿಕೊಂಡು ಬಂದಿರೆಂದು ಜವರ ಹೇಳಿದ— ಅರ್ಜಿ ಬರೆದು ತಂದಿದ್ದರೆ ಕೊಡಿ; ವಿಳಾಸ, testimonials ಎಲ್ಲಾ

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯನ್ನು ಓದಿರಿ.

*"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"
—ಬರಾಹಪುರಾಣ.

*"ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವನನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥನನ್ನು ಓದಬೇಕು."
—ಲೋಕಮಾನ್ಯ ತಿಲಕ.

*"ನನಗೆ ಸಂದೇಹಗಳು ಬಂದಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಬಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು."
—ಮಹಾತ್ಮಾ ಗಾಂಧಿ.

*"ಯಾವ ಸಮಾಜದೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವೆ ಆತ್ಮಶ್ರೇಯಸ್ಕರವಾದದ್ದು."
—ವಾರೆನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೂ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವಿದೆ.

ಗೀತೆಯ ಕೈಗನ್ನಡಿ

ಬೆಲೆ: 0—8—0 ; ಉತ್ತಮ ಪ್ರತಿ ರೂ. 0—12—0

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ಸಿಗುತ್ತವೆ.

ವಿ. ಸೂ— ರೂ. 0—12—0 ಕಳಿಸಿದರೆ ಪ್ರತಿಯೊಂದನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಯುಗ ಪ್ರೆಸ್, ಉಡುಪಿ, ದ. ಕ.

ಪಾರ್ತಿ ಸುಬ್ಬ

ಬರೆದವರು: ಶ್ರೀ ಎಂ. ಗೋವಿಂದ ಹೈ.

ನನ್ನ ಪರಮಾಪ್ತರಾಗಿದ್ದ ವೈಕುಂಠ ವಾಸಿ (ವೈ. ವಾ.) ಕುಂಬಳೆಯ ಕವಿರತ್ನ ನರಸಿಂಹ ಲಕ್ಷ್ಮಣ ನಾಯಕರೊಂದಿಗೆ (ಕ್ರಿಸ್ತಶಕ 1874—1945) **ಪಾರ್ತಿ ಸುಬ್ಬನು** ಯಾವಂದಿನವನಾಗಿರಬಹುದು ಎಂದು ನಾನೊಮ್ಮೆ (1939) ವಿಚಾರಿಸಿದ್ದಲ್ಲಿ ಅವರು ಹೀಗೆ ತಿಳಿಸಿದರು—

ಆ ನಾಯಕರ ಸಾಕಷ್ಟು ಹಿರಿಯ ಮಿತ್ರರಾದ ಹಾಗೂ ೯೦ ವರ್ಷಗಳಿಗೆ ದೀರ್ಘಾಯುಷಿಯಾಗಿ ಬಾಳಿದ ಕುಂಬಳೆಯ ಶ್ರೀಶ್ರೀ ಅನಂತ ಶಾನುಭಾಗ (1860—1950) ಎಂಬ ಪ್ರಸಿದ್ಧ ಆಡಿಕೆಯ ಹರದರೊಬ್ಬರು, ಆಡಿಕೆಯನ್ನು ಕೊಂಡುಕೊಳ್ಳಲಿಕ್ಕೆ ಕುಂಬಳೆಯ ನೆರೆ ಗ್ರಾಮಗಳಿಗೆ ಆಗಾಗ್ಗೆ ಹೋಗುತ್ತಲಿದ್ದವರು ಕುಂಬಳೆಯಿಂದ ೨—೩ ಮೈಲುಗಳೊಳಗೆ ಉಳ್ಳ ಕೋಟೆಕುಂಜೆಯ ಬಳಿಯ **ಬೇಕಮಂಗಲ** ಎಂಬ ಹಳ್ಳಿಗೆ ಹೋಗುತಿದ್ದಾಗ, ಅಲ್ಲಿದ್ದ **ಸುಬ್ಬಿ** ಎಂಬೊಬ್ಬ ಮುಮುಕಿಯ ಮನೆಯಲ್ಲಿ ತಂಗಿ, ಅಲ್ಲಿ ತಮ್ಮ ಕೆಯ್ಯಡಿಗೆಯನ್ನು ಮಾಡುತಿದ್ದರಂತೆ. ಇದು ಸುಮಾರು 1879ನೆಯ ಇಸವಿಯ ಕಥೆ. ಆ ಸುಬ್ಬಿ ದೇಶಮಂಗಲ ದೇವಸ್ಥಾನದ ಪಾಟಾಳಿಯೊ ಪಾಟಾಳಿಗಳ ಮನೆತನದವನೊ ಆದ **ಪಾರ್ತಿ ಸುಬ್ಬನ** ಪ್ರಾಯಶಃ ಒಬ್ಬಳೇ ಮಗಳ ಮಗಳು. ಆತನಿಗೆ ಗಂಡು ಸಂತತಿ ಇದ್ದಿಲ್ಲ, ಸುಬ್ಬಿಗೆ ಮಕ್ಕಳಿರಲಿಲ್ಲ. ಆಗ್ಗೆ ಆಕೆಗೆ ಸುಮಾರು ೬೦ ವರ್ಷ ಪ್ರಾಯ, ಅಂದರೆ ಆಕೆ ಹೆಚ್ಚು ಕಡಮೆ 1819ನೆಯ ಇಸವಿಯಲ್ಲಿ ಹುಟ್ಟಿರಬೇಕು.

ಹಾಗಾದರೆ **ಸುಭಾನು** ಸಂವತ್ಸರದಲ್ಲಿ ರಚಿತವಾಯಿತೆಂದಿರುವ **'ರಾವಣೋದ್ಭವ'** ಎಂಬ ಯಕ್ಷಗಾನ ಪ್ರಬಂಧದ ಕೊನೆಯ

ರಸಿಕಂ ರಸಾರ್ದ್ರಚಿತ್ತಂ
ಪೊಸದೇಸಿಯ ಕಬ್ಬಿಗನೊವಜಂ **ಪಾರ್ವತಿಜಂ**
ಕುಶಲಿಗ ಯಕ್ಷರ ಸಾಹಿತಿ
ಯಸುಂವಳಿಸಿದ **ದುರ್ಮತಿ** ಪೆಸರಿರದ
ಕೇಂದುಂ॥

ಎಂಬೀ ಕಂದ ಪದ್ಯದಲ್ಲಿ 'ಪೊಸ ದೇಸಿಯ ಕಬ್ಬಿಗ' ಎಂದೂ 'ಒವಜ' ಎಂದೂ 'ಯಕ್ಷರ ಸಾಹಿತಿ' ಎಂದೂ 'ಪಾರ್ವತಿಜ' ಎಂದೂ ಮಿಕ್ಕವರಿಗೆ ಸಲ್ಲದ ಗುಣವಾಚಿಗಳಿಂದ ಇಷ್ಟು ಸ್ಪಷ್ಟವಾಗಿ ಜಣ್ಣಿಸಲ್ಪಟ್ಟಾತನು, ಹೊಸತಾದ ದೇಸಿಯ ಅಂದರೆ ಜಾನಪದ ಸಾಹಿತ್ಯದ ಕಬ್ಬಿಗನು ಅಂದರೆ ಕವಿಯೂ, 'ಒವಜ'ನು ಅಂದರೆ, ಆ ಸಾಹಿತ್ಯದ ಆಚಾರ್ಯನೂ ಗುರುವೂ, 'ಯಕ್ಷರ ಸಾಹಿತಿ ಕುಶಲಿಗ' ಎಂದರೆ ಯಕ್ಷರ ಗಾನ ಸಾಹಿತ್ಯದಲ್ಲಿ ನಿಪುಣನೂ, ಆದ ಪಾರ್ವತಿಯ ಮಗನಾದ ಸುಬ್ಬನೇ ಅಂದರೆ ಪಾರ್ತಿ ಸುಬ್ಬನೇ ವಿನಾ ಅನ್ಯನಲ್ಲ ಎಂದು ಬೇಕಾದಷ್ಟು ನಿಷ್ಕೃಷ್ಟವಿರುವುದರಿಂದ, ಮೇಲೆ ಕಂಡಿರುವಂತೆ ಸುಮಾರು 1819ನೆಯ ಇಸವಿಯಲ್ಲಿ ಹುಟ್ಟಿದ ಸುಬ್ಬಿಯ ಮಾತಾಮಹನಾದ ಆತನ 'ಅಸುವಳಿಸಿದ' ಅಂದರೆ ಆತನು ಮರಣಪಟ್ಟ **ದುರ್ಮತಿ** ಸಂವತ್ಸರವೆಂದರೆ **1801—1802**ನೇಯ ಇಸವಿತಾನೆ. ಆತ ಏವ ಆತನು ಕ್ರಿ. ಶ. 1730 ರಿಂದ 1750ರೊಳಗೆ ಹುಟ್ಟಿರಬೇಕು, ಹಾಗೂ ಆ 'ರಾವಣೋದ್ಭವ' ರಚಿತವಾದ ಸುಭಾನು ಸಂವತ್ಸರವೆಂದರೆ ಕ್ರಿ. ಶ. 1823 — 24ನೆಯ ಇಸವಿಯಾಗಿರಬೇಕು.

ಇದೇ ಬಗ್ಗೆ ಮತ್ತೊಂದು ಆಧಾರವೂ ಇದೆ. ಪಾರ್ತಿ ಸುಬ್ಬನ ಸಮಸಾಮಯಿಕನಾಗಿ **ಕೆಂಗಣ್ಣ ನಾಯಕ** ಎಂಬ ಪ್ರಸಿದ್ಧ ವೇಷಧಾರಿಯೊಬ್ಬನು ಪ್ರಾಯಶಃ ಪಾರ್ತಿ ಸುಬ್ಬನು ಭಾಗವತನಾಗಿದ್ದ ಮೇಳದಲ್ಲೇನೋ ಇದ್ದನೆಂದು ಇತ್ತಕಡೆ ಕರ್ಣಾಕರ್ಣಿಕೆಯಾಗಿದೆ. ಆ ಕಾಲದಲ್ಲಿ ಈ ಕಡೆ ಹುಟ್ಟಿದ ರಾಜಕೀಯ ಅನಾಯಕ ಪ್ರಜೆಕ್ಕೆ ಸರಿಯಾಗಿ ಆ ಕೆಂಗಣ್ಣ ನಾಯಕನು ಟಿಪ್ಪು ಸುಲ್ತಾನನ ಸೈನಿಕರೊಂದಿಗೂ, ಕ್ರಿ. ಶ. 1799ರಲ್ಲಿ ಟಿಪ್ಪು

ಇವೆಯಲ್ಲ.... ವಿರಾಮದಲ್ಲಿ ನೋಡಿ ತಿಳಿಸುತ್ತೇನೆ...

(ಎಲ್ಲರೂ ಕಿಸೆಗೆ ಕೈಹಾಕಿ ಹುಡುಕುವರು)

ಶ್ಯಾಮಣ್ಣ— ನಾನು ಬರುವ ಅವಸರದಲ್ಲಿ ಅದನ್ನು ಮರೆತು ಬಿಟ್ಟೆ!

ಸೂರ್ಯ— ಅರ್ಜಿಯನ್ನು ಮರೆತು ಬಂದಿರಾ!

ಶ್ಯಾಮಣ್ಣ— ನೀವು?

(ಅವರೂ ಕಣ್ಣು ಕಣ್ಣುಬಿಡುವರು)

(ತಂತಿ ಕಚೇರಿಯ ಹುಡುಗ ಬರುತ್ತಾನೆ, ಸೈಕಲಿನ ಘಂಟೆ ಆಗುತ್ತದೆ)

(ಹುಡುಗ ತಂತಿಯೊಂದನ್ನು ತಂದು ಕೊಡುತ್ತಾನೆ.

ಸೂರ್ಯ— (ಅದನ್ನು ತೆರೆದು ಓದುತ್ತ, ನಗುವನ್ನು ಬೀರುತ್ತ....ಆತುರತೋರುತ್ತ) ಜವರಾ!

ಜವರಾ— ಏನು ತಾಯಿ?

ಸೂರ್ಯ ಘಂಟೆ ಹದಿನೊಂದಲ್ಲವೇ ಈಗ! ಎಷ್ಟು ತಡವಾಗಿ ಬಂತು ತಂತಿ! ಅವರು ಈಗಲೇ ಬರುತ್ತಾರಲ್ಲ! ಒಂದು ಘಂಟೆಯಾದರೂ ತಂತಿ ಮುಂಚಿತವಾಗಿ ಸಿಕ್ಕಿದ್ದರೆ!

ಜವರಾ— ಏನು ತಾಯಿ!

ಸೂರ್ಯ— ದೊಡ್ಡ ಯಜಮಾನರಿಗೆ ಹೇಳು—ಸಿರಿಯಾಪಿನಿಂದ ತಂತಿ ಬಂದಿದೆ! ಅವರು ಈಗಲೇ ಬರುತ್ತಾರಂತೆ—ಈಗಲೇ ಅಂದರೆ 11ಕ್ಕೆ....ಹದಿನೊಂದಕ್ಕೆ ಇನ್ನು ನಾಲ್ಕು ನಿಮಿಷಗಳೂ ಇಲ್ಲ. ನೀನು ನಮ್ಮ ದಿವಾನಖಾನೆಯನ್ನು ಗುಡಿಸಿ, ಸರಿ ಮಾಡು. ಒಳಗೆ ಹೋಗಿ ಕಾಫಿಗೆ, ತಿಂಡಿಗೆ ಹೇಳಿಡು—

ಸಿರಿಯಾರಿಂದ ಈಗ ಒಂದು ಮೋಟರು ಬರುತ್ತದೆ! ಹಾರ್ನ್ ಕೇಳಿದ ಕೂಡಲೆ, ನನ್ನನ್ನು ಬಂದು ಕರೆ...ನಾನು ತಿರುಗಿ ಡ್ರೆಸ್ ಮಾಡಿಕೊಳ್ಳಬೇಕು.

ಜವರಾ— ಯಾರು ಬರುತ್ತಾರವ್ವ!

ಸೂರ್ಯ— ಹೋಗೋ ಮಂಕ! ಯಾರೊ ದೊಡ್ಡವರು ಬರುತ್ತಾರೆ! ಬೇಗ ...ರೂಮು ಚೆನ್ನಾಗಿರಿಸು....

(ಇವರನ್ನು ನೋಡಿ...)

ನಾನು ತುಸು ಬಿಸಿ. (Busy) ಆಗಿದ್ದೇನೆ....ಅರ್ಜಿ ಬರೆದಿದ್ದರೆ, ಮೇಜಿನ ಮೇಲೆ ಇರಿಸಿ ಹೋಗಿ ಬಿಡಿ....ವಿರಾಮದಲ್ಲಿ ತಿಳಿಸುತ್ತೇನೆ (ಎಂದು ಉತ್ಸಾಹಿತ ನಗುಮೊಗದಿಂದ ಹೊರಡುವಳು!—)

ರಾಜಶೇಖರ— ಉಸ್ಸಪ್ಪ-ಒಮ್ಮೆಗೆ ತಪ್ಪಿದೆ ವಿಪತ್ತಿನಿಂದ! ಅರ್ಜಿ ಎಲ್ಲಿ ಎಂದೆ!....

ಶ್ಯಾಮಸುಂದರ—ಅದು ನನ್ನಲ್ಲಿಯೂ ಇದ್ದಿರಲಿಲ್ಲ....ಆದರೆ ಅವಳು ಹೋದ ರೀತಿ, ರೀವೆ ವಯ್ಯಾರ ನೋಡಿದರೆ ಬೇಕೆಂದೇ ನಮ್ಮನ್ನು ಹಾಸ್ಯ ಮಾಡಲು ಕರೆಯಿಸಿದ ಹಾಗೆ ಕಾಣಿಸುತ್ತದೆ ನನಗೆ!

ಶ್ಯಾಮಣ್ಣ— ಯಾಕೆ ಹಾಗೆನ್ನುತ್ತೀಯ!

ಶ್ಯಾಮ ಸು.— ಅವಳು ಬೇಡುವ ಗಂಡ ಬೇರೆಯೇ ಇದ್ದಾನೆ; ಅವನೇ ಬರುತ್ತಾನೆ ಎಂಬ ಹಾಗೆ ಅನಿಸುತ್ತದೆ ಅವಳು ಥಟ್ಟನೆ ಹೋದ ರೀತಿ ನೋಡಿದರೆ—

ಶ್ಯಾಮಣ್ಣ— ಹಾಗಾದರೆ ನಾವು ಇಲ್ಲಿಂದ ಹೊರಡುವುದು ಅನ್ನುತ್ತೀಯ!

ಶ್ಯಾಮ ಸು.— ನೀವೋ! ಮಹಾನುಭಾವರು! ಅವರ ಬಂಧುಗಳು ಎಂದು ನನ್ನನ್ನು ನಂಬಿಸಿ, ನನ್ನ ಬಾಯಿಯಿಂದ ಏನೇನು ಮಾತು ಬರಿಸಿ...ಹುಣ್ಣಕ್ಕೆ ಅವಳು ಕೇಳಿರಲಾರಳು....ಪಾರಾದೆವು! ಇಲ್ಲವಾದರೆ....

ಶ್ಯಾಮಣ್ಣ— ನಾನು ಹಾಗೆಂದೆನೇ? 'ನೀವು ಬಂಧುಗಳಿರಬೇಕು'— ಎಂದವರು ನೀವು! ನೀವು ಅಂದುದಕ್ಕೆ 'ಆಗಲಿ'-ಎಂದೆ ನಾನು! ಅಲ್ಲದೆ ಹೋದರೆ ಹುಡುಗಿಯ ಮನೆಗೇ ಬಂದು, ಅವರ ಬಂಧುಗಳಿಂದಲೇ ಗುಟ್ಟು ತಿಳಿಯಲು ಹೊರಟೆ ನಮ್ಮ ಬುದ್ಧಿಯೇ!

ಶ್ಯಾಮ. ಸು— ನನ್ನ ಬುದ್ಧಿಗೇನಾಗಿಲ್ಲ! ನಿಮ್ಮ ಮಗಳು! ನಂಬಿ ಕೆಟ್ಟೆವು! ಅಷ್ಟೆ! ಸಾಕು—ಹೋಗುವ.

ರಾಜ— ನಾನು ಹೊರಟೆ!

ಶ್ಯಾಮಣ್ಣ— ಜವಾನು ದಾರಿ ರೂ ಹೊರಟಿದ್ದೇ!

ಶಾ. ಸು— ಒಮ್ಮೆ ಆದ ಮಂಗಳಾರತಿ ಸಾಲದೇ!

ಶ್ಯಾಮಣ್ಣ— ಅದು ನೀವು ನೀವೇ ಮಾಡಿಕೊಂಡದ್ದು.

ಶ್ಯಾ. ಸು.— ನಾವು ನಾವೇ ಮಾಡಿಕೊಂಡದ್ದೇ....!

ಶ್ಯಾಮಣ್ಣ— ಮತ್ತೇನೆನ್ನುತ್ತೀರಿ? ಕಣ್ಣಿದ್ದು ಕಾಣದವರು ನೀವು!

ಶ್ಯಾಮ ಸು. — ಕಣ್ಣಿದ್ದು ಏನು ಕಾಣಲಿಲ್ಲ?—ನಾವು!

ಶ್ಯಾಮಣ್ಣ— ಕಣ್ಣಿದ್ದು ಏನು ಕಂಡಿರಿ: ಹಾಗಾದರೆ—ಅವನನ್ನು ಕಂಡಿರೋ? ಯಾರೆಂಬುದು ತಿಳಿಯಿತೋ!

ಶ್ಯಾಮ ಸು.— ಅವಳು ಯಾರಾದರೂ ನಮಗೇನು! ಅವಳ ಮೇಲೆ ನನ್ನ ದೂರಿಲ್ಲ; ನೋಡಲಿಕ್ಕೆ ಚಂದವಾಗಿದ್ದಾಳೆ; ಓದಿದ್ದಾಳೆ— ಅದು ಅವಳ ತಪ್ಪಲ್ಲ—ಅವರ ಬಂಧುಗಳು ಗಿಂಧುಗಳು ಎಂದು ಮೋಸಮಾಡಿದ ನೀವು— ....

ಶ್ಯಾಮಣ್ಣ— ಮೋಸ ನಾನು ಮಾಡಿದ್ದೋ!

ಶ್ಯಾಮ ಸು.— ಮತ್ತೆ!

ಶ್ಯಾಮಣ್ಣ— ಮೋಸ ಮಾಡಿದ್ದೇ— ಇದ್ದರೆ ಅದು ಅವನು; ಅವಳು....

ಶ್ಯಾಮ ಸು.— ಅಂದರೆ?

ಶ್ಯಾಮಣ್ಣ— ಅವಳು ಅವನಲ್ಲವೇ ರಾಯರೇ! ಅವನೇ ಅವಳಲ್ಲವೇ ರಾಯರೇ.

ಶ್ಯಾಮ ಸು.— ಏನೆನ್ನುತ್ತೀರಾ!—ಅವನು ಅವಳು, ಅವಳು ಅವನು ಎಂದು—

ಶ್ಯಾಮಣ್ಣ—ಅದೂ ತಿಳಿಯಲಿಲ್ಲ; ಆದೂ ಮದುವೆಯಾಗುವ ಚಪಲ! ದೊಡ್ಡವರ ಮನೆಯ ಪೆಣ್ಣು; ದುಡ್ಡು ಸಿಕ್ಕಿತು- ಎಂದು ಬಾಯಿ ಬಿಟ್ಟು ಬಂದಿರಿ, ಕುಳಿತಿರಿ.... ನೋಡಿ— ಮೊದಲು ಕೆಲಸದವನ ಹಾಗೆ ವೇಷ ಹಾಕಿ ಬಂದ ಮುಖವೂ, ಅವಳ ಮುಖವೂ ಒಂದೇ ಎಂದು ನಿಮಗೆ ಕಾಣಿಸಲಿಲ್ಲವೇ! ಆ ಮೇಲೆ ಅವರ ಮನೆಯ ಜಗುಲಿಯಲ್ಲಿ ಕುಳಿತು ಏನೇನು ಆಡಿದರಲ್ಲ!....

ಶ್ಯಾಮ—ಏನು! ಕೆಲಸದವನ ವೇಷದಲ್ಲಿ ಬಂದು ಮಾತನಾಡಿಸಿದ್ದು ಅವಳೇ! ಅವಳೇ!

ರಾಜ—ಆ ಹುಡುಗನೇ!

ಶ್ಯಾಮಣ್ಣ— ಆ ಹ.ಡುಗಿ... ಇನ್ನಾದರೂ ಹಾಗಿರ ಮಾತನಾಡಿ.

ಶ್ಯಾಮ— What a situation!

ಜವರ— (ಹೊರಗಿಂದ ಮೋಟರ್ ಬಂದು ನಿಲ್ಲುವುದು. ಹಾರ್ನ್ ಕೇಳಿಸುತ್ತದೆ. ಅವಸರಿಸಿ ಬಂದು—)

ಏನು ಇನ್ನೂ ಹೆಂಗರ ಹಾಗೆ ನಿಂತಿದ್ದೀರಿ ...? ಕಾಫಿ ಕುಡಿದಾಯಿತು ಅರ್ಜಿ ಬಿಟ್ಟು ಹೋಗಿ ಎಂದು ಅಮ್ಮಾವರು ಹೇಳಿದರೆ ನಿಂತೇ ಇದ್ದೀರಲ್ಲ.

(ಒಳಗಿಂದ)

ಸೂರ್ಯಕು.-ಜವರಾ, ಕಾರು ಬಂತು ಅಂತ ಕಾಣುತ್ತದೆ; ಹೋಗಿ ಅವರನ್ನು ಕರೆದುಕೊಂಡು ಬಾ!

ಜವರ— ನೀವು ಹೋಗಿ ಸ್ವಾಮಿ.... ಇಲ್ಲಿ ಕೆಲಸವಿಲ್ಲದೆ ನಿಂತಿರಬೇಡಿ!

ಮೂವರು— (ಹೊರಡುತ್ತ)

ಶ್ಯಾಮ ಸು.— ಎಂಥ ಆಕಸ್ಮಿಕ ಸಿಟಿಯೇಶನ್!

ಶ್ಯಾಮಣ್ಣ— ಎಂಥ ಟೆರಿಬಲ್ ಊಮನ್!

ರಾಜ— ನಿಮ್ಮಂಥವರ ಕೈಗೆ ಸಿಕ್ಕಿ ನನ್ನ ಕೈತಪ್ಪಿತು-ಒಂದು ಲಾಲ್ಲಿ ಊಮನ್!

(ನಿಷ್ಕ್ರಮಣ-)

(ಹುಡುಗಿಯ ಅಜ್ಜನೂ ಹೊಗೆ ಬರುತ್ತಾರೆ! ಜವರ ಬಂದವರನ್ನು ರಸ್ತೆಯಿಂದ ಕರೆದುತರುತ್ತಾನೆ. ಬೆತಗಿನ ಉಡ.ಗೆಯಿಂದ ಸೂರ್ಯಕುಮಾರಿಯೂ ನಗುತ್ತ ಬಂದು ಸ್ವಾಗತಿಸುತ್ತಾಳೆ)

ಸೂರ್ಯಕು.— ಗುಡ್ ಮಾರ್ನಿಂಗ್. ನಿಮ್ಮ ತಂತಿ ಈಗತಾನೆ ಬಂತು.

ಮೂವರು— (ನಿಷ್ಕ್ರಮಿಸುತ್ತ)— ನಮ್ಮ ತಂತಿ ಮಾತ್ರ ತೀರಾ ಕಡಿಯಿತು!

ಮಡಿದ (4-5-1799) ಬಳಿಕ ತುಳುನಾಡಿನ ಆಡಳಿತವನ್ನು ಆಂಗ್ಲರು ಕೈಯ್ಯೆಳ್ತತ್ತಲೆ ಅವರ ಸೈನಿಕರೊಂದಿಗೂ ಕಾದಾಡಿ ಅವರನ್ನು ದಿಕ್ಕಾಪಾಲಾಗಿ ಓಡಿಸಿದ್ದ ಕಾರಣ ಆತನಿಗೆ ಲೋಕ ರೂಢಿಯಲ್ಲಿ ಸಿಡಿಲ ಮರಿ ಕೆಂಗಣ್ಣ ನಾಯಕ ಎಂದು ಮೇಲುಹೆಸರಾಯಿತಂತೆ. ಇಲ್ಲಿ 'ಸಿಡಿಲ ಮರಿ' ಎಂದರೆ ಮಿಂಚು. ಆದರೆ ಅದೊಂದು ತೀರ ಅಪೂರ್ವವಾದ ಹೆಸರು ಕನ್ನಡ ಸಾಹಿತ್ಯದಲ್ಲಿ (ನಾನು ಬಲ್ಲಷ್ಟರ ಮಟ್ಟಿಗೆ). ಹೇಗೂ ಆ ಅರ್ಥದಲ್ಲಿ ಇಲ್ಲವಷ್ಟೇ, ಕನ್ನಡನಾಡಿನಲ್ಲಾದರೂ ಪ್ರಾಯಶಃ ಅವರಿಗೆ ಇದ್ದಿಲ್ಲದ ಹೆಸರು. § ಆ ಹೆಸರನ್ನು ಪಾರ್ತಿ ಸುಬ್ಬನು ತನ್ನ 'ಅಂಗದ ಸಂಧಾನ' ಎಂಬ ಯಕ್ಷಗಾನ ಪ್ರಸಂಗದಲ್ಲಿ ಬಳಸಿರುತ್ತಾನೆ—

ಬಲು ಬಿಂಕವೆಸೆಯೆ ಸಿ
ಡಿಲ ಮರಿಯಂತಿರ್ಪ
ಕಲಹಪ್ರಿಯಸುಂಗದ॥

ಈಕಾರಣವೂ ಆತನು ಕ್ರಿ. ಶ. 1800ರ ವರೆಗಾದರೂ ಜೀವಿಸಿದ್ದನೆಂದು ಕಂಡಿತವಾಗಿ ಸಿದ್ಧವಾಗುತ್ತದೆ.

ಇವಲ್ಲದೆ ಕವಿರತ್ನ ನರಸಿಂಹ ನಾಯಕರ ತಂದೆ ವೈ. ವಾ. ಕುಂಬಳೆಯ ಲಕ್ಷ್ಮಣ ನಾಯಕರು (ಕ್ರಿ. ಶ. 1812—1907) ಹುಟ್ಟುವ ಕೆಲವು ವರ್ಷಗಳ ಹಿಂದೆ ಪಾರ್ತಿ ಸುಬ್ಬನು ಗತಿಸಿದ್ದನೆಂದೂ ಆತನು ಕುಂಬಳೆಯ ದೊಡ್ಡ ರಾಯಪ್ಪ ನಾಯಕರು ಕಟ್ಟಿದ ಕುಂಬಳೆಯ ದಶಾವತಾರದ ಮೇಳದಲ್ಲಿ ಭಾಗವತನಾಗಿ ಇದ್ದನೆಂದೂ ಅವರು ಹುಟ್ಟುವ ಕೆಲ ವರ್ಷಗಳ ಮುಂಚಿನ ಅವರು ಕೇಳಿಬಲ್ಲ ಸುದ್ದಿಯನ್ನು ಹೇಳಿರುವ ನೆನಪೂ ನನಗಿದೆ.

ಪಾರ್ತಿ ಸುಬ್ಬನ ಯಾವುದೋ ಒಂದು ಯಕ್ಷಗಾನ ಪ್ರಸಂಗದಲ್ಲಿ (ಪ್ರಾಯಶಃ ಬಹು ಮಂದಿ ಆತನ ಕೃತಿ ಎಂಬ 'ಬಾಲಲೀಲೆ'ಯಲ್ಲೇನೋ) ತಾನು 'ವೆಂಕಣಾರ್ಯನ ಸತಿ ಸುಗುಣೆ ಪಾರ್ತಿ ಎಂಬಳ ಮಗಂ' ಎಂದು ಆತನು ಹೇಳಿಕೊಂಡಿರುತ್ತಾನೆಂದು ಆ ಪಾಡನ್ನು ಮೇಲೆ ಹೆಸರಿಸಿರುವ ಅನಂತ ಶಾನುಭಾಗರು ತನಗೆ ಕೇಳಿಸಿರುತ್ತಾರೆಂದು ಕವಿರತ್ನ ನರಸಿಂಹ ನಾಯಕರು ನನಗೆ ತಿಳಿಸಿರುತ್ತಾರೆ. ಆದನ್ನು ಒಪ್ಪಿದರೆ ಪಾರ್ತಿ ಸುಬ್ಬನ ತಂದೆಯ ಹೆಸರು ವೆಂಕಣಾರ್ಯ, ಅಂದರೆ ಬಹುಶಃ ವೆಂಕಣ್ಣಯ್ಯ ಎಂದೂ, ತಾಯಿಯ ಹೆಸರು ಪಾರ್ತಿ, ಅಂದರೆ (ಮುಂದೆ ತಿಳಿವಂತೆ) ಪಾರ್ವತಿ ಎಂದೂ ಗೊತ್ತಾಗುತ್ತದೆ. ಹೇಗೂ ಪಾರ್ತಿ ಸುಬ್ಬನದೇ ಎಂದು ಕಂಡಿತ ಉಳ್ಳ 'ಪಟ್ಟಾಭಿಷೇಕ' ಎಂಬ ಯಕ್ಷಗಾನ ಪ್ರಬಂಧದ ಈ ಆದಿಮ ಶಾರ್ದೂಲವಿಕ್ರೀಡಿತ ವೃತ್ತದಿಂದ—

ಧಾತ್ರೀಪುಂದನ ಕಣ್ವನಾಮ ಪುರದೊಳ್ ಮಯ್ದೋರಿ ಭಕ್ತಾಳಿಯಂ
ಸತ್ಪ್ರಾದಾಜ್ಞ ಮರಂದದಿಂ ತಣಿಯಿಸುತ್ತಾ ರಂಪ್ ಶ್ರೀ ಕೃಷ್ಣನಾ।
ಭಕ್ತಿಸ್ರೋತದೊಳೊಂದುಗೂಡಿ ಪರಿಯುತ್ತೀ ಪಾರ್ವತೀ ನಂದನಂ
ಬತ್ತೀಸಂಕೆಯ ರಾಗತಾಳಗತೊಳೀ
ರಾಮ ... ಗಾಡಿಗಂ॥

(ಈ ವೃತ್ತದಲ್ಲಿಯ ಪ್ರಾಸಾಕ್ಷರಗಳನ್ನು ಗಮನಿಸಿರಿ)

ಆತನು 'ಕಣ್ವನಾಮ ಪುರದ' ಅಂದರೆ ತುಳುನಾಡಿನ ಕುಂಬಳೆಯ ಶ್ರೀ ಕೃಷ್ಣ ದೇವರ ಆರಾಧಕನೆಂದೂ, 'ಪಾರ್ವತೀ ನಂದನಂ' ಅಂದರೆ ಆತನ ತಾಯಿಯ ಹೆಸರು ಪಾರ್ವತಿ ಎಂದೂ ವ್ಯಕ್ತಪಾಗುತ್ತದೆ. ರಾವಣೋದ್ಭವದಿಂದ ಮೇಲೆ ಉದ್ಧರಿಸುವ ಆ ಕಂದ ಪದ್ಯದಲ್ಲೂ ಆತನನ್ನು 'ಪಾರ್ವತಿಜಂ' ಎಂದದೆ. ಆ ಪಾರ್ವತಿಯೇ ಜನವಾಣಿಯಲ್ಲಿ ಪ್ರಾಯಶಃ ಆಕೆಯ ಮನೆಹೆಸರಾದ ಪಾರ್ತಿ ಆಯಿತು.

ಪಾರ್ತಿ ಸುಬ್ಬನು ದೇಶಮಂಗಲದ ದೇವಸ್ಥಾನದ ಪಾಟಾಳಿಯೊ ಪಾಟಾಳಿಗಳ ಮನೆತನದವನೊ ಎಂದೆವಲ್ಲ? ಪಾಟಾಳಿ ಎಂದರೇನು? ಪಾಟಾಳಿ ಎಂದರೆ ಪ್ರಾಯಶಃ ಪಾಡಾಳಿ (ಕನ್ನಡ ಶಬ್ದಮಣಿದರ್ಪಣ ಸೂತ್ರ ೨೦೨), ಪಾಡಾಳಿ ಎಂದರೆ ಹಾಡುಗಾರ, ಅಂದರೆ ಅಯಾ ದೇವಸ್ಥಾನಗಳಲ್ಲಿ, ನಾನು ಬಲ್ಲಷ್ಟರ ಮಟ್ಟಿಗೆ ಮುಖ್ಯತಃ ತುಳುನಾಡಿನ ದ್ರಾವಿಡ ಸಂಪ್ರದಾಯದ ದೇವಸ್ಥಾನಗಳಲ್ಲಿ, ದೇವರ ಮುಂದೆ ಅಯಾ ಹೊಸ್ತುಗಳಲ್ಲಿ ದಿನಾಲೂ ಹಾಡುವಾತ ಎಂದು ಆ ಪದದ ಮೂಲಾರ್ಥವೆಂದು ತೋರುತ್ತದೆ. ಕ್ರಮೇಣ ಆ ವೃತ್ತಿಯಿಂದ ಮೇಲೇರಿ ಈಗ ಪಾಟಾಳಿ ಹೆಚ್ಚಾಗಿ ದೇವಸ್ಥಾನಗಳಲ್ಲಿ ಪಾರುಪತ್ಯಗಾರನಾಗಿರುತ್ತಾನೆ. ಪಾರ್ತಿ ಸುಬ್ಬನು ತನ್ನ ಕೃತಿಗಳಲ್ಲಿ ದೇಶಮಂಗಲದ ದೇವರ ಹೆಸರೆತ್ತದೆ ಕಣ್ವಪುರದ ಅಂದರೆ ಕುಂಬಳೆಯ ಶ್ರೀ ಕೃಷ್ಣನನ್ನೇ ಸ್ಮರಿಸಿರುವುದರಿಂದ, ಆತನು ದೇಶಮಂಗಲದ ದೇವಸ್ಥಾನದಲ್ಲಿ ತಾನೇ ಪಾಟಾಳಿಯಾಗಿದ್ದನೆಂಬುದಕ್ಕಿಂತ ಆ ಪಾಟಾಳಿಕೆ ಪ್ರಾಯಶಃ ಆತನ ಮನೆತನದ ವೃತ್ತಿಯಾಗಿರಬೇಕೇ ಹೊರತು ಆತನ ಸ್ವಂತ ಉದ್ಯೋಗವಾಗಿರಲಿಲ್ಲ, ಆಕಾರಣ ಅದನ್ನು ತಾನೇ ಅಲ್ಲ, ಆತನ ಕುಟುಂಬದ ಬೇರೆ ಯಾರೊ ಅಲ್ಲಿ ನಿರ್ವಹಿಸುತ್ತಿರಬೇಕು ಎಂದು ಸಿದ್ಧಯಿಸಬಹುದು.

ಆತನು ಕುಂಬಳೆಯ ಬಯಲಾಟದ ಮೇಳದಲ್ಲಿ ಭಾಗವತನಾಗಿದ್ದನೆಂದೂ ಲೋಕವಾದವಿದೆ. ಆತನ ಎಲ್ಲವೆಂಬಂತೆ ಕೃತಿಗಳಲ್ಲಿ ಕೊನೆಯ ಮಂಗಲಪದವಾಗಿರುವ 'ಎದೆಯಾರತಿ ಎತ್ತಿರೆ' ಎಂದು ಪ್ರತಿ ಚರಣವೂ ಮುಗಿವ ಆ ಹಾಡಿನಲ್ಲಿ ಕಣ್ವಪುರ ಪತಿಗೆ ಮೇಳದೊಳೊಪ್ಪಿಸುವೆನು'. (=ಕುಂಬಳೆಯ ಶ್ರೀ ಕೃಷ್ಣ ದೇವರಿಗೆ ಮೇಳದೊಂದಿಗೆ ಒಪ್ಪಿಸುವೆನು) ಎಂದಿರುವಲ್ಲಿಂದ ಆ ಜನಶ್ರುತಿ ಸಾಕಷ್ಟು ಪುಷ್ಟವಾಗುತ್ತದೆ. 1809ನೆಯ ಇಸವಿಯಲ್ಲಿ ವೈಕುಂಠವಾಸಿಯಾದ ಕುಂಬಳೆಯ ದೊಡ್ಡ ರಾಯಪ್ಪ ನಾಯಕರೆಂಬ ಶ್ರೀಮಂತರು ಕುಂಬಳೆಯಲ್ಲಿ ಒಂದು ದಶಾವತಾರದ ಆಟದ, ಅಂದರೆ ಬಯಲಾಟದ ಮೇಳವನ್ನು ನೆರಸಿ ಜನನ್ನು ಬಂಟವಾಳದತ್ತಣ ವೇಂಕಟೇಶ ಭಾಗವತ ಎಂಬವನಿಗೆ ಒಪ್ಪಿಸಿದ್ದರು. ಪಾರ್ತಿ ಸುಬ್ಬನು ಆ ಮೇಳದಲ್ಲಿ ವೇಂಕಟೇಶ ಭಾಗವತನಿಗಿಂತ ಮುಂಚೆ ಭಾಗವತನಾಗಿ ಇದ್ದಿರಬಹುದು. ಹಾಗೆಯೇ ಭಾಗವತಿಕೆಯಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಷ್ಟರ ಪರಾಕಾಷ್ಠೆಗೆ ಅಯ್ದಿ ಕೀರ್ತಿಗೊಂಡ ವೈ. ವಾ. ಮೂಲಿಕೆಯ ಮಂಜುನಾಥ ಭಾಗವತರೂ, ಅವರಂದಿನ ಹಾಗೂ ಅವರ ಹಿಂದಿನ ಭಾಗವತರೂ, ಎಲ್ಲರೆಂಬಂತೆ ನೊತ್ತಮೊಢಲು ವೇಷಧಾರಿಗಳಾಗಿ ರಂಗಾವತರಣ ಮಾಡಿ ತಾನೇ ಆಮೇಲೆ ಭಾಗವತಿಕೆಯ ಜಾಗಟೆ ಹಿಡಕೊಂಡ ವಿತಿಹ್ಯಕ್ಕೆ ಅನುಗುಣವಾಗಿ ಪಾರ್ತಿ ಸುಬ್ಬನೂ ವೇಷಧಾರಿಕೆಯಿಂದ ತಾನೆ ಭಾಗವತಿಕೆಗೆ ಹೋಗಿದ್ದನೆಂದು ಊಹಿಸಬಹುದು.

ಪಾರ್ತಿ ಸುಬ್ಬನು ತಿರುವಾಂಕೋಡು ರಾಜ್ಯಕ್ಕೆ (Travancore State) ಹೋಗಿ ಅಲ್ಲಿ ಕೊಂಚ ಸಂಸ್ಕೃತವನ್ನು ಕಲಿತಿದ್ದನೆಂದೂ ತಾನು ಅಲ್ಲಿ ಕಂಡ 'ಕೂತ್ತುಕ್ಕಳಿ'ಗಳ ('ಕೂತ್ತುಕ್ಕಳಿ' ಅಂದರೆ ಕುಣಿದಾಡುವ ಆಟ) ಬಗೆಯವೇ ವೇಷಗಳನ್ನು ಇಲ್ಲಿ ನಮ್ಮ ತುಳುನಾಡಿನಲ್ಲಿಯೂ ಬರೆಯಿಸಿದನೆಂದೂ ಒಂದು ಪ್ರವಾದವಿದೆ. ಈ ಜನಶ್ರುತಿಯಲ್ಲಿ ಅಲ್ಲಿಯ ವೇಷಗಳನ್ನು ಇಲ್ಲಿ ಆಚರಣೆಗೆ ತಂದನೆಂಬುವುದನ್ನು ಒಂದು ವೇಳೆ ಒಪ್ಪಬಹುದಲ್ಲದೆ, ಆತನು ಅಲ್ಲಿ ಸಂಸ್ಕೃತವನ್ನೂ ಕಲಿತನೆಂಬುದನ್ನು ಅಷ್ಟು ನಂಬಲಾಗುವುದಿಲ್ಲ. ಏಕೆಂದರೆ ಆತನಿಗೆ ಸಂಸ್ಕೃತದ ಸರಿಜ್ಞಾನ ಅಷ್ಟರ ಮಟ್ಟಿಗೆ ಇದ್ದಂತೆ ಆತನ ಕೃತಿಗಳಿಂದ ಬಯಲಾಗುವುದಿಲ್ಲ.

ದಶಾವತಾರದ ಆಟಗಳ ಲಕ್ಷಣಗಳನ್ನೂ ಕ್ರಮಗಳನ್ನೂ ಸೂತ್ರಕಲ್ಪವಾಗಿ ವಿವರಿಸಿದ್ದು, ಸಂಸ್ಕೃತ ಸಾಹಿತ್ಯಕ್ಕೆ ಪಾಣಿನಿಯ ಅಷ್ಟಾಧ್ಯಾಯಿ ಹೇಗೋ ಹಾಗೆ ಯಕ್ಷಗಾನದ ಆಟಗಳಿಗೆ ಮೂಲಾಧಾರವಾಗಿರುವ 'ಸಭಾಲಕ್ಷಣ' ಎಂಬ ಆ ಉತ್ತಮವಾದ ಗ್ರಂಥದ ರಚಕನು ಪಾರ್ತಿ ಸುಬ್ಬನೆಂದು ಒಂದು ಮತ, ಅತನಲ್ಲ, ಆತನಿಗಿಂತ ಹಿಂದಣ ಹಾಗೂ ಕಾಸರಗೋಡಿನ ಕೆಲದ ಮದೂರು ಎಂಬಲ್ಲಿಯ ಶ್ರೀ ವಿಘ್ನೇಶ ದೇವರ ಆರಾಧಕನಾದ ಬೆಸಕಯ್ಯ ಭಾಗವತನೆಂದುಮತ್ತೊಂದು ಮತ, ಹೀಗೆ ಆಕುರಿತು ಬಲ್ಲವರಲ್ಲಿ ದ್ವೈಧವಿರುವುದರಿಂದ ಆಪ್ರಶ್ನೆಯನ್ನು ಒತ್ತಟ್ಟಿಗಿಟ್ಟರೆ, ಪಾರ್ತಿ ಸುಬ್ಬನಿಂದ ರಚಿತವಾದುವೆಂದು ಸಿದ್ಧಯಿರುವ ೧೨ ಎಂಟಾದರೂ ಯಕ್ಷಗಾನ ಪ್ರಸಂಗಗಳಿವೆ— (೧) ಪಟ್ಟಾಭಿಷೇಕ, (೨) ಪಂಚವಟಿ, (೩) ವಾಲಿ-ಸುಗ್ರೀವರ ಕಾಳಗ, (೪) ಉಂಗುರ ಸಂಧಿ ಅಥವಾ ಚೂಡಾಮಣಿ, (೫) ಸೇತುಬಂಧನ, (೬) ಅಂಗದ ಸಂಧಾನ, (೭) ಕುಂಭಕರ್ಣನ ಕಾಳಗ, ಮತ್ತು (೯) ಇಂದ್ರಜಿತುವಿನ ಕಾಳಗ. ಇವೆಲ್ಲವೂ ರಾಮಾಯಣದಿಂದ ತಾನೇ ಎತ್ತಿಕೊಂಡ ಕಥಾಪ್ರಸಗಂಗಳು, ಇವನ್ನು ರಚಿಸುವಲ್ಲಿ ಆತನು ಕನ್ನಡ ತೊರವೆಯ ರಾಮಾಯಣದಿಂದ ಎರಕೊಂಡಿರುತ್ತಾನೆ. ಪಟ್ಟಾಭಿಷೇಕದಿಂದ ಸರಾಗವಾಗಿ ಮುಂದೆ ಸಾಗುವ ಈ ರಾಮಾಯಣದ ಕಥೆಗಳ ಒಳಿಯಲ್ಲಿ ನಡುವಣ ಭರತಸಮಾಗಮವೂ ಕೊನೆಯ ರಾವಣನ ಕಾಳಗವೂ ಇಲ್ಲವೆಂಬುದು ಸೋಜಿಗ. ಈ ಪ್ರಸಂಗಗಳಲ್ಲಿ ಯಾವುದೂ ಉದ್ದವಾಗಿಲ್ಲ; ವಾಲಿ-ಸುಗ್ರೀವರ ಕಾಳಗ, ಕುಂಭಕರ್ಣನ ಕಾಳಗ, ಇಂದ್ರಜಿತುವಿನ ಕಾಳಗ, ಇವಂತೂ ಬಲು ಚಿಕ್ಕವು.

ಕನ್ನಡ ಸಾಹಿತ್ಯ ದೇಸಿ ಎಂದೂ ಮಾರ್ಗ ಎಂದೂ ಎರಡು ವಿಧವಾಗಿದೆ. ಅವಲ್ಲಿ ಮಾರ್ಗಗಿಂತ ದೇಸಿ ಹಳದು, ಅದೇ ಮೂಲ ಸಾಹಿತ್ಯ, ಅದೇ ಸ್ವಭಾವಸಿದ್ಧವಾದ ಕನ್ನಡ ಸಾಹಿತ್ಯ. ದೇಸಿ ಎಂದರೆ ಊರ ಬಾವಿಯಂತೆ; ನೀರು ತಿಳಿದಾಗಿದೆ, ತಣ್ಣಗಾಗಿದೆ ಮಾತ್ರವಲ್ಲ, ಸೇದಿದಷ್ಟು ಇದೆ, ಊರಿನ ಎಲ್ಲರಿಗೂ ಸಾಲುತ್ತದೆ. ಮಾರ್ಗಿಯಾದರೆ ಹೊಳೆಯಂತೆ; ಎಲ್ಲಿಯೋ ಹುಟ್ಟಿ ಅನೇಕ ಊರುಗಳ ದಾರಿಯಾಗಿ ಹರಿದು ಬರುತ್ತದೆ, ಅದೆಷ್ಟೋ ಬಗೆಯ ಜಲಜಂತುಗಳನ್ನು ಒಳಕೊಂಡಿದೆ, ಎಷ್ಟೋ ಜಲಯಾನಗಳನ್ನು ತಳಕೊಂಡಿದೆ, ಎಷ್ಟೋ ಬಗೆಯ ಧಾತುಗಳ ಪದರುಗಳನ್ನು ಆಪ್ಪಯಿಸುತ್ತದೆ, ಎಷ್ಟೋ ಮಂದಿತೀರ್ಥವೆಂದುಮಿಂದವರನ್ನು ಸುದ್ದಯಿಸುತ್ತದೆ, ತನ್ನ ದಂಡೆಯ ಅಯಾ ಊರವರಿಗೆಲ್ಲ ತನ್ನ ನೀರನ್ನು ಉಣಿಸುತ್ತದೆ, ತಣಿಸುತ್ತದೆ. ದೇಸಿ ಸಾಮಾನ್ಯ ಜನರ, ಮುಖ್ಯತಃ ಹಳ್ಳಿಯವರ, ಜೀವನವನ್ನು ಬಿಂಬಿಸುವುದಾದರೆ, ಮಾರ್ಗಿ ಮಹಾಜನರ, ವಿಶೇಷತಃ ಪಟ್ಟಣಿಗರ, ನಾಗರಿಕರ ಜೀವನವನ್ನು ಚಿತ್ರಿಸುತ್ತದೆ. ಆ ಕಾರಣ ಅವುಗಳ ಆಕೃತಿಯಲ್ಲೂ ಪ್ರಕೃತಿಯಲ್ಲೂ ತುಂಬ ಅಂತರವೂ ಇದೆ. ವೃತ್ತ—ಕಂದಗಳಲ್ಲೂ, ಚಂಪುವಿನಲ್ಲೂ, ಷಟ್ಪದಿಗಳಲ್ಲೂ, ರಗಳೆಗಳಲ್ಲೂ ರಚಿಸಿದ ಕಾವ್ಯಗಳು ಹೇಗೆ ಮಾರ್ಗಿಯಲ್ಲಿ ಸೇರುತ್ತವೊ, ಹಾಗೆ ಯಕ್ಷಗಾನ ಪ್ರಸಂಗಗಳೂ, ಲಾವಣಿಗಳೂ, ಜಾವಳಿಗಳೂ, ಕೇರ್ತನೆಗಳೂ, ಮದುವೆಯ ಹಾಡುಗಳೂ, ತೊಟ್ಟಿಲ ಹಾಡುಗಳೂ ಮೊದಲಾದುವೆಲ್ಲವೂ ದೇಸಿಯಲ್ಲಿ ಕೂಡುತ್ತವೆ. ಅವುಗಳಲ್ಲಿ ಯಕ್ಷಗಾನವೆಂದರೆ ದೇಸಿಯ ಕಣ್ಣು. ಯಕ್ಷಗಾನಗಳಲ್ಲಿ ಬರೇ ಹಳ್ಳಿಗರನ್ನಲ್ಲ, ರಾಮಾಯಣ—ಭಾರತಗಳ ಮಹಾವೀರರನ್ನೇ ಚಿತ್ರಿಸಿದೆಯಾದರೂ, ಆ ಚಿತ್ರಣದ ಹೊರಿಗೆ ದೇಸಿಯ ಸಾಮಾನ್ಯರ ದೃಷ್ಟಿ

ಓದಲೇಬೇಕಾದ ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು
(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೇಷಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ
"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಸೊತ್ತು. ಆ ದುರಂತ ಕರ್ಣಚರಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)
ಮೂರೂ ಪುಸ್ತಕಗಳನ್ನೂ ದಿ। ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

§ ಮಂದಿಯ ಮಾತಿನಲ್ಲಿ 'ಸಿಡಿಲ ಮರಿ' ಎಂದರೆ ಆಣಬೆ (ಆಳಂಬೆ) = mushroom ಎಂದು ಅರ್ಥವಾಗುತ್ತದೆ (ಅದು ಸಿಡಿಲಿನ ಮೊಳಗಿಗೆ ಹುಟ್ಟುತ್ತದೆಂದು ನಂಬುವ ಕಾರಣ.)

ನಿಂದಲೇ ಹೊರತು ಮಾರ್ಗದರ್ಶಿಗಳ ವಿಶ್ವಜ್ಞನರ ವೃಷ್ಟಿಯಿಂದಲ್ಲ.

ಪಾರ್ತಿ ಸುಬ್ಬನ ಪ್ರಸಂಗಗಳಲ್ಲಿ ದೇಸಿಗೆ ತಕ್ಕಂತೆ ಸಂಭಾಷಣೆಯೆಂದರೆ, ನಾವು ನೀವು ಪಡಸಾಲೆಯಲ್ಲಿ ಕೂತು ಪಟ್ಟಾಂಗ ಹೊಡೆಯುವಷ್ಟರ ಸಲುಗೆಯ ಮಾತಿನಲ್ಲಿ, ಉದಾ: ಆತನ 'ಪಂಚವಟಿ'ಯಲ್ಲಿ ಶೂರ್ಪಣಖೆಗೂ ರಾವಣನಿಗೂ, ರಾವಣನಿಗೂ ಮಂಡೋದರಿಗೂ, 'ವಾಲಿಸಂಹಾರ'ದಲ್ಲಿ ವಾಲಿಗೂ ಶ್ರೀರಾಮನಿಗೂ, 'ಅಂಗದ ಸಂಧಾನ'ದಲ್ಲಿ ಅಂಗದನಿಗೂ ರಾವಣನಿಗೂ ನಡೆದ ಸಂಭಾಷಣೆ ಇತ್ಯಾದಿ. ಆತನ ಅಲಂಕಾರಗಳೆಂದರೆ ಗೋಧಿಯನ್ನು ಹದವಾಗಿ ಬೀಸುವಲ್ಲಿ ಹಿಟ್ಟಿನೊಂದಿಗೆ ಸಹಜವಾಗಿ ಉದುರುವ ಸಜ್ಜಿಗೆಯಂತೆ, ಉದಾ: 'ಅಳಲಿನ ಮಳಲೊಳೊರಬಾರದು ಮನವ' ('ಪಟ್ಟಾಭಿಷೇಕ'), 'ಅರಸಿನದ ಪುಡಿಗೆದರಿದಂತಿಹುದು' ('ಪಂಚವಟಿ'), 'ಬೆಕ್ಕುಗಳಿಗು ಕೋಡು ಬಂದರೂ....ಸೊನ್ನೆಯೆ ತಾಸಂಕೆಯಾದರೂ' ('ಅಂಗುರ ಸಂಧಿ'), 'ಬೇರ ಬಲ್ಲವರಿಗೆ ಮರದೆಲೆಯನು ತಂದು ತೋರಲೇತಕೆ?' ('ಅಂಗದ ಸಂಧಾನ'), 'ಅನ್ನ ಹೋಗಿ ಬೀತು ತಂಗುಳಾಯ್ತು...ಎಂದಿಗಾದರೆ ಈ ಪರೀರವೆರವಿನ ಹಾರ' ('ಕುಂಭಕರ್ಣನ ಕಾಳಗ') ಇತ್ಯಾದಿ. ಆತನ ಭಾಷೆ ಸುಸ್ತಕದ ಭಾಷೆಯಲ್ಲ, ಸಂತೆಯ ಭಾಷೆ; ಆತನ ಕೃತಿಗಳಲ್ಲಿ ಅಲ್ಲಲ್ಲಿ ಪ್ರಾಂತೀಯ ಪ್ರಯೋಗಗಳೂ ಇವೆ, ಉದಾ. 'ಕರಕೊಣಕು' = ಕಂಕೊಳ್ಳಲಕ್ಕು, 'ಎನಕು' = ಎನಲಕ್ಕು, 'ಮಂಡೆ ಗಟ್ಟಿಯೆನುತ್ತ ಮರಕೆ ಜೆಪ್ಪುವುದುಂಟೆ?' = (ತುಳು 'ಜೆಪ್ಪ' = ತಟ್ಟು, ತಟ್ಟಾಡು) = ತಟ್ಟುವುದುಂಟೆ?; 'ಏನ್ಯಾಕ್ಕಿ ರಾವಣ? 'ಕಾಣ್ಯಾಕ್ಕಿ', 'ಕೇಳ್ಯಾಕ್ಕಿ' 'ಬಾಳ್ಯಾಕ್ಕಿ' = ಏನೋ!?, ಕಾಣೋ, ಕೇಳೋ, ಬಾಳೋ ಎಂಬ ಅರ್ಥದಲ್ಲಿ ಇತ್ಯಾದಿ. ಆತನ ಕಂದಗಳು, ನಾನು ಕಂಡಿರುವ ಪ್ರತಿಗಳಲ್ಲಾದರೂ, ಕಂದ ಪದ್ಯಗಳ ಲಕ್ಷಣಗಳಿಗೆ ಸೇರಾಗಿಲ್ಲ, ಉದಾ: 'ಪಂಚವಟಿ' —

ದುರುಳಂ ಮಾಯದಿ ಸೀತಾ
ತರುಣಿಯನೆತ್ತಿ ಕೊಂಡು ಶಾನಂಬರ
ಮಾರ್ಗದೊಳಂ
ಶರಧಿಯ ದಾಂಟುತ ಲಂಕಾ
ಪುರಕೆಯ್ತರೆ ಲಕ್ಷ್ಮಣ ರಾಮನೊಳಂ
ತಿಂದಂ ॥ *

ಆತನ ಪ್ರಾಸಗಳು ಅಲ್ಲಲ್ಲಾದರೂ ಬಲುಬಡವಾಗಿವೆ. ನ್ಯೂನವಾಗಿವೆ, ಉದಾ: ಮೇಲೆ ಉದ್ಧರಿಸಿರುವ ಶಾರ್ದೂಲವಿಕ್ರೀಡಿತ ವೃತ್ತದಲ್ಲಿ, 'ಧಾತ್ರೀ—ಸತ್ಪಾದ—ಭಕ್ತಿ—ಬತ್ತೀಸ', ಇತ್ಯಾದಿ. ಆದರೂ ಒಟ್ಟಿನ ಮೇಲೆ ಯಕ್ಷಗಾನ ಪ್ರಪಂಚದಲ್ಲಿ ಯಾವ ಸಾಧನವಿದೆಯೊ ಅದನ್ನು ಪಾರ್ತಿ ಸುಬ್ಬನು ತೀವ್ರ ಬಳಸಿದ್ದಾನೆ, ಯಕ್ಷಗಾನದ ಪ್ರತ್ಯೇಕ ತಂತಿಯನ್ನು

ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು ರೂಪುಗೊಳಿಸುತ್ತಿರುವ ಶಕ್ತಿ

(ಆನೇ ಪುಟದಿಂದ)

ನ್ನು ಡಾಕ್ಟರ್ ಪೈಗಳು ತಾವೇ ಮಾಡುತ್ತಿದ್ದರು. ಬೇಕು ಬೇಕಾದ ಹಾಗೆ ಸಿಟ್ಟಿಂದಿಯಿದ್ದರೂ ಆ ಕೆಲಸವನ್ನು ಇತರರಿಗೆ ಒಪ್ಪಿಸಲು ಅವರಿಗೆ ಸಮಾಧಾನವಿಲ್ಲ. ಎಲ್ಲವೂ ಸ್ವಹಸ್ತದಿಂದಲೇ ನೆರವೇರಬೇಕು. ಪ್ರಾಸ್ಪೆಕ್ಟಸ್‌ಗಳನ್ನು ಸುತ್ತಿ ಅವುಗಳಿಗೆ ರ್‍ಯಾಪರ್ ತಗಲಿಸುವ ಕೇಸವನ್ನು ಕೂಡ ಇತರರಿಗೆ ಒಪ್ಪಿಸಿದ್ದಿಲ್ಲ. ರಾತ್ರಿ ಹತ್ತೂವರೆ ಘಂಟೆಗೆ ತಮ್ಮ ಬ್ಯಾಂಕಿನ ಹಾಗೂ ಇತರ ಕಾರ್ಯಭಾರಗಳನ್ನೆಲ್ಲ ಮುಗಿಸಿ ಬಂದು ಮಾರನೆಯ ದಿನ ಬೆಳಗಾಗುವುದರೊಳಗೆ ಅರುವತ್ತೆಪ್ಪತ್ತು ಕಾಗದಗಳನ್ನು ಬರೆದು ಅಂಚೆಗೆ ಹಾಕಲು ತಂದ ಚೈತನ್ಯವದು! ಕೈಕೊಂಡ ಕಾರ್ಯದಲ್ಲಿ ಅವರಿಗಿರುವ ಶ್ರದ್ಧೆ ಅಸಾಮಾನ್ಯವಾದದ್ದು. ಅವರ ಕರ್ತವ್ಯ ನಿಷ್ಠೆಯೇ ಅವರಲ್ಲಿರುವ ಕರ್ತೃತ್ವ ಶಕ್ತಿಯ ಮೂಲವೆನ್ನಲಡ್ಡಿಯಿಲ್ಲ. "Two per cent inspiration, and 98 per cent perspiration" ಎಂಬ ಮಾತು ಅವರಿಗೆ ಚೆನ್ನಾಗಿ ಅನ್ವಯಿಸುತ್ತದೆ.

ಅನಂತರ ಕಟ್ಟಡಗಳ ಕೆಲಸ ಪ್ರಾರಂಭವಾದಾಗಲೂ ಹಾಗೆಯೇ; ಅಡ್ಡ ಪಂಚೆಯನ್ನು ಎತ್ತಿ ಕಟ್ಟಿ, ತಲೆಗೊಂದು ಟವಲು ಸುತ್ತಿ ಮೇಸ್ತ್ರಿಯೊಡನೆ ಅಳತೆಯ ವಾರವನ್ನು ಹಿಡಿದು ಡಾಕ್ಟರ್ ಪೈಗಳವರು ಅತ್ತ ಇತ್ತ ಓಡಾಡಿದರು. ಈ ಕಾಲೇಜಿನ ಯೋಜನೆಯೆಂದರೆ ಶುದ್ಧ ಹುಚ್ಚು ಎಂದು ಜನಗಳಾಡಿಕೊಳ್ಳುತ್ತಲಿದ್ದ ಕಾಲವದು. ಆದರೆ ಜನಗಳೇನು ಆಡಿಕೊಳ್ಳುತ್ತಿದ್ದಾರೆ ಎಂಬುದರ ಕಡೆಗೆ ಅವರ ಗಮನವಿಲ್ಲ. ಅವರ ಮನಸ್ಸೆಲ್ಲ ಒಂದೇ ಕಡೆಗೆ—ಕೈಕೊಂಡ ಕಾರ್ಯವನ್ನು ಮುಂದುವರಿಸುವುದರಲ್ಲಿ. ಕಾಲೇಜಿನ ಕಟ್ಟಡವು ಮೇಲೆ ಬರುತ್ತಿರುವಾಗ ಅನುದಿನವೂ ಬೆಳಗ್ಗೆ ಮತ್ತು ಸಾಯಂಕಾಲ ಸುತ್ತಿಗೆಯಿಂದ ಬಂಡೆಯನ್ನು ಪುಡಿಮಾಡಿ 'ಜಲ್ಲಿ' ತಯಾರಿಸಲು ಅವರು ಸಿದ್ಧರು! ಅವರ ಉತ್ಸಾಹ ಸಾಂಕ್ರಾಮಿಕವಾಗಿಹಬ್ಬಿ ಆ ಕೆಲಸಕ್ಕೆ ಮಕ್ಕಳು ಮರಿಗಳೆನ್ನದೆ ಹಲವರು ಬರತೊಡಗಿದರು. ಅವರ ಉತ್ಸಾಹದ ಬಿಸಿಯಿಂದಾಗಿ ಬೆಳಗಿನ ಝಾವದ ಚಳಿಯಾರಿಗೂ ನಾಟುತ್ತಿರಲಿಲ್ಲ. ಎಂತಹ ಬಿಳಿಯಂಗಿಯ ಚಿತ್ತವೃತ್ತಿಯವನಾದರೂ ಅವರನ್ನು ಕಂಡು ಕಾಯಕಪ್ರಿಯರಾಗಿ ಮದರಾಸು ಹಾಗೂ ಇತರ ರಾಜ್ಯ ಸರಕಾರಗಳ ಕೃಪಾಕಟಾಕ್ಷವನ್ನು ದೊರಕಿಸಿಕೊಳ್ಳುವುದಕ್ಕಾಗಿಯೂ, ಡಾಕ್ಟರ್ ಪೈಗಳು ಯಾವೆಲ್ಲ ಬಗೆಯಿಂದ ಶ್ರಮಿಸಬೇಕಾಯಿತೆಂಬುದರ ವಿವರವನ್ನು ಇಲ್ಲಿ ಉಲ್ಲೇಖಿಸಿಲ್ಲ.

ಡಾಕ್ಟರ್ ಪೈಗಳವರಿಗೆ ಲಭಿಸಿರುವ ಸೌಹಾರ್ದ, ಸಹಕಾರ, ಹಾಗೂ ಅವರ ಕಾರ್ಯಕ್ಷಮತೆಯ ಕುರಿತು ಪ್ರಸ್ತಾಪಿಸಿದ್ದಾಯಿತು. ಇನ್ನು ಮೂರನೆಯದಾಗಿ ಅವರಲ್ಲಿರುವ ಮುಖ್ಯ ಶಕ್ತಿಯೆಂದರೆ ಅವರ ಮನೋದಾರ್ಢ್ಯ. ಕೈಕೊಂಡ ಕೆಲಸವನ್ನು ಕೊನೆಗಾಣಿಸುವ ತನಕ, ನಡುವೆ ಎಷ್ಟೊಂದು ಉಗ್ರ ಟೀಕೆಗಳು ಬಂದರೂ ಅವುಗಳನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಅವರಲ್ಲಿದೆ. ಅವರು ಸಾವಿರ ಜನರ ಅಭಿಪ್ರಾಯ ಸಲಹೆಗಳನ್ನು ಕೇಳಬಹುದು. ಆದರೆ ಕಾರ್ಯಾಚರಣೆಗಿಳಿದಾಗ ತನ್ನ ಬುದ್ಧಿಗೆ ಸೇರವಾಗಿಯೇ ನಡೆದಾರು. ಆ ಮಾರ್ಗದಲ್ಲಿ ಸಂಧಿಸುವ ಯಾವ ಎಡರು ತೊಡರುಗಳಿಗೂ ಅವರು ಹಿಮ್ಮೆಟ್ಟಲಾರರು. ಯಾರೋ ಅವರನ್ನು 'ಕರ್ಮಯೋಗಿ' ಎಂದರು. ಆದರೆ ಡಾಕ್ಟರ್ ಪೈಗಳವರು ಫಲಾಪೇಕ್ಷೆಯೇ ಇಲ್ಲದ ಕರ್ಮಯೋಗಿಗಳೆಂದು ಹೇಳುವಂತಿಲ್ಲ. ಕಾರ್ಯರಂಗಕ್ಕಿಳಿದಾಗ ಕರ್ಮ ಫಲಕ್ಕಿಂತಲೂ ಕೈಹಿಡಿದುದನ್ನು ಯಶಸ್ವಿಯಾಗಿ ಕೊನೆಗಾಣಿಸಲು ನಡೆಸಬೇಕಾದ ಸಾಧನೆಗಳ ಕಡೆಗೇ ಹೆಚ್ಚಿನ ಗಮನ ಕೊಡುವವರೆಂಬುದರಿಂದ, ಮತ್ತು ಸತ್ಕಾರ್ಯಕ್ಕೆ ಸತ್ಫಲ ದೊರಕಿಯೇ ದೊರಕುವುದೆಂಬ ದೃಢವಾದ ವಿಶ್ವಾಸವಿರುವವರೆಂಬುದರಿಂದ, ಅವರು 'ಕರ್ಮ ಯೋಗಿ'ಯೂ ಹೌದು.

ದೈವ ಕೃಪೆಯಲ್ಲಿ ಡಾಕ್ಟರ್ ಪೈಗಳವರಿಗೆ ನಿಶ್ಚಲವಾಗಿ ನಂಬಿಕೆಯಿದೆ. ತಾನು ಒಳ್ಳೆಯದೆಂದು ತೀರ್ಮಾನವನ್ನು ಮಾಡಲು ತೊಡಗಿದಾಗ ಎಲ್ಲಿಂದಾದರೂ ಸಹಾಯ ಅವು ಕೇವಲಮನೋರಂಜನೆಯ ಕಾರ್ಯಕ್ರಮಗಳಾದರೂ—ಅವರು ಸಂಕೋಚಪಡದೆ ಮುಂದಾಗುತ್ತಾರೆ.

ಹೀಗಿದ್ದರೂ ತಾನು ಮಾಡಬೇಕೆಂದುಗೊತ್ತು ಮಾಡಿಕೊಂಡ ಕೆಲಸಗಳನ್ನು ಆಯಾಯ ದಿನವೇ ಆಯಾಯ ಅವಧಿಯಲ್ಲಿಯೇ ಮುಗಿಸಬೇಕೆಂಬ ಅವರ ಛಲ ಅಸಾಧಾರಣವಾದದ್ದು. ಇಂದಾಗಬೇಕಾದುದನ್ನು ನಾಳೆಗೆಂದು ಉಳಿಯಕೊಟ್ಟರೆ ಅವರಿಗೆ ನಿದ್ರೆಯೇ ಬಾರದು. ಆ ಮಟ್ಟಿಗೆ ಅವರಿಗೆ ದಣಿವೆಂಬುದಿಲ್ಲ, ಬಿಡುವು ಬೇಕಾಗಿಲ್ಲ. ಹೀಗಿದೆ ಅವರ ಕಾರ್ಯೋತ್ಸಾಹ.

ಇಲ್ಲಿ ಉದಾಹರಿಸಿರುವುದು ಸಾಮಾನ್ಯ ವಿಷಯಗಳನ್ನು ಮಾತ್ರ. ಕಾಲೇಜಿನ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅವರು ನಡೆಸಿದ ತಪಸ್ಸಿನ ಮುಖ್ಯಾಂಶ ಬೇರೆಯೇ ಇದೆ. ಕರ್ಣಾಟಕ ವಿಶ್ವವಿದ್ಯಾಲಯವನ್ನು ಒಲಿಸಿಕೊಳ್ಳುವುದಕ್ಕಾಗಿಯೂ, ಮುಖ್ಯವಾಗಿ ದ್ರವ್ಯ ಸಹಾಯಕ್ಕಾಗಿಯಲ್ಲದಿದ್ದರೂ, ತಾಂತ್ರಿಕ ಮತ್ತು ಇನ್ನಿತರ ಸೌಲಭ್ಯಗಳಿಗೋಸ್ಕರವಾಗಿ ಮದರಾಸು ಹಾಗೂ ಇತರ ರಾಜ್ಯ ಸರಕಾರಗಳ ಕೃಪಾಕಟಾಕ್ಷವನ್ನು ದೊರಕಿಸಿಕೊಳ್ಳುವುದಕ್ಕಾಗಿಯೂ, ಡಾಕ್ಟರ್ ಪೈಗಳು ಯಾವೆಲ್ಲ ಬಗೆಯಿಂದ ಶ್ರಮಿಸಬೇಕಾಯಿತೆಂಬುದರ ವಿವರವನ್ನು ಇಲ್ಲಿ ಉಲ್ಲೇಖಿಸಿಲ್ಲ.

ಡಾಕ್ಟರ್ ಪೈಗಳವರಿಗೆ ಲಭಿಸಿರುವ ಸೌಹಾರ್ದ, ಸಹಕಾರ, ಹಾಗೂ ಅವರ ಕಾರ್ಯಕ್ಷಮತೆಯ ಕುರಿತು ಪ್ರಸ್ತಾಪಿಸಿದ್ದಾಯಿತು. ಇನ್ನು ಮೂರನೆಯದಾಗಿ ಅವರಲ್ಲಿರುವ ಮುಖ್ಯ ಶಕ್ತಿಯೆಂದರೆ ಅವರ ಮನೋದಾರ್ಢ್ಯ. ಕೈಕೊಂಡ ಕೆಲಸವನ್ನು ಕೊನೆಗಾಣಿಸುವ ತನಕ, ನಡುವೆ ಎಷ್ಟೊಂದು ಉಗ್ರ ಟೀಕೆಗಳು ಬಂದರೂ ಅವುಗಳನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಅವರಲ್ಲಿದೆ. ಅವರು ಸಾವಿರ ಜನರ ಅಭಿಪ್ರಾಯ ಸಲಹೆಗಳನ್ನು ಕೇಳಬಹುದು. ಆದರೆ ಕಾರ್ಯಾಚರಣೆಗಿಳಿದಾಗ ತನ್ನ ಬುದ್ಧಿಗೆ ಸೇರವಾಗಿಯೇ ನಡೆದಾರು. ಆ ಮಾರ್ಗದಲ್ಲಿ ಸಂಧಿಸುವ ಯಾವ ಎಡರು ತೊಡರುಗಳಿಗೂ ಅವರು ಹಿಮ್ಮೆಟ್ಟಲಾರರು. ಯಾರೋ ಅವರನ್ನು 'ಕರ್ಮಯೋಗಿ' ಎಂದರು. ಆದರೆ ಡಾಕ್ಟರ್ ಪೈಗಳವರು ಫಲಾಪೇಕ್ಷೆಯೇ ಇಲ್ಲದ ಕರ್ಮಯೋಗಿಗಳೆಂದು ಹೇಳುವಂತಿಲ್ಲ. ಕಾರ್ಯರಂಗಕ್ಕಿಳಿದಾಗ ಕರ್ಮ ಫಲಕ್ಕಿಂತಲೂ ಕೈಹಿಡಿದುದನ್ನು ಯಶಸ್ವಿಯಾಗಿ ಕೊನೆಗಾಣಿಸಲು ನಡೆಸಬೇಕಾದ ಸಾಧನೆಗಳ ಕಡೆಗೇ ಹೆಚ್ಚಿನ ಗಮನ ಕೊಡುವವರೆಂಬುದರಿಂದ, ಮತ್ತು ಸತ್ಕಾರ್ಯಕ್ಕೆ ಸತ್ಫಲ ದೊರಕಿಯೇ ದೊರಕುವುದೆಂಬ ದೃಢವಾದ ವಿಶ್ವಾಸವಿರುವವರೆಂಬುದರಿಂದ, ಅವರು 'ಕರ್ಮ ಯೋಗಿ'ಯೂ ಹೌದು.

ದೈವ ಕೃಪೆಯಲ್ಲಿ ಡಾಕ್ಟರ್ ಪೈಗಳವರಿಗೆ ನಿಶ್ಚಲವಾಗಿ ನಂಬಿಕೆಯಿದೆ. ತಾನು ಒಳ್ಳೆಯದೆಂದು ತೀರ್ಮಾನವನ್ನು ಮಾಡಲು ತೊಡಗಿದಾಗ ಎಲ್ಲಿಂದಾದರೂ ಸಹಾಯ

ಬಾರಿಸಿದ್ದಾನೆ, ಆ ಬಾರಿಸಹದಲ್ಲಿ ತುಂಬ ಯಶಸ್ವಿಯೂ ಆಗಿದ್ದಾನೆ. ಆತನ ಪ್ರಸಂಗಗಳು ಹೆಳ್ಳಿಯವರನ್ನೇ ಅಲ್ಲ, ಹೊಲಿನವರನ್ನೂ ಮೆಚ್ಚಿಸಲಾಪವು, ಅವರನ್ನು ಎಷ್ಟೋ ಅಷ್ಟೇ ಮಟ್ಟಿಗೆ ಇವರನ್ನೂ ನೈಸೈ ಎಂದು ತಲೆದೂಗಿಸಲಾಪವು.

ನಮ್ಮತ್ತಣ ಮಂದಿಗಾದರೆ ಪಾರ್ತಿ ಸುಬ್ಬನ ಪ್ರಸಂಗಗಳನ್ನು ಆಡಿಸುವುದೆಂದರೆ ಅಷ್ಟು ಇಷ್ಟ, ಅವರಿಗೆ ಅದೊಂದು ಅಮಗ. ಕಾರಣವಿಷ್ಟೇ. ಅವುಗಳಲ್ಲಿ ಯುದ್ಧಕ್ಕೆ ಮೇಲುಗೈ; ಬಣ್ಣದ ವೇಷಗಳು ತುಂಬಾ ತಿರುಗುತ್ತಾವೆ, ಕಾಳಗಗಳು ಯಥೇಚ್ಛ ಜರಗುತ್ತಾವೆ. (ಬೆಳಗಾನಾನಿದ್ದೆಗೆ ಶತ್ರಾರ) ಮಂದಿಗೆ ಬೇಕು ಗುಲ್ಲು, ಗಲಜೆ, ಗದ್ದಲ. ಅದನ್ನೂ ಆತನ ಪ್ರಸಂಗಗಳಲ್ಲಿ ಉದ್ದಕ್ಕೂ ಇದೆ. ಆದರೆ ರಾಮಾಯಣದಿಂದ ವನವಾಸಕ್ಕೆ ಈಜೆಯ ಕಥಾವಸ್ತುಗಳನ್ನು ಆಯ್ದುಕೊಂಡ ಕಾರಣ ಆತನ ಕೃತಿಗಳಲ್ಲಿ ಹೀಗೆ ಆಗ ಬೇಕಾಯಿತಲ್ಲಗೆ, ಅದೇನೂ ಹೀನಾಯವಲ್ಲ. ಏಕೆಂದರೆ ಆತನ ಪ್ರಸಂಗಗಳು ಓದಲಿಕ್ಕೆ ಬಹಳ ಮೇಲಾಗಿವೆ, ಆಡಲಿಕ್ಕೆ ಬಹಳ ಚಲೋದಾಗಿವೆ. ಅವುಗಳ ಓದೂ ಆಡೂ ಮಂದಿಯನ್ನೇ ಅಲ್ಲ ರಸಿಕರನ್ನೂ ಬಲ್ಲವಿಸುತ್ತದೆ. ಹಾಗಾಗಿ ಅವು ಎಲ್ಲರಿಗೂ ಓದಲಿಕ್ಕೂ ಆಡಿಸಲಿಕ್ಕೂ ಅನ್ವ ಇಷ್ಟವಾಗಿರುವಲ್ಲಿ ಆಶ್ಚರ್ಯವೇನೂ ಇಲ್ಲ.‡

---

* ಈ ಕಂದಪದ್ಯದ ೨ನೆಯ ಚರಣದಲ್ಲಿ ಪ್ರಸ್ತಾರಕ್ಕೆ ಸರಿಯಾಗಿ ೨೦ ಮಾತ್ರೆಗಳು ಇರಬೇಕಾಗಿದ್ದಲ್ಲಿ ಇಲ್ಲಿ ೨೨ ಮಾತ್ರೆಗಳಿವೆ. ಒಂದು ಹೇಳಿ 'ಎತ್ತಿಕೊಂಡು' ಎಂಬುದನ್ನು 'ಎತ್ತುತ' ಎಂದು ಮಾರ್ಪಡಿಸಿಕೊಂಡರೆ ೨೦ ಮಾತ್ರೆಗಳು ಆಗುತ್ತವಾದರೂ, ಆಚರಣದ ೩ನೆಯ ಗಣವು ಕಂದಪದ್ಯದ ಲಕ್ಷಣಕ್ಕೆ ಬೇಕಾಗಿರುವಂತೆ ಜ-ಗಣ-ವಾಗಲಿ ಲಘುಗಳ ಗಣವಾಗಲಿ ಆಗದೆ, 'ತಾನಂ' ಎಂದು ಆಲ್ಲಿ ಸರ್ವಘಾಸಲ್ಲದೆ ೨ ಗುರುಗಳ ಗಣವಾಗುತ್ತದೆ ಮಾತ್ರವಲ್ಲ, ೪ನೆಯ ಚರಣದ ೩ನೆಯ ಗಣವು 'ಕ್ಷ್ಮಣ ರಾ' ಎಂದು ೨ ಲಘು ಮತ್ತು ಒಂದು ಗುರುವಿನ ಗಣವಾಗುತ್ತದೆ.

‡ ಮದರಾಸು ಆಕಾಶವಾಣಿಯ (All India Radio) ಸೌಜನ್ಯದಿಂದ. ಅಲ್ಲಿ ೨೪—೬—೧೯೫೪) ಓದಲ್ಪಟ್ಟ ಪ್ರತಿಯನ್ನು ಇಲ್ಲಿ ಕೊಂಡ ಮಾರ್ಪಡಿಸಿದೆ.

ಸಂಸ್ಕೃತಿ ಮತ್ತು ಪಡೆಮಾತು

(೭ನೇ ಪುಟದಿಂದ)

ಪೂರ್ಣಮದಃ—ಬಾಯಿ ತುಂಬಿದ ಮಾತು ಕಿವಿ ತುಂಬಿಸುತ್ತದೆ. ಆ ಆದೂ ತುಂಬಿ ಬಂದಾಗಲೇ ವಾಗ್ಮೈಬರಿ, ಶಬ್ದಝರಿ ಮುಸಲ ಧಾರೆಯಿಂದ ಇಂದ್ರ ಪ್ರೇಷಿತವಾಗುತ್ತದೆ. ಆದುದರಿಂದ ಭಾರತೀಯ ಸಂಸ್ಕೃತಿಯೊಂದು ತುಂಬಿದ ಕೊಡ; ಅದು ತುಳುಕಿದರೂ ತುಂಬಿಯೇ ಉಳಿಯುತ್ತದೆ. ಆದಕ್ಕೆ 'ಅತ್ಯತಿಪ್ಯದ್ದಶಾಂಗುಲಂ' ಎಂಬುದೇ ಆಧಾರ. ಮಾತುಗಾರರಲ್ಲಿ ತುಂಬಿರುವುದೊಂದು, ಬಾಯಿಯಿಂದ ಹೊರ ಬೀಳುವುದಿನ್ನೊಂದು, ಅವರದ ಕ್ಕೂ ಆಧಾರ ಬೇರೊಂದು, ಅವುಗಳ ಪರಿಣಾಮ ಮತ್ತೊಂದು. ಇದೇ ಸಂಸ್ಕೃತಿ ಬ್ರಹ್ಮನ ಚತುರ್ಮುಖ. ಆದರಿಂದ ಹೊರಟ ಮಾತಿನ ಮಾತೆಯೇ, 'ಚತುರ್ಮುಖನ ನಾಲಗೆಯ ಹಾಸಿ ತುಟಿದಿಂಬು ಮಾಡಿನಾಕೆ' ಈಗ ಮಲಗಿದಲ್ಲಿಂದೆದ್ದು ದಶ ದಿಕ್ಕುಗಳಲ್ಲಿ ಮಂಡೆಯೆತ್ತಿ ನಗ್ಗಲಾರಂಭಿಸಿದ್ದಾಳೆ ಆ ಸರಸ್ವತಿ! ರಸವತಿ!

ಆ ಮಾತಾ ಸ್ರೋತಸ್ಸಿನ ಮೂಲವನ್ನು ಕಂಡವರಿಲ್ಲ. ಅದನ್ನು ಮನುಜ ಹುಟ್ಟಿಸಿಲ್ಲ; ಅದು ಅದರಿಂದಲೇ ಸಾಯುವುದಲ್ಲ. 'ಕಂಡವರಿಗಲ್ಲ ಕಂಡವರಿಗಷ್ಟೆ ತಿಳಿದವದ ಅದರ ನೆಲೆಯು'. ಅದು ಹುಟ್ಟಿದ್ದಲ್ಲ, ಆದ್ದರಿಂದ ಸಾಯದು. ಅದು ಅಜಾತವಿರುವುದರಿಂದಲೇ ಸುಜಾತ. ಅದು ವಿಭಕ್ತರಲ್ಲಿ ಅವಿಭಕ್ತ, ಅವಿಭಕ್ತರಲ್ಲಿ ವಿಭಕ್ತ. ಹಾಗೇ ಅಜಾತರಲ್ಲಿ ಜಾತ, ಜಾತರಲ್ಲಿ ಅಜಾತ, ಅಜ. 'ಅಜೋ ನಿತ್ಯಃ ಶಾಶ್ವತೋಯಂ ಪುರಾಣಃ' ಅದೊಂದು ದೊಡ್ಡ ಪುರಾಣ; ಅದು ನಿತ್ಯ, ಶಾಶ್ವತ. ಅಷ್ಟೇ ಅಲ್ಲದೆ ಅದಕ್ಕೆ 'ಊರ್ಧ್ವ ಮೂಲ ಮಧಃ ಶಾಖಂ' ಬುಡ ಮೇಲೆ, ತಲೆ ಕೆಳಗಿದೆ.

'ಕಲ್ಚರೋಪಥಿಕ್ ಡೋಜ್' ಇಷ್ಟರಿಂದಲೇ ಸಿದ್ಧವಾಗುವುದೆಂಬಿರಾ? ಇಲ್ಲ. ಮತ್ತೂ ಇದೆ. ಈ ಸರ್ವಂಸಹ ಸಂಸ್ಕೃತಿ ಬಹಳ ಉದಾರವಾದುದು. ಆದರೆ ಈ ಧಾರಾಳತನದಿಂದಲೇ ಅದರ ಬಗ್ಗೆ ಯಾರು, ಏನು, ಹೇಗೆ ಹೇಳಿದರೂ ನಡೆಯುತ್ತದೆ; ಅದು ಸಹಿಸಿಕೊಳ್ಳುತ್ತದೆ. ಅದು ಸರ್ವಾಂತರ್ಯಾಮಿ, ಅಣೋರಣೀಯ, ಮಹತೋ ಮಹೀಯ. ಚಿಕ್ಕವರಲ್ಲಿಯ ಚಿಕ್ಕತನ, ದೊಡ್ಡವರಲ್ಲಿಯ ದೊಡ್ಡ ಅಥವಾ ದಡ್ಡತನ, ಅಲ್ಪರಲ್ಲಿಯ ಅಲ್ಪತನ, ಮಹೋದರರಲ್ಲಿಯ ಮಹಾ ಹೊಟ್ಟೆತನ, ಪಾಪಿಗಳಲ್ಲಿ ಪಾಪ, ಪುಣ್ಯಾತ್ಮರಲ್ಲಿ ಪುಣ್ಯ—ಹೀಗೆ ಎಲ್ಲವುಗಳ ಸಾರವೆನಿಸಿದೆ ಭಾರತದ ಈ ಮೇರು ಕೃತಿಯಾದ ಸಂಸ್ಕೃತಿ. ಕೃತಿ, ವಿಕೃತಿ, ಪ್ರಕೃತಿ, ಆಕೃತಿ, ಸುಕೃತಿ, ದುಷ್ಕೃತಿ, ಪರಿಷ್ಕೃತಿ, ನಿಕೃತಿ, ನಿಷ್ಕೃತಿ, ಪುರಾಕೃತಿ, ಉಪಕೃತಿ, ಉಪಕೃತಿ, ಪರಾಕೃತಿ. ಅನುಕೃತಿ, ಉಪಸ್ಕೃತಿ, ಧಿಕ್‌ಕೃತಿ ಎಂಬ ಹೋಡಶ ಸಂಸ್ಕಾರಗಳು ಭಾರತೀಯ ಸಂಸ್ಕೃತಿಯ ಪ್ರಾಯದ ಹದಿನಾರು ಮುಖಗಳು. ಈ ಹದಿನಾರೂ ಹೌದು, ಅದನ್ನು ಮೀರಿದ್ದೂ ಹೌದು—ಆದರಿಂದಲೇ ಅದು, 'ಹದಿನಾರು ರಾಜರು ತಲೆಕೆಳಗಾದರು, ಅದರು ತಲೆಯೆತ್ತಿ ನಿಂತಿರುವೆ' ಎಂಬ ಹೊಗಳಿಕೆಗೆ ಪಾತ್ರವಾಗಿದೆ. ಈ ಹದಿನಾರರಿಂದಲೇ ದ್ವಿಜತ್ವ, ನಾಗರಿಕತ್ವ, ಸಂಸ್ಕೃತತ್ವ, ಯೌವನ, ಸೌಂದರ್ಯ, ಲೌಕಿಕ, ಪಾರಲೌಕಿಕಗಳು ಲಭ್ಯ. ಇವು ಸಂವಾದಿಗಳು, ಸಂಧಿಗಳು -- ವಿವಾದಿಗಳಲ್ಲ, ವಿಗ್ರಹಿಗಳಲ್ಲ. ಆದುದರಿಂದ ಈ ಹದಿನಾರರ ಬಗ್ಗೆ ವಿವಾದ ವಿಗ್ರಹಗಳೆದ್ದರೆ ಅವನ್ನು ತನ್ನ ಪ್ರವಾದ-ಪ್ರಗ್ರಹಗಳಿಂದ ಸಂಸ್ಕೃತಿ ಅಂಕೆಯಲ್ಲಿಡುತ್ತದೆ. ಈ ದೈವೀ ಮಾಯೆ, ಶಕ್ತಿ, ಶಬ್ದ, ನಾದ, ಬಿಂದು, ಕಲೆ—ಅಪ್ರಮೇಯ, ಅಜೇಯ, ಅಪೌರುಷೇಯ, ಅನಿರ್ವಚನೀಯ; ಇದೇ ಸತ್ಯ, ಜ್ಞಾನ, ಅನಂತ; ಸತ್, ಚಿತ್, ಆನಂದ; ಚಿತ್, ಅಚಿತ್, ಈಶ್ವರ; ಜೀವ, ಜಡ, ಜಗದೀಶ, ಜೈ—ಹಿಂದೂ!

ಇದರ ಮೇಲೆ, ಮಹಾ ಸಮುದ್ರದಂತಿರುವ ಭಾರತೀಯ ಸಂಸ್ಕೃತಿಯ ಮುಖ ಸಾಮುದ್ರಿಕ ಜ್ಯೋತಿಶ್ಶಾಸ್ತ್ರ ನಿಹಿತವಾಗಿದೆ. ಅದರ ಶಿಕ್ಷೆ, ರಕ್ಷೆ, ಪಾಲನೆ, ಧಾರಣೆಗಳ ಹಿರಿಯ ಹೊಣೆ ಸ್ವತಂತ್ರ ಭಾರತದ ಹೊಸ ನಾಗರಿಕನದಾಗಿದೆ. ಆದುದರಿಂದ ಅದು ಅವನ ಜಾತಕವನ್ನವಲಂಬಿಸಿದೆ. ಜ್ಯೋತಿರ್ಮಂಡಲ ಜಾತಕ ನಡೆಸುತ್ತದೆ. ಆದರಿಂದಲೇ ಸಂಸ್ಕೃತಿ ಪ್ರಚಾರದ ಭಾಷಣ ಜ್ಯೋತಿರ್ಮಯವಾಗಿರುತ್ತದೆ. ಭಾರತದ ಭವಿಷ್ಯ ಅದರಿಂದಲೇ ಜಿಹ್ವಾಜ್ಯೋತಿಷ್ಯಕ್ಕೆ ಅಧೀನವಾಗಿದೆ. ಜಿಹ್ವಾಜ್ಯೋತಿಷ್ಯವು ಜಿಹ್ವಾಸಂಸ್ಕೃತಿಗಧೀನ. ಆದುದರಿಂದ ಭಾರತೀಯ ಸಂಸ್ಕೃತಿಯೆಂದರೆ ಜಿಹ್ವಾ ಸಂಸ್ಕೃತಿ. ಓಂಪದ, ತ್ವಂಪದ, ತತ್ಪದ—ಮುಂತಾದ ಪರಶಕ್ತಿಯಿಂದಲೇ ನಮ್ಮ ಸರ್ವಜ್ಞಾನ ಸಂಕುಪ್ಪವಾಗಿರುವುದರಿಂದ ಸಂಸ್ಕೃತಿಯಾದರೂ ಪದಗತ. ಆದರ ಅರ್ಥವೇ 'ಪದಾರ್ಥ. ಅಭಿಧೇಯತ್ವಂ ಪದಾರ್ಥತ್ವಂ — ಅದು ಇರುವುದು ಕೇವಲ ಹೆಸರಿನಲ್ಲಿ, ನಾಮವಲ್ಲಿ, ಪದೋಚ್ಚಾರದಲ್ಲಿ, ಜಿಹ್ವಾಗ್ರೇತೆಯಲ್ಲಿ. ಆದರಿಂದಲೇ ದಾಸರು 'ನಾಮವೊಂದೇ ಸಾಲದೇ?' ಎಂದು ಕೇಳಿದ್ದು. ಒಂದೇ ನಾಮ—ಒಂದೇ ಸಂಸ್ಕೃತಿ—ಒಕ್ಕೈ ಹೊಡೆತ!

ಈ ಸಂಸ್ಕೃತಿಯ ಗಂಡಭೇರುಂಡನಿಗೆ ಶ್ರೇಯಸ್ಸು, ಪ್ರೇಯಸ್ಸು ಎಂಬೆರಡು ಮುಖಗಳೂ ಧರ್ಮ, ಅರ್ಥಗಳೆಂಬ ಕಾಲುಗಳೂ ಕಾಮ, ಮೋಕ್ಷಗಳೆಂಬ ರೆಕ್ಕೆಗಳೂ ಇವೆ. ಅದನ್ನು ಕೊಂದು ಮಾಡಿದ ರಸಾಯನವೇ ಯುನಾನಿ ಮಿಶ್ರಿತ ಸಂಸ್ಕೃತಿ ರಸಾಯನ—ರಸಪಾಕ; ಅದೇ ರಸ-ರಸೋವೈಸಃ! ಪ್ರವೃತ್ತಿಯೂ ರಸವೇ, ನಿವೃತ್ತಿಯೂ ರಸವೇ. ಪಾಶ್ಚಾತ್ಯ, ಪೌರಸ್ತ್ಯ, ಕಮ್ಯೂನಿಸ್ಟ್, ಡೆಮೊಕ್ರಾಟ್ ತತ್ವಗಳ ಕುಂಭಮೇಳವೇ ಸಂಸ್ಕೃತಿ ಸಾರವಾದ ರಸ. ಅಲ್ಲಿ ಚಾರ್ವಾಕತೆಯಿದೆ, ಮೌನ ವ್ಯಾಖ್ಯೆಯಿದೆ, ದೇವ ತತ್ವವಿದೆ, ದಿಗಂಬರ ಅಂಬರವಿದೆ; ನಗ್ನತೆಯಿದೆ, ಭಗ್ನತೆಯಿದೆ, ಧರ್ಮವಿದೆ, ಕರ್ಮವಿದೆ, ಭಕ್ತಿಯಿದೆ, ಜ್ಞಾನವಿದೆ, ವೈರಾಗ್ಯವಿದೆ. All roads lead to Rome ಎಂಬುದೇ 'ನದೀನಾಂ ಸಾಗರೋಗತಿಃ' ಎಂದಾಗಿದೆ. ಈ ದೃಷ್ಟಿಯಿಂದ ಪರಮ ಬ್ರಹ್ಮಶರೀರ ಪುಷ್ಟಿ, ಜನತಾಂತರ್ದೃಷ್ಟಿ, ಕೈವಲ್ಯ ಬೋಧರ ಮಾ ಮೌಕ್ತಿಕ ಹಾರಯಷ್ಟಿ, ಕವಿತಾವಲ್ಲೀ ಸುಧಾವೃಷ್ಟಿ, ಸರ್ವ ರಸೋತ್ಪಾದನವೀನಸೃಷ್ಟಿ, ಬುಧ ಹರ್ಷಾಕೃಷ್ಟಿ ಸಂಭವಿಸುತ್ತದೆ. 'ಅಂತರ್ ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ' ಎಂಬಂತೆ ಭಾರತೀಯ ಸಂಸ್ಕೃತಿ ಭಾರತೀಯರೆಲ್ಲರ ಒಳಹೊರಗೆಲ್ಲ ಹಬ್ಬಿದೆ. ಅದಿಲ್ಲದ ಸ್ಥಳವಿಲ್ಲ, ಕಾಲವಿಲ್ಲ, ಅವಸ್ಥೆಯಿಲ್ಲ. ಆದುದರಿಂದ ಭಾರತೀಯ ಸಂಸ್ಕೃತಿಯಿಲ್ಲದ ಭಾರತೀಯನಿಲ್ಲವೇ ಇಲ್ಲ. ಭಾರತೀಯನಿಂದ ಭಾರತೀಯ ಸಂಸ್ಕೃತಿಯ ಮಾತಲ್ಲದೆ ಬೇರೆಯ ಮಾತು ಹೊರಡದು. ಭಾರತೀಯ ಸಂಸ್ಕೃತಿ ಸೂಕ್ತಿ ಸುಧಾರ್ಣವ; ಅದರಿಂದ ಭಾರತೀಯರಿಂದು ಅಂಥ ಅರ್ಣವವುಳ್ಳ ಅರ್ಣವರು.

ಸಂಸ್ಕೃತಿಯೆಂದರೆ ಸುಶಿಕ್ಷಿತತೆಯ ಆಭಾಸ; ಅದು ವಾಗಿಂದ್ರಜಾಲ; ಚಿಂತಿಸಿದ ಹಾಗೂ ಹೇಳಿದ ಆತ್ಯುತ್ತಮಾಂಶಗಳ ಪರಿಜ್ಞಾನ; ಪದ್ಧತಿಯಂತೆ ಮಾರ್ಗದರ್ಶನಾರ್ಥವಾಗಿ ಉದ್ದೇಶ ಪೂರ್ವಕ ಓದುವುದು ಎಂಬೆಲ್ಲ ಲಕ್ಷಣಗಳ ಜೊತೆಗೆ ಅದು ಶ್ರೋತೃ ಮನೋರಂಜಕ ವಾಕ್ ಪುಷ್ಪ ವೃಷ್ಟಿ ಎಂಬುದೂ ಸದ್ಯ ಸುವಿದಿತವಾಗಿದೆ. ಆದುದರಿಂದ ನವ ಭಾರತೀಯ ಸಂಸ್ಕೃತಿಯು Intellectual dandyism, brutalizing of Imagination, crime of the Mind, ideal over-turned, parody of physical and moral beauty – ಬೌದ್ಧಿಕ ವೇಷ ಪ್ರದರ್ಶನ, ಪ್ರತಿಭೆಯ ಅನಾಗರಿಕ ಪರಿವರ್ತನ, ಮನಸ್ಸಿನ ದಂಡನೀಯ ಅಪರಾಧ, ಧ್ಯೇಯದ ತಲೆಕೆಳಗು, ಭೌತಿಕ ಹಾಗೂ ನೈತಿಕ ಸೌಂದರ್ಯದ ಅಣಕವಾಡು ಎಂದೊಬ್ಬ ಒದರಿದ್ದಾನೆ. Assimilation ಸರ್ವಗ್ರಸನವು ಸಂಸ್ಕೃತಿಯ ಪ್ರಥಮ ಲಕ್ಷಣವಾದುದರಿಂದ ಮೇಲಿನ ಮಾತನ್ನೂ ಅದು ತನ್ನ ಹೊಟ್ಟೆಯಲ್ಲಿ ಹಾಕಿಕೊಳ್ಳಬಲ್ಲುದು. ವಾತಾಪೇಜೀರ್ಣೋಭವ—ಗಾಳಿಯಂಥ ಮಾತನ್ನಾದರೂ ಹಿಡಿದು ನುಂಗಬಲ್ಲುದು ಭಾರತೀಯ ಸಂಸ್ಕೃತಿ. ಅದು ನವನಾಗರಿಕನ ಜಿಹ್ವಾರಂಗದಲ್ಲಿ— 'ಚಿಗರ್‌ಯಾಗಿ, ತಿಗರ್‌ಯಾಗಿ, ನಿದ್ದಿಯ ಭಗರ್‌ಯಾಗಿ, ಗಾಳಿಗೂ ಹಗುರಾಗಿ' ಕುಣಿಯಬಲ್ಲುದು. ಈ ಸರ್ವಾಂಗ ಸುಂದರಿ ವಿದ್ಯಾನಟಿಯ ನಾಟ್ಯವೇ ಸಂಸ್ಕೃತಿ ಪ್ರಚಾರ, ಸಂಸ್ಕೃತಿ ವ್ಯಾಖ್ಯೆ, ಸಂಸ್ಕೃತಿ ಲಕ್ಷಣ ಕಥನ ಎಂದರೆ, ಸುಸಂಸ್ಕೃತನ ಓದಿಂದು ಅಗಸ್ತ್ಯಾಪೋಶನ—ಆದರಿಂದಲೇ ಅವನ ಭಾಷಣ ಜಾಹ್ನವೀ ಪ್ರವಾಹ. ಭಾರತೀಯರದು ಬ್ರಹ್ಮ ಸಂಸ್ಕೃತಿಯಾದುದರಿಂದ ಅವರ ಸಂಸ್ಕೃತಿಪ್ರಿಯ. ಹೀಗೆ ಮನೋವಾಗತೀತವಾಗಿದೆ, ಬಣ್ಣಿಸಿದ್ದಷ್ಟೂ ಆಗಿ ಬಣ್ಣನೆಗೆ ಮೀರಿ ನಿಲ್ಲುತ್ತದೆ. ಅದು ಪಾಶ್ಚಾತ್ಯ ಸಂಬದ್ಧ, ಸನಾತನ ಸಂಸ್ಕೃತ ಪುರಾಣ—ನವ ಅಥವಾ ನವಪುರಾಣ! ಆ ಸಂಸ್ಕೃತಿ—

ನಾನೀನ ನುಡಿ ನುಂಗಿ ತಾನೀನ
ತಾನೆ ತಾ
ತಾನಾಗಿ ತನನ ಅಂಥಂಗ!

ಹೊಸ ವರ್ಷದ ಕಾಣಿಕೆ

ಸುಲಭ ವೆಚ್ಚದಿಂದ ಸುಂದರವಾದ ತೋಟಗಳನ್ನು
—: ರಚಿಸಲು ಮರೆಯದಿರಿ :—
ಹೂವಿನ ಉದ್ಯಾವನಗಳಿಗೆ.....
..... ಅತ್ಯಾವಶ್ಯವೆನಿಸಿರುವ

10 ಜಾತಿಯ ನವೀನ ತರದ
ಪ್ರಕಾಶ ಹೂವಿನ ಬೀಜಗಳ
10 ಪೆಕೇಟುಗಳುಳ್ಳ ಪೇಕಿಗೆ
ಕೇವಲ ಮೂರು ರೂಪಾಯಿಗೆ

ನಮ್ಮಲ್ಲಿ ಸಿಕ್ಕುತ್ತವೆ.
ಪೋಸ್ಟೇಜ ಮತ್ತು ವಿ. ಪಿ. ಖರ್ಚು ಪ್ರತ್ಯೇಕ.

ವಿಜಯಲಕ್ಷ್ಮಿ ಗಾರ್ಡನ್,
ತ್ರಿಶುಲ್ಲೇಶ್ವರ ಟೆಂಪಲ್ ಸ್ಟ್ರೀಟ್ . . . ಮಂಗಳೂರು—1.

ಕಲೆಗಾಗಿ ಕಲೆಯೇ?

ಬರೆದವರು:—
ಶ್ರೀ ಕೆ. ಬಿ. ರಾಮಕೃಷ್ಣ ರಾವ್, ಬಿ.ಎ. ಆನರ್ಸ್.

'ಕಲೆ ಕಲೆಗಾಗಿ' ಎನ್ನುವ ವಾದ ಸೌಂದರ್ಯ ಮೀಮಾಂಸೆಯಲ್ಲಿ ಪ್ರಮುಖಸ್ಥಾನವನ್ನು ಗಳಿಸಿದೆ. ಕಲೆಯನ್ನು ಭೌತಿಕ ಅಥವಾ ಇತರ ಸಂಬಂಧಗಳಿಂದ ನಿರ್ಲಿಪ್ತಗೊಳಿಸಿ, ಕಲಾ ಸೃಷ್ಟಿಯನ್ನು ಪ್ರತ್ಯೇಕವೆಂದು ಸಾರಿ, ಕಲಾವಿದನ ಸೃಷ್ಟಿ ಚೈತನ್ಯವನ್ನು ಬ್ರಹ್ಮ ಚೈತನ್ಯದೊಂದಿಗೂ ಕಲಾವಿದನನ್ನು ಬ್ರಹ್ಮನೊಂದಿಗೂ ಹೋಲಿಸುವ ವಿಚಾರ ಧೋರಣೆ ಈ ವಾದದಲ್ಲಿ ಅಡಗಿದೆ. ಈ ವಾದ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ನಡೆದು ಬಂದಿರುವ ವಾದ. ಆದರೂ ವಾದವನ್ನು ಬೆಳಸಿರುವ ಕ್ರಮಗಳಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಈ ವಾದದಲ್ಲಿ ಬರುವ ವಿಚಾರಣೀಯ ಅಂಶಗಳೆಂದರೆ:— ಕಲಾಜಗತ್ತು ಅಥವಾ ಕಲಾಸೃಷ್ಟಿ ಬ್ರಹ್ಮಸೃಷ್ಟಿಗಿಂತ ಭಿನ್ನವಾದುದೇ? ಭಿನ್ನವೆಂದರೆ ಯಾವ ರೀತಿಯಲ್ಲಿ? ಬ್ರಹ್ಮಸೃಷ್ಟಿಗಿರುವಂತೆ ಕಲಾಸೃಷ್ಟಿಗೆ ಸ್ವತಂತ್ರ ನಿಲುಮೆಯಿದೆಯೇ? ಅದು ಭೌತಿಕ ಸಂಸರ್ಗದಿಂದ ಸಹಜವಾಗಿ ನಿರ್ಲಿಪ್ತವಾದುದೇ? ಅದು ಉದ್ದೇಶರಹಿತವೇ? ಉದ್ದೇಶರಹಿತವಾದರೆ ಅಂತಹ ನಿರ್ಲಿಪ್ತ ನಿಸ್ವಾರ್ಥ ಕಲಾಸೃಷ್ಟಿಯ ಮೌಲ್ಯವೇನು? ಇಂತಹ ಪ್ರಶ್ನೆಗಳಿಗೆ ಉತ್ತರ ಬರುವಂತೆ ವಾದಗಳನ್ನು ಬೆಳಸಿಕೊಂಡು ಹೋಗಿರುವುದನ್ನು ಕಾಣಬಹುದು. ಈ ಲೇಖನದಲ್ಲಿ, ವಾದಕ್ಕೆ ಸಂಬಂಧಪಟ್ಟಂತೆ ಭಾರತೀಯ ತಾತ್ತ್ವಿಕರ ವಿಚಾರ ದೃಷ್ಟಿಯನ್ನು ಸೂಕ್ಷ್ಮವಾಗಿ ತಿಳಿಯಪಡಿಸುವ ಪ್ರಯತ್ನ ಮಾಡಲಾಗಿದೆ.

ಭಾರತೀಯರಿಗೆ 'ಕಲೆ ಕಲೆಗಾಗಿ' ಎಂದರೆ ಅಷ್ಟು ಸಮರ್ಪಕವಲ್ಲ. ಪರಬ್ರಹ್ಮ ತತ್ತ್ವವನ್ನು ಸಚ್ಚಿದಾನಂದ ಸ್ವರೂಪವೆಂದೋ, ಪರಬ್ರಹ್ಮತತ್ತ್ವದಲ್ಲಿ ಸತ್, ಚಿತ್,ಆನಂದ ತತ್ತ್ವಗಳು ಲೀನವಾಗಿರುವುವೆಂದೋ ತಿಳಿದ ಭಾರತೀಯ ತಾತ್ತ್ವಿಕರಿಗೆ ಕಲೆ ಅಥವ ಸೌಂದರ್ಯಾನುಭವ ಒಂದು ಸಾಧನ ಮಾತ್ರ, ಏಕೈಕ ಧ್ಯೇಯವಲ್ಲ. ಜೀವನದ ಅಂತಿಮ ಧ್ಯೇಯವಾದ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸೌಂದರ್ಯಾನ್ವೇಷಣೆ ಒಂದು ಸಾಧನೆ; ಸೌಂದರ್ಯಾನುಭವ ನೀಡುವ ಆನಂದ ಬ್ರಹ್ಮಾನಂದದ ಒಂದು ಸ್ವರೂಪ. ಈ ರೀತಿಯ ವಿಚಾರಕ್ರಮ ಭಾರತೀಯ ಸಂಸ್ಕೃತಿಯ ಹೆಗ್ಗುರುತು.

ಇಂತಹ ಮನೋವೃತ್ತಿಯುಳ್ಳ ಭಾರತೀಯರ ಕಲಾವಿವೇಚನೆ ಬ್ರಹ್ಮಸೃಷ್ಟಿಯನ್ನೂ ಕಲಾಸೃಷ್ಟಿಯನ್ನೂ ನೋಡುವ ರೀತಿಯೇ ವಿಶಿಷ್ಟವಾದುದು. ಭಾರತೀಯರು ಕಲಾವಿದನ ಅಪ್ರತಿಮ ಸೃಷ್ಟಿಚೈತನ್ಯವನ್ನು ಒಪ್ಪಿಕೊಂಡಿದ್ದಾರೆ. ಕವಿಯ ಪ್ರತಿಭೆಯನ್ನು "ವಿಚಿತ್ರಾಪೂರ್ವ ನಿರ್ಮಾಣ ಶಕ್ತಿಶಾಲಿನಃ"[1] ಎಂದು ಹೊಗಳಿದ್ದಾರೆ. ಕಲಾವಿದನನ್ನು ಬ್ರಹ್ಮನೊಂದಿಗೆ ಹೋಲಿಸಿ "ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ"[2] ಎಂದು ಹೇಳಿದುದೂ ಉಂಟು. ಕವಿಸೃಷ್ಟಿಯನ್ನು ಬ್ರಹ್ಮಸೃಷ್ಟಿಗೆ ಹೋಲಿಸಿ, ಕವಿಸೃಷ್ಟಿಯನ್ನು "ಯಥಾಸ್ಮೈರೋಚತೇ ವಿಶ್ವಂ ತಥೇದಂ ಪರಿವರ್ತತೇ"[3] ಎಂದೂ "ನಿಯತಿ ಕೃತ ನಿಯಮರಹಿತಾಂ ಹ್ಲಾದೈಕಮಯೀಂ ಅನನ್ಯ ಪರತಂತ್ರಾಂ | ನವರಸ ರುಚಿರಾಂ...."[3] ಎಂದೂ ಹೊಗಳಿದ್ದು ಉಂಟು. ಆದರೆ, ಹೀಗೆ ಕವಿಯ ಮಹತ್ವವನ್ನೂ, ಕವಿಸೃಷ್ಟಿಯ ವಿಶಿಷ್ಟ ಗುಣವನ್ನೂ ಒಪ್ಪಿಕೊಂಡಿದ್ದರೂ, ಅಂತಿಮವಾಗಿ ಕಾವ್ಯ ರಸಾಸ್ವಾದನೆಯಿಂದುಂಟಾಗುವ ಆನಂದವನ್ನು "ಬ್ರಹ್ಮಾನಂದ ಸೂಚಿ" ಎಂದೇ ಭಾರತೀಯರು ಹೇಳುತ್ತಾರೆ.

ಹಾಗೆಯೇ, ಭಾರತೀಯ ದೃಷ್ಟಿಯಲ್ಲಿ ಬ್ರಹ್ಮಸೃಷ್ಟಿಗೆ ಮಾಧ್ಯಮ (medium) ಬ್ರಹ್ಮವೇ. ಜೇಡರ ಹುಳು ತನ್ನ ಶರೀರದಿಂದಲೇ ತೆಗೆದ ಎಳೆಯಿಂದ ಬಲೆಯನ್ನು ನಿರ್ಮಿಸುವಂತೆ ಬ್ರಹ್ಮ ತನ್ನನ್ನೇ ವಿಶ್ವವನ್ನಾಗಿ ಪರಿಣಮಿಸಿಕೊಳ್ಳುವ ಒಂದು ಚೈತನ್ಯ.[4] ಈ ವಿಶ್ವವೆಲ್ಲಾ ಆ ಬ್ರಹ್ಮವೇ ಆಗಿದೆ— "ಈಶಾವಾಸ್ಯಮಿದಂ ಸರ್ವಂ"[5]. ಇದರಲ್ಲಿ ಬ್ರಹ್ಮ "ಅಣೋರಣೀಯಾನ್ ಮಹತೋ ಮಹೀಯಾನ್"[6] ಆಗಿದೆ. ಅಲ್ಲದೆ "ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಮ್."[7] ಬ್ರಹ್ಮತತ್ತ್ವದ ಸ್ವರೂಪವನ್ನು ಈ ರೀತಿಯಲ್ಲಿ ಅರ್ಥಮಾಡಿಕೊಂಡಿರುವ ತಾತ್ತ್ವಿಕರಿಗೆ ಕಲಾಚೈತನ್ಯ ಬ್ರಹ್ಮಚೈತನ್ಯದ ಅಂಶವಲ್ಲದೆ ಮತ್ತೇನು? —"ಯದ್ಯದ್ವಿಭೂತಿ ಮತ್ಸತ್ವಂ ಶ್ರೀಮದೂರ್ಜಿತ ಮೇವ ವಾ | ತತ್ತ ದೇವಾವಗಚ್ಛತ್ವಂ ಮಮ ತೇಜೋಂಶ ಸಂಭವಂ|"[8]

ಕಲಾಸೃಷ್ಟಿಗೆ ಮಾಧ್ಯಮ(medium) ಬ್ರಹ್ಮಸೃಷ್ಟಿಯೇ. ಶಿಲ್ಪಿಗೆ ಮಣ್ಣು, ಕಲ್ಲು; ಚಿತ್ರಕಾರನಿಗೆ ಬಣ್ಣ; ಸಂಗೀತಗಾರನಿಗೆ ನಾದ; ಕವಿಗೆ ಶಬ್ದ, ಅರ್ಥ. ಕಲಾವಿದ ವಿಶಿಷ್ಟ ಸೃಷ್ಟಿಕಲಾರ. ಬ್ರಹ್ಮ ಸೃಷ್ಟಿಯನ್ನೇ ವಸ್ತುವನ್ನಾಗಿ ಬಳಸಿಕೊಂಡು ರೂಪಾಂತರಗೊಳಿಸಿ ಚಿತ್ರಿಸಬಹುದು, ಚೇತನವನ್ನು ಅಚೇತನವನ್ನಾಗಿಯೂ, ಅಚೇತನವನ್ನು ಚೇತನವನ್ನಾಗಿಯೂ ಕಾಣಿಸಬಹುದು, ಮತ್ತೇನನ್ನೂ ಕಲಾವಿದ ಮಾಡಲಾರ—"ಭಾವಾನಚೇತನಾನಪಿ ಚೇತನವಚ್ಚೇತನಾನಚೇತನವತ್ | ವ್ಯವಹಾರಯತಿ..."[9] ಕಲಾವಿದನಾದವನು ತನ್ನ ಪ್ರತಿಭಾ ಶಕ್ತಿಯಿಂದ ಇದ್ದುದನ್ನೇ ಅಪೂರ್ವವಾದದ್ದೆಂದು ಚಮತ್ಕಾರದಿಂದ ತೋರಿಸುತ್ತಾನೆಯೇ ಹೊರತು ಬ್ರಹ್ಮನಂತೆ ಅಪೂರ್ವವಾದುದನ್ನು "ನಿರ್ಮಾಣ" ಮಾಡಲಾರ. ಕಲಾಸೃಷ್ಟಿಯ ವೈಶಿಷ್ಟ್ಯವೆಂದರೆ ಇದೇಯೇ—ಕಲಾವಿದ ತನಗೆ ಬ್ರಹ್ಮನಿತ್ತ ವಸ್ತುವನ್ನು ಬಳಸಿಕೊಳ್ಳುವ ರೀತಿ. "ತ ಏವ ಪದಸಂಘಾತಾಸ್ತಾ ಏವಾರ್ಥ ವಿಭೂತಯಃ| ಯಥಾಸಿ ನ್ಯಂ ಭವತಿ ಕಾವ್ಯಂ ಗ್ರಥನ ಕೌಶಲಾತ್ |"[10] ಒಂದೇ ಪದಸಮೂಹವಾದರೂ, ಒಂದೇ ಅರ್ಥ ಸಾಮರ್ಥ್ಯವಾದರೂ ಅವನ್ನು ಬಳಸಿಕೊಳ್ಳುವ ಕೌಶಲದಿಂದ ಕಾವ್ಯ ಹೊಸದಾಗಿ ಕಂಡು ಬರುತ್ತದೆ.

ಬ್ರಹ್ಮಸೃಷ್ಟಿಗೂ ಕಲಾಸೃಷ್ಟಿಗೂ ಇರುವ ವ್ಯತ್ಯಾಸವೆಂದರೆ ಬ್ರಹ್ಮಸೃಷ್ಟಿ ಪ್ರಾಕೃತಿಕವಾದುದು (ಅದನ್ನು ಜೇರೆಯ ವಿಶೇಷಣದಿಂದ ನಿರ್ದೇಶಿಸುವ ಹಾಗಿಲ್ಲ), ಆದರೆ ಕಲಾಸೃಷ್ಟಿ ಪ್ರತಿಭಾತ್ಮಿಕ ಅಥವಾ ಕಾಲ್ಪನಿಕವಾದುದು. ಕಲಾವಿದನಾದವನು ತನಗೆ ಬ್ರಹ್ಮದತ್ತವಾದ ಪ್ರತಿಭಾಶಕ್ತಿಯಿಂದ ಪ್ರಾಕೃತಿಕ ಜಗತ್ತಿಗೆ ಉಡುಪನ್ನು ತೊಡಿಸಿ, ಒಡವೆ ವಸ್ತ್ರಗಳನ್ನಿಟ್ಟು ಮೆರೆಸುತ್ತಾನೆ. ಮತ್ತೇನನ್ನೂ ಮಾಡಲಾರ. ಕಲಾಜಗತ್ತಿನ ಆಂತರಿಕ ವಸ್ತು ಬ್ರಹ್ಮ; ಕಲಾಜಗತ್ತನ್ನು ರೂಪಿಸುವ ಶಕ್ತಿಯು ಬ್ರಹ್ಮಚೈತನ್ಯದ ಒಂದು ಅಂಶ. ಕಲಾಸೌಂದರ್ಯ ಆಂತರಿಕವಾದ, ಸ್ವಯಂ ಪ್ರಕಾಶಮಾನವಾದ ಬ್ರಹ್ಮ ಸೌಂದರ್ಯದ ಮೇಲೆ ಆಧಾರಗೊಂಡಿರುತ್ತದೆ. ಪ್ರತಿಭೆಯ ಲೀಲಾ ವ್ಯಾಪಾರಕ್ಕೆ ಲೋಕ ವ್ಯವಹಾರವೇ ಆಧಾರ, ಕಲಾಸೃಷ್ಟಿಗೆ ಬ್ರಹ್ಮಸೃಷ್ಟಿಯೇ ತಳಹದಿ ಎನ್ನುವ ಭರತ ಮುನಿಯ ವಾಣಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು, "ಈ ತ್ರೈಲೋಕ್ಯ ವೆಲ್ಲದರ ಭಾವದ ಅನುಕೀರ್ತನವೇ ನಾಟ್ಯ. ಒಂದು ಕಡೆ ಧರ್ಮ, ಒಂದು ಕಡೆ ಆಟ, ಒಂದು ಕಡೆ ಅರ್ಥ, ಒಂದು ಕಡೆ ಶಾಂತಿ, ಒಂದು ಕಡೆ ಹಾಸ್ಯ, ಒಂದು ಕಡೆ ಯುದ್ಧ, ಒಂದು ಕಡೆ ಕಾಮ, ಒಂದು ಕಡೆ ಕೊಲೆ. ಧರ್ಮ ತತ್ವರರ ಧರ್ಮ, ಕಾಮಾಸಕ್ತರ ಕಾಮ, ಉದ್ಧತರ ನಿಗ್ರಹ, ವಿನಯಶಾಲಿಗಳ ಇಂದ್ರಿಯ ನಿಗ್ರಹ, ಹೇಡಿಗಳ ದಿಟ್ಟತನ, ಶೂರರ ಉತ್ಸಾಹ, ಅಜ್ಞರ ಪ್ರಬೋಧ, ವಿದ್ವಾಂಸರ ಪಾಂಡಿತ್ಯ, ಶ್ರೀಮಂತರ ವಿಲಾಸ, ದುಃಖ ಪೀಡಿತರ ಮನಃಸ್ಥೈರ್ಯ, ಅರ್ಥಪರರ ಅರ್ಥ ಸಂಗ್ರಹ, ಕಡುಬಡ ಮನಸ್ಸಿನವರ ಧೈರ್ಯ. ಹೀಗೆ ಅನೇಕ ಭಾವಗಳಿಂದ ಸಂಪನ್ನವಾಗಿ, ಅನೇಕ ಅವಸ್ಥೆಗಳನ್ನು ಒಳಗೊಂಡು, ಲೋಕದ ನಡೆವಳಿಕೆಯನ್ನು ಅನುಕರಿಸುವ ಈ ನಾಟ್ಯವನ್ನು ನಿರ್ಮಿಸಿದೆನು; ಇದಕ್ಕೆ ಉತ್ತಮ, ಮಧ್ಯಮ, ಅಧಮ, ಈ ಎಲ್ಲರ ಕಾರ್ಯಗಳೂ ಆಧಾರ...ಈ ನಾಟ್ಯದಲ್ಲಿ ಕಾಣಬಾರದ ಜ್ಞಾನವಿಲ್ಲ, ಶಿಲ್ಪವಿಲ್ಲ, ವಿದ್ಯೆಯಿಲ್ಲ, ಕಲೆಯಿಲ್ಲ, ಯೋಗವಿಲ್ಲ, ಕಾರ್ಯವಿಲ್ಲ...ಸುಖದುಃಖಗಳಿಂದ ಕೂಡಿದ ಲೋಕ ಸ್ವಭಾವವೇನುಂಟೋ ಅದೆಲ್ಲವೂ ಆಂಗಿಕವೇ ಮೊದಲಾದ ಅಭಿನಯಗಳಿಂದ ಕೂಡಿ ನಾಟ್ಯವೆಂದು ಕರೆಯಿಸಿಕೊಳ್ಳುತ್ತದೆ"[11] ಭರತನು 'ನಾಟ್ಯಶಾಸ್ತ್ರ'ದಲ್ಲಿ ನಾಟ್ಯವನ್ನು ಕುರಿತು ಹೇಳಿರುವ ಈ ಮಾತನ್ನು ಕಲಾಸಾಮಾನ್ಯಕ್ಕೇ ಅನ್ವಯಿಸಿ "ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ಕಲಾ ಭಾವಾನುಕೀರ್ತನಂ" ಎಂದು ಹೇಳಬಹುದು.

ಕಲಾಸೃಷ್ಟಿಗೆ ಬ್ರಹ್ಮಸೃಷ್ಟಿಯ ಆಧಾರವನ್ನು ಒಪ್ಪಿಕೊಂಡು, ಕಲಾವಿದನಾದವನು ತನ್ನ ಪ್ರತಿಭಾ ಶಕ್ತಿಯಿಂದ ಚಮತ್ಕಾರಗಳನ್ನು ತೋರಿಸಬಹುದೆಂಬ ಸ್ವಾತಂತ್ರ್ಯವನ್ನು ಪಡಗಣಿಸಿದ್ದರೂ ಔಚಿತ್ಯವನ್ನರಿತು ಕಲಾ ಕಾರ್ಯದಲ್ಲಿ ತೊಡಗಬೇಕೆನ್ನುವ ವಿವೇಕ ಭಾರತೀಯ ಕಲಾವಿದನ ಒಂದು ವೈಶಿಷ್ಟ್ಯ. ಕಲೆ ಕಲೆಗಾಗಿ ಎನ್ನುವ ಅತಿರೇಕಾಭಿಪ್ರಾಯದಿಂದ ಮುಂದು ಹೋಗದ ಹಾಗೆ ನಿಯಮಗಳನ್ನು ಸೂಚಿಸುವ ಕಲಾದೃಷ್ಟಿ ಕಲಾತತ್ತ್ವದ ಪರಮ ಸತ್ಯವನ್ನು ಅರಿತಿದ್ದಿರಲೇ ಬೇಕು. ಒಬ್ಬ ಕವಿಗೆ ಪ್ರತಿಭೆಯಿರಬಹುದು, "ಗ್ರಥನ ಕೌಶಲ" ವಿರಬಹುದು ಆದರೆ ಯಾವುದನ್ನೂ ಅತಿಕ್ರಮಿಸಬಾರದೆಂಬ ನಿಯಮನ, ಹಾಗೂ ಅಸಂಭವನವಾದುದನ್ನು ಚಿತ್ರಿಸಬಾರದೆಂಬ ಔಚಿತ್ಯ ಜ್ಞಾನದ ಸೂಚನೆಗಳು ನಮ್ಮ ಲಕ್ಷಣ ಗ್ರಂಥಗಳಲ್ಲಿ ಕಂಡುಬರುತ್ತವೆ. "ಇಂತಹುದನ್ನು ಕಲಾವಿದರು ಮಾಡಬಾರದೆಂದಲ್ಲ, ಆದರೆ ಅದನ್ನು ವಿದಗ್ಧರಲ್ಲದವರು ಅರ್ಥಮಾಡಿಕೊಳ್ಳಲಾರರು" ಎನ್ನುವ ಅಭಿಪ್ರಾಯ ಎಚ್ಚರಿಕೆಯೂ ಹೌದು, ಕಲಾ ಲಕ್ಷಣದ ತಿಳಿವಳಿಕೆಯೂ ಹೌದು.

ಕಲೆ ಕಲೆಗಾಗಿ ಎನ್ನುವ ವಾದಕ್ಕೆ ಸಂಬಂಧ ಪಟ್ಟಂತೆ ಬರುವ ಪ್ರಯೋಜನದ ಪ್ರಶ್ನೆಯೂ ಭಾರತೀಯರ ದೃಷ್ಟಿಯಲ್ಲಿ ಒಂದು ವಿಶಿಷ್ಟ ರೂಪವನ್ನು ಹೊಂದಿದೆ. ಕಾವ್ಯ ಪ್ರಯೋಜನವನ್ನು ಹೇಳುತ್ತಾ "ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ" ಎಂದು ಹೇಳಿದ್ದರೂ "ಸದ್ಯಃ ಪರನಿರ್ವೃತಯೇ"[12] ಎಂಬುದನ್ನೇ ಭಾರತೀಯರು ಹೆಚ್ಚಾಗಿ ಅನುಮೋದಿಸಿದ್ದಾರೆ. ಕಲೆಯು ನೀಡುವ ಆನಂದ ತಾತ್ಕಾಲಿಕವಾದರೂ ಕಲೆಯ ಮೌಲ್ಯ ಈ ಆನಂದದಲ್ಲಿಯೇ ಅಡಗಿದೆ. ಏಕೆಂದರೆ ಇದು ಬ್ರಹ್ಮಾನಂದದ ಸದೃಶ. ಕಲಾನುಭವದಲ್ಲಿ ಸಿಗುವ ಆನಂದ ಅನುಭಾವಿಯನ್ನು ತಾತ್ಕಾಲಿಕವಾದರೂ ಐಹಿಕ ಬಂಧನಗಳಿಂದ ನಿರ್ಲಿಪ್ತಗೊಳಿಸಿ ಆತ್ಮಜ್ಞಾನಿಗಳಿಗೆ ಲಭಿಸುವ ಬ್ರಹ್ಮಾನಂದದ ಸವಿಯನ್ನು ಸೂಕ್ಷ್ಮದಲ್ಲಿ ಮಾಡಿಕೊಡುತ್ತದೆ. ಭಾರತೀಯ ದೃಷ್ಟಿಯಲ್ಲಿ ಕಲಾನುಭವ ಒಂದು ಬಗೆಯ ಸವಿಕಲ್ಪ ಸಮಾಧಿ.

ಮೇಲಿನ ವಿಚಾರ ಕ್ರಮದಲ್ಲಿ ಕಂಡು ಬರುವ ಸಿದ್ಧಾಂತವೇನೆಂದರೆ:— ಕಲೆ ಕಲೆಗಾಗಿ ಎನ್ನುವ ಅತಿರೇಕ ವ್ಯಾಖ್ಯಾನ ಭಾರತೀಯರಿಗೆ ಅಸಮಂಜಸ. ಕಲೆ ಕಲೆಗಾಗಿಯೇ ಇದ್ದರೆ ಮೊದಲನೆಯದಾಗಿ ಮೂಲ ಭೂತವಾದ ಒಂದು ಅಸ್ತಿತ್ವವನ್ನು ಹೊಂದಿರಬೇಕು, ಎರಡನೆಯದಾಗಿ

---

1 ಭರತ:—ನಾಟ್ಯಶಾಸ್ತ್ರ
2. ಅನಂದವರ್ಧನ:.. ಧ್ವನ್ಯಾಲೋಕ
3. ಮಮ್ಮಟ:—ಕಾವ್ಯಪ್ರಕಾಶ
4. ಮುಂಡಕೋಪನಿಷತ್ತು—7
5. ಈಶಾವಾಸ್ಯೋಪನಿಷತ್ತು—1
6 ಕಠೋಪನಿಷತ್ತು 1. 2. 20
7. ಪುರುಷ ಸೂಕ್ತ
8. ಭಗವದ್ಗೀತೆ—10. 41
9. ಅನಂದವರ್ಧನ—ಧ್ವನ್ಯಾಲೋಕ
10. ಸಿಂಗಭೂಪಾಲ—ರಸಾರ್ಣವ ಸುಧಾಕರ.
11. ಭರತ ನಾಟ್ಯಶಾಸ್ತ್ರ—ತೀ. ನಂ. ಶ್ರೀ. ಯವರ ಭಾರತೀಯ ಕಾವ್ಯಮೀಮಾಂಸೆ. ಪು. 153
12. ಮಮ್ಮಟ: ಕಾವ್ಯಪ್ರಕಾಶ.

ಕಲೆಗೆ ಧ್ಯೇಯ ಕಲೆಯೇ ಆಗಿರಬೇಕು ಅಥವಾ ಕಲೆಯು ಧ್ಯೇಯ ರಹಿತವಾಗಿರಬೇಕು. ಆದರೆ ಕಲಾಸೃಷ್ಟಿಗೆ ಬ್ರಹ್ಮಸೃಷ್ಟಿಯಂತೆ ಸ್ವತಂತ್ರ ಅಸ್ತಿತ್ವವಿಲ್ಲ. ಎರಡನೆಯದಾಗಿ ಕಲೆಯ ಧ್ಯೇಯ ಕಲೆಯೇ ಎಂದರೆ ಅರ್ಥಹೀನವಾಗುತ್ತದೆ. 'ಧ್ಯೇಯ ರಹಿತ'ವೆಂದೂ ವಿಶೇಷ ಅರ್ಥದಲ್ಲಿ ನಿರ್ಲಿಪ್ತ ನಿಸ್ವಾರ್ಥ ಆನಂದವೇ ಧ್ಯೇಯವೆಂದೂ ಸೂಚಿಸಿದಲ್ಲಿ ಕಲೆಗೆ ಒಂದು ಧ್ಯೇಯವಿದೆಯೆಂದು ಒಪ್ಪಿಕೊಂಡಂತಾಯಿತು. ಇಂತಹ ಆನಂದವನ್ನು ಸಾಧಿಸುವುದೇ ಮಾನವನ ಗುರಿಯೆಂದರೆ ಕಲೆಯು ನೀಡುವ ಆನಂದ ತಾತ್ಕಾಲಿಕ. ಆದ್ದರಿಂದ ಯಾವುದು ನಿರಂತರವಲ್ಲವೋ ಅದು ಮಾನವನ ಅಂತಿಮ ಗುರಿಯಾಗಲಾರದು. ಹೀಗಾಗಿ ಕಲಾನ್ವೇಷಣೆ ಮತ್ತು ಕಲಾನುಭವದಿಂದ ಬರುವ ಆನಂದ ಮಾನವನ ಜೀವನದಲ್ಲಿ ಮುಖ್ಯ ಪಾತ್ರವನ್ನು ವಹಿಸಬೇಕಾದರೆ ಅದಕ್ಕಿಂತ ಅತ್ಯಂತಿಕವಾದ ಮತ್ತು ಆನಂತವಾದ ತತ್ತ್ವವನ್ನು ಸಾಧಿಸಲು ಮಾರ್ಗವಾಗಬೇಕು. ಎಂದರೆ ಕಲೆ ಕಲೆಗಾಗಿ ಅಲ್ಲ; ಕಲೆ ಬ್ರಹ್ಮಸೂಚಿಯಾಗಿ.

ಪಾರಮಾರ್ಥಿಗಳಾದ ಭಾರತೀಯರಿಗೆ ಕಲೆಯೆಂದರೆ ವಿಶ್ವಲೀಲೆ, ಕಲಾವಿದನೆಂದರೆ ವಿಶ್ವಕರ್ಮ. ಆದ್ದರಿಂದ ಯಾವುದನ್ನು ನಾವು ಸಾಮಾನ್ಯವಾಗಿ 'ಕಲೆ'ಯೆಂದು ವ್ಯವಹರಿಸುತ್ತೇವೆಯೋ ಅದು ಪ್ರಾಪಂಚಿಕವಾದ ಒಂದು ವ್ಯಾಪಾರ. ಅದು ಅತ್ಯಂತಿಕ ದೃಷ್ಟಿಯಿಂದ (in a transcendental sense) ಗೌಣವಾದುದು. ಸಾಕ್ಷಾತ್ಕಾರಕ್ಕೆ ಕಲೆಯನ್ನು ಪ್ರಾಪಂಚಿಕ ದೃಷ್ಟಿಯಿಂದ ಕಂಡು ವಿಚಾರ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದರೂ ಕಲೆಯ ಸೃಷ್ಟಿಯ ವಿಶಿಷ್ಟ ರೀತಿಯ ಆನಂದಕ್ಕಾಗಿ ಕಲೆಗೆ ಹೆಚ್ಚು ಮನ್ನಣೆಯನ್ನು ಕೊಡುತ್ತಾರೆ. ಕಲಾನುಭವವು ಒಂದು ಅಪೂರ್ವ ಯೋಗವೆನ್ನುವುದರಲ್ಲಿ ಯಾರಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಆದರೆ ಅದನ್ನು ನೋಡುವ ದೃಷ್ಟಿಯಲ್ಲಿ ವ್ಯತ್ಯಾಸ ಕಂಡು ಬರುವುದರಿಂದ ಸಿದ್ಧಾಂತಗಳಲ್ಲೂ ವ್ಯತ್ಯಾಸ ಬರುವುದು ಸಹಜ.

ಲಘು ಉದ್ಯಮಗಳು

(೭ನೇ ಪುಟದಿಂದ)

ತಜ್ಞರನ್ನು ನಾವು ಯಾವ ಸಂಖ್ಯೆಯಲ್ಲಿ ಹೊರಗಿನಿಂದ ಬರಮಾಡಿಕೊಳ್ಳಬೇಕಾಗಬಹುದು ಎಂಬ ವಿಷಯಗಳ ಯೋಜನೆಯನ್ನು ನಾವು ಮಾಡಬೇಕು. ಅಸಂಖ್ಯವಾಗಿ ಎಷ್ಟು ಉದ್ಯಮಗಳು ನಮ್ಮ ದೇಶಗಳಲ್ಲಿದ್ದಂತೆಯೇ, ಅವುಗಳಿಗೆ ಕೂಡ ದಿಕ್ಕಿಲ್ಲದಂತಿರುವದರಿಂದ ಅಗಣಿತ ಜನರು ಸಾಕಷ್ಟು ಕೆಲಸವಿಲ್ಲದೆ ಇದ್ದಾರೆ. ನಗರಗಳಲ್ಲಿ ಕಂಡು ಬರುವ ಶಿಕ್ಷಿತ ಜನರ ನಿರುದ್ಯೋಗಕ್ಕಿಂತ, ಹಂಗೆಟ್ಟು ಕುಳಿತ ಈ ಕುಶಲ ಜನರ ಕೆಲಸಗೇಡಿತನವು ಸಾಂಸ್ಕೃತಿಕ ದೃಷ್ಟಿಯಿಂದ ನಮ್ಮ ದೇಶಗಳಿಗೆ ಹೆಚ್ಚು ಅನಿಷ್ಟವಾದುದು; ಅಪಾಯಕಾರಿಯಾದುದು. ಅಂತೆಯೆ ಆ ಪ್ರದೇಶದಲ್ಲಿ ನಿರ್ಮಾಣವಾಗುವ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು, ಆ ಪ್ರದೇಶದ ಜನರ ಸಹಾಯದಿಂದ ನಡೆಯುವ ಲಘುಉದ್ಯಮಗಳು ಇಂದಿನ ನಮ್ಮ ಸಮಾಜದಲ್ಲಿ ಪುನರುಜ್ಜೀವನಗೊಳ್ಳುವದು ಅಗತ್ಯವಾಗಿದೆ. ಇದರಿಂದ ಹಳೆಯ ರೀತಿಯಲ್ಲಿಯೆ ಆ ಉದ್ಯಮಗಳು ನಡೆಯಬಹುದು ಎಂದು ಮಾತ್ರ ಯಾರೂ ತಿಳಿಯಬಾರದು. ಇಂತಹ ಸುಸಜ್ಜಿತ ಮತ್ತು ಸುಧಾರಣೆಯನ್ನು ಹೊಂದಿದ ಯಾಂತ್ರಿಕ ಸಾಧನದಿಂದ ನಡೆಯುವ ಘನ ಉದ್ಯಮಗಳ ಎದುರಿನಲ್ಲಿ ಸ್ಪರ್ಧೆಯನ್ನು ನಡೆಯಿಸಿ ತಮ್ಮ ಅಸ್ತಿತ್ವವನ್ನು ಇನ್ನು ಚಿಕ್ಕ ಉದ್ಯಮಗಳು ಇಟ್ಟುಕೊಂಡಿರುವವು ಎಂಬುದೇ ಅವುಗಳ ಉಚ್ಚಗುಣ ಮತ್ತು ಲೋಕ ಪ್ರಿಯತೆಗಳ ನಿದರ್ಶನವಾಗಿದೆ. ಆದರೂ ಆಧುನಿಕ ಸಂಶೋಧನ ಮತ್ತು ಉಪಕರಣಗಳ ಸಹಾಯದಿಂದ ಆ ಲಘು ಮತ್ತು ಗೃಹ ಉದ್ಯಮಗಳನ್ನು ನಮ್ಮ ಶಕ್ತಿ ಮತ್ತು ಅವಶ್ಯಕತೆಗಳಿಗೆ ಅನುಸಾರವಾಗಿ ಪರಿಷ್ಕರಿಸುವದು ಅನಿವಾರ್ಯವೆನಿಸುತ್ತದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಘನ ಉದ್ಯಮಗಳ ಮತ್ತು ಯಂತ್ರ ಸಾಧನದ ಅಭಿವೃದ್ಧಿಯು ಅಪರಿಮಿತ ಪ್ರಮಾಣದಲ್ಲಿ ಆಗಿದ್ದರೂ, ಧನ, ದೇಶಶಕ್ತಿ ಮತ್ತು ಯೋಜಕಬುದ್ಧಿಗಳ ದೃಷ್ಟಿಯಿಂದ ತೂಗಿ ನೋಡಲಾಗಿ ಲಘು ಮತ್ತು ಗೃಹ ಉದ್ಯಮಗಳಿಗಿಂತ ಘನ ಉದ್ಯಮಗಳ ಉತ್ಪಾದನ ಹೆಚ್ಚು ಎಂದಾಗಲಿ, ಸುಲಭ ಎಂದಾಗಲಿ ಎಲ್ಲಿಯೂ ಯಾರೂ ಸಿದ್ಧಮಾಡಿ ತೋರಿಸಿಲ್ಲ. ಅಷ್ಟೆ ಪ್ರಮಾಣದಲ್ಲಿ ಉತ್ಪಾದನ ಸಾಮಗ್ರಿಗಳನ್ನು ಆಣಿಮಾಡಿಕೊಂಡು ನಡೆಯುತ್ತಿರುವ ಎರಡು ಅದೇ ಬಗೆಯ ಉದ್ಯಮಗಳಲ್ಲಿ ಕೂಡ ಸಮವಾಗಿ ಉತ್ಪಾದನವಾಗಬಹುದು ಎಂಬುದನ್ನು ಖಂಡಿತವಾಗಿ ಹೇಳಲಾಗುವದಿಲ್ಲವೆಂದ ಮೇಲೆ — ಅತ್ಯಂತ ವಿಭಿನ್ನವಾದ ಸರಿಸ್ಥಿತಿಯಲ್ಲಿ ನಡೆಯುವ ಲಘು ಮತ್ತು ಘನಉದ್ಯಮಗಳ ಗುಣಾವಗುಣಗಳನ್ನು ತೂಗಿ ನೋಡುವದು ಹೇಗೆ? ಅಂತೆಯೆ ಆ ದೇಶದ ಜನ ಮತ್ತು ಜೀವನಗಳಿಗೆ ಅನುಸಾರವಾಗಿ ಆ ಬಗೆಯ ಉದ್ಯಮಗಳ ಮೇಲೆ ಹೆಚ್ಚು ಗಮನವನ್ನು ಕೊಡುವದು ಪ್ರಯೋಜಕವಾಗಬಹುದು.

ಸಾಮಾನ್ಯವಾಗಿ ಇಲ್ಲಿ ಎಲ್ಲ ಚಿಕ್ಕ ಉದ್ಯಮಗಳ ನಿರ್ದೇಶನವನ್ನು ಮಾಡುವದು ಸೂಕ್ತವೂ ಸಾಧ್ಯವೂ ಅಲ್ಲವಾದ ಕಾರಣ ಸ್ಥೂಲವಾಗಿ ಲಘು ಉದ್ಯಮಗಳು ಇಂದಿನ ನಮ್ಮ ಯೋಜನೆಯಲ್ಲಿ ಯಾವ ಬಗೆಯಾಗಿ ಸಹಾಯಕವಾಗಬಹುದು ಎಂಬುದನ್ನು ಇಲ್ಲಿ ನೋಡಬೇಕಾಗಿದೆ. ಮೊದಲನೆಯದಾಗಿ ಬರುವದು ಗೃಹ ಉದ್ಯಮಗಳು. ಇವು ಅನಾದಿ ಕಾಲದಿಂದಲೂ ನಮ್ಮ ದೇಶದ ಹಳ್ಳಿಹಳ್ಳಿಯಲ್ಲಿ ಹಬ್ಬಿಕೊಂಡಿವೆ. ಕೇವಲ ದೈನಂದಿನ ಉಪಯೋಗಕ್ಕಾಗಿ ಮತ್ತು ಸ್ಥಳೀಕ ಸಾಮಗ್ರಿಗಳನ್ನು ಆಣಿಮಾಡಿಕೊಳ್ಳುವದಕ್ಕಾಗಿ ನಡೆದ ಈ ಉದ್ಯಮಗಳು ನಮ್ಮ ಗ್ರಾಮ ಜೀವನದ ಅಭೇದ್ಯ ಅಂಗವಾಗಿವೆ. ಈ ಉದ್ಯಮಗಳ ಇನ್ನೊಂದು ಹಿರಿಯ ವೈಶಿಷ್ಟ್ಯವೆಂದರೆ, ಕೃಷಿಯನ್ನು ಮಾಡಿ, ಉಳಿದ ಸಮಯದಲ್ಲಿ ಜರಗುವ ಮತ್ತು ಕೃಷಿಕನಿಗೆ ಬೇಕಾಗುವ ಸಾಧನಗಳನ್ನು ಪೂರೈಸುವ ಕಾರ್ಯದಲ್ಲಿ ನಡೆಯುವದಾಗಿದೆ. ಕಳೆದ ಕೆಲವು ದಶಕಗಳಿಂದ ಪಾಶ್ಚಾತ್ಯ ದೇಶಗಳಿಂದ ಆಯಾತವಾಗಿ ಬರುತ್ತಿರುವ ಅಸಂಖ್ಯ ವಸ್ತುಗಳ ಸ್ಪರ್ಧೆಯಿಂದ ಮತ್ತು ಪರಕೀಯ ರಾಜ್ಯದ ಅವಕೃಪೆಯ ಮೂಲಕ ಅವು ಹಿಂದೆ ಬಿದ್ದವೆ; ತತ್ಪರಿಣಾಮವಾಗಿ ಗ್ರಾಮಗಳಲ್ಲಿ ನಿರುದ್ಯೋಗವು ಹೆಚ್ಚಾಗಿದೆ.

ಆ ಮೇಲೆ ಬರುವವು ಲಘು ಉದ್ಯಮಗಳು. ಇವು ಹಳ್ಳಿಗಳ ವೈಶಿಷ್ಟ್ಯವನ್ನು ಕಾಯ್ದುಕೊಂಡು ಕಲಾತ್ಮಕ ವಸ್ತುಗಳ ನಿರ್ಮಾಣವನ್ನಾಗಲಿ, ನಗರಗಳ ವಸ್ತುಗಳಿಗೆ ಪೂರಕವಾಗುವಂತಹ ಸಾಮಗ್ರಿಗಳ ಉತ್ಪಾದನವನ್ನಾಗಲಿ ಮಾಡುವ ಉದ್ಯಮಗಳಾಗಿವೆ. ಆನಂತರ ಬರುವವು ಘನ ಉದ್ಯಮಗಳು. ಅಸಂಖ್ಯ ಜನರು, ಅಪರಿಮಿತ ಧನ, ಅದ್ಭುತವಾದ ಯಂತ್ರ ಸಹಾಯ, ಆಶ್ಚರ್ಯಜನಕವೆನ್ನಿಸುವ ಸಂಶೋಧನೆಗಳ ಪೋಷಣೆ ಇವುಗಳಿಂದ ನಡೆಯುವ ಉದ್ಯಮಗಳು. ಈ ಮೂರು ಬಗೆಯ ಉದ್ಯಮಗಳು ಭಾರತದ ಉತ್ಕರ್ಷಕ್ಕೆ ಅಗತ್ಯವಾಗಿದ್ದರೂ ನಮ್ಮ ಆರ್ಥಿಕ ಸ್ಥಿತಿ, ತಾಂತ್ರಿಕ ಪ್ರಗತಿ ಮತ್ತು ಸಾಮಾಜಿಕ ಮತಿ ಇವುಗಳಿಗೆ ತಕ್ಕಂತೆ ಆ ಉದ್ಯಮಗಳ ಪ್ರಮಾಣವನ್ನು ನಾವು ನಿರ್ಧರಿಸಬೇಕಾಗಿದೆ. ಈ ಮೂರು ರೀತಿಯ ಉದ್ಯಮಗಳು ಒಂದಕ್ಕೊಂದು ವಿರುದ್ಧವಾಗಿವೆ ಎಂಬ ಅಭಿಪ್ರಾಯವನ್ನು ಮಾಡಿಕೊಳ್ಳದೆ, ಅವು ಒಂದಕ್ಕೊಂದು ಪೂರಕವಾಗಿವೆ, ಪೋಷಕವಾಗಿವೆ ಎಂಬ ನಿಜಾಂಶವನ್ನು ನಾವು ಅರಿತುಕೊಂಡರೆ ಆ ಪ್ರಮಾಣವನ್ನು ಗೊತ್ತುಪಡಿಸಲಿಕ್ಕೆ ಸುಲಭವಾಗುವದು. ಈ ಸಂದರ್ಭದಲ್ಲಿ ಜನರ ಸಾಂಪತ್ತಿಕ ಸ್ಥಿತಿಯನ್ನು, ಅವರ ಸಾಂಸ್ಕೃತಿಕ ಅವನತಿಯಾಗದಂತೆ, ಹೆಚ್ಚಿಸುವದು ನಮ್ಮ ಆದರ್ಶವಾಗಿದೆ ಎಂಬುದನ್ನು ನಾವು ನಿರಂತರವಾಗಿ ಲಕ್ಷದಲ್ಲಿಡಬೇಕಾಗಿದೆ. ಗ್ರಾಮ ಪ್ರದೇಶಗಳಲ್ಲಿ ಲಘು ಉದ್ಯಮಗಳ ಅಭಿವೃದ್ಧಿಯನ್ನು ಗೆಯ್ಯುವದರಿಂದ, ಗ್ರಾಮ ನಿವಾಸಿಗಳ ಆರ್ಥಿಕ ಸ್ಥಿತಿಯು ಸುಧಾರಿಸಿ ತನ್ಮೂಲಕ ದೇಶದ ಒಟ್ಟು ಉತ್ಪನ್ನವು ಬೆಳೆಯಲಿಕ್ಕೆ ಅನುಕೂಲವಾಗುವದಲ್ಲದೆ ಸ್ವಾತಂತ್ರ್ಯದಂತೆಯೆ ಸ್ವಾಭಿಮಾನವನ್ನು ಉಳಿಸಿಕೊಳ್ಳಲಿಕ್ಕೆ ಸಾಧ್ಯವಾಗುವದು ಎಂಬ ಮಾತು ಮಹತ್ವದ್ದಾಗಿದೆ.

(೫ನೇ ಪುಟದಿಂದ)

ವಾಗಿ ದುಡಿಯುವ ರೈತನಿಗೆ ಸಿಗುತ್ತಿರುತ್ತವೆ. ಅದರಿಂದ ಅವನು ಪ್ರಯೋಜನವನ್ನು ಪಡೆಯಲು ಯಾವಾಗಲೂ ಸಿದ್ಧನು. ನಮ್ಮ ರೈತರಂತೆ ಅವನು ಹಿಂದೆ ನೋಡುವವನಲ್ಲ, ಅವನ ಕಣ್ಣು ಯಾವಾಗಲೂ ಭವಿಷ್ಯದ ಕಡೆಗೆ ಇರುತ್ತದೆ. ಪ್ರಗತಿಪರ ಮನೋದೃಷ್ಟಿಯುಳ್ಳ ಅತನಿಗೆ ಸುಧಾರಿತ ವಿಧಾನಗಳ ಮೇಲೆ ಅಭಿಮಾನವಿದೆ, ಸಂಶಯವಿಲ್ಲ. ಅಣುಶಕ್ತಿಯನ್ನು ಕೃಷಿಗೆ ಬಳಸುವ ದಿನವನ್ನು ಅತ ಇದಿರು ನೋಡುತ್ತಿದ್ದಾನೆ.

ಅಮೇರಿಕದ ಕೃಷಿಯನ್ನು ವೀಕ್ಷಿಸಿದ ಮೇಲೆ ನನ್ನ ಮನಸ್ಸಿಗೆ ಒಂದು ತೀರ್ಮಾನ ಹೊಳೆದಿದೆ; ಒಂದೋ ನಾವು ಕೃಷಿಯನ್ನು ಸುಧಾರಿಸಿಕೊಳ್ಳಬೇಕು, ಅಥವಾ ಸರ್ವನಾಶಕ್ಕೆ ಸಿದ್ಧರಾಗಬೇಕು. ಆಧುನಿಕ ವಿಧಾನಗಳನ್ನೂ ತಂತ್ರಗಳನ್ನೂ ಬಳಸದೆ ಹೋದಲ್ಲಿ ಈ ಪ್ರಪಂಚದಲ್ಲಿ ನಮಗೆ ಕಂಡಿತವಾಗಿಯೂ ಉಳಿಗಾಲವಿಲ್ಲ. ಸಂಯುಕ್ತ ರಾಜ್ಯದಲ್ಲಿ ನಮಗಿಂತ ಹತ್ತು ಪಟ್ಟು ಹೆಚ್ಚು ಬೆಳೆಯ ಬಲ್ಲರೇಕೆ ಎಂಬುದನ್ನು ನಾವು ವಿಚಾರಿಸಬೇಕು. ನಮ್ಮ ಕೃಷಿಯ ಶೋಧನೆ ಮೊದಲು ನಡೆಯಬೇಕು. ಆ ಮೇಲೆ ವೈಜ್ಞಾನಿಕ ಸಂಶೋಧನೆ. ಇಂದಿನ ಸಮಸ್ಯೆಗಳನ್ನು ಸುಧಾರಿತ ಕೃಷಿಕ್ರಮದಿಂದ ಪರಿಹರಿಸಿಕೊಳ್ಳದಿದ್ದರೆ ಮುಂದಿನ ನಮ್ಮ ಭವಿಷ್ಯದ ಕಾರ್ಯೋಡಗಳನ್ನು ಬುದ್ಧಿವಂತರು ಈಗಲೇ ಗುರುತಿಸುವಂತಾಗುತ್ತದೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ — ಕಾಯರ್ಸ್ ಬಿಲ್ಡಿಂಗ ಹಂಪನಕಟ್ಟಾ

ಮಂಗಳೂರು.

ನಿಮ್ಮ ಸಂಪಾದನೆಗೆ ಅನುಕೂಲವಾಗಿ ವಿವಿಧ ರೀತಿಯಲ್ಲಿ ವಿಮೆ ಮಾಡಲು ಯೋಗ್ಯವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಹೊಸದಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಾಗಿವೆ.

ಇಂದೇ ನಿಮ್ಮ ವಿಮೆಯನ್ನು ಇಳಿಸುವ ಏರ್ಪಾಡನ್ನು ಮಾಡಿರಿ.

ಇನ್ಸ್‌ಪೆಕ್ಟರರು ಓರ್ಗನೈಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ.

B. B. Shetty B. A, L L. B,
Chairman.

ಮನ್ಮಥ ಸಂವತ್ಸರದ 1955—1956.

ಉ ಡು ಪಿ ಪ ಂ ಚಾ ಂ ಗ ಂ

ಶ್ರೀ ರವಿ ಪ್ರಸಾದ್ ಜ್ಯೋತಿಷಾಲಯ ಕೊಯಂಬುತ್ತೂರು

ಅಥವಾ, ಹಳೆಯಂಗಡಿ ಪೋಸ್ಟು, ದ. ಕ.

ದೃಗ್ಗಣಿತ ಪಂಚಾಂಗಂ, ಮಾಸಂಸ್ಕೃತಿ ಭವಿಷ್ಯಫಲಗಳು ವಿಸ್ತಾರವಾಗಿ ಕೊಟ್ಟಿರುತ್ತದೆ.

ಕನ್ನಡ ಪ್ರತಿ 1 ಕ್ಕೆ. 0—6—0. ಕರ್ಚು 0—9—0.

ಪೊಪ್ಯುಲರ್ ಬುಕ್ ಡಿಪೊ; ಲಿಮಿಟೆಡ್ ರೋಡು, ಬೊಂಬೈ.

ಪಿ. ಎನ್. ಉಡುಪ, 9 ತಾಗಪ್ಪ ಚೆಟ್ಟಿ ಸ್ಟ್ರೀಟ್, P. T. ಮದ್ರಾಸು.8

ಅಣುಯುಗ ಹಾಗು ಮಾನವ ಜೀವನ

(೪ನೇ ಪುಟದಿಂದ)

ಳಲ್ಲಿ ಸಂಬಂಧಗಳನ್ನು ಕಲ್ಪಿಸುವಷ್ಟು ಮುಂದುವರಿಯುವುದು ಮಾತ್ರ ಈ ಒರೆಗೆ ಆಗಿಲ್ಲ. ಇಲ್ಲಿಯ ಪ್ರಗತಿಯನ್ನು ಜನ ಸಾಮಾನ್ಯರು ಹಾಗು ವಿಜ್ಞಾನಿಗಳು ಕೂಡಿಯೇ ಕೂತೂಹಲದಿಂದ ನಿರೀಕ್ಷಿಸ ತೊಡಗಿದ್ದಾರೆ. ಸಮಾಜದಲ್ಲಿಯ ಭಿನ್ನ ಭಿನ್ನ ಜನರು ಸಮಾಜಕ್ಕೆ ಹೇಗೆ ಉಪಯುಕ್ತರಿರುವರು, ಸಮಾಜದಲ್ಲಿಯೇ ಬೇರೆ ಬೇರೆ ಘಟಕಗಳೊಳಗೆ ಇರಬೇಕಾದ ಸಂಬಂಧ ಹಾಗು ಇಂದಿನ ನಮ್ಮ ಜೀವನವನ್ನು ಸಾಗಿಸುವಲ್ಲಿ ಎಂತಹ ಗಂಡಾಂತರ ಪರಿಸ್ಥಿತಿಗಳನ್ನು ಎದುರಿಸಲಿರುವೆವು ಮುಂತಾದ ವಿಷಯಗಳನ್ನು ಕುರಿತು ನಿರೀಕ್ಷಣೆಯು ಸಾಗಿದೆ. ಇಲ್ಲಿಯ ಶೋಧಗಳು ವೈಜ್ಞಾನಿಕ ತಳಹದಿಯ ಮೇಲೆ ಮುಂದುವರಿಯುವುದು ಅಗತ್ಯದ್ದಾಗಿದೆಯಲ್ಲದೆ, ಸಮಾಜ ವಿಜ್ಞಾನಿಗಳಿಗೆ ರಾಷ್ಟ್ರಗಳಿಂದ ಹಾಗು ಅಂತಾರಾಷ್ಟ್ರೀಯ ಫಂದಿನಿಂದಲೂ ನೆರವು ದೊರೆಯುವುದು ಯೋಗ್ಯವೆನಿಸುವುದು.

ಸಮಾಜ ವಿಜ್ಞಾನದ ಬೆಳವಣಿಗೆ ಹಾಗು ಅಣುಯುದ್ಧಗಳ ಗಂಡಾಂತರ: ಇಂದು ಸಮಾಜ ವಿಜ್ಞಾನದ ವಿಷಯದಲ್ಲಿ ಸಂಶೋಧನೆಗಳೇನೋ ಭರದಿಂದ ಸಾಗತೊಡಗಿವೆ. ಈ ಕಾರ್ಯಕ್ಕೆಂದು ಅನೇಕ ಸಂಶೋಧನಾಲಯಗಳೂ ಏರ್ಪಟ್ಟಿವೆ; ಆದರೆ ಇಂತಹ ಶೋಧಗಳು ನಿಜವಾಗಿ ಮುಂದುವರಿಯಲು—ಇವುಗಳು ಕೇವಲ ಸಂಶೋಧನಾಲಯಗಳಿಗೇ ಮರ್ಯಾದಿತವಾದರೆ, ಕಾರ್ಯವು ಯೋಗ್ಯವಾಗಿ ಮುಂದುವರಿಯವು. ವಿಶ್ವವಿದ್ಯಾಲಯಗಳೊಳಗಿನ ಜನರು, ಕಾಯಿದೆ ಪಂಡಿತರು, ಹಣಕಾಸಿನ ತಜ್ಞರು, ಪ್ರಾಣಿ ಹಾಗು ಸಸ್ಯ ಶಾಸ್ತ್ರಜ್ಞರು, ಸಂಖ್ಯಾಶಾಸ್ತ್ರಜ್ಞರು ಈ ಎಲ್ಲ ಜನರೂ ಇಂತಹ ಕಾರ್ಯದಲ್ಲಿ ತಮ್ಮ ನೆರವನ್ನು ನೀಡುವುದು ಅಗತ್ಯವಿದೆ.

ವಿಜ್ಞಾನಿಗಳು ಹಾಗು ಜನಸಾಮಾನ್ಯರು ಕೂಡಿಯೆ ಕಲೆಯುವ ಮತ್ತು ಒಬ್ಬರನ್ನೊಬ್ಬರು ತಿಳಿಯಲು ಅನುಕೂಲವಾಗುವಂತಹ ಸಂಘ ಸಂಸ್ಥೆಗಳ ಅಗತ್ಯತೆಯು ಹಿಂದೆ ಎಂದೂ ಇರದಷ್ಟು ಇಂದು ಹೆಚ್ಚಿದೆ. ವೈಜ್ಞಾನಿಕ ಯುಗವು ಜನ ಸಾಮಾನ್ಯರನ್ನು ಎಲ್ಲಿಗೆ ಎಳೆದೊಯ್ಯಲಿದೆ ಎಂಬುದನ್ನು ಅವರಿಗೆ ತಿಳಿಸುವ ಹೊಣೆಗಾರಿಕೆಯು ವಿಜ್ಞಾನಿಗಳದು. ಅದೇ ಪ್ರಕಾರ ವಿಜ್ಞಾನಿಗಳಾದರೂ ತಮ್ಮ ಶೋಧಗಳನ್ನು ಮುಂದುವರಿಸುವುದೂ ಅಗತ್ಯದ್ದಾಗಿದೆ. ಏಕೆಂದರೆ ಯಾವುದೊಂದು ಶೋಧದ ಪ್ರಯೋಜನೆಗೆ ಕುತೂಹಲವೇ ಕಾರಣವು. ಕುತೂಹಲವು ಮಾನವ ಸ್ವಭಾವದ ಅಂಗವಿದ್ದು ಅದನ್ನು ಹತ್ತಿಕ್ಕುವುದು ಸಾಧ್ಯವೂ ಅಲ್ಲ ಹಾಗು ಯೋಗ್ಯವೂ ಅಲ್ಲ. ಇಂತಹ ಕುತೂಹಲವು ಲಾಭದಾಯಕವಾಗಿ ಪರಿಣಮಿಸಿದಲ್ಲಿ ಮಾನವ ಜನಾಂಗವು ಇದರ ಪ್ರಯೋಜನವನ್ನು ಪಡೆಯುವಲ್ಲಿ ಯಾವ ತಪ್ಪೂ ಇಲ್ಲ. ಆದರೆ ಇಂದು ಈ ಕುತೂಹಲವು ನಮ್ಮನ್ನು ಎಂತಹ ಪರಿಸ್ಥಿತಿಯಲ್ಲಿ ಇರಿಸಿದೆ ಎಂಬುದು ಎಲ್ಲರೂ ತಿಳಿದ ಮಾತೇ ಆಗಿದೆ. ಇಂದು ಅಣುಶಕ್ತಿಯು ದೊರೆತುದು ಎಲ್ಲರ ಸಂತೋಷಕ್ಕೆ ಕಾರಣವಾದರೂ ಅಣುಬಾಂಬುಗಳು ಮಾತ್ರ ಎಲ್ಲರನ್ನೂ ವಿಪಂಚನೆಗೆ ಈಡುಮಾಡಿವೆ. ಹೊಸ ಶಕ್ತಿಯ ಉದಯವು ಹೇಗೆ ಹೊಸ ನಾಗರಿಕತೆಗೆ ಮಾರ್ಗಮಾಡಿಕೊಡುವುದೋ ಅದೇ ಪ್ರಕಾರವಾಗಿ ಈ ಹೊಸ ಶಕ್ತಿಯಿಂದಾಗಿ ಯುದ್ಧ ಕಲೆಯಲ್ಲಿಯೂ ಕೂಡ ನವೀನತೆಯು ಉದ್ಭವಿಸುವುದು ಅಣು ಶಕ್ತಿಯು ಪ್ರಚಂಡ ಶಕ್ತಿಯಾದ್ದರಿಂದ ಯುದ್ಧದಲ್ಲಿಯ ಇದರ ಉಪಯೋಗವು ಪ್ರಚಂಡವಾದ ಹಾನಿಯಲ್ಲಿ ಪರಿಣಮಿಸುವುದು ಅನಿವಾರ್ಯವಿದೆ. ಇಂತಹ ಹಾನಿಯನ್ನು ತಪ್ಪಿಸುವುದೇ ಇಂದು ಎಲ್ಲರೂ ಗಮನಿಸಬೇಕಾದ ಕಾರ್ಯವಾಗಿದೆ.

ಇನ್ನು ಅಣುಬಾಂಬುಗಳನ್ನು ಉಪಯೋಗಿಸುವವರ ಮುಖ್ಯ ಉದ್ದೇಶವು—ತಮ್ಮ ರಾಷ್ಟ್ರವು ಉಳಿದವುಗಳಿಗಿಂತ ಊರ್ಜಿತಸ್ಥಿತಿಯಲ್ಲಿ ಇರಬೇಕು ಮತ್ತು ಇದನ್ನು ಸಾಧಿಸಲು ಉಳಿದವರನ್ನು ವಂಚಿಸಿದರೂ ಚಿಂತೆಯಿಲ್ಲ, ಮಾನವ ದಯೆ ಮುಂತಾದವುಗಳನ್ನು ಕಡೆಗಣಿಸಿದರೂ ಚಿಂತೆಯಿಲ್ಲ' ಎಂಬುದೇ ಆಗಿದೆ. ಇದನ್ನು ಸಾಧಿಸಲು ಸಾಧ್ಯವೋ ಹೇಗೆಂಬುದನ್ನು ಈಗ ನೋಡೋಣ. ಮೇಲಿಂದ ಮೇಲೆ ಇಂತಹ ಅಣುಸ್ಫೋಟಗಳು ಆದಲ್ಲಿ, ಇದರಿಂದ ವಾತಾವರಣದಲ್ಲಿ ಆಗುವ ಬದಲಾವಣೆಗಳನ್ನು—ಇಂತಹ ಬಾಂಬುಗಳನ್ನು ಹಾಕಿದವರೂ ಕೂಡ ಎದುರಿಸಬೇಕಾಗುವುದು. ಇವುಗಳನ್ನು ಸಹನ ಮಾಡುವುದು ಅಥವಾ ಇದರಿಂದ ಪಾರಾಗುವುದು ಸ್ಪಷ್ಟವೆಂದೇ ವಿವರಿಸುವುದು ಯೋಗ್ಯವೆನಿಸುವುದು. ವಾತಾವರಣದಲ್ಲಿಯ ಇಂತಹ ಬದಲಾವಣೆಗಳು ಯಾವ ಪ್ರಮಾಣದಲ್ಲಿ ಆಗುವುವು ಎಂಬುದರ ಪರಿಮಾಣವನ್ನು ಭೌತ ವಿಜ್ಞಾನಿಗಳು ಕೊಡಬೇಕಾಗುವುದು ಮತ್ತು ಇದರ ಪರಿಣಾಮವು ಭೂಮಿಯ ಮೇಲೆ ಜೀವಿಸುವ ಪ್ರಾಣಿಗಳು ಹಾಗು ಉಳಿದವುಗಳ ಮೇಲೆ ಹೇಗಾಗುತ್ತದೆಂಬುದನ್ನು ಪ್ರಾಣಿ ಶಾಸ್ತ್ರಜ್ಞರೂ ಮತ್ತು ಸಸ್ಯ ಶಾಸ್ತ್ರಜ್ಞರೂ ವಿವರಿಸಬೇಕಾಗುವುದು. ಆದರೆ ಈ ಅಣುಶಕ್ತಿಯು ಶಾಂತಿ ಕಾರ್ಯಗಳಿಗೆಂದು ಉಪಯೋಗಿಸಲ್ಪಟ್ಟಾಗ ಇದರ ಈ ದುಷ್ಟ ಪರಿಣಾಮ ತಡೆಗಟ್ಟಲು ಸಾಧ್ಯ.

ಈ ಅಣುಯುದ್ಧ ಇಲ್ಲವೆ ಪ್ರಾಯೋಗಿಕ ಅಣುಸ್ಫೋಟಗಳು ಹಲವುಗಳಿಗೇ ಮರ್ಯಾದಿತವಾದರೆ, ಇವುಗಳ ದುಷ್ಪರಿಣಾಮವು ಗೋಚರಿಸದಿದ್ದರೂ ಕೂಡ, ಇಂತಹ ಯುದ್ಧಗಳು ಮೇಲಿಂದ ಮೇಲೆ ಜರುಗುವಂತಾದರೆ ಇವುಗಳ ಪರಿಣಾಮವನ್ನು ಸೋತವರೊಂದಿಗೆ ಗೆದ್ದವರೂ ಅನುಭೋಗಿಸಬೇಕಾಗುವುದು. ಮುಖ್ಯವಾಗಿ ನಿಸರ್ಗವು ಇಂತಹ ಪ್ರಚಂಡ ಶಕ್ತಿಯ ಮೇಲೆ ಮರುಸಂಯೋಗ ಮಾಡಬಾರದೆಂಬ ಕಡಿವಾಣವನ್ನು ಹಾಕಿದೆ ಎಂಬುದನ್ನು ಎಲ್ಲ ಸೂಜ್ಞರೂ ತಜ್ಞರೂ ಕಂಡುಕೊಂಡರೆ ಎಲ್ಲವೂ ಸಮನಾಗಿ ಸಾಗುವದರಲ್ಲಿ ಸಂದೇಹವಿಲ್ಲ.

ಇಂತಹ ಯುದ್ಧಗಳು ಇಂದು ಯಾರಿಗಾದರೂ ಬೇಕಾಗಿದ್ದರೆ, ಅಂತಹವರನ್ನು ಜೀವದ ಹಂಗು ತೊರೆದವರೆಂದೇ ವರ್ಣಿಸಬಹುದು. ಇಂದು ಶಾಂತಿಯಿಂದ ಜೀವಿಸುವುದು ಕಠಿಣದ್ದಾಗಿ ಪರಿಣಮಿಸಿದೆ. ನಮ್ಮ ತತ್ವಗಳನ್ನಾದರೂ ಹೋಮಮಾಡಬೇಕು ಇಲ್ಲವೇ ಮಾನವ ಜನಾಂಗವನ್ನೇ ಭೂಮಿಯ ಮೇಲಿನಿಂದ ತಳಿಸಿ ಬಗೆಯಬೇಕು ಎಂಬ ಪರಿಸ್ಥಿತಿಯು ಇಂದು ನಿರ್ಮಾಣವಾಗಿದೆ ಇಂದಿನ ಬಿಕ್ಕಟ್ಟಿಗೆ ನಮ್ಮ ಕುತೂಹಲ ಹಾಗು ನಾವು ಇರುವ ಭೌತಿಕ ಜಗತ್ತಿನ ಸ್ವರೂಪ ಇವುಗಳೇ ಕಾರಣವಾಗಿದ್ದು, ಇಂದು ನಮಗೆ ದೊರೆತ ಹೆಚ್ಚಿನ ಜ್ಞಾನವನ್ನು ಆರಗಿಸಿಕೊಳ್ಳುವ ರೀತಿಯಲ್ಲಿ ನಮ್ಮ ವರ್ತನೆಯನ್ನು ಮಾರ್ಪಡಿಸಿಕೊಂಡು—ಇಂತಹ ಹೆಚ್ಚಿನ ಜ್ಞಾನಕ್ಕೆ ನಾವು ಅರ್ಹರಿರುವೆವೆಂದು ತೋರ್ಪಡಿಸಿದರೆ, ನಮಗೆ ಹೆಚ್ಚು ಸುಖ ಶಾಂತಿಯಿಂದ ಬಾಳಲು ಸಾಧ್ಯವಾಗುವುದು.

ಕೊನೆಯದಾಗಿ: ಎಡ್ರಿಯಾನ್‌ರ ಮಾತಿನಲ್ಲೇ ಹೇಳುವುದಾದರೆ 'ವಿಜ್ಞಾನಿಗಳಿಗೆ ಇಂದು ಎರಡು ವಿಧದ ಜವಾಬುದಾರಿಗಳನ್ನು ಹೊರುವುದು ಅಗತ್ಯದ್ದಾಗಿದೆ. ನಮ್ಮೆಲ್ಲರ ವರ್ತನೆಯು ಈ ತೆರದಾಗಿ ಏಕೆ ಪರಿಣಮಿಸಿದೆ ಎಂಬುದರ ಭೌತಿಕ ಹಾಗು ಮಾನಸಿಕ ಕಾರಣಗಳನ್ನು ವೈಜ್ಞಾನಿಕ ರೀತಿಯಲ್ಲಿ ತಿಳಿಯುವುದು ಮೊದಲನೆಯ ಜವಾಬುದಾರಿಯು. ಜೀವನದಲ್ಲಿ ಪತನ ಹೊಂದಲು ಇರಬಹುದಾದ ಕಾರಣಗಳ ಕೂಲಂಕಷವಾದ ವಿವೇಚನೆಯನ್ನು ಮಾಡುವುದು ಎರಡನೆಯ ಜವಾಬುದಾರಿಯು. ಅದೇ ಪ್ರಕಾರವಾಗಿ ಮಾನವ ಜನಾಂಗವು ಬಹಳವಾದರೆ ಕೆಲವೇ ಸಾವಿರದಷ್ಟು ಪ್ರಬಲವಾದ ಅಣು ಸ್ಫೋಟಗಳನ್ನು ಸಹನೆಮಾಡಬಹುದು. ಇಂತಹ ಸ್ಫೋಟಗಳು ತಮ್ಮ ಗುರಿಯನ್ನು ಮುಟ್ಟುವುವೋ ಅಥವಾ ಇಲ್ಲವೋ ಎಂಬುದು ಅಮುಖ್ಯವಾದ ಸಂಗತಿಯು. ಈ ತೆರದ ಬೇಳಿಕೆಯನ್ನೊಳಗೊಂಡ ಸಂದೇಶವು ಜಗತ್ತಿನ ಮೂಲೆ ಮೂಲೆಗಳಲ್ಲಿ ಹರಡುವುದೇ ಅಣುಸ್ಫೋಟಗಳ ದುಷ್ಪರಿಣಾಮವನ್ನು ಜನತೆಯು ಭೋಗಿಸದಂತೆ ಮಾಡಲು ಸಹಕಾರಿಯಾಗುವುದು.'

ಭಾರತವು ಹಾಕಿಕೊಟ್ಟ ಶಾಂತಿ ಮಂತ್ರವನ್ನು ನಮ್ಮ ಇಂದಿನ ಪ್ರಜಾರಾಜ್ಯೋತ್ಸವದ ಶುಭ ಪ್ರಸಂಗದಲ್ಲಿ ಎಲ್ಲ ರಾಷ್ಟ್ರಗಳೂ ನೆನೆಯುವಂತಾಗಲಿ ಹಾಗು ಜಗತ್ತಿನಲ್ಲೆಲ್ಲ ಶಾಂತಿಯ ರಾಜ್ಯವು ನೆಲೆಗೊಳ್ಳಲಿ ಎಂದು ಇಂದಿನ ಮಂಗಳ ಪ್ರಸಂಗದಲ್ಲಿ ನಾವೆಲ್ಲರೂ ಹಾರೈಸೋಣ!

Dr. E. ED. Adrian, O. M. President of the Royal Society, ಇವರು "ವಿಜ್ಞಾನ ಹಾಗು ಮಾನವ ಸ್ವಭಾವ" ಎಂಬ ವಿಷಯವನ್ನು ಕುರಿತು ಮಾಡಿದ ಭಾಷಣದಿಂದ ಅನೇಕ ವಿಚಾರಗಳನ್ನು ಉಪಯೋಗಿಸಿ ಈ ಲೇಖನವನ್ನು ಬರೆದಿದ್ದೇನೆ. ಈ ಲೇಖನ ಬಹುಭಾಗದ ಶ್ರೇಯಸ್ಸು ಎಡ್ರಿಯಾನ್‌ರಿಗೇ ಸಲ್ಲತಕ್ಕದ್ದು.—ಲೇ.

Gram: "LAXMINIVAS" Phone: 82

JAYA CAFE

IDEAL BOARDING & LODGING.

"LAXMINIVAS", MANGALORE-1.

(Opp: BUS STAND)

Prop: N. V. BHAT.



ಜಯ ಕೆಫೆ

"ಲಕ್ಷ್ಮೀನಿವಾಸ್", ಮಂಗಳೂರು -1.

(ಬಸ್ ಸ್ಟಾಂಡಿನ ಬಳಿ)

ಪ್ರೊಪ್ರೈಟರ್: ಎನ್. ವಿ. ಭಟ್.

ಮದುವೆ, ಮುಂಜಿ ಮೊದಲಾದ ಶುಭಶೋಭನಾದಿ ಪ್ರಸ್ತಗಳಿಗೆ—

ಉತ್ಸವ, ಜಾತ್ರೆ, ಕೂಟ ಮುಂತಾದ ಸಂತೋಷ ಸಮಾರಂಭಗಳಿಗೆ—

ನಿತ್ಯ ಜೀವನದ ಸಕಲ ಆವಶ್ಯಕತೆಗಳಿಗೆ—

ಶೋಭಾ

ಸಿಲ್ಕ್ ಸದನ

ಹಂಪನಕಟ್ಟೆ,

ಮಂಗಳೂರು-1.

ಯಾವುದೇ ಸಂದರ್ಭಕ್ಕೆ ಬೇಕಾಗುವ ಸಕಲ ಬಟ್ಟೆಬರೆಗಳೂ ನಮ್ಮಲ್ಲಿ ಸದಾ ನ್ಯಾಯವಾದ ಬೆಲೆಗೆ ದೊರೆಯುವವು.

ನಮ್ಮಲ್ಲಿರುವ ಪ್ರತಿ ಅಂಗುಲ ಜವಳಿಯೂ ತೀರಾ ಹೊಸತು.

ಸಮಾಜವಾದ - ಭಾರತದ ಮುಂದಿರುವ ಆದರ್ಶ

(೩ನೇ ಸುಟದಿಂದ)

ವನ್ನು ನೋಡಿದರೆ ಅವರಿಗೆ ತಮ್ಮ ವಿಶೇಷ ಬಗೆಯ ಸಮಾಜವಾದವನ್ನು ಪ್ರಚಲಿತ ನಾಣ್ಯದ ಸ್ಥಾನದಲ್ಲಿ ತಪ್ಪು ತಿಳಿದು ಕೊಳ್ಳುವುದು ಬೇಕಾಗಿರಲಿಲ್ಲವೆಂದು ವ್ಯಕ್ತವಾಗುತ್ತದೆ. ಅವರು ಪಲ್ಲವಿಗಿಂತಲೂ ಆದಕ್ಕಿಂತ ಭಿನ್ನವಾದ ಮೂಲ ತತ್ವಕ್ಕೆ ಪ್ರಾಧಾನ್ಯವನ್ನೂ ಒತ್ತಾಸೆಯನ್ನೂ ಕೊಟ್ಟರು.

ಬೇರೆಲ್ಲ ದೇಶಗಳಂತೆ ನಮಗೆ ಸಹ ಸ್ವಾತಂತ್ರ್ಯವು ರಕ್ತಪಾತದಿಂದ ಸಿಗುತ್ತಿದ್ದರೆ, ಚರಿತ್ರೆಯು ಬೇರೆಯೇ ದಾರಿಯನ್ನನುಸರಿಸಿ ಹೋಗುತ್ತಿತ್ತು. ಆದರೆ ಪರಕೀಯ ಪ್ರಭುತ್ವದಿಂದ ಸ್ವಾತಂತ್ರ್ಯ ಸಂಪಾದಿಸುವುದೊಂದೇ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಬೀಗದ ಕೈ ಇದ್ದಂತಲ್ಲ; ಅಲ್ಲದೆ ಈಗಿನ ಪದ್ಧತಿಯ ಪ್ರಜಾಸತ್ತಾತ್ಮಕ ರಾಜಕೀಯವೂ ಇದಕ್ಕೆ ಸಾಕಾಗಲಾರದು. ಹೆಚ್ಚು ಅಕ್ಷರಸ್ಥರಲ್ಲದಿದ್ದರೂ ನಮ್ಮ ಜನರು ಜಾಗೃತರಾಗಿದ್ದಾರೆ. ಅವರು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವವರೆಗೆ, ಸಮಾನತೆ, ಸಾಮಾಜಿಕ ನ್ಯಾಯ,ಜಾತಿ ಹಾಗು ವರ್ಗಗಳ ನಾಶ ಮತ್ತು ಶೋಷಣೆಯ ಅಂತ್ಯವೆಂಬ ಶಾಸನವು ರೂಢಿಯಲ್ಲಿ ಬರುವವರೆಗೆ ವಿಶ್ರಾಂತಿಯನ್ನು ಹೊಂದಲಾರರು. ಇದನ್ನು ಎಷ್ಟು ಚೆನ್ನಾಗಿ ಮತ್ತು ಎಷ್ಟು ಶೀಘ್ರದಲ್ಲಿ ಹಿಂಸೆಯನ್ನು ಅವಲಂಬಿಸದೆ ಸಾಧಿಸಬಹುದೆಂಬುದೇ ಭಾರತದ ಮುಂದಿರುವ ಪ್ರಶ್ನೆಯಾಗಿದೆ. ಅದನ್ನು ಪ್ರಜಾಸತ್ತಾತ್ಮಕವಾದ, ಮತ್ತು ಅಹಿಂಸಾತ್ಮಕವಾದ ರೀತಿಯಲ್ಲಿ ಜನತೆಯ ಮೌನ ಸಮ್ಮತಿಯೊಂದಿಗೆ ಮಾಡುವುದು ಸಾಧ್ಯವಾದರೆ, ಅದು ನಿಜವಾಗಿಯೂ ಉತ್ತಮವಾದ ಮಾರ್ಗವೆನಿಸುತ್ತದೆ. ಆಗ ಅದು ಜಾಗೃತವಾದ ಮತ್ತು ತಿಳಿವಳಿಕೆಯಿಂದ ಕೂಡುವುದು. ಅದು ಆಂತರಿಕ ಸ್ವರೂಪದ ಉತ್ಕ್ರಾಂತಿಯಾಗುವುದು ಮತ್ತು ಜನರ ಸ್ವಂತದ್ದಾಗುವುದು. ಆದುದರಿಂದ ಅದು ಜನರಿಗೆ ಬಂಧನಕಾರಿಯಾಗುವುದು. ಅದು ಶತ್ರುಗಳನ್ನು ಹುಟ್ಟಿಸದು; ಮತ್ತು ಮನಃಕ್ಲೇಶಕ್ಕೂ ಕಾರಣವಾಗದು. ಬೇಗನೇ ಆದನ್ನು ಮಾಡುವುದಾದಲ್ಲಿ ರಕ್ತಕ್ರಾಂತಿಯನ್ನು ಹಿಂದೂಡುವುದು ನಿಶ್ಚಯ.

ಭಂಡವಾಳ ಶಾಹಿತ್ವವು ತನ್ನ ದಿನಗಳನ್ನು ಮುಗಿಸಿದೆ ಅದು ಕೊರತೆಯಿಂದ ಕೂಡಿದೆ ಎಂದು ಅನಿಸುತ್ತದೆ. ಸಮಾಜವನ್ನು ಸ್ಥಿರೀಕರಿಸುವ ಮತ್ತು ಆರ್ಥಿಕ ಹಾಗು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯದಲ್ಲಿ ಅದು ದೊಡ್ಡ ಸೋಲನ್ನು ಹೊಂದಿದೆ. ತನ್ನ ಯೋಗ್ಯತೆಯನ್ನು ವಿೂರಿ ಅದು ಯಶಸ್ವಿಯಾಗಿರುವಂತೆ ಕಾಣುವ ಅಮೇರಿಕದಲ್ಲೇನೊ ಅದಕ್ಕೆ ಕೆಲವು ಬೆಂಬಲಿಗರಿರಬಹುದು. ಆದರೆ ಅಮೇರಿಕದ ವಿಶಿಷ್ಟ ವಾತಾವರಣವೇ ಅದಕ್ಕೆ ಜಯಲಾಭವನ್ನು ಮಾಡಿಕೊಟ್ಟಿತಲ್ಲದೆ ಆ ಪದ್ಧತಿಯ ನಿಜವಾದ ಯೋಗ್ಯತೆಯಲ್ಲ ಅಂಥ ಪರಿಸ್ಥಿತಿಯು ಬೇರೆ ದೇಶಗಳಲ್ಲಿರುವುದಿಲ್ಲ. ಇಂಗ್ಲೆಂಡಿನಂಥ ಬೇರೆ ದೇಶಗಳು ಹೊರ ನೋಟಕ್ಕೆ ಭಂಡವಾಳ ಶಾಹಿತ್ವದ ಪುರಸ್ಕರ್ತರಂತೆ ಕಂಡು ಬಂದರೂ ಸಮಾಜವಾದಿ ಪದ್ಧತಿಗಳಲ್ಲಿ ಪಲವನ್ನು ಅನುಸರಿಸುವ ಮತ್ತು ಭಂಡವಾಳ ಶಾಹಿಗಳಿಗೆ ತೊಂದರೆಯಾಗುತ್ತಿದ್ದರೂ ಜನತೆಯ ಹಿತವನ್ನು ಮಾಡುವ ಮೂಲಕ ಸಮಾಜವಾದದ ಗಾಳಿಯಲ್ಲೇ ಉಸಿರಾಡುತ್ತಿವೆಯೆಂದು ವ್ಯಕ್ತವಾಗುತ್ತದೆ. ಅದೇನೇ ಇರಲಿ, ಭಾರತದಲ್ಲಿ ಭಂಡವಾಳ ಶಾಹಿತ್ವವು ಆನಸಾನ ಹೊಂದಿತಲ್ಲ ಎಂದು ದುಃಖಿಸುವವರು ಯಾರೂ ಇಲ್ಲ.

ಸಮಾಜವಾದದ ರೂಪದಲ್ಲಿಯೇ ಹೊಸ ಮಾರ್ಗವು ವ್ಯಕ್ತವಾಯಿತು. ವಿಚಾರಕರಿಗೆ ಮಾನವ ಸಮಾಜವು ಸುವ್ಯವಸ್ಥಿತವಾಗಿ ರೂಪುಗೊಳ್ಳುವುದೂ ಸುಜ್ಞ ತಳಹದಿಯಲ್ಲಿ ನೆಲೆಯೂರುವುದೂ ಸಾಧ್ಯವೆಂಬ ಎಲ್ಲರೂ ಸಮಾನರೆಂಬ, ಆರ್ಥಿಕ ಪರಿಸ್ಥಿತಿಯೇ ಎಲ್ಲದಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ ಗೋಚರಿಸುವ ಸಂಗತಿಯಾಗಿದೆ ಎಂಬ ಮತ್ತು ಶಾಂತಿಯನ್ನೂ ಭದ್ರ ಅಸ್ತಿತ್ವವನ್ನೂ ಗಂಡಾಂತರಕ್ಕೆ ನೂಕುವ ಮನಸ್ಸಿಲ್ಲದಿದ್ದರೆ ,ಅದನ್ನು ಕಡೆಗಣಿಸಲಾಗದೆಂಬ ಅಂಶಗಳು ಹೊಳೆದವು. ಇವತ್ತು ಸಮಾಜವಾದವು ನಾಳೆಯ ಸಾಮಾಜಿಕ ತತ್ವಜ್ಞಾನವಾಗುವುದೆಂಬ ಸಂಗತಿಯ ಕುರಿತು ಭಿನ್ನಾಭಿಪ್ರಾಯವಿಲ್ಲದಿದ್ದರೂ ಅದನ್ನು ಜಾರಿಯಲ್ಲಿ ತರುವ ರೀತಿಯ ಬಗ್ಗೆ ಮಾತ್ರ ತೀವ್ರ ಮತಭೇದಗಳು ಕಂಡು ಬರುತ್ತವೆ.

ಯಾವ ಪದ್ಧತಿಯಿಂದ ಸಮಾಜವಾದವನ್ನು ಸ್ಥಾಪಿಸಬೇಕೆಂಬ ವಿಷಯದಲ್ಲಿ ಮುಖ್ಯವಾಗಿ ಎರಡು ಅಭಿಪ್ರಾಯಗಳು ತೋರುತ್ತವೆ. ಒಂದು ಹಿಂಸೆಯ, ಸರ್ವಾಧಿಕಾರದ, ಸೈನಿಕ ಶಕ್ತಿಯ ಮತ್ತು ಒಂದನ್ನುಳಿದು ಬೇರೆಲ್ಲ ವರ್ಗಗಳ ನಾಶದ ಮಾರ್ಗ. ಇನ್ನೊಂದು ಶಾಂತವಾದ, ಪ್ರಜಾಸತ್ತಾತ್ಮಕವಾದ, ಜನತೆಯ ಸಮ್ಮತಿ ಪಡೆದ ಉದಾತ್ತ ಮಾರ್ಗ. ಭೌತಿಕ ದೃಷ್ಟಿಕೋಣವನ್ನೆ ಇಟ್ಟುಕೊಂಡವರು ಮೊದಲಿನ ಮಾರ್ಗವನ್ನೂ ಮನುಷ್ಯನ ಮೌಲ್ಯಗಳನ್ನು ಮನ್ನಿಸಿ ಅವನ ಅಸ್ತಿತ್ವಕ್ಕೆ ಆಧ್ಯಾತ್ಮಿಕ ಅರ್ಥ ವಿವರಣೆಯನ್ನು ಮಾಡುವವರು ಎರಡನೆಯ ದಾರಿಯನ್ನೂ ಪ್ರತಿಪಾದಿಸುವರು.

ಮೇಲಿನ ಭಿನ್ನಾಭಿಪ್ರಾಯಗಳನ್ನು ಅಟ್ಟಕ್ಕೆಯೇ ಬಿಟ್ಟುಕೊಟ್ಟು, ನಾವು, ವ್ಯಾವಹಾರಿಕ ಬುದ್ಧಿಯುಳ್ಳ ಮನುಷ್ಯರಂತೆ, ನಮ್ಮ ಚಿತ್ತ ಶುದ್ಧಿಯನ್ನು ಮೊದಲಾಗಿ ಮಾಡಿಕೊಳ್ಳುವುದು ಅಪೇಕ್ಷಣೀಯ. ಅದಕ್ಕೆ ಕೆಳಗಿನ ಅಂಶಗಳು ನೆರವಾಗುತ್ತವೆ. ನಾವು ಅಂಗೀಕರಿಸಬೇಕೆನ್ನುವ ಸಮಾಜವಾದದ ಮಾದರಿಯಾವುದು? ಅದನ್ನು ಅಂಗೀಕರಿಸುವ ನಮ್ಮ ರೀತಿಯಾವುದು? ಈಗ ನಾವು ಎಲ್ಲಿದ್ದೇವೆ?

ನಾವಿಂದು ಭಂಡವಾಳ ಶಾಹಿತ್ವವನ್ನು ದೂರುವುದಕ್ಕೆ ಅದು ತನ್ನ ಪ್ರಯೋಜನಾಂಶವನ್ನು ಕಳೆದುಕೊಂಡಿದೆಯೆಂಬುದೇ ಕಾರಣ. ತನ್ನ ಕಾಲದಲ್ಲಿ ಅದು ಪ್ರಯೋಜಕವಾಗಿದ್ದಿರ ಬಹುದು; ಮತ್ತು ತನ್ನ ಉದ್ದೇಶ ಸಾಧನೆಯಲ್ಲಿ ಅದು ಯಶಸ್ವಿಯಾಗಿರಲೂ ಬಹುದು. ಪಾಶ್ಚಾತ್ಯ ಸಮಾಜವಾದವು ಅದರ ವಿರುದ್ಧವಾಗಿ, ಪ್ರತಿ ತತ್ವವಾಗಿ ಹುಟ್ಟಿಕೊಂಡಿತು. ಭಂಡವಾಳ ಶಾಹಿತ್ವದಿಂದ ಉಂಟಾದ ಕೊರತೆಗಳನ್ನೂ ದೋಷಗಳನ್ನೂ ನಿವಾರಿಸುವದಕ್ಕೆ ಇದು ಪ್ರಯತ್ನಿಸಿತು. ಆದರೆ ನಾವು ಭಾರತೀಯರೆಂಬುದಕ್ಕಾಗಿಯಾದರೂ ಅದನ್ನು ನಮ್ಮ ಸಂಪ್ರದಾಯಕ್ಕೂ ಹಿನ್ನೆಲೆಗೂ ಹೊಂದಿಸಿಕೊಳ್ಳಬೇಕು. ಸುದೈವದಿಂದ ನಮಗೊಂದು ಭವ್ಯ ಇತಿಹಾಸವಿದೆ, ಮೂರು ಸಾವಿರ ವರ್ಷಗಳಿಗೂ ಪುರಾತನವಾದ ಅಮೂಲ್ಯ ಧರ್ಮ ಗ್ರಂಥಗಳಿವೆ, ಉತ್ತಮ ಕಾವ್ಯಗಳಿವೆ, ಇಪ್ಪತ್ತು ಲಕ್ಷ ವರ್ಷಕ್ಕಿಂತಲೂ ಪ್ರಾಚೀನವಾದ ಸಂಸ್ಕೃತಿ ಮತ್ತು ನಾಗರಿಕತೆಯ ದಾಖಲೆಯಿದೆ. ನಮಗಿರುವ ಈ ಸೌಲಭ್ಯಗಳನ್ನು ಹೊಂದಿರದ ದೇಶಗಳವರಿಗಿಂತ ನಾವು ಸಮಾಜವಾದದಲ್ಲಿ ಹೆಚ್ಚು ಉತ್ತಮಾಂಶಗಳನ್ನು ಗುರುತಿಸಬಲ್ಲೆವು. ಇನ್ನೊಂದರ ಲೋಪದೋಷಗಳನ್ನು ಪರಿಹರಿಸುವುದಕ್ಕಾಗಿ ಪ್ರಯೋಗಿಸಲಾದ ತತ್ವವೆಂದು ಸಮಾಜವಾದವನ್ನು ಪುರಸ್ಕರಿಸುವುದಕ್ಕಿಂತ, ನಾವು ಮಾನವನ ಕಲ್ಯಾಣ ಸಾಧಿಸುವ ಉದ್ದೇಶದ ಮೇಲೆ ಆಧರಿಸಿದ ವಿಶಾಲವಾದ ಅನುಭವವೆಂಬ ಹೆಚ್ಚು ಗುಣಾಂಶಗಳಿಂದ ಕೂಡಿದ ಮತ್ತು ನಿಶ್ಚಯಾತ್ಮಕವಾದ ದೃಷ್ಟಿಕೋಣವನ್ನು ಕೊಡುವುದು ಸಾಧ್ಯ. ನಾವದನ್ನು ಭೌತಿಕ ಹಾಗು ಆರ್ಥಿಕ ತಳಹದಿಯ ಮೇಲಷ್ಟೇ ಅಲ್ಲ,ಜೀವನ ಸಾಮರಸ್ಯ ಹಾಗು ಸಮಾಜದೊಡನೆ ವ್ಯಕ್ತಿಯ ಅವಿಭಾಜ್ಯ ಐಕ್ಯ ಎಂಬ ತತ್ವದ ಸಾಧನೆಯಾಗಿ ಪರಿಗ್ರಹಿಸುವುದು ಶಕ್ಯ.

ಭಾರತದ ಪರಿಸ್ಥಿತಿಗೆ ಹೊಂದಿಕೊಂಡ ಸಮಾಜವಾದ ಈ ಮಾದರಿಯದಾಗಿದ್ದರೆ (ಅದು ಹಾಗಾಗ ಬಾರದೆಂಬುದಕ್ಕೇನೂ ಕಾರಣವಿಲ್ಲ) ಉನ್ನತವಾದ ಈ ಉದ್ದೇಶಕ್ಕೆ ಅನುಗುಣವಾದ ರೀತಿಯಲ್ಲಿಯೇ ಆ ಸಮಾಜವಾದವನ್ನು ಸ್ಥಾಪಿಸುವ ಮಾರ್ಗವೂ ಇರಬೇಕಾಗುತ್ತದೆ. ಅದನ್ನು ಮನಃ ಪರಿವರ್ತನೆ ಹಾಗು ಒಲಿಸುವಿಕೆ ಮತ್ತು ಅಹಿಂಸಾತ್ಮಕ ಹಾಗು ಪ್ರಜಾಸತ್ತಾತ್ಮಕ ರೀತಿಯಿಂದಲೇ ಸಾಧಿಸುವುದು ಅವಶ್ಯವೆನಿಸುತ್ತದೆ. ಈ ಮಾರ್ಗವು ಬಹಳ ದೀರ್ಘವೆಂದೂ,ಕೆಲವುಪ್ರಸಂಗಗಳಲ್ಲಿ ತ್ರಾಸದಾಯಕವೆಂದೂ ಕಂಡುಬಂದು ನಮ್ಮ ಸಹನಾಶಕ್ತಿಯನ್ನು ಕೆಡಿಸಬಹುದು. ಆದರೆ,ಅಸಹನೆಯು ವಿಶ್ವಾಸದ ವಿರುದ್ಧವಾದ ಮತ್ತು ಅಂತಿಮ ವಿಜಯದಲ್ಲಿ ವಿಶ್ವಾಸವುಳ್ಳ ಶಾಂತ ಹಾಗು ದೃಢಶಕ್ತಿಗೆ ತೀರ ವಿಸಂಗತವಾದ ಅಂಶವೆಂಬುದನ್ನು ಇಲ್ಲಿ ಮರೆಯಲಾಗದು. ನೋಡಲಿಕ್ಕೆ ದೀರ್ಘವೆನಿಸಿದ ಈ ಮಾರ್ಗವೇ ಶಾಶ್ವತವಾದ ಪ್ರಯೋಜನ ಲಾಭದಿಂದಲೂ ಜನತೆಯ ಮನಸ್ಸನ್ನು ಸಂಪೂರ್ಣವಾಗಿ ಗೆದ್ದುಕೊಂಡು ಆಂತರಿಕ ಶ್ರದ್ಧೆಯಿಂದ ಕಾರ್ಯಕ್ಷಮವಾದ ರೀತಿಯಲ್ಲಿ ಅವರು ಕೆಲಸ ಮಾಡುವುದಕ್ಕೆ ಪ್ರೇರಿಸುವುದರಿಂದಲೂ ಬಹಳ ಹೆತ್ತಿರದ ದಾರಿಯೆಂದೇ ಸಿದ್ಧವಾದೀತು.

ನಾವು ಸಮಾಜವಾದದ ಮಾರ್ಗದಲ್ಲಿ ಭದ್ರವಾಗಿರುವ ದೃಷ್ಟಿಯಿಂದ ಈಗ ಎಲ್ಲಿದ್ದೇವೆಂದೂ ಇನ್ನೆಷ್ಟು ದೂರ ನಾವು ಪ್ರಯಾಣಿಸಬೇಕಾಗಿದೆಯೆಂದೂ ನೋಡುವುದು ಸಹ ಅಪೇಕ್ಷಣೀಯವಾಗಿದೆ. ಮೊದಲನೆಯದಾಗಿ, ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿ ಅದನ್ನು ಗೆದ್ದುಕೊಂಡವರಂತೆ ಭಾರತದಲ್ಲಿ ಭಾರತೀಯ ಮಾದರಿಯ ಸಮಾಜವಾದವನ್ನು ಸ್ಥಾಪಿಸುವ ದೃಢವಾದ ಧ್ಯೇಯವನ್ನಿಟ್ಟುಕೊಂಡ ಮತ್ತು ಅದರಲ್ಲಿ ಸಂಪೂರ್ಣ ಶ್ರದ್ಧೆ ಮತ್ತು ವಿಶ್ವಾಸವನ್ನು ವ್ಯಕ್ತಪಡಿಸುವ ಗಟ್ಟಿ ಮನಸ್ಸಿನ ಕಾರ್ಯಕರ್ತರು ನಮಗೆ ಬೇಕಾಗಿದ್ದಾರೆ. ಅಂಥ ಸ್ತ್ರೀಪುರುಷರೇ ತಮ್ಮ ಅಚಲ ವಿಶ್ವಾಸವನ್ನೂ ಶ್ರದ್ಧೆಯನ್ನೂ ಮಾತಿನಿಂದಲೂ ಕೃತಿಯಿಂದಲೂ ಲಕ್ಷಾಂತರ ನಾಗರಿಕರಿಗೆ ವರ್ಗಾಯಿಸಬಲ್ಲರು. ಹೀಗೆ ವಿಶ್ವಾಸವುಳ್ಳ ಕಾರ್ಯಕರ್ತರನ್ನು ಸಾಕಷ್ಟು ಹೆಚ್ಚು ಸಂಖ್ಯೆಯಲ್ಲಿ ಸೇರಿಸಿಕೊಂಡು ಮೇಲಿನ ಉದ್ದೇಶ ಸಾಧನೆಯಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಲು ಈಗಿರುವ ರಾಷ್ಟ್ರೀಯ ಸಂಸ್ಥೆಗೆ ಸಾಧ್ಯವಾದೀತೇ ಹೇಗೆಂಬುದನ್ನು ನಾವಿನ್ನೂ ಕಾದು ನೋಡಬೇಕಾಗಿದೆ.

ಅನಂತರ ನಮಗೆ ನಮ್ಮ ರಾಜ್ಯಾಂಗ ಘಟನೆ ಇದೆ. ಇದರಲ್ಲಿರುವ ಪರಿಹಾರ

ಕೈಮಗ್ಗದ ಬಟ್ಟೆಗಳ
ನ್ಯಾಯ ಬೆಲೆ (Fair Price) ಅಂಗಡಿ
ನಂಬ್ರ 27.
ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಸರಕಾರದಿಂದ ಅವರ ನಿಶ್ಚಿತ ದರದ ಮೇಲೆ, ಬಟ್ಟೆ ಉಪಯೋಗಿಸುವವರಿಗೆ ರೂ. 5ರಿಂದ 50ರ ವರೆಗಿನ ವಿಕ್ರಿತದ ಮೇಲೆ ರೂಪಾಯಿಗೆ 1 ಆಣೆಯಿಂತೆ ಕಡಿತ (Rebate) ಕೊಡಲಾಗುವುದು. ಇದು ಕೆಲವು ಸಮಯದ ವರೆಗೆ ಮಾತ್ರ.
ನಿಮಗೆ ಬೇಕಾಗುವ ಬಟ್ಟೆಗಳಿಗೆ
"ಪೂರ್ಣಿಮಾ ಸ್ಟೋರ್ಸ್"
ಕೈಮಗ್ಗದ ಬಟ್ಟೆಗಳ ರಖಂ ವ ಚಿಲ್ಲರೆ ವ್ಯಾಪಾರಸ್ಥರು ಮತ್ತು "ಪೂರ್ಣಿಮಾ ಸ್ಪೆಶಲ್ ಸೀರೆ" ತಯಾರಕರು.
ಪೊಪ್ಪುಲರ್ ಕಟ್ಟಡ, ಮಂಗಳೂರು, ಇವರನ್ನು ಇಂದೇ ಸಂದರ್ಶಿಸಿರಿ.

ಧನ ನೀಡುವ ಪ್ರಶ್ನೆಯು ಘಟನೆಯ ಚರ್ಚೆಯ ಕಾಲದಲ್ಲಿ ಬಹಳಷ್ಟು ಹೆಚ್ಚು ಸಮಯವನ್ನು ತೆಗೆದು ಕೊಂಡಿದ್ದಿತು. ಸಮಾಜವಾದ ಹಾಗು ಪ್ರಾಚೀನ ಪದ್ಧತಿ ಪ್ರಿಯವಾದಗಳೆಂಬ ಎರಡೂ ವಿಚಾರ ಪ್ರಣಾಳಿಗಳು ತಮ್ಮ ನಿಲುಮೆಯನ್ನು ಆಗಸುಸ್ಪಷ್ಟವಾಗಿ ವ್ಯಕ್ತಗೊಳಿಸಿದ್ದವು. ತಾತ್ಕಾಲಿಕವಾಗಿ ಪ್ರಾಚೀನ ಪದ್ಧತಿ ಪ್ರಿಯವಾದವೇ ಗೆದ್ದಿತೆಂದೂ ಹೇಳಬಹುದು. ಆದರೆ ಈಗ ಇನ್ನೊಂದು ವಾದ (ಅದೇ ಸಮಾಜವಾದ) ಅನೇಕ ರೀತಿಯಲ್ಲಿ ಜನರಿಗೆ ಹಿತವೆಂದು ಕಾಣತೊಡಗಿದೆ. ಅನಿಬಂಧನೆಯು ಇದ್ದಂತೆಯೆ ನಮ್ಮ ದೇಶವು ಸಮಾಜವಾದದಲ್ಲಿ ಅಲ್ಪಲಿದ್ದರೂ ಸಮಾಜವಾದದ ಸ್ಥಾಪನೆಗೆ ಶಕ್ತಿಹಿನ್ನೆಲೆಯನ್ನು ಒದಗಿಸುವುದರಲ್ಲಿ ಮಹತ್ತರವಾದ ಪ್ರಗತಿಯನ್ನು ಸಾಧಿಸಿರುವುದೆಂದು ಹೇಳಬಹುದು. ಇದಕ್ಕೆ ಸಂಸ್ಥಾನಿಕರ ಪರಂಪರೆಯನ್ನು ರದ್ದುಗೊಳಿಸಿರುವುದು, ಜಮೀನುದಾರಿ ಪದ್ಧತಿಯನ್ನು ನಿರ್ಮೂಲಿಸಿರುವುದು, ಭೂಹಿಡುವಳಿಗೊಂದು ಪರಮಾವಧಿ ಮಿತಿಯನ್ನು ಹಾಕಲು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದು ಇವನ್ನು ನಿದರ್ಶನವಾಗಿ ನಾವುಕೊಡಬಹುದು ವಿನೋಬಾಜಿಯವರು ತಮ್ಮ ಆಧ್ಯಾತ್ಮಿಕ ಭೌತಿಕ ತತ್ವಜ್ಞಾನದಿಂದಲೂ ಭೂದಾನಯಜ್ಞದ ಪ್ರವರ್ತನೆಯಿಂದಲೂ ಅನುಕೂಲವಾದ ಮತ್ತು ಪರಿಣಾಮಕಾರಿಯಾದ ವಾತಾವರಣವನ್ನು ರೂಪಿಸುತ್ತಿರುವರು. ನಮ್ಮ ಕೈಕಾಲುಗಳು ಕೆಲಸ ಮಾಡುವುದಕ್ಕೆ ಮುಂಚೆ ಮನಸ್ಸು ತನ್ನ ಕಾರ್ಯವನ್ನು ತೊಡಗಬೇಕಷ್ಟೆ! ಅದರಂತೆ ಶಾಸನವನ್ನು ರಚಿಸಿ, ನಮಗೆ ನಾವೇ ಅರ್ಪಿಸಿಕೊಳ್ಳುವುದಕ್ಕೆ ಮುಂಚೆ ಸಾರ್ವಜನಿಕ ಮತವನ್ನು ರೂಪಿಸ ಬೇಕಾಗುತ್ತದೆ. ಆದುದರಿಂದ ವಿನೋಬಾಜಿಯವರು ತಮ್ಮದೇ ವಿಶಿಷ್ಟ ರೀತಿಯಲ್ಲಿ ಆಸ್ತಿಯ ಮೇಲಿದ್ದ ಹಳೆಯ ಹಿಡಿತದ ಬಿಗುಪನ್ನು ಕಡಿಮೆ ಮಾಡುತ್ತಿರುವರೆಂದು ಭಾವಿಸಬಹುದು. ಆಸ್ತಿವಂತರು ಭೂಮಿಯು ತಮ್ಮ ಕೈಬೆರಳುಗಳ ಡೆಯಿಂದ ಯಾವಾಗಬೇಕೆಂದರಾಗ ಜಾರಿಬೀಳಬಹುದೆಂದು ಈಗಾಗಲೇ ಯೋಚಿಸುತ್ತಿರುವರೆಂದು ತೋರಿಬರುತ್ತದೆ.

ಈಚೆಗೆ ಔದ್ಯೋಗಿಕ ಕ್ಷೇತ್ರದಲ್ಲಿ ಸಾರ್ವಜನಿಕ ರಂಗದ ಮತ್ತು ಖಾಸಗಿವಲಯದ ಪಾತ್ರವನ್ನು ಕುರಿತು ಸಾಕಷ್ಟು ಸ್ಪಷ್ಟೀಕರಣವನ್ನು ನಾವು ಕೇಳಿದ್ದೇವೆ. ನಾವು ಮುಂದಿನ ಹೆಜ್ಜೆಯನ್ನಿಡಲು ಘಮಿಸುವ ಸಂದರ್ಭ ಬೇಗನೇ ಬಂದೀತು; ಆಗ ತತ್ಕಾಲಕ್ಕೆ ಕೆಲವು ಕಪ್ಪು ಕಲ್ಪನೆಗಳುಂಟಾದರೂ ನಿರ್ಮಲ ವಿಚಾರವು ಬಲಗೊಂಡು ಸಮಸ್ತಯವನ್ನು ಶೀಘ್ರದಲ್ಲಿಯೇ ಸಾಧಿಸುವುದೆಂಬುದಂತೂ ಖಂಡಿತ.

ಬೇರೆ ಮುಖ್ಯ ವಿಷಯಗಳಲ್ಲಿ ಯೋಜನೆಯಲ್ಲಿ ಗಳಿಸಲಾದ ಅನುಭವವು ಯೋಜನೆಯ ವೈಜ್ಞಾನಿಕವೂ ಪೂರ್ಣ ಪ್ರಯೋಜನಕಾರಿಯೂ ಒಳ್ಳೆಯ ಪರಿಣಾಮ ಮಾಡುವಂಥದೂ ಆಗಬೇಕಾದರೆ ಸಮಾಜವು ಸಮಾಜವಾದಿ ಪದ್ಧತಿಯನ್ನು ಏಕಾಗಿ ಅಂಗೀಕರಿಸಬೇಕೆಂಬ ವಿಷಯವನ್ನು ಸ್ಪಷ್ಟವಾಗಿ ಎತ್ತಿತೋರಿಸಿರುತ್ತದೆ. ಅದೇ ಸಮಯದಲ್ಲಿ ಯೋಜನೆಯು ನಮ್ಮ ನೆಲದಲ್ಲಿ ದೃಢವಾಗಿ ಬೇರೂರಿ, ಯಶಸ್ವಿಯೆಂದು ಸಿದ್ಧಗೊಳ್ಳಬೇಕಾಗಿದ್ದರೆ ಜನ ಸಮುದಾಯವು ತಾವೇ ಯೋಜನೆಗಳನ್ನು ನಡೆಸಿಕೊಳ್ಳುತ್ತಿದ್ದೇವೆಂದೂ ಅದನ್ನು ಕಾರ್ಯಾನ್ವಿತಗೊಳಿಸುತ್ತಿರುವೆವೆಂದೂಭಾವಿಸುವುದು ಅತ್ಯಗತ್ಯವೆಂಬ ಸಂಗತಿಯೂ ವಿಷದವಾಗಿರುತ್ತದೆ. ಈ ದಿಸೆಯಲ್ಲಿ ನಡೆಸಲಾದ ಪ್ರಯತ್ನಗಳು, ವಿಶೇಷವಾಗಿ ಜನಪದ ಅಭಿವೃದ್ಧಿಯೋಜನೆ ಮತ್ತು ರಾಷ್ಟ್ರೀಯ ವಿಸ್ತಾರಣಾ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಉಂಟಾದ ಆತ್ಮಜಾಗೃತಿಯು, ತುಂಬ ಪ್ರೋತ್ಸಾಹಕರವಾಗಿ ಕಂಡುಬರುತ್ತವೆ.

ನಮ್ಮ ದೇಶದಲ್ಲಿ ಸಮಾಜವಾದವನ್ನು ಸಂಪೂರ್ಣ ಸ್ವರೂಪದಲ್ಲಿ ಸ್ಥಾಪಿಸುವುದಕ್ಕೆ ಮುಂಚೆ ಅನೇಕ ತೊಡಕುಗಳನ್ನು ಇದಿರಿಸಬೇಕಾಗುವುದೆಂಬುದಂಲ್ಲಿ ಸಂದೇಹವಿಲ್ಲ. ಶೈಕ್ಷಣಿಕ ಮತ್ತು ಸಾಮಾಜಿಕಕ್ಷೇತ್ರದಲ್ಲಿಯೇ ಕೆಲವು ತೊಂದರೆಗಳು ಕಾಣಬಹುದು. ಜನಸಮುದಾಯದ ನಿರಕ್ಷರಕುಕ್ಷಿತನ, ಸಾಮಾಜಿಕ ಅಂಧ ಸಂಪ್ರದಾಯಗಳು, ಜಾತೀಯ ಪದ್ಧತಿ ಮತ್ತು ಅದರಿಂದಬೇರುಬಿಟ್ಟಿರುವ ಉಚ್ಚಹಾಗು ನೀಚ ಭಾವನೆ, ದೈಹಿಕ ಶ್ರಮದ ಕುರಿತಿರುವ ತಿರಸ್ಕಾರ—ಇವೆಲ್ಲವನ್ನು ನಾವು ಪರಿಹರಿಸ ಬೇಕಾಗುತ್ತದೆ. ನಮ್ಮ ಜಾತೀಯ ಪದ್ಧತಿಯು ಈಗ ಕೇವಲ ಸಾಮಾಜಿಕ ಕ್ಷೇತ್ರಕ್ಕಷ್ಟೆ ಸೀಮಿತವಿರದೆ ಅರ್ಥಿಕರಂಗಕ್ಕೂ ಕಾಲಿಟ್ಟಿದ್ದು, ಅಲ್ಲಿಯೂ ಪ್ರಗತಿಯನ್ನು ಕುಂಠಿತಗೊಳಿಸುತ್ತಿದೆ. ಸ್ವಾರ್ಥಪರ ರಾಜಕೀಯದಲ್ಲಿರುವ ರೋಗಗ್ರಸ್ತಸ್ಥಳವನ್ನು ಬೊಟ್ಟೆತ್ತಿ ತೋರಿಸಿಯೇ ಗಾಂಧೀಜಿಯವರು ತಾನು ಜಾತಿ ಹಾಗು ವರ್ಗರಹಿತ ಸಮಾಜಕ್ಕಾಗಿ ಹೋರಾಡುತ್ತಿದ್ದೇನೆ ಎಂದು ಹೇಳಿದ್ದರು. ಆದರೆ ಜಾತೀಯ ಪದ್ಧತಿಯನ್ನು ನಮ್ಮ ತಿರಸ್ಕಾರದಿಂದಷ್ಟೇ ದೂರಗೊಳಿಸಬಲ್ಲೆವೆಂದು ಭಾವಿಸಲಾಗದು. ಬೇರು ಇದಕ್ಕಿಂತಲೂ ಆಳವಾಗಿದೆ; ಆದುದರಿಂದ ಬಾಲ್ಯದಿಂದಲೇ ಸಮಾನತೆಯ ಮನೋಭಾವನೆಯನ್ನು ಂಟುಮಾಡುವ ದೃಢಚಿತ್ತದಿಂದ ಸ್ಥಾಪಾನ್ಯ ಉದ್ದೇಶಗಳಿಗಾಗಿ ಸಾಮಾನ್ಯ ಕಾರ್ಯಕ್ರಮಗಳನ್ನು ಪರಸ್ಪರ ಸಹಕಾರದಿಂದ ಕೈಗೊಂಡು ಪೂರೈಸುವ ಪ್ರಯತ್ನವೇ ಮತ್ತೆ ಕೆಲವು ವರ್ಷಗಳಲ್ಲಿ ಯಾದರೂ ಉತ್ತಮ ಫಲಿತಾಂಶವನ್ನು ತಂದೀತು.

ಕೊನೆಯ, ಆದರೆ ಬಹಳ ಪ್ರಾಮುಖ್ಯವಾದ, ವಿಚಾರವೆಂದರೆ ಉತ್ಪಾದನೆ ಮತ್ತು ವಿತರಣೆಯಲ್ಲಿ ಸಮಾಜಕ್ಕೆ ಸಂಪೂರ್ಣ ನಿಯಂತ್ರಣ. ಇದು ಕಾಲವು ಪಕ್ವವಾದಾಗಲೇ ಸಾಧ್ಯ; ಆದರೆ ಸುಸ್ಪಷ್ಟವಾದ ಮುನ್ನೋಟವಿರುವುದು ಮಾತ್ರ ಅಗತ್ಯ. ಇದಕ್ಕಾಗಿ ಮೆಟ್ಟಲು ಮೆಟ್ಟಲಾದ ಪ್ರಗತಿಯಧ್ಯಾಯವನ್ನು ನಾವು ಯೋಜಿಸುವುದೂ ಅದನ್ನು ಕಾರ್ಯಾನ್ವಿತಗೊಳಿಸುದೂ ಉಚಿತ. ನಮ್ಮ ಧ್ಯೇಯ ಸ್ಥಾನವನ್ನು ಈಗಲೇ ಕೊನೆಯದಾಗಿ ನಿರ್ಧರಿಸಬೇಕಾಗಿದೆ ಮತ್ತು ಆ ಗುರಿಯನ್ನು ಮುಟ್ಟುವುದಕ್ಕೆ ಯೋಗ್ಯ ಕ್ರಮಗಳನ್ನೂ ರೂಪಿಸಬೇಕಾಗಿದೆ. ಈ ಕುರಿತು ಸಂಶಯ ಚಿತ್ತರಾಗುವ ಮತ್ತು ಹಿಂದೆ ಮುಂದೆ ನೋಡುವ ಕಾಲ ಇದಲ್ಲವೇ ಅಲ್ಲ.

ಮಾರ್ಗರೇಟಿನ
ಫಿಟ್ಸ್ ಕ್ಯೂರ್
ಗ್ರೋಥ್ ಆಯಿಲ್

ಮಕ್ಕಳ
ಕಾಯಿಲೆಗಳಲ್ಲಿ
ಎರಡು ಉತ್ತಮ
ಸಾಧನಗಳು.

ತಯಾರಕರು:
ಮಾರ್ಗರೇಟ್ಸ್ ಪ್ರೊಡಕ್ಟ್ಸ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 20, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ,
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಉತ್ತಮ ಚಿತ್ರಗಳ ಪ್ರದರ್ಶನ!

ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು ಪತ್ರಿಕಾ ಜಾಹೀರಾತಿನ ನಿದರ್ಶನ!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ--
- ಮೋಟಾರು, ರೇಡಿಯೋ ಬೆಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು -
- ಮದುವೆ, ಮುಂಜಿಗಳಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ—ಇಲ್ಲಿ!

SRI RAMAKRISHNA THEATRE LIMITED, UDIPI.

ಪ್ರಜಾರಾಜ್ಯ ವಿನೋದ್ಸವ (೧ನೇ ಪುಟದಿಂದ)

ಒಳ್ಳೆಯ ಕೆಲಸಗಳಾಗಿವೆಯೆಂಬುದನ್ನು ಅಲ್ಲಗಳೆಯದಿದ್ದರೆ ಅದೇ ರಾಷ್ಟ್ರಕ್ಕೆ ನಾವು ಸಲ್ಲಿಸುವ ದೊಡ್ಡ ಸೇವೆ! ರಾಷ್ಟ್ರೀಯ ಮಟ್ಟದಲ್ಲಿ ನಾವು ಪ್ರಜಾರಾಜ್ಯವನ್ನು ಆಚರಿಸಬೇಕೆಂದು ಹೇಳುವುದರ ಅರ್ಥವೇ ಇದು— ಭಾರತದ ಪ್ರಗತಿಯಿಂದ ಒಂದು ಪಕ್ಷವಷ್ಟೇ ಲಾಭಹೊಂದುವುದಿಲ್ಲ, ಎಲ್ಲ ಪ್ರಜೆಗಳಿಗೂ ಪ್ರಯೋಜನವಾಗುತ್ತದೆ. ಇದನ್ನು ಜ್ಞಾಪಕದಲ್ಲಿಟ್ಟು ಕೊಂಡರೆ ಯಾವ ಮತಭೇದವೂ ಉಳಿಯಲಾರದು.

ಈ ಸಂಚಿಕೆಯ ಕುರಿತು

ನಮ್ಮ ಈ ಸಲದ ವಿಶೇಷ ಸಂಚಿಕೆಯು ಎಷ್ಟು ಸುಂದರವಾಗಿ ಪ್ರಕಟವಾಗ ಬೇಕಿತ್ತೋ ಹಾಗಾಗಿಲ್ಲವೆಂದು ತೋರಬಹುದು. ಅದಕ್ಕೆ ಅನಿವಾರ್ಯವಾದ ಅಡಚಣೆಗಳು ಕಾರಣವಾದುವೆಂದು ಹೇಳಿ ನಾವು ಕ್ಷಮೆ ಕೇಳುತ್ತೇವೆ. ಕೆಲವು ಒಳ್ಳೆಯ ಲೇಖನಗಳನ್ನು ಆವು ತಡವಾಗಿ ಕೈಸೇರಿದುದರಿಂದಲೂ ಸ್ಥಳಾಭಾವದಿಂದಲೂ ಪ್ರಕಟಿಸಲಾರದೆ ಹೋದುದಕ್ಕೆ ನಾವು ತುಂಬ ವಿಷಾದಿಸುತ್ತೇವೆ. ನಮ್ಮ ಜಾಹೀರಾತುದಾರರು ಮತ್ತು ಶ್ರೀ ಟಿ. ಎ. ಪೈ, ಎಂ. ಎಲ್. ಎ., ಡಾ| ಸುಂದರರಾಮ ಪೈ ಮುಂತಾದ ಹಿತೈಷಿಗಳು ನಮ್ಮ ಬೆನ್ನುತಟ್ಟಿ ಪ್ರೋತ್ಸಾಹಿಸಿದುದರಿಂದಲೇ ಈ ಉದ್ಯಮ ಕೈಗೂಡಿತೆಂದು ಹೇಳಿದರೆ ತಪ್ಪಾಗದು. ಈ ಅಭಿಮಾನ ನಮ್ಮ ಮೇಲೆ ಮುಂದಕ್ಕೂ ಬೆಳೆಯಲೆಂದು ಹಾರೈಸಿ, ನಾವು ಅವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ಅದರಂತೆ ಎಲ್ಲ ಲೇಖಕ ಮಿತ್ರರಿಗೂ ಮುದ್ರಣಾಲಯದ ಬಂಧುಗಳಿಗೂ ನಮ್ಮ ಆಭಾರವನ್ನು ಸೂಚಿಸುತ್ತೇವೆ.

THE CANARA BANKING CORPORATION LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)
ಪ್ರಕಟಣೆ
ನಮ್ಮ ಬ್ಯಾಂಕಿನ 39 ನೇ ಸಾಂಡ್ವಿ— ಮುಂಬಯಿ ಶಾಖೆಯು ಇದೇ ತಿಂಗಳ ದಿನಾಂಕ 28 ನೇ ಶುಕ್ರವಾರ 51, ಪೈಥೋನಿ ರೋಡ್, ಬರಕ್, ಮುಂಬಯಿ-9 ಇಲ್ಲಿ ಕೆಲಸಮಾಡುತ್ತದೆ, ಎಲ್ಲಾ ವಿಧದ ಬ್ಯಾಂಕಿಂಗ್ ಸಹಿವಾಟುಗಳನ್ನು ನಡೆಸುವುದು.
ವಿ. ಆರ್. ಕಾಮತ್, ಬಿ. ಎ., ಎಲ್ ಎಲ್. ಬಿ.,
ಜನರಲ್ ಮೆನೇಜರ್.

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ
ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶ್ಯಲ್ ನಂ. ೧ (ರಜಿಸ್ಟರ್ಡ)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.
ಯಾಕಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ.
ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.
ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು (ಎಲ್ಲಾ ಋತುಗಳಲ್ಲಿ ಅನುಕೂಲವಾದೆ. ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. ಇದೇ ಎಚ್ಚೆಯನ್ನೇ ಕೇಳಿರಿ.
ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೩-೮-೦. ಸಣ್ಣ ಬಾಟ್ಲಿ ರೂ. ೨-೦-೦.
ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೩-೧೩-೦. ಸಣ್ಣ ಬಾಟ್ಲಿಗೆ ರೂ. ೩-೧೩-೦ (ಪೇಕಿಂಗ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಆರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವುದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ (ಸೆಂಟ್ರಲ ರೇಲ್ವೆ) ಮುಂಬಯಿ, ೧೪.
Tl. K 62899. ಟೆಲಿಗ್ರಾಮ: PRANAYAMA.

ತುಂಗಭದ್ರೆಯ ಅಣೆಕಟ್ಟು

ವಿಶ್ವದಲ್ಲಿಯೇ ಹಿರಿದೆನಿಸಿದ ಅಭಿವೃದ್ಧಿ ಪ್ರಯತ್ನಗಳಲ್ಲಿ ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ಹೆಸರಿಸಿದರೆ ತಪ್ಪಾಗಲಾರದು. ಇದು ವಿವಿಧೋದ್ದೇಶದ ಅಣೆಕಟ್ಟುಗಳನ್ನು ನಿರ್ಮಿಸುವ ಕಾರ್ಯಕ್ರಮವನ್ನು ಸಹ ಒಳಗೊಳ್ಳುತ್ತದೆ. ನೀರಾವರಿಯ ಅನುಕೂಲತೆಗಳನ್ನು ಹೆಚ್ಚಿಸುವುದಕ್ಕಾಗಿಯೂ ವಿದ್ಯುಚ್ಛಕ್ತಿಯ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿಯೂ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಲಾಗುತ್ತಿದ್ದು ಅವುಗಳಲ್ಲಿ ಈಗ ಕೆಲವು ಕೊನೆಯ ಹಂತವನ್ನು ಮುಟ್ಟುತ್ತಿವೆ.

ತುಂಗಭದ್ರೆಯ ಯೋಜನೆಯು ನಮಗೆ ಸಮೀಪವಾದ ಮತ್ತು ಕನ್ನಡಿಗರ ಕುತೂಹಲವನ್ನು ಕೆರಳಿಸುವ ಕಾರ್ಯಕ್ರಮವಾಗಿದೆ. ವರ್ಷಕ್ಕೆ ೧೭೦ ಅಂಗುಲದಷ್ಟು ಹೆಚ್ಚು ಮಳೆ ಬೀಳುವ ಮೈಸೂರಿನ ಕೂಡ್ಲಿಗಿ ಪ್ರದೇಶದಲ್ಲಿ, ಪಶ್ಚಿಮ ಘಟ್ಟಗಳ ತಪ್ಪಲಲ್ಲಿ, ಹುಟ್ಟಿದ ತುಂಗೆ ಮತ್ತು ಭದ್ರೆ ಎಂಬ ಯಮಳ ನದಿಗಳು ಮುಂದೆ ತುಂಗಭದ್ರೆಯಾಗಿ ಒಟ್ಟಿಗೆ ಹರಿದು ಕೃಷ್ಣೆಯನ್ನು ಸೇರುತ್ತವೆ. ಈ ದಾರಿಯಲ್ಲಿ ಮೈಸೂರಿನ ಬಳ್ಳಾರಿ, ಹೈದರಾಬಾದಿನ ರಾಯಚೂರು, ಆಂಧ್ರದ ಅನಂತಪುರ, ಕಡಪ ಮತ್ತು ಕರ್ನೂಲು ಜಿಲ್ಲೆಗಳ ಒಣ ಪ್ರದೇಶವನ್ನು ಹಾದು ಹೋಗುತ್ತವೆ. ಇಲ್ಲೆಲ್ಲ ವರ್ಷಕ್ಕೆ ೨೦ ಅಂಗುಲದಷ್ಟೂ ಮಳೆ ಬೀಳುವುದಿಲ್ಲ. ಕ್ಷಾಮವು ಪ್ರತಿ ವರ್ಷ ಪ್ರಜೆಗಳನ್ನು ಪೀಡಿಸುತ್ತದೆ. ಜೂನಿನಿಂದ ಅಕ್ಟೋಬರ ತಿಂಗಳ ವರೆಗೆ ಮುಂಗಾರು ಮಳೆಯಿಂದ ತುಂಬಿ ಹರಿಯುವ ತುಂಗಭದ್ರೆಯ ನೀರು ಉಳಿದ ಸಮಯ ಬೇಸಾಯಕ್ಕೆ ಸಿಗುತ್ತಿದ್ದರೆ—ಎಂದು ಜನರು ವಿಚಾರಿಸುತ್ತಿದ್ದರೆ ಅದು ಆಶ್ಚರ್ಯವಲ್ಲ.

ಕಾರಣ, ಭಾರತ ಸರಕಾರವು ಜನರ ಈ ಆಕೋತ್ತರಗಳನ್ನು ಪೂರೈಸುವುದಕ್ಕೆ ಸಹಜವಾಗಿಯೇ ಮುಂದಾಯಿತು. ಭಾರತದಲ್ಲಿಯೇ ದೊಡ್ಡದೆನಿಸಿದ ಕಲ್ಲಿನ ಅಣೆಕಟ್ಟನ್ನು ಕಟ್ಟಲು ಅದು ಸಂಕಲ್ಪಿಸಿತು. ಒಂದೂವರೆ ಮೈಲು ಉದ್ದ ಹಾಗು ೧೬೦ ಅಡಿ ಎತ್ತರದ ಅಣೆಕಟ್ಟು, ಅದರ ಇಬ್ಬದಿಯಲ್ಲಿ ಆಂಧ್ರ ಹಾಗು ಮೈಸೂರು ಪ್ರದೇಶಗಳಲ್ಲಿ ೨೨೫ ಮೈಲು ಮತ್ತು ಹೈದರಾಬಾದಿನಲ್ಲಿ ೧೨೭ ಮೈಲು ಹರಿಯುವ ಮಹಾಕಾಲುವೆಗಳು, ೧೧೦೦೦೦ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸುವ ಕೇಂದ್ರಇವೆಲ್ಲದರಕೆಲಸವೂ ಈಗ ಕೊನೆಯ ಹಂತದಲ್ಲಿ ನಡೆಯುತ್ತದೆ. ಅಣೆಕಟ್ಟಿನ ಜಲಾಶಯವು ೧೦೦ಮೈಲು ಉದ್ದವೂ೨೬೦ಲಕ್ಷ ಎಕ್ರೆಯಷ್ಟು ವಿಶಾಲವೂ ಇದ್ದು, ನೆರೆ ಬಂದಾಗ ಹೆಚ್ಚಿನ ನೀರನ್ನು ಹೊರಗೆ ಬಿಡಲು ೩೩ ಬಾಗಿಲುಗಳ ವ್ಯವಸ್ಥೆ ಮಾಡಲಾಗಿರುವುದು. ಈ ಯೋಜನೆಯಿಂದಾಗಿ ಎಂಟು ಲಕ್ಷ ಎಕ್ರೆ ಪ್ರದೇಶಕ್ಕೆ ಂತ ಲೂ ಹೆಚ್ಚು ಜಾಗದಲ್ಲಿ ಹೊಸ ಬೆಳೆಯಾಗುವುದಲ್ಲದೆ ಯೋಜನೆಗೆ ಹಿನ್ನೆಲೆಯಲ್ಲಿರುವ ೨೦ ಲಕ್ಷ ಎಕ್ರೆ ಪ್ರದೇಶದ ಸೌಭಾಗ್ಯ ಅಣೆಕಟ್ಟಿನಿಂದ ಹೆಚ್ಚುತ್ತದೆ. ಭತ್ತ, ಜೋಳ ಮುಂತಾದ ಆಹಾರಧಾನ್ಯಗಳು ೧೪೦೦೦೦ ಟನ್ನುಗಳಷ್ಟು ಮತ್ತು ಕಬ್ಬು, ಹತ್ತಿ ಮುಂತಾದ ರೊಕ್ಕದ ಸೈರುಗಳು ೮೦೦೦೦ ಟನ್ನುಗಳಷ್ಟು ಅಧಿಕವಾಗುತ್ತವೆ.

ಅಣೆಕಟ್ಟಿನ ಬಲಬದಿಯಲ್ಲಿರುವ ೨೨೫ ಮೈಲು ಉದ್ದದ ಕಾಲುವೆಯನ್ನೂ ಬಾಗಿಲುಗಳನ್ನು ತಯಾರಿಸುವ ಕಾರ್ಖಾನೆಯನ್ನೂ ಚಿತ್ರದಲ್ಲಿ ಕಾಣಬಹುದು.

ಮುದ್ರಾದ ಮುದ್ರಣಕ್ಕೆ
ನವಯುಗ ಪ್ರೆಸ್
ಸಂತೆಕಟ್ಟೆ : : ಉಡುಪಿ.

BALIGA & SONS
Publishers, Booksellers, Dealers in School Reguisites,
CAR STREET, MANGALORE-1.

THE VIJAYA BANK LTD.

H. O. MANGALORE.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಕಾಯಂ ಠೇವಣಾತಿ

ಈಗಿನ ಬಡ್ಡಿ ದರಗಳು

1 ತಿಂಗಳಿಗೆ	....	2%
2 ,,	....	2¾%
3 ತಿಂಗಳಿನಿಂದ 6 ತಿಂಗಳ ವರೇಗೆ		3½%
7 ,, 12 ,,	,,	3¾%
24 ತಿಂಗಳಿಗೆ	... .	4%

ರೂಪ್ಯಾ 15,000 ವ, ಮೇಲಿನ ಠೇವಣಾತಿಗೆ ಸ್ಪೆಷಲ್ ಬಡ್ಡಿ ದರ ಕೊಡಲಾಗುವುದು.

ವಿಜಯ ಕೇಶ್ ಸರ್ಟಿಫಿಕೇಟು.

ಮೂರು ವರ್ಷ ಅವಧಿಯ ಮೇಲಿನ ಠೇವಣಾತಿಯಲ್ಲಿ 4½% ದರ ಬಡ್ಡಿ ಗಳಿಸಿಕೊಳ್ಳಬಹುದು.

ಚತುರ್ ವಾರ್ಷಿಕ ಯೋಜನೆ

ರಿಕರಿಂಗ್ ಠೇವಣಾತಿಯಾಗಿ ರೂಪ್ಯಾ ಒಂದು ಯಾ ಹೆಚ್ಚು ತಿಂಗಳಿಗೊಮ್ಮೆ ಇಟ್ಟಾಗಿದ ಐವೇಜಿಗೆ ನಾಲ್ಕು ವರ್ಷಗಳೊಳಗೆ 4½% ದರ ಬಡ್ಡಿ ಗಳಿಸಿಕೊಳ್ಳಬಹುದು.

ಯಾವತ್ತೂ ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಿ ಕೊಡಲಾಗುವುದು.

ಕೆ. ಸುಂದರರಾಮ ಶೆಟ್ಟಿ.
ಬಿ. ಎ., ಬಿ. ಎಲ್., ಎಲ್ಎಲ್.
ಬೇಂಕಿನ ಡೈರೆಕ್ಟರ್ ಮಂಡಳಿಯ ಅಧ್ಯಕ್ಷರು.

NAVAYUGA 27-1-1955

Regd. No. M. 3618
LICENCE NO. 31
Licenced to Post without Prepayment

The Canara Banking Corporation Ltd.

(A SCHEDULED BANK)

ESTD: 1906.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್

ಪ್ರಾಮುಖ್ಯ ಕಾರ್ಯಾಲಯ- ಉಡುಪಿ (ದ. ಕ. ಜಿಲ್ಲಾ.)

ಭಾರತದ ಆರ್ಥಿಕ ಕ್ಷೇತ್ರದಲ್ಲಿ **49** ವರ್ಷಗಳಿಂದಲೂ ಸೇವೆಯನ್ನು ಸಲ್ಲಿಸಿ ದೇಶದ ಕೃಷಿ, ವ್ಯಾಪಾರ, ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ನೆರವಾಗಿದೆ.

ಆಡಳಿತ ಮಂಡಳಿ

ಡಾ| ಯು. ಸುಂದರರಾಮ ಪೈ, ಎಮ್. ಬಿ. & ಬಿ. ಎಸ್.—ಅಧ್ಯಕ್ಷ.
ಶ್ರೀ. ಬಿ. ವೈಕುಂಠ ಬಾಳಿಗಾ, ಬಿ. ಎ., ಬಿ. ಎಲ್., ಎಂ. ಎಲ್. ಎ.
,, ಕೆ. ಪದ್ಮನಾಭ ಪೈ, ಬಿ. ಎ.
,, ಯು. ಗೋಪಾಲಕೃಷ್ಣ ನಾಯಕ್
ಡಾ| ಯು. ಪದ್ಮನಾಭ ಮಲ್ಯ, ಎಲ್. ಎಮ್. & ಎಸ್.
ಶ್ರೀ. ಬಿ. ಆನಂದ ಮಲ್ಯ, ಎಮ್. ಎ, ಬಿ. ಎಲ್.
,, ಎಫ್. ಎಕ್ಸ್. ಡಿ. ಪಿಂಟೊ
ಡಾ| ಎಮ್. ಬಾಲಕೃಷ್ಣ ಕಿಣಿ, ಎಮ್. ಬಿ. & ಬಿ. ಎಸ್, ಡಿ. ಜಿ. ಓ.
ಶ್ರೀ. ಕಲ್ಯಾಡಿ ರಾಮ ರಾವ್

1953-54ರ ಸರ್ವತೋಮುಖ ಅಭಿವೃದ್ಧಿ ಸೂಚಿಸುವ ತಪ್ಪಿಗೆ

	31-12-53ರಲ್ಲಿ	31-12-54ರಲ್ಲಿ (ಶೇಖ್ರ ಪರಿಹೋಧನೆಗೆ ಒಳಪಟ್ಟು)
ತೆತ್ತು ಬಂದ ಪಾಲು ಭಂಡವಾಳ	20,00,000	20,00,000
ಕ್ಷೇಮ ನಿಧಿಗಳು	10,50,000	11,25,000
ರೀಸರ್ವ್	2,98,18,859	3,42,79,566
ಕೊಟ್ಟ ಸಾಲಗಳು	1,51,53,069	1,57,79,008
ಸರಕಾರಿ ಭದ್ರತಾ ಪತ್ರಗಳ ಮೇಲೆ ಸಂಚಯಕಟ್ಟಿ ಮೊಬಲಗು ...	1,34,28,068	1,60,37,095
ಕೈಯಲ್ಲಿ ಮತ್ತು ಬ್ಯಾಂಕಿನಲ್ಲಿರುವ ಶಿಲ್ಕು	57,29,122	71,46,136
ಅನ್ ಮುನಾಫೆ	3,17,797	3,29,139
ವ್ಯವಹಾರದಲ್ಲಿರುವ ಒಟ್ಟು ಭಂಡವಾಳ	3,90,20,922	4,36,38,125

* * * * * * *

ಮದರಾಸು, ಮುಂಬಾಯಿ, ಆಂಧ್ರ, ಮೈಸೂರು, ತಿರು-ಕೊಚ್ಚಿ, ಕೊಡಗು ಸಂಸ್ಥಾನಗಳಲ್ಲಿ **38** ಶಾಖೆಗಳಿದ್ದು, ಆಧುನಿಕ ರೀತಿಯ ಸಕಲ ತರದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲಾಗುತ್ತದೆ.

ಹೆಚ್ಚಿನ ಮಾಹಿತಿ ನಮ್ಮ ಯಾವದೇ ಶಾಖೆಯಿಂದ ತಿಳಿಯಬಹುದು.

ವಿ. ಆರ್. ಕಾಮತ್, ಬಿ. ಎ., ಎಲ್ ಎಲ್ ಬಿ.,
ಜನರಲ್ ಮ್ಯಾನೇಜರ್.

Edited, Printed & Published by K H. Shetty at the Navayuga Press, Udipi, S. India

ಕ, ೨೦೧೦

Licensed to Post without Prepayment

ನವಯುಗ

ಸಂಪುಟ ೩೪ — ಉಡುಪಿ, 3—2—1955 — ಸಂಚಿಕೆ ೨೨

VOL. 34 — NO. 22

ಸ್ವಾಗತಾರ್ಹ

ಏಳು ವರ್ಷಗಳಷ್ಟೇ ಪೂರ್ವದಲ್ಲಿ ಕಾಂಗ್ರೆಸಿಗೆ ಅಧಿಕಾರ ದೊರಯಿತು ಈ ಅಲ್ಪಾವಧಿಯಲ್ಲಿ ದೊರೆತ ಅನುಭವದಿಂದ ಶಾಸನ ಸಭೆಗಳಲ್ಲಿಯೂ ಅಧಿಕಾರ ವರ್ಗದಲ್ಲಿಯೂ ಸ್ಥಾನ ದೊರೆಸಿಕೊಳ್ಳುವ ಹಂಬಲವು ಸಂಸ್ಥೆಯ ಮೇಲೆ ಎಷ್ಟು ದುಷ್ಪರಿಣಾಮ ಮಾಡಿದೆಯೆಂದರೆ ತಕರಾರುಗಳು ಬಾರದ ಪ್ರವೇಶವೇ ಇಲ್ಲ ಈ ಪ್ರವೃತ್ತಿಯನ್ನು ಯಶಸ್ವಿಯಾಗಿ ಪ್ರತಿಭಟಿಸುವುದು ಅಗತ್ಯವಾಗಿದ್ದು ಈ ದಿಸೆಯಲ್ಲಿ ಎಲ್ಲರಿಂದಲೂ ಸರ್ಕಾರವನ್ನು ಸಂಘಟಿಸಬಯಸುತ್ತದೆ

—ಶ್ರೀ ಯು ಎನ್ ಧೇಬರ್

ಶುಚಿಯಾದ ಒಳಾವರಣ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನವು ಕಳೆದ ತಿಂಗಳ ಕೊನೆಯಲ್ಲಿ ಅವಡಿಯಲ್ಲಿ ಜರಗಿದಾಗ ಕಾಂಗ್ರೆಸು ಸಂಸ್ಥೆಯನ್ನು ಶುಚಿಯಾಗಿಡುವ ವಿಷಯದ ಕುರಿತೊಂದು ಗಂಭೀರವಾದ ಗೊತ್ತುವಳಿಯನ್ನು ಸ್ವೀಕರಿಸಲಾಯಿತು ಇದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಜನರು—ಮುಖ್ಯವಾಗಿ ಕಾಂಗ್ರೆಸು ಸದಸ್ಯರು ಮತ್ತು ಕಾಂಗ್ರೆಸಿನ ಹಿತೈಷಿಗಳು—ತಿಳಿದಿರಬೇಕಾದ ಅಗತ್ಯವುಂಟು ಒಬ್ಬರು ಹೇಳಿದಂತೆ, ಇಂದು ಕಾಂಗ್ರೆಸಿನ ಹೊರಗಿನ ಆವರಣ, ಅಂದರೆ ಅಧಿಕಾರದ ಆವರಣ, ಬಹಳ ವಿಶಾಲವಾಗಿದೆ, ಆದರೆ ಒಳಗಿನ ಆವರಣ, ಅಂದರೆ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನಿಷ್ಠೆ ಮತ್ತು ನೈತಿಕ ನಿಟ್ಟಿ ರಕ್ಷಣೆಯ ಆವರಣ ಮಾತ್ರ ಬಹಳ ಸಂಕುಚಿತವಾಗಿದೆ ಇದು ಹೀಗಯೇ ಮುಂದುವರೆದರೆ, ಕಾಂಗ್ರೆಸು ಸರ್ವ ನಾಶದ ದಿನವನ್ನು ಎದುರು ನೋಡಬೇಕಾದೀತು, ಹೊರತು, ಉತ್ಕರ್ಷದ ಹಂಬಲವಿಟ್ಟು ಕೊಳ್ಳುವಂತಿಲ್ಲ ಆದುದರಿಂದ ಕಾಂಗ್ರೆಸಿನಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳುವ ಒಗ್ಗೆ ಈಗಿಂದೀಗ ಯೋಗ್ಯ ಕ್ರಮಗಳನ್ನು ಅವು ಎಷ್ಟು ಕಠಿಣದ್ದಾದರೂ ಚಿಂತಿಲ್ಲ, ತೆಗೆದುಕೊಳ್ಳಲೇ ಬೇಕೆಂದು ಒತ್ತಾಯಿಸಿದರೆ ತಪ್ಪಾಗಲಾರದು.

ಕಾಂಗ್ರೆಸಿನಲ್ಲಿ ಎಲ್ಲವೂ ಸರಿ ಯಾಗಿಲ್ಲ; ಅಲ್ಲಿ ಅಶುಚಿಯಿದೆ, ಭ್ರಷ್ಟಾಚಾರವಿದೆ ಎಂದು ಗೊತ್ತುವಳಿಯನ್ನು ಸ್ವೀಕರಿಸುವುದರಿಂದ, ಸಂಸ್ಥೆಯನ್ನು ಸಾರ್ವಜನಿಕವಾಗಿ ಅವಹೇಳನ ಮಾಡಿದಂತಾಯಿತೆಂದು ಕೆಲವು ಸದಸ್ಯರು ವಾದಿಸಿದ್ದರು ಆದರೆ ಆ ಮಾತಿನಲ್ಲಿ ಹುರುಳಿಲ್ಲವೆಂದು ನೆಹರು ಸಮಾಧಾನ ಮಾಡಿದರು ಕಾಂಗ್ರೆಸಿನಲ್ಲಿ ಕೊಳೆಚೆಯ ಪ್ರದೇಶಗಳು ಕಾಣಿಸಿಕೊಂಡಿವೆಯೆಂಬ ಸತ್ಯವನ್ನು ಕಣ್ಣುಮುಚ್ಚಿಕೊಂಡು ಉಪೇಕ್ಷಿಸುವುದು ಎಷ್ಟಕ್ಕೂ ಉಚಿತವಲ್ಲ—ಸಾರ್ವಜನಿಕರು ಈಗಾಗಲೇ ಅಪ್ರಾಮಾಣಿಕರಾಗಿ ಕಾಂಗ್ರೆಸಿಗರನೇಕರು ವರ್ತಿಸುತ್ತಿದ್ದಾರೆಂದೂ ನೀತಿಯನ್ನು ಗಾಳಿಗೆ ತೂರಿ ಸಂದರ್ಭಸಾಧಕತನವನ್ನೆ ಪ್ರದರ್ಶಿಸುತ್ತಿದ್ದರೆಂದೂ ಆರೋಪಿಸುತ್ತಿದ್ದು, ಇದು ಸಂಸ್ಥೆಯ ಹೆಸರನ್ನು ಹಾಳುಮಾಡುತ್ತಿದೆ ಹಾಗೆ ಕಲಂಕ ತಗಲುವುದಕ್ಕೆ ಕಾರಣವಾದ ಸದಸ್ಯರನ್ನು ಎಚ್ಚರಿಸುವುದು ಸಂಸ್ಥೆಯ ಕರ್ತವ್ಯ ಗೊತ್ತುವಳಿಯೊಂದನ್ನು ಸ್ವೀಕರಿಸಿದ ಮಾತ್ರಕ್ಕೆ ಕಾಂಗ್ರೆಸಿನ ಶುದ್ಧೀಕರಣವಾಯಿತೆಂದೇನು ಅರ್ಥವಲ್ಲ, ಆದರೆ ಅದು ತಪ್ಪನ್ನು ಒಪ್ಪಿಕೊಳ್ಳುವ ಪ್ರಾಮಾಣಿಕ ವಿಧಾನವೆಂದು ಮಾತ್ರ ಹೇಳಬಹುದು; ಮತ್ತು ಹಾದಿಗಟ್ಟವರಿಗೆ ಸುಧಾರಿಸಿಕೊಳ್ಳಲು ನೀಡಿದ ಎಚ್ಚರಿಕೆಯೆಂದೂ ಭಾವಿಸಬಹುದು ಇದರಿಂದ ಅಂತಃ ನಿರೀಕ್ಷಣೆಗೆ ಹೆಚ್ಚಿನ ಚಾಲನೆ ದೊರಕುತ್ತದೆನ್ನುವುದೂ ಸುಳ್ಳಲ್ಲ

ಶುಚಿತ್ವದ ರಕ್ಷಣೆಯಾಗ ಬೇಕಿದ್ದರೆ, ಕಾಂಗ್ರೆಸು ಸದಸ್ಯರು ಹೆಚ್ಚು ಪ್ರಾಮಾಣಿಕ ರೀತಿಯಲ್ಲಿ ನಡೆದುಕೊಳ್ಳುವುಗು ಅತ್ಯಗತ್ಯ ಆದರೆ ಹಾಗೆ ರುದ್ಧಜೀವನವನ್ನು ನಡಸುವ ಜನರೆಷ್ಟು? ನಹರುಗಳೇ ಒಪ್ಪಿಕೊಂಡಂತೆ ಉಚ್ಚ ಸ್ಥಾನಾಪನ್ನರಾದ ಕಾಂಗ್ರಸಿಗರಲ್ಲಿ ಸಹ ಎಷ್ಟೋ ಮಂದಿ ಅನವೇಕ್ಷಿತವಾದ ಕೆಟ್ಟ ಹವ್ಯಾಸಗಳಲ್ಲಿ ಮುಗ್ನರು! ರಾಜಕೀಯ ದುರೀಣರಿಗಿಂತಲೂ ತನ್ನ ಸ್ವಾರ್ಥಸಾಧನೆಗಾಗಿ ದುಡ್ಡನ್ನು ನೀರಿನಂತೆ ಚೆಲ್ಲಿ ಜನರನ್ನು ರನ್ನ ಜೇಲರನ್ನಾಗಿ ಮಾಡಿಕೊಂಡು ಅವರೆಲ್ಲರಿಗೆ "ಧಣಿ" ಯಾಗಿ ಮರೆಯುವ ಕಾಂಗ್ರೆಸಿಗರೇ ಇಂದು ಹೆಚ್ಚು. ಇದು ನಾವು ಹೇಳುವ ಮಾತಲ್ಲ—ಕಾಂಗ್ರೆಸಿನ ಪರಿಷ್ಕರು ಒಪ್ಪಿಕೊಂಡ ವಿಷಯ ಶ್ರೀ ಮುರಾರಜಿ ದೇಸಾಯಿಯವರ ಮಾತಿನಲ್ಲೇ ಹೇಳುವುದಾದರೆ ಕಾಂಗ್ರಸಿಗರು ತವೆಗ್ಗಿಳಗೆಯ ಕಚ್ಚಾಡಿಕೊಳ್ಳುತ್ತಾರೆ, ಒಬ್ಬರನ್ನೊಬ್ಬರ ಬರ್ತ್ಸನೆ ಮಾಡುತ್ತಾರೆ ಮತ್ತು ತಮ್ಮ ಹಿತಕ್ಕೋಸ್ಕರ ಕಾಂಗ್ರೆಸಿನ ತತ್ವಗಳಲ್ಲಿ ಏನೇನೂ ವಿಶ್ವಾಸವಿಲ್ಲದವರ ಸ್ನೇಹವನ್ನು ಸಹ ಮಾಡಿಕೊಳ್ಳುತ್ತಾರೆ! ಪರಿಸ್ಥಿತಿ ಹೀಗಿರುವಾಗ ಜನರ ಒಳಿತಿಗಾಗಿ ಸೇವೆಯ ದೀಕ್ಷೆಯನ್ನು ಕೈಗೊಂಡ ಪಕ್ಷ ತನ್ನ ಕರ್ತವ್ಯವನ್ನು ಪೂರೈಸುವ ಬಗ ಹೇಗೆಂದು ತಿಳಿಯದು

ಇದು ಬಹಳ ದುಃಖದ ವಿಷಯ—ಚುನಾವಣೆಯು ಪ್ರಜಾ ಪ್ರಭುತ್ವ ಪದ್ಧತಿಯ ಅನಿವಾರ್ಯ ಅಂಗವಾಗಿದ್ದರೂ ಸಹ, ಅದು ನೈತಿಕ ಮಟ್ಟವನ್ನು ಇಳಿಸುವುದಕ್ಕೆ ಕಾರಣವಾಯಿತೆಂಬುದೂ, ಕಾಂಗ್ರೆಸಿನಪಕ್ಷನಕ್ಕ ಇದೇ ದಾರಿ ಮಾಡಿಕೊಟ್ಟಿತೆಂಬುದೂ ಕಡಿಮೆ ಬೇಸರದ ಸಂಗತಿಯಲ್ಲ. ಗೊತ್ತುವಳಿಯ ಕುರಿತು ಚರ್ಚೆ ನಡೆದಾಗ ಸದಸ್ಯರಲ್ಲಿ ಕೆಲವರು ಚುನಾವಣಾಗಳನ್ನು ಹೋರಾಡುವಾಗ ಕಾಂಗ್ರೆಸು ಸದಸ್ಯರು ಪವಿತ್ರ ತತ್ವಗಳನ್ನು ಹೇಗೆ ಮೂಲೆಗುಂಪು ಮಾಡುವರೆಂದು ತಿಳಿಸಿದರು ಹಣವನ್ನು ಚೆಲ್ಲಿ ಮತವನ್ನು ಸಂಪಾದಿಸುವುದು, ಮದಿರೆಯನ್ನು ಕುಡಿಯಗೊಟ್ಟು ಮತದಾರರ ಪ್ರೀತಿಗಳಿಸುವುದೇ ಮುಂತಾದ ದುಷ್ಟ ವ್ಯವಹಾರದಲ್ಲಿ ಕಾಂಗ್ರೆಸಿಗರನೇಕರು ಮಗ್ನರಾಗಿದ್ದಾರೆಂದು ಮಾಡಲಾದ ಆರೋಪ ಹುರುಳಿಲ್ಲದುದೇನೂ ಅಲ್ಲ, ಪತ್ಯಕ್ಕೆ ದೂರವಾದದ್ದೂ ಅಲ್ಲ ಇಂದವಾದ ಮಾರ್ಗವಲಂಬಿಗಳಾದವರು ಕಾಂಗ್ರೆಸಿಗರಷ್ಟೇ ಅಲ್ಲ—ಬೇರೆ ಪಕ್ಷದವರ ಚುನಾವಣಾ ತಂತ್ರವೂ ಹೀಗಿತ್ತು ಎಂಬುದು ಕಾಂಗ್ರೆಸಿನ ನಿಲುಮೆಯನ್ನು ಸರ್ಮರ್ಥಿಸುವುದಕ್ಕೆ ಪ್ರಬಲ ಕಾರಣವಾಗದು, ಏಕೆಂದರೆ, ಮಹಾತ್ಮ ಗಾಂಧೀಜಿಯ ನೇತೃತ್ವವನ್ನು ಅಂಗೀಕರಿಸಿದ ಕಾಂಗ್ರೆಸಿಗೆ, ಗುರಿಯನ್ನು ಸೇರುವುದೊಂದೇ ಕೆಲಸವಲ್ಲ, ಗುರಿಯಷ್ಟೇ ಪವಿತ್ರವಾದ ಮಾರ್ಗವನ್ನು ಅನುಸರಿಸುವುದೂ ಮಹತ್ವದ ಕಾರ್ಯ. ಇದಕ್ಕೆ ತಪ್ಪಿ ನಡೆದಾಗ, ಕಾಂಗ್ರೆಸಿನ ಪಾವಿತ್ರ್ಯತೆಯ ತಿಳುವು ಕುಸಿದು ಬೀಳುವುದು ನಿಶ್ಚಯ

ನೆಹರುಗಳೇ ಒಪ್ಪಿಕೊಂಡಂತೆ, ಮೂರು ದಶಕಗಳ ಹಿಂದೆ ಕಾಂಗ್ರೆಸಿನಲ್ಲಿದ್ದ ಪಾವಿತ್ರ್ಯ ಇಂದು ಉಳಿದಿಲ್ಲ ಆಗ ಚುನಾವಣೆಗಳು ಇರಲಿಲ್ಲ, ಸೇವೆಯೊಂದೇ ಕಾಂಗ್ರೆಸಿನ ಆದರ್ಶವಾಗಿತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಉತ್ಸಾಹ ತೋರಿಸಿ, ಜನತೆಯ ಪ್ರೀತಿಯನ್ನು ಅಂದು ಸಂಪಾದಿಸಲಾಯಿತು ಆದ ನ್ಯಾಯವಾದ ದಾರಿಯಾಗಿದ್ದರೂ ಇಂದು ಅಧಿಕಾರದ ಆಮಿಷದ ಮೂಲಕ ಜನರ ಮನಸ್ಸನ್ನೆ ಕೆಡಿಸುವ ಗಂಡಾಂತರ ಪ್ರಾಯವಾದ ಕವ್ಯಾಸದಲ್ಲಿ ಕಾಂಗ್ರೆಸಿಗರನೇಕರು ಬಿದ್ದಿದ್ದಾರೆ! ಕಾಂಗ್ರೆಸಿನ ಮೇಲೆ ಮಮತೆ ಹುಟ್ಟುವುದಕ್ಕೆ ಬದಲಿಗೆ ಸೇರುವುದರಿಂದ ಅಧಿಕಾರ ಸ್ಥಾನಪ್ರಾಪ್ತಿ ಯಾಗುವುದೆಂಬ ನಂಬಿಕೆಯೇ ಹೆಚ್ಚಿನ ಸಂದರ್ಭಗಳಲ್ಲಿ ಹೇರುವಾಯಿತು ಚುನಾವಣೆ ನಿಜವಾದ ಕಾರ್ಯಕರ್ತನನ್ನು ಹಿನ್ನಲೆಗೆ ಸರಿಸಿ, ಸಂದರ್ಭ ಸಾಧಕರನ್ನು ಜನರನ್ನು ಧನದ ಮದದ ಮುಂತಾದವುಗಳ ದಿಸೆಯಿಂದ ಆಕರ್ಷಿಸಬಲ್ಲವನನ್ನೂ ಮುಂದಕ್ಕೆ ತಂದಿತು ಪ್ರಜೆಯೊಂದೂ ದೇಶದಲ್ಲಿ, ಸರಕಾರವನ್ನು ನಡೆಸಬಯಸುವ ಪಕ್ಷ ಚುನಾವಣೆಗಳ

(ಕೆಳ ಸುಟ ನೋಡಿರಿ)

ಸ್ವಾರಸ್ಯ

ತಾಯಿಬೊಡನೆ ಮಗನು ಹೇಳಿದ—'ನಾನೇನು ಸುಳ್ಳು ಹೇಳುವುದಿಲ್ಲವಮ್ಮ. ಬಡ ಹುಡುಗನಿಗೆ ಕೊಡಬೇಡಮ್ಮಾ ಒಂದು ಅರಳುಂಡೆಯನ್ನು ತೆಗೆದುಕೊಂಡೆ "

ಇದನ್ನು ಕೇಳಿದ ತಾಯಿ ಸಂತೋಷದಿಂದ "ಉಂಡೆಯನ್ನು ತೆಗೆದುಕೊಂಡ ಬಡ ಹುಡುಗ ಆನಂದದಿಂದ ಮೂದಿರಬಹುದು, ಅಲ್ಲವೆ!" ಎಂದು ಕೇಳಿದಳು

'ಹಾಗೇನೂ ಆಗಿಲ್ಲವಮ್ಮ—ನಾನು ಉಂಡೆ ತೆಗೆದುಕೊಂಡು ಒಳಗೆ ಹೊತ್ತಾದರೂ ಅದರಲ್ಲಿ ಬಡ ಹುಡುಗನು ಕಾಣಲಿಲ್ಲ ಆದಕ್ಕೆ ನೇ ತಿಂದುಬಿಟ್ಟೆ!"

THE CANARA INDUSTRIAL & BANKING SYNDICATE LTD.
Estd: 1925 H O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು ಆ ಕಾಲಕ್ಕೆ ನಾವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ಏನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಪಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಕೇಳಾಗಿರಿಸಲು ನೀವು ತಯಾರಿಲ್ಲವೆನಿರೆ ಅದಕ್ಕೆ ಬಡ್ಡಿ ಸಿಕ್ಕದಿರಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸಾಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಶೇಖರಿಸಿಡಲು ನಾವು ಇಚ್ಛಿಸುವಿರಿ ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕದಲ್ಲಿ ನಿಮಗೆ ಯಾವ ಕಾಲದಲ್ಲಾ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು ೧೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಸೇವಾದಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಸಾಗಿಸಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦,೦೮೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ ಭಾರತ

ಎಲ್ಲ ಪ್ರಜೆಗಳಿಗೂ ವಸತಿಗೃಹ

ಸಮಸ್ಯೆಯನ್ನು ಪರಿಹರಿಸಲು ಸರಕಾರದ ಸಂಕಲ್ಪ

ನಮ್ಮ ದೇಶದ ಲಕ್ಷಾಂತರ ಜನರಿಗೆ ಸರಿಯಾದ ವಸತಿಗೃಹಗಳನ್ನು ಒದಗಿಸುವ ಸಮಸ್ಯೆಯನ್ನು ಈಗಿರುವ ತೊಂದರೆಗಳ ಹಿನ್ನೆಲೆಯಲ್ಲಿ ಗಣನೆಗೆ ತೆಗೆದುಕೊಳ್ಳದೆ ಬೆಲೆಕಟ್ಟುವುದು ಸರಿಯಾದುದಲ್ಲ. ಜನಸಂಖ್ಯೆಯ ಸಾಮಾನ್ಯ ಏರಿಕೆಯ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಕೈಗಾರಿಕಾ ಕೇಂದ್ರಗಳಿಗೆ ಜನಸಂಖ್ಯೆಯು ಹರಿದು ಬಂದುದರ ಜೊತೆಗೆ, ವಿಭಜನಾನಂತರ ವಸತಿಗೃಹಗಳಿಲ್ಲದ ಲಕ್ಷಾಂತರ ಜನರ ಒತ್ತಡವು ಸಹ ಅಧಿಕಾರಿಗಳಿಗೆ ಈ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ಸವಾಲನ್ನು ಹಾಕಿತು. ಎಲ್ಲಾ ರಾಜ್ಯಗಳ ಮತ್ತು ಖಾಸಗಿ ಕ್ಷೇತ್ರದ ಸಾಧನ ಸಂಪತ್ತನ್ನೆಲ್ಲ ಶೇಖರಿಸಿ ಈ ಸವಾಲನ್ನು ಎದುರಿಸಬೇಕಾಯಿತು. ಪರಿಣಾಮವಾಗಿ ಹಲವಾರು ಹೊಸ ಊರುಗಳೂ ನಗರಗಳ ನಿವೇಶನಗಳೂ ನಿರ್ಮಾಣವಾಗುವಂತಾಯಿತು. ನಮಗೆ ದೊರೆತಿರುವ ಕಾಲ ಮತ್ತು ಸಾಧನ ಸಂಪತ್ತುಗಳನ್ನು ಗಣನೆಗೆ ತೆಗೆದುಕೊಂಡರೆ ಈ ಕ್ಷೇತ್ರದಲ್ಲಿ ನಾವು ಅದ್ಭುತ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಮನವರಿಕೆಯಾಗುತ್ತದೆ.

ಕಳೆದ ಮೂರು ದಶಕಗಳಲ್ಲಿ ನಮ್ಮ ಜನಸಂಖ್ಯೆಯು ಕ್ರಮವಾಗಿ ಸೂರಕ್ಕ ೨೦, ೩೨, ಮತ್ತು ೫೮ರಷ್ಟು ಏರಿರುವುದನ್ನು ಗಮನಿಸಿದರೆ, ನಮ್ಮ ಪರಿಸ್ಥಿತಿಯು ಗೊತ್ತಾಗುತ್ತದೆ. ಈ ತೊಂದರೆಯ ಜೊತೆಗೆ, ಸಶ್ಚಿಮ ಮತ್ತು ಪೂರ್ವ ಪಾಕಿಸ್ಥಾನದಿಂದ ಬಂದಿರುವ ಒಟ್ಟು ನಿರಾಶ್ರಿತರ ಸಂಖ್ಯೆಯೇ ೭೯ ಲಕ್ಷವನ್ನು ಮೀರುತ್ತದೆ ಯೆಂಬುದನ್ನೂ ನೆನಪಿಟ್ಟುಕೊಳ್ಳುವುದು ಅಗತ್ಯ.

ಈ ನಿರಾಶ್ರಿತರಿಗೆ ಗ್ರಾಮಾಂತರಗಳಲ್ಲಿ ಈಗ ನಿಗದಿ ಮಾಡಲ್ಪಟ್ಟ ಮನೆಗಳನ್ನು ದುರಸ್ತುಪಡಿಸಿಕೊಳ್ಳಲು ಅಥವಾ ಹೊಸ ಮನೆಗಳನ್ನು ಕಟ್ಟಿಕೊಳ್ಳಲು ಹಣವನ್ನು ಕೊಡಲು ಸರಕಾರ ನಿರ್ಧರಿಸಿತು. ನಗರ ಪ್ರದೇಶಗಳಲ್ಲಿ, ಹೊಸ ವಸತಿಗೃಹಗಳನ್ನು ಕಟ್ಟುವುದರಿಂದಲೂ ಆಧುನಿಕ ರೀತಿಯ ಊರುಗಳನ್ನು ಕಟ್ಟುವುದರಿಂದಲೂ ವಸತಿಗೃಹ ನಿರ್ಮಾಣ ಕಾರ್ಯಕ್ರಮವು ಈಗ ಮುಂದುವರಿಯುತ್ತಿದೆ ಕೆಲವು ಕಡೆಗಳಲ್ಲಿ ೧೦೦೦ ರೂಪಾಯಿಗಳಿಂದ ೧೮೦೦೦ ರೂಪಾಯಿಗಳ ವರೆಗಿನ ವೆಚ್ಚದಲ್ಲಿ ವಿವಿಧ ಮಾದರಿಯ ಮನೆಗಳನ್ನು ಕಟ್ಟಿ ಸ್ಥಾನಪಲ್ಲಟರಿಗೆ ಬಾಡಿಗೆಗೆ ಕೊಡಲಾಗುತ್ತದೆ. ಸ್ವಂತವಾಗಿ ಮನೆಗಳನ್ನು ಕಟ್ಟಿಕೊಳ್ಳಲು ಇಚ್ಛಿಸುವವರಿಗೆ, ಸಾಮಗ್ರಿಗಳನ್ನೂ ಖಾಲಿ ಜಾಗವನ್ನೂ ಒದಗಿಸಲಾಗುತ್ತದೆ.

ಕೇಂದ್ರದ ಪುನರ್ನಿವೇಶನ ಸಚಿವ ಶಾಖೆಯು ವಸತಿಗೃಹ ಯೋಜನೆಗಳ ಪೂರ್ಣ ವೆಚ್ಚವನ್ನು ಪಡಿಸಿಕೊಳ್ಳುತ್ತದೆ. ಈ ಯೋಜನೆಗಳನ್ನು ಕಾರ್ಯಗತ ಮಾಡುವ ಕೆಲಸ ಮಾತ್ರ ಸಂಬಂಧಪಟ್ಟ ರಾಜ್ಯ ಸರ್ಕಾರಗಳಿಗೆ ಸೇರಿದೆ. ಕಳೆದ ವರ್ಷದಲ್ಲಿ ದೆಹಲಿ ಮತ್ತು ಅದರ ಸುತ್ತಲೂ ೫೫ ವಸಾಹತುಗಳನ್ನು ಕಟ್ಟಲಾಯಿತು. ಈ ವಸಾಹತುಗಳಲ್ಲಿ ೩೪೦೦೦ ಮನೆಗಳನ್ನು ಕಟ್ಟಲಾಗಿದ್ದು ಇನ್ನೂ ೫೦೦೦ ಮನೆಗಳನ್ನು ಕಟ್ಟಲು ಸರಕಾರ ಬಯಸುತ್ತದೆ. ದೆಹಲಿ ಯೋಜನೆಗಳಿಂದ ೧.೩೮ ಲಕ್ಷ ಸ್ಥಾನಪಲ್ಲಟರಿಗೆ ವಸತಿಗೃಹಗಳನ್ನು ಒದಗಿಸಲು ಸಹಾಯ ಮಾಡಿದಂತಾಗಿದೆ.

ದೆಹಲಿಯ ಸುತ್ತುಮುತ್ತಲೂ ಕಟ್ಟಿರುವ ವಸಾಹತುಗಳನ್ನುಳಿದು, ಇಷ್ಟರ ವರೆಗೆ ೧೩೦ ಹೊಸ ಪುಟ್ಟ ಊರುಗಳನ್ನೂ, ಬಡಾವಣೆಗಳನ್ನೂ ಕಟ್ಟಲಾಗಿದೆ. ಇಂಥ ಪುಟ್ಟ ಊರು ಮತ್ತು ಬಡಾವಣೆಗಳಲ್ಲಿ ಫರಿದಾಬಾದ್, ಗಾಂಧಿಧಾಂ, ರಾಜಪುರಿ, ನಿಲೋಖರಿ, ತ್ರಿಪುರಿ, ಸರ್ದಾರ್‌ನಗರ, ಉಲ್ಲಾಸನಗರ, ಗೋವಿಂದಪುರಿ ಮತ್ತು ಹಸ್ತಿನಾಪುರ—ಇವು ಉಲ್ಲೇಖನೀಯ. ಈಗಿನ ಆರ್ಥಿಕ ಸಾಲಿನ ಕೊನೆಯವರೆಗೂ ೧೦ ಲಕ್ಷ ಸ್ಥಾನಪಲ್ಲಟರಿಗಾಗಿ ಮನೆಗಳನ್ನು ಕಟ್ಟುವ ಯೋಜನೆಯನ್ನು ಸರಕಾರ ಮಂಜೂರು ಮಾಡಿರುತ್ತದೆ.

ಒಂದು ಕಾಲದಲ್ಲಿ ಗೃಹ ನಿರ್ಮಾಣದ ಮುಖ್ಯ ಆಸರೆಯಾಗಿದ್ದ ಖಾಸಗಿ ಉದ್ಯಮವು ಯುದ್ಧಾನಂತರ ಕುಗ್ಗಲು ಪ್ರಾರಂಭಿಸಿತು. ಬಾಡಿಗೆಗಳ ಹತೋಟಿ ಮತ್ತು ಮನೆಗಳನ್ನು ವಶಪಡಿಸಿಕೊಳ್ಳುವುದು, ಕಟ್ಟಿದದ ಸಾಮಗ್ರಿಗಳ ಕೊರತೆ ಮತ್ತು ಹೆಚ್ಚು ಬೆಲೆ ತೆರಬೇಕಾದುದು—ಇವೇ ಮುಂತಾದ ಕಾರಣಗಳಿಂದ ಖಾಸಗಿ ಉದ್ಯಮದ ಅವನತಿಯಾಯಿತು. ಈ ತೊಂದರೆಗಳು ಸಮಸ್ಯೆಯನ್ನು ಹೆಚ್ಚಿಸುತ್ತಿದ್ದಾಗ ಕಲ್ಯಾಣ ರಾಜ್ಯವು ಅಲ್ಪ ಆದಾಯ ವರ್ಗ, ನಗರಗಳ ಮಧ್ಯಮ ವರ್ಗ ಮತ್ತು ಕೈಗಾರಿಕಾ ಕೆಲಸಗಾರ ವರ್ಗದ ಸದಸ್ಯರಿಗೆ ವಸತಿ ಗೃಹಗಳನ್ನು ಒದಗಿಸಿ ಕೊಡುವುದು ಅನಿವಾರ್ಯವಾಯಿತು. ವಸತಿ ಗೃಹಗಳ ಬಗ್ಗೆ ಕೇಂದ್ರೀಕೃತ ಹತೋಟಿಯೂ ಅವಶ್ಯಕವಾಯಿತು. ಯೋಜನಾ ಆಯೋಗವು ಈ ಸಮಸ್ಯೆಯ ಪ್ರಾಮುಖ್ಯತೆಯನ್ನು ಅರಿತುಕೊಂಡು, ಕೇಂದ್ರ ಸರಕಾರವು ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೩೮.೫ ಕೋಟಿ ರೂಪಾಯಿಗಳನ್ನು ನಗರಗಳಲ್ಲಿ ವಸತಿ ಗೃಹಗಳನ್ನು ಕಟ್ಟುವ ಬಗ್ಗೆ ಸಹಾಯ ದ್ರವ್ಯ ಮತ್ತು ಸಾಲಗಳಿಗಾಗಿ ಖರ್ಚು ಮಾಡಬೇಕೆಂದು ಸೂಚಿಸಿತು. ಈ ಹಣದಲ್ಲಿ ಬಹುಭಾಗವನ್ನು ಉದ್ಯೋಗಿಗಳ ಪ್ರಾವಿಡೆಂಟ್ ಫಂಡ್ ಕಾನೂನಿನ ವಿಧಾನವಾಗಿ ಪ್ರಾವಿಡೆಂಡ್ ಫಂಡ್‌ನಿಂದಲೂ ಮತ್ತು ಕೇಂದ್ರದ ಆದಾಯಗಳ ಸಹಾಯ ದ್ರವ್ಯದಿಂದಲೂ ಪಡೆಯಲಾಗುವುದು. ಈ ಹಣವನ್ನು ಯೋಜನಾವಧಿಯಲ್ಲಿ ರಾಜ್ಯ ಸರಕಾರಗಳಿಗೆ, ಖಾಸಗಿ ಜನರಿಗೆ ಮತ್ತು ಕಾರ್ಮಿಕರ ಸಹಕಾರ ಸಂಘಗಳಿಗೆ ಸಾಲಗಳು ಮತ್ತು ಸಹಾಯ ದ್ರವ್ಯಗಳನ್ನಾಗಿ ಕೊಡಲಾಗುವುದು.

ನಗರ ಪ್ರದೇಶಗಳಲ್ಲಿನ ವಸತಿಗೃಹ ಪೂರೈಕೆಯ ಜವಾಬ್ದಾರಿಯನ್ನು ಕೇಂದ್ರವು ನಹಿಸಿಕೊಂಡಿರುವುದರಿಂದ, ರಾಜ್ಯ ಸರ್ಕಾರಗಳು ಗ್ರಾಮಾಂತರ ಪ್ರದೇಶಗಳಲ್ಲಿನ ಜೀವನ ಮತ್ತು ವಸತಿಗೃಹ ಪೂರೈಕೆಯನ್ನು ಉತ್ತಮಪಡಿಸುವ ಬಗ್ಗೆ ೧೦೧೯ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿವೆಯೆಂದು ಯೋಜನಾ ಆಯೋಗದ ಅಂದಾಜು.

ನಗರ ಪ್ರದೇಶಗಳಲ್ಲಿನ ವಸತಿ ಗೃಹ ಸಮಸ್ಯೆಯು ಮುಖ್ಯವಾಗಿ ಕಾರ್ಮಿಕ ವರ್ಗಕ್ಕೂ ಕನಿಷ್ಠ ಆದಾಯ ವರ್ಗಕ್ಕೂ ಕೊಳಕು ಪ್ರದೇಶ ನಿರ್ಮಾಣೀಕರಣಕ್ಕೂ ಅನ್ವಯಿಸುತ್ತದೆ.

ಕೈಗಾರಿಕೋದ್ಯಮಿಗಳು ತಮ್ಮ ಕೆಲಸಗಾರರಿಗೆ ವಸತಿಗೃಹಗಳನ್ನು ಕಟ್ಟಲು ಪ್ರೋತ್ಸಾಹಿಸುವಂತೆ ಸಿದ್ಧಪಡಿಸಿದ ಎರಡು ಯೋಜನೆಗಳು ವಿಫಲವಾದನಂತರ ಭಾರತ ಸರ್ಕಾರವು, ರಾಜ್ಯ ಸರ್ಕಾರಗಳು, ಕೆಲಸದ ಧಣಿಗಳು ಮತ್ತು ಕೆಲಸಗಾರರು ವಸತಿಗೃಹಗಳನ್ನು ನಿರ್ಮಿಸಲು ಅನುಕೂಲವಾಗುವಂತೆ ಇನ್ನೂ ಹೆಚ್ಚು ಉದಾರವಾದ ನಿಯಮಗಳ ಮೇಲೆ ಆರ್ಥಿಕ ನೆರವನ್ನು ಕೊಡಲು ನಿರ್ಧರಿಸಿತು.

ಸಹಾಯ ದ್ರವ್ಯದ ವಸತಿಗೃಹ ಪೂರೈಕೆ ಯೋಜನೆಯ ಅವಕಾಶವನ್ನು ಗಣಿಗಳ ಕೆಲಸಗಾರರಿಗೂ ಇತ್ತೀಚೆಗೆವಿಸ್ತರಿಸಲಾಯಿತು. ಈ ನಿರ್ಧಾರವು ಒಂದೂವರೆ ಲಕ್ಷಕ್ಕೂ ಮೀರಿದ ಕೆಲಸಗಾರರಿಗೆ ಅನ್ವಯಿಸುವುದು. ಇದಲ್ಲದೆ, ಕಲ್ಲಿದ್ದಲು ಮತ್ತು ಅಭ್ರಕ ಗಣಿಗಳ ಕೈಗಾರಿಕೆಯಲ್ಲಿರುವ ನಾಲ್ಕು ಲಕ್ಷಕ್ಕೂ ಮೀರಿದ ಕೆಲಸಗಾರರು ಸಹಾಯ ದ್ರವ್ಯ ಯೋಜನೆಯಲ್ಲಿ ವಿಶೇಷ ಅನುದಾನಗಳಿಗೆ ಅರ್ಹರಾಗಿರುತ್ತಾರೆ.

ವಿಸ್ತರಿಸಿದ ಈ ಯೋಜನೆಯಿಂದ, ಗಣಿ ಅಥವಾ ಕಾರ್ಖಾನೆಯ ಕೆಲಸಗಾರರಿಗಾಗಿ ವಸತಿಗೃಹಗಳನ್ನು ಕಟ್ಟುವವರಿಗೂ ರಾಜ್ಯ ಸರ್ಕಾರಕ್ಕೂ ವಸತಿಗೃಹ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ಅರೆವಾಸಿಯಷ್ಟು ಸಹಾಯದ್ರವ್ಯವಾಗಿ ಸಿಗುವುದಲ್ಲದೆ ಉಳಿದ ಅರ್ಧಾಂಶವನ್ನು ಸಾಲವನ್ನಾಗಿ ಪರಿಗಣಿಸಿ ೫೫ ವರ್ಷಗಳಲ್ಲಿ ತೀರಿಸುವುದಕ್ಕೆ ಕೇಂದ್ರ ಸರಕಾರ ಅನುಮತಿ ಕೊಟ್ಟಿರುತ್ತದೆ.

ಸಹಾಯ ದ್ರವ್ಯದ ಕೈಗಾರಿಕಾ ವಸತಿಗೃಹ ಯೋಜನೆಯಲ್ಲಿ, ಕೇಂದ್ರವು ೬೫೦೦೦ ಮನೆಗಳು ಹಾಗೂ ಕಲ್ಲಿದ್ದಲು ಮತ್ತು ಅಭ್ರಕ ಗಣಿ ಕೆಲಸಗಾರರಿಗಾಗಿ ೫೨೨ ಮನೆಗಳ ನಿರ್ಮಾಣಕ್ಕೆ ಮಂಜೂರಾತಿಯನ್ನಿತ್ತಿದೆ. ಈ ಯೋಜನೆಗೆ ಸಮಾಧಾನಕಾರಿಯಾದ ಜವಾಬು ದೊರೆತಿದೆ. ೧೯೫೫ರ ಕೊನೆಯಲ್ಲಿ ಈ ಯೋಜನೆಯು ಪ್ರಕಟಿಸಲ್ಪಟ್ಟಿದ್ದಾಗ್ಯೂ ಎಂಟೂವರೆ ಕೋಟಿ ರೂಪಾಯಿಗಳನ್ನು ಸಹಾಯ ದ್ರವ್ಯ ಮತ್ತು ಸಾಲವನ್ನಾಗಿ ರಾಜ್ಯ ಸರಕಾರಗಳಿಗೂ, ಮತ್ತಿತರ ಸಂಸ್ಥೆಗಳಿಗೂ ಈಗಾಗಲೇ ಕೊಡಲಾಗಿದೆ.

ಕನಿಷ್ಠ ಆದಾಯ ವರ್ಗದ ವಸತಿ ಗೃಹ ಯೋಜನೆಯ ಬಗ್ಗೆ ಕಾತುರದಿಂದ ನಿರೀಕ್ಷಿಸಲಾಗುತ್ತಿದ್ದ ವಿವರಗಳನ್ನು ಇತ್ತೀಚೆಗೆ ಸರಕಾರವು ಪ್ರಕಟಿಸಿದೆ.

ಮನೆಗಳನ್ನು ಹೊಂದದಿರುವ ಮತ್ತು ವರ್ಷಾದಾಯವು ೬೦೦೦ ರೂಪಾಯಿಗಳಿಗೆ ಮೀರದಿರುವವರಿಗೆ ಮುಖ್ಯವಾಗಿ ಈ ಯೋಜನೆಯು ರೂಪಿಸಲ್ಪಟ್ಟಿದೆ. ಈಗಾಗಲೇ ಮನೆಯ ಒಡೆತನವನ್ನು ಪಡೆದಿರುವ ವ್ಯಕ್ತಿಗಳಿಗೆ ಸಾಲಗಳನ್ನು ಕೊಡಲೂ ಆಕ್ಷೇಪವಿಲ್ಲ. ಇದರಿಂದ ಜನ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಕ್ರೆಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಭಿಕೃತ ಭಂಡವಾಳ ...	...	ರೂ. 25,00,000
ಚಂದಾ ಅರ್ಪಿಸಿ, ತೆತ್ತು ಬಂಡ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲು)

THE CANARA BANKING CORPORATION LIMITED
Estd:- 1906] [H. O. UDIPI (S.India).

ಸಾಮಾನ್ಯರು ಬಹಳ ಹೆಚ್ಚು ಪ್ರಯೋಜನವನ್ನು ಪಡೆಯಬಲ್ಲರು.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಮತ್ತು ಅವುಗಳು ತಿರುಗಿ ವ್ಯಕ್ತಿಗಳಿಗೆ ಅಥವಾ ಸಹಕಾರ ವಸತಿಗೃಹ ಸಂಘಗಳಿಗೆ ಸಾಲಗಳನ್ನು ವಿನಿಯೋಗ ಮಾಡುವ ಬಗ್ಗೆ ಅವಶ್ಯಕವಾದ ಯೋಜನೆ ಸಿದ್ಧವಾಗಿದೆ. ರಾಜ್ಯ ಸರ್ಕಾರಗಳು ಕೂಡ, ಅವುಗಳು ಇಚ್ಛಿಸಿದರೆ, ವಸತಿಗೃಹ ಆರ್ಥಿಕ ಸಂಸ್ಥೆಗಳಿಗೆ ಸಾಲಗಳನ್ನು ಕೊಡಬಹುದು.

ರಾಷ್ಟ್ರದ ವಿವಿಧ ಗ್ರಾಮಾಂತರ ಪ್ರದೇಶಗಳಲ್ಲಿ ವಿವಿಧ ನಮೂನೆಯ ಮನೆಗಳನ್ನು ನಿರ್ಮಿಸಲು ಗ್ರಾಮಸ್ಥರಿಗೆ ಅವಕಾಶ ಮಾಡಿಕೊಡಲಾಗಿದೆ. ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳಿಂದ ಗಾಳಿ ಬೆಳಕಿನಿಂದ ಕೂಡಿದ ಸುಲಭವಾದ ಮನೆಗಳನ್ನು ಕಟ್ಟುವ ಮಾರ್ಗವನ್ನು ತೋರಿಸಲಾಗುತ್ತದೆ. ಇದಕ್ಕಾಗಿ ಸರ್ಕಾರವು ಗ್ರಾಮಾಂತರ ವಸತಿಗೃಹ ತಂಡವೊಂದನ್ನು ಸ್ಥಾಪಿಸಿದೆ. ಈ ತಂಡದಲ್ಲಿ ಒಬ್ಬ ನಕಾಸೆಯನ್ನು ರಚಿಸುವವನು ಮತ್ತು ವಾಸ್ತುಶಿಲ್ಪಿ, ಒಬ್ಬ ಉಸ-ಇಂಜಿನಿಯರ್ ಮತ್ತು ಹಿರಿಯ ನಕ್ಷೆಗಾರ—ಇವರು ಇರುತ್ತಾರೆ. ಈ ತಂಡವು ಸಮಾಜ ವಿಕಾಸ ಯೋಜನೆಯ ಪ್ರದೇಶಗಳಲ್ಲಿಯೂ, ಗ್ರಾಮಾಂತರ ಪ್ರದೇಶಗಳಲ್ಲಿಯೂ ವಸತಿಗೃಹ ನಿರ್ಮಾಣದ ಬಗ್ಗೆ ಪ್ರಯೋಗಗಳನ್ನು ನಡೆಸುತ್ತದೆ.

ಈ ಪ್ರಯೋಗಗಳು ಇನ್ನೂ ಹೆಚ್ಚಿನ ಸಂಶೋಧನೆಯನ್ನು ನಡೆಸಲು ಅವಕಾಶವನ್ನಿತ್ತಿವೆ. ಇಲ್ಲಿಯ ವರೆಗೂ ಈ ಸಂಶೋಧನೆಯ ಫಲವನ್ನು ಸಂಘಟಿಸಲು ಮತ್ತು ಸಮಾಚಾರವನ್ನು ಸರ್ಕಾರಿ ಇಲಾಖೆಗಳಿಗೂ, ಖಾಸಗಿ ಕಟ್ಟಡ ನಿರ್ಮಾಪಕರುಗೂ, ಮತ್ತಿತರರಿಗೂ ವಿನಿಯೋಗಿಸಲು ಅಂಗೀಕೃತ ಅಧಿಕಾರವಿದ್ದಿರಲಿಲ್ಲ. ಈ ಕೊರತೆ ನಿವಾರಣೆಗಾಗಿ ರಾಷ್ಟ್ರೀಯ ಕಟ್ಟಡಗಳ ಸಂಸ್ಥೆಯೊಂದನ್ನು ಇತ್ತೀಚೆಗೆ ಭಾರತ ಸರ್ಕಾರವು ರಚಿಸಿದೆ. ಸಂಶೋಧನಾ ಕಾರ್ಯಕ್ರಮಗಳನ್ನು ವೈಜ್ಞಾನಿಕ ಸಂಸ್ಥೆಗಳೂ ಮತ್ತಿತರರೂ ನಡೆಸುವುದರ ಜೊತೆಗೆ, ಈ ಸಂಸ್ಥೆಯು ವಸ್ತು ಪ್ರದರ್ಶನಗಳನ್ನೂ, ಪ್ರದರ್ಶನ ಯೋಜನೆಗಳನ್ನೂ ಆಧುನಿಕ ವಿಧಾನಗಳಲ್ಲಿ ಏರ್ಪಡಿಸುವುದು.

ಮಹಾತ್ಮರ ಹೃದಯ ವಾತ್ಸಲ್ಯ

ಉಕ್ಕಿನಷ್ಟು ಕಠೋರರೂ ಅವರಾಗುತ್ತಿದ್ದರು

ಬರೆದವರು: ಶ್ರೀ ಮಣಿಲಾಲ ಗಾಂಧಿ.

* *

ಇದೇ ಜನವರಿ ೩೦ರಂದು ಮಹಾತ್ಮಾಗಾಂಧೀಜಿಯವರು ಹುತಾತ್ಮರಾದ ದಿನವನ್ನು ರಾಷ್ಟ್ರದ ಎಲ್ಲೆಡೆಯಲ್ಲೂ ಶ್ರದ್ಧಾ ಭಕ್ತಿಗಳಿಂದಲೂ ರಚನಾತ್ಮಕ ಕಾರ್ಯಗಳಿಂದಲೂ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗಾಂಧೀಜಿಯವರ ಪುತ್ರ ಶ್ರೀ ಮಣಿಲಾಲರು ತಮ್ಮ ಪಿತನ ಕುರಿತಾದ ಕೆಲವು ನೆನಪಿನ ಸಂಗತಿಗಳನ್ನು ವಿವರಿಸಿದ್ದು, ಓದುಗರಿಗೆ ಅವು ರುಚಿಸಿಯಾವೆಂದು ನಂಬುತ್ತೇವೆ.

ನನ್ನ ಜೀವಮಾನದಲ್ಲಿ ನನ್ನ ತಂದೆಯೊಟ್ಟಿಗೆ ಕೆಲವೇ ವರ್ಷಗಳನ್ನು ಮಾತ್ರ ನಾನು ಕಳೆದೆನು. ನನ್ನ ಉಳಿದ ಸೋದರರಂತಿರದೆ, ನಾನು ದಕ್ಷಿಣ ಆಫ್ರಿಕೆಯಂಥ ದೂರದೇಶದಲ್ಲಿಯೇ ತಂದೆಯಿಂದ ದೂರವಾಗಿ ಇರಬೇಕಾಯಿತು. ಈ ದೇಶದಲ್ಲಿ ನಾನು ಕಳೆದ ಮೂವತ್ತು ವರ್ಷಗಳಿಂದ ಬಿಟ್ಟೂ ಬಿಡದೆ ಇದ್ದೇನೆ ಎಂದು ಹೇಳಬಹುದು. ೧೯೧೪ ನೇ ಆಗೋಸ್ತಿನಿಂದ ೧೯೧೭ನೇ ಜನವರಿಯ ವರೆಗೆ ನಾನು ಭಾರತದಲ್ಲಿದ್ದೆ. ೧೯೨೪ರಲ್ಲಿ ಒಂದು ತಿಂಗಳ ಸಂದರ್ಶನದ ಮೇಲೆ ಭಾರತಕ್ಕೆ ಹೋಗಿದ್ದೆ. ೧೯೩೩ನೇ ಇಸವಿಯ ಕೊನೆಯಲ್ಲಿ ಇನ್ನೊಮ್ಮೆ ಭಾರತಕ್ಕೆ ಹೋದೆ. ೧೯೩೭ನೇ ಮಾರ್ಚಿಯಲ್ಲಿ ನನ್ನ ಮದುವೆಯಾಯಿತು; ಮತ್ತು ಆ ಕೂಡಲೇ ನಾನು ದಕ್ಷಿಣ ಆಫ್ರಿಕಕ್ಕೆ ಮರಳಿ ಮತ್ತೆ ಮೂರು ವರ್ಷಗಳ ಸುಮಾರಿಗೆಲ್ಲ ಒಮ್ಮೆ ಭಾರತಕ್ಕೆ ಬರುತಿದ್ದೆ. ನಾನು ಭಾರತದಲ್ಲಿ ಅದೂ ನನ್ನ ತಂದೆಯೊಟ್ಟಿಗೆ-ಕಳೆದ ದೀರ್ಘಕಾಲವೆಂದರೆ ೧೯೪೫ನೇ ಇಸವಿಯ ಪೂರ್ಣ ಹಾಗು ಮರು ವರ್ಷದ ಪ್ರಥಮಾರ್ಧವಾಗಿದೆ.

ಮೇಲಿನ ಅವಧಿಯು ಬಳಕೆ ಬೆಲೆಯುಳ್ಳದ್ದಾಗಿದ್ದಿತು. ನನ್ನ ತಂದೆಯವರ ಮದ್ರಾಸು ಮತ್ತು ಬಂಗಾಳ ಯಾತ್ರೆಯ ಕಾಲದಲ್ಲಿ ನಾನು ಅವರೊಂದಿಗಿರುವ ಅವಕಾಶವನ್ನು ಅದು ಒದಗಿಸಿತು. ನನ್ನ ತಂದೆಯವರ ಪಾಲನೆ ಪೋಷಣೆಯನ್ನು ಮಾಡುತ್ತಾ ಅವರ ಯೋಗ ಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾ ಇರುವವರೆಗೆಲ್ಲ ಅವರೊಡನೆ ಒಳ್ಳೆಯ ರೀತಿಯಲ್ಲಿ ಸಮಯ ಕಳೆಯುವ ಅವಕಾಶ ಸಿಗುತ್ತಿತ್ತು. ನಾನು ಬೇರೆಯವರ ಹಕ್ಕಿನ ಸ್ಥಾನದಲ್ಲಿ ಪ್ರವೇಶಿಸುತ್ತಿದ್ದೆನೆಂದು ತೋರಬಹುದಾಗಿದ್ದರೂ ನನ್ನ ತಂದೆಯವರು ತಮ್ಮ ಆಗಿನ ಪರಿಸ್ಥಿತಿಯಲ್ಲಿ ಎಷ್ಟು ಸಾಧ್ಯವಿತ್ತೊ ಅಷ್ಟೂ ಸಂದರ್ಭಗಳನ್ನು ಅವರೊಂದಿಗಿರಲು ನನಗೆ ಪ್ರೀತಿಯಿಂದ ಒದಗಿಸಿ ಕೊಟ್ಟರು. ನಾವಿಬ್ಬರೂ ಅನೇಕ ವಿಷಯಗಳ ಮೇಲೆ ದಾಕ್ಷಿಣ್ಯವಿಲ್ಲದೆ ಬಿಚ್ಚು ಮನಸ್ಸಿನ ಚರ್ಚೆಯನ್ನು ಮಾಡುತ್ತಿದ್ದೆವು. ಅವರ ವಾತಾವರಣದ ಕುರಿತಾಗಿಯೂ ಅವರ ಮನೋಭಾವನೆಯ ಕುರಿತಾಗಿಯೂ ಚರ್ಚೆ ನಡೆಯುತ್ತಿದ್ದುದುಂಟು—ಇವೆರಡೂ ವಿಷಯಗಳು ನಮ್ಮ ಬಾಲ್ಯ ಕಾಲದಲ್ಲಿ ನಾವು ತಂದೆಯವರೊಂದಿಗೆ ಕಳೆದ ದಿನಗಳಿಗಿಂತ ತೀರ ಭಿನ್ನವಾಗಿ ಪರಿವರ್ತನೆಯನ್ನು ಆಗಿ ಹೊಂದಿದ್ದವು. ತನ್ನ ಪರಮಾವಧಿ ಪ್ರೀತಿ ವಾತ್ಸಲ್ಯಗಳಿಂದ ತಂದೆಯವರು ತಮ್ಮ ಒಡನಾಡಿಗಳೆಲ್ಲರನ್ನೂ ಹಾಳು ಮಾಡಿದ್ದಾರೆಂದು ನನಗೆ ಒಮ್ಮೊಮ್ಮೆ ತೋರುತ್ತಿತ್ತು!

ಅವರೆಲ್ಲರೂ ಅವರ ತುಂಟ ಮಕ್ಕಳಿಹಾಗಿದ್ದರು—ನನ್ನ ತಾಯಿಯು ತಂದೆಯ ಜೀವನದಿಂದ ಅಗಲಿಹೋದ ಬಳಿಕವಂತೂ ಅದೇ ಸರಿಯಾಗಿದ್ದಿತು. ತಂದೆಯ ನೇಲೆ ನನ್ನ ತಾಯಿ ತುಸು ನಿಯಂತ್ರಣವನ್ನೂ ಇಡುತ್ತಿದ್ದರು ಮತ್ತು ಜೀವನದ ಸಾಮಾಜಿಕ ಮುಖದಲ್ಲಿ ತಂದೆಯವರಿಂದುಂಟಾದ ಬಿರುಕನ್ನು ಅವರು ತುಂಬಿಸುತ್ತಿದ್ದರು. ತಾಯಿಯ ಅಗಲಿಕೆಯ ನಂತರ ನನ್ನ ತಂದೆಯವರು ತನ್ನ ಬಳಿಯಲ್ಲಿರುತ್ತಿದ್ದವರಿಗೆಲ್ಲ ತಂದೆಯೂ ತಾಯಿಯೂ ಆಗಬೇಕಾಯಿತು. ಆದರೆ ಅವರು ಯಾರೂ ತಾಯಿ ಹಾಗು ಮಹಾದೇವ ದೇಸಾಯಿಯವರು (ತಾಯಿಯ ಬಳಿಕ ನನ್ನ ತಂದೆಗೆ ಇವರೇ ಪ್ರಿಯರು) ಬಿಟ್ಟುಹೋದ ಬಿರುಕನ್ನು ತುಂಬಲಾರದಾದರು. ನನ್ನ ತಾಯಿಯೂ ಮಹಾದೇವ ಭಾಯಿಯೂ ತಂದೆಯವರ ಎಡ ಹಾಗು ಬಲಗೈಯಂತಿದ್ದರು. ಆದಾಗ್ಯೂ ನನ್ನ ತಂದೆಯ ನಡತೆಯನ್ನು ವೀಕ್ಷಿಸಿದಂತೆಲ್ಲ ನನಗೆ ನನ್ನ ತಂದೆಯವರು ಬಹಳ ನಯವಾಗಿ ವರ್ತಿಸುತ್ತಿರುವರೆಂದು ತೋರಿತು. ನಾವು ನಾಲ್ಕು ಮಂದಿ ಸಹೋದರರು ಅವರಡಿಯಲ್ಲಿರುತ್ತಿದ್ದಾಗಿನ ಸಮಯಕ್ಕಿಂತ ಅವರು ಎಷ್ಟೋ ಮೃದುವಾಗಿದ್ದರು.

ಒಂದು ರೀತಿ ನೋಡಿದರೆ ತಂದೆಯವರು ಯಾವಾಗಲೂ ಕ್ಷಮಾತೀಲರಾಗಿಯೇ ಇರುತ್ತಿದ್ದರು. ಅವರು ಜೈನ್ನಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದರೆಂಬುದೇನೋ ನಿಜ—ಆದರೆ ನಮ್ಮ ಬಾಲ್ಯದ ದಿನಗಳಿಗಿಂತಲೂ ಈ ವಯಸ್ಸಿನಲ್ಲಿ ಅವರು ಅತಿ ಹೆಚ್ಚು ಸಹನಾಶೀಲರಾಗಿ ತೋರಿದರು. ಉತ್ತರ ವಯಸ್ಸಿನಲ್ಲಿ ಅವರು ಲೋಕದಲ್ಲಿ ಸಂಪಾದಿಸಿದ ಕಟು ಅನುಭವಗಳಿಂದ ಮತ್ತು ತನ್ನ ಅಂತರ್ಯದಲ್ಲಿಯೇ ಪೋಷಿಸಿಕೊಂಡು ಬಂದ ಆಹಿಂಸೆಯ ಮನೋಭಾವದಿಂದ ಹಾಗಾಗಿರಬಹುದು ಎಂದು ನನ್ನ ಅಭಿಪ್ರಾಯ. ಇದು ನನಗೆ ಹೊಳೆದ ಬಳಿಕ ನಾನು ಎಷ್ಟೋ ನೇಳೆ ತಂದೆಯವರನ್ನು ನೆನಸುತ್ತಾ "ಬಾಪು, ನನ್ನ ಬಾಲ್ಯಕಾಲಕ್ಕಿಂತ ನೀವೀಗ ತುಂಬ ಬದಲಾಗಿದ್ದೀರಿ ನವ್ವನ್ನು ನೀವೆಂದೂ ಸುದ್ದಿಸುತ್ತಿರಲಿಲ್ಲ. ನಮ್ಮೊಡನೆ ನೀವು ಕಠಿಣವಾಗಿ ನಡೆದುಕೊಳ್ಳುತ್ತಿದ್ದಿರಿ. ನೀವು ಬಟ್ಟೆ ಒಗೆದುಕೊಳ್ಳಲು ಮತ್ತು ಕಟ್ಟಿಗೆಯನ್ನು ಒಡೆಯಲು ನನ್ನನ್ನು ಹೆಚ್ಚುತ್ತಿದ್ದುದನ್ನು ನಾನಿನ್ನೂ ಮರೆತಿಲ್ಲ. ಚಳಿಗಾಲದ ನಡುಕ ಹುಟ್ಟಿಸುವ ಪ್ರಾತಃಕಾಲಗಳಲ್ಲೂ ನೀವು ನನ್ನನ್ನು ತೋಟದಲ್ಲಿ ಅಗೆಯಲು ಹೇಳುತ್ತಿದ್ದಿರಿ; ಅಡುಗೆ ಮಾಡಲೂ ನಾಲ್ಕಾರು ಮೈಲು ನಡೆಯಲೂ ವಿಧಿಸುತ್ತಿದ್ದಿರಿ. ಆದರೀಗ ನೀವು ನಿಮ್ಮೊಟ್ಟಿಗಿರುವವರನ್ನೆಲ್ಲ ಮುದ್ದಾಡುವುದನ್ನು ಕಂಡು ನಾನು ಆಶ್ಚರ್ಯ ಹೊಂದಿದ್ದೇನೆ!"

ಇದೆಲ್ಲವನ್ನೂ ತಂದೆಯವರು ಒಳ್ಳೆ ಆಸ್ಥೆಯಿಂದ ಕೇಳುತ್ತಿದ್ದರು; ಮತ್ತು ಎಂದಿನಂತೆ ಗೊಳ್ಳನೆ ನಕ್ಕುಬಿಡುತ್ತಿದ್ದರು. "ಸರಿ ಮಕ್ಕಳೇ, ಮಣಿಲಾಲ ಏನು ಹೇಳುತ್ತಿದ್ದಾನೆಂಬುದನ್ನು ನೀವು ಕೇಳುತ್ತಿದ್ದೀರಷ್ಟೆ!" ಎಂಬ ಮಾತಿನಿಂದ ಉಳಿದವರನ್ನು ನಗಿಸುತ್ತಿದ್ದರು; ಮತ್ತು ಆ ನಂತರವೂ ಎಲ್ಲರನ್ನೂ ಮೊದಲಿನಂತೆಯೇ ಪ್ರೀತಿಸಿ, ಜೆನ್ನುತಟ್ಟುತ್ತಿದ್ದರು. ಹೀಗಿರುವಾಗ ಭಾರತವು ತಂದೆ ಹಾಗು ತಾಯಿಯ ವ್ಯಕ್ತಿತ್ವವನ್ನೆಲ್ಲ ಕೇಂದ್ರೀಕರಿಸಿಕೊಂಡ ಆ ಪವಿತ್ರಾತ್ಮನ ಅಗಲಿಕೆಗಾಗಿ ಬಿಕ್ಕಿ ಬಿಕ್ಕಿ ದುಃಖಿಸುವುದರಲ್ಲಿ ಆಶ್ಚರ್ಯವಿರಲಾರದು! ತಂದೆಯವರು ನಮ್ಮೊಡನೆ ಎಷ್ಟೇ ಕಠಿಣವಾಗಿ ನಡೆದುಕೊಳ್ಳುತ್ತಿದ್ದರೂ ನಮಗೆಂದೂ ಅದರ ಅನುಭವವಾಗಿರಲಿಲ್ಲ. ಇದರ ಕಾರಣ ಸರಳವಾಗಿದೆ—ಅವ

(೧೨ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE

POPULAR INSURANCE CO.,LTD.

"POPULAR BUILDINGS" MANGALORE-1

ಗುಲಾಂ ಮಹಮದರ ಸೌಹಾರ್ದ ಸಂದರ್ಶನ

ಪಾಕಿಸ್ತಾನದೊಡನೆ ಭಾರತದ ಸಂಬಂಧ ಸುಧಾರಿಸುವ ಲಕ್ಷಣ

ಪ್ರಜಾರಾಜ್ಯ ದಿನೋತ್ಸವವನ್ನು ಈ ವರ್ಷ ಆಚರಿಸುವ ಶುಭ ಸಂದರ್ಭ ಬಂದೊದಗಿದಾಗ ಭಾರತೀಯರು ನಿಜಕ್ಕೂ ಸಂತೋಷ ಪಡುವ ಇನ್ನೊಂದು ಘಟನೆಯೂ ಸಂಭವಿಸಿತು—ಅದೆಂದರೆ ನೆರೆಯ ರಾಷ್ಟ್ರವಾದ ಪಾಕಿಸ್ತಾನದೊಡನೆ ದೃಢವಾದ ಸ್ನೇಹ. ಪಾಕಿಸ್ತಾನದ ಗವರ್ನರ ಜನರಲರಾದ ಗುಲಾಂ ಮಹಮ್ಮದರು ತಮ್ಮ ಮಂತ್ರಿ ಮಂಡಳದ ಸದಸ್ಯರಾದ ಡಾ! ಖಾನ್ ಸಾಹೇಬ್, ಮೇಜರ್ ಜನರಲ್ ಇಸ್ಕಂದರ್ ಮಿರ್ಜಾ ಮತ್ತು ಚೌಧರಿ ಮಹಮ್ಮದ ಅಲಿ ಇಷ್ಟು ಮಂದಿಯೊಡನೆ "ಸೌಹಾರ್ದ ಸಂದರ್ಶನ" ವನ್ನಿತ್ತು ಭಾರತದ ಧುರೀಣರೊಡನೆ ಉಭಯ ರಾಷ್ಟ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಮಾಲೋಚನೆಗಳನ್ನು ನಡೆಸಿದರು. ಪರಸ್ಪರರನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಮತ್ತು ಇದೇ ಮಾರ್ಚಿ ತಿಂಗಳಲ್ಲಿ ನಡೆಯಲಿರುವ ಉಭಯ ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಸಮ್ಮೇಳನದ ನೆಲವನ್ನು ಹದಗೊಳಿಸುವುದಕ್ಕೆ ಇದರಿಂದ ಬಹಳ ಹೆಚ್ಚಿನ ಅನುಕೂಲವಾಯಿತೆಂದು ಹೇಳಲಾಗುತ್ತದೆ.

ಪ್ರಜಾರಾಜ್ಯ ದಿನೋತ್ಸವ

ಭಾರತದ ರಾಷ್ಟ್ರಾಧ್ಯಕ್ಷರಾದ ಡಾ| ರಾಜೇಂದ್ರ ಪ್ರಸಾದರು ಪ್ರಜಾರಾಜ್ಯ ದಿನದ ಸಂದೇಶವನ್ನು ನಾಡಿಗೆ ಕಳುಹಿಸುತ್ತಾ ಕಲ್ಯಾಣ ರಾಷ್ಟ್ರವನ್ನು ಕಟ್ಟುವುದಕ್ಕೆ ಸರಕಾರವು ದೃಢ ಸಂಕಲ್ಪವನ್ನು ಮಾಡಿದೆಯೆಂದೂ ಈ ಉದ್ದೇಶವನ್ನು ನೆರವೇರಿಸುವಲ್ಲಿ ರಾಷ್ಟ್ರಕರಿಂದ ಸಹ ಪರಿಶ್ರಮವನ್ನು ಬಯಸಲಾಗುತ್ತದೆಂದೂ ತಿಳಿಸಿದರು. ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡುತ್ತಾ ಅವರು ಭಾರತದ ಗೌರವವನ್ನು ಹೆಚ್ಚಿಸುವ ರೀತಿಯಲ್ಲಿ ತಮ್ಮ ಆಚಾರಗಳನ್ನು ಇಟ್ಟುಕೊಳ್ಳಬೇಕೆಂದು ಉಪದೇಶಿಸಿದರು. ನಮ್ಮ ಪ್ರಜಾರಾಜ್ಯ ದಿನೋತ್ಸವದ ನಿಮಿತ್ತ ಶುಭಾಶಯಗಳನ್ನು ಅನೇಕ ವಿದೇಶಗಳ ಪ್ರಮುಖರು ಕಳಿಸಿದ್ದರು. ಅಮೇರಿಕ, ಚೀನ, ರಶಿಯ ಮುಂತಾದೆಲ್ಲರೂ ಕಳಿಸಿದ ಸಂದೇಶದಲ್ಲಿ ಭಾರತವು ವಿಶ್ವಶಾಂತಿಯ ರಕ್ಷಣೆಯಲ್ಲಿ ವಹಿಸಿದ ಪಾತ್ರವನ್ನು ಸುನಾವಾರೆ ಪ್ರಶಂಸಿಸಿ ಭಾರತೀಯರ ಸಂಪತ್ಸಮೃದ್ಧಿಗಾಗಿ ಶುಭ ಕೋರಿದ್ದರು. ಪಾಕಿಸ್ತಾನದ ಗವರ್ನರ ಜನರಲರು ಸಹ ಭಾರತದ ಪ್ರಗತಿಯನ್ನು ಹಾರೈಸಿ ಉಭಯ ರಾಷ್ಟ್ರಗಳ ಸ್ನೇಹ ಸಂವರ್ಧಿಸಲೆಂದು ಆಶಿಸಿದರು.

ಗುಲಾಂ ಮಹಮದರ ಆಶೆ

ಸನ್ಮಾನ್ಯ ಅತಿಥಿಗಳ ಗೌರವಾರ್ಥವಾಗಿ ರಾಷ್ಟ್ರಾಧ್ಯಕ್ಷರು ರಾಜಧಾನಿಯಲ್ಲಿ ಭೋಜನ ಸಮಾರಂಭವೊಂದನ್ನು ಜರಗಿಸಿದರು. ಇಲ್ಲಿ ನಡೆದ ಭಾಷಣಗಳಲ್ಲಿ ಪಾಕಿಸ್ತಾನ ಮತ್ತು ಭಾರತಗಳ ಸಂಬಂಧವನ್ನು ಬಹಳಷ್ಟು ಸುಧಾರಿಸಬೇಕೆಂಬ ಪ್ರಾಮಾಣಿಕ ಇಚ್ಛೆಯನ್ನು ವ್ಯಕ್ತಪಡಿಸಲಾತು. "ಸ್ನೇಹ ಮತ್ತು ತಿಳಿವಳಿಕೆಯ ವಾತಾವರಣದಲ್ಲಿ ಬಗೆಹರಿಸಲಾಗದ ಯಾವ ಸಮಸ್ಯೆಯೂ ನಮ್ಮೆರಡು ರಾಷ್ಟ್ರಗಳಲ್ಲಿಲ್ಲ" ಎಂದು ಪ್ರಸಾದರು ಸಾರಿದರು. ಗುಲಾಂ ಮಹಮದರು "ನಮ್ಮೆಲ್ಲ ಜಗಳಗಳಿಗೂ ಕೊನೆಯನ್ನು ತರೋಣ! ಇದು ನಾವು ಮುಂದಿನ ಪೀಳಿಗೆಯ ಶುಭಕ್ಕಾಗಿ ನಿರ್ವಹಿಸಬೇಕಾದ ಕರ್ತವ್ಯ. ಉತ್ಕೃಷ್ಟಕ್ಕೆ ಅಗತ್ಯವೆನಿಸಿದ ಸತ್ಯ ಮತ್ತು ಪ್ರಾಮಾಣಿಕ ಭಾವನೆಯ ತಳಹದಿಯಲ್ಲಿ ನಾವಿದನ್ನು ಸಾಧಿಸೋಣ" ಎಂದು ತಮ್ಮ ದೃಢ ಸಂಕಲ್ಪವನ್ನು ಪ್ರಕಟಿಸಿದರು. ಗುಲಾಂ ಮಹಮದರೂ ಅವರ ಪರಿವಾರದವರೂ ಪ್ರಜಾರಾಜ್ಯದಿನೋತ್ಸವದ ಸಂಬಂಧ ಜರಗಿದ ಕವಾಯತು ಮುಂತಾದ ಸಮಾರಂಭಗಳಲ್ಲಿ ಸಹ ಭಾಗವಹಿಸಿದರು ಹಿಂದಿನೆಲ್ಲ ಸಮಾರಂಭಗಳಿಗಿಂತ ಈ ಸಲದ ಉತ್ಸವವು ಅಧಿಕ ಶೋಭಾಯಮಾನವಾಗಿತ್ತೆಂದು ನಿರೀಕ್ಷಕರ ಅಭಿಪ್ರಾಯ.

ನೆಹರುಗಳೊಡನೆ ಸಮಾಲೋಚನೆ

ಪ್ರಧಾನ ಮಂತ್ರಿಗಳೊಡನೆ ಮಾತುಕತೆ ನಡೆಸುವುದಕ್ಕೆ ಗುಲಾಂ ಮಹಮದರು ಈ ಸಂದರ್ಶನವನ್ನು ಉಪಯೋಗಿಸಿಕೊಂಡರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಗುಲಾಂ ಮಹಮದರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ-ಅವರು ಕಾಲು ನೋವಿನಿಂದ ಬಳಲುತ್ತಿದ್ದರು; ಮತ್ತು ನಡೆಯಲಾಗದೆ ನರಳುತ್ತಿದ್ದರು. ಆದರೂ ಗಾಲಿಯ ಕುರ್ಚಿಯಲ್ಲಿ ಕುಳಿತು ಮಹಾತ್ಮಾಗಾಂಧಿಯವರ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಿದರು. ಅಸ್ವಸ್ಥರಿದ್ದರೂ ತಮ್ಮ ಪೂರ್ವ ನಿಶ್ಚಿತ ಕಾರ್ಯಕ್ರಮವನ್ನು ಬದಲಿಸದೆ ಅವರು ಢಿಲ್ಲಿಗೆ ಪ್ರಯಾಣಿಸಿದ್ದೇ ಮಹತ್ವದ ವಿಷಯ. ಅವರೊಟ್ಟಿಗೆ ಭಾರತದ ಪರಮ ಮಿತ್ರರಾದ ಮತ್ತು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕಾಂಗ್ರೆಸಿನೊಡನೆ ಹೆಗಲು ಕೊಟ್ಟು ದುಡಿದ ಸೈನಿಕರೆನಿಸಿದ ಡಾ. ಖಾನ್ ಸಾಹೇಬರೂ, ಪಾಕಿಸ್ತಾನದ "ಉಕ್ಕಿನ ಮನುಷ್ಯ" ಇಸ್ಕಾಂದರ್ ಮಿರ್ಜರೂ ಉಭಯ ರಾಷ್ಟ್ರಗಳ ಸಮಸ್ಯೆಗಳ ಬಗ್ಗೆ ವಿಶಾಲವಾದ ತಿಳಿವಳಿಕೆಯುಳ್ಳ ಚೌಧರಿ ಮಹಮದಲಿಗಳೂ ಬಂದದ್ದು ಇಷ್ಟಷ್ಟು ಹಿತಕರವಾದ ಪರಿಣಾಮವನ್ನು ಮಾಡಿದೆ ಎಂದರೆ ತಪ್ಪಾಗದು.

ಸಮಸ್ಯೆಗಳ ಇತ್ಯರ್ಥ

ಭಾರತೀಯ ಧುರೀಣರನ್ನು ಬೀಳ್ಕೊಡುವಾಗ ಗುಲಾಂ ಮಹಮದರು ಒಳ್ಳೆಯ ಮಾತುಗಳನ್ನಾಡಿ, ಕೈಕಜ್ಜಲತೆಯನ್ನು ತಿಳಿಸುವುದಕ್ಕೆ ತಪ್ಪಲಿಲ್ಲ. ಅವರು ರಾಷ್ಟ್ರಾಧ್ಯಕ್ಷರಿಗೂ ಉಪರಾಷ್ಟ್ರಾಧ್ಯಕ್ಷರಿಗೂ ಪಾಕಿಸ್ತಾನಕ್ಕೆ ಸೌಹಾರ್ದ ಸಂದರ್ಶನವನ್ನು ಕೊಡಲು ಆಮಂತ್ರಣವನ್ನಿತ್ತರು. ಪ್ರಧಾನ ಮಂತ್ರಿ ನೆಹರುಗಳ ಭುಜದ ಮೇಲೆ ಕೈಯಿಟ್ಟು "ನಾವು ನಮ್ಮೆಲ್ಲ ಸಮಸ್ಯೆಗಳನ್ನೂ ಬಗೆಹರಿಸಲೇಬೇಕು. ನೀವು ಇದಕ್ಕೆ ಅನುಕೂಲಿಸುವಂತೆ ಮಾರ್ಗವನ್ನು ಹದಗೊಳಿಸಬೇಕು. ದೇವರು ನಿಮ್ಮನ್ನು ಆಶೀರ್ವದಿಸಲಿ!" ಎಂದು ಪುನಃ ಉಭಯ ರಾಷ್ಟ್ರಗಳು ಸ್ನೇಹದಿಂದಿರುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಇದೆಲ್ಲ ಮಾತನ್ನು ನೋಡಿದರೆ, ಪಾಕಿಸ್ತಾನವು ಏಳೂವರೆ ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಮುಖ್ಯ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ತೀರ್ಮಾನಿಸಲು ಮನಸ್ಸು ಮಾಡಿದೆಯೆಂಬ ಅಭಿಪ್ರಾಯವಾಗುತ್ತದೆ. ಇದು ಸಾತ್ಯವಾನಲ್ಲಿ ಭಾರತದ ಪ್ರತಿಷ್ಠೆಯೂ ಹೆಚ್ಚದಿರದು.

ಮಹತ್ವದ ಪ್ರಶ್ನೆಗಳು

ಈಗ ಕಾಶ್ಮೀರದ ಸಮಸ್ಯೆ, ಕಾಲುವೆ ನೀರಿನ ತಂಟೆ, ನಿರಾಶ್ರಿತರ ಆಸ್ತಿ ಮತ್ತು ಹಣಕಾಸಿನ ಪಾವತಿ ಎಂದು ನಾಲ್ಕು ದೊಡ್ಡ ಪ್ರಶ್ನೆಗಳು ಭಾರತ ಮತ್ತು ಪಾಕಿಸ್ತಾನದ ಮುಂದೆ ಇತ್ಯರ್ಥವಾಗದೆ ಉಳಿದಿವೆ. ಪಾಕಿಸ್ತಾನದಲ್ಲಿ ಘಟನಾ ಸಮಿತಿಯನ್ನು ವಿಸರ್ಜಿಸಿ, "ರಾಷ್ಟ್ರೀಯ ಸ್ವರೂಪದ ಮಂತ್ರಿ ಮಂಡಳ"ವನ್ನು ರಚಿಸಿ, ತಾನೇ ಎಲ್ಲವೂ ಆಗಿರುವ ಗವರ್ನರ ಜನರಲರು ಅವಿಭಾಜ್ಯ ಭಾರತದಲ್ಲಿ ತಾವು ಆಡಳಿತ ವಿಭಾಗದಲ್ಲಿ ಸಂಪಾದಿಸಿದ ಅನುಭವದ ಬಲದಿಂದ ಸರಕಾರದ ಧೋರಣೆಯನ್ನು ರೂಪಿಸುವಲ್ಲಿಯೂ ಅದನ್ನು ಕಾರ್ಯಗತಗೊಳಿಸುವಲ್ಲಿಯೂ ಪ್ರಧಾನ ಪಾತ್ರವನ್ನು ವಹಿಸುತ್ತಿದ್ದಾರೆಂದು ಈಗ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗಿದೆ. ಇಸ್ಕಂದರ್ ಮಿರ್ಜರೂ ಮಹಮ್ಮದಾಲಿಗಳೂ ತುಸು ಅವಲಕ್ಷಣದ ಮಾತುಗಳನ್ನು ಇತ್ತೀಚೆಗೆ ಹೇಳಿದ್ದರೂ—ಗವರ್ನರ ಜನರಲ್ಲರ ದೃಢ ನಿಶ್ಚಯದ ಮುಂದೆ ಉಳಿದವರ ಬೇಳಿಕೆಗಳಿಗೆ ಮಹತ್ವ ಬರಲಾರದು.

"ಯುದ್ಧವಿಲ್ಲ"ವೆಂಬ ನಿಶ್ಚಯ

ಗುಲಾಂ ಮಹಮ್ಮದರ ಸಂದರ್ಶನದಿಂದ ಉಭಯ ರಾಷ್ಟ್ರಗಳು "ಯುದ್ಧವಿಲ್ಲ" ಘೋಷಣೆಯನ್ನು ಹೊರಡಿಸಬಹುದೆಂಬ ಅಭಿಪ್ರಾಯಕ್ಕೆ ಪುಷ್ಟಿ ದೊರಕಿದೆಯೆಂದೂ ಕೆಲವು ನಂಬಿಗಳು ಹೇಳುತ್ತವೆ. ಭಾರತದ ಪ್ರಧಾನ ಮಂತ್ರಿಗಳು ಲಿಯಾಕತ್ ಅಲಿಖಾನರು ಪಾಕಿಸ್ತಾನದ ಪ್ರಧಾನಿಗಳಾಗಿದ್ದಾಗ ಈ ಸೂಚನೆಯನ್ನು ಪರಿಶೀಲನೆಗಾಗಿ ಮಂಡಿಸಿದ್ದರು. ಆದರೆ ಪಾಕಿಸ್ತಾನವು ಅದಕ್ಕೆ ಇಷ್ಟರ ವರೆಗೂ ಒಪ್ಪಿರಲಿಲ್ಲ. ಗುಲಾಂ ಮಹಮ್ಮದರು ಈಗ ವ್ಯಕ್ತಪಡಿಸಿದ ಪ್ರತಿಕ್ರಿಯೆಯು

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ಪಿತ್ಥಾಸ್ಥಿಯ ಕೆಮ್ಮು, ಸರಗಳ ನಿಸ್ತೊಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ಪರಿಶ್ಚ ತರವಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—

ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುಗಳಿಗೆ ಅತ್ಯಂತ ಪರಿಣಾಮಕಾರಿ.

ಬೆಲೆ: 1 ರಾತ್ಲಿಗೆ ರೂ. 7—8—0. ಕಾಲು ರಾತ್ಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,

113 Nainiappa Naicken Street, P. T.-MADRAS-3.

ಮದ್ರಾಸು ಹೈಕೋರ್ಟನಲ್ಲಿ

ಒ. ಪಿ. ನಂಬ್ರ 32/1955.

1913ನೆ ಇಸವಿಯ ಇಂಡಿಯನ್ ಕಂಪೆನೀಸ್ ಆಕ್ಟ

ಮತ್ತು

ದಿ ಮಯಾಪ್ಪ ಎಕ್ಸ್ಪೋರ್ಟ್ ಬೇಂಕ್ ಲಿಮಿಟೆಡ್ ಮತ್ತು ಇಳಿಸುವಿಕೆ ವಿಚಾರದಲ್ಲಿ.

ದಿ ಮಯಾಪ್ಪ ಎಕ್ಸ್ಪೋರ್ಟ್ ಬೇಂಕ್ ಲಿಮಿಟೆಡ್ ಮತ್ತು ಇಳಿಸುವಿಕೆ —ಅರ್ಜಿದಾರರು.

ಮೇಲ್ಕಂಡ ಕಂಪೆನಿಯ ಮೆಮೊರಾಂಡಮ್ ಒಫ್ ಎಸೋಸಿಯೇಶನನ ಉದ್ದೇಶಗಳ ಕ್ಲಾಜನ್ನು ತಿದ್ದುಪಡಿ ಮಾಡುವ ಬಗ್ಗೆ (ಬೇಂಕಿಂಗ್ ವ್ಯವಹಾರವನ್ನು ಹೊರ್ತುಪಡಿಸುವ) ಸದ್ರಿ ಕಂಪೆನಿಯ ತಾ. 30-11-1954ರ ವಿಶೇಷ ನಿರ್ಣಯವನ್ನು ಕಾಯಂ ಮಾಡುವ ಬಗ್ಗೆ ಅಕ್ಟಿನ ನಂಬ್ರ 12ನೆ ಸೆಕ್ಷನಿನನ್ವಯ ಕೋರ್ಟನಲ್ಲಿ ತಾ. 19-1-1955 ರಲ್ಲು ಹಾಜ್ರುಪಡಿಸಿದ ಅರ್ಜಿಯು ಮೇಲ್ಕಂಡ ಕೋರ್ಟನಲ್ಲಿಯ ನ್ಯಾಯಾಧೀಶರ ಮುಂದೆ ತನ್ನ ಬಗ್ಗೆ ತಾ. 23-2-1955ಕ್ಕೆ ಇಟ್ಟರುತ್ತದೆ. ಅರ್ಜಿಯ ಸಮರ್ಥನೆ ಅಥವಾ ಆಕ್ಷೇಪಣೆಯಿದ್ದಲ್ಲಿ ಅಂತಹವರು ತನ್ನ ಕಾಲದಲ್ಲಿ ಮುನ್ನು ಯಾ ವಕೀಲರ ಮುಖೇನ ಸ್ವಯಹರಿಸಬಹುದು. ನಿಯಮಿತ ಫೀಸು ಕೊಟ್ಟಲ್ಲಿ ಈ ಕೆಳಗೆ ಸಹಿ ಮಾಡಿದವರಿಂದ ಅರ್ಜಿನಕಲನ್ನು ಪಡೆಯಬಹುದು.

1—ಎ, ತೋಮಸ್ ರೋಡ್,
ಟಿ. ನಗರ್, ಮದ್ರಾಸ್ 17.

ಎ. ನಾರಾಯಣ ಶೆಟ್ಟಿ,
ಅರ್ಜಿದಾರರ ಕಡೆ ಎಡ್ವೋಕೇಟ್.

ಸೂಚನೆ: ಅರ್ಜಿ ತನ್ನ ಕಾಲದಲ್ಲಿ ಹಾಜರಾಗಲು ಬಯಸುವ ವ್ಯಕ್ತಿಗಳಾಗಲೀ ಸಂಘ ಸಂಸ್ಥೆಗಳಾಗಲೀ ತಮ್ಮ ಸಂಪೂರ್ಣ ವಿಳಾಸಾದಿಗಳನ್ನು ಯಾ ತಮ್ಮ ಅಧಿಕೃತ ವಕೀಲರ ವಿಳಾಸಾದಿಗಳನ್ನು ಒಳಗೊಂಡ ನೋಟೀಸನ್ನು ಮೇಲೆ ಸಹಿ ಮಾಡಿದವರಿಗೆ ತಾ. 27—2—1955ನೆ ದಿವಸ ಅಪರಾಹ್ನ ಮೂರು ಗಂಟೆಯೊಳಗೆ ತಲ್ಲುವಂತೆ ವ್ಯವಸ್ಥೆಗೊಳಿಸಬೇಕು.

ಫೊರ್ಮೋಸದ ವಿಮೋಚನೆಯ ಗೊಂದಲ

ಅಮೇರಿಕದ ಹೊಸ ನಿಲುಮೆಯಿಂದ ಲೋಕ ಶಾಂತಿಗೆ ಅಪಾಯ

ಫೊರ್ಮೋಸದ "ವಿಮೋಚನೆ"ಗಾಗಿ ಚೀನದ ಕಮ್ಯುನಿಸ್ಟರು ನಡೆಸುತ್ತಿರುವ ಪ್ರಯತ್ನ ಅಮೇರಿಕದ ಹಸ್ತಕ್ಷೇಪದ ದೆಸೆಯಿಂದಾಗಿ ಜಗತ್ತಿನ ವಾತಾವರಣವನ್ನು ಬಹಳಷ್ಟು ಕ್ಷೋಭೆಯುಂಟಾಗಿಸುವುದಕ್ಕೆ ನೆಪವಾಗಿರುವುದು ಈ ವಾರದ ವಿಶೇಷ ವರ್ತಮಾನಗಳಲ್ಲಿ ಉಲ್ಲೇಖನೀಯ. ಕೆಲವು ತಿಂಗಳುಗಳಿಂದೀಚೆಗೆ ಚೀನದ ಮುಖ್ಯ ಭೂಮಿಯಿಂದ ರಾಷ್ಟ್ರೀಯರ ವಶವಿರುವ ಕ್ಯಮ್ಯೊ ಮುಂತಾದ ಸಮೀಪದ ದ್ವೀಪಗಳ ಮೇಲೆ ನಡೆಸಲಾಗುತ್ತಿದ್ದ ದಾಳಿ ಮತ್ತದನ್ನು ಪ್ರತಿಭಟಿಸಲು ಕೈಗೊಂಡಕ್ರಮಗಳು ಇದ್ದುದಿದ್ದಂತೆ ಬಿಸಿಯನ್ನು ಹೆಚ್ಚಿಸಿ, ತೃತೀಯ ಮಹಾಯುದ್ಧದ ನಾಂದಿಯನ್ನು ಹಾಡುವಷ್ಟು ಮುಂದೆ ಹೋಗಿರುವುದು ಕೋಚನೀಯ. ಫೊರ್ಮೋಸಾದ ಪ್ರಶ್ನೆಯನ್ನು ಶಾಂತರೀತಿಯಲ್ಲಿ ತೀರ್ಮಾನಿಸಿ, ಈಗಿನ ಹೋರಾಟವನ್ನು ಸ್ಥಗಿತ ಗೊಳಿಸುವ ಪ್ರಯತ್ನಗಳನ್ನು ನಡೆಸಿದ್ದರೆ ಶಾಂತಿಯನ್ನು ಕಾಯ್ದುಕೊಳ್ಳುವ ಕೆಲಸವು ಬಹಳ ಕಷ್ಟಕ್ಕೆಟ್ಟುಕೊಳ್ಳುವುದೆಂಬುದರಲ್ಲಿ ಈಗ ಯಾವ ಸಂದೇಹವೂ ಉಳಿದಿಲ್ಲ.

"ಯುದ್ಧವಿಲ್ಲ" ಘೋಷಣೆಗೆ ಪ್ರತಿಕೂಲವಾಗಿರಲಿಲ್ಲವೆಂದು ಹೇಳಲಾಗುತ್ತದೆ. ಇಂಥ ಘೋಷಣೆ ಹೊರಟ ಬಳಿಕವೇ ಭಾರತದ ರಾಷ್ಟ್ರಾಧ್ಯಕ್ಷರು ಪಾಕಿಸ್ತಾನಕ್ಕೆ ಸಂದರ್ಶನ ಕೊಡಬಹುದೆಂದೂ ಉಭಯ ಪ್ರಧಾನ ಮಂತ್ರಿಗಳ ಭೇಟಿಯನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕಾದರೂ ಮಾರ್ಚಿಯೊಳಗೆ ಈ ಘೋಷಣೆಯನ್ನು ಹೊರಡಿಸಬೇಕೆಂದೂ ಅಭಿಪ್ರಾಯಪಡಲಾಗುತ್ತದೆ. ಆದರೆ ಇದು ಪಾಕಿಸ್ತಾನದ ಮಂತ್ರಿ ಮಂಡಳವೂ ಗವರ್ನರ ಜನರಲರೂ ಕೂಡಿ ವಿಚಾರಿಸಬೇಕಾದ ವಿಷಯ—ಭಾರತದ ನಿಲುಮೆ ಈ ಬಗ್ಗೆ ಮೊದಲಿನಿಂದಲೂ ಸ್ಪಷ್ಟವಿರುತ್ತದೆ.

ಸಮಸ್ಯೆಯ ಹಿನ್ನೆಲೆ

ಪರಿಸ್ಥಿತಿಯು ಇಷ್ಟು ವಿಷಮಿಸುವಷ್ಟು ಮಾಡಿದ ಘಟನೆಗಳೇನು? ಚೀನದ ಕಮ್ಯುನಿಸ್ಟರೂ ಫೊರ್ಮೋಸದ ರಾಷ್ಟ್ರೀಯರೂ ಪರಸ್ಪರ ದಾಳಿಗಳನ್ನು ನಡೆಸುತ್ತಲೇ ಇದ್ದರು. ಭಾರತೀಯರು ಗೋವೆ ಮತ್ತಿತರ ವಸಾಹತುಗಳು ಭಾರತದಲ್ಲಿ ವಿಲೀನವಾಗದ ಹೊರತು ತಮ್ಮ ಸ್ವಾತಂತ್ರ್ಯದ ಕಲ್ಪನೆಯು ಪೂರ್ತಿಯಾಗಲಾರದೆಂದು ಹೇಗೆ ಹೇಳುತ್ತಿರುವರೋ ಅದರಂತೆ ಚೀನದ ಕಮ್ಯುನಿಸ್ಟರು ಫೊರ್ಮೋಸ ಮತ್ತಿತರ ರಾಷ್ಟ್ರೀಯರ ವಶದಲ್ಲಿರುವ ದ್ವೀಪಗಳ "ವಿಮೋಚನೆ"ಯಾಗದೆ ವಿರಮಿಸೆವೆಂದು ಹೇಳುತ್ತಿದ್ದಾರೆ; ಮತ್ತು ಭಾರತೀಯರಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟು ದಾಳಿ ನಡೆಸುವ ಮೂಲಕ ರಾಷ್ಟ್ರೀಯರನ್ನು ಹಣ್ಣು ಮಾಡಲು ನೋಡುತ್ತಿದ್ದಾರೆ. ರಾಷ್ಟ್ರೀಯರ ವಶದಲ್ಲಿರುವ ಈ ದ್ವೀಪ ಸಮುದಾಯಗಳಲ್ಲಿ ತನ್ನ ನೌಕಾ ರಾಣ್ಯಗಳನ್ನೂ ವೈಮಾನಿಕ ಕೇಂದ್ರಗಳನ್ನೂ ಸ್ಥಾಪಿಸಿರುವ ಅಮೇರಿಕವು, ಈ ದ್ವೀಪಗಳು ತನ್ನ ವರ್ಚಸ್ಸಿನ ವಲಯದ ಹೊರಗೆ ಹೋಗಿ ಬಿಟ್ಟರೆ ಮುಂದೆ ಚೀನದ ಕಮ್ಯುನಿಸ್ಟರ ಮೇಲೆ ಯಶಸ್ವಿ ನಿಯಂತ್ರಣವಿಡಲು ಸಾಧ್ಯವಾಗದೆಂದು ಭಾವಿಸುತ್ತದೆ.

ತಿಕ್ಕಾಟ ನಿಶ್ಚಯ

ಹೀಗೆ ಅಮೇರಿಕವು ಪಡೆದಿರುವ ಅಸಕ್ತಿಯೇ ತೃತೀಯ ಯುದ್ಧಕ್ಕೆ ನಾಂದಿ ಹೇಳುವ ಘಟನೆಯೊಂದರ ಹಿನ್ನೆಲೆಯಲ್ಲಿರುವ ಸತ್ಯ: ಅದೆಂದರೆ, ಅಧ್ಯಕ್ಷ ಐಸೆನ್ ಹೋವರರು ಕೇಳಿಕೊಂಡು ಈಗ ತಾನೆ ಪಡೆದಿರುವ ಫೊರ್ಮೋಸಾ ಮತ್ತು ಇತರ ದ್ವೀಪಗಳನ್ನು ರಕ್ಷಿಸುವ ಸಂಪೂರ್ಣ ಅಧಿಕಾರ. ಕಮ್ಯುನಿಸ್ಟರು ತಮ್ಮ ದಾಳಿಯ ಪರಿಣಾಮವಾಗಿ ಯಿಕಿಯಾಂಗ್ ಶಾನ್ ಎಂಬ ದ್ವೀಪವನ್ನು ತಮ್ಮ ಮುಷ್ಟಿಯಲ್ಲಿ ತೆಗೆದುಕೊಳ್ಳಲು ಸಮರ್ಥರಾಗಿದ್ದಾರೆ. ಅಲ್ಲಿಯೂ ಚೀನದ ಮುಖ್ಯ ಭೂಮಿಯಲ್ಲಿಯೂ ದೊಡ್ಡ ದೊಡ್ಡ ತೋಫಿನ ಕೇಂದ್ರಗಳನ್ನು ಸ್ಥಾಪಿಸಿ, ಅಲ್ಲಿಂದ ವಿಸ್ತಾರವಾದ ಪ್ರಮಾಣದಲ್ಲಿ ದಾಳಿ ನಡೆಸಲು ಪ್ರಯತ್ನಿಸುತ್ತಿದ್ದಾರೆ. ತಾಚೇನ್ ದ್ವೀಪ ಸಮುದಾಯದಲ್ಲಿ ಅವರದೇ ಮೇಲ್ಗೈಯಾಗುವ ಎಲ್ಲ ಲಕ್ಷಣಗಳೂ ಈಗ ಕಾಣಿರುತ್ತವೆ; ಮತ್ತು ಇದನ್ನು ಮನಗಂಡ ಅಮೇರಿಕವು ಅಲ್ಲಿರುವ ಇಪ್ಪತ್ತು ಸಾವಿರ ರಾಷ್ಟ್ರೀಯ ಚೀನದ ಪ್ರಜೆಗಳನ್ನು ಸಾಗಿಸಿಕೊಂಡು ಬರಲು ಸರ್ವ ಸನ್ನಾಹವನ್ನು ನಡೆಸುತ್ತಿದೆ. ಅಮೇರಿಕದ ಈ ಸಾಹಸವನ್ನು ನಿಷ್ಕ್ರಿಯ ಗೊಳಿಸುವ ಉದ್ದೇಶದಿಂದ ಚೀನವು ಈ ದ್ವೀಪ ಸಮುದಾಯದ ಸುತ್ತ ಬಿಗಿಯಾದ ಕಾವಲಿಡಲು ಮುಂದಾದಿದ್ದು, ಇದರಿಂದ ತಿಕ್ಕಾಟವಿಲ್ಲದೆ ಅಮೇರಿಕದ ಸಾಹಸ ಯಶಸ್ವಿಯಾಗಲಾರದೆಂಬ ಅಭಿಪ್ರಾಯ ಮೂಡುತ್ತದೆ.

ಶಾಂತಿಗೆ ಅಪಾಯ

ಕಮ್ಯುನಿಸ್ಟರ ಬಲವು ಹೆಚ್ಚುತ್ತಿರುವುದನ್ನು ಕಂಡ ಐಕರು ಸಿನೇಟಿಗೂ ಕಾಂಗ್ರೆಸಿಗೂ ರಾಯಸವನ್ನು ಕಳಿಸಿ, ತಮಗೆ ಉಚಿತ ಕಂಡ ಕ್ರಮವನ್ನು ಕೈಗೊಂಡು ಫೊರ್ಮೋಸದ ರಕ್ಷಣೆಗಾಗಿ ಸೈನ್ಯವನ್ನು ಉಪಯೋಗಿಸುವುದಕ್ಕೆ ಅಧಿಕಾರ ಕೊಡಬೇಕೆಂದು ಹೇಳಿದರು. ಸೈನ್ಯವನ್ನು ಉಪಯೋಗಿಸಿ ಫೊರ್ಮೋಸವನ್ನೂ ಪೆಸ್ಕಾಡೋರ್ಸ್ ದ್ವೀಪಗಳನ್ನೂ ರಕ್ಷಿಸುವುದಲ್ಲದೆ ಚೀನದ ಮುಖ್ಯ ಕರಾವಳಿಗೆ ಹದಿನೈದೇ ಮೈಲುಗಳ ಅಂತರದಲ್ಲಿರುವ ಕ್ಯಮ್ಯೊ ಮತ್ತು ಮತ್ಸು ದ್ವೀಪಗಳ ಮೇಲೆ ಆಕ್ರಮಣ ನಡೆಯದಂತೆಯೂ ಸೈನ್ಯವನ್ನುಪಯೋಗಿಸುವುದು ಐಕರ ಉದ್ದೇಶ. ಕೊನೆಯ ಎರಡು ದ್ವೀಪಗಳ ರಕ್ಷಣೆಯ ಜವಾಬ್ದಾರಿಯನ್ನು ಅಮೇರಿಕ ಹೊರಬಯಸಿರುವುದೇ ದೊಡ್ಡ ವಿಪತ್ತೆಂದು ರಾಜಕೀಯ ತಜ್ಞರ ಅಭಿಪ್ರಾಯ. ಈ ದ್ವೀಪಗಳ ಎದುರಿಗೆಯೇ ಚೀನದ ಮುಖ್ಯ ಭೂಮಿಯಲ್ಲಿ ರಾಷ್ಟ್ರೀಯರ ಮೇಲೆ ದಾಳಿಯನ್ನು ನಡೆಸಲು ಅನುಕೂಲವಾದ ದೊಡ್ಡ ರಾಣ್ಯಗಳನ್ನು ಕಮ್ಯುನಿಸ್ಟರು ಕಟ್ಟುತ್ತಿರುವರೆಂದೂ ಅದಕ್ಕೆ ವಿಘ್ನವನ್ನುಂಟು ಮಾಡುವುದೇ ಐಕರ ಇಚ್ಛೆಯೆಂದೂ ಅಮೇರಿಕದ ನಿಲುಮೆಯನ್ನು ಸಮರ್ಥಿಸಲಾಗುತ್ತದೆ. ಆದರೆ, ಹದಿನೈದು ಮೈಲುಗಳಷ್ಟು ಸ್ವಲ್ಪ ಅಂತರವಿರುವ ಈ ದ್ವೀಪಗಳ ಮೇಲೆ ಚೀನದ ಕಮ್ಯುನಿಸ್ಟರು ಏನೇ ದಾಳಿ ನಡೆಸಲಿ, ಅದನ್ನು ಅಮೇರಿಕದ ವಿರುದ್ಧ ನಡೆಸಲಾದ ಯುದ್ಧವೆಂದೇ ಪರಿಗಣಿಸುವ ಐಕರ ಧೋರಣೆ, ಮಹಾ ಯುದ್ಧಕ್ಕೆ ಆಹ್ವಾನ ಕೊಡುತ್ತದೆ!

ಮಧ್ಯಸ್ಥಿಕೆಯ ಪ್ರಯತ್ನ

ಜಗತ್ತಿನ ಶಾಂತಿಗೆ ಹೀಗೆ ಭಯವುಂಟಾಗಿದೆಯೆಂದೇ ಭದ್ರತಾಮಂಡಳದ ಸಭೆಯನ್ನು ಮೊನ್ನೆ ಸೋಮವಾರ ಕರೆಯಲಾಯಿತು. ನ್ಯೂಜೀಲೆಂಡು ಕರೆದಿರುವ ಈ ಸಭೆಯು ವಿಷಯವನ್ನು ಪರ್ಯಾಲೋಚಿಸುವುದಕ್ಕಾಗಿ ಚೀನದ ಕಮ್ಯುನಿಸ್ಟರ ಪ್ರತಿನಿಧಿಗೂ ಆಮಂತ್ರಣ ಕೊಡಬೇಕೆಂದು ಅಭಿಪ್ರಾಯಪಡಲಾಗಿದ್ದು, ಬ್ರಿಟನು ಈ ಆಮಂತ್ರಣವನ್ನು ಸ್ವೀಕರಿಸಲು ಚೀನದ ಮನವೊಲಿಸಬೇಕೆಂದು ರಶಿಯಕ್ಕೆ ತಿಳಿಸಿರುತ್ತದು. ಆದರೆ ರಶಿಯದ ಪ್ರತಿಕ್ರಿಯೆ ಯಾಗಿರೀ ಚೀನದ ಪ್ರಧಾನ

(೭ನೇ ಪುಟ ನೋಡಿರಿ)

The Canara Mutual Assurance Company, Ltd.

Managing Director: T. R. A. PAI.

Head Office: **UDIPI**, S. India.] [Estd: 1935

ಹೊಸ ದಾಖಲೆ

ಕಂಪೆನಿಯು **1954**ನೇ ವರ್ಷದಲ್ಲಿ ಮಾಡಿದ ಹೊಸ ವ್ಯವಹಾರ:

ಬಂದ ಪ್ರೊಪೋಸಲುಗಳು: ರೂ. **1,02,73,700/-**

ಹೊರಡಿಸಲಾದ ಪಾಲಿಸಿಗಳು: ರೂ. **88,29,450/-**

ಇದು ಕಂಪೆನಿಯ ಹಿಂದಿನೆಲ್ಲ ದಾಖಲೆಗಳನ್ನೂ ಮೀರಿಸಿದೆಯಲ್ಲದೆ

1953ನೇ ವರ್ಷದ ವ್ಯವಹಾರದೊಡನೆ ಹೋಲಿಸಿದರೆ,

75%ಕ್ಕಿಂತಲೂ ಹೆಚ್ಚಾಗಿರುತ್ತದೆ.

31—12—1953ನೇ ತಾರೀಕಿಗಾದ ವಿಮಾಗಣನೆಯ ಫಲಿತಾಂಶ:

ಲಾಭ ಸಹಿತ ಪಾಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. **18/-** ಹೋಲ್ ಲೈಫ್ ಎಶ್ಯೂರೆನ್ಸಿಗೆ ರೂ. **15/-** ಎಂಡೋಮೆಂಟ್ ಎಶ್ಯೂರೆನ್ಸಿಗೆ

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಕೊಟ್ಟಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

Mukund Nivas, UDIPI, S. India.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA
Popular Kannada Weekly
Founder:—
Sri **A. B. SHETTY,** *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೩—೨—೧೯೫೫	೨೨

ಮಣಿಪಾಳದ ಕಾಲೇಜು

ಇಲ್ಲಿಗೆ ಸಮೀಪದ ಮಣಿಪಾಳದಲ್ಲಿರುವ ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ, ಅಲ್ಲಿಯ ಶರೀರ ವಿಜ್ಞಾನಾಭ್ಯಾಸ ಭವನದ ಉದ್ಘಾಟನೆಯನ್ನು ಮೊನ್ನೆ ತಾನೆ ನಡೆಸಿದ ಕೇಂದ್ರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪಾತ್ರವನ್ನು ಕುರಿತು ಕೆಲವು ಮಹತ್ವದಮಾತುಗಳನ್ನಾಡಿದರು. ನಮ್ಮದೇಶದ ಗ್ರಾಮಾಂತರ ಪ್ರದೇಶಗಳಲ್ಲಿನ ಕೋಟ್ಯಾಂತರ ಪ್ರಜೆಗಳ ಆರೋಗ್ಯ ಚಿಂತನೆಯನ್ನು ಮಾಡಬಲ್ಲ ಸಮರ್ಥ ವೈದ್ಯರ ಆವಶ್ಯಕತೆಯನ್ನು ಎಲ್ಲರೂ ಬಲ್ಲರು. ನಮಗೆ ಉತ್ತಮರೂ ದಕ್ಷರೂ ಆದ ವೈದ್ಯರು ಬೇಕೆಂಬುದನ್ನೂ ನಾವು ತಿಳಿದಿದ್ದೇವೆ. ಮಾನ್ಯ ಮಂತ್ರಿಗಳು ಇವೆರಡೂ ವಿಷಯಗಳನ್ನು ಒತ್ತಿ ಹೇಳಿದುದರಲ್ಲಿ ಹೊಸತೇನೂ ಇಲ್ಲ—ಆದರೆ, ಒಳ್ಳೆಯ ವೈದ್ಯರನ್ನು ಸಿದ್ಧಗೊಳಿಸುವ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದಕ್ಕೆ ಕಾರಣಾಂತರಗಳಿಂದ ಸರಕಾರದವರು ಸಾಕಷ್ಟು ಪ್ರಯತ್ನವನ್ನು ನಡೆಸದಿರುವಾಗ ಶಿಕ್ಷಣ ಕ್ಷೇತ್ರದಲ್ಲಿ ಸುರಿತ ಅನುಭವವಿರುವ ಖಾಸಗಿ ಸಂಸ್ಥೆಯೊಂದು ವೈದ್ಯಕೀಯ ವಿದ್ಯಾಭ್ಯಾಸವನ್ನು ಕೊಡುವ ಕಲಾ ಶಾಲೆಯೊಂದನ್ನು ಸ್ಥಾಪಿಸುವಷ್ಟು ಎದೆಗಾರಿಕೆ ತೋರಿಸಿದುದನ್ನು ಮಂತ್ರಿಗಳು ಕಂಡು ಸಂತೋಷಿಸಿರುವುದು ಉಲ್ಲೇಖನೀಯ. ಅವರು ಮಣಿಪಾಳದ ಕಾಲೇಜು ಹಳ್ಳಿಯ ಆವರಣದಲ್ಲಿರುವುದನ್ನು ಕಂಡು ತಮ್ಮ ಮೆಚ್ಚಿಕೆ ವ್ಯಕ್ತಪಡಿಸಿದರು. ಹೀಗೆ ಶಿಕ್ಷಣ ಪ್ರದಾನ ಕಾರ್ಯದಲ್ಲಿ ಹಳ್ಳಿಯ ಆವರಣಕ್ಕೆ ಕೊಡಲಾದ ಪ್ರಾಮುಖ್ಯತೆಯು ವೈದ್ಯಕೀಯ ಪದವೀಧರರಾಗಿ ಇಲ್ಲಿಂದ ಹೊರಬೀಳುವ ವಿದ್ಯಾರ್ಥಿಗಳಲ್ಲಿ ಹಳ್ಳಿಯ ಆರೋಗ್ಯ ಸಮಸ್ಯೆಗಳ ಕಡೆಗೆ ಆಕರ್ಷಣೆಯನ್ನು ಹುಟ್ಟಿಸಿ ಹಳ್ಳಿಗಳಲ್ಲಿಯೇ ಅವರು ಹೋಗಿ ನೆಲಸುವ ಭಾವನೆಯನ್ನು ಅಪ್ರತ್ಯಕ್ಷವಾಗಿಯಾದರೂ ಪೋಷಿಸುವುದೆಂಬ ಇನ್ನೊಂದು ವೈಶಿಷ್ಟ್ಯವನ್ನೂ ಅವರು ಮನಗಂಡರು. ಅದೇ ಸಮಯದಲ್ಲಿ ಇಲ್ಲಿಯ ತಿಕ್ಷ್ಣ ವೃಂದದಲ್ಲಿ ಸಮರ್ಥರೂ ಯೋಗ್ಯತಾವಂತರೂ ಇರುವರೆಂದು ಹರ್ಷವನ್ನು ವ್ಯಕ್ತಪಡಿಸಿದ್ದಲ್ಲದೆ, ವೈದ್ಯಕೀಯ ತಜ್ಞರ ಅಭಾವವಿರುವ ನಮ್ಮ ದೇಶವಲ್ಲಿ ಮಾನಸಿಕವಾಗಿಯೂ ದೈಹಿಕವಾಗಿಯೂ ಚೆನ್ನಾಗಿ ಕೆಲಸಮಾಡಬಲ್ಲವರನ್ನೆಲ್ಲ ನಿವೃತ್ತಿ ಪ್ರಾಯವಾದ ೫೫ನೇ ವಯಸ್ಸಿನ ಬಳಿಕವೂ ಕೆಲಸಮಾಡಗೊಡಬೇಕೆಂಬ ಅಭಿಪ್ರಾಯವನ್ನು ಪ್ರಕಟಿಸಿದರು. ಅಧಿಕಾರದಿಂದ ನಿವೃತ್ತಿಗೊಂಡಿದ್ದರೂ ಮಣಿಪಾಳದ ಕಾಲೇಜಿನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದ ವೈದ್ಯಕೀಯ ತಜ್ಞರ ಕಾರ್ಯ ಪಟುತ್ವವನ್ನು ಕಂಡೇ ಮಂತ್ರಿಗಳು ಮೇಲಿನಂತೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರೆಂದರೆ ತಪ್ಪಲ್ಲ. ಈ ಪ್ರಕಾರವಾಗಿ ಕಾಲೇಜಿನ ಸ್ಥಾಪನೆ ಮತ್ತದರ ಚಟುವಟಿಕೆಗಳ ಬಗ್ಗೆ ಸದಭಿಪ್ರಾಯವನ್ನು ವ್ಯಕ್ತಗೊಳಿಸಿದ ಮಂತ್ರಿಗಳು ಇನ್ನೊಂದು ಆಶಾದಾಯಕವಾದ ವಿಷಯವನ್ನೂ ಪ್ರಸ್ತಾಪಿಸಿದರು—ಅದೆಂದರೆ ವೈದ್ಯಕೀಯ ಕಾಲೇಜಿನ ಆವರಣದಲ್ಲೇ, ಮಣಿಪಾಳದಲ್ಲಿಯೇ, ಸಾಕಷ್ಟು ವಿಶಾಲವಾದ ಆಸ್ಪತ್ರೆಯನ್ನು ಕಟ್ಟಿಸುವುದು. ಖಾಸಗಿ ಸಂಸ್ಥೆಗೆ ಕೋಟ್ಯಾಂತರ ರೂಪಾಯಿಗಳ ಕರ್ಚನ್ನು ನೋಡಿಕೊಳ್ಳುವುದು ಸುಲಭವಾಗಲಾರದು—ಆದುದರಿಂದ ಸರಕಾರದವರೇ ತಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಣಿಪಾಳಕ್ಕೆ ಆಸ್ಪತ್ರೆಯೊಂದನ್ನು ಕಟ್ಟಿಸುವ ಕಾರ್ಯಕ್ರಮವನ್ನು ಸೇರಿಸುವುದು ಅಪೇಕ್ಷಣೀಯ. ಮದ್ರಾಸು ಸರಕಾರ ಇತ್ತ ಗಮನಿಸುವುದೆಂದು ಆಶಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಕರತಾಡನದ ನಡುವೆ ಹೇಳಿದರು. ಈಗ ಮಂಗಳೂರಿನ ಆಸ್ಪತ್ರೆಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸಲಾಗುತ್ತದೆ; ವಿದ್ಯಾರ್ಥಿಗಳಿಗೆ ಮಂಗಳೂರಿನಲ್ಲೆ ವಸತಿಯ ಹಾಗು ವಿದ್ಯೆಯ ಎಲ್ಲ ವ್ಯವಸ್ಥೆಗಳನ್ನೂ ಮಾಡಿದ್ದು, ಅವರಿಗೆ ಯಾವ ತರದ ಅನಾನುಕೂಲತೆಯೂ ಆಗುತ್ತಿಲ್ಲ. ಆದರೂ ಮಣಿಪಾಳದಲ್ಲೊಂದು ತುಣುಕು, ಮಂಗಳೂರಿನಲ್ಲೊಂದು ತುಣುಕು—ಹೀಗೆ ವೈದ್ಯಕೀಯ ಕಾಲೇಜು ಇರುವುದು ಅಷ್ಟು ಚಂದವಲ್ಲ ಎಂಬ ಸಾಮಾನ್ಯ ಅಭಿಪ್ರಾಯ ಯಾರಿಗಾದರೂ ಆಗಬಹುದು. ಮಂತ್ರಿಗಳು ಈ ದೋಷ ನಿವಾರಣೆಗಾಗಿ ಸರಕಾರಿ ಮಟ್ಟದಲ್ಲಿ ಆಸ್ಪತ್ರೆಯನ್ನು ರಚಿಸುವ ಸೂಚನೆಯನ್ನು ಮುಂದಿಟ್ಟುದರಿಂದ, ಕಾಲೇಜಿನ ಸಂಸ್ಥಾಪಕರ ಸ್ವರಕ್ಕೆ ಹೆಚ್ಚಿನ ಬಲ ಬಂದಿದೆಯೆಂದು ಹೇಳಬಹುದು. ಸರಕಾರವನ್ನು ಪ್ರಾರ್ಥಿಸಿ, ಆಸ್ಪತ್ರೆಗೆ ಅಗತ್ಯವೆನಿಸಿದ ಎಲ್ಲ ಸಹಾಯವನ್ನು ಪಡೆಯುವುದಕ್ಕೆ ಕೇಂದ್ರ ಆರೋಗ್ಯ ಮಂತ್ರಿಗಳ ಆಶ್ವಾಸನೆಯು ಒಳ್ಳೆಯ ಹಿನ್ನೆಲೆಯನ್ನು ಒದಗಿಸಬಲ್ಲುದು. ವೈದ್ಯಕೀಯ ಶಿಕ್ಷಣದ ಈ ಕೇಂದ್ರವು ಈಗಾಗಲೇ ಪ್ರಶಂಸಾರ್ಹ ಪ್ರಗತಿಯನ್ನು ತೋರಿಸಿದೆ—ವಿಶ್ವವಿದ್ಯಾಲಯದವರು ಅತಿ ಕಠಿಣವಾದ ಮಟ್ಟದಲ್ಲಿ ನಿರ್ಧರಿಸಿದ ಪರೀಕ್ಷೆಯಲ್ಲಿ ನೊರಕ್ಕೆ ಐವತ್ತಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ತೇಗರೆಡೆ ಪೊಂದಿರುವುದೂ ಉಳಿದವರಲ್ಲಿ ಸಹ ಅರೆವಾಸಿಯಷ್ಟು ಮಂದಿ ವಿಭಾಗಗಳಲ್ಲಿ ಪಾಸಾಗಿರುವುದೂ ಕಾಲೇಜಿನಲ್ಲಿ ನೀಡಲಾಗುವ ಶಿಕ್ಷಣವು ಎಷ್ಟು ಉಚ್ಚಮಟ್ಟದಲ್ಲಿದೆಯೆಂದೂ ಇಲ್ಲಿ ಕಲಿಯುವ ವಿದ್ಯಾರ್ಥಿಗಳು ಎಷ್ಟು ಉತ್ಸಾಹದಿಂದಿರುವರೆಂದೂ ತೋರಿಸುತ್ತದೆ. ಶಿಕ್ಷಣದ ಮಟ್ಟವನ್ನು ಇಳಿಸುವ, ಅಥವಾ ತೃತೀಯ ಶ್ರೇಣಿಯ ವೈದ್ಯರನ್ನು ಸಿದ್ಧಪಡಿಸುವ ಪ್ರಶ್ನೆಯೇ ಈ ಸಂಸ್ಥೆಯ ಮುಂದಿಲ್ಲವೆಂಬುದನ್ನೂ ಇದು ಸ್ಪಷ್ಟಗೊಳಿಸುತ್ತದೆ. ಇಂಥ ಕಾಲೇಜನ್ನು ರೂಪಿಸಿ, ನಡೆಸುವುದು ಎಲ್ಲರಿಗೂ ಸಾಧ್ಯವೆಂದೇನೂ ನಾವು ಹೇಳುವುದಿಲ್ಲ—ಡಾ. ಮಾಧವ ಪೈಗಳಂಥ ಕರ್ತವ್ಯ ದಕ್ಷರಿಗೂ ಸೇವಾ ಪರಾಯಣರಿಗೂ ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ಅವುಗಳನ್ನು ಮುನ್ನಡೆಸಿದ ಪ್ರತಿಭಾಸ್ವಿತರಿಗೂ ಮಾತ್ರ ವೈದ್ಯಕೀಯ ಶಿಕ್ಷಣ ಸಂಸ್ಥೆಯಂಥ ದೊಡ್ಡ ಜವಾಬ್ದಾರಿಯನ್ನು ಹೊರಲು ಸಾಧ್ಯವಲ್ಲದೆ, ಸಾಮಾನ್ಯರಿಗೆ ಅದು ನೀಗದು. ಡಾ. ಪೈಗಳ ಕೈಯಲ್ಲಿ ಸರಕಾರಕ್ಕೆ ಬರಬಹುದಾಗಿದ್ದ ವೆಚ್ಚಕ್ಕಿಂತ ಎಷ್ಟೊ ಕಡಿಮೆ ಕರ್ಚಿನಲ್ಲಿ ಇಲ್ಲಿಯ ಕಟ್ಟಡಗಳೂ ಸಾಮಾನು ಸಲಕರಣೆಗಳೂ ಒದಗಿಸಲ್ಪಟ್ಟಿವೆ; ನಾಳೆಯ ಆಸ್ಪತ್ರೆ ಸಹ ಇವರ ಕೈಯಲ್ಲಿ ಸರಕಾರದ ಅಂದಾಜಿಗಿಂತಲೂ ಕಡಿಮೆ ಹಣದಲ್ಲಿ ಕಟ್ಟಲ್ಪಡಬಹುದು. ಆದುದರಿಂದ ಸರಕಾರವು ಈ ಕರ್ತೃತ್ವ ಶಾಲಿಗಳಿಗೆ ಎಲ್ಲ ರೀತಿಯ ಪ್ರೋತ್ಸಾಹಗಳನ್ನು ಮುಂದಕ್ಕೆ ಸಹ ಕೊಡುತ್ತಿರಬೇಕೆಂದೂ ರಾಜಕುಮಾರಿಯವರು ಹೇಳಿದಂತೆ ಸಂಸ್ಥೆಯು ಸ್ವಯಂಪೂರ್ಣವಾಗಿ ಭದ್ರವಾದ ತಳಹದಿಯಲ್ಲಿ ನಿಲ್ಲುವಂತೆ ನೆರವಾಗಬೇಕೆಂದೂ ನಾವು ಒತ್ತಾಯದೊಡನೆ ವಿನಂತಿಸುತ್ತೇವೆ. ಅಂಥ ಸಹಾಯದಿಂದ ಮೂರುಸಾವಿರ ರೂಪಾಯಿಗಳನ್ನು ಹೆತ್ತವರಿಂದ ದಾನವಾಗಿ ಸ್ವೀಕರಿಸುವ ಈಗಿನ ಕ್ರಮವನ್ನು ಕತ್ತು ವರ್ಷಗಳೆಂದು ನಿಶ್ಚಯಿಸಿರುವ ಅವಧಿಗೆ ಮೊದಲೇ ಬಿಟ್ಟುಗೊಡುವುದಕ್ಕೆ ಸಹ ಅನುಕೂಲವಾದೀತೆಂದು ನಮ್ಮ ಅಭಿಪ್ರಾಯ.

ಒಕ್ಕಲುಗಳಿಗೆ ಭದ್ರತೆ

ನಮ್ಮ ಜಿಲ್ಲೆಯ ಪ್ರವಾಸ ಕೈಗೊಂಡಿರುವ ಮದ್ರಾಸು ಸರಕಾರದ ಕಂದಾಯ ಮಂತ್ರಿಗಳಾದ ಮಾನ್ಯ ಶ್ರೀ ಮಾಣಿಕ್ಯವೇಲು ನಾಯಕ್ಕರರು ಒಕ್ಕಲು ಹಿತ ಮಸೂದೆಯನ್ನು ತರುವವಿಷಯದ ಕುರಿತು ಆಡಿದ ಮಾತುಗಳು ಅಷ್ಟು ಅಶಾಜನಕವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಅವರ ಅಭಿಪ್ರಾಯದಂತೆ, ನಮ್ಮ ಧುರೀಣದಲ್ಲಿ ಒಮ್ಮತವಿಲ್ಲ. ಪರಿಸ್ಥಿತಿಯ ಕೂಲಂಕಷ ಪರಿಶೀಲನೆಯನ್ನು ನಡೆಸುವ ಕೆಲಸ ಇನ್ನೂ ಮುಗಿದಿಲ್ಲ; ಇಡೀ ರಾಜ್ಯಕ್ಕೆ ಸಂಬಂಧಿಸಿದ ಒಂದೇ ಭೂಸುಧಾರಣಾ ಮಸೂದೆಯನ್ನೆ ತರಬೇಕೇ ಅಥವಾ ದಕ್ಷಿಣ ಕನ್ನಡ ಜಿಲ್ಲೆಗೆಂದೇ ವಿಶಿಷ್ಟ ಶಾಸನ ಕ್ರಮವನ್ನು ಕೈಗೊಳ್ಳಬೇಕೇ ಎಂಬುದಿನ್ನೂ ನಿಶ್ಚಿತವಾಗಿಲ್ಲ. ಆದರೂ ಈ ವರ್ಷಾಂತ್ಯದೊಳಗೆ ಏನಾದರೊಂದು ನಿರ್ಧಾರಕ್ಕೆ ಬಂದು ತದನುಗುಣವಾದ ಶಾಸನವನ್ನು ಜ್ಯಾರಿಗೆ ತರುವ ಆಶೆ ಅವರಿಗುಂಟು; ಜನರಿಗೆ ಮಾತ್ರ ಇಲ್ಲ! ಏಕೆಂದರೆ, ಒಕ್ಕಲುಗಳಿಗೆ ಭದ್ರತೆ, ನ್ಯಾಯವಾದ ಗೇಣಿ ಮುಂತಾದ ಪ್ರಾಮುಖ್ಯ ವಿಷಯಗಳಿಂದ ಕೂಡಿದ ಮಸೂದೆಯೊಂದನ್ನು ತರುವುದಾಗಿ ೧೯೫೬ನೇ ಇಸವಿಯಷ್ಟು ಹಿಂದಿನಿಂದ ಸರಕಾರದವರು ಹೇಳುತ್ತ ಬಂದಿದ್ದರೂ, ಈ ಬಗ್ಗೆ ಕೆಲವು ಸಮಿತಿಗಳನ್ನು ನೇಮಿಸಿ ಅವುಗಳ ವರದಿಯನ್ನು ತರಿಸಿಕೊಂಡಿದ್ದರೂ, ಮಂತ್ರಿ ಮಂಡಳಗಳು ಉರುಳಿಕೊಂಡಂತೆ ಈ ಶಾಸನ ಕ್ರಮದ ಕುರಿತಾದ ಮಾತೂ ಉರುಳುತ್ತಾ ಹೋಗಿದೆ; ನಿಶ್ಚಿತ ರೂಪಕ್ಕೇನೂ ಅದು ಬಂದಿಲ್ಲ. ಒಕ್ಕಲೆಬ್ಬಿಸುವುದನ್ನು ತಡೆಗಟ್ಟಲು ಶಾಸನ ತಂದಿದ್ದಾಗ, ಅದರ ಅವಧಿ ಮುಗಿಯುವುದರೊಳಗೆ ವ್ಯಾಪಕವಾದ ಮಸೂದೆ ತರಲಾಗುವುದೆಂದು ಹೇಳಲಾಯಿತು; ಮೊನ್ನೆ ದಶಂಬರದ ಅಧಿವೇಶನದಲ್ಲಿಯೇ ಮಂಡಿಸಲಾಗುವುದೆಂದಿದ್ದ ಮಸೂದೆ, ಈ ಫೆಬ್ರುವರಿಯಲ್ಲಿ ಬರುವುದೆಂಬ ಉತ್ತರ ಬಂತು; ಅದು ಸಾಧ್ಯವಾಗದಿರಬಹುದೆಂದೊಬ್ಬ ಮಾನ್ಯ ಸದಸ್ಯರು ಶಾಸನ ಸಭೆಯಲ್ಲಿ ಹೇಳಿದಾಗ, "ನಾನಷ್ಟು ನಿರಾಶಾವಾದಿಯಾಗಿಲ್ಲ" ಎಂದು ಮಂತ್ರಿಗಳು ಮಾರ್ಮಡಿಸಿದರು. ಈಗ ಜನರೇ ನಿರಾಶರು ಹೊರತು, ಮಂತ್ರಿಗಳಲ್ಲ—ನಮ್ಮ ಶಾಸನ ಸಭಾ ಸದಸ್ಯರು ಜೂನು ತಿಂಗಳ ಒಳಗಾದರೂ ಹೊಸ ಮಸೂದೆ ಬಂದೀತೆಂದು ತಿಳಿದಿದ್ದರೆ, ಮಂತ್ರಿಗಳು ಈ ವರ್ಷದ ಅಶ್ವಿಯಿಗೆ ಅವಧಿ ದೂಡಿದ್ದಾರೆ: ಅಷ್ಟರಲ್ಲಿ ಮುಂದಿನ ಮಹಾ ಚುನಾವಣೆಯ ಗೊಂದಲ ತೊಡಗುತ್ತದೆ—ಆಗಿನ ಪರ್ವತ ಪ್ರಸವ ಹೇಗಿದ್ದೀತೆಂದು ಪರಿಸ್ಥಿತಿಯನ್ನರಿಯದೆ ಹೇಳುವಂತಿಲ್ಲ. ಏನೇ ಆಗಲಿ, ಒಕ್ಕಲುಗಳಿಗೆ ಹಿತಮಾಡಬೇಕೆನ್ನುವ ಮತ್ತು ಭೂಸುಧಾರಣೆಯ ಕ್ರಮಗಳನ್ನು ತೀವ್ರವಾಗಿಸಬೇಕೆನ್ನುವ ಸರಕಾರ—ಇಷ್ಟು ವಿಳಂಬದ ಧೋರಣೆಯನ್ನು ವಹಿಸುವುದು ಸರಿಯಲ್ಲಿ. ಎಲ್ಲವೂ ಸುಸೂತ್ರ ನಡೆದರೆ, ಮಂತ್ರಿ ಮಂಡಳಕ್ಕಿರುವುದು ಐದು ವರ್ಷಗಳ ಅಧಿಕಾರಾವಧಿ ಮಾತ್ರ—ಆದುದರಿಂದ ಸಯಾಲೋಚನೆ ಮತ್ತು ಪರಿಶೀಲನೆಗಾಗಿಯೇ ಸಮಯ ತೆಗೆದುಕೊಳ್ಳುವುದಕ್ಕೆ ಒಂದು ಮಿತಿಯುಂಟು; ಅದನ್ನು ದಾಟಿ ಹೋಗುವುದೆಂದರೆ ಅಸಹನೆಯನ್ನು ಹೆಚ್ಚಿಸಿದಂತೆ—ಒಕ್ಕಲುಗಳಿಗೆ ಹಿತ ಮಾಡುವ ಪ್ರಾಮಾಣಿಕ ಉದ್ದೇಶ ಸರಕಾರಕ್ಕಿದ್ದರೆ, ಅದು ಉಭಯ ಪಕ್ಷಗಳು, ಅಂದರೆ ಒಕ್ಕಲುಗಳ ಮತ್ತು ಭೂಮಾಲಿಕರ, ವಾದಗಳನ್ನು ಕೂಡಲೇ ಚೆನ್ನಾಗಿ ಕೇಳಿಕೊಂಡು ಬೇಗನೇ ತನ್ನ ಧೋರಣೆಯನ್ನು ಬಹಿರಂಗಗೊಳಿಸಲಿ—ಅಸಮಂಜಸತೆಯಲ್ಲಿಯೇ ಹೆಚ್ಚುಕಮಯವಿದ್ದು ತಾಳ್ಮೆಯ ಪರೀಕ್ಷೆ ನಡೆಸುವುದು ಎಷ್ಟಕ್ಕೂ ಇಷ್ಟವಾಮದಲ್ಲ.

ಕಸ್ತೂರ್‌ಬಾ ಮೆಡಿಕಲ್ ಕಾಲೇಜು

ಶರೀರ ವಿಜ್ಞಾನಾಭ್ಯಾಸ ಭವನದ ಉದ್ಘಾಟನೆ

ಮಾನ್ಯ ಅಮೃತ ಕೌರರಿಂದ

ತಾ. ೨೯—೧—೫೫ನೇ ರಾತ್ರಿ ಕೇಂದ್ರ ಸರಕಾರದ ಆರೋಗ್ಯಮಂತ್ರಿ ರಾಜಕುಮಾರಿ ಅಮೃತಕೌರರು ಮಂಗಳೂರಿನಿಂದ ಮಣಿಪಾಲಕ್ಕೆ ಬಂದರು. ಫಲಾಹಾರ ತೀರಿಸಿಕೊಂಡು ಉಡುಪಿಗೆ ಆಗಮಿಸಿದರು. ಎಸ್. ಆರ್. ಥಿಯೇಟರಿನಲ್ಲಿ ಮಹಿಳಾ ಸಮಾಜದಕಡೆಯಿಂದ

ತೆರೆಯಲಾಗುವ ಹೆಂಗಸರ ಮತ್ತು ಮಕ್ಕಳ ಆರೋಗ್ಯ ಕೇಂದ್ರಗಳ ಸಹಾಯಾರ್ಥವಾಗಿ ಸಜ್ಜುಗೊಳಿಸಲಾದ ಯಕ್ಷಗಾನ ನಾಟಕದಲ್ಲಿ ಭಾಗವಹಿಸಿದರು. ಶ್ರೀಮತಿ ಪ್ರೇಮಾ, ಎ. ಪೈಗಳು ಸ್ವಾಗತವಿತ್ತರು.

ಮರುದಿನ ಬೆಳಿಗ್ಗೆ ವಡಭಾಂಡೇಶ್ವರಕ್ಕೆ ಹೋಗಿ ಅಲ್ಲಿಯ ಸರ್ವೋದಯ ಬಾಗದಲ್ಲಿ ಬಾಪೂಜಿಯ ಪ್ರತಿಮೆಗೆ ಹೊಸಾಲಿಕೆಯನ್ನು ಸಿರಿಸಿ ಮಣಿಪಾಲಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿಯ ಮೆಡಿಕಲ್ ಕಾಲೇಜನ್ನು ಪರಿಶೀಲಿಸಿದರು ನಂತರ ಫಿಟಿಯಾಲಜಿ ಬ್ಲಾಕನ್ನು ಉದ್ಘಾಟಿಸಿದರು. ಡಾ! ಎಸ್. ಆರ್. ಸೈ, ಕೇಸ್ಸರ್ ಮಂಗೇಶ ರಾವ್ ಮೊದಲಾದವರು ಸ್ವಾಗತವಿತ್ತರು. ಎಕಡಮಿ ರಿಜಿಸ್ಟ್ರಾರ್ ಡಾ! ಟಿ. ಎಮ್. ಎ. ಪೈಗಳು ಸ್ವಾಗತಭಾಷಣ ಮಾಡಿ ಕಾಲೇಜಿನ ಇತಿಹಾಸವನ್ನಿತ್ತರು.

ಶ್ರೀ. ಟಿ. ಎ. ಪೈ, ಎಮ್. ಎಲ್ ಎ. ಅವರು ಸಂದೇಶಗಳನ್ನು ಓದಿದರು. ಮಾನ್ಯಮಂತ್ರಿಗಳು ತಾನು ಬಂದುದರ ಉದ್ದೇಶವನ್ನು ವಿವರಿಸಿ ಈ ಕಾಲೇಜಿನಲ್ಲಿ ನಂಗಿತ ಶಿಬಂದಿಯರುವುದನ್ನು ಅಭಿನಂದಿಸಿದರು. ಕಾಲೇಜಿನ ಪ್ರಗತಿಯನ್ನು ಕುರಿತು ಪ್ರಸ್ತಾಪಿಸುತ್ತಾ ಈ ಕಾಲೇಜಿಗೆ ಕಾಲೇಜುಬಸ್ಸಿರದಿರುವುದೇ ಅಸ್ವತ್ರಿ ಇರಬೇಕಾದಅವಶ್ಯಕತೆಯನ್ನು ಸೂಚಿಸಿದರು. ಅಲ್ಲದೆ ಮುಂದಿನ ಪಂಚವರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವುದೆಂದು ಅರಿಸಿದರು. ವೈದ್ಯಕೀಯ ಶಿಕ್ಷಣವು ಕೇರಮಟ್ಟಿಕ್ಕೆ ಎಷ್ಟು ಮಾತ್ರಕ್ಕೂ ಬರಕೂಡದೆಂದೂ, ಈ ಕಾಲೇಜಿನ ವಿದ್ಯಾರ್ಥಿಗಳು ಆದರ್ಶಪ್ರಾಯರಾಗಬೇಕೆಂದೂ ಬಯಸಿದರು. ಪ್ರಿನ್ಸಿಪಾಲ್ ರಮಣ ಮೂರ್ತಿಯವರು ವಂದನೆಗಳನ್ನರ್ಪಿಸಿದರು. ಮಂತ್ರಿಗಳು ಮಣಿಪಾಲದಿಂದ ಮಂಗಳೂರಿಗೆ ತೆರಳಿ ವೆನ್‌ಲೊಕ್ ಮತ್ತು ಲೇಡಿಗೋಶನ್ ಆಸ್ಪತ್ರೆಗಳನ್ನು ಸಂದರ್ಶಿಸಿ, ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ಸೆಕ್ಷನ್‌ನನ್ನು ಪರಿಶೀಲಿಸಿ, ಭೋಜನ ತೀರಿಸಿ ವಿಮಾನಮೂಲಕ ಬೊಂಬಾಯಿಗೆ ತೆರಳಿದರು.

(ಹಸೇ ಪುಟದಿಂದ)

ಮಂತ್ರಿಗಳ ಹೇಳಿಕೆಯಾಗಲೀ ಇದಕ್ಕೆ ಅನುಕೂಲವಾಗಿ ಕಾಣುವುದಿಲ್ಲ. ಸಂಯುಕ್ತ ರಾಷ್ಟ್ರಸಂಘವು ಫೊರ್ಮೋಸದ ವಿಮೋಚನೆಯ ಪ್ರಶ್ನೆಯಲ್ಲಿ ಕೈಯನ್ನೆ ಹಾಕುವಂತಿಲ್ಲವೆಂದು ಕಮ್ಯುನಿಸ್ಟರ ವಾದ. ಆ ದ್ವೀಪ ಸಮುದಾಯಗಳು ಚೀನದ ಅವಿಭಾಜ್ಯ ಅಂಗವಾಗಿದ್ದು, ಇದು ಚೀನದ ಆಂತರಿಕ ಪ್ರಶ್ನೆಯೇ ಹೊರತು ಬಹಿರಂಗ ಚರ್ಚೆಯ ವಿಷಯವಲ್ಲ—ಅಮೆರಿಕದ ಅಮೇರಿಕದ ನಿಲುಮೆಯೇ ಅನ್ಯಾಯ ಎಂದು ಚೀನ ಹೇಳುತ್ತದೆ. ಅಮೇರಿಕವು ಫೊರ್ಮೋಸಾ ಮತ್ತಿತರ ದ್ವೀಪಗಳ ರಕ್ಷಣೆಯ ಬಗ್ಗೆ ಹೊತ್ತಿರುವ ಜವಾಬ್ದಾರಿಯನ್ನು ಈಗಿಂದೀಗ ಬಿಟ್ಟುಕೊಡಲಿ—ಎಂದು ಅವು ಗುಡುಗುತ್ತದೆ

ನೆಹರುಗಳ ಆಕರ್ಷಣೆ

ಇದೇ ಸಮಯ ಲಂಡನಿನಲ್ಲಿ ಕಾಮನ್‌ವೆಲ್ತಿನ ಪ್ರಧಾನ ಮಂತ್ರಿಗಳು ಮಂತ್ರಾಲೋಚನೆಯಲ್ಲಿ ಸೇರಿ ಈಗೆಗೆ ತೀವ್ರ ಬೆಳವಣಿಗೆಯನ್ನು ಹೊಂದಿದ ಫೊರ್ಮೋಸದ ಗಲಭೆಯನ್ನು ಶಾಂತಗೊಳಿಸಲು ತಮ್ಮ ಪ್ರಯತ್ನ ನಡೆಸಿದ್ದಾರೆ. ಇಲ್ಲಿ ಭಾರತದ ಪ್ರಧಾನ ಮಂತ್ರಿ ನೆಹರುಗಳು ವಹಿಸುವ ಪಾತ್ರವನ್ನು ಎಲ್ಲ ರಾಷ್ಟ್ರಗಳೂ ಗಮನವಿಟ್ಟು ನಿರೀಕ್ಷಿಸುತ್ತಿವೆ. ಚೀನದ ಕಮ್ಯುನಿಸ್ಟರ ಕೃದಯವನ್ನು ಬಲ್ಲವರೊಬ್ಬರೆದ್ದರೆ ಅದು ನೆಹರುಗಳೆಂದು ಪಾಶ್ಚಾತ್ಯರ ವಿಶ್ವಾಸ—ಅಮೇರಿಕವು ನಿಲುಮೆಯನ್ನು ಕೆನಡಾ ಮತ್ತು ಬ್ರಿಟನುಗಳು ಇದ್ದುದಿದ್ದಂತೆ ಮುಂದಿದಬ್ಬವಾದುದರಿಂದ ಕಾಮನ್‌ವೆಲ್ತ್ ಪ್ರಧಾನಿಗಳಿಗೆ ಪರಿಸ್ಥಿತಿಯ ಸಮಗ್ರಚಿತ್ತವನ್ನು ಗ್ರಹಿಸಲು ಸಾಧ್ಯ

ಜಿಲ್ಲೆಯ ಕೃಷಿಪದ್ಧತಿ:—

ಮಾನ್ಯಕಂದಾಯಸಂತ್ರಿಗಳು ಮಂಗಳೂರಿಗೆ ದಿನಾಂಕ ೨೯ರಂದು ಆಗಮಿಸಿದಾಗ ಜಿಲ್ಲೆಯ ಕೃಷಿಪದ್ಧತಿಯ ವೈಶಿಷ್ಟ್ಯಗಳನ್ನು ಮುಂದಿಟ್ಟು ಮಾಡಿಕೊಡುವ ಮನವಿಯೊಂದನ್ನು ಇಲ್ಲಿಯ ಭೂಮಾಲಿಕರ ಮತ್ತು ಕೃಷಿಕರ ಪರವಾಗಿ ಅರ್ಪಿಸಲಾಯಿತು. ಇದರಲ್ಲಿ ರಾಜ್ಯದ ಬೇರೆ ಪ್ರದೇಶಗಳಿಗೆ ಯೋಗ್ಯವಾದ ಮಸೂದೆ ಇಲ್ಲಿಯ ಪರಿಸ್ಥಿತಿಗೆ ಒಗ್ಗಲಾರದೆಂದೂ ರಾಜಕೀಯ ಧುರೀಣರು ಕೇವಲ ಪ್ರಚಾರದೃಷ್ಟಿಯಿಂದ ಒಕ್ಕಲುಗಳಿಗೆ ಭದ್ರತೆಕೊಡಲು ಶಾಸನದ ಕುರಿತು ಚಳವಳಿನಡೆಸುತ್ತಿದ್ದಾರೆಂದೂ ಜಿಲ್ಲೆಯಲ್ಲಿ ಭೂಮಾಲಿಕರೊಳಗೂ ಒಕ್ಕಲುಗಳೊಳಗೂ ಅನ್ಯೋನ್ಯತೆಯಿದೆಯೆಂದೂ ಜಂಗಮಾಯಿಗಳಿಗಿಂತಲೂ ಹೆಚ್ಚುತೀರ್ಪೆಕೊಡುವವರು ಕೇವಲ ೩೦೦ ಮಂದಿ ಇದ್ದು ಉಳಿದೆಲ್ಲ ಪಟ್ಟಾದಾರರೂ ಕಡಿಮೆ ಹಿಡುವಳಿಯ ಜನರೆಂದೂ ಜೇಳಿದರು. ಮಂತ್ರಿಗಳು ಉತ್ತರ ಕೊಡುತ್ತಾ ಎಲ್ಲ ವಿಷಯವನ್ನೂ ಸಮರ್ಪಕವಾಗಿ ಆಲೋಚಿಸಲಿದೆ ಶಾಸನಕರ್ತೃಗಳನ್ನುತರೆಯಲ್ಲಿ ನಿಳಂಬವಾಗುತ್ತಿದೆ; ಆದಷ್ಟರದಿಂದ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲ: ಭೂಮಾಲಿಕರ ನ್ಯಾಯ ಸಮ್ಮತ ಹಕ್ಕನ್ನು ರಕ್ಷಿಸಲಾಗುವುದು ಎಂದರು, ಮಾನಸತ್ರ ಮತ್ತು ಬಿನ್ನವತ್ತಳಿ ಕೊಡುವ ಈ ಸಮಾರಂಭವು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಿತು. ವಕೀಲರ್ ಶ್ರೀ ಎಜ್. ಬಾಸಣ್ಣ ಆಳ್ವರು ಮಾನಸತ್ರವನ್ನು ಎತ್ತಿಕೇಟ್ ಶ್ರೀ ಎಂ ಕೆ. ಜೇಪರಾಜರು ಬಿನ್ನವತ್ತಳಿಯನ್ನೂ ಓದಿಅರ್ಪಿಸಿದರು. ಆರೋಗ್ಯಮಂತ್ರಿ ಶ್ರೀ ಎ.ಬಿ. ಶೆಟ್ಟರೂ ಹಾಜರಿದ್ದರು.

ವಾದೀತೆಂದುಹೇಳಲಾಗುತ್ತದೆ ಫೊರ್ಮೋಸದಬಗ್ಗೆ ಈ ಪರಿಹತ್ತ್ವವ್ಯವಹಾರಿಕವಾದ ಮತ್ತು ಯುದ್ಧದ ಜ್ವಾಲೆಯನ್ನು ನೊಂದಿಸುವ ಸೂಚನೆಗಳನ್ನು ಮಾಡಬಹುದೆಂದು ನಿರೀಕ್ಷಿಸಿದರೆ ತಪ್ಪಲ್ಲ. ಆದರೆ ಇದು ಅಷ್ಟು ಸುಲಭದ ಕೆಲಸಮಾತ್ರ ಅಲ್ಲವೆಂಬುದನ್ನು ಮರೆಯಲೂ ಬಾರದು.

ಆ್ಯಟ್ಲಿಯವರ ಅಭಿಪ್ರಾಯ

ಹೇಗಾದರೂ ಶಾಂತಿ ಭಂಗವಾಗದೆ ಸಮಸ್ಯೆ ಕೊನೆಗೊಳ್ಳಬೇಕೆಂದು ಹೇಳುವವರು ಅಮೇರಿಕವು ಈಗ ತನ್ನೆ ಹಿಂದಿನ ನಿಲುಮೆಯನ್ನು ತುಸ ವಾದರೂ ಬದಲಿಸಿದೆಯೆಂದು ಭಾವಿಸಿದ್ದಾರೆ. ಅಮೇರಿಕವು ಚೀನದ ಮುಖ್ಯ ಭೂಮಿಯಿಂದ ಕಮ್ಯುನಿಸ್ಟರನ್ನು ಹೊಡೆದೋಡಿಸಿ,ರಾಷ್ಟ್ರೀಯ ಚೀನದ ಧುರೀಣ ಚಿಯಾಂಗರನ್ನು ಅಲ್ಲಿ ಪ್ರತಿಷ್ಠಾಪಿಸುವ ಹಂಬಲವನ್ನು ಈಗ ತೊರೆದಿದೆಯೆಂದು ಅವರ ಅಂಬೋಣ. ಆದುದರಿಂದ, ಫೊರ್ಮೋಸಾ ಮತ್ತು ಇತರ ದ್ವೀಪಗಳ ತಂಟೆಗೆ ಚೀನದ ಕಮ್ಯುನಿಸ್ಟರು ಹೋಗದಿದ್ದರೆ, ಮತ್ತು ಮುಂದೆ ಸಹ ಹೋಗುವುದಿಲ್ಲವೆಂದು ಪ್ರಾಮಾಣಿಕವಾಗಿ ಸಾರಿದರೆ ಕಮ್ಯುನಿಸ್ಟ ಚೀನದ ಅಸ್ತಿತ್ವವನ್ನು ಮನ್ನಿಸಿ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅದಕ್ಕೆ ಪ್ರವೇಶ ನೀಡಲು ಅಮೇರಿಕ ಒಪ್ಪಬಹುದೆಂದು ಅವರ ಆಶಯ. ಆದರೆ ಇದಕ್ಕೆ ಚೀನದ ಕಮ್ಯುನಿಸ್ಟರು ಒಪ್ಪುವರೆಂಬ ಭರವಸೆ ಏನೇನೂ ಕಾಣುವುದಿಲ್ಲ. ಆದುದರಿಂದ ತತ್ಕಾಲಕ್ಕಾದರೂ "ಎರಡು ಚೀನ"ಗಳ ಅಸ್ತಿತ್ವವನ್ನು ಮನ್ನಿಸಿ ಫೊರ್ಮೋಸವನ್ನೂ ಇತರ ದ್ವೀಪ ಸಮುದಾಯವನ್ನೂ "ತಟಸ್ಥ"ಗೊಳಿಸಬೇಕೆಂದೂ ಮುಂದೆ ಈ ಪ್ರದೇಶದ ಜನರ ಅಭಿಪ್ರಾಯವನ್ನು ತಿಳಿದುಕೊಂಡು, ಕಮ್ಯುನಿಸ್ಟ ಚೀನಕ್ಕೆ ಸೇರಿಸುವುದು ಅಥವಾ ಬಿಡುವುದು ನಡೆಯಲೆಂದೂ ಆ್ಯಟ್ಲಿಯಾಂಥವರ ಅಭಿಪ್ರಾಯ

ವಾರದ ಮಹಾನುಭಾವ

ಮೈಸೂರಿನ ಮುತ್ತಜ್ಜ—ಶ್ರೀ ವಿಶ್ವೇಶ್ವರಯ್ಯ

ಅವಕಾಶವಿಲ್ಲದೆ ಜನರು ಹಿಂದುಳಿಯುತ್ತಾರೆಯೇ ಹೊರತು ಪ್ರತಿಭಾಸ್ಫುರಣ ವೆಂಬುದೇ ಪ್ರಗತಿಗಿರುವ ಅತಂಕವಲ್ಲ ಎಂಬ ಮಾತನ್ನು ಸಮರ್ಥಿಸುವವರಿಗೆ ಕನ್ನಡಿಗರಿಗೆಲ್ಲ ಮುತ್ತಜ್ಜನಂತಿರುವ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜೀವನವೊಂದು ಉತ್ತಮ ನಿದರ್ಶನ. ೯೫ ವಯಸ್ಸು ನಡೆಯುತ್ತಿರುವ ಈ ಮೇಧಾವಿಗಳಿಗೆ ಭಾರತದ ರಾಷ್ಟ್ರಾಧ್ಯಕ್ಷರು ಮೊನ್ನೆ ಪ್ರಜಾರಾಜ್ಯದಿನೋತ್ಸವದ ಸಂದರ್ಭದಲ್ಲಿ "ಭಾರತ ರತ್ನ" ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಕಳೆದ ವರ್ಷ "ಭಾರತ ರತ್ನ" ಪ್ರಶಸ್ತಿ ಪಡೆದ ಮೂವರೂ ದಕ್ಷಿಣ ಭಾರತಕ್ಕೆ ಸೇರಿದ ಮಹಾನುಭಾವರಾಗಿದ್ದರು ಈ ಸಲ ಉತ್ತರ ದಕ್ಷಿಣ ವಿಭಾಗಗಳಲ್ಲಿ ಒಬ್ಬೊಬ್ಬರಿಗೆ ಈ ಪ್ರಶಸ್ತಿ ಕೊಡಲಾಗಿರುವುದು. ಅದೇನೇ ಇರಲಿ, ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಯಾವುದೇ ಒಂದು ಪ್ರಾಂತಕ್ಕೆ ಸೇರಿದವರಲ್ಲ— ಭಾರತದ ನಾಗರಿಕರು ಎಂಬುದು ಎಲ್ಲರೂ ಒಪ್ಪತಕ್ಕ ವಾದ. ಅವರು ಅಖಿಲಭಾರತ ಉತ್ಪಾದಕರ ಸಂಘದ ಅಧ್ಯಕ್ಷರೂ ಮಾರ್ಗದರ್ಶಕರೂ ಹೇಗೆ ಆಗಿದ್ದಾರೋ ಅದೇ ರೀತಿಯಲ್ಲಿ ಭಾರತಕ್ಕೆ ಪ್ರಗತಿ ವಧನನ್ನು ದಿಗ್ದರ್ಶಿಸಬಲ್ಲ ಯೋಗ್ಯತಾವಂತರೂ ಹೌದು.

ಪುಣೆಯ ವಿಜ್ಞಾನ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿಯನ್ನು ಹೊತ್ತು ಬಂದು ಮುಂಬಯಿ ಸರಕಾರದ ಲೋಕೋಪಯೋಗಿ ಖಾತೆಯಲ್ಲಿ ಕೆಲಸಕ್ಕೆ ಸೇರಿಕೊಂಡ ಅಲ್ಪಾವಧಿಯಲ್ಲಿಯೇ ವಿಶ್ವೇಶ್ವರಯ್ಯನವರ ಪ್ರತಿಭೆ ಒಮ್ಮಿದೊಮ್ಮೆ ಎಲ್ಲರನ್ನೂ ಸೆಳೆದುಕೊಂಡಿತು. ಖಾಸ ದೇಶದಲ್ಲಿ ಅವರೊಂದು ಇಂಜಿನಿಯರಿಂಗ್ ಕೌಶಲ್ಯಕ್ಕೆ ಒಪ್ಪಬಹುದಾದ ನೀರಿನ ಕೆಲಸವನ್ನು ಸಮರ್ಥವಾಗಿ ನೆರವೇರಿಸಿ ಅಧಿಕಾರಿವರ್ಗದವರ ಕಣ್ಣನ್ನು ಕುಕ್ಕಿದರು. ೧೯೯೩ ರಲ್ಲಿ ಸಿಂಧೂ ನದಿಗೆ ಸಕ್ಕರ್ ಅಣೆಕಟ್ಟನ್ನು ಕಟ್ಟುವ ಮಹಾಸಾಹಸ ನಡೆದಾಗ ವಿಶ್ವೇಶ್ವರಯ್ಯನವರ ಕಡೆಗೆಯೇ ಎಲ್ಲರ ದೃಷ್ಟಿ ಹರಿಯುವಂತೆ ಇದು ಮಾಡಿತು.

ಸಕ್ಕರ್ ಅಣೆಕಟ್ಟಿನ ರಚನೆಯಲ್ಲಿ ವಿಶ್ವೇಶ್ವರಯ್ಯನವರು ವ್ಯಕ್ತಪಡಿಸಿದ ಕೃಷಿಯ ಆಂಗ್ಲ ಶಿಷ್ಟರನ್ನೂ ದಂಗುಬಡಿಸಿತಲ್ಲದೆ ಗವರ್ನರರಿಂದ ಮುಕ್ತ ಪ್ರಶಂಸೆಯನ್ನು ಗಳಿಸಿತು. ಮುಂಬಯಿಯ ನಗರ ಸಭೆ ವಿಶ್ವೇಶ್ವರಯ್ಯನವರ ಮಹತ್ಕಾರ್ಯವನ್ನು ಪ್ರಶಂಸಿಸಿ ಗೌರವಿಸಿತು. ಮುಂಬಯಿ ಸರಕಾರದಿಂದ ಒಟ್ಟಿಗಿದ್ದ ಇಪ್ಪತ್ತೈದು ವರ್ಷಗಳಲ್ಲಿ ವಿಶ್ವೇಶ್ವರಯ್ಯನವರು ಕುಶಲ ಇಂಜಿನಿಯರೆನೆಂದೂ ದೂರದರ್ಶಿಯಾದ ಮೇಧಾವಿಯೆಂದೂ ಕಲ್ಪನಾ ಚಾತುರ್ಯದಿಂದ ಕೂಡಿದ ಪ್ರತಿಭಾವಂತನೆಂದೂ ಹೆಸರಾದರು.

ಅಲ್ಲಿಂದ ಅವರ ಸೇವೆಯ ಭಾಗ್ಯ ದೊರೆತದ್ದು ಕನ್ನಡದ ಮೈಸೂರಿಯಾದ— ಮೈಸೂರಿಗೆ. ಮುಮ್ಮಡಿ ಕೃಷ್ಣರಾಜ ಒಡೆಯರ ಸಹಾನುಭೂತಿ ವರವಾದ ವರ್ತನೆಯು ಮಹತ್ವಾಕಾಂಕ್ಷಿಗಳಾದ ವಿಶ್ವೇಶ್ವರಯ್ಯನವರನ್ನು ಭಾರತದಲ್ಲಿಯೇ ನೂತನವಾದ ಸಾಹಸಕ್ಕೆ ಪ್ರೇರಿಸಿತು ಶ್ರೀ ರಂಗಪಟ್ಟಣದ ಬಳಿಕ ಕಾವೇರಿಯ ನೀರನ್ನು ಭಂಗಿಸುವಂತೆ ಅಡ್ಡ ರಚಿಸಿದ ಅಣೆಕಟ್ಟು ಗಾಂಭೀರ್ಯದ ಇನಯಿಯ ಆ ಕಾಲದಲ್ಲಿ ಭಾರತವನ್ನು ಬೆರಗುಗೊಳಿಸಿದ್ದರಲ್ಲಿ ಆಶ್ಚರ್ಯವಿಲ್ಲ! ಆಗಿನ ಕಾಲದಲ್ಲಿ ೨೫ ಲಕ್ಷ ರೂಪಾಯಿ ತಗಲಿದ ಈ ಯೋಜನೆಯಿಂದ ನೀರಾವರಿಯ ಅನುಕೂಲತೆಯುದೆ ಭಾರತದಲ್ಲಿಯೇ ಪ್ರಥಮ ವಿದ್ಯುಚ್ಛಕ್ತಿಯ ಸೌಲಭ್ಯವನ್ನೂ ವಿಶ್ವೇಶ್ವರಯ್ಯನವರು ಮೈಸೂರಿಗೆ ಒದಗಿಸಿಕೊಟ್ಟರು.

ಮೈಸೂರಿಗೆ ಒಟ್ಟು ಆರು ವರ್ಷಗಳ ಸೇವೆಯನ್ನು ದಿವಾನರಾಗಿ ವಿಶ್ವೇಶ್ವರಯ್ಯನವರು ಸಲ್ಲಿಸಿದರು. ಗಾಂಧೀಜಿಯವರು "ಮಾದಂ ಮೈಸೂರು" ಎನ್ನುವಂತೆ ಆ ನಾಡನ್ನು ವಿಶ್ವೇಶ್ವರಯ್ಯ ಸಮೃದ್ಧಿಗೊಳಿಸಿದರು; "ಕೃಷ್ಣರಾಜ ಸಾಗರವೊಂದೇ ವಿಶ್ವೇಶ್ವರಯ್ಯನವರಿಗೆ ಪ್ರಸಿದ್ಧಿ ದೊರಕಿಸಲು ಯಥೇಷ್ಟವಾಯಿತು." ಎಂದು ಸ್ವತಃ ಗಾಂಧೀಜಿಯೇ ಈ ಮಹಾನುಭಾವನನ್ನು ಹೊಗಳಿದರು. ವಿಶ್ವೇಶ್ವರಯ್ಯನವರ ಪ್ರಯತ್ನದಿಂದ ಇಂಜಿನಿಯರಿಂಗ ಕಾಲೇಜು ಸ್ಥಾಪನೆಯಾಯಿತು; ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಅಸ್ತಿತ್ವಕ್ಕೆಬಂತು. ಆ ಇಂಜಿನಿಯರಿಂಗ್ ಕಾಲೇಜು ಮೊನ್ನೆ ಅವರನ್ನು ಮುಖ್ಯ ಮಂತ್ರಿ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿಸತ್ಕರಿಸಿದ್ದು ಒಳ್ಳೆಯ ಸಂಪ್ರದಾಯ.

ಶ್ರೀ ವಿಶ್ವೇಶ್ವರಯ್ಯನವರು ನಿಪುಣ ಆಡಳಿತಗಾರ; ಮತ್ತು ಮುನ್ನೋಟವುಳ್ಳ, ಕಾರ್ಯಪಟುತ್ವವುಳ್ಳ ವ್ಯಕ್ತಿ. ಆರೋಗ್ಯದ ಕಡೆಗೆ ವಿಶೇಷ ಲಕ್ಷ್ಯಕೊಡುತ್ತಾರೆ; ಕುಶಾಗ್ರ ಬುದ್ಧಿಯಿಂದ ಎಲ್ಲರನ್ನೂ ಅವರು ಚಕಿತ ಗೊಳಿಸುತ್ತಾರೆ. ಭಾರತವಲ್ಲಿ ಕೈಗಾರಿಕೆಗಳ ವಿಸ್ತರಣಕ್ಕೆ ತುಂಬ ಅವಕಾಶ ವಿದೆಯೆಂದು ಅವರ ಖಚಿತ ಅಭಿಪ್ರಾಯ. ಭಾರತ ಸರಕಾರದ ವಿಳಂಬ ಧೋರಣೆ ಅವರ ಮನಸ್ಸಿಗೆ ಅಷ್ಟು ಸರಿಬರುವದಿಲ್ಲ. ಈ ಹಿರಿಯನ ಮಾತನ್ನು ಕೇಳಿಕೊಂಡು ಗೌರವಿಸುವಷ್ಟು ವಿನಯವೂ ಸಮೃದ್ಧ ಧೀಶಕ್ತಿಯೂ ಇಲ್ಲ. ಇದು ತುಸು ಶೋಚನೀಯವಾದ ವಿಚಾರ—ಆದರೆ ಸ್ವತಃ ವಿಶ್ವೇಶ್ವರಯ್ಯನವರು ಏನೂ ಬೇಸರ ಪಡುವುದಿಲ್ಲ. ಅವರು ತಮ್ಮ ನಂಬಿಕೆಯ ಮಾತನ್ನು ಸಂದರ್ಭ ದೊರೆತಾಗಲೆಲ್ಲ ಜನರ ಮುಂದೆ ಇಡಲು ಹಿಂಜರಿಯುವುದಿಲ್ಲ. ಆದುದರಿಂದ ಅವರು ದೀರ್ಘಾಯುಷಿಗಳಾಗಿ ಬದುಕಿ ನಾಡಿಗೆ ಮಾರ್ಗದರ್ಶನ ನೀಡುತ್ತಿರಲೆಂದು ನಾವು ಹಾರೈಸುವುದು ಸಹಜ.

ಮದ್ರಾಸು ಬಾನುಲಿಯಿಂದ ತಾ. ೧-೨-೫೫ ರವಿವಾರ ಬೆಳಿಗ್ಗೆ ೧-೫೦ರಿಂದ ೧-೪೫ರ ತನಕ ಸ್ವಾದಿ ಯಕ್ಷಗಾನ ಕೃಷ್ಣ ಸಂಧಾನ ಪ್ರಸಾರವಾಗಲಿದೆ.

ಕೊಡವೂರು ಶ್ರಿ ಶಂಕರನಾರಾಯಣ ದೇವರ ಸನ್ನಿಧಿಯಲ್ಲಿ ವರ್ಷಂಪ್ರತಿ ನಡೆಯುವ ದೊಡ್ಡ ರಂಗಪೂಜೆಯು ಫೇಬ್ರವರಿ ತಾ 7 ನೇ ಸೋಮವಾರ ಮತ್ತು ಶ್ರೀ ಮನ್ಮಹಾ ರಥೋತ್ಸವವು ತಾ 9 ನೇ ಬುಧವಾರ ನಡೆಯುವುವು. ಭಕ್ತಾದಿಗಳು ಬಂದು ಸಹಕರಿಸಿ ಶ್ರೀ ಮುಡಿ ಗಂಧ ಪ್ರಸಾದಗಳನ್ನು ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಆಡಳಿತೆ ಪೊಕ್ಕೇಸರ ಡಾ| ಕೆ. ಎಲ್. ಐತಾಳರು ಅಪೇಕ್ಷಿಸುತ್ತಾರೆ.

ಸುಳ್ಯ— ಇಲ್ಲಿಯ ಯೂನಿಯನ್ ಮಹಾಸಭೆಯು ತಾ 22 ರಲ್ಲು ಪೆರುವಾಜೆ ಸಂಘದ ಆಫೀಸಿನಲ್ಲಿ ಶ್ರೀ ಐತಪ್ಪ ಗೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮಂದಾರ್ತಿ—ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಇದೇ ತಾ.10 ರಿಂದ 15ರ ತನಕ ಕಾಲಾವಧಿ ರಥೋತ್ಸವ ಜಾತ್ರೆ ನಡೆಯಲಿರುವುದು. ತಾ. 13ರಲ್ಲಿ ಮಹಾ ರಥೋತ್ಸವ.

ಮೂಡಬಿದ್ರಿ—ಜೈನಪ್ರಾಥ ಶಾಲೆಯ ವರ್ಷಂತಿ ಸಮಾರಂಭವು ಕಳೆದ ತಾ. 29ರಲ್ಲಿ ಜಿಲ್ಲಾ ಬೋರ್ಡ ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಲಲಿತ ಕೆ. ಹೆಗ್ಡೆಯವರು ಬಹುಮಾನವಿತರಣೆ ಮಾಡಿದರು. ಶಾಲಾ ಸ್ವಸ್ತಿ ವಾಚನವನ್ನು ಶ್ರೀ ಎಲ್. ಸಿ. ಸೋನ್ಸರವರು ಮಾಡಿದರು. ವಿವಿಧ ವಿನೋದಾವಳಿಗಳಿಂದ ಸಮಾರಂಭ ಕೊನೆಗೊಂಡಿತು.

ಕಿದಿಯೂರು - ತಾ. 26ರಲ್ಲಿ ಪ್ರಜಾ ಪ್ರಭುತ್ವ ದಿನಾಚರಣೆಯು ಕಿದಿಯೂರು ಎಯುಡೆಂ ಹಾ| ಎ| ಶಾಲೆಯಲ್ಲಿ ಶ್ರೀ ಕೆ. ಎಲ್. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿಯೂ ಪಂಡ್ಯಾಟ ಮತ್ತು ಶಿಬಿರಾಗ್ನಿ ದಿನಾಚರಣೆಯು ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿಯೂ ಜರಗಿದವು.

ಕನ್ನಿಗೋಳಿ— ಇಲ್ಲಿಯ ಜೋಸ್ಫಾಫೀಸಿನ ಸೂತನ ಕಟ್ಟಿದ ಹಾಗೂ ಗಾಂಧೀಜೀಯವರ ಭಾವಚಿತ್ರ ಅನಾವರಣ ಸಮಾರಂಭವು ತಾ. 30ರಲ್ಲಿ ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎ. ಕೆ. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಹಂಗಾರಕಟ್ಟೆ—ಸ್ಥಳೀಯ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. 26ರಲ್ಲಿ ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಅಣಕ ಪಾರ್ಲಿಮೆಂಟ್ ಅಧಿವೇಶನ ನಡೆಯಿತು.

ಬೈಂದೂರು—ತಾ 26 ರಲ್ಲು ಪ್ರಜಾರಾಜ್ಯ ದಿನಾಚರಣೆಯಸಲುವಾಗಿ ವೃತ್ತಿ, ನ್ಯಾಪಸಾಯ್ಯ ಗುಡಿ ಕೈಗಾರಿಕೆ, ಜಾನುವಾರು ಮತ್ತು ಕಲಾ ಪ್ರದರ್ಶನಗಳು ಶ್ರೀ ಕೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪಿ. ಕುರುಪ್, ಅವರು ಧ್ವಜ ಆರೋಹಿಸಿ ಬಹುಮಾನ ವಿತರಣೆ ಮಾಡಿದರು.

ಹಿರೆಬೆಟ್ಟು: ಪಟ್ಲ ಬೋಳಮಾನ್ಯ ತಿಲಕ ಹಾ| ಎ| ಶಾಲೆ ಮತ್ತು ಗಣಪತಿ ಎಯುಡೆಡ್ ಎ| ಶಾಲೆಗಳಲ್ಲಿ ಪ್ರಜಾರಾಜ್ಯ ದಿನಾಚರಣೆಯು ಡಾ| ಎಮ್. ಜಾಬುರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಾಡಿಳ ಗೋವಿಂದ ಸೆಟ್ಟರು ಧ್ವಜಾರೋಹಣ ಮಾಡಿದರು.

ಬಡನಿಡಿಯೂರು— ಸ್ಥಳೀಯ ಕರ್ನಾಟಕ ಸಂಘದಲ್ಲಿ ತಾ 26 ರಲ್ಲು ಪ್ರಜಾರಾಜ್ಯ ದಿನಾಚರಣೆಯು ವಕೀಲ್ ಶ್ರೀ ಕೆ. ವೆಂಕಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸುರತ್ಕಲ್— ಅಗ್ಗಿದಕಳಿಯ ಹಾ| ಎ| ಶಾಲೆಯಲ್ಲಿ ಗಂಗಯ್ಯ ಸ್ಮಾರಕ ರಾತ್ರಿ ಶಾಲೆಯ ಪಡನಾಟದಿಂದ ತಾ 26 ರಲ್ಲು ಪ್ರಜಾರಾಜ್ಯ ದಿನಾಚರಣೆಯು ಶ್ರೀ ಯು. ಉಪೇಂದ್ರನವರ ಅಧ್ಯಕ್ಷತೆಯಲ್ಲಿ ಯಕ್ಷಗಾನಾದಿ ಕಾರ್ಯಕ್ರಮಗಳಿಂದ ಜರಗಿತು.

ನಿಂಜೂರು – ತಾ. 26ರಲ್ಲಿ ಶ್ರೀ ವಿವೇಕಾನಂದ ಸೇವಾಸಂಘ ಮತ್ತು ಪಂಚಾಯತ ಬೋರ್ಡಿನ ಸಂಯುಕ್ತ ಆಶ್ರಯದಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಶ್ರೀರಾಮ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ಆರ್ ಗುರುರಾಘವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಶೀರೂರು—ಇಲ್ಲಿಯ ಎಯುಡೆಡ್ ಎಲಿಮೆಂಟರಿ ಶಾಲಾ ಹಳೆವಿದ್ಯಾರ್ಥಿಗಳು ತಾ.16 ಮತ್ತು 17ರಲ್ಲಿ ಶಾಲಾ ಕಟ್ಟೋಣದ ಸಹಾಯಾರ್ಥವಾಗಿ 'ಭಕ್ತ ವಿಜಯ ಮತ್ತು ಅರ್ಜುನನ ಗರ್ವಭಂಗ ನಾಟಕಗಳನ್ನು ಅಭಿನಯಿಸಿ ರೂಪ್ಯಾ 518/ನ್ನು ನಗದುಶೇಖರಿಸಿರುತ್ತಾರೆ.

ಬೆಳ್ಳಾರೆ— ಬೋರ್ಡ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 22-1-55 ರಂದು ಹಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು.

ಸಾರ್ವಜನಿಕ ಸಹಾಯದಿಂದ ನಿರ್ಮಿಸಲಾದ ದಿ| ಯನ್. ಎಸ್. ಕಿಟ್ಟಿ ಸ್ಮಾರಕ ಪು

ಉಡುಪಿ

ಪ್ರಜಾಪ್ರಭುತ್ವ ದಿನಾಚರಣೆಯು ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ದಿ| ಮುನ್ಸಿಫ್ ಯು. ಹಮ್ಮಬ್ಬನವರು ಗಾಂಧಿ ಪ್ರತಿಮೆಯಲ್ಲಿ ಧ್ವಜಾರೋಹಣ ಮಾಡಿದರು. ಡಾ| ಸುಂದರರಾಮಯ್ಯ, ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಭಾಷಣಗಳಾದ ಮೇಲೆ ವಿವಿಧ ಆಟ ಪಂದ್ಯಾಟಗಳು ನಡೆದವು, ಸಂಜೆ ಡಾ| ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಎನ್. ಸೀತಾರಾಮ ಶಾಮತರ ಸ್ವಾಗತ, ಟಿ. ಎ. ಪೈ, ಎಂ. ಎಲ್. ಎ, ಎ. ಜೆ. ಆಳ್ವ ಅಧ್ಯಾಕ್ಷರ ಭಾಷಣಗಳಾದುವು. ಶ್ರೀಮತಿ ಸುಭದ್ರಾ ಮೆನೋನರು ಸ್ಪರ್ಧೆಯಲ್ಲಿ ಗೆದ್ದವರಿಗೆ ಇನಾಮಗಳನ್ನು ಹಂಚಿದರು.

ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ಶ್ರೀ. ಟಿ. ರಮಾನಾಥ ಪೈಗಳು ದಾನವಿತ್ತ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಭಾವಚಿತ್ರದ ಅನಾವರಣವನ್ನು ಪ್ರಿನ್ಸಿಪಾಲ್ ಕಾಲಗಿ ಶೇಷಾಚಾರ್ಯರು ಶ್ರೀ. ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಹೆ| ಮಾ| ಆನಂತಕೃಷ್ಣ ಸಾಮಗರು ಸ್ವಾಗತ ಭಾಷಣ ಮಾಡಿದರು.

ತಾ. 23ರಂದು ಬೋರ್ಡು ಹೈಸ್ಕೂಲಿನ ಸಾಯನ್ಸ್ ಕ್ಲಬ್ಬಿನ ಆಶ್ರಯದಲ್ಲಿ ನಿರ್ಮಿಸಲಾದ ಪ್ರದರ್ಶನದ ಉದ್ಘಾಟನೆ ಮತ್ತು ಸರ್ ಮೈಸೀಲ್ ಫರಾಡಿಯವರ ತೈಲಚಿತ್ರ ಅನಾವರಣ ಪ್ರಿನ್ಸಿಪಾಲ್ ಎಚ್. ಸುಂದರರಾಯರಿಂದ ಶ್ರೀ ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು.

ತಾ. 4-2-55ನೇ ಶುಕ್ರವಾರ ಸಂಜೆ 5-30ಕ್ಕೆ ಸ್ಥಳೀಯ ಬೋರ್ಡು ಹೈಸ್ಕೂಲಿನ ವರ್ಷಾಂತ್ಯೋತ್ಸವವು ಎಂಡೋಮೆಂಟ್ ಆಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎನ್. ಮಾಧವ ರಾವ್, ಎಂ. ಎ., ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ ಹಳೆ ವಿದ್ಯಾರ್ಥಿಗಳೂ ಸರ್ವ ವಿದ್ಯಾಭಿಮಾನಿಗಳೂ ಬಂದು ಪ್ರೋತ್ಸಾಹಿಸಬೇಕಾಗಿ ಪೆ| ಮಾ| ಶ್ರೀ ಬಿ. ಅನಂತಕೃಷ್ಣ ಸಾಮಗರು ವಿನಂತಿಸುತ್ತಾರೆ.

ಹುಡುಗರ ಟ್ರೈನಿಂಗ್ ಶಾಲೆಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯು ಹೆ| ಮಾ| ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಇದೇ ಶಾಲೆಯ 30 ಹಿರಿಯ ವರ್ಗದ ವಿದ್ಯಾರ್ಥಿಗಳು ಅಧ್ಯಾಪಕ ಶ್ರೀ. ಶ್ರೀಪತಿ ರಾವ್ ಫಲಿಮಾರ್ಕರರ ನೇತೃತ್ವದಲ್ಲಿ ಮಾಡಬಿದ್ರಿ, ಧರ್ಮಸ್ಥಳ ಮೊದಲಾದ ಕಡೆಗಳಿಗೆ ಶೈಕ್ಷಣಿಕ ಪ್ರವಾಸವನ್ನು ಕೈಕೊಂಡು 30 ರಂದು ಹಿಂದಿರುಗಿರುವರು.

ಸರ್ವೋದಯ ಮೇಳವು ತಾ 12ನೇ ಬೆಳಗ್ಗೆ 7 ಗಂಟೆಯಿಂದ ಕಡಿಭಾಂಡೇಶ್ವರದಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಾಡಿಕೆಯಂತೆ ಜರಗುವುದೆಂದೂ ಸರ್ವರೂ ಭಾಗವಹಿಸಬೇಕೆಂದು ಶ್ರೀ ಕೆ. ಶ್ರೀನಿವಾಸ ಪೈಗಳು ವಿನಂತಿಸುತ್ತಾರೆ.

ಕ್ರಿಶ್ಚಿಯನ್ ಹೈಸ್ಕೂಲ್ ವರ್ಧಂತ್ಯುತ್ಸವವು ಕಳೆದ ತಾ 28ರಂದು ದಿ| ಮುನ್ಸಿಯ. ಹಮ್ಮಬ್ಬನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಹೆ| ಮಾ| ಶ್ರೀ ಎಸ್. ಎನ್. ಪಂತಾಯಸರರು ಸ್ವಾಗತಿಸಿ, ಸರದಿಯನ್ನೋದಿದರು. ಶ್ರೀ ಕೊಚ್ಚಿಕಾರ್ ವರದರಾಯ ಪೈಗಳು ಸ್ವಸ್ತಿವಾಚನದಲ್ಲಿ ಹೈಸ್ಕೂಲಿನ ಅಭಿವೃದ್ಧಿಯನ್ನು ಶ್ಲಾಘಿಸಿದರು. ಬಹುಮಾನ ವಿತರಣೆ, ಹಸ್ತಪತ್ರಿಕೆಯ ಉದ್ಘಾಟನೆಗಳಾದ ಮೇಲೆ ಅಧ್ಯಕ್ಷರು ವಿದ್ಯಾಕ್ರಮದ ಸುಧಾರಣೆಯನ್ನು ಪ್ರಸ್ತಾಪಿಸಿ, ವಿದ್ಯಾರ್ಥಿಗಳಲ್ಲಿ ವಿನಂತಿ ಅಗತ್ಯವೆಂದರು. ಬಳಿಕ ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ನೆರವೇರಿದವು.

ಎಂ. ಜಿ. ಯಂ. ಕಾಲೇಜಿನ— ಆರನೇ ವರ್ಷಂತಿಯು ತಾ. 1—2—55ನೇ ಸಂಜೆ ಆರ್ಥಿಕ ಮತ್ತು ವಿದ್ಯಾಮಂತ್ರಿ ಶ್ರೀ. ಸಿ. ಸುಬ್ರಹ್ಮಣ್ಯಂ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ವಾಗತಾನಂತರ ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಶ್ರೀ. ಎಸ್. ಶ್ರೀಪತಿ ಬಲ್ಲಾಳರು ಸ್ವಸ್ತಿವಾಚನಮಾಡಿದರು. ಅಧ್ಯಕ್ಷರಉತ್ತರವಾದಬಳಿಕ ಪ್ರಿನ್ಸಿಪಾಲ್ ಎಚ್ ಸುಂದರರಾಯರು ವರದಿಯನ್ನರ್ಪಿಸಿದರು. ಪಾರಿತೋಷ ವಿತರಣೆಯಾದ ಮೇಲೆ ಅಧ್ಯಕ್ಷರು ಇಂದಿನ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಉಲ್ಲೇಖಿಸಿ ಭಾಷಣವಿತ್ತರು. ರಾತ್ರಿ ವಿವಿಧ ವಿನೋದಾವಳಿಗಳು ಜಯಶೀಲವಾಗಿ ಪ್ರದರ್ಶಿಸಲ್ಪಟ್ಟಿಪು.

ತಾ. 31ರಂದು ಕಾಲೇಜಿನ ಯೂನಿಯನ್ ದಿನಾಚರಣೆಯು ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ| ಇ. ಜೆ. ಜೆಕ್ಕೊಸ್ ಇವರ ಅಧ್ಯಕ್ಷತೆಯಲ್ಲಿಯೂ ತಾ. 2ರಂದು ಹೊಸ್ಟೆಲ್ ದಿನಾಚರಣೆಯು ದಿ| ಮುನ್ಸಿ ಯು. ಹಮ್ಮಬ್ಬನವರ ಅಧ್ಯಕ್ಷತೆಯಲ್ಲಿಯೂ ಯಶಸ್ವಾಂಗವಾಗಿ ಜರಗಿದವು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಅಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುಬೆಲು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಸತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುಶಿಷ್ಯರ ದೇವರಸಿ (ಕುಬೆಲು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಸತ್ರಸಾರ	೨	೮
ಮಿಂಚುಗೊಟಿಕೆ ಒಂದೊಳ್ಳೆಸಾರ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀಪಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೭
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಸ್ಥಾರಿ	೧	೦
ಶ್ರೀ ಗುರುದೇವರ ವಚನ	೧	೦
ಅನಾಥನಾಥ ಯಾತ್ರೆ	೧	೦
ಭಸ್ಮತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮ [illegible]	೦	೧೦
ಭರ್ತಸೂನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಬೇಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನೆ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈನಾಚಲ ಸಾನ್ನಿಧ್ಯದಲ್ಲಿ (ಕೇದಾರ ದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಸ್ತಕ ಭಂಡಾರವು ತಾ 31-1-55 ರಲ್ಲಿ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿರಿಂದ ಉದ್ಘಾಟಿಸಲ್ಪಟ್ಟಿತು. ವಕೀಲ್ ಕೆ. ಆರ್. ಆಚಾರ್ ಇವರು ಅಧ್ಯಕ್ಷತೆವಹಿಸಿದ್ದರು. ಬೆಳ್ಳಾರೆ ಪ್ರಾಂತದ ಮಾಶಾ ಜನರ ಪರವಾಗಿ ಶ್ರೀ ಬಿ. ನಾರಾಯಣ ಶೇಕರು ಮಂತ್ರಿಗಳಿಗೆ ಮಾನಪತ್ರವೊಂದನ್ನರ್ಪಿಸಿದರು. ದಿ. ಕಿಟ್ಟಿಯವರ ತೈಲಚಿತ್ರದ ಅನಾವರಣವು ನರ್ತನ, ಪ್ರಸಿದ್ಧ ಯಕ್ಷಗಾನ ಪಟುಗಳಿಂದ ಯಕ್ಷಗಾನಕೂಟವೂ ಜರಗಿದವು.



ನಿಮ್ಮ ಆಸೆ, ನಿಮ್ಮ ಆಕಾಂಕ್ಷೆ ನಿಮ್ಮ ರಸಿಕತೆ, ನಿಮ್ಮ ಸುಪ್ತ ತೃಷ್ಟಿ ಇವೆಲ್ಲಾ ಒಂದೇಬಾರಿ ಈಡೇರಿಸಲು ಈ ನೆಚ್ಚಿನ ಕನ್ನಡ ಚಿತ್ರ ಬಹುದಿನಗಳ ಬಳಿಕ ಬಂದಿದೆ—

ಅದೇ ಕಲಾಕಾರನೊಬ್ಬನ ಜೀವನದ ಹಾಸ್ಯಪೂರ್ಣ ಚಿತ್ರ—

ನಟಶೇಖರ (ಕನ್ನಡ)

ಸಂಧ್ಯಾ, ವಿದ್ಯಾ, ಕಲ್ಯಾಣಕುಮಾರ್, ರಾಮಚಂದ್ರ ಶಾಸ್ತ್ರಿ, ಮರಿರಾವ್, ಶಾಂತಿಗ್ರಾಮ್ ಮೊದಲಾದವರು

ಕಥೆ: ಸಂಭಾಷಣೆ: ನಾಡಿಗೇರ ಕೃಷ್ಣರಾವ್. ಸಂಗೀತ: ಕಾಳಿಂಗರಾವ್.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾ. 4-2-1955 ರಿಂದ.

ಮಂಗಳೂರು

ಕೇಂದ್ರ ಆರೋಗ್ಯ ಮಂತ್ರಿಗಳಿಗೆ ನಗರ ಸಭೆಯ ಮಾನಪತ್ರ- ಕೇಂದ್ರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರು ತಾ ೨೨ ರಲ್ಲು ಸಂಜೆ ಮೈಲ್‌ಗಾಡಿಯಲ್ಲಿ ಮಂಗಳೂರಿಗೆ ಬಂದಿಳಿದರು. ಅವರ ಜತೆಯಲ್ಲಿ ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಸೆಟ್ಟಿ, ಭಾರತದ ಡೈರೆಕ್ಟರ್ ಜನರಲ್ ಮೆಡಿಕಲ್ ಸರ್ವಿಸಸ್ ಕರ್ನಲ್ ಸಿ. ಕೆ. ಲಕ್ಷ್ಮಣನ್, ಮದ್ರಾಸು ರಾಜ್ಯದ ಟಿ ಕೃಷ್ಣಸಂಗಮ ಲಾರ್, ಮೊದಲಾದವರು ಬಂದಿದ್ದರು. ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ಎ. ಕುಂಞಾಮ್ಮದ್, ಶ್ರೀಗಳಾದ ಯು. ಶ್ರೀನಿವಾಸ ಮಲ್ಯ, ಡಾ! ಟಿ. ಎಮ್. ಎ. ಪೈ, ಡಾ! ಕೆ. ಕೆ. ಹೆಗ್ಡೆ, ಕೆ. ಸೂರ್ಯನಾರಾಯಣ ಅಡಿಗ, ಬಿ. ಸಿ. ಬಾಳಿಗ, ಎಮ್. ಎಲ್. ಎ. ಟಿ. ಎ. ಪೈ, ಎಮ್ ಎಲ್. ಎ, ಮೊದಲಾದವರು ಸ್ವಾಗತಿಸಿದರು.

ನಗರಸಭೆಯ ಕಡೆಯಿಂದ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾನ್ಯಸಂತ್ರಿಗಳಿಗೆ ಮಾನಪತ್ರವನ್ನರ್ಪಿಸಿದರು. ರಾಜಕುಮಾರಿಯವರು ಉತ್ತರವೀಯುತ್ತಾ ,ಭಾರತ ಸರಕಾರವು ತಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ರೋಗನಿವಾರಣೆಗಿಂತಲೂ, ನಿರೋಧ ಕಾರ್ಯಕ್ರಮಕ್ಕೆ ಹೆಚ್ಚಿನ ಗಮನವೀಯುತ್ತಲಿದೆ. ಹೀಗಾಗಿ ಸ್ವಾತಂತ್ರ್ಯದನಂತರ ಭಾರತದ ಜನತೆಯ ಆಯುಷ್ಯಮಾನವು ಐದುವರ್ಷಜಾಸ್ತಿಯಾಗಿದೆ. ಕ್ಷಯರೋಗ ನಿರೋಧಕಾರ್ಯವೂ ಸಾಗುತ್ತಿದೆ. ಜನತೆ ಈ ಎಲ್ಲಾ ಕಾರ್ಯಕ್ರಮಗಳೊಡನೆ ಸಹಕರಿಸ ಬೇಕು. ದ. ಕ. ಜಿಲ್ಲೆ ಮತ್ತು ಮಲಬಾರು ಜಿಲ್ಲೆಗಳಿಗಾಗಿ ಅನೇಕಾಲು ನಿರೋಧ ಕೇಂದ್ರವನ್ನು ಮದ್ರಾಸು ಸರಕಾರವು ಸ್ಥಾಪಿಸಲು ನಿರ್ಧರಿಸಿರುವುದು ಎಂದು ಹೇಳಿದರು. ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಕುರಿತು ಪ್ರಸ್ತಾಪಿಸುತ್ತಾ, ಭಾರತವು ಸ್ವತಂತ್ರವಾದಬಳಿಕ ಜನತೆ ಸ್ಥಳೀಯ ಸಂಸ್ಥೆಗಳನ್ನು ಮರೆತಂತಿದೆ. ಎಲ್ಲರೂ ಎಸೆಂಬ್ಲಿ, ಪಾರ್ಲಿಮೆಂಟ್ ಸದಸ್ಯರಾಗಲು ಯತ್ನಿಸುತ್ತಿದ್ದಾರೆ. ಪರಿಣಾಮವಾಗಿ ಸ್ಥಾನಿಕ ಸಂಸ್ಥೆಗಳಿಗೆ ಸಮರ್ಥ ಸದಸ್ಯರ ಅಭಾವವಿದೆ. ನಗರ ಸಭಾ ಸದಸ್ಯರು ನಗರದ ಕ್ಷೇಮಚಿಂತನೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಎಂದು ಮಂತ್ರಾಗಿ ಹೇಳಿದರು. ನಂತರ ಉಡುಪಿಗೆ ಪ್ರಯಾಣ ಬೆಳೆಸಿದರು.

ಪ್ರಜಾರಾಜ್ಯ ದಿನೋತ್ಸವ: ಮಂಗಳೂರು ರಪರಿನ ಎಲ್ಲಾ ಸಂಸ್ಥೆಗಳಲ್ಲಿ ತಾ 26 ರಲ್ಲು ಪ್ರಜಾರಾಜ್ಯ ದಿನಾಚರಣೆ ನಡೆಯಿತು ಸರಕಾರಿ ಕಟ್ಟಡಗಳನ್ನೆಲ್ಲ ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿತು. ಸಂಜೆ ಕೇಂದ್ರ ಮೈದಾನದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಪಂಚುವ ಸಮಾರಂಭವು ನಗರ ಸಭಾಪತಿ ಶ್ರೀ. ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ಕಟ್ಟೆ, ಕೆ. ಆರ್. ಆಚಾರ್, ಎಲ್. ಸಿ. ಪಾಯಸ್, ಬಿ. ಆರ್. ಕರ್ಕೇರ ಮೊದಲಾದವರುಮಾತನಾಡಿದರು. ಬಲ್ಮಠ ಸಂಗೀತ ಸಭೆಯವರು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಂಗೀತೋತ್ಸವ ಜರಗಿಸಿದರು..

ಕಂದಾಯ ಮಂತ್ರಿ ಶ್ರೀ ಎಮ್. ಮಾಣಿಕ್ಯ ವೇಲುನಾಯಕರ್ ರವರು ತಾ. 28ರಲ್ಲಿ ಸಂಜೆಮಂಗಳೂರಿಗೆ ಆಗಮಿಸಿದರು. ಅವರನ್ನು ಜಿಲ್ಲಾ ಕಲೆಕ್ಟರ್ ಜಿಲ್ಲಾಜೋರ್ಡ್ ಅಧ್ಯಕ್ಷ, ನಗರ ಸಭಾಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮೊದಲಾದವರು ಸ್ವಾಗತಿಸಿದರು. ಮಂತ್ರಿಗಳು ಸನ್ಯಾಸಿ ಗುಡ್ಡೆಯ ಆರ್ಯ ಸಮಾಜದ ಶ್ರೀ ಸ್ವಾಮಿ ಶ್ರದ್ಧಾನಂದ ಸೇವಾಶ್ರಮವನ್ನೂ ಕಂಕನಾಡಿಯ ಬಾಲಿಕಾಶ್ರಮ, ಬೋಳಾರದ ಶ್ರೀ ರಾಮಕೃಷ್ಣ ಅನಾಥ ಆಶ್ರಮಕ್ಕೂ ಸಂದರ್ಶಿಸಿ ತೃಪ್ತಿಪಟ್ಟರು.

ದ. ಕ. ಜಿಲ್ಲಾ ಪಂಚಾಯತ ಸಮ್ಮೇಳನವು ತಾ. 29ನೇ ಬೆಳಿಗ್ಗೆ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕರಿಂದ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಉದ್ಘಾಟಿಸಲ್ಪಟ್ಟಿತು. "ಹಿಂದಿನಿಂದಲೂ ಪಂಚಾಯತ ಕ್ರಮವೇ ಭಾರತದಲ್ಲಿ ರೂಢಿಯಲ್ಲಿತ್ತೆಂದೂ ಅದರೆ ಇಂದು ಅಂತರ್ಕಲಹ ಪಕ್ಷಪಾಗಡಗಳಿಂದಾಗಿ ಪಂಚಾಯತ ಅತಿಶಯ ಶಿಥಿಲವಾಗುತ್ತಿದೆಯೆಂದೂ, ಜೋಸಪೋಸಗಳು ತೊರಿಬರುತ್ತಿವೆಯೆಂದೂ ಪಂಚಾಯತುಗಳಿಗೆ ಪೋಲೀಸು ಮೊದಲಾದ ಹೆಚ್ಚಿನ ಅಧಿಕಾರವಿತ್ತರೆ ದುರುಪಯೋಗ ವಾಗಬಹುದೆಂದೂ ಅವರು ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಆರಂಭದಲ್ಲಿ ಜಿಲ್ಲಾ ಜೋರ್ಡು ಅಧ್ಯಕ್ಷ ಡಾ! ಕೆ. ಕೆ. ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಶ್ರೀ ಟಿ. ಮಂಜಯ್ಯ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಆರ್. ಕೆ. ಸಂಜೀವರಾಯರು ಸ್ವಾಗತ ಭಾಷಣಮಾಡಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಭಾಷಣವಾಗಿ ರಚಾವುಗಳ ಕುರಿತು ವಿಮರ್ಶೆನಡೆಯಿತು. ಮಧ್ಯಾಹ್ನದ ಸಭೆಯಲ್ಲಿ ಶ್ರೀ. ಬಿ. ವಿ. ಮುತ್ತು ಸ್ವಾಮಿಯವರೂ, ಶ್ರೀ. ಎಂ. ಸುಂದರರಾಯರೂ ಭಾಷಣಗಿತ್ತರು.

ಮರುದಿನದ ಸಭೆ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಪಂಚಾಯತ ಅಸಥಿಯನ್ನು 3 ರಿಂದ 5 ವರ್ಷಕ್ಕೇರಿಸಬೇಕೆನ್ನುವ, ಗೆಸ್ತು ಮತದಾನ ಪದ್ಧತಿಯಿಂದಲೇ ಪಂಚಾಯತ ಚುನಾವಣೆ ನಡೆಯಬೇಕೆನ್ನುವ ಇತ್ಯಾದಿ ರಚಾವುಗಳಾಗಿ ಅಡಳಿತೆ ಕಮಿಟಿ ರಚಿಸಲ್ಪಟ್ಟಿತು.

ಹೆಜ್ಜಾಡಿ ಕೋಡಿಯಲ್ಲಿ ಮಂತ್ರಿ ಮಾನ್ಯ ಮಾಣಿಕ್ಯವೇಲು ನಾಯಕರ್‌ರವರು ತಾ 29 ನೇ ಮಧ್ಯಾಹ್ನ ಹೆಜ್ಜಾಡಿ ಕೋಡಿಗೆ ಹೋಗಿ ಅಲ್ಲಿ ನೆರೆದ ಗ್ರಾಮಸ್ಥರ ಸ್ವಾಗತಪಡೆದರು. ಶ್ರಿ. ಎನ್. ಎನ್. ಸುವರ್ಣ, ಎಮ್ ಎಲ್. ಎ. ಅವರು ಗ್ರಾಮಸ್ಥರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಂತ್ರಿಗಳಿಗೆ ಹೆಜ್ಜಾಡಿ ಕೋಡಿ ಫಿಶರೀಸ್ ಶಾಲಾ ಹಳೆ ವಿದ್ಯಾರ್ಥಿ ಸಂಘ, ಕೃಷಿಕರ ಸಂಘ ಮೊದಲಾದ ಸಂಸ್ಥೆಗಳ ಪರವಾಗಿ ಮಾನವಿಗಳು ಒಪ್ಪಿಸಲಾದುವು.

ಮಂತ್ರಿಗಳು ತಮ್ಮ ಭಾಷಣದಲ್ಲಿ ,ಮದ್ರಾಸು ಸರಕಾರಕ್ಕೆ ಭೂಸುಧಾರಣಾ ಕಾನೂನು ಪ್ರಮುಖ ಪ್ರಶ್ನೆಯಾಗಿದೆ. ಆದರೆ ಇದು ಇಡೀ ಸ್ವಾಂತ್ರ್ಯಕ್ಕೆ ಒಂದೇ ಒಂದು ಭೂಸುಧಾರಣೆ ಮಸೂದೆಯಾಗಬೇಕೋ ಅಥವಾ ವಿವಿಧ ಜಿಲ್ಲೆಗಳಿಗೆ ಪ್ರತ್ಯೆ ಪ್ರತ್ಯೇಕ ಮಸೂದೆಗಳಾಗಬೇಕೋ ಅಥವಾ ಅಯಾ ಕ್ಷೇತ್ರಗಳ ಹಿಡುವಳಿ ಕ್ರಮ ಕ್ಕನುಸಾರವಾಗಿ ಸುಧಾರಣೆಯಾಗಬೇಕೋ ಎಂಬುದನ್ನು ಸರಿಶೀಲಿಸಬೇಕಾಗಿದೆ. ದ. ಕ. ಜಿಲ್ಲೆಯ ಪ್ರತಿನಿಧಿಗಳಲ್ಲಿ ಈ ಕುರಿತು ಒಮ್ಮತದ, ಅಭಿಪ್ರಾಯವಿಲ್ಲ. ಆದಕಾರಣ ಸರಕಾರವು ಯಾರಿಗೂ ತೊಂದರೆಯಾಗದಂತೆ ಮತ್ತು ಅದೇ ಕಾಲದಲ್ಲಿ ರೈತರಿಗೆ ಹಿಡುವಳಿಯಲ್ಲಿ ಸ್ಥಿರತೆ, ನ್ಯಾಯಾದ ಗೇಣಿ ಮತ್ತು ಅತನ ಗೈಮೆಗೆ ಸರಿಯಾದ ಪ್ರತಿಫಲಸಿಕ್ಕುವಂತೆಯೂ ಹಾಗೂ ಧನಿಯ ಹಿತಕ್ಕೆ ಹೆಚ್ಚಿನ ಭಾಧಕ ಬಾರದಂತೆಯೂ ರೀತಿಯಲ್ಲಿ ಸರಕಾರವು ಮಸೂದೆಯನ್ನು ತರಬೇಕಾಗಿದೆ. ಅಂತೂ 1955ನೆ ಸಾಲಾಂತ್ಯದೊಳಗೆ ಖಂಡಿತವಾಗಿಯೂ ಈ ಭೂಸುಧಾರಣಾ ಮಸೂದೆಯನ್ನು ಸರಕಾರವು ಕೈಗೊಳ್ಳುವುದು ಎಂದು ಹೇಳಿದರು.

ಮೊಗವೀರ ಬಂಧುಗಳ ಕುರಿತು ಮಾತನಾಡುತ್ತ ಮೊಗವೀರ ಯುವಕರು ನೌಕಾಸೆನೆಯಲ್ಲಿ ಸೇರುವ ಅವಶ್ಯಕತೆಯನ್ನು ಸೂಚಿಸಿದರು. ಮತ್ತು ಸ್ವಮಾಯಿಕ್ಕೆ ಬೇಕಾದ ತಾಂತ್ರಿಕ ತರಬೇತಿಯನ್ನು ಮಲ್ಪೆಯಲ್ಲಿ ಕೊಡಲಾಗುತ್ತಿದೆ. ಅಂತೆಯೇ ಕೋಡಿಯಲ್ಲಿಯೂ ಆ ಸೌಕರ್ಯ ಸಿಗುವಂತೆ ಆಶಿಸುತ್ತೇನೆ. ಜನರ ಆರ್ಥಿಕ ಜೀವನ ಮಟ್ಟವನ್ನು ಹೆಚ್ಚಿಸುವುದೇ ಸರಕಾರದ ದೃಷ್ಟಿಪಥದಲ್ಲಿರುವುದು ಎಂದು ಹೇಳಿದರು. ಶ್ರೀ. ಎನ್. ಎನ್. ಸುವರ್ಣರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಭೂಸುಧಾರಣಾ ಮಸೂದೆ ಬೇಗನೆ ಬಾರದಿದ್ದಲ್ಲಿ ಕಾಂಗ್ರೆಸಿಗೆ ತೊಡಕಾಗಬಹುದೆಂದರು. ಬಳಿಕ ಮಂತ್ರಿಗಳು ಸಮಾಜ ಮಂದಿರದ ಶಂಕುಸ್ಥಾಪನೆ ಮಾಡಿದರು.

ಆರ್ಥಿಕ ಮಂತ್ರಿ ಸಿ. ಸುಬ್ರಹ್ಮಣ್ಯಂರವರು—ತಾ.31ಲ್ಲಿ ಮಂಗಳೂರಿಗೆ ಬಂದಾಗ ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾಧಿಕಾರಿಗಳೇ ಮೊದಲಾದವರಿಂದ ಸ್ವಾಗತಗಿಲ್ಪಟ್ಟರು ಅನಂತರ ಮಂತ್ರಿಗಳು ಗವರ್ನ್‌ಮೆಂಟು ಕಾಲೇಜಿನ ವರ್ಧಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ವಿದ್ಯಾರ್ಥಿಗಳ ಹೊಣೆಯ ಕುರಿತು ಭಾಷಣಮಾಡಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಟಿ ಕೆ. ಲಕ್ಷ್ಮಣಸ್ವಾಮಿಯವರು ಆರಂಭದಲ್ಲಿ ಸ್ವಾಗತ ಭಾಷಣಮಾಡಿ ವರದಿಯನ್ನೊದಿದರು. ಡಾ! ಎಂ. ಕೇಶವ ಪೈಗಳು ಮಾಡಿದ ಅಭಿನಂದನಾ ಭಾಷಣಕ್ಕೆ ಕುಂ! ವಿಮಲಾದೇವಿಯವರು ಉತ್ತರಿಸಿದರು.

ವರ್ಧಂತ್ಯುತ್ಸವ: ನವಭಾರತ ರಾತ್ರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 23 ರಲ್ಲು ಶ್ರೀ ಟಿ. ಕೆ. ಲಕ್ಷ್ಮಣನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ! ಕೆ. ನಾಗಪ್ಪ ಆಳ್ವರು ಸ್ವಾಗತ ಭಾಷಣಮಾಡಿದರು. ಶ್ರಿಮತಿ ಲಕ್ಷ್ಮಣನ್, ಅವರು ಬಹುಮಾನ ವಿತರಣೆಮಾಡಿದರು.

ಹಿಂದೂಸ್ಥಾನಿ ಲೇಂಡ್‌ಮಾಸ್ಟರ್ ಕಲ್ಕತ್ತದ ಹಿಂದುಸ್ಥಾನ್ ಮೋಟಾರ್ಸ್ ಲಿಮಿಟೆಡ್ ಸಂಸ್ಥೆಯವರ ಹೊಸ ,ಹಿಂದುಸ್ಥಾನ್ ಲೇಂಡ್‌ಮಾಸ್ಟರ್' ಎಂಬ ಕಾರುಗಳ ಪರಿಚಯ ಮಾಡಿಸುವ ಸಮಾರಂಭವು, ಯುನ್ಯಾಟೆಡ್ ಟ್ರೇಡಿಂಗ್ ಕೋಸರೇಶನ್ ಮತ್ತು ವರ್ಕಾಶಾಪ್ ಇವರ ಕಾರ್ಯಾಲಯದಲ್ಲಿ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎ. ಆರ್. ಶೋಷನ ರಾಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎ. ಶ್ರೀನಿವಾಸರಾಯರು ಕಾರಿನ ಪರಿಚಯಮಾಡಿಕೊಟ್ಟರು. ಶ್ರೀಗಳಾದ ಬಿ. ಎ. ಕೃಷ್ಣಯ್ಯ, ಡಾ! ಎ. ಎಸ್. ಕೊಯ್ಲ, ಡಾ! ಕೆ. ನಾಗಪ್ಪ ಆಳ್ವ ಮೊದಲಾದವರು ಮಾತನಾಡಿದರು. ಶ್ರೀ ಎ. ಕೃಷ್ಣಮೂರ್ತಿಯವರು ಧನ್ಯವಾದಗಳನ್ನರ್ಪಿಸಿದರು.

ವರ್ಗ:—ಜಿಲ್ಲಾ ನ್ಯಾಯಾಧೀಶರಾಗಿದ್ದ ಶ್ರೀ ಸಿ. ಕಂದನರಸಿಂಹ ಚಿಟ್ಟಿಯಾರರಿಗೆ ಕೊಯಮುತ್ತೂರಿನ ಇಂಜಿನ್ಸ್ರಿಯರ್‌ಟ್ರಿಬ್ಯೂನಲಿಗೆ ವರ್ಗವಾಗಿರುವುದಾಗಿ ಹೇಳಲಾಗಿದೆ.

ಹಾಸ್ಟೆಲ್ ದಿನಾಚರಣೆ: ಮಂಗಳೂರು ಎಸ್.ಆರ್.ಎಸ್. ಹೋಮಿನ ಹಾಸ್ಟೆಲ್ ದಿನಾಚರಣೆಯು ತಾ 6 ರಲ್ಲು ಮೈಸೂರು ಸರಕಾರದ ರೆವಿನ್ಯೂಮತ್ತು ಪಬ್ಲಿಕ್ ವರ್ಕ್ಸ್ ಶಾಖೆಯ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಟೀಚರ್ಸ್ ಗಿಲ್ಡಿನ ಮಹಾ ಸಭೆಯು ಕಳೆದ ತಾ 23 ರಲ್ಲು ಶ್ರೀ ಯು. ಕೇಶವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಶ್ರೀನಿವಾಸ ಕಿನಿಯರು ವರದಿಯನ್ನೊದಿದರು. ಶ್ರಿ. ಎಸ್. ಮುಕುಂದರಾಯರು ಗಿಲ್ಡಿನ ಘಟನೆಗಳ ತಿದ್ದುಪಡಿ ಕುರಿತು ಮಾತನಾಡಿದರು. ಒಬ್ಬ ಉಪಾಧ್ಯಾಯನಿರುವ ಶಾಲೆಯಲ್ಲಿ ಉಪಾಧ್ಯಾಯನು ಕೆಲಸದಲ್ಲಿ ರಜೆ ಪಡೆಯುವುದರಿಂದ ಶಾಲಾ ದಿನಗಳು ಕಡಿಮೆಯಾದಲ್ಲಿ ಅದನ್ನು ನಿವಾಯತಿ ಪಡೆಸಬೇಕೆನ್ನುವ, ಜಿಲ್ಲಾ ಬೋರ್ಡುಶಾಲೆಗಳಲ್ಲಾ ವಾರದಲ್ಲಿ 5 ದಿನ ಮಾತ್ರ ಶಾಲೆಗಳಿರುವಂತೆ ಮಾಡಬೇಕೆನ್ನುವ, ಉಪಾಧ್ಯಾಯರ ಮಕ್ಕಳಿಗೆ ಮಿಟ್ಟಿಕ್ ತನಕ ಧರ್ಮಾರ್ಥ ಶಿಕ್ಷಣ ಸಿಗಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

(೧ನೇ ಪುಟದಿಂದ)

ಲ್ಲಿ ಹೋರಾಡ ಬೇಕಾದುದೇನೋ ನಿಜ—ಎಲ್ಲೆಡೆಯಲ್ಲೂ ಕೆಲವು ದುರಾಚಾರಿಗಳಿರುವುದೂ ಹೌದು. ಆದರೆ ಕಾಂಗ್ರೆಸಿನ ಶಕ್ತಿಯು ಏಳೇ ವರ್ಷಗಳಲ್ಲಿ ಎಷ್ಟು ಕುಂದಿದೆಯೋ ಅಷ್ಟು ಎಲ್ಲೂ ಇಳಿದಿರಲಾರದೆಂಬ ವಿಷಯ ಮಾತ್ರ ಶೋಚನೀಯ.

ವರಿಷ್ಠರು ಮನಗಾಣ ತೊಡಗಿದಂತೆ, ಅಧಿಕಾರ ಸ್ಥಾನದ ಮಹತ್ವವನ್ನು ಆದಷ್ಟು ಕಡಿಮೆ ಮಾಡಿ, ಸೇವೆ ಮತ್ತು ತ್ಯಾಗದ ಮುಖಕ್ಕೆ ಹೆಚ್ಚು ಪ್ರಾಧಾನ್ಯವನ್ನು ನೀಡುವುದೊಂದೇ ಕಾಂಗ್ರೆಸಿನ ವರ್ಚಸ್ಸನ್ನು ಹೆಚ್ಚಿಸುವುದಕ್ಕೆ ನಮಗೆ ತೋರುವ ಮಾರ್ಗ. ಮಂತ್ರಿಗಳಾದವರು, ಶಾಸನ ಸಭೆಯ ಸದಸ್ಯರಾದವರ ಮಾತಿಗಿಂತಲೂ ವಿಧಾಯಕ ಕಾರ್ಯಕರ್ತರ ವಾಣಿಗೆ ಹೆಚ್ಚು ಬೆಲೆ ಬರುವಂತಾಗದೆ, ಚುನಾವಣೆಗಳಲ್ಲಿ ಅಡ್ಡ ಮಾರ್ಗವನ್ನು ಹಿಡಿಯುವ ಇಂದಿನ ಮನೋಭಾವದಲ್ಲಿ ಪರಿವರ್ತನೆಯಾಗಲಾರದು. ಅಧಿಕಾರ ಸ್ಥಾನದಲ್ಲಿರುವುದೊಂದೇ ಸಂಸ್ಥೆಯನ್ನು ಉಳಿಸುವ ಬೆಳೆಸುವ ಉಪಾಯವಲ್ಲ—ಹಾಗೆ ನೋಡಿದರೆ, ಕಾಗ್ರೆಸು ಅಧಿಕಾರಕ್ಕೆ ಬಂದುದನ್ನು ಮನಃಪೂರ್ವಕ ಹೊಗಳುವ ಜನರು ಎಷ್ಟು ಇದ್ದಾರು? ಎಲ್ಲಿಯೇ ಆಗಲಿ, ಆಳುವ ಪಕ್ಷವನ್ನು ನಿಂದಿಸುವುದೊಂದೇ ಜನರ ಕೆಲಸವಾಗಿದ್ದಂತೆ ತೋರುತ್ತದೆ. ಆದುದರಿಂದ ಅಧಿಕಾರ ಸ್ಥಾನದಲ್ಲಿರುವ ಹೆಚ್ಚಿನ ಜನರು ಕೇವಲ ನಾಲ್ಕು ದಿನದ ಪ್ರತಿಷ್ಠೆ ಮತ್ತು ಕೀರ್ತಿಗಾಗಿ ಹಂಬಲ ತೋರಿಸುವವರೆಂದೇ ವ್ಯಕ್ತವಾಗುತ್ತದೆ

ವ್ಯಾಪಾರಿಕ ನಡತೆಯನ್ನು ಅವಲಂಬಿಸಿದರೆ, ಪ್ರತಿ ಕಕ್ಷಿಗಳನ್ನು ಸ್ಪರ್ಧೆಯಲ್ಲಿ ಸೋಲಿಸುವುದು ಸಾಧ್ಯವಾಗಲಾರದು—ಎಂಬ ಹೆದರಿಕೆ ಕಾಂಗ್ರೆಸಿಗರಿಗೆ ಇರಬಹುದು. ಆದರೆ. ಅದು ಶುಚಿಯಾದ ಒಳಾವರಣದ ರಚನೆಗಾಗಿ ಹೋರಾಡುವ ಮನೋಭಾವವನ್ನು ಹಿನ್ನಲೆಗೆ ದೂಡಬಾರದು. ಏಕೆಂದರೆ ಜನರ ಹೃದಯ ಸಿಂಹಾಸನದಲ್ಲಿ ಕಾಂಗ್ರೆಸು ರಾರಾಜಿಸ ಬೇಕಾಗಲಿ, ಕ್ಷಣಿಕ ಲಾಲಸೆಯಿಂದ ತತ್ವ ಹಾಗು ಶ್ರದ್ಧೆಗಳನ್ನು ಧಿಕ್ಕರಿಸುವವರ ಕೈಯಲ್ಲಿ ಕಾಂಗ್ರೆಸಿನ ಉತ್ಕರ್ಷವಾಗಲಾರದು. ವಿಧಾಯಕ ಕಾರ್ಯಕರ್ತರನ್ನು ಹೆಚ್ಚು ಗೌರವ ಭಾವದಿಂದ ನೋಡುವುದೇ ಎಲ್ಲ ತೊಂದರೆಗಳಿನಿವಾರಣೆಗೆ ಇರುವ ರಾಮ ಬಾಣ ಔಷದ.ವಿಧಾಯಕ ಕಾರ್ಯಕರ್ತರು ಮುಂಬರಲಿಲ್ಲನೆಂದು ತಾವು ಚುನಾವಣೆಗಳಲ್ಲಿ ಹೋರಾಡಬೇಕಾಯಿತೆಂದು ಹೇಳುವ ಸಂದರ್ಭ ಸಾಧಕರು ಜನತೆಯನ್ನು ಮತ್ತು ಪ್ರಾಮಾಣಿಕ ಬುದ್ಧಿಯವರನ್ನು ವಂಚಿಸುವುದು ಸುಲಭವಲ್ಲ—ಅವರ ಯೋಗ್ಯತೆ ಎಷ್ಟು ಅವರ ಉದ್ದೇಶವಲ್ಲರುವ ಹುರುಳೆಷ್ಟು ಎಂಬುದನ್ನು ತಿಳಿಯಲಾರದಷ್ಟು ಮೂರ್ಖರು ಜನರಲ್ಲ—ಕಾಂಗ್ರೆಸಿನ ಹಿತೈಷಿಗಳೂ ಅಲ್ಲ.

— ಕಾರ್ತಿಕೇಯ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಕಾರ್ಮಿಕರ ಸರ್ಕಾರಿ ಜೀವವಿಮೆ ಯೋಜನೆ

ಏಪ್ರಿಲ್‌ದಲ್ಲಿಯೇ ಪ್ರಥಮ ಉಪಕ್ರಮ

ಭಾರತೀಯ ಕಾರ್ಖಾನೆಯ ಕಾರ್ಮಿಕರು ಎದುರಿಸಬೇಕಾದ ಅನೇಕ ಅನಾಯಗಳಲ್ಲಿ ಕಾಯಿಲೆ, ಮಾತೃತ್ವ ಮತ್ತು ಅಶಕ್ತತೆಗಳು ಗಣನೀಯ ಪ್ರಮಾಣದಲ್ಲಿ ತೊಂದರೆಗಳನ್ನುಂಟುಮಾಡುತ್ತಿವೆ. ಕಲ್ಯಾಣ ರಾಜ್ಯದ ಆವಶ್ಯಕತೆಗಳನ್ನೂ ಭಾರತದಲ್ಲಿ ಬೆಳೆಯುತ್ತಿರುವ ಕಾರ್ಮಿಕರ ಬೆಂಬಲವನ್ನೂ ಸಾಕಷ್ಟು ಪ್ರಮಾಣದಲ್ಲಿ ಗಮನಿಸಲಾಗುವಂತೆ ವೈದ್ಯಕೀಯ ಸೌಲಭ್ಯಗಳನ್ನು ಇಲ್ಲಿಯವರೆಗೂ ಒದಗಿಸಲು ಸಾಧ್ಯವಾಗಿಲ್ಲ; ಈ ಆವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಕಾರ್ಮಿಕರ ಸರ್ಕಾರಿ ಜೀವವಿಮೆಕಾನೂನನ್ನು ೧೯೪೮ರಲ್ಲಿ ಅಧಿಕೃತವಾಗಿ ಜಾರಿಗೆ ತರಲಾಯಿತು.

ಈ ಕಾನೂನಿನಲ್ಲಿ ರೂಪಗೊಂಡಿರುವ ಕಾರ್ಮಿಕರ ಸರ್ಕಾರಿ ಜೀವವಿಮೆ ಯೋಜನೆಯು ಇದೀ ಸಂಖ್ಯಾ ಬಂಡಕ್ಕೆ ಮೊಟ್ಟ ಮೊದಲನೆಯದಾಗಿದೆ. ಪ್ರತಿಕೀರ್ತಿಗಳಿಗೆ ೪೦೦ರೂಪಾಯಿಗಳಿಗೆ ಮೀರದ ಆದಾಯವಿರುವ ಕಾರ್ಖಾನೆಗಳ ಕಾರ್ಮಿಕರೆಲ್ಲರಿಗೂ ನಿಮ್ಮತ್ತನ್ನು ಉಚಿತವೇ ಗಿಸುವ ಯೋಜನೆಯನ್ನು ಸೀಮಿತ ಮಂದಿಯನ್ನು ಕೆಲಸಕ್ಕೆ ಇಟ್ಟುಕೊಳ್ಳುವ ಎಲ್ಲಾ ಕಾರ್ಖಾನೆಗಳಿಗೂ ಈ ಯೋಜನೆಯನ್ನು ಅನ್ವಯಿಸುವುದು. ಸರ್ಕಾರಿ ಕೆಲವೇ ತಿಂಗಳಾದರೆಗೆ ಕೆಲಸಮಾಡುವ ಕಾರ್ಖಾನೆಗಳು ಮತ್ತು ಗಣಿಗಳನ್ನೂ ಈ ಯೋಜನೆಯಿಂದ ಪ್ರತ್ಯೇಕಿಸಲಾಗಿದೆ

ಈ ಯೋಜನೆಯನ್ನು ದೆಹಲಿ ಮತ್ತು ಕಾನಪುರಗಳಲ್ಲಿ ೧೯೫೦ರ ಫೆಬ್ರುವರಿ ೨೪ರಂದು ಜಾರಿಗೆ ತರಲಾಯಿತು. ಈ ಯೋಜನೆಯು ಈಗ ಭಾರತದಾದ್ಯಂತವೂ ಅರ್ಹ ಕಾರ್ಮಿಕರಿಗೆ ಅನ್ವಯವಾಗುವುದು. ರಾಷ್ಟ್ರಾದ್ಯಂತವೂ ಈ ಕಾನೂನನ್ನು ವಿಸ್ತರಿಸಿದಾಗ, ೧೪,೦೦೦ ಕಾರ್ಖಾನೆಗಳಲ್ಲಿನ ೨೩ಲಕ್ಷ ಕಾರ್ಮಿಕರಿಗೆ ಪ್ರಯೋಜನ ಸಿಗುವುದು.

ಈ ಯೋಜನೆಯಿಂದ ಕೆಳಗೆ ಹೇಳಲಾದ ಪದಸಿದ್ಧಿಗಳ ಸೌಲಭ್ಯವು ಲಭಿಸುತ್ತದೆ:—

(೧) ವೈದ್ಯಕೀಯ ಸೌಲಭ್ಯ :— ಕಾರ್ಯನಿರತನಾದಾಗ ಗಾಯಗೊಂಡರೆ ಅಥವಾ ಕಾಯಿಲೆ ಬಂದರೆ ಯೋಜನೆಯು ಪ್ರಾರಂಭವಾದಾಗಿನಿಂದಲೂ ಉಚಿತ ವೈದ್ಯಕೀಯ ಸಹಾಯವನ್ನು ಕೊಡಲಾಗುವುದು. ಸಹಿಷ್ಣಾ ಕಾರ್ಮಿಕರು ಕೂಡಾ ಪ್ರಸವಕ್ಕೆ ಮೊದಲು ಮತ್ತು ಆನಂತರ ೩೩ ದಿನಗಳ ಅವಧಿಗಾಗಿ ಸುತ್ತಾರೆ. ವೈದ್ಯಕೀಯ ಸೌಲಭ್ಯಗಳಲ್ಲಿ ಉಚಿತ ಔಷಧಗಳು, ಉಚಿತ ಔಷಧಗಳು ಮೊದಲಾದವು ಸೇರಿವೆ. ವೈದ್ಯಕೀಯ ಸೌಲಭ್ಯವು ರಾಜ್ಯಸರ್ಕಾರಗಳ ಕೈಯಲ್ಲಿದ್ದು ಒಟ್ಟು ವೆಚ್ಚದಲ್ಲಿ ಕಾಲುಭಾಗಗಳನ್ನು ಅವು ವಹಿಸಿಕೊಳ್ಳುತ್ತವೆ.

(೨) ಅಶಕ್ತತೆಯ ಸೌಲಭ್ಯ:— ಕಾರ್ಯನಿರತರಾಗಿದ್ದಾಗ ಗಾಯಗಳೇನಾದರೂ ಉಂಟಾದಲ್ಲಿ, ಉಚಿತ ವೈದ್ಯಕೀಯ ಸೌಲಭ್ಯವನ್ನು ಕೊಡುವುದಲ್ಲದೆ, ಏಳುದಿನಗಳಿಗೆ ಮೀರಿದ ಅಶಕ್ತತೆಯ ಅವಧಿಯಲ್ಲಿ ವೇತನದ ಅರ್ಧದಷ್ಟನ್ನು ನಗದಾಗಿ ಕೊಡುವ ಸೌಲಭ್ಯವೂ ಇರುವುದು. ಬಾಯಂ ಅಶಕ್ತತೆಯಲ್ಲಿ ಪೂರ್ಣ ವೇತನ ಮೇಲೆ, ಅಂದರೆ ಜೀವನಪೂರ ಮಾಡಿದ ನಿಗದಿ ಅರ್ಹದಷ್ಟಿನ ವೇತನಗಳನ್ನು ಆ ಜೀವನ ಪರ್ಯಂತ ಕೊಡಲಾಗುವುದು.

(೩) ಆಶ್ರಿತರಿಗೆ ಸೌಲಭ್ಯ:— ದುರದೃಷ್ಟದಿಂದ, ಕಾರ್ಯನಿರತನಾಗಿದ್ದಾಗ ಗಾಯಗೊಂಡು ಮೃತಿಹೊಂದಿದರೆ, ದಿನಕೂಲಿಯ ವೇತನಗಳ ಅರ್ಧದಷ್ಟನ್ನು ವಿಶ್ರಾಂತಿ ವೇತನವನ್ನಾಗಿ ವಿಧವೆಗೂ ಮಕ್ಕಳಿಗೂ ಅವರಿಲ್ಲದಿದ್ದರೆ ಆಶ್ರಿತರಿಗೂ ಕೊಡಲಾಗುವುದು.

ಈ ಯೋಜನೆಯು ಜಾರಿಗೆಬಂದ ಮೊದಲನೆಯ ದಿನದಿಂದಲೇ ಮೇಲೆ ತಿಳಿಸಿದ ನಗದು ಸೌಲಭ್ಯವು ಜಾರಿಗೆ ಬರುವುದು.

(೪) ಕಾಯಿಲೆ ಸೌಲಭ್ಯ :— ಅಶಕ್ತ ಸಂಖ್ಯೆಯಲ್ಲಿ ದತ್ತಾಂಶಗಳನ್ನು ಕೋಟ್ಟಿ ಕಾರ್ಮಿಕನು ತನ್ನ ದಿನಗೂಲಿಯ ವೇತನಗಳ ಅರ್ಧದಷ್ಟನ್ನು ಕಾಯಿಲೆಯ ದಿನಗಳಲ್ಲಿ ನಗದನ್ನಾಗಿ ಪಡೆಯಬಹುದು. ಈ ನಗದನ್ನು ೩೬೫ ದಿನಗಳ ನಿರಂತರ ಅವಧಿಯಲ್ಲಿ ೫೬ ದಿನಗಳಷ್ಟು ಹೆಚ್ಚು ಪಡೆಯಬಹುದು.

(೫) ಮಾತೃತ್ವದ ಸೌಲಭ್ಯ :— ಜೀವನ ಏರ್ಪಡಿಸಿದ ಮಹಿಳೆಯರಿಗೆ ಮಾತೃತ್ವ ಸೌಲಭ್ಯವು ದಿನಕ್ಕೆ ೧೨ ಆಣೆಗಳಂತೆಯೂ ಅಥವಾ ಕಾಯಿಲೆಯ ಸೌಲಭ್ಯದ ದರದಂತೆಯೂ, ಯಾವುದು ಹೆಚ್ಚೋ ಅದನ್ನು ೧೨ ವಾರಗಳ ಅವಧಿಯವರೆಗೂ ಕೊಡಲಾಗುವುದು.

ಕಾಯಿಲೆ ಮತ್ತು ಮಾತೃತ್ವ ಸೌಲಭ್ಯಗಳನ್ನು ಜೀವನಮೆಯಾದಿದ ೭ ದಿಂದ ೯ ತಿಂಗಳ ನಂತರ ಪಡೆಯಲು ಸಾಧ್ಯವಾಗಿದೆ

ಕಾರ್ಮಿಕರ ಸರ್ಕಾರಿ ಜೀವವಿಮೆ ಯೋಜನೆಯ ಕಾರ್ಯ ನಿರ್ವಹಣೆಗಾಗಿ ಒಂದು ಸಂಸ್ಥೆಯನ್ನು ಸಂಘಟಿಸಿದ್ದು ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ವೈದ್ಯ ವೃತ್ತಿಪರರು, ಸಂಸತ್ತು, ಮಾಲಿಕರು ಮತ್ತು ಕಾರ್ಮಿಕರು ಇವರ ಪ್ರತಿನಿಧಿಗಳು ಇದ್ದಾರೆ.

ಅಲ್ಲದೆ ವೈದ್ಯಕೀಯ ಸೌಲಭ್ಯಮಂಡಲವೊಂದನ್ನು ನಿಯಮ ರಚಿಸಲಾಗಿದೆ.

ಇದೀ ರಾಷ್ಟ್ರವನ್ನು ಮುಂಬೈ, ಕಲ್ಕತ್ತಾ, ಮದ್ರಾಸ್, ಕಾನಪುರ ಮತ್ತು ದೆಹಲಿ ಎಂದು ಐದು ಪ್ರದೇಶಗಳನ್ನಾಗಿ ವಿಭಾಗಿಸಲಾಗಿದೆ. ಪ್ರತಿ ಪ್ರದೇಶಕ್ಕೂ ಅನೇಕ ಸ್ಥಳೀಯ ಕಛೇರಿಗಳೂ, ಪರೀಕ್ಷಾ ಕಛೇರಿಗಳೂ ಇವೆ. ಈ ಕಾನೂನಿನ ರೀತಿಯಲ್ಲಿ ಸೌಲಭ್ಯಗಳನ್ನು ಕಾನಪುರ ಮತ್ತು ದೆಹಲಿಗಳಲ್ಲಿ ಮಾತ್ರ ಮೊದಲಿಗೆ ಜಾರಿಗೆ ತರಲಾಯಿತು. ಈ ಸೌಲಭ್ಯಗಳನ್ನು ೧೯೫೩ ಮೇ ೧೭ ರಿಂದ ಪಂಜಾಬಿನ ೭ ಕೈಗಾರಿಕಾ ನಗರಗಳಿಗೂ ೧೯೫೪ ರ ಜುಲೈ ೧೧ ರಂದು ನಾಗಪುರಕ್ಕೂ ೧೯೫೪ ರ ಅಕ್ಟೋಬರ್ ೩ ರಿಂದ ಬೃಹತ್ ಮುಂಬಯಿಗೂ ಜಾರಿಗೆ ತರಲಾಯಿತು. ಇದೇ ಜನವರಿ ೨೬ರಂದುಕೊಯಮುತ್ತೂರುಮತ್ತು ತರ ಮದ್ರಾಸು ಪ್ರಾಂತ್ಯದ ಕೇಂದ್ರಗಳಿಗೆ ಇದನ್ನು ಅನ್ವಯಿಸಲಾಯಿತು.

ವೈದ್ಯಕೀಯ ಸೌಲಭ್ಯವನ್ನು ಸರ್ಕಾರಿ ಜೀವವಿಮಾ ಔಷಧಾಲಯಗಳಿಂದ ಒದಗಿಸಲಾಗುತ್ತಿದೆ. ಪಂಜಾಬ್ ಮತ್ತು ಬೃಹತ್ ಮುಂಬೈನಲ್ಲಿ ರಾಜ್ಯ ಸರ್ಕಾರಗಳು ಖಾಸಗಿ ವೈದ್ಯರಿಂದ ವೈದ್ಯಕೀಯ ಸೌಲಭ್ಯವನ್ನು ಪಡೆಯ ಬಹುದೆಂದು ಸಾರಿವೆ ಪಂಜಾಬಿನಲ್ಲಿ ೧೨೦ ಮಂದಿ ವೈದ್ಯರೂ ಬೃಹತ್ ಮುಂಬೈಯಲ್ಲಿ ೧೦೦೦ ವೈದ್ಯರೂ (ಅಯುರ್ವೇದ ವೈದ್ಯರೂ ಸೇರಿ) ಇರುವರು.

ನಗದು ಸೌಲಭ್ಯಗಳ ಬಗ್ಗೆ ಹಕ್ಕುಗಳನ್ನು ಸ್ವೀಕರಿಸಿ ಧನವನ್ನು ವಿತರಿಸುವ ಅಧಿಕಾರವು ಸ್ಥಳೀಯ ಕಛೇರಿಗಳಿಗೆ ಸೇರಿದೆ. ಕಾನಪುರದಲ್ಲಿ ಎಂಟು ಸ್ಥಳೀಯ ಕಛೇರಿಗಳೂ, ದೆಹಲಿಯಲ್ಲಿ ಮೂರು, ಪಂಜಾಬಿನಲ್ಲಿ ನಾಲ್ಕು ಸ್ಥಳೀಯ ಮತ್ತು ನಾಲ್ಕು ಸಬ್ ಲೋಕಲ್ ಕಛೇರಿಗಳೂ ಬೃಹತ್ ಮುಂಬೈಯಲ್ಲಿ ೨೪ ಸ್ಥಳೀಯ ಕಛೇರಿಗಳೂ ಕೆಲಸಮಾಡುತ್ತಿವೆ.

ಮಾಲಿಕರಿಂದಲೂ ಕಾರ್ಮಿಕರಿಂದಲೂ ಬರುವ ದತ್ತಾಂಶಗಳಿಂದ ಯೋಜನೆಗೆ ಮುಟ್ಟುವಾಗಿ ಹಣಕಾಸನ್ನು ಒದಗಿಸಲಾಗುತ್ತಿದೆ. ಅವರ ಸರಾಸರಿ ಆದಾಯದಲ್ಲಿ ನೂರಕ್ಕೆ ಎರಡಕ್ಕಿಂತಲೂ ಸ್ವಲ್ಪ ಹೆಚ್ಚಿನ ಭಾಗವನ್ನು ಕಾರ್ಮಿಕರ ದತ್ತಾಂಶವನ್ನಾಗಿ ಕೊಡಲಾಗುತ್ತಿದೆ. ಸಧ್ಯಕ್ಕೆ ರಾಷ್ಟ್ರಾದ್ಯಾಂತವೂ ಮಾಲಿಕರು ವಿಶೇಷ ದತ್ತಾಂಶವನ್ನು ಕೊಡುತ್ತಿದ್ದಾರೆ.

ಯೋಜನೆಯು ಕೊಯಮುತ್ತೂರಿನಲ್ಲಿ ಜಾರಿಗೆ ಬಂದುದರಿಂದ ೩೭೦೦೦ ಕಾರ್ಮಿಕರಿಗೆ ಲಾಭವಾಯಿತು. ಮಧ್ಯಭಾರತ ರಾಜ್ಯದ ಇಂದೂರ್, ಗ್ವಾಲಿಯರ್ ಉಜ್ಜಯನಿ ಮತ್ತು ರತ್ಲಾಂ ಗಳಲ್ಲಿ ೫೫೦೦೦ ಮಂದಿ ಕಾರ್ಮಿಕರಿಗೆ ಪ್ರಜಾರಾಜ್ಯ ದಿನಾಚರಣೆಯ ದಿನದಂದು ಈ ಯೋಜನೆಯು ಅನ್ವಯವಾಯಿತು.

ಕಾಯಿಲೆ ಬಂದಾಗ ಕೊಡುವ ನಗದಿನ ಸೌಲಭ್ಯವನ್ನು ಈ ಕಾನೂನಿನ ರೀತ್ಯಾ ೫೬ ದಿನಗಳಿಗೆ ಮಾತ್ರ ಸೀಮಿತಿ ಮಾಡಲ್ಪಟ್ಟಿದೆಯಷ್ಟೆ!— ಈ ಅವಧಿಯನಂತರ ಕಾರ್ಮಿಕರು ನಗದಿ ಸೌಲಭ್ಯವನ್ನು ಪಡೆಯದೆ ಕೆಲಸಕ್ಕೆ ಬಾರದೆ ಉಳಿಯಬಲ್ಲರು. ಇಂತಹ ಪರಿಸ್ಥಿತಿಗಳನ್ನು ಸ್ವಲ್ಪಮಟ್ಟಿಗೆ ಎದುರಿಸಲು ಆಸ್ಪೋರೇಷನ್ ಕ್ಷಯರೋಗದ ಬಂದಾಗ ಕೊಡುವ ನಗದಿನ ಸೌಲಭ್ಯವನ್ನು ಕಡಿಮೆ ಮಾಡಲ್ಪಟ್ಟದರದ ಮೇಲೆ ೧೮ ವಾರಗಳ ಇನ್ನೂ ಹೆಚ್ಚಿನ ಅವಧಿಗೆ ಕೊಡಲು ನಿರ್ಧರಿಸಿದೆ.

ಪ್ರತಿ ೮೦೦ ಕಾರ್ಮಿಕರಿಗೊಂದು ಶುಶ್ರೂಷಾಸ್ಥಳವನ್ನೂ, ೧೬೦೦ ಕಾರ್ಮಿಕರಿಗೊಂದು ಕ್ಷಯರೋಗದ ಶುಶ್ರೂಷಾ ಸ್ಥಳವನ್ನೂ ೫೦೦ ಮಹಿಳೆಯರಿಗೊಂದು ಶುಶ್ರೂಷಾ ಸ್ಥಳವನ್ನೂ ಒದಗಿಸಲು ವಿಮಾ ಸಂಸ್ಥೆಯು ಅವಕಾಶ ಬೇಯಲು ನಿರ್ಧರಿಸಿದೆ.

ಆಸ್ಪತ್ರೆಗಳಲ್ಲಿ ನೂರಕ್ಕಿಂತಲೂ ಹೆಚ್ಚಿನ ಹಾಸಿಗೆಗಳಿಗೆ ಅವಕಾಶವಿದ್ದರೆ ಪ್ರತ್ಯೇಕ ಆಸ್ಪತ್ರೆಗಳನ್ನು ಸ್ಥಾಪಿಸಲು ಅದು ಆಲೋಚಿಸಿದೆ. ನೂರಕ್ಕಿಂತ ಕಡಿಮೆಯಿರುವ ಆಸ್ಪತ್ರೆಗಳಿಗೆ ಉಪಗೃಹಗಳನ್ನೂ ಕಟ್ಟಿ ಶುಶ್ರೂಷಾ ಸ್ಥಳಗಳನ್ನೂ ಒದಗಿಸಲಾಗುವುದು. ಇಷ್ಟರವರೆಗೆ ನಾಗಪುರದಲ್ಲಿ ೨೫೦ ಶುಶ್ರೂಷಾ ಸ್ಥಳಗಳನ್ನೂ ಮುಂಬೈಯ ವಿವಿಧ ಆಸ್ಪತ್ರೆಗಳಲ್ಲಿ ೩೦೦ ಸಾಂಕ್ರಾಮಿಕ ಶುಶ್ರೂಷಾ ಸ್ಥಳಗಳನ್ನೂ ಮತ್ತು ೧೦೦ ಕ್ಷಯರೋಗ ಶುಶ್ರೂಷಾ ಸ್ಥಳಗಳನ್ನೂ ಮೀಸಲಾಗಿಡಲಾಗಿದೆ.

ವೈದ್ಯಕೀಯ ಸೌಲಭ್ಯದ ಮತ್ತು ಆಸ್ಪತ್ರೆಗಳ ಉಪಗೃಹಗಳ ಮತ್ತು ಔಷಧಾಲಯಗಳ ನಿರ್ಮಾಣದಲ್ಲಿನ ಒಟ್ಟು ವೆಚ್ಚದ ಮುಕ್ಕಾಲಂಶವನ್ನು ವಿಮಾಸಂಸ್ಥೆಯು ವಹಿಸುವುದು. ನಿರ್ಮಾಣದ ಒಟ್ಟು ವೆಚ್ಚದಲ್ಲಿ ಕಾಲಂಶವನ್ನೂ ರಾಜ್ಯ ಸರ್ಕಾರವು ವಹಿಸಲು ಸಾಧ್ಯವಾಗದಿದ್ದರೆ, ಸಾಲವನ್ನು ಅವುಗಳಿಗೆ ಮಂಜೂರು ಮಾಡಲಾಗುವುದು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3-

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-) ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8) ರೂ. ೧೦೦ಕ್ಕೆ
(ಪ್ರತಿಯೊಂದು ಪ್ರೀಮಿಯಮ್ ಸ್ಟೇಲಿಸಿಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ಟರು: ಶಹಾಕಂಪೆನಿ, ಮಂಗಳೂರು

BHUVANENDR PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇಪ್ಪುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮಠಾಕ ಗಲ್ಲಿ, ಹುಬ್ಬಳ್ಳಿ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಹಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.

ಇನ್ಸ್‌ಪೆಕ್ಟರರು, ಬ್ರಾಂಚ್‌ಮೆನೇಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ.—

B. B. SHETTY, B. A., LL. B.
Chairman.

೧೯೫೪ನೇ ಇಸವಿಯ ರಕ್ಷಣಾ ದಳಗಳಿಗೆ ಮತ್ತು ರಾಷ್ಟ್ರಕ್ಕೆ ಬಹು ಪ್ರಾಮುಖ್ಯವುಳ್ಳ ಅ ನೇಕ ಮುಖ್ಯ ನಿರ್ಧಾರಗಳಿಂದ ಕೂಡಿದ ಮ ಹತ್ವ ಪೂರಿತ ವರ್ಷವಾಗಿದ್ದಿತು.

ಈ ವರ್ಷದಲ್ಲಿ ನಿರ್ಧಾರ ಕೈಕೊಂಡ ಹಲ ವಾರು ಮುಖ್ಯ ವಿಷಯಗಳಲ್ಲಿ ಶಿಕ್ಷಣ ಮಂದಿ ರುವುಳ್ಳ ರಾಷ್ಟ್ರೀಯ ಸ್ವಯಂಸೇವಕದಳವನ್ನು ರಚಿಸುವ ನಿರ್ಧಾರವು ಅತ್ಯಂತ ಗಣನೀಯ ವಾದದ್ದು. ಮೂಲ ಪ್ರತಿರಕ್ಷಣಾ ಕೈಗಾರಿಕೆ ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿ ದ ಯೋಜನೆಗಳನ್ನೂ ಕಳೆದವರ್ಷ ಕಾರ್ಯಗ ತ ಮಾಡಲಾಯಿತು. ಈಚಿನ ವರ್ಷಗಳಲ್ಲಿ ಸ ಶಸ್ತ್ರಾವೆಗಳಿಂದ ಶಸ್ತ್ರಾಸ್ತ್ರಗಳ ಮತ್ತು ಸಾ ಮಾನು ಸರಂಜಾಮಿನ ಬೇಡಿಕೆಯು ಕಡಿಮೆ ಯಾಗಿರುತ್ತದೆಂದರಿಂದ ಯಂತ್ರೋಪಕರಣಗಳ ಕಾರ್ಖಾನೆಗಳು ಅಸೈನಿಕ ವಾಣಿಜ್ಯಕಾರ್ಯ ಗಳಲ್ಲಿ ತೊಡಗಿವೆ ಎಂದಿಲ್ಲಿ ಉಲ್ಲೇಖಿಸ ಬಹುದು.

ಕಳೆದ ವರ್ಷ ಖ್ರಾಯೋಗಿಕವಾಗಿ ಪ್ರಾರಂ ಭಿಸಿದ ಸಹಾಯಕ ಪ್ರಾದೇಶಿಕ ದಳದ (ಆಕ್ಸು ಯಲರಿ ಟೆರಿಟೊರಿಯಲ್ ಫೋರ್ಸ್) ಬದಲು, ಈ ವರ್ಷದ ಎಪ್ರಿಲ್ ತಿಂಗಳಿನಿಂದ ಕೂಡಿಸ ಲಾಗುವ ರಾಷ್ಟ್ರೀಯ ಸ್ವಯಂ ಸೇವಕ ದಳ ದ ಜನತೆಗೆ ಪ್ರಾಥಮಿಕ ಸೇನಾ ಶಿಕ್ಷಣವನ್ನು ಕೊಡುವುದು. ರಾಷ್ಟ್ರದ ವಿವಿಧ ಸ್ಥಳಗಳಲ್ಲಿ ಕೂಡಿಸಿದ ಸಹಾಯಕ ಪ್ರಾದೇಶಿಕ ದಳವಿಭಿನ್ನ ಗಳಲ್ಲಿನ ಸಾಜಬಾತಿಯಿಂದ ಪ್ರೋತ್ಸಾಹಗೊಂ ಡು ರಾಷ್ಟ್ರೀಯ ಸ್ವಯಂ ಸೇವಕ ದಳವನ್ನು ಪ್ರಾರಂಭಿಸಲಾಗುವುದು. ಮುಂದಿನ ಐದು ವರ್ಷಗಳಲ್ಲಿ ಐದು ಲಕ್ಷ ಜನರು ಈ ಯೋಜ ನೆಯ ಪ್ರಕಾರ ಶಿಕ್ಷಣ ಪಡೆಯುವರು. ಇನ್ನೂ ಹೆಚ್ಚಿನ ಮಂದಿಯು ಶಿಕ್ಷಣ ಪಡೆಯುವಂತೆ ಏರ್ಪಾಟನ್ನು ಮಾಡಲಾಗುವುದು. ತರಬೇತಿ ಯ ಅವಧಿಯನ್ನು ಈಗಿರುವ ೧೦ ದಿನಗಳಿಂದ ೧೦ ದಿನಗಳಿಗೆ ಹೆಚ್ಚಿಸಲಾಗುವುದು. ನಮ್ಮ ಸ್ವಾತಂತ್ರ್ಯೋಪಕರಣಗಳ ಕಾರ್ಖಾನೆಗಳಿಂದಲೇ ಎಲ್ಲ ರೀತಿಯ ಸಮ ಸಸ್ತ್ರ, ಸಾಮಾನು ಸರಂ ಜಾಮು ಮತ್ತು ಶಸ್ತ್ರಾಸ್ತ್ರಗಳು ಬರುವುದರಿಂ ದ ಈ ದಳವು ಸಂಪೂರ್ಣವಾಗಿ ರಾಷ್ಟ್ರೀಯ ವಾಗಿರುತ್ತದೆ.

ರಾಷ್ಟ್ರೀಯ ಸೈನಿಕ ವಿದ್ಯಾರ್ಥಿದಳ (ನ್ಯಾಷನಲ್ ಕೆಡೆಟ್ ಕೋರ್) ಮತ್ತು ಸ ಹಾಯಕ ಸೈನಿಕ ವಿದ್ಯಾರ್ಥಿದಳ (ಅಕ್ಸಿಯಲ ರಿ ಕೆಡೆಟ್ ಕೋರ್) ಪೃಥಕವಾಗಿ ಪ್ರಗತಿ ಯನ್ನು ಹೊಂದಿವೆ ಮತ್ತು ಪ್ರಸ್ತುತ ಅರ್ಥಿಕ ಸಾಲಿನ ಅಂತ್ಯದೊಳಗಾಗಿ ಆಯಗಳ ಬಲವು ಕ್ರಮವಾಗಿ ೧೦೦,೦೦೦ ಮತ್ತು ೪,೦೦,೦೦೦ ಗಳಾಗುವ ನಿರೀಕ್ಷಣೆಯಿದೆ. ಈ ಎರಡು ಜನಪ್ರಿ ಯ ಸಂಸ್ಥೆಗಳಲ್ಲಿಪ್ರಾಮುಖ್ಯವಾದ ದೃಷ್ಟಿಯು ಬಾಲಿಕೆಯರ ವಿಭಾಗದ ವಿಸ್ತರಣೆಯ ಮೇಲೆ ಬೀಳುತ್ತದೆ. ೬೦೦ ವಿದ್ಯಾರ್ಥಿನಿಯರೊಂದಿಗೆ ಪ್ರಾರಂಭಿಸಲ್ಪಟ್ಟ ಬಾಲಿಕೆಯರ ವಿಭಾಗವು ಈಗ ೫೦೦೦ ವಿದ್ಯಾರ್ಥಿನಿಯರನ್ನು ಹೊಂ ದಿದೆ. ಶಾಲಾ ಬಾಲಿಕೆಯರಿಗಾಗಿ ಒಂದು ಕಿರಿಯರ ವಿಭಾಗವನ್ನೂ ಇತ್ತೀಚೆಗೆ ಪ್ರಾರಂ ಭಿಸಲಾಯಿತು.

ನಮ್ಮ ಸಶಸ್ತ್ರ ಸೈನ್ಯಗಳ ವೃತ್ತಾಂತ

ಯೋಧರಾಗಿಯೂ ಶಾಂತಿದೂತರಾಗಿಯೂ ನಿರ್ವಹಿಸಿದ ಕಾರ್ಯ

ಸಶಸ್ತ್ರ ಪಡೆಗಳ ನಿಬಂದಿಗೆ ಕೊಡುವ ಸಂ ಬಳ ಸಾರಿಗೆ, ವಿಶ್ರಾಂತಿ ವೇತನ, ಸಹಾಯ ಸ್ರವ್ಯ ಸೌಲಭ್ಯಗಳನ್ನು ವಿಮರ್ಶಿಸಿ ಸುಧಾರಿ ಸುವ ವಿಷಯವು ಕಳೆದ ವರ್ಷದಲ್ಲಿ ಮುಗಿ ಯಿತು. ಹೊಸ ವಿಶ್ರಾಂತಿ ವೇತನ ನಿಯಮಾ ವಳಿಯನ್ನು ಸಶಸ್ತ್ರ ದಳಗಳ ಎಲ್ಲಾ ನಿಬಂದಿ ಯವರಿಗೂ ಅನ್ವಯಿಸಲಾಗುವುದು.

ವಿಶ್ರಾಂತಿ ವೇತನಗಳಲ್ಲಿ ಕೆಲವು ತಾತ್ಕಾ ಲಿಕ ಪರಿಹಿಯಗಳನ್ನು ಅಧಿಕಾರಿ ದರ್ಜೆಯ ಕೆ ಳಗಿನ ಸಶಸ್ತ್ರ ಪಡೆಗಳ ನಿಬಂದಿಗೆ ಕೊಡಲಾ ಯಿತು.

ಭೂ ಕಾನೂನುಗಳಲ್ಲಿನ ಕ್ರಾಂತಿಕಾರಕ ಬದಲಾವಣೆಗಳೂ ದಂಡಿನ ಪ್ರದೇಶಗಳ ಕಾ ರ್ಯ ನಿರ್ವಹಣೆಯೂ, ಇತ್ತೀಚೆಗೆ ಪ್ರತಿ ರಕ್ಷ ಣಾ ಶಾಖೆಯ ಕೈಗೊಂದ ನಿರ್ಧಾರಗಳ ಫಲ ವಾಗಿ, ಜಾರಿಗೆ ಬರಲಿವೆ. ಇದರನ್ವಯ ದಂಡಿ ನ ಪ್ರದೇಶಗಳಲ್ಲಿರುವ ಜಮೀನುಗಳನ್ನು ಜ ಮೀನಿಲ್ಲದ ರೈತರಿಗೆ ಮತ್ತು ಪ್ರಾಮಾಣಿಕ ರೈತರಿಗೆ ಕೊಡಲಾಗುವುದು.

ದಂಡಿನ ಪ್ರದೇಶಗಳ ಕಾರ್ಯ ನಿರ್ವಹಣೆ ಯಲ್ಲಿ ಕೂಡ, ಕೆಲವು ಸುಧಾರಣೆಗಳನ್ನು ಮಾ ಡಲಾಗುವುದು. ಹದಿನೆಂಟನೇ ಶತಮಾನದ ಅ ರಿಯಲ್ಲಿ ಉಚ್ಚಸ್ಥಾನದ ದಂಡಿನ ಪ್ರದೇಶಗಳ ಲ್ಲಿ ಸಸ ಶಕೆಯು ಇಸ್ಪರಲ್ಲಿಯೇ ಪ್ರಾರಂಭವಾ ಗಲಿದೆ.

ರಾಷ್ಟ್ರೀಯ ಪ್ರತಿರಕ್ಷಣಾ ಪರಿಷತ್ತು (ನ್ಯಾಷನಲ್ ಡಿಫೆನ್ಸ್ ಅಕಾಡೆಮಿ) ಮೂರು ದಳಗಳ ಪ್ರಮುಖ ಶಿಕ್ಷಣ ಸಂಸ್ಥೆಯಾಗಿದ್ದು ಮನೋಹರವಾದ ಪ್ರಾಕೃತಿಕ ಸನ್ನಿವೇಶದ ಮಧ್ಯದಲ್ಲಿ ಖಡಕ್‌ವಾಸ್ಲಾದಿಗೆ ಮೊನ್ನೆತಾನೇ ವರ್ಗಾಯಿಸಲ್ಪಟ್ಟಿತು. ಮೊದಲು ಪ್ರಾಯೋಗಿ ಕವಾಗಿ ಡೆಹ್ರಾಡೂನಿನಲ್ಲಿ ಈ ಪರಿಷತ್ತು ಕೆಲ ಸವನ್ನು ಪ್ರಾರಂಭಿಸಿತು ಇಲ್ಲಿ ಜಂಟಿದಳಗಳ ವಿಭಾಗವು ೫೦೦ ಜನ ವಿದ್ಯಾರ್ಥಿಗಳನ್ನು ಪ್ರತಿ ತರಗತಿಗೂ ತೆಗೆದು ಕೊಳ್ಳುವುದು. ಪ್ರತಿ ತರ ಗತಿಯೂ ಮೂರು ವರ್ಷಗಳ ವರೆಗೆ ನಡೆ ಯುವುದು.

ಕಾರ್ಖಾನೆಗಳ ಪುನರ್ಘಟನೆಯ ಸಮಿತಿ ಯು ಶ್ರೀ. ಬಲದೇವ ಸಿಂಗರ ಆಧ್ಯಕ್ಷತೆಯ ಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ಭಾರತದಲ್ಲಿ ನ ಯುದ್ಧೋಪಕರಣ ಕಾರ್ಖಾನೆಗಳ ಕೆಲಸ ವನ್ನು ಪರಿಶೀಲಿಸಿ ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ ಸಲಹೆಗಳ ನ್ನು ನೀಡಬೇಕೆಂದು ಈ ಸಮಿತಿಯನ್ನು ರಚಿಸ ಲಾಗಿತ್ತು.

ನಮ್ಮ ನೌಕಾದಳವು ತನ್ನ ನಾವೆಯ ಕ ವಾಯತುಗಳ ಮತ್ತು ಸಂಚಾರದ ಮುಖ್ಯ ಸ್ಥಾನಾಂಗ್, ಸಿಂಗಾಪುರ, ಮನಿಲಾ, ಹಾಂಗ್ ಕಾಂಗ್ ಮತ್ತು ಬಾಂಗ್‌ಕಾಕ್‌ಗಳಿಗೆ ಭೇಟಿ ಯನ್ನಿತ್ತಿತು. ಆ ಸ್ಥಳಗಳಲ್ಲಿ ನಮ್ಮ ನಾವಿಕ ರು ಹೆಮ್ಮೆಯಿಂದ ಭಾರತದ ಧ್ವಜವನ್ನು ಹಿಡಿ ದಿತ್ತಿದರು.

ಪ್ರಧಾನ ಮಂತ್ರಿಗಳು ಕೊಚ್ಚಿಯಿಂದ ಬಂಬಯಿಗೆ ಧ್ವಜ ನೌಕೆ ,,ಡೆಲಿಲಿ" ಯಲ್ಲಿ ಸಂಚರಿಸಿದ್ದು ನೌಕಾದಳದ ಮಹತ್ವದ ಕಾಲ ವಾಗಿದ್ದಿತು. ನೌಕಾ ಕವಾಯತುಗಳನ್ನು ಪರಿ ಶೀಲಿಸಿದ ನಂತರ ಪ್ರಧಾನ ಮಂತ್ರಿಯವರು ತಮ್ಮ ಪ್ರವಾಸವನ್ನು 'ಸಮುದ್ರಯಾನದ ಮ ರೆವರ್ಣನ" ವೆಂದು ವರ್ಣಿಸಿದರು.

ಭಾರತೀಯ ವೈಮಾನಿಕ ಪಡೆಯು ಪ್ರಾಪ್ತ ವಯಸ್ಸಿಗೆ ಬಂದು ತನ್ನ ೩೧ ನೇ ವಾರ್ಷಿಕೋ ತ್ಸವನ್ನು ಆಚರಿಸಿದ್ದು ಈ ಪಡೆಯು ಇತಿಹಾ ಸದಲ್ಲಿ ಚಿರಸ್ಮರಣೀಯವಾದ ವಿಷಯವಾಗಿದೆ. ಆ ದಿನದೇ ಪ್ರಥಮ ಭಾರತೀಯ ದಂಡನಾ ಯಕರಾದ ಏರ್ ಮಾರ್ಷಲ್ ಎಸ್. ಮುಖರ್ಜಿಯವರು ಭಾರತೀಯ ವೈಮಾನಿಕ ಪಡೆ ಯ ಅಧಿಕಾರ ಸೂತ್ರವನ್ನು ವಹಿಸಿಕೊಂ ಡರು.

ಭಾರತೀಯ ವೈಮಾನಿಕರು ಭಾರತದಲ್ಲಿ ಯೇ ತಯಾರಾದ ,,ಎಚ್. ಟಿ- ೨" ಮೂ ದರಿಯ ವಿಮಾನಗಳಲ್ಲಿ ಪ್ರೌಢಭಾವಿ ತರಬೇತಿ ಯನ್ನು ಪಡೆಯುವರು. ವಿಮಾನ ತಯಾರಿಕೆ ಯ ಈ ಮಾದರಿಯ ಅಭಿವೃದ್ಧಿಯಲ್ಲಿ ವೈಮಾ ನಿಕ ಪಡೆಯು ಮುಖ್ಯ ಪಾತ್ರವನ್ನು ವಹಿಸಿದೆ.

ಈಶಾನ್ಯ ಗಡಿ ವಿಭಾಗದಲ್ಲಿ ವಿಮಾನಗಳ ಮೂಲಕ ಸಾಮಾನುಗಳನ್ನು ಸಾಗಿಸಲಾಯಿ ತು. ಹಾಗೂ ರಾಷ್ಟ್ರೀಯ ಪುನಾರಚನೆಗಾಗಿ ಶಾಂತಿ ಕಾಲದ ಪಾತ್ರವನ್ನು ವೈಮಾನಿಕ ಪ ಡೆಯು ನಡೆಸಿತು. ಭಾರತೀಯ ವೈಮಾನಿಕ ಪಡೆಯ ಸಾರಿಗೆ ವಿಮಾನವೊಂದು ಪ್ರಧಾನ ಮಂತ್ರಿಗಳನ್ನು ಚೀನಾ, ಇಂಡೋಚೀನಾ ಮತ್ತು ಸಿಂಗಳಗಳಿಗೆ ಕರೆದೊಯ್ಯಿತು.

ಭಾರತೀಯ ವೈಮಾನಿಕ ಪಡೆಯ ವಿಮಾನಗಳು ಭಾರತೀಯ ತಂಡವೊಂದನ್ನು ಇಂಡೋಚೀನಕ್ಕೂ ಸಾಗಿಸಿದವು ಫ್ರಾನ್ಸ್‌ನಲ್ಲಿ ಧ್ವನಿತೆಯನ್ನು ನುಚ್ಚು ನೂರು ಮಾಡಿ ಮೂರು ಭಾರತೀಯ ವೈಮಾನಿಕರು ಅದ್ಭುತ ಪ್ರದ ರ್ಶನವನ್ನಿತ್ತದ್ದು ಕಳೆದ ವರ್ಷದಲ್ಲಿ ಗಮನಿ ಸಿದ ಸಿಂಗಳ ಹೆಜ್ಜೆಯಾಗಿದೆ. ರಬ್ಬಕ್ಕಿಂತಲೂ ಹೆಚ್ಚಿನ ವೇಗದಲ್ಲಿ ವಿಮಾನಗಳನ್ನು ನಿರ್ವಾಹ ವೈಮಾನಿಕರು ನಡೆಸಿದ್ದು ಇದೆ ಮೊದಲು.

ಭಾರತೀಯ ವೈಮಾನಿಕ ಪಡೆಯ ಉಪದಂ ಡನಾಯಕರಾದ ಏರ್ ವೈಸ್ ಮಾರ್ಷಲ್ ಎ- ಎಸ್. ಇಂಜನಿಯರ್ ಇವರ ನಾಯಕತ್ವದ ಲ್ಲಿ ಇಂಡೋನೇಷ್ಯಕ್ಕೆ ಸೌಹಾರ್ದ ನಿಯೋಗ ವೊಂದು ಭೇಟಿಯನ್ನಿತ್ತಿತು. ೧೯೫೧ರಿಂದಲೂ ಭಾರತೀಯ ವೈಮಾನಿಕ ಪಡೆಯು ಇಂಡೋ ನೇಷ್ಯಾವನ್ನು ಸೇರಿಸಿ ಕೆಲವು ನೆರೆಹೊರೆಯ ಸ್ವತಂತ್ರ ರಾಷ್ಟ್ರಗಳ ವೈಮಾನಿಕರಿಗೆ ತರಬೇ ತಿಯ ಸೌಲಭ್ಯವನ್ನು ಒದಗಿಸುತ್ತಿದೆ. ಭಾರತ ದ ವೈಮಾನಿಕರಿಗೆ ಪರಿಷತ್ತುಗಳೊಂದರಲ್ಲಿ ಅಫ್ಘಾನಿಸ್ತಾನ ವೈಮಾನಿಕ ವಿದ್ಯಾರ್ಥಿಗಳ ಪ್ರಥ ಮ ತಂಡವು ತರಬೇತಿಯನ್ನು ಪಡೆದು ಪರಿಪೂ ರ್ಣ ಸೇನಾ ವೈಮಾನಿಕ ದಂಡವಾಗಿ ಹೊರ ಬಂತು. ವೈಮಾನಿಕಪಡೆಯ ಜೆಟ್ ವಿಮಾನ ಗಳ ಗುಣಪು ಉತ್ತಮ ಗೊಂಡಿತು. ಹೆಲಿಕಾ ಪ್ಟರ್‌ಗಳನ್ನೂ ಫೈರ್‌ಫೈಟ್ಟಿಂಗ್ ಜಾಕ್ಸ್‌ಕಾರ್‌ಗ ಳನ್ನೂ ಸೇರಿಸಲಾಯಿತು.

ಸ್ವದೇಶದಲ್ಲಿ ಎಲ್ಲ ರೀತಿಯಲ್ಲಿಯೂ ನಮ್ಮ ಸಶಸ್ತ್ರ ಪಡೆಗಳು ಪ್ರಗತಿಯನ್ನು ದಾಖಲೆಮಾ ಡಿದ್ದಲ್ಲದೆ ಲೋಕಕಲ್ಯಾಣಿಯ ಸ್ಥಾಪನೆಗಾಗಿ ಮ ತ್ತೊಮ್ಮೆ ಅಂತಾರಾಷ್ಟ್ರೀಯಕ್ಷೇತ್ರವನ್ನು ಪ್ರ ವೇಶಿಸಿದವು. ನಮ್ಮ ಅಧಿಕಾರಿಗಳೂ ಮತ್ತಿತ ರೂ ಈಗ ಇಂಡೋಚೀನದಲ್ಲಿ ಅಂತಾರಾಷ್ಟ್ರೀ ಯ ಮಟ್ಟದ ಮತ್ತು ಮೇಲ್ವಿಚಾರಣಾ ಆ ಯೋಗಗಳಲ್ಲಿ ಕೆಲಸಮಾಡುತ್ತಿದ್ದಾರೆ. ಕೊರಿ ಯಾದಲ್ಲಿನ ಶಾಂತಿ ಪಾತ್ರವಂತೆ ಇಲ್ಲಿಯೂ ನಮ್ಮವರು ಅದೇ ನಿಷ್ಪಕ್ಷಪಾತವಾದ, ಕಟ್ಟು ನಿಟ್ಟಾದ ನಡತೆಯಿಂದೆ ಕೂಡಿದ್ದು ತಮ್ಮ ಸಾ ಲಿನ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ.

ನೀವು ಈ ಗುರುತನ್ನು ನೋಡಿದೊಡನೆಯೇ

ನಿಮಗೆ ಅತ್ಯುತ್ತಮ ವಾದುದು ದೊರಕಿದೆಯೆಂದು ತಿಳಿಯುವಿರಿ

SR

ಎಸ್. ಆರ್.

ಉತ್ತಮ ತಂಬಾಕು ಎಲೆಗಳಿಂದ ತಯಾರಿಸಲ್ಪಟ್ಟ ಬೀಡಿಗಳಾಗಿರುತ್ತವೆ.

S.R. Beedi Works UDIPI

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಚತುರ್ ವಾರ್ಷಿಕ ಯೋಜನೆ

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ನಿಳಾಸ:—

ಹಾಲಸ್ವಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

(೩ನೇ ಪುಟದಿಂದ)

ರು ತಮ್ಮಿಂದ ಸ್ವತಃ ಮಾಡಲಾರದ ಮತ್ತು ನಮ್ಮೆಲ್ಲರಿಗಿಂತಲೂ ಉತ್ತಮ ರೀತಿಯಲ್ಲಿ ಸ್ವತಃ ನಿರ್ವಹಿಸಲಾರದ ಯಾವ ಕೆಲಸವನ್ನೂ ನಮಗೆ ಮಾಡಲು ಬೇಳುತ್ತಿರಲಿಲ್ಲ. ಫೋನಿಕ್ಸ್ ನಗರದಲ್ಲಿದ್ದಾಗ ಅವರು ಗದ್ದೆಯಲ್ಲಿ ಗುದ್ದಲಿ ಹಿಡಿದು ಕೆಲಸ ಮಾಡುತ್ತಿದ್ದರು. ನಮ್ಮಲ್ಲಿ ತುಂಬ ಬಲಶಾಲಿಗಳಾಗಿದ್ದವರು ಸಹ ಆಯಾಸದಿಂದ ನಿಟ್ಟುಸಿರು ಬಿಡುತ್ತಿದ್ದರು - ಆದರೆ ತಂದೆಯವರು ಮಾತ್ರ ದೃಢವಾಗಿ, ಕ್ಷಣವೂ ನಿಲ್ಲದೆ ತಮ್ಮ ಕೆಲಸವನ್ನು ನಿಶ್ಚಿತ ಸಮಯದ ವರೆಗೆ ಮಾಡುವುದರಲ್ಲಿಯೇ ಮಗ್ನರಾಗುತ್ತಿದ್ದರು. ಅವರ ಅಗಾಧ ಶಕ್ತಿ ಮತ್ತು ದೃಢ ನಿಶ್ಚಯ ಹಾಗಿದ್ದಿತು! ಈ ಗತಕಾಲವನ್ನು ನೆನೆದಾಗ ನಾನು ಅದನ್ನು ಕೊಂಡಾಡುತ್ತೇನೆ—ಏಕೆಂದರೆ ಹಾಗೆ ದುಡಿದುದರಿಂದಲೇ ಇಂದಿಗೂ ದೈಹಿಕ ದಾರ್ಢ್ಯವನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಯಿತು.

ಜೀವನದಲ್ಲಿ ನಾನು ಅನೇಕ ಘಟ್ಟಗಳನ್ನು ದಾಟಿ ಹೋಗಿದ್ದೇನೆ; ಇಲ್ಲೆಲ್ಲ ನನಗೆ ನನ್ನ ತಂದೆಯಿಂದ ಪ್ರೀತಿ ದೊರೆತಂತೆ ಶಿಕ್ಷೆಯೂ ಸಿಕ್ಕಿದೆ. ಆದರೆ ಅವರ ಶಿಕ್ಷೆಯಿಂದ ನಾನೆಂದೂ ಕಹಿಯಾದಂತೆ ನೆನಪಿಲ್ಲ. ನನ್ನ ಒಂಭತ್ತನೆಯ ವಯಸ್ಸಿನಲ್ಲಿ ವಿಷಮ ಜ್ವರವು ನನ್ನನ್ನು ತನ್ನ ಮುಷ್ಟಿಯಲ್ಲಿ ತೆಗೆದು ಕೊಂಡಾಗ ಯಾವ ತಂದೆಯೂ ನನ್ನ ತಂದೆಯವರನ್ನು ತತ್ಪರತೆಯಿಂದಲೂ ಪುತ್ರ ವಾತ್ಸಲ್ಯದಿಂದಲೂ ಉಪಚರಿಸಿರಲಿಕ್ಕಿಲ್ಲ. ಇದರ ಸತ್ಯ ಚಿತ್ರವನ್ನು ತಂದೆಯವರು ಬರೆದು "ಸತ್ಯ ಬೋಧನೆ" ಪುಸ್ತಕದಲ್ಲಿ ಕಾಣಬಹುದು- ಅಲ್ಲಿ ಹೇಳಿದ ವೃತ್ತಿಯೊಂದೂ ಮಾತು ನಿಜ. ಆದರೆ ನಾನು ಮಾತ್ರ ಗಂಭೀರಲ್ಲಿ ನನ್ನ ತಂದೆಯವರು ಏಳು ದಿನಗಳ ಉಪವಾಸವನ್ನು ಕೈಗೊಳ್ಳುವಂತೆ ಮಾಡಿದೆನೆಂದು ನಾಚಿಕೆಯಿಂದಲೇ ಒಪ್ಪಿಕೊಳ್ಳಬೇಕಾಗಿದೆ ನಾನು ಅವರನ್ನು ಮೋಸ ಮಾಡಲು ಯತ್ನಿಸಿದ್ದೆ—ಆ ಸಮಯದಲ್ಲಿ ತಂದೆಯವರು ಜೋಹಾನ್ಸ್ ಬರ್ಗ್‌ನಲ್ಲಿದ್ದರು; ನಾನು ಫೋನಿಕ್ಸ್‌ನಲ್ಲಿ. ನಮ್ಮಿಬ್ಬರೊಳಗೆ ಪರಸ್ಪರ ಪತ್ರ ವಿನಿಮಯವಾಯಿತು. ನನ್ನ ಬಗ್ಗೆ ಅವರಿಗೆ ತಲಪಿದ ಕೆಲವು ವರದಿಗಳಿಂದ ತಂದೆಯವರು ನೊಂದಿದ್ದರು ಅವರು ಅದೆಲ್ಲವನ್ನೂ ನಾನು ಒಪ್ಪಿಕೊಳ್ಳಬೇಕೆಂದು ಬೇಳುತ್ತಿದ್ದರು; ನಾನು ಮಾತ್ರ ನಿರಾಕರಿಸುತ್ತಿದ್ದೆ. ಕೊನೆಯಲ್ಲಿ ‘‘ಮನಃಕ್ಲೇಶದಲ್ಲಿ ಬಳಲುತ್ತಿರುವ ನಿನ್ನ ತಂದೆಯ ಆಶೀರ್ವಾದಗಳು’’ ಎಂಬೊಂದು ಪತ್ರ ಅವರಿಂದ ಕೈ ಸೇರಿತು. ಅದನ್ನು ನಾನು ಸಹಿಸುವಂತಿರಲಿಲ್ಲ. ನಾನು ನನ್ನ ತಪ್ಪನ್ನು ಒಪ್ಪಿಕೊಳ್ಳಲು ಇಚ್ಛಿಸಿದೆ— ಆದರೆ ನೇರಾಗಿ ಅವರ ಮುಂದೆ ಹಾಗೆ ಮಾಡುವ ಧೈರ್ಯವಿರಲಿಲ್ಲ.

ಆದುದರಿಂದ ನಾನು ನಮ್ಮ ಕುಟುಂಬದೊಬ್ಬ ಸದಸ್ಯರನ್ನು ಎಷ್ಟು ಆತ್ಮೀಯರಾಗಿದ್ದ ಕಲ್ಲೆನ್ ಬಾಚ್‌ರಿಗೆ ಬರೆದ ಒಂದು ಕಾಗದೊಟ್ಟಿಗೆ ನನ್ನ ಕ್ಷಮಾಯಾಚನಾ ಪತ್ರವನ್ನು ಜೋಡಿಸಿ ಕಳಿಸಿದೆ. ತಂದೆಯವರಿಂದ ಒಡನೆಯೇ ಒಂದು ತಂತಿ ಬಂತು. "ನಾನು ನಿನ್ನನ್ನು ಕ್ಷಮಿಸಿದ್ದೇನೆ. ಇವರೂ ಕ್ಷಮಿಸುವಂತೆ ಪ್ರಾರ್ಥಿಸು". ಆ ಕೂಡಲೇ ಅವರು ಫೋನಿಕ್ಸ್‌ಗೂ ಬಂದರು, ಮತ್ತು ನಾನೂ ಅವರೂ ಏಳು ದಿನಗಳ ಉಪವಾಸ ಮಾಡಿದೆವು ಕಲ್ಲೆನ್ ಬಾಚ್ ಸಹ ನಮ್ಮನ್ನು ಸೇರಿಕೊಂಡರು. ಆಗ ಮತ್ತು ಆ ಮೇಲೆಯೂ ಈ ಘಟನೆಯ ಬಗ್ಗೆ ನನ್ನಲ್ಲಿಂದೂ ಕಹಿಭಾವನೆಯುಂಟಾಗಲಿಲ್ಲವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ ತಂದೆಯವರು ಫೋನಿಕ್ಸ್‌ನಲ್ಲಿ ಒಂದು ಶಾಲೆಯನ್ನು ನಡೆಸುತ್ತಿದ್ದರು ಅಲ್ಲಿಯ ಮಕ್ಕಳು ಅವರೊಂದಿಗೆಯೇ ಉಂಡು ವಾಸಿಸುತ್ತಿದ್ದರು. ಈ ಘಟನೆಯಿಂದಾಗಿ ಅವರು ಆ ಎಲ್ಲ ಮಕ್ಕಳ ಪೆತ್ತವರಿಗೂ ಕಾಗದ ಬರೆದು ಮಕ್ಕಳನ್ನು ಬೇಕಾದರೆ ಹಿಂದೆ ಕರೆದುಕೊಂಡು ಹೋಗಿರೆಂದು ತಿಳಿಸಿದರು. ಆದರೆ ಯಾರೂ ಹಾಗೆ ಮಾಡಲಿಲ್ಲ

ಇನ್ನೊಂದು ಘಟನೆಯು ಭಾರತದಲ್ಲಿ ಗಾಂಧೀಜೀ ಇಸವಿಯ ಪ್ರಾರಂಭದಲ್ಲಿ ನಡೆಯಿತು. ಆಗ ನಾನೊಂದು ಸುಳ್ಳನ್ನು ಹೇಳಬಿಟ್ಟೆ. ಸುತ್ತಮುತ್ತಲಿದ್ದ ಎಲ್ಲರಿಗೂ ಅದೊಂದು ಸಾಮಾನ್ಯ ಸಂಗತಿಯಾಗಿ ಕಂಡಿತು; ಆದರೆ ತಂದೆಯವರ ದೃಷ್ಟಿಯಲ್ಲಿ ಅದು ಹಿಮಾಲಯ ಸ್ವರೂಪದ ತಪ್ಪು! ನಾನು ಸುಳ್ಳು ಹೇಳಿದ್ದನ್ನು ಅವರು ಆಶ್ರಮದ ಎಲ್ಲರಿಗೂ ತಿಳಿಸಿ, ಮರುಸಿನದಿಂದ ನನ್ನನ್ನು ಆಶ್ರಮದಲ್ಲಿರಗೊಡಲಾದುದಿಲ್ಲವೆಂದು ಸಾರಿದರು. ನಾನು ಮನಸ್ಸು ಬಂದಲ್ಲಿಗೆ ಹೋಗಬಹುದೆಂದಾಯಿತು; ಆದರೂ ತಂದೆಯವರು ಕೆಲವು ಸಲಹೆಗಳನ್ನು ಮುಂದಿಟ್ಟರು. ಅವರು ನಾನು ಕೈಯಿಂದ ನೂಲುವ ಮತ್ತು ನೇಯುವ ಮದ್ರಾಸಿನ ಕೇಂದ್ರವೊಂದಕ್ಕೆ ಹೋಗಬಹುದೆಂದೂ ಅಲ್ಲಿ ಶಿಕ್ಷಣಾಭ್ಯಾಸಿಯಾಗಿರಬಹುದೆಂದೂ ಹೇಳಿದರು ಆದರೆ ತಂದೆಯವರ ಹೆಸರನ್ನು ಮಾತ್ರ ಉಪಯೋಗಿಸಬಾರದೆಂದು ನನಗೆ ವಿಧಿಸಿದರು. ಇದರ ಹೊರತಾಗಿ ತಂದೆಯವರು ಪ್ರಾಯಶ್ಚಿತ್ತ ರೂಪದಲ್ಲಿ ತಾವೇ ಸ್ವತಃ ಉಪವಾಸ ಕೈಗೊಳ್ಳುವ ನಿಶ್ಚಯವನ್ನೂ ಪ್ರಕಟಿಸಿದರು. ಆಗ ನಾನು ಇಡೀ ರಾತ್ರಿ ಅವರ ಮುಂದೆ ಕುಳಿತು ಹಾಗೆ ಮಾಡಬಾರದಾಗಿ ಬಿನ್ನವಿಸಿದೆ, ನನ್ನ ಈ ಪ್ರಾರ್ಥನೆ ಸಫಲವಾಯಿತು.

ನನ್ನ ತಂದೆಯನ್ನು ನೋಡಿರ ಜೀವ ದಾಸನನ್ನೂ ಬಿಕ್ಕಿ ಬಿಕ್ಕಿ ಅಳುತ್ತಲೇ ನಾನು ಆಗಲಿದೆ ನನ್ನ ಕೈಯನ್ನು ಪೂರ್ಣ ಬರಿದು ಮಾಡಿ ತಂದೆಯವರು ನನ್ನನ್ನು ಹೊರಗೆ ಹಾಕಲಿಲ್ಲ—ರೈಲಿನ ಕರ್ಚಿಗೆ ಸಾಕಾಗಿ ಸ್ವಲ್ಪ ಹೆಚ್ಚು ಎಷ್ಟು ಹಣವನ್ನು ಕೈಯಲ್ಲಿಟ್ಟರು ರೈಲಿನಿಂದ ಕಣ್ಣೀರು ಸುರಿಸುತ್ತಲೇ ನಾನು ತಂದೆಯವರಿಗೆ ನೋವುಂಟು ಮಾಡಿದುದಕ್ಕೆ ವಿಷಾದಿಸಿ ಪತ್ರವೊಂದನ್ನು ಬರೆದೆ. ಹೀಗೆ ನಾನು ಪ್ರತ್ಯೇಕವಾಗಿ ಕಳೆದ ಎರಡು ತಿಂಗಳಲ್ಲಿ ಜೀವನದಲ್ಲಿಯೇ ಹೊಸದೆನಿಸಿದ ಅನುಭವವನ್ನು ಸಂಪಾದಿಸಿದೆ. ಮುಂದೆ ತಂದೆಯವರುತನ್ನೊಟ್ಟಿಗೆ ಆಶ್ರಮಕ್ಕೆ ಹಿತನಿಗೆ ಪರಿಚಯ ಪತ್ರವೊಂದನ್ನು ಕೊಡಲು ಕಳಿಸಿದರು. ಇದರಿಂದ ನಂತರದ ಏಳುತಿಂಗಳುಗಳನ್ನು ಮದ್ರಾಸಿನಲ್ಲಿ ಸಂತೋಷದಿಂದಲೇ ಕಳೆಯುವಂತಾಯಿತು. ಆ ದಿನಗಳ ಪ್ರೀತಿಯ ಸ್ಮರಣೆಯು ನನ್ನ ತಂದೆಯವರ ಮೇರೆಯರಿಯದ ಮೃದುಸ್ವಭಾವವನ್ನು ತೋರಿಸುತ್ತದೆ, ಆದಾಗ್ಯೂ ಅವರು ಉಕ್ಕಿನಷ್ಟು ಕಠೋರರೂ ಆಗುತ್ತಿದ್ದರು! ಹೀಗೆ ಅವರು ನನಗೆ ಏನನ್ನು ಕೊಟ್ಟಿದ್ದಾರೋ ಅದಕ್ಕೆ ನಾನು ಅವರಿಗೆ ಅಭಾರಿಯಾಗಿದ್ದೇನೆ; ಮತ್ತು ಅವರ ಪವಿತ್ರಾತ್ಮವು ನನ್ನನ್ನು ಸದಾ ಕಾಲ ಸನ್ಮಾರ್ಗದಲ್ಲಿ ಮುನ್ನಡೆಸುತ್ತಿರಲೆಂದು ಪ್ರಾರ್ಥಿಸುತ್ತೇನೆ.

—I. P. S.

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

O S 414/1954

ವಾದಿ— ಶಂಕರ ನಾರಾಯಣ ಮಯ್ಯ.

ಪ್ರತಿವಾದಿಯು— 1. ಮಂಜ, 2. ಜಟ್ಟಿ, 3. ಸುಲೆ ಹೆಂಗಸು.

ಕುಂದಾಪುರ ತಾಲ್ಲೂಕು ಖಂಭದ ಕೋಣೆ ಗ್ರಾಮದಲ್ಲಿರುವ ಮೊಗೆರ ದಾರು ಹೆಂಗ್ಸಿನ ಮಗ 2ನೇ ಪ್ರತಿವಾದಿ ಜಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ವಾದಿಗೆ ಪ್ರತಿವಾದಿರಿಂದ ಕಳೆದ ಸಿಜಯ ಸಂವತ್ಸರಕ್ಕೆ ಬರತಕ್ಕ ಮೂಲಗೇಣಿ ಗೇಣಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇರೆ ದಾಖ್ಲು ಮಾಡಿದ ಮೇಲಿನ ವಾದೆಯು ತಾ 5-2-1955ಕ್ಕೆ ಮೇಲಿನ ಕೋರ್ಟ್‌ನಲ್ಲಿ ತತ್ವಗೆ ಇಟ್ಟಿರುತ್ತದೆ. ಆ ಸುರಿತು ವಿವಾದವೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟ್‌ಮುಂದೆ ಹಾಜ್ರಾಗಿ ಜ್ಯಾಹೀರ್ ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah
Advocate for Plff

Date 23-1-55 Coondapoor

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,

1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ದಿ| ಕೊರಡ್ಕಲ್ ಶ್ರೀನಿವಾಸ ರಾಯರಿಂದ ರಚಿತವಾದ



ಎಂಬ ಆಂಗ್ಲ ಸ್ವಯಂಬೋಧಿನಿಯಿಂದ ಸ್ವತಃ ಇಂಗ್ಲಿಷ್ ಕಲಿಯಿರಿ.

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ ತ್ವರೆಯಾಗಿ ತರಿಸಿಕೊಳ್ಳಿರಿ.
ದೊರೆಯುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ ನವಯುಗ ಪ್ರೆಸ್, ಉಡುಪಿ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ



Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licented to Post without Prepayment

ನವಯುಗ

ಸಂಪುಟ ೩೪
VOL. 34

ಉಡುಪಿ, 10—2—1955

ಸಂಚಿಕೆ ೨೩
NO. 23

ಪೋಲೀಸರು ಹಾಗು ಜನತೆ

ಪೋಲೀಸರು ಅನ್ಯೋಂದು ಅನುಕೂಲವಾಗಿರದ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವರೆಂದೂ ಅವರಿಗೆ ವ್ಯಾವಹಾರಿಕವಾದ ಅನೇಕ ಕಠಿಣ ಪ್ರಸಂಗಗಳನ್ನು ಎದುರಿಸಬೇಕಾಗುವುದೆಂದೂ ಸಾರ್ವಜನಿಕರಿಗೆ ಸ್ವಲ್ಪವೂ ತಿಳಿದಿರಾಗಿಲ್ಲ. ತಮ್ಮ ನಾಗರಿಕ ಸ್ವಾತಂತ್ರ್ಯವನ್ನು ಪೋಲೀಸರು ಗೌರವಿಸಬೇಕೆಂದು ಸಾಮಾನ್ಯವಾಗಿ ಪ್ರಜೆಗಳ ಅಭಿಪ್ರಾಯ. ಆದರೆ ಈ ರಕ್ಷಣೆಯು ಕಾನೂನನ ಅನುಯಾಯಿಗಳೆನಿಸುವವರಿಗೆ ಮತ್ತು ಶಾಸನಭಂಜಕರೆಂದು ಹೇಳಲಾಗುವವರಿಗೆ ಇಬ್ಬರಿಗೂ ಸಮನಾಗಿ ಅನ್ವಯಿಸುತ್ತದೆಂಬುದನ್ನು ಜನರು ಮೆಚ್ಚಿಕೊಂಡಂತಿಲ್ಲ

—ಬ್ರೂಸ್ ಸ್ಮಿತ್

ರಾಂಚಿಯಲ್ಲಿ ಇದೇ ಇನೇ ದಿನಾಂಕ ಪ್ರಾರಂಭವಾದ ಅಖಿಲ ಭಾರತ ಪೋಲೀಸರ ಕ್ರೀಡಾ ಮಹೋತ್ಸವಕ್ಕೆ ಸಂದೇಶವನ್ನು ಕಳುಹಿಸಿದ ಪ್ರಧಾನ ಮಂತ್ರಿಗಳು ಪೋಲೀಸರೂ ಜನರೂ ಪರಸ್ಪರ ತಿಳಿವಳಿಕೆಯಿಂದ ಮತ್ತು ಸಹಕಾರದಿಂದ ಕೆಲಸ ಮಾಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ತಾವು ಜನರ ಸೇವೆ ಮಾಡಬೇಕಾಗಿದೆಯೆಂಬುದನ್ನು ಪೋಲೀಸರೂ ತಾವು ಪೋಲೀಸರಂಗೆ ತೊಂದರೆಯಾಗದಂತೆ ನಡೆದುಕೊಳ್ಳಬೇಕಾಗಿದೆಯೆಂಬುದನ್ನು ಜನರೂ ಮನಗಾಣಬೇಕೆಂದು ಅವರು ಉಪದೇಶಿಸಿದರು. ಈಚೆಗೆ ಪೋಲೀಸು ಹಾಗು ಜನತೆಯ ನಡುವೆ ಸೌಹಾರ್ದಯುತವಾದ ಮತ್ತು ಸಹಕಾರಪೂರ್ಣವಾದ ಸಂಬಂಧ ಬೆಳೆದು ಬರುತ್ತಿರುವುದಕ್ಕೆ ಅವರು ತಮ್ಮ ಸಂತೋಷವನ್ನು ಸೂಚಿಸಿದರು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪೋಲೀಸರು ಬ್ರಿಟಿಷರ ಕಾಲದಲ್ಲಿ ನಿರ್ವಹಿಸಿದಕರ್ತವ್ಯಗಳನ್ನೆ ಆಗಲೂ ಹೊಸ ಆಡಳಿತ ವಿಧಾನಕ್ಕೆ ಸಮ್ಮತವಾದ ರೀತಿಯಲ್ಲಿ ಮತ್ತು ಪ್ರಜಾಭಿಪ್ರಾಯಕ್ಕೆ ತಕ್ಕುದಾದ ಕ್ರಮದಲ್ಲಿ ನಿರ್ವಹಿಸಬೇಕೆಂಬ ವಿಷಯಕ್ಕೆ ಈಗ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗುತ್ತದೆ. ಪೋಲೀಸರುಸಾರ್ವಜನಿಕರ ಸೇವಕರು; ಮತ್ತು ಪ್ರಜೆಗಳ ಪ್ರಾಣ ಮತ್ತು ಸಂಪತ್ತಿನ ರಕ್ಷಕರು ಅವರು ತಮ್ಮ ಈ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಜನತೆಯ ಮನಃಪೂರ್ವಕವಾದ ಸಹಕಾರವನ್ನೂ ಸಹಾನುಭೂತಿಯನ್ನೂ ಬೆಂಬಲವನ್ನೂ ಸಂಪಾದಿಸುವುದು ಅಗತ್ಯ.

ತಮ್ಮ ಕಾರ್ಯಾಚರಣೆಯಲ್ಲಿ ಪೋಲೀಸರಿಗೆ ವ್ಯರ್ಥ ತೊಂದರೆಗಳನ್ನೊಡ್ಡಬಾರದೆಂಬ ಸಂಗತಿಯನ್ನು ಜನರು ಸಹ ತಿಳಿದಿರುವುದು ಅಗತ್ಯ. ಪೋಲೀಸರು ನಿರ್ವಹಿಸುವ ಪಾತ್ರವನ್ನು ಸಾರ್ವಜನಿಕರು ಮೆಚ್ಚದಿದ್ದರೆ, ಅವರೊಡನೆ ಉಚಿತವೆನಿಸಿದ ರೀತಿಯಲ್ಲಿ ಸಹಕರಿಸದಿದ್ದರೆ, ಪೋಲೀಸರು ತಮ್ಮ ಅನೇಕ ಕೆಲಸಗಳಲ್ಲಿ ಕೃತಕೃತ್ಯರಾಗದೆ ಹೋಗಬಹುದು. ಕೆಲವು ಪರಿಸ್ಥಿತಿಗಳಲ್ಲಿ ಪೋಲೀಸರು ನಡೆಸುವ ತನಿಖೆ ಕ್ರಮಗಳಲ್ಲಿ ಹಸ್ತಕ್ಷೇಪ ಮಾಡದೆ ದೂರವುಳಿಯುವುದೇ ಸಾರ್ವಜನಿಕರು ತೋರಿಸಬಹುದಾದ ಸಹಕಾರವಾಗುತ್ತದೆ; ಇನ್ನು ಕೆಲವು ಪರಿಸ್ಥಿತಿಗಳಲ್ಲಿ ಸಹಾನುಭೂತಿಯನ್ನಷ್ಟೆ ಪ್ರಕಟಿಸದೆ ಚಟುವಟಿಕೆಯಿಂದ ಕೂಡಿ ಪೋಲೀಸರಿಗೆ ಬೇಕು ಬೇಕಾದ ಸಹಾಯವನ್ನು ಕೊಟ್ಟು ಸಮಾಜ ಭಾತುಕರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಸಹಕಾರದ ಕಕ್ಷೆಯಲ್ಲಿ ಬರುತ್ತದೆ.

ಆದುದರಿಂದ ಸಾರ್ವಜನಿಕರು ಎಲ್ಲಿ ಪೋಲೀಸರೊಡನೆ ಕ್ರಿಯಾತ್ಮಕ ಶಕ್ತಿಯಿಂದಲೂ ಚಟುವಟಿಕೆಯಿಂದಲೂ ಮುಂದೆ ಬಂದು ನೆರವೀಯಬೇಕು; ಮತ್ತು ಎಲ್ಲಿ ಜಡತ್ವವನ್ನು ಪ್ರಕಟಿಸಿ, ಕುತೂಹಲವನ್ನು ಅಮುಮಿಹಿಡಿದು ಹಿಂದೆ ಸರಿದು ಸಹಾಯಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿದಿರುವುದು ಅವೇಕ್ಷಣೀಯ ಇವೆರಡು ಭಿನ್ನ ಪ್ರಕಾರಗಳ ನಡುವೆ ವಿಭಾಜಕ ರೇಖೆಯನ್ನೆಳೆಯುವುದು ಅಷ್ಟು ಸುಲಭ ಸಾಧ್ಯವಲ್ಲ ಅದಕ್ಕೆ ತಿಕ್ಷಣವನ್ನೆ ಕೊಡಬೇಕಾಗುತ್ತದೆ—ಮುಂಬಯಿ ನಗರದಲ್ಲಿ ಮಾಡಿದಂತೆ ಪೋಲೀಸು ಸಲಹಾ ಸಮಿತಿಗಳ ರಚನೆ ಮಾಡುವುದರಿಂದ, ಸ್ವಲ್ಪಮಟ್ಟಿಗಾದರೂ ಸಾರ್ವಜನಿಕರಿಗೆ ತಮ್ಮ ಸಹಕಾರದ ಸ್ವರೂಪದ ಕಲ್ಪನೆಯನ್ನು ಮಾಡಿಕೊಡಬಹುದು. ಸ್ವಿಜರ್‌ಲೇಂಡ್ ದೇಶದಲ್ಲಿ ಜನರಿಗೆ ಸಾಕಷ್ಟು ಪರಿಣಾಮಕಾರಿಯಾದ ಶಿಕ್ಷಣವನ್ನು ಕೊಟ್ಟು, ಅವರ ಸಹಕಾರವು ಪ್ರತಿಯೊಂದೂ ಸಂದರ್ಭದಲ್ಲಿ ಸಿಗುವಂತೆ ಪೋಲೀಸರು ನೋಡಿಕೊಂಡಿದ್ದಾರೆ ಇದನ್ನು ನಮ್ಮ ದೇಶದಲ್ಲಿ ಸಹ ಅನುಸರಿಸುವುದು ಪ್ರಯೋಜನಕರ.

ಉದಾಹರಣೆಗಳಿಂದ ಸಹಕಾರದ ಸ್ವರೂಪವನ್ನು ವಿವರಿಸುವುದಾದರೆ, ರಸ್ತೆಯಲ್ಲಿ ಅಪಘಾತ ಅಥವಾ ಇನ್ನತ ಪ್ರಕರಣವೊಂದು ನಡೆಯಿತೆಂದು ಇಟ್ಟುಕೊಳ್ಳೋಣ—ಆಗ ಸಾಮಾನ್ಯವಾಗಿ ಈ ಸ್ಥಳವು ಜನರಿಂದ ಕಿಕ್ಕಿರಿಯಲ್ಪಡುತ್ತದೆ. ಅವರಲ್ಲಿ ಕೆಲವರು ಕುತೂಹಲವಶರಾಗಿ ಒಂದು ಪ್ರೇಕ್ಷಕರು; ಇನ್ನು ಕೆಲವರು ದುರ್ಘಟನೆಗೆ ಗುರಿಯಾದ ವ್ಯಕ್ತಿಯ ವಿಷಯದಲ್ಲಿ ಕನಿಕರದಿಂದಮುಂಬಿ ನೆರವಾಗಲು ಬಂದವರು, ಮತ್ತೆ ಕೆಲವರು ಪ್ರಕರಣದ ಪತ್ತೆಯನ್ನು ಮಾಡುವ ಬಗ್ಗೆ ಮಾಹಿತಿ ಸಂಗ್ರಹಿಸುವ ಚಪಲವನ್ನೂ ತೋರಿಸಬಹುದು. ಆದರೆ ಇದಾವುದೂ ಪೋಲೀಸರ ಕಾರ್ಯಾಚರಣೆಗೆ ಸಹಕಾರಿಯಾದುದಲ್ಲ—ಅನೇಕ ಸಂದರ್ಭಗಳಲ್ಲಿ ಚಿಕಿತ್ಸಕನ ಅಥವಾ ಪತ್ತೇದಾರನ ಕಾರ್ಯವನ್ನು ವಹಿಸಲು ಸಾಮಾನ್ಯ ಪ್ರಜೆಗಳು ಪ್ರಯತ್ನಿಸಿದುದರಿಂದಲೇ ಪ್ರಕರಣದ ಪತ್ತೆಯಲ್ಲಿ ದೊಡ್ಡ ಸಹಾಯ ಮಾಡಬಹುದಾಗಿದ್ದ ಕುಯಿಹುಗಳು ನಾಶವಾಗುತ್ತವೆ, ಅಥವಾ ಹಾಳುಗೊಳ್ಳುತ್ತವೆ.

ಹಾಗಾದರೆ, ಜಡತ್ವವೇ ಸಾರ್ವಜನಿಕ ಸಹಕಾರದ ಉತ್ತಮ ರೂಪವೆಂದು ತಿಳಿಯಬೇಕಾಗುವುದು ಅಗತ್ಯ. ಪೋಲೀಸರು ತಮ್ಮ ಕರ್ತವ್ಯ ನಿರ್ವಹಣ ಕಾಲದಲ್ಲಿ ನಿಜವಾದ ಅಪರಾಧಿಗಳನ್ನು ಮೃದುವಾಗಿ ನಡೆಸಿಕೊಳ್ಳುತ್ತಾರೆಂದೂ ಇತರರೊಂದಿಗೆ ಕಠಿಣ ವರ್ತನೆಯನ್ನೆ ತೋರಿಸುವರೆಂದೂ ಸಾಮಾನ್ಯವಾಗಿ ದೂರಲಾಗುತ್ತದೆ ತಮ್ಮ ಕೆಲಸದಲ್ಲಿ ಪೋಲೀಸರಿಗಿರುವ ಅಡೆತಡೆಗಳ ಸ್ಪಷ್ಟ ಕಲ್ಪನೆ ಸಾರ್ವಜನಿಕರಿಗಿದ್ದಲ್ಲಿ ಈ ಆರೋಪನ್ನೇನೂ ಅವರು ಮಾಡುತ್ತಿರಲಿಲ್ಲ—ಪೋಲೀಸರಿಗೆ ಅನುಮಾನಾಸ್ಪದವಾದ ಪ್ರಕರಣದಲ್ಲಿ ಸುಗ್ರಾವವರ ಪತ್ತೆ ಮಾ

(೧೨ನೇ ಪುಟ ನೋಡಿರಿ)

ಚಿಂತನ

ಬಗಳದಿನಗಳಿಂದ ಎದುರುಬಂದಗಾ ತಪ್ಪಿಸಿಕೊಂಡು ಅಲೆದಾಡುತ್ತಿದ್ದ ಮಿತ್ರ ಇಂದು ಅವನಕೈಗೆ ಸಿಕ್ಕಿಬಿದ್ದ. ಇಬ್ಬರೂ ತಮ್ಮ ಇಂಗಿತವನ್ನು ಹೊರಗಿಡದೆ ಹೊಟೇಲಿನೊಳಗೆ ಹೋದರು.

ತುಸುತಡೆದ ಬಳಿಕ ಸಿಕ್ಕಿಬಿದ್ದ ಮಿತ್ರ ಹೇಳಿದ—"ತಗೊಳ್ಳಪ್ಪ, ಹೋದ ಸರ್ತಿ ನೀನು ಕಡ ಕೊಟ್ಟದ್ದ ಒಂದು ರೂಪಾಯಿಯುಂಟಪ್ಪ, ಇಗೊ, ತೆಗೆದುಕೊ!"

ಅದಕ್ಕೆ ಅವನು ಹೇಳಿದ—"ಬೇಡ, ಬೇಡ—ಜೇನೇ ಇಟ್ಟುಕೋ, ಅದನ್ನು. ಇನ್ನು ದಿನಗಳ ಮೇಲೆ ಕೇಳಲು ಒಂದು ರೂಪಾಯಿಗಾಗಿ ನಾನು ನಿನ್ನಬಗ್ಗೆ ಮಾಡಿಕೊಂಡ ಅಭಿಪ್ರಾಯವನ್ನು ಬದಲಿಸುವುದೇನೂ ಪ್ರಯೋಜನಕರವಲ್ಲ!"

ಯೇಂಬವೇ! ಮೊದಲೇ ಹೇಳಿದಂತೆ, ಅದೂ ಸರಿಯಲ್ಲ—ಒಂದು ದುರ್ಘಟನೆಯನ್ನು ಪ್ರತ್ಯಕ್ಷವಾಗಿ ಕಂಡವರು ಪೋಲೀಸರ ತನಿಖೆ ನಡೆದಾಗ ತಮ್ಮ ಅನುಭವವನ್ನು ಹೇಳಲು ತಾವಾಗಿಯೇ ಮುಂದೆ ಬರುವುದು ಇಷ್ಟವಾಗಿದೆ. ಇದರಿಂದ ಘಟನೆಯನ್ನು ಕ್ರಮಬದ್ಧವಾಗಿ ಮೋಣಿಸಿ ನಿಜವಾದ ಅಪರಾಧಿಯ ಶೋಧವನ್ನು ಮಾಡುವುದಕ್ಕೂ ನ್ಯಾಯಾಲಯದಲ್ಲಿ ಪ್ರಕರಣವನ್ನು ಸತ್ಯಕ್ಕೆ ಚ್ಯುತಿ ಇಲ್ಲದಂತೆ ಮಂಡಿಸುವುದಕ್ಕೂ ಪೋಲೀಸರಿಗೆ ಸಾಧ್ಯವಾಗುತ್ತದೆ ಸಾರ್ವಜನಿಕರು ತಮಗೆ ಆ ಗೊಡವೆಯೇ ಬೇಡ ಎಂದು ಸುಮ್ಮನುಳಿದುದರಿಂದಲೇ ಎಷ್ಟೋ ಅಪರಾಧಗಳು ಪತ್ತೆಯಾಗದೆ ಉಳಿಯುತ್ತವೆ ಪತ್ತೆಯಾದರೂ ನ್ಯಾಯಾಲಯದಲ್ಲಿ ಅಪ್ರಯೋಜನ ಮಾಡಲಾಗದೆ ಹೋಗುತ್ತವೆ. ಹೀಗೆ ಸಾರ್ವಜನಿಕರಿಂದ ಸಹಕಾರ ದೊರೆಯಬೇಕೆಂದೇ ಯಾರೇ ಆಗಲಿ, ವಿಶಿಷ್ಟ ಪ್ರಕರಣದ ಬಗ್ಗೆ ತನಗೆ ತಿಳಿದಿರುವ ಮಾಹಿತಿಯನ್ನು ಮುಚ್ಚಿಟ್ಟುಕೊಳ್ಳಬಾರದು ಎಂಬ ಶಾಸನ ಜಾರಿಯಲ್ಲಿದ್ದು ಇದನ್ನು ಜಾರಿಸಕದಲ್ಲಿಟ್ಟುಕೊಳ್ಳಲು ಯಾರೂ ಮರೆಯಲುಗದು.

ಪೋಲೀಸರು ತಮ್ಮ ಕರ್ತವ್ಯ ನಿರ್ವಹಣ ಕಾಲದಲ್ಲಿ ನಿಜವಾದ ಅಪರಾಧಿಗಳನ್ನು ಮೃದುವಾಗಿ ನಡೆಸಿಕೊಳ್ಳುತ್ತಾರೆಂದೂ ಇತರರೊಂದಿಗೆ ಕಠಿಣ ವರ್ತನೆಯನ್ನೆ ತೋರಿಸುವರೆಂದೂ ಸಾಮಾನ್ಯವಾಗಿ ದೂರಲಾಗುತ್ತದೆ ತಮ್ಮ ಕೆಲಸದಲ್ಲಿ ಪೋಲೀಸರಿಗಿರುವ ಅಡೆತಡೆಗಳ ಸ್ಪಷ್ಟ ಕಲ್ಪನೆ ಸಾರ್ವಜನಿಕರಿಗಿದ್ದಲ್ಲಿ ಈ ಆರೋಪನ್ನೇನೂ ಅವರು ಮಾಡುತ್ತಿರಲಿಲ್ಲ—ಪೋಲೀಸರಿಗೆ ಅನುಮಾನಾಸ್ಪದವಾದ ಪ್ರಕರಣದಲ್ಲಿ ಸುಗ್ರಾವವರ ಪತ್ತೆ ಮಾ

THE CANARA INDUSTRIAL & BANKING SYNDICATE LTD
Est-d: 1925 H. O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೊಡದೇ ಪಡೆಯಬಲ್ಲಿರಿ ಏನಾಕಾರಣ ಹಣವನ್ನು ಸುಸೆಯಲ್ಲೇ ಇರಿಸಿಕೊಳ್ಳುವುದೆತ್ತೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಾಗಿಸಲು ನೀವು ತಯಾರಿಲ್ಲವಾದರೂ ಅವಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನತ್ತ ನಿಮ್ಮ ಹಣವನ್ನು ಶೇಖರಿಸಿದಲು ನೀವು ಇಚ್ಛಿಸುವಿರಿ ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲಾ ಎಲ್ಲಿ ಸೌಕರ್ಯವನ್ನು ಒದಗಿಸಬಲ್ಲುದು ೯೨ ೨ ಪಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅನೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ
ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ

ಆಂಗ್ಲ ಸಾಮ್ರಾಜ್ಯದ ಮಸ್ತಿಷ್ಕ

ಪ್ರಧಾನ ಮಂತ್ರಿ ಚರ್ಚಿಲ್ಲರ ವಸತಿ ಗೃಹ

ಇದೇ ಜನವರಿ ೩೧ನೇ ದಿನಾಂಕದಿಂದ ಒಂದು ವಾರದ ತನಕ ಲಂಡನಿನಲ್ಲಿ ಕಾಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಸಮ್ಮೇಳನ ಜರಗಿದ ವಿಷಯ ಎಲ್ಲರಿಗೂ ಗೊತ್ತಿದೆ. ಆದರೆ ಅದು ಲಂಡನಿನಲ್ಲಿ ಎಲ್ಲಿ ಜರಗಿತು, ಮತ್ತು ಹಾಗೆ ಜರಗಿದ ಮನೆಯ ಇತಿಹಾಸವೇನು, ಮಹತ್ವ ಎಷ್ಟು ಎಂಬಿತ್ಯಾದಿ ವಿವರಗಳು ಹೆಚ್ಚಿನವರಿಗೆ ತಿಳಿದಿರಲಿಕ್ಕಿಲ್ಲ. ಅವರ ಪಾಲಿಗೆ "ನಂಬರ್ ೧೦, ಡೌನಿಂಗ್ ಸ್ಟ್ರೀಟ್" ಅಷ್ಟೇ ನೂ ಅರ್ಥಗರ್ಭಿತವಾದ ಹೆಸರಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿತ್ವದ ಮಟ್ಟಿಗೆ ಮಾತ್ರ ಕಾಮನ್ಸ್ ಸಭೆಗಿಂತಲೂ, ಡೌನಿಂಗ್ ರಸ್ತೆಯ ಈ ಹತ್ತನೇ ನಂಬರಿನ ಮನೆಯೇ ಎಲ್ಲಕ್ಕಿಂತ ದೊಡ್ಡದು. ಇಲ್ಲಿ ಏನು ವಿಚಾರ ವಿಮರ್ಶೆ ನಡೆಯಿತೋ ಅದರ ಪ್ರತಿಧ್ವನಿಯನ್ನಷ್ಟೇ ಕಾಮನ್ಸ್ ಸಭೆಯ ಹೃದಯ ನುಡಿಸುತ್ತದೆ. ಬ್ರಿಟಿಷ್ ಸಾಮ್ರಾಜ್ಯ ಲಕ್ಷ್ಮಿಯ ಹೃದಯ ಕಾಮನ್ಸ್ ಸಭೆಯಾದರೆ, ಮಸ್ತಿಷ್ಕ ಪ್ರಧಾನ ಮಂತ್ರಿಯ ವಾಸಸ್ಥಾನವಾದ ನಂಬರ್ ೧೦, ಡೌನಿಂಗ್ ಸ್ಟ್ರೀಟ್; ಮುಕುಟವಾಗಿ ಬಕ್ಕಿಂಗ್ ಹ್ಯಾಮ್ ಅರಮನೆಯನ್ನು ಪರಿಗಣಿಸಬಹುದು.

ಸರ್ ವಿನ್‌ಸ್ಟನ್ ಚರ್ಚಿಲ್ಲರು ಇಂದು ಪ್ರಧಾನ ಮಂತ್ರಿಗೆಂದೇ ಮೀಸಲಾಗಿರುವ ಈ ಮನೆಯಲ್ಲಿ ಇದ್ದುಕೊಂಡು ಜಗತ್ತಿನ ಆಗು ಹೋಗುಗಳ ಮೇಲೆ, ಬ್ರಿಟಿಷ್ ಸಾಮ್ರಾಜ್ಯದ ಭೂ ಭಾಗಗಳ ಮೇಲೆ ಕಣ್ಣಿಡುತ್ತಾರೆ. ಹೊರಗೆ ನೋಡುವುದಕ್ಕೆ ಈ ಮನೆ ಬರೇ ಚಿಕ್ಕದು—ಇಕ್ಕಟ್ಟಾದ ಡೌನಿಂಗ್ ರಸ್ತೆಯಲ್ಲಿ ಜನನಿಬಿಡವಾದ ಸಂಚಾರ ಏರುವಾಗ ಈ ಮನೆಯನ್ನು ಹೊಸಬನೊಬ್ಬ ಫಕ್ಕನೆ ಗುರುತಿಸದೆ ಹೋಗಬಹುದು ಆಶ್ಚರ್ಯವಿಲ್ಲ. ಆದರೆ ಮನೆಯ ಬಾಗಿಲ ಮುಂದೆ ಹಳೆಯ ಮಾದರಿಯ ಕಾಲೊರಸುವ ಕಬ್ಬಿಣದ ಜಾವೆಗಳಿರುವುದನ್ನೂ ಬಾಗಿಲಿನ ಚಿಲಕದ ಮುಂದಿರುವ ಹಿತ್ತಾಳೆಯ ಹಲಗೆಯಲ್ಲಿ "ಮುಖ್ಯ ಕೋಶಾಧ್ಯಕ್ಷ" ಎಂದು ಬರೆದಿರುವುದನ್ನೂ ಗಮನಿಸಿದ ಪಕ್ಷದಲ್ಲಿ—ಈ ಮನೆಗೊಂದು ಇತಿಹಾಸವಿದೆ ಎಂಬ ಸಂಶಯವಾಗದಿರದು. ಹಾಗೆ ಕುತೂಹಲವಶನಾಗಿ ಮನೆಯ ಬಾಗಿಲು ಬಡಿದು, ಒಳಗೆ ಬಂದರೆ ಮನೆ ಅಷ್ಟೇನೂ ಇಕ್ಕಟ್ಟಾಗಿಲ್ಲ ಎಂಬ ಸತ್ಯ ಮನವರಿಕೆಯಾಗುತ್ತದೆ. ಒಟ್ಟು ಅರುವತ್ತು ಕೋಣೆಗಳಿರುವ ಈ ಭವನದಲ್ಲಿ ಮಂತ್ರಿ ಮಂಡಳದ ಸಭಾಸ್ಥಾನದಿಂದ ಮಲಗುವ ಮನೆ, ಅಡಿಗೆ ಮನೆ, ಬಚ್ಚಲು ಮನೆ ಎಲ್ಲವೂ ಕಂಡುಬರುತ್ತವೆ. ಮನೆ ಹಳೆಯ ಕಾಲದ್ದು; ಸಾಧಾರಣ ರೀತಿಯಲ್ಲಿ ಕಟ್ಟಿಸಲ್ಪಟ್ಟದ್ದು. ಬಚ್ಚಲು ಮನೆ ಮೊದಲು ಇದಕ್ಕೆ ಇರಲಿಲ್ಲ; ೧೯೧೬ನೇ ಇಸವಿಯಲ್ಲಿ ಆಗಿನ ಪ್ರಧಾನ ಮಂತ್ರಿ ಲಾಯ್ಡ್ ಜಾರ್ಜರ ಪತ್ನಿ ಸ್ನಾನಗೃಹವಿಲ್ಲದ ಮನೆಗೆ ಹೋಗಿ ಇರಲಾರೆನೆಂದು ಚಂಡಿ ಹಿಡಿದ ಪರಿಣಾಮವಾಗಿ ಅದನ್ನು ನಿರ್ಮಿಸಲಾಯಿತು. ಈ ದೃಷ್ಟಿಯಿಂದ ಬ್ರಿಟನ್ನಿನ ಶ್ರೀಮಂತರ ಮನೆಗಳೇ ಮೇಲಾಗಿ ಕಾಣಿಸುತ್ತವೆ— ಆದರೆ ಅವುಗಳಿಗೆ "ನಂಬರ್ ೧೦, ಡೌನಿಂಗ್ ಸ್ಟ್ರೀಟ್" ಪಡೆದಿರುವ ರಾಜಕೀಯ ಮಹತ್ವ ಇಲ್ಲವಲ್ಲ!

ವಿಶಿಷ್ಟವಾದ ಇತಿಹಾಸವನ್ನು ಪಡೆದಿರುವ ಈ ಮನೆಯನ್ನು ಕಟ್ಟಿಸಿದವನು ಇಂಗ್ಲಂಡಿನಲ್ಲಿಯೇ ಹುಟ್ಟಿ, ಅಮೇರಿಕಕ್ಕೆ ಒಯ್ಯಲ್ಪಟ್ಟು ಅಲ್ಲಿ ದೊಡ್ಡವನಾಗಿ, ೧೬೪೦ರಲ್ಲಿ ಮರಳಿ ಬ್ರಿಟನಿಗೆ ಆಗಮಿಸಿದ ಸರ್. ಜಾರ್ಜ್ ಡೌನಿಂಗ್. ಆಗ ಉಕ್ಕಿನ ಮನುಷ್ಯ ಕ್ರಾಮ್‌ವೆಲ್ ಇಂಗ್ಲಂಡಿನ ಸೂತ್ರಧಾರನಾಗಿದ್ದ— ಡೌನಿಂಗ್ ಅವನ ಕ್ರಾಂತಿ ಪಕ್ಷವನ್ನು ಸೇರಿಕೊಂಡು ವರ್ಚಸ್ಸನ್ನು ಗಳಿಸಿದ. ಆದರೆ ಕ್ರಾಮ್‌ವೆಲ್ಲನ ಮಾತಿಗೆ ಬೆಲೆ ಬಾರದ ಗಳಿಗೆಗಳು ಸಮೀಪಿಸಿದಾಗ, ಡೌನಿಂಗ್ ಆಗಿನ ಅರಸ ಎರಡನೇ ಚಾರ್ಲ್ಸ್‌ನ ಪಕ್ಷವನ್ನು ನಿಸ್ಸಂಕೋಚವಾಗಿ ಸೇರಿಕೊಂಡ. ಇದರಿಂದ ಸಂಪ್ರೀತನಾದ ಅರಸನು ಈಗ ಡೌನಿಂಗ್ ಸ್ಟ್ರೀಟ್ ಎಂದು ಹೆಸರಾಗಿರುವ ಸ್ಥಳವನ್ನು ೯೯ ವರ್ಷಗಳ ಗೇಣಿಗೆ ಅವನಿಗೆ ವಹಿಸಿಕೊಟ್ಟನು—ಅಲ್ಲಿ ಡೌನಿಂಗ್ ಕಟ್ಟಿಸಿದ ಮನೆಗಳ ಸಾಲುಗಳಲ್ಲಿ ಈಗಿರುವುದು ಮೂರು ಮಾತ್ರ: ನಂಬರ್ ೧೦—ಪ್ರಧಾನ ಮಂತ್ರಿಯದ್ದು; ನಂಬರ್ ೧೧—ಅರ್ಥ ಸಚಿವನದ್ದು; ಮತ್ತು ನಂಬರ್ ೧೨ - ಮುಖ್ಯ ಸಚೇತಕನ ಕಾರ್ಯಾಲಯ. ಹೀಗೆ ಪ್ರಧಾನ ಮಂತ್ರಿಯ ಪಾಲಿಗೆ ಇಲ್ಲಿ ಒಂದು ಮನೆ ದೊರೆತದ್ದು ಡೌನಿಂಗನ ಕಾಲದಲ್ಲಲ್ಲ. ಎರಡನೇ ಜಾರ್ಜ್‌ನಿಂದ ಅದು ಸಿದ್ಧಿತು. ಮೊದಲನೇ ಜಾರ್ಜ್ ಈ ರಾಜನಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ— ಆದುದರಿಂದ ಆಗ ಮುಖ್ಯ ಕೋಶಾಧ್ಯಕ್ಷನಾಗಿದ್ದ ಸರ್ ರಾಬರ್ಟ್ ವಾಲ್‌ಪೋಲ್ ಮಂತ್ರಿಮಂಡಳದ ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸುವ ಸಂಪ್ರದಾಯ ಪ್ರಾರಂಭವಾಯಿತು. ಪ್ರಧಾನ ಮಂತ್ರಿ ಎಂಬ ಸ್ಥಾನವು ದೊರೆತದ್ದಲ್ಲದೆ, ಅರಸನಿಗಿಂತಲೂ ಪ್ರಧಾನ ಮಂತ್ರಿಯ ಪ್ರತಿಷ್ಠೆಯೇ ಹೆಚ್ಚಿಕೊಂಡಿತು. ಎರಡನೇ ಜಾರ್ಜ್ ಅರಸನು ವಾಲ್‌ಪೋಲ್‌ಗೆ ಡೌನಿಂಗ್ ಸ್ಟ್ರೀಟ್‌ನ ನಂಬರ್ ೧೦ನೇ ಮನೆಯನ್ನು ಕೊಡಮಾಡಿದಾಗ, ತನಗಷ್ಟೇ ಅಲ್ಲ, ಅದು ಮುಂದಿನ ಎಲ್ಲ ಪ್ರಧಾನ ಮಂತ್ರಿಗಳಿಗೂ ಸಿಕ್ಕುವಂತಿದ್ದರೆ ಮಾತ್ರ ಸ್ವೀಕರಿಸುತ್ತೇನೆ ಎಂದನು. ಇದಕ್ಕೆ ಒಪ್ಪಿಗೆ ದೊರೆತುದರಿಂದ ಕಳೆದ ಇನ್ನೂರು ವರ್ಷಗಳಿಂದ ಅದು ಬಕ್ಕಿಂಗ್ ಹ್ಯಾಮ್ ಅರಮನೆಯ ಕೀರ್ತಿಯನ್ನೂ ಧಿಕ್ಕರಿಸಿ ಮೆರೆಯಿತು.

ಪ್ರಧಾನ ಮಂತ್ರಿಯ ಈ ಮನೆಗೆ ಬಾಡಿಗೆ ಕೊಡಬೇಕಾಗಿಲ್ಲ— ಮೂರು ವರ್ಷಗಳಿಗೊಮ್ಮೆ ಅದನ್ನು ಸರಕಾರದ ಕಡೆಯಿಂದ ಸ್ವಚ್ಛವಾಡಿ ಬಣ್ಣ ಬಳಿಯಲಾಗುತ್ತದೆ. ಆದರೆ ಲಂಡನ್ನಿನ ರಸ್ತೆಗಳ ಕೋಲಾಹಲದಲ್ಲಿ ಮೂರು ವರ್ಷಗಳ ಗೊಮ್ಮೆ ಬಣ್ಣಬಳಿದರೆ ಮನೆಗೆ ಯಾವ ಚಂದವಿದ್ದೀತು? ಪರಿಣಾಮ ಸ್ಪಷ್ಟವಾಗಿದೆ—ಯಾವಾಗ ನೋಡಿದರೂ ಪ್ರಧಾನ ಮಂತ್ರಿಯ ಮನೆಯಲ್ಲಿ ಧೂಳೇ ಧೂಳು! ಇದನ್ನು ನಿವಾರಿಸುವುದಕ್ಕೆ, ಬೇರೆ ಮನೆಗೆಲಸಕ್ಕೆ, ಹೆಚ್ಚೇಕೆ, ಅಧಿಕೃತ ಸತ್ಕಾರಗಳಿಗೆ ಸಜ್ಜೆ ಬರುವ ವೆಚ್ಚವನ್ನು ಪ್ರಧಾನ ಮಂತ್ರಿಯೇ ತನ್ನ ಕಿಸೆಯಿಂದ ಸೂರೈಸಬೇಕಾಗುತ್ತದೆ. ಆದುದರಿಂದ ವರ್ಷಕ್ಕೆ ಹತ್ತುಸಾವಿರ ಪೌಂಡುಗಳಷ್ಟು ಸಂಬಳ ಬರುತ್ತಿದ್ದರೂ ಪ್ರಧಾನ ಮಂತ್ರಿಗೆ ಅಷ್ಟೇನೂ ಸುಖವಿಲ್ಲ. ಅವನಿಗೆಂದು ಉಳಿಯುವ ಹಣ ಅತ್ಯಲ್ಪ. ಈ ಮನೆಯ ಅಧಿಪತಿ ತಾನೆಂಬ ಅಭಿಮಾನವೇ ಅವನ ಧನ! ಹಿಂದಿನ ಪ್ರಧಾನ ಮಂತ್ರಿಗಳ ಚಿತ್ರವನ್ನು ಇಟ್ಟಿರುವ ಸಾಲಿನಲ್ಲಿ ತನ್ನದೂ ಒಂದು ತೂಗುವ ಐತಿಹಾಸಿಕ ಘಟನೆ ಅವನಲ್ಲಿ ಮಿಳಕನೆಬ್ಬಿಸುತ್ತದೆ; ಮಂತ್ರಿ ಮಂಡಳದ ಸಭೆ ಜರಗುವ ಕಾಲದಲ್ಲಿ ಒಕ್ಕೈ ಕುರ್ಚಿಯ ಮೇಲೆ ಸ್ಥಾನವನ್ನು ಅಧ್ಯಕ್ಷ ಪ್ರಧಾನ ಮಂತ್ರಿ ವಹಿಸುವಾಗ, ಉಳಿದವರಿಗೆ ಈ ಸ್ಥಾನದ ಮಹತ್ವವನ್ನು ಮಾಡಿಕೊಡುವಂತೆ, ಸರ್ ರಾಬರ್ಟ್ ವಾಲ್‌ಪೋಲ್‌ನ ಚಿತ್ರ ಹಿನ್ನೆಲೆಯಲ್ಲಿ ನೇತು ಬಿಟ್ಟಿರುತ್ತದೆ! ಹಸುರು ಪಟ್ಟವನ್ನು ಹಾಕಿರುವ ಆ ದೀರ್ಘವೃತ್ತಾಕಾರದ ಮೇಜು, ಅದರ ಮೇಲೆ ಇಡಲಾದ ಲೇಖನ ಸಲಕರಣೆಗಳು, ಬ್ರಿಟಿಷ್ ರಾಜ (ಅಥವಾ ರಾಣಿ) ಜಗತ್ತಿನ ಎಲ್ಲಿಯೇ ಇದ್ದರೂ ನೇರವಾದ ಸಂಪರ್ಕವನ್ನು ಪಡೆದ ಟೆಲಿಫೋನ್—ಈ ಸಂಗಾತಿಗಳ ನಡುವೆ, ಮಂತ್ರಿ ಮಂಡಳದ ಸದಸ್ಯರು ವಿಚಾರ ವಿನಿಮಯ ನಡೆಸುತ್ತಾರೆ. ಒಂದು ಶಬ್ದವೂ ಇಲ್ಲಿಂದ ಹೊರಗೆ ಕೇಳಿಸದಂತೆ ಮಾಡುವ ಇಮ್ಮಡಿ ಗಪ್ಪನಾದ ಗೋಡೆಗಳೂ ಉಕ್ಕಿನ ಬಾಗಿಲುಗಳೂ ಈ ಕೋಣೆಯ ವೈಶಿಷ್ಟ್ಯ.

ಭೂಲೋಕದ ಕಾಲು ಜನರ ಅದೃಷ್ಟವನ್ನು ಮಂತ್ರಿ ಮಂಡಳದ ಸಭೆ ಜರಗುವ ಈ ಕೋಣೆಯೇ ರೂಪಿಸಿತು. ವಾಲ್‌ಪೋಲ್ ತನ್ನ ರಾಜಕೀಯ ಕುಹಕಗಳನ್ನು ನಡೆಸುತೊಡಗಿದ ಹದಿನೆಂಟನೇ ಶತಮಾನದ ದಿನಗಳಿಂದ ಬ್ರಿಟಿಷ್ ಸಾಮ್ರಾಜ್ಯದ ಎಲ್ಲ ಘಟನೆಗಳಿಗೂ ಈ ಕೋಣೆಯೇ ಹೊಣೆಯನಿಸುತ್ತದೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲಾರೆನೆಂದು ಚರ್ಚಿಲ್ಲರು ಗುಡುಗುತ್ತಿದ್ದದ್ದು ಇಲ್ಲಿಯೇ; ಈಗ ಸ್ವತಂತ್ರ ಭಾರತದ ಮಂತ್ರಿ ನೆಹರುಗಳೊಡನೆ ಕೈಕುಲುಕಿ ಮಂತ್ರಾಲೋಚನೆ ನಡೆಸುತ್ತಿರುವುದೂ ಇಲ್ಲಿಯೇ! ಒಂಟಿ ಕನ್ನಡಕದ ತಂತ್ರಗಾರ ಡಿಸ್ರೇಲಿ ಸುಯೆಜ್ ಕಾಲುವೆಯ ಮೇಲೆ ಬ್ರಿಟಿಷ್ ಪ್ರಭುತ್ವವನ್ನು ದಿನ ಬೆಳಗಾಗುವುದರೊಳಗೆ ಪಡೆಯುವಂತೆ ಮಂತ್ರಿಮಂಡಳವನ್ನು ಒಲಿಸಿಕೊಂಡದ್ದು ಇಲ್ಲಿಯೆ; ಚರ್ಚಿಲ್ಲರು ಸುಯೇಜ್ ಪ್ರದೇಶದಿಂದ ಬ್ರಿಟಿಷ್ ಸೈನ್ಯಗಳನ್ನು ಹಿಂದಕ್ಕೆ ತರಿಸುವುದಕ್ಕೆ ತನ್ನ ಸಹೋದ್ಯೋಗಿಗಳನ್ನು ಒಪ್ಪಿಸಿ ಸಮಾಧಾನಪಡಿಸಿದ್ದು ಸಹ ಇಲ್ಲಿಯೇ! ಇಲ್ಲಿಗೆ ಸರಕಾರಿ ಕಾಗದ ಪತ್ರಗಳ ರಾಶಿಗೆ ರಾಶಿಯೇ ಬಂದು ಬೀಳುತ್ತದೆ. ರಾತ್ರಿ ಕಾಲದಲ್ಲಿ ಸಹ ಟೆಲಿಫೋನಿಗೆ ಬಿಡುವಿಲ್ಲ—ರಾಜಕೀಯ ಘಟನೆಗಳ ಬೆಳವಣಿಗೆಯನ್ನು ಕಣ್ಣಿಗೆ ಎಣ್ಣೆ ಹಾಕಿಕೊಂಡು ನಿರೀಕ್ಷಿಸುತ್ತಿರಬೇಕಾದುದರಿಂದ ಕಾರ್ಯದರ್ಶಿಯೊಬ್ಬ ಇಲ್ಲಿ ನಿದ್ದೆ ಗೆಟ್ಟು ಕುಳಿತಿದ್ದು, ಪ್ರಧಾನ ಮಂತ್ರಿಗಳಿಗೆ ಸುದ್ದಿ ಮುಟ್ಟಿಸುವುದಕ್ಕೆ ಸಿದ್ಧನಿರುತ್ತಾನೆ! ಸರಕಾರದ ವ್ಯವಹಾರ ಇಷ್ಟು ಗೊಂದಲವೆಬ್ಬಿಸುವಂತಿದ್ದರೂ ಇದು ಸಭ್ಯ ಮನುಷ್ಯನೊಬ್ಬನ ಗೃಹವೂ ಹೌದು.— ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಪ್ರಧಾನ ಮಂತ್ರಿಯಾಗಿದ್ದ ಗ್ಲಾಡ್‌ಸ್ಟನ ತನ್ನ ಮಡದಿಯೊಡನೆ ಆಗ್ಗಿಷ್ಟಿಕೆಯ ನಸುಬೆಳಕಿನಲ್ಲಿ ಇಲ್ಲಿ ನರ್ತಿಸುತ್ತಿದ್ದರು! ಚರ್ಚಿಲ್ಲರು ಸಹ ತನ್ನ ಮಡದಿಯೊಡನೆ ಸಲ್ಲಾಪಿಸಲು ಸಂಕೋಚ ಪಡುವುದಿಲ್ಲ—ಹಾಗೆ ಸಂಕೋಚ ಪಟ್ಟರೆ, ಅವರಿಗೆ ಬೇರೆ ಮನೆ ಇಲ್ಲವಲ್ಲ! ವಿಲಾಸಿಯಾದ ಪ್ರಧಾನ ಮಂತ್ರಿ ಲಾರ್ಡ್ ಪಾಮರ್‌ಸ್ಟನ್ ಒಬ್ಬನೇ ಈ ಮನೆಯನ್ನು ಬಿಟ್ಟು ಹೊರಗಿರುತ್ತಿದ್ದ— ಆದರೆ ಅವನ ರಾಜಕೀಯ ಮಾತ್ರ ಇಲ್ಲೀಂದಲೇ ನಡೆಯುತ್ತಿತ್ತೆಂಬುದು ಉಲ್ಲೇಖನೀಯ.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ಸೂಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಸುರುವಾತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3.

ಫೊರ್ಮೋಸದ ಕುತೂಹಲಜನಕ ಕಥೆ

ಸೈನಿಕ ಪ್ರಾಮುಖ್ಯತೆ ಪಡೆದ ಸುಂದರ ದ್ವೀಪ

ಎಲ್ಲರಿಗೂ ತಲೆಸಿಡಿತವನ್ನುಂಟು ಮಾಡುವ ಅಂತಾರಾಷ್ಟ್ರೀಯ ತ್ವೇಷದ ಸುದ್ದಿಯಾಗಿ ಫೊರ್ಮೋಸದ'ವಿಮೋಚನೆ'ಯ ಆಂದೋಲನ ಪರಿಣಮಿಸಿದ್ದು, ಇದರಿಂದ ತೃತೀಯ ಮಹಾ ಯುದ್ಧವು ಹತ್ತಿರವಾಗುವ ಸಂಭವವಿದೆಯೆಂದು ಹೇಳಲಾಗುತ್ತದೆ. ಸ್ವಲ್ಪ ಮಟ್ಟಿಗಾದರೂ ಸಮಾಧಾನವನ್ನು ಕೆಲ ಸಮಯದಿಂದೀಚೆಗೆ ಕೊಡುತ್ತಿದ್ದ ಜಾಗತಿಕ ಶಾಂತಿಯ ವಾತಾವರಣವು ದೂರ ಪೂರ್ವದ "ಮಧ್ಯನ ಮನೆ" ಯೆನಿಸಿದ ಫೊರ್ಮೋಸದಲ್ಲಿ ನಡೆದಿರುವ ಈಗಿನ ಚಟುವಟಿಕೆಗಳ ದೆಸೆಯಿಂದ ಕೆಟ್ಟುಹೋಗುವ ಭಯವು ಮುತ್ಸದ್ದಿಗಳಲ್ಲಿ ಕಂಡು ಬರುತ್ತದೆ. ಅವರೆಲ್ಲರೂ ಫೊರ್ಮೋಸದ ಕಥೆಯನ್ನು ಚೆನ್ನಾಗಿ ಪರಿಶೀಲಿಸಿ, ಸಮಸ್ಯೆಯ ತೃಪ್ತಿಕರವಾದ ಪರಿಹಾರ ಮಾರ್ಗವೊಂದನ್ನು ಹುಡುಕಲು ಭಗೀರಥ ಪ್ರಯತ್ನವನ್ನೇ ನಡೆಸುತ್ತಿದ್ದಾರೆ. ಇದರಲ್ಲಿ ಭಾರತದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುಗಳು ವಹಿಸುವ ಪಾತ್ರ ಮಹತ್ವದ್ದೆಂದು ಎಲ್ಲ ಪಾಶ್ಚಾತ್ಯ ರಾಷ್ಟ್ರಗಳೂ ಹೇಳುತ್ತವೆ. ನೆಹರುಗಳ ಮಾತನ್ನು ಕೇಳಿದರೆ ಮಾತ್ರ ಈಗಿನ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗಬಹುದೆಂದು ಸಾಮಾನ್ಯವಾದ ಅಭಿಪ್ರಾಯ. ನೆಹರುಗಳು ಬಿಡಿಸಬೇಕಾಗಿ ಬಂದಿರುವ ಸಮಸ್ಯೆಯ ಸ್ವರೂಪ ದರ್ಶನವನ್ನು ಮಾಡಿಕೊಳ್ಳುವ ನಮ್ಮ ಕುತೂಹಲ ಸಹಜವಾದದ್ದೆಂದು ಹೇಳಿದರೆ ತಪ್ಪಲ್ಲ.

ಫೊರ್ಮೋಸಾ ಎಂಬುದು ಶಾಂತ ಸಾಗರದಲ್ಲಿರುವ ಒಂದು ದ್ವೀಪ. ಇದು ಬಹಳ ಸುಂದರವಾದ ಪ್ರದೇಶ. ಫೊರ್ಮೋಸಾ ಎಂಬ ಹೆಸರೇ "ರಮ್ಯದ್ವೀಪ" ಎಂಬ ಅರ್ಥವನ್ನು ಕೊಡುತ್ತದೆ. ವ್ಯಾಪಾರಕ್ಕಾಗಿ ಪ್ರಯಾಣ ಮಾಡುತ್ತ ದೂರ ಪೂರ್ವಕ್ಕೆ ಬಂದ ಐರೋಪ್ಯ ನಾವಿಕರು ಸುಮಾರು ೧೪ ಸಾವಿರ ಚದರ ಮೈಲು ವಿಸ್ತೀರ್ಣವುಳ್ಳ ಈ ದ್ವೀಪಕ್ಕೆ ಹಾಗೆ ಹೆಸರಿಟ್ಟರು. ಇದು ಚೀನದ ಮುಖ್ಯ ನೆಲದಿಂದ ೯೦ ಮೈಲುಗಳ ಪೂರ್ವಕ್ಕೆ ಉತ್ತರ ದಕ್ಷಿಣವಾಗಿ ಚಾಚಿರುತ್ತದೆ. ಚೀನೀಯರು ಟೈವಾನ್ ಎಂಬ ಹೆಸರಿನಿಂದ ಈ ದ್ವೀಪವನ್ನು ಕರೆಯುತ್ತಾರೆ ಪ್ರಾಚೀನಕಾಲದಿಂದಲೂ ಈ ದ್ವೀಪದ ಮೇಲೆ ಚೀನೀಯರು ಒಡೆತನ ನಡೆಸುತ್ತಿದ್ದರು. ಪೆಸ್ಕಾಡೋರ್ ದ್ವೀಪಗಳು ಇದಕ್ಕೆ ಸಮೀಪದಲ್ಲಿ ಚೀನದ ಮುಖ್ಯ ನೆಲಕ್ಕೆ ಎದುರಾಗಿರುತ್ತವೆ. ಕೃಷಿಯಲ್ಲಿಯೂ ಖನಿಜ ಸಂಪತ್ತಿನಲ್ಲಿಯೂ ಫೊರ್ಮೋಸಾ ಮತ್ತು ಪೆಸ್ಕಾಡೋರ್ ದ್ವೀಪಗಳು ಸಮೃದ್ಧವಾಗಿವೆ. ಇಲ್ಲಿ ಉತ್ಪಾದಿಸಲ್ಪಡುವ ಅಂಕಾರಾಷ್ಟ್ರೀಯ ಖ್ಯಾತಿಯ ವಸ್ತುಗಳಲ್ಲಿ ಕರ್ಪೂರವು ಉಲ್ಲೇಖನೀಯ. ಜಗತ್ತಿನ ಪೇಟೆಗೆ ಬರುವ ಕರ್ಪೂರದಲ್ಲಿ ನೂರಕ್ಕೆ ತೊಂಭತ್ತೈದರಷ್ಟು ಫೊರ್ಮೋಸಾದಿಂದ ಬರುತ್ತದೆ.

ಚೀನೀಯರ ಕೈಯಲ್ಲಿ ಸುಖವಾಗಿದ್ದ ಈ ಪ್ರದೇಶದ ಮೇಲೆ ಹತ್ತೊಂಭತ್ತನೇ ಶತಮಾನದ ಕೊನೆಯಲ್ಲಿ ಜಪಾನಿನ ಮಹತ್ವಾಕಾಂಕ್ಷಿಗಳ ಧಾಳಿ ನಡೆಯಿತು. ತಿಮಿನೋಸ್ಕಿ ಒಪ್ಪಂದದ ಪ್ರಕಾರ ೧೮೯೫ರಲ್ಲಿ ಚೀನವು ಫೊರ್ಮೋಸ ಮತ್ತು ಪೆಸ್ಕಾಡೋರ್ ದ್ವೀಪಗಳನ್ನು ಜಪಾನಿಗೆ ಬಿಟ್ಟುಕೊಟ್ಟಿತು. ಅಂದಿನಿಂದ ದ್ವಿತೀಯ ಮಹಾಯುದ್ಧದ ವರೆಗೂ ಈ ಪ್ರದೇಶದ ಮೇಲೆ ಜಪಾನೀಯರೇ ತಮ್ಮ ಅಧಿಕಾರವನ್ನು ನಡೆಸಿದರು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಚೀನವನ್ನು ರಾಷ್ಟ್ರೀಯ ಸೈನ್ಯ ಪಡೆಯ ಮುಖಂಡರಾದ ಚಿಯಾಂಗ್ ಕೈಶೇಕರು ಆಳುತ್ತಿದ್ದರು. ಜಪಾನೀಯರ ಆಕ್ರಮಣವನ್ನು ತಡೆಗಟ್ಟಲು ಅವರು ಮಿತ್ರ ರಾಷ್ಟ್ರಗಳ ಕೂಟಕ್ಕೆ ಸೇರಿಕೊಂಡರು. ೧೯೪೩ನೇ ನವಂಬರದಲ್ಲಿ ಕೈರೋದಲ್ಲಿ ಅಮೇರಿಕ, ಚೀನ ಮತ್ತು ಬ್ರಿಟನುಗಳು ಒಂದು ಒಪ್ಪಂದವನ್ನು ಮಾಡಿಕೊಂಡು ಚೀನದಿಂದ ಜಪಾನು ಹಿಂದೆ ಕಸಿದುಕೊಂಡಿದ್ದ ಪ್ರದೇಶಗಳೆಲ್ಲವನ್ನೂ ಚೀನಕ್ಕೆಯೇ ಮರಳಿ ಕೊಡಬೇಕೆಂದು ತೀರ್ಮಾನಿಸಿದವು. ೧೯೪೫ನೇ ಜುಲಾಯಿಯಲ್ಲಿ ಪೋಟ್ಸ್‌ಡಾಮ್ ಒಪ್ಪಂದವನ್ನು ಚೀನ, ಅಮೇರಿಕ, ಬ್ರಿಟನ್ ಮತ್ತು ರಶಿಯಗಳು ಮಾಡಿಕೊಂಡು ಜಪಾನಿನಲ್ಲಿ ಶಾಂತಿಯನ್ನು ನೆಲೆಗೊಳಿಸುವ ಕಾರ್ಯಕ್ರಮದ ಅಂಗವಾಗಿ ಕೈರೋ ಒಪ್ಪಂದವನ್ನು ಸಂಪೂರ್ಣ ಪಾಲಿಸುವುದಾಗಿ ನಿರ್ಧರಿಸಿದವು. ಅದೇ ವರ್ಷ ಸಪ್ಟಂಬರದಲ್ಲಿ ಮಿತ್ರ ರಾಷ್ಟ್ರಗಳ ಪರಿಸ್ಥ ಸೈನ್ಯಾಧಿಪತಿಯು ೫೦ ವರ್ಷಗಳ ಜಪಾನಿ ಆಕ್ರಮಣದಿಂದ ಫೊರ್ಮೋಸ ಮತ್ತು ಪೆಸ್ಕಾಡೋರ್ ದ್ವೀಪಗಳನ್ನು ವಿಮೋಚನೆಗೊಳಿಸಿದನು.

ಇದರಿಂದ ಫೊರ್ಮೋಸಾ ಮತ್ತು ಪೆಸ್ಕಾಡೋರ್ ದ್ವೀಪಗಳು ಚೀನಕ್ಕೆ ಸೇರಿದವುಗಳೆಂಬ ವಿಷಯದಲ್ಲಿ ಯಾರೂ ಭಿನ್ನಭಿಪ್ರಾಯವನ್ನು ವ್ಯಕ್ತ ಪಡಿಸಿರಲಿಲ್ಲವೆಂದು ಸ್ಪಷ್ಟವಾಗುತ್ತದೆ. ಆದರೆ, ಜಪಾನೀಯರ ಆಕ್ರಮಣದಿಂದ ಮಿತ್ರರಾಷ್ಟ್ರಗಳು ವಿಮೋಚನೆಗೊಳಿಸಿದ ಈ ಪ್ರದೇಶಗಳನ್ನು ಅಧಿಕೃತ ರೀತಿಯಲ್ಲಿ ಚೀನಕ್ಕೆ ಒಪ್ಪಿಸಿ ಕೊಡುವುದಕ್ಕೆ ಮೊದಲು ಚೀನದ ಮುಖ್ಯ ನೆಲದಲ್ಲಿ ಮಹತ್ವದ ಸ್ಥಿತ್ಯಂತರವಾಯಿತು. ಅದೆಂದರೆ, ಕಮ್ಯುನಿಸ್ಟರ ಧುರೀಣರ ಮಾವೊತ್ಸೆತುಂಗರೊಡನೆ ಸೆಣಸಾಡಿ, ಚಿಯಾಂಗರು ಹೊಂದಿದ ಪರಾಭವ! ಚಿಯಾಂಗರು ಕಮ್ಯುನಿಸ್ಟರನ್ನು ಪ್ರತಿಭಟಿಸಲಾರದೆ ನೋತು, ಮುಖ್ಯ ನೆಲದಿಂದ ಫೊರ್ಮೋಸಕ್ಕೆ ಓಡಿ ಬಂದು ಅಲ್ಲಿ ಆಶ್ರಯವನ್ನು ಪಡೆದರು. ಆಗ ಸತ್ತ ಫೊರ್ಮೋಸದ ಮೇಲೆ ಚೀನಕ್ಕೆ—ಅಂದರೆ ಈಗ ಚೀನದ ಕಮ್ಯುನಿಸ್ಟರಿಗೆ- ಅಧಿಕಾರವಿಲ್ಲವೆಂದು ಯಾರೂ ಆಕ್ಷೇಪಿಸತ್ತಿದಂತೆ ಕಾಣುವುದಿಲ್ಲ. ಫೊರ್ಮೋಸಾ ಮತ್ತಿತರ ದ್ವೀಪಗಳಿಂದ ಸಹ ರಾಷ್ಟ್ರೀಯರ ವರ್ಚಸ್ಸನ್ನು ತಗ್ಗಿಸಿ, ಚಿಯಾಂಗರನ್ನು ಸಂಪೂರ್ಣ ಸೋಲಿಸಿಬಿಡುವುದಕ್ಕೆ ಕಮ್ಯುನಿಸ್ಟರು ಅಂದೇ, ಅಂದರೆ ೧೯೪೯ರಲ್ಲಿಯೇ, ಪ್ರತಿಜ್ಞೆಯನ್ನು ತೊಟ್ಟಿದ್ದರೂ ಸಮುದ್ರವನ್ನು ದಾಟಿ ಒಂದು ಕಾಳಗ ಕೊಡುವುದಕ್ಕೆ ಅವರು ಕೂಡಲೇ ಸಿದ್ಧರಾಗಲಿಲ್ಲ. ಹೀಗೆ ಕಾಳಗ ಕೊಡುವುದಕ್ಕೆ ಅವರು ಸಿದ್ಧತೆ ನಡೆಸುತ್ತಿದ್ದ ಅವಧಿಯಲ್ಲಿ ಮಿತ್ರ ರಾಷ್ಟ್ರಗಳ ವಿಚಾರವು ನಿಧಾನವಾಗಿ ಪರಿವರ್ತನೆಯನ್ನು ಹೊಂದಲಾರಂಭಿಸಿತು. ಇದಕ್ಕೆ ಕಾರಣವೆನಿಸಿದ್ದೇ ಕೊರಿಯದ ಕದನ.

ಕಮ್ಯುನಿಸ್ಟರು ಚೀನದ ಮುಖ್ಯ ನೆಲದಲ್ಲಿ ನಿಜವಾದ ಸರಕಾರವನ್ನು ಸ್ಥಾಪಿಸಿ, ಭಾರತ, ಬರ್ಮ, ರಶಿಯ, ಬ್ರಿಟನುಗಳಂಥ ದೇಶಗಳಿಂದ ಮನ್ನಣೆ ಪಡೆದ ಕೆಲವೇ ತಿಂಗಳುಗಳಲ್ಲಿ ಕೊರಿಯದ ಕದನದ ಘಟನೆ ಸಿತು. ತನ್ನ ಆಪ್ತಮಿತ್ರ ರಾಷ್ಟ್ರವಾದ ಬ್ರಿಟನು ಕಮ್ಯುನಿಸ್ಟ್ ಚೀನವನ್ನು ಮನ್ನಿಸಿದುದನ್ನು ಕಂಡ ಅಮೇರಿಕವು ತುಂಬ ಕಸಿವಿಸಿಯನ್ನು ತೋರಿಸಿದರೂ ಸಹ, ಫೊರ್ಮೋಸದ ಬಗ್ಗೆ ತನ್ನ ಧೋರಣೆಯನ್ನದು ಬದಲಿಸಲಿಲ್ಲ. ೧೯೫೦ನೇ ಜನವರಿಯಲ್ಲಿ ಆಗಿನ ಅಧ್ಯಕ್ಷ ಟ್ರೂಮನ್ನರು ಒಂದು ಹೇಳಿಕೆಯನ್ನು ಹೊರಡಿಸಿ, ಫೊರ್ಮೋಸಾ ಅಥವಾ ಚೀನದ ಇನ್ನಾವುದೇ ಪ್ರದೇಶದಲ್ಲಿ ಅಮೇರಿಕಕ್ಕೆ ಯಾವ ಆಶೆಯೂ ಇಲ್ಲ ಇಲ್ಲಿ ಯಾವುದೇ ತರದ ವಿಶೇಷ ಹಕ್ಕುಗಳನ್ನು ಸ್ಥಾಪಿಸುವುದಕ್ಕಾಗಲೀ ಸೈನಿಕ ಠಾಣ್ಯಗಳನ್ನು ನೆಲೆಗೊಳಿಸುವುದಕ್ಕಾಗಲೀ ಅಮೇರಿಕ ಬಯಸುವುದಿಲ್ಲ. ಚೀನದ ಆಂತರಿಕ ಕಲಹದಲ್ಲಿ ಅದು ಕೈಹಾಕಲು ಇಚ್ಛಿಸುವುದಿಲ್ಲ. ಆದುದರಿಂದ ಚಿಯಾಂಗರಿಗೆ ಯಾವ ತರದ ಸೈನಿಕ ಸಹಾಯವನ್ನಾಗಲೀ ಸಲಹೆಯನ್ನಾಗಲೀ ಕೊಡಲು ಅಮೇರಿಕ ಹೋಗುವುದಿಲ್ಲ ಎಂದು ಹೇಳಿದರು. ಆದರೆ ಮುಂದೆ ಆರೇ ತಿಂಗಳುಗಳಲ್ಲಿ ಕೊರಿಯದಲ್ಲಿ ಕಮ್ಯುನಿಸ್ಟರ ಆಕ್ರಮಣ ನಡೆದುದರಿಂದ ಟ್ರೂಮನ್ನರು ತಮ್ಮ ಮೊದಲಿನ ಹೇಳಿಕೆಗೆ ವ್ಯತಿರಿಕ್ತವಾಗಿಯೇ ಫೊರ್ಮೋಸದ "ರಕ್ಷಣೆ"ಗಾಗಿ ಅಮೇರಿಕದ ಏಳನೇ ನೌಕಾಪಡೆಯನ್ನು ಕಳಿಸಿಕೊಟ್ಟರು.

ದೂರ ಪೂರ್ವದಲ್ಲಿ ಕಮ್ಯುನಿಸ್ಟರ ವರ್ಚಸ್ಸು ಹೆಚ್ಚದಂತೆ ತಡೆಯುವುದೇ ಅಮೇರಿಕವು ಕೈಗೊಂಡ ಕ್ರಮದ ಹಿನ್ನೆಲೆಯೆಂದು ಆಗ ಎಲ್ಲರಿಗೂ ಸ್ಪಷ್ಟವಾಯಿತು; ಮಾತ್ರವಲ್ಲ ಇದರಿಂದ ಅನಾವಶ್ಯಕವಾಗಿ ಚೀನದ ಆಂತರಿಕ ಕಲಹದಲ್ಲಿ ಅಮೇರಿಕವು ಕೈಹಾಕಿದಂತಾಯಿತೆಂದೂ ಹೇಳಲಾಯಿತು. ಆದರೆ ಅಮೇರಿಕವು ಮಾತ್ರ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತದೆ. ಅದಕ್ಕೋಸ್ಕರ ವಿಧ್ಯುಕ್ತವಾಗಿ ಫೊರ್ಮೋಸವನ್ನು ಚೀನದ ಒಡೆಯರಿಗೆ ಬಿಟ್ಟುಕೊಡಲಾಗಿಲ್ಲವೆಂಬ ತಾಂತ್ರಿಕ ಲೋಪವನ್ನು ಉಪಯೋಗಿಸಿಕೊಳ್ಳುತ್ತದೆ. ಚೀನದ ಮುಖ್ಯ ನೆಲದ ಮೇಲೆ ಯಾರ ಅಧಿಕಾರ ನ್ಯಾಯವಾದದ್ದು ಎಂಬ ವಿಷಯ ಇತ್ಯರ್ಥವಾಗದೆ ಹೊಂತು, ಫೊರ್ಮೋಸದ ಭವಿಷ್ಯವನ್ನು ನಿರ್ಧರಿಸುವಂತಿಲ್ಲವೆಂದು ಅಮೇರಿಕ ಹೇಳುತ್ತದೆ. ಇದು ವ್ಯಾಯ.ರಿತಿ ಚಿಯಾಂಗರಿಗೂ ಒಪ್ಪಿಗೆಯಿಲ್ಲದ ಮಾತು—ಏಕೆಂದರೆ ಚಿಯಾಂಗರ ದೃಷ್ಟಿಯಲ್ಲಿ ಫೊರ್ಮೋಸವು ಚೀನದ ಅವಿಭಾಜ್ಯ ಅಂಗ—ಕಮ್ಯುನಿಸ್ಟರೂ ಅ

(೧೦ನೇ ಪುಟ ನೋಡಿರಿ)

ZANDU'S THREE GEMS of AYURVEDIC MEDICINES

ಝಾಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ಸರಗಳ ನಿಸ್ತೇಜ ಮತ್ತು ಸರ್ವಸಾಮಾನ್ಯ ಆಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಾಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ತ್ರಾಣ ಇತ್ಯಾದಿ ಬಯಕಾಲದ ಮೂತ್ರ ರೋಗಗಳಿಗೆ ಜಾಕ್ಷರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಾಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ಲಿಗೆ ರೂ. 7—8—0. ಕಾಲು ರಾತ್ಲಿಗೆ ರೂ. 2—0—0.

ಝಾಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

THE CANARA BANKING CORPORATION LIMITED
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಮ್ಮ ಮಾಂಡ್ಲಿ—ಮುಂಬಾಯಿ ಶಾಖೆಯು 51, ಪೈಧೋನಿ ರೋಡ್, ಖಡಕ್, ಮುಂಬಾಯಿ-9, ಇಲ್ಲಿ ಈಗಾಗಲೇ ತೆರೆಯಲ್ಪಟ್ಟಿದೆ. ನಮ್ಮ ಎಲ್ಲಾ ಭಾಗೀದಾರರೂ, ಗ್ರಾಹಕರೂ, ಹಿತೈಷಿಗಳೂ ಇದನ್ನು ದಯವಿಟ್ಟು ಲಕ್ಷದಲ್ಲಿಟ್ಟು, ಎಂದಿಗಿಂತಲೂ ಹೆಚ್ಚಾಗಿ, ತಮ್ಮ ಪ್ರೋತ್ಸಾಹವನ್ನು ನಮ್ಮ ಈ ಶಾಖೆಗೆ ನೀಡುವರಾಗಿ ಸಂಬುತ್ತೇವೆ.

ಡಾ॥ ಯು. ಸುಂದರ ರಾವ್ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

ಆಂಧ್ರದಲ್ಲಿ ಹೊಸ ಚುನಾವಣೆ ಪ್ರಾರಂಭ

ತಿರುಕೊಚ್ಚಿಯ ಸರಕಾರದಲ್ಲಿ ಅವಿಶ್ವಾಸ

ಇದೇ ೧೧ನೇ ತಾರೀಕಿನಿಂದ ಆಂಧ್ರದಲ್ಲಿ ಹೊಸ ಚುನಾವಣೆಗಳು ನಡೆಯುತ್ತವೆ. ಚುನಾವಣೆಯನ್ನು ಕೆಲವು ಹಂತಗಳಲ್ಲಿ ನಡೆಸಲು ಸರಕಾರದವರು ನಿರ್ಧರಿಸಿದ್ದು, ೧೧ನೇ ತಾರೀಕಿನಂದು ಉತ್ತರದ ೩೫ ಮತದಾರಕ್ಷೇತ್ರದಲ್ಲಿ ಮತದಾನವು ಪ್ರಾರಂಭವಾಗುತ್ತದೆ. ಇಲ್ಲಿಂದ ಒಟ್ಟು ೪೩ ಪ್ರತಿನಿಧಿಗಳನ್ನು ಆರಿಸಬೇಕಾಗಿದ್ದು, ಕಾಂಗ್ರೆಸು ಮತ್ತು ಮಿತ್ರವರ್ಗಗಳು ಪ್ರತಿಯೊಂದೂ ಸ್ಥಾನಕ್ಕೆ ಹುರಿಯಾಳುಗಳನ್ನು ನಿಲ್ಲಿಸಿವೆ. ಈ ಹುರಿಯಾಳುಗಳಲ್ಲಿ ಸಂಜೀವ ರೆಡ್ಡಿ, ಪಟ್ಟಾಭಿರಾಮರಾವ್, ಕೋಟಿ ರೆಡ್ಡಿ ಮುಂತಾದ ಹಿಂದಿನ ಮಂತ್ರಿಗಳೂ ಸೇರಿದ್ದಾರೆ. ಕಮ್ಯುನಿಸ್ಟರ ಪ್ರತಿಭಟನೆಯು ಇಲ್ಲಿ ತೀವ್ರವಾಗಿದೆ. ಪ್ರತಿಯೊಂದೂ ಸ್ಥಾನಕ್ಕೆ ಇಬ್ಬರಿಂದ ಏಳು ಮಂದಿ ಬೇರೆ ಬೇರೆ ಪಕ್ಷದ ಹಾಗು ಸ್ವತಂತ್ರ ಹುರಿಯಾಳುಗಳು ಸ್ಪರ್ಧೆಗೆ ನಿಂತಿದ್ದು, ಒಟ್ಟಿಗೆ ಇವರ ಸಂಖ್ಯೆಯು ೧೫೬ ಆಗುತ್ತದೆ ಆಂಧ್ರದ ಮತದಾರರ ಐದರಲ್ಲಿ ಒಂದಂಶವನ್ನು ಪ್ರಥಮದ ಈ ವಿಭಾಗವು ಒಳಗೊಳ್ಳುತ್ತದೆ. ಉಳಿದ ವಿಭಾಗಗಳಲ್ಲಿ ಫೆಬ್ರವರಿ ೧೫, ೧೮, ೨೩ ಮತ್ತು ೨೭ನೇ ತಾರೀಕುಗಳಲ್ಲಿ ಚುನಾವಣೆಯಾಗುತ್ತದೆ.

ಪ್ರಚಾರ ವೈಖರಿ

ಶಾಸನ ಸಭೆಯಲ್ಲಿರುವ ೧೯೩ ಸ್ಥಾನಗಳಿಗೆ ಒಟ್ಟು ೫೭೬ ಹುರಿಯಾಳುಗಳು ನಿಂತಿದ್ದಾರೆ. ಚುನಾವಣೆಗೆ ಹಿಂದಿನ ಈ ವಾರದಲ್ಲಿ ಪ್ರತಿಯೊಂದೂ ಪಕ್ಷದ ಪ್ರಭೃತಿಗಳು ಜನರ ಮನವೊಲಿಸುವ ತಮ್ಮ ಪ್ರಯತ್ನವನ್ನೂ ಪ್ರಚಾರವನ್ನೂ ಬಹಳವಾಗಿ ತೀವ್ರಗೊಳಿಸಿದರು. ಕಾಂಗ್ರೆಸಿನ ಅಧ್ಯಕ್ಷ ಶ್ರೀ ಧೇಬರರು ಮಿಂಚಿನ ಸಂಚಾರವನ್ನು ಕೈಗೊಂಡು, ಜನರು ಕಮ್ಯುನಿಸ್ಟರ ಕುರಿತಾದ ವ್ಯಾಮೋಹವನ್ನು ಬಿಟ್ಟುಗೊಟ್ಟು ಎಚ್ಚರದಿಂದ ವರ್ತಿಸಬೇಕು ಎಂದು ಜನರಿಗೆ ತಿಳಿಸಿದರು. ಕಾಂಗ್ರೆಸಿಗೆ ಮತವಿತ್ತು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯರಿ ಎಂಬ ಘೋಷಣೆಯನ್ನು ಅವರು ಹೋದಲ್ಲೆಲ್ಲ ಮಾಡಿದರು. ಇದಕ್ಕೆ ವಿರುದ್ಧವಾಗಿ ಕಮ್ಯುನಿಸ್ಟರು ಜನತಾ ರಾಜ್ಯದ ಸ್ಥಾಪನೆಗಾಗಿ ತಮಗೆಯೇ ಮತಕೊಡಬೇಕೆಂದು ಸಾರುತ್ತಿದ್ದಾರೆ. ರಾಜ್ಯದ ಹನ್ನೊಂದು ಜಿಲ್ಲೆಗಳಲ್ಲಿ ಅತ್ಯಂತ ಫಲವತ್ತಾದ ಉತ್ತರ ಸರಕಾರ ಪ್ರದೇಶದ ಐದು ಜಿಲ್ಲೆಗಳಲ್ಲಿ ಕಮ್ಯುನಿಸ್ಟರ ವರ್ಚಸ್ಸು ಬಹಳ ಹೆಚ್ಚಿಗಿದೆ. ಇಲ್ಲಿಯ ರೈತರು ಭಾರತದಲ್ಲಿಯೇ ಸಂಪನ್ನರಾಗಿದ್ದರೂ ಅವರಲ್ಲಿ ಕಮ್ಯುನಿಸ್ಟರ ಕುರಿತಾದ ಪ್ರೀತಿ ಆಶ್ಚರ್ಯ ಹುಟ್ಟಿಸುವಂತಿದೆ. ಇಲ್ಲಿಯ ಪರಿಣಾಮದ ಮೇಲೆಯೇ ಆಂಧ್ರದ ಭವಿಷ್ಯ ಹೊಂದಿಕೊಂಡಿದೆ. ರೈತರಿಗೆ ಕಮ್ಯುನಿಸ್ಟರ ಹಿಂಸಾತ್ಮಕ ಕ್ರಾಂತಿ ಬೇಕೋ ಅಥವಾ ಕಾಂಗ್ರೆಸಿನ ಅಹಿಂಸಾತ್ಮಕ ಸಮಾಜವಾದದ ಕಾರ್ಯಕ್ರಮ ಬೇಕೋ ಎಂಬುದನ್ನು ಕೊನೆಯದಾಗಿ ಇಲ್ಲಿಯ ಪರಿಣಾಮ ನಿರ್ಧರಿಸುತ್ತದೆ.

ಅವಿಶ್ವಾಸ ಗೊತ್ತುವಳಿ

ತಿರುವಾಂಕೂರು-ಕೊಚ್ಚಿ ರಾಜ್ಯದಲ್ಲಿ ಪ್ರಜಾ ಸಮಾಜವಾದಿಗಳ ಸರಕಾರದ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಈ ವಾರ ತರಲಾಯಿತು. ತಿರು ತಮಿಳು ನಾಡು ಕಾಂಗ್ರೆಸಿನ ಶ್ರೀ ಚಿದಂಬರ ನಾಡರರು ಕೆಲವು ದಿನ ಪೂರ್ವದಲ್ಲಿಯೇ ಅವಿಶ್ವಾಸ ಸೂಚನೆಯನ್ನು ತಂದಿದ್ದರೂ ಚರ್ಚೆಯನ್ನು ಫೆಬ್ರುವರಿ ೫ನೇ ತಾರೀಕಿಗೆ ಮುಂದೂಡಬೇಕೆಂದೂ ಆಗ ತನ್ನ ಪಕ್ಷದ ಕೆಲವರಿಗೆ ಸಭೆಯಲ್ಲಿ ಭಾಗ ವಹಿಸಲು ಅನುಕೂಲವಾಗುವುದೆಂದೂ ಅವರು ಸಾಡಿದ ವಿನಂತಿ ಮಾನ್ಯವಾಗದಿದ್ದುದರಿಂದ, ಅದನ್ನು ಹಿಂದೆಗೆದು ಕೊಳ್ಳಲಾಯಿತು. ಆದರೆ ಇದಾದ ಕೆಲವೇ ದಿನಗಳಲ್ಲಿ ಜೈಲಿನಲ್ಲಿದ್ದ ನಾಡರರ ಪಕ್ಷದ ೬ ಮಂದಿ ಶಾಸನ ಸಭಾ ಸದಸ್ಯರನ್ನು ಹೈಕೋರ್ಟಿನ ಅಪ್ಪಣೆಯಂತೆ ಬಿಡುಗಡೆ ಮಾಡಿದುದರಿಂದ, ಅವಿಶ್ವಾಸ ಗೊತ್ತುವಳಿಗೆ ಹೆಚ್ಚಿನ ಬೆಂಬಲವು ಶಾಸನ ಸಭೆಯಲ್ಲಿ ಸಿಗುವ ಪರಿಸ್ಥಿತಿಯುಂಟಾಯಿತು. ತಕ್ಷಣವಾಗಿ ದಕ್ಷಿಣ ತಿರುವಾಂಕೂರಿನ ಸ್ವತಂತ್ರ ಹುರಿಯಾಳೊಬ್ಬರು ಮತ್ತು ತಿರು ತಮಿಳು ನಾಡು ಕಾಂಗ್ರೆಸಿನ ಸದಸ್ಯರೊಬ್ಬರು ಪಟ್ಟಂ ಥಾನು ಪಿಳ್ಳೆಯವರ ಮಂತ್ರಿ ಮಂಡಳದಲ್ಲಿ ಅವಿಶ್ವಾಸ ವ್ಯಕ್ತಪಡಿಸುವ ಗೊತ್ತುವಳಿಗಳನ್ನು ತಂದರು. ಇವುಗಳ ಚರ್ಚೆ ೫ನೇ ತಾರೀಕಿನಂದು ನಡೆಯುವುದು ನಿಶ್ಚಿತವಾಗಿದ್ದರೂ ಕೊನೆಯ ಗಳಿಗೆಯಲ್ಲಿ ೮ನೇ ತಾರೀಕಿಗೆ ಅದನ್ನು ಮುಂದೂಡಲಾಯಿತು. ಅವಿಶ್ವಾಸ ಗೊತ್ತುವಳಿಗೆ ಕಾಂಗ್ರೆಸು ಪಕ್ಷವು ತನ್ನ ಬೆಂಬಲವನ್ನು ವ್ಯಕ್ತಗೊಳಿಸಿದೆ; ಆದರೆ ಕಮ್ಯುನಿಸ್ಟರು ಥಾನು ಪಿಳ್ಳೆಯವರನ್ನು ಬೆಂಬಲಿಸುವಂತೆ ತೋರುತ್ತದೆ.

ಉಕ್ಕಿನ ಉತ್ಪಾದನೆ

ಚುನಾವಣೆಗಳು ರಾಷ್ಟ್ರದ ಪ್ರಗತಿಯನ್ನು ಸಾಧಿಸುವ ಸರಕಾರವನ್ನು ನೆಲೆಗೊಳಿಸುವುದಕ್ಕೆ ಅವಶ್ಯವೆಂದು ಒಪ್ಪಬೇಕು. ಆದರೆ ಅದು ಸ್ಥಿರವಾದ ಸರಕಾರವಾಗಿರುವುದು ಮಾತ್ರ ಅಪೇಕ್ಷಣೀಯ ಆಗಮಾತ್ರ ಭದ್ರ ಭವಿಷ್ಯದ ಅಡಿಗಲ್ಲನ್ನು ಹಾಕಲು ಸಾಧ್ಯವಾಗುತ್ತದೆ. ಕೇಂದ್ರದಲ್ಲಿ ಪ್ರಬಲವಾದ ಕಾಂಗ್ರೆಸು ಸರಕಾರವು ಅಸ್ತಿತ್ವದಲ್ಲಿರುವುದರಿಂದ ಎಷ್ಟೋ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ. ಇತ್ತೀಚಿನ ಉದಾಹರಣೆಯೆಂದರೆ, ಭಾರತಭೂಮಿಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ಬಗ್ಗೆ ಮಾಡಿಕೊಂಡ ಒಪ್ಪಂದ. ಕಳೆದ ವಾರ ಸಹಿ ಹಾಕಲಾದ ಈ ಒಪ್ಪಂದವನ್ನಯ ಮಧ್ಯ ಪ್ರದೇಶದ ಭಿಲ್ಲಾಯಿ ಎಂಬ ಹಳ್ಳಿಯಲ್ಲಿ ವರ್ಷಕ್ಕೆ ಹತ್ತು ಲಕ್ಷ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸಬಲ್ಲ. ಸುಮಾರು ೧೦೦ ಕೋಟಿ ರೂಪಾಯಿ ವೆಚ್ಚ ಬರುವ, ಕಾರ್ಖಾನೆಯನ್ನು ನೆಲೆಗೊಳಿಸಲಾಗುವುದು. ಇದಕ್ಕೆ ಬೇಕಾಗುವ ಯಂತ್ರೋಪಕರಣಗಳ ಬೆಲೆಯನ್ನು ೧೨ ವಾರ್ಷಿಕ ಕಂತುಗಳಲ್ಲಿ ಮುಟ್ಟಿಸುವ ಸೌಕರ್ಯವು ಭಾರತ ಸರಕಾರಕ್ಕೆ ಸಿಕ್ಕಿರುವುದು. ರಷ್ಯವು ಕಮ್ಯೂನಿಸ್ಟೇತರ ರಾಷ್ಟ್ರಕ್ಕೆ ತಾಂತ್ರಿಕ ಹಾಗು ಆರ್ಥಿಕ ಸಹಾಯವನ್ನು ಕೊಡಲು ಮುಂದೆ ಬಂದದ್ದು ಇದೇ ಮೊದಲನೇ ಸಲ. ಈ ಕಾರ್ಖಾನೆಯು ೧೯೫೯ನೇ ವರ್ಷಾಂತ್ಯದೊಳಗೆ ಕೆಲಸವನ್ನು ಪ್ರಾರಂಭಿಸುವುದು. ಇಷ್ಟರಲ್ಲಿಯೇ ಭಾರತದ ತಜ್ಞರ ಮಂಡಳವೊಂದು ರಷಿಯಕ್ಕೆ ಹೋಗಿ, ಅಲ್ಲಿಂದ ಒಡಗಿಸಲಾಗುವ ಸರಕುಗಳ ಮತ್ತು ಇತರ ವಿಷಯಗಳ ಪರಿಶೀಲನೆಯನ್ನು ಮಾಡುವದು. ಇದರಿಂದ ಒಪ್ಪಂದದಂತೆ ನಡೆದುಕೊಳ್ಳಲು ರಷಿಯಕ್ಕೆ ಸಾಧ್ಯವಾದೀತೇ ಇಲ್ಲವೆ ಎಂಬ ಸಂಗತಿಯನ್ನು ಭಾರತ ಸರಕಾರ ತೀರ್ಮಾನಿಸಲು ಅನುಕೂಲವಾಗುತ್ತದೆ.

ಸಂಸ್ಕೃತದ ಅಭ್ಯಾಸ

ದೇಶದಲ್ಲಿ ಆರ್ಥಿಕ ಅಭಿವೃದ್ಧಿ ಮಾತ್ರ ಕೈಗೂಡಿದರೆ ಸಾಲದು—ವರಿಷ್ಠ ನ್ಯಾಯಸ್ಥಾನದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿಗಳು ಹೇಳುವಂತೆ ನಾವು "ಸಾಂಸ್ಕೃತಿಕ ಸ್ವರಾಜ್ಯ"ವನ್ನು ಸಹ ಕೂಡಲೇ ಸಂಪಾದಿಸಬೇಕು. ಅವರು ಬಿಹಾರಿನ ಸಂಸ್ಕೃತ ಸಂಘದ ಪದವೀದಾನ ಸಮಾರಂಭದಲ್ಲಿ ಓದಲೆಂದು ಸಿದ್ಧಪಡಿಸಿದ್ದ ಭಾಷಣದಲ್ಲಿ ಸಾಂಸ್ಕೃತಿಕ ಸ್ವರಾಜ್ಯವನ್ನು ಭಾರತದ ಪ್ರಾಚೀನ ಭಾಷೆಯಾದ ಸಂಸ್ಕೃತದ ಅಭ್ಯಾಸದಿಂದಲೇ ಸಂಪಾದಿಸಲು ಸಾಧ್ಯ ಎಂದು ಹೇಳಿದರು. ಸಂಸ್ಕೃತವನ್ನು ಜನಪ್ರಿಯಗೊಳಿಸಲು ನಡೆಸಿದ ಪ್ರಯತ್ನಗಳೇನೂ ಹೆಚ್ಚಿಲ್ಲವೆಂದು ಅವರು ವಿಷಾದದಿಂದ ನುಡಿದರು. ನಮ್ಮ ರಾಷ್ಟ್ರಾಧ್ಯಕ್ಷರಾದ ಡಾ| ರಾಜೇಂದ್ರ ಪ್ರಸಾದರಿಗೆ ಸಂಸ್ಕೃತದಲ್ಲಿ ಒಳ್ಳೆಯ ಅಭಿಮಾನವಿದೆ; ಪ್ರಧಾನ ಮಂತ್ರಿಗಳಿಗೆ ಸಹ ಸಂಸ್ಕೃತದಲ್ಲಿ ತುಂಬ ಆಸ್ಥೆಯಿದೆ. ಆದರೆ ಸಂಸ್ಕೃತದ ಅಭ್ಯಾಸಕ್ಕೆ ಸರಕಾರದ ಮಟ್ಟದಲ್ಲಿ ಸಾಕಷ್ಟು ಪ್ರೋತ್ಸಾಹ ಮಾತ್ರ ಇನ್ನೂ ಸಿಗುತ್ತಿಲ್ಲ. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಸಂಸ್ಕೃತ ಭಾಷೆಯ ಅಭ್ಯಾಸವನ್ನು ಅಳವಡಿಸಿಕೊಳ್ಳಬೇಕು. ಸಂಸ್ಕೃತ ಪಂಡಿತರು ಹೊಟ್ಟೆವಾಡಿನ ಬಗ್ಗೆ ತೊಂದರೆಗೊಳಗಾಗುವ ಪರಿಸ್ಥಿತಿಯನ್ನು ತಪ್ಪಿಸಬೇಕು. ಎಂದು ಅವರು ಅಭಿಪ್ರಾಯಪಟ್ಟರು. ಬಿಹಾರದ ಗವರ್ನರರಾದ ಶ್ರೀ ದಿವಾಕರ ರಂಗರಾಯರು ಸಹ ಸಂಸ್ಕೃತದ ಅಭ್ಯಾಸಕ್ಕೆ ಹೆಚ್ಚಿನ ಅನುಕೂಲತೆಯನ್ನೊದಗಿಸುವುದು ಮತ್ತು ಸುಂದರವಾದ ಈ ಪ್ರಾಚೀನ ಭಾಷೆಯ ಒಗ್ಗೆ ಜನರ ಆದರವನ್ನು ಸಂಪಾದಿಸುವುದು ಅತ್ಯವಶ್ಯ ಎಂದರು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ

ಗೀತೆಯ ಕೈಗನ್ನಡಿ
ಬೆಲೆ: ೦—೩—೨

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಜಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.
ಇನ್ಸ್‌ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.
ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:—
B. B. SHETTY, B. A., LL. B.
Chairman.

ದೂರ ಪೂರ್ವದ ಅಪಾಯಕರ ವಾತಾವರಣ

ರಾಷ್ಟ್ರೀಯ ಚೀಣರನ್ನು ಫೊರ್ಮೋಸಕ್ಕೆ ಸಾಗಿಸುವ ಪ್ರಯತ್ನ

ಫೊರ್ಮೋಸದ ರಕ್ಷಣೆಯನ್ನು ಮಾಡಲು ಕಟಿ ಬದ್ಧವಾಗಿರುವ ಅಮೇರಿಕವು ರಾಷ್ಟ್ರೀಯ ಚೀನದ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸುವ ಉದ್ದೇಶದಿಂದ ಸುಮಾರು ೨೦೦ ಮೈಲು ಉತ್ತರಕ್ಕೆ ಚೀನದ ಮುಖ್ಯ ನೆಲದಿಂದ ಕೇವಲ ೮ ಮೈಲುಗಳ ಪೂರ್ವಕ್ಕೆ ಇರುವ ಟಾಚೆನ್ ದ್ವೀಪಗಳನ್ನು ತೆರವು ಮಾಡಲು ಈಗ ಚಿಯಾಂಗರ ಮನವೊಲಿಸಿದೆ. ಕೆಲವು ವಾರಗಳಿಂದೀಚೆಗೆ ಆ ದ್ವೀಪಗಳ ಮೇಲೆ ಕಮ್ಯುನಿಸ್ಟರು ತೋಫಿನ ಹೊಡೆತವನ್ನು ಕೈಗೊಂಡಿದ್ದರೂ ಅಲ್ಲಿಯ ಜನರು ಅಷ್ಟೇನೂ ಗಲಿಬಿಲಿ ಗೊಂಡಿರಲಿಲ್ಲವೆಂದು ಹೇಳಲಾಗುತ್ತದೆ. ಚಿಯಾಂಗರಿಗಂತೂ ಆ ದ್ವೀಪಗಳನ್ನು ಬಿಟ್ಟುಕೊಡಲು ಮನಸ್ಸೇ ಇರಲಿಲ್ಲ. ಅವುಗಳಿಗೆ ಯುದ್ಧ ಮಹತ್ವವಿಲ್ಲವೆಂದೂ ಫೊರ್ಮೋಸದ ರಕ್ಷಣೆಯ ಕ್ರಮಗಳನ್ನು ಬಲಪಡಿಸಲು ಟಾಚೆನ್ ದ್ವೀಪಗಳಲ್ಲಿರುವ ೧೫೦೦೦ ಸೈನಿಕರನ್ನು ಉಪಯೋಗಿಸುವುದು ವಿಹಿತವೆಂದೂ ಅಮೇರಿಕವು ಹೇಳಿದುದರಿಂದ ಚಿಯಾಂಗರು ಈ ಕೆಲಸಕ್ಕೆ ಒಪ್ಪಿಬಂತೆ ಕಾಣುತ್ತದೆ. ಯಿಕಿಯಾಂಗ್ ಶಾನ್ ದ್ವೀಪಗಳನ್ನು ಈಚೆಗೆ ವಶಪಡಿಸಿಕೊಂಡಿದ್ದ ಕಮ್ಯುನಿಸ್ಟರು ತಮ್ಮ ಮುಂದಿನ ಗುರಿಯಾಗಿ ಟಾಚೆನ್ ದ್ವೀಪಗಳನ್ನು ಪರಿಗಣಿಸಿದ್ದರು. ಅದಕ್ಕಾಗಿ ದಾಳಿ ನಡೆಸುವಾಗ ರಾಷ್ಟ್ರೀಯ ಚೀನದ ೧೯೦೦೦ ಪ್ರಜೆಗಳೂ ೧೫೦೦೦ ಸೈನಿಕರೂ ವ್ಯರ್ಥವಾಗಿ ತೊಂದರೆಗೀಡಾಗಬಾರದೆಂದು ಅಮೇರಿಕ ಆ ದ್ವೀಪಗಳನ್ನೆ ತೆರವು ಮಾಡಿಬಿಡುವಂತೆ ಚಿಯಾಂಗರಿಗೆ ಬೋಧಿಸಿತು.

ಘರ್ಷಣೆಯ ಸಂಭವ

ಮೊನ್ನೆ ಸೋಮವಾರ ದ್ವೀಪಗಳನ್ನು ತೆರವು ಮಾಡುವ ಕೆಲಸವೂ ಪ್ರಾರಂಭವಾಗಿದೆ. ಇದು ಇನ್ನು ಹತ್ತು ಹದಿನೈದು ದಿನಗಳಲ್ಲಿ ಮುಗಿಯಬಹುದೆಂದು ಅಮೇರಿಕದ ಸೈನ್ಯಾಧಿಕಾರಿಗಳು ಹೇಳುತ್ತಾರೆ. ತೆರವು ಮಾಡುವ ಕೆಲಸದಲ್ಲಿ ಚೀನದ ಕಮ್ಯುನಿಸ್ಟರಿಂದ ಕಿರುಕುಳವಾಗಬಾರದೆಂದು ಭಾರಿ ದೊಡ್ಡ ಸಿದ್ಧತೆಗಳನ್ನು ಸೈನ್ಯಾಧಿಕಾರಿಗಳು ಮಾಡಿದ್ದರು. ಮುನ್ನೂರು ವಿಮಾನಗಳ ರಕ್ಷಣೆಯೊಡನೆ ದೊಡ್ಡ ಹಡಗು ಪಡೆಯೇ ಟಾಚೆನ್ ದ್ವೀಪಗಳಿಗೆ ಹೊರಡಿತ್ತಲ್ಲದೆ. ಏನಾದರೂ ಗೊಂದಲವನ್ನು ಕಮ್ಯುನಿಸ್ಟರು ನಡೆಸಿದರೆ, ಅದನ್ನು ಕೂಡಲೇ ಪ್ರತಿಭಟಿಸುವ ಅಪ್ಪಣೆಯನ್ನು ಸಹ ಈ ಪಡೆ ಪಡೆದಿತ್ತು. ಅಮೇರಿಕದ ವರಿಷ್ಠಸೈನ್ಯಾಧಿಪತಿಗಳೇ ಕಾರ್ಯಾಚರಣೆಯ ನೇತೃತ್ವವನ್ನು ವಹಿಸಿದ್ದರು. ಮೊದಲಿನ ಪ್ರಯತ್ನಗಳಲ್ಲಿ ತೆರವಿನ ಕಾರ್ಯಕ್ಕೆ ಯಾವ ತರದ ತೊಂದರೆಯೂ ಸಂಭವಿಸಲಿಲ್ಲವೆಂದು ವರದಿಗಳು ಹೇಳುತ್ತವೆ. ಆದರೆ ಇದನ್ನೆ ನಂಬಿ ಕುಳಿತಿರುವುದು ಸಾಧ್ಯವಿಲ್ಲ— ಏಕೆಂದರೆ ಕಮ್ಯುನಿಸ್ಟರು ಇನ್ನು ಮುಂದೇನು ಮಾಡುವರೆಂದು ತಿಳಿಯದು. ಅವರನ್ನು ಕೆಣಕಲು ಹೋಗಬಾರದೆಂದೂ ಕೇವಲ ತೆರವಿನ ಕಾರ್ಯದಲ್ಲಿಯೇ ಮನಸ್ಸಿಡಬೇಕೆಂದೂ ಅಮೇರಿಕ ತನ್ನ ಪಡೆಗೂ ರಾಷ್ಟ್ರೀಯ ಸೈನಿಕರಿಗೂ ಹೇಳಿದೆ— ಆದರೆ ಟಾಚೆನ್ ದ್ವೀಪಗಳನ್ನು ಬಿಟ್ಟು ಹೊರಟ ಮೇಲೆ ಫೊರ್ಮೋಸಕ್ಕೆ ಮರಳುವ ದಾರಿಯಲ್ಲಿ ಏನಾದೀತೊ ಗೊತ್ತಿಲ್ಲ. ಚೀನದ ಮುಖ್ಯ ನೆಲದಿಂದ ಕೇವಲ ೩೦ ಮೈಲು ದೂರದ, ಫೊರ್ಮೋಸದಿಂದ ೧೫೦ ಮೈಲು ಅಂತರದ ಮುಂಚಿನಾನ್ ದ್ವೀಪದಲ್ಲಿ ಇವರು ಸುಸು ತಡೆದು ನಿಲ್ಲುವಾಗ ಏನಾದರೂ ಅನಾಹುತ ನಡೆದರೂ ನಡೆದೀತು.

ನಿಷ್ಕ್ರಿಯ ಗೊತ್ತುವಳಿ

ಕಮ್ಯುನಿಸ್ಟ್ ಚೀನವು ನ್ಯೂ ಜೀಲೇಂಡಿನ ಕೇಳಿಕೆಯಂತೆ ಭದ್ರತಾ ಮಂಡಳವು ಕಳಿಸಿದ್ದ ಆಮಂತ್ರಣವನ್ನು ತಿರಸ್ಕರಿಸಿ, ಫೊರ್ಮೋಸದ ವಿಮೋಚನೆಯ ಸಂಯುಕ್ತ ರಾಷ್ಟ್ರಸಂಘದಲ್ಲಿ ಚರ್ಚೆಯ ವಿಷಯವಾಗಬಾರದೆಂದು ಹೇಳಿದೆ. ಅಮೇರಿಕವು ಅನ್ಯಾಯವಾಗಿ ಶಾಂತಿ ಸಾಗರದಲ್ಲಿ ನಡೆಸಿರುವ ಯುದ್ಧ ಪ್ರಚೋದಕ ನೀತಿಯನ್ನು ಖಂಡಿಸುವುದಕ್ಕೇನಾದರೂ ಚರ್ಚೆಯನ್ನು ಭದ್ರತಾ ಮಂಡಳವು ನಡೆಸುವುದಾದರೆ, ಅದರಲ್ಲಿ ಭಾಗವಹಿಸಲು ತನ್ನ ಪ್ರತಿನಿಧಿಯನ್ನು ಕಳಿಸುವುದಾಗಿ ಆದು ತಿಳಿಸಿದೆ. ರಶಿಯವು ಇಂಥದೊಂದು ಗೊತ್ತುವಳಿಯನ್ನು ತಂದಿದ್ದು, ಅದನ್ನು ಈಗ ಮೂಲೆಯಲ್ಲಿಡಲಾಗಿದೆ. ಚೀನದ ನಕಾರಾತ್ಮಕ ಉತ್ತರದ ದೆಸೆಯಿಂದ ನ್ಯೂ ಜೀಲೇಂಡಿನ ಗೊತ್ತುವಳಿಯೂ ಏನೂ ಫಲಕೊಡದೆಂದು ತಿಳಿಯಬಹುದು. ಏಕೆಂದರೆ, ಭದ್ರತಾ ಮಂಡಳವು ಏಕ ಪಕ್ಷೀಯವಾಗಿ ಕಮ್ಯುನಿಸ್ಟ್ ಚೀನದ ಚಟುವಟಿಕೆಯನ್ನು ಖಂಡಿಸಿದ ಪಕ್ಷದಲ್ಲಿ ಅದಕ್ಕೆ ಬಂಧನಕಾರಿಯಾಗಲು ಚೀನವು ಬದ್ಧವಿಲ್ಲ— ಏಕೆಂದರೆ, ಚೀನವು ರಾಷ್ಟ್ರಸಂಘದ ಸದಸ್ಯತ್ವವನ್ನು ಪಡೆದಿಲ್ಲ. ಅದೂ ಅಲ್ಲದೆ ಚೀನದ ಪಕ್ಷಪಾತಿಯಾದ ರಶಿಯವು ತನ್ನನಿಷೇಧಾಧಿಕಾರವನ್ನು ಉಪಯೋಗಿಸಿ, ಭದ್ರತಾ ಮಂಡಳದ ಈ ಏಕಪಕ್ಷೀಯ ನಿರ್ಣಯವನ್ನು ನಿಷ್ಕ್ರಿಯ ಗೊಳಿಸಬಹುದು ಇಂಥ ಪರಿಸ್ಥಿತಿಯಲ್ಲಿ ಭದ್ರತಾ ಮಂಡಳವು ಏನನ್ನೂ ಮಾಡದೆ ಮೂಕ ಪ್ರೇಕ್ಷಕನಂತೆ ಕುಳಿತಿರುವ ಪ್ರಸಂಗ ತಪ್ಪಿದ್ದಲ್ಲ.

ಭಾರತದ ಮಾರ್ಗದರ್ಶನ

ಹಾಗಾದರೆ, ಫೊರ್ಮೋಸದ ಸನ್ನಿವೇಶ ಪರಿಹಾರಕ್ಕೆ ಏನು ಮಾಡಬೇಕೆಂದು ಕೇಳಲಾಗುತ್ತದೆ— ಈ ವಿಷಯದಲ್ಲಿ ಭಾರತದ ಅಭಿಪ್ರಾಯವು ಇಂಡೋ ಚೀನದ ಸಮರ ನಿಲುಗಡೆಯ ಪ್ರಯತ್ನ ನಡೆಸುವುದಕ್ಕೆ ಜಿನೇವಾದಲ್ಲಿ ಸಮ್ಮೇಳನವನ್ನು ನೆರೆಯಿಸಿದಂತೆ, ಪ್ರಮುಖ ರಾಷ್ಟ್ರಗಳ ಇನ್ನೊಂದು ಪರಿಷತ್ತನ್ನು ಕೂಡಿಸಿದರೆ ಅದೀತು ಎಂದಿದೆ. ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಸಮ್ಮೇಳನವು ಕಳೆದ ವಾರ ಜರಗಿದಾಗ ನೆಹರುಗಳು ಪ್ರಾರಂಭದಲ್ಲಿಯೇ ಇಂಥ ಸೂಚನೆಯನ್ನು ಮುಂದಿಟ್ಟರೆಂದು ತಿಳಿದು ಬರುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಹೊರಗೆಯೇ ಫೊರ್ಮೋಸದ ಪ್ರಶ್ನೆಯನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕಲ್ಲದೆ, ಚೀನದ ವರ್ತನೆಯನ್ನು ಖಂಡಿಸಿ, ಮುಖ ಭಂಗಿಸುವುದರಿಂದಾಗಲಿ, ಅಮೇರಿಕದ ಕಾರ್ಯವನ್ನು ಹೊಗಳುವುದರಿಂದಾಗಲಿ ಪ್ರಯೋಜನವಿಲ್ಲ ಎಂದು ಭಾರತದ ನಿಲುಮೆಯಿದ್ದಂತೆ ಕಾಣುತ್ತದೆ. ಆದರೆ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ನೆಹರುಗಳ ಈ ಧೋರಣೆಗೆ ಸಾಕಷ್ಟು ಬಲ ಸಿಗುವಂತೆ ಕಾಣುವುದಿಲ್ಲ— ಕಾನೂನು ಪ್ರಕಾರ ಫೊರ್ಮೋಸವು ಯಾರನೆಂಬುದಿನ್ನೂ ತೀರ್ಮಾನವಾಗಿಲ್ಲ ಎಂಬ ಅಮೇರಿಕದ ನಿಲುಮೆಯನ್ನೆ ನೆಹರುಗಳ ಹೊರತಾಗಿ ಉಳಿದೆಲ್ಲರೂ ಪ್ರಕಟಿಸಿರುವುದರಿಂದ ಒಮ್ಮತದ ಯಾವ ಸೂಚನೆಯೂ ಬರಲಾರದೆಂದು ಊಹಿಸಲಾಗುತ್ತದೆ. ಆದುದರಿಂದ ಸ್ಪಷ್ಟ ಸೂಚನೆಗಳಿಲ್ಲದೆಯೇ ಸಾಮಾನ್ಯ ಮಾತುಗಳ ಮೂಲಕ ಫೋರ್ಮೋಸದಲ್ಲಿ ಶಾಂತಿಯನ್ನು ರಕ್ಷಿಸುವ ಧೋರಣೆಯನ್ನು ಉಲ್ಲೇಖಿಸಿ ಪ್ರಧಾನ ಮಂತ್ರಿಗಳು ತಮ್ಮ ಪರಿಷತ್ತನ್ನು ಮುಗಿಸಬಹುದು.

ಅಮೇರಿಕದ ನಿಲುಮೆ

ಅಮೇರಿಕದ ಅಧ್ಯಕ್ಷರು ಫೊರ್ಮೋಸಾ ಮತ್ತು ಪೆಸ್ಕಾಡೋರ್ ದ್ವೀಪಗಳ ರಕ್ಷಣೆಯ ಜವಾಬ್ದಾರಿಯನ್ನಷ್ಟೇ ಅಲ್ಲದೆ ಗಡಿಯ ಹೊರಗಿನ, ಅರ್ಥಾತ್ ಚೀನದ ಮುಖ್ಯ ನೆಲಕ್ಕೆ ತೀರ ಸಮೀಪವಿರುವ ಕ್ಯೂಮೈ ಮತ್ತು ಮತ್ಸು ದ್ವೀಪಗಳ ಬಗ್ಗೆಯೂ ಹೊಣೆಗೆ ಹೆಗಲು ಕೊಟ್ಟಿರುವುದು ಎಷ್ಟೋ ಮಂದಿ ಸಿನೇಟರರಿಗೆ ಮನಸ್ಸಿಗೆ ಬಂದಿಲ್ಲ. ಇವರನ್ನು ಸಮಾಧಾನಪಡಿಸುವುದು ಅಧ್ಯಕ್ಷರಿಗೆ ಅಗತ್ಯವೆಂದೇನು ತೋರುವುದಿಲ್ಲ— ಆದರೆ, ತೃತೀಯ ಮಹಾಯುದ್ಧಕ್ಕೆ ಇದು ಮಟ ಕೊಡುವುದರಿಂದ ಅಮೇರಿಕಕ್ಕೂ ಈಗ ಶಾಂತಿಯೇ ಬೇಕಾಗಿದೆಯೆಂದು ಹೇಳಲಾಗುತ್ತದೆ. ಯುದ್ಧ ವಿರಾಮ ಒಪ್ಪಂದವನ್ನು ಪ್ರಿಸ್ರದಲ್ಲಿ ನಡೆಸಲಾಗುವಂತೆ ಕಮ್ಯುನಿಸ್ಟರನ್ನು ಹೆದರಿಸುವುದಕ್ಕೋಸ್ಕರವೇ ಅಮೇರಿಕ ಇಷ್ಟು ದೊಡ್ಡ ಹೊಣೆಗೆ ಹೆಗಲು ಕೊಟ್ಟಿತೆಂದು ಅಭಿಪ್ರಾಯ ಪಡಲಾಗುತ್ತದೆ. ಯುದ್ಧ ವಿರಾಮದ ದಿನೆಯಲ್ಲಿ ಪ್ರಯತ್ನ ಮಾಡುವವರು ಯಾರು ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ— ಸಂಯುಕ್ತ ರಾಷ್ಟ್ರಸಂಘದ ಹೊರಗೆಯೇ ಈ ಪ್ರಯತ್ನ ನಡೆಯಬೇಕೆಂದು ಅಮೇರಿಕವೂ ಒಪ್ಪುವಂತೆ ಕಾಣುತ್ತದೆ. ಆದರೆ ನೆಹರುಗಳ ನಿಲುಮೆಯನ್ನು ಅದು ಮೆಚ್ಚದಿದ್ದರೆ, ಬೇರೆ ಯಾರೂ ಯುದ್ಧ ವಿರಾಮ ಸಾಧಿಸಬಲ್ಲ ಸಮರ್ಥರು ಕಾಣುವುದಿಲ್ಲ.

ಮದ್ರಾಸು ಹೈಕೋರ್ಟಿನಲ್ಲಿ
ಸಾಮಾನ್ಯ ಮೂಲ ಸಿವಿಲ್ ಕ್ಷೇತ್ರಕ್ಕೊಳಪಟ್ಟ
ಒ. ಸಿ. ನಂಬ್ರ 4/1955.

1913ನೆ ಇಂಡಿಯನ್ ಕಂಪೆನೀಸ್ ಆಕ್ಟು
ಮತ್ತು
ದಿ ಮಹಾರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಮತ್ತು
ಇಳಿಸುವಿಕೆ ವಿಚಾರದಲ್ಲಿ

ದಿ ಮಹಾರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಮತ್ತು ಇಳಿಸುವಿಕೆ —ಅರ್ಜಿದಾರ.

ಮೇಲ್ಕಂಡ ಕಂಪೆನಿಯು ಷೇರು 1ರ ರೂ. 10/-ರಂತೆ ಐದು ಲಕ್ಷ ಸಾಮಾನ್ಯ ಷೇರುಗಳ ಅಧಿಕೃತ ಭಂಡವಳ ರೂಪಾಯಿ 50,00,000ನ್ನು ಷೇರು 1ರ ರೂ. 2/-ರಂತೆ ಐದು ಲಕ್ಷ ಸಾಮಾನ್ಯ ಷೇರುಗಳ ಭಂಡವಳ ರೂಪಾಯಿ 10,00,000ಕ್ಕೆ ಮತ್ತು ಷೇರು 1ರ ರೂ. 10/-ರಂತೆ 2,53,518 ಷೇರುಗಳ ತತ್ತ ಭಂಡವಳ ರೂಪಾಯಿ 25,35,180/-ನ್ನು ಷೇರು 1ರ ರೂ. 2/-ರಂತೆ 2,53,518 ಷೇರುಗಳ ಭಂಡವಳ ರೂಪಾಯಿ 5,07,036/-ಕ್ಕೆ ತಗ್ಗಿಸುವ ಕುರಿತು ತಾ. 30—11—54ರಲ್ಲು ಅದ ನಿರ್ಣಯವನ್ನು ಖಾಯಂ ಮಾಡುವ ಬಗ್ಗೆ ಸದ್ರಿ ಕಂಪೆನಿಯು ಮದ್ರಾಸು ಹೈಕೋರ್ಟಿಗೆ ತಾ. 3—1—1955ರಲ್ಲು ಮಾಡಿದ ಅರ್ಜಿ ತನ್ನಿಮಿತ್ತ ಸದ್ರಿ ಹೈಕೋರ್ಟಿನ ಒತ್ತಿಂದಿಂದ ತಾ. 28—2—1955ರಲ್ಲು ತನ್ನ ಬಗ್ಗೆ ಇಡೋಣಾಗಿಯದೆ ಎಂದು ಈ ಮೂಲಕ ನೋಟೀಸು ಕೊಡೋಣಾಗಿಯದೆ.

1-ಎ, ತೋಮಸ್ ರೋಡ್
ಟಿ. ನಗರ, ಮದ್ರಾಸು-17
7—2—1955

ಎ ನಾರಾಯಣ ಪೈ,
ಕಂಪೆನಿಪರ ಎಡ್ವೊಕೇಟ್.

ಶ್ರೀ ಶಿವರಾಮ ಕಾರಂತರ
ಕೆಲವು ಪುಸ್ತಕಗಳು

ಒಡಕುಮೂರ್ತಿದವರು	2—8—0
ಕುಡಿಯರ ಕೂಸು	3—4—0
ಚಿಗುರಿದ ಕನಸು	3—4—0
ಆಪೂರ್ವ ಪಶ್ಚಿಮ	4—0—0
ಕಲೆಯ ದರ್ಶನ	1—12—0
ನವೀನ ನಾಟಕಗಳು	1—8—0
ಬಾಲ್ಯದಿಂದ ಬೆಳಕು	1—8—0

ನವಭಾರತ ಪುಸ್ತಕ ಭಂಡಾರ.
ಉಡುಪಿ.

BHUVANENDR PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಕ ಗಲ್ಲಿ, ಹುಬ್ಬಳ್ಳಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೦-೨-೧೯೫೫	೨೩

ಗೋವೆಯೊಳಗೆ

ವಸಾಹತು ವಾದವನ್ನು ವಿರೋಧಿಸಿ, ಭಾರತದೊಡನೆ ಸೇರದೆ ಮತ್ತು ಸ್ವಾತಂತ್ರ್ಯಕ್ಕಾಗಿ ಪೋರ್ಚುಗೀಜ ಸರಕಾರದ ವಿರುದ್ಧ ಹೋರಾಟವನ್ನು ಹೂಡಿರುವ ಗೋವೆಯ ರಾಷ್ಟ್ರೀಯರು ಇದೇ ಫೆಬ್ರವರಿ ೧೭ನೇ ದಿನಾಂಕ ಅತಿ ದೊಡ್ಡ ಮಟ್ಟದ ಸತ್ಯಾಗ್ರಹವನ್ನು ಕೈಗೊಳ್ಳುವರೆಂದು ತಿಳಿದು ಬರುತ್ತದೆ. ಗೋವೆಯ ಪ್ರಮುಖ ರಾಷ್ಟ್ರೀಯರಲ್ಲಿ ಒಬ್ಬರಾದ ಡಾ. ಗ್ಯಾತೊಂಡೆಯವರನ್ನು ಕಳೆದ ವರ್ಷ ಫೆಬ್ರವರಿ ೧೭ರಂದು ಗಡೀಪಾರು ಮಾಡಿಲಿಸ್ಬನಿಗೆ ಒಯ್ದುದನ್ನು ನೆನೆದು ಅವರ ಹೆಸರಿನಿಂದ ಈ ಸತ್ಯಾಗ್ರಹವನ್ನು ಗೋವೆಯ ರಾಷ್ಟ್ರೀಯ ಕಾಂಗ್ರೆಸು ಸಂಘಟಿಸಿರುತ್ತದೆ. ಪೋರ್ಚುಗೀಜ ಸರಕಾರವು ಸತ್ಯಾಗ್ರಹದೇ ಮುಂತಾದ ಚಳವಳಗಳಲ್ಲಿ ಉದ್ಯುಕ್ತರಾದವರನ್ನು ತನ್ನ "ಹೊಸ ಕಾಯಿದೆ" ಗಳ ಬಲದಿಂದ ಅಗ್ರವಾಗಿ ಶಿಕ್ಷಿಸಲಾಗುವುದೆಂದೂ ಆದುದರಿಂದ ಅದಕ್ಕೆ ಯಾವುದೇ ರೀತಿಯ ಉತ್ತೇಜನೆಯನ್ನು ಕೊಡಲಾಗದೆಂದೂ ಭಾರತ ಸರಕಾರಕ್ಕೆ "ಎಚ್ಚರಿಕೆ"ಯ ಮಾತುಗಳನ್ನು ಪದೇ ಪದೇ ಹೇಳುತ್ತದೆ. ಆದರೆ, ಭಾರತ ಸರಕಾರವು ವಸಾಹತು ವಾದದ ವಿರುದ್ಧ ಹೋರಾಡುವ ಸ್ವಾತಂತ್ರ್ಯವು ವಸಾಹತುಗಳಲ್ಲಿನ ಜನರಿಗೆ ಇದ್ದೇ ಇದೆಯೆಂಬ ತನ್ನ ದೃಢವಾದ ವಿಶ್ವಾಸವನ್ನು ಪ್ರಕಟಿಸುವುದಕ್ಕೆ ಹಿಂಜರಿದಿಲ್ಲ. ಪೋರ್ತುಗಾಲದಿಂದ ಬಂದ "ಎಚ್ಚರಿಕೆ"ಯ ಪತ್ರಗಳಿಗೆ ಭಾರತವು ತಕ್ಕ ಉತ್ತರಗಳನ್ನಿತ್ತು ಹೊಸ ಕಾಯಿದೆಗಳ ಬಲದಿಂದ ಗೋವೆಯ ವಿಮೋಚನೆಗಾಗಿ ಆಂದೋಲನ ನಡೆಸುವ ಜನರನ್ನು ಗಡೀಪಾರು ಮಾಡುವುದೇ ಮುಂತಾದ ಕೆಲಸಗಳಲ್ಲಿ ಪ್ರವೃತ್ತರಾದರೆ, ಅದು ಭಾರತದಲ್ಲಿ ಉದ್ವೇಗಜನಕ ಪ್ರತಿಕ್ರಿಯೆಯನ್ನು ಮಾಡುವುದು ನಿಶ್ಚಯವೆಂದು ತಿಳಿಸಿರುತ್ತದೆ. ಭಾರತೀಯರು ಗೋವೆ ಮತ್ತಿತರ ಪೋರ್ತುಗೀಜ ವಸಾಹತುಗಳ ವಿಮೋಚನೆಯಾಗಬೇಕೆಂಬ ತಮ್ಮ ಸಂಕಲ್ಪವನ್ನು ಎಷ್ಟಕ್ಕೂ ತ್ಯಜಿಸಲು ಸಿದ್ಧರಿಲ್ಲ. ಇದನ್ನು ಭಾರತ ಸರಕಾರವು ಪದೇ ಪದೇ ಪೋರ್ತುಗಾಲಕ್ಕೆ ಮನಗಾಣಿಸಿಕೊಟ್ಟಿದ್ದಲ್ಲದೆ, ಬ್ರಿಟನು, ಫ್ರಾನ್ಸು ಮುಂತಾದವುಗಳ ವಸಾಹತು ವಾದವು ಶಿಥಿಲವಾಗುತ್ತ ಹೋದ ಉದಾಹರಣೆಯು ಮ್ಮ ಮುಂದಿಟ್ಟಿರುತ್ತದೆ ಆದಾಗ್ಯೂ ಅದನ್ನು ಲಕ್ಷ್ಯಕ್ಕೆತಾರದೆ ಪೋರ್ತುಗಾಲದ ಸರಕಾರವು ಉಗ್ರದಂಡನೆ ಮತ್ತು ಅನಾಗರಿಕ ವರ್ತನೆಯ ಭಯವನ್ನು ಹುಟ್ಟಿಸಿ, ಸತ್ಯಾಗ್ರಹಿಗಳನ್ನು ತಡೆಯಲು ವ್ಯರ್ಥ ಪ್ರಯತ್ನಿಸುತ್ತದೆ. ಸತ್ಯಾಗ್ರಹಿಗಳು ಅಷ್ಟು ಹೇಡಿಗಳಲ್ಲವೆಂದೂ ಪೋರ್ತುಗೀಜರ ಛಲನೆಯು ಅವರಲ್ಲಿ ಉತ್ಸಾಹವನ್ನೆ ಉಕ್ಕೇರಿಸುವುದೆಂದೂ ಅಳ್ವಾರೀಸರ ಅಭಿಪ್ರಾಯ ಅವರು ಭಾರತೀಯ ನಾಗರಿಕರು ಸಕ್ಕೆ ಗೋವೆಯ ಚಳವಳದಲ್ಲಿ ಭಾಗವಹಿಸಬೇಕೆಂದು ಹೇಳುತ್ತಾ ಇದಕ್ಕೆ ಭಾರತ ಸರಕಾರ ಅಕ್ಷೇಪಿಸುವುದಿಲ್ಲವೆಂದು ಪ್ರಧಾನ ಮಂತ್ರಿಗಳು ಹೇಳಿರುವುದಾಗಿಯೂ ತಿಳಿಸಿದ್ದಾರೆ. ಭಾರತೀಯ ಪ್ರಜೆಗಳು ಸ್ವೇಚ್ಛೆಯಿಂದ ಭಾಗವಹಿಸುವುದಕ್ಕೆ ಮುಂದೆ ಹೋಗಬೇಕೆಂದೇನು ಸರಕಾರದ ಅಭಿಪ್ರಾಯವಲ್ಲ—ಏಕೆಂದರೆ ಅದು ಭಾರತದ ನಿಲುಮೆಯನ್ನು ಕೆಲಮಟ್ಟಿಗೆ ಬಲಹೀನಗೊಳಿಸುತ್ತದೆ—ಆದರೆ ಗೋವಾಂತಕರು ಮಾತ್ರ ತಮ್ಮ ಚಳವಳವನ್ನು ಬಲಪಡಿಸುವುದು ಅಪೇಕ್ಷಣೀಯ ಗೋವೆಯಲ್ಲಿರುವ ಅಧಿಕಾರಿ ವರ್ಗಗಳ ಮನಸ್ಸು ಸಹ ಪೋರ್ತುಗೀಜರ ವಿರುದ್ಧ ತಿರುಗಿದೆಯೆಂದು ಈಚೆಗಿನ ವರದಿಗಳು ತಿಳಿಸುತ್ತವೆ ಅಲ್ಲಿಯ ಸರಕಾರದ ಉನ್ನತ ಅಧಿಕಾರಿಗಳೂ ಪೋಲೀಸರೂ ಪೋರ್ತುಗೀಜರ ಮಾತನ್ನು ಮೀರಿ ನಡೆಯುವಷ್ಟು ಮುಂದೆ ಹೋಗಿದ್ದು, ಇದು ಪೋರ್ತುಗಾಲವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿರುತ್ತದೆ. ಇದರೊಂದಿಗೆ, ಕರನಿರಾಕರಣೆ, ಶಾಲೆ ಮತ್ತು ಕಚೇರಿಗಳ ಬಹಿಷ್ಕಾರ ಮುಂತಾದ ಇತರ ಕ್ರಮಗಳನ್ನು ರಾಷ್ಟ್ರೀಯರು ಕೈಗೊಂಡರೆ ಪೋರ್ತುಗೀಜರು ಕಾಲ್ತೆಗೆಯಲೇ ಬೇಕಾಗುತ್ತದೆ. ಸೈನ್ಯ ಶಕ್ತಿ ಅವರ ಕೈಯನ್ನು ಎಷ್ಟಕ್ಕೂ ಬಲಪಡಿಸಲಾರದು. ಹೀಗೆ ಅಪಮಾನಕರ ರೀತಿಯಲ್ಲಿ ವಸಾಹತಿನಿಂದ ಓಡಿಹೋಗುವ ಕಾಲ ಬರುವುದಕ್ಕೆ ಮುಂಚೆಯೇ ಭಾರತದೊಡನೆ ಗೌರವಯುತವಾದ ಒಪ್ಪಂದಕ್ಕೆ ಅದು ಬರುವುದು ಶ್ರೇಯಸ್ಕರ.

ಜಿಲ್ಲೆಯ ಅಭಿವೃದ್ಧಿ

ಎರಡನೆಯ ಪಂಚವಾರ್ಷಿಕ ಯೋಜನೆಯ ಕುರಿತು ವಿಚಾರವಿನಿಮಯವನ್ನು ನಡೆಸಿ, ಪ್ರಾಸ್ತಾವಿಕ ಸಿದ್ಧತೆಗಳನ್ನು ಮಾಡುವ ಕಾಲವು ಈಗ ಸನ್ನಿಹಿತವಾಗಿದೆಯೆಂಬುದಕ್ಕೆ ಕೊಯಮುತ್ತೂರಿನ ಸಮೀಪ ಕಳೆದವಾರ ನಡೆಸಲಾದ ಗೋಷ್ಠಿಯೊಂದು ನಿದರ್ಶನ. ಇದರಲ್ಲಿ ಮದ್ರಾಸು, ಮೈಸೂರು, ಹೈದರಾಬಾದು, ಆಂಧ್ರ ಮತ್ತು ತಿರುವಾಂಕೂರು-ಕೊಚ್ಚಿ ರಾಜ್ಯಗಳ ಪ್ರತಿನಿಧಿಗಳೂ ಇತರ ಪ್ರಮುಖರೂ ಭಾಗವಹಿಸಿ ಅನೇಕ ಉಪಯುಕ್ತ ವಿಷಯಗಳ ಬಗ್ಗೆ ಪರ್ಯಾಲೋಚನೆ ಗೈದರು. ರಾಜ್ಯಗಳು ಪರಸ್ಪರ ಸಹಕರಿಸಿ, ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಾರ್ಯಕ್ರಮಗಳನ್ನು ಯಾವ ಪ್ರಕಾರ ಯಶಸ್ವಿಯಾಗಿ ನೆರವೇರಿಸಬಹುದೆಂದು ಅವರು ಚರ್ಚಿಸಿದರು. ದೊಡ್ಡ ಅಣೆಕಟ್ಟುಗಳು, ಜಲ ವಿದ್ಯುಚ್ಛಕ್ತಿಯ ಕೇಂದ್ರಗಳು-ಮುಂತಾದುವನ್ನು ಕಟ್ಟುವುದಕ್ಕೆ ರಾಜ್ಯಗಳಲ್ಲಿ ವಿಧಾಯಕ ಸಹಕಾರವಿರಬೇಕೆಂಬ ಮಾತಿನಲ್ಲಿ ಭಿನ್ನಾಭಿಪ್ರಾಯವಿಲ್ಲ. ಅಲ್ಲದೆ, ದಕ್ಷಿಣ ಭಾರತದ ಪ್ರಗತಿಯ ದೃಷ್ಟಿಯಿಂದಲೂ ಕೊಯಮುತ್ತೂರಿನ ಪರಿಷತ್ತಿನಲ್ಲಿ ಸಾಕಷ್ಟು ಉಪಯುಕ್ತವಾದ ಸೂಚನೆಗಳು ಮಂಡಿಸಲ್ಪಟ್ಟಿದ್ದು ಸತ್ಯ. ಆದರೆ ಯೋಜನೆಯ ಪ್ರಯೋಜನವು ಪ್ರತಿಯೊಂದು ಹಳ್ಳಿಗೂ ಲಭ್ಯವಾಗಬೇಕಾದರೆ, ಪ್ರಾದೇಶಿಕ ದೃಷ್ಟಿ ಕೋಣವನ್ನು ಮಾತ್ರ ಇಟ್ಟುಕೊಂಡರೆ ಸಾಲದು. ಜಿಲ್ಲೆಗಳ ಮಟ್ಟದಲ್ಲಿ—ಅದಕ್ಕೂ ಹೆಚ್ಚಾಗಿ ಸ್ಥಾನಿಕ ರೀತಿಯಲ್ಲಿ—ಯೋಜನೆಯು ಕಾರ್ಯಗತಗೊಳ್ಳುವುದು ಇಷ್ಟವಾಗಿದೆ. ಇದನ್ನು ಯೋಜನಾ ಆಯೋಗವು ಒಪ್ಪಿಕೊಂಡಿದೆ—ಆದುದರಿಂದ ಪ್ರತಿಯೊಂದು ಜಿಲ್ಲೆಗಳದೂ ಸ್ಥಳೀಯ ಅಭಿವೃದ್ಧಿ ಪ್ರಯತ್ನಗಳ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ಮಾಡಿಕೊಳ್ಳಲಾಗುವಂತೆ ಯೋಗ್ಯ ಮಾಹಿತಿಯನ್ನು ಈಗಿಂದೀಗಲೇ ಸಂಗ್ರಹಿಸಲು ಪ್ರಯತ್ನಿಸುವುದು ಯೋಗ್ಯ. ಕಳೆದ ವಾರ ಮಂಗಳೂರಿಗೆ ಆಗಮಿಸಿ ಯೋಜನೆಯ ಕಾರ್ಯಾಚರಣೆಯ ಕುರಿತು ಮಾತುಕತೆ ನಡೆಸಿದ ಶ್ರೀ ಹೆಜ್ಜಾಡಿಯವರು ದಕ್ಷಿಣ ಕನ್ನಡವು ಸಹ ತನ್ನ ಅಭಿವೃದ್ಧಿಯೋಜನೆಯನ್ನು ಸಿದ್ಧಪಡಿಸಬೇಕೆಂದು ಸೂಚಿಸಿದರು. ನಮ್ಮ ಜಿಲ್ಲೆಯ ಜನರು—ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳವರು—ಈ ವಿಷಯದಲ್ಲಿ ಉತ್ಸಾಹವನ್ನು ತೋರಿಸಬೇಕೆಂದು ನಾವು ಸೂಚಿಸುತ್ತೇವೆ. ಕೃಷಿ ವಿಭಾಗದಲ್ಲಿ ಹಳೆಯ ಕೆರೆ ಮತ್ತು ಭಾವಿಗಳಜೀರ್ಣೋದ್ಧಾರಮಾಡಿತೋಡು ಮತ್ತು ಸಣ್ಣ ಹೊಳೆಗಳಿಗೆ ಚಿಕ್ಕ ಅಣೆಕಟ್ಟುಗಳನ್ನು ರಚಿಸಬಹುದು; ನೆರೆ ತುಂಬಿ ಹರಿಯುವ ತೋಡುಗಳಿಗೆ ಸಂಕ, ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಶಾಲೆ, ಹತ್ತಿರ ಆಸ್ಪತ್ರೆಯಿಲ್ಲದಲ್ಲಿ ಆಸ್ಪತ್ರೆಗಳನ್ನು ತೆರೆಯಬಹುದು; ಅಲ್ಲದೆ, ವಿದ್ಯುಚ್ಛಕ್ತಿಯನ್ನುಪಯೋಗಿಸಿ ನೀರಾವರಿ ಮತ್ತು ಕೈಗಾರಿಕೆಗಳನ್ನು ವಿಸ್ತರಿಸಬಹುದು. ನಮ್ಮ ಅರಣ್ಯ ಸಂಪತ್ತನ್ನು ಜೆನ್ನಾಗಿ ಬಳಸಿಕೊಂಡರೆ, ಕೈಗಾರಿಕೆಗಳನ್ನು ತುಂಬ ಅಭಿವೃದ್ಧಿಗೊಳಿಸಲು ಸಾಧ್ಯವುಂಟು—ಜಿಲ್ಲೆಯ ಜನರು ತಮ್ಮ ಸಲಹೆ ಸೂಚನೆಗಳಿಂದಲೂ ನಿರ್ಧಾರದಿಂದಲೂ ಯೋಜನಾಧಿಕಾರಿಗಳಿಗೆ ನೆರವಾಗಬೇಕೆಂದು ವಿನಂತಿಸುತ್ತೇವೆ.

ವಾರದ ಮಹಾನುಭಾವ

ಭಾಗ್ಯಹೀನ ಪ್ರಧಾನಿ-ಶ್ರೀ ಮೆಂಡೆ ಫ್ರಾನ್ಸ್

ಭೀಷ್ಮ ಪ್ರತಿಜ್ಞೆಯನ್ನು ಕೈಗೊಳ್ಳುವವರು ಈ ಕಾಲದಲ್ಲಿಸಹ ಅನೇಕ ಜನರಿದ್ದಾರೆ; ಆದರೆ ಅಂಥಪ್ರತಿಜ್ಞೆಯನ್ನು ನಡೆಸಬಲ್ಲ ಸಮರ್ಥರು ಮಾತ್ರ ವಿರಳ. ಹೀಗೆ ವಿರಳರ ಸಾಲಿಗೆ ಸೇರುವ ಮಹಾನುಭಾವರಲ್ಲಿ ಫ್ರಾನ್ಸಿನ ಶಾಸನಸಭೆಯ ವಿಶ್ವಾಸವನ್ನು ಇದೇ ಆನೇದಿನಾಂಕಕಳೆದುಕೊಂಡ ಭಾಗ್ಯಹೀನ ಪ್ರಧಾನ ಮಂತ್ರಿ ಮಾನ್ಸಿಯರ್ ಪಿರೆ ಮೆಂಡೆ ಫ್ರಾನ್ಸ್ ಅಗ್ರಸ್ಥಾನವನ್ನು ಪಡೆಯುತ್ತಾರೆ. ಅವರಂಥ ಪ್ರಧಾನಿಯನ್ನು ಪಡೆದು, ರಾಜ್ಯ ಶಕಟವನ್ನು ಮುನ್ನಡೆಸುವುದಕ್ಕೆ ಫ್ರಾನ್ಸಿಗೂ ಲಭ್ಯಷ್ಟ ಬೇಕೆಂಬುದು ಸ್ಪಷ್ಟವಾಯಿತು.

ಒಳ್ಳೆಯವರಿದ್ದರೆ ಸಾಲದು, ಅವರು ತಮ್ಮ ಒಳ್ಳೆಯತನವನ್ನೂ ಬುದ್ಧಿ ಕೌಶಲ್ಯವನ್ನೂ ಪ್ರದರ್ಶಿಸುವುದಕ್ಕೆ ಉತ್ತಮ ಅವಕಾಶವೂ ಒದಗಿ ಬರಬೇಕು-ಫ್ರಾನ್ಸಿನಲ್ಲಿ ಯುದ್ಧೋತ್ತರದಲ್ಲಿ ಕಳೆದ ಜೂನು ತಿಂಗಳವರೆಗೆ ಇಪ್ಪತ್ತು ಮಂತ್ರಿ ಮಂಡಳಗಳು ಅಧಿಕಾರಕ್ಕೆ ಬಂದು, ಉರುಳಿ ಹೋದವು! ಹೆಚ್ಚೆಂದರೆ ಹದಿಮೂರು ತಿಂಗಳು, ಕಡಿಮೆಯೆಂದರೆ ಮೂರು ದಿನಗಳವರೆಗಷ್ಟೇ ಅಧಿಕಾರ ನಡೆಸಿದ ಮಂತ್ರಿ ಮಂಡಳಗಳಿವು. ಆದುದರಿಂದ ಇಪ್ಪತ್ತೊಂದನೆಯ ಮಂತ್ರಿ ಮಂಡಳವನ್ನು ಏಳೂವರೆ ತಿಂಗಳುಗಳಿಗೆ ಹಿಂದೆ ರಚಿಸಿದ ಮೆಂಡೆ ಫ್ರಾನ್ಸರೂ ಅಧಿಕಾರ ತ್ಯಜಿಸುವ ದಿನ ಬಹಳ ದೂರವಿರಲಾರದೆಂದು ಅಂದೇ ಎಲ್ಲರೂ ಭಾವಿಸಿದ್ದರು.

ಸ್ವತಃ ಮೆಂಡೆ ಫ್ರಾನ್ಸರೂ ಅಧಿಕಾರ ಸ್ಥಿರವಾಗಿ ಅಂಟಿಕೊಂಡೀತೆಂದು ನಂಬಿದವರಲ್ಲ—ಏಕೆಂದರೆ ಫ್ರಾನ್ಸಿನ ಯುದ್ಧೋತ್ತರ ರಾಜಕೀಯ ಸ್ಥೈರ್ಯಕ್ಕೆ ಅದು ಒಪ್ಪಿದ ಸಂಗತಿಯಲ್ಲ. ಇಂದಿನ ಫ್ರೆಂಚ್ ಶಾಸನ ಸಭೆಯಲ್ಲಿ ಅರವಾಸಿಯಷ್ಟಾದರೂ ಜನರು ಉರುಳಿ ಹೋದ ಮಂತ್ರಿ ಮಂಡಳಗಳ ಸದಸ್ಯರೇ ಆಗಿದ್ದಾರೆ. ಇಪ್ಪತ್ತೆರಡನೆಯ ಮಂತ್ರಿ ಮಂಡಳ ರಚಿಸಲು ಅಧ್ಯಕ್ಷರ ಅಪ್ಪಣೆಯಂತೆ ಪ್ರಯತ್ನಿಸುತ್ತಿರುವ ಪಿನೆಯವರಾದರೂ ಹಿಂದೊಮ್ಮೆ ಮಂತ್ರಿ ಮಂಡಳ ರಚಿಸಿ, ಹಿಂದಿನಿಂದ ಅವಿಶ್ವಾಸ ಗೊತ್ತುವಳಿಗೆ ಬಲಿ ಬಿದ್ದವರೇ ನಿಜ ಮೆಂಡೆ ಫ್ರಾನ್ಸರಿಗೆ ಇದೆಲ್ಲ ಗೊತ್ತಿರದಿದ್ದ ವಿಷಯವಲ್ಲ. ಆದುದರಿಂದ ಒಂದು ತಿಂಗಳೊಳಗೆ ಇಂಡೋ ಚೀನದಲ್ಲಿ ಯುದ್ಧ ವಿರಾಮ ಸಾಧಿಸುತ್ತೇನೆ; ಇಲ್ಲವಾದರೆ, ನೀವು ಅವಿಶ್ವಾಸ ಗೊತ್ತುವಳಿ ತರುವುದಕ್ಕೆ ಮುಂಚೆ ನಾನೇ ರಾಜೀನಾಮೆ ಕೊಡುತ್ತೇನೆ ಎಂದಿದ್ದರು.

ಪ್ರಸಂಚ ಭೀಷ್ಮ ಪ್ರತಿಜ್ಞೆ ಎಂದು ಕರೆದದ್ದು ಇದನ್ನೆ—ಕೊನೆಯ ದಿನದ ಅವಧಿ ಮುಗಿಯುವ ಮಧ್ಯ ರಾತ್ರಿಯ ಹೊತ್ತಿಗೆ ಸರಿಯಾಗಿ ಇಂಡೋ ಚೀನದ ಯುದ್ಧ ವಿರಾಮ ಒಪ್ಪಂದಕ್ಕೆ ಸಹಿ ಹಾಕಿ, ಮೆಂಡೆ ಫ್ರಾನ್ಸರು ಈ ಪ್ರತಿಜ್ಞೆಯನ್ನು ಪೂರೈಸಿದರು. ಜಗತ್ತಿನ ಎಲ್ಲ ಮುತ್ಸದ್ದಿಗಳನ್ನೂ ತಮ್ಮ ಕಾರ್ಯಪಟುತ್ವದಿಂದ ಮೆಚ್ಚಿಸಿದರು, ಬೆಚ್ಚಿಸಿದರು ಇನ್ನೂ ನಲ್ವತ್ತೆಂಟು ನಡೆಯುತ್ತಿರುವ ಈಉತ್ಸಾಹಿಯ ಕೈಯಲ್ಲಿ ಫ್ರಾನ್ಸು ಯುದ್ಧದ ಅನಾಹುತದಿಂದ ಕೊನೆಗೊಮ್ಮೆ ಮುಕ್ತವಾಯಿತು. ಪಶ್ಚಿಮ ಜರ್ಮನಿಯ ಸೈನ್ಯವು ಐರೋಪ್ಯ ರಕ್ಷಣಾವೂಹ್ಯದಲ್ಲಿ ಸೇರದೆ ಹೊಂದುವಂತೆ ಅವರು ಶಾಸನ ಸಭೆಯನ್ನು ಒಲಿಸಿಕೊಂಡರು. ಭಾರತದಲ್ಲಿರುವ ಫ್ರೆಂಚರ ಸ್ವಾತ್ಯಕ್ಕಗಳನ್ನು ಶಾಂತ ರೀತಿಯಲ್ಲಿ ಹಸ್ತಾಂತರಮಾಡಿ, ಇತಿಹಾಸದ ಹೊಸ ಪುಟ್ಟವನ್ನೇ ಬರೆದರು.

ಇದಾವುದೂ ಅಸ್ಥಿರವಾದ ರಾಜಕೀಯ ವಾತಾವರಣದ ಮೇಲೆ ಶಾಶ್ವತ ಪರಿಣಾಮಮಾಡಲಿಲ್ಲ— ಇಂಡೋಚೀನವು ಕೈ ಬಿಟ್ಟು ಜೋದುದನ್ನು ಕಂಡ ಫ್ರಾನ್ಸಿನ ವಸಾಹತು ವಾದಿಗಳ ಮನಸ್ಸು ತುಂಬ ತಲ್ಲಣಗೊಂಡಿತು; ಭಾರತದ ವಸಾಹತುಗಳ ಮೇಲಿನ ಹಿಡಿತವೂ-ತಪ್ಪಿದುದ

ರಿಂದ ಅದು ಮತ್ತಷ್ಟು ಸಂತ್ರಸ್ತವಾಯಿತು; ಮೆಂಡೆ ಫ್ರಾನ್ಸರು ಉತ್ತರ ಆಫ್ರಿಕದ ಮೊರೊಕ್ಕೊ, ಟ್ಯೂನೀಸಿಯಾ ಮತ್ತು ಅಲ್ಜೀರಿಯಗಳೆಂಬ ಮೂರು ಫ್ರೆಂಚರ ಅಧಿಕಾರ ನಡೆಯುವ ರಾಜ್ಯಗಳ ಕುರಿತ್ತು ವಹಿಸಿದ ಘೋರಣೆ ಸಾಮ್ರಾಜ್ಯ ಶಾಹಿತ್ವದ ಪುಗಸ್ಪರ್ತರಿಗೆ ತುಂಬ ಕಹಿಯಾಯಿತು. ಅದರ ಫಲವೇ—ಮೊನ್ನೆ ಸ್ವೀಕೃತವಾದ ಅವಿಶ್ವಾಸ ಸೂಚಕ ಗೊತ್ತುವಳಿ: ನಿಮ್ಮ ಉತ್ತರ ಆಫ್ರಿಕದ ಘೋರಣೆ ನಮಗೆ ಸಮ್ಮತವಿಲ್ಲ ಎಂದದು ಮೆಂಡೆ ಫ್ರಾನ್ಸರಿಗೆ ಹೇಳಿತು.

ವಸಾಹತುಗಳ ಕುರಿತು ಮೆಂಡೆ ಫ್ರಾನ್ಸರು ಸಹಾನುಭೂತಿಯಿಂದ ನಡೆದುಕೊಂಡಿದ್ದರು— ಹಿಂದಿನ ಫ್ರೆಂಚ್ ಮಂತ್ರಿ ಮಂಡಲದ ತಪ್ಪುಗಳನ್ನು ಪ್ರತಿಪೈಗೆ ಧಕ್ಕೆ ಬಾರದಂತೆ ತಿದ್ದಿಕೊಂಡು, ಅಲ್ಲಿಯ ಸ್ವಾತಂತ್ರ್ಯಹೋರಾಟವನ್ನು ಮಾನವೀಯಭಾವನೆಯಿಂದ ಕಾಣಲು ಅವರು ಪ್ರಯತ್ನಿಸಿದ್ದರು. ಯೆಹೂದಿಗಳ ವಂಶದಲ್ಲಿಜನಿಸಿದಅವರ ದಯಾಮಯವರ್ತನೆ ಆಶ್ಚರ್ಯ ಹುಟ್ಟಿಸುವಂತಿದೆಯೆಂದರೆ ತಪ್ಪಲ್ಲ. ತನ್ನ ಇಪ್ಪತ್ತೆರಡನೇ ಪ್ರಾಯದಲ್ಲಿಯೇ ವಕೀಲರಾಗಿ, ಫ್ರಾನ್ಸಿನ ಅತಿ ಚಿಕ್ಕ ಡಿಪ್ಯೂಟಿಗಳಾಗಿ, ಯುದ್ಧ ಕಾಲದಲ್ಲಿ ವೈಮಾನಿಕ ಪಡೆಯ ಸದಸ್ಯನಾಗಿ ಅವರುಗಳಿಸಿದ ಖ್ಯಾತಿಯೇನೂ ಕಡಿಮೆ ಇರಲಿಲ್ಲ. ಆದರೆ ರೀಟಾ ಹೇವರ್ತಳ ಮದುವೆಯ ಮೋಜಿಗಿಂತಲೂ ದೊಡ್ಡ ಸಂಭ್ರಮವೆನಿಸಿದ, ವಿಲಾಸ ಭೂಮಿಯಾದ ಫ್ರಾನ್ಸಿನ ಜಾಯಮಾನಕ್ಕೆ ಹೇಳಿಸಿದ, ಮಂತ್ರಿ ಮಂಡಳದ ಉರುಳಾಟದಲ್ಲಿ ಎಲ್ಲ ಬಣ್ಣವನ್ನೂ ಮಸಿ ಸುಂಗಿತೆಂಬಂತೆ ಅವರ ಯೋಗ್ಯತೆಗಳನ್ನು ಅವಿಶ್ವಾಸಗೊತ್ತುವಳಿ ಮರೆಯಲ್ಲಿಟ್ಟಿತು.

ಒಳ್ಳೆಯ ಕೆಲಸಗಳನ್ನು ಮುಂದರಿಸಿಕೊಂಡು ಹೋಗುವವರಿರಬೇಕು—ಮುಂದಿನ ಮಂತ್ರಿಮಂಡಳ ಹಾಗೆ ಮಾಡುವುದೆಂದು ಆಶಿಸುತ್ತೇನೆ ಎಂದು ಈ ರಾಷ್ಟ್ರಭಕ್ತರು ಸುದ್ದಿಗಾರರ ಮುಂದೆ ತಮ್ಮ ಮನದಾಶೆಯನ್ನು ವ್ಯಕ್ತಪಡಿಸಿದರು. ತಮ್ಮ ವೈಯಕ್ತಿಕ ಜೀವನದ ಮಟ್ಟಿಗೆ ಪ್ರಧಾನ ಮಂತ್ರಿ ಸ್ಥಾನ ತಪ್ಪಿದುದರಿಂದ ಅವರಿಗೇನೂ ಅಷ್ಟು ದೊಡ್ಡ ಆಘಾತವಾದಂತೆ ಕಾಣಲಿಲ್ಲ—ಅವರಿಗೆ ಮುದ್ದು ಹೆಂಡತಿ ಇದ್ದಾಳೆ; ಇಬ್ಬರು ಮಕ್ಕಳಿದ್ದಾರೆ; ಸುಖವಾಗಿ ದಿನ ಹೋಗುತ್ತದೆ. ಫ್ರಾನ್ಸಿನ ಉದ್ವೇಗಜನಕ ವಾತಾವರಣದಲ್ಲಿದರೂ ಮಾದಕಪೇಯಗಳನ್ನು ಮುಟ್ಟದೆಹಾಲನ್ನೆ ಸೇವಿಸುವ, ಇತರ ಪ್ರಜೆಗಳೂ ಹಾಗೆ ಮಾಡುವಂತೆ ನೋಡುವ ಜೀವ ಶಾಸನಸಭೆಯ ಸದಸ್ಯರ ಹುಚ್ಚು ವರ್ತನೆಗೆ ಮಾತ್ರ ಮರುಗುತ್ತದೆ.

ಮೆಲೆಂಕಾಫರ ರಾಜೀನಾಮೆ

ರಕ್ಷಣಾ ಮಂತ್ರಿ ಬಲ್ಗೇನಿನ್ನರು ಹೊಸ ಪ್ರಧಾನಿ

ರಶಿಯದ ಪ್ರಧಾನ ಮಂತ್ರಿ ಸ್ಥಾನವನ್ನು ಸ್ಟಾಲಿನ್ನರ ಮರಣಾ ನಂತರ ವಹಿಸಿದ್ದ ಮೆಲೆಂಕಾಫರು ತನ್ನ ಹುದ್ದೆಗೆ ಮೊನ್ನೆ ದಿನಾಂಕ ಆರಂದು ರಾಜೀನಾಮೆಯನ್ನು ಸಲ್ಲಿಸಿದರು. ಎಂದಿಗಿಂತ ನಾಲ್ಕಾರು ವಾರಗಳ ಮೊದಲೇ ತನ್ನ ಸಭೆಯನ್ನು ನೆರೆಯಿಸಿದ್ದ ಸುಪ್ರೀಂ ಸೋವಿಯೆಟಿಗೆ ಮೆಲೆಂಕಾಫರು ತಮ್ಮ ರಾಜೀನಾಮೆಯನ್ನು ಒಪ್ಪಿಸಿದರೆಂದೂ ಅದನ್ನು ಸಭೆಯು ಸ್ವೀಕರಿಸಿ, ಅವರ ಸ್ಥಾನಕ್ಕೆ ರಕ್ಷಣಾ ಮಂತ್ರಿ ಮಾರ್ಶಲ್ ಬಲ್ಗೇನಿನ್ನರನ್ನು ಆರಿಸಿತೆಂದೂ ತಿಳಿದು ಬರುತ್ತದೆ. ತಮ್ಮ ರಾಜೀನಾಮೆಯ ಪತ್ರದಲ್ಲಿ ಮೆಲೆಂಕಾಫರು ರಾಜ್ಯ ನಿರ್ವಹಣೆಯಲ್ಲಿ ತಮಗೆ ಸಾಕಷ್ಟು ಅನುಭವವಿಲ್ಲವೆಂದು ಮನವರಿಕೆಯಾಯಿತಾಗಿಯೂ ಕೃಷಿ ವಿಭಾಗದಲ್ಲಿ ನಡೆದ ಅನೇಕ ತಪ್ಪುಗಳಿಗೆ ತಾನು ಹೊಣೆಗಾರನಿರುವುದಾಗಿಯೂ ಹೇಳಿ, ತಮಗಿಂತ ಹೆಚ್ಚು ಯೋಗ್ಯತಾವಂತನು ಅಧಿಕಾರಕ್ಕೆ ಬರುವಂತೆ ರಾಜೀನಾಮೆ ಕೊಡುತ್ತಿರುವುದಾಗಿ ತಿಳಿಸಿದರು ಬುದ್ಧಿಸ್ವಾಸ್ಥ್ಯವಿಲ್ಲದ ಜನರುಮಾತ್ರತಮ್ಮ ರಾಜೀನಾಮೆಯ ಗೂಢದ ಬಗ್ಗೆ ಊಹಾಪೋಹ ನಡೆಸಿಯಾರು—ಆದರೆ ತಾನು ಮಾತ್ರ ತನಗೆ ಒಪ್ಪಿದ ಯಾವುದೇ ಬೇರೆ ಹುದ್ದೆಯನ್ನು ವಹಿಸಿಕೊಳ್ಳಲು ಸಿದ್ಧನಿದ್ದೇನೆ ಎಂದು ಮೆಲೆಂಕಾಫರು ಸ್ಪಷ್ಟೀಕರಣವನ್ನು ಕೊಟ್ಟರು.

ಸಮ್ಮೇಳನದ ಮುಕ್ತಾಯ

ಲಂಡನಿನಲ್ಲಿ ಸೇರಿದ್ದ ಕಾಮನ್‌ವೆಲ್ತ್ ಪ್ರಧಾನ ಮಂತ್ರಿಗಳ ಸಮ್ಮೇಳನವು ದಿನಾಂಕ ಆರಂದು ತನ್ನ ೯ ದಿನಗಳ ಅಧಿವೇಶನವನ್ನು ಮುಗಿಸುವುದಕ್ಕೆ ಮುನ್ನ ಮೆಲೆಂಕಾಫರ ರಾಜೀನಾಮೆಯ ವಿಷಯವನ್ನು ಚರ್ಚಿಸಿತು ಸಮ್ಮೇಳನಾಂತ್ಯದಲ್ಲಿ ಎರಡು ಪ್ರಕಟನೆಗಳನ್ನು ಹೊರಡಿಸಲಾಯಿತು- ಇದರಲ್ಲಿ ಭಾರತವು ಬದ್ಧವಾಗಿರುವ ಮೊದಲನೆ ಪ್ರಕಟಣೆಯು ಅಂತಾರಾಷ್ಟ್ರೀಯ ಪರಿಸ್ಥಿತಿಯು ತ್ವೇಷಮಯವಾಗುತ್ತಿರುವುದನ್ನು ಕಂಡು ವಿಷಾದಿಸಿ, ಕಾಮನ್‌ವೆಲ್ತ್ ಪ್ರಧಾನಿಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಸಾರುತ್ತದೆ—ಇದರಲ್ಲಿ ದೂರ ಪೂರ್ವದ ಅವಾಯಕರ ವಾತಾವರಣದ ಕುರಿತು ಕಳವಳವನ್ನು ಪ್ರಕಟಿಸಿದ್ದಲ್ಲದೆ ಶಾಂತಿಯುತವಾದ ರೀತಿಯಲ್ಲಿ ಸಮಸ್ಯೆ ಪರಿಹಾರವಾಗುವಂತೆ ಉಪಾಯಗಳನ್ನು ತ್ವರಿತದಲ್ಲಿಯೇ ಹುಡುಕಬೇಕೆಂದೂ ಕದನವು ಕೂಡಲೇ ನಿಲ್ಲಬೇಕೆಂದೂ ಹೇಳಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ರಕ್ಷಣಾಕ್ರಮಕ್ಕೆ ಸಂಬಂಧಿಸಿದ ವಿಚಾರಗಳನ್ನು ಎರಡನೆ ಪ್ರಕಟನೆ ಒಳಗೊಂಡಿದ್ದು, ಅದರಲ್ಲಿ ಅಣುಶಕ್ತಿಯು ರಕ್ಷಣೆಯ ಮುಖ್ಯ ಸಾಧನವೆಂಬ ವಿಶ್ವಾಸವನ್ನು ಪ್ರಕಟಿಸಲಾಗಿದೆ. ಆದರೆ ಭಾರತವು ಇದನ್ನು ಒಪ್ಪುವುದಿಲ್ಲ—ಸಮ್ಮೇಳನದಲ್ಲಿ ನೆಹರುಗಳು ಅಣುಶಸ್ತ್ರಗಳ ಉತ್ಪಾದನೆಯನ್ನೂ ಪ್ರಯೋಗವನ್ನೂ ಸ್ಪಷ್ಟ ಮಾತುಗಳಲ್ಲಿ ಖಂಡಿಸಿದರು.

ಉಡುಪಿ

ಮಂತ್ರಿ ಸುಬ್ರಹ್ಮಣ್ಯಂರವರು—

ಉಡುಪಿಯಲ್ಲಿ ಮೊಕ್ತಾಂ ಮಾಡಿದಾಗ ಅವರನ್ನು ಪಂಟರೇಂಡ್ ಬಂಗ್ಲೆಯಲ್ಲಿ ಶ್ರೀಗಳಾದ ಕೆ. ಜೆ. ಬಲ್ಲಾಳ, ಎ. ಲಕ್ಷ್ಮೀನಾರಾಯಣ ರಾವ್‌ಮೊದಲಾದವರು ಭೇಟಿಯಾಗಿ ಉಡುಪಿಯಲ್ಲೊಂದು ಸರ್ ಕೋರ್ಟ್ ತೆರೆಯುವ ಅವಶ್ಯಕತೆಯನ್ನು ಸೂಚಿಸಿದರು. ಮಂತ್ರಿಗಳು ತಾ. 1ರಲ್ಲಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ ಕಾಲೇಜಿನ ಚಟುವಟಿಕೆಗಳನ್ನು ಕಂಡು ತುಂಬಾ ಸಂತೋಷಪಟ್ಟರು. ಅಲ್ಲದೆ ವಿದ್ಯಾರ್ಥಿಗಳೇ ಈ ಕಾಲೇಜು ಸ್ಥಾಪನೆಗೆ ಕಾರಣೀಭೂತರಾದುದರಿಂದ ಅವರಿಗೂ ಉಜ್ವಲ ಭವಿಷ್ಯವನ್ನು ಕೋರಿದರು.

ಸತ್ಕಾರ ಸಮಾರಂಭ:—ಉಡುಪಿ ಇಗರ್ಜಿಯ ರೆ| ಪಾ| ಎ. ಜೆ. ಶಿಲ್ವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟ ಕಾರಣ ಅವರಿಗೆ ವಿದಾಯ ಕೀಯುವ ಸತ್ಕಾರಕೂಟವು ಚರ್ಚ್‌ವಾರದಲ್ಲಿ ವಿಜೃಂಭಣೆಯಿಂದ ತಾ. 6ರಲ್ಲಿ ಸಂಜೆ ಜರಗಿತು. ಶ್ರೀ ರೋಕಿಫೆರ್ನಾಂಡೀಸರು ಸಮಾಜದ ಪರವಾಗಿ ಮಾನಪತ್ರವನ್ನೂ ಬಿನ್ನವತ ಗಡಿಯಾರವನ್ನೂ ಅರ್ಪಿಸಿದರು. ಶ್ರೀ ಎನ್. ಸೀತಾರಾಮ ಕಾಮತ್ ಮೊದಲಾದವರ ಭಾಷಣಗಳಾದ ಮೇಲೆ ಶ್ರೀ. ಜೆ. ಸಿ. ರೇಗೋರವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಸಂಗೀತ, ವಿವಿಧ ವಿನೋದಾದಿ ಕಾರ್ಯಕ್ರಮಗಳಾದುವು.

ಬಿ. ಸಿ. ಜಿ. ಡಾಕು

ಕ್ಷಯ ರೋಗ ನಿರೋಧಕ್ಕಾಗಿ ಮದ್ರಾಸು ಸರಕಾರದವರು ಕೈಕೊಂಡ ಬಿ. ಸಿ. ಜಿ. ಡಾಕು ಹಾಕುವ ಪ್ರಯೋಗವನ್ನು ಇದೇ ತಾ 15 ರಿಂದ 18 ರ ವರೆಗೆ ಉಡ್ಡಿಯಲ್ಲಿ ಕೈಗೊಳ್ಳಲಾಗುವುದು. ಇದಕ್ಕಾಗಿ 6 ಹೆಲ್ತ್ ಇನ್ಸ್‌ಪೆಕ್ಟರುಗಳು 2 ಪಂಗಡಗಳು ಉಡ್ಡಿಗೆ ಬರಲಿರುವುದು.

ಪ್ರಥಮವಾಗಿ ತಾ 15, 16 ಮತ್ತು 17 ರಂದು ಕ್ಷಯರೋಗ ನಿರೋಧಕ ಶಕ್ತಿ ಇರುವರೋ ಇಲ್ಲವೋ ಎಂದು ಪರೀಕ್ಷೆನಡೆಯುವುದು. ಅನಂತರ ತಾ 18, 19 ರಂದು ಪ್ರತಿಭಟನಾಶಕ್ತಿ ಇಲ್ಲದವರಿಗೆ ಡಾಕುಹಾಕಲಾಗುವುದು

ಇದೇ ಮುನಿಸಿಪಾಲಿಟಿಯಲ್ಲಿ ಸುಮಾರು 600 ಜನರಿಗೆ ಒಂದು ಕೇಂದ್ರದಂತೆ 46 ಕೇಂದ್ರಗಳನ್ನು ಸ್ಥಾಪಿಸಿ ಡಾಕು ಹಾಕುವ ಕಾರ್ಯ ನಡೆಸಲಾಗುವುದು ಜನರು ಒಮ್ಮೆ ಪರೀಕ್ಷೆಗಾಗಿ ಮತ್ತೊಮ್ಮೆ ಡಾಕುಹಾಕಿಸಿಕೊಳ್ಳುವ ಬಗ್ಗೆ ಸೂಚನೆಕಾಗುವುದು. ಬೆಳಿಗ್ಗೆ 7 ರಿಂದ 12 ಗಂಟೆಯ ವರೆಗೂ, ಮಧ್ಯಾಹ್ನ 3 ರಿಂದ 5 ರ ವರೆಗೂ, ಈ ಕಾರ್ಯವು ಎಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು.

ಈ ಪ್ರಯೋಗವು ಕ್ಷಯರೋಗ ಚಿಕಿತ್ಸೆಯಲ್ಲ. ಇದುಕ್ಷಯರೋಗವನ್ನು ನಿರೋಧಿಸುವುದಕ್ಕಾಗಿರುತ್ತದೆ. ಅನೇಕ ದೇಶಗಳಲ್ಲಿ ಇದರಿಂದ ಕ್ಷಯರೋಗವು ತುಂಬಾ ಕಡಿಮೆಯಾಗಿದೆ.

ಬಿ. ಸಿ. ಜಿ. ಡಾಕಿನಿಂದ ಯಾವ ತೊಂದರೆಯಿಲ್ಲ. ಈ ಡಾಕು ಧನ್ವಾರ್ಥ ಹಾಕಲ್ಪಡುತ್ತದೆ. ಎಂದು ಮುನ್ಸಿಪಲ್ ಆರೋಗ್ಯ ಶಾಖೆಯ ವಿನಂತಿ.

ಕಂದಾಯ ಮಂತ್ರಿ: ಮದರಾಸು ಸರಕಾರದ ಕಂದಾಯ ಮಂತ್ರಿ ಮಾಣಿಕ್ಯವೇಲು ನ್ಯಾಕರರು ತಾ 3 ರಲ್ಲು ಸಂಜೆ ಉಡ್ಡಿಗೆ ಆಗಮಿಸಿದರು. ನಗರ ಸಭೆಯ ಮಾನಪತ್ರವನ್ನು ಸಭಾಪತಿ ಡಾ| ಪಿ. ವಿ. ಶ್ಯಾಸರಾಯರು ಮಾನ್ಯ ಮಂತ್ರಿಗಳಿಗೆ ಒಪ್ಪಿಸಿದರು. ಆಬರಲ್ಲಿ ಈ ನಗರ ಸಭೆಗೆ ಹೆಚ್ಚಿನ ಕೊರತೆಯಿರುವುದರಿಂದ ಒಂದು ಲಕ್ಷ ರೂಪಾಯಿ ಧನ ಸಹಾಯ ಬೇಡಲಾಗಿತ್ತು. ಮಂತ್ರಿಗಳು ಉತ್ತರವೀಯುತ್ತಾ ದೊಡ್ಡ ಮೊತ್ತದ ಸಹಾಯವನ್ನು ಸರಕಾರವು ಕೊಡುವುದು ಸಂದೇಹಾಸ್ಪದವೆಂದು ಹೇಳಿ ಅದಕ್ಕೆ ಬದಲಾಗಿ ಸಾಲದ ಬೇಡಿಕೆ ಬಂದಲ್ಲಿ ಆ ಕುರಿತು ಸಹಾನುಭೂತಿ ತೋರಿಸಲು ಸಾಧ್ಯವಾಗಬಹುದೆಂದರು. ಮುನಿಸಿಪಾಲಿಟಿಯೊಳಗಣ ಸರಕಾರಿ ಬಾಲಿಜಾಗವನ್ನು ನಗರ ಸಭೆಗೆ ಬಿಟ್ಟುಕೊಡುವ ಕುರಿತು ಪರಿಶೀಲಿಸಲಾಗುವುದೆಂದರು. ಶ್ರೀ ಟಿ. ಎ. ಪೈ ಎಂ. ಎಲ್. ಎ; ರವರು ನಗರ ಸಭೆಯ ಕಷ್ಟವನ್ನು ವಿವರಿಸಿದರು ಡಾ| ಕೆ. ಎಲ್. ಐತಾಳರು ಮಂತ್ರಿಗಳಿಗೆ ಧನ್ಯವಾದಗಳನ್ನಿತ್ತರು.

ರಾತ್ರಿ ಮಂತ್ರಿಗಳು ಮಣಿಪಾಲಕ್ಕೆ ಹೋಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಶ್ರೀ ಎಸ್. ಎಸ್. ಶಿರಾಲೆಯವರು ದಾನವಿತ್ತ ಕಸ್ತೂರ್ಬಾ ಗಾಂಧಿಯವರ ಭಾವ ಚಿತ್ರ ಅನಾವರಣಮಾಡಿದರು. ಕಾಲೇಜಿನ ಅಭಿವೃದ್ಧಿಯನ್ನು ಕಂಡು ಹರ್ಷಚಿತ್ತರಾದ ಮಂತ್ರಿಗಳು ಇಲ್ಲಿಯ ವಿದ್ಯಾರ್ಥಿನಿಯರು ಬಾಹ್ಯಾಕಾಶ ಬರಗಳಲ್ಲಿ ಮಗ್ನರಾಗದೆ ಕಸ್ತೂರ್ಬಾ ಗಾಂಧಿಯವರಂತೆ ಆಗಲು ಪ್ರಯತ್ನಿಸಬೇಕೆಂದು ಆಶಿಸಿದರು.

ಶಾಲಾವರ್ಧಂತಿ— ಉಡುಪಿ ಬೋರ್ಡು ಹೈಸ್ಕೂಲಿನ ಶಾಲಾ ವರ್ಧಂತಿ ಸಮಾರಂಭವು ತಾ 4 ರಲ್ಲು ಸಂಜೆ ಸೀಪಲ್ಸ್ ಹಾಲಿನಲ್ಲಿ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ನ ಜಿಲ್ಲಾ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾ ನಂತರ ಸ್ವಾಗತಾಧ್ಯಾಯ ಶ್ರೀ ಬಿ. ಅನಂತ ಕೃಷ್ಣ ಸಾಮುಕರು ಶಾಲೆಯ ಸರ್ವತೋಮುಖ ಅಭಿವೃದ್ಧಿಪರ ವರದಿಯನ್ನೋದಿದರು. ಸೋದೆ ಮಠದ ಪಟ್ಟದ ಶ್ರೀ ಪಿ. ಶ್ರೀಪತಿ ಆಚಾರ್ಯರು ಶಾಲಾ ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆಯಾದ ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಪ್ರಗತಿಸರ ಅಭಿವೃದ್ಧಿಯನ್ನು ಕಂಡು ಸಂತೋಷ ವ್ಯಕ್ತಪಡಿಸಿದರಲ್ಲದೆ ಈ ಶಾಲೆಯು ಆದರ್ಶ ಸಂಸ್ಥೆಯಾಗಿದ್ದುಕೊಂಡು ಇಲ್ಲಿ ಹೊರಹೋಗುವ ವಿದ್ಯಾರ್ಥಿಗಳು ಉಚ್ಚಮಟ್ಟದ ಭಾರತೀಯರಾಗಲೆಂದು ಹಾರೈಸಿದರು. ಶಾಲಾ ವಿದ್ಯಾರ್ಥಿ ಸುಬಿಂಡೆ ಶ್ರೀ ಶ್ರೀನಿವಾಸ ರಾಯರು ವಂದನೆಗಳನ್ನಿತ್ತರು. ರಾತ್ರಿ ಜನಮನರಂಜನ ಕಾರ್ಯಕ್ರಮಗಳಾದುವು.

ಉಪಚುನಾವಣೆ ತೆಂಕಪೇಟೆ ಮತ್ತು ಅಂಬ್ಲಪಾಡಿ ವಾರ್ಡಗಳ ಉಪಚುನಾವಣೆಯ ಹುರಿಯಾಳುಗಳಿಂದ ಇದೇ ತಾ 15ರಿಂದ 17 ರ ತನಕ ನಾಮಪತ್ರ ಸ್ವೀಕಾರ, ತಾ 18ರಲ್ಲು ಪರಿಶೋಧನೆ, ಮಾರ್ಚ ತಾ11ರಲ್ಲು ಮತದಾನ ನಡೆದು ಅದೇ ಮತಗಣನೆ ನಡೆಯುವುದೆಂದು ಇಲೆಕ್ಷನ್ ಆಫೀಸರ್ ಅದ ಕೃಷ್ಣಶನು ತಿಳಿಸುತ್ತಾರೆ.

ಕಲಾವೃಂದದಲ್ಲಿ—ಇದೇ ತಾ. 15ರಲ್ಲಿ ನಡೆಯಲಿರುವ ಮುದ್ದಣ್ಣಸ್ಮಾರಕೋತ್ಸವದ ಅಂಗವಾಗಿ ತಾ. 13ನೆ ಆದಿತ್ಯವಾರ ಸಂಜೆ ಕಲಾವೃಂದದಲ್ಲಿ ಮುದ್ದಣ್ಣಸ್ಮಾರಕ ಭಾಷಣ ಸ್ಪರ್ಧೆ ನಡೆಯಲಿರುವುದು. ಹೈಸ್ಕೂಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರತ್ಯೇಕ ವ್ಯವಸ್ಥೆಇದೆ. ಯಾ ಮೇದ್ವಾರರು ತಂತಮ್ಮ ಹೆಸರು ಏನಾಸಾದಿಗನ್ನು ಕಾರ್ಯದರ್ಶಿಯರಿಗೆ 12ನೆ ಶನಿವಾರ ಸಂಜೆಯೊಳಗೆ ತಲ್ಲಿಸಬೇಕಾಗಿದೆ.

ನಡಿಯುವ ಚಿತ್ರ

ನಟಶೇಖರ (ಕನ್ನಡ)

ಬರುವ ಚಿತ್ರ

ರಾಣಿ (ತಮಿಳು)

ಭಾನುಮತಿ,

ತಾ. 13 – 2 – 55ರಂದು ಆದಿತ್ಯವಾರ ಬೆಳಿಗ್ಗೆ 10ಗಂಟೆಗೆ

ಸಾವಿರ ಪೂರ್ಣ ವರ್ಣಚಿತ್ರ

DISTANT DRUMS.

(Gary Cooper)

ನಿರೀಕ್ಷಿಸಿರಿ, ಹೆಣ್, ಕನ್ಯಾದಾನ, ಪೈ ಜಯಂತಿಮಾಲಾ

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಬೆಳ್ಳಾರೆ—ಕಳಂಜ ಪಂಚಾಯತ ಬೋರ್ಡಿನ ನೇತೃತ್ವದಲ್ಲಿ ಸಾಮೂಹಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಕಳದ ತಾ ೫ರಿಂದ ೫೧ರತನಕ ನಿಲಿದ ಕಾರ್ಯಕ್ರಮಗಳಿಂದ ಜರಗಿತು ಪ್ರಭಾತಫೇರಿ, ಧ್ವಜಾರೋಹಣ, ಸಭಿ ಭಾಷಣ, ಪಂಚ್ಯಾಟ, ಕೃಷಿ, ಕೈಗಾರಿಕೆ ಪ್ರದರ್ಶನ, ಗ್ರಾಮ ಸೇವಕರ್ಲು, ಸಾಮೂಹಿಕ ಸೂರ್ಯನಮಸ್ಕಾರ, ಕಂಬಳ ಕೋಣಗಳ ಓಟಸ್ಪರ್ಧೆ ಮೊದಲಾದ ಕಾರ್ಯಕ್ರಮಗಳು ಸಾಂಗವಾಗಿರುವು ಕೊನೆಯ ದಿನ ಮುಖ್ಯ ಅತಿಥಿಯಾಗಿ ಶ್ರೀ ಎಮ್ ಎ ಮಾಣಿಕ್ಯವೇಲು ನ್ಯಾಕರ ಆರೋಗ್ಯಮಂತ್ರಿ ಶ್ರೀ ಎ ಬಿ ಶೆಟ್ಟಿರು ಆಗಮಿಸಿದ್ದರು ಮಂತ್ರಿ ದ್ವಯರಿಗೆ ಮಾಲಾರ್ಪಣೆ, ಅಭಿನಂದನೆ, ಸತ್ಕಾರಕೂಟಾದಿಗಳು ಜರಗಿದವು ಶ್ರೀ ನ್ಯಾಕರರು ಬೆಳ್ಳಾರೆಯಲ್ಲಿ ಆಸ್ಪತ್ರೆ ಪ್ರಭುರು ಚಿಕಿತ್ಸಾ ಕೇಂದ್ರವನ್ನು ತೆರೆದರು ಶ್ರೀ ಶೆಟ್ಟರು ಸಾಂಸ್ಕೃತಿಕ ಉತ್ಸವದಲ್ಲಿ ಬಹುಮಾನ ವಿತರಣೆ ಮಾಡಿ, ಅಯ್ಯನ ಕಟ್ಟೆ ಹೊಳೆಯ ಸೇತುವೆಯ ಅಡಿಗಲ್ಲನ್ನಿಟ್ಟು ತುಳುವಿನಲ್ಲಿ ಭಾಷಣಮಾಡಿದರು ಬಿಟ್ಟರೆ ಶಿಕ್ಷಾರಯ ಮತ್ತು ಕಳಂಜ ಸಮಾರಂಭಗಳು ಅಭೂತಪೂರ್ವರೀತಿಯಲ್ಲಿ ಜರಗಿದವು

ಶಿರ್ವ—ಸ್ಥಳೀಯ ಸೈಂಟ್ ಮೇರೀಸ್ ಹೈಸ್ಕೂಲಿನ ವರ್ಷಾಂತ್ಯೋತ್ಸವವು ತಾ ೧೮ರಲ್ಲಿ ಶ್ರೀ ಎಮ್ ಬಿ ಎಮ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕ್ರಾಸ್ಲಿಸ್ ನೊರೋನ್ಹರು ಶಾಲಾ ಸ್ವಸ್ತಿವಾಚನ ಮಾಡಿದರು ಈ ಶಾಲೆಯ ಪಳೆಯವಿದ್ಯಾರ್ಥಿ ಸಂಘದ ದಿವಾಕರಣೆಯ ಮರುದಿನ ಪಾಂಗಾಳ ಇಗರ್ಜಿಯ ರೆವ್ ಫಾ ಎ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು

ಪೆಟ್ರಿ—ಸ್ಥಳೀಯ ಆಸ್ಪತ್ರೆಯ ನೂತನ ಕಟ್ಟಡದ ಉದ್ಘಾಟನೆಯನ್ನು ತಾ ೩ರಲ್ಲಿ ಮದ್ರಾಸು ಸರಕಾರದ ಕಂದಾಯ ಮಂತ್ರಿ ಶ್ರೀ ಎಮ್ ಎ ಮಾಣಿಕ್ಯವೇಲು ನ್ಯಾಕರು ನೆರವೇರಿಸಿದರು ಸಂಸ್ಥಾಧಿಪತಿ ಅಧ್ಯಕ್ಷತೆಯನ್ನು ಕುಂದಾಪುರ ಎಡ್ಯೊಕೇಟ್ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್ ಎ. ಅವರು ವಹಿಸಿದ್ದರು ಶ್ರೀ ಬಿ ಮೋನಪ್ಪ ಹೆಗ್ಡೆಯವರು ಮಂತ್ರಿಗಳಿಗೆ ಪುಷ್ಪಮಾಲೆಯನ್ನರ್ಪಿಸಿ ಸ್ವಾಗತಿಸಿದರು ಶ್ರೀ ಬಿ ಭುಜಂಗ ಬಲ್ಲಾಳರು ಸ್ವಾಗತ ಭಾಷಣಮಾಡಿದರು ಶ್ರೀ ಸಂಜೀವ ನ್ಯಾಕರು ಶುಭಸಂದೇಶಗಳನ್ನೋದಿದರು ಸಂಸ್ಥಾಯತ ಬೋರ್ಡಿನ ಅಧ್ಯಕ್ಷ ಶ್ರೀ ಮಂದರಧರ ಬಲ್ಲಾಳರು ಮಾನಪತ್ರವನ್ನು ಒಪ್ಪಿಸುತ್ತಾ, ಹೆಬ್ರಿಗೆ ಹೈಸ್ಕೂಲು ಮೊದಲಾದ ಆವಶ್ಯಕತೆಗಳನ್ನು ಸೂಚಿಸಿದರು ಶ್ರೀ ಬಿ ಸಂಜೀವ ಹೆಗ್ಡೆಯವರು ಭೂಸುಧಾರಣೆಯ ಕುರಿತಾದ ಮನವಿಯನ್ನೊಪ್ಪಿಸಿದರು ಶ್ರೀಗಳಾದ ಕೆ ಮುಕುಂದ ಪ್ರಭು, ಕೆ ಕೃಷ್ಣಯ್ಯ ಇವರ ಭಾಷಣಗಳಾದ ಮೇಲೆ ಹೈಸ್ಕೂಲು, ರಸ್ತೆಸಾರಿಗೆ ಸಂಬಂಧ ಕಂದಾಯ ಸ್ಥಳೀಯ ಆವಶ್ಯಕತೆಗಳಿಗೆ ತಮ್ಮ ಸಹಾಯಭೂತಿಯನ್ನು ವ್ಯಕ್ತಪಡಿಸಿದರು ಸಭಾಧ್ಯಕ್ಷರು ಭೂ ಸುಧಾರಣಾ ಮಸೂದೆಯನ್ನು ಕೂರ್ಯ ತರುವ ಆವಶ್ಯಕತೆಯನ್ನು ತಮ್ಮ ಅಧ್ಯಕ್ಷ ಭಾಷಣದಲ್ಲಿ ಒತ್ತಿ ಹೇಳಿದರು ಕಟ್ಟಡ ಕೆಲಸಗಾರರಿಗೆ ಬಹುಮಾನ ವಿತರಣೆ, ಧನ್ಯವಾದಾರ್ಪಣೆಗಳಾದುವು.

ಕಾರ್ಕಳ—ಸ್ಥಳೀಯ ಬೋರ್ಡುಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ ೧೩ ರಲ್ಲು ಸಂಜೆ ೬ ಗಂಟೆಗೆ ಮಂಗಳೂರು ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ರಾಘವ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸರ್ವರೂ ಬಂದು ಸಹಕರಿಸಬೇಕೆಂದೂ ಶ್ರೀ ಬಿ ರಾಮರಾಯ ಶೆಟ್ಟರು ಕೋರುತ್ತಾರೆ

ಕುಂದಾಪುರ—ಇಲ್ಲಿಯ 'ರೂಪರಂಗ'ದ ವಾರ್ಷಿಕ ಮಹಾ ಸಭೆಯು ಕಳದ ತಾ ೧೦ ರಲ್ಲು ವಕೀಲ್ ಶ್ರೀ ನರಸಿಂಹ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎಮ್ ಎಮ್ ಹೆಗ್ಡೆ, ಸಂಜೀವ ಭಟ್ ಮೊದಲಾದವರು ರೂಪರಂಗದ ಅಭಿವೃದ್ಧಿಯನ್ನು ಹಾರೈಸಿ ಮಾತನಾಡಿದರು

ಕುಂಬಳೆ— ಕಂದಾಯ ಮಂತ್ರಿ ಶ್ರೀ ಎಮ್ ಎ ಮಾಣಿಕ್ಯ ವೇಲು ನ್ಯಾಕರರು ತಾ ೧ ರಲ್ಲು ಇಲ್ಲಿಯ ಪಂಚಾಯತ ಬೋರ್ಡಿನ ಹೊಸ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು ಶ್ರೀ ಎಮ್ ಎಸ್ ಮೊಗ್ರಾಲ್, ಎಮ್ ಎಲ್ ಎ, ಅವರು ಅಧ್ಯಕ್ಷತೆ ವಹಿಸಿದ್ದರು ಮಂತ್ರಿಗಳಿಗೆ ಕೆಲವು ಬೇಡಿಕೆಗಳನ್ನೊಳಗೊಂಡ ಮನವಿಕೂಡಾ ಅರ್ಪಿಸಲಾಯಿತು

ತಾ ೩ ರಲ್ಲು ಅರ್ಥಿಕ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ರವರು ಕಡಪುರಂ ಸಂಕದ ಶಂಕುಸ್ಥಾಪನೆಯನ್ನು ಮಾಡಿದರು ಹೈಸ್ಕೂಲು ಆಸ್ಪತ್ರೆ, ಮೊಗ್ರಾಲ್ ಹೊಳೆಗೆ ಸಂಕ ಇತ್ಯಾದಿ ಬೇಡಿಕೆಗಳಿರುವ ಮನವಿಯನ್ನು ಮಂತ್ರಿಗಳಿಗೆ ಕೊಡಲಾಯಿತು

ರೈತ ಸಮ್ಮೇಳನವು ತಾ ೩ ರಲ್ಲು ಕಾಸರಗೋಡಿನಲ್ಲಿ ಶ್ರೀ ಟಿ ಸಿ ನಾರಾಯಣ ನಂಬಿಯಾರ್, ಎಮ್ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಕಾಸರಗೋಡಿಗೆ ಮಲಬಾರು ಒಕ್ಕಲು ಹಿತಮಸೂದೆಯನ್ನು ವಿಸ್ತರಿಸಬೇಕೆನ್ನುವ ನಿರ್ಣಯವಾಯಿತು

ಕಟಿಪಾಡಿ—ಎಸ್ ವಿ ಎಸ್ ಹೈಸ್ಕೂಲಿನ ಶಾಲಾವರ್ಧಂತಿ ಸಮಾರಂಭವು ತಾ ೧೮ರಲ್ಲಿ ಅದಮಾರು ಮಠದ ಶ್ರೀವಿಭುದೇಶತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಪೈಳವದಿಂದ ಜರಗಿತು ಪ್ರಾರ್ಥನೆ, ಅಧ್ಯಕ್ಷರ ಮುನ್ನುಡಿಗಳಾದ ಬಳಿಕ ಶ್ರೀ ಎ ಕೃಷ್ಣಮೂರ್ತಿ ಆಚಾರ್ಯರು ಶಾಲೆಯ ಸ್ವಸ್ತಿವಾಚನ ಮಾಡಿದರು, ಮುಖ್ಯೋಪಾಧ್ಯಾಯ ಶ್ರೀ ಪಿ ರಾಮದಾಸ ನಾಯ್ಕರು ಶಾಲೆಯ ಸರ್ವತೋಮುಖ ಅಭಿವೃದ್ಧಿಪರ ವರದಿಯನ್ನೋದಿದರು ಪಾರಿತೋಷಕವಿತರಣೆಯಾದ ನಂತರ ಅಧ್ಯಕ್ಷರು ಈ ಶಾಲೆಯ ಆದಿತ ಮಂಡಳಿಯ ಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರು ಈ ಶಾಲೆಯಲ್ಲಿ ಉಪಾಧ್ಯಾಯ ಮತ್ತು ಶಿಕ್ಷಕವೃಂದದಲ್ಲಿ ಪ್ರೇಮಾದರ ವಿರುವುದು ಶಾಲೆಯ ಉನ್ನತಿಗೆ ಕಾರಣವಾದ ಬಗ್ಗೆ ಸಂತೋಷ ಸೂಚಿಸಿದರು ಕೊನೆಯದಾಗಿ ವಿದ್ಯಾರ್ಥಿಗಳು ಸತ್ಕಸಂಪರಾಗಿ ಆದರ್ಶಭಾರತೀಯರಾಗುವಂತೆ ಹರಸಿದರು ಎಸ್. ವಿ ಎಸ್. ವಿದ್ಯಾವರ್ಧಕ ಸಂಘದ ಅಧ್ಯಕ್ಷರಿದ್ದು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೀ ಯು ಎಸ್ ನಾಯ್ಕರಿಗೆ ಸ್ವಾಮಿಗಳವರು ಪುಷ್ಪಮಾಲೆಯನ್ನು ಅನುಗ್ರಹಿಸಿದರು. ಶ್ರೀ ಪಿ ಪಯಾನಂದ ನಾಯ್ಕರು ಧನ್ಯವಾದಗಳನ್ನರ್ಪಿಸಿದರು ರಾತ್ರಿ ವಿವಿಧ ವಿನೋದಾವಳಿಗಳಾಗಿ ನಾಟಕ ಪ್ರದರ್ಶನವಾಯಿತು.

ಬೈಲೂರು—ಇಲ್ಲಿಯ ಬೋರ್ಡು ಹಾಯಿ ಶಾಲೆಯ ಹೊಸಕಟ್ಟಡದ ಉದ್ಘಾಟನೆಯನ್ನು ಮದ್ರಾಸಿನ ಕಂದಾಯಮಂತ್ರಿ ಶ್ರೀ ಎಮ್ ಎ. ಮಾಣಿಕ್ಯವೇಲು ನಾಯ್ಕರು ನೆರವೇರಿಸಿದರು ಶ್ರೀ ಟಿ ಎ ಪೈ, ಎಮ್ ಎಲ್ ಎ, ಅವರು ಅಧ್ಯಕ್ಷತೆ ವಹಿಸಿದ್ದರು.

ಧರ್ಮಸ್ಥಳ—ಮದ್ರಾಸು ಸರಕಾರದ ಅರ್ಥಿಕಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ತಾ ೧ರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಸಂದರ್ಶಿಸಿದರು ಮಂತ್ರಿಗಳೊಂದಿಗೆ ಶ್ರೀಗಳಾದ ಬಿ ವಿ ಬಾಳಿಗ, ಎಮ್ ಎಲ್ ಎ ಎಸ್. ನರಸಪ್ಪಯ್ಯ, ಎಮ್ ಎಲ್. ಸಿ, ಕೆ ಬಿ ಜಿನರಾಜ ಹೆಗ್ಡೆ ಕೆ ನರಸರಿಕಾಮತ್ ಮೊದಲಾದವರು ಬಂದಿದ್ದರು ಶ್ರೀ ಡಿ ಮಂ

ಸಾರ್ವಜನಿಕ ಸಹಾಯ—ಸಹಕಾರಗಳಿಂದ ಊರಪರೇ ಅಂತಸ್ಥುರ್ತಿಗೊಂಡು ಕಟ್ಟಿಸಿ, ಜಿಲ್ಲಾ ಬೋರ್ಡಿಗೆ ಬಿಟ್ಟುಕೊಟ್ಟಿರುವ ಬೆಳ್ಳಾರೆ ಬೋರ್ಡು ಹೈಸ್ಕೂಲಿನ ಭವ್ಯ ಕಟ್ಟಡ

ಕಳದವಾರ ಇಲ್ಲಿಗೆ ಮಂತ್ರಿ ದ್ವಯರಾದ ಶ್ರೀ ಎ ಬಿ ಶೆಟ್ಟರು, ಮಾಣಿಕ್ಯವೇಲು ನಾಯ್ಕರರೂ ಸಂದರ್ಶನವಿತ್ತರು ಇಲ್ಲಿಯೇ ವಿಪರ್ಷಿಸಲಾದ ಡಿ ಎನ್ ಎಸ್ ಕೆಲ್ಲೆಸ್ಮಾರಕ ಲೈಬ್ರೆರಿಯನ್ನು ಶ್ರೀ. ಎ ಬಿ ಶೆಟ್ಟರು ಉದ್ಘಾಟಿಸಿದರು

ಯಂದಲ್ಲಿ ಶ್ರೀ ಎಮ್ ಎಸ್ ಮೊಗ್ರಾಲ್, ಎಮ್ ಎಲ್ ಎ, ಅವರು ಅಧ್ಯಕ್ಷತೆ ವಹಿಸಿದ್ದರು ಮಂತ್ರಿಗಳಿಗೆ ಕೆಲವು ಬೇಡಿಕೆಗಳನ್ನೊಳಗೊಂಡ ಮನವಿಕೂಡಾ ಅರ್ಪಿಸಲಾಯಿತು

ತಾ ೩ ರಲ್ಲು ಅರ್ಥಿಕ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ರವರು ಕಡಪುರಂ ಸಂಕದ ಶಂಕುಸ್ಥಾಪನೆಯನ್ನು ಮಾಡಿದರು ಹೈಸ್ಕೂಲು ಆಸ್ಪತ್ರೆ, ಮೊಗ್ರಾಲ್ ಹೊಳೆಗೆ ಸಂಕ ಇತ್ಯಾದಿ ಬೇಡಿಕೆಗಳಿರುವ ಮನವಿಯನ್ನು ಮಂತ್ರಿಗಳಿಗೆ ಕೊಡಲಾಯಿತು

ರೈತ ಸಮ್ಮೇಳನವು ತಾ ೩ ರಲ್ಲು ಕಾಸರಗೋಡಿನಲ್ಲಿ ಶ್ರೀ ಟಿ ಸಿ ನಾರಾಯಣ ನಂಬಿಯಾರ್, ಎಮ್ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಕಾಸರಗೋಡಿಗೆ ಮಲಬಾರು ಒಕ್ಕಲು ಹಿತಮಸೂದೆಯನ್ನು ವಿಸ್ತರಿಸಬೇಕೆನ್ನುವ ನಿರ್ಣಯವಾಯಿತು

ಕಟಿಪಾಡಿ—ಎಸ್ ವಿ ಎಸ್ ಹೈಸ್ಕೂಲಿನ ಶಾಲಾವರ್ಧಂತಿ ಸಮಾರಂಭವು ತಾ ೧೮ರಲ್ಲಿ ಅದಮಾರು ಮಠದ ಶ್ರೀವಿಭುದೇಶತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಪೈಳವದಿಂದ ಜರಗಿತು ಪ್ರಾರ್ಥನೆ, ಅಧ್ಯಕ್ಷರ ಮುನ್ನುಡಿಗಳಾದ ಬಳಿಕ ಶ್ರೀ ಎ ಕೃಷ್ಣಮೂರ್ತಿ ಆಚಾರ್ಯರು ಶಾಲೆಯ ಸ್ವಸ್ತಿವಾಚನ ಮಾಡಿದರು, ಮುಖ್ಯೋಪಾಧ್ಯಾಯ ಶ್ರೀ ಪಿ ರಾಮದಾಸ ನಾಯ್ಕರು ಶಾಲೆಯ ಸರ್ವತೋಮುಖ ಅಭಿವೃದ್ಧಿಪರ ವರದಿಯನ್ನೋದಿದರು ಪಾರಿತೋಷಕವಿತರಣೆಯಾದ ನಂತರ ಅಧ್ಯಕ್ಷರು ಈ ಶಾಲೆಯ ಆದಿತ ಮಂಡಳಿಯ ಕಾರ್ಯದಕ್ಷತೆಯನ್ನು ಪ್ರಶಂಸಿಸಿ ಮಾತನಾಡಿದರು ಈ ಶಾಲೆಯಲ್ಲಿ ಉಪಾಧ್ಯಾಯ ಮತ್ತು ಶಿಕ್ಷ ಜಯ್ಯ ಹೆಗ್ಡೆ ಯವರು ಜೇಷ್ಠಸ್ಥಾನದ ಬಿರುದಾವಳಿಗಳಿಂದ ಮಂತ್ರಿಗಳನ್ನು ಸ್ವಾಗತಿಸಿದರು, ಮಂತ್ರಿಗಳು ಬಾಲ ಬಾಲಕಿಯರ ನೃತ್ಯನಾಟಕಾದಿಗಳನ್ನು ನೋಡಿದರು

ಶಿರ್ವಬಂಟಕಲ್ಲು—ಶ್ರೀ ದುರ್ಗಾಪರಮೇಶ್ವರೀ ಜೇಷ್ಠಸ್ಥಾನದ ವಸಂತಾಚರಣ ಮಹಾ ಸಭೆಯು ಇದೇ ತಾ ೧ರಲ್ಲಿ ಶ್ರೀ ದುರ್ಗಾಪರಮೇಶ್ವರೀ ಹಾ ಎ ಶಾಲೆಯಲ್ಲಿ ಶ್ರೀ ಕೇರೆ ಶ್ಯಾಮ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ ಗೋವಿಂದ ಬಟ್ಟರು ವರದಿ ವಾಚನ ಮಾಡಿದರು ಎ ಗಳಾದ ಎ ವಾಸುದೇವ ಪ್ರಭು, ಕೆ ಮಂಜುನಾಥ ನಾಯಕರು ಕಾಲೋಚಿತ ಮಾತುಗಳನ್ನಾಡಿದರು ಅಧ್ಯಕ್ಷರು ಸಮಾಜದ ಸಂಘಟನೆ, ವಿದ್ಯಾಭಿವೃದ್ಧಿ ಇತ್ಯಾದಿ ಕುರಿತು ಭಾಷಣವಿತ್ತರು

ಚೇಕಾರ್ಡಿ—ಆರ್ ಕೆ ಹಂಟ್ರಾರ ಶಾರದಾ ಹಾ ಎ ಶಾಲಾ ವರ್ಧಂತಿಯು ಎಂಜಿ ಯಂ ಕಾಲೇಜಿನ ಶ್ರೀ ಕೆ ಬಿ ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ತಾ ೫ರಂದು ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು ಮುಖ್ಯ ಅತಿಥಿ ಶ್ರೀ. ಎಸ್ ಬಿ ಉಡ್ಪರು ಧನ್ಯವಾದಗಳನ್ನಿತ್ತರು

ಸ್ಯಾಬರಕಟ್ಟೆ—ಅಧ್ಯಾಪಕ ಕೇಂದ್ರದ ವಾರ್ಷಿಕೋತ್ಸವವು ಶ್ರೀ ಎಚ್ ಸಂಜೀವಯ್ಯರ ಅಧ್ಯಕ್ಷತೆಯಲ್ಲಿ ತಾ. ೫ರಲ್ಲಿ ಯಥಾ ಸಾಂಗವಾಗಿ ನೆರವೇರಿತು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. S no. 405/1954

ಭಾಗೀರತಿ ಅಮ್ಮ—ವಾದಿಳು

ಸುಬ್ಬಯ ಶೆಟ್ಟಿ ಕೂಡಾ — ಪ್ರತಿವಾದಿರು.

2ನೇ ಪ್ರತಿವಾದಿ ನರ್ಸಿ ಶೆಟ್ಟಿ ಮೋನುಶೆಟ್ಟಿರ ಮಗಳು ಶಾಕಳ ತಾಲ್ಲುಕು ಹಿಗಾರನ ಗ್ರಾಮದ ಕಣಿಲೆ ಎಂಬಲ್ಲಿರುವವರು ಇವರಿಗೆ—

1ನೇ ಪ್ರತಿವಾದಿ ವ ನಿಮ್ಮಿಂದ ವಾದಿಳಿಗೆ ಕಳದ ವಿಜಯ ಸಂ/ರ ಬಗ್ಗೆ ಬಹಾ ಮೂಲಗೇಣಿ ಬಾಕಿ ವಗೈರೆ ಬಗ್ಗೆ ರೂಪಾಯಿ 365-1-6ಕ್ಕೆ ವಾದಿಳು ದಾಕ್ಲು ಮಾಡಿದ ಸದರಿ ದಾವೆಯು ಮೇಲ್ಕಂಡ ಕೋರ್ಟಿನಲ್ಲಿ ತಾ 24-2-55ಕ್ಕೆ 2ನೇ ಪ್ರತಿವಾದಿಳಾದ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿರುವುದರಿಂದ ಸದರಿ ದಾವೆಯಲ್ಲಿ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ತಾ 24 2 1955ರಲ್ಲು ಪೂರ್ವಾನ್ನ ಗಂಟೆ 10ಕ್ಕೆ ನೀವು ಸ್ವತಹಾ ಆಗಲೀ ವಕೀಲರ ಮೂಲಕವಾಗಲೀ ಹಾಜ್ರಾಗಿ ಉದಪರಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯಕ್ತ ಕಂಡ ರೀತಿ ತೀರ್ಮಾನಿಸಲ್ಪಡಿಯತು ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯ ದೆ

D. Venkatesh Bhat
PLEADER for Plff

Karkala 4—2—1955

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹೆದರಿಕೆಪಡದ ಮತ್ತು ನಿಂತುಹೋದ ಮುಟ್ಟು ಹೋಗಲಿಗಳನ್ನು ಹತೋಟಿಗೆ ತರುವವು

ಈ ಔಷಧದ ಸೇವನೆಯಿಂದ ಯಾವ ಭಾದಕವೂ ಉಂಟಾಗುವುದಿಲ್ಲ ಬೆಲೆ ರೂ 5/- ಸ್ಪೆಶಲ್ ರೂ.8/-

Mrs. P. DEVEE, 1 Ds (N J) (ವಿ ಪಿ ಪ್ರತ್ಯೇಕ)
CALCUTTA- 10 ಸ್ಟಾಕಿಸ್ಟರು ಶೆಹಾಕಂಪೆನ್ಸಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹೆಡೆಯುವುದು ಸಾಕು]

ದಿನಕ್ಕೆ ಕೆಲವು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ಭಯ ಗರ್ಭ ಇದ ವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು

ಬೆಲೆ- ೧ ಬಾಟ್ಲಿಗ — ರೂ. ೫-೮-೦ .. ಪೋಸ್ಟು ಖರ್ಚು ರೂ ೦-೧೪-೦

—:ವಿಳಾಸ—

ಹಾಲಪ್ಪಾ ಡಾಮಣಗೇರಿ ಆಯುರ್ವೇದ ಔಷಧಾಲಯ, ಗದಗ.





ಮಂಗಳೂರು

ಮೈಸೂರು ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು— ತಾ. ೧೮ ರಲ್ಲಿ ಮಂಗಳೂರಿಗೆ ಆಗಮಿಸಿದರು. ಸೆಂಟ್ರಲ್ ಕೊಪರೇಟಿವ್ ಬೇಂಕಿನ ಮಹಾಳಿಗೆಯಲ್ಲಿ ಅವರಿಗೊಂದು ಸತ್ಕಾರಕೂಟ ಜರಗಿತು. ನಗರ ಸಭಾಪತಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತಿಸಿ, ದ. ಕ. ಜಿಲ್ಲೆ ಮತ್ತು ಮೈಸೂರುಗಳ ನಡುವೆ ವಾಹನ ಸಂಚಾರಕ್ಕೆ ಇರುವ ಕೆಲವು ನಿರ್ಬಂಧಗಳನ್ನು ಹೋಗಲಾಡಿಸಬೇಕೆಂದು ಕೇಳಿಕೊಂಡರು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ ಮತ್ತು ಕೆ. ಆರ್. ಆಚಾರ್ಯರು ಮಾತನಾಡುತ್ತಾ ಕರ್ನಾಟಕ ಏಕೀಕರಣಕ್ಕೆ ಮೈಸೂರಿನವರ ಬೆಂಬಲವನ್ನು ಅಪೇಕ್ಷಿಸಿದರು. ಮಂತ್ರಿಗಳು ಉತ್ತರಿಸುತ್ತಾ, ದ. ಕ ಜಿಲ್ಲೆಯನ್ನರಾಗಲೀ ನೆರೆಯ ಇತರರೇ ಆಗಲಿ ಅಪೇಕ್ಷಿಸಬೆಟ್ಟಿಲ್ಲ ಸಂತೋಷದಿಂದ ಸ್ವಾಗತಿಸಲಾಗುವುದು ಎಂದು ಹೇಳಿದರು. ಮೈಸೂರು ದ. ಕ. ಜಿಲ್ಲೆಗಳನ್ನು ಜೋಡಿಸುವ ಆಗುಂಬೆ ರಸ್ತೆಯನ್ನು ಸಾಲಿಗೆಯ ಬಗ್ಗೆ ಉತ್ತಮಗೊಳಿಸಲಾಗುವುದೆಂದರು. ಮೈಸೂರಿನ ಕಡೆಯಿಂದ ದ. ಕ ಜಿಲ್ಲೆಗೆ ಜೋಗಿನ ವಿದ್ಯುಚ್ಛಕ್ತಿ ಕೊಂಡೊಯ್ಯುವರೆಗೆ ಲೈನು ಹಾಕುವ ಕಾರ್ಯಕ್ರಮಗಳು ತೀವ್ರ ಕೈಕೊಂಡಿದ್ದು ಜಿಲ್ಲೆಗೆ ವಿದ್ಯುತ್ತನ್ನು ಒದಗಿಸಲು ಪ್ರಯತ್ನಿಸಲಾಗುವುದೆಂದು ಹೇಳಿದರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಮೈಸೂರಿನ ಮಂತ್ರಿ ಶ್ರೀಕಡಿದಾಳ ಮಂಜಪ್ಪ ನವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಭವನದ ಸುಪರಿಂಟೆಂಡೆಂಟ್ ಡಾ! ಬಿ. ಆರ್. ಬೆಗ್ಗಿಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಯು. ಶಿವರಾಮ ರೈಗಳು ವರದಿಯನ್ನೋದಿದರು. ಡಾ! ಎಮ್. ಎಸ್. ಹೆಗ್ಡೆಯವರು ಸ್ವಸ್ತಿವಾಚನಮಾಡಿದರು. ಶ್ರೀ ವಿಶ್ವನಾಥ ರೈಗಳು ಉತ್ತರಿಸಿದರು. ಸಭಾಧ್ಯಕ್ಷ ಮಂತ್ರಿಗಳು ತಮ್ಮ ಭಾಷಣದಲ್ಲಿ ‘ತಾನು ರೈತ ಕುಟುಂಬದವನೆನ್ನಲು ಅಭಿಮಾನಪಡುತ್ತೇನೆ. ಇತರ ಪಲಯಗಳಲ್ಲಿನ ಜನರಿಗಿಂತ ರೈತರು ಹೆಚ್ಚು ಪ್ರಾಮಾಣಿಕರೂ ಸತ್ಯವಂತರೂ ಆಗಿದ್ದಾರೆ. ಸತ್ಯವೆಂದು ತಿಳಿದುದನ್ನು ಧೈರ್ಯದಿಂದ ಹೇಳಲು ರೈತಜನ ಹಿಂಜರಿಯುವುದಿಲ್ಲ. ರೈತರ ಈ ಗುಣ ಅನುಕರಣಮಾಡಿರೆಂಬುವೇ, ರೈತ ಕುಟುಂಬದವರೇ ಹೆಚ್ಚಿರುವ ಈ ವಿದ್ಯಾರ್ಥಿ ಭವನದ ನಿವಾಸಿಗಳಿಗೆ ನನ್ನ ಹಿತೋಕ್ತಿ’ ಎಂದು ಮುಂತಾಗಿ ಹೇಳಿದರು. ಕೊನೆಯಲ್ಲಿ ಕನ್ನಡಿಗ ತುಳು ನಾಟಕಗಳೂ, ಶ್ರೀ ಯು. ಎಸ್. ಕೃಷ್ಣರಾಯರ ಶಿಷ್ಯಯರು ಕುಮಾರಿಯರಾದ ಯಶೋಧರಾ ಕಿರಣ್ ದಾಸ್, ಪ್ರಕಾರದಾಸರ ಭಾರತೀಯ ನೃತ್ಯ ಪ್ರದರ್ಶನಗಳೂ ಸಾಂಗವಾಗಿ ಜರಗಿದವು.

ಮೈಸೂರು ಕಂದಾಯ ಮಂತ್ರಿಗಳು ಮೈಸೂರು ಎಸೆಂಬ್ಲಿ ಸದಸ್ಯ ಶ್ರೀ ಮಾಧವಾಚಾರ್ಯರೊಂದಿಗೆ ಕಾರ್ಕಳ, ಮೂಡಬಿದ್ರೆ ಕೇಂದ್ರಗಳಿಗೂ ಭೇಟಿಯಿತ್ತು ಮಾನಪತ್ರಗಳನ್ನು ಸ್ವೀಕರಿಸಿ ಉಪಚಾರಾದಿಗಳಲ್ಲಿ ಭಾಗವಹಿಸಿದರು.

ಸೈಂಟ್ ಎಲೋಸಿಯಸ್ ಕಾಲೇಜ್ ಯೂನಿಯನ್— ದಿನಾಚರಣೆಯು ತಾ. ೫ರಲ್ಲು ಕೊಡಗು ಸರಕಾರದ ಜೀಪ್ ಸೆಕ್ರೆಟರಿಗಳಾದ ಶ್ರೀ ಬಿ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಅಧ್ಯಕ್ಷ ಶ್ರೀ ರಮಾನಂದ ಹೆಗ್ಡೆಯವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಪಿ. ಬಿ. ರಾಮಕೃಷ್ಣರಾಯರು ವರದಿಯನ್ನೋದಿದರು. ಜಿಲ್ಲಾ ಮೆಜಿಸ್ಟ್ರೇಟ್ ಡಿ. ನೊರೋಂಹಾರು ಕಾರ್ಯೇಜು ಯೂನಿಯನ್ನನ್ನು, ಶ್ರೀ ಕೆ. ಸುರೇಂದ್ರ ಶೆಣೈಯವರು ಕಾಲೇಜಿನ ಮತ್ತು ಶ್ರೀ ಒಸ್ವಾಲ್ಡ್ ಕೊಯಿಲೊರವರು ಶಾಲೆಯಿಂದ ತೇರ್ಗಡೆ ಹೊಂದಿ ಹೊರಹೋಗುವ ವಿದ್ಯಾರ್ಥಿಗಳ ಸ್ವಸ್ತಿವಾಚನ ಮಾಡಿದರು. ಶ್ರೀ ಪಿ. ಪಿ. ಭಟ್ಟತನ್, ಶ್ರೀ ಫಾ! ಇ. ಜೆ. ಜೇಕ್ಸ್ (ಕಾಲೇಜ್ ಪ್ರಿನ್ಸಿಪಾಲ್) ಮತ್ತು ಶ್ರೀ ಪೌಲ್ ಪೀಟರ್ ಪಿಂಟೋರವರು ಕ್ರಮವಾಗಿ ಸ್ವಸ್ತಿವಾಚನಗಳಿಗೆ ಉತ್ತರ ಕಿತ್ತರು. ಶ್ರೀಮತಿ ಐ. ಸಿ. ಸುಬ್ಬಯ್ಯನವರು ಬಹುಮಾನ ವಿತರಣೆ ಮಾಡಿದರು. ಭಾರತದ ಗತವೈಭವವನ್ನು ಪುನಃ ಅನುಷ್ಠಾನದಲ್ಲಿ ತರುವ ಕಾರ್ಯದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿ ಮೊದಲಾದ ವಿಷಯಗಳನ್ನೆತ್ತಿ ಅಧ್ಯಕ್ಷರ ಭಾಷಣವಾಯಿತು. ಜನ ಮನರಂಜನ ಕಾರ್ಯಗಳಾಗಿ ಸಮೂರಂಭ ಕೊನೆಗೊಂಡಿತು.

ಕೇಂದ್ರದ ಆಕಾಶವಾಣಿ ಮತ್ತು ವಾರ್ತಾ ಮಂತ್ರಿ — ಡಾ! ಬಿ. ವಿ ಕೇಸ್ಕರರಿಗೆ ತಾ. ೫ರಲ್ಲಿ ಮಂಗಳೂರು ನಗರಸಭೆಯ ವರವಾಗಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾನಪತ್ರವನ್ನರ್ಪಿಸಿದರು. ಅದರಲ್ಲಿ ಮಂಗಳೂರಲ್ಲಿ ಕಲಾಕೇಂದ್ರ ಸ್ಥಾಪನೆಗೆ ಕೇಂದ್ರ ಸರಕಾರದ ಸಹಕಾರ ಮತ್ತು ಮಂಗಳೂರಿಗೊಂದು ಆಕಾಶವಾಣಿ ಪ್ರಸಾರ ಕೇಂದ್ರ ಬೇಕೆಂದು ವಿನಂತಿಸಲಾಗಿತ್ತು. ಮಂತ್ರಿಗಳು ಉತ್ತರಿಸುತ್ತಾ ‘ಸ್ವಾತಂತ್ರ್ಯಬಂದೊಡನೆಯೇ ದೇಶದ ಅಭ್ಯುದಯವಾಗದು. ಅಭ್ಯುದಯ ಸಾಧಿಸಲು ತ್ಯಾಗ, ಸಂಘಟನೆ ಮತ್ತು ಕಾರ್ಯತತ್ಪರತೆ ಬೇಕು. ಅದಕ್ಕಾಗಿ ಪ್ರತಿಯೊಬ್ಬರೂ ಸಂಘಟಿತರಾಗಿ ಶ್ರಮಿಸಬೇಕು. ದಕ್ಷಿಣಕನ್ನಡವು ಕಲವಾರು ಉತ್ತಮ ಕಲಾಗಾರರನ್ನು ದೇಶಕ್ಕೆ ಒದಗಿಸಿಕೊಟ್ಟಿದೆ’ ಎಂದು ಮೊದಲಾಗಿ ಹೇಳಿದರು.

ಭಾರತ ಕೇಂದ್ರದ ತೆಂಗಿನ ಸಮಿತಿ ಸಭೆಯು— ಕಳೆದ ತಾ 31 ರಲ್ಲಿ ಶ್ರೀ ಸಿ. ಎ. ಗೋಪಾಲಕೃಷ್ಣನ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಉಪಾಧ್ಯಕ್ಷ ಹಾಗೂ ಅಖಿಲಭಾರತದ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಪಿ. ಮಾಧವನ್ ನಾಯರ್, ಶ್ರೀ ಸುರೇಂದ್ರನಾಥ ದ್ವಿವೇದಿ, ಎಮ್. ಪಿ. ಆವರೂ ರಾಜ್ಯ ಸರಕಾರಗಳ ಕೃಷಿ ಖಾತೆಯ ಡೈರೆಕ್ಟರರೂ ಸಭೆಗೆ ಚಿತ್ತೈಸಿದ್ದರು. ಸಮಿತಿಯು ಈ ತನಕ ಸಾಧಿಸಿದ ಕಾರ್ಯಗಳು, ಮುಂದೆ ಮಾಡಬೇಕಾದ ಕೆಲಸ ಇತ್ಯಾದಿ ಕುರಿತು ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ವಿವರಿಸಿದರು

ದ ಕ. ಜಿಲ್ಲಾ ಅಭಿವೃದ್ಧಿ ಯೋಜನೆ ಭಾರತದ ಯೋಜನಾ ಸಮಿತಿಯ ಸಲಹೆಗಾರರಾದ ಶ್ರೀ ಪಿ. ಎಸ್. ಜೆಜ್ಜಾಮಿಯವರು ಜಿಲ್ಲೆಗೆ ಬಂದಿದ್ದು ಸ್ಥಳೀಯ ಅಭಿವೃದ್ಧಿ ಕ್ಷೇತ್ರಗಳನ್ನು ಸಂದರ್ಶಿಸಿದರು. ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ಧರಿಸಲು ಜಿಲ್ಲಾ ಯೋಜನಾ ಸಮಿತಿಯೊಂದನ್ನು ನೇಮಿಸಬೇಕೆಂದು ಸೂಚನೆ ಇತ್ತರು.

ಬೆಂಗ್ರೆವಾಸಿಗಳ ಸಂಕಷ್ಟ—ಬೆಂಗರೆಯ ತಾತ್ಕಾಲಿಕ ಕಾಂಗ್ರೆಸ್ ಕಮಿಟಿ ಮತ್ತು ಪುರನಿವಾಸಿಗಳ ವರವಾಗಿ ಕಂದಾಯಮಂತ್ರಿ ಶ್ರೀ. ಎಂ. ವಿ. ಸಾಮಿಕ್ಕಪೆಲ್ಲ ನಾಯ್ಕರಿಗೆ ಮನವಿಯೊಂದನ್ನು ಕೊಡಲಾಯಿತು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಎಮ್. ತಿಂಗಳಾಯರು ಬೆಂಗ್ರೆವಾಸಿಗಳ ಸಂಕಷ್ಟಗಳನ್ನು ಮಂತ್ರಿಗಳ ಅವಗಾಹನೆಗೆ ತಂದರು. ಮತ್ಸ್ಯೋದ್ಯಮ ವಾಸಿಗಳು ಹಿಂದುಳಿದವರಾದರೂ ಅವರಿಗಾಗಿಯೇ ಪ್ರತ್ಯೇಕ ಶಾಲೆಗಳಿರುವುದು ಇಂದಿನ ಪರಿಸ್ಥಿತಿಯಲ್ಲಿ ಒಳ್ಳೆದಲ್ಲವೆಂದೂ ಎಲ್ಲರೂ ಒಂದಾಗಿಕೂಡಿ ಕಲಿಯುವುದು ಒಳ್ಳೆಯದೆಂದೂ ಮಂತ್ರಿಗಳು ತಿಳಿಸಿದರು.

ಆರ್ಥಿಕ ಮಂತ್ರಿಗಳಿಗೆ ಬಿನ್ನವತ್ತಳೆ— ಮದ್ರಾಸಿನ ಆರ್ಥಿಕಮಂತ್ರಿ ಶ್ರೀ ಸಿ. ಸುಬ್ರಮ್ಮಣ್ಯಂ, ಅವರಿಗೆ ತಾ. ೧ರಲ್ಲಿ ದ. ಕ. ಜಿಲ್ಲಾ ಬೋರ್ಡಿನ ವರವಾಗಿ ಬೋರ್ಡಿನ ಅಧ್ಯಕ್ಷ ಡಾ! ಕೆ. ಕೆ. ಹೆಗ್ಡೆಯವರು ಬಿನ್ನವತ್ತಳೆಯೊಂದನ್ನು ಒಪ್ಪಿಸಿದರು. ಅದರಲ್ಲಿ ಜಿಲ್ಲಾ ಬೋರ್ಡಿನ ಸಾಮಾನ್ಯ ನಿಧಿಯಲ್ಲಿ ರೂ. 2,00,291 ಮತ್ತು ಪ್ರಾಥಮಿಕ ನಿಧಿಯಲ್ಲಿ ರೂ. 97,501 ಕೊರತೆಯಿದೆಯೆಂದೂ ಈ ಆರ್ಥಿಕಸ್ಥಿತಿಯ ಸುಧಾರಣೆಗಾಗಿ ಬೋರ್ಡಿಗೆ ಈಗ ಸರಕಾರದಿಂದ ಸಿಕ್ಕುವ ಕೆಲವು ಮತ್ತಿನೆಯನ್ನು ಹೆಚ್ಚಿಸಬೇಕೆಂದೂ ಹಾಲ್ಯಸ್ಕೂಲುಗಳಿಗಾಗಿ ಸ್ಥಿರಸ್ವತ್ತು ಗ್ರಾಂಟುಕೊಡಬೇಕೆಂದೂ, ಬೋರ್ಡಿನ ಉಸಾದ್ಯಾಯರಿಗೆ ಮತ್ತು ಸಿಬಂದಿಗಳಿಗೆ ಸರಕಾರದ ಸ್ಕೇಲನ್ನೇ ಕೊಡಬೇಕೆಂದೂ ಜಿಲ್ಲೆಗೆ ಇನ್ನು 10 ಗ್ರಾಂಟಾಸ್ಪತ್ರೆಗಳನ್ನು ಒದಗಿಸಬೇಕೆಂದೂ ಕೇಳಿಕೊಳ್ಳಲಾಗಿತ್ತು. ಮಂತ್ರಿಗಳು ಉತ್ತರಿಸುತ್ತಾ, ಸ್ಥಳೀಯ ಸರಕಾರದ ವಿಚಾರದಲ್ಲೀಗ ಭಿನ್ನಾಭಿಪ್ರಾಯವಿದೆಯೆಂದೂ ಆರ್ಥಿಕ ವಿಚಾರ ಬಂದಾಗ ನಾವು ಸಮಗ್ರ ರಾಷ್ಟ್ರೀಯ ದೃಷ್ಟಿಯಿಂದ ಸಮಸ್ಯೆಗಳನ್ನು ನೋಡಬೇಕೆಂದೂ ತಿಳಿಸಿದರು. ಅಲ್ಲದೆ ಈ ಜಿಲ್ಲೆಯಲ್ಲಿ ರಸ್ತೆಗಾಗಿ ಹೆಚ್ಚು ಗಮನವೀಯಲಾಗಿದೆ, ಗ್ರಾಮಾಸ್ಪತ್ರೆಗಳಿಗೆ ಡಾಕ್ಟರರು ದೊರಕುವುದು ಕಷ್ಟವಾಗಿನೆಯೆಂದು ಹೇಳಿದರು. ಎಸೆಂಬ್ಲಿಯ ಮುಂದೆ ಬರುವ ಮುಂಗಡಪತ್ರದ ಚರ್ಚೆಯಕಾಲವಲ್ಲಿ ಸಾಧ್ಯವಾದ ಬಡಲಾವಣೆ ತೋರಿದರೂ ತೋರಬಹುದೆಂದು ತಿಳಿಸಿದರು. ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರು ಧನ್ಯವಾದಗಳನ್ನರ್ಪಿಸಿದರು.

ರಾಲಾವರ್ಧಂತಿ — ಬೊಕ್ಕಪಟ್ಟಣ ಮುನಿಸಿಪಲ್ ಹಾ! ಎ! ಶಾಲೆಯ ವರ್ಧಂತಿ ಸಮಾರಂಭವು ತಾ. ೫ರಲ್ಲಿ ಜಿಲ್ಲಾ ನಿರ್ದೇಶಕರಾದ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ದಿ! ಬೆನಗಲ್ ಸರಸಿಂಗರಾಯರ ಭಾವಚಿತ್ರ ಅನಾವರಣವು — ತಾ. 1—2—55ರಲ್ಲಿ ಸಾರಸ್ವತ ಎಜ್ಯುಕೇಶನ್ ಸೊಸೈಟಿಯ ಆಶ್ರಯದಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿಯಿಂದ ನೆರವೇರಿಸಲ್ಪಟ್ಟಿತು. ಶ್ರೀ. ಜಿ. ಸೋಮಶೇಖರ ರಾಯರು ದಿವಂಗತರ ಮಹತ್ತರ ದೇಶಸೇವಾದಿ ಗುಣಗಳನ್ನು ವಿವರಿಸಿದರು. ಶ್ರೀ. ಶೆಟ್ಟರು ದಿವಂಗತರ ಶಕ್ತಿ ಸಾಮರ್ಥ್ಯ, ಜಗತ್ಪ್ರಸಿದ್ಧಿಗಳನ್ನು ವಿವರಿಸಿ ಅನಾವರಣ ಭಾಷಣಮಾಡಿದರು.

ಜಿಲ್ಲಾ ಬೋರ್ಡು— ವಿಶೇಷ ಸಭೆಯೊಂದು ತಾ. 28-2-55ನೇ ಬುಧವಾರ ಬೆಳಿಗ್ಗೆ 10-45ಕ್ಕೆ ಜಿಲ್ಲಾ ಡೋಕಲ್ ರೈಟ್ರಿನ ಆಫೀಸಿಗೆ ಸದಸ್ಯರೆಲ್ಲರೂ ಜಮಾಯಿಸುವ ಬಗ್ಗೆ ಜರಗಲಿರುವುದು.

ದಿ ಜವಾಹರ್ ಲಾಲ್ ಫ್ರೀ ಸ್ಟೈಟ್ ಹೈಸ್ಕೂಲ್ ಮುಂಬಾಯಿ

ಇದೇ ಬರುವ ಮಾರ್ಚಿ ಎಸ್. ಎಸ್. ಸಿ. ಪರೀಕ್ಷೆಗೆ ಕೂತುಕೊಳ್ಳುವ ಹುಡುಗ ಮತ್ತು ಹೊಸ ಕನ್ನಡ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಒಂದು ಸಂಸ್ಕೃತ ಕ್ಲಾಸು ಪ್ರತಿ ಆದಿತ್ಯವಾರ ಮತ್ತು ರಾಲಾ ರಜಾ ದಿನಗಳಲ್ಲಿ ಪೂರ್ವಾಹ್ನ ೧ ಗಂಟೆ ೮ ರಿಂದ ೧೧ ರ ತನಕ ಪ್ರೋಫೆಸರ್ ಸರಪಡ್ಡಿನ ಕಾರ್ಯಕ್ರಮ ರಸ್ತೆಯ ಜವಾಹರ್ ಲಾಲ್ ಫ್ರೀ ಸ್ಟೈಟ್ ಹೈಸ್ಕೂಲಿನ ವರಾಂಡದಲ್ಲಿ ನುರಿತ ಸಂಸ್ಕೃತ ಪಂಡಿತರಿಂದ ಜರಗಿಸಲ್ಪಡುವುದು.

ಅಂತೆಯೇ ಎಪ್ರಿಲ್ ತಿಂಗಳಲ್ಲಿ ಜರಗಲಿರುವ ಮುಂಬಾಯಿ ಸಂಸ್ಕೃತ ವಿದ್ಯಾಪೀಠದ ಪರೀಕ್ಷೆಗಳಿಗೆ ಕೂತುಕೊಳ್ಳುವ ವಿದ್ಯಾರ್ಥಿಗಳಿಗೋಸುಗ ಅದೇ ವಾರಾರದಲ್ಲಿ ಒಂದು ವಿಶೇಷ ಕ್ಲಾಸು ತೆರೆಯಲ್ಪಡುವುದು.

ಕಲಿಯಲು ಅಪೇಕ್ಷಿಸುವ ವಿದ್ಯಾರ್ಥಿಗಳು ಅಧ್ಯಾಪಕರ ಪೂರ್ವಾನ್ಸ್ ಬೇಕಾದ ಮಾಹಿತಿಯನ್ನು ಆನರಿಂದ ಪಡೆಯಬಹುದು.

ಇದೇ ಕಳೆದ ನವಂಬರದ ಪಬ್ಲಿಕ್ ಪರೀಕ್ಷೆಗೆ ಜವಾಹರ್ ಲಾಲ್ ಶಾಲೆಯ ಸೆಂಟರಿನಲ್ಲಿ ನಿಂತ ೨೩ ಮಂದಿಯೂ ಪಾಸಾಗಿರುವರೆಲ್ಲದೆ, ಕುಮಾರ ಮೊದ್ದಣ್ಣ ಸಾಲಿಯಾನ್ ಎಂಬ ವಿದ್ಯಾರ್ಥಿಯು ವಿಶೇಷ ಶ್ರೇಣಿಯಲ್ಲಿ ಪಾಸಾಗಿ ವಿದ್ಯಾಪೀಠಕ್ಕೆ ಮೂರನೇ ನಂಬರವನ್ನು ಪಡೆದಿರುವನು.

ಸಹದೇವ ಸ್ಮಾರಕ ಕಲಾ ಮಂಡಳಿ, ಮುಂಬಯಿ—ಇಂದಿನ ಪ್ರಥಮ ವಾರ್ಷಿಕೋತ್ಸವ ಸಮಾರಂಭವು ಕಳೆದ ತಾ. ೨೮ 1—55ರಲ್ಲು ಕಾಮಾ ಹಾಲಿನಲ್ಲಿ ಮದ್ಯಪಾನ ನಿಷೇಧದ, ಮಾನ್ಯ ಉಪಮಂತ್ರಿಗಳಾದ ಡಾ! ಟಿ. ಆರ್. ನರಸಿಂಹಯ್ಯನ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಂಡಳಿಯ ಅಧ್ಯಕ್ಷ ಶ್ರೀ. ವೈ. ಯಸ್. ಹೆಗ್ಡೆಯವರು ಅಧ್ಯಕ್ಷರನ್ನು ಹಾಗೂ ವಿಶೇಷ ಅತಿಥಿಗಳಾಗಿ ಚಿತ್ತೈಸಿದ ಶ್ರೀಗಳಾದ ಎಳ್. ಕೆ. ಎಳ್. ನರಸಿಮ್ಹನ್, ಯು. ಎಸ್. ಪ್ರಭು, ಯನ್. ಆರ್. ಬಗುವಾಡಿಯ, ವಿಶ್ವನಾಥ ರಾವ್, ಮತ್ತಯ ಕುಂದರ್, ಪಿ. ಯಲ್. ಮಾಸ್ಟರ್ ಮುಂತಾದವರನ್ನು ಸ್ವಾಗತೀಕರಿಸುತ್ತಾ ಮಂಡಳಿಯ ಉದ್ದೇಶದ ಕುರಿತು ಭಾಷಣಗೈದರು. ಕಾರ್ಯದರ್ಶಿ ಯಸ್. ಬಿ. ಕುಂದರರು ವಾರ್ಷಿಕ ವರದಿಯನ್ನು ಓದಿದರು. ಸಭಿಕರಲ್ಲಿ ಶ್ರೀ ವಿಶ್ವನಾಥ ರಾವ್, ಯನ್. ಆರ್. ಬಗುವಾಡಿಯ ಹಾಗೂ ಪಿ. ಎಲ್. ಮಾಸ್ಟರವರು ಮಂಡಳಿಗೆ ಶ್ರೇಯಸ್ಸನ್ನು ಕೋರಿ ಭಾಷಣಗೈದರು. ಅಧ್ಯಕ್ಷರು ಮಂಡಳಿಯ ಕಾರ್ಯಗಳಾದಗಳನ್ನು ಕೊಂಡಾಡುತ್ತಾ ಮಂಡಳಿಗೆ ಅಭಿವೃದ್ಧಿಯನ್ನು ಕೋರಿ ಸುರಸವಾದ ಭಾಷಣಗೈದರು— ಮಂಡಳಿಯು ನಡೆಸಿಕೊಂಡು ಬರುತ್ತಿರುವ ಕಲಾ ಶಾಲೆಯ ವಿದ್ಯಾರ್ಥಿಗಳ ನೃತ್ಯ ಹಾಗೂ ಸಂಗೀತ ಪ್ರದರ್ಶನಗಳು ಪ್ರೇಕ್ಷಣೀಯವಾಗಿದ್ದವು. ಕುಮಾರಿ ಚಂದ್ರಾವತಿ, ಕುಮಾರಿ ವಿಮಲ ಹಾಗೂ ಕುಮಾರಿ ಶೈಲ ಇವರ ನೃತ್ಯಗಳು ಸಭಿಕರನ್ನು ಬೆರಗುಗೊಳಿಸಿತ್ತು. ಅಂತೆಯೇ ಶ್ರೀಗಳಾದ ಯನ್. ಎಸ್. ಮೆಂಡನ್, ವಿ. ಪಿ. ಮೆಂಡನ್ ಮತ್ತು ಕೋಟಿಯಾನ್ ಕೆ. ಎ. ಇವರುಗಳ ನೃತ್ಯದ ಪ್ರದರ್ಶನಗಳೂ ಜನರ ಮೆಚ್ಚುಗೆಯನ್ನು ಗಳಿಸಿತ್ತು. ಶ್ರೀ ವೈ. ಯಸ್. ಹೆಗ್ಡೆಯವರು ಕೊನೆಯಲ್ಲೀ ಮಂಡಳಿಯ ಏಳ್ಗೆಗಾಗಿ ಎಲ್ಲರೂ ಸಹಕರಿಸಬೇಕೆಂದರು.



ಶ್ರೀಲೋಕಮಹಾತ್ಮ ಶ್ರೀ ಯೋಗಿರಾಜ ವಿದ್ಯಾಸಾಗರ ಪ್ರೇಮಸಾಗರ ಸರಸ್ವತಿ ನಿತ್ಯಾನಂದ ಸ್ವಾಮಿ ಗಣೇಶಪುರಿ.

ಪಂಡಿತ್ ಎಂ. ಎಸ್. ರಾವ್, ಇವರು ಸಾಕ್ಷಾತ್ ಪರಮಾತ್ಮ ಶ್ರೀ ನಿತ್ಯಾನಂದ ಸ್ವಾಮಿ ಗಣೇಶಪುರಿ, ವಜ್ರೇಶ್ವರಿ, ಮುಂಬಾಯಿ, ಇವರಿಂದ ಮೇಲ್ಬಾಣಿಸಿದ ಹೆಸರಿನಿಂದಲೂ ಅವರ ಧರ್ಮ ಪತ್ನಿಯವರು ಮಾತಾಜಿ ಶ್ರೀ ಲಕ್ಷ್ಮೀದೇವಿ ನಿತ್ಯಾನಂದ ಸ್ವಾಮಿ, ಗಣೇಶಪುರಿ ಎಂಬ ಹೆಸರಿನಿಂದಲೂ ಅನುಗ್ರಹಿಸಲಾಗಿರುವರು.

ಅವರ ಉಪವಾಸದ ಅಂತ್ಯದ ದಿನ ತಾರೀಕು. 1—1—55ರಲ್ಲಿ ಗಣೇಶಪುರಿಯಲ್ಲಿ ತೆಗೆದ ಭಾವಚಿತ್ರವಿದು.

ತಾ. 2—1—55 ರಲ್ಲು ಗುರುಪೂಜೆಯು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

(Advt.)

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ,

1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಫೊರ್ಮೋಸದ ಕುತೂಹಲಜನಕ ಕಥೆ

(೩ನೇ ಪುಟದಿಂದ)

ದೇ ಮಾತು ಹೇಳುತ್ತಾರೆ. ಆದರೆ ಕಮ್ಯುನಿಸ್ಟರು ಚೀನದ ನ್ಯಾಯವಾದ ನಾರೀಸುಧಾರಲ್ಲಿ; ಆಕ್ರಮಣಗಾರರು, ಅಧಪತಂಗೆ ಬೋರರು. ಆದುದರಿಂದ ಅವರಿಗೆ ಫೊರ್ಮೋಸ ಮತ್ತಿತರ ದ್ವೀಪಗಳನ್ನು ಒಪ್ಪಿಸಿಕೊಡ ಕೂಡದು ಎಂದಷ್ಟೆ ಚಿಯಾಂಗರ ವಾದ.

ಬ್ರಿಟನಿಗೆ ಸಹ ಕಮ್ಯುನಿಸ್ಟರ ಪ್ರಭಾವ ಹೆಚ್ಚುವುದು ಇಷ್ಟವಿಲ್ಲವಾದುದರಿಂದ ಫೊರ್ಮೋಸವನ್ನು ಚೀನಕ್ಕೆ ಬಿಟ್ಟುಕೊಡಬೇಕೆಂಬ ಸೂಚನೆಯನ್ನು ಮುಂದಕ್ಕೆತರಲಿಲ್ಲ ೧೯೫೦ನೇ ಎಪ್ರೀಲಿನಲ್ಲಿ ಜಪಾನು ವಿಧ್ಯುಕ್ತವಾಗಿ ಫೊರ್ಮೋಸ ಮತ್ತು ಪೆಸ್ಕಾಡೋರ್ ದ್ವೀಪಗಳ ಮೇಲಿನ ತನ್ನ ಸ್ವಾಮ್ಯವನ್ನು ಬಿಟ್ಟುಕೊಟ್ಟಿತು. ಅಷ್ಟು ಹೊತ್ತಿಗೆ ಅಮೇರಿಕದಲ್ಲಿ ಹೊಸ ಚುನಾವಣೆಗಳು ನಡೆದು, ರಿಪಬ್ಲಿಕನ್ ಪಕ್ಷದ ಐಸೆನ್ ಹೋವರ್ ಅಧ್ಯಕ್ಷರಾಗಿ ಆಯ್ಕೆಗೊಂಡರು. ಅವರು ಟ್ರೂಮನ್ನರು ಕೊಟ್ಟಿದ್ದ ವಾಗ್ದಾನಗಳನ್ನು ಸಂಪೂರ್ಣವಾಗಿ ಮುರಿದು, ಚಿಯಾಂಗರಿಗೆ ಬೇಕು ಬೇಕಾದಂತೆ ಸೈನಿಕ ಸಹಾಯವನ್ನೂ ಸಲಹೆಯನ್ನೂ ನೀಡುತ್ತಾ ಬಂದರು; ಮತ್ತು ಇದರಿಂದ ದೂರ ಪೂರ್ವದಲ್ಲಿ ಕಮ್ಯುನಿಸ್ಟರ ಮುನ್ನಡೆಯನ್ನು ತಡೆಯಲು ಸಹಾಯವಾಗುತ್ತದೆ ಎಂದು ಹೊರಗಿನ ಲೋಕಕ್ಕೆ ತಿಳಿಸುತ್ತಾ ಹೋದರು. ಚೀನದ ಕರಾವಳಿಗೆ ಮೂರೇ ಮೈಲುಗಳ ದೂರದಲ್ಲಿರುವ ಕ್ಯುಮೈ ಮತ್ತು ಮಸ್ತು ದ್ವೀಪಗಳಿಂದ ಚೀನದ ಮುಖ್ಯ ನೆಲದ ಮೇಲೆ ಚಿಕ್ಕ ದಾಳಿಗಳನ್ನು ನಡೆಸುವುದಕ್ಕೆ ಸಹ ಚಿಯಾಂಗರಿಗೆ ಪ್ರೋತ್ಸಾಹವಿತ್ತರು ಚೀನದ ಹಡಗುಗಳ ಚಲನವಲನವನ್ನು ಆತಂಕಿಸುವುದಕ್ಕೆ ಚಿಯಾಂಗರಿಗೆ ನೆರವಾದರು. ಹೊನ್ನೆ ಅಂದರೆ ೧೯೫೪ನೇ ದಶಂಬರದಲ್ಲಿ ಚಿಯಾಂಗರೊಡನೆ ಪರಸ್ಪರ ರಕ್ಷಣೆಯ ಒಪ್ಪಂದವನ್ನು ಮಾಡಿಕೊಂಡದ್ದಲ್ಲದೆ, ಇದೇ ಜನವರಿಯಲ್ಲಿ ಫೊರ್ಮೋಸ, ಪೆಸ್ಕಾಡೋರ್, ಕ್ಯುಮೈ ಮತ್ತು ಮಸ್ತು ದ್ವೀಪಗಳ ರಕ್ಷಣೆಗಾಗಿ ತನ್ನ ಇಚ್ಛಾನುಸಾರ ಅಮೇರಿಕದ ಸೈನಿಕ, ನಾವಿಕ ಮತ್ತು ವೈಮಾನಿಕ ಪಡೆಯನ್ನು ಉಪಯೋಗಿಸುವುದಾಗಿ ಸಾರಿದರು.

ಟ್ರೂಮನ್ನರು ಚೀನದ ಆಂತರಿಕ ವಿಷಯವೆಂದು ಒಪ್ಪಿಕೊಂಡಿದ್ದ ಫೊರ್ಮೋಸಾ ಮತ್ತಿತರ ದ್ವೀಪಗಳ ವಿಮೋಚನೆಯ ಹೋರಾಟದಲ್ಲಿ ಐಕರು ಪ್ರತ್ಯಕ್ಷವಾಗಿ ಹಸ್ತಕ್ಷೇಪವನ್ನು ಮಾಡಲು ಉದ್ಯುಕ್ತರಾದದ್ದು ಕಮ್ಯುನಿಸ್ಟರನ್ನು ರೊಚ್ಚಿಗೆಬ್ಬಿಸಿದ್ದರೆ ಆಶ್ಚರ್ಯವಿಲ್ಲ! ಯಾವುದೇ ರಾಷ್ಟ್ರದ ಆಂತರಿಕ ವಿಷಯವನ್ನು ಸಂಯುಕ್ತ ರಾಷ್ಟ್ರಸಂಘವು ಚರ್ಚಿಸಲಾರದಾದುದರಿಂದ, ಫೊರ್ಮೋಸದ ವಿಮೋಚನೆಗಾಗಿ ತಾವು ನಡೆಸುವ ಹೋರಾಟದ ಬಗ್ಗೆ ರಾಷ್ಟ್ರಸಂಘವು ಚರ್ಚಾರ ಶಬ್ದವನ್ನೂ ಎತ್ತಲಾಗದೆಂದು ಚೀನ ಹೇಳುತ್ತದೆ. ಅಲ್ಲದೆ ಅಮೇರಿಕವೇ ಅನಾವಶ್ಯಕವಾಗಿ ಯುದ್ಧ ಪ್ರಚೋದಕ ನೀತಿಯನ್ನು ಅನುಸರಿಸಿ ಹಸ್ತಕ್ಷೇಪವನ್ನು ಮಾಡುತ್ತಿದೆಯೆಂದು ಅದು ಆರೋಪಿಸುತ್ತದೆ. ಭದ್ರತಾ ಮಂಡಳವು ಏನಾದರೂ ಚರ್ಚೆ ನಡೆಸುವುದಿದ್ದರೆ ಅಮೇರಿಕದ ವರ್ತನೆಯ ಮಟ್ಟಗಷ್ಟೇ ಅದು ಸೀಮಿತವಿರಬೇಕೆಂದು ಚೀನದ ಅಭಿಪ್ರಾಯ ಇದೇ ಕಾರಣವನ್ನು ಮುಂದೆ ಮಾಡಿ ಚೀನದ ಪ್ರಧಾನ ಮಂತ್ರಿ ಚೌ ಎನ್ ಲಾಯರು ಭದ್ರತಾಮಂಡಳವು ಕಳೆದವಾರ ನೀಡಿದ ಆಮಂತ್ರಣವನ್ನು ತಿರಸ್ಕರಿಸಿ, ರಶಿಯವು ತಂದ ಅಮೇರಿಕದ ನೀತಿಯನ್ನು ಖಂಡಿಸುವ ಗೊತ್ತುವಳಿಯ ಚರ್ಚೆ ನಡೆಯಲಿ ಎಂದರು.

ಫೊರ್ಮೋಸವು ನ್ಯಾಯವಾಗಿ ಚೀನಕ್ಕೆ— ಅಂದರೆ ಚೀನದ ಕಮ್ಯುನಿಸ್ಟರಿಗೆ—ಸೇರಬೇಕಾಗಿದ್ದರೂ ಅಮೇರಿಕವು ಏಕಾಗಿ ಹೀಗೆ ಮಾಡುತ್ತದೆ ಎಂಬ ಪ್ರಶ್ನೆ ಇಲ್ಲಿ ಸಹಜವಾಗಿಯೇ ಕೇಳಲ್ಪಡುತ್ತದೆ ಅದಕ್ಕೆ ಉತ್ತರವಾಗಿ ಆ ದ್ವೀಪ ಸಮುದಾಯವಿರುವ ಭೌಗೋಲಿಕ ಸ್ಥಾನದ ಮಹತ್ವವನ್ನು ವಿವರಿಸಬೇಕಾಗುತ್ತದೆ— ಕೊರಿಯದ ಯುದ್ಧದಲ್ಲಿ ಅಮೇರಿಕದ ಸೈನ್ಯಗಳ ಪರಿಷ್ಕಾರಾಗಿದ್ದ ಜನರಲ್ ಡಗ್ಲಾಸ್ ಮೇಕರ್ಥರರು ವ್ಲಾಡಿವೊಸ್ಟೋಕ್‌ನಿಂದ ಸಿಂಗಾಪುರದ ವರೆಗಿನ ದೂರ ಪೂರ್ವದ ಕರಾವಳಿಯಲ್ಲಿ ವೈಮಾನಿಕ ಹಾಗು ನಾವಿಕ ಚಟುವಟಿಕೆಗಳನ್ನು ನಡೆಸುವುದಕ್ಕೆ ಫೊರ್ಮೋಸವು ಅತ್ಯಂತ ಪ್ರಶಸ್ತವಾದ ಸ್ಥಳವೆಂದು ಹೇಳಿದ್ದರು. ಅಷ್ಟು ವಿಸ್ತಾರ ಪ್ರದೇಶದ ಮೇಲಲ್ಲದಿದ್ದರೂ ಹೈನಾನ್‌ನಿಂದ ಶಾಂಘೈ ವರೆಗಿನ ಚೀನದ ಕರಾವಳಿಯ ಮೇಲೆ ಕಣ್ಣಿಡುವುದಕ್ಕೆ ಫೊರ್ಮೋಸವು ಹೇಳಿಸಿದ ಸ್ಥಾನವೆಂಬ ಬಗ್ಗೆ ಯಾರಿಗೂ ಸಂಶಯವಿಲ್ಲ. ಆದುದರಿಂದ ಫೊರ್ಮೋಸವನ್ನು ಕಮ್ಯುನಿಸ್ಟರ ಕೈಗೊಪ್ಪಿಸಬಾರದು ಎಂದು ಅಮೇರಿಕದ ಛಲ. ಒಂದೊಮ್ಮೆ ಫೊರ್ಮೋಸ ಕೈತಪ್ಪಿಹೋದರೆ ಕಮ್ಯುನಿಸ್ಟ್ ಚೀನದ ಮೇಲಿನಹಿಡಿತವಷ್ಟೇ ತಪ್ಪಿಹೋಗುವುದಲ್ಲದೆ, ಫೊರ್ಮೋಸದಿಂದ ಕೇವಲ ೭೦ ಮೈಲುಗಳ ದೂರದಲ್ಲಿರುವ ಫಿಲಿಪೀನ ದ್ವೀಪ ಸಮುದಾಯಕ್ಕೂ ಗಂಡಾಂತರ ಬಂದೀತು ಎಂದು ಅಮೇರಿಕ ಹೆದರುತ್ತದೆ. ಜೆಟ್ ವಿಮಾನಗಳಿಗೆ ಇಷ್ಟು ದೂರ ಕ್ರಮಿಸಲು ಕೆಲವೇ ನಿಮಿಷಗಳು ಸಾಕು--ಮತ್ತು ಹೀಗೆ ಕಮ್ಯುನಿಸ್ಟರು ಆಕ್ರಮಣವನ್ನು ಮುಂದೊತ್ತುತ್ತ ಹೋದರೆ, ಪ್ರತಿಭಟಿಸುವುದು ಸುಲಭವಲ್ಲ.

ಆದುದರಿಂದ ಫೊರ್ಮೋಸದ ರಕ್ಷಣೆಗೆ ಸರ್ವಪ್ರಯತ್ನವನ್ನು ನಡೆಸಬೇಕಲ್ಲದೆ, ಅದರ ಮೇಲಾಗಬಹುದಾದ ಕಮ್ಯುನಿಸ್ಟರ ದಾಳಿಯ ಹುಟ್ಟನ್ನೆ ಅಡಗಿಸಿಬಿಡಬೇಕೆಂದು ಅಮೇರಿಕದ ನಿರ್ಧಾರ. ಇದಕ್ಕಾಗಿಯೇ ಚೀನದ ಮುಖ್ಯ ನೆಲಕ್ಕೆ ತೀರ ಸಮೀಪವಿರುವ, ಮತ್ತು ಬರಿಗಣ್ಣಿನಿಂದಲ್ಲದಿದ್ದರೂ ದುರ್ಬೀನಿನಿಂದ ಕಮ್ಯುನಿಸ್ಟರ ಚಲನವಲನಗಳನ್ನು ನಿರೀಕ್ಷಿಸುತ್ತಿರಬಹುದಾದ ಕ್ಯುಮೈ ದ್ವೀಪವನ್ನು ರಕ್ಷಿಸಲು ಅದರ ಸಂಕಲ್ಪ. ಸುಮಾರು ಹತ್ತು ಲಕ್ಷ ಜನರಿರುವ ಈ ದ್ವೀಪದಲ್ಲಿ ಈಗಾಗಲೇ ರಾಷ್ಟ್ರೀಯ ಸೈನಿಕರ ದೊಡ್ಡ ಪಡೆ ಬೀಡು ಬಿಟ್ಟಿರುತ್ತದೆ; ಮತ್ತು ಚೀನದ ಮುಖ್ಯ ನೆಲಕ್ಕೆ ಹೊಂದಿಕೊಂಡಿರುವ ಅಮೈ ಎಂಬ ಸರ್ವಸಜ್ಜಿತ ಬಂದರದ ಮೇಲೆ ದಾಳಿಯನ್ನು ನಡೆಸಿ ಥಕ್ಕೆಗಳನ್ನು ಧ್ವಂಸ ಮಾಡಲಾಗುತ್ತದೆ. ನಾವಿಕ ಪಡೆಯನ್ನು ಉಪಯೋಗಿಸಿ ಕಮ್ಯುನಿಸ್ಟರು ಎಷ್ಟು ಮಾತ್ರಕ್ಕೂ ಫೊರ್ಮೋಸದ ಬಳಿ ಹೋಗದಂತೆ ತಡೆಯುವ ಉದ್ದೇಶದಿಂದ ಕ್ಯುಮೈ ದ್ವೀಪದಲ್ಲಿ ಎಲ್ಲ ಸನ್ನಾಹಗಳನ್ನು ನಡೆಸಲು ರಾಷ್ಟ್ರೀಯರಿಗೆ ಅಮೇರಿಕ ನೆರವಾಗುತ್ತದೆ. ಫೊರ್ಮೋಸದಲ್ಲಿ ಚಿಯಾಂಗರಿಲ್ಲದಿರುತ್ತಿದ್ದರೆ, ಅವರಂಥ ಯಾರನ್ನೇ ಆದರೂ ಸೃಷ್ಟಿಸಿ, ಕಮ್ಯುನಿಸ್ಟರ ಆಕ್ರಮಣವನ್ನು ತಡೆಗಟ್ಟಬೇಕು ಎಂಬುದೇ ಅಮೇರಿಕದ ಧೋರಣೆಯ ತಿರುಳು.

ಹೇಗಾದರೂ ಮಾಡಿ ಚಿಯಾಂಗರನ್ನು ನಾಶಮಾಡಬೇಕು ಎಂದು ಕಮ್ಯುನಿಸ್ಟರ ಸಂಕಲ್ಪ—ಚಿಯಾಂಗರ ನಾಶವಾಗದಿದ್ದರೆ, ಕಮ್ಯುನಿಸ್ಟ್ ಚೀನಕ್ಕೆ ಭದ್ರತೆಯಿಲ್ಲ. ಏಕೆಂದರೆ ಫೊರ್ಮೋಸಾ ಮತ್ತಿತರೆ ಆಗ್ನೇಯ ಏಶ್ಯದ ದ್ವೀಪಗಳಲ್ಲಿರುವಗಾಂಲಕ್ಷ್ಯ ಚೀನೀಯರ ಸಹಾನುಭೂತಿಯು ಚಿಯಾಂಗರು ಇರುವಷ್ಟು ಕಾಲ ಕಮ್ಯುನಿಸ್ಟರಿಗೆ ಸಿಗಲಾರದು. ಚಿಯಾಂಗರು ಫೊರ್ಮೋಸದಲ್ಲಿದ್ದರೆ, ಅಮೇರಿಕವು ಅನ್ಯಾಯದಿಂದಲೆ ಆಗಲಿ, ಅಲ್ಲಿ ತಳವೂರುವುದರಿಂದ, ಮತ್ತು ಹಾಗೆ ನೆಲೆನಿಂತು ಚೀನದ ಕರಾವಳಿಯನ್ನು ಗಿಗ್ಬಂಧಿಸುವುದರಿಂದ ಕಮ್ಯುನಿಸ್ಟರಿಗೆ ತಮ್ಮ ಚಟುವಟಿಕೆಗಳನ್ನು ವಿಸ್ತರಿಸುತ್ತದಿರಲಿ, ನಿತ್ಯದ ವ್ಯಾಪಾರೋದ್ಯಮಗಳನ್ನು ನಡೆಸುವುದು ಸಹ ಸಾಧ್ಯವಾಗಲಾರದು. ಇಷ್ಟಲ್ಲದೆ, ಅಮೇರಿಕವು ಸೀಟೊ, ನೀಟೊ ಮುಂತಾದ ಒಪ್ಪಂದ ಕೃಮಗಳಿಂದ ಕಮ್ಯುನಿಸ್ಟರ ಚಟುವಟಿಕೆಯ ವಿರುದ್ಧ ಪ್ರಬಲ ಪಾಶ್ಚಾತ್ಯ ರಾಷ್ಟ್ರಗಳ ಸಹಕಾರವನ್ನು ಸಂಘಟಿಸಲು ಪ್ರಯತ್ನಿಸುತ್ತಿರುವುದರಿಂದಸುತ್ತಲೂ ಶತ್ರುಗಳು ತುಂಬಿ, ಹೆದರಿಕೆಯಿಂದಲೇ ದಿನಗಳೆಯುವ ಪಾಡು ಚೀನದ್ದಾಗುತ್ತದೆ ಇದನ್ನು ಕಮ್ಯುನಿಸ್ಟರು ಸಹಿಸುವುದಿಲ್ಲ- ಆದಕ್ಕಾಗಿ ಈಗಲೇ ಫೊರ್ಮೋಸದ ವಿಮೋಚನೆ ಮಾಡಬೇಕೆಂಬ ಛಲ ಅವರದು. ಕಾಗೆಂದು ಅಮೇರಿಕವು ನಡೆಸಿದ ಈಗಿನ ಕೈವಾಡದಿಂದ ಹಾಗೆ ಜರಗುವ ವಿಮೋಚನಾ ಹೋರಾಟವು ಅಮೇರಿಕದೊಡನೆ ನಡೆಸಿದ ಯುದ್ಧವೇ ಆಗುತ್ತದೆ; ಅಮೇರಿಕದ ಕಾಳಗ ಅಣುಶಸ್ತ್ರಗಳ ಪ್ರಯೋಗದಲ್ಲಿಯೇ ಪರ್ಯವಸಾನವಾಗುತ್ತದೆ. ಹೀಗೆ ಯುದ್ಧವು ಪ್ರಳಯದಲ್ಲಿ ಅಂತ್ಯವಾಗುವ ಈ ಭೀಕರಪ್ರಸಂಗವನ್ನು ತಡೆಯಬೇಕೆಂದೇ ಶಾಂತಿಪ್ರಿಯರ ಈಗಿನ ಪ್ರಯತ್ನ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ರೇವಣಾತಿ.

ಬರೇ ರೂಪಾಯಿ ಒಂದು ಅಧನಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬದ್ದಿ ಸಾಲಿಯಾನ್ ಸೇಕಡಾ ೪½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ನಾಲ್ಕನೇ ವರ್ಷದ ಹೊಸ್ತಿಲಲ್ಲಿ!

ನಮ್ಮ ಸಾಧನೆ—ನಮ್ಮ ಪ್ರತಿಜ್ಞೆ!

ಆರ್ ಎಸ್ ಕಣಿ,
ಸಂಚಾಲಕ

ಎ ದೇವರಾಯ ಶೆಟ್ಟಿ,
ಮೆನೇಜರ್

ಜನವರಿ 27, 1952.

ಹಲವು ವರ್ಷಗಳ ನಮ್ಮ ಆಸೆದಿನದ ಕನಸು ಒಂದು ರೂಪದಿಂದ ನೆನಸಾದ ದಿನವದು ಉಡುಪಿಯಲ್ಲೊಂದು ಆದರ್ಶವಾದ ಸಲಾಹಾರ ಮಂದಿರವನ್ನು ಆಧುನಿಕ ಸೌಕರ್ಯಗಳಿಂದೊಡ ಗೂಡಿ ಸೌಲಭ್ಯ ಪೂರ್ಣತೆಯಿಂದ ಪ್ರಾರಂಭಿಸಬೇಕೆಂಬ ನಮ್ಮ ಆಸೆ ತಂದು ಈಡೇರಿತು ಪ್ರಶಾಂತವಾದ ವಾತಾವರಣದ ಮಧ್ಯೆ, ಸಾರ್ವಜನಿಕ ಕೇಂದ್ರದಲ್ಲೇ ಇದ್ದು, ಒಂದು ಬಗೆಯ ಕುತೂಹಲ ಜನಕ ಹಿನ್ನೆಲೆಯಲ್ಲಿ 'ತಾಜ್‌ಮಹಾಲ್' ಪ್ರಾರಂಭವಾಯಿತು.

ಅಂದಿನಿಂದ ಇಂದಿಗೆ ಮೂರು ವರ್ಷಗಳು ಉರುಳಿಹೋಗಿವೆ ನೆರಳುಕೊಡುವ ಮರ ಒಂದು ಹತ್ತಾರು ಟೊಂಗೆಗಳಿಂದ ಸರ್ವತ್ರ ಪ್ರಸರಿಸುವಂತೆ 'ತಾಜಮಹಾಲ್' ತನ್ನೊಳಗೆ ಹಲವು ವಿಭಾಗಗಳನ್ನು ವೈವಿಧ್ಯಪೂರ್ಣವಾಗಿ ಮಾಡಿಕೊಂಡು ಇಂದು ಉಡುಪಿಯ ಹಾಗೂ ಉಡುಪಿಗೆ ಬರುವವರ ಆಕರ್ಷಣೀಯ ಕೇಂದ್ರವಾಗಿದೆ ಆದರ್ಶವಾದ ಸ್ಥಾನ ಪಡೆದಿದೆ ಉತ್ಸಾಹಪೂರ್ಣವಾದ ಜನಪ್ರಿಯತೆ ಪಡೆದಿದೆ

ಇದು ನಮ್ಮ ಸಾಧನೆಯೆಂದು ಹೇಳುವುದಕ್ಕಿಂತಲೂ ತುಂಬುಹೃದಯದ ನಮ್ಮ ಹೃತ್ಪೂರ್ವಕ ಸಹಕಾರವೇ ಕಾರಣವೆಂಬುದನ್ನು ನಾವೀ ಸಂದರ್ಭದಲ್ಲಿ ಮರೆಯದೆ ವಿನಯಪೂರ್ವಕವಾಗಿ ತಿಳಿಸಲೇಕ್ಷಿಸುತ್ತೇವೆ ಈ ಹುಟ್ಟುಹಬ್ಬದ ಸಂದರ್ಭದಲ್ಲೂ ನಮ್ಮ ಅಂತಃಕರಣಪೂರ್ವಕ ಕೃತಜ್ಞತೆಯನ್ನು ನಾವು ಮರೆಯದೆ ಸಲ್ಲಿಸುವೆವು

ತಾಜಮಹಾಲ್ ಇಂದು ಪಡೆದಿರುವ ಜನಪ್ರಿಯತೆಯ ಹೆಗ್ಗುರುತು ಶಾಶ್ವತರೀತಿಯಲ್ಲಿ ನಡೆದುಬರಬೇಕು ತಮ್ಮ ಪ್ರೀತಿ ಚಿರಂತನವಾಗಿರಬೇಕು. ವಿಶ್ವಾಸ ಅನವರತವಾಗಿರಬೇಕು ಅದಕ್ಕಾಗಿ ನಾವಿಂದು ವ್ಯವಹಾರವನ್ನು ಸೇವೆಯ ದೃಷ್ಟಿಯಲ್ಲೇ ಮುಂದರಿಸುತ್ತ ಬಂದಿದ್ದೇವೆ. ನಮ್ಮ ಗಿರಾಕಿಗಳಿಗೆ ಅತ್ಯಧಿಕ ಸೌಲಭ್ಯವನ್ನು ಕಲ್ಪಿಸುವದೇ ನಮ್ಮ ಎಂದೆಂದಿನ ಗುರಿಯಾಗಿದೆ ಅದಕ್ಕಾಗಿ ನಾವಿಂದು ಈ ನಾಲ್ಕನೇ ಹುಟ್ಟುಹಬ್ಬದ ಸಂತೋಷದ ಸಂಭ್ರಮದಲ್ಲಿ ಈ ನೆನಪು ನಿತ್ಯವೂ ಉಳಿಯಬೇಕೆಂಬ ಹಿರಿಯಾಸೆಯಿಂದ ನಮ್ಮ ಸಂದರ್ಶಕರಿಗೆ ಈ ರೀತಿ ಸೌಲಭ್ಯ ಒದಗಿಸಿಕೊಡುವೆವು

ನಮ್ಮ ಉಪಹಾರ ಮಂದಿರದ ತಿಂಡಿತಿನಸುಗಳ ದರದಲ್ಲಿ 12½% ಯಿಂದ 25% ದರ ವರೆಗೂ ದರವನ್ನು ಇಳಿಸಲಾಗುವುದು.

ಶೀರಾ ಪ್ಲೇಟು ಒಂದಕ್ಕೆ 0—1—0 ಹೋಳಿಗೆ 0—1—0.

ದರ ಇಳಿಸಲಾಗಿದೆಯೆಂದು ತಿಂಡಿತಿನಸುಗಳ ರುಚಿ, ಶುಚಿಯ ವಿಚಾರದಲ್ಲಿ ಅನುಮಾನ ಬೇಡ ನಮ್ಮಲ್ಲಿ ಬೆರಕೆಯ ಪ್ರಶ್ನೆಯೇ ಬರುವಂತಿಲ್ಲ. ಆರೋಗ್ಯಕರವಾದ ತಿಂಡಿಗಳ ಪೂರೈಕೆಯೇ ನಮ್ಮ ಧ್ಯೇಯ ಹಾಗೂ ಪ್ರತಿಜ್ಞೆ!

ಊಟದ ವೈಶಿಷ್ಟ್ಯ!





ನೋಡಿ ಈ ಫೊಟೊಗಳ ತಾರತಮ್ಯವನ್ನು ನೀವೆಷ್ಟು ಸುಲಭವಾಗಿ ಊಹಿಸಬಲ್ಲಿರೀನೋ ಸರಿ ಅದರೆ ಇದು ಒಬ್ಬರದೇ ಭಾವಚಿತ್ರವೆಂದರೆ ನೀವು ಬೆಚ್ಚಿಬೀಳಬೇಕಾಗಿಲ್ಲ ಆರೋಗ್ಯಕರವೂ ಹಿತಕರವೂ ಆದ ರುಚಿಕರ ಊಟ ದೊರಕಿದರೆ ಯಾರೂ ಇಂತಹ ಸುದೃಢ ದೇಹ ಹೊಂದಲು ಸಾಧ್ಯವಿದೆ. 'ತಾಜಮಹಾಲ್'ನ ಊಟ ಉಂಡವರು ಇಂತಹ ಸಪಾಟನ್ನು ಸಾಧಿಸಲು ಸಾಧ್ಯವಿದೆ ಎಂಬುದಕ್ಕೆ ಹಲವಾರು ಉದಾಹರಣೆ ನಾವು ನಿತ್ಯವೂ ಕೊಡಬಹುದಾಗಿದೆ.

ಹೋಟೇಲಿನ ಊಟವೆಂದೊಡನೆ ಓಕರಣೆಮಾಡುವ—ಮುಖ ಸಿಂಗರಿಸಿಕೊಳ್ಳುವ ಕಾಲ ಇದೀಗ ಮಾಯವಾಗಿದೆ ಬದಲು ಮನೆಮಂದಿಯೇ 'ತಾಜಮಹಾಲಿಗೆ ಧಾವಿಸಿ ಬಂದು ನಮ್ಮ ಊಟದ ರುಚಿನೋಡುವ ಕಾಲಬಂದಿದೆ ಅದೇ ನಮ್ಮ ಅಪರಿಮಿತ ಉತ್ಸಾಹದ ಫಲ—ನಿಮ್ಮ ಅಭಿರುಚಿಯನ್ನು ನಾವು ಕಂಡುಹಿಡಿದುದರ ನಿದರ್ಶನ

ಗಾರ್ಡನ್ ಪಾರ್ಟಿ

ನಿಸರ್ಗಸುಂದರ ಹಚ್ಚ ಹಸುರಿನ ಪ್ರಕೃತಿ ಮೈವೆತ್ತು ನಿಮ್ಮ ಮುಂದೆ ನರ್ತಿಸುವಾಗ —
ಆಕೆಯ ಸುಗಂಧದ ತಂಪು—ಸೌಂದರ್ಯದ ಸೊಂಪು—ಹತ್ತಿಂದಲ್ಲಿ ಪುಷ್ಪಸಮೂಹವಾಗಿ ಅರಳುವಾಗ—
ಪ್ರಶಾಂತ ವಾತಾವರಣದಲ್ಲಿ ಲೋಕವೇ ಸತ್ಯ, ನಿತ್ಯ ಸುಸುಂದರತೆಗಳೊಂದಿಗೆ ಸಮ್ಮಿಲನಗೊಂಡಾಗ—
ನಾವೂ—ನೀವೂ ಎಂತಹ ಕಷ್ಟಗಳಿದ್ದರೂ ಈ 'ನಿತ್ಯಸೌಂದರ್ಯ' ಕಂಡು ಒಂದು ಗಳಿಗೆಯಾದರೂ ಮುಗ್ಧರಾಗುವುದಿಲ್ಲವೆ?
ಅದಕ್ಕಾಗಿಯೇ ಹಸಿರು ಅಂದ ಮರದಲ್ಲಿ ಕುಳಿತು ಗೌತಮನು ಮಹಾತ್ಮಾ ಬುದ್ಧನೆನಿಸಿದನು.
ರವೀಂದ್ರನಾಥ ಠಾಕೂರರು ಹಸಿರು ಮರಗಳ ತಂನೆರಳಲ್ಲೇ ವಿಶ್ವವಿಖ್ಯಾತ 'ಶಾಂತಿನಿಕೇತನ'ವನ್ನು ಸ್ಥಾಪಿಸಿದರು
ಇಂದಿಗೂ ಜನಪದ ದಣಿದಾಗ ಚಿಂತೆ ಆವರಿಸಿದಾಗ ಹಸಿರನ್ನರಸಿ ಓಡುತ್ತಾರೆ
ನಾವೂ ಕೂಡಾ ನಿಮ್ಮ ಇಷ್ಟವನ್ನು ಪೂರೈಸಲು ಹಸುರು ಹೂದೋಟದ ಮಧ್ಯ ನಿಮ್ಮ ನಿತ್ಯ ಉಪಹಾರದ ಏರ್ಪಾಡು ಮಾಡಿದ್ದೇವೆ.
ನಿತ್ಯ ನೂತನ ಪ್ರಕೃತಿಯ ಚಿರಂತನ ನವನೆನಪಿಗಾಗಿ— **'ನಮ್ಮ ಗಾರ್ಡನ್ ಪಾರ್ಟಿ'.**

ಸಂದರ್ಶಕರು

ನಾವು ಪ್ರತಿಯೊಂದು ಏರ್ಪಾಡನ್ನೂ ಜನತಾಹಿತಕಾಂಕ್ಷೆಯ ದೃಷ್ಟಿಯಿಂದಲೇ ಮಾಡುತ್ತೇವೆ. ಈ ಎಲ್ಲವೂ ಸೌಲಭ್ಯ, ಸೌಕರ್ಯಗಳನ್ನು ಜನರ ಮನಸ್ಸಿನ ದೃಷ್ಟಿಯಿಟ್ಟೇ ಪೂರೈಸುವ ಪ್ರಯತ್ನ ಮಾಡಿದ್ದೇವೆ ಆಸ್ವಾದ್ಯ ಗಿರಾಕಿಗಳನ್ನು ನಿತ್ಯವೂ ಆಕರ್ಷಿಸುವ ನಮ್ಮ ತಾಣದಲ್ಲಿ ಅಕಸ್ಮಾತ್ ಒದಗಬಹುದಾದ ಲೋಪದೋಷಗಳು ಸಹಜವೇ ಅದರೆ ಇಂತಹ ಲೋಪದೋಷಗಳು ನಮಗೆ ತಿಳಿದುಬಂದಾಗಲೆಲ್ಲಾ ಅದನ್ನು ಕೂಡಲೇ ಸರಿಪಡಿಸಿದ್ದೇವೆ ಇಂತಹ ಸಂದರ್ಭಗಳಲ್ಲಿ ಜನರು ತೋರಿದ ಸಹನೆ, ಸಹಕಾರ ಅದ್ಭುತವೆಂಬ ಭಾವನೆ ಅಂತಹ ವಿಶಾಲಾಂತಃಕರಣದ ಬಗೆಗೆ ನಾವು ಕೃತಜ್ಞತೆ ಅರ್ಪಿಸುತ್ತೇವೆ. ದಿನದಿನಕ್ಕೆ ಹೊಸ ಹೊಸ ಏರ್ಪಾಡುಗಳನ್ನು ಕೈಗೆತ್ತಿರುವ ಈ ಕಾಲದಲ್ಲಿ ಆ ರಭಸಕ್ಕೆ ಸರಿಯಾಗಿ ಕಾಲದೊಡನೆ ಹೆಜ್ಜೆಹಾಕುತ್ತ ಜನರ ಅಭಿರುಚಿಯನ್ನು ನಾವೂ ಮಾರ್ಪಾಡು ಮಾಡುವ ಹಿರಿಯಾಸೆಯ ಉತ್ಸಾಹ ನಮ್ಮದು ಅದಕ್ಕೆ ನಿಮ್ಮ ಸಹಕಾರಬೇಕು ಅದಕ್ಕಾಗಿ ಸಂದರ್ಶಕರು ಈಯಬಹುದಾದ ಸಲಹೆಗೆ ವಿಶೇಷ ಪ್ರಾಧಾನ್ಯತೆ ಕೊಟ್ಟಿದ್ದೇವೆ ನಮ್ಮ ಪ್ರೀತಿಯ ಗಿರಾಕಿಗಳ ಗೌರವಪೂರ್ವಾದ ಸಲಹೆಯನ್ನೂ ನಾವು ಮರೆಯದೆ ಸ್ವೀಕರಿಸಿ ನಮ್ಮಿಂದ ಸ್ಯಾಧ್ಯವಾಗುವ ಏರ್ಪಾಡು ಒದಗಿಸುವ ಅಭ್ಯಾಸನೆ ಈ ಸಂದರ್ಭದಲ್ಲಿ ಅಭಿಮಾನದಿಂದ ಕೊಡುತ್ತೇವೆ

"ಸರ್ವೇಜನಾ ಸುಖಿನೋ ಭವಂತು" ಇದು ನಮ್ಮ ಧ್ಯೇಯ ಇದು ನಮ್ಮ ಗುರಿ—ಇದೇ ನಮ್ಮ ಸಾಧನೆ—ಇದೇ ನಮ್ಮ ಪ್ರತಿಜ್ಞೆ.

PHONE 68

ತಾಜಮಹಾಲ್

ಅತ್ಯಾಧುನಿಕ ಊಟ, ಉಪಹಾರ ಗೃಹ, ಸಿನೆಮಾ ಥಿಯೇಟರಿನ ಬಳಿ, ಉಡುಪಿ.

(೧ನೇ ಪುಟದಿಂದ)

ದುವಾಗ ತುಂಬ ಆತಂಕಗಳನ್ನು ಎದುರಿಸ ಬೇಕಾಗುತ್ತದೆ. ನಿರಪರಾಧಿಯನ್ನೂ ನಿಗೂಢ ಅಪರಾಧಿಯನ್ನೂ ಸುಲಭದಲ್ಲಿ ಗುರುತಿಸಲಾಗುವುದಿಲ್ಲ— ಆದುದರಿಂದ ಮಧ್ಯ ಮಾರ್ಗವನ್ನೆ ಪೋಲೀಸರು ಆಸರಿಸಿದರೂ ಅದು ಒಬ್ಬನ ದೃಷ್ಟಿಗೆ ಮೃದುವೆಂದೂ ಇನ್ನೊಬ್ಬನಿಗೆ ಕಠಿಣವೆಂದೂ ತೋರುವುದು ಸಹಜ. ಪೋಲೀಸರಿಂದಬೇಕೆಂದೇ ತೊಂದರೆಯಾಗುವುದಿಲ್ಲ— ಅವರು ಯಾರನ್ನೂ ಶಿಕ್ಷಿಸಲು ಅಥವಾ ಪುರಸ್ಕರಿಸಲು ಹೋಗುವುದಿಲ್ಲ. ನ್ಯಾಯಾಲಯವೇ ಅದನ್ನು ಮಾಡುತ್ತದೆ.

ರಾಷ್ಟ್ರದ ಪ್ರಗತಿಯಲ್ಲಿ ಪೋಲೀಸರು ನೆರವಾಗಬಹುದೆಂಬ ವಿಷಯದಲ್ಲಿ ಜನರು ಸದಭಿಪ್ರಾಯವನ್ನೇನು ಹೊಂದಿಲ್ಲ. ಬ್ರಿಟಿಷರ ಕಾಲದಲ್ಲಿ ಸತ್ಯಾಗ್ರಹಿಗಳ ಮೇಲೆ ದೊಣ್ಣೆ ಬೀಸುವುದಕ್ಕೂ ಗುಂಡು ಹಾರಿಸುವುದಕ್ಕೂ ಉದ್ಯುಕ್ತರಾದ ಪೋಲೀಸರ ವಿಷಯದಲ್ಲಿ ನಮ್ಮಲ್ಲಿ ಹೆಚ್ಚಿನವರಿಗೆ ಸಮಾಧಾನಕರವಾದ ಭಾವನೆಯಿಲ್ಲವೆಂದೇ ಕಾಣುತ್ತದೆ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕವೂ ಪೋಲೀಸರು ಅದೇ ಕೆಲಸದಲ್ಲಿ ಮಗ್ನರೆಂಬ ಭಾವನೆ ಜನರಲ್ಲಿದ್ದಂತೆ ತೋರುತ್ತದೆ – ಮುಷ್ಕರಗಳು, ಸತ್ಯಾಗ್ರಹಗಳು ಇತ್ಯಾದಿ ನಡೆದಾಗ ಪೋಲೀಸರು ಕೈಗೂಳ್ಳುವ ಕಾರ್ಯಕ್ರಮ ಅಷ್ಟೇನೂ ಮೆಚ್ಚಿಕೆಯನ್ನು ಪಡೆದಿಲ್ಲ. ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿದ ಸ್ವತಂತ್ರ ಭಾರತದಲ್ಲಿ ಹೀಗೆ ಪೋಲೀಸರ ಕಾರುಭಾರು ನಡೆಯುತ್ತದೋ ಎಂದು ಪ್ರಶ್ನಿಸಲಾಗುತ್ತದೆ. ಆದರೆ ಪೋಲೀಸರು ಶಾಂತಿರಕ್ಷಕರು ಪ್ರಜೆಗಳ ಪ್ರಾಣ ಮತ್ತು ಆಸ್ತಿಗಳನ್ನು ಕಾಪಾಡುವ ನೇಮಕರು—ಎಂಬುದನ್ನು ನೆನೆದರೆ, ಮೇಲಿನ ಅಭಿಪ್ರಾಯವನ್ನು ಬದಲಿಸುವುದೇ ಹಿತವೆಂದು ಕಾಣದಿರದು.

ಜನರು ಪೋಲೀಸರ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಿಸುವುದರಿಂದ ರಾಷ್ಟ್ರಕ್ಕೆ ಹೆಚ್ಚಿನ ಲಾಭವಾಗುವುದ ನಿಶ್ಚಯ –ಏಕೆಂದರೆ ಜನರ ಬೆಂಬಲ ದೊರೆತರೆ ಪೋಲೀಸರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆಯನ್ನು ತೋರಿಸಬಲ್ಲರು. ಪೋಲೀಸರು ಸಹ ತಮ್ಮ ಹಾಗೆಯೇ ರಾಷ್ಟ್ರದ ಪ್ರಜೆಗಳು ಎಂಬ ಸತ್ಯವನ್ನು ಸಾರ್ವಜನಿಕರು ಸ್ಮರಿಸುತ್ತಿದ್ದರೆ, ಅವರ ಬಗೆಗೆ ಸೋದರ ಭಾವನೆ ಬಲಿಯದಿರದು. ಅದೇ ಸಮಯ ಪೋಲೀಸರಿಗೆ ರಾಷ್ಟ್ರದ ಹಿತದೃಷ್ಟಿಯಿಂದ ಕೆಲವು ವಿಶಿಷ್ಟ ಕರ್ತವ್ಯಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಒಪ್ಪಿಸಲಾಗಿದೆಯೆಂದೂ ಜನರು ತಿಳಿದಿರಬೇಕು. ಪೋಲೀಸು ದಳವು ಶಿಸ್ತನ್ನು ಪಾಲಿಸುವ, ವ್ಯವಸ್ಥಿತ ತರಬೇತಿಯನ್ನು ಪಡೆದ ವ್ಯಕ್ತಿಗಳ ಸಂಸ್ಥೆಯಾಗಿರುವುದರಿಂದ ಅದು ರಾಷ್ಟ್ರದ ಅಭಿವೃದ್ಧಿಯಲ್ಲಿ ವಿಶೇಷ ರೀತಿಯಲ್ಲಿ ನೆರವಾಗುವುದು ಸಾಧ್ಯವೆಂದು ನೆಹರುಗಳ ಅಭಿಪ್ರಾಯ. ವಿಪತ್ತಿನ ಪ್ರಸಂಗಗಳಲ್ಲಿ ಸೈನ್ಯ ದಳದಂತೆ ಪೋಲೀಸು ಪಡೆಯೂ ಸಾರ್ವಜನಿಕರ ನೆರವಿಗೆ ಬಂದಿದೆ—ಕ್ಷಾಮ ನಿವಾರಣೆಯಲ್ಲಿ, ಪ್ರವಾಹ ನಿಯಂತ್ರಣದಲ್ಲಿ ಪೋಲೀಸರಿಂದ ಜನರಿಗಾದ ಲಾಭ ಅಷ್ಟಿಷ್ಟಲ್ಲ.

ಈಚೆಗೆ ಪೋಲೀಸರಲ್ಲಿ ಸಹ ಶಿಸ್ತು ಗೇಡಿತನವು ಸ್ವಲ್ಪ ಮಟ್ಟಿಗೆ ಮನೆಮಾಡಿಕೊಂಡಿದೆಯೆಂಬುದು ಶೋಚನೀಯವಾದ ವಿಚಾರ— ಶಾಸನಗಳು ಪ್ರಜೆಗಳಿಂದ ಪಾಲಿಸಲ್ಪಡುವಂತೆ ನೋಡಿಕೊಳ್ಳಬೇಕಾದ ಪೋಲೀಸರು ತಾವೇ ಶಾಸನವನ್ನು ಮುರಿದ ಉದಾಹರಣೆಗಳು ಅಪರೂಪವಲ್ಲ. ಪೋಲೀಸರೇ ಲಂಚಕ್ಕೆ ಕೈಯೊಡ್ಡಿದ, ಮದ್ಯಪಾನ ಪ್ರತಿಬಂಧ ಶಾಸನವನ್ನು ಧಿಕ್ಕರಿಸಿದ ಪ್ರಕರಣಗಳು ನಿತ್ಯವೂ ಬೆಳಕಿಗೆ ಬರುತ್ತಿದ್ದು, ಇದರಿಂದ ಪೋಲೀಸು ಪಡೆಯ ಮೇಲಿನ ಗೌರವ ಭಾವನೆ ತಗ್ಗುತ್ತದೆ. ಅನ್ಯಾಯವಾಗಿ ಮುಷ್ಕರ ಮತ್ತು ಸತ್ಯಾಗ್ರಹವನ್ನು ಮಾಡುವ ತಂಡಗಳ ಮೇಲೆ ಶಾಸನಬದ್ಧಕ್ರಮ ತೆಗೆದುಕೊಳ್ಳುವ ಪೋಲೀಸರೇ ತಮ್ಮ ವಿವಾದ ತೀರ್ಮಾನಕ್ಕೆ ಶಾಂತಿಯುತವಾದ, ಮಾತುಕತೆ ನಡೆಸುವ ಮಾರ್ಗವನ್ನು ಬಿಟ್ಟುಗೊಟ್ಟು ಸಂಪು ಹೂಡುವ ಪ್ರಸಂಗ ಜನರಲ್ಲಿ ಒಳ್ಳೆಯ ಅಭಿಪ್ರಾಯವನ್ನು ಹುಟ್ಟಿಸದು. ಪೋಲೀಸು ಪಡೆಯ ಮೇಲೆ ಕೆಟ್ಟ ಹವ್ಯಾಸದಿಂದಾಗುವ ಕಲಂಕವನ್ನು ತೊಡೆಯುವಲ್ಲಿ ಪ್ರತಿಯೊಬ್ಬ ಪೋಲೀಸನೂ ಪ್ರಯತ್ನ ಶೀಲನಾಗಬೇಕು—ಹಾಗಾಗದೆ, ಜನರ ಸಹಾನುಭೂತಿಗಳಿಸುವುದು ಕಷ್ಟ.

—ಕಾರ್ತಿಕೇಯ.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ಸಮರ್ಪಣೆ

ಬರೆದವರು:"ಕಮಲನಾಭ"ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದಕ್ಷಿಣ ಕನ್ನಡ. ಬೆಲೆ: ರೂ. ೧–೦–೦.

'ಕನ್ನಡಿಗರಿಗೆ ಶ್ರೀ "ಕಮಲನಾಭ" ರು ಹೊಸಬರೇನೂ ಅಲ್ಲ— ಅವರು ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಾಥಮಿಯನ್ನು ಪಡೆದ ತರುಣರು; ಸಾಹಿತ್ಯದ ಕುರಿತಾದ ಪ್ರೇಮದಿಂದ ಈಚೆಗೆ ಹತ್ತು–ಹನ್ನೆರಡು ವರ್ಷಗಳಿಂದ ಬಗೆಬಗೆಯಾಗಿ ಸೇವೆ ಸಲ್ಲಿಸಿದ ಉತ್ಸಾಹಿಗಳು. ಕತೆ, ಲೇಖನಾದಿಗಳನ್ನು ಬರೆಯುವುದಕ್ಕಿಂತಲೂ ಕವನಗಳನ್ನು ಬರೆಯುವುದೆಂದರೆ ಅವರಿಗೆ ತುಂಬಾ ಇಷ್ಟ. ಅವರ ರಸಿಕತೆ, ಮನಃಶುದ್ಧಿ, ಪ್ರಾಣಯೋಲ್ಲಾಸ ಹಾಗು ಭಾಷೆಯ ಮೇಲಿನ ಹಿಡಿತ— ಇವೆಲ್ಲವೂ ಅವರನ್ನು ಭವ್ಯ ಭವಿಷ್ಯತ್ತುಳ್ಳ ಕವಿಗಳಾಗಿ ಮಾಡಿವೆ ಎಂಬ ವಿಷಯ "ಸಮರ್ಪಣೆ" ಎಂಬ ಈ ಮೊದಲನೇ ಕವನ ಸಂಕಲನದಿಂದ ವ್ಯಕ್ತವಾಗುತ್ತದೆ. ಇಲ್ಲಿ ಅವರು ಸ್ವತಃ ಬರೆದ ಕೆಲವು ಕವಿತೆಗಳಲ್ಲದೆ ಹಿಂದಿ ಮತ್ತು ಸಂಸ್ಕೃತದಿಂದ ಆಯ್ದು ಅನುವಾದ ಮಾಡಿದ ಕೆಲವು ಗೀತೆಗಳೂ ಹಿಂದಿ ಯಲ್ಲಿ ಒಳ್ಳೆಯ ಪ್ರಸಿದ್ಧಿಯನ್ನೂ ಮನ್ನಣೆಯನ್ನೂ ಹೊಂದಿದ ಶ್ರೀ ಮೈಥಿಲೀಶರಣ ಗುಪ್ತರ "ಜಯಂತ" ಯ ಕಾವ್ಯಾನುವಾದ, "ಮಾಯಾ ಮಯಿ"ಯೂ ಕನ್ನಡದ ರಸಿಕರಿಗೆ ಅರ್ಪಿಸಲಾದ ಸವಿ ತಿನಿಸುಗಳು. ಶ್ರೀ "ಕಮಲನಾಭ"ರ ಸ್ವಂತ ಕವಿತೆಗಳಲ್ಲಿ ವಿನಯವೂ ರಸಿಕತೆಯೂ ತುಂಬಿಕೊಂಡು ಓದುಗರ ಹೃದಯವನ್ನು ಸೆರೆ ಹಿಡಿಯುತ್ತವೆ. ಅಲಂಕಾರ ಪ್ರಿಯತೆಗಿಂತಲೂ ಭಾವ ಸೌಂದರ್ಯ, ಶೃಂಗಾರ ಪ್ರಿಯತೆಗಿಂತಲೂ ಚಿತ್ತಸ್ಥೈರ್ಯಲ್ಲಿ, ವಾಸ್ತವತೆಯ ವ್ಯಾಮೋಹಕ್ಕಿಂತಲೂ ಸತ್ಯಾನ್ವೇಷಣದ ಪಂಬಲ–ಇವನ್ನು ಇಲ್ಲಿಯ ಕವಿತೆಗಳಲ್ಲಿ ಗುರುತಿಸಬಹುದು. ಅವರು ನಿರಾಶಾವಾದಿಗಳಲ್ಲ; ಅಶೆಯೇ ಜೀವನದ ಉಸಿರು ಎನ್ನುವವರು. ಉದಾತ್ತವಾದ, ಆದರ್ಶವಾದ ಬಾಳ್ಬಯ ಕನಸನ್ನು ಕಂಡವರು– ಇವು ಅವರ ಕವಿತೆಗಳ ಅಂತಃಸತ್ವವನ್ನು ಗಣನೀಯವಾಗಿ ಹೆಚ್ಚಿಸುತ್ತವೆ; ಕವಿತೆಯ ಸಾಲುಗಳಲ್ಲಿ ಅಡ್ಡಿಯಿಲ್ಲದೆ ಹರಿದು ಬರುವ ಪ್ರವಾಹದ ನೆನಪನ್ನು ತಂದು ಕೊಡುತ್ತವೆ. ಎಲ್ಲಿಯೂ ಅನುಚಿತವಾದ ಪದಪ್ರಯೋಗವಿಲ್ಲ; ಶಬ್ದಕ್ಕಾಗಿ ಹುಡುಕಬೇಕಾಗಿ ಬಂದಂತೆಯೂ ಕಾಣಿಸುವುದಿಲ್ಲ. "ಮಾಯಾ ಮಯಿ" ಯಂಥ ಕಾವ್ಯಾನುವಾದ ಸಹ ಕನ್ನಡಕ್ಕೆ ಸಹಜವಾದ ಶೈಲಿಯಲ್ಲಿ ಮೂಲಕ್ಕೆ ಕುಂದಿಲ್ಲದಂತೆ ಮಾಡಲ್ಪಟ್ಟಿರುವುದು ಶ್ರೀ "ಕಮಲನಾಭ"ರ ಕಾವ್ಯ ರಕ್ತಪಡೆದ ಸಿದ್ಧಿಯ ಸೂಚಕವೆಂದರೆ ತಪ್ಪಲ್ಲ. ಅವರಿಗೆ ನಾವು ಇತೋಹ್ಯತಿಶಯವಾದ ಶ್ರೇಯಸ್ಸನ್ನು ಕೋರುವುದಲ್ಲದೆ ಕನ್ನಡಿಗರ ಪ್ರೋತ್ಸಾಹವೂ ಸಿಗುತ್ತಿರಲೆಂದು ಹಾರೈಸುತ್ತೇವೆ.

ಲಘು ಪರಿಚಯ

* ಮದ್ರಾಸಿನ ಕಮಿಶನರ್ ಆಫ್ ಫೂಡ್ ಸಾಪ್ಲಿಕೈನ್ ಅವರಿಂದ ೧೯೫೨–೫೩ನೇ ಇಸವಿಯಲ್ಲಿ ಮದ್ರಾಸು ರಾಜ್ಯದಲ್ಲಿ ,ಅಧಿಕ ಆಹಾರ ಬೆಳೆಯಿರಿ' ಎಂಬ ಚಳವಳದಂತೆ ನಡೆಸಲಾದ ಕಾರ್ಯಕ್ರಮಗಳ ಸುತ್ತ ಸಾಧನೆಯ ವಿವರಗಳನ್ನು ಕೊಡುವ ಚಿಕ್ಕ ಪುಸ್ತಕವೊಂದು ಪ್ರಕಟವಾಗಿದೆ. ಇದರಲ್ಲಿ ನೀರಾವರಿಯ ಅನುಕೂಲತೆಗಳನ್ನು ಒದಗಿಸಿಯೂ ಉತ್ತಮ ಗೊಬ್ಬರ, ಬೀಜ ಮತ್ತು ಇತರ ಹತ್ಯಾರುಗಳನ್ನು ಪೂರೈಸಿಯೂ ಆಹಾರ ಧಾನ್ಯಗಳ ಬೆಳೆಯನ್ನು ಅಧಿಕಗೊಳಿಸಲು ರೈತರಿಗೆ ನೆರವಾದ ಸಂಗತಿಯ ಉಲ್ಲೇಖವಿದೆಯಲ್ಲದೆ, ಮೀನುಗಾರಿಕೆಯ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ನಡೆಸಿದ ಪ್ರಯತ್ನಗಳ ಮಾಹಿತಿಯೂ ಕಂಡುಬರುತ್ತದೆ. ವಿಷಯದ ಸಮಗ್ರ ಗ್ರಹಣಕ್ಕೆ ಅನುಕೂಲವಾದ ೧೩ ಅನುಬಂಧಗಳನ್ನು ಸೇರಿಸಿರುವುದರಿಂದ ಪುಸ್ತಕದ ಉಪಯುಕ್ತತೆ ಹೆಚ್ಚಿರುತ್ತದೆ.

* ಕಾರ್ಕಳ ಪುಸ್ತಕವ್ಯಾಪಾರಿಗಳಾದ ಮೆಸರ್ಸ್ ಆರ್. ವಿಟ್ಟಪ್ಪ ಶೆಣೈ ಎಂಡ್ ಸನ್ಸ್ ಇವರಿಂದ "ಸುಕನ್ಯಾ ಪರಿಣಯ ಅಥವಾ ಇಂದ್ರಗರ್ವಾಪಹಾರ" ಮತ್ತು "ಭೂಕೈಲಾಸ ಅಥವಾ ಮಂಡೋದರಿ ಪರಿಣಯ" ಎಂಬೆರಡು ಯಕ್ಷಗಾನ ಪ್ರಸಂಗಗಳು ಪ್ರಕಟಿಸಲ್ಪಟ್ಟಿವೆ. ಇವುಗಳಲ್ಲಿ ಮೊದಲನೆಯದನ್ನು ಬರೆದವರು ಆಗುಂಬೆಯ ಅಧ್ಯಾಪಕರಾದ ಶ್ರೀ ಎ. ಅನಂತ ಮೂರ್ತಿ ಹೆಬ್ಬಾರರು; ಎರಡನೆಯದನ್ನು ಕನ್ನಡ ಕವಿ ಭೂಷಣ ಶ್ರೀ ಮುದ್ರಾಡಿ ವೆಂಕಪ್ಪಯ್ಯ ನವರು ಬರೆದಿದ್ದಾರೆ. ಇವೆರಡೂ ಹೊಸ ಕಥಾವಸ್ತುಗಳನ್ನೊಳಗೊಂಡು ಸಾಕಷ್ಟು ಚೆನ್ನಾಗಿಯೇ ಬರೆಯಲ್ಪಟ್ಟಿವೆ– ಆದುದರಿಂದ ತುಳುಮದ್ದಳೆಯಲ್ಲಿ ಆಸಕ್ತಿಯುಳ್ಳವರಿಗೂ ದಶಾವತಾರ ಮೇಳದವರಿಗೂ ತುಂಬ ಪ್ರಯೋಜನಕರವೆನಿಸುವುದೆಂದು ನಾವು ನಂಬುತ್ತೇವೆ. ಹಳೆಸಿದ ಕತೆಗಳ ಸ್ಥಾನದಲ್ಲಿ ಹೊಸಕತೆಗಳನ್ನು ಆವಿಷ್ಕರಿಸಲಾಗುವಂತೆ ನಡೆದ ಈ ಪ್ರಯತ್ನವನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.

ದಿ| ಕೊರಡ್ಕಲ್ ಶ್ರೀನಿವಾಸ ರಾಯರಿಂದ ರಚಿತವಾದ

ಎಂಬ ಆಂಗ್ಲ ಸ್ವಯಂಬೋಧಿನಿಯಿಂದ ಸ್ವತಃ ಇಂಗ್ಲಿಷ್ ಕಲಿಯಿರಿ.

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ. ತ್ವರೆಯಾಗಿ ತರಿಸಿಕೊಳ್ಳಿರಿ.
ದೊರೆಯುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ ನವಯುಗ ಪ್ರೆಸ್, ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

Edited, Printed & Published By K. H. Shetty at the Navayuga Press, Udipi, S. India

ನವಯುಗ

ಸಂಪುಟ ೩೪ — ಉಡುಪಿ, 16—6—1955 — ಸಂಚಿಕೆ ೪೦

VOL. 34 — NO. 40

ಯೋಜಕರಿಗೆ ಸಲಹೆ

ನಿರುದ್ಯೋಗವನ್ನು ಅದಷ್ಟು ಬೇಗನೇ ನಿವಾರಿಸುವುದು ನಮ್ಮ ಯೋಜನೆಯ ಮುಖ್ಯೋದ್ದೇಶ. ನಿರುದ್ಯೋಗದ ಸಮಸ್ಯೆ ಪರಿಹಾರವಾಗುವ ವರೆಗೆ ಸಮಾಜಕ್ಕೆ ಅಪಾರ ವೆಚ್ಚದ್ದಾಗಿರುವ ತಾಂತ್ರಿಕ ಪದ್ಧತಿಯ ಅಸುಖಾಸವನ್ನು ದೂರವಿಡಲು ನಾನು ಬಯಸುತ್ತೇನೆ. ಏಕೆಂದರೆ ಗ್ರಾಮೋದ್ಯೋಗಗಳನ್ನೂ ಗೃಹಕೈಗಾರಿಕೆಗಳನ್ನೂ ಹೆಚ್ಚಿಸುವುದರಿಂದಲೇ ನಿರುದ್ಯೋಗವು ನಿರ್ಮೂಲವಾಗಬಲ್ಲುದು. ಲಕ್ಷಾವಧಿ ಜನರನ್ನು ಕೆಲಸಗೇಡಿಗಳಾಗಿ ಉಳಿಯಗೊಡುವುದಕ್ಕಿಂತ ಯಾಂತ್ರಿಕ ಉತ್ಪಾದನೆಯನ್ನು ನಿಲ್ಲಿಸುವುದೇ ಲೇಸು

—ಪ್ರೊ. ಮಹಾಲನೋಬಿ.

ಕಲ್ಕತ್ತೆಯಿಂದ ಬಂದ ಸುದ್ದಿಯೊಂದು ನಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯ ಕುರಿತು ಕೆಲವು ಮನನೀಯ ವಿಚಾರಗಳನ್ನು ವ್ಯಕ್ತಪಡಿಸುತ್ತದೆ. ಯೋಜನೆಯ ಮೂಲ ಅಂಶಗಳ ಕುರಿತು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಪ್ರಚಾರ ನಡೆಯಬೇಕೆಂಬ ಪ್ರಧಾನ ಮಂತ್ರಿಗಳ ಸೂಚನೆಯಂತೆ, ಯೋಜನೆಯ ವಿಷಯದಲ್ಲಿ ಕೇಂದ್ರ ಮಂತ್ರಿ ಮಂಡಳಕ್ಕೆ ಸಲಹೆಗಾರರಾಗಿರುವ ಸುಪ್ರಸಿದ್ಧ ಸಂಖ್ಯಾ ಶಾಸ್ತ್ರಜ್ಞ ಪ್ರೊ. ಮಹಾಲನೋಬಿಸರು ಒಂದು ಪತ್ರಿಕಾ ಪರಿಷತ್ತನ್ನು ನೆರೆಯಿಸಿದರು, ಮತ್ತು ಅಲ್ಲಿ ಯೋಜನೆಯ ರೂಪರೇಖೆಗಳನ್ನು ವರ್ಣಿಸಿದರು. ಅವರ ಹೇಳಿಕೆಯಂತೆ, ಮುಂದಿನ ಯೋಜನೆಯ ಅವಧಿಯಲ್ಲಿ ಸರಕಾರವು ಹೆಚ್ಚು ಹೆಚ್ಚಾಗಿ ಔದ್ಯೋಗಿಕ ಕ್ಷೇತ್ರದಲ್ಲಿ ಪ್ರವೇಶ ಮಾಡುತ್ತದೆ ಉಕ್ಕು. ಸಿಮೆಂಟು ಇತ್ಯಾದಿ ಮೂಲಭೂತ ಕೈಗಾರಿಕಗಳಲ್ಲಿ ಅದು ಮಗ್ನವಾಗುತ್ತದೆ, ಆದರೆ ಬಾಸಗಿ ವಲಯದ ರಾಷ್ಟ್ರೀಕರಣವನ್ನೇನು ಅದು ಮಾಡುವುದಿಲ್ಲ. ಗ್ರಾಮೋದ್ಯೋಗಗಳೊಡನೆಯೂ ಗೃಹ ಕೈಗಾರಿಕೆಗಳೊಡನೆಯೂ ಸ್ಪರ್ಧಿಸುವ ಕಾರ್ಖಾನೆಗಳ ವಿಸ್ತರಣೆಗೆ ಸರಕಾರ ಅನುಮತಿ ಕೊಡುವುದಿಲ್ಲ. ನಿತ್ಯೋಪಯೋಗದ ವಸ್ತುಗಳ ವಿಷಯದಲ್ಲಿ ವಿಕೇಂದ್ರೀಕರಣದ ತತ್ವಗಳನ್ನು ಅಳವಡಿಸಿಕೊಳ್ಳುವುದೇ ಮಹಾಲನೋಬಿಸರ ಅಭಿಪ್ರಾಯವಿದ್ದಂತೆ ತೋರುತ್ತದೆ.

ತಾಂತ್ರಿಕ ಪ್ರಗತಿಯ ಬೆನ್ನು ಹತ್ತಿ, ಯಂತ್ರಗಳ ಆಶ್ರಯವನ್ನು ದೊಡ್ಡ ಪ್ರಮಾಣದಲ್ಲಿ ಎಡೆಯುವ ಹವ್ಯಾಸವನ್ನು ಬಿಟ್ಟುಗೊಟ್ಟರೆ ಮಾತ್ರ ಭಾರತದಲ್ಲಿ ವಿದ್ಯಮಾನವಿರುವ ನಿರುದ್ಯೋಗ ಸಮಸ್ಯೆಯನ್ನು ದೂರ ಮಾಡಲು ಸಾಧ್ಯವೆಂಬ ಮೂಲಭೂತ ಅಂಶವನ್ನು ಯೋಜನಾ ಆಯೋಗ ಮನಗಂಡಿರುವಂತೆ ಮಹಾಲನೋಬಿಸರ ಹೇಳಿಕೆಯಿಂದ ಅಭಿಪ್ರಾಯವಾಗುತ್ತದೆ. ಅವರು ಜನರನ್ನು ಕೆಲಸವಿಲ್ಲದೆ ಸಮಯ ಕಳೆಯಲು ಬಿಡುವುದಕ್ಕಿಂತ ಯಂತ್ರಗಳನ್ನು ಉಪಯೋಗಿಸದಿರುವುದೇ ಯೋಗ್ಯವೆಂದು ಸಾರಿದರು. ಮುಂದಿನ ಯೋಜನೆಯು ದೇಶದಲ್ಲಿ ೧೨೦ ಲಕ್ಷ ಹೊಸ ಉದ್ಯೋಗದ ಅವಕಾಶಗಳನ್ನು ಒದಗಿಸಿಕೊಡಬೇಕೆಂದು ಉದ್ದೇಶಿಸಿರುವುದರಿಂದ ಈ ಕ್ರಮವು ಅತ್ಯಗತ್ಯವೆಂಬ ವಾದದಲ್ಲಿ ಸತ್ಯಾಂಶವೇ ಕಂಡು ಬರುತ್ತದೆ. ತಾಂತ್ರಿಕ ಹಾಗು ಯಾಂತ್ರಿಕ ವಿಜ್ಞಾನದ ಪ್ರಯೋಜನವನ್ನು ಮಾಡಿಕೊಳ್ಳದೆ, ಕೇವಲ ಗೃಹೋದ್ಯಮಗಳನ್ನೂ ಗ್ರಾಮೋದ್ಯೋಗಗಳನ್ನೂ ಆಶ್ರಯಿಸುವುದು ಆಧುನಿಕ ವಾತಾವರಣಕ್ಕೆ ಒಪ್ಪಿದ ಮಾತಲ್ಲವೆಂದು ಸಾಮಾನ್ಯವಾಗಿ ದೂರಲಾಗುತ್ತದೆ ಆದರೆ, ಭಾರತದ ವಿಶಿಷ್ಟ ಪರಿಸ್ಥಿತಿಗೆ ಕೈಗಾರೀಕರಣದಿಂದ ಹೆಚ್ಚಿನ ಸಹಾಯ ದೊರಕಲಾರದೆಂಬುದೂ, ಕೈಗಾರೀಕರಣವಾಗುವುದು ತೀರಾ ಅನಿವಾರ್ಯವೆನಿಸಿದ ಪ್ರಸಂಗದಲ್ಲಿ ಸಹ ಅದು ವಿಕೇಂದ್ರೀಕರಣದ ತತ್ವಗಳಂತೆ, ಗ್ರಾಮ ಸಮಾಜದ ಧರ್ಮದಂತೆ, ನಡೆಯಬೇಕೆಂಬುದೂ ಪ್ರಾಜ್ಞರ ಅಭಿಪ್ರಾಯ.

ಮಹಾತ್ಮಾ ಗಾಂಧೀಯವರು ಸುರಸ್ತರಿಸಿದ ಮೇಲಿನ ಮಾರ್ಗವನ್ನು ನಾವು ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿಯೂ ಅನುಸರಿಸಬೇಕೆದ್ದಿತು; ಆದರೆ ದುರ್ದೈವದಿಂದ ಹಾಗಾಗಲಿಲ್ಲ. ನಾವು ಸ್ವಾವಲಂಬನದ ಘನವಾದ ಉದ್ದೇಶವನ್ನು ಇಟ್ಟುಕೊಂಡಿದ್ದೆವು. ನಿಜ; ಆದುದರಿಂದ ಆಹಾರ ಮುಂತಾದ ವಲಯಗಳಲ್ಲಿ ಕೊರತೆ ನೀಗಿಸಲು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಲಾಯಿತು; ಇದರಿಂದ ಲಕ್ಷಾಂತರ ಎಕ್ರೆ ಹೊಲಗಳು ನೀರುಣ್ಣುವಂತಾಯಿತು. ಆದರೆ ಇವೆಲ್ಲವುಗಳಿಗಾಗಿ ನಾವು ಹಾಕಿದ ಬಂಡವಾಳವೆಷ್ಟು? ಮತ್ತು ಅವುಗಳಿಂದ ದೊರತ ಪ್ರತಿಫಲದಿಂದ ಜನರು ಪಡೆದ ಪ್ರಯೋಜನವೆಷ್ಟು? ರೈತ ಕುಟುಂಬಗಳು ಕೆಲಮಟ್ಟಿಗೆ ಸಮೃದ್ಧವಾಗಿರಬಹುದು. ಆದರೆ ಈ ಸಮೃದ್ಧಿಗೂ ವೆಚ್ಚಮಾಡಿದಹಣದಪ್ರಮಾಣಕ್ಕೂ ಯೋಗ್ಯ ಸಂಬಂಧವಿಲ್ಲ ಅಷ್ಟೇಯಲ್ಲ, ಅಣೆಕಟ್ಟುಗಳ ರಚನೆಯಲ್ಲಿ ಯಂತ್ರಗಳ ನೆರವನ್ನೆ ಧಾರಳವಾಗಿ ಆಶ್ರಯಿಸಲಾಯಿತು; ಮನುಷ್ಯ ಬಲದ ಉಪಯೋಗಕ್ಕೆ ಸಾಕಷ್ಟು ಅವಕಾಶ ಕೊಡಲ್ಪಡಲಿಲ್ಲ, ಸಿಮೆಂಟು, ಉಕ್ಕು ಮುಂತಾದ ಸಲಕರಣೆಗಳನ್ನು ನೂರಾರು ಕೋಟಿ ರೂಪಾಯಿಗಳ ವೆಚ್ಚದಿಂದ ಹೊರದೇಶಗಳಿಂದ ತರಿಸಿ, ಇವುಗಳನ್ನು ರಚಿಸಲಾಯಿತು. ಇದೆಲ್ಲ ನಿಜವಾಗಿ ರಾಷ್ಟ್ರಕ್ಕೆ ಪ್ರಯೋಜನಕರವಾಗಿದ್ದಿತೆ?

"ಹರಿಜನ" ಪತ್ರಿಕೆಯ ಸಂಪಾದಕರಾದ ಶ್ರೀ ಮಗನಭಾಯಿ ಪಿ. ದೇಸಾಯಿಯವರ ಅಭಿಪ್ರಾಯದಲ್ಲಿ ಇವು ವೈಭವ ಹಾಗು ವಿಲಾಸದ ಕಾರ್ಯಕ್ರಮಗಳೇ ಹೊರತು, ರಾಷ್ಟ್ರಕ್ಕೆ ಪೋಷಕವಾದ ಅಂಶ ಇವುಗಳಲ್ಲಿ ಹೆಚ್ಚಿಲ್ಲ. ಹೊಲಗಳಿಗೆ ನೀರು ಹೊರೈಸುವುದು ಒಳ್ಳೆಯ ಕೆಲಸವೆಂಬುದರಲ್ಲಿ ಯಾರದೂ ತಕರಾರಿಲ್ಲ. ಆದರೆ, ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಉಕ್ಕು ಮತ್ತು ಸಿಮೆಂಟುಗಳನ್ನು ಉಪಯೋಗಿಸಿಯೇ ಕೋಟ್ಯಾಂತರ ರೂಪಾಯಿಗಳ ವೆಚ್ಚದಿಂದ ಕಟ್ಟಬೇಕೇ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ.

ಎಲ್ಲಿಯಲ್ಲಿ ಹಾಳಾಗಿ ನಿಂತಿದ್ದ ಮೋಟಾರುಕಾರನ್ನು ಎಳೆಯಿಸಿಕೊಂಡು ಬಂದ ಗಾಡಿಯವನು ತನ್ನ ಎತ್ತುಗಳಿಂದಿಗೆ ಮನೆಗೆ ಬಂದ ಆಗ ಅವನ ಹೆಂಡತಿ "ಎಷ್ಟು ರೂಪಾಯಿ ಬಾಡಿಗೆ ಬೇಕಿದರಿ?" ಎಂದು ಕೇಳಿದಳು

"ಎರಡು ರೂಪಾಯಿ"

"ಅಯ್ಯೋ! ಇಷ್ಟೆಯೆ? ನಿನಗೇನೂ ಬುದ್ಧಿಇಲ್ಲವೊ ನನಗೆ ಗೊತ್ತಾಗದು. ಇನ್ನು ಮುಂದೆ ನೀನೇ ಗಾಡಿ ಎಳೆದು, ಎತ್ತುಗಳು ಬಾಡಿಗೆ ಬೇಕಿದರೆ, ಕೆಲಸಕ್ಕೆ ತಕ್ಕ ಪ್ರತಿಫಲ ದೊರಕೀತು" ಎಂದು ಹೆಂಡತಿ ಮೂದಲಿಸಿದಳು

ದೇಸಾಯಿಗಳ ಮಾತಿನಲ್ಲಿ "ಸಾಮಾನ್ಯವಾಗಿ ನಮ್ಮ ಪ್ರತಿಯೊಂದು ಹಳ್ಳಿಯಲ್ಲಿ ಬಾವಿ, ಕೆರೆ, ಹಳ್ಳ, ಎಲೆಗಳಲೆ ಅವು ಮಣ್ಣಿನಿಂದ ಮುಚ್ಚಿ ಹೋಗಿದ್ದು ಅನೇಕಾನೇಕ ವರ್ಷಗಳ ಅಲಕ್ಷ್ಯದಿಂದ ತಮ್ಮ ಉಪಯುಕ್ತತೆಯನ್ನು ಕಳೆದುಕೊಂಡಿವೆ. ನೀರಿನ ಸೂರೈಕೆಯ ಈ ಸ್ರೋತಗಳನ್ನು ಮೊದಲಿಗೆ ದುರಸ್ತಿಮಾಡುವ ಯೋಜನೆ ರಚಿಸಿದ್ದರೆ ಅದು ಯೋಗ್ಯವಾಗುತ್ತಿರಲಿಲ್ಲವೆ? ಇದರಿಂದ ಸಾಮಾನ್ಯ ಜನರ ಮೇಲಾಗುವ ಪರಿಣಾಮ, ಜನರಲ್ಲಿ ಹುಟ್ಟಬಹುದಾದ ಉತ್ಸಾಹ, ಅದರ ಕಾರ್ಯಾಚರಣೆಗೆ ಜನರು ಸ್ವೇಚ್ಛೆಯಿಂದ ಮುಂದೆ ಬಂದು ದುಡಿಯಬಹುದಿದ್ದ ಸಂದರ್ಭ— ಇವುಗಳನ್ನೆಲ್ಲ ಯೋಚಿಸಿ ಕೊಂಡರೆ ವೈಸನವಿರೇಳುವುದಿಲ್ಲವೆ?' ಇದರ ಬದಲು ದೊಡ್ಡ ಯಂತ್ರಗಳನ್ನು ಉಪಯೋಗಿಸಿದ್ದರಿಂದ ಜನರಲ್ಲಿ ಎಷ್ಟು ಮುಂದಿಗೆ ಪ್ರಯೋಜನವಾಯಿತು? ಅವರಿಂದ ಯಾವ ಬಗೆಯ ಸಹಕಾರ ಯೋಜನೆಗೆ ದೊರಕಿತು?—ತಿಳಿಯದು.

ಸೌರಾಷ್ಟ್ರದಲ್ಲಿ ಬ್ರಾಹ್ಮಣಿ ನದಿಗೆ ಅಣೆಕಟ್ಟೊಂದನ್ನು ವೈಸೂರಿನ ಇಂಜಿನಿಯರರಾದ ಶ್ರೀ ನೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಲಹೆಯಂತೆ ಕಟ್ಟಿದ್ದಾರೆ. ಇದು ೮೦೦ ಅಡಿ ಉದ್ದ, ೨೮೦ ಅಡಿ ಅಗಲ ಮತ್ತು ೬೧ ಅಡಿ ಎತ್ತರವಾಗಿದೆ; ಆದರ ಇದರ ರಚನೆಯಲ್ಲಿ ನೀರು ಬಳಿದು ಹೋಗಬಹುದಾದ ತುದಿಗಳಲ್ಲಿ ಹೊಂತು ಬೇರೆಲ್ಲೂ ಸಿಮೆಂಟನ್ನು ಉಪಯೋಗಿಸಿಲ್ಲ; ಕೇವಲ ಮಣ್ಣಿನಿಂದಲೇ ಇದನ್ನು ಕಟ್ಟಲಾಯಿತು. ವೆಚ್ಚ ೨೦ ಲಕ್ಷ ರೂಪಾಯಿಗಳು ಮಾತ್ರ! ಆದುದರಿಂದ ಅಣೆಕಟ್ಟುಗಳನ್ನು ಉಕ್ಕು ಮತ್ತು ಸಿಮೆಂಟುಗಳಲ್ಲದೆ ರಚಿಸುವುದು ಸಾಧ್ಯವಿಲ್ಲವೆಂಬ ಮಾತು ಸುಳ್ಳೆನಿಸುತ್ತದೆ. ನಮಗೆ ವೈಭವ ಬೇಡ, ಹಾಕಿದ ಹಣಕ್ಕೆ ತಕ್ಕ ಪ್ರತಿಫಲ ಸಿಗಬೇಕು ಎಂದಿದ್ದರೆ, ಸುಲಭ ಮಾರ್ಗವನ್ನು ಅನು

(೯ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ
ವಿಶೇಷ ಸೌಕರ್ಯಗಳುಳ್ಳ ಸೇವಿಂಗ್ಸ್ ಬ್ಯಾಂಕಿನ
ವ್ಯವಸ್ಥೆ ಮಾಡಿರುವೆವು.

ಹೆಚ್ಚಿನ ಸೂಚನೆಗೆ
ನಿಮಗೆ ಸಮೀಪವಿರುವ 'ಸಿಂಡಿಕೇಟ್' ಬ್ಯಾಂಕಿನ' ಶಾಖೆಯಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.
Estd: 1925 H O UDIPI, S India

ಅಮೇರಿಕದಲ್ಲಿ ನೀಗ್ರೋಗಳ ಸಮಸ್ಯೆ

ಸುಧಾರಕರ ಶಾಸನದೊಡನೆ ವಿರೋಧಿಗಳ ತಾಕಲಾಟ

ನಮ್ಮ ದೇಶದಲ್ಲಿ ಹರಿಜನರನ್ನು ಅಸ್ಪೃಶ್ಯರೆಂದು ದೂರವಿಡುವ ಪದ್ಧತಿ ಕಂಡು ಬರುತ್ತದೆಯಲ್ಲವೆ? ಸರಕಾರದವರು ಸುಧಾರಕ ಮನೋಭಾವದ ಸಾರ್ವಜನಿಕರ ಸಹಕಾರದಿಂದ ಅಸ್ಪೃಶ್ಯತೆಯ ಉಚ್ಚಾಟನೆಗಾಗಿ ಈಗ ಶಾಸನಗಳನ್ನು ಮಾಡಿ, ಅದನ್ನು ಜಾರಿಗೆ ತರಲು ಬಹಳ ಪ್ರಯತ್ನಪಡುತ್ತಾರೆ. ಮಹಾತ್ಮಾ ಗಾಂಧೀಯವರು ಅಸ್ಪೃಶ್ಯರನ್ನು "ಹರಿಜನರು" ಎಂಬ ಗೌರವದ ಹೆಸರಿನಿಂದ ಕರೆದು ತನ್ನನ್ನು "ಹರಿಜನರ ಸೇವಕ" ಎಂಬುದಾಗಿ ಭಾವಿಸಿದ ೧೯೨೦ನೇ ಇಸವಿಯ ಸುಮಾರಿನಿಂದ ಭಾರತದಲ್ಲಿ ಅಸ್ಪೃಶ್ಯತೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಆಚರಿಸುವುದು ಕಡಿಮೆಯಾಗುತ್ತಾ ಬರುತ್ತಿದೆ. ಆದರೂ ಈ ಶಾಸನಗಳು ನಮ್ಮ ಜನರ ಅಭಿಪ್ರಾಯ ಉಚ್ಚವರ್ಣದವರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಉಂಟು ಮಾಡಿ ಅಸ್ಪೃಶ್ಯತೆಯ ಪದ್ಧತಿಯೇ ಮಾಯವಾಗುವುದಕ್ಕೆ ಇನ್ನೂ ಕೆಲವು ದಶಕಗಳು ಹಿಡಿಯಬಹುದು. ಇದು ಸಾಕಷ್ಟು ದೀರ್ಘಕಾಲವಲ್ಲ; ಅಷ್ಟು ಅವಧಿ ಸಹಜವಾಗಿಯೇ ಬೇಕು ಎಂಬುದು ಅಮೆರಿಕದ ಹರಿಜನರೆಂದು ಕರೆಯಬಹುದಾದ ನೀಗ್ರೋಗಳ ಇಂದಿನ ಪರಿಸ್ಥಿತಿಯಿಂದ ನಮಗೆ ಮನಪರಿಕೆಯಾಗುತ್ತದೆ.

ಸಂಯುಕ್ತ ರಾಜ್ಯ (ಅಮೇರಿಕದಲ್ಲಿನ ನೀಗ್ರೋಗಳ ಪರಿಸ್ಥಿತಿಯು ಈಗ ವಿಶೇಷವಾಗಿ ಚರ್ಚಿಸಲ್ಪಡುತ್ತಿದೆ. ಮೊನ್ನೆ ಅಮೇರಿಕದ ಶ್ರೇಷ್ಠ ನ್ಯಾಯಸ್ಥಾನವು ಕೊಟ್ಟ ಒಂದು ತೀರ್ಮಾನವೇ ಇದಕ್ಕೆ ಕಾರಣ. ಕಳೆದ ವರ್ಷದ ಮೇ ತಿಂಗಳಲ್ಲಿ ಶ್ರೇಷ್ಠ ನ್ಯಾಯಸ್ಥಾನವು ಶಾಲೆಗಳಲ್ಲಿ ನೀಗ್ರೋಗಳನ್ನು ಅಮೇರಿಕನ್ನರಿಂದ ಪ್ರತ್ಯೇಕಿಸುವುದು ರಾಜ್ಯ ಘಟನೆಗೆ ವಿರುದ್ಧವೆಂದು ತೀರ್ಪು ಹೇಳಿದ್ದಿತು; ಮತ್ತು ಈ ತೀರ್ಪನ್ನು ರಾಷ್ಟ್ರದಾದ್ಯಂತ ಎಲ್ಲರೂ ಒಪ್ಪಬೇಕೆಂದು ವಿಧಿಸಿದ್ದಿತು. ಆದರೆ ಇಲ್ಲಿ ಗೆಪ್ರಶ್ನೆಯು ಬಗೆ ಹರಿಯಲಿಲ್ಲ. ಏಕೆಂದರೆ, ನ್ಯಾಯಸ್ಥಾನವು ಎನನ್ನೆ ಹೇಳಲಿ, ಅಮೇರಿಕದ ದಕ್ಷಿಣ ಭಾಗದಲ್ಲಿರುವ ಹೆಚ್ಚಿನ ರಾಷ್ಟ್ರಗಳಿಗೆ ನೀಗ್ರೋಗಳನ್ನು ಅಮೇರಿಕನ್ನರೊಡನೆ ಬೆರೆಯಗೊಡುವ ಈ ತೀರ್ಪು ಸಹನೆಯಾಗಲಿಲ್ಲ. ನೀಗ್ರೋಗಳನ್ನು ಅಮೇರಿಕನ್ನರನ್ನೇ "ಸಮಾನವಾದ" ರೀತಿಯಲ್ಲಿ ನಡೆಸಿಕೊಳ್ಳುವುದಕ್ಕೆ ಅವುಗಳದು ಅಡ್ಡಿ ಇರಲಿಲ್ಲ; ಆದರೆ ಪ್ರತ್ಯೇಕವಾಗಿಡುವ ಬದಲು, ಅಮೇರಿಕನ್ನರು ಹೊಕ್ಕಲ್ಲೆಲ್ಲ ನೀಗ್ರೋಗಳೂ ಹೊಕ್ಕು ಅವರೊಂದಿಗೆಯೇ "ಬೆರೆತು" ಹೀಗೆ "ಸಮಾನವಾದ" ರೀತಿಯಲ್ಲಿ ನಡೆಸಿಕೊಳ್ಳಲ್ಪಡುವುದನ್ನು ದಕ್ಷಿಣದ ರಾಷ್ಟ್ರಗಳು ಉಗ್ರವಾಗಿ ವಿರೋಧಿಸುತ್ತವೆ. ಆದುದರಿಂದಲೇ ಶ್ರೇಷ್ಠ ನ್ಯಾಯಸ್ಥಾನವು ಈ ವರ್ಷ ಪುನಃ ಈ ವಿಷಯದಲ್ಲಿ ಅನಿವಾರ್ಯವಾಗಿ ಕೈ ಹಾಕಬೇಕಾಯಿತು.

ಶ್ರೇಷ್ಠ ನ್ಯಾಯ ಸ್ಥಾನವು ಈ ಸಲ ಹಿಂದಿನ ನಿಲುಮೆಯನ್ನು ಬದಲಿಸುವುದಕ್ಕೇನೂ ಹೋಗಲಿಲ್ಲ. ನೀಗ್ರೋಗಳನ್ನು ಪ್ರತ್ಯೇಕವಾಗಿಡುವುದು ಎಷ್ಟಕ್ಕೂ ಅಮೇರಿಕನ್ನರೊಡನೆ ಸಮಾನ ರೀತಿಯಿಂದ ನಡೆಸಿದ ಹಾಗಲ್ಲವೆಂಬುದನ್ನು ಅದು ದೃಢವಾಗಿ ಮರಳಿ ಒತ್ತಿ ಹೇಳಿತು. ಆದರೆ ದಕ್ಷಿಣದ ರಾಜ್ಯಗಳ ತೀವ್ರ ವಿರೋಧವನ್ನೂ ಅಲ್ಲಿಯ ಜನರ ಮನೋಭಾವವನ್ನೂ ಲಕ್ಷ್ಯದಲ್ಲಿಟ್ಟುಕೊಂಡು "ಉದ್ದೇಶ ಪೂರ್ವಕವಾದ ತ್ವರಿತ ಗತಿಯಿಂದ ಕ್ಲಪ್ತ ಸಮಯದೊಳಗೆ" ನೀಗ್ರೋಗಳನ್ನು ಅಮೇರಿಕನ್ನರಿಂದ ಶಾಲೆಗಳಲ್ಲಿ ಪ್ರತ್ಯೇಕವಾಗಿಡುವ ಪದ್ಧತಿಯು ಕೊನೆಗೊಳ್ಳಬೇಕು ಎಂದು ತನ್ನ ಕಳೆದ ವರ್ಷದ ತೀರ್ಪಿಗೆ ಭಾಷ್ಯವನ್ನು ಬರೆಯಿತು. ಕ್ಲಪ್ತ ಸಮಯವೆಂದರೆ ಎಷ್ಟು ಎಂಬುದನ್ನು ಸ್ವಶೀಯ ನ್ಯಾಯ ಸ್ಥಾನಗಳು ಅಲ್ಲಿಯ ವಿದ್ಯಮಾನವನ್ನು ಪರಿಶೀಲಿಸಿ ನಿರ್ಧರಿಸಬೇಕೆಂದು ಅದು ವಿಧಿಸಿತು. ಇದನ್ನು ಸಾಮಾನ್ಯವಾಗಿ ಎಲ್ಲರೂ ಎರಡು ಅತಿರೇಕಗಳ ನಡುವಣ ಮಧ್ಯ ಮಾರ್ಗ ಎಂಬುದಾಗಿ ಒಪ್ಪುತ್ತಾರೆ. ನಿಶ್ಚಿತ ಅವಧಿಯೊಂದನ್ನು ಹಾಕಬೇಕೆಂಬ ನೀಗ್ರೋಗಳ ಪರವಾದ ಸೂಚನೆ, ಮತ್ತು ನೀಗ್ರೋಗಳನ್ನು ಎಂದೆಂದಿಗೂ ಅಮೇರಿಕನ್ನರೊಡನೆ ಬೆರೆಯಗೊಡಬಾರದೆಂಬ ದಕ್ಷಿಣದ ರಾಜ್ಯಗಳ ಪ್ರತಿಭಟನೆಯ ವಾತಾವರಣದಲ್ಲಿ ಅಮೇರಿಕದ ಶ್ರೇಷ್ಠ ನ್ಯಾಯಸ್ಥಾನ ಒಳ್ಳೆಯ ಜಾಣರ್ಯದ ತೀರ್ಪು ಹೇಳಿತೆಂದು ಸಾಮಾನ್ಯವಾಗಿ ಎಲ್ಲೆಡೆಯೂ ಒಪ್ಪಲಾಗುತ್ತದೆ.

ದಕ್ಷಿಣದ ರಾಜ್ಯಗಳಲ್ಲಿ ನೀಗ್ರೋಗಳ ವಿರುದ್ಧವಾದ ಭಾವನೆ ಇಷ್ಟು ತೀವ್ರವಾಗಲು ಕಾರಣವೇನು? ಅಮೇರಿಕದ ಚರಿತ್ರೆಯ ಪುಟಗಳನ್ನು ಅಭ್ಯಸಿಸಿದರೆ ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ಹದಿನಾರನೇ ಶತಮಾನದಲ್ಲಿ ಕೊಲಂಬಸನು ಅಮೇರಿಕದ ಈ ಹೊಸ ಭೂಖಂಡವನ್ನು ಕಂಡು ಹಿಡಿದ ಬಳಿಕ ಐರೋಪ್ಯ ಜನಾಂಗಗಳು ಇಲ್ಲಿಯ ಸಂಪತ್ತನ್ನು ಸೂರೆಗೊಳ್ಳುವುದಕ್ಕಾಗಿ ಎಲೆಸೆ ಬರತೊಡಗಿದವು. ಈ ಎಲೆಸೆಗಾರರು ಮೊತ್ತಮೊದಲು ಅಮೇರಿಕದ ದಕ್ಷಿಣ ಭಾಗವನ್ನು ಪ್ರವೇಶಿಸಿದರು. ಈಗಿನ ಜಾರ್ಜಿಯ, ಮಿಸ್ಸಿಸಿಪಿ, ಲೂಸಿಯಾನಾ, ದಕ್ಷಿಣ ಕೆರೊಲೀನಾ, ಕೆಂಟುಕಿ, ವರ್ಜೀನಿಯಾ, ಒಕ್ಲಹಾಮಾ, ಟೆನೆಸ್ಸಿ, ಮಿಸ್ಸೂರಿ, ಡೆಲ್ಟಾರೆ ಮುಂತಾದ ರಾಜ್ಯಗಳಲ್ಲಿ ಅವರು ಕಾಲೂರಿದರು. ಇಲ್ಲಿ ವಿಶಾಲವಾದ ಹೊಲಗಳನ್ನು ಮಾಡಿಕೊಂಡು, ಬೇಸಾಯವನ್ನು ತೊಡಗಿದರು. ಆದರೆ, ತೀರ ಹೊಸತಾದ ಈ ಭೂಮಿಯಲ್ಲಿ ಚೆನ್ನಾಗಿ ಪರಿಶ್ರಮಪಟ್ಟು ದುಡಿಯಬೇಕಾದ ಜನರ ಅಗತ್ಯ ಅವರಿಗೆ ಬಹಳವಾಗಿ ಗೋಚರವಾಯಿತು. ಇದಕ್ಕೋಸ್ಕರ ಬ್ರಿಟಿಷರು ಒಂದು ಉಪಾಯವನ್ನು ಹೂಡಿದರು— ಆಫ್ರಿಕದಿಂದ ನೀಗ್ರೋಗಳನ್ನು ತಂದು ಇಲ್ಲಿಯ ಹೊಲಗದ್ದೆಗಳಲ್ಲಿ ದುಡಿಸಿದರು. ನೀಗ್ರೋಗಳನ್ನು ಹಿಡಿದು, ಅಮೇರಿಕಕ್ಕೆ ತಂದು, ಹಣಕ್ಕೋಸ್ಕರ ಮಾರಾಟ ಮಾಡುವ ಹವ್ಯಾಸ ಬಲವಾಯಿತು. ದುಡ್ಡಿಗೆ ಕೊಂಡ ಈ ಜನರನ್ನು ವಲಸೆಗಾರರು ತಮ್ಮ ದಾಸರಂತೆ, ಪಶುಗಳಂತೆ ಕಂದರು. ಗಂಡಸರು ಹೆಂಗಸರಿಗಿಂತ ಹೆಚ್ಚು ಬಲಿಷ್ಠರಾಗಿದ್ದುದರಿಂದ ಮತ್ತು ಚೆನ್ನಾಗಿ ದುಡಿಯುತ್ತಿದ್ದುದರಿಂದ, ನೀಗ್ರೋ ಹೆಂಗಸರನ್ನು ಹಿಡಿದು ತರುವುದು ವಿರಳವಾಯಿತು. ಈ ಪ್ರಕಾರ ನೀಗ್ರೋಗಳು ಕೊಟ್ಟಿಗೆಯಲ್ಲಿ ಮಲಗುತ್ತಿದ್ದರು; ಯಜಮಾನ ಹಾಕಿದುದನ್ನು ತಿನ್ನುತ್ತಿದ್ದರು; ಕೌಟುಂಬಿಕ ಬಂಧನ ಅವರಿಗೆ ಇರಲಿಲ್ಲ; ಆದರೆ ಯಾವನದ ಮದವನ್ನು ದಮನಿಸುವುದು ಅವರಿಂದಾಗಲಿಲ್ಲ—ಹೀಗಾಗಿ ನೀಗ್ರೋ ಗಂಡಸರಿಗೆ ಜನಿಸಿದ ವಿವಾಹ ಬಾಹಿರ ಸಂತಾನಗಳು ಹೆಚ್ಚಕೊಂಡಾಗ ಯಜಮಾನನೇ ಅವುಗಳ ಹೊಟ್ಟೆ ಹೊರಬೇಕಾಯಿತು.

ಇಷ್ಟಾದರೂ ಬ್ರಿಟಿಷರು ನೀಗ್ರೋಗಳ ವ್ಯಾಪಾರವನ್ನು ನಿಲ್ಲಿಸಲಿಲ್ಲ. ಎಷ್ಟೋ ವೇಳೆ ಅವರು ತೀರ ಅಮಾನುಷವಾದ ರೀತಿಯಲ್ಲಿ ನೀಗ್ರೋಗಳನ್ನು ನಡೆಸಿಕೊಂಡರು— ತಂದೆಯನ್ನು ಹೆಂಡತಿಯಿಂದ, ಮಕ್ಕಳನ್ನು ಹೆತ್ತವರಿಂದ ಬೇರೆಯಾಗಿಡುವ ರೀತಿಯಲ್ಲಿ ವ್ಯಾಪಾರವನ್ನು ಮಾಡಿದರು. ದನವನ್ನೊಬ್ಬನಿಗೆ, ಅದರ ಕರುವನ್ನು ಇನ್ನೊಬ್ಬನಿಗೆ ಮಾರಿ ಬಿಡುವಂತೆ ನೀಗ್ರೋಗಳನ್ನು ಸಹ ಅವರುಲಾಭಕ್ಕಾಗಿ ವಿಕ್ರಯಿಸಿದರು ಆದರೆ ೧೭೭೬ನೇ ಇಸವಿಯಲ್ಲಿ, ಅಂದರೆ ಇಂದಿಗೆ ಸುಮಾರು ೧೮೦ ವರ್ಷಗಳ ಹಿಂದೆ, ಅಮೇರಿಕಕ್ಕೆ ಇಂಗ್ಲೆಂಡು ಸ್ವಾತಂತ್ರ್ಯವನ್ನಿತ್ತಿತು. ಆಗ ಅಮೇರಿಕವು ತನ್ನದೇ ರಾಜ್ಯಾಂಗ ಘಟನೆಯೊಂದನ್ನು ರಚಿಸಿಕೊಂಡಿತು. ಅದರಲ್ಲಿ ವರ್ಣ, ಜನಾಂಗ ಮುಂತಾದ ಯಾವ ಭೇದವೂ ಇಲ್ಲದೆ— ನಮ್ಮ ಭಾರತದ ರಾಜ್ಯಾಂಗ ಘಟನೆಯಲ್ಲಿರುವಂತೆ—ಎಲ್ಲರಿಗೂ ಸಮಾನಾಧಿಕಾರ, ಸಭಾಸ್ಥಾನಾವಕಾಶ, ಸಮಾನವಾದ ವರ್ತನೆಯ ಸೂತ್ರವನ್ನು ಸೇರಿಸಿದರು. ಆದರೆ ಈ ಸೂತ್ರ ವ್ಯವಹಾರಗಳಲ್ಲಿ ಒಡನೆಯೇ ಇಳಿಯಲಿಲ್ಲ. ಏಕೆಂದರೆ ಆದಕ್ಕೆ ದಕ್ಷಿಣದವರು ಏನೇನೂ ಮಹತ್ವವನ್ನು ಕೊಡಲಿಲ್ಲ; ಬದಲು ಅದನ್ನು ತಿರಸ್ಕರಿಸಿದರು. ಇಷ್ಟರ ವರೆಗೆ ಪಶು ಜೀವನ ನಡೆಸಿಕೊಂಡು ಬರುತ್ತಿದ್ದವರನ್ನು, ದಾಸರಂತೆ ಕಾಣುತ್ತಿದ್ದವರನ್ನು ಸಮಾನತೆಯಿಂದ ನೋಡುವ ಕಲ್ಪನೆಯೇ ದಕ್ಷಿಣದವರಿಗೆ ಹಿಡಿಸಲಿಲ್ಲ. ಉತ್ತರದ ರಾಜ್ಯಗಳವರು ಮಾತ್ರ ನೀಗ್ರೋಗಳಿಗೆ ಸಹಾನುಭೂತಿ ತೋರಿಸುತ್ತಿದ್ದರು. ಆದರೆ, ಅವರು ಸಹ ದಕ್ಷಿಣದವರನ್ನು ಸಂಪೂರ್ಣ ವಿರೋಧಿಸುತ್ತಿರಲಿಲ್ಲ. ಏಕೆಂದರೆ ತಮ್ಮಲ್ಲಿನ ಕೈಗಾರಿಕೆಗಳಿಗೆ ದಕ್ಷಿಣದ ರಾಜ್ಯಗಳಿಂದ ಬರುವ ಹತ್ತಿ, ಹೊಗೆಸೊಪ್ಪು, ನೀಲಿ ಮತ್ತಿತರ ಬೆಳೆಗಳು ಅವರಿಗೆ ಅಗತ್ಯವಾಗಿದ್ದವು; ಈ ಬೆಳೆಗಳನ್ನು ಬೆಳೆಸುವುದಕ್ಕಾಗಿ ದುಡಿಯಲು ನೀಗ್ರೋಗಳು ಬೇಕಿದ್ದರು.

ಪರಿಸ್ಥಿತಿ ಹೀಗಿರುವಾಗ ೧೭೮೭ರಲ್ಲಿ ರಾಜಕೀಯ ಪಟುಗಳೆಲ್ಲ ಒಟ್ಟು ಸೇರಿ, ನೀಗ್ರೋಗಳ ವ್ಯಾಪಾರವನ್ನು ನಿರ್ಬಂಧಿಸುವ ಮೂಲಕ ರಾಜ್ಯಾಂಗ ಘಟನೆಯ ಪಾವಿತ್ರ್ಯವನ್ನು ಸ್ವಲ್ಪ ಮಟ್ಟಿಗಾದರೂ ಉಳಿಸಿಕೊಳ್ಳಲು ನಿರ್ಧರಿಸಿದರು. ಇದಕ್ಕೋಸ್ಕರ ಎರಡು ಸಾವಿರಕ್ಕಿಂತಲೂ ಹೆಚ್ಚು ಸಂಘಗಳನ್ನು ರಚಿಸಿಕೊಂಡು ನೀಗ್ರೋ ವ್ಯಾಪಾರದ ಮತ್ತು ನೀಗ್ರೋಗಳನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುವುದರ ವಿರೋಧ ದೊಡ್ಡ ಚಳವಳವನ್ನು ವ್ಯಾಪಾರಿಸಲಾಯಿತು. ಪತ್ರಿಕೆಗಳಲ್ಲಿ, ಸಭೆಗಳಲ್ಲಿ, ಶಾಸನಗಳಲ್ಲಿ ಮತ್ತು ಕಳ್ಳ ರೀತಿಯಿಂದ ನೀಗ್ರೋ ವ್ಯಾಪಾರ ನಡೆಸುವವರನ್ನು ಕಂಡು ಹಿಡಿದು ಶಿಕ್ಷಿಸುವುದರಲ್ಲಿ ಚಳವಳಗಾರರು ತಮ್ಮ ಶಕ್ತಿಮೀರಿ ಧ್ಯೇಯ ಸಾಧನೆಗಾಗಿ ದುಡಿದರು. ಉತ್ತರದವರಿಗೆ ನೀಗ್ರೋಗಳು ಅಗತ್ಯವಿರದುದರಿಂದ ಈ ರೀತಿ ತಮ್ಮ ಆಶಯಕ್ಕೆ ಪ್ರತಿಭಟನೆಯೊಡ್ಡುತ್ತಿರುವರೆಂಬ ಕಾರಣದಿಂದ ದಕ್ಷಿಣದವರು ಅವರ ಮೇಲೆ ತಿರುಗಿ ಬಿದ್ದರು. ಅಬ್ರಹಾಂ ಲಿಂಕನ್ನರು ಅಧ್ಯಕ್ಷರಾಗಿದ್ದ ಕಾಲದ ಈ "ಯಾದವೀ ಕಲಹ" ನೀಗ್ರೋ ಸಮಸ್ಯೆಯಿಂದಲೇ ಪ್ರೇರಿತವಾಗಿದ್ದಿತು. ಈ ಯುದ್ಧದಲ್ಲಿ ಉತ್ತರದವರು ಗೆದ್ದರು; ಲಿಂಕನ್ನರು ನೀಗ್ರೋಗಳ ಅಂತಸ್ತನ್ನು ಹೆಚ್ಚಿಸಿದ ಮಹಾನಾಯಕರಾಗಿ ಮೆರೆದರು.

ಇದರಿಂದ ಪರಿಸ್ಥಿತಿ ಸುಧಾರಿಸಿತೆಂದೇನಲ್ಲ—ಏಕೆಂದರೆ ಈಗ ನೀಗ್ರೋಗಳನ್ನು ಹಿಡಿತದಲ್ಲಿ ಇಡುವವರೇ ಇಲ್ಲವಾಯಿತು. ಅವರು ಹೊಲಗಳನ್ನು ತೊರೆದು ಸ್ವಚ್ಛಂದವಾಗಿ ತಿರುಗ ಹತ್ತಿದರು; ಆದರೆ ಹೊಲಗಳಲ್ಲಿ ಗೇಯುವುದನ್ನು ಬಿಟ್ಟರೆ ಬೇರೆ ಯಾವ ಉದ್ಯೋಗವೂ ಅವರಿಗೆ ತಿಳಿದಿರಲಿಲ್ಲ ಅವರಿಗೆ ಓದು ಬರೆಹ ಕಲಿಸಿದವರಿಲ್ಲ; ಇತರ ಕೆಲಸಗಳಲ್ಲಿ ತರಬೇತಿ ನೀಡಿದವರಿಲ್ಲ; ಕೌಟುಂಬಿಕ ವಾತಾವರಣದಲ್ಲಿ ಬೆಳೆದವರೂ ಅವರಲ್ಲ. ಇಷ್ಟರ ವರೆಗೆ ಯಜಮಾನರಂದಾಗ - ಅವರಿಗೆ ಹೊಟ್ಟೆ ಬಟ್ಟೆಗೆ ಕೊಡುತ್ತಿದ್ದರು— ಈಗ ಅದೂ ನಿಂತಿತು. ಹೀಗಾಗಿ ನೀಗ್ರೋ

(ಎಂನೇ ಪುಟ ನೋಡಿರಿ)

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಕ್ಕಾಗಿ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:— (1) ಉಡುಪಿ (2) ಮಾರಾತ ಗಲ್ಲಿ, ಹುಬ್ಬಳ್ಳಿ.

ವೈಜ್ಞಾನಿಕ ಮಹತ್ವದ ಸೂರ್ಯಗ್ರಹಣ

ಸೂರ್ಯ ದೇವನ ಪೂಜೆಯ ಪರಂಪರೆ

ನಮ್ಮಲ್ಲಿಯ ಜೋಯಿಸರು ಫಲ ಜ್ಯೋತಿಷ್ಯದಲ್ಲಿ ನುರಿತವರಾಗಿಲ್ಲವೆಂಬುದೇನೊ ನಿಜ; ಆದರೆ ಗ್ರಹಣಕಾಲ ಮುಂತಾದವುಗಳನ್ನು ನಿಮಿಷವೂ ಹೆಚ್ಚು ಕಡಿಮೆ ಯಾಗದಂತೆ ಗಣಿತ ಸಿದ್ಧಾಂತದ ಮೂಲಕ ನಿರ್ಧರಿಸುವುದರಲ್ಲಿ ಅವರು ನಿಪುಣರೆಂಬುದರಲ್ಲಿ ಸಂದೇಹವಿಲ್ಲ. ಪಂಚಾಂಗದಲ್ಲಿ ಅವರು ಹೇಳಿದ ದಿನ, ಸೂಚಿಸಿದ ಸಮಯ ಹುಣ್ಣಿಮೆ ಅಮಾವಾಸ್ಯೆಗಳೂ ಗ್ರಹಣ ಇತ್ಯಾದಿ ವಿಶೇಷ ಘಟನೆಗಳೂ ಜರಗಿಯೇ ಜರಗುತ್ತವೆ. ಇದೇ ೨೦ನೇ ತಾರೀಕಿನಂದು ಸೂರ್ಯನಿಗೆ ಪ್ರಾತಃಕಾಲ ೭-೧೨ ಗಂಟೆಗೆ ಕೇತು ಗ್ರಹಣವಾಗುವುದೆಂದೂ ರವಿಬಿಂಬವನ್ನು ಗ್ರಾಸ ಕಲೆಯು ನೈಋತ್ಯದಲ್ಲಿ ಸ್ಪರ್ಶಿಸಿ ಬಹ್ವಂಶವನ್ನು ವ್ಯಾಪಿಸಿ ಆಗ್ನೇಯದಲ್ಲಿ ೯-೨೬ ಗಂಟೆಗೆ ಮೋಕ್ಷ ಹೊಂದುವುದೆಂದೂ ನಮ್ಮ ಜೋಯಿಸರು ಎಂದೋ ಕಂಡು ಹಿಡಿದಿದ್ದಾರೆ; ಇದರ ಸತ್ಯವನ್ನು ಸಂಶಯಿಸುವುದು ಅನಾವಶ್ಯಕ; ಏಕೆಂದರೆ ಪಾಶ್ಚಾತ್ಯ ವಿಜ್ಞಾನಿಗಳೂ ಒಪ್ಪಿದ ವಿಷಯ ಇದು.

ಪಂಚಾಂಗದಲ್ಲಿ ಈ ವರ್ಷ ದಶಂಬರದ ೧೪ನೇ ತಾರೀಕಿನಂದು ಇನ್ನೊಂದು ಸೂರ್ಯ ಗ್ರಹಣವಾಗುವುದರ ಉಲ್ಲೇಖವೂ ಕಂಡು ಬರುತ್ತದೆ. ಆದರೆ ಇದೇ ೨೦ನೇ ತಾರೀಕಿನ ಸೂರ್ಯ ಗ್ರಹಣಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ; ಮತ್ತು ಮನುಷ್ಯನ ಪ್ರಗತಿಯ ಈ ಪರಿಸ್ಥಿತಿಯಲ್ಲಿ ಅತ್ಯಂತ ಮಹತ್ವವಿದೆ. ಈ ಸಲ ಸೂರ್ಯನಿಗೆ ಖಗ್ರಾಸ ಗ್ರಹಣವಾಗುವುದಷ್ಟೇಯಲ್ಲ—ಅದು ಅತಿ ಹೆಚ್ಚು ಸಮಯದ ವರೆಗೆ, ಅಂದರೆ ೭ ನಿಮಿಷಕ್ಕಿಂತಲೂ ಹೆಚ್ಚು, ಸಮಯದ ವರೆಗೆ ಉಳಿಯುತ್ತದೆ ಕಳೆದ ವರ್ಷದ ಜೂನಿನ ೩೦ನೇ ತಾರೀಕಿನಲ್ಲಿ ಸಂಭವಿಸಿದ ಖಗ್ರಾಸ ಗ್ರಹಣದ ಅವಧಿ ಕೇವಲ ಎರಡೂವರೆ ನಿಮಿಷ ಮಾತ್ರವಾಗಿದ್ದಿತು. ಈ ಸಲ ಬಹಳ ಹೆಚ್ಚು ಸಮಯದ ವರೆಗೆ ಸೂರ್ಯನು ಪ್ರಪಂಚದಿಂದ ಮರೆಯಾಗಿ ನಿಲ್ಲುವುದರಿಂದಲೂ ಇನ್ನು ೧೨ ಶತಮಾನಗಳ ವರೆಗೆ ಈ ಮಾದರಿಯ ಖಗ್ರಾಸ ಸೂರ್ಯ ಗ್ರಹಣ ಘಟಿಸುವುದಿಲ್ಲವಾದುದರಿಂದಲೂ ಪರಮಾಣು ಯುಗದಲ್ಲಿ ಉಸಿರಾಡಿಸುತ್ತಿರುವ ವಿಜ್ಞಾನಿಗಳು ಸೌರಗೋಲದ ರಹಸ್ಯಗಳನ್ನು ತಿಳಿದುಕೊಳ್ಳಲು ಬಹಳ ಕುತೂಹಲಿಗಳಾಗಿದ್ದಾರೆ.

ಖಗ್ರಾಸ ಗ್ರಹಣ ಪಥವು ಈ ಸಲ ಮಾಲದೀವದಿಂದ ತೊಡಗಿ ಸಿಂಹಳ, ಅಂದಮಾನ್, ದಕ್ಷಿಣ ಬರ್ಮ, ಥೈಲೆಂಡ್, ಇಂದೋಚೀನ, ಫಿಲಿಪೈನ್ ದೇಶಗಳನ್ನು ಹಾದು ಆಸ್ಟ್ರೇಲಿಯದ ಕರಾವಳಿಯ ಅಚೆಗೆ ಶಾಂತ ಸಾಗರದಲ್ಲಿ ಅಂತ್ಯವಾಗುತ್ತದೆ. ಪಾಕಿಸ್ತಾನ, ಭಾರತ, ನೇಪಾಳ, ಉತ್ತರ ಬರ್ಮ, ಚೀನ, ಇಂಡೋನೇಶಿಯ, ಉತ್ತರ ಆಸ್ಟ್ರೇಲಿಯ, ಅರೇಬಿಯ ಮತ್ತು ಇರಾಣಗಳಲ್ಲಿ ಖಂಡ ಗ್ರಾಸವು ಗೋಚರಿಸುತ್ತದೆ. ಯುರೋಪು ಮತ್ತು ಅಮೇರಿಕಗಳು ಗ್ರಹಣ ಪಥದೊಳಗೆ ಬರುವುದಿಲ್ಲ. ಖಗ್ರಾಸ ಗ್ರಹಣ ಪಥದಲ್ಲಿರುವ ಸ್ಥಳಗಳಲ್ಲಿ ಸಿಂಹಳದ ಕೊಲೊಂಬೋ ನಗರವೇ ಸೌರಪಥದ ಪರೀಕ್ಷೆಗೆ ಯೋಗ್ಯ ಸ್ಥಾನವೆಂದು ವಿಜ್ಞಾನಿಗಳ ಅಭಿಪ್ರಾಯ. ಏಕೆಂದರೆ ಇಲ್ಲಿ ಒಟ್ಟು ಏಳು ನಿಮಿಷಕ್ಕಿಂತ ಶುಸು ಹೆಚ್ಚು ಅವಧಿಯವರೆಗೆ ನಿಲ್ಲುವ ಖಗ್ರಾಸ ಗ್ರಹಣದಲ್ಲಿ ನಾಲ್ಕೂ ಮುಕ್ಕಾಲು ನಿಮಿಷಗಳ ವರೆಗಿನವಿದ್ಯಮಾನಗಳನ್ನು ನಿರೀಕ್ಷಿಸುವುದು ಸಾಧ್ಯ. ಆದುದರಿಂದಲೇ ಜಗತ್ತಿನ ಬೇರೆ ಬೇರೆ ದೇಶಗಳಿಂದ ನೂರಕ್ಕಿಂತಲೂ ಅಧಿಕ ಭೌತ ವಿಜ್ಞಾನಿಗಳು ಖಗೋಲ ಶಾಸ್ತ್ರಗಳು, ರೇಡಿಯೋ ವಿಜ್ಞಾನಿಗಳು ಮತ್ತು ಜ್ಯೋತಿಷ್ಯರು ಸಿಂಹಳಕ್ಕೆ ಪ್ರಯಾಣಿಸಿ, ಅಲ್ಲಿ ಬೇರೆ ಹೂಡಿದ್ದಾರೆ.

೨೦ನೇ ತಾರೀಕಿನಂದು ಸೂರ್ಯನ ಒಂದಲ್ಲದಿದ್ದರೊಂದು ಭಾಗವು ಪ್ರಾತಃಕಾಲದ ಆರೂವರೆಯಿಂದ ಹದಿನಾರೂ ವರೆ ತಾಸುಗಳ ವರೆಗೆ ಚಂದ್ರ ಬಿಂಬದ ನೆರಳಿನಿಂದ ಕವಿದಿರುತ್ತದೆ. ನಮ್ಮ ದೇಶದಲ್ಲಿ ಮುಂಬಯಿಯಲ್ಲಿ ಪ್ರಾತಃಕಾಲದ ೭-೧೮ರಿಂದ ೯-೧೬ರ ವರೆಗೆ, ಕಲ್ಕತ್ತೆಯಲ್ಲಿ ೭-೨೭ರಿಂದ ೯-೪೫ರ ವರೆಗೆ, ದಿಲ್ಲಿಯಲ್ಲಿ ೭-೩೩ರಿಂದ ೯-೧೯ರ ವರೆಗೆ, ಮದ್ರಾಸಿನಲ್ಲಿ ೭-೧೧ರಿಂದ ೯-೩೧ ವರೆಗೆ ಖಂಡಗ್ರಾಸ ಗ್ರಹಣವು ಗೋಚರಿಸುತ್ತದೆ. ವಿಜ್ಞಾನಿಗಳು ನಡೆಸಬೇಕೆಂದಿರುವ ಬಹುಮುಖ ಪರಿಶೀಲನೆಗಳಲ್ಲಿ ಸೂರ್ಯನ ಪ್ರಭಾವಲಯದ ನಿರೀಕ್ಷೆ ಉಲ್ಲೇಖನೀಯ. ಸೂರ್ಯಬಿಂಬದ ಇಮ್ಮಡಿ ಅಥವಾ ಮುಮ್ಮಡಿಯಷ್ಟು ವ್ಯಾಪ್ತಿಯುಳ್ಳ, ತಿಂಗಳ ಬೆಳಕಿನ ಅರ್ಧದಷ್ಟು ಪ್ರಕಾಶವುಳ್ಳ, ಈ ಪ್ರಭಾವಲಯವು ಖಗ್ರಾಸ ಗ್ರಹಣಕಾಲದಲ್ಲಿ ಚೆನ್ನಾಗಿ ದೃಷ್ಟಿಗೋಚರವಾಗುತ್ತದೆ. ಈ ಸಮಯದಲ್ಲಿ ಮಾತ್ರ ತೋರಿ ಬರುವ ಇನ್ನೊಂದು ಬಗೆಯ ನಿಶಿಷ್ಟ ಸೂರ್ಯ ಕಿರಣಗಳ ನಿರೀಕ್ಷಣೆಯಿಂದ ದೀರ್ಘಾವಧಿಯ ವರೆಗೆ ಹವಾಮಾನದ ಪರಿಸ್ಥಿತಿಯ ಕುರಿತು ಭವಿಷ್ಯ ನುಡಿಯಲು ಸಾಧ್ಯವಾದೀತೆಂದೂ ಹೇಳಲಾಗುತ್ತದೆ. ಪ್ರಕಾಶ ಕಿರಣಗಳು ಆಕಾಶ ಕಾಯಗಳ ಸಾಮೀಪ್ಯ ಹೆಚ್ಚಿದಾಗ ಆವುಗಳ ಗುರುತ್ವಾಕರ್ಷಣ ಶಕ್ತಿಗೆ ಒಳಪಟ್ಟು ಬಾಗುತ್ತವೆ ಎಂಬ ಐನ್‌ಸ್ಟೀನ್‌ರ ಸಿದ್ಧಾಂತವೂ ಒಂದಿಗಲ್ಲಿಗೆ ಹುಚ್ಚಲ್ಪಡುತ್ತದೆ; ಅಲ್ಲದೆ ಬೇರೆ ಬೇರೆ ಗ್ರಹಗಳು, ಉಲ್ಕೆಗಳು ಮತ್ತಿತರ ಸೂರ್ಯ ಗ್ರಹದ ಹೊರಗಿನ ವಾತಾವರಣದ ನಿರೀಕ್ಷಣೆಯೂ ನಡೆಸಲ್ಪಡುತ್ತದೆ.

(೧೨ನೇ ಪುಟ ನೋಡಿರಿ)

ಇತರ ಯಾವದೇ ಚಹಾಗಿಂತಲೂ

ಬ್ರೂಕ್ ಬಾಂಡ್ ಚಹಾವನ್ನೇ

ಹೆಚ್ಚು ಜನರು ಕೊಳ್ಳುತ್ತಾರೆ

ಒಂದು ಕಾರಣ – ಹಸನಾಗಿರುವಿಕೆ!
ಫ್ಯಾಕ್ಟರಿಯಿಂದ ಅಂಗಡಿಗೆ ತ್ವರಿತದಿಂದ ತಲುಪಿಸಲ್ಪಡುವುದರಿಂದ ಬ್ರೂಕ್ ಬಾಂಡ್ ಚಹಾ ಅತ್ಯಂತ ಹಸನಾಗಿರುವುದನ್ನು ಖಂಡಿತಮಾಡುತ್ತದೆ.

ಇನ್ನೊಂದು ಕಾರಣ – ಶುದ್ಧತೆ!
ಪೊಟ್ಟಣಗಳ ಸೀಲ್ ಮಾಡುವಿಕೆಯು ಬ್ರೂಕ್ ಬಾಂಡ್ ಚಹಾಗೆ ಧೂಳು, ಕೊಳೆ ಸೇರದಂತೆಯೂ, ಬೆರೆಕೆ ಮಾಡಲಾಗದಂತೆಯೂ ಕಾಪಾಡುವುದು.

BB 60 X

ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಏಕೀಕರಣ ಹಾಗು ಬೋಧ ಭಾಷೆಯ ಮನನೀಯ ವಿಚಾರಗಳು

ಕನ್ನಡ ಸಾಹಿತ್ಯ ಸಮ್ಮೇಳನದ ಮೂವತ್ತೈಳನೆಯ ಅಧಿವೇಶನವು ಇದೇ ೧೦, ೧೧ ಮತ್ತು ೧೨ನೇ ದಿನಾಂತಗಳಲ್ಲಿ ಮೈಸೂರಿನಲ್ಲಿ ಯಶಸ್ವಿಯಾಗಿ ನೆರವೇರಿತು. ಕುಮಟೆಯಲ್ಲಿ ೧೯೫೫ನೇ ಇಸವಿಯ ಡಿಸೆಂಬರದಲ್ಲಿ ಸಮ್ಮೇಳನದ ಮೂವತ್ತಾರನೆಯ ಅಧಿವೇಶನವನ್ನು ಉದ್ಘಾಟಿಸಿದ್ದ ಕೇಂದ್ರದ ಮಂತ್ರಿ ಶ್ರೀ ಕರಮರಕರರು ಮುಂದಿನ ಸಮ್ಮೇಳನ ಏಕೀಕೃತ ಕರ್ನಾಟಕದ ರಾಜಧಾನಿಯಲ್ಲಿ ಜರಗಲಿ ಎಂದು ಹಾರೈಸಿದ್ದರು. ಕರ್ನಾಟಕದ ಏಕೀಕರಣ ಇನ್ನೂ ನೆರವೇರಬೇಕಾಗಿದ್ದರೂ ಹಾಗೆ ಏಕೀಕರಣವಾದಾಗ ಸಹಜವಾಗಿಯೇ ರಾಜಧಾನಿಯೆನಿಸುವ ಮೈಸೂರಿನಲ್ಲಿ ಈ ಸಮ್ಮೇಳನ ನಡೆಯಿತು; ಮತ್ತು ಮೈಸೂರಿನ ರಾಜಪ್ರಮುಖರೇ ಇದನ್ನು ಉದ್ಘಾಟಿಸಿದರು.

ಗೆಳೆಯರ ಶುಭಾಶಂಸೆ

ಸಮ್ಮೇಳನದ ಅಧ್ಯಕ್ಷರಾಗಿ ಖ್ಯಾತನಾದ ಸಾಹಿತಿಗಳಾದ ಶ್ರೀ ಕೋಟ ಶಿವರಾಮ ಕಾರಂತರು ಆರಿಸಲ್ಪಟ್ಟಿದ್ದರು. ಅವರು ತಮ್ಮ ಭಾಷಣವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಕೆಲವು ಮಹನೀಯರು ಕಾರಂತರ ಕುರಿತು ತುಂಬ ಅಭಿಮಾನದ ಮಾತುಗಳನ್ನಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಎ. ಎನ್. ಮೂರ್ತಿರಾಯರು ಕಾರಂತರ ವ್ಯಕ್ತಿತ್ವವನ್ನು ಕನ್ನಡನಾಡಿನ ದೊಡ್ಡ ಸಂಸ್ಥೆ ಎಂದು ಕರೆದರು; ಸಾಹಿತ್ಯನಾಮ್ರಾಜ್ಯದ ಸಾಮ್ರಾಟರೆಂದು ಕಾರಂತರನ್ನು ಅವರು ಪ್ರಶಂಸಿದರು. ಪರಿಷತ್ತಿನ ಕಾರ್ಯದರ್ಶಿಗಳು ಅನೇಕ ದಿಸೆಗಳಿಂದ ಮದುವೆಗೆ ಒಪ್ಪದಿದ್ದ ಗಂಡು ಇಂದು ಕನ್ನಡ ವಧುವಿನ ಕೈ ಹಿಡಿಯಲು ಒಪ್ಪಿರುವುದು ನಮ್ಮ ಅದೃಷ್ಟ ಎಂದರು ಕನಿವರ್ಯ ಬೇಂದ್ರೆಯವರು ಸಾಹಿತ್ಯದ ಹತ್ತು ಮುಖಗಳನ್ನು ಮಾತ್ರವಲ್ಲ, ಬದುಕಿನ ಹಾಗು ದೇಶದ ಹತ್ತು ಮುಖಗಳನ್ನು ನೋಡಿರುವ ಕಾರಂತರು ರಾಜ ಪ್ರಮುಖರ ರತ್ನ ಸಿಂಹಾಸನದ ಹತ್ತಿರ ಸಾಹಿತ್ಯ ಸಿಂಹಾಸನವನ್ನು ಏರಿರುವುದು ಮಹತ್ವದ ವಿಷಯ ಎಂದು ಸಾರಿದರು.

ಕಟುವಾದ ಭಾಷಣ

ಕಾರಂತರ ಅಭಿಮಾನಿಗಳೆಲ್ಲ ಸ್ತ್ರೀ ಸ್ಮರಾದ ವಿ. ಸೀ. ಯವರು ಕಾರಂತರ ಅಧ್ಯಕ್ಷತೆಯ ಕಾಲ ಕಲ್ಯಾಣಕಾರಿ ಯಾಗಲಿ ಎಂದು ಬಯಸಿದರು. ಇಷ್ಟು ಜನರ ಶುಭಾಶಂಸೆಗಳನ್ನು ಪಡೆದು ಭಾಷಣವನ್ನು ತೊಡಗಿದ ಕಾರಂತರು ನೇರವಾಗಿ ಕನ್ನಡಿಗರ ಜೀವಾಳದ ಪ್ರಶ್ನೆಯಾದ ಏಕೀಕರಣಕ್ಕೆಯೇ ಕೈ ಹಾಕಿದರು. ಅವರು ಬಿಚ್ಚು ಮನಸ್ಸಿನಿಂದ ಮಾತನಾಡುತ್ತಿದ್ದರು; ಕಟುವಾದ ಶಬ್ದಗಳನ್ನು ಭಾಷಣದಲ್ಲಿ ಉಪಯೋಗಿಸುತ್ತಿದ್ದರು ಶ್ರೋತೃಗಳು ಪದೇ ಪದೇ ಅವರ ಮಾತುಗಳಿಗೆ ಮೆಚ್ಚುಕೆ ವ್ಯಕ್ತಪಡಿಸುತ್ತಿದ್ದರು. ಅವರು ಕರ್ನಾಟಕ ಏಕೀಕರಣ ವಿರೋಧಕರನ್ನೂ "ಎರಡು" ಕರ್ನಾಟಕ ರಾಜ್ಯಗಳ ಪ್ರತಿಪಾದಕರನ್ನೂ ಬಲವಾಗಿ ಖಂಡಿಸಿದರು, ಸಾಹಿತ್ಯದ ಅಭಿವೃದ್ಧಿಯ ಕುರಿತು ಅತ್ಯಮೂಲ್ಯವಾದ ಸಲಹೆಗಳನ್ನೂ ಭಾಷಣದ ಉತ್ತರಾರ್ಧದಲ್ಲಿ ನೀಡಿದರು.

ಏಕೀಕರಣದ ಹಂಬಲ

ಜೀವನದ ಇತರ ರಂಗಗಳಲ್ಲಿ ತಾವು ಬೇರೆ ಬೇರೆ ಗುಂಪು, ಬಣ, ಎಂದು ತಿಳಿದು ಕಲಹ ಸೆಣಸಾಟಗಳು ನಡೆಯಬಹುದು; ಆದರೆ ಸಾಹಿತ್ಯ ಕ್ಷೇತ್ರದಲ್ಲಿ, ಈ ಸಮ್ಮೇಳನದ ಆಶ್ರಯದಲ್ಲಿ ಕನ್ನಡಿಗರು ಹಲವರಲ್ಲ; ಕನ್ನಡದ ಕುಲ ಒಂದು; ಜನ ಒಂದು ಎಂದು ನಮ್ಮ ಸಾಹಿತಿಗಳು ಎಷ್ಟೋ ಹಿಂದಿನಿಂದ ಹೇಳುತ್ತ ಬಂದಿದ್ದಾರೆ; ಕನ್ನಡ ನಾಡು ಒಂದುಗೂಡಬೇಕು ಎಂಬ ಹಂಬಲವನ್ನು ಇರಿಸಿಕೊಂಡೇ ಆದಕ್ಕಾಗಿ ನಾಡಿನಲ್ಲಿ ತೊಳಲಾಡಿದ್ದಾರೆ ಎಂದು ಕಾರಂತರು ಜ್ಞಾಪಿಸಿದರು. ಇದು, ನಮ್ಮ ಕನ್ನಡ ನಾಡು, ಹದಿನಾರು ಶತಮಾನಗಳಷ್ಟು ಕಾಲ ಒಂದುಗೂಡಿದ್ದ ಪ್ರದೇಶ; ಹಾಗೆ ಬಾಳೆ, ಹಿರಿದಾದ, ಸಂಸ್ಕೃತಿ, ಇತಿಹಾಸಗಳನ್ನೂ ಕಟ್ಟಿಕೊಂಡು ಭಾರತದ ಇತಿಹಾಸದಲ್ಲಿಯೇ ಸುವರ್ಣ ಯುಗವನ್ನು ಕಟ್ಟಿದ ಕನ್ನಡಿಗರು ಇಂದು ಮಾತ್ರ ಒಂದಾಗಿ ಬಾಳುವುದಕ್ಕೆ ಅಯೋಗ್ಯರು, ಹಾಗೆ ಬಾಳಲು ಹಂಬಲಿಸಿದರೆ, ಅದು ಭಾರತಕ್ಕೆಸೆಯುವ ದ್ರೋಹ ಎನ್ನುವುದಾದರೆ, ಅಂಥ ದ್ರೋಹವನ್ನು ಪವಿತ್ರ ವಸ್ತುವಾಗಿಯೇ ನಾನು ತಿಳಿಯುತ್ತೇನೆ ಎಂದು ಘೋಷಿಸಿದರು.

ಕನ್ನಡದ ಯೋಗ್ಯತೆ

"ಹಿಂದೆ ಆಳುವ ಭಾಷೆಯಾಗಿ ಕನ್ನಡ ವಿದ್ದಿತು, ಇನ್ನೂ ಆಳುವ ಭಾಷೆಯಾಗಬಲ್ಲುದು; ಆಗಲೂ ಬೇಕು ಭಾರತದ ರಾಷ್ಟ್ರಭಾಷೆ ಹಿಂದಿಯಾಗಲಿ; ನಮಗೆ ಸಂತೋಷವೇ. ಆದರೆ ನಮ್ಮ ಪ್ರಾಂತೀಯ ಆಡಳಿತದ ಭಾಷೆ ಕನ್ನಡವಾಗಿಯೇ ಉಳಿಯಬೇಕು ಎಂದು ಕಾರಂತರು ಸಾರಿದರು. ಈ ದೇಶದಲ್ಲಿ ಎರಡು ಕನ್ನಡನಾಡುಗಳಾಗಲಿ ಎನ್ನುವ ಪ್ರಭೃತಿಗಳುಂಟು —ಮಂತ್ರಿಗಳಾಗುವ ಹೆಬ್ಬಯಕೆಯೊಂದೇ ರಾಜಕೀಯದಲ್ಲಿ ತಾಂಡವವಾಡುವಂತಿದ್ದರೆ, ಎರಡಲ್ಲ, ಮಂತ್ರಿಪದಾಕಾಂಕ್ಷಿಗಳಿಗೆ ಸಮನಾದ ಸಂಖ್ಯೆಯಲ್ಲಿ ಬಹುಖಂಡ ಕರ್ನಾಟಕವಾಗಬೇಕಾದೀತು. ಹದಿನಾರು ಶತಮಾನಗಳ ಕಾಲವೇ ಒಟ್ಟಾಗಿ ಬಾಳಿ ಕಷ್ಟ ಸುಖವನ್ನು ಸಮನಾಗಿ ಅನುಭವಿಸಿದ ಕನ್ನಡ ಜನತೆಗೆ ದಯವಿಟ್ಟು ಈ ತಿರುಮಂತ್ರ ಕಲಿಸಲು ಬರಬೇಡಿ ಎಂದವರು ರಾಜಕಾರಣಿಗಳಿಗೆ ದಿಟ್ಟತನದಿಂದ ತಿಳಿಸಿದರು.

ದರಿದ್ರ ಭೂಮಿಯಲ್ಲ

ಏಕೀಕೃತ ಕರ್ನಾಟಕವು ಬಡ ರಾಜ್ಯವಾಗುತ್ತದೆನ್ನುವ ವಾದವನ್ನು ತಿರಸ್ಕರಿಸುತ್ತಾ ಕನ್ನಡ ನಾಡು ಎಂದಿಗೂ ಬಡ ದೇಶವಾಗಬೇಕಿಲ್ಲ ಎಂದು ತಮ್ಮ ಅನುಭವದ ಬಲದಿಂದ ವಿವರಿಸಿದರು. ದುಡಿಯುವ ಜನರು ಈ ನಾಡಿನಲ್ಲಿ ಎಲ್ಲೆಲ್ಲೂ ಇದ್ದಾರೆ; ದುಡಿಯಲು ಬೇಕಾದ ವಿಸ್ತಾರ ಕ್ಷೇತ್ರವೂ ಇದೆ. ನಿಸರ್ಗ ಹರಸಿ ನೀಡಿರುವ ವಿಸ್ತಾರವಾದ ಕಡಲು, ಪರ್ವತಾವಳಿ, ಅರಣ್ಯದ ಸೆರಗು, ಬಯಲು ಸೀಮೆಗಳು ನಮಗಿವೆ. ನಮ್ಮವರಾಗಿ ಹುಟ್ಟಿದ ವಿಜ್ಞಾನಿಗಳನ್ನು ನಾವು ಪರ ನಾಡುಗಳಿಗೆ ಅಟ್ಟಿದಿದ್ದರೆ, ಅವರ ನೆರವಿನಿಂದಲೂ ಸರಿಯಾದ ರಾಜಕೀಯ ಮಾರ್ಗದರ್ಶನದಿಂದಲೂ ಕೃಷಿ ಮತ್ತು ಉದ್ಯಮಗಳಲ್ಲಿ ನೆರವಾಗಬಲ್ಲತಜ್ಞರಿಂದಲೂ—ಕರ್ನಾಟಕ ಸಂಪದಭಿವೃದ್ಧಿಯನ್ನು ಪಡೆದೀತು. ಸಂಯುಕ್ತ ಕರ್ನಾಟಕವು ದರಿದ್ರ ಕರ್ನಾಟಕ ಎನ್ನುವ ಜನರು ನಾಡಿನ ನಾಲ್ದೆಸೆಯನ್ನೆಲ್ಲ ಒಮ್ಮೆ ಅಡ್ಡಾಡಿ ಬರಲಿ; ನಮ್ಮ ನೆಲ, ಜಲ, ಜನ, ಮನಗಳನ್ನು ಇಣಿಕಿ ನೋಡಲಿ— ಆನಂತರ ಅಮಂಗಳದ ನಾಲಗೆಯನ್ನು ಕುಣಿಸಲಿ ಎಂದವರು ಗರ್ಜಿಸಿದರು.

ಸಾಹಿತ್ಯದಲ್ಲಿ ಶುಚಿತ್ವ

ಸಾಹಿತ್ಯ ನಿರ್ಮಾಣದಲ್ಲಿ ಸಾಹಿತಿಗಳ ಕರ್ತವ್ಯದ ಕುರಿತಾಗಿ ಮಾತನಾಡುತ್ತಾ ಕಾರಂತರು ಬಾಲ್ಯದಿಂದ ಪ್ರೇರಣೆಗೊಳ್ಳದ ಸಾಹಿತ್ಯ ಕೇವಲ ಬೊಬ್ಬಾಟ ಎಂದರು ಕಲ್ಪನಾ ಲೋಕಕ್ಕೂ ವಾಸ್ತವತೆಗೂ ಇರುವ ಅಂತರ ಕಡಿಮೆಯಾಗದೆ ಹೋದರೆ ಸುಖ ಸ್ವಪ್ನ ಕಥಾನಕಗಳನ್ನು ಮಾತ್ರ ಸಾಹಿತಿಗಳು ಹೇಳಬಲ್ಲರಲ್ಲದೆ ಬದುಕಿನ ಅರ್ಥವನ್ನಲ್ಲ ಎಂದರು. ಸಾಹಿತ್ಯದಲ್ಲಿ ರುಚಿ ಹೇಗೆ ಬೆಳೆಯ ಬೇಕೋ ಹಾಗೆ ಶುಚಿಯೂ ಕಂಡು ಬರಬೇಕು. ಕದ್ದು ಮರೆಯಲ್ಲಿ ತಮ್ಮವರಿಂದ ಆಡಗಿ ಕುಳಿತು ಓದಲ್ಪಡುವ ಸಾಹಿತ್ಯ ರುಚಿಯಾದ ಸಾಹಿತ್ಯವಾಗಿರಬಹುದು; ಅದು ರುಚಿಯಾದ ಸಾಹಿತ್ಯದ ಲಕ್ಷಣ ಮಾತ್ರ ಅಲ್ಲ ಎನ್ನುತ್ತಾ ನಾವು ಬೆಳೆಯದೆ, ನಮ್ಮ ಮನಸ್ಸು ದೊಡ್ಡದಾಗದೆ, ನಮ್ಮ ಸಾಹಿತ್ಯ ಮಾತ್ರ ದೊಡ್ಡದಾದೀತು, ಬೆಳೆದೀತು ಎಂಬ ನಂಬಿಕೆ ತನಗಿಲ್ಲ ಎಂದು ತಿಳಿಸಿದರು.

ಸಾಹಿತ್ಯದಲ್ಲಿ ಆಸಕ್ತಿ

ವಾಜಾಸುಭರುಚಿಯು ಇಂದಿನ ಜನರಲ್ಲಿ ಬೆಳೆದಿಲ್ಲ ಎನ್ನುವ ದೂರನ್ನು ಪ್ರಸ್ತಾ

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಸಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ತೇಜ ಇತ್ಯಾದಿ ಬಹುಕಾಲದ ಮೂತ್ರ ರೋಗಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ, ಬಂಗಾರ ಮತ್ತು ಇತರ ಧಾತ್ವಗಳ ಮಿಶ್ರಣ ಸೇರಿರುವುದರಿಂದ ಶೀತ, ಕೆಸ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ 1 ರಾತ್ಲಿಗೆ ರೂ. 7—8—0. ಕಾಲು ರಾತ್ಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ವಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಮಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಪಿಸುತ್ತಾ ವಾಚನಾಭಿರುಚಿ ಬೆಳೆಯುವುದಕ್ಕೆ ನಾವೇನು ಪ್ರಯತ್ನಿಸಿದ್ದೇವೆ ಎಂದು ಅವರು ನೇರಾದ ಪ್ರಶ್ನೆ ಹಾಕಿದರು. ಐದಾರು ವರ್ಷಗಳಿಂದ ತೊಡಗಿ ಇಪ್ಪತ್ತೈದು ವರ್ಷ ಪ್ರಾಯವಾಗುವ ತನಕ ಜನರು ನಮ್ಮಲ್ಲಿ ಏನನ್ನು ಓದಬೇಕು? ಎಂದವರು ಕೇಳಿದರು. ತಾರುಣ್ಯದಲ್ಲಿ ಕಾಲಿಡುವ ಹುಡುಗ-ಹುಡುಗಿಯರಿಗೆ ಮನಸ್ಸನ್ನೆರಳಿಸುವ ಯಾವ ಕಥೆಗಳುಂಟು? ವೈಜ್ಞಾನಿಕ ಕುತೂಹಲವನ್ನು ಕೆರಳಿಸುವ ಯಾವ ಬರಹ ಉಂಟು? ಎಂದು ಸಾಹಿತಿಗಳನ್ನು ವಿಚಾರಿಸಿದರು. ನಮ್ಮ ಆ ಬಾಲವೃದ್ಧರೆಲ್ಲರೂ ಚಂದನಮಾದ ಕತೆಗಳಿಂದಲೂ ಕಾದಂಬರಿಯಲ್ಲಿ ವ್ಯಕ್ತವಾದ ಪ್ರಣಯ ಸನ್ನಿವೇಶಗಳಿಂದಲೂ ತಮ್ಮ ಹೃದಯ ಮನಸ್ಸುಗಳನ್ನು ತುಂಬಿಸಿಕೊಂಡೇ ಬೆಳೆಯಬೇಕಾದರೆ, ಅವರು ಹೇಗೆ ಬೆಳೆದಾರು? ಎಂದು ಕೆಣಕಿ ಮಾತನಾಡಿದರು. ಮನಸ್ಸು ವಿಕಾಸ ಹೊಂದಿದಂತೆ ಅಲ್ಲಿ ಶಕ್ತಿ ಮತ್ತು ಚೈತನ್ಯವನ್ನು ತುಂಬ ಬಲ್ಲ ಸಾರ್ಥಕ ಸಾಹಿತ್ಯದ ಸೃಷ್ಟಿ ಅಗತ್ಯ ಎಂದವರು ಪ್ರತಿಪಾದಿಸಿದರು.

ಕನ್ನಡದಲ್ಲಿ ಶಾಸ್ತ್ರ ಗ್ರಂಥ

ವೈಜ್ಞಾನಿಕ ಸಾಹಿತ್ಯ ಕೃತಿಗಳ ಆವಶ್ಯಕತೆಯನ್ನೂ ಅವರು ವಿವರಿಸಿದರು. ತಿಳಿದವರು ತಾವು ಗಳಿಸಿದ ಜ್ಞಾನವನ್ನು ಜನತೆಗೆ ಉಚಿತ ರೀತಿಯಲ್ಲಿ ನಾಡ ನುಡಿಯ ಮೂಲಕ ಅರ್ಪಿಸಬೇಕು ಎಂದರು.

ಯಾರೊಬ್ಬನೂ ತಾನು ಪಂಡಿತನೆಂದು ಹೇಳಿಕೊಳ್ಳಲು ಹೆದರುವಷ್ಟು ಶೀಘ್ರಗತಿಯಿಂದ ವಿಜ್ಞಾನ ಬೆಳೆಯುತ್ತಿದ್ದರೂ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕೇವಲ ಸ್ನಾತಕ ಪದವಿಯನ್ನಷ್ಟೇ ನೀಡಿ, ಸಂಶೋಧನೆ ಮತ್ತು ಜ್ಞಾನ ಜನನಕ್ಕೆ ಅವಕಾಶವಿಲ್ಲದಿರುವುದಕ್ಕೆ ಅವರು ವಿಷಾದಿಸಿದರು. ವಿಜ್ಞಾನದ ತಿಳಿವಳಿಕೆಗೆ ಇಂಗ್ಲೀಷು ಭಾಷೆಯು ನಮಗೆ ತುಂಬ ನೆರವಾಗಿದೆ ಎಂಬುದನ್ನು ಒಪ್ಪಿಕೊಂಡರೂ ನಮ್ಮಲ್ಲಿ ವಿಜ್ಞಾನದ ಪ್ರಚಾರ ಆ ಭಾಷೆಯ ಮೂಲಕವೇ ಆಗಬೇಕೆಂದಿಲ್ಲ ಎಂದವರು ಸ್ಪಷ್ಟಪಡಿಸಿದರು. ಇಂಗ್ಲೀಷು ಮಾತೃಭಾಷೆಯಾಗಿರದ ಯಾವ ರಾಷ್ಟ್ರವೂ ಹಾಗೆ ಮಾಡಲು ಸಿದ್ಧವಿಲ್ಲ ಎಂದು ಕನ್ನಡಿಗರ ಸ್ವಾಭಿಮಾನವನ್ನು ಚುಚ್ಚಿದರು. ನಮ್ಮ ವಿಶ್ವವಿದ್ಯಾನಿಲಯಗಳಲ್ಲೂ ಇತರ ಶೈಕ್ಷಣಿಕಸಂಸ್ಥೆಗಳಲ್ಲೂ ಬೋಧಭಾಷೆ ಕನ್ನಡವೇ ಆಗಬೇಕು ಎಂದು ಒತ್ತಿ ಹೇಳಿದರು.

ಅರ್ಥಕೋಶ-ವಿಶ್ವಕೋಶ

ಶಾಸ್ತ್ರ ಗ್ರಂಥಗಳ ಸಮುದಾಯ ಕನ್ನಡದಲ್ಲಿ ಹುಟ್ಟಬೇಕಿರುವಂತೆ ವಿಶ್ವಕೋಶ, ಅರ್ಥಕೋಶಗಳೂ ಬೇಕೆಂದು ಅವರು ಅಭಿಪ್ರಾಯಪಟ್ಟರು. ಸಾಹಿತಿಯು ಬಡಜೀವಿ ಎಂಬ ವಿಷಯವನ್ನು ಮಂದಟ್ಟು ಪಡಿಸುತ್ತಾ ಹಲವು ಬರಹಗಾರರಲ್ಲಿ ಕೆಲವರಿಗೆ ಸಂಪತ್ತು ಒಲಿಯಬಹುದಾದರೂ ಖಂಡ ಕರ್ನಾಟಕಕ್ಕಿಂತ ಅಖಂಡ ಕರ್ನಾಟಕವು ಈ ವಿಷಯದಲ್ಲಿ ಹೆಚ್ಚು ಸ್ಫೋತ್ಸಾಹಕರವಾಗಿ ತೋರಬಹುದು ಎಂದು ಅಶಿಸಿದರು. ನಮ್ಮ ಶೈಕ್ಷಣಿಕ ಸಂಸ್ಥೆಗಳು ಸಾಹಿತಿಗಳಿಗೆ ನಿತ್ಯ ಅನ್ನ ಕೊಡಲಾರವಾದರೂ ಒಂದು ದಿನದ ಭೋಜನವನ್ನಾದರೂ ನೀಡುವುದು ಸಾಧ್ಯವೆನ್ನುತ್ತಾ ಒಳ್ಳೆಯ ಸಾಹಿತ್ಯ ಕೃತಿಗಳನ್ನೂ ಬರಹಗಳನ್ನೂ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಪಠ್ಯ ಪುಸ್ತಕವಾಗಿ ಆಯ್ದುಕೊಂಡು ಸ್ಫೋತ್ಸಾಹಿಸಬೇಕೆಂದು ಸಲಹೆ ಮಾಡಿದರು. ಕರ್ನಾಟಕದಲ್ಲಿರುವ ಎರಡು-ಮೂರು ಪುಸ್ತಕ ಭಂಡಾರಗಳೂ ವಾಚನಾಲಯಗಳೂ ಒಳ್ಳೆಯ ಸಾಹಿತ್ಯ ಕೃತಿಗಳನ್ನು ಕ್ರಯಕ್ಕೆ ಪಡಕೊಳ್ಳಬೇಕು ಎಂದು ಸೂಚಿಸಿದರು. ತಮ್ಮ ಭಾಷಣ ಮುಗಿಸುವುದಕ್ಕೆ ಮುಂಚೆ ಕನ್ನಡದ ಜನತೆ ನಿದ್ರೆಯಲ್ಲಿ, ಕನಸಿನಲ್ಲಿ ವೈಭವರೆಯದೆ, ಶಕ್ತಿ ಬೆಳೆಸಿಕೊಂಡು, ಗಾತ್ರ ಹೆಚ್ಚಿಸಿಕೊಂಡು ಬದುಕಲಿ; ಮತ್ತು ಕನ್ನಡ ಸಾಹಿತಿ ವಿದ್ವಸಾಹಿತಿಗಳ ಎದೆಯಲ್ಲಿ "ನಾನೂ ಇಲ್ಲದ್ದೇನೆ—ಸ್ವಂತ ಹಕ್ಕೆಂದೂ ಇದ್ದೇನೆ" ಎಂಬ ಧೈರ್ಯದಿಂದ ಬಾಳುವಂತಾಗಲಿ ಎಂದು ಹಾರೈಸಿದರು.

ಕಾರ್ಯಕಲಾಪ

ಸಮ್ಮೇಳನವನ್ನು ಉದ್ಘಾಟಿಸಿದ ಮೈಸೂರಿನ ರಾಜಪ್ರಮುಖರು "ಇಂದಿನ ಸ್ಥಿತಿಯಲ್ಲಿ ನಮ್ಮ ನಾಡಿನ ಭಾಷೆಯ ಸಾಹಿತ್ಯಗಳೇ ಕನ್ನಡಿಗರನ್ನೆಲ್ಲ ಒಂದುಗೂಡಿಸುವ ಮುಖ್ಯ ಸಾಧನ. ತಾಯ್ನುಡಿಯು ಎಂಥ ಪ್ರೇಮಬಂಧನವಾಗುವುದೆಂಬುದನ್ನು ಹೊರನಾಡಿನಲ್ಲಿ ಕಾಲಿಟ್ಟವರೆಲ್ಲರೂ ಅನುಭವಿಸಬಲ್ಲರು" ಎಂದರು. ಮುಂದುವರಿದು "ಇಂದು ಯಾವ ಶಾಸ್ತ್ರದ ಮೇಲೆ ಎಂಥ ಪ್ರೌಢ ಗ್ರಂಥವನ್ನು ಬೇಕಾದರೂ ಕನ್ನಡದಲ್ಲಿ ಬರೆಯಬಲ್ಲ ಶಕ್ತರಿದ್ದಾರೆ. ಅವರನ್ನೂ ಅವರ ಜ್ಞಾನವನ್ನೂ ಜನತೆ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೇ ವಿಚಾರಣೀಯ ಅಂಶ. ಎರಡು ಕೋಟಿ ಕನ್ನಡಿಗರು ತಮ್ಮ ತಾಯ್ನುಡಿಯನ್ನು ಬಿಟ್ಟು ಮತ್ತೆ ಯಾವದೇ ಭಾಷೆಯಲ್ಲಿ ವಿದ್ಯಾವಂತರೆನಿಸಿಕೊಳ್ಳಲಾರರು; ಪಂಡಿತರಾಗರು; ಕವಿಗಳಾಗರು; ಅದವರ ವಿದ್ಯೆ, ಪಾಂಡಿತ್ಯಾದಿ ಜನರನ್ನು ಮುಟ್ಟದು; ಫಲ ಕೊಡದು" ಎಂದು ವಿದಿತ ಪಡಿಸಿದರು. ಆದರೆ ಕನ್ನಡ ನಾಡು ಭಾರತದ ಅವಿಭಾಜ್ಯ ಅಂಗವಾಗಿರುವುದರಿಂದ ಭಾರತೀಯ ಸಂಸ್ಕೃತಿಯೊಡನೆ ಹೊಂದಿಕೊಳ್ಳಬೇಕು ಎಂದೂ ಹೇಳಿದರು

ಸ್ವೀಕೃತ ಗೊತ್ತುವಳಿ

ಲೇಖಕರ, ಕವಿಗಳ, ಪಂಡಿತರ ಮತ್ತು ವಿಮರ್ಶಕರ ಬೇರೆ ನಾಲ್ಕು ಅಧಿವೇಶನಗಳೂ ಈ ಸಂದರ್ಭದಲ್ಲಿ ಜರಗಿದವು. ಕನ್ನಡದಲ್ಲಿ ಶಾಸ್ತ್ರ ಗ್ರಂಥಗಳ ರಚನೆಯ ಕುರಿತಾಗಿಯೂ, ಸ್ವಾತಂತ್ರ್ಯೋತ್ತರದಲ್ಲಿ ಕನ್ನಡ ಸಾಹಿತ್ಯದ ಒಲವು ನಿಲವುಗಳ ಕುರಿತಾಗಿಯೂ ಹಲವಾರು ಬರೆಹಗಾರರು ಭಾಷಣ ಮಾಡಿ ಚರ್ಚೆಯಲ್ಲಿ ಭಾಗ ವಹಿಸಿದರು. ಒಂದು ಕನ್ನಡ ಗ್ರಂಥ ಪ್ರದರ್ಶನವನ್ನು ಸಹ ಇದೇ ಕಾಲಕ್ಕೆ ಏರ್ಪಡಿಸಿದ್ದರು. ಸಮ್ಮೇಳನವು ಕೊನೆಯ ದಿನ ಕೆಲವು ಮಹತ್ವ ಪೂರ್ಣ ಗೊತ್ತುವಳಿಗಳನ್ನು ಸ್ವೀಕರಿಸಿತು. ಕನ್ನಡವು ಪ್ರಾದೇಶಿಕ ಭಾಷೆಯಾಗಿರುವ ಸ್ಥಳಗಳಲ್ಲೆಲ್ಲ ಕನ್ನಡವನ್ನೆ ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದ ವರೆಗೆ ಬೋಧ ಭಾಷೆಯಾಗಿ ಮಾಡಬೇಕು ಎಂದು ಒಂದು ಗೊತ್ತುವಳಿ ಸಂಬಂಧ ಪಟ್ಟವರನ್ನು ಒತ್ತಾಯಿಸುತ್ತದೆ. ಕನ್ನಡದಲ್ಲಿ ಸಂಶೋಧನೆ ನಡೆಸಲು ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದೂ ಕನ್ನಡದಲ್ಲಿ ವಿಶ್ವಕೋಶ ಇತ್ಯಾದಿ ಮಹಾ ಕಾರ್ಯಗಳಲ್ಲಿ ನೆರವಾಗಬೇಕೆಂದೂ ಸರಕಾರವನ್ನು ಇನ್ನೊಂದು ಗೊತ್ತುವಳಿ ಕೇಳಿಕೊಳ್ಳುತ್ತದೆ. ಮುಂದಿನ ಅಧಿವೇಶನವನ್ನು ರಾಯಚೂರಿನಲ್ಲಿ ನೆರೆಯಿಸಕೇಂದು ತೀರ್ಮಾನವಾಯಿತು. ಸಮ್ಮೇಳನದ ಕಾರ್ಯಕಲಾಪಗಳ ಹಿಂದೆ "ರಾಮಾಯಣ ದರ್ಶನಂ" ರಚಿಸಿದ ಕನ್ನಡದ ಪ್ರಸಿದ್ಧ ಕವಿ "ಕುವೆಂಪು" ಸೂತ್ರಧಾರಂತಾಗಿ ನಿಂತಿದ್ದರು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. S. 113/1955

ಸರ್ವಿಂಪ ಪೆಟ್ಟೂರ ... ವಾದಿ.

ಮತ್ತು

ಲಕ್ಷ್ಮೀನಾರಾಯಣ ಪರ್ಜ ಕೊಡಾ ... ಪ್ರತಿವಾದಿರು.

1. ಲಕ್ಷ್ಮೀನಾರಾಯಣ ಪರ್ಜ— ತಮ್ಮಯ್ಯ ಪಣಿಕರ ಮಗ, ಕುಂದಾಪುರ ತಾಲ್ಲುಕ್ ಕೋಟೇಶ್ವರ ಗ್ರಾಮದಲ್ಲಿರುವವರು.

ವಾದಿಯು ತನಗೆ ಬರಬೇಕಾದ ವಿಜಯ ಮತ್ತು ಜಯ ಸಂವತ್ಸರಗಳ ಮೂಲಗೇಣಿಗೇಣಿ ಬಾಕಿ ಬಗ್ಗೆ ಮಾಡಿದ ದಾವೆಯು ತಾರೀಕು 27—6—1955ಕ್ಕೆ ತನ್ನಾಗೆ ಇಟ್ಟುಕೊಳ್ಳುತ್ತದೆಂತಲೂ, ಪ ಸದ್ರಿ ದಿನ ಪ್ರತಿವಾದಿಯು ಹಾಜ್ರಾಗಲಿಕ್ಕೆ ತಪ್ಪಿದ್ರೆ ದಾವೆಯು ಆ ದಿನ ತೀರ್ಮಾನವಾಗುವುದೆಂತಲೂ ಸದಾ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಸೋಣಾಗುತ್ತದೆ.

G. Sanjiva Rao,
Vakil for Plff.

ಕುಂದಾಪುರ, ತಾ. 11.6.55.

ರೂಪಾಯಿ 500 ಬಹುಮಾನ

(ಗವರ್ನಮೆಂಟ್ ರಿಜಿಸ್ಟರ್ಡ್)

ಸರ್ವಶಕ್ತಿಯುತವಾದದು. ಸುಸ್ತ ಸರೀಕರಣ ಯಂತ್ರವೊಂದಿದ್ದರೆ ಎಂತಹ ಕಷ್ಟಸಾಧ್ಯವಾದುದನ್ನೂ ಸುಲಭವಲ್ಲಿ ಸಡೆಯಬಹುದು. ಯಾವ ಪೊರ್ಸಸಿದ್ಧತೆಯೂ ಬೇಕಾಗಿಲ್ಲ. ದುಸ್ಸಗ್ರಹ ಭಾವಿ, ಶತ್ರುಗಳ ಶರಣಾಗತಿ, ಪರೀಕ್ಷೆಗಳಲ್ಲಿ ತೇರ್ಗಡೆ, ವ್ಯಾಪಾರದಲ್ಲಿ ಲಾಭ, ಕೋರ್ಟು ದಾವೆಗಳಲ್ಲಿ ಜಯ, ಲಾಟರಿಯಲ್ಲಿ ಲಾಭ, ಜೂಜಿನಲ್ಲಿ ಯಶಸ್ಸು, ನೌಕರಿಯಲ್ಲಿ ಭಡ್ತಿ, ಪುತ್ರಲಾಭ, ಪುಸ್ತಕ ಧನಾಗಮನ, ಸಾಲದಿಂದ ಬಿಡುಗಡೆ, ಆಕರ್ಷಿತ (ಅವನು ಯಾ ಅವಳು) ಶರಣಾಗತರಾಗಲಿಕೆ, ಕಾಮಿಲೆಗಳಿಂದ ಗುಣಹೊಂದುವಿಕೆಗೆಲ್ಲಾ ಉಪಯೋಗಿಸಿರಿ. ಜಯಪ್ರದವಲ್ಲದೆಂದು ರುಜು ಮಾಡಿಸುವಿಕೆ ರೂಪಾಯಿ 500 ಬಹುಮಾನ. ಪಾಮ್ಸದ ಯಂತ್ರಕ್ಕೆ ರೂ. 2.8-0; ಬೆಳ್ಳಿಯದಕ್ಕೆ ರೂ. 3; ಉದ್ದ ಬಂಗಾರದಕ್ಕೆ ರೂ. 15; ಸ್ಪೆಶಲ್ ಯಂತ್ರಕ್ಕೆ ರೂ. 45.

Shree Biswanath Asram,
(M) P. O. Katrisarai, Gaya.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಜೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ರಾಜ್ಯಾ ಕಛೇರಿಗಳಲ್ಲಿ: ಮದ್ರಾಸ್, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರ್ಯ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ! ಯು. ಸುಂದರ ರಾವು ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).

THE CANARA BANKING CORPORATION LIMITED

(By order of the Court)

K. Vittal Nayak,
Vakil for Plff.

Udipi, 11-6-55.

NAVAYUGA
Popular Kannada Weekly
Founder:—
Sri **A. B. SHETTY,** *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉದಯಸಿ ೧೬-೬-೫೫	ಸಂಚಿಕೆ ೪೦

ಕನ್ನಡ ಮಾಧ್ಯಮ

ಮೊನ್ನ ಆದಿತ್ಯವಾರ ಮುಕ್ತಾಯವಾದ ಕನ್ನಡ ಸಾಹಿತ್ಯ ಸಮ್ಮೇಳನದ ಮೂವತ್ತೈಳನೆಯ ಅಧಿವೇಶನವು ನವೋದಯದ ಎಲ್ಲ ಲಕ್ಷಣಗಳನ್ನೂ ತೋರಿಸಿತೆಂದರೆ ತಪ್ಪಾಗದು. ಸಮ್ಮೇಳನವನ್ನು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಕರೆದಿದ್ದರು; ಕನ್ನಡದಲ್ಲಿ ಯಾವುದೂ ಅಸಾಧ್ಯವಲ್ಲ; ಮನಸ್ಸು ಮಾತ್ರ ಬೇಕು ಎನ್ನುವ ಕವಿ ಪುಟ್ಟಪ್ಪನವರು ಅಧ್ಯರ್ಯುವಾಗಿ ನಿಂತಿದ್ದರು. ಉದ್ಘಾಟಕರಾಗಿ ಮೈಸೂರಿನ ರಾಜಪ್ರಮುಖರು ಬಂದು, ತಾಯ್ನುಡಿಯಲ್ಲಿ ಪಾಂಡಿತ್ಯವಿಲ್ಲದವನು ಪಂಡಿತನಲ್ಲ, ಜನರನ್ನು ಮುಟ್ಟದ ಸಾಹಿತ್ಯ ಎಷ್ಟಕ್ಕೂ ಸಾಹಿತ್ಯವಲ್ಲ ಎಂದು ಸಾರಿದರು. ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕನ್ನಡದ ಸವ್ಯಸಾಚಿ, "ಪಡುಕಡಲ ತೀರದ ಭಾರ್ಗವ" ಶ್ರೀ ಕೋಟಿ ಶಿವರಾಮ ಕಾರಂತರು ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ತಮ್ಮ ಸಹಜ ಮನೋಭಾವದಿಂದ ಸಾಧನೆಗಳನ್ನು ಉತ್ಪ್ರೇಕ್ಷಿಸದೆ, ಅವಶ್ಯಕತೆಗಳನ್ನು ಮರೆಯದೆ ನಿರೀಕ್ಷಿಸಿದಷ್ಟು ಅಥವಾ ಹೇಳಿಕೊಳ್ಳುತ್ತಿರುವಷ್ಟು ಪ್ರಗತಿಪರರು ಇನ್ನೂ ನಾವಾಗಿಲ್ಲ ಎಂಬುದನ್ನು ನೆನಪಿಗೆ ತಂದು ಕೊಟ್ಟರು; ಅಲ್ಲದೆ, ಹಿಮಾಲಯದಂಥ ಅಗಾಧ ಕೆಲಸವನ್ನು ಮಾಡಿ ಮುಗಿಸೋಣ ಎಂಬ ಹುಮ್ಮಸ್ಸನ್ನೂ, ಕರ್ತವ್ಯ ಪ್ರಜ್ಞೆಯನ್ನೂ ಅವರು ಉಂಟು ಮಾಡಿದರು. ಹೀಗೆ ನಾನಾ ಬಗೆಯಿಂದ ಕನ್ನಡಿಗರನ್ನು ಎಚ್ಚರಿಸಿದ ಈ ಸಮ್ಮೇಳನವು ಕೆಲವು ಅತ್ಯಂತ ಸುಹತ್ಪೂರ್ಣ ಗೊತ್ತುವಳಿಗಳನ್ನು ಅಂಗೀಕರಿಸಿದೆ—ಅವುಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯದ ಮಟ್ಟದ ವರೆಗೂ ಕನ್ನಡವನ್ನು ಬಳಸುವ ಗೊತ್ತುವಳಿ ಉಲ್ಲೇಖನೀಯ. ಎಲ್ಲ ಮುಖಂಡರೂ ಕನ್ನಡದಲ್ಲಿ ಕನ್ನಡಿಗರು ಶಿಕ್ಷಣ ಪಡೆಯದಿದ್ದರೆ, ನಾಡು ಮುಂದೆ ಬರಲಾರದು ಎಂದಿದ್ದಾರೆ; ಆಡಳಿತದ ಭಾಷೆಯಾಗಿಯೂ ಶಿಕ್ಷಣದ ಮಾಧ್ಯಮವಾಗಿಯೂ ಕನ್ನಡ ಇರಬಲ್ಲುದು ಎಂಬುದನ್ನು ಅವರು ಜೀನ್ಯಾಗಿ ಮಂದಟ್ಟು ಪಡಿಸಿದ್ದಾರೆ. ನಮ್ಮಲ್ಲಿ ಯಾವ ಶಾಸ್ತ್ರದ ಬಗೆಗಾದರೂ ಕನ್ನಡದಲ್ಲಿ ಪ್ರಾಥ ಗ್ರಂಥಗಳನ್ನು ಬರೆಯಬಲ್ಲ ಪ್ರಭೃತಿಗಳಿಗೆ ಅಭಾವವಿಲ್ಲ; ಇರುವುದು ಪ್ರೋತ್ಸಾಹದ ಅಭಾವ ಮಾತ್ರ. ಕನ್ನಡದಲ್ಲಿ ಬರೆದ ಶಾಸ್ತ್ರ ಗ್ರಂಥಗಳು ಶೈಕ್ಷಣಿಕ ಕ್ಷೇತ್ರದಲ್ಲಿ ವಿಸ್ತೃತ ಪ್ರಮಾಣದಲ್ಲಿ ಬಳಸಲ್ಪಡುವ ಸಂಭವವಿದ್ದರೆ, ಆಗ ಅಂಥ ಗ್ರಂಥಗಳನ್ನು ಪ್ರಕಟಿಸುವ ಜನರು ದೊರೆತಾರು; ಗ್ರಂಥ ಕರ್ತರ ಶ್ರಮವೂ ಸಾರ್ಥಕವಾದೀತು; ಕೆಲವು ಸಾವಿರ ಮಂದಿ ಕನ್ನಡಿಗರಾದರೂ ಈ ಗ್ರಂಥಗಳನ್ನು ಓದುವಂತಾದೀತು. ಕನ್ನಡದಲ್ಲಿ ಶಾಸ್ತ್ರ ಗ್ರಂಥಗಳನ್ನು ಬರೆಯುವುದಕ್ಕೆ ಪಾರಿಭಾಷಿಕ ಪದಗಳ ತೊಡಕೊಂದು ಕಾಣುತ್ತದೆ—ಇವುಗಳನ್ನು ಅಂತಾರಾಷ್ಟ್ರೀಯ ಸ್ವರೂಪದಲ್ಲಿಯೇ ಕನ್ನಡವೂ ಸ್ವೀಕರಿಸುವಂತಿದ್ದರೆ ಈ ತೊಡಕು ತಾನಾಗಿಯೇ ದೂರವಾಗುತ್ತದೆ; ಕನ್ನಡಕ್ಕೆ ಹೊಂದಿಕೊಳ್ಳುವ ಸಮಾನ ಪದಗಳನ್ನು ಪ್ರಯೋಗಿಸಬೇಕೆಂದಿದ್ದರೆ, ಆಗ ಕನ್ನಡ ಸಾಹಿತ್ಯ ಪರಿಷತ್ತು ಸರಕಾರಕ್ಕೊ ವಿಶ್ವವಿದ್ಯಾನಿಲಯಕ್ಕೊ ತನ್ನ ಅಭಿಮಾನಿಗಳ ಧಾರಾಳ ಸಹಕಾರವನ್ನು ಒದಗಿಸಿಕೊಡಬಲ್ಲುದು. ಕನ್ನಡವು ಶಿಕ್ಷಣ ಮಾಧ್ಯಮವಾಗಲಿಕ್ಕೂ ಆಡಳಿತದ ಭಾಷೆಯಾಗಲಿಕ್ಕೂ ಆದರಲ್ಲಿ ಸಂಪತ್ತಿನ ಕೊರತೆ ಇದೆ ಎಂಬ ಪ್ರಶ್ನೆ ಎಷ್ಟಕ್ಕೂ ಏಳುವುದಿಲ್ಲ. ಹೈಸ್ಕೂಲುಗಳ ವರೆಗೆ ಈಗ ಸಾಮಾನ್ಯವಾಗಿ ಕನ್ನಡವನ್ನು ಬೋಧ ಭಾಷೆಯಾಗಿ ಬಳಸಲಾಗುತ್ತದೆ. ನಮ್ಮಲ್ಲಿ ಕನ್ನಡ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದುವವರ ಸಂಖ್ಯೆ ಗಣನೀಯವಾಗಿ ಹೆಚ್ಚಿಕೊಳ್ಳುತ್ತಿರುವುದಕ್ಕೆ ರಾಜಕೀಯ ಜಾಗೃತಿಯೇ ಮುಂತಾದ ಇತರ ಕಾರಣಗಳೊಡನೆ ಕನ್ನಡ ಮಾಧ್ಯಮಕ್ಕೆ ಕೆಳತರಗತಿಗಳಲ್ಲಿ ಕೊಡಲಾದ ಪ್ರೋತ್ಸಾಹವೂ ಒಂದೆಂಬುದರಲ್ಲಿ ಸಂದೇಹವಿಲ್ಲ. ಶಿಕ್ಷಣದ ಮಾಧ್ಯಮವಾಗಿ ಒಂದು ಭಾಷೆಯನ್ನು ಬಳಸಿಕೊಂಡಾಗ, ಆಡಳಿತದ ಭಾಷೆ ಎಂಬ ಮನ್ನಣೆಯನ್ನು ಅದಕ್ಕೆ ಕೊಟ್ಟಾಗ, ಎಲ್ಲರಿಗೂ ಆ ಭಾಷೆಯಲ್ಲಿ ಗಹನವಾದ ವಿಷಯಗಳನ್ನು ಚಿಂತಿಸುವ, ಮತ್ತದನ್ನು ಆ ಭಾಷೆಯಲ್ಲಿಯೇ ವ್ಯಕ್ತಪಡಿಸುವ ಉತ್ಸಾಹ ತನ್ನಷ್ಟಕ್ಕೆ ಬರುತ್ತದೆ. ಆಗ ಮಾತ್ರ ಕನ್ನಡದಂಥ ಒಂದು ಭಾಷೆ ಜನರ ಇನ್ನೂ ಸವಿೂಪಕ್ಕೆ ಬರಬಲ್ಲುದು; ಅದರ ಕ್ಷೇತ್ರ ವ್ಯಾಪ್ತಿ ವಿಶಾಲವಾಗಬಲ್ಲುದು; ಸಂಶೋಧನೆಯಂಥ ವೈಜ್ಞಾನಿಕ ದಿಸೆಯಲ್ಲಿ ಮುನ್ನಡೆಯಬಲ್ಲುದು. ಹಿಂದಿ, ಇಂಗ್ಲೀಷು ಮುಂತಾಗಿ ತಾಯ್ನುಡಿಯಾದ ಕನ್ನಡವಲ್ಲದೆ ಬೇರೆ ಕೆಲವು ಭಾಷೆಗಳ ಹಿಂದೆ ಓಡುತ್ತಾ ಯಾವ ಭಾಷೆಯಲ್ಲೂ ಪಾಂಡಿತ್ಯವನ್ನು ಗಳಿಸದೆ, ಜ್ಞಾನ ತೃಷೆಯನ್ನು ಹಿಂಗಿಸಿಕೊಳ್ಳಲಾರದೆ, ಭಾಷೆಯನ್ನು ಕಲಿಯುವುದರಲ್ಲಿಯೇ ಆಯುಷ್ಯವನ್ನು ಕ್ಷಯಿಸುವ ಇಂದಿನ ಅನಪೇಕ್ಷಿತ ಪದ್ಧತಿ ನಿಲ್ಲಬೇಕಾದರೆ ಕನ್ನಡದ ವಿಕಾಸ ಮತ್ತು ಪ್ರಗತಿಗೆ ಅದರ ಚಟುವಟಿಕೆಗಳ ವಿಸ್ತಾರಕ್ಕೆ, ಅನುಕೂಲತೆ ಕಲ್ಪಿಸಿಕೊಡುವುದು ಅತ್ಯಗತ್ಯವಾಗಿದೆ. ಕನ್ನಡ ಸಾಹಿತ್ಯ ಸಮ್ಮೇಳನ ಸರಕಾರವನ್ನೂ ವಿಶ್ವವಿದ್ಯಾನಿಲಯಗಳಂಥ ಶೈಕ್ಷಣಿಕ ಕೇಂದ್ರಗಳನ್ನೂ ಈ ರೀತಿಯಲ್ಲಿ ಕನ್ನಡದ ನೆರವಿಗೆ ಬರಬೇಕೆಂದು ತುಂಬ ಒತ್ತಾಯದಿಂದ ಕೇಳಿಕೊಂಡಿರುವುದು ಸ್ತುತ್ಯ. ಆಗ ಕನ್ನಡದಲ್ಲಿ ವಿಶ್ವಕೋಶ—ಅರ್ಥಕೋಶದಂಥ ದೊಡ್ಡ ಪ್ರಯತ್ನಗಳಿಗೆ ಕೂಡ ಸಹಜವಾಗಿಯೇ ಬೆಂಬಲ ದೊರಕುತ್ತದೆ; ಕಾದಂಬರಿಗಳನ್ನೂ ಲಲಿತ ಸಾಹಿತ್ಯವನ್ನೂ ನಿರ್ಮಿಸುವ ನಮ್ಮ ಸಾಹಿತಿಗಳು ಕನ್ನಡದ ಸಾರಸ್ವತ ಸಂಪತ್ತನ್ನು ಹೆಚ್ಚಿಸುವ ಬೇರೆ ಬಗೆಯ ಗ್ರಂಥಗಳ ರಚನೆಗೆ ಕೈಹಾಕುವಂತಾಗುತ್ತದೆ. ಪ್ರಾಥಮಿಕ ಶಾಲೆಯ ಐದನೇ ವರ್ಷದ ವಿದ್ಯಾರ್ಥಿಯಿಂದ ಹಿಡಿದು ವಿಶ್ವವಿದ್ಯಾನಿಲಯದಿಂದ ಇಪ್ಪತ್ತೈದನೇ ವರ್ಷ ಸ್ನಾಯದಲ್ಲಿ ಹೊರಬೀಳುವ ಸ್ನಾತಕನ ವರೆಗೆ ಬೇಕಾದ ಸರಿಪಷ್ಟ ಸಾಹಿತ್ಯ ನಿರ್ಮಾಣವಾಗುವುದಕ್ಕೆ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಬಳಸುವುದರಿಂದ ನೆರವು ಸಿಗುತ್ತದೆ. ಇಂದು ಲಲಿತವಾದ, ಸರಳವಾದ ಕನ್ನಡದಲ್ಲಿ ಸಾಮಾನ್ಯ ಪ್ರಬಂಧಗಳನ್ನು ಬರೆದರೂ ಅವನ್ನು ಓದಲು ನಮ್ಮ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆಂದು ಸಾಮಾನ್ಯವಾಗಿ ಅಧ್ಯಾಪಕ ವರ್ಗ ದೂರಿಡುತ್ತದೆ; ಕನ್ನಡದಲ್ಲಿ ಗಟ್ಟಿಗರಾಗುವ ಮನಸ್ಸಿಗಿಂತಲೂ ವಿದ್ಯಾರ್ಥಿಗಳಲ್ಲಿ ಬೇರೆ ಹವ್ಯಾಸಗಳೇ ಬಲವಾಗಿವೆ ಎಂಬುದನ್ನು ಇದು ಸ್ಪಷ್ಟಗೊಳಿಸುತ್ತದೆ. ಬೇರೆ ಭಾಷೆ ಕಲಿಯುವ ವ್ಯಾಮೋಹಕ್ಕೆ ಎಡೆಕೊಡದಿದ್ದರೆ, ಅದನ್ನು ಆವಶ್ಯಕವಲ್ಲವೆಂದರೆ, ವಿದ್ಯಾರ್ಥಿಗಳ ಜ್ಞಾನದ ಮಟ್ಟ ವಿಸ್ತರಿಸೀತು; ಮತ್ತು ಲೇಖಕರು ಬರೆದ ಕಾದಂಬರಿಯೇತರ ಗ್ರಂಥಗಳನ್ನು ಓದುವ ಕುತೂಹಲ ಅವರಲ್ಲಾಗೀತು. ಪುಸ್ತಕಗಳು ಪ್ರಾಥವಾಗಿವೆ ಎಂಬ ಕಾರಣದಿಂದ ಶಿಕ್ಷಣ ಕ್ಷೇತ್ರದಿಂದ ಹೊರಗುಳಿಯುವ, ಹಾಗೆ ಲೇಖಕ ಪ್ರಕಾಶಕರನ್ನು ನಿರಾಸೆಗೊಳಿಸುವ ಪ್ರಮೇಯ ತಪ್ಪೀತು. ಕಾರಂತರು ಹೇಳಿದಂತೆ, ಖಂಡ ಕರ್ನಾಟಕಕ್ಕಿಂತ ಅಖಂಡ ಕರ್ನಾಟಕ ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಹೆಚ್ಚು ಪೋಷಕವಾಗಿರುವುದರಿಂದ, ಏಕೀಕರಣಕ್ಕೆ ವಿಳಂಬಿಸದಿರುವುದರಿಂದಲೂ ಶ್ರೇಯಸ್ಸಾದೀತು.

ರಶ್ಯದಲ್ಲಿ ನೆಹರುಗಳ ಪ್ರವಾಸ

ಶಾಂತಿ ಸಾಧಕರೇ ಧನ್ಯರೆಂಬ ಉದ್ಗಾರ

ನೆಹರುಗಳು ಕೈಗೊಂಡಿರುವ ರಶಿಯದ ಪ್ರವಾಸ ಪ್ರಗತಿಪಥದಲ್ಲಿದೆ. ಅವರು ಚೆಕೊಸ್ಲೊವಾಕಿಯದ ರಾಜಧಾನಿಗೆ ಸೌಹಾರ್ದ ಸಂದರ್ಶನ ಕೊಟ್ಟು ಮೋಸ್ಕೋದಲ್ಲಿ ಇಳಿದಾಗ, ಅವರನ್ನು ಸ್ವಾಗತಿಸಲು ರಶಿಯದ ಪ್ರಧಾನ ಮಂತ್ರಿ ಬುಲ್ಗೇನಿನ್, ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವ್ ಮುಂತಾಗಿ ಎಲ್ಲ ಪ್ರಭೃತಿಗಳೂ ಕಾದು ನಿಂತಿದ್ದರು. ರಶಿಯದ ಸರಕಾರ ನೆಹರುಗಳ ಆಗಮನದ ಕುರಿತು ಎಷ್ಟು ಪ್ರಚಾರ ಮಾಡಿತ್ತೆಂದರೆ, ನೆಹರುಗಳನ್ನು ಮೋಸ್ಕೋದ ಆಬಾಲವೃದ್ಧರೆಲ್ಲರೂ ಕಾಣಲು ತವಕಿಸುತ್ತಿದ್ದರು.

ಭವ್ಯ ಸ್ವಾಗತ

ಮೋಸ್ಕೋದಲ್ಲಿಳಿದ ಮರುಗಳಿಗೆಯಿಂದ ನೆಹರುಗಳ ಪ್ರವಾಸ ಕಾರ್ಯಕ್ರಮ ತೆರಪಿಲ್ಲದೆ ಮುಂದರಿಯಿತು. ಅವರು ರಶಿಯದ ಅಧ್ಯಕ್ಷ ವೊರೊಶಿಲೋಫ್, ವಿದೇಶ ಮಂತ್ರಿ ಮೊಲೊಟೋಫ್ ಮುಂತಾದವರನ್ನು ಕಂಡು, ವಿಚಾರವಿನಿಮಯ ನಡೆಸಿದರು. ಬುಲ್ಗಾನಿನ್ ಮತ್ತು ಕ್ರುಶ್ಚೇವ್ ಇವರೊಡನೆ ಗಹನ ಸಂಭಾಷಣೆಯನ್ನು ನಡೆಸಿದರು. ರಶಿಯದ ಸರಕಾರವೂ ಭಾರತೀಯ ರಾಯಭಾರ ನಿಲಯವೂ ನೆಹರುಗಳ ಗೌರವಾರ್ಥ ಏರ್ಪಡಿಸಿದ್ದ ಭೋಜನ ಸಮಾರಂಭಗಳು ಇದಕ್ಕೆ ಅವಕಾಶವನ್ನು ಒದಗಿಸಿದವು.

ಶಾಂತಿ ಸಾಧಕರು

ಕ್ರೆಮ್ಲಿನಿನಲ್ಲಿ ಏರ್ಪಡಿಸಿದ್ದ ಭೋಜನ ಸಮಾರಂಭಗಳಲ್ಲಿ ನೆಹರುಗಳು ಬಹಳ ನೇರವಾದ ರೀತಿಯಲ್ಲಿ ರಶಿಯದ ಧುರೀಣರಿಗೆ ಲೋಕ ಶಾಂತಿಯ ರಹಸ್ಯವನ್ನು ಮನಗಾಣಿಸಿದರು. ಭಾರತೀಯರಿಗೂ ತನಗೂ ಸೌಖ್ಯ ಬಯಸಿದ ರಶಿಯದ ಪ್ರಭಾನಿಗಳಿಗೆ ಉತ್ತರವೀಯುತ್ತಾ, "ಶಾಂತಿ ಸಾಧಕರೇ ಧನ್ಯರು" ಎಂಬ ಬೈಬಲಿನ ವಚನವನ್ನು ನೆಹರು ಉಚ್ಚರಿಸಿದರು. "ಅಧಿಕಾರ ಸ್ಥಾನದಲ್ಲಿದ್ದವರು ಹಿಂಸೆ ಮತ್ತಿತರ ವಾಮ ಮಾರ್ಗಗಳಲ್ಲಿ ನಡೆಯಲು ನಿರಾಕರಿಸುವ ಸಮಯ ಬಂದಿದೆ. ನಿಮ್ಮ ಹಾಗು ಬೇರೆ ರಾಷ್ಟ್ರಗಳು ಈ ವಿಷಯದಲ್ಲಿ ಸಹಕರಿಸಿದರೆ ಶಾಂತಿ ಸ್ಥಾಪನೆಯಾದೀತು" ಎಂದರು.

ಪ್ರಗತಿಯ ಸವಿೂಕ್ಷೆ

ರಶಿಯದಲ್ಲಿ ಬೇರೆ ಯಾವುದೇ ಕಮ್ಯುನಿಸ್ಟೇತರ ರಾಷ್ಟ್ರದ ಧುರೀಣರಿಗೆ ದೊರೆಯದ ರೀತಿಯ ಸ್ವಾಗತವಲ್ಲದೆ, ಉರಾಲ್ ಪರ್ವತ ಶ್ರೇಣಿಯ ಮರೆಯಲ್ಲಿರುವ ಗೋಪ್ಯ ಔದ್ಯಮಿಕ ಕೇಂದ್ರಗಳ ಸಂದರ್ಶನದ ಪ್ರಯೋಜನವೂ ನೆಹರುಗಳಿಗೆ ಸಿಗುವುದೆಂದು ತಿಳಿದುಬರುತ್ತದೆ. ಈಗಾಗಲೇ ನೆಹರುಗಳು ರಶಿಯದ ಪ್ರಗತಿಯ ವಿಧಾನಗಳನ್ನು ತಿಳಿಯಲು ತನಗೆ ಒದಗಿಸಿಕೊಡಲಾದ ಪ್ರತಿಯೊಂದೂ ಸಂದರ್ಭದ ಸದುಪಯೋಗ ಮಾಡಿಕೊಳ್ಳುತ್ತಿದ್ದು, ಅನೇಕ ಕಾರಖಾನೆಗಳಿಗೆ, ಹೊಲಗಳಿಗೆ, ಆಸ್ಪತ್ರೆ ಮತ್ತು ಶಿಕ್ಷಣಾಲಯಗಳಿಗೆ ಭೇಟಿ ಕೊಟ್ಟಿದ್ದಾರೆ. ರಶಿಯದ ಜನತೆ ಅವರನ್ನು ಹೋದಲ್ಲೆಲ್ಲ ಪ್ರೀತಿಯಿಂದ ಬರಮಾಡಿಕೊಂಡಿದೆ; ಸಂಕಾರ ಅವರ ಸವಿೂಕ್ಷೆಗೆ ಅದಷ್ಟು ಹೆಚ್ಚು ಅವಕಾಶವನ್ನು ಒದಗಿಸುತ್ತಿದೆ.

ಕೊಮಿನ್ ಫಾರ್ಮಿನ ವಿಸರ್ಜನೆ

ರಶಿಯದ ಧುರೀಣರೊಡನೆ ನಡೆಸಿದ ಖಾಸ್ಗಾನಿಕ ಮಾತುಕತೆಯು ಇದೇ ೨೦ನೇ ತಾರೀಕಿನಂದು ಮೋಸ್ಕೋಗೆ ಪ್ರವಾಸ ಮುಗಿಸಿ ನೆಹರುಗಳು ಮರಳಿದ ಬಳಿಕ ಮುಂದುವರಿಯುತ್ತದೆ. ನೆಹರುಗಳು ಅಂತಾರಾಷ್ಟ್ರೀಯ ತ್ವೇಷಶಮನಕ್ಕೋಸ್ಕರ ರಶಿಯವು ಹೆಚ್ಚು ಉದಾರವಾಗಿ ನಡೆದುಕೊಳ್ಳಬೇಕೆಂದು ವಿನಂತಿಸಬಹುದೆಂದೂ ಕಮ್ಯೂನಿಸಮ್ಮನ್ನು ಈಗಾಗಲೇ ಅಪ್ಪಿಕೊಂಡಿರುವ ದೇಶಗಳನ್ನು ಬಿಟ್ಟು, ಬೇರೆ ಕಡೆ ಕೊಮಿನ್ ಫಾರ್ಮುಗಳ ಮೂಲಕ ಕಮ್ಯೂನಿಸ್ಟರ ಪ್ರಚಾರ ನಡೆಸುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿಯಾರಾಗಿಯೂ ತಿಳಿದು ಬರುತ್ತದೆ. ಪಂಚಶೀಲಗಳನ್ನು ಮನ್ನಿಸುವ ಘೋಷಣೆಯನ್ನು ಭಾರತ—ರಶಿಯಗಳ ಪ್ರಧಾನರು ಮಾಡಿದರೆ, ಆನಂತರ ಪರಕೀಯರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಕೊಮಿನ್ ಫಾರ್ಮ್ ಮುಂದುವರಿಯುವುದು ಇಷ್ಟವಾಗದು.

ಉಡುಪಿ

ಮುನ್ಸಿಪಲ್ ಕೌನ್ಸಿಲು ಸಭೆಯು- ಇದೇ ತಾ. 13ರಲ್ಲಿ ಸಂಜೆ ಟೇರ್‌ಮೇನ್ ಡಾ|| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ರಸ್ತೆ ಬದಿಗಳಲ್ಲಿ 'ಬಸ್‌ಕೇಂಡಿ' ಮಾರಾಟಮಾಡುವರನ್ನು ನಿಲ್ಲಿಸಬೇಕೆಂದು ನಿರ್ಧಾರವಾಯಿತು. ಹರಿಗೆ ಮತ್ತು ಮಕ್ಕಳ ಕ್ಷೇಮ ಚಿಂತನಾ ಕೇಂದ್ರವೊಂದನ್ನು ತೆರೆಯುವ ವಿಷಯಸನ್ನು 1956-57 ವರ್ಷದ ಬಜೆಟ್ ಸಮಯ ಆಲೋಚಿಸುವುದೆಂದಾಯಿತು. ಮುನ್ಸಿಪಲ್ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಜಾಸ್ತಿಯಿದ್ದುದರಿಂದ ಹೆಚ್ಚಿನ ಅಧ್ಯಾಪಕರ ನೇಮಕ ಮಾಡಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಅಭೀಸು ಉಪಯೋಗಕ್ಕೆ ಸ್ಟೇಶನರಿ ಸಾಮಾನುಗಳನ್ನು ಕೊಂಡು ಕೊಳ್ಳಲು ರೂಪಾಯಿ 724/- ಸೆಂಕ್ಷನ್ ಮಾಡಲಾಯಿತು. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆ ಮತ್ತು ಅಡಕ್ಕೆ ಸಂಬಂಧ ಪಟ್ಟ ಕಟ್ಟಡ ಕಟ್ಟಿಸಲು ಮೂಡಸಿಡಂಬೂರು ಮತ್ತು ಕಡೆಕಾರು ಗ್ರಾಮದ ಕೆಲವೊಂದು ಸ್ಥಳಗಳನ್ನು ಕೊಡಬಹುದೆಂದು ಕೌನ್ಸಿಲಿನ ತೀರ್ಮಾನವಾಯಿತು. ಶ್ರೀ ಪ್ರಸನ್ನ ಸಾಲಿಸ್ಸರು ನೂಲಿಗೆ ರಂಗುಹಾಕಲು ಮಾಡಿದ ಲ್ಯಾಸೆನ್ಸ್ ಅರ್ಜಿಯು ನಿರಾಕರಿಸಲ್ಪಟ್ಟುದುದರ ವಿರುದ್ಧ ಮಾಡಿದ ಅಪೀಲು ಡ್ಯಾರೆಕ್ಟರ್ ಆಫ್ ಪಬ್ಲಿಕ್ ವರ್ಕ್ಸ್ ಮತ್ತು ಡ್ಯಾರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಮದ್ರಾಸು ಅವರ ತೀರ್ಮಾನಕ್ಕೆ ಒಪ್ಪಿಸಬೇಕೆನ್ನುವ ಶ್ರೀ ಪಿ. ವಿ. ಆಚಾರ್ಯರ ನಿರ್ಣಯ ಬಹುಮತದಿಂದ ಸಾಗಾಯಿತು.

ವಿವಾಹ ಸಮಾರಂಭ ಮತ್ತು ಉಪಾಹಾರಕೂಟ:— ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರಿಜಿಸ್ಟ್ರಾರ್ ಡಾ|| ಟಿ. ಮಾಧವ ಶೈಗಳ ಪ್ರಥಮ ಪುತ್ರ ಶ್ರೀ ಮೋಹನದಾಸ ಶೈ ಮತ್ತು ಶ್ರೀ ಆರ್. ವಿ ಶ್ಯಾಮಭಾಗರೆ ಸುತ್ರಿ ಕುಮಾರಿ ಸರೋಜಿನಿ ಇವರ ವಿವಾಹವು ಇದೇ ತಾ. 9ರಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನದ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಜರಗಿತು ಊರ ಪರವೂರ ಆಪ್ತರನೇಕರು ಬಂದು ನವಿವರೆರನ್ನು ಆಶೀರ್ವದಿಸಿದರು. ತಾ. 10ರಲ್ಲಿ ಸಂಜೆ ಮುಕುಂದ ನಿವಾಸದಲ್ಲಿ ನಿವಾಸ ಮಹೋತ್ಸವದ ನಿಮಿತ್ತ ಉಪಾಹಾರಕೂಟವಿದ್ದಿತು.

ಕಾರ್ಕಳ— ಸ್ಥಳೀಯ ಬೋರ್ಡ್‌ಹೈಸ್ಕೂಲಿನಲ್ಲಿ ಹೆಡ್ಮಾಸ್ಟರರಾಗಿದ್ದು ಜನಾದರಣೀಯರಾಗಿ ನಿವೃತ್ತಿಹೊಂದಿದ ಶ್ರೀ ಟಿ. ಶ್ಯಾಮರಾಯ ಸೆಟ್ಟರ ಸ್ಥಾನದಲ್ಲಿ ಶ್ರೀರಾಮಕೃಷ್ಣ ಆಚಾರ್ಯರು ನೇಮಕಹೊಂದಿರುವರು. ಶ್ರೀ ಸೆಟ್ಟರಿಗೆ ಬೀಳ್ಕೊಡುವ ಸಮಾರಂಭವು ಶ್ರೀ ಎಚ್. ಸಿ. ಎ ಜೈನಿಯವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ನಾಭಿರಾಜ ಮುದ್ಕ, ಮತ್ತು ಕೆ. ಕೆ. ಶಾಸ್ತ್ರಿಗಳ ಉಚಿತ ಭಾಷಣಗಳಾಯುವು.

ಸೆಡ್ರೂರು- ಜಿಲ್ಲೆಯ ಕಲಾ ಮಂಡಳಿಯ ಸುವರ್ಣ ಹಬ್ಬವು ತಾ. 11ರಲ್ಲಿ ಬಿ. ಇ. ಎಮ್. ಹಾ. ಎ. ಶಾಲೆಯಲ್ಲಿ ಶ್ರೀ. ಎ. ಜಿ. ಅಳ್ವಿಯನರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ವೀರಣ್ಣ ಸೂಡರಿಂದ ಅತಿಥಿಗಳ ಸ್ವಾಗತ, ಆರ್. ಟಿ ಕಲ್ಯಾಣಯವರಿಂದ ವರದಿ ವಾಚನಗಳಾದ ಬಳಿಕ ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ, ಸುನಮೋಹನ್ ಕಾನಾತ್, ಎಸ್. ಎಲ್. ಭಟ್, ಟಿ. ಶೀನ ಸೆಟ್ಟರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ, ನಾಟಕಾಭಿನಯಗಳಿಂದ ಸಮಾರಂಭ ಅಂತ್ಯವಾಯಿತು

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶ:- ಕಳೆದ ಮಾರ್ಚ ತಿಂಗಳಲ್ಲಿ ಜರಗಿದ ಎಸ್. ಎಸ್ ಎಲ್. ಸಿ. ಪರೀಕ್ಷೆಯಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನಿಂದ ೬೮ರಲ್ಲಿ ೫೩; ಸುಬ್ರಹ್ಮಣ್ಯ ಬೋರ್ಡು ಹೈಸ್ಕೂಲಿನಿಂದ ೩೦ರಲ್ಲಿ ೧೩; ವಿಟ್ಲದ ಪಿರಿಯ ಹೈಸ್ಕೂಲಿನಿಂದ ೬೯ರಲ್ಲಿ ೪೨; ಬೋರ್ಡ್ ಹೈಸ್ಕೂಲಿನಿಂದ ೪೨ರಲ್ಲಿ ೧೯; ಗವರ್ನಮೆಂಟ್ ಮುಸ್ಲಿಂ ಹೈಸ್ಕೂಲಿನಿಂದ ೩೧ರಲ್ಲಿ ೧೩; ಮಂಜೇಶ್ವರದ ಶ್ರೀ ಪದ್ಮನಂತೇಶ್ವರ ಹೈಸ್ಕೂಲಿನಿಂದ ೬೭ರಲ್ಲಿ ೩೭; ಪುತ್ತೂರಿನ ಬೋರ್ಡು ಹೈಸ್ಕೂಲಿನಿಂದ ೭೦ರಲ್ಲಿ ೪೬; ಸೈಂಟ್ ವಿಕ್ಟರ್ಸ್ ಗರ್ಲ್ಸ್ ಹೈಸ್ಕೂಲಿನಿಂದ ೧೫ರಲ್ಲಿ ೧೩; ಸೈಂಟ್ ಫಿಲೋಮಿನಾ ಹೈಸ್ಕೂಲಿನಿಂದ ೨೨ರಲ್ಲಿ ೧೪; ಮಂಗಳೂರಿನ ಬಲ್ಮರದ ಸರಕಾರಿ ಹುಡುಗಿಯರ ತರಬೇತಿ ಮತ್ತು ಸಕೆಂಡರಿ ಶಾಲೆಯಿಂದ ೩೪ರಲ್ಲಿ ೨೫; ಮಿಲಾಗ್ರಿಸ್ ಹೈಸ್ಕೂಲಿನಿಂದ ೨೭ರಲ್ಲಿ ೧೯; ಹಿರಿಯಡಕ ಬೋರ್ಡ್ ಹೈಸ್ಕೂಲಿನಿಂದ ೪೦ರಲ್ಲಿ ೨೩; ಆದಮಾರು ಬೋರ್ಡು ಹೈಸ್ಕೂಲಿನಿಂದ ೭೭ರಲ್ಲಿ ೫೮; ಬೆಳ್ಳಾರೆ ಬೋರ್ಡು ಹೈಸ್ಕೂಲಿನಿಂದ ೨೫ರಲ್ಲಿ ೧೪; ಹಂಜ ಬೋರ್ಡು ಹೈಸ್ಕೂಲಿನಿಂದ ೧೪ರಲ್ಲಿ ೧೧, ಪೆರಡಾಲ ನವಜೀವನ ಹೈಸ್ಕೂಲಿನಿಂದ ೩೨ರಲ್ಲಿ ೨೮ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

ಬೊಂಬಾಯಿ— ಶ್ರೀ ರಜಕ ಸಂಘ, ಬೊಂಬಾಯಿ, ಇವರ ವಿದ್ಯಾಪ್ರಚಾರ ಸಮಿತಿಯು ಐದನೆ ತರಗತಿಯಿಂದ ಪಟ್ರಿಕ್ಯುಲೇಶನ್ ವರೆಗಿನ ಪೈಕ್ಷಣಕನ್ನಡ ಜಿಲ್ಲೆಯ ಬಡರಜಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವುದಾಗಿ ನಿಶ್ಚಯಿಸಿರುವುದು. ವೇತನಪಡೆಯಲೆಪೇಕ್ಷಿಸುವವರು ಜುಲೈ ತಿಂಗಳ ತಾ. 15 ರೊಳಗೆ ಗೌರವ ಕಾರ್ಯದರ್ಶಿ, ಶ್ರೀ ರಜಕ ಸಂಘ, 189, ಬಜಾರ್ ಗೇಟ್ ಸ್ಟ್ರೀಟ್ ಕೋಟೆ, ಬೊಂಬಾಯಿ ವಿಳಾಸಕ್ಕೆ ಅರ್ಜಿಸಾಡಬೇಕೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮೈಸೂರು— ಮೊರ್ನಾ ಕೆಳೆ, ದಾಸ ಪ್ರಕಾಶದಲ್ಲಿ ಇದೇ ತಾ. 5 ಮತ್ತು 7ರಲ್ಲಿ ಶ್ರೀ ಕೆ. ಸೀತಾರಾಮರಾಯರು ಶ್ರೀ ರಾಮಮಟ್ಟಾಭಿಷೇಕ ಮಹೋತ್ಸವನನ್ನು ಎಂದಿನಂತೆ ಬಹು ವಿಜೃಂಭಣೆಯಿಂದ ಆಚರಿಸಿದರು. ಶ್ರೀ ಕೆ. ವಾಸುದೇವಾಚಾರ್ಯ, ಟಿ. ಚಾಡಯ್ಯ ಮೊದಲಾದವರ ಸಂಗೀತಕಚೇರಿ ನಡೆಯಿತು.

ಮದ್ರಾಸು -- ಪೂರ್ಣಚೇಂದ್ರ ಹೊಟೆಲ್ ಮಾಲಕರಾದ ಶ್ರೀ ಕೆ. ಕೃಷ್ಣಭಟ್ಟರ ಸುತ್ರಿ ಶ್ರೀಮತಿ ಪ್ರೇಮಾ, ಇವರ ವಿವಾಹವು ಮಂಗಳೂರು ಕೃಷ್ಣಭವನದ ಮಾಲಕರಾದ ಶ್ರೀ ಎಸ್. ವೆಂಕಟ್ರಮಣ ಭಟ್ಟರ ಪುತ್ರ ಶ್ರೀ ಪುಟ್ಟಣ್ಣ ಭಟ್ಟರೊಂದಿಗೆ ಇದೇ ತಾ. 9 ರಲ್ಲಿ ಜರಗಿತು. ಮದ್ರಾಸಿನ ಮಂತ್ರಿಗಳೂ, ಹೈಕೋರ್ಟು ನ್ಯಾಯಾಧೀಶರೂ, ನಗರದ ಅಧ್ಯರೂ ಉಪಸ್ಥಿತರಿದ್ದರು. ಕುಮಾರಿ ಮೋಹಿನಿಯವರ ನೃತ್ಯ ಮತ್ತು ಕಾರ್ಕಳದ ನಾರಾಯಣ ಸ್ವಾಮಿ ಮತ್ತು ಸಾರ್ಟಿಯವರ ನಾಗಸ್ವರವು ಇದ್ದುವು.

ಪೂರಿರಥೋತ್ಸವ— ಈ ವರ್ಷ ಇದೇ ಜೂನ್ ತಿಂಗಳ ತಾ. 21 ಮತ್ತು 29ರಲ್ಲಿ ಜರಗಲಿರುವ ಪುರಿಯಲ್ಲಿಯ ಜಗನ್ನಾಥ ದೇವರ ರಥೋತ್ಸವಕ್ಕೆ ಹೊಗಲಿಚ್ಛಿಸುವವರು ಕಾಲಾರಾ ಪ್ರತಿಬಂಧಕಡಾಬನ್ನು ಮಾಡಿಸಿಕೊಂಡು ಆಬಗ್ಗೆ ಸರ್ಟಿಫಿಕೇಟನ್ನು ಪಡಕೊಂಡಲ್ಲದೆ ರಥೋತ್ಸವವನ್ನು ನೋಡಲು ಅನುಮತಿ ಕೊಡಲಾಗುವುದಿಲ್ಲವೆಂದು ಪ್ರಕಟಿಸಿ ಮೊರೆ ಬಿದೆ.

ಎಡನೂರರಿಗೆ ಕರೆ

ಎಲ್ಲರೊಡನೆಯೂ ಶಾಂತಿಯಿಂದಿರುವ ಉದ್ದೇಶದಿಂದ ಪ್ರೇರಿತವಾಗಿಯೋ ಎಂಬಂತೆ, ರಶಿಯವು ಪಶ್ಚಿಮ ಜರ್ಮನಿಯ ಛಾನ್ಸಲರರಾದ ಎಡೆನೂರರಿಗೆ ಮೋಸ್ಕೋಗೆ ಬರಲು ಆಮಂತ್ರಣ ಕೊಟ್ಟಿದೆ. ಪರಸ್ಪರ ಸಂಬಂಧಗಳನ್ನು ಪುನಃ ಸ್ಥಾಪಿಸುವುದೇ ಇದರ ಧ್ಯೇಯವೆಂದು ಹೇಳಲಾಗಿದೆ. ಎಡೆನೂರರು ಆಮಂತ್ರಣದ ಕುರಿತು ಪಾಶ್ಚಾತ್ಯ ರಾಷ್ಟ್ರಗಳೊಡನೆ ಸಲಹೆ ಕೇಳಿದ್ದಾರೆ.

ಪಾಕಿಸ್ತಾನದಲ್ಲಿ

ಘಟನಾ ಸಮಿತಿಯ ಮೊದಲನೇ ಸಭೆಯು ಇದೇ ೨೯ನೇ ತಾರೀಕಿಗೆ ಸೇರಬಹುದೆಂದು ಗೊತ್ತಾಗಿದೆ. ಘಟನಾ ಸಮಿತಿಯ ಸದಸ್ಯರ ಚುನಾವಣೆಗಳು ಈಗ ನಡೆಯುತ್ತಿವೆ. ಪಶ್ಚಿಮ ಪಂಜಾಬಿನಿಂದ ೨೦ ಮಂದಿ ಸದಸ್ಯರ ನಾಮಕರಣವನ್ನು ಮುಸ್ಲಿಂ ಲೀಗು ಮಾಡಿದೆ. ಆದರೆ ಆದರಲ್ಲಿ ಆ ರಾಜ್ಯದ ಮಾಜಿ ಮುಖ್ಯ ಮಂತ್ರಿ ಫಿರೋಜ್‌ಖಾನ್ ನೂನರ ಬಳ್ಳಗದವರು ಯಾರೂ ಇಲ್ಲ.

ಚತುರಾಷ್ಟ್ರ ಪರಿಷತ್ತು

ನಾಲ್ಕು ಮಹಾರಾಷ್ಟ್ರಗಳ ಪರಿಷ್ಕರು ಎಲ್ಲಿ ಮತ್ತು ಯಾವಾಗ ಸಭೆಸೇರ ತಕ್ಕುದೆಂಬ ವಿಷಯದಲ್ಲಿ ಈಗ ರಶಿಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒಪ್ಪಂದವಾಗಿದೆ ಪರಿಷತ್ತು ಜಿನೇವಾದಲ್ಲಿ ಬರುವ ತಿಂಗಳ ೧೮ರಿಂದ ೩೧ರ ವರೆಗೆ ಸೇರಬೇಕೆಂಬ ಪಾಶ್ಚಾತ್ಯರ ಸೂಚನೆಗೆ ರಶಿಯ ಸಮ್ಮತಿಸಿದೆ. ಈ ಪರಿಷತ್ತು ಲೋಕಶಾಂತಿ ಸ್ಥಾಪನೆಯ ವಿಷಯದಲ್ಲಿ ಒಂದು ಪ್ರಯತ್ನವೆಂದೇ ಜನರು ತಿಳಿಯಬೇಕಲ್ಲದೆ ದೊಡ್ಡ ಆಶೆ ಕಟ್ಟಿಕೊಳ್ಳಬಾರದು ಎಂದು ಐಸನ್ ಹೋವರ್ ತಮ್ಮ ಹೇಳಿಕೆಯೊಂದರಲ್ಲಿ ಧ್ವನಿಸಿದ್ದಾರೆ.

ಫಜಲಅಲಿ ಆಯೋಗ

ಭಾಷಾಪ್ರಾಂತಗಳನ್ನು ರಚಿಸುವ ಕುರಿತಾದ ಫಜಲಅಲಿ ಆಯೋಗವು ಇದೇ ಸೆಪ್ಟೆಂಬರಿಂತ್ಯದೊಳಗೆ ನಿಶ್ಚಯವಾಗಿಯೂ ತನ್ನ ವರದಿಯೊಪ್ಪಿಸುವುದೆಂದು ತಿಳಿದುಬರುತ್ತದೆ. ಆಗೋಸ್ತು ೧೫ರಂದು ವರದಿಯನ್ನು ಅದು ಒಪ್ಪಿಸಿದರೂ ಆಶ್ಚರ್ಯ ಪಡಬೇಕಾಗಿಲ್ಲವೆಂದೆ. ಹೇಳಲಾಗುತ್ತದೆ. ಆಯೋಗವು ಸೌರಾಷ್ಟ್ರ ಮತ್ತು ಕಚ್ಛ ರಾಜ್ಯವನ್ನು ಮಾತ್ರ ಪ್ರಯಾಣಿಸುವುದು. ಬಾಕಿ ಉಳಿದಿದೆ; ಅಲ್ಲಿಗೆ ಅದು ಮುಂದಿನ ತಿಂಗಳು ಹೋಗುತ್ತದೆ.

ಭೂಸುಧಾರಣೆ

ಮದ್ರಾಸು ಸರಕಾರದ ಮಂತ್ರಿ ಮಂಡಳವು ಭೂಸುಧಾರಣೆಯ ಕುರಿತು ಉಪಸಮಿತಿ ರಚಿಸಿದ ಕರಡು ಮಸೂದೆಯ ಪರಿಶೀಲನೆಯನ್ನು ಕಳೆದವಾರ ಮಾಡಿತು. ಮಸೂದೆ ಯಾವಾಗ ಶಾಸನ ಸಭೆಯಲ್ಲಿ ಮಂಡಿಸಲ್ಪಡುವುದೆಂಬ ಪ್ರಶ್ನೆಗೆ ಮುಖ್ಯ ಮಂತ್ರಿಗಳು ತಮ್ಮ ವಿಶಿಷ್ಟ ನಗೆಯನ್ನು ಮಾತ್ರ ಉತ್ತರವಾಗಿ ಕೊಟ್ಟರು.

ಆವಶ್ಯಕ ಮಾಹಿತಿಗಳಿಂದ ಕೂಡಿರುವ

ಮಕ್ಕಳ ಮಗ್ಗಿ ಪುಸ್ತಕ

ಬೆಲೆ 0—1—0

ವ್ಯಾಪಾರಿಗಳಿಗೆ ಥಿಂಯಾಳ ಕಮಿಶನ್.

ದಪ್ಪ ಕಾಗದದ

ಎಕ್ಸರ್‌ಸೈಜ್ ಪುಸ್ತಕಗಳೂ

ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಜರ್ಜರಾಸ್ವದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ,

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ನಡೆಯುವ ಚಿತ್ರ.

ನಮ್ಮ ನಿರ್ಮಿತ

ಡಂಕಾ

ನಿರ್ದೇಶಕ: ಅಮರ್ ನಾಥ್

ಬರುವ ಚಿತ್ರ: ರತ್ನ ಕಣ್ಣೇರ್, ಎದಿರ್‌ಪರಾದುದು

ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ

ನವಭಾರತ ಪುಸ್ತಕ ಭಂಡಾರ ಉಡುಪಿ

ಆಮಂತ್ರಣ ಪತ್ರಿಕೆ ಮೊದಲಾದ ಪ್ರಿಂಟಿಂಗ್ ಕೆಲಸಗಳಿಗೆ-

ನವಯುಗ ಪ್ರೆಸ್,

ಉಡುಪಿ.

ಮಂಗಳೂರು

ವನಮಹೋತ್ಸವ— ದ. ಕ. ಜಿಲ್ಲೆಯಲ್ಲಿ ವನಮಹೋತ್ಸವದ ಅಧಿಯುಕ್ತ ಕಾರ್ಯಕ್ರಮಗಳು ಮುಂದಿನ ಜುಲಾಯಿ ತಿಂಗಳ ತಾ. 10ರಿಂದ 7ರ ತನಕ ಜರಗಲಿರುವುದು. ಕಳೆದ ಐದುವರ್ಷಗಳಿಂದಲೂ ವನಮಹೋತ್ಸವವು ವಿಜೃಂಭಣೆಯಿಂದಲೇ ಜರಗಿತ್ತು. ಈ ಐದು ವರ್ಷಗಳಲ್ಲಿ ಪ್ರಥಮ ಮೂರು ವರ್ಷಗಳಲ್ಲಿ ನಮ್ಮ ಜಿಲ್ಲೆಯೇ ಈ ಉತ್ಸವ ಕಾರ್ಯದಲ್ಲಿ ಪುರಸ್ಕಾರವನ್ನು ಹೊಂದಿರುವುದು. ಈ ಮೂರು ವರ್ಷವೂ ನಮ್ಮ ಜಿಲ್ಲೆಗೆ ಗುರಾಣಿ ಸಾರಿತೋಷವನ್ನು ಸರಕಾರವು ಕೊಟ್ಟಿರುತ್ತದೆ. ಈ ಭಾಗ್ಯವೂ, ಸನ್ಮಾನವೂ ನಿನ್ನದೇ. ಮಹಾಜನರೆಲ್ಲರೂ ಎಂದಿನಂತೆ ಉತ್ಸಾಹಪೂರಿತರಾಗಿ ಸಹಿಲತೆಗಳನ್ನು ನೆಟ್ಟು ಈ ವನಮಹೋತ್ಸವದ ಸಮಾರಂಭಕ್ಕೆ ಬೆಂಬಲವನ್ನು ನೀಡಿದಲ್ಲಿ ನಮ್ಮ ಜಿಲ್ಲೆಯ ಕೀರ್ತಿಯು ಅಖಿಲ ಭಾರತದಲ್ಲಿ ಬೆಳಗುವುದರಲ್ಲಿ ಸಂದೇಹವಿಲ್ಲವೆಂದು ಬೆಲ್ಲಾ ಕಲೆಕ್ಟರರು ಪ್ರಕಟಿಸಿರುತ್ತಾರೆ.

ನೋಟೀಸು

ಉಡುಪಿ ತಾಲ್ಲೂಕೋಟೆ ಗ್ರಾಮದಲ್ಲಿರುವ ಕೇಳುದ ಪೂರ್ಣಯ್ಯನವರ ಮಗ ಶೀಪಪ್ಪಯ್ಯನು ಈ ಮೂಲಕ ತಿಳಿಸುವುದೇನಂದ್ರೆ- ಉಡುಪಿ ತಾಲ್ಲೂಕೋಟೆ ಗ್ರಾಮದ ಕಟ್ಟಾದಿಯಲ್ಲಿರುವ ಶ್ರೀಧರ ಕಮ್ತರ ಮಗ ಶೇಷಗಿರಿ ಕಮ್ತಿ ಮತ್ತು ಇವರ ಮೈನರ್ ಮಕ್ಕಳ ಬಾಬ್ತು ಮೂಲಿಪಕ್ಕೆನ ಉಡ್ಪಿ ತಾಲ್ಲೂಕ ಮೂಡಬೆಟ್ಟು ಗ್ರಾಮದ ಸರ್ವೆ ನಂಬ್ರ 14—19—21 ಇವುಗಳು ಕೂಡಾ ಸದ್ರಿ ಮೂಡಬೆಟ್ಟು ಗ್ರಾಮದ ಸರ್ವೆ ನಂಬ್ರ 6 ರಲ್ಲಿ 24—25 ಮತ್ತು 20ನೇ ಸ್ಥಳಗಳೊಂದಿಗೆ ಆ ಎಲ್ಲಾ ಸ್ಥಳಗಳಲ್ಲಿರುವ ಸರ್ವಾದಿ ಕೃತಗಳ ಸಮೇತ ಸದ್ರಿ ಶೇಷಗಿರಿ ಕಮ್ತರು ಸ್ವತಃ ಮೈನರ್ ಮಕ್ಕಳ ಗಾರ್ಡಿಯನ್‌ನಾಗಿಯೂ ಅವರ ಕುಟುಂಬದ ಯಜಮಾನನಾಗಿಯೂ ಸಹ ಅವರ ಕುಟುಂಬದ ಪ್ರಯೋಜನಾರ್ಥವಾಗಿಯೂ ಅತ್ಯಗತ್ಯವಾದ ಗರ್ಜಿನ ಬಗ್ಗೆಯೂ ಸಹ ನನಗೆ ತಾ. 13—6—1955ರಲ್ಲು ರೂಪಾ 8000 (ಎಂಟು ಸಾವಿರಕ್ಕೆ) ಬರಕೊಟ್ಟ ಈಯದ ದಸ್ತಾವೇಜನ ಅಸ್ಸು ಬಡ್ಡಿ ಅ್ಯಾವಜುಗಳಿಗೆ ಈಡು ಇರುತ್ತದೆ. ಮತ್ತು ಸದ್ರಿ ಸ. ನಂ. 6 ರಲ್ಲಿ 14, 19, 21 ಸ್ಥಳಗಳನ್ನು ಕೂಡಾ ಸದ್ರಿ ಶೇಷಗಿರಿ ಕಮ್ತರು ಮೇಲ್ಕಂಡ ಈಡು ದಸ್ತಾವೇಜು ಪ್ರಕಾರ ನನಗೆ ಈಡುಮಾಡಿ ಕೊಟ್ಟಿರುತ್ತಾರೆ. ಅವರೆ ಸದ್ರಿ ಈಡು ದಸ್ತಾವೇಜಿನಲ್ಲಿ ಈ ದಿನ ಅಸ್ತಿಯ ಸರ್ವ ತಪಶೀಲು ತೋರಿಸುವಾಗ್ಯೆ ಪರಾಮೋಶಿಯಿಂದಲೂ ಉಭಯತರ ತಪ್ಪು ಅಭಿಪ್ರಾಯದಿಂದಲೂ ಸರ್ವ ಸ. ನಂ. 6ರಲ್ಲಿ 11.19ಮತ್ತು 21 ಅಂಕೆಗಳನ್ನು ತೋರಿಸುವರೆ ಬಿಟ್ಟು ಹೋದ ಸಂಗತಿನನ್ನ ತಿಳುವಳಿಕೆಗೆ ಯಿತ್ತಲಾಗ್ಯೆ ಬಂದಿರುವಲ್ಲಿಂದ ಆ ಕಾರಣದಿಂದ ಸದ್ರಿ ಶೇಷಗಿರಿ ಕಮ್ತರು ನನಗೆ ಮೋಸಕೊಟ್ಟು ಅಕ್ರಮ ಲಾಭಪಡಿಯುವ ಇರಾದೆಯಿಂದ ಅವುಗಳು ನನ್ನ ಈಡಿನ ಸೇರಿಲಿಲ್ಲವೆಂತ ಹೇಳಿಕೊಂಡು ಅವರ ಹಂಗೀಕರ ಹೆಸರಲ್ಲಿ ಅವುಗಳನ್ನು ಬೆನಾಮಿಯಾಗಿ ಪರಾಬಾರೆ ಮಾಡಿಯಿಡುವ ಅಭಿಪ್ರಾಯದಲ್ಲಿ ಸದ್ರಿ ಶೇಷಗಿರಿ ಕಮ್ತರು ಇರುವದಾಗಿ ಕೂಡಾ ನಾನು ತಿಳಿಯುತ್ತೇನೆ. ಆ ಪ್ರಕಾರ ನನ್ನ ಈಡಿನ ಅಸ್ಸು ಬಡ್ಡಿ ಅ್ಯಾವಜುಗಳನ್ನು ಖಾವತಿ ಮಾಡದೆ ಸದ್ರಿ ಸ್ಥಳಗಳನ್ನು ಪರಾಭಾರೆ ಮಾಡುವರೆ ಅವರಿಗೆ ಅಧಿಕಾರ ಇರುವದಿಲ್ಲ. ನನಗೆ ತಾ. 13-6-1955ಕ್ಕೆ ಬರಬೇಕಾದ ಬಡ್ಡಿಯ ವಸೂಲಿಗೆ ನಾನು ಉಡ್ಪಿ ದಿ. ಮುನ್ಸೀಫ್ ಕೋರ್ಟಸಲ್ಲಿ ದಾವಾ ಮಾಡಿಯಿತ್ತೇನೆ. ಮತ್ತು ಸದ್ರಿ ದಾವೆಯಲ್ಲಿ ಮೇಲ್ಕಂಡ ಸ್ಥಳಗಳ ಮೇಲಾಟದಿಂದ ಕೊಡಾ ನನ್ನ ಗುಣಕ್ಕೆ ಡಿಕ್ರಿ ಆಗುವಂತೆ ನಾನು ಕೇಳಿಕೊಂಡಿದ್ದೇನೆ. ಆದುದರಿಂದ ಮೇಲ್ಕಂಡ ಸ. ನಂಬ್ರ 6 ರಲ್ಲಿ 14, 19, 21ನೇ ಸ್ಥಳಗಳನ್ನು ಯಾರಾದರೂ ಈಡು ಕ್ರಯ ವಗೈರೆ ಯಾವ ತರದ ಪರಾಭಾರೆಯನ್ನು ಮಾಡಿಕೊಂಡಲ್ಲಿ ಅಂಥವುಗಳು ನನ್ನನ್ನು ಬದ್ದೀಕರಿಸತಕ್ಕವುಗಳಲ್ಲ ಅಂಥವರಿಗೆ ಆಗಬಹುದಾದ ನಷ್ಟಕಷ್ಟಕ್ಕೆ ನಾನು ಜವಾಬ್ದಾರನಲ್ಲ.

ಪಿ. ಶೇಷಪ್ಪಯ್ಯನ್.
ದಸ್ತಖತು.

ಉಡ್ಪಿ, ತಾ. 13-6-1955.

ಭಾಷಣ . ಇದೇ ತಾ. 9 ರಲ್ಲು ಸಂಜೆ ಸ್ಥಳೀಯ ರೋಟರಿ ಕ್ಲಬ್ಬಿನ ಸಭೆಯು ಡಾ| ಪೈಲೂರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಣೇಲ್ ಶ್ರೀನಿವಾಸ ನಾಯ್ಕರು ಗುಡಿಕೈಗಾರಿಕೆಯ ಕುರಿತು ಮಾತನಾಡುತ್ತಾ, ನಮ್ಮ ಸರಕಾರವು "ರಾಷ್ಟ್ರೀಯ ಗುಡಿಕೈಗಾರಿಕೆಯ ಬೋರ್ಡನ್ನು" ಸ್ಥಾಪಿಸಿ ಆಯಾ ಕಡೆಗಳಲ್ಲಿ ಒಂದೇ ಸಮಿತಿಯ ಕೈಗಾರಿಕೆಯ ಸ್ಥಳೀಕರಣವಾಗುವಂತೆ ಯತ್ನಿಸಬೇಕೆಂದರು. ಶ್ರೀ ನಿಶ್ಚಲನಾಥ ಕಾಮತರು ವಂದನೆಗಳನ್ನರ್ಪಿಸಿದರು.

ವಿವಾಹ ಸಮಾರಂಭ— ಕೆನರಾ ಪರ್ಕ್ ಕೋಪ್ಸಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ವಿ. ಎಸ್. ಕುಡ್ಲರ ಪುತ್ರಿ ಕುಮಾರಿ ಭಾರತೀಯರ ವಿವಾಹವು ದಿವಂಗತ ಶ್ರೀ ಪಿ. ನಾಗೇಶ ಮಲ್ಯರ ಪುತ್ರ ಶ್ರೀ ರಂಗನಾಥ ಮಲ್ಯರೊಂದಿಗೆ ಇದೇ ತಾ 9ರಲ್ಲು ಮಧ್ಯಾಹ್ನ ಯಶಸ್ವಿಯಾಗಿ ಜರಗಿತು. ನಗರದ ಅಧ್ಯಮಹನೀಯರೂ ಮಹಿಳೆಯರೂ ಸಮಾರಂಭಕ್ಕೆ ಬಂದಿದ್ದು ನವದಂಪತಿಗಳನ್ನು ಹರಸಿದರು.

ಸೈಕಲ್ ಸಾಹಸ— ಮಂಗಳೂರು ಕೇಂದ್ರ ಮೈದಾನದಲ್ಲಿ ತಾ. 10ರಲ್ಲು ಸಂಜೆ 4.30 ತಾಸಿನಿಂದ ಕಾರ್ಕಳದ ಶ್ರೀ ಪಿ. ಎಸ್. ಆನಂದ ಪ್ರಭುಗಳು 75 ಗಂಟೆಕಾಲ ಅವಿಶ್ರಾಂತ ಸೈಕಲ್ ಸವಾರಿ ಮಾಡಿದರು.

ವಾರ್ಷಿಕೋತ್ಸವ — ಮಂಗಳೂರು ಸೈಕಲ್ಸ್ ಬ್ರಾಹ್ಮಣರ ಸಂಘದ 21ನೇ ವಾರ್ಷಿಕೋತ್ಸವವು ತಾ. 12ರಲ್ಲು ಶ್ರೀ. ಜಿ. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಗತವರ್ಷದ ವರದಿ ಲೆಕ್ಕಪತ್ರಗಳು ಸ್ವೀಕರಿಸಲ್ಪಟ್ಟ ಬಳಿಕ ಹೊಸ ವರ್ಷಕ್ಕೆ ಶ್ರೀಗಳಾದ ಎಮ್. ಎನ್. ಶೇಟ್, ಅಧ್ಯಕ್ಷ ಎಚ್. ಕೆ. ಶೇಟ್, ಉಪಾಧ್ಯಕ್ಷ ಎಸ್. ಎಲ್. ಶೇಟ್, ಕಾರ್ಯದರ್ಶಿ, ಎನ್. ಸಂಜೀವ ಶೇಟ್, ಜತೆ ಕಾರ್ಯದರ್ಶಿ, ಕೆ. ಕೆ. ಆರ್. ಶೇಟ್; ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಉದ್ಯಾವರ— ಉಡುಪಿ ತಾಲೂಕಿಗೆ ಒಳಪಟ್ಟ ಉದ್ಯಾವರ ಹದಿನಾಲ್ಕು ಪಟ್ಟಿ ಮೊಗವೀರ ಮಹಾಜನ ಸಭೆಯು ಇದೇ ತಾ. 9ರಲ್ಲಿ ಶ್ರೀ ಯು. ಸದಿಯನಾಯಕರ ಅಧ್ಯಕ್ಷತೆಯಲ್ಲಿ ನೇರಿಯ. ಈವರ್ಷ ಮೀನು ಇಲ್ಲದೆ ಕಾಲಕಳೆಯುವುದು ಕಷ್ಟಕರವಾದ ಪರಿಸ್ಥಿತಿಯನ್ನು ಕಂಡು, ಸಭೆಯ ಧನದಿಂದ ಅಕ್ಕಿಯನ್ನು ಕೊಂಡು ಕೊಂಡು ಈ ಸಭೆಗೆ ಸಂಬಂಧಪಟ್ಟ ಪ್ರತೀ ಬರೆಯ ಕಲಾಸಿಗಳಿಗೂ, ವ್ಯಾಪಾರಸ್ಥರಿಗೂ ಮತ್ತು ಬೊಂಬಾಯಿ ಹಾಗೂ ಇತರಕಡೆಯಲ್ಲಿರುವವರಿಗೂ ಅಂತೆಯೇ ಕೆಲಸ ಮಾಡಲು ಅರಕ್ಕರಾದ ಪ್ರಾಯಸ್ಥರಿಗೂ ತಲಾ ಒಂದರ ಬಂಪೊಂದು ಮುಡಿ ಅಕ್ಕಿಯಂತೆ 865 ಮುಡಿ ಅಕ್ಕಿಯನ್ನು ತಾ. 11ರಲ್ಲಿ ಧರ್ಮಾರ್ಥ ಹಂಚಲಾಯಿತು.

ಗೋವೆಯ ವಿಮೋಚನೆಯ ಹೋರಾಟ

ಒಳಗಿನ ಒತ್ತಡ ಬಲವಾಗಲಿ

ಗೋವೆ ಮತ್ತಿತರ ಭಾರತದಲ್ಲಿನ ಪೋರ್ಚುಗೀಜ ವಸಾಹತುಗಳಲ್ಲಿ ನಡೆಯುತ್ತಿರುವ ಆಂದೋಲನದಿಂದ ಬೆದರಿದ ಪೋರ್ಚುಗಾಲವು ಲಿಸ್ಬನ್‌ನಿಂದ ಕಳೆದ ವಾರ ಒಂದು ಬೆದರು ಗುಂಡನ್ನು ಒಗೆಯಿತಲ್ಲದೆ, ಗೋಮಾಂತಕರ ಮನವೊಲಿಸಲು ಶಾಸನದಲ್ಲಿ ಸುಧಾರಣೆ ಮಾಡುವ ಆಮಿಷವನ್ನೂ ತೋರಿಸಿತು. ಸ್ವಯಂಸೇವಕರು ಸ್ವೇಚ್ಛೆಯಿಂದ ಗೋಮಾಂತಕರೊಡನೆ ಸಹಕರಿಸಲು ಭಾರತದಿಂದ ಹೋಗುತ್ತಿದ್ದರೂ ಭಾರತ ಸರಕಾರದ ಪ್ರಚೋದನೆಯಿಂದಲೇ ಇದು ನಡೆಯುತ್ತದೆ ಎಂದು ಪೋರ್ಚುಗಾಲವು ಆರೋಪಿಸಿತು. ಸ್ವಯಂಸೇವಕರು ಹೆಸರಿಗಷ್ಟೇ ಶಾಂತಿಯ ಮಂತ್ರ ಪಠಿಸುತ್ತಿದ್ದಾರೆಂದೂ ಗೋವೆಗೆ ನುಗ್ಗಿ ಬಂದ ಬಳಿಕ ಹಿಂಸಾಚಾರಗಳನ್ನು ನಡೆಸುವರೆಂದೂ ಅದು ಹೇಳಿತು. ಆದುದರಿಂದ ಗೋವೆಯ ಗಡಿ ನುಗ್ಗಿ ಬರುವವರನ್ನು ತನ್ನ ಸಾರ್ವಭೌಮತ್ವದ ಉಲ್ಲಂಘನೆ ಮಾಡಿದವರೆಂದೇ ಪೋರ್ಚುಗಾಲವು ಭಾವಿಸುವುದೆಂದೂ ಈ ಅತಿಕ್ರಮಣವನ್ನು ಹಿಂಸೆಯಿಂದಲೇ ಎದುರಿಸಲಾಗುವುದೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿತು.

ನೆಹರುಗಳ ನಿಲುಮೆ

ಪ್ರಧಾನ ಮಂತ್ರಿ ನೆಹರುಗಳು ತಮ್ಮ ಧೋರಣೆಯನ್ನು ಬದಲಿಸಿರುವರೆಂದೂ ಇದರಿಂದ ಐಕ್ಯದಲ್ಲಿ ಯುದ್ಧದ ಜ್ವಾಲೆ ಹೊತ್ತಿಕೊಳ್ಳುವ ಸಂಭವ ಹೆಚ್ಚಿದೆಯೆಂದೂ ಪೋರ್ಚುಗಾಲವು ಸಾರಿತು. ಇವೆಲ್ಲ ಆರೋಪಗಳನ್ನು ಕೇಳಿಕೊಂಡ ಭಾರತ ಸರಕಾರವು ಇಂಥ ಅಪಪ್ರಚಾರದಿಂದ ಪೋರ್ಚುಗಾಲದೊಡನಿರುವ ಸಂಬಂಧ ಬಹಳವಾಗಿ ಕೆಡಬಹುದೆಂದು ಭಾವಿಸಿದೆಯಾಗಿ ತಿಳಿದು ಬರುತ್ತದೆ. ಸತ್ಯಾಗ್ರಹಿಗಳು ಸ್ವೇಚ್ಛೆಯಿಂದ ಗೋವೆಯನ್ನು ಪ್ರವೇಶಿಸಿ ಶಾಂತ ರೀತಿಯಲ್ಲಿ ಗೋಮಾಂತಕರೊಡನೆ ವಿಮೋಚನೆಯ ಹೋರಾಟದಲ್ಲಿ ಸಹಕರಿಸುವುದಕ್ಕೆ ಅಧಿಕಾರ ಪಡೆದಿರುವರೆಂದೇ ಭಾರತದ ಅಭಿಪ್ರಾಯ. ಅವರೆ ಭಾರತೀಯರು ಬಹು ಸಂಖ್ಯೆಯಲ್ಲಿ ಗೋವೆಯ ಒಳಗೆ ನುಗ್ಗುವುದು ಸರಕಾರಕ್ಕೆ ಇಷ್ಟವಿಲ್ಲ—ಹಾಗೆಂದು ಗೋವೆಯ ಗಡಿಗಳಲ್ಲಿ ಪ್ರವೇಶಿಸದಂತೆ ಎಲ್ಲ ಮಾರ್ಗಗಳಲ್ಲೂ ಪಹರೆ ನಡೆಸುವುದು ಅಸಾಧ್ಯ ಎಂದು, ಡಾ. ಸಯ್ಯದ್ ಮಹಮ್ಮದರ ಹೇಳಿಕೆಯಿಂದ ಗೊತ್ತಾಗುತ್ತದೆ

ಒಳಗಿನ ಒತ್ತಡ ಬೇಕು

ಪ್ರತಿವಾರವೂ ಇನ್ನುಮುಂದೆ ಬೇರೆ ಬೇರೆ ರಾಜಕೀಯ ಪಕ್ಷದ ಪರವಾಗಿ ಸ್ವಯಂಸೇವಕರು ಗೋವೆಯನ್ನು ನುಗ್ಗುವರೆಂದು ವರದಿಗಳು ಹೇಳುತ್ತವೆ. ಇದೇ ೧೮ನೇ ತಾರೀಕಿನಂದು ಕ್ರಾಂತಿಯ ದಿನವನ್ನು ಧ್ವಜ ಸತ್ಯಾಗ್ರಹದಿಂದ ಆಚರಿಸುವುದಾಗಿ ಸ್ವಯಂಸೇವಕರಲ್ಲಿ ಒಂದು ತಂಡ ಹೇಳಿರುತ್ತದೆ. ಭಾರತ ಸರಕಾರವು ರೈಲು ಸಂಪರ್ಕವನ್ನು ಸ್ಥಗಿತಗೊಳಿಸಬೇಕೆಂದೂ ಒತ್ತಾಯಿಸಲಾಗುತ್ತದೆ. ಆದರೆ ಭಾರತ ಸರಕಾರ ಹಾಗು ಪಂಡಿತ ಕುಂಜ್ರುರಂಥ ಮುತ್ಸದ್ದಿಗಳು ಗೋಮಾಂತಕರೇ ತಮ್ಮ ಹೋರಾಟವನ್ನು ಬಲಗೊಳಿಸಬೇಕೆಂದು ಈ ಅತಿರೇಕವಾದಿಗಳಿಗೆ ಹಿತೋಪದೇಶ ನೀಡುತ್ತಾರೆ. ಗೋಮಾಂತಕರು ಪೋರ್ಚುಗೀಜ ಪ್ರಭುತ್ವವನ್ನು ನೇರಾಗಿ ಎದುರಿಸಿದರೆ ಆಗ ಹೊರಗಿನವರ ಪ್ರಚೋದನೆ ನಡೆಯುತ್ತಿದೆ ಎಂಬ ಆರೋಪಕ್ಕೆ ಎಡೆ ಇರುವುದಿಲ್ಲ. ಫ್ರೆಂಚರ ಕೈಯಲ್ಲಿ ಭಾರತದಲ್ಲಿದ್ದ ವಸಾಹತುಗಳ ಹಸ್ತಾಂತರ ಅಷ್ಟು ಶೀಘ್ರದಲ್ಲಿ ಕೈಗೂಡಲು ಅಲ್ಲಿಯ ಧುರೀಣರು ನಡೆಸಿದ ಚಳವಳಿಯೇ ಕಾರಣವೆಂದರೆ ತಪ್ಪಾಗದು. ಗೋಮಾಂತಕರು ಇದನ್ನು ಮನಗಂಡು ತಮ್ಮ ಹೊರಗಿನ ಭಾರತೀಯರ ಮುಖನೋಡದೆ, ಚಳವಳದಲ್ಲಿ ಧುಮುಕಬೇಕು. ಹೆಸರಿಗಷ್ಟೇ ತಂದಿರುವ ಪೋರ್ಚುಗಾಲ ಸರಕಾರದ ಸುಧಾರಣೆಯ ಕ್ರಮಗಳಿಂದ ಮೋಸಹೋಗಬಾರದು ಎನ್ನಲಾಗುತ್ತದೆ.

Kannada non-detailed TextBook for Higher Forms
ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶೆದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮೋದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ವಿಶ್ವ ಸಂಸ್ಥೆಯ ಹತ್ತನೇ ವಾರ್ಷಿಕಾಧಿವೇಶನ

ಸಾನ್ ಫ್ರಾನ್ಸಿಸ್ಕೋದಲ್ಲಿ ಅಪೂರ್ವ ಸಿದ್ಧತೆಗಳು

ವಿಶ್ವ ಸಂಸ್ಥೆಯು 10ವರ್ಷಗಳ ಹಿಂದೆ ಎಲ್ಲಿ ಜನ್ಮತಾಳಿತೋ ಆ ಸ್ಥಳಕ್ಕೆ ಅದನ್ನು ಸುಸ್ವಾಗತಿಸಲು ಸಾನ್ ಫ್ರಾನ್ಸಿಸ್ಕೋ ನಗರವು ಅಪೂರ್ವಸಿದ್ಧತೆಗಳನ್ನು ಮಾಡುತ್ತಿದೆ.

ಜನರಲ್ ಅಸೆಂಬ್ಲಿಯ ಜೂನ್ ೨೦–೨೬ ರ ಸಭೆಯು ಕೇವಲ ಔಪಚಾರಿಕವಾಗಿರುವುದೆಂದು ಮೊದಲು ನಿರೀಕ್ಷಿಸಲಾಗಿತ್ತು. ಆದರೆ ಅಧ್ಯಕ್ಷ ಐಸೆನ್ ಹೋವರ್‌ರು ತಾನು ಸ್ವಾಗತಭಾಷಣಮಾಡುವುದಾಗಿ ಹೇಳಿಕಳಿಸಿದ ಅನಂತರ ಈ ಸಭೆಗೆ ಹೊಸವೈಶಿಷ್ಟ್ಯ ಒದಗಿದೆ.

ರಾಜ್ಯಜಾತಿಯ ಕಾರ್ಯದರ್ಶಿ ಡಲೆಸ್‌ರು ಸ್ವಾಗತಭಾಷಣಮಾಡುವರೆಂದು ಮೊದಲು ನಿಶ್ಚಯಿಸಲಾಗಿತ್ತು. ಆದರೆ ಅವರು ಭಾಷಣವನ್ನೀಗ ವಾರದ ಕೊನೆಯ ವರೆಗೆ ಮುಂದುವರಿಸಲಾಗಿದೆ. ರಷ್ಯದ ವಿದೇಶಾಂಗ ಸಚಿವ ವಿ. ಯಂ. ಮೊಲಟೋವ್‌ರು ಜೂನ್ ೨೦ರಂದು ಭಾಷಣ ಮಾಡಬಹುದು. ಬ್ರಿಟಿಷ್ ವಿದೇಶ ಜಾತಿಯ ಕಾರ್ಯದರ್ಶಿ ಹ್ಯಾರಲ್ಡ್ ಮ್ಯಾಕ್‌ಮಿಲನ್‌ರೂ ಅಧಿವೇಶನದ ಮೊದಲ ದಿನಗಳಲ್ಲಿ ಮಾತಾಡುವರು. ಏಕೆಂದರೆ ಅವರಿಗೆ ಜೂನ್ ೨೨ರ ವರೆಗೆ ಮಾತ್ರ ಸಾನ್ ಫ್ರಾನ್ಸಿಸ್ಕೋದಲ್ಲಿರಲು ಸಾಧ್ಯವಿದೆ. ಫ್ರೆಂಚ್ ವಿದೇಶಾಂಗ ಸಚಿವ ಪಿನೇಯವರೂ ಪ್ರತಿನಿಧಿಗಳನ್ನುದ್ದೇಶಿಸಿ ಭಾಷಣ ಮಾಡಲಿರುವರು.

ಈ ವಾರ್ಷಿಕಾಧಿವೇಶನದ ಅನಧಿಕೃತ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಹಿಂದಿನ ಆರು ಮಂದಿ ಅಧ್ಯಕ್ಷರು ಭಾಷಣಗಳನ್ನೀಯಲಿರುವರು. ಬಂಧಿತ್ವನೆಯ (೧೯೫೪) ಜನರಲ್ ಅಸೆಂಬ್ಲಿಯ ಅಧ್ಯಕ್ಷ ಡಾ| ಎಲ್ ಕೋ ಎನ್. ವಾನ್ ಕ್ಲಿಫೆನ್ಸರು ಅಧ್ಯಕ್ಷತೆ ವಹಿಸುವರು ಮತ್ತು ಜೂನ್ ೩೦ನೇ ಸೋಮವಾರ ಅಪರಾಹ್ನದ ಉದ್ಘಾಟನಾಧಿವೇಶನದಲ್ಲಿ ಮಾತಾಡುವರು.

ಶೀಘ್ರದಲ್ಲಿಯೇ ಜರುಗಲಿರುವ ಚತುರಾಷ್ಟ್ರ ಪ್ರಮುಖರ ಸಮ್ಮೇಳನದ ವಿಷಯಗಳನ್ನು ನಿರ್ಧರಿಸಲು ನಾಲ್ಕು ರಾಷ್ಟ್ರಗಳ ವಿದೇಶ ಮಂತ್ರಿಗಳು ಇಲ್ಲಿ ಕಾರ್ಯನಿರತರಾಗುವ ಕಾರಣ ಈ ಸಭೆಯು ಹತ್ತು ವರ್ಷಗಳ ಹಿಂದಣ್ಣ ವಿಶ್ವಸಂಸ್ಥೆಯ ಪ್ರಾರಂಭದ ಸಭೆಯನ್ನೇ ನಮ್ರತ್ವ ಪೂರ್ಣದ್ದಾಗಬಹುದು ಎಂದು ಸಾನ್‌ಫ್ರಾನ್ಸಿಸ್ಕೋದ ಮೇಯರ್ ಎಲ್‌ಪಾರ್ ರಾಬಿನ್‌ಸನ್‌ರು ಹೇಳುತ್ತಾರೆ.

ಶಾಂತಸಾಗರ ಪ್ರದೇಶದಲ್ಲಿ ದ್ವಿತೀಯ ಜಾಗತಿಕ ಯುದ್ಧವು ನಡೆಯುತ್ತಿದ್ದಾಗಲೇ, 1945ನೇ ವಸಂತ ಋತುವಿನಲ್ಲಿ ಸಾನ್‌ಫ್ರಾನ್ಸಿಸ್ಕೋದಲ್ಲಿ ನೂರಾರು ರಾಜಕಾರಣಿಗಳು ಸೇರಿಗೂಡಿದರು ಇವರ ಪ್ರಯತ್ನಗಳಿಂದ ವಿಶ್ವಸಂಸ್ಥೆಯು ಜನ್ಮತಾಳಿತು. ಯುದ್ಧದ ಗೊಂದಲವಿದ್ದರೂ, ಸಾನ್ ಫ್ರಾನ್ಸಿಸ್ಕೋದ ಜನರಿದನ್ನು ಗಣಿಸದೆ ಸಂದರ್ಶಕರಿಗೆ ಸ್ವಾಗತವೀಯುವ ಮತ್ತು ಸಹಾಯ ಮಾಡುವ ಆತಿಥ್ಯ ಕಾರ್ಯಗಳಲ್ಲಿ ನಿರತರಾದರು.

ಕಳೆದ ವರ್ಷದ ಕೊನೆಯಭಾಗದಲ್ಲಿ, ವಿದೇಶಗಳ ಪ್ರಮುಖ ವ್ಯಕ್ತಿಗಳನ್ನು ಸತ್ಕರಿಸುವುದರಲ್ಲಿ ದೀರ್ಘಕಾಲದಿಂದ ಅನುಭವಹಿಸಿದ್ದ ಸಾನ್ ಫ್ರಾನ್ಸಿಸ್ಕೋದ ಪ್ರೆಸ್ ಎಂಡ್ ಯೂನಿಯನ್ ಲೀಗ್ ಕ್ಲಬ್ ಎಂಬ ಸಂಘವು, ಜನರಲ್ ಎಸೆಂಬ್ಲಿಯ ತನ್ನ ಹತ್ತನೇ ವಾರ್ಷಿಕೋತ್ಸವವನ್ನಾಚರಿಸಲು ಸಾನ್ ಫ್ರಾನ್ಸಿಸ್ಕೋದಲ್ಲಿ ಸಭೆ ಸೇರಬೇಕೆಂದು ಸಲಹೆಮಾಡಿತು. ಈ ಸಂಘವು ಕಳೆದ 60 ವರ್ಷಗಳಲ್ಲಿ ಜಗತ್ತಿನ ಅನೇಕ ಭಾಗಗಳ ರಾಜರಿಗೆ, ಸ್ವರ್ಗಗಳ ವಿಜಯಿಗಳಾದವರಿಗೆ, ವಿದೇಶ ಮಂತ್ರಿಗಳಿಗೆ, ಮೇಧಾವಿಗಳಿಗೆ ಮತ್ತು ತಾರೆಯರಿಗೆ ಸತ್ಕಾರ ಕಿತ್ತಿದೆ.

೧೯೪೪ನೇ ಇಸವಿಯ ಕೊನೆಯ ಭಾಗದಲ್ಲಿ ಮುನಿಸಿಪಲ್ ಸರಕಾರವು ಜನರಲ್ ಅಸೆಂಬ್ಲಿಯ ಸಭೆ ಜರುಗುವ ಸಲುವಾಗಿ ಅಧಿಕೃತ ಪೆಚ್ಚಗಳನ್ನು ನಿರ್ವಹಿಸಲು ೧,೫೦,೦೦೦ ಕೋಟಿ ಡಾಲರ್‌ಗಳನ್ನು ಮಂಜೂರು ಮಾಡಿತು.

೩೦,೦೦,೦೦೦ ಜನಸಂಖ್ಯೆಯಿರುವ ಸಾನ್ ಫ್ರಾನ್ಸಿಸ್ಕೋ ನಗರದಲ್ಲಿ ಅಂತಾರಾಷ್ಟ್ರೀಯ ವಾತಾವರಣವಿರುವುದು ಸಹಜವಾಗಿದೆ. ವಾಣಿಜ್ಯ ಮತ್ತು ಪಲಸೆಗಳಿಂದಾಗಿ, ಫ್ರಾನ್ಸಿಸ್ಕೋ ಪ್ರದೇಶದ ಬಲು ಹಿಂದಿನಿಂದಲೂ ಸಾರ್ವಾತ್ರಿಕ ರಾಷ್ಟ್ರೀಯರಿಂದ ಕೂಡಿದ ಮಿಶ್ರನಗರವಾಗಿರುತ್ತದೆ. ಸಾನ್ ಫ್ರಾನ್ಸಿಸ್ಕೋ ಟೆಲಿಫೋನ್ ಡೈರೆಕ್ಟರಿಯಲ್ಲಿ ವಿದೇಶಿ ಭಾಷೆಗಳ ಛಿತ್ರಿಕೆಗಳ ಹೆಸರುಗಳಿವೆ. ಸಾನ್ ಫ್ರಾನ್ಸಿಸ್ಕೋದಲ್ಲಿ ೪೯ ಕಾನ್ಸುಲೇಟ್‌ಗಳಿವೆ.

ಈ ನಗರದಲ್ಲಿ ಒಂದು ಫ್ರೆಂಚ್ ಆಸ್ಪತ್ರೆಯಿದೆ, ಅನೇಕ ಬೌದ್ಧ ದೇವಾಯಗಳಿವೆ ಮತ್ತು ಬಹಳ ದೊಡ್ಡದಾಗಿರುವ ಚೀನೀಯರ ವಸಾಹತಿದೆ.

ಈ ಅಂತಾರಾಷ್ಟ್ರೀಯ ಹಿನ್ನೆಲೆಯಲ್ಲಿ, ಸಾನ್ ಫ್ರಾನ್ಸಿಸ್ಕೋ ನಗರದಲ್ಲಿ ಅಂತಾರಾಷ್ಟ್ರೀಯ ಧ್ಯೇಯಗಳ ಸಾಧನೆಗೆ ಮೀಸಲಾಗಿರುವ ಹಲವು ಸಂಘಗಳು ತಲೆಯೆತ್ತಿವೆ. ಜಾಗತಿಕ ವ್ಯವಹಾರಗಳ ಮಂಡಳಿಯೆಂಬುದು ಇವುಗಳಲ್ಲಿ ಅತ್ಯಂತ ಕ್ರಿಯಾಶಾಲಿಯಾಗಿರುವ ಸಂಘಗಳಲ್ಲೊಂದಾಗಿರುತ್ತದೆ. ಇದು ಸಾನ್ ಫ್ರಾನ್ಸಿಸ್ಕೋದ ಜನರಲ್ಲಿ ಅಂತಾರಾಷ್ಟ್ರೀಯ ಬೆಳವಣಿಗೆಗಳ ತಿಳುವಳಿಕೆಯನ್ನು ಹೆಚ್ಚಿಸಲು ಅವಿಶ್ರಾಂತವಾಗಿ ಶ್ರಮಿಸುತ್ತಿರುವ ನಾಗರಿಕರ ಸಂಘವಾಗಿರುತ್ತದೆ.

ಸಾನ್ ಫ್ರಾನ್ಸಿಸ್ಕೋದಲ್ಲಿ 1946ರಿಂದ ಬಹಳ ಕಾರ್ಯಶೀಲವಾಗಿರುವ ವಿಶ್ವ ಸಂಸ್ಥೆಯ ಅಸೊಸಿಸ್ ಅಸೋಸಿಯೇಷನ್ ಎಂಬ ಸಂಘವು ಮುಂಬರುವ ಸಮ್ಮೇಳನಕ್ಕೆ ಸಿದ್ಧತೆಗಳ ಹೆಚ್ಚಿನಂತರವನ್ನು ನಿರ್ವಹಿಸುತ್ತಿದೆ. ಅಂತಾರಾಷ್ಟ್ರೀಯ ಆತಿಥ್ಯ ಕೇಂದ್ರ ಎಂಬ ಸಂಘವು ಸಂದರ್ಶಕರಿಗೆ ಸಹಾಯ ಮಾಡುವ ಸಿದ್ಧತೆಗಳಲ್ಲಿ ನಿರತವಾಗಿದೆ. ಏಷಿಯಾ ಫೌಂಡೇಷನ್ ಎಂಬ ಸಂಘವು ಏಷಿಯನ್ ಪ್ರತಿನಿಧಿಗಳಿಗೆ ವೈಯಕ್ತಿಕ ಅತಿಥಿ ಸತ್ಕಾರ ಕೈಗೊಳ್ಳುವುದು.

ಸಮ್ಮೇಳನದ ಕಾಲದಲ್ಲಿ, ಅರಾಮಗೃಹಗಳು, ಉಪಹಾರ ಮಂದಿರಗಳು, ವಾಚನಾಲಯಗಳು ಮತ್ತು ಈಜುಕೊಳಗಳಿರುವ ಪ್ರೆಸ್ ಎಂಡ್ ಯೂನಿಯನ್ ಲೀಗ್‌ಕ್ಲಬ್‌ನ ಭವ್ಯವಾದ ಕಟ್ಟಡವು ವಿಶ್ವದ ಪ್ರತಿಕೋದ್ಯಮಿಗಳ ವಸತಿ ಸ್ಥಾನವಾಗಿರುವುದು.

೧೯೪೪ರಲ್ಲಿ ಒಪೆರಾ ಹೌಸಿನಲ್ಲಿ ವಿಶ್ವಸಂಸ್ಥೆಯ ಮೊದಲನೆಯ ಸರ್ವಸದಸ್ಯರ ಸಭೆಜರುಗಿದ ಅಲ್ಲಿಗೇ ಮುಂಬರುವ ಸಮ್ಮೇಳನಕ್ಕೆ ಭರದಿಂದ ಸಿದ್ಧತೆಗಳಾಗುತ್ತಿವೆ.

ಒಪೆರಾ ಹೌಸಿನಲ್ಲಿ ಸಾರ್ವಜನಿಕರಿಗೆ ಪ್ರತಿದಿನವೂ, ಮೊದಲು ಬಂದವರಿಗೆಮೊದಲೇನೆಯೆಂಬ ತತ್ವದಡಿಯ ಪ್ರಕಾರ ೬೦೦ಸೀಟುಗಳು ದೊರೆಯುವುವು. ಸಾರ್ವಜನಿಕರಿಗೆ ಇನ್ನೂ ೧೫೦೦ ಸೀಟುಗಳು ಪೆಟ್ಟರ್‌ವಾಸ್ ಬಿಲ್ಡಿಂಗ್ ಅಡಿಟೋರಿಯಂನಲ್ಲಿ ದೊರಕುವುವು. ಇಲ್ಲಿ ಟೆಲಿವಿಷನ್ ಮೂಲಕ ಅಸೆಂಬ್ಲಿಯ ಕಾರ್ಯಕಲಾಪಗಳನ್ನು ತೋರಿಸಲಾಗುವುದು.

ಜೂನ್ 19ರಂದು, ಸಮ್ಮೇಳನಕ್ಕೆ ಒಂದು ದಿನ ಮೊದಲು, ಸಾನ್ ಫ್ರಾನ್ಸಿಸ್ಕೋ ಚರ್ಚ್‌ಗಳ ಮಂಡಳಿಯು 'ಧಾರ್ಮಿಕ ಉತ್ಸವವೊಂದನ್ನೇರ್ಪಡಿಸುವುದು ಮತ್ತು ರಾಜ್ಯ ಜಾತಿಯ ಕಾರ್ಯದರ್ಶಿ ಡಲ್ಲೇಸ್‌ರು ಮತ್ತು ಜನರಲ್ ಅಸೆಂಬ್ಲಿಯ ಅಧ್ಯಕ್ಷ ವಾನ್ ಕ್ಲಿಫೆನ್ಸ್‌ರು ಈ ಉತ್ಸವದಲ್ಲಿ ಭಾಷಣಮಾಡುವರು.

ಮರುದಿನ ನಗರ ಪ್ರಮುಖರು ಪ್ರತಿನಿಧಿಗಳಿಗೆ ಔತಣವಿತ್ತು ಬಳಿಕ ವಿಶ್ವ ಸಂಸ್ಥೆಯ ಸಮ್ಮೇಳನ ಪ್ರಾರಂಭವಾಗುವುದು. ಅವರು ಮೋಟಾರ್‌ಗಳಲ್ಲಿ ಕುಳಿತು ಮೆರವಣಿಗೆಯಲ್ಲಿ ಒಪೆರಾ ಹೌಸಿಗೆ ಹೋಗುವರು. ಪ್ರತಿ ದಿನವೂ ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ ಒಂದು ಗಂಟೆಯ ವರೆಗೆ ಮತ್ತು ಅಪರಾಹ್ನ 3 ಗಂಟೆಯಿಂದ ಅಪರಾಹ್ನ 6 ಗಂಟೆಯ ವರೆಗೆ ಅಧಿವೇಶನಗಳು ಜರುಗುವುವು.

ಶನಿವಾರ ರಾತ್ರಿ ಸಾನ್ ಫ್ರಾನ್ಸಿಸ್ಕೋ ಸಿಂಫನಿ ಆರ್ಕೆಸ್ಟ್ರಾ ಬಾರೆ ಮತ್ತು ಸಂಗೀತ ಕಚೇರಿಗಳನ್ನೇರ್ಪಡಿಸಿ ಪ್ರತಿನಿಧಿಗಳಿಗೆ ಮನೋರಂಜನೆ ಒದಗಿಸುವುದು. ವಾರದ ಮಧ್ಯದಲ್ಲಿ ವಿಶ್ವಸಂಸ್ಥೆಯ ಔಪಚಾರಿಕ ಔತಣವೊಂದು ಜರುಗುವುದು. ಜೂನ್ 25ನೇ ರವಿವಾರ ಸಾನ್‌ಫ್ರಾನ್ಸಿಸ್ಕೋ ಆಡಾತದಿಂದಾಚೆಗೆ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ದೊಡ್ಡ ಬಹಿರಂಗ ಸಭೆಯೊಂದು ಜರುಗುವುದು ಮತ್ತು ಶನಿವಾರ ರಾತ್ರಿ ನಗರದಲ್ಲಿ ಸರಕಾರೀ ಭೋಜನ ಸಮಾರಂಭ ಜರುಗುವುದು ಇದರಲ್ಲಿ ಸಾಧಾರಣ 1500 ಜನ ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ.

ಅಲ್ಲದೆ ಇನ್ನೂ ಅನೇಕ ಚಿಕ್ಕ ಪುಟ್ಟ ಸಮಾರಂಭಗಳು ನಗರದಲ್ಲಿ ಜರುಗುವುವು. ಇದೀ ನಗರದಲ್ಲಿ ಉತ್ಸವಗಳು, ಔಪಚಾರಿಗಳು ಮತ್ತು ಔತಣಗಳು ಉದಾರ ಪ್ರಮಾಣದಲ್ಲಿ ಜರುಗಲಿವೆ. ಭಾರತದ ಪರವಾಗಿ ಶ್ರೀ ಕೃಷ್ಣ ಮೆನನ್ ಕಾರ್ಯಕಲಾಪಗಳಲ್ಲಿ ಭಾಗವಹಿಸುವರು.

(೦ನೇ ಪುಟದಿಂದ)

ಸರಿಸಬೇಕು. ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಹೆಚ್ಚಿಸಿ, ಕಾರಖಾನೆಗಳ ವಿಸ್ತರಣೆಗೆ ಅನುಮತಿ ಕೊಟ್ಟರೆ ಆ ಸಂಸ್ಥೆಗಳ ಪಾಲುದಾರರ ಬೊಕ್ಕಸಬೆಳೆದಿತಲ್ಲದೆ, ಜನಸಾಮಾನ್ಯರಿಗೆ ಲಾಭವಾಗದು. ವಿದ್ಯುಚ್ಛಕ್ತಿಯನ್ನಾದರೂ ಜೋಗದಂಥ ದೊಡ್ಡ ಕೇಂದ್ರದಿಂದಲೇ ಅಗ್ಗದಲ್ಲಿ ಪೂರೈಸಲು ಸಾಧ್ಯವೆಂಬ ಕಲ್ಪನೆ ಸರಿಯಲ್ಲ. ಒಂದಿಷ್ಟು ಎತ್ತರದಿಂದ ಎಲ್ಲಿಯೇ ನೀರು ಬೀಳುತ್ತಿರಲಿ, ಅದನ್ನು ಚಿಕ್ಕ ಡೈನಮೊ ನಡೆಸಿ, ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬಳಸಲಾಗುತ್ತದೆ; ಪ್ರತಿಯೊಂದು ಹಳ್ಳಿ ಹೀಗೆ ಸ್ವಾವಲಂಬಿಯಾಗಿದೆ ಎಂದು ಕಾರಂತರು ಯುರೋಪು ಪ್ರವಾಸಮಾಡಿ ಬಂದವರು ಅಲ್ಲಿಯ ಅನುಭವವನ್ನು ವಿವರಿಸಿದ್ದರು. ನಮಗೆ ಅದು ಯಾಕೆ ಕೂಡದು? ನಾವು ವಿಲಾಸಕ್ಕೆ ಮನನೋಲದೆ, ಹೀಗೆ ವಿಕೇಂದ್ರೀಕೃತ ದೃಷ್ಟಿಯಿಂದಲೇ ಪ್ರತಿಯೊಂದೂ ಕ್ಷೇತ್ರದಲ್ಲಿ ವಿಚಾರಿಸುವುದು ಶ್ರೇಯಸ್ಕರ.

— ಕಾರ್ತಿಕೇಯ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-

No Finer RUBBER STAMP LINE-HALFTONE BLOCK made anywhere than at CROWN RUBBER STAMP CO. BALLARD ESTATE, BOMBAY 1. PHONE 203

S. S. L. C. 1956

ಕನ್ನಡ ಪರೀಕ್ಷಾರ್ಥಕ

ಕನ್ನಡ ಭಾಗ-I ಮತ್ತು ಭಾಗ-II

ಪ್ರಕಟವಾಗಿದೆ.

ಪ್ರಾಮುಖ್ಯ ಪ್ರಶ್ನೆಗಳು—ಉತ್ತರಗಳು—ಸಂದರ್ಭ ವಾಕ್ಯಗಳು—ಉತ್ತರಗಳು—ವ್ಯಕ್ತಿ ಚಿತ್ರಗಳು—ವ್ಯಾಕರಣ ವಿಶೇಷಗಳು—ಛಂದೋಲಂಕಾರಗಳು—ಕವಿತಾ ವಿಮರ್ಶೆ—ಸಮೇತವಾಗಿ.

ಪುಟಗಳು: ೨೬೦. ಬೆಲೆ: ಒಂದೂವರೆ ರೂಪಾಯಿ

ಬರೆದವರು:

ಕೆ. ಕೆ. ರೈ ವಿದ್ವಾನ್. ಯಸ್. ಅನಂತ ಭಟ್ಟ, ವಿದ್ವಾನ್.

ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ಪ್ರತಿಗಳು ದೊರೆಯಲಿರುವುವು.

ಪುಸ್ತಕದ ವೈಶಿಷ್ಟ್ಯವನ್ನು ಗಮನಿಸಿ ಪ್ರತಿಗಳನ್ನು ಆರಿಸಿಕೊಳ್ಳಿರಿ.

ಪ್ರಕಾಶಕರು:

ಜಯ ಮುದ್ರಣ ಪ್ರಕಟಣಾಲಯ, ಮೂಡಬಿದ್ರಿ, ದ. ಕ.

ಭರ್ತ ಕಂಟ್ರೋಲ

[ಮಕ್ಕಳನ್ನು ಡಬೆಯುವುದು ಸಾಕು]

ದಿನಕ್ಕೆ ಮೂರು. ನಾಂ ಏಳು ದಿವ್ಸ ಕೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೩–೮–೦ .... ಪೋಸ್ಟ ಖರ್ಚು ರೂ. ೦–೧೪–೦

—:ವಿಳಾಸ:—

ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಿಯ ರೇಜಾಣ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಟೈಪರೈಟರ ಆಧುನಿಕ ಅವಶ್ಯಕತೆಗಳಲ್ಲಿ ಒಂದು. ದೇವನಾಗರಿ, ಮರಾಠಿ, ಗುಜರಾತಿ ಬೇರೆ ಬೇರು ಭಾರತೀಯ ಲಿಪಿಗಳಲ್ಲಿ ಟೈಪ ರೈಟರುಗಳು ಬಂದು ಹಳೆ ಮಾತಾಗಿದೆ. ಈ ಲಿಪಿಗಳ ಮೊನೋ ಟೈಪ ಯಂತ್ರಗಳಿವೆ, ದೇವನಾಗರಿ, ಬಂಗಾಲಿ, ಅಸಾಮಿ ಲಿಪಿಗಳ ಲೈನೊಟೈಪ ಯಂತ್ರಗಳೂ ಇವೆ. ಇತ್ತೀಚೆಗೆ ದೇವನಾಗರಿಯಲ್ಲಿ ಟೆಲಿಪ್ರಿಂಟರ ಯಂತ್ರ ಸಹ ಬಂದಿದೆ

ಕನ್ನಡದಲ್ಲಿ ಮಾತ್ರ ಇನ್ನೂ ಟೈಪರೈಟರ ಕೂಡ ಬಂದಿಲ್ಲ. ಕನ್ನಡದಲ್ಲಿ ಟೈಪರೈಟರ ನಿರ್ಮಿಸುವ ಯತ್ನ ಸಾಗಿಲ್ಲವೆಂದಲ್ಲ. ಅನೇಕ ವರ್ಷಗಳಿಂದ ಅನೇಕ ವ್ಯಕ್ತಿಗಳೂ ಸಂಸ್ಥೆಗಳೂ ಇದಕ್ಕಾಗಿ ಪರಿಶ್ರಮಿಸಿದ್ದುಂಟು. ಮೈಸೂರು ಸರಕಾರದಿಂದ ೧೯೫೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಅಧ್ಯಕ್ಷ ಹಾಗೂ ಬೆಂಗಳೂರಿನ ನಿಶ್ಶಕನಾರ್ಟಕ ದಿನ ಪತ್ರಿಕೆಯ ಶ್ರೀ ತಾತಾಚಾರ್ಯ ಶರ್ಮರಿ ಅಧ್ಯಕ್ಷತೆಯಲ್ಲಿ ನೇಮಳವಾದ ಸಮಿತಿಯ ಕಾರ್ಯ ಈ ದಿಶೆ

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಅ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ(ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಹೈಮಾಚಲ ಸಾನ್ನಿಧ್ಯದಲ್ಲಿ(ಹರಿದ್ವಾರದಿಂದ ಕೇದಾರ ಬದರಿಗೆ)	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ(ಸಂಕ್ಷಿಪ್ತ ಜೀವನ ಪ್ರಿವೇಚಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ಸೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಕನ್ನಡಕ್ಕೊಂದು ಟೈಪರೈಟರ ಯಂತ್ರ

ಲಿಪಿಸುಧಾರಣೆಯ ತೊಂದರೆ ಇರದ ಸಾಹಸ

ಯಲ್ಲಾದ ತೀರ ಇತ್ತೀಚೆಯ ಯತ್ನ. ಶರ್ಮಾ ಸಮಿತಿಯ ಆಗ ಲಭ್ಯವಿರುವ ಟೈಪರೈಟರ ಕೈಮಣಿ (ಕೀ ಬೋರ್ಡ್) ಹಾಗು ಪ್ರಾಯೋಗಿಕ ಟೈಪರೈಟರುಗಳನ್ನು ಪರೀಕ್ಷಿಸಿ ಅವು ಶಾಸ್ತ್ರ ಸಮ್ಮತವಿಲ್ಲವೆಂದೂ ಅವುಗಳ ಅಕ್ಷರ ಸಂಯೋಜನಾ ಪದ್ಧತಿ ಲೈನೋಟೈಪ ಮುಂತಾದ ಮುದ್ರಣಾಲಯದ ಅಕ್ಷರ ತೋರಿಸುವ ಯಂತ್ರಗಳನ್ನು ಕನ್ನಡಕ್ಕೆ ಪರಿವರ್ತಿಸಿಕೊಳ್ಳಲು ಸರಿಹೋಗದೆಂದೂ ಬಗೆದು ತನ್ನದೇ ಆದ ಕೈಮಣಿಯೊಂದನ್ನು ಸೂಚಿಸಿತು. ಸಮಿತಿಯು ಸೂಚಿಸಿದ ಕೈಮಣಿಯಲ್ಲಿ ಲಿಪಿಸುಧಾರಣೆಯ ಅಂಶಗಳು ಕೂಡಿದ್ದರಿಂದ ವಿಷಯ ವಾದಗ್ರಸ್ತವಾಯಿತು. ಆಗಸ್ಟ ೫, ೧೯೫೭ರಂದು ಮೈಸೂರ ಸರಕಾರದ ಈ ವಿಷಯದಲ್ಲಿಯ ಪತ್ರಿಕಾ ಪ್ರಕಟನೆಯಲ್ಲಿ ಹೀಗೆ ಹೇಳಲಾಗಿದೆ.

"ಶರ್ಮಾ ಸಮಿತಿಯ ಸೂಚನೆಗಳಿಗೆ ಜನತೆಯಿಂದ ಸಮ್ಮಿಶ್ರ ಸ್ವಾಗತ ದೊರೆಯಿತು. ಸಮಿತಿಯು ಸೂಚಿಸಿದ ತಾಂತ್ರಿಕ ಪರಿಪೂರ್ಣತೆಯುಪ್ರಶ್ನೆಯೆಂದು ಸೀನಿಯರ ಅಸಿಸ್ಟಂಟ ಡೈರೆಕ್ಟರ ಶ್ರೀ ವಿಜಯಶಾಲಯ್ಯನವರು ತಮ್ಮ "ಕನ್ನಡ ಟೈಪರೈಟರ, ಲೈನೋಟೈಪ ಮತ್ತು ಮೊನೋಟೈಪ ಕೈಮಣಿಗಳ ರಚನೆ (೧೯೫೨)" ಈ ಪುಸ್ತಕೆಯಲ್ಲಿ ಶರ್ಮಾ ಸಮಿತಿಯು ಸೂಚಿಸಿದ ಲಿಪಿ ಸುಧಾರಣೆಗಳು ಅದೇಕೆ ಅಸಾಧ್ಯವೆಂಬುದನ್ನು ವಿವರಿಸಿದರು. ಆ ಪುಸ್ತಕೆಯ ಲಿಪಿಸುಧಾರಣೆಯ ಕುರಿತಾದ ಆಕ್ಷೇಪಣೆಗಳನ್ನು ಎದುರಿಸಿದರೂ, ಲಿಪಿಸುಧಾರಣೆಯ ಅಂಶಗಳನ್ನು ಇನ್ನಷ್ಟು ಕಡಿಮೆ ಮಾಡಿದರೆ ಜನಕ್ಕೆ ಹೆಚ್ಚು ಸಮಾಧಾನವಾಗುವದೆಂದೆನಿಸಿತು.

೧೯೫೮ ಈ ಒಲವನ್ನು ಮನದಂದು ಶ್ರೀ ವಿಜಯಶಾಲಯ್ಯನವರು ಸೂಚನೆಗಳಲ್ಲಿ ಒಂದನ್ನು ಅಂದರೆ ಸಧ್ಯಕ್ಕೆ ಬಳಸದಿರುವ ಸಂದರ್ಭಗಳಲ್ಲಿ ಇಳಿದೀರ್ಘ (ಕ) ವನ್ನು ಬಳಸಬೇಕೆಂಬ ಸೂಚನೆಯನ್ನು ಬಿಟ್ಟು ಕೊಟ್ಟು ಕೈಮಣಿಯನ್ನು ಅಲ್ಪಮಟ್ಟಿಗೆ ಪರಿವ್ರರಿಸಿ ಸರಕಾರಕ್ಕೆ ಒಂದು ಪ್ರತ್ಯೇಕ ಮನವಿಯನ್ನು ಒಪ್ಪಿಸಿದರು. ಆ ಕೈಮಣಿಯಲ್ಲಿ ಆಕಾರಾಂತ ವ್ಯಂಜನಗಳನ್ನು ಇಕಾರಾಂತ, ಎಕಾರಾಂತ ವ್ಯಂಜನಗಳಿಗೆ ಪರಿವರ್ತಿಸಿಕೊಳ್ಳಲು ಇತ್ತ (ಿ) ಎತ್ತ (ೆ) ಸಂಕೇತಗಳನ್ನು ಬಳಸಬೇಕೆಂಬ ಎರಡೇ ಸೂಚನೆಗಳು ಇವೆ"

ಲಿಪಿಸುಧಾರಣೆಯ ಈ ಸೂಚನೆಗಳಿಂದ ಲಿಪಿಯಲ್ಲಿ ಬಹಳ ಮಹತ್ವದ ಬದಲಾವಣೆಯಾಗುವದರಿಂದ ಮೈಸೂರ ಸರಕಾರವು ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಆ ರಾಜ್ಯದ ಕಂಯದೆ ಹಾಗು ಶಿಕ್ಷಣದ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಸಮಿತಿಯನ್ನು ನೇಮಿಸಿತು. ಹೊಸ ಸಮಿತಿಯು ಮೇ ೯, ೧೯೫೩ ರಂದು ಸಭೆಗೂಡಿ ತನ್ನ ಸೂಚನೆಗಳನ್ನು ಸರಕಾರಕ್ಕೆ ಒಪ್ಪಿಸಿತೆಂದೂ ಆ ಸೂಚನೆಗಳು ಸರಕಾರದ ಪರಿಶೀಲನೆಯಲ್ಲಿವೆಯೆಂದೂ ಮೇಲ್ಕಾಣಿಸಿದ ಪ್ರಕಟನೆಯಲ್ಲಿ ಹೇಳಲಾಗಿದೆ.

ಮೈಸೂರು ಸರಕಾರವು ಪುರಸ್ಕರಿಸಿದ ಟೈಪರೈಟರ ಕೈಮಣಿಯ ಬಗ್ಗೆ ಆಗಾಗ ಪರದಿಗಳು ಪ್ರಕಟವಾಗುತ್ತಿವೆ. ಇತ್ತೀಚೆಗೆ ಪ್ರಜಾಮತ, ಬೆಂಗಳೂರು, ವಾರ ಪತ್ರಿಕೆಯ ೩ — ೩—೧೯೫೫ರ ಸಂಚಿಕೆಯಲ್ಲಿ ಶ್ರೀ ವಿಜಯಶಾಲಯ್ಯನವರಿಂದ ಪರಿಷ್ಕೃತವಾದ ಮತ್ತು ಮೈಸೂರ ಸರಕಾರದ ಒಪ್ಪಿಗೆ ಪಡೆದ ಕೈಮಣಿ ನಕ್ಷೆಯೊಂದು ಪ್ರಕಟವಾಗಿದೆ. ಅದರಂತೆ ಸದ್ಯಕ್ಕೆ ಇದೇ ಕೊನೆಯ ಅಧಿಕೃತ ಪ್ರಕಟಣೆ ಎನ್ನಬಹುದು.

ಶರ್ಮಾ ಸಮಿತಿಯ ವರದಿಯನ್ನೂ ಶ್ರೀ ವಿಜಯಶಾಲಯ್ಯನವರ ಪುಸ್ತಕೆಯನ್ನೂ ಆ ಮೂಲಾಗ್ರವಾಗಿ ಅಭ್ಯಸಿಸಿದರೆ ಒಂದು ಸಾತು ನಿಶ್ಚಳವಾಗುತ್ತದೆ. ಅದೆಂದರೆ—

ಲಿಪಿ ಸುಧಾರಣೆಯ ಅಂಶಗಳಿರದ ಕಾರ್ಯ ಸಮರ್ಥ ಲೈನೊಟೈಪ ಮತ್ತು ಕೈಮಣಿಗಳ ನಿರ್ಮಾಣವಾದರೆ ಎಲ್ಲರಿಗೂ ಸಂತೋಷ. ಅದು ಅಸಾಧ್ಯ. ಆದ್ದರಿಂದ ಟೈಪರೈಟರ, ಲೈನೊಟೈಪ ಮುಂತಾದ ಯಂತ್ರಗಳಿಗೂ ಸುಲಭವಾಗಿ ಹೊಂದಿಕೆಯಾಗುವ ಅತ್ಯಲ್ಪ ಮತ್ತು ಅಗತ್ಯವಿರುವ ಒಂದೆರಡು ಸುಧಾರಣೆಗಳನ್ನು ಅಂಗೀಕರಿಸಿದರೆ ಕೊನೆವರೆಗೆ ಸಮಸ್ಯೆ ಬಿಟ್ಟಿರುತ್ತಾಗುತ್ತದೆ.

ಈ ವಿಚಾರ ಒಪ್ಪತಕ್ಕದ್ದಾಗಿದೆ. ಆದರೆ ಸುಧಾರಣೆಯ ಅಂಶಗಳು ಎಷ್ಟೇ ಸುಲಭವಿದ್ದರೂ ಶಾಸ್ತ್ರ ಸಮ್ಮತವಿದ್ದರೂ ಅವು ಜನ ಮನಕ್ಕೆ ಹಿಡಿಸದಿದ್ದರೆ ಅವುಗಳನ್ನು ತ್ಯಜಿಸಲೇ ಬೇಕಾಗುವದು. ಯಂತ್ರ ತಯಾರಿಕರು ಲಾಭದ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡುತ್ತಾರೆ. ಯಂತ್ರ ಜನಮನಕ್ಕೆ ಹಿಡಿಸದಿದ್ದರೆ ಅದಕ್ಕೆ ಗಿರಾಕಿಗಳನ್ನು ಎಲ್ಲಿಂದ ತರಬೇಕೆಂದು ಅವರು ಕೇಳುತ್ತಾರೆ. ಆದ್ದರಿಂದ ಜನರಿಗೆ ಹಿಡಿಸಬಹುದಾದ ಮಾರ್ಗವನ್ನು ಅನುಸರಿಸುವದೇ ಹೆಚ್ಚು ಶ್ರೇಯಸ್ಕರ ಮತ್ತು ವ್ಯಾವಹಾರಿಕವೆನಿಸುವದು. ಕನ್ನಡ ಟೈಪರೈಟರ ಕಾರ್ಯ ಹಿಂದೆ ಬಿದ್ದಿರುವದು ಈ ಲಿಪಿಸುಧಾರಣೆಯ ವಾದದಿಂದಲೆ ಎಂದರೆ ತಪ್ಪಾಗದು. ಟೈಪರೈಟರನ್ನು ಲೈನೊಟೈಪಿಗೆ ತಳಕು ಹಾಕಿರುವದರಿಂದ ಸಮಸ್ಯೆ ಮತ್ತಷ್ಟು ಕಠಿಣವಾಗಿದೆ. ಒಂದೊಮ್ಮೆ ಲಿಪಿಸುಧಾರಣೆ ಇಲ್ಲದ ಟೈಪರೈಟರ ಸಾಧ್ಯವಾದರೂ ಅಂಥದೇ ಲೈನೊಟೈಪ ತಯಾರಿಸುವ ಮಾರ್ಗವನ್ನು ಕಂಡು ಹಿಡಿಯುವವರೆಗೆ ಸಮಸ್ಯೆಗೆ ಪರಿಹಾರ ದೊರೆಯದಂತಾಗಿದೆ.

ಈಚೆಗೆ, ಮುಂಬಯಿ ಸರಕಾರದ ಪ್ರಸಿದ್ಧಿ ಶಾಲೆಯ ಕನ್ನಡ ವಿಭಾಗದ ಸಹಾಯಕ ಡೈರೆಕ್ಟರರಾದ ಶ್ರೀ ಭಿ. ಬಾ. ಚಿಟಿಗುಪ್ಪಿಯವರು ಲಿಪಿ ಸುಧಾರಣೆಯ ಅಂಶಗಳಿರದ ಒಂದು ಪ್ರಾಯೋಗಿಕ ಕನ್ನಡ ಟೈಪರೈಟರನ್ನು ತಯಾರಿಸಿದ್ದಾರೆ. ಇದರಿಂದ ಕನ್ನಡದ ಟೈಪರೈಟರನ್ನು ಸಿದ್ಧಪಡಿಸುವ ವಿಷಯಕ್ಕೆ ಪುನಃ ಚಾಲನೆ ದೊರೆತಂತಾಗಿದೆ. ಕನ್ನಡಳುವರ ಅಧಿದೇವತೆ "ಶ್ರೀ ಭುವನೇಶ್ವರಿ"ಯ ಹೆಸರನ್ನಿರಿಸಿ ಜನತೆಯ ಮುಂದಿರಿಸಿದ ಈ ಟೈಪರೈಟರಿನ ಪೋರ್ಟೇಬಲ ವಾದದಿಯ ಕುರಿತಾಗಿಯೂ ಅವರು ಆಲೋಚಿಸಿದ್ದಾರೆ. ಮಾತ್ರವಲ್ಲ, ಲೈನೋಟೈಪಿಗೆ ಹೊಂದಿಕೆಯಾಗುವಂತೆ ಅಳವಡಿಸುವ ಹುಮ್ಮಸ್ಸೂ ಅವರಿಗಿದ್ದಂತೆ ಕಾಣುತ್ತದೆ.

ಈ ಪ್ರಾಯೋಗಿಕ ಟೈಪರೈಟರಿನ ಕೈಮಣಿಯನ್ನು ಶರ್ಮಾ ಸಮಿತಿಯು ಹಾಕಿಕೊಟ್ಟ ನೀತಿ ನಿಯಮಗಳನ್ನೂ ಅದು ಸೂಚಿಸಿದ ಕೈಮಣಿಯನ್ನೂ ಎತ್ತಿ ತೋರಿಸಿದ ಲೋಪದೋಷಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಚಿಸಲಾಗಿದೆ. ವಿಮರ್ಶಕರಿಗೆ ಅನುಕೂಲವಾಗಲೆಂದು ತಾವು ಈ ಕುರಿತು ಬರೆದ ಹೊತಿಗೆಯನ್ನು ಚಿಟಿಗುಪ್ಪಿಯವರು ತಮ್ಮ ಟೈಪರೈಟರದ ಮೇಲೆಯೇ ಟೈಪಮಾಡಿ, ಸೈಕ್ಲೊಸ್ಟೈಯಲದ ಮೂಲಕ ಪ್ರಚಾರಪಡಿಸಿದ್ದಾರೆ.

ಶರ್ಮಾ ಸಮಿತಿಯ ಕೈಮಣಿಯಲ್ಲಿ ಎಡಗೈ ನಡುವಿನ ಬೆರಳಿಗೆ ಶೇಕಡ ೧೫.೮ ಇದ್ದರೆ ಬಲಗೈ ನಡುವಿನ ಬೆರಳಿಗೆ ಶೇಕಡ ೮ ಇದೆ. ಹಾಗೆ ನೋಡಿದರೆ ಸಾಮಾನ್ಯವಾಗಿ ಬಲಗೈ ಬೆರಳುಗಳು ಹೆಚ್ಚು ಸಮರ್ಥ ಮತ್ತು ಚಲನವಿರುತ್ತವೆ. ಇವರೆಡೂ ಬೆರಳುಗಳ ಸಾಮರ್ಥ್ಯ ಸರಿಸಮಾನವೆಂದು ಗಣಿಸಿದರೂ ಎಡಗೈ ಬೆರಳಿಗೆ ಬಲಗೈ ಬೆರಳಿಗಿಂತ ಇನ್ನುಮಿಡಿ ಕೆಲಸ ಬೀಳುತ್ತದೆ. ಇದು ಅಕ್ಷೇಪಾರ್ಹವೆನಿಸದಿದ್ದರೆ ಆ ಸಮಿತಿಯ ಕೈಮಣಿ ಮತ್ತು ಭುವನೇಶ್ವರಿ ಕೈಮಣಿಯ ಅಕ್ಷರಗಳ ಹಂಚುವಿಕೆಯಲ್ಲಿ ಕಂಡುಬರುವ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಆಕ್ಷೇಪಾರ್ಹವಾಗದು. ಇನ್ನೂ ಒಂದುಮಾತು. ಕೈಮಣಿರಚನೆಯಲ್ಲಿ ಅಕ್ಷರಗಳನ್ನು ಹಂಚುವಾಗ ಅವುಗಳ ಸಂಭವ ಪ್ರಮಾಣಕ್ಕೆ ಅತೀತ ಮಹತ್ವಕೊಡುವದು ಯುಕ್ತವಾಗದು. ಟೈಪರೈಟರ ಕೈಮಣಿಯ ಮೇಲೆ ಹತ್ತೂ ಬೆರಳುಗಳಾಡುತ್ತಿದ್ದರೆ ಲೈನೊಟೈಪ ಕೈಮಣಿಯ ಕಂ ಕೈಗಳಲ್ಲಿಲಕ್ಷ ಕೈಗಳ ಮೇಲೆ ಬಲಗೈಯವನೇ ಬೆರಳುಗಳಾಡುತ್ತವೆ. ಒಟ್ಟಿನಲ್ಲಿ ಅಯಾ ಯಂತ್ರಗಳ ರಚನಾಕ್ರಮ, ಲಿಪಿಯ ವೈಶಿಷ್ಟ್ಯ, ಕೆಲಸ ಮಾಡುವವನ ಬೆರಳು ಬುದ್ಧಿಗಳ ಹಿಟ, ಇವೆಲ್ಲ ಅಂಶಗಳನ್ನು ಮನದಂದು ಒಂದು "ಸುವರ್ಣ ಮಧ್ಯ"ಕ್ಕೆ ನಿಲ್ಲುವದು ಸರಿಯಾದ ಮಾರ್ಗ.

ಕಡಲುಗೈ (ಶಿಫ್ಟ್ ಕೀ) ಬಳಸುವ ಪ್ರಮಾಣ ಶೇಕಡ ೪-೮ ಇದೆ. ಶರ್ಮಾ ಸಮಿತಿಯು ಈ ಪ್ರಮಾಣ ೪ ಮಿಕ್ಕಲಾಗದೆಂದು ಸೂಚಿಸಿದೆ. ಕೈಗಳ ಮೇಲೆ ಮೂರು ಮಂದಿ ಅಕ್ಷರಗಳನ್ನಿರಿಸಿ ಇನ್ನೊಂದು ಕಡಲೊತ್ತುವ ವಿಧಾನವನ್ನು ಬಳಸಿಕೊಂಡಿಲ್ಲ. ಒತ್ತಕ್ಷರಗಳಿಗಾಗಿ ಆರಗದಲಿನ ವಿಧಾನವನ್ನು ಅನುಸರಿಸಿಲ್ಲ. ಇಂಗ್ಲೀಷಿನ ಬದಲು ಕನ್ನಡ ಅಕ್ಷರಗಳನ್ನಲ್ಲದೆ ಯಂತ್ರದಲ್ಲಿ ಬೇರೆ ಯಾವದೇ ಹೆಚ್ಚು ಕಡಿಮೆ ಮಾಡಿಲ್ಲ.

ಬರೆಯುವಾಗ ಸಾಮಾನ್ಯವಾಗಿ ಅಕ್ಷರಗಳ ಮೂಲ ಸಂಜ್ಞೆಗಳಿಗೆ ಅಕಾರ, ಇಕಾರಾದಿ ಕಾಗುಣಿತಗಳನ್ನು ಜೋಡಿಸಲಾಗುತ್ತದೆ ಇದೆನ್ನೆ ಚಿಟಿಗುಪ್ಪಿಯವರು ಅನುಸರಿಸಿದ್ದಾರೆ. ಅಕ್ಷರಗಳ ಸಹಜ ರೂಪದಲ್ಲಿ ಕಾಗುಣಿತಗಳ ಜೋಡಣೆಗಾಗಿ ಅಲ್ಪ ಸ್ವಲ್ಪ ವ್ಯತ್ಯಾಸ ಮಾಡುವದು ಅನಿವಾರ್ಯವಾದಾಗ ಅಸಂದಿಗ್ಧತೆಗೆ ಪ್ರಾಧಾನ್ಯತೆ ಕೊಟ್ಟು ಅಕ್ಷರದ ಒಟ್ಟು ಸೌಂದರ್ಯವನ್ನು ಕಾಪಾಡಿಕೊಳ್ಳಲು ಯತ್ನಿಸಲಾಗಿದೆ. ಕಾಗುಣಿತದ ಅಗತ್ಯವಿರದ ಅಕ್ಷರಗಳನ್ನು ಅವುಗಳ ಪೂರ್ಣ ರೂಪದಲ್ಲಿ ಹಾಗು ಕಾಗುಣಿತಗಳನ್ನು ಜೋಡಿಸಬೇಕಾದ ಅಕ್ಷರಗಳನ್ನು ಅವುಗಳ ಮೂಲ ಸಂಜ್ಞೆಯಲ್ಲಿ ಇಟ್ಟುಕೊಳ್ಳಲಾಗಿದೆ.

ಅಕ್ಷರಗಳಿಗೆ ಕಾಗುಣಿತ, ಮಾತ್ರಾ ಪ್ರಾಣಾದಿಗಳ ಜೋಡಣೆ ಹೊಸ ವಿಧಾನವಲ್ಲ. ಕನ್ನಡವಲ್ಲದೆ ದೇವನಾಗರಿ ಮುಂತಾದ ಇತರ ಭಾರತೀಯ ಲಿಪಿಗಳ ಮಾತಾದರೂ ಹೀಗೆಯೆ. ಇಂಗ್ಲೀಷ ಲಿಪಿಗೆ ಸ್ಟೆಲಿಂಗ್ (ಅಕ್ಷರ ಸಂಕಲನ) ಮುಖ್ಯವಾಗಿದ್ದರೆ ಉಚ್ಚಾರಣೆ ದೃಷ್ಟಿಯಿಂದ ಪರಿಪೂರ್ಣವಿರುವ ಭಾರತೀಯ ಲಿಪಿಗಳಿಗೆ ಅಕ್ಷರ ರಚನೆ ಮುಖ್ಯವಾಗಿದೆ. ಈ ರಚನಾ ವಿಧಾನವನ್ನು ಭಾರತೀಯರು ಹೊಸದಾಗಿ ಕಲಿಯಬೇಕಿಲ್ಲ. ಮಕ್ಕಳ ಅಕ್ಷರಾಭ್ಯಾಸವು ಈ ಪದ್ಧತಿಯಿಂದಲೇ ಪ್ರಾರಂಭವಾ

(೧೨ನೇ ಪುಟದೊಳಗೆ)



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಪಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾವಕಪೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಪೆಶಿಸ್ಟರು: ಶಹಾಕಂಪೆನಿ, ಮಂಗಳೂರು



(೨ನೇ ಪುಟದಿಂದ)

ಳು ಹೊಲಗಳಲ್ಲಿ ಹೊಕ್ಕು ಕದ್ದು ತಿನ್ನು ದು, ಕೊಳ್ಳೆ ಹೊಡೆಯುವುದು, ಅಮೇ ಕದ ಬಿಳಿಸ್ತ್ರೀಯರ ಮೇಲೆ ಅತ್ಯಾಚಾರ ಸುವುದು ಬಹಳ ಹೆಚ್ಚಾಯಿತು. ೀಗ್ರೋಗಳೊಡನೆ ಸಹಾನುಭೂತಿ ಪ್ರ ಟಿಸುವ ಹುಮ್ಮಸ ತುಂಬಿದ್ದ ಉತ್ತ ದ ಕೆಲವು ಸಂದರ್ಭ ಸಾಧಕರು ಇವ ಗೆ ಪ್ರೋತ್ಸಾಹವಿತ್ತರು. ಈ ದುರಂತ ಕೊನೆಯೇ ಇಲ್ಲವೆಂಬಂತೆ ತೋರಿತು. ಸ್ಟರಲ್ಲಿ ದಕ್ಷಿಣದ ಹೊಲಗದ್ದೆಗಳ ಪು ರ್ಘಟನೆಯ ಕೆಲಸ ನಡೆಸಿದ್ದರಿಂದ, ವರು ನೀಗ್ರೋಗಳನ್ನು ಮರಳಿ ತಮ್ಮ ಕೆಲಸಕ್ಕೆ ಸೇರಿಸಿಕೊಳ್ಳಲು ಒಪ್ಪಿದರು ರಕ್ಷರ ಕುಟ್ಟಿಗಳೂ ಅಜ್ಞಾನಿಗಳೂ ಅ ನೀಗ್ರೋಗಳು ಸುತ್ತು. ಅವರ ಬೆಂಬ ಪಡೆದ ಉತ್ತರದ ಸಂದರ್ಭ ಸಾಧ ರು ಶಾಸನಾಂಗಗಳಲ್ಲಿ ಪ್ರವೇಶಿಸಿ, ಕ್ಷಿಣದವರ ಹಿತಕ್ಕೆ ವಿರುದ್ಧ ನಡೆಯ ಂತೆ, ದಕ್ಷಿಣದ ರಾಜ್ಯಗಳು ಕೆಲವು ಗೆಯ ತೆರಿಗೆಗಳನ್ನು ವಿಧಿಸಿ, ಅವನ್ನು ತ್ತವರಿಗೆ, ಮತ್ತು ಇಂತಿಷ್ಟು ಭೂದಾ ಮತ್ತು ವಿದ್ಯಾಭ್ಯಾಸವಿದ್ದವರಿಗೆ ಮಾತ್ರ ಾಸನಾಂಗದಲ್ಲಿ ಪ್ರವೇಶ ಸಿಗುವುದೆಂಬ ಾನೂನನ್ನು ತಂದವು. ಅದು ಸಾಲದು ಕ್ಕೆ ಸಾರ್ವಜನಿಕ ಹೋಟೆಲು, ಮೋ ಾರು, ಶಾಲೆ ಮುಂತಾದವುಗಳಲ್ಲಿ ನೀ ಗ್ರೋಗಳಿಗೆ ಪ್ರತ್ಯೇಕ, ಮತ್ತು ಅಮೇ ಕದವರಿಗೆ ಪ್ರತ್ಯೇಕ ಎಂಬ ಪದ್ಧತಿಯ ನ್ನು ಪ್ರಾರಂಭಿಸಿದವು. ನೀಗ್ರೋಗಳ ಾಲಿಗೆ ಸಮಾನತೆ ಈ ಬಗೆಯ ಹೊಸ ಾನುಭವವನ್ನು ತಂದುಕೊಟ್ಟಿತು.

ಈಗ ನೀಗ್ರೋಗಳು ಜಾಗೃತರಾದರು. ಾವು ಕೇವಲ ಹೊಲದಲ್ಲಿ ದುಡಿಯುವ ಾಲಿಗಳಾದುದರಿಂದ ಇದಕ್ಕಿಂತ ಹೆಚ್ಚಿ ದನ್ನು ಪಡೆಯುವ ಅವಕಾಶ ತಮ ಲ್ಲವೆಂಬ ತಿಳಿವಳಿಕೆ ಅದರಲ್ಲಿ ಮೂ ತು. ಆದುದರಿಂದ ಒಬ್ಬೊಬ್ಬರಾಗಿ ುತ್ತರದ ಸಹಾನುಭೂತಿಪರ ವ್ಯಕ್ತಿಗಳ ಂಬಲದಿಂದ ಕೈಗಾರಿಕೋದ್ಯಮಗಳಲ್ಲಿ ೀರಿಕೊಂಡರು. ಅಲ್ಲಿ ಅವರ ಆರ್ಥಿಕ ಸ್ಥಿತಿ ತುಸು ಉತ್ತಮವಾಯಿತು. ಕಾಲ ಳೆದಂತೆ, ಪತ್ರಿಕೆಗಳು ಹೆಚ್ಚಿಕೊಂಡು ರಿಂದಲೂ ಸಂಪರ್ಕದ ಸಾಧನಗಳು ಅ ಭಿವೃದ್ಧಿ ಹೊಂದಿದುದರಿಂದಲೂ ನೀಗ್ರೋ ಗಳ ಸಮಸ್ಯೆಯು ಹೆಚ್ಚು ಹೆಚ್ಚು ಅಮೇ ರಿಕನ್ನರ ಹೃದಯವನ್ನು ಕಲಕುವಂತಾ ಯಿತು; ಅವರು ನಿಧಾನವಾಗಿ ನೀಗ್ರೋ ಗಳನ್ನು ಮಾನವೀಯ ಭಾವನೆಯಿಂದ ನೋಡುವಂತಾಯಿತು. ಇಂದು ಮಧ್ಯ ವಯಸ್ಕರಾಗಿರುವ ನೀಗ್ರೋಗಳ ಅಜ್ಜಂದಿ ರ ಕಾಲದಲ್ಲಿ ಉಂಟಾದ ಈ ಜಾಗೃತಿ ಅ ಮೇರಿಕದಲ್ಲಿ ನಿಜವಾಗಿಯೂ ನವೋದ ಯದ ಹೊಸ ಬೆಳಕನ್ನು ತಂದಿತು. ರಾ ಜ್ಯಾಂಗ ಘಟನೆಗೆ ಹದಿನೈದನೇ ತಿದ್ದುಪ ಡಿಯನ್ನು ಮಾಡುವ ಮೂಲಕ "ಮತ ದಾನದ ಹಕ್ಕನ್ನು ವರ್ಣ, ಜನಾಂಗ ಮತ್ತು ಹಿಂದೆ ಮಾಡುತ್ತಿದ್ದ ಕೆಲಸಗಳ ನೆಪ ದಿಂದ ನಿರಾಕರಿಸಲಾಗದು" ಎಂದು ವಿಧಿ ಸುವುದಕ್ಕೆ ಇದು ಪ್ರೇರಣೆ ಕೊಟ್ಟಿತು.

ಆ ಮೇಲಿನ ವರ್ಷಗಳಲ್ಲಿ, ಅಂದರೆ, ಈ ಶತಮಾನದ ಆದಿಯಿಂದ, ನೀಗ್ರೋ ಗಳ ಪರಿಸ್ಥಿತಿಯು ಗಣನೀಯವಾಗಿ ಊ ರ್ಜಿತವಾಗುತ್ತಿದೆ ಎಂದು ನೀರೀಕ್ಷಕರ ಅ ಭಿಪ್ರಾಯ. ಔದ್ಯೋಗೀಕರಣ ಮತ್ತು ಶಿಕ್ಷಣಗಳು ನೀಗ್ರೋಗಳ ಜೀವನವನ್ನು ಸಾಮಾನ್ಯ ಅಮೇರಿಕನ್ನರ ಮಟ್ಟಕ್ಕೆ ತರ ಲು ನೆರವಾದುವೆಂದರೆ ಅತಿಶಯೋಕ್ತಿ ಯಲ್ಲ. ೧೯೧೦ರ ಸುಮಾರಿಗೆ ನುರಿತ ಔದ್ಯೋಗಿಕ ಕೆಲಸಗಾರರಾಗಿ ಒಂದು ಲಕ್ಷ ನೀಗ್ರೋಗಳಿದ್ದರು; ೧೯೫೦ನೇ ವರ್ಷದ ಹೊತ್ತಿಗೆ ಅವರ ಸಂಖ್ಯೆ ಹದಿನೈ ದು ಲಕ್ಷಕ್ಕೆ ಏರಿತು. ಹೊಲಗಳಲ್ಲಿ ಕೂಲಿ ಗಳಾಗಿ ದುಡಿಯುವ ಬದಲು ನೀಗ್ರೋ ಗಳು ತಾವೇ ಯಜಮಾನರಾಗಹತ್ತಿದರು ಇಂದು ಎರಡು ಲಕ್ಷ ನೀಗ್ರೋಗಳು ಸರಾ ಸರಿ ೭೮ ಎಕ್ರೆ ವಿಸ್ತೀರ್ಣದ ಒಟ್ಟು ೧೯೦೦೦ ಚದರ ಮೈಲು ಪ್ರದೇಶದಲ್ಲಿ ಹಬ್ಬಿದ ಹೊಲಗಳ ಒಡೆಯರಾಗಿದ್ದಾರೆ. ಕೈಗಾರಿಕೆಯ ಕೇಂದ್ರಗಳಲ್ಲಿ ತಮ್ಮ ಸಂಘಗಳನ್ನು ಕಟ್ಟಿಕೊಂಡಿರುವ ೧೬೦೦೦೦೦ ಕೆಲಸಗಾರರಲ್ಲಿ ನೀಗ್ರೋಗಳ ಸಂಖ್ಯೆ ೧೨೫೦೦೦ ಅಧ್ಯಕ್ಷ ರೂಜ್‌ವೆಲ್ಟರು ನೇಮಿಸಿದ ಒಂದು ಸಮಿತಿಯ ಸಿಫಾರಸಿನಂತೆ, ಈಗ ಯಾವದೇ ಸರಕಾರಿ ಕಂಟ್ರಾಕ್ಟದಾರನು ನೀಗ್ರೋಗಳನ್ನು ಕೆಲಸಕ್ಕೆ ಇಡಲು ಅಕ್ಷೇಪಿಸುವಂತಿಲ್ಲ. ಟ್ರೂಮನ್ನರು ನೇ ಮಿಸಿದೊಂದು ಸಮಿತಿಯ ಸಿಫಾರಸಿ ನಂತೆ, ಸಾರ್ವಜನಿಕ ಆಡಳಿತ ಮಂಡಳ ದಲ್ಲಿ ಕೆಲಸಕ್ಕೆ ನೂಕಿಕೊಂಡ ಅರ್ಜಿಯ ಲ್ಲಿ ಜನಾಂಗದ ಹೆಸರನ್ನು ನಮೂದಿಸ ಬಾರದೆಂದೂ ಅಮೇರಿಯಾದವರ ಚಿತ್ರ ವನ್ನು ಹಚ್ಚುವುದು ಅಗತ್ಯವಿಲ್ಲವೆಂದೂ ಆಗಿದೆ. ಇದರಿಂದ ಎರಡು ಲಕ್ಷ ನೀ ಗ್ರೋಗಳು ಈಗ ಸರಕಾರದ ಕೆಲಸದಲ್ಲಿ ರುವಂತಾಗಿದೆ. ಸೈನ್ಯದಲ್ಲಿಯೂ ಈಗ ಸ್ವತ್ಯೇಕ ಭಾವನೆ ಉಳಿದಿಲ್ಲ.

ಯಾವದೇ ಕಲಹದ ಸಮಯದಲ್ಲಿ ಅ ಮೇರಿಕದ ನೀಗ್ರೋಗಳಿಗೆ ಶಿಕ್ಷಣದ ಗಂ ಧಗಾಳಿಯೇ ಇರಲಿಲ್ಲ. ಆದರೆ ಅ ಶತಮಾನದ ಅಂತ್ಯದಲ್ಲಿ ಓದು ಬರಹ ಬಲ್ಲ ನೀಗ್ರೋಗಳು ೫೮% ಆದರು; ಇಂದು ಈ ಪ್ರಮಾಣ ೯೫% ಅಂದರೆ, ೨೨ ಲಕ್ಷಕ್ಕಿಂತಲೂ ಹೆಚ್ಚು ನೀ ಗ್ರೋಗಳು ಶಾಲೆಗಳಲ್ಲಿ ಕಲಿಯುತ್ತಿದ್ದಾ ರೆ. ಉತ್ತರದ ಎಪ್ಪತ್ತಕ್ಕಿಂತಲೂ ಹೆಚ್ಚು ಕಾಲೇಜುಗಳಲ್ಲಿ ಮತ್ತು ನೂರಾರು ಕೆಳಗಿ ನ ಶಾಲೆಗಳಲ್ಲಿ ನೀಗ್ರೋ ಸದಸ್ಯರಿದ್ದಾರೆ; ಸುಮಾರು ೩೦೦ ನೀಗ್ರೋ ಉಪಾಧ್ಯಾ ಯರು ಅಮೇರಿಕನ್ನರ ಮಕ್ಕಳಿಗೆ ಶಿಕ್ಷಣ ಕೊಡುತ್ತಿದ್ದಾರೆ! ಸುಮಾರು ೬೦ ಶಾಲಾ ಕಾಲೇಜುಗಳನ್ನು ನೀಗ್ರೋಗಳಿಗಾಗಿ ದ ಕ್ಷಿಣದರಾಜ್ಯಗಳಲ್ಲಿ ತೆರೆಯಲಾಗಿದೆ. ಭಾರ ತದ ಕಾಲೇಜು ವಿದ್ಯಾರ್ಥಿಗಳ ಅರೆವಾ ಸಿಯನ್ನು, ಮತ್ತು ಬ್ರಿಟನಿನ ಕಾಲೇಜು ವಿದ್ಯಾರ್ಥಿಗಳಿಗಿಂತಲೂ ಹೆಚ್ಚು, ಅಂದರೆ ೧೮೦೦೦ ನೀಗ್ರೋ ವಿದ್ಯಾರ್ಥಿಗಳು ಉಚ್ಚ ಶಿಕ್ಷಣ ಪಡೆಯುತ್ತಿದ್ದಾರೆ. ಇದ ಲ್ಲದೆ ಯಂತ್ರ ಕುಶಲರಾಗಿ, ನ್ಯಾಯಾ ಧೀಶರಾಗಿ, ವಿಜ್ಞಾನಿಗಳಾಗಿ, ಉಪನ್ಯಾಸ ಕರಾಗಿ, ಇಂಜಿನಿಯರರಾಗಿ, ಡಾಕ್ಟರರಾ ಗಿ, ಶಿಕ್ಷಣ ತಜ್ಞರಾಗಿ, ಬ್ಯಾಂಕರರಾಗಿ, ವ್ಯಾಪಾರಿಗಳಾಗಿ ಭೂಮಾಲಕರಾಗಿ, ಸಾರ್ವಜನಿಕ ಮುಂದಾಳುಗಳಾಗಿ, ರಾಜ ಕೀಯ ಪಟುಗಳಾಗಿ, ಸಂಯುಕ್ತ ರಾಷ್ಟ್ರ ಸಂಘದ ಪ್ರಭೃತಿಗಳಾಗಿ ಸಾವಿರಾರು ನೀ ಗ್ರೋಗಳು ಗೌರವದ ಜೀವನವನ್ನು ನಿ ರ್ವಹಿಸುತ್ತಿದ್ದಾರೆ. ಅವರ ಕೈಯಲ್ಲಿಂದು ೧೬ ಬೇಂಕುಗಳೂ, ೭೨ ಸಾಲ ಕೊಡುವ ಸಂಸ್ಥೆಗಳೂ ನೂರಾರು ಸಹಕಾರ ಸಂಘ ಗಳೂ ೫೫ ಉಳಿತಾಯದ ಕೇಂದ್ರಗಳೂ ೩೦೪ ವಿಮಾ ಕಂಪನಿಗಳೂ ೨೦೦ ವೃತ್ತ ಪತ್ರಿಕೆಗಳೂ ಇದ್ದು ಜೆನ್ನಾಗಿ ಕೆಲಸ ಮಾಡುತ್ತವೆ. ರಾಲ್ಫ್‌ಬುಂಜ್‌ರಂಥ ಅಂ ತಾರಾಷ್ಟ್ರೀಯ ಮನ್ನಣೆ ಪಡೆದ ರಾಜ ಕಾರಣಿ, ರಿಚಾರ್ಡ್ ರೈಟ್ ರಂಥ ಪ್ರತಿ ಭಾನ್ವಿತ ಲೇಖಕ, ಎಥೆಲ್ ವಾಟರ್ಸ್ ರಂಥ ಸುವಿಖ್ಯಾತ ನಟಿ, ಎಲ್ಲಿಸ್ ವಿಲ್ಸನ್ ರಂಥ ಪ್ರಸಿದ್ಧ ಚಿತ್ರಕಾರರನ್ನು ನೀಗ್ರೋ ಗಳಲ್ಲಿ ಕಾಣಬಹುದು.

ಐವತ್ತು ವರ್ಷಗಳಿಂದೀಚೆಗೆ ನೀಗ್ರೋ ಗಳ ಪರಿಸ್ಥಿತಿಯಲ್ಲಿ ಕಂಡುಬಂದ ಈ ಒಡೆ ಲಾವಣೆ ಆಶ್ಚರ್ಯಕರವಿದೆ ನಿಜ. ಆದರೆ ಇದಕ್ಕೆ ಹಿನ್ನೆಲೆಯಲ್ಲಿ ೧೨೦ ವರ್ಷಗಳ ಹೋರಾ ಟದ ಕತೆ ಇದೆ ಎಂಬುದನ್ನು ಮರೆಯಲಾ ಗದು. ಭಾರತದಲ್ಲಿ ಹರಿಜನರ ಪರಿಸ್ಥಿತಿ ಯನ್ನು ಊರ್ಜಿತ ಗೊಳಿಸುವುದಕ್ಕೂ ಇದೇ ರೀತಿಯ ಹೋರಾಟ ಹೂಡದಿದ್ದರೆ ಆಗದೆಂದು ಇದು ನೆನಪು ಮಾಡಿಕೊಡು ತ್ತದೆ. ನೀಗ್ರೋಗಳು ಇಂದು ಆರ್ಥಿಕ ದೃಷ್ಟಿಯಿಂದ ಭದ್ರಂಗಾಗಿದ್ದಾರೆ; ಅವರಿಗೆ ಮತದಾನದ ಅರ್ಹತೆ ಪಡೆಯಲು ತೆರಿಗೆ ತೆರಬೇಕಾದ ನಿರ್ಬಂಧ ಈಗಲೂ ದಕ್ಷಿಣ ದ ಐದು ರಾಜ್ಯಗಳಲ್ಲಿದೆ ಆದರೆ, ಈ ತೆರಿ ಗೆ ಕೊಡಲು ಅವರಿಗೆ ಕಷ್ಟವಾಗುತ್ತಿಲ್ಲ. ಅಮೇರಿಕದ ೧೫,೧೦,೦೦,೦೦೦ ನಾಗರಿ ಕರಲ್ಲಿ ನೀಗ್ರೋಗಳು ೧೩೦,೦೦,೦೦೦, ಅಂದರೆ ೯% ಮಾತ್ರ ಇದ್ದಾರೆ; ಆದುದ ರಿಂದ ಅವರು ಶಾಸನಾಂಗದಲ್ಲಿ ಬಹುಮತ ಪಡೆಯಲಾರರು, ನಿಜ ಹಾಗೆಂದು ದ ಕ್ಷಿಣದ ರಾಜ್ಯಗಳಲ್ಲಿಯೇ ಐದರಲ್ಲಿ ಶಾ ಲ್ಯಾಂಶ ನೀಗ್ರೋಗಳಿದ್ದಾರೆ; ಅಲ್ಲದೆ ಅಲ್ಲಿ ಯ ಕೆಲವು ಮತದಾರ ಕ್ಷೇತ್ರಗಳಲ್ಲಿ ಒ ಬ್ಬ ಅಮೇರಿಕನ್ನನಿಗೆ ನಾಲ್ಕರಂತೆ ನೀ ಗ್ರೋಗಳಿದ್ದಾರೆ! ಆದುದರಿಂದ ಎಲ್ಲಿತ ಮ್ಮನ್ನು ಈ ನೀಗ್ರೋಗಳು ಆಳುವ ಪರಿ ಸ್ಥಿತಿ ಬಂದು ಬಿಡುವುದೋ ಎಂದು ದಕ್ಷಿ ಣದವರ ಭಯ. ಈ ಹೆದರಿಕೆಯಿಂದಾಗಿ ಯೇ ತಮ್ಮ ನೀಗ್ರೋಗಳ ವಿರುದ್ಧವೊಂ ಟ ಕಟ್ಟಿದ್ದಾರೆ ಆದರೆ ಇವರಲ್ಲಿರುವ ಕೆಲ ವುಬುದ್ಧಿವಂತರು ಇನ್ನೊಂದು ಬಗೆಯಾಗಿ ಸಮಸ್ಯೆಯನ್ನು ಪರಿಹರಿಸಲು ನೋಡು ತ್ತಿದ್ದಾರೆ—ಅದೆಂದರೆ, ನೀಗ್ರೋಗಳನ್ನು ಸುಶಿಕ್ಷಿತರೂ ಸುಸಂಸ್ಕೃತರೂ ಆಗಿ ರೂಪಿ ಸುವ ಮಾರ್ಗ. ಈ ದಾರಿಯಲ್ಲಿ ನಡೆ ಯುವುದೇ ಶ್ರೇಯಸ್ಕರವೆಂದು ನಮಗೂ ಹೊಳೆಯದಿರದು. ಆದರೆ ದಕ್ಷಿಣ ರಾಜ್ಯ ಗಳ ಕೆಲವರು ಸಾರ್ವಜನಿಕ ಶಾಲೆಗಳ ನ್ನು ಮುಚ್ಚಿ ಬಿಟ್ಟು ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸುವುದೇ ನ್ಯಾಯಸ್ಥಾನದ ತೀರ್ಪಿನ ಹಿನ್ನೆಲೆಯಿಂದ ಸಾಧ್ಯವಾಗುವ ಬಗೆ ಯೆಂದು ಯೋಚಿಸುತ್ತಿರುವವರಾಗಿ ತಿಳಿದು ಬರುತ್ತದೆ. ಇದು ನಿಜಕ್ಕೂ ಶೋಚ ನೀಯ.



ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4½%.

ಬದವ ಬಲ್ಲಿದನೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

(೧೧ನೇ ಪುಟದಿಂದ)

ಗುತ್ತದೆ. ಇಷ್ಟೊಂದು ಸುಲಭ, ಸಹಜ ಮತ್ತು ಬಾಲ್ಯದಿಂದಲೂ ಅವಗತವಿರುವ ಪದ್ಧತಿಯು ದುರ್ಗಮವೆಂತಾದೀತು ? ಆದರೆಯ ಮ ಗಳನ್ನು ಮುದ್ರಣದಲ್ಲಿ ರೂಪಿಸಿಕೊಳ್ಳುವಂತೆ ಯ ಗಳಿಗೆ (ಂ) ಕಾಗುಣಿತವನ್ನು ಜೋಡಿಸಬೇಕಾಗುವದು. ಕ್ರಿ ಸಹಿತ ಒಗೆಯೆ ರೂಪಿಸಿಕೊಳ್ಳಬೇಕಾಗುವದು. ಶರ್ಮಾ ಸಮಿತಿ ಹಾಗು ಶ್ರೀ ವಿಜಯಪಾಲಯ್ಯನವರಾದರೂ ಇದೇ ಮಾರ್ಗವನ್ನು ಅನುಸರಿಸಿರುವರು. ೨೦೯ ಸಂಜ್ಞೆಗಳಿಗೆ ಜಂಟಿಗಳ ಆವಶ್ಯಕತೆಯಿಲ್ಲ. ಇವುಗಳನ್ನು ನೇರವಾಗಿ ಅಕ್ಷರಗಳ ಮೂಲ ಸಂಜ್ಞೆಗಳಿಗೆ ಜೋಡಿಸಬಹುದು. ಉ ಊ ಗಳನ್ನು ಪ್ರಮಾಣ ಬದ್ಧವಾಗಿ ಪೂರ್ಣ ರೂಪದಲ್ಲಿ ಟೈಪರೈಟರದ ಮೇಲೆ ಇಡುವದು ಸಾಧ್ಯವೇ ಇಲ್ಲ. ಈ ಅಕ್ಷರಗಳನ್ನು ಯುಕ್ತ ಸ್ಥಾನದಲ್ಲಿ ಕತ್ತರಿಸಿ ಎಡಭಾಗದ ತುಂಡನ್ನಷ್ಟೇ ಕೈಮಣೆಯ ಮೇಲೆ ಇರಿಸಲಾಗಿದೆ. ಇದಕ್ಕೆ ೨ ಕಾಗುಣಿತಗಳನ್ನು ಜೋಡಿಸಿದರೆ ಉ ಊ ಸಿದ್ಧವಾಗುತ್ತವೆ. ಒ ಮತ್ತು ಎ ಗಳಿಗೆ ( ) ಚಿನ್ಹವನ್ನು ಬಳಸಲಾಗಿದೆ. ಒ ಎ ಗಳಿಗೆ ಇದನ್ನು ಜೋಡಿಸಿದರೆ ಒ, ಐ ಗಳು ಸಿದ್ಧವಾಗುತ್ತವೆ. ಪೂರ್ಣ ರೂಪದಲ್ಲಿದೆ. ಇದಕ್ಕೆ ೨ಬಿಸ್ಸುಗಳನ್ನು ಜೋಡಿಸಿದರೆ ಔ ಸಿದ್ಧವಾಗುತ್ತವೆ. ಶರ್ಮಾ ಸಮಿತಿಯ ಕೈಮಣೆಯಲ್ಲಿ ಔ ಗೇ ಚಿನ್ಹ ಹಾಕಿ ಔ ರೂಪಿಸಬೇಕಾಗುವದು.

ಕನ್ನಡದಲ್ಲಿ ಒತ್ತಕ್ಷರಗಳು ನೇರವಾಗಿ ಅಕ್ಷರಗಳ ಬುಡಕ್ಕೆ ಇಲ್ಲವೆ ಬಲಕ್ಕೆ ತುಸು ಬಾಗಿಕೊಂಡು ಬರುತ್ತವೆ. ಟೈಪರೈಟರಿನಲ್ಲಿ ಒತ್ತಕ್ಷರಗಳನ್ನು ಕೆಳಗೆ ಮೂಡಿಸುವುದು ಬಲವಾದ ಸಮಸ್ಯೆಯಾಗಿದ್ದಿತು. ಶರ್ಮಾ ಸಮಿತಿಗೆ ಮೊದಲು ಈ ವಿಷಯವನ್ನು ಚರ್ಚಿಸಿದ್ದ ಶ್ರೀಕಂಠಯ್ಯ ಸಮಿತಿಯು ಅರ್ಧವ್ಯಂಜನಗಳನ್ನು (ಕ್ ಇತ್ಯಾದಿ) ಬಳಸಿಕೊಂಡು ಒತ್ತುಗಳನ್ನು ಬಿಡಬಹುದಾಗಿ (ದಿಕ್ಕಳು=ದಿಕ್ಕು) ಸೂಚಿಸಿತು. ಚಲವು ಕೈಮಣೆ ನಿರ್ಮಾಪಕರು ಒತ್ತುಗಳಿಗಾಗಿ ಅರೆಗಡಲು ಕೈ (ಹಾಫ್ ಶಿಫ್ಟ್ ಕೀ) ಬಳಸುವ ವಿಧಾನವನ್ನು ಕಲ್ಪಿಸಿಕೊಂಡಿದ್ದಾರೆ. ಸಮಸ್ಯೆಯ ಬಿಗುವನ್ನು ಮನದಂದು ಶರ್ಮಾ ಸಮಿತಿಯು ಒತ್ತುಗಳನ್ನು ಮುಖ್ಯ ಅಕ್ಷರದ ಮುಖ್ಯದ ಎಡೆಗೆ, ಅಂದರೆ ಅರ್ಧವಿಸ್ಸು, ಮೇಲಕ್ಕೆ ಎಳೆದುಕೊಳ್ಳಲು ಅನುಮತಿಯನ್ನಿತ್ತಿದೆ. ಇಷ್ಟಾದರೂ ಸಮಸ್ಯೆ ಬಿಟ್ಟಿಲ್ಲ. ಕನ್ನಡದಲ್ಲಿ ಒಂದೇ ಅಕ್ಷರಕ್ಕೆ ಎರಡು—ಮೂರು ಒತ್ತುಗಳನ್ನು ಬಳಸುವ ಸಂದರ್ಭ ಬರುತ್ತದೆ (ಸ್ವಾತಂತ್ರ್ಯ, ವೈಶಿಷ್ಟ್ಯ, ಉತ್ಕೃಷ್ಟ, ಸ್ತ್ರೈಣ ಇತ್ಯಾದಿ). ಇಂಥ ಸಂದರ್ಭಗಳಲ್ಲಿ ಒತ್ತುಗಳನ್ನು ಒಂದರಲ್ಲಿ ಇನ್ನೊಂದು ಸೇರಿಸಬೇಕಾಗುತ್ತದೆ. ಇಲ್ಲವಾದರೆ ಅವು ಒಂದರ ಮುಂದೊಂದು ಬಂದು ಬರೆಯಬೆಡ ಅಂದಗೆಡುತ್ತದೆ. ಶರ್ಮಾ ಸಮಿತಿಯ ಸೂಚನೆ ಮೇರೆಗೆ ಒತ್ತುಗಳನ್ನು ಮೇಲಕ್ಕೆ ಎಳೆದುಕೊಂಡರೆ ಒತ್ತುಗಳನ್ನು ಒಂದರಲ್ಲಿ ಇನ್ನೊಂದು ಸೇರಿಸಲು ಸಾಧ್ಯವಾಗುವದಿಲ್ಲ. ಚಿಟಗುಪ್ಪಿಯವರ ಟೈಪ ರೈಟರದಲ್ಲಿ ಈ ಸಮಸ್ಯೆ ಪೂರ್ಣ ಬಿಟ್ಟಿಂತಾಗಿದೆ ಎನ್ನಬಹುದು. ವೇಗದ ಸೌಲಭ್ಯಕ್ಕಾಗಿ ಒತ್ತುಗಳನ್ನು ತುಸು ಬಲಕ್ಕೆ ಮೂಡಿಸಬೇಕಿದ್ದರೂ ಅಗತ್ಯವೆನಿಸಿದಾಗ ಬ್ಯಾಕ್ ಸ್ಪೇಸಿನಿಂದ ಹಿಂದಕ್ಕೆಳೆದುಕೊಂಡು ಒಂದನ್ನು ನೇರವಾಗಿ ಅಕ್ಷರದ ಬುಡಕ್ಕೆ ಹಾಕಿ ಇನ್ನೊಂದು ಅದಕ್ಕೆ ಹೊಂದುವಂತೆ ಮಾಡಬಹುದು.

ಜಂಟಿ ಅಕ್ಷರಗಳನ್ನು ಬಿಟ್ಟಿರುವುದು ಚಿಟಗುಪ್ಪಿಯವರ ಟೈಪರೈಟರಿನ ಇನ್ನೊಂದು ವೈಶಿಷ್ಟ್ಯ. (ಕ್, ಕ್, ಗ ಈ ಕಾಗುಣಿತದ ಚಿಹ್ನಗಳನ್ನು ಜೋಡಿಸಿಕೊಳ್ಳಲು ಮುದ್ರಣದಲ್ಲಿ ಕೊಂಬಿಲ್ಲದ ಸರಳ ರೇಖೆಯ ತಲೆಕಟ್ಟನ ವಿಶೇಷಾಕ್ಷರಗಳಿರುತ್ತವೆ. ಉದಾ: ಕ—ಇವುಗಳಿಗೆ ಜಂಟಿ ಎನ್ನುತ್ತಾರೆ.) ಮೈಸೂರು ಸರಕಾರದವರಿಂದ ಒಪ್ಪಿಗೆ ಪಡೆದು ಪ್ರಕಟನಾಗಿರುವ ವಿಜಯಪಾಲಯ್ಯನವರ ಕೈಮಣೆಯಲ್ಲಿಯೂ ಜಂಟಿಗಳಿಲ್ಲ. ಆದರೆ ಆಕಾರಾಂತ ವ್ಯಂಜನಗಳನ್ನೆ ಪೂರ್ಣ ರೂಪದಲ್ಲಿ ಇಟ್ಟುಕೊಂಡಿರುವುದರಿಂದ ಕ, ಗ, ಗ ಈ ಕಾಗುಣಿತಗಳನ್ನು ಬಳಸುವಾಗ ಆಕಾರದ ತಲೆಕಟ್ಟನ್ನು ಕೊಂಬು ಅಡಿಯಲ್ಲಿ ಹಾಗೆಯೇ ಎದ್ದು ಕಾಣುತ್ತದೆ. (ಉದಾ: ಕಾ ಅಲ್ಲದೆ) ಬ, ಲ, ಜ

(೩ನೇ ಪುಟದಿಂದ)

ಕೈಗೆ ಬಂದಿರುವ ಈ ಸಂದರ್ಭವನ್ನು ಕಳೆದುಕೊಂಡು ೧೨೦೦ ವರ್ಷಗಳ ವರೆಗೆ ಮಾನವ ಜನಾಂಗ ಅಳುತ್ತಾ, ಕೂಡ ಬಾರದೆಂಬ ಸದುದ್ದೇಶದಿಂದಲೇ ವಿಜ್ಞಾನಿಗಳು ಪ್ರೇರಿತರಾಗಿ, ಸಿಂಹಳದ ಯಾತ್ರೆ ಮಾಡಿದ್ದಾರೆ. ಆದರೆ ಸೂರ್ಯಗ್ರಹಣ ಕಾಲದಲ್ಲಿ ಜೋರಾದ ಮಳೆ ಬಂದರೆ, ಅಥವಾ ಆಕಾಶವು ಮುಗಿಲುಗಳಿಂದ ಮುಸುಕಿಕೊಂಡಿದ್ದರೆ, ಹವಾಮಾನವು ಇತರ ಬಗೆಯಿಂದ ಪ್ರತಿಕೂಲವಾಗಿದ್ದರೆ ಅವರಿಗೆ ಪೂರ್ಣ ನಿರಾಶೆಯಾಗದಿರದು ಆದುದರಿಂದ ಅವರು ಗ್ರಹಣ ಕಾಲದ ಹವೆಯು ಅತ್ಯುತ್ತಮವಾಗಿರಲೆಂದು ದೇವರಲ್ಲಿ ಪ್ರಾರ್ಥಿಸಿಯಾರು. ಆದರೆ ಭಾರತದಲ್ಲಿಯ ಸನಾತನ ಸಂಪ್ರದಾಯಿಗಳ ಮಟ್ಟಿಗೆ ಹವಾಮಾನವು ಮಹತ್ವದ ವಿಷಯವಲ್ಲ. ಸೂರ್ಯ ಗ್ರಹಣದಕಾತುಕವನ್ನು ಕಾಣದೇಕೆಂಬ ಆಸೆಯಿಂದ ಕಡಾಯಿಯಲ್ಲಿ ಸೆಗಣಿಯ ನೀರನ್ನು ತುಂಬಿಸಿ ಅದರಲ್ಲಿ ಸೂರ್ಯನ ಪ್ರತಿಬಿಂಬವನ್ನು ನಿರೀಕ್ಷಿಸಲು ಕುಳಿತಿರಬಹುದಾದ ಜನರನ್ನು ಬಿಟ್ಟರೆ, ಉಳಿದ ಎಲ್ಲರೂ ಕೆರೆ, ನದಿಗಳಲ್ಲಿಯೂ ಸಮುದ್ರದಲ್ಲಿಯೂ ಸ್ನಾನಾಹ್ನಿಕಗಳನ್ನು ನಡೆಸಿ, ಸೂರ್ಯ ನಮಸ್ಕಾರ ಮಾಡುವುದರಲ್ಲಿಯೇ ಪುರುಷಾರ್ಥ ಕಾಣುವುದು ಸಂಪ್ರದಾಯ. ಇದಕ್ಕೋಸ್ಕರ ಕುರುಕ್ಷೇತ್ರದ ಕಮಲಗಳಿಂದ ತುಂಬಿದ ಸರೋವರದ ವರೆಗೂ ಯಾತ್ರೆ ಹೊರಡಲು ನಮ್ಮವರು ಸಿದ್ಧರು.

ಸೂರ್ಯ ದೇವನನ್ನು ಹಿಂದುಗಳು ಸವಿತೃ ನಾರಾಯಣನೆಂದು ಪೂಜಿಸುತ್ತಾರೆ. ಋಗ್ವೇದದಲ್ಲಿ ಉಷೆಯ ವರ್ಣನೆ, ಅರುಣೋದಯದ ಸೌಂದರ್ಯ ಮತ್ತು ಭಾಸ್ಕರನ ಮಹತ್ವವನ್ನು ವರ್ಣಿಸುವ ರಸವ್ಯಂಜಕ ಮಂತ್ರಗಳನ್ನು ಕಾಣಬಹುದು. ಅವುಗಳ ಸೌಂದರ್ಯಕ್ಕೆ ಎಲ್ಲ ಪ್ರಾಜ್ಞರೂ ತಲೆತೂಗಿದ್ದಾರೆ. ಸೆರೆಯ ಇರಾನಿನಲ್ಲಿ ಸೂರ್ಯ ದೇವನ ಪೂಜೆಯು ಬಹುಕಾಲದಿಂದ ನಡೆದುಕೊಂಡು ಬಂದಿದೆ. ಜೋರಾಷ್ಟ್ರನು ಇದಕ್ಕೊಂದು ಯೋಗ್ಯ ರೂಪವನ್ನು ನೀಡಿದ್ದಾನೆ. ದೂರ ಪೂರ್ವದ ಜಪಾನಿನಲ್ಲಿ ಅಲ್ಲಿಯ ಚಕ್ರವರ್ತಿಯನ್ನು ಸೂರ್ಯ ವಂಶಜನೆಂದು ಗತಮಾನಗಳಿಂದ ಭಾವಿಸಲಾಗುತ್ತದೆ. ಐಗುಪ್ತದಲ್ಲಿಯೂ ಸೂರ್ಯೋಪಾಸನೆಯು ಬಹಳ ಹಿಂದಿನ ಕಾಲದಲ್ಲಿ ಉಚ್ಛ್ರಾಯಾವಸ್ಥೆಯನ್ನು ಹೊಂದಿದ್ದಿತು. ಮೃತ್ಯು ಮತ್ತು ಪುನರುತ್ಥಾನದ ದೇವತೆಯಾಗಿ ಸೂರ್ಯನನ್ನು ಆಗ ಜನರು ಭಾವಿಸಿದ್ದರು. ಗ್ರೀಕರ ಪ್ರಸಿದ್ಧ ದೇವತೆ ಅಪೊಲೊವೆಂದರೆ ಸೂರ್ಯ-ಅವನು ಜ್ಞಾನವೃದ್ಧನೆಂದು ತಿಳಿಯಲ್ಪಡುತ್ತಿದ್ದನು. ಅಮೇರಿಕದ ಎಲ್ಲೆಡೆಯಲ್ಲೂ ಸೂರ್ಯನನ್ನು ಆರಾಧಿಸುತ್ತಿದ್ದರು. ದಕ್ಷಿಣ ಅಮೇರಿಕ ಮತ್ತು ಮೆಕ್ಸಿಕೊಗಳಲ್ಲಿ ಸೂರ್ಯ ಮಂದಿರಗಳು ಬೇಕಾದಷ್ಟು ನೋಡಸಿಗುತ್ತವೆ.

ಆದರೆ ಯಾವ ಸೂರ್ಯಮಂದಿರವೂ ಭಾರತದ ಕೋಣಾರ್ಕದ ಸೌಂದರ್ಯಕ್ಕೆ ಸರಿದೊರೆಯಾಗದು. ಒರಿಸ್ಸಾ ರಾಜ್ಯದಲ್ಲಿ ಜಗನ್ನಾಥಪುರಿಯಿಂದ ೨೧ ಮೈಲು ದೂರದಲ್ಲಿರುವ ಈ ಭವ್ಯ ಮಂದಿರವು ಕಳಿಂಗದಲ್ಲಿ ಆಳುತ್ತಿದ್ದ ಗಂಗರಾಜರ ವೈಭವವನ್ನು ಸಾರಿಹೇಳುತ್ತದೆ. ಇತಿಹಾಸಕಾರರು ನಿರ್ಧರಿಸಿರುವಂತೆ ಅನ್ಯಾದೃಶ ಸೌಂದರ್ಯದಿಂದ ಶೋಭಿಸುವ ಈ ಮಂದಿರವನ್ನು ಮೊದಲನೇ ನರಸಿಂಹ ದೇವನು (ಕ್ರಿ. ಶ. ೧೨೩೮—೧೨೪೪) ಕಟ್ಟಿಸಿದನು. ಇದರ ನಿರ್ಮಾಣದಲ್ಲಿ ಹನ್ನೆರಡು ವರ್ಷದ ಆದಾಯವನ್ನು ವ್ಯಯಿಸಲಾಯಿತೆಂದು ಅಬುಲ್ ಫಜಲನು ಬರೆದ "ಐನ್—ಇ—ಅಕ್ಬರಿ" ಹೇಳುತ್ತದೆ. ಹನ್ನೆರಡು ಸಾವಿರ ಶಿಲ್ಪಿಗಳೂ ಇತರ ಸಹಸ್ರಾರು ಕೆಲಸಗಾರರೂ ಹದಿನಾರು ವರ್ಷಗಳ ವರೆಗೆ ಈ ದೇವಾಲಯದ ಕೆಲಸದಲ್ಲಿ ನಿರತರಾದರೆಂದು ಹೇಳಲಾಗುತ್ತದೆ. ಇಷ್ಟು ಶ್ರಮ ವಹಿಸಿ ಕಟ್ಟಿಸಿದ ಮಂದಿರವು ಈಗ ಕೆಲ ಮಟ್ಟಿಗೆ ಭಗ್ನವಾಗಿದ್ದರೂ ಪ್ರೇಕ್ಷಕರನ್ನು ದಂಗುಗೊಳಿಸುವ ವೈಶಿಷ್ಟ್ಯಗಳನ್ನು ಕಳೆದುಕೊಂಡಿಲ್ಲ.

ಪ್ರಾಚೀನ ಕತೆಯೊಂದರ ಪ್ರಕಾರ, ಶ್ರೀ ಕೃಷ್ಣನ ಮಗನಾದ ಸಾಂಬನು ವ್ಯಭಿಚಾರ ದೋಷದಿಂದ ಪ್ರಾಪ್ತವಾದ ಕುಷ್ಠರೋಗದ ನಿವಾರಣೆಗೆ ಮೈತ್ರೇಯಿ ಅರಣ್ಯದಲ್ಲಿ ಸೂರ್ಯ ದೇವನನ್ನು ಆರಾಧಿಸಿದನೆಂದೂ ಚಂದ್ರಭಾಗಾ ನದಿಯಲ್ಲಿ ಕಮಲ ಪುಷ್ಪದ ಮೇಲೆ ಸೂರ್ಯನ ಮೂರ್ತಿಯೊಂದು ತೇಲುವುದನ್ನು ಕಂಡು ಆತನು ದೇವಾಲಯವನ್ನು ಕಟ್ಟಿಸಿದನೆಂದೂ ತಿಳಿದು ಬರುತ್ತದೆ. ಈ ಮಂದಿರ ನೆಲಸಿರುವ ಪದ್ಮಕ್ಷೇತ್ರವು ಚಕ್ರ ಕ್ಷೇತ್ರವೆಂದು ಹೆಸರಾವಸುರಿಗೆ ಈಶಾನ್ಯ "ಮೂಲೆ"ಯಲ್ಲಿರುವುದರಿಂದ ಕೋಣಾರ್ಕವೆಂದು ದೇವಾಲಯ ಪ್ರಸಿದ್ಧವಾಯಿತು. ಬೌದ್ಧಕಾಲದಲ್ಲಿ ಈ ಸ್ಥಳವು ದೊಡ್ಡ ಶೇಖಾಗಿದ್ದಿತು. ಸಮುದ್ರ ತಟದಲ್ಲಿರುವ ಈ ಮಂದಿರವನ್ನು ಉತ್ತರ ಭಾರತದಿಂದ ಪಠಾಣರು ಮುಂದೊತ್ತಿ ಬಾರದಂತೆ ತಡೆದು ನಿಲ್ಲಿಸಿದ ತನ್ನ ಪೌರುಷದ ನೆನಪಿಗಾಗಿ ಪುನಃ ಕಟ್ಟಿಸಲು ನರಸಿಂಗ ದೇವನು ನೋಡಿದನು.

ನಿಜಕ್ಕೂ ಈ ಮಂದಿರ ಕಳಿಂಗ ರಾಜ್ಯದ ಕಲಾವಂತಿಕೆಯನ್ನು ಹೊರ ಸೂಸುತ್ತದೆ. ಸೂರ್ಯ—ಚಂದ್ರರ ವಿಗ್ರಹಗಳನ್ನು ೧೭ನೇ ಶತಮಾನದ ಆದಿಯಲ್ಲಿ ಇಲ್ಲಿಂದ ಇನ್ನೊಬ್ಬ ಅರಸನು ಪುರಿಗೆ ಸಾಗಿಸಿದನೆಂದು ಗೊತ್ತಾಗುತ್ತದೆ. ಆದರೆ, ದೇವಾಲಯದಲ್ಲಿ ಈಗಲೂ ನೋಡ ಸಿಗುವ ಸ್ತಂಭವೊಂದು ನವಗ್ರಹದ ರಮಣೀಯ ಚಿತ್ರವನ್ನು ವ್ಯಕ್ತಪಡಿಸುತ್ತದೆ. ಎದುರಿಗೊಂದು ನೃತ್ಯಾಂಗಣ, ನಡುವೆ ಎತ್ತರವಾದ ವಿಮಾನ, ಮೂರು ಕಡೆಯಲ್ಲಿ ಮಹಾದ್ವಾರಗಳಿರುವ ಈ ಮಂದಿರದ ಕೆತ್ತನೆ ಕೆಲಸ ಅಕರ್ಷಕವಾಗಿದೆ. ವಿಮಾನದ ತುದಿಯಲ್ಲಿರಬೇಕಾಗಿದ್ದ ಕಲಶವು ನೆಲದಮೇಲೆ ಬಿದ್ದಿದೆ; ಇದರ ದಪ್ಪ ೨೫ ಅಡಿ! ದ್ವಾರಗಳಲ್ಲಿ ಒಂದೆಡೆ ಸಿಂಹ, ಇನ್ನೊಂದೆಡೆ ಆನೆ, ಮಗುದೊಂದೆಡೆ ಕುದುರೆಗಳ ಜೊತೆಗಳ ನಿಗ್ರಹಗಳನ್ನು ನಿಲ್ಲಿಸಲಾಗಿದೆ. ಇವುಗಳನ್ನು ಕೆತ್ತಿದ ಕೈಯ ಕೌಶಲ್ಯಕ್ಕೆ ಎಷ್ಟು ಪ್ರಶಂಸೆ ಸಲ್ಲಿಸಿದರೂ ಕಡಿಮೆಯೇ ನಿಜ. ಭಾರತೀಯರ ಪಾಲಿಗೆ ಒಮ್ಮೆ ಮರಳಿನಿಂದ ಮುಚ್ಚಿ ಹೋಗಿದ್ದ ಈ ದೇವಾಲಯವನ್ನು ಮರಳಿ ಯಾತ್ರಾಕ್ಷೇತ್ರವಾಗಿ ಮಾಡಿದ ಶ್ರೇಯಸ್ಸು ಇಲ್ಲಿ ವೈಸರಾಯಿಯಾಗಿ ಬಂದ ಲಾರ್ಡ್ ಕರ್ಜನ್ ದೊಡ್ಡಿಗೆ ಸಲ್ಲುತ್ತದೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಬರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

Edited, Printed & Published By K. H. Shetty at the Navayuga Press, Udipi, S. India.

ನವಯುಗ

ಸಂಪುಟ ೩೪ — VOL. 34

ಉಡುಪಿ, 23—6—1955

ಸಂಚಿಕೆ ೪೧ — NO. 41

ಪ್ರಸ್ತುತ ಸಂಗತಿ

ಅರ್ಥಿಕ ಜೀವನದಲ್ಲಿ ಪ್ರಜಾಪ್ರಭುತ್ವವನ್ನು ಸಾಧಿಸುವುದೇ ಸಮಾಜವಾದ. ಕೃಷಿಯು ಅರ್ಥಿಕ ಜೀವನದ ಮುಖ್ಯವಾದ ಅಂಗ. ಅದರೆ ಭೂಮಿಯನ್ನು ರಾಷ್ಟ್ರೀಕರಿಸುವುದಾಗಲಿ, ಸಾಮೂಹಿಕ ರೀತಿಯಿಂದ ಸಾಗುವಳಿ ಮಾಡುವುದಾಗಲಿ ಅನಿಷ್ಟ ಪ್ರಭವೂ ಅದೂರೆದರ್ಶತ್ವವೂ ಆಗುತ್ತದೆ. ಸಾಮಾಜಿಕ ನಿಯಂತ್ರಣವನ್ನು ಬೇರೆ ರೀತಿಯಿಂದ ಹೇರ ಬಹುದು. ಜಮೀನುದಾರಿಗಳನ್ನು ರದ್ದುಗೊಳಿಸುವುದು, ಮಧ್ಯಸ್ಥರ ಉಚ್ಚಾಟನೆ, ಒಕ್ಕಲುಗಳಿಗೆ ಶಾಶ್ವತ ಹಕ್ಕು ಬಾಧ್ಯತೆಗಳನ್ನು ನೀಡುವುದು, ಹಿಡುವಳಿಯ ಗರಿಷ್ಠ ಮಿತಿಯನ್ನು ಗೊತ್ತುಪಡಿಸಿ ಹೆಚ್ಚಿಗೆ ಉಳಿದ ಭೂಮಿಯನ್ನು ಹಂಚುವುದು, ಸಾಗುವಳಿ ಭೂಮಿಯ ಅನುತ್ಪಾದಕವೂ ಅಲಾಭಕರವೂ ಆಗದಂತೆ ಹಂಚೋಣದಲ್ಲಿ ಜಾಗ್ರತೆ ವಹಿಸುವುದು ಈ ವಿಧಾನ.

—ವೈಕುಂಠಲಾಲ ಮೆಹತ

ಉಳುವವನೇ ಹೊಲದೊಡೆಯ

ನಮ್ಮ ಜಿಲ್ಲೆಯ ಸಾಗುವಳಿದಾರ ಒಕ್ಕಲುಗಳ ದೃಷ್ಟಿಗೆ ಮುಂಬಯಿ ಸರಕಾರವು ಹೊಲ ಸಾಗುವಳಿ ಕಾಯಿದೆಗೆ ಮಾಡಬೇಕೆಂದಿರುವ ತಿದ್ದುಪಡಿಯ ಮುಖ್ಯಾಂಶಗಳು ಈಗಾಗಲೇ ಬಿದ್ದಿರಬಹುದು. ಇದೇ ೧೫ನೇ ದಿನಾಂಕ ಪ್ರಕಟವಾದ ತಿದ್ದುಪಡಿಯ ಸಾರಾಂಶವು ಮುಂಬಯಿ ರಾಜ್ಯದಲ್ಲಿ ೧೯೫೭ನೇ ಇಸವಿಯ ಎಪ್ರೀಲಿನ ೧೫ನೇ ತಾರೀಕಿನಿಂದ ಉಳುವವನೇ ಹೊಲದೊಡೆಯನಾಗುವನೆಂಬ ಆಕರ್ಷಕವಾದ ಮತ್ತು ಸಂತೋಷಕರವಾದ ವಿಷಯವನ್ನು ಮನಗಾಣಿಸುತ್ತದೆ, ಆ ತಾರೀಕಿಗೆ ಕೃಷಿ ನಿರತನಾದ ಪ್ರತಿಯೊಬ್ಬ ಒಕ್ಕಲು ತನ್ನ ಸಾಗುವಳಿಯ ಭೂಮಿಯನ್ನು ಧನಿಯಿಂದ ಕ್ರಯಕ್ಕೆ ಪಡೆದುಕೊಂಡಿರುವನೆಂದು ಭಾವಿಸಲಾಗುತ್ತದೆ. ಈ ಕ್ರಯವನ್ನು ನಿರ್ಣಯಿಸುವ ಸೂತ್ರವೂ ತಿದ್ದುಪಡಿಯಲ್ಲಿದೆ. ಅದರಂತೆ, ಶಾಶ್ವತ ಒಕ್ಕಲಿನ ಸಂಗತಿಯಲ್ಲಿ ಭೂಕಂದಾಯದ ೩ಂರಿಂದ ೧೦೦ ಪಾಲು, ಮತ್ತು ಇತರ ಬಗೆಯ ಒಕ್ಕಲುಗಳ ಸಂಗತಿಯಲ್ಲಿ ೫೦ ರಿಂದ ೨೦೦ ಪಾಲಿನಷ್ಟು ಖರೀದಿಯ ಬೆಲೆ ಇರಬಲ್ಲುದು. ಈ ಹಣವನ್ನು ಸಾಗುವಳಿದಾರನು ಕೂಡಲೇ ಒಂದೇ ಗಂಟಿನಲ್ಲಿ ಪಾವತಿ ಮಾಡಬಹುದು; ಅಥವಾ ಹನ್ನೆರಡು ವರ್ಷಗಳ ಅವಧಿಯಲ್ಲಿ ಹತ್ತು ಕಂತುಗಳಲ್ಲಿ ಶೇಕಡಾ ನಾಲ್ಕೂವರೆ ಸಲೆಯ ಬಡ್ಡಿಯಿಂದ ಸಂದಾಯಿಸಬಹುದು.

ಹೀಗೆ ಭೂಮಿಗೆ ರೈತನು ಬೆಲೆ ಕೊಡುವುದಲ್ಲದೆ, ಧನಿಗೆ ಭೂಕಂದಾಯದ ಎರಡರಿಂದ ಐದು ಪಾಲಿನಷ್ಟಿರುವ, ಅದರ ಒಟ್ಟು ಉತ್ಪಾದನೆಯಲ್ಲಿ ಅರವತ್ತಿ ಒಂದಂಶಕ್ಕಿಂತ ಹೆಚ್ಚಾಗದ ಗೇಣಿಯನ್ನೂ ಪ್ರತಿ ವರ್ಷ ಸಂದಾಯ ಮಾಡಬೇಕೆಂದು ತಿದ್ದುಪಡಿಯು ವಿಧಿಸುತ್ತದೆ. ಹಿಡುವಳಿಯ ಗರಿಷ್ಠ ಪ್ರಮಾಣವಾಗಿ ಬೆಟ್ಟು ಗದ್ದೆ (ಅಂದರೆ ನೀರಾವರಿ ಇಲ್ಲದ ಭೂಮಿ) ಯಾದರೆ ೪೮ ಎಕ್ರೆ, ಮಜಲು ಗದ್ದೆ (ಅಂದರೆ ಸ್ವಲ್ಪ ಮಾತ್ರ ನೀರಾವರಿಯ ಅನುಕೂಲತೆ ಇದ್ದು ಭತ್ತ ಬೆಳೆಬಹುದಾದ ಸ್ಥಳ) ಯಾದರೆ ೨೪ ಎಕ್ರೆ, ಯಾವಾಗಲೂ ನೀರಿನ ಆಶ್ರಯವಿರುವ ಬೈಲು ಗದ್ದೆಯಾದರೆ ೧೨ ಎಕ್ರೆ ಎಂದು ಸರಕಾರ ನಿರ್ಣಯಿಸಿರುತ್ತದೆ. ಈಗ ಈ ಗರಿಷ್ಠ ಪ್ರಮಾಣಕ್ಕಿಂತ ಹೆಚ್ಚು ಭೂಮಿ ಇಟ್ಟು ಕೊಂಡಿರುವವರ ಕೈಯಿಂದ ಭೂಮಿಯನ್ನು ಕಸಿದುಕೊಳ್ಳುವುದಿಲ್ಲ. ಆದರೆ, ಮುಂದೆ ಯಾರಿಗೂ ಈ ಪರಮ ಮಿತಿಯನ್ನು ಮೀರಿ ಭೂಮಿ ಸಂಗ್ರಹಿಸಲು ಸರಕಾರ ಅವಕಾಶ ನೀಡುವುದಿಲ್ಲ. ಒಬ್ಬ ಸಾಗುವಳಿದಾರನ ಕೈಯಲ್ಲಿನ ಅರ್ಥಿಕ ಹಿಡುವಳಿಯ ಕನಿಷ್ಠ ಪ್ರಮಾಣವನ್ನು ಬೆಟ್ಟು ಗದ್ದೆಯಾದರೆ ೧೬ ಎಕ್ರೆ, ಮಜಲು ಗದ್ದೆಯಾದರೆ ೮ ಎಕ್ರೆ, ಬೈಲು ಗದ್ದೆಯಾದರೆ ೪ ಎಕ್ರೆ ಎಂದು ತೀರ್ಮಾನಿಸಿದ್ದು. ಪ್ರತಿಯೊಬ್ಬ ಸಾಗುವಳಿದಾರನಿಗೂ ಈ ಮಿತಿಯಲ್ಲಿ ಭೂಮಿ ಸಿಗುವಂತೆ ಪ್ರಯತ್ನ ಮಾಡಲ್ಪಡುತ್ತದೆ. ಭೂಮಾಲಿಕರು ಸ್ವಂತ ಸಾಗುವಳಿಗಾಗಿ ಅಥವಾ ಬೇರೆ ಉದ್ದೇಶಗಳಿಗಾಗಿ ಭೂಮಿಯಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸಿದರೆ, ಆಗ ಅರ್ಥಿಕ ಹಿಡುವಳಿಯನ್ನು ಪಡೆದ ರೈತರಿಗೆ ಸಂರಕ್ಷಣೆಯೊದಗಿಸಲಾಗುತ್ತದೆ.

ಮುಂಬಯಿ ಸರಕಾರದ ತಿದ್ದುಪಡಿಯ ಆಶಯ ಮೇಲಿನಂತಿದ್ದು, ಸಾರ್ವಜನಿಕರ ಅವಗಾಹನೆಗಾಗಿ ಇಷ್ಟು ಬೇಗನೆ ಸರಕಾರ ಅದನ್ನು ಪ್ರಕಟಿಸಿರುತ್ತದೆ. ಸಮಾಜವಾದಿ ಮಾದರಿಯ ಸಮಾಜ ರಚನೆಯ ಪ್ರಯತ್ನ ಮಾಡುವ ಕಂದಾಯ ಮಂತ್ರಿಗಳ ಆಶ್ವಾಸನದಂತೆ ಈ ಕ್ರಾಂತಿಕಾರ ತಿದ್ದುಪಡಿಯನ್ನು ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುತ್ತದೆ. ಬ್ರಿಟಿಷರು ಅಗೋಸ್ತು ೧೫, ೧೯೪೭ನೇ ದಿನದಂದು ಭಾರತ ಬಿಟ್ಟು ಹೋಗುತ್ತೇವೆಂದು ಪ್ರಕಟಿಸಿದ್ದ ಹಾಗೆ, ಮುಂಬಯಿ ಸರಕಾರವು ೧೯೫೭ನೇ ಎಪ್ರೀಲಿನ ೧೫ನೇ ತಾರೀಕಿನಂದು ಒಕ್ಕಲುಗಳು ತಮ್ಮ ಸಾಗುವಳಿ ಭೂಮಿಯನ್ನು ಕ್ರಯಕ್ಕೆ ಪಡೆದುಕೊಂಡವರಂತಾಗುತ್ತಾರೆಂದು ಮುಂದಾಗಿಯೇ ಹೇಳಿರುತ್ತದೆ. ಇದರಿಂದ, ಒಕ್ಕಲುಗಳು ಈಗಿನಿಂದಲೇ ತಮ್ಮ ಭೂಮಿಗಾಗಿ ಕೊಡಬೇಕಾದ ಹಣದ ಸಂಗ್ರಹಕ್ಕೆ ಪ್ರಯತ್ನಿಸಲು ಅನುಕೂಲ; ಅದರಂತೆ, ಭೂಮಾಲಿಕರು, ಗಡಿಬಿಡಿ ಇಲ್ಲದೆ, ಸರಳ ಜೀವನದ ತತ್ವವನ್ನು ಅನುಷ್ಠಾನಕ್ಕೆ ತರುವುದೂ ಉಳಿದ ಜನರೊಡನೆ ಬೆರೆತು ನಡೆಯಲು ಕಲಿಯುವುದೂ ಸಾಧ್ಯ. ಒಟ್ಟಾರೆ ಮೇಲೆ ಮುಂಬಯಿಯಲ್ಲಿ ಭೂಮಾಲಿಕರು ಭೂಮಿಯನ್ನು ಈಗಿನ ಚಾಲಗೇಣಿ ಒಕ್ಕಲುಗಳಿಗೆ ಮೂಲಗೇಣಿಗೆ ವಹಿಸಿ ಕೊಟ್ಟಂತೆ ಆಗುತ್ತದೆ.

ಆದರೆ ನಮ್ಮ ಮದ್ರಾಸು ಸರಕಾರವು ಈ ದಿಸೆಯಲ್ಲಿ ಏನು ಮಾಡಿದೆ? ಒಕ್ಕಲುಗಳಿಗೆ ರಕ್ಷಣೆ ಕೊಡುವ, ಸಾಗುವಳಿ ಭೂಮಿಯ ಮೇಲೆ ಅವರಿಗೆ ಅಧಿಕಾರ ನೀಡುವ, ನ್ಯಾಯವಾದ ಗೇಣಿಯನ್ನು ನಿಶ್ಚಯಿಸುವ, ವ್ಯಾಪಕ ಸ್ವರೂಪದ ಶಾಸನವನ್ನು ತರಲಾಗುತ್ತದೆ ಎಂದು ಮಂ

ಸಂಗ್ರಹ

ಗಂಡ ಮತ್ತು ಹೆಂಡತಿಯರಲ್ಲಿ ಸಂಭಾಷಣೆ ನಡೆಯುತ್ತಿತ್ತು. ಹೆಂಡತಿ ಮಗನ ವರ್ತನೆಯ ಕುರಿತು ದೂರಿ ಕೊಂಡಳು—"ಈಗ ನಮ್ಮ ಕೈಯಿಂದ ಜಾರಿ ಹೋಗುತ್ತಿರುವ ಹಾಗೆ ಕಾಣುತ್ತದೆ. ಅವನು ಯಾವಾಗಲೂ ನಿನೇನೋ ಹೇಳುತ್ತಿರುತ್ತಾನೆ. ನಾವು ಹೇಳಿದುದು ಅವನ ಕಿವಿಗೆ ಬೀಳುವುದೇ ಇಲ್ಲ. ಗಳಿಗೆಗೊಂದು ರೀತಿ ನಡೆಯುತ್ತಾನೆ."

ಅದನ್ನು ಕೇಳಿದ ಗಂಡ ಸಮಾಧಾನ ಮಾಡಿದ— "ಅದಕ್ಕೆ ನೀನು ಚಿಂತಿಸಿ, ಸೊರಗ ಬೇಕಾಗಿಲ್ಲ. ಹಾಗೆ ಮಾಡುವುದು ಮುಂದೆ ದೊಡ್ಡ ರಾಜಕಾರಣಿಯಾಗುವವನ ಲಕ್ಷಣ! ಅವನ ಪಡೆಯಲ್ಲಿ ಮಂತ್ರಿಯಾಗುವ ಯೋಗವಿದೆ ಎಂಬುದರ ನಿದರ್ಶನವನ್ನು ಇನ್ನು ಬೇರೆಡೆ ಹುಡುಕುವುದು ಬೇಡ."

ತ್ರಿವರ್ಯರು ಶಾಸನ ಸಭೆಯ ವೇದಿಕೆಯ ಮೇಲಿಂದಲೂ ಸಾರ್ವಜನಿಕ ಸಭೆಗಳ ಮುಂದೆಯೂ ಭಾಷಣ ಮಾಡುವಾಗ ಪದೇಪದೇ ಹೇಳಿದ್ದುಂಟು. ಬರುತ್ತದೆ, ಬಂತು, ಬಂತೇ ಬಂತು— ಎಂದು ಜನರು ಸಮಾಧಾನ ಪಡುತ್ತಿದ್ದ ಹಾಗೆಯೇ ದೂರದ ದಿಗಂತದಲ್ಲಿ ಮೂಡಿದ ಕಾಮನ ಬಿಲ್ಲಿನ ರೀತಿಯಲ್ಲಿ ಮಸೂದೆಯ ವಾರ್ತೆ ಮಾಯವಾಗಿ ಹೋದುದೇನು ಒಂದೆರಡು ಸಲವಲ್ಲ. ಇದೇ ಎಪ್ರೀಲು ತಿಂಗಳಲ್ಲಿ ಜಿಲ್ಲೆಯಲ್ಲಿ ಸಂಚರಿಸಿದ ಕೃಷಿ ಮಂತ್ರಿ ಮಾನ್ಯ ಶ್ರೀ ಎಂ. ಭಕ್ತವತ್ಸಲಂ, ಕಂದಾಯ ಮಂತ್ರಿ ಮಾನ್ಯ ಶ್ರೀ ಮಾಣಿಕ್ಯವೇಲು ನಾಯ್ಕರರಲ್ಲದೆ, ಸೊನ್ನೆ ತಾನೆ ಬಂದು ಹೋದ ಮುಖ್ಯ ಮಂತ್ರಿ ಮಾನ್ಯ ಶ್ರೀ ಕಾಮರಾಜ ನಾಡರು ಸಹ ಇದೇ ಅಗೋಸ್ತು ತಿಂಗಳಲ್ಲಿ ಸೇರಲಿರುವ ಮದ್ರಾಸಿನ ಶಾಸನ ಸಭೆಯ ಅಧಿವೇಶನದಲ್ಲಿ ವ್ಯಾಪಕ ಸ್ವರೂಪದ ಒಕ್ಕಲು ಹಿತ ಮಸೂದೆ ಮಂಡಿಸಲ್ಪಡುವುದೆಂಬ ಖಚಿತವಾದ ಭರವಸೆಯನ್ನು ಜನರಲ್ಲಿ ಮೂಡಿಸಿದ್ದರು. ಹೀಗಿರುತ್ತಾ ಈಗ ಸರಕಾರದ ಮುಖ್ಯ ಕಾರ್ಯದರ್ಶಿಗಳು ಹೇಳುವುದೇನು? ಮಂತ್ರಿಮಂಡಳದ ಉಪ ಸಮಿತಿ ಮಾಡಿರುವ ಸಿಫಾರಸುಗಳನ್ನು ಯೋಜನಾ ಆಯೋಗದ ಪರಿಶೀಲನೆಗೆ ಒಪ್ಪಿಸಲಾಗುವುದು; ಅದರ ಅಭಿಪ್ರಾಯ ತಿಳಿದ ಬಳಿಕವೇ ಸರಕಾರ ಕೊನೆಯ ತೀರ್ಮಾನಕ್ಕೆ ಬರುವುದು— ಎಂದವರ ಅಂಬೋಣ.

ಸರಕಾರದ ಮುಖ್ಯ ಕಾರ್ಯದರ್ಶಿಗಳು ಹೇಳಿದುದಕ್ಕಿಂತ ತಾನೇನೂ ಹೆಚ್ಚು ಹೇಳುವಂತಿಲ್ಲವೆಂದು ನಾಡರರು ತಿಳಿಸಿದ್ದಾರೆ. ಹಾಗಾದರೆ, ಅಗೋಸ್ತು ತಿಂಗಳಲ್ಲಿ ಬರುವ ಮಸೂದೆ ತಿರುಕನ ಕನಸು ಎಂದೇ ನಾವು ಊಹಿಸಬೇಕಾಗು

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ
ವಿಶೇಷ ಸೌಕರ್ಯಗಳುಳ್ಳ ಸೇವಿಂಗ್ಸ್ ಬ್ಯಾಂಕಿನ
ವ್ಯವಸ್ಥೆ ಮಾಡಿರುವೆವು.

ಹೆಚ್ಚಿನ ಮಾಹಿತಿಗೆ
ನಿಮಗೆ ಸಮೀಪವಿರುವ 'ಸಿಂಡಿಕೇಟ್ ಬ್ಯಾಂಕಿನ' ಶಾಖೆಯಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ಬೇಲೂರಿನ ಮನಮೋಹಕ ದೇವಾಲಯ

ಕನ್ನಡದ ಹೊಯ್ಸಳ ರಾಜರು ಕಲ್ಲಿನಲ್ಲಿ ಮೂಡಿಸಿದ ಕಾವ್ಯ

ಭಾರತದಲ್ಲಿ ವಿಗ್ರಹ ಶಿಲ್ಪಕ್ಕೆ ಹೆಸರಾಗಿರುವ ದೇವಾಲಯಗಳಲ್ಲಿ ಬೇಲೂರಿನದು ಮೊದಲ ಪಂಕ್ತಿಯದು,—ಮೊದಲನೆಯದು ಎಂದೇ ಹೇಳಬಹುದು. ಬೇಲೂರು ನಮ್ಮ ದೇಶದ ಪೂರ್ವ ಚರಿತ್ರೆಯಲ್ಲಿ ಅತ್ಯಂತ ಸ್ಮರಣೀಯವಾದ ಪಟ್ಟಣಗಳ ಪೈಕಿ ಒಂದು. ಅದು ಕೆಲವು ಶತಮಾನ ಕಾಲ ಹೊಯ್ಸಳರ ರಾಜಧಾನಿಯಾಗಿತ್ತು. ಆಗ ಅದು ಜನ ಸಮೃದ್ಧವಾಗಿ, ವೈಭವದಿಂದ ಬಾಳಿ, ತನ್ನ ಧಾರ್ಮಿಕತೆ-ರಸಿಕತೆಗಳ ಸಮನ್ವಯದಿಂದ ಇಂದಿಗೂ ಯಶಸ್ವಿಯಾಗಿ ನಿಂತಿದೆ. ಆ ಪಟ್ಟಣಕ್ಕೆ ಸೇರಿದ ರಾಜ್ಯದಲ್ಲಿ ಜೈನರು, ಶೈವರು, ವೈಷ್ಣವರು ಮೊದಲಾದ ಅನೇಕ ಮತಗಳವರು ಸಾಮರಸ್ಯದಿಂದ ವಿಷಯಗಳಲ್ಲಿ ಅಭೇದ ಬುದ್ಧಿಯಿಂದ ಏಕೀಭವಿಸಿ ನಡೆದುಕೊಳ್ಳುತ್ತಿದ್ದರೆಂದು ತೋರುತ್ತದೆ.

ಹೊಯ್ಸಳ ರಾಜರುಗಳಲ್ಲಿ ಅತ್ಯಂತ ಪ್ರಸಿದ್ಧನಾದವನು ವಿಷ್ಣುವರ್ಧನ. ಅವನು ಅತುಲ ಪರಾಕ್ರಮಶಾಲಿ; ತನ್ನ ರಾಜ್ಯವನ್ನು ಎಲ್ಲಾ ದಿಕ್ಕುಗಳಲ್ಲಿಯೂ ವಿಸ್ತರಿಸಿದವನು; ರಣರಂಗದಲ್ಲಿ ಆತನು ಹೇಗೆ ಜಯಶಾಲಿಯಾದನೋ ರಾಜ್ಯಪಾಲನೆಯಲ್ಲಿಯೂ ಹಾಗೆ ಕೃತಸಂಕಲ್ಪನಾದವನು; ತಾನು ಸರಸ ಕಲಾಪ್ರಿಯನಾಗಿ ತನ್ನ ಜನರೂ ನಗುಮುಖದಿಂದ ನಲಿಯುವುದನ್ನು ನೋಡಬೇಕೆಂದು ಪರಿಶ್ರಮಿಸುತ್ತಿದ್ದವನು. ಎಲ್ಲಕ್ಕಿಂತ ಮಿಗಿಲಾಗಿ ಆತನು ಧರ್ಮಶ್ರದ್ಧೆಯುಳ್ಳವನು; ಆ ಧರ್ಮಕ್ಕೆ ಉದಾರತೆಯನ್ನು ಮುಖ್ಯ ಲಕ್ಷಣವಾಗಿರಿಸಿಕೊಂಡಿದ್ದವನು. ಜೈನ, ಶೈವ, ವೈಷ್ಣವ—ಈ ಮೂರು ಮತಗಳಲ್ಲಿಯೂ ಆತನಿಗೆ ಸಹಾನುಭೂತಿ ಸಮನಾಗಿತ್ತೆಂದು ತೋರುತ್ತದೆ. ಆತನ ರಾಣಿ ವಾಸದಲ್ಲಿಯೂ ಮಂತ್ರಿ ಸೇನಾಪತಿ ವರ್ಗಗಳಲ್ಲಿಯೂ ಮೂರು ಮತಗಳಿಂದಲೂ ಬಂದವರಿದ್ದರು; ಅವರು ಮೂರು ಮತಗಳ ದೇವಾಲಯಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದರು.

ವಿಷ್ಣುವರ್ಧನನು ಕಟ್ಟಿಸಿದ ದೇವಾಲಯಗಳಲ್ಲಿ ಐದು ನಾರಾಯಣ ದೇವಾಲಯಗಳೆಂದು ಲೋಕದ ಹೇಳಿಕೆ. (೧) ತಿರುನಾರಾಯಣ ಅಥವಾ ಚೆಲುವ ನಾರಾಯಣ, (೨) ಲಕ್ಷ್ಮೀನಾರಾಯಣ, (೩) ವೀರನಾರಾಯಣ, (೪) ಕೀರ್ತಿ ನಾರಾಯಣ, (೫) ವಿಜಯ ನಾರಾಯಣ—ಇವು ಪಂಚನಾರಾಯಣ ಮೂರ್ತಿಗಳು. ಇವುಗಳಲ್ಲಿ ಐದನೆಯದು ಬೇಲೂರಿನ ದೇವರ ಹೆಸರು. ಅದೇ ದೇವರಿಗೆ ಸೌಮ್ಯನಾರಾಯಣ ಸ್ವಾಮಿಯೆಂದೂ ಚೆನ್ನಕೇಶವನೆಂದೂ ಹೆಸರುಗಳು ರೂಢಿಯಾಗಿವೆ. ಉಳಿದ ನಾಲ್ಕು ನಾರಾಯಣ ದೇವಾಲಯಗಳು ತಲಕಾಡು, ಮೇಲುಕೋಟೆ, ತೊಣ್ಣೂರು (ತೊಡನೂರು), ಗುಂಡ್ಲು ಪೇಟೆ (ಅಥವಾ ಗದಗು)—ಈ ಸ್ಥಳಗಳವೆಂದು ಜನದ ನಂಬಿಕೆ.

ಬೇಲೂರಿನಲ್ಲಿ ಶ್ರೀ ವಿಜಯನಾರಾಯಣ ಸ್ವಾಮಿಯ ಪ್ರತಿಷ್ಠೆಯಾದದ್ದು ಕ್ರಿಸ್ತ ವರ್ಷ ೧೧೧೭ರಲ್ಲಿ. ಅದು ವಿಷ್ಣುವರ್ಧನ ರಾಜನು ಜೈನಮತದಿಂದ ಶ್ರೀ ವೈಷ್ಣವ ಮತಕ್ಕೆ ಬಂದದ್ದರ ಜ್ಞಾಪಕಾರ್ಥವಾದದ್ದೆಂದು ಕೆಲವರು ಹೇಳುತ್ತಾರೆ. ಅದು ಆತನ ದಿಗ್ವಿಜಯದ ಮಂಗಳ ಶಾಸನವೆಂದು ಕೆಲವರು ಹೇಳುತ್ತಾರೆ. ಆ ದೇವಾಲಯದ ನಿರ್ಮಾಣ ಪೂಜನಾದಿ ವ್ಯವಸ್ಥೆಗಳಲ್ಲಿ ಶ್ರೀ ಮದ್ರಾಮಾನುಜಾಚಾರ್ಯರ ಪ್ರಭಾವವಿದ್ದಿರಬೇಕೆನ್ನಲು ಸಂದೇಹವಿಲ್ಲ.

ಬೇಲೂರಿನ ದೇವಾಲಯದ ಪ್ರಾಕಾರದಲ್ಲಿಯೇ—ವೀರನಾರಾಯಣ, ಲಕ್ಷ್ಮೀನಾರಾಯಣ ದೇವರುಗಳ ಗುಡಿಗಳಿವೆ. ಬಹುಶಃ ಅವುಗಳ ಅಕ್ಕ ಪಕ್ಕಗಳಲ್ಲಿಯೇ ಚೆಲ್ವನಾರಾಯಣ, ಕೀರ್ತಿನಾರಾಯಣ ದೇವರುಗಳ ಗುಡಿಗಳೂ ಇದ್ದು, ಪಂಚನಾರಾಯಣ ಪ್ರತಿಷ್ಠೆಯು ಬೇಲೂರಿನಲ್ಲಿಯೇ ಆಗಿದ್ದಿರಬಹುದೋ ಏನೋ ಎಂಬ ಊಹೆಗೆ ಅವಕಾಶ ಕಾಣುತ್ತದೆ.

ಬೇಲೂರಿನ ದೇವಾಲಯದ ಪ್ರಾಕಾರದ ಒಳ ವಿಸ್ತೀರ್ಣ ಪೂರ್ವ—ಪಶ್ಚಿಮಕ್ಕೆ ಸುಮಾರು ೪೦೦ ಅಡಿ, ಉತ್ತರ—ದಕ್ಷಿಣಕ್ಕೆ ಸುಮಾರು ೪೫೦ ಅಡಿ. ಗುಡಿ ಪೂರ್ವಾಭಿಮುಖವಾಗಿದೆ. ಪ್ರಾಕಾರದ್ದು ಮಹಾದ್ವಾರದ ನೇರಣ ಗೋಪುರ ದೇವಸ್ಥಾನದ ಕೀರ್ತಿಗೆ ತಕ್ಕಂತೆ ಕಣ್ಣನ್ನು ತೃಪ್ತಿಗೊಳಿಸುತ್ತದೆ. ಆವರಣದ ಒಳಗಡೆ ಈಶಾನ್ಯ ದಿಕ್ಕಿನಲ್ಲಿ ಸೊಗಸಾಗಿ ಮೆಟ್ಟಲು ಕಟ್ಟಿದ ಪುಷ್ಕರಿಣಿಯೂ ಮಿಕ್ಕ ಮೂಲೆಗಳಲ್ಲಿ ಯಜ್ಞಶಾಲೆ, ವಾಹನಶಾಲೆ ಮೊದಲಾದ ಮಂಟಪಗಳೂ ಇವೆ. ಚೆನ್ನಕೇಶವ ದೇವಾಲಯದ ಉತ್ತರ ಪಾರ್ಶ್ವದಲ್ಲಿ ಸೌಮ್ಯನಾಯಕಿ ಅಮ್ಮನವರ ಗುಡಿಯೂ ಮಹಾಲಕ್ಷ್ಮಿಯ ಗುಡಿಯೂ ಇವೆ. ದಕ್ಷಿಣ ಭಾಗದಲ್ಲಿ ಕಪ್ಪೆ ಚೆನ್ನಿಗರಾಯ ಸ್ವಾಮಿಯ ಗುಡಿ ಇದೆ. ಹೀಗೆ ಭಾವೋನ್ನತಿಗೆ ಅನುಕೂಲವಾದ ಸನ್ನಿವೇಶದ ನಡುವೆ ಇರತಕ್ಕದ್ದು ಈ ಹೊತ್ತು ನಾವು ಮನಸಾ ನೋಡಬೇಕೆಂದಿರುವ ಪ್ರಖ್ಯಾತ ದೇವಾಲಯ.

ಈ ದೇವಸ್ಥಾನದ ಮುಖ್ಯ ವೈಶಿಷ್ಟ್ಯ ಅದರ ವಿಗ್ರಹ ಶಿಲ್ಪವೆಂದು ಮೊದಲೇ ಸೂಚಿಸಿದ್ದಾಗಿದೆ. ಶಿಲ್ಪದಲ್ಲಿ ವಾಸ್ತು ಶಿಲ್ಪ, ವಿಗ್ರಹ ಶಿಲ್ಪ, ಯಂತ್ರ ಶಿಲ್ಪ ಮೊದಲಾದ ಅನೇಕ ವಿಭಾಗಗಳುಂಟಷ್ಟೆ? ಅವುಗಳಲ್ಲಿ ವಾಸಗೃಹದ ನಿರ್ಮಾಣಕ್ಕೆ ಸಂಬಂಧಪಟ್ಟದ್ದು ವಾಸ್ತು ಶಿಲ್ಪ. ಇದರಲ್ಲಿ ಕಲಾಂಶಕ್ಕಿಂತ ಉಪಯೋಗಾಂಶ ಹೆಚ್ಚಿನದು. ಕಲೆಯೆಂದರೆ ಸೌಂದರ್ಯ ಕಲ್ಪನೆ. ಇದನ್ನು ಇಂಗ್ಲೀಷಿನಲ್ಲಿ "ಆರ್ಟ್" ಎಂದು ಕರೆಯುತ್ತಾರೆ. ಅದರ ಮುಖ್ಯ ಪರಿಣಾಮ ಮನೋ ಜೀವನದಲ್ಲಿ ಉಪಯೋಗಾಂಶವೆಂಬುದಾದರೋ ಇಂಗ್ಲೀಷಿನ "ಯುಟಿಲಿಟಿ". ಅದು ನಮ್ಮ ಬಹಿರಂಗ ಜೀವನದ ಪ್ರತ್ಯಕ್ಷ ಪ್ರಯೋಜನಕ್ಕೆ ಸಂಬಂಧಪಟ್ಟದ್ದು. ಇಂಥಾದ್ದು ವಾಸ್ತು ಶಿಲ್ಪ. ಅದು ಒಂದು ಪರಿಕರ್ಮ ಅಥವಾ ಇಂಡಸ್ಟ್ರಿ. ವಿಗ್ರಹ ಶಿಲ್ಪವಾದರೋ 'ಆರ್ಟ್' ಅಥವಾ ಕಲೆ. ವಾಸ್ತು ಶಿಲ್ಪದ ದೃಷ್ಟಿಯಿಂದ ಬೇಲೂರಿನ ದೇವಾಲಯ ಉಪೇಕ್ಷಿಗರ್ಹವಾದದ್ದೇನೂ ಅಲ್ಲವಾದರೂ ಅದರ ಶ್ರೇಷ್ಠತೆಯಿರುವುದು ಅದರ ಕಲಾಭಾಗದಲ್ಲಿ—ವಿಗ್ರಹ ಶಿಲ್ಪದ ಸೌಂದರ್ಯದಲ್ಲಿ.

ಗುಡಿ ಸುಮಾರು ೧೮೦ ಅಡಿ ಉದ್ದವೂ ೧೬೦ ಅಡಿ ಅಗಲವೂ ಮೂರು ಅಡಿ ಎತ್ತರವೂ ಇರುವ ಅಸ್ತ್ರಿಭಾರ ಪೀಠದ ಮೇಲೆ ನಿಂತಿದೆ. ಅದರ ಒಟ್ಟಿನ ಆಯಕಟ್ಟು, ಅದರ ಮಂಟಪಗಳ ವಿಸ್ತಾರ, ಕಂಬಗಳ ಸಾಲು, ಮಾಳಿಗೆಯ ಎತ್ತರ, ಜಗಲಿಗಳ ಆಚ್ಚುಕಟ್ಟು, ಈ ನಾನಾ ಹೊರಗಣ ರೂಪರಚನೆಗಳು ಉಚಿತ ಪ್ರಮಾಣಗಳಿಂದ ಕೂಡಿ ಅಲ್ಲಿಗೆ ಬರುವ ಭಕ್ತಸ್ತೋಮದ ಸುಖವಸತಿಗೂ ಅಂಗಾಂಗ ಸಂಚಲನೆಗೂ ರಮ್ಯವಾಗಿವೆ. ಈ ಕಟ್ಟಡದ ಸೊಬಗು ಇಷ್ಟಿದ್ದರೂ ಅದರ ವಿಶೇಷವಾದ ಆಕರ್ಷಣೆ ಅದರ ಪ್ರತಿಮೆಗಳದು. ನಮ್ಮ ದೇಶದಲ್ಲಿ ವಾಸ್ತು ಶಿಲ್ಪದ ಮಹಿಮೆಯಿಂದ ಪ್ರಸಿದ್ಧವಾದ ದೇವಾಲಯಗಳು ಹತ್ತಾರಿವೆ. ರಾಮೇಶ್ವರ, ಶ್ರೀರಂಗ, ಮಧುರೆ, ಹಂಪೆ—ಇಂಥ ಕ್ಷೇತ್ರಗಳ ದೇವಾಲಯಗಳು ಕಟ್ಟಡದ ವಿಸ್ತಾರದಲ್ಲಿಯೂ ಉನ್ನತಿಯಲ್ಲಿಯೂ ಗಾತ್ರದಲ್ಲಿಯೂ ಅದ್ಭುತಗಳಾಗಿವೆ. ಕಟ್ಟಡದ ನಮೂನೆಯನ್ನೂ ಅಡಕವನ್ನೂ ನೋಡುವುದಾದರೆ ಸೋಮನಾಥಪುರದ ದೇವಲಾಯವೆಂಥವು ಬೇಲೂರಿನದಕ್ಕೆ ಕಡಿಮೆಯವೇನೂ ಅಲ್ಲ. ವಾಸ್ತು ಶಿಲ್ಪದ ಚಮತ್ಕಾರ ಕೆಲವು ಕಡೆ ಇನ್ನೂ ಹೆಚ್ಚಾಗಿದೆ, ಬೇಲೂರಿನ ಪ್ರಸಿದ್ಧಿ ಈ ಬಗೆಯ ವಾಸ್ತು ಶಿಲ್ಪದ ಚಮತ್ಕೃತಿಯ ಕಾರಣದಿಂದ ಬಂದದ್ದಲ್ಲ. ಅದು ಅಲ್ಲಿಯ ವಿಗ್ರಹ ಶಿಲ್ಪದ ಹೃದಯೋದ್ದೀಪನ ಶಕ್ತಿಯಿಂದ ಬಂದದ್ದು. ಅದು ಕಲ್ಲಿನಲ್ಲಾದ ಕಾವ್ಯ. ಈ ಕಾರಣದಿಂದ ಅದರ ಕೀರ್ತಿ.

ಆ ಚಿತ್ರ ಸೌಂದರ್ಯವನ್ನು ಬರಿಯ ಮಾತುಗಳ ಮೂಲಕ ಕಾಣಿಸಬಹುದೆಂದಾಗಲಿ ಕಂಡುಕೊಳ್ಳಬಹುದೆಂದಾಗಲಿ ಯಾರಾದರೂ ಭಾವಿಸಿದ್ದರೆ ಅವರು—ಭ್ರಾಂತರು. ಪ್ರತ್ಯಕ್ಷ ದರ್ಶನದಿಂದ ಸಾಧ್ಯವಾದ ಅನುಭವವು ವಾಙ್ಮಯ ವರ್ಣನೆಗೂ ಸಾಧ್ಯವಾಗುವ ಹಾಗಿದ್ದರೆ ಆ ದೃಶ್ಯದಲ್ಲಿ ಅತಿಶಯದ ಸಂಗತಿಯೇನೂ ಇರದೆಂದೇ ಅರ್ಥ. ಯಥಾವತ್ತಾದ (ಫೋಟೋಗ್ರಾಫ್) ಛಾಯಾ ಬಿಂಬದಿಂದ ಸಹ ದೊರೆಯತಕ್ಕದ್ದಲ್ಲ ಆ ಸೌಂದರ್ಯಾನುಭವ. ಹೀಗಿದ್ದರೂ ನನ್ನ ಉದ್ದೇಶ ನೆರವೇರಬೇಕಾದರೆ ವರ್ಣನೆಯ ಪ್ರಯತ್ನ ಒಂದಷ್ಟು ನನ್ನಿಂದ ಆಗಬೇಕಾಗಿದೆ. ಮಾದರಿಗಾಗಿ ಗುಡಿಯ ಒಂದು ಪಕ್ಕದ ಗೋಡೆಯನ್ನು ನೋಡೋಣ—ಅದರಲ್ಲಿ ಶಿಲ್ಪ ಚಿತ್ರವಿಲ್ಲದ ಜಾಗ ಒಂದಂಗುಲವೂ ಇಲ್ಲ. ಬುಡದಿಂದ ತುದಿಯ ವರೆಗೂ ಕೆತ್ತನೆ ಕೊರೆತಗಳು ಎಡೆಬಿಡದೆ ತುಂಬಿಕೊಂಡಿವೆ.

ಈ ಶಿಲ್ಪ ಕೃತಿಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. (೧) ಚಿತ್ರಾಲಂಕಾರ ಭಾಗ, (೨) ದೈವಪ್ರತಿಮಾ ಭಾಗ, (೩) ಹೃದಯ ವಿಲಾಸ ಭಾಗ. ಈ ಮೂರು ಭಾಗಗಳು ಮೂರು ಅಂತಸ್ತಾಗಿವೆ. ಕೆಳಗಡೆಯದು ಮುಖ್ಯವಾಗಿ ಚಿತ್ರಾಲಂಕಾರ. ಬಗೆಬಗೆಯ ಲತೆಗಳು; ಎಲೆ, ಹೂವುಗಳು; ಹಂಸ, ಹಕ್ಕಿಗಳು; ಹಾವು, ಹುಲ್ಲೆಗಳು; ಆನೆ, ಕುದುರೆಗಳ

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited

Managing Director: T. R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ

ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಜಾಹೀರಾತು - ಜನರಿಗೆ ತಿಳಿಸಿ ಹೇಳುವ ಸಾಧನ

ಔದ್ಯಮಿಕ ಸಂಸ್ಥೆಗಳ ಪಾಲಿಗೆ ಅದೊಂದು ಅನಾವಶ್ಯಕ ಪೆಬ್ಬವಲ್ಲ

ಇದೇ ೯ನೇ ದಿನಾಂಕ ಮುಂಬಯಿಯಲ್ಲಿ ಭಾರತದ ಜಾಹೀರಾತು ಏಜಂಟರುಗಳ ಸಂಘಗಳವರೆಲ್ಲ ಒಂದು ಅಧಿವೇಶನದಲ್ಲಿ ಸೇರಿ, ತಮ್ಮ ಸಮಸ್ಯೆಗಳನ್ನು ಚರ್ಚಿಸಿದರೆಂದು ತಿಳಿದು ಬರುತ್ತದೆ. ತಮ್ಮ ನಡವಳಿಕೆಯ ನಿಯಮಾವಳಿಯನ್ನೂ ಅವರು ತಯಾರಿಸಿಕೊಂಡರೆಂದು ವರದಿಗಳು ಹೇಳುತ್ತವೆ. ಸಾರ್ವಜನಿಕ ಸೇವೆಯ ರೂಪದ ಪ್ರಕಟಣೆಗಳನ್ನು ವ್ಯಾಪಾರ ಸಂಬಂಧದ ಜಾಹೀರಾತುಗಳ ಕಕ್ಷೆಯಲ್ಲೆ ತರಬೇಕೊ ಎಂಬುದನ್ನು ಸಹ ವಿಚಾರಿಸಿದರೆಂದೂ ಗೊತ್ತಾಗುತ್ತದೆ.

ಪ್ರತಿಯೊಂದು ಉದ್ಯೋಗ ಅಥವಾ ವ್ಯವಸಾಯ ಕೈಗೊಂಡವರೂ ಸಂಘಟನೆ ಹೊಂದಿ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುವ ಪ್ರವೃತ್ತಿ ಇಂದಿಗೆ ತೀರಾ ಸಾಮಾನ್ಯವೆನಿಸಿದೆ. ಈ ದೃಷ್ಟಿಯಿಂದ ಜಾಹೀರಾತು ಏಜಂಟರುಗಳ ಸಂಘದ ಸಭೆಗೆ ಹೆಚ್ಚಿನ ಮಹತ್ವ ಕೊಡಬೇಕಾಗಿಲ್ಲ. ಆದರೆ, ಜಾಹೀರಾತು ಸಂಘಗಳು ಯಾವ ಕೆಲಸವನ್ನು ನಿರ್ವಹಿಸುತ್ತವೋ ಅದು ಇಪ್ಪತ್ತನೆಯ ಶತಮಾನದಲ್ಲಿಯಷ್ಟೇ ಹುಟ್ಟಿಕೊಂಡುದಲ್ಲ, ಕ್ರಿಸ್ತಪೂರ್ವದ ನಲ್ವತ್ತನೆಯ ಶತಮಾನದಷ್ಟು ಹಿಂದೆಯೇ ಮನುಷ್ಯನಲ್ಲಿ ಜಾಹೀರಾತಿನ ಮೋಹವಿದ್ದಿತು ಎಂಬುದೇ ಮನನೀಯವಾದ ವಿಚಾರ.

ಬಾರಕೂರಿಗೊಬ್ಬ ರಾಜ, ಎರ್ಮಾಳಿಗೊಬ್ಬ ರಾಜರಿದ್ದ, ಒಂದು ಮೈಲು ವಿಸ್ತೀರ್ಣದೊಳಗೆ ನಾಲ್ಕು ಗುತ್ತುಗಳವರೂ ಬಲ್ಲಾಳರೂ ಇದ್ದ ಆ ಹಿಂದಿನ ಕಾಲದಲ್ಲಿ ಜಾಹೀರುನಾಮೆಯು ಈಗಿನ ಸ್ವರೂಪವನ್ನು ಹೊಂದಿರಲಿಲ್ಲ ಎನ್ನುವುದು ಸುಳ್ಳಲ್ಲ. ಸರಕಾರದ ಪ್ರಕಟಣೆಗಳನ್ನು ಬಪಳ ಗಟ್ಟಿಯಾಗಿ ಕೂಗಬಲ್ಲವನೊಬ್ಬ ಮುಖ್ಯ ಬೀದಿಗಳಲ್ಲಿ ಜೊಬ್ಬೆ ಹಾಕುತ್ತಾ ಜನರಿಗೆ ವಿದಿತಪಡಿಸುತ್ತಿದ್ದ; ಅವನು ಹುಚ್ಚನಲ್ಲ, ಉದ್ದೇಶಪೂರ್ವಕ ಹಾಗೆ ಕೂಗುತ್ತಿದ್ದಾನೆಂಬುದನ್ನು ತಿಳಿಸುವುದಕ್ಕೆಂಬಂತೆ, ನಗಾರಿ, ತಮಟೆ ಅಥವಾ ತಾಲಗದ ಮೇಳನ್ನು ಅವನೊಡನೆ ಕಳಿಸುತ್ತಿದ್ದರು. ಈ ಮೇಳವು ಜನರನ್ನು ಬರಮಾಡಿಕೊಳ್ಳುವುದಕ್ಕೂ ನೆರವಾಗುತ್ತಿದ್ದಿತು.

ಜಾಹೀರುನಾಮೆಯ ಈ ಪ್ರಾಚೀನ ಪದ್ಧತಿ ಈಗ ನಿಂತು ಹೋಗಿರುವಂತೇನು ಕಾಣಿಸುವುದಿಲ್ಲ. ಆದರೆ, ಓದು ಬರಹಗಳು ಪ್ರಚಾರಕ್ಕೆ ಬಂದ ಹಾಗೆ ಪ್ರಚಾರದ ಉದ್ದೇಶವನ್ನು ನೆರವೇರಿಸಬಲ್ಲ ಬೇರೆ ಸಾಧನಗಳನ್ನೂ ಕಂಡುಕೊಳ್ಳಲಾಯಿತು. ಉದಾಹರಣೆಗೆ, ವ್ಯಾಪಾರಿ ವರ್ಗಗಳವರು ತಮ್ಮ ಸರಕುಗಳಲ್ಲಿ ತಮ್ಮ ಸಂಸ್ಥೆಯ ಹೆಸರನ್ನು ಬರೆಯ ಹತ್ತಿದರು; "ಮೇಡ್ ಇನ್ ಇಂಗ್ಲೆಂಡ್" ಎಂದು ಪೆನ್ನುಗಳಲ್ಲಿರುವುದಿಲ್ಲವೆ, ಹಾಗೆ. ಮೆಸೊಪೊಟೇಮಿಯ ಎಂಬ ಪ್ರಾಚೀನ ನಾಗರಿಕ ಪ್ರದೇಶದಲ್ಲಿ ಕ್ರಿಸ್ತಪೂರ್ವ ೪೦೦೦ ವರ್ಷಗಳಲ್ಲಿ ಇದೇ ವಿಧಾನ ಬಳಕೆಯಲ್ಲಿದ್ದಿತು. ಮಣ್ಣಿನ ಪಾತ್ರೆಗಳಲ್ಲಿ ಅದನ್ನು ತಯಾರಿಸಿದಾತನ ಹೆಸರು, ಔಷಧದ ಸೀಸೆಯಲ್ಲಿ ಅದನ್ನು ಸೂಚಿಸಿದ ವೈದ್ಯರ ಹೆಸರುಗಳನ್ನು ಬರೆಯುತ್ತಿದ್ದರು.

ರೋಮನರ ಕಾಲದಲ್ಲಿ ಮರದ ಹಲಗೆಗಳ ಮೇಲೆ ಬರೆಯುವ ಮೂಲಕ ಅಧಿಗಾ ಕಂಚಿನಲ್ಲಿ ಕೆತ್ತಿಸುವ ಮೂಲಕ ಶಾಶ್ವತ ಮಹತ್ವದ ಪ್ರಕಟಣೆಗಳನ್ನು ಪ್ರಚುರಪಡಿಸುವ ಪದ್ಧತಿ ಪ್ರಾರಂಭವಾಯಿತು. ಭಾರತದಲ್ಲಿ ಅಶೋಕನು ಶಿಲಾಲೇಖನಗಳ ಮೂಲಕ ಪ್ರಜೆಗಳಿಗೆ ತನ್ನ ಸಂದೇಶವನ್ನು ಮುಟ್ಟಿಸುತ್ತಿದ್ದನು. ಜನರು ಹೇಗೆ ಬಾಳಬೇಕು ಎಂಬ ಕುರಿತು ಈ ಶಿಲಾಲೇಖನಗಳು ಉಜ್ವಲ ಪ್ರಕಾಶವನ್ನು ಚೆಲ್ಲುತ್ತವೆ. ರೋಮನರ ಕಾಲದಲ್ಲಿ ಬಣ್ಣದಿಂದ ಬರೆಯುವ ಪದ್ಧತಿಯೂ ಉಚ್ಛ್ರಾಯಾವಸ್ಥೆಯಲ್ಲಿದ್ದಂತೆ ಕಂಡು ಬರುತ್ತದೆ. ರಾಜಧಾನಿಯಾದ ರೋಮಿನಸ್ಟೇ ಪ್ರಖ್ಯಾತಿಪಟ್ಟ ಪೊಂಪೀಯಲ್ಲಿನ ಗೋಡೆಯ ಮೇಲೆ ಅಂಟಿಸಿದ ವರ್ಣಚಿತ್ರಗಳು ಉತ್ಖನನ ಕಾಲದಲ್ಲಿ ಸಿಕ್ಕಿವೆ.

ಪೊಂಪೀಯಲ್ಲಿ ಎರಡು ಮಾಳಿಗೆಯ ಮನೆಗಳೇ ಹೆಚ್ಚಾಗಿದ್ದು, ಅವುಗಳ ಕೆಳ ಅಂತಸ್ತಿನಲ್ಲಿ ಬೇರೆ ಬೇರೆ ಉದ್ಯೋಗದ ಜನರು ಇರುತ್ತಿದ್ದರು. ಇವರು ತಮ್ಮ ವ್ಯವಸಾಯವನ್ನು ಸಾರಿ ಹೇಳುವ ಚಿತ್ರ ಅಥವಾ ಲೇಖನವನ್ನೊಳಗೊಂಡ ನಲಕವನ್ನು ಅಂಗಡಿಯ ಮುಂದಿಡುತ್ತಿದ್ದರು, ಅಥವಾ ಗೋಡೆಯ ಮೇಲೆ ಅವನ್ನು ಮೂಡಿಸುತ್ತಿದ್ದರು ಉದಾಹರಣೆಗೆ ಆಡಿನ ಚಿತ್ರವು ಹಾಲು ಮಾರಾಟ ಮಾಡುವವನು ಅಲ್ಲಿರುವವನೆಂದು ಹೇಳುತ್ತಿದ್ದಿತು; "ನಿಮ್ಮ ಸ್ವಪ್ನ ಫಲಗಳನ್ನು ನನ್ನಲ್ಲಿವಿಚಾರಿಸಿರಿ" ಎಂಬ ಫಲಕಜ್ಯೋತಿಷಿಯ ಅಸ್ತಿತ್ವವನ್ನು ಸೂಚಿಸುತ್ತಿದ್ದಿತು.

ಬಾಡಿಗೆಗೆ ಸಿಗುತ್ತದೆ; ಮಾರಲಿಕ್ಕೆ ಇಚ್ಛಿಸುತ್ತೇವೆ; ಉತ್ತಮ ಗೃಹ ಸೌಖ್ಯವನ್ನು ನೀಡಬಲ್ಲ ವರಾರ ಎಂದು ಮುಂತಾದ ಸಾಮಾನ್ಯ ಪ್ರಕಟಣೆಗಳನ್ನೂ ಆಗ ಉಪಯೋಗಿಸುತ್ತಿದ್ದರು. ಕಾರ್ಯಕ್ರಮಗಳ ವಿವರವನ್ನು ಒಂದು ಹಲಗೆಯ ಮೇಲೆ ಬರೆದಿಡುತ್ತಿದ್ದರು; "ಸೂರ್ಯನ ಬಿಸಿಲಿನ ತಾಪವಾಗದಂತೆ ಚಪ್ಪರದ ವ್ಯವಸ್ಥೆ ಮಾಡಿರುತ್ತೇವೆ" ಎಂದು ಮುಂತಾದ ವಿವರಗಳನ್ನೂ ಅದರಲ್ಲಿ ಸೇರಿಸುತ್ತಿದ್ದರು. ಜುನಾವಣೆಯ ಕಲಹದ ವರ್ಣನೆ ಮಾಡುವ ಪ್ರಾಚೀನ ಭಿತ್ತಿ ಚಿತ್ರಗಳೂ ಬರೆಗಳೂ ಪೊಂಪೀಯಲ್ಲಿ ನೋಡಸಿಗುತ್ತವೆ. "—ಇವರನ್ನೆ ಚುನಾವಣೆಯಲ್ಲಿ ಆರಿಸಲು ಮರೆಯ ಬೇಡಿ" ಎನ್ನುತ್ತಾ ಆ ಹುರಿಯಾಳನ್ನು ಚೆಂಬಲಿಸಿದ ಪುರಪ್ರಮುಖರ ಹೆಸರುಗಳ ಪಟ್ಟಿಯನ್ನೊಳಗೊಂಡ ಪ್ರಕಟಣೆಗಳು ಹೆಚ್ಚಿನ ಮನೆಯ ಗೋಡೆಗಳಲ್ಲಿ ಬಣ್ಣದಿಂದ ಬರೆಯಲಾಗಿವೆ. ನಾವಾದರೂ ಇದರ ಅನುಕರಣವನ್ನೆ ಮಾಡುತ್ತಿದ್ದೇವೆ; ಜೊತೆಗೆ ಬೇರೆ ಕೇವ ಆಧುನಿಕ ಪದ್ಧತಿಗಳನ್ನೂ ಬಳಸುತ್ತಿದ್ದೇವೆ.

ಪ್ರಾಚೀನರಿಗಿಂತ ಭಿನ್ನವಾದ ಪದ್ಧತಿಗಳಲ್ಲಿ ಮುದ್ರಣ ಯಂತ್ರದ ಉಪಯೋಗ ಪಡೆದು ಕೊಳ್ಳುವ ನಮ್ಮ ಪ್ರಯತ್ನ ಉಲ್ಲೇಖನೀಯ. ೧೪೫೦ನೇ ಇಸವಿಯಲ್ಲಿ ಗುಟೆನ್‌ಬರ್ಗ್ ಮಹಾಶಯನು ಮುದ್ರ

(ಮೂನೇ ಪುಟ ನೋಡಿರಿ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 78/1955.

1, ಕೂಸು ಹೆಂಗ್ಸು. 2. ಬೂಬ ಪೂಜಾರಿ.3. ಗಿರಿಯಪ್ಪ ಪೂಜಾರಿ.4. ರಂಗಪ್ಪ ಪೂಜಾರಿ. 5. ಕಮಲ — 6. ಬಾಬು. 7. ಬೇದಿ. — ಮೈನರರು ಯಿವರ ಕ್ಷೇಮ ಚಿಂತಕಳು ತಾಯಿ 1ನೇ ಅರ್ಜಿದಾರಳು.

ಅರ್ಜಿದಾರರು.

ಮತ್ತು

1, ಸಂಚು ಯಾನೆ ಪರಮೇಶ್ರಿ, ಕುಂಞಾ ಹೆಂಗ್ಸಿನ ಮಗಳು. 2. ಕೂಕ್ರ ಪೂಜಾರಿ. 3. ಮೂಸಿ ಕೋಟಿಯಾನ್ 1ನೇ ಎದ್ರಿಯ ಮಕ್ಕಳು.

1—3ನೇ ಯವರು ಮಂಗಳೂರು ತಾಲ್ಲೂಕು ಚಿತ್ರಾಪು ಗ್ರಾಮದ ಚಿತ್ರ ಕಾಡು ಪೈದಾಸು ಎಂಬಲ್ಲಿಯೂ 3ನೇಯವನು C/o Ciba Pharma. Ltd Esplanade House Wandby Rood, Po. Box 1123 Bombay No1 ಎಂಬಲ್ಲಿಯೂ ಯಿರುತ್ತಾರೆ.— ಎದ್ರಿರು.

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವದೇನಂದ್ರೆ, 1ನೇ ಅರ್ಜಿದಾರಳ ಗಂಡ ದ ೨೧ಂದ 7ನೇ ಪರೇಗಿನ ಅರ್ಜಿದಾರರ ತಂದೆ ಹಾಲಿಸ್ಟುತ ಪಟ್ಟ ಪದ್ಮಪೂಜಾರಿಗೆ ಅರ್ಜಿಯಲ್ಲಿ ಕಾನ್ಸದ ಕೆನರಾಬೇಂಕ್ ಲಿಮಿಟೆಡ್ ಮೂಲ್ಕಿ ಬ್ರೇಂಚಿನ S. B. Account No. 1718 ರ ಬಾಬ್ತು ಬರತಕ್ಕ ರೂ. 612_0-0 ನ್ನು ವಸೂಲು ಪಡಿಯುವರೆ ತಮಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 2—7—1955ಕ್ಕೆ ಯಿಟ್ಟಿದೆ. ಆ ಕುರಿತು ಅಕ್ಷೇಪಯಿದ್ದವರು ಮೆಲ್ಕಂಡ ಕೋರ್ಟು ಮುಂದೆ ಸದ್ರಿ ತಾರೀಖು ಹಗಲು ಗಂಟೆ 10ಕ್ಕೆ ಹಾಜ್ರಾಗಿ ಉದ್ದಾರಣೆ ಕೊಡತಕ್ಕದ್ದು ಎಂತ ಕೋರ್ಟು ಸುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

K. V. Kamath.
Advocate For Petitioner

Karkala. 14—6—55

ಸೌದಿ ಅರೇಬಿಯದ ಔದಾರ್ಯ

ಅರೇಬಿಯದೊಡನೆ ಭಾರತಕ್ಕೆ ಬಪಳ ಪ್ರಾಚೀನ ಕಾಲದಿಂದಲೂ ವ್ಯಾಪಾರ ವಿಷಯಗಳ ಮುಟ್ಟಿಗೆ ಸಂಬಂಧವಿದ್ದಿತು; ರಾಜಕೀಯ ಸಂಬಂಧ ಕೂಡ ಮುಸ್ಲಿಂ ಆಡಳಿತದ ಕಾಲದಲ್ಲಿ ಬೆಳೆದಿದ್ದಿತು.

ಈಚೆಗೆ ಸೌದಿ ಅರೇಬಿಯದ ರಾಜಕುಮಾರರು ಹೊಸದಿಲ್ಲಿಗೆ ಆಗಮಿಸಿ, ನೆಹರೂಗಳೊಡನೆ ಸಮಾಲೋಚನೆ ನಡೆಸುವ ಮೂಲಕ ಈ ಬಾಂಧವ್ಯವನ್ನು ಇನ್ನಷ್ಟು ಬಿಗಿಯಾಗಿಸಿದರು. ಅಲ್ಲದೆ, ರಾಜಕುಮಾರರು (ಇವರು ಸೌದಿ ಅರೇಬಿಯದ ಪ್ರಧಾನ ಮಂತ್ರಿ ಹಾಗು ನಿಜೇರಾಂಗ ಸಚಿವರೂ ಹಾಗೂ ಭಾರತದ ಪ್ರಧಾನ ಮಂತ್ರಿಗಳ ನಿಗೆ ಒಂದೊಂದರಲ್ಲಿ ಲಕ್ಷ ರೂಪಾಯಿಗಳ ಉದಾರ ಸಹಾಯವನ್ನೂ ಮೊನ್ನೆ ಘೋಷಿಸಿದರು.

ಚಿತ್ರದಲ್ಲಿ ನೆಹರೂಗಳೊಂದಿಗೆ ತನ್ನ ದೇಶಕ್ಕೆ ವಿಶಿಷ್ಟವಾದ ಉಡುಪನ್ನು ಧರಿಸಿದ್ದ ರಾಜಕುಮಾರ ಅಮೀರ್ ಫೈಸಲ್ ಅಲ್ ಸೌದ್ ಇವರನ್ನು ಕಾಣಬಹುದು.

ಜರ್ಮನಿಯ ಪುನರೇಕೀಕರಣದ ಆಶೆ ಫಲಿಸೀತೇ?

ರಾಜಕಾರಣಿಗಳ ಬಲೆಯೊಳಗೆ ಜನತೆಯ ನರಳಾಟ

ನಾಲ್ಕು ಮಹಾ ರಾಷ್ಟ್ರಗಳ ಪರಸ್ಪರ ಪರಿಷತ್ತು ಮುಂದಿನ ತಿಂಗಳಲ್ಲಿ ಜನೇವದಲ್ಲಿ ಸೇರಲಿರುವ ಸುದ್ದಿ ಬಂದ ಬಳಿಕ, ಅಲ್ಲಿ ಚರ್ಚಿಸಲ್ಪಡುವ ವಿಷಯಗಳು ಎಷ್ಟರ ಮಟ್ಟಿಗೆ ಫಲಕಾರಿಯಾಗಬಹುದೆಂಬ ಕುರಿತು ಊಹಾ ಪೋಹೆಗಳು ನಡೆಯುತ್ತಿವೆ ಅತಿ ಹೆಚ್ಚು ಕುತೂಹಲದಿಂದ ಜಗತ್ತು ಪರಿಹಾರವನ್ನು ನಿರೀಕ್ಷಿಸುತ್ತಿರುವ ಸಮಸ್ಯೆಗಳಲ್ಲಿ ಜರ್ಮನಿಯ ಪುನರೇಕೀಕರಣದ ಪ್ರಶ್ನೆಯೇ ಪೂರ್ವೋಕ್ತದ ವಿಷಯಕ್ಕಿಂತಲೂ ಈಗ ಅಧಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ, ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅಡೆನೂರರನ್ನು ರಶಿಯದ ಸರಕಾರವು ಪರಸ್ಪರ ಸಮಾಲೋಚನೆಗಾಗಿ ಮೋಸ್ಕೋಗೆ ಬರಲು ಆಮಂತ್ರಣವನ್ನು ಈಚೆಗೆ ಕೊಟ್ಟಿದೆ. ರಶಿಯವು ಅಡೆನೂರರ ಮುಂದೆ ಯಾವ ಸೂಚನೆಗಳನ್ನು ಮಂಡಿಸಬಹುದು? ಎಂದೆಲ್ಲರೂ ಆತುರದಿಂದಿದ್ದಾರೆ.

ತಟಸ್ಥೀಕರಣವಿಲ್ಲ

ಡಾ. ಅಡೆನೂರರ ಮೋಸ್ಕೋ ಭೇಟಿಯ ದಿನವಿನ್ನೂ ಗೊತ್ತಾಗಿಲ್ಲ. ನಾಲ್ಕು ಮಹಾರಾಷ್ಟ್ರಗಳ ಪರಿಷತ್ತಿಗೆ ಮೊದಲೇ ಈ ಭೇಟಿ ನಡೆಯುವುದು ಶಕ್ಯವಿಲ್ಲ. ಅಡೆನೂರರ ಟೆಲಿವಿಜನ್ ಸಂದರ್ಶನವೊಂದನ್ನು ಪಡೆದುಕೊಂಡಾಗಿ, ಅವರು ಮುಂದಿನ ಬೇಸಿಗೆಯ ಕೊನೆಗೆ ಮೋಸ್ಕೋವಿಗೆ ಹೋಗಲು ತಮಗೆ ಸಾಧ್ಯವಾದೀತೆಂದು ಹೇಳಿದರಾಗಿ ತಿಳಿದು ಬರುತ್ತದೆ. ತಮ್ಮ ಭೇಟಿಯ ಉದ್ದೇಶವು ಫಲಪ್ರದವಾಗಬೇಕಾದರೆ, ಅವಕ್ಕೋಸ್ಕರ ವಿವುಲ ಸಿದ್ಧತೆ ನಡೆಸಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಸಿದ್ಧತೆಯ ಪ್ರಥಮ ಘಟ್ಟವಾಗಿ ಅವರು ಕಳೆದ ವಾರ ವಾಷಿಂಗ್‌ಟನ್ನಿಗೆ ಕೊಟ್ಟ ಭೇಟಿಯನ್ನು ಉಲ್ಲೇಖಿಸಬಹುದು. ಅವರು ಅಲ್ಲಿ ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸನ್ನೂ ಅಧ್ಯಕ್ಷ ಐಸೆನ್ ಹೋವರರನ್ನೂ ಕಂಡು ಮಾತುಕತೆ ನಡೆಸಿದರು. ಫಲ ಸ್ವರೂಪದಲ್ಲಿ ಹೊರಬಿದ್ದ ಅಡೆನೂರ್—ಐಕ್ ಸಂಯುಕ್ತ ಪ್ರಕಟಣೆಯು ನಾಲ್ಕು ಮಹಾ ರಾಷ್ಟ್ರಗಳ ಪರಿಷತ್ತಿನ ಉದ್ದೇಶಗಳಲ್ಲಿ ಜರ್ಮನಿಯ ಪುನರೇಕೀಕರಣವನ್ನು ತ್ವರಿತಗೊಳಿಸುವುದು ಒಂದೆಂದು ಸಾರುತ್ತದೆ; ಅಲ್ಲದೆ, ಜರ್ಮನಿಯನ್ನು ತಟಸ್ಥೀಕರಿಸುವುದರಿಂದಲ್ಲ, ಸಾಮೂಹಿಕ ಸಂರಕ್ಷಣೆಯ ವ್ಯೂಹದಲ್ಲಿ ಸೇರ್ಪಡೆಗೊಳಿಸುವುದರಿಂದ ಮಾತ್ರ ರಾಷ್ಟ್ರದ ಸ್ವಾತಂತ್ರ್ಯವನ್ನು ರಕ್ಷಿಸುವುದು ಸಾಧ್ಯ ಎಂಬ ದೃಢವಾದ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.

ಸೈನಿಕ ವ್ಯೂಹದಲ್ಲಿ ಪ್ರವೇಶ

ಈ ಘೋಷಣೆಯಿಂದ ಜರ್ಮನಿಯ ಸಮಸ್ಯೆಯನ್ನು ಬಿಡಿಸುವುದರಲ್ಲಿ ತೊಂದರೆ ಉಂಟಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಪಶ್ಚಿಮ ಜರ್ಮನಿ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯದ ಪುನರುಚ್ಚಾರವೆಂದೇ ಈ ಘೋಷಣೆಯನ್ನು ಪರಿಗಣಿಸಬಹುದೇನೊ ನಿಜ; ಆದರೆ, ರಶಿಯವು ಜರ್ಮನಿಯ ಪುನರೇಕೀಕರಣಕ್ಕೆ ಮಾಡಬಹುದಾದ ಸೂಚನೆಗಳನ್ನು ತಿಳಿದುಕೊಳ್ಳದೆ, ತಮ್ಮ ಸಲಹೆಯನ್ನಷ್ಟೇ ಪದೇ ಪದೇ ಮುಂದಿಡುತ್ತಿರುವುದು ಎಷ್ಟರ ಮಟ್ಟಿಗೆ ಪ್ರಯೋಜನಕರವಾದೀತೊ ತಿಳಿಯದು. ರಶ್ಯದ ಸದುದ್ದೇಶದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗೆ—ಮುಖ್ಯವಾಗಿ ಅಮೇರಿಕಕ್ಕೆ—ಹೇಗೆ ವಿಶ್ವಾಸವಿಲ್ಲವೊ, ಡಾ. ಅಡೆನೂರರಿಗೂ ಭರವಸೆ ಇಲ್ಲ. ರಶ್ಯದ ಸರಕಾರ ಈಚೆಗೆ ಬೇರೆ ಬೇರೆ ಜಾಗತಿಕ ಬಿಕ್ಕಟ್ಟಿನ ಸಮಸ್ಯೆಗಳ ವಿಷಯದಲ್ಲಿ ಆಕಸ್ಮಿಕವೆನಿಸುವ ರೀತಿಯಲ್ಲಿ ಔದಾರ್ಯವನ್ನು ತೋರಿಸಿದ್ದರೂ ಇದು ಪೂರ್ವ ಏಶಿಯದಲ್ಲಿ ಹೊಸ ಆಟವನ್ನು ನಡೆಸಲು ಯುರೋಪಿನ ರಾಜಕೀಯದಲ್ಲಿ ನಡೆಸಿದ ತಂತ್ರ ಎಂದೇ ಅಡೆನೂರರು ಸಾರಿದರು. ಈ ಕುಹಕಗಳಿಗೆ ಮೋಸ ಹೋಗದೆ, ಪಾಶ್ಚಾತ್ಯ ರಾಷ್ಟ್ರಗಳಿಗೆ ಕೊಟ್ಟ ಭರವಸೆಯನ್ನು ನಡೆಸಿಕೊಂಡು ಹೋಗುವುದೇ ತಮ್ಮ ಸರಕಾರದ ಇಚ್ಛೆಯಾಗಿದೆ ಎಂದ ಪಾಶ್ಚಾತ್ಯ ಮಿತ್ರರಾಷ್ಟ್ರಗಳು ಪಶ್ಚಿಮ ಜರ್ಮನಿಯು ಮುಂದಿನ ಎರಡು ವರ್ಷಗಳಲ್ಲಿ ಐದು ಲಕ್ಷದಷ್ಟು ಸೈನ್ಯವನ್ನು ಕಟ್ಟಿಕೊಳ್ಳಬೇಕೆಂದೂ ಉತ್ತರ ಅಟ್ಲಾಂಟಿಕ್ ಸಂರಕ್ಷಣೆಯ ಒಪ್ಪಂದದಲ್ಲಿ ಸೇರಬೇಕೆಂದೂ ಅಪೇಕ್ಷಿಸುತ್ತವೆ. ಬ್ರಿಟನು ಮತ್ತು ಫ್ರಾನ್ಸುಗಳು ಈ ಕುರಿತು ಹೆಚ್ಚು ಆಸಕ್ತಿ ವಹಿಸಿಲ್ಲವಾದರೂ ಅಮೇರಿಕ ಪಶ್ಚಿಮ ಜರ್ಮನಿಯ ಮೇಲೆ ಬಹಳವಾದ ಒತ್ತಾಯವನ್ನು ಹೇರುತ್ತದೆ.

ರಶಿಯದ ಕೋಪ ಬೇಡ

ಸೈನ್ಯ ಕಟ್ಟಿಕೊಳ್ಳುವ ವಿಷಯವು ಉತ್ತರ ಅಟ್ಲಾಂಟಿಕದ ಒಪ್ಪಂದದೊಡನೆ ಥಳಕು ಹಾಕಲ್ಪಟ್ಟಿರುವುದರಿಂದ, ಪಶ್ಚಿಮ ಜರ್ಮನಿಯ ಜನತೆ ಮಾತ್ರ ತುಂಬ ಚಿಂತೆಗೀಡಾಗಿದೆ. ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸುಗಳು ಕಳೆದ ತಿಂಗಳಲ್ಲಿ ಪಶ್ಚಿಮ ಜರ್ಮನಿಗೆ ಸಾರ್ವಭೌಮಾಧಿಕಾರವನ್ನು ನೀಡುವಾಗ, ಈ ಕರಾರನ್ನು ಮುಂದಿಡಲು ಮರೆತಿರಲಿಲ್ಲ. ಸಾರ್ವಭೌಮಾಧಿಕಾರದಿಂದ ಶಾಸನಗಳನ್ನು ರಚಿಸುವ, ಔದ್ಯಮಿಕ ಮತ್ತು ವೈಜ್ಞಾನಿಕ ಕೇಂದ್ರಗಳ ಮೇಲ್ವಿಚಾರಣೆ ನೋಡುವ, ನಾಗರಿಕ ವಿಮಾನೋಡ್ಡಾಣ, ಹಡಗು ಕಟ್ಟುವ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಅಭಾದಿತ ಪ್ರಗತಿ ಸಾಧಿಸುವ ಮತ್ತು ಬೇಕಾದ ದೇಶಗಳೊಡನೆ ರಾಜಕೀಯ ಸಂಬಂಧವನ್ನು ಬೆಳೆಸಿಕೊಳ್ಳುವ ಅವಕಾಶ ಪಶ್ಚಿಮ ಜರ್ಮನಿಗೆ ದೊರೆತಿದೆ; ಯುದ್ಧ ಕಾಲದಲ್ಲಿ ಮಿತ್ರ ರಾಷ್ಟ್ರಗಳು ಪಶ್ಚಿಮ ಜರ್ಮನಿಯಲ್ಲಿ ಇಟ್ಟಿದ್ದ ಸೇನೆಗಳ ನಿಯಂತ್ರಣವೂ ತಪ್ಪಿದೆ. ಆದರೆ ಇದರಿಂದ ಪಶ್ಚಿಮ ಜರ್ಮನಿಯ ಜನರು ಏನೇನೂ ಸಂತೋಷ ಹೊಂದಿಲ್ಲ. ಪಾಶ್ಚಾತ್ಯ ಮಿತ್ರರ ಸೈನಿಕ ವ್ಯೂಹದಲ್ಲಿ ಸೇರುವ ಇಚ್ಛೆ ಅವರಿಗೆ ಎಷ್ಟಕ್ಕೂ ಇರುವಂತೆ ಕಾಣಿಸುವುದಿಲ್ಲ. ಸಾಮಾನ್ಯ ಜರ್ಮನನೊಡನೆ ಕೇಳಿದರೆ, ಅವನಿಗಿರುವುದು ಒಂದೇ ಹೆಬ್ಬಯಕೆ—ಅದೆಂದರೆ, ಜರ್ಮನಿಯ ಪುನರೇಕೀಕರಣ. ಇದಕ್ಕೆ ಸಹಾಯಕವಾಗದೆ ಯಾವುದನ್ನೂ ಅವನು ಮೆಚ್ಚುವುದಿಲ್ಲ. ಜರ್ಮನಿಯ ಪೂರ್ವ ತುಣುಕು ರಶ್ಯದ ಕೈಯಲ್ಲಿರುವುದರಿಂದ ರಶ್ಯದ ಮನಸ್ಸನ್ನು ನೋಯಿಸಿ, ಏಕೀಕರಣದ ಆಶೆಯನ್ನು ಸಂಪೂರ್ಣ ವಿಫಲಗೊಳಿಸುವ ಯಾವ ಕರಾರನ್ನೂ ಜರ್ಮನಿಯ ಸಾಮಾನ್ಯ ಜನತೆ ಸಂತೋಷದಿಂದ ಸ್ವೀಕರಿಸುವುದಿಲ್ಲ. ಉತ್ತರ ಅಟ್ಲಾಂಟಿಕ ಒಪ್ಪಂದದಲ್ಲಿ ಪಶ್ಚಿಮ ಜರ್ಮನಿ ಸೇರುವುದರಿಂದ ರಶಿಯವು ಸಹಜವಾಗಿಯೇ ಕ್ರುದ್ಧವಾಗುತ್ತದೆ; ಆದುದರಿಂದ ಈ ಶರತ್ತುಗಳಿಗೆಷ್ಟು ದೊರೆತ ಸಾರ್ವಭೌಮಾಧಿಕಾರದಿಂದ ಯಾವ ಸಂತೋಷವೂ ಇಲ್ಲವೆಂದು ಜನತೆಯ ಅಭಿಪ್ರಾಯ.

ಶಾಂತಿಯ ಹಂಬಲ

ದ್ವಿತೀಯ ಮಹಾಯುದ್ಧದಲ್ಲಿ ಆಗ ಮಿತ್ರರಾಷ್ಟ್ರಗಳಾಗಿದ್ದ ರಶಿಯ, ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸುಗಳು ಜರ್ಮನಿಯನ್ನು ನೋಲಿಸಿದ (ಅನೇ ಮೇರ್‌ಳಿಸಿ) ಹತ್ತು ವರ್ಷಗಳ ಹಿಂದಿನ ವಾತಾವರಣದ ನೆನಪಿದ್ದವರಿಗೆ, ಮಿತ್ರರಾಷ್ಟ್ರಗಳು ಜರ್ಮನಿಯ ಸ್ವಾತಂತ್ರ್ಯಕ್ಕೆ ಎಂದಾದರೂ ಒಪ್ಪಬಹುದೆಂಬ ಕಲ್ಪನೆಯೇ ಅಗುವಂತಿಲ್ಲ. ಆಗ ಅಮೇರಿಕದ ಸೇನಾಧಿಪತಿಯಾಗಿದ್ದ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್,
(ಶಾರದಾ ಪ್ರೆಸ್ಸಿನ ಪ್ರೊಪ್ರೈಟರ್ಸ್)
ಕಾರ್ ಸ್ಟ್ರೀಟ್, ಮಂಗಳೂರು.
(ಫೋನ್ 328)

ಇವರನ್ನು

ನಮ್ಮಲ್ಲಿ ತಯಾರಾಗುವ ವಿಶಿಷ್ಟ ತರದ ಶಾಯಿಗಳು, ವಾರ್ನಿಸುಗಳು ಮೊನಲಾದವುಗಳ ದ. ಕ. ಜಿಲ್ಲೆಯ ಎಜಂಟರಾಗಿ ತಾ. 1-4-1955 ರಿಂದ ನೇಮಿಸಲಾಗಿದೆ. ಯಾವತ್ತೂ ಪ್ರೆಸ್ ಮ್ಯಾನೇಜರುಗಳು ತಮಗೆ ಬೆಕಾದುವುಗಳನ್ನು ಅವರಿಂದ ಪಡೆಯಬೇಕಾಗಿ ವಿನಂತಿ.

ಧನ್ಯವಾದಗಳು

THE RAINBOW INK & VARNISH Manufacturing Co. Ltd.,
Suryodaya Mill Compound, Tardeo,
BOMBAY 7.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರ್ಯ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ| ಯು. ಸುಂದರ ರಾವು ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).
THE CANARA BANKING CORPORATION LIMITED

LEARN HINDI
Read, write and speak Hindi without tutor within 3 months by studying "Self Hindi Teacher". Revised edition. Price Rs. 4/-. Postage As. 12.

DESIGN BOOK
Contains modern designs of every kind for embroidery work. Price Rs 3/8 postage Re. 1.

TAILORING CUTTING
New publication with illustrations. Very useful for ladies to learn modern cutting. Price Rs. 4. Postage As. 12.

DEEN BROTHERS,
ALIGARH 16.

ಐಸೆನ್ ಹೋವರರು ಡ್ಯೆಮ್ಸ್‌ನಲ್ಲಿಯೂ ರಿಯಬ ಸೇನಾಪತಿ ಜುಕೋವರು ಉಕ್ರೈನ್ ಬರ್ಲಿನಿನಲ್ಲಿಯೂ ಜರ್ಮನಿಯ ಸೇನಾಧಿಕಾರಿಗಳ ಶರಣಾಗತಿಯನ್ನು ಒಳ್ಳೆಯ ಅಭಿಮಾನದಿಂದ ಸ್ವೀಕರಿಸಿದ್ದರು. ಜರ್ಮನರ ಪಾಲಿಗೆ ಅದು ವಿಷಗಳಿಗೆ ಯಾಗಿದ್ದಿತು; ಇನ್ನು ತಮಗೆ ಎಂದಾದರೂ ತಲೆ ಎತ್ತಲು ಸಾಧ್ಯವೆಂದು ಅವರು ಭಾವಿಸಿರಲಿಲ್ಲ; ಮಿತ್ರ ರಾಷ್ಟ್ರಗಳು ಹಾಗೆ ಪ್ರಗತಿ ಹೊಂದಲು ಬಿಡಬಹುದೆಂದು ಅವರು ಊಹಿಸುವುದೂ ಶಕ್ಯವಿದ್ದಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಜರ್ಮನಿಯ ಪುನರುದ್ಧಾರ ಕಾರ್ಯ ನಡೆದಿದೆ. ಬುಲ್ಡೋಜರುಗಳ ಮೂಲಕ ಬಾಂಬಿನ ಹೊಗೆ ಕವಿದ ವಾತಾವರಣದ ನಡುವೆ ದಾರಿ ಮಾಡಿಕೊಂಡು ಹೋಗಬೇಕಾದ ದಿನಗಳು ಕಳೆದು, ಶಾಂತಿಯ ಜೀವನ ನಡೆಸುವುದು ಸಾಮಾನ್ಯ ಜರ್ಮನರಿಗೆ ಇಂದು ಸಾಧ್ಯವಾಗಿದೆ. ಯುದ್ಧದಿಂದ ಜರ್ಜರಿತರಾಗಿರೋ ವಿನೋ, ಜರ್ಮನಿಯ ಜನರು ಶಾಂತಿಗಾಗಿ ಹಂಬಲಿಸುತ್ತಿದ್ದಾರೆ; ಸೈನ್ಯ ಕಟ್ಟಿಕೊಳ್ಳುವುದು ಸಹ ಅವರಿಗೆ ಬೇಕಿದ್ದಂತೆ ಕಾಣುವುದಿಲ್ಲ. ಸೈನಿಕ ವ್ಯೂಹಗಳಲ್ಲಿ ಸೇರುವುದನ್ನಂತೂ ಅವರು ತಿರಸ್ಕರಿಸುತ್ತಾರೆ. ನಮಗೆ ಶಾಂತಿಬೇಕು, ಇಬ್ಭಾಗವಾಗಿ ಒಡೆದ ರಾಷ್ಟ್ರ ಒಂದಾಗಬೇಕು— ಎಂದೇ ಅವರ ವಾದ.

ಪ್ರತಿ ಪಕ್ಷಗಳ ಒತ್ತಾಯ

ಇದು ಜನರ ಇಚ್ಛೆಯಾಗಿದ್ದಂತೆ, ಕೆಲವು ರಾಜಕೀಯ ಪಕ್ಷಗಳ ಅಭೀಷ್ಟವೂ ಆಗಿದೆ ಆಸ್ಟ್ರಿಯವನ್ನು ತಟಸ್ಥೀಕರಿಸಿ, ಅಲ್ಲಿಯ ಸಂರಕ್ಷಣೆಗೋಸ್ಕರ ಮಾತ್ರ ಸೈನ್ಯ ಕಟ್ಟಿಕೊಳ್ಳಲು ಬಿಟ್ಟಿರುವ ರೀತಿಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳು ಜರ್ಮನಿಯ ವಿಷಯದಲ್ಲೂ ಹಾಗೆ ಮಾಡಿದರಾಗಬಹುದೆಂದು ಅವು ಹೇಳುತ್ತವೆ. ಆಡೆನೂರರು ಮಾತ್ರ ಇದಕ್ಕೆ ಅನುಕೂಲರಾಗಿಲ್ಲ. —ಆದರೆ ಸಾರ್ವಭೌಮಾಧಿಕಾರವನ್ನು ಚಲಾಯಿಸುವಾಗ ಪ್ರತಿಪಕ್ಷಗಳಿಂದ ಅವರು ಟೀಕೆಗೆ ಗುರಿಯಾಗುವುದು ನಿಶ್ಚಯ; ಕೆಲವು ಪ್ರಸಂಗಗಳಲ್ಲಿ, ಮೂರರಲ್ಲಿ ಎರಡಂಶ ಬಹುಮತ ಬೇಕಾದಾಗ, ಆಡೆನೂರರ ಪಂಚಿಕೆಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತವೆಯೋ ಗೊತ್ತಿಲ್ಲ. ಪ್ರತಿಪಕ್ಷಗಳ ವಿರೋಧ ತೀವ್ರವಾಗಿದೆ, ಕೆಲವು ಕರಾರುಗಳೊಡನೆ ನೀಡಲಾದನಾ

ಮುಂದಿನ ಚುನಾವಣೆಗಳು ನಡೆಯುವುದೆಂದು?

ಫಜಲ ಅಲಿ ಆಯೋಗದ ವರದಿ ಕಾಯಲು ಪಂತರ ವಿನಂತಿ

ನೈಸಿತಾಲದಲ್ಲಿ ಗೃಹಮಂತ್ರಿ ಪಂಡಿತ ಪಂತರು ಮುಂದಿನ ಮಹಾ ಚುನಾವಣೆಗಳು ಎಂದು ನಡೆದಾವೆಂಬ ಕುರಿತು ಮಾತನಾಡುತ್ತಾ ಫಜಲ ಅಲಿ ಆಯೋಗವು ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಸರಕಾರಕ್ಕೆ ವರದಿಯನ್ನು ನೀಡಿದ ಬಳಿಕವೇ ಒಂದು ನಿರ್ಣಯಕ್ಕೆ ಬರುವುದು ಸಾಧ್ಯ ಎಂದು ತಿಳಿಸಿದ್ದಾರೆ. ಸರಕಾರಕ್ಕೆ ಐದು ವರ್ಷಗಳಿಗೊಮ್ಮೆ ಪದ್ಧತಿಯಂತೆ ನಡೆಯಬೇಕಿರುವ ಚುನಾವಣೆಗಳನ್ನು ಮುಂದೆ ಹಾಕುವ ಮನಸ್ಸೇನೂ ಇಲ್ಲ; ಆದರೆ ಆಯೋಗದ ಶಿಫಾರಸುಗಳನ್ನು ಪರಿಶೀಲಿಸದೆ ಈಗಲೇ ಸರಕಾರದ ಅಭಿಪ್ರಾಯವನ್ನು ತಿಳಿಸುವಂತಿಲ್ಲ ಎಂದವರು ವಿವರಿಸಿದರು.

ಸುಕುಮಾರ ಸೇನರ ಹೇಳಿಕೆ

ಫಜಲ ಅಲಿ ಆಯೋಗವು ರಾಜ್ಯಗಳ ಪುನರ್ಘಟನೆಯ ಕುರಿತು ಅನುಕೂಲ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಆಗ ಹೊಸ ರಾಜ್ಯಗಳ ರಚನೆಯ ಸಿದ್ಧತೆಯನ್ನು ಮಾಡುವುದಕ್ಕೆ ಕೆಲ ಸಮಯ ಹೋಗುತ್ತದೆ; ಹೊಸ ರಾಜ್ಯಗಳ ಶಾಸನ ಸಭೆಗೆಯೇ ಚುನಾವಣೆಗಳನ್ನು ನಡೆಸಲೂ ಬಹುದು. ಆದರೆ, ಇವಾವುದೂ ಖಚಿತವಾಗಿಲ್ಲ ಎಂಬುದೇ ಪಂತರ ಅಭಿಪ್ರಾಯದ ಹಿನ್ನೆಲೆಯಲ್ಲಿನ ವಿಷಯ. ಆದರೆ, ಭಾರತದ ಚುನಾವಣೆಯ ಕಮಿಶನರರಾದ ಶ್ರೀ ಸುಕುಮಾರ ಸೇನರು ಮಹಾ ಚುನಾವಣೆಗಳನ್ನು ಮುಂದೂಡುವ ಅಗತ್ಯವಿಲ್ಲವೆಂದೂ ಗಾಂಜೀಯ ಇನವರಿ ತಿಂಗಳಲ್ಲಿ ಅವನ್ನು ನಡೆಸುವಂತೆ ತಾವು ಸರಕಾರಕ್ಕೆ ಸಿಫಾರಸು ಮಾಡಿರುವುದಾಗಿಯೂ ಹೇಳಿರುವರು.

ಗೋವೆಯ ಹೋರಾಟ

ಕಾಂಗ್ರೆಸಿಗರು ಗೋವೆಯ ವಿಮೋಚನೆಯ ಹೋರಾಟದಲ್ಲಿ ಆಸಕ್ತಿಯನ್ನು ವಹಿಸಬೇಕು ಎಂಬುದಾಗಿ ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ. ಶ್ರೀಮನ್ನಾರಾಯಣರು ಪರಿಪತ್ರವೊಂದರ ಮೂಲಕ ವಿನಂತಿಸಿಕೊಂಡಿದ್ದಾರೆ. ಈ ಹೋರಾಟದ ವಿಷಯದಲ್ಲಿ ಸರಕಾರದ ಅಭಿಪ್ರಾಯ ಏನಿದೆ ಎಂಬುದನ್ನು ಸಾರ್ವಜನಿಕ ಸಭೆ ಮುಂಕಾದ ಕಾರ್ಯಕ್ರಮಗಳ ಮೂಲಕ ಜನರಿಗೆ ವಿದಿತಪಡಿಸಬೇಕು, ಗೋಮಾಂತಕರ ನ್ಯಾಯವಾದ ಕೇಳಿಕೆಗಳಿಗೆ ಸಹಾನುಭೂತಿ ವ್ಯಕ್ತಪಡಿಸುವ ಮತ್ತು ಪೋರ್ಚುಗೀಜ ಸರಕಾರದ ಅತ್ಯಾಚಾರಗಳನ್ನು ಖಂಡಿಸುವ ಹಾಗೆ ಜನರನ್ನು ಕೇಳಿಕೊಳ್ಳಬೇಕು ಎಂದವರು ಸಲಹೆ ನೀಡಿದ್ದಾರೆ. ಸತ್ಯಾಗ್ರಹದಲ್ಲಿ ಭಾಗವಹಿಸಬಹುದೋ ಎಂಬ ಅಂಶವನ್ನು ಪ್ರಸ್ತಾಪಿಸುತ್ತಾ ವೈಯಕ್ತಿಕವಾಗಿ ಭಾರತೀಯರು ಭಾಗವಹಿಸುವುದಕ್ಕೆ ಆಕ್ಷೇಪವಿಲ್ಲ ಎಂಬ ಪ್ರಧಾನಿ ನೆಹರುಗಳ ಸುಣಯ ಭಾಷಣವನ್ನು ಕಾಂಗ್ರೆಸಿಗರ ನೆನಪಿಗೆ ತಂದುಕೊಟ್ಟಿದ್ದಾರೆ.

ಗ್ಯಾತೊಂಡೆಯವರ ಅಭಿಪ್ರಾಯ

ಗೋವೆಯಿಂದ ಕಳೆದ ವರ್ಷ ಗಡೀಪಾರು ಮಾಡಲ್ಪಟ್ಟಿದ್ದ ಡಾ. ಗ್ಯಾತೊಂಡೆ ಮತ್ತು ಅವರ ಪತ್ನಿ ಬಿಡುಗಡೆ ಹೊಂದಿ, ಇದೀಗ ಭಾರತಕ್ಕೆ ಮರಳಿದ್ದಾರೆ. ತಮ್ಮ ಬಿಡುಗಡೆಗೆ ಹೊರಗಿನವರ ಒತ್ತಾಯವೇ ಕಾರಣ ಎಂದವರು ತಿಳಿಸಿದ್ದಾರೆ. ಪೋರ್ಚುಗೀಜರು ಭಾರತದಲ್ಲಿನ ತಮ್ಮ ವಸಾಹತುಗಳ ಕುರಿತು ಸಹಿಸುತ್ತಿರುವ ಘೋರತೆಯನ್ನು ಅಲ್ಲಿಯ ಜನರು ಬೆಂಬಲಿಸುತ್ತಿಲ್ಲ; ನಿಷ್ಪಕ್ಷಪಾತ ರೀತಿಯಲ್ಲಿ ಜನಮತಗಣನೆ ನಡೆಸಿದ್ದಾದರೆ, ಪ್ರತಿ ಐವರಲ್ಲಿ ನಾಲ್ಕು ಮಂದಿ ಪೋರ್ಚುಗೀಜರು ವಸಾಹತುಗಳಿಗೆ ಸ್ವಾತಂತ್ರ್ಯ ಕೊಡಲು ಸಿದ್ಧರಿದ್ದಾರೆ. ಅಧಿಕಾರ ಸ್ವಾಸದಿಂದ ಸತ್ಯಾಗ್ರಹಿಗಳನ್ನು ಪೀಡಿಸಬೇಕಾಗಿ ಬಂದಿರುವುದಕ್ಕೆ ಅನೇಕ ಪೋರ್ಚುಗೀಜರು ಪಶ್ಚಾತ್ತಾಪ ಪಡುತ್ತಿದ್ದಾರೆ. ಡಾ. ಸಾಲಾಝಾರರಿಗೆ ಕ್ರೈಸ್ತ ಮಠಗಳ ಬೆಂಬಲವಿರುವಂತೆ ಕಾಣುತ್ತದೆ. ಏನೇ ಮಾಡಿದರೂ ಸೈನಿಕ ಶಕ್ತಿಯನ್ನು ಭಾರತವು ಗೋವೆಯ ವಿಮೋಚನೆಗಾಗಿ ಉಪಯೋಗಿಸದೆಂದೂ ಅವರಿಗೆ ತುಸವರಿಕೆಯಾಗಿದೆ. ಸೈನಿಕ ಶಕ್ತಿಯನ್ನು ಭಾರತ ಉಪಯೋಗಿಸಿದರೆ ಬಲಾತ್ಕಾರದಿಂದ ಮಾಹತುಗಳನ್ನು ವಶಪಡಿಸಿಕೊಂಡ ಅಪವಾದ ಬರುವುದು ತಪ್ಪದು— ಎಂದು ಮುಂತಾಗಿ ಗ್ಯಾತೊಂಡೆಯವರು ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಹೊರಗಿನ ಒತ್ತಾಯ ಬಲವಾಗದೆ ಸಾಲಾಜಾರರು ಸಂಧಾನಕ್ಕೆ ಮುಂದಾಗರು ಎಂದರು.

ಚಿನ್ನದ ಗಣಿಗಳ ರಾಷ್ಟ್ರೀಕರಣ

ಮೂಲ ಸಂಪತ್ತಿಗೆ ಸಂಬಂಧಿಸಿದ ಎಲ್ಲ ಕೈಗಾರಿಕೆಗಳು ರಾಷ್ಟ್ರದ ಸ್ವಾಧೀನವಿರಬೇಕೆನ್ನುವ ಸರಕಾರದ ನೀತಿಯಂತೆ, ಕೋಲಾರದಲ್ಲಿರುವ ಚಿನ್ನದ ಗಣಿಗಳ ರಾಷ್ಟ್ರೀಕರಣ ಮಾಡಲು ಸರಕಾರ ನಿರ್ಧರಿಸಿದೆ ಎಂದು ಮೈಸೂರಿನ ಮುಖ್ಯ ಮಂತ್ರಿ ಶ್ರೀ. ಹನುಮಂತಯ್ಯನವರು ಪತ್ರಿಕಾಗೋಷ್ಠಿಯೊಂದರಲ್ಲಿ ಸಾರಿದರು. ಇದು ಸರಕಾರದ ಉನ್ನತ ಧೋರಣೆಗೆ ಸಂಬಂಧಿಸಿದ ವಿಷಯವಾದುದರಿಂದ ಈ ಸಂಬಂಧದಲ್ಲಿ ಸಾಮಾನ್ಯ ವಿವಾದಾಂಶಗಳ ಕುರಿತು ಯಾರೂಡನೆಯೂ ಚರ್ಚೆನಡೆಸಬೇಕಾಗಿಲ್ಲ. ದೇಶಕ್ಕೆ ಚಿನ್ನವು ಉಕ್ಕಿಗಿಂತ ಕಡಿಮೆ ಮಹತ್ವದ್ದೇನೂ ಅಲ್ಲ ಎನ್ನುತ್ತಾ ಅವರು ಪರಿಹಾರ, ತಾಂತ್ರಿಕ ವಿಷಯಗಳು, ಹಣಕಾಸು ಮತ್ತು ಕಾನೂನಿಗೆ ಸಂಬಂಧಿಸಿದ ವಿವರಗಳನ್ನು ಕೇಂದ್ರ ಸರಕಾರದೊಡನೆ ಕೂಡಿಕೊಂಡು ಪರಿಶೀಲಿಸಲಾಗುತ್ತದೆ. ಎಂದು ನುಡಿದರು. ಭಾರತ ಸರಕಾರ ಮೈಸೂರಿನ ಅಭಿಪ್ರಾಯಕ್ಕೆ ಹೆಚ್ಚಿನ ಸಹಾನುಭೂತಿ ತೋರಿಸಿದೆ ಎಂದರು.

ವರ್ಭೌಮಾಧಿಕಾರ ಜನರ ಮನಸ್ಸಿಗೆ ಬಂದಿಲ್ಲ ಎಂಬುದನ್ನು ತಿಳಿದೇ ಆಡೆನೂರರು ಯಾವ ಸಂಭ್ರಮವೂ ಇಲ್ಲದೆ, ಪಶ್ಚಿಮ ಜರ್ಮನಿ ಸ್ವತಂತ್ರವಾಯಿತೆಂಬ ಘೋಷಣೆ ಹೊರಡಿಸುವುದರಲ್ಲಿಯೇ ತೃಪ್ತರಾದರು. ಸಾರ್ವಜನಿಕ ರಜೆಯನ್ನು ಸಾರಿ, ಸಭೆ ಮೆರವಣಿಗೆಗಳಿಂದ ಉತ್ಸವವಾಚರಿಸಬೇಕೆಂದಿದ್ದ ಆಡೆನೂರರಿಗೆ ಜರ್ಮನಿ ವಿಭಾಜಿತವಾಗಿರುವ ವರೆಗೆ ಈ ಆಡಂಬರಕ್ಕೆ ಅರ್ಥವಿಲ್ಲ—ಎಂಬ ಸಲಹೆ ಕೊಡಲಾಯಿತು. ಪಶ್ಚಿಮ ಜರ್ಮನಿಯಲ್ಲಿ ನಾಲ್ಕರಲ್ಲಿ ಮೂರಂಶ ಜರ್ಮನರಿದ್ದಾರೆ; ರಶ್ಯದ ವಶವಿರುವ ಪೂರ್ವ ಜರ್ಮನಿಯಲ್ಲಿ ಬಾಳುತ್ತಿರುವ ಸಹೋದರರ ಬಗ್ಗೆ ಅವರಲ್ಲಿ ಅನುಕಂಪವಿಡಿಯುತ್ತದೆ. ಆದರೆ, ತಟಸ್ಥೀಕರಣಕ್ಕೆ ಒಪ್ಪದ ಹೊರತು, ರಶಿಯ ಜರ್ಮನಿಯ ವಿಕೇಂದ್ರೀಕರಣಕ್ಕೆ ಒಪ್ಪುವುದೆ? —ಒಪ್ಪದು ಎಂಬುದರಿಂದ, ಜನತೆಯು ರಾಜಕಾರಣಿಗಳ ಕೈಯಲ್ಲಿ ನರಳುವಂತಾಗಿದೆ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉತ್ತಮ ಕಾಗದದ
ಎಕ್ಸರಸೈಜ್ ಪುಸ್ತಕಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಬಿಷ್ಟೂ:— (1) ಉಡುಪಿ (2) ಮಾರಾಟ ಗಲ್ಲಿ, ಹುಬ್ಬಳ್ಳಿ.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೩-೬-೧೯೫೫	೪೧

ಸಂಯುಕ್ತ ರಾಷ್ಟ್ರ ಸಂಘ

ಅಮೇರಿಕದ ಸಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಅಧ್ಯಕ್ಷ ಐಸೆನ್‌ಹೋವರರು ಇದೇ ೧೧ನೇ ದಿನಾಂಕ ಸಂಯುಕ್ತ ರಾಷ್ಟ್ರ ಸಂಘದ ಹತ್ತನೇ ವಾರ್ಷಿಕೋತ್ಸವವನ್ನು ಉದ್ಘಾಟಿಸಿದರು. ಸಂಯುಕ್ತ ರಾಷ್ಟ್ರ ಸಂಘದ ಮೂಲಕ ದುಡಿದು ಯುದ್ಧ ಭಯದ ಸ್ಥಾನದಲ್ಲಿ ಶಾಂತಿಯ ಸಮಾಧಾನದ ವಾತಾವರಣವನ್ನು ನೆಲೆಗೊಳಿಸಲು ಪ್ರಯತ್ನಿಸೋಣ ಎಂದವರು ಈ ಸಂದರ್ಭದಲ್ಲಿ ಹೇಳಿದರು. ಭಿನ್ನಾಭಿಪ್ರಾಯಗಳನ್ನು ಶಸ್ತ್ರ ಸಂಗ್ರಹದ ಬಲದಿಂದಲ್ಲ, ಪರಸ್ಪರ ಸಮಾಲೋಚನೆಗಳ ಮೂಲಕ ಬಗೆಹರಿಸಲು ಮುಂದಾಗೋಣ ಎಂದವರು ಸೂಚಿಸಿದರು. ನಿಜವಾಗಿಯೂ, ಹತ್ತು ವರ್ಷಗಳ ಹಿಂದೆ, ದ್ವಿತೀಯ ಮಹಾ ಯುದ್ಧದ ತರುವಾಯ, ಈ ವಿಶ್ವ ವ್ಯಾಪಕ ಚಟುಪಟಿಕೆಯ ಸಂಸ್ಥೆಯನ್ನು ಸ್ಥಾಪಿಸುವಾಗ ಇದೇ ಉದ್ದೇಶವನ್ನು ಸಾನ್ ಫ್ರಾನ್ಸಿಸ್ಕೊ ಸಮ್ಮೇಳನದಲ್ಲಿ ಆಗ ಭಾಗವಹಿಸಿದ್ದ ಐವತ್ತು ರಾಷ್ಟ್ರಗಳ ಪ್ರತಿನಿಧಿಗಳು ಇಟ್ಟುಕೊಂಡಿದ್ದರು. ಹತ್ತು ವರ್ಷಗಳಲ್ಲಿ ಈ ಉದ್ದೇಶ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದನ್ನು ಸಮೀಕ್ಷಿಸುವಾಗ, ನಾವು ಸಂಯುಕ್ತ ರಾಷ್ಟ್ರಸಂಘದ ಕೆಲವು ದೌರ್ಬಲ್ಯಗಳನ್ನು ಮೊದಲಾಗಿ ಗಮನಿಸಬೇಕಾಗುತ್ತದೆ. ಅವೇನೆಂದರೆ, ಸಂಯುಕ್ತ ರಾಷ್ಟ್ರ ಸಂಘವು ಒಂದು ಸರಕಾರವಲ್ಲ; ಅದರೊಡನೆ ತನ್ನ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಸೈನ್ಯ ಅಥವಾ ಪೋಲೀಸು ಪಡೆ ಇರುವುದಿಲ್ಲ. ಆದುದರಿಂದ ಸಂಯುಕ್ತ ರಾಷ್ಟ್ರ ಸಂಘವು ಜಾಗತಿಕ ಅಭಿಪ್ರಾಯವನ್ನು ತಿಳಿಸಬಹುದೇ ಹೊರತು ವಿಶ್ವ ವ್ಯಾಪಾರದ ಮೇಲೆ ಕಮ್ಯುನಿಟ್ಯಾದ ನಿಯಂತ್ರಣವನ್ನು ಅದು ಇಡಲಾರದು. ನೈತಿಕ ವರ್ಚಸ್ಸಿನಿಂದ ಎಷ್ಟು ಪ್ರಯೋಜನವಾದೀತೋ ಅಷ್ಟನ್ನು ಮಾತ್ರ ಸಂಯುಕ್ತ ರಾಷ್ಟ್ರ ಸಂಘ ಒದಗಿಸಬಲ್ಲುದು. ಎರಡನೆಯ ದೌರ್ಬಲ್ಯವೆಂದರೆ, ಸಂಯುಕ್ತ ರಾಷ್ಟ್ರ ಸಂಘದ ಸ್ಥಾಪನೆಯ ಕಾಲದಲ್ಲಿ ಮಹಾ ರಾಷ್ಟ್ರಗಳಲ್ಲದ್ದ ಒಗ್ಗಟ್ಟು ಮುರಿದಿರುವುದು: ೧೯೪೭ನೇ ಇಸವಿಯಿಂದ ಸ್ಥಾಪಕ ಮಹಾ ರಾಷ್ಟ್ರಗಳಲ್ಲಿ ಒಂದಾದ ರಶಿಯವು ಇತರ ಮಿತ್ರರಿಂದ ದೂರವಾಯಿತು; ಮತ್ತು ರಶಿಯ—ಅಮೇರಿಕಗಳ ನಡುವಣ ಭಿನ್ನಾಭಿಪ್ರಾಯದ ದೆಸೆಯಿಂದ ಎಷ್ಟೋ ಮಹತ್ವದ ಸಮಸ್ಯೆಗಳು 'ಜೋಕಾಲಿಯಾಡುತ್ತಾ ಕೊಳೆಯುತ್ತಿರಬೇಕಾಯಿತು. ಈ ಮನಸ್ತಾಪ, ಅಥವಾ ವಿಷಮ ಧೋರಣೆ, ಇಂದಿಗೂ ಕೊನೆಗೊಂಡಿಲ್ಲ. ಆದುದರಿಂದ ಪ್ರಾರಂಭದಲ್ಲಿದ್ದ ಸಂಯುಕ್ತ ರಾಷ್ಟ್ರಸಂಘದ ಯಶಸ್ಸಿಗಿದ್ದ ಕೆಲವು ಅನುಕೂಲತೆಗಳು ಈಗ ಮಾಯವಾಗಿವೆ ಎಂದೆನ್ನಬೇಕಾಗುತ್ತದೆ. ಹೀಗಿದ್ದರೂ ಸಂಯುಕ್ತ ರಾಷ್ಟ್ರ ಸಂಘವು ತನ್ನ ಅಸ್ತಿತ್ವದ ಹತ್ತು ವರ್ಷಗಳಲ್ಲಿ ಒಂದಕ್ಕಿಂತ ಹೆಚ್ಚು ಸಲ ಲೋಕಕ್ಕೆಬರಬಹುದಾಗಿದ್ದ ಗಂಡಾಂತರಗಳನ್ನು ದೂರಮಾಡಿದೆ; ಶ್ವೇತ ರಶಿಯನಕ್ಕೋಸ್ಕರ ಅದು ಕೈಕೊಂಡ ಪ್ರಯತ್ನಗಳ ದೆಸೆಯಿಂದಲೇ ಯುದ್ಧ ಭಯವೂ ಕೋಲಾಹಲವೂ ಬಹಳಷ್ಟು ಕಡಿಮೆಯಾಗಿದೆ. ಇದು ಸಾಧ್ಯವಾಯಿತಾದರೂ ಹೇಗೆ? ಸಂಯುಕ್ತ ರಾಷ್ಟ್ರಸಂಘವು ಮುಖಾಮುಖಿಯಾದ ಸಮಾಲೋಚನೆಗೆ ಅವಕಾಶವನ್ನು ಒದಗಿಸಿ ಕೊಡುತ್ತದೆ ಎಂಬುದೇ ಈ ಪ್ರಶ್ನೆಯ ಉತ್ತರ. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು, ತಂತಮ್ಮ ಧೋರಣೆಗಳನ್ನು ಉಳಿದ ರಾಷ್ಟ್ರಗಳವರ ಮುಂದೆ ಪ್ರಕಟಿಸಿ, ಸಹಾನುಭೂತಿಯನ್ನು ಹೆಚ್ಚಿಸಲು ಹಾಗು ಹೊಸ ಹೊಸ ಉಪಾಯಗಳು ಎಲ್ಲರ ಪರಿಶೀಲನೆಗಾಗಿ ಒಟ್ಟಿಸಲ್ಪಡಲು—ಸಂಯುಕ್ತ ರಾಷ್ಟ್ರ ಸಂಘವು ಒಂದು ಪ್ರಶಸ್ತರಂಗಸ್ಥಳವಾಗಿದೆ. ಎದುರೆದುರು ಕುಳಿತಿರುವಾಗ ನಾವು ಸ್ವಲ್ಪ ಮಟ್ಟಗಾದರೂ ಮಾನವ ಸಹಜವಾದ ಸುಸಂಸ್ಕೃತ ಮನೋಭಾವವನ್ನೂ ಸ್ನೇಹದ ವರ್ತನೆಯನ್ನೂ ತೋರಿಸದಿರಲಾಗುವುದಿಲ್ಲ. ಪರಿಣಾಮವಲ್ಲಿ ಒಮ್ಮೆ ಎದುರೆದುರು ಬಂದವರು ಇನ್ನಷ್ಟು ಹತ್ತಿರಕ್ಕೆ ಬರುವಂತಾಗುತ್ತದೆ; ಪರಸ್ಪರರನ್ನು ಹೆಚ್ಚು ತಿಳಿದುಕೊಳ್ಳಲು ಇದು ನೆರವಾಗುತ್ತದೆ. ಕೇವಲ ಮಾತಾಳಿಗಳ ಕೂಟ ಎಂದು ಸಂಯುಕ್ತ ರಾಷ್ಟ್ರ ಸಂಘವನ್ನು ಕೆಲವರು ದೂರುವುದುಂಟು. ಆದರೆ, ಈ ಮಾತುಕತೆ ಮತ್ತು ಚರ್ಚೆಗಳು ಹರಟೆಗಳಲ್ಲ; ರಾಜಕೀಯ ಮಹತ್ವದ ಧೋರಣೆಗಳನ್ನು ಇವು ವ್ಯಕ್ತ ಪಡಿಸುತ್ತವೆ; ವಿಶ್ವ ಶಾಂತಿಯ ಸದಿಚ್ಛೆವಿಸ್ತಾರಮಟ್ಟಿಗೆ ಫಲಕಾರಿಯಾಗಬಹುದೆಂಬುದನ್ನು ಇವು ತೋರಿಸಿಕೊಡುತ್ತವೆ ಎಂಬ ಅಂಶವನ್ನು ಮನಗಂಡರೆ, ಸಂಯುಕ್ತ ರಾಷ್ಟ್ರ ಸಂಘದ ಕಾರ್ಯಕಲಾಪಗಳ ಬಗ್ಗೆ ಅಭಿಮಾನವುಂಟಾಗುತ್ತದೆ. ಜರ್ಮನಿಯ ದಿಗ್ಬಂಧನ ೧೯೪೭ರಲ್ಲಿ ನಡೆದಾಗ ಪೂರ್ವ ಜರ್ಮನಿಯಿಂದ ಪಾಶ್ಚಾತ್ಯ ಮಿತ್ರರು ಆಕಾಶದ ಮೂಲಕ ಜರ್ಮನರನ್ನು ಸಾಗಿಸಿಕೊಳ್ಳುತ್ತಿದ್ದರು; ಆಗ ರಶಿಯ ತೋಪುಗಳನ್ನು ಹಾರಿಸಿ ಒಂದು ವಿಮಾನವನ್ನು ಉರುಳಿಸಿದ್ದರೂ ಸಾಕು, ಇನ್ನೊಂದು ನಿಶ್ವಯುದ್ಧ ತೊಡಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಈ ಮಾರ್ಗವನ್ನು ಬಿಟ್ಟುಗೊಟ್ಟು, ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ರಶಿಯ—ಅಮೇರಿಕಗಳು ಮಾತುಕತೆ ನಡೆಸಲು ಮುಂದಾದುದರಿಂದ, ಎಲ್ಲವೂ ಸುಗಮವಾಗಿ ಬಗೆಹರಿಯಿತು; ಬರ್ಲಿನಿನ ದಿಗ್ಬಂಧನ ದೂರವಾಯಿತು. ಕೊರಿಯದಲ್ಲಿ ಆಕ್ರಮಣಕಾರರನ್ನು ಹಿಂದೋಡಿಸಲು. ಅದು ವೀರೋಚಿತ ರೀತಿಯಲ್ಲಿ ೧೭ ರಾಷ್ಟ್ರಗಳ ಸೈನ್ಯ ಸಹಾಯ ಮತ್ತು ೪೬ ರಾಷ್ಟ್ರಗಳ ಕ್ರಿಯಾತ್ಮಕ ನೆರವಿನಿಂದ ತಕ್ಕ ಕ್ರಮಗಳನ್ನು ಕೈಗೊಂಡಿತು. ವಿಶ್ವ ಸಂಸ್ಥೆಯ ಇತಿಹಾಸದಲ್ಲಿ ಇದು ನಿಜಕ್ಕೂ ಅದ್ಭುತ ಕಾರ್ಯಕ್ರಮ, ಇದಲ್ಲದೆ, ಕಾಶ್ಮೀರ ಗ್ರೀಸ್ ಪಾಲಿಸ್ತಾನಗಳಲ್ಲಿ ಯುದ್ಧ ನಿಲ್ಲಿಸಲು; ಇಂಡೋಚೀನದಲ್ಲಿ ಹೋರಾಟ ಅಂತ್ಯವಾಗಲು; ಸಿರಿಯಾ, ಲಿಬಿಯಾ, ಇರಾನ್ ಮುಂತಾದ ದೇಶಗಳಿಂದ ಹೊರ ದೇಶಗಳವರ ಸೈನ್ಯ ಹಿಂದೆಗೆದುಕೊಳ್ಳಲ್ಪಡಲು; ಇಂಡೋನೇಶಿಯ ಮುಂತಾದ ಒಟ್ಟು ೬೦ ಕೋಟಿ ಪ್ರಜೆಗಳಿರುವ ಬೇರೆ ಬೇರೆ ರಾಷ್ಟ್ರಗಳಿಗೆ ಸ್ವಾತಂತ್ರ್ಯ ನೀಡಲು ಸಂಯುಕ್ತ ರಾಷ್ಟ್ರ ಸಂಘ ಕಾರಣಭೂತವಾಗಿದೆ. ನಿಶ್ಶಸ್ತ್ರೀಕರಣದ ಆದರ್ಶವನ್ನು ಮುಟ್ಟುವುದಕ್ಕಾಗಿಯೂ ಶಾಂತಿಕಾಲದ ಬಳಕೆಗಾಗಿ ಅಣುಶಕ್ತಿಯನ್ನು ಉಪಯೋಗಿಸುವುದಕ್ಕಾಗಿಯೂ ಸಂಯುಕ್ತ ರಾಷ್ಟ್ರ ಸಂಘ ಬಹಳವಾಗಿ ಹೆಣಗಾಡುತ್ತಿದೆ. ತನ್ನ ಅಂಗ ಸಂಸ್ಥೆಗಳ ಮೂಲಕ ಜಾಗತಿಕ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ವಿಜ್ಞಾನಗಳ ಅಭಿವೃದ್ಧಿಗಾಗಿ ತುಂಬ ಪ್ರಯತ್ನಗಳನ್ನು ನಡೆಸುತ್ತಿದೆ. ಇದರಿಂದ ರಾಷ್ಟ್ರಗಳ ಅಭಿವೃದ್ಧಿ ಮತ್ತು ವ್ಯಕ್ತಿ ಮನೋಭಾವದ ಸಂಸ್ಕಾರ ಕೈಗೂಡುವ ಆಶೆ ಬಲಿತಿದೆ. ಆದುದರಿಂದ ಸಂಯುಕ್ತ ರಾಷ್ಟ್ರ ಸಂಘದ ಅಸ್ತಿತ್ವವನ್ನು ಅಪ್ರಯೋಜಕವೆಂದು ಯಾರೂ ಭಾವಿಸಬಾರದು. ಅದರ ಉಪಯುಕ್ತತೆಯನ್ನು ಇನ್ನಷ್ಟು ಹೆಚ್ಚಿಸುವ ಕುರುತಾಗಿಯೇ ಜಗತ್ತು ಆಲೋಚಿಸಬೇಕಾದದ್ದು ಕರ್ತವ್ಯ. ಇಷ್ಟರ ವರೆಗಿನ ಅನುಭವದ ಪ್ರಕಾರ, ಪರಸ್ಪರ ಸಮಾಲೋಚನೆಗೆ ಅವಕಾಶವಿಲ್ಲದಾಗಲೇ ಲೋಕ ಶಾಂತಿಯು ಗಂಡಾಂತರಕ್ಕೆ ಗುರಿಯಾಯಿತು. ಸಮಾಲೋಚನೆಯ ಸುಲಭ ಸಂದರ್ಭಗಳನ್ನುಂಟಗಿಸುವುದಕ್ಕಾಗಿ ಆದಷ್ಟು ಹೆಚ್ಚು ರಾಷ್ಟ್ರಗಳಿಗೆ ಸಂಯುಕ್ತ ರಾಷ್ಟ್ರಸಂಘದ ಸದಸ್ಯತ್ವವನ್ನು ನೀಡಬೇಕು ಚೀನದ ಜನತಾ ರಾಜ್ಯದಂಥ ರಾಷ್ಟ್ರಕ್ಕೆ ಸರ್ವ ಪ್ರಥಮವಾಗಿ ಸಂಯುಕ್ತ ರಾಷ್ಟ್ರಸಂಘದಲ್ಲಿ ಪ್ರವೇಶಸಿಗಬೇಕು; ಬಾಂಡುಂಗಿನಲ್ಲಿ ಸೇರಿದ ಸಮ್ಮೇಳನವು ಶಸ್ತ್ರಾಸ್ತ್ರಗಳ ಬಲವಿಲ್ಲದ ಚಿಕ್ಕ ರಾಷ್ಟ್ರಗಳು ಸಹ ಶಾಂತಿಯ ಭದ್ರ ಅಸ್ತಿವಾರ ಹಾಕಬಲ್ಲವೆಂದು ತೋರಿಸಿಕೊಟ್ಟಿದೆ; ಆದುದರಿಂದ ನೇಪಾಳ, ಸಿಂಹಳ ಮುಂತಾದ ಪ್ರತಿಯೊಂದು ರಾಷ್ಟ್ರಕ್ಕೂ ಸಂಯುಕ್ತ ರಾಷ್ಟ್ರಸಂಘದಲ್ಲಿ ಪ್ರವೇಶವನ್ನು ಮುಕ್ತವಾಗಿಡಬೇಕು. ಇದಕ್ಕೋಸ್ಕರ ಪ್ರವೇಶದ ನಿಯಮಗಳನ್ನು ಸಡಲಿಸುವ ಮತ್ತು "ವೀಟೋ" ಪ್ರಯೋಗಾಧಿಕಾರದ ಪ್ರಯೋಜನಾಂಶವನ್ನು ಪುನಃ ಪರಿಶೀಲಿಸುವ ಆವಶ್ಯಕತೆಕಂಡುಬರುತ್ತದೆ. ಹತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನೆರೆದಿರುವ ಅರುವತ್ತು ಸದಸ್ಯ ರಾಷ್ಟ್ರಗಳ ಧುರೀಣರು ಈ ಅಂಶಗಳನ್ನು ಗಮನಿಸುವರೆಂದು ನಂಬೋಣ. ಸಂಯುಕ್ತ ರಾಷ್ಟ್ರ ಸಂಘದ ಅಂಗ ಸಂಸ್ಥೆಗಳಲ್ಲಿ ಹೆಚ್ಚು ಸದಸ್ಯತ್ವವಿದ್ದು ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳೇ ತಾಂಡವನಾಡುವ ವಿರೋಧಾಭಾಸಕರವಾದ ಪರಿಸ್ಥಿತಿಯನ್ನು ಅವರು ಸುಧಾರಿಸುವರೆಂದೂ ಆಶಿಸೋಣ.

ಅರ್ಜೆಂಟೀನದ ಗೊಂದಲ

ಸೇನಾಧಿಕಾರಿಗಳು ನಡೆಸಿದ ದಂಗೆ

ದಕ್ಷಿಣ ಅಮೇರಿಕದ ಅರ್ಜೆಂಟೀನಾ ಎಂಬ ಸಮೃದ್ಧ ರಾಷ್ಟ್ರದಲ್ಲಿ ಕಳೆದ ವಾರ ಗೊಂದಲ ನಡೆಯಿತು. ನೌಕಾಪಡೆ ಮತ್ತು ವಿಮಾನ ಪಡೆಯ ಅಧಿಕಾರಿಗಳು ದಂಗೆ ಎಬ್ಬಿಸಿ, ಅಧ್ಯಕ್ಷ ಪೆರೋನರ ಅರಮನೆಯ ಮೇಲೆ ಮತ್ತು ಸರಕಾರದ ಕಾರ್ಯಾಲಯಗಳ ಮೇಲೆ ಧಾಳಿ ಮಾಡಿದರು. ಇದರಿಂದ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯ ದೆಸೆಯಿಂದ ಅನೇಕರ ಜೀವ ಹಾನಿಯಾಯಿತು; ಮನೆ ಮರಗಳೂ ನಷ್ಟವಾದವು.

ಕ್ರೈಸ್ತ ಮರಗಳ ಉತ್ತೇಜನ

ಅರ್ಜೆಂಟೀನದಲ್ಲಿ ಕ್ರೈಸ್ತ ಧರ್ಮವು ಸರಕಾರದ ಧರ್ಮವಾಗಿದೆ; ಆ ರಾಷ್ಟ್ರದ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಕ್ರೈಸ್ತರಾಗಿರಬೇಕೆಂಬ ನಿಯಮವಿದೆ. ಆದರೆ ಈಚೆಗೆ ಅಧ್ಯಕ್ಷ ಪೆರೋನರು ಆಧುನಿಕ ಪ್ರಜಾಸತ್ತಾತ್ಮಕ ವಿಚಾರ ಪ್ರಣಾಳಿಯನ್ನು ಅನುಸರಿಸಿಯೋ ಏನೊ, ಧಾರ್ಮಿಕ ಸಂಸ್ಥೆಗಳ ನಿಯಂತ್ರಣದಿಂದ ರಾಜಕೀಯವು ದೂರವಿರಬೇಕೆಂದು ನಿಶ್ಚಯಿಸಿದರು. ಈ ಬಗ್ಗೆ ಜನರ ಅಭಿಪ್ರಾಯವನ್ನು ಇನ್ನು ಮೂರು ತಿಂಗಳಲ್ಲಿ ಚುನಾವಣೆಯ ಮೂಲಕ ಪಡೆಯಲಾಗುವುದು ಎಂದೆರು. ಇದರಿಂದ ಅಸಂತುಷ್ಟರಾದ ಕ್ರೈಸ್ತರ ಚಟುವಟಿಕೆಯಿಂದ ದಂಗೆ ನಡೆಯಿತೆಂದು ಹೇಳಲಾಗುತ್ತದೆ.

ಅಧ್ಯಕ್ಷರ ತ್ವರಿತ ಕ್ರಮ

ದಂಗೆಯ ಪರಿಣಾಮವಾಗಿ, ಅರಾಜಕತೆಯೇ ನೆಲಸುವುದೇನೊ ಎನ್ನುವಂತೆ ನಿರೀಕ್ಷಕರಿಗೆ ತೋಂದ್ದಿತು. ಜನರ ಮೇಲೆ ಅತ್ಯಂತ ವರ್ಚಸ್ಸನ್ನುಳ್ಳ ಕ್ರೈಸ್ತ ಮರಗಳು ಸರಕಾರದ ವಿರುದ್ಧ ಬೊಬ್ಬಿಡುತ್ತಿದ್ದುವು; ಸರಕಾರವು ಕೂಲಿಕಾರರೇ ಮುಂತಾದ ಜನಸಾಧಾರಣದ ಬೆಂಬಲವನ್ನು ಅವಲಂಬಿಸಿದ್ದಿತು. ಪುಣ್ಯಕ್ಕೆ ಸೇನೆಯ ಪದಾತಿದಳವು ಅಧ್ಯಕ್ಷರನ್ನು ದೃಢವಾಗಿ ಬೆಂಬಲಿಸಿದುದರಿಂದ ಈಗ ಪರಿಸ್ಥಿತಿ ಶಾಂತವಾಗಿದೆ ಎಂದು ತಿಳಿದುಬರುತ್ತದೆ.

ಪಾಕಿಸ್ತಾನದಲ್ಲಿ

ಮುರ್ರಿಯಲ್ಲಿ ಇದೇ ೨೯ನೇ ದಿನಾಂಕ ಸೇರಲಿರುವ ಪಾಕಿಸ್ತಾನದ ಘಟನಾ ಸಮಿತಿಗೆ ಚುನಾವಣೆಗಳು ಇಷ್ಟರಲ್ಲಿ ಮುಗಿದಿರುತ್ತವೆ. ಮುಸ್ಲಿಂ ಲೀಗಿನ ಅನೇಕ ಪ್ರಭೃತಿಗಳಿಗೆ ಚುನಾವಣೆಯ ತಿಕೇಟು ಸಿಗದ್ದರಿಂದ ಅವರು ಸ್ವತಂತ್ರವಾಗಿ ಲೀಗಿನ ಅಧಿಕೃತ ಪ್ರತಿನಿಧಿಗಳನ್ನು ವಿರೋಧಿಸಲು ಮುಂದಾಗಿದ್ದರು. ಅವರ ಮೇಲೆ ಶಿಸ್ತು ಕ್ರಿಯಾರಿ ಮಾಡುವೆನೆಂದ ಲೀಗಿನ ಅಧ್ಯಕ್ಷ ಮಹಮದಾಲಿಗಳ ಬೆದರಿಕೆ ಫಲಕಾರಿಯಾಗಿಲ್ಲ.

ಘಟನಾ ಸಮಿತಿಗೆ ಚುನಾವಣೆ

ಫಜಲುಲ್ ಹಕ್ಕರು ಚುನಾವಣೆಯಲ್ಲಿ ತಮ್ಮ ಪಕ್ಷ ಇಳಿಯಬೇಕೆಂದು ಹೇಳಿ

ದ್ದರೂ ೮೨ ಮಿಲಿಯ ಜನಸಂಖ್ಯೆಯುಳ್ಳ ಪೂರ್ವ ಬಂಗಾಳಕ್ಕೆ ೩೩ ಮಿಲಿಯ ಜನಸಂಖ್ಯೆಯುಳ್ಳ ಪಶ್ಚಿಮ ಪಾಕಿಸ್ಥಾನದ ಪ್ರೈ, ಅಂದರೆ ೪ಂ, ಸ್ಥಾನಗಳನ್ನು ಘಟನಾ ಸಮಿತಿಯಲ್ಲಿ ಕೊಟ್ಟಿರುವುದನ್ನು ವಿರೋಧಿಸುವುದಾಗಿ ಸುನಃ ಹೇಳಿದ್ದಾರೆ. ಕೇಂದ್ರ ಮಂತ್ರಿ ಮಂದಳದಲ್ಲಿ ಸುಹ್ರವರ್ದಿಯವರಿಗೂ ಮಹಮದಾಲಿಗಳಿಗೂ ಭಿನ್ನಾಭಿಪ್ರಾಯವು ಬಲಿಯುತ್ತಿರುವುದು ಅತಿ ಸ್ಪಷ್ಟವಾಗಿ ಗೋಚರಿಸಿದೆ.

ಭಾರತಕ್ಕೆ ಬುಲ್ಗೇನಿನ್ನರು

ನೆಹರುಗಳು ಕಳೆದವಾರವೆಲ್ಲ ರಶ್ಯದ ಒಳನಾಡುಗಳಲ್ಲಿ ದೀರ್ಘ ಪ್ರಯಾಣವನ್ನು ಮಾಡಿದರು. ಪರಕೀಯರ ಪ್ರವೇಶಕ್ಕೆ ನಿರ್ಬಂಧವಿದ್ದ ಉರಾಲ್ ಪರ್ವತ ಪ್ರದೇಶದ ದೊಡ್ಡ ಔದ್ಯಮಿಕ ಕೇಂದ್ರಗಳನ್ನು ಸಹ ನೆಹರುಗಳಿಗೆ ತೋರಿಸಿ, ರಶ್ಯ ಹೆಚ್ಚಿನ ವಿಶ್ವಾಸವನ್ನು ಪ್ರಕಟಿಸಿತು. ಮಂಗಳವಾರ ದಿನ ನೆಹರುಗಳು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ರಶ್ಯದ ಪ್ರಧಾನಿ ಬುಲ್ಗೇನಿನ್ನರು ಭಾರತಕ್ಕೆ ಬರಲು ಒಪ್ಪಿರುವರೆಂದು ತಿಳಿಸಿದರು.

ಕಮ್ಯೂನಿಸ್ಟರ ಪ್ರತಿಕ್ರಿಯೆ

ರಶ್ಯದ ಪ್ರವಾಸದಿಂದ ಏನು ಸತ್ಪರಿಣಾಮವಾಗುವುದೆಂಬುದನ್ನು ಕೆಲವು ಕಾಲ ನಿರೀಕ್ಷಿಸಿ ನೋಡ ಬೇಕಾಗಿದೆ. ಪೋಸ್ಕೋದಿಂದ ಹೊರಡುವ ಸಮಯಕ್ಕೆ ಪ್ರಕಟಿಸಬಹುದಾದ ಸಂಯುಕ್ತ ಹೇಳಿಕೆಯನ್ನು ನೋಡಿದ ಬಳಿಕ, ಅಥವಾ ಪೋಸ್ಕೋದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ನೆಹರುಗಳು ಭಾಗವಹಿಸಿದ ತರುವಾಯ, ಪ್ರವಾಸದ ಪ್ರಯೋಜನಾಂಶದಅಂದಾಜನ್ನು ಕಟ್ಟಿಕೊಳ್ಳಬಹುದು. ಆದರೆ, ನೆಹರುಗಳು ರಶ್ಯದಲ್ಲಿ ಪಡೆದಿರುವ ಜನಪ್ರಿಯತೆ, ಮತ್ತು ಮಾನವನಾಗರಿಕತೆಯ ಸಂರಕ್ಷಕನೆಂದು ರಶ್ಯದ ಧುರೀಣರು ನೆಹರುಗಳ ವಿಷಯದಲ್ಲಿ ಮಾಡಿದ ಪ್ರಶಂಸೆ, ಭಾರತದಲ್ಲಿ ಕಮ್ಯೂನಿಸ್ಟರ ವರ್ಚಸ್ಸನ್ನು ಕುಗ್ಗಿಸಿದೆ ಎಂಬುದು ನಿಸ್ಸಂಶಯ.

ಮೆನೊನರ ಮಾತುಕತೆ

ಭಾರತದ ಸಂಚಾರಿ ರಾಯಭಾರಿ ಮೆನೋನರು ಅಧ್ಯಕ್ಷ ಐಸೆನ್ ಹೋವರರನ್ನು ಕಳೆದವಾರ ಭೇಟಿಯಾದರು. ಜಾಗತಿಕ ವಿದ್ಯಮಾನಗಳ ಕುರಿತು ಸಾಮಾನ್ಯ ಮಾತುಕತೆಯಾಯಿತೆಂದು ಮೆನೋನರು ತಿಳಿಸಿದ್ದಾರೆ. ಗೋಸ್ಯವಾಗಿ ತಿಳಿದುಬಂದ ಮೇರೆಗೆ ಚೀನದೊಡನೆ ನೇರಾದ ಸಂಪರ್ಕವನ್ನು ಸ್ಥಾಪಿಸಿ ಅಮೇರಿಕವು ಫೊರ್ಮೋಸ ಮತ್ತಿತರ ವಿವಾದಾಸ್ಪದ ವಿಷಯಗಳಲ್ಲಿ ಚರ್ಚೆ ನಡೆಸುವ ಕುರಿತು ಮೆನೋನರು ಅಭಿಪ್ರಾಯ ವ್ಯಕ್ತಪಡಿಸಿದರು ಎನ್ನಬೇಕಾಗುತ್ತದೆ. ಆದರೆ, ಅಮೇರಿಕಕ್ಕೆ ಚೀನದ ಜನತಾ ರಾಜ್ಯದ ಹೇಳಿಕೆಗಳಲ್ಲಿಯೂ ಕೃತಿಗಳಲ್ಲಿಯೂ ಪ್ರಾಮಾಣಿಕತೆ ಕಾಣಿಸುವುದಿಲ್ಲ.

ಶಸ್ತ್ರ ಸಂಗ್ರಹ ಸ್ಪರ್ಧೆ

ಅಧ್ಯಕ್ಷ ಐಸೆನ್ ಹೋವರರು ದಿನಾಂಕ ೨೧ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಹತ್ತನೇ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ನಡೆದಿರುವ ಸ್ಪರ್ಧೆಯನ್ನು ಟೀಕಿಸಿ, ಅದುನಿಲ್ಲಬೇಕು ಎಂದರು. ಆಯುಧಗಳ ಉಪಯೋಗ ಅಗತ್ಯವಿಲ್ಲದ ಶಾಂತ ವಾತಾವರಣವನ್ನು ನಾವು ನೆಲೆಗೊಳಿಸಬೇಕು ಇದು ಸಾಧ್ಯವಾದರೆ, ಜನರ ಬುದ್ಧಿಯು ರಚನಾತ್ಮಕ ಕೃತ್ಯಗಳ ಕಡೆ ತಿರುಗುತ್ತದೆ ಆಯುಧಗಳಿಗಾಗಿ ವ್ಯಯವಾಗುವ ಹಣವನ್ನು ಅಭಿವೃದ್ಧಿಗಾಗಿ ನೀಡಲು ಆಗ ಸಾಧ್ಯವಾದೀತು ಎಂದೂ ಹೇಳಿದರು.

ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರ

ಹೇಯ ರಾಜಕೀಯ ನೋಸದ ಪ್ರತೀಕವೆನಿಸಿದ "ಕಾಶ್ಮಿರ್ ಪ್ರಿನ್ಸೆಸ್" ವಿಮಾನದ ಅವಘಡದಲ್ಲಿ ಮೃತ್ಯುವಶರಾದವರನ್ನೊಳಗೊಂಡು ವಿಮಾನ ಚಾಲಕ ವರ್ಗದಲ್ಲಿದ್ದ ಎಂಟೂ ಜನರಿಗೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಅಶೋಕ ಚಕ್ರಗಳ ಪ್ರಶಸ್ತಿಯನ್ನು ದಯವಾಲಿಸಿದ್ದಾರೆ. ಇವರು ಗಂಡಾಂತರ ಪರಿಸ್ಥಿತಿಯಲ್ಲಿ ತೋರಿಸಿದ ಸ್ಥೈರ್ಯ ಮತ್ತು ಕರ್ತವ್ಯ ದಕ್ಷತೆಗಳನ್ನು ರಾಷ್ಟ್ರಾಧ್ಯಕ್ಷರು ಕೊಂಡಾಡಿದ್ದಾರೆ.

ಬೊಂಬಾಯಿ— ಜವಾಹರಲಾಲ ಧರ್ಮಾರ್ಥ ರಾತ್ರಿಶಾಲೆ, ಕೋಟೆ, ಬೊಂಬಾಯಿ—ಈ ಸಂಸ್ಥೆಯು 1950ನೆ ಇಸವಿಯಲ್ಲಿ ಶ್ರೀ ಮುಂಡೂರು ಸಂಜೀವರಾಯರಿಂದ ಸ್ಥಾಪಿಸಲ್ಪಟ್ಟು ವರ್ಷಂಪ್ರತಿಯೂ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವುದು. ಕಳದ ಎಸ್. ಎಸ್. ಸಿ. ಪರೀಕ್ಷೆಗೆ ಕುಳಿತ 31 ವಿದ್ಯಾರ್ಥಿಗಳಲ್ಲಿ 11 ಮಂದಿ ಪಾಸಾಗಿರುವರು. ಚಾಲ್ತಿವರುಷದಲ್ಲಿ ಹೊಸ ವಿಭಾಗಗಳನ್ನು ತೆರೆಯಲಾಗುವುದು. ಅಲ್ಲದೆ, ಎಸ್. ಎಸ್. ಸಿ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಒಂದು ನೂರು ರೂಪಾಯಿ ಬಹುಮಾನ ಕೊಡಲಾಗುವುದು. ಸಾಂಸ್ಕೃತಿಕ ಶಿಕ್ಷಣದ ಏರ್ಪಾಡು ಕೊಡಾ ಮಾಡಲಾಗಿದೆ. ಬಂದನ ತರಗತಿಯಿಂದ ಎಸ್. ಎಸ್. ಸಿ. ತನಕವೂ ಸಂಸ್ಕೃತ ಹಿಂದಿ ಧರ್ಮಾರ್ಥ ವಿದ್ಯಾಭ್ಯಾಸ ಪಡೆಯಲಿಚ್ಛಿಸುವವರು ಕೂಡಲೆ ಶ್ರೀ ಮುಂಡ್ಕೂರ ಸಂಜೀವ ರಾವ್, ಗೌರವ ಪ್ರಿನ್ಸಿಪಾಲ್, ಬಿ. ಜವಾಹರಲಾಲ ಧರ್ಮಾರ್ಥ ರಾತ್ರಿ ಶಾಲೆ, 283 ಕಾರ್ನಾಕ್ ರೋಡ್; ಹೋಟೆಲ್, ಬೊಂಬಾಯಿ ನಂಬ್ರ 1—ಅವರನ್ನು ಕಾಣುವುದು.

ಕೊಯಮುತ್ತೂರು— ಸ್ಥಳೀಯ ಕರ್ನಾಟಕ ಸಭೆಂದ ವಾರ್ಷಿಕ ಸಭೆಯು ತಾ. 12ರಲ್ಲಿ ಜರಗಿ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದು ಶ್ರೀಗಳಾದ ಎಚ್. ಸಿ. ಕೊಲಾಸೊ, ಅಧ್ಯಕ್ಷ; ಉಚ್ಚಿಲ ವಾಸು ಮತ್ತು ಕೆ. ಗೋವಿಂದ್ರಾವ್ ಉಪಾಧ್ಯಕ್ಷರು; ಕೆ. ಎಸ್. ನೆಟ್ಟಿ, ಕೋಶಾಧಿಕಾರಿ; ಡಾ| ಸಿ. ವಿ. ರಾಮಂಜಾಚಾರ್ ಮತ್ತು ಎನ್. ಆರ್. ಬಾಕೂರು ಕಾರ್ಯದರ್ಶಿಗಳು: ಕೆ. ಎಸ್. ನಾರಾಯಣ ಭಟ್, ಡಾ| ಪಿ. ರಾಜಗೋಪಾಲ ಉಡುಪ, ಡಾ| ಪಿ. ಎನ್. ಅರಿಗಾ, ಕೆ. ಲಕ್ಷ್ಮೀನಾರಾಯಣ ರಾವ್, ಕೆ. ಸಿ. ವಿ. ರಾವ್, ಎಮ್. ಎಸ್. ಪ್ರಭು, ಟಿ. ಆರ್. ಶ್ರೀನಿವಾಸ ರಾವ್, ಕೆ. ಕೃಷ್ಣ ಮಾರ್ಲಾ, ಕೆ. ಕೃಷ್ಣ ನೆಟ್ಟಿ, ಶ್ರೀಮತಿ ಮನೋರಮಾ ನಾರಾಯಣ ರಾವ್ ಮತ್ತು ಶ್ರೀಮತಿ ಮೇಬಲ್ ಕೊಲಾಸೊ, ಇತರ ಸದ್ಯರಾಗಿ ಆರಿಸಲ್ಪಟ್ಟರು.

ಶ್ರೀ| ಟಿ. ಎ. ಪೈಗಳು:— ಕೊಯಮುತ್ತೂರಲ್ಲಿ ನಡೆದ ವಿದೇಶೀ ವಿದ್ಯಾರ್ಥಿಗಳ ಶಿಬಿರದ ಸಮಾರೋಪಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ ಎ. ಪೈ, ಎಂ. ಎಲ್. ಎ. ಇವರು ವಹಿಸಿದ್ದರು. 18 ವಿವಿಧ ದೇಶಗಳ 45 ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ಮದ್ರಾಸಿನ ಗವರ್ನರ್ ಶ್ರೀ| ಪ್ರಕಾಶರು ಮೇ 17ರಲ್ಲಿ ಇದನ್ನು ಉದಕಮಂಡಲದಲ್ಲಿ ಉದ್ಘಾಟಿಸಿದ್ದರು. ಶ್ರೀ ಟಿ. ಎ. ಪೈಯವರು ಭಾರತ ಸ್ವಾತಂತ್ರ್ಯದ ಮಹತ್ವ ವಿವರಿಸಿ ಶಾಂತಿಯಿಂದಲೇ ಇದನ್ನು ಪಡೆದುದರಿಂದ ಬ್ರಿಟಿಷರೊಡನೆ ಯೋಗ್ಯ ಮಿತ್ರತ್ವವೂ ಉಳಿಯಬಹುದಾಯಿತೆಂದರು.

ಉಡುಪಿ

ವಿದಾಯ ಸತ್ಕಾರ— ಸ್ಥಳೀಯ ಸರಕಾರಿ ತರಬೇತಿಶಾಲೆಯ ಹೆಡ್ಮಾಸ್ಟರ್ ಶ್ರೀ ಉಗ್ರಾಣ ಕೃಷ್ಣರಾಯರಿಗೆ ವರ್ಗವಾದ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭವು ತಾ 15ರಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾಗಿ ಅವರ ಸ್ಥಾನದಲ್ಲಿ ಬಂದ ಶ್ರೀ ಬಿ. ಶ್ರೀನಿವಾಸಾಚಾರ್ಯರು ಸಭಾಧ್ಯಕ್ಷತೆವಹಿಸಿದ್ದರು. ಅಧ್ಯಾಪಕರ ಕಡೆಯಿಂದ ಶ್ರೀ ಸಿ. ಸುಶೀಲೇಂದ್ರಾಚಾರ್ಯರೂ, ವಿದ್ಯಾರ್ಥಿಗಳ ಪರವಾಗಿ ಶ್ರೀ ಪದ್ಮನಾಭ ಭಟ್ಟರೂ ಕಾಲೋಚಿತ ಮಾತುಗಳನ್ನಾಡಿದರು.

ಸಮಾಜ ಸೇವಕ ಶಿಬಿರಮುಕ್ತಾಯ— ಭಾರತಸೇವಕ ಸಮಾಜದ ಕಡೆಯಿಂದ ಕಳದ ತಾ. 20ರಲ್ಲಿ ತೆರೆಯಲಾದ ಸೇವಕ ತರಬೇತಿ ಶಿಬಿರದ ಮುಕ್ತಾಯ ಸಮಾರಂಭವು ಇದೇ ತಾ. 18ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮರವರ ಅಧ್ಯಕ್ಷತೆಯಲ್ಲಿ ಎಂ. ಜಿ. ಎಮ್ ಕಾಲೇಜಿನಲ್ಲಿ ಜರಗಿತು. ಶಿಬಿರದ ಕನ್ವೀನರ್ ಶ್ರೀಮತಿ ಸ್ವೇಮಾ ಎ. ಪೈಗಳು ವರದಿಯನ್ನೋದಿದರು. ಅಧ್ಯಕ್ಷರು ಪಾಠೋಪಹಿತರಣೆಮಾಡಿ ಶಿಬಿರ ಪಾಸಿಗಳು ಮಾಡಿದ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಶಿಬಿರದಲ್ಲಿ ಪಡೆದ ಅನುಭವವನ್ನು ಟೀಪನದಲ್ಲಿ ಉಪಯೋಗಿಸಬೇಕೆಂದರು. ವಿವಿಧ ವಿನೋದಾವಳಿಗಳಾಗಿ ಸಮಾರಂಭ ಕೊನೆಗೊಂಡಿತು.

ಮಣಿಪಾಲದಲ್ಲಿ ಹೆರಿಗೆ ಆಸ್ಪತ್ರೆ ಉದ್ಘಾಟನೆ:- ಮಣಿಪಾಲದಲ್ಲಿ ಹೊಸತಾಗಿ ಕಟ್ಟಲಾದ ಹೆರಿಗೆ ಆಸ್ಪತ್ರೆಯನ್ನು ತಾ. 19 ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮ್, ಅವರು ಉದ್ಘಾಟಿಸಿದರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡೀನ್ ಕೇಶ್ವನ್ ಮಂಗೇಶರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ ಎ. ಪೈ, ಎಮ್. ಎಲ್. ಎ., ಅವರು ಸ್ವಾಗತ ಭಾಷಣಮಾಡಿದರು. ಆಸ್ಪತ್ರೆಯನ್ನು ಮೆಡಿಕಲ್ ಕಾಲೇಜಿಗೆ ಬಿಟ್ಟುಕೊಡುವ ಕಾರ್ಯವನ್ನು ಜಿಲ್ಲಾ ಕಲೆಕ್ಟರರು ನಡೆಸಬೇಕೆಂದು ಶ್ರೀ ರಮೇಶ ಪೈಗಳು ವಿನಂತಿಸಿದ ಮೇರೆಗೆ ಜಿಲ್ಲಾ ಕಲೆಕ್ಟರರು ಡಾ. ಟಿ. ಎಮ್. ಎ. ಪೈಗಳಿಗೆ ಒಪ್ಪಿಸಿದರು. ಇಂತಹ ಹೆರಿಗೆ ಕೇಂದ್ರಗಳು ಇನ್ನೂ ಇತರ ಸ್ಥಳಗಳಲ್ಲಿ ಆಗುವಂತೆ ಮಣಿಪಾಲದ ಧುರೀಣರುಅದರ್ಶ ಹಾಕಿದುದು ಸಂತೋಷಕರವೆಂದು ಅಧ್ಯಕ್ಷರು ಹೇಳಿದರು. ಜನತೆಯ ಸಹಕಾರ, ಜೆಂಬಲವನ್ನು ಅಪೇಕ್ಷಿಸಿ ಡಾ. ಪೈಗಳು ಮಾತನಾಡಿದರು.

ಶ್ರೀ ವೆಂಕಟೇಶ ಸೇವಾಸಮಿತಿ— ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ತಾ 18ರಲ್ಲಿ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ದೇವಸ್ಥಾನದ ಭಜಕರ ಸಭೆಯು ಜರಗಿ ಶ್ರೀ ವೆಂಕಟೇಶ ಸೇವಾಸಮಿತಿಯೊಂದು ರಚಿಸಲಾಯಿತು. ಸಮಿತಿಯ ಕಾರ್ಯನಿರ್ವಾಹಕರಾಗಿ ಶ್ರೀಗಳಾದ ಕೆ. ಪರಮರಿ ಕಾರ್ಣಾ, ಅಧ್ಯಕ್ಷ; ಯು. ರಾಘವೇಂದ್ರ ಭಟ್ಟ ಮತ್ತು ಎರೋಡಿ ರಾಧಾಕೃಷ್ಣ ಪೈ, ಉಪಾಧ್ಯಕ್ಷರು; ಕೆ. ಗೋಪಾಲಕೃಷ್ಣ ಪ್ರಭು, ಕಾರ್ಯದರ್ಶಿ; ಕೆ ರಾಮಚಂದ್ರ ನಾಯಕ್ ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟಿದ್ದರು.

ಸಂಗೀತ ಕಚೇರಿ— ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದ ಪರಿವೇಂದ್ರ ಕಲಾಮಂದಿರದಲ್ಲಿ ಮಿತ್ರಮಂಡಳಿಯ ಪತಿಯಿಂದ ತಾ. 19ರಲ್ಲಿ ಗಾನಸಿರಿಯರೆದೆ ಶ್ರೀಮತಿ ಕಾತ್ಯಾಯಿನಿ ಕೃಷ್ಣಮೂರ್ತಿಯವರ ಸಂಗೀತವು ಶ್ರೀ ಕೆ. ಮಂಜುನಾಥಯ್ಯನವರ ಪಿಡ್ಲು ವಾದನ ಮತ್ತು ಶ್ರೀ ಸುಂದರಾಚಾರ್ಯರ ಮೃದಂಗವಾದನಗಳೊಂದಿಗೆ ನಡೆಯಿತು. ಶ್ರೀಮತಿಯವರು ಶಿವಮೊಗ್ಗೆಯ ಪ್ರಸಿದ್ಧ ಸಂಗೀತ ವಿದ್ವಾನ್ ಹಾಗೂ ರೇಡಿಯೋ ಕಲಾವಿದರಾದ ಶ್ರೀ. ಎ. ಜಾ. ರಾಮನಾಥನ್ ಅವರ ಶಿಷ್ಯೆಯರಿದ್ದು, ಸದ್ಯ ಉಡುಪಿಯಲ್ಲಿಯೇ ವಾಸ್ತವ್ಯಮಾಡಿಕೊಂಡಿರುವರು.

ಸತ್ಕಾರ ಸಮಾರಂಭ:- ಡಾ. ಟಿ. ಮಾಧವ ಪೈಗಳ ಪುತ್ರ ಶ್ರೀ ಟಿ. ಮೋಹನಸಾಯಿಪೈಗಳು, ಕುಮಾರಿ ಸರೋಜಿನಿಯನ್ನು ವಿವಾಹವಾದ ನಿಮಿತ್ತವಾಗಿ ಸ್ಥಳೀಯ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪನಿಯವರು ತಾ. 18ರಂದು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಶ್ರೀ ಬಿ. ವೈಕುಂಠ ಬಾಳಿಗರು ಅಧ್ಯಕ್ಷತೆ ವಹಿಸಿ, ನೂತನ ದಂಪತಿಗಳ ಶುಭಾಶಂಸೆ ಮಾಡಿದರು. ಡಾ. ಮಾಧವ ಪೈಗಳು ಕಂಪನಿಯ ತೋರಿಸಿದ ಆತ್ಮೀಯತೆಗೆ ಕೃತಜ್ಞತೆಯನ್ನು ಸೂಚಿಸಿದರು.

ಮೊಡರ್ನ್ ಹಾ| ಎ| ಶಾಲೆಯ:- ಬಡವಿದ್ಯಾರ್ಥಿಗಳಿಗೆ ತಾ 15ರಂದು ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮ್ ಅವರು ಶ್ರೀ ಟಿ. ಎ. ಪೈ, ಎಂ. ಎಲ್. ಎ. ದೆಸರ ಅಧ್ಯಕ್ಷತೆಯಲ್ಲಿ ಉಡುಗೆ ಮತ್ತು ಪುಸ್ತಕಗಳನ್ನು ವಿತರಿಸಿದರು.

ಉದ್ಯಾವರ:—ಉಡುಪಿ ತಾಲೂಕು ಕೈಸುಂಜಾಲಿನಿಂದ ಕದೆಕಾರ್ ವರೆಗಿನ 14 ಮಾನವೀರ ಕೂಡುಕಟ್ಟುಗಳ ಒಕ್ಕೂಟಕ್ಕೆ 14 ಪಟ್ಟಣ ಸಭೆಯನ್ನುದ್ಘಾಟಿಸಲಾಗಿದೆ. ತಾ. 11-6-54ರಿಂದ ಈ ಸಭೆಯೊಳಗೆ ಬಿಕ್ಕಟ್ಟು ಉಂಟಾಗಿದ್ದು ಅದು ನಿವೃತ್ತಿಯಾದುದಿಲ್ಲವೆಂದೂ ಉಭಯ ಪಂಗಡಗಳು ಒಂದಾಗಿ 14 ಪಟ್ಟಣ ಸಭೆಯ ಹೆಸರಿನಿಂದ ನಡೆಯಬಹುದಾದ ಚಟುವಟಿಕೆಗಳು ಉಭಯತರಿಗೂ ಲಗಾಮಾಗತಕ್ಕುದಲ್ಲವೆಂದೂ ಒಂದೇ ಪಂಗಡದವರಿಗೆ ಸಭೆಯ ಘಂಡಿನಿಂದ ಹಣವನ್ನು ಉಪಯೋಗಿಸುವ ಅಧಿಕಾರ ಯಾರಿಗೂ ಇರುವುದಿಲ್ಲವೆಂದೂ ತಾತ್ಕಾಲಿಕ ಕಮಿಟಿಯ ಕಡೆಯಿಂದ ಮಹನೀಯರೊಬ್ಬರು ಬರೆಯುತ್ತಾರೆ.

ಸಂಕಾರದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕಾಂತ ರೈ ವಿದ್ವಾನ್ ಇವರು ಬರೆದಿರುವ

ಪ್ರೌಢ ಶಾಲಾ ವ್ಯಾಕರಣ

ಮತ್ತು

ಛಂದೋಲಂಕಾರ ಸಾರ

ಎಂಬ ವ್ಯಾಕರಣ ಪುಸ್ತಕವು

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಪಠ್ಯಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಪುಟಗಳು: ೨೫೦ (ದ್ವಿತೀಯ ಮುದ್ರಣ) ಬೆಲೆ: ೧-೧೦ ೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಜಯ ಮುದ್ರಣಾಲಯ, ಮೂಡಬಿದಿರೆ. ದ. ಕ.

ಕವಿಭೂಷಣ ಕೆ. ಸಿ. ವೆಂಕಪ್ಪ ಶೆಟ್ಟಿ	
ಸಾಸಿರ ಭೀಮ ಸಿಯ	0—8—0
ಲತ್ತಪಗಣೆ	0—6—0
ಭರತೇಶ ದಿಗ್ವಿಜಯ	0—8—0
ಸಾರಿ ಸುಗ್ರೀವ	0—8—0

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: ೦ ೮ ೦

ಮಂಗಳೂರು

ವಿದಾಯ ಸತ್ಕಾರ:— ಮಂಗಳೂರನ್ನು ಬಿಟ್ಟು ಮದ್ರಾಸಿನಲ್ಲಿ ನೆಲೆಸಲಿರುವ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಸಿ. ಅವರನ್ನು ಬೀಳ್ಕೊಡುವ ಸಮಾರಂಭವೊಂದು ತಾ. 18ರಲ್ಲು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀಗಳಾದ ಕೆ. ಬಾಲಕೃಷ್ಣ ರಾನ್, ಹೊಳಲಿ ಶಂಕರನಾರಾಯಣ ಶಾಸ್ತ್ರಿ ಮೊದಲಾದ ಅರ್ಥಧಾರಿಗಳಿಂದಲೂ, ಶ್ರೀ ಮಹಾಬಲ ನೋಂಡರ ಭಾಗವತಿಕೆ ಮತ್ತು ಶ್ರೀ ಪರಿಕ್ಕಳ ಈಶ್ವರಪ್ಪಯ್ಯನವರ ಮೃದಂಗದಿಂದೊಡಗೂಡಿ 'ಅಗ್ರಪೂಜೆ' ಎಂಬ ಯಕ್ಷಗಾನ ಜರಗಿತು. ಬಳಿಕ ಶ್ರೀ ಬಾಲಕೃಷ್ಣ ರಾಯರು ಸ್ವಾಗತ ಮಾತುಗಳನ್ನಾಡಿದರು. ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಾಮಾನ್ಯ ಅತಿಥಿಯ ರಾಜಕೀಯ ಹಾಗು ಸಾಮಾಜಿಕ ವರ್ಚಸ್ಸನ್ನು ವಿವರಿಸಿ ಶುಭವನ್ನು ಕೋರಿದರು. ಶ್ರೀ ಹೆಗ್ಡೆಯವರು ತನಗಿತ್ತ ಸತ್ಕಾರ ಗೌರವಕ್ಕಾಗಿ ಆಭಾರ ಸೂಚಿಸಿದರು.

ಜಿಲ್ಲಾ ಬೋರ್ಡು ಸಭೆಯು ತಾ. 15ರಲ್ಲು ಬೆಳ್ತಂಗಡಿಯಲ್ಲಿ ಜರಗಿದಾಗ, ಬೆಳ್ತಂಗಡಿಗೆ ಹೈಸ್ಕೂಲು ಆಗಬೇಕೆಂಬ ಅಲ್ಲಿಯ ನಾಗರಿಕರ ಕೋರಿಕೆಯ ವಿಚಾರವಾಗಿ ಚರ್ಚೆಮಾಡಿ ಅಳುರಿತು ಕೂಲಂಕುಷ ಪರಾಂಬರಿಸಿ ಸರಿಮಾಡಲು ಕಮಿಟಿಯೊಂದು ನೇಮಿಸಲ್ಪಟ್ಟಿತು. ಜಿಲ್ಲಾ ಬೋರ್ಡು ಸದಸ್ಯ ಡಾ! ಬಿ. ನಾರಾಯಣ ರಾಯರು ಬೆಳ್ತಂಗಡಿಗೆ ಹೈಸ್ಕೂಲು ಆಗತ್ಯವಿದೆಯೆಂದು ಸಭೆಯಲ್ಲಿ ಒತ್ತಿಹೇಳಿದರು.

ಆಯುರ್ವೇದ ತರಬೇತಿ ತರಗತಿಗಳ ಉದ್ಘಾಟನೆಯನ್ನು ತಾ. 12ರಲ್ಲಿ ಡಾ! ಎನ್. ವಿ. ಉಪಾಧ್ಯಾಯರು ನೆರವೇರಿಸಿದರು. ವೈದ್ಯಸೂರಿ ಎಮ್. ಆರ್. ಭಟ್ ಮತ್ತು ವೈದ್ಯ ಸಿ. ನರಶಿಂಹ ಪೈಗಳು ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ ಕೊಟ್ಟರು.

ಚುನಾವಣೆಯ ದಿನ ನಡೆದ ಪೆಟ್ಟಿನ ಘಟನೆಯ ತೀರ್ಮಾನ:—ತಾ. 17—10—34ರಲ್ಲು ಜರಗಿದ ದ. ಕ. ಜಿಲ್ಲಾ ಬೋರ್ಡು ಚುನಾವಣೆಯ ದಿನ, ಉಡುಪಿ ತಾಲೂಕು ಕುರುಕಾಲು ಮೋಲಿಂಗ್ ಆಫೀಸಿನ ಮಾರಿದಲ್ಲಿ ಕಾಂಗ್ರೆಸು ಉಮೇದ್ವಾರ ಶ್ರೀ ಕೆ. ಕೆ. ಶೆಟ್ಟರ ಪರವಾಗಿ ಮುಂದಾಳಾಗಿ ಕೆಲಸಮಾಡುತ್ತಿದ್ದ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರಿಗೆ.. ಪ್ರ. ಸೋ. ಪಕ್ಕದ ಉಮೇದ್ವಾರ, ಶ್ರೀ ಸಿ. ಯಸ್. ನಾಯ್ಕರ ಪರವಾಗಿ ಕೆಲಸಮಾಡುತ್ತಿದ್ದ, ಕುರುಕಾಲು ಗ್ರಾಮಸ್ಥರಾದ ನಾಸು ಶೆಟ್ಟಿ (ಕುರುಕಾಲು ಪಕೇರ್ ಚಂದಯ್ಯ ಶೆಟ್ಟಿ ಮಗ) ಮತ್ತು ಅಣ್ಣಯ್ಯ ಶೆಟ್ಟಿ (ಮೂಡಬೆಟ್ಟು ಚರ್ಚ್ ಶಾಲಾ ಅಧ್ಯಾಪಕ) ಎಂಬವರಿಬ್ಬರು— ಹೊಡೆದರೆಂಬ ಆರೋಪದ ಮೇಲೆ ಹೊಡಲಾದ ಸರಕಾರಿ ಮೊಕದ್ದಮೆಯು, ಉಡ್ಪಿ 1ನೇ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ದ. ಕ. ಜಿಲ್ಲಾ ಮೇಜಿಸ್ಟ್ರೇಟರ ಕೋರ್ಟಿಗೆ ವರ್ಗಾಯಿಸಲ್ಪಟ್ಟು ಶ್ರೀ ಡಿ. ನೋರಂಹಾರ ಮುಂದೆ ತನಿಖೆ ನಡೆದು, ಒಂದನೇ ಆರಾದಿತ ನಾಸು ಶೆಟ್ಟರನ್ನು ಬಿಡುಗಡೆಗೊಳಿಸಿಯೂ, ಎರಡನೆ ಆರಾದಿತ ಅಣ್ಣಯ್ಯ ಶೆಟ್ಟಿಗೆ ಕುರುಕಾಲು ಗಣಪಯ್ಯ ಶೆಟ್ಟಿಗೆ ಕೊಡಬೇಕಾಗಿ ನಿಯಮಿಸಿದ ಪರಿಹಾರ ದ್ರವ್ಯ ರೂಪ್ಯಾ50/—ಕೂಡಾ ರೂಪ್ಯಾ 200/- ಜುಲುಮಾನೆಯನ್ನೂ, ಕೋರ್ಟು ಮುಗಿಯುವವರೆಗೆ ಬಂದು ದಿನದ ಸಜೆಯನ್ನೂ ವಿಧಿಸಿ ತಾ. 15—6—55ರಲ್ಲು ತೀರ್ಪಾಗಿದೆಯೆಂದು ತಿಳಿದುಬರುತ್ತದೆ. ಆರಾದಿತರ ಪರವಾಗಿ ಉಡ್ಪಿಯ ವಕೀಲ್ ಶ್ರೀ ಬಿ. ತೀನಪ್ಪ ಹೆಗ್ಡೆಯರೂ, ಕಾರ್ಕಳ ವಕೀಲ್ ಶ್ರೀ ಶ್ಯಾಮ ಶೆಟ್ಟರೂ. ಪ್ರೊಸಿಕ್ಯೂಶನ್ ಕಡೆಯಿಂದ ಮಂಗಳೂರಿನ ಎ. ಪಿ. ಪಿ. ಯವರಾದ ಶ್ರೀ. ವಿ. ಕೃಷ್ಣಪ್ಪ ಶೆಟ್ಟರು ಮತ್ತು ಉಡ್ಪಿಯ ವಕೀಲ್ ಶ್ರೀ ಜಿ.ಸಿ. ರೇಗೋರವರೂ, ನ್ಯಾಯಪರಿಸಿದ್ದರು.

ಮೂಲ್ಕಿ— ಸ್ಥಳೀಯ ಸರಕಾರಿ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ. ನಿಕಲ ಶೆಟ್ಟಿಯವರು, ತಾವು ಈಚೆಗೆ ಅಮೇರಿಕಾ, ಇಂಗ್ಲೆಂಡ್, ಶ್ರಾನ್ಸ್, ಸ್ವಿಜರ್‌ಲಾಂಡ್, ಇಟಲಿ ಮತ್ತು ಇಜಿಪ್ಟ್ ದೇಶಗಳಲ್ಲಿ ಪ್ರವಾಸಮಾಡಿ ದಾಗಅಲ್ಲಲ್ಲಿಯಜನಜೀವನವನ್ನುಸಂಗ್ರಹಿಸಿದ ವಿಷಯವನ್ನು ಚಿತ್ರಗಳ ಮಾಯಾಲಾಂಟ್ರ್ನ ಪ್ರದರ್ಶನ ಮುಖೇನ ತಾ. 17ರಲ್ಲಿ ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ತೋರಿಸಿದರು.

ಕರ್ಕುಂಜೆ— ಈ ಗ್ರಾಮದ ಶ್ರೀ ಮಾಣಿಬೈಲು ಅಂತಯ್ಯ ಶೆಟ್ಟರು ಇದೇ ತಾ. 12ರಲ್ಲಿ ಬೆಳಿಗ್ಗೆ ತಮ್ಮ ಸ್ವಗೃಹದಲ್ಲಿ ಸ್ವರ್ಗಸ್ಥರಾದುದು ವಿಶಾದಕರವಿದೆ.

ಪುತ್ತೂರು ಕೊಯಿಲಾ— ಕೊಯಿಲಾ ಗ್ರಾಮದಲ್ಲಿ ಹೊಸತಾಗಿ ಸ್ಥಾಪಿತವಾದ ಪಂಚಾಯತ ಬೋರ್ಡಿಗೆ ಶ್ರೀ ಕಲ್ಲಾಡಿ ರಘುನಾಥ ರೈಗಳು ಬಹುಮತದಿಂದ ಆರಿಸಲ್ಪಟ್ಟಿರುವರು.

ತಲ್ಲೂರು— ಕುಂದಾಪುರ ತಾಲೂಕು ತಲ್ಲೂರು ಕೇಂದ್ರದ ಅಧ್ಯಾಪಕ ಸಂಘದ ಸಭೆಯು ತಾ. 11ರಲ್ಲಿ ಜರಗಿ ಶ್ರೀಗಳಾದ ವೈ. ಸಖಾರಾಮ ರಾಯರು ಕಾರ್ಯದರ್ಶಿಗಳಾಗಿಯೂ, ಪಿ. ರಾಘಾಕೃಷ್ಣ ರಾಯರು ಉಪಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಸಕಕಾರಿ ನೌಕರರ ಸಂಬಳ—ಪುತ್ತೂರಲ್ಲಿ ಜರಗಿದ ರಾಜಕೀಯ ಸಮ್ಮೇಳನದಲ್ಲಿ ಸ್ವೀಕರಿಸಲ್ಪಟ್ಟಿರುವ ನಿರ್ಣಯಗಳಲ್ಲಿ ಈ ಕೆಳಗಿನ ನಿರ್ಣಯಸೂಪ ಬಂದಾಗಿರುತ್ತದೆಂದು ಕಾಸರಗೋಡಿನ ಎಡ್ವೊಕೇಟ್ ಶ್ರೀ. ಎಮ್. ಉಮೇಶರಾಯರು ತಿಳಿಸುತ್ತಾರೆ. ನಿರ್ಣಯ ಹೀಗಿದೆ "ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಸರಕಾರಿ ನೌಕರರ ಮಾಸಿಕ ವೇತನವು ರೂಪಾಯಿ 500/-ನ್ನು ಮೀರ ಕೂಡದಾಗಿ, ಕೆಲವು ವರ್ಷಗಳ ಹಿಂದೆಯೇ ಕಾಂಗ್ರೆಸು ನಿರ್ಣಯಿಸಿತ್ತು. ಆದರೆ ಅನಂತರದ ಧಾರಣೆಗಳ ಬಡಾವಣೆಯಿಂದಾಗಿ ಅದನ್ನು ರೂ. 1500/-ಕ್ಕೆ ಏರಿಸುವುದು ಅಗತ್ಯ. ಒಬ್ಬ ಸರಕಾರಿ ನೌಕರನ ಮಾಸಿಕ ವೇತನವು ರೂ. 1500/-ಕ್ಕೂ ಮೀರಕೂಡದಾಗಿಯೂ, ಕುಟುಂಬ ಸಮೇತ ಮರ್ಯಾದೆಯಿಂದ ಜೀವಿಸುವರೆ ಬೇಕಾದ ಹಣಕ್ಕಿಂತ ಕಡಿಮೆಯಿರೆ ಕೂಡದಾಗಿಯೂ ಈ ಪರಿಷತ್ತು ಅಭಿಪ್ರಾಯಪಡುತ್ತದೆ."

ಕುರಿಯಾಳ— ಸಮಾಜವಿಕಾಸಯೋಜನೆಯ ಸಹಾಯದಿಂದ ಕುರಿಯಾಳ ಗ್ರಾಮದಲ್ಲಿ ಕಟ್ಟಿರುವ ಶಾಲೆಯ ವಿಸ್ತರಣದ ಹೊಸ ಕಟ್ಟೋಣವನ್ನು ತಾ. 15ರಲ್ಲಿ ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮರು ತೆರೆದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ, ಅವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಲೆಕ್ಟರರು ತಮ್ಮ ಭಾಷಣದಲ್ಲಿ ಶಾಲೆಯ ಉಪಯೋಗದ ಬಗ್ಗೆ ಒಂದು ಹೆರಿಯುವ ಜೀವನ ಬಾವಿಯನ್ನು ನುಂಜೂರು ಮಾಡಲು ಅಶ್ವಾಸನೆಯಿತ್ತರು. ಜಿಲ್ಲಾ ಕಲೆಕ್ಟರರು ಸಮಾಜವಿಕಾಸಯೋಜನೆಗೆ ಸಂಬಂಧಿಸಿದ ಇವರ ಆಸುಪಾಸಿನ ಗ್ರಾಮಗಳನ್ನು ಸಂದರ್ಶಿಸಿ ಅಲ್ಲಿ ಆದ ಮತ್ತು ಆಗುತ್ತಿರುವ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿದರು.

ಕಾಸರಗೋಡು:— ಬಂದಡ್ಕ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. 14ರಲ್ಲಿ ಶ್ರೀ ಬಿ ಸುಬ್ರಾಯರ ಅಧ್ಯಕ್ಷತೆಯಲ್ಲಿ ಮೆತ್ತವರ ಕೂಟವು ಜರಗಿತು.

ಕಳದ ನಗುಪ ಕಾಸರಗೋಡು ತಾಲೂಕಿನಲ್ಲಿ ಹೆಚ್ಚು ಮಿತ್ರ ಗೊಬ್ಬರ ತಯಾರಿಸಿದ ಶ್ರೀ. ಬಿ. ಸೂಥಲ ಪೈಗಳವರಿಗೆ ತಾ. 18ರಲ್ಲು ಕಾಸರಗೋಡು ತಾಲೂಕು ಕಚೇರಿಯಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಪದ್ಮನಾಭ ಕುರುಪ್, ಅವರು ಪ್ರಶಸ್ತಿ ಪತ್ರವನ್ನು ಕೊಟ್ಟರು.

ಕಾರ್ಕಳ:—ಇದೇ ತಾ. 16ರಲ್ಲು ಇಲ್ಲಿಯ ಬೋರ್ಡು ಹೈಸ್ಕೂಲಿನ ನಿವೃತ್ತ ಹೆಡ್ಮಾಸ್ಟರ್ ಶ್ರೀ ಬಿ. ಶ್ಯಾಮರಾಯ ಸೆಟ್ಟರ ತೈಲ ಚಿತ್ರವನ್ನು ಶ್ರೀ ಆರ್. ಹರಿಶಣೈಯವರು ಅನಾವರಣ ಮಾಡಿದರು. ಪ್ರಸ್ತುತದ ಮುಖ್ಯೋಪಾಧ್ಯಾಯ ಶ್ರೀ ಎಸ್. ಆರ್. ಆಚಾರ್ಯರು ಸ್ವಾಗತ ಭಾಷಣ ಮಾಡಿ ಶ್ರೀ ಸೆಟ್ಟರ ಗುಣ ಕಥನಮಾಡಿದರು. ಬಳಿಕ ಶ್ರೀಗಳಾದ ಎನ್. ಮುಯ್ಯ, ಕೆ. ಸಿ. ಮುಕುಂದ ಪ್ರಭು, ಕೆ. ಜಿ. ಹಿಜಿ, ಕೆ. ಗಣಪತಿ ಶೆಣೈ, ಎಮ್. ಎಸ್. ಅಧಿಕಾರಿ, ಕೆ. ಪಾಂಡುರಂಗ ನಾಯಕ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಸೆಟ್ಟರಿಗೆ ಸುವಿಶಾಂತಿಯನ್ನು ಕೋರಲಾಯಿತು. ಶ್ರೀ ಎಮ್. ಬಾಬುಸವರು ವಂದನೆಗಳನ್ನಿತ್ತರು ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಕೆಲವು ಉತ್ತಮ ಪುಸ್ತಕಗಳು.

ಬಮಕು ಬಂಗಾರ (ಕುಮಾರಸ್ವಾಮಿ)	1	8
ಯುಗವಾಣಿ (ಕು. ಶಿ. ಹರಿದಾಸಭಟ್ಟ)	0	8
ಘಂಟೆಮಾರಾ (,,)	2	0
ಐಶಿಯದ ಸಂಪತ್ತು (,,)	2	0
ಪ್ರಜಾಪ್ರಭುತ್ವವನ್ನು ಕುರಿತು (ಶಿವರಾಮ ಕಾರಂತ)	0	8
ಅಂತರಂಗದ ಕತೆಗಳು (ಸಂಕಲನ)	1	4
ಸ್ವಪ್ನಲೋಕ (ಕಾರ್ತಿಕೇಯ)	0	8
ನೀತಿವಿನೋದ ಕತೆಗಳು	0	12
ಸೇನಾಪಥ (ಸೇಟ್ ಗೋವಿಂದಾಸ್)	0	8
ಸರಸ್ವತಿ (ಡಾ! ಎಂ. ಸಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ (ಚಿದಂಬರಯ್ಯ)	0	8
ಭಾರತದ ಕರ್ಣ (ಎನ್. ಎಸ್. ಕಲ್ಲೆ)	0	6
ಪ್ರಾಚೀನ ತುಳುನಾಡು (,,)	2	0
ಮುರಲಿ (,,)	0	12
ಸುಧುವನ (ಸಂಕಲನ)	3	0
ಕಾವ್ಯಸಾಮ್ರಾಜ್ಯ (,,)	1	8
ರನಗಳ ಸಾಗಾಟ (ಕಳ್ಳ ಪೇಟೆ)	0	10
ಕವಿತಾಕಾಮಿನಿ (ಎಸ್. ವೆಂಕಟರಾಜ)	2	0
ಆಕಾಶಗಂಗೆ	1	12
ಜೀವನ ಸಂಗ್ರಾಮ (ಸಿ. ತೀನ ಶೆಟ್ಟಿ)	1	8
ದೇಶಭಕ್ತ (ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ ,,)	1	0

ಏಜಂಟರು ಬೇಕು. ಶರತ್ತುಗಳಿಗೂ ನಮ್ಮಲ್ಲಿ ದೊರೆಯುವ ಎಲ್ಲಾ ಕಡೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆವಶ್ಯಕ ಮಾಹಿತಿಗಳಿಂದ ಕೂಡಿರುವ

ಮಕ್ಕಳ ಮಗ್ಗಿ ಪುಸ್ತಕ

ಬೆಲೆ 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1931ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು, ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ. ಮೆನೇಜರ್, ನವಯುಗ, ಉಡುಪಿ.

ತರುಣ ತರುಣಿಯರಿಗೆ ಅತ್ಯಂತ ಬೋಧಪ್ರದವಾದ ಅಧುನಿಕ ನಾಟಕ

ಅಂಧ ಸಮಾಜದ ನಿರೂಪನನ್ನು, ನ್ಯಾಯವು ಅನ್ಯಾಯವನ್ನು ಗೆದ್ದುಬರುವುದಕ್ಕೆ ಅಧಿಕಾರ, ಧನಲಾಲಸೆಯಲ್ಲ—ಪವಿತ್ರ ಪ್ರೇಮವೊಂದೇ ಶಾಂತಿಯೊಯುವುದೆಂಬುದನ್ನು ಕಾಣಬಹುದಾದ ಏಕಮಾತ್ರ ಸಾಮಾಜಿಕ ನಾಟಕ—

ವ್ಯಭಿಚಾರಿಣಿ ಯಾರು?

100 ಪುಟಗಳಿಗೂ ಮಿಕ್ಕಿದ ಪುಸ್ತಕ!

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆದು ಹೆಸರುಗೊಂಡ

ಶ್ರೀ. ಕೆ. ಕೆ. ಶೆಟ್ಟರೇ ಇದರ ಲೇಖಕರು!!

ಬೆಲೆ: 1—4—0 ಮಾತ್ರ.] [ಟಿ. ಖರ್ಚು ಬೇರೆ

ಸಿಗುವ ಸ್ಥಳಗಳು:—

ಕಿರಿಯರ ಪ್ರಸಂಚ ಉಡುಪಿ., ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!

ದಣಿದ ಮನವನ್ನು ತಣಿಸಿ ನಗಿಸಲು—

ನಗೆ ನೋಟಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)

ಲೇಖಕರು: ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.

(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)

ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.

ಬೆಲೆ: ೧—೪—೦ (ಟಿ. ಖರ್ಚು ಬೇರೆ)

ಕಿಯರ ಪ್ರಸಂಚ ಉಡುಪಿ, ದ.ಕ.

ಸ್ವೀಕಾರ-ವಿಮರ್ಶೆ

ಶ್ರೀ ರಾಮಕೃಷ್ಣ ಲೀಲಾಪ್ರಸಂಗ—

ಮೂಲ ಲೇಖಕರು: ಸ್ವಾಮಿ ಶಾರದಾನಂದ. ಅನುವಾದಕರು: ಸ್ವಾಮಿ ಪ್ರಣವೇಶಾನಂದ. ಪ್ರಕಾಶಕರು: ಶ್ರೀ ರಾಮಕೃಷ್ಣ ಮಠ, ಬೇಲೂರು ಮಠ ಪೋಸ್ಟು (ಹ೗ರಾ ಜಿಲ್ಲೆ-ಪಶ್ಚಿಮ ಬಂಗಾಳ) ಬೆಲೆ. ರೂ. ೨೨.

ಹೊಳೆಸಿದ ಬಿಳಿ ಕಾಗದದಲ್ಲಿ ಬಹಳ ಸುಂದರವಾದ ಮುದ್ರಣ ಹಾಗೂ ಗಟ್ಟಿಮುಟ್ಟಾದ ಕಟ್ಟಿನೊಂದಿಗೆ, ಮತ್ತು ಪುಸ್ತಕದ ವಿಷಯಕ್ಕೆ ಸಂಬಂಧಪಟ್ಟ ಮೂವತ್ತಕ್ಕಿಂತಲೂ ಹೆಚ್ಚು ಆಕರ್ಷಕ ಚಿತ್ರಗಳೊಂದಿಗೆ, ಪ್ರಕಟವಾಗಿರುವ ಈ ಗ್ರಂಥವು ಶ್ರೀ ರಾಮಕೃಷ್ಣ ಪರಮ ಹಂಸರ ಕುರಿತು ಕನ್ನಡದಲ್ಲಿ ಬಂದಿರುವ ಪುಸ್ತಕಗಳಲ್ಲೆಲ್ಲ ಹಿರಿಯದಾದದ್ದು; ಶ್ರೇಷ್ಠವಾದದ್ದು. ಈ ಗ್ರಂಥದ ವಿಸ್ತಾರವೇ ಕ್ರೈಸ್ ೧/೪ ಆಕಾರದ ಅಳತೆ ಪುಟಗಳಷ್ಟಿದೆ; ಅಲ್ಲದೆ, ವಿಷಯಾನುಕ್ರಮಣಿಕೆಯು ಬೇರೆ ೭೦ಪುಟಗಳನ್ನು ಆವರಿಸುತ್ತದೆ. ಇದರ ಮೇಲಿಂದಲೇ ನಾವು ಗ್ರಂಥದಲ್ಲಿ ಅಡಕವಾಗಿರುವ ವಿಷಯ ಸಂಪತ್ತಿನ ವೈಶಾಲ್ಯವನ್ನು ಊಹಿಸಬಹುದು. ಹೊರ ತೋರಿಕೆಗೆ ಇಷ್ಟು ಭವ್ಯವಾಗಿರುವ ಈ ಪುಸ್ತಕದ ಹೂರಣವೂ ಅಷ್ಟೇ ಹೃದಯಂಗಮವಾಗಿದೆ. ಹೆಸರೇ ಹೇಳುವಂತೆ, ಶ್ರೀ ರಾಮಕೃಷ್ಣ ಪರಮ ಹಂಸರ ನಾನಾ ಮುಖವಾದ ಆಧ್ಯಾತ್ಮಿಕ ಜಟುಲಬಟಿಕೆಗಳ ಮೇಲೆ ಶುಭ್ರವಾದ ಪ್ರಕಾಶನನ್ನು ಇದು ಚೆಲ್ಲುತ್ತದೆ. ಇದನ್ನು ಮೂಲಬಂಗಾಳಿಯಲ್ಲಿ ಬರೆದ ಸ್ವಾಮಿ ಶಾರದಾನಂದರು ಶ್ರೀ ರಾಮಕೃಷ್ಣರ ಕೃಪಾಪಾತ್ರರಾಗಿ, ಅವರಿಂದ ಶಿಷ್ಯ ದೀಕ್ಷೆಯನ್ನು ಪರಿಗ್ರಹಿಸಿದ ಅನುಭಾವಿಗಳು; ಗುರುವಿನ ಸಾಧನೆಯನ್ನು ಬಹಳ ಹತ್ತಿರದಿಂದ ಸಮೀಕ್ಷಿಸಿ, ಅವುಗಳನ್ನು ತಾವೂ ಅನುಷ್ಠಿಸಿದ ಯೋಗಿಗಳು. ಅವರು ಈ ಪುಸ್ತಕದ ಮೂಲಕತನ್ನು ಗುರುವಿನ ಕುರಿತಾದ ಮತ್ತು ಪರಮಹಂಸರ ಉಪದೇಶಗಳ ಕುರಿತಾದ, ಅಧಿಕೃತ ವಿಷಯಗಳನ್ನು ಆತ್ಮೀಯತೆಯಿಂದಲೂ ಸ್ವಂತ ಅನುಭವ ಹಾಗು ಜ್ಞಾನದ ಬಲದಿಂದಲೂ ಅತ್ಯಂತ ವಿಶದವಾಗಿ ಮತ್ತು ಎಲ್ಲ ರೀತಿಯಿಂದಲೂ ಸಮಂಜಸವೆನಿಸುವಂತೆ ನಿರೂಪಿಸಿದ್ದಾರೆ. ಪರಮಹಂಸರ ವ್ಯಕ್ತಿತ್ವದ ವಿಷಯದಲ್ಲಿ ಇಲ್ಲಿ ಕಾಣುವಷ್ಟು ಸೂಕ್ಷ್ಮವಾದ ಚಿತ್ರಣ ಬೇರಾವುದೇ ಕನ್ನಡದ ಗ್ರಂಥದಲ್ಲಿ ನನಗೆ ನೋಡಸಿಗುವುದಿಲ್ಲ. ಪರೋಕ್ಷ ಜ್ಞಾನದಿಂದ ಬರೆಯಲಾದ ಗ್ರಂಥಗಳೇ ಕನ್ನಡದಲ್ಲಿ ಹೆಚ್ಚೆಂಬುದನ್ನು ಅಲ್ಲಿ ವಿಷಯದ ಸಾರವಿರುವುದು ಕಡಿಮೆಯೆಂಬುದನ್ನು ನೆನೆದರೆ ಈ ಗ್ರಂಥದ ಯೋಗ್ಯತೆ ಇನ್ನಷ್ಟು ಸ್ಫುಟವಾಗಿ ಗೋಚರಿಸುತ್ತದೆ. ಇಲ್ಲಿ ಪರಮ ಹಂಸರ ಜನನದಾರಭ್ಯದಿಂದ ಅವರ ದೇಹತ್ಯಾಗಕ್ಕೆ ಕೆಲವು ತಿಂಗಳು ಮೊದಲ ವರೆಗಿನ (ಕ್ರಿಸ್ತಾಬ್ದ ೧೮೩೦-೮೦) ಜೀವನದ ಘಟನೆಗಳು ಸಂಕೋಲೆಯ ಗೊಣಸಿನಂತೆ ಪೋಣಿಸಲ್ಪಟ್ಟಿವೆ. ಅವರ ಬೋಧನೆಗಳು ಮನಸ್ಸನ್ನು ಸೆರೆಹಿಡಿಯುವ ಕಥನ ಶೈಲಿಯಲ್ಲಿ ಬೀಳಲ್ಪಟ್ಟಿವೆ. ಪ್ರಸ್ತಾಪಿಸಿದ ವಿಷಯಗಳು ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸಲ್ಪಟ್ಟಿವೆ. ಆವಶ್ಯಕ ಸಂದರ್ಭಗಳಲ್ಲಿ ಗ್ರಂಥಕರ್ತರು ಶಾಸ್ತ್ರಸಮ್ಮತವಾದ ವಿಶ್ಲೇಷಣೆಯಿಂದಲೂ ತರ್ಕಶುದ್ಧವಾದ ವಿಚಾರ ಸರಣಿಯಿಂದಲೂ ವಾಚಕರಲ್ಲಿ ಮೂಡಬಹುದಾದ ಸಂದೇಹಗಳ ನಿವಾರಣೆಗೆ ಪ್ರಯತ್ನಿಸಿದ್ದಾರೆ. ಇವೆಲ್ಲವುಗಳ ಫಲವಾಗಿ ಗ್ರಂಥವು ಬಹಳ ಸತ್ವ ಪೂರ್ಣವಾಗಿದೆ; ಹೃದಯ ಸ್ಪರ್ಶಿಯಾಗಿದೆ; ಸುಲಭಗ್ರಾಹ್ಯವಾಗಿ ನಮ್ಮನ್ನು ಪರಮ ಹಂಸರ ದಿವ್ಯ ಸನ್ನಿಧಿಗೆ ಸೇರಿಸುವಂತೆ ಒಯ್ಯುತ್ತದೆ ಎಂದರೂ ಅತಿಶಯೋಕ್ತಿಯಾಗಲಿಲ್ಲ. ಇಷ್ಟು ವ್ಯಾಸಂಗ ಪೂರ್ಣವಾದ, ತತ್ವ ವಿಚಾರಗಳಿಂದ ತುಂಬಿ ತುಳುಕುವ, ಆನುಭ್ಯಾಸ ವೇದಾಂತವನ್ನು ಭಟ್ಟ ಇಳಿಸಿದಂತಿರುವ, ಆಧ್ಯಾತ್ಮಿಕ ಜಿಜ್ಞಾಸೆಯನ್ನು ಜಾಗೃತಗೊಳಿಸಿ, ಗಮ್ಯಸ್ಥಾನಕ್ಕೊಯ್ಯಬಲ್ಲ ಈ ಗ್ರಂಥದ ಅನುವಾದವನ್ನು ಸ್ವಾಮಿ ಪ್ರಣವೇಶಾನಂದರು ಸಮರ್ಥವಾಗಿಯೂ ನಿರ್ದುಷ್ಟವಾಗಿಯೂ ಮಾಡಿರುವುದು ಸಂತೋಷಕರವಿದ್ದಂತೆ ಪ್ರಶಂಸನೀಯವೂ ಹೌದು. ಅನುವಾದವೆಂದು ಭಾಷಿಸಲಾರದಷ್ಟು ಚೆನ್ನಾಗಿ ಭಾಷೆಯ ಗತಿ ಇದೆ; ಶೈಲಿ ಸುಂದರವಾಗಿದೆ; ಸಾಕಷ್ಟು ಪ್ರಾಢವಾಗಿದೆ. ಅನೇಕ ವರ್ಷಗಳ ಸತತ ಪ್ರಯತ್ನದ ಫಲವಾಗಿ ಸ್ವಾಮಿ ಪ್ರಣವೇಶಾನಂದರು ಕನ್ನಡಿಗರಿಗೆ ಈ ಮಹಾಗ್ರಂಥವನ್ನು ಓದುವ ಮತ್ತು ತಮ್ಮ ನಿತ್ಯಜೀವನದಲ್ಲಿ ಪರಮಹಂಸರ ತತ್ವಗಳನ್ನು ಸಾಧ್ಯವಿದ್ದಷ್ಟು ಪುಟ್ಟಗೆ ಅಳವಡಿಸಿಕೊಳ್ಳುವ ಅಪೂರ್ವ ಸಂದರ್ಭವನ್ನು ಒದಗಿಸಿದ್ದಾರೆ. ಈ ಪುಸ್ತಕದ ವಿಕ್ರಯದಿಂದ ಬರುವ ಲಾಭವೆಲ್ಲ ಬೇಲೂರಿನ ಶ್ರೀ ರಾಮಕೃಷ್ಣ ಮಠಕ್ಕೆ ಸಲ್ಲುತ್ತದೆ; ಅಲ್ಲಿ ಅದು ಲೋಕೋಪಕಾರಿಯಾದ ರೀತಿಯಲ್ಲಿ ಸದ್ವಿನಿಯೋಗವಾಗುತ್ತದೆ ಎಂದೂ ಅನುವಾದಕರು ಘೋಷಿಸಿದ್ದಾರೆ. ಅದುದರಿಂದ ಸ್ವಹಿತ-ಪರಹಿತಗಳೆರಡರ ದೃಷ್ಟಿಯಿಂದಲೂ ಸುಸಂಸ್ಕೃತರಾದ, ಭಾವಶುದ್ಧಿಯುಳ್ಳವರಾದ, ಕನ್ನಡಿಗರು ಅನುವಾದಕನ್ನೂ ಪ್ರಕಾಶಕರನ್ನೂ ಪ್ರೋತ್ಸಾಹಿಸುವರೆಂದು ನಾವು ನಂಬುತ್ತೇವೆ.

—ಕುಮಾರಸ್ವಾಮಿ

ದೇಶಭಕ್ತ ಕಾನಾಡು ಸದಾಶಿವ ರಾಯರು—

ಸಂಗ್ರಹಣ ಮತ್ತು ಪ್ರಕಾಶನ: ಬಿ. ಎಸ್. ಭಾಸ್ಕರ ರೈ, ಬಿ. ಎ., ಎಲ್‌ಎಲ್. ಬಿ., ಹಂಪನಕಟ್ಟೆ, ಮಂಗಳೂರು ೧. ಬೆಲೆ: ರೂ. ೦—೧೨—೦.

ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಚಳವಳದಲ್ಲಿ ಅದ್ವಿತೀಯ ಪಾತ್ರವನ್ನು ವಹಿಸಿದ, ಸಾಮಾಜಿಕ ಪುನರುಜ್ಜೀವನದ ಚಟುವಟಿಕೆಗಳಲ್ಲಿ ಸಕ್ರಿಯ ಸೇವೆಯನ್ನು ಸಲ್ಲಿಸಿದ, ಕಾಂಗ್ರೆಸು ಸಂಸ್ಥೆಯ ಧ್ಯೇಯ ಆಡಿಗಳನ್ನು ಕರ್ನಾಟಕದಲ್ಲಿ ಹಾಕಿದ ಮಹಾ ಪುರುಷರೇ ದಿವಂಗತ ದೇಶಭಕ್ತ ಕಾನಾಡು ಸದಾಶಿವರಾಯರು. ಅವರ ಕೆಚ್ಚು, ಶಕ್ತಿ, ಔದಾರ್ಯ, ಅನುಕಂಪ, ತ್ಯಾಗ ಮತ್ತು ನಿಷ್ಠೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಹೆಜ್ಜೆ ಹಾಕುತ್ತಿರುವವರಿಗೆ ನಿಜಕ್ಕೂ ಅನುಕರಣೀಯವಾಗಿವೆ. ಜಿಲ್ಲೆಯ ಮುಖಂಡರು ಕೆಲವರು ಸದಾಶಿವರಾಯರ ಕೊನೆಯ ದಿನ-ಳಲ್ಲಿ ಕೃತಜ್ಞತೆಯಿಂದ ನಡೆಸುಕೊಂಡು, ದ್ರೋಹ ಬಗೆದರೂ ಜನತೆ ಈ ದೇಶಭಕ್ತನನ್ನು ಮರೆಯಲಾರದು. ಆದರೆ ನಮರೆಯಲಾರದೆ ಈ ಜನತೆ ಅವರ ನೆನಪಿಗಾಗಿ ಏನು ಮಾಡಿದೆ? ಸ್ಮಾರಕ ಸಮಿತಿಯೊಂದು ಸ್ಥಾಪಿಸಲ್ಪಟ್ಟಿತ್ತು, ನಿಮ್ಮ ಕೆಲಸಮಾಡದೆ ಮೂಲೆ ಗುಂಪಾಯಿತು. ಈಗ ಮಂಗಳೂರಿನ ಕಾಂಗ್ರೆಸು ಸಂಸ್ಥೆಯ ಕಾರ್ಯಾಲಯದಲ್ಲೊಂದು ಚಿತ್ರ ತೂಗುತ್ತದೆ-ಅದೇ, ಅಸ್ಪಷ್ಟ, ಅವರ ಸ್ಮಾರಕ: ಹೀಗಿರುವಾಗ, ಶ್ರೀ ಭಾಸ್ಕರ ರೈಗಳು ಎಪ್ಪತ್ತು ಪುಟಗಳ ಈ ಚಿಕ್ಕ ಗ್ರಂಥದ ಮೂಲಕ ಈಗಿನ ಪೀಳಿಗೆಯ ಜನರು ಸದಾಶಿವಂತಹ ಸದಾಶಿವ ರಾಯರನ್ನು ಚೆನ್ನಾಗಿ ತಿಳಿಗು ಕೊಳ್ಳಲು ಸಾಧ್ಯವಾಗುವಂತೆ ಮಾಡಿರುವುದು ಶ್ಲಾಘನೀಯವಾದ ಕಾರ್ಯ. ಇದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ.

ತಂಬಾಕು ಮೋಹಿನಿ—

ಬರೆದವರು: ಬಿ. ಮೋಹನಪ್ಪ ಶಿಂಗಳಾಯ. ಪ್ರಕಾಶಕರು: ಮೊಗವೀರ ಶ್ರೀ ಜ್ಞಾನೋದಯ ಸಮಾಜ, ಮಂಗಳೂರು. ಬೆಲೆ: ರೂ. ೦-೩-೦

ಹೊಗೆ ಸೊಪ್ಪನ್ನು ಬೇರೆ ಬೇರೆ ರೀತಿಯಿಂದ ಸೇವಿಸುವುದು ಬಹಳ ಕೆಟ್ಟದಾದ ಮತ್ತು ನಮ್ಮಲ್ಲಿ ಹೆಚ್ಚಿನವರಿಗೆ ಅಂಟಿಕೊಂಡಿರುವ ಚಟವಾಗಿದೆ. ಅದು ಯಾವ ಬಗೆಯಾಗಿ ಆರೋಗ್ಯಕ್ಕೆ ಹಾನಿ ಮಾಡುತ್ತದೆಂಬುದನ್ನು ಈ ಚಿಕ್ಕ ಪುಸ್ತಕವು ಆಧಾರ ಸಹಿತವಾಗಿ ವಿವರಿಸುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಕೈಯಾಡಿಸಿರುವ ಪ್ರವೀಣರ ಮಾತುಗಳನ್ನು ಕ್ರೋಢೀಕರಿಸಿಕೊಂಡು ಸುಲಭ ಗ್ರಾಹ್ಯ ಶೈಲಿಯಲ್ಲಿ ಬರೆಯಲಾದ ಈ ಪುಸ್ತಕದಿಂದ ಜನರಲ್ಲಿ ಜಾಗೃತಿ ಮೂಡುವುದೆಂದು ಆಶಿಸುತ್ತೇವೆ.

ಅಘು ಪರಿಚಯ

ಮಂಗಳೂರಿನ ರಥಬೀದಿಯಲ್ಲಿರುವ ನವನಿಧಿ ಕಾರ್ಯಾಲಯದವರು ಶ್ರೀ ರಾಮೋದರ ಬಾಳಿಗ, ಬಿ. ಎ., ಇವರಿಂದ ಬರೆಯಲಾದ ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದು, ಇವುಗಳು ಮಕ್ಕಳ ಖಾಲಿಗೆ ಸ್ವಾರಸ್ಯವಾದ ಚಿಕ್ಕ ಕತೆಗಳಾಗಿಯೂ ಈಗ ಇನಿತ ಅಕ್ಷರಾಭ್ಯಾಸ ಕಲಿತ ವಯಸ್ಕರಿಗೆ ಭಾಷಾಭ್ಯಾಸಕ್ಕೆ ಬೇಕಿದ ಸಾಹಿತ್ಯವಾಗಿಯೂ ಶಾಲೆಯ ಕೆಳತರಗತಿಗಳಲ್ಲಿ ಮೌನ ಓದಿಗೆ ಉಪಯೋಗಿಸಬಹುದಾದ ಕೃತಿಗಳಾಗಿಯೂ ಶೋಭಿಸುತ್ತವೆ. ಈ ಪುಸ್ತಕಗಳ ಹೆಸರು — ಗೋಪಿನಕತೆ, ಮಾಯಾಳಿ ಅಮ್ಮ, ಗಡಗಡ ಗಡಿಗೆ, ಸೀನನ ಸೀನ, ಚಾಡಿಮೈಸನ, ಉಂಡುಡಿ ತೋಳ, ಇಲಿಮನೆಗಲಿಲಿ, ಸೂಲಂತ ತಕಲಿ, ಹನಿಕತೆಗಳು, ಅತ್ತಯ ಕರಾಮ, ಅಳಿಲ ಸೇವೆ ಮತ್ತು ಅಜ್ಜಕತೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಸುರುಪಾತು. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOLMAY 3-

Kannada non-detailed Text Book for Higher Forms

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮಿದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ

ನವಭಾರತ ಪುಸ್ತಕ ಭಂಡಾರ ಉಡುಪಿ

S. S. L. C. 1956

ಕನ್ನಡ ಪರೀಕ್ಷಾರ್ಥಕ

ಕನ್ನಡ ಭಾಗ-I ಮತ್ತು ಭಾಗ-II

ಪ್ರಕಟವಾಗಿದೆ.

ಪ್ರಾಮುಖ್ಯ ಪ್ರಶ್ನೆಗಳು—ಉತ್ತರಗಳು—ಸಂದರ್ಭ ವಾಕ್ಯಗಳು—ಉತ್ತರಗಳು—ವ್ಯಕ್ತಿ ಚಿತ್ರಗಳು—ವ್ಯಾಕರಣ ವಿಶೇಷಗಳು—ಛಂದೋಲಂಕಾರಗಳು—ಕವಿತಾ ವಿಮರ್ಶೆ—ಸಮೇತವಾಗಿ

ಪುಟಗಳು: ೨೬೦. ಬೆಲೆ: ಒಂದೂವರೆ ರೂಪಾಯಿ

ಬರೆದವರು:

ಕೆ. ಕೆ. ರೈ ವಿದ್ವಾನ್. ಯಸ್. ಅನಂತ ಭಟ್ಟ, ವಿದ್ವಾನ್.

ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ಪ್ರತಿಗಳು ದೊರೆಯಲಿರುವುವು

ಪುಸ್ತಕದ ವೈಶಿಷ್ಟ್ಯವನ್ನು ಗಮನಿಸಿ ಪ್ರತಿಗಳನ್ನು ಆರಿಸಿಕೊಳ್ಳಿರಿ.

ಪ್ರಕಾಶಕರು:

ಜಯ ಮುದ್ರಣ ಪ್ರಕಟಣಾಲಯ, ಮೂಡಬಿದ್ರಿ, ದ. ಕ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಜರ್ಜಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ಕನ್ನಡ ಟೈಪರೈಟರ

ವ್ಯವಹಾರದಲ್ಲಿ 'ಚಿಟಿಗುಪ್ಪಿಯವರ ಯಂತ್ರ

(ಹಿಂದಿನ ಸಂಚಿಕೆಯಿಂದ)

ಚಿಟಿಗುಪ್ಪಿಯವರು ಅನುಸರಿಸಿದ ಪದ್ಧತಿಯು ಒಂದು ದೋಷವೆಂದರೆ, ಅಕ್ಷರಗಳಿಗೆ ಸಮಾನ ಅಳತೆಯ ತಲೆಕಟ್ಟನ್ನು ಬಳಸುವದು. ಚ ಯ ಳ ಮುಂತಾದ ಕೆಲವು ಅಕ್ಷರಗಳ ತಲೆಕಟ್ಟು ಸ್ವಲ್ಪ ಚಿಕ್ಕದಿರುವದರಿಂದ ಇನ್ನೊಂದು ದೋಷವೇನು ಗಮನಿಸಲಾಗಿದೆ. ಯಂತ್ರಿಕ ನಿರ್ಬಂಧನೆಯ ಮೂಲಕ ಇನ್ನೂ ಸ್ಪಷ್ಟಕ್ಕೆ ಅವಾರ್ಯವಾಗಿದೆ. ಅದೇ ಇಂದ ಅಕ್ಷರಗಳ ಒಟ್ಟು ಸಂಖ್ಯೆ ಎಂಟು ಮಾತ್ರ. ಕನ್ನಡದಲ್ಲಿಟ್ಟು ೨೨೭ ಅಕ್ಷರ ಚಿಹ್ನಗಳ ಮಾನದಿಂದ ಈ ಸಂಖ್ಯೆ ಸಣ್ಣದು. ಟೈಪರೈಟರಿಗಾಗಿ ಈ ಅಕ್ಷರಗಳನ್ನು ಚಿತ್ರಿಸುವಾಗ ಸ್ವಲ್ಪ ಉದ್ದ ತಲೆಕಟ್ಟನ್ನು ಬಳಸುವದರಿಂದ ವಾಚನಕಾರಲಿಬ್ಬಕ್ಕೆ ತನಿಯಂಬಿಗದಂತೆ ಮತ್ತು ಅವುಗಳ ಒಟ್ಟು ಸ್ವರೂಪಕ್ಕೆ ಬಾಧೆ ತಟ್ಟದಂತೆ ದಕ್ಷತೆ ಸಹಿಸಲಾಗಿದೆ. ಮುಂದಿನ ಹಂತದಲ್ಲಿ ಅವುಗಳನ್ನು ಇನ್ನೂ ಸುಧಾರಿಸಿಕೊಳ್ಳಲು ತಕ್ಕ ಮಟ್ಟಿಗೆ ಅವಕಾಶವಿದೆ ಸುವಿಖ್ಯಾತ ಸಾಹಿತಿಗಳಾದ ರಾಜಸೇವಾಕ್ತ ಸಿ. ಕೆ. ವೆಂಕಟರಾಮಯ್ಯ ಮತ್ತು ಅಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಿ. ಶ್ರೀ. ಎಮ್. ಆರ್. ಶ್ರೀನಿವಾಸ ಮೂರ್ತಿಯವರು ಅನಿವಾರ್ಯ ಸಂದರ್ಭಗಳಲ್ಲಿ ಇದಕ್ಕೆ ಅಲ್ಪ ನ್ಯಾಯಸ್ಥಕ್ಕೆ ಸಮ್ಮತಿಸಿರುವದೂ ಶಾಸ್ತ್ರ ಸಮಿತಿಯ ಸದಸ್ಯರಲ್ಲಿದೆ.

ಇನ್ನೂ, ಕೆಲವು ಅಕ್ಷರಗಳು ದೋಷಯುಕ್ತವಾಗಿ ಕಾಣುವುದಕ್ಕೆ ಚಿತ್ರಣದ ಸಮಯದಲ್ಲಿ ಅಕ್ಷರಗಳ ಅಳತೆಯನ್ನು ನಿರ್ಧರಿಸುವಾಗ ಮತ್ತು ತಕ್ಕ ಉಪಕರಣಗಳಿಲ್ಲದೆ ಕೈಯಿಂದ ಅಕ್ಷರಗಳನ್ನು ಯಂತ್ರಕ್ಕೆ ಜೋಡಿಸಿರುವದರಿಂದ ಉಂಟಾದ ನ್ಯೂನ್ಯತೆಗಳೇ ಕಾರಣ. ಮುಂದಿನ ಹಂತದಲ್ಲಿ ಅವುಗಳನ್ನು ತಿದ್ದಿಕೊಳ್ಳಲು ಅವಕಾಶವಿದೆ. ಟೈಪರೈಟರಿನಲ್ಲಿ ಅಕ್ಷರ ಎಂದೆದಿದ್ದರೂ ಅದು ೧/೧೦ ಇಂಚಿನಲ್ಲಿ ಕೂಡಬೇಕು. ಅಕ್ಷರ ಗಡುತರವಿದ್ದರೆ ಇಷ್ಟು ಸ್ಥಳ ಸಾಲದು, ತೆಳುವಾಗಿದ್ದರೆ ಸ್ಥಳ ದೊಡ್ಡವಾಗುವದು. ಉದಾ.— ಉ ಊ ಪು ಪೂ ಯ ಮತ್ತು ೨ ೩ ಇತ್ಯಾದಿ. ಇಂಥ ಸಂದರ್ಭಗಳಲ್ಲಿ ಅಕ್ಷರಗಳನ್ನು ಸಂಕುಚಿತಗೊಳಿಸಿ ಇಲ್ಲವೆ ವಿಸ್ತೃತಗೊಳಿಸಿ ಅವುಗಳ ರೂಪಕಾರತನಕ್ಕೆ ಬಾಧೆತಟ್ಟದಂತೆ ಚಿತ್ರಿಸಿಕೊಳ್ಳಬೇಕಾಗುವುದು. ಇಂಗ್ಲಿಷಿನಲ್ಲಿ ಸಹ "ಎಮ್" ವಿಷಯದಲ್ಲಿ ಈ ತೊಂದರೆ ಅನಿವಾರ್ಯವಾಗಿದೆ. ಮುದ್ರಣದಲ್ಲಿ "ಎಮ್" ಮತ್ತು ಟೈಪರೈಟರ "ಎಮ್"ನ್ನು ಸಂಕುಚಿತಗೊಳಿಸಿರುವುದು ಕಂಡುಬರುವುದು.

ಸದ್ಯಕ್ಕೆ ಈ ಟೈಪರೈಟರದಲ್ಲಿ ದೇವನಾಗರಿಗಳ ಮೇಲಿರುವ ಆಕಾರಾದಿ ಕೆಲವು ಕಾಗುಣಿತಗಳನ್ನು ಮೊದಲು ಮೂಡಿಸಿ ಅನಂತರ ಅಕ್ಷರದ ಮೂಲ ಸಂಜ್ಞೆಯನ್ನು ಮೂಡಿಸಬೇಕಾಗುವದು. ಉದಾಹರಣೆಗಾಗಿ ಕ ಮೂಡಿಸುವಾಗ ಮೊದಲು ಸೊನ್ನೆಯನ್ನೂ ನಂತರ ತಲೆಕಟ್ಟನ್ನೂ ಮೂಡಿಸುವ ಸಹಜ ಮತ್ತು ಸಾಮಾನ್ಯ ಪರಿಣಾಮವಿದೆ. ಈ ಟೈಪರೈಟರದಲ್ಲಿ ಮೊದಲು ಕಾಗುಣಿತ ನಂತರ ಮೂಲ ಸಂಜ್ಞೆಯನ್ನು ಮೂಡಿಸುವ ವಿಪರೀತಕ್ರಮವು ಒಂದು ದೋಷವೆಂದೇ ಹೇಳಬೇಕು. ಆದರೆ ಇದು ಅನಿವಾರ್ಯವಲ್ಲ. ತಾತ್ಪೂರ್ತಿಕವೆಂದು ಹೇಳಬಹುದು. ಕನ್ನಡಕ್ಕೊಂದೇ ಅಲ್ಲದೆ ಬಳಕೆಯಲ್ಲಿರುವ ಅನೇಕ ಭಾರತೀಯ ಲಿಪಿಗಳ ಟೈಪರೈಟರುಗಳಿಗೆ ಇದೂಕಾಮನ್ನವಾಗಿದೆ. ಕೆಲವೊಂದು ಹೊಸ ಯಂತ್ರಗಳಲ್ಲಿ "ಅಪಸಿಟ್" ಕೀ ವಿಧಾನದಿಂದ ಈ ದೋಷವನ್ನು ತಿದ್ದಿಕೊಂಡಿದ್ದರೂ ಇಂಥ ಕೀಗಳನ್ನು ಕೈ ನುಡಿಯ ಮೇಲೆ ಕೆಲವೇ ಸ್ಥಾನಗಳಲ್ಲಿ ಇರಿಸುವದು ಸಾಧ್ಯವಿರುವದರಿಂದ ಅಕ್ಷರಗಳ ಹಂಚುವಿಕೆಯಲ್ಲಿ ನ್ಯಾಸವಾಗುತ್ತದೆ. ಇಂಥ ನೊಂದು ದೇವನಾಗರಿ ಯಂತ್ರ ಎರಡು ವರ್ಷ ಹಿಂದೆ ಕೆಲಸಮಾಡುತ್ತಿರುವುದು ದಿನನಿತ್ಯ ದೃಷ್ಟಿಪಥದಲ್ಲಿದ್ದೂ ಟೈಪಿಸ್ಟ್‌ನಿಂದ ಕೆಲವು ಬೆರಳುಗಳಿಗೆ ಅಕಾಲಿಕ ಶ್ರಮವಾಗುತ್ತದೆಂಬ ದೂರು ಇನ್ನೂ ಬಂದಿಲ್ಲ. ಒಟ್ಟಿನಲ್ಲಿ ಇದೊಂದು ಸಾಮಾನ್ಯ ಸಮಸ್ಯೆ ಇರುವದರಿಂದ ಸಲವು ಟೈಪರೈಟರ ಕಂಪೆನಿಗಳೂ ಇತರರೂ ಪ್ರಯೋಗಗಳನ್ನು ನಡೆಸಿದ್ದಾರೆ. ಒಂದು ಕಂಪೆನಿಯು ಈಗಾಗಲೇ ಯಶಸ್ವಿಯಾಗಿದೆಯೆಂದು ಹಿಂದೀ ಟೈಪರೈಟರ ಬಗ್ಗೆ ಕೆಲ ಸಮಯದಹಿಂದೆ ಸರಕಾರದಿಂದ ನೇಮಕವಾದ ಕಾರೇಲಕರ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಇದನ್ನಾದರೂ ಶಾಶ್ವತ ದೋಷವೆಂದು ಬಗೆಯುವಂತಿಲ್ಲ. ಅಕ್ಷರಗಳ ಹಂಚುವಿಕೆಯಲ್ಲಿ ಉಂಟಾಗುವ ನ್ಯಾಸವನ್ನು ಗಣಿಸದಿದ್ದರೆ ಈಗಲೇ ಈ ದೋಷವನ್ನು ತಿದ್ದಿಕೊಳ್ಳಬಹುದು.

ರೇಫೆ (') ಬಿಟ್ಟಿರುವದರಿಂದ ಅದನ್ನು ಲೋಪವೆಂದು ಎಣಿಸಬಹುದು. ಕನ್ನಡದಲ್ಲಿ ಕಾಲು, ಅರ್ಧ, ಮುಕ್ಕಾಲುಗಳಿಗೆ ।, ॥, ॥। ಈ ಚಿಹ್ನೆಗಳನ್ನು ಬರೆಯುವ ವಾಡಿಕೆಯಿದೆ. ಕವಿತಾ ಲೇಖನದಲ್ಲಿ ಇದನ್ನು ಪಾಪ ಮತ್ತು ನುಡಿಯ ಕೊನೆಗೆ ಬಳಸುವದುಂಟು. ಆಲ್ಲದೆ ಅಧಿಕ ಚಿನ್ನವನ್ನು ನಿರ್ಮಿಸಿಕೊಳ್ಳಲು ಇವರಿಂದ ಅನುಕೂಲವಾಗುವದು. ಅಮೂರ್ತಾಂಕಗಳಿಗೆ ಸಹ ಉಪಯುಕ್ತವಿದೆ. ಆದ್ದರಿಂದ ಸಧ್ಯಕ್ಕಿಲ್ಲದಿದ್ದರೂ ಮುಂದಿನ ಹಂತದಲ್ಲಿ ಇದಕ್ಕೆ ಸುಲಭವಾಗಿ ಸ್ಥಾನವನ್ನು ಕಲ್ಪಿಸಬಹುದಾಗಿದೆ.

ತಳರೇಖೆ (ಅಂಡರ ಲೈನ್) ಇಲ್ಲದಿರುವದು ಇನ್ನೊಂದು ಲೋಪ. ಒತ್ತಕ್ಷರಗಳ ಮೂಲಕ ತಳರೇಖೆ ಅನ್ನೊಂದು ಚಿನ್ನಾಗಿ ಹೊಂದಿಕೊಳ್ಳುವುದಿಲ್ಲ. ಮುದ್ರಣದಲ್ಲಿಯೂ ಇದನ್ನು ಕಾಣಬಹುದು. ಅವಶ್ಯವಾಗಿ ಬೇಕೆಂದರೆ ಇದಕ್ಕೂ ಒಂದು ಉಪಾಯವನ್ನು ಕಲ್ಪಿಸುವದು ಕಠಿಣವಲ್ಲ.

ಕಾಗುಣಿತಗಳ ಜೋಡಣೆಯಿಂದ ವೇಗಕ್ಕೆ ತಡೆಯಾಗುವದೆಂಬ ಒಂದು ಸಾಮಾನ್ಯ ಆಕ್ಷೇಪಣೆ ಇದೆ. ಇದು ಹೆಚ್ಚಾಗಿ ಕಾಲ್ಪನಿಕ ಒಂದೇ ಹೇಳಬೇಕು. ಈ ಟೈಪರೈಟರಿನ ಮೇಲೆ ವೇಗ ನಿರ್ಧರಿಸುವ ಶಾಸ್ತ್ರಸಮ್ಮತ ಪ್ರಯೋಗಗಳು ಇನ್ನೂ ನಡೆಯಬೇಕಾಗಿವೆ. ಅದರೂ ಈ ವರೆಗೆ ಬಂದ ಅನುಭವದಿಂದ ಬಳಕೆಯಲ್ಲಿರುವ ಇತರ ಭಾರತೀಯ ಲಿಪಿಗಳ ಟೈಪರೈಟರಗಳಲ್ಲಿ ಕೈಗೂಡುವಷ್ಟೇ ವೇಗವು ಇದರಲ್ಲಿಯೂ ಕೈಗೂಡುವದೆಂದು ವಿಶ್ವಾಸದಿಂದಹೇಳಬಹುದು. ಒಂದಷ್ಟು ಹೆಚ್ಚಾದೀತೆ ಹೊರತು ಕಡಿಮೆಯಾಗಲಾರದು.

ವೇಗವು ಹೆಚ್ಚಾಗಿ ಟಿಪ್‌ಗಳ ಸಂಖ್ಯೆ, ಬೆರಳು ಬುದ್ಧಿಗಳ ಓಟ, ಭಾಷೆಯ ಕಟ್ಟುನಿಟ್ಟು ಮತ್ತು ಲಿಪಿಯ ಸ್ವರೂಪವನ್ನು ಹೊಂದಿಕೊಂಡಿದೆ. ಇಂಗ್ಲೀಷಿನಲ್ಲಿ ಪೂರ್ಣಾಕ್ಷರಗಳಿದ್ದರೂ ಸ್ಪೆಲಿಂಗದಲ್ಲಿ ಟೈಪಿಸ್ಟನಿಗೆ ಒಳ್ಳೇಗತಿ ಇರದಿದ್ದರೆ, ಶಬ್ದ ಹಾಗು ಪದಪ್ರಯೋಗಗಳ ಸಾಕಷ್ಟು ಜ್ಞಾನವಿಲ್ಲದಿದ್ದರೆ ತೃಪ್ತಿಕರ ವೇಗ ಕೈಗೂಡದು. ಕನ್ನಡ ಮತ್ತು ಇತರ ಅನೇಕ ಭಾರತೀಯ ಲಿಪಿಗಳಿಗೆ ಸ್ಪೆಲಿಂಗಿನ ಜೊಂಜಾಟವಿಲ್ಲ. ಬದಲಾಗಿ ಅಕ್ಷರ ರಚನೆಗೆ ಮಹತ್ವವಿದೆ. ಇದನ್ನು ನಾವು ಹೊಸದಾಗಿ ಕಲಿಯಬೇಕಂದಿಲ್ಲ. ಬಾಲ್ಯದಿಂದಲೇ ಇದನ್ನು ಅರಿತಿದ್ದೇವೆ.

ಇಂಗ್ಲೀಷ್ ಅಕ್ಷರಗಳು ಉಚ್ಚಾರ ದೃಷ್ಟಿಯಿಂದ ಪರಿಪೂರ್ಣವಿಲ್ಲ. ಯಾವದೊಂದು ಅಕ್ಷರದ ಪೂರ್ಣ ಉಚ್ಚಾರಕ್ಕಾಗಿ ಎರಡು ಇಲ್ಲವೆ ಹೆಚ್ಚು ಅಕ್ಷರಗಳು ಬೇಕಾಗುತ್ತವೆ. ಈ ರೀತಿ ಇಂಗ್ಲೀಷ್ ಮತ್ತು ದೇಶಿ ಲಿಪಿಗಳಿಗೆಬೇಕಾಗುವ ಟಿಪ್‌ಗಳ ಸಂಖ್ಯೆಯಲ್ಲಿ ತೀವ್ರ ವ್ಯತ್ಯಾಸವಾಗುವದಿಲ್ಲ. ಉದಾ.: "ಗೋಪಾಲ" ಬರೆಯಬೇಕಾದರೆ ಇಂಗ್ಲಿಷಿನಲ್ಲಿ ೬ ಮತ್ತು ಈ ಟೈಪರೈಟರ ಮತ್ತು ಶಾಸ್ತ್ರಸಮಿತಿಯ ಕೈಮಣಿಯ ಮೇರೆಗೆ ೭ ಟಿಪ್‌ಗಳು ಬೇಕು. "ಅರ್ಥ" ಶಬ್ದಕ್ಕೆ ಇಂಗ್ಲಿಷ್ ಮತ್ತು ಶಾಸ್ತ್ರಸಮಿತಿಯ ಕೈಮಣಿಯ ಮೇರೆಗೆ ೫ಟಿಪ್‌ಗಳು ಬೇಕು. ಈ ಟೈಪರೈಟರದಲ್ಲಿ ೪ ಟಿಪ್‌ಗಳಿಂದ ಕೆಲಸವಾಗುತ್ತದೆ. ಒಂದೆರಡು ಹೆಚ್ಚು ಒಂದೆರಡು ಕಡಿಮೆ ಇಷ್ಟೆ.

ವೇಗವನ್ನು ಸಾಮಾನ್ಯವಾಗಿ ಒಂದು ಮಿನಿಟಿನಲ್ಲಿ ಟೈಪ್‌ಮಾಡುವ ಶಬ್ದಗಳ ಸಂಖ್ಯೆಯಿಂದ ಲೆಕ್ಕ ಹಾಕುವುದುಂಟು. ಈ ಪದ್ಧತಿ ಕನ್ನಡ ಹಾಗುಇತರ ದೇಶೀಯ ಲಿಪಿಗಳಿಗೆ ಅಷ್ಟೊಂದು ಸರಿ ಹೋಗುವುದಿಲ್ಲ. ಈ ವಿಷಯದಲ್ಲಿ ಮೈಸೂರ ಸರಕಾರದ ನಿವೃತ್ತ ಅಸಿಸ್ಟಾಂಟ್‌ಸೆಕ್ರೆಟರಿ ಮತ್ತು ಬ್ರೀಫರಿಪೋರ್ಟರ್ ಶ್ರೀ ಎನ್. ದೇವರಾಯರು ಪ್ರತ್ಯಕ್ಷ ಪ್ರಯೋಗಗಳನ್ನು ಕೈಕೊಂಡು ತಮ್ಮ "ಕನ್ನಡ ಲಘು ಲಿಪಿ (ಶಾರ್ಟಹ್ಯಾಂಡ್)" ಕೃತಿಯಲ್ಲಿ ಕನ್ನಡ ಲಘುಲಿಪಿಯ ವೇಗವನ್ನು ಕುರಿತು ಒಂದು ಮಾರ್ಗವನ್ನು ಸೂಚಿಸಿರುವರು. ಅದು ಹೀಗೆ:— ಕನ್ನಡ ಇಂಗ್ಲಿಷಿನಂತಿಲ್ಲ. ಅದರಲ್ಲಿ ಅಕಾರ ಮತ್ತು ಉಚ್ಚಾರಿಸಲು ಗಡಚಾದ ಸಂಯುತ ಶಬ್ದಗಳು ಸೇರಿರುವದರಿಂದ ಕನ್ನಡದ ಅಳವು ಹಾಗೂ ವಿಸ್ತಾರೆ ಹೆಚ್ಚಾಗಿದೆ. ಸಾಮಾನ್ಯವಾಗಿ ಒಂದು ಶಬ್ದಕ್ಕೆ ನಾಲ್ಕು ಅಕ್ಷರಗಳೆಂದು ಹಿಡಿದರೆ ಮಿನಿಟಿಗೆ ೬೦ ರಿಂದ ೭೦ ಶಬ್ದಗಳನ್ನು ಉಚ್ಚರಿಸಬಹುದು. ಒಳ್ಳೇ ವೇಗದಿಂದ ಮಾಡಾದುವವರು ಕೂಡಾ ಅಂದಿಂದ ೧೦ ಶಬ್ದಗಳನ್ನು ಮೀರಲಾರರು. ಆದ್ದರಿಂದ ಶಬ್ದಗಳ ಲೆಕ್ಕದಿಂದ ವೇಗವನ್ನು ನಿರ್ಧರಿಸುವುದು ದುಸ್ತರವಿದೆ. ಕನ್ನಡದಲ್ಲಿ ಒಂದು ದೊಡ್ಡ ಶಬ್ದವನ್ನು ಉಚ್ಚರಿಸುವ ಅವಧಿಯಲ್ಲಿ ಇಂಗ್ಲಿಷಿನ ಎರಡು ಮೂರು ಶಬ್ದಗಳನ್ನು ಉಚ್ಚರಿಸಬಹುದು. ಆದ್ದರಿಂದ ಶಬ್ದಗಳ ಲೆಕ್ಕದಿಂದ ಕನ್ನಡದಲ್ಲಿ ವೇಗವನ್ನು ನಿರ್ಧರಿಸುವುದು ಸರಿಯಾಗದು. ಒಂದು ಮಿನಿಟಿನಲ್ಲಿ ಉಚ್ಚರಿಸ ಬಹುವಾದ ಅಕ್ಷರಗಳ ಲೆಕ್ಕದಿಂದ ವೇಗವನ್ನು ನಿರ್ಧರಿಸುವುದು ಹೆಚ್ಚು ಸರಿಯಾದ ಮಾರ್ಗವೆಂದು ಹೇಳಬಹುದು. ಪ್ರತ್ಯಕ್ಷ ಸರೀಕ್ಷೆಯಲ್ಲಿ ಒಳ್ಳೇ ವೇಗದಿಂದ ಕನ್ನಡ ಬರೆಯುವವನು ೯೦ರಿಂದ ೧೦೦ಅಕ್ಷರಗಳನ್ನು ಬರೆಯಬಹುದೆಂದು ಕಂಡು ಬಂದಿದೆ. ಸರಾಸರಿ ಲೆಕ್ಕ ೬೫ರಿಂದ ೭೫ ಅಕ್ಷರಗಳಾಗುವವು. ಕನ್ನಡದಲ್ಲಿ ಸಾಮಾನ್ಯವಾಗಿ ೨೦೦ರಿಂದ ೨೫೦ ಅಕ್ಷರಗಳನ್ನು ಉಚ್ಚರಿಸಬಹುದು. ಒಳ್ಳೇ ವೇಗದಿಂದ ಮಾಡಾದುವವರು ೩೫೫ ಕ್ಕಿಂತ ಹೆಚ್ಚು ಅಕ್ಷರಗಳನ್ನು ಉಚ್ಚರಿಸಲಾರರು.

ಇಂಗ್ಲಿಷಿನಲ್ಲಿ ಟೈಪ್ ಮಾಡುವ ವೇಗ ಮಿನಿಟಿಗೆ ೪೦ ಹಾಗು ಶಾರ್ಟಹ್ಯಾಂಡ್ ವೇಗ ೧೨೦ ಶಬ್ದಗಳೆಂದು ಸರಾಸರಿ ಲೆಕ್ಕವಿದೆ. ಈ ರೀತಿ ಒಂದಕ್ಕೆ ಮೂರು ಪ್ರಮಾಣದಂದು ಹಿಡಿದ ಶ್ರೀ ದೇವರಾಯರ ಸಿದ್ಧಾಂತದ ಮೇರೆಗೆ ಕನ್ನಡ ಶಾರ್ಟಹ್ಯಾಂಡದ ವೇಗ ಮಿನಿಟಿಗೆ ಸರಾಸರಿ ೨೦೦ ರಿಂದ ೨೫೦ ಅಕ್ಷರಗಳಿದ್ದರೆ ಕನ್ನಡ ಟೈಪ್ ಮಾಡುವ ವೇಗ ಮಿನಿಟಿಗೆ ೬೫ರಿಂದ ೮೫ ಅಕ್ಷರಗಳಷ್ಟಾಗುವದು. ಪ್ರತ್ಯಕ್ಷ ಅನುಭವದೊಂದಿಗೆ ಈ ಲೆಕ್ಕವನ್ನು ತೂಗಿನೋಡಿ ವೇಗವನ್ನು ನಿರ್ಧರಿಸಬಹುದಾಗಿದೆ. ಟೈಪೋಲೈಸ ವೇಗವನ್ನು ಒಂದು ಮಿನಿಟಿನಲ್ಲಿ ಜೋಡಿಸಬಹುದಾದ ಮಾತೃಕೆ (ಮಾಟ್ರಿಕ್ಸ್)ಗಳ ಲೆಕ್ಕದಿಂದ ನಿರ್ಧರಿಸುವುದುಂಟು. ಈ ವೇಗ ಸರಾಸರಿ ೧೫೦ ಮಾತೃಕೆಗಳೆಂದಿದೆ. ಒಟ್ಟಿನಲ್ಲಿ ವೇಗದ ಅಳತೆಗೋಲನ್ನು ಆಯಾ ಭಾಷೆ ಮತ್ತು ಲಿಪಿಗಳ ರೀತಿನೀತಿಗಳನ್ನು ಅನುಸರಿಸಿ ಪ್ರಯೋಗ ಪರೀಕ್ಷೆಗಳೊಂದಿಗೆ ನಿರ್ಧರಿಸಬಹುದೇ ಹೊರತು ಕೇವಲ ಇಂಗ್ಲಿಷಿನೊಂದಿಗೆ ಹೋಲಿಸಿ ನಿರ್ಣಯಿಸುವದು ಉಚಿತವಾಗದು. ಕುಮರಿಯ ವೇಗವನ್ನು ಇತರ ಕುಮರಿಗಳ ವೇಗದೊಂದಿಗೆ ಹೋಲಿಸಬೇಕಲ್ಲದೆ, ಪೋಟೂರಿನೊಂದಿಗೆ ಹೋಲಿಸುವುದು ಯುಕ್ತವಾಗದು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಕ್ಕಿದ ಮತ್ತು ನಿಂತುಹೋದ ಮುಟ್ಟು ದೋಷಗನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಧೆಯೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ರಹಾಕಂಪೆನ್ಸಿ, ಮಂಗಳೂರು

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೩ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

(೨ನೇ ಪುಟದಿಂದ)

ಸಾಲು; ಕಾಲಾಳು ಬಲ; ಯಕ್ಷಯಕ್ಷಿಣಿಯರು—ಹೀಗೆ ಮನುಷ್ಯನ ಕಣ್ಣಿಗೆ ದೊರಕಿತಿರುವ ಮತ್ತು ಊಹೆಗೆ ತೋರಬಹುದಾದ ಎಲ್ಲಾ ಜೀವಂತಿಗಳೂ ಅಲ್ಲಿರುತ್ತವೆ. ಅವುಗಳ ರೂಪರೇಖೆಗಳು, ಉಬ್ಬು ತಗ್ಗುಗಳು, ನವಿರು ನಲಿವುಗಳು, ಚಕ್ರಾಕಾರ ಪದ್ಮಾಕಾರ ತ್ರಿಕೋಣ ಚತುಷ್ಕೋಣ ಅಷ್ಟಕೋಣಾಕಾರಗಳು—ಎಲ್ಲವೂ ಸಾಲು ಸಾಲಾಗಿ ಸಾಗುತ್ತಿರುವಂತಿವೆ. ನಮ್ಮ ಜಗತ್ತಿನ ಒಂದು ಸಕ್ರಮ ಪ್ರತಿಬಿಂಬವೇ ಈ ಗೋಡೆ. ನಾನಾ ಪ್ರಾಣಿಗಳೂ ಅವುಗಳ ಚೇಷ್ಟಿತಗಳೂ ಈ ಗೋಡೆಯಲ್ಲಿ ಸುವ್ಯವಸ್ಥಿತವಾಗಿ, ಸ್ವಸ್ವಧರ್ಮ ತತ್ಪರವಾಗಿರುವಂತೆ ಕಾಣ ಬರುತ್ತದೆ. ಅದು ನಮ್ಮಲ್ಲಿ ಪ್ರಪಂಚ ಸ್ವರೂಪ ಭಾವನೆಯನ್ನುಂಟು ಮಾಡಲಿಕ್ಕಾಗಿ, ನಾವು ಸೃಷ್ಟಿಯಿಂದ ಬೇರೆಯಲ್ಲವೆಂಬುದನ್ನು ಮಂದಟ್ಟು ಮಾಡಿಸಲಿಕ್ಕಾಗಿ, ಎಂಥೆಂಥ ಸ್ವಭಾವಗಳು ನಮ್ಮ ಜೀವನದಲ್ಲಿ ಸೇರಿರುತ್ತವೆಂಬುದನ್ನು ಗೋಚರಪಡಿಸಲಿಕ್ಕಾಗಿ-

ಅಲ್ಲಿಂದ ಮೇಲಿನದು ದೇವತಾ ಶ್ರೇಣಿ. ಇದು ಭಕ್ತರಾದವರಲ್ಲಿ ಧ್ಯಾನ ಪ್ರಚೋದಕವಾಗತಕ್ಕದ್ದು. ಭಗವಂತನ ನಾನಾ ರೂಪಲೀಲೆಗಳು, ತ್ರಿಮೂರ್ತಿಗಳು, ದಶಾವತಾರಗಳು, ದಕ್ಷಯಜ್ಞ, ತ್ರಿಪುರ ಸಂಹಾರ, ರಾಮಾಯಣದ ಸನ್ನಿವೇಶಗಳು, ಭಾರತದ ಉಪಾಖ್ಯಾನಗಳು, ಮಹರ್ಷಿಗಳ ತಪಸ್ಸು, ಆವರಿಗಾದ ಇಷ್ಟಸಿದ್ಧಿ ಇಂಥ ದಿವ್ಯಾದ್ಭುತ ದೃಶ್ಯಗಳು ಈ ಮಧ್ಯಭಾಗದವು. ಈ ದಿವ್ಯ ಮೂರ್ತಿಗಳನ್ನು ಅವುಗಳ ಕರಚರಣ ವಿನ್ಯಾಸಗಳನ್ನು, ಅವುಗಳ ಆಯುಧಾಭರಣಗಳನ್ನು, ಅವುಗಳ ಶರೀರ ಭಂಗಿಯನ್ನು ಮುಖ ಮುದ್ರೆಯನ್ನು, ದಿಟ್ಟಿಸಿ ನೋಡಿದರೆ ಶಿಲೆ ಶಿಲ್ಪಿಯ ಕೈಯಲ್ಲಿ ಮಯಣವಾಯಿತೆಂದೆನ್ನಿಸುತ್ತದೆ ಅಷ್ಟು ಅವಯವ ವಿವರ ವಿಸ್ತಾರ ಂದ, ಅಷ್ಟು ಅಂಗ ಪ್ರತ್ಯಂಗ ಸಾಮರಸ್ಯದಿಂದ ಅಂಥ ಅಗ್ರಹಾನುಗ್ರಹ ವ್ಯಂಜಕವಾಗಿ ನಿಂತಿವೆ ಆ ಮೂರ್ತಿಗಳು.

ಅಲ್ಲಿಂದ ಮೇಲಕ್ಕೆ ಕಣ್ಣೆತ್ತಿ ನೋಡಿದರೆ ಕಾಣುವುದು ಭಾವಾನಂದ ಲೋಕ. ಅದು ಗಾಂಧರ್ವ ಲೋಕ ಅಪ್ಸರೆಯರಂಥ ಮದನಿಕೆಯರುಅಲ್ಲಿ ಹಾವಭಾವ ವಿಲಾಸಗಳನ್ನು ತೋರುತ್ತಿದ್ದಾರೆ. ಒಬ್ಬಾಕೆ ಕನ್ನಡಿ ನೋಡಿಕೊಂಡು ತನ್ನ ಮೈ ಬೆಡಗಿಗೆ ತಾನೇ ಮನಸೋತಿದ್ದಾಳೆ. ಇನ್ನೊಬ್ಬಳು ಸುಗಂಧ ತೈಲಗಳಿಂದ ತಲೆಕೂದಲನ್ನು ಸಿಂಗರಿಸಿಕೊಳ್ಳುತ್ತಿದ್ದಾಳೆ. ಮತ್ತೊಬ್ಬಳು ಆಭರಣ ಧರಿಸಿಕೊಳ್ಳುವ ಸಂಭ್ರಮದಲ್ಲಿದ್ದಾಳೆ. ಒಬ್ಬಳು ಓಕುಳಿಯಾಟದಲ್ಲಿದ್ದಾಳೆ. ಕೆಲವರು ಗಾನಪರವಶರಾಗಿದ್ದಾರೆ. ಕೆಲವರು ನರ್ತನೋನ್ಮತ್ತರಾಗಿದ್ದಾರೆ, ಒಬ್ಬಳು ಸೀರೆಯಲ್ಲಿ ಜೇಳು ಕಾಣಿಸಿದ ನೆವದಿಂದ, ಒಬ್ಬಳು ಕೋತಿಯ ಕಾಟದ ನೆವದಿಂದ ಭಯ ಕೋಪಗಳ ಆವೇಶವನ್ನು ತಾಳಿ ಮೈಯ್ಯೊಬಗನ್ನು ವಿಕಾಸಗೊಳಿಸುತ್ತಿದ್ದಾಳೆ ಎಲ್ಲರೂ ಪರಮ ಸುಂದರಿಯರು, ಮತ್ತು ತಮ್ಮ ತಮ್ಮ ಸೌಂದರ್ಯದ ಪಾರಮ್ಯವನ್ನು ತಿಳಿದುಕೊಂಡವರು. ಒಬ್ಬೊಬ್ಬಾಕೆ ಒಂದೊಂದು ಬಗೆಯ ಶೃಂಗಾರ-ಸೌಭಾಗ್ಯವನ್ನು ಸೂಸುತ್ತಿದ್ದಾಳೆ. ಜಗತ್ತಿರಬಹುದು, ದೈವವಿರಬಹುದು. ಆದರೆ ಜಗತ್ತೂ ದೈವವೂ ಸಾಧನ ಮಾತ್ರಗಳು; ಅವುಗಳಿಂದ ಆಗಬೇಕಾದ ಸಿದ್ಧಿರಸ ಸಮೃದ್ಧಿ—ಭಾವಾನಂದ. ಇದು ಅವರ ನಿತ್ಯ ಘೋಷಣೆ.

ಆನಂದದ ಅಸಂಖ್ಯೇಯ ರೂಪಗಳಲ್ಲಿ ಸರ್ವ ವಿಧಿತವಾದದ್ದು, ಸರ್ವ ಸುಲಭವಾದದ್ದು, ಸರ್ವ ಪ್ರಿಯವಾದದ್ದು ಶೃಂಗಾರ ಅಥವಾ ಸ್ತ್ರೀಪುರುಷರ ಪರಸ್ಪರಾಕರ್ಷಣೆ. ಅದೇ ಸೃಷ್ಟಿಯ ಮೂಲ ಶಕ್ತಿ. ಉಪನಿಷತ್ತುಗಳು ಅದರ ಮಹಿಮೆಯನ್ನು ಸ್ಮರಿಸುತ್ತವೆ; ದೇವಕಥೆ, ಋಷಿಕಥೆಗಳು ಅದಕ್ಕೆ ದೃಷ್ಟಾಂತವಾಗಿವೆ. ಪರಮೇಶ್ವರನ ನಿರಂತರ ವಿಲಾಸಗಳಲ್ಲಿ ಅದು ಒಂದು ಪ್ರಕಾರದ್ದು. ಅದೂ ಒಂದು ಜಗದ್ಧರ್ಮ. ತರುಲತೆಗಳಲ್ಲಿ ಹೂವ್ಯಸ್ತ್ರೀ ಪುರುಷರಲ್ಲಿ ಶೃಂಗಾರ—ಹೂವನ್ನು ಉಪಯೋಗಿಸುವವನಿಗೆ ನವಿರು ನಾಜೂಕುಗಳು, ಯುಕ್ತ ಶೃಂಗಾರದ ಉಪಯೋಗದಲ್ಲಿ ನಯ ಸೌಜನ್ಯಗಳು ಅವಶ್ಯ. ಸ್ವಾಮಿಗರ್ಪಿಸಿದ ಕುಪ್ಪು ಪುಣ್ಯಶಾಲಿ, ದೇವಪ್ರಸಾದವೆಂದು ಅನುಭವಿಸಿದ ಶೃಂಗಾರ—ಧರ್ಮ. ಈಶ್ವರ ಸೃಷ್ಟಿಯಿಂದ ಎಲ್ಲಾ ಮಾನುಷ ವ್ಯಾಪಾರಗಳೂ ಪವಿತ್ರವಾಗುತ್ತವೆ ಶೃಂಗಾರೋಪಾಸನೆಯೂ ಹಾಗೆಯೇ. ಅದು ವಿಶ್ವ ಧರ್ಮದ ಒಂದಂಶ. ಈ ಸಂದೇಶವನ್ನು ಪ್ರಚುರಿಸಿ ರಸಿಕಾನಂದದ ತಿರುಳನ್ನು ನಿದರ್ಶನಗೊಳಿಸುವುದು ಈ ಅಪ್ಸರೀ ಲೋಕದ ಮರ್ಮವೆಂದು ಕಾಣುತ್ತದೆ. ಗುಡಿಯ ಈ ಸೌಂದರ್ಯ ಪ್ರದರ್ಶನವೇ ಬೇಲೂರಿನ ವಿಗ್ರಹ ಶಿಲ್ಪದ ನಾಯಕಮಣಿ.

ವಿಗ್ರಹ ಶಿಲ್ಪದಲ್ಲಿ ನಾವು ಹಸ್ತ ಕೌಶಲವನ್ನು ಮಾತ್ರ—ಉಪಕರಣ ಪ್ರವೀಣತೆಯನ್ನು ಮಾತ್ರ— ನೋಡುವುದಾದರೆ ಸೋಮನಾಥಪುರ ಬೇಲೂರಿಗಿಂತ ಕಡಿಮೆಯದೇನೂ ಅಲ್ಲ. ಶೃಂಗಾರ ಭಾಗವನ್ನು ಹಾಗಿಟ್ಟು, ಓಜೋವೀರ್ಯಗಳನ್ನು ಮಾತ್ರ ಗಣಿಸುವುದಾದರೆ ಬಾದಾಮಿಯ ವಿಗ್ರಹ ಶಿಲ್ಪ ಅದರ ಜಾತಿಯಲ್ಲಿ ಅಸಮಾನವಾದದ್ದೆಂದು ಹೇಳಬಹುದು. ಬೇಲೂರಿನ ವಿಗ್ರಹ ಶಿಲ್ಪದಲ್ಲಿ ವೀರ್ಯ ಗಾಂಭೀರ್ಯಾದಿ ಇತರ ಗುಣಗಳು ಉಚಿತ ಸಂದರ್ಭಗಳಲ್ಲಿ ಉಚಿತ ಪ್ರಮಾಣಗಳಲ್ಲಿ ಕಾಣಬರುತ್ತಿದ್ದರೂ, ಅಲ್ಲಿಯ ಪ್ರಧಾನ ಗುಣಗಳು ಶೃಂಗಾರ ತಾರುಣ್ಯ ಮಾಧುರ್ಯಗಳು. ಅಲ್ಲಿಯ ಪ್ರಧಾನ ದೇವತೆ ಚೆನ್ನ ಕೇಶವ, ಸೌಮ್ಯ ನಾರಾಯಣ ಅಲ್ಲಿಯ ಪ್ರಧಾನ ಗುಣ ಚೆನ್ನ. ಸೌಮ್ಯ, ಪ್ರಸನ್ನತೆ ಜೀವನದ ಸರಸತೆ. ಕಾಳಿದಾಸನು ಮಾತಿನಿಂದ ಮಾಡಿಟ್ಟದ್ದನ್ನು ಜಕಣಾಚಾರಿ ಕಲ್ಲಿನಿಂದ ಹೊರಡಿಸಿದ್ದಾನೆ. ಕರ್ನಾಟಕದ ಶಾಶ್ವತ ಸಂಸ್ಕೃತಿ ಭಂಡಾರದಲ್ಲಿ ಬೇಲೂರಿನ ವಿಗ್ರಹ ಶಿಲ್ಪವು ಶಿರೋರತ್ನವೆಂದು ಹೇಳುವುದು ಉತ್ಪ್ರೇಕ್ಷೆಯ ಮಾತಾಗದು.

ಒಂದು ದೇಶದ ಕಲಾಕೃತಿಗಳನ್ನು ಅದರ ಸ್ವೀಯ ಚರಿತ್ರೆಯೆಂದು ಹೇಳುವುದುಂಟು. ಒಂದು ಜನದ ಕಾವ್ಯ, ಸಂಗೀತ, ಶಿಲ್ಪ, ಚಿತ್ರಣ—ಇವುಗಳಲ್ಲಿ ಆ ಜನದ ಸ್ವಭಾವ ವ್ಯಕ್ತಪಟ್ಟಿರುತ್ತದೆ. ಅವರ ಮನಸ್ಸಿನ ಅಂತರಾಳದಲ್ಲಿ ಅಡಗಿಕೊಂಡಿರುವ ಗುಣ-ಶಕ್ತಿಗಳು ಎಂಥವು, ಅವರ ಮೂಲ ಧ್ಯೇಯ ಸಂಕಲ್ಪಗಳು ಎಂಥವು ಎಂಬುದಕ್ಕೆ ಕಲಾಕೃತಿಗಳು ಸಾಕ್ಷೀಭೂತವಾಗಿರುತ್ತವೆ. ನಮ್ಮ ದೇಶದಲ್ಲಿ ಸಾಹಿತ್ಯವನ್ನು ಬಿಟ್ಟರೆ ಜನದ ಅಂತರಂಗ ಚರಿತ್ರೆ ಮೂರ್ತೀಭವಿಸಿ ನಿಂತಿರುವುದು ನಮ್ಮ ದೇವಾಲಯಗಳ ಶಿಲ್ಪದಲ್ಲಿ—ಅದರಲ್ಲಿಯೂ ದಕ್ಷಿಣ ದೇಶದ ದೇವಾಲಯಗಳಲ್ಲಿ. ಪಳೆಯರಾಜ್ಯಗಳೆಷ್ಟೋ ನಷ್ಟವಾಗಿವೆ. ರಾಜಗೃಹಗಳು ನಿರ್ಮೂಲವಾಗಿವೆ. ಧನಿಕರ ಪ್ರಾಸಾದಗಳು ಮಣ್ಣು ಪಾಲಾಗಿವೆ. ಗುಡಿಗಳು ಮಾತ್ರ ಅನ್ಯ ಮತಸ್ಥರ ಹಾವಳಿ ಸುಟ್ಟದಪ್ಪಟ್ಟಿಗೆ ಯಥಾಪ್ರಕಾರವಾಗಿ ಉಳಿದುಕೊಂಡಿವೆ. ನಮ್ಮ ಪೂರ್ವಿಕರು ಮನುಷ್ಯ ಕೃತಿಗಳಲ್ಲಿ ಶಾಶ್ವತವಾಗಿರಬಹುದಾದದ್ದೂ, ಹಾಗೆ ಇರಲರ್ಹವಾದದ್ದೂ ದೇವಮಂದಿರವೊಂದೇ ಎಂದು ತಿಳಿದುಕೊಂಡಿದ್ದಂತೆ ಕಾಣುತ್ತದೆ. ಗುಡಿಯೇ ಊರಿನ ಜೀವನ ಕೇಂದ್ರ, ಜನ ತಮ್ಮ ಆಹಾರ ನಿದ್ರೆ ಉದ್ಯೋಗಗಳ ವೇಳೆ ಹೊರತು ಮಿಕ್ಕೆಲ್ಲ ಹೊತ್ತನ್ನೂ ಗುಡಿಯ ಆವರಣದೊಳಗೇ ಕಳೆಯುತ್ತಿದ್ದರು. ಅದೇ—ಅವರ ಪಾಠಶಾಲೆ, ಅವರ ಜಾವಡಿ, ಅವರ ನ್ಯಾಯಸ್ಥಾನ. ಅಲ್ಲಿಯೇ ಸುರಾಣ ಶ್ರವಣ, ಸಂಗೀತ, ನರ್ತನ. ಅಲ್ಲಿಯೇ ಬಂಧು ಮಿತ್ರರೊಡನೆ ಮಾತುಕಥೆ, ಊರಿನ ಯೋಗಕ್ಷೇಮ ವಿಚಾರ, ವಿನೋದ ಕಾಲಕ್ಷೇಪ. ಹೀಗೆ ನಮ್ಮ ಪೂರ್ವಿಕರಿಗೆ ಊರಿನಲ್ಲಿ ಮನೆಗಿಂತ ಮುಖ್ಯವಾದದ್ದು ಗುಡಿ. ಸುಖದಲ್ಲಿ ಸುಕೃತಕ್ಕೂ ದುಃಖದಲ್ಲಿ ಧೈರ್ಯಕ್ಕೂ ಆಕರವಾಗಿದ್ದದ್ದು ದೇವ ಸನ್ನಿಧಿ. ಆದ್ದರಿಂದ ಅಪರ ಕಲಾಪ್ರೀತಿಯ ತರುಲತೆಗಳೆಲ್ಲ ಗುಡಿಗಳ ಚಿತ್ರಾಲಂಕಾರ ಪ್ರತಿಮೆಗಳಲ್ಲಿ ಕುಸುಮಿಸಿ ವಿಕಾಸಗೊಂಡಿವೆ. ಅಂಥ ಕುಸುಮಗಳಲ್ಲಿ ಚಿರಸೌರಭ-ಭರಿತವಾದದ್ದು ಬೇಲೂರಿನ ಶ್ರೀ ಚೆನ್ನ ಕೇಶವ ಸನ್ನಿಧಿ.

ಕಲೆಯಿಂದ ಶಿಲೆಯ ಮೃತ ।
ಲಲಿತ ಕಲೆ ಹೃತ್ ಸುಕೃತ ।
ಬೇಲೂರ ನೋಡು ॥
ಅಳಿವ ಲೋಕದ ನಡುವೆ ।
ಉಳಿವ ರಸ ಘಟಿಕೆ ।
ಬಾಳ್ವೇನ ಗೂಡು ॥

—ಡಿ. ವಿ. ಗುಂಡಪ್ಪ.

ಆಮಂತ್ರಣ ಪತ್ರಿಕೆ ಮೊದಲಾದ ಪ್ರಿಂಟಿಂಗ್ ಕೆಲಸಗಳಿಗೆ-
ನವಯುಗ ಪ್ರೆಸ್,
ಉಡುಪಿ.

ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !
"ರಿಕರಿಂಗ್" ಠೇವಣಾತಿ.
ಬರೇ ರೂಪಾಯಿ ಒಂದು ತಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ ಬಡ್ಡಿ ಸಾಲಿಯಾನ್ ಸೇಕಡಾ 4½%.
ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಪಾಟೆಯಲ್ಲಿ ಇಂದೇ ಲೆಕ್ಕ ತೆರೆಯಿರಿ
ದಿ ವಿಜಯ ಬೇಂಕ್ ಲಿಮಿಟೆಡ್.

(೩ನೇ ಪುಟದಿಂದ)

ಣ ಯಂತ್ರದ ಸೃಷ್ಟಿಗೈದ ಬಳಿಕ, ಎಲ್ಲರೂ ಕರಪತ್ರಗಳ ಮೂಲಕ ಪ್ರಚಾರ ಮಾಡಲು ಮುಂದಾದರು. ಆದರೆ, ಈ ಕರಪತ್ರಗಳನ್ನು ಹಂಚುವ ಕೆಲಸ ಕಷ್ಟವೆಂದು ಕಂಡು ಬಂದಾಗ, ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ಪ್ರಕಟಿಸುವ ಉಪಕ್ರಮವು ಪ್ರಾರಂಭವಾಯಿತು. ಹದಿನೆಂಟನೇ ಶತಮಾನದಲ್ಲಿ ಇಂಗ್ಲೀಷು ಪತ್ರಿಕೆಗಳಲ್ಲಿ ಒಂದೊಂದೇ ಜಾಹೀರಾತು ಬರತೊಡಗಿತು. ಚುನಾವಣೆಯ ಸ್ಪರ್ಧಿಯೊಬ್ಬನು "ನನಗೆ ಗೌರವದ ಪದವಿಯೊಂದು ಬೇಕು; ಇನಕ್ಕೆ ನೆರವಾಗುವವರಿಗೆ ನಾನು ಯೋಗ್ಯ ಸುರಸ್ಕಾರ ಕೊಡುತ್ತೇನೆ..... ...ಇಲ್ಲಿರುವ ನನಗೆ ಒಂದು ಸೂಚನೆ ಕೊಟ್ಟರೆ ಸಾಕು" ಎಂದು ೧೭೭೪ನೇ ವರ್ಷದಲ್ಲಿ ಜಾಹೀರಾತು ಕೊಟ್ಟಿದ್ದನು. ಇನ್ನೊಬ್ಬನು ೧೮೯೨ರಲ್ಲಿ "ಚಿನ್ನ ಬೆಳ್ಳಿಯ ವ್ಯಾಪಾರಿ....ಇವನನ್ನು ದೇವರು ತನ್ನ ಬಳಿಕರೆದನು. ಕೆಳಗೆ ಹೆಸರಿಸಿದ ಅವನ ಹೆಂಡತಿ ಅವನ ಸಮಾಧಿಯಲ್ಲಿ ಪ್ರಾರ್ಥಿಸುತ್ತಿದ್ದಾಳೆ ಈಗಾಗಲೇ ಮದುವೆಯಾಗಿರುವ ಅವನ ಕಿರಿಯ ಮಗಳೂ ಮದುವೆಗೆ ತಯಾರಾಗಿ ನಿಂತಿರುವ ಹಿರಿಯಮಗಳೂ ಕೋಕಿಸುತ್ತಿದ್ದಾರೆ" ಎಂದು ಜಾಹೀರಾತು ಕೊಟ್ಟಿದಲ್ಲದೆ ;ಅದರ ಕೊನೆಯಲ್ಲಿ "ಇದರಿಂದ ನಮ್ಮ ನಿತ್ಯದ ವ್ಯಾಪಾರ ಸ್ಥಗಿತವಾಗುವುದೆಂದೇನು ತಿಳಿಯಬಾರದು; ಆದರೆ ಹಿಂದಿನ ಯಜಮಾನನು ಬಾಡಿಗೆ ಏರಿಸುವ ಬೆದರಿಕೆ ಹಾಕಿರುವ ಪ್ರಯುಕ್ತ ಈಗ ಅಂಗಡಿಯನ್ನು....ಇಂಥಲ್ಲಿಗೆ ಒಯ್ದಿದ್ದೇವೆ" ಎಂಬವಿಶೇಷ ಸೂಚನೆಯನ್ನು ನೀಡಿದ್ದಾಳು. ಇಂದು ಜಗತ್ತಿನ ದೈನಿಕಗಳಲ್ಲಿ ಪ್ರತಿನಿತ್ಯವೂ ಈ ಮಾದರಿಯ ಜಾಹೀರಾತುಗಳು ವಿಪುಲ ಪ್ರಮಾಣದಲ್ಲಿ ಬರುತ್ತಿರುತ್ತವೆ. ಭಾರತದಲ್ಲಿಯೇ ವರ್ಷಕ್ಕೆ ಐದುಕೋಟಿ ರೂಪಾಯಿಗಳನ್ನು ದೈನಿಕಗಳು ಜಾಹೀರಾತಿನಿಂದ ಸಂಪಾದಿಸುತ್ತವೆ. ಜಾಹೀರಾತಿಗಾಗಿ ಈಗ ಪೋಸ್ಟರುಗಳನ್ನು, ವಿದ್ಯುದ್ದೀಪದ ಸಲಕರಣೆಗಳನ್ನು,ರೇಡಿಯೋ ಮತ್ತು ಚಲಚ್ಚಿತ್ರಗಳನ್ನು ಬಳಸಲಾಗುತ್ತದೆ. ಈ ವ್ಯವಸಾಯದಲ್ಲಿ ಸಾವಿರಾರು ಜನರು ಜೀವನ ನಿರ್ವಹಿಸುತ್ತಿದ್ದಾರೆ.

ಒಬ್ಬ ಅನುಭವಸ್ಥರ ಮಾತಿನ ಪ್ರಕಾರ, ಜಾಹೀರಾತುಗಳು, ನಮ್ಮ ಅನುಪಸ್ಥಿತಿಯಲ್ಲಿಯೂ ಇನ್ನೊಬ್ಬನಿಗೆ ನಾವು ಹೇಳಬೇಕಾದುದನ್ನು ತಿಳಿಸುವ ಅನುಪಮ ಸಾಧನ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಉತ್ಪಾದನೆಯಲ್ಲಿ ನಿರತವಾದ ಸಂಸ್ಥೆಗಳು ಜಾಹೀರಾತಿನ ಕರ್ಚನ್ನು ಉತ್ಪಾದನೆಯ ವೆಚ್ಚದ ಅವಿಭಾಜ್ಯ ಅಂಗವೆಂದೇ ಸ್ವೀಕರಿಸುತ್ತವೆ. ಮೋಟಾರು ಕಾರಿನ ಹೊಸ ಹೊಸ ಮೋಡೆಲು ತಯಾರಿಸಿ ಕೊಡುವವರಿಗೆ ಹೇಗೆ ಹಣ ತೆರಬೇಕೋ ಹಾಗೆ ಈ ಮೋಡೆಲುಗಳನ್ನುಪ್ರಕಟಿಸಿ ಜನರ ಮನಸ್ಸನ್ನು ಮೋಹಿಸುವ ಆಕರ್ಷಕ ಜಾಹೀರಾತುಗಳಿಗೂ ಹಣ ತೆರಬೇಕೆಂಬುದು ಅವರು ಒಪ್ಪಿಕೊಂಡ ಮಾತು. ಜನರು ಮೆಚ್ಚಿ ಸರಕುಗಳನ್ನು ಪಡೆದರೆ ಮಾತ್ರ ವ್ಯಾಪಾರ ಅಭಿವೃದ್ಧಿಯಾಗುವುದರಿಂದ, ಜಾಹೀರಾತು ಅತ್ಯಾವಶ್ಯವೆಂದು ಅವರ ಅಭಿಪ್ರಾಯ. ಜಾಹೀರಾತಿಗೆ ಸಾಕಷ್ಟು ಹಣ ವಿನಿಯೋಗಿಸದಿದ್ದರೆ, ಜನರ ಗಮನಕ್ಕೆ ತಮ್ಮ ಸರಕುಗಳು ಬೀಳದೆ ಹೋಗಬಹುದು; ಆಗ ಮಾರಾಟವು ಕಡಿಮೆಯಾಗಿ, ಉತ್ಪಾದನೆ ಕುಸಿಯಬಹುದು ಎಂದು ಅವರಿಗೆ ಖಚಿತವಾದಂತೆ ತೋರುತ್ತದೆ. ಹೆಚ್ಚು ಹೆಚ್ಚು ಸರಕುಗಳು ಮಾರಿಹೋಗುವಂತೆ ಸಾಕಷ್ಟು ಜಾಹೀರಾತು ಕೊಟ್ಟುದಾದರೆ ಉತ್ಪಾದನೆಯ ವೆಚ್ಚ ತನ್ನಷ್ಟಕ್ಕೆ ಕಡಿಮೆಯಾಗುವುದೆಂದೂ ಅವರ ವಿಶ್ವಾಸ.

ನಮ್ಮ ದೇಶದಲ್ಲಿ ಮಾತ್ರ ಔದ್ಯಮಿಕ ಸಂಸ್ಥೆಗಳು ಜಾಹೀರಾತುಗಳ ವಿಷಯದಲ್ಲಿ ಉದಾರವಾದ ಧೋರಣೆಯನ್ನು ವಹಿಸಿಲ್ಲ. ಜಾಹೀರಾತು ಕೇಳಬರುವವರನ್ನು ಜಿಗಣೆಗಳ ಸಾಲಿಗೆಯೇ ಈ ಸಂಸ್ಥೆಗಳು ಸೇರಿಸುತ್ತವೆ. ಇದು ಸುಧಾರಿಸದಿದ್ದರೆ, ಔದ್ಯೋಗಿಕ ಕ್ಷೇತ್ರದಲ್ಲಿ ಪ್ರಗತಿ ಹೇಗೆ ಸಾಧ್ಯವೋ ತಿಳಿಯದು. ಸರಕುಗಳನ್ನು ಜನರ ಕಣ್ಣಿಗೆ ಹಾಕುವುದಕ್ಕೆ ಪತ್ರಿಕೆಗಳಲ್ಲಿ—ಅದೂ ದೇಶ ಭಾಷೆಯ ಪತ್ರಿಕೆಗಳಲ್ಲಿ— ಜಾಹೀರಾತು ಕೊಡುವುದಕ್ಕಿಂತ ಉತ್ತಮವಾದ ಬೇರೆ ವಿಧಾನವಿಲ್ಲ. ಪತ್ರಿಕೆಗಳಿಗೆ ಸಹಸ್ರಾರು ಸಂಖ್ಯೆಯ ಪ್ರಸಾರವಿರುವುದರಿಂದ, ವ್ಯಾಪಾರಿ ಸಂಸ್ಥೆಗಳ ಸಂದೇಶ ಆ ವಲಯದ ಎಲ್ಲ ಮನೆಯನ್ನೂ ಮುಟ್ಟುತ್ತದೆ ಎನ್ನಬಹುದು. ಆದರೆ, ದೇಶಭಾಷೆಯ ಜಾಹೀರಾತನ್ನು ಸಿದ್ಧಗೊಳಿಸುವವರು ಮಾತ್ರ ತುಸು ಜಾಣರಾಗಿ ವರ್ತಿಸಬೇಕು— ಇಂಗ್ಲೀಷಿನ ಅನುವಾದವೇ ಉತ್ಕೃಷ್ಟ ವಿಧಾನ ಎಂದು ಭಾವಿಸಬಾರದು; ಒಂದೇ ಚಿತ್ರದ ಪಡಿಯಚ್ಚನ್ನು ಎಲ್ಲ ಭಾಷೆಗಳವರೂ ಉಪಯೋಗಿಸುವಂತೆ ಹೇಳಲಾಗದು. ಏಕೆಂದರೆ, ಗುಜರಾತಿ ಉಡುಪಿನ ತರುಣಿಯ ಚಿತ್ರವಿದ್ದ ಪಡಿಯಚ್ಚನ್ನು ಕನ್ನಡನಾಡಿನಲ್ಲಿ ಸೀರೆಗಳಪ್ರಚಾರಕ್ಕೆ ಉಪಯೋಗಿಸುವುದರಿಂದ ಜನರ ಮೇಲೆ ಹೆಚ್ಚಿನ ಪರಿಣಾಮವಾಗದು.

ಜನರ ಮೇಲೆ ಪರಿಣಾಮವಾಗಬೇಕಾದರೆ, ಸರಕುಗಳ ವಿವರಕ್ಕಿಂತಲೂ ಪ್ರಯೋಜನಾಂಶದ ವಿವರವನ್ನು ಜಾಹೀರಾತುಗಳಲ್ಲಿ ಕಾಣಿಸುವುದು ಅಪೇಕ್ಷಣೀಯ. ಉದಾಹರಣೆಗೆ, ಕುರ್ಚಿಯ ವಿವರವನ್ನು ಹೇಳುವುದಕ್ಕಿಂತ, ಆರಾಮದ ಅವಶ್ಯಕತೆಯನ್ನು ಬಿಂಬಿಸುವುದು, ಸೀರೆಯ ಗುಣವನ್ನು ಬಣ್ಣಿಸುವುದಕ್ಕಿಂತ ಸೌಂದರ್ಯ ವರ್ಧನೆ ಇಷ್ಟವೆಂದು ಹೇಳುವುದು, ಹಾಸಿಗೆಯ ಬೆಲೆ ಹೇಳುವ ಬದಲು ಸುಖಕರವಾದ ನಿದ್ದೆಯ ಪ್ರಯೋಜನವನ್ನು ಮನಗಾಣಿಸುವುದು ಇಷ್ಟ. ಸರಕುಗಳನ್ನು ಅವುಗಳ ಪ್ರಯೋಜನಕ್ಕಾಗಿ ಜನರು ಬಯಸುತ್ತಾರೆ ಎಂಬುದನ್ನು ಔದ್ಯಮಿಕ ಸಂಸ್ಥೆಗಳು ಗಮನಿಸಬೇಕು. ಹಾಗೆಯೇ ದೇಶಭಾಷೆಯ ಪತ್ರಿಕೆಗಳು ಉಚ್ಚ ಶಿಕ್ಷಣ ಪಡೆಯದ ಜನಸಾಮಾನ್ಯರನ್ನು ಸಹ ಮುಟ್ಟುವುದರಿಂದ, ಅವುಗಳನ್ನೆ ಜಾಹೀರಾತಿನಮಾಧ್ಯಮವಾಗಿಬಳಸಲು ಅವುಮುಂದಾಗಬೇಕು.

In the Court of the District Munsif of Coondapoor.

O. S. No. 131/1955.

Between:

Madiyaru Narasimha Adiga ... Plaintiff.

and

Durgi Hengsu and others ... Defendants.

To,

1. Deva (3rd defendant)
2. Kusta (4th defendant)
   Children of Durgi Hengsu, now residing at Molahalli village, Coondapoor Taluk, P. O. Hunsemakki.

Please take notice that the plaintiff above named had filed the above suit against you for recovering the rents due to him for the year Vijaya. This is to inform you that the said suit stands posted to 30—6—1955 for your appearance before the above court. If you fail to appear before the said court on that day at 11 A. M. either in person or through a duly instructed pleader you will be declared exparte and the suit will be proceeded with in your absence.

Sd. K. Ramappayya,
B. A., B. L.,
Advocate for Plaintiff.

Coondapoor, 14-6-1955.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ.

(೧ನೇ ಪುಟದಿಂದ)

ತ್ತದೆ. ಮುಂದೆ ಎಂದಾದರೊಮ್ಮೆ ಬರುವ ಮಸೂದೆಯಲ್ಲಾದರೂ ಮುಂಬಯಿ ಸರಕಾರ ಮಾಡಿರುವ ರೀತಿಯ ಕ್ರಾಂತಿಕಾರಿಯಾದ ಅಂಶಗಳನ್ನು ಎಂದು ನಂಬುವುದು ಕಷ್ಟ. ಏಕೆಂದರೆ, ನಮ್ಮ ಜಿಲ್ಲೆಯ ಭೂಮಾಲಿಕರ ಪರವಾಗಿ ಮುಖ್ಯಮಂತ್ರಿಗಳಿಗೆ ಮೊನ್ನೆ ಎಪ್ರಿಲಿನಲ್ಲಿ ಅರ್ಪಿಸಿದ ಮನವಿಯು ನ್ಯಾಯವಾದ ಗೇಣಿಯನ್ನು ಉತ್ಪಾದನೆಯ ಅರವಾಸಿಯಷ್ಟು, ಅಥವಾ ಕಳೆದ ಐದು ವರ್ಷಗಳ ಸರಾಸರಿ ಗೇಣಿಯಷ್ಟು ಎಂದು ನಿರ್ಣಯಿಸಬೇಕಾಗಿ ಹೇಳಿರುತ್ತದೆ; ಅಲ್ಲದೆ ೫ ಎಕ್ರೆ ಮೊದಲನೇ ವರ್ಗದ ನಂಜ ಭೂಮಿಯನ್ನು ಭೂಹಿಡುವಳಿಯ ಅಧಿಕ ಮಿತಿ ಎಂದು ನಿರ್ಣಯಿಸಬಹುದೆಂದೂ ಆದರೆ ಪುಂಜ ಭೂಮಿಯನ್ನು ಲೆಕ್ಕಕ್ಕೆ ಹಿಡಿಯಲೇ ಬಾರದೆಂದೂ ಅದು ಸೂಚಿಸುತ್ತದೆ. ಈಚೆಗೆ ತಮಿಳು ನಾಡು ಕಾಂಗ್ರೆಸು ಸಮಿತಿಯು ಮಾಡಿರುವ ಸೂಚನೆಗಳು ಇದಕ್ಕಿಂತ ಹೆಚ್ಚು ಉದಾರವಾಗಿದ್ದರೂ ಒಕ್ಕಲುಗಳ ಕಲ್ಯಾಣ ಮಾಡುವ ರೀತಿಯಲ್ಲಿ ಅವೇನು ಇಲ್ಲ. ನೀರಿನ ಅನುಕೂಲತೆ ಇರುವ ೫ ಎಕ್ರೆ ಭೂಮಿ, ಅಥವಾ ೭೫ ಎಕ್ರೆ ಬೇರೆ ಭೂಮಿ ಹಿಡುವಳಿಯ ಪರಮ ಮಿತಿಯಾಗಿರಬಹುದೆಂದು ಅದು ಹೇಳುತ್ತದೆ. ಗೇಣಿಯ ವಿಷಯದಲ್ಲಿ ಒಟ್ಟು ಉತ್ಪಾದನೆಯ ೫೫%ದಿಂದ (ಬೆಟ್ಟು ಗದ್ದೆಗಳಿಗೆ) ಹಿಡಿದು ೪೫%(ಬೈಲುಗದ್ದೆಗಳಿಗೆ) ವರೆಗಿನ ಪ್ರಮಾಣವನ್ನು ಅದು ಪುರಸ್ಕರಿಸುತ್ತದೆ.

ಇದನ್ನು ನೋಡಿದರೆ, ನಾವು, ಮದ್ರಾಸಿನವರು, ಭೂಸುಧಾರಣೆಯ ವಿಷಯದಲ್ಲಿ ಎಲ್ಲಿದ್ದೇವೆ ಎಂದು ಮನವರಿಕೆಯಾಗುತ್ತದೆ. ಮುಂಬಯಿ ರಾಜ್ಯದಲ್ಲಿ ಒಕ್ಕಲುಗಳಿಗೆ ಸಾಮಾನ್ಯ ರಕ್ಷಣೆ ನೀಡುವ ಶಾಸನ ೧೯೪೮ರಷ್ಟು ಹಿಂದೆಯೇ ಜ್ಯಾರಿಗೆ ಬಂದಿದ್ದಿತು, ಇಂಥ ದಿವಸ ಉಳುವವನೇ ಹೊಲ ದೊಡೆಯ ನಾಗುವನೆಂದು ಸಾರುವ ಕೆಚ್ಚೆದೆಯನ್ನು ಅಲ್ಲಿಯ ಸರಕಾರ ತೋರಿಸಿತು. ಮದ್ರಾಸಿನ ಮುಖ್ಯಮಂತ್ರಿಗಳು ಮೂಲಭೂತವಾದ ಈ ಪ್ರಶ್ನೆಯ ವಿಷಯದಲ್ಲಿ ತಮ್ಮ ವಿಶಿಷ್ಟ ನಗೆಯೊಂದನ್ನು ತೇಲಿಸಿಬಿಟ್ಟು ಯಾವುದನ್ನೂ ಖಚಿತವಾಗಿ ಹೇಳದೆ ಜನರನ್ನು ಸುಮ್ಮಗಿರಿಸುವಂತೆ ಕಾಣುತ್ತದೆ. ನಾವಿನ್ನೂ ಪ್ರಥಮ ಹೆಜ್ಜೆಯನ್ನೆ ಮುಂದಿಟ್ಟಿಲ್ಲ.ಅದರೂ ಗಳಿಗೆಗೊಂದು ಬಗೆ ಮಾತಾಡುವುದನ್ನೇನು ನಮ್ಮ ಮಂತ್ರಿವರ್ಯರು ಬಿಟ್ಟುಗೊಡುವುದಿಲ್ಲ. ರಾಜಕಾರಣಿಗಳ ಸಹಜ ಧೂರ್ತತನವೆಂದು ಇದನ್ನು ಒಪ್ಪಬಹುದು; ಆದರೆ ರಾಷ್ಟ್ರಹಿತ ಮತ್ತು ಜನಹಿತದ ಆದರ್ಶಗಳು ಆಗ ಎಲ್ಲಿ ಉಳಿಯುತ್ತವೆ?

—ಕಾರ್ತಿಕೇಯ.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಭಗವದ್ಗೀತೆಯ ಸಮೂಲ
ಭಾಷಾಂತರ.
ನವಯುಗ ಪ್ರೆಸ್ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO. W. 3619

Licensed to Post without Prepay ment

ನವಯುಗ

ಸಂಪುಟ ೩೪ VOL. 34

ಉಡುಪಿ, 30—6—1955

ಸಂಚಿಕೆ ೪೨ NO. 42

ಸರಕಾರದ ಆಡಳಿತ ವರ್ಗ

ಕೆಲವೊಮ್ಮೆ ನಾವು ಕಾಲವು ಬದಲಾಗಿರುವುದರ ಕುರಿತಾಗಿ ವಿಷಾದಿಸುವವರನ್ನೂ ಕಾರ್ಯಕ್ಷಮತೆಯ ಸುಟ್ಟ ಕಿಳಿಗಿಳಿದಿರುವುದನ್ನಾಗಿ ನಿರಂತರ ವ್ಯಕ್ತಪಡಿಸುವವರನ್ನೂ ಕಾಣುತ್ತಿದ್ದೇವೆ. ಈಗ ಕಂಡುಬರುವ ಕುಂದು ಕೊರತೆಯನ್ನು ಸಾಮಾನ್ಯವಾಗಿ ಅತಿಶಯೋಕ್ತಿಯಿಂದ ಬಣ್ಣಿಸಲಾಗುತ್ತದೆ; ಆದರೆ ಕುಂದುಕೊರತೆಯು ಸುಧ್ಯಂತರವಾಸ್ಥೆಯ ಬಳಿಕ ದೂರವಾಗದಿರದು. ಸ್ವತಂತ್ರಭಾರತದಲ್ಲಿ ಸಾರ್ವಜನಿಕ ಆಡಳಿತದ ಹೊಣೆಹೊತ್ತವರು ತಾವು ಘನವಾದ ಉದ್ದೇಶವೊಂದಕ್ಕೆ ದುಡಿಯುತ್ತಿದ್ದೇವೆ ಎಂದು ಮನಗಾಣಬೇಕು. ನಾವು ಹೊಸತಾದ ಹಾಗು ಉತ್ತಮವಾದ ಸಮಾಜ ನಿರ್ಮಾಣದ ಕಾರ್ಯಕರ್ತರು; ಆದುದರಿಂದ ತ್ಯಾಗ, ಶ್ರದ್ಧೆ ಮತ್ತು ಐಕ್ಯದಿಂದ ನಾವು ದುಡಿಯೋಣ!

—ಕಾಮರಾಜ ನಾಡರ

ಕಳೆದ ವಾರ ಮದ್ರಾಸಿನಲ್ಲಿ ಸಚಿವಾಲಯದ ನೌಕರ ವರ್ಗದವರು ಸೇವೆಯ ಸಮಸ್ಯೆಯನ್ನು ಆಚರಿಸಿದರು. ಇಲ್ಲಿಯ ಕಾರ್ಯಕ್ರಮದ ವರದಿ ನೋಡಿದರೆ, ನೌಕರ ವರ್ಗದವರು ನಿತ್ಯ ಆಡಳಿತ ಕ್ರಮದಲ್ಲಿ ತಮ್ಮ ಹಿತಾಸಕ್ತಿಗೆ ಬರುವ ಕೆಲವು ತೊಂದರೆಗಳನ್ನು ಮಂತ್ರಿ ಮಹೋದಯರ ಅವಗಾಹನೆಗೆ ತರಲು ಈ ಅವಕಾಶವನ್ನು ಉಪಯೋಗಿಸಿಕೊಂಡಂತೆ ಭಾಸವಾಗುತ್ತದೆ. ನೌಕರ ವರ್ಗದವರು ಸಾರ್ವಜನಿಕ ಆಡಳಿತವನ್ನು ಜನರ ಮನ ಮೆಚ್ಚುವ ರೀತಿಯಲ್ಲಿ ಹೇಗೆ ನಿರ್ವಹಿಸಿಕೊಂಡು ಹೋಗಬಹುದು ಎಂಬುದನ್ನು ಕೂಲಂಕಷವಾಗಿ ಸಮಾಲೋಚಿಸುತ್ತಿದ್ದರೆ ಅದು ಪ್ರಯೋಜನಕರವಾಗುತ್ತಿತ್ತೆಂದು ನಮಗೆ ತೋರುತ್ತದೆ. ಸಪ್ತಾಹದ ಪ್ರಾರಂಭೋತ್ಸವದ ಸಂದರ್ಭದಲ್ಲಿ ಕಳುಹಿಸಲಾದ ಶುಭಾಶಯಗಳು ನೌಕರ ವರ್ಗ ಹೀಗೆ ಕಾರ್ಯಕ್ರಮವನ್ನು ರೂಪಿಸಬೇಕೆಂಬ ಆಶೇಕ್ಷೆಯನ್ನು ವ್ಯಕ್ತಪಡಿಸಿದ್ದಂತೆ ಕಾಣುತ್ತದೆ. ಆದರೆ, ಇತ್ತ ಹೆಚ್ಚಿನ ಗಮನ ಕೊಡಲ್ಪಡಲಿಲ್ಲ ಎಂಬುದು ಶೋಚನೀಯ.

ಹೆಚ್ಚು ಕಡಿಮೆ ಇದೇ ಸಮಯದಲ್ಲಿ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡಿದ್ದ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಹೈದರಾಬಾದಿನಲ್ಲಿ ರಾಜ್ಯದ ಆಡಳಿತ ಮಂಡಳದ ನೌಕರ ವರ್ಗದ ಸಭೆಯಲ್ಲಿ ಮಾತನಾಡುವಾಗ ತಮ್ಮ ಹಿತಾಸಕ್ತಿಗಳಿಗಿಂತ ಹೆಚ್ಚು ಮಹತ್ವವನ್ನು ಜನತೆಯ ಸೇವೆಗೆ ನೌಕರರೆಲ್ಲ ನೀಡಬೇಕೆಂದು ಸ್ಪಷ್ಟ ವಾಣಿಯಲ್ಲಿ ಉಪದೇಶಿಸಿದರು. ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಕಾಲದಲ್ಲಿ ಅತ್ಯುತ್ತಮ ರೀತಿಯಲ್ಲಿ ಆಡಳಿತ ನಿರ್ವಹಿಸಿಕೊಂಡು ಹೋಗಬಲ್ಲ ಅಧಿಕಾರಿಗಳನ್ನು ಹಿಂದೆ ಬಿಟ್ಟಿದ್ದರು; ಈ ಅಧಿಕಾರಿಗಳು ತ್ವರಿತದಲ್ಲಿಯೇ ತಮ್ಮನ್ನಿಷ್ಟೆಯನ್ನು ಸ್ವತಂತ್ರಭಾರತಕ್ಕೆ ವ್ಯಕ್ತಪಡಿಸಿದರು. ಇವರು ತುಂಡರಸರ ರಾಜ್ಯಗಳ ವಿಲೀನೀಕರಣ, ಸೈನ್ಯ ಮತ್ತು ಸಂರಕ್ಷಣಾ ವ್ಯವಸ್ಥೆಯ ಪುನರ್ಘಟನೆ, ಸಾರ್ವತ್ರಿಕ ಚುನಾವಣೆ ಮುಂತಾದ ಘನ ಕೆಲಸಗಳನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ; ಅಲ್ಲದೆ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವುದರಲ್ಲಿ ತಮ್ಮ ಅನುಭವದ ಬೆಂಬಲ ನೀಡಿದ್ದಾರೆ—ಎಂದು ಮುಂತಾದ ವಿಷಯಗಳು ನಮಗೆ ಗೊತ್ತಿಲ್ಲದಿಲ್ಲ.

ಜನತೆಯ ಸೇವಕನೇ ತಾನೆಂದು ಸರಕಾರದ ಅಧಿಕಾರಿ ತಿಳಿದುಕೊಳ್ಳುವುದು ಪ್ರಜಾಪ್ರಭುತ್ವದ ಸಲ್ಲಕ್ಷಣ. ಹಿಂದೆ ಸಾಮಾನ್ಯ ಜಾಕೀದಾರನು ತಾನೇ ಗ್ರಾಮದ ಯಜಮಾನನೆಂದು ವರ್ತಿಸುತ್ತಿದ್ದನು; ಆದರೆ ಇಂದು ರಾಷ್ಟ್ರಾಧ್ಯಕ್ಷರು ಸಹ ಜನರ ಸೇವಕ ತಾನೆಂದು ಹೇಳಿಕೊಳ್ಳುತ್ತಾರೆ. ಈ ಒಲವಾವಣೆ ಸಾರ್ವಜನಿಕ ಆಡಳಿತ ರಂಗದಲ್ಲಿ ದುಡಿಯುತ್ತಿರುವ ಅಧಿಕಾರಿಗಳಲ್ಲಿ ವ್ಯಕ್ತವಾಗುತ್ತಿರುವುದು ನಿಜಕ್ಕೂ ಶ್ಲಾಘನೀಯ. ಮನೋಭಾವದಲ್ಲಿ ಆದ ಈ ಮಾರ್ಪಾಟವು ನವಭಾರತದ ನಿರ್ಮಾಣ ಕಾರ್ಯಕ್ಕೆ ತುಂಬ ಸಹಕಾರಿಯಾಗಿದೆ. ಆದರೆ, ಕೆಲವೆಡೆ ಇನ್ನೂ ಹಳೆಯ ಭಾವನೆಗಳಿಂದ ಕೂಡಿದ ಅಧಿಕಾರಿಗಳು ಕಂಡುಬರುತ್ತಾರೆ; ಅವರು ಜನರನ್ನು ಸ್ನೇಹದಿಂದ ಮಾತನಾಡಿಸುವ ಬದಲು ಗದರಿಸುತ್ತಾರೆ. ಅವರ ಕೆಲಸವನ್ನು ಶೃಂಗಾರದಲ್ಲಿ ಮಾಡಿಕೊಡುವ ಬದಲು ಲಂಚಕ್ಕೆ ಕೈಯೊಡ್ಡುತ್ತಾರೆ ಲಂಚಗಳಿತವು ಅಧಿಕಾರ ವಲಯದಲ್ಲಿದ್ದವರಿಗೆ ಸ್ವಾತಂತ್ರ್ಯೋತ್ತರದಲ್ಲಿಯೇ ಅತಿಯಾಗಿ ಅಂಟಿಕೊಂಡಿತೆಂಬುದು ಅನುಭವಸಿದ್ಧವಾದ ಸಂಗತಿ. ಸಾರ್ವಜನಿಕ ಆಡಳಿತ ರಂಗವನ್ನು ಪರಿಶೀಲಿಸುವಾಗ ಈ ಬಗೆಯ ಕೆಟ್ಟ ವಿಷಯಗಳೂ ಗೋಚರಿಸುತ್ತವೆ.

ಆಡಳಿತವು ಸುಗಮವಾಗಿ ನಡೆಯಬೇಕು; ಜನರಿಗೆ ಹಿತವಾಗಬೇಕು ಎಂಬ ಆಕಾಂಕ್ಷೆ ಇಟ್ಟುಕೊಂಡ ವರಿಷ್ಠರು ಲಂಚಗುಳಿತನ, ವಿಳಂಬ ಧೋರಣೆ ಇತ್ಯಾದಿಗಳ ವಿರುದ್ಧ ಸದೇ ಸದೇ ತಮ್ಮ ಸ್ವರವೆತ್ತಿದ್ದಾರೆ; ಆದರೆ, ಇದರ ಪರಿಣಾಮ ಅಧಿಕಾರಿ ವರ್ಗದ ಮೇಲೆ ಸಾಕಷ್ಟು ಗಾಢವಾಗಿ ಆಗಿಲ್ಲವೆಂದೇ ತೋರುತ್ತದೆ. ಅಧಿಕಾರಿಗಳ ವಿರುದ್ಧ ದೂರೊಯ್ಯಲು ಜನರಿಗೆ ಸಾಧ್ಯವಾಗುವುದಿಲ್ಲ—ಏಕೆಂದರೆ, ನ್ಯಾಯಕರರು ವಿರಳ; ದೂರಿನ ಪ್ರಾಮಾಣಿಕತೆಯನ್ನು ಮೆಚ್ಚುವವರ ಬದಲು ಈ ಅಧಿಕ ಪ್ರಸಂಗಕ್ಕಾಗಿ ಶಿಕ್ಷಿಸುವವರೇ ಅಧಿಕ. ಆಡಳಿತ ಮಂಡಳವು ಶ್ಲಾಘನೀಯವಾದ ಅನೇಕ ಕೆಲಸಗಳನ್ನು ಮಾಡಿದ್ದರೂ ಸಹ, ನಿತ್ಯ ವ್ಯವಹಾರದಲ್ಲಿ ಜನರ ಮೇಲೆ ಪ್ರತ್ಯಕ್ಷ ಪರಿಣಾಮ ಮಾಡಬಲ್ಲ ಸಾಮಾನ್ಯ ಸೌಜನ್ಯದ ನಡವಳಿಕೆಯನ್ನು ಅನುಸರಿಸದಿದ್ದರೆ, ಜನರ ಅಭಿಪ್ರಾಯ ಬದಲಾಗುವುದು ಕಷ್ಟ. ರಾಷ್ಟ್ರಾಧ್ಯಕ್ಷರೂ ಮಂತ್ರಿ ಮಂಡಳದ ಸದಸ್ಯರೂ ಸರಕಾರದ ಅಧಿಕಾರಿಗಳ ದಕ್ಷತೆ ಮತ್ತು ಚಾತುರ್ಯಗಳನ್ನು ಹೊಗಳಬಹುದು; ಆದರೆ ಜನರ ಮನಸ್ಸಿನಲ್ಲಿ ಇಷ್ಟರಿಂದಲೇ ಸದಭಿಪ್ರಾಯ ಮೂಡಲಾರದು.

ಒಂದು ಸಾಮಾನ್ಯ ಕೆಲಸಕ್ಕಾಗಿ ಹತ್ತು ಹದಿನೈದು ಸಲ ತಾಲೂಕು ಕಚೇರಿಯಂಥ ಆಡಳಿತಾಧಿಕಾರಿಯ ಕಾರ್ಯಾಲಯಕ್ಕೆ ಹೋಗಿ ಬರಬೇಕಾದರೆ, ಜನರು ಏನು ಸುಖದ ಅನುಭವ ಹೊಂದಿಯಾರು? ವಿಕೇಂದ್ರೀಕರಣದ ತತ್ವವನ್ನು ಅದಷ್ಟು ಹೆಚ್ಚಿಗೆ ಆಡಳಿತರಂಗದಲ್ಲಿ ನಾವು ಅನುಸರಿಸಲು ನೋಡಬೇಕು. ಆಡಳಿತಾಧಿಕಾರಿಗಳಿಗೆ ಈಗ—ಅಂದರೆ ಜನತೆಗೆ ಜವಾಬ್ದಾರಿಯನ್ನು ಹೊತ್ತ ಪಕ್ಷ ಪಂಗಡಗಳ ನಾಯಕರ ಮಂತ್ರಿಮಂಡಳವಿರುವಾಗ—ತಮ್ಮ ಸ್ವರವೆತ್ತಲು ಅಧಿಕಾರವೇ ಇಲ್ಲದಂತಾಗಿದೆ. ಮಂತ್ರಿಯು ಏನು ಮೇಳುವನೋ ಅದನ್ನು ಕಾರ್ಯರೂಪಕ್ಕೆ ಇಳಿಸಲು ಹೆಣಗುವುದೇ ತನಗೆ ಭೂಷಣ ಎಂದವನು ತಿಳಿದುಕೊಳ್ಳಬೇಕಾಗಿದೆ; ಹೊರತು, ಆ ವಿಶಿಷ್ಟ ಸಮಸ್ಯೆಯ ಕುರಿತು ತನ್ನ ಇಷ್ಟು ದಿನಗಳ ಆಡಳಿತದ ಅನುಭವ ಏನು ಹೇಳುತ್ತದೆ ಎಂಬುದನ್ನು ಅತ ಹೇಳುವುದಕ್ಕೆ ಸಾಕಷ್ಟು ಅವಕಾಶವಿರುವುದಿಲ್ಲ. ಮಂತ್ರಿಯ ಇಚ್ಛೆಗೆ ವಿರುದ್ಧ ಅಭಿಪ್ರಾಯವನ್ನು ಮುಂದಿಟ್ಟ ಅಧಿಕಾರಿಯು ಮಂತ್ರಿಯ ಪ್ರೀತಿಪಾತ್ರನಾಗುವುದಿಲ್ಲ. ಪ್ರೀತಿ ಸಂಪಾದಿಸಬೇಕೆಂದು ಬಯಸುವ ಅಧಿಕಾರಿಗಳು ತಾನ ಪ್ರತಿಬಂಧ ಯಶಸ್ವಿಯಾಗಿದೆ ಎಂದು ಮುಂತಾಗಿ ಸುಳ್ಳು ವರದಿಯನ್ನೆ ಮಾಡುತ್ತಾರೆ! ಕಳ್ಳ ಚಟ್ಟಿ ಇಳಿಸುವುದು ಹೆಚ್ಚಿದೆ ಎಂದು ಹೇಳಲು ಹೋಗುವುದಿಲ್ಲ.

ಮಂತ್ರಿಗಳಾದವರು ಸರಕಾರದ ಧೋರಣೆಯನ್ನು ರೂಪಿಸುವಾಗ ಆಡಳಿತಾಧಿಕಾರಿಗಳನ್ನು ಮೊದಲಾಗಿ ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿದೆ. ಎಲ್ಲ ಕೀರ್ತಿಯೂ ಮಂತ್ರಿಗೆ ಸೇರುತ್ತದೆ ಎಂಬುದರಿಂದ ಅಧಿಕಾರಿಗಳು ತಮ್ಮ ಸ್ವಂತ ಪ್ರತಿಭೆಯನ್ನು ಹೊರಗೆಡವಲು ಹೋಗುವುದಿಲ್ಲ. ಇದು ತಪ್ಪು; ಸರಕಾರದ ಅಧಿಕಾರಿಗಳಿಗೆ ಯೋಗ್ಯ ಮನ್ನಣೆ ದೊರಕು

(ಅನೇ ಪುಟ ನೋಡಿರಿ)

ರೈಲ್ವೆಯ ಆ ಡಬ್ಬಿಯಲ್ಲಿ ಧೂಮ್ರಪಾನ ಮಾಡುವುದನ್ನು ನಿಷೇಧಿಸಿದ್ದರು. ಆದರೆ ಯಾರೋ ಒಬ್ಬ ಪ್ರಯಾಣಿಕ, ಸಿಗರೇಟನ್ನು ಹೊರ ತೆಗೆದು ಅದಕ್ಕೆ ಬೆಂಕಿ ಹಚ್ಚಿ, ಸೇದ ಹತ್ತಿದ. ಗಾರ್ಡನಿಗೆ ಆಗ ಮೂರು ಹೋಯಿತು.

ಒಡನೆಯೇ ಗಾರ್ಡನು ಬಂದ. "ನೋಡಿಸ್ವಾಮಿ, ರೈಲಿನಲ್ಲಿ ಯಾವಾಗಲೂ ಎರಡು ನಿಯಮಗಳ ಉಲ್ಲಂಘನೆಯಾಗುತ್ತದೆ. ಧೂಮ್ರಪಾನ ಮಾಡಲಾಗದು, ಲಂಚ ಕೊಡತಕ್ಕದಲ್ಲ ಎಂಬುದೇ ಆ ನಿಯಮಗಳು. ಈಗ ಮೊದಲನೆಯ ನಿಯಮವನ್ನಂತೂ ಮುರಿದ ಹಾಗಾಯಿತು; ಅನ್ನುಳಿದುದೇನೆಂದು ಗೊತ್ತಾಯಿತಲ್ಲವೆ?" ಎಂದು ಅವನು ಕೈ ಮುಂದೆಮಾಡಿದ! ಸಿಗರೇಟು ಭಕ್ತನಾದ ಹಿರಿಯ ಎಲ್ಲರೂ ಆ ಪಾಕ್ಕಾದರು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ
ವಿಶೇಷ ಸೌಕರ್ಯಗಳುಳ್ಳ ಸೇವಿಂಗ್ಸ್ ಬ್ಯಾಂಕಿನ
ವ್ಯವಸ್ಥೆ ಮಾಡಿರುವೆವು.

ಹೆಚ್ಚಿನ ಮಾಹಿತಿಗೆ
ನಿಮಗೆ ಸಮೀಪವಿರುವ 'ಸಿಂಡಿಕೇಟ್ ಬ್ಯಾಂಕಿನ' ಶಾಖೆಯಲ್ಲಿ ವಿಚಾರಿಸಿರಿ.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನೆಹರುಗಳು ಪೋಪರೊಡನೆ ನಡೆಸುವ ಭೇಟಿ

ರೋಮನರ ಕಾಲದಿಂದ ಇಟಲಿಯೊಡನೆ ಬೆಳೆದು ಬಂದ ಭಾರತದ ಗೆಳೆತನ

ಪ್ರಧಾನ ಮಂತ್ರಿ ನೆಹರುಗಳೀಗ ರಶ್ಯ ಮತ್ತಿತರ ಐರೋಪ್ಯ ರಾಷ್ಟ್ರಗಳ ಪ್ರವಾಸವನ್ನು ಮುಗಿಸಿ ಭಾರತಕ್ಕೆ ಮರಳುವ ದಾರಿಯಲ್ಲಿದ್ದಾರೆ. ಅವರು ಹಿಂದಿರುಗುವ ಮಾರ್ಗದಲ್ಲಿ ರೋಮಿನಲ್ಲಿ ಸ್ವಲ್ಪ ಸಮಯ ತಂಗುವರೆಂದೂ ಅಲ್ಲಿ ಇಟಲಿಯ ಸರಕಾರದ ಘೋಣರೊಡನೆ ಮತ್ತು ಪೋಪರೊಡನೆ ಮಾತುಕತೆ ನಡೆಸುವರೆಂದೂ ತಿಳಿದು ಬರುತ್ತದೆ.

ಪೋಪರೊಡನೆ ನೆಹರುಗಳ ಭೇಟಿಯು ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಬಹಳ ಮಹತ್ವವನ್ನು ಪಡೆಯುತ್ತದೆ. ನಮ್ಮ ದೇಶದಲ್ಲಿ ಈಗ ಗೋವೆ ಮತ್ತಿತರ ಪೋರ್ಚುಗೀಜರ ಕೈಯಲ್ಲಿನ ವಸಾಹತುಗಳ ವಿಮೋಚನೆಗಾಗಿ ಅತ್ಯುಗ್ರ ಸ್ವರೂಪದ ಚಳವಳಿವು ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆಯಷ್ಟೇ— ಈ ಚಳವಳಿದಲ್ಲಿ ವಿಶಾಲ ಮನೋಧರ್ಮದ ಕ್ರೈಸ್ತರು ಒಳ್ಳೆಯ ಆಸಕ್ತಿಯನ್ನು ವಹಿಸಿದ್ದಾರೆ; ಆದರೆ ಕೆಲವು ಧರ್ಮಾಂಧರು ಪೋರ್ಚುಗೀಜರ ಕೈಯಲ್ಲಿಯೇ ಗೋವೆಯ ಕ್ರೈಸ್ತರಿಗೆ ಸುಖ ದೊರಕೀತು ಎಂದು ವಸಾಹತು ಪ್ರದೇಶದಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ. ಇವರಿಗೆ ರಾಜಕೀಯ ಪ್ರಭುಗಳಾಗಿರುವ ಪೋರ್ಚುಗೀಜರ ಪ್ರೋತ್ಸಾಹ ಮತ್ತು ಬೆಂಬಲ ಸಿಗುತ್ತಿದೆ.

ಭಾರತದೊಡನೆ ವಿಲೀನ ಹೊಂದುವುದರಿಂದ ಗೋವೆ ಮತ್ತಿತರ ವಸಾಹತುಗಳಲ್ಲಿನ ಕ್ರೈಸ್ತರಿಗೆ ಯಾವುದೇ ಬಗೆಯ ಧಾರ್ಮಿಕ ತೊಂದರೆಯಾಗುವುದಿಲ್ಲ ವೆಂಬುದನ್ನು ಮಿ. ಫ್ರಾಂಕ್ ಅಂಥೋನಿಯವರಂಥ ಕ್ರೈಸ್ತ ರಾಜಕೀಯ ಮುಂದಾಳುಗಳಿಂದ ಹಿಡಿದು ಕಾರ್ಡಿನಲ್ ಗ್ರೇಸಿಯಸ್ ರಂಥ ಧರ್ಮಗುರುಗಳ ವರೆಗೆ ಎಲ್ಲರೂ ತಿಳಿಸಿಹೇಳಿದ್ದಾರೆ. ಆದಾಗ್ಯೂ ಪೋರ್ಚುಗಾಲಿನ ಸರ್ವಾಧಿಕಾರಿ ಡಾ. ಸಾಲಾಝಾರರಿಗೆ ಕ್ರೈಸ್ತಜಗದ್ಗುರು ಪೋಪರ ಬೆಂಬಲವಿದೆ. ಎಂದೆನ್ನಲಾಗುತ್ತದೆ. ಈ ಬೆಂಬಲದ ಭರವಸೆಯಿಂದಲೇ ಪೋರ್ಚುಗೀಜರು ಗೋವೆಯ ನಿವಾಸಿಗಳಲ್ಲಿ ಅರೆವಾಸಿಯಷ್ಟಿರುವ ಕ್ರೈಸ್ತರ ವಿಶ್ವಾಸ ಸಂಪಾದನೆಗೆ ಹೆಣಗುತ್ತಿದ್ದಾರೆ ಎಂಬ ಅಭಿಪ್ರಾಯ ಕಲವೆಡೆಗಳಿಂದ ಕೇಳಿಬರುತ್ತದೆ.

ಆದುದರಿಂದಲೇ ನೆಹರುಗಳು ಪೋಪರೊಡನೆ ನಡೆಸುವ ಮಾತುಕತೆಗೆ ಮಹತ್ವ ಪ್ರಾಪ್ತವಾಗಿದೆ. ನೆಹರುಗಳು ಪೋಪರಿಗೆ ಭಾರತದಲ್ಲಿ ಕ್ರೈಸ್ತ ಧರ್ಮಕ್ಕೆ ಎಳ್ಳಷ್ಟೂ ಗಂಡಾಂತರವಿಲ್ಲವೆಂಬುದನ್ನು ಸ್ಪಷ್ಟಪಡಿಸಿದರೆ, ಪೋಪರು ಪೋರ್ಚುಗೀಜರಿಗೆ ನೀಡುತ್ತಿರುವರೆನ್ನಲಾದ ಬೆಂಬಲವು ಗೋವೆ ಮತ್ತಿತರ ಭಾರತದಲ್ಲಿನ ವಸಾಹತು ಪ್ರದೇಶಗಳ ಮಟ್ಟಿಗೆ ಹಿಂದೆಗೆದುಕೊಳ್ಳಲ್ಪಡುವುದು ಸಿದ್ಧವೆ. ಈಗ ಭಾರತ ಹಾಗು ಗೋವೆಯೊಳಗಿನ ರಾಷ್ಟ್ರೀಯ ಮನೋಭಾವದ ಕ್ರೈಸ್ತರಿಗೆ ವಿಮೋಚನೆಯ ಹೋರಾಟವನ್ನು ಉತ್ಸಾಹದಿಂದ ಮುಂದೊತ್ತಲು ಅನುಕೂಲವಾಗುತ್ತದೆ.

ಶಾಂತಿಯ ಮಹಾಪ್ರವಾದಿ ಎನಿಸಿಕೊಳ್ಳುವ ಪೋಪರು ಮಾನವತೆಯ ಹಿತಚಿಂತಕನೆಂದು ಗೌರವಿಸಲ್ಪಡುವ ನೆಹರುಗಳವಾದ ಸರಣಿಯನ್ನು ಒಪ್ಪಿಕೊಳ್ಳದಿರಲು ಯಾವ ಕಾರಣವೂ ನಮಗೆ ಗೋಚರಿಸುವುದಿಲ್ಲ. ಒಂದು ವೇಳೆ, ಪೋರ್ಚುಗೀಜರು ಭಾರತದಲ್ಲಿ ಪಡೆದಿರುವ ವಸಾಹತುಗಳ ಕುರಿತು, ಹೆಚ್ಚಿನ ತಿಳಿವಳಿಕೆಯಾಗದೆ ಹೋದರೂ ಸಹ ಇವರಿಬ್ಬರ ಭೇಟಿಯು ಶಾಂತಿಯ ವಲಯದ ವಿಸ್ತರಣೆಗೆ 'ಹೆಚ್ಚಿನಶಕ್ತಿಯನ್ನು ನೀಡಬಹುದೆಂದು ಭಾವಿಸಲು ಅಡ್ಡಿಯಿಲ್ಲ.

ಪೋಪರು ರೋಮಿಗೆ ತೀರ ಹತ್ತಿರದ— ರೋಮಿನ ಭಾಗವೆಂದೇ ಹೇಳಬಹುದಾದ— ವೆಟಿಕನ್ ಅರಮನೆಯಲ್ಲಿ ವಾಸಿಸುತ್ತಾರೆ. ಈ ಅರಮನೆಯ ವಿಶಾಲವಾದ ಅಂಗಣವೇ ಪೋಪರ ರಾಜ್ಯವಾಗಿದೆ. ಇದು ಜಗತ್ತಿನಲ್ಲಿಯೇ ಅತಿ ಸಣ್ಣದು—ಅಂದರೆ ಒಂದು ನೂರು ಚದರ ಎಕ್ರೆ ವಿಸ್ತೀರ್ಣ ವ್ಯಾಪಿಸಿದ, ಕೇವಲ ಒಂದು ಸಾವಿರ ಜನರು ವಾಸಿಸುವ ರಾಜ್ಯ. ಆದರೆ ಪೋಪರ ವಿಷಯದಲ್ಲಿ ಜಗತ್ತಿನ ಪ್ರತಿಯೊಬ್ಬ ಕ್ರೈಸ್ತನೂ ಭಕ್ತಿ ಮತ್ತು ನಿಷ್ಠೆಯನ್ನು ತೋರಿಸುತ್ತಾನೆ. ಈ ದೃಷ್ಟಿಯಿಂದ ಪೋಪರ ಧರ್ಮಸಾಮ್ರಾಜ್ಯದ ಪ್ರಜೆಗಳು ಅಂಕೋಟೆಗಿಂತಲೂ ಹೆಚ್ಚಾಗಿದ್ದಾರೆ.

ವೆಟಿಕನ್‌ನಲ್ಲಿ ಪ್ರೇಕ್ಷಣೀಯವಾದ ಅನೇಕ ಸ್ಥಳಗಳಿವೆ. ಅವುಗಳಲ್ಲಿ ವಸ್ತು ಸಂಗ್ರಹಾಲಯವು ಉಲ್ಲೇಖನೀಯ. ಇಲ್ಲಿ ಲೆಕ್ಕವಿಲ್ಲದಷ್ಟು ಮೂರ್ತಿಗಳು, ಚಿತ್ರಗಳು, ಹಸ್ತ ಕೌಶಲ್ಯವನ್ನು ವ್ಯಕ್ತ ಪಡಿಸುವ ಸಾಮಗ್ರಿಗಳು ನೋಡಸಿಗುತ್ತವೆ. ಪ್ರತಿದಿನ ನಾಲ್ಕೈದು ಸಾವಿರಮಂದಿಯ ದಟ್ಟಣಿ ಇಲ್ಲಿ ನೆರೆಯುತ್ತದೆ. ಜಗತ್ತಿನಲ್ಲಿ ಇಷ್ಟು ಪ್ರಸಿದ್ಧವಾದ ವಸ್ತು ಸಂಗ್ರಹಾಲಯಗಳು ವಿರಳ.

ಹೊಸದಾದ ಸೈಂಟ್ ಪೀಟರ್, ಸೈಂಟ್ ಪಾವ್ಲರ್ ಮುಂತಾಗಿ ಪ್ರಸಿದ್ಧ ಕ್ರೈಸ್ತ, ಪ್ರವಾದಿಗಳ ಹೆಸರಿನಿಂದ ಶೋಭಿಸುವ ಇಗರ್ಜಿಗಳು ವೆಟಿಕನ್ ನಗರದಲ್ಲಿಯೂ ರೋಮಿನಲ್ಲಿಯೂ ಹೆಜ್ಜೆ ಹೆಜ್ಜೆಗೆ ದೃಷ್ಟಿಗೋಚರವಾಗುತ್ತವೆ. ರೋಮನರ ಕಾಲದ ಕಲೆಯ ಭವ್ಯತೆಯನ್ನು ಸೈಂಟ್ ಪೀಟರ್ ಇಗರ್ಜಿಯಂಥವು ಮಾಡಿಸಿಕೊಡುತ್ತವೆ; ಮೈಕೆಲ್ ಎಂಜೆಲೋ, ರಾಫೆಲ್ ಮುಂತಾದ ಚಿತ್ರಕಾರರ ಅಮೋಘ ಕೃತಿಗಳು ನಮ್ಮನ್ನು ಮಂತ್ರ ಮುಗ್ಧರಾಗಿ ಮಾಡುತ್ತವೆ.

ರೋಮಿನ ಭವ್ಯತೆಗೆ ಮೂರು ಸಾವಿರ ವರ್ಷಗಳ ಹಿಂದಿನ ಕಾಲದ ಇತಿಹಾಸ ಯೋಗ್ಯ ಹಿನ್ನೆಲೆಯನ್ನೊದಗಿಸಿದೆ. ಇಜಿಪ್ಟ್, ಗ್ರೀಸ್ ಮುಂತಾದ ಆಧುನಿಕ ದೇಶಗಳಿಗೆ ಹೇಗೆ ಪ್ರಾಚೀನ ನಾಗರಿಕತೆಯ ಚರಿತ್ರೆಯಿದೆಯೋ ಇಟಲಿಗೆ ಮತ್ತು ಅದರ ರಾಜಧಾನಿಯಾದ ರೋಮಿಗೆ ಸಹ ರೋಮಾಂಚಕಾರಿಯಾದ ಚರಿತ್ರೆ ಉಂಟು. ಗ್ರೀಕರ ಕಾಲದಲ್ಲಿ ಹುಟ್ಟಿಕೊಂಡ ತತ್ವ ಶಾಸ್ತ್ರ, ವಿಜ್ಞಾನ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಉದಾತ್ತವಾದ ರೀತಿಯಲ್ಲಿ ಬೆಳೆಸಿಕೊಂಡು ಮಾನವ ನಾಗರಿಕತೆಯ ಮುನ್ನಡೆಗೆ ನೆರವಾದ ರೋಮನರ ದಿನಗಳನ್ನು ನಾವೆಂದಿಗೂ ಮರೆಯುವಂತಿಲ್ಲ.

"ಎಲ್ಲ ಮಾರ್ಗಗಳೂ ರೋಮಿಗೆ ಒಯ್ಯುತ್ತವೆ" ಎಂಬ ನಾಣ್ಣುಡಿಯನ್ನೇ ಹುಟ್ಟಿಸುವಷ್ಟು ಅಂದು ರೋಮನರ ಸಾಮ್ರಾಜ್ಯ ವೈಭವಯುಕ್ತವಾಗಿದ್ದಿತು; ರೋಮ್ ನಗರ ಸಾಂಸ್ಕೃತಿಕ ಭವ್ಯತೆಯ ಪೀಠವೆನಿಸಿದ್ದಿತು. ಇಟಲಿಯ ಎಲ್ಲ ಮೇರೆಗಳನ್ನೂ ಈ ಸಾಮ್ರಾಜ್ಯ ಆವರಿಸಿತ್ತಲ್ಲದೆ, ಆಲ್ಪ್ಸ್ ಪರ್ವತದ ಆಚೆಗೆ ಉತ್ತರಕ್ಕೆ ರೈನ್ ನದಿಯವರೆಗೆ, ಪಶ್ಚಿಮಕ್ಕೆ ಸ್ಪೈನಿನ ವರೆಗೆ, ಪೂರ್ವಕ್ಕೆ ಬೈಜಾಂಟಿಯಮಿನ ವರೆಗೆ, ದಕ್ಷಿಣಕ್ಕೆ ಸಿಸಿಲಿಯ ವರೆಗೆ ರೋಮನರು ಪ್ರಭುತ್ವ ಬೆಳೆಸಿದ್ದರು. ಬ್ರಿಟನ್, ಗ್ರೀಸ್, ಆಫ್ರಿಕಗಳ ವರೆಗೆ ಅವರು ಕೀರ್ತಿ ಬೀರಿದ್ದರು. ಆರ್ಕಿಮಿಡೀಸನು ಗ್ರೀಕರ ಉಪಯೋಗಾರ್ಥ ಸಿದ್ಧಗೊಳಿಸಿದ್ದ ಹಡಗುಗಳಲ್ಲಿ ರೋಮನರು ವ್ಯಾಪಾರ ನಡೆಸುತ್ತಿದ್ದರು. ಅವರು ಭಾರತದ ದಂತವನ್ನು, ಚೀನದ ರೇಶ್ಮೆಯನ್ನು ರೋಮಿಗೆ ಒಯ್ಯುತ್ತಿದ್ದರು.

ಚಕ್ರವರ್ತಿ ಅಗಸ್ಟಸನು ಆಗಿನ ಕಾಲದಲ್ಲಿ ಅತ್ಯಂತ ಭವ್ಯವೆನಿಸಿದ, ಮತ್ತು ಇತಿಹಾಸದಲ್ಲಿಯೇ ಮೊದಲಿನದೆನ್ನಲಾದ ಭೂಪಟವೊಂದನ್ನು ಬರೆಯಿಸಿದನು. ಅದರಲ್ಲಿ ಗಂಗಾನದಿಯ ಬಯಲಿನ ವರೆಗಿನ ಭೂಭಾಗವನ್ನೂ ರೋಮನ ಸಾಮ್ರಾಜ್ಯದ ವಿಸ್ತಾರವನ್ನೂ ತೋರಿಸಿದ್ದರು. ಅಗಸ್ಟಸನ ಸ್ಮಾರಕಾರ್ಥವಾಗಿಯೇ ಮಲಬಾರಿನ ಕರಾವಳಿಯಲ್ಲಿ ಹಿಂದೂ ದೇವಾಲಯಗಳ ಪಕ್ಕದಲ್ಲಿ ರೋಮನರ ದೇವಾಲಯವನ್ನೂ ಕಟ್ಟಿದ್ದುಂಟು. ವರ್ಜಿಲ್‌ರಂಥ ಕವಿಗಳು, ಪ್ಲಿನಿಯಂಥ ವಿಜ್ಞಾನಿಗಳು, ಈ ಕಾಲದಲ್ಲಾದವರು.

ಆದರೆ ರೋಮನರ ವೈಭವದ ಕಾಲದಲ್ಲಿ ಮಾನವತೆಯ ಪೀಡಣೆಯು ಸಹ ಅತಿಹೆಚ್ಚು ನಡೆಯುತ್ತಿತ್ತೆಂಬುದು ಶೋಚನೀಯವಾದ ವಿಷಯ. ರೋಮಿಗೆ ಒಯ್ಯುವ ಭವ್ಯ ಮಾರ್ಗಗಳಲ್ಲಿ ಕೊರಳಿಗೆ ಉರುಳು ಬಿಗಿದು ಜನರನ್ನು ಎಳೆದುಕೊಂಡು ಹೋಗುತ್ತಿದ್ದ ದೃಶ್ಯ ನೆನೆದರೆ ಮೈ ಜುಮ್ಮೆನಿಸುತ್ತದೆ; ಪಾದಾಕ್ರಾಂತ ಮಾಡಿಕೊಂಡ ದೇಶಗಳ ಜನರನ್ನು ಗುಲಾಮರಂತೆ ರೋಮನರು ನಡೆಸಿಕೊಂಡರು. ಇದರಿಂದಾಗಿಯೇ "ತುಳಿಯಲ್ಪಟ್ಟವರೂ ಇನ್ನೊಬ್ಬರ ಕೈಯಲ್ಲಿ ಶ್ರಮಪಡುತ್ತಿರುವವರೂ ನನ್ನಲ್ಲಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ನೀಡುತ್ತೇನೆ"ಎಂಬ ಯೇಸುವಿನ ವಾಣಿಗೆ ಜನರಬೆಂಬಲ ಹೆಚ್ಚಾಯಿತು. ಧರ್ಮಗುರುಗಳ ಪ್ರಭಾವವನ್ನುಕಂಡ ಚಕ್ರವರ್ತಿ ಕಾನ್‌ಸ್ಟೆಂಟೈನನು ಕ್ರಿಸ್ತ ಧರ್ಮವನ್ನು ಸ್ವೀಕರಿಸಿ, ಜನರನ್ನುಪೋಸಗೊಳಿಸಲು ನೋಡಿದರೂ ಕೃತಕೃತ್ಯನಾಗಲಿಲ್ಲ. ಬಾರ್ಬೇರಿಯನರ ಕೈಯಲ್ಲಿ ರೋಮನರ ಸಾಮ್ರಾಜ್ಯದ ಪತನವಾಯಿತು.

ಜಗತ್ತಿನಲ್ಲಿಯೇ ಸಂಪನ್ನನಾಗಿದ್ದ ಇಟಲಿಯು ಅನಂತರದ ದಿನಗಳಲ್ಲಿ ಬಹಳ

(೭ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಅಮೃತಾಂಜನ
ಎಲ್ಲಾತರದ ಸಿಡಿತಮತ್ತು ನೋವುಗಳಿಗೆ
50 ವರ್ಷ ಮಾಯದ
ಪಾರಿಟ್ಸ್ ಫಾರ್ಮರ್

ವೃಕ್ಷ ಸಂಗೋಪನೆಯ ಬಹುಮುಖ ಪ್ರಯೋಜನ

ಷಷ್ಟಮ ಸಸಿ ಸಪ್ತಾಹದ ರಾಷ್ಟ್ರವ್ಯಾಪಿ ಕಾರ್ಯಕ್ರಮ

ನಮ್ಮ ಜಿಲ್ಲೆಯ ಕಲೆಕ್ಟರರಾದ ಶ್ರೀ ಎಂ. ಜಿ ರಾಜಾರಾಮರು ಒಂದು ಪ್ರಕಟಣೆಯ ಮೂಲಕ ಇದೇ ಜುಲಾಯಿ ೧೧ನೇ ತಾರೀಕಿನಿಂದ ೭ನೇ ತಾರೀಕಿನ ವರೆಗೆ ಆರನೆಯ ವನಮಹೋತ್ಸವವನ್ನು ಆಚರಿಸಬೇಕೆಂದು ವಿನಂತಿಸಿಕೊಂಡಿರುವುದು ಎಲ್ಲರಿಗೂ ಈಗಾಗಲೇ ತಿಳಿದಿರಬಹುದಾದ ವಿಷಯ. ಅಕ್ಟೋಬರ ಮಾಸಾಂತ್ಯದ ವರೆಗೆ ಸಾಮಾನ್ಯವಾಗಿ ಸಸಿಗಳನ್ನು ನೆಡುವ ಕೆಲಸ ನಡೆಯುವುದುಂಟಾದರೂ ಸಾಮೂಹಿಕ ಚಟುವಟಿಕೆಯನ್ನು ಪ್ರದರ್ಶಿಸುವ ಒಂದು ಸಾಧನವೆಂಬುದಾಗಿ ಈ ಸಪ್ತಾಹವನ್ನು ಆಚರಿಸಲಾಗುತ್ತದೆ. ಕೇಂದ್ರ ಸರಕಾರವು ಈ ಸಲದ ವನಮಹೋತ್ಸವ ಅತ್ಯಧಿಕ ಯಶಸ್ಸನ್ನು ಹೊಂದಬೇಕೆಂದು ಅಪೇಕ್ಷಿಸಿರುತ್ತದೆ. ಕಳೆದ ಐದು ವರ್ಷಗಳಿಂದಲೂ ವನಮಹೋತ್ಸವವು ಒಳ್ಳೆಯ ವಿಜೃಂಭಣೆಯಿಂದಲೇ ನಡೆದಿದೆ; ಈ ಐದು ವರ್ಷಗಳಲ್ಲಿ ಪ್ರಥಮದ ಮೂರು ವರ್ಷಗಳಲ್ಲಿ- ಅಂದರೆ ೧೯೩೦, ೩೧ ಮತ್ತು ೩೨ನೇ ಇಸವಿಯಲ್ಲಿ— ನಮ್ಮ ಜಿಲ್ಲೆ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದಿತು; ಮತ್ತು ಗುರಾಣಿ ಪಾರಿತೋಷಕವನ್ನು ಬಿಡದೆ ಪಡೆದಿದ್ದಿತು. ಕಲೆಕ್ಟರರು ಈ ಸನ್ಮಾನ ಜನರದು ಎಂದಿದ್ದಾರೆ; ಅಲ್ಲದೆ, ನಾವು ಈಗಾಗಲೇ ಸಂಪಾದಿಸಿರುವ ಗೌರವಕ್ಕೆ ಒಪ್ಪುವ ರೀತಿಯಲ್ಲಿ ಈ ಸಲವೂ ತುಂಬಿದ ಉತ್ಸಾಹದಿಂದ ಸಸಿಲತೆಗಳನ್ನು ನೆಟ್ಟು, ಪೋಷಿಸಿ, ಉತ್ಸವದ ಕಾರ್ಯಕ್ರಮವನ್ನು ಸಾಂಗಗೊಳಿಸಬೇಕೆಂದೂ ತನ್ನೂಲಕ ಜಿಲ್ಲೆಯ ಕೀರ್ತಿಯನ್ನು ಭಾರತದ ಎಂಟೂ ದಿಕ್ಕುಗಳಿಗೆ ಪಸರಿಸಬೇಕೆಂದೂ ಕೇಳಿಕೊಂಡಿದ್ದಾರೆ.

ಸಸಿಗಳನ್ನು ನೆಡುವ ಈ ಉತ್ಸವವು ಅನೇಕರ ದೃಷ್ಟಿಗೆ ಹಾಸ್ಯಾಸ್ಪದವಾದ ಒಂದು ಕಾರ್ಯಕ್ರಮವಾಗಿ ತೋರುತ್ತದೆ; ನೆಟ್ಟ ಸಸಿಗಳ ಪೋಷಣೆ ಮಾಡುವವರಿಲ್ಲವೆಂಬುದೇ ತಿರಸ್ಕಾರದಿಂದ ನೋಡುವವರು ಮಾಡುವ ಆರೋಪವಾಗಿದೆ. ಇದನ್ನು ಸುಳ್ಳು ಸಂಗತಿ ಎಂದು ಹೇಗಳೆಯುವುದು ತಪ್ಪಾದೀತು; ಏಕೆಂದರೆ, ನೆಟ್ಟ ಮರುಗಳಿಗೆಗೆ ಜಾನುವಾರುಗಳು ಆ ಸಸಿಗಳನ್ನು ಕಿತ್ತು ತಿಂದುದನ್ನು ನಾವೆಷ್ಟೋ ನೋಡಿದ್ದೇವೆ. ಯೋಗ್ಯ ಬೇಲಿಗಳನ್ನು ರಚಿಸದೆ ಹೋಗಿ, ಈ ಗತಿಯಾಗುತ್ತದೆ. ಇನ್ನೆಷ್ಟೋ ಸಂದರ್ಭಗಳಲ್ಲಿ ಸಸಿಗಳ ಆರೈಕೆ ನೋಡದೆ ಅವು ಬಾಡಿ ಸಾಯುತ್ತವೆ; ಇದಕ್ಕೆ ನೆಟ್ಟವರ ಉದಾಸೀನತೆಯೇ ಕಾರಣ. ಕೇವಲ ಫೋಟೋ ತೆಗೆಸಿಕೊಂಡು, ಪತ್ರಿಕೆಯಲ್ಲಿ ಅವು ಅಚ್ಚಾಗುವುದನ್ನು ಕಂಡು ತೃಪ್ತಿಪಡುವ ಅನೇಕ ಮಹಾನುಭಾವರು ತಾವು ನೆಟ್ಟ ಸಸಿಗಳ ಅವಸ್ಥೆ ಏನಾಯಿತೆಂದು ಆ ಮೇಲೆ ನೋಡುವುದೇ ಇಲ್ಲ. ಅದಕ್ಕೆ ಅವರಿಗೆ ವ್ಯವಧಾನ ಇಲ್ಲವೆಂಬುದನ್ನು ಒಪ್ಪಿಕೊಳ್ಳಬಹುದು. ಆದರೆ, ವನಮಹೋತ್ಸವದ ಟೀಕೆ ಮಾಡುವ ಜನರು ಇದನ್ನು ಎತ್ತಿ ಹೇಳುವಾಗ, ಸಾರ್ವಜನಿಕರ ಮೇಲೆ ಉತ್ಸವದ ವಿಷಯದಲ್ಲಿ ಜುಗುಪ್ಸೆ ಹುಟ್ಟುವುದಕ್ಕೆಯೇ ಪ್ರೋತ್ಸಾಹವೀಯುತ್ತಾರೆ. ಇದು ಇಷ್ಟವಲ್ಲವೆಂಬುದಕ್ಕಾಗಿಯಾದರೂ ಮುಂದಾಳುಗಳು ಜಾಗರೂಕತೆಯಿಂದ ವರ್ತಿಸುವುದು ಲೇಸು.

ಟೀಕಿಸುವವರು ಏನೇ ಹೇಳಲಿ - ವನಮಹೋತ್ಸವವನ್ನು ಆಚರಿಸುವುದರಿಂದ ನಮ್ಮ ದೇಶಕ್ಕೆ ಬಹಳ ಬಗೆಯ ಪ್ರಯೋಜನವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ನಾವು ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಿಸುತ್ತಾ ಈ ಉತ್ಸವವನ್ನು ಯಶಸ್ವಿಗೊಳಿಸಲು ನೋಡಬೇಕು ಎಂಬುದನ್ನು ಉತ್ಸವದ ಪ್ರಯೋಜನಾಂಶಗಳು ಮುಂದಿಟ್ಟುಪಡಿಸುತ್ತವೆ. ಎಲ್ಲರಿಗೂ ತಿಳಿದಿರುವಂತೆ, ನಾವು ಉಸಿರೆಳೆಯುವ ಅಮ್ಲಜನಕ ವಾಯು ಸಸ್ಯಗಳಿಂದ ಹೊರಹೊಮ್ಮಲ್ಪಟ್ಟುದು; ನಾವು ಉಸಿರು ಬಿಟ್ಟ ಅಂಗಾರಾಮ್ಲವನ್ನು ಸಸ್ಯಗಳು ಸೇವಿಸಿ, ಶುದ್ಧವಾದ ಅಮ್ಲಜನಕವನ್ನು ಒದಗಿಸಿ ಕೊಡುವುದರಿಂದಲೇ ನಮ್ಮ ಜೀವನವು ಸುಗಮವಾಗಿ ನಡೆಯುತ್ತದೆ. ಇದರ ಘೋರತು ನಾವು ಅನ್ನಕ್ಕಾಗಿಯೂ ಸಸ್ಯ ಸಂಕುಲವನ್ನೇ ಅವಲಂಬಿಸಿದ್ದೇವೆ. ಭತ್ತ, ಗೋಧಿ ಮುಂತಾದ ಧಾನ್ಯಗಳನ್ನು ಸಸ್ಯಗಳು ನಮಗೆ ನೀಡುತ್ತವಲ್ಲದೆ, ಅನೇಕ ಬಗೆಯ ಮರಗಳು ನಮ್ಮನ್ನು ಹಣ್ಣು ಹಂಪಲುಗಳಿಂದ ತೃಪ್ತಿಪಡಿಸುತ್ತವೆ. ಇವುಗಳ ಆಸೆಗಾಗಿಯಾದರೂ ನಾವು ತೋಟಗಳನ್ನು ಬೆಳೆಸಿಕೊಳ್ಳುವುದು ಅಪೇಕ್ಷಣೀಯ. ಮರಗಿಡಗಳು ನಮಗೆ ನೆರಳನ್ನೂ ಒದಗಿಸಿ ಕೊಡುತ್ತವೆ. ಮನೆ ಮತ್ತಿತರ ವನತಿ ಕೇಂದ್ರಗಳ ರಚನೆಗೆ ತೋಪಿಲ್ಲದೆ ಆಗದು. ಆಹಾರಕ್ಕೆ ಮನೆಯ ಕೆಲಸಕ್ಕೆ ಉರುವಲು ಇಲ್ಲದೆ ಹೋದರೆ ನಾವು ಉಪವಾಸವಿರಬೇಕಾದೀತು. ದಟ್ಟವಾದ ಅರಣ್ಯಗಳನ್ನು ಬೆಳೆಸುವುದರಿಂದ ಫಲವತ್ತಾದ ಮಣ್ಣು ಸವೆದು ಹೋಗುವುದು ಸಿಲ್ಲುವುದರಿಂದಲೂ ಉತ್ತಮ ಪೋಷಣ ಮತ್ತು ಕಟ್ಟಿಗೆಯ ಮರಗಳು ಲಭ್ಯವಾಗುವುದರಿಂದಲೂ ವನಮಹೋತ್ಸವದ ಆಚರಣೆಯು ಔತ್ಯಪಯುಕ್ತವೆಂದು ಒಪ್ಪಲೇ ಬೇಕಾಗುತ್ತದೆ.

ನಮ್ಮ ದೇಶದಲ್ಲಿ ಎರಡೂಕಾಲು ಲಕ್ಷ ಚದರ ಮೈಲುಗಳಿಗಿಂತ ಸ್ವಲ್ಪ ಹೆಚ್ಚು, ಅಂದರೆ ಒಟ್ಟು ಭೂಮಿಯ ಐದರಲ್ಲಿ ಒಂದಂಶ, ಅರಣ್ಯವಿದೆ ಎಂದು ತಜ್ಞರ ಅಭಿಪ್ರಾಯ. ಆದರೆ ಗುಡ್ಡ ಬೆಟ್ಟಗಳಲ್ಲಿ ನಡೆಯುವ ಭೂಸವೆತವನ್ನು ತಡೆಯಲು ಅಲ್ಲಿ ೬೦% ನೆಲವನ್ನು ಅರಣ್ಯ ವ್ಯಾಪಿಸುವಂತೆ ಮಾಡಬೇಕೆಂದು ತಿಳಿದುಬರುತ್ತದೆ. ನಮ್ಮ ಬಯಲು ಭೂಮಿಗಳಲ್ಲಿ ಅರಣ್ಯಗಳು ಕಂಡುಬರುವುದಿಲ್ಲ. ಆದರೆ, ಈ ಪರಿಸ್ಥಿತಿಯನ್ನು ಸುಧಾರಿಸಿ ೨೦% ನೆಲದ ಅಲ್ಲಾದರೂ ಇಲ್ಲಿ ಅರಣ್ಯ ಬೆಳೆಸಬೇಕು ಎಂದು ಹೇಳಲಾಗುತ್ತದೆ. ಇದರಿಂದ ಫಲವತ್ತಾದ ಮಣ್ಣು ಕೊಚ್ಚಿಹೋಗದೆ, ಮಳೆ ನೀರಿನ ತೇವವನ್ನು ಕಾಯ್ದುಕೊಂಡಿದುವುದಕ್ಕೆ ತುಂಬ ಸಹಾಯವಾಗುವುದಲ್ಲದೆ, ಇನ್ನೊಂದು ಬಗೆಯಿಂದಲೂ ಲಾಭ ಸಿಗುತ್ತದೆ. ಅದೇನೆಂದರೆ ಸಮೃದ್ಧ ವ್ಯಾಪಾರ. ನಮ್ಮ ಕಾಡುಗಳು ಅನೇಕ ಕೋಟಿ ರೂಪಾಯಿ ಬೆಲೆ ಬಾಳುವ ಸರಕುಗಳನ್ನು ಉತ್ಪಾದಿಸುತ್ತವೆ. ಉದಾಹರಣೆಗಾಗಿ ಕಾಗದದ ಕಾರ್ಖಾನೆಯನ್ನು ತೆಗೆದುಕೊಳ್ಳಬಹುದು. ಇವುಗಳಿಗೆ ಬೇಕಾದ ಬಿದಿರು ಮತ್ತು ವಿಶೇಷ ಜಾತಿಯ ಹುಲ್ಲನ್ನು ನಮ್ಮ ಅರಣ್ಯಗಳು ಒದಗಿಸಿ ಕೊಟ್ಟರೆ ಮಾತ್ರ ಕಾಗದ ಪೇಟೆಗೆ ಬಂದೀತು. ರೇಯನ್ ಜಾತಿಯ ಬಟ್ಟೆಗೆ ಸಹ ಅರಣ್ಯಗಳಲ್ಲಿನ ಸಸ್ಯ ಸಂತಾನವೇ ಕಚ್ಚಾವಸ್ತುವನ್ನು ಪೂರೈಸುತ್ತದೆ. ಚಾ ಪುಡಿಯನ್ನು ತುಂಬಿಸುವುದೇ ಮುಂತಾದ ಕೆಲಸಗಳಿಗೆ ಬಳಸುವ ಪ್ಲೈವುಡಿನ ಪೆಟ್ಟಿಗೆಗಳ ತಯಾರಿಕೆಗೆ ಮತ್ತು ನಿತ್ಯೋಪಯೋಗದ ಅನಿವಾರ್ಯ ವಸ್ತುವಾಗಿ ಪರಿಣಮಿಸಿರುವ ಬೆಂಕಿ ಪೆಟ್ಟಿಗೆಯ ರಚನೆಗೆ ಅರಣ್ಯ ಸಂಪತ್ತಿಲ್ಲದಿದ್ದರೆ ನಡೆಯದು.

ಅರಣ್ಯ ಸಂಪತ್ತುಗಳಲ್ಲಿ ಅರಗು, ಅಂಟು ಮುಂತಾದವುಗಳನ್ನೂ ವರಿಗಣಿಸದೆ ಬಿಡಲಾಗುವುದಿಲ್ಲ. ಏಕೆಂದರೆ ಹತ್ತಿಪ್ಪತ್ತು ಕೋಟಿ ರೂಪಾಯಿಯ ಆದಾಯವನ್ನು ಇವು ತರುತ್ತವೆ; ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನರಿಗೆ ಕೆಲಸವನ್ನೂ ಒದಗಿಸಿ ಕೊಡುತ್ತವೆ. ನಮ್ಮ ಪಡು ಕರಾವಳಿಯಲ್ಲಿ ಗೇರು ಬೀಜದ ಕಾಡುಗಳನ್ನು ರಚಿಸುವುದು ಹೆಚ್ಚಿನ ವೆಚ್ಚವಿಲ್ಲದೆ ಅರಣ್ಯ ಸಂಪತ್ತನ್ನು ಸಂವರ್ಧಿಸುವ ವಿಧಾನವೆಂದು ಹೇಳಬಹುದು. ಉತ್ತಮ ಬೀಜಗಳನ್ನು ಕೆಂಪು ಮಣ್ಣಿನ ಕುಸುರಿ ಪ್ರದೇಶದಲ್ಲಿ ಬಿತ್ತಿದರೆ, ಮುಂದೆ ನಾಲ್ಕೇ ವರ್ಷಗಳಲ್ಲಿ ಗಿಡ ಫಲಕೊಡುತ್ತದೆ; ಗೇರುಬೀಜ ಒಳ್ಳೆಯ ರಫ್ತು ವ್ಯಾಪಾರವನ್ನು ಪಡೆದಿದ್ದು ಯಥೇಷ್ಟ ಡಾಲರುಗಳನ್ನು ಸಂಪಾದಿಸುತ್ತದೆ. ಆದುದರಿಂದ ಸ್ವಲ್ಪ ಜಾಗವಿರುವ ಯಾರೇ ಆಗಲಿ, ಈ ಕೃಷಿಯನ್ನು ಮಾಡುವುದ್ದರು. ರಾಷ್ಟ್ರ ಹಿತ ಹಾಗು ಸ್ವಂತ ಲಾಭ—ಇವೆರಡನ್ನೂ ಗೇರುಬೀಜದ ಕಾಡು ಸಾಧಿಸುತ್ತದೆ! ದಟ್ಟ ಅರಣ್ಯಗಳ ಒಳಗೆ ಪ್ರವೇಶಿಸಿದರೆ, ಅಲ್ಲಿ ತಾನೇ ತಾನಾಗಿ ಹುಟ್ಟಿರುವ ಬೆತ್ತ ಮತ್ತು ಬೀಳಲುಗಳನ್ನು ನಾವು ಕಾಣಬಹುದು. ಇವುಗಳನ್ನು ನಿತ್ಯ ಜೀವನದ ಅನೇಕ ಸಾಧನಗಳಾಗಿ ರೂಪಿಸುವುದರಲ್ಲಿ ನಾವು ಹಿಂದುಳಿದಿಲ್ಲ. ಭೀಮಕಾಯದ ಮೋಪುಗಳನ್ನೂ ಈ ಅರಣ್ಯಗಳು ಪೂರೈಸುತ್ತವೆ. ನಮ್ಮ ದೇಶದಲ್ಲಿ ರೈಲ್ವೆ ಮತ್ತು ಸಂರಕ್ಷಣ ಶಾಖೆಗಳು ಸುಮಾರು ಆರು ಲಕ್ಷ ಟನ್ನು ಮೋಪನ್ನೂ ಕೈಗಾರಿಕೆಗಳು ಮೂರೂಕಾಲು ಲಕ್ಷ ಟನ್ನು ಮೋಪನ್ನೂ ಕಟ್ಟಡ ನಿರ್ಮಾಣ ಇತ್ಯಾದಿ ಕೆಲಸಗಳು ಗಿಲಕ್ಷ ಟನ್ನು ಮೋಪನ್ನೂ ಉಪಯೋಗಿಸುತ್ತವೆ. ಕುರಿಚಲು ಗಿಡಗಳಿಂದ ಹಂಬಿದ ಸಾಧಾರಣ ಕಾಡುಗಳು ಸಹ ಹೊಲಗದ್ದೆಗಳಿಗೆ ಸೊಪ್ಪು ಸೆದೆಯನ್ನೂ ಪ್ರಾಣಿಗಳಿಗೆ ಹುಲ್ಲು ಮತ್ತು ತಿನಿಸನ್ನೂ ನೀಡುತ್ತವೆ.

ಮೇಲಿನ ವಿವರಣೆಯಿಂದ ನಾವು ಕಾಡುಗಳಿಂದ ನಮಗಾಗುವ ಪ್ರಯೋಜನವನ್ನು ತಿಳಿದುಕೊಂಡಂತಾಯಿತು. ಆದರೆ, ಇದ್ದ ಕಾಡುಗಳನ್ನೆ ಕಡಿದು ಉಪಯೋಗಿಸುತ್ತಾ ಹೋದರೆ, ನಾವು ಎಷ್ಟು ಸಮಯ ದೂಡಬಹುದು? ಹಳೆಯ ಮರಗಳ ಸ್ಥಾನವನ್ನು ಹೊಸ ಗಿಡಗಳು ಆಕ್ರಮಿಸದಿದ್ದರೆ ಅರಣ್ಯಗಳ ಅವಸಾನ ತಪ್ಪದು. ಜೊತೆಗೆ ಬೆಳೆದು ನಿಂತ ಕಾಡುಗಳಿಲ್ಲದಿದ್ದರೆ, ಹವಾಮಾನವು ತಾಪಮಯಕರವಾಗುತ್ತದೆ; ಮೋಡ ಹಾದು ಹೋದರೂ ಮಳೆಯಾಗದೆ ನಾಡು ಬೆಂಗಾಡಾಗುತ್ತದೆ. ಈಗಾಗಲೇ ಧಾರ್ ಮರು ಭೂಮಿಯು ತನ್ನ ವಿಸ್ತಾರವನ್ನು ಹೆಚ್ಚಿಸಿಕೊಂಡು

(೬ನೇ ಪುಟ ನೋಡಿರಿ)

ರೂಪಾಯಿ 500 ಬಹುಮಾನ
(ಗವರ್ನಮೆಂಟ್ ರಿಜಿಸ್ಟರ್ಡ್)
ಸರ್ವಶಕ್ತಿಯುತವಾದುದು. ಗುಪ್ತ ಪರೀಕ್ಷಣ ಯಂತ್ರವೊಂದಿದ್ದರೆ ಎಂತಹ ಕಷ್ಟಸಾಧ್ಯವಾದುದನ್ನೂ ಸುಲಭವಲ್ಲ ಪಡೆಯಬಹುದು. ಯಾವ ಪೂರ್ವಸಿದ್ಧತೆಯೂ ಬೇಕಾಗಿಲ್ಲ. ದುಸ್ಥಗ್ರಹ ಭಾಧೆ, ಶತ್ರುಗಳ ಶರಣಾಗತಿ, ಪರೀಕ್ಷೆಗಳಲ್ಲಿ ತೇರ್ಗಡೆ, ವ್ಯಾಪಾರದಲ್ಲಿ ಲಾಭ, ಕೋರ್ಟು ವಾದಗಳಲ್ಲಿ ಜಯ, ಲಾಟರಿಯಲ್ಲಿ ಲಾಭ, ಜೂಜಿನಲ್ಲಿ ಯಶಸ್ಸು, ನೌಕರಿಯಲ್ಲಿ ಭಡ್ತಿ, ಪುತ್ರಲಾಭ, ಪುಷ್ಕಳ ಧನಾಗಮನ, ಸಾಲದಿಂದ ಬಿಡುಗಡೆ, ಅಪೇಕ್ಷಿತ (ಅವನು ಯಾ ಅವಳು) ಶರಣಾಗತರಾಗುವಿಕೆ, ಕಾಯಿಲೆಗಳಿಂದ ಗುಣಹೊಂದುವಿಕೆಗೆಲ್ಲಾ ಉಪಯೋಗಿಸಿರಿ. ಜಯಪ್ರದವಲ್ಲವೆಂದು ರುಜು ಮಾಡಿದವರಿಗೆ ರೂಪಾಯಿ 500 ಬಹುಮಾನ. ತಾಯ್ತದ ಯಂತ್ರಕ್ಕೆ ರೂ. 2-8-0; ಬೆಳ್ಳಿಯದಕ್ಕೆ ರೂ. 3; ಶುದ್ಧ ಬಂಗಾರದದ್ಕೆ ರೂ. 16; ಸ್ಪೆಶಲ್ ಯಂತ್ರಕ್ಕೆ ರೂ. 45.
Shree Biswanath Asram,
(M) P. O. Katrisarai, Gaya.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ
1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್
ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ
(ಪ್ರತಿಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ವ್ಯಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಜೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು
The Bombay Life Assurance Co., Ltd., Bombay.

ನೆಹರು-ಬುಲ್ಗೇನಿನ್ನರ ಸಂಯುಕ್ತ ಪ್ರಕಟಣೆ

"ಪಂಚ ಶೀಲಗಳಿಗೆ ಮನ್ನಣೆ: ಸಹಜೀವನದ ತತ್ವಕ್ಕೆ ಪುರಸ್ಕಾರ

ರಷ್ಯದ ಪ್ರವಾಸವನ್ನು ಮುಗಿಸಿ, ಆ ದೇಶದಿಂದ ಹೊರಡುವುದಕ್ಕೆ ಮುಂಚೆ, ನೆಹರುಗಳು ರಷ್ಯದ ಪ್ರಧಾನಿ ಬುಲ್ಗೇನಿನ್ನರೊಡನೆ ದೀರ್ಘ ಸಮಾಲೋಚನೆಗಳನ್ನು ನಡೆಸಿದರು. ಅದರ ಪರಿಣಾಮವಾಗಿ ಉಭಯ ಪ್ರಧಾನಿಗಳ ಜಂಟಿಸಹಿಯಿರುವ ಸಂಯುಕ್ತ ಪ್ರಕಟಣೆಯೊಂದು ಹೊರಟಿತು. ಇದು ಅನೇಕ ವಿಷಯಗಳಲ್ಲಿ ಪ್ರಧಾನಿದ್ವಯರು ಒಮ್ಮತಕ್ಕೆ ಬಂದಿರುವ ರೆಂಬುದನ್ನು ತೋರಿಸುತ್ತದಲ್ಲದೆ, ವಿಶ್ವ ಶಾಂತಿಯ ಸ್ಥಾಪನೆಗೆ ನೆರವಾಗಬಲ್ಲ ಮಹತ್ವದ ಅಂಶಗಳನ್ನು ಒಳಗೊಂಡಿರುತ್ತದೆ.

ಪಂಚ ಶೀಲಗಳು

ಮುಖ್ಯವಾಗಿ ಪ್ರಧಾನಿದ್ವಯರು "ಪಂಚ ಶೀಲಗಳಿಗೆ ಮನ್ನಣೆಯನ್ನು ಕೊಟ್ಟಿದ್ದಾರೆ; ಬಾಂಡುಂಗಿನ ಸಮ್ಮೇಳನದ ಗೊತ್ತುವಳಿಯನ್ನು ಕಣ್ಣು ಮುಂದೆ ಇಟ್ಟುಕೊಂಡೋ ಏನೋ, ಆರ್ಥಿಕ, ರಾಜಕೀಯ ಅಥವಾ ಯಾವುದೇ ತಾತ್ವಿಕ ಕಾರಣದಿಂದ ಇನ್ನೊಂದು ರಾಷ್ಟ್ರದ ಆಂತರಿಕ ವ್ಯವಹಾರದಲ್ಲಿ ಕೈಹಾಕಲಾಗದೆಂದು ವಿವರಣೆ ಕೊಟ್ಟಿದ್ದಾರೆ. ಚಿಕ್ಕ ರಾಷ್ಟ್ರಗಳ ಭಯ ನಿವಾರಣೆಯ ಬಗ್ಗೆ ಕಳಕಳಿ, ಅಣಾಬಾಂಬುಗಳ ತಯಾರಿಕೆ ಮತ್ತು ಸ್ಫೋಟನ ಪ್ರಯೋಗದ ಬಹಿಷ್ಕಾರ, ನಿಶ್ಶಸ್ತ್ರೀಕರಣ, ಕೆಂಪು ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ, ಇಂಡೋಚೀನದ ಕುರಿತು ಜಿನೇವದಲ್ಲಿ ಆದ ಒಪ್ಪಂದಗಳ ಕಾರ್ಯಾಚರಣೆ – ಇತ್ಯಾದಿ ವಿಷಯಗಳಲ್ಲಿ ಇಬ್ಬರಲ್ಲೂ ಸಹಮತ ವ್ಯಕ್ತವಾಗಿದೆ. ಫೊರ್ಮೋಸದ ಸಮಸ್ಯೆಯನ್ನು ಶಾಂತಿಯಿಂದಲೇ ಪರಿಹರಿಸಬಹುದು ಎಂದವರು ಹೇಳಿದ್ದಾರೆ.

೧ ಪರಸ್ಪರ ಬಾಂಧವ್ಯ

ಉಭಯ ದೇಶಗಳ ನಡುವೆ ಆರ್ಥಿಕ, ತಾಂತ್ರಿಕ ಹಾಗು ಸಾಂಸ್ಕೃತಿಕ ಸಂಬಂಧ ಇನ್ನಷ್ಟು ಬೆಳೆದು ಬರಲಿ ಎಂದು ಈ ಪ್ರಕಟಣೆಯಲ್ಲಿ ಆಶಿಸಲಾಗಿದೆ. ಸಂಚಶೀಲಗಳ ಮರ್ಯಾದೆಯನ್ನು ಮೀರದೆ, ಹೀಗೆ ಪರಸ್ಪರ ಸಹಕರಿಸಬಹುದೆಂದು ಅವರು ಒಪ್ಪಿದ್ದಾರೆ. ಅಂತಾರ್ಜಲ ರಷ್ಯಗೆ ಭಾರತಕ್ಕೆ ಹೊಸ ಉಕ್ಕಿನ ಕಾರ್ಖಾನೆಯನ್ನು ಕಟ್ಟಲು ನೀಡುರು ನೆರವಿನ ಉಲ್ಲೇಖ ಪ್ರಕಟಣೆಯಲ್ಲಿದೆ. ಈಚೆಗೆ ನಡೆದ ವ್ಯಾಪಾರ ಒಪ್ಪಂದವನ್ನೂ ಸ್ವಾಗತಿಸಲಾಗಿದೆ. ಭಾರತ ಮತ್ತು ರಷ್ಯಗಳು ಭಿನ್ನ ಭಿನ್ನವಾದ ರಾಜಕೀಯ ಹಾಗು ಸಾಮಾಜಿಕ ಪದ್ಧತಿಯನ್ನು ಅನುಸರಿಸುತ್ತಿದೆಯಾದರೂ ಅವುಗಳು ಸಹಜೀವನ ನಡೆಸಬಲ್ಲವು ಶಾಂತಿ ಮತ್ತು ಸೌಹಾರ್ದದಿಂದ ಇರಬಲ್ಲವು ಎಂದು ಪ್ರಕಟಣೆ ಕೊನೆಯಲ್ಲಿ ಸಾರಿ ಹೇಳುತ್ತದೆ.

ಪ್ರಕಟಣೆಗೆ ಪ್ರತಿಕ್ರಿಯೆ

ಪ್ರಕಟಣೆಯ ಕುರಿತು ರಶ್ಯ ಮತ್ತು ಭಾರತದ ಜನಾಭಿಪ್ರಾಯವು ತುಂಬ ಉತ್ತೇಜನಕಾರಿಯಾಗಿದೆ; ಹಾಗೆಯೇ ಈಜಿಪ್ಟಿನಿಂದ ಹಿಡಿದು ಪಾಕಿಸ್ತಾನ, ಸಿಂಹಳ, ಇಜಿಪ್ಟಿನುಗಳವರೆಗೆ ಎಲ್ಲ ಪೌರಸ್ತ್ಯ ದೇಶಗಳಲ್ಲೂ ಇದಕ್ಕೆ ಪ್ರಚಂಡ ಸ್ವಾಗತ ದೊರಕಿದೆ ಜಾಗತಿಕ ಪ್ರಶ್ನೆಗಳನ್ನು ಸಮಾಧಾನಕರವಾಗಿ ಬಿಡಿಸುವ ಪ್ರಯತ್ನವನ್ನು ನೆಹರುಗಳು ಎಷ್ಟು ಜಾತುರ್ಯದಿಂದ ನಡೆಸಿರುವರೆಂಬುದನ್ನು ಈ ಪ್ರಕಟಣೆ ತೋರಿಸಿ ಕೊಡುತ್ತದೆ ಎನ್ನಲಾಗಿದೆ. ಆದರೆ ಅಮೇರಿಕ ಹಾಗು ಬ್ರಿಟನುಗಳಲ್ಲಿ ಈ ಪ್ರಕಟಣೆಗೆ ಕೊಡಬೇಕಾದಷ್ಟು ಮಹತ್ವವನ್ನು ನೀಡಿಲ್ಲ. ನೆಹರುಗಳೇ ಈ ಘೋಷಣೆಯ ಹೆಚ್ಚಿನಂಶ ಬರೆದಿದ್ದಾರೆ ಎಂದು ಅಲ್ಲಿಯ ಪತ್ರಿಕೆಗಳು ಹೇಳುತ್ತವೆ; ಮತ್ತು ಬುಲ್ಗೇನಿನ್ನರು ನೆಹರುಗಳನ್ನು ತೃಪ್ತಪಡಿಸುವುದಕ್ಕೂ ತಮ್ಮದಷ್ಟು ಹೇತುಗಳನ್ನು ಮುಚ್ಚಿಡುವುದಕ್ಕೂ ಇದಕ್ಕೆ ಅಂಕಿತ ಹಾಕಿದರು ಎನ್ನುತ್ತವೆ.

ಈಡನ್ನರ ಆಮಂತ್ರಣ

ಆದಾಗ್ಯೂ ನೆಹರುಗಳೊಡನೆ ಮಾತುಕತೆ ನಡೆಸಿದರೆ, ರಶಿಯದ ಮನೋಭಾವವನ್ನು ತಿಳಿಯಲು ಅದು ಸಹಕಾರಿಯಾದೀತೆಂದು ಬ್ರಿಟನಿನ ರಾಜಕೀಯ ವರ್ತುಲಗಳು ನಂಬಿವೆ. ಅಲ್ಲಿಯ ಪ್ರಧಾನಿ ಈಡನ್ನರು ಇದೇ ಉತ್ಕಟೇಚ್ಛೆಯಿಂದ ನೆಹರುಗಳಿಗೆ, ಭಾರತಕ್ಕೆ ಮರಳುವ ಮುಂಚೆ ತಮ್ಮನ್ನು ಕಂಡು ಹೋಗಬೇಕೆಂದು ಅವರವರ ವಿನಂತಿಯನ್ನು ಕಳುಹಿಸಿದರು. ಇದಕ್ಕೆ ನೆಹರುಗಳು ಒಪ್ಪಿದ್ದಾರೆ; ಇದೇ ೮, ೯ನೇ ದಿನಾಂಕಗಳಲ್ಲಿ ಅವರು ಈಡನರೊಡನೆ ಸಮಾಲೋಚನೆ ನಡೆಸುತ್ತಾರೆ. ರಷ್ಯದ ಪ್ರಾಮಾಣಿಕತೆಯನ್ನು ಸಂದೇಹಿಸುತ್ತಿರುವ ಪಾಶ್ಚಾತ್ಯ ಗುಂಪು ಜಿನೇವಾದಲ್ಲಿ ನಡೆಯುವ ಚತುರಾಷ್ಟ್ರ ವರಿಷ್ಠರ ಪರಿಷತ್ತಿನಲ್ಲಿ ವಹಿಸುವ ಪಾತ್ರದ ಮೇಲೆ ಇದರ ಪರಿಣಾಮವಾಗದಿರದು.

ಪ್ರವಾಸದ ಕಾರ್ಯಕ್ರಮ

ಸದ್ಯಕ್ಕೆ ನೆಹರುಗಳು ಯು�ೋಸ್ಲಾವಿಯದ ಒಂದು ವಾರದ ಸಂಚಾರ ಕೈಗೊಂಡಿದ್ದಾರೆ; ವಾರಾಂತ್ಯದಲ್ಲಿ ಅವರು ರೋಮಿಗೆ ಹೋಗಿ ಇಟಲಿಯ ಸರಕಾರದ ವರಿಷ್ಠರೊಡನೆ ಸಮಾಲೋಚಿಸುತ್ತಾರೆ; ಪೋಪರನ್ನೂ ಭೇಟಿಯಾಗುತ್ತಾರೆ. ಯುಗೊಸ್ಲಾವಿಯಕ್ಕೆ ಬರುವ ಮುಂಚೆ ನೆಹರುಗಳು ರಶ್ಯದಿಂದ ಪೋಲೆಂಡಿಗೆ, ಅಲ್ಲಿಂದ ಆಸ್ಟ್ರಿಯಕ್ಕೆ ಹೋದರು. ಇಲ್ಲಿ ದೊರೆತ ಸ್ವಾಗತ ವರ್ಣನಾತೀತವೆಂದು ಒಂದೇ ಮಾತಿನಲ್ಲಿ ಹೇಳಬಹುದು. ಇಂಡೋಚೀನದ ಕದನ ವಿರಾಮವನ್ನೂ ಅಲ್ಲಿಯ ರಾಜಕೀಯ ಭವಿಷ್ಯವನ್ನೂ ರೂಪಿಸುವ ಹೊಣೆ ಹೊತ್ತ ಸಮಿತಿಯಲ್ಲಿನ ಪೋಲೆಂಡು—ಭಾರತಗಳ ವರಿಷ್ಠರು ತಮ್ಮ ಕೆಲಸ ಸುಗಮವಾಗುವಂತೆ ಸಂಬಂಧಿಸಿದ ರಾಷ್ಟ್ರಗಳ ಸಹಕಾರವನ್ನು ಒಂದು ಸಂಯುಕ್ತ ಪ್ರಕಟಣೆಯಲ್ಲಿ ಕೋರಿದ್ದಾರೆ. ಆಸ್ಟ್ರಿಯದಲ್ಲಿ ನೆಹರುಗಳು, ಯುದ್ಧ ಬೇಡವೆಂದಾದರೆ, ಸಹಜೀವನದ ತತ್ವವನ್ನು ಆಶ್ರಯಿಸಲೇ ಬೇಕು ಎಂದಿದ್ದಾರೆ.

ರೂ. ೧೦೦ ಕೋಟಿ ಸಾಲ

ಭಾರತ ಸರಕಾರದವರು "ರಾಷ್ಟ್ರೀಯ ಯೋಜನೆಯ ಸಾಲ ಪತ್ರ"ಗಳ ಮೂಲಕ ಈ ಸಲ ಸುಮಾರು ೧೦೦ ಕೋಟಿ ರೂಪಾಯಿಗಳ ಸಾಲವನ್ನು ಎತ್ತಬೇಕೆಂದು ನಿರ್ಧರಿಸಿದ್ದಾರೆ. ಇದೇ ಜುಲಾಯಿ ೧ನೇ ತಾರೀಕಿನಿಂದ ೫ನೇ ತಾರೀಕಿನೊಳಗೆ ಸಾಲ ಎತ್ತಲ್ಪಡುತ್ತದೆ. ಹತ್ತು ವರ್ಷಗಳ ಅವಧಿಯ ಈ ಸಾಲ ಪತ್ರಕ್ಕೆ ಸಾಲಿಯಾನ ಸೇಕಡಾ ಮೂರೂವರೆ ದರದಲ್ಲಿ ಬಡ್ಡಿ ಸಿಗುತ್ತದೆ. ನೂರು ರೂಪಾಯಿ ಮುಖ ಬೆಲೆಯ ಸಾಲ ಪತ್ರಗಳಿಗೆ ರೂ. ೯೮–೮–೦ ಕೊಟ್ಟರೆ ಆಯಿತು; ಆದರೆ ಬಡ್ಡಿಯ ಹಣಕ್ಕೆ ಆದಾಯ ತೆರಿಗೆಯು ಅನ್ವಯಿಸುತ್ತದೆ; ಅರ್ಧ ವರ್ಷಕ್ಕೊಮ್ಮೆ ಈ ಬಡ್ಡಿಯನ್ನು ಕೊಡಲಾಗುತ್ತದೆ.

ಮದ್ರಾಸೂ ಸಾಲವೆತ್ತುತ್ತದೆ

ಹೋದ ವರ್ಷ ಎಲ್ಲ ರಾಜ್ಯ ಸರಕಾರಗಳ ಆವಶ್ಯಕತೆಯನ್ನು ಮುಂದಾಗಿ ಗ್ರಹಿಸಿ, ಕೇಂದ್ರ ಸರಕಾರವೇ ಸಾಲ ಎತ್ತಿ, ಇವುಗಳಿಗೆ ಹಂಚಿದ್ದಿತು. ಈ ಸಲ ರಾಜ್ಯ ಸರಕಾರಗಳು ಪ್ರತ್ಯೇಕ ವಾಗಿ ಸಾಲ ಎತ್ತುತ್ತವೆ. ಎಂದು ತಿಳಿದು ಬರುತ್ತದೆ. ಮದ್ರಾಸು ಸರಕಾರವು ಒಂದೆರಡು ತಿಂಗಳಲ್ಲಿ ಐದರಿಂದ ಹತ್ತು ಕೋಟಿ ರೂಪಾಯಿಗಳ ಸಾಲವನ್ನು ಎತ್ತಬಹುದೆಂದು ಅರ್ಥ ಸಚಿವರಾದಶ್ರೀ ಸುಬ್ರಹ್ಮಣ್ಯಂ ತಿಳಿಸಿದ್ದಾರೆ ಸಾಲದ ನಿಜವಾದ ಪ್ರಮಾಣ ಮತ್ತು ಶರ್ತಗಳು ಬೇಗನೆ ಪ್ರಕಟಿಸಲ್ಪಡುತ್ತವೆ.

ಭೂಸುಧಾರಣೆಯ ಶಾಸನ

ರಾಜ್ಯದ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರು ಲಾಲಗುಡಿಯಲ್ಲಿ ಮೊನ್ನೆ ಮಾತನಾಡುವಾಗ ಭೂಸುಧಾರಣೆಯ ಶಾಸನವನ್ನು ತರಲಾಗದಿದ್ದರೆ ತಾನು ರಾಜೀನಾಮೆ ಕೊಡುವೆನೆಂಬ ಪ್ರತಿಜ್ಞೆಯನ್ನು ಕೈಗೊಂಡರು. ಸರಕಾರಕ್ಕೆ ಭೂಸುಧಾರಣೆಯ ಅದರ ಆವಶ್ಯಕತೆ ಜಟಿಲತೆ ಮತ್ತುತನ್ನ ಹೊಣೆಗಾರಿಕೆ ಮನವರಿಕೆಯಾಗಿದೆ ಎಂದರು. ಗಾಂಧೀಜಿಯು ತೋರಿಸಿದಮಾರ್ಗದಂತೆ ಭೂಸುಧಾರಣೆಯ ಕ್ರಮ ಕೈಗೊಳ್ಳಲ್ಪಡುವುದು ಎಂದವರು ಸಾರಿದರು. ಒಕ್ಕಲೆಬ್ಬಿಸುವ ಪ್ರವೃತ್ತಿಯನ್ನು ಖಂಡಿಸುತ್ತಾ ಸರಕಾರವು ತಾನು ಮಾಡಬಹುದಾದ ಶಾಸನಸನ್ನು ಹಿಂದಿನ ತಾರೀಕಿನಿಂದ ಅನ್ವಯಿಸುವ ಮೂಲಕ ಭೂಮಾಲಿಕರ ತಂತ್ರಗಳನ್ನು ವಿಫಲಗೊಳಿಸಲು ಶಕ್ತವಿದೆ ಎಂದು ಎಚ್ಚರಿಸಿದರು.

ಗೋವೆಯ ಆಂದೋಲನ

ಪರಕೀಯ ಆಡಳಿತೆಯ ನೊಗವನ್ನು ಕಳಚಲು ಗೋವೆಯಲ್ಲಿ ನಡೆಯುತ್ತಿರುವ ಆಂದೋಲನವು ದಿನದಿಂದ ದಿನಕ್ಕೆ ಬಲಿಯುತ್ತಿದೆ. ಸತ್ಯಾಗ್ರಹಿಗಳ ತಂಡಗಳು ಒಂದರ ಹಿಂದೊಂದೆಂಬಂತೆ ಬಿದದೆ ಗೋವೆಯನ್ನು ಪ್ರವೇಶಿಸಿ, ಅಲ್ಲಿ ಜನಜಾಗೃತಿಯನ್ನು ಉಂಟುಮಾಡುತ್ತಿವೆ. ಸರಕಾರದ ಕಟ್ಟಡಗಳ ಮೇಲೆ ಭಾರತದ ತ್ರಿವರ್ಣ ಧ್ವಜವನ್ನು ಏರಿಸುವಷ್ಟು ಶೌರ್ಯವನ್ನು ಈ ಸತ್ಯಾಗ್ರಹಿಗಳು ತೋರಿಸಿದ್ದಾರೆ. ಹೆಚ್ಚಿನ ಸತ್ಯಾಗ್ರಹಿಗಳನ್ನು ಪೋರ್ಚುಗೀಜ ಪೋಲೀಸರು ಕೈಗೆ ಬಂದಂತೆ ಹೊಡೆದು, ಘಾಸಿಗೊಳಿಸಿ, ಭಾರತದ ಗಡಿಗೆ ತಂದು ಬಿಟ್ಟಿದ್ದಾರೆ. ಮುಖಂಡರನ್ನು ಮಾತ್ರ ಸೆರೆಹಿಡಿದು ಪೀಡಿಸುತ್ತಿದ್ದಾರೆ.

ಹುತಾತ್ಮ ಸತ್ಯಾಗ್ರಹಿ

ಪೋಲೀಸರ ಮರ್ಮಾಂತಿಕವಾದ ಹೊಡೆತಗಳ ಮತ್ತು ಅತ್ಯಾಚಾರದ ಪರಿಣಾಮವಾಗಿ ಅಮೂರಜಂಟ ಎಂಬ ಸತ್ಯಾಗ್ರಹಿಯು ಹುತಾತ್ಮನಾದ ವರದಿಯೊಂದು ಬಂದಿದೆ. ಬೇರೆ ೧೮ ಮಂದಿಯೊಡನೆ ಗೋವೆಯನ್ನು ಪ್ರವೇಶಿಸಿದ್ದ ಈ ಸತ್ಯಾಗ್ರಹಿಯನ್ನು ಚೆನ್ನಾಗಿ ಹೊಡೆದುದರಿಂದ ಅವನ ಬಲಗಡೆಯ ಏಳು ಪಕ್ಕೆಲುಬುಗಳೂ ಎಡಗಡೆಯ ಮೂರು ಪಕ್ಕೆಲುಬುಗಳೂ ತುಂಡಾದವು; ಪೋರೆಯ ನೋಲೆ ಎಡಗಡೆ ಕೆನ್ನೆಯಿಂದ ದವಡೆಯ ವರೆಗೆ ಬಾತಿತು; ಎಡಗೈ ಮುರಿಯಿತ್ತಲ್ಲದೆ ಬಲಗೈಯು ಊದಿ ಹೋಗಿದ್ದಿತು. ತಮ್ಮ ಬೂ

(೫೯ ಪುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರ್ಯ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಾದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ। ಯು. ಸುಂದರ ರಾಮ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).

THE CANARA BANKING CORPORATION LIMITED

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:–

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:– (1) ಉಡುಪಿ (2) ಮಂಗಳ ಗಲ್ಲಿ, ಮುಂಬಯಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೩೦-೬-೧೯೫೮	ಸಂಚಿಕೆ ೪೨

ಜೈತ್ರ ಯಾತ್ರೆ

ಆಸ್ಟ್ರಿಯದ ರಾಜಧಾನಿಯಾದ ವಿಯೆನ್ನದಲ್ಲಿ ಭಾರತದ ಪ್ರಧಾನ ಮಂತ್ರಿ ನೆಹರುಗಳನ್ನು ಒಬ್ಬ ಪತ್ರಿಕೋದ್ಯೋಗಿ "ಕಬ್ಬಿಣದ ಪರದೆಯೊಳಗಿನ ಭಾಗಕ್ಕೆ ನೀವೀಗ ಕೊಟ್ಟು ಬಂದ ಭೇಟಿಯ ವಿಷಯ ನಮಗೇನಾದರೂ ತಿಳಿಸಿರಿ" ಎಂದು ವಿನಂತಿಸಿದನಂತೆ; ಅವನ ಉದ್ದೇಶ ರಶ್ಯದ ಕುರಿತು ನೆಹರುಗಳ ಅಭಿಪ್ರಾಯ ತಿಳಿಯುವುದಾಗಿತ್ತೆಂಬುದು ಸ್ಪಷ್ಟ. ಆದರೆ "ಕಬ್ಬಿಣದ ಪರದೆ" ಎಂಬ ಮಾತಿನಲ್ಲಿ ಅಸತ್ಯವಿತ್ತು; ವ್ಯಂಗ್ಯವಿತ್ತು; ಅವಿಶ್ವಾಸವಿತ್ತು—ಇದು ನೆಹರುಗಳಿಗೆ ಸರಿ ಬರಲಿಲ್ಲ. ಆವರ ನೇರವಾದ ಉತ್ತರ ಬಾಣದಂತೆ ಹಾರಿ ಬಂತು— "ನಾನು ನನ್ನ ಸಂಚಾರ ಕಾಲದಲ್ಲಿ ಕಬ್ಬಿಣದ ಅಥವಾ ಬೇರಾವುದೇ ಪರದೆಯನ್ನು ಕಂಡಿಲ್ಲ!" ನೆಹರುಗಳು ಮುಂದುವರಿದು "ಪ್ರಶ್ನೆಯನ್ನು ಯಾವಾಗಲೂ ಸ್ಪಷ್ಟವಾಗಿಯೇ ಕೇಳಿರಿ" ಎಂದು ಉಪದೇಶಿಸಿದರು. ಇದೊಂದು ಘಟನೆಯೇ ನೆಹರುಗಳ ವ್ಯಕ್ತಿತ್ವದ ದಿಗ್ದರ್ಶನವನ್ನು ಮಾಡಿಕೊಡುತ್ತದೆ; ಅವರ ಪ್ರವಾಸದ ಹಿಂದಿನ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ನೆಹರುಗಳಿಗೆ ನಿಜಕ್ಕೂ ರಶ್ಯದಲ್ಲಿಯಾವ ಗೋಪ್ಯವೂ ಕಾಣಲಿಲ್ಲ; ರಶ್ಯದ ಸರಕಾರವು ವಿದೇಶದ ವರಿಷ್ಠನೊಬ್ಬನಿಗೆ ಸಾಂಪ್ರದಾಯಿಕವಾಗಿ ತೋರಿಸಬೇಕಾದ ಗೌರವದ ಮಿತಿಯನ್ನು ಮೀರಿ ತಮ್ಮವರಲ್ಲಿ ಒಬ್ಬನೆಂದೇ ಬಗೆದು ನೆಹರುಗಳಿಗೆ ಅತ್ಯಂತ ಸಂಭ್ರಮದ ಸ್ವಾಗತ ನೀಡಿತು; ಅಲ್ಲದೆ, ಪರಕೀಯರಿಗೆ, ಅದೇಕೆ, ಚೀನದ ಪ್ರಧಾನ ಮಂತ್ರಿಗಳಿಗೆ ಸಹ, ಇದುವರೆಗೆ ತೋರಿಸದಿದ್ದ ಅಣುಶಕ್ತಿ ಕೇಂದ್ರವನ್ನು ನೆಹರುಗಳಿಗೆ ತೋರಿಸಿತು; ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನು ಸಹ ಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿತು—ರಶ್ಯದ ಈ ವರ್ತನೆಗಳು ಕೇವಲ ಸಂಶಯಿತ ದೃಷ್ಟಿಯಿಂದ ನೋಡುವವರಿಗೆ ಆಶ್ಚರ್ಯವಾಗಿ ಪರಿಣಮಿಸಿವೆ. ಈ ಸೌಜನ್ಯ, ಈ ವಿಶ್ವಾಸ, ಈ ಗೌರವಗಳ ಹಿಂದೆ ಯಾವ ಮುಷ್ಟ ಹೇತು ಇದೆಯೋ—ಎಂದು ಅವರು ಇನ್ನಷ್ಟು ಸಂದೇಹಿಸುವುದಕ್ಕೆಯೇ ಇವು ಕಾರಣವಾಗಿವೆ. ನೆಹರು—ಬುಲ್ಗೇನಿನ್ನರ ಸಂಯುಕ್ತ ಪ್ರಕಟಣೆಯನ್ನು ಓದಿದ ವಾರ್ತಾಪತ್ರಿಕೆಗಳಲ್ಲಿ ಹೆಚ್ಚಿನವರು ರಶ್ಯವು ಇಲ್ಲಿ ಒಪ್ಪಿಕೊಂಡ ತತ್ವಗಳನ್ನು ತನ್ನ ನೀತಿಯಾಗಿ ಸ್ವೀಕರಿಸಲಿಕ್ಕಿಲ್ಲ; ಕೇವಲ ನೆಹರುಗಳನ್ನು ಮೋಸಗೊಳಿಸಲು ಬುಲ್ಗೇನಿನ್ನರು ಈ ಹೇಳಿಕೆಗೆ ಅಂಕಿತ ಹಾಕಿದರು—ಎಂದು ಭಾವಿಸುವ ಪ್ರಭೃತಿಗಳಾಗಿ ಇದ್ದಾರೆ. ಹೀಗೆ ರಶ್ಯದ ನಡವಳಿಕೆಯಲ್ಲಿ ಮತ್ತು ಅದಕ್ಕೆ ಪಾಶ್ಚಾತ್ಯರ ಪ್ರತಿಕ್ರಿಯೆಯಲ್ಲಿ ಪರಸ್ಪರ ವಿರೋಧವಾದ ಅಂಶಗಳೇ ಕಂಡು ಬರುತ್ತವೆ. ಒಂದೆಡೆ ಪ್ರಾಮಾಣಿಕತೆಯ ಅತಿಹೆಚ್ಚು ನಿದರ್ಶನಗಳಿವೆ; ಇನ್ನೊಂದೆಡೆ ಶಂಕೆಯಿಂದ ದೂಷಿತವಾದ ವಾತಾವರಣವಿದೆ. ಈ ಪರಿಸ್ಥಿತಿಯಲ್ಲಿ ನೆಹರುಗಳ ಕುರಿತಾದ ಪ್ರಶಂಸೆಯಂತೆ ಟೀಕೆಗಳೂ ಕೇಳಿ ಬರುವುದು ಸಹಜ. ರಶ್ಯವನ್ನು ಪಂಚಶೀಲಗಳಿಗೆ ಒಪ್ಪಿಸುವ ಮೂಲಕ—ರಶ್ಯ ಈ ತತ್ವಗಳನ್ನು ಮೊದಲೇ ಮಾನ್ಯ ಮಾಡಿದ್ದಿತು; ಆದರೂ ಪ್ರಕಟವಾಗಿ ಅದು ಈಗ ತನ್ನ ನಿಲುಮೆಯನ್ನು ಹೇಳಿದಂತಾಗಿದೆ ನೆಹರುಗಳು ಶಾಂತಿವಲಯದ ಕ್ಷೇತ್ರವನ್ನು ವಿಸ್ತಾರಗೊಳಿಸಿದ್ದಾರೆ ಎಂದು ಪ್ರಶಂಸಕರ ಅಭಿಪ್ರಾಯ; ರಶ್ಯವನ್ನು ಸಮಾಲೋಚನೆಗಳ ಮೂಲಕ ವಿವಾದಗಳ ಶಿಮಾನಕ್ಕೆ ಪ್ರಯತ್ನಿಸುವಂತೆ ಮನವೊಲಿಸಿದ್ದಾರೆ ಎಂದೂ ಅವರ ಅಂಬೋಣ. ಇದಕ್ಕೆ ಪ್ರತಿಯಾಗಿ ಟೀಕಾಕಾರರು ರಶ್ಯದ ಬಲಿಯೊಳಗೆ ನೆಹರು ಬಿದ್ದರು, ಕಮ್ಯೂನಿಸ್ಟರ ಪಕ್ಷಪಾತಿಯಂತೆ ನಡೆದುಕೊಳ್ಳುತ್ತಿದ್ದ ನೆಹರುಗಳು ಈಗ ಕಮ್ಯೂನಿಸ್ಟರಾಗಿಯೇ ಹೋದರು; ಪ್ರತಿಭಾವಾಲಿಯಾದ ಮುಕ್ಸದ್ದಿಯೊಬ್ಬನ ವ್ಯಕ್ತಿತ್ವ ಹೀಗೆ ಪಲ್ಲಟಗೆಯಾದುದು ಶೋಚನೀಯ— ಎನ್ನುತ್ತಾರೆ. ಇವೆರಡು ನಿಲುಮೆಗಳಲ್ಲಿ ಯಾವುದು ಸರಿ ಎಂಬುದನ್ನು ನಾವು ನಿರ್ವಿಕಾರಚಿತ್ತದಿಂದ ಪರಿಶೀಲಿಸಬೇಕಾಗಿದೆ— ನೆಹರುಗಳು ಕಮ್ಯೂನಿಸ್ಟರ ಪಕ್ಷಪಾತಿಯಂತೆ ನಡೆದುಕೊಂಡಿದ್ದಾರೆಯೆ? ಶ್ರೀ ಕೃಷ್ಣ ಮೆನೊನ್ನರು ಸಂಯುಕ್ತ ರಾಷ್ಟ್ರ ಸಂಘದ ಹತ್ತನೆಯ ವಾರ್ಷಿಕೋತ್ಸವದಲ್ಲಿ ಮಾತನಾಡುವಾಗ ಇದನ್ನು ಸ್ಪಷ್ಟೀಕರಿಸಿದ್ದಾರೆ—ಅವರು ಹೇಳುವಂತೆ, ನೆಹರುಗಳು ಹೊಸ ಧೋರಣೆಯನ್ನು ವ್ಯಕ್ತಪಡಿಸಿಲ್ಲ; ಹಿಂದೆ ಅನುಸರಿಸಿಕೊಂಡು ಬಂದ ನೀತಿಗಿಂತ ಭಿನ್ನವಾದ ನಿರ್ಣಯಗಳನ್ನು ಅವರು ರಶ್ಯದ ನಾಯಕರೊಡನೆ ಕೈಗೊಳ್ಳಲಿಲ್ಲ; ಪಂಚಶೀಲಗಳಾಗಲೀ ಅಣುಶಸ್ತ್ರಗಳ ಬಹಿಷ್ಕಾರವಾಗಲೀ ಕೆಂಪು ಚೀನ ಮತ್ತು ಫೊರ್ಮೋಸದ ಪ್ರಶ್ನೆಗಳಾಗಲೀ—ಭಾರತ ಅನುಸರಿಸಿಕೊಂಡು ಬಂದಿರುವ ವಿದೇಶಾಂಗ ನೀತಿಯ ಚೌಕಟ್ಟಿನಲ್ಲಿ ರಶ್ಯದಲ್ಲಿ ಪ್ರವಾಸ ಕೈಗೊಳ್ಳುವುದಕ್ಕೆ ಮೊದಲೇ ಜೋಡಿಸಲ್ಪಟ್ಟಿದ್ದ ವಿಷಯಗಳಾಗಿವೆ. ಆದುದರಿಂದ ರಶ್ಯದ ನಾಯಕರು ನೆಹರುಗಳ ತಲೆ ಕೆಡಿಸಿದರು ಎಂದು ಉದ್ಧಟರಂತೆ ಹೇಳುವುದು ನ್ಯಾಯವಾಗದು. ರಶ್ಯವು ನೆಹರುಗಳ ಕುರಿತು ಅಪೂರ್ವವಾದ ಪ್ರೀತಿ, ವಿಶ್ವಾಸಗಳನ್ನು ತೋರಿಸಿದ್ದರೆ—ಅದಕ್ಕೆ ನೆಹರುಗಳು ಸ್ವಾತಂತ್ರ್ಯೋತ್ಕರ್ಷದಲ್ಲಿ ಭಾರತದ ವಿದೇಶ ಧೋರಣೆಯನ್ನು ರೂಪಿಸಿಕೊಂಡ ಬಗೆಯೇ ಹೇತು. ಕಳೆದ ಆರೇಳು ವರ್ಷಗಳಲ್ಲಿ ಪರಸ್ಪರ ಅವಿಶ್ವಾಸ, ಶಸ್ತ್ರ ಸಂಗ್ರಹದ ಸ್ಪರ್ಧೆ, ಅಣುಬಾಂಬುಗಳ ಸ್ಫೋಟನ ಪ್ರಯೋಗ, ಯುದ್ಧದಿಂದ ರಾಜಕೀಯ ಉದ್ದೇಶ ಸಾಧಿಸುವ ಛಲ—ಮುಂತಾದವುಗಳನ್ನು ಮಹಾರಾಷ್ಟ್ರಗಳು ನಡೆಸುತ್ತಾ ಬರುತ್ತಿದ್ದಾಗ ಮತ್ತು ಚಿಕ್ಕ ರಾಷ್ಟ್ರಗಳನ್ನು ನಾನಾ ಬಗೆಯ ಆಮಿಷಗಳಿಂದ ತಮ್ಮ ಗುಂಪುಗಳಿಗೆ ಸೇರಿಸಿಕೊಳ್ಳಲು ಹವಣಿಸುತ್ತಿದ್ದಾಗ— ಭಾರತದಂಥ ಕೆಲವೇ ರಾಷ್ಟ್ರಗಳು ಪ್ರಲೋಭನೆಗೆ ಹೊರಗಾಗಿ ನಿಂತವಲ್ಲದೆ, ಯುದ್ಧಕ್ಕೆ ಅದರ ಸಿದ್ಧತೆಗೆ, ವಿರೋಧವನ್ನೂ ಪರಸ್ಪರರಲ್ಲಿ ವಿಶ್ವಾಸವಿಡಬೇಕೆಂಬ ತತ್ವವನ್ನೂ ಸಹಜೀವನದ ಆದರ್ಶವನ್ನೂ ಎತ್ತಿಹಿಡಿದವು. ಯುದ್ಧತ್ರಸ್ತರಾದ ಎಲ್ಲರಿಗೂ ಇದು ಹೌದೆನಿಸಿದೆ; ಭಾರತವು ನೈತಿಕಶಕ್ತಿ ಸಂಪನ್ನವಾಗಿದೆ ಎಂದೂ ಅದು ಜಾಗತಿಕ ಶಾಂತಿಗಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ಶಕ್ತಿಮೀರಿ ದುಡಿಯುತ್ತಿದೆ ಎಂದೂ ಕೊರಿಯ, ಇಂಡೋಚೀನಗಳ ಸಮರ ವಿರಾಮಕ್ಕಾಗಿ ಅದು ನಡೆಸಿದ ಪ್ರಯತ್ನದಿಂದ ಸಿದ್ಧವಾಗಿದೆ. ಈ ಸಿದ್ಧಿಯನ್ನು ಚಿಕ್ಕ ರಾಷ್ಟ್ರಗಳಲ್ಲಿ ಹೆಚ್ಚಿನವು ಮನಗಂಡಿವೆ; ಕೊಂಡಾಡಿವೆ— ಈಗ ಮಹಾ ರಾಷ್ಟ್ರಗಳೂ ಒಂದೊಂದಾಗಿ ಇದನ್ನು ಮೆಚ್ಚುತ್ತಿವೆ; ಚೀನ ಪಂಚಶೀಲಗಳನ್ನು ಪುರಸ್ಕರಿಸಿತು; ರಶ್ಯವೂ ಅವಕ್ಕೆ ಒಪ್ಪಿಗೆ ನೀಡಿತು. ಇನ್ನು ಅಮೇರಿಕ ಮತ್ತು ಬ್ರಿಟನುಗಳು ಸೈಗುಟ್ಟಿದರೆ, ಆಗ ಸಹ ಜೀವನಕ್ಕೆ ಮತ್ತು ಯುದ್ಧ ಭಯಹೋಗುವುದಕ್ಕೆ ಯಾಟೆ ಆತಂಕ ಉಳಿಯದು ಪರಸ್ಪರರಲ್ಲಿ ವಿಶ್ವಾಸ, ತಿಳಿವಳಿಕೆ ಮತ್ತು ಶಾಂತಿಯ ಕಳಕಳಿ ಹೆಚ್ಚಿದಷ್ಟು ವಿವಾದಗಳನ್ನು ಯುದ್ಧರಂಗದ ಹೊರಗೆ ಕ್ಲಿಷ್ಟದಲ್ಲಿ ನಿವಾರಿಸಿಕೊಳ್ಳಲು ಅನುಕೂಲವಾಗುತ್ತದೆ. ಈ ವಿಶ್ವಾಸ ಇಲ್ಲದೆ, ಪ್ರತಿಕಳ್ಳದ ಪ್ರಾಮಾಣಿಕತೆಯನ್ನು ಶಂಕಿಸುವ ಪ್ರವೃತ್ತಿಯೇ ಪ್ರಬಲಿಸಿರುವುದು ಜಾಗತಿಕ ಶಾಂತಿಗಿರುವ ಉಗಿನ ಗಂಡಾಂತರ. ಶ್ರೀ ಕೃಷ್ಣ ಮೆನೊನ್ನರು ಹಿರುವತ್ತು ರಾಷ್ಟ್ರಗಳ ಪ್ರತಿನಿಧಿಗಳ ಮುಂದೆ ವಿಶ್ವಾಸ ಭಾವನೆಯನ್ನು ಪರಸ್ಪರ ಕುದುರಿಸಿಕೊಳ್ಳೋಣ ಎಂದಿದ್ದಾರೆ. ಇದರ ಹಿಂದಿನ ಭಾವನೆಯನ್ನು ಎಲ್ಲ ರಾಷ್ಟ್ರಗಳ ಪರಸ್ಕರೂ— ಮುಖ್ಯವಾಗಿ ಸಂದೇಹದಿಂದ ಹೀಡಿತರಾದ ಮಹಾಸಾಮ್ರಾಜ್ಯವರು—ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಭಾರತದ ಮಟ್ಟಿಗೆ, ಅದು ಗಾಂಧೀಜಿಯು ತೋರಿಸಿದ ದಾರಿಯಲ್ಲಿ ಸಾಕಷ್ಟು ದೂರ ನಡೆದಿದೆ; ಇನ್ನೂ ನಡೆಯುತ್ತದೆ. ಮಹಾತ್ಮರ ಅಹಿಂಸೆಯ ಸಿದ್ಧಾಂತವು, ರಾಜಕಾರಣದಲ್ಲಿ ಹೇಗೆ ಬಳಸಲ್ಪಡಬಹುದೆಂಬುದನ್ನು ಗಾಂಧೀಜಿಯ "ವಾರೀಸುದಾರ' ನೆಹರುಗಳು ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ. ಆಕ್ರಮಣೇಚ್ಛೆಯಿಂದ ನೋಡುತ್ತಿರುವ ಮನುಷ್ಯನೊಡನೆಯೂ ಸಹಜೀವನದಿಂದಿರುವುದು ಸಾಧ್ಯ—ಅಲ್ಲಿ ವೈಮನಸ್ಯಕ್ಕೆ ಎಡೆಕೊಡಬೇಕೆಂದಿಲ್ಲ; "ನಾವು ವಾಪನನ್ನು ದ್ವೇಷಿಸೋಣ, ಪಾಪಿಯನ್ನಲ್ಲ" ಎಂಬ ಗಾಂಧೀಜಿಯ ಉಪದೇಶದಂತೆ, ನಾವು ಯುದ್ಧವನ್ನೆ ವಿರೋಧಿಸಬೇಕು; ಆಗ ಸಹಜೀವನವೇ ನಮಗುಳಿದಿರುವ ಮಾರ್ಗ ಎಂದು ನೆಹರುಗಳು ವಿದಿತಪಡಿಸಿದ್ದಾರೆ. ಆಲ್ಲೋಲ ಕಲ್ಲೋಲವೆದ್ದಿರುವ ವಿಶ್ವದ ರಾಜಕೀಯ ರಂಗದಲ್ಲಿ ಇಷ್ಟು ಸ್ಪಷ್ಟವಾಗಿ ಶಾಂತಿಯ ಸಂದೇಶ ಬೀರಿದ ನೆಹರುಗಳೇ ಧನ್ಯರು! ಅವರನ್ನು ನಾಯಕನಾಗಿ ಪಡೆದ ನಾವು ನಿಜಕ್ಕೂ ಪುಣ್ಯ ಮಾಡಿದ್ದೇವೆ.

—ಅ—

ಪಾಕಿಸ್ತಾನಕ್ಕೆ ಸಮ್ಮಿಶ್ರ ಮಂತ್ರಿಮಂಡಳ

ಘಟನಾ ಸಮಿತಿಗೆ ನಡೆದ ಚುನಾವಣೆ

ಪಾಕಿಸ್ತಾನದ ಗವರ್ನರ ಜನರಲರು ಮುಕ್ರಿಯಲ್ಲಿ ಇದೇ ೬ನೇ ದಿನಾಂಕ ಘಟನಾ ಸಮಿತಿಯ ಪ್ರಥಮ ಸಭೆ ಜರಗಬೇಕೆಂದು ಆಜ್ಞೆ ವಿಧಿಸಿದ್ದಾರೆ. ಘಟನಾಸಮಿತಿಯ ೮೦ ಸ್ಥಾನಗಳಲ್ಲಿ ೭೨ ಸ್ಥಳಗಳಿಗೆ ಈಗಾಗಲೇ ಚುನಾವಣೆ ಮುಗಿದಿದೆ; ಉಳಿದ ೮ ಸ್ಥಾನಗಳ ಪ್ರತಿನಿಧಿಗಳನ್ನು ಘಟನಾ ಸಮಿತಿಯೇ ಆರಿಸುತ್ತದೆ

ಪಕ್ಷಗಳ ಬಲಾಬಲ

ಗೆದ್ದುಬಂದ ಪಕ್ಷಗಳ ಬಲಾಬಲವನ್ನು ನೋಡಿದರೆ ಮುಸ್ಲಿಂ ಲೀಗು ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿರುವಂತೆ ಕಂಡುಬರುತ್ತದೆ ಈ ಪಕ್ಷ ಗಳಿಸಿರುವ ಸ್ಥಾನ ೫೫; ಆದರೆ ಪೂರ್ವ ಬಂಗಾಲದಿಂದ ಪಕ್ಷದ ಹುರಿಯಾಳಾಗಿ ಆಯ್ಕೆಹೊಂದಿದವರು ಪ್ರಧಾನಿ ಮಹಮ್ಮದಾಲಿ ಮಾತ್ರ. ಮುಸ್ಲಿಂ ಲೀಗಿನ ಬಳಿಕ ಫಜಲುಲ್ ಹಕ್ಕರ ಪಕ್ಷಕ್ಕೆ ೧೬, ಸುಹ್ರವರ್ದಿಯವರ ಪಕ್ಷಕ್ಕೆ ೧೨ ಸ್ಥಾನಗಳು ಸಿಕ್ಕಿವೆ.

ಮಹಮ್ಮದಾಲಿಗಳ ಅಭಿಪ್ರಾಯ

ಇವರಿಬ್ಬರೂ ಒಟ್ಟುಕೂಡಿ ಹೋದ ವರ್ಷ ಪೂರ್ವಬಂಗಾಲದಲ್ಲಿ ಲೀಗಿಗೆ ಪ್ರಚಂಡ ಪರಾಭವವೊಡ್ಡಿದ್ದರು. ಆದರೆ ಈ ಸಲ ಮಹಮ್ಮದಾಲಿಗಳು ಭೇದೋಪಾಯದ ಮೂಲಕ ಫಜಲುಲ್ ಹಕ್ಕರನ್ನು ಒಲಿಸಿಕೊಂಡಿದ್ದಾರೆ; ಮುಸ್ಲಿಂ ಲೀಗಿನ ಕಾರ್ಯಕರ್ತರೊಡನೆ ವಿಚಾರ ವಿನಿಮಯ ನಡೆಸಿ, ಫಜಲುಲ್ ಹಕ್ಕರ ಪಕ್ಷದ ೧೬ ಸದಸ್ಯರ ಸಹಕಾರದಿಂದ ಸಮ್ಮಿಶ್ರ ಮಂತ್ರಿಮಂಡಳ ರಚಿಸುವ ಆದೇಶವನ್ನು ಅವರು ವ್ಯಕ್ತಪಡಿಸಿದ್ದಾರೆ. ಹೀಗಾಗಿ ೨೮ ಸ್ಥಾನಗಳ ಸಂಯುಕ್ತ ಬಲದಿಂದ ಫಜಲುಲ್ ಹಕ್ಕರೂ ಮುಸ್ರವರ್ದಿಗಳೂ ಮುಸ್ಲಿಂ ಲೀಗನ್ನು ಛಲಿಸುವ ಸಂಭವ ತಪ್ಪಿದೆ.

ಸುಹ್ರವರ್ದಿಯವರ ಮನಸ್ತಾಪ

ಇದರಿಂದ ಸುಹ್ರವರ್ದಿಯವರಿಗೆ ನಿಜಕ್ಕೂ ಸಂತಾಪವಾಗಿದೆ. ಪೂರ್ವ ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗಿನ ನೀತಿಯಕರ್ತರ್ಲಿ ಶಿಥಿಲವಾಗಿರುವಾಗ, ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಲು ಇವರು ಕಾದು ನಿಂತಿದ್ದರು. ಆದರೆ ಫಜಲುಲ್ ಹಕ್ಕರು ತಮ್ಮ ಬಣ್ಣ ಬದಲಾಯಿಸಿರುವುದರಿಂದ ಸುಹ್ರವರ್ದಿಯವರಿಗೆ ನಿರಾಶೆಯಾಗಿದೆ. ಮಂತ್ರಿ ಮಂಡಳದಲ್ಲಿ ಇವರಿಗೆ ಸ್ಥಾನ ದೊರಕದೆಂದು ಮಹಮ್ಮದಾಲಿಗಳು ಹೇಳಿರುವುದರಿಂದ ಅವರ ಅಭಿಮಾನ ಜಾಗೃತವಾಗಿದೆ. ಗವರ್ನರ ಜನರಲರು ಮಹಮ್ಮದಾಲಿಗಳ ವಿಚಾರವನ್ನು ಪುರಸ್ಕರಿಸಿದರೆ, ಸುಹ್ರವರ್ದಿಯವರು ಘಟನಾ ಸಮಿತಿಯ ಕೆಲಸಗಳನ್ನು ಸುಲಭದಲ್ಲಿ ಅಗಗೊಡಲಿಕ್ಕಿಲ್ಲ.

ಮುಕ್ಕರ್ಜಿಗಳಿಗೆ ಕರೆ

ರಶ್ಯದ ಸರಕಾರವು ಇದೇ ೩೦ನೇ ದಿನಾಂಕ ಮೊಸ್ಕೋದಲ್ಲಿ ಜರಗಲಿರುವ ರಶ್ಯದ ವಿಮಾನ ಪಡೆಯ ಚಟುವಟಿಕೆಗ

ಸಹಜೀವನ

ಅಣುಶಕ್ತಿ ಸ್ಪರ್ಧೆ ಮತ್ತು ಅಣ್ವಸ್ತ್ರ ಪ್ರಯೋಗಗಳ ಮೂಲಕ ಯುದ್ಧ ಭಯ ಹೆಚ್ಚಿ ಜಗತ್ತು ಕಂಗೆಟ್ಟಿರುವ ಈ ಕಾಲದಲ್ಲಿ ಸಹಜೀವನ ಎಂಬ ಮಾತು ಕೇಳಿ ಬರುತ್ತಿದೆ. ಸಹಜೀವನ ಎಂದರೆ ಏನು? ಅದು ಹೇಗೆ ಸಾಧ್ಯ? ಎಂಬ ಪ್ರಶ್ನೆಗಳು ಎದ್ದಿವೆ. ಸಹಜೀವನ ಎಂದರೆ ಒಂದು ಸಮಾಜದ ಸದಸ್ಯರು ಪರಸ್ಪರ ಸಹಕಾರದಿಂದ ಬಾಳುವುದು ಎಂದು ಅರ್ಥ. ಸಹಜೀವನ ಸಾಧ್ಯವಾಗಬೇಕಾದರೆ ಪರಸ್ಪರ ವಿಶ್ವಾಸ ಬೇಕು. ಒಂದು ಸಮಾಜದ ಸದಸ್ಯರು ಪರಸ್ಪರ ಸಹಕಾರದಿಂದ ಬಾಳಬೇಕಾದರೆ ಅವರಲ್ಲಿ ಸಮಾನ ಧ್ಯೇಯ ಇರಬೇಕು. ಅಂಥ ಧ್ಯೇಯ ಇಲ್ಲದಿದ್ದರೆ ಸಹಜೀವನ ಸಾಧ್ಯವಾಗದು. ಇಂದು ಜಗತ್ತಿನ ಮುಂದಿರುವ ಧ್ಯೇಯ ಶಾಂತಿ. ಶಾಂತಿ ಇಲ್ಲದೆ ಸಹಜೀವನ ಸಾಧ್ಯವಿಲ್ಲ

ಳನ್ನು ನಿರೀಕ್ಷಿಸಲು ಭಾರತದ ವಿಮಾನ ಪಡೆಯ ವರಿಷ್ಠರಾದ ಏರ್ ಮಾರ್ಶಲ್ ಮುಕರ್ಜಿಯವರನ್ನು ಆಮಂತ್ರಿಸಿದೆ. ಮುಕರ್ಜಿಯವರು ಇದೇ ೧೧ನೇ ದಿನಾಂಕ ಮೋಸ್ಕೋದಲ್ಲಿ ಇಳಿಯಲು ವಿಶೇಷ ವಿಮಾನದ ಮೂಲಕ ಹೊರಟಿದ್ದಾರೆ. ರಷ್ಯದೊಡನೆ ಆಮೇರಿಕಕ್ಕಿಂತಲೂ ಪ್ರಗತಿಪರವಾದ ವಿಮಾನಗಳಿದ್ದು, ಭಾರತಕ್ಕೆ ದೊರೆತ ನಿರೀಕ್ಷಣೆಯು ಸಂಧಿಯು ಮಹತ್ವಪೂರ್ಣವಾಗಿದೆ.

ಧೋರಣೆ ಬದಲಾಗುವುದೇ?

ಭಾರತ ಸರಕಾರದ ಧೋರಣೆಗಳನ್ನು ಇದು ವರೆಗೆ ಕಟುವಾಗಿ ಟೀಕಿಸುತ್ತಿದ್ದ ಕಮ್ಯೂನಿಸ್ಟರು ಇನ್ನು ಮುಂದೆ ತಮ್ಮ ನಿಲುಮೆಯನ್ನು ಕೆಲಮಟ್ಟಿಗೆ ಬದಲಿಸಿ ಜಾಗತಿಕ ಶಾಂತಿಸಂಧಿಸೆ ಮುಂತಾದ ವಿಷಯಗಳಲ್ಲಿ ಕ್ರಿಯಾತ್ಮಕ ಸಹಕಾರ ನೀಡುವರೆಂದು ಸರಣಿಗಳಿಂದ ತಿಳಿದು ಬರುತ್ತದೆ. ಮಧುರೆಯಲ್ಲಿ ಕೆಲಸಮಯದ ಹಿಂದೆ ಸೇರಿದ್ದ ಕಮ್ಯೂನಿಸ್ಟರ ಪರಿಷತ್ತಿನಲ್ಲಿ ಭಾರತದ ವಿದೇಶ ಧೋರಣೆ ಟೀಕೆಸಲ್ಪಟ್ಟಿತು; ಇನ್ನು ಮುಂದೆ ಟೀಕೆಯ ಬದಲು ಸಹಕಾರವೇ ಹೆಚ್ಚು ಪ್ರಮಾಣದಲ್ಲಿ ಸಿಗುವುದೆಂದು ಹೇಳಲಾಗುತ್ತದೆ.

ಅಣುಶಸ್ತ್ರಗಳ ನಿಷೇಧ

ಬ್ರಿಟಿಸನ ವಿಜ್ಞಾನಿಯೊಬ್ಬರು ಅಣುಶಸ್ತ್ರಗಳ ಸ್ಫೋಟನ ಪ್ರಯೋಗದ ಅನಾಹುತಗಳನ್ನು ಹೃದಯ ವ್ಯಥೆಯಾಗಿ ವಿವರಿಸಿದ್ದಾರೆ ಒಂದೇ ವರ್ಷದ ಅವಧಿಯಲ್ಲಿ ಹಲವು ತಲೆಮಾರುಗಳಷ್ಟು ಸಂತಾನಾಭಿವೃದ್ಧಿಯನ್ನು ಹೊಂದಬಲ್ಲ ಸೊಣಗಳ ಮೇಲೆ ಅಣು ಬಾಂಬಿನ ವಿಸರಣ ಕ್ರಿಯೆಗಳ ಪರಿಣಾಮವನ್ನು ಅವರು ನಿರೂಪಿಸಿದರು. ಆಗ ಬೊದಲಿನ ಎರಡು ತಲೆಮಾರುಗಳಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ; ಆದರೆ ಆ ಮೇಲಿನ ತಲೆಮಾರಿನಲ್ಲಿ ವಂಶ ಪಾರಂಪರ್ಯದ ಅವಯವ ನ್ಯೂನತೆಗಳು ಹೆಚ್ಚಾದವು; ಮೊಟ್ಟೆಗಳೂ ಬಲಿಯಲಿಲ್ಲ. ಇದನ್ನು ಮಾನವಜನಾಂಗಕ್ಕೆ ಅನ್ವಯಿಸುವುದಾದರೆ, ಅಣು ಬಾಂಬುಗಳ ಪ್ರಯೋಗದಿಂದ ಉಂಟಾಗಬಹುದಾದ "ಶಾಂತಿ"ಯನ್ನು ಅನುಭವಿಸಲು ನಾಗರಿಕರು ಯಾರೂ ಉಳಿಯಲಿಕ್ಕಿಲ್ಲ ಎಂದು ಈ ವಿಜ್ಞಾನಿಗಳ ಅಭಿಪ್ರಾಯ.

ವಿಮೋಚನೆಯ ಹೋರಾಟ

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ. ಮಾಧವನ್ ನಾಯರರು ಗೋವೆಯ ಕುರಿತು ಕಾಂಗ್ರೆಸಿನ ಧೋರಣೆ ಏನೆಂದು ಪುನಃ ವಿಶದ ಪಡಿಸಿದ್ದಾರೆ, ಹಿಂದೆ ದೇಶದೊಳಗಿನಕ್ಕೆ ಸಂಸ್ಥಾನಗಳ ವಿಲೀನೀಕರಣ ಅಲ್ಲಿಯ ಜನರು ಹೋರಾಡಿದಾಗ, ಕಾಂಗ್ರೆಸು ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಿತು. ಎಲ್ಲ ಬಗೆಯ ಸಹಾಯವನ್ನೂ ಕೊಟ್ಟಿದ್ದಿತು, ಆದರೆ ಸಂಸ್ಥಾನಗಳ ಒಳಗೆ ಹೋಗಿ, ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಅದಂತೆಯೇ ಗೋಮಾಂತಕರ ಹೋರಾಟಕ್ಕೆ ಕಾಂಗ್ರೆಸಿನ ಬೆಂಬಲವಿದೆ; ಆದರೆ ಗೋವೆಯನ್ನು ಒಳಹೊಕ್ಕು ಸತ್ಯಾಗ್ರಹ ನಡೆಸಲು ಕಾಂಗ್ರೆಸಿಗರಿಗೆ ಅಡ್ಡ ಬಿಡಲಾರದು. ಗೋಮಾಂತಕರೇ ಹೋರಾಟದಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು.

ಅಧಿಕಾರಿಗಳಿಗೆ ಉಪದೇಶ

ಮದ್ರಾಸಿನ ಸಚಿವಾಲಯದವರು ಏರ್ಪಡಿಸಿದ್ದ ಸೇನೆಯ ಸಪ್ತಾಹದ ಸಮಾರೋಪ ಭಾಷಣ ಮಾಡುತ್ತಾ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟಿಯವರು ರಾಷ್ಟ್ರೀಯ ಅಭಿವೃದ್ಧಿಯ ಕೆಲಸದಲ್ಲಿ ತಮ್ಮ ಪಾತ್ರವನ್ನು ದಕ್ಷತೆಯಿಂದಲೂ ಯಶಸ್ವಿಯಾಗಿಯೂ ನಿರ್ವಹಿಸಬೇಕೆಂದು ಸರಕಾರದ ಅಧಿಕಾರಿಗಳನ್ನು ಕೇಳಿಕೊಂಡರು. ಮುಖ್ಯ ಕಾರ್ಯದರ್ಶಿ ಶ್ರೀ ರಾಮುನ್ನಿ ಮೆನೊನ್ನರು ಜನನಾಯಕರು ರಾಷ್ಟ್ರ ನಿರ್ಮಾಣಕ್ಕಾಗಿ ಮಾಡುವ ಪ್ರಯತ್ನಗಳಲ್ಲಿ ಹೃತ್ಪೂರ್ವಕ ಸಹಕರಿಸಿ, ಉತ್ಸಾಹ ಮತ್ತು ಸ್ಫೂರ್ತಿಯನ್ನು ಅಧಿಕಾರಿಗಳು ಪ್ರದರ್ಶಿಸಬೇಕು ಎಂದು ಹೇಳಿದರು.

ಹತ್ತನೆಯ ವಾರ್ಷಿಕೋತ್ಸವ

ಸಂಯುಕ್ತ ರಾಷ್ಟ್ರಸಂಘದ ಹತ್ತನೆಯ ವಾರ್ಷಿಕೋತ್ಸವದ ಸಮಾರಂಭ ಮುಗಿದಿದೆ. ಇಲ್ಲಿ ಭಾಷಣ ಮಾಡಿದ ಪ್ರತಿಯೊಬ್ಬನೂ ರಾಷ್ಟ್ರಸಂಘದ ಅಸ್ತಿತ್ವದ ಉಪಯುಕ್ತತೆಯನ್ನು ಮನಗಂಡಿರುವುದು ವ್ಯಕ್ತವಾಯಿತು; ಹಾಗೆಯೇ ವಿಶ್ವ ಶಾಂತಿಯ ಸದಿಚ್ಛೆಯಿಂದ ಎಲ್ಲರೂ ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು, ಯುದ್ಧದ ಸಿದ್ಧತೆಗಳನ್ನು ನಿಲ್ಲಿಸಿ, ವಿವಾದಗಳನ್ನು ಸಮಾಲೋಚನೆ ಮತ್ತು ಅಂತಾರಾಷ್ಟ್ರೀಯ ನ್ಯಾಯಸ್ಥಾನದ ಮೂಲಕ ಬಗೆಹರಿಸಿಕೊಳ್ಳಬೇಕು ಎಂದು ಅವರು ಒಪ್ಪಿದಂತೆ ತೋರಿತು. ರಾಷ್ಟ್ರಸಂಘಕ್ಕೆ ಜಾಗತಿಕ ಸ್ವರೂಪವನ್ನು ಕೊಡುವ ಉದ್ದೇಶದಿಂದ ಸದಸ್ಯತ್ವವನ್ನು ಮುಕ್ತವಾಗಿಡಬೇಕೆಂದು ಹೆಚ್ಚಿನವರು ಅಭಿಪ್ರಾಯಪಟ್ಟರು.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಸಭೆಯು

ತಾ. 25ರಲ್ಲು ಟೌನ್ ಹಾಲ್ ಸಿ. ವಿ. ಪ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಂಪೋಸ್ಟು ಗೊಬ್ಬರವನ್ನು 25 ಕ್ಯೂಬಿಕ್ ಫೀಟು ಗಾಡಿ ಹೊರೆಗೆ ಒಂದು ರೂಪಾಯಿಯಂತೆ ಮಾರಾಟ ಮಾಡುವುದೆಂದಾಯಿತು. ನಗರ ಸಭೆಯ 52 ಮಂದಿ ಗಂಡಸು ಸೆನಿಟರಿ ಕೆಲಸಗಾರರಿಗೆ ಒಂದೊಂದು ಶರ್ಟು ಮತ್ತು ಅರ್ಧ ಚಡ್ಡಿಗಳು, 13 ಹೆಂಗಸು ಕೆಲಸಗಾರರಿಗೆ ಒಂದೊಂದು ಸೀರೆ ಮತ್ತು ಕುಪ್ಪಸ ಡ್ರೆಸ್ಸು ಕೊಡಲು ಕೌನ್ಸಿಲಿನ ಮಂಜೂರಾತಿ ದೊರೆಯಿತು. ಸೆನಿಟರಿ ಇನ್ಸ್ಪೆಕ್ಟರ್ಸ್ ಮತ್ತು ಹೆಲ್ತ್ ಅಸಿಸ್ಟಾಂಟರಿಗೆ ರೂಪಾಯಿ 50/-ರಂತೆ ಡ್ರೆಸ್ಸ್ ಎಲೊವೆನ್ಸ್ ಸೌಕರ್ಯ ನೂಡಲಾಯಿತು. ಇಬ್ಬರು ಹಾಸ್ಟಲ್ ಗ್ರೇಡ್ ಅಧ್ಯಾಪಕರ ಇನ್ಸಪೆಕ್ಷನ್ನು ಸಂಪೂರ್ಣ ಮಾಡುವಾಗ್ಗೆ, ಹಿಂದುಸ್ಥಾನಿ ಶಾಲೆಯ ಹಿರಿಯ ಉಪಾಧ್ಯಾಯನನ್ನು ಮುನಿಸಿಪಲ್ ಶಾಲೆ ಶಾಲೆಗೆ ವರ್ಗಾಯಿಸಿ ಉರ್ದು ಬಲ್ಲ ಅಧ್ಯಾಪಕನನ್ನು ಹಿಂದೂಸ್ಥಾನಿ ಶಾಲೆಗೆ ನೇಮಿಸಬೇಕೆಂದು ಕಮಿಶನರರನ್ನು ವಿನಂತಿಸುವ ಶ್ರೀ. ಪಿ. ವಿ. ಆಚಾರ್ಯರ ನಿರ್ಣಯ ಪಾಸಾಯಿತು. ನಗರ ಕ್ಷೇತ್ರದ ಚರಂಡಿಗಳನ್ನು ತಾ. 1-10-55ರಿಂದ 31-5-56ರ ತನಕ ಶುದ್ಧೀಕರಿಸುವರೆ ಇಬ್ಬರು ಡ್ರೈನ್ ಮಜದೂರರನ್ನು ನೇಮಿಸಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು.

ರಾಷ್ಟ್ರ ಭಾಷಾ ಶಿಕ್ಷಣ ಶಿಬಿರದಲ್ಲಿ:— ತಾ. 1-7-55ರಿಂದ ಹೊಸತಾಗಿ, (ಅಕ್ಷರ ಜ್ಞಾನದಿಂದ ಪ್ರಾರಂಭಿಸಿ) ಹಿಂದೀ ಪ್ರಾಥಮಿಕ ವರ್ಗವು ತೆರೆಯಲ್ಪಡುವುದು. ವರ್ಗಕ್ಕೆ ಸೇರಲಿಚ್ಛಿಸುವ ಸೋದರ ಸೋದರಿಯರು ಚಿತ್ತರಂಜನ ಭವನದಲ್ಲಿರುವ 'ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿ'ಯ ಆಫೀಸಿನಲ್ಲಿ ತಮ್ಮ ಹೆಸರುಗಳನ್ನು ಮೊದಲು ದಾಖಲು ಮಾಡಿಕೊಳ್ಳಬಹುದು.

ಮೂಲ್ಕಿ— ಸ್ಥಳೀಯ ಯೂನಿಯನ್ ಕ್ಲಬ್ಬಿನ ವರ್ಷಾಂತಿಯೂ ದಿ. ಡಾ! ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ತಾ. 16 ರಲ್ಲಿ ಶ್ರೀ ಯು. ಆರ್. ಯಬ್ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತ್ತು. ಚಾರ್ಟರ್ಡ್ ಕೈ ಶ್ರೀಗಳಾದ ಎಮ್. ಆರ್. ಎಚ್. ಸೊಜ (ಅಧ್ಯಕ್ಷ), ಎ. ಎಸ್. ಎಲ್. ಡಿ ಸೋಜ (ಉಪಾಧ್ಯಕ್ಷ), ಎಮ್. ಉಮೇಶರಾವ್, (ಖಜಾಂಚಿ), ಜೆ. ಎಸ್. ಮೂಲ್ಕಿ (ಕಾರ್ಯದರ್ಶಿ), ಎಮ್. ಎಚ್. ರಾಮ (ಸಹಕಾರ್ಯದರ್ಶಿ), ಎಚ್. ಮಾಧವ ಬಂಗೇರ (ಸ್ಪೋರ್ಟ್ಸ್ ಕಾರ್ಯದರ್ಶಿ)ರು ಆರಿಸಲ್ಪಟ್ಟರು.

ಹಂಗಾರಕಟ್ಟೆ— ಸ್ಥಳೀಯ ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ. 19ರಲ್ಲಿ ಶ್ರೀಎ ಸುಬ್ರಾಯ ಅಳ್ಳಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಬಿ. ಎ. ಉಡುಪರು ಸ್ವಾಗತ ಪರಿಚಯ ಭಾಷಣವಿತ್ತರು. ಶ್ರೀಗಳಾದ ಪಿ. ಸಿ. ಪಿತಾಳ, ಬಿ. ಶ್ರೀನಿವಾಸ ಕೆದಿಲಾಯ, ಹಿರಿಯಣ್ಣ ಶೆಟ್ಟಿ ಮತ್ತು ಎ. ಸದಾನಂದ ಹೆಬ್ಬಾರರು ವಿವಿಧ ವಿಷಯಗಳನ್ನೆತ್ತಿ ಮಾತನಾಡಿದರು.

ಮೂಡಬಿದ್ರೆ— ಜಿಲ್ಲಾ ಸುಪರಿಂಟಿಂಡೆಂಟ್ ಆಫ್ ಪೋಲೀಸ್ ಶ್ರೀಸುರೇಶಕುಮಾರ್, ಅವರು ತಾ. 22ರಲ್ಲಿ 'ಸಾರ್ವಜನಿಕರೂ ಪೋಲೀಸರೂ' ಎಂಬ ವಿಷಯದಲ್ಲಿ ಭಾಷಣವಿತ್ತು ಜನಜಾಗೃತಿಯನ್ನುಂಟುಮಾಡಿದರು.

ಕುಂಬಳೆ— ಇಲ್ಲಿನ ಆಳಿಯೆಯ ತೆಳು ಭಾಗಕ್ಕೆ ನೀರುಬರುತ್ತಾ ಬಂದು ಅಸ್ತ, ಮನೆಮಾರುಗಳು ಮುಂತಾದುವಕ್ಕೆ ನಷ್ಟವುಂಟಾಗುವುದನ್ನು ನಿರೋಧಿಸುವುದಕ್ಕಾಗಿ ಶ್ರೀ ಕೆ. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ತಾ. 25ರಲ್ಲಿ ಸಾರ್ವಜನಿಕ ಸಭೆ ಜರಗಿ, ಪಂಚಾಯತ ಸದಸ್ಯರೂ 11ಮಂದಿ ಹೊರಗಿನವರೂ ಒಳಗೊಂಡ ಆಳಿಪಸಮಿತಿಯೊಂದು ಸ್ಥಾಪಿಸಲಾಯಿತು.

ಪಂಚಾಯತ ಬೋರ್ಡಿನಸಭೆಯು ತಾ. 25ರಲ್ಲಿ ಶ್ರೀ ಕೆ. ಕಣ್ಣಪ್ಪ ಸಮರ ಅಧ್ಯಕ್ಷತೆಯಲ್ಲಿ ಜರಗಿ ಎರಡನೆ ಪಂಚವಾರ್ಷಿಕಯೋಜನೆ ಕಾರ್ಯಗಳನ್ನು ಪರಿಶೀಲಿಸುವರೆ ಕಮಿಟಿಯೊಂದು ರಚಿಸಲ್ಪಟ್ಟಿತು.

ಪ್ರಕಟಣೆ

ಸುರತ್ಕಲ್ ಶ್ರೀ ಮಹಲಿಂಗೇಶ್ವರ ದೇವಸ್ಥಾನ ಸಂಘ, ಮುಂಬಯಿ

ಸುರತ್ಕಲ್ ಮೂಲ್ಕಾಡು ಮಾಗಣೆಯ ಅಡಳಿತಕ್ಕೆ ಪಳಕಟ್ಟುರುವ ಶ್ರೀ ಸದಾಶಿವ ದೇವಾಲಯದ ಗರ್ಭ ಗುಡಿಕ್ಕೆ ತಾಗಿದ ಮುಖಮಂಟಪದಲ್ಲಿ ಇಂಜಿನಿಯರುಗಳು ಪ್ಲಾನಿನಲ್ಲಿ ತೋರಿಸಿರುವ ಬೀಜೋರ್ವಾರದ ಕೆಲಸವನ್ನು ನೆರವೇರಿಸುವ ಸಲುವಾಗಿ ಈ ಮೇಲೆ ಹೆಸರು ಕಾಣುವ ಸಂಘದವರು ನಿರ್ಧರಿಸಿಕೊಂಡಿರುವ ಮೇರೆಗೆ ಸದ್ರಿ ದೇವಾಲಯದ ಪೊತ್ತೇಶ್ವರ ಶ್ರೀ ದಾಸ ಮೈಯ್ಯರು ಮತ್ತು ಸಂಘದ ಅಧ್ಯಕ್ಷ ಇನ್ನೂ ಹೋಬಾಧಿಕಾರಿಗಳ ಮೈರುಗಳ ದಿನಾಂಕ 18-6-1955ರಲ್ಲಿ ಮುಂಗಳೂರು ಅತ್ತಾವರ ಇಂಜಿನಿಯರಿಂಗ್ ಕಂಟ್ರಾಕ್ಟರ್ ಕೆ. ವೀರಪಾಲರಿಗೆ ದೇವಸ್ಥಾನದಲ್ಲಿ ಕರಾರು ಮೂಲಕ ವಿವರಿಸಿ ಒಪ್ಪಿಸಿಕೊಟ್ಟಿರುವರೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

ಇತಿ: ಸಂಘದ ಪರವಾಗಿ

ಆರ್. ಕೆ. ಶೆಟ್ಟಿ,
ಅಧ್ಯಕ್ಷ.

ಪ್ರಧಾನ ಮಂತ್ರಿ ಶ್ರೀ ನೆಹರೂರವರು ಜೂನ್ ತಾ. 8 ರಂದು ಮೊಸ್ಕೋದಲ್ಲಿ ಅಖಿಲ ಸೋವಿಯೆಟ್ ವ್ಯವಸಾಯ ಪ್ರದರ್ಶನವನ್ನು ಸಂದರ್ಶಿಸಿದಾಗಿನ ಚಿತ್ರ.

ಅವಶ್ಯಕ ಮಾಹಿತಿಗಳಿಂದ ಕೂಡಿರುವ

ಮಕ್ಕಳ ಮಗ್ಗಿ ಪುಸ್ತಕ

ಬೆಲೆ 0-1-0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಬಲಿದಾನ ದಿನಾಚರಣೆ— ಡಾ| ಶ್ಯಾಮ ಪ್ರಸಾದ ಮುಖರ್ಜಿಯವರ ಬಲಿದಾನ ದಿನವು ತಾ. 23ರಲ್ಲು ಜನಸಂಘ ಕಾರ್ಯಾಲಯದಲ್ಲಿ ಶ್ರೀ ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಕರುಣಾಕರ್, ವಾಸುದೇವ ರಾವ್ ಮತ್ತು ಎಚ್. ಭಾಸ್ಕರ ರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು.

ದ. ಕ. ಜಿಲ್ಲಾ ಬೋರ್ಡಿನ ಸಭೆಯು ಬೆಳ್ತಂಗಡಿ ಡಾ| ಎ ಶಾಬಯಲ್ಲಿ ಈಚೆಗೆ ಡಾ| ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳ್ತಂಗಡಿಯಲ್ಲಿ ಹೈಸ್ಕೂಲನ್ನು ಸ್ಥಾಪಿಸುವ ಕುರಿತು ಪರಿಶೀಲನೆ ಮಾಡಿ ವರದಿಯನ್ನೀಯಲು ಶ್ರೀಗಳಾದ ಎಫ್- ಎಕ್ಸ್. ಡಿ. ಪಿಂಟೊ, ಕೆ. ಕೆ. ಶೆಟ್ಟಿ, ಕೆ. ಗಣೇಶ ರಾವ್, ಬಿ. ಎಸ್. ಭಾಸ್ಕರ ರೈ (ಕನ್ಸ್ಟೇಬಲ್), ಬಿ ಆರ್. ಕರ್ಕೇರ, ಎ. ನಾರಾಯಣ ಹೆಗ್ಡೆ ಮತ್ತು ಡಾ| ಕೆ. ನಾಗಪ್ಪ ಆಳ್ವರಿಂದ ಕಮಿಟಿ ರಚಿಸಲಾಯಿತು.

ಸೀತಾನದಿ-ಬ್ರಹ್ಮಾವರ ಮತ್ತು ಕುಲ್ಕುಂದ-ಸುಬ್ರಹ್ಮಣ್ಯ ರಸ್ತೆಗಳನ್ನು 1955-56ನೆ ಪಸಾದಿಂದ ಹೈವೇಸ್ ಇಲಾಖೆಗೆ ಒಪ್ಪಿಸಬೇಕೆನ್ನುವ ನಿರ್ಣಯವಾಯಿತು. ಆಲಿಪೂರು ಮತ್ತು ಸಂಕಲಕರಿಯ ನೇತುವೆಗಳನ್ನು ದ್ವಿತೀಯ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂಬ—ಕಮ್ಯುನಿಟಿ ಯೆಕೋಜನೆಯಂತೆಮಿಯ್ಯಾರಿನಲ್ಲೊಂದು ನೀರೊಳಗಿನ ಸಂಕ ಕಟ್ಟುವ ವೆಚ್ಚವೂ ರೂಪಾಯಿ 55,000ದಲ್ಲಿ ಸೇಕಡಾ 25ನ್ನು ಕೊಡಲು ಒಪ್ಪಿಗೆ ಸೂಚಿಸುವ—ಮಣಿಲ್ ತಾರಿಗೆ ಮಣ್ಣಕಟ್ಟೆ ಹಾದಿ ಕಟ್ಟುವ ವೆಚ್ಚ ರೂಪಾಯಿ 19000ದಲ್ಲಿ ಸೇಕಡಾ 15ನ್ನು ಕೊಡಲು ಸಮ್ಮತಿಸುವ ಇತ್ಯಾದಿ ಕೆಲಸಗಳಿಗೆ ಸಂಬಂಧಪಟ್ಟ ಠರಾವುಗಳಾದುವು.

(ಇನೇ ಪುಟದಿಂದ)

ಟುಗಾಲಿನಿಂದ ಸತ್ಯಾಗ್ರಹಿಗಳ ದೇಹದ ಮೇಲೆ ಪೋರ್ಚುಗೀಜ ಪೋಲೀಸರು ನಡೆಸಿದ ತಾಂಡವ ನೃತ್ಯದ ಸಾಕ್ಷಿಯಾಗಿ ಬೂಟುಗಳ ಮೊಳೆಯಿಂದ ಗಾಯಗಳಾಗಿವೆ. ಹೀಗೆ ವೈರಾಚಿಕ ಕೃತ್ಯದ ಪರಿಣಾಮವಾಗಿ ಪ್ರಾಣತ್ಯಾಗ ಮಾಡಿದ ಅಮೀರಚಂದರ ಕಳೇಬರದ ಅಂತ್ಯ ಸಂಸ್ಕಾರವನ್ನು ಜಾತಿಮತ ಭೇದವಿಲ್ಲದೆ ಎಲ್ಲ ಪಕ್ಷಪಂಗಡದವರೂ ಗೌರವ ಪೂರ್ವಕ ಮಾಡಿದರು.

ವರಿಷ್ಠರ ಅಭಿಪ್ರಾಯ

ಕ್ರಿಶ್ಚಿಯನರಿಗೆ ಗೋವೆಯಿಂದ ಪೋರ್ಚುಗೀಜರು ಹೊರಟು ಹೋದರೆ ಗಂಡಾಂತರವಿದೆ ಎಂಬ ಡಾ. ಸಾಲಾಝೂರರ ವಾದವನ್ನು ಖಂಡಿಸುವ ಸಭೆಗಳು ಮುಂಬಯಿಯಲ್ಲಿ ಗೋಮಾಂತಕೀಯರಾದ ಕ್ರೈಸ್ತ ಪ್ರಭೃತಿಗಳಿಂದ ನಡೆಸಲ್ಪಟ್ಟು ಕ್ರೈಸ್ತರ ಸಹಿ ಸಂಗ್ರಹಿಸುವ ನಿರ್ಣಯವಾಗಿದೆ. ಪೋರ್ಚುಗೀಜರ. ಗೋವೆಯಲ್ಲಿ ಉಳಿದಿರುವುದೇ ಭಾರತೀಯ ಕ್ರೈಸ್ತರಿಗೆ ತೊಡಕಾಗಿ ಪರಿಣಮಿಸಿದೆ ಎಂದು ಹೇಳಲಾಯಿತು. ಕಾಂಗ್ರೆಸು ಪರಿಷ್ಕಾರವಾದಿಗಳರು ಕಳೆದ ವಾರ ಗೋವೆಯ ಆಂದೋಲನದ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತಾ ರಾಜಕೀಯ ಮಾರ್ಗದಿಂದ ಸಮಸ್ಯೆ ನಿವಾರಿಸಲ್ಪಡುವ ಆಶೆಯನ್ನು ಪ್ರಕಟಿಸಿದರು; ಕಾಂಗ್ರೆಸಿಗರು ಸತ್ಯಾಗ್ರಹದಲ್ಲಿ ನೇರವಾಗಿ ಭಾಗವಹಿಸಬಾರದು; ಗೋಮಾಂತಕೀಯರೇ ಸತ್ಯಾಗ್ರಹದಲ್ಲಿ ಭಾಗವಹಿಸಬೇಕು; ಆದರೆ ಕಾಂಗ್ರೆಸಿಗರು ಜನಜಾಗೃತಿಯ ಇತರ ಕ್ರಮಗಳನ್ನು ಕೈಗೊಳ್ಳಬಲ್ಲರು ಎಂದರು.

ಪುತ್ತೂರು ತಾಲೂಕಿನ ಅಧ್ಯನಡ್ಕ ಪೇಟೆಯ ಜಾತಿ ದುರಸ್ತಿಗಾಗಿ ರೂಪಾಯಿ 900 ಸಂಕ್ಷನ್ ಮಾಡಲಾಯಿತು. ಜಿಲ್ಲಾ ಬೋರ್ಡು ಸದಸ್ಯರಿಗೆ ಸ್ವಂತ ಸರಕಾರಿಗೆ ಕ್ರಮಬದ್ಧ ಸಂಚಾರಕ್ಕಾಗಿ ರೂಪಾಯಿ 50 ಮಾಸಿಕ ಭತ್ತೆ ಕೊಡುವುದು 1920ನೆ ಎಮ್. ಡಿ. ಬಿ. ಕಾನೂನಿನ 20ನೇ ಸೆಕ್ಷನಿನಂತೆ ಕ್ರಮಬಾಹಿರವಾಗುತ್ತದೆಂಬ ಕಡೆಗೆ ಬೋರ್ಡಿನ ಲಕ್ಷ್ಯವನ್ನೆಳೆದ ಸರಕಾರಿ ಯಾದಾಸ್ತನ್ನು ರಿಕಾರ್ಡು ಮಾಡಲಾಯಿತು.

ರೋಟರಿ ಸಭೆ— ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ತಾ. 23ರಲ್ಲು ಶ್ರೀ ಪಿ.ಎಸ್. ಕುಡ್ವರು, ತಾನು ಪ್ರವಾಸಿಸಲ್ಪಟ್ಟ ಜರಗಿದ ಅಂತರರಾಷ್ಟ್ರೀಯ ರೋಟರಿ ಸಭೆಯನ್ನು ಸಂದರ್ಶಿಸಿ ನಡೆದ ಅನುಭವಗಳನ್ನು ವಿವರಿಸಿದರು. ಶ್ರೀ ವಿಶ್ವನಾಥ ಕಾಮತರು ವರದಿ ವಾಚನ ಮಾಡಿದರು. ಸಮಾಜ ಸೇವಾ ಸಮಿತಿಯ ಅಧ್ಯಕ್ಷ ಡಾ| ಕೆ. ಬಾಲಕೃಷ್ಣ ಶೆಟ್ಟರು ಸಮಾಜ ಸೇವೆಯ ಮಹತ್ವದ ಕುರಿತು ಭಾಷಣಮಿತ್ತರು.

ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಸಭೆಯು ತಾ. 19ರಲ್ಲು ಶ್ರೀ. ಕೆ. ಆರ್. ಆಚಾರ್, ಅವರ ಅಧ್ಯಕ್ಷತೆಯಲ್ಲಿ ಜರಗಿತಾಗ, ಬೆಂಗಳೂರಲ್ಲಿ ಜರಗಿರುವ ಅಖಿಲ ಕರ್ನಾಟಕ ಆಯುರ್ವೇದ ಪರಿಷತ್ತಿನ ಅಧ್ಯಕ್ಷತೆಗೆ ಪ್ರಸಿದ್ಧ ಪತ್ರಿಕೋದ್ಯಮಿಗಳೂ ಆಯುರ್ವೇದದ ಕಜ್ಜರೂ ಆದ ಡಾ. ಎಮ್. ಗೋಪಾಲಕೃಷ್ಣ ರಾಯರನ್ನು ಆರಿಸಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿತು. ಭಾರತದ ಪ್ರಧಾನಿ ಶ್ರೀ ನೆಹರೂರವರ ರಕ್ಷಾ ಪ್ರವಾಸವನ್ನು ವರದಿ ಮಾಡಲು ಭಾರತ ಸರಕಾರವು ಕೆಲವು ಭಾರತೀಯ ಪತ್ರಿಕೋದ್ಯಮಿಗಳ ಹೆಸರನ್ನು ಸೂಚಿಸಿದೆ, ಇತ್ಯಾದಿ ಟೋಸ್ ವಾರ್ತಾ ಸಂಸ್ಥೆಯು ಆ. ಹಟ್ಟಿಯಲ್ಲಿ ಕೆಲವೊಂದು ಬದಲಾವಣೆ ಮಾಡಿ ತನಗೆ ಬೇಕಾದ ಪತ್ರಿಕೋದ್ಯಮಿಗಳನ್ನು ಮಾತ್ರ ರಕ್ಷಕ್ಕೆ ಆಮಂತ್ರಿಸಿದನ್ನು ಖಂಡಿಸಲಾಯಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ- ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವ ಬಗ್ಗೆ ನಮ್ಮ ಜಿಲ್ಲೆಯ ಪ್ರತಿ ಗ್ರಾಮದಲ್ಲಿಯೂ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಸೂಚನೆಗಳನ್ನು ಆಯಾ ಗ್ರಾಮಸ್ಥರು ಅಪೇಕ್ಷಿಸುವುದೇನೆಂದು ನಮಗೆ ಕಳುಹಿಸಿಕೊಡಬೇಕಾಗಿಯೂ ಹಾಗೆ ಕಳುಹಿಸಿದಲ್ಲಿ ಈ ಸೂಚನೆಗಳನ್ನು ಯೋಜನೆಯಲ್ಲಿ ಸೇರಿಸಲು ವಿನಂತಿಯೊಡನೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಲಾಗುವುದೆಂದೂ ಕಾರ್ಯದರ್ಶಿಗಳು ಬರೆಯುತ್ತಾರೆ.

ಪ್ರಜಾ ಸೋಶಲಿಸ್ಟ್ ಕೌನ್ಸಿಲಿನ ಸಭೆಯು ತಾ. 26ರಲ್ಲು ಶ್ರೀ ಡಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಗೋವಾ ಸತ್ಯಾಗ್ರಹದಲ್ಲಿ ಪ್ರಾಣವನ್ನರ್ಪಿಸಿದ ಶ್ರೀ ಅಮೀರ ಚಂದರ ಆತ್ಮಕ್ಕೆ ಶಾಂತಿಯನ್ನು ಕೋರುವ ಮತ್ತು ಗೋವಾ ಸರಕಾರದವರು ನಿಶಸ್ತ್ರ ಸತ್ಯಾಗ್ರಹಿಗಳನ್ನು ಅಮಾನುಷ ರೀತಿಯಿಂದ ಚಿತ್ರಹಿಂಸೆ ಮಾಡುವುದನ್ನು ಖಂಡಿಸುವ ಠರಾವುಗಳಾದುವು.

ಗೋವಾ ವಿಮೋಚನೆಗೆ ಸತ್ಯಾಗ್ರಹಿಗಳ ಪ್ರಥಮ ದಳವನ್ನು ಜುಲಾಯಿ 10ರ ಒಳಗೆ ಕಳುಹಿಸಿ ಕೊಡುವುದೆಂದೂ ಶ್ರೀಗಳಾದ ದಾಮೋದರ ರಾವ್ ಮತ್ತು ಬೆಫಿಡಿಕ್ ಮಾರಿಯಾ ನರನ್ನು ದಳದ ನಾಯಕ ಹಾಗೂ ಉಪ ನಾಯಕರನ್ನಾಗಿ ಆರಿಸಲಾಯಿತು. ಸತ್ಯಾಗ್ರಹಿಗಳ ಖರ್ಚಿಗಾಗಿ ರೂಪಾಯಿ 500 ಬೇಕಾಗಿರುವುದರಿಂದ ಸಾರ್ವಜನಿಕರಿಂದ ಧನ ಸಹಾಯವನ್ನು ಕೇಳಿಕೊಳ್ಳಬೇಕೆಂದು ನಿರ್ಣಯವಾಯಿತು. ಧನಸಹಾಯನೀಡುವವರುಬಾಜಾಸ್ಟಿಗಳಾದಡಾ| ಕೆ. ನಾಗಪ್ಪ ಆಳ್ವ, ಪಂಪನ ಕಟ್ಟಾ, ಮಂಗಳೂರು-1. ಇವರಿಗೆ ಕಳುಹಿಸಿ ಕೊಡ ಬೇಕಾಗಿ ಶ್ರೀ. ಡಿ. ಮೋಹನರಾಯರು ವಿನಂತಿಸುತ್ತಾರೆ.

ನೀರೆ ಬೈಲೂರು— ಕಾರ್ಕಳ ತಾಲೂಕು ನೀರೆ ಬೈಲೂರಲ್ಲಿ, ಅಲ್ಲಿಯ ಎಡುಕೇಶನಲ್ ಕಮಿಟಿಯ ಕಚೆಯಿಂದ ಅರಂಭಿಸಲ್ಪಟ್ಟ ದ. ಕ. ಜಿಲ್ಲಾ ಬೋರ್ಡಿಗೆ ಬಿಟ್ಟು ಕೊಟ್ಟ ಹೈಸ್ಕೂಲಿನ ಉದ್ಘಾಟನಾ ಸಮಾರಂಭವನ್ನು ತಾ 22ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮ್ ಅವರು ವಹಿಸಿದ್ದರು. ಕಮಿಟಿಯ ಉಪಾಧ್ಯಕ್ಷೆ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಸಿ., ಅವರು ಸ್ವಾಗತ ಭಾಷಣ ಮಾಡಿದರು. ಡಾ| ಎ. ಎಲ್. ಎನ್. ರಾಯರು ಕಮಿಟಿಯ ವರದಿಯನ್ನೋದುತ್ತಾ, ರೂಪಾಯಿ 24,000 ಸಂಗ್ರಹವಾಗಿದ್ದು ಕಟ್ಟಡ ಹಾಗೂ ಇತರ ಸಾಮಗ್ರಿಗಳಿಗೆ ಬೇಕಾಗುವ ಹಣವನ್ನು ಸಮಾಜ ವಿಕಾಸ ಯೋಜನೆ ಹಾಗೂ ಜನತೆ ಒದಗಿಸಿ ಕೊಡಬೇಕೆಂದು ಆಕ್ಷೇಪಿಸಿದರು.

ಡಾ| ಕೆ. ಕೆ. ಹೆಗ್ಡೆಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಸರಕಾರವು ಹೈಸ್ಕೂಲು ವರೆಗಿನ ಶಿಕ್ಷಣವನ್ನು ಪುಕ್ಕಟೆಯಾಗಿಯೂ ಕಡ್ಡಾಯವಾಗಿಯೂ ಕೊಡಿಸಬೇಕೆಂದೂ ಈ ಜಿಲ್ಲೆಯಲ್ಲಿರುವ 72 ಹೈಸ್ಕೂಲುಗಳಲ್ಲಿ 15 ಹೈಸ್ಕೂಲುಗಳನ್ನು ದ. ಕ. ಜಿಲ್ಲಾ ಬೋರ್ಡು ನಡೆಸಿಕೊಂಡು ಬರುತ್ತದೆಂದೂ ಹೇಳಿದರು. ಸಭಿಕರ ಕಡೆಯಿಂದ ಡಾ| ಟಿ. ಎಮ್. ಎ. ಪೈ, ಶ್ರೀಗಳಾದ ಕೆ. ಪಿ. ಮುಕುಂದ ಪ್ರಭು, ಬಿ. ಶ್ಯಾಮರಾಯ ಶೆಟ್ಟಿ, ಶಾಲಾ ಪೆಟ್ಟಾಸ್ಟರ್ ನಾರಾಯಣ ರಾವ್ ಮೊದಲಾದವರು ಮಾತನಾಡಿದರು. ಅಧ್ಯಕ್ಷೆ ಕಲೆಕ್ಟರರು ತಮ್ಮ ಸಮಾರೋಪ ಭಾಷಣದಲ್ಲಿ ಈ ಹೈಸ್ಕೂಲನ್ನು ಜಿಲ್ಲಾ ಬೋರ್ಡು ನಡೆಸಿಕೊಂಡುಬರಲು ಒಪ್ಪಿದುದು ಸಂತೋಷಕರವೆಂದರು. ಸಮಾಜ ವಿಕಾಸ ಯೋಜನೆ ನಿಧಿಯಿಂದ ಹತ್ತು ಸಾವಿರ ರೂಪಾಯಿಗಳನ್ನು ಬೇಷರತ್ತಿಗೆ ಸಿಗುವಂತೆ ಒತ್ತಿಸಲಾಗುವುದೆಂದರು. ಪಂಚಾಯತಬೋರ್ಡಿನ ಅಧ್ಯಕ್ಷ ಶ್ರೀ ರಘುರಾಮ ಹೆಗ್ಡೆಯವರು ಶುಭಸಂದೇಶಗಳನ್ನೀಯಿದರು. ಕಮಿಟಿ ಕಾರ್ಯದರ್ಶಿ ಶ್ರೀ ಕೇಶವ ಕಿಣಿಯರು ವಂದನೆಗಳನ್ನರ್ಪಿಸಿದರು.

ಗಂಗೊಳ್ಳಿ— ಕುಂದಾಪುರ ತಾಲೂಕಿನ ಗುಜ್ಜಾಡಿ ಕಂಚಿಗೋಡು ರಸ್ತೆಯ ಕೆಲಸದ ಪ್ರಾರಂಭೋತ್ಸವವು ತಾ. 21ರಲ್ಲು ಶ್ರೀ ವೈ. ಸಂಜಯ್ಯ ಶೆಟ್ಟಿ, ಎಮ್. ಎಲ್. ಎ, ಅವರ ನೇತೃತ್ವದಲ್ಲಿ ಜರಗಿತು ಗಂಗೊಳ್ಳಿ ಎಸ್. ವಿ. ಹೈಸ್ಕೂಲಿನ ಸಮಾಜ ಸೇವಾ ಸಂಘದ ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ಭಾಗವಹಿಸಿದ್ದರು.

ಕಾರ್ಕಳ— ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಸಿ. ಅವರು ಮದ್ರಾಸಿಗೆ ಹೋಗಿ ಅಲ್ಲಿಯೇ ನೆಲಸರುವುದರಿಂದ ಅವರ ಇಷ್ಟಮಿತ್ರರು ತಾ. 22ರಲ್ಲು ಅವರಿಗೆ ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಆರ್. ಹರಿಕೃಷ್ಣಯರು ಮಾನ್ಯ ಅತಿಥಿಯ ಗುಣಗಾನ ಮಾಡಿದರು. ವಕೀಲ ಶ್ರೀ ಎನ್. ಎಮ್. ಅತ್ಯಂತಾಯರು ಧನ್ಯವಾದಗಳನ್ನರ್ಪಿಸಿದರು.

Kannada non-detailed Text Book for Higher Forms
ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

S. S. L. C. 1956

ಕನ್ನಡ ಪರೀಕ್ಷಾರ್ಥಕ

ಕನ್ನಡ ಭಾಗ-I ಮತ್ತು ಭಾಗ-II

ಪ್ರಕಟವಾಗಿದೆ.

ಪ್ರಾಮುಖ್ಯ ಪ್ರಶ್ನೆಗಳು—ಉತ್ತರಗಳು—ಸಂದರ್ಭ ವಾಕ್ಯಗಳು—ಉತ್ತರಗಳು—ವ್ಯಕ್ತಿ ಚಿತ್ರಗಳು—ವ್ಯಾಕರಣ ವಿಶೇಷಗಳು—ಛಂದೋಲಂಕಾರಗಳು—ಕವಿತಾ ವಿಮರ್ಶೆ—ಸಮೇತವಾಗಿ.

ಪುಟಗಳು: ೨೬೦. ಬೆಲೆ: ಒಂದೂವರೆ ರೂಪಾಯಿ

ಬರೆದವರು:
ಕೆ. ಕೆ. ರೈ ವಿದ್ವಾನ್. ಯಸ್. ಅನಂತ ಭಟ್ಟ, ವಿದ್ವಾನ್.

ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ಪ್ರತಿಗಳು ದೊರೆಯಬಲ್ಲುವು.
ಪುಸ್ತಕದ ಪೈಶಿಷ್ಟ್ಯವನ್ನು ಗಮನಿಸಿ ಪ್ರತಿಗಳನ್ನು ಆರಿಸಿಕೊಳ್ಳಿರಿ.

ಪ್ರಕಾಶಕರು:
ಜಯ ಮುದ್ರಣ ಪ್ರಕಟಣಾಲಯ, ಮೂಡಬಿದ್ರಿ, ದ. ಕ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ! ಕಿಲ್ಲೆಯವರಿ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ಮರಣದ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ

(೩ನೇ ಪುಟದಿಂದ)

ಹೋಗುತ್ತಿದೆ; ಮೈಸೂರಿನ ಅರಣ್ಯ ಮಂತ್ರಿಗಳ ಹೇಳಿಕೆಯಂತೆ ಮೈಸೂರು ಮತ್ತು ರಾಯಲ ಸೀಮೆಯ ಬಯಲು ಭೂಮಿ ಸಹ ನಿಧಾನವಾಗಿ ಮರು ಪ್ರದೇಶವಾಗುವ ಲಕ್ಷಣ ಗೋಚರಿಸಿದೆ ಉತ್ತರ ಭಾರತದ ಗಂಗಾನದಿಯ ಬಯಲಿನಲ್ಲಿ ಅರಣ್ಯಗಳ ಹೆಸರೇ ಇಲ್ಲದ ಪ್ರಯುಕ್ತ ನೆಲದ ಸವೆತ ಮಿತಿಮೀರಿದೆ, ಅಲ್ಲಿ, ಉರುವಲಿಗೂ ಕಟ್ಟಿಗೆ ದೊರಕುತ್ತಿಲ್ಲ ಆದುದರಿಂದ ಸೆಗಣಿಯ ಬೆರಣಿ ಮಾಡಿ ಅಲ್ಲಿ ಒಲೆ ಉರಿಸಲಾಗುತ್ತದೆ ಭೂಮಿಯನ್ನು ಫಲವತ್ತಾಗಿ ಮಾಡಬೇಕಿದ್ದ ಸೆಗಣಿ ಹೀಗೆ ಅಕಾರ್ಯವಾಗುತ್ತದೆ. ಅರಣ್ಯಗಳನ್ನು ಬೆಳೆಸಿದ್ದಾದರೆ, ಭೂಸವೆತದ ದೆಸೆಯಿಂದ ಸವೆತ್ತಾವ ಮಣ್ಣು ಕೊಟ್ಟಿ ಹೋಗುವುದನ್ನು ತಪ್ಪಿಸಬಹುದಲ್ಲದೆ, ಕಟ್ಟಿಗೆಯನ್ನು ಈ ಅರಣ್ಯದಿಂದ ಪಡೆದು, ಸಗಣಿಯನ್ನು ಹೊಲಗಳಿಗೆ ಹಾಕಿ, ಹಾಗೆ ಜಮೀನು ಫಲವತ್ತತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಹೀಗೆ ಹೇಳಿದ ಮಾತ್ರಕ್ಕೆ ನಾವು ಕಡಿದು ಉರುಳಿಸಲಿಕ್ಕಾಯಿಯೇ ಈಗ ಮರಗಳನ್ನು ನೆಡುತ್ತಿರುವುದೆಂದು ಅರ್ಥವಲ್ಲ— ಮಿದು ಕಲ್ಲಿದ್ದಲಿನ ಅಗಾಧ ಸಂಗ್ರಹ ನಮ್ಮ ದೇಶದಲ್ಲಿ ರುವುದರಿಂದ ಉರುಸಲಿಗೆ ನಾವು ಅದನ್ನು ಬಳಸಿಕೊಂಡರೆ, ಹಾಗೆ ಬಳಸುವುದಕ್ಕೆ ಯೋಗ್ಯ ವ್ಯವಸ್ಥೆಗಳಾದರೆ, ಕಟ್ಟಿಗೆಗಾಗಿ ಮರ ಕಡಿಯುವುದು ಕಡಿಮೆಯಾದೀತು ಅದರಂತೆ ಪಶ್ಚಿಮ ದುರ್ಗಮವಾಗಿರುವ ಅರಣ್ಯ ಪ್ರದೇಶಗಳಿಗೆ ಯೋಗ್ಯ ಸಾರಿಗೆಯ ಸೌಕರ್ಯ ಒದಗಿಸಿದರೆ, ಕಡಿಯಲು ಉಪಯುಕ್ತವಾದ ಬಹಳ ಹಳೆಯ ಮೋಪಿನ ಮರಗಳ ಪ್ರಯೋಜನವನ್ನು ಪಡೆಯುವುದು ಕಷ್ಟವಾಗಲಾರದು. ಈಗ ನೆಟ್ಟ ಸಸಿಗಳು ಮರವಾಗಿ ಬೆಳೆಯುವವರೆಗೆ ಹೀಗೆ ದಿನಗಳೆಯಲು ಬಂದೀತು.

ಅದಷ್ಟು ಹೆಚ್ಚು ತರಣ್ಯಗಳನ್ನು ಬೆಳೆಸುವ ನಮ್ಮ ನೀತಿಯನ್ನು ವ್ಯಾವಹಾರಿಕ ಕ್ಷೇತ್ರದಲ್ಲಿ ಹೇಗೆ ಕಾರ್ಯಗತಗೊಳಿಸಬಹುದೆಂಬುದನ್ನು ಸ್ಪಷ್ಟಮಟ್ಟಿಗೆ ಪರಿಶೀಲಿಸಿದ ಬಳಿಕ, ನಾವು ಇನ್ನೊಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಲು ಬಯಸುತ್ತೇವೆ. ಅದೆಂದರೆ ವನ್ಯ ಮೃಗಸಕ್ಷಿಗಳ ಸಂರಕ್ಷಣೆ. ನಮ್ಮ ದೇಶದಲ್ಲಿ ಇತ್ತೀಗೆ ಸಾಕಿಕೊಂಡುವವರು ಬಹಳ ವಿರಳ ಎಂಬುದನ್ನು ನೆನಪಿಡೋಣ ಏನೇ ಕೃಷಿ ಮಂತ್ರಿ ದಾ ದೇಶಮುಖರು ಈ ಸಲದ ಸಸಿ ಸಪ್ತಾಹದ ಕೊನೆಯ ದಿನವನ್ನು ಈ ವಿಷಯದ ಕಡೆಗೆ ಜನರನ್ನು ಆಕರ್ಷಿಸಲು ದುಡಿಸಲಿದೆಯೆಂದಿದ್ದಾರೆ ವನ್ಯ ಮೃಗಗಳು ಪಕ್ಷಿಗಳು ನಮ್ಮ ಭಾವನಾತ್ಮಕ ಪ್ರಸಂಚದ ತೃಪ್ತಿಗೆ ಕಾರಣವಾಗುತ್ತವೆ; ಮನಸ್ಸಿಗೆ ಉಲ್ಲಾಸವನ್ನು ಅವು ಸೀಡುತ್ತವೆ. ಕುಕಿಲುವ ಕೋಗಿಲೆ, ಸೋಗೆ ಬಿಡಿಸಿ ನರ್ತಿಸುವ ನವಿಲು, ಘೀಳಿಡುವ ಆನೆ, ಗರ್ಜಿಸುವ ಸುಲಿ, ನೆಗೆಯುವ ಜಿಂಕೆ ಇತ್ಯಾದಿಗಳಿಂದ ಸಂತೋಷಪಡದವರಾರು? ಆದರೆ, ಅವುಗಳನ್ನು ಗೊತ್ತುಗುರಿಯಿಲ್ಲದ ಬೇಟೆಯಿಂದ ಸಂರಕ್ಷಿಸಿದರೂ, ಕಾಡುಗಳನ್ನು ಕಡಿದು ವಾಸಿಸಲಿಕ್ಕೆ ಅವುಗಳಿಗೆ ಎದೆ ಇಲ್ಲದಂತೆ ಮಾಡುವ ದುಷ್ಟ ಹವ್ಯಾಸ ನಮ್ಮಲ್ಲಿ ಕಂಡು ಬರುತ್ತದೆ ಸುಶಿಕ್ಷಿತರು ಹೀಗೆ ಸಲ್ಲದ ತೊಂದರೆ ಕೊಡುವವರಾದರೆ, ಅಶಿಕ್ಷಿತರಾದ ಕಾಡು ಜನಾಂಗಗಳವರು ತಮ್ಮ ಕೃಷಿಗಾಗಿ ಕಾಡುಗಳಿಗೆ ಬೆಂಕಿ ಕೊಟ್ಟು, ಸುಟ್ಟು ಹಾವಳಿ ನಡೆಸುತ್ತಾರೆ ಅವರ ಮನವೊಲಿಸಿ, ಯಾವುದಾದರೊಂದೆಡೆ ಶಾಶ್ವತವಾಗಿ ಬೀಡು ಬಿಡುವಂತೆ ಸಾಮಾಜಿಕ ಕಾರ್ಯಕರ್ತರು ಪ್ರಯತ್ನ ನಡೆಸಿದರಾದೀತು. ಹಾಗೆಯೇ ಅರಣ್ಯಗಳಿಗೆ ತಾನಾಗಿಯೇ ಹಿಡಿಯದಂತೆ ಬೆಂಕಿಯನ್ನು ಸ್ವಲ್ಪತದಲ್ಲಿ ಆರಿಸುವ ವ್ಯವಸ್ಥೆಯೂ ಅತ್ಯವಶ್ಯ ಸಸ್ಪಮ ಸಸಿ ಸಪ್ತಾಹದ ರಾಷ್ಟ್ರವ್ಯಾಪಿ ಕಾರ್ಯಕ್ರಮದ ಸಂದರ್ಭದಲ್ಲಿ ಇವೆಲ್ಲದರ ಕಡೆಗೆ ನಾಗರಿಕರ ಗಮನ ಹರಿಯಲಿ.

ಸ್ವೀಕಾರ ವಿಮರ್ಶೆ

ಸೆರೆಯ ಮನೆಯಲ್ಲಿ ಮತ್ತು ಪ್ರೇಮ ಪ್ರಕರಣ —

ಬರೆದವರು: ಕೆ. ಶಂಕರ ಪ್ರಕಾಶಕರು: ಕಾವ್ಯಾಲಯ, ಮೈಸೂರು ಬೆಲೆ: ರೂ. ೧-೮-೦

ಪ್ರತಿಭಾವಂತ ಹೊಸ ಲೇಖಕರೊಬ್ಬರನ್ನು ಅವರ ಎರಡು ಕೃತಿಗಳನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ಕಾವ್ಯಾಲಯದವರು ಬೆಳಕಿಗೆ ತಂದಿದ್ದಾರೆ. ಶ್ರೀ ಶಂಕರರು ನಿಜಕ್ಕೂ ಒಳ್ಳೆಯ ಲೇಖಕರಾಗ ಬಲ್ಲ ಚಿನ್ಹಾಪುಳ್ಳವರೆಂಬುದು ಅವರ "ಪ್ರೇಮ ಪ್ರಕರಣ" ಕಾದಂಬರಿಯನ್ನೋದಿದಾಗ ಮನವರಿಕೆಯಾಗುತ್ತದೆ ನಾಟಕದ ಹೆಣ್ಣನ್ನು ಪ್ರೀತಿಸಿ ಮದುವೆಯಾದವನೊಬ್ಬ ಆ ಹೆಣ್ಣಿಗೆ ಸಹಜವಾದ ಚಂಚಲ ಚಿತ್ತದ ವರ್ತನೆಯ ಪರಿಣಾಮವಾಗಿ ಹೇಗೆ ಬಳಲಿಂತಕ್ಕೆ ಈ ಕಾದಂಬರಿ ನಿರೂಪಿಸುತ್ತದೆ. ಶೈಲಿ, ಕತೆಯ ಓಟ ಮತ್ತು ಸನ್ನಿವೇಶ ಚಿತ್ರಣಗಳು ನಿಜಕ್ಕೂ ಸೊಗಸಾಗಿವೆ. ಪಾತ್ರ ಚಿತ್ರಣದಲ್ಲಿ ಸುಮಿತ್ರೆಯ ಹುಚ್ಚ ಸಡವಳಿಕೆಯು ಸಂರಯಾಸ್ಪದವೆಂದು ತೋರುವ ಮಟ್ಟಿಗೆ ಕೊರತೆಕಾಣಿಸುತ್ತಿದ್ದರೂ ಅವಾಸ್ತವವೆಂದೇನು ನಾವು ಖಂಡಿತವಾಗಿ ಅವಳ ವರ್ತನೆಯನ್ನು ಸಾರುವಂತಿಲ್ಲ ಎಂಬ ಸಮಾಧಾನ ಇಲ್ಲದಿಲ್ಲ ಇದನ್ನು ಬರೆಯುವುದಕ್ಕೆ ಮೊದಲು— ಬಯಲ ಹಿಂದೆ-ಬರೆದಿದ್ದ "ಸೆರೆಯ ಮನೆಯಲ್ಲಿ" ಎಂಬುದು ಮೈಸೂರಿನ ರಾಜಕೀಯ ಕೈದಿಗಳ ಸೆರೆಮನೆ ವಾಸದ ಒಂದು ಅನುಭವವನ್ನು ವಿವರಿಸುತ್ತದೆ. ಇಲ್ಲಿಯ ಪ್ರಾರಂಭ, ಮುಕ್ತಾಯಗಳೆರಡೂ ಚೆನ್ನಾಗಿನೆ, ಆದರೆ, ಬೇಕೆಂದೇ ದೀರ್ಘವಾಗಿ ಕತೆಬೆಳೆಸಿದಂತಿದೆ—ಹಾಗಾಗಿ ಸ್ವಲ್ಪ ಸಪ್ಪೆ ಎನಿಸುತ್ತದೆ. ಅದಾಗ್ಯೂ ಶಂಕರರ ಕೈ ಇದನ್ನು ಬರೆದಂದಿನಿಂದ ತುಂಬ ಪಳಗಿದೆ ಎಂಬುದರ ಕುರುತು "ಪ್ರೇಮಪ್ರಕರಣ' ಸಾಕ್ಷಿ ಹೇಳುವುದರಿಂದ ನಾವು ಅವರನ್ನು ಪ್ರೋತ್ಸಾಹಿಸುವುದು ಅಪೇಕ್ಷಣೀಯ

ರಾಯರ ಚಾಳು—

ಬರೆದವರು: ಜನಾರ್ಧನ ಗುರ್ಕಾರ್ ಪ್ರಕಾಶಕರು ಪ್ರತಿಭಾ ಗ್ರಂಥಮಾಲ, ಧಾರವಾಡ ಬೆಲೆ: ರೂ ೧-೪-೦

ಇದೊಂದು ಹೊಸಬಗೆಯ ಕಾದಂಬರಿಯೋ, ಅಥವಾ ಇನ್ನೊಂಥದೋ—ಅದರ ಕುತೂಹಲಪರವಶರಾಗಿ ನಮ್ಮನ್ನು ಮಾಡುತ್ತದೆ. ರಾಯರ ಚಾಳಿನಲ್ಲಿದ್ದ ವಿದ್ಯಾರ್ಥಿಗಳ ಜೀವನದ ಹಿನ್ನೆಲೆಯಲ್ಲಿ ಆಲ್ಪಯ ಘಟನೆಗಳನ್ನು ರಮ್ಯವಾಗಿ ಪೋಣಿಸಿಕೊಂಡು ಕದಾನಕವನ್ನು ರಚಿಸಿಕೊಂಡಿದ್ದಾರೆ. ಇಲ್ಲಿ ನಮಗೆ ಎಲ್ಲ ಬಗೆಯ ಜನರ ಪರಿಚಯವೂ ಆಗುತ್ತದೆ. ಗಾಂಧೀ ಭಕ್ತರಿಂದಹಿಡಿದು ತಂಟೆಖೋರರ ವರೆಗಿನ ಜನರ ನೋಟವಿಲ್ಲಿದೆ. ಕೆಲವು ಗುಪ್ತಪ್ರೇಮ ವ್ಯವಹಾರಗಳ ಮೇಲೂ ಬೆಳಕು ಬಿದ್ದಿದೆ. ಹಿಮವಾಗಿ ಬೆಳಕಿನ ಹಿಂದೆ ಕತ್ತಲೆಯಲ್ಲಿ ನಡೆಯುವ ವ್ಯಾಪಾರಗಳ ಕುರಿತು ಜುಗುಪ್ಸೆ ಕೆಲವರಿಗಾದರೆ, ಇನ್ನು ಕೆಲವರಲ್ಲಿ ಕುತೂಹಲ ಮೂಡಬಹುದು ಅಂತೂ ಈ ಕೃತಿ ನಮ್ಮನ್ನು ಓದಿಸಿ ಬಿಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಲೇಖಕರ ಶೈಲಿ ಮತ್ತು ನಿರೂಪಣೆಯ ಕುರಿತು ಮಾತ್ರ ನಮಗೆ ಅಷ್ಟು ಸಮಾಧಾನವಾಗುವುದಿಲ್ಲ—ಕೆಲವೆಡೆ ನಿರೂಪಣೆ ಕುಂಟುತ್ತದೆ, ಮತ್ತು ಕೆಲವೆಡೆ ಅದು ನೆಗೆದುಹಾರುತ್ತದೆ. ಲೇಖಕರು ಉತ್ತಮ ಪ್ರಯತ್ನವನ್ನು ನಿರೂಪಣೆಗಾಗಿ ಉಪಯೋಗಿಸಿದ್ದಾರೆ—ಅದರೆ ಇಲ್ಲಿಯ ಕಥಾನಕದಲ್ಲಿ ಹೆಚ್ಚಿನವನ್ನು ಕತೆಕೇಳಿ ಬಣ್ಣಿಸಿದಂತಿದೆ. ಇದು ಅಷ್ಟು ಸಮಂಜಸವಾದುದಲ್ಲ.

"ಯಮ-ಮಾನವ"

ಕರಡಿಗೆ ಇಟ್ಟ ಹೆಸರು

ಕಲ್ಕತ್ತೆಯಲ್ಲಿ ಇದೇ ದಿನಾಂಕ ೨೧ ರಂದು ಹಿಮಾಲಯದ ಆರೋಹಣ ಕಾರ್ಯವನ್ನು ಕೈಗೊಂಡು ಪ್ರಸಿದ್ಧರಾಗಿರುವ ಡಾ. ಸ್ಟಾಫೋರ್ಡ್ ಮ್ಯಾಥ್ಯೂಸರು ಉನ್ನತ ಪರ್ವತ ಪ್ರದೇಶದ ಅನುಭವಗಳನ್ನು ವಿವರಿಸುತ್ತಾ "ಹಿಮ ಮಾನವ" ಎಂದು ಕರೆಯಲ್ಪಡುವ ಪ್ರಾಣಿಯ ಅಸ್ತಿತ್ವವನ್ನು ನಿರಾಕರಿಸಿದರು. ಹೇಯ ರೂಪಿಯಾದ, ಭಯಂಕರ ವರ್ತನೆಯ, ಸ್ತ್ರೀಯರು "ಯೇತಿ" ಎಂದು ಕರೆಯುವ ಮನುಷ್ಯ ಪ್ರಾಣಿ ಇಲ್ಲವೇ ಇಲ್ಲ ಎಂದವರು ಸಾರಿದರು. "ಯೇತಿ"ಯನ್ನು ಅನ್ವೇಷಿಸುತ್ತಾ ಹೋಗುವುದು ಹುಚ್ಚು ಕೆಲಸವಾದೀತು ಎಂಬುದಾಗಿ ಅವರು ಅಭಿಪ್ರಾಯಪಟ್ಟರು.

ಹಿಮಾಲಯದ ಆರೋಹಣವನ್ನು ಮಾಡಿದ ಕೆಲಪು ತಂಡಗಳವರು ಈಚೆಗೆ ಒಂದು ದಶಕದಿಂದ ತಾವು "ಹಿಮಮಾನವ"ನ ಹೆಜ್ಜೆಗಳನ್ನು ನೋಡಿರುವುದಾಗಿ ಪದೇ ಪದೇ ಹೇಳಿದ್ದರು. ಸುಮಾರು ಹತ್ತು ಸಾವಿರದಿಂದ ಇಪ್ಪತ್ತು ಸಾವಿರ ಅಡಿ ಎತ್ತರದಲ್ಲಿ ಸುಮಾರು ಇಪ್ಪತ್ತು ಅಂಗುಲದಷ್ಟು ದೊಡ್ಡದಾದ ಐದು ಬೆರಳುಗಳುಳ್ಳ ಹೆಜ್ಜೆಗಳ ಗುರುತು ತಮಗೆ ಗೋಚರಿಸಿದೆ ಎನ್ನುತ್ತಾ ಅದರ ಫೋಟೋವನ್ನು ಇವರು "ಹಿಮಮಾನವ"ನ ಕಲ್ಪನೆಯ ಆಧಾರವಾಗಿ ಮುಂದಿಡುತ್ತಿದ್ದರು.

ಡಾ. ಮ್ಯಾಥ್ಯೂಸರ ಅಭಿಪ್ರಾಯದಂತೆ ಈ ಹೆಜ್ಜೆ ಗುರುತುಗಳ ಮೇಲಿಂದ ಸಾಮಾನ್ಯ ಮನುಷ್ಯನಿಗಿಂತ ಭಿನ್ನ ಸ್ವರೂಪವನ್ನು ಹೊಂದಿದ "ಹೇಯರೂಪಿ ಹಿಮಮಾನವ" ಇದ್ದಾನೆಂದು ಎಷ್ಟು ಮಾತ್ರಕ್ಕೂ ಭಾವಿಸಲಾಗದು. ಈ ಹೆಜ್ಜೆಗಳು ಒಂದು ಜಾತಿಯ ಕರಡಿಯದಾಗಿವೆ-ಎಂದವರು ವಿವರಿಸಿದರು ಉನ್ನತವಾದ ಪರ್ವತಪ್ರದೇಶದಲ್ಲಿ ವಾಸಿಸುವ ಜನರು ಈ ಕರಡಿಯನ್ನು ನೋಡಿದ್ದಾರೆ, ಅದರ ಹೆಜ್ಜೆಯ ಗುರುತುಗಳು ಹಿಮದ ನಿಧಾನವಾದ ಕರಗುವಿಕೆಯಿಂದ ಅತಿದೊಡ್ಡದಾಗಿ ಹರಡಿ ಹೋಗುತ್ತವೆ ಎಂದರು.

ಡಾ. ಮ್ಯಾಥ್ಯೂಸರ ಈ ಅಭಿಪ್ರಾಯವು ಹಿಮಾಲಯವಾಸಿಗಳಾದ ಸ್ವಾಮಿ ಪ್ರಣವಾನಂದರಿಂದ ಯೋಗಿಗಳ ಹೇಳಿಕೆಯಿಂದ ಪುಷ್ಟೀಕೃತವಾಗುತ್ತದೆ. ಮಾನಸ ಸರೋವರದ ಸುತ್ತಿರ ಬಯಲ ಸಮಯದ ವರೆಗೆ ವಾಸಿಸಿದ್ದ ಇವರು ಟಿಬೇಟಿನ ಜನರ ಮೂಲಕ ಸಂಗ್ರಹಿಸಿದ ವಿವರಗಳ ಪ್ರಕಾರ, "ಹಿಮಮಾನವ" ಎಂದು ನಮ್ಮಿಂದ ತಪ್ಪಾಗಿ ಭಾವಿಸಲ್ಪಟ್ಟಿರುವ ಕರಡಿಯು ಕುರಿಗಳನ್ನು ಹಿಡಿಯಲು ಆಗಾಗ್ಗೆ ಆಕ್ರಮಿಸುತ್ತಿರುತ್ತದೆ. ಅದು ಹಿಂಗಾಲುಗಳ ಮೇಲೆ ನಿಂತಾಗ ಮನುಷ್ಯ ಪ್ರಮಾಣದನ್ನು ಎತ್ತರ ತೋರುತ್ತದೆ. ಮೈಯಲ್ಲಿ ಕಂದು ಹಾಗು ಕೆಂಚು ಕೂದಲುಗಳು ಅದಕ್ಕಿವೆ; ಸಾಮಾನ್ಯವಾಗಿ ನಾಲ್ಕು ಕಾಲಿನಲ್ಲಿ, ಒಮ್ಮೊಮ್ಮೆ ಹಿಂಗಾಲುಗಳಲ್ಲಿ ಅದು ನಡೆಯುತ್ತದೆ

ಎತ್ತರವಾದ ಹಿಮಾಚ್ಛಾದಿತ ಪ್ರದೇಶದಲ್ಲಿ ಸಹ ಹಿಮದಡಿಯಲ್ಲಿ ಹುಲ್ಲು ಹಾವಸೆಗಳು, ಕುರಿಚಲುಗಿಡಗಳು ಇತ್ಯಾದ್ಯಿಗಳಿರುತ್ತವೆ. ಇವುಗಳನ್ನು ಕಾದು ಕುದುರೆಗಳು, ಯಾಕ್ ಎಂಬ ಶೀತ ಪ್ರದೇಶದ ಪ್ರಾಣಿಗಳು ಗೊರಸಿನಿಂದ ಕೆದಕಿ ತಿನ್ನುತ್ತವೆ ಈ ಕರಡಿ ಸಹ ಇದನ್ನು ಆಹಾರವಾಗಿ ಉಪಯೋಗಿಸುವುದೆಂದು ತಿಳಿದುಬರುತ್ತದೆ ಕರಡಿಯ ಹಿಂದಿನ ಪಾದಗಳು ಮನುಷ್ಯನ ಪಾದಗಳನ್ನೆ ಹೋಲುವುದರಿಂದ, ಮತ್ತು ಹಿಮದ ಕರಗುವಿಕೆಯ ದೆಸೆಯಿಂದಾಗಿ ಅದರ ಹೆಜ್ಜೆಯ ಗುರುತುಗಳುದೊಡ್ಡದಾಗಿ ಪರಡುವುದರಿಂದ, "ಹಿಮಮಾನವ"ನ ಕಲ್ಪನೆ ಕೆಲವರಲ್ಲಿ ಉಂಟಾಯಿತು ಇದಕ್ಕೆ ಯೋಗ್ಯ ತಳಹದಿ ಇಲ್ಲವೆಂಬುದು ಮೇಲಿನ ವಿವರಣೆಯಿಂದ ಗೊತ್ತಾಗುತ್ತದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O S No 87/1955

U. ಕೃಷ್ಣಾಚಾರ್ಯ—ವಾದಿ

ಮತ್ತು

ನಾರಾಯಣ ಶೆಟ್ಟಿ—ಪ್ರತಿವಾದಿ

ಯವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ. ೦.7.1955 ಕ್ಕೆ ಯಿಟ್ಟಿರುವುದರಿಂದ ಆ ದಿನಸ ಸದ್ರಿ ಪ್ರತಿವಾದಿಯು ತನ್ನ ಅಕ್ಷೇಪಣೆ ಹೇಳುವದಿತ್ರೆ ಆ ದಿನಸ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು——

P Padmanabha Rao
Vakil for Plamtiff

Dated 22—6—55 Udipi.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ 8/-

Mrs. P. DEVEE, F. Ds (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಪೆಶಿಸ್ಟರು ಶಿಹಾಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ: ೧ ಬಾಟ್ಲಿಗೆ —ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಶಾಲಗ್ರಾಮ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

LEARN HINDI

Read, write and speak Hindi without tutor within 3 months by studying "Self Hindi Teacher" Revised edition. Price Rs. 4/-. Postage As 12

DESIGN BOOK

Contains modern designs of every kind for embroidery work Price Rs 3/8 postage Re 1

TAILORING CUTTING

New publication with illustrations Very useful for ladies to learn modern cutting Price Rs 4. Postage As 12.

DEEN BROTHERS,
ALIGARH

(೨ನೇ ಪುಟದಿಂದ)

ಷ್ಟಗಳನ್ನು ಅನುಭವಿಸಿತು ಆಧುನಿಕ ಇಟಲಿಯ ಇತಿಹಾಸವು ಮೆಜಿನಿ, ಗಾರಿಬಾಲ್ಡಿಯಂದ ರಾಜಕಾರಣಿಗಳ ದಿನದಿಂದ ತೊಡಗುತ್ತದೆ. ಆಂತಃಕಲಹದಿಂದಲೂ ಸರಾಜಳಿತದಿಂದಲೂ ದಿಕ್ಕುಗೆಟ್ಟು ತುಂಡಾಗಿದ್ದ ಸರ ಮತ್ತು ನಾಮ್ರಾಜ್ಯಶಾಹಿಗಳ ಕೈಯಲ್ಲಿ ಸರಳಾಡುತ್ತಿದ್ದ ಇಟಲಿಯನರನ್ನು ಒಗ್ಗಟ್ಟಿನ ಸೂತ್ರದಲ್ಲಿ ಸೋಣಿಸಲು ಮೆಜಿನಿಯು ೧೯ನೇ ಶತಮಾನದ ಆದಿಯಲ್ಲಿ ಬಹಳ ಪ್ರಯತ್ನಮಾಡಿದನು. ಈ ಸಮಯದಲ್ಲಿ ಎರಡನೆಯ ವಿಕ್ಟರ್ ಇಮಾನ್ಯುಯೆಲ್ ಎಂಬ ಅರಸನು ಪಟ್ಟಕ್ಕೆ ಬಂದು ತನ್ನ ಮುಖ್ಯ ಮಂತ್ರಿ ಕೌಂಟ್ ಕಾವರನ ಸಹಾಯದಿಂದ ಇಟಲಿಯ ಅಭ್ಯುದಯಕ್ಕಾಗಿ ಜೆನ್ನಾಗಿ ದುಡಿದನು. ಇಮಾನ್ಯುಯೆಲ್ ಅರಸನ ಸ್ಮಾರಕವು ರೋಮಿನಲ್ಲಿದ್ದು ಜನರು ಐಕ್ಯ ಮತ್ತು ಸ್ವಾತಂತ್ರ್ಯದ ಪ್ರತೀಕವೆಂದಿದನ್ನು ಭಾವಿಸುತ್ತಾರೆ: ಗಾರಿಬಾಲ್ಡಿ ಈ ಅರಸನೊಡನೆ ಕೂಡಿಕೊಂಡುದರಿಂದ ಇಟಲಿಯ ಐಕ್ಯ ಸಾಧನೆಯಾಯಿತು. ಪ್ರಥಮ ಮಹಾಯುದ್ಧದ ಬಳಿಕ ಆಸ್ಟ್ರಿಯದ ವರದಲ್ಲಿದ್ದ ಇಟಲಿಯ ಕೆಲವು ಚಿಕ್ಕ ಪ್ರದೇಶಗಳ ಮೇಲೆಯೂ ಈ ಕೇಂದ್ರ ಸರಕಾರದ ಅಧಿಕಾರ ನಡೆಯುವಂತಾಯಿತು.

ಇಟಲಿಯ ಪೆಸರನ್ನು ಹಾಳುಮಾಡಿದಾತನೇ ಮುಸಲೋನಿ – ತನ್ನ ಸರ್ವಾಧಿಕಾರ ಪದ್ಧತಿಯ ಹುಚ್ಚಿನಿಂದ ಆತನು ದ್ವಿತೀಯ ಮಹಾಯುದ್ಧಕಾಲದಲ್ಲಿ ಇಟಲಿಯನ್ನು ಗಂಭೀರ ಆಪತ್ತಿಗೆ ನೂಕಿದನು. ತನಗೆ ಬೇಡವಾಗಿದ್ದರೂ ಇಟಲಿಯಾನರು ಯುದ್ಧರಂಗದಲ್ಲಿ ಕಾಲಿಡಬೇಕಾಯಿತು. ಯುದ್ಧದ ಬಳಿಕ ಬಗೆಬಗೆಯಿಂದ ಪೀಡಿತರಾಗಬೇಕಾಯಿತು. ೧೯೪೫ರಲ್ಲಿ ಮಹಾಯುದ್ಧ ನಿಂತಿತು; ಆದರೆ ಇಟಲಿಯ ರಾಜಕೀಯ ಹಾಗು ಸಾಮಾಜಿಕ ವಾತಾವರಣ ಇನ್ನೂ ಸ್ತಿಮಿತಕ್ಕೆ ಬಂದಿಲ್ಲ. ಅಲ್ಲಿ ಮೊನ್ನೆ ೨೦ನೇ ದಿನಾಂಕದಂದು ೧೬ತಿಂಗಳು ವ್ಯಾಯದ ಮಂತ್ರಿಮಂಡಳದ ಸದಸ್ಯರೆಲ್ಲ ಪ್ರಧಾನ ಮಂತ್ರಿ ಸಿನಾರ್ ಮೇರಿಯೋ ಸೆಲ್ಬಾರಿಗೆ ತಮ್ಮ ರಾಜಿನಾಮೆಯೊಪ್ಪಿಸಿದರು; ಕ್ರಿಶ್ಚಿಯನ್ ದೆಮೊಕ್ರಾಟ ಪಕ್ಷದ ಈ ಪ್ರಧಾನಿ ಇನ್ನೊಂದು ಸಮ್ಮಿಶ್ರ ಮಂತ್ರಿಮಂಡಳದ ಪ್ರಯತ್ನ ನಡೆಸಿ, ಸೋತರು

ಯಾರಿಗೂ ಬಗುಮತವಿಲ್ಲದ ರಾಜಕೀಯ ಪಕ್ಷಗಳ ಕೈಗೆ ಆಡಳಿತದ ಸೂತ್ರ ಒಪ್ಪಿಸಲ್ಪಟ್ಟಿದೆ; ಸುಮಾರು ೧೨೦ರ ಸಭೆಯ ಸದಸ್ಯರು ಅನಿಶ್ಚಿತಿಯಲ್ಲಿ ಬೈದಾಟ, ಹೊಡೆದಾಟ ಮಾಡುತ್ತಿದ್ದಾರೆ — ಎಂಬುದನ್ನು ಒಪ್ಪಿದರೂ ಇಟಲಿ ಕಳೆದ ಹತ್ತು ವರ್ಷಗಳಲ್ಲಿ ಪುನರುಜ್ಜೀವನದ ಎಲ್ಲ ಪ್ರಯತ್ನಗಳನ್ನೂ ಮಾಡಿದೆ ಎಂಬುದು ಶ್ಲಾಘನೀಯ. ಯುದ್ಧಕಾಲದಲ್ಲಿ ರಾಷ್ಟ್ರದ ಸಂಪತ್ತಿನ ಮೂರರಲ್ಲಿ ಒಂದಂಶ ಬಾಂಬುದಾಳಿಗೆ ಆಹುತಿಯಾಗಿದ್ದಿತು; ನಲ್ವತ್ತು ಲಕ್ಷ ಮನೆಗಳು ನೆಲಸಮವಾಗಿದ್ದವಲ್ಲದೆ ವ್ಯಾಪಾರಿಗಳ ಹಡಗುಗಳಲ್ಲಿ ಹತ್ತರಲ್ಲಿ ಒಂಭತ್ತು ಸಮುದ್ರದ ತಳದಲ್ಲಿ ಕೂತಿದ್ದವು. ಇಂಥದೊಂದು ದೇಶ ಮಿತ್ರರಾಷ್ಟ್ರಗಳ ಸಹಾಯದಿಂದಲೂ ಸ್ವಂತ ಪರಿಶ್ರಮದಿಂದಲೂ ಯುದ್ಧಕ್ಕೆ ಮುಂಚಿದ್ದುದಕ್ಕಿಂತಲೂ ಹೆಚ್ಚು ಮನೆಗಳನ್ನು ಕಟ್ಟಿಕೊಂಡು, ೧೯೪೯ರಲ್ಲಿ ಉಪಯೋಗಿಸಿದ್ದರ ಇಮ್ಮಡಿ ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಗಾಗಿ ಬಳಸಿಕೊಂಡು ಮುನ್ನಡೆಯುತ್ತಿರುವುದು ನಿಜಕ್ಕೂ ಆಶ್ಚರ್ಯ !

ಕೈಗಾರಿಕೆಗಳ ಪುನಾರಾಜನೆಯಲ್ಲಿ ಇಟಲಿಯು ಐರೋಪ್ಯ ರಾಷ್ಟ್ರಗಳಲ್ಲಿ ಯಾವುದಕ್ಕಿಂತಲೂ ಹಿಂದೆಬಿದ್ದಿಲ್ಲ. ಇಟಲಿಯ ಉತ್ತರಭಾಗದಲ್ಲಿ ಆಲ್ಪ್ಸ್ ಪರ್ವತ ಪ್ರದೇಶಗಳಲ್ಲಿ ಹುಟ್ಟಿ ಎಡ್ರಿಯಾಟಿಕ್ ಸಮುದ್ರವನ್ನು ಸೇರುವ ಪೋ ನದಿಯ ವಿಶಾಲವಾದ ಲೊಂಬಾರ್ಡಿ ಎಂಬ ಹೆಸರಿನ ಬಯಲಿದೆ. ಇದು ತುಂಬ ಸಮೃದ್ಧವಾದ ಪ್ರದೇಶ. ಇಟಲಿಯ ಎರಡೂವರೆ ಕೋಟಿ ಜನರಲ್ಲಿ ಹೆಚ್ಚಿನಂಶ ಇಲ್ಲಿ ವಾಸಿಸುತ್ತಾರೆ. ವಿದ್ಯುಚ್ಛಕ್ತಿಯನ್ನು ಧಾರಾಳವಾಗಿ ಬಳಸಿಕೊಂಡು ಅವರು ಕೃಷಿವಿಸ್ತರಣೆಯನ್ನೂ ಕೈಗಾರಿಕೆಗಳ ಅಭಿವೃದ್ಧಿಯನ್ನೂ ಸಾಧಿಸಿದ್ದಾರೆ. ಸರಕಾರದವರು ಈಗ ದೇಶದಲ್ಲಿ ಉತ್ತರದಕ್ಷಿಣಕ್ಕೆ ಚಾಚಿರುವ ಎಪಿನ್ಯಾನ್ ಪರ್ವತ ಪ್ರದೇಶದಲ್ಲಿ ವಿದ್ಯುದುತ್ಪಾದನೆಗೆ ಅವಕಾಶವನ್ನು ಒದಗಿಸಿ, ಕೈಗಾರಿಕೆಗಳು ದಕ್ಷಿಣ ಭಾಗದಲ್ಲಿ ಸಹ ಪ್ರವರ್ಧಮಾನವಾಗಬೇಕೆಂದು ಹೆಣಗುತ್ತಿದ್ದಾರೆ.

ಯಾವ ಉದ್ಯಮವನ್ನೇ ತೆಗೆದುಕೊಂಡರೂ ಇಟಲಿ ಬಹಳ ಮುಂದುವರಿದಿರುವಂತೆ ಕಾಣುತ್ತದೆ. ಮೋಟಾರುಕಾರು, ಟ್ರಕ್ ಇತ್ಯಾದಿಗಳ ರಚನೆಗೆ ಅಮೇರಿಕವು ಸಹ ಇಲ್ಲಿಯ ಚಿತ್ರವಿಲ್ಲಿಗಳ ನೆರವನ್ನು ಅಪೇಕ್ಷಿಸುತ್ತದೆ. ಟ್ರ್ಯಾಕ್ಟರು, ರೈಲ್ವೆಯಂತ್ರಗಳಂಥ ಭಾರಿ ಸರಕುಗಳಲ್ಲದೆ ರಿಫ್ರಿಜರೇಟರ್ ಮುಂತಾದ ನಿತ್ಯೋಪಯೋಗದ ಸಾಮಾಗ್ರಿಗಳನ್ನೂ ಇಟಲಿ ತಯಾರಿಸುತ್ತದೆ. ವಿಮಾನ ಮತ್ತು ಹಡಗುಗಳನ್ನು ಕಟ್ಟುವುದರಲ್ಲೂ ಅದು ಹಿಂದುಳಿದಿಲ್ಲ. ಕೈಗಾರಿಕೆಗಳ ಅಭಿವೃದ್ಧಿಗೆ ನೆರವಾಗುವ ಉದ್ದೇಶದಿಂದ ಅದು ಬೇರೆಬೇರೆ ಬಗೆಯ ಅಂತಾರಾಷ್ಟ್ರೀಯ ಉತ್ಸವಗಳನ್ನು ನೆರೆಯಿಸುತ್ತದೆ. ಮಿಲಾನಿನಲ್ಲಿ ೧೯೫೫ರಲ್ಲಿ ಜರಗಿದ ಔದ್ಯಮಿಕ ಉತ್ಸವಕ್ಕೆ ೧೯ ದೇಶಗಳ ಹತ್ತುಸಾವಿರ ಉತ್ಪಾದಕರು ಬಂದಿದ್ದರು!

ಇಟಲಿಯ ಭೂಭಾಗವು ಭೂಮಧ್ಯ ಸಮುದ್ರದಲ್ಲಿ ಪಾದ ಸಹಿತವಾದ ಮೊಣಕಾಲಿನಂತೆ ಚಾಚಿರುತ್ತದೆ. ಪಾದದ ಮುಂದಿನ ಚೆಂಡಿನಂತೆ ಸಿಸಿಲಿ ದ್ವೀಪವು ಕಾಣುತ್ತದೆ. ಇಟಲಿಯು ಉತ್ತರ ದಕ್ಷಿಣಕ್ಕೆ ೭೬೦ ಮೈಲುಗಳಷ್ಟಿದೆ; ಪೂರ್ವ ಪಶ್ಚಿಮಕ್ಕೆ ೧೫೦ ಮೈಲಿಗಿಂತ ಎಲ್ಲೂ ಹೆಚ್ಚಾಗಿಲ್ಲ. ದಕ್ಷಿಣ ಇಟಲಿಯ ಬಹ್ವಂಶ ಪರ್ವತಮಯವಾಗಿದೆ. ಅಗಲ ತಿಂದಾದ ಬಯಲು ಇಲ್ಲಿನದು; ಆದರೆ ರೈತರು ಕಷ್ಟಪಟ್ಟು ಕೃಷಿಮಾಡುತ್ತಾರೆ. ವಿವಿಧ ಹಣ್ಣುಹಂಪಲುಗಳನ್ನು ಬೆಳೆಸುತ್ತಾರೆ. ಯುರೋಪಿನಲ್ಲಿ ಅಕ್ಕಿ ಬೆಳೆಯುವ ದೇಶವೆಂದರೆ ಇಟಲಿ ಮಾತ್ರ. ಪೋ ನದಿಯ ಬಯಲಿನಲ್ಲಿ ಬೆಳೆಸುವ ಈ ಅಕ್ಕಿಯ ಬೆಲೆ ಬಹಳ ಹೆಚ್ಚು.

ಗೋಧಿಯ ಸೇವಿಗೆಗೆ ಹೆಸರಾದ ಇಟಲಿಯ ಜನರ ನೈ ಬಣ್ಣ ಗೋಧಿಯಷ್ಟೆ ಹಳದಿಮಿಶ್ರಿತ ಬಿಳಿಯಾಗಿದೆ. ಇವರು ಯಾರೂ ಆಲಸಿಗಳಲ್ಲ. ಸಂಸ್ಕೃತಿಯ ಗಂಧಗಾಳಿ ಇಲ್ಲದವರೂ ಅಲ್ಲ. ರೋಮನರ ಕಾಲದಲ್ಲಿ ನೆಲೆನಿಂತ ಸಂಸ್ಕೃತಿಯು ರಕ್ತಗುಣವಾಗಿ ಅವರಲ್ಲಿ ಬಂದಿರುವುದಕ್ಕೆ ಅನೇಕ ನಿದರ್ಶನಗಳು ದೊರಕುತ್ತವೆ. ಉದಾಹರಣೆಗಾಗಿ ಹೆಣಕ್ಕಾಗಿಯಲ್ಲ, ಕೇವಲ ಕಲಾರಾಧನೆಯ ದೃಷ್ಟಿಯಿಂದ ಹೆಳೆಯ ರೈತನೂ ಕುಂಚ ಹಿಡಿಯುತ್ತಾನೆ; ಹೆಂಗಸರು ಸೊಬಗಿನ ಕಸೂತಿ ಹಚ್ಚುತ್ತಾರೆ; ಕುರುಬರು ಸಹ ಸುಂದರವಾದ ನಕ್ಷೆಗಳಿರುವ ಉಣ್ಣೆಯ ವಸ್ತ್ರಗಳನ್ನು ಸಿದ್ಧಪಡಿಸುತ್ತಾರೆ. ಕಾರ್ಖಾನೆಯ ಹೊರಗಿನ ಈ ಕೈಗಾರಿಕೆಗಳು ಇಟಲಿಯ ಜನರು ಯಾಂತ್ರಿಕ ದಾಸ್ಯವನ್ನು ಸ್ವೀಕರಿಸಿಲ್ಲ, ಅವರ ಕ್ರಿಯಾಶಕ್ತಿ ಹ್ರಾಸವಾಗಿಲ್ಲ ಎಂಬುದನ್ನು ವ್ಯಕ್ತಪಡಿಸುತ್ತವೆ.

ನಿರುದ್ಯೋಗದ ಸಮಸ್ಯೆ ಎಲ್ಲಾ ದೇಶಗಳಂತೆ ಇಟಲಿಯನ್ನೂ ಬಾಧಿಸುತ್ತದೆ. ಇಪ್ಪತ್ತು ಲಕ್ಷಜನನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದು ಹೇಗೆಂಬ ಪ್ರಶ್ನೆಇನ್ನೂ ಪರಿಹಾರವಾಗಿಲ್ಲ; ಇವರದಲ್ಲದೆ ಪ್ರತಿವರ್ಷ ಮತ್ತೆ ಎರಡೂವರೆ ಲಕ್ಷದಷ್ಟು ಕೆಲಸದ ಅಪೇಕ್ಷಾರ್ಥಿಗಳು ಬರುತ್ತಿರುತ್ತಾರೆ. ಶಿಕ್ಷಣ ಕ್ರಮದಲ್ಲಿ ಕೈಕಸಬುಗಳಲ್ಲಿ ಪ್ರವೀಣತೆ ಸಂಪಾದಿಸುವುದಕ್ಕೆ ಮಹತ್ವವಿತ್ತು ಸ್ವಲ್ಪಮಟ್ಟಿಗೆ ಇದನ್ನು ಸುಧಾರಿಸುವ ಪ್ರಯತ್ನ ನಡೆದಿದೆ. ಆದರೆ "ಸೈಕಲು ಕಳ್ಳ"ದಾಧ ಹೃದಯ ಸ್ಪರ್ಶಿ ಚಲಚ್ಚಿತ್ರ ನೋಡಿದ ನಮಗೆ ಇಟಲಿಯಲ್ಲೂ ಈ ಸಮಸ್ಯೆಗೆ ಸುಲಭ ಪರಿಹಾರವಿಲ್ಲ ಎಂದು ಹೊಳೆಯದಿರದು ಅಲ್ಲಿಯ ಚಲಚ್ಚಿತ್ರದ ಉದ್ದಿಮೆ ಹಾಲಿವುಡಿನ ಬಳಿಕ ತಂತ್ರಕೌಶಲ್ಯಕ್ಕೆ ಹೆಸರಾಗಿದೆ; ಹಾಲಿವುಡಿನ "ಕೋವಾಡಿಸ್" ಮುಂತಾದ ಅನೇಕ ಚಿತ್ರಗಳಿಗೆ ಇಟಲಿಯಲ್ಲಿ ಅಳವಡ ರೋಮನರ ಕಾಲದ ಘಟನೆಗಳೇ ಆಧಾರ.

ಸಾಹಿತ್ಯ ಮತ್ತು ಕಲೆಗೆ ಇಟಾಲಿಯಾನರು ಬಹಳ ಮಹತ್ವಕೊಡುತ್ತಾರೆ. ಡಾಂಟೆ, ಬೊಕಾಶಿಯೋರಂಥ ಲೇಖಕರು ಹಿಂದಿನವರಾದರು; ಇಂದಿನವರಿಗೆ "ಫಂಟಮಾರಾ"ದ ಕೃತಿ ಇಗ್ನೇಜಿಯೊ ಸಿಲೋನೆ ಮುಂತಾದವರು ಪೂಜ್ಯರಾಗಿದ್ದಾರೆ. ಇಟಲಿಯಲ್ಲಿ ಸುಮಾರು ೧೫೦ ಪತ್ರಿಕೆಗಳಿವೆ; ಅವುಗಳಲ್ಲಿ ಪ್ರಸಿದ್ಧ ಬರೆಹಗಾರರ ಜೊಕ್ಕು ಲೇಖನಗಳು ಪ್ರಕಟವಾಗುತ್ತಿರುತ್ತವೆ. ವಾರಪತ್ರಿಕೆಗಳ ಪ್ರಸಾರ ಯುದ್ಧದ ಬಳಿಕ ತುಂಬಹೆಚ್ಚಿದೆ; ಇವು ಜನಾಭಿಪ್ರಾಯವನ್ನು ರೂಪುಗೊಳಿಸುವುದರಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಒಪೆರಾ ಮತ್ತು ನಾಟಕಗಳೂ ಇಟಲಿಯಲ್ಲಿ ಊರ್ಜಿತಾವಸ್ಥೆಯಲ್ಲಿವೆ; ಪ್ರತಿಯೊಂದು ಹಳ್ಳಿಯೂ ನಾಟಕ ಹಾಗು ನರ್ತನ ಮಂದಿರಗಳಿಂದ ಕೂಡಿದೆ. ವರ್ಷದಲ್ಲಿ ಕೆಲವು ಸಂಭ್ರಮದ ಉತ್ಸವಗಳೂ ನಡೆಯುತ್ತವೆ. ೫೦೦ ಮೈಲು ಉದ್ದದ ಕಾರವಳಿಯಲ್ಲಿ ದೊಣಿಸಿದೆಡೆಯ ಹಾಗು ಎತ್ತರವಾದ ಹಿಮಮಂಡಿತ ಪರ್ವತಶಿಖರಗಳಲ್ಲಿ ಜಾರುವ ಕ್ರೀಡಾಸಕ್ತರೂ ಅಧಿಕ ಪ್ರಮಾಣದಲ್ಲಿ ನೇಪಲ್ಸಿನಂತೆ ವೆನಿಸ್, ಫ್ಲಾರೆನ್ಸಗಳೂ ಸಾಯುವ ಮೊದಲೊಮ್ಮೆ ನೋಡಬೇಕಾದ ಪ್ರೇಕ್ಷಣೀಯಸ್ಥಳಗಳೆಂಬುದರಲ್ಲಿ ಪ್ರತಿಮಾತಿಲ್ಲ ನಮಗೆ ಸುಪರಿಚಿತರಾದ ಆಂಗ್ಲ ಕವಿ ಬೈರನ್, ಕೀಟ್ಸ್ ಮತ್ತು ಶೆಲ್ಲಿಯವರ ಸಮಾಧಿಗಳು ಇಲ್ಲಿರುವುದರಿಂದಲೇ ಇಟಲಿಯ ಸೌಂದರ್ಯ ಹೆಚ್ಚಿನದೆಂದು ಮನವರಿಕೆಯಾಯಿತು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಸಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಿಯ ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.



ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ತುರುಮಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O Box No 3219, BOBMAY 3-

ಶಿಕ್ಷಣದ ಮಾಧ್ಯಮ

ಪ್ರಾದೇಶಿಕ ಭಾಷೆಗಳ ಯೋಗ್ಯತೆ

ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನೆರೆದಾಗ, ಪಿಲ್ಲ ವಿದ್ಯಾಲಯದ ಮಟ್ಟದಲ್ಲಿ ಸಹ ಕನ್ನಡವನ್ನು ಶಿಕ್ಷಣದ ಮಾಧ್ಯಮವಾಗಿ ಬಳಸುವ ಗೊತ್ತುವಳಿ ಸ್ವೀಕರಿಸಲ್ಪಟ್ಟಿತು. ಕಳೆದ ವಾರ ಮದ್ರಾಸಿನಲ್ಲಿ ಶಿಕ್ಷಣ ಮಂತ್ರಿಗಳು ಆಸಕ್ತಜನರ ಒಂದು ಸಭೆಯನ್ನು ಜರಗಿಸಿ, ತಮಿಳು ಭಾಷೆಯನ್ನು ಉಚ್ಚ ಶಿಕ್ಷಣದ ಮಾಧ್ಯಮವಾಗಿ ಬಳಸುವ ಕುರಿತು ವಿಚಾರವಿನಿಮಯ ನಡೆಸಿದರು; ಇಲ್ಲಿ ಹಿಚ್ಚಿನವರು ಈ ಪರಿವರ್ತನೆಗೆ ಬೆಂಬಲವಿತ್ತರೆಂದು ತಿಳಿದುಬರುತ್ತದೆ.

ಗುಜರಾತಿನ ವಿಶ್ವವಿದ್ಯಾಲಯವು ಕಳೆದ ವರ್ಷವೇ ಯೋಗ್ಯ ಕೃತಿಗಳೊಂಡು ಗುಜರಾತಿಯನ್ನು ಶಿಕ್ಷಣ ಮಾಧ್ಯಮವಾಗಿ ಉಚ್ಚ ಶಿಕ್ಷಣ ಕೇಂದ್ರಗಳಲ್ಲಿ ಬಳಸುವ ಉದ್ದೇಶವನ್ನು ಕೈಗೊಂಡಿತು. ಮೊನ್ನೆ ತಾನೆ ಕೇಂದ್ರ ಸರಕಾರದವರು ಹಿಂದಿಯನ್ನು ಸರಕಾರದ ವ್ಯವಹಾರದಲ್ಲಿ ಬಳಸುವುದಕ್ಕೆ ಅನುಕೂಲತೆ ಕಲ್ಪಿಸಿಕೊಡುವ ಉದ್ದೇಶದಿಂದ ಸಸ್ಯ ಶಾಸ್ತ್ರ, ಭೂತ ಶಾಸ್ತ್ರ, ಗಣಿತ ಶಾಸ್ತ್ರ ಇತ್ಯಾದಿ ವೈಜ್ಞಾನಿಕ ಮಹತ್ವದ ವಿಷಯಗಳಿಗೂ ಸೈನ್ಯ ಮತ್ತಿತರ ಕೆಲವು ಕ್ಷೇತ್ರಗಳಿಗೂ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳ ಕೋಶ ಪ್ರಾಂತವನ್ನು ಪ್ರಕಟಿಸಿದರು.

ಇನ್ನಿಲ್ಲವನ್ನು ನೋಡಿದರೆ, ಹಿಂದಿಯನ್ನೊಳಗೊಂಡು ಎಲ್ಲ ಪ್ರಾದೇಶಿಕ ಭಾಷೆಗಳೂ ಹೆಚ್ಚು ಹೆಚ್ಚಾಗಿ ಅಭಿಪ್ರಾಯ ವಿನಿಮಯಕ್ಕೆ ಮತ್ತು ನಿತ್ಯ ವ್ಯವಹಾರಕ್ಕೆ ಬಳಸಲ್ಪಡುವ ದಿನ ಹತ್ತಿರವಾದಂತೆ ಕಂಡು ಬರುತ್ತದೆ. ಆದರೆ, ಇಂಗ್ಲೀಷು ಭಾಷೆಯ ಕೆಲವು ಪ್ರಾಚೀನ ಪ್ರೇಮಿಗಳು ವೈಜ್ಞಾನಿಕ ವಿಷಯಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದೆಂತು, ಇನ್ನೊಬ್ಬರಿಗೆ ಮನವರಿಕೆ ಮಾಡಿಕೊಡುವುದೆಂತು— ಎಂಬ ಅನಾವಶ್ಯಕವಾದ ಪ್ರಶ್ನೆ ಹಾಕುತ್ತಾರೆ. ಅವರಿಗೆ ಉತ್ತರ ರೂಪದಲ್ಲಿ, ೧೧೧೭ನೇ ಇಸವಿಯಲ್ಲಿ ಹಿಂದೆ, ಮದ್ರಾಸಿನಲ್ಲಿ ಪ್ರಥಮ ಕಾಂಗ್ರೆಸು ಮಂತ್ರಿ ಮಂಡಳವಿದ್ದಾಗ, ಮುಖ್ಯ ಮಂತ್ರಿ ಸ್ಥಾನದಿಂದ ರಾಜಾಜಿಯವರು ಶಿಕ್ಷಣ ಖಾತೆಯ ವಿದ್ಯಾರ್ಥಿಕಾರಿಗಳಿಗೆ ಬರೆದ ಪತ್ರದ ಅರ್ಥವನ್ನು ಮನಗಾಣಿಸುವುದೊಳಿತು.

ರಾಜಾಜಿಯ ಪತ್ರ ಹೀಗೆ ಹೇಳುತ್ತದೆ— "ದಕ್ಷಿಣ ಭಾರತದ ಭಾಷೆಗಳಲ್ಲಿ ಯೋಗ್ಯ ಪಠ್ಯ ಪುಸ್ತಕಗಳು ಪ್ರಕಟವಾಗುವ ವರೆಗೆ ಮತ್ತು ವೈಜ್ಞಾನಿಕ ಶಬ್ದ ಕೋಶವೊಂದನ್ನು ರಚಿಸುವ ವರೆಗೆ ನಾವು ಗಣಿತ ಶಾಸ್ತ್ರವನ್ನೂ ವೈಜ್ಞಾನಿಕ ವಿಷಯಗಳನ್ನೂ ಕಲಿಸಲು ಸಾಧ್ಯವಿಲ್ಲವೆಂದು ನೀವು ಹೇಳುತ್ತೀರಿ.

"ಇದು ನಿಜಕ್ಕೂ ಒಂದು ಸಮಸ್ಯಾತ್ಮಕ ಚಕ್ರ. ನಮಗೆ ಎಷ್ಟೇ ಅನಾನುಕೂಲತೆಯಾಗಲಿ ಮತ್ತು ಅಪರಿಪೂರ್ಣವೆಂದು ತೋರಲಿ, ಯೋಚಿಸಿದಾದೊಡನೆ ಹಿಂದುವನ್ನು ಗಟ್ಟಿಯಾಗಿ ಹಿಡಿದು ಕಾರ್ಯವನ್ನು ಪ್ರಾರಂಭಿಸುವವರೆಗೆ ಈ ವಿಷಮ ಸಮಸ್ಯೆ ಪರಿಹಾರವಾಗಲಾರದು. ಪಠ್ಯಪುಸ್ತಕಗಳನ್ನು [illegible] ಬುದ್ಧಿಯ ಜನರೇನು ಬರೆದು ಪ್ರಕಟಿಸುವುದಿಲ್ಲ; ಬೇಡಿಕೆ ಇಲ್ಲದಿದ್ದರೆ, ಅವುಗಳು ಅಸ್ತಿತ್ವಕ್ಕೆ ಬರುವುದೇ ಇಲ್ಲ. ನಾವು ಎಷ್ಟೇ ಅಪರಿಪೂರ್ಣರೀತಿಯಿಂದರೇ ಆಗಲಿ ಮಾತೃಭಾಷೆಯಲ್ಲಿ ಶಿಕ್ಷಣಕೊಡುವ ಪದ್ಧತಿಯನ್ನು ಪ್ರಾರಂಭಿಸುವ ವರೆಗೆ, ಅಂಥ ಪಠ್ಯ ಪುಸ್ತಕಗಳನ್ನು ಬರೆಯುವ ಅವಶ್ಯಕತೆ ಯಾರಿಗೂ ಕಾಣಲಿಕ್ಕಿಲ್ಲ.

"ಪ್ರಾದೇಶಿಕ ಭಾಷೆಗಳ ಮೂಲಕ ಗಣಿತ ಮತ್ತು ವೈಜ್ಞಾನಿಕ ವಿಷಯಗಳನ್ನು ಕಲಿಸುವುದರಿಂದ, ವಿದ್ಯಾರ್ಥಿಗಳಿಗೆ ಶೈಲಿಗಾಂಭೀರ್ಯವಿಂದ ತುಳುಕುವ ಇಂಗ್ಲಿಷನ್ನು ಕಲಿಯಲು ಕಷ್ಟವಾಗುವುದೇ ಎಂದುಬಿಡನು ನಾವು ವಿಚಾರಿಸಬೇಕಾಗುತ್ತದೆ. ಇಂಗ್ಲಿಷನ್ನು ಕಲಿಯಲು ವಿದ್ಯಾರ್ಥಿಗೆ ಯಾವದೇ ತೊಂದರೆಯನ್ನು ಉಂಟು ಮಾಡದೆ, ನಮ್ಮ ನಿತ್ಯ ವ್ಯವಹಾರದಲ್ಲಿ ರೂಢವಾಗಿರುವ ವೈಜ್ಞಾನಿಕ ಮಹತ್ವದ ಇಂಗ್ಲೀಷು ಶಬ್ದಗಳನ್ನು ಉಪಯೋಗಿಸಿ ವಿಜ್ಞಾನವನ್ನೂ ಗಣಿತವನ್ನೂ ಪ್ರಾದೇಶಿಕಭಾಷೆಯಲ್ಲಿ ಕಲಿಸಲು ಸಾಧ್ಯವೆಂದೇ ನಾನು ನಂಬಿದ್ದೇನೆ. ಒಂದು ಹೇಳಿ ಇಂಗ್ಲೀಷಿನ ಜ್ಞಾನಾರ್ಜನೆಗೆ ಇದರಿಂದ ತೊಂದರೆ ಬಾರುವುದೆಂದು ಭಾವಿಸಿದರೂ ಸಹ, ಪ್ರಾದೇಶಿಕ ಭಾಷೆಯ ಉಪಯೋಗಕ್ಕೆ ನೀಡಿದ ಪ್ರೋತ್ಸಾಹದ ಮುಂದೆ ಅದು ಕ್ಷುಲ್ಲಕವೆನಿಸುತ್ತದೆ.

"ನಾವು ಅತ್ಯಗತ್ಯವಾಗಿ ಪರದೇಶದ ಕೆಲವು ವೈಜ್ಞಾನಿಕ ಶಬ್ದಗಳನ್ನು ಉಪಯೋಗಿಸಬೇಕಾಗಿ ಬರುವುದೆಂಬುದರಿಂದರೇ ಶಿಕ್ಷಣದ ಮಾಧ್ಯಮವೇ ಆ ಪರದೇಶದ ಭಾಷೆಯಾಗಿರಬೇಕೆಂದು ಹೇಳುವುದು ತಪ್ಪು. ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಪಾರಿಭಾಷಿಕ ಪದಗಳ ಪ್ರಯೋಗವು ಶಿಕ್ಷಣ ಮಾಧ್ಯಮದ ಪ್ರಶ್ನೆಗಿಂತ ಭಿನ್ನವಾದುದೆಂದು ನಾನು ಭಾವಿಸುತ್ತೇನೆ.

"ಮೇಲಿನ ಯೋಜನೆಯಂತೆ ನಡೆದರೆ ಪ್ರಾದೇಶಿಕ ಭಾಷೆಗಳಲ್ಲಿ ವೈಜ್ಞಾನಿಕ ಶಬ್ದಕೋಶವನ್ನು ಸಿದ್ಧಗೊಳಿಸುವುದು ಕಷ್ಟವಲ್ಲ. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ಜನರು ವೈಜ್ಞಾನಿಕ ಶಿಕ್ಷಣದ ಪ್ರಥಮ ದಿನಗಳಲ್ಲಿ ಲ್ಯಾಟಿನ್ ಅಥವಾ ಗ್ರೀಕ್ ಭಾಷೆಯನ್ನು ಮಾಧ್ಯಮವಾಗಿ ಬಳಸಿಕೊಂಡಿದ್ದರೆ? ಅವರು ಪಾರಿಭಾಷಿಕ ಶಬ್ದಗಳನ್ನು ಅನಾಬಂಧವಾಗಿ ಉಪಯೋಗಿಸಿದರು; ಆದರೆ ಪ್ರಾದೇಶಿಕ ಭಾಷೆಯನ್ನೆ ಮಾಧ್ಯಮವಾಗಿ ಬಳಸಿಕೊಂಡರು. ವಾಣಿಜ್ಯ ವಿಷಯಗಳಿಗೂ ವೈಜ್ಞಾನಿಕ ಹಾಗು ಗಣಿತ ಶಾಸ್ತ್ರದ ಕುರಿತು ಹೇಳಿದ ಮಾತು ಅನ್ವಯಿಸುತ್ತದೆ. ಮನೆಯಲ್ಲಿ ತಮ್ಮಂಗೆ ಅಣ್ಣನು ಕಲಿಸುವ ರೀತಿಯನ್ನು ನೋಡಿದರೆ, ಪಾರಿಭಾಷಿಕ ಪದಗಳು ಪರಭಾಷೆಯವುಗಳಾಗಿದ್ದರೂ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಸಾಧ್ಯವೆಂದು ಮನವರಿಕೆಯಾಗುತ್ತದೆ.

"ಇಷ್ಟರ ವರೆಗೆ ಇಂಗ್ಲಿಷಿನಲ್ಲಿಯೇ ಹಾಕ್ಕಬೇಳುತ್ತಿದ್ದ ಅಧ್ಯಾಪಕರಿಗೆ ಆಗುವ ತೊಂದರೆಯನ್ನು ನಾನು ಮನಗಂಡಿದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬೇರೆ ಬೇರೆ ಭಾಷೆಯಾಡುವ ವಿದ್ಯಾರ್ಥಿಗಳಿಂದ ತುಂಬಿದ ಶಿಕ್ಷಣ ಕೇಂದ್ರಗಳ ಸಮಸ್ಯೆಯ ಪರಿಚಯವೂ ನನಗಿದೆ; ತೊಂದರೆ ನಿವಾರಣೆಗಾಗಿ ಅಧ್ಯಾಪಕರು ಇಂಗ್ಲಿಷಿನಲ್ಲಿ ಬರೆಯಲಾದ ಪಠ್ಯಪುಸ್ತಕಗಳನ್ನು ತಾತ್ಕಾಲಿಕವಾಗಿ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬೇಕಿದ್ದರೆ ಹೇಳಲಿ; ಆದರೆ ಪಾಠವನ್ನು ಮಾತ್ರ ಪ್ರಾದೇಶಿಕ ಭಾಷೆಯಲ್ಲಿಯೇ ಮಾಡಲು ಮುಂದಾಗಲಿ."

ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ವಿಚಾರ ಪೂರ್ಣವಾದ ಹಾಗು ತರ್ಕಶುದ್ಧವಾದ ಶೈಲಿಯಲ್ಲಿ ರಾಜಾಜಿಯವರು ಅಂದು ಹೇಳಿದ್ದ ಮಾತು ಇಂದಿಗೂ ನಮಗೆ ಮಾರ್ಗದರ್ಶಕವಾಗಬಲ್ಲುದು. ಯೋಗ್ಯ ಸರ್ಯಾಯ ಪದಗಳು ಪ್ರಾದೇಶಿಕ ಭಾಷೆಯಲ್ಲಿ ದೊರಕುವುದಿಲ್ಲವಾದರೆ, ಇಂಗ್ಲೀಷು ಶಬ್ದಗಳೇ ಬಳಕೆಗೆ ಬರಲಿ ಎಂಬ ರಾಜಾಜಿಯ ಸೂಚನೆ ಬಹು ಜನರಿಗೆ ಸಮ್ಮತವಾಗದಿರದು. ನಮ್ಮ ಅಭಿಪ್ರಾಯವನಂತೆ ಮೋಟಾರನ್ನು ನಾವು ಮೋಟಾರೆಂದೇ ಕರೆಯೋಣ; ಅದರೆ, "ಆಟೋ ನಾಶನ" ಶಬ್ದದ ಬದಲು "ಸಾವಧಾನ" ಎಂಬ ಪದ ಪ್ರಯೋಗಿಸಲು ಹಿಂಜರಿಯುವುದು ಬೇಡ.

(೧ನೇ ಪುಟದಿಂದ)

ವಂತಾಗಬೇಕು. ಇಂದಿನ ಪರಿಸ್ಥಿತಿಯಲ್ಲಿ ಸರಕಾರದ ಅಧಿಕಾರಿಗಳು ಯಾವ ಕೆಲಸ ಮಾಡುವುದು ಬಾಕಿ ಉಳಿದಿದೆಯೊ ಗೊತ್ತಾಗುವುದಿಲ್ಲ; ಜನಹಿತದ ಸಾವರಿ ಕಾರ್ಯಗಳನ್ನು ನಿರ್ವಹಿಸುವುದು ಅವರ ಪಾಲಿನದಾಗಿದೆ ಹಿಂದೆ ಕೇವಲ ಕಾನೂನು ಮತ್ತು ಶಾಂತಿಯ ಪಾಲನೆ ಮಾಡಿಕೊಂಡು ಹೋಗಿದ್ದರೆ ಸಾಕಾಗಿದ್ದಿತು; ಈಗಲೋ, ಅವರ ಮೇಲೆ ವಿಶೇಷವಾದ ಭಾರ ಬಿದ್ದಿದೆ—ಈ ಭಾರ ಹೊರಲಾರದೆ ಅವರ ದಕ್ಷತೆ ಕುಗ್ಗಿದೆ ಎಂದರೂ ತಪ್ಪಾಗಲಿಕ್ಕಿಲ್ಲ ಎಂದು ಒಮ್ಮೊಮ್ಮೆ ಮನಸ್ಸಿಗೆ ಹೊಳೆಯುತ್ತದೆ. ಹೀಗಿರುವುದರಿಂದ— ಈ ಅಧಿಕಾರಿಗಳು ಜನಸೇವಕರೆಂದು ತಮ್ಮನ್ನು ಹೇಗೆ ಭಾವಿಸಿಕೊಳ್ಳಬೇಕೊ, ಹಾಗೆ ಮಂತ್ರಿ ಮಂಡಳದವರು ಅವರಿಗೆ ಸ್ವಲ್ಪ ಕ್ರಿಯಾ ಸ್ವಾತಂತ್ರ್ಯವನ್ನೂ ನೀಡಬೇಕು ಎಂದು ಹೇಳಬೇಕಾಗುತ್ತದೆ.

—ಕಾರ್ತಿಕೇಯ.

THE VIJAYA BANK, LTD., BRAHMAVAR.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಸುರುಬಾಕಿ ಮಾಡುವರೆ, ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಸಲವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ 16—7—'55ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಯೂ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲಸ ನಂಬ್ರ	ಹೆಸರು ಮತ್ತು ನಿವಾಸ	ಮೊಬಲಗು ಬಡ್ಡಿ ಸಮೇತ 31-3-55ರ ವರೆಗೆ	
66/53	ಕುಶಲ ಸೆಟ್ಟಿ, ಸುಬ್ಬಣ್ಣ ಸೆಟ್ರ ಅಳಿಯ, ಹಂದಾಡಿ ಗ್ರಾಮ, ಹೋಸ್ಪು ಬ್ರಹ್ಮಾವರ.	ರೂ.	ಆ 56 11
990/53	ಮಹಮ್ಮದ್ ಸಹೇಬ, ಅಲ್ಲಿ ಸಹೇಬರ ಮಗ, ಅಡ್ಡ ಬೆಂಗರೆ, ಕೆಮ್ಮಣ್ಣು, ಹೋಸ್ಪು ಕೆಮ್ಮಣ್ಣು.	35	14
632/53	ಜಿ. ಶೀನ ಸೆಟ್ಟಿ, ಗಿರಿಯಮ್ಮ ಸೆಡ್ತಿಯರ ಮಗ, ಗುಡೆಬೆಟ್ಟು, ವಾರಂಬಳ್ಳಿ ಗ್ರಾಮ, ಹೋಸ್ಪು ಬ್ರಹ್ಮಾವರ.	276	4
670/53	ಚಂದು ನಾಯ್ಕ, ಗಂಗ ನಾಯ್ಕರ ಮಗ, ಟಾಂತಾರು ಗ್ರಾಮ, ಹೋಸ್ಪು ಬ್ರಹ್ಮಾವರ.	54	6
903/53	ಶೀನಪ್ಪ ದಾಸ, ಅಣ್ಣಪ್ಪ ದಾಸರ ಮಗ, ವಾರಂಬಳ್ಳಿ ಗ್ರಾಮ, ಹೋಸ್ಪು ಬ್ರಹ್ಮಾವರ.	41	0
968/53	ಲೂಸಿ ಸೋಜ, ಪೇದ್ರು ಸೋಜರ ಮಗಳು, ಬೈಕಾಡಿ ಗ್ರಾಮ, ಹೋಸ್ಪು ಬ್ರಹ್ಮಾವರ.	25	14
440/54	ಪಿ. ಶ್ರೀನಿವಾಸ, Head Constable, No. 201, ಬ್ರಹ್ಮಾವರ ಪೋಲೀಸ್ ಸ್ಟೇಶನ್, ಬ್ರಹ್ಮಾವರ.	119	6
569/54	ಅಂತಯ್ಯ ಸೆಟ್ಟಿ, ಕೊರಗ ಸೆಟ್ರ ಅಳಿಯ, ಸುಡಿ, ಚೆಕ್ಕಾಡಿ ಗ್ರಾಮ, ಹೋಸ್ಪು ಪೇಕ್ರಿ.	81	2
593/54	ಮಿಣ್ಣ ಪೂಜಾರಿ, ಬೀರ ಪೂಜಾರಿ ಅಳಿಯ, ಬೈಕಾಡಿ ಗ್ರಾಮ, ಹೋಸ್ಪು ಬ್ರಹ್ಮಾವರ.	11	0
680/54	ರಾಮು ಹಾಂಡೆ, ಶೇಷ ಹಾಂಡೆನ ಅಳಿಯ, ಹಂದಾಡಿ ಗ್ರಾಮ, ಹೋಸ್ಪು ಬ್ರಹ್ಮಾವರ.	21	10
844/54	ಹಿರಿಯ ಬಂಗಾರಿ, ದುಗ್ಗ ಬಂಗಾರಿ ಅಳಿಯ, ಕುಮ್ಮಗೋಡು ಗ್ರಾಮ, ಹೋಸ್ಪು ಬ್ರಹ್ಮಾವರ.	16	2

Office of the Bank, BRAHMAVAR 26—6—'55.

ಬಿ. ಭಾಸ್ಕರ ಸೆಟ್ಟಿ, ಏಜಂಟ್.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ದೊರಕುವ ಸ್ಥಳಗಳು: 1) ನವಯುಗ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ಪಿ. ಕೆ

No Finer RUBBER STAMP LINE-HALFTONE BLOCK made anywhere than at CROWN RUBBER STAMP CO. BALLAPATA, MANGALORE 203

Edited, Printed & Published By K. H. Shetty at the Navayuga Press, Udipi, S. India

ನವಯುಗ

ಸಂಪುಟ ೩೪ | ಉಡುಪಿ, 7—7—1955 | ಸಂಚಿಕೆ ೪೩

VOL. 34 | NO. 43

ಅಂತರ್ಜಾತೀಯ ವಿವಾಹ

ಗತಕಾಲದಲ್ಲಿ ಭಾರತದ ಅಧಃಪತನಕ್ಕೆ ಜಾತಿ ವ್ಯವಸ್ಥೆಯೇ ಮುಖ್ಯ ಕಾರಣವಾಗಿದ್ದಿತು ಈಗತಾನೆ ಭಾರತವು ಪಡೆದುಕೊಂಡಿರುವ ಸ್ವಾತಂತ್ರ್ಯ ಉಳಿಯ ಬೇಕೆಂದಿದ್ದರೆ, ಜನತೆಯು ಜಾತಿ ವ್ಯವಸ್ಥೆಯ ಉಚ್ಚಾಟನೆಗಾಗಿ ಮುಂದಾಗಬೇಕು. ಅಂತರ್ಜಾತೀಯ ವಿವಾಹಗಳು ಈಗ ಅಪವಾದ ಸ್ವರೂಪವಾಗಿವೆ. ಈ ಪರಿಸ್ಥಿತಿಯು ಸುಧಾರಿಸಿ, ಅವುಗಳು ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿ ಬಂದುವಾದರೆ ಜಾತಿ ವ್ಯವಸ್ಥೆಯು ಬಹಳ ಬೇಗದಲ್ಲಿ ನಿರ್ಮೂಲ ಹೊಂದ ಬಲ್ಲುದು.

— ಜಗಜೀವನ ರಾಮ.

ದಲಿತ ವರ್ಗದ ಬಂಧುಗಳನ್ನು ಉದ್ಧರಿಸುವ ಪ್ರಶ್ನೆ ಬಂದಾಗಲೆಲ್ಲ ಒಂದು ಪ್ರಾಮುಖ್ಯ ವಿಷಯವನ್ನು ನಮ್ಮ ಧುರೀಣರಾದವರು ಒತ್ತಿಯೊತ್ತಿ ಹೇಳುತ್ತಾರೆ—ಅದೆಂದರೆ ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ. ಭಾರತದ ಪ್ರಗತಿಗೆ ಜಾತಿ ವ್ಯವಸ್ಥೆಯು ಬಾಧಕವಾಗಿದೆ ಎಂಬುದನ್ನು ಇತಿಹಾಸವೇ ತೋರಿಸಿಕೊಟ್ಟಿದೆ ಎನ್ನುತ್ತಾ ಈ ಮುಖಂಡರು ಅಂತರ್ಜಾತೀಯ ವಿವಾಹಗಳಿಂದ ಮಾತ್ರವೇ ರಾಷ್ಟ್ರದ ಉದ್ಧಾರ ಸಾಧ್ಯವೆಂದು ವಾದಿಸುತ್ತಾರೆ ಹೀಗೆ ಹೇಳುವಾಗ ಅವರು ಮುಖ್ಯವಾಗಿ ಹರಿಜನರ ಮತ್ತು ಇತರ ಹಿಂದುಳಿದ ಜನರ ಹೆಣ್ಣು ಗಂಡುಗಳೊಡನೆ ಉಚ್ಚ ವರ್ಣದವರೆಂದು ಭಾವಿಸಲ್ಪಟ್ಟಿರುವ ಗಂಡು ಹೆಣ್ಣುಗಳ ವಿವಾಹ ನಡೆಯಬೇಕೆಂಬ ಇಚ್ಛೆಯನ್ನು ಇಟ್ಟುಕೊಂಡಿರುತ್ತಿದೆ. ಅಂತರ್ಜಾತೀಯ ವಿವಾಹ ಎಂಬ ದೊಡ್ಡ ಶಬ್ದವನ್ನು ಉಪಯೋಗಿಸಿದರೂ ಸಹ ಧುರೀಣರ ತಲೆಯಲ್ಲಿ ಈ ಶಬ್ದದ ವ್ಯಾಖ್ಯೆಯ ವ್ಯಾಪ್ತಿ ಅಷ್ಟು ವಿಸ್ತಾರವಾಗಿಲ್ಲವೆಂದೆನಿಸುತ್ತಿದೆ.

ಅಂತರ್ಜಾತೀಯ ವಿವಾಹದ ವ್ಯಸ್ತಾಪವು ಶಾಸನ ಸಭೆಗಳಲ್ಲಿ ಬಂದಾಗಲೆಲ್ಲ ಅನೇಕ ಸ್ವಾರಸ್ಯದ ಘಟನೆಗಳು ಜರಗಿದ ಉದಾಹರಣೆಯುಂಟು—ಮದ್ರಾಸಿನ ಶಾಸನ ಸಭೆಯಲ್ಲಿ ಈಚೆಗೊಬ್ಬ ಸವರ್ಣ ಸದಸ್ಯರು ಅಂತರ್ಜಾತೀಯ ವಿವಾಹದ ಪ್ರತಿಪಾದನೆ ಮಾಡಿದರು. ಆಗ ಇನ್ನೊಬ್ಬ ಹರಿಜನ ಸದಸ್ಯರು ತಮ್ಮ ಮಗಳನ್ನು ಉಚ್ಚ ವರ್ಣದವರಿಗೆ ಮದುವೆ ಮಾಡಿ ಕೊಡಲು ಸಿದ್ಧರೆಂದು ಮೊದಲು ಮಾತನಾಡಿದ ಸದಸ್ಯರಿಗೆ ಹೇಳಿದರು. ಆಗ ಮಾತ್ರ ಈ ಮಹಾನುಭಾವರು 'ನನಗೆ ಗಂಡು ಮಗನಿಲ್ಲವಲ್ಲ' ಎಂದರು; ಹಾಗೆ ಹೇಳುವಾಗ ತನಗೆ ಮದುವೆಯೇ ಆಗಿಲ್ಲ ಎಂಬುದನ್ನು ಮರೆತರು. ಈ ಸಂಗತಿಯನ್ನು ಸಭಾಧ್ಯಕ್ಷರು ನೆನಪಿಗೆ ತಂದು ಕೊಟ್ಟು, ಆ ಸವರ್ಣ ಸದಸ್ಯರೇ ತಮ್ಮ ಹರಿಜನ ಮಿತ್ರರ ಮಗಳನ್ನು ಮದುವೆ ಯಾಗಲಿ ಎಂದರು! ಮುಂದೇನು ನಡೆಯುತೋ—ಗೊತ್ತಿಲ್ಲ ಆದರೆ, ಮೈಸೂರಿನ ಶಾಸನ ಸಭೆಯಲ್ಲಿ ಇದಕ್ಕಿಂತ ಸ್ವಲ್ಪ ಹೆಚ್ಚು ಜಾಣತನ ವ್ಯಕ್ತವಾದ ಘಟನೆಯೊಂದು ನಡೆದಿದ್ದಿತು. ಹರಿಜನ ಮಂತ್ರಿಗಳ ಮಗಳನ್ನು ಅಂತರ್ಜಾತೀಯ ವಿವಾಹದ ಪ್ರತಿಪಾದಕರಾದ ಇನ್ನೊಬ್ಬ ಸವರ್ಣ ಮಂತ್ರಿಗಳು ತಮ್ಮ ಮಗನಿಗೆ ಮದುವೆಮಾಡಿಕೊಳ್ಳುವರೇ ಎಂದೊಬ್ಬ ಸದಸ್ಯರು ನೇರಾದ ಪ್ರಶ್ನೆ ಹಾಕಿದರು. ಅದಕ್ಕೆ ತಮ್ಮದೇನೂ ವಿರೋಧವಿಲ್ಲವೆಂದೂ ಆದರೆ ಮದುವೆಯಾಗುವ ಗಂಡು-ಹೆಣ್ಣುಗಳ ಮನಸ್ಸು ಹೇಗಿದೆಯೋ ತಿಳಿಯ ಬೇಕಾಗುವುದೆಂದೂ ಬುದ್ಧಿವಂತಿಕೆಯ ಉತ್ತರವನ್ನು ಸವರ್ಣ ಮಂತ್ರಿಗಳು ಕೊಟ್ಟು, ಸದಸ್ಯರ ಬಾಯಿಮುಚ್ಚಿಸಿದರು.

ಮೇಲಿನೆರಡು ಸಾಮಾನ್ಯ ಘಟನೆಗಳಿಂದ ನಾವು ಕೆಲವು ಸಂಗತಿಗಳನ್ನು ತಿಳಿಯಬಹುದು—ಅದೇನೆಂದರೆ ಕೇವಲ ಪ್ರಚಾರದ ಸಾಧನವಾಗಿ ಅಂತರ್ಜಾತೀಯ ವಿವಾಹವನ್ನು ಪ್ರೋತ್ಸಾಹಿಸಲಾಗುತ್ತದೆ. ಹರಿಜನರ ಮತ್ತು ಇತರ ದಲಿತ ಬಂಧುಗಳ ಸಮಸ್ಯೆಗೆ ಇದನ್ನು ಸುಲಭ ಪರಿಹಾರ ಮಾರ್ಗವೆಂದು ಜನರ ಮುಂದೆ ಹೇಳುವವರು, ಸ್ವಂತದ ಪ್ರಶ್ನೆ ಬಂದಾಗ ಮಾತ್ರ ಜಾರಿ ಕೊಳ್ಳಲು ನೋಡುತ್ತಾರೆ. ಇದಕ್ಕೆ ಶಾಬ್ದಿಕ ಜಾಲವನ್ನು ಸೃಷ್ಟಿಸಿಕೊಳ್ಳುವ ಉಪಾಯ ಹೂಡುತ್ತಾರೆ. ಸರೋಪದೇಶ ಪಾಂಡಿತ್ಯರಲ್ಲಿ ಅವರದು ಎತ್ತಿದ ಕೈಯಾಗಿದೆಯೇ ಹೊರತು, ತಾವು ಸೂಚಿಸುವ ಪರಿಹಾರದಲ್ಲಿ ಅವರಿಗೇನೂ ದೃಢವಾದ ವಿಶ್ವಾಸವಿಲ್ಲ. ಈ ಪರಿಹಾರ ಮಾರ್ಗದ ಅನುಸರಣೆಯಿಂದ ಉಂಟಾಗಬಹುದಾದ ಪರಿಣಾಮಗಳನ್ನು ಎದುರಿಸುವ ಧೈರ್ಯವೂ ಅವರಲ್ಲಿಲ್ಲ. ಕಾರಣ, ಅಂತರ್ಜಾತೀಯ ವಿವಾಹವಾಗುವವರು ಯಾರು ಎಂಬ ಪ್ರಶ್ನೆ ಉತ್ತರಿಸಲ್ಪಡದೆ ಉಳಿಯುತ್ತದೆ. ಹಿರಿಯರ ಬೋಧನೆಯಿಂದ ಈ ರೀತಿಯ ವಿವಾಹಗಳು ಹೆಚ್ಚಿಕೊಳ್ಳಬಲ್ಲವೆ, ಎಲ್ಲ ಮದುವೆಗಳಂತೆ ಇಲ್ಲಿಯೂ ಗಂಡು-ಹೆಣ್ಣಿನ ಪರಸ್ಪರ ಒಪ್ಪಿಗೆ ಬೇಡವೆ ಎಂಬಿತ್ಯಾದಿ ಪ್ರಶ್ನೆಗಳೂ ಏಳುತ್ತವೆ

ಜಾತಿಯ ವ್ಯವಸ್ಥೆಯು ಭಾರತದ ಅಧಃಪತನವನ್ನು ತಂದೊಡ್ಡಿತು ಎಂದು ಹೇಳಲಾಗುತ್ತದೆ. ಇದನ್ನು ಎಷ್ಟರ ಮಟ್ಟಿಗೆ ಸತ್ಯವೆಂದು ಹೇಳಬಹುದೋ ತಿಳಿಯದು. ಆದರೆ ಇಷ್ಟು ಮಾತ್ರ ಹೇಳಬಹುದು, ಪ್ರಾಚೀನ ಸಂಪ್ರದಾಯಗಳಿಂದ ರೂಪುಗೊಂಡ ಜಾತಿ ವ್ಯವಸ್ಥೆಗೆ ಇಂದು ಮಹತ್ವವುಳಿದಿಲ್ಲ; ಅದಕ್ಕೆ ಅರ್ಥವೇ ಇಲ್ಲವೆನ್ನುವಷ್ಟು ಜಾತಿ ವ್ಯವಸ್ಥೆಯು ವಿರೋಧಾಭಾಸಕರ ಪರಿಸ್ಥಿತಿಯನ್ನು ವ್ಯವಹಾರದಲ್ಲಿ ವ್ಯಕ್ತಪಡಿಸುತ್ತದೆ. ಗುಣ ಮತ್ತು ಕರ್ಮಗಳಿಗನುಸಾರವಾಗಿ ನಾಲ್ಕು ವರ್ಣಗಳಾಗಿ ಜನರನ್ನು ವಿಂಗಡಿಸಲಾಯಿತೆಂದು ಗೀತೆಯು ಹೇಳುತ್ತದೆ. ಜಾತಿ ವ್ಯವಸ್ಥೆಗೆ ಈ ತಳಹದಿಯನ್ನು ಅನ್ವಯಿಸಿದರೆ ಇಂದು ಅನೇಕ ಹೊಸ ಜಾತಿಗಳ ಉದಯವಾಗಿದೆ ಎಂದೊಪ್ಪಬೇಕಾಗುತ್ತದೆ. ಉದಾಹರಣೆಗೆ, ಮಡಿವಾಳನ ಮಗನೂ ಇಂದು ಡಾಕ್ಟರನಾಗಬಲ್ಲನು; ವೈದಿಕ ಬ್ರಾಹ್ಮಣನ ಮಗನು ಹೋಟೆಲಿನ ವ್ಯಾಪಾರ ಮಾಡಬಲ್ಲನು. ಹರಿಜನನ ಮಗನು ಅಧಿಕಾರಿಯಾಗಬಲ್ಲನು; ಬಡಗಿಯ ಮಗನು ಸೈನಿಕನಾಗಬಲ್ಲನು. ಹೊಗಸರು ಸಹ ಹಿಂದಿನ ವೃತ್ತಿಗಳನ್ನು ಬಿಟ್ಟು ಗೊಟ್ಟು ಹೊಸ ಉದ್ಯೋಗಗಳಲ್ಲಿ ಕಾಲಿಡಬಲ್ಲರು. ಆದುದರಿಂದ ಕರ್ಮ ಮೂಲವಾದ ಜಾತಿಯು ಇಂದು ಸಂಪೂರ್ಣ ಬದಲಾಯಿಸಿದೆ-ಪಿಷ್ಟ ಕರ್ಮವೊಂದನ್ನು ಮಾಡಬಲ್ಲ ಯೋಗ್ಯತೆ ವ್ಯಾಪ್ತವಾಗಬೇಕಾದರೆ ಗುಣದಲ್ಲಿ ಬದಲಾವಣೆ ಅತ್ಯವಶ್ಯವೆಂದು ನಮಗೆ ತಿಳಿದೇ ಇದೆ—ವ್ಯಾಪಾರದ ಕರೆಯಲ್ಲಿ ಸಳಗುವಂತೆ ಕ್ಷತ್ರ ಗುಣಶೀಲಗಳನ್ನು ತಿದ್ದಿಕೊಂಡರೆ ಮಾತ್ರ ಈಗಿನ ಬ್ರಾಹ್ಮಣನು ಪ್ರಾಚೀನ ವೈಶ್ಯನಷ್ಟೇ ಕುಶಲವಾಗಿ ಹೋಟೆಲನ್ನು ನಡೆಸಬಲ್ಲನು; ಅನ್ಯಥಾ ದಿವಾಳಿ ಹೋಗಬೇಕಾದೀತು. ಆದುದರಿಂದ ಗುಣಕರ್ಮಗಳ ಬದಲಾವಣೆಯಿಂದ ಜಾತಿ ಪರಿವರ್ತನೆ ಆಗಿ ಹೋಗಿದೆ ಎಂದೊಪ್ಪಬೇಕಾಗುತ್ತದೆ.

ಪ್ರಾಚೀನ ಕಾಲದಿಂದಲೂ ಈ ರೀತಿ ಜಾತಿ ಪರಿವರ್ತನೆ ನಡೆದು ಬಂದಿದೆ—ಇಲ್ಲದಿದ್ದರೆ, ನಾಲ್ಕು ವರ್ಣಗಳ ಸ್ಥಾನದಲ್ಲಿ ಇಂದು ಮೂರು ಸಾವಿರಕ್ಕಿಂತಲೂ ಹೆಚ್ಚು ಜಾತಿಗಳನ್ನು ಹಿಂದುಗಳಲ್ಲಿ ಕಾಣಬೇಕಾಗುತ್ತಿರಲಿಲ್ಲ ಅನುಲೋಮ ವಿವಾಹಗಳಂತೆ, ವಿಲೋಮ ವಿವಾಹಗಳು ನಡೆಯುತ್ತಿದ್ದುದರಿಂದಲೂ ಈ ಜಾತಿ ವ್ಯವಸ್ಥೆ ಇಷ್ಟು ಕವಲುಗಳಾಗಿ ಒಡೆಯಿತೆಂದು ನಮ್ಮ ಪರಂಪರೆ ಹೇಳುತ್ತದೆ. ಇಂದು ಅಂತರ್ಜಾತೀಯ ವಿವಾಹಗಳ ಪ್ರೋತ್ಸಾಹದ ಮಾತನ್ನಾಡುವವರು ಈ ರೀತಿಯ ಮದುವೆಗಳು ಜಾತಿ ಪದ್ಧತಿಯನ್ನು ನಿರ್ಮೂಲಿಸುವ ಬದಲು ಹಿಂದಿನ ಪರಂಪರೆಯಂತೆ ನೂರಾರು ಹೊಸ ಜಾತಿಗಳಿಗೆ ಎಡೆಮಾಡಿಕೊಡಬೇಕೆ ಎಂಬ ಅಂಶವನ್ನು ಗಮನಿಸಿರುವಂತೆ ಕಾಣುವುದಿಲ್ಲ. ಬ್ರಾಹ್ಮಣ ಕನ್ನೆಗೆ ರೂಪ್ರನಿಂದ ಆಚನ್ನ ಬ್ರಹ್ಮಚಾರಿಯಾಗಿದ್ದ ಮುದುಕ ರೊಬ್ಬರನ್ನು "ನೀವೇಕೆ ಮದುವೆ ಮಾಡಿಕೊಳ್ಳಲಿಲ್ಲ' ಎಂದು ಪ್ರಶ್ನಿಸಲಾಯಿತು

ಅದಕ್ಕೆ ಅಧೀಕ್ಷಾಚಾರ್ಯರು ಹೀಗೆ ಉತ್ತರಿಸಿತ್ತರು— "ನಾನು ಆದರ್ಶ ಹೆಂಡತಿಯ ಶೋಧದಲ್ಲಿದ್ದೆ ಅನೇಕ ವರ್ಷಗಳ ತರುವಾಯ ನನಗೆ ಅಂಥ ಹೆಂಗಸೊಬ್ಬಳು ಸೋಡಸಿಕ್ಕಿದಳು. ಆವಳನ್ನು ಮದುವೆಯಾಗಬೇಕೆಂದಿದ್ದಾಗ ಇನ್ನೊಂದು ವಿಷಯ ತಿಳಿಯಿತು. ಅದೇನೆಂದರೆ ಆವಳು ಆದರ್ಶ ಗಂಡನ ಶೋಧನೆಯಲ್ಲಿದ್ದಳು ಹೀಗಾಗಿ ಮದುವೆ ನಡೆಯದೆ ಹೋಯಿತು."

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.,

ಸ್ಥಾಪನೆ. ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಭಂಡವಾಳ	ರೂ. 50,00,000	ಕ್ಷೇಮನಿಧಿ	ರೂ. 13,50,000
ಕೆತ್ತ ಭಂಡವಾಳ	ರೂ. 32,11,000	ಠೇವಣಾತಿಗಳು	ರೂ. 3,42,37,000
ಕೆತ್ತು ಬಂದ ಭಂಡವಾಳ	ರೂ. 25,52,152	ಚಲಾವಣೆ ಬಂದವಾಳ	ರೂ 6,58,98,000

[ತಾ. 31—12—1954ರಲ್ಲು]

ನಮ್ಮ ರಾಯಬೂರ (ಹೈದರಾಬಾದ ಸಂಸ್ಥಾನ) ಶಾಖೆಯು ಶೀಘ್ರದಲ್ಲೇ ತೆರೆಯಲ್ಪಡುವುದು.

ಬ್ಯಾಂಕಿನ 92 ಶಾಖೆಗಳು ಮುಂಬಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿದ್ದು ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ.

ಟಿ ಎ ಪೈ, ಬಿ ಕೋಂ (ಜೊಂ), ಎ.ಐ.ಜಿ.ಬಿ, ಎ.ಎಲ್.ಎ, ಜನರಲ್ ಮೆನೇಜರ್.

ಟಿ. ಎಂ. ಎ. ಪೈ ಎಂ.ಬಿ, ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S. India

(ಮೂರನೇ ಪುಟ ನೋಡಿರಿ)

ಉಕ್ಕು - ರಾಷ್ಟ್ರದ ಪ್ರಗತಿಯ ಅಡಿಗಲ್ಲು

ಉತ್ಪಾದನೆಯನ್ನು ಶೀಘ್ರದಲ್ಲಿ ಹೆಚ್ಚಿಸುವ ಕಾರ್ಯಕ್ರಮ

ನೆಹರು ಮತ್ತು ಬುಲ್ಗೇನಿನ್ನರ ಅಂಕಿತದಲ್ಲಿ ಮೋಸ್ಕೋದಿಂದ ಈಚೆಗೆ ಹೊರಟಿದ್ದ ಸಂಯುಕ್ತ ಪ್ರಕಟಣೆಯಲ್ಲಿ ಭಾರತ ಮತ್ತು ರಶ್ಯಗಳ ನಡುವೆ ತಾಂತ್ರಿಕ, ಔದ್ಯಮಿಕ, ಆರ್ಥಿಕ ಹಾಗು ಸಾಂಸ್ಕೃತಿಕ ಸಂಬಂಧಗಳು ಬೆಳೆದು ಬರಬೇಕೆಂಬ ಆಶೆ ವ್ಯಕ್ತಪಡಿಸಲ್ಪಟ್ಟಿದ್ದಿತು. ಉಭಯ ರಾಷ್ಟ್ರಗಳ ನಡುವೆ ಈಗಾಗಲೇ ಆಗಿರುವ ಐದು ವರ್ಷಗಳ ವ್ಯಾಪಾರ ಒಪ್ಪಂದ ಮತ್ತು ರಶ್ಯದ ನೆರವಿನಿಂದ ಭಾರತದ ಮುಗ್ಧಪ್ರದೇಶದಲ್ಲಿರುವ ಭಿಲಾಯಿಯಲ್ಲಿ ನಿರ್ಮಾಣವಾಗುವ ಉಕ್ಕಿನ ಕಾರ್ಖಾನೆಯನ್ನು ಸಹಕಾರದ ಮಾದರಿಯಾಗಿ ತೋರಿಸಿದ್ದರು.

೨೪ದ ಸರಕಾರ ಭಾರತದ ಎರಡನೆ ಪಂಚವಾರ್ಷಿಕ ಯೋಜನೆಗೆ ನೆರವೀಯಬಹುದೆಂದೂ ಹೇಳಲಾಗುತ್ತದೆ. ಅದು ಎಷ್ಟು ಸಹಾಯ ನೀಡಬಹುದೆಂಬುದು ಭವಿಷ್ಯಕ್ಕೆ ಸೇರಿದ ವಿಷಯ—ಆದರೆ, ಭಾರತವು ಅಭಿವೃದ್ಧಿ ಹೊಂದಬೇಕೆಂದು ರಶ್ಯ ಆಸೆಕ್ಷಿಸುತ್ತಿರುವುದನ್ನು ಅಲ್ಲಿಯ ಮುಖಂಡರು ಹೇಳಿಕೆಯಿಂದ ತಿಳಿದುಕೊಳ್ಳಬಹುದು. ಅಲ್ಲಿಯ ವಿದೇಶಾಂಗ ಸಚಿವ ಮೊಲೊಟೋಸರು ಸುಪ್ರೀಂ ಸೋವಿಯೆಟಿನ ಸಭೆಯಲ್ಲಿ ಕೆಲವು ತಿಂಗಳ ಹಿಂದೆ ಮಾತನಾಡುವಾಗ ಭಾರತದ ಪ್ರಗತಿ ಮತ್ತು ಸ್ವಾವಲಂಬನದ ದೃಷ್ಟಿಯಿಂದ ರಶ್ಯ ನೆರವೀಯುತ್ತಿದೆ ಎಂದಿದ್ದರು.

ನಿಜಕ್ಕೂ ಉಕ್ಕಿನ ಕಾರ್ಖಾನೆಯನ್ನು ಕಟ್ಟಲು ರಶ್ಯ ನೀಡುತ್ತಿರುವ ಸಹಾಯ ಶ್ಲಾಘನೀಯವಾಗಿದೆ—ಏಕೆಂದರೆ ಆಧುನಿಕ ಕಾಲದಲ್ಲಿ ಉಕ್ಕು ಮತ್ತು ಕಬ್ಬಿಣಗಳಿಲ್ಲದೆ ಪ್ರಗತಿ ಸಾಧಿಸುವುದು ಕನಸಿನ ಮಾತು. ಅಣು ಶಕ್ತಿಯು ಕರಗತವಾಗಿದೆ ಎಂಬುದು ನಿಜ—ಆದರೆ ಅದು ಉಕ್ಕು ಮತ್ತು ಕಬ್ಬಿಣಗಳ ಅವಶ್ಯಕತೆಯನ್ನು ಕಡಿಮೆಮಾಡಲಾರದು; ಹೆಚ್ಚಿಸುವುದೇ ಸಂಭವನೀಯ. ಅದರೆ ಭಾರತದಲ್ಲಿ ಇವುಗಳ ಉತ್ಪಾದನೆ ಬಹಳ ಕಡಿಮೆಯಾಗಿದೆ ಅಮೇರಿಕದಲ್ಲಿ ೧೨೦೦ ಲಕ್ಷ ಟನ್ನು, ರಶ್ಯದಲ್ಲಿ ೪೦೦ ಲಕ್ಷ ಟನ್ನು, ಜರ್ಮನಿ ಮತ್ತು ಬ್ರಿಟನುಗಳಲ್ಲಿ ೨೦೦ ಲಕ್ಷ ಟನ್ನು, ಲಕ್ಸೆಂಬರ್ಗಿನಂಥ ಸಣ್ಣ ಪ್ರದೇಶದಲ್ಲಿ ಸಹ ೩೦ ಲಕ್ಷ ಟನ್ನು ಉಕ್ಕು ಮತ್ತು ಕಬ್ಬಿಣ ಉತ್ಪಾದನೆಯಾಗುತ್ತಿರುವಾಗ, ಭಾರತದಲ್ಲಿ ಪಂಚವಾರ್ಷಿಕ ಯೋಜನೆಯಂತೆ ಎಲ್ಲ ವಿಸ್ತರಣೆಗಳನ್ನೂ ಪೂರೈಸಿದಲ್ಲಿ ಎರಡೂಕಾಲು ಲಕ್ಷ ಟನ್ನುಗಳಷ್ಟು ಮಾತ್ರ ಉತ್ಪಾದನೆ ಸಾಧ್ಯವಾಗುತ್ತದೆ. ಇದರಲ್ಲಿ ಉಕ್ಕಿನ ಅಂಶ ಒಂದೂವರೆ ಲಕ್ಷ ಟನ್ನುಗಳಿಗಿಂತ ಸ್ವಲ್ಪ ಹೆಚ್ಚಾಗುತ್ತದೆ

ಯೋಜನೆಯಂತೆ ೧೯೫೬ನೇ ವರ್ಷದಲ್ಲಿ ನಮ್ಮ ಉಕ್ಕಿನ ಬೇಡಿಕೆಯೊಂದೇ ಎರಡೂವರೆ ಲಕ್ಷ ಟನ್ನುಗಳನ್ನು ಮೀರುತ್ತದೆ. ಹಾಗಿರುವಾಗ ನಾವು ಹೊರದೇಶಗಳಿಂದ ತರಿಸದೆ ಇರುವುದೆಂತೋ ತಿಳಿಯದು. ಆದರೆ ಈಚೆಗೆ ಎರಡು ವರ್ಷಗಳಿಂದ ಸರಕಾರದವರು ಭಾರತದಲ್ಲಿ ಹೊಸ ಉಕ್ಕಿನ ಕಾರ್ಖಾನೆಗಳನ್ನು ರಚಿಸುವ ಕುರಿತು ವಿಶೇಷ ಆಸ್ಥೆ ತೋರಿಸುತ್ತಿದ್ದಾರೆ. ಪರಿಣಾಮದಲ್ಲಿ ರೂರ ಕೇಲಾದಲ್ಲಿ ಮತ್ತು ಭಿಲಾಯಿಯಲ್ಲಿ ಒಟ್ಟು ಇಪ್ಪತ್ತು ಲಕ್ಷ ಟನ್ನುಗಳಷ್ಟು ಉತ್ಪಾದನೆಯ ಸಾಮರ್ಥ್ಯ ಹೊಂದ ಎರಡು ಕಾರ್ಖಾನೆಗಳು ತಲೆ ಎತ್ತುತ್ತವೆ. ಇದಲ್ಲದೆ, ಬ್ರಿಟಿಷರ ಸಹಾಯದಿಂದ ದುರ್ಗಾಪುರದಲ್ಲಿ ನೂರನೆಯ ಕಾರ್ಖಾನೆಯೊಂದನ್ನು ತೆರೆದು ಮತ್ತೆ ಹತ್ತು ಲಕ್ಷ ಟನ್ನುಗಳಷ್ಟು ಉತ್ಪಾದನೆ ಹೆಚ್ಚಿಸುವ ವಿಚಾರವೂ ಸರಕಾರಕ್ಕೆ ಇದೆ. ಈ ಮೂರು ಕಾರ್ಖಾನೆಗಳು ಕೆಲಸ ಪ್ರಾರಂಭ ಮಾಡಿದರೆ, ಆಗ ೧೯೫೬ನೇ ಇಸವಿಯ ಸುಮಾರಿಗೆ ನಾವು ೬೦ ಲಕ್ಷ ಟನ್ನುಗಳಷ್ಟು ಕಬ್ಬಿಣ ಮತ್ತು ಉಕ್ಕನ್ನು ಉತ್ಪಾದಿಸಲು ಶಕ್ತರಾಗುತ್ತೇವೆ.

ಸರಕಾರದವರು ಉಕ್ಕಿನ ಉತ್ಪಾದನೆಯ ಮಹತ್ವವನ್ನು ಮನಗಂಡು ಈಗ ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನೆ ನೋಡುತ್ತಿರಲು ಪ್ರತ್ಯೇಕ ಇಲಾಖೆಯನ್ನು ರಚಿಸಿದ್ದಾರೆ; ಮತ್ತು ಶ್ರೀ ಟಿ. ಕೃಷ್ಣಮಾಚಾರಿಯವರನ್ನು ಈ ಖಾತೆಯ ಮಂತ್ರಿಗಳಾಗಿ ನೇಮಿಸಿದ್ದಾರೆ. ಇವರು ಉಕ್ಕಿನ ಉತ್ಪಾದನೆಯನ್ನು ಮಾಡಬಲ್ಲ ಕಾರ್ಖಾನೆಗಳನ್ನು ನೆಲೆಗೊಳಿಸುವ ಕುರಿತು ತಜ್ಞರೊಡನೆ ಮಾತುಕತೆಗೆ ತೊಡಗಿದ್ದಾರೆ. ರಶ್ಯದಲ್ಲಿ ಭಾರತದ ತಜ್ಞರ ತಂಡವೊಂದು ಇತ್ತೀಗೆ ಒದಗಿಸಲ್ಪಡುವ ಯಂತ್ರ ಸಾಮಗ್ರಿಗಳ ರಚನೆಯನ್ನು ಪರಿಶೀಲಿಸುತ್ತಿದೆ; ರಶ್ಯದ ತಜ್ಞರ ಸಂಗಡವೊಂದು ಭಾರತದಲ್ಲಿ ಕಾರ್ಖಾನೆ ಕಟ್ಟಲು ಸಿಗುವ ಸಿಮೆಂಟು ಮತ್ತು ದೊರಕುವ ಕಲ್ಲಿದ್ದಲಿನ ಮಾದರಿ ಇತ್ಯಾದಿಗಳನ್ನು ಪರೀಕ್ಷಿಸುತ್ತಿದೆ. ಭಿಲಾಯಿಯ ಕಾರ್ಖಾನೆಗೆ ಪ್ರತಿನಿತ್ಯ ೧೦೦೦ ಟನ್ನಿನಂತೆ ಎರಡು ವರ್ಷಗಳ ವರೆಗೆ ಸಿಮೆಂಟು ಬೇಕಾಗುತ್ತದೆ. ಎಂಬ ಒಂದೇ ವಿಷಯದಿಂದ ಈ ಕಾರ್ಖಾನೆಗಳ ಭವ್ಯತೆಯನ್ನು ಮನಗಾಣಬಹುದು.

ಭಿಲಾಯಿಯ ಕಾರ್ಖಾನೆ ೧೯೫೮ನೇ ಇಸವಿಯಷ್ಟು ಹೊತ್ತಿಗೆಯೇ ಅಂದರೆ ರೂರ್‌ಕೇಲಾದ ಕಾರ್ಖಾನೆಯೊಂದಿಗೆಯೇ ಉತ್ಪಾದನೆಯನ್ನು ಪ್ರಾರಂಭಿಸುವುದೆಂದು ತಿಳಿದು ಬರುತ್ತದೆ. ಈ ಕಾರ್ಖಾನೆಯು ೨೬ ಚದರ ಮೈಲು ವಿಸ್ತೀರ್ಣದ ೨೬ ಹಳ್ಳಿಗಳನ್ನು ಆವರಿಸುತ್ತದೆ. ಕಾರ್ಖಾನೆಗೆ ಸಂಬಂಧಿಸಿದ ಕೆಲಸಕ್ಕೆ ಏಳೂವರೆ ಸಾವಿರ ಜನರು ಬೇಕಾಗಬಹುದೆಂದು ಅಂದಾಜು. ಇಲ್ಲಿ ಶಾಶ್ವತವಾಗಿ ನೆಲೆನಿಲ್ಲುವ ಸಿಬಂಧಿಗೆ ವಸತಿಯ ಏರ್ಪಾಡು ನಡೆದಾಗ ೬೦೦೦೦ ಜನ ವಸತಿಯುಳ್ಳ ೧೦೦ ಚದರ ಮೈಲು ವಿಸ್ತೀರ್ಣದ ೫೦ ಹಳ್ಳಿಗಳನ್ನು ತೆರವು ಮಾಡಬೇಕಾಗುತ್ತದೆ. ರೂರ ಕೇಲದ ವಿಚಾರವೂ ಹೀಗೆಯೇ ಇದೆ. ಭಾರತೀಯ ತಜ್ಞರು ಜರ್ಮನಿ ಮತ್ತು ಕೆನಡಗಳಲ್ಲಿ ವಿಶೇಷ ಅನುಭವವನ್ನು ಪಡೆಯುತ್ತಿದ್ದಾರೆ. ಇನ್ನೆರಡು ತಿಂಗಳೊಳಗೆ ನೂರು ಮನೆಗಳನ್ನು ಕಟ್ಟಿಸಿ ಹಾಕುವ ಕೆಲಸವಲ್ಲದೆ, ಏಳು ಮೈಲುದ್ದದ ರಸ್ತೆಯೊಂದನ್ನು ರಚಿಸುವ ಕಾರ್ಯವೂ ಭರದಿಂದ ಮುನ್ನಡೆಯುತ್ತಿದೆ. ವಸತಿಯ ಇಪ್ಪತ್ತು ವಿಭಾಗಗಳಲ್ಲಿ ಹನ್ನೆರಡರ ಸರ್ವೆ ಕೆಲಸ ಮುಗಿದಿದೆ; ಪ್ರತಿಯೊಂದರಲ್ಲಿ ೫೦೦ ಮನೆಗಳಿರುವಂತೆ ಎರಡು ವಿಭಾಗಗಳ ನಕ್ಷೆಯನ್ನೂ ಈಗಾಗಲೇ ತಯಾರಿಸಲಾಗಿದೆ. ಇಲ್ಲಿಯ ಕೆಲಸಕ್ಕೆ ಐದು ಸಾವಿರ ಜನರು ಬೇಕಾದಾರು.

ಇದೇ ೧೭ನೇ ದಿನಾಂಕ ಇವೆರಡೂ ಕೇಂದ್ರಗಳಿಗೆ ಶ್ರೀ ಕೃಷ್ಣಮಾಚಾರಿಯವರು ಭೇಟಿಯನ್ನಿತ್ತು ಪ್ರಗತಿಯನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳುತ್ತಾರೆ. ಭಾರತದಲ್ಲಿ ಉಕ್ಕಿನ ಉತ್ಪಾದನೆಯ ಅವಶ್ಯಕತೆ ಎಷ್ಟಿದೆಯೋ ಅದಕ್ಕೆ ಸರಿಯಾದ ಪೂರೈಕೆಯನ್ನು ಒದಗಿಸುವ ಹೊಣೆ ಅವರ ಮೇಲಿದೆ ಅದರೆ, ನಮ್ಮ ದೇಶದಲ್ಲಿ ಉಕ್ಕಿನ ಉತ್ಪಾದನೆಯ ಪ್ರಥಮ ಯತ್ನಸ್ವಿ ಪ್ರಯತ್ನ ನಡೆಸಿದ ಶ್ರೇಯಸ್ಸು ದಿವಂಗತ ಜಮ್‌ಶೆಡ್‌ಜೀ ಟಾಟಾರಿಗೆ ಸಲ್ಲುತ್ತದೆ. ಮದ್ರಾಸಿನಲ್ಲಿ ೧೮೩೭ ರಲ್ಲಿ ಸುಮಾರು ೪೦ ಟನ್ನುಗಳಷ್ಟು ಕಬ್ಬಿಣವನ್ನು ಪ್ರತಿ ವಾರ ಉತ್ಪಾದಿಸುತ್ತಿದ್ದ ಒಂದು ಕಾರ್ಖಾನೆ ತೆರೆಯಲ್ಪಟ್ಟಿದ್ದರೂ ೧೮೭೪ನೇ ಇಸವಿಯ ಹೊತ್ತಿಗೆ ಪದೇ ಪದೇ ತೊಂದರೆಗಳುಂಟಾದ ಮೂಲಕ ಈ ಸಾಹಸವನ್ನು ಕೊನೆಗಾಣಿಸಬೇಕಾಯಿತು. ಆ ಮೇಲೆ ಟಾಟಾರು ಇಂಥ ಸಾಹಸ ಕೈಗೊಂಡರು; ಇವರಲ್ಲಿ ಜಯಶೀಲರಾಗಿ ಭಾರತದ ಕೈಗಾರೀಕರಣಕ್ಕೆ ಮತ್ತು ಔದ್ಯಮಿಕ ಕ್ರಾಂತಿಗೆ ಕಾರಣಭೂತರಾದರು. ದಕ್ಷಿಣದ ಮೈಸೂರಿನಲ್ಲಿ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ತೆರೆದು ದೇಶದ ಈ ಭಾಗದ ಮುನ್ನಡೆಗೆ ನೆರವಾದರು.

ಭಾರತೀಯ ಪರಂಪರೆಯನ್ನು ನೋಡಿದರೆ ಕೃತ ಯುಗವನ್ನು ಚಿನ್ನದ, ತ್ರೇತಾ ಯುಗವನ್ನು ಬೆಳ್ಳಿಯ, ದ್ವಾಪರ ಯುಗವನ್ನು ಹಿತ್ತಾಳೆಯ ಮತ್ತು ಕಲಿಯುಗವನ್ನು ಕಬ್ಬಿಣದ ಕಾಲ ಎಂದು ಪರಿಗಣಿಸಿರುವುದು ವೇದ್ಯವಾಗುತ್ತದೆ. ಕಬ್ಬಿಣವನ್ನು ಕಂಡು ಹಿಡಿದು, ಅದನ್ನು ಉಪಯೋಗಿಸಲು ಬಳಸಿಕೊಂಡ ಕಾಲವು ಮಾನವನ ಪ್ರಗತಿಯಲ್ಲಿ ನಿಜಕ್ಕೂ ಒಂದು ಮೈಲುಗಲ್ಲಾಯಿತು. ಇತಿಹಾಸಕಾರರ ಅಭಿಪ್ರಾಯದಂತೆ, ನವಶಿಲಾಯುಗದ ದಿನಗಳಲ್ಲಿ ಕಾಡುಗಳಿಗೆ ಬೆಂಕಿ ಹಿಡಿದುಕೊಂಡು ಲೋಹಗಳ ಅದುರುಗಳು ಕರಗಿ ಹತ್ತಿದಾಗ, ಈ ಲೋಹಗಳನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸುವುದು ಸಾಧ್ಯವೆಂದು ಆಗಿನ ಜನರು ತಿಳಿದರು. ಅಷ್ಟರ ವರೆಗೆ ಸಿಕ್ಕಿದ ಕಬ್ಬಿಣ ಇತ್ಯಾದಿ ಲೋಹದ ತುಂಡುಗಳನ್ನೆ ಹತ್ಯಾರುಗಳಾಗಿ ಉಪಯೋಗಿಸುತ್ತಿದ್ದ ಮತ್ತು ಒರಟು ರೀತಿಯಲ್ಲಿ ಅವುಗಳನ್ನು ದೇವತೆಗಳ ವಿಗ್ರಹಗಳಾಗಿ ಮಾರ್ಪಡಿಸುತ್ತಿದ್ದ ವಿಧಾನವು ತುಂಬ ಪರಿಶ್ಚಾರಗೊಳ್ಳಲು ಇದರಿಂದ ನೆರವಾಯಿತು. ಚಿಕ್ಕ ಅಗ್ನಿಶಿಕೆಗಳನ್ನೂ ಕುಲುಮೆಗಳನ್ನೂ ರಚಿಸಿಕೊಂಡು ಜನರು ತಮಗೆ ಬೇಕಾದ ಉಪಕರಣಗಳನ್ನು ತಯಾರಿಸಲು ಕಲಿತುಕೊಂಡರು.

ನಮ್ಮ ದೇಶದಲ್ಲಿ ಕಬ್ಬಿಣದ ಯುಗವು ಕ್ರಿಸ್ತ ಪೂರ್ವ ೧೫೦೦ ವರ್ಷಗಳಷ್ಟು ಹಿಂದೆ, ಅಂದರೆ ಐರೋಪ್ಯ ರಾಷ್ಟ್ರಗಳು ಕಬ್ಬಿಣದ ಧಾರಾಳ ಉಪಯೋಗವನ್ನು ಮಾಡಿಕೊಳ್ಳುವುದಕ್ಕೆ ೩೦೦೦ ವರ್ಷಗಳ ಪೂರ್ವದಲ್ಲಿ, ಉಚ್ಛ್ರಾಯಾಸ್ಥಿಯನ್ನು ಮುಟ್ಟಿದ್ದಿತು. ಋಗ್ವೇದದಲ್ಲಿ ಕಬ್ಬಿಣ ಹಾಗು ಇತರ ಲೋಹಗಳಿಂದ ತಯಾರಿಸಲಾದ ಅನೇಕ ಆಯುಧಗಳ ಉಲ್ಲೇಖವಿದೆಯಲ್ಲದೆ ಆರ್ಯರಿಗೆ ಹಿಂದಿನ ಕಾಲದಲ್ಲಿ ಅವುಗಳ ಬಳಕೆ ಇದ್ದಂತೆಯೂ ಇದರಿಂದ ವ್ಯಕ್ತವಾಗುತ್ತದೆ ಆದುದರಿಂದ ಭಾರತವು ಮಾನವ ನಾಗರಿಕತೆಯ ಚರಿತ್ರೆಯಲ್ಲಿ ಸರ್ವ ಪ್ರಥಮವಾಗಿ ಕಬ್ಬಿಣ ಮತ್ತು ಇತರ ಲೋಹಗಳ ಉಪಯೋಗವನ್ನು ಮನವರಿಕೆ ಮಾಡಿಕೊಂಡ ದೇಶವೆಂಬುದು ನಿರ್ವಿವಾದ ಹೈದರಾಬಾದು ಮತ್ತು ಮದ್ರಾಸು ಪ್ರದೇಶಗಳಲ್ಲಿ ಆಗ ವಿಶೇಷ ರೀತಿಯ ಉಕ್ಕನ್ನು ತಯಾರಿಸುತ್ತಿದ್ದರು; ಇವನ್ನು ಹರಿತವಾದ ಬದಿಯುಳ್ಳ ಲಕಲಕಿಸುವ ಖಡ್ಗಗ

(೧೧ನೇ ಪುಟ ನೋಡಿರಿ)

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ಸಮೃದ್ಧಿಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮುಖಾರ ಗಲ್ಲಿ, ಹುಬ್ಬಳ್ಳಿ.

ಹಂಪೆ - ವಿಜಯನಗರದ ಕಲೆಯ ನೆಲೆವೀಡು

ಕದಂಬ-ಹೊಯ್ಸಳ ಶಿಲ್ಪ ವೈಭವದ ರಮ್ಯ ಸಂಗಮ

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಕಳೆದ ವಾರ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡಿದ್ದರು. ತಮ್ಮ ಪ್ರವಾಸ ಕಾಲದಲ್ಲಿ ಅವರು ಹಂಪೆಯ ಅವಶೇಷಗಳನ್ನು ನೀರೀಕ್ಷಿಸುವುದಕ್ಕೆ ಸ್ವಲ್ಪ ಸಮಯವನ್ನು ವಿನಿಯೋಗಿಸಿದರು ವಾಸ್ತು ಸಂಶೋಧನ ಖಾತೆಯ ದಕ್ಷಿಣ ವಿಭಾಗದ ಸೂಪರಿಂಟೆಂಡೆಂಟರಾದ ಶ್ರೀ ಕೆ. ಆರ್. ಶ್ರೀನಿವಾಸನ್ನರು ರಾಷ್ಟ್ರಾಧ್ಯಕ್ಷರಿಗೆ ಪ್ರತಿಯೊಂದೂ ಶಿಲ್ಪಕೃತಿಯನ್ನು ವಿವರಿಸಿ ಹೇಳಿದರು. ಕನ್ನಡಿಗರ ಬಾವುಟವು ಸುಮಾರು ಮೂರು ಶತಮಾನಗಳ ವರೆಗೆ ಹಾರುತ್ತಿದ್ದ ವಿಜಯ ನಗರ ಸಾಮ್ರಾಜ್ಯದ ವೈಭವದ ಕತೆಯನ್ನು ರಾಷ್ಟ್ರಾಧ್ಯಕ್ಷರು ತುಂಬ ಕುತೂಹಲದಿಂದ ಕೇಳಿಕೊಂಡರು.

ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಕೇಂದ್ರ ರೈಲ್ವೆ ಇಲಾಖೆಯ ಮಂತ್ರಿ ಶ್ರೀ ಲಾಲ್‌ಬಹಾದ್ದೂರ್ ಶಾಸ್ತ್ರಿಗಳವರು ವಾಣಿಜ್ಯ ಮಂತ್ರಿ ಶ್ರೀ. ದ. ಪ. ಕರ್ ಮರ್ಕರ್ ಮತ್ತು ಬಳ್ಳಾರಿಯ ಎಂ. ಪಿ. ಗಳಾದ ಶ್ರೀ ಟೇಕೂರ್ ಸುಬ್ರಹ್ಮಣ್ಯಮ ರೊಂದಿಗೆ ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸಿದರು. ತತ್ಪರಿಣಾಮವಾಗಿ ಈ ಪ್ರದೇಶದಲ್ಲಿ ರೈಲು ಅನುಕೂಲತೆಯ ವಿಸ್ತರಣೆಯ ಭಂವಸೆಯು ಅವರಿಂದ ದೊರಕಿತಲ್ಲದೆ, ಹಂಪೆಯ ಅವಶೇಷಗಳನ್ನೂ ತುಂಗಭದ್ರೆಯ ಅಣೆ ಕಟ್ಟನ್ನೂ ಸಂದರ್ಶಿಸಲು ಬಯಸುವವರ ಸೌಕರ್ಯಕ್ಕೋಸ್ಕರ ಪ್ರವಾಸ ಕೇಂದ್ರವೊಂದನ್ನು ಸ್ಥಾಪಿಸುವ ಆಶ್ವಾಸನೆಯೂ ಸಿಕ್ಕಿತು. ಪರ ದೇಶಗಳಿಂದ ಸಹ ಪ್ರವಾಸಿಕರನ್ನು ಸೆಳೆಯಬಲ್ಲ ರೀತಿಯ ಎಲ್ಲ ಅನುಕೂಲತೆಗಳಿರುವ ಈ ಕೇಂದ್ರವನ್ನು ಮುನಿರಾಬಾದಿನಲ್ಲಿ ಅಥವಾ ಹಂಪೆಯ ಹೆಬ್ಬಾಗಿಲಿನಂತಿರುವ ಕಮಲಾಪುರದಲ್ಲಿ ತೆರೆಯಲಾಗುವುದೆಂದು ತಿಳಿದುಬರುತ್ತದೆ.

ಹಂಪೆಯು ಇಂದು ಹಾಳು ಕೊಂಪೆಯಂತೆ ಕಂಡುಬಂದರೂ ಸಹ, ಒಂದು ಕಾಲದಲ್ಲಿ ಅದು ಸಾವಿರಾರು ಪ್ರೇಕ್ಷಕರನ್ನು ಭಾರತದ ಮೂಲೆ ಮೂಲೆಗಳಿಂದಷ್ಟೇಯಲ್ಲ, ವಿದೇಶಗಳಿಂದಲೂ ಆಕರ್ಷಿಸುತ್ತಿದ್ದಿತು. ವಿಜಯನಗರ ಸಾಮ್ರಾಜ್ಯದ ಕುರಿತು ನಮಗೇನು ತಿಳಿದಿದೆಯೊ ಅನೆಲ್ಲ ಪಾಯಿಸ್, ಅಬ್ದುಲ್ ರಜಾಕ್ ಮುಂತಾದ ವಿದೇಶೀಯರು ಬರೆದಿಟ್ಟ ಸಂದರ್ಶನಾನುಭವಗಳನ್ನೆ ಹೆಚ್ಚಾಗಿ ಆಧರಿಸಿವೆ. ಇವತ್ತಿಗೆ ಹಂಪೆಯು ಬಳ್ಳಾರಿಯಿಂದ ೩೪ ಮೈಲು ಸುತ್ತು ಹೊಸ ಪೇಟೆಯಿಂದ ೮ ಮೈಲು ದೂರದಲ್ಲಿದೆ ಅಲ್ಲಿಯ ಭಗ್ನಾವಶೇಷಗಳು ದಕ್ಷಿಣದ ಕಮಲಾಪುರದಿಂದ ಉತ್ತರದ ಆನೆಗೊಂದಿಯ ವರೆಗೆ ೧೯ ಚದರವೈಲು ವಿಸ್ತೀರ್ಣದಲ್ಲಿ ನೋಡಸಿಗುತ್ತವೆ. ಹಂಪೆಯನ್ನು ತುಂಗಭದ್ರೆಯು ಸೀಳಿಕೊಂಡು ಹೋಗುತ್ತದೆಯಾದರೂ ನದಿಯನ್ನು ದಾಟದೆ, ದಕ್ಷಿಣ ಭಾಗದಲ್ಲಿ ಹೆಚ್ಚಿನ ಅವಶೇಷಗಳನ್ನು ನೋಡಬಹುದು.

ಹುಕ್ಕ ಮತ್ತು ಬುಕ್ಕ ಎಂಬ ಸಹೋದರರು ಕ್ರಿಸ್ತ ಶಕ ೧೩೩೬ನೇ ಇಸವಿಯಲ್ಲಿ ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯವು ತಾಳಿಕೋಟೆಯ ಯುದ್ಧವು ೧೫೬೫ನೇ ಇಸವಿಯಲ್ಲಿ ನಡೆದಾಗ ರಾಮರಾಯನು ಮುಸ್ಲಿಮರಿಂದ ಸೋಲಿಸಲ್ಪಟ್ಟುದರಿಂದ ಅವಸಾನವನ್ನು ಹೊಂದಿತು. ಹಂಪೆಯಂಥ ಕಗ್ಗಾಡಿನಲ್ಲಿ ಕನ್ನಡಿಗರ ಧ್ವಜವನ್ನು ಹಾರಿಸಲು ವಿದ್ಯಾರಣ್ಯರು ಮುಂದಾದುದಕ್ಕೆ ಬೇಟೆಯ ನಾಯಿಗಳನ್ನು ಇಟ್ಟಿಯ ಮೊಲಗಳು ಓಡಿಸಿದ ಕತೆ ಜನಜನಿತವಾಗಿದ್ದರೂ ಅದರಲ್ಲಿ ಹೆಚ್ಚು ನಂಬಿಕೆಯನ್ನಿಡಲು ಮನಸ್ಸೊಪ್ಪುವುದಿಲ್ಲ ಆದರೆ ಹಂಪೆಯ ಪ್ರಾಚೀನ ಪರಂಪರೆ ಮತ್ತು ಅಲ್ಲಿಯ ಸ್ಥಳ ಮಹತ್ವಗಳ ದೆಸೆಯಿಂದಲೇ ಸಾಮ್ರಾಜ್ಯವೊಂದರ ಕೇಂದ್ರ ಸ್ಥಾನವಾಗಿ ಅದನ್ನು ರೂಪಿಸಲು ವಿದ್ಯಾರಣ್ಯರು ಸಲಹೆ ನೀಡಿದರೆಂದು ಭಾವಿಸಲು ಅಡ್ಡಿಯಿಲ್ಲ.

ನಗರವನ್ನು ಕಟ್ಟಲು ೧೩೬೮ನೇ ಇಸವಿಯಲ್ಲಿ ಕೆಲಸವನ್ನು ಹೊಡಗಲಾಯಿತೆಂದೂ ಹತ್ತು ವರ್ಷಗಳಲ್ಲಿ ಅದನ್ನು ಪೂರೈಸಲಾಯಿತೆಂದೂ ಗೊತ್ತಾಗುತ್ತದೆ. ೦೦ ದಿನಿಂದ ಸಾಮ್ರಾಜ್ಯದ ವಿಸ್ತಾರ ಮತ್ತು ವೈಭವಗಳು ಹೆಚ್ಚಿದಂತೆ ಹಂಪೆಯ ಸೌಂದರ್ಯ ವೃದ್ಧಿಯೂ ಆಯಿತು. ಹಂಪೆಯಲ್ಲಿ ಶ್ರೀ ವಿರೂಪಾಕ್ಷ ಸ್ವಾಮಿಯ ಮಂದಿರವಿದೆ— ಇದು ಬಹಳ ಪ್ರಾಚೀನ ದೇವಾಲಯ ಚಾಳುಕ್ಯ ರಾಜನಾದ ವಿನಯಾದಿತ್ಯ ಸತ್ಯಾಶ್ರಯನ (ಕ್ರಿ. ಶ ೬೯೦) ದಾನ ಶಾಸನದಲ್ಲಿ ಹಂಪೆಯ ವಿರೂಪಾಕ್ಷ ಮಂದಿರದ ಉಲ್ಲೇಖವಿದೆ. ಚಾಳುಕ್ಯರ ಇನ್ನೊಬ್ಬ ಅರಸು ಜಗದೇಕಮಲ್ಲ ಜಯಸಿಂಹ (ಕ್ರಿ. ಶ. ೧೦೧೮), ಚೋಳ ರಾಜರಾದ ಪ್ರಥಮ ಹಾಗು ತೃತೀಯ ರಾಜರಾಜ (ಕ್ರಿ. ಶ. ೧೧ ಮತ್ತು ೧೩ನೇ ಶತಕಾನ) ಇದನ್ನು ಸಂದರ್ಶಿಸಿದಾಗ ಹಂಪೆಯು ಪ್ರಖ್ಯಾತ ಪಟ್ಟಣವಾಗಿದ್ದಿತು. ಚತುಷ್ಟಮಯ ಸಮುದ್ಧರಣ ಎಂದು ಹೆಸರಾದ ಹೊಯ್ಸಳ ಅರಸು ತೃತೀಯ ವೀರಬಲ್ಲಾಳನ ಅಜ್ಞ ಸೋಮೇಶ್ವರನು ಕ್ರಿ. ಶ. ೧೩೩೬ರಲ್ಲಿ ಹಂಪೆಯ ವಿರೂಪಾಕ್ಷನಿಗೆ ಅಂಬಲಿಯನ್ನು ಬಿಟ್ಟಿದ್ದನು ಕಂಪಾಪತಿ ಎಂದು ಹೆಸರಾದ ಈ ದೇವರ ಸನ್ನಿಧಿಯನ್ನು ಆರಿಸುವುದರಿಂದ ಶ್ರೇಯಸ್ಸಿದೆ ಎಂದು ವಿದ್ಯಾರಣ್ಯರು ಕಂಡುಕೊಂಡರೆಂದು ಮೇಲಿನ ಐತಿಹಾಸಿಕಾಂಶಗಳಿಂದ ನಾವು ಊಹಿಸಬೇಕಾಗುತ್ತದೆ.

ಶುಕ್ರ ನೀತಿಯಲ್ಲಿ ಸಾಮ್ರಾಜ್ಯದ ರಾಜಧಾನಿ ಹೇಗಿರಬೇಕೆಂದು ವರ್ಣಿಸಲ್ಪಟ್ಟಿದೆಯೋ—ಅದಕ್ಕೆ ಚ್ಯುತಿ ಇಲ್ಲದ ರೀತಿಯಲ್ಲಿ ಹಂಪೆ ಇದ್ದಿತು. ಸಮುದ್ರದ ಕರಾವಳಿಗೆ ಹತ್ತಿರವಿರಲಿಲ್ಲ ಮತ್ತು ವೈದಾನು ಸ್ಥಳವಾಗಿರಲಿಲ್ಲ ಎಂಬ ಎರಡೇ ಅಪವಾದಗಳನ್ನು ಹೇಳಬಹುದು— ಆದರೆ, ಇದರಿಂದ ಸಾಮ್ರಾಜ್ಯದ ಉನ್ನತಿಗೆ ಯಾವ ತೊಂದರೆಯೂ ಆಗಲಿಲ್ಲವೆಂಬುದನ್ನು ಗಮನಿಸಬೇಕು. ಶ್ರೀ ಕೃಷ್ಣದೇವರಾಯನ ಕಾಲದಲ್ಲಿ ಕಲ್ಲಿಕೋಟೆಯಷ್ಟೇ ಭವ್ಯವಾದ ಒಟ್ಟು ಮುನ್ನೂರು ಬಂದರುಗಳು ವಿಜಯನಗರ ಸಾಮ್ರಾಜ್ಯವು ಆವರಿಸಿದ್ದ ತುಂಗಭದ್ರೆಯ ದಕ್ಷಿಣದ ಭಾರತದಲ್ಲಿದ್ದವೆಂದು ಪರ್ಶಿಯದ ರಾಯಭಾರಿ ಅಬ್ದುಲ್ ರಜಾಕನ ಹೇಳಿಕೆಯಿಂದ ಗೊತ್ತಾಗುತ್ತದೆ ಈ ಬಂದರುಗಳಿಂದ ಪಶ್ಚಿಮಕ್ಕೆ ಪೋರ್ಚುಗಾಲಿನ ವರೆಗೆ ಮತ್ತು ಪೂರ್ವಕ್ಕೆ ಚೀನದ ವರೆಗೆ ಸಮೃದ್ಧ ವ್ಯಾಪಾರ ನಡೆಯುತ್ತಿದ್ದಿತು. ನಿಜ ಹೇಳಬೇಕೆಂದರೆ ಗೋವೆಯಲ್ಲಿ ಬೀಡು ಬಿಟ್ಟಿದ್ದ ಪೋರ್ಚುಗೀಜರೊಡನೆ ಶ್ರೀ ಕೃಷ್ಣದೇವರಾಯನು ಬಹಳ ಮೈತ್ರಿಯಿಂದಿದ್ದನು; ಮತ್ತು ತನ್ನ ಸೇನೆಯ ಅಭಿವೃದ್ಧಿ ಕಾರ್ಯಕ್ಕೆ ಪೋರ್ಚುಗೀಜರ ನೆರವನ್ನು ಪಡೆದಿದ್ದನು

ಏರು ತಗ್ಗುಗಳಿಂದ ಹಂಪೆ ತುಂಬಿದ್ದರೂ ಅದರ ಭವ್ಯತೆಗೆ ಸ್ವಲ್ಪವೂ ಚ್ಯುತಿ ಬರಲಿಲ್ಲ. ಏಕೆಂದರೆ, ಇದನ್ನು ವರ್ತುಲಾಕಾರದಲ್ಲಿ ಸುತ್ತುವರಿದಿದ್ದ ಬೇಮುಕೂಟ, ಋಷ್ಯಶೃಂಗ, ಪಾಪುಂಗ, ಅಂಜನಾದೇವಿ ಪರ್ವತ, ಮಾಲ್ಯವಂತ, ಸುಗ್ರೀವ, ಜಾಂಬವಂತ ಈ ಬೆಟ್ಟಗಳ ಸಾಲುಗಳು ರಾಜಧಾನಿಗೆ ಒಳ್ಳೆಯ ರಕ್ಷಣೆಯನ್ನು ಒದಗಿಸಿದವೆಂದು ಭಾವಿಸಲು ಎಡೆಯಿದೆ. ಈ ಪರ್ವತಾವಳಿಗಳ ಕವಚವು ಹೊರತಾಗಿ ಬೇರೆ ಏಳು ಸುತ್ತಿನ ಸಂರಕ್ಷಣ ವ್ಯವಸ್ಥೆಗಳಿದ್ದವೆಂದು ಇತಿಹಾಸಕಾರರು ಬರೆದಿಟ್ಟಿದ್ದಾರೆ. ಹದಿನೈದನೇ ಶತಮಾನದಲ್ಲಿ ಹಂಪೆಯ ಸುತ್ತಳತೆ ೦೦ ಮೈಲುಗಳಷ್ಟಿದ್ದಿತೆಂದೂ ಹೊಸ ಪೇಟೆಯ ನೈಋತ್ಯದಿಂದ ಹೊರ ಕೋಟೆಯು ತೆಂಡಗಿ ಹಗಿನ ಹೊಸ ಪೇಟೆ, ಹೊಸ ಪೇಟೆಯ ಉತ್ತರ ಭಾಗ, ಮಲ್ಲನ ಗುಡಿ ಗ್ರಾಮದ ದಕ್ಷಿಣ ಭಾಗ, ಅದರ ಉತ್ತರದಲ್ಲಿ ಕಂಡು ಬರುವ ಹೆಬ್ಬಾಗಿಲು, ಕಮಲಾಪುರದ ಕೆರೆಯ ದಕ್ಷಿಣ ಪಾರ್ಶ್ವ—ಇಲ್ಲಿ ಆರು ಪ್ರಾಕಾರಗಳು ಇದ್ದವೆಂದೂ ಏಳನೆಯ ಒಳ ಕೋಟೆಯು ಸೂರ್ಯದಿಂದ ಪಶ್ಚಿಮಕ್ಕೆ ಎರಡೂ ಮುಕ್ಕಾಲು ಮೈಲು ಮತ್ತು ಉತ್ತರದಿಂದ ದಕ್ಷಿಣಕ್ಕೆ ಒಂದು ಮೈಲು ಹಾಹತ್ತೆಂದೂ ಸೀವೆಲ್ಲರ ಹೇಳಿಕೆಯು ಸ್ಪಷ್ಟಪಡಿಸುತ್ತದೆ.

ವಿಜಯ ನಗರದ ಅರಸುಗಳು ಸಾಂಸ್ಕೃತಿಕ ಕ್ಷೇತ್ರದ ಉನ್ನತಿಗೆ ನೀಡಿದ ಪ್ರೋತ್ಸಾಹವನ್ನು ಎಷ್ಟು ಒಣ್ಣಿಸಿದರೂ ಸಾಲದು. ಶಿಲ್ಪ ಮತ್ತು ಸಾಹಿತ್ಯ ಸೃಷ್ಟಿಗೆ ಅವರು ತುಂಬ ಉತ್ತೇಜನೆಯನ್ನು ಕೊಟ್ಟರು; ನರ್ತನ, ಸಂಗೀತ, ಚಿತ್ರಾದಿಗಳ ಬೆಳವಣಿಗೆಗೆ ಸಹ ಅವರು ಉದಾರವಾದ ಬೆಂಬಲವನ್ನು ನೀಡಿದರು. ಅವರ ಆಡಳಿತದ ಕಾಲದಲ್ಲಿ ಜಾತಿ, ಮತ ಮತ್ತು ಪಂಗಡಗಳ ಮೇಲೆ ಯಾರೊಬ್ಬರೂ ಜಗಳಾಡುತ್ತಿರಲಿಲ್ಲ. ಹಿಂದೂ ದರ್ಶನದ ಮೂಲ ಭೂತ ಆದರ್ಶವನ್ನು ವಿಜಯ ನಗರದ ಅರಸರು ಎತ್ತಿಹಿಡಿದಿದ್ದರು. ಜೈನರು, ಲಿಂಗಾಯತರು, ಶೈವರು, ವೈಷ್ಣವರು ಎಲ್ಲರಿಗೂ ನೆಮ್ಮದಿಯಿಂದ ಬಾಳಲು ಅರಸರು ವ್ಯವಸ್ಥೆ ಮಾಡಿದ್ದರು. ಸತ್ಯಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವುದು, ಪರರ ಆಸ್ತಿಯ ಅಪಹಾರಕ್ಕೆ ಪ್ರಯತ್ನಿಸದಿರುವುದು, ಇಂದ್ರಿಯ ಸಂಯಮವನ್ನು ಸಾಧಿಸುವುದು ಧರ್ಮದ ಮೂಲ ತತ್ವವೆಂದು ಮನುಷ್ಯನ ಮಾತಿನಂತೆ ನಿಜಯ ನಗರದ ಅರಸರು ನಡೆದುಕೊಂಡು ದೂರ್ವ ಪದ್ಧತಿ ಮತ್ತು ಮರ್ಯಾದೆಯನ್ನು ಗೌರವಿಸುತ್ತಾ ಬಂದಿ

(೧೦ನೇ ಪುಟ ನೋಡಿರಿ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18	ರೂ. 15
ಹೋಲ್ ಲೈಫ್ ಎಶ್ಯೂರೆನ್ಸಿಗೆ	ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಪ್ರಜಾಸಮಾಜವಾದಿ ಪಕ್ಷದಲ್ಲಿ ತೀವ್ರ ಬಿಕ್ಕಟ್ಟು

ಭಾರತೀಯ ಕಮ್ಯೂನಿಸ್ಟರಿಗೆ ಸಂಯುಕ್ತ ರಂಗದ ಹಗಲುಗನಸು

ಅಧಿಕಾರಾರೂಢವಾದ ಕಾಂಗ್ರೆಸಿನ ಪ್ರತಿಪಕ್ಷ ಸ್ಥಾನದಲ್ಲಿರುವ ಪ್ರಜಾಸಮಾಜವಾದಿ ಮತ್ತು ಕಮ್ಯೂನಿಸ್ಟರ ಗುಂಪುಗಳಲ್ಲಿ ಒಡಕುಗಳು ಮತ್ತು ಧೋರಣೆಯ ಬದಲಾವಣೆಗಳು ಈಗ ಕಂಡು ಬರತೊಡಗಿವೆ. ಸಮರ್ಥ ಪ್ರತಿಪಕ್ಷವೊಂದಿರಬೇಕು, ಮತ್ತು ಅದು ಪ್ರಜಾಪ್ರಭುತ್ವದಲ್ಲಿ ಗಾಢವಾದ ವಿಶ್ವಾಸವನ್ನು ವ್ಯಕ್ತಪಡಿಸಿರಬೇಕು ಎಂದು ಭಾವಿಸಿದ್ದ ಜನತೆಗೆ ಪ್ರಜಾಸಮಾಜವಾದಿ ಪಕ್ಷ ಅಂಥದೊಂದು ಜೊಣಗಾರಿಕೆಯನ್ನು ಹೊರಬಹುದು ಎಂಬ ಅಭಿಪ್ರಾಯ ಒಂದೆರಡು ವರ್ಷಗಳ ಹಿಂದೆ ಇದ್ದಿತು. ಆದರೆ ಈಗ ಆ ನಿರೀಕ್ಷೆ ವಿಫಲವಾಗಿದೆ ಎಂದರೆ ತಪ್ಪಾಗದು.

ಪಕ್ಷದೊಳಗೆ ಬಿಕ್ಕಟ್ಟು

ಪ್ರಜಾಸಮಾಜವಾದಿಗಳಲ್ಲಿ ತೀವ್ರ ಬಿಕ್ಕಟ್ಟು ಈಗ ತಲೆದೋರಿದೆ. ಈ ಪಕ್ಷದಲ್ಲಿ ಡಾ. ರಾಮ ಮನೋಹರ ಲೋಹಿಯರು ಒಬ್ಬ ವರ್ಚಸ್ವಿ ಧುರೀಣರಾಗಿದ್ದಾರೆ; ಅವರು ಸಮಾಜವಾದದ ಪುರಸ್ಕರ್ತರಾಗಿದ್ದರು. ಆಚಾರ್ಯ ಕೃಪಲಾನಿಯವರ ರೈತ ಮಜೂರ ಪ್ರಜಾಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಐಕ್ಯಹೊಂದಿದ ಬಳಿಕ ಅನೇಕ ಸಮಾಜವಾದಿಗಳು ಒಳಗೊಳಗೆ ನಿರ್ದ್ರೋಹವನ್ನು ವ್ಯಕ್ತಪಡಿಸುತ್ತಾ ಬಂದಿದ್ದರು. ಡಾ. ಲೋಹಿಯರ ಧುರೀಣತ್ವ ಇವರಿಗಿದೆ ಎಂದು ಘಟನೆಗಳೇ ಹೇಳುತ್ತವೆ. ಪ್ರಜಾಸಮಾಜವಾದಿ ಪಕ್ಷದ ಉಗ್ರ ಟೀಕಾಕಾರರಲ್ಲಿ ಇಂದು ಡಾ. ಲೋಹಿಯರಿಗೆಯೇ ಅಗ್ರಪೀಠ ಸಲ್ಲುತ್ತದೆ.

ಲೋಹಿಯರ ಕಟು ಟೀಕೆ

ತಿರು-ಕೊಚ್ಚಿಯಲ್ಲಿ ತಿರು-ತಮಿಳುನಾಡು ಕಾಂಗ್ರೆಸಿನ ಸತ್ಯಾಗ್ರಹಿಗಳ ಮೇಲೆ ಗೋಳೀಬಾರು ನಡೆಸಿದಂದಿನಿಂದ ಡಾ. ಲೋಹಿಯರು ದಂಗೆ ಘೋರನಂತೆ ಪ್ರಜಾಸಮಾಜವಾದಿ ಪಕ್ಷದ ವರಿಷ್ಠರಿಗೆ ತೋರಿಬರುತ್ತಾರೆ ಉತ್ತರ ಪ್ರದೇಶದ ಪ್ರಜಾಸಮಾಜವಾದಿ ಪಕ್ಷದಲ್ಲಿ ಡಾ. ಲೋಹಿಯರ ವರ್ಚಸ್ಸು ಹೆಚ್ಚಿದೆ ಎಂಬ ಗೂಢ ಕಾರಣದಿಂದ ಅಲ್ಲಿಯ ಕಾರ್ಯಕಾರಿ ಸಮಿತಿಗೆ ಮನ್ನಣೆಯನ್ನು ಹಿಂದೆಗೆದುಕೊಳ್ಳಲಾಯಿತು. ಈ ಕ್ರಮವನ್ನು ಕಟುವಾಗಿ ನಿಂದಿಸುತ್ತಾ ಡಾ. ಲೋಹಿಯರು ಪ್ರಜಾಸಮಾಜವಾದಿಗಳು ತಮ್ಮ ಧ್ಯೇಯದಿಂದ ಹೆಚ್ಚೆ ಹಿಂದಿಡುತ್ತಿದ್ದಾರೆ; ಇವರು ಇಷ್ಟರ ವರೆಗೆ ಅನೇಕ ಪ್ರಸಂಗಗಳಲ್ಲಿ ತಪ್ಪು ಮಾಡಿದ್ದಾರೆ; ಇದರ ಪರಿಮಾರ್ಜನೆಗೆ ಪ್ರಯತ್ನಿಸದಿದ್ದರೆ ತಾವು ಹೊಸ ಪಕ್ಷ ಸ್ಥಾಪಿಸುತ್ತೇನೆ ಎಂದಿದ್ದಾರೆ.

ಪ್ರಕ್ಷುಬ್ಧ ಪರಿಸ್ಥಿತಿ

ಇದರಿಂದ ಪಕ್ಷದೊಳಗೆ ತೀವ್ರ ಮತಭೇದಗಳೆದ್ದಿವೆ; ಕೆಲವರು ಲೋಹಿಯರನ್ನೂ ಇನ್ನು ಕೆಲವರು ರಾಷ್ಟ್ರೀಯ ಸಭೆಯನ್ನೂ ಎತ್ತಿ ಕಟ್ಟುತ್ತಿದ್ದಾರೆ; ಒಬ್ಬರಿಗೊಬ್ಬರು ಉತ್ತರವೀಯುತ್ತಾ ವಿವರಣೆ ಕೊಡುತ್ತಾ ಕಚ್ಚಾಡುತ್ತಿದ್ದಾರೆಂದೇ ವರದಿಗಳು ತಿಳಿಸುತ್ತವೆ. ಈಭಿನ್ನಾಭಿಪ್ರಾಯಗಳ ಜೆಸಿಯಿಂದ ಪ್ರಜಾಸಮಾಜವಾದಿ ಪಕ್ಷದ ಒಗ್ಗಟ್ಟು ಮತ್ತು ಭದ್ರತೆಗೆ ಗಂಡಾಂತರ ತಲೆದೋರಿದೆ; ಪ್ರಮುಖ ಧುರೀಣರ ರಾಜೀನಾಮೆಗಳೂ ಒಂದರ ಹಿಂದೊಂದೆಂಬಂತೆ ಬರುತ್ತಿವೆ. ಅನುಯಾಯಿಗಳನ್ನು ಈ ಅಂತಃಕಲಹ ಕಂಗೆಡಿಸಿಬಿಟ್ಟಿದೆ; ಸಮರ್ಥವಾದ, ಪ್ರಭಾವಶಾಲಿಯಾದ ಧುರೀಣತ್ವದ ಅಭಾವದಲ್ಲಿ ಪ್ರಜಾಸಮಾಜವಾದಿ ಪಕ್ಷವು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಕಮ್ಯೂನಿಸ್ಟರ ದಿಗ್ಭ್ರಮೆ

ಯಾದವಿ ಯುದ್ಧದಿಂದ ಪ್ರಜಾಸಮಾಜವಾದಿ ಪಕ್ಷ ಜರ್ಜರಿತವಾಗಿದ್ದರೆ, ಕಮ್ಯೂನಿಸ್ಟರು ಭಾರತದ ಜನನಾಯಕ ನೆಹರುಗಳಿಗೆ ಚೀನ, ರಶ್ಯ ಮತ್ತಿತರ ಪೂರ್ವ ಯುರೋಪಿನ ಕಮ್ಯೂನಿಸ್ಟ ರಾಷ್ಟ್ರಗಳು ತೋರಿಸುವ ಗೌರವದಿಂದ ದಿಗ್ಭ್ರಮೆಗೊಂಡಿದ್ದಾರೆ. ಸಾಮಾನ್ಯವಾಗಿ ಕಮ್ಯೂನಿಸ್ಟರು ಮೋಸ್ಕೋದ ಮುಖ ನೋಡುವವರೆಂದು ಹೇಳಲಾಗುತ್ತದೆ. ಕಳೆದ ಮಹಾ ಯುದ್ಧಕಾಲದಲ್ಲಿ ಕಮ್ಯೂನಿಸ್ಟರು ರಶ್ಯವು ಯುದ್ಧದಲ್ಲಿ ಭಾಗವಹಿಸುವವರೆಗೆ ಯುದ್ಧವನ್ನು ನಿಂದಿಸಿದ್ದರು; ಯುದ್ಧದಲ್ಲಿ ರಶ್ಯ ಭಾಗವಹಿಸಿದ ಮರುಗಳಿಗೆಗೆ ಜನತೆಯ ಜೆಂಬಲವನ್ನು ಕೋರತೊಡಗಿದ್ದರು. ಇಂದು ಸಹ ಹೀಗೆಯೇ ನಡೆದಿದೆ—ನೆಹರುಗಳ ವಿದೇಶ ಧೋರಣೆಯನ್ನು ರಶ್ಯ, ಚೀನಗಳ ಪ್ರಭೃತಿಗಳು ಕೊಂಡಾಡಿದುದೇ ತಡ, ಭಾರತದ ಕಮ್ಯೂನಿಸ್ಟರು ನೆಹರುಗಳ ಧೋರಣೆಗೆ ತಮ್ಮ ಬೆಂಬಲ ಕೊಡಲು ನಿರ್ಧರಿಸಿರುವರು.

ಬದಲಾದುದು ಯಾರು?

ಆದರೆ ಹೀಗೆ ಮಾಡುವಾಗ ತಮ್ಮ ಧೋರಣೆ ಬದಲಾಗಿದೆ ಎಂದು ಒಪ್ಪಿಕೊಳ್ಳಲು ಪಕ್ಷದ ಕಾರ್ಯದರ್ಶಿ ಶ್ರೀ ಅಜಯ ಘೋಷರು ಸಿದ್ಧರಾಗಲಿಲ್ಲ. ಬದಲಿಗೆ ಕಾಂಗ್ರೆಸಿನ ಮತ್ತು ಅದು ನಡೆಸಿಕೊಂಡು ಬಂದಿರುವ ಹಾಗು ಬರುತ್ತಿರುವ ಸರಕಾರದ ಮುಖಕ್ಕೆಯೇ ಕೆಸರು ಚೆಲ್ಲಲು ಅವರು ನೋಡಿದರು. "ಭಾರತ ಸರಕಾರದ ವಿದೇಶ ಧೋರಣೆಯು ಈಚೆಗೆ ಸ್ವಾಗತಾರ್ಹ ಪರಿವರ್ತನೆಯನ್ನು ಹೊಂದಿದೆ" ಎಂಬ ಅವರ ಮಾತು ಸತ್ಯಕ್ಕೆ ತೀರ ವಿಪರ್ಯಾಸವಿರುತ್ತದೆ. ನೆಹರುಗಳು ನಿರ್ವಹಿಸಿಕೊಂಡು ಬಂದಿರುವ ವಿದೇಶ ಧೋರಣೆ ೧೯೪೬ನೇ ಇಸವಿಯಿಂದಲೂ ಒಂದೇ ರೀತಿಯಾಗಿ ಮುಂದುವರಿದು ಬಂದಿದೆ—ಕಮ್ಯೂನಿಸ್ಟರು ಈಗಲೂ ಯಾವ ಒಂದೆರಡು ವಿಷಯಗಳಲ್ಲಿ ಭಿನ್ನಾಭಿಪ್ರಾಯ ತೋರಿಸುತ್ತಿರುವರೋ ಅವು ಆಗಲೂ ಇದ್ದವು; ಇಂದು ಯಾವುದನ್ನು ಪ್ರಶಂಸಿಸುತ್ತಿರುವರೋ ಆ ಗುಣಗಳು ಸಹ ಬಹಳ ಹಿಂದೆಯೇ ಇದ್ದವು. ಅವುಗಳನ್ನು ಇಷ್ಟು ತಡವಾಗಿ ಗುರುತಿಸಿದ ಕಮ್ಯೂನಿಸ್ಟರು ತಾವೇ ಲಾಗ ಹೊಡೆದಿರುವೆವೆಂದು ಹೇಳುವಷ್ಟು ಪ್ರಾಮಾಣಿಕತೆ ತೋರಿಸಿಲ್ಲ.

ಯೋಜನೆಯ ಕುರಿತಾದ ನಿಲುಮೆ

ರಶ್ಯ, ಚೀನ ಮುಂತಾದ ರಾಷ್ಟ್ರಗಳು ಹೊಗಳಿದ ಹೊರತು ಭಾರತದ ಕಮ್ಯೂನಿಸ್ಟ ಪಕ್ಷ ಸಹ ಸರಕಾರವನ್ನು ಪ್ರಶಂಸಿಸಲಾರದು, ಆದರೆ ಕೆಲಸಗಳನ್ನು ಮೆಚ್ಚಲಾರದು ಎಂಬುದನ್ನು ಶ್ರೀ. ಅಜಯ ಘೋಷರು "ಆಂತರಿಕ ಧೋರಣೆ ಮಾತ್ರ ಇನ್ನೂ ಪ್ರತಿಗಾಮಿಯಾಗಿಯೇ ಉಳಿದಿದೆ" ಎಂದು ಹೇಳಿರುವುದರ ಮೇಲಿಂದ ತೀರ್ಮಾನಿಸಬಹುದು. ಪಂಚ ವಾರ್ಷಿಕ ಯೋಜನೆಯ ಲಾಭಗಳನ್ನು ಜನರು ಈಗಾಗಲೇ ಮನವರಿಕೆ ಮಾಡಿಕೊಂಡಿದ್ದಾರೆ; ಸರಕಾರದ ಲೆಕ್ಕದಂತೆ ಜನತೆಯ ನಿತ್ಯ ಜೀವನದ ವಸ್ತುಸ್ಥಿತಿಯೂ ಯೋಜನೆಯ ಪರಿಣಾಮವಾಗಿ ಸುಧಾರಿಸಿದೆ. ಆದರೆ ಕಮ್ಯೂನಿಸ್ಟರು "ಮಾಡಿದ ಕರ್ಚಿಗೆ ಸರಿಯಾದ ಲಾಭ ದೊರಕಿಲ್ಲ" ಎಂಬ ವಾದದ ಆಶ್ರಯವನ್ನು ಪಡೆದಿದ್ದಾರೆ. ಜನರ ಮೇಲೆ ತಕ್ಷಣ ಪ್ರಭಾವ ಬೀರುವ ಜನಪದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಸೇವೆಯ ನಿಸ್ತರಣೆಯ ಕಾರ್ಯಕ್ರಮಗಳನ್ನು ಮಾತ್ರ ಅವರು ವಿರೋಧಿಸಲು ಹೋಗಿಲ್ಲ—ಏಕೆಂದರೆ ವಿರೋಧಿಸಿದರೆ, ಜನರಿಗೆ ಈ ಪಕ್ಷದ ನೆಲೆ ಗೊತ್ತಾಗಿಬಿಡುತ್ತದೆ.

ವಿದೇಶಗಳ ಆರ್ಥಿಕ ನೆರವು

ಇನ್ನೂ ಒಂದು ವಿಷಯ ಇಲ್ಲಿ ಗಮನಕ್ಕೆ ಬರುತ್ತದೆ—ಕಮ್ಯೂನಿಸ್ಟರು ಈಗ ಭಾರತಕ್ಕೆ ವಿದೇಶಗಳು ಸಹಾಯನೀಡುವ ಕುರಿತು ತಮ್ಮ ಪ್ರತಿಭಟನೆಯನ್ನು ಬಹಳಷ್ಟು ಬಿಟ್ಟುಕೊಟ್ಟಿದ್ದಾರೆಂಬುದೇ ಅದು ರಶ್ಯವು ಭಾರತಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ತಾಂತ್ರಿಕ ಹಾಗು ಆರ್ಥಿಕ ರೀತಿಯಲ್ಲಿ ನೆರವಾಗುವ ಭರವಸೆ ಈಗ ಕಂಡುಬಂದಿರುವುದರಿಂದ ನಮ್ಮ ಕಮ್ಯೂನಿಸ್ಟರು ತಮ್ಮ ವಿರೋಧವನ್ನು ಹಿಂದೆಗೆದುಕೊಳ್ಳಬೇಕಾಯಿತೆಂದು ತೋರುತ್ತದೆ. ಆದರೆ, ಹೀಗೆ ಮಾಡುವಾಗ, ಅಂಥ ಸಹಾಯ ಸರಕಾರದಮಟ್ಟದಲ್ಲಿ ಬರಬೇಕು ಎಂದವರು ಕುಂಟು ಪಂಕ್ತಿ ಹಾಕಿದ್ದಾರೆ; ಅಮೇರಿಕದ ಖಾಸಗಿ ಭಂಡವಾಳವು ಭಾರತದಲ್ಲಿ ನಿಕ್ಷೇಪಿಸಿಲ್ಪಡುವುದನ್ನು ಕಮ್ಯೂನಿಸ್ಟರು ವಿರೋಧಿಸುತ್ತಾರೆ. ರಶ್ಯದಿಂದ ಸರಕಾರದಮಟ್ಟದಲ್ಲಿ ಹೊರತು ಬೇರಾವುದೇ ರೀತಿಯಲ್ಲಿ ಭಂಡವಾಳ ಹರಿದು

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8: ¼ ರಾತಲಿಗೆ ರೂ. 1/13.

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕಿಟಿಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಬಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ಆ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಶಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಬರಲಾರದೆಂಬುದೇ ಈ ವಿರೋಧದ ಹಿನ್ನೆಲೆಯಲ್ಲಿರುವ ಗುಟ್ಟು.

ರಾಷ್ಟ್ರೀಕರಣದ ವಿಷಯದಲ್ಲಿ

ಕಮ್ಯೂನಿಸ್ಟರು ರಾಷ್ಟ್ರೀಕರಣದಂಥ ವಿಷಯದಲ್ಲಿ ಸಹ ಈಗ ಮೆತ್ತಗಿನ ಧೋರಣೆ ವಹಿಸಿರುವರೆಂಬಂತೆ ಭಾಸವಾಗುತ್ತದೆ. ಎಲ್ಲ ಕೈಗಾರಿಕೆಗಳ ರಾಷ್ಟ್ರೀಕರಣವಾಗಬೇಕೆಂಬ ತಮ್ಮ ಹಿಂದಿನ ನಿಲುಮೆಯನ್ನು ಬಿಟ್ಟು ಬ್ರಿಟಿಷರ ಬಂಡವಾಳವಿರುವ ತೋಟಗಳ, ಕಲ್ಲಿದ್ದಲು ಮೊಂಗನೀಸೇ ಮುಂತಾದ ಕೆಲವು ಉದ್ದಿಮೆಗಳನ್ನು ವಿದೇಶಗಳವರು ನಡೆಸಿಕೊಂಡು ಬರುತ್ತಿರುವ ಬೇಂಕುಮತ್ತು ವಿಮಾ ಕಂಪನಿಗಳ ರಾಷ್ಟ್ರೀಕರಣವಾದರೆ ಸಾಕು ಎನ್ನುತ್ತಾರೆ. ಇದು ಪರಿಸ್ಥಿತಿಗೆ ಹೊಂದಿಕೊಳ್ಳುವ ಧೋರಣೆಯಲ್ಲದೆ ಬೇರೇನೂ ಆಗಲಾರದು. ಭಾರತದ ಸಂಘ, ಸಂಸ್ಥೆಗಳ ಮೈತ್ರಿ ಸಂಪಾದನೆಯ ಉದ್ದೇಶ ಇಲ್ಲಿ ಅಡಗಿದೆ. ಗೋವೆಯ ವಿಷಯದಲ್ಲಿ ಸರಕಾರ ಮೋಲೇಸು ಕ್ರಮವನ್ನು ಕೈಗೊಳ್ಳಬೇಕು, ಕಾನ್ಪುರ ಮತ್ತು ದಾರ್ಜಲಿಂಗುಗಳ ಮುಷ್ಕರದ ಕುರಿತು ಸರಕಾರ ವಹಿಸಿದ ಧೋರಣೆ ಸಮಾಜವಾದಿ ಸ್ವರೂಪದ ಸಮಾಜ ರಚನೆಯ ಗೊತ್ತುವಳಿಗೆ ವಿಸಂಗತವಾಗಿದೆ—ಎಂಬಿತ್ಯಾದಿ ವಿಷಯಗಳಲ್ಲಿ ಸಹ ಹೇಗಾದರೂ ಜೀವ ಹಿಡಿದುಕೊಂಡಿರುವ ಕಮ್ಯೂನಿಸ್ಟರ ಆತುರತೆಯೇ ಎದ್ದು ಕಾಣಿಸುತ್ತದೆ: ಹೊಸತು ತತ್ವನಿಷ್ಠೆಯಲ್ಲ.

ಪ್ರಜಾಶಕ್ತಿಗಳ ಒಗ್ಗಟ್ಟು

ಆಂತರಿಕ ಧೋರಣೆಯನ್ನು ಈಗ ಕಮ್ಯೂನಿಸ್ಟರು ಟೀಕಿಸುತ್ತಿದ್ದರೂ—ಬರುವ ಪ್ರಜಾರಾಜ್ಯ ದಿನದಂದು ರಶ್ಯದ ಪ್ರಧಾನಿ ಮಾರ್ಶಲ್ ಬುಲ್ಗೇನಿನ್ನರು ಭಾರತಕ್ಕೆ ಬಂದಾಗ, ಇಲ್ಲಿಯ ಪ್ರಗತಿಯನ್ನು ಪ್ರಶಂಸಿಸಿದರೆ, ಆಗ ಕಮ್ಯೂನಿಸ್ಟರು ಸಹ ಹೊಸ ರಾಗವನ್ನು ಹಾಡಬಹುದು. ಆದುದಂದ ಈ ಪಕ್ಷದಲ್ಲಿ ಜನತೆ ಯಾವ ವಿಶ್ವಾಸವನ್ನೂ ಇಡತಕ್ಕದ್ದಲ್ಲ. ಕಾಂಗ್ರೆಸಿಗರು ಸಹ ಭಾರತೀಯ ಕಮ್ಯೂನಿಸ್ಟರ ಧೋರಣೆಯ ಕುರಿತು ಸ್ವಲ್ಪ ಜಾಗ್ರತೆಯಿಂದ ಇರಬೇಕಾಗಿದೆ. ಏಕೆಂದರೆ ಇವರು ಕಾಂಗ್ರೆಸಿನೊಡನೆ ಕ್ರಿಯಾತ್ಮಕ ಸಹಕಾರವನ್ನು ನೀಡಲೇನು ಸಿದ್ಧರಿಲ್ಲ—ಬದಲು "ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗಟ್ಟು ಸ್ಥಾಪನೆ" ತಮ್ಮ ಉದ್ದೇಶ ಎಂದಿದ್ದಾರೆ; ಕಾಂಗ್ರೆಸಿನ ಹೊರಗಡೆಯ ಶಕ್ತಿಗಳನ್ನು ಈ ಒಗ್ಗಟ್ಟಿನ ಸೂತ್ರದಲ್ಲಿ ಬಂಧಿಸುವ ಹುನ್ನಾರವೇ ಕಮ್ಯೂನಿಸ್ಟರಿಗಿರದೆ, ಕಾಂಗ್ರೆಸಿನ ಒಳಗಿನ ಧೀರರನ್ನೂ ಆಕರ್ಷಿಸಿಕೊಳ್ಳುವ ವಿಚಾರ ಅವರದಿರುತ್ತದೆ

ಕ್ರಾಂತಿಕಾರಿ ಕಾರ್ಯಕ್ರಮ

ಕಾಂಗ್ರೆಸಿನ ಕೆಲವರಿಗೆ ಮುಂದಗಾಮಿಯಾದ ನೀತಿ ರುಚಿಸಿಲ್ಲ; ಅವರ ಸಹಕಾರ ಪಡೆದು ಪ್ರಜಾಸತ್ತಾತ್ಮಕ ಶಕ್ತಿಯನ್ನು ಬೆಳೆಸಿಕೊಂಡು, ಬರುವ ಚುನಾವಣೆಯಲ್ಲಿ ಈಗಿನ ಸರಕಾರಗಳ ಬದಲು ಪ್ರಜಾಸತ್ತಾತ್ಮಕ ಸಂಯುಕ್ತರಂಗದ ಸರಕಾರಗಳು ಅಸ್ತಿತ್ವಕ್ಕೆ ಬರುವಂತೆ ಹೊರಾಡುವುದೇ ತಮ್ಮ ಧ್ಯೇಯ—ಎಂದು ಅಜಯ ಘೋಷರು ಸಾರಿದ್ದಾರೆ. ಆದರೆ ಈ ಪ್ರಜಾಸತ್ತಾತ್ಮಕ ಶಕ್ತಿಯನ್ನು ಸಂಘಟಿಸಲು ಕಮ್ಯೂನಿಸ್ಟರು ಅರ್ಹರೆ ಎಂಬುದನ್ನು ಅವರು "ಕ್ರಾಂತಿಕಾರಿ ಕಾರ್ಯಕ್ರಮಗಳಿಗೆ ನೀವೀಗಲೂ ಅಂಟಿಕೊಂಡಿದ್ದೀರಾ?" ಎಂಬ ಪ್ರಶ್ನೆಗೆ ಕೊಟ್ಟ ಉತ್ತರ ಸ್ಪಷ್ಟೀಕರಿಸುತ್ತದೆ "ನಾವು ಯಾವುದೇ ವಿಶಿಷ್ಟ ಪದ್ಧತಿಗೆ ಅಂಟಿಕೊಂಡಿಲ್ಲ ಎಂಬುದನ್ನು ಸ್ಪಷ್ಟಗೊಳಿಸಿದ್ದೇವೆ. ನಾವು ಬಯಸುವ ಬದಲಾವಣೆಗಳನ್ನು ಶಾಂತ ರೀತಿಯಲ್ಲಿ ಅಸ್ತಿತ್ವಕ್ಕೆ ತರಲು ಪ್ರಯತ್ನಿಸುತ್ತೇವೆ. ಅದು ವಿಫಲಗೊಂಡರೆ, ನಿಮಗೆ ಗೊತ್ತೇ ಇದೆ, ಕಮ್ಯೂನಿಸ್ಟರು ತಮ್ಮನೆಯ ತತ್ವಕ್ಕೆ ಕಟ್ಟು ಬಿದ್ದವರೇನು [ಅಲ್ಲ" ಎಂದು ಘೋಷರು ಘೋಷಿಸಿದರು

ಎಚ್ಚರ ಅತ್ಯವಶ್ಯ

ಇಂಥವರ ಕೈಯಲ್ಲಿ ಪ್ರಜಾಸತ್ತಾತ್ಮಕ ಶಕ್ತಿ ಹೇಗೆ ಸಂಘಟನೆಯಾದೀತು, ಪ್ರಜಾಪ್ರಭುತ್ವ ಎಲ್ಲಿ ಉಳಿದೀತು ಎಂಬುದನ್ನು ಜನತೆ ತಿಳಿಯಬೇಕು. ತೆಲಂಗಾಣ ಮುಂತಾದ ಕಡೆಗಳಲ್ಲಿ ಹಿಂಸಾಚಾರದ ತಾಂಡವ ನೃತ್ಯ ನಡೆಸಿದ ಕಮ್ಯೂನಿಸ್ಟರು ಶಾಂತಿ ಮತ್ತು ಭದ್ರತೆಗೋಸ್ಕರ ದಾರ್ಜಿಲಿಂಗಿನಲ್ಲಿ ಅನಿವಾರ್ಯವಾಗಿ ನಡೆಸಿದ ಗೋಳಿಬಾರನ್ನು ವಿರೋಧಿಸುತ್ತಾರೆ—ಎಂದರೆ ಆಶ್ಚರ್ಯವೇ ಸಿಜ. ಪ್ರಜಾಪ್ರಭುತ್ವದಲ್ಲಿ ಜನಮನವನ್ನು ಒಲಿಸಿಕೊಳ್ಳಲು ಪ್ರತಿಯೊಂದೂ ರಾಜಕೀಯ ಪಕ್ಷ ಪ್ರಯತ್ನಿಸಲು ಅಧಿಕಾರ ಪಡೆದಿರುತ್ತದೆ—ಆದರೆ, ಇದು ಶಾಂತ ರೀತಿಯ ಚಳವಳಿದಿಂದ ಆಗಬೇಕಲ್ಲದೆ, ಹಿಂಸಾಚಾರದ ಮೂಲಕವಲ್ಲ. ಕಮ್ಯೂನಿಸ್ಟರು ಅಹಿಂಸೆಯ ಭಕ್ತರಲ್ಲ ಎಂಬ ವ್ಯಂಗ್ಯ ಮಾತು ಅವರು ಹಿಂಸೆಯನ್ನು ಆಶ್ರಯಿಸಲು ಹೇಸರು ಎಂಬುದನ್ನೆ ಸೂಚಿಸುತ್ತದೆ. ಇವರ ಕೈಯಲ್ಲಿ ಪ್ರಜಾಪ್ರಭುತ್ವ ಸಾಯದೆ ಉಳಿಯದು ಆದ್ದರಿಂದ ಈ ಕಮ್ಯೂನಿಸ್ಟರ ವಿಷಯದಲ್ಲಿ ಜನತೆ ಮೋಸಹೋಗಕೂಡದು. ತಿರುಕೊಚ್ಚಿ ಮತ್ತು ಆಂಧ್ರಗಳಲ್ಲಿ ಪೂರ್ಣ ಸಂತಾಪವನ್ನು ಹೊಂದಿದ ಬಳಿಕವೂ ಹಿಂಸೆಯ ಬೆದರಿಕೆ ಹುಟ್ಟಿಸುವವರು ತಿಳಿವಳಿಕೆಯುಳ್ಳ ಭಾರತೀಯರ ಭಾವಾನುಭೂತಿಯನ್ನು ಪಡೆಯುವುದು ತುಂಬ ಕಷ್ಟ.

ರಾಷ್ಟ್ರದಾದ್ಯಂತ ಮದ್ಯಪಾನ ಪ್ರತಿಬಂಧ

ಶ್ರೀಮನ್ನಾರಾಯಣ ಸಮಿತಿಯ ಅಭಿಪ್ರಾಯ

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀಮನ್ನಾರಾಯಣರ ಧುರೀಣತ್ವದಲ್ಲಿ ಯೋಜನಾ ಆಯೋಗವು ಏರ್ಪಡಿಸಿದ್ದ ಮದ್ಯನಿಷೇಧ ವಿಚಾರಣಾ ಸಮಿತಿಯು ಭಾರತದಾದ್ಯಂತ ಪಾನ ನಿರೋಧನವನ್ನು ಜ್ಯಾರಿಗೆ ತರಬೇಕೆಂದು ಸೂಚಿಸಿದೆಯಾಗಿ ತಿಳಿದುಬರುತ್ತದೆ. ಇದರಿಂದ ಭಾರತದ ಸರಕಾರಗಳಿಗೆ ಆದಾಯದಲ್ಲಿ ಉಂಟಾಗಬಹುದಾದ ಸುಮಾರು ೪೬ ಕೋಟಿ ರೂಪಾಯಿಗಳ ಕೊರತೆಯನ್ನು ಆದಾಯದ ಇತರ ಸ್ರೋತಗಳನ್ನು ಅವಲಂಬಿಸುವುದರಿಂದ ತುಂಬಿಸಬೇಕೆಂದೂ ಇದೇನು ಅಸಾಧ್ಯ ಕೆಲಸವಲ್ಲವೆಂದೂ ಸಮಿತಿಯ ಅಭಿಪ್ರಾಯ.

ರಾಜ್ಯಪಾಲರ ಸುಗ್ರೀವಾಜ್ಞೆ

ಮದ್ರಾಸಿನ ರಾಜ್ಯಪಾಲರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಮದ್ರಾಸು ನಗರಸಭೆಯ ವಲಯದಲ್ಲಿ ಹಿಂದಿನ ಕಡಿಮೆ ಗೇಣಿ ಅಥವಾ ಬಾಡಿಗೆಯ ಮೇಲೆ ಸ್ಥಳಪಡೆದು ಮನೆ ಕಟ್ಟಿಕೊಂಡವರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸಿದ್ದಾರೆ. ಈ ಸುಗ್ರೀವಾಜ್ಞೆಯ ವ್ಯಾಪ್ತಿಯನ್ನು ಮಧುರೆ, ತಿರುಚಿರಪಳ್ಳಿ ಮುಂತಾದ ಇತರ ನಗರಸಭೆಗಳಿಗೆ ವಿಸ್ತರಿಸುವುದಕ್ಕೂ ಗವರ್ನರರು ಉದ್ದೇಶಿಸಿರುವರೆಂದು ತಿಳಿದುಬರುತ್ತದೆ

ಕಲ್ಲೆಣ್ಣೆಯ ನಿಷ್ಕ್ಷೇಪ

ಪಶ್ಚಿಮ ಬಂಗಾಳದಲ್ಲಿ ಹೊಸ ಎಣ್ಣೆಯ ನಿಷ್ಕ್ಷೇಪ ಕಂಡು ಬಂದಿದೆ ಎಂದು ಭಾರತ ಸರಕಾರದ ನೆರವಿನಿಂದ ಅಮೇರಿಕದ ಸ್ಟ್ಯಾನ್‌ವಾಕ್ ಕಂಪೆನಿ ನಡೆಸಿದ ಶೋಧದ ಕುರಿತಾದ ವರದಿ ತಿಳಿಸುತ್ತದೆ. ಇದನ್ನು ಉಪಯೋಗಿಸುವ ಕುರಿತು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಮತ್ತು ದೇಶದ ಇತರ ಭಾಗಗಳಲ್ಲಿ ಎಣ್ಣೆಯ ಶೋಧನೆಡೆಸಲು ಪ್ರಯತ್ನವಾಗುತ್ತಿದೆ.

ನೋಟುಗಳ ಕಾಗದ ತಯಾರಿಕೆ

ದ್ವಿತೀಯ ಮಹಾಯುದ್ಧ ಕಾಲದಿಂದ ಬಹಳವಾಗಿ ಬಳಕೆಗೆ ಬಂದಿರುವ ನೋಟುಗಳ ಮುದ್ರಣಕ್ಕೆ ತಕ್ಕ ಕಾಗದ ತಯಾರಿಸಲು ಭಾರತದಲ್ಲಿ ೩೫ ಲಕ್ಷ ರೂಪಾಯಿ [ನೆಚ್ಚದ ಕಾರ್ಖಾನೆಯೊಂದು ಹೆರೆಯಲ್ಪಡುತ್ತದೆ ಸದ್ಯಕ್ಕೆ ಸುಮಾರು೧೦೦ ಟನ್ನುಗಳಷ್ಟು ಮಾತ್ರ ಈ ಕಾಗದದ ಬೇಡಿಕೆ ಇದ್ದರೂ ಮುಂದಿನ ಅವಶ್ಯಕತೆಯ ದೃಷ್ಟಿಯಿಂದ ೧೬೦೦ ಟನ್ನು ಕಾಗದ ಉತ್ಪಾದಿಸಬಲ್ಲ ಯಂತ್ರಗಳನ್ನು ಈ ಕಾರ್ಖಾನೆಯಲ್ಲಿ ಜೋಡಿಸಲಾಗುತ್ತದೆ.

ಕಾಂಗ್ರೆಸ್ಸೇ ಉತ್ತಮ

ಇಂದೋರಿನ ಪ್ರಮುಖ ಕಮ್ಯೂನಿಸ್ಟರೊಬ್ಬರು ತಮ್ಮ ಇನ್ನೂರು ಅನುಯಾಯಿಗಳೊಂದಿಗೆ ಕಾಂಗ್ರೆಸನ್ನು ಸೇರಿರುವರೆಂದು ತಿಳಿದು ಬರುತ್ತದೆ. ಕಮ್ಯೂನಿಸ್ಟ ಪಕ್ಷಕ್ಕೆ ಅವಕಾಶ ರಾಜೀನಾಮೆಯಲ್ಲಿ ರಾಷ್ಟ್ರದ ಪುನರ್‌ನಿರ್ಮಾಣದ ಕಾರ್ಯದಲ್ಲಿ ಕಮ್ಯೂನಿಸ್ಟರು ಸಹಕರಿಸದಿರುವುದು, ವಿದೇಶಗಳ ಧುರೀಣರ ಜನ್ಮ ದಿನಗಳಿಗೆ ಕೊಟ್ಟ ಮಹತ್ವವನ್ನು ರಾಷ್ಟ್ರೀಯ ಮುಖಂಡರ ವಿಷಯದಲ್ಲಿ ತೋರಿಸದಿರುವುದು, ಆಂತರಿಕ ಧೋರಣೆಯನ್ನು ಬೆಂಬಲಿಸದೆ ಟೀಕಿಸುವುದು, ಭಾರತಕ್ಕೆ ಇನ್ನೂ ಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲವೆಂದು ನಂಬಿರುವುದು ಇತ್ಯಾದಿ ಎಂಟು ಕಾರಣಗಳನ್ನಿತ್ತು ಆ ಪಕ್ಷದ ಧೋರಣೆ ತಮಗೇಕೆ ಸಮ್ಮತವಿಲ್ಲವೆಂದು ಅವರು ಸ್ಪಷ್ಟೀಕರಿಸಿದ್ದಾರೆ.

ಲೋಕ ಸಭೆಯ ಅಧಿವೇಶನ

ಇದೇ ೫ನೇ ದಿನಾಂಕ ಲೋಕ ಸಭೆಯ ಅಧಿವೇಶನ ಪ್ರಾರಂಭವಾಗುತ್ತದೆ. ಇದರಲ್ಲಿ ಚರ್ಚೆಗೆಂದು ೧೭ ಖಾಸಗಿ ಗೊತ್ತುವಳಿಗಳು ಮಂಡಿಸಲ್ಪಟ್ಟಿದ್ದು, ಅವುಗಳ ಪ್ರಾರಸ್ತ್ಯಾನುಕ್ರಮ ಇನ್ನೂ ಗೊತ್ತಾಗಿಲ್ಲ

ಸ್ಟೇಟ್ ಬ್ಯಾಂಕ್

ಇದೇ ೧೧ನೇ ತಾರೀಕಿನಂದು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯವಾಗಿ ಪರಿವರ್ತನೆ ಹೊಂದಿದೆ ಸರಕಾರದ ನೇರವಾದ ನಿಯಂತ್ರಣದಲ್ಲಿ ಕೆಲಸ ಮಾಡುವ ಈ ಸಂಸ್ಥೆಯು ಮುಂದಿನ ಐದು ವರ್ಷಗಳಲ್ಲಿ ೪೦ ಹೊಸ ಶಾಖೆಗಳನ್ನು ತೆರೆದು ಹಳ್ಳಿಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಿ ಕೊಡುತ್ತದೆ. ಇಂಪೀರಿಯಲ್ ಬ್ಯಾಂಕಿನ ಪಾಲುದಾರರಿಗೆ ಯೋಜನಾ ಸಾಲಪತ್ರ (೧೯೬೫)ಗಳನ್ನು ನೀಡುವ ಮೂಲಕ ಪರಿಹಾರವನ್ನು ಕೊಡಲಾಯಿತು. ಸ್ಟೇಟ್ ಬ್ಯಾಂಕಿನ ಪಾಲು ಸದೆಯ ಬಯಸುವವರಿಗೆ ಪ್ರತಿ ಪಾಲಿನ ಬೆಲೆ ೩೫ ರೂಪಾಯಿ ಎಂದು ತಿಳಿಸಲಾಯಿತು.

ಯೋಜನೆಗೆ ಸಾಲ

ಭಾರತ ಸರಕಾರದ ನೂರು ಕೋಟಿ ರೂಪಾಯಿಗಳ ಸಾಲವು ಸಂಪೂರ್ಣವಾಗಿ ತುಂಬಿಹೋಯಿದೆ. ೧೧ನೇ ತಾರೀಕಿನವರೆಗೆ ಸಾಲಕ್ಕೆ ಹಣ ಸಂದಾಯಮಾಡಲು ಅವಧಿಇದ್ದರೂ ಸಹ ೪ನೇ ತಾರೀಕಿಗೇ

(೮ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮಾರ್ಕೆಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕವ್ವಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪ್ರಜಾಸಮಾಜವಾದಿ ಪಕ್ಷದಲ್ಲಿ ತೀವ್ರ ಬಿಕ್ಕಟ್ಟು

ಭಾರತೀಯ ಕಮ್ಯೂನಿಸ್ಟರಿಗೆ ಸಂಯುಕ್ತ ರಂಗದ ಹಗಲುಗನಸು

ಅಧಿಕಾರಾರೂಢವಾದ ಕಾಂಗ್ರೆಸಿನ ಪ್ರತಿಪಕ್ಷ ಸ್ಥಾನದಲ್ಲಿರುವ ಪ್ರಜಾಸಮಾಜವಾದಿ ಮತ್ತು ಕಮ್ಯೂನಿಸ್ಟರ ಗುಂಪುಗಳಲ್ಲಿ ಒಡಕುಗಳು ಮತ್ತು ಘೋರಣೆಯು ಬದಲಾವಣೆಗಳು ಈಗ ಕಂಡು ಬರತೊಡಗಿವೆ. ಸಮರ್ಥ ಪ್ರತಿಪಕ್ಷವೊಂದಿರಬೇಕು, ಮತ್ತು ಅದು ಪ್ರಜಾಪ್ರಭುತ್ವದಲ್ಲಿ ಗಾಢವಾದ ವಿಶ್ವಾಸವನ್ನು ವ್ಯಕ್ತಪಡಿಸಿರಬೇಕು ಎಂದು ಭಾವಿಸಿದ್ದ ಜನತೆಗೆ ಪ್ರಜಾಸಮಾಜವಾದಿ ಪಕ್ಷ ಅಂಥದೊಂದು ಯೋಜಿಗಾರಿಕೆಯನ್ನು ಹೊರಬಹುದು ಎಂಬ ಅಭಿಪ್ರಾಯ ಒಂದೆರಡು ವರ್ಷಗಳ ಹಿಂದೆ ಇದ್ದಿತು. ಆದರೆ ಈಗ ಆ ನಿರೀಕ್ಷೆ ವಿಫಲವಾಗಿವೆ ಎಂದರೆ ತಪ್ಪಾಗದು.

ಪಕ್ಷದೊಳಗೆ ಬಿಕ್ಕಟ್ಟು

ಪ್ರಜಾಸಮಾಜವಾದಿಗಳಲ್ಲಿ ತೀವ್ರ ಬಿಕ್ಕಟ್ಟು ಈಗ ತಲೆದೋರಿದೆ. ಈ ಪಕ್ಷದಲ್ಲಿ ಡಾ. ರಾಮ ಮನೋಹರ ಲೋಹಿಯರು ಒಬ್ಬ ವರ್ಚಸ್ವಿ ಧುರೀಣರಾಗಿದ್ದಾರೆ; ಅವರು ಸಮಾಜವಾದದ ಪುರಸ್ಕರ್ತರಾಗಿದ್ದರು. ಆಚಾರ್ಯ ಕೃಪಲಾನಿಯವರ ದೈತ ಮಜೂರ ಪ್ರಜಾಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಐಕ್ಯಹೊಂದಿದ ಬಳಿಕ ಅನೇಕ ಸಮಾಜವಾದಿಗಳು ಒಳಗೊಳಗೆ ವಿದ್ರೋಹವನ್ನು ವ್ಯಕ್ತಪಡಿಸುತ್ತಾ ಬಂದಿದ್ದರು. ಡಾ. ಲೋಹಿಯರ ಧುರೀಣತ್ವ ಇವರಿಗಿದೆ ಎಂದು ಘಟನೆಗಳೇ ಹೇಳುತ್ತವೆ. ಪ್ರಜಾಸಮಾಜವಾದಿ ಪಕ್ಷದ ಉಗ್ರ ಟೀಕಾಕಾರರಲ್ಲಿ ಇಂದು ಡಾ. ಲೋಹಿಯರಿಗೆಯೇ ಅಗ್ರಸ್ಥಾನ ಸಲ್ಲುತ್ತದೆ.

ಲೋಹಿಯರ ಕಟು ಟೀಕೆ

ತಿರು-ಕೊಚ್ಚಿಯಲ್ಲಿ ತಿರು-ತಮಿಳುನಾಡು ಕಾಂಗ್ರೆಸಿನ ಸತ್ಯಾಗ್ರಹಿಗಳ ಮೇಲೆ ಗೋಳೀಬಾರು ನಡೆಸಿದಂದಿನಿಂದ ಡಾ ಲೋಹಿಯರು ದಂಗೆ ಘೋರನಂತೆ ಪ್ರಜಾಸಮಾಜವಾದಿ ಪಕ್ಷದ ವರಿಷ್ಠರಿಗ ತೋರಿಬರುತ್ತಾರೆ ಉತ್ತರ ಪ್ರದೇಶದ ಪ್ರಜಾಸಮಾಜವಾದಿ ಪಕ್ಷದಲ್ಲಿ ಡಾ ಲೋಹಿಯರ ವರ್ಚಸ್ಸು ಹೆಚ್ಚಿದೆ ಎಂಬ ಗೂಢ ಕಾರಣದಿಂದ ಅಲ್ಲಿಯ ಕಾರ್ಯಕಾರಿ ಸಮಿತಿಗೆ ಮನ್ನಣೆಯನ್ನು ಹಿಂದೆಗೆದುಕೊಳ್ಳಬಾಯಿತು. ಈ ಕ್ರಮವನ್ನು ಕಟುವಾಗಿ ಸಿಂದಿಸುತ್ತಾ ಡಾ. ಲೋಹಿಯರು ಪ್ರಜಾಸಮಾಜವಾದಿಗಳು ತಮ್ಮ ಧ್ಯೇಯದಿಂದ ಹೆಚ್ಚೆ ಹಿಂದಿಡುತ್ತಿದ್ದಾರೆ; ಅವರು ಇಷ್ಟರ ವರೆಗೆ ಅನೇಕ ಪ್ರಸಂಗಗಳಲ್ಲಿ ತಪ್ಪು ಮಾಡಿದ್ದಾರೆ; ಇದರ ಪರಿಮಾರ್ಜನೆಗೆ ಪ್ರಯತ್ನಿಸದಿದ್ದರೆ ತಾವು ತೊಸ ಪಕ್ಷ ಸ್ಥಾಪಿಸುತ್ತೇನೆ ಎಂದಿದ್ದಾರೆ.

ಪ್ರಕ್ಷುಬ್ಧ ಪರಿಸ್ಥಿತಿ

ಇದರಿಂದ ಪಕ್ಷದೊಳಗೆ ತೀವ್ರ ಮತಭೇದಗಳೆದ್ದಿವೆ, ಕೆಲವರು ಲೋಹಿಯರನ್ನೂ ಇನ್ನು ಕೆಲವರು ರಾಷ್ಟ್ರೀಯ ಸಭೆಯನ್ನೂ ಎತ್ತಿ ಕಟ್ಟುತ್ತಿದ್ದಾರೆ; ಒಬ್ಬರಿಗೊಬ್ಬರು ಉತ್ತರವೀಯುತ್ತಾ ವಿವರಣೆ ಕೊಡುತ್ತಾ ಕಜ್ಜಾಡುತ್ತಿದ್ದಾರೆಂದೇ ವರದಿಗಳು ತಿಳಿಸುತ್ತವೆ. ಈ ಭಿನ್ನಾಭಿಪ್ರಾಯಗಳ ದೆಸೆಯಿಂದ ಪ್ರಜಾಸಮಾಜವಾದಿ ಪಕ್ಷದ ಒಗ್ಗಟ್ಟು ಮತ್ತು ಭದ್ರತೆಗೆ ಗಂಡಾಂತರ ತಲೆದೋರಿದೆ, ಪ್ರಮುಖ ಧುರೀಣರ ರಾಜೀನಾಮೆಗಳೂ ಒಂದರ ಹಿಂದೊಂದೆಂಬಂತೆ ಬರುತ್ತಿವೆ. ಅನುಯಾಯಿಗಳನ್ನು ಈ ಅಂತಃಕಲಹ ಕಂಗೆಡಿಸಿಬಿಟ್ಟಿದೆ; ಸಮರ್ಥವಾದ, ಪ್ರಭಾವ ಶಾಲಿಯಾದ ಧುರೀಣತ್ವದ ಅಭಾವದಲ್ಲಿ ಪ್ರಜಾಸಮಾಜವಾದಿ ಪಕ್ಷವು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸುತ್ತಿದೆ.

ಕಮ್ಯೂನಿಸ್ಟರ ದಿಗ್ಭ್ರಮೆ

ಯಾವುದು ಯುದ್ಧದಿಂದ ಪ್ರಜಾಸಮಾಜವಾದಿ ಪಕ್ಷ ಜರ್ಜರಿತವಾಗಿದ್ದರೆ, ಕಮ್ಯೂನಿಸ್ಟರು ಭಾರತದ ಜನನಾಯಕ ನೆಹರುಗಳಿಗೆ ಚೀನ, ರಶ್ಯ ಮತ್ತಿತರ ಪೂರ್ವ ಯುರೋಪಿನ ಕಮ್ಯೂನಿಸ್ಟ ರಾಷ್ಟ್ರಗಳು ತೋರಿಸುವ ಗೌರವದಿಂದ ದಿಗ್ಭ್ರಮೆಗೊಂಡಿದ್ದಾರೆ. ಸಾಮಾನ್ಯವಾಗಿ ಕಮ್ಯೂನಿಸ್ಟರು ಮೋಸ್ಕೋದ ಮುಖ ನೋಡುವವರೆಂದು ಹೇಳಲಾಗುತ್ತದೆ. ಕಳೆದ ಮಹಾ ಯುದ್ಧಕಾಲದಲ್ಲಿ ಕಮ್ಯೂನಿಸ್ಟರು ರಶ್ಯವು ಯುದ್ಧದಲ್ಲಿ ಭಾಗವಹಿಸುವವರೆಗೆ ಯುದ್ಧವನ್ನು ನಿಂದಿಸಿದ್ದರು; ಯುದ್ಧದಲ್ಲಿ ರಶ್ಯ ಭಾಗವಹಿಸಿದ ಮರುಗಳಿಗೆಗೆ ಜನತೆಯ ಜೆಂಬಲವನ್ನು ಕೋರತೊಡಗಿದ್ದರು. ಇಂದು ಸಹ ಹೀಗೆಯೇ ನಡೆದಿದೆ – ನೆಹರುಗಳ ವಿದೇಶ ಘೋರಣೆಯನ್ನು ರಶ್ಯ, ಚೀನಗಳ ಪ್ರಭೃತಿಗಳು ಕೊಂಡಾಡಿದುದೇ ತಡ, ಭಾರತದ ಕಮ್ಯೂನಿಸ್ಟರು ನೆಹರುಗಳ ಘೋರಣೆಗೆ ತಮ್ಮ ಬೆಂಬಲ ಕೊಡಲು ನಿರ್ಧರಿಸಿರುವರು.

ಬದಲಾದುದು ಯಾರು?

ಆದರೆ ಹೀಗೆ ಮಾಡುವಾಗ ತಮ್ಮ ಘೋರಣೆ ಬದಲಾಗಿದೆ ಎಂದು ಒಪ್ಪಿಕೊಳ್ಳಲು ಪಕ್ಷದ ಕಾರ್ಯದರ್ಶಿ ಶ್ರೀ ಅಜಯ ಘೋಷರು ಸಿದ್ಧರಾಗಲಿಲ್ಲ. ಬದಲಿಗೆ ಕಾಂಗ್ರೆಸಿನ ಮತ್ತು ಅದು ನಡೆಸಿಕೊಂಡು ಬಂದಿರುವ ಹಾಗು ಬರುತ್ತಿರುವ ಸರಕಾರದ ಮುಖಕ್ಕೆಯೇ ಕೆಸರು ಚೆಲ್ಲಲು ಅವರು ನೋಡಿದರು. "ಭಾರತ ಸರಕಾರದ ವಿದೇಶ ಘೋರಣೆಯು ಈಚೆಗೆ ಸ್ವಾಗತಾರ್ಹ ಪರಿವರ್ತನೆಯನ್ನು ಹೊಂದಿದೆ" ಎಂಬ ಅವರ ಮಾತು ಸತ್ಯಕ್ಕೆ ತೀರ ವಿಪರ್ಯಾಸವಿರುತ್ತದೆ. ನೆಹರುಗಳು ನಿರ್ವಹಿಸಿಕೊಂಡು ಬಂದಿರುವ ವಿದೇಶ ಘೋರಣೆ ೧೯೪೬ನೇ ಇಸವಿಯಿಂದಲೂ ಒಂದೇ ರೀತಿಯಾಗಿ ಮುಂದುವರಿದು ಬಂದಿದೆ – ಕಮ್ಯೂನಿಸ್ಟರು ಈಗಲೂ ಯಾವ ಒಂದೆರಡು ವಿಷಯಗಳಲ್ಲಿ ಭಿನ್ನಾಭಿಪ್ರಾಯ ತೋರಿಸುತ್ತಿರುವರೋ ಅವು ಆಗಲೂ ಇದ್ದವು; ಇಂದು ಯಾವುದನ್ನು ಪ್ರಶಂಸಿಸುತ್ತಿರುವರೋ ಆ ಗುಣಗಳು ಸಹ ಬಹಳ ಹಿಂದೆಯೇ ಇದ್ದವು ಅವುಗಳನ್ನು ಇತ್ತು ತಡವಾಗಿ ಗುರುತಿಸಿದ ಕಮ್ಯೂನಿಸ್ಟರು ತಾವೇ ಲಾಗ ಹೊಡೆದಿರುವೆವೆಂದು ಹೇಳುವಷ್ಟು ಪ್ರಮಾಣಿಕತೆ ತೋರಿಸಿಲ್ಲ.

ಯೋಜನೆಯ ಕುರಿತಾದ ನಿಲುಮೆ

ರಶ್ಯ, ಚೀನ ಮುಂತಾದ ರಾಷ್ಟ್ರಗಳು ಹೊಗಳಿದ ಹೊರತು ಭಾರತದ ಕಮ್ಯೂನಿಸ್ಟ ಪಕ್ಷ ಸಹ ಸರಕಾರವನ್ನು ಪ್ರಶಂಸಿಸಲಾರದು. ಆದರ ಕೆಲಸಗಳನ್ನು ಮೆಚ್ಚಲಾರದು ಎಂಬುದನ್ನು ಶ್ರೀ. ಅಜಯ ಘೋಷರು "ಆಂತರಿಕ ಘೋರಣೆ ಮಾತ್ರ ಇನ್ನೂ ಪ್ರತಿಗಾಮಿಯಾಗಿಯೇ ಉಳಿದಿದೆ" ಎಂದು ಹೇಳಿರುವುದರ ಮೇಲಿಂದ ತೀರ್ಮಾನಿಸಬಹುದು. ಪಂಚ ವಾರ್ಷಿಕ ಯೋಜನೆಯ ಲಾಭಗಳನ್ನು ಜನರು ಈಗಾಗಲೇ ಮನವರಿಕೆ ಮಾಡಿಕೊಂಡಿದ್ದಾರೆ; ಸರಕಾರದ ಲೆಕ್ಕದಂತೆ ಜನತೆಯ ನಿತ್ಯ ಜೀವನದ ಪರಿಸ್ಥಿತಿಯೂ ಯೋಜನೆಯ ಪರಿಣಾಮವಾಗಿ ಸುಧಾರಿಸಿದೆ. ಆದರೆ ಕಮ್ಯೂನಿಸ್ಟರು "ಮಾಡಿದ ಕರ್ಚಿಗೆ ಸರಿಯಾದ ಲಾಭ ದೊರಕಿಲ್ಲ" ಎಂಬ ವಾದದ ಆಶ್ರಯವನ್ನು ಪಡೆದಿದ್ದಾರೆ. ಜನರ ಮೇಲೆ ತತ್ಕ್ಷಣ ಪ್ರಭಾವ ಬೀರುವ ಜನಪದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ಸೇವೆಯ ವಿಸ್ತರಣೆಯ ಕಾರ್ಯಕ್ರಮಗಳನ್ನು ಮಾತ್ರ ಅವರು ವಿರೋಧಿಸಲು ಹೋಗಿಲ್ಲ – ಏಕೆಂದರೆ ವಿರೋಧಿಸಿದರೆ, ಜನರಿಗೆ ಈ ಪಕ್ಷದ ನೆಲೆ ಗೊತ್ತಾಗಿಬಿಡುತ್ತದೆ.

ವಿದೇಶಗಳ ಆರ್ಥಿಕ ನೆರವು

ಇನ್ನೂ ಒಂದು ವಿಷಯ ಇಲ್ಲಿ ಗಮನಕ್ಕೆ ಬರುತ್ತದೆ—ಕಮ್ಯೂನಿಸ್ಟರು ಈಗ ಭಾರತಕ್ಕೆ ವಿದೇಶಗಳುಸಹಾಯನೀಡುವ ಕುರಿತು ತಮ್ಮ ಪ್ರತಿಭಟನೆಯನ್ನುಬಹಳಷ್ಟು ಬಿಟ್ಟುಕೊಟ್ಟಿದ್ದಾರೆಂಬುದೇಅದು ರಶ್ಯವು ಭಾರತಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ತಾಂತ್ರಿಕ ಹಾಗು ಆರ್ಥಿಕ ರೀತಿಯಲ್ಲಿ ನೆರವಾಗುವ ಭರವಸೆ ಈಗ ಕಂಡುಬಂದಿರುವುದರಿಂದ ಸಧ್ಯ ಕಮ್ಯೂನಿಸ್ಟರು ತಮ್ಮ ವಿರೋಧವನ್ನು ಹಿಂದೆಗೆದುಕೊಳ್ಳಬೇಕಾಯಿತೆಂದು ತೋರುತ್ತದೆ. ಆದರೆ, ಹೀಗೆ ಮಾಡುವಾಗ, ಅಂಥ ಸಹಾಯ ಸರಕಾರದಮಟ್ಟದಲ್ಲಿ ಬರಬೇಕು ಎಂದಪರು ಕುಂಟು ಹಂತ್ತಿ ಹಾಕಿದ್ದಾರೆ; ಅಮೇರಿಕದ ಖಾಸಗಿ ಭಂಡವಾಳವು ಭಾರತದಲ್ಲಿ ನಿಕ್ಷೇಪಿಸಲ್ಪಡುವುದನ್ನು ಕಮ್ಯೂನಿಸ್ಟರು ವಿರೋಧಿಸುತ್ತಾರೆ. ರಶ್ಯದಿಂದ ಸರಕಾರದಮಟ್ಟದಲ್ಲಿ ಹೊರತು ಬೇರಾವುದೇ ರೀತಿಯಲ್ಲಿ ಭಂಡವಾಳ ಹರಿದು

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ಈ ಕೆಳಕಂಡ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ರೆಡ್ಡಿ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,

ಮದ್ರಾಸ್—3.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ಒ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಶಾ ಕಂಪೆನಿ—ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಬರಲಾರದೆಂಬುದೇ ಈ ವಿರೋಧದ ಹಿನ್ನೆಲೆಯಲ್ಲಿರುವ ಗುಟ್ಟು.

ರಾಷ್ಟ್ರೀಕರಣದ ವಿಷಯದಲ್ಲಿ

ಕಮ್ಯೂನಿಸ್ಟರು ರಾಷ್ಟ್ರೀಕರಣದಂಥ ವಿಷಯದಲ್ಲಿ ಸಹ ಈಗ ವೆತ್ತಗಿನ ಧೋರಣೆ ವಹಿಸಿರುವರೆಂಬಂತೆ ಭಾವವಾಗುತ್ತದೆ. ಎಲ್ಲ ಕೈಗಾರಿಕೆಗಳ ರಾಷ್ಟ್ರೀಕರಣವಾಗಬೇಕೆಂಬ ತಮ್ಮ ಹಿಂದಿನ ನಿಲುಸೆಯನ್ನು ಬಿಟ್ಟು ಬ್ರಿಟಿಷರ ಬಂಡವಾಳವಿರುವ ತೋಟಗಳ, ಕಲ್ಲಿದ್ದಲು ಮೆಂಗನೀಸೇ ಮುಂತಾದ ಕೆಲವು ಉದ್ದಿಮೆಗಳನ್ನು ವಿದೇಶಗಳವರು ನಡೆಸಿಕೊಂಡು ಬರುತ್ತಿರುವ ಬೇಂಕುಮತ್ತು ವಿಮಾ ಕಂಪೆನಿಗಳ ರಾಷ್ಟ್ರೀಕರಣವಾದರೆ ಸಾಕು ಎನ್ನುತ್ತಾರೆ. ಇದು ಪರಿಸ್ಥಿತಿಗೆ ಹೊಂದಿಕೊಳ್ಳುವ ಧೋರಣೆಯಲ್ಲದೆ ಬೇರೇನೂ ಆಗಲಾರದು. ಭಾರತದ ಸಂಘ, ಸಂಸ್ಥೆಗಳ ವೈತ್ರಿ ಸಂಪಾದನೆಯ ಉದ್ದೇಶ ಇಲ್ಲಿ ಅಡಗಿದೆ. ಗೋವೆಯ ವಿಷಯದಲ್ಲಿ ಸರಕಾರ ಪೋಲೀಸು ಕ್ರಮವನ್ನು ಕೈಗೊಳ್ಳಬೇಕು, ಕಾನ್ಪುರ ಮತ್ತು ದಾರ್ಜಲಿಂಗುಗಳ ಮುಷ್ಕರದ ಕುರಿತು ಸರಕಾರ ವಹಿಸಿದ ಧೋರಣೆ ಸಮಾಜವಾದಿ ಸ್ವರೂಪದ ಸಮಾಜ ರಚನೆಯ ಗೊತ್ತುವಳಿಗೆ ವಿಸಂಗತವಾಗಿದೆ—ಎಂಬಿತ್ಯಾದಿ ವಿಷಯಗಳಲ್ಲಿ ಸಹ ಹೇಗಾದರೂ ಜೀವ ಹಿಡಿದುಕೊಂಡಿರುವ ಕಮ್ಯೂನಿಸ್ಟರ ಆತುರತೆಯೇ ಎದ್ದು ತಾಣಿಸುತ್ತದೆ: ಹೊರತು ತತ್ವನಿಷ್ಠೆಯಲ್ಲ.

ಪ್ರಜಾಶಕ್ತಿಗಳ ಒಗ್ಗಟ್ಟು

ಅಂತರಿಕ ಧೋರಣೆಯನ್ನು ಈಗ ಕಮ್ಯೂನಿಸ್ಟರು ಟೀಕಿಸುತ್ತಿದ್ದರೂ—ಬರುವ ಪ್ರಜಾರಾಜ್ಯ ದಿನದಂದು ರಶ್ಯದ ಪ್ರಧಾನಿ ಮಾರ್ಶಲ್ ಬುಲ್ಗೇನಿನ್ನರು ಭಾರತಕ್ಕೆ ಬಂದಾಗ, ಇಲ್ಲಿಯ ಪ್ರಗತಿಯನ್ನು ಪ್ರಶಂಸಿಸಿದರೆ, ಆಗ ಕಮ್ಯೂನಿಸ್ಟರು ಸಹ ಹೊಸ ರಾಗವನ್ನು ಹಾಡಬಹುದು. ಆದುದಂದ ಈ ಪಕ್ಷದಲ್ಲಿ ಜನತೆ ಯಾವ ವಿಶ್ವಾಸವನ್ನೂ ಇಡತಕ್ಕದ್ದಲ್ಲ. ಕಾಂಗ್ರೆಸಿಗರು ಸಹ ಭಾರತೀಯ ಕಮ್ಯೂನಿಸ್ಟರ ಧೋರಣೆಯ ಕುರಿತು ಸ್ವಲ್ಪ ಜಾಗ್ರತೆಯಿಂದ ಇರಬೇಕಾಗಿದೆ. ಏಕೆಂದರೆ ಇವರು ಕಾಂಗ್ರೆಸಿನೊಡನೆ ಕ್ರಿಯಾತ್ಮಕ ಸಹಕಾರವನ್ನು ನೀಡಲೇನು ಸಿದ್ಧರಿಲ್ಲ—ಬದಲು "ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗಟ್ಟು ಸ್ಥಾಪನೆ" ತಮ್ಮ ಉದ್ದೇಶ ಎಂದಿದ್ದಾರೆ; ಕಾಂಗ್ರೆಸಿನ ಹೊರಗಡೆಯ ಶಕ್ತಿಗಳನ್ನು ಈ ಒಗ್ಗಟ್ಟಿನ ಸೂತ್ರದಲ್ಲಿ ಬಂಧಿಸುವ ಹುಮ್ಮಸ್ಸೇ ಕಮ್ಯೂನಿಸ್ಟರಿಗಿರದೆ, ಕಾಂಗ್ರೆಸಿನ ಒಳಗಿನ ಧುರೀಣರನ್ನೂ ಆಕರ್ಷಿಸಿಕೊಳ್ಳುವ ವಿಚಾರ ಅವರದಿರುತ್ತದೆ.

ಕ್ರಾಂತಿಕಾರಿ ಕಾರ್ಯಕ್ರಮ

ಕಾಂಗ್ರೆಸಿನ ಕೆಲವರಿಗೆ ಮುಂದಗಾಮಿಯಾದ ನೀತಿ ರುಚಿಸಿತು; ಅವರ ಸಹಕಾರ ಸಡೆದು ಪ್ರಜಾಸತ್ತಾತ್ಮಕ ಶಕ್ತಿಯನ್ನು ಬೆಳೆಸಿಕೊಂಡು, ಬರುವ ಚುನಾವಣೆಯಲ್ಲಿ ಈಗಿನ ಸರಕಾರಗಳ ಬದಲು ಪ್ರಜಾಸತ್ತಾತ್ಮಕ ಸಂಯುಕ್ತರಂಗದ ಸರಕಾರಗಳು ಅಸ್ತಿತ್ವಕ್ಕೆ ಬರುವಂತೆ ಹೊರಾಡುವುದೇ ತಮ್ಮ ಧ್ಯೇಯ—ಎಂದು ಅಜಯ ಘೋಷರು ಸಾರಿದ್ದಾರೆ. ಆದರೆ ಈ ಪ್ರಜಾಸತ್ತಾತ್ಮಕ ಶಕ್ತಿಯನ್ನು ಸಂಘಟಿಸಲು ಕಮ್ಯೂನಿಸ್ಟರು ಅರ್ಹರೆ ಎಂಬುದನ್ನು ಅವರು "ಕ್ರಾಂತಿಕಾರಿ ಕಾರ್ಯಕ್ರಮಗಳಿಗೆ ನೀವೀಗಲೂ ಅಂಟಿಕೊಂಡಿದ್ದೀರಾ?" ಎಂಬ ಪ್ರಶ್ನೆಗೆ ಕೊಟ್ಟ ಉತ್ತರ ಸ್ಪಷ್ಟೀಕರಿಸುತ್ತದೆ "ನಾವು ಯಾವುದೇ ವಿಶಿಷ್ಟ ಪದ್ಧತಿಗೆ ಅಂಟಿಕೊಂಡಿಲ್ಲ ಎಂಬುದನ್ನು ಸ್ಪಷ್ಟಗೊಳಿಸಿದ್ದೇವೆ. ನಾವು ಬಯಸುವ ಬದಲಾವಣೆಗಳನ್ನು ಶಾಂತ ರೀತಿಯಲ್ಲಿ ಅಸ್ತಿತ್ವಕ್ಕೆ ತರಲು ಪ್ರಯತ್ನಿಸುತ್ತೇವೆ. ಅದು ವಿಫಲಗೊಂಡರೆ, ನಿಮಗೆ ಗೊತ್ತೇ ಇದೆ, ಕಮ್ಯೂನಿಸ್ಟರು ಅಹಿಂಸೆಯ ತತ್ವಕ್ಕೆ ಕಟ್ಟು ಬಿದ್ದವರೇನು [ಅಲ್ಲ" ಎಂದು ಘೋಷರು ಘೋಷಿಸಿದರು

ಎಚ್ಚರ ಅತ್ಯವಶ್ಯ

ಇಂಥವರ ಕೈಯಲ್ಲಿ ಪ್ರಜಾಸತ್ತಾತ್ಮಕ ಶಕ್ತಿ ಹೇಗೆ ಸಂಘಟನೆಯಾದೀತು, ಪ್ರಜಾಪ್ರಭುತ್ವ ಎಲ್ಲಿ ಉಳಿದೀತು ಎಂಬುದನ್ನು ಜನತೆ ತಿಳಿಯದು. ತೆಲಂಗಾಣ ಮುಂತಾದ ಕಡೆಗಳಲ್ಲಿ ಹಿಂಸಾಚಾರದ ತಾಂಡವ ನೃತ್ಯ ನಡೆಸಿದ ಕಮ್ಯೂನಿಸ್ಟರು ಶಾಂತಿ ಮತ್ತು ಭದ್ರತೆಗೋಸ್ಕರ ದಾರ್ಜಲಿಂಗಿನಲ್ಲಿ ಅನಿವಾರ್ಯವಾಗಿ ನಡೆಸಿದ ಗೋಳಿಬಾಂಬನ್ನು ನಿರೋಧಿಸುತ್ತಾರೆ—ಎಂದರೆ ಆಶ್ಚರ್ಯವೇ ಸರಿ. ಪ್ರಜಾಪ್ರಭುತ್ವದಲ್ಲಿ ಜನಮನವನ್ನು ಒಲಿಸಿಕೊಳ್ಳಲು ಪ್ರತಿಯೊಂದೂ ರಾಜಕೀಯ ಪಕ್ಷ ಪ್ರಯತ್ನಿಸಲು ಅಧಿಕಾರ ಪಡೆದಿರುತ್ತದೆ—ಆದರೆ, ಇದು ಶಾಂತ ರೀತಿಯ ಚಳವಳಿಂದ ಆಗಬೇಕಲ್ಲದೆ, ಹಿಂಸಾಚಾರದ ಮೂಲಕವಲ್ಲ. ಕಮ್ಯೂನಿಸ್ಟರು ಅಹಿಂಸೆಯ ಭಕ್ತರಲ್ಲ ಎಂಬ ವ್ಯಂಗ್ಯ ಮಾತು ಅವರು ಹಿಂಸೆಯನ್ನು ಆಶ್ರಯಿಸಲು ಹೇಸರು ಎಂಬುದನ್ನೆ ಸೂಚಿಸುತ್ತದೆ. ಇವರ ಕೈಯಲ್ಲಿ ಪ್ರಜಾಪ್ರಭುತ್ವ ಸಾಯದೆ ಉಳಿಯದು. ಆದುದರಿಂದ ಈ ಕಮ್ಯೂನಿಸ್ಟರ ವಿಷಯದಲ್ಲಿ ಜನತೆ ಮೋಸಹೋಗಿ ಕೂಡದು. ತಿರು ಕೊಚ್ಚಿ ಮತ್ತು ಆಂಧ್ರಗಳಲ್ಲಿ ಪೂರ್ಣ ಪರಾಭವವನ್ನು ಹೊಂದಿದ ಬಳಿಕವೂ ಹಿಂಸೆಯ ಬೆದರಿಕೆ ಹುಟ್ಟಿಸುವವರು ತಿಳಿವಳಿಕೆಯುಳ್ಳ ಭಾರತೀಯರ ಸಹಾನುಭೂತಿಯನ್ನು ಪಡೆಯುವುದು ತುಂಬ ಕಷ್ಟ.

ರಾಷ್ಟ್ರದಾದ್ಯಂತ ಮದ್ಯಪಾನ ಪ್ರತಿಬಂಧ

ಶ್ರೀಮನ್ನಾರಾಯಣ ಸಮಿತಿಯ ಅಭಿಪ್ರಾಯ

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀಮನ್ನಾರಾಯಣರ ಧುರೀಣತ್ವದಲ್ಲಿ ಯೋಜನಾ ಆಯೋಗವು ಏರ್ಪಡಿಸಿದ್ದ ಮದ್ಯನಿವೇಧ ವಿಚಾರಣಾ ಸಮಿತಿಯು ಭಾರತದಾದ್ಯಂತ ಪಾನ ನಿರೋಧನವನ್ನು ಜ್ಯಾರಿಗೆ ತರಬೇಕೆಂದು ಸೂಚಿಸಿದೆಯೆಂಬ ತಿಳಿದುಬರುತ್ತದೆ. ಇದರಿಂದ ಭಾರತದ ಸರಕಾರಗಳಿಗೆ ಆದಾಯದಲ್ಲಿ ಉಂಟಾಗಬಹುದಾದ ಸುಮಾರು ೪೬ ಕೋಟಿ ರೂಪಾಯಿಗಳ ಕೊರತೆಯನ್ನು ಆದಾಯದ ಇತರ ಸ್ರೋತಗಳನ್ನು ಅವಲಂಬಿಸುವುದರಿಂದ ತುಂಬಿಸಬೇಕೆಂದೂ ಇದೇನು ಅಸಾಧ್ಯ ಕೆಲಸವಲ್ಲವೆಂದೂ ಸಮಿತಿಯ ಅಭಿಪ್ರಾಯ.

ರಾಜ್ಯಪಾಲರ ಸುಗ್ರೀವಾಜ್ಞೆ

ಮದ್ರಾಸಿನ ರಾಜ್ಯಪಾಲರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಮದ್ರಾಸು ನಗರಸಭೆಯ ವಲಯದಲ್ಲಿ ಹಿಂದಿನ ಕಡಿಮೆ ಗೇಣಿ ಅಥವಾ ಬಾಡಿಗೆಯ ಮೇಲೆ ಸ್ಥಳಪಡೆದು ಮನೆ ಕಟ್ಟಿಕೊಂಡವರನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸಿದ್ದಾರೆ. ಈ ಸುಗ್ರೀವಾಜ್ಞೆಯು ವ್ಯಾಪ್ತಿಯನ್ನು ಮಧುರೆ, ತಿರುಚಿರಪಳ್ಳಿ ಮುಂತಾದ ಇತರ ನಗರಸಭೆಗಳಿಗೆ ವಿಸ್ತರಿಸುವುದಕ್ಕೂ ಗವರ್ನರರು ಉದ್ದೇಶಿಸಿರುವರೆಂದು ತಿಳಿದುಬರುತ್ತದೆ

ಕಲ್ಲೆಣ್ಣೆಯ ನಿಷ್ಕ್ಷೇಪ

ಪಶ್ಚಿಮ ಬಂಗಾಳದಲ್ಲಿ ಹೊಸ ಎಣ್ಣೆಯ ನಿಷ್ಕ್ಷೇಪ ಕಂಡು ಬಂದಿದೆ ಎಂದು ಭಾರತ ಸರಕಾರದ ನೆರವಿನಿಂದ ಅಮೇರಿಕದ ಸ್ಟಾನ್‌ವಾಕ್ ಕಂಪೆನಿ ನಡೆಸಿದ ಶೋಧದ ಕುರಿತಾದ ವರದಿ ತಿಳಿಸುತ್ತದೆ. ಇವನ್ನು ಉಪಯೋಗಿಸುವ ಕುರಿತು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಮತ್ತು ದೇಶದ ಇತರ ಭಾಗಗಳಲ್ಲಿ ಎಣ್ಣೆಯ ಶೋಧನಡೆಸಲು ಪ್ರಯತ್ನವಾಗುತ್ತಿದೆ.

ನೋಟುಗಳ ಕಾಗದ ತಯಾರಿಕೆ

ದ್ವಿತೀಯ ಮಹಾಯುದ್ಧ ಕಾಲದಿಂದ ಬಹಳವಾಗಿ ಬಳಕೆಗೆ ಬಂದಿರುವ ನೋಟುಗಳ ಮುದ್ರಣಕ್ಕೆ ತಕ್ಕ ಕಾಗದ ತಯಾರಿಸಲು ಭಾರತದಲ್ಲಿ ೩೫೦ ಲಕ್ಷ ರೂಪಾಯಿ [ವೆಚ್ಚದ ಕಾರ್ಖಾನೆಯೊಂದು ಸ್ಥಾಪಿಸಲ್ಪಡುತ್ತದೆ ಸದ್ಯಕ್ಕೆ ಸುಮಾರು೧೦೦ ಟನ್ನು ಗಳಷ್ಟು ಮಾತ್ರ ಈ ಕಾಗದದ ಬೇಡಿಕೆ ಇದ್ದರೂ ಮುಂದಿನ ಆವಶ್ಯಕತೆಯ ದೃಷ್ಟಿಯಿಂದ ೧೬೦೦ ಟನ್ನು ಕಾಗದ ಉತ್ಪಾದಿಸಬಲ್ಲ ಯಂತ್ರಗಳನ್ನು ಈ ಕಾರ್ಖಾನೆಯಲ್ಲಿ ಜೋಡಿಸಲಾಗುತ್ತದೆ.

ಕಾಂಗ್ರೆಸ್ಸೇ ಉತ್ತಮ

ಇಂದೋರಿನ ಪ್ರಮುಖ ಕಮ್ಯೂನಿಸ್ಟರೊಬ್ಬರು ತಮ್ಮ ಇನ್ನೂರು ಅನುಯಾಯಿಗಳೊಂದಿಗೆ ಕಾಂಗ್ರೆಸನ್ನು ಸೇರಿರುವರೆಂದು ತಿಳಿದು ಬರುತ್ತದೆ. ಕಮ್ಯೂನಿಸ್ಟ ಪಕ್ಷಕ್ಕೆ ಆವರಿತ್ತ ರಾಜೀನಾಮೆಯಲ್ಲಿ ರಾಷ್ಟ್ರದ ಪುನರ್ನಿರ್ಮಾಣದ ಕಾರ್ಯದಲ್ಲಿ ಕಮ್ಯೂನಿಸ್ಟರು ಸಹಕರಿಸದಿರುವುದು, ವಿದೇಶಗಳ ಧುರೀಣರ ಜನ್ಮ ದಿನಗಳಿಗೆ ಕೊಟ್ಟ ಮಹತ್ವವನ್ನು ರಾಷ್ಟ್ರೀಯ ಮುಖಂಡರ ವಿಷಯದಲ್ಲಿ ತೋರಿಸದಿರುವುದು, ಆಂತರಿಕ ಧೋರಣೆಯನ್ನು ಬೆಂಬಲಿಸದೆ ಟೀಕಿಸುವುದು, ಭಾರತಕ್ಕೆ ಇನ್ನೂ ಪೂರ್ಣ ಸ್ವಾತಂತ್ರ್ಯ ಸಿಕ್ಕಿಲ್ಲವೆಂದು ನಂಬಿರುವುದು ಇತ್ಯಾದಿ ಎಂಟು ಕಾರಣಗಳನ್ನಿತ್ತು ಆ ಪಕ್ಷದ ಧೋರಣೆ ತಮಗೇಕೆ ಸಮ್ಮತವಿಲ್ಲವೆಂದು ಅವರು ಸ್ಪಷ್ಟೀಕರಿಸಿದ್ದಾರೆ

ಲೋಕ ಸಭೆಯ ಅಧಿವೇಶನ

ಇದೇ ೫೫ನೇ ದಿನಾಂಕ ಲೋಕ ಸಭೆಯ ಅಧಿವೇಶನ ಪ್ರಾರಂಭವಾಗುತ್ತದೆ. ಇದರಲ್ಲಿ ಚರ್ಚೆಗೆಂದು ೧೭ ಖಾಸಗಿ ಗೊತ್ತುವಳಿಗಳು ಮಂಡಿಸಲ್ಪಟ್ಟಿದ್ದು, ತವುಗಳ ಪ್ರಾರಸ್ತ್ಯಾನುಕ್ರಮ ಇನ್ನೂ ಗೊತ್ತಾಗಿಲ್ಲ

ಸ್ಟೇಟ್ ಬ್ಯಾಂಕ್

ಇದೇ ೧೧ನೇ ತಾರೀಕಿನಂದು ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯವಾಗಿ ಪರಿವರ್ತನೆ ಹೊಂದಿದೆ. ಸರಕಾರದ ನೇರಾದ ನಿಯಂತ್ರಣವಲ್ಲಿ ಕೆಲಸ ಮಾಡುವ ಈ ಸಂಸ್ಥೆಯು ಮುಂದಿನ ಐದು ವರ್ಷಗಳಲ್ಲಿ ೪೦೦ ಹೊಸ ಶಾಖೆಗಳನ್ನು ತೆರೆದು ಹಳ್ಳಿಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸಿ ಕೊಡುತ್ತದೆ. ಇಂಪೀರಿಯಲ್ ಬ್ಯಾಂಕಿನ ಪಾಲುದಾರರಿಗೆ ಯೋಜನಾ ಸಾಲಪತ್ರ (೧೯೬೫)ಗಳನ್ನು ನೀಡುವ ಮೂಲಕ ಪರಿಹಾರವನ್ನು ಕೊಡಲಾಯಿತು. ಸ್ಟೇಟ್ ಬ್ಯಾಂಕಿನ ಪಾಲು ಪಡೆಯ ಬಯಸುವವರಿಗೆ ಪ್ರತಿ ಪಾಲಿನ ಬೆಲೆ ೩೫೦ ರೂಪಾಯಿ ಎಂದು ತಿಳಿಸಲಾಯಿತು.

ಯೋಜನೆಗೆ ಸಾಲ

ಭಾರತ ಸರಕಾರದ ಸುಮಾರು ೬೦೦ ಕೋಟಿ ರೂಪಾಯಿಗಳ ಸಾಲವು ಸಂಪೂರ್ಣವಾಗಿ ತುಂಬಿದೆಂದು. ೫೫ನೇ ತಾರೀಕಿನವರೆಗೆ ಸಾಲಕ್ಕೆ ಹಣ ಸಂದಾಯಮಾಡಲ. ಅವಧಿಇದ್ದಿದ್ದರೂ ಸಹ ೫ನೇ ತಾರೀಕಿಗೇ

(ಅನೇ ಪುಟ ನೋಡಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. ೩—೪—)
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೭-೭-೫೫	ಸಂಚಿಕೆ ೪೨

ಗೃಹ ನಿರ್ಮಾಣ ಸಮಸ್ಯೆ

ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಂತ್ರಿಗಳು ಕಳೆದ ವಾರ ಸಿಮ್ಲದಲ್ಲಿ ನಡೆದ ಸಭೆ ಸೇರಿ ಗೃಹ ನಿರ್ಮಾಣ ಸಮಸ್ಯೆಯ ಕುರಿತಾಗಿ ವಿಚಾರ ವಿನಿಮಯ ನಡೆಸಿ ೧೫ ನಿರ್ಣಯಗಳನ್ನು ಸ್ವೀಕರಿಸಿದ್ದಾರೆ; ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರ್ಪಡೆಗೆಂದು ಯೋಗ್ಯ ಕಾರ್ಯಕ್ರಮವನ್ನು ಗೃಹ ನಿರ್ಮಾಣ ಕ್ಷೇತ್ರದಲ್ಲಿ ರೂಪಿಸಿಕೊಳ್ಳಲು ಅವರು ಸಂಕಲ್ಪಿಸಿದ್ದಾರೆ. ಆದರೆ ಎಲ್ಲರಿಗೂ ಅನ್ನ ಮತ್ತು ಬಟ್ಟೆಯನ್ನೊದಗಿಸುವಷ್ಟು ಸುಲಭದ ಕೆಲಸವಾಗಿ ಗೃಹ ನಿರ್ಮಾಣ ಸಮಸ್ಯೆ ಇಲ್ಲವೆಂದು ಕೇಂದ್ರದ ಮಂತ್ರಿ ಸರದಾರ ಸ್ವರ್ಣ ಸಿಂಗರು ಸಭೆಯ ಮುಂದೆ ಮಂಡಿಸಿದ ಅಂಕೆ ಸಂಖ್ಯೆಗಳು ತಿಳಿಸುತ್ತವೆ. ಮುಂದಿನ ಯೋಜನೆಯ ಅವಧಿಯಲ್ಲಿ ಕೈಗಾರಿಕೆಗಳ ವಿಸ್ತರಣೆ ನಡೆಯಲಿದ್ದು ನಗರಗಳ ಅವಶ್ಯಕತೆಯನ್ನು ನ್ಯಾಯವಾಗಿ ನೋಡಬೇಕಾದರೆ ೧೫ ಲಕ್ಷ ಮನೆಗಳನ್ನು ಕಟ್ಟಬೇಕಾಗುತ್ತದೆ; ಕೇವಲ ೩೦ ಲಕ್ಷ ಹೊಸ ಮನೆಗಳನ್ನು ನಿರ್ಮಿಸುವೆವೆಂದರೂ ಸಹ ೧೭೫೦ ಕೋಟಿ ರೂಪಾಯಿಗಳ ವೆಚ್ಚ ಬೇಕಾಗುತ್ತದೆ. ಸುಮಾರು ೫೦೦ ಕೋಟಿ ರೂಗಳ ವ್ಯಾಪ್ತಿಯುಳ್ಳ ಮತ್ತು ಕೈಗಾರಿಕೆಗಳ ವಿಸ್ತರಣೆಗೆ ೧೨೦೦ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನಷ್ಟೇ ಇಟ್ಟುಕೊಂಡಿರುವ ನಾಲೆಯ ಯೋಜನೆಯು ಮನೆಗಳನ್ನು ಕಟ್ಟಿಸಿಕೊಡುವುದಕ್ಕಾಗಿ ದೊಡ್ಡ ಮೊತ್ತವನ್ನು ವ್ಯಯಿಸಲಾರದೆಂಬುದು ನಿಜ. ಈಗಿನ ಅಂದಾಜಿನಂತೆ ಕೂಲಿಕಾರರಿಗೆ ಮನೆ ಕಟ್ಟಿಸಿಕೊಡುವುದಕ್ಕೆ ೧೦೦ ಕೋಟಿ ರೂಪಾಯಿ ಮತ್ತು ಆರೋಗ್ಯ-ಪ್ರಗತಿ ಮನರ್ನಿರ್ಮಾಣದ ಖಾತೆಗಳ ಬೇಡಿಕೆಯನ್ನು ಪೂರೈಸುವುದಕ್ಕೆ ಮತ್ತೆ ೨೦೦ ಕೋಟಿ ರೂಪಾಯಿಗಳನ್ನು ಮಾತ್ರ ನಗರಗಳಲ್ಲಿ ಮನೆ ನಿರ್ಮಾಣ ಕಾರ್ಯಕ್ಕೆ ವಿನಿಯೋಗಿಸಲು ಸಾಧ್ಯವಾಗಿದೆ. ಆದುದರಿಂದ ನಗರಗಳಲ್ಲಿ ಇದ್ದ ಮನೆಗಳನ್ನೂ ವಸತಿಗಳನ್ನೂ ಕೆಡವಿಹಾಕಿ ಹೊಸತನ್ನು ನೆಲೆಗೊಳಿಸುವುದಕ್ಕೆ ಈಗ ಹೋಗುವಂತೆಯೇ ಇಲ್ಲ. ಕೈಗಾರಿಕೆಗಳ ವಿಸ್ತರಣದ ದೆಸೆಯಿಂದ ನಗರಗಳಲ್ಲಿ ತುಂಬುವ ಹೆಚ್ಚಿನ ಜನರಿಗೆ ಆಶ್ರಯ ನೀಡಬಲ್ಲ ಮನೆಗಳನ್ನು ಯೋಗ್ಯ ರೀತಿಯಲ್ಲಿ ಕಟ್ಟಿಕೊಡುವುದು ಮತ್ತು ಈಗ ತೀರ ಅನಾರೋಗ್ಯಕರವಾದ ಮತ್ತು ಏನೇನೂ ಸುಧಾರಿಸಿ ಕೊಳ್ಳದ ಕೊಳೆಚೆ ಪ್ರದೇಶಗಳನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಿಸಿ ವಾಸಯೋಗ್ಯವಾಗಿ ಮಾಡುವುದು—ಎಂಬ ಎರಡು ಮುಖ್ಯ ದೃಷ್ಟಿಯಿಂದಲೇ ಗೃಹ ನಿರ್ಮಾಣ ಸಮಸ್ಯೆಯನ್ನು ಈಗ ಸ್ವಲ್ಪ ಮಟ್ಟಿಗೆ ಪರಿಹರಿಸಲು ಪ್ರಯತ್ನ ನಡೆದಿದೆ. ಸರಕಾರದ ಅಂದಾಜಿನ ಪ್ರಕಾರ ಇಷ್ಟು ಮಾಡಬೇಕಾದರೂ ಸಹ ಸುಮಾರು ೫ ಲಕ್ಷ ಹೊಸ ಮನೆಗಳನ್ನು ಕಟ್ಟಿಸಿಕೊಡಬೇಕಾದೀತು. ಕೇಂದ್ರ ಸರಕಾರದವರು ಈಗಾಗಲೇ ರಾಜ್ಯ ಸರಕಾರಗಳಿಗೆ, ಸಹಕಾರ ಸಂಘಗಳಿಗೆ ಮತ್ತು ಉದ್ಯೋಗಪತಿಗಳಿಗೆ ಉಪಾರ ಧನಸಹಾಯ ಮತ್ತು ಸಾಲಗಳನ್ನು ನೀಡಿ ನಗರಗಳಲ್ಲಿಯೂ ಔದ್ಯಮಿಕ ಕೇಂದ್ರಗಳಲ್ಲಿಯೂ ಮನೆಗಳನ್ನು ರಚಿಸುವುದಕ್ಕೆ ಬಹಳ ನೆರವೀಯುತ್ತಿದ್ದಾರೆ. ಆದರೆ, ಇಲ್ಲಿ ಉದ್ಯೋಗಪತಿಗಳು ಸಾಕಷ್ಟು ಉತ್ಸಾಹವನ್ನು ತೋರಿಸಿಲ್ಲವೆಂಬುದು ಶೋಚನೀಯವಾದ ವಿಚಾರ—ಕೇಂದ್ರ ಸರಕಾರವೀಯುವ ನೆರವಿನಲ್ಲಿ ೮೫% ಸಾಲನ್ನು ರಾಜ್ಯಸರಕಾರಗಳೇ ಪಡೆದಿವೆಯೆಂದೂ ಉದ್ಯೋಗಪತಿಗಳು ಕೇವಲ ೧೫% ಪ್ರಯೋಜನವನ್ನಷ್ಟೇ ಪಡೆಯಲು ಮುಂದಾದರೆಂದೂ ತಿಳಿದು ಬರುತ್ತದೆ. ಮನೆಗಳನ್ನು ಕಟ್ಟಿಸುವ ವೆಚ್ಚದಲ್ಲಿ ೩೭% ಸಾಲವಾಗಿ, ಮತ್ತು ೫೫% ಸಹಾಯಧನವಾಗಿ ಕೇಂದ್ರ ಸರಕಾರದಿಂದ ಸಿಕ್ಕಿಯೂ ಉದ್ಯೋಗಪತಿಗಳು ಇಷ್ಟು ಅನಾಸ್ಥೆ ತೋರಿಸುತ್ತಿರುವುದರಿಂದ, ತಮ್ಮ ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರಿಗೆ ಯೋಗ್ಯ ಗೃಹಗಳನ್ನು ನಿರ್ಮಿಸಿಕೊಡಲೇಬೇಕೆಂದು ಅವರ ಮೇಲೆ ಶಾಸನದ ಮೂಲಕ ಒತ್ತಾಯ ಹೇರುವ ವಿಚಾರವೀಗ ನಡೆದಿರುತ್ತದೆ. ಇಂಥ ಶಾಸನವು ಕೈಗಾರಿಕೆಗಳ ವಿಸ್ತರಣೆಗೆ ಅಪಾಯಕಾರಿ ಎಂದು ಹೊರ ತೋರಿಕೆಗೆ ಕಂಡು ಬಂದೀತು; ಆದರೆ ಲಕ್ಷಾಂತರ ಕೂಲಿಕಾರರ ಆರೋಗ್ಯ ಮತ್ತು ಸುಖಗಳ ಕಡೆಗೆ ಗಮನ ಕೊಡದಿರುವುದು ಕಲ್ಯಾಣ ರಾಷ್ಟ್ರಕ್ಕೆ ನೀಗದ ಮಾತು. ಕೇಂದ್ರ ಸರಕಾರ ಹೆಚ್ಚು ಸಹಾಯ ಧನವನ್ನು ನೀಡಬೇಕು; ಸಾಲವನ್ನೂ ಅಧಿಕ ಪ್ರಮಾಣದಲ್ಲಿ ಕೊಡಬೇಕು—ಎಂದೆಲ್ಲ ಹೇಳಲಾಗುತ್ತದೆ. ಆದರೆ ಈಗಿನ ಪ್ರಮಾಣದಂತೆಯೇ ಕೇಂದ್ರ ಸರಕಾರ ನೆರವಾಗಿ ಬಯಸಿದರೂ ಸುಮಾರು ೧೫೦ ಕೋಟಿ ರೂಪಾಯಿಗಳು ಕೈ ಬಿಡುತ್ತವೆ. ಇದಕ್ಕೆಯೇ ಯೋಜನೆಯಲ್ಲಿ ಅವಕಾಶ ಕೊರತೇತಿಂದು ಊಹಿಸುವುದು ಕಷ್ಟ. ಏಕೆಂದರೆ, ಮನೆಗಳನ್ನುಮಾತ್ರ ಕಟ್ಟಿಸಿ ಕಾಕಿದರೆ ರಾಷ್ಟ್ರದ ಸಾರ್ವಾಂಗಿಕ ಪ್ರಗತಿಯಾಗದು. ಎಲ್ಲ ಸಮಸ್ಯೆಗಳನ್ನೂ ಸಿಧಾನವಾಗಿ ಪ್ರಾಶಸ್ತ್ಯಸ್ಥಾಪಿಸುವುದಂತೆ ಬಡಿಸಬೇಕಾಗುತ್ತದೆ. ಆದುದರಿಂದ ಸರಕಾರದವರು ಉದ್ಯೋಗಪತಿಗಳ ಮೇಲೆ ನಿರ್ಬಂಧ ಹೇರುವ ಮತ್ತು ಇತರ ವಿಧಾನಗಳನ್ನು ಅವಲಂಬಿಸಲು ಉದ್ದೇಶಿಸಿದ್ದಾರೆ—ನಗರಗಳ ೫೧% ಜನರ ಆದಾಯ ತಿಂಗಳಿಗೆ ೧೦೦ ರೂಪಾಯಿಗಿಂತಲೂ ಕಡಿಮೆಯಾಗಿದೆ; ೫% ಜನರ ಮಾಸಿಕ ಆದಾಯ ೧೦೧ರಿಂದ ೩೦೦ ರೂಪಾಯಿ ವರೆಗಿದೆ. ಹೀಗೆ ನೂರು ರೂಪಾಯಿಗಿಂತಲೂ ಕಡಿಮೆ ಆದಾಯದವರಲ್ಲಿ ಕೂಲಿಕಾರರೇ ಅಧಿಕ. ಇವರು ಕೊಳೆಚೆ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರೆ; ಏಕೆಂದರೆ ಹೆಚ್ಚು ಬಾಡಿಗೆಯನ್ನು ಕೊಡುವ ಅನುಕೂಲತೆ ಇವರಿಗಿಲ್ಲ; ಆದುದರಿಂದ ಉತ್ತಮ ಮನೆಗಳನ್ನು ಅವರು ಆಶ್ರಯಿಸುವಂತಿಲ್ಲ. ಸರಕಾರದವರು ಈಚೆಗೆ ಸಂವಿಧಾನಕ್ಕೆ ಮಾಡಿರುವ ತಿದ್ದುಪಡಿಯಿಂದ ಕೊಳೆಚೆ ಪ್ರದೇಶಗಳನ್ನು ಸುಲಭದಲ್ಲಿ ವಶಪಡಿಸಿಕೊಳ್ಳುವುದಕ್ಕೆ ಸರಕಾರ ಸಮರ್ಥವಾಗಿದೆ. ಆದರೆ ಆರ್ಥಿಕ ಅಡಚಣೆಯು ಸುಧಾರಣೆಯ ಸಮಸ್ಯೆಯನ್ನು ಬಹಳವಾಗಿ ಪೀಡಿಸುತ್ತದೆ. ನಾವು ಈಗಲೇ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಗಳನ್ನು ಪ್ರಾರಂಭಿಸದಿದ್ದರೆ ಮುಂದೆ ಇನ್ನಷ್ಟು ಕಷ್ಟವಾದೀತು ಎಂಬುದರಿಂದ ಈಗ ಅಲ್ಪ ಪ್ರಮಾಣದಲ್ಲಿಯಾದರೂ ಕೆಲವು ಸಾಹಸಗಳನ್ನು ಸರಕಾರ ಕೈಗೊಂಡಿದೆ. ಇವುಗಳಲ್ಲಿ ತಿಂಗಳಿಗೆ ೩೦೦, ಕೆಲವೊಮ್ಮೆ ೫೦೦ ರೂಪಾಯಿಗಳಿಗಿಂತ ಕಡಿಮೆ ಆದಾಯದವರಿಗೆ ಮನೆ ಕಟ್ಟಿಕೊಳ್ಳಲು ೮೦೦೦ ರೂ.ಗಳ ಮಿತಿಯನ್ನು ವಿಧಿಸದಂತೆ ಒಟ್ಟು ಕರ್ಚಿನಲ್ಲಿ ೮೦% ಹಣವನ್ನು ದೀರ್ಘಾವಧಿಯಲ್ಲಿ ಪಾವತಿಮಾಡುವ ಸಾಲವಾಗಿ ಕೊಡುವ ಯೋಜನೆ ಉಲ್ಲೇಖನೀಯ. ಕಳೆದ ವರ್ಷಾಂತ್ಯದಲ್ಲಿ ಪ್ರಾರಂಭಿಸಿದ ಈ ಯೋಜನೆ ಎಷ್ಟು ಜನಪ್ರಿಯವಾಗಿದೆ ಎಂದರೆ, ಬರುವ ಮಾರ್ಚಿಗೆ ಮುಕ್ತಾಯವಾಗುವ ಪಂಚವಾರ್ಷಿಕ ಯೋಜನೆಯ ೧೫ ತಿಂಗಳ ಅವಧಿಗೆ ೨೫ ಕೋಟಿ ರೂಪಾಯಿಗಳನ್ನು ಸರಕಾರ ಮಂಜೂರುಮಾಡಬೇಕಾಯಿತು. ತಿಂಗಳಿಗೆ ೩೦೦ ಅಥವಾ ೫೦೦ ರೂಪಾಯಿಗಳಿಗಿಂತ ಹೆಚ್ಚು ಆದಾಯವಿರುವವರಿಗೆ ಹೆಚ್ಚೆಂದರೆ ೩೫೦೦೦ ರೂಪಾಯಿಗಳ ಮಿತಿಗೊಳಪಟ್ಟು ಮನೆಯ ವೆಚ್ಚದಲ್ಲಿ ೮೦% ಹಣವನ್ನು ಸಾಲವಾಗಿ ವಿಮಾಕಂಪೆನಿಗಳಿಂದ ಒದಗಿಸಿ ಕೊಡುವ ವಿಚಾರ ಸರಕಾರಕ್ಕಿದೆ. ಇಷ್ಟೆಲ್ಲ ಉಪಾಯಗಳನ್ನು ಯೋಜಿಸಿದರೂ ಭಾರತದ ಗ್ರಾಮ ಪ್ರದೇಶಗಳ ೫೪೧ ಲಕ್ಷ ಮನೆ ಮತ್ತು ಗುಡಿಸಲುಗಳ ಮನರುಜ್ಜೀವನ ಕಾರ್ಯದತ್ತ ಗಮನಿಸುವುದೇ ಅಸಾಧ್ಯವೆನಿಸಿದೆ. ಏಕೆಂದರೆ ಪ್ರತಿಗುಡಿಸಲಿಗೆ ೧೦೦ ಮತ್ತು ಮನೆಗೆ ೫೦೦ ರೂಪಾಯಿಗಳಂತೆ ದುರಸ್ತಿ ಮತ್ತು ಕಿಟಕಿಬಾಗಿಲುಗಳ ರಚನೆ ಇತ್ಯಾದಿಗೆ ಸಹಾಯ ಕೊಡ ಹೋದ ಪಕ್ಷದಲ್ಲಿ ೯೨೨ ಕೋಟಿ ರೂಪಾಯಿಗಳ ವೆಚ್ಚ ಬರುತ್ತದೆ. ಈ ದೃಷ್ಟಿಯಿಂದ ನಾವು ಹೊಲವಾರು ಪಂಚವಾರ್ಷಿಕ ಯೋಜನೆಗಳನ್ನು ಕೈಗೂಡಿಸಿದ ಬಳಿಕವೇ ಗೃಹ ನಿರ್ಮಾಣ ಕ್ಷೇತ್ರದಲ್ಲಿ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುವಷ್ಟು ಪ್ರಗತಿ ಸಾಧಿಸಲು ಸಾಧ್ಯವಾದೀತು. ಈ ನಡುವೆ ಜನರೇ ತಮ್ಮ ಮನೆಗಳನ್ನು ಓರಣವಾಗಿಟ್ಟುಕೊಳ್ಳಲು ಮುಂದಾಗುವಂತೆ ಯೋಗ್ಯ ಪ್ರೋತ್ಸಾಹವನ್ನು ನೀಡಬೇಕೆಂದು ಸರಕಾರದ ಉದ್ದೇಶ. ಈ ದೃಷ್ಟಿಯಿಂದ ೫೦೦೦ ಮಾದರಿ ಮನೆಗಳನ್ನು ರಾಷ್ಟ್ರೀಯ ವಿಸ್ತರಣೆಯ ಕಾರ್ಯ ಕ್ಷೇತ್ರಗಳಲ್ಲಿ ನೆಲೆಗೊಳಿಸಲು ಆಗು ಅಪೇಕ್ಷಿಸಿದೆ. ಈ ಮನೆಗಳಿಗೆ ೧೦೦ ಕೋಟಿ ರೂಪಾಯಿ ವೆಚ್ಚ ಬರುತ್ತದೆ—ಇದರಲ್ಲಿ ಆರೆವಾಸಿಯಷ್ಟು ಹಣವನ್ನು ಸರಕಾರ ಸಾಲ ರೂಪದಲ್ಲಿ ಕಳ್ಳರಿಗೆ ಒದಗಿಸಿ ಕೊಡಲು ಸಾಧ್ಯವೇ ಎಂದು ಯೋಚಿಸುತ್ತಿದೆ. ಮೇಲೆ ವಿವರಿಸಿದ ಯಾವ ರೀತಿಯಿಂದಲೇ ಆಗಲಿ, ಯೋಗ್ಯ ಮನೆಗಳು ಕಟ್ಟಲ್ಪಟ್ಟರೆ ಆದರಿಂದ ಅಲ್ಲಿ ವಾಸಿಸುವ ಜನರಿಗಷ್ಟೇ ಪ್ರಯೋಜನವಲ್ಲ—ಮನೆ ಕಟ್ಟುವ ಕೆಲಸದಲ್ಲಿ ಬಿದ್ದ ಸಾವಿರಾರು ಜನರ ಜೀವನವೂ ನಿರ್ವಹಿಸಲ್ಪಡುತ್ತದೆ. ಆದರೆ, ಹಣದ ಅಡಚಣೆ ಬಹಳ ವಿರುವ ನಮ್ಮ ದೇಶದಲ್ಲಿ ಸುಲಭದಲ್ಲಿ, ಅಂದರೆ ೪೦೦—೫೦೦ ರೂಪಾಯಿಗಳಲ್ಲಿ, ಮನೆ ಕಟ್ಟಿಕೊಳ್ಳುವಂತಾದರೇನೆ ಪ್ರಯೋಜನ. ತಾಳೆ ಮರಗಳನ್ನೆ ಮನೆಗಳಿಗಾಗಿ ಉಪಯೋಗಿಸಲು ಮದ್ರಾಸು ಸರಕಾರ ಅನುಮತಿ ಕೊಡುತ್ತಿದೆ; ಆರೋಗ್ಯಕ್ಕೆ ಹಾನಿಯಾಗದಂತೆ ಉಚಿತ ತಂತ್ರಗಳನ್ನು ಬಳಸಿಕೊಂಡು ಸಾಮಾನ್ಯ ಸರಮಟ್ಟುಗಳನ್ನೆ ಉಪಯೋಗಿಸಿಕೊಂಡು ದಿನಗಳೆಯಬಲ್ಲ ಮನೆಗಳ ರಚನೆ ಮಾಡಿಕೊಳ್ಳಬಲ್ಲೆವಾದರೆ ಅದೇ ದೊಡ್ಡ ಕೆಲಸ; ಸಾಧನೆ ಎಂದರೂ ತಪ್ಪಲ್ಲ. ಆಡಂಬರಕ್ಕೆ ಗಮನ ಕೊಡುವುದಕ್ಕಿಂತಲೂ ಆರೋಗ್ಯಮತ್ತು ಆರ್ಥಿಕ ಅಡಚಣೆಗಳನ್ನು ಲಕ್ಷಿಸಿ, ಸುಲಭದ ಪರಿಹಾರಕ್ಕೆ ಮನಸ್ಸು ಮಾಡುವುದೇ ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಶ್ರೇಯಸ್ಕರ.

ಉಡುಪಿ

ಉದ್ಘಾಟನಾ ಸಮಾರಂಭ:— ಸ್ಥಳೀಯ ಸರಕಾರಿ ಗಂಡಸರ ತರಬೇತಿ ಶಾಲಾ ಬಿಡಾದಿ ಶಿಲ್ಪಿಗಳ ಉದ್ಘಾಟನಾ ಸಮಾರಂಭವು ತಾ. ೩-೭-೫೫ರಲ್ಲಿ ಶ್ರೀ ಟಿ. ಎ. ಪೈ. ಎಂ. ಎಲ್. ಎ. ಇವರಿಂದ ನೆರವೇರಿತು. ಶ್ರೀಮತಿ ಪ್ರೇಮಾ. ಎ. ಪೈಗಳಿಂದ ಧ್ವಜಾರೋಹಣವು ನೆರವೇರಿತು ಈ ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಬಿ ಎಸ್. ಆಚಾರ್, ಬಿ. ಎ. ಎಲ್. ಟಿ. ಅವರು ವಹಿಸಿದ್ದರು. ಶ್ರೀ ಎಂ. ಶೇಖರ ಶೆಟ್ಟರು ಸ್ವಾಗತಿಸಿದ ಮೇಲೆ ಉದ್ಘಾಟಕರಾದ ಶ್ರೀ ಪೈಗಳು ಕಾರ್ಯೋಚಿತ ಭಾಷಣವನ್ನು ಮಾಡಿದರು. ಶ್ರೀ ಶ್ರೀಪತಿ ರಾವ್ ಪಲಿಮಾರ್ಕರ್, ಬಿ. ಎ. ಬಿ. ಟಿ, ಅವರು ಸಭಿಕರ ವತಿಯಾಗಿ ಭಾಷಣವನ್ನಿತ್ತರು. ಶಾಲಾ ಮುಖ್ಯ ಸಂಸ್ಥಿಗಳಿಂದ ಧನ್ಯವಾದಸಲ್ಲಿಸಲ್ಪಟ್ಟು ರಾಷ್ಟ್ರಗೀತೆಯೊಂದಿಗೆ ಸಭೆಯು ಸುಖಾಂತ್ಯಗೊಂಡಿತು.

Kannada non-detailed Text Book for Higher Forms
ಬಂಗಾರಪಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಸಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಜಿನೇವದ ಸಮಾಲೋಚನೆ

ವಾತಾವರಣದ ಕುರಿತು ಐಕರ ಸಮಾಧಾನ

ಜಿನೇವದಲ್ಲಿ ಇದೇ ೧೮ನೇ ದಿನಾಂಕ ತೊಡಗುವ ಚತುರಾಷ್ಟ್ರ ವರಿಷ್ಠರ ಪರಿಷತ್ತಿನ ಕುರಿತು ಅಮೇರಿಕದ ಅಧ್ಯಕ್ಷ ಐಸೆನ್ ಹಾವರ್ ಆಶಾದಾಯಕ ಮಾತುಗಳನ್ನಾಡಿದ್ದಾರೆ. ಈ ಭಾಷಣದ ವರದಿಯು ರಶ್ಯದಲ್ಲಿ ಯಥಾವತ್ತಾಗಿ ಮಾಡಲ್ಪಟ್ಟಿರುವುದರ ಮೇಲಿಂದಲೇ ರಶ್ಯದ ಸರಕಾರ ಜಿನೇವದ ಪರಿಷತ್ತನ್ನು ಯಾವ ದೃಷ್ಟಿಯಿಂದ ಕಾಣುತ್ತದೆ—ಎಂದೂಹಿಸಬಹುದು.

ಅನುಕೂಲ ವಾತಾವರಣ

ಜಾಗತಿಕ ತ್ವೇಷ ಶಮನಕ್ಕೆ ಎರಡು ತಿಂಗಳುಗಳ ಹಿಂದೆ ಇದ್ದುದಕ್ಕಿಂತ ಈಗಿನ ವಾತಾವರಣ ಹೆಚ್ಚು ಅನುಕೂಲವಾಗಿದೆ ಎಂದು ಐಕರ ಅಭಿಪ್ರಾಯ. ಪತ್ರಿಕೋದ್ಯೋಗಿಗಳ ಮುಂದೆ ಮಾತನಾಡುತ್ತಿದ್ದ ಅವರು ಈ ಬದಲಾವಣೆಗಳು ರಶ್ಯದ ಸರಕಾರದ ಕಡೆಯಿಂದ ಪ್ರೇರಿತವಾಗಿವೆ ಎಂದೊಪ್ಪಿದರು. ಸೋವಿಯೆಟಿನ ಜನರೊಡನೆ ಸಹಜೀವನ ನಡೆಸಲು, ಅವರೊಡನೆ ಸಮಾಲೋಚನೆಗೈಯಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಈ ವಾತಾವರಣ ನೆರವಾದರೆ, ಜಗತ್ತಿನ ಪರಿಸ್ಥಿತಿಯ ಮೇಲೆ ಪ್ರಭಾವಶಾಲಿಯಾದ ಪರಿಣಾಮವಾಗುವುದು ನಿಶ್ಚಯ ಎಂದರು.

ಹೆಚ್ಚಿಗೇನೂ ಆಶೆಯಿಲ್ಲ

ಅಮೇರಿಕವು ತನ್ನ ನಿಲುಮೆಯನ್ನು ಪ್ರತಿಪಕ್ಷಕ್ಕೆ ತಿಳಿಸಲು ಪ್ರಯತ್ನಿಸುವುದೆಂದು ಅವರು ತಿಳಿಸಿದರು. ಸಮಸ್ಯೆಗಳನ್ನು ಹೊಸತಾಗಿ ಅಭ್ಯಸಿಸಲು ಮತ್ತು ಅವುಗಳನ್ನು ನೋಡುವ ದೃಷ್ಟಿಕೋಣದಲ್ಲಿ ಮಾರ್ಪಾಟನ್ನು ಮಾಡಲು ತಮ್ಮ ಪದ್ಧತಿ ನೆರವಾದೀತೆಂದು ಆಶಿಸಿದರು. ಕೆಲವು ನಿರ್ಣಯಗಳನ್ನು ಕೈಗೊಳ್ಳಲು ಜಿನೇವದ ಪರಿಷತ್ತು ಸಕಶಕಾರಿಯಾದೀತೆಂದು ಅವರು ವಿದಿತಪಡಿಸಿದರು. ಆದರೆ, ನಿರ್ಣಯಗಳ ಗಡಿಯನ್ನು ದಾಟಿ, ಸಮಸ್ಯೆಗಳಿಗೆ ನಿಶ್ಚಿತ ಪರಿಹಾರ ಸೂಚಿಸುವುದಕ್ಕೆ ಪರಿಷತ್ತು ಹೋಗಲಿಕ್ಕಿಲ್ಲ; ನಿರ್ಣಯಗಳು ಇದಕ್ಕೆ ಹಿಂದಿನಿಂದ ಜಾರಿ ಮಾಡಿಕೊಡಬಹುದು ಎಂದು ಹೇಳಿದರು.

ಪೋಪರೊಡನೆ ಭೇಟಿ

ಪ್ರಧಾನ ಮಂತ್ರಿ ನೆಹರುಗಳು ಯುಗೊಸ್ಲಾವಿಯದ ಪ್ರಯಾಣದ ಬಳಿಕ ಇದೇ ಗುರುವಾರ (ತಾ ೭) ರೋಮಿಗೆ ಭೇಟಿಕೊಟ್ಟು, ಕ್ರೈಸ್ತ ಜಗದ್ಗುರು ಪೋಪರನ್ನು ಕಂಡು ಮಾತನಾಡುವರೆಂದು ತಿಳಿದುಬಂದಿದೆ. ಪೋಪರ ಸಣ್ಣ ರಾಜ್ಯಕ್ಕೂ ಭಾರತಕ್ಕೂ ಸಮಾಧಾನಕರವಾದ ರಾಜಕೀಯ ಸಂಬಂಧವಿದೆ. ಗೋವೆಯ ಪ್ರಶ್ನೆಯನ್ನೂ ಭಾರತದಲ್ಲಿ ಕ್ರೈಸ್ತ ಧರ್ಮಪ್ರಚಾರಕರ ವಿಷಯವನ್ನೂ ನೆಹರುಗಳು ಪೋಪರೊಡನೆ ಪ್ರಸ್ತಾಪಿಸಬಹುದೆಂದು ಹೇಳಲಾಗುತ್ತದೆ. ಪೋಪರು ಗೋವೆಯ ವಿಷಯದಲ್ಲಿ ಪೋರ್ಚುಗಾಲಿಗೆ ಸಹಾಯ ನೀಡುವ ಬದಲು, ಈ ವಿವಾದದಲ್ಲಿ ತಾಟಸ್ಥ್ಯ ವಹಿಸುವರೆಂದು ಸಂಕಾರದ ವಲಯಗಳು ಹೇಳುತ್ತವೆ.

ದೇವದೂತ ನೆಹರು

ಪ್ರಪಂಚದ ಸ್ಥಿತಿಯು ಸುಧಾರಿಸುತ್ತಿರುವುದಕ್ಕೆ ನೆಹರುಗಳ ಧೋರಣೆ ಎಷ್ಟರ ಮಟ್ಟಿಗೆ ಸಹಾಯಕರವಾಗಿದೆ ಎಂಬುದನ್ನು ಜೆರೂಸಲೇಮಿನ ಪ್ರಮುಖ ದೈನಿಕವೊಂದು ಬಣ್ಣಿಸಿದೆ—ಅದು ನೆಹರುಗಳನ್ನು ದೇವದೂತನೆಂದು ಕರೆದಿದೆ. ಸೈತಾನನು ಮಾನವ ವರ್ಗದ ಪಾಲಿಗೆ ಅಣುಶಸ್ತ್ರಗಳನ್ನು ಸೃಷ್ಟಿಸುವ ಮೂಲಕ ನರಕದ ಬಾಗಿಲನ್ನು ತೆರೆದಿಟ್ಟಿದ್ದಾನೆ; ಈ ಪರಿಸ್ಥಿತಿಯಲ್ಲಿ ದೇವರು ನೆಹರುಗಳನ್ನು ಶಾಂತಿಸಂದೇಶ ಬೀರಲು ಜಗತ್ತಿಗೆ ಕಳುಹಿಸಿದ್ದಾನೆ ಎಂದು ಆ ಪತ್ರಿಕೆ ರೂಪಕಾಲಂಕಾರದ ಮಾತುಗಳಿಂದ ನೆಹರುಗಳ ವ್ಯಕ್ತಿತ್ವವನ್ನು ಶ್ಲಾಘಿಸಿದೆ.

ವಿಮೋಚನೆಯ ಹೋರಾಟ

ಗೋವೆಯ ಪರಿಸ್ಥಿತಿಯು ದಿನದಿಂದ ದಿನಕ್ಕೆ ದುರ್ದಸೆಗಿಳಿಯುತ್ತಿದೆ. ನಿತ್ಯೋಪಯೋಗದ ವಸ್ತುಗಳ ಕೊರತೆಯನ್ನು ನಿವಾರಿಸಲು ಪೋರ್ಚುಗೀಜರು ಪಾಕಿಸ್ತಾನ ಮುಂತಾದ ಪರದೇಶಗಳ ಮುಖನೋಡುವಂತಾಗಿದೆಯಲ್ಲದೆ, ಪ್ರತಿಯೊಬ್ಬರೂ ತಮ್ಮ ಒಂದು ದಿನದ ಆದಾಯವನ್ನು ಸರಕಾರಕ್ಕೆ ಕೊಟ್ಟು ಆರ್ಥಿಕ ಸಹಾಯ ನೀಡಬೇಕೆಂಬ ಕಡ್ಡಾಯವೂ ಬಂದಿದೆ. ಭಾರತ ಸರಕಾರವು ನೆಹರುಗಳು ಹೊಸದೆಹಲಿಗೆ ಇದೇ ೧೮ನೇ ದಿನಾಂಕ ಮರಳಿದ ಬೆನ್ನಿಗೆ ಪೋರ್ಚುಗೀಜರ ವಸಾಹತುಗಳಿಗೆ ಆರ್ಥಿಕ ದಿಗ್ಬಂಧನ ಹೇರುವ ವಿಚಾರವನ್ನು ತೀವ್ರವಾಗಿ ಪರ್ಯಾಲೋಚಿಸುತ್ತಿದೆ.

ಕಾಂಗ್ರೆಸಿನ ಅಭಿಪ್ರಾಯ

ಇದೇ ೨೭ನೇ ದಿನಾಂಕ ಸೇರಲಿರುವ ಕಾಂಗ್ರೆಸಿನ ಕಾರ್ಯ ಸಮಿತಿಯು ಗೋವೆಯ ವಿಮೋಚನೆಗಾಗಿ ಕೈಗೊಳ್ಳಬೇಕಾದ ಮುಂದಿನ ಕ್ರಮಗಳನ್ನು ಗಂಭೀರವಾಗಿ ಆಲೋಚಿಸುವುದೆಂದು ಕಾಂಗ್ರೆಸಾಧ್ಯಕ್ಷ ಶ್ರೀ. ಢೇಬರರು ಹೇಳಿದ್ದಾರೆ. ಕಾಂಗ್ರೆಸಿಗರು ಸಹನೆಗೆಟ್ಟವರಂತೆ ವರ್ತಿಸಬಾರದು; ಲಘುಬುದ್ಧಿಯಿಂದ ದುಡುಕಬಾರದು ಎಂದಿದ್ದಾರೆ. ಆದರೆ ಗೋವೆಯೊಳಗೆ ಒಂದರ ಹಿಂದೊಂದೆಂಬಂತೆ ಕಾಂಗ್ರೆಸ್ಸೇತರ ಪಕ್ಷಗಳ ಸತ್ಯಾಗ್ರಹಿಗಳ ತಂಡ ಹೋಗುತ್ತಲೇ ಇದೆ; ಇವರ ಮೇಲೆ ಪೈಶಾಚಿಕ ಅತ್ಯಾಚಾರ ನಡೆಸಿದುದಕ್ಕೆ ಭಾರತ ಸರಕಾರ ತನ್ನ ಪ್ರಬಲ ಪ್ರತಿಭಟನೆಯನ್ನು ಪೋರ್ಚುಗಾಲಿಗೆ ಸೂಚಿಸಿದೆ. "ಸಾರಿ ಕೊಂದರೆ ಪಾಪವಿಲ್ಲ" ಎಂಬ ಮಾತಿನಂತೆ ಪೋರ್ಚುಗೀಜರಿಗೆ ದಾರಿಗೆ ಬರಲು ಆದಷ್ಟು ಹೆಚ್ಚು ಅವಕಾಶಕೊಟ್ಟು ನೋಡುವುದೇ ಭಾರತ ಸರಕಾರ ಉದ್ದೇಶ.

ಸೈನಿಕ ಒಂಪ್ಪದ

ಪಾಕಿಸ್ತಾನವು ಇದೇ ಫೆಬ್ರುವರಿಯಲ್ಲಿ ಕೈಗೂಡಿದ ಟರ್ಕಿ ಮತ್ತು ಇರಾಕುಗಳ ಸೈನ್ಯ ಮತ್ತಿತರ ಸಹಾಯದ ಒಪ್ಪಂದದಲ್ಲಿ ಸೇರಲು ನಿರ್ಧರಿಸಿರುವುದನ್ನು ಪ್ರಧಾನಿ ಮಹಮ್ಮದಾಲಿ ಪ್ರಕಟಿಸಿದ್ದಾರೆ. ಇಸ್ಲಾಂ ವಲಯದ ರಕ್ಷಣೆಗೆ ಇದರಿಂದ ಸಹಾಯವಾಗುವುದೆಂದು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಎರಡು ವರ್ಷಗಳ ಹಿಂದೆ ನಮಗೆ ಮಿತ್ರರಿರಲಿಲ್ಲ; ಈಗಲಾದರೆ ಅಮೇರಿಕದ ಸೈನ್ಯ ಸಹಾಯ, ಸೀಟೋದ ನೆರವು, ಮುಸ್ಲಿಂ ರಾಷ್ಟ್ರಗಳ ಬಂಧುತ್ವ ಪ್ರಾಪ್ತವಾಗಿದೆ ಎಂದು ಜನತೆಗೆ ತಿಳಿಸಿದ್ದಾರೆ.

ಕಾಶ್ಮೀರ ಸಮಸ್ಯೆ

ಮಹಮ್ಮದಾಲಿಗಳು ಕಾಶ್ಮೀರದ ವಿಷಯ ಪ್ರಸ್ತಾಪಿಸುತ್ತಾ ನೆಹರುಗಳೊಡನೆ ಬರುವ ಸಲ ತಾವು ನಡೆಸುವ ಸಂಧಾನವೇ ಕೊನೆಯದೆಂದು ಹೇಳಿದ್ದಾರೆ; ಇದು ವಿಫಲವಾದರೆ ಭದ್ರತಾ ಮಂಡಳವನ್ನು ತಾವು ಆಶ್ರಯಿಸುವೆನೆಂದಿದ್ದಾರೆ. ಭಾರತವು ಕಾಶ್ಮೀರ ಪ್ರಶ್ನೆಯನ್ನು ಬಿಡಿಸಲು ತುಂಬ ಆತುರದ ಸಕಾರ ನೀಡುತ್ತಿದೆ; ನೀರಾವರಿ ಕಾಲುವೆಗಳ ವಿಷಯದಲ್ಲಿ ಈಗ ಒಂದು ಒಪ್ಪಂದವಾಗಿದೆ; ಆದರೆ ಕಾಶ್ಮೀರದ ಪ್ರಶ್ನೆ ಸಮಾಧಾನಕರವಾಗಿ ಬಿಡಿಸಲ್ಪಡದಿದ್ದರೆ, ನಮ್ಮೆರಡು ರಾಷ್ಟ್ರಗಳಲ್ಲಿ ಸ್ನೇಹಬಾಂಧವ್ಯ ನೆಲೆಗೊಳ್ಳದು ಎಂದವರು ತಿಳಿಸಿದ್ದಾರೆ.

ಅಫಘಾನಿಸ್ಥಾನದೊಡನೆ ವಿವಾದ

ನೆರೆಯ ಅಫಘಾನಿಸ್ಥಾನದೊಡನೆ ಘಟಿಸಿದ ಧ್ವಜಪ್ರಕರಣದ ಪ್ರಾಯಶ್ಚಿತ್ತ ಕ್ರಮಗಳನ್ನು ಸಂಧಾನದಿಂದ ನೆರವೇರಿಸುವ ಪ್ರಯತ್ನವೀಗ ವಿಫಲವಾಗಿದೆ. ಸೌದಿ ಅರೇಬಿಯಾ ಮತ್ತು ಈಜಿಪ್ಟಿನ ಮಧ್ಯಸ್ಥಿಕೆಗಾರರು ಪಾಕಿಸ್ತಾನದ ವಿರುದ್ಧ ಪ್ರಚಾರ ಮಾಡುವ ವಿಷಯವು ಧ್ವಜ ಪ್ರಕರಣಕ್ಕೆ ಹೊರಗಿನ ಸಂಗತಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇವಲ ಧ್ವಜ ಪ್ರಕರಣದಿಂದ ಉಂಟಾದ ತ್ವೇಷ ಶಮನಕ್ಕಾದರೆ ತಮ್ಮ ಸಂಧಾನ ಯೋಗ್ಯ ಮಾರ್ಗ ಕಲ್ಪಿಸಿ ಕೊಟ್ಟಿದೆ ಎಂದಿದ್ದಾರೆ. ಆದರೆ ಪಾಕಿಸ್ತಾನಕ್ಕೆ ಫಕ್ತೂನಿಸ್ತಾನದ ಚಳವಳಗಾರರಿಗೆ ಅಫಘಾನಿಸ್ತಾನ ಕೊಡುವ ಪ್ರೋತ್ಸಾಹ ಸಹ್ಯವಿಲ್ಲ. ಸಂಕ ಮುರಿದಲ್ಲಿ ಸ್ನಾನವೂ ಆಗಲಿ ಎಂಬ ಅದರ ಮನೋಭಾವದಿಂದ ಮತ್ತು ಉಗ್ರ ಕ್ರಮಗಳನ್ನು ಕೈಗೊಳ್ಳುವ ಬೆದರಿಕೆಯಿಂದ ಅಫಘಾನಿಸ್ತಾನದೊಡನೆ ಅದು ಯುದ್ಧಕ್ಕಿಳಿದರೂ ಆಶ್ಚರ್ಯವಿಲ್ಲ.

ಘಟನಾ ಸಮಿತಿ

ಈಗಾಗಲೇ ಪಾಕಿಸ್ತಾನದಲ್ಲಿ ಒಳ ಯುದ್ಧವೊಂದು ರಭಸದಿಂದ ನಡೆಯುತ್ತಿದೆ. ಮುರ್ರೆಯಲ್ಲಿ ಇದೀಗ ನೇರಲಿರುವ ಘಟನಾ ಸಮಿತಿಯ ಪರಿಷತ್ತನ್ನು ಕರಾಚಿಗೆ ಸ್ಥಾನಾಂತರಿಸುವ ಪ್ರಯತ್ನದಲ್ಲಿ ಫಜಲುಲ್‌ಹಕ್, ಫಿರೋಜ್‌ಖಾನ್‌ನೂನ್ ಮುಂತಾದವರು ತೊಡಗಿದ್ದಾರೆ. ಗವರ್ನರರು ನೂತನ ಘಟನಾ ಸಮಿತಿಯು ಪಶ್ಚಿಮ ಪಾಕಿಸ್ತಾನವನ್ನು ಏಕ ಘಟಕವಾಗಿ ರೂಪಿಸುವುದೇ ಮುಂತಾದ ಮಹತ್ವದ ವಿಷಯಗಳನ್ನು ವಿಚಾರಿಸಲು ಅರ್ಹವಿಲ್ಲ ಎಂದಿದ್ದಾರೆ; ಚುನಾವಣೆಯ ಶಾಸನಗಳನ್ನು ರಚಿಸಿ, ಸಾರ್ವತ್ರಿಕ ಮತದಾನ ಪದ್ಧತಿಯಂತೆ ಹೊಸ ಸಮಿತಿಯನ್ನು ರಚಿಸಲು ಈ ಪರಿಷತ್ತು ನೋಡಬೇಕು ಎಂದಿದ್ದಾರೆ. ಹೀಗಾಗಿ ಅಂತಃಕಲಹ ತಪ್ಪಿದ್ದಲ್ಲ ಎಂದು ತೋರುತ್ತದೆ.

ಹೊಸ ಬಾಧೆ

ಇಂಡೋ ಚೀನದ ಕದನ ನಿಲುಗಡೆಯ ಒಪ್ಪಂದದಂತೆ ಇದೇ ೨೦ನೇ ದಿನಾಂಕದಂದು ವೀಟಮಿನ ಹಾಗು ವೀಟನಾಮ ಧುರೀಣರು ಮುಂದಿನ ವರ್ಷ ಚುನಾವಣೆ ನಡೆಸಲು ವಿಚಾರ ವಿನಿಮಯ ಮಾಡಬೇಕಾಗಿದೆ. ಆದರೆ, ಇದಕ್ಕೆ ಯಾವ ಸಿದ್ಧತೆಯೂ ನಡೆದಿಲ್ಲ. ನೆಹರುಗಳು ಇದರ ಬಗ್ಗೆ ಸಂಬಂಧಿಸಿದ ರಾಷ್ಟ್ರಗಳಿಗೆ ನೆನಪು ಹುಟ್ಟಿಸಿದ್ದಾರೆ; ಎಚ್ಚರಿಸಿಯೂ ಇದ್ದಾರೆ ಈಗ ಬಂದ ವರದಿಗಳಿಗನುಸಾರ, ಹೆಸರಿಗೇನೊ ಮಾತುಕತೆಗಳನ್ನು ತೊಡಗಿ ಚುನಾವಣೆಗಳು ಮುಂದಿನ ವರ್ಷ ನಡೆಯದಂತೆ ಪಟ್ಟಿತೊಟ್ಟು ಕಣ್ಣೆಗಮಣ್ಣುಗಾಕಬಹುದು ಎಂದು ತಿಳಿಯುತ್ತದೆ. ವಿಳಂಬ ಧೋರಣೆ ಮಸುಸುವ ತಂತ್ರವೂ ಅನುಸರಿಸಲ್ಪಡಬಹುದು.

ಮುಚ್ಚಿದರೆ ಮುಗುಳ! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಧರ್ಮಸ್ಥಳ— ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಪ್ರೋತ್ಸಾಹ ಸಹಕಾರಗಳಿಂದ ತಾ. 1-11-54 ರಲ್ಲಿ ಸ್ಥಾಪನೆಗೊಂಡು ಯೋಗ್ಯರೀತಿಯಲ್ಲಿ ನಡೆದುಕೊಂಡು ಬರುವ ಪ್ರವಾಸೀ ಆಸ್ಪತ್ರೆಯು ಸಾರ್ವಜನಿಕ ಸೇವಾಕಾರ್ಯ ಪ್ರಸಕ್ತರಿಗೆ ಒಂದು ಆಶಾದಾಯಕವಾದ ಪ್ರತಿಫಲನನ್ನೂ ಸಾರ್ವಜನಿಕರನ್ನೂ ಉಂಟುಮಾಡಿದೆಯೆ. ಈ ತನಕ 16608 ಮಂದಿ ರೋಗಿಗಳಿಗೆ ಔಷಧಿ ದಾನವನ್ನು ಮಾಡಿದೆಯೆ. ಈ ವೈದ್ಯಕೀಯ ಸೇವೆಯಾ 80 ಮಂದಿಗೆ ರಕ್ತವರ್ಗಣೆಯ ಸೇವೆಯಾ 50 ಮಂದಿಗೆ ಶ್ವಾಸಕೋಶದ ದುರ್ಬಲತೆಯೂ, ಸೇವೆಯಾ 10 ಮಂದಿಗೆ ಟೈಫಾಯಿಡ್ ಚಿಹ್ನೆಯೂ ಕಂಡುಬಂದಿದೆ. ಶ್ರೀ ಹೆಗ್ಗಡೆಯವರು ಜನತೆಯ ಕ್ಷೇಮದ ಚಿಂತನೆಗಾಗಿ ಪ್ರತಿವಾರದ 4 ದಿನಗಳಲ್ಲಿ ಅಪರಾಹ್ನದಿಂದ ರಾತ್ರಿ 9ಗಂಟೆ ತನಕ 20—30 ಮೈಲು ದೂರದ ಬೀಜಕಟ್ಟೆ, ಕಕ್ಕಿಂಜೆ ಕಟ್ಟೆ, ಪಣಕಜೆ, ಅಳದಂಗಡಿ, ಕಕ್ಕಿಂಜೆ ಸ್ಥಳಗಳಿಗೆ ಔಷಧಿ ತುಂಬಿದ ವಾಹನವೊಂದಿಗೆ ಸ್ಥಳೀಯ ಡಾಕ್ಟರರು ಮತ್ತು ಅವರ ಸಹಾಯಕ್ಕಾಗಿ ಇನ್ನರ ಮೂವರನ್ನೂ ಕಳುಹಿಸಿ ಕೊಟ್ಟು ಔಷಧಿ ದಾನದ ಮಹಾಕಾರ್ಯವನ್ನು ಮಾಡುತ್ತಿರುವುದು ಎತ್ತಿ ಹೇಳುವದೆನ್ನಲಾಗಿದೆ. ಶ್ರೀ ಹೆಗ್ಗಡೆಯವರ ಮಾದರಿಯು ಅನುಕರಣೀಯವು.

ಅಳಿಯಾರ:—ಇದೇ ತಾ. 1ರಲ್ಲಿ ಇಲ್ಲಿಯ ಹಾ ಎ ಶಾಲೆಯ ಉದ್ಘಾಟನಾ ಸಮಾರಂಭವು ಸ್ಥಳೀಯ ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಇಂದಿರಾಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಮುಖ್ಯೋಪಾಧ್ಯಾಯ ಶ್ರೀ ಬಿ. ಜಾನಕಿರಾಮ್, ಅವರು ಸ್ವಾಗತಭಾಷಣಕ್ಕೆತ್ತರು. ಶ್ರೀ ಗಳಾದ ಕೆ ರಾಮರಾವ್, ವೈ ಲಕ್ಷ್ಮಣ ಸೆಟ್ಟಿ, ಬಿ. ಕೃಷ್ಣ ಭಟ್, ವೈ ರಬುರ ಸೆಟ್ಟಿ ಮೊದಲಾದವರು ಶಾಲಾಭಿವೃದ್ಧಿಯನ್ನು ಹಾರೈಯಿಸಿ ಮಾತನಾಡಿದರು. ಶಾಲಾ ಮೆನೇಜರ್ ಶ್ರೀ ಸಿ. ಗಿರಿಯಣ್ಣ ಸೆಟ್ಟಿರ ಮುಂದಾಳ್ತನದಲ್ಲಿ ಈ ಹಾ ಎ ಶಾಲೆಯು ಆದರ್ಶಶಾಲೆಯಾಗಿ ಮೆರೆದಾಡಬೇಕೆಂದು ಅಧ್ಯಕ್ಷೆಯವರು ಆಶಿಸಿದರು. ವಂದನಾರ್ಪಣೆ, ತಿಂಡಿಪಂಡೋಣ ಇತ್ಯಾದಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ನೀಲಾವರ— ಸ್ಥಳೀಯ ಮಹಿಷಮರ್ದಿನಿ ಹಾ ಎ ಶಾಲೆಯ ಉದ್ಘಾಟನೆಯನ್ನು ಕಳೆದ ತಾ. 29ರಲ್ಲಿ ಉಡುಪಿ ಉತ್ತರ ಪ್ರೇಣೆಯ ಸರ್ಕಿಟ್ಸಾಧಿಕಾರಿ ಶ್ರೀ ಬಿ. ಪಿಂಟೋರವರು ನೆರವೇರಿಸಿದರು. ಶಾಲಾಮೆನೇಜರ್ ಶ್ರೀ ಎನ್. ಅಣ್ಣಪ್ಪ ಭಟ್ಟರು ತಮ್ಮ ಸ್ವಾಗತ ಭಾಷಣದಲ್ಲಿ ಶಾಲೆಯ ಇತಿಹಾಸವನ್ನು ವಿವರಿಸಿ ಗ್ರಾಮಸ್ಥರ ಸಹಕಾರವನ್ನು ಕೋರಿದರು ಶ್ರೀಗಳಾದ ಎಮ್. ಎಸ್. ಭಟ್ಟ, ಮಲ್ಪೆ ಪರಿದಾಸ ಸಾಮಗ, ಶಾಲಾ ಮುಖ್ಯೋಪಾಧ್ಯಾಯ ಬಿ. ಪಿ. ವಾರಂಬಳ್ಳಿ ಮೊದಲಾದವರ ಕಾಲೋಚಿತ ಭಾಷಣಗಳಾದುವು. ಶ್ರೀ ಸಾಮಗರಿಂದ 'ಗುರುಭಕ್ತಿ' ಎಂಬ ಹರಿಕತೆಯು ನಂತರ ಜರಗಿತು.

ಖಂಬದ ಕೋಣೆ:— ಸ್ಥಳೀಯ ಬೊರ್ಡ್ ಹಾ ಎ ಶಾಲಾ ನವರಾತ್ರಿದಲ್ಲಿ ಬೈಂದೂರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ. ಗಣಪತಿ ಕೆದಿಲಾಯರ ಅಧ್ಯಕ್ಷತೆಯಲ್ಲಿ ಇದೇ ತಾ 1ರಲ್ಲು ವನಮಹೋತ್ಸವ ಆಚರಿಸಲಾಯಿತು. ಹೇರಂಜಾಲು ಗ್ರಾಮದ ಸಂಘದ ಆಶ್ರಯದಲ್ಲಿ ಸಮಾಜ ವಿಹಾರ ಕೇಂದ್ರವು ಸ್ಥಾಪನೆಯಾಗಿ ಭಜನಾ ಕಾರ್ಯಕ್ರಮವೂ, ಸಾಮಾಜಿಕ ಶಿಕ್ಷಣ ಕೇಂದ್ರವೂ ಉದ್ಘಾಟಿಸಲ್ಪಟ್ಟವು.

ಕಾರ್ಕಳ— ಗೆರಸೊಪ್ಪಾ ಜೋಗಿನಿಂದ ಜಿಲ್ಲೆಯಾದ್ಯಂತ ವಿದ್ಯುಚ್ಛಕ್ತಿಯನ್ನು ಒದಗಿಸುವ ಯೋಜನೆಯ ಪೂರ್ವಭಾವಿಯಾಗಿ ಕಳೆದ ತಾ. 27ರಿಂದ ಕಾರ್ಕಳ ಪಂಚಾಯತ ಕ್ಷೇತ್ರದ ಎಲ್ಲಾ ಭಾಗಗಳಿಗೆ ಉಡುಪಿಯ ವಿದ್ಯುತ್ ಉತ್ಪಾದನೆಯ ಕೇಂದ್ರದಿಂದ ದಿವಾನಾಸದ ಎಲ್ಲಾ ಸಮಯ ದಲ್ಲೂ ವಿದ್ಯುತ್ಶಕ್ತಿನ್ನು ಸರಬರಾಯಿಸುವ ಕಾರ್ಯಾರಂಭವಾಗಿದೆ.

ಕಿನ್ನಿಕಂಬಳ—ಇಲ್ಲಿಯ ರೋಸಾ ಮಿಸ್ಟಿಕಾ ಬುನಾದಿ ತರಬೇತಿ ಶಾಲೆಯಲ್ಲಿ ಕುಮಾರಿ ಪಿ. ಇಂದಿರಾಪೈಗಳವರ ಅಧ್ಯಕ್ಷತೆಯಲ್ಲಿ 'ಪಂಪನೋಲೋ, ರನ್ನ ಮೇಲೋ' ಎಂಬ ಸಾಹಿತ್ಯ ವಿಚಾರ ಗೋಷ್ಠಿಯೊಂದು ಈಚೆಗೆ ನಡೆಯಿತು. ಪಂಪನೇ ಮೇಲೆಂಬ ತೀರ್ಮಾನವಾಯಿತು.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ 27ರಲ್ಲಿ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. **ಶಿರ್ವ**—ಪಡುಬಿದ್ರೆ ರಸ್ತೆಯ ಕುತ್ಯಾರು ಹೊಳೆಗಸಂಕವನ್ನು 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಕೊಂಡು ಮಾಡಿಸುವಂತೆ ಸರಕಾರಕ್ಕೆ ಶಿಫಾರಸು ಮಾಡುವ ಇತ್ಯಾದಿ ಠರಾಯಿಗಳಾದುವು.

ಹೆರ್ಗ—ಉಡುಪಿ ತಾಲೂಕು ಹೆರ್ಗ ಗ್ರಾಮದ ಸಾಧಾರಣ 65 ವರ್ಷ ವ್ಯಾಯದ ಶ್ರೀ ಕೆ. ಬಾಬು ಸೆಟ್ಟರು ಕಳೆದ ತಾ. 20ರಲ್ಲಿ ಡಾನಣ ಗೆರೆಯಲ್ಲಿ ಹೃದಯ ವಿಕಾರದಿಂದ ವಿಧಿವಶರಾದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ಕಳೆದ 40 ವರ್ಷಗಳಿಂದ ಡಾನಣಗೆರೆ ನಗರದ ಕಟ್ಟಡಗಳ ಪ್ರಸಿದ್ಧ ಕಂಟ್ರಾಕ್ಟರುಗಳಾಗಿದ್ದು ಜನಪ್ರಿಯತೆಯನ್ನು ಗಳಿಸಿದ್ದರು. ಶ್ರೀ ಸೆಟ್ಟರಿಗೆ ಅವರ ಮರಣ ಕಾಲದಲ್ಲಿ 3 ಜನ ಗಂಡು ಮಕ್ಕಳೂ 4 ಜನ ಹೆಣ್ಣು ಮಕ್ಕಳೂ ಇದ್ದಾರೆ.

ಹೆರಡಾಲ— ಕಳೆದ 30ರಲ್ಲಿ ಮೂರ್ಪದ್ದಲ್ಲಿ ಹರಿಜನ ದಿನಾಚರಣೆಯು ಶ್ರೀ ಎಜ್. ಎಸ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕುಂಬಳೆ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಟಿ ಕೃಷ್ಣ ನಾಯರ್ ಮೊದಲಾದವರು ಮಾತನಾಡಿದರು.

ಹೇರೂರು:— ಉಡ್ಪಿ ತಾಲೂಕು ನಂಬ್ರ 37ನೇ ಹೊಸೂರು ಗ್ರಾಮದ, ಗ್ರಾಮ ಪಂಚಾತಿಯ ತಾ 2.7.1955ರಲ್ಲು ಆರಂಭಿಸಲ್ಪಟ್ಟು ಅದರ ಪ್ರಸಿಡೆಂಟರನ್ನಾಗಿ, ಕರ್ಜೆ ಶ್ರೀ. ಬಿ. ಮಂಜಯ್ಯ ಸೆಟ್ಟನ್ನು ಸರ್ವಾನುಮತದಿಂದ ಆಯಾಯಿಸಲಾಗಿದೆ.

ಕಡೆಕಾರು:— ಸ್ಥಳೀಯ ಪಂಚಾಯತ ಬೋರ್ಡು ಸ್ಥಾಪಕ ಹಾಗೂ ನಿವೃತ್ತ ಅಧ್ಯಕ್ಷ ದಿವಂಗತ ಶ್ರೀ ಎಸ್. ರಾಜಗೋಪಾಲ್ ಕೃಷ್ಣರಾಯರ ತೈಲಚಿತ್ರವನ್ನು ಇದೇ ತಾ 3ರಲ್ಲು ಸಂಜೆ ಪಂಚಾಯತ ಬೋರ್ಡು ಕಟ್ಟಡದಲ್ಲಿ ಡಾ! ಬಿ. ಮೂಡಬ ಸೈಗಳು ಅನಾವರಣ ಮಾಡಿದರು. ಸಿಡಂಬೂರು ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಕೆ. ಶಂಕರ ರಾಯರ ಸ್ವಾಗತ ಮಾತುಗಳಾದ ಬಳಿಕ ಶ್ರೀಗಳಾದ ಕೆ. ವೆಂಕಟಾಚಲ ಭಟ್ಟ, ಬನ್ನಂಜೆ ರಾಮಾಚಾರ್ಯರೇ ಮೊದಲಾದ ಹಲವರ ಭಾಷಣಗಳಲ್ಲಿ ಶ್ರೀ ಕೇಶರ ಗುಣಗಾನವಾಯಿತು. ಶ್ರೀ ಕೆ. ವೆಂಕಟ್ರಾಯರು ಧನ್ಯವಾದಗಳನ್ನರ್ಪಿಸಿದರು.

(ಜನೇ ಪುಟದಿಂದ)

ಬೇಕಾದಷ್ಟು ಹಣ ಪಾವತಿಯಾದುದರಿಂದ ಆ ಮೇಲೆ ಹಣ ಸ್ವೀಕರಿಸುವುದನ್ನು ನಿಲ್ಲಿಸಲಾಯಿತು.

ಪಾಂಡಿಚೇರಿಯಲ್ಲಿ ಚುನಾವಣೆ

ಕಳೆದ ವರ್ಷ ಭಾರತ ಸರಕಾರದ ಆಡಳಿತಕ್ಕೆ ವರ್ಗಾಯಿಸಲ್ಪಟ್ಟಿರುವ ಫ್ರೆಂಚರ ಕೈಯಲ್ಲಿ ಹಿಂದಿದ್ದ ಸ್ವಾಸ್ತ್ಯಗಳಲ್ಲಿ ಇಷ್ಟರಲ್ಲಿಯೇ ಚುನಾವಣೆಗಳು ಜರಗುತ್ತವೆ. ನಾಮಪತ್ರ ಪರಿಶೀಲನೆ ಕಾರ್ಯವೂ ಮುಗಿದಿದ್ದು, ಹುರಿಯಾಳುಗಳ ಪಟ್ಟಿ ಪ್ರಕಟವಾಗಿದೆ. ಚುನಾವಣೆಗಳನ್ನು ನ್ಯಾಯ ಸಮ್ಮತವಾದ ರೀತಿಯಲ್ಲಿ ನಡೆಸಲಾಗುವುದೆಂದು ಸರಕಾರದ ಪರವಾಗಿ ಶ್ರೀ. ಕೇವಲ ಸಿಂಗರು ಭರವಸೆ ನೀಡಿದ್ದಾರೆ

ಉಕ್ಕಿನ ಉತ್ಪಾದನೆ

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆಗಳ ಕಾರ್ಯದರ್ಶಿ ಶ್ರೀ ಭೂತಲಿಂಗಂ ಅವರು ಭಾರತದಲ್ಲಿ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಉಕ್ಕನ್ನು ಉತ್ಪಾದಿಸುವ ಒಟ್ಟು ಹತ್ತು ಕಾರ್ಖಾನೆಗಳನ್ನು ನೆಲೆಗೊಳಿಸಬಹುದೆಂದು ತಿಳಿಸಿದ್ದಾರೆ. ಸರಕಾರವು ಬ್ರಿಟನಿನ ತಜ್ಞರ ನೆರವಿನಿಂದ ಸ್ಥಾಪಿಸಬೇಕೆಂದಿರುವ ಉಕ್ಕಿನ ಕಾರ್ಖಾನೆಯನ್ನು ಬಂಗಾಳ ಅಥವಾ ಬಿಹಾರ ರಾಜ್ಯದಲ್ಲಿ ನೆಲೆಗೊಳಿಸಬಹುದು ಎಂದು ಹೇಳಿದ್ದಾರೆ. ಆದರೆ ದಕ್ಷಿಣ ಭಾರತದಲ್ಲಿ ಉಕ್ಕಿನ ಉತ್ಪಾದನೆ ಮಾಡಬಲ್ಲ ಹೊಸ ಕಾರ್ಖಾನೆಗಳು ತಲೆ ಎತ್ತುತ್ತವೆಯೇ ಎಂಬ ಕುರಿತು ಯಾವ ಆಶಾಜನಕ ಹೇಳಿಕೆಯನ್ನೂ ಅವರು ನೀಡಲಿಲ್ಲ.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸುಮಾ ಕಿರಣ	0	10
3 ನಾದ ಕತೆಗಳು	0	8
4 ಕೂರಲಿನ	0	8
5 ಕಾವ್ಯ ಸಾಮ್ರಾಜ್ಯ	1	8
6 ಸುಧಾಪಸ	3	0
7 ಮುಂದಿನ ನೇಸರು	0	4
8 ಸ್ವಯಂಕೃತ ಯೂರು	1	4
9 ಮಂತ್ರಿ ಗುಲಾಮರಾದರೆ	0	4
10 ಪುರುಷ ಸಭ	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ಸಂಗಾಮಿಕ	1	0
13 ಜೀವಭಕ್ತ	1	4
14 ಪ್ರೇಮದ ವಿಜಯ	1	4
15 ಪೂರ್ವಭೂಮಿ	0	10
16 ಪೇಣಾಸಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾರ	2	4
20 ಸೂರಿ ಪ್ರಸನಗಳು	1	4
21 ನಗೆ ಸೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳ	.	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅಥವಾ ದಶಾವತಾರಗಳು	0	12
25 ಆಕಾಶ ಗಂಗೆ	2	8
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜಪಮಾಲಾರ	1	8
33 ಬಾಳಿನ ಬೆಡಗು	1	4
34 ಶೋಸಾಮುದ್ರೆ	1	0
35 ಚಿಗುರು	0	10
36 ನಸ್ಸ ಕಥೆಗಳು	0	10
37 ಸಕ್ಕರೆ ನಗುಮುಖ	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ತರುಣ ತರುಣಿಯರಿಗೆ ಅತ್ಯಂತ ಬೋಧಪ್ರದವಾದಅಧುನಿಕ ನಾಟಕ

ಅಂಧ ಸಮಾಜದ ನಿರೂಪಣೆನ್ನು, ನ್ಯಾಯವು ಅನ್ಯಾಯವನ್ನು ಗೆದ್ದುಬರುವುದಕ್ಕೆ ಅಧಿಕಾರ, ಧನಲಾಲಸೆಯಲ್ಲ—ಪವಿತ್ರ ಪ್ರೇಮವೊಂದೇ ಶಾಂತಿಯೊಯುವ ದೆಂಬುದನ್ನು ಕಾಣಬಹುದಾದ ಏಕಮಾತ್ರ ಸಾಮಾಜಿಕ ನಾಟಕ—

ವ್ಯಭಿಚಾರಿಣಿ ಯಾರು?

100 ಪುಟಗಳಿಗೂ ಮಿಕ್ಕಿದ ಪುಸ್ತಕ!

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆದು ಹೆಸರುಗೊಂಡ ಶ್ರೀ. ಕೆ. ಕೆ. ಶೆಟ್ಟರೇ ಇದರ ಲೇಖಕರು!!

ಬೆಲೆ: 1—4—0 ಮಾತ್ರ.] [ಟಿ. ಖರ್ಚು ಬೇರೆ

ಸಿಗುವ ಸ್ಥಳಗಳು:—

ಕಿರಿಯರ ಪ್ರಪಂಚ ಉಡುಪಿ., ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಭಗವದ್ಗೀತೆಯ ಸಮೂಲ ಭಾಷಾಂತರ.

ನವಯುಗ ಪ್ರೆಸ್ ಉಡುಪಿ.

ಮಂಗಳೂರು

ಮಂಗಳೂರು ನಗರ ಸಭೆಯೂ ಎರಡನೆ ಪಂಚವಾರ್ಷಿಕ ಯೋಜನೆಯೂ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಳೂರು ನಗರದಲ್ಲಿ ಯಾವುಯಾವ ಕೆಲಸಗಳಾಗಬೇಕೆಂಬ ವಿಚಾರದಲ್ಲಿ ಉಪಸಮಿತಿಯ ಸೂಚನೆಗಳು ತಾ. 25ರಲ್ಲಿ ಕೂಡಿದ ನಗರಸಭೆಯಲ್ಲಿ ಪರಿಶೀಲಿಸಲಾಯಿತು. ಸುಮಾರು ಕೋಟಿ ರೂಪಾಯಿಗಳ ಒಂದು ಯೋಜನೆ ಮಂಗಳೂರುಮಾಡಲಾಯಿತು. ಈ ಯೋಜನೆಯಂತೆ ಮಂಗಳೂರು ನಗರದಲ್ಲಿ ಬೂಗತ ಚರಂಡಿಗಾಗಿ ರೂ 150 ಲಕ್ಷ, ರಸ್ತೆಗಳ ಅಭಿವೃದ್ಧಿಗೆ ರೂ. 30 ಲಕ್ಷ, ಮಾರ್ಕೆಟ್ ಮೋಟಾರ್ ನಿಲ್ದಾಣಗಳಿಗಾಗಿ ರೂ. 35 ಲಕ್ಷ, ಪೆಜ್‌ಸ್ಟರ್ ಮಾರ್ಕೆಟಿಗಾಗಿ ರೂ. 10 ಲಕ್ಷ, ಸಾರ್ವಜನಿಕ ಕಚೇರಿಗಾಗಿ ರೂ. 6 ಲಕ್ಷ, ಮೋಟಾರ್ ನಿಲ್ದಾಣದ ವಿಸ್ತರಣೆಗೆ ರೂ. 5 ಲಕ್ಷ, ನಗರ ರಚನಾ ಕಾರ್ಯಗಳಿಗೆ ರೂ 45 ಲಕ್ಷ, 25 ಎಕ್ರೆಗಳಷ್ಟು ಹೊಲಸು ಕೇರಿಗಳನ್ನು ನಿರ್ಮೂಲಗೊಳಿಸಿ ಪುನರ್ನಿವೇಶನ ಕೆಲಸಗಳಿಗೆ ರೂ. 8 ಲಕ್ಷ, ಬಡವರ ವಸತಿಗಳ ರಚನೆಗಾಗಿ ರೂ. 11 ಲಕ್ಷ, ಉಯ್ಯಾಲೆ ಪಲಯದ ವಿಸ್ತರಣೆಗಾಗಿ ರೂ. 5 ಲಕ್ಷ, 30 ಎಕ್ರೆಗಳಲ್ಲಿ ಪಶುಪಾಲನಾ ಕೇಂದ್ರ ರಚಿಸಲು ರೂ. 10 ಲಕ್ಷ, ಕೈಗಾರಿಕೆಗಳ ನೌಕರರಿಗಾಗಿ 1000 ವಸತಿ ನಿರ್ಮಾಣಕ್ಕೆ ರೂ. 20 ಲಕ್ಷ, ಶಾಲೆಗಳಿಗಾಗಿ ರೂ. 5 ಲಕ್ಷ, ಆರೋಗ್ಯ ಕೇಂದ್ರಗಳಿಗಾಗಿ ರೂ. 5 ಲಕ್ಷ ಮುಂತಾಗಿ ಇನ್ನೂ ಹಲವು ಕೆಲಸಗಳಿಗೆ ಅಂದಾಜು ಮಾಡಲಾಗಿದೆ. ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಧ್ಯಕ್ಷತೆ ವಹಿಸಿದ್ದರು.

ಮತದಾರ ಪಟ್ಟಿ— ಮದ್ರಾಸು ಶಾಸನ ಸಭೆಗೆ ಮತ್ತು ಕೇಂದ್ರದ ಲೋಕ ಸಭೆಗೆ ಮತದಾರರಾಗಿರುವವರ, 1955ರಲ್ಲಿ ತಿದ್ದಿದ ಪಟ್ಟಿಯನ್ನೂಗೆ ತಾಲೂಕು ಆಪೀಸುಗಳಲ್ಲಿ ಪ್ರಕಟಿಸಲಾಗಿದೆ ಎಂದೂ ಆ ಕುರಿತು ತಿದ್ದುಪಡಿ ಸೂಚಿಸುವವರು ತಾ. 21 7—55 ರೊಳಗೆ ಹಾಗೆ ಮಾಡಬೇಕೆಂದೂ ಸಂಭಂಧಪಟ್ಟ ಅಧಿಕಾರಿಗಳ ಪ್ರಕಟಣೆ ಹೊರಟಿದೆ.

ರೋಡ್ ಗೇಂಗ್ ಕೂಲಿಯೂನಿಯನ್— ಮಂಗಳೂರು ಮುನಿಸಿಪಾಲಿಟಿಯ ರೋಡ್‌ಗೇಂಗ್‌ಕೂಲಿಗಳ ಮಹಾಸಭೆಯೊಂದು ಈಚೆಗೆ ಶ್ರೀ ಕೆ. ಈಶ್ವರ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿ ಯೂನಿಯನ್ ಸಂಘವೊಂದು ಸ್ಥಾಪಿಸಲಾಯಿತು. ಕಾರ್ಯಕಾರೀಸಮಿತಿಗೆ ಶ್ರೀಗಳಾದ ಕೆ. ಈಶ್ವರ, ಅಧ್ಯಕ್ಷ; ಎ. ಸಾಮುವೆಲ್, ಕಾರ್ಯದರ್ಶಿಗಾಗೂ ವಿಜಾಯ್ಯರಾಗಿ ಆರಿಸಲ್ಪಟ್ಟರು.

ಕಾನ್ಪುರ ವಿನಾಚರಣೆ— ದ ಕ. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲು ಮತ್ತು ಮಜದೂರ ಸಂಘಟನೆಗಳ ಆಶ್ರಯದಲ್ಲಿ ಇದೇ ತಾ. 3ರಲ್ಲಿ ಕಾನ್ಪುರದಲ್ಲಿ ನಡೆಯುವ ಗಿರಣಿ ಮಜದೂರರ ಮುಷ್ಕರಕ್ಕೆ ಸಹಾನುಭೂತಿ ತೋರಿಸುವ ಸಭೆಯೊಂದು ಶ್ರೀ ಎಮ್.ಎಚ್. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಮೋನಪ್ಪ ಕಟ್ಟೆ, ಎಮ್. ಶಾಂತಾರಾಮ ಪೈ, ಸಿಂಪ್ಸನ್ ಸೋನ್ಸ್ ಮತ್ತು ಎಚ್. ಉಮಾನಾಥ ನ್ಯಾಕರು ಮಜದೂರರ ಹೋರಾಟ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿದರು. ನಂತರ ಕೆಲವು ನಿರ್ಣಯಗಳಾದುವು.

ವಿಚಾರ ಗೋಷ್ಠಿ— ಜನಪದ್ಯಕಲಾ ಮಂಡಳಿಯ ಆಶ್ರಯದಲ್ಲಿ ತಾ. 3ರಲ್ಲಿ ಬೆಳಿಗ್ಗೆ ಸಿಟಿಜನ್ಸ್ ಲೈಬ್ರೆರಿ ಹಾಲಿನಲ್ಲಿ 'ನಮ್ಮ ಸಂಸ್ಕೃತಿ' ಎಂಬ ವಿಷಯದ ಮೇಲೆ ವಿಚಾರ ಗೋಷ್ಠಿಯೊಂದು ಜರಗಿತು ಶ್ರೀ ಆರ್. ಕೆ. ಪ್ರಭುಗಳು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಪಿ. ಕೆ. ನಾರಾಯಣ, ರಾಮಚಂದ್ರ ರಾವ್, ಪಸುಕುಮಾರ್, ಡಾ. ಬಿ. ಶೇಕಾರಾ ಮರಾವ್ ಮೊದಲಾದವರು ಸಂಸ್ಕೃತಿಯ ವಿವಿಧ ಮುಖಗಳನ್ನು ವಿವರಿಸಿದರು.

ಯುವಕ ಸಂಘ ಉದ್ಘಾಟನೆ— ಕದ್ರಿ ಯುವಕ ಸಂಘದ ಆಶ್ರಯದಲ್ಲಿ ಉದ್ಘಾಟನಾ ಸಭೆಯು ತಾ. 3ರಲ್ಲಿ ಶ್ರೀ ಜಿ. ಬಿ. ಮಹಾದೇವರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ರಮಾನಂದ ಆರ್. ಕೆ. ಯವರು ಸ್ವಾಗತಮಾತುಗಳನ್ನಾಡಿದರು. ಡಾ! ಎಮ್. ಎಸ್. ಶಾಸ್ತ್ರಿಗಳು ಉದ್ಘಾಟನೆ ಮಾಡಿದರು. ಶ್ರೀಗಳಾದ ಕೆ ಸುಂದರ ಮತ್ತು ಕೆ. ದೇವಪ್ಪನವರು ಮಾತನಾಡಿದರು ಅಧ್ಯಕ್ಷರ ಭಾಷಣ ನಂತರ ಶ್ರೀ ಕೆ. ಶಂಕರನವರು ಧನ್ಯವಾದಗಳನ್ನರ್ಪಿಸಿದರು.

ಉಪನ್ಯಾಸ— ಕಳದ ತಾ. 30ರಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ! ಪಿ. ಜಿ. ಗೊಲ್ಲರ ಕೇರಿಯವರು ಸ್ಥಳೀಯ ರೋಟರಿ ಕ್ಲಬ್ಬಿನಲ್ಲಿ ಗೀತೆಯ ಸಂದೇಶದ ಕುರಿತು ಉಪನ್ಯಾಸವಿತ್ತರು. ಶ್ರೀ ವಿ ಎಸ್. ಕುಡ್ವರು ಅಧ್ಯಕ್ಷತೆವಹಿಸಿದ್ದರು.

ಮೂಡಬಿದ್ರೆಯಲ್ಲಿ ಕ್ಷಯ ರೋಗದ ಆಸ್ಪತ್ರೆ

ಮೂಡಬಿದ್ರೆಯಲ್ಲಿ ಕ್ಷಯರೋಗಿಗಳ ಪುಶ್ರೂಷಾಲಯವು ಸ್ಥಾಪಿತವಾಗಿ ಇದೇ ಜೂನ್ 27ಕ್ಕೆ 16 ವರ್ಷಗಳು ಕಳೆದುವು. ಈ ಅವಧಿಯಲ್ಲಿ ಅದು ಅನೇಕ ಮಂದಿ ಕ್ಷಯರೋಗ ಪೀಡಿತರ ಮತ್ತು ಕೆಮ್ಮು, ಜ್ವರ ಮತ್ತು ಸೋವಿನಿಂದ ನರಳುವವರ ಸೇವೆ ಶುಶ್ರೂಷೆಗಳನ್ನು ಮಾಡಿ ಹಲವರಿಗೆ ಆರೋಗ್ಯ ಭಾಗ್ಯವನ್ನಿತ್ತಿದೆ.

ಕ್ಷಯರೋಗಿಗಳ ಮೇಲೆ ಮಮತೆ, ಮರುಕತೆಯಿಂದ ಕರುಣೆ ಹುಟ್ಟಿದ ಕಥೋಲಿಕ ಗುರು ಸ್ವಾಮಿಯೊಬ್ಬರು ರೋಗಿಗಳ ಸೇವಾಸಕ್ತಿಯುಳ್ಳವರು. ಹೀಗಿರಲು 1929ರಲ್ಲಿ ಅವರಿಗೆ ಮೂಡಬಿದ್ರೆ ರೋಸರಿ ಅಮ್ಮನವರ ಇಗರ್ಜಿಗೆ ವರ್ಗವಾಯಿತು. ಇಲ್ಲಿಯ ಹೆಸರಿನ್ನು ಕಂಡು ಪ್ರಸನ್ನರಾದ ಗುರು ಸ್ವಾಮಿಯವರು ಆಸ್ಪತ್ರೆಯನ್ನು ಕಟ್ಟಿಸಲು ನಿಶ್ಚಯಿಸಿದರು. ಅದರ ಫಲವಾಗಿ— ಮೂಡಬಿದ್ರೆಯ ನೆರವಣಿಗೆ ಗುಡ್ಡದ ಮೇಲೆ ನುವೀಗ ನೋಡುವ ಆಸ್ಪತ್ರೆ.

ಮೊದಮೊದಲು ವೈದ್ಯರೊಬ್ಬರು ವಾರದಲ್ಲಿ ಒಂದೆರಡು ಸಾರಿ ಹೊರಗಿನಿಂದ ಬಂದು ಹೋಗುತಲಿದ್ದರು. ಬಳಿಕ ಡಾ. ಜಾಂಡಿಯವರು ಇಲ್ಲಿಯೇ ನೆಲಸಿ ರೋಗಿಗಳಿಗೆ ಚಿಕಿತ್ಸೆ ಕೊಡುವಂತಾಯಿತು. ಕಳೆದ 12ವರ್ಷಗಳಿಂದ ಡಾ. ಪಿ. ವಿ. ಕೂರಿಯನವರು ನಿಸ್ವಾರ್ಥ ಸೇವೆಯಲ್ಲಿ ನಿರತರಾಗಿದ್ದಾರೆ. ಈ ಆಸ್ಪತ್ರೆಯ ಉನ್ನತಿಗೆ ಡಾ ಕೂರಿಯನರು ಒಂದು ಮುಖ್ಯ ಕಾರಣ. ಅಷ್ಟೇ ಅಲ್ಲದೆ, ಇಲ್ಲಿ ಸಂಬಳವಿಲ್ಲದೆ ಕೆಲಸ ಮಾಡುವ ಶ್ರೀಯರೂ, ಪ್ರೇಮ ನಮ್ರತೆಗಳಿಂದ ಶುಶ್ರೂಷೆಯನ್ನು ಮಾಡುತ್ತಿರುವ 'ನರ್ಸ್' ಗಳೂ ಶ್ಲಾಘ್ಯಾರ್ಹರು.

1937ರಲ್ಲಿ ಕೇವಲ ನಾಲ್ಕು ಕಟ್ಟಡಗಳಿದ್ದ 50 ಎಕ್ರೆ ವಿಸ್ತೀರ್ಣದ ಈ ಮೆರವಣಿಗೆ ಗುಡ್ಡದಲ್ಲಿ ಇದೀಗ 16 ಕಟ್ಟಡಗಳು ನಿಂತಿವೆ. ಮುಖ್ಯವಾಗಿ — ಎರಡು ಜನರಲ್ ವಾರ್ಡುಗಳು' ಎರಡು ಹೆಂಗಸರ ವಾರ್ಡುಗಳು, ಎರಡು ಸ್ಪೆಷಲ್ ವಾರ್ಡುಗಳು, 'ನರ್ಸ್'ಗಳಿಗೆ ಮನೆ, ಮದ್ದಿನ ಮನೆ ಮತ್ತು 'ಎಕ್ಸ್—ರೇ' ಕಟ್ಟಡಗಳೆಂದಿವೆ ಈ ಎರಗೆ ವರ್ಣ ಬೇಧವಿಲ್ಲದೆ ಸಾವಿರಕ್ಕೆ ಮೇಲ್ಪಟ್ಟು ರೋಗ ಪೀಡಿತರಿಗೆ ಮದ್ದು ಕೊಟ್ಟು ಸಹಾಯ ಮಾಡಿಯಿದೆ ಈ ಆಸ್ಪತ್ರೆ.

ಜನರ ಸೇವೆ ಮಾಡುವುದೊಂದು ಪುಣ್ಯದ ಬೆಳಸು. ಅದರಲ್ಲಿ ಬಡವರ ಶುಶ್ರೂಷೆಯ ಸುಮ್ಮನಾಗುವುದೇ? ರೋಗಿಗಳುಭಸಿಕರಾದರೋ ದೂರ ಪ್ರದೇಶಗಳಿಗೆ ಹೋಗಿ ತಮ್ಮ ಚಿಕಿತ್ಸೆಯನ್ನು ಸೋದಿಕೊಳ್ಳ ಬಲ್ಲರು. ಆದರೆ ಬಡವರೆ ಖಾಡೇನು? ಬಡವರ ಪ್ರೀತಿಯಿಂದ ತುಂಬಿದವರಾಗಿದ್ದರೆ ಶುಶ್ರೂಷಾಲಯದ ಸ್ಥಾಪಕರು ರೆ. ಫಾ. ಫ್ರಾನ್ಸಿಸ್ ಸೋಜರು. ಇವರ ಉದಾರ ಚಿತ್ತತೆ ಮತ್ತು ಕಾರ್ಯ ತತ್ಪರತೆಗಳನ್ನು ಸ್ಮರಿಂಸಿ ಜಗದ್ಗುರುಗಳಾದ ಪನ್ನೆರಡನೇ ಪೋಪ್ ಪಾಯಸರು ಇವರಿಗೆ 'ಮಾನ್ಸಿಞರ್, (Monsignor) ಬಿರುದನ್ನು ಕೊಟ್ಟು ಸನ್ಮಾನಿಸಿದ್ದಾರೆ. ಈ ಆಸ್ಪತ್ರೆಯ ರೋಗಿಗಳ ಸೇವೆಯನ್ನು ಮಾಡಿ ಅನೇಕರಿಗೆ ಆರೋಗ್ಯವನ್ನು ಹಿಂದಕ್ಕೆ ಕೊಟ್ಟಿದೆಯಾದರೆ ಅದು ಈ ಗುರು ಸ್ವಾಮಿಯವರ ದೈನ್ಯ ಪ್ರಾರ್ಥನೆಯಿಂದಾಗಿ ಎಂದು ತಿಳಿಯಬೇಕೆ? ರೋಸರಿ ಅಮ್ಮನವರ ಮೇಲಿನ ಅಳವಾದ ವಿಶ್ವಾಸವೇ ಇವರಿಗೆ ಬೇಕಾದ ಧನ ಸಹಾಯವನ್ನೊದಗಿಸುತ್ತದೆ. ದೇವರ ಸಹಾಯವು ಎಲ್ಲಕ್ಕೂ ಮಿಗಿಲು ಈ ಆಸ್ಪತ್ರೆಯಲ್ಲಿ ಗುಣ ಹೊಂದಿದವರ ಸೇಕಡಾ ಮಾನವು ಬೇರೆ ಹಲವು ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಗುಣ ಹೊಂದಿದವರ ಸೇಕಡಾ ಮಾನಕ್ಕಿಂತ ಹೆಚ್ಚು ಎಂದು ತಿಳಿಯುವರೆ ಸೇವರಲ್ಲಿ ಯಾರ ಭಕ್ತಿ ವಿಶ್ವಾಸಗಳು ಇನ್ನುಷ್ಟಿಯಾಗಲಾರವು?

ಈ ಆಸ್ಪತ್ರೆಯನ್ನು ಸಂದರ್ಶಿಸಿದ ಮಂತ್ರಿಗಳಿಂದಲೂ ಜಿಲ್ಲೆಯ ಅಧಿಕಾರಿ ವರ್ಗದವರಿಂದಲೂ ಜಿಲ್ಲೆಯ ಸ್ವಾರ್ಥ ಕೆಲಸಕ್ಕೆ, ಒಳ್ಳೆಯ ಬರುಮಾನವೂ ತಕ್ಕ ಪ್ರಶಂಸೆಯೂ ದೊರೆತಿವೆ ನಮ್ಮ ಜಿಲ್ಲೆಯ ಡಿ. ಎಸ್. ಪಿ.ರವರು 1939ರಲ್ಲಿ "ವಿಸಿಟರ್ಸ್" ಪುಸ್ತಕದಲ್ಲಿ ಹೀಗೆ ಸ್ವತ್ತಾರೆ "ರೆ. ಫಾ. ಫ್ರಾನ್ಸಿಸ್ ಸೋಜರು ನಮ್ಮನ್ನು ಆಸ್ಪತ್ರೆಯ ಸುತ್ತುಕೊಂಡು ಹೋಗಿದರು. ನಾನು ವೈದಿಕ ಮನುಷ್ಯನಾಗಿ ಹೇಳುವುದಾದರೆ ಇಷ್ಟೊಂದು ಚೆನ್ನಾದ ಹವೆಯುಳ್ಳ ಸ್ಥಳವನ್ನು ಗುರುಗಳು ಆಸ್ಪತ್ರೆಗೆ ಚುನಾಯಿಸಿದುದು ಒಂದು ವಿಶೇಷ ಕೆಲಸ. ಸಮುದ್ರ ಮಟ್ಟದಿಂದ ಈ ಸ್ಥಳವು 600 ಅಡಿಗಳಷ್ಟು ಎತ್ತರದಲ್ಲಿರುವುದರಿಂದ ಕ್ಷಯದ ಆಸ್ಪತ್ರೆಗೆ ಇದೇ ಜಿಲ್ಲೆಯಲ್ಲಿ ಇದೊಂದು ಉತ್ತಮ ಸ್ಥಳವಾಗಿರುತ್ತದೆ. ಇಲ್ಲಿ ಬೆಳಕು, ಗಾಳಿ, ಬಿಸಿಲು ಮಾತ್ರವಲ್ಲ, ಸುತ್ತಲೂ ಚೆನ್ನಾದ ದೃಶ್ಯವೂ ಕಾಣುತ್ತದೆ. ಈಗ 24 ರೋಗಿಗಳಿರುವ ಈ ಆಸ್ಪತ್ರೆಯನ್ನು ಗುರು ಸ್ವಾಮಿಯೊಬ್ಬರು ಕ್ಷಯದಿಂದ ನಡೆಸುತ್ತಾರೆ, ಮನುಷ್ಯ ಕುಲದ ಕಲ್ಯಾಣವನ್ನು ಬಯಸುವ ಎಲ್ಲರೂ ಈ ಸಂಸ್ಥೆಗೆ ಸಹಾಯಕೊಡಬೇಕು. ಬಡವರ ಸೇವೆಯನ್ನು ಮಾಡುವವರು ಇದಕ್ಕಿಂತಲೂ ಉತ್ತಮ ಸಂಸ್ಥೆಗೆ ಸಹಾಯ ಮಾಡಲು ಸಾಧ್ಯವಿಲ್ಲ ಈ ಗುರುಗಳಿಗೆ ನಾನು ಎಲ್ಲಾ ಸಹಾಯವನ್ನು ಕೊಡುತ್ತೇನೆ". 1947 ಜೆಲ್ಲಾ ಕಲೆಕ್ಟರರು ,ಈ ಗುರು ಸ್ವಾಮಿಯವರು ಹಿಂದು ಒಳ್ಳೆ ಕೆಲಸವನ್ನು ಹಲವು ಕಷ್ಟಗಳಿಂದ ನಡೆಸುತ್ತಾರಾದರೂ ಅವರು ಪ್ರತ್ಯೇಕ ಸಂತೋಷದಿಂದ ಈ ಕೆಲಸವನ್ನು ಮಾಡುತ್ತಾರೆ ...ಈ ಸಂಸ್ಥೆಯು ಪೃಥ್ವಿಯಾಗಿ ಅವರಿಗೆ ಅಗತ್ಯವಿರುವ ಧನ ಸಹಾಯವು ಬರಲೆಂದು ಅಪೇಕ್ಷಿಸುತ್ತೇನೆ' ಎಂದು ತಮ್ಮ ಅಭಿಲಾಷೆಯನ್ನು ಸೂಚಿಸಿದ್ದಾರೆ.

1951ರಲ್ಲಿ ಇದನ್ನು ಸಂದರ್ಶಿಸಿದ ಕಾರ್ಪಿನಲ್ ಗ್ರೇಶಿಯಸರು "ಪ್ರತಿಯೊಬ್ಬನೂ ಸಹಾಯಮಾಡಬೇಕಾದ ಈ ಕೆಲಸವನ್ನು ಇದು ಸರೆಗೆ ಪ್ರತ್ಯೇಕವಾಗಿ ಗುರುಗಳೊಬ್ಬರೇ ಮಾಡಿರುವರು. ಜನರ ಸಹಾಯವು ಅವರ ಹೊರೆಯನ್ನು ಸ್ವಲ್ಪ ಹಗುರೆ ಮಾಡಲಿ" ಎಂದು ಬರೆದಿದ್ದಾರೆ.

ಪ್ರಕೃತ ಈ ಆಸ್ಪತ್ರೆಯಲ್ಲಿ 36 ಹೆಣ್ಣುಗಳಿವೆ ಇವುಗಳಲ್ಲಿ 26 ಹೆಂಗಸರಿಗೆ ಒಟ್ಟಿನಲ್ಲಿ ನಮ್ಮ ಜಿಲ್ಲೆಯವರು ಮಾತ್ರವಲ್ಲ, ಬೊಂಬಾಯಿ ಮೈಸೂರು ಮತ್ತು ಮಲಬಾರಿನ ರೋಗಿಗಳು ಇಲ್ಲಿ ಇದ್ದಾರೆ. ಯಾವದೇ ಜಾತಿಮತ ಭೇದವಿಲ್ಲದೆ ಎಲ್ಲರೂ ಸಮಾನ ಅಭಿಕೆಯನ್ನು ನಡೆಯುತ್ತಾರೆ ಎಂದು ತಿಳಿಯುವರೆ ಕುಟುಂಬ ಸಂತೋಷನಾಗುತ್ತದೆ. ತಿಂಗಳಿಗೆ ಕಡಿಮೆ ಎಂದರೆ 2000 ರೂ ಗಳಷ್ಟು ಹಿತಚಿಂತಕರ ಸಹಾಯವು ಬೇಕಾಗುತ್ತದೆ. ಬಡ ರೋಗಿಗಳಿಗೆ ಹೊಟ್ಟೆಮದ್ದುಗಳನ್ನು ಧನಾರ್ಥ ಕೊಡಲು ಸಹಾಯ ಮಾಡಿದವರೆಲ್ಲರಿಗೂ, ಈ ಗುರು ಸ್ವಾಮಿಯವರಿಗೂ ರೋಗಿಗಳು ಕೃತಜ್ಞರು.

ಆಸ್ಪತ್ರೆಯ ಬಡ ರೋಗಿ.

ಮದ್ರಾಸಿನಲ್ಲಿ ಕನ್ನಡ ಚಲಚಿತ್ರಗಳು

'ಪ್ಲಾಝಾ' ಟಾಕೀಸ್

ಜುಲಾಯಿ 3, 10, 17, 24, 31 ಆದಿತ್ಯವಾರ
ಬೆಳಿಗ್ಗೆ 10 ಗಂಟೆಗೆ ಪ್ರದರ್ಶನ

ಈ ಮೂರು ಪಟಗಳು ಇದು ಆದಿತ್ಯವಾರಗಳಲ್ಲಿ ಪ್ರದರ್ಶಿಸಲ್ಪಡುವವು. ಯಾವ ತಾರೀಕಿನಲ್ಲಿ ಯಾವ ಪಟವೆಂಬುದನ್ನು ಪ್ರತ್ಯೇಕ ಕರವತ್ರಗಳ ಮೂಲಕವೂ ಆಯಾಯ ವಾರದ 'ಹಿಂದು' ಪತ್ರಿಕೆಯಲ್ಲಿಯೂ ಪ್ರಕಟಿಸಲಾಗುವುದು.

ಯೋಗ್ಯ ಪ್ರೋತ್ಸಾಹ ದೊರೆತಲ್ಲಿ ಅಗಾಗ್ಯೆ ಇದೇ ಪಟಗಳನ್ನೂ ಮತ್ತು ಇತರ ಕನ್ನಡ ಚಿತ್ರಗಳನ್ನೂ ಪ್ರದರ್ಶಿಸಲಾಗುವುದು.

ಮಹಾತ್ಮರವರ ಮಾಡಿದ್ದುಣ್ಣೋ ಮಾರಾಯ

ಜುಗಾರಿ, ಕುಡುಕತನ ಮತ್ತು ವೇಶ್ಯಾಸಹವಾಸದಿಂದ ಒಳ್ಳೇ ಕುಟುಂಬವೊಂದು ಹೇಗೆ ಕೆಟ್ಟಿತೆಂಬುದನ್ನು ಹೃದಯ ಸ್ಪರ್ಶಿಯಾಗಿ ವಿವರಿಸುವ ಉತ್ತಮ ಸಾಮಾಜಿಕ ಚಿತ್ರ.

ಡೈರೆಕ್ಷನ್. ಡಿ. ಶಂಕರಸಿಂಗ್. ವಚನ & ಹಾಡುಗಳು: ಗೌತಮ.

ತಾರಾಗಣ:— ಹರಿಣಿ, ಪ್ರಭಾ, ರೇವತಿ, ಹುಣಸೂರು, ಸಂಪತ್, ಮಹಾಬಲರಾವ್, ಸ್ಟಂಟ ಸೋಮು ಮುಂತಾದವರು.

ವಿಜಯಶ್ರೀ ಚಿತ್ರದವರ ವಿಚಿತ್ರ ಪ್ರಪಂಚ

ಸಮಾಜದಲ್ಲಿ ಒಳ್ಳೆ ಮನುಷ್ಯನಂತೆ ನಟಿಸಿ, ಅಂತರಂಗದಲ್ಲಿ ಹೆಣಕ್ಕಾಗಿಯೂ ಹೆಣ್ಣಿಗಾಗಿಯೂ ಜನರು ಯಾವ ಯಾವ ಅನ್ಯಾಯಗಳನ್ನು ಮಾಡುವರೆಂಬುದನ್ನು ಮನಗಾಣಿಸುವ ಚಿತ್ರ.

ಡೈರೆಕ್ಷನ್:ಬಾಳಗಜಬರ. ವಚನ & ಹಾಡುಗಳು:ಪ್ರೊ.ಡ.ರ.ಬೇಂದ್ರೆ M A.

ತಾರಾಗಣ: ಹರಿಣಿ, ಸುಮತಿ, ರಮಾದೇವಿ, ಇಂದುಶೇಖರ, ಗಿರಿಮಾಜಿ, ಶಾಂತಿಕುಮಾರ್, ವಸಂತಕುಮಾರ್, ನಾರಾಯಣ ರಾವ್, ಸೊರಟ್ ಅಶ್ವತ್ಥನಾರಾಯಣಶಾಸ್ತ್ರಿ ಮುಂತಾದವರು.

ಮಹಾತ್ಮರವರ 'ಗಂಧರ್ವ ಕನ್ಯೆ'

ಭೂಲೋಕದ ಸೊಬಗನ್ನು ನೋಡಲು ಬಂದ ಗಂಧರ್ವಕನ್ಯೆಯೊಬ್ಬಳು ಮಾಂತ್ರಿಕನ ದುರಾಶೆ ದುರ್ಬುದ್ಧಿಗಳಿಂದ ಹೇಗೆ ಕಷ್ಟಪಟ್ಟಳು? ಎಂಬುದನ್ನು ವಿವರಿಸುವ ಉತ್ತಮ ಜಾನಪದ ಚಿತ್ರ. ಮೈಸೂರು ಅರಣ್ಯಗಳ ಭವ್ಯ ದೃಶ್ಯಗಳು ಆಕರ್ಷಣೀಯವಾಗಿವೆ.

ಡೈರೆಕ್ಷನ್: D. ಶಂಕರಸಿಂಗ್. ವಚನ & ಹಾಡುಗಳು: ಗುಂಡುರಾವ್.

ತಾರಾಗಣ: ಹರಿಣಿ, ರಾಜಸುಲೋಚನಾ,ರೇವತಿ,ಇಂದುಶೇಖರ್, ವೀರಭದ್ರಪ್ಪ, ಈಶ್ವರಪ್ಪ, ಮಹಾಬಲರಾವ್, ಸುಬ್ಬಯ್ಯ, ಬಾಲಕೃಷ್ಣ ಮುಂತಾದವರು.

ಹಂಚಿಕೆದಾರರು:ಪರಿಣೀಸ್ ವೀನಸ್ ಪಿಕ್ಚರ್ಸ್,ಮದ್ರಾಸ್-7



ಚಂಡಾಡಣ ಜಾತಿ ಇರುವವರು ವಯಸುಮಾಡಿ ಕಳುಹಿಸಿ ಕೊಡಿರಿ

(೩ನೇ ಪುಟದಿಂದ)

ದ್ದರು. ಅರವೀಡು ವಂಶಜರು ರಾಜ ಸಿಂಹಾಸನವನ್ನು ಏರುವ ವರೆಗೆ ರಾಜರು ಕೇವಲ ಕನ್ನಡಿಗರೇ ಆಗಿದ್ದರೂ ಕನ್ನಡದೊಡನೆ ಸಂಸ್ಕೃತ, ತೆಲುಗು ಪುತ್ತು ತಮಿಳು ಭಾಷೆಗಳ ಕವಿ ಮತ್ತು ಪಂಡಿತರನ್ನು ಸಹ ಸನ್ಮಾನಿಸುತ್ತಿದ್ದರು.

ಇಷ್ಟು ಉದಾತ್ತ ಧ್ಯೇಯವನ್ನು ಇಟ್ಟುಕೊಂಡಿದ್ದ ವಿಜಯನಗರದ ಅರಸರು ಕಾಲಾಕ್ಷೇತ್ರದಲ್ಲಿ ಸಹ ಪ್ರಾಚೀನ ಆದರ್ಶವನ್ನು ಬಿಟ್ಟುಕೊಡಲಿಲ್ಲವೆಂದರೆ ತಪ್ಪಾಗದು. ಕಲೆಯ ಸಾಧನವನ್ನು ಕೇವಲ ಭೌತಿಕ ಸುಖಕ್ಕಾಗಿ ಬಳಸುವುದು ಉಚಿತವಲ್ಲ—ಆಧ್ಯಾತ್ಮಿಕ ಜಾಗೃತಿಯನ್ನು ಹುಟ್ಟಿಸುವುದಕ್ಕೆ ಅದನ್ನು ಉಪಯೋಗಿಸಬೇಕು ಎಂದು ನಮ್ಮ ಪೂರ್ವಿಕರ ಮತ. ಕೇವಲ ವಾಸ್ತವತೆಯ ಚಿತ್ರಣವೇ ಕಲೆಯಾಗದು; ಆತ್ಮದ ವಿಕಾಸಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟರೆ ಮಾತ್ರ ಕಲೆಯು ಸಾರ್ಥಕ ಎಂನವರ ಅಭಿಪ್ರಾಯ. "ಸತ್ಯಂ, ಶಿವಂ, ಸುಂದರಂ" ಎಂಬ ಹಂತವನ್ನು ಮುಟ್ಟುವುದೇ ಕಲೆಯ ಸಿದ್ಧಿ; ಈ ಸಿದ್ಧಿಗಾಗಿ ಕುಶಲ ರೀತಿಯಲ್ಲಿ ಕಾರ್ಯ ನಿರತನಾಗುವುದೇ ಯೋಗ. ವಿಜಯ ನಗರದ ಅರಸರು ನರ್ತಕರನ್ನೆ, ಸಂಗೀತಗಾರರನ್ನು, ಚಿತ್ರಗಾರರನ್ನು ಈ ಬಗೆಯ ಭಾವನೆಯನ್ನು ಬಿತ್ತಿದ್ದರೆಂದು ಅವರ ಕೃತಿಗಳ ಅವಲೋಕನೆಯಿಂದಲೂ ಅಗಿನ ಸಾಹಿತ್ಯ ರಾಶಿಯ ಪರಿಚಯದಿಂದಲೂ ಮನವರಿಕೆಯಾಗುತ್ತದೆ.

ದ್ರಾವಿಡ ಶೈಲಿಯ ಶಿಲ್ಪವೇ ಹೆಚ್ಚಾಗಿ ಹಂಪೆಯಲ್ಲಿ ಕಂಡುಬರುತ್ತಿದ್ದರೂ ಜೈನ ಮತ್ತು ಮುಸ್ಲಿಮರ ಪ್ರಭಾವವಿಯವ ಶಿಲ್ಪಗಳೂ ಇಲ್ಲದಿಲ್ಲ. ಹೆಚ್ಚಾಗಿ ವಿಜಯನಗರದ ಶಿಲ್ಪ ಕೃತಿಗಳಲ್ಲಿ ಸರಳತೆ ಎದ್ದು ಕಾಣುತ್ತದೆ. ಕದಂಬ ರಾಜರ ಕಾಲದ ಶಿಲ್ಪಗಳ ಪ್ರಭಾವವೇ ಇಲ್ಲಿ ಅತಿಯಾಗಿ ಬಿದ್ದಿದೆಯಲ್ಲದೆ, ಹೊಯ್ಸಳರದಲ್ಲ. ಬೇಲೂರು, ಹಳೆ ಬೀಡು, ಸೋಮನಾಥಪುರಗಳಲ್ಲಿ ಕಂಡು ಬರುವಷ್ಟು ನಾಜೂಕಿನ ಚಿತ್ರ ವಿಚಿತ್ರ ಕೆತ್ತನೆ ಕೆಲಸ ವಿಜಯನಗರದ ಶಿಲ್ಪಗಳಲ್ಲಿ ವಿಶೇಷವಾಗಿಲ್ಲ. ಕೃಷ್ಣ ದೇವರಾಯನ ಕಾಲದಲ್ಲಿಯಷ್ಟೇ ಹೊಯ್ಸಳರ ಕಲಾ ವಿಧಾನವನ್ನು ಬಳಸುವ ಪ್ರಯತ್ನ ಪಡೆಯಲಾಯಿತೆಂದು ವ್ಯಕ್ತವಾಗುತ್ತದೆ. ಆದರೂ ಈ ಶಿಲ್ಪ ಕೃತಿಗಳು ತಮ್ಮ ಭವ್ಯತೆಗೆ ತುಂಬ ಹೆಸರಾಗಿವೆ; ಒಂದಂಗುಲದಷ್ಟೂ ಎಡೆ ಇಲ್ಲದಷ್ಟು ನಿಬಿಡವಾದ ಕೆತ್ತನೆ ಕೆಲಸಗಳಿಲ್ಲದಿದ್ದರೂ ಸಹ, ಚಿತ್ರಿಸಿದ ಕೃತಿಗಳು ಎದ್ದು ತೋರುವಂಥ ಹಿನ್ನೆಲೆಯನ್ನು ರಚಿಸಲಾಗಿದೆ; ಇದರಿಂದ ಆ ಕೃತಿಗಳ ಸೌಂದರ್ಯ ಒಡೆದು ಕಾಣುತ್ತದೆ.

ಸಂಪಾಪತಿ ಶ್ರೀ- ವಿರೂಪಕ್ಷನ ಮಂದಿರ ದಕ್ಷಿಣ ಕಾಶಿ ಎಂದು ಪ್ರಸಿದ್ಧವಾಗಿದೆ; ವ್ಯಾಸ ಮುನಿಗಳು ಸ್ಕಂದ ಪುರಾಣದ ಹೇಮಕೂಟಕಾಂಡದಲ್ಲಿ ಇಲ್ಲಿಯ ಮಹಿಮೆಯನ್ನು ಚೆನ್ನಾಗಿ ವರ್ಣಿಸಿದ್ದಾರೆ. ಸಪ್ತ ಋಷಿಗಳೇ ಇಲ್ಲಿ ನೆಲಸಿರುವೆಂದು ಹೇಳಲಾಗುತ್ತದೆ. ಇಲ್ಲಿ ೨೦೦ ತೀರ್ಥ ಕುಂಡಗಳಿವೆಯೆಂದು ಪುರಾಣ ತಿಳಿಸುತ್ತದೆ ಮಂದಿರದ ಮಂಟಪ ಮೂಲೆಗಳಲ್ಲಿ ಕಿನ್ನರೇಶ್ವರ, ಮಣಿ ಭದ್ರೇಶ್ವರ ಯಕ್ಷ, ಚಂಡ ಭೈರವ, ಕಾಳಿ, ಪದ್ಮಾಕ್ಷಿ, ಕಪಾಲ ಭೈರವ, ಸಂಹಾರ ಭೈರವ, ವಂತಾದವರು ನೆಲೆನಿಂತು ಸಂರಕ್ಷಣೆಯ ಕಾರ್ಯವನ್ನೂ ದೇವರ ಸೇವೆಯನ್ನೂ ಮಾಡುತ್ತಿದ್ದಾರೆಂದು ಪುರಾಣ ವಿವರಿಸುತ್ತದೆ ಸ್ಥಪತಿಗಳ ಕೌಶಲ ಹೇಳಿಕೊಳ್ಳುವಷ್ಟು ಇಲ್ಲಿಲ್ಲವೆಂಬುದು ನಿಜ; ಕೆಲವು ವರ್ಣಚಿತ್ರಗಳೂ ಮಸುಕಾಗಿ ಕಂಡು ಬರುತ್ತವೆ. ಮೈಸೂರು ಸರಕಾರ ಇವುಗಳನ್ನು ಪುನಃ ಬರೆಯಲು ನಿರ್ಧರಿಸಿದೆಯೆಂದು ಕೇಳುತ್ತೇವೆ. ರಾಮಾಯಣ, ಮಹಾಭಾರತಾದಿಗಳ ಪ್ರಸಂಗಗಳೇ ಚಿತ್ರಕಥಾ ವಸ್ತು. ಮಂದಿರದ ಪೂರ್ವಕ್ಕೆ ತಿರುಮಲರಾಯನಿಂದಲೂ ಪಶ್ಚಿಮಕ್ಕೆ ಕೃಷ್ಣದೇವರಾಯನಿಂದಲೂ ಕಟ್ಟಿಸಲಾದ ಗೋಪುರಗಳಿವೆ

ಕನ್ನಡಿಗರೊಡತಿ ಶ್ರೀ ಭುವನೇಶ್ವರಿಯ ಮಂದಿರ ಇಲ್ಲಿಗೆ ಎಡಬರಿಯಿಲ್ಲಿದೆ. ಮಂದಿರದ ಮೂರ್ತಿಯು ಬಹಳ ಸುಂದರವಾಗಿದೆ; ಯೋಗ, ಮುದ್ರೆಗಳು ಅತಿ ಸ್ಪಷ್ಟವಾಗಿ ಗೋಚರಿಸುತ್ತವೆ. ಹಳೇ ಬೀಡಿನ ದೇವಾಲಯದ ಮಹಾ ದ್ವಾರದಲ್ಲಿರುವ ಮೂರ್ತಿಯಷ್ಟೇ ಇದು ಆಕರ್ಷಕವಾಗಿದೆ. ಮಾಲ್ಯವಂತ ಪರ್ವತದ ಮೇಲೆ ತಿರುಮಲರಾಯನು ಕಟ್ಟಿಸಿದ ರಘುನಾಥ ದೇವಾಲಯ, ಚಕ್ರತೀರ್ಥದ ಬಳಿ ಕಂಡು ಬರುವ ಕೋದಂಡ ರಾಮನ ಮಂದಿರ, ಮಾತಂಗ ಪರ್ವತದ ಹಿನ್ನೆಲೆಯಲ್ಲಿ ಸೂಳೆ ಬಜಾರದ ಒತ್ತಿಗೆ ನಿಂತಿರುವ ಅಚ್ಚುತರಾಯ ದೇವಸ್ಥಾನ, ಉತ್ಕಲದ ಗಜಪತಿಗಳನ್ನು ಸೋಲಿಸಿದ ಸ್ಮಾರಕಕ್ಕಾಗಿ ಕೃಷ್ಣದೇವರಾಯನು ನಿಲ್ಲಿಸಿದ ಕೃಷ್ಣಸ್ವಾಮಿಯ ಗುಡಿ-ಇವುಗಳಲ್ಲಿ ಸಹ ಹೆಚ್ಚಿನ ಕಲಾವಿಶೇಷಗಳಿಲ್ಲ ಗೋಪುರ ಮತ್ತು ಮಂಟಪಗಳೇ ಇಲ್ಲಿಯ ಬೆಲುವಿನ ಬೀಡು. ಹಾಗಾಗಿ ಈ ಗುಡಿಗಳಿಗಿಂತ ಮಹಾನವಮಿ ದಿಬ್ಬದ ಪಾರ್ಶ್ವಗಳಲ್ಲಿಯೇ ಉತ್ತಮ ಕೆತ್ತನೆ ಕೆಲಸವಿದೆ ಎಂದು ಹೇಳಬಹುದು. ೫೦ ಅಡಿ ಎತ್ತರದ ಈ ದಿಬ್ಬದ ದಕ್ಷಿಣ ಪಾರ್ಶ್ವದ ಒಂದೇ ಉದಾಹರಣೆಯನ್ನು ತೆಗೆದುಕೊಂಡರೆ ೯ ಸಾಲುಗಳಲ್ಲಿ ಸೂರ್ಯ ಚಂದ್ರರಿಂದ ಹಿಡಿದು ದೇವತೆಗಳವರೆಗೆ, ಮೃಕ ಚಕೋರಗಳಿಂದ ಹಿಡಿದು ಆನೆ ಸಿಂಹಗಳವರೆಗೆ, ಬೇಟೆಗಾರರಿಂದ ಹಿಡಿದು ವೀರ ಯೋಧರವರೆಗೆ ಪಶು, ಪಕ್ಷಿ, ಮೃಗ, ಮನುಷ್ಯರ ಎಲ್ಲ ಭಾವಭಂಗಿಗಳೂ ಸಸ್ಯ ಸಂಕುಲದ ಶೋಭೆಯೂ ಗೋಚರಿಸುತ್ತವೆ. ದಿಬ್ಬವನ್ನು ಹತ್ತಿಹೋಗುವ ಮೆಟ್ಟಲುಗಳಲ್ಲಿ ಸಹ ಭರತನಾಟ್ಯ, ಕೋಲಾಟ, ಸಂಗೀತಗಾರರ ಮೇಳ ಇತ್ಯಾದಿ ಸನ್ನಿವೇಶಗಳನ್ನು ಚೆಲುವಾಗಿ ಚಿತ್ರಿಸಿರುವುದು ಕಂಡುಬರುತ್ತದೆ. ಹೊಯ್ಸಳರ ಶಿಲ್ಪ ವೈಭವದ ಪ್ರಭಾವವನ್ನು ನಮಗೆ ಇವು ತೋರಿಸುತ್ತವೆ.

ನಮ್ಮ ಮನಸ್ಸನ್ನು ಸಂಪೂರ್ಣ ಹಿಡಿದು ನಿಲ್ಲಿಸುವ ಮಂದಿರವೆಂದರೆ ಶ್ರೀ ವಿಟ್ಟಲ ಸ್ವಾಮಿಯದೆಂದು ಒಪ್ಪಬೇಕು—ಇದನ್ನು ೧೫೫೫ರಲ್ಲಿ ಶ್ರೀ ಕೃಷ್ಣದೇವರಾಯನು ಕಟ್ಟಿಸಿದ್ದನು. ಇದರ ಹೆಸರು ಹಜಾರ ರಾಮ ಮಂದಿರ ಇಲ್ಲಿ ಶಿಲ್ಪ ವೈಭವಕ್ಕೆ ಸಾಕ್ಷಿ ಹೇಳುವ ಪೇಣುಗೋಪಾಲ, ಹನುಮಂತ ಮುಂತಾದ ಪ್ರತಿಮೆಗಳು ಕಂಡುಬರುತ್ತಿದ್ದರೂ ಹೊಯ್ಸಳರದಷ್ಟು ವಿಸ್ತಾರವಾಗಿ ಕೆತ್ತನೆ ಕೆಲಸವನ್ನು ಇಲ್ಲಿ ಮಾಡಿಲ್ಲ. ವಿಜಯನಗರದ ಕಲಾರಾಧನೆಯು ಕದಂಬ ಮತ್ತು ಹೊಯ್ಸಳ ಸಾಂಪ್ರದಾಯಗಳ ಸಮರಸತೆಯನ್ನೆ ಉದ್ದೇಶಿಸಿರುವಂತೆ ಎಲ್ಲ ಶಿಲ್ಪ ಕೃತಿಗಳಿಂದ ಗೊತ್ತಾಗುತ್ತದೆ. ಮೂರ್ತಿಗಳು ಕೇವಲ ಬೋಳಾದ ರೂಪವಲ್ಲ—ಹಾಗೆಂದು, ಅತಿರೇಕ ಅಲಂಕಾರವೂ ಇಲ್ಲ. ಇದನ್ನೆ ವಿಜಯನಗರದ ಕಲಾರಾಧನೆಯ ವೈಶಿಷ್ಟ್ಯ ಎಂದೆನ್ನಬಹುದು. ಉಗ್ರ ನರಸಿಂಹನ ೩೦ ಅಡಿ ಎತ್ತರದ ಮೂರ್ತಿಯನ್ನೂ ಅದರ ಸಕ್ಕದಲ್ಲಿರುವ ೯ ಅಡಿಯ ಶಿವಲಿಂಗದ ವೈಖರಿಯನ್ನೂ ನಾಸಿವೆಕಾಳು, ಕಡಲೆಕಾಳುಗಳಂಥ ಸಣ್ಣ ಹೆಸರನ್ನು ಇಟ್ಟುಕೊಂಡಿದ್ದರು ಸಹ ಮುಖವನ್ನು ತೀರ ಮೇಲಕ್ಕೆತ್ತಿಯೇ ನೋಡಬೇಕಾದಷ್ಟು ಗಾತ್ರದ ಗಣಪತಿಗಳ ಪ್ರತಿಮೆಗಳನ್ನೂ ಅವಲೋಕಿಸಿದಾಗ, ಸಂಲಿ ಸುಂದರತೆ ಎಂದರೇನೆಂದು ವೇದ್ಯವಾಗುತ್ತದೆ.

ಸ್ವಲ್ಪ ಮಟ್ಟಿಗೆ ಮುಸ್ಲಿಂ ಸಂಪ್ರದಾಯದ ಪ್ರಭಾವವೂ ವಿಜಯ ನಗರದ ಮಂದಿರಗಳ ಮೇಲೆ ಬಿದ್ದಿದೆ. ಇದಕ್ಕೆ ಬಿಜಾಪುರದ ಬಾಹ್ಮನಿ ಅರಸರೊಡನೆ ಈ ರಾಜರಿಗಿದ್ದ ನೈಕಟ್ಯ ಬಾಂಧವ್ಯ ಕಾರಣವಾಗಿರಬಹುದು. ಮೊದಲನೇ ದೇವರಾಯನ ಮಗಳನ್ನು ಸುಲ್ತಾನ ಫಿರೋಜ ಶಹಾನಿಗೆ ಮದುವೆ ಮಾಡಿ ಕೊಟ್ಟಿದ್ದರು; ರಾಮರಾಯನಿಗೆ ಮುಸ್ಲಿಮಳಾದ ಆಯೇಷೆ ಪ್ರೇಯಸಿಯಾಗಿದ್ದಳು. ಕಮಲ ಮಹಾಲೇ ಮುಂತಾದ ರಾಣೀ ವಾಸದ ವಿಹಾರ ಕೇಂದ್ರಗಳನ್ನು ಮುಸ್ಲಿಂ ಪ್ರಭಾವಕ್ಕೆ ಉದಾಹರಣೆಯಾಗಿ ಕೊಡಬಹುದು. ವಿಜಯ ನಗರದ ಅರಸರು ರಸಿಕರಾಗಿದ್ದರು; ಶೃಂಗಾರ ಪ್ರಿಯರಾಗಿದ್ದರು. ನೊಬಲನೇ ಒಕ್ಕನ ಮಗ ಕುಮಾರ ಕಂಪಣನ ಹೆಂಡತಿ ರಾಣಿ ಗಂಗಾ ದೇವಿಯು ಸಂಸ್ಕೃತದಲ್ಲಿ ಸಿದ್ಧ ಹಸ್ತಳಾದ ಕವಯಿತ್ರಿಯಾಗಿದ್ದಳು. ಶ್ರೀ ಕೃಷ್ಣದೇವರಾಯನು ಸಂಗೀತ ಪ್ರೇಮಿಯೂ ಸಾಹಿತ್ಯ ಭಕ್ತನೂ ಆಗಿದ್ದನು. ಸ್ವತಃ ಅವನಿಗೆ ಈ ಶಾಸ್ತ್ರಗಳಲ್ಲಿ ಅನುಭವವಿದ್ದಿತು. ಅವನ ನೃತ್ಯಾಗಾರದಲ್ಲಿ ಪ್ರತಿಯೊಂದು ವೈಶ್ಯ ಭಂಗಿಯ ಪ್ರತಿಮೆಗಳಿದ್ದವಲ್ಲದೆ, ಊರ್ವಶಿ-ಪುರೂರವ, ರಂಭೆ-ನಳ ಕೂಬರ, ರತಿ-ಮನ್ಮಥ ಮುಂತಾದ ಜೊತೆಗಳ ಸುಂದರ ಚಿತ್ರಗಳನ್ನು ಬರೆಯಿಸಿದ್ದನು. ಸೀತೆಯ ಮೇಲಿನ ಅನುರಾಗದಿಂದ ಬೆಂದರಾಮನಿಗೆ ಇತ್ತಿಯ ಪುಷ್ಪಾ ಸರೋವರದ ತಂಪಾದ ನೀರಿನಲ್ಲೂ ಸೀತೆ ಕಂಡಿದ್ದಳಲ್ಲವೆ? ವಾಲ್ಮೀಕಿ ಅದನ್ನು ಎಷ್ಟು ಸೊಗಸಾಗಿ ಬಣ್ಣಿಸಿದ್ದನೂ—ವಿಜಯನಗರದ ಅರಸುಗಳ ಕಲಾಪ್ರೇಮ ಅಷ್ಟೇ ಉನ್ನತ ಶ್ರೇಣಿಯದಾಗಿದ್ದಿತು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ ೪½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕಾಂಚನಗಂಗ ಪರ್ವತ

ಹಿಮ ಮಾನವನ ಕುರಿತು ನೂತನ ವಿಚಾರ

(೨ನೇ ಪುಟದಿಂದ)

ಕನ್ನ ಸಿದ್ಧಪಡಿಸಲು ಬಳಸುತ್ತಿದ್ದರು ಡಮಾಸ್ಕನೇ ಮುಂತಾದ ಹೊರದೇಶಗಳ ಪ್ರಮುಖ ನಗರಗಳಿಗೆ ಈ ಉಕ್ಕನ್ನು ಹಡಗುಗಳಲ್ಲಿ ಒಯ್ಯುತ್ತಿದ್ದರು. ಅಲ್ಲಿಯೂ ಖಡ್ಗ ಮತ್ತಿತರ ಆಯುಧಗಳ ತಯಾರಿಕೆಗೆ ಇದು ಉಪಯೋಗಿಸಲ್ಪಡುತ್ತಿದ್ದಿತು. ಬಾಳಿಕೆ ತಾಳಿಕೆ ಮತ್ತು ಇತರ ಗುಣಗಳಲ್ಲಿ ಈ ಉಕ್ಕು ಅತ್ಯಂತಶ್ರೇಷ್ಠ ತರಗತಿಯದಾಗಿದ್ದಿತು.

ಕ್ರಿಸ್ತ ಶಕ ೩೫೦ನೇ ಇಸವಿಯ ಹೊತ್ತಿಗೆ ಭಾರತವನ್ನು ಆಳಿದ್ದ ಸಮುದ್ರಗುಪ್ತನು ನಿಲ್ಲಿಸಿದ ಕಬ್ಬಿಣದ ಸ್ತಂಭವೊಂದು ದಿಲ್ಲಿಯ ಬಳಿ ಇದೆ— ಅದರ ತುಂಡೊಂದನ್ನು ತೆಗೆದು ಪರೀಕ್ಷಿಸಿದಾಗ, ಇಂದಿನ ಉಕ್ಕಿಗಿಂತ ಯಾವ ರೀತಿಯಲ್ಲೂ ಅದು ಕೆಳತರಗತಿಯದಾಗಿಲ್ಲವೆಂದು ಗೊತ್ತಾಯಿತು. ಇಷ್ಟು ಉತ್ತಮ ಮಟ್ಟದ ಉಕ್ಕನ್ನು ಎರಡು ಅಡಿ ಎತ್ತರ ಮತ್ತು ಒಂದೂವರೆ ಅಡಿ ವ್ಯಾಸವುಳ್ಳ ಚಿಕ್ಕ ಕುಲುಮೆಗಳಲ್ಲಿ ಉತ್ಪಾದಿಸುತ್ತಿದ್ದರು. ಸುಮಾರು ಐದು ರಾತಲುಗಳಷ್ಟು ಕಬ್ಬಿಣವನ್ನು ಇದರಿಂದ ಒಮ್ಮೆಗೆ ಪಡೆಯಬಹುದಾಗಿದ್ದಿತು ಆದರೆ ಇಂದು ಒಂದು ಸಾವಿರ ಟನ್ನುಗಳಷ್ಟು ಕಬ್ಬಿಣವನ್ನು ಒಮ್ಮೆಗೆ ಉತ್ಪಾದಿಸುವ ಭಾರಿಕುಲುಮೆಗಳಿವೆ. ಕಾಲಿನಿಂದ ತುಳಿದು ತಿದಿ ಯೊತ್ತುವ ಮೂಲಕ ಬೆಂಕಿಯನ್ನು ಉರಿಸಿ, ಅದುರನ್ನು ಕರಗಿಸುವ ಪುರಾತನ ವಿಧಾನದ ಬದಲು ವಿದ್ಯುಚ್ಛಕ್ತಿಯನ್ನೂ ಕಲ್ಲಿದ್ದಲನ್ನೂ ಉಪಯೋಗಿಸಿಕುಲುಮೆಯನ್ನು ಉರಿಸಲಾಗುತ್ತದೆ. ಆದರೆ, ನಮ್ಮ ಉತ್ಪಾದನೆಯ ವೈವಿಧ್ಯ ಮಾತ್ರ ಹೆಚ್ಚಿಲ್ಲ-ಉದಾಹರಣೆಗೆ, ಯಂತ್ರ ಸಾಮಗ್ರಿಗಳ ರಚನೆಗೆ ಬೇಕಾದ ನಾಡೂಕು ಜಾತಿಯ ಉಕ್ಕನ್ನು ತಯಾರಿಸಲು ನಾವು ಶಕ್ತರಾಗಿಲ್ಲ. ದೊಡ್ಡ ದೊಡ್ಡ ತೊಲೆಗಳು ಸಹ ಸಾಕಷ್ಟುಉತ್ಪಾದಿಸಲ್ಪಡುವುದಿಲ್ಲ. ಮುಂದಿನ ಐದು ವರ್ಷಗಳಲ್ಲಿ ಸರಕಾರಪರಿಸ್ಥಿತಿಯನ್ನುಸುಧಾರಿಸೀತು ಎಂದು ಆಶಿಸೋಣ.

ಸದಾಕಾಲ ಹಿಮದಿಂದ ಕವಿದಿರುವ ಭಾರತದ ಉತ್ತರ ಶರ್ವತಶ್ರೇಣಿಯನ್ನು ಜಗತ್ತಿನ ತೃತೀಯ ಧ್ರುವ ಎಂಬುದಾಗಿ ಭೌಗೋಲಿಕ ತಜ್ಞರು ಪರಿಗಣಿಸುತ್ತಾರೆ. ಜಗತ್ತಿನ ಎಲ್ಲ ಪ್ರಾಗುಣಗಳ ಅನುಭವನನ್ನೂ ಭಾರತದಲ್ಲಿ ಮಾಡಿಕೊಳ್ಳಬಹುದು ಎಂಬುದಕ್ಕೆ ಹಿಮಾಲಯದ ಸೆರಗು ವಾಯವ್ಯದಿಂದ ಈಶಾನ್ಯದಸರೆಗೆ ಚಾಚಿರುವುದೇ ಕಾರಣ.

ಉತ್ತರ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿ ಸಾಹಸಿಗಳು ಕೆಲವರು ಧ್ವಜವೂರಿದ ತರುವಾಯ ಹಿಮಾಲಯದ ಅತಿ ಎತ್ತರವಾದ ಶಿಖರದ ಮೇಲೆ ಬಾವುಟ ಹಾರಿಸಬೇಕೆಂಬ ಲಲಲಾಟಿಕೆ ಅತಿಯಾಯಿತು. ಎರಡುವರ್ಷಗಳ ಹಿಂದೆ ಆನ್ನಪೂರ್ಣ ಎಂಬ ದುರ್ಗಮ ಶಿಖರದ ಮೇಲೆ ನಡೆಸಿದ ಆರೋಹಣ ಯಶಸ್ವಿಯಾಯಿತು. ಇದಾದ ಕೆಲವೇ ದಿನಗಳಲ್ಲಿ ಎವರೆಸ್ಟ್ ಶಿಖರದ ಮೇಲೆ ತೇನ್‌ಸಿಂಗ್ ಮತ್ತು ಎಡ್ಮಂಡ್ ಹಿಲಾರಿಯವರು ತಮ್ಮ ಕಾಲುಗಳನ್ನೂರಿದರು.

ಮಸ್ತಕವನ್ನೆತ್ತಿ ನಿಂತಿದ್ದ ಜಗತ್ತಿನ ಈ ಅತ್ಯುನ್ನತ ಶಿಖರ ಪಾದಾಕ್ರಾಂತವಾದುದೇ ತಡ ರೋಷದ ಎರಡನೆಯ ಅತ್ಯುನ್ನತ ಶಿಖರವೆನಿಸಿದ ಗಾಡ್ವಿನ್ ಆಸ್ಟಿನ್ (K2, ನಂಗ, ಪರ್ವತ ಮುಂತಾದ ಒಂದೊಂದೇ ಶಿಖರಗಳನ್ನು ಪರ್ವತಾರೋಹಿಗಳು ಹತ್ತಿದರು. ಜಗತ್ತಿನ ಅತ್ಯುನ್ನತ ಶಿಖರಗಳಲ್ಲಿ ತೃತೀಯ ಸ್ಥಾನ ಪಡೆದ ತಲಾಳಜ ಅಡಿ ಎತ್ತರದ ಕಾಂಚನ ಗಂಗವನ್ನು ಸಹ ಇದೇ ಮೇ ತಿಂಗಳಲ್ಲಿ ಜಯಿಸಲಾಯಿತು.

ತಜ್ಞರ ಅಭಿಪ್ರಾಯದಂತೆ ಕಾಂಚನಗಂಗ ಪರ್ವತ ಶಿಖರವನ್ನು ಹತ್ತುವುದು ಎವರೆಸ್ಟ್ ಶಿಖರ ಹತ್ತುವುದಕ್ಕಿಂತಲೂ ಕಠಿಣವಾದ ಕಾರ್ಯ. ಆದರೆ, ಮೊನ್ನೆ ದಿನಾಂಕ ೨೬ರಂದು ಕಲ್ಕತ್ತೆಯಲ್ಲಿ ಪತ್ರಿಕೋದ್ಯೋಗಿಗಳೊದನೆ ಮಾತನಾಡಿದ ಕಾಂಚನಗಂಗ ಪರ್ವತಾರೋಹಿಗಳ ಧುರೀಣ ಡಾ. ಚಾರ್ಲ್ಸ್ ಇವಾನ್ಸರು ತಾವು ಎಣಿಸಿದಷ್ಟು ಆರೋಹಣ ಕಾರ್ಯ ಕಠಿಣವಾಗಿರಲಿಲ್ಲ ಎಂದರು. ಎವರೆಸ್ಟಿಗಿಂತ ಎಷ್ಟೋ ಕಠಿಣವೆಂದು ಭಾವಿಸಿದ್ದ ಕಾಂಚನಗಂಗವನ್ನು ಏರಿದ ಬಳಿಕ ಈಗ ಈ ಶಿಖರ ಕ್ಕಿಂತಲೂ ಅಧಿಕ ದುರ್ಗಮವೆಂದು ಹೇಳಲಾದ ರೋಷ್ಟ್ಸೆ ಶಿಖರವನ್ನು ಹತ್ತಲು ತಮಗೆ ಮನಸ್ಸಾಗಿದೆ ಎಂದೂ ಅವರು ಹೇಳಿದರು.

ಕಾಂಚನ ಗಂಗ ಪರ್ವತವು ನೇಪಾಳ ಮತ್ತು ಸಿಕ್ಕಿಂ ರಾಜ್ಯಗಳ ಗಡಿ ಪ್ರದೇಶದಲ್ಲಿದೆ. ಎವರೆಸ್ಟ್ ಶಿಖರ ಇಲ್ಲಿಂದ ೮೦ ಮೈಲು ಪಶ್ಚಿಮಕ್ಕಿದೆ. ಟಿಬೇಟನ ಗಡಿ ೧೩ ಮೈಲು ಉತ್ತರಕ್ಕಿದ್ದರೆ, ೩೫ ಮೈಲು ದಕ್ಷಿಣಕ್ಕೆ ಭಾರತದ ಸುಪ್ರಸಿದ್ಧ ಪರ್ವತ ವಿಹಾರ ಕೇಂದ್ರವಾದ ದಾರ್ಜಿಲಿಂಗಿದೆ. ಈ ನಗರದಿಂದ ಕಾಂಚನಗಂಗ ಪರ್ವತವನ್ನು ಪ್ರವಾಸಿಕರು ಸ್ಪಷ್ಟವಾಗಿ ನೋಡಬಲ್ಲರು. ಅರುಣೋದಯ ಮತ್ತು ಸೂರ್ಯಾಸ್ತಗಳ ಕಾಲದಲ್ಲಿ ಪರ್ವತದ ನೋಟ ರಮಣೀಯವಿರುತ್ತದೆ; ಬಿಸಿಲೇರಿದಾಗ ಅದು ಬೆಳ್ಳಿಯ ಬೆಟ್ಟದಂತೆ ಹೊಳೆಯುತ್ತದೆ.

ಇಪ್ಪು ಚೆನ್ನಾಗಿ ಮತ್ತು ಸ್ಪಷ್ಟವಾಗಿ, ಪರ್ವತದಿಂದ ಸಾಕಷ್ಟು ಹೆಚ್ಚು ದೂರವಿದ್ದು ಕೊಂಡು ಬೇರಾವುದೆ ಶಿಖರವನ್ನು ನೋಡಲಾಗುವುದಿಲ್ಲ. ವಾಸ್ತವದಲ್ಲಿ ಕಾಂಚನ ಗಂಗ ಪರ್ವತವು ಐದು ಬೇರೆ ಬೇರೆ ಶಿಖರಗಳಿಂದ ಕೂಡಿದೆ. ತಮ್ಮ ದೇವತೆಗಳ ನಿವಾಸ ಸ್ಥಾನವೆಂದು ಭಯ ಭಕ್ತಿಯಿಂದ ಈ ಶಿಖರಗಳನ್ನು ಕಾಣುವ ಸಿಕ್ಕಿಂ ಜನರ ಭಾವನೆಯು ಹಿಮದ ಪಂಚ ಪವಿತ್ರ ಬಂಡಾರ ಎಂಬುದಾಗಿ ಶಿಖರಗಳನ್ನು ಬಣ್ಣಿಸುತ್ತದೆ. ನಮ್ಮ ಮಟ್ಟಿಗೆ ಇವು ಗೋಪುರಗಳಂತೆ ಕಂಗೊಳಿಸುತ್ತವೆ.

ತಮ್ಮ ಪವಿತ್ರಭಾವನೆಯನ್ನು ಕಲುಷಿತಗೊಳಿಸಲು ಸಿಕ್ಕಿಂ ಜನರಾಗಲೀ ಅರಸರಾಗಲಿ ಸಿದ್ಧರಾಗಿಲ್ಲ. ಆದುದರಿಂದ ಡಾ. ಇವಾನ್ಸರ ತಂಡವು ಶಿಖರದ ಕೊನೆಯನ್ನು ಕಾಲಿನಿಂದ ತುಳಿಯದೆ ಐದು ಅಡಿ ಎತ್ತರದಷ್ಟು ಕೆಳಗೆ ನಿಂತು ಶಿಖರಕ್ಕೆ ಕೈಜೋಡಿಸಿಯೇ ಮರಳಬೇಕಾಯಿತು. ಇದರಿಂದ ಸಿಕ್ಕಿಂ ಅರಸರ ಮತ್ತು ಜನತೆಯ ಪ್ರೀತಿ ಮತ್ತು ಗೌರವದ ಲಾಭ ಅವರಿಗೆ ದೊರೆಯಿತೆಂಬುದುನಿಜ.

ಐದು ಶಿಖರಗಳಲ್ಲಿ ಅತಿ ಎತ್ತರವಾದುದು ಆಗ್ನೇಯ, ಈಶಾನ್ಯ ಮತ್ತು ಪಶ್ಚಿಮ ಶಿಖರಗಳ ಮೂಲಸಿರುವ ಭಾಗದಲ್ಲಿದೆ. ಇದರ ಮೇಲೆ ಆರೋಹಣ ಪ್ರಾರಂಭ ೧೯೦೫ನೇ ಇಸವಿಯಿಂದ ೧೯೩೦ನೇ ಇಸವಿಯ ವರೆಗೆ ಸಾಕಷ್ಟು ಪ್ರಯತ್ನಗಳಾಗಿದ್ದುವು; ನಾಲ್ಕಾರು ಮಂದಿ ಮೃತ್ಯುವನ್ನೂ ಅಪ್ಪಿದ್ದರು. ಆದರೆ ಯಾರೊಬ್ಬರಿಗೂ ಶಿಖರವನ್ನು ಮುಟ್ಟುವುದಾಗಲಿಲ್ಲ. ಅತಿ ಹೆಚ್ಚಿಂದರೆ ೨೫೦೦೦ ಅಡಿಯಷ್ಟು ೧೯೩೦ರಲ್ಲಿ ಪಾವುಲ್ ಭಾರ್ ತಂಡ ಏರಿದ್ದಿತು.

ಡಾ. ಇವಾನ್ಸರ ತಂಡಕ್ಕೆ ಅನೇಕ ವಿಘ್ನಗಳು ಕಾದಿದ್ದುವು. ಅತಿ ವಿಶಾಲವಾದ ಹಿಮಾನಿ ಮತ್ತು ಹಿಮಪ್ರಪಾತಗಳ ಸಾಲುಗಳು ಮಾರ್ಗದಲ್ಲಿ ಅಡಚಣೆಯಾಗಿದ್ದವು. ವಿಶೇಷ ತಂತ್ರಗಳನ್ನು ಉಪಯೋಗಿಸಿದೆ. ಅವುಗಳನ್ನು ಕ್ರಮಿಸುವುದು ಸಾಧ್ಯವಿರಲಿಲ್ಲ. ಆದರೆ ಅವರ ಉಪಕರಣಗಳು ಎವರೆಸ್ಟ್ ಪರ್ವತಾರೋಹಣ ಕಾಲದಲ್ಲಿ ಉಪಯೋಗಿಸಿದ್ದುದಕ್ಕಿಂತ ಸುಧಾರಿಸಲ್ಪಟ್ಟಿದ್ದವು. ಉದಾಹರಣೆಗೆ ಕಾಲಿನ ಪಾದರಕ್ಷೆಗಳು ಚಿಕ್ಕದಾಗಿ, ಲಘುವಾಗಿದ್ದವಲ್ಲದೆ, ಪ್ರಾಣವಾಯುವನ್ನು ತುಂಬಿಸಿದ ಪೆಟ್ಟಿಗೆ ಹಗುರವಿದ್ದಿತು; ಅದರಲ್ಲಿ ಪ್ರಾಣವಾಯುವನ್ನು ಹಿಂದಿಗಿಂತ ಹೆಚ್ಚು ಪ್ರಮಾಣದಲ್ಲಿ ತುಂಬಿಸುವುದಕ್ಕೆ ಅನುಕೂಲವಿದ್ದಿತು.

ಶಿಖರದ ಕೊನೆ ಹೇಗಿದೆ ಎಂಬ ಪ್ರಶ್ನೆಗೆ ಡಾ. ಇವಾನ್ಸರು ಅದು ಕಲ್ಲು ಆಕೃತಿಯಲ್ಲಿದೆ ಎಂದು ತಿಳಿಸಿದರು. "ಹಿಮಮಾನವ"ನ ಕುರಿತು ವಾಸ್ತವದ ಬೆಳಕಲು ಅವರು ಇಚ್ಛಿಸಲಿಲ್ಲ. "ಯೇತಿ" ಎಂದು ಸ್ಥಳೀಯರು ಕರೆಯಲ್ಪಡುವ ಪ್ರಾಣಿ ಸುಸಂಸ್ಕೃತಾಗಿರಲಿಕ್ಕಿಲ್ಲ—ಚೇರೇ ನಾದರೂ ಆಗಿರಬಹುದು ಎಂದರು. ಪರ್ವತಾರೋಹಣ ಕಾಲದಲ್ಲಿ ೧೮೦೦೦ ಅಡಿಗಳನ್ನು ಎತ್ತರದಲ್ಲಿ ಸರ ವಾಚಿ ಹಾವಸೆ ಇತ್ಯಾದಿ ಸಸ್ಯಗಳನ್ನು ಕಾಣಬಹುದು ತ್ತೆಂದೂ ಬಾಲವಿಲ್ಲದ ಇಲಿಯ ಜಾತಿಗೆ ಸೇರಿದ ಪ್ರಾಣಿಗಳು ಸಹ ಸೋಜಿಗ ರಿಸುತ್ತಿದ್ದವೆಂದೂ ಅವರು ನುಡಿದರು. ಕೆಲವರ ಜನರು "ಯೇತಿ"ಯು ಇವುಗಳನ್ನು ತಿಂದು ದಿನಗಳೆಯುತ್ತದೆ ಎಂದು ತಮಗೆ ತಿಳಿಸಿದರೂ ನಮ್ಮ ಕಲ್ಪನೆಯನ್ನು ದೊಡ್ಡದಾದ ಪ್ರಾಣಿ "ಯೇತಿ"ಯಾಗಿದ್ದರೆ, ಅದಕ್ಕೆ ಈ ಆಹಾರ ಸಾಲದೆಂದು ಇವಾನ್ಸರು ಅಭಿಪ್ರಾಯಪಟ್ಟರು.

ಪತ್ರಿಕೋದ್ಯೋಗಿಗಳೊಡನೆ ಹೀಗೆ ಡಾ. ಇವಾನ್ಸರು ಹೇಳುತ್ತಿದ್ದಂತೆಯೇ ಲಂಡನ್ನಿನಿಂದ "ಹಿಮ ಮಾನವ"ನ ಕುರಿತೊಂದು ಹೊಸ ವರದಿ ಬಂದಿರುತ್ತದೆ—ಹಿಮಾಲಯದ ವಾಯವ್ಯ ಭಾಗದ ಕೊಲ್ಲಿ ಹಿಮ ಪ್ರದೇಶದಲ್ಲಿ ಸಂಚರಿಸುತ್ತಿದ್ದಾಗ ಇದೇ ಜೂನಿನ ೧೨ನೇ ತಾರೀಕಿನಂದು ೧೨೨೫೦ ಅಡಿ ಎತ್ತರದಲ್ಲಿ ಸ್ಕಾಟ್ಲಂಡ್ ಲೀಡರ್ ಡೇವಿಸರು ಹಿಮಮಾನವನ ಹೆಜ್ಜೆಗಳನ್ನು ಕಂಡರೆಂದು ಇದು ವೇಳುತ್ತದೆ.

ಹೆಜ್ಜೆಯು ೧೨ ಅಂಗುಲ ಉದ್ದ ಮತ್ತು ೬ ಅಂಗುಲ ಅಗಲವಾಗಿದೆ; ಹಿಮದಲ್ಲಿ ೮ ಅಂಗುಲದಷ್ಟು ಮೂತು ಹೋಗಿದೆ. ಒಂದೊಂದು ಕಾಲು ಇಂಚಿನಷ್ಟು ಅಗಲದ ಐದು ಬೆರಳುಗಳು ಪ್ರತಿಯೊಂದು ಕಾಲಿನಲ್ಲಿವೆ; ಎರಡು ಕಾಲುಗಳಲ್ಲಿ ನಡೆದು ಹೋದಂತಿರುವ ಈ ದಾರಿಯು ಹಿಮಾಲಯ ಪ್ರದೇಶದ ಪಶ್ಚಿಮ ಭಾಗದಿಂದ ಪೂರ್ವ ದಿಕ್ಕಿಗೆ ಸಾಗಿದೆ-ಎಂದು ವರದಿಯಿಂದ ತಿಳಿದು ಬರುತ್ತದೆ.

ಡೇವಿಸರ ಬೇಳಿಕೆಗನುಸಾರ ಈ ಹೆಜ್ಜೆಗಳು ಕರಡಿಯ ಹೆಜ್ಜೆಗಳಿಗಿಂತ ದೊಡ್ಡದಾಗಿವೆ; ಅಲ್ಲದೆ ಸಾಮಾನ್ಯ ಮನುಷ್ಯನ ಹೆಜ್ಜೆಯು ಒಂದೆಂಗುಲದಷ್ಟು ಮಾತ್ರ ಹಿಮದಲ್ಲಿ ಮೂತು ಹೋದರೆ, ಈ ಪ್ರಾಣಿಯ ಹೆಜ್ಜೆ ಎಂಟೆಂಗುಲದಷ್ಟು ಹೊಂಡಕ್ಕೆ ಎಡೆಮಾಡಿದೆ. ಆದುದರಿಂದ ಅದು ಕರಡಿಗಿಂತ ದೊಡ್ಡದಾದ ಮತ್ತು ಭಾರವಾದ ಪ್ರಾಣಿಯಾಗಿರಬೇಕು. ಪಶ್ಚಿಮ ಪ್ರದೇಶದಿಂದ ಪೂರ್ವಕ್ಕೆ ಸಾಗುವ ದಾರಿಯಲ್ಲಿ ಅದು ಕಣಿಸ್ಥ ಮೂಲಾದರಿಂದ ರೆಳಸಿದಿಂದ ಪರಿಯುವ ಹೊಳೆಗಳನ್ನು ದಾಟಿ ಬಂದಿರುವುದರಿಂದ ಅದು ತುಂಬ ಬಲಿಷ್ಠಾಗಿರಬೇಕು.

ಸಾಮಾನ್ಯ ಕರಡಿಯೊಂದು ಇಷ್ಟು ದೆಚ್ಚಿಯು ಹಿಮದ ಕರಗುಸಿಕೆಯಿಂದ ಪರಿದಿ ದೊಡ್ಡದಾಗಿ ಕಂಡು ಬಂದಾಗ ಅದನ್ನು ನೋಡಿದವರು ಹೇಯೆರೂ ಹಿಮಮಾನವನ ಹೆಜ್ಜೆಗಳೆಂದು ಭ್ರಮಿಸುವರಾಗಿ ಕೆಲವರು ಹೇಳಿದ ನಿಸಯಕ್ಕೆ ಲಂಡನಿನ ಈ ವರದಿ ಎರಡು ಮುಖ್ಯ ಸಂಗತಿಗಳನ್ನು ನೃತ್ಯಾನವನ್ನು ತೋರಿಸುತ್ತದೆ— ಮೊದಲನೆಯದು ಹೆಜ್ಜೆಯಿಂದ ಉಂಟಾಗಿರುವಹೊಂಡವನ್ನು ನಾಣ; ಇನ್ನೊಂದು ವಿಷಯವೆಂದರೆ ಜೂನಿನಂದನೆ ತಾರೀಕಿನ ಅಪರಾನ್ಹದಲ್ಲಿ ಡೇವಿಸರು ಸುತ್ತಾಡಿದ್ದಾಗ ಈ ಹೆಜ್ಜೆಗಳು ಕಂಡುಬಂದಿರಲಿಲ್ಲ; ಮರುದಿನ ಸುಂಜಾನೆ ತಿಮಗಲು ಹೋದಾಗ ಮಾತ್ರ ಗೋಚರಿಸಿದು. ಇದರಿಂದ ೧೧ನೇ ತಾರೀಕಿನ ರಾತ್ರಿ "ಹಿಮಮಾನವ" ಆ ದಾರಿಯಲ್ಲಿ ದೋಗಿದ್ದನು; ಮತ್ತು ಅವನ ಹೆಜ್ಜೆ ಹಿಮದ ಕರಗುಸಿಕೆಯಿಂದ ದೊಡ್ಡದಾಗಲು ಅವಕಾಶವಿರಲಿಲ್ಲ ಎಂಬ ನಿರ್ಣಯ ವಾಗುತ್ತದೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ಹೋಷಗಳನ್ನು ದಕ್ಕೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/ ಪ್ರೆಸಲ್ ರೂ. 8/-

Mrs. P. DEVEE, F. Ds. (N. J.) (ಮಿ. ಪಿ. ಪ್ರೈಯೇ)
CALCUTTA—40 ಸ್ಟಾಕಿಸ್ಟರು: ಶೆಣಾಕಂಪೆನಿ, ಮಂಗಳೂರು

(೧ನೇ ಪುಟದಿಂದ)

ಹುಟ್ಟಿದ ಸಂತಾನವನ್ನು "ಚಂಡಾಲ" ಎಂದು ಕರೆದ ನಮ್ಮ ಪ್ರಾಚೀನ ಸಂಪ್ರದಾಯ, ವಿಲೋಮ ವಿವಾಹಗಳ ಸಂತಾನವನ್ನು ಮತ್ತು ಅಂತರ್ಜಾತೀಯ ವಿವಾಹಗಳಿಂದ ಜನಿಸುವ ಮಕ್ಕಳನ್ನು ಯಾವ ಹೆಸರಿಟ್ಟು ಕರೆದೀತು, ನಮ್ಮ ಸಮಾಜ ಅವುಗಳಿಗೆ ಯಾವ ಮನ್ನಣೆಯನ್ನು ಕೊಟ್ಟೀತು ಎಂಬುದು ಬಹಳ ಮಹತ್ವದ ವಿಚಾರ. ಏಕೆಂದರೆ. ಸಾಮಾಜಿಕ ಮನ್ನಣೆಯಿಲ್ಲದೆ, ಭದ್ರತೆಯಿಲ್ಲದೆ ಮಾನವನು ಸುಗಮವಾಗಿ ಜೀವನವನ್ನು ನಡೆಸಿಕೊಂಡು ಹೋಗುವುದು ಕಷ್ಟ. ಅಂತರ್ಜಾತೀಯ ವಿವಾಹವು ಅವನ ಬದುಕನ್ನು ಅಸಹನೀಯವಾಗಿ ಮಾಡುವುದಾದರೆ, ಅವನ ಬಾಳ್ವೆಯ ಭದ್ರತೆಯನ್ನು ಕಿತ್ತುಕೊಳ್ಳುವುದಾದರೆ—ಈ ವಿವಾಹ ಬಂಧನಕ್ಕೆ ಮನಸ್ಸು ಮಾಡುವವರಿಗೆ ಸಮಾಜವನ್ನು ಧಿಕ್ಕರಿಸಿ ಹೋಗಬಲ್ಲ ಧೈರ್ಯ ಸಾಹಸಾದಿ ಗುಣಗಳು ಅಗತ್ಯವೆನಿಸುತ್ತವೆ.

ಹೀಗೆ ದಿಟ್ಟತನದಿಂದ ನಡೆದ ಶೂರರು ಹಿಂದಿನ ಕಾಲದಿಂದಲೂ ಇದ್ದರೆಂಬುದು ಸಮಾಧಾನಕರವಾದ ವಿಷಯ—ಒಂದೆರಡು ಸೀಳಿಗೆಯ ಮಟ್ಟಿಗೆ ಅವರು ಸಮಾಜದೊಡನೆ ಸೆಣಸಾಡಬೇಕಾಗಿರಬಹುದು; ಆದರೆ ಹಿಂದಿನಿಂದ ಸಮಾಜ ವಿಇವರ ಸಂತಾನಕ್ಕೆ ಮನ್ನಣೆಯನ್ನು ಕೊಡದೆ ಹೋಗಲಿಲ್ಲ. ಇಂದಿನ ಮೂರು ಸಾವಿರ ಜಾತಿಗಳ ಚರಿತ್ರೆಯ ಬುಡ ಈ ಅಂಶವನ್ನು ಹೊರಗೆಡವುತ್ತದೆ. ಕಾರಣ, ಅಂತರ್ಜಾತೀಯ ವಿವಾಹಗಳನ್ನು ಇಂದು ನಾವು ಹೊಸತಾಗಿ ಆಚರಣೆಗೆ ತರುತ್ತಿದ್ದೇವೆಂಬ ಹೆಮ್ಮೆಯಾಗಲೀ ಹೆದರಿಕೆಯಾಗಲೀ ಯೋಗ್ಯವಲ್ಲ. ಜಾತಿ ವ್ಯವಸ್ಥೆಯು ಬುಡಕಟ್ಟು ಈಗಿನ ಸರಕಾರ ಕೈಗೊಂಡಿರುವ ಸುಧಾರಣೆಗಳಿಂದಲೂ ಬದಲಾದ ವಾತಾವರಣದ ಪ್ರಭಾವದಿಂದಲೂ ತೀರ ಸಡಿಲಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ ಆದುದರಿಂದ ಹಿಂದಿನವರು "ಅಂತರ್ಜಾತೀಯ" ಎಂದು ಕರೆಯಬಹುದಾದ ವಿವಾಹಗಳನ್ನು ಸರಕಾರದವರು ಶಾಸನದ ಮೂಲಕ ಇಂದು ಮಾನ್ಯಮಾಡುವಂತಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ, ಔದ್ಯೋಗಿಕ ಸಂಸ್ಥೆಗಳಲ್ಲಿ ವ್ಯಾಪಾರ ವ್ಯವಹಾರದ ಕಾರ್ಯಲಯಗಳಲ್ಲಿ ಹಿಂದಿನವರ ದೃಷ್ಟಿಯಲ್ಲಿ ಅನೇಕ ಜಾತಿಯವರು ಸೇರಿ ಬರುವ, ಆದರೆ ಇಂದಿನವರ ವಿಚಾರ ಸರಣಿಯಂತೆ ವಿಶಿಷ್ಟ ಯೋಗ್ಯತೆ ಮತ್ತು ಕಾರ್ಯದಕ್ಷತೆಗಳು ಸಾಮಾನ್ಯವಾಗಿ ಸಮಾನವಾಗಿರುವ, ಹಲವಾರು ಜನರು ಒಂದಾಗುತ್ತಾರೆ; ಒಟ್ಟಿಗೆ ದುಡಿಯುತ್ತಾರೆ. ಅವರು ತಮಗಿಂತ ಹೆಚ್ಚು ಅಥವಾ ತಮ್ಮಷ್ಟೇ ಸಂಸ್ಕಾರವುಳ್ಳವರ ಬಾಂಧವ್ಯವನ್ನು ಬಯಸಿದರೆ, ಅದು ಅನೈಸರ್ಗಿಕವಾಗಲಾರದು.

ಈ ಬಗೆಯ ಬಾಂಧವ್ಯವನ್ನು ವಿವಾಹವೇ ಶಾಶ್ವತವಾಗಿ ಏರ್ಪಡಿಸಬಲ್ಲುದು. ಇಂದು ವಿವಾಹ ಸುಲಭ ಸಾಧ್ಯವಾಗಿಲ್ಲ; ಅದು ಅಗ್ಗವೂ ಆಗಿಲ್ಲ. ಜಾತಿ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಜನರೇ ಹಿಂದುಗಳಲ್ಲಿ ಅಧಿಕ; ಆದರೆ ಅನುರೂಪ ಬಾಂಧವ್ಯ ಮಾತ್ರ ಬಹಳ ದುರ್ಲಭ. ತರುಣ ತರುಣಿಯರು ಆದರ್ಶ ಸಗಾಂತಿಗಾಗಿ ಶೋಧ ನಡೆಸುತ್ತಿದ್ದಾರೆಂದೇನು ಇದರ ಅರ್ಥವಲ್ಲ— ಹಾಗೆ ಶೋಧ ನಡೆಸಲು ಇರುವ ಕ್ಷೇತ್ರ ವ್ಯಾಪ್ತಿ ತುಂಬ ಮಿತವಾಗಿದೆ; ಅಂದರೆ ಸಜಾತಿಯ ಸಂಗಾತಿಯನ್ನೆ ಹೆಚ್ಚಾಗಿ ಕೂಡುಕಬೇಕಾಗುತ್ತದೆ. ಒಂದೊಮ್ಮೆ ಇಂಥ ಸಂಗಾತಿ ದೊರೆತರೂ ವರದಕ್ಷಿಣೆ, ವಧುವಿನ ಮೈ ಮೇಲೆ ಹಾಕುವ ಚಿನ್ನ ಮುಂತಾದ ಅನೇಕ ಪ್ರಶ್ನೆಗಳು ಅನುರೂಪ ಬಾಂಪತ್ಯಕ್ಕೆ ಇರುವ ಸಂದರ್ಭವನ್ನು ಅತಿರೇಕವಾಗಿ ಹಾಳು ಮಾಡುತ್ತವೆ. ಇಂಥ ಪ್ರಸಂಗಗಳು ವಿರಳವಾಗಬೇಕು ಎಂಬ ಉದ್ದೇಶದಿಂದ ಪ್ರೇಮ ವಿವಾಹಗಳನ್ನು ಆಗಗೊಡಬೇಕೆಂದು ಅನೇಕ ಸಲ ಸಂಸತ್ತಿನಲ್ಲಿ ಸದಸ್ಯರು ಹೇಳಿದ್ದುಂಟು. ಆದರೆ ಇದು ಕುಲಭೇದಲ್ಲಿ ಒಪ್ಪಿ ಬಿಡಬಹುದಾದ ಸಂಗತಿ ಏನಲ್ಲ—ಏಕೆಂದರೆ, ಪ್ರೇಮ ವಿವಾಹಗಳು ಒಂದು ಸಮಸ್ಯೆಯನ್ನು ಪರಿಹರಿಸಿದರೂ ಇತರ ಸಾಮಾಜಿಕ ಮಹತ್ವದ ಅನೇಕ ಸಮಸ್ಯೆಗಳಿಗೆ ಜನ್ಮ ಕೊಡುತ್ತವೆ. ಆದುದರಿಂದ ಈ ಉಪಾಯದಲ್ಲಿ ಅಪಾಯ ಹೆಚ್ಚು. ಜಾತಿ ಪದ್ಧತಿಯ ವೈಜ್ಞಾನಿಕ ಅಭ್ಯಾಸ ಪ್ರೇಮ ವಿವಾಹಕ್ಕೆ ಪೆತ್ರೀತ್ಸಾಹ ಕೊಡಬೇಕೆಂದೇನು ಹೇಳುವುದಿಲ್ಲ. ಆದರೆ, ಅಂತರ್ಜಾತೀಯ ವಿವಾಹಗಳು ಏಕೆ ಹೆಚ್ಚಾಗಿ ಆಗಬೇಕೆಂಬುದನ್ನು ಮಾತ್ರ ಇದು ತೋರಿಸಿ ಕೊಡುತ್ತದೆ.

ಅವೃತ ಬಜಾರ ಪತ್ರಿಕೆಯಲ್ಲಿ ಈ ಬಗೆಗೆ ಜನಸಂಖ್ಯೆಯ ಪ್ರಮಾಣದ ಮೇರೆ ಜಾತಿ ಪದ್ಧತಿಯು ಮಾಡುವ ಪರಿಣಾಮವನ್ನು ವಿವರಿಸುವ ಲೇಖನವೊಂದು ಪ್ರಕಟವಾಗಿದ್ದಿತು—ಅದರ ಪ್ರಕಾರ, ಭಾರತದಲ್ಲಿ ಜಾತಿ ಪದ್ಧತಿಯನ್ನು ಕಟ್ಟುನಿಟ್ಟಾಗಿ ಇನ್ನು ಮುಂದುವರಿಸುತ್ತ ಹೋದರೆ ಜನಸಂಖ್ಯೆಯ ಹ್ರಾಸಪಾದೀತು; ಮತ್ತು ಗಡುತರವಾದ ಸಾಮಾಜಿಕ ಸಮಸ್ಯೆಗಳು ಈ ನಡುವೆ ನಮ್ಮನ್ನು ಬಾಧಿಸಬಹುದು ಎಂದು ತಿಳಿದು ಬರುತ್ತದೆ. ಜನಗಣನೆಯ ಅಂಪೆ ಸಂಖ್ಯೆಗಳಗನುಸಾರವಾಗಿ ಈಗ ಪ್ರತಿ ಸಾವಿರ ತರುಣರಿಗೆ ಒಂಭೈನೂರೈವತ್ತಕ್ಕಿಂತಲೂ ಕಡಿಮೆ ತರುಣಿಯರು ಭಾರತದಲ್ಲಿದ್ದಾರೆ; ಹೆಣ್ಣು ಸಂತಾನವು ಹೀಗೆ ಕಡಿಮೆಯಾಗಿರುವುದಕ್ಕೆ ಜಾತಿ ಪದ್ಧತಿಗೆ ಭಾರತೀಯರು ಕೊಡುತ್ತಿರುವ ಮಹತ್ವವೇ ಕಾರಣವೆಂದು ಜನಗಣನೆಯನ್ನು ಅಭ್ಯಸಿಸಿದ ತಜ್ಞರ ಅಭಿಪ್ರಾಯವಾಗಿದೆ. ಸಗೋತ್ರ ವಿವಾಹ ನಿಷೇಧ ಮತ್ತು ಸ್ವಜಾತಿಯವಿವಾಹದ ಪುರಸ್ಕಾರ ಎಂಬ ಪ್ರಚಲಿತ ಪದ್ಧತಿಯನ್ನಷ್ಟೆ ವರ್ಣವು ಶುದ್ಧವಾಗಿ ಉಳಿಯುವುದೇನೊ ನಿಜ; ಆದರೆ ತತ್ಪರಿಣಾಮವಾಗಿ ಪುರುಷ ಬಾಹುಲ್ಯ ಉಂಟಾಗುತ್ತದೆ. ಕಾಲಾಂತರದಲ್ಲಿ ಮದುವೆಯಾಗಿ ಸಂಸಾರ ಹೂಡಲು ಹೆಣ್ಣುಗಳೇ ಅವರ್ಣದಲ್ಲಿ ದೊರೆಯದೆ ಕುಲ ನಾಶವಾಗುವ ಪ್ರಸಂಗವೂ ಬರುತ್ತದೆ. ನಾವು ಈಗಾಗಲೇ ಈ ಅವಾಯಕರ ಕ್ಷೇತ್ರದಲ್ಲಿ ಪ್ರವೇಶಿಸಿ ಬಿಟ್ಟಾಗಿರುವುದರಿಂದ, ಇನ್ನಾದರೂ ಮಿತ್ರ ಅಂದರೆ ಅಂತರ್ಜಾತೀಯ ವಿವಾಹಕ್ಕೆ ಉತ್ತೇಜನೆಯನ್ನು ಕೊಡಬೇಕೆಂದು ವೈಜ್ಞಾನಿಕ ಅಭ್ಯಾಸ ನಡೆಸಿದವರ ಮತ

ಜಗತ್ತಿನ ಪೈಶಾಲ್ಯದ ಅನುಭವ ನನಗೆ ಹಿಂದಿಗಿಂತ ಹೆಚ್ಚು ಪ್ರಮಾಣದಲ್ಲಿ ಆಗುತ್ತಿರುವುದರಿಂದ ಮತ್ತು ನಾವು ಊರು, ಮನೆ, ಕುಲ ಮತ್ತು ಜಾತಿಗಳ ಆವರಣವನ್ನು ಮೀರಿ, ಹೊರ ಪ್ರಪಂಚದಲ್ಲಿ ಹೆಚ್ಚು ಹೆಚ್ಚಾಗಿ ವ್ಯವಹರಿಸಬೇಕಾಗಿರುವುದರಿಂದ, ವಿವಾಹೇತರ ವಿಷಯಗಳಲ್ಲಿ ಈಗಾಗಲೇ ಜಾತಿ ಪದ್ಧತಿಯ ಕಟ್ಟುನಿಟ್ಟಾದ ನಿಯಮಗಳನ್ನು ಅನಿವಾರ್ಯವಾಗಿ ಮುರಿದು ನಡೆದಿದ್ದೇವೆ. ಬದಲಿಗೆ ಪ್ರಯಾಣಿಸುವ ವೈದಿಕರು ಇಂದು ಕಾಲ್ನಡೆಯಲ್ಲಿ ಹೋಗುವುದಿಲ್ಲ— ಇತರ ಸಾವಿರಾರು ಜಾತಿಯವರಿಂದ ತುಂಬಿದ ರೈಲಿನಲ್ಲಿ ಕುಳಿತೇ ಯಾತ್ರೆ ಮಾಡುತ್ತಾರೆ ಹೋಟೆಲಿನ ಕಾಫಿ ತಿಂಡಿಯನ್ನು ತಿಂದೇ ಹಸಿವು ನೀರಡಿಕೆಗಳನ್ನು ಹಿಂಗಿಸಿಕೊಳ್ಳುತ್ತಾರೆ - ಹಿಂದಿನಿಂದ ಅವರು ಪ್ರಾಯಶ್ಚಿತ್ತ ಕರ್ಮ ಮಾಡಿಕೊಳ್ಳಬಹುದು. ಆದರೆ ಅದಕ್ಕೆ ಮಹತ್ವವಿಲ್ಲ. ಕಾಲ್ನಡೆಯಲ್ಲಿ ಯಾತ್ರೆ ಮಾಡಬಾರದೆಂದು ಯಾರ ನಿರ್ಬಂಧವಿಲ್ಲದಿದ್ದರೂ ಅವರು ರೈಲು ಯಾತ್ರೆಯನ್ನು ಮೆಚ್ಚುವರೇಬುದೇ ಗಮನಿಸ ಬೇಕಾದ ವಿಷಯ. ಇದನ್ನು ನಾವು ಸಹಿಸಿಕೊಂಡಿರಬಹುದಾದರೆ, ಅಂತರ್ಜಾತೀಯ ವಿವಾಹ ವಾಗುವುದರಲ್ಲೂ ತಪ್ಪಿರಲಾರದು ಎಂದು ಹೇಳ ಬೇಕಾಗುತ್ತದೆ. ವಾತಾವರಣ ಮತ್ತು ಪರಿಸ್ಥಿತಿಗಳು ಅಂತರ್ಜಾತೀಯ ವಿವಾಹಕ್ಕೆ ಅನುಕೂಲವಿದ್ದ ಪ್ರಸಂಗಗಳಲ್ಲಿ ಅವುಗಳನ್ನು ನಿಂದಿಸುವುದಕ್ಕಿಂತ ಪುರಸ್ಕರಿಸುವುದೇ ಲೇಸು; ಮತ್ತು ಅದೇ ನ್ಯಾಯ ಸಮ್ಮತ. ಹಿಂದೂ ವಿವಾಹ ಶಾಸನ ಮತ್ತು ವಿಶೇಷ ವಿವಾಹದ ಕಾಯಿದೆಗಳು ಸರಕಾರದ ದೃಷ್ಟಿಯಲ್ಲಿ ಇವುಗಳನ್ನು ಮನ್ನಿಸಿವೆ; ಆದರೆ, ಸರಕಾರಕ್ಕಿಂತ ಸಮಾಜವೇ ಅತಿ ಮುಖ್ಯ ಸಂಸ್ಥೆಯಾಗಿರುವುದರಿಂದ ಅದು ಈ ಶಾಸನಗಳನ್ನು ಪುರಸ್ಕರಿಸದಿದ್ದರೆ ಈ ದಿಸೆಯಲ್ಲಿ ಸಾಕಷ್ಟು ಚಟುವಟಿಕೆ ಕಂಡು ಬರುವುದು ಸಂಶಯ. ಸಮಾಜದ ಧುರೀಣರು ಮತ್ತು ಹಿರಿಯರಾದವರು ಇತ್ತ ಗಮನವೀಯಬೇಕು—ಮತ್ತು ಹೆಣ್ಣು ಸಂತಾನಗಳೇ ಅತಿಯಾಗಿ ಬಿಡುವಷ್ಟು ಪ್ರಮಾಣದಲ್ಲಿಯಲ್ಲವಾದರೂ, ಅಂತರ್ಜಾತೀಯ ವಿವಾಹಗಳನ್ನು ಸ್ವಲ್ಪ ಹೆಚ್ಚು ಸಹನೆಯಿಂದ ಕಂಡು, ಹಾಗೆ ಇಂದಿಗಿಂತ ತುಸು ಅಧಿಕ ಉತ್ತೇಜನೆಯನ್ನು ನೀಡಬೇಕು.

—ಕಾರ್ತಿಕೇಯ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಡಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S. 45/1955.

ವಿಟ್ಲ ಜೋಗೇಶ್ವರ ಮಟ— ವಾದಿ.
ಲಕ್ಷ್ಮಿ ಹೆಂಗಸು ಸಹಾ— ಪ್ರತಿವಾದಿರು
ಪ್ರತಿವಾದಿರು

1, ಲಕ್ಷ್ಮಿ ಹೆಂಗಸು— ರಾಮಕ್ಕೆ ಮಗಳು ಸುಮಾರು 55 ವರ್ಷ ಪ್ರಾಯ. 2, ಸಂಜೀವ ಸೆಟ್ಟಿ-ಸದ್ರಿ 1ನೇ ಲಕ್ಷ್ಮಿ ಹೆಗ್ಗಿನ ಮಗ-ಸುಮಾರು 30 ವರ್ಷ ಪ್ರಾಯ. ಪುತ್ತೂರು ತಾಲೂಕು ವಿಟ್ಲ ಕೃಷ್ಣಾ ಗ್ರಾಮ ಸ್ತರು- ಇ ಪರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ತಿಳಿಯಪಡಿಸುವದೇನೆಂದರೆ:-

ವಾದಿಯು, ನಿಮ್ಮಿಂದ, ಪಾವಾ A ಸೆಡ್ಯುಲು ಆಸ್ತಿ ಬಾಬ್ತು ನಮಗೆ ರೂ. 304-6-7 ಬರಬೇಕಿತ್ತ ಪೈಗೆರೆ ನಿವೃತ್ತಿಗಳ ಕುರಿತು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ಪಾವೆಯು ತಾ. 7-7-1955ಕ್ಕೆ ತಪ್ಪಿ ಇಟ್ಟಿರುತ್ತೆನೆ. ಆ ಕುರಿತು ನಿಮಗೇನಾದರು ಆಕ್ಷೇಪ ಇದ್ದರೆ ಸದ್ರಿ ವ್ಯಾಜ್ಯದ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಸ್ವತಃ ಯಾ ವಕೀಲರ ದ್ವಾರಾ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸತಕ್ಕದ್ದು — ತಪ್ಪಿದ್ರೆ ನಿಮ್ಮನ್ನು ಶಿಸ್ತುಮಾಡಿ ಯುಕ್ತಿಕಂದಂತೆ ತೀರ್ಮಾನಿಸಲಾದೀತು.

M. Sadashiva Rao
Pleader for Piff.

ಪುತ್ತೂರು ತಾ. 20-6-55.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ.. ಇದು ಆವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ

Edited, Printed & Published By K. H. Shetty at the Navayuga Press, Udipi, S. India

M. 3615

ನವಯುಗ

ಸಂಪುಟ ೩೪ | ಉಡುಪಿ, 14—7—1955 | ಸಂಚಿಕೆ ೪೪

VOL. 34 | NO. 44

ಸಾಲಾಝಾರರ ಆಮಿಷ

ಡಾ. ಸಾಲಾಝಾರರು ಕೊಡಮಿಸಿರುವ ಹೊಸ ಘೋಷಣೆಯಂತೆ ವಿದೇಶ ಧೋರಣೆ ಮತ್ತು ಇದೇ ಪೋರ್ಚುಗೀಜ ರಾಷ್ಟ್ರಕ್ಕೆ ಸಂಬಂಧಿಸಿದ ವಿಷಯಗಳಿಗೆ ವಿದೇಯಕಗಳನ್ನು ರಚಿಸುವ ಅಧಿಕಾರ ಲಿಸ್ಬನ ಸರಕಾರವಲ್ಲಿಯೇ ಉಳಿಯುತ್ತವೆ. ಇದರಿಂದ ಗೋವಾಂತಕರ ಯಾವುದೇ ಆಶೆ, ಆಕಾಂಕ್ಷೆಗಳು ನೆರವೇರುವಂತಿಲ್ಲ. ಅವರೀಗ ತಮ್ಮ ಸಂಪೂರ್ಣ ವಿಮೋಚನೆಯ ದಿನ ಸಮೀಪಿಸಿದೆ ಎಂಬುದನ್ನು ಮನಗಂಡಿದ್ದಾರೆ. ಆದುದರಿಂದ ಸುಧಾರಣೆಗೆ ಸಂಬಂಧಿಸಿದ ಘೋಷಣೆಯೊಳಗೆ ಗೃತಿಯನ್ನು ಪರಿಶೀಲಿಸುವುದು ಹುಚ್ಚುತನವಾದೀತು.

—ಡಾ. ಪುಂಡಲೀಕ ಗ್ರಾತೊಂಡೆ

ದಿವಂಗತ ಲೋಕಮಾನ್ಯ ತಿಲಕರ ಜನ್ಮದಿನವಾದ ಆಗೋಸ್ತು ೧೧ನೇ ತಾರೀಕಿನಂದು ಪೋರ್ಚುಗೀಜರ ವಶದಲ್ಲಿರುವ ಭಾರತದ ನೆಲವಾದ ಗೋವೆಯೊಳಗೆ ಸತ್ಯಾಗ್ರಹಿಗಳ ದೊಡ್ಡ ತಂಡವೊಂದು ನುಗ್ಗಲಿದೆ. ಅಂದು ಗೋವೆ, ದೀವ ಮತ್ತು ದಮಣಗಳಲ್ಲಿ ಪೋರ್ಚುಗೀಜ ಸರಕಾರದಿಂದ ಪ್ರೇರಿತ "ಸುಧಾರಣೆ"ಗಳೂ ಜ್ಯಾರಿಗೆ ಬರಲಿವೆ. ಸತ್ಯಾಗ್ರಹಿಗಳು ಗೋವಾಂತಕರ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಲು ಹೋಗುತ್ತಿದ್ದಾರೆ; ಡಾ. ಸಾಲಾಝಾರರು ಗೋವಾಂತಕರಿಗೆ ಕೆಲವು ಚಿಕ್ಕ ಪುಟ್ಟ ರಾಜಕೀಯಾಧಿಕಾರಗಳನ್ನು ನೀಡಿ, ವಿಮೋಚನೆಯ ಹೋರಾಟದಿಂದ ಅವರನ್ನು ಪರಾವೃತ್ತರಾಗಿ ಮಾಡುವ ಆಮಿಷವನ್ನು ಒಡ್ಡಿದ್ದಾರೆ. ಗೋವಾಂತಕರು ಎತ್ತ ಒಲೆಯುವರೆಂಬುದನ್ನು ಜಗತ್ತು ಈ ಸಮಯದಲ್ಲಿ ಕುತೂಹಲದಿಂದ ನಿರೀಕ್ಷಿಸುತ್ತಿದೆ ಎಂದರೆ ತಪ್ಪಾಗದು.

ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳನ್ನು ಕಳೆದ ಮೂವತ್ತು ವರ್ಷಗಳಿಂದ ಗೋವಾಂತಕರ ಎಡೆಬಿಡದ ಆಗ್ರಹವಿದ್ದರೂ ಕೊಡಲೊಪ್ಪದ ಡಾ. ಸಾಲಾಝಾರರ ಸರಕಾರವು ಈಗ ಗೋವಾಂತಕರ ಮೇಲೆ ಅನುಗ್ರಹವನ್ನು ತೋರಿಸುತ್ತಿದೆ! ಇದು ಏಕಾಗಿ ಎಂದು ವಿಚಾರಿಸಿದರೆ, ಗೋವಾಂತಕರು ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟದ ಝಳ ಅವರಿಗೆ ತಾಗಿರಬೇಕೆಂಬ ವಿಷಯ ಹೊಳೆಯುತ್ತದೆ. ಆದರೆ, ಸಾಲಾಝಾರರು ಗೋವಾಂತಕರಿಗೆ ನೀಡುವ ಕೆಲವೇ ಅಧಿಕಾರಗಳು ಅವರನ್ನು ತೃಪ್ತಿಪಡಿಸಲು ಸಾಕಾಗಿವೆಯೆ? ಇಲ್ಲವೆಂದು ರಾಷ್ಟ್ರೀಯ ದೃಷ್ಟಿಕೋಣದ ಗೋವಾಂತಕ ಧುರೀಣರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಸಾಲಾಝಾರರ ಸರಕಾರ ಸತ್ಯಾಗ್ರಹದ ಒತ್ತಡವನ್ನು ಇಳಿಸಬೇಕೆಂಬುದಕ್ಕಾಗಿ ಮತ್ತು ದೂರದೃಷ್ಟಿ ಸಾಕಷ್ಟಿಲ್ಲದ ಸಾಮಾನ್ಯ ಜನರಲ್ಲಿ ಗೊಂದಲವನ್ನು ಹುಟ್ಟಿಸಿ, ವಿಮೋಚನೆಯ ಹೋರಾಟಕ್ಕೆ ಬೆಂಬಲ ಕಡಿಮೆಯಾಗುವಂತೆ ಮಾಡುವುದಕ್ಕಾಗಿ ಈ ತಂತ್ರವನ್ನು ಹೂಡಿದೆ ಎಂದವರ ಸ್ಪಷ್ಟ ಅಭಿಪ್ರಾಯ

ಕಣ್ಣು ಮುಚ್ಚಾಲೆಯ ಈಆಟಕ್ಕೆ ಮರುಳಾಗುವಷ್ಟು ಗೋವಾಂತಕರು ಹೆಡ್ಡರಲ್ಲ, ಅವರ ಮೇಲೆ ಮಂಕು ಬೂದಿಯನ್ನು ಎರಚುವುದು ಸುಲಭದ ಕಾರ್ಯವಲ್ಲ ಎಂದು ಇದರಿಂದ ತಿಳಿದುಕೊಳ್ಳಬಹುದು. ಹಾಗೆಂದು ಎಲ್ಲ ಗೋವಾಂತಕರೂ ಹೀಗೆ ಅಭಿಪ್ರಾಯ ಪಡುವರೆಂದು ನಾವು ಭಾವಿಸುವುದು ಸರಿಯಾಗಲಿಕ್ಕಿಲ್ಲ. ಊರಿದ್ದಲ್ಲಿ ಹೊಲೆಗೇರಿಯೂ ಇದ್ದೇ ತೀರುವಂತೆ, ಗೋವಾಂತಕರಲ್ಲಿಯೂ ಕೆಲವರು ಪೋರ್ಚುಗೀಜರ ಕೈವಾರಿಗಳ ಗಿರಬಹುದು. ಅವರು ತಮ್ಮ ವರ್ಚಸ್ಸನ್ನು ಉಪಯೋಗಿಸಿ ಪೋರ್ಚುಗಾಲಿನ ಸರಕಾರ ಭಾರತದಲ್ಲಿನ ತನ್ನ ವಸಾಹತಿಗೆ ಅನ್ವಯಿಸಲಿರುವ ಸುಧಾರಣೆಯೇ ಸ್ವಾತಂತ್ರ್ಯದಾನವೆಂದು ಅಪಪ್ರಚಾರ ಎನ್ನು ಮಾಡಬಲ್ಲುದು ಇದನ್ನು ವಿರೋಧಿಸದಿದ್ದರೆ, ನಿಜವಾದ, ಸಂಪೂರ್ಣವಾದ ಸ್ವಾತಂತ್ರ್ಯದ ಹೋರಾಟ ತನ್ನ ಶಕ್ತಿಯನ್ನು ಕಳೆದುಕೊಳ್ಳುವ ಭಯವಿದೆ. ಆದುದರಿಂದ ಗೋವಾಂತಕರ ಹೋರಾಟ ಇನ್ನಷ್ಟು ಶಕ್ತಿಯುತವಾಗುವಂತೆ ಪ್ರಯತ್ನಿಸುವುದೇ ಭಾರತೀಯರ ಕರ್ತವ್ಯವಾಗಿದೆ, ಗೋವೆಯ ರಾಷ್ಟ್ರೀಯ ಧುರೀಣರು ಈ ವಿಷಯದಲ್ಲಿ ವಸಾಹತುಗಳೊಳಗಿನ ಜನರನ್ನು ಎಚ್ಚರಿಸಿ, ಜಾಗೃತಗೊಳಿಸುವುದೂ ಅಗತ್ಯವಾಗಿದೆ.

ಸಮಯ ಬಂದಾಗ ಪೋರ್ಚುಗೀಜರೂ ಅವರ ಸರ್ವಾಧಿಕಾರಿಯಂತಿರುವ ಡಾ ಸಾಲಾಝಾರರೂ ಲಾಗ ಹೊಡೆದೇ ತೀರುವರು ಎಂಬುದನ್ನು ಅವರು ಗೋವೆಯ ವಸಾಹತಿಗೆ ಸುಧಾರಣೆಗಳನ್ನು ಅನ್ವಯಿಸಬೇಕೆಂದು ನಿರ್ಧರಿಸಿರುವುದೇ ನಿದರ್ಶನ. ಹೀಗೆ ಮಾಡುವಾಗ ಅವರು ಮುಕ್ತ ಮನಸ್ಸನ್ನೇನೂ ತೋರಿಸಿಲ್ಲ—ಏಕೆಂದರೆ ಜನರ ಕೈಗೆ ಅವರು ಕೊಟ್ಟಿರುವ ಅಧಿಕಾರ ಸ್ವಲ್ಪ ಮಾತ್ರ ತೆರಿಗೆಯ ಹೇರುವಿಕೆ, ವಿದೇಶೀಯರ ಆಗಮನ ಮತ್ತು ನಿರ್ಗಮನಗಳ ನಿಯಂತ್ರಣ, ಬಂದರು ಮತ್ತು ರಸ್ತೆಗಳ ಅಭಿವೃದ್ಧಿ ಇವೇ ಮುಂತಾದ ಮಿತವಾದ ಅಧಿಕಾರ ಈ "ಸುಧಾರಣೆ"ಯಿಂದ ಗೋವಾಂತಕರಿಗೆ ಸಿಗುತ್ತದೆ. ಹಾಗಿದ್ದರೂ ನಿಜವಾಗಿ ಗೋವಾಂತಕರ ಮಾತಿಗೆ ಈ ದಿಶೆಯಲ್ಲಿ ಸಿಗುವ ಬೆಲೆ ಕ್ಷುಲ್ಲಕವಾಗಿದೆ—ಏಕೆಂದರೆ, ಸರಕಾರದಲ್ಲಿ ಜನರಿಂದ ನಿಯುಕ್ತರಾದ ಪ್ರತಿನಿಧಿಗಳು ಅಲ್ಪಸಂಖ್ಯಾಕರಾಗುತ್ತಾರೆ ೨೩ ಜನರ ಶಾಸನ ಸಭೆಯಲ್ಲಿ ನೇರಾಗಿ ಆಯ್ಕೆಯಾಗಿ ಹೊಂದುವವರು ೧೧ ಮಂದಿ ಮಾತ್ರ; ೭ ಮಂದಿಯನ್ನು ದರ್ಮ, ಆಡಳಿತ, ಹಣಕಾಸು ಹಾಗು ಕೃಷಿಸಂಬಂಧ ಪಡೆದ ಸಂಸ್ಥೆಗಳು ಆರಿಸುತ್ತವೆ ಉಳಿದ ಐವರನ್ನು ಗವರ್ನರ ಜನರಲರೇ ನಾಮಕರಣ ಮಾಡುತ್ತಾರೆ. ಹೀಗೆ ನಾಮಕರಣವಾಗುವವರಲ್ಲಿ ಮತ್ತು ಸರಕಾರದ ಕಾರ್ಯಕಾರಿ ಮಂಡಳದಲ್ಲಿ ಸೇನಾಧಿಪತಿ, ಸರಕಾರದ ವಕೀಲ, ಸರಕಾರದ ಮುಖ್ಯ ಕಾರ್ಯದರ್ಶಿ, ಕೋಶಾಧಿಕಾರಿ ಇವರು ಉಲ್ಲೇಖನೀಯ. ಈ ಬಗೆಯ ಸುಧಾರಿತ ಆಡಳಿತವು ಪೋರ್ಚುಗಾಲಿನ ಸಾರ್ವಭೌಮತ್ವವನ್ನು ಮನ್ನಿಸಬೇಕು, ರಾಷ್ಟ್ರೀಯ ಧೋರಣೆಯ ವಿಷಯದಲ್ಲಿ ಲಿಸ್ಬನದ ವಾಣಿಯನ್ನೆ ಗೌರವಿಸಬೇಕು. ವಿದೇಶ ವ್ಯವಹಾರದಲ್ಲಿ ಅದು ಹಸ್ತಕ್ಷೇಪ ಮಾಡಲಾರದು; ಮಾತ್ರವಲ್ಲ, ಪೋರ್ಚುಗಾಲಿನ ಪ್ರಭೃತಿಗಳಿಗೆ ಸರಿಬಾರದ ಯಾವುದೇ ಶಾಸನ ಜ್ಯಾರಿಗೆ ಬರಲಾರದು ಇಂಥ ಸುಧಾರಣೆಯಿಂದ ಗೋವಾಂತರಿಗೆ ಏನು ಲಾಭ?

ಇದನ್ನು ವಿಚಾರಿಸುವುದೇ ಅನಗತ್ಯವೆಂದೂ ಸಂಪೂರ್ಣ ಸ್ವಾತಂತ್ರ್ಯದ ಹೊರತು ಅದಕ್ಕಿಂತ ಕಡಿಮೆಯದೇನೂ ಗೋವಾಂತಕರಿಗೆ ಈಗ ಸಾಲಾಝಾರರಿಂದ ಬೇಕಾಗಿಲ್ಲವೆಂದೂ ರಾಷ್ಟ್ರೀಯ ಧುರೀಣರು ಹೇಳುವುದರಲ್ಲಿ ಔಚಿತ್ಯವಿದೆ. ಹಿಂದೆ ಭಾರತಕ್ಕೆ ಬ್ರಿಟಿಷರು ಸಹ ಇದೇ ಮಾದರಿಯ ಸುಧಾರಣೆಗಳ ಕೊಡುಗೆಗಳನ್ನು ನೀಡಿದ್ದರು; ಆದರೆ ಅವುಗಳಿಂದ ಪ್ರಯೋಜನವಿಲ್ಲವೆಂದು ಮನಗಂಡ ಧುರೀಣರು ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದುವರಿಸಿಯೇ ತೀರಿದರು. ಗೋವಾಂತಕರು ಈಗ ಅಲ್ಪ ಸಂತುಷ್ಟಿಗಳಾಗಬಾರದು. ಪೋರ್ಚುಗಾಲಿನ ಹಿಡಿತ ನಿಧಾನವಾಗಿ ಸಡಿಲಾಗ ತೊಡಗಿದೆ. ಅದು ಪೂರಾ ಕಳಚಿ ಹೋಗುವಂತೆ ನೋಡಬೇಕಾದುದೇ ಗತ್ತುಗಾರಿಕೆಯಲ್ಲವೆ, ಸಿಕ್ಕಿದಷ್ಟೇ ಲಾಭ ಎನ್ನುವ ಮನೋಭಾವವಲ್ಲ ಗೋವಾಂತಕರಲ್ಲಿ ಸುಮಾರು ಅರವತ್ತಮೂರು ಸ್ಟ್ರೈಕ್ಸ್‌ರಿಸ್ಟ್ರಾರೆ—ತವರನ್ನು ಇಷ್ಟರ ವರೆಗೆ ಧರ್ಮದ ಹೆಸರಿನಲ್ಲಿ ಪೋರ್ಚುಗೀಜರು ಮೋಸಗೊಳಿಸಲು ಮತ್ತು ಸತ್ಯಾಗ್ರಹಕ್ಕೆ ಬೆಂಬಲ ಸೂಡುವುದರಿಂದ

(೧೨ನೇ ಪುಟ ನೋಡಿರಿ)

ಸಂಪಾದಕೀಯ ಟಿಪ್ಪಣಿ

ರಂಗಯ್ಯನ ಆಂಗಡಿಯ ಮುಂದೆ ಒಂದು ತಿಂಗಳಿಂದ "ಹೊಸ ಆಡಳಿತ" ಎಂಬ ಫಲಕವನ್ನು ತೂಗಿಸಿದ್ದರು. ಆದರೆ, ಈ ಅವಧಿಯಲ್ಲಿ ಯಾವುದೇ ಬದಲಾವಣೆ ವ್ಯವಹಾರದಲ್ಲಿ ಕಂಡುಬರಲಿಲ್ಲ. ಇದನ್ನು ಗಮನಿಸಿದ ಗಿರಾಕಿಯೊಬ್ಬರು "ಏನು ಸ್ವಾಮಿ, ಹೊಸ ಆಡಳಿತ ಎಂದು ಬರೆದಿದ್ದೀರಲ್ಲಾ, ಅದರ ಗಂಧಗಾಳಿಯೇ ನಮಗೆ ಹತ್ತಲಿಲ್ಲ" ಎಂದು ವಿಚಾರಿಸಿದರು

"ಆಯ್ಯೋ, ನಿಮಗೆ ಇಷ್ಟು ಬೇಗ ಮರೆತು ಹೋಯಿತೆ? ನನ್ನ ಸುದುವೆ ಒಂದು ತಿಂಗಳ ಹಿಂದೆ ನಡೆದದ್ದು ನಿಮಗೆ ಗೊತ್ತಿಲ್ಲವೆ?" ಎಂದು ರಂಗಯ್ಯ ಆಶ್ಚರ್ಯದ ವಿಚಾರಣೆಯನ್ನು ಕೊಟ್ಟ ಗಿರಾಕಿ ತಲೆತೂಗಬೇಕಾಯಿತು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.,

ಸ್ಥಾಪನೆ: ೧೯೨೫ | [ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.

ಆಧಿಕೃತ ಭಂಡವಾಳ	ರೂ 50,00,000	ಕ್ಷೇಮ ನಿಧಿ	ರೂ 13,50,000
ಚಿತ್ತ ಭಂಡವಾಳ	ರೂ.32,11,000	ಠೇವಣಾತಿಗಳು	ರೂ.5,42,37,000
ಚಿತ್ತು ಬಂಡ ಭಂಡವಾಳ	ರೂ.25,52,152	ಜಲಾವಣಿ ಭಂಡವಾಳ	ರೂ 6,58,98,000

[ತಾ. 31—12—1954ರಲ್ಲು]

ನಮ್ಮ ರಾಯಭೇಚೂರ (ಹೈದರಾಬಾದ ಸಂಸ್ಥಾನ) ಶಾಖೆಯು ಶೀಘ್ರದಲ್ಲೇ ತೆರೆಯಲ್ಪಡುವುದು.

ಬ್ಯಾಂಕಿನ 92 ಶಾಖೆಗಳು ಮುಂಬಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿದ್ದು ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ

ಟಿ ಎ. ಪೈ, ಬಿ ಕೋಂ (ಹೊಂ), ಎ ಐ. ಐ ಟಿ, ಎಂ ಎಲ್ ಎ, ಜನರಲ್ ಮೆನೇಜರ್.

ಟಿ ಎಂ ಎ ಪೈ, ಎಂ ಬಿ, ಬಿ ಎಸ್, ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S India

ದಶಮಾಂಶ ಪದ್ಧತಿಯ ನಾಣ್ಯ, ತೂಕ, ಅಳತೆಗಳು

ಸುಲಭ ಹಾಗು ಸುಗಮ ವ್ಯವಹಾರೋದ್ದೇಶದಿಂದ ಪ್ರೇರಿತ ಶಾಸನ

ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ನಾಣ್ಯ ಪದ್ಧತಿಯಲ್ಲಿ ದಶಮಾಂಶ ಕ್ರಮವನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಧೇಯಕವೊಂದು ಚರ್ಚೆಗೆ ಬರಲಿದೆಯೆಂದು ತಿಳಿಯುತ್ತದೆ. ಇದರ ಬೆನ್ನಿಗೆ ತೂಕ ಮತ್ತು ಅಳತೆಗಳಲ್ಲಿ ಸಹ ಮೆಟ್ರಿಕ್ ಪದ್ಧತಿಯನ್ನು ಜ್ಯಾರಿಗೆ ತರುವ ವಿಧೇಯಕ ಮಂಡಿಸಲ್ಪಡಬಹುದೆಂದು ಕೇಳುತ್ತೇವೆ. ವಾಣಿಜ್ಯ ಖಾತೆಯ ಉಪಮಂತ್ರಿಗಳ ಅಧ್ಯಕ್ಷತೆಯಲ್ಲಿ ಈಗಾಗಲೇ ಒಂದು ಸಮಿತಿ ನೇಮಕಗೊಂಡಿದ್ದು ಅದು ತೂಕ ಮತ್ತು ಅಳತೆಗಳಲ್ಲಿ ರಾಷ್ಟ್ರದಾದ್ಯಂತ ಒಂದೇ ಪದ್ಧತಿಯನ್ನು ಬಳಸುವ ಕುರಿತು ಪೂರ್ವಭಾವಿ ಪರಿಶೀಲನೆಗಳನ್ನು ನಡೆಸುತ್ತಿದೆ.

ಸರಕಾರದ ಚಟುವಟಿಕೆಗಳು ಹೀಗಿರುವುದರಿಂದ, ಸಾಮಾನ್ಯ ಜನರು ಈ ಹೊಸ ಸುಧಾರಣೆಯ ಉಪಯುಕ್ತತೆ ಮತ್ತು ಇತರ ಅಂಶಗಳನ್ನು ತಿಳಿದಿರುವುದು ಅಪೇಕ್ಷಣೀಯ. ಇಂದಿನ ನಾಣ್ಯ ಪದ್ಧತಿಯನ್ನು ಪರಿಶೀಲಿಸುವುದಾದರೆ, ಅದು ಕೂಡಿಸುವುದು, ಕಳೆಯುವುದು, ಗುಣಿಸುವುದು ಮುಂತಾದ ಗಣಿತದ ಪ್ರಕಾರಗಳನ್ನು ಮಾಡಲು ಸ್ವಲ್ಪ ಹೆಚ್ಚು ಸಮಯವನ್ನು ತೆಗೆದು ಕೊಳ್ಳುತ್ತದೆಂದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ೨೧೩ ಪೈಗಳಿಗೆ ಎಷ್ಟು ಆಣೆ ಮತ್ತು ರೂಪಾಯಿಯಾಗುವುದೆಂದು ಕೂಡಲೇ ಹೇಳಿಬಿಡುವುದು ಕಷ್ಟ; ಹಾಗೆಯೇ ೪೫೭ ಆಣೆಗಳಿಗೆ ಎಷ್ಟು ರೂಪಾಯಿಯಾಗುವುದೆನ್ನಲೂ ಸುಲಭದಲ್ಲಿ ಸಾಧ್ಯವಿಲ್ಲ. ಹನ್ನೆರಡು ಮತ್ತು ಹದಿನಾರರ ಗುಣಕಗಳು ನಮಗೆ ಗೊತ್ತಿರಬೇಕಾಗುತ್ತದೆ. ಎಲ್ಲರಿಗೂ ತಿಳಿದಿರುವಂತೆ ಈ ಮಗ್ಗಿಯನ್ನು ಕಲಿಯುವುದರಲ್ಲಿ ಮಕ್ಕಳು ಸಹ ಹಿಂದುಳಿಯುತ್ತಾರೆ. ಅವರು ಎರಡು, ಐದು ಮತ್ತು ಹತ್ತರ ಮಗ್ಗಿಯನ್ನು ಕಲಿತಷ್ಟು ಬೇಗ ಇದನ್ನು ಬಾಯಿಪಾಠ ಮಾಡುವುದಿಲ್ಲ.

ದಶಮಾಂಶ ಪದ್ಧತಿಯ ನಾಣ್ಯ ಚಲಾವಣೆಯನ್ನು ಪ್ರಾರಂಭಿಸಿದ ಪಕ್ಷದಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ವಸ್ತುಗಳ ಬೆಲೆ ನಿರ್ಣಯ, ಲೆಕ್ಕ ಪುಸ್ತಕಗಳಲ್ಲಿ ಹಣದ ದಾಖಲೆ ಇತ್ಯಾದಿಗಳನ್ನು ಮಾಡಬೇಕಾದಾಗ ಸಮಯದ ಉಳಿತಾಯವಾಗುವುದಕ್ಕೆ ಸಹಾಯ ಸಿಗುತ್ತದೆ. ಉದಾಹರಣೆಗೆ ೩೫೩ "ಸೆಂಟು"ಗಳೆಂದರೆ ೩೮.೩ ರೂಪಾಯಿಗಳೆಂದು ಸುಲಭದಲ್ಲಿ ನಿರ್ಣಯಿಸಬಹುದು. ಸರಕಾರದ ವಿಧೇಯಕವು ಒಂದು ರೂಪಾಯಿಗೆ ನೂರು ಸೆಂಟುಗಳೆಂದು ಹೇಳುತ್ತದೆ. ಈಗಿನ ಆಣೆ, ಅರ್ಧಾಣೆ, ಪಾವಾಣೆ, ಪೈಗಳ ಬದಲಿಗೆ ಸೆಂಟು ಜ್ಯಾರಿಗೆ ಬರುತ್ತದೆ. "ಸೆಂಟು" ಎಂಬ ಶಬ್ದವು ನಮಗೆ ಹೊಸತಾಗಿದೆ; ಭಾರತೀಯರಿಗೆ ಅದನ್ನು ನಿತ್ಯ ವ್ಯವಹಾರದಲ್ಲಿ ರೂಢಿಸಿಕೊಳ್ಳಲು ಕೆಲವು ವರ್ಷಗಳ ಅವಧಿ ಬೇಕಾದೀತು. ಈಗಿನ ಬೆಲೆಯನ್ನೆ ಸೆಂಟಿಗೆ ಅನ್ವಯಿಸಿದರೆ ನಮ್ಮಲ್ಲಿ ಪ್ರಚಲಿತವಿರುವ "ತಾರ"ಕ್ಕಿಂತ ಅದು ತುಸು ಕಡಿಮೆ ಬೆಲೆಯ ನಾಣ್ಯವಾಗುತ್ತದೆ. ತಾರದ ೧೦೬ ಅಂಶವೇ ಸೆಂಟು.

ಗಣಿತದಲ್ಲಿ ಹತ್ತರ ಗುಣಕಗಳನ್ನು ಸುಲಭ ರೀತಿಯಲ್ಲಿ ಅಳವಡಿಸಿಕೊಳ್ಳುವ ದಶಮಾಂಶ ಪದ್ಧತಿಯನ್ನು ಭಾರತೀಯ ತಜ್ಞರೇ ಜಗತ್ತಿನಲ್ಲಿ ಮೊತ್ತ ಮೊದಲನೆಯ ಸಲ ಜ್ಯಾರಿಗೆ ತಂದರೆಂಬುದನ್ನು ಅಭಿಮಾನದಿಂದ ನಾವಿಲ್ಲಿ ನೆನೆಯಬಹುದು. ಗುಪ್ತರ ಕಾಲದಲ್ಲಿದ್ದ ವರಾಹ ಮಿಹಿರ ಮುಂತಾದ ಗಣಿತ ಪಂಡಿತರು ೧೫೦೦ ವರ್ಷಗಳ ಹಿಂದೆ ಈ ಕ್ರಮವನ್ನು ಕಂಡು ಹಿಡಿದರು. ಅವರೆ ನಮ್ಮ ದೇಶದಲ್ಲಿ ಈ ದಶಮಾಂಶ ಪದ್ಧತಿ ಸಾಕಷ್ಟು ಪ್ರೋತ್ಸಾಹವನ್ನು ಪಡೆಯಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹದಿನೆಂಟನೆಯ ಶತಮಾನದಲ್ಲಿ ದಶಮಾಂಶ ಪದ್ಧತಿಗೆ ಹೊಸ ಚಾಲನೆ ದೊರಕಿತು; ಫ್ರೆಂಚರೇ ಮುಂತಾದವರು ನಾಣ್ಯಗಳಿಂದ ಹಿಡಿದು ತೂಕ ಮತ್ತು ಅಳತೆಗಳ ವರೆಗೆ ದಶಮಾಂಶ ಪದ್ಧತಿಯನ್ನು ಯಶಸ್ವಿಯಾಗಿ ಬಳಸಿಕೊಂಡರು; ಇದರ ಉಪಯುಕ್ತತೆಯು ಬೇರೆ ಅನೇಕ ದೇಶಗಳವರಿಗೂ ಮನವರಿಕೆಯಾಯಿತು. ಭಾರತದಲ್ಲಿಯೂ ಈಚೆಗೆ ಕೆಲವು ವರ್ಷಗಳಿಂದ ದಶಮಾಂಶ ಪದ್ಧತಿಯನ್ನು ಜ್ಯಾರಿಗೆ ತರಬೇಕೆಂಬ ಅಭಿಪ್ರಾಯ ಸಿಘಾನವಾಗಿ ಜನಪ್ರಿಯವಾಗತೊಡಗಿದುದರಿಂದ, ಸರಕಾರ ಈ ದಿಸೆಯಲ್ಲಿ ಹೆಜ್ಜೆ ಮುಂದಿಟ್ಟಿತು.

ನಾಣ್ಯ ಪದ್ಧತಿಯಲ್ಲಿ ಬದಲಾವಣೆ ಮಾಡುವುದರಿಂದ ನಾಗರಿಕರಿಗೆ ತೊಂದರೆಯಾದೀತೆಂಬ ಪ್ರಶ್ನೆ ಇಲ್ಲಿ ಸಹಜವಾಗಿಯೇ ಏಳುತ್ತದೆ. ಇದಕ್ಕೆ "ಇಲ್ಲ" ಎಂಬ ಉತ್ತರ ಕೊಡುವುದಕ್ಕೆ ನಾವು ಹೆಚ್ಚು ವಿಚಾರ ಮಾಡಬೇಕಾಗಿಲ್ಲ. ಭಾರತದಲ್ಲಿ ಹಿಂದೆ ಇದ್ದ ಅನೇಕ ಸಂಸ್ಥಾನಗಳಲ್ಲಿ (ಉದಾ: ಹೈದರಾಬಾದು) ಅವುಗಳದೇ ನಾಣ್ಯ ಚಲಾವಣೆ ಇದ್ದಿತು; ಅದನ್ನು ರದ್ದುಪಡಿಸಿ, ಭಾರತ ಸರಕಾರದ ಅಧಿಕೃತ ನಾಣ್ಯಗಳ ಚಲಾವಣೆಯನ್ನು ಒಂದು ನಿಶ್ಚಿತ ಅವಧಿಯೊಳಗೆ ರೂಢಿಗೊಳಿಸಲು ನಾವು ಶಕ್ತರಾಗಿದ್ದೇವೆ. ಆದುದರಿಂದ ಈಗಿನ ರೂಪಾಯಿ, ಆಣೆ, ಪೈಗಳ ಬದಲಿಗೆ ರೂಪಾಯಿ ಮತ್ತು ಸೆಂಟುಗಳ ಕ್ರಮವನ್ನು ಜ್ಯಾರಿಗೆ ತರುವುದು ಕಷ್ಟದ ಕೆಲಸವಾಗಲಿಕ್ಕಿಲ್ಲ. ಆದರೆ ಒಂದು ಬಗೆಯ ತೊಂದರೆ ಕಂಡು ಬಂದೀತು— ಭಿಕ್ಷುಕರಿಗೆ ಇಷ್ಟರ ವರೆಗೆ ಒಂದು ಪೈಯನ್ನು ಧರ್ಮ ಮಾಡುತ್ತಿದ್ದವರು ಇನ್ನು ಮುಂದೆ ಹೆಚ್ಚು ಕಡಿಮೆ ಪೈಯ ಇಮ್ಮಡಿ ಬೆಲೆ ಇರುವ ಸೆಂಟನ್ನೆ ಕೊಡಬೇಕಾಗುತ್ತದೆ. ಆದರೆ ವಸ್ತುಗಳ ಬೆಲೆಯ ಮೇಲೆ ಹೊಸ ಪದ್ಧತಿಯಿಂದ ಕೆಡುಕಿನ ಪರಿಣಾಮವಾಗಲಾರದು. ಈಗ ಒಂದಾಣೆ ಕೊಡಬೇಕಾದ ವಸ್ತುವಿಗೆ ಮುಂದೆ ಹತ್ತು ಸೆಂಟುಗಳನ್ನು ತೆರಬೇಕಾದೀತೊ ಎಂಬ ಹೆದರಿಕೆ ಕೆಲವರಲ್ಲಿ ವ್ಯಕ್ತವಾಗುತ್ತದೆ; ಹಾಗೇನೂ ಆಗುವುದಿಲ್ಲ; ಬೆಲೆಗಳು ಪ್ರಮಾಣ ಬದ್ಧವಾಗಿ ತಗ್ಗುತ್ತವೆ—ಎಂದು ಭರವಸೆ ಪಡಬಹುದು.

ತೂಕ ಮತ್ತು ಅಳತೆಗಳ ವಿಷಯವನ್ನು ಪರ್ಯಾಲೋಚಿಸುವುದಕ್ಕೆ ಮುಂಚೆ ಮೆಟ್ರಿಕ್ ಪದ್ಧತಿಯಲ್ಲಿ ಅವುಗಳ ವಿವರ ಹೇಗಿದೆ ಎಂದು ತಿಳಿದುಕೊಳ್ಳುವುದು ಯೋಗ್ಯ. ಫ್ರೆಂಚ್ ವಿಜ್ಞಾನಿಗಳು ಧ್ರುವದಿಂದ ಭೂಮಧ್ಯ ರೇಖೆಯ ವರೆಗಿನ ಅಂತರವನ್ನು ಒಂದು ಲಕ್ಷ ಪಾಲು ಮಾಡಿ, ಅದರ ಒಂದು ಪಾಲಿಗೆ ಮೀಟರ್ ಎಂದು ಹೆಸರಿಟ್ಟರು. ಈ ಅಳತೆಯ ನಮ್ಮ ಪದ್ಧತಿಯ ಪ್ರಕಾರ ೨೦° ಸೆಂಟಿಗ್ರೇಡ್ ಉಷ್ಣತೆಯಲ್ಲಿರುವ ಪ್ಲಾಟಿನಂಲೋಹದ ೫೯.೩೭೦೧೫ ಇಂಚುಗಳಷ್ಟು ಉದ್ದದ ಒಂದು ತುಂಡಾಗುತ್ತದೆ. (ಮೀಟರಿನ ಪಕ್ಕದಲ್ಲಿ ಒಂದಂಶದ ಘನವನ್ನು ಲೀಟರ್ ಎಂಬ ಹೆಸರಿನಿಂದ ಧ್ರುವ ಪದಾರ್ಥದ ಅಳತೆಯಾಗಿ ಕರೆಯಲಾಗುತ್ತದೆ. ೪° ಸೆಂಟಿಗ್ರೇಡ್ ಉಷ್ಣತೆಯಲ್ಲಿನ ಒಂದು ಮಿಲಿ ಲೀಟರಿನಷ್ಟು ನೀರಿನ ಭಾರವನ್ನು ಒಂದು ಗ್ರ್ಯಾಂ ಎಂದು ಭಾವಿಸಲಾಗುತ್ತದೆ. ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗಳು ಈ ಮೂಲಗಳನ್ನು ಅವಲಂಬಿಸಿರುತ್ತವೆ.

ಭಾರತದಲ್ಲಿ ಅಳತೆ ಮತ್ತು ತೂಕದ ಪ್ರಮಾಣಗಳು ಒಂದೊಂದು ಕಡೆಯಲ್ಲಿ ಒಂದೊಂದು ತೆರನಾಗಿವೆ. ಈ ವೈವಿಧ್ಯ ಎಷ್ಟು ವ್ಯಾಪಕವಾಗಿದೆಯೆಂದರೆ, ಕೆಲವೊಮ್ಮೆ ಒಂದೇ ಜಿಲ್ಲೆಯಲ್ಲಿ ಬೇರೆ ಬೇರೆ ಪದ್ಧತಿಗಳು ಅನುಸರಿಸಲ್ಪಡುತ್ತಿರುವುದನ್ನು ಕಾಣಬಹುದು. ಈಚೆಗೆ ರಾಷ್ಟ್ರದಲ್ಲಿನ ತೂಕ, ಅಳತೆಗಳ ಮಾದರಿ ಸರ್ವೆಯನ್ನು ನಡೆಸಲಾಯಿತು. ಸುಮಾರು ೧೦೦೦ ಜಿಲ್ಲೆಗಳ ಮಾಹಿತಿಯನ್ನು ಸಂಗ್ರಹಿಸಿದ ಬಳಿಕ ೧೪೩ ಪದ್ಧತಿಯ ತೂಕ ಮತ್ತು ಅಳತೆ ಪ್ರಕಾರಗಳು ಈ ಹಳ್ಳಿಗಳಲ್ಲಿನವೆಂದು ವ್ಯಕ್ತವಾಯಿತು. ಭಾರತದಲ್ಲೆಲ್ಲ ಇಷ್ಟು ಹೆಚ್ಚು ವ್ಯತ್ಯಾಸ ಕಂಡು ಬರುತ್ತದೆನ್ನುವುದರಲ್ಲಿ ಅತಿಶಯೋಕ್ತಿ ಏನೂ ಇರಲಾರದು. ನಮ್ಮಲ್ಲಿಯೇ ಮುಡಿಯೊಂದಕ್ಕೆ ೮೨ ಸೇರಿನಿಂದ ೫೦ ಸೇರುಗಳ ವರೆಗಿನ ಲೆಕ್ಕವಿದೆ; ಮುಡಿಗೆ ಮೂರರ ಕಳಸಿಗೆ ಇದ್ದಂತೆ, ನಾಲ್ಕರದೂ ಇದೆ. ದೇಶದಲ್ಲಿ ನೂರಕ್ಕಿಂತಲೂ ಹೆಚ್ಚು ಬಗೆಯ ಮಣಗಳಿವೆಯೆಂದೂ ಅವುಗಳಿಗನುಸಾರ ಒಂದು ಮಣಕ್ಕೆ ೨೮೦೦ ರಿಂದ ೮೭೫ ತೊಲೆಗಳ ತೂಕವಾಗುವುದೆಂದೂ ತಿಳಿದು ಬರುತ್ತದೆ. ಸರಕಾರದ ಮನ್ನಣೆ ಪಡೆದ ಮಣವು ೩೨೦೦ ತೊಲೆಗೆ ಸಮಾನವಾಗಿದೆ. ಉತ್ತರ ಪ್ರದೇಶದ ಒಂದೇ ಉದಾಹರಣೆಯನ್ನು ಗಮನಿಸಿದರೆ, ಮಣಕ್ಕೆ ಕಾನ್ಪುರದಲ್ಲಿ ೪೮ ಸೇರು, ಮಥುರೆಯಲ್ಲಿ ೪೦ ಸೇರು, ಗೋರಖಪುರದಲ್ಲಿ ೪೨ ೧/೨ ಸೇರು, ಬೇರಿಲಿಯಲ್ಲಿ ೫೦ ಸೇರು ಫೈಜಾಬಾದಿನಲ್ಲಿ ೪೬ ಸೇರು, ಶರಣಪುರದಲ್ಲಿ ೪೩ ೧/೪ ಸೇರು, ಶಹಜಹಾನಪುರದಲ್ಲಿ ೪೭ ೧/೨ ಸೇರು—ಈ ಬಗೆಯ ತೂಕ, ಅಳತೆ ಕಂಡು ಬರುತ್ತದೆ

ಅಳತೆಯಲ್ಲಿ ಬಹಳ ಒರಟು ಪದ್ಧತಿಯನ್ನೆ ಹಳ್ಳಿಗಳಲ್ಲಿ ಬಳಸಲಾಗುತ್ತದೆ. ಮೊಳ, ಮಾರು ಮತ್ತು ಹೆಜ್ಜೆಗಳ ಪದ್ಧತಿಯನ್ನು ಇದಕ್ಕೆ ಉದಾಹರಿಸಬಹುದು. ಸಹಜವಾಗಿ ಈ ಅಳತೆಗಳು ಒಬ್ಬೊಬ್ಬ ವ್ಯಕ್ತಿಯ ಮಟ್ಟಿಗೆ ಒಂದೊಂದು ಬಗೆಯಾಗುತ್ತವೆ. ಅಂಗುಲ ಮತ್ತು ಕೋಲಿನ ಲೆಕ್ಕವೊಂದಿದೆ. ತೂಕದಂತೆ ಇದು ಸಹ ದೇಶಕ್ಕೆಲ್ಲ ಏಕ ಪ್ರಕಾರವಾಗಿಲ್ಲ. ಸಂಶಿಕ್ಷಿತರು ಇಂಚು ಮತ್ತು ಗಜಗಳ, ಮೈಲು, ಫರ್ಲಾಂಗುಗಳ ಅಳತೆಯನ್ನು ಮನ್ನಿಸುತ್ತಿದ್ದರೂ ಹಳ್ಳಿಗರಲ್ಲಿ ಇದಿನ್ನೂ ಜನಪ್ರಿಯವಾಗಿಲ್ಲ. ಆದುದರಿಂದ ದೇಶಕ್ಕೆಲ್ಲ ಒಂದೇ ಬಗೆಯ ನಾಣ್ಯದಂತೆ ತೂಕ ಅಳತೆಗಳೂ ಬೇಕೆಂಬ ಬೇಡಿಕೆಯು ಯೋಗ್ಯವೆಂದು ಒಪ್ಪಲೇಬೇಕಾಗುತ್ತದೆ. ನಮಗೆ ಯಾವ ಬಗೆಯ ತೂಕ, ಅಳತೆಗಳನ್ನು ಉಪಯೋಗಿಸುವುದು ಲಾಭಕರ ಎಂಬ ವಿಷಯದಲ್ಲಿ ಇಷ್ಟರ ವರೆಗೆ ಭಿನ್ನಾಭಿಪ್ರಾಯ ವಿದ್ದಿತು. ಭಾರತದಲ್ಲಿನ ಯಾವುದಾದರೊಂದು ಪದ್ಧತಿಯನ್ನೆ ರಾಷ್ಟ್ರಕ್ಕೆಲ್ಲ ಅನ್ವಯಿಸಬೇಕೇ, ಅಥವಾ ಇಂಗ್ಲಂಡಿನ ರಾತಲು ಮತ್ತು ಇಂಚಿನ ಪದ್ಧತಿಯನ್ನು ಅನುಸರಿಸಬೇಕೇ ಅಥವಾ ಮೆಟ್ರಿಕ್ ಪದ್ಧತಿಯನ್ನು ರೂಢಿಗೆ ತರಬೇಕೇ ಎಂದೆಲ್ಲ ಚರ್ಚೆ ನಡೆಯುತ್ತಿದ್ದಿತು. ಈಗ ಈ ಚರ್ಚೆ ನಿಂತಿದೆ ಎಂದು ಹೇಳಲಿಕ್ಕಾಗದು. ಆದರೆ ಸಾಮಾನ್ಯವಾಗಿ ಮೆಟ್ರಿಕ್ ಪದ್ಧತಿಗೆ ಹೆಚ್ಚಿನ ಜನರ ಬೆಂಬಲವಿದೆಯೆಂದು ಕಂಡುಬಂದಿದೆ.

ಮೆಟ್ರಿಕ್ ಪದ್ಧತಿಯನ್ನು ಅನ್ವಯಿಸಿದರೆ ಕೆಲವೊಂದು ತೊಡಕುಗಳನ್ನು ಇದಿ

(೧೨ನೇ ಪುಟ ನೋಡಿರಿ)

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8
} ವರ್ಷ ಒಂದರ ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ವನ್ಯ ಮೃಗ ಪಕ್ಷಿಗಳ ಸಂರಕ್ಷಣೆಯ ಪ್ರಯತ್ನ

ಪ್ರಾಣಿ ಲೋಕಕ್ಕೆ ಸಹಜೀವನ ತತ್ವದ ಅನ್ವಯ

ವನಮಹೋತ್ಸವದ ಕೊನೆಯ ದಿನವಾದ ಜುಲಾಯಿಯ ೭ನೇ ದಿನಾಂಕವನ್ನು ಈ ಸಲ ಕಾಡು ಪ್ರಾಣಿಗಳ ಯೋಗ್ಯ ಸಂರಕ್ಷಣೆ ಮತ್ತು ಅವುಗಳ ಪೀಳಿಗೆಯ ಅಭಿವೃದ್ಧಿಯ ಕುರಿತು ಸಾರ್ವಜನಿಕರ ಲಕ್ಷ್ಯವನ್ನು ಸೆಳೆಯುವ ಉದ್ದೇಶಕ್ಕಾಗಿ ವಿನಿಯೋಗಿಸಲಾಯಿತು. ಕಾಡುಪ್ರಾಣಿಗಳು ಅರಣ್ಯಗಳಿಲ್ಲದೆ ಬದುಕಲಾರವಾದುದರಿಂದ ಅರಣ್ಯಗಳನ್ನು ಬೆಳೆಸಿಕೊಳ್ಳಿರಿ ಎಂಬ ಚಳವಳಿದ ವಾರದಲ್ಲಿಯೇ ಈ ದಿನವನ್ನು ಸೇರಿಸಿರುವುದು ಉಚಿತವೇ ಸಿಜ ತತ್ವಯುಕ್ತ ದೇಶದ ಅನೇಕ ಕಡೆಗಳಲ್ಲಿ ಸಭೆಗಳೂ ಭಾಷಣಗಳೂ ಜರಗಿದವು. ಮದ್ರಾಸಿನಲ್ಲಿ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟಿಯವರು "ರಾಜಾಜಿ ಭವನ"ದಲ್ಲಿ ಜರಗಿದ ಸಭೆಯನ್ನು ಉದ್ಘಾಟಿಸಿ ಅನೇಕ ಸಲಹೆಗಳನ್ನು ನೀಡಿದರು. "ವೃಗ ವಿಜ್ಞಾನವು ಮನುಷ್ಯ ಜೀವನದಲ್ಲಿ ಇತರ ಪ್ರಾಣಿಗಳು ವಹಿಸುವ ಪಾತ್ರದ ವಿವರವಾದ ವರ್ಣನೆಗಳನ್ನು ಮಾಡುತ್ತದೆ. ಮನುಷ್ಯನು ಇತರ ನೂರಾರು ಸಸ್ತನಿಗಳಂತೆಯೇ ಒಂದು ಸಸ್ತನಿ ಜಾತಿ; ಉತ್ಕ್ರಾಂತಿಯ ಘಟ್ಟದಲ್ಲಿ ಅವನೇ ಇಂದಿನ ಮೇಲಿನ ವರ್ಗ. ವಿಜ್ಞಾನವು ನಮ್ಮ ಪ್ರಾಣಿ ಲೋಕದ ತಿಳಿವಳಿಕೆಯನ್ನು ತುಂಬ ಹೆಚ್ಚಿಸಿದೆ. ಈ ಪರಿಜ್ಞಾನವು ಪ್ರಾಣಿಗಳ ಕಡೆಗೆ ನಮ್ಮಲ್ಲಿ ಅಧಿಕ ಸಹಾನುಭೂತಿಯನ್ನು ಹುಟ್ಟಿಸಬೇಕು" ಎಂದು ಮಾನ್ಯ ಮಂತ್ರಿಗಳು ಅಭಿಪ್ರಾಯಪಟ್ಟರು.

ತಮ್ಮ ಭಾಷಣದ ವೇಳೆ ಅವರು ಬೇರೆ ಕೆಲವು ವಿಚಾರಗಳನ್ನೂ ಪ್ರಕಟಿಸಿದರು. ಮದ್ರಾಸು ಸರಕಾರದವರು ನೀಲಗಿರಿ ಜಿಲ್ಲೆಯಲ್ಲಿ ಈಗ ಇರುವ ಮುದುಮಲೆಯ ಕಾಡು ಪ್ರಾಣಿಗಳ ನಿವಾಸವಲಯವನ್ನು ರಾಷ್ಟ್ರೀಯ ವನ್ಯ ಮೃಗ ಕೇಂದ್ರವಾಗಿ ರೂಪಿಸಲಿರುವರೆಂದು ಅವರು ತಿಳಿಸಿದರು. ಇದು ೧೫೦ ಚದರ ಮೈಲು ವಿಸ್ತೀರ್ಣದ ಕ್ಷೇತ್ರವಾಗುತ್ತದೆ. ಆನೆಗಳ ಮೇಲೆ ಕುಳಿತುಕೊಂಡು ವನ್ಯ ಮೃಗಗಳ ಜೀವನವನ್ನು ಬಹಳ ಹತ್ತಿರದಿಂದ ಸಂದರ್ಶಕರು ಇಲ್ಲಿ ಅವಲೋಕಿಸಬಲ್ಲರು. ಅವರಿಗೆ ಎಲ್ಲ ತರದ ಸೌಲಭ್ಯಗಳನ್ನೂ ಒದಗಿಸಿ ಕೊಡಲು ಸರಕಾರ ನೋಡುತ್ತದೆ. ಇದಲ್ಲದೆ ಚೆಂಗಲ್ಪೇಟೆ ಜಿಲ್ಲೆಯಲ್ಲೊಂದು ಪಕ್ಷಿಗಳ ಆವಾಸ ಸ್ಥಾನವನ್ನು ರೂಪಿಸುವ ವಿಚಾರವು ಸರಕಾರದ ಪರಿಶೀಲನೆಯಲ್ಲಿದೆ. ಇದೇ ಮೇ ತಿಂಗಳಲ್ಲಿ ಮದ್ರಾಸಿನಲ್ಲಿ ಸೇರಿದ್ದ ಅಧಿಕಾರಿಗಳ ಸಭೆಯೊಂದು ವೃಗಾಲಯಗಳ ಅಭಿವೃದ್ಧಿಯ ಕುರಿತು ತಕ್ಕ ಕ್ರಮಗಳನ್ನು ಕ್ಷಿಪ್ರದಲ್ಲಿ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿರುತ್ತದೆ. ಇನ್ನೆಲ್ಲದರ ಪರಿಣಾಮವಾಗಿ ರಾಜ್ಯದಲ್ಲಿ ವನ್ಯ ಮೃಗಗಳಿಂದಲೂ ಪಕ್ಷಿ ಸಂಕುಲದಿಂದಲೂ ಶೋಭಿಸುವ ಸಸ್ಯ ಶ್ಯಾಮಲವಾದ ಪ್ರದೇಶ ಹೆಚ್ಚಿಕೊಳ್ಳುವುದೆಂದು ನಿರೀಕ್ಷಿಸಬಹುದು.

ಮಾನ್ಯ ಮಂತ್ರಿ ಶ್ರೀ ಶೆಟ್ಟರು ವನ್ಯ ಮೃಗಗಳ ಅಭಿವೃದ್ಧಿಯಿಂದ ಕೃಷಿಗೆ ತೊಂದರೆಯಾಗುವುದೆಂಬ ಹೆದರಿಕೆಯನ್ನು ರೈತರು ವ್ಯಕ್ತಪಡಿಸಬೇಕಾಗಿಲ್ಲ ಎಂದರು. ವನ್ಯ ಮೃಗಗಳ ಜೋಪಾಸನೆ ಮಾಡುವ ಕೇಂದ್ರಗಳು ಕೃಷಿ ಪ್ರದೇಶಗಳಿಂದ ದೂರವಿರುತ್ತವೆಯೆಂದೂ ಅಗತ್ಯದ ಪ್ರಸಂಗಗಳಲ್ಲಿ ಕೋವಿಯನ್ನು ಇಟ್ಟುಕೊಳ್ಳಲು ಅನುಮತಿ ನೀಡಲಾಗುವುದೆಂದೂ ಆದರೆ ಈ ಕೋವಿಯ ಬಲದಿಂದ ತಮ್ಮ ಅಸ್ತಿತ್ವ ನಾಶದ ಭಯವಿರುವ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಕೊಲ್ಲುವುದು ಮಾತ್ರವಿಷಿದ್ಧವೆಂದೂ ಅವರುಹೇಳಿದರು. ಹೆಣ್ಣು ಜಾತಿಯನ್ನೂ ವೃದ್ಧಾವಸ್ಥೆಯನ್ನು ಮುಟ್ಟಿರದ ಗಂಡುಗಳನ್ನೂ ಗುಂಡಿಕ್ಕಿ ಕೊಲ್ಲುವುದು ಇಷ್ಟವಲ್ಲ ಎಂದೆನರು ತಿಳಿಸಿದರು. ಸಾರ್ವಜನಿಕರ ಸಹಕಾರವನ್ನು ಅವರು ಇದಕ್ಕಾಗಿ ಕೋರಿದರಲ್ಲದೆ, ಪ್ರಕೃತಿ ಪ್ರೇಮವನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕೆಂದು ವಿನಂತಿಸಿದರು. ರಾತ್ರಿಯಲ್ಲಿ ಜೀಪು ಕಾರುಗಳನ್ನೇರಿಕೊಂಡು ಕಾಡುಗಳನ್ನು ಪ್ರವೇಶಿಸಿ ಬಂದೂಕಿನಿಂದ ಗುರಿ ಹಿಡಿದು ಕೊಲ್ಲುವ ಮೂಲಕ ಕಾಡು ಪ್ರಾಣಿಗಳ ನಾಶವನ್ನು ಮಾಡಲಾಗುತ್ತದೆ. ಆದರೆ ಆಫ್ರಿಕ್ಕ,ಆಫ್ರಿಕ ಮುಂತಾದ ರಾಷ್ಟ್ರಗಳಲ್ಲಿ ವನ್ಯ ಮೃಗಗಳನ್ನು ಯೋಗ್ಯ ರೀತಿಯಲ್ಲಿ ಸಂರಕ್ಷಿಸುವುದಕ್ಕೆ ಮಹತ್ವ ಕೊಡಲಾಗುತ್ತದೆ. ಕೇವಲ ಶಾಸನ ಬಲದಿಂದ ವೃಗಪಕ್ಷಿಗಳ ಕಳ್ಳ ಬೇಟೆಯನ್ನು ನಿಲ್ಲಿಸುವುದು ಸಾಧ್ಯವಿಲ್ಲ—ಜನರೇ ತಮ್ಮ ಹೊಣೆಗಾರಿಕೆಯನ್ನು ಮನಗಾಣಬೇಕು ಎಂದವರು ನುಡಿದರು.

ಮನ್ದು ಗುಂಡುಗಳನ್ನು ಉಪಯೋಗಿಸಲು ಮನುಷ್ಯನು ಕಲಿತ ಗಳಿಗೆಯಿಂದ ವನ್ಯ ವೃಗ ಪಕ್ಷಿಗಳು ತಮ್ಮ ರಕ್ಷಣೆಯನ್ನು ತಾವು ಮಾಡಿಕೊಳ್ಳಲಾರದ ವಿಚಿತ್ರ ವಾತಾವರಣವು ಏರ್ಪಟ್ಟಿರುತ್ತದೆ. ಜನಸಂಖ್ಯೆ ಹೆಚ್ಚಿದಷ್ಟಾಗೆಲ್ಲ ಕಾಡುಗಳನ್ನು ಕಡಿದು, ಅಲ್ಲಿ ನೆಲೆಸಿನಲ್ಲುವ ಪ್ರವೃತ್ತಿ ಮಾನವನಲ್ಲಿ ಹುಟ್ಟಿರುವುದರಿಂದ ವೃಗ ಪಕ್ಷಿಗಳಿಗೆ ನಿರ್ಭಯವಾದ ಆಶ್ರಯ ಸ್ಥಾನ ದುರ್ಲಭವಾಗಿರುತ್ತದೆ. ಪರಿಣಾಮವಾಗಿ ಖಡ್ಗಮೃಗ, ಸಿಂಹ, ಕಸ್ತೂರಿ ಮೃಗ, ಕಾಡು ಕತ್ತೆ, ಹಿಮಚಿರತೆ ಇತ್ಯಾದಿ ಪ್ರಾಣಿಗಳ ಸಂತಾನ ಬಹಳವೇಗದಲ್ಲಿ ಕ್ಷೀಣಿಸುತ್ತಿದೆ. ಸಿಂಹಗಳು ಕಾಥಿಯಾವಾಡದ ಗಿರ್ ಅರಣ್ಯಗಳಲ್ಲಿ ಮಾತ್ರ ಈಗ ನೋಡಸಿಗುತ್ತವೆ. ಅಲ್ಲಿರುವುದಾದರೂ ಕೇವಲ ೩೦೦ ಸಿಂಹಗಳು—ಹಿಂದೊಂದು ಕಾಲದಲ್ಲಿ ನಮ್ಮ ದೇಶದಲ್ಲಿ ಸಿಂಹಗಳು ಎಲ್ಲಿ ನೋಡಿದರಲ್ಲಿ ಕಂಡು ಬರುತ್ತಿದ್ದುವು. ವೃಗರಾಜನೆಂದು ನಮ್ಮವರು ಸಿಂಹವನ್ನು ಪೂಜಿಸುತ್ತಿದ್ದರಲ್ಲದೆ ಪುರುಷ ಸಿಂಹ, ಸಿಂಹಾಸನ ಎಂದು ಮುಂತಾಗಿ ಗೌರವದ ಸಂಕೇತದಿಂದ ಸಿಂಹದ ಹೆಸರನ್ನು ಉಚ್ಚರಿಸುತ್ತಿದ್ದರು. ಈಗ ಅಳಿವಿನ ಕೊನೆಯ ಮೆಟ್ಟಲಿನಲ್ಲಿರುವ ಸಿಂಹದ ಪೀಳಿಗೆಯನ್ನು ಉಳಿಸುವ ಹಂಚಿಕೆಯೊಂದು ನಡೆದಿದೆ. ವಿಂಧ್ಯ ಪ್ರದೇಶದ ಟೀಕಂಗರ್ ಅರಣ್ಯದಲ್ಲಿ ಒಂದು ಗಂಡು, ಮತ್ತೊಂದು ಹೆಣ್ಣು ಸಿಂಹವನ್ನು ತಂದು ಬಿಟ್ಟು ಅಲ್ಲಿ ಅವುಗಳ ಸಂತಾನಾಭಿವೃದ್ಧಿಯಾಗುವುದಕ್ಕೆ ಅವಕಾಶ ಮಾಡಿಕೊಡುವ ವಿಚಾರ ಸರಕಾರಕ್ಕಿದೆ. ನೂತನ ವಾತಾವರಣಕ್ಕೆ ಈ ಸಿಂಹಗಳು ಹೊಂದಿಕೊಂಡರೆ, ಇಂಥ ಇತರ ಸಾಹಸವನ್ನು ಕೈಗೊಳ್ಳಲು ಸರಕಾರ ಮುಂದಾದೀತು.

ಖಡ್ಗ ಮೃಗಗಳು ಅಸ್ಸಾಮಿನಲ್ಲಿ ಮಾತ್ರ ನೋಡ ಸಿಗುತ್ತವೆ. ಅಲ್ಲಿ ಸುಮಾರು ೩೦೦ ಖಡ್ಗ ಮೃಗಗಳಿರಬಹುದೆಂದು ಅಂದಾಜು. ಅಸ್ಸಾಮು ರಾಜ್ಯದ ಅಲಂಕಾರವೇ ಖಡ್ಗಮೃಗ— ಹಿಂದೆ ಜನರು ಈ ಪ್ರಾಣಿಯನ್ನು ಉಳುವುದಕ್ಕೆ ಉಪಯೋಗಿಸುವಷ್ಟು ಮುಂದಾಗಿದ್ದರು: ರಣರಂಗಗಳಲ್ಲಿ ಸಹ ಈ ಮೃಗವನ್ನು ಉಪಯೋಗಿಸುತ್ತಿದ್ದರು. ಕೊಂಬು, ಖಡ್ಗ ದಂತಿರುವ ಕಾಡುಹಂದಿಗಿರುವಂತೆ ಚೂಪಾದ ಮೂತಿ, ಅದರ ತುದಿಯಲ್ಲಿ ಮೊಲಕ್ಕಿರುವಂತೆ ಜಿಗುಟು, ಅದರೆ ದೊಡ್ಡದಾದ ಕಿವಿ, ತುಕ್ಕಿನ ಬಣ್ಣದ ಅಭೇದ್ಯ ರಕ್ಷಾಕವಚಗಳಿರುವ ಈ ಪ್ರಾಣಿಯನ್ನು ಅಸ್ಸಾಮಿನ ಶಿವಸಾಗರ ಜಿಲ್ಲೆಯ ಕಾಜಿರಂಗದ ಆಶ್ರಯ ಸ್ಥಾನದಲ್ಲಿ ಆನೆಗಳ ಮೇಲೆ ವಿಹರಿಸುತ್ತಾ ಸಂದರ್ಶಕರು ನೋಡಬಲ್ಲರು. ಅಸ್ಸಾಮಿನಲ್ಲಿ ನಾಲ್ಕು ಪ್ರಮುಖ ವನ್ಯ ಮೃಗ ಕೇಂದ್ರಗಳಿದ್ದು ಅವುಗಳ ಒಟ್ಟು ವಿಸ್ತೀರ್ಣ ೬೬೪ ಚದರ ಮೈಲು. ಆಫ್ರಿಕಾ ಖಂಡದ ಮೂರ್ವಕ್ಕೆ ಜಗತ್ತಿನ ಯಾವ ಭಾಗದಲ್ಲಿಯೂ ಇಲ್ಲಿರುವಷ್ಟು ಜಾತಿಯ ವನ್ಯ ಮೃಗಗಳಾಗಲೀ ಪಕ್ಷಿಗಳಾಗಲೀ ಉರಗಗಳಾಗಲೀ ಇರುವುದಿಲ್ಲ. ಕ್ಷೀಣದಷ್ಟಿ ಸಂತಾನ ನಶಿಸುತ್ತಿರುವ ಕಾಳಿಂಗ ಸರ್ಪ, ಕೊಂಬು ಕೊಕ್ಕಿನ ಪಕ್ಷಿ ಹೊಳು ಜಿಂಕೆ ಇತ್ಯಾದಿಗಳು ಈಗ ಅಸ್ಸಾಮಿನ ಗೊಂಡಾರಣ್ಯಗಳಲ್ಲಿ ಮಾತ್ರ ನೋಡ ಸಿಗುತ್ತವೆ ಹುಲಿಗಳು ಈ ರಾಜ್ಯದಲ್ಲಿ ನಮ್ಮಲ್ಲಿಯ ನಾಯಿಗಳನ್ನೇ ನಿರ್ಭಯವಾಗಿ ರಸ್ತೆಗಳಲ್ಲಿ ತಿರುಗುತ್ತವೆ. ಜನರು ಅವುಗಳನ್ನು ಅಲಕ್ಷ್ಯದಿಂದ ನೋಡುವುದೇ ಅಧಿಕ. ಬೇಟೆಯಾಡುವುದು ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ.

ಉತ್ತರ ಪ್ರದೇಶ, ಮುಂಬಯಿ, ಮದ್ರಾಸು, ಬಂಗಾಳ, ಅಸ್ಸಾಂ, ಮಧ್ಯ ಪ್ರದೇಶ, ಹೈದರಾಬಾದು, ಆಂಧ್ರ ಇತ್ಯಾದಿ ಹೆಚ್ಚಿನ ರಾಜ್ಯಗಳಲ್ಲಿ ಈಗ ವನ್ಯ ಮೃಗಗಳ ಮತ್ತು ಪಕ್ಷಿಗಳ ಸಂರಕ್ಷಣೆಗೆ ವಿಶೇಷ ಗಮನವನ್ನು ನೀಡಲಾಗುತ್ತದೆ. ಸಸ್ಯ ಸಂಕುಲಗಳಾದರೆ ನಮಗೆ ಉತ್ತಮ ಔಷಧಗಳನ್ನೂ ಮರಮಟ್ಟುಗಳನ್ನೂ ಒದಗಿಸುತ್ತವೆ ಮೃಗಗಳು ಮತ್ತು ಪಕ್ಷಿಗಳಿಂದ ನಮಗೇನು ಪ್ರಯೋಜನ? ಎಂದು ಕೇಳುವವರುಂಟು. ಅವರೆ ಪ್ರಕೃತಿಯ ಸೃಷ್ಟಿಯಲ್ಲಿ ಅನಾವಶ್ಯಕವಾದದ್ದು, ಮತ್ತು ಉದ್ದೇಶ ರಹಿತವಾದದ್ದು ಯಾವುದೂ ಇಲ್ಲವೆಂಬ ಹಿರಿಯರ ಮಾತನ್ನು ನಾವು ಮನಗಾಣಬೇಕು. ಉರಗಗಳಿಲ್ಲದಿದ್ದರೆ ರೈತರಿ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. No. 29/1955.

ಯಮುನ ಅಮ್ಮ. ಕೆ. ಶಂಕರನಾರಾಯಣ ಭಟ್ಟರ ವಿಧವೆ, ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಳ್ಳಿಯಲ್ಲಿರುವವರು — ಅರ್ಜಿದಾರಳು

ಮತ್ತು

ಆನಂದ ರಾಮ ಭಟ್ಟ – ಶಂಬರನಾರಾಯಣ ಭಟ್ಟರ ಮಗ, ಸದ್ರಿ ತೀರ್ಥಳ್ಳಿಯಲ್ಲಿರುವವ ಎದ್ರಿ

ಕುಂದಾಪುರ ಕಸಬಾ ಗ್ರಾಮದಲ್ಲಿ ತಾ. 8-1-1950ರಲ್ಲಿ ಮೃತರಾದ ಅರ್ಜಿದಾರಳ ಮಗ ವ,ಎದ್ರಿಯ ಅಂಣ್ಣ ಸ್ರೀನಿವಾಸ ಭಟ್ಟಗೆ ಹೊರಗಿನಿಂದ ಬರತಕ್ಕ ಹಣಗಳನ್ನು ವಸೂಲುಮಾಡಲಿಕ್ಕೆ ತಾನು ಹಕ್ಕುದಾರನೆಂತಲೂ ಆ ಬಗ್ಗೆ ತನಗೆ ಪಾರಿಸಿ ಸರ್ಟಿಫಿಕೇಟು ಮಾಡಿಸಬೇಕಾಗಿ ಅರ್ಜಿದಾರಳು ಕೊಟ್ಟ ಅರ್ಜಿಯ ಮೇಲೆ ಕಾಣಿಸಿದ ಕೋರ್ಟನಲ್ಲಿ ತಾ 25-7-1955ಕ್ಕೆ ತನ್ನಿಗೆಯುದೋಣಾಗಿಯದೆ. ಈ ಬಾಬದಿನಲ್ಲಿ ಆಕ್ಷೇಪ ಯುದ್ದವರು ಸದ್ರಿ ದಿವ್ಸ ಹಗಲು 10 ಘಂಟೆಗೆ ಕೋರ್ಟುಮುಂದೆ ಹಾಜ್ರಾಗಿ ಜಾಹಿರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

G. Sanjiva Rao B.A.L.L.B.
Vakil for Petitioner.

ಕುಂದಾಪುರ ತಾ. 8-7-55

ನಮ್ಮ ಹೊಸ ಯೋಜನೆ:

ಥ್ರಿಫ್ಟ್ ಡಿಪೋಜಿಟ್ ಖಾತೆ:

ಎಲ್ಲರಿಗೂ ಅನುಕೂಲವಾಗುವ ಉಳಿತಾಯ ಯೋಜನೆ.
ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿ.
ಧಾರಾಳವಾದ ಸವಲತ್ತು.

ಇಂದೇ ಥ್ರಿಫ್ಟ್ ಡಿಪೋಜಿಟ್ ಖಾತೆಯನ್ನು ಪ್ರಾರಂಭಿಸಿ ನಿಮ್ಮ ಉಳಿತಾಯದಲ್ಲಿ ಅಧಿಕ ಮುನಾಫೆಯನ್ನು ಪಡೆಯಿರಿ.

ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ:

CANARA BANK, LTD.

ಕೆನರಾ ಬ್ಯಾಂಕ್, ಲಿಮಿಟೆಡ್.

(ಸ್ಥಾಪನೆ: 1906)

1956: ನಮ್ಮ ಸುವರ್ಣಮಹೋತ್ಸವದ ವರ್ಷ.

ಗೆ ಇಲಿಗಳಿಂದ ಎಷ್ಟು ಹಾನಿಯಾಗುತ್ತದೆ ಎಂಬುದನ್ನು ವರ್ಣಿಸುವ ಆವಶ್ಯಕತೆ ಇಲ್ಲ. ವಿಷಾರಿ ಸರ್ಪಗಳು ಹೀಗೆ ಪ್ರಯೋಜನ ಮಾಡುತ್ತಿದ್ದರೂ ಅವುಗಳ ಸಂಖ್ಯಾ ಪ್ರಮಾಣ ಹೆಚ್ಚಿಕೊಳ್ಳದಂತೆ ದೇವರು ಗಿಡುಗನನ್ನು ಸೃಷ್ಟಿಸಿದ್ದಾನೆ! ಜಿಂಕೆಯು ಕೋಡು ಎಷ್ಟೋ ಔಷಧಗಳಲ್ಲಿ ಉಪಯೋಗಿಸಲ್ಪಡುತ್ತದೆ; ಆದರೆ ರೈತರಿಗೆ ಅವುಗಳು ಹೆಚ್ಚು ಹಿಂಸೆ ಕೊಡದಂತೆ ಹುಲಿ ಮುಂತಾದವುಗಳಿಗೂ ಪ್ರಕೃತಿ ಆಶ್ರಯ ವಿತ್ತಿರುತ್ತದೆ. ಆದುದರಿಂದ ನಾವು ಅನಾವಶ್ಯಕವಾಗಿ ಅವುಗಳನ್ನು ಬೇಟೆಯಾಡುವುದು ಸಲ್ಲದು. ಮನುಷ್ಯನು ಮೊದಲು ಬೇಟೆಗಾರನಾಗಿದ್ದನೆಂಬುದು ನಿಜ. ಆದರೆ ನಮ್ಮ ದೇಶದಲ್ಲಿ ಹೆಚ್ಚಿನವರು ಸಸ್ಯಾಹಾರಿಗಳಾಗಿದ್ದಾರೆ; ಮಾಂಸಾಹಾರವೇ ಅಧಿಕ ರೂಢಿಯಲ್ಲಿರುವ ದೇಶಗಳಲ್ಲಿ ಸಹ ಮೃಗಪಕ್ಷಿಗಳ ಯೋಗ್ಯ ಅಭಿವೃದ್ಧಿಗೆ ಗಮನಕೊಡುತ್ತಿರುವಾಗ ನಾವು ಕಳ್ಳ ಬೇಟೆಯ "ಆನಂದ"ಕ್ಕೆ ಮನಸ್ಸು ಮಾಡುವುದು ಯೋಗ್ಯವಾಗಲಾರದು.

ಬೇಟೆಗಾಗಿಯೇ ಕೆಲವು ಸ್ಥಳಗಳನ್ನು ಸರಕಾರ ಮೀಸಲಿರಿಸುವುದುಂಟು—ಆದರೆ "ಪಂಚಶೀಲ" ಗಳಲ್ಲಿ ಪ್ರಥಮದ ಎರಡು ಸೂತ್ರಗಳನ್ನು ವನ್ಯ ಮೃಗಪಕ್ಷಿಗಳ ಕ್ಷೇತ್ರಕ್ಕೆ ಅನ್ವಯಿಸುವುದು ಅವೇಕ್ಷಣೀಯ. ಇನ್ನೊಬ್ಬರ ಅಧಿಕಾರ ವಲಯದಲ್ಲಿ ಹಸ್ತಕ್ಷೇಪ ಮಾಡದಿರುವುದು ಮತ್ತು ಶಾಂತಿಯುತ ಸಹಜೀವನದ ತತ್ವವನ್ನು ಪರಸ್ಪರಿಸುವುದು ಎಂಬವೇ ಆ ಸೂತ್ರಗಳು. ನಾವು ಕಾಡುಗಳನ್ನು ಕಡಿದು, ಮೃಗಪಕ್ಷಿಗಳ ರಾಜ್ಯದ ಮೇಲೆ ಆಕ್ರಮಣ ನಡೆಸಬಾರದು. ಅವುಗಳೊಡನೆ ಶಾಂತಿಯಿಂದ ಬಾಳಲು ಕಲಿಯಬೇಕು. ಇದಕ್ಕೋಸ್ಕರ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಕಾಡು ಪ್ರಾಣಿಗಳ ಜೀವನದಲ್ಲಿ ಆಸಕ್ತಿಯನ್ನು ಹುಟ್ಟಿಸಬಲ್ಲ ಪಾಠಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವುದು, ಮೃಗ, ಪಕ್ಷಿ, ಉರಗಗಳ ಸಂಗ್ರಹಾಲಯಗಳನ್ನು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ತೆರೆಯುವುದು. ಚಲಚ್ಚಿತ್ರಗಳ ಮೂಲಕ ಅರಣ್ಯದೊಳಗಿನ ಶೋಷಾಂಚಕ ಜೀವನದ ಕಲ್ಪನೆಯನ್ನು ಸಾರ್ವಜನಿಕರಿಗೆ ಮಾಡಿಸುವುದು, ಉತ್ತಮ ಗ್ರಂಥಗಳನ್ನು ಈ ವಿಷಯದ ಕುರಿತು ಬರೆಸಿ ಪ್ರಕಟಿಸುವುದು, ಅಂಚೆ ಚೀಟುಗಳಲ್ಲಿ ಮೃಗ ಪಕ್ಷಿಗಳ ಆಕರ್ಷಕ ಚಿತ್ರಗಳನ್ನು ಮುದ್ರಿಸುವುದು, ಹತ್ತಿರದ ಅರಣ್ಯ ಕ್ಷೇತ್ರಗಳಿಗೆ ಜನರನ್ನು ಬರಮಾಡಿಕೊಂಡು, ಮರಗಳ ಮೇಲೆ ಅಟ್ಟಿಗೆಗಳನ್ನು ಕಟ್ಟಿ. ಅಲ್ಲಿಂದ ಪ್ರಾಣಿ ಹಾಗು ಪಕ್ಷಿಜೀವನದ ಪ್ರತ್ಯಕ್ಷಾನುಭವವನ್ನು ಮಾಡಿಸಿಕೊಡುವುದು—ಇತ್ಯಾದಿ ಚಟುವಟಿಕೆಗಳು ವನ್ಯ ಮೃಗಗಳ ದಿನಾಚರಣೆಯ ಉದ್ದೇಶವನ್ನು ಸಫಲಗೊಳಿಸುತ್ತವೆ. ಮನುಷ್ಯನನ್ನು ಕೊಂದರೆ ಮಾತ್ರ ಶಿಕ್ಷಿಸುವ ನಮ್ಮ ನ್ಯಾಯಬುದ್ಧಿ ಪಶುಪಕ್ಷಿಗಳ ಕ್ಷೇತ್ರಕ್ಕೂ ವಿಸ್ತರಿಸಲಿ; ಹಾಗೆ ನಿಸರ್ಗದ ಶೋಭೆಯನ್ನು ಸಂವರ್ಧಿಸಲು ನೆರವಾಗಲಿ!

ಚಂದಾಹಣ ಬಾಕಿ ಇರುವವರು ದಯವಾಡಿ ಕಳುಹಿಸಿ ಕೊಡಿರಿ.

ಎರಡನೆಯ ಯೋಜನೆಯ ರೂಪರೇಖೆ

ಪ್ರಮುಖ ಕ್ಷೇತ್ರಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮ

ದ್ವಿತೀಯ ಪಂಚ ವಾರ್ಷಿಕ ಯೋಜನೆಯು ೬೫೦೦ ಕೋಟಿ ರೂಪಾಯಿಗಳಷ್ಟು ವೆಚ್ಚದಕಾರ್ಯಕ್ರಮಗಳನ್ನೊಳಗೊಳ್ಳುವುದೆಂಬುದು ಎಲ್ಲರಿಗೂ ಈಗಾಗಲೇ ತಿಳಿದಿರುವ ವಿಷಯ. ಇಷ್ಟು ವೆಚ್ಚದ ಕಾರ್ಯಕ್ರಮಗಳ ವಿವರ ಮಾತ್ರ ಪ್ರಕಟವಾಗಿರಲಿಲ್ಲ ಕಳೆದ ವಾರ ಈ ವಿಷಯದಲ್ಲಿ ಹೆಚ್ಚು ಮಾಹಿತಿಗಳು ದೊರಕಿರುತ್ತವೆ ಯೋಜನೆಯ ಕರಡು ಇನ್ನೂ ಸಿದ್ಧವಾಗಿಲ್ಲದಿದ್ದರೂ ಸರಕಾರದ ಬೇರೆ ಬೇರೆ ಖಾತೆಗಳು ತಮ್ಮ ಕಾರ್ಯಕ್ರಮದ ರೂಪ ರೇಖೆಗಳನ್ನು ಚಿತ್ರಿಸುವ ವರದಿಗಳನ್ನು ಆಯೋಗದ ಪರಿಶೀಲನೆಗೆ ಒಪ್ಪಿಸಿರುತ್ತವೆ

ಹೆಚ್ಚು ವೆಚ್ಚದ ಆವಶ್ಯಕತೆ

ಶೈಕ್ಷಣಿಕ ಶಾಖೆಯು ರೂಪಿಸಿರುವ ಕಾರ್ಯಕ್ರಮವು ಮೊದಲಿನ ಯೋಜನೆಯಲ್ಲಿ ಅದು ನಿರ್ವಹಿಸಿದ ಪಾತ್ರಕ್ಕಿಂತ ಬಹಳ ದೊಡ್ಡದಾಗಿದೆ; ೧೧೦೦ ಕೋಟಿ ರೂಪಾಯಿಗಳ ವೆಚ್ಚವನ್ನಿದು ಒಳಗೊಳ್ಳುತ್ತದೆ. ಇಷ್ಟು ಹೆಚ್ಚು ಹಣವನ್ನು ವಿದ್ಯಾಭ್ಯಾಸದ ಒಂದೇ ಕ್ಷೇತ್ರಕ್ಕೆ ಯೋಜನಾ ಆಯೋಗ ಮೀಸಲಿಡಲಾರದೆಂದೂ ಶಿಕ್ಷಣವನ್ನೊಳಗೊಂಡು ಎಲ್ಲ ಬಗೆಯ ಸಾಮಾಜಿಕ ಚಟುವಟಿಕೆಗಳಿಗೆ ೫೦೦ ಕೋಟಿ ರೂಪಾಯಿಗಳನ್ನಷ್ಟೇ ಅದು ನಿಗದಿಮಾಡಬಹುದೆಂದೂ ಹೇಳಲಾಗುತ್ತದೆ. ಇದರಂತೆ ಶಿಲ್ಪಿ ಶಾಖೆಯ ಆವಶ್ಯಕತೆಗಳೂ ಬಹಳ ಹೆಚ್ಚಿನವೆ; ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೪೫೦ ಕೋಟಿ ರೂಪಾಯಿಗಳನ್ನು ಈ ಖಾತೆಗೆ ತೆಗೆದಿಟ್ಟಿದ್ದರು; ಇಷ್ಟು ಹಣವೂ ವೆಚ್ಚವಾದುದಲ್ಲದೆ ಮತ್ತೆ ೧೯ ಕೋಟಿ ರೂಪಾಯಿಗಳನ್ನು ಬೇಡಲಾಯಿತು. ನಾಳೆಯ ಯೋಜನೆಯಲ್ಲಿ ರೈಲ್ವೆಗೆ ೯೦೦ ಕೋಟಿ ರೂಪಾಯಿಗಳನ್ನು ತೆಗೆದಿಡಬಹುದಾದರೂ ೧೫೦೦ ಕೋಟಿ ರೂಪಾಯಿಗಳೇ ಬೇಕು ಎಂದು ಮಂತ್ರಿಗಳ ಅಭಿಪ್ರಾಯ.

ಶಿಕ್ಷಣ ಖಾತೆಯ ಉದ್ದೇಶ

ಆರರಿಂದ ಹನ್ನೊಂದು ವಯಸ್ಸಿನ ೭೫% ಮಕ್ಕಳಿಗೆ ಮತ್ತು ಹನ್ನೊಂದರಿಂದ ಹದಿನಾಲ್ಕು ವಯಸ್ಸಿನ ೩೦% ಮಕ್ಕಳಿಗೆ ೧೯೬೧ನೇ ವರ್ಷದೊಳಗೆ ವಿದ್ಯಾಭ್ಯಾಸದ ಅನುಕೂಲತೆಯೊದಗಿಸಬೇಕೆಂದು ಶಿಕ್ಷಣ ಖಾತೆಯ ಉದ್ದೇಶ. ೧೨೦೦೦೦ ಪ್ರಾಥಮಿಕ ಶಾಲೆಗಳನ್ನು ಹೊಸತಾಗಿ ತೆರೆಯಬೇಕೆಂದೂ ಇದರಲ್ಲಿ ಅರವಾಸಿಯಷ್ಟನ್ನು ಮೂಲ ಶಿಕ್ಷಣಕ್ಕೆ ಮೀಸಲಿಡಬೇಕೆಂದೂ ಅದರ ಸಂಕಲ್ಪ. ಇದಲ್ಲದೆ ಈಗಿನ ಪ್ರಾಥಮಿಕ ಶಾಲೆಗಳಲ್ಲಿ ೮೦೦೦೦ ಶಾಲೆಗಳನ್ನು ಮೂಲ ಶಿಕ್ಷಣದ ಕೇಂದ್ರಗಳಾಗಿ ಪರಿವರ್ತಿಸಲಾಗುತ್ತದೆ. ಅಧ್ಯಾಪಕರ ಸಂಬಳವನ್ನು ಹೆಚ್ಚಿಸುವುದಕ್ಕೆ ಈ ಕರಡು ಮಹತ್ವವನ್ನು ಕೊಟ್ಟಿರುತ್ತದೆ. ತರಬೇತಿಯನ್ನು ಹೊಂದಿರದ ಪ್ರಾಥಮಿಕ ಶಾಲೆಯ ಅಧ್ಯಾಪಕನ ಕನಿಷ್ಠ ಸಂಬಳ ತಿಂಗಳಿಗೆ ೫೦ ರೂಪಾಯಿಗಳಿರಬೇಕೆಂದೂ ತರಬೇತಿ ಹೊಂದಿದವರಿಗೆ ಯೋಗ್ಯತಾನುಸಾರ ತಿಂಗಳಿಗೆ ೬೦ ಅಥವಾ ೭೫ ರೂಪಾಯಿಗಳಿರಬೇಕೆಂದೂ ಮಾಧ್ಯಮಿಕ ಶಾಲೆಗಳಲ್ಲಿ ಪದವೀಧರರಲ್ಲದ, ತರಬೇತಿ ಹೊಂದಿರದ ಅಧ್ಯಾಪಕರಿಗೆ ೧೦೦—೨೦೦ ಪದವೀಧರರಾಗಿದ್ದು ತರಬೇತಿ ಹೊಂದಿರದಿದ್ದರೆ ೧೫೦—೨೫೦, ತರಬೇತಿ ಹೊಂದಿದ ಪದವೀಧರರಿಗೆ ೧೫೦—೩೦೦, ಮುಖ್ಯಾಧ್ಯಾಪಕರಿಗೆ ೨೫೦—೫೦೦ ಸಂಬಳ ವಿರಬೇಕು ಎಂದು ಶಿಕ್ಷಣ ಖಾತೆಯ ತೀರ್ಮಾನ.

ಹೊಸ ಮಾರ್ಗಗಳ ರಚನೆ

ರೈಲ್ವೆಯ ವಿಸ್ತರಣೆಗೆ ೧೫೦೦ ಕೋಟಿ ರೂಪಾಯಿಗಳು ಬೇಕಾಗಿವೆ ಎಂದು ಮಂತ್ರಿಗಳು ಬೇಡಿಕೆಯನ್ನು ಮುಂಗಿಟ್ಟಿದ್ದಾರೆ. ಆಗ ೩೦೦೦ ಮೈಲುಗಳಷ್ಟು ತೀರ ಹೊಸ ರೈಲು ಮಾರ್ಗಗಳನ್ನು ರಚಿಸಲು ಮತ್ತು ಈಗಿನ ದಾರಿಗಳಿಗೆ ಸಮಾನಾಂತರವಾಗಿ ೨೫೦೦ ಮೈಲುಗಳ ಉದ್ದದ ಹೊಸದಾರಿಗಳನ್ನು ನಿರ್ಮಿಸಲು ಸಾಧ್ಯವಾಗುತ್ತದೆ. ಸುಮಾರು ೧೩೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ರೈಲ್ವೆಗಳಲ್ಲಿ ವಿದ್ಯುಚ್ಛಕ್ತಿಯ ಸೌಲಭ್ಯದ ವಿಸ್ತರಣೆ ಮಾಡಲಾಗುತ್ತದೆ. ಚಿತ್ತರಂಜನದಲ್ಲಿ ಹೊಸ ಯಂತ್ರಗಳನ್ನು ನೆಲೆಗೊಳಿಸಿ, ಮುಂದಿನ ಯೋಜನೆಯ ಅವಧಿಯಲ್ಲಿ ವರ್ಷಕ್ಕೆ ೪೦೦ ಉಗಿ ಯಂತ್ರಗಳನ್ನು ಸಿದ್ಧಗೊಳಿಸಲಾಗುತ್ತದೆ. ಮೊದಲಿನ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಚಿತ್ತರಂಜನದ ಕಾರ್ಖಾನೆ ೨೦೦ ಉಗಿ ಯಂತ್ರಗಳನ್ನು ಉತ್ಪಾದಿಸುತ್ತದೆ.

ಯಂತ್ರೋಪಕರಣಗಳಿಗೆ ಪ್ರಾಶಸ್ತ್ಯ

ಔದ್ಯಮಿಕ ಕ್ಷೇತ್ರದಲ್ಲಿ ೧೪೦೦ ಕೋಟಿ ರೂಪಾಯಿಗಳನ್ನು ಲೋಹ ಮತ್ತು ಯಂತ್ರೋಪಕರಣಗಳ ಉತ್ಪಾದನೆಯ ಉದ್ದೇಶಕ್ಕೆ ಮೀಸಲಿಡಲಾಗುತ್ತದೆ. ಈಗಿನ ಯೋಜನೆಯಲ್ಲಿ ಈ ಕೆಲಸಕ್ಕೆ ಸಂದ ಮೊತ್ತ ೧೭೫ ಕೋಟಿ ರೂಪಾಯಿಗಳು ಮಾತ್ರ. ಈಗಿನ ೧೫ ಲಕ್ಷ ಟನ್ನು ಉಕ್ಕಿನ ಬದಲು ೫೦ ಲಕ್ಷ ಟನ್ನುಗಳನ್ನೂ ೪೦೦೦ ಟನ್ನು ಅಲುಮಿನಿಯಮಿನ ಬದಲು ೪೦೦೦೦ ಟನ್ನುಗಳನ್ನೂ, ರಾಸಾಯನಿಕ ಪದಾರ್ಥಗಳನ್ನು ಈಗಿನದರ ಮೂರು ಪಾಲಿನಷ್ಟು ಉತ್ಪಾದಿಸುವ ಗುರಿ ಇರುತ್ತದೆ. ಬುಡವನ್ನು ಹೀಗೆ ಭದ್ರಗೊಳಿಸಿದರೆ ನಿತ್ಯೋಪಯೋಗದ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲು ತೊಂದರೆಯಾಗದು ಎಂಬ ಅಭಿಪ್ರಾಯ ಇಲ್ಲಿ ಕಂಡು ಬರುತ್ತದೆ.

ಕೈಗಾರಿಕೆಗಳ ವಿಸ್ತರಣೆ

ಕೈಗಾರಿಕೆಗಳ ವಿಸ್ತರಣೆಯನ್ನು ನೋಡಿದರೆ, ಎರಡು ಅಥವಾ ಮೂರು ಫಲವರ್ಧಕ ಗೊಬ್ಬರಗಳ ಕಾರ್ಖಾನೆಗಳನ್ನು ಹೊಸತಾಗಿ ತೆರೆಯುವ, ಇನ್ನೊಂದು ಡಿ. ಡಿ. ಟಿ. ಕಾರ್ಖಾನೆಯನ್ನು ನೆಲೆಗೊಳಿಸುವ, ಕೃತಕ ತೈಲವನ್ನು ಉತ್ಪಾದಿಸುವ ಹಾಗು ವಿದ್ಯುದುಪಕರಣಗಳನ್ನು ಸಿದ್ಧಗೊಳಿಸುವ ಕಾರ್ಖಾನೆಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳು ಗೋಚರಿಸುತ್ತವೆ. ವಿಶಾಖಪಟ್ಟಣದ ಹಡಗು ಕಟ್ಟುವ ಕಾರ್ಖಾನೆಯ ವಿಸ್ತರಣೆ, ರೂಪನಾರಾಯಣಪುರದ ಕೇಬಲು ಕಾರ್ಖಾನೆಯ ಅಭಿವೃದ್ಧಿ, ಬೆಂಗಳೂರಿನ ಯಂತ್ರೋಪಕರಣ ಕಾರ್ಖಾನೆಯ ಚಟುವಟಿಕೆಗಳನ್ನು ಹೆಚ್ಚಿಸುವುದು ಇತ್ಯಾದಿ ಗುರಿಗಳೂ ಕಂಡುಬರುತ್ತವೆ. ಎರಡು ಕೋಟಿ ರೂಪಾಯಿಗಳ ವೆಚ್ಚದಿಂದ ಉಪ್ಪಿನ ಸಂಶೋಧನೆ ಮತ್ತು ಅಧಿಕ ಉತ್ಪಾದನೆಗೆ ಪ್ರಯತ್ನಿಸಲಾಗುತ್ತದೆ.

ಹಳ್ಳಿಗಳಿಗೆ ವಿದ್ಯುಚ್ಛಕ್ತಿ

ವಿದ್ಯುಚ್ಛಕ್ತಿಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಇನ್ನೂ ೧೨೦೦೦ ಗ್ರಾಮಗಳಿಗೆ ಪೂರೈಸಲಾಗುತ್ತದೆ. ಈಗ ಮಾಡಲಾಗುತ್ತಿರುವ ೧೦೦ ಕೋಟಿ ರೂಪಾಯಿಗಳ ವೆಚ್ಚದ ಬದಲು ವಿದ್ಯುಚ್ಛಕ್ತಿಗೋಸ್ಕರ ೪೦೦ ಕೋಟಿ ರೂಪಾಯಿಗಳ ವ್ಯಯದ ಕಾರ್ಯಕ್ರಮವನ್ನು ಸರಕಾರ ರೂಪಿಸಿರುತ್ತ

(೧ನೇ ಪುಟ ನೋಡಿರಿ)

ಶ್ರೀ ರಾಜರಾಜೇಶ್ವರಿ ದೇವಸ್ಥಾನ,

ಪೊಳಲಿ ಪೋಸ್ಟ್, ದ. ಕನ್ನಡ.

(ಪುಳಿನಾಪುರಂ)

ಸಮಸ್ತ ಭಕ್ತಾದಿಗಳಲ್ಲಿ:

"ಕರ್ಕಾಟಕ ಮಾಸವು (ಜುಲ್ಯಾ 16ರಿಂದ ಆಗೋಸ್ತು 16ರ ವರೆಗೆ) ಭಗವತೀ ಸೇವೆಗೆ ಅತ್ಯಂತ ಪವಿತ್ರ ಕಾಲವಾದ್ದರಿಂದ ಈ ಕ್ಷೇತ್ರದಲ್ಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಪಾದಾರವಿಂದಗಳಲ್ಲಿ ಕೆಳಗೆ ನಮೂದಿಸಿದ ಪೂಜೆ, ಅರ್ಚನಾದಿಗಳನ್ನು ಭಕ್ತರು ಮನೋಭೀಷ್ಟ ಸಿದ್ಧಿಗೋಸ್ಕರ ವ ಮುಂದಿನ ಅಭ್ಯುದಯಕ್ಕಾಗಿ ಕೂಡ ಶ್ರೀ ವಿದ್ಯಾ ಪದ್ಧತಿಗನುಸಾರವಾಗಿ ಪಾಟಲ, ಮಂದಾರ, ಜಪಾ, ಕುಂದ, ಉತ್ಪಲ, ಪುನ್ನಾಗ ಇತ್ಯಾದಿ ಪುಷ್ಪ ವಿಶೇಷಗಳಿಂದ ನಡಿಸುವದಾಗಿ ನಿರ್ಣಯಿಸಿರುತ್ತದೆ. ಭಕ್ತಾದಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸೇವೆಗಳನ್ನು ಮಾಡಿಸಿ ಕೃತಾರ್ಥರಾಗಬೇಕಾಗಿ ವಿನಂತಿ. ಸೇವೆ ಬಗ್ಗೆ ಹಣ ಕಳುಹಿಸುವಾಗ ಹೆಸರು, ಜನ್ಮ, ನಕ್ಷತ್ರ ಇತ್ಯಾದಿಗಳನ್ನು ಬರೆದು ಕಳುಹಿಸುವದು.

ಪೊಳಲಿ, 1-7-1955. ಜಿ. ಎ. ಭಟ್ಟ, ಮೆನೇಜರ್.

ಸೇವೆಗಳ ವಿವರ:

1. ತ್ರಿಕಾಲ ಪೂಜಾ	15	0	0	6. ಆಸ್ಥೋತ್ತರ	1 0 0
2. ನವಾವರಣ ಪೂಜಾ	10	0	0	7. ಸೌಂದರ್ಯಲಹರಿ ಅರ್ಚನೆ	3 0 0
3. [illegible] ಪೂಜಾ	10	0	0	8. ಬಾಲಾವಿಂಶತಿ ಅರ್ಚನೆ	1 8 0
4. ಅಖಿಲ ಸಹಸ್ರ ನಾಮಾರ್ಚನೆ	3	0	0	9. ಗಾಯತ್ರಿ ಪೂಜಾ	2 0 0
5. ತ್ರಿಶತಿ ಅರ್ಚನೆ	1	8	0	10. ಶ್ರೀ ಚಕ್ರಾರ್ಚನೆ	50 0 0

ಜಿನೇವದ ಆಶಾದಾಯಕ ಸಮಾಲೋಚನೆ

ರಶ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಸ್ಪಷ್ಟೀಕರಣ

ಇದೇ ಸೋಮವಾರ (ದಿನಾಂಕ ೧೮) ಜಿನೇವಾದಲ್ಲಿ ನೇರಲಿರುವ ಚತೂರಾಷ್ಟ್ರ ವರಿಷ್ಠರ ಸಮ್ಮೇಳನವು ಈಗ ಜಗತ್ತಿನ ಲಕ್ಷ್ಯವನ್ನು ಸೆಳೆದಿರುತ್ತದೆ. ಎಲ್ಲ ರಾಜಕೀಯ ವರ್ತುಲಗಳೂ ವರಿಷ್ಠರು ಪರಸ್ಪರ ಮಾತುಕತೆಗಳ ಮೂಲಕ ಜಿಗುಟಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಈಗ ಹಿಂದೆ ಎಂದೂ ಇರದಷ್ಟು ಉತ್ಸಾಹದಾಯಕವಾದ ಅನುಕೂಲ ವಾತಾವರಣ ಕಂಡುಬಂದಿದೆ ಎಂದು ಸಾರುತ್ತವೆ. ಈಗ ಎರಡು ತಿಂಗಳುಗಳಿಂದ ಜಾಗತಿಕ ವಲಯದಲ್ಲಿ ವಿಶೇಷ ಚಟುವಟಿಕೆಗಳು ಗೋಚರಿಸಿದವು; ಯಾರೂ ನಿರೀಕ್ಷಿಸಿರದ ಘಟನೆಗಳೂ ಕೆಲವು ಜರಗಿದವು. ಭಾರತದ ಸಂಚಾರಿ ರಾಯಭಾರಿಗಳೆನಿಸಿದ ಶ್ರೀ ಕೃಷ್ಣ ಮೆನೋನ್ನರು ಫ್ರೊರ್ಮೋಸದ ಕುರಿತು ಒಂದು ಸಮಾಧಾನಕರವಾದ ತೀರ್ಮಾನಕ್ಕೆ ಹೇಗೆ ಬರಬಹುದೆಂಬುದನ್ನು ಚೀನ, ಬ್ರಿಟನ, ಹಾಗು ಅಮೇರಿಕಗಳ ವರಿಷ್ಠರೊಡನೆ ಸಮಾಲೋಚನೆ ನಡೆಸುವ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಿದರು. ನಮ್ಮ ಪ್ರಧಾನ ಮಂತ್ರಿ ನೆಹರುಗಳು ರಶಿಯ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಐದು ವಾರಗಳ ಕಾಲ ಸಂಚರಿಸಿ, ವಿಶ್ವ ಸಮಸ್ಯೆಗಳ ವಿಷಯದಲ್ಲಿ ಪಾಶ್ಚಾತ್ಯ ಜಗತ್ತಿನ ಅಭಿಪ್ರಾಯಗಳನ್ನು ಕಮ್ಯೂನಿಸ್ಟರಿಗೂ ಕಮ್ಯೂನಿಸ್ಟರ ವಿಚಾರ ಸರಣಿಯನ್ನು ಪಾಶ್ಚಾತ್ಯ ಪ್ರಭೃತಿಗಳಿಗೂ ತಿಳಿಯಪಡಿಸಲು ನೆರವಾದರು. ಯುಗೊಸ್ಲಾವಿಯದ ರಾಜಧಾನಿಗೆ ರಶ್ಯದ ಧುರೀಣರು ಬಂದು ಆ ದೇಶದೊಡನೆ ತಮ್ಮ ಸಂಬಂಧವನ್ನು ಪುನಃ ಸ್ಥಾಪಿಸುವ ಯತ್ನಸ್ವಿ ಮಾತುಕತೆಯನ್ನು ನಡೆಸಿದರು. ಜರ್ಮನಿಯ ಪ್ರಶ್ನೆ ಬಗೆಹರಿಯದೆ ಉಳಿದಿದ್ದರೂ ಸಹ ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅಡೆನೂರರನ್ನು ಮೋಸ್ಕೋಗೆ ಕಮ್ಯೂನಿಸ್ಟರು ಆಮಂತ್ರಿಸಿದರು. ಇದೇ ಸಂದರ್ಭದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ದಶ ವಾರ್ಷಿಕೋತ್ಸವವೂ ನಡೆದು, ಮಹತ್ವದ ಪ್ರಶ್ನೆಗಳನ್ನು ಯಾವ ದೃಷ್ಟಿಕೋಣದಿಂದ ನೋಡಬೇಕೆಂಬ ಬಗ್ಗೆ ಅದು ಯೋಗ್ಯ ಮಾರ್ಗದರ್ಶನವನ್ನು ಮಾಡಿಕೊಟ್ಟಿತು. ಇವೆಲ್ಲ ಘಟನೆಗಳ ಹಿನ್ನೆಲೆಯನ್ನಿಟ್ಟುಕೊಂಡು ಜಿನೇವದ ಸಮ್ಮೇಳನ ಜರಗುತ್ತದೆ.

ಕ್ರುಶ್ಚೇವರ ಎಚ್ಚರಿಕೆ

ಆದುದರಿಂದಲೇ ಎಲ್ಲರೂ ಈ ಸಮಾಲೋಚನೆಗಳ ಯಶಸ್ಸಿನ ಬಗ್ಗೆ ಹೆಚ್ಚಿನ ಆಶೆಯನ್ನು ಕಟ್ಟಿಕೊಂಡಿದ್ದಾರೆ; ಆಶೆಯು ಕೇವಲ ನಿರೀಕ್ಷೆ ಮಾತ್ರವಾಯತೆಂಬ ಭಾವನೆಗೆ ಎಡೆಯುಂಟಾಗದ ಹಾಗೆ ಚತೂರಾಷ್ಟ್ರಗಳ ವರಿಷ್ಠರು ತಮ್ಮ ಧೋರಣೆಯನ್ನು ರೂಪಿಸಿಕೊಳ್ಳಬೇಕೆಂದು ಜನರು ಬಯಸುತ್ತಾರೆ. ಜಿನೇವದ ಸಮ್ಮೇಳನದ ಕುರಿತು ಅಮೆರಿಕದ ಅಧ್ಯಕ್ಷ ಐಸೆನ್ ಹೋವರ್ ಬ್ರಿಟಿಷ್ ಪ್ರಧಾನಿ ಈಡನ್ ಮತ್ತು ರಶ್ಯದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವ್—ಇವರು ಬಹಿರಂಗ ಹೇಳಿಕೆಗಳನ್ನು ನೀಡಿದ್ದಾರೆ. ಕ್ರುಶ್ಚೇವರು ಪಾಶ್ಚಾತ್ಯ ರಾಷ್ಟ್ರಗಳ ಅಭಿಮಾನವನ್ನು ಕೆಣಕುವಂಥ ಕಟು ಮಾತುಗಳನ್ನೆ ಆಡಿದ್ದಾರೆಂದರೂ ಸಲ್ಲುತ್ತದೆ. ಮೋಸ್ಕೋದಲ್ಲಿನ ಅಮೇರಿಕದ ರಾಯಭಾರಿ ಕಚೇರಿಯಲ್ಲಿ ಅವರು ಮಾತನಾಡುತ್ತಾ "ನಮ್ಮ ಪಕ್ಷದ ಒಗ್ಗಟ್ಟು ಹಿಂದೇನೂ ಇಷ್ಟು ಬಲವಾಗಿರಲಿಲ್ಲ. ನಿಮ್ಮ ದೇಶದಲ್ಲಿಯೂ ಬ್ರಿಟನ್ ಮತ್ತು ಫ್ರಾನ್ಸುಗಳಲ್ಲಿಯೂ ನಾವು ಏಕಾಗಿ ಈಚೆಗೆ ಕೆಲವು ರಿಯಾಯತಿಗಳನ್ನು ತೋರಿಸಿದ್ದೇವೆ ಎಂಬ ಬಗ್ಗೆ ಹೊಣೆಗಾರ ವ್ಯಕ್ತಿಗಳೂ ಇತರರೂ ಕೂಡಿಯೇ ಆಶ್ಚರ್ಯವ್ಯಕ್ತಪಡಿಸುತ್ತಿದ್ದಾರೆ. ಹೀಗೆ ರಿಯಾಯತಿ ತೋರಿಸದಿದ್ದರೆ ರಶ್ಯಕ್ಕೆ ಗಂಡಾಂತರವಿದೆ ಎಂದವರು ತಿಳಿದಿರುವಂತೆ ಕಾಣುತ್ತದೆ. ಆದರೆ ನಾವು ದುರ್ಬಲರಾಗಿ ಜಿನೇವಕ್ಕೆ ಹೋಗುತ್ತಿದ್ದೇವೆ ಎಂದು ನೀವು ಯಾರೂ ಭಾವಿಸಬಾರದು. ಸಮಾನತೆಯ ಗೌರವದಿಂದಲೇ ಜಿನೇವದ ಸಮ್ಮೇಳನದಲ್ಲಿ ರಶ್ಯ ಭಾಗವಹಿಸುತ್ತದೆ. ಇದನ್ನು ನೀವು ಗಂಭೀರವಾಗಿ ಲಕ್ಷಿಸದಿದ್ದರೆ ನಾವು ಹೆಚ್ಚಿನ ಮಾತುಕತೆಗೆ ತಡೆ ಹಾಕಬೇಕಾದೀತು. ನಮ್ಮ ಕೃಷಿ ಮತ್ತು ಕೈಗಾರಿಕ ಕ್ಷೇತ್ರಗಳು ಒಳ್ಳೆಯ ಕಾರ್ಯಭರವನ್ನು ತೋರಿಸುತ್ತಿವೆ. ಆವುಗಳನ್ನು ನಾವು ಟೀಕಿಸುತ್ತಿದ್ದರು, ಕಾರ್ಯಕ್ಷಮತೆ ಇನ್ನೂ ಹೆಚ್ಚಬೇಕು ಎಂಬ ದೃಷ್ಟಿಯಿಂದಲೇ ಹೊರತು ನಮ್ಮ ಶಕ್ತಿ ಕುಂದಿದೆ ಎಂದಲ್ಲ. ನಾವು ಪ್ರಾಮಾಣಿಕ ತಾಹದಿಯ ಮೇಲೆ ಒಪ್ಪಂದಕ್ಕೆ ಬರಲಿಚ್ಛಿಸುತ್ತೇವೆ. ನಮ್ಮ ಕಾಲುಗಳು ಮುರಿಯುವ ವರೆಗೆ ಕಾದು, ಆ ಮೇಲೆ ನೋಡೋಣ ಎಂದು ನೀವನ್ನುತ್ತಿದ್ದರೆ ಅದು ಕೇವಲ ಭ್ರಮೆಯಲ್ಲದೆ ಬೇರೇನೂ ಆಗಲಾರದು" ಎಂದು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಸಿದರು.

ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯ

ಅಧ್ಯಕ್ಷ ಐಕರು ಇದಕ್ಕೆ ಉತ್ತರ ರೂಪದಲ್ಲಿ ಅಮೇರಿಕವು ಸ್ನೇಹ ಮತ್ತು ಒಪ್ಪಂದಕ್ಕೆ ಬರುವ ಸದಿಚ್ಛೆಯ ವಾತಾವರಣದಲ್ಲಿ ತನ್ನ ನಿಲುಮೆಯನ್ನು ಮಂಡಿಸುವುದು ಎಂದು ಭರವಸೆ ಕೊಟ್ಟಿದ್ದಾರೆ. "ನಮಗೆ ತಿಳಿದ ಮಟ್ಟಿಗೆ ಅಮೇರಿಕದ ಯಾವುದೇ ಅಧಿಕಾರಿಯು ರಶ್ಯವು ದೌರ್ಬಲ್ಯದ ದೆಸೆಯಿಂದ ಜಿನೇವದ ಸರಿಪತ್ತಿನಲ್ಲಿ ಭಾಗವಹಿಸಲು ಹೋಗುತ್ತಿದೆ ಎಂದು ಯೇಳಿಲ್ಲ. ಅಮೇರಿಕವು ರಶ್ಯದೊಡನೆ ಪ್ರಬಲ ಸೈನ್ಯ ಶಕ್ತಿ ಇರುವುದನ್ನು ಗಮನಿಸಿರುತ್ತದೆ. ನಾವು ಆಶಾದಾಯಕ ಮನೋಭಾವದೊಡನೆಯೇ ಜಿನೇವಕ್ಕೆ ಹೋಗುತ್ತೇವೆ. ಆಶೆ ಫಲಿಸಬೇಕಾದರೆ ಅದಕ್ಕೆ ಪೋಷಕವಾದ ಅಂಶಗಳು ಒದಗಿ ಬರಬೇಕು. ನಾವು ನಮ್ಮ ಪ್ರತಿಷ್ಠೆ ಮತ್ತು ಪೂರ್ವಗ್ರಹದೂಷಿತ ಭಾವನೆಗಳಿಗೆ ಕಟ್ಟುಬಿದ್ದು ಯಾವುದೇ ಉತ್ತಮ ಸೂಚನೆಯನ್ನು ನಿರಾಕರಿಸುವುದಿಲ್ಲ" ಎಂದು ಐಸೆನ್ ಹೋವರ್ ಹೇಳಿದ್ದಾರೆ. ಬ್ರಿಟಿಸಿನ ಪ್ರಧಾನಿಗಳು ಸ್ವತಂತ್ರ ಜರ್ಮನಿ ಮತ್ತು ಅದರ ಏಕೀಕರಣದ ಕುರಿತು ರಶ್ಯದ ಭಯ ನಿವಾರಣೆಗೆ ಯಾವುದೇ ಯೋಗ್ಯ ವ್ಯವಸ್ಥೆಯನ್ನು ಕೈಗೊಳ್ಳಲು ಸಿದ್ಧ ಎಂದು ತಿಳಿಸಿದ್ದಾರೆ. ರಶ್ಯದೊಡನೆ ಸಮಾಧಾನಕರವಾದ ತೀರ್ಮಾನಕ್ಕೆ ಬರಲು ನಾವು ತಯಾರಿದ್ದೇವೆ ರಶ್ಯದ ಹೊಸನೋಟವನ್ನು ನಾವು ಚೆನ್ನಾಗಿ ನಿರೀಕ್ಷಿಸಿ ಅದರ ಅಂತರ್ಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿ, ತನ್ಮೂಲಕ ಒಂದು ತೀರ್ಮಾನಕ್ಕೆ ಬರುವುದು ನಮ್ಮ ಇಚ್ಛೆಯಾಗಿರುತ್ತದೆ. ಇದನ್ನು ಯಾರೂ ಆಕ್ಷೇಪಿಸಬಾರದು. ಆದುದರಿಂದ ಜನರು ಜಿನೇವದ ಮಾತುಕತೆಗಳ ವಿಷಯದಲ್ಲಿ ಹೆಚ್ಚು ಭರವಸೆಯನ್ನು ಇಟ್ಟುಕೊಳ್ಳಲಾಗದು. ಬೇರೆ ಬೇರೆ ಮಟ್ಟದಲ್ಲಿ ಇನ್ನು ಮುಂದೆ ನಡೆಯುವ ಮಾತುಕತೆಗಳಿಗೆ ಇದು ಬುನಾದಿಯಾಗುತ್ತದೆ. ಪಾಸಗಿಯಾಗಿ ಜರಗುವ ಈ ಸಭೆಗಳಲ್ಲಿ ಮನಬಿಚ್ಚಿ ಚರ್ಚೆನಡೆಸುವುದರಿಂದ ಪರಸ್ಪರರಲ್ಲಿರಬಹುದಾದ ಶಂಕೆ ಮತ್ತು ಭೀತಿಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ ಎಂದು ಈಡನ್ ಅಭಿಪ್ರಾಯಪಟ್ಟರು.

ನೆಹರುಗಳ ಹಿತಬೋಧೆ

ನೆಹರುಗಳು ದೂರ ಪೂರ್ವದ ಸಮಸ್ಯೆಗಳ ಕುರಿತು ಸಹ ಚರ್ಚೆ ನಡೆಯುವುದು ಅಗತ್ಯವೆಂದು ಸೂಚಿಸಿರುವರಾದರೂ ಜಿನೇವದಲ್ಲಿ ಪ್ರಾಮುಖ್ಯವಾಗಿ ಪ್ರಸ್ತಾಪಿಸಲ್ಪಡುವ ಸಮಸ್ಯೆಗಳಲ್ಲಿ ಜರ್ಮನಿ ಮತ್ತು ಸಿಶ್ಚಿಸ್ತೀಕರಣದ ವಿಷಯಗಳೇ ಉಲ್ಲೇಖನೀಯ. ಜರ್ಮನಿಯನ್ನು ಸ್ವತಂತ್ರ ರಾಷ್ಟ್ರವಾಗಿ ರೂಪಿಸಿಕೊಳ್ಳಬೇಕು ಎಂದು ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯ; ಈ ಸ್ವಾತಂತ್ರ್ಯದಿಂದ ಯಾವದೇ ತರದ ತೊಂದರೆ ಇಲ್ಲವೆಂದು ರಶ್ಯಕ್ಕೆ ಭರವಸೆ ಕೊಡಲಿಕ್ಕೂ ಪಾಶ್ಚಾತ್ಯ ರಾಷ್ಟ್ರಗಳ ಪ್ರಭೃತಿಗಳು ಸಿದ್ಧರು ಆದರೆ ರಶ್ಯವನ್ನು ಸ್ವತಂತ್ರ ಹಾಗು ಸಶಕ್ತ ಜರ್ಮನಿಯು ಪಾಶ್ಚಾತ್ಯರ ವ್ಯೂಹ ಸೇರಿದರೆ ತನ್ನ ಪ್ರತಿಸ್ಪರ್ಧಿಯ ಶಕ್ತಿ ಹೆಚ್ಚುವುದೆಂಬ ಭಯ ಕಾಡುತ್ತದೆ. ನಿಶ್ಶಸ್ತ್ರೀಕರಣದ ವಿಷಯದಲ್ಲಿ ಅದು ಮಿತವಾದ ಕ್ಷೇತ್ರದಲ್ಲಿ ಮಾತ್ರ ಪರೀಕ್ಷೆಗೆ ಅಪಕಾರವಿರಬೇಕು ಎನ್ನುತ್ತದೆ. ಪಾಶ್ಚಾತ್ಯ ರಾಷ್ಟ್ರಗಳು ಇಷ್ಟರವರೆಗೆ ಇದನ್ನು ವಿರೋಧಿಸುತ್ತಿದ್ದವು. ಆದರೆ ಈಗ ಐಸೆನ್ ಹೋವರರು ನಾವು ಎಲ್ಲ ಕಾರ್ಯಾನೆಗಳನ್ನೂ ಪರೀಕ್ಷೆಗೆ ಮುಕ್ತಗೊಳಿಸಬಲ್ಲೆವೇ ಎಂಬ ಪ್ರಶ್ನೆಯನ್ನು ತಮಗೆ ತಾವೇ ಹಾಕಿಕೊಂಡಿದ್ದಾರೆ— ನಿರಣಾಮವಾಗಿ ಬಂದರುಗಳು, ರೈಲ್ವೆ ನಿಲ್ದಾಣಗಳು, ವಿಮಾನ ಇಳಿಯಬಹುದಾದ ಕೇಂದ್ರಗಳು ಇತ್ಯಾದಿಗಳ ನಿಯಂತ್ರಣಕ್ಕೆ ಅವಕಾಶ ಮಾಡಿಕೊಟ್ಟು, ಹಾಗೆಯುದ್ಧದ ಸಿದ್ಧತೆಗೆ ತಡೆಯೊಡ್ಡುವ ಹೊಸ ಯೋಜನೆಗೆ ಅವರು ಕೈಹಾಕಿರುವರೆಂದು ತಿಳಿದು ಬರುತ್ತದೆ. ರಶ್ಯದ ಸೈನಿಕ ಶಕ್ತಿ ತುಂಬ ಹೆಚ್ಚಿರುತ್ತದೆ ಎಂಬ ವಿಷಯದಲ್ಲಿ ಅಮೇರಿಕಕ್ಕೆ ಮತ್ತಿತರ ಪಾಶ್ಚಾತ್ಯರಾಷ್ಟ್ರಗಳಿಗೆ ಯಾವುದೇ ಅನುಮಾನ ಉಳಿದಿಲ್ಲ. ಮೊನ್ನೆ ತಾನೆ ಮೊಸ್ಕೋದಲ್ಲಿ ವೈಮಾನಿಕ ಪ್ರದರ್ಶನ ನಡೆದಾಗ ಹಾಜರಿದ್ದ ಪಾಶ್ಚಾತ್ಯ ನಿರೀಕ್ಷಕರು ರಶ್ಯವು ಕಳೆದ ಮಹಾಯುದ್ಧ ಕಾಲದಲ್ಲಿ ತಾನು ವಿಮಾನ ಬಲದಲ್ಲಿ ತೀರ ಹಿಂದುಳಿದಿದ್ದರೂ ಕ್ಷಿಪ್ರ ಸಂಘಟನೆಯ ಮೂಲಕ ಪಾಶ್ಚಾತ್ಯರ ತಂತ್ರಗಳನ್ನು ವಿಫಲಿಸುವಷ್ಟು ಕೌಶಲ ತೋರಿಸಿದೆ ಎಂದು ಮನಗಂದರು. ಆದುದರಿಂದ ನಿಶ್ಶಸ್ತ್ರೀಕರಣದ ಕುರಿತು ಮಾತ್ರ ಸ್ವಲ್ಪ ಆಕೆಯನ್ನು ಇಟ್ಟುಕೊಳ್ಳಬಹುದು.

ಚಿಕ್ಕ ಸಮಸ್ಯೆಗಳಿಗೆ ಪ್ರಾಶಸ್ತ್ಯ

ಕೃಷಿ ವಲಯವನ್ನು ಹಾಳು ಮಾಡಿ ಸೈನಿಕ ಶಕ್ತಿಯನ್ನು ರಶ್ಯ ಹೆಚ್ಚಿಸಿ ಕೊಂಡಿದೆ; ಈಗ ಅಲ್ಲಿಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವುದರಿಂದ ತನ್ನನ್ನು ಸುಧಾರಿಸಿಕೊಳ್ಳಲು ರಶ್ಯಕ್ಕೆ ಸ್ವಲ್ಪ ಅವಕಾಶಬೇಕಾಗಿದೆ; ಆದುದರಿಂದಲೇ ರಶ್ಯ ವೈತ್ರಿಯ ತಂತ್ರಗಳನ್ನು ಅನುಸರಿಸ ತೊಡಗಿದೆ ಎಂದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೇಳಲಾಗುತ್ತದೆ ಈ ವಾತಾನ್ನು ನೆ

(ಎನೇ ಪುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರ್ಯ ಜಾಣ್ಮೆ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಪಯಲ್ಲಿ ವಿಚಾರಿಸಿರಿ.

ಡಾ। ಯು. ಸುಂದರ ರಾವು ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ಪಿ. ಆರ್. ಕಾಮತ್, ಬಿ. ಎ., ಎಲ್ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).

THE CANARA BANKING CORPORATION LIMITED

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ಸಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೧೪-೭-'೫೫	ಸಂಚಿಕೆ ೪೪

ಯೋಗ್ಯ ಸಂರಕ್ಷಣೆ

ಭಾರತ ಸರಕಾರದಿಂದ ಕಳೆದ ಅಕ್ಟೋಬರದಲ್ಲಿ ನೇಮಕಗೊಂಡಿದ್ದ ಸಮಿತಿಯೊಂದು ಭತ್ತವನ್ನು ಕೈಯಿಂದ ಕುಟ್ಟಿ ಅಕ್ಕಿ ಮಾಡುವುದಕ್ಕೆ ಎಲ್ಲ ಬಗೆಯ ಪ್ರೋತ್ಸಾಹಗಳನ್ನು ಕೊಡಬೇಕೆಂದು ಹೇಳಿರುವುದನ್ನು ನಾವು ಅತಿ ಹೆಚ್ಚಿನ ಸಂತೋಷದೊಡನೆ ಸ್ವಾಗತಿಸಿ ಬೆಂಬಲಿಸುತ್ತೇವೆ. ಈಗ ಗಿರಣಿಗಳಲ್ಲಿ ಯಂತ್ರದ ಮೂಲಕ ಭತ್ತವನ್ನು ಕುಟ್ಟಿ ಅಕ್ಕಿ ಮಾಡುವ ಪ್ರವೃತ್ತಿಯು ಎಷ್ಟು ವ್ಯಾಪಕವಾಗಿದೆ ಎಂದರೆ ಹಳ್ಳಿಗಳಲ್ಲಿ ನಿರುದ್ಯೋಗ ತಾಂಡವವಾಡಲು ಇದು ಅವಕಾಶ ಮಾಡಿಕೊಟ್ಟಿರುತ್ತದೆ. ಆದುದರಿಂದ ಗಿರಣಿಗಳ ಹಾವಳಿಯನ್ನು ನಿಲ್ಲಿಸಿಯೇ ಬಿಡಬೇಕೆಂದು ಸಮಿತಿಯು ಮಾಡಿರುವ ಸಿಫಾರಸು ನಿಜಕ್ಕೂ ಶ್ಲಾಘನೀಯವಾಗಿದೆ. ಕಳೆದ ಯುದ್ಧಕಾಲದಿಂದೀಚೆಗೆ ಭತ್ತವನ್ನು ಗಿರಣಿಗಳಲ್ಲಿಯೇ ಕುಟ್ಟಿ ಅಕ್ಕಿ ಮಾಡುವ ಉಪಕ್ರಮವು ಬಹಳವಾಗಿ ಬೆಳೆಯ ಹತ್ತಿತು. ಗಿರಣಿಗಳ ಅಕ್ಕಿಯು ಹೊಳಪುಳ್ಳದ್ದಾಗಿ ಕಂಡುಬಂದುದರಿಂದ ಜನರು ಅವುಗಳನ್ನು ಮೆಚ್ಚತೊಡಗಿದಂತೆ ಕಾಣುತ್ತದೆ. ಗಿರಣಿಗಳು ಅಗ್ಗ ಬೆಲೆಗೆ ಭತ್ತವನ್ನು ಕುಟ್ಟಿ ಅಕ್ಕಿ ಮಾಡಲು ಮುಂದೆ ಬಂದುದರಿಂದ ರೈತರು ಇದೇ ತಮಗೆ ಲಾಭದಾಯಕವೆಂದು ಭಾವಿಸಿದರು. ಪರಿಣಾಮದಲ್ಲಿ ಕೊಯ್ಲಿನ ತರುವಾಯ ನಾಲ್ಕಾರು ತಿಂಗಳುಗಳ ಕಾಲ ಭತ್ತವನ್ನು ಕುಟ್ಟಿಯೇ ಕೂಲಿಯನ್ನು ಸಂಪಾದಿಸುತ್ತಿದ್ದ ಹಳ್ಳಿಯ ಹೆಂಗಸರು ಮತ್ತು ಗಂಡಸರಿಗೆ ಉದ್ಯೋಗವಿಲ್ಲದೆ ಹೋಯಿತು. ಅವರ ಜೀವನನಿರ್ವಹಣವು ಕಷ್ಟಕರವಾಗಿ ಕಂಡುಬಂದಿತು. ಇದರಿಂದಲೇ ಆರ್ಥಿಕ ದೃಷ್ಟಿಯಿಂದ ಸರಕಾರವು ಗಿರಣಿಗಳಿಗೆ ಕೆಲಸ ಮಾಡಗೊಡುವ ತನ್ನ ನೀತಿಯನ್ನು ಪುನರ್ನಿರ್ಮಿಸುವುದು ಅಗತ್ಯವೆನಿಸಿತು. ಸಮಿತಿಯ ವರದಿಯನ್ನು ಗಮನಿಸಿದರೆ, ಗಿರಣಿಗಳನ್ನು ನಮ್ಮ ದೇಶದಲ್ಲಿ ನೆಲೆಗೊಳಿಸಿ, ಭತ್ತವನ್ನು ಅವುಗಳ ಮೂಲಕ ಕುಟ್ಟಿಸಿ ಅಕ್ಕಿ ಮಾಡುವ ಅಗತ್ಯ ಎಷ್ಟು ಮಾತ್ರಕ್ಕೂ ಇಲ್ಲವೆಂದು ಮನವರಿಕೆಯಾಗುತ್ತದೆ. ಭತ್ತವನ್ನು ಕೈಯಿಂದ ಕುಟ್ಟಿಯೇ ನಮ್ಮ ಜನರಿಗೆ ಬೇಕಾದಷ್ಟು ಅಕ್ಕಿಯನ್ನು ಪೂರೈಸುವುದಕ್ಕೆ ಯಾವುದೇ ಕಷ್ಟವಿಲ್ಲ; ಗಿರಣಿಗಳನ್ನು ಮುಚ್ಚಿದರೆ ಬೇಕಾದ ಸಮಯಕ್ಕೆ ಅಕ್ಕಿ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ದೊರೆಯದೆ ಹೋಗದೆಂದು ಭಯಪಡುವುದಕ್ಕೆ ಆಧಾರ ಸಾಲದು. ಭತ್ತವನ್ನು ಕೈಯಿಂದ ಕುಟ್ಟುವ ಉದ್ದಿಮೆಯನ್ನು ಸಹಕಾರ ಪದ್ಧತಿಯ ತಳಹದಿಯ ಮೇಲೆ ಸಂಘಟಿಸಿದ ಪಕ್ಷದಲ್ಲಿ ಪೂರೈಕೆಯು ಕುಟ್ಟಿಗೆ ಯಾವುದೇ ತೊಂದರೆ ಬಿಳಲಾರದು. ಹೀಗೆ ಸಮಿತಿಯು ವ್ಯಕ್ತಪಡಿಸಿದ ಅಭಿಪ್ರಾಯವು ವಾಸ್ತವತೆಗೆ ಅನುಗುಣವಾಗಿದೆ ಎಂದೇ ನಮಗೆ ತೋರುತ್ತದೆ. ಗಿರಣಿಗಳಿಲ್ಲದಿದ್ದರೆ ಅಕ್ಕಿಯ ಪೂರೈಕೆಯಲ್ಲಿ ಯಾವುದೇ ಕಷ್ಟ ಕಾಣಲಾರದೆಂಬುದನ್ನು ಗಿರಣಿಗಳ ಅವಾಂತರವಿದ್ದಿದ್ದ ದಿನಗಳೇ ಮನಗಾಣಿಸಿ ಕೊಡುತ್ತವೆ. ಒಂದು ವೇಳೆ ಪೂರೈಕೆ ಕಷ್ಟವಾದೀತೆಂದು ಕಟ್ಟಿಕೊಂಡರೂ ಸಹ, ಗಿರಣಿಗಳಲ್ಲಿ ಭತ್ತವನ್ನು ಕುಟ್ಟಿ ತಯಾರಿಸಿದ ಅಕ್ಕಿಯು ಗಂಭೀರವಾದ ಇತರ ದುಷ್ಪರಿಣಾಮಗಳನ್ನು ಮಾಡುತ್ತದೆ ಎಂಬುದನ್ನು ಮರೆಯಲಾಗದು. ಆರ್ಥಿಕ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆಗೆ ಅದು ಎಡೆ ಮಾಡಿ ಕೊಡುವುದಂತೂ ನಿಜ—ಸಾರ್ವಜನಿಕ ಆರೋಗ್ಯದ ಮೇಲೂ ಗಿರಣಿಗಳಲ್ಲಿ ತಯಾರಾದ ಅಕ್ಕಿಯು ಅನಾಹುತಗಳನ್ನು ಮಾಡುತ್ತದೆ. ಅಕ್ಕಿಯಲ್ಲಿರುವ ಅತ್ಯಮೂಲ್ಯ ಪೋಷಕಾಂಶಗಳು ಗಿರಣಿಯಲ್ಲಿ ಅಕ್ಕಿಯನ್ನು ತಯಾರಿಸಿದಾಗ ಮಾಯವಾಗಿ ಬಿಡುತ್ತವೆ; ಆದುದರಿಂದ ಈ ಅಕ್ಕಿಯನ್ನು ಉಂಡವರು ಜೀವಸತ್ವದ ಅಭಾವದಿಂದ ಪೀಡಿತರಾಗುವರು; ಇದರಿಂದ ಉಪಶಮನ ಹೊಂದಲು ವೈದ್ಯಕೀಯ ಉಪಚಾರಾದಿಗಳಿಗೆ ಮತ್ತು ಪೋಷಕಾಂಶಗಳುಳ್ಳ ಇತರ ಆಹಾರಾದಿಗಳಿಗೆ ಹೆಚ್ಚು ಹಣವನ್ನು ವ್ಯಯಿಸಬೇಕಾಗುತ್ತದೆ. ಇವೆಲ್ಲ ಕಾರಣಗಳಿಂದ ಭತ್ತವನ್ನು ಗಿರಣಿಗಳಲ್ಲಿ ಕುಟ್ಟಿ ಅಕ್ಕಿಮಾಡುವ ಉದ್ದಿಮೆಯನ್ನು ನಿಲ್ಲಿಸಿ ಬಿಡಬೇಕೆಂದು ಸಮಿತಿ ಮಾಡಿರುವ ಸಿಫಾರಸು ಬಹಳ ಯೋಗ್ಯವಾಗಿದೆ. ಈಗಿನ ಗಿರಣಿಗಳನ್ನು ಮುಚ್ಚಿ ಬಿಡುವುದಕ್ಕೆ ಸ್ವಲ್ಪ ಕಾಲ ಹಿಡಿಯಬಹುದು; ಅಲ್ಲದೆ ಕೆಲವು ಕಾನೂನಿನ ತೊಂದರೆಗಳೂ ಕಾಣಿಸಿಕೊಳ್ಳಬಹುದು. ಸಮಿತಿಯು ಆವಶ್ಯಕ ವಸ್ತುಗಳ ನಿಯಂತ್ರಣ ಶಾಸನಕ್ಕೆ ಯೋಗ್ಯತಿದ್ದುಪಡಿ ಮಾಡುವ, ಮತ್ತು ಮೂಲಭೂತ ಹಕ್ಕುಗಳು ಗಿರಣಿಗಳನ್ನು ಮುಚ್ಚುವಂತೆ ಆಜ್ಞಾಪಿಸಲು ತಡೆಮಾಡುತ್ತದ್ದರೆ ಸಂವಿಧಾನವನ್ನೆ ಸೂಕ್ತವಾಗಿ ಪರಿಷ್ಕರಿಸುವ ಮೂಲಕ ಹೆಚ್ಚೆ ಮುಂದಿಡಬೇಕೆಂದು ಹೇಳಿರುತ್ತದೆ. ಈ ನಡುವೆ ಗಿರಣಿಗಳಲ್ಲಿ ತಯಾರಾದ ಅಕ್ಕಿಯಮೇಲೆ ಪ್ರತಿ ಮಣಕ್ಕೆ ಆರಾಣೆಯಂತೆ ಸುಂಕ ಹೇರಬೇಕೆಂದೂ ಇದರಿಂದ ಬಂದ ಹಣವನ್ನು ಕೈಯಿಂದ ಭತ್ತ ಕುಟ್ಟುವುದನ್ನು ಪ್ರೋತ್ಸಾಹಿಸಲು ವಿನಿಯೋಗಿಸಬೇಕೆಂದೂ ಅಲ್ಲದೆ ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಗೆ ಪ್ರೋತ್ಸಾಹವೆಂದು ಕೊಡುತ್ತಿರುವ ಹಣವನ್ನು ಮಣಕ್ಕೆ ಆರಾಣೆಯಿಂದ ಎಂಟಾಣೆಗೆ ಹೆಚ್ಚಿಸಬೇಕೆಂದೂ ಸೂಚಿಸಿರುತ್ತದೆ. ಇದರ ಹೊರತಾಗಿ ಸರಕಾರವು ತನ್ನ ಮೇಲ್ವಿಚಾರಣೆಯಲ್ಲಿರುವ ಆಸ್ಪತ್ರೆಗಳಿಗೆ, ಜೈಲುಗಳಿಗೆ, ರೈಲ್ವೆಗಳಿಗೆ, ಸೈನ್ಯಕ್ಕೆ, ಪೋಲೀಸರಿಗೆ ಮತ್ತು ವಿದ್ಯಾರ್ಥಿ ಗೃಹಗಳಿಗೆ ಭತ್ತವನ್ನು ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಯನ್ನೆ ಉಪಯೋಗಿಸಬೇಕೆಂದೂ ಸಮಿತಿ ಹೇಳಿರುತ್ತದೆ. ಗಿರಣಿಗಳಲ್ಲಿ ತಯಾರಾದ ಅಕ್ಕಿಗಿಂತ ಕೈಯಲ್ಲಿ ಕುಟ್ಟಿ ತಯಾರಿಸಿದ ಅಕ್ಕಿಯಲ್ಲಿ ಪೋಷಕಾಂಶ ಅಧಿಕವಾಗಿದೆ ಎಂಬಿತ್ಯಾದಿ ವಿಷಯಗಳಬಗ್ಗೆ ಭರದಿಂದ ಪ್ರಚಾರ ನಡೆಸಬೇಕೆಂದೂ ಸಮಿತಿಯ ಅಭಿಪ್ರಾಯ. ಇದು ಉಪಯುಕ್ತ ಸೂಚನೆ ಎಂಬುದರಲ್ಲಿ ಪ್ರತಿಮಾತಿಲ್ಲ— ಜನರಲ್ಲಿ ಹೆಚ್ಚಿನವರಿಗೆ ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಗೂ ಗಿರಣಿಗಳಲ್ಲಿ ತಯಾರಿಸಿದ ಅಕ್ಕಿಗೂ ಗುಣ ಮತ್ತು ಯೋಗ್ಯತೆಗಳಲ್ಲಿ ತುಂಬ ವ್ಯತ್ಯಾಸವಿದೆ ಎಂದು ತಿಳಿದಿರುವುದಿಲ್ಲ. ಶೈಕ್ಷಣಿಕ ಕೇಂದ್ರಗಳಲ್ಲಿಯಷ್ಟೇಯಲ್ಲ, ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣೆಯ ಸೇವೆ, ಸ್ಥಳೀಯ ಅಭಿವೃದ್ಧಿ ಮುಂತಾದ ಚಟುವಟಿಕೆ ಕಂಡು ಬರುವ ವಲಯಗಳಲ್ಲಿ ಪ್ರಚಾರ ಮಾಡಿ, ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಯನ್ನು ಜನರು ಉಪಯೋಗಿಸುವಂತೆ ನೋಡಬೇಕೆಂದು ಸಮಿತಿ ಸಲಹೆ ಮಾಡಿರುವುದು ತುಂಬ ಸಮಂಜಸ. ಸರಕಾರದವರೂ ಸಾರ್ವಜನಿಕರೂ ಪರಸ್ಪರ ಸಹಕರಿಸಿ ಸಮಿತಿಯ ಸಿಫಾರಸುಗಳನ್ನು ಕ್ಷಿಪ್ರದಲ್ಲಿ ಕಾರ್ಯರೂಪಕ್ಕೆ ಇಳಿಸಲು ಮುಂದಾಗಬೇಕೆಂದು ನಾವು ನಿನಂತಿಸುತ್ತೇವೆ.

ಜವಾಹರಲಾಲರ ಪುನರಾಗಮನ

ಪ್ರಧಾನ ಮಂತ್ರಿಗಳಿಗೆ ಭಾರತೀಯರ ಪ್ರಚಂಡ ಸ್ವಾಗತ

ಮೂವತ್ತೆಂಟು ದಿನಗಳ ಹಿಂದೆ ರಶ್ಯ ಮತ್ತಿತರ ಐರೋಪ್ಯ ರಾಷ್ಟ್ರಗಳ ಪರ್ಯಟನಕ್ಕಾಗಿ ಮುಂಬಯಿಯಲ್ಲಿ ವಿಮಾನ ಹತ್ತಿದ್ದ ಪ್ರಧಾನ ಮಂತ್ರಿ ಜವಾಹರಲಾಲ ನೆಹರುಗಳು ಇದೇ ಮಂಗಳವಾರ ರಾತ್ರಿಗೆ ಮುಂಬಯಿಯಲ್ಲಿ ಬಂದಿಳಿದರು. ಅಲ್ಲಿ ಅವರಿಗೆ ಭವ್ಯ ಘೌರ ಸ್ವಾಗತವನ್ನು ನೀಡಲಾಯಿತು. "ನಾನು ಭಾರತದ ಪ್ರತಿನಿಧಿಯಾಗಿ ಹೋಗಿದ್ದೆ; ನನಗೆ ಸಂದ ಗೌರವ ಭಾರತಕ್ಕೆ ಸಲ್ಲುತ್ತದೆ." ಎನ್ನುತ್ತಾ ನೆಹರುಗಳು ತಮ್ಮ ಪ್ರವಾಸದಿಂದ ಹೆಚ್ಚಿನ ಪ್ರಯೋಜನವಾಯಿತೆಂದು ತಿಳಿಸಿದರು. ಮರುದಿನ ಅವರು ಹೊಸದೆಹಲಿಗೆ ತೆರಳಿದರು.

ಕಾರ್ಯಭಾರ

ಹೊಸದೆಹಲಿಗೆ ಮರಳಿದೊಡನೆಯೇ ನೆಹರುಗಳು ಸುಮಾರು ಐದು ವಾರಗಳಿಂದ ತನ್ನ ಆಗಮನದ ನಿರೀಕ್ಷೆ ಮಾಡಿಕೊಂಡಿರುವ ಅನೇಕ ಮಹತ್ವದ ಕಾರ್ಯಗಳತ್ತ ಗಮನವೀಯಬೇಕಾಗಿದೆ. ಲೋಕಸಭೆಯ ಅಧಿವೇಶನ ಇದೇ ಐನೇ ದಿನಾಂಕ ತೊಡಗುವಾಗ ಗೋವೆಯ ಕುರಿತು ಉತ್ಕಂಠೆಯನ್ನು ಸದಸ್ಯರು ವ್ಯಕ್ತಪಡಿಸುವುದು ನಿಶ್ಚಯ. ಆದುದರಿಂದ ಗೋವೆಯ ಕುರಿತು ಅವರು ಸರಕಾರದ ಧೋರಣೆಯಲ್ಲಿ ಪರಿವರ್ತನೆ ಅಗತ್ಯವೇ ಏನೆಂದು ನಿರ್ಧರಿಸುವುದಕ್ಕೆ ಮೊದಲು ಗಮನ ಕೊಡಬೇಕಾದೀತು.

ಸಾಲಾಝುಾರರ ಕಳವಳ

ಧಾರ್ಮಿಕ ಭಾವನೆಗೆ ಗೋವೆಯ ವಿಷಯದಲ್ಲಿ ಯಾವ ಸ್ಥಾನವೂ ಇಲ್ಲವೆಂಬ ತನ್ನ ಮಾತಿಗೆ ಮೋಪರು ಒಪ್ಪಿದರೆಂದು ನೆಹರುಗಳು ಹೇಳಿದ್ದಾರೆ. ಇದರಿಂದ ಗೊಂದಲಗೊಂಡ ಪೋರ್ಚುಗಾಲದ ರಾಯಭಾರಿ ಕಚೇರಿಯು ಧಾರ್ಮಿಕ ಪ್ರಶ್ನೆಯನ್ನು ಗೋವೆಯಲ್ಲಿ ಪೋರ್ಚುಗಾಲ ಎತ್ತಿರುವುದೇ ಇಲ್ಲ; ತನ್ನ ಸಾರ್ವಭೌಮತ್ವಕ್ಕೆ ಒಳಪಟ್ಟಪ್ರದೇಶ ಗೋವೆ ಎಂದದರ ಅಭಿಪ್ರಾಯ ಎಂದು ಪ್ರಕಟಿಸಿದೆ. ಸೋಪರೊಡನೆ ನೆಹರುಗಳು ಮಾತನಾಡಿದ ಬೆನ್ನಿಗೆ ಡಾ. ಸಾಲಾಝುಾರರ ಮಂತ್ರಿಮಂಡಳದಲ್ಲಿ ಕೆಲವು ಬದಲಾವಣೆಗಳಾಗಿವೆ; ಹಿಂದಿನ ಸಾಗರೋತ್ತರ ಮಂತ್ರಿಯ ಬದಲು ಇನ್ನೊಬ್ಬನನ್ನು ನೇಮಿಸಿಕೊಳ್ಳಲಾಗಿದೆ.

ಕಾಶ್ಮೀರದ ಭವಿಷ್ಯ

ಭಾರತದ ಗೃಹ ಮಂತ್ರಿ ಪಂಡಿತ ಪಂತರು ಕಾಶ್ಮೀರವು ಭಾರತವಲ್ಲಿ ಸೇರ್ಪಡೆಹೊಂದಬೇಕೆಂಬ ವಿಷಯದಲ್ಲಿ ಆ ರಾಜ್ಯದ ಘಟನಾ ಸಮಿತಿಯು ಕೈಗೊಳ್ಳುವ ನಿರ್ಣಯವೇ ಕೊನೆಯದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರ ಪ್ರದೇಶದಲ್ಲಿ ಮಾತ್ರ ಚುನಾವಣೆಗಳು ನಡೆದರೆ ಸಾಕು ಎಂದವರು ಹೇಳಿದ್ದಾರೆ. ಕಾಶ್ಮೀರದ ಭವಿಷ್ಯವನ್ನು ಅಲ್ಲಿಯ ಜನರೇ ತೀರ್ಮಾನಿಸಬೇಕೆಂದು ಭಾರತ ಸರಕಾರ ಒಪ್ಪಿರುವುದನ್ನು ತಾನು ಮರೆತಿಲ್ಲ. ಆದರೆ ಹಾಗೆ ಹೇಳಿದಂದಿನಿಂದ ಇಷ್ಟರ ವರೆಗಿನ ಘಟನೆಗಳನ್ನು ಅವಲೋಕಿಸದಿರಲಾಗದು ಎಂದವರು ತಮ್ಮ ನಿಲುಮೆಯನ್ನು ಸ್ಪಷ್ಟೀಕರಿಸಿದರು.

ಲಂಚ ನಿರ್ಮೂಲನ

ರೈಲ್ವೆಗಳಲ್ಲಿ ಲಂಚಗುಳಿತನವನ್ನು ನಿರೋಧಿಸುವುದಕ್ಕೋಸ್ಕರ ಸೂಚನೆಗಳನ್ನು ಮಾಡಲು ನೇಮಕವಾಗಿದ್ದ ಸಮಿತಿಯು ಇದೀಗ ತನ್ನ ವರದಿಯನ್ನು ಒಪ್ಪಿಸಿದೆ. ಹೊಣೆಗಾರ ಸ್ಥಾನದಲ್ಲಿರುವ ವ್ಯಕ್ತಿಗಳು ಸಹ ಲಂಚ ಸ್ವೀಕರಿಸುತ್ತಿದ್ದರೆಂದು ಅದು ಹೇಳಿದೆ. ರೈಲ್ವೆಗಳನ್ನು ಚಿಕ್ಕ ಘಟಕಗಳಾಗಿ ವಿಂಗಡಿಸಿ, ಮೇಲ್ವಿಚಾರಣೆಯನ್ನು ಬಿಗಿಗೊಳಿಸುವುದರಿಂದ ಲಂಚಗುಳಿತನವನ್ನು ನಿಯಂತ್ರಿಸಲು ಸಾಧ್ಯವಾದೀತೆಂದು ಆ

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ವೃಶ್ಯದಲ್ಲಿ, ನಾನಾ ಗಾದೆಗಳೂ, ಉಸಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ.....ಶೈಲಿಯು ಚಲೋದಿದೆ"
—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: ೦–4–೦

ನವಭಾರತ ಪುಸ್ತಕ ಭಂಡಾರ, ಉಡುಪಿ.

ದು ಸೂಚಿಸಿದೆ. ರೈಲ್ವೆಗೆ ಸಂಬಂಧಿಸಿದ ಗುತ್ತಿಗೆಗಳನ್ನು ಕೊಡುವುದರಿಂದಹಿಡಿದು ಸಾಮಾನ್ಯಪಾರ್ಸೆಲನ್ನುಕಳುಹಿಸುವ ಕೆಲಸದ ವರೆಗೆ ವ್ಯತಿಯೊಂದೂ ಘಟ್ಟದಲ್ಲಿ ಲಂಚದಕೈವಾಡವೇ ಕಂಡುಬರುತ್ತದೆ ಎಂದು ಅದು ದೂರಿದೆಯಲ್ಲದೆ, ಸಾಮಾನುಗಳ ಕಳವನ್ನು ಕಡಿಮೆ ಮಾಡಲು ಅವುಗಳಿಗೆ ವಿಮೆ ಇಳಿಸಬೇಕೆಂದು ಹೇಳಿದೆ.

ಸರಳ ಚುನಾವಣೆ

ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಚುನಾವಣೆಗಳನ್ನು ಸರಳಗೊಳಿಸುವ ಕುರಿತು ಈಗಿನ ಕಾಯಿದೆಗಳಿಗೆ ಸೂಕ್ತ ತಿದ್ದುಪಡಿಯನ್ನು ಮಾಡುವ ವಿಧೇಯಕ ಮಂಡಿಸಲ್ಪಡುತ್ತದೆ. ಚುನಾವಣೆಗಳನ್ನು ನಡೆಸಲು ಅಜ್ಜಿ ಕೊಡುವ ಅಧಿಕಾರವನ್ನು ಚುನಾವಣೆಯ ಆಯೋಗಕ್ಕೆ ನೀಡುವ, ದೇಶದಲ್ಲೆಲ್ಲ ಒಂದೇ ಸಮಯಕ್ಕೆ ಚುನಾವಣೆಗಳನ್ನು ನಡೆಸುವ, ಚುನಾಣೆಯ ಅಜ್ಜಿ ಹೊರಟಿಂದಿನಿಂದ ಮತದಾನದ ವರೆಗಿನ ಅವಧಿಯನ್ನು ೮೦ ದಿನಗಳ ಬದಲು ೨೮ ದಿನಗಳಿಗೆ ಇಳಿಸುವ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ.

ಪಾಕಿಸ್ತಾನದಲ್ಲಿ

ಪಾಕಿಸ್ತಾನದ ಘಟನಾ ಸಮಿತಿಯ ಸಭೆ ೭ನೇ ದಿನಾಂಕ ಮಂಗಳವಲ್ಲಿ ಜರಗಿತು. ಪ್ರಾರಂಭದಲ್ಲಿಯೇ ಘರ್ಷಣೆ ಕಂಡುಬಂತು. ಬೇರೆ ಬೇರೆ ರಾಜಕೀಯ ಪಕ್ಷಗಳು ಹೇಗೆ ಸಹಕರಿಸಿ ನಡೆಯುತ್ತವೆ ಎಂಬ ವಿಷಯ ಯಾವುದೇ ಸ್ಥಿರ ಘಟ್ಟಕ್ಕೆ ಬಂದು ಮುಟ್ಟಿಲ್ಲ. ತನಗೆ ಪ್ರಧಾನ ಮಂತ್ರಿ ಪಟ್ಟವನ್ನು ಕಟ್ಟಿದರೆ ಮಾತ್ರ ಅವಾಮಿ ಲೀಗು ಮುಸ್ಲಿಂ ಲೀಗಿನೊಡನೆ ಸಹಕರಿಸುವುದೆಂದ ಸುಹ್ರವರ್ದಿಯವರ ವಿರುದ್ಧ ಕೆಲವು ಅವಾಮಿ ಲೀಗಿನವರೇ ಧ್ವನಿ ಎತ್ತಿರುವಂತೆ ವರದಿಗಳು ಹೇಳುತ್ತವೆ.

ಹೊಸ ಗತ್ತುಗಾರಿಕೆ

ಗವರ್ನರ ಜನರಲರ ಅಧಿಕಾರಗಳನ್ನು ಕಡಿಮೆಮಾಡಿ ಘಟನಾ ಸಮಿತಿಯೇ ಸಾರ್ವಭೌಮ ಸಂಸ್ಥೆ ಎಂದು ಸಾರುವ ಕೆಲವು ಸೂಚನೆಗಳನ್ನು ಮಂಡಿಸುವ ಆತುರ ಕಳೆದ ವಾರ ವ್ಯಕ್ತವಾಗಿದೆ. ಆದರೆ ಇದನ್ನು ಘಟನಾ ಸಮಿತಿಯು ಮನ್ನಿಸಿದರೂ ಗವರ್ನರ ಜನರಲರು ಅಂಕಿತ ಹಾಕದಿದ್ದರೆ ಅದು ಶಾಸನವಾಗಲಾರದೆಂಬುದನ್ನು ಗಮನಿಸದಿರಲಾಗದು. ಘಟನಾ ಸಮಿತಿಯು ಇದೇ ಮಂಗಳವಾರ ಮುಕ್ರಿಯ ಅಧಿವೇಶನವನ್ನು ಮುಗಿಸಿತೆಂದೂ ಸದ್ಯದಲ್ಲಿಯೇ ಕರಾಚಿಯಲ್ಲಿ ಪುನಃ ಸೇರುವುದೆಂದೂ ಈಗ ಸುದ್ದಿ ಬಂದಿದೆ.

ಬೆಲೆ ಇಳಿಯುವಿಕೆ

ಕೃಷಿ ಉತ್ಪನ್ನಗಳ ಬೆಲೆ ಇಳಿಮುಖವಾಗಿರುವುದರಿಂದ, ಕೈಗಾರಿಕೆಗಳು ಉತ್ಪಾದಿಸುವ ಸರಕುಗಳ ಬೆಲೆಯೂ ಕ್ರಮೇಣ ಇಳಿಯುವುದೆಂದು ಸರಕಾರದ ವಲಯಗಳು ಹೇಳುತ್ತವೆ. ಈಗ ಕೈಗಾರಿಕೆಗಳ ಸರಕುಗಳಲ್ಲಿ ಬೆಲೆ ಇಳಿಯದಿರುವುದಕ್ಕೆ ಕೃಷಿ ಉತ್ಪನ್ನಗಳಿಗೆ ಹೆಚ್ಚು ಬೆಲೆ ಇದ್ದಾಗ ಕೊಂಡುಕೊಂಡ ಕಚ್ಚಾ ಸಾಮಗ್ರಿಗಳ ಬೆಚ್ಚ ಮತ್ತು ದಾಸ್ತಾನು ಕಾರಣವೆಂದು ತಿಳಿದುಬರುತ್ತದೆ. ಸಂಗ್ರಹ ಮುಗಿದಾಗ ಮತ್ತು ಈಗಿನ ಬೆಲೆಯಲ್ಲಿ ಕೃಷಿ ವಲಯದಿಂದ ಕೊಂಡುಕೊಂಡ ಕಚ್ಚಾ ಸಾಮಗ್ರಿಗಳನ್ನು ಬಳಸಿಕೊಂಡಾಗ ಬೆಲೆ ಇಳಿತ ಅಗಿಯೇ ಆಗುತ್ತದೆ ಎಂದು ಕೇಳುತ್ತೇವೆ.

ಸಾನ ನಿರೋಧ

ಭಾರತದ ಭೂಸೇನೆಯ ಹೊಸ ವರಿಷ್ಠರಾದ ಜನರಲ್ ಶ್ರೀ ನಾಗೇಶರು ಸೈನ್ಯ ಶಾಖೆಯ ಜಲ ಹಾಗು ವಾಯುಪಡೆಗಳ ವರಿಷ್ಠರೊಡನೆ ವಿಚಾರ ವಿನಿಮಯ ನಡೆಸಿ, ಸೈನ್ಯದಲ್ಲಿ ಯಾವದೇ ಶಿಸ್ತಿನ ಸಮಾರಂಭಗಳ ನಡೆದಾಗ ಮಾದಕಪೇಯಗಳಿಗೆ ಅವಕಾಶ ಕೊಡಬಾರದೆಂದೂ ನಿಂಬೆಹಣ್ಣಿನ ಪಾನಕ ಮುಂತಾದ ಸೌಮ್ಯ ಪೇಯಗಳನ್ನೆ ಉಪಯೋಗಿಸತಕ್ಕದ್ದೆಂದೂ ತೀರ್ಮಾನಿಸಿದ್ದಾರೆ. ಸೈನ್ಯದ ಮೂರೂ ಶಾಖೆಗಳು ಈ ನಿಯಮವನ್ನು ಅನುಸರಿಸುತ್ತವೆ.

ಉಡುಪಿ

ಎಮ್. ಜಿ. ಎಮ್. ಕಾಲೇಜಿನಲ್ಲಿ ಉದ್ಘಾಟನಾ ಸಮಾರಂಭ— ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷ ಶ್ರೀ ಆರ್. ಎಸ್. ಹುಕ್ಕೇರಿಕರ್ ಅವರು ತಾ. ೧೩ರಲ್ಲಿ ಸಂಜೆ ಸ್ಥಳೀಯ ಎಮ್. ಜಿ. ಎಮ್. ಕಾಲೇಜಿನ ಶ್ರೀ ವಿಶ್ವೇಂದ್ರ ತೀರ್ಥ ಮೆಮೋರಿಯಲ್ ಹಾಲನ್ನು ಉದ್ಘಾಟಿಸಿದರು. ಈ ಹಾಲಿನ ಖರ್ಚು ರೂಪಾಯಿ 10,000/- ನ್ನು ಕಾಲೇಜಿಗೆ ದಾನವಿತ್ತ ಸೋದೆಮಠದ ಶ್ರೀ ವಿಶ್ವೋತ್ತಮತೀರ್ಥ ಸ್ವಾಮಿಗಳವರು, ಹುತ್ತಿಗೆ ಮಠ, ಕೃಷ್ಣಾಪುರ ಮಠ, ಕಾಣಿಯೂರು ಮಠ ಮತ್ತು ಅಥವಾರು ಮಠದ ಸ್ವಾಮಿಗಳವರು ಈ ಸಮಾರಂಭಕ್ಕೆ ಚಿತ್ತೈಸಿದ್ದರು ಡಾ| ಟಿ. ಮಾಧವ ಪೈಗಳು ಸ್ವಾಗತಭಾಷಣಮಾಡಿ ಉದ್ಘಾಟಕರಿಗೂ ದಾನವಿತ್ತ ಸ್ವಾಮಿಗಳವರಿಗೂ ಸಾಮಾನಪತ್ರ ಅರ್ಪಿಸಿದರು ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳವರು ಕಾಲೇಜಿನ ಇತಿಹಾಸವನ್ನು ವರದಿಮಾಡಿದರು. ಡಾ| ಎಸ್. ಆರ್. ಪೈಗಳು ಕಾಲೋಚಿತ ಮಾತುಗಳನ್ನಾಡಿದರು. ಒಂದೊಂದು ನೂರು ರೂಪಾಯಿ ಎರಡು ನಗದು ಬಹುಮಾನಗಳನ್ನು ಪರೀಂ ಪ್ರತಿಯೂ ಶ್ರೀ ಸೋದೆ ಮಠದ ಕಡೆಯಿಂದ ಕೊಡಲಾಗುವುದೆಂದು ಮಠದ ಏಜಂಟ್ ಶ್ರೀ ಶ್ರೀಪತಿ ಆಚಾರ್ಯರು ಬಾಹೀರುಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಮ್. ಸಂದರೆ ರಾಯರು ಧನ್ಯವಾದಗಳನ್ನರ್ಪಿಸಿದರು

ರಷ್ಯಾ ಪ್ರವಾಸಾನುಭವ— ರಾಜ್ಯ ಸಭೆಯ ಡಿಪ್ಯೂಟಿ ಸ್ಪೀಕರ್ ಶ್ರೀ ಕೃಷ್ಣಮೂರ್ತಿ ರಾಯರು ತಾ ೨೦ರಲ್ಲಿ ಮುಕುಂದ ಸಿವಾಸದಲ್ಲಿ ತಾವು ರಷ್ಯಾ ಪ್ರವಾಸಮಾಡಿದ ಅನುಭವಗಳನ್ನು ವಿವರಿಸುತ್ತಾ, ರಷ್ಯಾದೇಶವು ಪ್ರಬಲರಾಷ್ಟ್ರವಾದರೂ ಅಲ್ಲಿಯ ಜನತೆಯಲ್ಲಿ ದೇಶಾಭಿಮಾನ ತುಂಬಿ ತುಳುಕಿತ್ತಿದೆ ಎಂದು ಹೇಳಿದರು. ಶ್ರೀ ಹುಕ್ಕೇರಿಕರರು ಕೂಡಾಮಾತನಾಡುತ್ತಾ, ಕರ್ನಾಟಕದಲ್ಲಿ ಕಾಗದೆ ತಯಾರಿ ಕಾರ್ಖಾನೆಗೆ ದ ಕ. ಜಿಲ್ಲೆಯವರು ಮುಂದೆ ಬರಬೇಕೆಂದರು. ಆರಂಭದಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮಾನ್ಯ ಅತಿಥಿಗಳ ಪರಿಚಯಮಾಡಿಕೊಟ್ಟರು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ. ೧೭ರಲ್ಲಿ ಬೆರ್ ಮೆನ್ ಡಾ| ಪಿ. ವಿ. ವಾಣಿ ಸರಾಯರ ಅಧ್ಯಕ್ಷತೆಯಲ್ಲಿ ಜರಗಿತು ಮಂಗಳೂರು—ಉಡುಪಿ ರೈಲ್ವೆ ಕೆಲಸವು ಪ್ರಕೃತ ಅಸಾಧ್ಯವೆಂದು ಸೂಚಿಸಿದ ಸರಕಾರಿ ಪತ್ರವನ್ನು ವಿಕಾರ್ಯಮಾಡಲಾಯಿತು. ಸ್ವಾತಂತ್ರ್ಯ ಸ್ಮಾರಕ ಸ್ಕಾಲರ್ ಶಿಪ್ ಹೋರ್ಡಿಗೆ ನಗರ ಕ್ಷೇತ್ರದ ಹೋರ್ಡುಹೈಸ್ಕೂಲು, ಕ್ರಿಶ್ಚಿಯನ್ ಹೈಸ್ಕೂಲು, ಹೆಮ್ಮಕ್ಕಳ ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಕರನ್ನು ಸೈಟ್ ಸಿಸಿಲೀಸ್ ಕಾನ್ವೆಂಟಿನ ಸಹಾಯಕಉಪಾಧ್ಯಾಯರನ್ನು ನೇಮಿಸಲಾಯಿತು. ಸ್ಕಾಲರ್ ಶಿಪ್ಪನ್ನು ಪಡೆಯಲು ಅರ್ಹತೆಯುಳ್ಳ ನಗರ ಕ್ಷೇತ್ರದ ಹೈಸ್ಕೂಲುಗಳ ಬಡ ವಿದ್ಯಾರ್ಥಿಗಳ ಹೆಸರನ್ನು ಈ ಬೋರ್ಡಿನವರು ಕೌನ್ಸಿಲಿಗೆ ಶಿಫಾರಸು ಮಾಡಬೇಕಾಗಿದೆ.

ವನಮಹೋತ್ಸವ— ಉಡುಪಿ ಮುನಿಸಿಪಲ್ ಕೌನ್ಸಿಲು ಪರಿಸರದಲ್ಲಿ ವನಮಹೋತ್ಸವದ ಆಚರಣೆ ನಿಮಿತ್ತ ತಾ. ೧೧ರಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಭಾಸ್ಕರ ಮೆನೋನ್, ಅವರು ಸದಸ್ಯರನ್ನು, ನೆಟ್ಟರು ಮುನಿಸಿಪಲ್ ಬೆರ್ಮೆನ್ ಡಾ| ಪಿ. ವಿ. ವ್ಯಾಸರಾಯರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಎ. ಜಿ. ಅಲ್ಲಿ, ಕೆ. ಕೆ. ಪೈ ಮೊದಲಾದವರು. ಕಾರ್ಯೋಚಿತಮಾತುಗಳನ್ನಾಡಿದರು. ನಗರಸಭಾ ಸದಸ್ಯ ಶ್ರೀ ಯು. ರಾಘವೇಂದ್ರ ಕೃಷ್ಣ ಭಟ್ಟರು, ಮುನಿಸಿಪಾಲಿಟಿಯೊಳಗಿನ ಪ್ರಾಥಮಿಕ ಶಾಲೆಗಳಲ್ಲಿ ಉತ್ತಮ ತೋಟಗಾರಿಕೆಯನ್ನು ಮಾಡುವ ಶಾಲೆಗೆ ಬಹುಮಾನವೀಯಲು ರೋಲಿಂಗ್ ಶೀಲ್ಡನ್ನು ನಗರಸಭೆಗೆ ಒಪ್ಪಿಸಿದರು.

ಡಾ| ಮುಖರ್ಜಿ ದಿನಾಚರಣೆ— ಸ್ಥಳೀಯ ಜನಸಂಘದವರು ತಾ. ೧೧ರಲ್ಲಿ ಶ್ರೀ ಟಿ. ವಾಸುದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಡಾ| ಶ್ಯಾಮ ಪ್ರಸಾದ ಮುಖರ್ಜಿಯವರ ದಿನವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಡಾ| ಮುಖರ್ಜಿಯವರ ಜೀವಚಿತ್ರವನ್ನು ಶ್ರೀ ಭೋಜ ಶೆಟ್ಟರು ಅನಾವರಣ ಮಾಡಿದರು. ಶ್ರೀಗಳಾದ ಪೆರಲ ಕೆಳ ಮತ್ತು ಕೇರಳ ಪ್ರಭುಗಳ ಕಾಲೋಚಿತ ಭಾಷಣಗಳಾದುವು.

ಪಡುಬಿದ್ರಿ: ಶ್ರೀ ಅದಮಾರು ಮಠದ ಸಂಸ್ಕೃತ ಪಾಠ ಶಾಲೆಗಾಗಿ ನೂತನವಾಗಿ ಕಟ್ಟಿಸಿದ ಶ್ರೀ ವಿಬುಧ ಮಾನ್ಯ ವಿದ್ಯಾಮಂದಿರದ ಉದ್ಘಾಟನಾ ಸಮಾರಂಭವು ಶ್ರೀ ಪುತ್ತಿಗೆ ಮಠದ ವಿದ್ಯಾಪಲ್ಲವಿ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರಿಂದ ತಾ ೨೦ರಂದು ನೆರವೇರಿಸಲ್ಪಟ್ಟಿತು. ಸಭಾರಂಭದಲ್ಲಿ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಸ್ವಾಗತ ಮಾತುಗಳನ್ನಾಡಿದರು. ಈ ಸಂದರ್ಭದಲ್ಲಿ ಶ್ರೀ ಅದಮಾರು ಮಠದ ಶ್ರೀ ವಿಬುಧ ಮಾನ್ಯ ತೀರ್ಥ ಶ್ರೀ ಪಾದಂಗಳವರ ಭಾವ ಚಿತ್ರ ಅನಾವರಣವು ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀ ಪಾದಂಗಳವರಿಂದ ನೆರವೇಯಿತು. ಶ್ರೀ. ಪಿ. ಶ್ರೀಪತಿರಾಯರು ಸಂದೇಶಗಳನ್ನೋದಿದರು. ಶ್ರೀ ಟಿ. ಎ. ಪೈ, ಎಂ. ಎಲ್. ಎ.ರವರು ಸಭಿಕರವರನಾಗಿ ಭಾಷಣಿಸಿದ್ದರು.

ಉದ್ಘಾಟನಾ ಸಮಾರಂಭ— ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಜುನಿಯರಾ ಅಕ್ಸಿಲಿಯರಿ ಕೆಡೆಟ್ ಕೋರಿದ ಉದ್ಘಾಟನಾ ಸಮಾರಂಭವನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ನೆರವೇರಿಸುತ್ತಾ ವಿದ್ಯಾರ್ಥಿಗಳಲ್ಲಿರಬೇಕಾದ ಶಿಸ್ತು ಪಾಲನೆಯನ್ನು ಪ್ರತಿಪಾದಿಸಿದರು ಹೆಡ್ಮಾಸ್ಟರ್ ಶ್ರೀ ಎಸ್. ಎನ್. ಮತಾಯಸ್, ಅವರು ಅಧ್ಯಕ್ಷತೆವಹಿಸಿದ್ದರು.



ಕೇಂದ್ರದ ಮಂತ್ರಿ ಶ್ರೀ ಜೈ ಸುಖಲಾಲ ಹಾಥಿಯವರು ಇನ್ನು ೧೫-೨೦ ವರ್ಷಗಳಲ್ಲಿ ಭಾರತವನ್ನು ನೀರಾವರಿ ಪ್ರದೇಶವನ್ನು ಈಗಿನದರ ಇಮ್ಮಡಿ ಮಾಡಲಾಗುವುದೆಂದು ಹೇಳಿದ್ದಾರೆ ವಿವಿಧೋದ್ದೇಶಗಳನ್ನಿಟ್ಟುಕೊಂಡು ಕಟ್ಟಲಾಗುತ್ತಿರುವ ಅಣೆಕಟ್ಟುಗಳ ಮೇಲೆಯೂ ವಿದ್ಯುಚ್ಛಕ್ತಿಯ ಉತ್ಪಾದನೆಯೊಡನೆ ನೀರಾವರಿ ಪ್ರದೇಶವೂ ಹೆಚ್ಚಿಕೊಳ್ಳುವುದೆ ಕಂಡಿ ಸಂದರ್ಭಗಳಲ್ಲಿ ರೈತರಿಗೆ ಮಾಡಿರಿಗಳನ್ನು ರಚಿಸಿಕೊಂಡು, ಸಂಶೋಧನೆಗಳನ್ನು ನಡೆಸಬೇಕಾಗುತ್ತದೆ ಪುಣೆಯಲ್ಲಿರುವ ಕೇಂದ್ರ ಜಲ ಮಾರ್ಗ ವಿದ್ಯುಚ್ಛಕ್ತಿ ಸಂಶೋಧನಾಲಯ ಇದಕ್ಕೆ ನೆರವಾಗುತ್ತದೆ. ನೀರು ಹರಿದ ಬರುವ ಅನೇಕ ನಮೂನೆಗಳನ್ನು ಅಳ್ಳಿ ರಚಿಸಿರುವುದನ್ನು ನೋಡಿದ ಚಿತ್ರದಲ್ಲಿ ಕಾಣಬರುವುದು. ಮಂಗಳೂರನ್ನು ಪ್ರಬುದ್ಧ ಬಂದರನ್ನಾಗಿ ಮಾಡಲು ಉದ್ದೇಶಿಸಿದವರ ಪ್ರಯೋಜನಕ್ಕಾಗಿ ಈ ಸಂಶೋಧನಾಲಯದಲ್ಲಿಯೇ ನೇತ್ರಾವತಿಯ ಪ್ರವಾಹ ಗತಿಯ ಪರಿಣಾಮ ಇತ್ಯಾದಿಗಳ ಕುರಿತು ಹೆಚ್ಚಿನ ಪರಿಶೀಲನೆ ಮಾಡಲಿಗಳ ಮೂಲಕ ನಡೆದಿದೆ.

(ಸಚಿ ಪುಟದಿಂದ)

ಹರುಗಳಾಗಲೀ ಅವರೊಡನೆ ಸಂಚರಿಸಿದ ಭಾರತೀಯ ಪತ್ರಿಕೋದ್ಯೋಗಿಗಳಾಗಲೀ ಮುಸ್ಲೀಕರಿಸುವುದಿಲ್ಲ. ಕ್ಯೂಬಾ ದೇಶದ ದೆಸೆಯಿಂದ ಅಯಾಯತಗಳನ್ನು ತೋರಿಸ ತೊಡಗಿದೆ; ಪಾಕಿಸ್ತಾನ ರಾಷ್ಟ್ರಗಳು ನಿಮ್ಮನ್ನ ಬಿಂಬಿಸಿದ ಕುಳಿತರೆ ರಕ್ಷಣೆ ಅವಶ್ಯಾ ಸುಲಭ ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ನೆಹರುಗಳು ವಿರೋಧಿಸಿದ್ದಾರೆಂದೂ ಅದರೊಡನೆ ಮಾತನಾಡುವಾಗ ರಕ್ಷಣೆಯನ್ನು ನಿಷ್ಕ್ರಿಯರಾಗಿ ಭಾವಿಸುವುದು ತಪ್ಪೆಂದು ಎಚ್ಚರಿಸುವುದೂ ಸರಿಯಿಗಳು ಹೇಳುತ್ತವೆ. ರಕ್ಷಣ ಅರ್ಥಿಕ ವಾತಾವರಣವು ಪ್ರಗತಿಶೀಲವಾಗುವುದನ್ನು ತೋರಿಸುತ್ತಿದೆ; ಅಲ್ಲಿ ಬಿಲ್ಲಾದಿಯನ್ನು ಕೆಟ್ಟಿಸುವ ಪ್ರಯತ್ನಗಳು ಪ್ರಬಲವಾಗಿ ನಿಲ್ಲಲಿಲ್ಲ ಹೊಂದುತ್ತಿದೆ; ಅರ್ಥ ಮಂತ್ರಿಗಳ ತಳಹದಿ ಬಲಿಷ್ಠವಾಗಿದೆ ಎಂದು ಅ ದೇಶವನ್ನು ಸುತ್ತಿ ಬಂದಿದ್ದವರು ಅಭಿಪ್ರಾಯ ಪಟ್ಟಿದ್ದಾರೆ. ಹೀಗಿರುವುದರಿಂದ ರಕ್ಷಣೆಗೆ ಹೆಚ್ಚು ಹಣವನ್ನು ಪಾಕಿಸ್ತಾನ ರಾಷ್ಟ್ರಗಳು ಅಪೇಕ್ಷಿಸಿದರೆ ಪರಿಣಾಮ ಹಿತಕರವಾಗದು. ಹೊಸ ಸಮಸ್ಯೆಗಳ ಮಟ್ಟಿಗೆ ಈ ಮಾತು ಸರಿಯಾಗಿ ಅನ್ವಯಿಸುತ್ತದೆ. ಆದರೆ ಬೇರೆ ಕೆಲವು ಪ್ರಶ್ನೆ ಸಮಸ್ಯೆಗಳೂ ಈ ರಾಷ್ಟ್ರಗಳ ನಡುವೆ ಇರುತ್ತವೆ. ಕಾಶ್ಮೀರದ ಬೆಗೆ, ಯುದ್ಧ ಕೈದಿಗಳ ಬಿಡುಗಡೆ, ವ್ಯಾಪಾರ ನಿರ್ಬಂಧ ಮುಂತಾದ ಪ್ರಶ್ನೆಗಳು ಪ್ರಾಕೃತಿಕ ಅಯೋಗಗಳ ಅಧಿಕಾರ ಪ್ರದೇಶ ಇವೆಲ್ಲಾ ಹೆಚ್ಚಾಗಬಹುದು. ಜೊತೆಗಾಗ್ಯೆ ಸಂಪತ್ತು ಶಾಂತ ವಾತಾವರಣದಲ್ಲಿ ಸೇರಿ, ಈ ಚಿಕ್ಕ ಪ್ರಶ್ನೆಗಳನ್ನು ಹೊಡೆಸಿ ಬೀಳುವಲ್ಲಿ ಇತ್ಯರ್ಥಗೊಳಿಸಿದರೆ ಜಾಗೆ ಉಳಿಯಾದ ತಿಳಿವಳಿಕೆ, ಇದ್ದಾಗ ಮತ್ತು ಸಹಕಾರದ ಬುದ್ಧಿಗಳು ಜಗುಬಾದ ತರದ ವಿಷಯಗಳು ಬಗೆಹರಿಯುವುದಕ್ಕೆ ದಾರಿಮಾಡಿ ಕೊಡಬಹುದು.

ಮಂಗಳೂರು — ಯುಯೇಸ್ಸೂಲಿನಲ್ಲಿ ವಸಮೋತ್ಸವವು ತಾ. ೧೪ರಂದು ಎರಡೂ ಶಾಲೆಗಳ ವಿದ್ಯಾರ್ಥಿ ಅಧ್ಯಾಪಕರ ಮತ್ತು ಸಾರ್ವಜನಿಕರ ನಿಲ್ಲುವುದಿಕೆಯಿಂದ ಮಂಗಳೂರು ಪೋಲ್ಟು ಮೈಸ್ಟರ ಶ್ರೀ ಎಲ್. ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಯು. ಪಿ. ಶೆಟ್ಟಿಯವರು ಸ್ವಾಗತವಿತ್ತ ಭಾಷಣವಿತ್ತ ಮೇಲೆ ಉಪ್ಪಿಯ ಎಂಪ್ಲಿಕ್ಟರಲ್ ಮೆಮೋರಿಯಲ್ ಸ್ಕೇಲಿನ ಶ್ರೀ ಟಿ. ಪೆಂಕಟ್ರಾಯ ಪೈಯವರ ಭಾಷಣವಾಯಿತು.

ಕುರುಕಾಲು— ಸ್ಥಳೀಯ ಸಹಕಾರ ಸಂಘದ ಕಟ್ಟಡದಲ್ಲಿ ತಾ. ೧೧ರಲ್ಲಿ ಪೂರ್ವಾಹ್ನ ಕುಂಜುಗಿರಿ ಪೆಜಮಾನ ಅಡಳಿತದಾರ ಶ್ರೀ ಕೆ. ರಾಮಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ಜಾಂಗಾಣಾಗಿ ಜರಗಿತು. ಗ್ರಾಮಸೇವಾ ನಿರತ ಶ್ರೀ ಕೆ. ಗಣಪಯ್ಯ ಸೆಟ್ಟಿ, ಶ್ರೀಗಳಾದ ಕೆ. ವಾಸು ಸೆಟ್ಟಿ ಮತ್ತು ಅನಂತ ಕೃಷ್ಣ ಕುಲಾಲ ರಾಯರು ವನಮಹೋತ್ಸವ ಮತ್ತು ಸಿಹಿ ಗೊಬ್ಬರದ ಮಹತ್ವದ ಬಗೆಯನ್ನು ಮಾತ್ಮಿಯನ್ನು ವಿವರಿಸಿದರು. ಬಳಿಕ ಸಭಿಕರಿಗೆ ಕಾರ್ಯಕ್ರಮವಾಯಿತು.

ಕಂದಲೂರು— ಕುಂದಾಪುರ ತಾಲೂಕು ಕಾಸ್ತಾನಿ ಗ್ರಾಮ ಸೇವಕರ ನೇತೃತ್ವದಲ್ಲಿ ತಾ. ೧೬ಲ್ಲಿ ಸ್ಥಳೀಯ ಹಿಂದುಸ್ಥಾನಿ ಶಾಲಾ ಮಕ್ಕಳು ಊರವರೂ ಸೇರಿಕೊಂಡು ಸಸಿ ನೆಡುವ ಕಾರ್ಯವನ್ನು ಶ್ರಾಂಗಗೊಳಿಸಿದರು. ಶ್ರೀ ಎಸ್. ಪಿ. ನಾಯಕ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಶ್ರೀಗಳಾದ ಎಸ್. ಶಿವರಾಮ ಕಟ್ಟೆ, ಕೆ. ಪೈಯಿನ್ ಸಾಹೆಬ್, ಎಚ್. ಸಂಜೀವ ಸೆಟ್ಟಿ, ಮೊದಲಾದವರು ಮಾತನಾಡಿದರು.

ಬೆಳ್ಳಾರೆ: ಕಳಂಜ ಬಾಳಿಲ ಗ್ರಾಮ ಸೇವಾ ಸಂಘದ ಆಶ್ರಯದಲ್ಲಿ ಆಯ್ಕೆಯ ಪ್ರಿಯ ಸೇವಾ ದಳದ ಉದ್ಘಾಟನೆಯನ್ನು ಬೆಳ್ಳಾರೆಯ ಗ್ರಾಮ ಸೇವಕ ಶ್ರೀ. ಕೆ. ನಾರೇರ ಸುಬ್ರಹ್ಮಣ್ಯನವರು ನೆರವೇರಿಸಿದರು. ಶ್ರೀ. ಜಿ. ಕೃಷ್ಣಾ ರೈಗಳು ಅಧ್ಯಕ್ಷತೆ ವಹಿಸಿದ್ದರು. ಸಂಘದ ಸದಸ್ಯರು ವಾರದಲ್ಲಿ ಕನಿಷ್ಠ ಪಕ್ಷ ಒಂದು ಗಂಟೆಯಾದರೂ ಶ್ರಮದಾನ ಮಾಡಬೇಕೆಂದು ಸಭೆಯ ಅಭಿಪ್ರಾಯವಾಯಿತು.

ಹಿರಿಯಡಕ— ಸ್ಥಳೀಯ ಬೋರ್ಡು ಹೈಸ್ಕೂಲು ಮತ್ತು ಬೋರ್ಡು ಹಾಗೂ ಎಲಿ ಶಾಲೆಗಳಲ್ಲಿ ಸಸಿನೆಡುವ ಸಮಾರಂಭವು ತಾ. ೧೧ರಲ್ಲಿ ಉಡುಪಿ ರೇಂಜಿನ ಎ. ಸಿ. ಟಿ ಬಳವರ ನೇತೃತ್ವದಲ್ಲಿ ಜರಗಿತು. ನಿವೃತ್ತ ಶಾಲಾ ಹೆಡ್ಮಾಸ್ಟರ್ ಶ್ರೀ ಬಿ. ರಾಮರಾಯ ಸೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸೀತಾನದಿ ಗಣಪಯ್ಯ ಸೆಟ್ಟಿ ಮತ್ತು ಎ. ಸಿ. ಟಿ. ಬಳವರು ಮಾತನಾಡಿದರು. ಅಧ್ಯಕ್ಷರ ಗಂಭೀರ ಭಾಷಣ ನಂತರ ಶ್ರೀ ಟಿ. ರಮಾನಾಥ ಪೈಗಳು ಧನ್ಯವಾದಗಳನ್ನರ್ಪಿಸಿದರು. ಸಿಹಿತಿಂಡಿ ವಿತರಣೆಯಾಗಿ ಸಮಾರಂಭ ಕೊನೆಗೊಂಡಿತು.

ಹುಸ್ಲೆಮಕ್ಕಿ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲಾ ನೂತನ ಕಟ್ಟಡದ ಪ್ರವೇಶೋತ್ಸವವನ್ನು ಕಳೆದ ತಾ. ೨೮ರಲ್ಲು ಬಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮ್, ಅವರು ನೆರವೇರಿಸಿದರು. ಶ್ರೀ ಪೈ. ಮಂಜಯ್ಯ ಸೆಟ್ಟಿ ಎಮ್. ಎಲ್. ಎ., ಅವರು ಅಧ್ಯಕ್ಷತೆ ವಹಿಸಿದ್ದರು. ಬಿಲ್ಲಾ ಬೋರ್ಡು ಸದಸ್ಯ ಶ್ರೀ ಎನ್. ಎಸ್. ಪರಮೇಶ್ವರಯ್ಯನವರು ಸ್ವಾಗತ ಭಾಷಣ ಮಾಡಿದರು. ಬಿಲ್ಲಾ ಬೋರ್ಡು ಸದಸ್ಯರು ಶ್ರೀಗಳಾದ ಎಮ್. ಎಮ್. ಹೆಗ್ಡೆ ಮತ್ತು ಕೆ. ಸಂಜೀವರಾಯರು ಶಾಲೆಗೆ ಶುಭವನ್ನು ಕೋರಿ ಭಾಷಣವಿತ್ತರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಮ್. ಕೆ. ನಾರಾಯಣ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಆತಿಥಿಗಳಿಗೆ ಉಪಾಹಾರ, ಶಾಲಾ ಮಕ್ಕಳಿಗೆ ತಿಂಡಿ ಸಂತೋಷಾನಾದ ಬಳಿಕ ಸಭೆ ಕೊನೆಗೊಂಡಿತು.

ಬಡಾನಿಡಿಯೂರು — ಇಲ್ಲಿಯ ಕರ್ನಾಟಕ ಸಂಘದ ಉಪನ್ಯಾಸ ಶಾಖೆಯವರು ತಾ. ೧೧ರಲ್ಲಿ ತಿಂಗಳಿಡಿಯೂರು ಬೋರ್ಡು ಎಲಿಮೆಂಟರಿ ಶಾಲೆಗೆ ಹೋಗಿ ಅಲ್ಲಿಯ ಮಕ್ಕಳಿಂದ ಭಾಷಣ ಮತ್ತು ಲೇಖನ ಸ್ಪರ್ಧೆಗಳನ್ನು ಜರಗಿಸಿ ಬಹುಮಾನವಿತ್ತರು. ಶ್ರೀ ಚಂದ್ರಶೇಖರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಟಿ. ಎಲ್. ಉಡುಪ, ಕೆ. ವಿಶ್ವಂಬರ ಉಪಾಧ್ಯಾಯ, ಧನಾಡಿರಾಮ್, ಶ್ರೀಧರ ಹೆಗ್ಡೆ ಮೊದಲಾದವರು ವಿವಿಧ ವಿಷಯಗಳನ್ನೆತ್ತಿ ಮಾತನಾಡಿ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನುಂಟುಮಾಡಿದರು.

ಬಡಗಬೆಟ್ಟು— ಬೈಲೂರು ಮತ್ತು ಕೊರಂಗ್ರಪಾಡಿ ಗ್ರಾಮಗಳ ನಡುವೆ ಇರುವ ಕಾಲ್ದಾರಿಯನ್ನು ವಾಹನ ಸಂಚಾರದ ದಾರಿಯನ್ನಾಗಿ ಮಾಡುವ ಕೆಲಸದ ಸ್ವಾರಂಭವನ್ನು ತಾ. ೧೮ಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ನಡೆಸಿದರು. ಉಡುಪಿ ತಹಶಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯ ಮೊದಲಾದವರು ಹಾಜರಿದ್ದರು. ಈ ರಸ್ತೆಯ ಕೆಲಸದ ಜವಾಬ್ದಾರಿ ವಹಿಸಲು ಶ್ರೀ ಟಿ. ಎ. ಪೈಗಳು ಅಧ್ಯಕ್ಷರಾಗಿಯೂ, ಶ್ರೀ ಕಾಳಪ್ಪ ಸೆಟ್ಟರು ಕಾರ್ಯದರ್ಶಿಗಳಾಗಿಯೂ, ಶ್ರೀ ಜೋಬ್ ಡಿ.ಅಮ್ಮಣ್ಣನವರು ಖಜಾಂಚಿಗಳಾಗಿಯೂ ಇರುವ ಕಮಿಟಿ ರಚಿಸಲಾಯಿತು.

ಕುಂಬಳೆ: ಅಕಸ್ಮಾತ್ತಾಗಿ ತಲೆದೋರಿದ ಜಾನುವಾರು ರೋಗದ ಉಪಶಮನಕ್ಕಾಗಿ ಕೊಯಪ್ಪಾಡಿ, ಅರಿಕ್ಕಾಡಿ, ಇಚ್ಲಂಗಾಡಿ, ಎಡನಾಡು ಮೊದಲಾದ ಗ್ರಾಮಗಳ ಆಸ್ತಿಕ ಜನತೆಯು ಸ್ಥಳೀಯ ಶ್ರೀ. ಗೋಪಾಲಕೃಷ್ಣ ಸ್ವಾಮಿ ಸನ್ನಿಧಿಯಲ್ಲಿ ಸಮಸ್ತ ಸಂಖ್ಯಾ ಎಳೀರು ಅಭಿಷೇಕ ಹಾಗೂ ವಿಶೇಷ ಪೂಜಾದಿಗಳನ್ನು ನಡೆಸಿದರು.

ಸುಳ್ಯ: ಇದೇ ತಾ. ೨೧ರಲ್ಲು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರ ಅಧ್ಯಕ್ಷತೆಯಲ್ಲಿ ನಡೆದ ಮಹಾ ಜನರ ಸಭೆಯಲ್ಲಿ ಗ್ರಾಮ ಸೇವಾ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ. ಗಣಪಯ್ಯ ಸೆಟ್ಟರ ಹಾಡುಗಾರಿಕೆಯಿಂದ ಶ್ರೀಗಳಾದ ಸೀತಾರಾಮಯ್ಯ, ಕಿಟ್ಟಣ್ಣ ರೈ ಮೊದಲಾದ ಅರ್ಥದಾರಿಗಳ ಕೂಡುವಿಕೆಯಿಂದ 'ಅತಿಕಾಯ ಕಾಳಗ' ಎಂಬ ಯಕ್ಷಗಾನ ನಡೆಯಿತು.

ಬಾಡೂರು— ಈ ಗ್ರಾಮದ ಶ್ರೀ ಸನ್ಮಾನಾನಂದ ಪ್ರಾಥಮಿಕ ಶಾಲಾ ಬಾಲ ಭಾರತಿ ಸಭೆಯು ಇದೇ ತಾ. ೨೭ರಲ್ಲೂ ಅದೇ ಶಾಲೆಯ ಆನಂದ ಸಮಾಜದ ಮಂತ್ರಿಮಂಡಲದ ಸಭೆಯು ತಾ. ೨೧ರಲ್ಲೂ ಜರಗುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಟ್ಟಿಕ್ಕೋಲು— ಕುಟ್ಟಿಕ್ಕೋಲು ಗ್ರಾಮದಲ್ಲಿ ಮುಂದಿನ ಸಪ್ಟಂಬರ ತಿಂಗಳ ತಾ. ೨೧ರಿಂದ ಪಂಚಾಯತಬೋರ್ಡು ಸ್ಥಾಪಿಸಲ್ಪಟ್ಟು ಬ್ಯಾರಿಗೆ ಬರಲಿರುವುದು.

ಸುಮತಿ ತಾರಾನಾಥರ ನಿಧನ— ಆಯುರ್ವೇದ ವೈದ್ಯ ವಿದ್ಯೆಯ ಪಂಡಿತಾಚಾರ್ಯ ತಾರಾನಾಥರ ಧರ್ಮ ಪತ್ನಿ ಶ್ರೀಮತಿ ಸುಮತಿಬಾಯಿ ತಾರಾನಾಥ, ಬಿ. ಎ. ಎಲ್. ಟಿ, ಅವರು ಇದೇ ತಾ. ೧ರಂದು ಬೆಳಿಗ್ಗೆ ಬೆಂಗಳೂರಲ್ಲಿ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದ ಪಡಿಸುತ್ತದೆ ಶ್ರೀಮತಿಯರು ನುರಿತ ಲೇಖಕಿ, ವಾಗ್ಮಿ, ಪರೋಪಕಾರಿಣಿ, ಗಳಾಗಿದ್ದರು. ಶ್ರೀಮತಿಯರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಅಂತೆಯೇ ಅವರ ಕುಟುಂಬದವರಿಗುಂಟಾದ ದುಃಖವನ್ನು ಪಡಿಸಲು ಪರಮಾತ್ಮನು ಶಕ್ತಿ ನೀಡಲಿ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 14 33 O. S. 66, 46
M. ಶೇಷ — ಅರ್ಜಿದಾರ,

1. ಕೊಯಪ್ಪ ರೈ, ತಿಮ್ಮಪ್ಪ ರೈ ಮನೆ, ಕಾಕ್ಕರೆ ಕೊಡಗಿನ ಕಾಟಿಮೇರಿ ಗ್ರಾಮ ಮೂಡ ತಾಲ್ಲೂಕು.
2. ಜಮಾಲ್ ಅಕ್ಬರ್ ಹೆಂಗಸಿನ ಮಗಳು, Abbas Manzil Mori Road, Mahim Bombay.
3. ಅಲಿತ, ಮುತ್ತಕ್ಕನ ಮಗಳು, ಉತ್ತರ ಕೊಡಗಿನ ಕಾಟಿಮೇರಿ ಗ್ರಾಮದ ತಾಲ್ಲೂಕು. — ಎದುರು.

ಇದೇದಾರನು ಸ್ವಿರಾಸ್ತಿ ಇಷ್ಟುದು ಬಗ್ಗೆ ದಾಖಲು ಮಾಡಿದ ಈ ಅರ್ಜಿಯಾಯಿ ತಾ. 30-7-55ಕ್ಕೆ ಇರುವುದರಿಂದ ಆ ಕುರಿತು ಇಮಗೇನಾದರೂ ಆಕ್ಷೇಪದ ಇದ್ದಲ್ಲಿ ಆ ದಿನದ ಹಾಜ್ರಾಗಿ ಉದಾಹರಣೆಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಪನ್ನಾನಲಾದೀತೆಂದು ಈ ನೋಟಿಸ ತಿಳಿಸಿದೆ

B. Chidananda Rao,
Vakil for Petitioner.

ಪುತ್ತೂರು, ತಾ. 4-7-55.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನರಿ
ಬೆಲೆ: ರೂ. 5—6—0
ನವಭಾರತ ಬುಕ್ ಡಿಪೋ, ಉಡುಪಿ

Kannada non-detailed Text Book for Higher Forms
ಬಂಗಾರವೆಂಬ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶೆದಿಂದ ಪ್ರಸಂಸಿಸಲ್ಪಟ್ಟ

ಬದುಕು ಬಂಗಾರ
(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಸರಕಾರವರು: ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕಾಂತ ರೈ ವಿದ್ವಾನ್ ಇವರು ಬರೆದಿರುವ

ಪ್ರೌಢ ಶಾಲಾ ವ್ಯಾಕರಣ
ಮತ್ತು
ಛಂದೋಲಂಕಾರ ಸಾರ
ಎಂಬ ವ್ಯಾಕರಣ ಪುಸ್ತಕವು

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾಗಿದೆ.

ಪುಟಗಳು ೨೪೦ (ದ್ವಿತೀಯ ಮುದ್ರಣ) ಬೆಲೆ: ೧-೧೨ ೦

ಇದೇ ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಸೂರಾಣಿ ಸ್ವಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಶ್ರೀ ಎಚ್. ವಿ. ಕಾಮತರ ಭಾಷಣ— ಪ್ರಜಾ ಸೋಶಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಕಾರೀ ಮಂಡಳಿಯ ಸದಸ್ಯ ಶ್ರೀ ಎಚ್ ವಿ. ಕಾಮತ್, ಎಂ. ಪಿ. ಯವರು ತಾ. ೬-೭ರ ಸಂಜೆ ಪ್ರಜಾ. ಸೋ. ಪಕ್ಷದ ಅಧ್ರಯಿದಲ್ಲಿ ಕೊಡಿಯಾಲ ಬೈಲಿನ ಬೆಸೆಂಟ್ ಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ ಇಂದು ಲೋಕದ ಯಾವ ರಾಷ್ಟ್ರದಲ್ಲಿಯೂ ಆದರ್ಶ ಪ್ರಜಾಪ್ರಭುತ್ವವಿಟ್ ಎನ್ನಲಾಗುವುದಿಲ್ಲ. ಹೀಗಾಗಿ ಕೆಲವೊಮ್ಮೆ ಭಂಡವಾಳಶಾಹಿಗಳೂ ಧನಾಢ್ಯರೂ ತಮ್ಮ ಧನಬಲದಿಂದ ಚುನಾವಣೆಗೆ ಮತದಾರರನ್ನು ಬಲಿಸುವುದರಲ್ಲಿ ಜಯಶೀಲರಾಗುತ್ತಾರೆ. ಆದರೆ ತಮ್ಮ ಕರ್ತವ್ಯವನ್ನರಿತ ಮತದಾರರು ಮಾತ್ರ ಇವರ ಜಾಲದಲ್ಲಿ ಬೀಳುವರ್ ಹಾಗಿಲ್ಲ ಎಂದರು. ಪ್ರಜಾಪ್ರಭುತ್ವವು ಬೆಳೆಯಬೇಕಾದರೆ ಪ್ರತಿಪಕ್ಷವು ಯಾವಾಗಲೂ ಆಳುವ ಪಕ್ಷಕ್ಕೆ ಪ್ರಬಲ ಪ್ರತಿಭಟನೆಯಾಗಬೇಕು. ಪ್ರಜಾಪ್ರಭುತ್ವವನ್ನು ಕಟ್ಟುವುದರಲ್ಲಿ ಜನತೆಯು ಕ್ರಿಯಾತ್ಮಕ ಆಸಕ್ತಿಯನ್ನು ತೋರಿಸಬೇಕೆಂದರು. ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ ಶ್ರೀ ಕೆ. ಆರ್. ಕಾಂತರು ಮಾತನಾಡುತ್ತಾ ಆಳುವ ಪಕ್ಷದವರು ತಮ್ಮ ಹಿಂಬಾಲಕರಿಗೆ ಸಹಾಯ ಸವಲತ್ತುಗಳನ್ನು ಸರ್ಕಾರದ ಸೊತ್ತುಗಳಿಂದ ಒದಗಿಸುವ ಮತ್ತು ಚುನಾವಣಾ ಕಾಲದಲ್ಲಿ ಸರಕಾರದ ಯಂತ್ರವನ್ನು ತಮ್ಮ ಪಕ್ಷದ ಪ್ರಚಾರಕ್ಕಾಗಿ ಉಪಯೋಗಿಸುವ ನೀತಿಯನ್ನು ಖಂಡಿಸಿದರು.

ಕಾಲೇಜು ಯೂನಿಯನ್ ಚುನಾವಣೆ— ಸರಕಾರೀ ತರಬೇತಿ ಕಾಲೇಜ್ ಯೂನಿಯನ್ ಚುನಾವಣೆಯು ತಾ. ೦೮ರಲ್ಲಿ ಜರಗಿ ಶ್ರೀಗಳಾದ ಎ. ಅರವಿಂದ ರಾವ್ ಮತ್ತು ಕೆ. ವೆಂಕಟರಮಣ ಐತಾಳರು ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆಯ್ಕೆಮಾಡಿರಿಸಲ್ಪಟ್ಟರು. ತಾ. ೧೨ರಲ್ಲಿ ಈ ಯೂನಿಯನ್ನಿನ ಉದ್ಘಾಟನೆಯನ್ನು ಕೊಡಗಿನ ತರಬೇತಿ ಕಾಲೇಜಿನ ಪ್ರಿನ್ಸಿಪಾಲರಾಗಿ ಯೋಗಲಿರುವ ಶ್ರೀ ಬಿ. ರಾಘವ ಬಾಳಿಗರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಈಗಿನ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರು ವಹಿಸಿದ್ದರು.

ಸೈಂಟ್ ಎಲೋಸಿಯಸ್ ಕಾಲೇಜ್ ಯೂನಿಯನ್— ಅಧಿಕಾರಿಗಳ ಚುನಾವಣೆಯು ತಾ. ೦೮ರಲ್ಲಿ ನಡೆದು ಶ್ರೀ ಎಸ್. ಎಸ್. ಶ್ರೀಪತಿ ಅಧ್ಯಕ್ಷರಾಗಿಯೂ ಶ್ರೀ ಎಸ್. ಕಮಾನಂದ ಹೆಗ್ಡೆ ಪ್ರಧಾನ ಕಾರ್ಯದರ್ಶಿಯರಾಗಿಯೂ ಶ್ರೀ ಎನ್. ಜಿ. ಜೋನ್ಸರವರು ಜತಕಾರ್ಯದರ್ಶಿಗಳಾಗಿಯೂ ಆಯ್ಕೆಸಲ್ಪಟ್ಟರು.

ದ. ಕ. ಜಿಲ್ಲಾ ಮಾಸ್ಟರ್ ಪ್ರಿಂಟರ್ಸ್ ಎಸೋಸಿಯೇಶನಿನ— ದ್ವಿತೀಯ ವಾರ್ಷಿಕೋತ್ಸವವು ಇದೇ ತಾ. ೧೯ರಲ್ಲಿ ಸಂಜೆ ೪ ಗಂಟೆಗೆ ಕೊಡಿಯಾಲ ಬೈಲಿನ ಸಿ. ಪಿ. ಸಿ. ಅತಿಥಿ ಗೃಹದಲ್ಲಿ ಶ್ರೀ ಟಿ. ವೈಕುಂಠ ಬಾಳಿಗ, ಎಮ್ ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಆಷಾಢ ಪೌರ್ಣಮಿ ದಿನವನ್ನು ತಾ. ೨೦ರಲ್ಲಿ ಬೆಸೆಂಟ್ ಬಾಲಿಕಾ ವಾರಶಾಲೆಯಲ್ಲಿಯೂ ಥಿಯಸಾಫಿಕಲ್ ಸಂಘದಲ್ಲೂ ಶ್ರೀಗಳಾದ ಲೋಕಯ್ಯ ಶೆಟ್ಟಿ ಮತ್ತು ಡಾ. ಪಿ. ಜಿ.ಗೊಲ್ಲರಕೇರಿಯವರ ಅಧ್ಯಕ್ಷತೆಯಲ್ಲಿ ಆಸುಕ್ರಮವಾಗಿ ಆಂಸಲಾಯಿತು. ಶ್ರೀಗಳಾದ ಎಮ್. ಎಸ್. ಏಕಾಂಬರೇರಾವ್, ಪಿ. ಕೆ. ನಾರಾಯಣ, ಎಮ್. ಎಸ್. ಮಾಧವರಾವ್ ಮೊದಲಾದವರು ಭಗವಾನ್ ಬುದ್ಧನ ಕುರಿತು ಮಾತನಾಡಿದರು. ಶ್ರೀಮತಿ ಎಮ್. ಲೀಲಾ ಬಾಯಿಯವರು ಧನ್ಯವಾದಗಳನ್ನರ್ಪಿಸಿದರು.

ವನಮಹೋತ್ಸವವು— ತಾ. ೧೭ರಲ್ಲಿ ಮಂಗಳೂರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮ್, ಅವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀಗಳಾದ ಸಿ. ಎಲ್. ಪೋಜೋ ಮತ್ತು ಪಿ. ಆರ್. ಪೂಂಜರು ಭಾಷಣಮಾಡಿದರು. ಶ್ರೀ ಬಿ. ಆರ್. ಕರ್ಕೇರರು ಧನ್ಯವಾದಗಳನ್ನರ್ಪಿಸಿದರು.

ಮೈಸೂರು ಸರಕಾರದ ಪ್ರೆಸ್ ನೋಟು— ಮೈಸೂರು ಸರಕಾರದ ಗೃಹ ಮಂತ್ರಿಗಳು ಸೆಂಟ್ರಲ್ ಸಿಲ್ಕ್ ಬೋರ್ಡಿನ ಸ್ಥಾಯಿಂಗ್ ಕಮಿಟಿಯ ಕಳದ ತಾ.೨೭ರಲ್ಲಿ ಬೊಂಬಾಯಿಯಲ್ಲಿ ಸೇರಿದ ಅವಸರದ ಸಭೆಯಲ್ಲಿ ಭಾಗವಹಿಸಿ ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಕಚ್ಚಾ ಶಿಲ್ಕನ್ನು ಆಮದುಮಾಡುವ ಮತ್ತು ಕಚ್ಚಾ ಶಿಲ್ಕಿನ ಬೆಲೆಯನ್ನು ಸಮಾನೀಕರಿಸುವ ಕುರಿತು ಸಭೆಯಲ್ಲಿ ಚರ್ಚಿಸಿದರು. ಗೃಹಸಚಿವರುಗಳು ಬೊಂಬಾಯಿಗೆ ಹೋಗುವ ಮೊದಲು ಮೈಸೂರು ಸಿಲ್ಕ್ ಎಡ್ವೈಜರಿಕಮಿಟಿ ಸಭೆಯನ್ನು ಕರೆದು ಜನತೆಯ ಅಭಿಪ್ರಾಯವೇನಿದೆ ಎಂಬುದನ್ನು ತಿಳಿದುಕೊಂಡರು. ಈ ಕುರಿತು ಬೊಂಬಾಯಿ ಸಭೆಯಲ್ಲಿ ಮೈಸೂರಿನ ಕುರಿತು ಹೇಳಲಾದ ವಿಷಯಗಳಿಗೆ ಸಹಾನುಭೂತಿ ದೊರೆಯಿತು. ಮೈಸೂರು ಶಿಲ್ಕ್ ತಯಾರಿಕರಿಗೆ ತಂಟೆಬಾಗದಂತೆ ಕೇಂದ್ರ ಶಿಲ್ಕ್ ಬೋರ್ಡು ನಿಗಾತೆಗೆದುಕೊಳ್ಳುವುದೆಂದೂ ಆಮದು ಮಾಡುವ ಇತ್ಯಾದಿ ಬದಲಾವಣೆಮಾಡುವ ಸಂದರ್ಭದಲ್ಲಿ ಮೈಸೂರು ಸರಕಾರದ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದೆಂದೂ ಮಂತ್ರಿಗಳಿಗೆ ಭರವಸೆ ದೊರೆಯಿತು. ಸೆಂಟ್ರಲ್ ಶಿಲ್ಕ್ ಬೋರ್ಡು ಮತ್ತು ಮೈಸೂರು ಸರಕಾರದೊಡನೆ ಪ್ರಶ್ನೆತ ಸಾಕಷ್ಟು ಶಿಲ್ಕು ದಾಸ್ತಾನು ಇದ್ದು ಅದನ್ನು ಸಂದರ್ಭಾನುಸಾರ ಮಾರ್ಕೆಟಿಗೆ ಹಾಕಲಾಗುವುದು. ಮೈಸೂರು ರಾಜ್ಯದಲ್ಲಿ ರೇಶ್ಮೆ ಹುಳಗಳ ಬೆಳೆಯನ್ನು ಸಾಕಲಾವರ ಆರ್ಥಿಕ ಸುಟ್ಟಿಕ್ಕೆ ಸರಿಯಾಗಿ ಸರ್ಕಾರಿಸಿ ಬೆಲೆ ನಿಶ್ಚಯಿಸುವ ಆವಶ್ಯಕತೆಯನ್ನು ಮಂತ್ರಿಗಳು ಸಭೆಯಲ್ಲಿ ಸೂಚಿಸಿದರು ಸೆಂಟ್ರಲ್ ಶಿಲ್ಕ್ ಬೋರ್ಡಿನವರು ಅದನ್ನು ಪರಿಶೀಲಿಸುವುದಾಗಿ ಹೇಳಿದರು. ಮೈಸೂರು ರಾಜ್ಯದಲ್ಲಿ ಸರಿಕ್ಟರ್ ಕೈಗಾರಿಕೆಯನ್ನು ಮುಂದೊತ್ತುವುದರಲ್ಲಿ ಮತ್ತು ಅದರ ರಕ್ಷಣೆಯಲ್ಲಿ ಸರಕಾರವು ಸಾಧ್ಯವಾದುದನ್ನೆಲ್ಲಾ ಮಾಡುವುದಾಗಿ ಆಶ್ವಾಸನೆಯೊಯಲು ಸಂತೋಷಸಡುತ್ತದೆ.

(ಒನೇ ಪುಟದಿಂದ)

ದೆ ದೇಶದಲ್ಲಿ ೫೫ ಲಕ್ಷ ಕಿಲೋವಾಟಿನಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬೇಕೆಂದು ದ್ವಿತೀಯ ಯೋಜನೆಯ ಗುರಿ. ನೀರಾವರಿ ಕ್ಷೇತ್ರದಲ್ಲಿ ೧೪೦ ದೊಡ್ಡ ಹಾಗು ಸಾಮಾನ್ಯ ಮಟ್ಟದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ದೊಡ್ಡ ಯೋಜನೆಗಳಿಂದ ೮೫ ಲಕ್ಷ ಮತ್ತು ಸಣ್ಣ ಯೋಜನೆಗಳಿಂದ ೧೧೦ ಲಕ್ಷ ಎಕ್ರೆ ಭೂಮಿಗೆ ನೀರುಣಿಸಲಾಗುತ್ತದೆ. ೧೫—೨೦ ವರ್ಷಗಳ ಅವಧಿಯಲ್ಲಿ ನೀರಾವರಿ ವಲಯದ ವಿಸ್ತೀರ್ಣವನ್ನು ಇಮ್ಮಡಿಗೊಳಿಸುವುದೇ ಯೋಜಕರ ಮುಖ್ಯೋದ್ದೇಶ

ಶುದ್ಧ ನೀರಿನ ಪೂರೈಕೆ

ಆರೋಗ್ಯ ವಿಭಾಗದಲ್ಲಿ ಎಲ್ಲ ರಾಜ್ಯಗಳ ಅವಶ್ಯಕತೆಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ೬೦ ಕೋಟಿ ರೂಪಾಯಿಗಳನ್ನು ಉತ್ತಮ ನೀರಿನ ಪೂರೈಕೆ ಮತ್ತು ಆರೋಗ್ಯ ಸಂವರ್ಧನ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತದೆ. ಹತ್ತು ವೈದ್ಯಕೀಯ ಶಿಕ್ಷಣ ಕೇಂದ್ರಗಳನ್ನು ಹೊಸತಾಗಿ ಆರೆಯಲು ೧೧೬೦ ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಲಾಗಿರುತ್ತದೆ. ೮೦೨ ಲಕ್ಷ ರೂಪಾಯಿಗಳ ವೆಚ್ಚದಿಂದ ಕ್ಷಯ ರೋಗಕ್ಕೆ ಚಿಕಿತ್ಸೆ ನಡೆಯುವ ೩೦೦ ಹೊಸ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಬಹಳ ಮುಂದರಿದ ಕ್ಷಯ ರೋಗದ ಸಂಗತಿಯಲ್ಲಿ ರೋಗಿಗಳನ್ನು ಸೆಳೆಗೊಳಿಸುವುದಕ್ಕಾಗಿ ೨೦೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೫೦೦ ಹೊಸ ಹಾಸಿಗೆಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಗುಣವಾಗದಮನೋರೋಗ, ಕುಷ್ಠ ರೋಗ, ಅಂಗವೈಕಲ್ಯ— ಇವುಗಳಿಂದ ಪೀಡಿತರಿಗೆ ೫ ಕೋಟಿ ರೂಪಾಯಿ ವೆಚ್ಚದಲ್ಲಿ ೧೫ ಕೇಂದ್ರಗಳು ತೆರೆಯಲ್ಪಡುತ್ತವೆ. ೫೦೦೦೦ ದಾಯಿಗಳಿಗೆ ತರಬೇತಿ ನೀಡಲಾಗುತ್ತದೆ. ಅನೆಕಾಲು ರೋಗ ನಿರೋಧಕ್ಕೆ ೧೩೦ ಲಕ್ಷ ರೂಪಾಯಿಗಳನ್ನೂ ಮಲೇರಿಯದ ನಿಯಂತ್ರಣಕ್ಕೆ ೧೮೬೭ ಲಕ್ಷ ರೂಪಾಯಿಗಳನ್ನು ವ್ಯಯಿಸಲಾಗುತ್ತದೆ. ಅರ್ಬುದ ರೋಗ, ಲೈಂಗಿಕ ರೋಗ ಇತ್ಯಾದಿಗಳ ಉಪಶಮನಕ್ಕೆ ಹೆಚ್ಚಿನ ವ್ಯವಸ್ಥೆ ಕೈಗೊಳ್ಳಲ್ಪಡುತ್ತದೆ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

R. E. P. 40/54 O. S. 66/46

M. ಶೇಕಪ್ಪ — ಅರ್ಜಿದಾರ.

ಕೋಚಪ್ಪ ರೈ ವಗೈರೆರು — ಎದ್ರುರು.

1. ಕೋಚಪ್ಪ ರೈ, ತಿಮ್ಮಪ್ಪ ರೈಗಳ ಮಗ, ಕಾಟುಗೇರಿ ಗ್ರಾಮದ ತಾಳ್ತಮನೆ, ಕೊಡಗು.
2. ಸಾಂತಪ್ಪ ರೈ, ತಿಮ್ಮಪ್ಪ ರೈಗಳ ಮಗ, ಗಾಳಿ ಬೀಡಿ, ಮಡಿಕೇರಿ, ಕೊಡಗು.
4. ಕನುಲ, ಲಕ್ಷ್ಮಿ ಹೆಂಗಸಿನ ಮಗಳು, Abbas Manzil Mori Road, Mahim, Bombay.
5. ಲಲಿತ, ಮುತ್ತಮ್ಮನ ಮಗಳು, ಕಾಟುಗೇರಿ ಗ್ರಾಮ, ಕೊಡಗು.
7. ಬಾಲಕೃಷ್ಣ ರೈ, ಮುತ್ತಮ್ಮನ ಮಗ, Abbas Manzil Mori Road, Mahim, Bombay.
8. ಸೀತಾರಾಮ ರೈ, ಮುತ್ತಮ್ಮನ ಮಗ, Write Peramkolli Estate, Coorg.

ಇವರಿಗೆ ತಿಳಿಸುವುದೇನೆಂದರೆ—

ಅರ್ಜಿದಾರನು ಸ್ಟ್ರಾಸ್ತಿ ಎಲಮನ ಬಗ್ಗೆ ದಾಕಲು ಮಾಡಿದ ಈ ಅಮಲ್ಜಾರಿ ಮತ್ತು ನಿಲಮಿಗೆ ನಿಲ್ಲುವರೆ ಪರ್ಮಿಶನ್ ಬಗ್ಗೆ ದಾಕಲು ಮಾಡಿ R. E. A. 450/54ನೆ ಅರ್ಜಿ ಕೂಡಾ ತಾ. 20-7-55ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜ್ರಾಗಿ ಉದಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Petitioner.

ಪುತ್ತೂರು, ತಾ. 4-7-55.

ಆವಶ್ಯಕ ಮಾಹಿತಿಗಳಿಂದ ಕೂಡಿರುವ

ಮಕ್ಕಳ ಮಗ್ಗಿ ಪುಸ್ತಕ

ಬೆಲೆ ೦—1—೦

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವಸ್ಥಳ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನೆಯ್ಯ ಶೆಟ್ಟರ

ಮುಗುಳು

ವಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಭಗವದ್ಗೀತೆಯ ಸಮೂಲ ಭಾಷಾಂತರ.

ನವಯುಗ ಪ್ರೆಸ್ ಉಡುಪಿ.

ಸ್ವೀಕಾರ—ವಿಮರ್ಶೆ

ವಿಜಯಶ್ರೀ—

ಬರೆದವರು: ಮಿರ್ಜಿ ಅಣ್ಣಾ ರಾಯರು. ಪ್ರಕಾಶಕರು: ನೇತ್ರಾವತಿ ಪ್ರಕಾಶನ, ಬಳೇ ಪೇಟೆ, ಬೆಂಗಳೂರು ೨. ಬೆಲೆ: ರೂ. ೧-೮-೦.

ಇದು ಏಳು ಕತೆಗಳ ಒಂದು ಸಂಗ್ರಹ. "ವಿಜಯ ಶ್ರೀ" ಎಂಬ ಮೊದಲಿನ ಕತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಒಬ್ಬ ಯೋಧನ ಧೈರ್ಯ ಸ್ಥೈರ್ಯಗಳನ್ನು ಚಿತ್ರಿಸುತ್ತದೆ. ಉಳಿದ ಆರೂ ಕತೆಗಳಲ್ಲಿ ರೈತರ ದಾರುಣ ಜೀವನ, ಬದತನದ ಬವಣೆ, ಉಳ್ಳವರ ದರ್ಪಗಳಿಂದ ಸಾಮಾನ್ಯರು ನೊಂದುಕೊಳ್ಳುವ ಬಗೆ ಇತ್ಯಾದಿ ಪ್ರಸಂಗಗಳು ಹೆಣೆಯಲ್ಪಟ್ಟು ಹೃದಯ ಸ್ಪಂದನವನ್ನುಂಟುಮಾಡುತ್ತವೆ. ಪಾತ್ರಗಳು ಹೆಚ್ಚಾಗಿ ಓದುಗರ ಸಹಾನುಭೂತಿಯನ್ನು ಸಡೆಯುತ್ತವೆ; ಕೆಲಪೊಂದು ಪ್ರಸಂಗಗಳಲ್ಲಿ "ನಾವಿನೆ ಸ್ವಾತಂತ್ರ್ಯ ಬಂದರೂ ಬಡವರ ಗೋಳು ತಪ್ಪಲಿಲ್ಲ" ಎಂಬ ಅತೃಪ್ತಿಯನ್ನು ಲೇಖಕರು ಪುನಃ ಪುನಃ ಪ್ರಸ್ತಾಪಿಸಿರುವುದು ಗೋಚರಿಸುತ್ತದೆ. ಅವೇಶ ಭರದಲ್ಲಿ ಅವರು ಹೀಗೆ ಹೇಳ ಹೋದರೆಂದು ಭಾವಿಸಿದರೆ ತತ್ವಾಗವೆಂದು ನಮ್ಮ ವಿಶ್ವಾಸ. ಒಟ್ಟಿನಲ್ಲಿ ಅಣ್ಣಾ ರಾಯರ ಕತೆಗಳು ಸುಂದರವಾಗಿವೆ; ಶೈಲಿ ಗ್ರಾಮ್ಯ ಶಬ್ದಗಳ ಜೋಡಣೆಯಿಂದ ಮೆರುಗೇರಿದೆ. ಆದರೆ "ನ್ಯೂಸ್ ಪ್ರಿಂಟ್" ಕಾಗದದಲ್ಲಿ ಅಂ ಪುಟಗಳ ಮಿತಿಯೊಳಗಿನ ಈ ಪುಸ್ತಕದ ಬೆಲೆ ಮಾತ್ರ ಬಹಳ ಹೆಚ್ಚಾಯಿತು; ಮುದ್ರಣವೂ ಆಷ್ಟು ಚೆನ್ನಾಗಿಲ್ಲ.

ಮೂಲಾನಕ್ಷತ್ರ—

ಬರೆದವರು: ಶೇಷನಾರಾಯಣ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೧-೪-೦.

ಸಾಮಾನ್ಯ ಕತೆಯೊಂದನ್ನು ಸ್ವಲ್ಪ ವಿಸ್ತಾರವಾಗಿ ಕಾದಂಬರಿಯ ರೂಪದಲ್ಲಿ ಹೇಳ ಹೊರಟಿರುವ ಶ್ರೀ ಶೇಷ ನಾರಾಯಣರದು ಇದೇ ಜೊಚ್ಚಲಕೃತಿ ಎಂದು ಕಾಣುತ್ತದೆ. ಆದುದರಿಂದ ಅನುಭವ ಸಾಲದೆ ಕೆಲವೆಡೆ ಕುಂದುಕೊರತೆಗಳು ಕಾಣಿಸುವುದು ಸಹಜ. ಹಾಗೆಂದು ಅವರ ಭವಿಷ್ಯದ ಬಗ್ಗೆ ನಿರಾಶೆಗೇನೂ ಎಡೆಯಿಲ್ಲ. ಏಕೆಂದರೆ, ಮೂಲಾನಕ್ಷತ್ರದಲ್ಲಿ ಅವರು ಸಾಕಷ್ಟು ಚೆನ್ನಾಗ್ಗಿತಮ್ಮ ಕೌಶಲ್ಯವನ್ನು ತೋರಿಸಿದ್ದಾರೆ. ಹಿಂದುಗಳಲ್ಲಿ ಸಾಂಪ್ರದಾಯಿಕತೆಗೆ ಕಟ್ಟು ಬಿದ್ದವರು ಹೆಣ್ಣಿನ ಗುಣ ನೋಡದೆ ಮೂಲಾ ನಕ್ಷತ್ರದಲ್ಲಿ ಹುಟ್ಟಿದ ಹುಡುಗಿ ಎಂಬ ಒಂದೇ ಮಾತಿನಿಂದ ಸೊಸೆಯಾಗಿ ಸ್ವೀಕರಿಸಲು ಹಿಂಜರಿಯುತ್ತಾರಲ್ಲವೆ? ಇದರ ವಿರುದ್ಧ ಲೇಖಕರು ಧ್ವನಿಯನ್ನು ಎತ್ತಿದ್ದಾರೆ. ಈ ಕ್ರೂರ ವಿಶ್ವಾಸದ ಪರಿಣಾಮವಾಗಿ ಲಕ್ಷ್ಮಿಯಂಥ ಹುಡುಗಿ ರಾಘವಿನಂಥ ಅಯೋಗ್ಯನ ಹೆಂಡತಿಯಾಗಿಯೇ ಬದುಕಬೇಕಾಗುತ್ತದೆ. ರಾಘವಿಗೆ ಸರೋಜಳೆಂಬ ಪ್ರೇಯಸಿಯೊಬ್ಬಳಿರುತ್ತಾಳೆ — ಇಂಥವನೊಡನೆ ಸಂಸಾರ ಕಟ್ಟಿಕೊಂಡು ನರಳುವ ಲಕ್ಷ್ಮಿಯನ್ನು ಕಂಡು ಅನುಕಂಪ ಉದ್ಭವಿಸುತ್ತದೆ. ಪಾತ್ರ ಪೋಷಣೆಯಲ್ಲಿ ಹಿನ್ನೆಲೆಯಲ್ಲಿ ನಿಲ್ಲಬೇಕಾದ ಕೆಲವು ಪಾತ್ರಗಳನ್ನು ಬೇಕೆಂದೇ ವಿಸ್ತರಿಸಿದ, ಆದರೆ ಮುಖ್ಯಪಾತ್ರಗಳ ಚಿತ್ರಣದಲ್ಲಿ ಸ್ವಲ್ಪ ಮಟ್ಟಿಗೆ ಕೈ ಗಿಡ್ಡವಾದಿದ ಲೋಪದೋಷಗಳು ಇವೆ — ಆದರೆ ಮೊದಲ ಕೃತಿ ಎಂಬ ಸಮಾಧಾನವನ್ನು ವ್ಯಕ್ತಪಡಿಸದಿರಲಾಗದು. ಕಾದಂಬರಿಯ ಸಡುವೆ ಅಲ್ಲಲ್ಲಿ ಮೈಸೂರಿನ ತೆಂಕು ಗಡಿಯ ಹಳ್ಳಿಯ ಜೀವನದ ಸುಂದರ ವರ್ಣನೆ ಮತ್ತು ಚಿತ್ರಗಳು ಬಂದಿವೆ; ಇವುಗಳಿಂದ ಮನಸ್ಸು ಸಂತೋಷಗೊಳ್ಳುತ್ತದೆ. ಅಧ್ಯಾಯಗಳನ್ನು ನಿಂಗದಿಸಿದ ಬಗೆಮಾತ್ರ ಆಷ್ಟು ಸಮರ್ಪಕವಾಗಿಲ್ಲ. ಮುಂದಿನ ಕೃತಿಗಳಲ್ಲಿ ಹೆಚ್ಚಿನ ಕಸುವು ತುಂಬಿ ಬಂದೀತೆಂದು ಆಶಿಸೋಣ.

ಸಂಯುಕ್ತ ರಾಷ್ಟ್ರ ಸಂಘ:—

ಬರೆದವರು: ಪಾಟೀಲ ಪುಟ್ಟಪ್ಪ ರಾಯರು, ಎಂ. ಎ; ಬಿ. ಕಾಂ. ಪ್ರಕಾಶಕರು: ಪುಂಡಿನ ಬಳ್ಳಿ ಕಾರ್ಯಾಲಯ, ಜವಳೀ ಪೇಟೆ, ಧಾರವಾಡ. ಬೆಲೆ: ರೂ. ೧-೮-೦.

ಕನ್ನಡದಲ್ಲಿ ಶಾಸ್ತ್ರೀಯ ಗ್ರಂಥಗಳ ಕೊರತೆ ಇದೆ ಎಂದು ದೂರುವವರೇ ಹೆಚ್ಚಿದ್ದಲ್ಲದೆ ಆ ದಿಸೆಯಲ್ಲಿ ಪ್ರಯತ್ನವಾಡುವ ಸುರಿಕ್ಷಿತರು ವಿರಳ; ಯಾರಾದರೊಬ್ಬರು ಅಂಥ ಸಾಹಸ ಕೈಗೊಂಡಾಗ ಅದಕ್ಕೆ ಪ್ರೋತ್ಸಾಹ ನೀಡುವ ಜನರೂ ಹೆಚ್ಚಿಲ್ಲ. ಇಂಥ ಕನ್ನಡವನ್ನು ಉಚ್ಚ ಶಿಕ್ಷಣಕ್ಕೆ ಸಸ ಪಾಠ್ಯವಾಗಿ ಬಳಸಿಕೊಳ್ಳುವ ವಿಚಾರ ನಡೆದಿದೆ. ಹೀಗಿರುವಾಗ ನಮಗೆ ಬೇರೆ ಬೇರೆ ಸ್ವಾಮುಖ್ಯ ವಿಷಯಗಳ ಮೇಲೆ ಅನುಭವದ ಹಾಗೂ ವಿದ್ವತ್ತಿನ ಬಲದಿಂದ ಬರೆದ ಪುಸ್ತಕಗಳು ಬೇಡವೆ? ನಮ್ಮ ಭಂಡಾರದಲ್ಲಿ ಇಂಥ ಕೆಲವಾದರೂ ಪುಸ್ತಕಗಳಿದ್ದರೆ ಅದಕ್ಕೆ ಮಿಂಚಿನ ಬಳ್ಳಿಯ ಬುಲಿ ಬಂದು ಪಾಠಪರಂಪೆ ಸುಜಾನುಭಾವರ ಕತ್ತೃತ್ವ ಶಕ್ತಿಯೇ ಕಾರಣ. ಕನ್ನಡ ನಾಡು ಅವರನ್ನು ಮೊನ್ನೆ ತಾನೆ ನಿಧಿಯೊಂದನ್ನು ಸಮರ್ಪಿಸಿ ಗೌರವಿಸಿದೆ. ಅವರು ಇಂಥಾ ಸನ್ಮಾನಕ್ಕೆ ಸರ್ವಥಾಯೋಗ್ಯರೆಂಬುದನ್ನು ಸಂಯುಕ್ತ ರಾಷ್ಟ್ರ ಸಂಘದ ಮಾಹಿತಿಯನ್ನು ಸಾಕಷ್ಟು ವಿವರವಾಗಿ ಮಾಡಿಕೊಡುವ ಈ ಪುಸ್ತಕದ ಪ್ರಕಾಶನವೇ ಮನವರಿಕೆ ಮಾಡಿಕೊಡುತ್ತದೆ. ರಾಷ್ಟ್ರ ಸಂಘದ ಕಾರ್ಯ ಕಲಾಪಗಳ ಕುರಿತು ನಾವು ನಿತ್ಯಪೂ ಹಲವು ಸಂಗತಿಗಳನ್ನು ಕೇಳುತ್ತಿದ್ದೇವೆ. ಆದರೆ ಸಂಘದ ಸ್ಥಾಪನೆಯ ಹಿನ್ನೆಲೆಯ ಸಂಗತಿಗಳು, ಸ್ಥಾಪನೆಯ ಬಳಿಕ ಅದು ಕೆಲಸ ಮಾಡುತ್ತಿರುವ ವಿಧಾನ, ಜಗತ್ತಿನ ಪ್ರಗತಿಗೆ ಅದರಿಂದ ದೊರಕಿರುವ ಪ್ರಯೋಜನಾಂಶ, ತನ್ನ ಉದ್ದೇಶ ಸಾಧನೆಯಲ್ಲಿ ಯಶಸ್ವುಗಳಿಸಲು ರಾಷ್ಟ್ರಸಂಘ ನಿವಾರಿಸಿಕೊಳ್ಳಬೇಕಾದ ತೊಡಕುಗಳ ಪರಿಜ್ಞಾನ-ಇತ್ಯಾದಿ ಸಂಗತಿಗಳನ್ನು ಕನ್ನಡದಲ್ಲಿ ಈ ಗ್ರಂಥವನ್ನು ಅಧ್ಯಯನ ಸದಿದ್ದರೆ ಬೇರಾವುದೇ ರೀತಿಯಲ್ಲಿ ನಾವು ತಿಳುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ರಾಷ್ಟ್ರ ಸಂಘದ ಕುರಿತು ಕನ್ನಡದಲ್ಲಿ ಇದೇ ಮೊದಲನೆಯ ಗ್ರಂಥ; ಸಮಗ್ರ ಚಿತ್ರವನ್ನು ಅಭಿಕಾರ ಪೂರ್ವಕ ರೇಖಿಸಿರುವ ಪುಸ್ತಕ. ಇದನ್ನು ಬರೆದವರು ಕನ್ನಡದ ಎಂ. ಪಿ. ಯಾಗಿದ್ದಾರೆ; ಅವರ ಶೈಲಿ ಸರಳವಾಗಿದೆ; ನಿರೂಪಣೆ ಲಲಿತವಾಗಿದೆ. ಭಾರತದ ಕುರಿತಾದ ಅಭಿಮಾನ ಭರದಲ್ಲಿ ಅವರು ಹೇಳಿದ ಕೆಲವು ಮಾತುಗಳು ರಾಷ್ಟ್ರ ಸಂಘದ ಘನತೆಯನ್ನು ಕುಗ್ಗಿಸುತ್ತವೋ ಎಂಬ ಭಯ ಒಮ್ಮೊಮ್ಮೆ ನಮಗಾದರೂ ಲೇಖಕರು ಅದಷ್ಟು ಹೆಚ್ಚು ಸಂಯಮವನ್ನೂ ಪ್ರಾಮಾಣಿಕತೆಯನ್ನೂ ತೋರಿಸಿದ್ದಾರೆ ಎಂಬುದರಲ್ಲಿ ಸಂದೇಹಕ್ಕೆ ಆಸ್ಪದವಿರಲಾರದು ಮೊನ್ನೆತಾನೆ ಹತ್ತು ವರ್ಷಗಳ ಕನ್ನ ಉಪಯುಕ್ತ ಜೀವನದ ನೆನಪಿಗೆ ರಾಷ್ಟ್ರ ಸಂಘ ಉತ್ಸವವನ್ನು ಆಚರಿಸಿತು; ಈ ಸಂದರ್ಭದಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿರುವ ಈ ಪುಸ್ತಕದ ಪ್ರಕಾಶಕನ್ನು ನಾವು ಅಭಿನಂದಿಸುತ್ತೇವೆ.

ಹರಪ್ಪಾ ಸಂಸ್ಕೃತಿ—

ಬರೆದವರು: ಡಾ| ಎಂ. ಶೇಷಾದ್ರಿ, ಎಂ. ಎ. ಪಿ. ಎಚ್. ಡಿ. ಪ್ರಕಾಶಕರು: ಚೇತನ ಪ್ರಕಾಶನ, ಮೈಸೂರು. ಬೆಲೆ: ರೂ. ೧-೦-೦.

ಭಾರತೀಯ ಸಂಸ್ಕೃತಿಯ ಜಿಜ್ಞಾಸುಗಳು ಅಭ್ಯಾಸಿಸಲೇ ಬೇಕಾದ ಸಿಂಧೂನದಿಯ ನಾಗರಿಕತೆಯ ಕುರಿತು ಇದು ಅಧಿಕಾರವಾಣಿಯಿಂದ ಕನ್ನಡದಲ್ಲಿ ಬರೆಯಲ್ಪಟ್ಟ ಮೊದಲನೆಯ ಪುಸ್ತಕವೆಂದು ನಾವು ತಿಳಿದಿದ್ದೇವೆ. ಶಾಸ್ತ್ರ ಗ್ರಂಥಗಳ ಕೊರತೆಗಾಗಿ ಪರಿತಪಿಸುವ ಕನ್ನಡ ಬಾಂಧವರು ಇಂಥ ವಿದ್ವತ್ಪೂರ್ಣ ಕೃತಿಗಳನ್ನು ತೆರೆದ ಹೃದಯದಿಂದ ಸ್ವಾಗತಿಸಬೇಕು. ಹರಪ್ಪದ ಸಂಸ್ಕೃತಿಯ ಕುರಿತು ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಇಲ್ಲಿ ಕ್ರೋಢೀಕರಿಸಿದ ಡಾ| ಶೇಷಾದ್ರಿಯವರು ಈ ಕ್ಷೇತ್ರದಲ್ಲಿ ವಿಶೇಷ ಜ್ಞಾನ ಸಂಪನ್ನರೂ ಅನುಭವಿಗಳೂ ಆಗಿದ್ದಾರೆ. ಅವರು ತಮ್ಮ ಅಳವಾದ ಅಭ್ಯಾಸದ ಫಲಿತಾಂಶವಾಗಿ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ತುಲನಾತ್ಮಕವಾಗಿ ಬಳಸಿಕೊಂಡು ಈ ಪುಸ್ತಕದ ತೂಕವನ್ನು ತುಂಬ ಹೆಚ್ಚಿಸಿದ್ದಾರೆ. ಹರಪ್ಪದ ಕುರಿತು ನಮಗೆ ತಿಳಿದು ಬಂದಿರುವ ಎಲ್ಲ ವಿಷಯಗಳ ಸೂಕ್ಷ್ಮ ವಿವರಗಳು ಈ ಪುಸ್ತಕದಲ್ಲಿ ಸಿಗುತ್ತವೆ. ಶಾಸ್ತ್ರೀಯ ಮಹತ್ವದ ಪಾರಿಭಾಷಿಕ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಉಚಿತ ರೀತಿಯಲ್ಲಿ ಬಳಸಿ ಕೊಂಡಿದ್ದಾರೆ. ಇದರಿಂದ ನಮಗೆ ಓದುವಾಗ ಯಾವ ತೊಂದರೆಯೂ ಆಗದಂತೆ ಸಸ ನೋಡಿದ್ದಾರೆ. ಅನೇಕ ಸಂಗತಿಗಳ ಅವಲೋಕನೆಯಿಂದ ನಾವು ನಿರ್ಣಯಿಸಬಹುದಾದ ಸಂಗತಿಗಳಿಗೆ ಯೋಗ್ಯ ಹಿನ್ನೆಲೆಯನ್ನು ನೀಡಿದ್ದಾರಲ್ಲದೆ, ಕೊನೆಯಮಾತು ಸಂಶೋಧನೆಯಿಂದ ಹುಟ್ಟುವ ನ್ಯಾಯಕ್ಕೆ ಸಮ್ಮತವಿರುವಂತೆಯೂ ಜಾಗ್ರತೆವಹಿಸಿದ್ದಾರೆ. ಉಪಯುಕ್ತವಾದ ನಕ್ಷೆಗಳೂ ಹರಪ್ಪದ ಸಂಸ್ಕೃತಿಯ ಕಲ್ಪನೆಮಾಡಿಕೊಡುವ ಚಿತ್ರಗಳೂ ಪುಸ್ತಕದ ಶೋಭೆಯನ್ನು ಹೆಚ್ಚಿಸಿರುತ್ತವೆ. ಚಿತ್ರಗಳ ವಿವರಣೆಯನ್ನೂ ಕೊಟ್ಟಿರುವುದಲ್ಲದೆ ಆಧಾರ ಗ್ರಂಥಗಳ ದೀರ್ಘ ಪಟ್ಟಿಯನ್ನು ಕೊಟ್ಟು ವಿಶೇಷ ಅಭ್ಯಾಸಕ್ಕೆ ಸಸ ನೆರವಾಗಿದ್ದಾರೆ. ಈ ಪುಸ್ತಕ ಕನ್ನಡಿಗರಿಗೆ ಅಮೂಲ್ಯವಾದ ಕಾಣಿಕೆ—ವಿದ್ವಜ್ಜನರು ಕನ್ನಡದಲ್ಲಿಯೇ ಬರೆಯಲು ತೊಡಗಿರುವ ಈ ದಿನಗಳು ಕನ್ನಡದ ಸ್ವರ್ಣಯುಗದ ಮುನ್ಸೂಚನೆಯನ್ನು ಕೊಡುತ್ತಿವೆ. ಡಾ. ಶೇಷಾದ್ರಿಯವರೆ ಪ್ರಯತ್ನವನ್ನು ಶ್ಲಾಘಿಸುತ್ತೇವೆ. ಅವರ ಯಶಸ್ವಿ ಕೃತಿಯನ್ನು ಬೆಳಕಿಗೆ ತಂದ ಪ್ರಕಾಶಕರಿಗೆ ಶುಭವನ್ನು ಕೋರುತ್ತೇವೆ.

ಲಘು ಪರಿಚಯ

❀ ನಕ್ಕು ನಗಿಸಬೇಕೆಂಬ ಉದ್ದೇಶದಿಂದ ದಿವಾತಕರ ಪ್ರಕಾಶನ, ಜರ್ನಲಿಸ್ಟ್ ಕಾಲನಿ, ಬೆಂಗಳೂರು ೨— ಇವರು "ನಗೆನಾಣ್ಯ" ಎಂಬ ಚಿಕ್ಕ ಪುಸ್ತಕವನ್ನು ಅರಾಜಿ ಬೆಲೆಗೆ ಪ್ರಕಟಿಸಿದ್ದಾರೆ. ಇದರಲ್ಲಿ ಹಾಸ್ಯದ ಸವಿರೆಟ್ಟಿಸುವ ಚುಟುಕುಗಳು ಹೇರಳವಾಗಿವೆ. ರಾಜಕೀಯ ಕ್ಷೇತ್ರದಿಂದ ಕ್ರೀಡಾಂಗದ ವರೆಗೆ, ದಾಂಪತ್ಯ ಜೀವನದಿಂದ ನ್ಯಾಯಸ್ಥಾನದ ಕಾರ್ಯಕಲಾಪಗಳ ವರೆಗೆ ನಗೆಯ ಸನ್ನಿವೇಶಗಳಿಲ್ಲಿವೆ.

❀ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಕೆಟು ಸಮಿತಿಯವರು ೧೯೫೪ನೇ ವರ್ಷದ ಬಗ್ಗೆ ಪ್ರಕಟಿಸಿರುವ ಆಡಳಿತದ ವರದಿಯು ಸಮಿತಿಯ ಚಟುವಟಿಕೆಗಳನ್ನು ವಿವರಿಸುತ್ತದೆ. ಸಮಿತಿಯ ಆರ್ಥಿಕ ಸ್ಥಿತಿಗತಿಯ ಚಿತ್ರಣ ಇಲ್ಲಿದೆಯಲ್ಲದೆ ಪೇಟೆಯ ಧಾರಣೆಗಳ ವಿಮರ್ಶೆ, ಅಡಿಕೆ ಸುಂತಾದ ರೊಕ್ಕದ ಪೈರುಗಳ ಅಭಿವೃದ್ಧಿಗೆ ನೀಡುತ್ತಿರುವ ಸಹಾಯ ಇತ್ಯಾದಿ ಉಪಯುಕ್ತ ಅಂಶಗಳನ್ನೂ ಈ ವರದಿಯಲ್ಲಿ ಕಾಣುತ್ತೇವೆ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 13/55 O. S. 66/46

M ಶೇಷಪ್ಪ— ಅರ್ಜಿದಾರ.

ಕೋಚಪ್ಪ ರೈ, ತಿಮ್ಮಪ್ಪ ರೈಗಳ ಮಗ, ಉತ್ತರ ಕೊಡಗು ಜಿಲ್ಲಾ ತಾಟುಗೇರಿ ಗ್ರಾಮದ ತಾಳ್ತಮನೆ — ಎದ್ರಿ.

ಎದ್ರಿಗೆ ತಿಳಿಸುವುದೇನೆಂದರೆ—

ಅರ್ಜಿದಾರನು ಸ್ತಿರಾಸ್ತಿ ಜಪ್ತಿ ಬಗ್ಗೆ ದಾಖಲು ಮಾಡಿದ ಅನುಲ್ಲಾರಿಯ ತಾ. ೨೦—7—55ಕ್ಕೆ ವ್ಯಾಜ್ಯ ಇರುವುದರಿಂದ ನಿಮ್ಮದೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನ ಹಾಜ್ರಾಗಿ ಉದ್ದರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Pleader for Petitioner.

ಪುತ್ತೂರು, ತಾ. 4-7-55.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು $4\frac{1}{2}$% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

24	ತಿಂಗಳಿಗೆ	4%
12	,,	$3\frac{1}{4}$%
6	,,	$3\frac{1}{2}$%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು $\frac{1}{2}$%

THE MOOLKY BANK LTD., MULKI.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ 'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಗೆಡ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳ ಬಸುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.



ಆಯುರ್ವೇದದ ಮೀಮಾಂಸೆ

ವೈಜ್ಞಾನಿಕ ದೃಷ್ಟಿಯ ಒರೆಗಲ್ಲಿನಲ್ಲಿ

ವಿಜ್ಞಾನಯುಗದಲ್ಲಿ ಆಯುರ್ವೇದವು ಸ್ಥಿರವಾಗಿ ಉಳಿಯಬಲ್ಲುದೆ? ಎಂಬ ಪ್ರಶ್ನೆಯು ಈಗ ಎಲ್ಲೆಲ್ಲಿಂದಲೂ ಕೇಳಬರುತ್ತಿದೆ. ಆಯುರ್ವೇದವು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಆ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡದೆ ಗತ್ಯಂತರವಿಲ್ಲ. ಆಯುರ್ವೇದವು ಕ್ರಿಸ್ತಪೂರ್ವದ ೨-೩ ಸಾವಿರ ವರ್ಷಗಳಿಂದಲೂ ಇದೆ ಎಂಬ ಸಂಗತಿಯು ಅದರ ವೈಜ್ಞಾನಿಕತ್ವವನ್ನು ಸಿದ್ಧಪಡಿಸಲಾರದು. ಅದು ಋಷಿಪ್ರಣೀತವಾದುದು ಎಂಬ ಮಾತಿಗೂ ಹೆಚ್ಚಿನ ಮಹತ್ವವಿಲ್ಲ. ಬರಿ ಅನುಸ್ಸೇ ಆಯುರ್ವೇದದ ಹೆಚ್ಚುಗಾರಿಕೆಯನ್ನು ಹೇಳುತ್ತಿದ್ದರೆ ಸಾವಿರಾರು ವರ್ಷ ಬಾಳುವ ತಿಮಿಂಗಿಲಗಳೂ ದೇವತೆಗಳಾಗಬಹುದು. ಕರ್ತೃಗಳ ಮಹತ್ವವೇ ಆಯುರ್ವೇದದ ಗುಣಕ್ಕೆ ಪ್ರಮಾಣವಾಗಿದ್ದರೆ ಅಸ್ಪೃಶ್ಯತೆಯೂ ಒಂದು ಬೆಡಲಾಗದ ಸುಣ್ಣಗೂಢಿಯೆನಿಸೀತು. ಆಯುರ್ವೇದದಲ್ಲಿ ಉಪಯೋಗಿಸಲ್ಪಡುವ ವನಸ್ಪತಿಗಳು ಸ್ವದೇಶೀಯವಾಗಿವೆ ಎಂಬ ಕಾರಣದಿಂದಲೂ ಅದರ ಹಿರಿಮೆನಿಶ್ಚಿತವಾಗಲಾರದು. ವೈದ್ಯರು ಉಪಯೋಗಿಸುತ್ತಿರುವ ವನಸ್ಪತಿಗಳಲ್ಲಿ ಜೇಷ್ಠ ಮಧು, ಕರ್ಕಾಟಕ ಶೃಂಗಿ, ಕರ್ಪೂರ, ಇಂಗು, ಕಸ್ತೂರಿ, ದ್ರಾಕ್ಷಿ, ರೇವಾಚೀನಿ, ಯಿರಾಸಾಸಿ ಅಜವಾನ, ಮುಂತಾದ ವನಸ್ಪತಿಗಳು ಪರದೇಶೀಯವಾಗಿವೆ ಎಂಬ ವಿಷಯವನ್ನು ಮರೆಯುವಂತಿಲ್ಲ.

"ಹಾಗಾದರೆ ಆಯುರ್ವೇದವೂ ವಿಜ್ಞಾನವೇ?" ಎಂದು ಹೇಳುವುದರ ಅರ್ಥವೇನು? ಹಾಗೆ ಕೇಳುವವರ ಅಭಿಪ್ರಾಯದಲ್ಲಿ ಪಾಶ್ಚಾತ್ಯ ವೈದ್ಯಪದ್ಧತಿಯು (ಅಲೋಪೆಥಿಯು) ವಿಜ್ಞಾನ ಸಮ್ಮತವಾಗಿದೆ; ಆದುದರಿಂದ ಆಯುರ್ವೇದವೂ ಅಲೋಪೆಥಿಯೊಡನೆ ಸರಿ ನಂತರೆ ಅರ್ಥಾತ್ ಅಲೋಪೆಥಿಯ ಪ್ರಸ್ಥಾನ (ದೃಷ್ಟಿಕೋನ) ದಿಂದ ಆಯುರ್ವೇದವೂ ವಿಜ್ಞಾನ ಸಮ್ಮತವಾಗಬಹುದೆಂದು ಸಿದ್ಧವಾದರೆ ಮಾತ್ರ, ಅದಕ್ಕೆ ಬಾಳುವ ಅಧಿಕಾರವಿದೆ ಎಂದು ಈ ಪಂಗಡದವರ ತೀರ್ಮಾನವಾಗಿದೆ. ಅಲೋಪೆಥಿಯು ರೋಗದಲ್ಲೆಲ್ಲಪ್ರಚುರವಾಗಿದೆ ಎಂಬ ಒಂದು ಕಾರಣವೇ ಈ ಪಂಗಡದವರಿಗೆ ಆಧಾರ. ಗುಣವಿದ್ದುದರಿಂದಲ್ಲವೇ ಲೋಕವೆಲ್ಲ ಅದನ್ನು ಮೆಚ್ಚಿದೆ? ಆದ್ದರಿಂದಲೇ ಅದು ವಿಜ್ಞಾನ ಸಮ್ಮತವಾಗಿರಬೇಕು ಎಂದು ಅವರ ತರ್ಕ. ಅಲೋಪೆಥಿಯ ತಾಳಕ್ಕೆ ತಕ್ಕ ಲಾಗಾಹಾಕಿದರೆ ಮಾತ್ರ ಆಯುರ್ವೇದವೂ ವಿಜ್ಞಾನವೆಂದು ನಿರ್ಧಾರವಾಗುವುದು, ಎಂದು ಅವರ ಅಂಬೋಣ.

ಈ ಅಭಿಪ್ರಾಯ ಎಷ್ಟು ಜೊಳ್ಳಾಗಿದೆ! ರೋಗದಲ್ಲಿಲ್ಲ ಪ್ರಚುರವಾದ ಮಾತ್ರಕ್ಕೆ ಯಾವುದೊಂದು ಸಂಗತಿಯು ವೈಜ್ಞಾನಿಕವೆನಿಸಲಾರದು. ಪೃಥ್ವಿಯ ಸುತ್ತಲೂ ಸೂರ್ಯನೆ ತಿರುತ್ತಾನೆಂದು ಪುರಾತನ ರೋಗದಲ್ಲಿ ನಂಬಿತ್ತು. ಆ ನಂಬಿಕೆಯು ಅವೈಜ್ಞಾನಿಕವೆಂದು ಈಗ ಸುಸಂಪರಿಕೆಯಾಗಿದೆಯಲ್ಲವೇ? ಇದೇ ಪಂಗದಲ್ಲಿ ತಮ್ಮನ್ನು "ಹೆಚ್ಚು ತಿಳಿದವರು" ಎಂದು ಕೊಳ್ಳುವ ಕೆಲವರಿದ್ದಾರೆ. ಅವರೆನ್ನುತ್ತಾರೆ- "ಅಲೋಪೆಥಿಯಲ್ಲಿ ಶರೀರ ವರ್ಣನೆಯು ವಿವರಪೂರ್ಣವಾಗಿದೆ; ಅದರ ಔಷಧಗಳು ಕೆಮಿಸ್ಟ್ರಿ, ಫಿಜಿಕ್ಸ ಶಾಸ್ತ್ರಗಳ ತತ್ವಗಳನ್ನನುಸರಿಸಿ ಸಿದ್ಧವಾಗುತ್ತವೆ; ಅದರ ಚಿಕಿತ್ಸಾಕ್ರಮವು ಪ್ರಯೋಗಸಿದ್ಧವಾಗಿರುವುದರಿಂದ ಅಲೋಪೆಥಿಯು ಎಂಥಹ ಮರ್ಧರ ವ್ಯಾಧಿಗಳನ್ನೂ ಗುಣಪಡಿಸುತ್ತಿದೆ." ಇವರಿಗೆ ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕೆ? ಆಯುರ್ವೇದದಲ್ಲಿ ಶರೀರದ ವಿವರ ವರ್ಣನೆ ಇಲ್ಲವೆಂದು ನೀವು ಸಿದ್ಧಪಡಿಸುವಿರಾ? ಅದರ ಔಷಧಗಳು ಕೆಮಿಸ್ಟ್ರಿ, ಫಿಜಿಕ್ಸ ಶಾಸ್ತ್ರಗಳ ತತ್ವಗಳನ್ನನುಸರಿಸಿ ಇಲ್ಲವೆಂದು ನಿಮಗೆ ಯಾರು ಹೇಳಿದರು? ದಿವಂಗತ ಪ್ರಫುಲ್ಲ ಚಂದ್ರ ರಾಯರ "ಭಾರತೀಯ ರಸಾಯನ ಶಾಸ್ತ್ರ" ಎಂಬ ಗ್ರಂಥವನ್ನು ಓದುವ ಪ್ರಸಂಗವನ್ನು ತಾವು ತೆಗೆದುಕೊಂಡಿರುವಿರಾ? ನಾಯಿಕೆಮ್ಮು, ಅರ್ಧಾಂಗವಾತ, ಅಪಸ್ಮಾರ, ಪುಟ್ಟು, ಸಂಧಿವಾತ, ಜಲೋದರ, ಮೂತ್ರಾಬ್ಬುದ ಉಬ್ಬಸ, ಮಧುಮೇಹ, ಬಾಲಗ್ರಹಗಳನ್ನು ಅಲೋಪೆಥಿಯು ಗುಣಪಡಿಸುವುದೇ? ಈ ಬೇನೆಗಳನ್ನು ಆಯುರ್ವೇದವು ಗುಣಪಡಿಸುತ್ತಿಲ್ಲವೆ? ಆಯುರ್ವೇದ ಚಿಕಿತ್ಸೆಯು ಪ್ರಯೋಗಸಿದ್ಧವಾಗಿಲ್ಲವೆಂದು ತೋರಿಸಿಕೊಡುವಿರಾ? ಜರ್ಮನಿಯಲ್ಲಿ, ಬ್ರಿಟನ್ನಿನಲ್ಲಿ, ನ್ಯೂಯಾರ್ಕನಲ್ಲಿ ನಡೆಸಿದ ಸಂಶೋಧನೆಗಳಿಗೆ ಮಾತ್ರ ನೀವು ಪ್ರಯೋಗಪೆನ್ನುವಿರಾ?

ಖಂಡಿತವಾಗಿ ಆಯುರ್ವೇದ ತತ್ವಗಳೂ ತಮ್ಮ ವ್ಯಾಖ್ಯೆಯನುಸರಿಸಿಯೆ ವೈಜ್ಞಾನಿಕ ಸತ್ಯಗಳಾಗಿವೆ' ಎಂಬುದನ್ನು ಸಿದ್ಧಪಡಿಸುವುದಕ್ಕೆ ಮುಂಚೆ ಆಯುರ್ವೇದೀಯ ತತ್ವಗಳಲ್ಲಿ ವೈಜ್ಞಾನಿಕವಾಗಿವೆ ಎಂಬ ಭ್ರಮೆಯನ್ನು ಪರಿಹರಿಸಿಕೊಳ್ಳುವುದು ಅಗತ್ಯವಿದೆ. ಏಕೆಂದರೆ ಆ ಭ್ರಮೆಯನ್ನಿಟ್ಟುಕೊಂಡವರಿಗೆ ಆಲೋಪೆಥಿಯ ಕೆಲವು ಅವೈಜ್ಞಾನಿಕ ಕ್ರಮಗಳೊಡನೆ ಹೋಲಿಸುವ ಹುಚ್ಚು ಬಿಡದು. ಆ ಹುಚ್ಚು ಬಿಡುವ ಪರೆಗೆ ಆಯುರ್ವೇದದ ವೈಜ್ಞಾನಿಕತೆಯು ಸಾಕ್ಷಾತ್ಕಾರವಾಗದು. ಉದಾಹರಣಾರ್ಥವಾಗಿ "ಆಯುರ್ವೇದದಲ್ಲಿ 'ಆಸ್ಪಿರಿನ್' ನಂತಹ ವೇದನಾಹರ ಔಷಧವಿದೆಯೆ? ತಕ್ಷಣ ತಲೆಶೂಲೆಯನ್ನು ಗುಣಪಡಿಸುವ ಔಷಧವಿದೆಯೇ" ಎಂದು ಕೇಳುವ ಅನೇಕ ಜನರಿದ್ದಾರೆ. ಅವರಿಗೆ ಕೆಲವು ನೋವು-ಶೂರೆಗಳನ್ನು ತಕ್ಷಣ ಗುಣಪಡಿಸುವುದರಿಂದ ಶೂರೆಯ ಮೂಲಕಾರಣವು ಮರೆತು, ಮುಂದೆ ಅನಾಯತನಗಳಾಗುವ ಸಂಭವವಿದೆಯೆಂಬ ವೈಜ್ಞಾನಿಕ ಸತ್ಯವು ತಿಳಿಯದು. ಅರ್ಧ ತಲೆಶೂರೆಯ ಬಾಧೆಯಿಂದ ಸುಸಲೆ ಎಸಾರಿ ತಿಂಗಳುಗಟ್ಟಲೆ ವೇದನಾಹರ ಔಷಧಗಳನ್ನು ಮುಕ್ತಹೃದಯವನ್ನು ನುಗ್ಗುಮಾಡಿಕೊಂಡು ತಲೆಶೂರೆಯಮೂಲಕಾರಣವಾದ ಯಕೃತಿನರೋಗವು ಆಲಕ್ಷಿಸಲ್ಪಟ್ಟು ಮುಂದೆ ಭಯಂಕರ ಶಾಂಡು, ಕಾಮಲೆಗಳಿಗೆ ತುತ್ತಾದವರ ಕಥೆಯನ್ನೂ ಆ ಆಸ್ಪಿರಿನ್ ಭಕ್ತರು ಅರಿಯರು. ಉಬ್ಬಸದ ಪರಿತಾಪವನ್ನು ತಾತ್ಕಾಲಿಕವಾಗಿ ಶಮನಗೊಳಿಸುವ ಸುಟ್ಟಿಗೆ ಸುರುಳಾಗಿ ವರ್ಷಗಟ್ಟಲೆ 'ಎಫಿಡ್ರಿನ್' ಗುಳಿಗೆಗಳನ್ನು ನುಂಗಿ ಹೃದಯ, ಕಿಡಿಯ, ವೃಕ್ಕಗಳನ್ನು ಕೆಡಿಸಿಕೊಂಡು ಕ್ಷಯಕ್ಕೆ ಬಲಿಬಿದ್ದವರ ಉದಾಹರಣೆಗಳೂ ಗೊತ್ತಿರಲಿಕ್ಕಿಲ್ಲ. ಅವರಿಗೆ ಆಲೋಪೆಥಿಯವರು ಮೇಲ್ಕಂಡ ಬೇನೆಗಳಲ್ಲೆಲ್ಲ ತಕ್ಷಣ ವೇದನಾಹರವಾದ ಔಷಧಗಳನ್ನು ನುಂಗಿಸಿ ರೋಗಿಗಳಿಗೆ ಕ್ಷಣಿಕ ಸ್ವರ್ಗವನ್ನು ತೋರಿಸುತ್ತಿರುವದೊಂದೇ ಗೊತ್ತಿದೆ. ಅದರೆ ಇಲಿಗೆ ಅಂಜಿ ಹುಲಿಯಬಾಯಲ್ಲಿ ಬೀಳುವಂತಹ ಚಿಕಿತ್ಸಾಕ್ರಮಗಳನ್ನು ವೈಜ್ಞಾನಿಕವೆಂದು ಕರೆಯುವುದು ಮಿಥಿಳೆಗೆ ದಿವಾಳಿಯೇ ಸೈ. ಆಯುರ್ವೇದದಲ್ಲಿ ಅಂತಹ ಕ್ರಮಗಳನ್ನು ಹುಡುಕುವುದು ವ್ಯರ್ಥ. ಏಕೆಂದರೆ "ಪ್ರಯೋಗಃ ಶಮಯೇತ್ ವ್ಯಾಧಿಂ ಯೋಽನ್ಯಮನ್ಯಂ ಉದೀರಯೇತ್, ನಾಸೌ ವಿದ್ಯಾದ್ಭಿಷಕ್" (ಎಂದರೆ ಒಂದನ್ನು ಶಮನಸಿಸಿ ಮತ್ತೊಂದು ಬೇನೆಯನ್ನು ಉದ್ರೇಕಿಸುವ ಪ್ರಯೋಗವು ಅಶುದ್ಧವಾಗಿದೆ) ಎಂದು ಆಯುರ್ವೇದವು ಎರಡು ಸಾವಿರ ವರ್ಷಗಳಿಂದಲೂ ಹೇಳುತ್ತ ಬಂದಿದೆ. ಆದ್ದರಿಂದ ಆಯುರ್ವೇದದ ವೈಜ್ಞಾನಿಕತೆಯನ್ನು ತಿಳಿಸುಕೊಳ್ಳುವ ವಿಜ್ಞಾನ ಪೂಜಾರಿಗಳು ಆಲೋಪೆಥಿಯ ಕೆಲವು ಅವೈಜ್ಞಾನಿಕ ಕ್ರಮಗಳನ್ನು ಅಳಿಗೋಲನ್ನಾಗಿ ಉಪಯೋಗಿಸಬಾರದು.

ಆಯುರ್ವೇದದ ತತ್ವಗಳು ತರ್ಕಬದ್ಧವಾದ ಪ್ರಯೋಗಾನುಭವಗಳಿಂದ ಸಿದ್ಧವಾದ, ಕಾರಣ-ಪರಿಣಾಮಗಳ ಮೇಲೆ ನಿಂತಿದ್ದರೆ ಆಯುರ್ವೇದವೂ ವಿಜ್ಞಾನವೇ ಆಗಿದೆ ಎಂದು ಒಪ್ಪಿಕೊಳ್ಳುವುದು ಸತ್ಯಶೋಧಕರ ಲಕ್ಷಣವಾಗಿದೆ. ವೈಜ್ಞಾನಿಕ ದೃಷ್ಟಿಯಲ್ಲಿ ಯಾವುದೊಂದು ಚಿಕಿತ್ಸಾ ಶಾಸ್ತ್ರದಲ್ಲಿ ಅವಶ್ಯವಾಗಿ ಇರಬೇಕಾದ ಗುಣಗಳಾವುವು? (೧) ರೋಗಾನುತ್ಪಾದನೀಯ ಜ್ಞಾನ. (೨) ಆರೋಗ್ಯ ವರ್ಧನ ಅರ್ಥಾತ್ ದೀರ್ಘಾಯುಸ್ಸಿನ ಸಾಧನ. (೩) ಪ್ರತಿಯೊಂದು ರೋಗದ ಹುಟ್ಟಿನ ಕಾರಣದ ಜ್ಞಾನ. (೪) ಪರಿಣಾಮದಲ್ಲಿ ಆಪತ್ಕಾರಿಯಾಗದಂತೆ-ರೋಗ ನಿವಾರಕ ಚಿಕಿತ್ಸಾಕ್ರಮ. ಈ ಚತುರ್ಗುಣಗಳಿಂದ ಭೂಷಿತವಾದ ಚಿಕಿತ್ಸಾಕ್ರಮವು ವೈಜ್ಞಾನಿಕವಾಗಿ ರಚಿಸಬೇಕು ಏಕೆಂದರೆ ಈ ನಾಲ್ಕು ಉದ್ದೇಶಗಳನ್ನು ತರ್ಕಬದ್ಧವಾದ ಪ್ರಯೋಗಾನುಭವಗಳಿಂದ ಸಿದ್ಧವಾದ ತತ್ವಗಳಿಂದಲೇ ಸಾಧಿಸಬಹುದಲ್ಲವೇ? ಆಯುರ್ವೇದದಲ್ಲಿ ಈ ನಾಲ್ಕು ಗುಣಗಳಿವೆಯೇ?

ರೋಗ ನಿವಾರಣೆಗಿಂತ ರೋಗ ನಿರೋಧವೇ ಮೇಲು ಎಂಬ ಅಭಿಪ್ರಾಯವನ್ನು ಆಯುರ್ವೇದವು ಸಾವಿರಾರುವರುಷಗಳ ಪೂರ್ವದಲ್ಲಿಯೇ ಪ್ರಚುರಪಡಿಸಿದೆ. ಚರಕ, ವಾಗ್ಭಟ ಮುಂತಾದ ಗ್ರಂಥಕರ್ತರೆಲ್ಲ ತಮ್ಮ ಗ್ರಂಥಗಳ ಪ್ರಾರಂಭದಲ್ಲಿಯೇ ದಿನಚರ್ಯೆ, ಋತುಚರ್ಯೆಗಳನ್ನು ಉಪದೇಶಿಸಿದ್ದಾರೆ. ರೋಗಾನುತ್ಪಾದನೀಯ (ಅಂದರೆ ಬೇನೆ ಬಾರದಂತೆ ತಡೆಯುವ) ವಿಚಾರಗಳಿಗೆ ಪ್ರತ್ಯೇಕ ಅಧ್ಯಾಯಗಳನ್ನೇ ಬರೆದಿದ್ದಾರೆ. ನಿದ್ರೆ, ಸಲ್ಲಜ್ಜುವುದು ಸ್ನಾನ, ವ್ಯಾಯಾಮ, ಊಟಗಳ ವಿಷಯದಲ್ಲಿ ವಿವರವಾಗಿ ವಿವಿಧ ಋತುಗಳಿಗೆ ತಕ್ಕಂತೆ ಇಂದಿನ ವಿಜ್ಞಾನವು ಮೆಚ್ಚುವಂತೆ ಅಚ್ಚರಿಗೊಳ್ಳುವಂತೆ ಬರೆದಿದ್ದಾರೆ. ಅಕಳಿಸುವಾಗ, ಸೀನುವಾಗ, ಕೆಮ್ಮುವಾಗ, ನಗುವಾಗ ಮುಖವನ್ನು (ವಸ್ತ್ರದಿಂದ) ಮುಚ್ಚಿಕೊಳ್ಳಬೇಕೆಂದು ಆಯುರ್ವೇದವು ಹೇಳುವುದೆಂದಮೇಲೆ ಅಂತಹ ಕ್ರಿಯೆಗಳಿಂದ ರೋಗದ ಸೋಂಕು ಒಬ್ಬರಿಂದೊಬ್ಬರಿಗೆ ಹರಡುವುದೆಂದು ಅಗಲೇ ಗೊತ್ತಾಗಿತ್ತೆಂದು ವ್ಯಕ್ತವಾಗುವುದು. ರೋಗಿಯ ಸಪರ್ಶ್ಯಾಸನ, ಗಾತ್ರ ಸಂಸರ್ಗ, ಪಸ್ತ್ರವಾಲ್ಯಾಸುರೇಪ ಸಗಳಿಂದ ರೋಗಗಳು ಪರಡುವೆವೆಂದು ಮಾಧವ ನಿದಾನದಲ್ಲಿ ಸ್ಪಷ್ಟವಾಗಿ ಬರೆದಿದೆ. ನಿತ್ಯದ ಆಹಾರ ಗುಣದೋಷಗಳಲ್ಲಂತೆ ಬಹುತರ ಎಲ್ಲ ಆಹಾರ್ಯ ಪರ-ಪಕ್ಷಿ ಮಾಂಸಗಳ ಗುಣದೋಷಗಳನ್ನೂ ಆಯುರ್ವೇದವು ಅರಿತಿದೆ. ಅಲ್ಲದೆ ಮನಸ್ಸಿಗೆ ಆರೋಗ್ಯವನ್ನು ತಂದು ಕೊಡುವ ಧೀಃ ಧೈರ್ಯಾತ್ಮಾದಿ ವಿಜ್ಞಾನಗಳನ್ನೂ ಉಪದೇಶಿಸಿದೆ ಋತ್ತು, ಅವ್ಯಾಯಾಮ, ಅತಿವ್ಯಾಯಾಮ, ಅತ್ಯಾಹಾರ, ವಿಷಮಾಹಾರಗಳು, ದುಸ್ಪರಿಣಾಮಗಳನ್ನು ವರ್ಣಿಸಿದೆ. ಹೀಗೆ ರೋಗ ನಿರೋಧದ ಉಪಾಯಗಳನ್ನು ಹೇಳುತ್ತಿರುವಾಗಲೇ ದಿವಾ ಮಾನಕ್ಕೆ, ಋತುಮಾನಕ್ಕೆ, ನಯೋಮಾನಕ್ಕೆ ತಕ್ಕಂತಹ ಆಹಾರವಿಹಾರಗಳನ್ನೂ ವಿಚಾರ-ವಿಚಾರಗಳನ್ನೂ ತೂಕದಿಂದ ನಿವೇದಿಸಿದೆ.

ಆರೋಗ್ಯ ರಕ್ಷಣ ಮತ್ತು ದೀರ್ಘಾಯುಷ್ಯ ಸಾಧನವನ್ನೂ ಆಯುರ್ವೇದವು ಉಪದೇಶಿಸಿದೆ. ಪೂರ್ವ ದೊಷಿತ ಅಭಿಪ್ರಾಯವಿಲ್ಲದ ಪಾಶ್ಚಾತ್ಯ ವೈದ್ಯ ವಿಜ್ಞಾನಿಗಳೇನೇ ಹೇಳಲಿ ಆಯುರ್ವೇದದ ದಿನಚರ್ಯೆಯ, ಋತುಚರ್ಯೆಗಳನ್ನೂ ನೋಡಿ ಬೆಟ್ಟು ಕಚ್ಚುವ್ರಾರೆ.

ರೋಗೋತ್ಪತ್ತಿಯ-ವಿಷಯದಲ್ಲಿಯೂ ಆಯುರ್ವೇದವು ವೈಜ್ಞಾನಿಕ ವಿವೇಚನೆಯನ್ನೇ ಕೊಟ್ಟಿದೆ. ಅದರೆ ಅದರ ಪರಿಭಾಷೆ ತಿಳಿಯದವರಿಗೆ ಅದೊಂದು ದೊಡ್ಡ ತೊಡಕೆನಿಸುತ್ತದೆ. ಆಲೋಪೆಥಿಯಲ್ಲಿ ಬಹುತರ ರೋಗಗಳಿಗೆಲ್ಲ ಕೀಟಾಣುಗಳೇ ಕಾರಣವೆಂದು ಬೇಳಲಾಗುತ್ತದೆ. ಅದರೆ ಆ ಅಭಿಪ್ರಾಯವು ಈಗ ಬದಲಾಗುತ್ತಲಿದೆ. ಕೀಟಾಣುಗಳು ರೋಗದ ಪರಿಣಾಮವೇ ಹೊರತು ಕಾರಣಗಳಲ್ಲ ಎಂಬ ಸತ್ಯವನ್ನೂ ಪ್ರಮುಖವಿಜ್ಞಾನಿಗಳಿಂದು ಸಾರುತ್ತಿದ್ದಾರೆ ವಾಂತಿಭೇದಿ ರೋಗದ ಪಿಡುಗು ವ್ಯಾಪಿಸಿದಾಗ ಕೆಲವರಿಗೆ ಅದು ಅಂಟುವುದಕ್ಕೂ ಕೆಲವರಿಗೆ ಅಂಟದಿರುವುದಕ್ಕೂ ಕಾರಣವೇನು? ಅಂಟಿದವರಲ್ಲಿ ಕೆಲವರು ಸಾಯುವುದಕ್ಕೂ ಕೆಲವರು ಬದುಕುವುದಕ್ಕೂ ಕಾರಣವೇನು? ಎಂಬ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ರೋಗದ ಉತ್ಪತ್ತಿ, ಅನುತ್ಪತ್ತಿಗಳಿಗೆ ಕೀಟಾಣುಗಳಂತೆ ದೇಹದಲ್ಲಿಯ ಸುಸ್ಥಿತಿ ದುಸ್ಥಿತಿಗಳೂ ಕಾರಣವಾಗಿವೆ" ಎಂದು ಹೇಳಬೇಕಾಗುತ್ತದೆ. ಆಯುರ್ವೇದವೂ ಕೆಲವು ಕೀಟಾಣುಗಳಿಂದ ರೋಗವು ಹುಟ್ಟುವುದೆಂಬುದನ್ನು ಒಪ್ಪುವುದಿಲ್ಲವೆ ವಿಷಭೂ ಕೀಟಾಣುಗಳ ವರ್ಣನೆಯನ್ನೂ ಮಾಡಿದೆ. ಅದರೆ ಪ್ರಾಮುಖ್ಯವಾಗಿ ಸಕಲ ರೋಗಗಳಿಗೂ ದೋಷ ವೈಷಮ್ಯವೇ ಕಾರಣವೆಂದು ಆಯುರ್ವೇದದ ಅಭಿಪ್ರಾಯವಿದೆ. ಆಯುರ್ವೇದ ಋಷಿಗಳುದೇಹದಲ್ಲಿಯ ಕ್ರಿಯಾಸಮುಚ್ಚಯಗಳು ಮೂರು ಪ್ರಕೋಪಕ ತತ್ವಗಳಿಂದ ನಡೆಯುವವೆಂದು ಕಂಡು ಹಿಡಿದರು ಅವಕ್ಕೆ ವಾತ, ಪಿತ್ತ, ಕಫಗಳೆಂದು ಹೆಸರಿಟ್ಟರು. ಅವು ಪರಸ್ಪರ ತೂಕದಿಂದ ನಡೆದರೆ ಆರೋಗ್ಯ ಉಳಿಯುವುದು. ಅವಕ್ಕೆ ಪ್ರಕೋಪಗಳೆಂದು ಹೆಸರಿದೆ. ಅವುಗಳಲ್ಲಿ ತೂಕ ತಪ್ಪಿದರೆ (ದೋಷವೈಷಮ್ಯವಾದರೆ) ರೋಗಗಳು ಹುಟ್ಟುವವು. ಆ ತೂಕ ತಪ್ಪುವುದಕ್ಕೆ ಕೀಟಾಣುಗಳೂ ಕಾರಣವಾಗಬಹುದು; ಆಹಾರವೂ ಕಾರಣವಾಗಬಹುದು; ಮನೋವೈಕಲ್ಯವೂ ಕಾರಣವಾಗಬಹುದು. ಅದರೆ ದೋಷವೈಷಮ್ಯಾನುಗುಣವಲ್ಲದೆ ರೋಗೋತ್ಪತ್ತಿಯಿಲ್ಲ.

ರೋಗೋತ್ಪತ್ತಿಯ ಈ ಮೀಮಾಂಸೆಯ ಮೇಲೆಯೇ ಚಿಕಿತ್ಸಾಸೀಮಾಂಸೆಯೂ ನಿಂತಿದೆ ತೂಕ ತಪ್ಪಿದ ದೋಷಗಳಲ್ಲಿ ಹುಸ್ಸ ತೂಕ ತಂದುಕೊಡುವುದೇ ಚಿಕಿತ್ಸೆಯ ಗುರಿ. ಅದಕ್ಕಾಗಿ ಆಯುರ್ವೇದವು ಔಷಧಿಗಳನ್ನು ವಾತಹರ, ಪಿತ್ತಹರ ಮತ್ತು ಕಫಹರವೆಂದು ವಿಭಾಗಿಸಿದೆ. ಅಯಾ ರೋಗ ದೂಷಣೆಗೆ ತಕ್ಕಂತೆ ಅಯಾ ದೋಷಹರ ವನಸ್ಪತಿಗಳನ್ನು ಉಪಯೋಗಿಸಿದರೆ ರೋಗ ಪರಿಹಾರವಾಗುವುದು.

ವಿಜ್ಞಾನ ಭತ್ತರು ಇಲ್ಲಿ ತಿಳಿದುಕೊಳ್ಳತಕ್ಕ ವಿಷಯ ಒಂದಿದೆ. ಆಧುನಿಕ ವಿಜ್ಞಾನದಲ್ಲಿ ಪ್ರಚುರವಾದ ಅಕ್ಸಿಜನ್, ಹೈಡ್ರೋಜನ್, ಫಾಸ್‌ಫರಸ್, ಕೊಬ್ಬುಸಿಯಮ್ ಮುಂತಾದ ಶಬ್ದಗಳನ್ನು ಉಚ್ಚರಿಸಿದರೆ ಮಾತ್ರ ಆಯುರ್ವೇದವು ವಿಜ್ಞಾನವಾಗುತ್ತದೆ ಎಂಬ ವಿಚಾರಶ್ರೇಣಿಯು ತರ್ಕಬದ್ಧವಾಗಿಲ್ಲ. ರೋಗಿಗೆ ಬೇಕಾದದ್ದು ರೋಗದಿಂದ ಮುಕ್ತಿ, ರೋಗವು ಗುಣವಾದರೆ ವಿಶ್ಲೇಷಣವು ವೈಜ್ಞಾನಿಕವಾದುದು; ಗುಣವಾಗದಿದ್ದರೆ ಅವೈಜ್ಞಾನಿಕವಾದುದು ಎಂಬುದನ್ನು ಬೇರೆ ಹೇಳಬೇಕೆ? ಒಂದು ರೋಗವನ್ನು ಆಯುರ್ವೇದವು ವಾತಜನ್ಯವೆಂದು ಸಾರುತ್ತದೆ. ಕೆಲವು ವನಸ್ಪತಿಗಳನ್ನು ವಾತಹರವೆಂದು ವರ್ಗೀಕರಿಸುತ್ತದೆ. ಆ ವನಸ್ಪತಿಗಳನ್ನು ಆ ವಾತಜನ್ಯ ರೋಗದ ಮೇಲೆ ಪ್ರಯೋಗಿಸಿದಾಗ ಗುಣತೋರಿದರೆ ಆ ವಿಶ್ಲೇಷಣವು ತಪ್ಪೆಂದು ಹೇಳುವವರಿಗೆ ನನ್ನ 'ವಿಜ್ಞಾನ' ಶಬ್ದದ ವ್ಯಾಖ್ಯೆಯೇ ಮರೆತು ಹೋಗಿದೆ ಎನ್ನಬೇಕು. ಅಥವಾ ದುರುದ್ದೇಶದಿಂದಲೇ ಅವರು ಆಯುರ್ವೇದವನ್ನು ವೈಯ್ಯುವರೆನ್ನಬೇಕು. ಪ್ರಯೋಗ ಶಾಲೆಯಲ್ಲಿ ಗಾಜಿನ ಕೊಳವೆಯಲ್ಲಿ ನಡೆಸಿದುದಷ್ಟೆ ಪ್ರಯೋಗವಲ್ಲ; ವಿಶಿಷ್ಟ ವಿಶ್ಲೇಷಣವನ್ನನುಸರಿಸಿ ರೋಗಕಾರಣವನ್ನು ಹುಡುಕುವುದೂ, ಅದೇ ವಿಶ್ಲೇಷಣವನ್ನನುಸರಿಸಿ ಚಿಕಿತ್ಸೆ ನಡಿಸಿ ರೋಗವನ್ನು ಗುಣಪಡಿಸುವುದೂ ಒಂದು ಪ್ರಯೋಗವಲ್ಲವೇ?

ಇನ್ನು ಆಯುರ್ವೇದ ಪ್ರಯೋಗಗಳಿಂದ ರೋಗಿಗಳಿಗೆ ಗುಣ ಸಿಕ್ಕಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ನಿರ್ಮಲ ದೃಷ್ಟಿಯಿಂದ ಭಾರತದ ಇತಿಹಾಸದ ಕಡೆಗೆ ನೋಡಿದರೆ ಸಾಕು. ಪಾಶ್ಚಾತ್ಯ ಚಿಕಿತ್ಸಾಪ್ರಮುಖ ನಮ್ಮ ನಾಡಿಗೆ ಬಂದು ಒಂದೆರಡು ಶತಮಾನಗಳಾದವು. ಅನಕ್ಕೂ ಮುಂಚೆ ನಾಲ್ಕಾರು ವರ್ಷಗಳಿಂದ

(ಇನೂರೆ ಮುಚ ನೋಡಿರಿ)

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಸಿತಕ್ಕುವ ಮತ್ತು ನಿಂತುಹೋಗದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾವನೆಯೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ಸಿ.ಸಿ.ಸಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ವಾಧಿಕಾರಿಗಳು: ರಮಾಕಂಪೆನಿ, ಮಂಗಳೂರು

(೨ನೇ ಪುಟದಿಂದ)

ರಿಸಬೇಕಾಗುವುದೆಂಬುದು ನಿಜ. ಇಷ್ಟರ ವರೆಗೆ ಎಲ್ಲ ರಾಜಕೀಯಗಳನ್ನೂ ಇಂಗ್ಲೀಷು ಪದ್ಧತಿಯಂತೆ ಇಡುತ್ತಿದ್ದರು; ಯಂತ್ರೋಪಕರಣಗಳನ್ನು ಸಹ ನೆಚ್ಚಾಗಿ ಬ್ರಿಟನು, ಅಮೇರಿಕಗಳಿಂದ ಭಾರತ ತರಿಸುತ್ತಿದ್ದುದರಿಂದ ನಮ್ಮ ಲೆಕ್ಕಕ್ಕೆ ಬರುಗಳು ಹೊಂದಿಕೊಳ್ಳುತ್ತಿದ್ದವು. ಈಗ ಹೊಸ ತೂಕ, ಅಳತೆಗಳನ್ನು ಜ್ಞಾಪಿಗೆ ತಂದರೆ, ಯಂತ್ರೋಪಕರಣಗಳಿಂದ ಸಿಡಿದು ಮೈಲು ಕಲ್ಲುಗಳ ವರೆಗೆ ಪ್ರತಿಯೊಂದರಲ್ಲೂ ಬದಲಾವಣೆ ಬರಬೇಕಾಗುತ್ತದೆ. ಇದಕ್ಕೆ ಕನಿಷ್ಠಪಕ್ಷ ೫೦ ಕೋಟಿ ರೂಪಾಯಿಗಳ ಹೆಚ್ಚು ಬಂದೀತೆಂದು ಅಂದಾಜು. ಇಷ್ಟು ಹೆಚ್ಚಿನ್ನು ನಾವೀಗ ಮಾಡಬಲ್ಲೆವೆ ಎಂಬುದು ವಿಚಾರಣೀಯವಾದ ವಿಷಯ. ನಾವು ಒಮ್ಮೆಗೆಯೇ ಇಷ್ಟು ಹಣ ಕರ್ಚು ಮಾಡಬೇಕೆಂದಿಲ್ಲ. ನಿಜ. ಹದಿನೈದು ವರ್ಷಗಳ ಅವಧಿಯಲ್ಲಿ ಇದನ್ನು ಸಾಧಿಸಬಹುದು ಎಂಬ ಉತ್ತರ ವಿಚಾರಾರ್ಹವಲ್ಲ ನಮಗೆ ತೋರುತ್ತದೆ. ಹಾಗೆಯೇ ಯಂತ್ರೋಪಕರಣಗಳು ನಮ್ಮ ತೂಕ, ಅಳತೆಗಳಿಗೆ ಸರಿಯಾಗಿ ದೊರಕಲಿಕ್ಕಿಲ್ಲ ಎಂಬ ಮಾತೂಕೂಡ ಅವಕಾಶವಿಲ್ಲವೆಂದು ವಿಚಾರ ಮಾಡಿದರೆ ಮನವರಿಕೆಯಾಗುತ್ತದೆ. ಈಗಾಗಲೇ ಮೆಟ್ರಿಕ್ ಪದ್ಧತಿಯನ್ನು ಅನುಸರಿಸುವ ಫಿಲಿಪೈನ್, ಸೈಲೋನ್, ಜಪಾನ್, ಬೇಜಿಲ್ ಮುಂತಾದ ದೇಶಗಳಿಗೆ ಭೇಟಿನೀಡಿ ಅನೇಕಿಕೆಗಳಂದಲೇ ಯಂತ್ರೋಪಕರಣಗಳು ಸಿಗುತ್ತವೆ. ಇವುಗಳೊಂದಿಗೆಯೂ ಆ ದೇಶಗಳ ವ್ಯಾಪಾರ ನಡೆಯುತ್ತದೆ

ಇನ್ನು ಕೇಳಿದ ಬಳಿಕ, ಇನ್ನು ಮುನ್ನ ಕೆಯೊಂದೇ ಹೊಸ ಸುಧಾರಣೆಗೆ ಬೇಕಾದ ಸಂಗತಿ ಎಂದು ಹೊಳೆಯದಿರದು. ಮೆಟ್ರಿಕ್ ಪದ್ಧತಿಯಲ್ಲಿ ದಶಮಾಂಶಗುಣಕಗಳ ಸೌಲಭ್ಯವಿರುವುದರಿಂದ ಎಂಥ ದೊಡ್ಡ ಸಿಗದ ವ್ಯವಹಾರ ನಡೆಸಲು ಕಷ್ಟವಾಗಲಾರದು. ಮೈಲಿಗೆ ಎಂಟು ಫರ್ಲಾಂಗು, ಫರ್ಲಾಂಗಿಗೆ ೨೨೦ ಗಜ, ಗಜಕ್ಕೆ ೩ ಅಡಿ, ಅಡಿಗೆ ೧೨ ಇಂಚು ಎಂಬ ಕಷ್ಟ ಮತ್ತು ಟನ್ನಿಗೆ ೨೦ ಹಂಡ್ರೆಡ್‌ವೆಟ್ ೨೦ ಮಣ, ಮಣಕ್ಕೆ ೨೦ ರಾತಲು ಎಂಬ ತೊಡಕು ಮೆಟ್ರಿಕ್ ಪದ್ಧತಿಯನ್ನು ಅನುಸರಿಸಿದರೆ ಸ್ವಯಮೇವ ತಪ್ಪುತ್ತದೆ. ಎಲ್ಲ ಪ್ರಗತಿಪರ ರಾಷ್ಟ್ರಗಳು ಈ ಕ್ರಮವನ್ನು ಅನುಸರಿಸುತ್ತಿರುವುದರಿಂದ ನಾವೂ ಈ ಹಾದಿ ಹಿಡಿಯುವುದು ಕ್ರಮಪ್ರಾಪ್ತವಾಗಿದೆ. ಇಂಗ್ಲೆಂಡು ಇನ್ನು ಹಳೆಯ ಸಂಪ್ರದಾಯವನ್ನು ತೊರೆದಿಲ್ಲ ಎಂಬುದ ಕ್ಕಾಗಿ ನಾವು ಹಿಂದುಳಿಯಬೇಕಾಗಿಲ್ಲ. ಇಂಗ್ಲೆಂಡು ಯಾಕೆ ಹೊಸ ಸುಧಾರಣೆಗೆ ಅಂಜುತ್ತಿದೆ ಎಂಬುದನ್ನು ನಾವು ತಿಳಿದರೆ, ಈಗಲೇ ಸಜ್ಜು ಮುಂದಿಡಬೇಕಾದದ್ದು ಅಗತ್ಯ ಮತ್ತು ಅನಿವಾರ್ಯವೆಂದೇ ತೋರೀತು—ಅಲ್ಲಿ ಔದ್ಯೋಗಿಕ ಕ್ರಾಂತಿಯುಂಟಾಗಿದ ಎರಡು ಶತಮಾನಗಳಲ್ಲಿ ಎಷ್ಟು ಕೈಗಾರಿಕೆಗಳು ನೆಲೆಗೊಂಡಿವೆಯೆಂದರೆ, ಮೆಟ್ರಿಕ್ ಸನ್ಮತಿಗೆ ಬದಲಾವಣೆ ಮಾಡಲು ಕೋಟ್ಯಾಂತರ ಪನುಗಳ ವೆಚ್ಚ ಬರುತ್ತದೆ. ನಾವು ಸಹಜವಾಗಿ ಬೇಡ, ಇನ್ನು ಇಪ್ಪತ್ತು ವರ್ಷಗಳು ಕಳೆದ ಮೇಲೆ ನೋನೋಣ ಎಂದು ಹೇಳುವರೆ. ಈಗ ೫೦ ಕೋಟಿ ರೂಪಾಯಿ ವೆಚ್ಚವಾದ ಕೆಲಸಕ್ಕೆ ಆಗ ೧೫೦ ಕೋಟಿ ರೂಪಾಯಿಯೂ ಸಾಲದೆ - ಹೋದೀತು. ಏಕೆಂದರೆ ಈ ನಡುವಿನ ಅವಧಿಯಲ್ಲಿ ನಾಲ್ಕೈದು ಪಂಚವಾರ್ಷಿಕ ಯೋಜನೆಗಳು ಮುಗಿದು, ಕೈಗಾರಿಕೆಗಳ ವಿಸ್ತರಣೆ ಬಹಳ ಹೆಚ್ಚಿಕೊಂಡು ಬಿಡುತ್ತದೆ ಆದುದರಿಂದ, ನಾಳೆಗೆ ಬದಲಾವಣೆಯನ್ನು ಮುಂದೂಡುವುದಕ್ಕಿಂತ ಈಗಲೇ ತಕ್ಕ ಕ್ರಮ ಕೈಗೊಳ್ಳುವುದು ಲಾಭಕರ; ಇಂದಿನ ದಿನವೇ ಸುದಿನ ಎಂದು ನಾವು ತಿಳಿದುಕೊಳ್ಳಬೇಕಾದದ್ದೇ ಅಪೇಕ್ಷಣೀಯ.

—ಸಂಕಲಿತ.

(೧ನೇ ಪುಟದಿಂದ)

ನದ್ದು ಬೆಲೆದ ರೋಗಿಗಳಿಗೆ ಆಯುರ್ವೇದವೇ ಕೈಹಾರಿಯಾಗಿತ್ತಲ್ಲವೆ? ಆಕ್ಯುಪಂಕ್ಚರ್ ಮತ್ತು ಹೈಡ್ರೋಥೆರಾಪಿಗಳಿಗೆ ಯುರೋಪಿನಾದ್ಯಂತ ಮಾನ್ಯತೆ ಸಿಕ್ಕಿದ್ದರೂ ಆಯುರ್ವೇದಿಯರಿಗೆ ಸ್ವಾಧಾನಾಯಾಸದ ಮಹತ್ವವು ತಿಳಿದಿರಲಿಲ್ಲವೇ? ವಿಟಮಿನ್ನುಗಳ ವಿಷಯಗಳು ತಿಳಿಯುವುದಕ್ಕಿಂತ ಮೊದಲು ಅವುಗಳ ಕೊರತೆಯಿಂದುಂಟಾಗುವ ರಿಕೆಟ್ಸ್, ಸ್ಕರ್ವಿ, ಡ್ರಾಪ್ಸಿ (ಮುಡು ದೋಷ, ಕೋಗು) ಮುಂತಾದ ಬೇನೆಗಳನ್ನು ಗುಣಪಡಿಸಲು ಆಯುರ್ವೇದವು ಸಮರ್ಥವಾಗಿರಲಿಲ್ಲವೇ? ಆಯುರ್ವೇದವನ್ನು ಆಧುನಿಕ—ರಾಸಾಯನಿಕ ಪರಿಭಾಷೆಯಲ್ಲಿ ವಿವೇಚಿಸಿರೆಂದು ಕೇಳುವುದೂ, ಆಧುನಿಕ ರೋಗಾಯನ ಶಾಸ್ತ್ರವನ್ನು ಆಯುರ್ವೇದಿಕ ಪರಿಭಾಷೆಯಲ್ಲಿ ವಿವರಿಸಿರೆಂದು ಅಪೇಕ್ಷಿಸುವುದೂ ಮೂರ್ಖತನವಾಗಿದೆ. ಆಯಾ ಶಾಸ್ತ್ರವನ್ನು ಅದಕ್ಕೆ ವಿಶಿಷ್ಟವಾದ ವಿಶ್ಲೇಷಣ ಕ್ರಮದಿಂದಲೇ ತಿಳಿದುಕೊಳ್ಳಬೇಕು ಮತ್ತು ಅದರದರ ವೈಜ್ಞಾನಿಕತೆಯನ್ನು ಅದರದರ ಕಾರಣ—ಪರಿಣಾಮಗಳ ತರ್ಕಬದ್ಧತೆಯನ್ನೇ ಅವಲಂಬಿಸಿ ಅಳೆಯಬೇಕು

ಆಯುರ್ವೇದವೂ ಒಂದು ವಿಜ್ಞಾನವೇ? ಎಂದು ಪ್ರಶ್ನಿಸುವವರು ಮೊದಲು ಆಯುರ್ವೇದದ ವಿಶ್ಲೇಷಣ ಕ್ರಮವನ್ನು ತಿಳಿದುಕೊಳ್ಳಲಿ. ಆ ಕ್ರಮಕ್ಕನುಸರಿಸಿ ತಮ್ಮ ಆಹಾರ ವಿಹಾರಗಳನ್ನೂ ನಿದಾನ ಚಿಕಿತ್ಸಾಕ್ರಮಗಳನ್ನೂ ರೂಪಿಸಿಕೊಳ್ಳಲಿ. ತತ್ಪರಿಣಾಮವಾಗಿ ಅವರ ಆರೋಗ್ಯ ಭಾಗ್ಯವು ಬೆಳೆದರೆ ಆಯುರ್ವೇದವೂ ವಿಜ್ಞಾನವೆಂದು ಮನಗಾಣಲಿ. ಅಷ್ಟೆಲ್ಲ ತಾವೇ ಮಾಡಲಾಗದಿದ್ದರೆ ಮಾಡುತ್ತಿರುವವರನ್ನು ವಿಚಾರಿಸಿಯಾದರೂ, ವಿನಯದಿಂದ, ನಿರ್ಮಲ ಚಿತ್ತದಿಂದ ನೋಡಿಯಾದರೂ ಮನಗಾಣಲಿ. ಕವಿಪ್ರಿಯರ ಚಿಕಿತ್ಸೆಯನ್ನು ನೋಡಿ ಆಯುರ್ವೇದವನ್ನು ಬೈಯುವುದೂ ಕಂಡದ್ದೆಲ್ಲಿ ಇಂಜಕ್ಶನ್ ಮಾಡಿ ರೋಗಿಯನ್ನು ಕೊಲ್ಲುವ ಡಾಕ್ಟರರನ್ನು ನೋಡಿ ಅಲೋಪಥಿಯನ್ನು ಬೈಯುವುದೂ ತಲೆ ಕೆಟ್ಟವರ ಲಕ್ಷಣವಾಗಿದೆ. ಕಳಚಿಬಿದ್ದ ಕೊಳೆತ ಹಣ್ಣಿನಿಂದ ಆ ಮರದ ಗುಣವನ್ನು ತಿಳಿಯುವುದು ವೈಜ್ಞಾನಿಕ ರೀತಿಯೇ ಅಲ್ಲ

[ಡಾ| ಎಂ. ಗೋಪಾಲಕೃಷ್ಣರಾಯರು ನಿಖಿಲ ಕರ್ನಾಟಕ ಆಯುರ್ವೇದ ಪರಿಷತ್ತಿನ ಎಂಟನೇ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದ ಸಾರ.]

(೧ನೇ ಪುಟದಿಂದ)

ಹಿಂದುಳಿಯ ಮಂತೆ ಮಾಡಲು ಪ್ರಯತ್ನಿಸಿದ್ದರು. ಇನ್ನು ಈ ಆಟವೂ ನಡೆಯದು. ಏಕೆಂದರೆ, ಕ್ರೈಸ್ತ ಜಗದ್ಗುರು ಪೋಪರು ಗೋವೆಯ ವಿಷಯದಲ್ಲಿ ಧಾರ್ಮಿಕ ಭಾವನೆಗೇನೂ ಎಡೆಯಿಲ್ಲ ಎಂದು ನೆಹರುಗಳಿಗೆ ತಾವು ಭೇಟಿ ಕೊಟ್ಟಾಗ ಸಾರಿದ್ದಾರೆ. ಕಾರಣ, ಕ್ರೈಸ್ತ ಬಂಧುಗಳು ಯಾವುದೇ ದ್ವಂದ್ವ ಭಾವನೆಗೆ ಸಿಲುಕದೆ ಹೋರಾಟದಲ್ಲಿ ಭಾಗವಹಿಸಬಲ್ಲರು.

ಹೊಸ ಆಡಳಿತ, ನಿಮ್ಮದೇ ಸರಕಾರ ಎಂಬ ನೂತನ ಪಲ್ಲವಿಯು ಗೋವಾಂತಕರನ್ನು ಮರುಳು ಮಾಡಲಾರದೆಂದು ನಾವು ನಂಬುತ್ತೇವೆ ಸೀಸೆ ಮಾತ್ರ ಬದಲಾಗಿರಬಹುದು; ಆದರೆ ಮದ್ಯ ಅದೇ ಎಂಬುದರಲ್ಲಿ ಅನುಮಾನಕ್ಕೇನೂ ಎಡೆಯಿಲ್ಲ. ಪೋರ್ಚುಗೀಜರು ಕೈಯೆತ್ತಿ ಕೊಡುವ ಆ ಮದ್ಯವೇ ಬೇಡ; ಸ್ವಾತಂತ್ರ್ಯದ ಅಮೃತ ಪಾನದಿಂದಲೇ ತಮಗೆ ತೃಪ್ತಿ ಎಂದು ಗೋವಾಂತಕರು ದೃಢ ನಿಶ್ಚಯದಿಂದ ಈಗ ಸಾರಿದ ಪಕ್ಷದಲ್ಲಿ ಆಂತರಿಕ ಒತ್ತಡಕ್ಕೆ ಸಾಲಾಝಾರರು ಶರಣಾಗಲೇ ಬೇಕಾಗುತ್ತದೆ. "ಅನ್ಯಥಾ ಶರಣಂ ನಾಸ್ತಿ" ಎಂದವರು ಅಗ ಭಾರತದೊಡನೆ ಸಂಧಾನದ ಮಾತುಕತೆಯಾಡಲು ಮುಂದಾದಾರು. ಈಗ ತರಬೇಕೆಂದಿರುವ ಸುಧಾರಣೆಗಳನ್ನಾದರೂ ಅವರು ತಮ್ಮ ಮಿತ್ರರ ಒತ್ತಾಯದಿಂದಲೇ ತಂದಿರಬೇಕೆಂದು ಊಹಿಸಲು ಕಾರಣಗಳಿವೆ ಸಾಲಾಝಾರರ ಮಿತ್ರರ ಒತ್ತಾಯ ಸಂಪೂರ್ಣ ಸ್ವಾತಂತ್ರ್ಯವನ್ನು ಗೋವಾಂತಕರಿಗೆ ಸೀಡುವ ಸಿದ್ಧಾರಸಿನಲ್ಲಿಯೇ ಮುಕ್ತಾಯವಾಗುವಂತೆ ಭಾರತ ಸರಕಾರ ತನ್ನ ನರ್ಚಸ್ಸನ್ನು ಉಪಯೋಗಿಸಿ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಪೇಕ್ಷಣೀಯ. ಒಳಗಿನ ಒತ್ತಡಕ್ಕೆ ಪೂರಕವಾಗಿ ಭಾರತ ಸರಕಾರವು ರಾಜಕೀಯ ಹಾಗು ಆರ್ಥಿಕ ಉಪಾಯಗಳನ್ನು ಯೋಜಿಸಿದರೆ ನಮ್ಮ ಉದ್ದೇಶ ಬೇಗನೇ ಫಲಿಸುತ್ತದೆ. ನೆಹರುಗಳು ಗೋವಾಂತಕರು ಸ್ವತಂತ್ರರಾಗಿಯೇ ತೀರುತ್ತಾರೆ; ಈ ವಸಾಹತುಗಳು ಭಾರತದಲ್ಲಿ ಸೇರಿಹೆ ಹೊಂದೆಯೇ ಹೊಂದುತ್ತವೆಂದು ರೋಮಿನಲ್ಲಿ ಘೋಷಿಸಿದ್ದಾರೆ. ಇದು ಮುಸಿಸೋಗದಂತೆ, ಮತ್ತು ವಿಳಂಬವಿಲ್ಲದೆ ಈ ಭವಿಷ್ಯ ಸತ್ಯವಾಗುವಂತೆ ಭಾರತ ಸರಕಾರವು ನೆಹರುಗಳು ಹೊಸ ದೆಹಲಿಗೆ ಮರಳಿದೊಡನೆಯೇ ತನ್ನ ಧೋರಣೆಯನ್ನು ಸೂಕ್ತರೀತಿಯಲ್ಲಿ ಅಳವಡಿಸಿಕೊಳ್ಳಲಿ; ಹಾಗೆ ಗೋವಾಂತಕರಿಗೆ ನಿರವಾಗಲಿ!

—ಕಾರ್ತಿಕೇಯ.

ಕನ್ನಡದ ಗ್ರಂಥಗಳಿಗೆ ಬಹುಮಾನ

ಮದ್ರಾಸ್ ಸರಕಾರವು ವಿದ್ಯಾಮಟ್ಟದ ಕನ್ನಡ ಗ್ರಂಥ ಸ್ಪರ್ಧೆಗೆ ಈ ವರ್ಷ (೧೯೫೫) ಈ ಕೆಳಗಿನ ವಿಷಯಗಳು ಆಯ್ಕೆಯಾಗಿವೆ.

1. ಗದ್ಯಕೃತಿಗಳು (ಚಿತ್ರ ಜಾತ್ರೆ ಅಥವಾ ಜಾತ್ರೆ)
2. ಸಂದೋಹನ.
3. ಕಾದಂಬರಿ (1951 ರಿಂದ ಈಚೆಗೆ ಪ್ರಕಟವಾದವುಗಳಾಗಿರಬೇಕು.)

ನಿಯಮಗಳು:

1. ಪ್ರತಿಯೊಂದು ವಿಭಾಗದಲ್ಲಿ ಉತ್ತಮವೆಂದು ಆರಿಸಲ್ಪಟ್ಟ ಪುಸ್ತಕಕ್ಕೆ ರೂ. 500/- ರ ಬಹುಮಾನ ಕೊಡಲಾಗುವುದು.
2. ಹೊಸ್ತಾಗಿ ಬರೆದಿರುವುದೇ ಗ್ರಂಥಕರ್ತರು ಮಾತ್ರ ಈ ಸ್ಪರ್ಧೆಯಲ್ಲಿ ಭಾಗವಹಿಸಬಲ್ಲರು ಅರ್ಹರು.
3. ಆಯ್ದಾದ ಪುಸ್ತಕಗಳಾದರೆ ಸಾಲ್ಕು ಪ್ರತಿಗಳನ್ನು ಕಳುಹಿಸಬೇಕು.
4. ಕೈ ಬರೆದ ಪುಸ್ತಕಗಳನ್ನು ಸ್ಪರ್ಧೆಗೆ ಕಳುಹಿಸಲಾಗುವುದು ಮೂರು ಪ್ರತಿಗಳನ್ನು ಕಳುಹಿಸಬೇಕು.
5. ಸ್ಪರ್ಧೆಗೆ ಕಳುಹಿಸಲ್ಪಟ್ಟ ಯಾವುದೇ ಪುಸ್ತಕಗಳನ್ನಾಗಲಿ ಕೈ ಬರೆದ ಪುಸ್ತಕಗಳನ್ನಾಗಲಿ ಎಷ್ಟು ಮಾತ್ರಕ್ಕೂ ಹಿಂದಕ್ಕೆ ಕಳುಹಿಸಿಕೊಡಲಾಗುವುದಿಲ್ಲ.
6. ಈ ಮೇಲಿನ ವಿಭಾಗಗಳಲ್ಲಿ ಈ ಹಿಂದೆ ಮದ್ರಾಸ್ ಸರಕಾರದಿಂದ ಬಹುಮಾನ ಪಡೆದ ಪುಸ್ತಕಗಳನ್ನು ಸ್ಪರ್ಧೆಗೆ ಸ್ವೀಕರಿಸಿಕೊಳ್ಳಲಾಗುವುದಿಲ್ಲ.
7. ಪುಸ್ತಕಗಳು ತಾ. 31—8—55 ರ ಒಳಗೆ ಕಾರ್ಯದರ್ಶಿ ಕರ್ನಾಟಕ ಸಂಘ, 16 ವೀರಸ್ವಾಮಿ ಪಿಳ್ಳೆ ಬೀದಿ, ಎಗ್ಮೋರ್ ಮದ್ರಾಸು—8 ಇವರಿಗೆ ಸೇರ್ಪಡೆ ಆಗಬೇಕು.

ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಸಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎ.ಎಸ್-ಪಂಚಕೇಶ ಅಯ್ಯರ್, ಎಂ ಎ., ಐ. ಸಿ. ಎಸ್. ಬಾರ್. ಎಟ್. ಲಾ.
ಎ. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊಡ್ಲಿಯ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇರೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತೂ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

151 ಕತೆಗಳು ಬೆಲೆ ರೂ. 1-12-0

ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

ಅಮೃತಾಂಜನ
ಎಲ್ಲಾ ನೋವುಗಳಿಗೆ ನಿವೇದ
ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಮಾರ್ಟಿನ್ & ಹ್ಯಾರ್ಟ್

Edited, Printed & Published By K. H. Udipi at the Navayuga Press, Shetty, S. India

REGD. NO. M. 3810

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ ಉಡುಪಿ, 21—7—1955 ಸಂಚಿಕೆ ೪೫

VOL. 34 NO. 45

ಸಂಪಾದಕೀಯ

ಸರ್ವಾಧಿಕಾರದ ಮಾರ್ಗಗಳಲ್ಲಿ ಮತ್ತು ಸಾರ್ವಭೌಮತ್ವದ ಅಭ್ಯಾಸಗಳಲ್ಲಿ ತರಬೇತಿಗೊಂಡಿರುವ ನಿರಂಕುಶ ಆಡಳಿತ ವರ್ಗವನ್ನು ಪ್ರಜಾಪ್ರಭುತ್ವ ಪದ್ಧತಿಯ ರೀತಿ ಮತ್ತು ನಡವಳಿಕೆಗಳಿಗೆ ಪರಿವರ್ತಿಸುವ ಮಹಾಕಾರ್ಯ ಸರಕಾರದ ಮೇಲಿದೆ. ಇದಕ್ಕೆ ಮುಂಗಡ ಪತ್ರದಲ್ಲಿ ವೆಚ್ಚಗಳಿಗಾಗಿ ಹಣವನ್ನೇನು ತೆಗೆದಿಡ ಬೇಕಾಗುವುದಿಲ್ಲ ಆದುದರಿಂದ ಸರಕಾರವು ಇತರ ಕೆಲಸಗಳಿಗಿಂತ ಮೊದಲು ಇದನ್ನು ಗಮನಿಸಬೇಕು ಅತ್ಯಂತ ಮಹತ್ವದ ಈ ವಿಷಯ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಡುವುದೆಂದು ಆಶಿಸೋಣ!

—ಮಗನ ಭಾಯಿ ಪಿ. ದೇಸಾಯಿ.

ಸತ್ಯಾಗ್ರಹಕ್ಕೋಸ್ಕರ ಗೋವೆಗೆ ತೆರಳಿದವರನ್ನು ಅಲ್ಲಿಯ ಪೋಲೀಸರೇ ಮುಂತಾದ ಸಾಮಾನ್ಯ ನೌಕರರು ಅತಿಯಾಗಿ ಹಿಂಸಿಸಿದ ವಾರ್ತೆಯನ್ನು ನಿತ್ಯವೂ ಕೇಳುವ ನಮಗೆ ಅಲ್ಲಿಯ ಅಧಿಕಾರಿಗಳಿಗೆ ಈ ನೌಕರರು ತುಂಬ ಹೆದರಿ ನಡೆಯುವರೆಂಬ ವಿಷಯವೂ ತಿಳಿದಿರುವುದು ಒಳಿತು. ಸತ್ಯಾಗ್ರಹಿಗಳು ಮೇಲಧಿಕಾರಿಗಳಿಗೆ ದೂರನ್ನು ಕೊಂಡುಹೋದರೆ, ಆಗ ಇವರು ಸಾಮಾನ್ಯ ಪೋಲೀಸರನ್ನು ಗದರಿಸುವರಂತೆ—"ಈ ಸ್ತ್ರೀಯರು ನಮಗೆ ಸೇರಬೇಕು, ನಾವಿವರನ್ನು ಹಣಕ್ಕೆ ಕೊಂಡುಕೊಳ್ಳುತ್ತೇವೆ" ಎಂದು ಮಹಿಳಾ ಸತ್ಯಾಗ್ರಹಿಗಳನ್ನು ಸುತ್ತುವರಿದವರು ಸಹ ಅಧಿಕಾರಿಯೊಬ್ಬ ಬಂದಾಗ ಜಾರುತ್ತಿದ್ದರಂತೆ. ಮೇಲಧಿಕಾರಿಗಳು ಕೇವಲ ದರ್ಪ ತೋರಿಸುತ್ತಿರಲು ಹಾಗೆ ನೌಕರರನ್ನು ಭಯಪಡಿಸುತ್ತಿರಬಹುದು—ಆದರೆ, ಅಧಿಕಾರಿಗಳು ಜನರ ದೂರಿಗೆ ಕಿವಿಗೊಡದ ಅಲಸಿಗಳಾಗುವುದಕ್ಕಿಂತ ತುಸು ನಿಷ್ಠುರ ನಡವಳಿಕೆಯ ದರ್ಪಶಾಲಿಗಳಾಗುವುದೇ ಲೇಸು.

ಭಾರತದ ಆಡಳಿತವರ್ಗ ಹೀಗಿಲ್ಲವಲ್ಲ ಎಂದು ತೋರುತ್ತದೆ. ದರ್ಪ ತೋರಿಸುವ ಜನರು ವಿರಳ ಎಂದಿದರ ಅರ್ಥವಲ್ಲ—ದೂರು ಹೇಳಿದವನ ಮೇಲೆಯೇ ಕಿಡಿಕಾರುವ ಅಧಿಕಾರಿಗಳಾಗಿ ನಮ್ಮವರಿದ್ದಾರೆ. ತಪ್ಪಿತಸ್ಥನನ್ನು ಗದರಿಸಲು ಹೋಗುವ ಬದಲು ದೂರು ತಂದವನನ್ನೆ ಬೆದರಿಸುವುದಕ್ಕೆ ಇವರು ಹೋಗುತ್ತಾರೆ. ಈಚೆಗೊಂದು ಸ್ವಾರಸ್ಯದ ಸುದ್ದಿ ಬರದಿಯಾಯಿತು—ಎಲ್ಲಿಯೋ ಒಂದು ರೈಲು ನಿಲ್ದಾಣದಲ್ಲಿ ಟಿಕೇಟು ಕೊಡುವಾತ "ಚಿಲ್ಲರೆ ಸಾಕಷ್ಟಿಲ್ಲ" ಎಂದು ಮುಂತಾಗಿ ಕಾಗದದಲ್ಲಿ ಬರೆದು ಕೊಡುತ್ತಿದ್ದನೇ ಹೊರತು, ಯಾವ ಪ್ರಶ್ನೆಗೂ ಮಾತನಾಡುತ್ತಿರಲಿಲ್ಲವಂತೆ. ಜನರು ಮೇಲಧಿಕಾರಿಗೆ ದೂರು ಕೊಂಡು ಹೋದರು—ಆದರೆ ಅಷ್ಟರೊಳಗೆ ರೈಲು ಹೊರಟಾಯಿತು. ಎಷ್ಟೋ ಜನರು ತೊಂದರೆಪಟ್ಟುಕೊಂಡರು. ಆ ಅಧಿಕಾರಿಯಿಂದ ಹೆಚ್ಚಿನ ಪ್ರಯೋಜನವೇನೂ ಆಗಲಿಲ್ಲ.

ಅಧಿಕಾರಿಗಳು ಸಾಮಾನ್ಯರ ಮಾತಿಗೆ ಕಿವಿಗೊಡುವುದಿಲ್ಲವಷ್ಟೇಯಲ್ಲ- ಪ್ರತಿಷ್ಠಿತರ ಮಾತನ್ನೂ ಉದಾಶೀನದಿಂದಲೇ ನೋಡುತ್ತಾರೆ. "ಹರಿಜನ" ಪತ್ರಿಕೆಯ ಸಂಪಾದಕರು ತಮ್ಮದೊಂದು ಅನುಭವವನ್ನು ಈಚೆಗೆ ಬರೆದಿದ್ದಾರೆ—ಅವರು ಈಚೆಗೆ ಒಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಮನುಮೆಯ ಗದ್ದಲದ ಸಮಯವದು. ಆದರೆ ಮನುಮಕ್ಕಳಿಗೆ ನೆಟ್ಟಗೆ ನಿಂತಿರಲೂ ರೈಲಿನಲ್ಲಿ ಜಾಗವಿರಲಿಲ್ಲ ದೂರದ ಊರುಗಳಿಂದ ಪ್ರಯಾಣಿಸುವವರ ಡಬ್ಬಿಗಳಿಗೆ ರಿಜರ್ವೇಶನ್ ಲೇಬಲ್‌ಹಚ್ಚಲು ಅಧಿಕಾರಿಗಳು ಮರೆತಿದ್ದರು ಸಾಮಾನ್ಯವಾಗಿ ರಿಜರ್ವೇಶನ್ನು ಮುಂಚಿನದಿನ ಕೊಡತ್ತಿದ್ದರೂ ಸಹ ಒಬ್ಬ ಪೋಲೀಸು ಸಾಹೇಬನಿಗೆ ಆ ಕೂಡಲೇ ಇಡೀ ಡಬ್ಬಿಯೊಂದು ದೊರಕಿತು! ಇದೇಕೆ ಹೀಗೆ ಎಂಬ ಪ್ರಶ್ನೆಯನ್ನು ಉದೇಕ್ಷಿಸಲಾಯಿತು. ಇನ್ನೊಂದು ಡಬ್ಬಿಯಲ್ಲಿ ರಿಜರ್ವೇಶನ್ ಲೇಬಲ್ ಹಚ್ಚಿದ್ದರು—ಆದರೆ ಅವಂಲ್ಲದ್ದದ್ದು ಇಬ್ಬರೇ ಸೈನಿಕರು ಇದು ರಿಜರ್ವ್ ಡಬ್ಬಿ ಎಂದು ಹೇಳುತ್ತಾ ಅವರು ಆ ಡಬ್ಬಿ ಹೊಕ್ಕಿದ ಎಲ್ಲರನ್ನೂ ಹೊರಹೋಗುವಂತೆ ಬಲಾತ್ಕರಿಸಿದರು. ರೈಲಿನಲ್ಲಿ ಜನಸಂದಣಿ ಹೆಚ್ಚಿದೆ, ಆದುದರಿಂದ ಎಲ್ಲರಿಗೂ ಸಾಕಷ್ಟು ಅವಕಾಶ ಒದಗಿಸುವ ಸೌಜನ್ಯ ತೋರಿಸಿರಿ—ಎಂದು ಹೇಳಲು ಯಾವ ಅಧಿಕಾರಿಯೂ ಮನಸ್ಸು ಮಾಡಲಿಲ್ಲ. ಜನರ ದೂರನ್ನು ಸಂಪೂರ್ಣ ತಿರಸ್ಕರಿಸಲಾಯಿತು

ತಮ್ಮ ಅನುಭವವನ್ನು ಹೀಗೆ ವಿವರಿಸಿದ "ಹರಿಜನ" ಸಂಪಾದಕ ಶ್ರೀ ಮಗನ ಭಾಯಿ ದೇಸಾಯಿಯವರು ಪೋಲೀಸರು ಮತ್ತು ಸೈನಿಕರಿಗೆ ಮಾತ್ರ ಸಾಮಾನ್ಯ ಜನರಿಗೆ ದೊರಕದ ಸೌಲಭ್ಯಗಳು ದೊರಕುವುದೆಂದರೇನು? ಎಂಬ ಪ್ರಶ್ನೆ ಹಾಕಿದ್ದಾರೆ. ಶಾಸನದ ನಿಯಮಗಳಿಗೆ ಅನುವರ್ತಿಯಾಗಿ ನಡೆಯುವುದರಿಂದ ಯಾರಿಗೂ ವಿನಾಯತಿ ಇಲ್ಲ ಎಂಬ ಸತ್ಯವನ್ನು ಅವರು ನೆನಪಿಗೆ ತಂದುಕೊಟ್ಟಿದ್ದಾರೆ. ಶಾಸನವನ್ನು ತಮ್ಮ ಅನುಕೂಲಕ್ಕೆ ಶಕ್ಯಂತೆ ಕಡೆಗಣಿಸುವ ಈ ಆಡಳಿತವರ್ಗ ತಮ್ಮ ನಡವಳಿಕೆಯನ್ನು ತಿದ್ದಿಕೊಂಡು ಶುದ್ಧವಾಗಿರುವಂತೆ ಜನರು ಮತ್ತು ಸರಕಾರ ಪರಸ್ಪರ ಸಹಕರಿಸಿ ಒತ್ತಾಯ ಹೇರಬೇಕು ಎಂದವರು ಸೂಚಿಸಿದ್ದಾರೆ ಸಾಮಾನ್ಯ ಜನರ ದೂರುಗಳಿಗೆ ಹೆಚ್ಚು ಲಕ್ಷ್ಯ ಪೂರೈಸಲ್ಪಡಬೇಕೆಂಬ ತತ್ವವನ್ನು ಅವರು ಪ್ರತಿಪಾದಿಸಿದ್ದಾರೆ.

ಸರಕಾರದ ಅಧಿಕಾರಿಗಳು ಶಾಸನಗಳನ್ನು ತಮಗೆ ಅನುಕೂಲವಾದ ರೀತಿಯಲ್ಲಿ ಕಡೆಗಣಿಸುವುದರಲ್ಲಿ ಮುಂದಾಗಿರುವಷ್ಟೇ ಜನತೆಗೆ ರಿಯಾಯತಿ ತೋರಿಸಲು ಮುಂದಾಗುತ್ತಿದ್ದರೆ ಸ್ವಾತಂತ್ರ್ಯ ನಿಜವಾದ ಸವಿಯನ್ನು ಜನರು ಇಷ್ಟರಲ್ಲಿಯೇ ಸವಿಯತ್ತಿದ್ದರು. ದುರ್ದೈವದಿಂದ ಹಾಗಾಗಿರುವುದಿಲ್ಲ— ನಿಯಮಾವಳಿಗಳನ್ನು ಅವರು ರಚಿಸುವಾಗಲಾಗಲೀ ಅವುಗಳನ್ನು ವ್ಯವಹಾರದಲ್ಲಿ ಅನ್ವಯಿಸುವಾಗಲಾಗಲೀ ಜನರ ಕಿರುಕುಳಗಳ ಕಡೆಗೆ ಸಾಕಷ್ಟು ಗಮನಕೊಡುವುದಿಲ್ಲ ಉದಾಹರಣೆಗೆ ಮೊನ್ನೆ ಅಧ್ಯಾಪಕರಿಗೆ ಬೇಸಿಕ್ ಶಾಲೆಯಲ್ಲಿ ಮೂರು ತರಬೇತಿಯ ಕೇಂದ್ರದಲ್ಲಿ ಸೇರಲು ಅಪ್ಪಣೆ ಕೊಡಲಾಯಿತು. ಕಡಿಮೆ ಬಿದ್ದ ಜಾಗಕ್ಕೆ ಸೇರಬೇಕಾದ ಜನರು ಇನೇ ತಾರೀಕಿನೊಳಗೆ ಸೇರಬೇಕೆಂದೂ ಹಾಗೆ ಸೇರಲು ಸಾಕಷ್ಟು ಮುಂದಾಗಿ ಸೂಚನೆ ಕೊಡಲಾಗುವುದೆಂದೂ ಹೇಳಲಾಗಿದ್ದಿತು. ಆದರೆ ಆ ಸೂಚನೆ ಬಂದದ್ದು ೧೪ನೇ ತಾರೀಕಿಗೆ, ಸೇರಬೇಕಾದ ದಿನವನ್ನು ೧೬ನೇ ತಾರೀಕಿಗೆಂದು ಗೊತ್ತುಪಡಿಸಿದ್ದರು. ಈ ಬದಲಾವಣೆಯನ್ನು ಸಂಬಂಧಿಸಿದ ಅಧ್ಯಾಪಕರಿಗೆ ತಿಳಿಸಿದ್ದರೆ? ಇಲ್ಲ—ಆದುದರಿಂದ, ಆ ಅಧ್ಯಾಪಕರು ತಮ್ಮ ಪ್ರಾಪಗಿ ಕೆಲಸಕ್ಕೆ ಬೇರೆಲ್ಲಿಯಾದರೂ ೧೬ನೇ ತಾರೀಕಿನ ಬಳಿಕ ಹೋಗಿದ್ದ ಪಕ್ಷದಲ್ಲಿ ಈ ಆಜ್ಞೆಯನ್ನು ಪಾಲಿಸುವುದು ಶಕ್ಯವಿತ್ತೇ?

ಇದಕ್ಕಿಂತಲೂ ಹೆಚ್ಚು ಸ್ಪಷ್ಟವಾದ ಕಿರುಕಳದ ಕುರಿತು ಒಬ್ಬ ಉಮಗರು ಪತ್ರಿಕೆಯೊಂದಕ್ಕೆ ಬರೆದು ತಿಳಿಸಿದ್ದಾರೆ—ಡಿಪ್ಲೊಯಲ್ಲಿ ೨ನೇ ಮೇ ೧೯೫೫ರಲ್ಲಿ ಭೇಟಿಗೆ ಬರಲು ೨೯ನೇ ಎಪ್ರೀಲು ೧೯೫೫ರಲ್ಲಿ ಒಂದು ಹುದ್ದೆಯ ಅಭ್ಯರ್ಥಿಗಳಿಗೆ ಹೇಳಲಾಯಿತಂತೆ. ಕೇವಲ ಒಂದು ದಿನದಲ್ಲಿ ಮದ್ರಾಸಿನ ಆ ಅಭ್ಯರ್ಥಿಗಳು ದಿಲ್ಲಿಗೆ ಹೋಗಲು ಸಿದ್ಧತೆ ಮಾಡುವುದು ಸಾಧ್ಯವೆ? ಅವರಿಗೆ ಹಣ ಬೇಕು, ಈಗಿನ ಕೆಲಸದಿಂದ ರಜೆಬೇಕು, ತಂಗಿ ವಸ್ತ್ರಗಳಾದಿಯಾಗಿ ಎಲ್ಲ ಬಗೆಯ ಉಡುಪು ತೊಡುಮಗಳುಬೇಕು- ಹೀಗಿರುವಾಗ ಒಂದು ದಿನದ ಪೂರ್ವ ಸೂಚನೆಕೊಡುವ ಅಧಿಕಾರಿಗಳು ಎಷ್ಟು ಬುದ್ಧಿವಂತಿಕೆಯಿಂದ ನಡೆದುಕೊಂಡಿರುವರೆಂದು ಹೇಳೋಣ?

(೧ನೇ ಪುಟ ನೋಡಿರಿ)

ನಿವಾರಣೀಯ ಕಿರುಕುಳ

ವರ್ಷದ ಕೊನೆ, ಆಡಿಟಿಗೆ ತೊಂದರೆ, ಹಾಗೆ, ಹೀಗೆ ಎಂದು ಮುಂತಾದ ಕಾರಣಗಳನ್ನು ತೋರಿಸಿ ಮೆನೇಜರರು ರಾಮುಮೆಗೆ ಮದುವೆಯ ಬಗ್ಗೆ ಒಂದು ವಾರದ ರಜೆ ಕೊಡಲು ಒಪ್ಪಲಿಲ್ಲ ಕೊನೆಗೆ ಮದುವೆಯ ದಿನದ ಮಟ್ಟಿಗೆ ರಜೆ ಸಿಗಬೇಕಾದರೆ ಸಾಕಾಗಿ ಹೋಯಿತು ಆದರೆ ದುರ್ದೈವ ರಾಮುವನ್ನು ಇಲ್ಲಿಗೂ ಬಿಡಲಿಲ್ಲ ಇದ್ದ ಅಲ್ಪಕಾಲದ ಪ್ರಕಾಶದಲ್ಲಿ ಸಾಮಾನ್ಯ ಸಿದ್ಧತೆಗಳನ್ನುಮಾಡಿ ರೈಲು ನಿಲ್ದಾಣಕ್ಕೆ ಹೋದಾಗ, ರೈಲು ಆಗ ತಾನೆ ಎರಡು ಗಳಕಾಲು ದಾಟವಲ್ಲಿ ಸಾಗುತ್ತಿರುವುದು ಕಂಡಿತು ನಿರಾಶೆಯ ಈ ಗಳಿಗೆಯಲ್ಲೂ ಅತನು ಕಳೆದುಹೋದ ವಧುವಿಗೆ ತಂತಿ ಕಳುಹಿಸಿದ—'ರೈಲು ತಪ್ಪಿತು, ನಾನು ಬರುವ ವರೆಗೂ ಮದುವೆಯಾಗಬೇಡ"

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ, [ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಅಧಿಕೃತ ಭಂಡವಾಳ	ರೂ 50,00,000	ಕ್ಷೇಮ ನಿಧಿ	ರೂ 13,50,000
ಚೆತ್ತ ಭಂಡವಾಳ	ರೂ 32,11,000	ಠೇವಣಾತಿಗಳು	ರೂ.6,10,00,000
ಚೆತ್ತು ಬಂದ ಭಂಡವಾಳ	ರೂ.25,56,737	ಚಲಾವಣೆ ಭಂಡವಾಳ	ರೂ.7,32,00,000

[ತಾ. 30—6—1955ರಲ್ಲು]

ನಮ್ಮ ರಾಯಚೂರ (ಹೈದರಾಬಾದ ಸಂಸ್ಥಾನ) ಶಾಖೆಯು ತಾ 29-7-1955ರಂದು ತೆರೆಯಲ್ಪಡುತ್ತದೆ.

ಮುಂಬಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ 92 ಶಾಖೆಗಳಿದ್ದು

ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ.

ಟಿ. ಎ. ಪೈ, ಬಿ ಕೋಂ (ಹೊಂ.), ಎ ಐ ಐ ಬಿ, ಎಂ. ಎಲ್ ಎ., ಜನರಲ್ ಮೆನೇಜರ್.

ಟಿ ಎಂ ಎ. ಪೈ ಎಂ.ಬಿ, ಬಿ ಎಸ್, ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD
Estd: 1925 H. O. UDIPI, S India

ಹೊಸದೆಹಲಿ - ಭಾರತದ ಈ ರಾಜಧಾನಿಯ ಅತುಲ ಶೋಭೆ

ಹದಿನೈದು ಅವತಾರಗಳನ್ನೆತ್ತಿದ ಚಾರಿತ್ರಿಕ ಪ್ರಸಿದ್ಧಿಯ ಪಟ್ಟಣ

ಲೋಕಸಭೆಯ ಅಧಿವೇಶನವು ಇದೇ ೨೧ನೇ ದಿನಾಂಕ ಪ್ರಾರಂಭವಾಗುವುದರಿಂದ ಅದರಲ್ಲಿ ಭಾಗವಹಿಸಲು ಜನರನ್ನು ಪ್ರತಿನಿಧೀಕರಿಸುವ ಚುನಾಯಿತ ಸದಸ್ಯರು ದೇಶದ ಎಲ್ಲೆಡೆಯಿಂದಲೂ ಹೊಸ ದೆಹಲಿಗೆ ಈಗ ಭಾವಿಸುತ್ತಿದ್ದಾರೆ. ಕ್ಷಿಪ್ರದಲ್ಲಿ ಭಾರತದ ಈ ರಾಜಧಾನಿಯನ್ನು ಮುಟ್ಟಲಾಗುವಂತೆ ಪಟಂಬಿಯು, ಮದ್ರಾಸು, ಕಲ್ಕತ್ತ, ಅಜ್ಮೀರ ಮತ್ತು ಅನ್ಯತಕರಗಳಂಬ ದೇಶದ ಎಲ್ಲ ಮೂಲೆಗಳಿಂದಲೂ ಹೊಸ ದೆಹಲಿಗೆ ನೇರವಾದ ರೈಲು, ವಿಮಾನ ಹಾಗು ನೆಲ ಮಾರ್ಗಗಳ ಸಂಪರ್ಕವಿದೆ. ಭಸಹೊಂದಿದ ಎಂ. ಪಿ. ಒಬ್ಬರೊಡನೆ ನಾವೂ ಸುತ್ತಾಡಿಕೊಂಡು ಬರಲು ಹೋದರೆ ರಾಜಧಾನಿಯ ಜೀವನ ನಮಗೆ ಹೇಗೆ ಕಾಣಿಸೀತು?

ಪ್ರಪಂಚದ ಇತಿಹಾಸದಲ್ಲಿ ನಾಗರಿಕತೆಯ ಉತ್ಥಾನ ಮತ್ತು ಪತನದ ಘಟನೆಗಳಲ್ಲಿ, ರೋಂ ನಗರದ ಕತೆಯನ್ನು ಬಿಟ್ಟರೆ, ದಿಲ್ಲಿಯಷ್ಟು ವೈವಿಧ್ಯಕ್ಕೆ ಹೆಸರಾದ ಇನ್ನೊಂದು ನಗರ ಸಿಗಲಾರದು. ದಿಲ್ಲಿಯನ್ನು ರಾಜಧಾನಿಯಾಗಿ ಮಾಡಿಕೊಂಡೇ ಕಳೆದ ಎಳೆಂಟು ಶತಮಾನಗಳಿಂದ ಭಾರತೀಯರನ್ನು ಪರದೇಶಗಳವರು ಆಳಿದರು; ಅದಕ್ಕೆ ಮುಂಚೆ ಭಾರತೀಯ ಅರಸರ ಸಿಂಹಾಸನ ಇಲ್ಲಿದ್ದಿತು. ಒಂದು ದೃಷ್ಟಿಯಿಂದ ನೋಡಿದರೆ, ರೋಮಿಗಿಂತಲೂ ದಿಲ್ಲಿಯೇ ಹೆಚ್ಚು ಪ್ರಖ್ಯಾತನಾಗಿದೆ —ಏಕೆಂದರೆ ಈ ನಗರ ಎಷ್ಟು ಸಲ ದರೋಡೆ ಮತ್ತು ಸುಲಿಗೆಗೊಳಗಾಯಿತು, ಎಷ್ಟು ಸಲ ತುಳಿಯಲ್ಪಟ್ಟು ನಾಶವಾಯಿತು, ಎಷ್ಟು ಸಲ ಮರಳಿ ಕಟ್ಟಲ್ಪಟ್ಟಿತು, ಎಷ್ಟು ಸಾಮ್ರಾಜ್ಯಗಳ ಕೇಂದ್ರವಾಗಿ ಮೆರೆಯಿತು, ಎಷ್ಟು ದಂಗೆ ಮತ್ತು ವಿಜಯೋತ್ಸಾಹಗಳ ನೆಲೆವೀಡಾಯಿತು, ಎಷ್ಟು ಕಲಾವಿದರಿಗೆ ಮತ್ತು ವಿದ್ವಾಂಸರಿಗೆ ಮನ್ನಣೆ ನೀಡಿತು, ಎಂಬುದು ವರ್ಣಿಸಿ ಮುಗಿಯದ ವಿಷಯ.

ಇಂದಿನ ಹೊಸ ದೆಹಲಿ ಹಿಂದಿನ ಚರಿತ್ರೆಯ ಘಟನೆಗಳಿಂದಾಗಿನಮ್ಮನ್ನು ಗತಕಾಲಕ್ಕೆ ಒಯ್ಯುತ್ತದೆ; ಅದೇ ಸಮಯಕ್ಕೆ ಆಧುನಿಕ ಬಗೆಯ ಎಲ್ಲ ಸೌಲಭ್ಯಗಳನ್ನೂ ನೀಡಿ, ಇಪ್ಪತ್ತನೆಯ ಶತಮಾನದ ಅನುಭವಗಳಿಂದಲೂ ಸಂತೋಷ ಪಡಿಸುತ್ತದೆ. ಸರಕಾರಿ ಭವನದಿಂದ ಹೊಸ ದೆಹಲಿಯ ಇಂಡಿಯಾ ಗೇಟ್ ಎಂದು ಹೆಸರಾದ ಯುದ್ಧ ಸ್ಮಾರಕ ಕಮಾನಿನ ಮೂಲಕ ಸುರಾನಾ ಕಿಲಾಕ್ಕೆ ಸಾಗುವ ಕಿಂಗ್ಸ್‌ವೇಯ ವಿಶಾಲವಾದ ರಾಜ ಮಾರ್ಗ ಹಳೆತು - ಹೊಸತುಗಳ ಸುಂದರ ಸಮನ್ವಯವನ್ನು ಹೊಸ ದೆಹಲಿ ನಗರದ ನಕ್ಷೆ ತಯಾರಿಸಿದ ಶಿಲ್ಪಿಗಳು ಸಾಧಿಸಿರುವರೆಂಬುದನ್ನು ಸ್ಪಷ್ಟ ಪಡಿಸುತ್ತದೆ. ಸರಕಾರಿ ಭವನ, ಸಂಸತ್ ಭವನ ಮತ್ತು ಸಚಿವಾಲಯಗಳ ಕೇಂದ್ರವು ತನ್ನ ವಿಶಾಲತೆ, ಸೌಂದರ್ಯ ಮತ್ತು ವೈವಿಧ್ಯಗಳಿಂದ ಪ್ರೇಕ್ಷಕರನ್ನು ಮುಗ್ಧಗೊಳಿಸುತ್ತದೆ.

ಸ್ವತಂತ್ರ ಭಾರತದ ರಾಜಧಾನಿಯಾಗಿ ಈಗ ಮೆರೆಯುತ್ತಿರುವ ಈ ನಗರ ಹಿಂದೆ ಹದಿನಾಲ್ಕು ಅವತಾರಗಳನ್ನು ತಾಳಿತ್ತೆಂದು ಇತಿಹಾಸದ ಪುಟ ತಿರುಗಿಸಿದಾಗ ಮನಸರಿಕೆಯಾಗುತ್ತದೆ. ಹದಿನೈದನೇ ಸಲ ದಿಲ್ಲಿಯನ್ನು ರಾಜಧಾನಿಯಾಗಿ ರೂಪಿಸುವ ಮಹಾ ಕಾರ್ಯವನ್ನು ಸರ್ ಎಡ್ವಿನ್ ಲುಟ್ಯೆನ್ಸ್ ಮತ್ತು ಸರ್ ಹರ್ಬರ್ಟ್ ಬೇಕರ್ ಎಂಬಿಬ್ಬರು ಬ್ರಿಟಿಷ್ ಶಿಲ್ಪಿಗಳು ನಲ್ವತ್ತು ವರ್ಷಗಳ ಹಿಂದೆ ಕೈಗೊಂಡರು. ಈಗಿನ ರಾಷ್ಟ್ರಪತಿ ಭವನದಂಥ ಅತಿ ರಮಣೀಯ ವಸತಿಗೃಹಗಳಿಂದ ಹಿಡಿದು, ಸಂಸ್ಥಾನಗಳನ್ನು ಆಳುತ್ತಿದ್ದ ಅನೇಕ ರಾಜ-ಮಹಾರಾಜರುಗಳ ಆರಮನೆಯವರೆಗೆ ಎಲ್ಲದಿಕ್ಕಿಗೂ ಹಬ್ಬಿರುವ ರಸ್ತೆಗಳವರೆಗೆ ತಕ್ಕ ನಕ್ಷೆಗಳನ್ನು ಈ ಬ್ರಿಟಿಷ್ ತಜ್ಞರೇ ಸಿದ್ಧಪಡಿಸಿದರು. ಹೊಸ ದೆಹಲಿಯ ಈಗಿನ ಸೌಂದರ್ಯದಲ್ಲಿರುವುದು ಇವರದೇ ಕೈವಾಡ.

ಮಹಾ ಭಾರತವನ್ನು ಓದಿದವರಿಗೆ ಇಂದ್ರಪ್ರಸ್ಥವನ್ನು ಪಾಂಡವರು ತಮ್ಮ ರಾಜಧಾನಿಯಾಗಿ ಮಾಡಿಕೊಂಡಿದ್ದರೆಂದು ಗೊತ್ತಿರಬಹುದು. ಇಂದಿನ ಪುರಾನಾ ಕಿಲಾದ ಸ್ಥಳವೇ ಹಿಂದಿನ ಇಂದ್ರಪ್ರಸ್ಥ ಎಂದು ಅಂದಾಜು. ಆದರೆ ಪಾಂಡವರು ಈ ರಾಜಧಾನಿಯಿಂದ ಹೆಚ್ಚು ಸಮಯ ರಾಜ್ಯವಾಳಲಾರದೆ ಹೋದರು. ದಿಲ್ಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಹಿಂದಿನ ಎಲ್ಲ ಸಾಮ್ರಾಜ್ಯಗಳ ಅನುಭವವೂ ಇದೇ ಮಾದರಿಯದಾಯಿತು. ಚೌಹಾನ ವಂಶದ ರಜಪೂತ ಅರಸ ಅನಂಗಪಾಲನು (೧೧೬೦) ಸೂರಜ್‌ಕುಂಡ್ ಮತ್ತು ಲಾಲ್ ಕೋಟ್ ಎಂಬೆರಡು ರಾಜಧಾನಿಗಳನ್ನು ದಿಲ್ಲಿಯಲ್ಲಿ ಕಟ್ಟಿಸಿದನು. ಘೋರಿ ಮಹಮ್ಮದನೊಡನೆ ಸೆಣಸಾಡಿದ ಭಾರತದ ಕೊನೆಯ ಪ್ರಸಿದ್ಧ ಹಿಂದೂ ಅರಸನಾದ ಪೃಥ್ವಿರಾಜನು (೧೧೯೧) ಈಗಿನ ಮಹ್‌ರೌಲಿ ಹಳ್ಳಿಯ ಪ್ರದೇಶದಲ್ಲಿದ್ದ ಲಾಲ್‌ಕೋಟ್‌ನಿಂದ ರಾಜ್ಯಭಾರ ಮಾಡುತ್ತಿದ್ದನು.

ಗುಲಾಮ ವಂಶದ ಕುತುಬುದ್ದೀನನಿಂದ ಬಾಲ್ಬನನ ವರೆಗೆ ಎಲ್ಲರೂ ಲಾಲ ಕೋಟ್‌ನಿಂದಲೇ ಆಳಿದರು ಆದರೆ ಈ ವಂಶದ ಕೈಕುಬಾದನು (೧೩೮೮) ಕಿಲೋಖ್ರಿಯಲ್ಲಿ ದಿಲ್ಲಿಯ ನಾಲ್ಕನೇ ರಾಜಧಾನಿಯನ್ನು ಕಟ್ಟಿಸಿದನು. ಖಿಲ್ಜಿ ವಂಶದ ಪ್ರಥಮ ರಾಜನಾದ ಜಲಾಲುದ್ದೀನನಿಗೆ ಇದೇ ರಾಜಧಾನಿಯಾಯಿತು. ಅನಂತರ ಪಟ್ಟಕ್ಕೆ ಬಂದ ಅಲ್ಲಾವುದ್ದೀನ ಖಿಲ್ಜಿಯು (೧೩೧೦) ಲಾಲ್‌ಕೋಟ್‌ನಿಂದ ಎರಡು ಮೈಲು ಅಂತರದ ಸೀರಿಯಲ್ಲಿ ತನ್ನ (ಐದನೇ) ರಾಜಧಾನಿಯನ್ನು ನಿರ್ಮಿಸಿದನು. ಇವನ ಮರಣಾನಂತರ ರಾಜ್ಯಾಧಿಪತಿಯಾದ ಗಿಯಾಸುದ್ದೀನ ತಘ್ಲಕನು ತಘ್ಲಕಾಬಾದ್ ಎಂಬ ಅತಿ ಸುಂದರವೂ ಭವ್ಯವೂ ಆದ ಕೋಟೆಯನ್ನು ಕಟ್ಟಿಸಿದನು. ಆದರೆ ದಿಲ್ಲಿಯಲ್ಲಿ ತಲೆ ಎತ್ತಿದ ಈ ಆರನೇ ರಾಜಧಾನಿಯನ್ನು ಅವನ ಬಳಿಕ ಯಾರೂ ಮೂಸಿ ನೋಡಲಿಲ್ಲ; ಪ್ರೇಕ್ಷಕರ ಮಟ್ಟಿಗೆ ಈಗ ಅದು ಅಪೂರ್ಣವಾಗಿಯೇ ಕಾಣು ಕಾಣುಬರುತ್ತದೆ.

ಅನಂತರ ಪಟ್ಟಕ್ಕೆ ಬಂದ ಮಹಮ್ಮದ್ ತಘ್ಲಕ (೧೩೧೦) ಮತ್ತು ಫಿರೋಜ್ ಶಾಹ (೧೩೮೦) ಇವರು ಜಹಾಂಪನಾಹ್ ಮತ್ತು ಫಿರೋಜಾಬಾದ್ ಎಂಬ ಎಳನೇ ಮತ್ತು ಎಂಟನೇ ರಾಜಧಾನಿಗಳನ್ನು ರಚಿಸಿದರು. ಜಹಾಂಪನಾಹದಲ್ಲಿ ಬೇಗಂಪುರದ ಮಸೀದಿಯೇ ಮುಂತಾದ ಅವಶೇಷಗಳು ನೋಡಸಿಗುತ್ತಿದ್ದರೆ ಫಿರೋಜಾ ಬಾದಿನಲ್ಲಿ ಹೌಸ್ ಖಾಸ್ ಉದ್ಯಾನಗಳೂ ಕ್ರಿಕೆಟ್ ಸಂದ್ಯಾಟದ ರಂಗಸ್ಥಳವೂ ಈಗ ಕಂಗೊಳಿಸುತ್ತವೆ. ಫಿರೋಜ್ ಶಾಹನ ಸುಂದರ ಗೋರಿಯೂ ಇಲ್ಲಿ ನೋಡಸಿಗುತ್ತದೆ. ದಿಲ್ಲಿಯ ಗದ್ದುಗೆಯನ್ನು ಏರಿದ ಸೈಯದ್ ವಂಶೀಯರು ೧೪೧೪ ಮತ್ತು ೧೪೫೧ ವರ್ಷಗಳ ಅವಧಿಯಲ್ಲಿ ಒಂಭತ್ತು ಮತ್ತು ಹತ್ತನೇ ರಾಜಧಾನಿಗಳನ್ನು ನಿರ್ಮಿಸಿದರು. ಆ ಮೇಲೆ ೧೫೫೦ರಲ್ಲಿ ಮೊಗಲ ಬಾದಶಾಹನಾದ ಹುಮಾಯೂನನು ಹನ್ನೊಂದನೇ ರಾಜಧಾನಿಯನ್ನು ಕಟ್ಟಿಸಿದನು. ಅವನ ಪುಸ್ತಕ ಭಂಡಾರದ ಗೋಡೆಗಳನ್ನು ಈಗಲೂ ಪುರಾನಾ ಕಿಲಾದಲ್ಲಿ ಕಾಣಬಹುದು. ಹುಮಾಯೂನನನ್ನು ಪರ್ಶಿಯಕ್ಕೆ ಓಡಿಸಿದ ಶೇರ್ ಶಾಹನು (೧೫೪೦) ತನ್ನ ಐದು ವರ್ಷಗಳ ಆಳಿಕೆಯಲ್ಲಿ ಹನ್ನೆರಡನೇ ರಾಜಧಾನಿಯನ್ನು ದಿಲ್ಲಿಯಲ್ಲಿ ನೆಲೆಗೊಳಿಸಲು ನೋಡಿದನು. ಆದರೆ ಈ ಕೆಲಸ ಮುಗಿಯಲಿಲ್ಲ. ಆಗ ಕಟ್ಟಲಾದ ದರ್ವಾಜವನ್ನು ರಾಷ್ಟ್ರೀಯ ಕ್ರೀಡಾಂಗಣದ ಆಗ್ನೇಯಕ್ಕೆ ಪುರಾನಾ ಕಿಲಾದ ಬಳಿ ಈಗ ನೋಡಬಹುದು.

೧೫೫೫ರಲ್ಲಿ ಹುಮಾಯೂನನು ಮರಳಿ ಭಾರತಕ್ಕೆ ಬಂದನು. ಆದರೆ ಅವನ ಮಗ ಅಕ್ಬರನಾಗಲೀ, ಮೊಮ್ಮಗ ಜಹಾಂಗೀರನಾಗಲೀ ದಿಲ್ಲಿಗಿಂತಲೂ ಹೆಚ್ಚಾಗಿ ಆಗ್ರಾವನ್ನೆ ರಾಜಧಾನಿಯಾಗಿ ಮಾಡಿಕೊಂಡರು. ಅಕ್ಬರನು ಫತ್ತೇಪುರ ಸಿಕ್ರಿಯಲ್ಲಿ ಹೊಸ ರಾಜಧಾನಿಯನ್ನು ರಚಿಸುವ ಸಾಹಸಮಾಡಿ, ನೀರಿನ ಅಭಾವದಿಂದ ಆ ಪ್ರಯತ್ನವನ್ನು ಬಿಟ್ಟುಗೊಟ್ಟನು. ಶಾಹಜಹಾನನು (೧೬೪೦) ಆಗ್ರದಷ್ಟೇ ದಿಲ್ಲಿಯನ್ನೂ ಪ್ರೀತಿಸಿದನು; ಮತ್ತು ಶಾಹಜಹಾನಾಬಾದ್ ಎಂಬ ೧೪ ನಮಾಜ್ದಾರ್‌ಗಳುಳ್ಳ ದಿಲ್ಲಿಯ ಹದಿಮೂರನೇ ರಾಜಧಾನಿಯನ್ನು ಕಟ್ಟಿಸಿದನು ಮೊಗಲರ ಪತನದ ತರುವಾಯ ಬ್ರಿಟಿಷರು ಭಾರತದ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
24 ತಿಂಗಳಿಗೆ	4%
12 ,,	3¾%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOKLY BANK LTD., MULKI.

THE CANARA MUTUAL

Assurance Company Limited

Managing Director: T. R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ

ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA LTD.,

"Mukund Nivas" UDIPI, S. India.

ಜಗತ್ಪ್ರಳಯ ತಪ್ಪಿಸಲು ಪ್ರಸಿದ್ಧ ವಿಜ್ಞಾನಿಗಳ ಬಿನ್ನಹ

ಲೋಕದ ರಾಜಕಾರಣಿಗಳಿಗೆ ವಿವೇಕ ತೊರೆಯದಿರಲು ಬೋಧನೆ

ಪ್ರಧಾನ ಮಂತ್ರಿ ನೆಹರುಗಳು ಜಪಾನಿನ ಬೆಸ್ತರು ಕಳೆದ ವರ್ಷ ಬಿಕಿನಿಯಲ್ಲಿ ನಡೆದ ಜಲಜನಕ ಬಾಂಬಿನ ಸ್ಫೋಟನ ಪ್ರಯೋಗದ ದೆಸೆಯಿಂದ ಪೀಡೆಗೆ ಗುರಿಯಾದ ವಾರ್ತೆ ಕೇಳಿದವರೇ ಈ ಮಾರಕ ಪ್ರಯೋಗಗಳನ್ನು ನಿಲ್ಲಿಸಿ ಬಿಡಬೇಕೆಂದು ಜಗತ್ತಿನ ಮಹಾರಾಷ್ಟ್ರಗಳನ್ನು ವಿನಂತಿಸಿದ್ದರು. ಮಾನವ ಸಂತಾನವನ್ನು ವಿನಾಶದಿಂದ ಉಳಿಸುವ ಸದುದ್ದೇಶದಿಂದಲೇ ಭಾರತದ ಮಹಾ ಮೇಧಾವಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಅಮೇರಿಕವು ಏಕಪಕ್ಷೀಯವಾಗಿ ಅಣ.ಶಸ್ತ್ರಗಳನ್ನೆಲ್ಲ ಸಮುದ್ರಕ್ಕೆ ಎಸೆದು ಬಿಡುವ ನೈತಿಕ ಧೈರ್ಯದ ಹೆಜ್ಜೆಯನ್ನು ಮುಂದಿಡಲಿ ಎಂದು ಕೇಳಿಕೊಂಡರು; ಹಿಂದಿನಿಂದ ಅವರು ರಶ್ಯವೂ ಈ ಸಾಹಸ ಕಾರ್ಯವನ್ನು ಮಾಡಿತೋರಿಸಿ ಜಗತ್ಪ್ರಳಯವನ್ನು ತಪ್ಪಿಸುವುದಾದಲ್ಲಿ ಸಂತೋಷ ಎಂದರು.

ಅಲ್ಲಿಂದೀಚೆಗೆ ಅಣುಶಸ್ತ್ರಗಳ ಸ್ಫೋಟನ ಪ್ರಯೋಗಗಳನ್ನು ನಿಲ್ಲಿಸುವ ಮತ್ತು ತೃತೀಯ ಮಹಾ ಯುದ್ಧದ ಸಂಭವಗಳನ್ನು ತಪ್ಪಿಸುವ ಕುರಿತು ಜಗತ್ತಿನಾದ್ಯಂತ ಅನುಕೂಲಾಭಿಪ್ರಾಯವು ಪದೇ ಪದೇ ಪ್ರಕಟವಾಗತೊಡಗಿತು. ರಾಜಕಾರಣಿಗಳು ವಿವೇಕಶೀಲರಾಗಿ ವರ್ತಿಸಬೇಕೆಂದು ಜನತೆ ಅಪೇಕ್ಷೆಯನ್ನು ವ್ಯಕ್ತಪಡಿಸಿತು; ಅನೇಕ ವಿಜ್ಞಾನಿಗಳು ಅಣು ಶಸ್ತ್ರಗಳಿಂದ ಸರ್ವ ನಾಶವಾಗುವುದೆಂಬ ಭಯ ನಿರಾಧಾರವಾದುದಲ್ಲ ಎಂದು ಹೇಳಿ ಜನತೆಯ ನಿಲುಮೆಯನ್ನು ಬೆಂಬಲಿಸಿದರು. ಆದರೂ ರಾಜಕಾರಣಿಗಳ ಮೇಲೆ ಜನರ ಮತ್ತು ಅವರಿಗೆ ಬೆಂಬಲವಾಗಿ ನಿಂತ ವಿಜ್ಞಾನಿಗಳ ಮನೋಭಾವ ಸಾಕಷ್ಟು ಗಾಢವಾದ ಪರಿಣಾಮವನ್ನು ಮಾಡಿದಂತಿಲ್ಲ.

ಪರಿಸ್ಥಿತಿ ಹೀಗಿರುವುದನ್ನು ಮನಗಂಡ ಬ್ರಿಟನಿನ ೮೩ ವರ್ಷದ ಅಂತಾರಾಷ್ಟ್ರೀಯ ಖ್ಯಾತಿಯ ತತ್ವಜ್ಞಾನಿ ಅರ್ಲ್ ಬರ್ಟ್ರೆಂಡ್ ರಸೆಲ್ ಕಳೆದ ವಾರ ಮಹತ್ವದ ಘೋಷಣೆಯೊಂದನ್ನು ಪ್ರಕಟಿಸಿ, ರಾಜಕಾರಣಿಗಳ ಮೇಲೆ ಬಲವಾದ ಒತ್ತಾಯವನ್ನು ಜನತೆಯ ಹೆಸರಿನಲ್ಲಿ ಹೇರಲು ಮುಂದಾದರು. ಪ್ರಚಾರಕರ ಪಾತ್ರವನ್ನು ವಿಜ್ಞಾನಿಗಳು ವಹಿಸುವುದು ಸುಲಭವಲ್ಲ; ಮತ್ತದು ಅಗತ್ಯವಿಲ್ಲ ಎಂಬುದು ನಿಜವಾಗಿದ್ದರೂ ಜಾಗತಿಕ ಶಾಂತಿಗಾಗಿ ಚಳವಳವನ್ನೆ ಹೂಡಬೇಕಾಗಿ ಬಂದಿರುವ ಈ ಸಂಧಿ ಕಾಲದಲ್ಲಿ ಅವರೂ ತಮ್ಮ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಎನ್ನುತ್ತಾ ರಸೆಲ್ ಲೋಕದ ಒಂಭತ್ತು ಪ್ರಖ್ಯಾತ ವಿಜ್ಞಾನಿಗಳ ಅಂಕಿತ ಪಡೆದಿರುವ ಮತ್ತು ಇತರ ಕೆಲವು ಪ್ರಸಿದ್ಧ ವಿಜ್ಞಾನಿಗಳ ಸಹಾನುಭೂತಿಪರ ಅನುಮೋದನೆ ಪಡೆದಿರುವ ಎಚ್ಚರಿಕೆಯ ಪತ್ರವೊಂದನ್ನು ಪ್ರಕಟಿಸಿದ್ದಾರೆ. ಅಮೇರಿಕ, ಜಪಾನು, ರಶಿಯ, ಪೋಲೆಂಡ್, ಕೆನಡ, ಬ್ರಿಟಿಷ್, ಚೀನ, ಫ್ರಾನ್ಸ್ ಮುಂತಾದ ರಾಷ್ಟ್ರಗಳಲ್ಲಿ ಚಟುವಟಿಕೆಯನ್ನು ತೋರಿಸಿರುವ, ತೋರಿಸುತ್ತಿರುವ ಮತ್ತು ನೋಬೆಲ್ ಪಾರಿತೋಷಕ ಇತ್ಯಾದಿಗಳನ್ನು ಪಡೆದು ಮನ್ನಣೆಗಳಿಸಿರುವ ಈ ವಿಜ್ಞಾನಿಗಳಲ್ಲಿ ಅಣುಯುಗದ ಪ್ರವರ್ತಕರಾದ ದಿವಂಗತ ಡಾ. ಆಲ್ಬರ್ಟ್ ಐನ್‌ಸ್ಟೀನ್ ಸಹ ಸೇರಿದ್ದಾರೆ. ಎಂತಲೇ ಹಿಂದಿನೆಲ್ಲ ಹೇಳಿಕೆಗಳಿಗಿಂತ ಇದರ ತೂಕ ಹೆಚ್ಚು.

ಕಳೆದ ಫೆಬ್ರುವರಿಯಲ್ಲಿ ರಸೆಲ್ ಅಣುಶಸ್ತ್ರಗಳ ಸ್ಫೋಟನದ ದುಷ್ಪರಿಣಾಮಗಳ ಕುರಿತು ಎಚ್ಚರಿಕೆ ಕೊಡುವ ಘೋಷಣೆಯನ್ನು ಹೊರಡಿಸುವ ಕುರಿತು ಐನ್‌ಸ್ಟೀನರೊಡನೆ ಪತ್ರವ್ಯವಹಾರವನ್ನು ಪ್ರಾರಂಭಿಸಿದರು. ಐನ್‌ಸ್ಟೀನರ ಹೇಳಿಕೆಯಂತೆ ರಸೆಲ್ ತಾನೇ ಆ ಘೋಷಣೆಯನ್ನು ಬರೆದರು. ಈ ಅತ್ಯುತ್ತಮ ಹೇಳಿಕೆಯ ಪ್ರತಿಯೊಂದೂ ಶಬ್ದಕ್ಕೆ ಸಮ್ಮತಿಯನ್ನು ವ್ಯಕ್ತಪಡಿಸುತ್ತಾ ಐನ್‌ಸ್ಟೀನ್ ತಾವು ಇದೇ ಎಪ್ರೀಲಿನಲ್ಲಿ ಮರಣ ಗೊಳ್ಳುವ ಒಂದು ವಾರದ ಮುಂಚೆ ಸಹಿಹಾಕಿದರು. ರಸೆಲರು ಹಿಂದಿನಿಂದ ಇದಕ್ಕೆ ಇತರ ವಿಜ್ಞಾನಿಗಳ ಅಂಕಿತವನ್ನು ಪಡೆದುಕೊಂಡರು. ಇದೇ ಆಗೋಸ್ತು ತಿಂಗಳ ಪ್ರಥಮವಾರದಲ್ಲಿ ಅಂತಾರಾಷ್ಟ್ರೀಯ ಸ್ವರೂಪದಲ್ಲಿ ವಿಜ್ಞಾನಿಗಳ ಪರಿಷತ್ತೊಂದನ್ನು ಕರೆಯುವುದು ಅವರ ಇಚ್ಛೆಯಾಗಿದೆ. ಪ್ರಸಿದ್ಧ ವಿಜ್ಞಾನಿಗಳ ಈಗಿನ ಘೋಷಣೆ ಅದನ್ನು ಪುಷ್ಟೀಕರಿಸುತ್ತದೆ. ಮೂಲತಃ ನೆಹರುಗಳು ಈ ರೀತಿಯ ಚಳವಳದಲ್ಲಿ ಧುಮುಕಬೇಕೆಂದು ರಸೆಲ್ ಅಪೇಕ್ಷಿಸಿದ್ದರು ಅದರೆ ನೆಹರುಗಳು ತಾವು ಅಧಿಕೃತವಾಗಿ ಈ ಚಳವಳದಲ್ಲಿ ಭಾಗವಹಿಸುವುದು ಇಷ್ಟವಲ್ಲ ಎಂದುದರಿಂದ ರಸೆಲ್ ತಾವೇ ಆ ಘೋಷಣೆಯನ್ನು ಹೊತ್ತುಕೊಂಡರು.

ಘೋಷಣೆಗೆ ರಸೆಲ್ ತಮ್ಮದೊಂದು ಮುನ್ನುಡಿ ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ— "ಅಣುಶಸ್ತ್ರಗಳನ್ನು ಪ್ರಯೋಗಿಸಿದ ಯುದ್ಧದಿಂದ ಯಾವ ಪಕ್ಷವೂ ಜಯಹೊಂದಲಾರದು; ಅಂಥ ಯುದ್ಧದಲ್ಲಿ ಮಾನವತೆಯು ಮಾರಕ ಭಸ್ಮವಾಗುವ ಭಯವೇ ಇರುತ್ತದೆ. ಆದರೆ ಈ ಕುರಿತು ಜನರಾಗಲೀ, ಸರಕಾರಗಳಾಗಲೀ ಸಾಕಷ್ಟು ಎಚ್ಚರಿಕೆಯನ್ನು ಇನ್ನೂ ವಹಿಸಿಲ್ಲ. ಅಣುಶಸ್ತ್ರಗಳ ಬಹಿಷ್ಕಾರವಾದರೆ ಸಾಕೆನ್ನುವುದೂ ಪ್ರಯೋಜನಕರವಲ್ಲ— ಏಕೆಂದರೆ ಅಣ.ಶಸ್ತ್ರಗಳನ್ನು ಉಪಯೋಗಿಸುವುದಿಲ್ಲವೆಂದು ಶಾಂತಿಕಾಲದಲ್ಲಿ ಮಾಡಿಕೊಂಡ ನಿಶ್ಚಯವನ್ನು ಯುದ್ಧಕಾಲದಲ್ಲಿ ಯಾವುದೇ ನಾಚಿಕೆ ಇಲ್ಲದೆ

(೧೨ನೇ ಪುಟ ನೋಡಿರಿ)

ಮಾರಾಟದಲ್ಲಿ ಇತರ ಎಲ್ಲವುಗಳನ್ನೂ ಮೀರಿಸುವ ಚಹಾ !

ಇತರ ಯಾವದೇ ಚಹಾಗಿಂತಲೂ ಬ್ರೂಕ್ ಬಾಂಡ್ ಚಹಾ ಹೆಚ್ಚು ಮಾರಾಟವಾಗುತ್ತದೆ. ಏಕೆಂದರೆ ಅದು ನಿಜವಾಗಿಯೂ ಹಸನಾಗಿರುವುದಲ್ಲದೆ ಶುದ್ಧತೆಯುಳ್ಳದ್ದೂ ಆಗಿದೆ.

ಫ್ಯಾಕ್ಟರಿಯಿಂದ ಆಂಗಡಿಗೆ ತ್ವರಿತವಿಂದ ತಲುಪಿಸಲ್ಪಡುವುದರಿಂದ ಅದರ ಹಸನಾಗಿರುವಿಕೆಯನ್ನು ಪಿಂಡಿತ ಮಾಡುತ್ತದೆ. ಹಾಗೂ ಪೊಟ್ಟಗಳ ಸೀಲ್ ಮಾಡುವಿಕೆಯು ಅದಕ್ಕೆ ಧೂಳು, ಕೊಳೆ ಸೇರದಂತೆಯೂ, ಬೆರೆಕೆ ಮಾಡಲಾಗದಂತೆಯೂ ಕಾಪಾಡುವುದು.



ಪಾಂಡಿಚೇರಿಯ ಹೊಸ ವಿಧಾನ ಸಭೆಗೆ ಚುನಾವಣೆ

ಹಿಂದಿಯನ್ನು ಸರಕಾರದ ಆಡಳಿತ ಭಾಷೆಯಾಗಿ ರೂಪಿಸುವ ಕಾರ್ಯಕ್ರಮ

ಫ್ರೆಂಚರ ಕೈಯಿಂದ ಸ್ವಾತಂತ್ರ್ಯವನ್ನು ಪಡೆದು ಭಾರತದೊಡನೆ ಸೇರ್ಪಡೆ ಹೊಂದಿರುವ ಪಾಂಡಿಚೆರಿ, ಮಾಹೆ, ಯಾನಂ ಮತ್ತು ಕರೈಕಲುಗಳಲ್ಲಿ ಇದೇ ಸೋಮವಾರ (ದಿನಾಂಕ ೧೮) ರಾಜ್ಯಕ್ಕೆ ಹೊಸತಾಗಿ ರಚಿಸಲ್ಪಡುವ ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆ ನಡೆಯಿತು. ಹಿಂದಿನ ಚುನಾವಣೆಗಳಲ್ಲಿ ಅನೇಕ ಬಗೆಯ ಲೋಪದೋಷಗಳಿದ್ದುದರಿಂದ ಭಾರತ ಸರಕಾರವ ಆಜ್ಞೆಯಂತೆ ನಡೆಯುತ್ತಿರುವ ಈಗಿನ ಚುನಾವಣೆಯೇ ಅತ್ಯಂತ ಸ್ವತಂತ್ರ ರೀತಿಯದೆಂದು ಹೇಳಲಾಗುತ್ತದೆ. ಪಾಂಡಿಚೇರಿ ರಾಜ್ಯ ಎಂದು ಕರೆಯಲ್ಪಡುವ ಈ ನಾಲ್ಕು ಪ್ರದೇಶಗಳಲ್ಲಿ ಸುಮಾರು ಒಂದೂವರೆ ಲಕ್ಷ ಮತದಾರರಿದ್ದಾರೆ; ಇವರಲ್ಲಿ ೨೧% ಹೆಂಗಸರು. ಒಟ್ಟು ೯೯ ಮತದಾರ ಕ್ಷೇತ್ರಗಳಿದ್ದು ಅವುಗಳಲ್ಲಿ ಯಾನಮಿನ ಎರಡು ಮತ್ತು ಕರೈಕಲಿನ ಒಂದು—ಹೀಗೆ ಮೂರು ಸ್ಥಾನಗಳಿಗೆ ಕಾಂಗ್ರೆಸಿನ ಉಮೇದ್ವಾರರು ಅವಿರೋಧವಾಗಿ ಆಯ್ಕೆ ಹೊಂದಿದ್ದಾರೆ. ಉಳಿದ ೩೬ ಸ್ಥಾನಗಳಿಗೆ ೧೧೫ ಮಂದಿ ಉಮೇದ್ವಾರರು ಸ್ಪರ್ಧಿಸಿದ್ದಾರೆ. ಕಾಂಗ್ರೆಸು ೩೬ ಸ್ಥಾನಗಳಿಗೆ ಉಮೇದ್ವಾರರನ್ನು ನಿಲ್ಲಿಸಿದ್ದರೆ, ಈಚೆಗೆ ಕಾಂಗ್ರೆಸಿನಿಂದ ಸಿಡಿದು ನಿಂತಿರುವ ಪಾಂಡಿಚೇರಿಯ ರಾಷ್ಟ್ರೀಯ ಕಾಂಗ್ರೆಸು ೨೧ ಉಮೇದ್ವಾರರನ್ನು ಚುನಾವಣೆಯ ರಂಗಕ್ಕೆ ಇಳಿಸಿದೆ. ಕಮ್ಯೂನಿಸ್ಟರ ಪ್ರಭಾವವಿರುವ ಜನತಾ ರಂಗದಿಂದ ೨೩ ಮಂದಿ ಚುನಾವಣೆಗೆ ನಿಂತಿದ್ದಾರೆ. ಒಟ್ಟು ೩೦೫ ಮತಗಟ್ಟೆಗಳನ್ನು ಏರ್ಪಡಿಸಿದ್ದು ಶಾಂತಿ ರಕ್ಷಣೆಗೆ ಯೋಗ್ಯ ವ್ಯವಸ್ಥೆಯನ್ನೂ ಸರಕಾರ ನಡೆಸಿರುತ್ತದೆ.

ಆಡಳಿತ ಭಾಷೆಯಾಗಿ ಹಿಂದಿ

ಕೇಂದ್ರದ ಶಿಕ್ಷಣ ಶಾಖೆಯು ಹಿಂದಿಯನ್ನು ಸರಕಾರದ ಭಾಷೆಯಾಗಿ ಅಳವಡಿಸಿಕೊಳ್ಳುವ ಬಗ್ಗೆ ೧೫ ವರ್ಷಗಳ ಕಾರ್ಯಕ್ರಮವನ್ನು ರೂಪಿಸಿರುವುದಾಗಿ ತಿಳಿದು ಬರುತ್ತದೆ. ಇದು ಮೂರು ಘಟ್ಟಗಳ ಕಾರ್ಯಕ್ರಮ—ಮೊದಲನೆಯ ಐದು ವರ್ಷಗಳಲ್ಲಿ ಹಿಂದಿಯ ಪಾರಿಭಾಷಿಕ ಶಬ್ದಗಳನ್ನು ರಚಿಸುವುದು ಹಿಂದೀ ಭಾಷೆಯನ್ನಾಡದ ಪ್ರದೇಶಗಳಮಾಧ್ಯಮಿಕ ಶಾಲೆಗಳಲ್ಲಿ ಹಿಂದಿಯ ಶಿಕ್ಷಣವನ್ನು ಕಡ್ಡಾಯವಾಗಿ ನೀಡುವುದು, ಮತ್ತು ಈ ಪ್ರದೇಶದಲ್ಲಿ ಹಿಂದಿಯ ಪ್ರಚಾರಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದು- ಇವುಗಳಿಗೆ ಪ್ರಾಶಸ್ತ್ಯ ನೀಡಲ್ಪಡುತ್ತದೆ. ಪಾರಿಭಾಷಿಕ ಪದಗಳ ಸಂಕಲನ ಕಾರ್ಯವನ್ನು ಎರಡನೆಯ ಐದು ವರ್ಷಗಳ ಅವಧಿಯಲ್ಲಿ ಮುಗಿಸಲಾಗುತ್ತದೆ. ಇಷ್ಟು ಹೊತ್ತಿಗೆ ಹಿಂದಿ ಭಾಷೆಯನ್ನಾಡುತ್ತಿರದ ಪ್ರದೇಶಗಳ ಎಲ್ಲ ಮಕ್ಕಳಿಗೂ ಹಿಂದಿ ಬರುತ್ತದೆ ಎಂದು ಭಾವಿಸಿದ್ದು ವಯಸ್ಕರಿಗೆ ಮಾತ್ರ ಹಿಂದಿ ಶಿಕ್ಷಣ ಕೊಡುವ ವಿಶೇಷ ಏರ್ಪಾಡು ನಡೆಯುತ್ತದೆ. ಹೀಗೆ ಹತ್ತು ವರ್ಷಗಳಲ್ಲಿ ಯೋಗ್ಯ ಹಿನ್ನೆಲೆಯನ್ನು ರಚಿಸಿಕೊಂಡ ತರುವಾಯ ಮುಂದಿನ ಐದು ವರ್ಷಗಳಲ್ಲಿ ಇಂಗ್ಲೀಷು ಭಾಷೆ ಇದ್ದಂತೆಯೇ ಹಿಂದಿಯನ್ನು ಸಹ ಕೇಂದ್ರ ಸರಕಾರದ ಆಡಳಿತ ವಿಭಾಗದಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಪತ್ರವ್ಯವಹಾರ ನಡೆಸುವುದರಲ್ಲಿ ಉಪಯೋಗಿಸಲಾಗುತ್ತದೆ. "ಇದರಿಂದ ಆಡಳಿತದ ಭಾಷೆಯಾಗಿ ಹಿಂದಿಯನ್ನು ಅಭಿವೃದ್ಧಿ ಪಡಿಸಲು ಮತ್ತು ಏನಾದರೂ ಲೋಪದೋಷ ಕಂಡು ಬಂದರೆ ತಿದ್ದಲು ಐದು ವರ್ಷಗಳ ಕಾಲಾವಕಾಶ ದೊರಕುತ್ತದೆ" ಎಂದು ಕೇಂದ್ರ ಸರಕಾರದ ಶಿಕ್ಷಣ ಶಾಖೆಯ ಅಭಿಪ್ರಾಯ.

ರಣ ನೌಕೆಗಳ ನಿರ್ಮಾಣ

ಭಾರತದ ಜಲಸೇನೆಯ ಮುಖ್ಯಾಧಿಕಾರಿಗಳಾಗಿದ್ದು ನಿವೃತ್ತಿ ಹೊಂದುವ ಪೂರ್ವದಲ್ಲಿ ಹೊಸದೆಹಲಿಯಲ್ಲಿ ತನ್ನ ಕೊನೆಯ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡಿದ ಆ್ಯಡ್ಮಿರಲ್ ಸರ್ ಮಾರ್ಕ್ ಪ್ರಿಜಿಯವರು ಭಾರತದಲ್ಲಿ ಯುದ್ಧದ ಹಡಗುಗಳನ್ನು ಕಟ್ಟುವ ವಿಚಾರ ಮಾಡಲಾಗುತ್ತಿದೆ ಎಂದು ತಿಳಿಸಿದರು. ವಿಶಾಖಪಟ್ಟಣದ ಹಡಗು ಕಟ್ಟುವ ಕಂಪೆನಿಗೆ ಒಂದು ಸರ್ವೆ ಹಡಗನ್ನು ನಿರ್ಮಿಸಲು ಹೇಳಲಾಗಿದೆಯೆಂದೂ ಹಿಂದಿನಿಂದ ಸಣ್ಣ ಸಣ್ಣ ಬೇರೆ ಯುದ್ಧದ ಹಡಗಗಳನ್ನು ಇಲ್ಲಿ ರಚಿಸಲಾಗುವುದೆಂದೂ ಅವರು ಹೇಳಿದರು ಮುಂದಿನ ಆರು ವರ್ಷಗಳಲ್ಲಿ ಭಾರತದ ಜಲ ಸೇನೆಯು ಬ್ರಿಟನಿನಿಂದ ಒಂದು ಹೊಸ ಧ್ವಜ ನೌಕೆ, ಹನ್ನೆರಡು ಫ್ರೈಗೇಟ್ ಮತ್ತು ಎಂಟು ಮೈನ್ ಸ್ವೀಪರ್ ಅಲ್ಲದೆ ಬೇರೆ ಅನೇಕ ಹಡಗುಗಳನ್ನೂ ಪಡೆಯುತ್ತದೆ. ಇವುಗಳೆಲ್ಲ ಈಗಿನ ಹಡಗುಗಳಿಗಿಂತ ಹೆಚ್ಚು ಉತ್ತಮವಾಗಿರುತ್ತವೆ. ಉದಾಹರಣೆಗೆ ಈಗಿನ ಫ್ರೈಗೇಟ್ ತಾಸಿಗೆ ೧೪ ನಾಟ್‌ಗಳ ವೇಗದಲ್ಲಿ ಚಲಿಸುತ್ತಿದ್ದರೆ ಬ್ರಿಟನಿನಿಂದ ಪಡೆಯಲಿರುವ ಫ್ರೈಗೇಟ್ ಇದರ ಇಮ್ಮಡಿ ವೇಗದಲ್ಲಿ ಸಾಗುತ್ತದೆ. ಭಾರತದಲ್ಲಿ ಕಟ್ಟಲು ಸಾಧ್ಯವಿಲ್ಲದ ನಮೂನೆಗಳನ್ನೆ ಬ್ರಿಟನಿನಿಂದ ಪಡೆಯುತ್ತಿದ್ದೇವೆ ಎಂದೂ ಅವರು ಸ್ಪಷ್ಟಪಡಿಸಿದರು. ಪಿಜಿಯವರ ಸ್ಥಾನಕ್ಕೆ ಜಲಸೇನೆಯ ಹೊಸ ಮುಖ್ಯಾಧಿಕಾರಿಯಾಗಿ ವೈಸ್ ಆ್ಯಡ್ಮಿರಲ್ ಎಸ್. ಎಚ್. ಕಾರಿಲ್ ನೇಮಕಗೊಂಡಿದ್ದಾರೆ.

ರಾಷ್ಟ್ರದಾದ್ಯಂತ ಪಾನ ಪ್ರತಿಬಂಧ

ಶ್ರೀಮನ್ನಾರಾಯಣ ಸಮಿತಿಯ ಮಧ್ಯಂತರದ ವರದಿಯೊಂದು ಸಮಗ್ರ ಭಾರತದಲ್ಲಿ ಪಾನನಿರೋಧ ಧೋರಣೆಯನ್ನು ಇದೇ ಅಕ್ಟೋಬರ ೨೯ನೇ ದಿನಾಂಕ (ಮಹಾತ್ಮಾ ಗಾಂಧೀಯವರ ಜನ್ಮದಿನ) ದಂದು ಎಲ್ಲ ರಾಜ್ಯ ಸರಕಾರಗಳೂ ಸಾರಬೇಕೆಂದು ಸೂಚಿಸಿರುತ್ತದೆ. ದೇಶದ ಆರ್ಥಿಕ ಪರಿಸ್ಥಿತಿಯು ಹೇಗೆಯೇ ಇರಲಿ, ಸೈನ್ಯ ಶಾಲೆಯನ್ನೊಳಗೊಂಡು ರಾಷ್ಟ್ರದಾದ್ಯಂತ ಮದ್ಯಪಾನವನ್ನು ಪ್ರತಿಬಂಧಿಸಬೇಕು ಎಂದು ಅದರ ಅಭಿಪ್ರಾಯ. ಪರ್ಮಿಟನ ಮೂಲಕ ಕೆಲವರಿಗೆ ಕುಡಿಯಗೊಡುವುದು ಸಲ್ಲದು ಎಂದೂ ಅದು ಹೇಳಿದೆ—ರೋಗಗಳ ಚಿಕಿತ್ಸೆಗೆ ಮಾದಕ ಪದಾರ್ಥವು ಅನಿವಾರ್ಯವಲ್ಲ ಎಂಬ ಪ್ರಸಿದ್ಧ ವೈದ್ಯಕೀಯ ತಜ್ಞರ ಅಭಿಪ್ರಾಯವನ್ನು ಅದು ಉಲ್ಲೇಖಿಸುತ್ತಾ ರೋಗೋಪಶಮನದ ಹೆಸರಿನಲ್ಲಿ ಮದ್ಯಸೇವನೆಯ ಪ್ರವೃತ್ತಿಗೆ ಪ್ರೋತ್ಸಾಹ ಕೊಡತಕ್ಕದ್ದಲ್ಲ ಎಂಬ ನಿಶ್ಚಯವನ್ನೂ ಪ್ರಕಟಿಸಿರುತ್ತದೆ. ಸರಕಾರದ ಆದಾಯವು ಪಾನನಿರೋಧದಿಂದ ಕುಗ್ಗುತ್ತದೆ ಎಂಬ ವಾದವನ್ನು ಅದು ಹಿನ್ನೆಲೆಗೆ ಸರಿಸಿ, ಅಭಿವೃದ್ಧಿ ಕಾರ್ಯಗಳಿಗೆ ಬೇರೆ ಬೇರೆ ಬಗೆಯಿಂದ ಹಣ ಸಂಗ್ರಹಿಸುತ್ತಿರುವಂತೆ ಪಾನನಿರೋಧದ ನಷ್ಟವನ್ನಾದರೂ ಇತರ ಆದಾಯದ ಮೋತ್ರಗಳಿಂದ ತುಂಬಿಸಿಕೊಳ್ಳಬೇಕು ಎಂದು ಹೇಳುತ್ತದೆ. ಪಾನನಿರೋಧದ ಪ್ರಯೋಜನವನ್ನು ವಿವರಿಸುತ್ತಾ ಕುಡಿತಕ್ಕಾಗಿ ಈಗ ಹಾಳಾಗುತ್ತಿರುವ ೧೫೦ ಕೋಟಿ ರೂಪಾಯಿಗಳನ್ನು ಕುಟುಂಬದ ಪರಿಸ್ಥಿತಿಯನ್ನು ಉತ್ತಮವಿಡಲು ವಿನಿಯೋಗಿಸುವಂತೆ ಪಾನನಿರೋಧ ಧೋರಣೆ ನೆರವಾಗುತ್ತದೆ; ಇದೇ ಲಕ್ಷ್ಯಿಸತಕ್ಕ ವಿಷಯ ಎಂದು ನೆನಪಿಗೆ ತಂದು ಕೊಟ್ಟಿರುತ್ತದೆ.

ಕಾರ್ಕಳ ಡಿ. ಮುಂ. ಕೋರ್ಟಿನಲ್ಲಿ

O. S. No. 103/1955

ಚಂದಮ್ಮ ಶೆಟ್ಟಿ —ವಾದಿಳು.

ರಾಮಕ್ಕೆ ಹೆಂಗ್ಸು, ಲಕ್ಷ್ಮಿ ಹೆಂಗ್ಸಿನ ಮಗಳು, ಕಾರ್ಕಳ ತಾಲೂಕು ಸೂರಾಲಪೆಟ್ಟು ಗ್ರಾಮದ ನೆಲ್ಲಿಕಾರ ಎಂಬಲ್ಲಿರುವವಳು —ಪ್ರತಿವಾದಿಳು.

ಸದ್ರಿ ಪ್ರತಿವಾದಿಳು ಶ್ರೀಮತಿ ರಾಮಕ್ಕೆ ಹೆಂಗ್ಸು ಯಿವರಿಗೆ—

ನಿಮ್ಮಿಂದ ಕಳೆದ 1954 ಮತ್ತು 1955 ನೇ ಯಿಸ್ವಿಯಿಗಳ ವ್ಯಾಜೆಗೆ ವಾದಿಳಿಗೆ ಬರತಕ್ಕ ಮೂಲಗೇಣಿ ಗೇಣಿ ಅ೨ ಸೇರು ರೂಪಾಯಿ 466-5-0 ಕೇಳಿ ಸದ್ರಿಯವಳು ನಿಮ್ಮ ಮೇಲೆ ದಾಖ್ಲುಮಾಡಿದ ದಾವೆಯು ನಿಮಗೆ ನೋಟೀಸಿನ ಬಗ್ಗೆ ತಾ 29-7-55ಕ್ಕೆ ಯಿಟ್ಟಿರುತ್ತದೆ ಆಕ್ಷೇಪಯಿದ್ರೆ ಸದ್ರಿ ತಾರೀಕು ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ನೀನು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for Plamtiff.

Karkala, 17-7-55

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು, ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಶಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ನೆಹರುಗಳಿಗೆ ರಾಷ್ಟ್ರಾಧ್ಯಕ್ಷರಿಂದ "ಭಾರತರತ್ನ" ಪ್ರಶಸ್ತಿಯ ಕೊಡುಗೆ

ಮಾನವ ಜನಾಂಗದ ಶಾಂತಿ ಸಾಧನೆಗಾಗಿ ನಡೆಸಿದ ಅಮೋಘ ಕಾರ್ಯದ ಹೊಗಳಿಕೆ

ಹೊಸದೆಹಲಿಗೆ ಮರಳಿದ ನೆಹರುಗಳಿಗೆ ಎಲ್ಲ ವರ್ತುಲಗಳಿಂದಲೂ ಸಂಭ್ರಮದ ಸ್ವಾಗತ ಮತ್ತು ಸನ್ಮಾನ ದೊರೆತಿದೆ. ಭಾರತದ ಪ್ರತಿಷ್ಠೆಯನ್ನು ವಿದೇಶಗಳಲ್ಲಿ ಗಣನೀಯವಾಗಿ ಹೆಚ್ಚಿಸಿದರೆಂದು ಎಲ್ಲರೂ ನೆಹರುಗಳನ್ನು ಕೊಂಡಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ನೆಹರುಗಳು ತಮ್ಮ ಉದಾತ್ತವಾದ ದೃಷ್ಟಿಕೋಣಕ್ಕೆ ಅನುಗುಣವಾಗಿ ನನಗೆ ಸಂದ ಗೌರವ ಭಾರತದ ಪರವಾಗಿ ವ್ಯಕ್ತವಾದ ಭಾವನೆಯಾಗಿದೆ. ನಾವು ಅನುಸರಿಸಿಕೊಂಡು ಬಂದ ಶಾಂತಿಧೋರಣೆಯ ಬಗೆಗೆ ತೋರಿಸಿದ ಅಭಿಮಾನವಾಗಿದೆ ಎಂದಿದ್ದಾರೆ. ಭಾರತ ಸರಕಾರವು ಯೋಗ್ಯ ಸಮಯ ಮತ್ತು ಸಂದರ್ಭಗಳಲ್ಲಿ ಅತ್ಯುತ್ತಮ ಸೂಚನೆಗಳನ್ನು ಮುಂದಿಡುತ್ತಾ ಬಂದಿರುವುದರಿಂದ ಜಗತ್ತು ಅದರ ಪ್ರಯೋಜನವನ್ನು ಪಡೆಯಲು ಆತುರದಿಂದ ಸಿದ್ಧವಾಗುತ್ತದೆ. ಈ ಶಾಂತಿಧೋರಣೆಗೆ ಭಾರತದ ಹಿಂದಿನ ಇತಿಹಾಸ ಮತ್ತು ನಾಯಕರ ಧೀರ ನಿಲುಮೆಗಳೇ ಕಾರಣವಾಗಿವೆ ಎಂದು ನೆಹರುಗಳು ಪ್ರಾಂಜಲ ಮನಸ್ಸಿನಿಂದ ವಿದಿತಪಡಿಸಿದ್ದಾರೆ.

ವಿದೇಶಗಳ ಗೌರವ

ಮಾನವ ಜನಾಂಗದ ಶಾಂತಿ ಸಾಧನೆಗಾಗಿ ನಡೆಸಿದ ಅಮೋಘ ಕಾರ್ಯಗಳಿಗಾಗಿ ನೆಹರುಗಳಿಗೆ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಭಾರತದ ಅತ್ಯುಚ್ಚ ಗೌರವದ ಪ್ರತೀಕವೆನಿಸಿದ "ಭಾರತ ರತ್ನ" ಪ್ರಶಸ್ತಿಯನ್ನು ದಯಪಾಲಿಸಿದ್ದಾರೆ. ಹೊಸದೆಹಲಿಯಲ್ಲಿ ದಿನಾಂಕ ೧೬ ರಂದು ಜರಗಿದ ಸಮಾರಂಭವೊಂದರಲ್ಲಿ ರಾಷ್ಟ್ರಾಧ್ಯಕ್ಷರು ತಮ್ಮ ಈ ನಿರ್ಧಾರವನ್ನು ಪ್ರಕಟಿಸಿದರು. ಆಗ ಭಾಷಣ ಮಾಡುತ್ತಾ ರಾಷ್ಟ್ರಾಧ್ಯಕ್ಷರು ಹೀಗೆಂದರು- "ನಮ್ಮ ಪ್ರಧಾನ ಮಂತ್ರಿಗಳಾದ ಜವಾಹರಲಾಲ ನೆಹರುಗಳು ಐರೋಪ್ಯ ರಾಷ್ಟ್ರಗಳ ಪ್ರಯಾಣವನ್ನು ಪೂರೈಸಿಕೊಂಡು ಕ್ಷೇಮದಿಂದ ಹಿಂತಿರುಗಿದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಲು ನಾವಿಲ್ಲಿ ಸೇರಿದ್ದೇವೆ. ಅವರು ಭೇಟಿಕೊಟ್ಟ ರಾಷ್ಟ್ರಗಳಲ್ಲೆಲ್ಲ ಅಲ್ಲಿಯ ಸರಕಾರ ಮತ್ತು ಜನತೆಯು ಅವರಿಗೆ ನೀಡಿದ ಪ್ರಚಂಡ ಸ್ವಾಗತವು ನಮ್ಮ ರಾಷ್ಟ್ರದ ಬಗ್ಗೆ ತಳೆದಿರುವ ಗೌರವ ಭಾವನೆಯನ್ನು ವ್ಯಕ್ತಪಡಿಸುತ್ತದೆ. ನಮ್ಮದು ಅತ್ಯಂತ ಪುರಾತನವಾದ ದೇಶ; ಆದರೆ ಇನ್ನೂ ಶೈಶವಾವಸ್ಥೆಯಲ್ಲಿರುವ ಪ್ರಜಾರಾಜ್ಯ. ಹೀಗಿದ್ದರೂ ಶಾಂತಿ ಸ್ಥಾಪನೆ ಮತ್ತು ರಕ್ಷಣೆಗಾಗಿ ಅದು ತಳೆದಿರುವ ನಿಲುಮೆಗೂ ಕೈಕೊಂಡಿರುವ ಚಟುವಟಿಕೆಗಳಿಗೂ ಎಲ್ಲರಾಷ್ಟ್ರಗಳ ಪ್ರಶಂಸೆ ದೊರೆತಿರುವುದು ಅಭಿಮಾನದ ವಿಷಯ.

ರಾಷ್ಟ್ರದ ಕೃತಜ್ಞತೆ

"ನಿಜವಾಗಿಯೂ ನಾವು ಎಲ್ಲ ಜನತೆಯ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಶಾಂತಿಯು ಅವಶ್ಯವೆಂದು ನಂಬುತ್ತೇವೆ. ಶಾಂತಿಯ ತತ್ವವನ್ನು ನಮ್ಮದೇ ಆದ ನಮ್ಮ ರೀತಿಯಲ್ಲಿ ಪ್ರತಿವಾದಿಸುತ್ತಾ ನಾವು ಜಗತ್ತಿನ ಕೋಟ್ಯಾಂತರ ಜನರ ಆರ್ತನಾದವನ್ನು ಎತ್ತಿಹೇಳುತ್ತಿದ್ದೇವೆ. ನಮ್ಮ ಈ ಧೋರಣೆಯ ಮುಖ್ಯ ಶಿಲ್ಪಿ ಪ್ರಧಾನ ಮಂತ್ರಿ ನೆಹರುಗಳಾಗಿದ್ದಾರೆ; ಅವರು ಈ ಬಗ್ಗೆ ಅಸಂಖ್ಯಾತ ಜನರ ಪ್ರಶಂಸೆ ಪಡೆದಿದ್ದಾರೆ. ಅವರು ಕೈಗೊಂಡಿರುವ ಜಾಗತಿಕ ಶಾಂತಿ ಸ್ಥಾಪನೆಯ ದೊಡ್ಡ ಪ್ರಯತ್ನದಲ್ಲಿ ಇಡೀ ರಾಷ್ಟ್ರವು ಅವರ ಬೆಂಬಲಕ್ಕಿದೆ ಎಂಬುದನ್ನು ವಿದಿತಪಡಿಸಲು ಮತ್ತು ರಾಷ್ಟ್ರದ ಕೃತಜ್ಞತೆಯನ್ನು ವ್ಯಕ್ತಗೊಳಿಸಲು ಏನು ಮಾಡಲಿ ಎಂದು ನಾನು ಯೋಚಿಸುತ್ತಿದ್ದೆನು. ಅವರು ನಮ್ಮರಾಷ್ಟ್ರಕ್ಕೆ ಸಲ್ಲಿಸಿದ ಅಜೀವನ ಪರ್ಯಂತರವಾದ ಸೇವೆಯು ನಮ್ಮ ಇತ್ತೀಚೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಿದ್ದು ಮಾನವ ಜನಾಂಗದ ಶಾಂತಿಸಾಧನೆಗೆ ಅವರು ನಡೆಸಿದ ಕಾರ್ಯವು ಸುವರ್ಣಕ್ಕೆ ಸುಗಂಧವನ್ನು ಸೇರಿಸಿದಂತಾಗಿದೆ. ನಮ್ಮಲ್ಲಿರುವ ಅತ್ಯುಚ್ಚ ಗೌರವದ ಪ್ರಶಸ್ತಿಯಾದ ಭಾರತ ರತ್ನವನ್ನು ನೀಡುವ ಮೂಲಕವೇ ನಾವು ತೃಪ್ತರಾಗಬೇಕಾಗಿದೆ. ನಾನು ಸ್ವೇಚ್ಛೆಯಿಂದ ಅವರಿಗೆ ನೀಡುತ್ತಿರುವ ಈ ಪ್ರಶಸ್ತಿಗೆ ಮಂತ್ರಿ ಮಂಡಳದ ಎಲ್ಲ ಸದಸ್ಯರ ಮತ್ತು ರಾಷ್ಟ್ರದ ಜನತೆಯ ಬೆಂಬಲವಿದೆ ಎಂದು ನಾನು ನಂಬಿದ್ದೇನೆ".

ಪ್ರತಿಜ್ಞೆಯ ಪುನರುಚ್ಚಾರ

ರಾಷ್ಟ್ರಾಧ್ಯಕ್ಷರ ಪ್ರಾಮಾಣಿಕವಾದ ಪ್ರಶಂಸೆಯನ್ನು ಕೇಳಿ ಮತ್ತು ಅವರು ವ್ಯಕ್ತಪಡಿಸಿದ ಸುಂದರ ಭಾವನೆ, ಪ್ರೀತಿ ಮತ್ತು ಬೆಂಬಲದ ಮಾತುಗಳಿಂದ ಭಾವೋದ್ರಿಕ್ತರಾಗಿ ನೆಹರುಗಳು ಗದ್ಗದ ಕಂಠರಾದರು. ಅವರು ಉತ್ತರ ಕೊಡಲು ಎದ್ದಾಗ ಮಾತುಗಳು ಏರುಯಾಗಿ ಹೊರಡದಷ್ಟು ಭಾವನಾವಶವಶರಾಗಿದ್ದರು. "ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಸಾಧನೆಗಳು ಇತ್ತೀಚಿನ ಇತಿಹಾಸವನ್ನು ರೂಪಿಸುವುದರಲ್ಲಿ ಸಹಕಾರಿಸಿದ ಎಲ್ಲರ ಪ್ರಯತ್ನಗಳ ಫಲವಾಗಿದೆ. ಆದುದರಿಂದ ಇದರ ಶ್ರೇಯಸ್ಸು ಎಲ್ಲರ ಸಾಮೂಹಿಕ ಸಾಹಸಕ್ಕೆ ಸಲ್ಲುತ್ತದೆ. ನನ್ನ ಮಟ್ಟಿಗೆ ಸಲ್ಲಿಸಿದ ಈ ಗೌರವಕ್ಕೆ ನಾನು ಯಾರನ್ನು ಹೇಗೆ ಅಭಿನಂದಿಸಬೇಕೋ ತಿಳಿಯದು. ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸಲು ನಾನು ಶಕ್ತಿ ಮೀರಿ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ನಡೆಸುತ್ತೇನೆ. ಮತ್ತು ನಮ್ಮಲ್ಲಿ ಕೊನೆಯ ಉಸಿರು ಇರುವ ವರೆಗೂ ಈ ಪ್ರಯತ್ನವನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ" ಎಂದು ನೆಹರುಗಳು ತಮ್ಮ ದೃಢ ನಿರ್ಧಾರವನ್ನು ಪುನರುಚ್ಚರಿಸಿದರು. ಅವರಿಗೆ ನೀಡಲಾಗಿರುವ "ಭಾರತ ರತ್ನ" ಪ್ರಶಸ್ತಿಯು ಕಂಚಿನ ಪದಕವಾಗಿದ್ದು ಅರಳೆಲೆಯ ಆಕಾರದಲ್ಲಿ ಅದು ಇರುತ್ತದೆ. ಅದರ ಒಂದು ಬದಿಗೆ ಸೂರ್ಯನ ಚಿಹ್ನೆವೂ ಅದರ ಕೆಳಗೆ "ಭಾರತ ರತ್ನ" ಎಂಬ ಹಿಂದಿಯಲ್ಲಿ ಕೆತ್ತಲಾದ ಶಬ್ದಗಳೂ ಇವೆ; ಇನ್ನೊಂದು ಬದಿಯಲ್ಲಿ ರಾಷ್ಟ್ರದ ಸಂಕೇತ ಮುದ್ರೆ ಮತ್ತು ಧ್ಯೇಯ ವಾಕ್ಯಗಳನ್ನು ಕೆತ್ತಲಾಗಿದೆ. ಪದಕದ ಕಟ್ಟು, ರಾಷ್ಟ್ರದ ಸಂಕೇತ ಮುದ್ರೆ ಮತ್ತು ಸೂರ್ಯ ಬಿಂಬಗಳು ಪ್ಲಾಟಿನಂ ಲೋಹದಲ್ಲಿ ಅಂಕಿಸಲ್ಪಡುತ್ತವೆ

ಮದ್ರಾಸಿನ ಕಾರ್ಯಕ್ರಮ

ಮುಂದಿನ ತಿಂಗಳು ರಾಷ್ಟ್ರ ಸಭೆಯ ಅಧಿವೇಶನ ಮದ್ರಾಸಿನಲ್ಲಿ ಜರಗುವಾಗ ರಾಜ್ಯಕ್ಕೆ ಅನ್ವಯಿಸಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಚರ್ಚೆ ನಡೆಯುತ್ತದೆ. ರಾಜ್ಯ ಸರಕಾರವು ವಿವಿಧ ಮಂತ್ರಿಶಾಖೆಗಳೊಡನೆ ವಿಚಾರಿಸಿ ಸುಮಾರು ೩೫೦ ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳುಳ್ಳ ಕರಡೊಂದನ್ನು ಯೋಜನಾ ಆಯೋಗದ ಪರಿಶೀಲನೆಗಾಗಿ ಇದೇ ಶುಕ್ರವಾರ ಕಳಿಸಿರುತ್ತದೆ. ಸಂಬಂಧಿಸಿದವರ ಹೇಳಿಕೆಯನ್ನು ಗಮನಿಸಿದರೆ ಯೋಜನಾ ಆಯೋಗವು ರಾಜ್ಯದ ಯೋಜನೆಗಳ ಒಟ್ಟು ವೆಚ್ಚವನ್ನು ೨೮೦ ರಿಂದ ೩೦೦ ಕೋಟಿ ರೂಪಾಯಿಗೆ ಹೆಚ್ಚಾಗದಂತೆ ಇಳಿಸಬಹುದು. ಯೋಜನಾ ಆಯೋಗದ ಅಭಿಪ್ರಾಯ, ಶಾಸನಸಭೆಯ ಸದಸ್ಯರ ಸೂಚನೆಗಳು ಇತ್ಯಾದಿಯನ್ನು ಪರಿಶೀಲಿಸಿ, ಸಪ್ತಂಬರ—ಅಕ್ಟೋಬರ ತಿಂಗಳುಗಳಲ್ಲಿ ಕೊನೆಯದಾಗಿ ರಾಜ್ಯದ ಕಾರ್ಯಕ್ರಮಗಳ ತಪಶೀಲನ್ನು ಸಿದ್ಧಗೊಳಿಸಬಹುದು. ಈಗಿರುವಂತೆ ಸರಕಾರವು ಮುಂದಿನ ಐದು ವರ್ಷಗಳ ಅವಧಿಯಲ್ಲಿ ೪೫ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ವ್ಯಯಿಸುತ್ತದೆ. ಇದರಲ್ಲಿ ಅಧ್ಯಾಪಕರ ವೇತನಗಳನ್ನು ಹೆಚ್ಚಿಸುವುದಕ್ಕೆ ಸ್ವಲ್ಪಮಟ್ಟಿನ ವ್ಯವಸ್ಥೆ ಇರುತ್ತದೆ. ಮಧ್ಯಮ ಹಾಗು ಘನ ಉದ್ಯಮಗಳಿಗಾಗಿ ೪೦ ಕೋಟಿ ರೂಪಾಯಿಗಳನ್ನೂ ಸಣ್ಣ ಪಟ್ಟಿನ ಕೈಗಾರಿಕೆ ಮತ್ತು ಗೃಹೋದ್ಯಮಗಳಿಗಾಗಿ ಮತ್ತೆ ೪೦ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದಾರೆ. ಕೃಷಿ, ಪಶುಸಂಗೋಪನೆ, ಜೈನ, ಅರಣ್ಯ, ಮೀನುಗಾರಿಕೆಗಳಿಗೆ ೩೬ ಕೋಟಿ; ವಿದ್ಯುಚ್ಛಕ್ತಿ ಮತ್ತು ನೀರಾವರಿಗೆ ೩೩ ಕೋಟಿ; ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಕ್ಕೆ ೨೨ ಕೋಟಿ, ಮಾರ್ಗ ರಚನೆಗೆ ೨೦ ಕೋಟಿ; ಗ್ರಾಮಾಭಿವೃದ್ಧಿಗೆ ೨೨ ಕೋಟಿ;—ಹೀಗೆಲ್ಲ ಹಣ ಹಂಚಿದ್ದಾರೆ.

ಚುನಾವಣೆಯ ಕಾಲ

ಮುಂದಿನ ಮಹಾ ಚುನಾವಣೆಗಳನ್ನು ೧೯೫೭ನೇ ಜನವರಿ—ಫೆಬ್ರವರಿಗಳಲ್ಲಿ ನಡೆಸಬೇಕೆಂದೂ ರಾಜ್ಯಗಳ ಶಾಸನಾಂಗಕ್ಕೂ ಕೇಂದ್ರದ ಸಂಸತ್ತಿಗೂ ಒಮ್ಮೆಯೇ ಚುನಾವಣೆ ನಡೆಯಬೇಕೆಂದೂ ಚುನಾವಣೆಗಳ ಕಮಿಶನರರಾದ ಶ್ರೀ ಸುಕುಮಾರ ಸೇನರು ಮಾಡಿದ ಸೂಚನೆಗೆ ಅಖಿಲಭಾರತ ಸ್ವರೂಪದ ನಾಲ್ಕು ಪಕ್ಷಗಳು (ಕಾಂಗ್ರೆಸ್, ಪ್ರಜಾಸಮಾಜವಾದಿ, ಕಮ್ಯೂನಿಸ್ಟ್ ಮತ್ತು ಜನಸಂಘ) ಸಮ್ಮತಿಸಿವೆಯಾಗಿತಿಳಿದುಬರುತ್ತದೆ. ಆದರೆ ಪೆಪ್ಸು ಆಂಧ್ರ ತಿರು-ಕೊಚ್ಚಿ ರಾಜ್ಯಗಳಲ್ಲಿ ಈಚೆಗೆ ರಾಜ್ಯದ ಶಾಸನಾಂಗಕ್ಕೆ ಚುನಾವಣೆಗಳು ನಡೆದಿರುವುದರಿಂದ ಈ ಶಾಸನಾಂಗಗಳೇ ಬೇರೆಯಾದರೂ ಘಟನೆಗಳು ಸಂಭವಿಸಿ, ವಿಸರ್ಜನೆಯೊಂದದಿದ್ದ ಪಕ್ಷದಲ್ಲಿ ೧೯೫೭—೬೦ನೇ ವರ್ಷದ ವರೆಗೆ ಉಳಿಯುತ್ತವೆ. ಲೋಕ ಸಭೆಯ ಸ್ಥಳಗಳಿಗೆ ಮಾತ್ರ ಈ ರಾಜ್ಯಗಳಲ್ಲಿಯೂ ಹೊಸತಾಗಿ ಚುನಾವಣೆಗಳು ಜರಗುತ್ತವೆ.

ಪವನ ಶಕ್ತಿಯ ಸದುಪಯೋಗ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ದೇಶದಲ್ಲೆಲ್ಲ ೩೦೦೦-೩೦೦೦ ಪವನ ಚಕ್ರಗಳನ್ನು ನೆಲೆಗೊಳಿಸುವ ಏಳುಕೋಟಿ ರೂಪಾಯಿಗಳ ಯೋಜನೆಯೊಂದು ರೂಪಿತವಾಗಿದೆ. ಚಿಕ್ಕ ಹೊಲಗಳಿಗೂ ತೋಟಗಳಿಗೂ ನೀರನ್ನು

(ಅನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಬ್ಯಾಂಕಿನ ಶಾಖೆಗಳು ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿ ಶೀಘ್ರದಲ್ಲೇ ತೆರೆಯಲ್ಪಡುವುವು:
1) ಮುಂಬಯಿ ಸಂಸ್ಥಾನದ ಧಾರವಾಡ ಜಿಲ್ಲೆಯ ರಾಣಿಬೆನ್ನೂರು.
2) ಮದ್ರಾಸು ಸಂಸ್ಥಾನದ ಸುಲಬಾರಿನಲ್ಲಿರುವ ಪಾಲ್ಘಾಟ್.

ಡಾ॥ ಯು. ಸುಂದರ ರಾವು ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd.- 1906] [H. O. UDIPI (S.India).
THE CANARA BANKING CORPORATION LIMITED

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೧-೭-'೫೫	ಸಂಚಿಕೆ ೪೫

ಕಾಶ್ಮೀರ

ಕೇಂದ್ರ ಸರಕಾರದ ಗೃಹ ಮಂತ್ರಿ ಪಂಡಿತ ಪಂತರು ಈ ತಿಂಗಳ ಪೂರ್ವಾರ್ಧದಲ್ಲಿ ಕಾಶ್ಮೀರಕ್ಕೆ ಭೇಟಿ ಕೊಟ್ಟಾಗ, ಆ ರಾಜ್ಯದ ಭವಿಷ್ಯವನ್ನು ಕುರಿತು ಕೆಲವು ಮಾತುಗಳನ್ನು ಆಡಿದ್ದರು. ಇದಕ್ಕೆ ಪಾಕಿಸ್ತಾನವು ತನ್ನ ತೀವ್ರ ಪ್ರತಿಭಟನೆಯನ್ನು ತೋರಿಸಿದೆ; ಪಂತರು ತಾನು ವೈಯಕ್ತಿಕ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದೇನೆಂದು ಹೇಳಿದ್ದರಿಂದ, ಪಾಕಿಸ್ತಾನದ ಸರಕಾರ ಒಂದು ನಿಷೇಧ ಪತ್ರವನ್ನು ಕಳಿಸುವ ಮೂಲಕ ಭಾರತ ಸರಕಾರದ ಸ್ಪಷ್ಟೀಕರಣವನ್ನು ಕೇಳಿದೆ. ಈ ಪತ್ರಕ್ಕೆ ಹೊಸದೆಹಲಿಯಿಂದ ಇಷ್ಟರಲ್ಲಿಯೇ ಸಮರ್ಪಕವಾದ ಉತ್ತರ ಹೋಗಬಹುದು. ಆ ಉತ್ತರ ಗೃಹಮಂತ್ರಿಗಳ ಪ್ರತಿಯೊಂದೂ ಶಬ್ದವನ್ನು ಸಮರ್ಥಿಸುವ ರೀತಿಯಲ್ಲೇ ಇರಬಹುದು. ಏಕೆಂದರೆ, ಪಂತರು ವೈಯಕ್ತಿಕವಾಗಿಯೇ ಮಾತನಾಡಿದರೂ ಸಹ, ಸರಕಾರದ ಧೋರಣೆಯ ಮೇಲೆ ಅವರ ಅಭಿಪ್ರಾಯ ಸಾಕಷ್ಟು ಗಂಭೀರ ಪರಿಣಾಮವನ್ನು ಸಹಜವಾಗಿಯೇ ಮಾಡುತ್ತದೆ. ಹೊಣೆಗಾರ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬನು ಸಮಯ—ಸಂದರ್ಭಗಳಿಗೆ ಹೊಂದಿಕೊಳ್ಳಲಾರದ ಅಭಿಪ್ರಾಯಗಳನ್ನು ವೈಯಕ್ತಿಕವಾಗಿಯಾದರೂ ಪ್ರಕಟಿಸುವುದು ವಿರಳ. ಗೃಹಮಂತ್ರಿಗಳಿಗೆ ಕಾಶ್ಮೀರ ಪ್ರಶ್ನೆಯ ಕುರಿತು ವಿಶೇಷವಾದ ತಿಳಿವಳಿಕೆ ಇದೆ—ಇದೇ ಮೇ ತಿಂಗಳಲ್ಲಿ ಭಾರತ ಮತ್ತು ಪಾಕಿಸ್ತಾನದ ಪ್ರಧಾನ ಮಂತ್ರಿಗಳು ಹೊಸದೆಹಲಿಯಲ್ಲಿ ಈ ಕುರಿತು ಸಮಾಲೋಚನೆ ನಡೆಸಿದಾಗ, ಪಂಡಿತ ಪಂತರೂ ಅದರಲ್ಲಿ ಭಾಗವಹಿಸಿದ್ದರು. ಆದುದರಿಂದ ಸಮಸ್ಯೆಯ ಪೂರ್ವಾಪರಗಳೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡೇ ಪಂತರು ಶ್ರೀ ನಗರದಲ್ಲಿ ಕಾಶ್ಮೀರದ ಭವಿಷ್ಯದ ಕುರಿತಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೆಂದು ಹೇಳುವುದು ನ್ಯಾಯೋಚಿತ. ಪಾಕಿಸ್ತಾನದ ಪತ್ರಿಕೆಗಳೂ ಸರಕಾರವೂ ಅಕ್ಷೇಪಿಸಿರುವ ಪಂತರ ಅಭಿಪ್ರಾಯದ ಸಾರವೇನು? ಕಾಶ್ಮೀರದ ಭವಿಷ್ಯ ನಿರ್ಣಯಿಸುವಲ್ಲಿ, ಅಲ್ಲಿಯ ಘಟನಾ ಸಮಿತಿ ಸ್ವೀಕರಿಸಿದ ಗೊತ್ತುವಳಿಯನ್ನು ಉಪೇಕ್ಷಿಸುವಂತಿಲ್ಲ; ಭಾರತ ಸರಕಾರವು ೧೯೪೭ರಲ್ಲಿ ಆಗಿನ ಕಾಲಗುಣಕ್ಕೆ ಅನುಸಾರವಾಗಿ ಏನೇ ವಚನ ಕೊಟ್ಟಿರಲಿ, ಪಾಕಿಸ್ತಾನವು ಅಮೇರಿಕದೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಂಡ ಬಳಿಕ, ಅದು ಪರಿಸ್ಥಿತಿಯ ಮೇಲೆ ವಿಪರೀತ ಪರಿಣಾಮವನ್ನುಂಟು ಮಾಡಿರುತ್ತದಾದುದರಿಂದ, ಬದಲಾದ ವಾತಾವರಣಕ್ಕೆ ಅನುಗುಣವಾಗಿ ನಡೆದುಕೊಳ್ಳುವುದು ಅವಶ್ಯಕ—ಇದೇ ಪಂತರ ಅಭಿಪ್ರಾಯ. ಅವರು ಕಾಲವು ಸೀಗೆ ಬದಲಾಗಿದೆ ಎಂಬುದನ್ನು ನಾಲ್ಕು ಅಂಶಗಳ ಮೇಲಿಂದ ವಿವರಿಸಿದ್ದಾರೆ— ಮೊದಲನೆಯದಾಗಿ, ಕಾಶ್ಮೀರವು ಈಗ ಕೆಲವು ವರ್ಷಗಳಿಂದ ತನ್ನದೇ ಒಂದು ಧೋರಣೆಯನ್ನು ಅನುಸರಿಸಿಕೊಂಡು ಬರುತ್ತಿದೆ; ಮತ್ತು ಅನೇಕ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಂಡಿರುತ್ತದೆ. ಇದನ್ನು ಮುಂದುವರಿಸಗೊಡದ ಯಾವ ವ್ಯವಸ್ಥೆಯೂ ಜನತೆಯ ಹಿತಕ್ಕೆ ಹೇಳಿಸಿದುದಲ್ಲ. ಎರಡನೆಯದಾಗಿ, ಪಾಕಿಸ್ತಾನವು ಅಮೇರಿಕದೊಡನೆ ಸೈನಿಕ ಒಪ್ಪಂದ ಮಾಡಿಕೊಂಡಿರುವುದರಿಂದ, ಅದು ಆ ರಾಷ್ಟ್ರದ ಸೈನಿಕ ಶಕ್ತಿಯ ಮೇಲೆ ಪರಿಣಾಮವನ್ನು ಮಾಡಿದ್ದು, ಯುದ್ಧ ವಿರಾಮ ರೇಖೆಯ ಪಾಕಿಸ್ತಾನೀ ಭಾಗದಲ್ಲಿ ನಿಲ್ಲುವ ಸೈನ್ಯದ ಪ್ರಮಾಣ ಮುಂತಾದವುಗಳನ್ನು ಹೊಸ ತಳಹದಿಯ ಮೇಲೆ ನಿರ್ಧರಿಸದಿದ್ದರೆ ನ್ಯಾಯವಾಗದು. ಮೂರನೆಯದಾಗಿ, ಪ್ರಬುದ್ಧ ಮತದಾನದ ತತ್ವದ ಮೇಲೆ ಚುನಾಯಿಸಲ್ಪಟ್ಟಿರುವ ಕಾಶ್ಮೀರದ ಘಟನಾ ಸಮಿತಿಯು ಭಾರತದೊಡನೆಯೇ ಸೇರ್ಪಡೆ ಹೊಂದಬೇಕೆಂಬ ಜನತೆಯ ಇಚ್ಛೆಯನ್ನು ಪ್ರತಿನಿಧೀಕರಿಸುವ ನಿರ್ಣಯವನ್ನು ಈಗಾಗಲೇ ಮಾಡಿರುತ್ತದೆ; ಆದುದರಿಂದ ಕಾಶ್ಮೀರದ ಜನರ ಅಭಿಪ್ರಾಯವನ್ನು ತಿಳಿಯಲು ವ್ಯವಸ್ಥೆ ಮಾಡಲಾಗುವುದು ಎಂದು ಹಿಂದೆ ಭಾರತವು ನೀಡಿದ್ದ ಆಶ್ವಾಸನೆ ಈಡೇರಿದೆ ಎಂದೇ ತಿಳಿಯುವುದೊಳಿತು. ಕೊನೆಯದಾಗಿ, ಘಟನಾ ಸಮಿತಿಯನ್ನು ಚುನಾಯಿಸುವುದಕ್ಕೆ ಪೂರ್ವದಲ್ಲಿ ಆಗಿನ ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲರು ರಾಷ್ಟ್ರೀಯ ಪರಿಷತ್ತನ್ನು ಉದ್ದೇಶಿಸಿ ಮಾತನಾಡುವಾಗ, ಚುನಾವಣೆಗಳನ್ನು ಕಾಶ್ಮೀರದ ಭವಿಷ್ಯ ನಿರ್ಣಯಿಸುವ ಪ್ರಮುಖ ಉದ್ದೇಶದಿಂದ ನಡೆಸಲಾಗುವುದು ಎಂದಿದ್ದರು; ಆದುದರಿಂದ, ಕಾಶ್ಮೀರದ ಜನತೆಯ ಮನಸ್ಸಿನ ಇಚ್ಛೆ ಭಾರತದೊಡನೆ ಸೇರುವುದಕ್ಕಿಂತ ಬೇರೆ ತೆರನಾಗಿದೆ ಎಂದು ಹೇಳುವುದಕ್ಕೆ ಆಧಾರ ಸಾಲದು. ಈ ನಾಲ್ಕು ಸಂಗತಿಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿದರೆ ಪಾಕಿಸ್ತಾನವು ಈಗ ಮಾಡುತ್ತಿರುವ ಪ್ರತಿಭಟನೆಯದು ಸರಿಯಲ್ಲವೆಂದು ಮನವರಿಕೆಯಾಗುತ್ತದೆ. ಭದ್ರತಾ ಮಂಡಳದ ಮುಂದೆ ಕಾಶ್ಮೀರದ ಪ್ರಶ್ನೆ ಇದ್ದಾಗ, ಜನಮತಗಣನೆಯ ಮೂಲಕ ಕಾಶ್ಮೀರದ ಭವಿಷ್ಯವನ್ನು ನಿರ್ಣಯಿಸಬೇಕು ಎಂದು ಒಪ್ಪಲಾಗಿತ್ತು, ನಿಜ. ಆದರೆ, ಪಾಕಿಸ್ತಾನವು ಯುದ್ಧ ವಿರಾಮ ರೇಖೆಯ ತನ್ನ ಬದಿಯಲ್ಲಿ ನಿಲ್ಲಿಸುವ ಸೈನ್ಯದ ಪ್ರಮಾಣ, ಅಜಾದ್ ಕಾಶ್ಮೀರ್ ದಳಗಳ ವಿಸರ್ಜನೆ ಮುಂತಾದ ಮಹತ್ವದ ವಿಷಯಗಳಲ್ಲಿ ಯೋಗ್ಯ ಸಹಕಾರವನ್ನು ನೀಡಲಿ. ಜನಮತಗಣನೆ ನಡೆಯಲು ಅನುಕೂಲವಾದ ವಾತಾವರಣ ನಿರ್ಮಾಣದಂತೆ ಸರ್ಕಸಿತು ಭದ್ರತಾ ಮಂಡಳದ ಮುಖ್ಯಸ್ಥರು ಪಾಕಿಕೊಟ್ಟ ಗುರುತುಗಳ ಮೇಲೆ ಕಾಶ್ಮೀರ ಪ್ರಶ್ನೆಯನ್ನು ಸಂಧಿಸುವುದಕ್ಕೆ ಪ್ರಯತ್ನಿಸುವುದು ವ್ಯರ್ಥ ಎಂಬ ಅಭಿಪ್ರಾಯ ಭಾರತ ಮತ್ತು ಪಾಕಿಸ್ತಾನ ಸರಕಾರಗಳಿಗೆ ಎರ್ಪಡೆಯೂ ಮೂಡುವಂತಾಯಿತು. ಆದುದರಿಂದಲೇ "೧೯೫೫ರ ಮನೋಭಾವ"ದಿಂದ ಈ ಪ್ರಶ್ನೆಯ ಪರಿಹಾರಕ್ಕೆ ಪ್ರಯತ್ನಿಸಲಾಗುವುದೆಂದು ಪಾಕಿಸ್ತಾನದ ಪ್ರಧಾನಿಗಳೂ ತುಸು ಉದಾರ ನಿಲುಸುವುದನ್ನು ವಹಿಸಲಾಗುವುದೆಂದು ನೆಹರುಗಳೂ ಇದೇ ಮೇ ತಿಂಗಳಲ್ಲಿ ವ್ಯಕ್ತಪಡಿಸಿದರು. ಆಗ ಹೊಸದೆಹಲಿಯಲ್ಲಿದ್ದ ಪಾಕಿಸ್ತಾನದ ಪ್ರಧಾನಿಗಳು ಪತ್ರಿಕೋದ್ಯೋಗಿಗಳ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಕಾಶ್ಮೀರದ ಜನರ ಇಚ್ಛೆಯನ್ನು ತಿಳಿದುಕೊಳ್ಳಬೇಕೆಂಬ ತತ್ವವನ್ನು ಉಪೇಕ್ಷಿಸುವುದು ಇಷ್ಟವಲ್ಲವೆಂದೂ ಅದರೆ ಅದನ್ನು ಜನಮತಗಣನೆಯಲ್ಲದೆ ಇತರ ವಿಧಾನಗಳಿಂದಲೂ ತಿಳಿದುಕೊಳ್ಳುವುದು ಸಾಧ್ಯವೆಂದೂ ಚುನಾವಣೆಯ ಫಲಿತಾಂಶ ಅಂಥದೊಂದು ಬಗೆಯೆಂದೂ ಹೇಳಿದ್ದರು. ಅಂತಾರಾಷ್ಟ್ರೀಯ ಮೇಲ್ವಿಚಾರಣೆಯಲ್ಲಿ ಜನಮತಗಣನೆಯಾಗಲೀ ಚುನಾವಣೆಯಾಗಲೀ ನಡೆಯುವುದು ಸಾಧ್ಯವಿಲ್ಲದಿರುವಾಗ ಮತ್ತು ಪಾಕಿಸ್ತಾನದ ವಶದಲ್ಲಿರುವ ಆಜಾದ್ ಕಾಶ್ಮೀರ್ ಪ್ರದೇಶಕ್ಕೂ ಭಾರತದೊಡನೆ ಹೊಂದಿಕೊಂಡಿರುವ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಉಳಿದ ಪ್ರದೇಶಕ್ಕೂ ಚುನಾವಣೆ ನಡೆಸುವ ಅಧಿಕಾರ ಪಡೆದ ಒಂದೇ ಸರಕಾರ ಇಲ್ಲದಿರುವಾಗ, ಆಯಾ ಭಾಗದ ಸರಕಾರಗಳೇ ಚುನಾವಣೆಯನ್ನು ಭವಿಷ್ಯ ನಿರ್ಣಯದ ತತ್ವವನ್ನು ಜನತೆಯ ಮುಂದಿಟ್ಟು ನಡೆಸುವುದೇ ವ್ಯವಹಾರ್ಯವೆನಿಸುತ್ತದೆ. ಇದನ್ನು ಒಪ್ಪಿಕೊಂಡರೆ, ಈಗಾಗಲೇ ಭಾರತದೊಡನೆ ಸೇರ್ಪಡೆ ಹೊಂದಬೇಕೆಂದು ಶೇಕ್ ಅಬ್ದುಲ್ಲರ ಕಾಲದಲ್ಲಿ ಘಟನಾ ಸಮಿತಿ ಮಾಡಿರುವ ನಿರ್ಣಯವೇ ಯುದ್ಧ ವಿರಾಮ ರೇಖೆಯ ಭಾರತೀಯ ಭಾಗದಲ್ಲಿರುವ ಪ್ರದೇಶಕ್ಕೆ ಬಂಧನಕಾರಿಯಾಗುತ್ತದೆ ಎಂದು ಭಾವಿಸುವುದು ತಪ್ಪಾಗದು. ಆದುದರಿಂದ, ಈಗ ನಡೆಯ ಬೇಕಾದದ್ದು ಅಜಾದ್ ಕಾಶ್ಮೀರ್ ಪ್ರದೇಶದ ಭವಿಷ್ಯ ನಿರ್ಣಯಕ್ಕೆ ಅನುಕೂಲವಾದ ನಿಷ್ಪಕ್ಷಪಾತ ಚುನಾವಣೆ ಎಂಬ ಪಂಡಿತ ಪಂತರ ಸೂಚನೆಯು ನ್ಯಾಯ ಸಮ್ಮತವೆನಿಸುತ್ತದೆ; ಇದೇ ಅಗೋಸ್ತಿನಲ್ಲಿ ಮುಂದುವರೆಯುವುದೆಂದಿದ್ದ ಉಭಯ ರಾಷ್ಟ್ರಗಳ ಪ್ರಧಾನಿಗಳ ಸಮಾಲೋಚನೆಯಲ್ಲಿ ಚರ್ಚಿಸಲು ಸಾಕಷ್ಟು ಮೊದಲೇ ಪಂತರು ಮಂಡಿಸಿದ ಸೂಚನೆ ಇದಾಗಿತ್ತೆಂದರೂ ತಪ್ಪಲ್ಲ. ಆದರೆ ಪಾಕಿಸ್ತಾನಕ್ಕೆ ಮಾತ್ರ ಇದು ಹಿತಕರವಾಗಿ ಕಂಡಿಲ್ಲ—ಅಜಾದ್ ಕಾಶ್ಮೀರದಲ್ಲಿ ಈಗ ತೀವ್ರ ಅಸಂತೃಪ್ತಿ ಎದ್ದಿದೆ; ಸೈನಿಕರಿಗೂ ಜನರಿಗೂ ಮನಸ್ತಾಪ ಬೆಳೆಯುತ್ತಿದೆ; ಅಲ್ಲಿಯ ವಾತಾವರಣ ಗೊಂದಲಮಯವಾಗಿದೆ ಎಂದು ಪಾಕಿಸ್ತಾನದ ಪತ್ರಿಕೆಗಳೇ ಪ್ರತಿನಿತ್ಯ ವರದಿ ಮಾಡುತ್ತವೆ. ಇದರಿಂದ ಪಾಕಿಸ್ತಾನದ ಸರಕಾರದ ಮೇಲೆ ಜನರ ವಿಶ್ವಾಸ ಕಡಿಮೆಯಾಗುತ್ತಿರುವುದನ್ನು ಕಂಡು, ಆ ಸರಕಾರವು ಪಂಡಿತ ಪಂತರ ಮಾತುಗಳಿಗೆ ನಿಷೇಧ ವ್ಯಕ್ತಪಡಿಸುವ ಮೂಲಕ, ಕಾಶ್ಮೀರ ಪ್ರಶ್ನೆಯ ಭೂತವನ್ನು ಪಾಕಿಸ್ತಾನದ ಜನರ ಮನಸ್ಸಿನಲ್ಲಿ ಹೊಕ್ಕಿಸಲು, ಮತ್ತು ಭಾರತದ ವಿರುದ್ಧ ಜನರನ್ನು ಎತ್ತಿ ಕಟ್ಟಿ, ತನ್ನ ದೌರ್ಬಲ್ಯವನ್ನು ಮುಚ್ಚಿಡಲು ಹವಣಿಸುತ್ತಿದೆ ಎಂದು ರಾಜಕೀಯ ನಿರೀಕ್ಷಕರು ಸ್ಪಷ್ಟವಾಗಿ ಅಭಿಪ್ರಾಯ ಪಡುತ್ತಿದ್ದಾರೆ. ಈ ರೀತಿಯ ಕುಹಕ ತಂತ್ರವನ್ನು ಪಾಕಿಸ್ತಾನದ ಸರಕಾರ ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದುದರಿಂದ ಭಾರತ ಸರಕಾರವು ಕಾಶ್ಮೀರದ ವಿಷಯದಲ್ಲಿ ಪಾಕಿಸ್ತಾನದಲ್ಲಿ ನಡೆದಿರುವ ಅಪಪ್ರಚಾರಗಳಿಂದ ದಿಗಿಲು ಹೊಂದಿಲ್ಲ— ಮೇಲೆ ವಿವರಿಸಿದ ರೀತಿಯಲ್ಲಿ ಅದರ ನಿಲುವೆ ನಿಜಕ್ಕೂ ನ್ಯಾಯಬದ್ಧವಾಗಿದೆ; ಗೃಹಮಂತ್ರಿಗಳ ಅಭಿಪ್ರಾಯವು ಪ್ರಧಾನ ಮಂತ್ರಿ ನೆಹರುಗಳು ಮೊನ್ನೆ ಹೊಸದೆಹಲಿಯಲ್ಲಿ ರಾಮ ಲೀಲ ವೈದಾನಿನಲ್ಲಿ ಭಾಷಣ ಮಾಡಿದಾಗ ವ್ಯಕ್ತಪಡಿಸಿದ ಅಭಿಪ್ರಾಯಕ್ಕಿಂತ ಭಿನ್ನವಾಗಿಲ್ಲ. ಈ ನಿಲುವೆ ಭಾರತೀಯರಿಗೆಲ್ಲ ಸಮ್ಮತನಾಗಿದೆ. ಪಾಕಿಸ್ತಾನವು ಇದನ್ನು ಗಮನಿಸದೆ ತನ್ನದೇ ಹಾಡನ್ನು ಹಾಡುತ್ತಾ ಭದ್ರತಾಮಂಡಳಕ್ಕೆ ಮನಃ ಈ ದೂರನ್ನು ಒಯ್ದರೆ, ಬಕ್ಷಿ ಗುಲಾಂ ಮಹಮ್ಮದರ ಸರಕಾರದ ಕೆಲಸಗಳಿಗೆ ಏನೇನೂ ತೊಂದರೆಯಾಗದು; ಅಲ್ಲಿಯ ಜನತೆಯ ಅಭಿವೃದ್ಧಿಗೆ ಕಡೆಯಾಗದು. ಈಗಿನಂತೆಯೇ ಕಾಶ್ಮೀರ ಸಮಸ್ಯೆ ಮತ್ತಷ್ಟು ಸಮಯ ಕೊಳೆಯುತ್ತಿರಬೇಕಾದೀತು— ಭಾರತ ಮತ್ತು ಪಾಕಿಸ್ತಾನಗಳೊಳಗೆ ಮಧುರ ಬಾಂಧವ್ಯ ಏರ್ಪಡದೆ ಹೋದೀತು. ಆದರೆ ನ್ಯಾಯವಾದ ನಿಲುವೆಗಳನ್ನು ಮನ್ನಿಸದೆ ಲಾಭದ ದೃಷ್ಟಿಯನ್ನಷ್ಟೇ ಇಟ್ಟುಕೊಂಡರೆ ಮೈತ್ರಿಯ ಆಕಾಂಕ್ಷೆ ಎಷ್ಟೇ ತೀವ್ರವಾಗಿದ್ದರೂ ಸ್ನೇಹದ ಬೆಸುಗೆ ಕೂಡಿಬರಲಾರದು. ಪಾಕಿಸ್ತಾನದ ಗೃಹಮಂತ್ರಿ ಮಿರ್ಜಾರು ಸ್ನೇಹ ಉಭಯತರಿಗೆ ಬೇಕಿದ್ದರೆ ಮಾತ್ರ ಕೂಡಿ ಬಂದೀತು ಎಂದಿದ್ದಾರೆ; ಭಾರತಕ್ಕೆ ನ್ಯಾಯವಾದ ಸ್ನೇಹ ಬೇಕಾಗಿದೆ—ಆದುದರಿಂದ ಪಾಕಿಸ್ತಾನವು ನ್ಯಾಯವನ್ನು ತಳ್ಳಿ ಹಾಕದೆ ಸಹಕಾರವನ್ನು ನೀಡಲಿ ಎಂದೇ ನಮ್ಮ ನಮ್ರ ಬಿನ್ನಹ.

ಕುಂದಾಪುರ—ಜಿಲ್ಲಾ ಲೋಕಲ್ ಬೈಪ್ರೈರಿ ಅಥಾರಿಟಿಯ ಶಾಖೆಯೊಂದನ್ನು ಶ್ರೀ ಎಸ್. ಎಸ್. ಕೊಳ್ಳೆಬೈಲು ಎಂ. ಎಲ್. ಎ. ಅವರು ಶ್ರೀ ಸೈ. ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 17ರಲ್ಲಿ ಉದ್ಘಾಟಿಸಿದರು. ಎಲ್. ಎಲ್. ಎ. ಅಧ್ಯಕ್ಷ ಶ್ರೀ ಎಂ. ಎಸ್. ವಿಠಾಂಬರ ರಾಯರು ಪ್ರಾಸ್ತಾವಿಕ ಭಾಷಣವಿತ್ತರು. ಕಾರ್ಯದರ್ಶಿ ಶ್ರೀ ಕೆ. ಸಂಜೀವ ಭಟ್ಟರು ವಂದನೆಗಳನ್ನರ್ಪಿಸಿದರು.

ಅಂದೇ ಬೆಳಗ್ಗೆ ಎಲ್. ಎಲ್. ಎ. ಯ ಕಮಿಟಿ ಸದಸ್ಯರ ಸಭೆ ಜರಗಿತು.

ಕಾರ್ಕಳ—ತಾ. 13ರಂದು ದ್ವಿತೀಯ ಸಂಚವಾರ್ಷಿಕ ಯೋಜನೆಯ ಪ್ರಚಾರ ಸಭೆಯೊಂದು ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನಲ್ಲಿ, ಸಮಾಜವಿಕಾಸ ಯೋಜನೆ ಹಾಗೂ ಜಿಲ್ಲಾ ಪಂಚಾಯತ್-ಬೋರ್ಡು ಪ್ರೊಸಿಡೇಟಿಂಗಳ ಸ್ಥಾಯಿ ಸಮಿತಿಯ ನೇತೃತ್ವದಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಇವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎಚ್. ನರಸಿಂಹ ಕಮ್ಯೂನಿಟಿ ಎಕ್ಸ್‌ಟೆನ್ಶನ್ ಆಫೀಸರ್, ಸಿ. ಪಿ. ಭಾಸ್ಕರ ಮೆನೋನ್, ಕುಂದಾಪುರ ಸಭಾ ಕಲೆಕ್ಟರ್, ಪರಿ ಶೆಟ್ಟಿ, ಪೆಟ್ರಿ ಭುಜಂಗ ಬಲ್ಲಾಳ್ ಮೊದಲಾದವರ ಭಾಷಣಗಳಾದುವು.

ಚತುರಾಷ್ಟ್ರ ಪರಿಷ್ಠರ ಪರಿಷತ್ತು

ಜರ್ಮನಿಯ ಏಕೀಕರಣದ ಕುರಿತು ವಿಚಾರ ವಿನಿಮಯ

ಹತ್ತು ವರ್ಷಗಳ ಹಿಂದೆ ಜರ್ಮನಿಯ ನಾಜಿ ಶಕ್ತಿಯನ್ನು ದಮನಿಸಲು ಏನು ಕಾರ್ಯಕ್ರಮ ಕೈಗೊಳ್ಳಬೇಕು ಎಂಬುದನ್ನು ಚರ್ಚಿಸುವುದಕ್ಕೋಸ್ಕರ ಪೋಟ್ಸ್‌ಡ್ಯಾಂ ಪರಿಷತ್ತನ್ನು ಪ್ರಮುಖ ತ್ರಿಮೂರ್ತಿಗಳು ಜರಗಿಸಿದ್ದರು. ಅಮೇರಿಕ, ರಶಿಯ ಮತ್ತು ಬ್ರಿಟನುಗಳು ಇದರಲ್ಲಿ ಭಾಗ ವಹಿಸಿದ್ದರು. ಈಗ ಇದೇ ೧೮ನೇ ದಿನಾಂಕದಿಂದ ತಮ್ಮಲ್ಲಿನ ಒಡಕುಗಳನ್ನು ಹೇಗೆ ಸಂಹರಿಸಬಹುದೆಂದು ವಿಚಾರಿಸಲು ಈ ತ್ರಿರಾಷ್ಟ್ರಗಳ ವರಿಷ್ಠರೂ ಪಾಶ್ಚಾತ್ಯ ಗುಂಪಿಗೆ ಸೇರಿದ ಫ್ರಾನ್ಸಿನ ಪ್ರಧಾನಿಗಳೂ ಜಿನೇವಾದಲ್ಲಿ ಸಮಾಲೋಚನೆ ನಡೆಸುತ್ತಿದ್ದಾರೆ.

ಆಶೆಯೋ, ನಿರಾಶೆಯೋ?

ಜಿನೇವಾ ಸಮ್ಮೇಳನಕ್ಕೆ ಪೂರ್ವದಲ್ಲಿ ಎಲ್ಲ ರಾಷ್ಟ್ರಗಳ ಪರವಾಗಿಯೂ ಅಯಾ ರಾಷ್ಟ್ರದ ನಿಲುಮೆಯನ್ನು ಘೋಷಿಸಿದ್ದರು--ಎಲ್ಲರೂ ಶಾಂತಿಯುತ ಪರಿಹಾರದ ತೀವ್ರ ಇಚ್ಛೆಯಿಂದಲೇ ಈ ಮಾತುಕತೆಯಲ್ಲಿ ಭಾಗವಹಿಸುವ ಅರ್ಜಿಸನೆಯನ್ನು ಕೊಟ್ಟಿದ್ದರೂ ಪಾಶ್ಚಾತ್ಯ ರಾಷ್ಟ್ರಗಳ ನಿಲುಮೆಗೂ ರಶಿಯದ ಧೋರಣೆಗೂ ಜರ್ಮನಿ, ನಿಶ್ಶಸ್ತ್ರೀಕರಣ ಮುಂತಾದ ಪ್ರತಿಯೊಂದೂ ಮಹತ್ವದ ವಿಷಯದಲ್ಲಿ ಪರಸ್ಪರ ಹೊಂದಿಕೆ ಕಾಣಿಸುತ್ತಿರಲಿಲ್ಲ. ಆದುದರಿಂದ ಮಾತುಕತೆಗಳ ಕುರಿತು ವಿಶೇಷ ಆಶೆ ಕಟ್ಟಿಕೊಳ್ಳಬಾರದು ಎಂದೇ ಎಲ್ಲರೂ ಮುಂದಾಗಿ ಸೂಚಿಸಿರುವರೆಂದರೆ ತಪ್ಪಲ್ಲ.

ರಶ್ಯದ ಔದಾರ್ಯಕ್ಕೆ ಮಹತ್ವ

ಜರ್ಮನಿಯ ಏಕೀಕರಣವಾಗಲಿ, ಪೂರ್ವ ಯೂರೋಪಿನ ರಾಷ್ಟ್ರಗಳ ಸ್ವಾತಂತ್ರ್ಯದ ವಿಷಯವಾಗಲಿ, ನಿಶ್ಶಸ್ತ್ರೀಕರಣವಾಗಲಿ—ರಶ್ಯವು ಔದಾರ್ಯದಿಂದ ವರ್ತಿಸದಿದ್ದರೆ ಸಮಾಧಾನಕರವಾಗಿ ಬಗೆಹರಿಯುವ ಸಮಸ್ಯೆಗಳಲ್ಲ. ರಶ್ಯ ಆಕಸ್ಮಿಕವಾಗಿ ತನ್ನ ಇದು ವರೆಗಿನ ನಿಲುಮೆಗಳನ್ನು ಬಿಟ್ಟುಗೊಟ್ಟು, ಪಾಶ್ಚಾತ್ಯರ ತಾಳಕ್ಕೆ ತಕ್ಕಂತೆ ಕುಣಿಯುವ ವಿಚಿತ್ರ ಗತ್ತುಗಾರಿಕೆಯನ್ನು ಅನುಸರಿಸಿದರೆ ಮಾತ್ರ ಮಹತ್ವದ ಒಗಟುಗಳನ್ನು ಬಿಡಿಸಬಹುದು ಕಳೆದ ಅರೇಳು ತಿಂಗಳುಗಳಿಂದ ರಶ್ಯವು ಏನೇನೂ ಪೂರ್ವ ಸೂಚನೆ ಕೊಡದೆ, ತನ್ನ ನಿಲುಮೆ ಬದಲಾಯಿಸಿ, ಉದಾರವಾಗಿ ವರ್ತಿಸಿದ ಉದಾಹರಣೆಗಳು ಪಾಶ್ಚಾತ್ಯ ರಾಷ್ಟ್ರಗಳ ಜನತೆಯಲ್ಲಿ ಜೀವ್ಯವದ ಮಾತುಕತೆಯಲ್ಲೂ ಪಲಾಡ ನಡೆದೀತು ಎಂಬ ಊಹೆಗೆ ಅವಕಾಶ ಇತ್ತಿವೆ.

ವರಿಷ್ಠರ ಅಭಿಪ್ರಾಯ

ಚತುರಾಷ್ಟ್ರ ವರಿಷ್ಠರ ಸಮ್ಮೇಳನದಲ್ಲಿ ಪ್ರಥಮ ಭಾಷಣವನ್ನು ಅಧ್ಯಕ್ಷ ಐಸೆನ್ ಹೋವರ್ ಅಧ್ಯಕ್ಷ ಸ್ಥಾನದಿಂದಲೇ ಮಾಡಿದರು. ಹೊಸ ಸ್ಫೂರ್ತಿಯಿಂದ ವ್ಯವಹಾರವನ್ನು ಪ್ರಾರಂಭಿಸೋಣ ಎಂದವರು ಹೇಳಿದರು. ಶಾಂತಿಯ ಮಾರ್ಗವನ್ನು ಕಂಡುಹಿಡಿದು ಅದನ್ನು ಅನುಸರಿಸಿಕೊಂಡು ಹೋಗಬೇಕೆಂದು ಜನರ ಒತ್ತಾಯ ಬಿದ್ದಿರುವುದರಿಂದ ಇಲ್ಲಿ ತಾವೆಲ್ಲ ಸೇರಿರುವುದಾಗಿ ಅವರು ತಿಳಿಸಿದರು. ಅಂತಾರಾಷ್ಟ್ರೀಯ ಕಮ್ಯೂನಿಸಮ್ಮಿನ ವಿಷಯ ಚರ್ಚೆ ನಡೆಯಬೇಕೆಂದೂ ಅವರು ಸೂಚನೆ ಇತ್ತರು. ಆದರೆ ಇದನ್ನು ರಶ್ಯದ ಪ್ರಧಾನಿ ಬುಲ್ಗೇನಿನ್ ತಿರಸ್ಕರಿಸಿದರು. ಪರಸ್ಪರ ವ್ಯಾಪಾರಾಭಿವೃದ್ಧಿಗೆ ಪ್ರಯತ್ನಿಸಬೇಕು ಎಂದವರು ಹೇಳಿದರು. ಕಾರ್ಯಕ್ರಮದ ಕೊನೆಯ ಸಟ್ಟಿಯಂತೆ ಜರ್ಮನಿಯ ಏಕೀಕರಣ, ಯೂರೋಪಿನ ಭದ್ರತೆ, ನಿಶ್ಶಸ್ತ್ರೀಕರಣ ಮತ್ತು ಪೂರ್ವ ಪಶ್ಚಿಮಗಳ ಸಂಸರ್ಕದ ಪುನರುಜ್ಜೀವನಗಳು ಜಿನೇವದಲ್ಲಿ ಚರ್ಚಿಸಲ್ಪಡತ್ತವೆ.

ಘಟನಾ ಸಮಿತಿಯ ಕಾರ್ಯ

ಪಾಕಿಸ್ತಾನದಲ್ಲಿ ಘಟನಾ ಸಮಿತಿಯ ಸಭೆಯು ಘಟನೆ ರಚಿಸುವ ಪ್ರಾಮುಖ್ಯ ಕೆಲಸಕ್ಕೆ ಕೈಹಾಕದೆ ಕರಾಚಿಯಲ್ಲಿ ಸೇರಲು ಮುಂದುವರೆಯಿತು ಹಾಗೆ ಮುಂದುವರೆಯುವುದಕ್ಕೆ ಮುಂಚೆ ಸುಮಾರು ೩೭ ಶಾಸನಗಳಿಗೆ ಒಪ್ಪಿಗೆಯನ್ನು ವ್ಯಕ್ತಪಡಿಸಿತು. ಸರಕಾರ ಎಣಿಸಿದ್ದಂತೆ ಕಣ್ಣು ಮುಚ್ಚಿ ಒಪ್ಪಿಗೆಯನ್ನು ಕೊಡಲು ಮಾತ್ರ ಅದು ಮುಂದಾಗಲಿಲ್ಲ. ಸದಸ್ಯರು ತೀಕ್ಷ್ಣವಾದ ಚರ್ಚೆಯನ್ನು ನಡೆಸಿದರು. ವೈಯಕ್ತಿಕವಾಗಿ ಆರೋಪ-ಪ್ರತ್ಯಾರೋಪಗಳನ್ನು ನಡೆಸಲಾಯಿತಾದರೂ ತನ್ನ ಇಚ್ಛೆಯಂತೆ ಘಟನಾ ಸಮಿತಿಯನ್ನು ಕುಣಿಸಬಹುದೆಂಬ ಸರಕಾರದ ಅಭಿಪ್ರಾಯಕ್ಕೆ ವಿರುದ್ಧವಾದ ಪ್ರತಿಕ್ರಿಯೆಯೇ ಕಂಡು ಬಂತು. ಕೊನೆಯ ವರೆಗೂ ಈ ಮನೋಭಾವ ಉಳಿದರೆ ಪಾಕಿಸ್ತಾನದ ಘಟನೆ ಜನತೆಯ ಇಚ್ಛೆಯನ್ನು ಸ್ವಲ್ಪ ಮಟ್ಟಿಗಾದರೂ ಪ್ರತಿನಿಧಿಸಬಹುದು.

ಗಫರಖಾನರ ನಿರ್ಬಂಧ

ವೈಯಕ್ತಿಕ ಆರೋಪಗಳ ದೆಸೆಯಿಂದ ಒಂದು ಲಾಭಕರವಾದ ಘಟನೆ ನಡೆಯಿತು—ವಾಯವ್ಯ ಸರಹದ್ದಿನಲ್ಲಿ ಜನರ ಪ್ರತಿನಿಧಿಗಳ ಹಕ್ಕುಬಾಧ್ಯತೆಗಳಿಗೆ ಗಂಡಾಂತರವಿದೆ ಎಂದು ಆರೋಪಿಸಿ, "ಗಡಿನಾಡಿನ ಗಾಂಧಿ' ಖಾನ್ ಅಬ್ದುಲ್ ಗಫರ್ ಖಾನರಿಗೆ ಆ ರಾಜ್ಯದಲ್ಲಿ ಪ್ರವೇಶಿಸದಂತೆ ನಿರ್ಬಂಧಿಸಿರುವುದನ್ನು ಒಬ್ಬ ಸದಸ್ಯರು ಪ್ರಸ್ತಾಪಿಸಿದರು. ಅದಕ್ಕೆ ಉತ್ತರವಿತ್ತ ವಾಯವ್ಯ ಸರಹದ್ದಿನ ಮುಖ್ಯ ಮಂತ್ರಿಗಳು ಗಫರಖಾನರು ನಮ್ಮ ರಾಜ್ಯದಲ್ಲಿ ಪ್ರವೇಶಿಸುವುದಕ್ಕೆ ನಮ್ಮ ಆಕ್ಷೇಪವಿಲ್ಲ ಅವರ ಮೇಲೆ ನಿರ್ಬಂಧ ಹೇರಿರುವುದು ಕೇಂದ್ರ ಸರಕಾರ ಎಂದರು. ಇದರಿಂದ ಕುಪಿತರಾದ ಪಾಕಿಸ್ತಾನದ ಗೃಹಮಂತ್ರಿ ಮಿಜಾರು ಮುಖ್ಯಮಂತ್ರಿಗಳ ಹೇಳಿಕೆಗೆ ಆಶ್ಚರ್ಯ ವ್ಯಕ್ತಪಡಿಸಿ, ಅವರಿಗೆ ಸಮ್ಮತವಾದರೆ ನಮ್ಮ ಆಕ್ಷೇಪವಿಲ್ಲವೆನ್ನುತ್ತಾ ಗಫರಖಾನರ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕಿದೆಯಾಗಿ ಸಾರಿದರು.

ಮಂತ್ರಿಮಂಡಳದ ರದ್ದತಿ

ಗಫರಖಾನರು ಈಗ ಗಡಿನಾಡಿನಲ್ಲಿ ಸಂಚರಿಸುತ್ತಿದ್ದಾರೆ ಗಡಿನಾಡು ಪರಾಣರದು, ಆದು ಪರಾಣರದಾಗಿಯೇ ತೀರುವುದು ಎಂದು ಅವರು ಸಭೆಗಳಲ್ಲಿ ಭಾಷಣವಿತ್ತಿದ್ದಾರೆ. ತನಗೆ ಹಾರ್ದಿಕ ಸ್ವಾಗತವನ್ನು ನೀಡಿದ ಗಡಿನಾಡಿನ ಜನತೆಗೆ ತನ್ನ ಇಲಪೆಯಂತೆ ನಡೆಯಲು ವಿನಂತಿಸಿದ್ದಾರೆ ಏಕಘಟಕವಾಗಿ ಪಶ್ಚಿಮ ಪಾಕಿಸ್ತಾನವನ್ನು ರೂಪಿಸುವುದಕ್ಕೆ ತಮ್ಮ ವಿರೋಧವನ್ನು ಅವರು ಸುನಃ ವ್ಯಕ್ತಪಡಿಸಿದ್ದಾರೆ. ಇದನ್ನು ವಾಯವ್ಯ ಸರಹದ್ದಿನ ಸರಕಾರ ಬೆಂಬಲಿಸುತ್ತಿದೆ ಎಂಬ ಆರೋಪದ ಮೇಲೆ ಅಲ್ಲಿಯ ಮಂತ್ರಿಮಂಡಳವನ್ನು ಪಾಕಿಸ್ತಾನದ ಕೇಂದ್ರ ಸರಕಾರ ರದ್ದು ಗೊಳಿಸಿದೆ. ಹೀಗಾಗಿ ಗಫರ ಖಾನರ ಬೆಡುಗಡೆಗೆ ಕಾರಣರಾದಮುಖ್ಯ ಮಂತ್ರಿಗಳು ಈಕ ಪದಚ್ಯುತರಾಗಿದ್ದಾರೆ. ಹೊಸಮಂತ್ರಿ ಮಂಡಳವನ್ನು ಸರ್‌ದಾರ್ ಬಹಾದುರ್‌ಖಾನರೆಂಬವರು ರಚಿಸುವರೆಂದು ತಿಳಿದುಬರುತ್ತದೆ.

ಭಾರತದ ಪ್ರಧಾನಿ ಶ್ರೀ ಜವಾಹರಲಾಲ್‌ಜಿಯವರು ಇಂದಿರಾ ಗಾಂಧಿಯವರೊಂದಿಗೆ ಜೆಕೊಸ್ಲೊವಾಕಿಯದ ಶಾಲಾ ಮಕ್ಕಳು

ಉಡುಪಿ

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಸಭೆಯು— ತಾ. 16ರಲ್ಲಿ ಸಂಜೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಸದಸ್ಯರನ್ನು ಬರುವ ಸಂಸ್ಥೆಯಲ್ಲಿ ಸೇರಿಸಬೇಕೆನ್ನುವ ಭೂದಾನ ಜಿಲ್ಲೆಯಲ್ಲಿ ಸರ್ವರೂ ಬೆಂಬಲವೀಯಬೇಕೆನ್ನುವ ಮತ್ತು ಭೂಧಾನ ಯಜ್ಞವು ಸಫಲವಾಗಲು ಕೇವಲ ಕಾನೂನುಗಳನ್ನು ಮಾಡುವಂತೆ ಮದ್ರಾಸು ಸರಕಾರವನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಟಿ. ಎ. ಪೈಗಳ ಸೂಚನೆಗಳು ಪುಸ್ಕೀಕರಿಸಲ್ಪಟ್ಟವು.

ಭಾಷಣ ಕಲೆಯ ಅಭಿವೃದ್ಧಿ— ವಿದ್ಯಾರ್ಥಿಗಳಲ್ಲಿ ಭಾಷಣ ಕಲೆಯ ಅಭಿವೃದ್ಧಿ ಮೊದಲಾದಂತೆ ಮಾಡಲು ಸ್ಥಳೀಯ ಫ್ರೆಂಡ್ಸ್ ಯೂನಿಯನ್ ಆಶ್ರಯದಲ್ಲಿ ಬಾಷಣಸಭೆಯ ನ್ನೇರ್ಪಡಿಸುವ ಸಮಾರಂಭವನ್ನು ತಾ. 16ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಅವರು ಮುಕುಂದ ನಿವಾಸದಲ್ಲಿ ಸೆರವೇರಿಸಿದರು. ಎಮ್.ಜಿ. ಎಮ್. ಕಾಲೇಜು ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಗೋವಾ ವಿಮೋಚನಾ ಸಮಸ್ಯೆಯನ್ನು— ಪರಿಶೀಲಿಸುವರೆ ತಾ. 15ರಲ್ಲಿ ಸ್ಥಳೀಯ ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನಲ್ಲಿ ಸರ್ವ ಪಕ್ಷಗಳ ಪ್ರತಿನಿಧಿಗಳ ಸಭೆಯೊಂದು ಶ್ರೀ ಟಿ. ವಾಸುದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು ಅರೆಂಭದಲ್ಲಿ ಶ್ರೀ ಬಿ. ಎಸ್. ಲೂವಿಸರು ಸಭೆಯ ಉದ್ದೇಶಗಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣಾನಂತರ ಗೋವಾ ವಿಮೋಚನಾ ಚಳವಳಿಯಲ್ಲಿ ನುಡಿದವರಿಗೆ ಸಂತಾಪಸೂಚಿಸುವ, ಗೋವಾ ಸಮಸ್ಯೆಬಗ್ಗೆ ತೀವ್ರ ಕಾರ್ಯ ಕೈಕೊಳ್ಳಬೇಕೆಂದು ಕೇಂದ್ರ ಸರಕಾರವನ್ನು ವಿನಂತಿಸಿಕೊಳ್ಳುವ, ಆಗೋಸ್ತು ತಿಂಗಳಲ್ಲಿ ಗೋವಾವಿಮೋಚನಾ ಚಳವಳಿಯಲ್ಲಿ ಭಾಗವಹಿಸಲು ಉಡುಪಿಯಿಂದಲೂ ಸತ್ಯಾಗ್ರಹಿಗಳನ್ನು ಕಳುಹಿಸಬೇಕೆನ್ನುವ ನಿರ್ಣಯಗಳಾದುವು. ಮಂದಿನ ಕಾರ್ಯದರ್ಶಿಗಳಾದ ಶ್ರೀಗಳಾದ ಯು. ಎಸ್. ನಾಯಕ್, ಎ. ಜೆ. ಅಲ್ಮೆ, ಬಿ. ಎಸ್. ಲೂವಿಸ್, ಪಿ. ಶೀನ ನಾಯಕ್. ವಿರಲು ಕಿಂ-ಇವರಿರುವ ಸಮಿತಿಯೊಂದು ರಚಿಸಲ್ಪಟ್ಟಿತು.

ಕಲಾವೃಂದದ ವಾರ್ಷಿಕೋತ್ಸವವು ತಾ 13ರಲ್ಲಿ ಶ್ರೀ ಚಂದ್ರೇಶ್ವರ ದೇವಸ್ಥಾನದ ಮಹಡಿಯಲ್ಲಿ ಶ್ರೀ ಬಿ. ಶ್ರೀನಿವಾಸಾಚಾರ್ಯರ ಸರಕಾರಿ ಬುನಾದಿ ಶಿಕ್ಷಣ ತರಬೇತಿಶಾಲಾ ಹೆಡ್ಮಾಸ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ವೃಂದದ ಅಧ್ಯಕ್ಷ ಶ್ರೀ ಕೆ. ಹರಿದಾಸ ಉಪಾಧ್ಯಾಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಪಿ. ರಘುರಾಮ ಐತಾಳರು ಕಾವ್ಯವಾಚನಮಾಡಿದರು ಶ್ರೀ ಎಮ್. ರಾಜಗೋಪಾಲಾಚಾರ್ಯರು 'ಸಾಹಿತ್ಯದಲ್ಲಿ ಧರ್ಮ' ಎಂಬ ವಿಷಯವಲ್ಲೂ, ಶ್ರೀ ಬಿ. ವೆಂಕಟ್ರಾಯರು ಸಾಹಿತ್ಯವು ಸಮಾಜವನ್ನು ಹೊರಂದಿಕೊಳ್ಳುವ ಬಗೆ ಎಂಬುದರ ಕುರಿತೂ ಉಪನ್ಯಾಸವಿತ್ತರು ಶ್ರೀ ಆರ್. ಎಸ್. ವೈಲಾಯರು 'ಸಾಹಿತ್ಯದಲ್ಲಿ ಅಶ್ಲೀಲ' ಎಂಬ ವಿಷಯದಲ್ಲಿ ಭಾಷಣವಿತ್ತರು. ಅಧ್ಯಕ್ಷರ ಭಾಷಣಾನಂತರ ಕಾರ್ಯವರ್ತಿಗಳಾದ [illegible] ಅವರ ವಂದನೆಯೊಂದಿಗೆ ಸಭೆಯು ಮುಕ್ತಾಯವಾಯಿತು

ಪೆರಡಾಲ— ದಲ್ಲಿ ತಾ 31—5—55 ರಂದು ಜರಗಿದ ಯಕ್ಷಗಾನ ಕೂಟದ ಕುರಿತು 'ಯಕ್ಷಗಾನ ಪ್ರೇಮಿ' ಗೊಬ್ಬರು ನಡೆಸಿದ ಅಪಪ್ರಚಾರಕ್ಕೆ ಶ್ರೀ ಕೆ ರಾಮನ ಶಣೈಯವರಿಂದ ಉತ್ತರವೊಂದು ಬಂದಿದ್ದು ಅದನ್ನು ಸ್ಥಳಾಭಾವದಿಂದ ಪ್ರಕಟಿಸಲಿಲ್ಲ. ಸಂ. ಸ.

ಮಂಗಳೂರು

ಮಾಸ್ಟರ್ ಪ್ರಿಂಟರ್ಸ್ ಏಸೋಸಿಯೇಶನಿನ ವಾರ್ಷಿಕೋತ್ಸವವು— ತಾ. 17ರಲ್ಲು ಸಂಜೆ ಸಿ. ಪಿ. ಸಿ ಅತಿಥಿಗೃಹದಲ್ಲಿ ಶ್ರೀ. ಬಿ. ಸೈಕುಂರ ಬಾಳಿಗ, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಏಸೋಸಿಯೇಶನಿನ ಅಧ್ಯಕ್ಷ ಶ್ರೀ. ವಿ. ಎಸ್. ಕುಡ್ವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ. ಬಿ. ಪಿ. ಕೊಳೂರ್‌ಕಾರ್‌ರವರು ವರದಿಯನ್ನೊಪ್ಪಿಸಿದರು. ಮದ್ರಾಸ್ ಕೃಷಿ ಮಂತ್ರಿ ಶ್ರೀ. ಎಮ್. ಭಕ್ತವತ್ಸಲಂ ಮೊದಲಾದವರಿಂದ ಬಂದ ಸಂದೇಶಗಳನ್ನು ಸಂಘದ ಖಜಾಂಚಿ ಶ್ರೀ. ಎಮ್. ಬಾಬುರಾಯ ಪ್ರಬುಗಳು ಓದಿದರು ಬಳಿಕ ಮುದ್ರಣ ಕಲೆ ಮತ್ತು ಕೈಗಾರಿಕೆ ಕುರಿತು ಶ್ರೀಗಳಾದ ಕೆ.ಸೂರ್ಯನಾರಾಯಣ ಅಡಿಗ, ಆರ್. ಕೆ. ಪ್ರಭು, ಬಿ. ಬಿ. ಸೆಟ್ಟಿ, ಡಾ। ನಾಗಪ್ಪ ಅಳ್ವ ಮೊದಲಾದವರು ಭಾಷಣಮಾಡಿದರು. ಅಧ್ಯಕ್ಷರು ಮುಕ್ತಾಯ ಭಾಷಣ ಮಾಡುತ್ತಾ, ಮುದ್ರಣ ಕಲೆಯಲ್ಲಿ ಜಿಲ್ಲೆಗೆ ಕೀರ್ತಿ ಬರುವಂತೆ ಮಾಡಬೇಕೆಂದರು. ಅಂತ್ಯದಲ್ಲಿ ಶ್ರೀ ವಿ. ದೇವದಾಸ ಕಾಮತರು ಧನ್ಯವಾದಗಳನ್ನಿತ್ತರು.

ಕಾಲೇಜು ಯೂನಿಯನ್ ಉದ್ಘಾಟನೆ— ಸ್ಥಳೀಯ ಏಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಯೂನಿಯನ್ ಉದ್ಘಾಟನೆಯನ್ನು ತಾ. 15ರಂದು ಶ್ರೀ. ಕೆ. ಆರ್. ಕಾರಂತರು ನೆರವೇರಿಸುತ್ತಾ, ವಿದ್ಯಾರ್ಥಿಗಳು ಕಪ್ಪಹಟ್ಟು ಮುಡಿದುಭಾರತದ ಉದ್ಧಾರಕ್ಕಾಗಿ ಹೆಣಗಬೇಕೆಂದರು. ಕಾಲೇಜ್ ಪ್ರಿನ್ಸಿಪಾಲರು ಹಿತವಚನಗಳನ್ನಿತ್ತರು. ಶ್ರೀ. ಎಸ್. ರಮಾನಂದ ಹೆಗ್ಡೆಯವರು ವಂದನೆಗಳನ್ನರ್ಪಿಸಿದರು.

ನಗರ ಸಭೆಯು- ತಾ. 9ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾಲೆಗಳಲ್ಲಿ ಶಿಕ್ಷಣ ಪಡೆಯುವ ಯುವತ್ತು ಬಡವಿದ್ಯಾರ್ಥಿಗಳಿಗೆ ಪುಸ್ತಕಗಳು ಸ್ಲೇಟು ಮತ್ತು ಪುಸ್ತಕಗಳನ್ನು ಖಂಜಬೇಕೆಂಬ ಗೊತ್ತುವಳಿಯಾಯಿತಲ್ಲದೆ ಮುಂದೆಯೂ ವರ್ಷಂಪ್ರತಿ ಹೀಗೆ ವಿತರಣೆಮಾಡಲು ಆನುಮತಿಕೊಡುವಂತೆ ಸರಕಾರವನ್ನು ವಿನಂತಿಸಲಾಯಿತು. ಸೈಂಟ್ ಜೋಸೆಫ್ ಕುಷ್ಠರೋಗಾಸ್ಪತ್ರೆ ಮತ್ತು ದಾನುಕ್ಕೆ 1955-56ರ ಬಗ್ಗೆ ರೂಪಾಯಿ 1500/- ನ್ನು ಮಂಜೂರುಮಾಡಲಾಯಿತು. ಪಾಂಡೇಶ್ವರದಲ್ಲಿರುವ ಮುನಿಸಿಪಲ್ ಪ್ರಯೂಜಕರ ಬಂಗ್ಲೆಗೆ ಹೊಸ ವಿಭಾಗಗಳನ್ನು ಸೇರಿಸಿ ಕಟ್ಟಲು ಅಂದಾಜು ಪೆಚ್ಚ ರೂಪಾಯಿ 14,500 ಮಂಜೂರುಮಾಡಲಾಯಿತು. ಭಾರತದ ನಗರಯೋಜಕರ ಸಂಸ್ಥೆಯ ‘ಸೆಮಿನಾರ್’ಗೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರನ್ನು ಪ್ರತಿನಿಧಿಯಾಗಿ ಆರಿಸಲಾಯಿತು.

ಹೆರಿಗೆ ಆಸ್ಪತ್ರೆ— ಮಂಗಳೂರಿನ ಸರಕಾರಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯಾಗಿದ್ದ ಲೇಡಿ ಗೋಶನ್ ಆಸ್ಪತ್ರೆಯು ಇದೇ ತಾ 10ರಿಂದ ಬರೇ ಹೆರಿಗೆ ಮತ್ತು ಅದಕ್ಕೆ ಸಂಬಂಧಪಟ್ಟ ಆಸ್ಪತ್ರೆಯಾಗಿ ಪರಿವರ್ತಿಸಲಾಗಿದೆ ಎಂದು ತಿಳಿದುಬರುತ್ತದೆ.

ಶ್ರೀ ವಿ. ಯೆಸ್. ಕುಡ್ವರಿಗೆ ವಿದಾಯ: ಇಂಗ್ಲಾಂಡ್, ಅಮೇರಿಕಾ, ಜಪಾನು ಮೊದಲಾದ ದೇಶಗಳಲ್ಲಿ ಪ್ರವಾಸ ಕೈಗೊಳ್ಳಲು ಈ ತಿಂಗಳ ಅಂತ್ಯದಲ್ಲಿ ಮಂಗಳೂರಿನಿಂದ ಹೊರಡಲಿರುವ ಶ್ರೀ ವಿ.ಎಸ್. ಕುಡ್ವರಿಗೆ ತಾ. 14ರಂದು ರಾತ್ರಿ ಸ್ಥಳೀಯ ರೋಟರಿ ಕ್ಲಬ್ಬಿನವರು ಒಂದು ಸತ್ಕಾರನ್ನೇರ್ಪಡಿಸಿ ವಿದಾಯವಿತ್ತರು. ಜಿಲ್ಲಾ ಕಲೆಕ್ಟರ ಶೀ ಎಮ. ಜಿ. ರಾಜಾರಾವನು, ಕೋಮನ್‌ವೆಲ್ತ್ ಗ್ರೂಪ್ ಮೆನೇಜರ್ ಮಿ। ಜಿ. ಎಸ್. ಟೈಟ್, ಪೋರ್ಟ್ ಆಫೀಸರ್ ಶ್ರೀ ಎಲ್. ಜಿ. ಹರ್‌ವಾಸ್, ಸರ್ ಜಡ್ಜ್ ಮಿ। ಪ್ರೊದು ಮೊದಲಾದವರು ವಿಶೇಷತಃ ಆಮಂತ್ರಿಸಲ್ಪಟ್ಟಿದ್ದರು. ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಪಿ. ಆರ್. ಗೊಂಜರು ಶ್ರೀ ಕುಡ್ವರಿಗೆ ಹಾರವನ್ನರ್ಪಿಸಿದರು. ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ ಮೊದಲಾದವರು ಶ್ರೀ ಕುಡ್ವರಿಗೆ ಸುಖ ಪ್ರಯಾಣವನ್ನು ಹಾರೆಯಿಸಿದರು. ಕಾರ್ಯದರ್ಶಿ ಶ್ರೀ ಕೆ. ನಿರ್ವಾಣ ಕಾಮತರು ಧನ್ಯವಾದಗಳನ್ನಿತ್ತರು.

ದ. ಕ. ಜಿಲ್ಲಾ ಬೋರ್ಡು ಸಭೆ ಯು ಇದೇ ತಾ. 23ನೇ ಶನಿವಾರ ಪೂರ್ವಾಹ್ನ 11 ಗಂಟೆಗೆ ಬೋರ್ಡಿನ ಕಚೇರಿಯಲ್ಲಿ ಜರಗಲಿರುವುದು. 1951-55ನೆ ವರ್ಷದ ಬೋರ್ಡಿನ ಆಡಳಿತದ ವರದಿಯು ಸಭೆ ಈ ಸಭೆಯಲ್ಲಿ ಮಂಡಿಸಲಾಗುವುದು

ಚೇಕಾರ್ಡಿ— ಸ್ಥಳೀಯ ಶ್ರೀ ಆರ್. ಕೆ. ಶಾರದಾ ಹಾಗೂ ಎ। ಶಾಲೆಯ ವರ್ಷಾಂತ್ಯೋತ್ಸವವು ತಾ. 10ರಲ್ಲು ಶ್ರೀ ಹೇಮಾ ಎಮ್. ಕೋಟೆಕಾರರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷ ಶ್ರೀ ಎಮ್ ಮುಕುಂದ ಪ್ರಭುಗಳು ಸ್ವಾಗತಿಸಿದರು, ಕಾರ್ಯದರ್ಶಿ ಶ್ರೀ ಎಮ್. ಗೋಂದಪ್ಪ ಪ್ರಭುಗಳು ವರದಿ ವಾಚನ ಮಾಡಿದರು ಶಾಲಾ ವಿದ್ಯಾರ್ಥಿಗಳಿಗೆ ದರ್ಜಾರ್ಹ ಸ್ಲೇಟು ಪುಸ್ತಕ ಹಂಚೋಣವಾಗಿ, ಹಿಂದಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಶ್ರೀಗಳಾದ ಎಮ್. ಶ್ಯಾಮ ಶೆಟ್ಟಿ, ಎಸ್. ಕೆ. ಸಾಮಂತ, ಎಚ್. ಭುಜಂಗ ಶೆಟ್ಟಿ, ಎಮ್. ಮುಕುಂದ ಪ್ರಭು ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ಕುರುಕಾಲು- ಸ್ಥಳೀಯ ಮಹಿಳೋದ್ಧಾರ ಹಾಗೂ ಶಿಶು ಸಂಗೋಪನಾ ಕೇಂದ್ರದಲ್ಲಿ ತಾ. 17ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಜರಗಿತು. ಶ್ರೀ ಕುರುಕಾಲು ಗಣಪಯ್ಯ ಶೆಟ್ಟರುಅತಿಥಿಗಳನ್ನು ಸ್ವಾಗತಿಸಿದರು. ಮಹಿಳಾಕೇಂದ್ರದ ಉಪಾಧ್ಯಕ್ಷಿ ಶ್ರೀಮತಿ ಸ್ಕ್ಯಾರೆಸ್ಕಿ ಪ್ರೇರರು ಹೆರಿಗೆ ಕೇಂದ್ರ, ಹಿಂದಿ, ಕುಸೂತಿ, ಬಾಲ್ವಾಡಿಕ್ಲಾಸು ಮೊದಲಾದುವುಗಳ ವರದಿಯನ್ನೊಪ್ಪಿಸಿದರು. ಗ್ರಾಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಕೆ. ವಾಸು ಶೆಟ್ಟಿರು ರೋಲ್ ಡಿಸ್ಪೆನ್ಸರಿಯ ಅವಶ್ಯಕತೆ ಬಸ್ ಸರ್ವಿಸಿನ ವಿಚಾರ ಇತ್ಯಾದಿ ಕುರಿತು ಸೂಚನೆಯನ್ನು ಕಲೆಕ್ಟರರಿಗೆ ಒಪ್ಪಿಸಿದರು. ಜಿಲ್ಲಾ ಕಲೆಕ್ಟರು ಮನೆಯಿಂದ ಬೇಡಿಕೆಗಳನ್ನು ಕಾರ್ಯಗತಗೊಳಿಸುವರೆಂದು ಶ್ರೀ ಟಿ. ಎ ಪೈಗಳು ತಮ್ಮ ವಿಶ್ವಾಸವನ್ನು ಸೂಚಿಸಿ ಮಾತನಾಡಿದರು. ಈ ಕೇಂದ್ರದಲ್ಲಿ ಸಂಗೀತ ಕ್ಲಾಸು ನಡಿಸುವರೆ ಒಂದು ಹಾರ್ಮೋನಿಯಮ್ ಪೆಟ್ಟಿಗೆಯನ್ನು ಕೊಡುವುದಾಗಿ ಕಲೆಕ್ಟರ್ ಅಧ್ಯಕ್ಷರು ಆಶ್ವಾಸನೆಯಿತ್ತರು.

ಹಿರಿಯಡಕ— ಸ್ಥಳೀಯ ಬೋರ್ಡು ಹೈಸ್ಕೂಲಿನ ಎಸ್. ಪಿ ಎಲ್. ಚುನಾವಣೆಯು ತಾ 15ರಂದು ನಡೆದು ಶ್ರೀಗಳಾದ ಎಚ್. ದಿವಾಕರ ಸೂಡ ಮತ್ತು ಎಸ್. ಭೋಜ ಶೆಟ್ಟರು ವಿದ್ಯಾರ್ಥಿ ಮುಖಂಡ ಮತ್ತು ಸಹಾಯಕ ವಿದ್ಯಾರ್ಥಿ ಮುಖಂಡರಾಗಿ ಆಯಕ್ರಮದಿಂದ ಆರಿಸಲ್ಪಟ್ಟರು.

ಮೂಡಬಿದ್ರೆ— ಇಲ್ಲಿಯ ಜೈನ್ ಹೈಸ್ಕೂಲಿನ ಸಾಹಿತ್ಯ ಸಂಘದ ಉದ್ಘಾಟನೋತ್ಸವವು ಶ್ರೀ. ಎಚ್. ಶಾಂಭಟ್ಟ ಅವರ ಸ್ವೇತೃತ್ವದಲ್ಲಿ ಜರಗಿತು. ಬಳಿಕ ವಿದ್ಯಾರ್ಥಿಗಳ ಚರ್ಚಾಕೂಟವೂ ಶ್ರೀ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಎ. ಸೋಮಪ್ಪ ರೈಗಳು ಅತಿಥಿಗಳ ಪರಿಚಯ ಭಾಷಣ ಮಾಡಿದರು. ಬಳಿಕ ಶಿಕ್ಷಣದಲ್ಲಿ ವೃತ್ತಿಗೆ ಪ್ರಾಶಸ್ತ್ಯವಿರುವುದು ಅಗತ್ಯವೋ ಅನಗತ್ಯವೋ ಎಂಬೀ ವಿಚಾರದಲ್ಲಿ ಚರ್ಚೆ ನಡೆದು ಕೊನೆಗೆ ‘ವೃತ್ತಿ ಮೂಲ ಶಿಕ್ಷಣವೇ ಭಾರತದ ಏಳಿಗೆಗೆ ಅಗತ್ಯ’ ಎಂದು ತೀರ್ಮಾನವಾಯಿತು. ಅಧ್ಯಕ್ಷರ ಕಾರ್ಯೋಚಿತ ಭಾಷಣಾನಂತರ ಶ್ರೀ ಕೆ. ಕೆ. ರೈಗಳು ಧನ್ಯವಾದಗಳನ್ನರ್ಪಿಸಿದರು.

ಮೂಡಬಿದ್ರೆ— ಸಮಾಜ ಶಿಕ್ಷಣ ತರಬೇತಿ ಶಿಬಿರದಲ್ಲಿ ತಾ. 18ರಲ್ಲಿ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ಶ್ರೀ ಕೆ. ಸಂಜೀವ ಶೆಟ್ಟರು ‘ಭತ್ತ ಬೆಳೆಸುವುದರಲ್ಲಿ ನವೀನ ವಿಧಾನ’ ಎಂಬುದರ ಕುರಿತು ಭಾಷಣವಿತ್ತರು. ಅದೇ ದಿನ ರಾತ್ರಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಅವರು ‘ಸ್ತ್ರೀಯರ ಸಮಸ್ಯೆಗಳು’ ಎಂಬುದರ ಕುರಿತು ಭಾಷಣವಿತ್ತರು.

ಮುಲ್ಕಿ— ಸ್ಥಳೀಯ ವಿದ್ಯಾಬೋಧಿನಿ ಎಲಿಮೆಂಟರಿ ಶಾಲೆಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾವನುರೂ, ಜಿಲ್ಲಾಸಮಾಜ ವಿಕಾಸಯೋಜನಾಧಿಕಾರಿ ಶ್ರೀ ಎಚ್. ನರಶಿಂಹಪನವರೂ ಬಂದಾಗ ಶಾಲಾ ಮತ್ತು ಗ್ರಾಮಸ್ಥರ ಕಡೆಯಿಂದ ಶ್ರೀ ಎಮ್. ಮಂಕ ಹ್ಯಾಯರು ಮಾನಪತ್ರ ಅರ್ಪಿಸಿದರು. ಶಾಲೆಗೆ ಆಡುವ ಬಯಲಿನ ವಿಚಾರದು, ಶಾಲಾಕಟ್ಟೋಣ ವಿಸ್ತರಣೆಗೆ ಧನಸಹಾಯ ಮೊದಲಾದುವು ಮಾನಪತ್ರದಲ್ಲಿ ಸೂಚಿಸಲಾಗಿದ್ದುವು.

ಕೋಟೆ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಮಹಾತ್ಮಾ ಮಂದಿಳದ ಸ್ವಾರಂಭೋತ್ಸವವು ತಾ. 15ರಲ್ಲು ಶ್ರೀ ನರಶಿಂಹ ಉಪಾಧ್ಯರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀಗಳಾದ ದುಗ್ಗಪ್ಪ ಸೆಟ್ಟಿ, ಬಿ. ಸಂಜೀವ ಸೆಟ್ಟಿ ಮತ್ತು ಜಿ. ವಿಶ್ವನಾಥ ಹೆಗ್ಡೆಯವರು ಮರಿಗಳ ಕರ್ತವ್ಯವನ್ನು ವಿವರಿಸಿದರು. ಕಬಾಮಾಸ್ತರ್ ಶ್ರೀ ಜಿ. ವಿಶ್ವನಾಥ ಹೆಗ್ಡೆಯವರು ಧನ್ಯವಾದವಿತ್ತರು.

(೫ನೇ ಪುಟದಿಂದ)

ಒಡಗಿಸಲು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಗ್ಗದ ವಿದ್ಯುಚ್ಛಕ್ತಿಯನ್ನು ಹೂರೈಸಲು ಈ ಪವನ ಚಕ್ರಗಳಿಂದ ಸಾಹಾಯವಾಗುತ್ತದೆ. ಬಿದಿರು ಮತ್ತು ಸಮಾನ್ಯ ಮೋಪಿನಿಂದ ನಿರ್ಮಿಸಲ್ಪಡುವ ಈ ಪವನಚಕ್ರಗಳಿಗೆ ೮೦೦-೧೦೦೦ ರೂಪಾಯಿ ವೆಚ್ಚ ಬಂದೀತೆಂದೂ ವಿದೇಶಗಳಿಂದ ತರಿಸುವ ಪವನ ಚಕ್ರಗಳಿಗೆ ೩-೪ ಸಾವಿರ ರೂಪಾಯಿ ಕೊಡಬೇಕಾಗುವುದರಿಂದ ದೇಶೀಯ ಸಾಹಸವೇ ಯೋಗ್ಯವೆಂದೂ ಹೇಳಲಾಗುತ್ತದೆ. ಈಗ ಯಾವುದೇ ಪ್ರಯೋಜನವಿಲ್ಲದೆ ಹಾಳಾಗಿ ಹೋಗುತ್ತಿರುವ ಪವನ ಶಕ್ತಿಯ ಸದುಪಯೋಗ ಪಡೆಯುವ ಉದ್ದೇಶದಿಂದ ವಿಶೇಷ ಸಂಶೋಧನೆ ನಡೆಸುವ ಕೇಂದ್ರವೊಂದು ೧೦ ಲಕ್ಷ ರೂಪಾಯಿಗಳ ವೆಚ್ಚದಿಂದ ಕೊಯಮುತ್ತೂರು ಜಿಲ್ಲೆ ಅಥವಾ ಸೌರಾಷ್ಟ್ರ ರಾಜ್ಯದಲ್ಲಿ ನೆಲೆಗೊಳಿಸಲ್ಪಡುತ್ತದೆ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ಮರಂತ ಕರ್ಣನ ಚಿತ್ರ ಎಂದೆಂದೂ ಜನಸುನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ(0-12-0.

ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಒರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ

ಕಾಪು ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಕಟ್ಟೋಣ ವಿಸ್ತರಣಾ ಕೆಲಸದ ಜಮಾ ಖರ್ಚಿನ ತಪಶೀಲು.

	ಜಮಾ	ರೂ.	ಆ.	ಪೈ
1	ಸಾರ್ವಜನಿಕರಿಂದ ಕೂಡಾಯಧನ	11,901	8	6
2	1947ರ ಸ್ವಾತಂತ್ರ್ಯ ದಿನಾಚರಣೆ ಸಮಿತಿಯಿಂದ	17	6	0
3	ಮರ, ಕಲ್ಲು ಇತ್ಯಾದಿಗಳ ಏಲಮಾನಿಂದ	175	15	0
4	ನಾಟಕಗಳಿಂದ	2,038	5	0
5	ಬೇಂಕಿನ ಬಡ್ಡಿ	19	10	0
	ಜುಮ್ಲಾ	14,152	15	6

ಧನ ಸಹಾಯವನ್ನಿತ್ತ ಮಹಾಸಯರಿಗೂ, ಲೆಕ್ಕ ಪರಿಶೋಧಕರಿಗೂ ಮತ್ತು ಕಟ್ಟಡದ ಕೆಲಸದಲ್ಲಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು. ಶಿಲ್ಪಿ ಈ ಪ್ರಕಟಣೆಯ ಬಾಬ್ತು ಬರ್ಚಾಗಿರುತ್ತದೆ.

	ಖರ್ಚು	ರೂ.	ಆ.	ಪೈ
1	ಟಸ್ಕಾಲು ಹಾಸಲು, ಸಾದಿಲವಾರು ಮತ್ತು ಮುದ್ರಣ,	518	7	7
2	ಶಿಲೆ ಕಲ್ಲು ಮತ್ತು ಕೆಂಪು ಕಲ್ಲುಗಳ ಬಾಬ್ತು	2,660	6	0
3	ಹೊಯಿಗೆ, ಸುಣ್ಣ ಮತ್ತು ಸಿಮೆಂಟು	1,214	6	10
4	ಮೋಪಿನ ಬಾಬ್ತು	3,905	4	0
5	ಹಂಚು	1,277	14	3
6	ಕಲ್ಲು ಮತ್ತು ಮಣ್ಣಿನ ಲಾಗವಾಡು	971	15	9
7	ಕೂಲಿ	3,355	13	6
8	ಪ್ರಯಾಣ ವೆಚ್ಚ	467	1	0
9	ನಾಟಕಗಳ ಬಾಬ್ತು	282	10	0
10	ಶಿಲ್ಪಿ	8	13	7
	ಜುಮ್ಲಾ	14,152	15	6

Verified and found correct. *(Sd.)* H Narahari Rao, Hon. Auditor, B Com. (Bom.) C A I I. B.

(Sd.) ಕಾಪು ಕೃಷ್ಣಾಚಾರ್ಯ (ಕಾರ್ಯದರ್ಶಿ) ಕಟ್ಟಡ ವಿಸ್ತರಣಾ ಸಮಿತಿ. (Sd.) ಬಿ. ಕೆ. ಜಗನ್ನಾಥ (ಅಧ್ಯಕ್ಷ)

(೧೦ನೇ ಪುಟದಿಂದ)

ಒಂದು ದಿನದಲ್ಲಿ ಮದ್ರಾಸಿನಿಂದ ಹೊಸ ದೆಹಲಿಗೆ ಆ ಊರೇವ್ವರನನ್ನು ತಂದು ಹಾಕುವ ರೈಲಿನಂಥ ಪ್ರಯಾಣ ಸೌಕರ್ಯವಾದರೂ ಇದೆಯೆ ಎಂಬುದನ್ನು ಅವರು ಗಮನಿಸಲಿಲ್ಲ.

ಮಂಗಳೂರಿನ ಟ್ರೈನಿಂಗ್ ಕಾಲೇಜಿನಲ್ಲಿ ಪಂಡಿತ ಟ್ರೈನಿಂಗ್ ತರಗತಿಯನ್ನು ಜುಲಾಯಿಯ ೨೧ನೇ ತಾರೀಕಿಗೆ ತೆರೆಯಲಾಗುವುದು ಎಂದು ಸರಕಾರ ಇದೇ ಎಪ್ರಿಲಿನಲ್ಲಿ ಪ್ರಕಟಿಸಿತು. ಮತ್ತು ಅರ್ಜಿಗಳನ್ನು ಜೂನಿನ ೧೫ರೊಳಗೆ ಕಳಿಸಬೇಕೆಂದು ಹೇಳಲಾಯಿತು. ಇದರಿಂದ ಆ ಕುರಿತು ಜುಲಾಯಿ೨೧ನೇತಾರೀಕಿನವರೆಗೂಯಾರಿಗೂ ಏನನ್ನೂ ತಿಳಿಸಲಿಲ್ಲ. ಅರ್ಜಿ ಹಾಕಿದವರಿಗೆ ತಮ್ಮ ಅರ್ಜಿಯ ಗತಿ ಏನಾಯಿತೆಂದು ಈಗಲಾದರೂ ತಿಳಿದಿದೆಯೋ ಅನುಮಾನ—ಕಳೆದ ವರ್ಷ ತರಗತಿ ನಡೆಸಲ್ಪಡುವುದಿಲ್ಲವೆಂದು ಎಲ್ಲ ಅರ್ಜಿಗಳೂ ಹೋದ ನಂತರ ತಿಳಿಸಿದ್ದರು. ಈ ಸಲ ಹಾಗೂ ಮಾಡಿದಂತಿಲ್ಲ. ಇದು ಜನರಿಗೆ ವ್ಯರ್ಥಶ್ರಮ ಕೊಡುವ ಹವ್ಯಾಸವಲ್ಲದಿದ್ದರೆ ಬೇರೇನು?

ಇಂಥ ಅರ್ಜಿಗಳನ್ನು ಹಾಕುವಾಗ ಕೆಲವು ವೇಳೆ ಹಣವನ್ನು ಕಟ್ಟಬೇಕಾಗುತ್ತದೆ. ಈ ಹಣವನ್ನು ಮನಿಯಾರ್ಡರು ಮಾಡಿದರೆ ತೆಗೆದುಕೊಳ್ಳಲಾಗುವುದಿಲ್ಲವೆಂದು ಕೆಲವು ಸಂದರ್ಭಗಳಲ್ಲಿ ನಿಯಮವಿದೆ. ಇದರಿಂದ ಜನರಿಗೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ವರ್ಣಿಸಿ ಮುಗಿಯದು. ರಿಜರ್ವ್ ಬೇಂಕಿನ ಶಾಖೆಯಲ್ಲಿಯೇ ಕಟ್ಟಬೇಕು, ಟ್ರೆಜರಿಯಲ್ಲಿಯೇ ಕಟ್ಟಬೇಕು ಎಂದು ಮುಂತಾದ ನಿಯಮಗಳಿಂದ ಸಹಸ್ರಾರು ಜನರು ಅನಾವಶ್ಯಕವಾಗಿ ಸಮಯ ಮತ್ತು ಹಣದ ಅಪವ್ಯಯ ಮಾಡಬೇಕಾಗುತ್ತದೆ. ಹಣ ಕಟ್ಟುವಾಗ ಈ ಕಷ್ಟ—ಸರಕಾರದಿಂದ ನಮಗಲ್ಲಿಯಾದರೂ ಹಣ ಬರುವುದಿದ್ದರೆ ಅದಕ್ಕೆ ಕಾದು ಕಾದು ಸಾಕಾಗುತ್ತದೆ. ಜನವರಿಯ ಮೊದಲನೇ ವಾರದ ಕೂನೆಯೊಳಗೆ ಬರಬೇಕೆಂದಿದ್ದ ಅರ್ಜಿಗಳಿಗೆ ಸಂಬಂಧಿಸಿದ ಹುದ್ದೆಯೊಂದಕ್ಕೆ ಹೊಸ ನೇಮಕವಾಗುವುದಿಲ್ಲ ಎಂಬುದನ್ನು ಸಾರಲು ಮೂರೂವರೆ ತಿಂಗಳು ಬೇಕಾಯಿತು—ಅಂದರೆ ಎಪ್ರೀಲಿನ ಕೊನೆಯ ವಾರದಲ್ಲಿ ಈ ನಿರ್ಣಯ ಪ್ರಕಟಿಸಲಾಯಿತು ಎಂದೊಬ್ಬರು ತಮ್ಮ ವೇದನೆ ತೋಡಿಕೊಂಡಿದ್ದಾರೆ. ಅರ್ಜಿಯೊಂದಿಗೆ ಕಟ್ಟಿದ ಹೂ ಪ್ರಮೇಣ ಕ್ರಮೇಣ ಕಳುಹಿಸಲ್ಪಡುವುದಂತೆ! ಎಷ್ಟು ಸಮಯದ ಬಳಿಕ?

ಅಲ್ಪ ಸಂಬಳದವರಿಗೆ ಮನೆ ಕಟ್ಟಿಸಿಕೊಳ್ಳಲು ಸರಕಾರದ ಸಹಾಯಧನ ಪಡೆಯುವ ಕುರಿತು ಅರ್ಜಿ ಮಾಡುವ ವಿಧಾನವೊಂದು ಈಚೆಗೆ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದನ್ನು ಓದಿದವರಲ್ಲಿ ಪ್ರತಿಯೊಬ್ಬರಿಗೂ "ಅಬ್ಬಾ ದೇವರೇ, ಈ ಕ್ರಮವೇ?" ಎಂದು ತೋರಿಂಲೇ ಬೇಕು ಎಂದು ಊಹಿಸಿದರೆ ತಪ್ಪಾಗದು. ಏಕೆಂದರೆ ಆ ನಿಯಮಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಸಾಧಾರಣ ಬುದ್ಧಿವಂತಿಕೆ ಸಾಲದು; ಅದರ ಪ್ರಕಾರ ನಡೆಯ ಹೊರೆದರೆ, ಬ್ಯಾರಿಯು ಬೇಸಾಯದ ಗೋಜು ಬಿಟ್ಟಂತೆ ಅರ್ಥದಲ್ಲಿಯೇ ಮನೆ ಕಟ್ಟುವ ಉತ್ಸಾಹವನ್ನು ಬಿಟ್ಟು ಬಿಡಬೇಕಾದೀತು. ಜಟಿಲವಾದ ನಿಯಮಗಳು, ಅವುಗಳನ್ನು ನಿರೂಪಿಸಿರುವ ಕ್ಲಿಷ್ಟ ವಿಧಾನ, ಈ ನಿಯಮಗಳು ಜಾಲದಲ್ಲಿ ಸಿಕ್ಕಿ ಬೀಳುವ ಸಾಮಾನ್ಯ ಪ್ರಜೆಯನ್ನು ಸೆಹಾನುಭೂತಿಯಿಂದ ಕಾಣದ ಅಧಿಕಾರಿಗಳ ಮನೋಭಾವೆ— ಇವೆಲ್ಲವುಗಳ ಪರಿಣಾಮವಾಗಿ ಜನರ ಪಾಲಿಗಾಗುವಾಗ ಸರಕಾರದ ಯಾವ ಯೋಜನೆಗಳೂ ಪ್ರಯೋಜನ ತಾರದೆ ಹೋಗುತ್ತವೆ.

ಇದರ ಒಟ್ಟು ಫಲಿತಾಂಶವೆಂದರೆ, ಶಾಸನ ಮತ್ತು ನಿಯಮಗಳನ್ನು ತಿಳಿದವರ ಅವುಗಳನ್ನು ಉಲ್ಲಂಘಿಸಿಕೊಂಡೇ ಹೋಗುತ್ತಾರೆ; ತಿಳಿಯದವರ ಪಾಲಿಗೆ ಏನೂ ಇಲ್ಲ! ಹೀಗಾದರೆ ಜನತೆಗೆ ನೆಮ್ಮದಿ ಮತ್ತು ಸುಖಗಳು ಸಿಗುವುದೆಂತು? ಸರಕಾರ ತನ್ನ ಆಡಳಿತ ವರ್ಗವನ್ನು ತಿದ್ದಲು ಅದಷ್ಟು ಕ್ಷಿಪ್ರ ಪ್ರಯತ್ನವನ್ನುಕೈಗೊಳ್ಳಬೇಕು. ಅಧಿಕಾರಿಗಳು ರಚಿಸುವ ನಿಯಮಗಳು ಸರಳವಾಗಿರಬೇಕು. ಸಾಮಾನ್ಯ ಬುದ್ಧಿಗೂ ಅರ್ಥವಾಗುವಂತಿರಬೇಕು; ಅವನ ಸೌಕರ್ಯ ಮತ್ತು ಸೌಲಭ್ಯಗಳಿಗೆ ಸಾಕಷ್ಟು ಗಮನಕೊಡಬೇಕು ಉತ್ತಮ ನಡತೆಯ ಬಗ್ಗೆ ಒಬ್ಬನು ಕಲಿತ ಶಾಲೆಯ ಅಥವಾ ಆತನ ವಾಸಸ್ಥಾನದ ಸದ್ಗೃಹಸ್ಥರೊಬ್ಬರ ಸಿಫಾರಸು ಪತ್ರಕ್ಕೆ ಮನ್ನಣೆ ಕೊಡುವ ಬದಲು ಕಂಡು ಕೇಳಿರದ ಗಜೆಟೆಡ್ ಆಫೀಸರನ ಸಿಫಾರಸು ಪತ್ರವೇ ಬೇಕು ಎಂದು ಒತ್ತಾಯಿಸುವುದರಲ್ಲಿ ಯಾವ ನ್ಯಾಯವಿದೆ? ಸರಕಾರದ ಹೆಚ್ಚಿನ ನಿಯಮಗಳು ಹೀಗೆಯೇ ಬಹಳ ಕಠಿಣವಾಗಿವೆ: ಜನರ ಕೈಗೆ ನಿಲುಕದೆ ತುಂಬ ಕಿರುಕುಳಕೊಡುತ್ತವೆ. ಇವು ಅನಾವರಣೀಯವಾದವುಗಳೇನೂ ಅಲ್ಲ—ಅವಶ್ಯಕ ಸ್ವರೂಪದವುಗಳೂ ಅಲ್ಲ. ಆದುದರಿಂದ ಸರಕಾರ ತನ್ನ ಅಧಿಕಾರಿಗಳ ಮತ್ತು ನೌಕರ ವರ್ಗದಲ್ಲಿ ದಕ್ಷತೆಯನ್ನು ಹೆಚ್ಚಿಸಿ, ಸೌಜನ್ಯವರ ವರ್ತನೆಯನ್ನು ಅವರು ಇಟ್ಟುಕೊಳ್ಳುವಂತೆ ಆದೇಶಿಸಿ ನೆರವಾಗಬೇಕು; ಅಲ್ಲದೆ, ನಿಯಮಾವಳಿಗಳನ್ನು ಜನಹಿತವಾಗುವ ರೀತಿಯಲ್ಲಿ ಉದಾರ ತಳಹದಿಯ ಮೇಲೆ ಸಿದ್ಧಗೊಳಿಸಬೇಕು.

—ಕಾರ್ತಿಕೇಯ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸನಾತನ ಭಾರತ—

ಬರೆದವರು: ಸ್ವಾಮಿ ವಿವೇಕಾನಂದ. ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು. ಬೆಲೆ: ರೂ. ೧-೮-೦.

ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯ ಶ್ರೀಸ್ಕೂರಾದ ಸ್ವಾಮಿ ವಿವೇಕಾನಂದರ ವಾಣಿಯ ಶಕ್ತಿ ಮತ್ತು ಆಕರ್ಷಣೆ ಎಷ್ಟು ಬಲವತ್ತರವಾಗಿತ್ತೆಂಬುದನ್ನು ಈ ಚಿಕ್ಕ ಪುಸ್ತಕದ ಪಠಣ ಮಾತ್ರದಿಂದ ನಾವು ಮನಗಾಣಬಹುದಾಗಿದೆ. ಸನಾತನ ಭಾರತದ ಚಿತ್ರವನ್ನು ಅವರು ಇಲ್ಲಿ ರಿಬೀಸಿರುವ ರೀತಿಯಲ್ಲಿ ಹೊಸತನ ಕಂಡುಬರುತ್ತಿದ್ದಂತೆ ದೃಷ್ಟಿಯಲ್ಲಿ ಆಧ್ಯಾತ್ಮಿಕ ತತ್ವದ ಹೊಳಪು ನೃತ್ಯವಾಗಿರುವುದೂ ಗೋಚರಿಸುತ್ತದೆ. ರಾಮಾಯಣ, ಮಹಾಭಾರತ, ಶ್ರಮಣ್ಣದ, ಬುದ್ಧ ಇತ್ಯಾದಿ ಕತೆಗಳನ್ನು ಹೇಳುವಾಗಲೂ ಸತ್ಯ ಧರ್ಮ ಜಾಗೃತಿಯನ್ನು ಹುಟ್ಟಿಸುವ ಉದ್ದೇಶ ಸಾಧಿಸುವಷ್ಟು ಕೌಶಲ್ಯವನ್ನು ವಿವೇಕಾನಂದರು ತೋರಿಸಿರುತ್ತಾರೆ. ಗೀತೆಯ ಸಂದೇಶ, ಬುದ್ಧನ ಉಪದೇಶ ಪರತತ್ವ, ಹಿಂದೂ ಧರ್ಮದ ಮರ್ಮ ಇತ್ಯಾದಿ ತುಸು ಜಟಿಲ ವಿಷಯಗಳನ್ನು ವಿವರಿಸುವಾಗ ಸ್ವಾಮಿಜಿಯವರು ತುಲನಾತ್ಮಕವಾದ ಅಧ್ಯಾಸದ ಹಿನ್ನೆಲೆಯಲ್ಲಿ ಸತ್ಯವನ್ನು ಭಟ್ಟಇಳಿಸಿದ್ದಾರೆ—ಗಹನವಾದ ವಿಚಾರಗಳನ್ನು ಲಘುವಾದ, ಸರಳವಾದ ಮಾತುಗಳಲ್ಲಿ ಮಂಡಿಸಿದ್ದಾರೆ. ಈ ಪುಸ್ತಕದಲ್ಲಿನ ಹೆಚ್ಚಿನ ಅಧ್ಯಾಯಗಳು ಮೂಲತಃ ಅಮೇರಿಕದ ಜನತೆಯನ್ನು ಉದ್ದೇಶಿಸಿದಂತಿದ್ದರೂ ಎಲ್ಲ ಕನ್ನಡಿಗರೂ ಓದಿ ಪ್ರಯೋಜನವನ್ನು ಹೊಂದಬಲ್ಲರು. ಸ್ವಾಮಿಜಿ ಇಲ್ಲಿ ಪ್ರಸ್ತಾಪಿಸಿರುವ ವಿಷಯಗಳನ್ನು ತಿಳಿದುಕೊಂಡಿರುವುದರಿಂದ ಭಾರತೀಯ ಸಂಸ್ಕೃತಿಯ ಕುರಿತಾದ ನಮ್ಮ ಕಲ್ಪನೆ ಪರಿಪುಷ್ಟವಾಗಬಲ್ಲುದು ಇದಕ್ಕೆ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದವರು ಈ ಅನುವಾದದ ಮೂಲಕ ನೆರವಿತ್ತದ್ದು ಪ್ರಶಂಸನೀಯ. ಭಾಷಾಂತರ ಕೆಲಸದಲ್ಲಿ ಪ್ರಮಾಣಿಕತೆ ಕಂಡುಬರುತ್ತದೆ; ಶೈಲಿ ಗಂಭೀರವಾಗಿದೆ; ಉತ್ತಮ ಅಭಿರುಚಿಯನ್ನು ಪೋಷಿಸುವ ಸಾಹಿತ್ಯವಿದು ಎಂಬುದರಲ್ಲಿ ಅನುಮಾನವಿರದು.

ನಾಂಬ ವಿಜಯ:—

ಬರೆದವರು: ಬಿ. ಶ್ರೀನಿವಾಸ ಭಟ್ಟ. ಪ್ರಕಾಶಕರು: ಟಿ. ಶ್ರೀಪತಿ, ಬಿ. ಎ. ಸೆಕ್ರೆಟರಿ, ಶ್ರೀ ಕೃಷ್ಣಾಪುರ ಮಠ, ಉಡುಪಿ. ಬೆಲೆ: ಎಂಟಾಣೆ.

ಕೌರವ ರಾಯ ಮರ್ಯಾದೆಗನ ಮಗಳಾದ ಲಕ್ಷ್ಮಿಯನ್ನು ಶ್ರೀಕೃಷ್ಣನ ಪುತ್ರನಾದ ಸಾಂಬನು ವಿವಾಹವಾದ ಪ್ರಸಂಗ—ಈ ನಾಟಕದ ಕಥಾವಸ್ತು. ಇದನ್ನು ಬಳಸಿಕೊಂಡ ರೀತಿ ಮತ್ತು ನಾಟಕ ರಚಿಸಿದ ವಿಧಾನ ಚೆನ್ನಾಗಿದೆ. ಮೂಲದಲ್ಲಿ ಇದನ್ನು ಗ್ರಂಥಕರ್ತರು ಸಂಸ್ಕೃತದಲ್ಲಿ ಬರೆದರೆಂಬುದರಿಂದ, ಶಾಸ್ತ್ರ ಲಕ್ಷಣಗಳಿಗನುಸಾರ ಸೂತ್ರಧಾರ—ನಟಿಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ; ವಸಂತ ಮಿತ್ರ ಎಂಬ ಸ್ನೇಹಿತನಪಾತ್ರವು ಪ್ರಾಚೀನ ನಾಟಕಗಳ ವಿದೂಷಕನನ್ನು ಚೆನ್ನಾಗಿ ಪ್ರತಿನಿಧೀಕರಿಸುತ್ತದೆ. ಇತರ ಪಾತ್ರಗಳನ್ನು ಅವುಗಳ ಮನೋಧರ್ಮಕ್ಕೆ ಉಚಿತ ರೀತಿಯ ಪಾತ್ರಾವರಣದಿಂದ ಪೋಷಿಸುವ ಮೂಲಕ ಲೇಖಕರು ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿದ್ದಾರೆ. ಸಾಮಾನ್ಯವಾಗಿ ಪೌರಾಣಿಕ ನಾಟಕ ಬರೆಯುವಾಗ ಪಾತ್ರ ಚಿತ್ರಣ ಇನ್ನೂ ಹೆಚ್ಚು ಸಮರ್ಪಕವಾಗುವಂತೆ ಜಾಗ್ರತೆ ವಹಿಸುವವರು ವಿರಳ. ಸಾಂಬ-ಲಕ್ಷ್ಮಿಯರ ಸಮಾಗಮ ಪ್ರಸಂಗವನ್ನು ಶೃಂಗಾರಾತಿರೇಕದಿಂದ ಹಾಳುಗೆಡವುವ ಪ್ರವೃತ್ತಿ ಹಲವು ಲೇಖಕರಲ್ಲಿ ಮೂಡಬಹುದಾಗಿದ್ದರೂ ಈ ಲೇಖಕರು ಔಚಿತ್ಯ ಮೀರಿಹೋಗದೆ, ಅದೇಕಾಲಕ್ಕೆ ಪ್ರೇಮ ಧರ್ಮದ ಮಹತ್ವವನ್ನು ಕುಗ್ಗಿಸದೆ, ಬರೆಯುವವರು ಹೇಗೆ ಬರೆದರೆ ಶಾಸ್ತ್ರ ಸಮ್ಮತವಾಗುವುದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಅವರಿಂದ ಹೆಚ್ಚಿನ ಸಾಹಿತ್ಯ ಸೇವೆಯಾಗಲಿ ಎಂದು ಹಾರೈಸುತ್ತೇವೆ.



ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಲೆಟ್ಟರ

ಮುಗುಳು

ವಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಬಿರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ಬೆಜಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮುಕಾತ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ಸಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ವಾಕಿಸ್ಟರು: ಶಯಾಕಂಸೆಸ್, ಮಂಗಳೂರು

ಕಿರುಗತೆ.

ಚಿತ್ರ

ಅಭಿರಾಮನು ದೇವ-ದೇವತೆಗಳ ಚಿತ್ರಗಳನ್ನು ಬರೆಯುತ್ತಿದ್ದ ಆ ನಗರದಲ್ಲಿ ಅತನ ಪೂರ್ವಾಪಚಾರಗಳನ್ನು ತಿಳಿದಿದ್ದವರು ಯಾರೂ ಇರಲಿಲ್ಲ. ಎಲ್ಲರಿಗೂ ಅವನೊಬ್ಬ ಯಾವಾಗಲೂ ಚಿತ್ರಬರೆಯುವುದೇ ಕೆಲಸವಾಗಿದ್ದ ಹೊಸಬನಾಗಿದ್ದ; ಅದಕ್ಕಿಂತ ಹೆಚ್ಚಿನ ಪರಿಚಯ ಯಾರಿಗೂ ತಿಳಿಯದು.

ಅವನಿಗೊಮ್ಮೊಮ್ಮೆ ಹಿಂದಿನ ನೆನಪು ಆಗುತ್ತಿದ್ದಿತ್ತು-"ನಾನು ಹಿಂದೊಂದುಕಾಲದಲ್ಲಿ ಶ್ರೀಮಂತನಾಗಿದ್ದೆ; ಆ ಐಶ್ವರ್ಯವೆಲ್ಲ ಕಳೆದು ಮೋಡುನೊಂದು ಬರಬೇ ನಿಜ. ಈಗ ನಾನು ಅಘೋರಾತ್ರಿ ದೇವತ್ರ ವಿಚಾರ ಮಾಡಬಹುದು; ಅವನ ಕರುಣೆಯ ಮೇಲೆ ಬದುಕಬಹುದು; ಪ್ರತಿಯೊಂದೂ ಮನೆಯಲ್ಲಿ ಅವನನ್ನು ಪ್ರತಿಷ್ಠಿಸಲೂ ಬಹುದು. ಈ ಗೌರವದಿಂದ ಯಾರೂ ನನ್ನನ್ನು ವಂಚಿತಗೊಳಿಸಬಲ್ಲರು?"

ಹೀಗಿರುವಾಗ ಆ ಊರಿನ ಮಂತ್ರಿಯ ಮರಣವಾಯಿತು. ಇನ್ನೊಂದು ಸಾಡಿನಿಂದ ಒಬ್ಬ ಸ್ಥಾಪಕನ್ನು ಈ ಊರಿನ ರಾಜನು ತನ್ನ ಹೊಸ ಮಂತ್ರಿಯಾಗಿ ಸ್ವಾಗತಿಸಿದನು. ಊರಿಗೆ ಊರೇ ವೈಭವದಿಂದ ಈ ಸಮಾರಂಭದಲ್ಲಿ ಮಗ್ನವಾಗಿದ್ದಿತು. ಆದರೆ ಅಭಿರಾಮನ ಕುಂಚ ಮಾತ್ರ ಚಲಿಸುತ್ತಿರಲಿಲ್ಲ.

ಹೊಸ ಮಂತ್ರಿ ಬೇರಾರೂ ಆಗಿರಲಿಲ್ಲ-ಅಭಿರಾಮನ ತಂದೆಯೇ ಈತನನ್ನು ಮುದ್ದಿನಿಂದ ಸಾಕಿದ್ದನು; ತನ್ನ ಸ್ವಂತ ಮಗನಿಗಿಂತಲೂ ಹೆಚ್ಚು ವಿಶ್ವಾಸವನ್ನು ಈತನ ಮೇಲಿಟ್ಟಿದ್ದನು. ಹಿಂದಿನಿಂದ ಈ ವಿಶ್ವಾಸವನ್ನೆ ಮುದುಕನ ಸರ್ವಸ್ವವನ್ನು ಅಪಹರಿಸಲು ಸಾಕು ಮಗನು ಅಯಥಾವಾಗಿ ಮಾಡಿಕೊಂಡನು. ಅಂಥವನೇ ಈಗ ನಾಡಿನ ಮಂತ್ರಿಯಾಗಿ ರಾಜಾಜಿಸುತ್ತಿದ್ದನು!

ಅಭಿರಾಮನಿಗೆ ತಾನು ಚಿತ್ರಗಳನ್ನು ಬರೆಯುತ್ತಿದ್ದ ಕೋಣೆಯೇ ದೇಗುಲ. ಅವನು ಅಲ್ಲಿ ಕೈಜೋಡಿಸಿ ಪ್ರಾರ್ಥಿಸಿದನು-"ನಿನ್ನನ್ನು ನಾನು ಇಷ್ಟು ದೀರ್ಘಕಾಲ ಬಣ್ಣಿಸುತ್ತ ಗಿರಿಗಳಿಂದ ಆರಾಧಿಸಿದ್ದು ಇದಕ್ಕೋಸ್ಕರವೇ? ಈ ತೇಜೋವಧೆಯೇ ನಿನ್ನ ಬಯಸುವಾಸೆ?"

ಊರಿನ ರಥೋತ್ಸವದ ದಿನ ಬಂತು ಪತ್ತಿರ ಮತ್ತು ದೂರದ ಎಲ್ಲ ಊರುಗಳಿಂದಲೂ ಜನರು ಅವನ ಚಿತ್ರಗಳನ್ನು ಕೊಂಡುಕೊಳ್ಳಲು ಬಂದರು. ಆ ಜನಸಂದಣಿಯೊಳಗಿಂದ ಸರಸ್ತ್ರ ಕಾವಲು ಭಟರ ಸಂರಕ್ಷಣೆಗೊಳಗಾಗಿದ್ದ ಒಬ್ಬ ಬೆಳ್ಳ ಯುವಕನೂ ಬಂದನು.

ಅವನು ಅಭಿರಾಮನ ಒಂದು ಚಿತ್ರವನ್ನು ಹೆಕ್ಕಿ ತೆಗೆದು "ನಾನಿದನ್ನು ಖರೀದಿ ಮಾಡುತ್ತೇನೆ" ಎಂದನು. ಆಗ ಕಾವಲು ಭಟನನ್ನು "ಈ ಯುವಕ ಯಾರು?" ಎಂದು ಅಭಿರಾಮನು ವಿಚಾರಿಸಿದನು.

"ಅವನು ನಮ್ಮ ಮಂತ್ರಿಗಳ ಏಕಮಾತ್ರ ಪುತ್ರ" ಎಂಬ ಉತ್ತರ ಬಂತು. ಕೂಡಲೇ ಅಭಿರಾಮನು "ಹಾಗಾದರೆ ನಾನಿದನ್ನು ಮಾರುವುದಿಲ್ಲ" ಎನ್ನುತ್ತಾ ಚಿತ್ರದ ಮೇಲೆ ವಸ್ತ್ರದ ತೆಳು ಪರದೆಯನ್ನೆಳೆದನು.

ಈ ಮಾತುಗಳಿಂದ ಬಾಲಕನಿಗೆ ಚಿತ್ರದ ಮೇಲಿದ್ದ ವ್ಯಾಮೋಹ ಹೆಚ್ಚಿತು. ತುನೆಗೆ ಪರಳಿದ ಬಳಿಕ ಮದುಗನು ಉಣ್ಣಲು ನಿರಾಕರಿಸಿ, ಮುಖ ಚೆ...ಲುಮಾಡಿ ಕುಳಿತನು. ಮಂತ್ರಿಯು ಅಭಿರಾಮನಿಗೆ ಮೊಹರುಗಳಿಂದ ತುಂಬಿದ ದೊಡ್ಡ ಚೀಲ ಕೊಡಲು ಮುಂದಾದನು; ಆದರೆ ಆ ಚೀಲ ಹಾಗೆಯೇ ಮರಳಿ ಬಂತು.

"ಏನು ದಾಪ್ಪ್ಯ'?" ಎಂದು ಮಂತ್ರಿ ತನ್ನಲ್ಲಿಯೇ ಬೇಳಿಕೊಂಡನು. ಅಭಿರಾಮನಿಗೆ ಇನ್ನಷ್ಟು ಬಗೆಯ ಅಮಿಷಗಳನ್ನು ತೋರಿಸಲಾಯಿತು. ಮಂತ್ರಿಯ ಇಟ ಹೆಚ್ಚಿದಹಾಗೆಲ್ಲ ಅಭಿರಾಮನು "ವಿಜಯ ನನ್ನದು" ಎಂದು ಗರ್ವಿತನಾದನು.

ಪ್ರತಿದಿನ ಮುಂಜಾನೆ ಬಹಳ ಬೇಗನೆ ಅಭಿರಾಮನು ತನ್ನ ಇಷ್ಟದೇವತೆಯ ಚಿತ್ರವೊಂದನ್ನು ಬರೆಯುತ್ತಿದ್ದನು. ಇದೊಂದರ ಹೊರತು ಬೇರಾವುದೇ ಬಗೆಯ ದೇವ ಪೂಜೆ ಅವನು ಮಾಡುತ್ತಿರಲಿಲ್ಲ. ಒಂದು ದಿನ ತನ್ನ ಕಲ್ಪನೆಯನ್ನು ತಾನು ಬಿಡಿಸುತ್ತಿರುವ ಚಿತ್ರ ಪ್ರತಿಸಲಿಸಲಿದುದಿಲ್ಲ ಎಂದು ಅವನಿಗೆ ತೋರಿತು. ಎಲ್ಲಿಯೋ ಏನೋ ತಪ್ಪಿದೆ ಎಂದವನು ಭಾವಿಸಿದನು. ಯಾವುದೂ ಅವನನ್ನು ತೃಪ್ತಿಪಡಿಸಿದಂತೆ ಕಾಣಲಿಲ್ಲ.

ಇದರಿಂದ ಆತನು ಮನಃಕ್ಷೋಭೆಗೆ ಗುರಿಯಾದನು. ದಿಶಗಳಿದಂತೆ ಸೂಕ್ಷ್ಮ ಬದಲಾವಣೆಗಳು ಒಂದಿಟು ರೀತಿಯಲ್ಲಿ ಸ್ಪಷ್ಟಗೊಳ್ಳತೊಡಗಿದವು. "ಹಿ, ಈಗ ತಿಳಿಯಿತು" ಎಂದು ಅಭಿರಾಮನು ಹೇಳಿಕೊಳ್ಳುವಂತಾಯಿತು. ಆತನ ಇಷ್ಟದೇವತೆಯ ಮುಖ ಬಿಂಬ ಮಂತ್ರಿಯ ಸಾದೃಶ್ಯವನ್ನು ಪಡೆದಿದ್ದಿತು. ಅಭಿರಾಮನು ತನ್ನ ಕುಂಚವನ್ನು ಎಸೆದು "ಮಂತ್ರಿಯೇ ಗೆದ್ದನು" ಎಂದು ನಿಟ್ಟುಸಿರಿಟ್ಟನು.

ಆದೇ ದಿನ ಆತನು ಮಂತ್ರಿ ಇದ್ದಲ್ಲಿಗೆ ಹೋಗಿ "ಸೋಡಿ, ಆ ಚಿತ್ರವನ್ನು ತಂದಿದ್ದೇನೆ; ನಿನ್ನ ಮಗನು ಇಟ್ಟುಕೊಳ್ಳಲಿ" ಎಂದನು. "ಏನು ಬೆಲೆ?" ಎಂದು ಮಂತ್ರಿ ವಿಚಾರಿಸಿದಾಗ ಅಭಿರಾಮನು "ಬೆಲೆಯೆ?-ನೀವು ನನ್ನ ಮನಸ್ಸನ್ನು ಬೇಸರದಿಂದ ಸೂರೆಗೊಂಡಿರಿ. ನಾನದನ್ನು ಈ ಚಿತ್ರಕ್ಕೆ ಪ್ರತಿಫಲವಾಗಿ ಪಡೆಯುತ್ತೇನೆ" ಎಂದನು. ಮಂತ್ರಿಗೆ ದಿಗ್ಭ್ರಮೆಯಾಯಿತು!

[ಕವೀಂದ್ರ ರವೀಂದ್ರ ಪ್ರಣೀತ]

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ 147/1955.

ಉಡುಪಿ ಶ್ರೀ ಶೀರೂರು ಮಠದ ಅಧಿಪತಿಗಳು ಶ್ರೀಮದ್ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು — ವಾದಿರು.

ಮತ್ತು

ಜಬ್ಬ ಪೂಜಾರಿ — ಪ್ರತಿವಾದಿ.

ಇದರೊಳಗೆ

ಜಬ್ಬ ಪೂಜಾರಿ, ನೀಲು ಪೂಜಾರಿ ಮಗ, ಉಡುಪಿ ತಾಲೂಕು ಅಂಬ್ಲಪಾಡಿ ಗ್ರಾಮದಲ್ಲಿರುವವ — ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿರು ಪ್ರತಿವಾದಿ ಮೇಲೆ ಗೇಣಿ ಬಾಕಿ ಅಸ್ತಿ ಸ್ವಾಧೀನತೆ ವಗೈರೆ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಅಯ್ಕರಿ ನೋಟೀಸಿನ ಬಗ್ಗೆ 6-8-1955ಕ್ಕೆ ಇಡೋಣಾಗಿಯದೆ. ಸದ್ರಿ ತನಪಿ ದಿನ ಹಗಲು ಗಂಟೆ 11ಕ್ಕೆ ಪ್ರತಿವಾದಿಯು ಮೇಲ್ಕಂಡ ಕೋರ್ಟು ಮುಂದೆ ಹಾಜರಾಗದಿದ್ದರೆ ಅತನ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ

(By order of Court)

K. Varadaraya Pai,
Advocate for Plaintiff.

ಉಡುಪಿ, ತಾ. 15—7—1955.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0 -0

ಶ್ರೀ ರಾಮತೀರ್ಥ ಯೋಗಾಶ್ರಮ,
ವಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಿ ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ,

ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡೆಕೊಂಡು ದೀರ್ಘ ಕಾಲದಿಂದ ಅಸಲು ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ರಿಜಿಸ್ಟರ್ಡ್ ನೋಟೀಸು ಕೊಟ್ಟರೂ, ಆಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ ಸದ್ರಿಯವರ ನಗಗಳನ್ನು ತಾ. 6—8—1955ನೇ ಶನಿವಾರ ಮಧ್ಯಾಹ್ನ ಗಂಟೆ 12ಕ್ಕೆ, ಯಾ ತದನಂತರ ಯುಕ್ತ ಕಂಡ ದಿವಸ ಬೇಂಕಿನ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರಲಿ.

ಲೋನು ನಂಬ್ರ.	ಹೆಸರು ಮತ್ತು ವಿಳಾಸ.	ಅಸಲು ಮೊಬಲಗು
211/51	ಯಂ. ಎ. ಅಹಮ್ಮದ್ ಬ್ಯಾರಿ, S/o ಅಬ್ದುಲ್ ಖಾದ್ರಿ ಬ್ಯಾರಿ, ಚರಂತಿಪೇಟೆ, ಮುಲ್ಕಿ.	92/-
264/51	— do —	50/-
653/51	ಅಬ್ದುಲ್ ಗನಿ, S/o ಶೇಕ್ ಹ್ಯೂಸೀನ್ ಸಾಹೇಬ್, ಗೇರಿಕಟ್ಟೆ, ಮುಲ್ಕಿ.	90/-
722/51	ಅಲಿಯಬ್ಬ, S/o ಹ್ಯೂಸೀನ್ ಬ್ಯಾರಿ, ದೊಡ್ಡಮನೆ, ಮುಲ್ಕಿ.	15/-
416/51	ಜೆ. ಯಂ. ಡಿ. ಸೋಜ, S/o ಜೋಸ್ ಡಿ. ಸೋಜ, ಮಾನಂಪಾಡಿ, ಮುಲ್ಕಿ.	10/-
757/51	ಚಿನ್ನು ಪೆಂಗಸ್ಸು, D/o ಡೋಗ್ರ ಶೇರಿಗಾರ, ಪೆಂಕಟರಮಣ ದೇವಸ್ಥಾನ ಬಳಿ, ಮುಲ್ಕಿ.	25/-
764/51	ಸೇಸಪ್ಪ ಸಾಲಿಯಾನ್, S/o ಮುತ್ತಯ, ಕೋಡಿ, ಹೆಜ್ಮಾಡಿ.	60/-
634/51	ಸತ್ಯನಾರಾಯಣ ರಾವ್, S/o ಕೃಷ್ಣರಾವ್, ಪಡುಪಣಂಬೂರು, ಪಲೆಯಂಗಡಿ.	60/-
716/51	— do —	80/-
329/52	— do —	250/-
460/52	— do —	50/-
76/52	ನಾರಾಯಣ ಪುತ್ರನ್, S/o ಐತ ಮರಕಾಲ, ಕೋಡಿ, ಹೆಜ್ಮಾಡಿ.	105/-
87/52	ಶೇಕ್ ಅಕ್ಬರ್, S/o ಅಹಮದ್ ಸಾಹೇಬ್, ಕಿಲ್ಪಾಡಿ, ಮುಲ್ಕಿ.	75/-
207/52	ಕಾಡ ಪೂಜಾರಿ, S/o ಅಂಗರ, ಸಸಿಹಿತ್ಲು, ಪಲೆಯಂಗಡಿ.	65/-
255/52	ಸೋಮಪ್ಪ ಪೂಜಾರಿ S/o ಆಚ್ಚು ಪೂಜಾರಿ, ಕಿಲ್ಪಾಡಿ, ಮುಲ್ಕಿ.	40/-
521/52	ಯಂ. ಸೋಮಪ್ಪ ಕಳೇರ, S/o ಚೆನ್ನು ಪೂಜಾರಿ, ಮುಲ್ಕಿ.	120/-
729/52	ಯಂ. ಯನ್. ಅಬೂಬಕರ್, S/o ಹಾಮದ್ ಬ್ಯಾರಿ, ಕೊಳಚಕಂಬಳ, ಪಲಿಕ್ಕೆ.	30/-
170/53	ಶೇಕ್ ಅಬ್ದುಲ್ ಖಾದರ್, ಪೋಸ್ಟ್‌ಮೇನ್, ಮುಲ್ಕಿ.	20/-
169/53	— do —	50/-
530/53	— do —	60/-
635/53	ನಾರಾಯಣ ಕುಂಡರ್, S/o ಐತ ಪೆಂಡನ್, ಪಡುಸುನೆ, ಮುಲ್ಕಿ.	28/-

Office of the Bank:
MULKI.
Date: 22—7—1955.

ಯಂ. ಆರ್. ಯಬ್ಬ. ಪೂಂಜ,
ಮೆನೇಜರ್.

ಶ್ರೀ ರಾಜರಾಜೇಶ್ವರಿ ದೇವಸ್ಥಾನ,

ಪೊಳಲಿ ಪೋಸ್ಟ್, ದ. ಕನ್ನಡ.

(ಪು ಳಿ ನಾ ಪು ರಂ)

ಸಮಸ್ತ ಭಕ್ತಾದಿಗಳಲ್ಲಿ:

"ಕರ್ಕಾಟಕ ಮಾಸವು (ಜುಲ್ಯಾ 16ರಿಂದ ಆಗೋಸ್ತು 16ರ ವರೆಗೆ) ಭಗವತೀ ಸೇವೆಗೆ ಅತ್ಯಂತ ಪವಿತ್ರ ಕಾಲವಾದ್ದರಿಂದ ಈ ಕ್ಷೇತ್ರದಲ್ಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಪಾದಾರವಿಂದಗಳಲ್ಲಿ ಕೆಳಗೆ ನಮೂದಿಸಿದ ಪೂಜೆ, ಅರ್ಚನಾದಿಗಳನ್ನು ಭಕ್ತರ ಮನೋಭೀಷ್ಟ ಸಿದ್ಧಿಗೋಸ್ಕರ ವ ಮುಂದಿನ ಅಭ್ಯುದಯಕ್ಕಾಗಿ ಕೂಡ ಶ್ರೀ ವಿದ್ಯಾ ಪ್ರಾಪ್ತಿಗನುಸಾರವಾಗಿ ಪಾಟಲ, ಮಂದಾರ, ಜವಾ, ಕುಂದ, ಅಶೋಕ, ಪುನ್ನಾಗ ಇತ್ಯಾದಿ ಪುಷ್ಪ ವಿಶೇಷಗಳಿಂದ ನಡಿಸುವದಾಗಿ ನಿರ್ಧೈಸಿರುತ್ತದೆ. ಭಕ್ತಾದಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸೇವೆಗಳನ್ನು ಮಾಡಿಸಿ ಕೃತಾರ್ಥರಾಗಬೇಕಾಗಿ ವಿನಂತಿ. ಸೇವೆ ಒಗ್ಗೆ ಹಣ ತಳುಹಿಸುವಾಗ ಹೆಸರು, ಜನ್ಮ ನಕ್ಷತ್ರ ಇತ್ಯಾದಿಗಳನ್ನು ಬರೆದು ಕಳುಹಿಸುವದು.

ಪೊಳಲಿ, 1-7-1955. ಜಿ. ಎ ಭಟ್ಟ. ಮೆನೇಜರ್.

ಸೇವೆಗಳ ವಿವರ:

1. ತ್ರಿಕಾಲ ಪೂಜಾ	15 0 0		6. ಅಷ್ಟೋತ್ತರ	1 0 0
2. ನವಾವರಣ ಪೂಜಾ	10 0 0		7. ಸೌಂದರ್ಯಲಹರಿ ಅರ್ಚನೆ	3 0 0
3. ಪಂಚ್ಚಸೂಲಾ ಪೂಜಾ	10 0 0		8. ಬಾಲಾವಿಂಶತಿ ಅರ್ಚನೆ	1 8 0
4. ಲಲಿತ ಸಹಸ್ರ ನಾಮಾರ್ಚನೆ	8 0 0		9. ಗಾಯತ್ರಿ ಪೂಜಾ	2 0 0
5. ತ್ರಿಶತಿ ಅರ್ಚನೆ	1 8 0		10. ಶ್ರೀ ಚಕ್ರಾರ್ಚನೆ	50 0 0

(೨ನೇ ಪುಟದಿಂದ)

ಆಳ ತೊಡಗಿದರು:—ಆದರೆ ಕಲ್ಕತ್ತೆ ರ ರಾಜಧಾನಿಯಾಗಿದ್ದಿತು. ೧೯೧೨ ಇಸವಿಯಲ್ಲಿ ಐದನೇ ಜೋರ್ಜರ ಕೀ ಟಧಾರಣ ಸಮಾರಂಭ ಜರಗಿದಾಗ ರತದ ರಾಜಧಾನಿಯನ್ನು ಕಲ್ಕತ್ತ ದ ದಿಲ್ಲಿಗೆ ವರ್ಗಾಯಿಸುವುದಾಗಿ ರು ಸಾರಿದರು. ರಾಜಧಾನಿಯಾಗಿ ಯನ್ನು ರೂಪಿಸಲು ಸ್ವಲ್ಪ ಕಾಲಾವ ಶ ಅಗತ್ಯವೆಂದು ಕಂಡು ಬಂದುದ ದ ತತ್ಕಾಲಕ್ಕೆ ಹಳೆ ದಿಲ್ಲಿಯ ಸಿವಿಲ್ ನನ್ನು ಆಡಳಿತ ಕೇಂದ್ರವಾಗಿ ರೂಪಿಸ ಯಿತು. ಈ ಹದಿನಾಲ್ಕನೇ ರಾಜ ನಿಯು ಕೆಲವೇ ವರ್ಷ ಬಾಳಿ, ಹಿಂದಿ ದ ಹೊಸದೆಹಲಿಯ ಭವ್ಯ ಕೇಂದ್ರಕ್ಕೆ ನವನ್ನು ಬಿಟ್ಟುಗೊಟ್ಟಿತು.

— ಇದು ಹೊಸದೆಹಲಿಯ ಇತಿಹಾಸ ಸಿತವಾದ ಬಗೆ. ವೈಕ್ಷಕರು ತ್ರಿಕೋ ಕಾರದ ನಗರದಲ್ಲಿ ಯಾವಬೀದಿಯಿಂ ದೇ ಸಂಚರಿಸುತ್ತಿರಲಿ, ಎನಾದರೊಂ ಪ್ರಾಚೀನ ಇತಿಹಾಸದ ಸ್ಮಾರಕ ಕ ಗೆ ಬಿದ್ದೇ ತೀರುತ್ತದೆ. ಇವುಗಳಲ್ಲಿ ಲವಕ್ಕೆ ಕಲಾತ್ಮಕ ಮಹತ್ವವಿದೆ; ಚಾ ತ್ರಿಕ ಪ್ರಾಧಾನ್ಯವೂ ಇದೆ. ಆದರೆ ಎ ಲ್ಲೇ ಗೋಡೆ ಇತ್ಯಾದಿಗಳು ಅಸಹ್ಯ ಗಿ ಕಾಣುತ್ತವೆ. ಅನೇಕ ಸಂದರ್ಭ ಲ್ಲಿ ತಿರುಗಣೆ ರಸ್ತೆಗಳ ಕತ್ತಲೆಯಲ್ಲಿ ಯೇ ಸ್ಮಾರಕಗಳು ಅಡ್ಡ ನಿಂತು ಸಂ ಚಾರಕ್ಕೆ ತಡೆಮಾಡುತ್ತವೆ. ಹಾಗಿದ್ದರೂ ಲ್ಲಿಗೆ ಹೋದವರು ಈ ಸ್ಮಾರಕಗಳನ್ನು ಲವನ್ನಾದರೂ ನೋಡದೆ ಹಿಂತಿರುಗ ಸಾರದು. ಗುಲಾಮ ವಂಶಜನಾದ ಲ್ತುಮಿಷನು (೧೨೩೦) ರಚಿಸಿದ್ದ ತುಬ್ ಮಿನಾರ್ ಎಂಬ ಭವ್ಯವಾದ ಳ ಅಡಿ ಎತ್ತರದ ಗೋಪುರ ದಿಲ್ಲಿಯ ಸಾರವಲಯದಲ್ಲಿದೆ. ಅದಕ್ಕೆ ಹ ರದಲ್ಲಿಯೇ ಸಮುದ್ರಗುಪ್ತನು (ಪ್ರಸ್ತಪೂರ್ವ ೩೫೦) ನಿರ್ಮಿಸಿದ್ದ ಪ್ರಸಿದ್ಧ ಂದ ಕಬ್ಬಿಣದ ಸ್ತಂಭವಿದೆ—ಎರಡೂ ರೆ ಸಾವಿರ ವರ್ಷಗಳಿಂದ ಮಳೆಗಾಳಿಗ ನ್ನು ಎದುರಿಸುತ್ತಿದ್ದರೂ ಈ ಕಂಭಕ್ಕೆ ಕ್ಕು ಹಿಡಿದಿಲ್ಲ ಎಂಬುದನ್ನು ನೆನೆದರೆ, ಪ್ರಾಚೀನ ಭಾರತೀಯರು ಲೋಹ ಶಾಸ್ತ್ರ ದಲ್ಲಿ ಎಷ್ಟು ಪಾರಂಗತರಾಗಿದ್ದರು ಎಂಬ ಜ್ಞಾನವಾಗುತ್ತದೆ.

ಹೊಸದೆಹಲಿಯ ಆವರಣದೊಳಗೆ ನೇತಿಹಾಸದ ಸ್ಥಳಗಳಿಗೆ ಲೆಕ್ಕ ವೇ ಇಲ್ಲ- ಅಗೋಸ್ತುಹದಿನೈದರಂದು ಪ್ರ ಧಾನ ಮಂತ್ರಿಗಳು ಸ್ವತಂತ್ರ ಭಾರತದ ತ್ರಿವರ್ಣ ಧ್ವಜವನ್ನು ಅರಳಿಸುವ ಇತಿ ಹಾಸ ಪ್ರಸಿದ್ಧಿಯ ಕೆಂಪು ಕೋಟೆಯ ನ್ನು ಸಂದರ್ಶಿಸದಿರುವುದೇ ಅಪರಾಧ. ಇದಕ್ಕೆ ಸಮೀಪದಲ್ಲಿ ಶಾಹಜಹಾನನು ಕ ಟ್ಟಿಸಿದ ದಿವಾನೆ ಆಮ್ ಎಂಬ ಜನಸಾ ಧಾರಣರ ಸಭಾಭವನವಿದೆ. ಇಲ್ಲಿಯೇ ಆ ತನು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಅಮೂಲ್ಯ ರತ್ನಗಳಿಂದಲೂ ಚಿನ್ನದಿಂದಲೂ ಕಟ್ಟಲಾದ ಮಯೂರ ಸಿಂಹಾಸನವನ್ನು ನೆಲೆಗೊಳಿಸಿದ್ದನು. ಹ ತ್ತಿರದಲ್ಲಿಯೇ ದಿವಾನೇ ಖಾಸ್ ಎಂಬ ವಿ ಶೇಷ ದರ್ಬಾರಿನ ಭವನವಿದೆ—ಇಲ್ಲಿಯ ಪಾಲುಗಲ್ಲಿನ ಕೆಲಸ ಬಹಳ ನಾಜೂಕಾಗಿ ದೆ. "ಭೂಲೋಕದಲ್ಲಿ ಸ್ವರ್ಗವೆಂಬುದು ಇದ್ದರೆ ಅದು ಇಲ್ಲಿಯೇ ನಿಜ" ಎಂಬ ಪಾರ್ಸಿ ದ್ವಿಪದಿ ಈ ಭವನದ ವೈಭ ವವನ್ನು ಚೆನ್ನಾಗಿ ವರ್ಣಿಸುತ್ತದೆ. ಜುಮ್ಮಾ ಮಸೀದಿಯು ಶಾಹಜಹಾನನ ಶಿಲ್ಪ ವೈಭವ ಪ್ರಿಯತೆಯ ಇನ್ನೊಂದು ನಿದರ್ಶನ.

ಕೆಂಪು ಕೋಟೆಯಿಂದ ಅನತಿ ದೂರ ದಲ್ಲಿ ಯಮುನೆಯ ಬಲದಂಡೆಯ ಮೇಲೆ ಭಾರತದ ಅತಿ ಪವಿತ್ರ ಕ್ಷೇತ್ರಗಳಲ್ಲಿ ಒಂ ದೆಂದು ಕೆಲವೇ ವರ್ಷಗಳಿಂದ ಪರಿಗಣಿಸ ಲಾಗಿರುವ ರಾಜ್‌ಘಾಟ್ ಇದೆ. ಇದಕ್ಕೆ ಮಹತ್ವ ಪ್ರಾಪ್ತವಾದದ್ದು ಗಾಂಧೀ ಸ ಮಾಧಿಯ ದೆಸೆಯಿಂದ ಅಲ್ಲಿ ಕಣ್ಣು ಕೋ ರೈಸುವ ಯಾವ ಶಿಲ್ಪ ವೈಭವವಿಲ್ಲದಿದ್ದ ರೂ ಸಹಸ್ರಾರು ಜನರು ನಿತ್ಯವೂ ಪಾದ ಯಾತ್ರೆಯನ್ನು ಬೆಳೆಸುತ್ತಾರೆ; ದೇವರಿಗೆ ಹೂವೇರಿಸುವಂತೆ ಪುಷ್ಪಗುಚ್ಛಗಳಿಂದ ಸಮಾಧಿಯನ್ನು ಅಲಂಕರಿಸುತ್ತಾರೆ. ಹೂ ವಿನ ವ್ಯಾಪಾರ ಇಲ್ಲಿ ಚೆನ್ನಾಗಿ ನಡೆಯು ತ್ತದೆ ಎಂಬ ಮಾತಿನಲ್ಲಿ ವ್ಯಂಗ್ಯಕ್ಕಿಂತಲೂ ಸತ್ಯವೇ ಹೆಚ್ಚು. ಶ್ರೀ ಕೃಷ್ಣಲಾಲಾ ಶ್ರೀ ಧಾನಿಯವರ ಮಾತಿನಲ್ಲಿ ರಾಜ್‌ಘಾಟ್ "ಭಾರತದ ಅಧಿಕಾರವಂತರಿಗೂ ಅವರ ನ್ನು ಪಟ್ಟಕ್ಕೇರಿಸಿದವರಿಗೂ ದೇಶದ ಆ ಧ್ಯಾತ್ಮಿಕ ಸಂಪ್ರದಾಯವನ್ನು ಜ್ಞಾಪಕ ಕ್ಕೆ ತಂದು ಕೊಡುವ ಕೆಲಸ ಮಾಡು ತ್ತದೆ"

ಕೋಟೆಯ ಪೂರ್ವಕ್ಕೆ ಲಾ ಹೋರ್ ಗೇಟಿನ ಪರೆಗೆ ಚಾಂದ ನೀ ಚೌಕ ಎಂಬ ರಾಜಮಾರ್ಗ ಸಾಗುತ್ತದೆ. ಒಂದು ಕಾಲದಲ್ಲಿ ಇಲ್ಲಿಯ ಮನೆಯಿಂದ ಬಂದೊಂದು ಕಾಲುದೆ ಹ ರಿಯುತ್ತಿದ್ದಿತು—ಪ್ರಪಂಚದಲ್ಲಿಯೇ ವ್ಯಾ ಪಾರಕ್ಕೆ ಹೆಸರಾದ ಕೇಂದ್ರವಾಗಿ ಇದು ಮೆರೆಯುತ್ತಿದ್ದಿತು. ಇಂದು ಅದರ ಕುರು ಹನ್ನು ಮಾತ್ರ ಕಾಣಬಹುದು- ಈಗಲೂ ಆ ಚಿನಿವಾರರು, ಅಕ್ಕಸಾಲಿಗರು ಕಸೂ ತಿಯವರು, ದಂತದ ಕೆಲಸಗಾರರು ಕೆಲ ಸದಲ್ಲಿ ನಿರತರಾಗಿರುವುದು ಕಂಡುಬರು ತ್ತದೆ. ವಿದೇಶಗಳಿಂದ ಬಂದ ಮಹಾನು ಭಾವರಿಗೆ ದಿಲ್ಲಿಯ ವೈಭವದ ಚಿಕ್ಕ ಮಾ ದರಿಯನ್ನು ಪೂರೈಸುವಷ್ಟು ಕೌಶಲ್ಯವ ನ್ನು ಇವರು ಉಳಿಸಿಕೊಂಡಿದ್ದಾರೆ. ಆದ ರೆ ಜನಸಾಮಾನ್ಯರಿಗೆ ಇವರನ್ನು ನೋಡಿ ಸುವ ಸಾಮರ್ಥ್ಯ ಇನ್ನೂ ಬಂದಿಲ್ಲ. ರಾ ಷ್ಟ್ರಾಧ್ಯಕ್ಷರು ಭವ್ಯ ರಥದಲ್ಲಿಯೇ ಅಂಗ ರಕ್ಷಕನೊಡನೆಬಂದು,ಸಂಸತ್ತಿನಲ್ಲಿ "ಸ ನ್ನ ಸರಕಾರ, ಸನ್ನ ಮಂತ್ರಿಗಳು" ಎಂದು ಶ್ರೀ ಮದ್ಗಾಂಭೀರ್ಯದ ಮಾತುಗಳನ್ನಾ ಡುತ್ತಿದ್ದರೂ ಸಾದಾಖ ದಿಯ ನೋಷಾ ಕನ್ನು ತೊಟ್ಟುಕೊಂಡಿರುವಂತೆ, ಭವ್ಯ ವಾದ ತನ್ನ ಉದ್ಯಾನವನ್ನು ಸಾರ್ವಜನಿ ಕರಿಗೆ ಮುಕ್ತವಾಗಿಟ್ಟಿರುವಂತೆ, ಭವನದ ಅನೇಕ ಕೋಣೆಗಳನ್ನು ಅತಿಥಿಗಳಿಗಾ ಗಿಯೂ ರಾಷ್ಟ್ರೀಯ ಕಲಾಕೇಂದ್ರಕ್ಕಾಗಿ ಯೂ ತೆಗೆದಿಟ್ಟಿರುವಂತೆ — ಚಾಂದನೀ ಚೌಕ ಸಹ ಬದಲಾದ ದಿನಗಳನ್ನು ಕಾ ಣುವಂತಾಗಿದೆ ಅಲ್ಲಿ ಪ್ರಾಚೀನ ಭವ್ಯತೆ ಮತ್ತು ವೈಭವದ ಮಿಂಚು ಹೊಳೆಯು ತ್ತಿದ್ದರೂ ಅದು ಜನಸಾಧಾರಣರ ಪಾಲಿ ಗೆ ಕ್ಷಣಿಕ ಸುಖವನ್ನಷ್ಟೇ ನೀಡುತ್ತದೆ.

ಹುಮಾಯೂನ ಮುಂತಾದವರು ತಮ್ಮ ಗೋರಿಯೊಳಗಿನಿಂದ ಹಣಿಕಿ ನೋಡಿದರೆ ಇಂದಿನ ದಿಲ್ಲಿಯ ಜೀವನವನ್ನು ಕಂಡು ಅಚ್ಚರಿಪಡಬಹುದು—ಹೊಸ ದೆಹಲಿಯು ಇಂದು ಹಿಂದೆಂದೂ ಇದ್ದಿರದಷ್ಟು ಹೆಚ್ಚು ರಾಜಕೀಯ ಚಟುವಟಿಕೆಯಿಂದ ತುಂಬಿ ತುಳುಕುತ್ತಿದೆ. ಅದು ಏಶ್ಯದ ಮೆಸುಳೆನಿ ಸಿದ ನೆಹರುಗಳ ಕೇಂದ್ರ; ಪೂರ್ವ—ಪಶ್ಚಿಮಗಳಲ್ಲಿ ನಿಭಾಜಿತವಾಗಿರುವ ಜಗ ತ್ತಿನ ಮೂರನೇ ಕಣ್ಣು ಎಂತೆಂದರೂ ಸಲ್ಲು ತ್ತದೆ. ಲಂಡನ್, ನ್ಯೂಯಾರ್ಕ್, ಸಾನ್ ಫ್ರಾನ್ಸಿಸ್ಕೋದ ವರೆಗೆ, ಸಿಂಗಾಪುರ್, ಸಿಡ್ನಿ, ಶಾಂಘೈ, ಟೋಕಿಯೋಗಳ ವರೆ ಗೆ ಎಲ್ಲ ರಾಜಕಾರಣಿಗಳಿಗೂ ಅದು ಪು ಣ್ಯಕ್ಷೇತ್ರ. ಪ್ರತಿಯೊಂದೂ ಸಮಾರಂಭ ದಲ್ಲಿ ಕೇಂದ್ರ ಸರಕಾರದ ಮಹಾನುಭಾವ ರು ಗೋಚರಿಸುತ್ತಾರೆ; ರಾಯಭಾರಿ ವರ್ಗದವರನ್ನೂ ನಾವಿಲ್ಲಿ ಕಾಣು ತ್ತೇವೆ. ಲೋಕದ ಎಲ್ಲ ದೇಶಗಳ ಉದುಮ ತೊಡುಪು, ವೈಭವ ವೈಯ್ಯಾರಗಳ ಕಲ್ಪನೆಯನ್ನು ಇಲ್ಲಿ ಕಾಣ ಬಹುದು ಮಾಡಿಕೊಡುತ್ತದೆ.

ಕೇಂದ್ರ ಸರಕಾರದ ಪ್ರಭೃತಿಗಳು ಸು ಲಭದಲ್ಲಿ ಸಿಕ್ಕುವುದರಿಂದ ರಾಜ್ಯ ಸರಕಾ ರದ ಮಂತ್ರಿಗಳನ್ನು ಸಕ ಕೇಳುವವರಿಲ್ಲ ದ ಪರಿಸ್ಥಿತಿ ಹೊಸ ದೆಹಲಿಯದು—ಆದ ರೆ ನಮ್ಮ ಕೆಲಸವೇನಾದರೂ ಆಗಬೇಕಿ ದ್ದರೆ ಸಚಿವಾಲಯದ ಕತ್ತಲು ಕೋಣೆ ಯೊಳಗೆ ಕುಳಿತಿರುವ ಕಾರಕೂನನನ್ನೇ ಆರಾಧಿಸಬೇಕಾಗುತ್ತದೆ. ಕಾರ್ಯದರ್ಶಿ ಗಳೂ ಉಪಕಾರ್ಯದರ್ಶಿಗಳೂ ಮಹತ್ವದ ಮಂತ್ರಾಲೋಚನೆಯಲ್ಲಿ ಮುಳುಗಿರು ತ್ತಾರೆ—ವಿದೇಶಗಳ ರಾಯಭಾರಿ ಕಾ ರ್ಯಾಲಯದೊಡನೆ ಸಂಪರ್ಕ ಬೆಳೆಸು ವುದರಲ್ಲಿಯೂ ಮಂತ್ರಿಗಳು ಅಪೇಕ್ಷಿಸು ತ್ತಾರೆ ಎಂಬ ಸುಂಗಲಾಚರಣೆಯೊಡನೆ ತಮ್ಮ ಸ್ವಂತ ಆವಶ್ಯಕತೆಗಳನ್ನು ಸುಲಭ ದಲ್ಲಿ ಪೂರೈಸಿಕೊಳ್ಳುವುದರಲ್ಲಿಯೂ ಅವ ರ ಹೆಚ್ಚಿನ ಸಮಯ ಹೋಗುತ್ತದೆ. ರಾಜ ಕೀಯ ಗದ್ದಲದ ಹೊರಗೆ ಜನರ ಹತ್ತಿರ ನಾವು ಸರಿದರೆ, ಅಲ್ಲಿ ಯಾವ ಇತಿಹಾಸ ವಾಗಲೀ ಸಂತೋಷವಾಗಲೀ ಕಾಂಬು ದುವುದಿಲ್ಲ. ಜನರು ಸಡಗರ ತೋರಿಸು ತ್ತಾರೆ, ನಿಜ. ಆದರೆ, ಶರಾಣಾರ್ಥಿಗಳ ಗೋ ಳಿಗೆ ಸಾಕ್ಷಿಯಾಗಿ ನಿಂತ ಹೊಸ ದೆಹಲಿ ಸಾಮಾನ್ಯರ ಪಾಲಿಗೆ ಅತಿ ಶುಷ್ಕಯಾದ ನಗರ. ದಿನಗಳೆಯುವುದೇ ಕಷ್ಟ ಎಂಬು ದು ಅಲ್ಲಿಯ ನಿತ್ಯದ ಗೋಳು.

ಆವಶ್ಯಕ ಮಾಹಿತಿಗಳಿಂದ ಕೂಡಿರುವ

ಮಕ್ಕಳ ಮಗ್ಗಿ ಪುಸ್ತಕ

ಬೆಲೆ ೦—೧—೦

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ. !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬ್ಯಾಂಕಿನಲ್ಲಿ ಜಮೆ ಮಾಡಿರಿ. ಒತ್ತಿ ಸಾಲಿಯಾನ್ ಸೇಕಡಾ ೪½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

For NEW Enjoyment Smoke

S.R. BIDIES

ಹೊಸ ಆನಂದ ಉತ್ಸಾಹಗಳಿಗಾಗಿ ಸೇದಿರಿ ಎಸ್.ಆರ್. ಬೀಡಿಗಳನ್ನು

SR

ಎಸ್.ಆರ್. ಬೀಡಿ ವರ್ಕ್ಸ್, ಉಡುಪಿ, ದ.ಕ.

(೩ನೇ ಪುಟದಿಂದ)

ಮುರಿಯಬಹುದು. ಆದುದರಿಂದ ಯುದ್ಧವನ್ನು ತಪ್ಪಿಸುವುದೇ ನಮ್ಮ ಧ್ಯೇಯ ಕೈಗೂಡುವ ಏಕಮಾತ್ರ ಮಾರ್ಗ. ಯುದ್ಧವೇ ತಲೆ ಎತ್ತದಂತೆ ಯೋಗ್ಯ ಮನೋಧರ್ಮವನ್ನು ರೂಪಿಸುವುದೇ ನಮ್ಮ ಉದ್ದೇಶ. ಆದುದರಿಂದ ಅಣುಶಸ್ತ್ರಗಳ ಸ್ಫೋಟನದ ದುಷ್ಪರಿಣಾಮಗಳ ಕುರಿತು ಜಗತ್ತಿನ ಪ್ರಸಿದ್ಧ ವಿಜ್ಞಾನಿಗಳು ಏನು ಅಭಿಪ್ರಾಯ ಪಡುವರೆಂಬುದನ್ನು ನಾನು ಈ ಘೋಷಣೆಯ ಮೂಲಕ ಶಕ್ತಿಶಾಲಿಯಾದ ಜಗತ್ತಿನ ರಾಷ್ಟ್ರಗಳ ಗಮನಕ್ಕೆ ತರುತ್ತಿದ್ದೇನೆ; ಅಲ್ಲಿಯ ಸರಕಾರಗಳು ತಮ್ಮ ದೇಶದ ಜನತೆಯನ್ನು ಬದುಕಗೊಡಲಿ ಎಂಬ ಆಶೆ ನನ್ನದು."

ವಿಜ್ಞಾನಿಗಳ ಅಭಿಪ್ರಾಯದ ಸಾರಾಂಶ ಹೀಗಿದೆ—"ಮಾನವತೆಯನ್ನು ಇದಿರಿಸುತ್ತಿರುವ ಇಂದಿನ ವಿಷಾದ ಪೂರ್ಣ ಪರಿಸ್ಥಿತಿಯಲ್ಲಿ ಸಾರ್ವತ್ರಿಕ ನಾಶವನ್ನು ಮಾಡಬಲ್ಲ ಶಸ್ತ್ರಗಳ ತಯಾರಿಕೆಯಿಂದ ಉಂಟಾಗುವ ಅನಾಹುತಗಳನ್ನು ವಿವರಿಸುವ ಕರ್ತವ್ಯವನ್ನು ವಿಜ್ಞಾನಿಗಳು ನಿರ್ವಹಿಸುವುದು ಆವಶ್ಯಕ. ನಾವು ಯಾವುದೇ ಒಂದು ಪಂಗಡದ ಪರವಾಗಿ ಇದನ್ನು ಹೇಳುತ್ತಿಲ್ಲ. ಗಂಡಾಂತರವು ಇತ್ತಂಡದವರಿಗೂ ಸಮಾನವಾಗಿದೆ—ಅನಾಹುತದ ತಿಳಿವಳಿಕೆಯನ್ನು ಮಾಡಿಕೊಳ್ಳುವುದೊಂದೇ ಅದರಿಂದ ವಾರಾಗಲು ಸಾಮೂಹಿಕ ಕಾರ್ಯಾಚರಣೆ ಕೈಗೊಳ್ಳಲು ಸಹಾಯಕವಾದ ವಿಷಯ. ಮನುಷ್ಯನ ಅಸ್ತಿತ್ವ ಸರ್ವನಾಶಕರವಾಗಿ ಪರಿಣಮಿಸಿರುವ ಭಯದಿಂದ ಲೇ ನಾವೀ ಮಾತನ್ನು ಹೇಳುತ್ತಿದ್ದೇವೆ. ನಮ್ಮ ಮಾತನ್ನು ಕೇಳುವುದಾದಲ್ಲಿ ಎಲ್ಲರೂ ಹೊಸ ಬಗೆಯಿಂದ ವಿಚಾರಿಸಲು ತೊಡಗಬೇಕು—ಸೈನಿಕ ಯಶಸ್ಸನ್ನು ಸಂಪಾದಿಸಿಕೊಳ್ಳಬಲ್ಲ ದಾರಿ ಯಾವುದು ಎಂದು ಆಲೋಚಿಸುವ ಕ್ರಮವೇ ಇಂದು ಸಲ್ಲದು; ಏಕೆಂದರೆ ಹಾಗೆ ಹೆಜ್ಜೆಯನ್ನು ಇಂದು ಮುಂದಿಡುವಂತಿಲ್ಲ. ಸೈನಿಕ ಸ್ಪರ್ಧೆಯನ್ನು ನಿಲ್ಲಿಸುವುದಕ್ಕೆ ಏನು ಕ್ರಮ ಕೈಗೊಳ್ಳೋಣ ಎಂಬುದೇ ವಿಚಾರಣೀಯವಾದ ಅಂಶ.

"ಜನರಾಗಲೀ ರಾಜಕಾರಣಿಗಳಾಗಲೀ ಅಣುಶಸ್ತ್ರಗಳ ಪ್ರಯೋಗ ನಡೆಯುವ ಅವಕಾಶಗಳ ಹಾನಿಯನ್ನು ಸಾಕಷ್ಟು ಹೆಚ್ಚು ತಿಳಿದಿರುವುದಿಲ್ಲ ಬಾಂಬುಗಳ ಪ್ರಯೋಗದಿಂದ ದೊಡ್ಡ ನಗರಗಳು ನಾಶವಾಗುತ್ತವೆ ನಿಜ; ಆದರೆ ಇದು ಸಾಮಾನ್ಯ ಪರಿಣಾಮ ಮಾತ್ರ. ಬಿಕಿನಿಯ ಪ್ರಯೋಗಗಳ ಬಳಿಕ ನಾವು ಈ ಬಾಂಬುಗಳು ವ್ಯಾಪಕ ಕ್ಷೇತ್ರದಲ್ಲಿ ಸಹ ಹಾನಿಮಾಡಬಲ್ಲವೆಂದು ಕಂಡುಕೊಂಡಿದ್ದೇವೆ. ಹಿರೋಶಿಮಾದ ಮೇಲೆ ಹಾಕಿದ ಬಾಂಬಿನ ಎರಡು ಸಾವಿರ ಪಾಲು ಹೆಚ್ಚು ಶಕ್ತಿಶಾಲಿಯಾಗಿರುವ ಈ ಬಾಂಬುಗಳು ವಿಸರಣ ಕ್ರಿಯೆಯ ಪರಿಣಾಮವಾಗಿ ಮಾರಕಭಸ್ಮ ಮತ್ತು ಮಳೆಯನ್ನು ಕರೆದು ಮನುಷ್ಯ ಕುಲವನ್ನೆ ಕಾಲಾಂತರದಲ್ಲಿ ನಾಶಪಡಿಸುತ್ತವೆ. ಒಮ್ಮೆಲೇ ಸಾಯುವ ಜನರು ಹೆಚ್ಚಿರಲಿಕ್ಕಿಲ್ಲ; ಆದರೆ ರೋಗ ಮತ್ತು ನೋವು ಬೇನೆಗಳ ಮೂಲಕ ಹೆಚ್ಚಿನವರ ನಾಶ ನಿಶ್ಚಿತ.

"ನಾವು ಮಾನವತೆಯ ನಾಶಕ್ಕೆಯೇ ಉದ್ಯುಕ್ತರಾಗಬೇಕೇ, ಅಥವಾ ಯುದ್ಧವನ್ನುತಪ್ಪಿಸಬೇಕೇ? ಯುದ್ಧವನ್ನು ತಪ್ಪಿಸುವುದರಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಮಿತಿಯಾಕಿದಂತಾಗುವುದೆಂದು ಭಾವಿಸಲಾಗುತ್ತದೆ ಆದರೂ ಅಣುಶಸ್ತ್ರಗಳ ಸ್ಫೋಟನ ಪ್ರಯೋಗಗಳನ್ನು ಬಹಿಷ್ಕರಿಸಿ ಇತರ ರೀತಿಯ ಯುದ್ಧಗಳಿಗೆ ಅವಕಾಶ ಮಾಡಿಕೊಡಲು ಸಮ್ಮತಿಸುವ ಭಾವಕಂಡುಬರುತ್ತದೆ. ಇದು ಕೇವಲ ಭ್ರಮೆ—ಏಕೆಂದರೆ ಯುದ್ಧವಾದ ಪಕ್ಷದಲ್ಲಿ ಯಾರು ಮೊದಲು ಅಣುಶಸ್ತ್ರಗಳನ್ನು ಪ್ರಯೋಗಿಸುವರೋ ಅವರಿಗೆ ಜಯ ನಿಶ್ಚಯವಾದುದರಿಂದ ಆವುಗಳಿಗೆ ಹಾಕಿದ ಬಹಿಷ್ಕಾರ ದುರ್ಲಕ್ಷಿಸಲ್ಪಡುತ್ತದೆ. ಹೀಗಿದ್ದರೂ ಅಂಥಬಹಿಷ್ಕಾರದಘೋಷಣೆಯಿಂದ ತಾತ್ಕಾಲಿಕವಾಗಿ ಎರಡು ಸುಪರಿಣಾಮವಾದೀತು—ಮೊದಲನೆಯದಾಗಿ, ದ್ವೇಷ ಶಮನವನ್ನು ಅದು ಕೆಲಮಟ್ಟಿಗಾದರೂ ಮಾಡಬಲ್ಲುದು; ಎರಡನೆಯದಾಗಿ, ಬಹಿಷ್ಕಾರ ತತ್ವಕ್ಕೆ ಅನುಗುಣವಾಗಿ ಶಕ್ತಿಗಳು ನಡೆದುಕೊಂಡರೆ, ಫಕ್ಕನೆ ಸಂಶಯದ ಮೇಲಿಂದ ಆಕ್ರಮಣ ನಡೆಸುವ ಹವ್ಯಾಸ ನಿಲ್ಲಬಲ್ಲುದು. ಆದುದರಿಂದ ರಾಜಕಾರಣಿಗಳು ಈ ದಿನೆಯಲ್ಲಿಡಬಹುದಾದಹೆಜ್ಜೆಯನ್ನು ನಾವು ಸ್ವಾಗತಿಸುತ್ತೇವೆ

"ನಾವು ಜನರಲ್ಲಿ ಹೀಗೆ ಪ್ರಾರ್ಥಿಸುತ್ತೇನೆ—ನೀವು ಮಾನವತೆಯನ್ನಷ್ಟೇ ನೆನಪಿಸಿಕೊಳ್ಳಿರಿ; ಉಳಿದಲ್ಲವನ್ನು ಮರೆಯಿರಿ. ಹಾಗೆ ಮರೆಯದಿದ್ದರೆ ಜಾಗತಿಕ ನಾಶವಾದೀತು ವಿಜ್ಞಾನಿಗಳಿಗೆ ನಾವು ಈ ಕೆಳಗಿನ ಗೊತ್ತುವಳಿಯನ್ನು ಬೆಂಬಲಿಸಲು ವಿನಂತಿಸುತ್ತೇವೆ—'ಮುಂದಿನ ಜಾಗತಿಕ ಯುದ್ಧದಲ್ಲಿ ಅಣುಶಸ್ತ್ರಗಳು ಅತ್ಯವಶ್ಯವಾಗಿ ಪ್ರಯೋಗಿಸಲ್ಪಡುವುದರಿಂದ ಮತ್ತು ಇದು ಮನುಷ್ಯನ ಅಸ್ತಿತ್ವಕ್ಕೆ ಭಯಕಾರಕವಿರುವುದರಿಂದ ಲೋಕದ ಸರಕಾರಗಳು ಇದನ್ನು ಮನಗಂಡು ಯುದ್ಧದಿಂದ ತಮ್ಮ ಉದ್ದೇಶ ನೆರವೇರಲಾರದೆಂದು ಬಹಿರಂಗವಾಗಿ ಸಾರಬೇಕು; ಮತ್ತು ತಮ್ಮ ವಿವಾದಗಳ ಪರಿಹಾರಾರ್ಥವಾಗಿ ಶಾಂತಿ ಮಾರ್ಗಗಳನ್ನು ಕೆಂಡುಕೊಳ್ಳಬೇಕು' ಇದೇ ನಮ್ಮ ಒತ್ತಾಯ".

ಯುದ್ಧತ್ಯಾಗಕ್ಕೆ ಒತ್ತಾಸೆ ನೀಡುವ ಈ ಘೋಷಣೆಯನ್ನು ಅಮೇರಿಕದಿಂದ ಹಿಡಿದು ಹೆಚ್ಚಿನ ರಾಷ್ಟ್ರಗಳು ಖಾಸಗಿಯಾಗಿ ಸ್ವಾಗತಿಸಿರುತ್ತವೆ. "ವಾಷಿಂಗ್‌ಟನ್ ಪೋಸ್ಟ್" ಹೀಗೆ ಬರೆಯಿತು: "ಶಾಂತಿಯ ಸದಭಿಲಾಷೆಯ ಸರಕಾರಗಳ ಪರಿಷತ್ತಿನಲ್ಲಿ ಅಥವಾ ವಿಜ್ಞಾನಿಗಳ ಪ್ರಯೋಗಾಲಯದಲ್ಲಿ ಸಿಗಲಾರದು. ಜನರ ಹೃದಯ ಮತ್ತು ಮನಸ್ಸುಗಳಲ್ಲಿಯೇ ಅದನ್ನು ಹುಡುಕಬೇಕು. ಮಾನವನ ಸದ್ಭಾವನ, ತಿಳಿವಳಿಕೆ ಮತ್ತು ಜ್ಞಾನಗಳಿಂದ ಅಣುಯುಗಕ್ಕೆ ಹೇಳಿಸಿದ ಸಂಯಮ ಮತ್ತು ಶಿಸ್ತಿನ ಮನೋಭಾವ ಉಂಟಾಗಬೇಕು. ಕಾರಣ, ಮಹಾರಾಷ್ಟ್ರಗಳು ಶಕ್ತಿ ಪ್ರಯೋಗವನ್ನು ಮುಂದೆ ಹಾಕಲಿ—ಸಾಕಷ್ಟು ದೀರ್ಘಕಾಲದ ವರೆಗೆ ಸ್ಪರ್ಧೆಯನ್ನು ಮುಂದೆ ಹಾಕಿ, ಪ್ರಯೋಗದ ಸಂದರ್ಭವನ್ನು ದೂಡಿದರೆ, ವಿಜ್ಞಾನಿಗಳು ಎಚ್ಚರಿಕೆ ಕೊಡುತ್ತಿರುವ ವಿನಾಶದ ಭಯವನ್ನು ತಪ್ಪಿಸುವುದು ಶಕ್ಯ."

ಇದನ್ನು ಗಮನಿಸದೆ ಹೋದರೆ, ಪರಿಸ್ಥಿತಿ ಎಷ್ಟು ಭೀಕರವಾದೀತು ಎಂಬುದನ್ನು ಜಗತ್ತಿನ ಸಮಾಜವಾದಿಗಳ ಲಂಡನ್ ಪರಿಷತ್ತಿನಲ್ಲಿ ಮೊನ್ನೆ ತಾನೆ ಜವಾಹರಿನ ಪ್ರತಿನಿಧಿಗಳು ಪ್ರಕಟಿಸಿದ ಅಭಿಪ್ರಾಯದಿಂದ ತಿಳಿಯಬಹುದು. "ಜವಾಹರು ಮೂರು ಸಲ ಅಣುಶಸ್ತ್ರಗಳ ಅನಾಹುತಕ್ಕೆ ಗುರಿಯಾಯಿತು; ಬಹಳ ದೊಡ್ಡ ತ್ಯಾಗವನ್ನದು ಮಾಡಿತು. ೧೯೪೫ರಲ್ಲಿ ಮೂರು ಲಕ್ಷ ಜನರು ತಕ್ಷಣ ಮೃತರಾದರು. ಹತ್ತು ವರ್ಷಗಳು ಕಳೆದ ಬಳಿಕ ಈಗ ಸಹ ಅಣುವಿಕಿರಣ ಕ್ರಿಯೆಯ ಪರಿಣಾಮವಾಗಿ ಬಳಲುವವರು ಅನೇಕ ಆದುದರಿಂದ ಅಣುಶಸ್ತ್ರಗಳ ಸ್ಫೋಟನೆ ಪ್ರಯೋಗ ಕೊನೆಗೊಳ್ಳಬೇಕು. ಅಣುಶಕ್ತಿಯು ಮಾನವನ ಹಿತಕ್ಕೆ ಉಪಯೋಗವಾಗಬೇಕು. ಇಲ್ಲದಿದ್ದರೆ ಸರ್ವನಾಶತಪ್ಪದು" ಒಬ್ಬ ರಾಜಕೀಯ ಹುಚ್ಚನ ಕೈಯಲ್ಲಿ ಸಿಕ್ಕಿಬಿದ್ದಿರುವ ಅಣು ಭೂತದ ದೆಸೆಯಿಂದ ಮಾನವ ಜನಾಂಗ ಹೀಗೆ ಜಪಿಸುತ್ತಿರಬೇಕಾಗಿ ಬಂದಿರುವುದು ನಿಜಕ್ಕೂ ವಿಪತ್ತಿನ ಲಕ್ಷಣ-ಇಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ, ಲೋಕದ ಬೋಧನೆಗೆ ಬೆಲೆಬಾರದೆ ಹೋದರೆ, ಪ್ರಜಾಸ್ವಭುತ್ವ ಮತ್ತು ಲೋಕಸತ್ತೆಗಳ ಪಲ್ಲವಿ ಅರ್ಥಶೂನ್ಯವಾಗುತ್ತದೆ.

ಮೈಸೂರು ಸರಕಾರದ ಪ್ರೆಸ್ ನೋಟ್ಸು—ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲದ ಅಭಿವೃದ್ಧಿ ಮತ್ತು ದ್ವಿತೀಯ ಯೋಜನೆಯಲ್ಲಿ ಅಗತಕ್ಕ ಯೋಜನೆಗಳ ಕುರಿತು ಇದೇ ತಾ. ೧೮ರಲ್ಲು ಮುಖ್ಯ ಮಂತ್ರಿ ಮತ್ತು ಇವರ ಮಂತ್ರಿಗಳು ಪಾರ್ಲಿಮೆಂಟಿನ ಮೈಸೂರು ಮೆಂಬರರನ್ನು ಭೆಟ್ಟಿಯಾದರು. ಮುಖ್ಯ ಮಂತ್ರಿಗಳು ಆರಂಭದಲ್ಲಿ ಪಾರ್ಲಿಮೆಂಟರಿ ಮೆಂಬರರನ್ನು ಸ್ವಾಗತಿಸುತ್ತಾ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬಹುದಾದ ಸೂಚನೆಗಳನ್ನು ಆಪೇಕ್ಷಿಸಿದರು. ಹೊನ್ನೆಮರಡು ಪ್ರಜೆಕ್ಟು ಫರ್ಟಿಲೈಸರ್ ಕಾರ್ಖಾನೆ ತೆರೆಯುವಿಕೆ, ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಮೊದಲಾದ ಸೂಚನೆಗಳು ಸದಸ್ಯರಿಂದ ತರಲ್ಪಟ್ಟವು. ಇನ್ಲಾಂಗ್ ಯೋಜನೆಯ ಸ್ಟೇಟ್ ಎಡ್ವೈಸರಿ ಬೋರ್ಡಿಗೆ ಪಾರ್ಲಿಮೆಂಟನಲ್ಲಿ ಮೈಸೂರು ಪ್ರತಿನಿಧಿಗಳಾಗಿರುವ ಇಬ್ಬರು ಇರಬೇಕಾದ ಆವಶ್ಯಕತೆಯನ್ನು ಮುಖ್ಯ ಮಂತ್ರಿಗಳು ತಮ್ಮ ಮುಕ್ತಾಯ ಭಾಷಣದಲ್ಲಿ ತಿಳಿಸಿದರು ಈ ಸೂಚನೆ ಸ್ವಾಗತೀಕರಿಸಲಾಯಿತು. ಮುಖ್ಯ ಮಂತ್ರಿ ಮತ್ತಿತರ ಮಂತ್ರಿಗಳು ತಮಗೆ ಈ ಅವಕಾಶವನ್ನು ಕಲ್ಪಿಸಿ ಕೊಟ್ಟ ಬಗ್ಗೆ ಅವರಿಗೆ ಕೃತಜ್ಞತೆ ಸಲ್ಲಿಸಲ್ಪಟ್ಟಿತು.

ಎಂಪ್ಲೊಯಿಮೆಂಟ್ ಎಕ್ಸ್‌ಚೇಂಜದ ಕಾರ್ಯಗಳು—ರಾಜ್ಯದ ಎಂಪ್ಲೊಯಿಮೆಂಟ್ ಎಕ್ಸ್‌ಚೇಂಜ್ (ಬೆಂಗಳೂರು ಮತ್ತು ಮೈಸೂರು) ಜೂನ್ ತಿಂಗಳಲ್ಲಿ 1789 ಮಂದಿಯನ್ನು ರಿಜಿಸ್ಟ್ರಿ ಮಾಡಿದ್ದು ಅ ಪೈಕಿ 174 ಮಾಜಿ ಸಿಪಾಯಿಗಳು, 95 ಹೆಂಗಸರು ಮತ್ತು 1520 ಇತರರು ಆಗಿದ್ದರು. ಸೆಂಟ್ರಲ್ ಗವರ್ನಮೆಂಟ್ ಮತ್ತು ಸ್ಟೇಟ್ ಗವರ್ನಮೆಂಟ್‌ಗಳಲ್ಲಿದ್ದ ಖಾಲಿ ಸ್ಥಳಗಳು 56 ಮತ್ತು ಖಾಸಗಿ ಸಂಸ್ಥೆಗಳಲ್ಲಿ 32 ಇದ್ದುವು. ಈ ಖಾಲಿಸ್ಥಳಗಳಿಗೆ 149 ಮಾಜಿ ಸಿಪಾಯಿ ಮತ್ತು 402 ಇತರರನ್ನು ಶಿಫಾರಸು ಮಾಡಲಾಯಿತು. ಜೂನ್ ತಿಂಗಳಲ್ಲಿ 96 ಮಂದಿ ಮಾಜಿ ಸಿಪಾಯಿಗಳಿಗೂ 52 ಮಂದಿ ಇತರರಿಗೂ ಕೆಲಸಗಳು ದೊರೆತವು. ಮಾರ್ಚ ತಿಂಗಳಲ್ಲಿ ಮಾಜಿ ಸಿಪಾಯಿಗಳ ಮತ್ತು 1066 ಇತರರ ರಿಜಿಸ್ಟ್ರೇಶನ್‌ಗಳು ವ್ಯಾದಿ ಕಳಕೊಂಡವು. ಜೂನ್ ಅಂತ್ಯದಲ್ಲಿ 10,134 ಮಂದಿ ಉದ್ಯೋಗಕ್ಕಾಗಿ ಮಾಡಿದ ಅರ್ಜಿಗಳಿದ್ದುವು. ಈ ಪೈಕಿ 985 ಮಂದಿ ಮಾಜಿ ಸಿಪಾಯಿಗಳು.

ಎಂಪ್ಲೊಯಿಮೆಂಟ್ ಎಕ್ಸ್‌ಚೇಂಜ್ ಸ್ಥಾಪಿಸಲ್ಪಟ್ಟಿಂದಿನಿಂದ ಜೂನ್ ತಿಂಗಳ ಅಂತ್ಯದ ವರೆಗೆ 1,29,293 ಮಂದಿಗಳ ಅರ್ಜಿಗಳು ರಿಜಿಸ್ಟ್ರಿ ಮಾಡಲ್ಪಟ್ಟಿದ್ದವು. ಖಾಲಿ ಸ್ಥಾನಗಳಿಗೆ 42,008 ಅರ್ಜಿಗಳನ್ನು ಶಿಫಾರಸು ಮಾಡಲಾಗಿತ್ತು. 6012 ಮಂದಿಗೆ ಉದ್ಯೋಗ ದೊರೆತಿದೆ.

ನಿಮ್ಮಷ್ಟಕ್ಕೆ [illegible] ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರೆಯುವ ಸ್ಥಳಗಳು.- 1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಹಚ್ಚಿರಿ ಬೆಂಬಲಿಸಿರಿ

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. o. Box No 3219, BOBMAY 3-

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

Edited, Printed & Published By K. H. Shetty, at the Navayuga Press, Udipi S. India

REGD. NO. N. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ ಸಂಚಿಕೆ ೪೬

VOL. 34 ಉಡುಪಿ, 28—7—1955 NO. 46

ಪ್ರಸ್ತುತ ಸಂಗತಿ

ನನ್ನ ರಶ್ಯ ಮತ್ತು ಪೂರ್ವ ಯುರೋಪಿನ ಸಂಚಾರ ಕಾಲದಲ್ಲಿ ಮನಸ್ಸಿಗೆ ತುಂಬ ಪ್ರಭಾವವನ್ನು ಮಾಡಿದ ಸಂಗತಿಯೆಂದರೆ ಭಾರತೀಯ ರಾಷ್ಟ್ರಧ್ವಜವನ್ನು ನೂರಾರು ಸಂಖ್ಯೆಯಲ್ಲಿ ಎತ್ತಿ ಹಿಡಿದ ದೃಶ್ಯ, ಮತ್ತು ಭಾರತದ ರಾಷ್ಟ್ರಗೀತೆಯನ್ನು ಹಾಡಿದ ಪ್ರಸಂಗ. ಇಷ್ಟು ಹೆಚ್ಚು ಪ್ರಮಾಣದಲ್ಲಿ ಭಾರತದಲ್ಲಿ ನಮ್ಮ ರಾಷ್ಟ್ರಧ್ವಜಗಳನ್ನು ಆರಳಿಸಿದ್ದು ನನ್ನ ಕಣ್ಣಿಗೆ ಬಿದ್ದಿಲ್ಲ. ರಾಷ್ಟ್ರಗೀತೆಯನ್ನು ಹೊರದೇಶಗಳವರು ಹಾಡಿದಾಗ ನನ್ನ ಮೈಯು ತುಂಬ ಪುಳಕಿತವಾಯಿತು.

—ಜವಾಹರಲಾಲ ನೆಹರು.

ತಮಿಳು ನಾಡಿನಲ್ಲಿ ದ್ರಾವಿಡ ಕಜಗಂ ಎಂಬುದೊಂದು ಸಂಸ್ಥೆ ಭಾರತದ ರಾಷ್ಟ್ರೀಯ ಹಿತಕ್ಕೆ ಧಕ್ಕೆಯನ್ನು ತರುವ ಅನೇಕ ಕೆಲಸಗಳನ್ನು ಕಲ ಸಮಯದಿಂದೀಚೆಗೆ ಮಾಡುತ್ತಲಿರುವುದು ಎಲ್ಲರಿಗೂ ತಿಳಿದ ವಿಷಯ. ಉತ್ತರೇಯರ ಮತ್ತು ಆರ್ಯರ ವಿರುದ್ಧವಾದ ಭಾವನೆಯಿಂದ ಈ ಸಂಸ್ಥೆಯವರು ರಾಮ, ಕೃಷ್ಣ, ಗಣಪತಿಯಂಥ ಹಿಂದುಗಳೆಲ್ಲರಿಗೂ ಪೂಜ್ಯ ಭಾವವಿರುವ ದೇವತೆಗಳ ವಿಗ್ರಹಗಳನ್ನು ಸಾರ್ವಜನಿಕರೆದುರು ಬಹಿರಂಗವಾಗಿ ಒಡೆಯುವ ಒಂದು ಚಳವಳವನ್ನು ನಡೆಸಿದರು. ರಾಮಾಯಣದ ಪವಿತ್ರಕತೆಯ ಅವಹೇಳನೆ ಮಾಡುವ ಉದ್ದೇಶದಿಂದ 'ಕೀ ಮಾಯಣ"ವನ್ನು ರಚಿಸಿ, ಅದನ್ನು ನಾಟಕ ರೂಪದಲ್ಲಿ ಅಭಿನಯಿಸಿ ಜನರ ಮನ ನೋಯಿಸಿದರು; ದಾಕ್ಷಿಣಾತ್ಯರಿಗೆ ಹಿಂದೀ ಭಾಷೆಯು ಬೇಕಿಲ್ಲ ಎನ್ನುತ್ತಾ ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಿದ್ದ ಫಲಕಗಳ ಮೇಲೆ ಹಿಂದಿಯಲ್ಲಿ ಬರೆಯಲಾದ ಹೆಸರುಗಳನ್ನು ತಾರಿನಿಂದ ಅಳಿಸಲು ನೋಡಿದರು. ಇದೀಗ, ಈ ಸಂಸ್ಥೆಯ ನಾಯಕರಾದ ಶ್ರೀ ಇ ವಿ ರಾಮಸ್ವಾಮಿ ನಾಯಕ್ಕರರು ತಮಿಳು ನಾಡಿನ ಹನ್ನೊಂದು ಜಿಲ್ಲೆಗಳಲ್ಲಿರುವ ತಮ್ಮ ಅನುಯಾಯಿಗಳಿಗೆಲ್ಲಾ ಆಹ್ವಾನವಿತ್ತು ಇದೇ ಅಗೋಸ್ತು ೧೧ನೇ ದಿನಾಂಕ ಭಾರತದ ರಾಷ್ಟ್ರಧ್ವಜವನ್ನು ಬಹಿರಂಗವಾಗಿ ಸುಟ್ಟುಹಾಕುವ ಆಂದೋಲನ ನಡೆಸಲು ಕೇಳಿಕೊಂಡಿದ್ದಾರೆ. ಇಂಥ ಅನಪೇಕ್ಷಿತ ಚಳವಳ ನಡೆದೇ ತೀರುವಂತೆಯೂ ಕಾಣುತ್ತದೆ

ರಾಜಾಜಿಯವರು ಮದ್ರಾಸಿನ ಮುಖ್ಯ ಮಂತ್ರಿಗಳಾಗಿದ್ದಾಗ ಕಮ್ಯೂನಿಸ್ಟರನ್ನು ತಮ್ಮ ಪೃಥಸು ಶತ್ರು ಎಂದು ಕರೆದು, ಅವರ ದರ್ಪವನ್ನು ದಮನಿಸಿದ್ದರು. ಆ ಬಳಿಕ ಅವರು ದ್ರಾವಿಡ ಕಜಗದೊಡನೆ ಕಾಳಗಕ್ಕೆ ಮುಂದಾದರು. ರಾಜಾಜಿಯ ಬಳಿಕ ಅಧಿಕಾರಕ್ಕೆ ಬಂದ ಕಾಮರಾಜ ನಾಡರೊಡನೆ ದ್ರಾವಿಡ ಕಜಗ ಸಹಕಾರದಿಂದ ಕೆಲ ಮಟ್ಟಿಗೆ ವರ್ತಿಸಿತು—ಆದರೆ, ಈಗ ಕೈಗೊಳ್ಳಬೇಕೆಂದಿರುವ ಕಜಗದ ಆಂದೋಲನವು ಎಷ್ಟು ಮಾತ್ರಕ್ಕೂ ಸರಕಾರದ ಸಹಾನುಭೂತಿಯನ್ನು ಸಂಪಾದಿಸಲಾರದು. ಕಾಮರಾಜ ನಾಡರರು ಇದನ್ನು ಸ್ಪಷ್ಟವಾಗಿ ಆಡಿ ತೋರಿಸಿ ಎಲ್ಲರಿಗೂ ಮನವರಿಕೆ ಮಾಡಿಕೊಟ್ಟಿದ್ದಾರೆ—ಇದು ಸ್ತುತ್ಯ. ಭಾರತದ ರಾಷ್ಟ್ರಧ್ವಜದ ಮಟ್ಟಿಗೆ ಉತ್ತರೇಯರು ಅಥವಾ ದಾಕ್ಷಿಣಾತ್ಯರು ಎಂಬ ಭೇದಭಾವಕ್ಕೆ ಎಡೆಯೇ ಇರುವುದಿಲ್ಲ—ಅದು ಸಮಸ್ತ ಭಾರತೀಯರ ಗೌರವದ ಪ್ರತೀಕ. ಉತ್ತರ ಪ್ರದೇಶಕ್ಕೆ ಎಷ್ಟೋ, ಮದ್ರಾಸಿಗೂ ಅದು ಸ್ಫೂರ್ತಿಯ ದ್ಯೋತಕ ಹಿಂದೀ ಭಾಷೆಯವರು ಹೇಗೋ ತಮಿಳುನಾಡಿನವರೂ ಅದರ ರಕ್ಷಣೆಗೆ ಬದ್ಧರು, ಅದಕ್ಕಾಗಿ ಜೀವಕೊಡಬೇಕಾದರೂ ಹಿಂಜರಿಯಲಾಗದು. ಕಜಗಕ್ಕೆ ಈ ಬಗೆಯ ಎಚ್ಚರಿಕೆ ಕಾಂಗ್ರೆಸಿನ ಧುರೀಣರೊಬ್ಬರಿಂದ ಕೂಡಲೇ ಹೋಗಿರುತ್ತದೆ; ಸರಕಾರ ಸಹಯೋಗ್ಯ ಕಾರ್ಯಕ್ರಮವನ್ನು ಕೈಗೊಂಡು ಈ ಚಳವಳವನ್ನು ಇದಿರಿಸಲು ನಿಶ್ಚಯಿಸಿರುತ್ತದೆ.

ರಾಷ್ಟ್ರಾಭಿಮಾನ ಜಾಗೃತವಾಗಿರುವ ಯಾವ ಭಾರತೀಯನೂ ಮೆಚ್ಚುವಂತಿಲ್ಲದ, ಮತ್ತು ಪ್ರಾಣವನ್ನು ಕೊಟ್ಟಾದರೂ ಧ್ವಜದ ಅಪಮಾನವನ್ನು ತಡೆಯಲೇಬೇಕಾಗಿ ಬರಬಹುದಾದ, ಈ ಚಳವಳವನ್ನು ನಾಯಕ್ಕರರು ತೊಡಗಬೇಕೆಂದಿರುವುದಾದರೂ ಏಕಾಗಿ? ವರದಿಗಳಗನುಸಾರ, ಹಿಂದಿಯನ್ನು ತಮಿಳು ನಾಡಿನವರ ಭಾವನೆಗೆ ವಿರುದ್ಧವಾಗಿ ಕೇಂದ್ರ ಸರಕಾರ ಕಡ್ಡಾಯವಾಗಿ ಶಾಲೆಗಳಲ್ಲಿ ಕಲಿಸಲು ನಿರ್ದರಿಸಿರುತ್ತದೆ, ಇದು ತಪ್ಪು ಎಂಬುದೇ ನಾಯಕ್ಕರರ ಚಳವಳದ ಮೂಲ ಕಾರಣ. ಭಾರತದ ರಾಷ್ಟ್ರೀಯ ಧ್ವಜದ ನೆರಳಿನಲ್ಲಿ ತಮಿಳರಿಗೆ ನ್ಯಾಯ ದೊರೆಯುತ್ತಿಲ್ಲ, ಅವರ ಆಕೋತ್ತರಗಳನ್ನು ಕಡೆಗಣಿಸಲಾಗುತ್ತದೆ ಎಂದವರ ದೂರು. ಹಿಂದಿಯನ್ನು ಒಲ್ಲದ ಜನರ ಮೇಲೆ ಅತಿ ತವಸರದಿಂದ ಒತ್ತಾಯ ಪೂರ್ವಕ ಹೇರಲಾಗುತ್ತದೆ ಎಂದವರ ಆಕ್ಷೇಪ. ಕೇಂದ್ರ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸುವ ಆಶ್ವಾಸನೆಯನ್ನು ಕೊಟ್ಟರೆ, ತಾನು ಚಳವಳದ ನಿರ್ಧಾರವನ್ನು ಹಿಂದೆಗೆದುಕೊಳ್ಳುವೆನೆಂದು ಅವರ ಆಂಬೋಣ. ಹಿಂದಿಯನ್ನು ಸ್ವೇಚ್ಛೆಯಿಂದ ಯಾರಾದರೂ ಕಲಿಯುವವರಾದರೆ ಅದಕ್ಕೆ ನಾಯಕ್ಕರರು ಪ್ರತಿಕೂಲರಾಗಿಲ್ಲ ಅವರು ಕಾಮರಾಜ ನಾಡರರ ಸರಕಾರಕ್ಕೆ ತೊಂದರೆ ಮಾಡಬೇಕೆಂದೂ ಬಯಸುವುದಿಲ್ಲ. ಧ್ವಜವನ್ನು ಹೊತ್ತಿಸುವುದು ಪೌರುಷದ ಕೆಲಸವೆಂದೂ ಅವರು ಬೇಳುವುದಿಲ್ಲ—ಆದರೂ ತಮ್ಮ ನ್ಯಾಯದ ಸಮರ್ಥನೆಗಾಗಿ ಈ ಕಾರ್ಯಕ್ರಮ!

ಒತ್ತಾಯದಿಂದ ಹಿಂದಿಯನ್ನು ದಾಕ್ಷಿಣಾತ್ಯರ ಮೇಲೆ ಹೇರುವುದು ಅಷ್ಟು ಇಷ್ಟವಾದುದಲ್ಲ ಎಂಬ ವಿಷಯವನ್ನು ಕೇಂದ್ರ ಸರಕಾರ ಉಪೇಕ್ಷಿಸಿದರೆ, ಅದರಿಂದ ಹಾನಿಯಾದೀತು ಭಾರತ ಸರಕಾರ ನಿಧಾನವಾಗಿ ಆಡಿ ಇಡುವುದೇ ಶ್ರೇಯಸ್ಕರ— ಇದನ್ನು ಕೇಂದ್ರದವರು ತಿಳಿದುಕೊಂಡಿಲ್ಲ

ಭಾರತೀಯರ ಬಾವುಟ

ಎನ್ನುವುದಕ್ಕೆ ಆಧಾರ ಸಾಲದು ಈಚೆಗೆ ಹಿಂದೀಯೇತರ ಭಾಷೆಗಳನ್ನಾಡುವವರ ಭಾವನೆಗೆ ವಿರುದ್ಧವಾಗದಂತೆ. ಅವರ ಮನವೊಲಿಸಿಕೊಂಡು ಹಿಂದಿಯನ್ನು ಸರಕಾರದ ಆಡಳಿತ ಭಾಷೆಯಾಗಿ ಹೇಗೆ ರೂಪಿಸಬಹುದೆಂದು ಸಲಹೆಮಾಡಲು ಶ್ರೀ ಬಿ. ಜಿ ಖೇರರ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ಕೇಂದ್ರ ಸರಕಾರ ನೇಮಿಸಿರುತ್ತದೆ ಈ ಆಯೋಗ ದ್ರಾವಿಡ ಭಾಷೆಯಾಡುವವರಿಗೂ ಬಂಗಾಳಿ, ಮರಾಠಿ ಮುಂತಾದ ಭಾಷೆಯಾಡುವವರಿಗೂ ಅನ್ಯಾಯ ಮಾಡದೆಂದು ಆಶಿಸಬಹುದು, ಅಷ್ಟಲ್ಲದೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡು ಆಯೋಗದ ಮೇಲೆ ತಮ್ಮ ಅಭಿಪ್ರಾಯದ ಪ್ರಭಾವವನ್ನು ಹಿಂದೀಯೇತರ ಭಾಷೆಗಳವರು ಬೀರಲು ಅವಕಾಶ ಉಂಟು. ಸರಕಾರದ ಕೆಲವು ಕಚೇರಿಗಳಲ್ಲಿ ಹಿಂದೀ ಭಾಷೆಯವರೆಗೆ ಅದೊಂದೇ ಭಾಷೆಯಲ್ಲಿ ಪ್ರಾವೀಣ್ಯ ವಿದ್ದರೆ ಸಾಕಾಗಿರುವಾಗ, ಹಿಂದೀಯೇತರರಿಗೆ ತಮ್ಮ ಮಾತೃ (ಅಥವಾ ಪ್ರಾದೇಶಿಕ) ಭಾಷೆಯ ಜೊತೆಗು ಹಿಂದಿಯಲ್ಲಿಯೂ ಸಾಕಷ್ಟು ಅಭ್ಯಾಸ ವಿರಬೇಕೆಂಬ ನಿಯಮವನ್ನು ಕಾಣುತ್ತೇವೆ ಇದುತಕ್ಕಲ್ಲವಾದರೂ ಹಿಂದೀಯೇತರರು ಒಂದು ಭಾಷೆಯನ್ನು ಹೆಚ್ಚು ಕಲಿಯಬೇಕಾಗುತ್ತದೆಂದರೆ ಅಷ್ಟು ಮಟ್ಟಿಗೆ ಹಿಂದೀ ಭಾಷೆಯವರಿಗೆ ಸುಖ ದೊರಕುವುದೆಂದೂ ಹೇಳುವ ಮಾತನ್ನು ಕಡೆಗಣಿಸಲಂಗದು ಈ ತೆರದ ನ್ಯೂನತೆಗಳನ್ನು ನಿವಾರಿಸಬೇಕೆಂಬುದೂ ಹಿಂದೀಯನ್ನು ಸಾರ್ವತ್ರಿಕವಾಗಿ ಕಲಿಸಲು ಯೋಗ್ಯ ವಿರ್ಪಡಾಗದೆ, ಅದನ್ನು ಆಡಳಿತ ಭಾಷೆಯಾಗಿ ಮಾಡಬಾರದೆನ್ನುವುದೂ ಯೋಗ್ಯವೇ—ಈ ದಿಸೆಯಲ್ಲಿ ಸರಕಾರವನ್ನು ಒತ್ತಾಯಿಸುವುದಕ್ಕೆ ರಾಷ್ಟ್ರ ಧ್ವಜವನ್ನು ಸುಡಬೇಕಾದ ಪ್ರಮೇಯ ಮಾತ್ರ ಇರುವುದಿಲ್ಲ

ಭಾರತೀಯರ ಬಾವುಟದ ಇತಿಹಾಸವನ್ನು ನೆನೆದರೆ ಮೈನವಿರೇಳುತ್ತವೆ. ವಂಗಭಂಗದ ಕಾಲದಲ್ಲಿ (೧೯೦೭) ತಮ್ಮ

(೧೯ನೇ ಪುಟ ನೋಡಿರಿ)

ನಿಸೆಮಾಕ್ಕೆ ಹೋಗಲು ದಂಪತಿಗಳು ನಿಶ್ಚಯಿಸಿದ್ದರು ಬಹಳ ಸಮಯವಾದರೂ ಹೆಂಡತಿಯ ಶೃಂಗಾರ ಮುಗಿಯದಿರಲು ಗಂಡ "ಏನೇ, ನೀನು ಬರುವ ಹಾಗಿದೆಯೋ, ಇಲ್ಲವೆ?" ಎಂದು ಕೇಳಿದ ಅದಕ್ಕೆ ಹೆಂಡತಿ "ನಿಮಗೆ ಏನ್ಸುಸಲ ಹೇಳಬೇಕು — ಎರಡು ನಿಮಿಷದಲ್ಲಿ ಬರುತ್ತೇನೆಂದು ಈಗ ಅರ್ಧಗಂಟೆಯಿಂದ ಕೂಗಿ ಕೊಗ್ಯುತ್ತಾ ಇದ್ದೇನೆ" ಎಂದು ಮೈಮರೆತು ಹೇಳಿದಳು!

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ,
ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.

ಅನಿಕೃತ ಭಂಡವಾಳ	ರೂ 56,00,000	ಕ್ಷೇಮ ನಿಧಿ	ರೂ 13,50,000
ಕೆತ್ತ ಭಂಡವಾಳ	ರೂ 32,11,000	ಠೇವಣಾತಿಗಳು	ರೂ.6,10,00 000
ಕೆತ್ತು ಬಂದ ಭಂಡವಾಳ	ರೂ 25,55,737	ಜಿಲಾವಣಿ ಭಂಡವಾಳ	ರೂ 7,32,00,000

[ತಾ 30—6—1955ರಲ್ಲು]

ನಮ್ಮ ರಾಯಭೂರ (ಹೈದರಾಬಾದ ಸಂಸ್ಥಾನ) ಶಾಖೆಯು
ತಾ 29-7-1955ರಂದು ತೆರೆಯಲ್ಪಡುತ್ತದೆ
ಮುಂಬಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದ
ಮತ್ತು ಕೆರಳ-ಕೊಚ್ಚಿ ಸಂಸ್ಥಾನಗಳಲ್ಲಿ 92 ಶಾಖೆಗಳಿದ್ದು
ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ.

ಟಿ ಎ ಪೈ, ಬಿ ಕೋಂ (ಆನರ್ಸ್),
ಎ ಐ.ಐ ಬಿ, ಎಂ ಎಲ್ ಎ,
ಜನರಲ್ ಮೆನೇಜರ್.

ಟಿ ಎಂ ಎ ಪೈ
ಎಂ ಬಿ, ಬಿ ಎಸ್.,
ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD.
Estd: 1925 H. O UDIPI S India

ಕನ್ನಡ ನಾಡಿನ ಸಮುದ್ರ ತೀರದ ಐಶ್ವರ್ಯ

ಉದ್ಯಮವನ್ನು ಚೆನ್ನಾಗಿ ಬೆಳೆಸಬಲ್ಲವರಿದ್ದರೆ ನೈಸರ್ಗಿಕ ಸಂಪತ್ತಿನ ಕೊರತೆ ಇಲ್ಲಿಲ್ಲ

ದಕ್ಷಿಣ ಕನ್ನಡದ ಅತಿ ದಕ್ಷಿಣಕ್ಕಿರುವ ಚಂದ್ರಗಿರಿ ಹೊಳೆಯು ಕಡಲಿಗೆ ಕೂಡುವಲ್ಲಿಂದ ಉತ್ತರ ಕನ್ನಡ ಜಿಲ್ಲೆಯ ಕಾಳೀ ನದಿಯ ಕಡಲ ಸಂಗಮದ ತನಕ ನಮಗೆ ಸುಮಾರು ಇನ್ನೂರು ಮೈಲು ವಿಸ್ತಾರಕ್ಕೆ ಚಾಚಿರುವ ಸಮುದ್ರ ಭಾಗವು ಕರ್ಣಾಟಕದ ಪದುಗಣ ಮೇರೆಯಾಗಿ ದೊರೆಯುತ್ತದೆ. ಈ ನೈಸರ್ಗಿಕ ಆವರಣದ ಸರಿಯಾದ ಪ್ರಯೋಜನವನ್ನು ದೊರಕಿಸಿ ಕೊಳ್ಳಬಲ್ಲ ಜನಕ್ಕೆ ಇಷ್ಟೊಂದು ವಿಶಾಲವಾದ ಕಡಲ ಕಿನಾರೆ ಬಹು ದೊಡ್ಡದಾದ ಸಂಪತ್ತು.

ವಾಣಿಜ್ಯದ ದೃಷ್ಟಿಯಿಂದಲೂ ಜನಕ್ಕೆ ಜೀವನವನ್ನು ಒದಗಿಸಿಕೊಡಬಲ್ಲ ಹಲವಾರು ವೃತ್ತಿಗಳ ದೃಷ್ಟಿಯಿಂದಲೂ ರಾಷ್ಟ್ರಗಳಿಗೆ ಕಡಲು ತೀರ ಅನಿವಾರ್ಯವಾದ ವಸ್ತು. ಸಂಪತ್ತಿನ ಪೂರೈಕೆಗೆ ಅದು ಹೇಗೆ ನೆರವಾಗುತ್ತದೋ ಮನಸ್ಸಿನ ಸೊಗಸಿಗೂ ಅದು ಅಷ್ಟೇ ನೆರವಾಗಬಲ್ಲುದು. ಈ ಎರಡು ದೃಷ್ಟಿಗಳಿಂದಲೂ ವಿಕೇಕೃತವಾಗಬಹುದಾದ ಕರ್ಣಾಟಕವು ಭಾಗ್ಯಶಾಲಿಯಾದ ಪ್ರದೇಶ.

ಒಳನಾಡಿನ ಸಾರಿಗೆಯು ವಿಚಾರದಲ್ಲಿ ಮುಂಬಯಿಯಿಂದ, ಅಥವಾ ಗುಜರಾತಿನ ಬಂದರುಗಳಿಂದ ಕೊಲೊಂಬೋದ ತನಕ ಇಂದಿಗೂ ಬಹು ಹೆಚ್ಚಿನ ಸಾರಿಗೆ ಕಡಲಿನ ಮೂಲಕ ನಡೆಯುತ್ತದೆ. ಅದು ದೇಶೀಯ ಮಂಜಿ, ಹಡಗು ಮೊದಲಾದವುಗಳ ಮೂಲಕ ಸಾಗುತ್ತದೆ. ಈ ಸಾಗಾಟಕ್ಕೆ ಅನುಕೂಲವಾದ ಬಂದರು ಇಲ್ಲವೆ ರೇವುಗಳ ಸಂಖ್ಯೆಯು ನಮಗೆ ಬಹುವಾಗಿ ದೊರಕಿದೆ. ಕಾರವಾರ, ತದಡಿ, ಕುಮಟೆ, ಭಟ್ಕಳ, ಹೊನ್ನಾವರ, ಗಂಗೊಳ್ಳಿ, ಹಂಗಾರಕಟ್ಟೆ, ಮಲ್ಪೆ, ಮುಲ್ಕಿ, ಮಂಗಳೂರು, ಕಾಸರಗೋಡು ಗಳೆಂದು ಹತ್ತು–ಹದಿನೈದು ಬಂದರುಗಳು ಹಲವು ಶತಮಾನಗಳಿಂದಲೂ ಹಡಗುಗಳ ಪ್ರಯಾಣಕ್ಕೆ ಅನುಕೂಲಿಸಿ ಬಂದಿವೆ.

ಭಟ್ಕಳ ಮೊದಲಾದ ರೇವುಗಳು ಇತಿಹಾಸ ಪ್ರಸಿದ್ಧವಾಗಿವೆ. ಒಂದು ಕಾಲದಲ್ಲಿ ಇಲ್ಲಿಂದ ಪರ್ಶಿಯದ ಕೊಲ್ಲಿ, ಕೆಂಪು ಸಮುದ್ರ ತೀರ ಇತ್ಯಾದಿಗಳಿಗೆ ಹೆಚ್ಚಿನ ವ್ಯಾಪಾರ ನಡೆಯುತ್ತಿದ್ದಿತು. ಗುಜರಾತಿನ ನಾವಿಕರು ಸಿಂಹಳದ ಹಾದಿಯಾಗಿ ಮಲಯದ ತನಕ ಹೋಗುತ್ತಿದ್ದ ಪ್ರಾಚೀನ ಯುಗದಲ್ಲಿ ಕರ್ಣಾಟಕದ ರೇವುಗಳನ್ನು ಬಳಸುತ್ತಿದ್ದರೆಂದು ಊಹಿಸುವುದು ಕಷ್ಟದ ಸಂಗತಿಯಲ್ಲ. ಆದುದು ರಸ್ತುಗಳ ದೃಷ್ಟಿಯಿಂದ ಎಷ್ಟು ಮೌಲ್ಯದ ಸರಕುಗಳು ಈ ರೇವುಗಳ ಮೂಲಕ ಸಾಗುತ್ತಿವೆ ಎಂದು ಹುಡುಕಿ ತೆಗೆಯುವುದೂ ಕಷ್ಟದ ವಿಷಯವಾಗದು.

ಮಳೆಗಾಲದ ದೆಸೆಯಿಂದ ವರ್ಷದ ನಾಲ್ಕೈದು ತಿಂಗಳುಗಳ ಕಾಲ ಇವುಗಳು ಜಡವಾಗಿರಬೇಕಾಗಿರುವುದೇನೋ ನಿಜ. ಅದಕ್ಕಾಗಿಯೇ ಕೇಂದ್ರ ಸರಕಾರದಿಂದ ನೇಮಿತವಾದ ಪ್ರಬುದ್ಧ ಬಂದರ ಸಮಿತಿಯವರು ಮಲ್ಪೆಯ ಹೆಸರನ್ನು ಸೂಚಿಸಿದರು. ಕೆಲವು ಪ್ರತಿಗಾಮಿ ಶಕ್ತಿಗಳಿಂದಾಗಿ ಮಂಗಳೂರಿನಲ್ಲಿ ಅದನ್ನು ರಚಿಸಬೇಕೆಂಬ ಪ್ರಯತ್ನ ಈಗ ನಡೆಯುತ್ತದೆ.

ಇವುಗಳಲ್ಲಿ ಯಾವ ಬಂದರ ಪ್ರಬುದ್ಧ ಬಂದರವಾಗಿ ರಚನೆಗೊಂಡರೂ ಅದಕ್ಕೆ ಬೇಕಾಗುವ ಒಂದು ಕೋಟಿ ಟನ್ನುಗಳ ಆಮದು ರಸ್ತು ವ್ಯಾಪಾರವನ್ನು ಕರ್ಣಾಟಕವು ನಿಶ್ಚಯವಾಗಿಯೂ ಒದಗಿಸಿ ಕೊಡಬಲ್ಲುದು. ಇಂಥ ಪ್ರಬುದ್ಧ ಬಂದರವಿಲ್ಲವೆ ಕರ್ಣಾಟಕದ ವಾಣಿಜ್ಯ ಬೆಳೆಯಲಾರದು. ಅದು ಅಲ್ಲಿಯ ತನಕ ಮದ್ರಾಸು, ಕೊಚ್ಚಿ, ಮರ್ಮಗೋವೆ ಮತ್ತು ಮುಂಬಯಿ ಬಂದರುಗಳನ್ನು ಆಶ್ರಯಿಸಿಕೊಂಡಿರಬೇಕಾಗುತ್ತದೆ.

ಇಷ್ಟೊಂದು ರೇವುಗಳಿದ್ದರೂ ಕರ್ಣಾಟಕದ ಒಳನಾಡಿಗೆ ಹೆಚ್ಚಿನ ಸ್ಪಯೋಜನವಾಗದಿರುವುದಕ್ಕೆ ಏನು ಕಾರಣ? ಈ ಯಾವುದೇ ಬಂದರವನ್ನು ಸಂಧಿಸುವ ಒಳನಾಡಿನಲ್ಲಿ ಚಲಿಸುವ ಒಂದೇ ಒಂದು ರೈಲು ಹಾದಿಯಾಗಲೀ ಸಾಮಾನ್ಯ ಸಾರಿಗೆಗೆ ಅನುಕೂಲಿಸುವ ಕರಾವಳಿಯ ರೈಲು ಹಾದಿಯಾಗಲೀ ಇಲ್ಲಿರುವುದಿಲ್ಲ. ಅಂಥ ರೈಲು ದಾರಿಗಳು ಬೀಳುವತನಕ ಒಳನಾಡಿನ ಮಟ್ಟಿಗೆ ಬಂದರುಗಳಿದ್ದರೂ ಇಲ್ಲವೆಂದೇ ಲೆಕ್ಕ. ಕರಾವಳಿ ಪ್ರದೇಶದ ಸಾಗಾಟಕ್ಕೆ ಮಾತ್ರ ಅವು ಸ್ಪಯೋಜನಕರವಾಗುತ್ತವಲ್ಲದೆ ಒಳನಾಡಿನ ಆಮದು–ರಸ್ತುಗಳಿಗೆ ಸಹಾಯಕವಾಗುವುದಿಲ್ಲ ವಿಕೇಕೃತ ಕರ್ಣಾಟಕವು ತನ್ನ ಯೋಜನೆಗಳಲ್ಲಿ ಈ ಪ್ರಶ್ನೆಗೆ ಪ್ರಧಾನ ಸ್ಥಾನ ಕೊಡಬೇಕಾಗುತ್ತದೆ.

ನಮ್ಮ ಕಡಲ ಕಿನಾರೆಗೆ ಸಂಪರಿಯಾಗಿ ಇಪ್ಪತ್ತು – ಮೂವತ್ತು ಮೈಲು ದೂರದಲ್ಲಿ ನಿಂತಿರುವ ಪಶ್ಚಿಮ ಘಟ್ಟದ ಗೋಡೆಯನ್ನು ನಾವು ಸ್ಪಯೋಜನಕ್ಕೆ ಬಳಸಿಕೊಂಡಿಲ್ಲ. ಇಲ್ಲಿನ ಮಳೆಯು ಸಂವಾಸರಿ ನೂರಮೂವತ್ತು ಅಂಗುಲವಿದೆ ಎಂಬುದನ್ನು ತಿಳಿಕೊಂಡಲ್ಲಿ ಈ ಘಟ್ಟದಲ್ಲಿ ಹುಟ್ಟುವ ಪ್ರತಿಯೊಂದೂ ನದಿಯು ಘಟ್ಟದ ಮೂಡಣ ಭಾಗದ ಕೃಷಿಗೆ ಒದಗಿ ಬರುವುದಲ್ಲದೆ ಯಾವತ್ತೂ ಕರ್ಣಾಟಕಕ್ಕೆ ಬೇಕಾಗುವ, ಅದನ್ನು ನೀರಿ ಇತರರಿಗೂ ನೆರವಾಗಬಲ್ಲ, ವಿದ್ಯುತ್ತನ್ನು ಒದಗಿಸಬಲ್ಲ ಜಲಶಕ್ತಿಯ ಪ್ರದೇಶ ಇದೆಂದು ಹೊಳೆಯುತ್ತದೆ. ಈ ಶಕ್ತಿಯನ್ನು ಉಪಯೋಗಿಸಿಕೊಂಡಲ್ಲಿ ದೇಶದ ಉದ್ಯಮ ಎಷ್ಟೋ ಮುಂದುವರಿದೀತು.

ಸಾವಿರಾರು ಜನರಿಗೆ ಅನ್ನವನ್ನು ಈ ಕಡಲ ಕಿನಾರೆಯು ಒದಗಿಸಬಲ್ಲುದು. ಮೀನುಗಾರಿಕೆಯೇ ಅಲ್ಲಿನ ಜನರ ಮುಖ್ಯ ವೃತ್ತಿ ಮಲ್ಪೆಯು ಭಾರತದಲ್ಲಿಯೇ ಅತಿ ದೊಡ್ಡ ಮೀನುಗಾರಿಕೆಯ ಕೇಂದ್ರವಾಗಬಹುದಾದ ಯೋಗ್ಯತೆ ಪಡೆದಿದೆ ಎಂದು ತಜ್ಞರು ಹೇಳುವರಾದರೂ ಅದರ ಬೆಳವಣಿಗೆಗೆ ಬೇಕಾದ ಪ್ರಯತ್ನಗಳನ್ನು ಮಾತ್ರ ಅವರು ಕೈಗೊಂಡವರಲ್ಲ.

ಇಷ್ಟರ ವರೆಗೆ ಮಳಗಾಲ ಮುಗಿದು ತಿರುಗಿ ತೊಡಗುವ ತನಕ ಕರಾವಳಿಯ ಬೆಸ್ತರು ಕಡಲಿನಲ್ಲಿ ತೀರದಿಂದ ಒಂದು ಮೈಲಿ ನೊಳಗೆ ಮಾರಿಬಲೆ, ರಂಪಣಿ ಬಲೆ ಇತ್ಯಾದಿಗಳನ್ನು ಬೀಸಿ ಬೇಕಷ್ಟು ಮೀನುಗಳಿಸುತ್ತಿದ್ದರೂ ಈ ವ್ಯಾಪಾರ ಅಭಿವೃದ್ಧಿ ಹೊಂದುವುದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಮೀನು ಕಡಿಮೆಯಾಗಿ ಬಂದಾಗ ಸ್ಥಳೀಯ ಸಂತೆಯಲ್ಲಿ ವಿಕ್ರಯವಾಗುತ್ತದೆ. ತುಸು ಹೆಚ್ಚಿಗೆ ಬಂದರೆ ಅದಕ್ಕೆ ಉಪ್ಪು ಹಾಕಿ, ಒಣಗಿಸಿ ಕೊಚ್ಚಿ ಮೊದಲಾದ ಕಡೆಯ ದೊಡ್ಡ ವ್ಯಾಪಾರಿಗಳಿಗೆ ಮಾರಬೇಕಾಗುತ್ತದೆ. ಅದರ ಲಾಭವು ಸಂಪೂರ್ಣವಾಗಿ ಸ್ಥಳೀಯ ಬೆಸ್ತರಿಗೆ ಸಿಗುತ್ತಿರುವುದಿಲ್ಲ.

ಬೈಗೆ ಮೀನು ಕಳೆದವರ್ಷ ಅತಿಹೆಚ್ಚಾಗಿ ಬಿದ್ದಿತು. ಒಂದು ಬಲೆಗೆ ಕೆಲವು ಲಕ್ಷಗಳ ತನಕವೂ ಈ ಮೀನು ಬೀಳುತ್ತದೆ. ಆಗ ಅದಕ್ಕೆ ಗಿರಾಕಿಯೇ ಇಲ್ಲ. ಆದುದರಿಂದ ಬಂದ ಮೀನನ್ನು ಗೋಚಿ, ಹೂತು ವ್ಯರ್ಥಮಾಡಬೇಕಾಗುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಈ ಮೀನು ಅತಿಯಾಗಿ ಬರುತ್ತಿದ್ದಾಗ ಎಣ್ಣೆ ಗಾಣಗಳನ್ನು ನಡೆಸುತ್ತಿದ್ದರು. ಈಗ ಆ ಗಾಣಗಳಿಲ್ಲ.

ಮೀನನ್ನು ಗೊಬ್ಬರವಾಗಿ ಪರಿವರ್ತಿಸಿದರೆ ಅದಕ್ಕೆ ಹೆಚ್ಚಿನ ಬೆಲೆ ಇಲ್ಲ. ಆಹಾರವಾಗಿ ಅದನ್ನು ಸಾಗಿಸುವುದಕ್ಕೆ ಬೇಕಾದ ಶೀತಗೊಳಿಸುವ ಮನೆಗಳಿಲ್ಲ. ಮಂಗಳೂರಿನಲ್ಲಿ ಅಂಥದೊಂದನ್ನು ಕಟ್ಟುವ ಪ್ರಯತ್ನ ನಡೆಯುತ್ತದೆ. ಆದರೆ ಒಂದೊಂದು ರೇವಿನಲ್ಲಿ ಅಂಥದೊಂದು ಮನೆ ಇದ್ದರೆಯೇ ಪ್ರಯೋಜನ. ಅಲ್ಲಿಂದ ಮೀನನ್ನು ಸಾಗಿಸುವುದಕ್ಕೆ ಮರಳಿ ರಿಫ್ರಿಜರೇಟರುಗಳುಳ್ಳ ಮೋಟಾರು ವಾಹನಗಳು ಬೇಕು. ಒಳನಾಡಿಗೆ ರೈಲು ಸಂಪರ್ಕವಾದರೂ ಇದ್ದಿದ್ದರೆ ಬೇಗನೆ ಮೀನನ್ನು ಸಾಗಿಸುವುದು ಸಾಧ್ಯವಾಗುತ್ತಿದ್ದಿತು. ಬಲೆ ಬೀಸಿದ ಇಪ್ಪತ್ತನಾಲ್ಕು ತಾಸಿನೊಳಗೆ ಗಿರಾಕಿಯನ್ನು ಸೇರಿದರೆಯೇ ಮೀನಿಗೆಬೆಲೆ.

ಇದಾವುದೂ ಆಗದಿದ್ದ ಕಾಲದಲ್ಲಿ ಬಂದ ಮೀನನ್ನುಳೊಳೆಯುವುದಕ್ಕೆ ಬಿಡದೆ ಪ್ರಯೋಜನಕ್ಕೆ ತರಬೇಕಾದರೆ ಅದು

(೧೧ನೇ ಪುಟ ನೋಡಿರಿ)

ದಿ ಜುಪಿಟರ್ ಜನರಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ-1.

ಒಟ್ಟು ನಿಧಿ ರೂಪ್ಯಾ 3 ಕೋಟಿ 50 ಲಕ್ಷಕ್ಕೆ ವಿಕ್ಕಿ ಇದೆ.

ಪೋಲಿಸಿದಾರರಿಗೆ ಆಗಾಗ್ಗೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.

ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ, ಪಾಕಿಸ್ತಾನ, ಬರ್ಮಾ, ಸಿಲೋನ್, ಬ್ರಿಟಿಷ್ ಆಫ್ರಿಕಾ, ಲಂಡನ್ ಇತ್ಯಾದಿ ಕಡೆಗಳಲ್ಲಿ ಶಾಖಾ, ಆಫೀಸುಗಳೂ ಏಜನ್ಸಿ ಆಫೀಸುಗಳೂ ಇವೆ.

ಪ್ರಾತಿನಿಧ್ಯಕ್ಕೆ ವ ಇತರ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ:

ಯಸ್. ಎ. ಹೆಗ್ಡೆ,

ಸುಪರಿಂಟೆಂಡೆಂಟ್, ಆಫ್ ಏಜನ್ಸಿಸ್,

ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಪೋಸ್ಟ್ ಶಿರ್ಸಿ, ದ. ಕ.

ಶ್ರೀ ರಾಜರಾಜೇಶ್ವರಿ ದೇವಸ್ಥಾನ,

ಪೊಳಲಿ ಪೋಸ್ಟ್, ದ. ಕನ್ನಡ.

(ಪುಳಿನಾಪುರಂ)

ಸಮಸ್ತ ಭಕ್ತಾದಿಗಳಲ್ಲಿ:

"ಕರ್ಕಾಟಕ ಮಾಸವು (ಜುಲ್ಯಾ 16ರಿಂದ ಆಗೋಸ್ತು 16ರ ವರೆಗೆ) ಭಗವತೀ ಸೇವೆಗೆ ಅತ್ಯಂತ ಪವಿತ್ರ ಕಾಲವಾದ್ದರಿಂದ ಈ ಕ್ಷೇತ್ರದಲ್ಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ಪಾದಾರವಿಂದಗಳಲ್ಲಿ ಕೆಳಗೆ ನಮೂದಿಸಿದ ಪೂಜೆ, ಅರ್ಚನಾದಿಗಳನ್ನು ಭಕ್ತರ ಮನೋಭೀಷ್ಟ ಸಿದ್ಧಿಗೋಸ್ಕರ ವ ಮುಂದಿನ ಅಭ್ಯುದಯಕ್ಕಾಗಿ ಕೂಡ ಶ್ರೀ ವಿದ್ಯಾ ಪದ್ಧತಿಗನುಸಾರವಾಗಿ ಪಾಟಲ, ಮಂದಾರ, ಜಪಾ, ಕುಂದ, ಅಶೋಕ, ಪುನ್ನಾಗ ಇತ್ಯಾದಿ ಪುಷ್ಪ ವಿಶೇಷಗಳಿಂದ ನಡಿಸುವದಾಗಿ ನಿರ್ಣೈಸಿರುತ್ತದೆ. ಭಕ್ತಾದಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಸೇವೆಗಳನ್ನು ಮಾಡಿಸಿ ಕೃತಾರ್ಥರಾಗಬೇಕಾಗಿ ವಿನಂತಿ. ಸೇವೆ ಬಗ್ಗೆ ಹಣ ಕಳುಹಿಸುವಾಗ ಹೆಸರು, ಜನ್ಮ ನಕ್ಷತ್ರ ಇತ್ಯಾದಿಗಳನ್ನು ಬರೆದು ಕಳುಹಿಸುವದು.

ಪೊಳಲಿ, 1-7-1955. ಜಿ. ಎ ಭಟ್ಟ, ಮೆನೇಜರ್.

ಸೇವೆಗಳ ವಿವರ:

1. ತ್ರಿಕಾಲ ಪೂಜಾ	15 0 0		6. ಅಷ್ಟೋತ್ತರ	1 0 0
2. ಸಹಾವರಣ ಪೂಜಾ	10 0 0		7. ಸೌಂದರ್ಯಲಹರಿ ಅರ್ಚನೆ	3 0 0
3. ಮಿಷ್ಟಮಾಲಾ ಪೂಜಾ	10 0 0		8. ಚಾರಾವಿಂಶತಿ ಅರ್ಚನೆ	1 8 0
4. ಲಲಿತ ಸಹಸ್ರ ನಾಮಾರ್ಚನೆ	3 0 0		9. ಗಾಯತ್ರಿ ಪೂಜಾ	2 0 0
5. ತ್ರಿಶತಿ ಅರ್ಚನೆ	1 8 0		10. ಶ್ರೀ ಚಕ್ರಾರ್ಚನೆ	50 0 0

ಸ್ಟೇಟ್ ಬ್ಯಾಂಕ್ ಸ್ಥಾಪನೆಯ ಮೂಲೋದ್ದೇಶ

ರಿಜರ್ವ್ ಬೇಂಕಿನ ಗವರ್ನರರ ವಿವರಣೆ

ಇದೇ ಜುಲಾಯಿ ತಿಂಗಳ ಮೊದಲನೇ ತಾರೀಕಿನಿಂದ ಭಾರತದ ಇಂಪೀರಿಯಲ್ ಬೇಂಕು "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ"ವಾಗಿ ಪರಿವರ್ತನೆಯನ್ನು ಹೊಂದಿರುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ಸಾಲದೊರೆಯದಲ್ಲಿ ಹಣವನ್ನು ಒದಗಿಸಿಕೊಡುವ ಉಪಾಯಗಳನ್ನು ತಿಳಿಸಲು ನೇಮಿಸಿದ್ದ ಸಮಿತಿಯ ಸೂಚನೆಯಂತೆ ನಡೆದಿರುವ ಈ ಏರ್ಪಾಡಿನ ಕುರಿತು ಕೆಲವು ವರ್ತಮಾನಗಳಲ್ಲಿ "ಇದು ಕೇವಲ ಆದರ್ಶವಾದದ ತಳಹದಿಯ ಮೇಲಿನ ಪ್ರಯೋಗ" ಎಂಬ ಭಾವನೆಯೂ ವಾಣಿಜ್ಯ ವ್ಯವಹಾರದಲ್ಲಿ ನಿರತವಾಗಿರುವ ದೇಶದ ಎಲ್ಲ ಬೇಂಕುಗಳ ರಾಷ್ಟ್ರೀಕರಣದ ಪ್ರಥಮ ಹೆಜ್ಜೆ ಎಂಬ ಭಯವೂ ಕಂಡುಬರುತ್ತದೆ. ಆದುದರಿಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಮೂಲೋದ್ದೇಶಗಳನ್ನು ಜನರು ತಿಳಿದಿರುವುದು ಹಿತಕರ.

ದೇಶದ ಕ್ಷಿಪ್ರ ಅಭಿವೃದ್ಧಿಯು, ಖಾಸಗಿ ಕ್ಷೇತ್ರದಲ್ಲಿಯೇ ಆಗಲಿ, ನಡೆಯ ಬೇಕಾಗಿದ್ದರೆ ಭಂಡವಾಳವಾಗಿ ತೊಡಗಿಸಲ್ಪಡುವ ಹಣದ ಹೊರತಾಗಿ ಮೂರು ಇತರ ಅವಶ್ಯಕತೆಗಳಿವೆ— (೧) ಸುಲಭದಲ್ಲಿ ಸಾಲಸಿಗುವ ಏರ್ಪಾಡು, (೨) ಅಗ್ಗದಲ್ಲಿ ಶಕ್ತಿಯ ಪೂರೈಕೆ ಮತ್ತು (೩) ಸಾರಿಗೆಯ ಧಾರಾಳ ಅನುಕೂಲತೆ. ಸಾಲವನ್ನು ಸುಲಭದಲ್ಲಿ ಒದಗಿಸಿಕೊಡಬಲ್ಲ ವ್ಯವಸ್ಥೆ ಇಲ್ಲವಾದಲ್ಲಿ ಗಣನೀಯ ಪ್ರಮಾಣದಲ್ಲಿ ಔದ್ಯಮಿಕ ಅಭಿವೃದ್ಧಿಯು ಕೈಗೂಡಲಾರದು. ಭಾರತದ ಎಲ್ಲ ಶೆಡ್ಯೂಲ್ಡ್ ಬ್ಯಾಂಕುಗಳಿಗೆ ದೇಶದೊಳಗಿರುವುದು ಒಟ್ಟು ೨೮೦೦ ಶಾಖೆಗಳು ಮಾತ್ರ; ನೂರಕ್ಕಿಂತಲೂ ಹೆಚ್ಚು ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಇಂಪೀರಿಯಲ್ ಬೇಂಕ್ ಅಥವಾ ಬೇರಾವುದೇ ದೊಡ್ಡ ಶೆಡ್ಯೂಲ್ಡ್ ಬ್ಯಾಂಕಿನ ಶಾಖೆಗಳಿರುವುದಿಲ್ಲ

ಕೈಗಾರಿಕೆಯ ಕ್ಷೇತ್ರದಲ್ಲಿ ತುಂಬ ಮುಂದುವರಿದಿರುವ ಬ್ರಿಟನಿನೊಡನೆ ಹೋಲಿಸಿದರೆ ನಮ್ಮ ದೇಶದ ಪರಿಸ್ಥಿತಿಯಲ್ಲಿ ಬಹಳ ಹೆಚ್ಚು ತಾರತಮ್ಯ ಕಂಡುಬರುತ್ತದೆ. ಭಾರತದ ಎಲ್ಲ ದೊಡ್ಡ ಶೆಡ್ಯೂಲ್ಡ್ ಬ್ಯಾಂಕುಗಳ ಎಲ್ಲ ಶಾಖೆಗಳ ಒಟ್ಟು ಸಂಖ್ಯೆಯಷ್ಟು ಶಾಖೆಗಳನ್ನು ಬ್ರಿಟನಿನ ಒಂದು ಪ್ರಮುಖ ಬ್ಯಾಂಕು ಪಡೆದಿರುತ್ತದೆ! ಭಾರತಕ್ಕಿಂತ ಎಷ್ಟೋ ಸಣ್ಣ ದೇಶವಾಗಿರುವ ಬ್ರಿಟನಿನಲ್ಲಿ ನಮ್ಮಲ್ಲಿನ ಬ್ಯಾಂಕುಗಳ ಒಟ್ಟು ಶಾಖೆಗಳ ನಾಲ್ಕು ಪಾಲಿನಷ್ಟು ಶಾಖೆಗಳನ್ನು ಅಲ್ಲಿನ ಬ್ಯಾಂಕುಗಳು ತೆರೆದಿರುತ್ತವೆ.

ಸಾಲವನ್ನು ಸುಲಭವಲ್ಲಿ ಕೊಡುವುದರ ಹೊರತಾಗಿ, ಉಳಿತಾಯ ಪ್ರವೃತ್ತಿಯನ್ನು ಚೆನ್ನಾದ ರೀತಿಯಲ್ಲಿ ಪೋಷಿಸಿಕೊಂಡು ಬರುವುದಕ್ಕೆ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಭದ್ರವಾದ ಮತ್ತು ಸುವ್ಯವಸ್ಥಿತ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಹೋಗುವ ಬ್ಯಾಂಕುಗಳ ವಿಸ್ತರಣೆಯು ಅಗತ್ಯ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಲಾಗಿರುವ ಮಟ್ಟದಲ್ಲಿ ರಾಷ್ಟ್ರದ ಅಭಿವೃದ್ಧಿಯು ಕೈಗೂಡಿ ಬರುವುದಕ್ಕೆ ವಾತಾವರಣದ ಅನುಕೂಲತೆಯನ್ನು ನೋಡಿಕೊಂಡು "ಕೊರತೆ ಧನ ವಿನಿಯೋಗ"ದ ಪದ್ಧತಿಯನ್ನು ಕೆಲಮಟ್ಟಿಗೆ ಅನುಸರಿಸಲಾಗುವುದೆಂಬುದು ನಿಜ; ಆದರೆ, ಕೊನೆಗೆ, ಎಲ್ಲ ಹಣವೂ ಜನರಿಂದಲೇ ಉಳಿತಾಯದ ರೂಪದಲ್ಲಿ ಯೋಜನೆಗೆ ಒದಗಿ ಬರಬೇಕಾಗುತ್ತದೆ. ಆದುದರಿಂದ ಈ ಉಳಿತಾಯವನ್ನು ಸಂಗ್ರಹಿಸಬಲ್ಲ ಮತ್ತು ಔದ್ಯಮಿಕ ಹಾಗು ಕೃಷಿ ವಲಯಗಳ ಅಭಿವೃದ್ಧಿಗೆ ಉಳಿತಾಯದ ಹಣವನ್ನು ಒದಗಿಸಬಲ್ಲ ಬ್ಯಾಂಕಿಂಗ್ ಸಂಸ್ಥೆ ನಮಗೆ ಬೇಕೇ ಬೇಕು.

ಕೆಲವು ವರ್ಷಗಳಿಂದೀಚೆಗೆ ಭಾರತದ ರಿಜರ್ವ್ ಬೇಂಕು ವ್ಯಾಪಕವಾಗಿ ಬ್ಯಾಂಕಿಂಗ್ ಸೌಲಭ್ಯಗಳನ್ನು ವಿಸ್ತರಿಸುವ ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದೆಂದು ಮನನ ಮಾಡತೊಡಗಿತು. ಹಾಗೆ ವಿಸ್ತರಣೆಯ ವ್ಯವಸ್ಥೆಗಳನ್ನು ಮಾಡುವುದಕ್ಕೆ ಮುಂಚೆ, ಜನರಿಗೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾಕಷ್ಟು ನಂಬಿಕೆ ಉಳಿಯುವಂತೆ ಮಾಡಬೇಕಾದದ್ದು ಅಗತ್ಯವೆಂದು ಕಂಡಿತು. ಕಳೆದ ಒಂದು ದಶಕದಲ್ಲಿ ಬಹು ಸಂಖ್ಯೆಯಲ್ಲಿ ನಾಯಿ ಕೊಡೆಗಳ ಮಾದರಿಯ ಬ್ಯಾಂಕುಗಳು ತಲೆಎತ್ತಿದ್ದವು; ಅವುಗಳಲ್ಲಿ ಹಲವು ದಿವಾಳಿ ಹೋಗಿದ್ದವು. ಇದರಿಂದ ಜನರಿಗೆ ಬ್ಯಾಂಕಿಂಗ್ ವ್ಯವಸ್ಥೆಯ ಮೇಲಿದ್ದ ವಿಶ್ವಾಸ ಅಲುಗಾಡ ಹತ್ತಿತು. ಆದುದರಿಂದ ಕಳೆದು ಹೋಗತೊಡಗಿದ ಭರವಸೆಯನ್ನು ತಂದುಕೊಡಲಿಕ್ಕೋಸ್ಕರ ರಿಜರ್ವ್ ಬೇಂಕ್ ಎಲ್ಲ ಬೇಂಕುಗಳನ್ನು ಆಗಿಂದಾಗ್ಗೆ ಪರೀಕ್ಷಿಸುವ ಪದ್ಧತಿಯನ್ನು ಪ್ರಾರಂಭಿಸಿತು. ಇದರಿಂದ ಬ್ಯಾಂಕಿಂಗ್ ಪದ್ಧತಿಯ ಭದ್ರತೆಯನ್ನು ಕಾಯ್ದುಕೊಂಡು ಹೋಗುವುದಕ್ಕೆ ತುಂಬ ಸಹಾಯವಾಯಿತು.

ಡಾ. ಜಾನ್ ಮಥಾಯಿಯವರು ಭಾರತ ಸರಕಾರದ ಅರ್ಥ ಸಚಿವರಾಗಿದ್ದಾಗ ರಿಜರ್ವ್ ಬೇಂಕಿನ ಗವರ್ನರರಾಗಿರುವ ಶ್ರೀ. ಬೆನೆಗಲ್ ರಾಮರಾಯರು ಇಂಪೀರಿಯಲ್ ಬ್ಯಾಂಕನ್ನು ಸಾಮಾನ್ಯ ಪಟ್ಟಣಗಳಿಗೂ ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸುವ ಒಂದು ಸೂಚನೆಯನ್ನು ಮುಂದಿಟ್ಟರು. ಈಗ ಭಾರತದಲ್ಲೆಲ್ಲ ಸಾವಿರದೈನೂರಕ್ಕಿಂತಲೂ ಹೆಚ್ಚು ಟ್ರೆಜರಿ ಮತ್ತು ಸಬ್ ಟ್ರೆಜರಿಗಳು ನಾಣ್ಯ ಚಲಾವಣೆಯನ್ನು ವ್ಯವಸ್ಥಿತಗೊಳಿಸುವ, ಆದಾಯವನ್ನು ಸ್ವೀಕರಿಸಿ ಸರಕಾರದಿಂದ ಸಲಬೇಕಾದುದನ್ನು ಸಂದಾಯ ಮಾಡುವ ಕೆಲಸಗಳನ್ನು ಮಾಡುತ್ತವೆ. ಆದರೆ ಸುಲಭದ ಸಾಲವನ್ನು ಹರೈಸುವ ಕೆಲಸ ಮಾತ್ರ ಇವುಗಳಿಂದಾಗುತ್ತಿಲ್ಲ. ಇಂಪೀರಿಯಲ್ ಬ್ಯಾಂಕಿನ ಶಾಖೆಗಳು ಇದ್ದಲ್ಲಿ ಮಾತ್ರ ಈ ಶಾಖೆಗಳು ಸರಕಾರದ ಟ್ರೆಜರಿ, ಸಬ್ ಟ್ರೆಜರಿಗಳು ಮಾಡುವ ಎಲ್ಲ ಕೆಲಸಗಳನ್ನೂ ನಿರ್ವಹಿಸುವುದಲ್ಲದೆ ಸುಲಭದಲ್ಲಿ ಸಾಲವನ್ನು ಜನರಿಗೆ ಒದಗಿಸಲೂ ವಾಣಿಜ್ಯತತ್ವದ ಮೇಲೆ ಮುಂದಾಗುತ್ತಿದ್ದವು. ಆದುದರಿಂದ ಟ್ರೆಜರಿ ಮತ್ತು ಸಬ್ ಟ್ರೆಜರಿಗಳ ಕೆಲಸವನ್ನು ಇಂಪೀರಿಯಲ್ ಬ್ಯಾಂಕಿನ ಶಾಖೆಗಳು ಮಾಡುವಂತೆ ನೋಡಬೇಕೆಂಬುದು ರಾಮರಾಯರ ಸೂಚನೆಯ ತಿರುಳಾಗಿದ್ದಿತು.

ಗ್ರಾಮಾಂತರ ಪ್ರದೇಶಗಳಿಗೆ ಸುಲಭದಲ್ಲಿ ಬಂಡವಾಳವನ್ನು ಪೂರೈಸುವ ದೃಷ್ಟಿಯಿಂದ ಈ ಸೂಚನೆಗಳನ್ನು ವಿಚಾರಿಸಲು ಡಾ. ಜಾನ್ ಮಥಾಯಿಯವರು ಸರ್ ಪುರುಷೋತ್ತಮದಾಸ್ ಠಾಕುರ್ ವಾಸರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ೧೯೫೦ರಲ್ಲಿ ಈ ಸಮಿತಿಯು ಒಂದು ವರದಿಯನ್ನು ಒಪ್ಪಿಸಿ, ರಾಮರಾಯರ ಸೂಚನೆಯನ್ನು ಪುರಸ್ಕರಿಸಿತಲ್ಲದೆ, ಐದು ವರ್ಷಗಳಲ್ಲಿ ಇಂಪೀರಿಯಲ್ ಬ್ಯಾಂಕು ೨೮೦೦ ಶಾಖೆಗಳನ್ನು ಹೊಸತಾಗಿ ತೆರೆಯುವಂತೆ ಒತ್ತಾಯಿಸಬೇಕಾಗಿ ಹೇಳಿತು. ಆದರೆ ರಿಜರ್ವ್ ಬೇಂಕಿನ ತೀವ್ರ ಒತ್ತಾಯವಿದ್ದರೂ ಸಹ ಇಂಪೀರಿಯಲ್ ಬ್ಯಾಂಕು ಕೇವಲ ಅಂ ೨೮೦೦ ಶಾಖೆಗಳನ್ನು ಮಾತ್ರ ಹೊಸತಾಗಿ ತೆರೆದಿರುತ್ತದೆ.

ಹಳ್ಳಿಗಳಿಗೆ ಸುಲಭದಲ್ಲಿ ಹಣವನ್ನು ಒದಗಿಸಿಕೊಡಬಲ್ಲ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಲು ವ್ಯಾಪಾರಿಕವಾದ ತೊಡಕುಗಳು ಇಂಪೀರಿಯಲ್ ಬ್ಯಾಂಕಿಗೆ ಇದ್ದವೆಂಬುದನ್ನು ಮರೆಯಲಾಗದು. ತೆರೆಯಲ್ಪಟ್ಟ ಎಷ್ಟೋ ವರ್ಷಗಳ ವರೆಗೆ ಈ ಹೊಸ ಶಾಖೆಗಳು ಲಾಭದಾಯಕವಾಗುವುದಿಲ್ಲ; ಆದುದರಿಂದ, ದೇಶದ ಹಿತದೃಷ್ಟಿಯೇ ಆಗಲಿ, ತನ್ನ ಲಾಭದ ಅಂಶವೂ ಕಡಿಮೆಯಾಗುವುದನ್ನು ಹೆಚ್ಚಾಗಿ ಮಧ್ಯಮ ವರ್ಗಕ್ಕೆ ಸೇರಿದ ಇಂಪೀರಿಯಲ್ ಬ್ಯಾಂಕಿನ ಪಾಲುದಾರರು ಸಹಿಸುವಂತಿರಲಿಲ್ಲ. ಇದೇ ರೀತಿಯ ತೊಂದರೆಯನ್ನು ವಾಣಿಜ್ಯ ಕ್ಷೇತ್ರದಲ್ಲಿ ವ್ಯವಹರಿಸುತ್ತಿರುವ ಇತರ ಬೇಂಕುಗಳೂ ವ್ಯಕ್ತಪಡಿಸುತ್ತವೆ. ಈಚೆಗೆ ನ್ಯಾಯಮಂಡಳಿಗಳ ಕೊಡುಗೆಗಳ ದೆಸೆಯಿಂದ ಈ ಬ್ಯಾಂಕುಗಳ ಆದಾಯದ ವೆಚ್ಚವು ಬಹಳವಾಗಿ ಹೆಚ್ಚಿರುತ್ತದೆ ಈ ಪರಿಸ್ಥಿತಿಯಲ್ಲಿ ಖಾಸಗಿ ಸಂಸ್ಥೆಗಳು ಕೆಲವು ವರ್ಷಗಳ ವರೆಗಾದರೂ ಜನತೆಯ ಜೀವನಮಟ್ಟವನ್ನು ಎತ್ತರಿಸಬಲ್ಲ ಮತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಣಾಮಕರವಾಗಿ ಬಗೆಹರಿಸಬಲ್ಲ ಔದ್ಯಮಿಕ ಹಾಗು ಕೃಷಿ ವಲಯದ ಅಭಿವೃದ್ಧಿಗೆ ಬೇಕೆನಿಸಿದಷ್ಟು ಸಾಲದ ಸೌಕರ್ಯವನ್ನು ಒದಗಿಸಿ ಕೊಡಲಾರವೆಂದು ಸ್ಪಷ್ಟವಾಯಿತು.

ನಿರುದ್ಯೋಗದ ಸಮಸ್ಯೆಯನ್ನು ಹೊಸ ತಳಹದಿಯ ಮೇಲೆಯೇ ಪರಿಹರಿಸಲು ನೋಡಬೇಕೆಂದು ಈ ಸಂದರ್ಭದಲ್ಲಿ ಹೊಳೆಯಿತು. ಘನೋತ್ಪನ್ನಗಳನ್ನು ಒಂದೆಡೆ, ಮತ್ತು ಗೃಹೋತ್ಪನ್ನಗಳನ್ನು ಇನ್ನೊಂದೆಡೆ ಬೆಳೆಸಿದ ಮಾತ್ರಕ್ಕೆ ನಿರುದ್ಯೋಗ ಸಮಸ್ಯೆ ಬಿಡಿಸ್ಪಾಇದೆಂಬ ಸತ್ಯತಥ್ಯರಿಗೆ ಮನವರಿಕೆಯಾಗ ಹತ್ತಿತು. ಮಧ್ಯಮ ಹಾಗು ಸಣ್ಣ ಪ್ರಮಾಣದಲ್ಲಿ ಅನೇಕ ಹೊಸ ಕೈಗಾರಿಕೆಗಳು ಬರೆ ಎಷ್ಟೇಯೆಂದೂ ಘನೋ

(೧೦ನೇ ಪುಟ ನೋಡಿರಿ)

ಮುಂದಿನ ವರುಷ ನಾವು ನಮ್ಮ
ಸುವರ್ಣೋತ್ಸವವನ್ನು
ಆಚರಿಸಲಿದ್ದೇವೆ— ಈ ಗಡಿಯನ್ನು ಮುಟ್ಟಲು
ಅಸಂಖ್ಯಾತ ಸ್ನೇಹಿತರು ನಮಗಿತ್ತ ಹುಮ್ಮನಸ್ಸಿನ
ಆಶ್ರಯಕ್ಕಾಗಿ ಧನ್ಯವಾದಗಳು.

ನಾಲ್ಕು ಮಹಾರಾಷ್ಟ್ರಗಳ ವರಿಷ್ಠರ ಪರಿಷತ್ತಿನ ಮುಕ್ತಾಯ

ಮೇಜಿನ ಮುಂದೆ ನಡೆದುದು ಕಡಿಮೆ— ತೆರೆಯ ಮರೆಯ ಚಟುವಟಿಕೆಯೇ ಅಧಿಕ

ಕಾರ್ಯಕ್ರಮಗಳನ್ನು ಪ್ರಾರಂಭಿಸಿದ ಆರು ದಿನಗಳಲ್ಲಿ, ಆದರೆ ಶನಿವಾರ (ದಿನಾಂಕ ೨೩) ರಾತ್ರಿಗೆ ಜಿನೇವದಲ್ಲಿ ಸೇರಿದ್ದ ಚತೂರಾಷ್ಟ್ರ ವರಿಷ್ಠರ ಪರಿಷತ್ತು ಮುಕ್ತಾಯವಾಯಿತು. ಪರಿಷತ್ತು ಯಶಸ್ವಿಯಾಯಿತೆ? ಎಂದರೆ "ಹೌದು" ಎಂದು ಉತ್ತರಿಸಬಹುದು; ಯಶಸ್ವಿಯಾಗಲಿಲ್ಲವೆ? ಎಂದರೆ "ಇಲ್ಲ" ಎಂದೂ ಹೇಳಬಹುದು. ಆದರೆ ಪ್ರಸಂಗದ ಈಗಿನ ಪರಿಸ್ಥಿತಿಯಲ್ಲಿ ಯಾರೊಬ್ಬರೂ ಎರಡನೆಯ ಪ್ರಶ್ನೆಯನ್ನು ಕೇಳುವ ಮನೋಭಾವವನ್ನು ಹೊಂದಿಲ್ಲ, ಆ ಪ್ರಶ್ನೆಗೆ ಬರಬಹುದಾದ ನಕಾರಾತ್ಮಕ ಉತ್ತರದಿಂದ ಆಗಬಹುದಾದ ಆಘಾತವನ್ನು ತಡೆದುಕೊಳ್ಳಲು ಯಾರೂ ಸಿದ್ಧರಿಲ್ಲ. ಸ್ವತಃ ನಾಲ್ಕು ಮಹಾರಾಷ್ಟ್ರಗಳಲ್ಲಿಯ ಪ್ರಸ್ತುತ ವಿದ್ಯಮಾನ ಹಾಗಿರುತ್ತದೆ—ಎಂದ ಮೇಲೆ ಜಾಗತಿಕ ಶಾಂತಿಗಾಗಿ ಬಾಯಿ ಬಿಡುತ್ತಿರುವ ಕೋಟ್ಯಾಂತರ ಜನರು ಜಿನೇವದ ಪರಿಷತ್ತು ಉಪಯುಕ್ತವಾಯಿತು ಎಂಬ ಉತ್ತರವನ್ನೆ ನಿರೀಕ್ಷಿಸಿದ್ದರೆ ಅದು ತೀರ ಸಹಜ

ಅಂತಿಮ ನಿರ್ಣಯ

ಆದುದರಿಂದ ಶುಭಾರಂಭದ ಬೆನ್ನಿಗೆ ಕಾಣಿಸಿಕೊಂಡ ಬಿಕ್ಕಟ್ಟನ್ನು ಐದನೇ ದಿನದ ಗುಪ್ತ ಸಭೆಯಲ್ಲಿ ಹೇಗಾದರೂ ಬಿಡಿಸಿಕೊಂಡು, ಪ್ರಸಂಜದ ಮುಂದೆ ನಾವು ಸಾಮಾನ್ಯ ಒಮ್ಮತಕ್ಕೆ ಬಂದಿದ್ದೇವೆ ಎಂದು ಸಾರಲು ಜಗತ್ತಿನ ನಾಲ್ಕು ಮಹಾರಾಷ್ಟ್ರಗಳ ಅಗ್ರಗಣ್ಯ ನಾಯಕರು ತುಂಬ ಸಿದ್ಧತೆಯನ್ನು ನಡೆಸಿದರು. ಸಮ್ಮೇಳನ ಅಯಶಸ್ವಿಯಾಯಿತೆಂಬ ಹೇಳಿಕೆ ಕೊಡಬೇಕಾದ ಪ್ರಸಂಗವನ್ನು ತಪ್ಪಿಸಲು ಅವರು ಕೊನೆಯ ಸಾಹಸವನ್ನು ಕೈಗೊಂಡರು. ಎಲ್ಲಾಗೂ ಶಾಂತಿ ಬೇಕಾಗಿದ್ದಿತು—ಆದರೆ "ತ್ಯಾಗ"ಕ್ಕೆ ಯಾರೂ ಸಿದ್ಧರಾಗಿರಲಿಲ್ಲ; ಆದಾಗ್ಯೂ ಹಾಗೆ ತ್ಯಾಗವನ್ನು ಸ್ವಲ್ಪ ಮಟ್ಟಿಗಾದರೂ ಮಾಡಿದ್ದರೆ ಅದು ರಮ್ಯ ಮಾತ್ರ. ಈ ತ್ಯಾಗದ ಪರಿಣಾಮವಾಗಿಯೇ ನಿಶ್ಚಯಕ್ಕೂ ಕುಸಿದುಬೀಳಬಹುಬಾಗಿದ್ದ ಮಾತುಕತೆಗಳು ಅಲ್ಪ ಸಮಾಧಾನವನ್ನಾದರೂ ಉಂಟುಮಾಡುವ ಕೊನೆಯ ಹೇಳಿಕೆಯಲ್ಲಿ ಮುಕ್ತಾಯವಾಗುವಂತಾಯಿತು. ಪರಿಷತ್ತಿನ ಕೊನೆಯಲ್ಲಿ ಹೊಂಟ ಪ್ರಕಟಣೆ ಹೇಳುವುದಿಷ್ಟೇ— 'ಚತೂರಾಷ್ಟ್ರ ವರಿಷ್ಠರು ಜರ್ಮನಿ ಮತ್ತು ಯುರೋಪಿನ ಭದ್ರತೆಯ ಕುರಿತು ಇಲ್ಲಿ ನಡೆದ ಮಾತುಕತೆಗಳ ಮತ್ತು ಮುಂಡಿಸಲಾದ ಸೂಚನೆಗಳ ಜಾಕಟ್ಟಿನಲ್ಲಿ ಹೆಚ್ಚಿನ ವಿಚಾರ ವಿನಿಮಯವನ್ನು ಇದೇ ಅಕ್ಟೋಬರ ತಿಂಗಳಲ್ಲಿ ನಾಲ್ಕೂ ರಾಷ್ಟ್ರಗಳ ವಿದೇಶ ಮಂತ್ರಿಗಳು ನಡೆಸಬೇಕು; ನಿಶ್ಶಸ್ತ್ರೀಕರಣದ ವಿಷಯದಲ್ಲಿ ಇಲ್ಲಿ. ನಡೆದ ವಿದ್ಯಮಾನಗಳ ಹಿನ್ನೆಲೆಯನ್ನಿಟ್ಟುಕೊಂಡು ಸಂಯುಕ್ತ ರಾಷ್ಟ್ರಸಂಘದ ನಿಶ್ಶಸ್ತ್ರೀಕರಣ ಸಮಿತಿ ಹೆಚ್ಚಿನ ಕೆಲಸ ಕೈಗೊಳ್ಳಬೇಕು; ವ್ಯಾಪಾರ ವ್ಯವಹಾರ ಮತ್ತು ಸಂಪರ್ಕದ ಅಭಿವೃದ್ಧಿಯ ಬಗ್ಗೆ ಆಯಾ ರಾಷ್ಟ್ರಗಳ ತಜ್ಞರು ಪರಸ್ಪರ ಸಂಬಂಧ ಬೆಳೆಸಿ, ಹೆಚ್ಚಿ ಮುಂದಿಡಬೇಕು."

ಶಾಂತಿಯ ಹಂಬಲ

ಹತ್ತು ವರ್ಷಗಳಲ್ಲಿ ಬೆಳೆದು ಬಂದ, ಕಳೆದ ಆರೇಳು ವರ್ಷಗಳಲ್ಲಿ ತೀಕ್ಷ್ಣವಾಗಿರುವ, ಪಾಶ್ಚಾತ್ಯರ ಹಾಗು ರಶ್ಯದ ನಡುವಣ ಭಿನ್ನಾಭಿಪ್ರಾಯಗಳು ಹೋಗಿ ಬರಲು ಹತ್ತು ದಿನ, ನೇರಾದ ಮಾತುಕತೆಗೆ ಆರು ದಿನ, ತಗಲಿದ ಜಿನೇವದ ಪರಿಷತ್ತಿನ ಅವಧಿಯಲ್ಲಿ ನಿವಾರಣೆ ಹೊಂದುತ್ತವೆ ಎಂದು ಊಹಿಸಿದ್ದರೆ ಅದನ್ನು ಅತಿರೇಕವಾದ ನಿರೀಕ್ಷೆಯೆಂದೇ ಹೇಳಬೇಕಾಗುತ್ತದೆ. ಸುದೈವದಿಂದ ಯಾರೂ ಇಷ್ಟು ಹೆಚ್ಚಿನ ಆಶೆಯನ್ನು ಕಟ್ಟಿಕೊಂಡಿರಲಿಲ್ಲ. ಅಣು ಯುಗದ ಯುದ್ಧದ ಗಂಡಾಂತರ ತೋರಿ ಬರುವ ಸಂಧಿ ಕಾಲದಲ್ಲಿ ಶಾಂತಿಗಾಗಿ ಹಂಬಲಿಸುವ ಜನರ ಆಕಾಂಕ್ಷೆಯನ್ನು ಮನ್ನಿಸಿ ನಾಲ್ಕು ಮಹಾರಾಷ್ಟ್ರಗಳು ಸೌಹಾರ್ದದ ವರ್ತನೆಯನ್ನು ತೋರಿಸಬೇಕು; ಪರಸ್ಪರ ಮೈತ್ರಿ ಮತ್ತು ಸಂಧಾನದಿಂದ ವಿವಾದವನ್ನು ಬಗೆಹರಿಸುವ ಮನೋಭಾವವನ್ನು ಪ್ರದರ್ಶಿಸಬೇಕು; ಹಾಗಾದರೆ ಮಾತ್ರ ಜಗತ್ತಿನ ಶೀಘ್ರ ನಾಶ ತಪ್ಪೀತು, ಮಾನವನಾಗರಿಕತೆ ಉಳಿದೀತು—ಎಂದೇ ಎಲ್ಲರೂ ಹೇಳುತ್ತಿದ್ದರು. ಇವರನ್ನು ಜಿನೇವದ ಸಮ್ಮೇಳನ ಸುಸಿಗೂಳಿಸಲಿಲ್ಲ—ಇನ್ನೊಂದು ಮಹಾಯುದ್ಧವಾಗುವುದು ನಾಲ್ಕು ಮಹಾರಾಷ್ಟ್ರಗಳಲ್ಲಿ ಯಾರಿಗೂ ಬೇಕೆಂದು ತೋರಲಿಲ್ಲ; ಅಣು ಬಾಂಬುಗಳಿಂದಲೇ ಶಕ್ತಿ ಪರೀಕ್ಷೆಯಾಗುವ ಮುಂದಿನ ಯುದ್ಧದಲ್ಲಿ ಯಾರಿಗೂ ತಾವು ಗೆದ್ದೇವೆಂಬ ಭರವಸೆ ಇರಲಿಲ್ಲ. ಜಿನೇವದ ಮಾತುಕತೆ ಈ ಹಿನ್ನೆಲೆಯಲ್ಲಿ ಜರಗಿತು—ಮತ್ತು ಪರಸ್ಪರರನ್ನು ತಿಳಿದುಕೊಳ್ಳುವುದಕ್ಕೆ, ಪ್ರೀತಿ ಮತ್ತು ವಿಶ್ವಾಸಗಳನ್ನು ಪ್ರದರ್ಶಿಸುವುದಕ್ಕೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿನ ಚಟುವಟಿಕೆ ಅಲ್ಲಿ ವ್ಯಕ್ತವಾಯಿತು.

ತೆರೆಯ ಮರೆಯ ಚಟುವಟಿಕೆ

ಪರಿಷತ್ತಿನ ಮೇಜಿನ ಮುಂದೆ ನಡೆದುದಕ್ಕಿಂತ ಹತ್ತಿಪ್ಪತ್ತು ಪಾಲಾದರೂ ಹೆಚ್ಚಿನ ಕೆಲಸ ತೆರೆಯ ಹಿಂದೆ ನಡೆಯಿತು. ಅನೌಪಚಾರಿಕ ಸ್ವರೂಪದ ಭೇಟಿಗಳು, ಸ್ನೇಹಪರ ಹಸ್ತಾಂದೋಲನಗಳು, ಕುಶಲ ಸಂಭಾಷಣೆಗಳು, ಭೋಜನ ಕೂಟಗಳು—ಇವೆಲ್ಲ ರಶ್ಯನರ ನಿಜ ಹೃದಯವನ್ನು ಪಾಶ್ಚಾತ್ಯರಿಗೂ ಪಾಶ್ಚಾತ್ಯರ ಸದುದ್ದೇಶವನ್ನು ರಶ್ಯನರಿಗೂ ಮನವರಿಕೆಮಾಡಿಸಿಕೊಡಲು ಸಹಾಯಕವಾದುವು ಎಂದರೆ ಅತಿಶಯೋಕ್ತಿಯಾಗದು. ಇದು ದೂರಗಾಮಿಯಾದ ಸತ್ಪರಿಣಾಮವನ್ನು ಸಂಬಂಧಿಸಿದ ರಾಷ್ಟ್ರಗಳ ಮೇಲೆ ಮಾಡುವುದು ನಿಶ್ಚಯ. ನಿಜವಾಗಿ ಇಂಥ ಸಮ್ಮೇಳನಗಳ ಮಹತ್ವವಿರುವುದೇ ತೆರೆಯ ಹಿಂದಿನ ಚಟುವಟಿಕೆಗಳಲ್ಲಿ ಎಂದರೂ ಸಲ್ಲುತ್ತದೆ—ಏಕೆಂದರೆ ಒಂದು ರಾಷ್ಟ್ರದ ನಿಲುಮೆಯಲ್ಲಿ ಸಂಪೂರ್ಣ ವಿಶ್ವಾಸ ಹುಟ್ಟದೆ ಸ್ಪಷ್ಟ ಮಾತಿನಲ್ಲಿ ಪ್ರತಿಸ್ಪರ್ಧಿ ರಾಷ್ಟ್ರವು ತನಗೆ ಬಂಧನಕಾರಿಯಾದ ಯಾವುದಾದರೂ ಮಹತ್ವದ ಹೇಳಿಕೆಯನ್ನು ನೀಡುವುದಾಗಲೀ, ತನ್ನ ಆಂತರಿಕ ಇಚ್ಛೆಯನ್ನು ಅಧಿಕೃತ ರೂಪದಲ್ಲಿ ವ್ಯಕ್ತಪಡಿಸುವುದಾಗಲೀ ಮುತ್ಸದ್ದಿತನಕ್ಕೆ ಹೇಳಿಸದ ಮಾತು. ಅನೌಪಚಾರಿಕ ಸ್ವರೂಪದ ಸಮಾಲೋಚನೆಗಳೇ ಕಾಲಾಂತರದಲ್ಲಿ ಯೋಗ್ಯ ವಾತಾವರಣವನ್ನು ನಿರ್ಮಿಸಬೇಕೆಂದು ಸಾಮಾನ್ಯವಾಗಿ ರಾಜಕೀಯ ವರ್ತುಲಗಳ ಅಭಿಪ್ರಾಯ. ಇದಕ್ಕೆ ಜಿನೇವದ ಮಾತುಕತೆಗಳು ತುಂಬ ನೆರವಾಗಿವೆ ಎಂದು ಎಲ್ಲರೂ ಅಭಿಪ್ರಾಯಪಟ್ಟಿದ್ದಾರೆ. ಭವಿಷ್ಯತ್ತನ್ನು ಶಾಂತವಾಗಿ ಎದುರಿಸುವ ಧೈರ್ಯ ಬಂದಿರುವುದಕ್ಕೆ ಇದು ಕಾರಣ. ಪರಸ್ಪರ ಸಂಪರ್ಕ ಸ್ಥಾಪಿಸಲ್ಪಟ್ಟ ಜಗತ್ತಿನಲ್ಲಿ ಸ್ನೇಹದ ಹೊಸ ವಾತಾವರಣಗೋಚರಿಸುವುದಕ್ಕಾದರೂ ಸಮ್ಮೇಳನದ ಅಧಿಕೃತ ಕಾರ್ಯಕಲಾಪಗಳಿಗಿಂತ, ಮೈತ್ರಿ ಪ್ರದರ್ಶನದ ಉತ್ಸಾಹವೇ ಹೇತು.

ಕಲ್ಯಾಣಪ್ರದ ಭವಿಷ್ಯ

ಅತಿ ಹೆಚ್ಚು ಪ್ರಚಾರವನ್ನು ಮಾಡಿ, ಲೋಕಶಾಂತಿಯ ಹೊಸ ಆಶೆಯನ್ನು ಚಿಗುರಿಸಲು ಎಲ್ಲ ವಂಸ್ಕರೂ ಅವರ ಸಲಹೆಗಾರರೂ ಪ್ರಯತ್ನಿಸಿದ್ದರು. ೧೨೦೦ ಪತ್ರಿಕೋದ್ಯೋಗಿಗಳಿಗೆ ಅವರು ಪ್ರಚಾರಕ್ಕೆ ಅನುಕೂಲವಾದ ಮಾಹಿತಿಗಳನ್ನು ಒದಗಿಸಲು ಮುಂದಾದರು—ಸಮ್ಮೇಳನದ ಮುಂದೆ ನಡೆದ ಮಾತುಕತೆಗಳಲ್ಲಿ ಪರಸ್ಪರರ ಉದ್ದೇಶಗಳನ್ನು ಸಂಶಯದಿಂದ ಕಂಡು ಆರೋಪ, ಪ್ರತ್ಯಾರೋಪಗಳನ್ನು ಮಾಡುವ ಎಂದಿನ ಸಂಪ್ರದಾಯ ಅನುಸರಿಸಲ್ಪಡಲಿಲ್ಲ ಎಂಬುದನ್ನು ಎಲ್ಲ ನಿರೀಕ್ಷಕರು ವಿಶೇಷವಾಗಿ ಗಮನಿಸಿದ್ದಾರೆ. ನೆಹರುಗಳು ಅಣುಬಾಂಬಿನ ಭೀತಿಯೇ ಮಹಾರಾಷ್ಟ್ರಗಳ ಸುನಃ ಪರಿವರ್ತನೆಗೆ ಕಾರಣವಾಯಿತೆನ್ನುತ್ತಾ ಮಾತುಕತೆಗಳಲ್ಲಿ ವ್ಯಕ್ತವಾದ ಸ್ನೇಹ ಭಾವವು ಸ್ವಾಗತಾರ್ಹವಾದ ಬದಲಾವಣೆ ಎಂದಿದ್ದಾರೆ. ಇದು ನಿಜ. ಮಾತನಾಡುವ ವ್ಯಕ್ತಿಯ ನಿಲುಮೆಯನ್ನು ಅರ್ಥಮಾಡಿಕೊಳ್ಳಲು ಉಳಿದವರು ಪ್ರಯತ್ನಿಸುತ್ತಿದ್ದರಲ್ಲದೆ ವ್ಯರ್ಥ ಆಕ್ಷೇಪವನ್ನು ಮಾಡುತ್ತಿರಲಿಲ್ಲ—ಸೂಚನೆಗಳನ್ನು ಅವುಗಳ ಯೋಗ್ಯತೆಯ ಮೇಲೆ ಚರ್ಚಿಸುವ ಭಾವ ಕಂಡು ಬಂದಿತಲ್ಲದೆ, ಸೂರ್ವಾಗ್ರಹದಿಂದ ಪೀಡಿತರಾಗಿ ಖಂಡಿಸುವ ಬುದ್ಧಿಯಲ್ಲ. ಕರೋಂತೆಗೆ ತಿಲಾಂಜಲಿಯನ್ನು ಕೊಟ್ಟಿರುವ ಜಿನೇವದ ಸಮ್ಮೇಳನ ಕಲ್ಯಾಣ ಪ್ರದವಾದ ಭವಿಷ್ಯದ ಭರವಸೆಯನ್ನು ಕೊಟ್ಟಿರುತ್ತದೆ; ವೈರಿಯನ್ನೂ ದ್ವೇಷವನ್ನೂ ಗಣನೀಯವಾಗಿ ತಗ್ಗಿಸಿರುತ್ತದೆ.

ಭಿನ್ನಾಭಿಪ್ರಾಯದ ಕೇಂದ್ರ

ನಾಳೆಯ ಶುಭದ ಆಶೆಯನ್ನು ಮೇಲಿನ ಸಿಂಹಾವಲೋಕನ ಮಾಡಿಸಿಕೊಡುತ್ತಿದ್ದರೂ—ಜಿಗುಟಾದ ಜಾಗತಿಕ ಸಮಸ್ಯೆಗಳನ್ನು ಈಗ ಇದ್ದಂತೆ ವಿಶ್ಲೇಷಿಸಿದರೆ, ಜಿನೇವದ ಪರಿಷತ್ತು ಕಜ್ಜೆ ಮುಂದಿಟ್ಟ ಲಕ್ಷಣ ತೋರಿಸಿತೆಂದೇನು ಹೇಳುವಂತಿಲ್ಲ. ಇನ್ನೊಮ್ಮೆ ಸಮಾಲೋಚನೆ ನಡೆಸುವ ಕುರಿತ, ಒಮ್ಮತವಾಯಿತೇ ಹೊರತು, ಸಮಸ್ಯೆಗಳನ್ನು ಬಿಡಿಸಬೇಕಾದ ಉಪಾಯಗಳ ಮಟ್ಟಿಗೆ ಏಕಾಭಿಪ್ರಾಯ ಮೂಡಿಬರಲಿಲ್ಲ. ಎಶ್ಯದ ವಿವಾದವನ್ನು ಎತ್ತಲು ರಶ್ಯದ ಪ್ರಧಾನಿಗಳು ಅಪೇಕ್ಷಿಸಿಟ್ಟರು; ಆದರೆ ಪಾಶ್ಚಾತ್ಯ ರಾಷ್ಟ್ರಗಳು ಅದಕ್ಕೆ ಅವಕಾಶ ಕೊಡಲಿಲ್ಲ. ಜರ್ಮನಿಯ ಪುನರೇಕೀಕರಣವಾಗಬೇಕೆಂದು ಎಲ್ಲರೂ ಒಪ್ಪಿದರು— ಆದರೆ. ಯುರೋಪಿನ ಭದ್ರತೆಯ ವಿಷಯವನ್ನು ಇದಕ್ಕೆ ತಳಕು ಹಾಕಲಾಯಿತು. ರಶ್ಯವು ಆಟ್ಲಾಂಟಿಕ ಒಪ್ಪಂದಕ್ಕೆ ಸಹಿ ಹಾಕಿರುವ ಪಾಶ್ಚಾತ್ಯ ರಾಷ್ಟ್ರಗಳೂ ವಾರ್ಸಾ ಒಪ್ಪಂದಕ್ಕೆ ಅಂಕಿತವಿಕ್ಕಿರುವ ಕಮ್ಯು

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮುಂಬಾಯಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬೇಕೆಂದು ಮಂಜೂರು ಮಾಡಿರುತ್ತಾರೆ.

1941ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ನಿರಂತರವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ. ಮೆನೇಜರ್, ನವಯುಗ, ಉಡುಪಿ,

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಗೋವೆಯ ಕುರಿತು ನೆಹರುಗಳ ಹೇಳಿಕೆ

ಕಾಂಗ್ರೆಸು ಕಾರ್ಯಕಾರಿ ಸಮಿತಿಯ ಗೊತ್ತುವಳಿ

ಲೋಕಸಭೆಯ ಅಧಿವೇಶನವು ಹೊಸದೆಹಲಿಯಲ್ಲಿ ಇದೇ ಸೋಮವಾರ(ದಿನಾಂಕ ೨೫) ಪ್ರಾರಂಭವಾದಾಗ, ಪ್ರಧಾನ ಮಂತ್ರಿ ನೆಹರುಗಳು ಗೋವೆಯ ಕುರಿತು ಮಹತ್ವದ ಹೇಳಿಕೆಯನ್ನು ಕೊಟ್ಟರು. ಮುಂದಿನ ಅಗೋಸ್ತು ಅನೇ ತಾರೀಕಿನಿಂದ ಹೊಸದೆಹಲಿಯಲ್ಲಿರುವ ಪೋರ್ಚುಗಾಲಿನ ರಾಯಭಾರಿ ಕಚೇರಿಯನ್ನು ಮುಚ್ಚಬೇಕೆಂದು ಭಾರತ ಸರಕಾರ ತಿಳಿಸಿರುವುದಾಗಿ ಅವರು ಸಾರಿದರು. ಮುಂದುವರಿದು ಮರ್ಮಗೋವೆಗೆ ಹೋಗಿಬರುತ್ತಿದ್ದ ಭಾರತದ ರೈಲ್ವೆಯ ಸಾರಿಗೆಯನ್ನು ಸಹ ಅಮಾನತುಗೊಳಿಸಿರುವುದಾಗಿ ತಿಳಿಸಿದರು.

ಶಾಂತ ಚಳವಳಿ

ಗೋವೆಯಲ್ಲಿ ನಡೆದಿರುವ ಸತ್ಯಾಗ್ರಹವು ಶಾಂತ ರೀತಿಯ ಆಂದೋಲನವಾಗಿದೆ ಎಂದೂ ಅದರಲ್ಲಿ ಗೋಮಾಂತಕರೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುತ್ತಿರುವರೆಂದೂ ನೆಹರುಗಳು ವಿದಿತಪಡಿಸಿದರು. ಪೋರ್ಚುಗೀಜರ ಕೈಯಲ್ಲಿ ಗೋಮಾಂತಕರಿಗೆ ನಾಗರಿಕ ಅಧಿಕಾರಗಳಿರುವುದಿಲ್ಲ. ಘಟನಾತ್ಮಕ ವಿಧಾನಗಳನ್ನು ಕೈಗೊಂಡು ಮುನ್ನಡೆಯುವ ಸ್ವಾತಂತ್ರ್ಯವೂ ಇಲ್ಲ ಎಂದು ನೆಹರುಗಳು ಹೇಳಿದರು. ಕೆಲವು ಬಾಗತೀಯರು ಈ ಸತ್ಯಾಗ್ರಹದಲ್ಲಿ ಸೇರಿರುವುದು ನಿಜ. ಆದರೆ ಕಳೆದ ಒಂದು ವರ್ಷದಲ್ಲಿ ೫೫೦ ಮಂದಿ ಗೋಮಾಂತಕರನ್ನು ದೈಹಿಕ ಹಾಗು ಮಾನಸಿಕ ಯಾತನೆಗೆ ಗುರಿಪಡಿಸಿರುವುದನ್ನೂ ಇನ್ನೂ ೪೫೦ ನರು ಬಂಧನದಲ್ಲಿರುವುದನ್ನೂ ೧೫೨ ಮಂದಿ ಗೋಮಾಂತಕರಿಗೆ ಒಂದರಿಂದ ಇಪ್ಪತ್ತೆಂಟು ವರ್ಷಗಳ ಅವಧಿಯ ಕ್ರೂರ ಶಿಕ್ಷೆ ವಿಧಿಸಿರುವುದನ್ನೂ ನೋಡಿದರೆ ಗೋಮಾಂತಕರದೇ ಹೋರಾಟವಿದೆಂದು ವ್ಯಕ್ತವಾಗುತ್ತದೆ ಎಂದು ಪ್ರಧಾನಿಗಳು ನುಡಿದರು.

ಕಾಂಗ್ರೆಸನ ಗೊತ್ತುವಳಿ

ಕಾಂಗ್ರೆಸನ ಕಾರ್ಯಕಾರಿ ಸಮಿತಿಯು ಜುಲಾಯಿ ೨೩ನೇ ದಿನಾಂಕದ ತನ್ನ ಸಭೆಯಲ್ಲಿ ಸಾಮೂಹಿಕವಾಗಿ ಭಾರತೀಯರು ಸತ್ಯಾಗ್ರಹದ ಉದ್ದೇಶದಿಂದ ಗೋವೆಯನ್ನು ಪ್ರವೇಶಿಸುವುದಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಪೋರ್ಚುಗಾಲವು ಗೋವೆಯ ಕುರಿತು ವಹಿಸಿರುವ ನಿಲುಮೆಯನ್ನು ಅದು ಖಂಡಿಸಿದರೂ ಬಹು ಸಂಖ್ಯೆಯಲ್ಲಿ ಸತ್ಯಾಗ್ರಹಿಗಳಾಗಿ ಭಾರತೀಯರು ಒಳನುಗ್ಗಿದರೆ ಶಾಂತಿಯ ವಾತಾವರಣ ಬದಲಾಗಬಹುದು ಎಂದು ಅದು ಹೇಳಿತು. ಗೋವೆಯು ಭಾರತದಲ್ಲಿ ವಿಲೀನವಾಹೊಂದಿದರೆ ಕ್ರೈಸ್ತ ಧರ್ಮಕ್ಕೆ ಗಂಡಾಂತರ ಬರುವುದೆಂಬ ಪೋರ್ಚುಗಾಲದ ವಾದ ಅಸಮರ್ಥನೀಯವಾದುದೆಂಬುದನ್ನು ಭಾರತ ಸರಕಾರದ ಆಶ್ವಾಸನೆಗಳು ಹೇಳಿದೆಯಲ್ಲದೆ ಈಗ ಮೋಪಾ ಸಹ ಗೋವೆಯಲ್ಲಿರುವುದು ರಾಜಕೀಯ ವಿವಾದ ಎಂದಿದ್ದಾರೆ ಎಂದು ಕಾರ್ಯಸಮಿತಿ ತಿಳಿಸಿತು ಈ ನಿರ್ಣಯವು ಕಾಂಗ್ರೆಸಿಗರು ವೈಯಕ್ತಿಕವಾಗಿ ಸತ್ಯಾಗ್ರಹದಲ್ಲಿ ಧುಮುಕುವುದಕ್ಕೆ ಅಡ್ಡಿ ಮಾಡಲಾರದೆಂದು ಹೇಳಲಾಗುತ್ತದೆ.

ಮಹತ್ವದ ಎಚ್ಚರಿಕೆ

ನೆಹರುಗಳು ಕಳೆದ ಮಂಗಳವಾರ (ದಿನಾಂಕ ೧೯) ಹೊಸದೆಹಲಿಯ ಪತ್ರಿಕೋದ್ಯೋಗಿಗಳ ಪರಿಷತ್ತಿನಲ್ಲಿ ಲೋಕಸಭೆಯಲ್ಲಿ ಕೊಟ್ಟ ಹೇಳಿಕೆಗಿಂತಲೂ ಕಟುವಾದ ಮಾತುಗಳಲ್ಲಿ ಪೋರ್ಚುಗಾಲಿಗೆ ಎಚ್ಚರಿಕೆಯನ್ನು ಕೊಟ್ಟಿದ್ದರು. 'ಗೋವೆಯ ಕುರಿತು ತಿಳಿಗೇಡಿತನವನ್ನು ಭಾರತವು ಸಹಿಸಲಾರದು. ಕೆಲವು ಆಂಗ್ಲ ಪತ್ರಿಕೆಗಳು ಬಿಲ್ಲು ಬಾಣಗಳಿಂದ ಯುದ್ಧಮಾಡುತ್ತಿದ್ದಕಾಲದ ಒಪ್ಪಂದಗಳ ನೆಪಹೇಳಿ ಪೋರ್ಚುಗಾಲಿನ ನಿಲುಮೆಯನ್ನು ಸಮರ್ಥಿಸುವುದು ಹಾಸ್ಯಾಸ್ಪದ. ಗೋವೆಯು ಎಲ್ಲ ದೃಷ್ಟಿಯಿಂದಲೂ ಭಾರತದ ಅವಿಭಾಜ್ಯ ಅಂಗ—ಅದು ಭಾರತದೊಡನೆ ಸೇರಬೇಹೊಂದಿಯೇ ತೀರುತ್ತದೆ. ಜಗತ್ತು ಇದನ್ನು ನೆನಪಿಟ್ಟುಕೊಳ್ಳಲಿ; ಅಟ್ಲಾಂಟಿಕ್ ಒಪ್ಪಂದದ ರಾಷ್ಟ್ರಗಳೂ ನೆನಪಿಡಲಿ" ಎಂದವರು ಘೋಷಿಸಿದರು. 'ಭಾರತವು ಶಾಂತಿಯ ಮಾರ್ಗವನ್ನು ಅನುಸರಿಸುತ್ತದೆ. ಅದುದರಿಂದಲೇ ತನ್ನ ಸ್ವಾಭಿಮಾನ ಮತ್ತು ಘನತೆಯನ್ನು ಕಾಯ್ದುಕೊಂಡು ಸಂಯಮ ಮತ್ತು ಸಹನೆಯನ್ನು ತೋರಿಸುತ್ತದೆ. ಬೇರೆ ರಾಷ್ಟ್ರಗಳಾದರೆ ಏನು ಮಾಡುತ್ತಿದ್ದವು ಎಂಬ ಪ್ರಶ್ನೆಗೆ ನನಗೆ ಉತ್ತರ ಬೇಕು. ಇದನ್ನು ಗಮನಿಸಿ ಸಂಧಾನದ ಮಾರ್ಗವನ್ನು ಪೋರ್ಚುಗಾಲವು ಅನುಸರಿಸದಿದ್ದರೆ ಗೋವೆಯಂತೂ ಅವರ ಕೈ ಬಿಡುವುದು ತಪ್ಪದು—ಪೋರ್ಚುಗಾಲವೂ ಉಳ್ಳಳಿಸೀತು" ಎಂದರು.

ನಿಸ್ಪ ರಾಷ್ಟ್ರಗಳೂ ಪರಸ್ಪರ ಅನಾಕ್ರಮಣದ ಒಪ್ಪಂದ ಮಾಡಿಕೊಳ್ಳಬೇಕೆಂದು ಸೂಚಿಸಿದರು. ಇದು ಫ್ರಾನ್ಸಿನ ಪ್ರಧಾನಿಗಳಿಗೆ ರುಚಿಸಿದಂತೆ ತೋರಿತು.—ಆದರೆ ಪಾಶ್ಚಾತ್ಯ ರಾಷ್ಟ್ರಗಳ ಒಟ್ಟಿನ ಅಭಿಪ್ರಾಯ ರಶ್ಯಕ್ಕೆ ಅನುಕೂಲವಾಗಲಿಲ್ಲ. ಅಮೇರಿಕದ ಅಧ್ಯಕ್ಷರು ಅಟ್ಲಾಂಟಿಕ ಒಪ್ಪಂದದ ರಾಷ್ಟ್ರಗಳು ರಶ್ಯದ ಮೇಲೆ ದಂಡೆತ್ತಿ ಹೋಗುವುದಿಲ್ಲವೆಂದು ಹೇಳಿದರು—"ಹಾಗಾದರೆ ರಶ್ಯವನ್ನು ಸಹ ಈ ಒಪ್ಪಂದದಲ್ಲಿ ಸೇರಿಸಿಕೊಳ್ಳಬಹುದಲ್ಲ" ಎಂಬ ಬುಲ್ಗೇನಿನ್ನರ ಪ್ರಶ್ನೆಗೆ ಮಾತ್ರ ಉತ್ತರ ಸಿಗಲಿಲ್ಲ. ಪಶ್ಚಿಮ ಜರ್ಮನಿಯ ಸಶಸ್ತ್ರೀಕರಣ ಈಗ ನಡೆಯುತ್ತಿರುವುದರಿಂದ ಅನಾಕ್ರಮಣ ಒಪ್ಪಂದ ಅತ್ಯಗತ್ಯವೆಂದೂ ಅದಾಗದಿದ್ದರೆ ಏಕೀಕೃತ ಜರ್ಮನಿಯು ರಶ್ಯಕ್ಕೆ ಮಾಡಬಹುದಾದ ಆಪಾಯವನ್ನು ಊಹಿಸುವುದು ಸಾಧ್ಯವಿಲ್ಲವೆಂದೂ ರಶ್ಯದ ಪ್ರಧಾನಿ ತಿಳಿಸಿದರು. ಮೊದಲು ಯುರೋಪಿನ ಭದ್ರತೆ ಮತ್ತೆ ಜರ್ಮನಿಯ ಏಕೀಕರಣ ಎಂಬ ಆಗ್ರಹವನ್ನು ಬಿಟ್ಟು ಇವೆರಡು ವಿಷಯಗಳನ್ನು ಒಟ್ಟಿಗೆ ವಿಚಾರಿಸಲು ಅವರು ಸಮ್ಮತಿಸಿದುದೇ ರಶ್ಯದ ಔದಾರ್ಯ.

ಸಹಕಾರ ಭಾವ

ವರಿಷ್ಠರ ಪರಿಷತ್ತಿನಲ್ಲಿ ನಿಶ್ಶಸ್ತ್ರೀಕರಣದ ಕುರಿತು ಅಧ್ಯಕ್ಷ ಐಸೆನ್ ಹೋವರರು ವಿಸ್ಮಯಕರ ಸೂಚನೆಯೊಂದನ್ನು ಮಂಡಿಸಿದರು. ರಶ್ಯವು ಅಮೇರಿಕದ ಎಲ್ಲ ಸೈನಿಕ ಕೇಂದ್ರಗಳ ವಿವರವನ್ನು ಸಂಗ್ರಹಿಸಲಿ, ವಿಮಾನ ಮೂಲಕ ಸಂಚರಿಸಿ ಬಂದು ಚಿತ್ರಗಳನ್ನೂ ತೆಗೆದುಕೊಳ್ಳಲಿ—ಆದರೆ ಇದಕ್ಕೆ ಪ್ರತಿಯಾಗಿ ರಶ್ಯದ ಸೈನಿಕ ರಾಣ್ಯಗಳ ವಿವರವನ್ನು ಸಂಪಾದಿಸಲಿಕ್ಕೆ ಮಾತ್ರ ಅಮೇರಿಕಕ್ಕೆ ಬಿಡಲಿ ಎಂದರು. ಏಕರ ಈ ಸೂಚನೆ ರಶ್ಯದ ಪ್ರಭೃತಿಗಳನ್ನು ಗೊಂದಲದಲ್ಲಿ ಕೆಡವಿತು; ಬ್ರಿಟಿಷ್ ಮತ್ತು ಫ್ರೆಂಚ್ ಪ್ರಧಾನಿಗಳು ಸಹ ಆಶ್ಚರ್ಯಪಟ್ಟರು. ಆದರೆ ಏಕರ ಸೂಚನೆಗೆ ರಶ್ಯ ಮರುಳಾಗಿರುವಂತೆ ಮಾತ್ರ ಕಾಣುವುದಿಲ್ಲ. ಅಣುಬಾಂಬುಗಳ ಬಹಿಷ್ಕಾರಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕೆಂಬ ನಿಲುಮೆಯನ್ನು ಅವರು ಬಿಟ್ಟುಗೊಡಲಿಲ್ಲ. ಸಂಯುಕ್ತ ರಾಷ್ಟ್ರಸಂಘದ ಕಡೆಯಿಂದ ಏಕರ ಸೂಚನೆಯಂತೆ ಸಂಘಟಿಸಲ್ಪಡುವ ಶಾಂತಿಗಾಗಿ ಪರಮಾಣುಶಕ್ತಿ ಯೋಜನೆಯಲ್ಲಿ ರಶ್ಯ ಭಾಗವಹಿಸುವುದೆಂದು ರಶ್ಯದ ಪ್ರಧಾನಿ ತಿಳಿಸಿದರು ಫ್ರೆಂಚ್ ಪ್ರಧಾನಿ ಫೋರೆಯವರು ಸೈನ್ಯ ಸಂಗ್ರಹವನ್ನು ಕಡಿಮೆ ಮಾಡಿ ಈ ಹಣವನ್ನು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ನೀಡಬೇಕು ಎಂದರು. ಈ ಎಲ್ಲ ಸೂಚನೆಗಳನ್ನು ಸಂಯುಕ್ತ ರಾಷ್ಟ್ರಸಂಘದ ಸಮಿತಿಯು ಹಿಂದಿನಿಂದ ವಿಚಾರಿಸುತ್ತದೆ. ತಮ್ಮ ಸೂಚನೆಯಿಂದ ಏಕರು ಪ್ರತಿಸ್ಪರ್ಧಿಗಳ ಸಂಶಯ ನಿವಾರಣೆಗೆ ಸಹಕಾರ ಭಾವ ತೋರಿಸಿರುವರೆಂದೂ ಬುಲ್ಗೇನಿನ್ನರು ಲೋಕದ ಜನತೆಯು ಶಾಂತಿಗೆ ನೆರವಾಗುವ ನಿಲುಮೆ ಹಿಡಿದಿರುವರೆಂದೂ ನೀರೀಕ್ಷಕರ ಅಭಿಪ್ರಾಯ. ಇನ್ನುಳಿದ ವ್ಯಾಪಾರ ಮತ್ತು ಸಂಪರ್ಕದ ವಿಷಯದಲ್ಲಿ ಎಲ್ಲರೂ ಉತ್ಸಾಹದಿಂದ ತಮ್ಮ ಸೂಚನೆಗಳನ್ನಿತ್ತರು. ಸಾಂಸ್ಕೃತಿಕ ಆದಾನ ಪ್ರದಾನ, ಪ್ರವಾಸಿಗಳಿಗೆ ಮುಕ್ತದ್ವಾರ, ಪತ್ರಿಕೋದ್ಯೋಗಿಗಳಿಗೆ ಸ್ವಾತಂತ್ರ್ಯ ಇತ್ಯಾದಿ ವಿಷಯಗಳಲ್ಲಿ ರಶ್ಯದ ಸ್ನೇಹ ಹಸ್ತವನ್ನು ಪಾಶ್ಚಾತ್ಯ ವರಿಷ್ಠರು ಬಯಸಿದರು. ಬಹುಶಃ ಈ ವಿಷಯಗಳಲ್ಲೇ ಮೊದಲು ಒಮ್ಮತ ವ್ಯಕ್ತಪಡಬಹುದು. ಹಿಂದಿನಿಂದ ದೊಡ್ಡ ಸಮಸ್ಯೆಗಳಿಗೊಂದು ಬಿಡುಗಡೆಯ ದಾರಿದೊರಕೀತು—ಇದೇ ಸಹಜವಾದ ವಿಧಾನ ಎನ್ನಬಹುದು.

1954

A YEAR OF OUTSTANDING SUCCESS FOR UNITED INDIA!

Policyholders number	....	1,29,800
Life Assurance in Force	.... Rs.	30,56,26,000
Total Assets	.... ,,	9,73,00,000
Total Income	.... ,,	1,68,00,000
Life Assurance Fund	.... ,,	8,77,00,000
Total Claims paid in 1954	,,	52,85,000
NEW BUSINESS SECURED	Rs.	5,30,00,000

OUR BIENNIAL VALUATION ON 31st DECEMBER, 1954:

BONUS DECLARED:

Rs. 17/- per thousand per annum Whole Life Participating Policies.

Rs. 15/- per thousand per annum Endowment Participating Policies.

SURPLUS DISCLOSED: ... Rs. 51,38,221.

(Bonus Certificates will be despatched in due course. Policyholders are requested not to send any reminders meantime.)

*****

THE UNITED INDIA LIFE ASSURANCE COMPANY, LTD.

(ESTABLISHED 1906)

HEAD OFFICE: MADRAS.

NAVAYUGA
Popular Kannada Weekly
Founder —
Sri **A. B SHETTY,** *M.L.A*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೮-೭-೧೯೫೫	ಸಂಚಿಕೆ ೪೬

ಸ್ವಳೀಯ ಅಭಿವೃದ್ಧಿ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತಾದ ವಿಶೇಷ ಮಾತುಕತೆಗಳು ಕೇಳಿ ಬರುತ್ತಿರುವಾಗ, ನಮ್ಮ ಜಿಲ್ಲೆಯಲ್ಲಿ ಇಷ್ಟರವರೆಗೆ ಎಷ್ಟು ಅಭಿವೃದ್ಧಿ ಕೆಲಸಗಳು ನಡೆದಿವೆ ಮತ್ತು ಮುಂದಿನ ನಮ್ಮ ಯೋಜನೆಯ ಗಾತ್ರವೆಷ್ಟು ಎಂಬುದನ್ನು ಪರಿಶೀಲಿಸುವುದು ಉಚಿತವಾಗಿದೆ—ಈ ವಾರ ಮಂಗಳೂರಿನಲ್ಲಿ ಜಿಲ್ಲಾ ಬೋರ್ಡಿನ ಆಡಳಿತದ ವರದಿಯ ಮೇಲೆ ನಡೆದ ಚರ್ಚೆಯೂ ಜಿಲ್ಲೆಗೆಂದು ರೂಪಿಸಲ್ಪಟ್ಟಿರುವ ಯೋಜನಾ ಮಂಡಳದ ಸಭೆಯ ಕಾರ್ಯಕಲಾಪಗಳೂ ಸ್ವಲ್ಪ ಮಟ್ಟಿನ ಬೆಳಕನ್ನು ಇದರ ಮೇಲೆ ಕೆಡವುತ್ತವೆ ಜಿಲ್ಲೆಯಲ್ಲಿ ನಡೆದ ಕೆಲಸಗಳಲ್ಲಿ ಸರಕಾರ ಸ್ವೇಚ್ಛೆಯಿಂದ ಕೈಗೊಂಡ ಶೇತುವೆಗಳ ನಿರ್ಮಾಣ, ಪ್ರಮುಖ ಮಾರ್ಗಗಳಿಗೆ ತಾರುಬಳಿದು ತಿಪ್ಪು ಕೆಡದಂತೆ ರಕ್ಷಿಸುವ ಕಾರ್ಯ ಇತ್ಯಾದಿಗಳಲ್ಲದೆ ಸ್ವಳೀಯ ಅಭಿವೃದ್ಧಿ ಪ್ರಯತ್ನಗಳಿಗೆ ಕೊಡುತ್ತಿರುವ ಪ್ರೋತ್ಸಾಹವು ಉಲ್ಲೇಖನೀಯ. ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣೆಯ ಸೇವೆ ಮುಂತಾದ ಚಟುವಟಿಕೆಗಳು ನಡೆಯುತ್ತಿರುವ ಭಾಗಗಳ ಹೊರತಾಗಿ ಜಿಲ್ಲೆಯ ಬೇರಲ್ಲಿ ಯಾದರೂ ಆಗತ್ಯದ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳಲು ಜನರು ಉತ್ಸಾಹಿಗಳಾಗಿ ಕಂಡು ಬಂದರೆ, ಅವರಿಗೆ ಇನ್ನಷ್ಟು ಉತ್ತೇಜನೆಯನ್ನು ಕೊಡಲು ಸರಕಾರ ಸ್ವಳೀಯ ಅಭಿವೃದ್ಧಿ ಯೋಜನೆಗೆ ಸಾಕಷ್ಟು ಹಣವನ್ನು ತೆಗೆದಿಟ್ಟಿರುತ್ತದೆ. ಇಷ್ಟರ ವರೆಗೆ ಮೂರು ಲಕ್ಷಕ್ಕಿಂತಲೂ ಹೆಚ್ಚು ಹಣವನ್ನು ಸರಕಾರ ಇದಕ್ಕೆ ಒದಗಿಸಿ ಕೊಟ್ಟಿರುತ್ತದೆ—ಹೊರತೋರಿಕೆಗೆ ಇದು ದೊಡ್ಡ ಮೊತ್ತವೆಂದು ಕಾಣಿಸದಿರಬಹುದು. ಯೋಜನೆಯೆಂದರೆ ತೋಟ್ಯಾಂತರ ರೂಪಾಯಿಗಳ ಕಾರ್ಯಕ್ರಮ ಎಂಬ ಕಲ್ಪನೆ ಇಟ್ಟುಕೊಂಡು ವಿಚಾರಿಸಿದರೆ, "ಇಷ್ಟೇಯೇ ನಡೆದ ಕೆಲಸ" ಎಂದು ಉದ್ಗರಿಸುವ ಜನರೂ ದೊರೆತಾರು. ಆದರೆ ಜನರು ಸ್ವೇಚ್ಛೆಯಿಂದ ಅಭಿವೃದ್ಧಿ ಪ್ರಯತ್ನಗಳಿಗೆ ನೆರವಾಗಿರುವುದನ್ನೂ ಈ ಸಹಾಯವನ್ನೂ ಸರಕಾರದ ವೆಚ್ಚದ ಮೊತ್ತಕ್ಕೆ ಸೇರಿಸಬೇಕೆಂಬುದನ್ನೂ ಮರೆಯಲಾಗದು. ಜನರಲ್ಲಿ ತಮ್ಮ ಪ್ರದೇಶದ ಅಭಿವೃದ್ಧಿಯಾಗಬೇಕು, ಅದಕ್ಕಾಗಿ ಶ್ರಮದಾನದಿಂದ ಹಿಡಿದು ಹಣ ಸಹಾಯದ ವರೆಗೆ ಎಲ್ಲ ರೀತಿಯಿಂದಲೂ ಸರಕಾರದೊಡನೆ ಸಹಕರಿಸಬೇಕು ಎಂಬ ಮನೋಭಾವ ಬೆಳೆದು ಬರುತ್ತಿರುವುದು ಸಾಮಾನ್ಯವಾದ ಸಾಧನೆಯಲ್ಲ; ಉಪೇಕ್ಷಿಸಬಹುದಾದ ವಿಷಯವೂ ಅದಲ್ಲ. ರಾಷ್ಟ್ರದ ಪ್ರಗತಿಗೆ ಇಂಥ ಮನೋಭಾವವೇ ರೂಪಾಯಿ—ಆಣೆ—ಪೈಗಳಿಗಿಂತಲೂ ಹೆಚ್ಚು ಪೋಷಕವಾದದ್ದು; ಶಾಶ್ವತ ಪರಿಣಾಮವನ್ನು ಮಾಡುವಷ್ಟು ಮಹತ್ವವುಳ್ಳದ್ದು—ಎಂಬುದರಲ್ಲಿ ಪ್ರತಿಮಾತಿರಲಾರದು ಜಿಲ್ಲೆಯ ಕಲೆಕ್ಟರರು ಸರಕಾರದೊಡನೆ ಸ್ವಳೀಯ ಅಭಿವೃದ್ಧಿಗಾಗಿ ಇನ್ನೂ ನಾಲ್ಕು ಲಕ್ಷ ರೂಪಾಯಿಗಳನ್ನು ಕೇಳಿರುವರೆಂದೂ ಎರಡು ಲಕ್ಷ ರೂಪಾಯಿಗಳನ್ನು ವಿನಿಯೋಗಿಸಲು ಸರಕಾರದ ಒಪ್ಪಿಗೆ ದೊರೆತಿದೆಯೆಂದೂ ತಿಳಿಯುತ್ತೇವೆ—ಇದಲ್ಲದೆ ಗ್ರಾಮಗಳಿಗೆ ನೀರು ಪೂರೈಸುವ ಯೋಜನೆಯಂತೆ ಮತ್ತೆ ೨ ಲಕ್ಷ ರೂಪಾಯಿ ಸಿಕ್ಕಿರುತ್ತದೆ. ಕಲೆಕ್ಟರರ ಅಭಿಪ್ರಾಯದಂತೆ ಗ್ರಾಮಾಂತರ ಪ್ರದೇಶಗಳಿಂದ ಜನರು ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮತ್ತು ಸಹಕಾರಗಳನ್ನು ಕೊಡಲು ಮುಂಬಂದ ಪಕ್ಷದಲ್ಲಿ ಸರಕಾರದಿಂದ ಅಧಿಕ ನೆರವನ್ನು ನೀರೀಕ್ಷಿಸಬಹುದು. ಆದುದರಿಂದ ಸರಕಾರದವರು ಜನತೆಯ ಸಾರ್ವಾರ್ಥಿಕ ಏಳಿಗೆಗಾಗಿ ಪ್ರತಿಯೊಂದೂ ಬಗೆಯಲ್ಲಿ ತಮ್ಮಿಂದಾದಷ್ಟು ಕೆಲಸವನ್ನು ಮಾಡಲು ಸಿದ್ಧರಾಗಿರುವ ಈ ಕಾಲದ ಪ್ರಯೋಜನವನ್ನು ಜನರು ಪಡೆದುಕೊಳ್ಳಲು ಹಿಂದಿರಿಯಲಾಗದು ಇದಕ್ಕೋಸ್ಕರ ತಮ್ಮಲ್ಲಿರಬಹುದಾದ ಮನಸ್ತಾಪ, ವೈರಸ್ಯ ಮತ್ತು ವೈರಾಗ್ಯಗಳನ್ನು ಹಳ್ಳಿಯ ಮುಖಂಡರು ಬಿಟ್ಟುಗೂಟ್ಟು, ಆಯಾ ಎಲಯದ ಜನರ ಮನವೊಲಿಸಿಕೊಂಡು ಯೋಗ್ಯ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕೆ ಮುಂದಾಗಲಿ ಎಂದು ಸೂಚಿಸಲು ಬಯಸುತ್ತೇವೆ. ಸ್ವಳೀಯ ಅಭಿವೃದ್ಧಿಗೆ ಈಗ ಸರಕಾರ ನೀಡುವ ಸಹಾಯವು ಜನರಿಂದ ಕರ್ಚಿನ ಅರೆವಾಸಿಯಷ್ಟಾದರೂ ಮಂತಿಗೆ ಬಂದಿರಬೇಕಂಬ ಸೂತ್ರವನ್ನು ಅನ್ವಯಿಸಿದುತ್ತದೆ—ಆದುದರಿಂದ ಶಾಸನ ಸಭೆಯ ಸದಸ್ಯರುಗಳಾದ ಶ್ರೀ ಟಿ ಎ. ಪೈ, ಮತ್ತು ಶ್ರೀ ಎಸ್. ಎಸ್. ಕೊಳ್ಳೆಜೈಲ್ ಮುಂತಾದವರು ಸೂಚನೆಯೊಂದನ್ನು ಮೊನ್ನೆಯ ಸಭೆಯಲ್ಲಿ ಮಂಡಿಸಿ, ಜನರ ಮಂತಿಗೆಯ ಪಾಲನ್ನು ಕಡಿಮೆಮಾಡಬೇಕು, ತೀರ ಹಿಂದುಳಿದ ಎಲಯದಲ್ಲಿ ಮತ್ತು ಬಡಜನರಿಗಾಗಿಯೇ ಕೈಗೊಳ್ಳಲ್ಪಟ್ಟ ಅಭಿವೃದ್ಧಿ ಪ್ರಯತ್ನಗಳಿಗೆ ಸ್ಥಳೀಯರು ಕೊಡಬೇಕಾದ ಹಣ ರೂಪದ ಮಂತಿಗೆಯ ಮಟ್ಟಿಗೆ ವಿನಾಯತಿ ತೋರಿಸಬೇಕು ಎಂದರು. ಕಲೆಕ್ಟರರು ಯೋಗ್ಯವಾದ ಈ ಸಲಹೆಯನ್ನು ಉಚಿತ ಸಂದರ್ಭಗಳಲ್ಲಿ ಮನ್ನಿಸುವ ಆಶ್ವಾಸನೆಯನ್ನು ನೀಡಿರುವುದರಿಂದ "ನಮ್ಮಲ್ಲಿ ಮಂತಿಗೆ ಕೊಡಲು ಹಣವಿಲ್ಲವಲ್ಲ" ಎಂದು ತೀರ ಬಡವರಾದವರು ನಿರ ತ್ಸಾಹಿಗಳಾಗುವ ಅಗತ್ಯವಿಲ್ಲ; ಮಂತಿಗೆ ನಿರ್ನಿಷ್ಟ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆಯಾಯಿತೆಂಬ ಕಾರಣದಿಂದ ಕೈಗೊಂಡ ಕೆಲಸ ಅರ್ಧಕ್ಕೆ ನಿಂತೀತೆಂಬ ಭಯಕ್ಕಾಗಿ ಎದೆ ಇರುವುದಿಲ್ಲ. ಹಣ ರೂಪದ ಮಂತಿಗೆ ಕೊಡಲು ಶಕ್ಯವಿದ್ದವರು ತಮ್ಮ ಶಕ್ತ್ಯಾನುಸಾರ ಧಾರಾಳವಾದ ಮನಸ್ಸಿನಿಂದ ನೆರವಾಗಬೇಕು; ಹಣ ತೆರಲಾರದವರು ಶ್ರಮದಾನವನ್ನು ಮಾಡಲು ಮುಂಬರಬೇಕು, ಅನುಕೂಲವಿದ್ದವರು ಯೋಗ್ಯ ಸಾಮಗ್ರಿಗಳನ್ನು ಧರ್ಮಾರ್ಥವಾಗಿ ಪೂರೈಸಲು ಸಿದ್ಧರಾಗಬೇಕು—ಸ್ವಳೀಯ ಅಭಿವೃದ್ಧಿ ಯೋಜನೆಯ ಮೂಲದಲ್ಲಿರುವ ಸೂತ್ರ ಇದು. ಆದರೆ, ಒಮ್ಮೆ ಉತ್ಸಾಹಭರಿತರಾಗಿ ನಾವು ಕಾರ್ಯ ಪ್ರವೃತ್ತರಾದರೆ ತೀರಲಿಲ್ಲ ಎಂಬುದನ್ನೂ ಗಮನಿಸುವುದೊಳಿತು—ರಸ್ತೆಯೊಂದನ್ನು ಈ ವರ್ಷ ನಿರ್ಮಿಸುವುದು ದೊಡ್ಡ ಮಾತಲ್ಲ, ಅದನ್ನು ಯೋಗ್ಯ ರೀತಿಯಲ್ಲಿ ಪ್ರತಿ ವರ್ಷ ಕಾಪಾಡಿಕೊಳ್ಳುವುದೂ ಅಷ್ಟೇ ಮುಖ್ಯವಾದ ಕೆಲಸ. ಇದೇ ಮಾತನ್ನು ಶಾಲೆಗಳ ಕಟ್ಟೋಣ ಇತ್ಯಾದಿಗಳಿಗೆ ಅನ್ವಯಿಸಬಹುದು. ಮಾಡಿದ ಕೆಲಸ ತಾತ್ಕಾಲಿಕ ಸ್ಫೂರ್ತಿಯ ಫಲವಾಗದೆ, ಶಾಶ್ವತವಾಗಿ ಜನರ ಪ್ರಯೋಜನಕ್ಕೆ ಲಭ್ಯವಾಗುತ್ತಿರಬೇಕೆಂದೂ ಅದಕ್ಕಾಗಿ ಯೋಗ್ಯ ವ್ಯವಸ್ಥೆ ಕೈಗೊಳ್ಳಲ್ಪಡಬೇಕೆಂದೂ ಸರಕಾರ ಅಪೇಕ್ಷಿಸುತ್ತದೆ; ತಕ್ಕ ಒತ್ತಾಯವನ್ನೂ ಅದು ಹೇರುತ್ತದೆ. ಸಾಮಾನ್ಯವಾಗಿ ಜಿಲ್ಲಾ ಬೋರ್ಡಿನ ಅಧೀನತೆಗೆ ಶಾಲೆಗಳನ್ನೂ ರಸ್ತೆಗಳನ್ನೂ ಬಿಟ್ಟುಗೊಡಲಾಗುತ್ತದೆ— ಜಿಲ್ಲಾ ಬೋರ್ಡ್ ಜನರ ಈ ಸಂತೋಷದ ಕೊಡುಗೆಯನ್ನು ನಿರಾಕರಿಸಲಾರದಷ್ಟು ಪಾಕ್ಷಿಣ್ಯಪರವಿದ್ದರೂ ಅವುಗಳ ಮೇಲ್ವಿಚಾರಣೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗದೆ ಅಸವರ್ಥತೆಯನ್ನು ತೋರಿಸುತ್ತದೆ. ಇದಕ್ಕೆ ಬೋರ್ಡಿನ ಆರ್ಥಿಕ ದುಸ್ಥಿತಿಯೇ ಕಾರಣವಲ್ಲದೆ ಸದಸ್ಯರ ಮತ್ತು ಆಡಳಿತ ವರ್ಗದ ಉದಾಸೀನತೆಯಲ್ಲ ಎಂಬುದು ನಿಜ. ಹಣದ ತತ್ಸಾರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಬೋರ್ಡ್ ತುಂಬ ಬಳಲುತ್ತದೆ—ಅದರ ಆದಾಯದ ಸ್ರೋತಗಳು ಒಂದೊಂದೇಯಾಗಿ ಕೈ ಬಿಡುತ್ತಾ ಹೋಗುತ್ತಿದ್ದರೂ ಜವಾಬ್ದಾರಿ ಮಾತ್ರ ಹೆಚ್ಚುತ್ತಿದ್ದು, ಆಯವ್ಯಯದ ಬಾಯಿಗೂಡಿಸಲು ಬೋರ್ಡಿಗೆ ಬಹಳ ಕಷ್ಟವಾಗುತ್ತದೆ. ಸರಕಾರದವರು ಇದನ್ನು ಮನಗಂಡು, ವಾಹನ ತೆರಿಗೆ, ಪೆಟ್ರೋಲಿನ ಮೇಲಿನ ಸುಂಕ ಇತ್ಯಾದಿಗಳಲ್ಲಿ ಗಣನೀಯ ಪಾಲನ್ನೂ ಇತರ ಆದಾಯಗಳಲ್ಲಿ ಸಹಿ ಸ್ವಲ್ಪ ಹೆಚ್ಚು ಅಂಶವನ್ನೂ ಬೋರ್ಡಿಗೆ ಕೊಟ್ಟು ಅದರ ಇಂದಿನ ತ್ರಾಸವನ್ನು ನಿವಾರಿಸಲು ಮುಂಬರಬೇಕು. ಸಾರಿಗೆ, ವಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಬೋರ್ಡು ಪ್ರಗತಿ ಸಾಧಿಸುವುದಕ್ಕಿಂತಲೂ ಹಿನ್ನಡೆಯನ್ನಿಟ್ಟಿದೆ ಎಂದೇ ಸದಸ್ಯರ ಪ್ರಾಮಾಣಿಕವಾದ ಅಭಿಪ್ರಾಯ. ಇದು ಜನಕ್ಕೂ ತಿಳಿದಿರುವ ಮಾತು—ಆದುದರಿಂದ, ಸರಕಾರ ಬೋರ್ಡಿಗೆ ಉದಾರವಾದ ನೆರವಿತ್ತು ಮತ್ತು ಅದರ ಆದಾಯ ಹೆಚ್ಚುವ ರೀತಿಯಲ್ಲಿ ಯೋಗ್ಯ ಅಧಿಕಾರಗಳನ್ನಿತ್ತು ಜನರ ಕೃತಜ್ಞತೆಗೆ ಪಾತ್ರವಾಗಬೇಕು. ಈ ದೃಷ್ಟಿಯಿಂದ ಜಿಲ್ಲಾ ಬೋರ್ಡಿಗೆ ೫ ಲಕ್ಷ ರೂಪಾಯಿಗಳ ಸಹಾಯವನ್ನು ಕೊಡಬೇಕೆಂದು ಜಿಲ್ಲೆಯ ಯೋಜನಾ ಮಂಡಳ ಮಾಡಿರುವ ಗೊತ್ತುವಳಿಯನ್ನು ಸರಕಾರ ಮನ್ನಿಸಬೇಕೆಂದು ಆಗ್ರಹಪೂರ್ವಕ ವಿನಂತಿಸುತ್ತೇವೆ ಹೀಗೆ ಸಹಾಯ ಮಾಡಿದರೆ ಜಿಲ್ಲೆಯಲ್ಲಿ ಸ್ಥಳೀಯ ಅಭಿವೃದ್ಧಿಗೆ ಹತ್ತು ಲಕ್ಷ ರೂಪಾಯಿಗಳ ಕಾರ್ಯ ಕ್ರಮವನ್ನು ಯೋಜಿಸಿದ ಮಹಾನುಭಾವರ ಉದ್ದೇಶ ನಿಜಾರ್ಥದಲ್ಲಿ ಸಫಲವಾಗುವುದಕ್ಕೂ ಸಹಕರಿಸಿದಂತಾಗುತ್ತದೆ.

ಸೈಗಾನಿನಲ್ಲಿ ಮತಪ್ರದರ್ಶಕರ ಉಪದ್ರವ

ಅಂತಾರಾಷ್ಟ್ರೀಯ ನಿಯಂತ್ರಣ ಮಂಡಳದ ಮೇಲೆ ಹೇಳ್ಳಿ

ದಕ್ಷಿಣ ವೀಟನಾಮಿನ ರಾಜಧಾನಿಯಾದ ಸೈಗಾನಿನಲ್ಲಿ ೨೦ನೇ ದಿನಾಂಕ ದೊಡ್ಡ ಗಲಭೆಯೊಂದು ನಡೆಯಿತು. ಸರಿಯಾಗಿ ಒಂದು ವರ್ಷದ ಹಿಂದೆ ನಡೆದ ಜನೇವದ ಒಡಂಬಡಿಕೆಯಂತೆ ವೀಟನಾಮಿನಲ್ಲಿ ಈಗ ಕೆಲಸಮಾಡುತ್ತಿರುವ ಅಂತಾರಾಷ್ಟ್ರೀಯ ಶಸ್ತ್ರ ಸಂಧಾನ ನಿಯಂತ್ರಣ ಮಂಡಳದ ಸದಸ್ಯರು ಇಳಿದುಕೊಂಡಿದ್ದ ಹೋಟೆಲುಗಳ ಮೇಲೆ ಜನರು ದಾಳಿಮಾಡಿದರು. ಇದರಿಂದ ಲಕ್ಷಾಂತರ ರೂಪಾಯಿಗಳ ಹಾನಿಯಾಯಿತು; ಮಂಡಳದ ಕೆಲವು ಸದಸ್ಯರನ್ನೊಳಗೊಂಡು ಅನೇಕರು ಘಾಸಿಹೊಂದಿದರು. ಪೋಲೀಸರು ಇದನ್ನೆಲ್ಲ ಕಣ್ಣು ಮಿಟುಕಿಸದೆ ನೋಡುತ್ತಿದ್ದರು, ಹೊಂತು ರಕ್ಷಣೆ ನೀಡಲು ಮುಂದಾಗಲಿಲ್ಲ

ಶ್ರೀ| ಎಂ. ಜೆ. ದೇಸಾಯಿ

ದೇಸಾಯಿಯವರ ಹೇಳಿಕೆ

ಅಂತಾರಾಷ್ಟ್ರೀಯ ನಿಯಂತ್ರಣ ಮಂಡಳದಲ್ಲಿ ಭಾರತದ ಇನ್ನೂರು ಮತ್ತು ಕೆನಡ, ಪೋಲೆಂಡುಗಳ ಐವತ್ತೈವತ್ತು ಸದಸ್ಯರು ಇದ್ದಾರೆ—ಮೊದಲು ಬಂದ ವರದಿಯು ಮಂಡಳದ ಭಾರತೀಯ ಅಧ್ಯಕ್ಷರಾದ ಶ್ರೀ|| ಎಂ. ಜೆ ದೇಸಾಯಿಗೆ ದಾಳಿಗಾರರಿಗೆ ಅಪಮತಿಯಾದರೆಂದು ಹೇಳಿತು. ಆದರೆ, ಇಂದಿನಿಂದ ದೇಸಾಯಿಯವರು ತನಗೇನೂ ಆಗಿಲ್ಲ ಎಂದು ತಿಳಿಸಿ, ಉದ್ವೇಗದ ಶಮನದೀಮರನ್ನು ಕಂಡರು. ಸರಕಾರದಿಂದ ಅವರಿಗೆ ಕಮ್ಯೂನಿಸ್ಟರ ವಿರುದ್ಧ ನಡೆದ ಮತ ಪ್ರದರ್ಶನ ಇದಾಗಿತ್ತೇ ಹೊರತು ಮಂಡಳದ ಮೇಲೆ ದುರುದ್ದೇಶದಿಂದ ನಡೆಸಿದ ದಾಳಿಯಲ್ಲ ಎಂಬ ಉತ್ತರ ಸಿಕ್ಕಿತು. ದೇಸಾಯಿಯವರು ಇದನ್ನು ಖಂಡಿಸಿ, ಮಂತ್ರಿ ಮಂಡಳದ ಒಪ್ಪಿಗೆಯಿಂದಲೇ ನಡೆದ ಪೂರ್ವ ನಿಯೋಜಿತ ದಾಳಿ ಇದು ಎಂದು ವರದಿ ಒಪ್ಪಿಸಿದ್ದಾರೆ, ಅಲ್ಲದೆ ಅಂತಾರಾಷ್ಟ್ರೀಯ ಮಂಡಳಕ್ಕೆ ಯೋಗ್ಯ ರಕ್ಷಣೆ ಕೊಡಲು ಸಂಬಧಿಸಿದ

ವರು ಸಿದ್ಧರಿಲ್ಲದಿದ್ದರೆ ಅದು ಕೆಲಸ ಮಾಡುವುದು ಕಷ್ಟ ಎಂದಿದ್ದಾರೆ.

ಭಾರತದ ರಾಯಸ

ಮಂಡಳದ ಕಾರ್ಯ ನಿರ್ವಹಣೆಯ ಹೊಣೆ ಭಾರತ ಸರಕಾರದ ಮೇಲಿರುವುದರಿಂದ ನೆಹರೂಗಳು ಆಗ ಜನೇವದ ಸಮ್ಮೇಳನಕ್ಕೆ ಹೋಗಿದ್ದ ಬ್ರಿಟಿಷ್, ಫ್ರೆಂಚ್ ಮತ್ತು ರಶ್ಯನ್ ಧುರೀಣರಿಗೆ ಪತ್ರ ಬರೆದು, ದಕ್ಷಿಣ ವೀಟನಾಮಿನ ಮೇಲೆ ಒತ್ತಾಯವನ್ನು ಬೇರಬೇಕೆಂದು ಕೇಳಿಕೊಂಡರು. ಜಿನೇವದ ಒಡಂಬಡಿಕೆಯು ಇದೇ ೨೦ನೇ ತಾರೀಕಿನ ತರುವಾಯ ಉತ್ತರ ಮತ್ತು ದಕ್ಷಿಣ ವೀಟನಾಮುಗಳಲ್ಲಿ ಒರುವ ವರ್ಷ ಚುನಾವಣೆ ನಡೆಸುವ ಕುರಿತು ಮಾತುಕತೆ ನಡೆಯಬೇಕೆಂದು ವಿಧಿಸುತ್ತದೆ. ದಕ್ಷಿಣ ವೀಟನಾಮಿನಲ್ಲಿ ಕಳೆದ ಒಂದು ವರ್ಷದಿಂದ ಆಂತರಿಕಗಲಭೆಗಳಾಗುತ್ತಿರುವುದರಿಂದ ದೀಮರು ಚುನಾವಣೆ ನಡೆದರೆ, ತಮಗೆ ಜಯವಾಗದೆ, ಕಮ್ಯೂನಿಸ್ಟರದೇ ಮೇಲ್ಗೈ ಯಾದೀತೆಂದು ಬೆದರಿ, ಮಾತುಕತೆ ನಡೆಸಲು ನಿರಾಕರಿಸಿದ್ದಾರೆ. ಅಂತಾರಾಷ್ಟ್ರೀಯ ನಿಯಂತ್ರಣ ಮಂಡಳವನ್ನೆ ಬೆದರಿಸತ್ತಿದ್ದಾರೆ.

ಪ್ರಮುಖರ ಒತ್ತಾಯ

ಅಮೇರಿಕಕ್ಕೆ ಕಮ್ಯೂನಿಸ್ಟರು ಪ್ರಬಲಿಸುವುದು ಇಷ್ಟವಲ್ಲವಾದುದರಿಂದ, ಅದು ದೀಮರಿಗೆ ಬೆಂಬಲ ಕೊಡುತ್ತಿದೆ ಎಂಬುದರಲ್ಲಿ ಈಗ ಯಾರಿಗೂ ಸಂದೇಹವುಳಿದಿಲ್ಲ. ಈ ಬೆಂಬಲದ ಭರವಸೆಯಿಂದಲೇ ದೀಮರು ಒಡಂಬಡಿಕೆಯಂತೆ ನಡೆಯಲು ನಿರಾಕರಿಸುತ್ತಿದ್ದಾರೆಂದೂ ಅಮೇರಿಕದ ಮೇಲೆಯೇ ಒಡಂಬಡಿಕೆ ಮುರಿದ ಹೊಣೆ ಬೀಳುತ್ತದೆಂದೂ ಫ್ರಾನ್ಸಿನ ಅಧಿಕೃತ ವರ್ತುಲಗಳು ಆರೋಪಿಸುತ್ತವೆ. ಜಿನೇವ ಒಡಂಬಡಿಕೆಗೆ ಅಮೇರಿಕ ಅಂಕಿತ ಹಾಕಿಲ್ಲ—ಆದುದರಿಂದ ಅದು ಹೀಗೆ ತಂತ್ರ ನಡೆಸಿರುತ್ತದೆ ಎಂದರೂ ತಪ್ಪಲ್ಲ. ಆದರೆ ಈಗ, ಅಮೇರಿಕವು ಫ್ರಾನ್ಸು ಪತ್ತು ಬ್ರಿಟನುಗಳ ಒತ್ತಾಯವನ್ನು ಗೆವನಿಸಿ, ಇವೆರಡೂ ರಾಷ್ಟ್ರಗಳೊಂದಿಗೆ ತಾನೂ ದೀಮರಿಗೊಂದು ರಾಯಸ ಕಳಿಸಿ, ಚುನಾವಣೆಯ ಕುರಿತು ಮಾತುಕತೆ ನಡೆಸಲು ವಿಳಂಬಿಸಬಾರದೆಂದು ಆದೇಶವಿತ್ತಿದೆಯೆಂದು ತಿಳಿದುಬರುತ್ತದೆ. ಈಗಮಾತುಕತೆ ನಡೆದರೂ, ಒತ್ತಾಯಕ್ಕೆ ನಡೆದೀತು; ಫಲ ಸಿಗುವುದು ಸಂಶಯ; ಕಾಲಪರೂವನ್ನಷ್ಟೇ ನಿರೀಕ್ಷಿಸಬಹುದು.

ಭೂಸುಧಾರಣೆಯ ಮಸೂದೆ

ಮದ್ರಾಸು ಸರಕಾರವು ಆಗೋಸ್ಟಿನಲ್ಲಿ ಸೇರುವ ಶಾಸನ ಸಭೆಯ ಮುಂದೆ ಭೂಸುಧಾರಣೆಯ ಮಸೂದೆಯನ್ನು ಮಂಡಿಸುವುದಿಲ್ಲ. ರಾಜ್ಯದಲ್ಲಿ ಭೂಸುಧಾರಣೆಯನ್ನು ಮೂರು ಹಂತಗಳಲ್ಲಿ ಕಾರ್ಯರೂಪಕ್ಕೆ ಇಳಿಸಲಾಗುತ್ತದೆ. ಇದರ ವಿವರಗಳನ್ನು ಕೆಲವೇ ದಿನಗಳಲ್ಲಿ ತಿಳಿಸುತ್ತೇನೆ—ಎಂದು ಮುಖ್ಯಮಂತ್ರಿ ನಾಡರರು ಹೇಳಿದ್ದಾರೆ. ಇದರಿಂದ ನಿರಾಶೆಗೊಂಡ ದಕ್ಷಿಣ ಕನ್ನಡದ ರೈತರನ್ನು ಸತ್ಯಾಗ್ರಹಕ್ಕಾಗಿ ಕಮ್ಯೂನಿಸ್ಟರು ಸಂಘಟಿಸುತ್ತಿದ್ದಾರೆಂದು ತಿಳಿದುಬರುತ್ತದೆ.

ಸಾರ್ವಜನಿಕರಿಂದ ಸಾಲ

ಭಾರತದ ಬೇರೆ ಬೇರೆ ರಾಜ್ಯ ಸರಕಾರಗಳು ಸಾರ್ವಜನಿಕರಿಂದ ಸುಮಾರು ೩೬ ಕೋಟಿ ರೂಪಾಯಿಗಳ ಸಾಲವನ್ನು ಎತ್ತಲು ನಿರ್ಧರಿಸಿದ್ದು, ೧೬ನೇ ಆಗೋಸ್ಟಿನಿಂದ ೩೧ನೇ ಆಗೋಸ್ಟಿನ ವರೆಗೆ ವಂತಿಗೆ ಸ್ವೀಕರಿಸಲ್ಪಡುತ್ತದೆ. ಮದ್ರಾಸು ಸರಕಾರಕ್ಕೆ ಎಳು ಕೋಟಿ ರೂಪಾಯಿಗಳು ಬೇಕಾಗಿದ್ದು, ಇದಕ್ಕೆ ೪½ ಬಡ್ಡಿ ಸಿಗುತ್ತದೆ. ಸಾಲದ ಅವಧಿ ೧೨ ವರ್ಷ; ಈ ವರ್ಷಕ್ಕೆ ಅವಧಿ ಮುಗಿಯುವ ಸರಕಾರದ ಸಾಲಪತ್ರಗಳನ್ನು ಹೊಸ ಸಾಲಕ್ಕೆ ವಂತಿಗೆಯಾಗಿ ಕೊಡಬಹುದು. ಕೊನೆಯ ದಿನಕ್ಕೆ ಮೊದಲೇ ಸಾಲ ತುಂಬಿ ಬಂದರೆ, ವಂತಿಗೆ ಸ್ವೀಕರಿಸುವುದನ್ನು ಆ ಕೂಡಲೇ ನಿಲ್ಲಿಸಲಾಗುತ್ತದೆ. ಸಾಲಪತ್ರದ ಕನಿಷ್ಠ ಪ್ರಮಾಣ ೧೦೦ ರೂಪಾಯಿಇದನ್ನು ಪಡೆಯಲುರೂ ೯-೧೨-೦ ಕೊಟ್ಟರೆ ಸಾಕು.

ಉಡುಪಿ

ಗೋವಾ ಸತ್ಯಾಗ್ರಹಿಗಳಿಗೆ ಸ್ವಾಗತ—

ಮಲಬಾರಿನ ಭಾರತೀಯ ಜನಸಂಘದ ಕಡೆಯಿಂದ ಗೋವೆಯಲ್ಲಿ ಸತ್ಯಾಗ್ರಹ ಹೂಡಲು ಹೊರಟಿದ್ದ ಶ್ರೀ ಎ ಕೆ ಶಂಕರ ಮೆನೊನ್ ಮತ್ತು ಪಾರ್ಟಿಯವರಿಗೆ ತಾ.20ರಲ್ಲಿ ಉಡುಪಿಯಲ್ಲಿ ಸ್ವಾಗತ ಉಪಾಚಾರಗಳಾದುವು. ಸಂಜೆ ರಥಬೀದಿಯಲ್ಲಿ ಸರ್ವಪಕ್ಷೀಯ ಗೋವಾನಿಮೋಚನಾ ಸಮಿತಿಯಆಶ್ರಯದಲ್ಲಿ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿ ಗೋವೆಗೆ ಹೋಗುವ ಸತ್ಯಾಗ್ರಹಿಗಳಿಗೆ ಶುಭವನ್ನು ಕೋರಲಾಯಿತು. ಮಂಗಳೂರಿನಿಂದ ಈ ಮೊದಲೇ ಗೋವೆಗೆ ಹೋಗಿ ಸತ್ಯಾಗ್ರಹ ಹೂಡಿ ಕಷ್ಟಗಳನ್ನು ಅನುಭವಿಸಿ ಹಿಂತಿರಳಿದ ಶ್ರೀ ಬಾಮೋದರ ರಾಯರಿಗೆ ಪಂಗಡವೂ ಅಂದೇ ಉಡುಪಿಗೆ ಬಂದಿತ್ತು. ಆ ಪಂಗಡದವರೂ ಸಾರ್ವಜನಿಕೇ ಸಭೆಯಲ್ಲಿ ಅಭಿನಂದನೆಗೆ ಪಾತ್ರರಾಯಿತು. ಶ್ರೀ ಪ್ರಭಾಕರ ಘಾಟೆ, ಶ್ರೀ ಎ. ಜೆ ಅಲ್ಸೆ, ಮೊದಲಾದವರು ಮಾತನಾಡಿದರು ಶ್ರೀ ಪಿ. ಶೀನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಎಂ. ಜಿ. ಎಮ್. ಕಾಲೇಜ್ ಯೂನಿಯನಿನ—

ಅಧ್ಯಕ್ಷರಾಗಿ ಶ್ರೀ ಕೆ. ರಾಧಾಕೃಷ್ಣ ಕಾರಂತರು ತಾ. 22ರಂದು ಚುನಾಯಿತರಾಗಿದ್ದಾರೆ. ಶ್ರೀಗಳಾದ ಹರಿದಾಸ ಆಚಾರ್ ಮತ್ತು ಗೋವಿಂದ ಸೆಟ್ಟರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ.

ನಿಧನ-ಕೆಲವು ತಿಂಗಳುಗಳಿಂದ ಕಾಯಿಲೆಯಲ್ಲಿದ್ದ ಪಡಿಯಲ್ ಕ್ಲೋತ್ ಸ್ಟೋರ್ಸಿನ ಶ್ರೀ ಕೆ. ಗೋಪಾಲ ಕೃಷ್ಣ ನಾಯ್ಕರು 61ನೆ ಪ್ರಾಯದಲ್ಲಿ ತಾ. 21ರಂದು ಮೃತರಾದುದು ವಿಷಾದಕರವಿದೆ. ಸ್ಥಳೀಯ ವರ್ತಕ್ಯಾಪಾರಿಗಳು ಅಂದು ಈ ಸಂಬಂಧ ಹರತಾಳವನ್ನಾಚರಿಸಿದರು.

ಶ್ರೀಲಕ್ಷ್ಮೀವೆಂಕಟೇಶ ದೇವಸ್ಥಾನದಲ್ಲಿ—

ಪ್ರತಿಷ್ಠೆ ಜರಗುವ ಭಜನಾ ಸಪ್ತಾಹವು ತಾ. 21ರಂದು ವಿಜೃಂಭಣೆಯಿಂದ ಪ್ರಾರಂಭಿಸಲ್ಪಟ್ಟಿದೆ. ಮಂಗಲೋತ್ಸವವು ತಾ 31ಕ್ಕೆ ನೆರವೇರಲಿದೆ.

ರಸ್ತೆಯಕಾರ್ಯ—

ಚಿಟ್ಟಾಡಿ ಬೀಡು—ಪೂರ್ಪಳ್ಳಿ ರಸ್ತೆ ಮತ್ತು ಬಡಗಬೆಟ್ಟು ಬೈಲೂರು-ಕೊರಂಗ್ರಪಾಡಿ ರಸ್ತೆಗಳ ದಕ್ಷಿಣ ಭಾಗದ ಕೆಲಸವು ಪೂರ್ತಿಯಾಗಿದ್ದು ಉತ್ತರ ಭಾಗದ ಕೆಲಸವನ್ನು ಆರಂಭಿಸುವ ಸಮಾರಂಭವು ತಾ. 24ರಂದು ಡಾ| ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಬೈಲೂರು ಹನುಮಾನ್ ಕಟ್ಟಡದಲ್ಲಿ ಜರಗಿತು.

ಪಿಜಾಂಜೆ ಶ್ರೀ ಬೋಜ್ ಡಿ. ಅಣ್ಣಾರು ವರದಿಯನ್ನೋದಿದ ಮೇಲೆ ಶ್ರೀಗಳಾದ ಎ.ಜೆ ಅಲ್ಸೆ, ಹೆಡ್ಮಾಸ್ಟರ್ ಎಸ್. ಎಸ್. ಮತ್ತಾಯಸರು ಸಂದರ್ಭೋಚಿತ ಭಾಷಣಮಿತ್ತರು.

ಮದ್ರಾಸು ಸರಕಾರದವರು ಎತ್ತುವ ರೂ. 7 ಕೋಟಿ ಸಾಲದಲ್ಲಿ, ಎದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್ ಇವರು ರೂ. 20 ಲಕ್ಷದ, ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನವರು 20 ಲಕ್ಷದ, ಕೆನರಾ ಮ್ಯಾನೇಜಿಂಗ್ ಏಜೆನ್ಸಿನವರು 10 ಲಕ್ಷದ ಬೋಂಡುಗಳನ್ನು ಪಡಕೊಳ್ಳುವರೆಂದು ತಿಳಿದು ಬರುತ್ತದೆ

1949ರ ಅಳಿಯಸಂತಾನ ಕಾನೂನು— ಸಂಪೂರ್ಣ ಕೈಬಿಡಲ್ಪಟ್ಟವಾಗಿದೆ ಎಂದೂ, ಅಕ್ಟೋಬರನೇ ಕೆಲಂ ಪ್ರಾಂತಿಕ ಶಾಸನ ಸಭೆಯ ಸಮಿತಿಯೊಳಗೇ ಇರುವುದೆಂದೂ ಮದ್ರಾಸು ಹೈಕೋರ್ಟು ತೀರ್ಪುಕೊಟ್ಟಿದೆ. ಸ್ವಲ್ಪಸಮಯದ ಹಿಂದೆ ಮಂಗಳೂರು ಪ್ರಭಾ ಕೋರ್ಟಿನಲ್ಲಿ ಸುಮಾರು ಅಳಿಯ ಸಂತಾನ ಕುಟುಂಬಗಳ ಮೂರು ದಾವೆಗಳುದಾಖಲಾಗಿದ್ದು 1935ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಕಾನೂನು ಮೇರೆಗೆ 1949ರ ಅಳಿಯಸಂತಾನ ಮತ್ತೂದೆ ಮದ್ರಾಸು ಶಾಸನಸಭೆಗೆ ವರ್ಗಾಯಿಸಿಕ್ಕಿದ್ದೆಂಬ ವಾದ ಎದ್ದಿತ್ತು ಆದ್ದರಿಂದ ಮಂಗಳೂರಿನ ಸಬ್ ಜಡ್ಜರು. ಇದನ್ನು ಹೈಕೋರ್ಟಿನ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟಿದ್ದರು.

ಪಳ್ಳಿ—ತಾ. 24-7-55ರಲ್ಲು ಪಳ್ಳಿ ಡಾಂಗರ್ ಎಲಿಮೆಂಟರಿ ಶಾಲಾ ಉದ್ಘಾಟನಾ ಸಮಾರಂಭವು ಪೊಸದಾಗಿ ಕಟ್ಟಿಸಿದ ಕಟ್ಟಡದಲ್ಲಿ ವಿಸ್ಟಿಕ್ಟ್ ಬೋರ್ಡ್ ಅಧ್ಯಕ್ಷ ಡಾ. ಕೆ. ಕೆ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ. ಬಿ. ಎಸ್ ಭಾರ್ಗವ ರೈಯವರಿಂದ ಉದ್ಘಾಟಿಸಲ್ಪಟ್ಟಿತು.

ಮಲ್ಪೆ— ಗ್ರಾ ಫಿಶ್ಶರೀಸ್ ಹೈಸ್ಕೂಲಿನಲ್ಲಿ ಎ ಸಿ. ಸಿ ಯ ಉದ್ಘಾಟನೆಯು ಶ್ರೀ. ಎ. ಜೆ ಅಲ್ಸೆಯವರಿಂದ (ಸುಬ್ಬಾಳ್ಳಾಪಿಳೆ ಶ್ರೀಮತಿ ಸಾರಾ ಅಮೀನರ ಅಧ್ಯಕ್ಷತೆಯಲ್ಲಿ) ತಾ. 19ರಂದು ನೆರವೇರಿಸಲ್ಪಟ್ಟಿತು.

ಹೈವಳಿಕೆ— ಸ್ಥಳೀಯ ಬೋರ್ಡ್ ಹಾಲಿ ಶಾಲೆಯ ಹೊಸ ಕಟ್ಟಿಡದ ಶಂಕುಸ್ಥಾಪನೆಯನ್ನು ತಾ. 20ರಲ್ಲಿ ಬೆಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಆರ್ಎಸ್ ನೆರವೇರಿಸಿದರು. ಶಾಲಾ ಸಮಿತಿ ಅಧ್ಯಕ್ಷ ಶ್ರೀ ಕೆ ಆರ್. ಬಲ್ಲಾಳರು ಸ್ವಾಗತ ಮಾತುಗಳನ್ನಾಡಿದರು.

ಅದೇ ದಿನ ಗ್ರಾಮ ಸೇವಾಸಂಘದ ಅಧ್ಯಕ್ಷರೂ ಆಗಿರುವ ಶ್ರೀ ಕೆ ಆರ್. ಬಲ್ಲಾಳರ ಹಿರಿತನದಲ್ಲಿ ಸುವಾರು ಎರಡುಸೂರು ಗ್ರಾಮಸ್ಥರು ಶ್ರಮದಾನಮಿತ್ತು ಶಾಲೆಗಾಗಿ ಆಟದ ಮೈದಾನವನ್ನು ಸಿದ್ಧಗೊಳಿಸಿದರು ಕುಂದಾಪುರ ಸಬ್‌ಕಲೆಕ್ಟರ್ ಶ್ರೀ ಕೆ ವಿ. ಸಿ. ಕುರುಪ್, ಅವರು ಶ್ರಮದಾನ ಕಾರ್ಯವನ್ನು ಉದ್ಘಾಟಿಸಿದರು.

ಕಣಿಯೊರು— ಚಿತ್ರಂಜಿ ತಾಲೂಕು ಕಣಿಯೂರು ಗ್ರಾಮದ ಪಂಚಾಯತ ಚುನಾವಣೆಯು ತಾ. 19ರಲ್ಲಿ ಜರಗಿ ಶ್ರೀಗಳಾದ ರಾಘವೇಂದ್ರಯ್ಯ ನವರು ಅಧ್ಯಕ್ಷರಾಗಿಯೂ ವಿಠಲ ಸೆಟ್ಟಿ, ಕೆ. ಪಿ. ಸಂತಪ್ಪ ಹೆಗ್ಡೆ, ಕೆ. ರಮಿರಾಜ ಹೆಗ್ಡೆ, ಬಿ ವೈ ಮೊಯ್ದಾ ಮೇಲಂಟ, ಕರಿಜನ ತಿಮ್ಮಪ್ಪ ಮತ್ತು ಅಹಾಂಬ್ಯಾರಿಗಳು ಇತರ ಸದಸ್ಯರಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟರು.

ಕುಂಬಳೆ— ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಸಜಂಟ್ ಶ್ರೀ ಎ ಎಸ್ ಕಾಮತರು ಕಣ್ಣಾನೂರಿಗೆ ವರ್ಗವಾಗಿ ಹೋಗಲಿರುವ ನಿಮಿತ್ತ ಆವರಿಗೆ ತಾ. 18ರಂದು ಶ್ರೀ ಬಿ. ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಬೀಳ್ಕೊಡುವ ಸಮಾರಂಭ ಜರಗಿತು.

ಕೊರಂಗ್ರಪಾಡಿ—ತಾ 21-3-55 ರಲ್ಲಿ ವಸೂಲಿಮಾಡಿದ ತೀರ್ವಜಣ ರೂ. 203.7.0ನ್ನು ಹಿಡಿದುಕೊಂಡು ಪರಾರಿಯಾದ ಶೇಕ್ ಇಬ್ರಾಹಿಮ್ ಸಾಹೇಬನನ್ನು ಬೊಂಬಾಯಿಯಲ್ಲಿ ದಸ್ತಗಿರಿಮಾಡಿ ಉಡುಪಿಗೆ ತಂದು ತಾ 15—7—55ರಲ್ಲಿ ಉಡುಪಿ ಸ್ಪೆಶಲ್ ಸಬ್ಸ್ಟಾಕ್ಸಿನ್ ಮೆಜಿಸ್ಟ್ರೇಟರಲ್ಲಿ ವಿಚಾರಣೆ ನಡೆದು ಅವನಿಗೆ 15 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಪಡುಬಿದ್ರೆ— ಸ್ಥಳೀಯ ಸರಕಾರೀ ಪಿರೀಸ್ ಶಾಲೆಯ ವಿದ್ಯಾರ್ಥಿಗಳಿಗೆ ಬೊಂಬಾಯಿಯ ನುತ್ತು ಊರ ಕೊಡಿಸಿದ್ದ ಸದಿಪಟ್ಟಿ ವಿದ್ಯಾ ಪ್ರಚಾರ ಸಮಿತಿಯ ಕಡೆಯಿಂದ ಸ್ಲೇಟು ಪುಸ್ತಕಗಳು ಬಹಮಿಸಿಕೊಟ್ಟಿದ್ದು ಹರಿಜನ ಶುಕ್ಷಿಗೆ ಅಂಗಿ ವಸ್ತ್ರಕೂಡಾ ಕೊಡಲ್ಪಟ್ಟಿದೆ ಎನ್ನಲಾಗಿದೆ.

ಕೊಂಡಾಡಿ—ಉಡುಪಿ ತಾಲೂಕು ಬೊಮ್ಮಾರಬೆಟ್ಟು ಗ್ರಾಮದ ಕೊಂಡಾಡಿಯಲ್ಲಿ ತಾ. 20ರಂದು ರಾತ್ರಿ ಹರಿಜನ ಜೆಂಗುಮಣ್ಣು ಎಂಬವಳು ತನ್ನ 8 ತಿಂಗಳ ಮಗುವನ್ನು ಹುಲ್ಲುಕೊಯ್ಯುವ ಕತ್ತಿಯಿಂದ ಕಡಿದು ಕೊಂದಳೆಂದೂ, ಸುಮಾರು 9 ವರ್ಷದ ಮಗನನ್ನು ಗಾಯಗೊಳಿಸಿದಳೆಂದೂ, ಬಳಿಕ ತಾನು ಆತ್ಮ ಹತ್ಯೆಮಾಡಲು ಪ್ರಯತ್ನಿಸಿದಳೆಂದೂ ಈಗ ಹೆಂಗಸನ್ನು ಹುಡುಗನನ್ನೂ ಉಡುಪಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದೂ ಪೊಲೀಸರು ತನಿಖೆ ನಡೆಸುತ್ತಿರುವರೆಂದೂ ತಿಳಿದು ಬರುತ್ತದೆ.

ಭಾರತದ ಗುರುಕುಲ
(ಯಕ್ಷಗಾನ)
ಮದರಾಸು ಸರಕಾರದಿಂದ
ಸಂಭಾವನೆ ಪಡೆದ ಗ್ರಂಥ.
ಬೆಲೆ: 0 8 0

ಭಾರತದಲ್ಲಿ ವಿಶಾಖ ಪಟ್ಟಣದ ಹಡಗುನಿರ್ಮಾಣ ಕಾರ್ಖಾನೆಯಲ್ಲಿ ಯುದ್ಧ ಹಡಗುಗಳನ್ನು ಮಾದರಿಗಳು ಕಟ್ಟಲ್ಪಡುತ್ತವೆ. ಈ ಉದ್ಯಮ ಅಭಿವೃದ್ಧಿಯೊಂದಿ, ಬ್ರಿಟನ್ನಿನಂತೆ ನಮಗೆ ದೊರೆತಿರುವ ಮೇರಿನ ಮಾದರಿಯ ರಣ ನೌಕೆಗಳನ್ನು ಕಟ್ಟಲು ಕಾವು ಸಮರ್ಥರಾಗುವ ದಿನ ದೂರವಿಲ್ಲ ಅಲ್ಲಿಯ ವರೆಗೆ ಬ್ರಿಟನು ಇನ್ನೂ ಕೆಲವು ರಣ ನೌಕೆಗಳನ್ನು ನಮಗೆ ನೀಡುತ್ತದೆ, ಅವು ಈ ಚಿತ್ರದಲ್ಲಿ ತೋರುವ ಹಡಗಿಗಿಂತಲೂ ಹೆಚ್ಚು ಯೋಗ್ಯತೆಯುಳ್ಳದ್ದಾಗುತ್ತವೆ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಪ್ಪಿ ವಾಸುದೇವ ತೆಣ್ಣೈಯವರ
ಓದಲೇಬೇಕಾದ ಮೂರು ಪುಸ್ತಕಗಳು
ಮೀರೆ ಮತ್ತು ನಾನು (೧೫ ಮೀರಾ ಕತೆಗಳು) 1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು 1—0—0
ಕಸದ ಡಬ್ಬಿಗಳು (೨೪ ಹರಟೆಗಳು) 1—0—0
ಪ್ರತಿಗಳಿಗೆ ಬರೆಯಿರಿ.— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಶ್ರೀ ಯು. ಗಣೇಶ ಶೆಣೈಯವರ ನಿಧನ— ಸ್ಥಳೀಯ ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡಿನ ಮೆನೇಜರ್ ಶ್ರೀ ಯು. ಗಣೇಶ ಶೆಣೈಯವರು ತಾ. 20ರಂದು ಬೆಳಿಗ್ಗೆ 49ನೇ ವಯಸ್ಸಿನಲ್ಲಿ ನಿಧನ ಹೊಂದಿದುದು ವಿಷಾದಕರವಾಯಿತು. ಮೃತರ ಗೌರವಾರ್ಥವಾಗಿ ಅಂದು ನಗರದ ಹೆಚ್ಚಿನ ಪ್ರೆಸ್‌ಗಳು ಮುಚ್ಚಲ್ಪಟ್ಟಿದ್ದವು. ಡಿ. ಕೆ. ಚಿತ್ಲೆಯ ಮಾಸ್ಟರ್ ಪ್ರಿಂಟರ್ಸ್ ಎಸೋಸಿಯೇಶನ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದ ಶ್ರೀ ಶೆಣೈಯವರ ನಿಧನದ ಬಗ್ಗೆ ಸಮಿತಿಯು ತನ್ನ ಶೋಕವನ್ನು ವ್ಯಕ್ತಪಡಿಸಿತು. ಮೃತರು ಅಸುಖವಾಲಿ ಮೆನೇಜರರಾಗಿದ್ದು 20 ವರ್ಷ ಕಾಲ ಸೇವೆ ಸಲ್ಲಿಸಿದ್ದರು.

ಪತ್ರಿಕೋದ್ಯಮಿಗಳ ಸಂಘದಲ್ಲಿ ಶ್ರೀ ಪಿ. ಎಸ್ ಕುಡ್ವರು— ವಿದೇಶ ಪ್ರವಾಸ ಕೈಗೊಳ್ಳಲಿರುವ ನವಭಾರತ ಸಂಪಾದಕರು, ಕೆನರಾ ವರ್ಕ್ಸ್ ಶೀಟ್ಸ್ ಲಿಮಿಟೆಡ್ ಮತ್ತು ಸಿ. ಪಿ. ಸಿ. ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ ಆದ ಶ್ರೀ ಪಿ. ಎಸ್. ಕುಡ್ವರಿಗೆ ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಕಡೆಯಿಂದ ಮೋಹನಿನಿಲಾಸದಲ್ಲಿ ಸತ್ಕಾರಕೂಟವೊಂದು ಜರಗಿತು. ಶ್ರೀ ಡಿ. ಮಟ್ಟುಸ್ವಾಮಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಆರ್. ಆಚಾರ್ಯರು ಸ್ವಾಗತವಾಡಿದರು. ಶ್ರೀಗಳಾದ ಎಮ್. ಮಾಧವ ರಾವ್, ಡಾ। ಎಸ್. ಗೋಪಾಲಕೃಷ್ಣ ರಾವ್, ಬಿ. ಎಮ್. ಇದಿನಬ್ಬ, ಡಾ। ಎಮ್ ಆರ್ ಭಟ್ ಮತ್ತು ಎಚ್. ಎನ್. ಕಾಮತರು ಕಾಲೋಚಿತಮಾತುಗಳನ್ನಾಡುತ್ತಾ ಶ್ರೀ ಕುಡ್ವರ ವಿದೇಶ ಪ್ರವಾಸವು ಸತ್ಫಲದಾಯಕವಾಗಲೆಂದರು. ಶ್ರೀ ಕುಡ್ವರು ತಮಗಿತ್ತ ಸತ್ಕಾರಕ್ಕಾಗಿ ಸಂತೋಷ ವ್ಯಕ್ತಪಡಿಸಿ, ತಾನು ನಡೆಸುತ್ತಿರುವ ಉದ್ಯಮಗಳಿಗೆ ರಾಷ್ಟ್ರೀಕರಣ ಮಾಡುವುದಾದರೆ, ಅಪ್ಪಗಳನ್ನು ಸರಕಾರಕ್ಕೆ ಒಪ್ಪಿಸಲು ತನ್ನಿಂದೇನೂ ಅಕ್ಷೇಪವಿಲ್ಲವೆಂದರು ಶ್ರೀ ಕೆ. ಎಸ್. ಉಪಾಧ್ಯಾಯರು ಧನ್ಯವಾದಗೈದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನಲ್ಲಿ ಶ್ರೀ ಕುಡ್ವರಿಗೆ ಸತ್ಕಾರ— ಶ್ರೀ ಪಿ ಎಸ್. ಕುಡ್ವರು ವಿದೇಶ ಪ್ರವಾಸಕ್ಕೆ ತೆರಳುವ ಗೌರವಾರ್ಥವಾಗಿ ತಾ. 21 ರಂದು ಸಂಜೆ ಕೆನರಾ ಚೇಂಬರ್ ಆಫ್ ಕಾಮರ್ಸಿನವರು ಸತ್ಕಾರಕೂಟವೊಂದನ್ನೇರ್ಪಡಿಸಿದರು. ಶ್ರೀ ಎಮ್. ಧರಣಾಲ ಪಡಿವಾಳರು ಸ್ವಾಗತವಾತುಗಳನ್ನಾಡಿ ಶ್ರೀ ಕುಡುವರಿಗೆ ಸುಪ್ರಯಾಣವನ್ನು ಬಯಸಿದರು. ಶ್ರೀಗಳಾದ ಎಮ್. ಗೋವಿಂದ ಪೈ, ಎಸ್. ನರಸಯ್ಯ, ಎಮ್. ಎಲ್. ಸಿ. ಮತ್ತು ಮಿಸ್ ಜೆ. ಎನ್. ಟೈಟಸ್ ಶ್ರೀ ಕುಡ್ವರು ಉದ್ದೇಶ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿದರು. ಸ್ವೀಕಾರ ಉದ್ಯಮದ ಸಂಬಂಧ ವಿದೇಶ ಪ್ರವಾಸ ಕೈಗೊಂಡುದಾಗಿಯೂ, ಎರಡು ತಿಂಗಳಿಕಾಲ ಅ[illegible] ತಾನು ಅ[illegible]ಸಲಿರುವುದಾಗಿಯೂ, ಶ್ರೀ ಕುಡ್ವರು ಹೇಳಿ, ತನಗಿತ್ತ ಸತ್ಕಾರಕ್ಕಾಗಿ ಕೃತಜ್ಞತೆ ಸಲ್ಲಿಸಿದರು. ಶ್ರೀ ಕೆ. ಉದೇಂದ್ರ ಪೈಗಳು ವಂದನೆಗೈದನ್ನಿತ್ತರು. ಶ್ರೀ ಕುಡ್ವರು 22ರಂದು ಮುಖ್ಯಾಧ್ಯ ವಿಮಾನಮೂಲಕ ಬೊಂಬಾಯಿಗೆ ತೆರಳಿದರು. ಬಂಧುವರ್ಗದವರು ಶ್ರೀ ಕುಡ್ವರಿಗೆ ಬಜ್ಪೆ ವಿಮಾನ ನಿಲ್ದಾಣದಲ್ಲಿ ಹಾರಗಳನ್ನರ್ಪಿಸಿದರು. ಶ್ರೀ ಕುಡ್ವರು ತಾ. 27ರಂದು ಬೊಂಬಾಯಿಂದ ವಿಮಾನಮೂಲಕ ವಿದೇಶಕ್ಕೆ ತೆರಳಿದರು.

ಕಾಂಗ್ರೆಸ್ ಯುವಕ ಸಂಘಟನೆಯ ಸಭೆಯು— ತಾ. 19ರಲ್ಲು ಸಂಜೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ। ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು ಯುವಕ ಸಂಘಟನೆಯ ನಿಯಮಾವಳಿಗಳನ್ನು ತಯಾರಿಸಲು ಶ್ರೀಗಳಾದ ಎ. ಶಂಕರ ಆಳ್ವ, ಸಿ. ವ್ಯಾಸ್, ಎಮ್. ಎಲ್. ಸಿಟ್ಟಿ ಮತ್ತು ಎಮ್. ಆರ್. ಕಿಣಿಗಳಿರುವ ಸಮಿತಿ ನೇಮಿಸಲ್ಪಟ್ಟಿತು.

ಪ. ಕ. ಜಿಲ್ಲಾ ಬೋರ್ಡು ಸಭೆಯು—ಇದೇ ತಾ. 23ರಲ್ಲು ಬೋರ್ಡಿನ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳ್ತಂಗಡಿಯಲ್ಲೊಂದು ಹೈಸ್ಕೂಲನ್ನು, ಸರಕಾರಿ ಶರತ್ತುಗಳನ್ನು ಅಲ್ಲಿಯ ಸ್ಥಳೀಯರು ಈಡೇರಿಸುವಲ್ಲಿ ತೆರೆಯಬಹುದೆಂದು ಸರ್ವಾನು ಮತದಿಂದ ಪಾಸಾಯಿತು. ಬೋರ್ಡಿನ 1954–55ನೆ ವರ್ಷದ ಆಡಳಿತೆಯ ವರದಿಯ ಮೇಲೆ ಚರ್ಚೆ ನಡೆಸಿ ರಸ್ತೆ ಮತ್ತು ಶಾಲೆಗಳ ಪರಿಸ್ಥಿತಿಯು ಉತ್ತಮಗೊಳ್ಳಬೇಕೆಂಬ ಅಭಿಪ್ರಾಯವನ್ನು ಸದಸ್ಯರು ಸೂಚಿಸಿದರು. ಶ್ರೀ ಟಿ. ಎಸ್. ಭಾಸ್ಕರ ರೈಗಳು ಈಗಿನ ಜಿಲ್ಲಾ ಬೋರ್ಡು ಮತದಾರ ಕ್ಷೇತ್ರಗಳನ್ನು ಪುನರ್ವಿಂಗಡಿಸಬೇಕು, ಶ್ರೀಯರಿಗೆ ಹೆಚ್ಚು ಸ್ಥಾನಗಳನ್ನು ಕಾದಿರಿಸಬೇಕು ಎಂದು ಮುಂದಾಗಿ ಆಡಳಿತ ವರದಿ ಚರ್ಚೆಯ ಸಮಯ ಹೇಳಿದರು. ಶ್ರೀ ಎಸ್. ಎಸ್. ಪರಮೇಶ್ವರಯ್ಯನವರು ನಾಡ್ಕೈಮ ವರ್ಷಗಳಷ್ಟು ಸರ್ವಾದಾ ಉಪಾಧ್ಯಾಯರು ಪೆನ್ಶನ್ ಫಂಡಿಗೆ ಸೇರುವಂತಾಗಬೇಕೆಂದರು. ಶ್ರೀಗಳಾದ ಕೆ. ಕೆ. ಸಿಟ್ಟಿ, ಡಾ। ನಾಗಪ್ಪ ಆಳ್ವ, ಡಾ। ಯು. ಕೃಷ್ಣ, ಧರ್ಮ ಶಾಸ್ತ್ರಿ ಜ್ಜಯ್ಯ, ಎ ಕೃಷ್ಣ ಸಿಟ್ಟಿ, ಆರ್. ಕೆ. ಸಂಜೀವ ರಾವ್ ಮೊದಲಾದವರು ಕೆಲವೊಂದು ಸಲಹೆ ಸೂಚನೆಗಳನ್ನಿತ್ತರು. ಅಧ್ಯಕ್ಷರು ಉತ್ತರಿಸುತ್ತಾ, ಸದಸ್ಯರು ಕೊಟ್ಟ ಸೂಚನೆಗಳಿಗೆಲ್ಲಾ ಸಾಧ್ಯ ಆವಶ್ಯಕತೆಯಿದೆ ಎಂದು ಹೇಳಿದರು.

ಬಂಟ್ವಾಳ ಲೋಕಲ್ ಫಂಡ್ ಆಸ್ಪತ್ರೆ ಪಟಾರದಲ್ಲಿ ಸಮಾಜ ವಿಕಾಸ ಯೋಜನೆಯ ಆಶ್ರಯದಲ್ಲಿ ರೂ. 10,000 ವೆಚ್ಚದಿಂದ ಕಟ್ಟಿಸುತ್ತಿರುವ ಹೆರಿಗೆ ವಾರ್ಡಿನ ಕೆಲಸ ಮುಂದರಿಸಬೇಕೆಂದೂ ಆ ವಾರ್ಡಿನ ಮುಂದಿನ ನಡೆಸುವ ಖರ್ಚನ್ನು ಜಿಲ್ಲಾ ಬೋರ್ಡು, ಒಡಗಿಸಬೇಕೆಂದೂ ನಿರ್ಣಯವಾಯಿತು. ಕುಂದಾಪುರ ಬೋರ್ಡು ಹೈಸ್ಕೂಲಿನ ಹಾಲನ್ನು ರಚಿಸಲು ತಿದ್ದಿದ ಅಂದಾಜು ರೂಪಾಯಿ 40,000ನ್ನು ಮಂಜೂರು ಮಾಡಲಾಯಿತು. ಉಡುಪಿಯಲ್ಲಿರುವ ಜಿಲ್ಲಾ ಬೋರ್ಡಿನ ಪೆಂಟ್‌ಹೌಸ್ ಬಂಗಲೆಯನ್ನು ಉಡುಪಿ ನಗರಸಭೆಗೆ ಬಿಟ್ಟುಕೊಡಬೇಕೆನ್ನುವ ಉಡುಪಿ ನಗರಸಭೆಯ ಕೋರಿಕೆಯನ್ನು ತಿರಸ್ಕರಿಸಲಾಯಿತು. ಸರಕಾರದ ಅಜ್ಞೆಯಂತಿರುವ ಶರತ್ತುಗಳನ್ನು ಸ್ಥಳೀಕರು ಪೂರೈಸುವಲ್ಲಿ ಮಂಜೂರಿನಲ್ಲಿಯೂ ಹೈಸ್ಕೂಲು ತೆರೆಯಬಹುದೆಂದಾಯಿತು. ಬೈಲೂರಲ್ಲಿ ಚಾಲ್ತಿ ನಡುಷದಲ್ಲಿ 10ರಿಂದ 4ನೆ ಫಾರ್ಮುಗಳ ತನಕ ತೆರೆದು ಹೈಸ್ಕೂಲು ಆರಂಭಿಸಿದುದನ್ನು ಮಂಜೂರು ಮಾಡಲಾಯಿತು. ಜಿಲ್ಲೆಯ ಸಮಾಜ ವಿಕಾಸ ಯೋಜನಾ ಕ್ಷೇತ್ರದಲ್ಲಿರುವ 164 ಬೋರ್ಡು ಶಾಲೆಗಳಿಗೆ ಕುರ್ಚಿ, ಮೇಜು ಇತ್ಯಾದಿ ಒದಗಿಸಲು ಬೇಕಾದ ರೂ. 47,350 ರಲ್ಲಿ ರೂ. 24,285ನ್ನು ಮಂಜೂರುಮಾಡಲಾಯಿತು. ಉಡುಪಿ ತಾಲೂಕಿನ ಬನ್ನಾಡಿಯಲ್ಲೊಂದು ಗ್ರಾಮ ಔಷಧಾಲಯ ತೆರೆಯಲು ನಿರ್ಧಾರವಾಯಿತು. ಉಡುಪಿ ತಾಲೂಕು ಗರಡಿ ಮಜಲು ಹಾಗೂ ಎರಾಲಿಗೆ ಗ್ರಾಮಸ್ಥರು ಕಟ್ಟಿಸಿ ಕೊಡಲೊಪ್ಪಿದ ಕಟ್ಟಡಕ್ಕೆ ಜಿಲ್ಲಾ ಬೋರ್ಡಿನಿಂದ ಸೇರಿದಾ 16 ರಷ್ಟು ಖರ್ಚನ್ನು ಕೊಡುವುದೆಂದಾಯಿತು. ಸಂಜೆ ಹೈಸ್ಕೂಲು ಕಟ್ಟಡದ ವಿಸ್ತರಣಕ್ಕೆ ರೂ.5000ವಂತಿಗೆ ಕೊಡುವುದೆಂದಾಯಿತು.

ನಿಧನ— ಕಂಕನಾಡಿ ಫಾದರ್ ಮುಲ್ಲರ್ಸ್ ಚಿರಿಟಿಬಲ್ ಇನ್‌ಸ್ಟಿಟ್ಯೂಶನ ವ್ಯಾರೆಕ್ಟರರಾದ ರೆ। ಫಾ। ರೆಜಿನಾಲ್ಡ್ ಪಿಂಟೋರವರು ತಾ 23ರಲ್ಲಿ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ತಮ್ಮ 75ನೆ ವಯಸ್ಸಿನಲ್ಲಿ ನಿಧನರಾದುದು ವಿಷಾದಕರವಾಯಿತು. ಮರುದಿವಸ ಅವರ ದಹನ ಕ್ರಿಯೆಯು ಮಂಗಳೂರು ಬಿಶೋಪ್ ರೈಟ್ ರೆ। ಡಾ। ಬಿ. ಎಸ್. ಪೇರಿಸರ ನೇತೃತ್ವದಲ್ಲಿ ಜರಗಿತು.

ಉದ್ಘಾಟನಾ ಸಮಾರಂಭ— ಮಂಗಳೂರು ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದ ವಿದ್ಯಾರ್ಥಿ ಸಭೆಯನ್ನು ತಾ. 24ರಲ್ಲಿ ಶ್ರೀ ಕೆ. ಎರ್. ಆಚಾರ್ಯ, ಅವರು ಉದ್ಘಾಟಿಸುತ್ತಾ, ಕರ್ನಾಟಕ ಏಕೀಕರಣ ಸಮಸ್ಯೆಯು ಪಕ್ವತೆಗೆತಂದೆಂದೂ, ಏಕೀಕರಣ ಸಾಧಿಗಳನ್ನು ದ್ರೋಹಿಗಳೆಂದು ಕರೆಯುವುದು ಅಕ್ಷಮ್ಯ ದ್ರೋಹವೆಂದೂ ಹೇಳಿದರು. ಶ್ರೀ ಕೆ. ಶ್ರೀನಿವಾಸ ಉಪಾಧ್ಯಾಯರು ಸ್ವಾಗತಮಾತುಗಳನ್ನಾಡಿದರು. ಶ್ರೀ ಯು ಶ್ರೀಧರ ಮಧ್ಯಸ್ಥರು ಧನ್ಯವಾದಗೈದನ್ನಿತ್ತರು.

ಜಿಲ್ಲಾ ಪ್ಲಾನಿಂಗ್ ಬೋರ್ಡಿನ ಸಭೆಯು—ತಾ. 25ನೇ ಸಂಜೆ ಕಲೆಕ್ಟರರ ಆಫೀಸಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಕಾಭಿವೃದ್ಧಿ ಕಾರ್ಯಗಳ ವರದಿಯನ್ನು ವಿವರಿಸಿ, ಜನತೆಯ ಸಹಕಾರವನ್ನು ಕೋರಿದ ಮೇಲೆ ಜಿಲ್ಲಾ ಬೋರ್ಡ್ ವಲಯದೊಳಗೆ ಆವಶ್ಯಕವಾಗಿ ಮಾಡಬೇಕಾದ ಕೆಲವು ಕೆಲಸಗಳಿಗೆ ಜಿಲ್ಲಾ ಬೋರ್ಡಿಗೆ ಹಣ ಅಭಾವ ಇರುವುದರಿಂದ ಅದಕ್ಕೆ ಸರಕಾರ 5 ಲಕ್ಷ ರೂಪಾಯಿ ಸಹಾಯಮಾಡಬೇಕೆಂಬ ಶ್ರೀ ಟಿ. ಎ. ಪೈ ಎಂ. ಎಲ್. ಎ. ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೇರ ಸೂಚನೆಯನ್ನು ಮನ್ನಿಸಿ ಹಾಗೆಯೇ ಠರಾವು ಮಾಡಲಾಯಿತು. ಶ್ರೀಗಳಾದ ಎಸ್. ಎಸ್. ಕೊಳ್ಳೆಬೈಲ್ ಎಂ. ಎಲ್. ಎ., ಟಿ. ಎ. ಪೈ, ಎಂ. ಎಲ್. ಎ., ಕೆ. ಪಿ. ಸುಕುಂದ ಪ್ರಭು, ಮಂಗಳೂರು ಸಭಾಧ್ಯಕ್ಷ ಕೆ. ಸೂರ್ಯನಾರಾಯಣ ಅಡಿಗ, ಉಡುಪಿ ನಗರ ಸಭಾಪತಿ ಡಾ। ಪಿ. ವಿ. ವ್ಯಾಸರಾವ್ ಮೊದಲಾದವರು ಕೆಲವೊಂದು ಸಲಹೆ ಸೂಚನೆಗಳನ್ನಿತ್ತರು.

ರೋಟರಿ ಕ್ಲಬ್ಬಿನಲ್ಲಿ ಭಾಷಣ—ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ತಾ. 21ರಲ್ಲಿ ರಾತ್ರಿ ಶ್ರೀ ಜೆಸಗಲ್ ಸಂಜೀವರಾವ್, ಐ ಇ ಎಸ್. (ನಿವೃತ್ತ) ಅವರು 'ಶಿಕ್ಷಣ ಮತ್ತು ಜಾಗತಿಕ ನೆಮ್ಮದಿಸ್ಥಿತಿ' ಎಂಬ ವಿಚಾರದಲ್ಲಿ ಭಾಷಣ ಮಾಡುತ್ತಾ, ಇಂದಿನ ಯುವ ಜನಾಂಗದಲ್ಲಿ ಬಂದು ವಿಧಿಧ ಅಶಾಂತಿ, ಅತೃಪ್ತಿ, ಅಸ್ವಸ್ಥತೆಯ ಮನೋಭಾವ ಮುಸುಕಿದ್ದು, ನಮ್ಮ ರಾಷ್ಟ್ರ ಜೀವನದ ನೈತಿಕ ಮತ್ತು ಪಾರಮಾರ್ಥಿಕ ಅಸ್ತಿತ್ವವು ಹದಗೆಟ್ಟಿರುವುದಾಗಿದೆ. ಪ್ರಸ್ತುತ ಶಿಕ್ಷಣಾಕ್ರಮದಲ್ಲಿ, ಬೌದ್ಧಿಕ, ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣ ವಿಭಾಗಗಳಿಗೆ ಮಾತ್ರ ಗಮನ ಕೊಡಲಾಗುತ್ತಿದ್ದು, ಮಾನಸಿಕ ಮತ್ತು ಪಾರಮಾರ್ಥಿಕ ವಿಕಾಸಕ್ಕೆ ಅವಕಾಶವಿಲ್ಲದಾಗಿದೆ. ಜೀವನದಲ್ಲಿ ನವ ಸ್ಫೂರ್ತಿಯುತ ಪಥವನ್ನು ನಿರ್ಮಿಸಲು ಈಗಿನ ಯುವಜನಾಂಗಕ್ಕೆ ಪ್ರೋತ್ಸಾಹಕೊಟ್ಟು ಆಸಕ್ತಿಯನ್ನುಂಟುಮಾಡುವುದರ ಮೂಲಕ ಮಾತ್ರ ಈಗ ಉಂಟಾಗಿರುವ ಅವ್ಯವಸ್ಥೆಯನ್ನು ಹೋಗಲಾಡಿಸಲು ಸಾಧ್ಯವಾಗಬಹುದು ಎಂದರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದವಿತ್ತರು.

ಸಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಸೂರಾಣಿ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್ ಉಡುಪಿ

ತರುಣ ತರುಣಿಯರಿಗೆ ಅತ್ಯಂತ ಬೋಧಪ್ರದವಾದ ಆಧುನಿಕ ನಾಟಕ

ಅಂಧ ಸಮಾಜದ ನಿರೂಪಣೆಯನ್ನು, ನ್ಯಾಯವು ಅನ್ಯಾಯವನ್ನು ಗೆದ್ದುಬರುವುದಕ್ಕೆ ಅಧಿಕಾರ, ಧನಲಾಲಸೆಯಲ್ಲಿ—ಪವಿತ್ರ ಪ್ರೇಮದೊಂದೇ ಶಾಂತಿಯೊಯುವು ದೆಂಬುದನ್ನು ಕಾಣಬಹುದಾದ ಏಕಮಾತ್ರ ಸಾಮಾಜಿಕ ನಾಟಕ—

ವ್ಯಭಿಚಾರಿಣಿ ಯಾರು?

100 ಪುಟಗಳಿಗೂ ಮಿಕ್ಕಿದ ಪುಸ್ತಕ!

ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆದು ಹೆಸರುಗೊಂಡ

ಶ್ರೀ. ಕೆ. ಕೆ. ಶೆಟ್ಟರೇ ಇದರ ಲೇಖಕರು!!

ಬೆಲೆ: 1—4—0 ಮಾತ್ರ.] [ಟಿ. ಖರ್ಚು ಬೇರೆ

ಸಿಗುವ ಸ್ಥಳಗಳು:—

ಕರಿಯರ ಪ್ರಪಂಚ ಉಡುಪಿ., ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂಸಾರದಲ್ಲೆಲ್ಲ ಪ್ರತಿಯೊಂದು ವೃತ್ತಿಯಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ..... ...ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

(೧೯ನೇ ಪುಟದಿಂದ)

ಧ್ಯೇಯಸಾಧನೆಗಾಗಿದುಡಿಯಲು ಮತ್ತು ಆಗತ್ಯದ ಪ್ರಸಂಗಗಳಲ್ಲಿ ಮಡಿಯಲುಸಹ ಧ್ವಜವೊಂದು ಬೇಕಾಗಿ ಧಾರಿಣಿರಗೆ ತೋರಿತು. ಹೋಂ ರೂಲಿನ ಚಳವಳ ನಡೆದಾಗಲೂ (೧೯೧೫) ಜನರನ್ನು ಧ್ವಜವೊಂದರ ನೆರಳಿನಲ್ಲಿ ಸೇರಿಸುವ ಪ್ರಯತ್ನ ನಡೆಯಿತು. ಕಾಂಗ್ರೆಸಿನಲ್ಲಿ ಗಾಂಧೀಜಿಯ ಪ್ರವೇಶದ ಬಳಿಕ ಅವರು "ಯಂಗ್ ಇಂಡಿಯ" ಪತ್ರಿಕೆಯಲ್ಲಿ (೧೭-೪-೨೧) ಧ್ವಜದ ಕುರಿತಾದ ತಮ್ಮ ಅಭಿಪ್ರಾಯವನ್ನು ಅತಿ ಸ್ಪಷ್ಟ ಮಾತುಗಳಲ್ಲಿ ವ್ಯಕ್ತಪಡಿಸಿದರು—ಎಲ್ಲ ರಾಷ್ಟ್ರಗಳಿಗೂ ಧ್ವಜ ಅತ್ಯಗ್ಯಾವೆಂದು ಹೇಳುತ್ತಾ ಅವರು ಎಲ್ಲ ಭಾರತೀಯರಿಗೂ ಆಶ್ರಯ ನೀಯುವ ಧ್ವಜದ ರೂಪರೇಖೆಯನ್ನು ವಿವರಿಸಿದರು. ಅದರಲ್ಲಿ ಹಸುರು, ಬಿಳಿ ಮತ್ತು ಕೆಂದು ಬಣ್ಣಗಳೂ ಚರಕವೂ ಇದ್ದಿತು—ಮುಸಲ್ಮಾನರನ್ನು ಹಸುರು, ಹಿಂದುಗಳನ್ನು ಕೆಂಪು ಮತ್ತು ಇತರ ಧರ್ಮಗಳನ್ನು ಬಿಳಿ ಬಣ್ಣಪೂ ಚರಕವು ರಾಷ್ಟ್ರದ ಪ್ರಗತಿಯ ಆಕಾಂಕ್ಷೆಯನ್ನೂ ಬಿಂಬಿಸುವುದೆಂದು ಅವರು ಹೇಳಿದರು ಹಿಂದುಗಡೆ ಸಿಕ್ಖರು ತಮ್ಮ ಬಣ್ಣವಾದ ಕಪ್ಪನ್ನೂ ಧ್ವಜದಲ್ಲಿ ಸೇರಿಸಿಕೊಳ್ಳಬೇಕೆಂದು ಆಗ್ರಹಪಡಿಸಿದಾಗ, ಎಲ್ಲ ಧರ್ಮಗಳೂ ಬಿಳಿ ಬಣ್ಣದಲ್ಲಿ ಬರುತ್ತವೆಂದು ಗಾಂಧೀಜಿ ಹೇಳಿದ್ದಲ್ಲದೆ, ಧ್ವಜವು ರಾಷ್ಟ್ರದ ಸಾಮೂಹಿಕ ಶಕ್ತಿಯನ್ನು ಸೂಚಿಸುತ್ತದೆ; ರಾಷ್ಟ್ರಕ್ಕಾಗಿ ತ್ಯಾಗ ಮಾಡುವ ಮನೋಭಾವವನ್ನು ಸೂಚಿಸುತ್ತದೆ ಎಂದರು. ನಾಗಪುರದಲ್ಲಿ ಇತಿಹಾಸ ಪ್ರಸಿದ್ಧವಾದ ಧ್ವಜ ಸತ್ಯಾಗ್ರಹ (೧-೫-೧೯೩೩) ನಡೆದಾಗ, ರಾಜಾಜಿಯವರು ತಮ್ಮ ಅನೋಖವಾದ ಶೈಲಿ ಮತ್ತು ತರ್ಕದಿಂದ ರಾಷ್ಟ್ರ ಧ್ವಜದ ಮಹತ್ವ ಎಷ್ಟೆಂದು ಬಣ್ಣಿಸಿದರು ಭಾರತೀಯರು ತಮ್ಮದೊಂದುರಾಷ್ಟ್ರಧ್ವಜವನ್ನು ಹಿಡಿದುಕೊಳ್ಳುವುದಕ್ಕೆ ಆಂಗ್ಲೇಯರು ಅಡ್ಡಿ ಮಾಡುವುದನ್ನು ನೋಡಿದರೆಯೇ, ಧ್ವಜಕ್ಕೆ ಅವರು ಎಷ್ಟು ಪ್ರಾಮುಖ್ಯತೆ ಕೊಡುವರೆಂದು ತಿಳಿಯುತ್ತದೆ ಎಂದು ರಾಜಾಜಿ ಸ್ಫೂರ್ತಿಯ ಸೆಲೆಯನ್ನು ಆಗಜರರ್ಲ್ಲಿ ಹುಟ್ಟಿಸಿದರು.

ಕಾಂಗ್ರೆಸು ಹಿಂದಿನಿಂದ (ಜುಲಾಯಿ, ೧೯೩೧) ಒಂದು ಸಮಿತಿಯನ್ನು ರಾಷ್ಟ್ರ ಧ್ವಜ ಹೇಗಿರಬೇಕೆಂದು ರೂಪಿಸಲು ನೇಮಿಸಿತು. ಬಣ್ಣಗಳ ಹಂಚುವಿಕೆಯನ್ನು ಮತದ ತಳಹದಿಯ ಮೇಲೆ ಮಾಡಿದ್ದ ಗಾಂಧೀಜಿಯವರು ಸಾರ್ವಜನಿಕ ಪ್ರತಿಕ್ರಿಯೆಯನ್ನು ಗಮನಿಸಿ, ಅವುಗಳು ಭಾರತೀಯರ ಗುಣವನ್ನು ತೋರಿಸುವಂತಿರಬೇಕೆಂಬ ಅಭಿಪ್ರಾಯಕ್ಕೆ ಬೆಂಬಲಕೊಟ್ಟರು. ನೆಹರುಗಳು ಧ್ವಜರಕ್ಷಣೆಗಾಗಿ ಅಸಾಮಿನ ಕಗ್ಗಾಡಿನಲ್ಲಿ ಸಹ ನಡೆದ ಹೋರಾಟದ ನೆನಪು ಮಾಡಿಕೊಟ್ಟು, ಎಲ್ಲರ ಗೌರವಕ್ಕೆ ಪಾತ್ರವಾದ ಧ್ವಜದ ಆಗತ್ಯವನ್ನು ಪ್ರತಿಪಾದಿಸಿದರು. ಪರಿಣಾಮದಲ್ಲಿ ರೂಪುಗೊಂಡ ಧ್ವಜವು ಕೇಸರಿ, ಬಿಳಿ ಮತ್ತು ಹಸುರು ಬಣ್ಣಗಳಿಂದ ಕೂಡಿತು. ಧ್ವಜದಲ್ಲಿ ಅಡ್ಡವಾಗಿ ಈ ಮೂರೂ ಬಣ್ಣಗಳಿಗೂ ಸಮಾನ ಸ್ಥಾನವನ್ನು ಕೊಡಲಾಯಿತು—ಬಿಳಿ ಬಣ್ಣದ ಮೇಲೆ ಚರಕವನ್ನು ನೀಲಿಯಲ್ಲಿ ಅಂಕಿಸಲಾಯಿತು. ಕೇಸರಿಯು ಧೈರ್ಯ ಮತ್ತು ತ್ಯಾಗಗಳನ್ನೂ ಬಿಳಿಯು ಶಾಂತಿ ಮತ್ತು ಸತ್ಯವನ್ನೂ ಹಸುರು ಶ್ರದ್ಧೆ ಮತ್ತು ಶೌರ್ಯವನ್ನೂ ಪ್ರತಿನಿಧಿಸುವುದೆಂದು ವಿವರಣೆ ಕೊಟ್ಟುದರಿಂದ ಎಲ್ಲ ವರ್ಗಗಳಿಗೂ ಸಮಾಧಾನವಾಯಿತು. ನೆಹರುಗಳು ಘಟನಾ ಸಮಿತಿಯ ಮುಂದೆ (೧೯೪೭) ಸ್ವತಂತ್ರ ಭಾರತದ ರಾಷ್ಟ್ರ ಧ್ವಜದ ವಿವರಣೆಯನ್ನು ಕೊಡುವಾಗ ಚರಕದ ಬದಲು ಅಶೋಕನ ಧರ್ಮಚಕ್ರವನ್ನು ಪ್ರತಿಕ್ಷೇಪಿಸಿದರು. ಧರ್ಮಚಕ್ರ ಭಾರತೀಯರಿಗೆ ತಮ್ಮ ಘನವಾದ ಇತಿಹಾಸದ ನೆನಪು ಮಾಡಿಕೊಡುವುದಲ್ಲದೆ, ಉತ್ಕರ್ಷಕ್ಕಾಗಿ ನ್ಯಾಯವಾದ ರೀತಿಯಲ್ಲಿ ಶಕ್ತಿಯನ್ನು ವಿನಿಯೋಗಿಸಲು ಪ್ರೇರಣೆಯನ್ನೂ ನೀಡುತ್ತದೆ.

ಇದು ನಮ್ಮ ರಾಷ್ಟ್ರ ಧ್ವಜದ ಇತಿಹಾಸ. ನಾವು ರಾಷ್ಟ್ರ ಧ್ವಜದ ನೆರಳಿನಲ್ಲಿಯೇ ನಮ್ಮ ಪವಿತ್ರ ಹೋರಾಟಗಳನ್ನು ಹೂಡಿದ್ದೇವೆ. ಆದರೆ ಎಂದಿಗೂ ಅದರ ಅಪಮಾನವನ್ನು ಸಹಿಸಿಲ್ಲ. ಕರ್ಣಾಟಕದ ಶ್ರೀ. ನಾ. ಸು. ಹರ್ಡೀಕರರು ಸೇವಾ ದಳದ ಸಂಘಟನೆಯ ಮೂಲಕ ಭಾರತೀಯರಿಗೆ ಸ್ಫೂರ್ತಿಯಾಗಿದ್ದ ಕಾಂಗ್ರೆಸು ಸಂಸ್ಥೆಗೆ ಧ್ವಜವನ್ನು ಹೇಗೆ ಮನ್ನಿಸಬೇಕೆಂಬ ಪಾಠವನ್ನು ಕಲಿಸಿಕೊಟ್ಟರು. ಪವಿತ್ರ ಕಾರ್ಯವನ್ನು ಕೈಗೊಳ್ಳುವುದಕ್ಕೆ ಮುಂಚೆ ಸಂಕಲ್ಪ ಮಾಡಿಕೊಳ್ಳುವಂತೆ, ಬಾವುಟವನ್ನು ಹಾರಿಸಿ ಅದನ್ನು ವಂದಿಸುವ ಪರಿವಾರ ಪ್ರಾರಂಭವಾಯಿತು. ರಾಷ್ಟ್ರದ ಸಂಕೇತವೇ ಅದರ ಧ್ವಜ ಎಂದು ಇಂದು ಎಲ್ಲೆಡೆಯಲ್ಲೂ ಮನ್ನಿಸಲ್ಪಡುತ್ತದೆ. ಪಾಕಿಸ್ತಾನದ ಧ್ವಜಕ್ಕಾದ "ಅಪಮಾನ"ದಿಂದ ಅಫಘಾನಿಸ್ತಾನದೊಡನೆ ಆ ದೇಶಕ್ಕೆ ಬೆಳೆದ ವಿರಸ ಎಷ್ಟು ಉಗ್ರಸ್ವರೂಪ ತಳೆದಿದೆ ಎಂಬುದು ಎಲ್ಲರಿಗೂ ಗೊತ್ತು—ಪೋರ್ಚುಗೀಜರು ಭಾರತೀಯ ಸತ್ಯಾಗ್ರಹಿಗಳ ಕೈಯಿಂದ ಧ್ವಜವನ್ನು ಏಕೆ ಕಸಿದುಕೊಳ್ಳುತ್ತಿರುವರೆಂಬುದೂ ನಮಗೆ ತಿಳಿದ ವಿಷಯ. ಹೀಗಿರುವಾಗ, ಹಳೆಯ ಹಾಡಿನ ಸೇಡಿಗಾಗಿ ಭಾರತೀಯರೊಬ್ಬರು, ರಾಷ್ಟ್ರಧ್ವಜವನ್ನು ಅಗ್ನಿಗೆ ಆರ್ಪಿಸುವ ಯಜ್ಞತೊಡಗಿರುವುದು ಖಂಡನೀಯ. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಎಂದೋ ಸ್ವೀಕರಿಸಲಾಗಿದೆ—ಅದು ಒಪ್ಪಿಗೆ ಇಲ್ಲದಿದ್ದರೆ ರಾಷ್ಟ್ರಧ್ವಜದ ಅಪಮಾನ ಮಾಡಬೇಕಾಗಿಲ್ಲ ಘಟನಾತ್ಮಕವಾದ ಬೇರೆ ದಾರಿಗಳಿವೆ. ಅವನ್ನು ಅನುಸರಿಸದಿದ್ದರೆ ದ್ರಾವಿಡ ಕಜಗ ತಾನು ಭಾರತದ ಅಭಿಮಾನಿಯಲ್ಲವೆಂದೇ ಸಾರಿದ ಹಾಗಾಗುತ್ತದೆ. ತಮಿಳುನಾಡಿನಲ್ಲಿ ಅವರಾಗ ಹೇಗೆ ಉಳಿಯಬಲ್ಲರು? ಅವರು ಹೀಗೆ ಮೈಮರೆಯಬಾರದು.

—ಕಾರ್ತಿಕೇಯ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿಪುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮೈಸೂರು ಸ್ಟೇಟಿನಲ್ಲಿ—ಸಂಬಳ ಪುನರಿಮರ್ಶೆಗಾಗಿ ಕಮಿಟಿ ನೇಮಕ— ಮೈಸೂರು ಎಸೆಂಬ್ಲಿಯ ಕಳೆದ ಬಜೆಟ್ ಅಧಿವೇಶನದಲ್ಲಿ ನೌಕರರ ಸಂಬಳದ ಪುನರಿಮರ್ಶೆಯ ಕುರಿತು ಕಮಿಟಿಯನ್ನೇಮಕಮಾಡಬೇಕೆಂದು ಕೆಲವು ಸದಸ್ಯರು ಕೊಟ್ಟ ಸೂಚನೆಯನ್ನು ಮುಖ್ಯಮಂತ್ರಿಗಳು ಒಪ್ಪಿರುವರು. ಅಂತೆಯೇ ಈಗ ಸರಕಾರವು ಕೆಳಗೆಸೂಚಿಸಿದ ವರನ್ನೊಳಗೊಂಡ ಕಮಿಟಿಯನ್ನು ರಚಿಸಿ ಈ ಗಿರುವ ಸಂಬಳ ಭತ್ತೆ ಇತ್ಯಾದಿಗಳ ಕುರಿತು ವರದಿಮಾಡಬೇಕೆಂದು ಸೂಚಿಸಿರುವೆ. ಶ್ರೀಗಳಾದ ಪಿ. ಎಸ್. ಮಸ್ಕರೇಂಜ್, ಎಂ. ಎಲ್. ಎ. ಎಸ್. ನಾರಾಯಣ ರಾವ್, ಎಡ್ವೋಕೇಟ್, ನಂಜನ ಗೂಡು, ಮುಲ್ಕಿ ಗೋವಿಂದ ರೆಡ್ಡಿ, ಎಸ್. ಎಲ್. ಎ, ಚಿತ್ರದುರ್ಗ, ಎಸ್. ಎಸ್. ಮಹಂತ ದೇವರು, ಎಂ. ಎಲ್. ಸಿ, ಕೆ. ಆರ್. ಮಾಧವ ರಾವ್, ಬಿ. ಎಸ್. ರಾಘವೇಂದ್ರ ರಾವ್, ನಿವೃತ್ತ ಸರಕಾರಿ ಆರ್ಥಿಕ ಸೆಕ್ರೆಟರಿ, ಬಿ. ಎಸ್. ಕೃಷ್ಣನ್, ಗವರ್ನಮೆಂಟ್ ಎಮ್ಪ್ಲಾಯೀಸ್ ಸೆಕ್ರೆಟರಿ, ಎಸ್. ಜಿ. ಬಿ. ಎಸೋಸಿಯೇಶನ ಅಧ್ಯಕ್ಷ, ಎಸ್. ಸಿ ನಾಗಯ್ಯ ರೆಡ್ಡಿ, ಎಸ್. ಎಲ್. ಎ, ಎ. ಎಸ್. ಸಿ. ಶಿವಾನಂದ ರಮಣ, ಸೆಕ್ರೆಟರಿ ಗ್ರಾಮ ವಿದ್ಯೋದಯ ಸಂಘ, ಟಿ. ನರೀಪುರ. ಈ ಸಮಿತಿಗೆ ಸರಕಾರಿ ಬಜೆಟ್ ಶಾಖೆಯ ಅಸಿಸ್ಟಾಂಟ್ ಸೆಕ್ರೆಟರಿಗಳು, ಕಾರ್ಯದರ್ಶಿಗಳಾಗಿರುವರು. ಸಮಿತಿಯವರು ವಿಚಾರಿಸತಕ್ಕ ವಿಷಯಗಳಾವುವೆಂದರೆ 1, ಮೈಸೂರು ಸ್ಟೇಟಿನ ಗಜೆಟೆಡ್ ಮತ್ತು ನಾನ್ ಗಜೆಟೆಡ್ ಸರ್ವಿಸಿನಲ್ಲಿರುವವರ ಈಗಿನ ಸಂಬಳ ಸ್ಕೇಲನ್ನು ಸದ್ಯದ ಪರಿಸ್ಥಿತಿಯಲ್ಲಿ ಸುಧಾರಿಸುವ ಸಾಧ್ಯಾಸಾಧ್ಯತೆ 2, ಸರಕಾರಿ ಉದ್ಯೋಗಸ್ಥರಿಗೆ ಅಯಾಯಾ ರಾಜ್ಯದ ನೌಕರಿಯ ಶಿಕ್ಷಣ ಯೋಗ್ಯತೆ ಮತ್ತು ಜನಾಬ್ದಾರಿ ಪರಿಶೀಲಿಸಿ ಅವರವರ ಸಂಬಳದಲ್ಲಿ ತಾರತಮ್ಯವಿದ್ದರೆ ಅದ್ದುಗಳ ಪರಿಶೀಲನೆ, 3, ತುಟ್ಟಿಭತ್ತೆ ಅಥವಾ ಹ್ಯಾಸ್ಟ್ರೈಸ್ ಎರೊವೆನ್ಸ್‌ಗಳ ಊರ್ಜಿತ ಯಾ ರದ್ದತಿಯ ಪರಿಶೀಲನೆ ಯಾ ಅದ್ದುಗಳನ್ನು ಎಷ್ಟರ ಮಟ್ಟಿಗೆ ಪೆನ್ಸನ್ ಮತ್ತು ಪ್ರೊವಿಡೆಂಟ್ ಫಂಡ್ ರೀತಿಗೆ ಸೇರಿಸಬಹುದು ಎಂಬ ಬಗ್ಗೆ ಸೂಚನೆ 4, ಸರಕಾರಿ ನೌಕರರಿಗೆ ಸರ್ವಿಸ್ ಕಾಲದಲ್ಲಿ ಕೊಡಲಾಗುವ ದಿನವಹಿ ಭತ್ತೆಯನ್ನು ಎಷ್ಟರ ಮಟ್ಟಿಗೆ ಜಾಸ್ತಿ ಮಾಡಬಹುದು ಎಂಬುದರ ವಿಚಾರ 5, ಸಂಬಳ ಸ್ಕೇಲು ಮತ್ತಿತರ ಸರ್ವಿಸ್ ರೂಲ್‌ಗಳ ಕುರಿತು ಸರ್ವಿಸ್ ಎಸೋಸಿಯೇಶನುಗಳ ಸೂಚನೆ ಪರಿಶೀಲನೆ 6, ಸರಕಾರಿ ಇಂಡಸ್ಟ್ರಿಯಲ್ ಸಂಸ್ಥೆಗಳಲ್ಲಿಯ ನೌಕರರಿಗೆ ಮೈಸೂರು ಸರ್ವಿಸು ರೆಗ್ಯುಲೇಶನ್ಸ್ ಒಳಿಯದೋ ಯಾ ಸರ್ವಿಸ್ ರೂಲ್ಸುಗಳು ಅನ್ವಯಿಸಬೇಕೋ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮವ್ಯಾಜ್ಯ 165/1955.

ದಿ. ಬ್ರದ್ಸ್‌ವರ ಕೋಪರೇಟಿವ್ ಸ್ಟೋರ್ಸ್ ಲಿಮಿಟೆಡ್ ನಂಬ್ರ L. 160 ಇದರ ಪರವಾಗಿ ಸೆಕ್ರೆಟರಿ ಡಾಕ್ಟರ್ ಕೊಚ್ಚಿಕಾರ್ ನಾರಾಯಣ ಪೈ— ವಾದಿ

ಮತ್ತು

ಕೆ. ಹಿರಿಯಣ್ಣ ಶೆಟ್ಟಿ— ಪ್ರತಿವಾದಿ

ಇನರೊಳಗೆ

ಕೆ. ಹಿರಿಯಣ್ಣ ಶೆಟ್ಟಿ, ಕೊರೆಗ ಶೆಟ್ರ ಅಳಿಯ, ಉಡುಪಿ ತಾಲೂಕು ಅರೂರು ಗ್ರಾಮದ ಕಂಡುಂಜೆಯಲ್ಲಿರುವನ— ಪ್ರತಿವಾದಿ

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ವಾದಿಯು ಪ್ರತಿವಾದಿ ಮೇಲೆ ದಾವೆಹೂಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಅಪ್ಪೈರಿ ನೋಟೀಸಿನ ಬಗ್ಗೆ 5—8—1955ಕ್ಕೆ ಇದೋರಾಗಿಯಿದೆ. ಪ್ರತಿವಾದಿಯು ಸದ್ರಿ ತನ ಬಿ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾ ದಿದ್ದರೆ ಸದ್ರಿ ವ್ಯಾಜ್ಯವು ಅತನ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

K. Varadaraya Pai

Advocate for Plaintiff

ಉಡುಪಿ ತಾ. 23—7—1955.

(೩ನೇ ಪುಟದಿಂದ)

ದ್ಯಮಗಳ ಪೂರೈಕೆಯಿಂದ ಗೃಹೋದ್ಯಮಗಳಿಗೆ ಉತ್ಪಾದಿಸಲು ಅಶಕ್ಯವಾದ ನಿತ್ಯೋಪಯೋಗದ ವಸ್ತುಗಳನ್ನು ಇವು ಉತ್ಪಾದಿಸಿ, ವಿತರಿಸುವುದು ಅವಶ್ಯವೆಂದೂ ಅವರು ಭಾವಿಸಿದರು. ಅದರಿಂದ, ಈ ಕೈಗಾರಿಕೆಗಳು ಅಸ್ತಿತ್ವದಲ್ಲಿ ಬರಬೇಕಾದರೆ, ವಾಣಿಜ್ಯ ಕ್ಷೇತ್ರದ ವ್ಯವಹಾರದಲ್ಲಿ ನಿರತವಾದ ಯಾವುದಾದರೊಂದು ಬ್ಯಾಂಕು ಸುಲಭದಲ್ಲಿ ಸಾಲವನ್ನು ಒದಗಿಸಿ ಕೊಡುವುದು ಅವಶ್ಯವೆಂದು ಕಂಡಿತು.

ಹೀಗೆ ಬ್ಯಾಂಕಿಂಗ್ ಸೌಲಭ್ಯವನ್ನು ವಿಸ್ತರಿಸುವುದು ಅತ್ಯಗತ್ಯವೆಂಬ ವಿಚಾರ ದಿನಗಳೆದಂತೆ ನಿಶ್ಚಿತವಾಯಿತು. ಯೋಜನಾ ಬದ್ಧವಾದ ಅಭಿವೃದ್ಧಿಗೆ ಅನಿವಾರ್ಯವೆನಿಸಿದ ಈ ಪ್ರಾಮುಖ್ಯ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸರಕಾರವೇ ಮುಂದಾಗಿ ಹೊಣೆಯನ್ನು ಹೊತ್ತುಕೊಳ್ಳಬೇಕೆಂದು ಎಲ್ಲರೂ ಬೇಳ ತೊಡಗಿದರು. ನೀರಾವರಿ, ವಿದ್ಯುಚ್ಛಕ್ತಿಯ ಉತ್ಪಾದನೆ, ಸಾರಿಗೆ—ಸಂಪರ್ಕದ ಅನುಕೂಲತೆ ಮುಂತಾದ ಕ್ಷೇತ್ರಗಳಲ್ಲಿ ಸರಕಾರ ಇಂಥ ಹೊಣೆಯನ್ನು ಹೊತ್ತುಕೊಂಡಿದ್ದಿತು. ಕಾರಣ ಬ್ಯಾಂಕಿಂಗ್ ಸೌಲಭ್ಯವನ್ನಾದರೂ ಸರಕಾರವೇ ಒದಗಿಸಿ ಕೊಡಲು ಸಾಧ್ಯವೆಂಬ ಅಭಿಪ್ರಾಯ ಬಲವಾಯಿತು. ಮೊದಲಿನ ಕೆಲವು ವರ್ಷಗಳಲ್ಲಿ ಹೊಸ ಶಾಖೆಗಳು ನಷ್ಟದಲ್ಲಿ ನಡೆಯುತ್ತಿರಬೇಕಾದರೂ ಸಹ, ಸಾಲದ ಪೂರೈಕೆಯಲ್ಲಿ ಸುಧಾರಣೆಯೊದಂತೆ ಕೃಷಿ ಮತ್ತು ಔದ್ಯೋಗಿಕ ವಲಯದ ಉತ್ಪಾದನೆ ಹೆಚ್ಚಿಕೊಳ್ಳುವುದು ನಿಶ್ಚಯವೆಂದೂ ತತ್ಪರಿಣಾಮವಾಗಿ ರಿಜರ್ವ್ ಬೇಂಕಿನ ಮೂಲಕ ಸರಕಾರ ನಡೆದಿರುವ ಪಾಲುಗಳ ಮೇಲೆ ನೇರವಾದ ಲಾಭದ ದೃಷ್ಟಿಯಿಂದಲ್ಲವಾದರೂ ಸಹ, ಜನರ ಪರಿಸ್ಥಿತಿಯು ಸುಧಾರಿಸಿದ ದೆಸೆಯಿಂದ ದೊರಕುವ ಅಧಿಕ ತೆರಿಗೆ, ಸುಂಕ ಇತ್ಯಾದಿಗಳಿಂದ ಸರಕಾರಕ್ಕೆ ಹಣ ಹಿಂದೆ ಬರುವುದೆಂದೂ ಸಮಾಧಾನವನ್ನು ಹೇಳಲಾಯಿತು.

ಇವೆಲ್ಲ ವಿಚಾರಗಳಿಗೆ ಕಳಸವಿಡುವಂತೆ ಗೋರ್ವಾಲ ಸಮಿತಿಯ ವರದಿ ಬಂತು. ಇಂಪೀರಿಯಲ್ ಬ್ಯಾಂಕಿನ ಸಮಾವೇಶದಿಂದ ಹೊಸತಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯವನ್ನು ಸ್ಥಾಪಿಸಬೇಕೆಂದು ಅದು ಹೇಳಿತು. ಕಳೆದ ದಶಂಬರದಲ್ಲಿ ಸರಕಾರವು ತನ್ನ ನೂತನ ನಿಶ್ಚಯವನ್ನು ಸಾರಿತು. ಆದರೆ ಈ ಧೋರಣೆಯು ಕೇವಲ ಗೋರ್ವಾಲ ಸಮಿತಿಯ ಸಿಫಾರಸನ್ನು ಆಧರಿಸಿತ್ತೆಂದು ಹೇಳುವುದಾಗಲಿ, ಆದರ್ಶವಾದದಿಂದ ಪ್ರೇರಿತವಾಗಿತ್ತೆಂದು ಮೂದಲಿಸುವುದಾಗಲಿ ಸರಿಯಲ್ಲ. ಹಲವು ವರ್ಷಗಳ ಪರಾಮರ್ಶೆ ಮತ್ತು ಪರಿಶೀಲನೆಗಳನ್ನು ಇಂಪೀರಿಯಲ್ ಬ್ಯಾಂಕಿನ ಕಾರ್ಯಕ್ಷೇತ್ರವನ್ನು ನಿಶ್ಚಿತ ರೂಪದಲ್ಲಿ ವಿಸ್ತರಿಸಬೇಕೆಂಬ ನಿರ್ಧಾರದಿಂದಲೇ ಸರಕಾರ ನಡೆಸಿದ್ದಿತೆಂದು ಹೇಳುವುದು ಸಮಂಜಸ.

ರಾಷ್ಟ್ರೀಕರಣದ ವೃಥಾ ಹೆಜ್ಜೆ ಇದು ಎಂಬ ಹೆಬರಿಕೆಯ ಕುರಿತು ಸ್ಪಷ್ಟೀಕರಣವನ್ನು ಕೊಡುತ್ತಾ ರಿಜರ್ವ್ ಬೇಂಕಿನ ಗವರ್ನರರಾದ ಶ್ರೀ ರಾಮರಾಯರು "ಈ ವಿಷಯದ ಮೇಲೆ ಸಂಸತ್ತಿನಲ್ಲಿ ಅರ್ಥ ಸಚಿವರು ಕೊಟ್ಟಿರುವ ಅಧಿಕೃತ ಹೇಳಿಕೆಯು ರಾಜ್ಯ ಸರಕಾರಗಳ ಸಂಬಂಧವಿರುವ ಕೆಲವು ಬೇಂಕುಗಳ ಹೊರತಾಗಿ ಬೇರೆ ಯಾವುದೇ ವಾಣಿಜ್ಯ ವ್ಯವಹಾರಾಸಕ್ತ ಬೇಂಕುಗಳನ್ನು ತೆಗೆದುಕೊಳ್ಳುವ ಉದ್ದೇಶ ಸರಕಾರಕ್ಕಿಲ್ಲ ಎಂದು ಸ್ಪಷ್ಟವಾಗಿ ಸಾರುತ್ತದೆ" ಎಂದು ಹೇಳುತ್ತಾರೆ. ಮುಖ್ಯವಾದ ಈ ವಿಷಯವನ್ನು ಇಲ್ಲಿಗೆ ಬಿಟ್ಟರೆ ಸ್ಟೇಟ್ ಬ್ಯಾಂಕಿನ ಕುರಿತಿರುವ ಬೇರೆ ಎರಡು ದೂರುಗಳು ಹೀಗಿವೆ—ನಿರಂಕುಶಾಧಿಕಾರ ಪದ್ಧತಿಯಂತೆ ಸ್ಟೇಟ್ಬ್ಯಾಂಕ್ ನಡೆಸಲ್ಪಟ್ಟು ಇಂಪೀರಿಯಲ್ ಬ್ಯಾಂಕು ಈ ವರೆಗೆ ಕೊಡುತ್ತಿದ್ದ ಯಾವುದೇ ತರದ ಸೌಕರ್ಯ ಇನ್ನು ಮುಂದೆ ಸಿಗಲಾರದು ಎಂಬುದು ಒಂದನೆಯದು; ಸರಕಾರವು ಅನಾವಶ್ಯಕವಾಗಿ ಸ್ಟೇಟ್ ಬ್ಯಾಂಕಿನ ವ್ಯವಹಾರದಲ್ಲಿ ಕೈಹಾಕಬಹುದು ಮತ್ತು ಕೆಲವು ಸಂದರ್ಭಗಳಲ್ಲಿ ರಾಜಕೀಯ ವಿಚಾರಗಳ ಕೈವಾಡ ಇಲ್ಲಿ ನಡೆಯಬಹುದು ಎಂಬುದು ಎರಡನೆಯದು. ಇವುಗಳಿಗೆ ಸಮಾಧಾನವಾಗಿ ಶ್ರೀ ರಾಮರಾಯರು ಹೀಗೆ ಹೇಳುತ್ತಾರೆ—

"ಇವೆರಡು ವಿಷಯಗಳ ಬಗ್ಗೆ ಹೇಳುವುದಾದರೆ ಸರಕಾರದವರು ತಮ್ಮ ಧೋರಣೆಗೆ ಸಂಬಂಧಿಸಿದ ಹೇಳಿಕೆಯಲ್ಲಿ ನಿಶ್ಚಿತ ಭರವಸೆಯನ್ನು ಕೊಟ್ಟಿರುವರಲ್ಲದೆ, ವ್ಯಾವಹಾರಿಕ ಸೂತ್ರಗಳ ಮೇಲೆ ಕೆಲಸ ಮಾಡಬೇಕೆಂದು ನಾಯಕ ಮಂಡಳದವರಿಗೆ ವಿಧಿಸುವ ಶಾಸನಬದ್ಧ ಒತ್ತಾಯವಿರುತ್ತದೆ. ಬ್ಯಾಂಕಿಂಗ್ ವ್ಯವಹಾರಕ್ಕೆ ವಿಶಿಷ್ಟವಾದ, ರಹಸ್ಯ ರಕ್ಷಣೆಯೇ ಮುಂತಾದ, ಸಾಮಾನ್ಯ ಸಂಪ್ರದಾಯ ಮತ್ತು ಪದ್ಧತಿಗಳನ್ನು ಸ್ಟೇಟ್ ಬ್ಯಾಂಕ್ ಸಹ ಅನುಸರಿಸಬೇಕೆಂದು ಶಾಸನ ವಿಧಿಸಿರುತ್ತದೆ. ರಾಜಕೀಯ ಸ್ವರೂಪದ ಅಥವಾ ಅನಾವಶ್ಯಕವಾದ ಹಸ್ತಕ್ಷೇಪವನ್ನು ಅಸಂಭವವಾಗಿಯಲ್ಲವಾದರೂ ಬಹಳ ಕಷ್ಟಕರವಾಗಿ ಮಾಡುವ ಸೂತ್ರಗಳೂ ಶಾಸನದಲ್ಲಿರುತ್ತವೆ. ನಾಯಕ ಮಂಡಳದಲ್ಲಿ ಕೇಂದ್ರ ಅಥವಾ ರಾಜ್ಯದ ಶಾಸನಾಂಗದ ಸದಸ್ಯನು ಸ್ಥಾನವನ್ನು ಪಡೆಯುವಂತಿಲ್ಲ. ಸಾರ್ವಜನಿಕ ಹಿತದೃಷ್ಟಿಗೆ ಸಂಬಂಧಿಸಿದ ಧೋರಣೆಯ ಕುರಿತಾದ ವಿಷಯಗಳಲ್ಲಿ ಸರಕಾರದ ನಿರ್ದೇಶಗಳನ್ನು ರಿಜರ್ವ್ ಬೇಂಕಿನ ಗವರ್ನರರೊಡನೆ ಮತ್ತು ಸ್ಟೇಟ್ ಬ್ಯಾಂಕಿನ ಅಧ್ಯಕ್ಷರೊಡನೆ ಸಮಾಲೋಚನೆ ನಡೆಸಿ, ರಿಜರ್ವ್ ಬ್ಯಾಂಕಿನ ಮೂಲಕವಷ್ಟೇ ಕೊಡಲು ಸಾಧ್ಯ."

ನೈಮಿತ್ತಿಕ ಕಾರ್ಯಗಳಲ್ಲಿ ಶಾಸನದ ಸೂತ್ರಗಳೂ ಸರಕಾರದ ನಿರ್ದೇಶಗಳೂ ಹೆಚ್ಚಿನ ಪರಿಣಾಮವನ್ನುಂಟು ಮಾಡುವುದು ವಿರಳ. ಬ್ಯಾಂಕಿನ ಆಡಳಿತದ ಹೊಣೆಯನ್ನು ಹೊತ್ತಿರುವ ನಾಯಕರ ಮಂಡಳದ ರಚನೆಯ ಮೇಲೆಯೇ ಈ ಮಟ್ಟಿಗೆ ಯಶಸ್ಸು ಅವಲಂಬಿಸಿರುತ್ತದೆ. ಹೀಗೆ ವಿಚಾರಿಸಿದ ಪಕ್ಷದಲ್ಲಿ ಡಾ. ಜಾನ್ ಮಧ್ಯಾಯವರು ಅಧ್ಯಕ್ಷರಾಗಿಯೂ ಶ್ರೀ. ವೈಕುಂಠಲಾಲ ಮೆಹತರು ಉಪಾಧ್ಯಕ್ಷರಾಗಿಯೂ ಇರುವ ಮತ್ತು ದೇಶದ ಪ್ರಸಿದ್ಧ ವ್ಯವಹಾರಜ್ಞರೂ ಆರ್ಥಿಕ ಕ್ಷೇತ್ರದ ಪಟ್ಟುಗಳೂ ಕೂಡಿರುವ ಸ್ಟೇಟ್ ಬ್ಯಾಂಕಿನ ನಾಯಕ ಮಂಡಳವು ಸರಕಾರದ ಸಂಸರ್ಕವಾರ್ಯ. ಇರುವ ಬೇರೆ ಯಾವುದೇ ಸಂಸ್ಥೆಗಿಂತ ಹೆಚ್ಚು ಉತ್ತಮವಾಗಿದೆ ಎಂದು ನಿರೀಕ್ಷಕರ ಅಭಿಪ್ರಾಯ. ಆದುದರಿಂದ ಈ ನಾಯಕ ಮಂಡಳವು ಸರಕಾರದಿಂದಾಗಲೀ ರಿಜರ್ವ್ ಬೇಂಕಿನಿಂದಾಗಲೀ ಅನಾವಶ್ಯಕವಾದ ಹಸ್ತಕ್ಷೇಪವನ್ನು ಸಹಿಸಲಾರದೆಂದು ಊಹಿಸಿದರೆ ತಪ್ಪಾಗದು.

೧೯೪೯ರಲ್ಲಿ ರಿಜರ್ವ್ ಬೇಂಕನ್ನು ಸಂಪೂರ್ಣವಾಗಿ ರಾಷ್ಟ್ರೀಕರಿಸಿದ ಬಳಿಕದ ಅನುಭವವು ಸ್ಟೇಟ್ ಬ್ಯಾಂಕಿನ ಕುರಿತಾದ ಮೇಲಿನ ಸಮಾಧಾನ ಹುಸಿಹೋಗದೆಂದು ನಂಬಿಕೆ ಕೊಡುತ್ತದೆ ರಾಷ್ಟ್ರೀಕರಣಕ್ಕೆ ರಿಜರ್ವ್ ಬೇಂಕಿನ ನಾಯಕ ಮಂಡಳದವರು ಆಗ ವಿರೋಧವಾಗಿದ್ದರು; ಎಲ್ಲ ಬಗೆಯ ಹೆದರಿಕೆಯನ್ನೂ ಅವರು ವ್ಯಕ್ತಪಡಿಸಿದ್ದರು. ರಿಜರ್ವ್ ಬೇಂಕ್ ಶಾಸನದಲ್ಲಿ ರಾಷ್ಟ್ರೀಯ ಹಿತದ ದೃಷ್ಟಿಯಿಂದ ಸರಕಾರವು ಬೇಂಕಿನ ಗವರ್ನರರೊಡನೆ ಸಮಾಲೋಚನೆ ನಡೆಸಿ ಬೇಕಾದ ನಿರ್ದೇಶಗಳನ್ನು ಕೊಡಬೇಕೆಂದಿದ್ದರೂ ಕಳೆದ ಆರು ವರ್ಷಗಳಲ್ಲಿ ಅಂಥ ಯಾವುದೇ ಅಜ್ಞೆ ಬಂದಿರುವುದಿಲ್ಲ; ಸರಕಾರದಿಂದ ಹಸ್ತಕ್ಷೇಪವಾದ ಒಂದೇ ಒಂದು ಉದಾಹರಣೆಯೂ ಸಿಗುವುದಿಲ್ಲ. ರಿಜರ್ವ್ ಬೇಂಕಿನ ಚಟುವಟಿಕೆ ಈಗ ಬಹಳ ಹೆಚ್ಚಿಕೊಂಡಿದೆ; ಅತಿ ಪ್ರಸರಣದ ಭಯ ನಿವಾರಣೆಗೆ ಅದು ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಕೈಗೊಂಡಿದೆ; ಇತರ ಬೇಂಕುಗಳಿಗೂ ವ್ಯಾಪಾರ ವ್ಯವಹಾರಗಳಲ್ಲಿ ಮಗ್ನರಾದವರಿಗೂ ಬಹಳ ಬಗೆಯಿಂದ ನೆರವಾಗುವ ಕೆಲಸಗಳನ್ನು ಅದು ಮಾಡಿದೆ; ಗ್ರಾಮಾಂತರ ಪ್ರದೇಶಕ್ಕೆ ಹಣ ಹರಿಯುವಂತೆಯೂ ಅದು ನೋಡಿಕೊಂಡಿದೆ—ಅದರೆ ಇವಾವುದರಲ್ಲಿಯೂ ಸರಕಾರ ಹಸ್ತಕ್ಷೇಪ ನಡೆಸುವುದಿಲ್ಲ. ಕೇಂದ್ರಸಚಿವಾಲಯದ ಶಾಖೆಯೊಡನೆ ವಿಚಾರವಿನಿಮಯ ನಡೆಸಿದ್ದೆಷ್ಟೋ ಅಷ್ಟೇಯಲ್ಲದೆ ಅದಕ್ಕಿಂತ ಬಗಿಯಾದ ಧೋರಣೆಗೆ ರಿಜರ್ವ್ ಬ್ಯಾಂಕ್ ಬಲಿಯಾಗಿರುವುದಿಲ್ಲ

ಆದುದರಿಂದ, ಸ್ಟೇಟ್ ಬ್ಯಾಂಕ್ ಸ್ಥಾಪನೆಯಾಗಿರುವುದು ನಿಜಕ್ಕೂ ಸ್ವಾಗತಾರ್ಹ. ನಾವು ಬಯಸಿದಷ್ಟು ವೇಗದಿಂದ ಕೃಷಿ ಮತ್ತು ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದುವುದಕ್ಕೆ ಬೇಕಾದ ಅನುಕೂಲತೆಯನ್ನು ಒದಗಿಸಿಕೊಡುವ ವ್ಯಾವಕ ಯೋಜನೆಯಲ್ಲಿ ಸ್ಟೇಟ್ ಬ್ಯಾಂಕ್ ಸೇರುತ್ತದೆ. ಈಗ ಭಾರತದಲ್ಲಿ ಜನರ ಜೀವನ ಮಟ್ಟವನ್ನು ಎತ್ತರಿಸುವ ಮಹಾ ಪ್ರಯತ್ನ ನಡೆದಿದೆ. ಇದಕ್ಕೆ ಯಶಸ್ಸು ಸಿಗಬೇಕಾದರೆ ನಮ್ಮ ಜನ ಸಂಖ್ಯೆಯು ಹೆಚ್ಚುತ್ತಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಮತ್ತು ಕೈಗಾರಿಕೆಗಳು ಅಭಿವೃದ್ಧಿಯಾಗುವುದು ಅನಿವಾರ್ಯ.

ಇದು ಕೇವಲ ಆರ್ಥಿಕ ಸ್ವರೂಪದ ಸಮಸ್ಯೆಯಲ್ಲ—ರಾಜಕೀಯವೂ ಇದರಲ್ಲಿ ಬೆರೆತಿರುತ್ತದೆ. ವೈಯುಕ್ತಿಕ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಎಂದು ಮುಂತಾದವುಗಳಿಗೆ ಎಡೆ ಕೊಡುವ ಪ್ರಜಾಪ್ರಭುತ್ವ ಪದ್ಧತಿಗೆ ನಾವು ಈಗ ತುಂಬ ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆ. ಸರ್ವಾಧಿಕಾರಿತ್ವವುಳ್ಳ ರಾಷ್ಟ್ರದ ಅಭಿವೃದ್ಧಿಗಿಂತ ಯಾವ ರೀತಿಯಲ್ಲೂ ಹಿಂದುಳಿದಿರದ ಪ್ರಗತಿಯನ್ನು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸಾಧಿಸಬಲ್ಲವಾದರೆ ಮಾತ್ರ ನಾವು ತೃಪ್ತರಾಗಬಹುದು. ಪ್ರಗತಿಗೆ ತಗಲುವ ಕಾಲಾವಧಿಯು ಮಹತ್ವದ ವಿಷಯ. ಸಾಕಷ್ಟು ಕ್ಷಿಪ್ರದಲ್ಲಿ ನಾವು ಜನರ ಜೀವನ ಮಟ್ಟವನ್ನು ಎತ್ತರಿಸಲು ಶಕ್ತರಾಗದಿದ್ದರೆ, ಚೆನ್ನಾದ ಮನೆ ಇಲ್ಲದ, ಉಚಿತ ಶಿಕ್ಷಣವಿಲ್ಲದ, ಸೊಪ್ಪೆ ತುಂಬ ಅನ್ನವಿಲ್ಲದ ಸಾಮಾನ್ಯ ಜನರು ಈದಾರುಣಪರಿಸ್ಥಿತಿಗಿಂತ ತುಸು ಮಟ್ಟಗಾದರೂ ಹೆಚ್ಚು ಸೌಖ್ಯವನ್ನು ನೀಡುವ ಆರ್ಥಿಕ ಮಾರ್ಗಾವಲಂಬನೆಗೆ ಮನಸ್ಸುಮಾಡುವುದು ನಿಶ್ಚಯ. ಅದೇ ಸಾಮ್ಯವಾದ—ಅಥವಾ ಕಮ್ಯೂನಿಸಂ. ಆದುದರಿಂದ ಕೃಷಿ ಮತ್ತು ಔದ್ಯಮಿಕ ಪ್ರಗತಿ ಹಾಗು ಅಭಿವೃದ್ಧಿಯ ಮಾರ್ಗದಲ್ಲಿರುವ ಎಲ್ಲ ತೊಡಕು, ತೊಂದರೆಗಳನ್ನು ದೂರವಾದುವುದು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿರುವ ನಮ್ಮ ಆದ್ಯ ಕರ್ತವ್ಯ. ಈ ತೊಡಕುಗಳಲ್ಲಿ ಒಂದು ಬಾರತದ ಹೆಚ್ಚಿನ ಹಳ್ಳಿಗಳಿಗೆ ಸುಲಭದಲ್ಲಿ ಸಾಲದ ಪೂರೈಕೆಯಾಗುವುದಕ್ಕೆ ಯೋಗ್ಯ ಸಾಧನವಿಲ್ಲದಿರುವುದೇ ಎಂಬುದರಲ್ಲಿ ಪ್ರತಿಮಾತಿಲ್ಲ. ಈ ಅಡಚಣೆಯನ್ನು ದೂರ ಮಾಡುವುದೇ ಸ್ಟೇಟ್ ಬ್ಯಾಂಕ್ ಸ್ಥಾಪನೆಯ ಮೂಲೋದ್ದೇಶ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOKLY BANK LTD., MULKI.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕತೆಯೂ ಉಂಟಾಗದೆ ತೀವ್ರ ಗುಣಪಡಿಸುವುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ವರು: ಶಹಾಕಂಪೆನಿ, ಮಂಗಳೂರು

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY3.

(೨ನೇ ಪುಟದಿಂದ)

"ಫಿರ್ ಮಿಲ್" ಆಗಿ ಪರಿವರ್ತಿಸಲ್ಪಡಬೇಕು. ಇದು ವಿದೇಶಗಳಿಗೆ ಹೋಗಬಹುದಾದ ಪದಾರ್ಥ. ಅಲ್ಲಿ ಅದನ್ನು ದನಕರುಗಳಿಗೆ, ಕೋಳಿಗಳಿಗೆ ಆಹಾರವಾಗಿ ಬಳಸಲಾಗುತ್ತದೆ. ಆದರೆ ಈ ಉದ್ಯಮದ ಜ್ಞಾನವೇ ನಮ್ಮ ಜನಗಳಿಗಿಲ್ಲ. ಹೀಗಿರುವುದರಿಂದ ಮೀನು ಹಿಡಿಯುವ ಪ್ರಯೋಜನ ಪಡೆಯಲು ನಮ್ಮ ಬೆಸ್ತರುಗಳಿಗಾಗುತ್ತಲಿಲ್ಲ. ಸಣ್ಣ ಸುಟ್ಟ ಪ್ರಮಾಣದಲ್ಲಿ ಇದಕ್ಕೆ ಬೇಕಾದ ಡಬ್ಬಿ ಕೈಗಾರಿಕೆಯನ್ನು ಬೆಳೆಸಬಹುದು. ಹಾಗೆ ಬೆಳೆಸಿದವರಿಲ್ಲ.

ಕೇವಲ ಕಡಲ ಕಿನಾರೆಯಲ್ಲಾದರೆ ಮೀನುಗಳು ಸಿಗುವ ಕಾಲವಿದ್ದಂತೆ ಸಿಗದಿರುವ ಕಾಲವೂ ಉಂಟು. ಮೀನುಗಾರಿಕೆಯು ಸದಾ ಲಾಭಕರವಾದ ಉದ್ಯಮವಾಗಬೇಕಾದರೆ ಆಳವಾದ ಕಡಲಿನ ಭಾಗಕ್ಕೆ ಜನರು ಹೋಗಿ ಮೀನು ಹಿಡಿಯುವ ಪ್ರಯೋಗದಲ್ಲಿ ನಿರತರಾಗಬೇಕು. ನಾವೇ ದೇಶದ ತಜ್ಞರಿಂದ ಈ ಶಿಕ್ಷಣವನ್ನು ತಿರುವಾಂಕೂರಿನಲ್ಲೀಗ ಕೊಡಿಸಲಾಗುತ್ತದೆ. ಕರ್ಣಾಟಕದ ಇನ್ನೂರು ಮೈಲುಗಳ ತೀರದಲ್ಲಿ ಒಂದೆರಡಾದರೂ ಮೀನುಗಾರಿಕೆಯಲ್ಲಿ ಈ ಬಗೆಯ ಶಿಕ್ಷಣ ಕೊಡುವ ಕೇಂದ್ರಗಳು ಅನಿವಾರ್ಯವಾಗಿ ಬೇಕು. ಆಳವಾದ ಕಡಲಿನಲ್ಲಿ ಸಂಚರಿಸುವುದಕ್ಕೆ ಯಂತ್ರ ಶಕ್ತಿಯುಳ್ಳ ಹಡಗುಗಳೂ ಹಡಗಿನಲ್ಲೇ ಮೀನನ್ನು ಉಪವಸ್ತುವಾಗಿ ಪರಿವರ್ತಿಸುವ ಸಲಕರಣೆಗಳೂ ಇದ್ದ ಪಕ್ಷದಲ್ಲಿ ನಮ್ಮ ಕಡಲು ನಿಜಕ್ಕೂ ಸಂಪತ್ತಿನ ಆಗರವಾಗಿ ಬಲ್ಲದು ಮೀನಿನಿಂದ ಉತ್ಪಾದಿಸಬಹುದಾದ ಸಾಮಾನ್ಯವಾದ ಮೀನೆಣ್ಣೆ, ಶಾರ್ಕ್ ಲಿವರ್ ಆಯಿಲ್ ಎಂಬ ಪೌಷ್ಟಿಕ ಪದಾರ್ಥ, ಮೀನಿನ ಸರಸು ಇವು ತುಂಬ ಪ್ರಯೋಜನಕಾರಿಯಾದ ಉಪವಸ್ತುಗಳು.

ಇಂದಿನ ವೈಜ್ಞಾನಿಕ ಯುಗದಲ್ಲಿ ಮೆಗ್ನೇಶಿಯಂ ಒಂದು ಅಮೂಲ್ಯವಾದ ಲೋಹ. ಅನೇಕ ಮಿಶ್ರ ಲೋಹಗಳಲ್ಲಿ ಅದು ಬಳಸಲ್ಪಡುತ್ತದೆ ಅದನ್ನು ಕಡಲಿನ ನೀರಿನಿಂದಲೇ ವಿದ್ಯುತ್ತಿನ ಮೂಲಕ ವಿಭಾಜಿಸಿ ತೆಗೆಯುತ್ತಾರೆ ಈ ಉದ್ಯಮದ ಕಡೆಗೆ ಭಾರತದ ಗಮನವೇ ಹರಿದಂತಿಲ್ಲ. ಕಡಲಿನ ಪಾಮಾಜಿಗಳಲ್ಲಿ ಅಯೋಡಿನ್ ಮೊದಲಾದ ಧಾತುಗಳ ಸಂಗ್ರಹ, ಸಸಾರ ಜನಕ ಮೊದಲಾದ ಆಹಾರ ವಸ್ತುಗಳ ಸಂಗ್ರಹ ಸುಲಭ ಸಾಧ್ಯವಾಗಿದ್ದರೂ ಈ ಪ್ರಯೋಗ ನಡೆದಿಲ್ಲ.

ಕಡಲಿನ ಅನೇಕ ಜೀವಿಗಳ ಚಿಪ್ಪುಗಳು ಇಂದು ದಂಡೆಗೆ ಬಿದ್ದು ವ್ಯರ್ಥವಾಗುತ್ತವೆ. ಕಡಲ ತೀರದ ಕಾರಿಗಳಲ್ಲಿ ಈ ಬಗೆಯ ಚಿಪ್ಪುಗಳು ಧಾರಾಳವಾಗಿ ದೊರಕುತ್ತವೆ. ಇದರಿಂದ ಸ್ಥಳೀಯ ಉಪಯೋಗಕ್ಕೆ ಸುಣ್ಣವನ್ನು ತಯಾರಿಸಲಾಗುತ್ತದೆ. ಏನೊಂದೂ ಕಶ್ಮಲವಿಲ್ಲದ ಸುಣ್ಣವನ್ನು ನಾವು ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿ ಲಾಭ ಗಳಿಸುವುದು ಸಾಧ್ಯ. ವಿದ್ಯುತ್ತಿನ ನೆರವು ಅಗ್ಗವಾಗಿ ದೊರೆತಲ್ಲಿ ಉಪ್ಪು ನೀರಿನಿಂದ ಕಾಸ್ಟಿಕ್ ಸೋಡಾವನ್ನು ಧಾರಾಳವಾಗಿ ಪಡೆಯಬಹುದು. ಈ ಉದ್ಯಮಕ್ಕೆ ಸಮುದ್ರದ ಕರಾವಳಿಯೇ ಅನುಕೂಲವಾದ ಪ್ರದೇಶ.

ಕಡಲಿನ ಗಾಳಿ ಮತ್ತು ಅಲೆಗಳ ಬಡಿತವನ್ನು ಉಪಯೋಗಿಸಿಕೊಂಡು ವಿದ್ಯುತ್ತಿನ ಉತ್ಪಾದನೆ ಮಾಡಬಹುದು. ಈ ದೃಷ್ಟಿಯಿಂದಲೂ ನಮಗೆ ಕಡಲು ಹೆಚ್ಚಿನ ಸಹಾಯವನ್ನು ನೀಡಬಲ್ಲುದು. ಕಡಲಿನ ದಂಡೆಯಲ್ಲಿರುವ ಶುದ್ಧವಾದ ಹೈಗೆಯು ಸಹ ಉದ್ಯಮವನ್ನು ಕಟ್ಟಬಲ್ಲ ಪಸಿಗೆ ಸಂಪತ್ತಿನ ಒಂದು ಸಾಧನ. ಅಲ್ಲಲ್ಲಿ ಥೋರಿಯಂ ಮಿಶ್ರಿತವಾದ ಕಡಲಿನ ಮರಳನ್ನೂ ಕಾರ್ಬರೆಂಡಂ ಮಿಶ್ರಿತವಾದುದನ್ನೂ ಪರಿಚಯ ಮಾಡಿಕೊಂಡರೆ ಅದು ವಿಶೇಷ ಸಂಪತ್ತಿಗೆ ದಾರಿ ಮಾಡಿಕೊಡುತ್ತದೆ ಸಾಮಾನ್ಯ ಮರಳು ಸಹ ನಮಗೆ ಉತ್ತಮ ಸಿಲೀಕಾವನ್ನು ಒದಗಿಸಿಕೊಡಬಲ್ಲುದು. ಗಾಜಿನ ಕೈಗಾರಿಕೆಗೆ ಕರಾವಳಿಯ ಮರಳು ಒಂದು ಅತ್ಯುತ್ತಮ ಕಚ್ಚಾ ವಸ್ತು.

ನಡು ಕರಾವಳಿಯ ಉದ್ದಕ್ಕೂ ಇರುವ ಮರಳಿನ ದಿನ್ನೆಗಳು ತೆಂಗು ಮತ್ತು ಹೊಗೆಸೊಪ್ಪುಗಳ ಬೆಳೆಗೆ ಅನುಕೂಲಿಸಿದ ಪ್ರದೇಶಗಳೆಂದು ಭಾವಿಸಲ್ಪಡುತ್ತವೆ. ಕರಾವಳಿಯ ಉದ್ದಕ್ಕೂ ತೆಂಗಿನ ತೋಟಗಳನ್ನು ಧಾರಾಳವಾಗಿ ಕಾಣುತ್ತಿದ್ದೇವೆ. ತೆಂಗಿನ ನಾರು ಸಾಕಷ್ಟು ಪ್ರಮಾಣದಲ್ಲಿ ಹುರಿಹಗ್ಗದ ರೂಪದಲ್ಲಿ ನಾಡಿನ ಜನರಿಗೆ ಉದ್ಯೋಗವನ್ನು ನೀಡುತ್ತದೆ. ಆದರೆ ಇಂದು ವ್ಯಾವಾರದ ವಿಶಿಷ್ಟತೆಗಳಿಗೆ ಗುರಿಯಾಗಿ ಇದು ತೀರ ಅಸ್ಥಿರವಾದ ಗುಡಿಕೈಗಾರಿಕೆಯಾಗಿ ಕಾಣಿಸುತ್ತದೆ. ತೆಂಗಿನ ನಾರಿನಿಂದ ಹಗ್ಗವಲ್ಲದೆ ಇತರ ಅನೇಕ ಉಪವಸ್ತುಗಳನ್ನು ಸಹ ತಯಾರಿಸಬಹುದು. ವಿಶಿಷ್ಟ ರೀತಿಯ ಬ್ರಶ್ಶುಗಳ ತಯಾರಿಕೆಗೂ ಅದು ಬರುತ್ತದೆ.

ದೇಶದಲ್ಲಿ ಸಿಮೆಂಟಿನ ಉತ್ಪನ್ನ ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಸಿಮೆಂಟ್, ರಸಿನ್ ಮತ್ತು ನಾರುಗಳ ಉಪಯೋಗದಿಂದ ಫೈಬರ್ ಬೋರ್ಡ್ ನಿರ್ಮಾಣ ಮಾಡುವುದು ಅಸಾಧ್ಯವಾದ ಮಾತಲ್ಲ. ನಮ್ಮ ದೇಶದ ಇತರ ಎಲ್ಲ ನಾರುಗಳಿಗಿಂತಲೂ ತೆಂಗಿನ ನಾರು ನೀಳವೂ ತಾಳಿಕೆಯದೂ ಆಗಿರುವುದರಿಂದ ಇಂಥ ಬೋರ್ಡುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆಗೆ ತರಬಹುದು. ಕಡಲಿನಿಂದ ನಮಗೆ ದೊರೆಯುವ ಇಂಥ ಅನೇಕ ಪ್ರತ್ಯಕ್ಷ ಹಾಗು ಪರೋಕ್ಷ ಉತ್ಪನ್ನಗಳ ಜ್ಞಾನವನ್ನು ಸಂಗ್ರಹಿಸಿ ಯೋಗ್ಯ ಪ್ರಯೋಗಗಳಿಂದ ಜನರ ಜೀವನಕ್ಕೆ ನೆರವಾಗಬಲ್ಲ ಅನೇಕ ಉದ್ಯಮಗಳನ್ನು ನಾವು ಕರ್ಣಾಟಕದ ಕಡಲಿನ ತೀರದಲ್ಲಿ ಸ್ಥಾಪಿಸಬಹುದು.

ಪ್ರಯೋಜನದಲ್ಲಿ ತೆಂಗಿನ ಮರದಷ್ಟೇ ಇಲ್ಲಿ ಯಾರ ರಕ್ಷಣೆಯೂ ಇಲ್ಲದೆ ಬೆಳೆಯುತ್ತಿರುವ ಹನೆ ಮರವೂ ಅನೇಕ ಕೈಗಾರಿಕೆಗಳಿಗೆ ಸಹಾಯವಾಗಬಲ್ಲುದು. ಇಂದು ಅದರ ಸೋಗೆಗಳನ್ನು ಸುಡುವುದಕ್ಕೋ ಮಾಡು ಹೊದೆಯಿಸುವುದಕ್ಕೋ ಸಾಮಾನ್ಯ ಬುಟ್ಟಿಗಳನ್ನು ಮಾಡುವುದಕ್ಕೋ ನಾವು ಉಪಯೋಗಿಸುತ್ತಿದ್ದೇವೆ. ಅದನ್ನು ಇನ್ನಷ್ಟು ನಾಜೂಕಿನ ಚೀಲ, ತಡಿಕೆ, ಪೆಟ್ಟಿಗೆ ಮೊದಲಾದ ಅಗ್ಗದ ವಸ್ತುಗಳ ವಿವಿಧ ಕೈಗಾರಿಕೆಗಳಲ್ಲಿ ಬಳಸಬಹುದು.

ನೈಸರ್ಗಿಕ ಸೌಂದರ್ಯವನ್ನು ಎಣಿಸಿಕೊಂಡಲ್ಲಿ ಕೊಚ್ಚಿಯಿಂದ ಕಾರವಾರದ ತನಕ ಚಾಚಿರುವ ಕಡಲಿನ ಭಾಗ ಭಾರತದಲ್ಲೆಲ್ಲ ಅತ್ಯಂತ ರಮಣೀಯವಾದ ಪ್ರದೇಶ. ಸನೊಪದ ಗುಡ್ಡಗಳಿಂದಲೂ ಅಸಂಖ್ಯಾತ ನದಿ ಮತ್ತು ಕಾಲುವೆಗಳಿಂದಲೂ ತೆಂಗಿನತೋಟಗಳಿಂದಲೂ ದಕ್ಷಿಣ ಸಮುದ್ರದ ದ್ವೀಪಗಳನ್ನು ನಾಚಿಸುವ ಸೊಬಗು ನಮ್ಮ ಕರಾವಳಿಯದು. ಆದರೆ ಇಲ್ಲಿಗೆ ನೋಡಲು ಬರುತ್ತು ವಿಹರಿಸಲು ಎಷ್ಟು ಜನರು ಬರುತ್ತಾರೆ? ಬಂದು ವಾಸಿಸುತ್ತಾರೆ? ಯಾರೂ ಬರಬಾರದೇ?

ಸ್ವಿಜರ್‌ಲೇಂಡಿನಂಥ ನಿಸರ್ಗ ಸುಂದರ ದೇಶವು ಪ್ರವಾಸಿಗಳ ಆಕರ್ಷಣೆಗೆ ಅಷ್ಟೊಂದು ಒಳಗಾಗಿರುವುದಕ್ಕೆ ಅಲ್ಲಿನ ನಿಸರ್ಗವು ಎಷ್ಟು ಕಾರಣವೋ ಅಲ್ಲಿಯ ಜನರು ಪ್ರವಾಸಿಗಳಿಗೆ ಅರ್ಪಿಸುತ್ತಿರುವ ಅನುಕೂಲತೆಗಳೂ ಅಷ್ಟೇ ಕಾರಣ. ಸರಕಾರವಾಗಲೀ ಖಾಸಗಿ ಸಂಸ್ಥೆಗಳಾಗಲೀ ಇಲ್ಲಿನ ಸೌಂದರ್ಯವನ್ನು ಹೊಂದಿನ ಜನರಿಗೂ ಒಳನಾಡಿನವರಿಗೂ ಪರಿಚಯ ಮಾಡಿಕೊಡಬೇಕು—ಇದೆಷ್ಟಾಗಿಯೇ ನಮ್ಮ ಕರಾವಳಿ ತೀರದಲ್ಲಿ ಪ್ರವಾಸಿಗರ ಸಂಚಾರ ವ್ಯವಸ್ಥೆಗೊಳ್ಳಬೇಕು. ಕಡಲ ದಂಡೆಗಳಲ್ಲಿ ವಿಹಾರ ಕೇಂದ್ರಗಳನ್ನು ತೆರೆಯಬೇಕು, ಸ್ನಾನ ಕೇಂದ್ರಗಳು, ದೋಣಿಯಾಟದ ಕೇಂದ್ರಗಳು ಅಪಾಯವಿಲ್ಲದೆ ನಡೆಯಬಹುದಾದಂತೆ ಶಲೆಯತ್ತಬೇಕು. ದೋಣಿ, ಮೋಟಾರ್ ಲಾಂಚ್ ಮೊದಲಾದವುಗಳ ಆನುಕೂಲತೆ ಒದಗಬೇಕು. ಬಂದು, ನಾಲ್ಕು ದಿನ ತಂಗಿ, ಸಂತೋಷಗೊಳ್ಳುವವರಿಗೆ ಪ್ರತಿಯೊಂದೂ ಕೇಂದ್ರದಲ್ಲಿ ಸುಲಭ ವಸತಿ ಗೃಹಗಳನ್ನೂ ಆಹಾರ ಉಪಚಾರಗಳನ್ನೂ ಏರ್ಪಡಿಸುವ ವ್ಯವಸ್ಥೆ ಮಾಡಬೇಕು

ಇದಾದರೆ ವಾರ, ತಿಂಗಳುಗಳನ್ನು ಕಳೆಯುವುದಕ್ಕೆ ಪಾಶ್ಚಾತ್ಯ ದೇಶಗಳ ಕಡಲಿನ ತೀರಗಳು ಎಷ್ಟು ಆಕರ್ಷಕ ವಿಹಾರ ಕೇಂದ್ರಗಳಾಗಿ ಮೆರೆಯುತ್ತವೆಯೋ ನಮ್ಮ ಕಡಲಿನ ಒಂದೊಂದು ಗಜ ದೂರವು ಅಷ್ಟೇ ಸುಂದರ ತಾಣಗಳಾಗಬಲ್ಲುದು. ಇಂಥ ಹೆಲುವಿನ ತಾವುಗಳು ವ್ಯರ್ಥವಾಗದಂತೆ ಅನುಕೂಲತೆಗಳು ಒದಗಿಸಲ್ಪಟ್ಟು, ಶಿಕ್ಷಣ ಮತ್ತು ಪ್ರಚಾರ ನಡೆದಲ್ಲಿ ಪ್ರವಾಸಿಗಳ ಸಂಚಾರವು ಬೆಳೆದು, ಜನಗಳಿಗೆ ಲಾಭದಾಯಕವಾದ ಜೀವನದ ಹೊಸ ಮಾರ್ಗವನ್ನು ಕಲ್ಪಿಸಿಕೊಡಬಹುದು.

—ಶಿವರಾಮ ಕಾರಂತ,

["ಕನ್ನಡ ಗುಡಿ"ಯಲ್ಲಿ]

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ವಾಜ್ಯ 172/1955.

ಜನಾರ್ಧನ ಮಂಡೀಜ— ವಾದಿ

ಮತ್ತು

ಗ್ರಿಗೋರಿ ಲೂವಿಸ್— ಪ್ರತಿವಾದಿ

ಇವರೊಳಗೆ.

ಗ್ರಿಗೋರಿ ಲೂವಿಸ್, ಲೊರೆನ್ಸ್, ಬಸ್ತ್ಯಾಂ ಲೂವಿಸರ ಮಗ, ಉಡುಪಿ ತಾಲೂಕು ಉಪ್ಪೂರು ಗ್ರಾಮದ ಮೂವಿನ ಕುದ್ರಲ್ಲಿರುವವ ಪ್ರತಿವಾದಿ.

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ವಾದಿಯು ಪ್ರತಿವಾದಿ ಮೇಲೆ ಜಾಲಗೇಣಿ ಗೇಣಿ ಬಾಕಿ ಆಸ್ತಿ ಸ್ವಾಧೀನತೆ ಹುಟ್ಟುವಳ್ಳಬಗ್ಗೆ ದಾವಲುಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿಗೆ ಅಪ್ಪೆರಿ ನೋಟೀಸಿನ ಬಗ್ಗೆ 8—8—1955ಕ್ಕೆ ಇಲ್ಲೋಣಾಗಿಯದೆ. ಸದ್ರಿ ತನಬಿ ದಿನ ಪಗಲು ಗಂಟೆ 11ಕ್ಕೆ ಪ್ರತಿವಾದಿಯು ಮೇಲ್ಕಂಡ ಕೋರ್ಟು ಮುಂದೆ ಹಾಜರಾಗದಿದ್ದರೆ ಸದ್ರಿ ವ್ಯಾಜ್ಯವು ಆತನ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

K. Varadaraya Pai

Adocate for plaintiff

ಉಡುಪಿ ತಾ. 21—7—1955.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಸ್ಪೆಶಲತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಸುಳುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ)

ಅವಿವಾಹಿತೆ —

ಬರೆದವರು: ಶ್ರೀನಿವಾಸ ಹಾವನೂರ. ಪ್ರಕಾಶಕರು: ರಾಕಾಕು ಪ್ರಕಾಶನ, ಕುಮಟಿ, ಉತ್ತರ ಕನ್ನಡ. ಬೆಲೆ: ರೂ. ೧-೪-೦.

ಅರೇಳು ವರ್ಷಗಳ ಹಿಂದೆ "ಆನರು ಮತ್ತು ದೇವಕ್ಕ" ಎಂಬೆರಡು ನೀಳ್ಗತೆಗಳ ಪುಸ್ತಕ ಪ್ರಕಟವಾಯಿತು. ಅದನ್ನು ಬರೆದ ಶ್ರೀ ಬರೆಣಿ ಶ್ರೀನಿವಾಸರಿಗೆ ಭವ್ಯ ಭವಿಷ್ಯವಿದೆ ಎಂದು ಎಲ್ಲರೂ ಒಪ್ಪಿದರು. ಆದೇ ವ್ಯಕ್ತಿ ಈಗ ಶ್ರೀನಿವಾಸ ಹಾವನೂರ ಎಂದು ತನ್ನ ಆಡ್ಡಹೆಸರನ್ನು ಬದಲಾಯಿಸಿ "ಅವಿವಾಹಿತೆ" ಯನ್ನು ಬರೆದಿದ್ದಾರೆ. ಈನಡುವಿನವರು ಹಲವು ಲೇಖನಗಳನ್ನೂ ಕೆಲವಾದರೂ ಕೃತಿಗಳನ್ನೂ ರಚಿಸಿ ಕನ್ನಡಿಗರಿಗೆ ಒಪ್ಪಿಸಿದ್ದಾರೆ. ಕಥನ ಸಾಹಿತ್ಯದಿಂದ ಅವರೀಗ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆಯನ್ನು ಮಾಡಿ ವಿಚಾರವನ್ನು ಪ್ರಚೋದಿಸುವ ಉದ್ಯೋಧಕ ಸಾಹಿತ್ಯದ ಕ್ಷೇತ್ರಕ್ಕೆ ಜಿಗ್ಗಿಯನ್ನು ಮುಂದಿಟ್ಟಿದ್ದಾರೆ. ಇದು ಸ್ವಾಗತಾರ್ಹವಾದ ಪ್ರಗತಿ ಎಂದು ಸಂತೋಷದಿಂದ ಹೇಳಬಹುದು. ಅವರು ತಮ್ಮ ಈ ನೂತನ ಕೃತಿಯಲ್ಲಿ ಎತ್ತಿಕೊಂಡಿರುವುದು ನಿಜಕ್ಕೂ ಎಲ್ಲರೂ ವಿಚಾರಿಸಲೇ ಬೇಕಾದ ಮಹತ್ವದ ಪ್ರಶ್ನೆ—ಅದೆಂದರೆ ಪ್ರಾಯಪ್ರಬುದ್ಧರಾಗಿದ್ದರೂ ಮದುವೆಯಾಗದೆ, ದಾಂಪತ್ಯ ಜೀವನದ ಸುಖವಿಲ್ಲದೆ, ನಿರೀಹರಾಗಿ ಬಾಳಬೇಕಾಗಿ ಬಂದ ಹುಡುಗಿಯರ ಜೀವನ. ಐವತ್ತು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಈ ಸಮಸ್ಯೆ ಇರಲಿಲ್ಲ—ಆದರೆ ಈಗ ಇದು ಎಷ್ಟು ಬೆಳೆದುಬಿಟ್ಟಿದೆ ಎಂದರೆ, ಭಾರತದಲ್ಲಿ ಸುಮಾರು ಒಂದೂವರೆ ಕೋಟಿ ಅವಿವಾಹಿತೆಯರಿರಬಹುದೆಂದು ಹೇಳಲಾಗುತ್ತದೆ! ಪರಿಸ್ಥಿತಿಯು ಇಷ್ಟು ಉಲ್ಬಣಗೊಳ್ಳಲಿಕ್ಕೆ ಕಾರಣಗಳೇನೆಂದು ಇಲ್ಲಿ ಲೇಖಕರು ಎಳೆ ಎಳೆಯಾಗಿ ಚರ್ಚಿಸಿದ್ದಾರೆ. ಅವರ ಅಭಿಪ್ರಾಯದಂತೆ ಸ್ತ್ರೀಯರ ಶಿಕ್ಷಣಕ್ಕೆ ಅಗಾಧವಾದ ಮಹತ್ವವನ್ನು ನುಳ್ಳಪುವರ್ಗ ಕೊಟ್ಟಿರುವುದೇ ಈ ಸಮಸ್ಯೆಯ ಹುಟ್ಟಿಗೆ ಕಾರಣ. ೧೫ವರ್ಷಕ್ಕಿಂತ ಕಡಿಮೆವಯಸಿನ ಹುಡುಗಿಯರನ್ನು ಮದುವೆಯಾಗಲು ಇಂದಿನ ಹುಡುಗರು ಸಿದ್ಧರಿಲ್ಲ. ಏಕೆಂದರೆ ಅವಿಭಕ್ತ ಕುಟುಂಬಗಳು ಒಡೆದು ನೌಕರಿಗಾಗಿ ಹೆಚ್ಚು ಗಂಡಸರು ಎಲ್ಲೋ ಸುತ್ತಮಾಡಿಕೊಂಡಿರಬೇಕಾಗುತ್ತದೆ. ಆದರೆ ಅವರಿಗೆ ತಮಗಿಂತ ಹೆಚ್ಚು ಬುದ್ಧಿವಂತರಾದ, ಶಿಕ್ಷಿತರಾದ ಹುಡುಗಿಯರೂ ಬೇಡ-ಕಲಿತವರೆಂದರೆ ಹುಡುಗರು ಹೆದರುತ್ತಾರೆ. ಕಲಿತ ಹುಡುಗಿಯರೊಡನೆ ಸರಸವಾಡಲು ಹುಡುಗರಿಗೆ ಬೇಸರವಾಗುವುದಿಲ್ಲ; ಆದರೆ ಅವರೊಡನೆ ಮದುವೆಮಾತ್ರ ಆಗಲಿಗೆ ಬೇಡ. ಇದೊಂದು ಮದುವಾದರೆ, ಪರ ಪೂರುಗಳಲ್ಲಿನ ಹೋಟೆಲುಗಳು ಹುಡುಗರ "ಮದುವೆಯನ್ನು ತಪ್ಪಿಸುವುದರಿಂದಲೂ ಆರ್ಥಿಕ ದೃಷ್ಟಿಯಿಂದ ಅನುಕೂಲವಿಲ್ಲದ ಗಂಡಸಿಗೆ ಮದುವೆ ಮುಂದೆ ಬೀಳುತ್ತದೆ. ವಿಷಯದ ಒಂದು ಬದಿ ಹೀಗಿದ್ದರೆ, ಹುಡುಗಿಯರ ತಂದೆತಾಯಿಗಳಿಗೆ ಹುಡುಗರ ಆರ್ಥಿಕ ಬೇಡಿಕೆಗಳನ್ನು ಪೂರೈಸಿ ಹುಡುಗಿಯರನ್ನು ಧಾರೆ ಎರೆಯುವ ಸ್ಥಿತಿ ಅನುಕೂಲತೆ ಇರದಿರುವುದು ಹುಡುಗಿಯರ ಮದುವೆಗೊಂದು ಬಲವಾದ ಕಾರಣವಾಗುತ್ತದೆ. ಮೊದಲಿಗೆ ಪ್ರಾಪ್ತ ವಯಸ್ಸಾಗುವ ವರೆಗೆ ಓದು ಬರೆಯವಾದರೂ ಬರಲಿ ಎಂದು ಹುಡುಗಿಯರಿಗೆ ಓದಿಸುತ್ತಾರೆ; ೧೫ರಿಂದಿಗಲ ವಯಸ್ಸಾಗುವಷ್ಟರಲ್ಲಿ ಮದುವೆಯ ಪ್ರಯತ್ನ ನಡೆಸಿದರೂ ಮದುವೆಯಾಗುವ ವರೆಗೆ ಸುಮ್ಮನೆ ಮನೆಯಲ್ಲೇಕೆ ಉಳಿಯುವುದೆಂದು ಓದನ್ನು ಮುಂದುವರಿಸುತ್ತಾರೆ; ಆ ನಂತರ ೧೧ ವರ್ಷದ ವರೆಗೆ ಅನುಕೂಲ ಸಂಬಂಧ ಸಿಗಲಿಲ್ಲವಲ್ಲ ಎಂದು ಓದು ನಡೆಯುತ್ತದೆ. ಇಷ್ಟರಲ್ಲಿ ಹುಡುಗಿಯ ಕಾಮನೂರ್ಯದನೋಟ ನಡತೆ ಕಳೆದು ಪ್ರೌಢ ವಯಸ್ಸಿನ ಯೌವನ ಬಲಿಯುತ್ತದೆ. ಹೆಚ್ಚು ಓದು ಕಲಿತ ಅವಳು ಸ್ವಂತ ವಿಚಾರಮಾಡಿ ತನ್ನ ಗಂಡನು ಇಂಥವನೇ ಇರಬೇಕೆಂಬ ಕಲ್ಪನೆಯನ್ನು ಕಟ್ಟಿಕೊಳ್ಳುತ್ತಾಳೆ—ಇವಳ ನಡತೆಗೆ ಸಾಮಾನ್ಯ ಹುಡುಗರ ಪಾಲಿಗೆ "ಗಂದು ಬೀರಿ" ಯ ನಡತೆಯಾಗಿ ತೋರಿದರೆ ಕೆಲವು ಸಾಯಸಿಗಳಾದರಸಿಕರಿಗೆ ಆಹ್ವಾನ ಪ್ರಾಯವಾಗುತ್ತದೆ. ಇಲ್ಲಿ ತಲೆದೋರುವುದು ಭಗ್ನ ಪ್ರಣಯದ ದುರಂತ. ಇದು ಬಯಲಾವಾಗ ಹುಡುಗಿಯ ಬಾಳು ನುಣ್ಣಗೆ ಗೂಡುತ್ತದೆ. ಹುಡುಗನಾದರೆ ಬೇರೆಡೆ ಮದುವೆಯಾಗುತ್ತದೆ. ಕಾಯಿದೆಯ ಬಲದಿಂದ ಅವನನ್ನು ಶಿಕ್ಷಿಸಲು ಹುಡುಗಿಯ ತೆತ್ತವರೇನು ಮುಂದಾಗುವುದಿಲ್ಲ. ಮದುವೆಯಾಗದ ಹುಡುಗಿ ಅನಿವಾರ್ಯವಾಗಿ ನೌಕರಿಯನ್ನು ಅಪ್ಪಿಕೊಳ್ಳಬೇಕಾಗುತ್ತದೆ; ಅವಳ ಸಂಪಾದನೆ ಸುಧ್ಯಮ ವರ್ಗದ ತೆತ್ತವರಿಗೆ ಕುಟುಂಬದ ಕರ್ಚಿಗೊಂದು ಆಧಾರವಾಗುತ್ತದೆ. ಆದರೆ ಆ ಹುಡುಗಿಯ ಬಾಳೋ—ನೀರಸ; ದುಃಖಮಯ, ಏಕಾಂತದ ಮರಣ. ನೈಸರ್ಗಿಕವಾಗಿ ದೈಹಿಕ ಕಾಮನೆ ಬಲಿತಿರುವ ಮತ್ತು ಮೂರ್ತಪವದಲ್ಲಿಯೇ ಜೀವನದ ಸಫಲತೆಯನ್ನು ಕಾಣಬೇಕಾಗಿರುವ ಹುಡುಗಿಯರ ಪಾಲಿಗೆ ಅವಿವಾಹಿತ ಜೀವನವೇ ಮರಣ ಎಂದು ಲೇಖಕರು ಸಬಲ ಕಾರಣಗಳೊಡನೆ ವಿವರಿಸಿದ್ದಾರೆ. ಅವರ ಚರ್ಚೆಯಲ್ಲಿ ಸಾಮಾಜಿಕ ಪ್ರಜ್ಞೆ ಸೂಕ್ಷ್ಮವಾಗಿ ಮಿಡಿಯುತ್ತದೆ; ಅವರ ವಾದ ಬಲಪ ಸಮರ್ಥವಾಗಿದೆ; ಸಮಸ್ಯೆಯನ್ನು ವಿಶ್ಲೇಷಿಸಿರುವ ಅವರ ದೃಷ್ಟಿಕೋಣದಲ್ಲಿ ಸತ್ಯಾನ್ವೇಷಣೆಯ ಪ್ರಾಮಾಣಿಕ ಇಚ್ಛೆ ವ್ಯಕ್ತವಾಗುತ್ತದೆ. ಅವರು ಕೆಲವು ಪರಿಹಾರ ಮಾರ್ಗಗಳನ್ನು ಸೂಚಿಸಿದ್ದಾರೆ—ಮುಖ್ಯವಾಗಿ ಹೆಣ್ಣಿನ ತೆತ್ತವರು ಪ್ರಾಪ್ತ ವಯಸ್ಕಳಾದಾಗ ಅವಳಿಗೆ ಕೂಡಲೇ ಮದುವೆ ಮಾಡಿಬಿಡಬೇಕು—ಪಂಜಣಿ ಬರುವ ನೌಕರಿಯನ್ನೇ ಹಿಡಿದವನಾಗಬೇಕು, ಸಮಾಜದಲ್ಲಿ ಉಜ್ವಲ ಭವಿಷ್ಯವಿರುವವನೇ ಆಗಬೇಕು ಎಂದು ಗಂಡಿನಲ್ಲಿ ಅನಾವಶ್ಯಕವಾದ ಆದರ್ಶ ಗುಣಗಳ ಶೋಧನೆಗೆ ಹೋಗಬಾರದು. ಗಂಡಿನ ಕಡೆಯವರಾದರೂ ವರದಕ್ಷಿಣೆ, ಮದುವೆಯ ಸಮಯದ ಉಡುಗೊರೆ ಇತ್ಯಾದಿಗಳಿಗೆ ಹೆಚ್ಚು ಆಗ್ರಹ ತೋರಿಸಬಾರದು. ವಿದ್ಯಾಕ್ಷಿಂತ ಹೆಚ್ಚಾಗಿ ಹೆಣ್ಣು ತನ್ನ ಔದಾರ್ಯವನ್ನು ಹತ್ತಿಕ್ಕಿಕೊಳ್ಳಬೇಕು—ಭಗ್ನ ಪ್ರಣಯದ ದುರಂತವನ್ನು ತಡೆಯುವುದಕ್ಕಾಗಿ ಮಧ್ಯಾವಧಿಯಿಂದ ನಡೆಯಬೇಕು; ಗಂಡಿನ "ಅನುರಾಗ"ದ ಕುರಿತು ವಿಶೇಷ ಎಚ್ಚರಿಕೆ ವಹಿಸುವುದು ಅವಶ್ಯ. ಲೇಖಕರು ತಮ್ಮ ಮಾರ್ಮಿಕವಾದ ಶೈಲಿಯಲ್ಲಿ ಇವೆಲ್ಲ ವಿಷಯಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ; ಸಮಸ್ಯೆ ಜಟಿಲ ಮತ್ತು ಕಠಿಣವಾಗಿದ್ದರೂ ಅವರು ಹೇಳುವ ರೀತಿ ಬಹಳ ಮೋಹಕವಾಗಿದೆ; ಸರಳವಾಗಿದೆ. ಸಮಾಜ ಶಾಸ್ತ್ರಕ್ಕೆ ಸಂಬಂಧಿಸಿದ ಸಾಹಿತ್ಯಕ್ಕೆ ಇದು ಅತಿ ಅಮೂಲ್ಯವಾದ ಕಾಣಿಕೆ—ಎಲ್ಲಿ ತೆತ್ತವರೂ ತಮಗೆ ಪ್ರಶ್ನೆಯನ್ನು ಹಾಕಿಕೊಳ್ಳುವಂತೆ ಇದು ಮಾಡುತ್ತದೆ; ವಿಚಾರಕ್ಕೆ ಅವರನ್ನು ಹಚ್ಚುತ್ತದೆ. ಈ ಬಗೆಯ ಸಾಹಿತ್ಯ ಕೃತಿ ಕನ್ನಡದಲ್ಲಿ ವಿರಳ; ಲೇಖಕರು ಇನ್ನೂ ಅನೇಕ ಉತ್ತಮ ಅಧ್ಯಾಸ ಗ್ರಂಥಗಳನ್ನು ಒದಗಿಸಲಿ ಎಂದು ಹಾರೈಸುತ್ತೇವೆ.

ಮಹಾವೀರ ಗೀತಾಂಜಲಿ: —

ಸಂಪಾದಕರು: ಮಾರವಾಡಿ ವಧೂ ಮಾನ ಹೆಗ್ಗಡೆ. ಪ್ರಕಾಶಕರು: ಶ್ರೀ ವಿಶ್ವ ಜೈನ ಮಿಶನ್, ಕರ್ನಾಟಕ ಶಾಖೆ, ವೀರಸೇವಾ ಭಜನಾ ಮಂಡಲಿ, ಧರ್ಮಸ್ಥಳ. ಬೆಲೆ: ರೂ. ೧—೮—೦.

ಕನ್ನಡದ ಹಿರಿಯ ಸಾಹಿತಿಗಳಾದ ಶ್ರೀ ಹುಮಚ ಭೀಮಾಚಾರ್ಯರ ಮುನ್ನುಡಿಯೊಂದಿಗೆ ಹೊರಬಂದಿರುವ ಈ ಗ್ರಂಥದಲ್ಲಿ ಜೈನರ ನಿತ್ಯ ಪ್ರಾರ್ಥನೆ, ಭಜನೆ ಮುಂತಾದವುಗಳಿಗೆ ಉಪಯುಕ್ತವಾಗಬಹುದಾದ ಅನೇಕ ಕವನಗಳನ್ನೂ ಸ್ತೋತ್ರಗಳನ್ನೂ ಕಾಣುತ್ತೇವೆ. ಅವುಗಳನ್ನು ಜೈನ ಮಹಾನುಭಾವರೂ ಮಹಿಳೆಯರೂ ಬರೆದಿದ್ದಾರೆ—ಇಪ್ಪತ್ತರವರೆಗೆ ಮುದ್ರಣಗೊಳ್ಳದೆ ಈಗತಾನೆ ಈ ಎಂಟೆಮರೆಯ ಕವಿಗಳ ಕೃತಿಗಳು ಪ್ರಕಾಶಕ್ಕೆ ಬಂದಿರುತ್ತವೆ. ಇವುಗಳ ಹೊರತಾಗಿ ಸರ್ವ ಧರ್ಮಗಳಿಗೂ ಸಮನಾಗಿ ಅನ್ವಯಿಸುವ ನೀತಿ ಸಿದ್ಧಾಂತಗಳನ್ನು ಪ್ರತಿಪಾದಿಸುವ ಪ್ರಾಚೀನ ಹಾಗೂ ಅರ್ವಾಚೀನ ಗೀತೆಗಳಲ್ಲಿ ಕೆಲವನ್ನು ಕೊಟ್ಟಿರುತ್ತಾರೆ. ಅದರೆ ಸಂಪಾದನ ಕಾರ್ಯದಲ್ಲಿ ಒಂದು ವ್ಯವಸ್ಥೆ ಇದ್ದಂತೆ ಮಾತ್ರ ಕಾಣಿಸುವುದಿಲ್ಲ. "ಜಮ್ಹಾರಲಾಲರು ಆಡಿದರೆಂದರೆ—" ಎಂದು ಮುಂತಾದ ಕೆಲವು ಗೀತೆಗಳಿಗೆ ಈ ಸಂಗ್ರಹದಲ್ಲಿ ಸ್ಥಾನವಿತ್ತುವರ ಔಚಿತ್ಯ ಹೊಳೆಯದು. ಸಂಪಾದಕರಿಗೆ ಬೇಕೆನಿಸಿದವುಗಳಿಗಿಂತಲೂ ಪುಸ್ತಕದ ಉದ್ದೇಶ ದೊಡ್ಡದು; ಅದನ್ನು ತೆಗೆದುಕೊಳ್ಳುವವರ ಪ್ರಯೋಜನವೇ ಬೆಲೆಯಿಳ್ಳದು. ಇದನ್ನು ಮನಗಂಡು ಸಂಪಾದಕರು ಮುಂದಿನ ಮುದ್ರಣದಲ್ಲಿ ಹೆಚ್ಚು ದಕ್ಷತೆಯನ್ನು ವಹಿಸುವುದು ಅಪೇಕ್ಷಣೀಯ.

ಶ್ರೀ ಶಡಗೋಪರ ಸಿರಿಬಾಯಿನುಡಿ-

ಅನುವಾದಕರು: ಪಾ. ತಿ. ನರಸಿಂಹಾಚಾರ್. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ಎಂಟಾಣೆ.

ತಮಿಳು ಸಾಹಿತ್ಯದಲ್ಲಿ ನಮ್ಮಾಳ್ವಾರರ ಸ್ತವನಗೀತೆಗಳಿಗೆ ಮಹತ್ವದ ಸ್ಥಾನ ಸಲ್ಲುತ್ತದೆ. ಕನ್ನಡದಲ್ಲಿ ವೀರಶೈವರ ವಚನಗಳು ಧಾರ್ಮಿಕ ಜಾಗೃತಿಯನ್ನು ಮಾಡುವುದಕ್ಕೆ ಸಮರ್ಥವಾಗಿರುವಂತೆ ತಮಿಳಿನ ಈ ನುಡಿಮುತ್ತುಗಳು ಸ್ತವನ ಮನನಗಳಿಗೆ ಅತ್ಯಂತ ಉಪಯುಕ್ತವಾಗಿವೆ. ವಿಶಿಷ್ಟಾದ್ವೈತದ ಪ್ರತಿಪಾದಕರಿಗೆ ಈ ಗೀತೆಗಳು ಶಕ್ತಿಯನ್ನೂ ಸ್ಫೂರ್ತಿಯನ್ನೂ ನೀಡುತ್ತವೆ. ಅತಿ ಸುಂದರವಾದ ವಿಚಾರಗಳನ್ನು ಅದ್ಭುತ ಅಧ್ಯಾತ್ಮಿಕ ಆಕರ್ಷಣೆಯೊಡನೆ ಬೆರೆಸಿ, ಪಾಡಿ, ಪರಮಾನಂದ ಸಾಗರದಲ್ಲಿ ವಿಹರಿಸುವಂತೆ ಮಾಡಲು ಇವು ಸಮರ್ಥವಾಗಿವೆ. ಇಲ್ಲಿ ಕಾವ್ಯಾಮೃತವಲ್ಲದೆ ಸುಬೋಧೆಯ ನವನೀತವೂ ಇದೆ ಎಂದರೆ ಅತಿಶಯೋಕ್ತಿಯಾಗದು. ಶ್ರೀ ಪು. ತಿ. ನ. ಅವರ ಅನುವಾದವು ಪ್ರೌಢವಾಗಿದೆ; ಮೂಲದ ವಿಚಾರಗಳನ್ನು ಸಮಂಜಸವಾಗಿ ಸ್ಫುಟಪಡಿಸುತ್ತದೆ. ಅವರ ಪ್ರಗಲ್ಭ ಶೈಲಿ ವಿದ್ವಾಂಸರ ಮೆಚ್ಚುಗೆ ಗಳಿಸುತ್ತದೆ. ಅದರೆ ತಮಿಳಿನಲ್ಲಿ ಜನರ ಬಾಯಲ್ಲಿ ನೆಲೆನಿಂತಿರುವ ಈ ಸೂಕ್ತಿಗಳ ಅನುವಾದ ಸಾಮಾನ್ಯ ಕನ್ನಡಿಗರ ಮಟ್ಟಿಗೆ ಸುಕ್ತವಲ್ಲ ಕಳಚಿಯೇ ನಿಜ. ಈ ಕಾರಣದಿಂದಲೇ ಅದು ಹೆಚ್ಚು ಜನರ ಹೃನ್ಮಂದಿರಗಳನ್ನು ಮುಟ್ಟುವುದು ಸಂದೇಹ.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	8
4 ಕುಶಲವ	0	8
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	3	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು	1	4
9 ಹೆಂಡ್ತಿ ಗಂಡನಾದರೆ	0	4
10 ಪುರುಷ ವಧು	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	1	0
13 ದೇಶಭಕ್ತ	1	4
14 ಪ್ರೇಮ ವಿಜಯ	1	4
15 ರಂಗಭೂಮಿ	0	10
16 ಸೇವಾಪಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾರ	2	4
20 ಮೂರು ಪ್ರಹಸನಗಳು	1	4
21 ನಗೆ ನೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	12
25 ಆಕಾಶ ಗಂಗೆ	2	8
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜಮಿನ್ದಾರ	1	8
33 ಬಾಳಿನ ಬೆಡಗು	1	4
34 ರೋಸಾಮುತ್ರೆ	1	0
35 ಚಿಗುರು	0	10
36 ನನ್ನ ಕಥೆಗಳು	0	10
37 ನಕ್ಕರೂ ನಗದಮದು	0	10
38 ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.
ಕೆರಿಯರ ಪ್ರಸಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಮಾರಿಯ ದಾರ್ಕ್ಯರ್
ಅಮೃತಾಂಜನ ಲಿ ಬೊಂಬಾಯಿ ಮದ್ರಾಸ್ ಲಂಡನ್

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಯಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.
ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ).
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

ಆವಶ್ಯಕ ಮಾಹಿತಿಗಳಿಂದ ಕೂಡಿರುವ
ಮಕ್ಕಳ ಮಗ್ಗಿ ಪುಸ್ತಕ
ಬೆಲೆ 0—1—0
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty, at the Navayuga Press, Udipi S. India.

R 3418 PERMIT NO. 21 Licensed to Post without Prepayment

ನವಯುಗ

ಸಂಪುಟ ೩೪ ಉಡುಪಿ, 4—8—1955 ಸಂಚಿಕೆ ೪೭

VOL. 34 NO. 47

ಬೇಡುವವರ ಬಗೆ

ಇಂದಿನ ಭಾರತದಲ್ಲಿ ಭಿಕ್ಷಾವೃತ್ತಿಯ ಸಮಸ್ಯೆಯು ವೈಯಕ್ತಿಕ ದಾನಧರ್ಮಗಳ ಮಿತಿಯನ್ನು ಮೀರಿದೆ. ಭಿಕ್ಷುಕರ ಸಮಸ್ಯೆಯ ಮೂಲ ಅರ್ಥಿಕ, ಸಾಮಾಜಿಕ, ಮಾನಸಿಕ ಹಾಗು ಶಾರೀರಿಕ ಕ್ಷೇತ್ರಗಳಲ್ಲಿದೆ. ಇದರ ಪರಿಹಾರಕ್ಕಾಗಿ, ದೇಶದ ಎಲ್ಲ ರಾಜ್ಯಗಳಲ್ಲೂ ನಿಕರೂಪದ ಶಾಸನಕ್ರಮ ಬರಬೇಕು; ಸರ್ವಾಂಗ ಸಂಪೂರ್ಣವಿರುವ ನಿರೋಗಿಗಳಿಗೆ ಉಚಿತ ಶಿಕ್ಷಣವಿತ್ತು, ಕೆಲಸಕ್ಕೆ ಹಚ್ಚುವ ವ್ಯವಸ್ಥೆಯಾಗಬೇಕು; ಮಕ್ಕಳಿಗೂ ಯಾವುದೇ ಉದ್ಯೋಗಕ್ಕೆಯೋಗ್ಯರಲ್ಲದೆ ಅನರ್ಪರಿರುವವರಿಗೂ ಯೋಗ್ಯ ರಕ್ಷಣೆಯಾಗಬೇಕು.

—ಡಾ. ಜೀವರಾಜ ಮೆಹತ.

ನಾಲ್ಕೈದು ದಿನಗಳ ಹಿಂದೆ ದೈನಿಕ ಪತ್ರಿಕೆಗಳಲ್ಲಿ ಮದ್ರಾಸಿನಿಂದ ವರದಿಯಾದ ಕುತೂಹಲ ಜನಕ ಸುದ್ದಿಯೊಂದು ಪ್ರಕಟವಾಯಿತು— ಮದ್ರಾಸಿನ ಭಿಕ್ಷುಕ ಗೃಹದಲ್ಲಿರುವ ಒಬ್ಬನು ಆ ನಗರದ ಪ್ರಮುಖ ಪ್ರದೇಶದಲ್ಲಿರುವ ಮನೆಯೊಂದರ ಮಾಲಿಕನಾಗಿದ್ದಾನೆಂದೂ ಟಿಪ್ಪಾಲು ಕಟ್ಟೆಯ ಉಳಿತಾಯದ ಬೇಂಕಿನಲ್ಲಿ ಆತನ ಲೆಕ್ಕದಲ್ಲಿ ೪೦೦೦ ರೂಪಾಯಿಗಳು ಜಮೆ ಇವೆಯೆಂದೂ ಈ ವಾರ್ತೆ ಹೇಳುತ್ತದೆ. ಮೂವತ್ತಾರು ವರ್ಷ ವ್ಯಾಯದ ಈ ಮಹಾನುಭಾವನು ಸಾಮಾಜಿಕ ಕಾರ್ಯಗಳ ಶಾಲೆಯವರು ಕೇಳಿದ ಪ್ರಶ್ನೆಗಳನ್ನು ಉತ್ತರಿಸುತ್ತಾ ತಾನು ಜನನ ದಾರಭ್ಯ ಕುಂಟನಾಗಿದ್ದೇನೆಂದೂ ಭಿಕ್ಷುಕ ಗೃಹಕ್ಕೆ ಬರುವುದಕ್ಕೆ ಹಿಂದಿನ ಇಪ್ಪತ್ತಾರು ವರ್ಷಗಳಲ್ಲಿ ಬೇಡುವುದರ ಜೊತೆಗೆ ನೆರೆಯ ಹಳ್ಳಿಗಳಲ್ಲಿ ತಾಯಿತಗಳನ್ನು ಕಟ್ಟಿ ಮಾರಿ ಒಟ್ಟಿಗೆ ದಿನಕ್ಕೆ ಎರಡರಿಂದ ಹದಿನೈದು ರೂಪಾಯಿಗಳನ್ನು ಸಂಪಾದಿಸುತ್ತಿದ್ದುದಾಗಿಯೂ ತಿಳಿಸಿದನು.

ಇದನ್ನು ಓದಿದ ಬಳಿಕ ಲೋಕದಲ್ಲಿ ಸುಖಿಗಳು ಯಾರು? ಎಂಬ ಪ್ರಶ್ನೆಗೆ ಬೇರೆ ಉತ್ತರವೇ ಅಗತ್ಯವಿನಿಸದು. ಭಿಕ್ಷುಕ ವೃತ್ತಿಯನ್ನು ಅವಲಂಬಿಸಿರುವವರೇ ಭಾಗ್ಯವಂತರು ಎಂಬ ಉದ್ಗಾರ ನಮ್ಮಲ್ಲಿಂದ ಬರುವುದು ಖಂಡಿತ. ಬಡತನದಿಂದ ದಿನಗಳೆಯಲು ಕಷ್ಟವಾದ ಹೆಂಗಸು ಕಣ್ಣುಗಳನ್ನು ಕಳೆದುಕೊಂಡ ಪಕ್ಷದಲ್ಲಿ ಕುರುಡುತನ ಅವಳಿಗೆ ಸುಲಭದಲ್ಲಿ ಜೀವನ ಮಾರ್ಗವನ್ನು ಕಲ್ಪಿಸಿ ಕೊಡುತ್ತದೆ— ಜನರ ತಿರುಗಾಟ ಹೆಚ್ಚಿರುವ ರಸ್ತೆಯ ಪಕ್ಕದಲ್ಲಿ ಅವಳು ಸುಮ್ಮನೆ ಕುಳಿತಿದ್ದರೂ ಸಾಕು, ದಿನಕ್ಕೆ ಒಂದು ರೂಪಾಯಿಯ ಸಂಪಾದನೆಯಾಗುತ್ತದೆ. ಅವಳನ್ನು ಅಲ್ಲಿ ತಂದು ಬಿಡುವುದಕ್ಕೂ ಅವಳಿಗೆದಿನಕ್ಕೊಂದು ಊಟ ಕೊಡಲಿಕ್ಕೂ ಒಬ್ಬ ಮಹಾನುಭಾವ ಮುಂದಾಗುತ್ತಾನೆ— ಅವನ ನೆರವು ಪಡೆಯುವವರು ಬೇರೆ ಹತ್ತಿಪ್ಪತ್ತು ಜನರಿರುತ್ತಾರೆ! ಇವರೆಲ್ಲರ ಗಳಿಕೆಯ ಅರೆವಾಸಿ ಅವನ ಕೆಸೆಗೆ ಹೋಗುತ್ತದೆ. ಹೀಗೆ ಭಿಕ್ಷುಕ ವೃತ್ತಿಗೆ ಬಿದ್ದವರ ಸಂಪಾದನೆಯಿಂದ ಮೆರೆಯುವ ಜನರೇನು ವಿರಳರಲ್ಲ.

ಗಟ್ಟಿಮುಟ್ಟಾಗಿರುವ ಹೆಂಗಸೊಬ್ಬಳು ತನ್ನ ಕಂಕಳಲ್ಲಿ ಮಗುವೊಂದನ್ನು ತುರುಕಿಸಿ, ಅಸಹ್ಯಕರವಾಗಿ ರೋದಿಸುತ್ತಾ ದಾರಿಗರ ಮನಸ್ಸು ಕರಗುವಂತೆ ಮಾಡುತ್ತಾಳೆ. ರೋಗಿಷ್ಠರಾದವರು ರೋಗ ಪರಿಹಾರಕ್ಕೆ ಪ್ರಯತ್ನಿಸದೆ, ಅವುಗಳನ್ನೆ ಬೆಳೆಯಗೊಟ್ಟು, ರೋಗದ ಬಂಡವಾಳದ ಮೇಲೆ "ಒಂದು ಪಾವಾಣೆ ಧರ್ಮ ಹಾಕಿರಿ" ಎನ್ನುತ್ತಾ ದಿನಗಳೆಯುತ್ತಾರೆ. ಇವರೊಂದಿಗೆ ಎಲ್ಲ ರೀತಿಯಿಂದಲೂ ಆರೋಗ್ಯವಂತರಾದ, ದೃಢಕಾಯರಾದ ಪುರುಷರೂ ತಿರುಗುತ್ತಿರುತ್ತಾರೆ. ಸಾಧುಗಳಾಗಿ, ಬೈರಾಗಿಗಳಾಗಿ, ಕಣಿ ಹೇಳುವವರಾಗಿ— ಇನ್ನೂ ನೂರಾರು ತಂತ್ರಗಳನ್ನು ಉಪಯೋಗಿಸಿ ಸದಾಕಾಲ ಅಂಡಲೆದು ಇವರು ಜನರಿಂದ ಹಣವನ್ನು ಸುಲಿಯುತ್ತಾರೆ. ಭಿಕ್ಷುಕರ ಈ ತಂಡದಲ್ಲಿ ಸಮಾಜದ ಎಲ್ಲ ವರ್ಗದ ಜನರನ್ನೂ ಸಮಾನುಭೂತಿ ಪರರಾಗಿ ಮಾಡುವ ವೈಧ್ಯವನ್ನು ಕಾಣುತ್ತೇವೆ. ಅವರಲ್ಲಿ ಅತಿ ಹೆಚ್ಚಿನ ಕರುಣೆಗೆ ಪಾತ್ರರಾಗುವವರೆಂದರೆ, ಅನಾಥರಾಗಿ ತೋರುವ ಮಕ್ಕಳು!

ಕುಂಟರು, ಕುರುಡರು, ಅಂಗಹೀನರು, ರೋಗಿಷ್ಠರು, ನಿರುದ್ಯೋಗಿಗಳು ಎಲ್ಲರೂ ಸೇರಿರುವ ಭಿಕ್ಷುಕ ವರ್ಗದಲ್ಲಿ ಮಕ್ಕಳ ಪ್ರಮಾಣ ನೂರಕ್ಕೆ ಮೂವತ್ತರಷ್ಟಿದೆ ಎಂದು ಅಂದಾಜು. ಇವರಲ್ಲಿ ಹೆಚ್ಚಿನವರು ಮನೆಯಲ್ಲಿ ಜಗಳಾಡಿ, ಓಡಿ ಬಂದವರು; ಪೇಟೆಯಲ್ಲಿ ಹೊಟ್ಟೆಗೆ ಗತಿಯಿಲ್ಲದೆ ಭಿಕ್ಷೆಗೆ ಇಳಿದವರು. ಉಳಿದವರಲ್ಲಿ ಅನಾಥ ಮಕ್ಕಳಿಗಿಂತಲೂ ಹೆತ್ತವರ ಪ್ರೋತ್ಸಾಹದಿಂದಲೇ ಭಿಕ್ಷುಕ ವೃತ್ತಿಯನ್ನು ಕೈಗೊಂಡು ನಾಲ್ಕು ಕಾಸು ಸಂಪಾದಿಸುವವರು ಅಧಿಕ. ಇಂಥ ಮಕ್ಕಳನ್ನೆಲ್ಲ ಬೀದಿಯಲ್ಲಿ ಬಿಕ್ಕೆಗಾಗಿ ಅಂಡಲೆಯಲು ಬಿಡದಿದ್ದರೆ, ಹೆತ್ತವರನ್ನು ತರಿಸಿ ಬುದ್ಧಿ ಹೇಳದೆ, ಭಿಕ್ಷುಕ ಸಮಸ್ಯೆ ತುಸು ಪುಟ್ಟಿಗೆ ಪರಿಹಾರವಾದೀತು. ಆದರೆ, ನಿಜಕ್ಕೂ ಅನಾಥರಾದ ಮಕ್ಕಳೂ ಇವರಲ್ಲಿದ್ದಾರೆ— ಇಂಥವರನ್ನು ಉಚಿತ ವಸತಿ ಗೃಹಗಳಲ್ಲಿ ನೆಲೆಗೊಳಿಸಿ, ಶಿಕ್ಷಣವನ್ನಿತ್ತು, ಕೈಗಾರಿಕೆಗಳಲ್ಲಿ ಪರಿಣತರಾಗಿ ಮಾಡುವುದು ಅಪೇಕ್ಷಣೀಯ. ಹಾಗೆ ಜಾಗ್ರತೆ ವಹಿಸದಿದ್ದರೆ ಸಂಸರ್ಗ ದೋಷದಿಂದಲೂ ಇತರ ಪ್ರಾಯ ಪ್ರಬುದ್ಧ ಭಿಕ್ಷುಕರ ಉತ್ತೇಜನೆಯಿಂದಲೂ ಈ ಮಕ್ಕಳು ಕದಿಯುವುದೇ ಮುಂತಾದ ಸಮಾಜಘಾತಕ ಕೆಲಸಗಳಿಗೆ ಕೈಯಿಕ್ಕಿ, ದೊಡ್ಡವರಾಗುವ ಹೊತ್ತಿಗೆ ಕೇಡಿಗಳಾಗಿ ಪರಿಣಮಿಸುವುದು ನಿಶ್ಚಯ.

ಸಾಮಾಜಿಕ ಕಾರ್ಯಕರ್ತರು ಸಂಗ್ರಹಿಸಿದ ಮಾಹಿತಿಗಳಿಗನುಸಾರವಾಗಿ ಗಂಡಂದಿರು ತಮ್ಮನ್ನು ತ್ಯಜಿಸಿದುದರಿಂದ ಹೆಂಗಸರೂ ಕೆಲಸವಿಲ್ಲದೆ ದಿನಗಳೆಯುವುದು ಕಷ್ಟಕರವಾಗಿ ಪರಿಣಮಿಸಿದುದರಿಂದ ಗಂಡಸರೂ ಭಿಕ್ಷುಕ ವೃತ್ತಿಯನ್ನು ಆಶ್ರಯಿಸುವವರೆಂದು ತಿಳಿದುಬರುತ್ತದೆ. ಸೇಲಮಿನಲ್ಲಿ ಗಣಿಗಳಲ್ಲಿ ಜರಗಿದ ಸಮ್ಮೇಳನವೊಂದರಲ್ಲಿ ದಾರಿದ್ರ್ಯಮತ್ತು ದೀರ್ಘಾವಧಿಯ ನಿರುದ್ಯೋಗಗಳೇ ಭಿಕ್ಷಾವೃತ್ತಿಯ ಕಾರಣಗಳಾಗಿರುತ್ತವೆ; ಕೆಲಸವನ್ನು ಹುಡುಕಿಕೊಂಡು ಹೋಗುವುದು ಕೆಲಸ ಮಾಡುವುದಕ್ಕಿಂತಲೂ ಹೆಚ್ಚು ತ್ರಾಸದಾಯಕವಿರುತ್ತದೆ ಎಂಬುದಾಗಿ ಅಮೇರಿಕದ ಕಾರ್ಮಿಕಖಾತೆಯುಕರಪತ್ರವೊಂದರ ಮೂಲಕ ಹೇಳಿದ್ದಿತು. ಈ ತ್ರಾಸದಿಂದ ಉಂಟಾದ ದಣಿವು, ನಿರಾಶೆಗಳು ಅನಿವಾರ್ಯವಾಗಿ ಜನರನ್ನು ಬೇಡಲಿಕ್ಕೆ ಹಚ್ಚುತ್ತವೆ— ಒಮ್ಮೆ ಬೇಡುವ ರುಚಿ ಹಿಡಿದರೆ, ಮತ್ತೆ ಗೌರವದ ಜೀವನ ನಡೆಸಲು ಅವರು ಬಯಸುವುದಿಲ್ಲ. ಭಿಕ್ಷಾವೃತ್ತಿಯಲ್ಲಿ ಸಿಕ್ಕಿದಷ್ಟು ಬೇರೆಕಡೆ ಹೆಚ್ಚು ಸಂಪಾದನೆಯಾಗುವುದಿಲ್ಲ, ಇಲ್ಲಿರುವಷ್ಟು ಸ್ವಾತಂತ್ರ್ಯ ಸಿಗುವುದಿಲ್ಲ, ತಿರುಗಾಡಿ ದಿನಗಳೆಯಲು ಬರುವುದಿಲ್ಲ ಎಂಬ ಅನೇಕ ನೆಪಗಳಿಂದ ಅವರು ಭಿಕ್ಷುಕ ವೃತ್ತಿಯನ್ನು ತ್ಯಜಿಸುವುದು ಮಾರ್ಪಾತನವೆಂದು ಸ್ಪಷ್ಟಪಿಸಿ, ಅದಕ್ಕೆಯೇ ಅಂಟಿಕೊಳ್ಳುತ್ತಾರೆ.

ಮಾದರಿ ಸಂಖ್ಯೆಗಳು ಹೇಳುವಂತೆ, ರೋಗಿಗಳು, ಅಂಗವಿಕಲರು ಮತ್ತು ಹೆಚ್ಚರನ್ನು ಬಿಟ್ಟರೆ, ದೃಢಕಾಯರಾದ ವಯಸ್ಕ ಭಿಕ್ಷುಕರ ಪ್ರಮಾಣ ನೂರಕ್ಕೆ ಐವತ್ತೈದರಷ್ಟು ಇರಬಹುದು. ಇವರಲ್ಲಿ ಹಳ್ಳಿಯಿಂದ ಬಂದವರನ್ನು ಆಯಾ ಹಳ್ಳಿಗಳಿಗೆ ತಿರುಗಿ ಕಳುಹಿಸಿ, ಅಲ್ಲಿ ಕೆಲಸಕ್ಕೆ ಹಚ್ಚುವುದು ಹಿತಕರ. ಏನೇನೂ ಗತಿ ಇಲ್ಲದ ವಯಸ್ಕರನ್ನು, ಮಕ್ಕಳಂತೆ, ವ್ಯವಸ್ಥಿತ ಕೇಂದ್ರಗಳಲ್ಲಿ ಸೇರಿಸಿ, ಅಲ್ಲಿ ಅವರಿಂದ ಕೃಷಿ ಮತ್ತು ಕೈಗಾರಿಕೆಗಳನ್ನು ಮಾಡಿಸಿ, ಅದರ ಉತ್ಪತ್ತಿಯಿಂದಲೂ ಸಾರ್ವಜನಿಕರ ಮಂತಿಗೆಯಿಂದಲೂ ಹೊಟ್ಟೆಬಟ್ಟೆಗೆತಪ್ಪಾರವಾಗದಂತೆ ನೋಡುವುದು ಶ್ರೇಯಸ್ಕರ. ಇದಕ್ಕೆ ಭಿಕ್ಷುಕ ವೃತ್ತಿಯಲ್ಲಿರುವವರು ಸುಲಭದಲ್ಲಿ ಒಪ್ಪಲಿಕ್ಕಿಲ್ಲ— ಬಲವಾದ ಸಾಮಾಜಿಕ ಒತ್ತಾಯ, ಶಾಸ

(ಸಂಪುಟ ನೋಡಿರಿ)

ಇಬ್ಬರು ಗೆಳೆಯರು ಲೋಕದಲ್ಲಿ ಸುಖಿಯಾರು ಎಂದು ಚರ್ಚಿಸುತ್ತಿದ್ದರು. ಬಡವರ ಮತ್ತು ಧನಿಕರ ಪರಿಸ್ಥಿತಿಯನ್ನು ಒಬ್ಬ ಪ್ರಸ್ತಾಪಿಸಿ ತನ್ನ ಪಾಡವನ್ನು ಮಂಡಿಸಿದ ಇನ್ನೊಬ್ಬ ಅದನ್ನು ಒಪ್ಪದೆ, ಹೀಗೆ ಹೇಳಿದ—

"ನನ್ನನ್ನು ಕೇಳುತ್ತಿಯಾದರೆ ಬಡವರೂ ಧನಿಕರೂ ಸಮಾನ ದುಃಖಿಗಳು; ಬಡವರಿಗೆ ತಾವು ಬಡವರಲ್ಲ ಎಂದು ತೋರಿಸುವ ಹುಮ್ಮಸ್ಸು; ಅದಕ್ಕಾಗಿ ಸಾಲಮಾಡಿಯಾದರೂ ಕರ್ಚು. ಧನಿಕರಿಗೆ ತಾವು ಧನಿಕರಲ್ಲ ಎಂದು ತೋರಿಸಿ ಹಣವುಳಿಸುವ ಚಪಲ; ಹೀಗಾಗಿ ಧಾರಾಳ ಕರ್ಚುಮಾಡಿ ಸಂತೋಷದಿಂದಿರಬಹುದಿದ್ದರೂ ಬೋಭ. ಭಿಕ್ಷುಕರನ್ನೇ ನಿಶ್ಚಿಂತೆಯ ಸುಖವನ್ನು ಬಲ್ಲರು."

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.,
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅನಿಕೃತ ಭಂಡವಾಳ	ರೂ. 50,00,000	ಕ್ಷೇಮನಿಧಿ	ರೂ. 13,50,000
ಕಿತ್ತ ಭಂಡವಾಳ	ರೂ. 32,11,000	ಕೇವಲಾತಿಗಳು	ರೂ. 6,10,00,000
ಕಿತ್ತು ಬಂದ ಭಂಡವಾಳ	ರೂ. 25,55,737	ಜಲಾವಣೆ ಭಂಡವಾಳ	ರೂ. 7,32,00,000

[ತಾ. 30—6—1955ರಲ್ಲು]

ನಮ್ಮ ರಾಯಚೂರ (ಹೈದರಾಬಾದ ಸಂಸ್ಥಾನ) ಶಾಖೆಯು
ತಾ. 29-7-1955ರಂದು ತೆರೆಯಲ್ಪಟ್ಟಿದೆ.
ಮುಂಬಯಿ, ಮದ್ರಾಸು, ಆಂಧ್ರ, ನ್ಯೂಯೂರ್ಕ, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ 92 ಶಾಖೆಗಳಿದ್ದು
ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ.
ಟಿ. ಎ. ಪೈ, ಬಿ.ಕೋಂ.(ಹೊಂ.), ಎ.ಎ.ಐ.ಬಿ, ಎಂ.ಎಲ್.ಎ., ಜನರಲ್ ಮೆನೇಜರ್.
ಟಿ. ಎಂ. ಎ. ಪೈ, ಎಂ.ಬಿ., ಬಿ.ಎಸ್., ಮೆನೇಜಿಂಗ್ ಡೈರೆಕ್ಟರ್.
THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ಗೋವೆಯ ಆಂದೋಲನದ ಬೆಳವಣಿಗೆಯ ಸಿಂಹಾವಲೋಕನ

ಶಾಂತ ವಿಧಾನದಿಂದ ವಸಾಹತಿನ ವಿಲೀನವಾಗುವುದೇ ಭಾರತದ ಘನತೆಗೆ ಹೇಳಿಸಿದ ವಿಷಯ

ತನ್ನ ರಕ್ಷ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳ ಪ್ರವಾಸವನ್ನು ಮುಗಿಸಿ ಬಂದ ಬಳಿಕ, ನೆನ್ನು ಪ್ರಧಾನ ಮಂತ್ರಿ ಶ್ರೀ. ಜವಾಹರಲಾಲ ನೆಹರುಗಳು ಕಳೆದ ಹನ್ನೆರೆಡು ದಿನಗಳ ಅವಧಿಯಲ್ಲಿ ಮೂರು ಮುಖ್ಯ ಘೋಷಣೆಗಳನ್ನು ಗೋವೆಯ ಆಂದೋಲನದ ಬೆಳವಣಿಗೆಯ ಸಂಬಂಧದಲ್ಲಿ ಮಾಡಿದ್ದಾರೆ. ನಿರೀಕ್ಷಕರ ಅಭಿಪ್ರಾಯದಂತೆ ಈ ಹೇಳಿಕೆಗಳಿಗೆ ರಾಷ್ಟ್ರೀಯ ಮಹತ್ವವಷ್ಟೇಯಲ್ಲ, ಅಂತಾರಾಷ್ಟ್ರೀಯ ದೃಷ್ಟಿ ಕೋಣದಿಂದಲೂ ಪ್ರಾಮುಖ್ಯತೆ ಸಲ್ಲುತ್ತದೆ. ಭಾರತದ ಲೋಕ ಸಭೆಯ ನೆಹರುಗಳ ಘೋಷಣೆಗೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿರುವುದರಿಂದ ಮತ್ತು ಈ ಪ್ರಕಾರ ಭಾರತೀಯ ಜನತೆ ನೆಹರುಗಳ ನಿಲುಮೆಯನ್ನು ಒಪ್ಪಿಕೊಂಡಿರುವುದರಿಂದ, ಗೋವೆಯ ಕುರಿತಾದ ಈ ಗಿನ ನಮ್ಮ ಮನೋಭಾವನೆಗಳು, ಅದರ ಹಿನ್ನೆಲೆಯನ್ನು, ಪ್ರತಿ ಪಕ್ಷಗಳ ಅಭಿಪ್ರಾಯವೇನು, ಲೋಕದ ಪ್ರತಿಕ್ರಿಯೆಯೇನು ಎಂದು ಮಂತಾಗಿ ತಿಳಿದುಕೊಳ್ಳುವುದು ಅವೇಕ್ಷಣೀಯ.

ನೆಹರುಗಳು ಹೇಳಿರುವಂತೆ ಗೋಮಾಂತಕರ ವಿಮೋಚನೆಯ ಹೋರಾಟ ಕಳೆದ ಹಲವು ದಶಕಗಳಿಂದ ನಡೆದು ಬಂದಿದ್ದರೂ ಅದು ೧೯೪೬ನೇ ಇಸವಿಯ ಬಳಿಕ ಹೊಸ ಉತ್ಸಾಹದಿಂದ ಮುಂದರಿಯಿತು; ಕಳೆದ ಒಂದು ವರ್ಷದಲ್ಲಿ ಅದು ತೀವ್ರವಾದ ಬೆಳವಣಿಗೆಯನ್ನು ಹೊಂದಿತು. ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸಿನ ಸೂತ್ರಧಾರರಾಗಿದ್ದ ೧೯೪೬ನೇ ಆಗೋಸ್ತು ತಿಂಗಳಲ್ಲಿ ವಾರ್ಧಾದಲ್ಲಿ ಸೇರಿದ ಕಾಂಗ್ರೆಸು ಕಾರ್ಯಕಾರಿ ಸಮಿತಿ ಈ ಕೆಳಗಿನ ಆಶಯದ ಗೊತ್ತುವಳಿಯೊಂದನ್ನು ಗೋವೆಗೆ ಸಂಬಂಧಿಸಿ ಸ್ವೀಕರಿಸಿತು—"ಗೋವೆಯೊಳಗಿನ ಇತ್ತೀಚೆಯ ಘಟನೆಗಳು ಈ ವಸಾಹತುಗಳ ತೀರ ಹಿಂದುಳಿದ ಪರಿಸ್ಥಿತಿಯನ್ನು ಹೊರಗೆಡವಿರುತ್ತವೆ. ಆರ್ಥಿಕವಾಗಿ ಈ ಪ್ರದೇಶಗಳು ದಾರಿದ್ರ್ಯಕ್ಕೆ ದೂಡಲ್ಪಟ್ಟಿವೆ; ರಾಜಕೀಯವಾಗಿ ಸಾಮಾನ್ಯವಾದ ನಾಗರಿಕ ಅಧಿಕಾರಗಳಿಂದಲೂ ಜನರು ವಂಚಿತರಾಗಿದ್ದಾರೆ. ಸರ್ವಾಧಿಕಾರವನ್ನು ಅಪ್ಪಿಕೊಂಡಿರುವ ಆಡಳಿತವು ಈ ಸಣ್ಣ ವಸಾಹತಿನಲ್ಲಿ ದಬ್ಬಾಳಿಕೆಯನ್ನು ನಡೆಸಿರುತ್ತದೆ. ಒಂದು ಕಾಲದಲ್ಲಿ ಶ್ರೀಮಂತವಾಗಿದ್ದ ಈ ಪ್ರದೇಶ ಈಗ ಬಡವಾಗಿದೆ; ಅಲ್ಲಿಯ ಜನರು ತಮ್ಮ ಜೀವನ ಯಾಪನೆಗಾಗಿ ಹೊರಗೆ ಹೋಗುವಂತಾಗಿದೆ. ಗೋವೆಯು ಯಾವಾಗಲೂ ಭಾರತದ ಅಂಗವಾಗಿತ್ತು; ಈಗಲೂ ಆಗಿದೆ. ಭಾರತೀಯರ ಸ್ವಾತಂತ್ರ್ಯದಲ್ಲಿ ಅದೂ ಪಾಲುಗೊಳ್ಳಬೇಕು. ಸ್ವತಂತ್ರ ಭಾರತದಲ್ಲಿ ಅದರ ಸ್ಥಾನವೇನು ಎಂಬುದು ಗೋವೆಯ ಜನರೊಡನೆ ವಿಚಾರಿಸಿಯೇ ನಿರ್ಧರಿಸಬೇಕಾದ ವಿಷಯ; ಹೊರತು, ಹೊರಗಿನ ಅಧಿಕಾರ ವರ್ಗವನ್ನು ಕೇಳುವ ಪ್ರಶ್ನೆಯಲ್ಲ."

ಎರಡು ವರ್ಷಗಳ ಬಳಿಕ, ೧೯೪೮ರಲ್ಲಿ ಕಾಂಗ್ರೆಸಿನ ಜಯಪುರ ಅಧಿವೇಶನ ಜರುಗಿದಾಗ, ಸ್ವತಂತ್ರ ಭಾರತದಲ್ಲಿ ಸರಕಾರವನ್ನು ನಡೆಸುತ್ತಿದ್ದ ಕಾಂಗ್ರೆಸು ಭಾರತದೊಳಗಿನ ಸರದೇಶಗಳ ವಸಾಹತಿನ ಸಂಬಂಧದಲ್ಲಿ ಹೀಗೆ ಹೇಳಿತು — "ಭಾರತದ ಕಳೆದ ಎರಡು ಶತಮಾನಗಳ ಇತಿಹಾಸವು ಈ ದೇಶದಲ್ಲಿ ಕೆಲವು ಪರಕೀಯರ ವಸಾಹತುಗಳಿಗೆ ಎಡೆ ಕೊಟ್ಟಿದೆ. ಸ್ವತಃ ಭಾರತವೇ ಪರಕೀಯರ ಪ್ರಭುತ್ವದಲ್ಲಿದ್ದುದರಿಂದ ಈ ವಸಾಹತುಗಳೂ ಪರಕೀಯರ ಕೈಯಲ್ಲಿರುವಂತಾಯಿತು. ಈಗ ಸ್ವತಂತ್ರಭಾರತದ ಸ್ಥಾಪನೆಯೊಗಿರುವುದರಿಂದ ಇನ್ನು ಮುಂದೆ ಭಾರತದ ಯಾವ ಭಾಗವೇ ಆಗಲಿ, ಪರಕೀಯರ ಕೈಯಲ್ಲಿರುವುದು ಹಾನ್ಯಾಸ್ಪದ; ಮಾತ್ರವಲ್ಲ, ಭಾರತದ ಒಗ್ಗಟ್ಟು ಮತ್ತು ಸ್ವಾತಂತ್ರ್ಯದ ಕಲ್ಪನೆಗೂ ಅದು ಕುಠಾರ ಪ್ರಾಯ. ಆದುದರಿಂದ ಈ ವಸಾಹತು ಪ್ರದೇಶಗಳನ್ನು ರಾಜಕೀಯವಾಗಿ ಭಾರತದೊಡನೆ ವಿಲೀನಗೊಳಿಸುವುದು ಅಗತ್ಯವಾಗಿದೆ; ಇದರ ಹೊರತು ಬೇರಾವುದೇ ಪರಿಹಾರವು ಶಾಶ್ವತವಾಗಲಾರದು; ಜನರ ಅಭಿಲಾಷೆಗೂ ಅನುಗುಣವೆನಿಸಲಾರದು. ಈ ಬದಲಾವಣೆಯು ಸಂಬಂಧಿಸಿದ ರಾಷ್ಟ್ರಗಳಲ್ಲಿ ಶಾಂತಿಯ ಮಾರ್ಗದಿಂದ ಮತ್ತು ಸ್ನೇಹಪೂರ್ಣ ಸಹಕಾರದಿಂದ ನೆರವೇರುವುದೆಂದು ಕಾಂಗ್ರೆಸು ನಂಬುತ್ತದೆ. ದೀರ್ಘಾವಧಿಯ ಪರಕೀಯ ಆಡಳಿತದ ಫಲವಾಗಿ ಈ ವಸಾಹತುಗಳಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ ಹಾಗು ಶಾಸನಿಕವಾಗಿ ಕೆಲವು ಪದ್ಧತಿಗಳು ಬೆಳೆದು ಬಂದಿವೆಯೆಂದೂ ಇವು ಭಾರತದ ಉಳಿದ ಭಾಗದವುಗಳಿಗಿಂತ ಭಿನ್ನವಾಗಿವೆಯೆಂದೂ ಕಾಂಗ್ರೆಸು ತಿಳಿದಿದೆ. ಆದುದರಿಂದ ಯಾವುದೇ ಬದಲಾವಣೆಯು ನಿಧಾನವಾಗಿ ಹೊಂದಿಕೊಳ್ಳುವುದಕ್ಕೆ ನೆರವಾಗಬೇಕಲ್ಲದೆ, ಈಗಿನ ವಸಾಹತುಗಳಲ್ಲಿರುವ ಜನರ ನಿತ್ಯ ಜೀವನದಲ್ಲಿ ಗೊಂದಲವೆಬ್ಬಿಸುವಂತಿರಬಾರದು. ವಸಾಹತುಗಳ ಜನರು ಇಚ್ಛಿಸಿದ ಪಕ್ಷದಲ್ಲಿ ಅಲ್ಲಿಯ ಸಾಂಸ್ಕೃತಿಕ ಪರಂಪರೆಯನ್ನು ಕಾಯ್ದುಕೊಂಡು ಹೋಗಬೇಕು. ಅಲ್ಲಿಯ ಉಪಯುಕ್ತ ಸಂಸ್ಥೆಗಳನ್ನು ಅಬಾಧಿತವಾಗಿ ನಡೆಸಿಕೊಂಡು ಹೋಗಲು ಬಿಡುವ ಸ್ವಾತಂತ್ರ್ಯವನ್ನು ನೀಡಬೇಕು. ಇದೇ ಕಾಂಗ್ರೆಸಿನ ಆಶಯ."

ಕಲ್ಕತ್ತದಲ್ಲಿ ಮಾರ್ಚ್, ೧೯೫೨ರಲ್ಲಿ ಕಾಂಗ್ರೆಸಿನ ಕಾರ್ಯಕಾರಿ ಸಮಿತಿ ಇನ್ನೊಂದು ಠರಾವಿನ ಮೂಲಕ ಭಾರತದಲ್ಲಿರುವ ಪರಕೀಯರ ವಸಾಹತುಗಳ ಆಡಳಿತದ ವರ್ಗಾವಣೆಯಲ್ಲಿ ವಿಲಂಬವಾಗುತ್ತಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿತು. ಅಲ್ಲದೆ ಈ ವರ್ಗಾವಣೆಯು ಭಾರತದಲ್ಲಿ ಯಾವುದೇ ಪರಕೀಯ ಪ್ರಭುತ್ವದ ತುಣುಕನ್ನು ದೂರಗೊಳಿಸಬೇಕೆಂಬ ಆಶೆಯು ಸಫಲವಾಗುವುದಕ್ಕೆ ಅವಶ್ಯವೆಂದೂ ಭಾರತದ ಒಗ್ಗಟ್ಟಿಗೂ ಭದ್ರತೆಗೂ ಅನಿವಾರ್ಯವೆಂದೂ ಹೇಳಿತು. ೧೯೫೪ನೇ ಜುಲಾಯಿಯಲ್ಲಿ ಜರುಗಿದ ಅಜ್ಮೀರದ ಸಭೆಯಲ್ಲಿ ಪೋರ್ಚುಗಾಲವು ಗೋವೆಯ ಕುರಿತು ಅಸಮರ್ಥನೀಯವಾದ ನಿಲುಮೆ ತಳೆದಿರುವುದಕ್ಕೂ ಭಾರತದೊಡನೆ ವಿಲೀನ ಹೊಂದಬೇಕೆನ್ನುವವರನ್ನು ದಬ್ಬಾಳಿಕೆಗೆ ಗುರಿಪಡಿಸುತ್ತಿರುವುದಕ್ಕೂ ವಿಷಾದಿಸಿತು. ಭಾರತದ ಸ್ವಾತಂತ್ರ್ಯ ಚಳವಳಿದ ಅವಿಭಾಜ್ಯ ಅಂಗವೇ ಈ ವಸಾಹತುಗಳ ವಿಲೀನೀಕರಣದ ಆಂದೋಲನವಾಗಿದೆ ಎಂದು ಸಾರಿತು. ವಸಾಹತುಗಳು ಭಾರತದೊಡನೆ ನೇರ್ಪಡೆ ಹೊಂದದೆ, ಭಾರತದ ಸ್ವಾತಂತ್ರ್ಯ ಚಳವಳಿ ಕೊನೆಗೊಂಡಂತಾಗದು ಎಂದು ಘೋಷಿಸಿತು. ಮುಂದುವರಿದು ಪರಕೀಯರ ವಶದ ಪ್ರದೇಶಗಳ ಧರ್ಮ, ಸಂಸ್ಕೃತಿ, ಸಂಪ್ರದಾಯ ಮತ್ತು ಭಾಷೆಗಳಿಗೆ ಸಾಕಷ್ಟು ರಕ್ಷಣೆಯನ್ನು ಭಾರತದಲ್ಲಿ ಕೊಡಲಾಗುವುದೆಂದು ಆಶ್ವಾಸನೆ ನೀಡಿತು.

ಫ್ರೆಂಚರ ಕೈಯಲ್ಲಿದ್ದ ಭಾರತೀಯ ಪ್ರದೇಶಗಳ ಆಡಳಿತವನ್ನು ಭಾರತ ಸರಕಾರಕ್ಕೆ ವರ್ಗಾಯಿಸಲಾದ ಬಳಿಕ ಇದೇ ೧೯೫೫ನೇ ಜನವರಿಯಲ್ಲಿ ಸೇರಿದ ಆವಡಿಯ ಕಾಂಗ್ರೆಸು ಅಧಿವೇಶನವು ಫ್ರೆಂಚರ ನಿಲುಮೆಯನ್ನು ಶ್ಲಾಘಿಸಿತಲ್ಲದೆ ಪೋಂಡಿಚೇರಿ ರಾಜ್ಯದ ಫ್ರೆಂಚರಿಂದ ಪ್ರಭಾವಿತವಾದ ಸಂಸ್ಕೃತಿಯನ್ನು ರಕ್ಷಿಸುವುದಾಗಿ ಭರವಸೆ ಕೊಟ್ಟಿತು. ಅದೇ ಸಮಯದಲ್ಲಿ ನಿಕಟ ಭವಿಷ್ಯದಲ್ಲಿ ಭಾರತದಲ್ಲಿರುವ ಪೋರ್ಚುಗೀಜರ ವಸಾಹತುಗಳು ಬೇಗನೆ ವಿಲೀನ ಹೊಂದುವವೆಂದೂ ಹಾಗೆ ಜನತೆಯ ಅಭಿಲಾಷೆ ಈದೇರುವುದೆಂದೂ ಸಾಲಾಜಾರರ ಸರಕಾರ ಸಹಕಾರ ನೀಡುವುದೆಂದೂ ಆತಿಸಿತು. ಆದರೆ ಈ ಆಸೆ ಹುಸಿ ಹೋಯಿತೇ ಹೊರತು ಕೈಗೂಡಿ ಬರಲಿಲ್ಲ—ಶಾಂತ ರೀತಿಯಲ್ಲಿ ಸತ್ಯಾಗ್ರಹವನ್ನು ಕೈಗೊಳ್ಳಲು ತೆರಳಿದವರ ಮೇಲೆ ಪೋರ್ಚುಗೀಜರು ಉಗ್ರ ಪ್ರತೀಕಾರ ಕ್ರಮಗಳನ್ನು ಕೈಗೊಂಡರು. ವೈಶಾಚಿಕ ಚಿತ್ರಹಿಂಸೆಗಳನ್ನು ನಡೆಸಿದರು. ಸತ್ಯಾಗ್ರಹಿಗಳು ಮಾನಸಿಕ ಕ್ಲೇಶಕ್ಕೂ ಶಾರೀರಿಕ ಯಾತನೆಗೂ ಗುರಿಯಾದರಷ್ಟೆ ಇಬ್ಬರು ಸತ್ಯಾಗ್ರಹಿಗಳೂ ಹುತಾತ್ಮರಾದರು ಕಾಂಗ್ರೆಸು ಈ ಚಳವಳದಲ್ಲಿ ಸಕ್ರಿಯವಾಗಿ ಭಾಗವಹಿಸದಿದ್ದರೂ ತನ್ನ ಸಂಪೂರ್ಣ ಸಹಾನುಭೂತಿಯನ್ನು ಪ್ರದರ್ಶಿಸಿತು. ಬೇರೆ ಪಕ್ಷಗಳು ಸತ್ಯಾಗ್ರಹಿಗಳನ್ನು ಕಳಿಸುವಷ್ಟು ಮುಂದೆ ಹೋದವು

ಭಾರತ ಸರಕಾರವು ಮೇಲೆ ವಿವರಿಸಿದ ಕಾಂಗ್ರೆಸಿನ ಗೊತ್ತುವಳಿಗೆ ಅನುಗುಣವಾದ ಕಾರ್ಯಕ್ರಮಗಳನ್ನೇ ಈ ಅವಧಿಯಲ್ಲಿ ಅನುಸರಿಸಿಕೊಂಡುಬಂತು. ಪೋರ್ಚುಗಾಲದೊಡನೆ ಸಂಧಾನದ ಮಾತುಕತೆ ನಡೆಯುವ ಆಶೆಯೂ ಕಳೆದವರ್ಷದ ಕೊನೆಯಲ್ಲಿ ಉದಯಿಸಿತು. ಆದರೆ ಪೋರ್ಚುಗೀಜರು ಇಟ್ಟ ಷರತ್ತುಗಳನ್ನು ಹಿಂದಿಟ್ಟುಕೊಂಡುದರಿಂದ ಭಾರತವು ಉಗ್ರ ಪ್ರತಿಭಟನೆಯ ಸೂಚನೆಯಾಗಿ ಲಿಸ್ಬನಿನಲ್ಲಿರುವ ತನ್ನ ರಾಯಭಾರಿ ಕಚೇರಿಯನ್ನು ಮುಚ್ಚಿತು. ಸತ್ಯಾಗ್ರಹದಲ್ಲಿ ಗೋಮಾಂತಕರೇ ಭಾಗವಹಿಸಬೇಕೆಂದು ಭಾರತಸರಕಾರ ಮೊದಲು ತೀರ್ಮಾನಿಸಿತು—ತದನುಗುಣವಾಗಿ ಭಾರತೀಯ ಸತ್ಯಾಗ್ರಹಿಗಳು ವಸಾಹತು ಪ್ರದೇಶಗಳಿಗೆ ಹೋಗುವುದನ್ನು ಅದು ತಡೆಯಿತು. ಪೋರ್ಚುಗೀಜರ ಘೋರತೆ ಬಿಗುವಾದ ಹಾಗೆಲ್ಲ ಈ ನಿಬಂಧನೆಯನ್ನು ಸಡಲಿಸಿ

(ಮುಂದೆ ನೂಕಿದೆ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 — ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15 — ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಶಾಂತಿ ಕಾಲದ ಬಳಕೆಗಾಗಿ ಪರಮಾಣು

ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ವಿಜ್ಞಾನಿಗಳ ಸಮ್ಮೇಳನ

ಅಣುಯುಗದ ಪ್ರವರ್ತಕ ದಿವಂಗತ ಡಾ. ಐನ್‌ಸ್ಟೈನ್ ಮತ್ತು ಇಂದಿನ ಜಗತ್ತಿನ ಶ್ರೇಷ್ಠ ತತ್ವಜ್ಞಾನಿ ಆರ್ಲ್‌ರಸ್ಸೆಲ್ ಇವರು ಬೇರೆ ಆರು ಮಂದಿ ಖ್ಯಾತನಾಮರಾದ ವಿಜ್ಞಾನಿಗಳೊಂದಿಗೆ ಅಣು ಯುದ್ಧದ ಭೀಕರತೆಯನ್ನು ಮನಗಾಣಿಸಿ ಕೊಡುವ ಪೇಳಿಕೆಯನ್ನು ಪ್ರಕಟಿಸಿದ್ದರಷ್ಟೇ— ಇದರ ಬೆನ್ನಿಗೆ ನೋಬೆಲ್ ಪಾರಿತೋಷಕವನ್ನು ಪಡೆದ, ಹೆಚ್ಚಾಗಿ ರಷಾಯನ ಶಾಸ್ತ್ರಜ್ಞರೇ ಆಗಿರುವ, ಹದಿನೆಂಟು ಮಹಾನುಭಾವರು ಸಂಯುಕ್ತ ಪ್ರಕಟಣೆಯೊಂದನ್ನು ಹೊಂಡಿಸಿ, ಯುದ್ಧದಲ್ಲಿ ಅಣುಬಾಂಬನ್ನು ಉಪಯೋಗಿಸಬಾರದೆಂದೂ ರಾಜಕೀಯ ಉದ್ದೇಶಗಳಿಗೆ ಬಲಪ್ರಯೋಗದ ಮಾರ್ಗವನ್ನು ಅವಲಂಬಿಸಬಾರದೆಂದೂ ಪ್ರತಿಭಟಿಸಿದ್ದಾರೆ.

"ಮಾನವನು ತನ್ನನ್ನು ತಾನೇ ನಾಶ ಮಾಡಿಕೊಳ್ಳಬಹುದಾದ ವಸ್ತುವೊಂದನ್ನು ವಿಜ್ಞಾನ ಕೊಟ್ಟಿರುವುದನ್ನು ನೋಡಿ ನಾವು ವಿಹ್ವಲರಾಗಿದ್ದೇವೆ ಯುದ್ಧದಲ್ಲಿ ಅತ್ಯಾಧುನಿಕ ಶಸ್ತ್ರಗಳನ್ನು ಉಪಯೋಗಿಸುವುದರಿಂದ ಸಮಸ್ತ ಜಗತ್ತಿನ ವಾತಾವರಣವು ಅಣು ವಿಸ್ತರಣ ಕ್ರಿಯೆಯಿಂದ ಎಷ್ಟರ ಮಟ್ಟಿಗೆ ವಿಷಾಕ್ತವಾಗುವುದೆಂದರೆ, ರಾಷ್ಟ್ರಗಳೇ ನಾಶ ಹೊಂದಬಹುದು" ಎಂದವರು ತಮ್ಮ ಗಾಢವಾದ ಅಧ್ಯಯನ ಮತ್ತು ಅನುಭವದ ಬಲದಿಂದ ಎಚ್ಚರಿಕೆಯನ್ನು ನೀಡಿದ್ದಾರೆ.

ಇಂದಿನ ಪರಿಸ್ಥಿತಿಯಲ್ಲಿ ವಿಜ್ಞಾನಿಗಳ ಈ ಬಿಚ್ಚುಮನಸ್ಸಿನ ಅಭಿಪ್ರಾಯಕ್ಕೆ ರಾಜಕಾರಣಿಗಳು ಕಿವಿಗೊಡದೆ ಹೋದರೆ- ಅವರು ಜನಶಿಯ ರೋಷಕ್ಕೆ ಪಾತ್ರರಾಗುವುದು ನಿಶ್ಚಯ. ಇದಕ್ಕೆ ರಾಜಕಾರಣಿಗಳ. ಅಷ್ಟು ಸಿದ್ಧರಾಗಿಲ್ಲ—ಜನತೆಯ ಸಾಮೂಹಿಕ ಅಭಿಪ್ರಾಯದ ಒತ್ತಡವನ್ನು ಅವರು ಉಪೇಕ್ಷಿಸಿ ನಡೆಯಲಾರರು. ಆದುದರಿಂದಲೇ ಜಿನೇವದಲ್ಲಿ ಮೊನ್ನೆ ತಾನೆ ನಡೆದ "ಶಿಖರ" ಸಮ್ಮೇಳನದಲ್ಲಿ ನಾಲ್ಕು ಮಹಾರಾಷ್ಟ್ರಗಳ ಧುರೀಣರು ಅಣುಬಾಂಬು ಪ್ರಯೋಗಿಸಲ್ಪಡಬಹುದಾದ ಯುದ್ಧದ ಸಂಭವವನ್ನು ದೂರ ಮಾಡಲು ಪ್ರಯತ್ನಿಸಿ, ಬಹಳಷ್ಟು ಜಯಶೀಲರಾದರು. ಶಕ್ತಿ ಪ್ರದರ್ಶನದ ಹೆಗ್ಗಳಿಕೆಯಿಂದ ಪ್ರತಿಸ್ಪರ್ಧಿಯನ್ನು ಉದ್ರೇಕಿಸುವ ದಾರಿಯನ್ನು ಬಿಟ್ಟುಗೊಟ್ಟು, ಸೌಹಾರ್ದ ಸಂಬಂಧವನ್ನು ಬೆಳೆಸಿ, ಮನವೊಲಿಸುವ ಮಾರ್ಗಾನುಸರಣೆಯನ್ನು ಅವರು ಮಾಡಿದರು.

ಇನ್ನು ಕೆಲವೇ ದಿನಗಳಲ್ಲಿ, ಅಂದರೆ ಇದೇ ಆಗೋಸ್ತಿನ ಆರನೇ ದಿನಾಂಕದಿಂದ ಹನ್ನೆರಡು ದಿನಗಳವರೆಗೆ ಜಿನೇವದಲ್ಲಿ ಇನ್ನೊಂದು ಮಹತ್ವದ ಸಮ್ಮೇಳನ ಜರಗುತ್ತದೆ. ಸಂಯುಕ್ತ ರಾಷ್ಟ್ರಸಂಘದ ೮೦ ಸದಸ್ಯ ರಾಷ್ಟ್ರಗಳಿಗೆ ಮತ್ತು ಅದರ ಅಂಗ ಸಂಸ್ಥೆಗಳ ೨೪ ಸದಸ್ಯ ರಾಷ್ಟ್ರಗಳಿಗೆ ಈ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಣವನ್ನೀಯಲಾಗಿದೆ. ಇವೆಲ್ಲ ರಾಷ್ಟ್ರಗಳ ಪ್ರತಿನಿಧಿಗಳು— ಇವರಲ್ಲಿ ವಿಜ್ಞಾನಿಗಳೇ ಹೆಚ್ಚು— ವೈಜ್ಞಾನಿಕ ತಿಳಿವಳಿಕೆಯ ಶಿಖರವಾಗಿರುವ ಪರಮಾಣು ಶಕ್ತಿಯ ಬಗ್ಗೆ ಮೊದಲ ಬಾರಿಗೆ ಜಗದ್ವ್ಯಾಪಿ ತಳಹದಿಯಲ್ಲಿ ಚರ್ಚೆಯನ್ನು ನಡೆಸುವರು. ಶಾಂತಿ ಕಾಲದ ಬಳಕೆಗಾಗಿ ಪರಮಾಣು ಶಕ್ತಿಯನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದೇ ಅವರ ಮುಂದಿರುವ ಉದ್ದೇಶ.

ಅಮೇರಿಕದ ಅಧ್ಯಕ್ಷ ಐಸೆನ್ ಹೋವರ್ ೧೯೫೩ನೇ ದಶಂಬರ ತಿಂಗಳಲ್ಲಿ ಪರಮಾಣುವಿನ ಶಾಂತಿ ಕಾಲದ ಉಪಯೋಗದ ಕುರಿತು ಸಂಯುಕ್ತ ರಾಷ್ಟ್ರ ಸಂಘದಲ್ಲಿ ನೀಡಿದ ಸಲಹೆಯಿಂದ ಈ ಸಮ್ಮೇಳನ ಉದ್ಭವಿಸಿರುತ್ತದೆ. ಎಲ್ಲ ರಾಷ್ಟ್ರಗಳೂ ಒಟ್ಟು ಸೇರಿ ತಮ್ಮಲ್ಲಿರಬಹುದಾದ ಸ್ಫೋಟನೀಯ ಪದಾರ್ಥಗಳ ಪಂತಿಗೆಯನ್ನು ಸಲ್ಲಿಸಿ ಅದರ ಶಾಂತಿ ಕಾಲದ ಬಳಕೆಗೆ ಪ್ರೋತ್ಸಾಹ ಕೊಡುವಂತೆ ಅಂತಾರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಬೇಕು ಎಂದು ಐಕರು ತಮ್ಮ ಆ ಭಾಷಣದಲ್ಲಿ ಸಲಹೆಯನ್ನು ಮಂಡಿಸಿದ್ದರು. ಇಂಥದೊಂದು ಸಂಸ್ಥೆಯು ಸ್ಥಾಪಿಸಲ್ಪಟ್ಟರೆ, ಪರಮಾಣು ಶಸ್ತ್ರಾಗಾರಗಳಲ್ಲಿ ಸಂಗ್ರಹಿಸಬಹುದಾದ ಶಕ್ತಿಯನ್ನು ಶಾಂತಿಯ ಕ್ಷೇತ್ರಗಳಿಗೆ ಹರಿಯಿಸುವ ದಿಸೆಯಲ್ಲಿ ಪ್ರಾರಂಭದ ಹೆಜ್ಜೆಯನ್ನಿಟ್ಟಂತಾಗುತ್ತದೆ.

ಜಗತ್ತಿನ ಪ್ರಖ್ಯಾತ ಪರಮಾಣು ವಿಜ್ಞಾನಿಗಳ ಈ ಸಮ್ಮೇಳನಕ್ಕೆ ಭಾರತದ ಅಣು ಮಂಡಳದ ಅಧ್ಯಕ್ಷ ಡಾ. ಹೋಮಿ ಭಾಭಾ ಅಧ್ಯಕ್ಷರಾಗಿರುವರೆಂಬುದು ನಮಗೆಲ್ಲರಿಗೂ ಅಭಿಮಾನದ ವಿಷಯ. ಇವರು ಸಮ್ಮೇಳನದಲ್ಲಿ ಭಾಗವಹಿಸುವ ಭಾರತೀಯ ನಿಯೋಗದ ಧುರೀಣರಾಗಿಯೂ ಕೆಲಸ ಮಾಡುತ್ತಿರುವರು. ನಮ್ಮ ನಿಯೋಗದಲ್ಲಿ ಒಟ್ಟು ಐವರು ಪ್ರತಿನಿಧಿಗಳೂ ೧೪ ಸಲಹೆಗಾರರೂ ಇದ್ದಾರೆ. ಇವರಲ್ಲಿ ಹೆಚ್ಚಿನವರು ಅಣು ಮಂಡಳದ ಕಾರ್ಯಕಲಾಪಗಳಲ್ಲಿ ನಿತ್ಯವೂ ಭಾಗ ವಹಿಸುತ್ತಿರುವ ಪಟುಗಳು. ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಸೇರುವ ಪರಿಷತ್ತು ಇದಾದುದರಿಂದ ರಾಷ್ಟ್ರಸಂಘದಲ್ಲಿ ಭಾರತದ ಶಾಶ್ವತ ಸ್ರತಿನಿಧಿಯಾಗಿರುವ ಸರ್ ಆರ್ಥರ್ ಲಾಲ್ ಪ್ರತಿನಿಧಿಗಳಲ್ಲಿ ಒಬ್ಬರಾಗಿ ನೇಮಕಗೊಂದಿದ್ದಾರೆ.

ಶಾಂತಿ ಕಾಲದ ಬಳಕೆಗೆ ಅಣುಶಕ್ತಿಯನ್ನು ವಿಪುಲವಾಗಿ ಬಳಸುವ ಸಾಧ್ಯತೆಯನ್ನು ಜಿನೇವದ ಈ ಸಮ್ಮೇಳನ ಮನವರಿಕೆ ಮಾಡಿಸಿಕೊಟ್ಟರೆ, ವಿಜ್ಞಾನಿಗಳು ಈಗಾಗಲೇ ಭಯಾಪಹವೆಂದು ಸಾರಿರುವ ಅಣು ಬಾಂಬಿನ ವಿಷಯದಲ್ಲಿ ರಾಜಕಾರಣಿಗಳು ಆಸಕ್ತಿಯನ್ನು ತೊರೆದು, ಅದರ ಉತ್ಪಾದನೆ ಮತ್ತು ಸ್ಫೋಟನ ಪ್ರಯೋಗಗಳ ಬಹಿಷ್ಕಾರಕ್ಕೆ ಮನಸ್ಸು ಮಾಡಬಹುದು. ಈ ಕುರಿತು ಪ್ರಬಲ ರಾಷ್ಟ್ರಗಳು ತೀವ್ರ ನಿಜಾರ ವಿನಿಮಯವನ್ನು ನಡೆಸಿ ಒಂದು ಒಪ್ಪಂದಕ್ಕೆ ಬರಬಹುದು. ಈ ರಾಜಕೀಯ ಪರಿಣಾಮವನ್ನು ಬಿಟ್ಟರೆ, ವೈಜ್ಞಾನಿಕ, ಔದ್ಯಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಮ್ಮೇಳನದ ಕಾರ್ಯಕಲಾಪದಿಂದ ಆಶೆಯ ನವೋದಯವಾದೀತು— ಇಷ್ಟರ ವರೆಗೆ ಅನುಭವಿಸಿರದಷ್ಟು ಉನ್ನತವಾದ ಜೀವನ ಮಟ್ಟವನ್ನು ಜಗತ್ತಿನ ಪ್ರತಿಯೊಂದೂ ರಾಷ್ಟ್ರವು ಹೊಂದುವುದಕ್ಕಾಗಿ ಅಣು ಶಕ್ತಿಯನ್ನು ಬಳಸುವ ಸಹಕಾರದ ಮನೋಭಾವವನ್ನು ಅದು ಮೂಡಿಸೀತು.

ಶಕ್ತಿಯ ಉತ್ಪಾದನೆಯೇ ಆಧುನಿಕ ಜೀವನದ ಆಡಿಗಲ್ಲು. ಶಕ್ತಿಯ ಪೂರೈಕೆ ಧಾರಾಳವಾಗಿದ್ದರೆ ಮಾತ್ರ ಉದ್ಯಮಗಳು ನಡೆದಾವು. ಮನೆಯ ದೀಪಗಳು ಬೆಳಗಿಯಾವು, ನಮ್ಮ ಮೈಯನ್ನು ಬೆಪ್ಪಗಿಡಲು ಸಾಧ್ಯವಾದೀತು, ನಾವು ಸುಗಮ ಪ್ರಯಾಣವನ್ನು ಮಾಡಿಯೇವು, ನಾಮಾನು ಸರಂಜಾಮುಗಳನ್ನೂ ಕ್ಷಿಪ್ರದಲ್ಲಿ ಸಾಗಿಸಿಯೇವು. ಒಟ್ಟಿನಲ್ಲಿ ನಾಗರಿಕ ಜೀವನದ ಆಧಾರವೇ ಶಕ್ತಿಯ ಪೂರೈಕೆ. ಇದರ ಅಭಾವದಿಂದಲೇ ಜಗತ್ತಿನ ಕೆಲವು ಪ್ರದೇಶಗಳು ಹಿಂದುಳಿದಿವೆ— ಮಾನವ ಜನಾಂಗದ ಸಾಮೂಹಿಕ ಹಿತಸಾಧನೆಯ ಧ್ಯೇಯವುಳ್ಳವರು ಎಲ್ಲರಿಗೂ ಶಕ್ತಿಯ ಪೂರೈಕೆ ಸುಲಭದಲ್ಲಾಗುವ ಬಗೆ ಏನೆಂದು ಆಲೋಚನೆ ಮಾಡುತ್ತಾರೆ.

ಇಷ್ಟರ ವರೆಗೆ ಶಕ್ತಿ ಎಂದೊಡನೆಯೇ ಕಲ್ಲಿದ್ದಲಿನ ನೆನಪು ಬರುತ್ತಿದ್ದಿತು; ಸ್ವಲ್ಪ ಮಟ್ಟಿಗೆ ಎಣ್ಣೆಯೂ ಶಕ್ತಿಯ ರೂಪದಲ್ಲಿ ನೆರವಾಗುತ್ತಿದ್ದಿತು. ಇವೆರಡು ಇಂಧನಗಳ ಬೇಡಿಕೆಯು ಪ್ರತಿದಿನ ಹೆಚ್ಚಾಗುತ್ತಿದೆ. ಬ್ರಿಟನನಲ್ಲಿ ೧೯೬೦ನೇ ಇಸವಿಯ ಹೊತ್ತಿಗೆ ೧೯೪೦ನೇ ವರ್ಷದಲ್ಲಿದ್ದ ಕಲ್ಲಿದ್ದಲಿನ ಬೇಡಿಕೆಯ ಪ್ರಮಾಣಕ್ಕಿಂತ ಇಮ್ಮಡಿಯಷ್ಟು ಪೂರೈಕೆ ಬೇಕಾದೀತೆಂದು ಅಂದಾಜು. ೧೯೭೫ನೇ ವರ್ಷದ ಸುಮಾರಿಗೆ ಬ್ರಿಟನನ್ನೊಳಗೊಂಡು ಜಗತ್ತಿನ ಅನೇಕ ರಾಷ್ಟ್ರಗಳು ಇಂಧನದ ಅಭಾವದಿಂದ ಪೀಡಿತವಾಗಬಹುದೆಂದು ಪೇಳಲಾಗುತ್ತದೆ. ಈ ಶತಮಾನದ ಅಂತ್ಯದೊಳಗೆ ಜಗತ್ತಿನ ಹೆಚ್ಚುತ್ತಿರುವ ಬೇಡಿಕೆಯನ್ನು ಸುಲಭದಲ್ಲಿಯೂ ವಿಪುಲ ಪ್ರಮಾಣದಲ್ಲಿಯೂ ಪೂರೈಸಲು ಸಾಧ್ಯವಾಗಬಹುದಾದ ಹೊಸ ಶಕ್ತಿಯ ಸಾಧನ—ಅಥವಾ ಇಂಧನ—ಅಗತ್ಯವಾಗಿ ಬೇಕಾಗಿದೆ ಎಂದು ತಜ್ಞರ ಅಭಿಪ್ರಾಯ.

ಜಿನೇವದ ಸಮ್ಮೇಳನದ ಉಪಯುಕ್ತತೆಯನ್ನು ನಾವು ಈಹಿನ್ನೆಲೆಯಲ್ಲಿ ವಿಮರ್ಶಿಸಬೇಕು—ಅಣುಶಕ್ತಿಯ ಕುರಿತಾದ ತಿಳಿವಳಿಕೆಯು ನಾವು ಯೋಗ್ಯ ಮಾರ್ಗವನ್ನು ಅವಲಂಬಿಸಿದ ಪಕ್ಷದಲ್ಲಿ ಅತ್ಯುತ್ತಮ ಇಂಧನವಾಗಿ ಶಾಂತಿ ಕಾಲದ ಬಳಕೆಗೆ ಅಣುಶಕ್ತಿಯನ್ನು ಬಳಕೆಮಾಡಬಹುದೆಂದು ತೋರಿಸಿಕೊಟ್ಟಿರುತ್ತದೆ. ವಿಧಾಯಕ ಕಾರ್ಯಗಳಿಗೆ ಅಣುಶಕ್ತಿಯನ್ನು ಹೇಗೆ ಬಳಸಬಹುದೆಂಬ ಬಗ್ಗೆ ಜಗತ್ತಿನ ವಿಜ್ಞಾನಿಗಳ ಅಭಿಪ್ರಾಯ ಈಗಾಗಲೇ ಸಾಕಷ್ಟು ವಿಸ್ತೃತ ಪ್ರಮಾಣದಲ್ಲಿರುತ್ತದೆ. ಇವೆಲ್ಲ ಅಭಿಪ್ರಾಯಗಳನ್ನು ಉದಸ್ಯಾಸದ ರೂಪ

(೧೦ನೇ ಪುಟ ನೋಡಿರಿ)

1956 ನೆಷ್ಟು
ಸುವರ್ಣ ಮಹೋತ್ಸವದ ವರ್ಷ

ಮುಂದಿನ ವರುಷ ನಾವು ನಮ್ಮ
ಸುವರ್ಣೋತ್ಸವವನ್ನು
ಆಚರಿಸಲಿದ್ದೇನೆ— ಈ ಗಡಿಯನ್ನು ಮುಟ್ಟಲು
ಅಸಂಖ್ಯಾತ ಸ್ನೇಹಿತರು ನಮಗಿತ್ತ ಹುಮ್ಮನಸ್ಸಿನ
ಆಶ್ರಯಕ್ಕಾಗಿ ಧನ್ಯವಾದಗಳು.

ಕೆನರಾ ಬ್ಯಾಂಕ್ ಲಿ.
ಭಾರತದ ಬೆಳೆಯುತ್ತಿರುವ ಬ್ಯಾಂಕ್
1906 ರಿಂದ
JBL/62

ಕೆಂಪು ಚೀನ - ಅಮೇರಿಕಗಳ ನಡುವೆ ನೇರಾದ ಮಾತುಕತೆ

ಗಡಿನಾಡಿನ ಗಾಂಧಿಯುವರಿಂದ ಏಕ ಘಟಕದ ರಚನೆಗೆ ಬಲವಾದ ವಿರೋಧ

ನಾಲ್ಕು ಮಹಾರಾಷ್ಟ್ರಗಳ ಪರಿಷ್ಕರ ಪರಿಷತ್ತಿನಿಂದ ಪಾಶ್ಚಾತ್ಯರಲ್ಲಿಯೂ ಕಮ್ಯೂನಿಸ್ಟರಲ್ಲಿಯೂ ಬಳಕೆ ಹೆಚ್ಚಿಕೊಂಡಿದೆ. ರಶ್ಯ ಮತ್ತು ಅಮೇರಿಕಗಳ ನಡುವೆ ಬೇಸಾಯಗಾರರು, ಕಲಾವಿದರು, ವಿಜ್ಞಾನಿಗಳ ಶಿಷ್ಟ ಮಂಡಲಗಳ ಆದಾನ-ಪ್ರದಾನ ಕಾರ್ಯ ನಡೆಯ ತೊಡಗಿದೆ. ರಶ್ಯದ ಪರಿಷ್ಕರು ಹೊರ ದೇಶಗಳಿಗೆ ಸೌಹಾರ್ದ ಸಂದರ್ಶನವನ್ನು ನೀಡುವ ಉದ್ದೇಶದಿಂದ ಪ್ರವಾಸ ಕೈಗೊಳ್ಳಲೂ ಮುಂದಾಗಿದ್ದಾರೆ.

ಸೌಹಾರ್ದ ಸಂದರ್ಶನ

ಬ್ರಿಟನಿನ ಪ್ರಧಾನಿ ಈಡನ್ನರ ಆಮಂತ್ರಣದಂತೆ ರಶ್ಯದ ಪ್ರಧಾನಿ ಬುಲ್ಗೇನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಧುರೀಣ ಕ್ರುಶ್ಚೇವರೂ ಮುಂದಿನ ವಸಂತದಲ್ಲಿ ಬ್ರಿಟನಿಗೆ ಭೇಟಿ ಕೊಡಲಿದ್ದಾರೆ. ಈ ಸಮಯದಲ್ಲಿ ಈಡನ್ನರು ನೆಹರುಗಳನ್ನು ಲಂಡನಿಗೆ ಬರಹೇಳುವ ಸಂಭವವಿದೆ. ಅಮೇರಿಕದ ಉಪಾಧ್ಯಕ್ಷ ನಿಕ್ಸನ್ ಮೋಸ್ಕೋವಿಗೆ ಹೋಗಲಿರುವರೆಂದೂ ವರದಿಯಾಗಿದೆ. ಪಶ್ಚಿಮ ಜರ್ಮನಿಯ ಡಾ. ಅಡೆನೂರರು ಇನ್ನೆರಡು ತಿಂಗಳಲ್ಲಿ ರಶ್ಯದ ರಾಜಧಾನಿಗೆ ಹೋಗಲಿದ್ದಾರೆ. ಈಡನ್ನರಿಗೆ ರಶ್ಯವನ್ನು ಸಂದರ್ಶಿಸಲು ಬುಲ್ಗೇನಿನ್ ಬ್ರಿಟನಿಗೆ ಬಂದಾಗ ಆಮಂತ್ರಣ ನೀಡುವುದು ಉಚಿತ.

ಕೆಂಪು ಚೀನದೊಡನೆ ಪರ್ಯಾಲೋಚನೆ

ಪೂರ್ವ ಏಶ್ಯದ ಪ್ರಕ್ಷುಬ್ಧ ಪರಿಸ್ಥಿತಿಗೆ ಕೆಂಪು ಚೀನದೊಡನೆ ಮನಸ್ತಾಪ ಕಟ್ಟಿಕೊಂಡಿರುವುದೇ ಮುಖ್ಯ ಕಾರಣ ಎಂದು ನೆಹರುಗಳು ಬಹಳ ಸಮಯದಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಹೇಳುತ್ತ ಬಂದಿದ್ದಾರೆ. ಅಮೇರಿಕವು ಬಿಗುಮಾನದಿಂದ ನಡೆದುಕೊಂಡರೆ ಪರಿಸ್ಥಿತಿ ಸುಧಾರಿಸದು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ಕೆಂಪು ಚೀನ—ಅಮೇರಿಕಗಳ ನಡುವೆ ಸೌಹಾರ್ದ ಸಂಬಂಧವನ್ನು ಸ್ಥಾಪಿಸಿ ಪರಸ್ಪರ ಹಿತಾಸಕ್ತಿಯ ಪ್ರಶ್ನೆಗಳನ್ನೂ ಎಶ್ಯದ ಜಿಡುಪಿನ ಸಮಸ್ಯೆಗಳನ್ನೂ ನಿವಾರಿಸಲಾಗುವಂತೆ ಅವರು ಶ್ರೀ ಕೃಷ್ಣ ಮೆನೊನ್ನರನ್ನು ಪೇಕಿಂಗಿಗೂ ಲಂಡನ್, ವಾಷಿಂಗ್‌ಟನ್ನುಗಳಿಗೂ ಕಳಿಸಿದ್ದರು.

ಸಂಧಾನದ ವಿಷಯ

ಮೆನೊನ್ನರು ನಡೆಸಿದ ಸಂಧಾನದ ಫಲವಾಗಿಯೂ ಬರ್ಮದ ಪ್ರಧಾನಿಯುನೂರವರು ತಮ್ಮ ಅಮೇರಿಕದ ಪ್ರವಾಸ ಕಾಲದಲ್ಲಿ ಹಿತ ಬೋಧೆ ನೀಡಿದುದರಿಂದಲೂ ಇದೇ ಸೋಮವಾರ (ದಿನಾಂಕ ೧) ಜಿನೇವದಲ್ಲಿ ಅಮೇರಿಕ ಹಾಗು ಕೆಂಪು ಚೀನಗಳ ನಡುವೆ ರಾಯಭಾರಿಗಳ ಮಟ್ಟದಲ್ಲಿ ಮಾತುಕತೆಯೊಂದು ಪ್ರಾರಂಭವಾಗಿದೆ. ಕೆಂಪು ಚೀನದಲ್ಲಿರುವ ಅಮೇರಿಕನ್ ಕೈದಿಗಳ ಮತ್ತು ಅಮೇರಿಕದಲ್ಲಿರುವ ಚೀನೀ ವಿದ್ಯಾರ್ಥಿಗಳ ಬಿಡುಗಡೆ ಇಲ್ಲಿ ಮುಖ್ಯವಾಗಿ ಚರ್ಚಿಸಲ್ಪಡುತ್ತದೆ. ಮೋಲೆಂಡಿನಲ್ಲಿರುವ ಚೀನದ ರಾಯಭಾರಿಗಳೂ ಝುಕೊಸ್ಲೊವಾಕಿಯದಲ್ಲಿರುವ ಅಮೇರಿಕದ ರಾಯಭಾರಿಗಳೂ ಭಾಗವಹಿಸುವ ಈ ಸಮ್ಮೇಳನ ಸಫಲವಾದರೆ, ಜಾ ಎನ್ ಲ್ಯಾ ಮತ್ತು ಡಲ್ಲೇಸರ ನಡುವೆ ಬೇರೆ ಮಹತ್ವದ ಸಮಸ್ಯೆಗಳ ಬಗ್ಗೆ ನೇರಾದ ಮಾತುಕತೆ ನಡೆದೀತು ಎನ್ನಲಾಗಿದೆ.

ಫೊರ್ಮೋಸದ ಬಿಡುಗಡೆ

ಜಿನೇವದ ಈ ಸಮಾಲೋಚನೆ ಸಫಲವಾಗುವುದಕ್ಕೆ ಆತಂಕ ಏನೂ ಇಲ್ಲವೆನ್ನಲಾಗಿದೆ—ಇದು ಬಡಿಸಲು ಬಹಳ ಕಷ್ಟವಾದ ಕಗ್ಗಂಟಿನ ಪ್ರಶ್ನೆಯಿಲ್ಲ ಎಂದು ಜಾಎನ್ ಲ್ಯಾ ಹೇಳಿದ್ದಾರೆ. ಆದರೆ ಅಮೇರಿಕ ಮತ್ತು ಕೆಂಪು ಚೀನಗಳ ಮತ ಭೇದದ ಕ್ಷೇತ್ರ ಬಹಳ ವ್ಯಾಪಕವಾಗಿದೆ—ಮುಖ್ಯವಾಗಿ ಫೊರ್ಮೋಸದಲ್ಲಿ ಯುದ್ಧ ವಿರಾಮ, ಫೊರ್ಮೋಸ ಪಲಯದ ಭವಿಷ್ಯ, ಕೆಂಪು ಚೀನಕ್ಕೆ ರಾಷ್ಟ್ರ ಸಂಘದಲ್ಲಿ ಪ್ರವೇಶ ಮತ್ತು ಅಮೇರಿಕದಿಂದ ಮನ್ನಣೆ ಇವುಗಳನ್ನು ಸಮಾಧಾನಕರವಾಗಿ ಬಿಡಿಸ ಬೇಕಾಗಿದೆ. ಅಮೇರಿಕವು ನಡುವೆ ಬರದಿದ್ದರೆ, ಚೀನದ ಆಂತರಿಕ ವ್ಯವಹಾರವೆಂದೇ ಬಗೆದರೆ, ಕೆಂಪು ಚೀನವು ರಾಷ್ಟ್ರೀಯರೊಡನೆ ನೇರಾದ ಮಾತುಕತೆಯನ್ನು ತೊಡಗಿ ಫೊರ್ಮೋಸದ ವಿವಾದವನ್ನು ತೀರ್ಮಾನಿಸಲು ಸಿದ್ಧವಿದೆ ಎಂದು ಜಾಎನ್ ಲ್ಯಾ ಹೇಳಿದ್ದಾರೆ; ಹೀಗೆ ಶಾಂತ ವಿಧಾನದಿಂದಲೇ ಸಮಸ್ಯೆ ಪರಿಹರಿಸಲ್ಪಡಬಲ್ಲುದು ಎಂದಿದ್ದಾರೆ.

ಗಾಫರ ಖಾನರ ಕಾರ್ಯ ಕಲಾಪ

ಗಡಿನಾಡಿನ ಗಾಂಧಿ ಎಂದು ಗೌರವಿಸಲ್ಪಡುವ ಗಾಫರ ಖಾನರನ್ನು ಸಂಚಾರ ನಿರ್ಬಂಧದಿಂದ ಮುಕ್ತಗೊಳಿಸಿದ ಬಳಿಕ, ಪಾಕಿಸ್ತಾನ ಸರಕಾರಕ್ಕೆ ತಾನು ತಪ್ಪು ಮಾಡಿದೆನೇ ಎಂದು ತೋರ ತೊಡಗಿದೆ; ಪರಿಣಾಮವಾಗಿ, ಗಾಫರ ಖಾನರ ಮೇಲೆ ಪುನಃ ನಿರ್ಬಂಧ ಹೇರಲ್ಪಡುವ ಅಥವಾ ಅವರನ್ನು ಮರಳಿ ಸೆರೆಮನೆಗಟ್ಟುವ ಸಂಭವ ಕಂಡು ಬರುತ್ತದೆ. ಗಾಫರಖಾನರು ಪಶ್ಚಿಮ ಪಾಕಿಸ್ತಾನವನ್ನು ಏಕ ಘಟಕವಾಗಿ ರೂಪಿಸುವ ಕೇಂದ್ರಸಂಕಾರದ ಉದ್ದೇಶವನ್ನು ಸ್ಪಷ್ಟ ಮಾತುಗಳಲ್ಲಿ ಬಲವಾಗಿ ಖಂಡಿಸಿದ್ದಾರೆ—ಇದು ಸೈನಿಕ ಗೃಹ ಮಂತ್ರಿ ಮಿರ್ಜಾರ ಅಭಿಮಾನವನ್ನು ಕೆಣಕಿದ್ದು, ಜನತೆಯ ಹಿತಸಂಬಂಧಿಗಳ ವಿರುದ್ಧವಾಗಿ ಪ್ರಜೋದನೆ ಕೊಡುವ ಗಾಫರಖಾನರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ಆವಶ್ಯಕತೆ ಇದೆ ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರಕಾರಕ್ಕೆ ಆಹ್ವಾನ

ಪಶ್ಚಿಮ ಪಾಕಿಸ್ತಾನವನ್ನು ಏಕ ಘಟಕವಾಗಿ ರೂಪಿಸುವ ಯೋಜನೆಯನ್ನು ಚುನಾವಣೆಯ ಪ್ರಶ್ನೆಯಾಗಿ ಮಾಡಿ, ಜನರ ಅಭಿಮತವನ್ನು ಪಡೆಯಿರಿ ಎಂದು ಗಾಫರ ಖಾನರು ಪಾಕಿಸ್ತಾನದ ಕೇಂದ್ರ ಸರಕಾರಕ್ಕೆ ಆಹ್ವಾನವಿತ್ತಿದ್ದಾರೆ. ಜನತೆಯ ಹಿತ ನೆಗಳೇರುವುದೆಂದೂ ಜನತೆಯ ಪ್ರಚಂಡ ಬೆಂಬಲವಿರುವುದೆಂದೂ ಕೇಂದ್ರದ ಮಂತ್ರಿಗಳು ಹೇಳುತ್ತಿರುವ ಮಾತಿನ ಸತ್ಯ ಹೀಗೆ ಪರೀಕ್ಷಿಸಲ್ಪಡಲಿ ಎಂದವರು ಕೇಳಿದ್ದಾರೆ. ಪ್ರಾಂತೀಯ ಅಥವಾ ಬೇರಾವುದೇ ಸಂಕುಚಿತ ಭಾವನೆಯಿಂದ ತಾನು ಪ್ರೇರಿತನಾಗಿಲ್ಲವೆಂದೂ ಅಹಿಂಸೆಯ ದೀಕ್ಷೆಯನ್ನು ಕೆಂಪಂಗಿಯವರು ತೊರೆಯುವುದಿಲ್ಲವೆಂದೂ ಅವರು ಪುನರುಚ್ಚರಿಸಿದ್ದಾರೆ. ಪೇಶಾವರದಲ್ಲಿ ಸೇರಿದ ಗಡಿನಾಡಿನ ಅವಾಮಿ ಲೀಗ್ ಮತ್ತು ಕೆಂಪಂಗಿಯವರ ಸಭೆಯು ಏಕ ಘಟಕದ ರಚನೆಯಿಂದ ಗಡಿನಾಡಿನ ಜನತೆ ಆರ್ಥಿಕ ಹಾಗು ರಾಜಕೀಯ ದೃಷ್ಟಿಯಿಂದ ಹಾನಿಗೀಡಾಗುವುದರಿಂದ ಅದರ ವಿರುದ್ಧ ಪ್ರತಿಭಟನೆ ವ್ಯಕ್ತ ಮಾಡಲು ಉಚಿತ ಮಾರ್ಗ ಅನುಸರಿಸಿರೆಂದು ಗಾಫರ ಖಾನರಿಗೂ ಪೀರ ಸಾಹೇಬರಿಗೂ ಸರ್ವಾಧಿಕಾರ ನೀಡಿದೆ.

ಮಲಯದಲ್ಲಿ ಸ್ವಾತಂತ್ರ್ಯ ಸೂರ್ಯ

ಸ್ವತಂತ್ರ ರಾಷ್ಟ್ರಗಳ ಮಾಲಿಕೆಯಲ್ಲಿ ಬೇಗನೆ ಇನ್ನೊಂದು ದೇಶ ಸೇರುವ ಮುನ್ಸೂಚನೆ ಮಲಯದಲ್ಲಿ ಈ ವಾರ ವ್ಯಕ್ತವಾಗಿದೆ. ಅಲ್ಲಿ ಇದೇ ಮೊದಲ ಬಾರಿಗೆ ನಡೆದ ಚುನಾವಣೆಗಳಲ್ಲಿ ಮಲಯನ್, ಚೀನೀ ಹಾಗು ಭಾರತೀಯರ ಐಕ್ಯರಂಗಕ್ಕೆ, ಪ್ರಚಂಡ ಜಯ ಲಭಿಸಿದೆ: ೫೨ರಲ್ಲಿ ೫೧ ಸ್ಥಾನಗಳು ಸಿಕ್ಕಿವೆ. ರಾಜಕುಮಾರ ಅಬ್ದುಲ್ ರಹಿಮಾನರು ೬ ಮಲಯಿಗಳೂ ೩ ಚೀನರೂ ಇರುವ ಮಂತ್ರಿಮಂಡಳವನ್ನು ರಚಿಸುವರೆಂದು ತಿಳಿದಿದೆ. ೧೯೫೭ನೇ ಇಸವಿಯೊಳಗೆ ಮಲಯಕ್ಕೆ ಸ್ವಾತಂತ್ರ್ಯ ತರುವುದು ಇವರ ಧ್ಯೇಯ—ಇದಕ್ಕಾಗಿ ಬ್ರಿಟಿಷ್ ಹೈಕಮಿಶನರರಿಗೆ ಮಂತ್ರಿಮಂಡಳದ ನಿರ್ಣಯಗಳನ್ನು ರದ್ದುಪಡಿಸಲು ಈಗ ಇರುವ ಅಧಿಕಾರ ಹಿಂದೆಗೆದುಕೊಳ್ಳಲ್ಪಡಬೇಕು ಎಂದವರವಾದ. ಸದ್ಯದಲ್ಲೆ ಇಲ್ಲಿಗೆ ಬರಲಿರುವ ವಸಾಹತುಮಂತ್ರಿಗಳು ಆಂಗ್ಲ ಸಚಿವ ಸಂಪುಟಕ್ಕೆ ಏನು ಸಲಹೆ ಕೊಡುವರೋ ತಿಳಿಯದು—ಗೊಟೆಮಾಲದಲ್ಲಿ ಮಾಡಿದಂತೆ ಮಲಯದಲ್ಲೂ ಮಂತ್ರಿಮಂಡಳವನ್ನು ಮನೆಗೆ ಕಳಿಸುವರೋ ಎಂದಿಷ್ಟೇ ಸಂದೇಹ.

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ರ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ರಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ದಶಮಾಂಶ ವಿಧಾನದ ಭಾರತೀಯ ರೂಪಾಯಿ

ಜಗತ್ತಿನಲ್ಲಿಯೇ ನಮ್ಮದು ಭದ್ರವಾದ ನಾಣ್ಯ

ಕಳೆದ ವಾರ ನ್ಯೂಯಾರ್ಕಿನಲ್ಲಿ ಪತ್ರಿಕೋದ್ಯೋಗಿಗಳ ಮುಂದೆ ಮಾತನಾಡುತ್ತಿದ್ದ ಮಿ ಫ್ರಾಂಜ್ ಪಿಕ್ ಎಂಬ ಜಗತ್ಪ್ರಸಿದ್ಧ ನಾಣ್ಯ ಶಾಸ್ತ್ರಜ್ಞರು, ಭಾರತದ ರೂಪಾಯಿಯ ಕುರಿತು ಕೆಲವು ಅಮೂಲ್ಯ ಸಂಗತಿಗಳನ್ನು ತಿಳಿಸಿದರು. ಆನು ಸಂಗಿಕವಾಗಿ ಅವರು ಇತರ ಕೆಲವು ದೇಶಗಳ ನಾಣ್ಯಗಳ ಬೆಲೆಯ ಕುರಿತಾಗಿಯೂ ಮಹತ್ವದ ಅಂಶಗಳನ್ನು ಹೊರಗೆಡವಿದರು. ಅವರ ಹೇಳಿಕೆಯ ಪ್ರಕಾರ ಜಗತ್ತಿನಲ್ಲಿ ವ್ಯಾರಿಸ್ ಮತ್ತು ಲಂಡನ್ ನಗರಗಳನ್ನು ಬಿಟ್ಟರೆ ಭಾರತದ ಮುಂಬಯಿ ನಗರದಲ್ಲಿಯೇ ಅತಿ ಹೆಚ್ಚಿನ ಚಿನ್ನದ ವಿನಿಮಯ ವ್ಯಾಪಾರ ನಡೆಯುತ್ತದೆ. ಭಾರತದ ರೂಪಾಯಿಯು ಪ್ರಪಂಚದಲ್ಲಿಯೇ ಭದ್ರವಾದ ನಾಣ್ಯಗಳಲ್ಲಿ ಒಂದಾಗಿದೆ—ಮುಕ್ತ ಪೇಟೆಯಲ್ಲಿ ಅದರ ಮೇಲೆ ಕೇವಲ ೫% ವಟ್ಟವನ್ನಷ್ಟೆ ಬಿಡಲಾಗುತ್ತದೆ.

ಕಮ್ಯೂನಿಸ್ಟರ ನಾಣ್ಯ

ಪಾಕಿಸ್ತಾನದ ರೂಪಾಯಿಯ ಮೇಲೆ ೩೫% ವಟ್ಟವನ್ನು ಮುಕ್ತ ಪೇಟೆಯಲ್ಲಿ ಬಿಡಬೇಕಾಗುತ್ತದೆ. ಅಂದರೆ, ಅಷ್ಟು ಮಟ್ಟಿಗೆ ಆ ದೇಶದೊಳಗಿನ ನಾಣ್ಯದ ಬೆಲೆ ಹೊರ ಪೇಟೆಯಲ್ಲಿ ತಗ್ಗುತ್ತದೆ. ಕಮ್ಯೂನಿಸಮ್ಮನ್ನು ಅಪ್ಪಿಕೊಂಡಿರುವ ರಾಷ್ಟ್ರಗಳ ನಾಣ್ಯಗಳ ಬೆಲೆ ಮುಕ್ತ ಪೇಟೆಯಲ್ಲಿ ಬಹಳ ಇಳಿದಿದೆ—ಉದಾಹರಣೆಗೆ, ರಶ್ಯದ ರೂಬಲಿನ ಮೇಲೆ ೪೧೭%, ಹಂಗೆರಿಯ ಫೋರಿಂಟಿನ ಮೇಲೆ ೩೬೦%, ರುಮೇನಿಯದ ಲ್ಯೂದ ಮೇಲೆ ೩೮೭%, ಬಲ್ಗೇರಿಯದ ಲೇವ್‌ದ ಮೇಲೆ ೪೫೯%. ಚೆಕೊಸ್ಲೊವಾಕಿಯದ ಕೊರುನಾದ ಮೇಲೆ ೫೧೮%, ಪೂರ್ವ ಜರ್ಮನಿಯ ಮಾರ್ಕ್‌ದಮೇಲೆ ೫೪೪%, ಪೋಲೆಂಡಿನ ಜ್ಲೋಟಿಯ ಮೇಲೆ ೧೯೦೦% ವಟ್ಟವನ್ನು ಬಿಡಬೇಕಾಗುತ್ತದೆ. ಚೀನದ ಜೆನ್ ಮಿನ್ ಪಿಯಾವೊ ಎಂಬ ನಾಣ್ಯ ಮಾತ್ರ ಇದಕ್ಕೆ ಅಪವಾದ-ಇದರ ಮೇಲೆ ೧೦೦% ವಟ್ಟ ಬಿಟ್ಟರೆ ಸಾಕಾಗುತ್ತದೆ. ಸ್ವತಂತ್ರ ಪ್ರಜಾಸತ್ತಾತ್ಮಕ ರಾಷ್ಟ್ರಗಳಲ್ಲಿ ಇಂಡೋನೇಶಿಯದ ರುಪೈಯ ಎಂಬ ನಾಣ್ಯವೇ ಬಹಳ ಅಸ್ಥಿರ ಬೆಲೆಯದು.

ಕಳ್ಳ ವ್ಯಾಪಾರ

ಆದಾಗ್ಯೂ ರಶ್ಯವು ತನ್ನಲ್ಲಿನ ಚಿನ್ನ, ಪ್ಲಾಟಿನಂ, ಬೆಳ್ಳಿ ಮುಂತಾದ ಅಮೂಲ್ಯ ಲೋಹಗಳ ಸಂಗ್ರಹದ ಬಲದಿಂದ ಹೊರ ದೇಶಗಳೊಡನೆ ವ್ಯಾಪಾರವನ್ನು ನಡೆಸಲು ಸಮರ್ಥವಾಗಿದೆ ಎಂದು ಮಿ. ಪಿಕ್ ಹೇಳಿದ್ದಾರೆ. ಕಳೆದ ವರ್ಷ ೦೦ ಮಿಲಿಯ ಡಾಲರು ಬೆಲೆಯ ಕ್ಯೂಬದ ಸಕ್ಕರೆ ೨೦ ಮಿಲಿಯ ಡಾಲರು ಬೆಲೆಯ ಆಂಗ್ಲ ಒಟ್ಟಿಬರೆಗಳ ಯಂತ್ರ ಮತ್ತಿತರ ವಸ್ತುಗಳನ್ನು ಖರೀದಿಮಾಡಲು ಅದು ೧೭೮ ಮಿಲಿಯ ಡಾಲರು ಬೆಲೆಯ ಚಿನ್ನವನ್ನು ಮಾರಿತು. ಭಾರತದ ರೂಪಾಯಿ ಭದ್ರವಾಗಿರುವುದರಿಂದ ಅದರ ಕಳ್ಳ ವ್ಯಾಪಾರ ನಡೆಯುತ್ತದೆ. ಹೊಂಗ್‌ಕೊಂಗ್, ಕುವೈತ್, ಟೋಕಿಯೊ, ಮನಿಲ, ಬೀರುಟ್, ನ್ಯೂಯಾರ್ಕ್ ಇತ್ಯಾದಿ ನಗರಗಳಲ್ಲಿ ೫೦೦ ಮಿಲಿಯ ಡಾಲರುಗಳಿಗಿಂತಲೂ ಹೆಚ್ಚು ಬೆಲೆಯ ರೂಪಾಯಿಗಳ ಕಳ್ಳ ವ್ಯಾಪಾರ ಕಳೆದ ವರ್ಷ ನಡೆಯಿತು. ಪಾಕಿಸ್ತಾನದ ರೂಪಾಯಿಯಲ್ಲೂ ೧೫೦ ಮಿಲಿಯ ಡಾಲರು ಬೆಲೆಯಷ್ಟು ನಾಣ್ಯಗಳ ಮಟ್ಟಿಗೆ ಕಳ್ಳ ವ್ಯಾಪಾರ ಸಾಗಿತು. ಉಗ್ರ ನಿಯಂತ್ರಣ ಕ್ರಮಗಳಿದ್ದೂ ಇದು ನಡೆಯುವುದು ಆಶ್ಚರ್ಯದ ಮಾತು.

ಉಗ್ರ ನಿಯಂತ್ರಣ ಕ್ರಮ

ಭಾರತದ ಮಟ್ಟಿಗೆ, ಚಿನ್ನದ ಆಯಾತ ಮತ್ತು ನಿರ್ಯಾತ ವ್ಯಾಪಾರವನ್ನು ಜನರು ಮಾಡಬಾರದೆಂದು ನಿರ್ಬಂಧವಿದೆ; ಅಲ್ಲದೆ, ಭಾರತದ ನೋಟುಗಳನ್ನು ಹೊರಗೆ ಕಳಿಸಬಾರದು, ಡಾಲರು ಪ್ರದೇಶ ಮತ್ತು ಪಶ್ಚಿಮ ಜರ್ಮನಿಯ ನೋಟುಗಳನ್ನು ಪಡೆದಿಟ್ಟುಕೊಳ್ಳಲಾಗದು, ಆ ದೇಶಗಳ ಬ್ಯಾಂಕುಗಳಲ್ಲಿ ಹಣ ಇಡಬಾರದು, ಅಲ್ಲಿಂದ ಸರಕುಗಳನ್ನು ಸರಕಾರದ ಅನುಮತಿ ಇಲ್ಲದೆ ತರಿಸಬಾರದು ಎಂಬು ಮುಂತಾದ ನಿರ್ಬಂಧಗಳಿವೆ. ಇದರ ದೆಸೆಯಿಂದಲೂ ಅತಿ ಪ್ರಚರಣವನ್ನು ತಡೆಗಟ್ಟಿರುವುದರಿಂದಲೂ ಆಯಾತ ನಿರ್ಯಾತ ವ್ಯಾಪಾರದಲ್ಲಿ ಸಮತೂಕವನ್ನು ಕಾಯ್ದುಕೊಂಡು ಹೋಗುತ್ತಿರುವುದರಿಂದಲೂ ಭಾರತದ ರೂಪಾಯಿಯು ಭದ್ರವಾದ ನಾಣ್ಯವೆನಿಸಿದೆ. ಜಗತ್ತಿನಲ್ಲಿ ನೆದರ್‌ಲೇಂಡಿನ ಗಿಲ್ಡರ್, ಬೆಲ್ಜಿಯಮಿನ ಫ್ರಾಂಕ್ ಇತ್ಯಾದಿ ರಾಷ್ಟ್ರಗಳ ನಾಣ್ಯಗಳಷ್ಟೇ ಭಾರತದ ರೂಪಾಯಿಗೆ ಮನ್ನಣೆ ಸಿಗುತ್ತದೆ.

ಹೊಸ ಮಸೂದೆಯ ಮಂಡನೆ

ರೂಪಾಯಿಯ ಕತೆ ಹೀಗಿರುವಾಗ, ಲೋಕ ಸಭೆಯ ಮುಂದೆ ನಾಣ್ಯ ಪದ್ಧತಿಗೆ ಸಂಬಂಧಿಸಿದ ಮಸೂದೆಯೊಂದು ಮಂಡಿಸಲ್ಪಟ್ಟು ಅಂಗೀಕೃತವಾಗಿದೆ—ಇದು ರೂಪಾಯಿಯು ನೂರು ಘಟಕಗಳಲ್ಲಿ ವಿಂಗಡಿಸಲ್ಪಡುವುದೆಂದೂ ಹೊಸ ಘಟಕಕ್ಕೆ ನೂತನವಾದ ನಾಮಕರಣವನ್ನು ಸರಕಾರ ಸದ್ಯವೇ ಮಾಡುವುದೆಂದೂ ತಿಳಿಸುತ್ತದೆ. ರಾಜ್ಯ ಸಭೆಯಲ್ಲಿ ಸದ ಈ ಮಸೂದೆ ಅಂಗೀಕೃತವಾದರೆ, ರಾಷ್ಟ್ರಾಧ್ಯಕ್ಷರ ಸಹಿ ಬಿದ್ದೊಡನೆಯೇ ಶಾಸನವಾಗುತ್ತದೆ. ಅನಂತರ, ಈಗಿನ ರೂಪಾಯಿಗೆ ೧೬ ಆಣೆ ಮತ್ತು ಪ್ರತಿ ಆಣೆಗೆ ೧೨ ಪೈ ಎಂಬ ಕ್ರಮ ಹಿಂದೆಗೆಯಲ್ಪಡುತ್ತದೆ; ಬದಲು ದಶಮಾಂಶ ಗುಣಕಗಳಿಂದ ಕೂಡಿದ ಪದ್ಧತಿ ರೂಢಿಗೆ ಬರುತ್ತದೆ. ರೂಪಾಯಿಯ ನೂರನೇ ಒಂದು ಅಂಶವನ್ನು ಪ್ರತಿನಿಧಿಸುವ ಘಟಕದ ಹೆಸರು "ಪೈಸಾ" ಎಂದಿರಬಹುದು ಎಂಬುದಾಗಿ ಪ್ರಧಾನಿಗಳು ಹೇಳಿದ್ದಾರೆ—ಸರಕಾರ ಇತಿಹಾಸಕಾರರನ್ನೂ ತಜ್ಞರನ್ನೂ ವಿಚಾರಿಸಿ ಈ ವಿಷಯದಲ್ಲಿ ಅಂತಿಮ ನಿರ್ಣಯವನ್ನು ಕೈಗೊಳ್ಳುತ್ತದೆ

ಚಲಾವಣೆಯ ವಿಧಾನ

ಹೊಸ ಪದ್ಧತಿ ಬಳಕೆಗೆ ಬಂದ ಬಳಿಕವೂ ಈಗಿನ ರೂಪಾಯಿ, ಅರ್ಧ ರೂಪಾಯಿ ಮತ್ತು ಕಾಲು ರೂಪಾಯಿಗಳ ನಾಣ್ಯಗಳು ಉಳಿಯುತ್ತವೆ ಅವುಗಳ ಬೆಲೆಯಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಆದರೆ ಎರಡಾಣೆ, ಒಂದಾಣೆ, ಅರ್ಧಾಣೆ, ಕಾಲಾಣೆ ಮತ್ತು ಪೈಗಳ ಬದಲು ಹೊಸ ನಾಣ್ಯಗಳನ್ನು ಚಲಾವಣೆಗೆ ತರಲಾಗುತ್ತದೆ. ಮೊದಲು ಸ್ವಲ್ಪ ಸಮಯದ ವರೆಗೆ ಈಗಿನ ಆಣೆ, ಪೈ ಇತ್ಯಾದಿಗಳೂ ಹೊಸ ನಾಣ್ಯಗಳೂ ಒಟ್ಟಿಗೆ ಬಳಕೆಯಲ್ಲಿರುತ್ತವೆ—ಆದರೆ ಜನರಿಗೆ ಹೊಸ ನಾಣ್ಯದ ಪರಿಚಯ ಮತ್ತು ಅದನ್ನು ಬಳಕೆಯ ವಿಧಾನಗಳಲ್ಲಿ ಸಾಕಷ್ಟು ಜ್ಞಾನ ದೊರೆತಂತೆಲ್ಲ ಕಳೆಯ (ಅಂದರೆ ಈಗಿನ) ನಾಲ್ಕಾಣೆಗಿಂತ ಕಡಿಮೆ ಬೆಲೆಯ ನಾಣ್ಯಗಳು ಹಿಂದೆಗೆದುಕೊಳ್ಳಲ್ಪಡುತ್ತವೆ. ಸರಕಾರದವರು ಹೊಸ ನಾಣ್ಯಗಳನ್ನು ಚಲಾವಣೆಗೆ ತರುವುದರಿಂದ ಆಜ್ಞ ಜನರಿಗೆ ಯಾರೂ ಮೋಸ ಮಾಡದಂತೆ ಜಾಗ್ರತೆ ವಹಿಸುವುದಾಗಿಯೂ ಪ್ರಚಾರಕ್ಕೆ ಪ್ರಾಮುಖ್ಯತೆ ಕೊಡುವುದಾಗಿಯೂ ಭರವಸೆಯನ್ನು ನೀಡಿದ್ದಾರೆ.

ಪ್ರಯೋಜನದ ಕುರಿತು ಪ್ರಧಾನಿ

ಹೊಸ ಪದ್ಧತಿಯಿಂದ ಹಾನಿಯಾಗುವ ಬದಲು ಬಹಳ ಬಗೆಯಿಂದ ಲಾಭವಾಗುತ್ತದೆಂದು ಸರಕಾರದ ಪರವಾಗಿ ಹೇಳಲಾಯಿತು. ಔದ್ಯಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹೊಸ ಕ್ರಮದಿಂದ ಬಹಳ ಸಮಯದ ಉಳಿತಾಯವಾಗುವುದೆಂದೂ ಅಚ್ಚುಕಟ್ಟುತನ ಮತ್ತು ಕಾರ್ಯಕ್ಷಮತೆ ಹೆಚ್ಚುವುದೆಂದೂ ಪ್ರಧಾನಿ ತಿಳಿಸಿದರು. ದೇಶದಲ್ಲಿ ಪಂಚವಾರ್ಷಿಕಯೋಜನೆಯಂಥ ಅಭಿವೃದ್ಧಿ ವ್ಯಯತ್ನಗಳನ್ನು ಕೈಗೊಳ್ಳುತ್ತಿರುವ ಈ ಕಾಲದಲ್ಲಿ ನಾವು ದಶಮಾಂಶ ಪದ್ಧತಿಯನ್ನು ಅನುಸರಿಸದಿದ್ದರೆ ಬಹಳ ತೊಂದರೆಯಾದೀತೆಂದು ಅವರು ಅಭಿಪ್ರಾಯಪಟ್ಟರು. "ಶೂನ್ಯ"ವನ್ನು ಕಂಡು ಹಿಡಿದು ದಶಮಾಂಶ ಗುಣಕದ ಕಲ್ಪನೆಗೆ ಗಣಿತದಲ್ಲಿ ಸ್ಥಾನವನ್ನು ಕಲ್ಪಿಸಿದ ಭಾರತೀಯರ ಮೇಧಾವಿತನಕ್ಕೆ ಇದು ಯೋಗ್ಯವಾದ ಹೆಜ್ಜೆ ಎಂದರು. ಮಸೂದೆಯನ್ನು ಮಂಡಿಸಿದ ಮಂತ್ರಿ ಗುಹಾರು ತೂಕ ಮತ್ತು ಅಳತೆಗಳಲ್ಲಿ ಮೆಟ್ರಿಕ್ ಮಾದರಿಯ ದಶಮಾಂಶ ವಿಧಾನವನ್ನು ಬಳಕೆಗೆ ತರುವ ಮಸೂದೆಯನ್ನು ವಾಣಿಜ್ಯ ಮಂತ್ರಿಗಳು ಸದ್ಯವೇ ತರುವರೆಂದು ನುಡಿದರು.

ಕರ್ನಾಟಕ ಏಕೀಕರಣ

ಮುಂದಿನ ತಿಂಗಳ ಕೊನೆಯೊಳಗೆ ಫಜಲಅಲಿ ಆಯೋಗವು ಭಾರತದಲ್ಲಿ ರಾಜ್ಯಗಳ ಪುನರ್ಘಟನೆಯ ಬಗ್ಗೆ ತನ್ನ ವರದಿಯನ್ನು ಒಪ್ಪಿಸಲಿದೆ. ಆಯೋಗವು ವರದಿಯನ್ನು ಬರೆಯಲು ತೊಡಗಿದೆಯೆಂದೂ ತನ್ನ ನಿರ್ಣಯಗಳನ್ನು ಅದು ಇಷ್ಟರಲ್ಲಿಯೇ ಸ್ಪಷ್ಟ ರೀತಿಯಲ್ಲಿ ಮಾಡಿಕೊಂಡಿದೆಯೆಂದೂ ಕೆಲವು ವರದಿಗಳು ತಿಳಿಸುತ್ತವೆ. ಈ ವರದಿಗಳನ್ನು ನಂಬುವುದಾದರೆ, ಮೈಸೂರು, ಕೊಡಗು, ಬಾಂಬಯಿ ಕರ್ನಾಟಕ, ಮದ್ರಾಸು ಕರ್ನಾಟಕ ಮತ್ತು ಹೈದರಾಬಾದಿನ ಕೆಲವು ಕನ್ನಡ ಪ್ರದೇಶಗಳನ್ನೊಳಗೊಂಡ ಏಕೀಕೃತ ಕನ್ನಡ ರಾಜ್ಯದ ನಿರ್ಮಾಣವಾಗುತ್ತದೆ. "ಕರ್ನಾಟಕದ ಏಕೀಕರಣವಾದೊಡನೆಯೇ ಕೈಲಾಸವೇ ಕೈಗೆ ಬರುತ್ತದೆಂದು ಕನ್ನಡಿಗರು ತಿಳಿಯಬಾರದು; ಮೈಸೂರಿನ ಸುಮ ಕನ್ನಗಳಲ್ಲಿ ಅದರೊಡನೆ ಸೇರುವ ಕನ್ನಡಿಗರೂ ಸಾಲುಗೊಳ್ಳಬೇಕಾಗುತ್ತದೆ" ಎಂದು ಮುಂತಾಗಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಎಚ್ಚರದ ಮಾತನ್ನು ಆಡಿದ್ದಾರೆ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಬ್ಯಾಂಕಿನ ಶಾಖೆಗಳು ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿ ಶೀಘ್ರದಲ್ಲೇ ತೆರೆಯಲ್ಪಡುವುವು:
1) ಮುಂಬಯಿ ಸಂಸ್ಥಾನದ ಧಾರವಾಡ ಜಿಲ್ಲೆಯ ರಾಣಿಬೆನ್ನೂರು.
2) ಮದ್ರಾಸು ಸಂಸ್ಥಾನದ ಮಲಬಾರಿನಲ್ಲಿರುವ ಪಾಲ್ಘಾಟ್.

ಡಾ। ಯು. ಸುಂದರ ರಾಮ ಶೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.
ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).
THE CANARA BANKING CORPORATION LIMITED

७० वर्षोंसे जगप्रसिद्ध और विजयी होनेवाला।
प्रत्येक स्टोर मे और सब स्थानों पर बिकता है।
बाटलीवाला एग्यूमिक्चर
और गोलीयां
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डी. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्टुगीझ चर्च स्ट्रीट,
Tele. Add. "CAWASHABAD" दादर, बम्बई २८.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೪-೮-೧೯೫೫	ಸಂಚಿಕೆ ೪೭

ಪಾಂಡಿಚೇರಿಯ ಚುನಾವಣೆ

ಇದೇ ಜುಲಾಯಿ ತಿಂಗಳ ೧೮ರಿಂದ ೨೩ನೇ ದಿನಾಂಕಗಳ ವರೆಗೆ ಪಾಂಡಿಚೆರಿ ರಾಜ್ಯದ ಹೊಸ ವಿಧಾನ ಸಭೆಗೆ ನಡೆದ ಚುನಾವಣೆಯ ಫಲಿತಾಂಶಗಳು ಒಂದಕ್ಕಿಂತ ಹೆಚ್ಚು ದೃಷ್ಟಿಯಿಂದ ಮಹತ್ವಪೂರ್ಣವಾಗಿವೆ. ಈ ಸಲದ ಚುನಾವಣೆಗಳು ಬಹಳ ಶಾಂತ ರೀತಿಯಿಂದ ಜರಿಗಿದವು; ಹಿಂದೆ ಫ್ರೆಂಚರ ಆಳಿಕೆಯ ಕಾಲದಲ್ಲಿ ಕಂಡುಬರುತ್ತಿದ್ದ ಘರ್ಷಣೆ ಮತ್ತು ಗೊಂದಲಗಳು ಈ ಸಲ ಸ್ವಲ್ಪವೂ ಕಾಣಿಸಲಿಲ್ಲ. ಜನರು ತುಂಬ ಉತ್ಸಾಹದಿಂದ ಮತದಾನ ಮಾಡಲು ಬಂದಿದ್ದರು; ಮತ್ತು ಮತದಾನದ ಪ್ರಮಾಣವು ನೂರಕ್ಕೆ ೭೦—೮೦ ವರೆಗೆ ಇದ್ದಿತು. ಗಂಡಸರಿಗಿಂತಲೂ ಅಧಿಕಸಂಖ್ಯೆಯ ಹೆಂಗಸರು ತೋರಿಸಿದರು. ಪ್ರಜಾಪ್ರಭುತ್ವದ ಅತ್ಯಮೂಲ್ಯವಾದ ಮತದಾನದ ಅಧಿಕಾರದ ಮಹತ್ವವನ್ನು ಮನಗಾಣುವುದರಲ್ಲಿ ಪಾಂಡಿಚೆರಿಯ ಬಾಂಧವರು ಭಾರತದ ಉಳಿದ ಜನತೆಗಿಂತ ಹಿಂದೆ ಉಳಿಯಲಿಲ್ಲ— ಸ್ವತಂತ್ರ ರೀತಿಯ ಶಾಂತ ಮತದಾನವು ಅವರ ಪಾಲಿಗೆ ಹೊಸ ಅನುಭವವಾಗಿದ್ದರೂ ಅವರು ಉದಾಸೀನತೆಯನ್ನು ತೋರಿಸಲಿಲ್ಲ. ಇದನ್ನು ಜಾಗೃತ ರಾಷ್ಟ್ರೀಯ ಮನೋಭಾವದ ಸ್ವಲ್ಪಲಕ್ಷಣವೆಂದರೆ ಅತಿಶಯೋಕ್ತಿಯಾಗದು. ಆದರೆ ಪಕ್ಷ ಪಂಗಡಗಳ ರಾಜಕಾರಣದಲ್ಲಿ ಪಾಂಡಿಚೆರಿಯ ಜನತೆಗೆ ಇನ್ನೂ ತಿಳಿವಳಿಕೆ ಊರ್ಜಿತ ಹೊಂದಬೇಕಾದ ಆವಶ್ಯಕತೆ ಕಾಣುತ್ತದೆ.—ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಅಂಗಸಂಸ್ಥೆಯಾಗಿರುವ ಪಾಂಡಿಚೆರಿಯ ಜಿಲ್ಲಾ ಕಾಂಗ್ರೆಸು ವಿಧಾನ ಸಭೆಯ ೯೫ ಸ್ಥಾನಗಳಲ್ಲಿ ೨೦ ಸ್ಥಳಗಳನ್ನು ಸಡೆದು, ಉಳಿದ ಸಮಯ ರಾಜ್ಯದ ೧೬ ನಗರ ಸಭೆಗಳಿಗೆ ನಡೆದ ಚುನಾವಣೆಯ ಫಲಿತಾಂಶವಾಗಿ ೯ ನಗರ ಸಭೆಗಳಲ್ಲಿ ಕಾಂಗ್ರೆಸು ಬಹುಮತವನ್ನು ಸಂಪಾದಿಸಿದೆ ಎಂಬುದು ಸಂತೋಷದ ವಿಷಯ. ಆದಾಗ್ಯೂ ಪಕ್ಷ ಸಂಗಡಗಳ ಬಲಾಬಲವು ಸಾಕಷ್ಟು ಸ್ಪಷ್ಟವಾಗಿ ತೋರಿ ಬರುವಂತೆ ಮತದಾನವಾಗಿಲ್ಲ. ಕಮ್ಯೂನಿಸ್ಟರ ಬೆಂಬಲವಿರುವ ಜನತಾ ರಂಗದ ೧೬ ಹುಂಯಾಳುಗಳು ವಿಧಾನ ಸಭೆಗೆ ಆರಿಸಿ ಬಂದಿದ್ದಾರೆ; ಅಲ್ಲದೆ ೪ ನಗರ ಸಭೆಗಳಲ್ಲಿಯೂ ಜನತಾರಂಗಕ್ಕೆಯೇ ಬಹುಮತ ದೊರಕಿದೆ—ಮುಖ್ಯವಾಗಿ ಪಾಂಡಿಚೆರಿ ಮತ್ತು ಮಾಹೆಗಳಲ್ಲಿ ಜನತಾರಂಗ ಹೆಚ್ಚಿನ ಬೆಂಬಲವನ್ನು ಪಡೆದಿದೆ. ವಿಧಾನ ಸಭೆಯ ಉಳಿದ ಮೂರು ಸ್ಥಾನಗಳು ಪ್ರಾಂತ್ರರಿಗೆ ಸೇರಿವೆ— ಪಾಂಡಿಚೆರಿಯಲ್ಲಿ ಜಿಲ್ಲಾ ಕಾಂಗ್ರೆಸಿನಿಂದ ಸಿಡಿದು ನಿಂತಿದ್ದ "ರಾಷ್ಟ್ರೀಯ" ಕಾಂಗ್ರೆಸಿನ ಯಾವ ಉಮೇದ್ವಾರನೂ ವಿಧಾನ ಸಭೆಗೆ ಆಯ್ಕೆ ಹೊಂದಲಿಲ್ಲ; ನಗರ ಸಭೆಯ ಚುನಾವಣೆಗಳಲ್ಲಿ ಕೆಲವು ಸ್ಥಾನಗಳು ಸಿಕ್ಕಿವೆಯಾದರೂ ಈ ಪಕ್ಷಕ್ಕೆ ಭವಿಷ್ಯವೇನೂ ಇದ್ದಂತೆ ತೋರುವುದಿಲ್ಲ. ಪಾಂಡಿಚೆರಿಯ ಈಗಿನ ರಾಜಕೀಯವನ್ನು ಗಮನಿಸಿದರೆ, ಜಿಲ್ಲಾ ಕಾಂಗ್ರೆಸು ಮತ್ತು ಜನತಾರಂಗಗಳೇ ಭವಿಷ್ಯದಲ್ಲಿ ಮಹತ್ವದ ಪಾತ್ರವನ್ನು ರೂಪಿಸುವುದು ನಿಶ್ಚಯ. ಒಟ್ಟಿನಲ್ಲಿ ಕಾಂಗ್ರೆಸಿಗೆ ಜನರ ಬೆಂಬಲ ವ್ಯಕ್ತವಾಗಿದೆ— ಈ ಬೆಂಬಲವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವುದು ಕಾಂಗ್ರೆಸಿನ ಸೂತ್ರಧಾರದ ಹೊಣೆಯಾಗಿದೆ. ಭಾರತದಲ್ಲಿ ಅಧಿಕಾರಾರೂಢವಾಗಿರುವ ಕಾಂಗ್ರೆಸಿನಲ್ಲಿ ಪಾಂಡಿಚೇರಿ ರಾಜ್ಯದ ಜನತೆ ವಿಶ್ವಾಸವಿಟ್ಟು ದರಲ್ಲಿ ಆಶ್ಚರ್ಯದ ಮಾತೇನಿಲ್ಲ—ಈ ವಸಾಹತು ಪ್ರದೇಶಗಳ ಆಡಳಿತದ ವಾಸ್ತವಿಕ ಹಸ್ತಾಂತರವನ್ನು ಕೈಗೂಡಿಸುವುದಕ್ಕೆ ಭಾರತದ ರಾಷ್ಟ್ರೀಯ ಕಾಂಗ್ರೆಸು ಮತ್ತು ಸರಕಾರದಲ್ಲಿರುವ ಅದರ ಪ್ರಭೃತಿಗಳು ತುಂಬ ಕೆಲಸ ಮಾಡಿದ್ದಾರೆ; ಮುತ್ಸದ್ದಿತನದಿಂದ ವರ್ತಿಸಿದ್ದಾರೆ. ಈಗ ಚುನಾವಣೆಯ ಬಳಿಕ ವಿಧಾನ ಸಭೆಯಲ್ಲಿ ಅಧಿಕಾರ ವಹಿಸಿಕೊಳ್ಳುವ ಕಾಂಗ್ರೆಸು ಪಕ್ಷವು ಹೆಸರಿಗಷ್ಟೇ ನಡೆದಿರುವ ವಸಾಹತು ಪ್ರದೇಶದ ಹಸ್ತಾಂತರ ಕ್ರಮವು ಶಾಸನಬದ್ಧ ರೀತಿಯಲ್ಲಿ ಕ್ಷಿಪ್ರವಲ್ಲಿ ನೆರವೇರಬೇಕೆಂದು ನಿರ್ಣಯವನ್ನು ಕೈಗೊಳ್ಳುವುದಾಗಿ ಕಾಂಗ್ರೆಸಿನ ಕಡೆಯಿಂದ ಚುನಾವಣೆಗಳ ಸೂತ್ರಧಾರರಾಗಿ ಕೆಲಸಮಾಡಿದ ಶ್ರೀ ಆರ್. ವೆಂಕಟ ರಾಮನ್, ಎಂ.ಪಿ. ಇವರು ಹೇಳಿದ್ದಾರೆ. ಫ್ರಾನ್ಸಿನ ಸರಕಾರ ಇದನ್ನು ಮನ್ನಿಸುವ ವರೆಗೆ, ಪಾಂಡಿಚೆರಿಯ ಹೊಸ ವಿಧಾನ ಸಭೆಗೆ ಮುಂಗಡ ಪತ್ರವನ್ನು ರೂಪಿಸಿ, ಚರ್ಚಿಸಿ, ಮನ್ನಿಸುವುದಕ್ಕಿಂತ - ಹೆಚ್ಚಿನ ಅಧಿಕಾರ ಸಿಗುವುದಿಲ್ಲ; ರಾಜ್ಯದ ಕಮಿಶನರಿಗೆ ಸಲಹೆ ಕೊಡಲು ಮೂವರು ಸದಸ್ಯರನ್ನು ವಿಧಾನಸಭೆ ಆರಿಸಬಹುದಾದರೂ ಕಮಿಶನರರು ಸ್ವತಃ ಬೇರೆ ಮೂರು ಮಂದಿಯನ್ನು ಸಲಹೆಗಾರರಾಗಿ ನಾಮಕರಣ ಮಾಡಬಲ್ಲರು. ಆದರೆ ೧೯೪೮ರಲಿದ್ದ ಫ್ರೆಂಚರ ಗವರ್ನರ ಜನರಲ್ಲರು ಈ ಆರೂ ಸದಸ್ಯರನ್ನು ಚುನಾಯಿತ ಪ್ರತಿನಿಧಿಗಳೇ ಆರಿಸಿ ಕಳುಹಿಸುವ ಸಂಪ್ರದಾಯವನ್ನು ಹಾಕಿಕೊಟ್ಟಿರುವುದರಿಂದ ಈಗಿನ ಭಾರತೀಯ ಕಮಿಶನರರು ಈ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬಹುದು; ಹಾಗೆ ಮಾಡುವುದೇ ಚಂದ. ವಾಸ್ತವದಲ್ಲಿ ಮುಂಗಡ ಪತ್ರವನ್ನು ಪಾಸುಮಾಡಿಸಿಕೊಳ್ಳುವುದಕ್ಕೆ ಕಾಂಗ್ರೆಸಿಗೆ ನಿಜವಾಗಿ ಸಿಕ್ಕಿದ ಹೆಚ್ಚಿನ ಸ್ಥಾನ ಬಲವೆಂದರೆ ಒಂದು ಮಾತ್ರ - ಆದರೆ ಈಗ ಬಂದಿರುವ ವರದಿಗಳಿಗನುಸಾರವಾಗಿ, ಒಬ್ಬ ಸ್ವತಂತ್ರರು ಮತ್ತು ಇನ್ನೊಬ್ಬ ಜನತಾರಂಗದ ಸದಸ್ಯರು ಕಾಂಗ್ರೆಸನ್ನು ಸೇರಿರುವರೆಂದೂ ಹೀಗೆ ಕಾಂಗ್ರೆಸಿನ ಬಲವನ್ನು ೨೨, ಪ್ರತಿಸ್ಪರ್ಧಿಗಳ ಬಲವನ್ನು ೧೭ ಮಾಡಲು ಕಾರಣರಾಗಿರುವರೆಂದೂ ಗೊತ್ತಾಗುತ್ತದೆ. ಕಾಂಗ್ರೆಸಿನ ಕಾರ್ಯಕಲಾಪ ನಿರ್ವಿಘ್ನವಾಗಿ ನೆರವೇರಿ, ಪಾಂಡಿಚೆರಿ ರಾಜ್ಯದ ಸಾರ್ವಾಂಗಿಕ ಅಭಿವೃದ್ಧಿಯಾಗುವುದಕ್ಕೆ ಹೀಗೆ ದೊರೆತ ಬೆಂಬಲದಿಂದ ಪ್ರಯೋಜನ ದೊರಕುವುದು ನಿಶ್ಚಯವೇಹ. ಚುನಾವಣೆಗಳು ಬಹಳ ಜೊಕ್ಕ ರೀತಿಯಲ್ಲಿ ನಡೆಸಲ್ಪಟ್ಟಿವೆ ಎಂದು ಎಲ್ಲ ಪಕ್ಷಗಳ ಪ್ರಭೃತಿಗಳೂ ಕಮಿಶನರರನ್ನು ಪ್ರಶಂಸಿಸಿದ್ದಾರೆ. ಆಡಳಿತವೂ ಶಿಷ್ಟೇ ಚೆನ್ನಾದ ರೀತಿಯಲ್ಲಿ ನಡೆದಿದೆ ಎಂದು ಪಾಂಡಿಚೇರಿಯ ಜನತೆಯಿಂದ ಹೇಳಿಸಿಕೊಳ್ಳುವ ಧ್ಯೇಯವನ್ನಿಟ್ಟುಕೊಂಡು ಹೊಸ ವಿಧಾನ ಸಭೆ ಮತ್ತು ನಗರ ಸಭೆಗಳೂ ರಾಜ್ಯದ ಕಾಂಗ್ರೆಸು ಪಕ್ಷದ ಧುರೀಣರೂ ಆಸಕ್ತಿ ವಹಿಸಿ ದುಡಿಯಲಿ; ಗೋವಾಂತರು ಪೋರ್ಚುಗೀಜರ ವಸಾಹತು ವಾದದ ನೊಗವನ್ನು ಕಳಚಿ ಒಗೆಯುವುದಕ್ಕೆ ಧಾರಾಳ ಉತ್ತೇಜನೆ ಕೊಡುವ ವಾದರಿಯಲ್ಲಿ ಪುನಾರಚನೆಯ ಕಾರ್ಯ ಇಲ್ಲಿ ನೆರವೇರಲಿ- ಎಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

ದ. ಕ. ಜಿಲ್ಲಾ ಬೋರ್ಡಿನ ೧೯೫೪-೫೫ನೇ ವರ್ಷದ ಆಡಳಿತ ವರದಿಯ ಸಾರಾಂಶ

ಮೇಲಿನ ವರ್ಷದ ಮೊದಲಿನ ಏಳೂವರೆ ತಿಂಗಳುಗಳಲ್ಲಿ ಜಿಲ್ಲಾ ಬೋರ್ಡಿನ ಆಡಳಿತವು ವಿಶೇಷಾಧಿಕಾರಿಗಳ ವಶದಲ್ಲಿತ್ತು; ಆದರೆ ಜನರಿಂದ ಚುನಾಯಿಸಲ್ಪಟ್ಟ ಸದಸ್ಯರ ಅಧಿಕಾರಕ್ಕೆ ಬೋರ್ಡು ಬಂತು. ಚುನಾಯಿತ ಬೋರ್ಡಿನಲ್ಲಿ ದಲಿತವರ್ಗದ ಮೂವರು ಮತ್ತು ನಾಲ್ವರು ಸ್ತ್ರೀ ಸದಸ್ಯರನ್ನೊಳಗೊಂಡು ಒಟ್ಟು ೪೦ ಸದಸ್ಯರಿದ್ದರು.

ಬೋರ್ಡಿನ ವಶದಲ್ಲಿ ೭೯೦ ಮೈಲು ಉದ್ದದ ರಸ್ತೆ ಇತ್ತು; ವರದಿ ವರ್ಷದಲ್ಲಿ ೧೮ ಮೈಲು ಉದ್ದದ ಹೊಸ ರಸ್ತೆ ರಚಿಸಲ್ಪಟ್ಟಿತು. ರಸ್ತೆಗಳ ದುರಸ್ತಿಗಾಗಿ ರೂ. ೨೧೧೦೮ ಕರ್ಚಾಗಿದ್ದರು ಅವುಗಳ ಪರಿಸ್ಥಿತಿ ಅಷ್ಟು ಒಳ್ಳೆಯದಿರಲಿಲ್ಲ; ಕನಿಷ್ಠ ಪಕ್ಷಕ್ಕೆ ಅರ್ಧದರಷ್ಟು ಲಕ್ಷ ರೂಪಾಯಿ ಪೆಚ್ಚುಮಾಡಲು ಬೋರ್ಡಿಗೆ ಸಾಧ್ಯವಾದರೆ ರಸ್ತೆಗಳು ಸುಧಾರಿಸಬಹುದೆಂದು ಇಂಜಿನಿಯರರ ಅಭಿಪ್ರಾಯ.

ಬೋರ್ಡಿನ ಆಡಳಿತ ವಲಯದಲ್ಲಿ ಸರಕಾರದ ನೆರವಿನಿಂದ ಸಂಕ ಮುಂತಾದ ಕೆಲವು ಸಣ್ಣ ಕೆಲಸಗಳು ನಡೆದಿವೆ. ಸರಕಾರದ ಮಂಜೂರಾತಿಯಿಂದ ಬೋರ್ಡು ಸ್ವತಃ ನಡೆಸಿದ ಕೆಲಸವೆಂದರೆ, ಮೂಡಬಿದ್ರೆ ಹೊಸ್ಮಾರ್ ರಸ್ತೆಗೆ ಹೌದಾಳದಲ್ಲಿ ಕಟ್ಟಿಸಿದ ಸೇತುವೆ ಮಾತ್ರ.

ಬೋರ್ಡಿನ ವಶದಲ್ಲಿ ೯೯ ಕಡವುಗಳಿದ್ದವು; ಈ ವರ್ಷ ಮಾಣಾಯಿಯಲ್ಲಿ ಒಂದು ಹೊಸ ಕಡವು ತೆರೆಯಲ್ಪಟ್ಟಿತು; ಆದರೆ ಬೇರೆ ಮೂರು ಕಡವುಗಳನ್ನು ಗ್ರಾಮ ಪಂಚಾಯಿತಿಗಳಿಗೆ ಬಿಟ್ಟುಕೊಡಲಾಯಿತು. ಕಡವುಗಳಿಂದ ಬಂದ ಉತ್ಪನ್ನ (ರೂ. ೨೩೯೩೮) ಕಳೆದ ವರ್ಷಕ್ಕಿಂತ ೪ ಸಾವಿರದಷ್ಟು ಕಡಿಮೆಯಾಗಿದೆ.

ವರದಿ ವರ್ಷದಲ್ಲಿ ಬೋರ್ಡು ೭೧೩ ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಿತ್ತು; ಇವುಗಳಲ್ಲಿ ೧೪೩ ಶಾಲೆಗಳನ್ನು ಹೊಸದಾಗಿ ತೆರೆದಿದ್ದರು; ಎರಡು ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಯಿತು. ಪ್ರಾಥಮಿಕ ಶಾಲೆಗಳಲ್ಲಿ ೭೪ ಪ್ರಾಥಮಿಕ ವರ್ಗಗಳಿಂದ ಕೂಡಿಸಿ; ೨೭ ಮೂಲ ಶಿಕ್ಷಣವನ್ನು ಕೊಡುತ್ತಿವೆ. ಬೋರ್ಡಿನ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುವ ಒಟ್ಟು ಮಕ್ಕಳ ಸಂಖ್ಯೆ ೧,೧೦,೪೧೭ ಹುಡುಗರು; ಮತ್ತು ೩೨,೯೯೪ ಹುಡುಗಿಯರು. ಐದನೇ ತರಗತಿಯ ವರೆಗೆ ಶಿಕ್ಷಣ ಧರ್ಮಾರ್ಥ. ೮೧ ಗ್ರಾಮಗಳಲ್ಲಿ ಶಿಕ್ಷಣಕ್ಕಾಗಿ ಸಾಲ ಕೊಡಲಾಗಿತ್ತು. ೩೩೧ ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ. ಆದರೆ ಇವುಗಳ ಪರಿಸ್ಥಿತಿಯಾಗಲೀ ಸ್ಥಳೀಯರು ಒದಗಿಸಿಕೊಟ್ಟ ಕಟ್ಟೋಣಗಳಾಗಲೀ ಒಳ್ಳೆಯ ರೀತಿಯಲ್ಲಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ ಕರ್ಚಾದ ಹಣ ರೂ.೧೭,೧೦,೦೪೬.

ಮಾಧ್ಯಮಿಕ ಶಿಕ್ಷಣಕ್ಕೆ ರೂ. ೩,೦೬,೦೩೩ ವ್ಯಯವಾಯಿತು. ಇದರಲ್ಲಿ ಬೋರ್ಡಿನಿಂದ ಬಿದ್ದದ್ದು ರೂ. ೦,೫೬೨ ಮಾತ್ರ. ವರದಿ ವರ್ಷದಲ್ಲಿ ಬೋರ್ಡು ತ್ರಿಕಾರಣದಲ್ಲಿ ಹೊಸ ಹೈಸ್ಕೂಲನ್ನು ತೆರೆಯಿತು. ಜಿಲ್ಲೆಯಲ್ಲಿರುವ ೭೨ ಹೈಸ್ಕೂಲುಗಳಲ್ಲಿ ೧೪ ಬೋರ್ಡಿನ ಅಧೀನದಲ್ಲಿವೆ—ಇವುಗಳಲ್ಲಿ ೩೯೨ ಹುಡುಗರು ಮತ್ತು ೩೩೭ ಹುಡುಗಿಯರು ಕಲಿಯುತ್ತಿದ್ದಾರೆ. ಅತ್ಯುತ್ತಮ ಫಲಿತಾಂಶವನ್ನು ಎಸ್. ಎಸ್. ಎಲ್ ಸಿ. ಪರೀಕ್ಷೆಯಲ್ಲಿ ತೋರಿಸಿದುದಕ್ಕಾಗಿ ವರದಿವರ್ಷದಲ್ಲಿ ಉಡುಪಿಯ ಬೋರ್ಡು ಹೈಸ್ಕೂಲಿಗೆ ಗುರಾಣಿ ಪಾರಿತೋಷಕವನ್ನು ನೀಡಲಾಯಿತು; ಈ ವರ್ಷ ಅದು ಕೋಟೇಶ್ವರದ ಬೋರ್ಡು ಹೈಸ್ಕೂಲಿಗೆ ಸಿಕ್ಕಿರುತ್ತದೆ.

ಸಾರ್ವಜನಿಕರಿಗೆ ವೈದ್ಯಕೀಯ ಸಹಾಯ ಸಲ್ಲಿಸಲೆಂದು ಬೋರ್ಡಿನ ವಶದಲ್ಲಿ ೩ ಆಸ್ಪತ್ರೆಗಳೂ ೪ ಸಾಮಾನ್ಯ ಔಷಧಾಲಯಗಳೂ ೧೩ ಪಾಶ್ಚಾತ್ಯ ಕ್ರಮದ ಹಾಗೂ ೧೯ ಮತ್ತು ಭಾರತೀಯ ಪದ್ಧತಿಯ ಗ್ರಾಮ ಔಷಧಾಲಯಗಳೂ ವರದಿ ವರ್ಷದಲ್ಲಿದ್ದವು. ಇವುಗಳಲ್ಲಿ ಶಿವೇಶ್ವರದ ಪಾಶ್ಚಾತ್ಯಕ್ರಮದ ಗ್ರಾಮಔಷಧಾಲಯವು ಮತ್ತು ಕೊಕ್ಕಡದ ಭಾರತೀಯ ಪದ್ಧತಿಯ ಗ್ರಾಮ ಔಷಧಾಲಯ ಹೊಸತಾಗಿ ತೆರೆಯಲ್ಪಟ್ಟವುಗಳು ಔಷಧಿಯು ಮದ್ರಾಸಿನಿಂದ ಕ್ರಯ ಪ್ರಕಾರ ಹೂರೈಕೆಯಾಗದಾಗ, ಸ್ಥಳೀಯ ಪೇಟೆಯಿಂದಲೇ ತರಿಸಿಕೊಳ್ಳಲು ಬಿಡಲಾಗಿದೆ. ಪಾಶ್ಚಾತ್ಯ ಕ್ರಮದ ಔಷಧಾಲಯಗಳಲ್ಲಿ ೨೩೦೦೬ ಮಂದಿ ಹೊರಗಿನ ರೋಗಿಗಳಾಗಿಯೂ ೮೮೩ ಮಂದಿ ಒಳ ರೋಗಿಗಳಾಗಿಯೂ ಚಿಕಿತ್ಸೆ ಪಡೆದರು; ಭಾರತೀಯ ಪದ್ಧತಿಯ ಔಷಧಾಲಯಗಳಲ್ಲಿ ಈ ಸಂಖ್ಯೆ ಕ್ರಮವಾಗಿ ೧೩೧೭೫೬ ಮತ್ತು ೫.

ಹೆರಿಗೆಯಲ್ಲಿ ಸೂಲಗಿತ್ತಿಯರ ಅನುಕೂಲತೆಯನ್ನು ಒದಗಿಸುವ ಪ್ರಯತ್ನ ವರದಿ ವರ್ಷದಲ್ಲಿ ಮುಂದೊತ್ತಲ್ಪಟ್ಟಿತು. ಜಿಲ್ಲೆಯಲ್ಲಿನ ೫೬೮೦೯ ಹೆರಿಗೆಗಳಲ್ಲಿ ೫೪೭೬ ಹೆರಿಗೆಗಳನ್ನು ಬೋರ್ಡಿನ ಸೂಲಗಿತ್ತಿಯರು ನಡೆಸಿದರು. ೫೨ ಹಳ್ಳಿಗಳ ೧೪೭೦೯ ಜನರಿಗೆ ಪ್ರಯೋಜನ ದೊರಕುವಂತೆ ೧೯ ಬಾಣಂತಿ ಹಾಗೂ ಶಿಶು ಕೇಂದ್ರಗಳನ್ನು ಬೋರ್ಡು ನಡೆಸಿತು. ಶಿಶು ಮರಣ ಸಂಖ್ಯೆ ಇಳಿಯಿತು. ಜನರ ಮರಣ ಪ್ರಮಾಣವೂ ಕಡಿಮೆಯಾಯಿತು. ೭ ಗ್ರಾಮಗಳಲ್ಲಿ ಸಿಡುಬು ಕಾಣಿಸಿತು; ಇದರಿಂದಾದ ಮರಣ ೯ ಆನೆಕಾಲು, ಮಲೇರಿಯ ಮುಂತಾದುವುಗಳನ್ನು ನಿಯಂತ್ರಿಸುವ ಪ್ರಯತ್ನ ಕೈಗೊಳ್ಳಲ್ಪಟ್ಟಿತು.

ಬೋರ್ಡಿನ ಆರ್ಥಿಕ ಸ್ಥಿತಿ ಮಾತ್ರ ಏನೂ ಊರ್ಜಿತವಾಗಿಲ್ಲ. ರೂ. ೮೬೪೨೬ ಕೊರತೆಯಿಂದ ತೊಡಗಿದ ವರ್ಷವು ಸರಕಾರದಿಂದ ರೂ. ೧೧೦೦೦ ಸಹಾಯ ದೊರೆತ ಬಳಿಕವೂ ರೂ. ೧೦೧೩೯ ಕೊರತೆಯಲ್ಲಿ ಮುಕ್ತಾಯವಾಯಿತು. ಸರಕಾರದಿಂದ ಅದರದೇ ಮಂಕುಪೊಂದರ ಪ್ರಕಾರ ನ್ಯಾಯವಾಗಿ ಬರಬೇಕಿದ್ದ ಹಣ ಬಂದರೆ ಈ ಕೊರತೆ ಉಳಿಯಲಿಕ್ಕಿಲ್ಲ—ಅದರೆ, ಬೋರ್ಡಿನ ಆದಾಯದ ವ್ಯಾಪ್ತಿಯನ್ನು ಹೆಚ್ಚಿಸದಿದ್ದರೆ, ಆರ್ಥಿಕ ಕೊರತೆ ಸದಾ ಸೀದಿಸುವುದು ನಿಶ್ಚಯ. ಅಭಿವೃದ್ಧಿ ಕೆಲಸಗಳು ಕುಂಠಿತವಾಗುವುದೂ ಬಂದಿತ.

ಸೂಚನೆ

'ನವಯುಗ'ದ ೩೪ನೆಯ ಸಂಪುಟವು ಇದೇ ಆಗಸ್ತ್ ಅಂತ್ಯಕ್ಕೆ ಮುಗಿಯುತ್ತದೆ. ಸಪ್ಟಂಬರದಿಂದ ೩೬ನೆಯ ವರ್ಷವು ಆರಂಭವಾಗುತ್ತದೆ. ಈ ಅವಧಿಗೆ ಯಾರಿಯಾರ ಚಂದಾಪಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಪಣವನ್ನೂ ಮುಂದಿನ ವರ್ಷದ ಚಂದಾಪಣವನ್ನೂ ಬೇಗನೆ ಕಳುಹಿಸುವಂತೆ ವಿನಂತಿ.

(ವಾರ್ಷಿಕ ಚಂದಾಪಣ ರೂ. 5-13-0.)

ಮೆನೇಜರ್,

ನವಯುಗ ವಾರಪತ್ರಿಕೆ, ಉಡುಪಿ.

ಮೂರು ಹಂತಗಳ ಭೂಸುಧಾರಣೆ

ಶಾಸನಾಂಗದ ಸಂಯುಕ್ತ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ

ಮುಖ್ಯ ಮಂತ್ರಿ ಶ್ರೀ. ಕಾಮರಾಜ ನಾಡರರು ಮೂರು ಹಂತಗಳಲ್ಲಿ ಭೂಸುಧಾರಣೆಯ ಶಾಸನವನ್ನು ರಾಜ್ಯದಲ್ಲಿ ಜಾರಿಗೆ ತರಲಾಗುವುದೆಂದು ಹೇಳಿದ್ದ ಮಾತಿನ ವಿವರಣೆಯು ರಾಜ್ಯದ ಶಾಸನ ಸಭೆಗಳ ಸಂಯುಕ್ತ ಅಧಿವೇಶನವನ್ನು ಇದೇ ೧ನೇ ದಿನಾಂಕ ಉದ್ಘಾಟಿಸುತ್ತಾ ಮಾಡಿದ ಗವರ್ನರರ ಭಾಷಣದಲ್ಲಿ ಸ್ವಲ್ಪ ಮಟ್ಟಿಗೆ ಸಿಕ್ಕಿರುತ್ತದೆ.

ಮೂರು ಹಂತಗಳು

ಇದರ ಪ್ರಕಾರ, ರಾಜ್ಯದಲ್ಲಿ ಕೃಷಿ ನಿರತನಾದ ಯಾವುದೇ ಒಕ್ಕಲನ್ನು ಎಬ್ಬಿಸದಂತೆ ಪ್ರತಿ ಬಂಧಿಸುವ ಮತ್ತು ಈಚೆಗೆ ಒಕ್ಕಲೆಬ್ಬಿಸಲ್ಪಟ್ಟವರಿಗೆ ಪುನಃ ಒಕ್ಕಲು ತನವನ್ನು ಕೊಡಿಸುವ ಮೊದಲನೇ ಹಂತದ ಶಾಸನ ಈ ಅಧಿವೇಶನದಲ್ಲಿ ಮಂಡಿಸಲ್ಪಡುತ್ತದೆ. ಇದರ ಬೆನ್ನಿಗೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೃಷಿ ಭೂಮಿಗೆ ನ್ಯಾಯವಾದ ಗೇಣಿಯ ಮಟ್ಟವನ್ನು ನಿರ್ಣಯಿಸುವ ಶಾಸನ ಬರುತ್ತದೆ. ಭೂಮಿಯ ಹಿಡುವಳಿಗೆ ಕನಿಷ್ಠ ಹಾಗು ಗರಿಷ್ಠ ಮಿತಿಗಳನ್ನು ನಿಶ್ಚಯಿಸುವ ಕೊನೆಯ ಹಂತವು ಘಟನಾತ್ಮಕ ತೊಡಕುಗಳನ್ನು ನಿವಾರಿಸಲು ಸೂಕ್ತ ಉಪಾಯಗಳನ್ನು ಕೈಗೊಂಡ ಬಳಿಕ ಅಸ್ತಿತ್ವದಲ್ಲಿ ಇಳಿಯುತ್ತದೆ.

ಭಾಷಣದ ಇತರ ವಿವರ

ಸಾಮಾನ್ಯ ಆಡಳಿತ ಮತ್ತು ಅಭಿವೃದ್ಧಿ ಕೆಲಸಗಳನ್ನು ಒಬ್ಬನೇ ಅಧಿಕಾರಿಗೆ ಒಪ್ಪಿಸಿ ಕೊಡುವುದು, ರಾಜ್ಯದಲ್ಲಿ ದ್ವಿತೀಯ, ಪಂಚವಾರ್ಷಿಕ ಯೋಜನೆಗೆ ಸೇರಿಸಬೇಕೆಂದಿರುವ ಕಾರ್ಯಕ್ರಮಗಳ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ತಿಳಿಯುವುದು, ಸಾಗುವಳಿದಾರರಿಗೆ ಸುಲಭದಲ್ಲಿ ಸಾಲ ಸಿಗುವಂತೆ ವ್ಯವಸ್ಥೆ ಮಾಡುವ ಶಾಸನವನ್ನು ತರುವುದು, ದಕ್ಷಿಣ ಕನ್ನಡ ಮತ್ತಿತರ ಕಲವು ಜಿಲ್ಲೆಗಳಲ್ಲಿ ಉತ್ತಮ ವ್ಯವಸ್ಥೆಗಾಗಿ ಬಾಸಗಿ ಕಾಡುಗಳನ್ನು ಪಶಪಡಿಸಿಕೊಳ್ಳಲು ಕಾನೂನು ಮಾಡುವುದು ಮುಂತಾದ ವಿಷಯಗಳು ಶಾಸನ ಸಭೆಯ ಈ ಸಲದ ಕಾರ್ಯ ಕಲಾಪವೆಂದು ಗವರ್ನರರು ಹೇಳಿದ್ದಾರೆ.

ಧ್ವಜ ದಹನವಿಲ್ಲ

ಕೇಂದ್ರ ಸರಕಾರವು ಒತ್ತಾಯದಿಂದ ಹಿಂದಿಯನ್ನು ಹೇರುವ ನಿಶ್ಚಯವನ್ನು ಬದಲಿಸಬೇಕೆಂದು ದ್ರಾವಿಡ ಕಜಗದ ನಾಯಕರು ಕೈಗೊಳ್ಳಿದ್ದ ರಾಷ್ಟ್ರ ಧ್ವಜ ದಹನದ ಹೇಯ ಕಾರ್ಯಕ್ರಮ ತಾತ್ಕಾಲಿಕವಾಗಿ ಹಿಂದೆಗೆದುಕೊಳ್ಳಲ್ಪಟ್ಟಿದೆ. ಇದಕ್ಕೆ ಮುಂಚೆ ನಾಡರರು ಹಿಂದಿಯನ್ನು ಜನತೆಯ ಇಚ್ಛೆಗೆ ವಿರುದ್ಧ ಹೇರಲಾಗುವುದಿಲ್ಲವೆಂದು ರಾಷ್ಟ್ರಾಧ್ಯಕ್ಷರು ಹೈದರಾಬಾದಿನಲ್ಲಿ ಈಚೆಗೆ ಮಾಡಿದ ಭಾಷಣದ ಕಡೆಗೆ ಗಮನ ಸೆಳೆದದ್ದಲ್ಲದೆ ರಾಜ್ಯ ಸರಕಾರವು ಪ್ರಾದೇಶಿಕ ಭಾಷೆಗೆ ಸಲ್ಲಬೇಕಾದ ಸ್ಥಾನ ಮಾನ ಮತ್ತು ಅಬರ ಅಭಿವೃದ್ಧಿಗೆ ಕೊಡಬೇಕಾದ ಮಹತ್ವವನ್ನು ತಿಳಿದಿದೆ ಎಂದಿದ್ದರು. ಧ್ವಜ ದಹನ ನಡೆಸಲು ಉದ್ಯುಕ್ತರಾದರೆ ಸರಕಾರ ಉಗ್ರ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಎಚ್ಚರಿಸಿದ್ದರು.

ಬಾಬುರಾಯನಿಗೆ ಸಜೆ

ಕಳೆದ ಮಾರ್ಚಿ ೧೩ನೇ ದಿನಾಂಕ ನಾಗಪುರದಲ್ಲಿ ಪ್ರಧಾನಿ ನೆಹರುಗಳ ಕಾರಿನ ಫೂಟ್‌ಬೋರ್ಡಿನ ಮೇಲೆ ಕೈಯಲ್ಲಿ ಚೂರಿ ಹಿಡಿದುಕೊಂಡು ನೆಗೆದು ಕೊಲೆಮಾಡಲು ಉದ್ಯುಕ್ತನಾದನೆಂದು ವಿಚಾರಣೆಗೆ ಗುರಿಮಾಡಲ್ಪಟ್ಟ ಬಾಬುರಾಯನೆಂಬ ೩೪ ವರ್ಷದ ರಿಕ್ಷಾವಾಲನು ತಪ್ಪಿತಸ್ಥನೆಂದು ಜ್ಯೂರಿಗಳು ತೀರ್ಮಾನಿಸಿದರು. ಇದನ್ನು ಒಪ್ಪಿಕೊಂಡು ನಾಗಪುರದ ಡಿಸ್ಟ್ರಿಕ್ಟ್ ಎಂಡ್ ಸೆಶನ್ಸ್ ಜಡ್ಜ್ ಶ್ರೀ ಕೆ.ಎಚ್. ಪಾಂಡೆಯವರು ಬಾಬುರಾಯನಿಗೆ ೬ ವರ್ಷದ ಸಶ್ರಮ ಶಿಕ್ಷೆಯನ್ನು ಮೊನ್ನೆ ೨೮ನೇ ದಿನಾಂಕ ವಿಧಿಸಿದರು. ರಸ್ತೆಯ ನಿಯಮಗಳನ್ನು ಉಲ್ಲಂಘಿಸಿ. ನಾಲ್ವರು ಮಕ್ಕಳನ್ನು ಭಾಸಿಗೊಳಿಸಿದ್ದಕ್ಕೆ ಆರುತಿಂಗಳ ಸಜೆಯೂ ಬಾಬುರಾಯನಿಗೆ ವಿಧಿಸಲ್ಪಟ್ಟಿತು. ಇವೆರಡು ಶಿಕ್ಷೆಗಳು ಏಕಕಾಲಕ್ಕೆ ಜಾರಿಗೆ ಬರುತ್ತವೆ. ಬಾಬುರಾಯನಿಗೆ ತೀರ್ಮಾನದ ವಿರುದ್ಧ ಅಪೀಲು ಮಾಡಲು ಅವಕಾಶ ಕೊಟ್ಟಿದ್ದು ಅವನು ಅಪೀಲು ಮಾಡುವನೆಂದು ತಿಳಿದುಬರುತ್ತದೆ ಈ ಪ್ರಕರಣದಲ್ಲಿ ನೆಹರುಗಳ ಸಾಕ್ಷಿಯನ್ನೂ ನ್ಯಾಯಾಧೀಶರು ಕಮಿಶನನ ಮೂಲಕ ಹೊಸದೆಹಲಿಯಲ್ಲಿ ತೆಗೆದುಕೊಂಡಿದ್ದರು; ಮತ್ತು ನೆಹರುಗಳಿಗೆ ಅಡ್ಡ ಸವಾಲು ಹಾಕುವ ಅವಕಾಶವನ್ನು ಬಾಬುರಾಯನಿಗೆ ಒದಗಿಸಿದ್ದರು.

ಅಮೇರಿಕದ ವೈಮಾನಿಕರು

ಜನೇವದಲ್ಲಿ ಅಮೇರಿಕ ಮತ್ತು ಕೆಂಪು ಚೀನಗಳ ರಾಯಭಾರಿಗಳ ಮಾತುಕತೆ ನಡೆಯಲಿದ್ದ ಕಲವೇ ತಾಸಿಗೆ ಮೊದಲು ಗೂಢಚಾರರೆಂದು ಬಂದಿಸಲ್ಪಟ್ಟು ಶಿಕ್ಷೆಗೆ ಗುರಿಯಾಗಿದ್ದ ಹನ್ನೊಂದು ಮಂದಿ ಅಮೇರಿಕನ್ ವೈಮಾನಿಕರನ್ನು ಚೀನ ಬಿಡುಗಡೆ ಮಾಡಿತು. ಅಧ್ಯಕ್ಷ ಐಕರು ಈ ಕುರಿತು ತಕ್ಕ ಪ್ರಯತ್ನ ಮಾಡಿದ್ದಕ್ಕೆ ರಾಷ್ಟ್ರ ಸಂಘದ ಕಾರ್ಯದರ್ಶಿಗಳನ್ನು ಅಭಿನಂದಿಸಿದ್ದಾರೆ; ಆದರೆ ಶ್ರೀ ಕೃಷ್ಣ ಮೆನೊನ್ನರ ರಾಯಭಾರದಿಂದಲೇ ಇದು ಸಾಧಿಸಿತೆಂದೂ ಕೆಲ ಸಮಯದ ಹಿಂದೆ ನಾಲ್ವರು ವೈಮಾನಿಕರನ್ನು ಬಿಡುಗಡೆ ಮಾಡಿದಾಗಲೇ ಮೆನೊನ್ನರು ಉಳಿದವರ ಬಿಡುಗಡೆಯಾಗುವುದೆಂಬ ಭವಿಷ್ಯ ನುಡಿದಿದ್ದರೆಂದೂ ಭಾರತೀಯರೂ ಲೋಕದ ಧುರೀಣರೂ ತಿಳಿದಿರುವುದೊಳಿತು.

ಡೀಮರಿಂದ ಪರಿಹಾರ

ಸೈಗಾನಿನಲ್ಲಿ ನಡೆದ ಗೊಂದಲಗಳಿಂದ ಅಂತಾರಾಷ್ಟ್ರೀಯ ಶಸ್ತ್ರ ಸಂಧಾನ ನಿಯಂತ್ರಣ ಮಂಡಳಕ್ಕೆ ಉಂಟಾದ ನಷ್ಟಕ್ಕೆ ಡೀಮರ ಸರಕಾರ ಪರಿಹಾರವನ್ನು ಕೊಡಲು ಮುಂಬಂದಿದೆಯೆಂದು ನೆಹರು ಭಾರತದ ಲೋಕಸಭೆಯಲ್ಲಿ ಹೇಳಿದ್ದಾರೆ. ಜಿನೇವದ ಒಪ್ಪಂದದಂತೆ ವೀಟಮಿನರೊಡನೆ ಚುನಾವಣೆಯ ಮಾತುಕತೆ ನಡೆಸಲು ಡೀಮರು ಒಪ್ಪಿದ್ದಾರಾಗಿಯೂ ತಿಳಿದು ಬರುತ್ತದೆ, ಆದರೆ ಇದರಿಂದ ಕಮ್ಯೂನಿಸ್ಟರ ಶರತ್ತುಗಳೆಲ್ಲಕ್ಕೂ ಒಪ್ಪಿಗೆ ಕೊಡಲು ಡೀಮರು ಸಿದ್ಧರಿರುವರೆಂದಾಗಲೀ ಚುನಾವಣೆಗಳು ನಡೆದೇ ತೀರುವುವೆಂದಾಗಲೀ ಹೇಳಲಾಗದು.

ದೂರ ದರ್ಶಿಗಳ ಮತ

ಇದೇ ಆಗೋಸ್ತು ೧೫ರಂದು ಗೋವೆಯೊಳಗೆ ಭಾರತೀಯರು ಕೆಲವು ಸಹಸ್ರ ಸಂಖ್ಯೆಯಲ್ಲಿ ಸತ್ಯಾಗ್ರಹಕ್ಕೆ ನುಗ್ಗಲಿರುವರೆಂದು ವರದಿಗಳು ಹೇಳುತ್ತವೆ. ಇದು ಸಾಮೂಹಿಕ ಪ್ರವೇಶದಲ್ಲಿ ಪರಿಣಮಿಸಿದರೆ, ಭಾರತ ಸರಕಾರದ ಪೋಲೀಸರು ತಡೆಯಬಹುದು ಎಂಬ ಸಂಶಯವಿದೆ. ಏಕೆಂದರೆ, ಸಾಮೂಹಿಕವಾಗಿ ಸತ್ಯಾಗ್ರಹಿಗಳು ಗೋವೆಯನ್ನು ಹೊಕ್ಕರೆ, ಪೋರ್ಚುಗೀಜರು ಅವರನ್ನು ತಡೆಯಲು ಗೊಳೀಬಾರು ನಡೆಸಲು ಹಿಂಜರಿಯಲಿಕ್ಕಿಲ್ಲ; ನಾಲ್ಕು ಹೆಣ ಬಿದ್ದ ಪಕ್ಷದಲ್ಲಿ ಸತ್ಯಾಗ್ರಹಿಗಳಲ್ಲಿ ಕೆಲವರ ತಾಳ್ಮೆಯಾದರೂ ತಪ್ಪಿ ಹಿಂಸೆಗೆ ಅವರು ತೊಡಗಬಹುದು. ಅಲ್ಲದೆ ಪೋರ್ಚುಗೀಜರ ಕೈಯಲ್ಲಿ ಅನೇಕ ಭಾರತೀಯರ ಮರಣವಾಯತೆಂದಾದರೆ, ಭಾರತದ ಜನತೆ ರೊಚ್ಚಿಗೆದ್ದು ಸರಕಾರದ ಯಾವ ಆಕ್ಷೇಪವನ್ನೂ ಗಮನಿಸದೆ ಗೋವೆಯ ಮೇಲೆ ದಾಂಡು ನಡೆಸಬಹುದು—ಆಗ ಭಾರತದ ಪೋಲೀಸು ಮತ್ತು ಸೈನಿಕರೇ ಭಾರತೀಯರನ್ನು ತಡೆಯಲು ಗುಂಡು ಹಾರಿಸುವ ಪ್ರಸಂಗ ಬಂದರೂ ಆಶ್ಚರ್ಯವಿಲ್ಲ. ನೆಹರು ಈ ಬಗೆಯ ಪರಿಣಾಮವನ್ನು ವಿಮೋಚನೆಯ ಆಂದೋಲನ ಮಾಡಬಾರದು ಎಂದು ಅಪೇಕ್ಷಿಸುತ್ತಾರೆ—ಆದುದರಿಂದಲೇ ಸಾಮೂಹಿಕ ಸತ್ಯಾಗ್ರಹ ಇಷ್ಟವಲ್ಲ ಎಂದು ಒತ್ತಿಒತ್ತಿ ಹೇಳುತ್ತಿದ್ದಾರೆ.

ಮದ್ಯಪಾನ ಪ್ರತಿಬಂಧ

ಆಂಧ್ರ ಸರಕಾರ ರಾಮಮೂರ್ತಿ ಸಮಿತಿಯವರು ಪಾನನಿರೋಧ ಘೋರಣೆ ಕುರಿತು ನೀಡಿದ ಸಿಫಾರಸುಗಳನ್ನು ಸ್ವೀಕರಿಸಿಲ್ಲವೆಂದೂ ಮದ್ಯಪಾನ ಪ್ರತಿಬಂಧವನ್ನು ಕಟ್ಟುನಿಟ್ಟಾಗಿ ಮುಂದರಿಸಿಕೊಂಡು ಹೋಗಲಾಗುವುದೆಂದೂ ಸಂಬಂಧಿಸಿದ ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ.

ಲೋಹಿಯರ ಹೇಳಿಕೆ

ಪ್ರಜಾಸಮಾಜವಾದಿ ಪಕ್ಷದ "ಬಂಡುಗಾರ" ಧುರೀಣ ಡಾ. ರಾಮಮನೋಹರ ಲೋಹಿಯರ ಸದಸ್ಯತನವನ್ನು ಶಿಸ್ತುಭಂಗದ ನೆಪದಲ್ಲಿ ಪಕ್ಷದ ರಾಷ್ಟ್ರೀಯ ಸಭೆ ಅಮಾನತು ಮಾಡಿರುವುದರಿಂದ, ಲೋಹಿಯರು ಹೊಸ ಪಕ್ಷವನ್ನು ಸ್ಥಾಪಿಸುವ ತಮ್ಮ ವಿಚಾರಕ್ಕೆ ದೃಢವಾಗಿ ಅಂಟಿಕೊಂಡಿರುವಂತೆ ತೋರುತ್ತದೆ. ತನ್ನ ಪಕ್ಷವು ಇದೇ ವರ್ಷದ ಕೊನೆಯೊಳಗಾಗಿ ಸ್ಥಾಪಿಸಲ್ಪಡುವುದೆಂದು ಅವರು ಹೇಳಿದ್ದಾರೆ.

ಸ್ಥಳಾಭಾವದಿಂದ ಶ್ರೀಮತಿ ಸಂಜಾಂಗ ಸಂಪಾದಕರಿಂದ ಬಂದ 'ಅಧಿಕಮಾಸದಲ್ಲಿ ಉಪಾ ಕರ್ಮ, ಶ್ರೀಕೃಷ್ಣ ಜನ್ಮಾಷ್ಟಮಿಯ ಮಹೋತ್ಸವಾದಿಗಳನ್ನು ಆಚರಿಸುವುದು ಶಾಸ್ತ್ರ ವಿಧಿಗೆ ಸಿದ್ಧ' ಎಂಬ ಜಾಹೀರಾತನ್ನು ಶ್ರೀ ಸಾ. ರಾಮಚಂದ್ರ ರಾವ್, ಅತ್ತೂರು ಇವರು ಕಳುಹಿಸಿದ 'ಜನಮಹೋತ್ಸವದ ಕೃಷಿಯಜ್ಞ' ಎಂಬ ಲೇಖನವನ್ನು ಪ್ರಕಟಿಸಲಾಗಲಿಲ್ಲ. ಸಂ. ನ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 211/55-

ನಾಗಮ್ಮ ಸಿದ್ರಿ. ಸುಬ್ಬಿ ಸಿದ್ರೀರ ಮಗಳು, ಕುಂದಾಪುರ ತಾಲ್ಲೂ ಬೈಜೂರು ಗ್ರಾಮದ ಮೇಲು ಗಾಯಡಿ ಸುಬ್ಬಿ ಸಿದ್ರೀರ ಮನೆ.

ವಾದಿಳು.

1. ಮಂಜ } ಕಾರ್ಕಿ ಮಾಸ್ತಿ ಮಕ್ಕಳು.
2. ದುಗ್ಗ }
3. ಲಿಂಗ. 1ನೇ ಪ್ರತಿವಾದಿ ಮಗ.

ಪ್ರತಿವಾದಿರು.

ಕುಂದಾಪುರ ತಾಲ್ಲೂ ಉಪ್ಪುಂದ ಗ್ರಾಮದ ಶಿರೂರ ಮಂಜಣ ಮನೆಯಲ್ಲಿರುವವರು.

ಸದ್ರಿ ದಾವೆಯು 2 ಮತ್ತು 3ನೇ ಪ್ರತಿವಾದಿರಿಗೆ ತಿಳಿಯಪಡಿಸಿದ್ದು.

ಸದ್ರಿ ವಾದಿಳು ಪ್ರತಿವಾದಿರಿಂದ ಕಳೆದ ವಿಜಯ ಮತ್ತು ಜಯ ಸಂವತ್ಸರಗಳಿಗೆ ಬರತಕ್ಕ ಮೂಲಗೇಣಿ ಬಾಕಿ ಉಳಿದಂತೆ ರೂಪಾಯಿ 50-5-0ನ್ನು ಬರಪಾಡಿಕೊಳ್ಳುವದೇ ದಾಕ್ಲು ಮಾಡಿದ ಮೇಲಿನ ದಾವೆ ತಾ. 12-8-55ಕ್ಕೆ ನೋಟ್ಲಾಗ್ದಿದ ಕೋರ್ಟಿನಲ್ಲಿ ತಪ್ಪಿಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮ ಉಪಾಪರಣೆಯುದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(Sd.) Y. Manjaya Shetty.
Advocate for Plaintiff.

ಮೊಕ್ಕಾಂ: ಕುಂದಾಪುರ. ತಾ. 1-8-55.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ಶೆಣೈಯವರ

ಓದಲೇಬೇಕಾದ ಮೂರು ಪುಸ್ತಕಗಳು

ಮೀರೆ ಮತ್ತು ನಾನು (೧೫ ಮೀರಾ ಕತೆಗಳು)	1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು	1—0—0
ಕಸದ ಡಬ್ಬಿಗಳು (೨೪ ಹರಟೆಗಳು)	1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ಪ್ರ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಗೀತೆಯ ಕೈಗನ್ನಡಿ

* *

ನವಯುಗ ಪ್ರೆಸ್, ಉಡುಪಿ.

ಉಡುಪಿ

ಬೋರ್ಡು ಹೈಸ್ಕೂಲಿನಲ್ಲಿ— ಮದ್ರಾಸು ವಿದ್ಯಾ ಇಲಾಖೆಯ ಡೈರೆಕ್ಟರರ ನಿರ್ಧಾರದಂತೆ ಈ ವರ್ಷಾರಂಭದಿಂದ (1) ಎಂಗ್ರಿಕಲ್ಚರ್, ಮತ್ತು (2) ಪ್ರೋಟಿಯಿಂಗ್ ಪೈಂಟಿಂಗ್ ಎಂಬೀ ಎರಡು ವಿಶೇಷ ತರದ ವೃತ್ತಿಪರ ಶಿಕ್ಷಣವನ್ನು ಹೈಸ್ಕೂಲು ತರಗತಿಗಳಲ್ಲಿ ಪ್ರಾರಂಭಿಸಲಾಗಿದೆ.

ಈ ಹೈಸ್ಕೂಲಿನ ವಿದ್ಯಾರ್ಥಿ ನಾಯಕ ಮತ್ತು ಉಪನಾಯಕರಿಗಾಗಿ ಶ್ರೀಗಳಾದ ನರಸಿಂಹ ಕೇಳುದ ಮತ್ತು ನಾರಾಯಣ ಬಲ್ಲಾಳರು ಆಯ್ಕೆಮಾಡಾಗಿ ಚುನಾವಣೆ ಜರುಗಿದುವರು.

ತಾಲೂಕು ಎಯಿಡೆಡ್ ಶಾಲಾ ಟೀಚರ್ಸ್ ಯೂನಿಯನ್ನಿನ ಕಾರ್ಯಕಾರಿ ಮಂಡಳಿಯ ಸಭೆಯು ಕಳೆದ 31ರಲ್ಲು ಶ್ರೀ ಎಸ್. ಕೆರ್ವಾಂಥೀಸರ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ವರ್ಷಕ್ಕೆ ಶ್ರೀ ಕೆರ್ವಾಂಥೀಸರು ಅಧ್ಯಕ್ಷರಾಗಿಯೂ ಶ್ರೀ ಡಾಂಡಿಯವರು ಕಾರ್ಯದರ್ಶಿಯರಾಗಿಯೂ, ಶ್ರೀಗಳಾದ ಎಚ್. ಎಲ್. ಭಟ್ಟ ಮತ್ತು ಎಸ್. ರಾಮಸೆಟ್ಟರು ಉಪಾಧ್ಯಕ್ಷ ಮತ್ತು ಜೊತೆಕಾರ್ಯದರ್ಶಿಗಳಾಗಿಯೂ, ಟಿ. ಕಾಂತಪ್ಪ ಮತ್ತು ನಾಸುದೇವ ಭಟ್ಟರು ಸಂಘಟಕರಾಗಿಯೂ ಆಯ್ಕೆಮಾಡಲ್ಪಟ್ಟರು. ಕೆಲವು ನಿರ್ಣಯಗಳೂ ಮಂಜೂರಾದುವು.

ಆಫೀಸು ಬದಲಾವಣೆ— ಶಿರಿಬೀಡಿನಲ್ಲಿದ್ದ ಕೃಷಿ ಪ್ರದರ್ಶಕರ ಕಚೇರಿಯು ಕಳೆದ ತಾ 26 ರಿಂದ ಮುಸೀದಿ ರಸ್ತೆಯ ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟ್ ಸಂಸ್ಥೆಯ ಕಟ್ಟಡಕ್ಕೆ (ರೇಶನ್ ಕಾಲದ ಸೆಂಟ್ರಲ್ ಸ್ಟೋರ್ಸು ಗೋದಾಮು) ಬದಲಾಗಿದೆ ಎಂದು ಕೃಷಿ ಆಫೀಸರರು ತಿಳಿಸುತ್ತಾರೆ.

ಉಡುಪಿ-ಚಿಟ್ಟಾಣಿ ಮಾರ್ಗದ ರಸ್ತೆ ಕಳೆದ ತಾ. 30ರಲ್ಲು ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿಗಳ ನೇತೃತ್ವದಲ್ಲಿ ಶಾಲೆಯ ಸುಮಾರು 60 ಮಂದಿ ಸ್ವಯಂಸೇವಕರು ಸ್ಕೌಟು ಮಾಸ್ಟರ್ ಶ್ರೀ ಕೆ. ಗೋಪಾಲ ಸೆಟ್ಟರ ಸಹಕಾರದೊಂದಿಗೆ ಚಿಟ್ಟಾಣಿ ಮಾರ್ಗದಲ್ಲಿ ಶ್ರಮದಾನ ಕಾರ್ಯದಲ್ಲಿ ಶ್ರಮದಾನ ಮಾಡಿದುದು ಅಭಿನಂದನೀಯವಿದೆ. ಈ ಸಂದರ್ಭದಲ್ಲಿ ಮಾ ಟಿ ಎಸ್ ಎ. ಪೈ, ಶ್ರೀ ಎಸ್. ಎನ್. ಮದಾಯಸ್ ಹೆಡ್ಮಾಸ್ಟರ್ ಮತ್ತು ಶ್ರೀ ಕೆ. ಗೋಪಾಲ ಸೆಟ್ಟರು ಸಮಯೋಚಿತಮಾತುಗಳನ್ನಾಡಿದರು. ರಸ್ತೆ ಕಮಿಟಿ ಪರವಾಗಿ ಶ್ರೀ ಪಿ. ಮುಖ್ಯಪ್ರಾಣ ತಂತ್ರಿಗಳು ಧನ್ಯವಾದಗಳನ್ನರ್ಪಿಸಿದರು. ಪಸುಮಾನ್ ಕಂಪನಿಯ ಪ್ಯಾರೆಕ್ಟರರು ಮೆನೇಜಿಂಗ್ ಪ್ಯಾರೆಕ್ಟರ್ ಶ್ರೀ ಯು. ಎಸ್. ನಾಯ್ಕರು ಈ ಸಮಾರಂಭದಲ್ಲಿ ಉಗಸ್ಥಿತರಿದ್ದರು ಲಘೂಪಹಾರ ಸಾಮೂಹಿಕ ಭೂಯಾಗ್ರಹಣದೊಂದಿಗೆ ಶ್ರಮದಾನ ಕಾರ್ಯ ಕೊನೆಗೊಂಡಿತು.

ದ್ವಿ. ಪಂ. ಯೋಜನೆಯಲ್ಲಿ ಉಡುಪಿಯ ಸೌಕರ್ಯಗಳು ಇಪ್ಪತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ನೀರಿನ ಪೂರೈಕೆ, ಇಪ್ಪತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಗುಪ್ತ ಚರಂಡಿ ನಿರ್ಮಾಣ, ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಭಿಕ್ಷುಕರ ವಸತಿ ಕಟ್ಟುವಿಕೆ, ಟೌನ್ ಪ್ಲಾನಿಂಗ್ ಮತ್ತು ಹೊಲಸು ಗೇರಿಗಳ ನಿರ್ಮೂಲನಗಳ ಬಗ್ಗೆ ಎಂಟೂವರೆ ಲಕ್ಷ ರೂಪಾಯಿ ವೆಚ್ಚದ ಯೋಜನೆಗಳಾಗಿವೆ. ಈ ಕಾರ್ಯಗಳನ್ನು ಪೂರ್ತಿಗೊಳಿಸಲು ಸರಕಾರ ಸಾಲ ಹಾಗೂ ಗ್ರಾಂಟನ್ನು ಪಡೆಯುವ ಕೇಳಿಕೆಗಳೂ ಇವೆ.

ಮುನ್ಸಿಪಲ್ ಕೌನ್ಸಿಲು ಸಭೆಯು— ಕಳೆದ ತಾ 29ರಲ್ಲು ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. 1955-56ರ ಬಜೆಟಿನಲ್ಲಿ ರಸ್ತೆಗಳ ಬಗ್ಗೆ ವಿಂಗಡಿಸಿದಲಾದ ಪಣವನ್ನು ಸರಿಸುಮಾರಿನಲ್ಲಿ ಸರಕಾರದ ಅಕ್ಷೇಪಣೆಗೂ ಇರಲಾರದು, ಆದರೆ ಕೊರತೆಯ ಬಜೆಟನ್ನು ಸರಿಪಡಿಸುವುದು ಕೌನ್ಸಿಲಿನ ಜವಾಬ್ದಾರಿಯಿದೆ ಎಂದು ನಗರಸಭೆಗೆ ತಿಳಿಸಿದ ಸರಕಾರ ಸುತ್ತೋಲೆಯಂದಂ ಓದಿ ವಿಮರ್ಶಿಸಲಾಯಿತು. ಈ ಮೊದಲು ಪಾಸುಮಾಡಿದ ಬಜೆಟನ್ನು ಇಪ್ಪತ್ತಿಬ್ಬಂದಿತೆಂದರೆಗೊಡಿಸಬೇಕೆಂದು ತೀರ್ಮಾನವಾಯಿತು. ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಕಾರ್ಯಕ್ರಮಗಳ ಕುರಿತು ಉಪಸಮಿತಿಯು ತಯಾರಿಸಿದ ವರದಿಯಲ್ಲಿಯ ಕೆಲವು ಅಂಶಗಳನ್ನು ತೆಗೆಯಬೇಕೆನ್ನುವ ಶ್ರೀ ಪಿ. ವಿ. ಆಚಾರ್ಯರ ಸೂಚನೆ ಬಹುಮತದಿಂದ ಪಾಸಾಯಿತು. ಈಗಿರುವ ಬಸ್ ಸ್ಟೇಂಡನ್ನು ಸಿಟಿಬಸ್ ನಿಲ್ದಾಣಕ್ಕೆ ಕೊಂಡುಹೋಗಿ ಬಸ್ ಸ್ಟೇಂಡನ್ನು ಮುನಿಸಿಪಲ್ ಆಫೀಸಿಗಾಗಿ ಉಪಯೋಗಿಸುವುದು ಮತ್ತು ಸಂತೆಕಟ್ಟೆಯಿಂದ ಪೆಟಿಟೇಂಡ್ ಬಂಗ್ಲೆ ರಸಕ ರಸ್ತೆಯನ್ನು ಪ್ರಹಸುತಮಾಡುವುದು—ಈ ಸೂಚನೆಗಳಿಗೆ ಮಾನ್ಯತೆ ದೊರೆಯಲಿಲ್ಲ. ಫಲಿಮಾರು ಮಠದ ರಸ್ತೆ ಸುಧಾರಣೆ ಬಗ್ಗೆ ರೂಪಾಯಿ 2000/- ವೆಚ್ಚ ಮಂಜೂರಾಯಿತು.

ಕಾಲೇಜುಯೂನಿಯನ್ ಉದ್ಘಾಟನೆ— ಪ್ರೊಫೆಸರ್ ಬಿ ಸಂಜೀವ ರಾಯರು ಕಳೆದ ತಾ. 29ರಲ್ಲಿ ಸ್ಥಳೀಯ ಎಂಜಿ. ಎಂ. ಕಾಲೇಜ್ ಯೂನಿಯನ್ನಿನ ಉದ್ಘಾಟನೆಯನ್ನು ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಯೂನಿಯನ್ ಅಧ್ಯಕ್ಷ ಶ್ರೀ ಕೆ. ರಾಧಾಕೃಷ್ಣ ಕಾರಂತರು ವಹಿಸಿದ್ದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಮಾತುಗಳಾನಂತರ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ತುಳಸಿದಾಸ ಜಯಂತಿಯು- ಎಂ. ಜಿ. ಎಂ. ಕಾಲೇಜಿನಲ್ಲಿ ತಾ. 31ರಂದು ಪ್ರಿನ್ಸಿಪಾಲ್ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿ ಪಲವರ ಭಾಷಣಗಳಾದುವು.

ಸರ್ವೋದಯ ಸಮಾಜ— ಎಂಬೀ ಕುರಿತು ಸ್ಥಳೀಯ ಗಂಡಸರ ಬುನಾದಿ ತರಬೇತಿ ಶಾಲೆಯ ವಿದ್ಯಾರ್ಥಿಕೂಟದ ಆಶ್ರಯದಲ್ಲಿ ಶ್ರೀ ಬಿ. ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಎ. ಜಿ ಆಳ್ವಿಯವರು ಕಳೆದ ತಾ 22ರಂದು ಭಾಷಣಮಾಡಿದ್ದರು.

"ಲೋಟೇಶ್ವರ— ದ. ಕ. ಜಿಲ್ಲಾ ಬೋರ್ಡು ತನ್ನ ಅಂಕಿತದಲ್ಲಿರುವ ಹೈಸ್ಕೂಲುಗಳಲ್ಲಿ ಎಸ್ ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಅತ್ಯಧಿಕ ಶೇಕಡಾ ತೇಗಡೆ ಹೊಂದಿದ ಶಾಲೆಗೆ ಕೊಡಮಾಡಿದ 'ರೋಲಿಂಗ್ ಶೀಲ್ಡ'ನ್ನು ಕೋಟೇಶ್ವರ ಬೋರ್ಡುಹೈಸ್ಕೂಲು ಶೇಕಡಾ 100ನ್ನು ತೇಗಡೆಯನ್ನು ಈ ಸಲ ಪಡೆದುಗಳಿಸಿದೆ. ಕಳೆದ ತಾ. 25ರಲ್ಲಿ ಜಿಲ್ಲಾ ಬೋರ್ಡಿನವರು ದಯಮಾಲಿಸಿದ ಈ ಶಿಲ್ಡನ್ನು ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಸುಬ್ರಾಯ ಉರಾಳರು ತಂದಾಗ ಶಾಲಾವಿದ್ಯಾರ್ಥಿಗಳು, ಅಧ್ಯಾಪಕ ವೃಂದದವರು ಹಾಗೂ ಊರವರು ಮೆರವಣಿಗೆಯಿಂದ ಎದುರುಗೊಂಡು ಪ್ರಮುಖ ರಸ್ತೆಗಳಲ್ಲಿ ಪ್ರದರ್ಶಿಸಿದರು. ಬಳಿಕ ಹೈಸ್ಕೂಲು ಸಮಿತಿ ಅಧ್ಯಕ್ಷ ಶ್ರೀ ಕೆ. ಸೀತಾರಾಮ ಐತಾಳರ ಹಿರಿತನದಲ್ಲಿ ಸಾರ್ವಜನಿಕಸಭೆ ಜರಗಿ ಭಾಷಣಗಳಾದುವು.

ಸುಬ್ರಹ್ಮಣ್ಯ— ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇಗುಲದ ಟ್ರಸ್ಟಿಗಳ ಉದಾರತೆಯಿಂದ ಸ್ಥಳೀಯ ಬೋರ್ಡು ಹಾ| ಎ| ಶಾಲಾ ಬಡವಿದ್ಯಾರ್ಥಿಗಳಿಗೆ ಕಳೆದ ತಾ. 25ರಿಂದ ದಿನಾಲೂ ಮಧ್ಯಾಹ್ನದ ಊಟದ ಪೂರೈಕೆಯು ಶ್ರೀ ದೇವಳದ ಕಡೆಯಿಂದ ನಡೆಯುತ್ತಲಿದೆ.

ಮಣಿಪಾಲ— ಸ್ಥಳೀಯ ಹೈಸ್ಕೂಲಿನಲ್ಲಿ ಕಳೆದ ತಾ. 29ರಲ್ಲು ವಿಶ್ವ ಸಂಸ್ಥೆಯ ಅಂಗವಾದ ವಿಶ್ವಾಸ್ವಾಸ್ಥ್ಯ ಸಂಸ್ಥೆಯ ದಿನಾಚರಣೆಯು ನಡೆಯಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ಪುಂಡಲೀಕ ಪೈಯವರು ವಿಶ್ವಸಂಸ್ಥೆ ಮತ್ತು ಅದರ ವಿವಿಧ ಅಂಗಗಳ ಕುರಿತು ಪರಿಚಯ ಭಾಷಣವಿತ್ತರು. ನಂತರ ಡಾ| ಎ. ಆರ್. ತೋನ್ಸೆಯವರು, ವಿಶ್ವಾಸ್ವಾಸ್ಥ್ಯ ಸಂಸ್ಥೆಯವರೇ ಸೂಚಿಸಿದ "ಪುಷ್ಟ ನೀರೇ ಉತ್ತಮ ಆರೋಗ್ಯಕ್ಕೆ ಕಾರಣ" ಎಂಬ ವಿಷಯದಲ್ಲಿ ಉಪನ್ಯಾಸನಿತ್ತರು. ಚಿತ್ರ ಮತ್ತು ಧ್ವಜ ಪ್ರದರ್ಶನವೂ ಇತ್ತು.

ನೆಲ್ಲಿಕಟ್ಟೆ (ಕುಂದಾಪುರ)ಜೈಭಾರತಿ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ23ರಲ್ಲು ರಾಷ್ಟ್ರೀಯ ವಿತ್ತರಿಣಾ ಯೋಜನೆಯ ಸಮಾಜ ಶಿಕ್ಷಣ ವ್ಯವಸ್ಥಾಪಕ ಶ್ರೀ ಕೆ ಕೆ. ಸೆಟ್ಟರ ನೇತೃತ್ವದಲ್ಲಿ ವಯಸ್ಕರ ಶಾಲೆಯೊಂದನ್ನು ಶ್ರೀ ಬಿ. ನರಸಿಂಹ ಸೆಟ್ಟರು ತೆರೆದರು. ಈ ಸಂದರ್ಭದಲ್ಲಿ ಪಲವರ ಭಾಷಣಗಳಿದ್ದು ಪಲ್ಲಕಿಯತ್ತಿಗಾನ ತಾಳಮದ್ದಳೆಯ ಕಾರ್ಯಕ್ರಮವೂ ಇತ್ತು.

ಬೈಂದೂರು- ಕಳೆದ ತಾ. 26ರಲ್ಲಿ ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ.ಎಸ್. ಬಾಬುಸೆಟ್ಟಿಯವರು ಸ್ಥಳೀಯ ಸಮಿಂಗಳಾ ವಿಹಾರ ಕೇಂದ್ರವೊಂದನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಸುಶೀಲಾ ಐ. ರಾಘವ ರಾಯರು ವಹಿಸಿದ್ದರು. ಕೇಂದ್ರದ ಕಾರ್ಯವನ್ನು ಮುಂದುವರಿಸಲು ತಾತ್ಕಾಲಿಕ ಕಾರ್ಯಕಾರೀ ಸಮಿತಿಯೊಂದು ರಚಿಸಲ್ಪಟ್ಟಿತು ಈ ಕೆಳಗಿನವರು ಸದಸ್ಯರಾಗಿ ಆಯಸಲ್ಪಟ್ಟರು. ಶ್ರೀಮತಿ ಇಂದಿರಾ ಜಿ. ಶೆಟ್ಟಿ, ಅಧ್ಯಕ್ಷೆ; ಶ್ರೀಮತಿ ಸುಶೀಲಾ ಐ. ರಾಘವರಾವ್, ಉಪಾಧ್ಯಕ್ಷೆ; ಕುಮಾರಿ ಕೆ. ಸರೋಜಿನಿ, ಕಾರ್ಯದರ್ಶಿನಿ; ಕುಮಾರಿ ಕೆ. ಜಯಲಕ್ಷ್ಮಿ, ಉಪಕಾರ್ಯದರ್ಶಿನಿ; ಶ್ರೀಮತಿ ಲಕ್ಷ್ಮಿ ಐ. ಮೋಹನ ರಾವ್, ಕುಮಾರಿಯರು ಪಿ. ಎಸ್. ಗಂಗಮ್ಮ, ಉಮಾ ಬಾಯಿ, ಪ್ರೇಮಾ ಬಾಯಿ, ಇತರ ಸದಸ್ಯರು.

ಪಡುಬಿದ್ರೆ— ಕಳೆದ ತಾ 21ರಂದು ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ ಪೈ, ಎಂ. ಎಲ್. ಎ. ರವರು ಪಲ್‌ಫೇರ್ ಎಕ್ಸಟೆನ್ಶನ್ ಪ್ರೊಜೆಕ್ಟಿನ ಕಡೆಯಿಂದ ಧರ್ಮಾಸ್ಪತ್ರೆಯ ಉದ್ಘಾಟನೆ ಮಾಡಿದರು. ಡಾ| ಪಿ. ಸಿ. ಹೆಗ್ಡೆಯವರ ನೇತೃತ್ವದಲ್ಲಿ ಈ ಆಸ್ಪತ್ರೆಯು ನಡೆಯುತ್ತಿದೆ.

ಕಟಪಾಡಿ— ಸ್ಥಳೀಯ ಹೈಸ್ಕೂಲ ಮಸೀದಿಯಲ್ಲಿ ವಿದ್ಯುದ್ದೀಪಗಳನ್ನು ಪ್ರಥಮವಾಗಿ ಬೆಳಗಿಸುವ ಸಮಾರಂಭವು ಕಳೆದ ತಾ 26ರಂದು ಶ್ರೀ ಹಾಂಗಾಳ ವೆಂಕಟ್ರಾಯ ನಾಯ್ಕರ ಅಧ್ಯಕ್ಷತೆಯಲ್ಲಿ ಶ್ರೀ ಟಿ ಎ. ಪೈ, ಎಂ. ಎಲ್. ಎ. ರವರ ನೇತೃತ್ವದಲ್ಲಿ ನೆರವೇರಿತು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ದಕ್ಷಿಣ ಧ್ರುವ ಸಕ್ಕಾಗ—

ಬರೆದವರು: ನಾರಂಗಿ ಭಟ್ಟ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೦—೦

ಹೊಸ ರೀತಿ ಕಥೊಬ್ಬರ ಮಿಶ್ರ ಗುಣಗಳ ಕಥಾ ಸಂಗ್ರಹ ಇದಾಗಿದೆ—ಇದರಲ್ಲಿ ನವೀನ ವಾದ ವಸ್ತುವನ್ನು ಹೆಚ್ಚಿನ ದಕ್ಷತೆಯಿಂದ ಚಿತ್ರಿಸಿರುವ "ಡಾ. ಕುಥರ್ಬರ್ಟರ ಅಕಾಲ ಮರಣ" "ಮಸೇರಿಯ ಭವಿಷ್ಯ" "ಕೈಸುಕೊಂಡದ ಹನುಮಪ್ಪ," "ಮಾರ ಜಗರಿಗಿಳಿದಾಗ" ಎಂಬ ಉತ್ತಮ ಕತೆಗಳನ್ನು ಕಾಣಬಹುದು; ಜೊತೆಗೆ, "ಜೀವ-ಜಾತ್ರೆ", "ಕಾಯಿ" "ನೂತನ-ಮಿತಿ", "ಮಿತವ್ಯಯ" ಎಂಬ ಸಾಮಾನ್ಯ ಕತೆಗಳನ್ನೂ ನೋಡಬಹುದು. "ದಕ್ಷಿಣ ಧ್ರುವ ಸಕ್ಕಾಗ", "ಅಲೆಕ್ಟಾಂಡರನು ಭಾರತವನ್ನು ಬಿಟ್ಟಾಗ" ಇವುಗಳನ್ನು ಇನ್ನಷ್ಟು ಕಲಾತ್ಮಕವಾಗಿ ಚಿತ್ರಿಸಿದ್ದರೆ...ಎಂದೆನಿಸುತ್ತದೆ. "ಮೈಲಿಗೆ ಮದ್ದು", "ಭೂತದ ಬಲಿ" ಇವುಗಳಲ್ಲಿ ಕಥನ ತಂತ್ರದ ನೈಪುಣ್ಯ ವ್ಯಕ್ತವಾಗಿಲ್ಲ. ಒಟ್ಟಿನಲ್ಲಿ ಈ ಸಂಗ್ರಹ ಕಲಸು ಮೇಲೋಗರದಂತಿದ್ದರೂ ಶ್ರೀ ಭಟ್ಟರು ಉತ್ತಮ ಕತೆಗಳನ್ನು ಬರೆಯಬಲ್ಲರು ಎಂಬುದಕ್ಕೆ ಕೆಲವಾದರೂ ನಿದರ್ಶನಗಳು ಇಲ್ಲಿ ಸಿಗುತ್ತವೆ—ಈ ದಾರಿಯಲ್ಲಿಯೇ ಅವರು ಮುನ್ನಡೆಯಲಿ; ತಮ್ಮ ಒಳ್ಳೆಯ ಕತೆಗಳನ್ನೆಯುದು ಅವರು ಕನ್ನಡಿಗರಿಗೆ ನೀಡುತ್ತಿರಲಿ!

ಬುಶ್ ಕೋಟು—

ಬರೆದವರು: ಎಕ್ಕ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೦—೦

ಇದು ಆಕಾಶವಾಣಿಯಲ್ಲಿ ಪ್ರಸಾರಕ್ಕೆಂದು ಮೂಲತಃ ಬರೆದಂತಿರುವ ಏಕಾಂಕಗಳ ಸಂಕಲನ. ಸಾಮಾನ್ಯವಾಗಿ ಪ್ರತಿಯೊಂದೂ ನಾಟಕವು ಹಾಸ್ಯ ರಸವನ್ನು ಚಿಮ್ಮುತ್ತದೆ. ನಿತ್ಯ ಜೀವನದ ಸನ್ನಿವೇಶಗಳ ಕೊಂಕು ಜೊಂಕುಗಳನ್ನೆ ವಾಸ್ತವತೆಯ ಕಡಿ ಗುಳಿಗೆಗೆ ವ್ಯಂಗ್ಯದ ಸಕ್ಕರೆಯ ಹೊದಿಕೆ ಹಾಕಿದಂತೆ ಚಿತ್ರಿಸಿರುವುದರಿಂದ ಹಿಮಗರಸ್ಥೇ ಟೀಕೆಗೆ ಗುರಿಯಾದ ವ್ಯಕ್ತಿಗಳೂ ನಕ್ಕು, ತಮ್ಮನ್ನು ತಿದ್ದಿಕೊಳ್ಳಬಲ್ಲರು. "ವನಲಕ್ಷ್ಮಿ ಪೂಜೆ", "ಆರೋಗ್ಯ ಭಾಗ್ಯ" ಇವುಗಳಲ್ಲಿ ಸ್ವಲ್ಪಮಟ್ಟಿಗೆ ಪ್ರಚಾರದ ದೃಷ್ಟಿ ವ್ಯಕ್ತವಾಗುತ್ತದೆ. "ದಿಗ್ದರ್ಶಕಕ್ಕೆ ಸಾರ್ವಭೌಮ" ಮತ್ತು "ಅತಿಥಿ" ಇವುಗಳ ವಸ್ತು ಮನಸ್ಸಿಗೆ ಅಷ್ಟು ಒಪ್ಪಿಗೆಯಾಗುವುದಿಲ್ಲ. "ಬುಶ್ ಕೋಟು" "ಶನಿವಾರದ ಅತಿಥಿ", "ರಾಜಾ ರಾಣಿ ಟ್ರೇಗ", "ಮುದ್ರಾರಾಕ್ಷಸ" ಇತ್ಯಾದಿಗಳು ಚೆನ್ನಾಗಿವೆ. "ಭಾವಬಿಡಿಗೆ" ಯಲ್ಲಿ ಹಾಸ್ಯರಸಕ್ಕಿಂತಲೂ ಮಾನವತೆಯ ಮನೋಭಾವ ಬಲಕ್ಕೆ ಹೆಚ್ಚುದಾಗಿ ಬಂದಿದೆ ಈ ನಾಟಕಗಳಲ್ಲಿ ಸೆಚ್ಚಿನವನ್ನು ರಂಗಭೂಮಿಯ ಮೇಲೆ ಅಭಿನಯಿಸಿ, ಪ್ರೇಕ್ಷಕರನ್ನು ಸಂತೋಷಗೊಳಿಸಬಹುದು.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಶಲ್ ನಂ ೦] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಪಾಧ್ಯಾಯರು ಬೇಕು

ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ರಾತ್ರಿಗೆ ಹಾಯರ್ ಗ್ರೇಡ್ ತರ ಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು.

ಕೆ ವಿಶ್ವೇಶ್ವರ ರಾವ್,
ಮೆನೇಜರ್
ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ಸ್ಕೂಲ್— P. O. ಎಲ್ಲೂರು, ದ. ಕ.

ಮಂಗಳೂರು

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಯಾವ್ಯಾವುವು ಎಂಬುದನ್ನು ಪರಿಶೀಲಿಸಿ ವರದಿಮಾಡಲು ನೇಮಿಸಲಾದ ಸಮಿತಿಯ ಅನೌಪಚಾರಿಕ ಸಭೆಯು ಕಳೆದ ತಾ 28ರಲ್ಲು ಶ್ರೀ ಕೆ. ಸದಾನಂದ ಹೆಗ್ಡೆ, ಎಂ. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಜಿಲ್ಲಾ ಜೋರ್ಡು ಅಧ್ಯಕ್ಷ ಡಾ ಕೆ. ಕೆ. ಹೆಗ್ಡೆ, ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶಾಸನ ಸಭಾ ಸದಸ್ಯರುಗಳಾದ ಶ್ರೀಯುತರು ಬಿ. ವಿ. ಬಾಳಿಗ, ವೈ. ಮಂಜಯ್ಯ ಸೆಟ್ಟಿ, ಕೆ. ಎ. ಗೌಡ, ಮೇಲೊತ್ತು ನಾರಾಯಣನಾಂಬಿಯಾರ್ ಹಾಗೂ ಸಿ. ಆರ್. ರಂಗನಾಥ ಪೂಂಜ, ಕೆ. ಆರ್. ಆಚಾರ್ ಉಡುಪಿಯ ಕೆ. ಶ್ರೀನಿವಾಸ ಪೈ ಮೊದಲಾದವರು ಹಾಜರಿದ್ದರು. ಕರಾವಳಿಯ ರೈಲು ರಸ್ತೆಯ ರಚನೆ, ನೀರಾವರಿ ಯೋಜನೆಗಳು, ಮೆಡಿಕಲ್ ಕಾಲೇಜು, ಕರ್ನಾಟಕ ಪೊಲಿಟೆಕ್ನಿಕನ್ನು ಇಂಜಿನಿಯರಿಂಗ್ ಕಾಲೇಜಾಗಿ ಸಾರ್ವಜನಿಸುವುದು, ಮೀನು ವ್ಯವಸಾಯ ಅಭಿವೃದ್ಧಿ, ಸರಕಾರಿ ತರಬೇತಿ ಕಾಲೇಜಿಗೆ ಕಟ್ಟಡ ರಚನೆ ಇತ್ಯಾದಿಯನ್ನು ಹೊಸತಾಗಿ ರಚಿಸಲ್ಪಟ್ಟ ಗ್ರಾಮಾಭಿವೃದ್ಧಿ ಸಲಹಾ ಸಮಿತಿಗಳ ವರದಿಗಳಿಗಾಗಿ ವಿಳಂಬಿಸದೆ, ಕೂಡಲೇ ಯೋಜನೆಯಲ್ಲಿ ಸೇರಿಸಿಕೊಳ್ಳುವಂತೆ ಮದ್ರಾಸು ಸರಕಾರಕ್ಕೆ ವರದಿ ಮಾಡುವ ಬಗ್ಗೆ ಜಿಲ್ಲಾ ಪ್ಲೇನಿಂಗ್ ಬೋರ್ಡಿನ ಸಭೆಯನ್ನು ಬೇಗನೆ ಕರೆಯಬೇಕೆಂದು ಜಿಲ್ಲಾ ಕಲೆಕ್ಟರರನ್ನು ವಿನಂತಿಸುವ ಹಾಗೂ ಮುಖ್ಯಸಚಿವ ಸುಬ್ಬ ಮಂತ್ರಿ ಮತ್ತಿತರ ಮಂತ್ರಿಗಳನ್ನು ಜಿಲ್ಲೆಯ ಶಾಸನ ಸಭಾಸಭೆಗಳೊಂದು ಕಾಣಬೇಕೆನ್ನುವ ನಿರ್ಣಯಗಳಾದುವೆಂದು ತಿಳಿದು ಬರುತ್ತದೆ.

ನಗರ ಸಭೆಯು—ತಾ 30ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಹೊಗೆ ಬಜಾರಿನ ಸರಕಾರಿ ಐಸ್ ಕಾರ್ಖಾನೆಯಿಂದ ಹೊಗೆ ಬಜಾರಿನ ಲೆವಲ್ ಕ್ರಾಸಿಂಗ್ ವರೆಗೆ ರೂ. 75,000 ಖರ್ಚಿನಿಂದ ಒಂದು ರಸ್ತೆಯ ನಿರ್ಮಾಣ, ಮಂಗಳಾದೇವಿ ರಸ್ತೆಯನ್ನು ಹೊಗೆ ಬಜಾರ್ ರಸ್ತೆಗೆ ಕೂಡಿಸುವರೆ ರೂ. 50,000 ಖರ್ಚು ಮಾಡಿ ಹೊಸ ರಸ್ತೆಯರಚನೆ, ರೂ 5,11,000 ವೆಚ್ಚದಿಂದ 80 ಎಕ್ರೆಗಳಷ್ಟು ಕೈಗಾರಿಕಾವಲಯದ ಅಭಿವೃದ್ಧಿಯೋಜನೆ, ರೂ 5,00,000 ದಿಂದ 60 ಎಕ್ರೆಗಳಷ್ಟು ವಿಸ್ತೀರ್ಣದಲ್ಲಿ ಕೈಗಾರಿಕಾ ಕ್ಷೇತ್ರ ಅಭಿವೃದ್ಧಿ ಯೋಜನೆಯನ್ನು ವ್ಯವಸ್ಥೆಗೊಳಿಸುವುದು ಮತ್ತು ಹೊಗೆ ಬಜಾರಿನ ಕ್ಷೇತ್ರದಲ್ಲಿ ರೂ. 7,26,000 ಖರ್ಚಿನಲ್ಲಿ ಹೊಲಗೇರಿ ಶುದ್ಧೀಕರಣ ಯೋಜನೆಗಳನ್ನು ಟೌನ್ ಪ್ಲಾನಿಂಗ್ ಯೋಜನೆಯಲ್ಲಿ ಸೇರಿಸಬೇಕೆಂದು ಸರ್ಕಾರವಾಯಿತು. ಬರುವ ನಗರ ಸಭಾ ಚುನಾವಣೆಗೆ ಕಿಡ್ಡು ಪಡಿ ಮಾಡಿದ ಮತದಾರರ ಪಟ್ಟಿಯನ್ನು ಉಪಯೋಗಿಸಬೇಕೆಂಬ ಮತ್ತು ಗುರುತಿನ ಬದಲು ಚಿನ್ಹೆಯ ರೀತಿಯನ್ನು ಚುನಾವಣೆಗೆ ಉಪಯೋಗಿಸಬೇಕೆಂಬ ದೇವಕೋಟ್ಯ ನಗರ ಸಭೆಯ ಸೂಚನೆಗೆ ಈ ನಗರ ಸಭೆಯು ಒಪ್ಪಿಗೆ ಕೊಟ್ಟಿತು. ವೆನ್‌ಲೋಕ್ ಆಸ್ಪತ್ರೆಯಿಂದ ಮೂಡು ಶೆಡ್ಡಿಯ ಕ್ಷಯ ರೋಗಾಸ್ಪತ್ರೆಗೆ ಕ್ಷಯ ರೋಗಿಗಳನ್ನು ಸಾಗಿಸಲು ಮುನ್ಸಿಪಾಲ್ ಎಂಬ್ಯುಲೆನ್ಸುಗಳನ್ನು ರೂಪಾಯಿ ಐದರಂತೆ ಒಂದು ಪ್ರಯಾಣಕ್ಕೆ ಬಾಡಿಗೆ ನಿಶ್ಚಯಿಸಲಾಯಿತು.

ಲ್ಯಾಬ್ರೆರಿ ಚಳವಳಿ ಮತ್ತು ಸಾಮಾನ್ಯ ಓದುಗ— ಎಂಬೀ ವಿಷಯದಲ್ಲಿ ಕಳೆದತಾ. 31ರಲ್ಲಿ ಸೈಂಟ್ ಎಲೋಸಿಯಸ್ ಕಾಲೇಜ್ ಪ್ರಾಧ್ಯಾಪಕ ಶ್ರೀ ಸಿ ನಾರಾಯಣ ರಾಯರು ಭಾಷಣವಿತ್ತರು. ಶ್ರೀ ಸಿ. ಆರ್. ರಂಗನಾಥ ಪೂಂಜರು ಸಭಾಧ್ಯಕ್ಷತೆವಹಿಸಿದ್ದರು. ಲ್ಯಾಬ್ರೆರಿ ಆಧಾರಿಟಿ ಕುರಿತು ಶ್ರೀ ಎಸ್. ಎಸ್. ಏಕಾಂಬರ ರಾಯರು ತಮ್ಮ ಸ್ವಾಗತಭಾಷಣದಲ್ಲಿ ನಾಲ್ಕು ಮಾತುಗಳನ್ನಾಡಿದರು ಭಾಷಣಗಾರರು ಓದುಗರಿಗೂ ಲ್ಯಾಬ್ರೆರಿಗೂ ಇರುವ ಸಂಬಂಧವನ್ನು ವಿವರಿಸಿದರು. ಸಭಾಧ್ಯಕ್ಷರು ಓದುಗರಲ್ಲಿರಬೇಕಾದ ಗುಣವೈಶಿಷ್ಟ್ಯಗಳನ್ನು ವಿವರಿಸಿದರು. ಜೀರ್ಣ ಲ್ಯಾಬ್ರೆರಿಯನ್ ಶ್ರೀ ಎ. ಎಸ್. ಇಸಾಕರು ಧನ್ಯವಾದಗಳನ್ನರ್ಪಿಸಿದರು.

ವಾಗ್ವರ್ಧಕ ಸಭೆ—ಸರಕಾರಿ ಬುನಾದಿ ತರಬೇತಿ ಶಾಲೆಯ ವಾಗ್ವರ್ಧಕ ಸಭೆಯು ಕಳೆದ 26ರಲ್ಲು ಶ್ರೀ ಎಸ್. ಎಸ್. ಏಕಾಂಬರೆ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. 'ಬುನಾದಿ ವಿದ್ಯಾಭ್ಯಾಸವೂ ಗ್ರಾಮಾಭಿವೃದ್ಧಿಯೂ' ಎಂಬ ವಿಷಯದಲ್ಲಿ ಉಪನ್ಯಾಸವಾಯಿತು ಶ್ರೀಗಳಾದ ಆರೆಕ್ಸಿಸ್ ಸ್ವಿವರ್ಟಿ ಪಿ. ಸದಾಶಿವ ರಾವ್, ಜೆ. ಟಿ. ವಾಸು ದೇವ ಭಟ್ ಮೊದಲಾದವರು ಭಾಷಣವಿತ್ತರು.

ಕೈಮಗ್ಗ ಮಾಲಿಕರ ಸಂಘದ ಮಹಾಸಭೆಯು—ಕಳೆದ 24ರಲ್ಲು ಶ್ರೀ ಜೆ. ಬಿ. ಮಹಾದೇವರ ಅಧ್ಯಕ್ಷತೆಯಲ್ಲಿ ಜರಗಿತು. ಇತ್ತು ಜನರಿಗಿಂತ ಕಡಿಮೆ ಕೆಲಸಕ್ಕಿರುವ ಕೈಮಗ್ಗ ಕಾರ್ಖಾನೆಗಳನ್ನು ಫ್ಯಾಕ್ಟರೀಸ್ ಆಕ್ಟಿನಿಂದ ವಿನಾಯತಿ ಪಡಿಸುವಂತೆ ಸರಕಾರಕ್ಕೆ ಮನವಿ ಕಳುಹಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಕಾಲೇಜು ಯೂನಿಯನ್ ಚುನಾಣೆ—ಸ್ಥಳೀಯ ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಯೂನಿಯನ್ ಅಧ್ಯಕ್ಷರಾಗಿ ಶ್ರೀ ಆತ್ಮಾರಾಮ ವಿಠಲ ಸೆಟ್ಟರೂ, ಕಾರ್ಯದರ್ಶಿಗಳಾಗಿ ಶ್ರೀ ಸಾವೂರುಗುತ್ತು ರಾಮಚಂದ್ರ ಶೇಣವರೂ ಆಯಸಲ್ಪಟ್ಟಿರುವರು.

ನೃತ್ಯ ಕಲಾವಿದ ಶ್ರೀ ಕೆ. ಕೆ. ಸೆಟ್ಟಿರು ಬರ್ಲಿನ್ ನಗರದಲ್ಲಿ—ಮಂಗಳೂರಿನ ಕೆಲವು ವರ್ಷಗಳಿಕಾಲವಿದ್ದು ನಂತರ ಬೊಂಬಾಯಿಗೆ ಹೋಗಿ ನೆಲಸಿರುವ ನೃತ್ಯಕಲಾವಿದ ಶ್ರೀ ಕೆ. ಕೆ. ಸೆಟ್ಟಿರು ತಮ್ಮ ಪದಿನಾರು ಮಂದಿ ಶಿಷ್ಯರೊಡನೆಕಳೆದ ಜೂನ್ ತಿಂಗಳ 11ರಲ್ಲಿ ಯುರೋಪ್ ಪ್ರವಾಸ ಕೈಕೊಂಡು ಈಗ ಜರ್ಮನಿಯ ರಾಜಧಾನಿ ಬರ್ಲಿನಿನಲ್ಲಿ ನೃತ್ಯ ಪ್ರದರ್ಶನಗಳನ್ನು ಕೊಡುತ್ತಿದ್ದಾರೆ. ಜರ್ಮನಿಯ ಸರಕಾರೀ ಸಾಂಸ್ಕೃತಿಕ ಸಂಘದ ಆಮಂತ್ರಣ ಮೇರೆಗೆ ಶ್ರೀ ಸೆಟ್ಟಿರು ಜರ್ಮನಿಯಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿರುವರು. ಶ್ರೀ ಸೆಟ್ಟಿರ ನೃತ್ಯವು ಅಲ್ಲಿಯ ಜನತೆಯಿಂದ ತುಂಬಾ ಮನ್ನಣೆ ಪಡೆಯುತ್ತಿದೆ ಎಂದು ತಿಳಿದುಬರುತ್ತದೆ.

ಡಾ| ಯು. ಪಿ. ಮಲ್ಯರು—ಜಿಲ್ಲಾ ಕಾಂಗ್ರೆಸು ಕಮಿಟಿಯ ಅಧ್ಯಕ್ಷರಾದ ಡಾ| ಯು. ಪಿ. ಮಲ್ಯರು ಸದ್ಯದೇ ವಿದೇಶ ಪ್ರವಾಸ ಕೈಕೊಳ್ಳಲಿರುವುದರಿಂದ ತಾ. 11ರಂದು ಶ್ರೀ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನಗರ ಸಭೆಯಲ್ಲಿ ಅವರಿಗೆ ಸುಪ್ರಸಾದನವನ್ನು ಕೋರಲಾಯಿತು. ಡಾ| ಮಲ್ಯರು ಆಭಾರ ಸೂಚಿಸಿ ಮಾತನಾಡಿದರು.

ಸ್ವಾತಂತ್ರ್ಯೋತ್ಸವ ಸಮಿತಿ— ಕಳೆದ 20ರಂದು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಇದೇ ರಂಗಕ್ಕೆ ಸ್ವಾತಂತ್ರ್ಯೋತ್ಸವವನ್ನು ಆಚರಿಸಬೇಕೆಂದು ನಿರ್ಣಯಿಸಲ್ಪಟ್ಟಿತಲ್ಲದೆ ಆ ಬಗ್ಗೆ ಈ ಕೆಳಗಿನವರ ಬೇರೆ ಬೇರೆ ಉಪಸಮಿತಿಗಳು ರಚಿಸಲ್ಪಟ್ಟವು. ಶ್ರೀಗಳಾದ ಬಿ. ಆರ್. ಕರ್ಕೇರ, ಮಚೇಲ ಶ್ರೀನಿವಾಸ ನಾಯ್ಕ್, ಟಿ. ಅಣ್ಣಪ್ಪ ನಾಯ್ಕ, ಜೋ ಪ್ರಿಟೊ, ಮಿತ್ರದಾಸ ಹೆಗ್ಡೆ, ಶ್ರೀನಿವಾಸ ಕಲ್ಯಾಣಿ ಡಿ. ಶೆಟ್ಟಿ, ಭೋಜ ರಾವ್ ಬೋಳಾರ್, ಎಸ್. ಡಿ. ಬಂಗೇರ, ಎಚ್. ಕೆ. ತಿಂಗಳಾಯ, ಎಂ. ಗೋವಿಂದ, ಪರಮೇಶ್ವರ ಚಿಟ್ಟಿಯಾರ್, ಎಂ. ಆರ್. ಕಿಣಿ, ಎಂ. ಎಲ್. ಶೆಟ್ಟಿ, ಬಿ. ವರದರಾಜ ಪ್ರಭು, ರಾಘವ ಭಂಡಾರಿ.

(೧ನೇ ಪುಟದಿಂದ)

ನದಸಿಬಂಧ್ಯ ಮತ್ತು ಕುಸಂಪೃಕ್ತ ಜೀವನ ನಡೆಸುವ ಪ್ರೇರೇಪಣೆಗಳನ್ನು ಸರಕಾರವೂ ಸಾರ್ವಜನಿಕರೂ ಕೂಡಿಯೇ ನೀಡಿದರೆ ಮಾತ್ರ ಪರಿಸ್ಥಿತಿ ಸುಧಾರಿಸುವ ಅಶೆಕಟ್ಟುಕೊಳ್ಳಬಹುದು. ಇದು ಅನಾಥವಾದ ಮಾತೇನಲ್ಲ—ತಿರು-ಕೊಚ್ಚಿ ರಾಜ್ಯದ ಕೊಟ್ಟಾಯಂ ನಗರದಲ್ಲಿ ಗುಂಪು ಗುಂಪಾಗಿ ಸಂಚರಿಸುತ್ತಿದ್ದ ಭಿಕ್ಷುಕರು ಈಗ ಮಾಯವಾಗಿರುವುದಕ್ಕೆ ರಚನಾತ್ಮಕ ಕಾರ್ಯಕ್ರಮ ಮತ್ತು ಸ್ಥಳೀಯರ ಉತ್ಸಾಹವೇ ಹೇತು. ಅವರನ್ನು ಇತರ ಭಾರತೀಯರೂ ಅನುಸರಿಸಬಲ್ಲರು.

ಸಾಮಾನ್ಯವಾಗಿ, ಭಿಕ್ಷುಕ ವೃತ್ತಿಯಲ್ಲಿರುವವರನ್ನು ಮೋಸಗಾರರೆಂದು ಜನರು ಭಾವಿಸುತ್ತಾರೆ.— ಆದರೆ, ಭಿಕ್ಷುಕರಲ್ಲಿಯೂ ಪ್ರಾಮಾಣಿಕರನ್ನು ಹುಡುಕಿತೆಗೆಯುವುದು ಕಷ್ಟವಲ್ಲ. ಪರಿಹಾರ ಕೇಂದ್ರಗಳಲ್ಲಿ ತರಬೇತಿ ಪಡೆದಬಳಿಕ ಹಲವು ಹಿಂದಿನ ಭಿಕ್ಷುಕರು ತಮ್ಮ ಪ್ರಾಮಾಣಿಕತೆಯ ನಿದರ್ಶನವನ್ನು ನೀಡಿದ್ದಾರೆ ಇವರಿಗೆ ಖಾಲಿ ಮನೆಗಳವರೂ ಔದ್ಯಮಿಕ ಸಂಸ್ಥೆಗಳವರೂ ಕೆಲಸವಿತ್ತು ಗೌರವದ ಜೀವನ ನಡೆಸಲು ಅವಕಾಶ ನೀಡಿದರೆ, ಪುನಃ ಭಿಕ್ಷುಕ ವೃತ್ತಿಯನ್ನು ಅವರು ಕೈಗೊಳ್ಳಲಿಕ್ಕಿಲ್ಲ. ಬೇಡುವುದು ಆಕರ್ಷಕ ವೃತ್ತಿಯಾಗಬಾರದು — ಕೆಲಸ ಮಾಡಿ ದುಡಿಯುವುದೇ ಪುರುಷಾರ್ಥ ಎಂಬ ಜಾಗೃತಿ ಮೂಡಿ ಬರಬೇಕು. ಈ ಆದರ್ಶ ಸಾಧನೆಗೆ ಮೂರು ಬಗೆಯ ಕಾರ್ಯಕ್ರಮ ಅಗತ್ಯ— ಮೊದಲನೆಯದಾಗಿ ಮಕ್ಕಳ ಶಿಕ್ಷಣ; ಎರಡನೆಯದಾಗಿ ಅನಾಥರಿಗೆ, ರೋಗಿಗಳಿಗೆ, ಅಂಗವಿಕಲರಿಗೆ ಮತ್ತು ಹುಚ್ಚರಿಗೆ ಯೋಗ್ಯ ರಕ್ಷಣೆ ಮತ್ತು ಜೋಪಾಸನೆ; ಮೂರನೆಯದಾಗಿ, ನಿರುದ್ಯೋಗಿಗಳಿಗೆ ಕೆಲಸ. ಇದಕ್ಕೆ ಸಾರ್ವಜನಿಕರ ಸಹಕಾರ ಅನಿವಾರ್ಯ. ಅವರು ಪಾತ್ರಾಪಾತ್ರತೆಯನ್ನು ಗಮನಿಸದೆ ದಾನಧರ್ಮ ಮಾಡುವುದಕ್ಕೆ ಹೋಗಬಾರದು; ಸಾಮಾಜಿಕ ಹಿತದ ಉದ್ದೇಶವಿಟ್ಟುಕೊಂಡ ಸಂಸ್ಥೆಗಳು ಪ್ರೇರಣ ಪೂರ್ವಕ ಸಹಕರಿಸಬೇಕು. ಬೇರೆ ದೇಶಗಳು ಹೀಗೆ ಭಿಕ್ಷುಕ ಸಮಸ್ಯೆಯನ್ನು ಪರಿಹರಿಸಿವೆ – ನಮ್ಮ ದೇಶದಲ್ಲಿಯೂ ಭಿಕ್ಷಾಟನೆಯ ಉಚ್ಚಾಟನೆಯಾಗಲೇ ಬೇಕು. ರಾಷ್ಟ್ರೀಯ ಗೌರವದ ಪ್ರಶ್ನೆ ಇದಾದುದರಿಂದ ಇತ್ತ ತೀವ್ರ ಗಮನ ಹರಿಯಲಿ!

— ಕಾರ್ತಿಕೇಯ.

ನೋಟೀಸು

1, ಭಂಡಾರದ ಬಾಬ್ತು ತೊಳ್ಳಲು ಅಕ್ಕಿ ಮುಡಿ 80 ಮಾರಲಿಕ್ಕಿದೆ. 2, ಭಂಡಾರದ ಮೂಲಹಕ್ಕಿನ ಬಾಬ್ತು ಸರ್ವೆನಂಬ್ರ 156/19ರ ಪೈಕಿ ಮೂರು ಮತ್ತು ಕೆಂಕು ಸೀತಾರಾಮ ಕಲ್ಯಾಣಗಳ ಸ್ಥಳ ಪದು ರಾಮಪ್ರಭುಗಳ ಮನೆಯಿಂದ ಒಂದು ಕೋಲು ಮೂಡು ಬಡಗು ನಾರಾಯಣ ಬಂಡಾರಿಯ ಅಂಗಡಿ ಇವುಗಳ ನಡುವಿನ ಸುಮಾರು 8½ ಸೆಂಟ್ಸ್‌ಸ್ಥಳವನ್ನು ಹಾಲಿಗೇಣಿಗೆ ಕೊಡಲಾಗುವುದು.

ಈ ಎರಡರ ಬಗ್ಗೆ ಇದೇ ತಾರೀಕು 15-8-1955ನೇ ಆದರಾಷ್ಟ್ರ ಗಂಟೆ 4ಕ್ಕೆ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಮಾಯ್ಸು ಉಳ್ಳವರು ಆ ಹೊತ್ತಿಗೆ ಸರಿಯಾಗಿ ಬಂದು ಏಲಂನಲ್ಲಿ ಭಾಗವಹಿಸಬಹುದು.

SRI ANANTHAPADMANABHA TEMPLE, PERDUR.

K. B. Shetty
Executive Officer.

ಕುಮಾರಿ ಬಿಲ್ಲೆಗಳು-(ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾವಕವೂ ಉಂಟಾಗದೆ ತೀವ್ರ ಗುಣಕೊಡಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಪ್ರಕಟಣೆ

ಉಪ್ಪಿ ತಾಲೂಕು ಉಳಿಯಾರ ಗೋಳಿ ಗ್ರಾಮದ ಪಶ್ಚಿ ಸೆಟ್ಟಿ ಹೆಂಡತಿ ಅಕ್ಕು ಸೆಟ್ಟಿ ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:— ಕೆಲವು ದಿನಗಳ ಹಿಂದೆ ಉಳಿಯಾರಗೋಳಿ ಗ್ರಾಮದ ಕುಡ್ಡ ಸೆಟ್ಟಿ ಮಗ ಜೀವನಿನ ಅಂಗಡಿ ವ್ಯಾಪಾರಿ ವಾಸು ಸೆಟ್ಟಿ ಎಂಬವರು, ಕೆನರಾ ಇಂಡಸ್ಟ್ರಿಯಲ್ ಅಂಡ್ ಸಿಂಡಿಕೇಟ್ ಬ್ಯಾಂಕ್-ಕಾಬು. ಇದರಲ್ಲಿ ನನಗೆ ಸಂಬಂಧಪಟ್ಟ ಒಂದು ಆಭರಣದ ವಿಚಾರದಲ್ಲಿ ಆರ್ಜಿಕೊಡುವ ಬಗ್ಗೆ ಎಂದು ಬರಹ ತಿಳಿಯದೆ ನನ್ನನ್ನು ಪ್ರೇರೇಪಿಸಿದ, ಯಾರೂ ಇಲ್ಲದ ವೇಳೆಯಲ್ಲಿ ನನ್ನಿಂದ ಕೆಲವು ಎಡಹೆಬ್ಬೆಟ್ಟಿನ ಗುರುತುಗಳನ್ನು ಪಡೆದಿರುತ್ತಾರೆ. ಈಗ ಸದ್ರಿ ವಾಸು ಸೆಟ್ಟಿರ ಆ ಹೆಬ್ಬೆಟ್ಟುಗಳ ಆಧಾರದ ಮೇಲೂ, ಅಲ್ಲದೆ ಅದೇ ದಿನ, ಬ್ಯಾಂಕಿಗೆ ಅಭರಣದ ಕುರಿತು ದಾಖಲುಪಡಿಸುವರೆ ಅಗತ್ಯವಿದೆಯೆಂದು ನನ್ನಿಂದ ಕೊಂಡುಹೋದ ನನ್ನ ಸ್ಥಿರಾಸ್ತಿಯ ಪಟ್ಟಿ, ರಿಜಿಸ್ಟ್ರಿಕಾರ್ಡುಗಳ ಸಹಿಗಳ ಆಧಾರದ ಮೇಲೂ, ಬ್ಯಾಂಕಿನಿಂದ ನನ್ನ ಹೆಸರಲ್ಲಿ ಸಾಲವನ್ನೆರೆ ಪಡೆಯುವ ಇರಾಧೆಯಲ್ಲಿರುತ್ತಾರಾಗಿ ತಿಳಿದುಬರುತ್ತದೆ. ನನಗೆ ಸಾಲವನ್ನೆರೆ ಮಾಡುವ ಅಗತ್ಯವಿರುವುದಿಲ್ಲ. ಆದ್ದರಿಂದ ಆ ನನ್ನ ಎಡಹೆಬ್ಬೆಟ್ಟುಗಳ ಮತ್ತು ರಿಕಾರ್ಡಿನ ಆಧಾರದ ಮೇಲೆ ಅವರು ಯಾವ ತರದ ವ್ಯವಹಾರವನ್ನು ಮಾಡಿದರೂ ನಿಂಧಾವಲ್ಲ ಹೊರತು ನಾನು ಅದಕ್ಕೆ ಜವಾಬ್ದಾರಳಲ್ಲ. ಸಂಬಂಧಪಟ್ಟ ಬ್ಯಾಂಕಿಗೆ ಇದರ ಮೊದಲೇ ತಿಳಿಸಿರುತ್ತೇನೆ. ಸದ್ರಿ ವಾಸು ಸೆಟ್ಟಿ ಮೇಲೆ ಪ್ರತ್ಯೇಕ ವ್ಯವಹಾರ ನಡೆಯಿಸುತ್ತೇನೆ.

● ಈ ಎಡ ಹೆಬ್ಬೆಟ್ಟಿನಗುರ್ತು ಅಕ್ಕು ಸೆಟ್ಟಿದ್ದಾಗಿರುತ್ತದೆ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹೆಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸ್ಥಿರ ಠೇವಣಿಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOKLY BANK LTD., MULKI.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಪುರುಸಾಹತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-

ಶಾಂತಿ ಕಾಲದ ಬಳಕೆಗಾಗಿ ಪರಮಾಣು

(೩ನೇ ಪುಟದಿಂದ)

ದಲ್ಲಿ ಪ್ರಕಟಪಡಿಸಲು ಜಿನೇವದ ಸಮ್ಮೇಳನದಲ್ಲಿ ಕಾಲಾವಕಾಶ ದೊರೆಯದೆಹೋದರೆ ಆಶ್ಚರ್ಯ ಪಡಲಾಗದಷ್ಟು ಅಣು ವಿಜ್ಞಾನ ರಾಷ್ಟ್ರ ಈಚೆಗಿನ ಹತ್ತು—ಹನ್ನೆರಡು ವರ್ಷಗಳಲ್ಲಿ ಅಭಿವೃದ್ಧಿ ಕೊಂದಿರುತ್ತದೆ.

ಸಮ್ಮೇಳನವು ಬೇರೆ ಬೇರೆ ಉಪಸಮಿತಿಗಳಾಗಿ ವಿಭಾಜಿಸಲ್ಪಟ್ಟು ತನ್ನ ಕೆಲಸವನ್ನು ನಡೆಸುತ್ತದೆ. ೧೯೭೫ ಮತ್ತು ೨೦೦೦ನೇ ಇಸವಿಗಳಲ್ಲಿ ಜಗತ್ತಿನ ನಿತ್ಯ ಜೀವನಕ್ಕೆ ಎಷ್ಟು ಶಕ್ತಿ ಬೇಕಾದೀತೆಂದು ಬರ್ಚಿಸಿ ಅದನ್ನು ಪಡೆಯಲು ಯಾವ ವಿಧಾನಗಳನ್ನು ಅನುಸರಿಸಬೇಕೆಂದು ಇಲ್ಲಿ ನಿರ್ಣಯಿಸಲ್ಪಡುವುದು. ಅಣು ಶಕ್ತಿಯ ಹೊರತಾಗಿ ಸಮುದ್ರದ ಅಲೆಗಳನ್ನು ಸೂರ್ಯ ಪ್ರಕಾಶವನ್ನು, ಜ್ವಾಲಾಮುಖಿಯ ಉಷ್ಣವನ್ನು ಶಕ್ತಿಯ ಸ್ರೋತವಾಗಿ ಉಪಯೋಗಿಸುವ ವಿಚಾರವೂ ಕೆಲವು ವಿಜ್ಞಾನಿಗಳಿಂದ ಪ್ರತಿಪಾದಿಸಲ್ಪಡಬಹುದು. ಆದರೆ ಅಣುಶಕ್ತಿಯನ್ನು ಉತ್ಪಾದಿಸುವ ಕೇಂದ್ರಗಳನ್ನು ಸ್ಥಾಪಿಸುವುದರ ಕಡೆಗೆ ನೀಡಿದಷ್ಟು ಹೆಚ್ಚು ಗಮನ ಇವುಗಳಿಗೆ ದೊರಕಲಾರದು.

ಅಣುಶಕ್ತಿಯನ್ನು ಉತ್ಪಾದಿಸುವ ಕೇಂದ್ರಗಳ ಕೆಲಸಕ್ಕೂ ಅಣುಬಾಂಬುಗಳ ಸ್ಫೋಟನ ಕ್ರಿಯೆಗೂ ಮುಖ್ಯವಾದ ವ್ಯತ್ಯಾಸವೊಂದಿದೆ— ಪರಮಾಣು ಸ್ಫೋಟನವಾದಾಗ ಅಪಾರ ಶಕ್ತಿ ಉತ್ಪನ್ನವಾಗುತ್ತದೆಯಷ್ಟೇ. ಇದನ್ನು ನೇರಾಗಿ ಈ ಕೇಂದ್ರಗಳು ಉಪಯೋಗಿಸುವುದಿಲ್ಲ. ಅಣುಬಾಂಬುಗಳನ್ನು ಒಗೆದಾಗ ಮಾತ್ರ ಈ ಶಕ್ತಿ ಸುತ್ತಲಿನ ವಾತಾವರಣದ ಮೇಲೆ ಭೀಕರ ಪರಿಣಾಮವನ್ನು ಮಾಡುತ್ತದೆ. ಶಾಂತಿ ಕಾರ್ಯಕ್ಕೆ ಅಣುಶಕ್ತಿಯನ್ನು ಒಳಸುವ ಕೇಂದ್ರಗಳು ಸ್ಫೋಟನ ಕಾಲದಲ್ಲಿ ಉಂಟಾಗುವ ಉಷ್ಣವನ್ನಷ್ಟೇ ಕಲ್ಲಿದ್ದಲು ಅಥವಾ ಎಣ್ಣೆ ಉತ್ಪಾದಿಸುವ ಉಷ್ಣಕ್ಕೆ ಪ್ರತಿಯಾಗಿ ಉಪಯೋಗಿಸಲಾಗುತ್ತದೆ. ಹೀಗೆ ಶಕ್ತಿಯನ್ನು ಪ್ರತಿಕ್ಷೇಪಿಸುವಾಗ ಎದುರಿಸಬೇಕಾದ ಸಮಸ್ಯೆಗಳ ಕುರಿತಾಗಿ ವಿಜ್ಞಾನಿಗಳು ಗಂಭೀರವಾಗಿ ವಿಚಾರಮಾಡಬೇಕಾಗುತ್ತದೆ.

ಭೌತಶಾಸ್ತ್ರಿಗಳೂ ತಾಂತ್ರಿಕ ರೂ ಅಣು ಶಕ್ತಿಯನ್ನು ಸಾಮಾನ್ಯ ಯಂತ್ರಗಳಲ್ಲಿ ಕೆಲಸಮಾಡುವಂತೆ ಹೇಗೆ ವರ್ಗಾಯಿಸಬಹುದು, ಯಾವ ಉಪಾಯಗಳನ್ನು ಕೈಗೊಂಡು ಮತ್ತು ಯಂತ್ರಗಳನ್ನು ಹೇಗೆ ಪರಿಷ್ಕರಿಸಿ ಈ ಸಾಹಸವನ್ನು ಜಯಪ್ರದ ಮಾಡಬಹುದು ಎಂದು ನಿಶ್ಚಯಿಸುತ್ತಾರೆ. ರಸಾಯನ ಶಾಸ್ತ್ರಜ್ಞರು ಪರಮಾಣು ಸ್ಫೋಟನ ಕಾಲದಲ್ಲಿ ಉಂಟಾಗುವ ಅತ್ಯಧಿಕ ಉಷ್ಣ ಮತ್ತು ಇತರ ಪ್ರತಿಕ್ರಿಯೆಗಳನ್ನು ಯಶಸ್ವಿಯಾಗಿ ತಾಳಿಕೊಳ್ಳಬಲ್ಲ ಲೋಹ ಸಾಮಗ್ರಿಯಾವುದು ಎಂದು ತೀರ್ಮಾನಿಸುತ್ತಾರೆ. ಅಲ್ಲದೆ ಜಿರ್ಕೋನಿಯಂ, ಬೆರೀಲಿಯಂ ಮುಂತಾದ ತೀರ ಅಪರೂಪವಾದ ಪದಾರ್ಥಗಳ ಬಗೆಗೆ ಹೆಚ್ಚಿನ ತಿಳಿವಳಿಕೆಯನ್ನು ಅವರು ಸಂಪಾದಿಸುತ್ತಾರೆ. ಭೂಗರ್ಭಶಾಸ್ತ್ರಜ್ಞರು ಜಗತ್ತಿನ ಯಾವ್ಯಾವ ಭಾಗಗಳಲ್ಲಿ ಎಷ್ಟು ವಿಧದ ಅಣು ಇಂಧನಗಳ ನಿಕ್ಷೇಪಗಳಿವೆ, ಮತ್ತು ಅವುಗಳ ಪ್ರಮಾಣ ಎಷ್ಟು ಎಂದು ವಿಚಾರಿಸುತ್ತಾರೆ. ಇಲ್ಲಿಯ ಅದುರುಗಳನ್ನು ಹೇಗೆ ಶುದ್ಧೀಕರಿಸುವುದೆಂಬುದೂ ಚರ್ಚಿಸಲ್ಪಡುತ್ತದೆ.

ಅಣು ಶಕ್ತಿಯನ್ನು ಉತ್ಪಾದಿಸಬಲ್ಲ ಕೇಂದ್ರವನ್ನು ರಚಿಸಿಕೊಳ್ಳುವುದಕ್ಕೆ ಎಷ್ಟು ಹೆಚ್ಚು ಒಂದೀತು, ಅದನ್ನು ಕಡಿಮೆ ಮಾಡುವುದು ಸಾಧ್ಯವೇ ಎಂಬ ಪರಿಶೀಲನೆಯೂ ನಡೆಯುತ್ತದೆ. ರಶ್ಯದಲ್ಲಿ ಈಗಾಗಲೇ ಇಂಥದೊಂದು ಕೇಂದ್ರವಿದ್ದು, ಅದು ತನ್ನ ಅಮೂಲ್ಯ ಅಭಿಪ್ರಾಯಗಳನ್ನು ಇಲ್ಲಿ ಮಂಡಿಸಬಹುದು. ಬ್ರಿಟನು ಮುಂದಿನ ವರ್ಷದೊಳಗೆ ಕಂಬರ್‌ಲೇಂಡ್‌ನಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸುವುದಲ್ಲದೆ ೧೯೫೫ರೊಳಗೆ ಒಟ್ಟು ಹನ್ನೆರಡು ಕೇಂದ್ರಗಳನ್ನು ನೆಲೆಗೊಳಿಸುವುದೆಂದು ತಿಳಿದು ಬರುತ್ತದೆ. ಇದಕ್ಕೆ ತಗಲುವ ವೆಚ್ಚ ೩೦ ಕೋಟಿ ಪವನುಗಳು! ೧೯೫೫ನೇ ವರ್ಷದ ಹೊತ್ತಿಗೆ ೪ ಕೋಟಿ ಟನ್ನು ಕಲ್ಲಿದ್ದಲಿನ ಉಳಿತಾಯವಾಗುವಷ್ಟು, ಅಂದರೆ ಒಟ್ಟು ಆಗತ್ಯದ ಕಾಲಂಶದಷ್ಟು ವಿದ್ಯುಚ್ಛಕ್ತಿಯನ್ನು ಈ ಕೇಂದ್ರಗಳು ಉತ್ಪಾದಿಸುತ್ತವೆ. ಕಲ್ಲಿದ್ದಲಿನ ವಿದ್ಯುಚ್ಛಕ್ತಿಗೆ ಕೊಡಬೇಕಾದ ಹಣದ ಹನ್ನೆರಡರಲ್ಲಿ ಒಂದು ಪಾಲನ್ನು ಕೊಟ್ಟರೆ ಸಾಕಾಗುವಷ್ಟು (ಅಂದರೆ ಯುನಿಟಿಗೆ ಅರ್ಧ ಶಿಲಿಂಗ್) ಇದು ಅಗ್ಗವಾಗುತ್ತದೆ. ಈ ಯಂತ್ರಗಳ ಕಾರ್ಯಕ್ಷಮತೆಯನ್ನು ಇನ್ನಷ್ಟು ಹೆಚ್ಚಿಸಬಹುದೆಂದು ವಿಜ್ಞಾನಿಗಳ ಅಭಿಪ್ರಾಯ. ಈ ವಿಷಯದಲ್ಲಿ ಸಮ್ಮೇಳನ ಹೆಚ್ಚಿನ ಬೆಳಕು ಬೀರಬಹುದು.

ಅಮೇರಿಕ, ಬ್ರಿಟನ್ ಇತ್ಯಾದಿ ರಾಷ್ಟ್ರಗಳು ಬೇರೆ ಬೇರೆ ಬಗೆಯ ಅಣುಶಕ್ತಿಗೆ ಸಂಬಂಧಿಸಿದ ಪ್ರತಿ ಪ್ರವರ್ತಕ ಯಂತ್ರ (ರಿಯಾಕ್ಟರ್)ಗಳನ್ನು ಸ್ಥಾಪಿಸಿರುತ್ತವೆ. ಇವುಗಳಲ್ಲಿ ಒಂದು ಯಂತ್ರವು ಅಣು ಸ್ಫೋಟನ ಕ್ರಿಯೆಯಿಂದ ಉಷ್ಣವನ್ನು ಉತ್ಪಾದಿಸುತ್ತಿದ್ದಂತೆಯೇ ಜಡಯುರೇನಿಯಂ ಕಣಗಳನ್ನು ಚೈತನ್ಯ ಪೂರ್ಣವಾದ ಪ್ಲುಟೋನಿಯಂ ಆಗಿ ಪರಿವರ್ತಿಸುವ ವಿಚಿತ್ರ ಕೆಲಸವನ್ನು ಮಾಡುತ್ತದೆ. ಇಂಥ ಯಂತ್ರವು ತಾನು ಉಪಯೋಗಿಸಿಕೊಂಡುದಕ್ಕಿಂತ ಎಷ್ಟೋ ಪಾಲು ಹೆಚ್ಚು ಪ್ರಮಾಣದಲ್ಲಿ ಹೊಸ ಇಂಧನವನ್ನು ತನ್ನಷ್ಟಕ್ಕೆ ಒದಗಿಸಿಕೊಳ್ಳುವುದರಿಂದ, ಯುರೇನಿಯಂ ಖನಿಜದ ಅಭಾವದ ಪ್ರಶ್ನೆ ವಿಜ್ಞಾನಿಗಳನ್ನು ಧೃತಿಗೆಡಿಸದಿರುವಂತೆ ಮಾಡಿರುತ್ತದೆ. ಈಚೆಗೆ ಸ್ಫೋಟನೀಯವಲ್ಲದಿರುವ ಥೋರಿಯಂಧಾತುವನ್ನು ಪ್ಲುಟೋನಿಯಂಗಿಂತಲೂ ಹೆಚ್ಚಿನ ದಕ್ಷತೆಯಿರುವ "ಯುರೇನಿಯಂ ೨೩೩" ಎಂಬ ಧಾತುವಾಗಿ ಪರಿವರ್ತಿಸುವ ಯಂತ್ರವನ್ನು ಅಮೇರಿಕ ಕಂಡು ಹಿಡಿದಿರುತ್ತದೆ. ಯುರೇನಿಯಂಗಿಂತ ಥೋರಿಯಂ ಕನಿಷ್ಠ ನಾಲ್ಕು ಪಾಲಿನಷ್ಟು, ಪ್ರಾಯಶಃ ಹತ್ತು ಪಾಲಿನಷ್ಟು ಹೆಚ್ಚು ಪ್ರಮಾಣದಲ್ಲಿ ದೊರಕುತ್ತಿರುವುದರಿಂದ ಇದು ಶಾಂತಿ ಕಾಲದ ಬಳಕೆಗೆ ಬಹಳವಾಗಿ ನೆರವಾಗುವ ಸಂಶೋಧನೆ ಎಂಬುದರಲ್ಲಿ ಅನುಮಾನವಿಲ್ಲ.

ಥೋರಿಯಂ ಪ್ರತಿ ಪ್ರವರ್ತಕ ಯಂತ್ರವು ನಿಧಾನ ಗತಿಯ ನ್ಯೂಟ್ರಾನುಗಳನ್ನು ಉಪಯೋಗಿಸುತ್ತಿರುವುದು ಅದರ ಉಪಯುಕ್ತತೆಯನ್ನು ಬಹಳವಾಗಿ ಹೆಚ್ಚಿಸಿರುತ್ತದೆ. ಇಲ್ಲಿನ ನ್ಯೂಟ್ರಾನು ಒಂದು ಕ್ಷಣಕ್ಕೆ ಒಂದು ಮೈಲು ವೇಗದಲ್ಲಿ ಸಂಚರಿಸುತ್ತದೆ. ಬೇರೆ ಯಂತ್ರಗಳಲ್ಲಿ ಕ್ಷಣಕ್ಕೆ ಹತ್ತು ಸಾವಿರ ಮೈಲು ದೂರ ಗಮಿಸುವ ನ್ಯೂಟ್ರಾನುಗಳು ಉಪಯೋಗಿಸಲ್ಪಡುತ್ತವೆ. ತೀವ್ರ ಗತಿಯ ಈ ಯಂತ್ರಗಳನ್ನು ತಣಿಸಿ, ಹತೋಟಿಯಲ್ಲಿಡುವುದು ಬಹಳ ಕಷ್ಟದ ಕೆಲಸ. ನಿಧಾನ ಗತಿಯ ನ್ಯೂಟ್ರಾನುಗಳಲ್ಲಿ ಪರಮಾಣುವಿಗೆ ಸಂಬಂಧಿಸಿದ ಅಗ್ನಿಯನ್ನು ಜ್ವಲಂತವಾಗಿಡುವುದು ಒಂದು ಸಮಸ್ಯೆಯಾಗಿದ್ದರೂ, ಥೋರಿಯಂ ಬಳಸಲ್ಪಡುವ ಯಂತ್ರದಲ್ಲಿ ಈ ಸಮಸ್ಯೆಗೆ ಪರಿಹಾರ ದೊರಕುವ ವಿಶ್ವಾಸವನ್ನು ವಿಜ್ಞಾನಿಗಳು ಇಟ್ಟುಕೊಂಡಿದ್ದಾರೆ. ಆದುದರಿಂದ ಈ ಯಂತ್ರದ ಬಗೆಗೆ ಕುತೂಹಲ ವ್ಯಕ್ತವಾಗದೆ ಇರಲಾರದು. ಹಾಗೆಯೇ ಶಾಂತಿ ಕಾಲದ ಬಳಕೆಗಾಗಿಯೇ ಆಗಲಿ, ಅಣು ಸ್ಫೋಟನ ಕ್ರಿಯೆ ಶಕ್ತಿಯ ಉತ್ಪಾದನೆಗಾಗಿ ನಡೆದಾಗ, ಉಂಟಾಗುವ ವಿಷಾಕ್ತ ಅಣು ವಿಸರಣ ಕ್ರಿಯೆಯಿಂದ ಜನರ ಮೇಲುಂಟಾಗುವ ದುಷ್ಪರಿಣಾಮವನ್ನು ತಡೆಯುವುದು ಹೇಗೆಂದೂ ಇದಕ್ಕಾಗಿ ಯಾವ ಬಗೆಯ ಸುರಕ್ಷಿತೆಯ ಕ್ರಮಗಳನ್ನು ಕೈಗೊಳ್ಳಬೇಕೆಂದೂ ವಿಜ್ಞಾನಿಗಳು ನಿರ್ಧರಿಸಿಯಾರು.

ಇಷ್ಟಲ್ಲದೆ ಪರಮಾಣು ಬೂದಿಯನ್ನು ಈ ಬಗೆಯ ಕೇಂದ್ರಗಳು ಚೆಲ್ಲುತ್ತವೆ. ಇವುಗಳನ್ನು ಸಂಗ್ರಹಿಸಿ ಇಟ್ಟುಕೊಂಡು ನದಿಗಳಿಗೋ ಸಮುದ್ರಕ್ಕೋ ಬಿಡಬಹುದೇ, ಹಾಗೆ ಬಿಡುವುದಾದರೆ ನೀರು ಹಾನಿಕರವಾಗಿ ಪರಿಣಮಿಸದ ಮಟ್ಟ ಯಾವುದು ಎಂದೂ ವಿಜ್ಞಾನಿಗಳು ಅಭಿಪ್ರಾಯ ವಿನಿಮಯ ಮಾಡುತ್ತಾರೆ. ಪರಮಾಣು ಬೂದಿಯ ಕಣಗಳನ್ನು ಐಸೋಟೋಪುಗಳೆಂಬ ಉಪಯುಕ್ತ ಪದಾರ್ಥವಾಗಿ ಬಳಸಿಕೊಳ್ಳಲಿಕ್ಕೂ ಬರುತ್ತದೆ. ಐಸೋಟೋಪುಗಳು ಅಗ್ಗದಲ್ಲಿ ಸಿಗುವಹಾಗಾದರೆ, ವೈದ್ಯಕೀಯ ಕ್ಷೇತ್ರದಲ್ಲಿ, ಕೃಷಿ ವಲಯದಲ್ಲಿ ಮತ್ತು ಬೆದ್ಯಮಿಕ ರಂಗದಲ್ಲಿ ಕ್ರಾಂತಿಯಾದೀತು. ಲೋಹದ ಕ್ಷಕಿರಣ ಚಿತ್ರವನ್ನು ತೆಗೆಯುವ ಬದಲು ಐಸೋಟೋಪುಗಳಿಂದ ಆಲೋಹದ ಒಳಗಿನ ರಚನೆ ಹೇಗಿದೆ ಎಂದು ಪರೀಕ್ಷಿಸುವುದು, ದೇಹದ ತೀರ ಒಳ ಭಾಗದಲ್ಲಿರುವ ವ್ರಣಗಳ ಸಂಶೋಧನೆ ನಡೆಸುವುದು, ಸಸ್ಯಗಳ ಉತ್ಪಾದಕ ಶಕ್ತಿಯನ್ನು ಸಂವರ್ಧಿಸುವುದು ಇತ್ಯಾದಿ ಹಲವು ಬಗೆಯ ಕಾರ್ಯಗಳಲ್ಲಿ ಐಸೋಟೋಪುಗಳು ನೆರವಾಗುತ್ತವೆ. ಇವೆಲ್ಲ ವಿಷಯಗಳ ಕುರಿತು ಮಹತ್ವದ ಜ್ಞಾನವನ್ನು ಸಮ್ಮೇಳನ ಆದಾನ—ಪ್ರದಾನ ಮಾಡಬಹುದು.

ಸಮ್ಮೇಳನದ ಕೊನೆಯ ಸಭೆಯಲ್ಲಿ ಇತರ ರಾಷ್ಟ್ರಗಳಿಗೆ ಅಭಿವೃದ್ಧಿ ಕಾರ್ಯಕ್ಕೆ ಸಹಾಯವಾಗುವ ಉದ್ದೇಶದಿಂದ ಯಾವ ಬಗೆಯಲ್ಲಿ ರಾಷ್ಟ್ರಗಳು ನೆರವೀಯಲು ಮುಂದಾಗುತ್ತವೆ ಎಂಬ ವಿಷಯ ಮಂಡಿಸಲ್ಪಡುತ್ತದೆ. ಬ್ರಿಟನ್, ಅಮೇ

For NEW Enjoyment
Smoke
S.R. BEEDIES
ಹೊಸ ಆನಂದ ಅನುಭವಗಳಿಗಾಗಿ
ಸೇದಿರಿ ಎಸ್.ಆರ್. ಬೀಡಿಗಳನ್ನು
SR
ಎಸ್.ಆರ್. ಬೀಡಿ ವರ್ಕ್ಸ್, ಉಡುಪಿ, ದ.ಕ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಒರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ರಿಕ ಇತ್ಯಾದಿಗಳು ಈಗಾಗಲೇ ಏಸೋ ಟೋಸುಗಳನ್ನೂ ತಾಂತ್ರಿಕರನ್ನೂ ಬೇರೆ ರಾಷ್ಟ್ರಗಳಿಗೆ ಕಳಿಸಿರುತ್ತವೆ. ಭಾರತವನ್ನೊಳಗೊಂಡು ಜಗತ್ತಿನಲ್ಲಿ ರಾಷ್ಟ್ರಗಳಿಗೆ ಅಮೇರಿಕವು ಅಣು ಶಕ್ತಿಯ ಶಾಂತಿ ಕಾಲದ ಉಪಯೋಗಕ್ಕೆ ಸಂಬಂಧಿಸಿದ ವಾರಿಭಾಷಿಕ ಗ್ರಂಥಾಲಯವೊಂದನ್ನು ಕಳಿಸಿರುತ್ತದೆ. ಇದರಲ್ಲಿ ೬೫೦೦ ಸಂಶೋಧನೆಯ ವರದಿಗಳು, ೨೨ ಪುಸ್ತಕಗಳು, ಅಣು ಸಿದ್ಧಾಂತಕ್ಕೆ ಸಂಬಂಧಿಸಿದ ೩೪ ಗ್ರಂಥಗಳು ಅಲ್ಲದೆ ಈಗಾಗಲೇ ಬೇರೆ ಬೇರೆ ಕಡೆ ಪ್ರಕಟವಾದ ೪೦೦೦ ಲೇಖನ ಇತ್ಯಾದಿಗಳ ಸಂಪುಟಗಳು ಅಡಕವಾಗಿವೆ. ರಷ್ಯವು ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಈಗಾಗಲೇ ಅಣು ಶಕ್ತಿಯ ಕ್ಷೇತ್ರದಲ್ಲಿ ನೆರವೀಯುತ್ತಿದೆಯಲ್ಲದೆ, ಭಾರತದಲ್ಲಿ ಪ್ರತಿಪ್ರವರ್ತಕ ಯಂತ್ರವನ್ನು ಸ್ಥಾಪಿಸಲು ನೆರವೀಯುವುದಾಗಿ ಹೇಳಿರುತ್ತದೆ. ಸದ್ಯದಲ್ಲೇ ಈ ನೆರವಿನ ಕುರಿತು ವಿಚಾರವಿನಿಮಯ ನಡೆಸಲು ಭಾರತದಿಂದ ನಿಯೋಗವೊಂದು ರಷ್ಯಕ್ಕೆ ಹೋಗಲಿದೆಯಾಗಿ ಪ್ರಧಾನಿ ನೆಹರು ಲೋಕ ಸಭೆಯಲ್ಲಿ ಮೊನ್ನೆ ತಿಳಿಸಿದ್ದಾರೆ. ಬೇರೆ ಅನೇಕ ರಾಷ್ಟ್ರಗಳು—ಭಾರತವೂ ಸೇರಿ-ತಮಗೆ ತಿಳಿದ ರೀತಿಯಲ್ಲಿ ಹೆಜ್ಜೆಯನ್ನು ಮುಂದಿಡುತ್ತಿವೆ.

ನಿಯೋಜಿತ ಸಂಸ್ಥೆಗೆ ಅಣು ಇಂಧನಗಳನ್ನು—ಅಂದರೆ ಸ್ಫೋಟನೀಯ ವಸ್ತುಗಳನ್ನು ವಂತಿಗೆಯಾಗಿ ಕೊಡುವ ವಿಷಯವೂ ಚರ್ಚೆಗೆ ಬರದಿರಲಾರದು. ಅಣು ಇಂಧನಗಳು ಇಲ್ಲದ ದೇಶಗಳಿಗೆ ಈ ಸಂಸ್ಥೆಯು ನೆರವಾಗುತ್ತದೆ. ರಷ್ಯವು ತನ್ನ ಪಾಲಿನ ವಂತಿಗೆಯನ್ನು ಈ ಸಂಸ್ಥೆಗೆ ಸಂತೋಷದಿಂದ ಕೊಡುವುದೆಂದು ಜಿನೇವದ ವರಿಷ್ಠರ ಸಮ್ಮೇಳನದ ಮುಂದೆ ಮಾತನಾಡುತ್ತಾ ಆ ದೇಶದ ಪ್ರಧಾನಿಬುಲ್ಗೇನಿನ್ ಹೇಳಿದ್ದಾರೆ. ರಷ್ಯ ಮತ್ತು ಅಮೇರಿಕಗಳು ಹೀಗೆ ಸಹಕರಿಸಲು ಸಿದ್ಧವಾಗಿರುವುದರಿಂದ ಬೇರೆ ರಾಷ್ಟ್ರಗಳೂ ಈ ಮಾದರಿಯನ್ನು ಅನುಸರಿಸುವುದು ನಿಶ್ಚಯ. ಎಲ್ಲಕ್ಕಿಂತ ಸೆಣ್ಣಾಗಿ ಅಣುಶಕ್ತಿಯ ಕ್ಷೇತ್ರದಲ್ಲಿ ಕೆಲಸಮಾಡಬಲ್ಲ ದಕ್ಷ ತಾಂತ್ರಿಕರ ಅವಶ್ಯಕತೆ ಜಗತ್ತಿನಿದೆ—ಹಣ ಮತ್ತು ಸಾಧನಗಳೆಲ್ಲ ದೊರೆತರೂ ತಜ್ಞರು ಸಾಕಷ್ಟಿಲ್ಲದಿದ್ದರೆ ನಿರೀಕ್ಷಿಸಿದ ಫಲ ದೊರಕದೆ ಹೋದೀತು. ಸಹಾಯ ನೀಡುವ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳ ಜನರಲ್ಲಿ ಯೋಗ್ಯ ಮೇಧಾವಿಗಳನ್ನು ಆಯ್ದು, ಅವರನ್ನು ಈ ದಿಸೆಯಲ್ಲಿ ತರಬೇತಿಗೊಳಿಸುವುದು ಅಪೇಕ್ಷಣೀಯ. ಸಂಯುಕ್ತ ರಾಷ್ಟ್ರ ಸಂಘ ಹೀಗೆ ಶಾಂತಿಗಾಗಿ ಪರಮಾಣು ಉಪಯೋಗಿಸಲು ನೆರವಿತ್ತರೆ, ರಾಷ್ಟ್ರಗಳು ಯುದ್ಧವನ್ನೂ ಅಣುಶಕ್ತಿಯ ವಿಧ್ವಂಸಕ ಉಪಯೋಗವನ್ನೂ ಮರೆತೇಬಿಡಬಹುದು. ಆ ದಿನದ ಹಾರೈಕೆನಮ್ಮದು.

—ಸಾಧಾರ.



ಗೋವೆಯ ಆಂದೋಲನದ ಬೆಳವಣಿಗೆಯ ಸಿಂಹಾವಲೋಕನ

(ಏನೆಯ ಪುಟದಿಂದ)

ಭಾರತೀಯ ಸತ್ಯಾಗ್ರಹಿಗಳು ವೈಯಕ್ತಿಕವಾಗಿ ಪ್ರವೇಶಿಸುವುದನ್ನು ನಿರ್ಬಂಧಿಸಿದೆ ಬಿಟ್ಟಿತು. ಅಲ್ಲದೆ ರಾಜಕೀಯ ಮಟ್ಟದಲ್ಲಿ ಅದು ಯೋಗ್ಯ ಪ್ರಯತ್ನಗಳನ್ನು ಕೈಗೊಂಡು ಭಾರತದ ನಿಲುಮೆಗೆ ಸಹಾನುಭೂತಿಯನ್ನು ಸಂಪಾದಿಸಲು ಪ್ರಯತ್ನಪಟ್ಟಿತು. ಎಂದಿಗೇ ಆಗಲಿ, ಶಾಂತಮಾರ್ಗವನ್ನು ಭಾರತ ಬಿಟ್ಟುಗೊಡಲಾರದೆಂದು ರಶ್ಯದ ಪ್ರವಾಸವನ್ನು ಕೈಗೊಳ್ಳುವ ಪೂರ್ವದಲ್ಲಿ ಪ್ರಧಾನಿಗಳು ಮಣಿಯ ಸಾರ್ವಜನಿಕ ಭಾಷಣದಲ್ಲಿ ಸಾರಿದರು; ಅದೇ ಸಮಯ, ಪೋರ್ಚುಗೀಜರು ಗೋವೆಯಲ್ಲಿ ತಳ್ಳಪೂರುವುದನ್ನು ಭಾರತ ಸರಕಾರ ಸಹಿಸದು ಎಂದೂ ತಮ್ಮ ನಿಲುಮೆಯನ್ನು ಪುನರುಚ್ಚರಿಸಿದರು.

ಇದನ್ನು ಹಿನ್ನೆಲೆಯಾಗಿ ತೆಗೆದುಕೊಂಡರೆ, ನೆಹರುಗಳು ಸ್ವದೇಶಕ್ಕೆ ಮರಳಿದೊಡನೆಯೇ ಮಾಡಿದ "ಗೋವೆಯ ಕುರಿತು ಯಾವ ಮೂರ್ಖತನವನ್ನೂ ಭಾರತ ಸಹಿಸದು; ಅದು ಜಗತ್ತಿನ ಯಾವ ಮೂಲೆಯಿಂದ ಬಂದರೂ ಭಾರತ ಮಣಿಯದು. ಲೋಕ ಇದನ್ನು ತಿಳಿಯಲಿ; ನ್ಯಾಟೋ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳೂ ನೆನಪಿಡಲಿ" ಎಂಬ ಘೋಷಣೆ ಭಾರತವು ತನ್ನ ಅಭಿಮಾನ ತೊರೆಯದೆಂದು ಸ್ಪಷ್ಟಪಡಿಸಿತು. ನೈತಿಕ ಒತ್ತಾಯಕ್ಕೂ ವಸ್ತು ಸ್ಥಿತಿಗೂ ವಿರುದ್ಧವಾದ ವರ್ತನೆಯನ್ನು ಪೋರ್ಚುಗಾಲವು ಮುಂದಕ್ಕೂ ತೋರಿಸಿದರೆ, ಗೋವೆಯಲ್ಲಿ ಅವರ ಆಡಳಿತ ಕುಸಿದು ಬೀಳುವುದಲ್ಲದೆ, ಪೋರ್ಚುಗಾಲವೇ ಮಣ್ಣು ಮುಕ್ಕಬಹುದು ಎಂಬ ನೆಹರುಗಳ ಎಚ್ಚರಿಕೆ ಜಗತ್ತಿನ ಕಣ್ಣನ್ನು ತೆರೆಯಿಸಿತು. ಇದಕ್ಕೆ ಪೋರ್ಚುಗೀಜರು ತೋರಿಸಿದ ಪ್ರತಿಕ್ರಿಯೆ, ತಮಗೆ ಬೆಂಬಲಿಗರಿಲ್ಲ; ತಾವು ಒಂಟಿಯಾಗಿರುವುದೇ ನಿಜ ಎಂಬ ಅಭಿಪ್ರಾಯವನ್ನು ನಿರೀಕ್ಷಕರಲ್ಲಿ ಹುಟ್ಟಿಸುತ್ತದೆ. ಡಾ. ಸಾಲಾಝಾರರ ಸರಕಾರ ಹೊರಡಿಸಿದ ಪ್ರಕಟಣೆ ಹೀಗೆನ್ನುತ್ತದೆ—"ಪೋರ್ಚುಗಾಲದ ಪ್ರತಿಯೆ ಬ್ಬನಿಗೂ ಭಾರತ ಸರಕಾರದ ಅತ್ಯಧಿಕ ಬಲಾತ್ಕಾರದ ಪರಿಣಾಮವಾಗಿ ಪೋರ್ಚುಗೀಜರ ಕೈಯಲ್ಲಿರುವ ಭಾರತದ ರಾಜ್ಯಗಳು ಕಸಿದುಕೊಳ್ಳಲ್ಪಡಬಹುದೆಂದು ತಿಳಿದಿದೆ. ಆದರೆ ನ್ಯಾಯವಲ್ಲದ ಒತ್ತಾಯಕ್ಕೆ ಕಟ್ಟುಬಿದ್ದು, ಗೋವೆಯ ಪ್ರಜೆಗಳನ್ನು, ಅವರ ವಿತ್ತ ಜೀವಿತಗಳನ್ನು, ಸಂಸ್ಕೃತಿಯನ್ನು, ಜೀವಿತ್ರಿಯನ್ನು ರಕ್ಷಿಸಲು ನಮ್ಮ ಶಕ್ತಿಯ ಪ್ರತಿಯೊಂದೂ ಅಂಶವನ್ನು ಉಪಯೋಗಿಸದೆ ಬಿಟ್ಟರೆ ನಮ್ಮ ಸಂಕಲ್ಪವನ್ನು ಜನತೆ ಕ್ಷಮಿಸದು."

ಲೋಕಸಭೆಯ ಅಧಿವೇಶನವು ನೇರುವುದಕ್ಕೆ ಎರಡು ದಿನಗಳ ಮೊದಲು ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ಪ್ರತಿಯೊಬ್ಬ ಭಾರತೀಯನಿಗೂ ಗೋವೆಯ ಹೋರಾಟವೆಲ್ಲಿಸಕ್ತಿ ಇರುವುದು ಸ್ವಾಭಾವಿಕ ಎಂದು ಒಪ್ಪಿಕೊಂಡಿತು. ಯೋಗ್ಯಪರಿಣಾಮದ ದೃಷ್ಟಿಯಿಂದ ಸಾಮೂಹಿಕವಾಗಿ ಗೋವೆಯೊಳಗೆ ಸತ್ಯಾಗ್ರಹಿಗಳು ಹೋಗುವುದು ಇಷ್ಟವಲ್ಲ; ಹಾಗೆ ಹೋದರೆ ಸತ್ಯಾಗ್ರಹದ ಶಾಂತ ಸ್ವರೂಪ ಬದಲಾವಣೆಯಾದೀತು ಎಂದು ಅದು ಹೇಳಿದರೂ ಪೋರ್ಚುಗಾಲದ ಧೋರಣೆಯನ್ನು ಗಮನಿಸಿ, ಕಾಂಗ್ರೆಸಿಗರು ಸತ್ಯಾಗ್ರಹದಲ್ಲಿ ಭಾಗವಹಿಸಬಾರದು ಎಂಬ ನಿರ್ಬಂಧವನ್ನು ಗೊತ್ತುವಳಿಯಲ್ಲಿ ಉಲ್ಲೇಖಿಸದೆ ಬಿಟ್ಟಿತು. ಕಾಂಗ್ರೆಸಿನ ಕಾರ್ಯದರ್ಶಿ ಶ್ರೀಮನ್ನಾರಾಯಣರು ಹಿಂದಿನಿಂದ ಪ್ರದೇಶ ಕಾಂಗ್ರೆಸುಗಳಿಗೊಂದು ಸರಿಪತ್ರವನ್ನು ಕಳುಹಿಸಿ ಈ ಗೊತ್ತುವಳಿಯು ಭಾರತೀಯರಲ್ಲಿ ಪಂಕ್ತಿ ಭೇದಮಾಡುವುದನ್ನು ಬಿಟ್ಟು ಗೊಟ್ಟಿತೆಂದೂ ತನ್ಮೂಲಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಉತ್ಸುಕೇಚ್ಛೆಯುಳ್ಳ ಕಾಂಗ್ರೆಸಿಗರಿಗೆ ವೈಯಕ್ತಿಕವಾಗಿ ಹೆಜ್ಜೆ ಮುಂದಿಡಲು ಅವಕಾಶ ನೀಡಿದೆಯೆಂದೂ ತಿಳಿಸಿದರು. ಆದರೆ ಕಾಂಗ್ರೆಸಿಗರು ಶಾಂತಿಮಾರ್ಗವನ್ನು ತೊರೆಯಬಾರದು ಕಾಂಗ್ರೆಸು ಪಕ್ಷ ಸತ್ಯಾಗ್ರಹದಲ್ಲಿ ಧುಮುಕಿದೆಯೆಂದೂ ಭಾವಿಸಬಾರದು ಎಂದವರು ಸ್ಪಷ್ಟೀಕರಿಸಿದರು.

ಸರಕಾರವು ಗೋವೆಯ ಸಮಸ್ಯೆಯನ್ನು ಹೇಗೆ ನೋಡುತ್ತಿದೆ ಎಂಬುದರ ಕಲ್ಪನೆಯನ್ನು ಪ್ರಧಾನಿಗಳು ಮೊನ್ನೆ ೨೩ನೇ ದಿನಾಂಕ ಮಾಡಿದ ಭಾಷಣದಲ್ಲಿಯೂ ಮರುದಿನ ಲೋಕ ಸಭೆಯಲ್ಲಿ ನಡೆದ ಚರ್ಚೆಗೆ ಕೊಟ್ಟ ಉತ್ತರದಲ್ಲಿಯೂ ವಿದಿತ ಪಡಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಭಾರತದ ವಿವಿಧ ಪಕ್ಷಗಳ ಮತ್ತು ಸಾಮಾನ್ಯವಾಗಿ ಜನತೆಯ ಅಭಿಪ್ರಾಯಗಳೇನೆಂದು ತಿಳಿಸಿದರು. ನೆಹರುಗಳು ಇದೇ ಆಗೋಸ್ತು ೮ರಿಂದ ಭಾರತದಲ್ಲಿರುವ ಪೋರ್ಚುಗಾಲದ ರಾಯಭಾರಿ ಕಚೇರಿಯನ್ನು ಮುಚ್ಚಬೇಕೆನ್ನುತ್ತಾ "ಅದು ಹೊಸ ದೆಹಲಿಯಲ್ಲಿರುವುದರಿಂದ ಯಾವ ಸದುದ್ದೇಶವೂ ಸಾಧಿಸಲ್ಪಡಲಾರದು" ಎಂದರು. ಯುದ್ಧಕ್ಕೆ ಸಮಾನವಾದ ಶಾಂತಿ ಕಾಲದ ಈ ಉಗ್ರಕ್ರಮವನ್ನು ಎಲ್ಲ ಸದಸ್ಯರೂ ಹರ್ಷೋದ್ಗಾರದಿಂದ ಸ್ವಾಗತಿಸಿದರು. ಗೋವೆಯೊಳಗೆ ಹೋಗುವ ಭಾರತದ ರೈಲು ಸಾರಿಗೆಯನ್ನೂ ಅವಮಾನತುಗೊಳಿಸಲಾಗಿದೆ ಎಂದು ನೆಹರುಗಳು ಹೇಳಿದುದರಿಂದ ಈಗ ಪರಸ್ಪರ ಟಪ್ಪಾಲು ಸಂಪರ್ಕವೂ ಸ್ಥಗಿತವಾಗಿರುತ್ತದೆ. ಸಾಮಾನ್ಯರಿಗಲ್ಲ ಹೋಗಬರುವುದೂ ನಿಂತು ಹೋಗಿರುತ್ತದೆ. ಆದರೂ ಪೋರ್ಚುಗಾಲವು ಜಂಬದ ಮಾತಾಡುವುದನ್ನು ನಿಲ್ಲಿಸಲ್ಲ—"ಭಾರತ ಸರಕಾರವು ತನ್ನ ಈ ಕ್ರಮದಿಂದ ಗೋವೆಯತೊರಗಿನ ಗೋಮಾಂತಕರ ಸಂಪರ್ಕವನ್ನೆ ಗೋವೆಯ ನಾಗರಿಕರು ಕಡಿದುಕೊಳ್ಳುವಂತೆ ಮಾಡಿದೆ. ಅದರ ನ್ಯಾಯವು ನಮ್ಮ ಕಡೆಗಿದೆ. ನಾವು ತ್ವೇಶವನ್ನು ಹೆಚ್ಚಿಸುವ ಯಾವುದೇ ಹೆಜ್ಜೆಯನ್ನೂ ಮುಂದಿಡದೆ ಅಯೋಗ್ಯಕರವಾದ ಅಂತರಾಷ್ಟ್ರೀಯ ಸಂಬಂಧವನ್ನೂ ಸಹಜೀವನವನ್ನೂ ಊರ್ಜಿತದಲ್ಲಿಡಲು ಪ್ರಯತ್ನಿಸುತ್ತೇವೆ. ಗೋವೆಯ ಮೇಲೆ ಪೋರ್ಚುಗಾಲದ ಸಾರ್ವಭೌಮತ್ವವಿದೆ ಎಂಬ ತತ್ವವನ್ನು ಭಾರತ ಮನ್ನಿಸಿದ ವಕ್ಷದಲ್ಲಿ ಅವರೊಡನೆ ನಾವು ಸಾಮಾನ್ಯ ಸಮಸ್ಯೆಗಳ ಕುರಿತು ಸಂಧಾನದಮಾತುಕತೆಗೆತೊಡಗಲುಸದಾ ಸಿದ್ಧರಿದ್ದೇವೆ" ಎಂದು ಅದು ಹೇಳುತ್ತದೆ.

ಪೋರ್ಚುಗಾಲಕ್ಕೆ ಗೋವೆಯ ಮೇಲೆ ಸಾರ್ವಭೌಮಾಧಿಕಾರವಿದೆ ಎಂಬ ತತ್ವವೇ ಭಾರತ ಸರಕಾರಕ್ಕೆ ಮತ್ತು ಆ ದು ಪ್ರತಿನಿಧಿಸುವ ಭಾರತೀಯ ಜನತೆಗೆ ಸಮ್ಮತವಿಲ್ಲ ಎಂಬುದು ಲೋಕ ಸಭೆಯ ಚರ್ಚೆಯಲ್ಲಿ ವಿದಿತವಾಯಿತು. ಚರ್ಚೆಯನ್ನು ಪ್ರಾರಂಭಿಸಿದ ಡಾ. ಲಂಕಾಸುಂದರಂ "ಪೋರ್ಚುಗಾಲವು ಇದುವರೆಗೆ ತೋರಿಸಿದ ವರ್ತನೆಯನ್ನು ಭಾರತದೊಡನೆ ಮುಂದುವರಿಸುವುದು ಅಸಾಧ್ಯ" ಎಂದರು. ವಸಾಹತು ಪ್ರದೇಶದೊಡನೆ ವ್ಯಾಪಾರ ಸಂಬಂಧವನ್ನು ಕಡಿದುಕೊಳ್ಳಬೇಕು ಅಲ್ಲಿ ನಡೆಯುತ್ತಿರುವ ಯುದ್ಧ ಸಿದ್ಧತೆಯ ಲೆಕ್ಕವಿಟ್ಟುಕೊಳ್ಳಬೇಕು, ನೌಕಾ ದಿಗ್ಬಂಧನವನ್ನು ಹೇರ ಬೇಕು. ನ್ಯಾಟೋರಾಷ್ಟ್ರಗಳ ಮನೋಭಾವವನೆಂಬುದನ್ನು ಸ್ಪಷ್ಟೀಕರಿಸಬೇಕು ಎಂದೂ ಅವರು ಹೇಳಿದರು. ಪ್ರಜಾ ಸಮಾಜವಾದಿ ಪಕ್ಷದ ಆಚಾರ್ಯ ಕೃಪಲಾನಿಯವರು ಗೋವೆಯ ವಿಮೋಚನೆಯ ಹೋರಾಟವು ಭಾರತದ ಸ್ವಾತಂತ್ರ್ಯದ ಕೊನೆಯ ಹೆಜ್ಜೆ ಎಂದರು. "ಸರಕಾರವು ಹಿಂದೆ ಮತ್ತು ಯುದ್ಧವನ್ನು ತ್ಯಜಿಸಿದೆಯೇ ಎಂದು ನನಗೆ ಗೊತ್ತಿಲ್ಲ. ಆದರೆ ಕಾಶ್ಮೀರ ಮತ್ತು ಹೈದರಾಬಾದುಗಳಲ್ಲಿ ಸೈನ್ಯ ಶಕ್ತಿಯನ್ನು ಸರಕಾರ ಅವಲಂಬಿಸಿರುತ್ತದೆ. ಯುದ್ಧವು ಸಮಸ್ಯೆಗಳನ್ನು ಬಗೆಹರಿಸಲಾರದು ಬುದ್ಧ ಅರ್ಥ ಸತ್ಯ; ದೇಶದ ಒಗ್ಗಟ್ಟು ಮತ್ತು ಭದ್ರತೆಗೆ ಯುದ್ಧವು ನೆರವಾಗಿದೆ. ಆದರೆ ಅಣುಯುದ್ಧ ದೊಡ್ಡ ಸಮರ ಮಾತ್ರ ಈಗ ಅಪೇಕ್ಷಣೀಯವಲ್ಲ. ಗೋವೆಯ ಮಟ್ಟಿಗಂತೂ ಹೈದರಾಬಾದಿನಲ್ಲಿ ತಗಲಿದಷ್ಟೇ ಹೊತ್ತು ಸಾಕು" ಎಂದು ನುಡಿದರು. ಒಂದೇ ಯುದ್ಧ ಅಥವಾ ಸತ್ಯಾಗ್ರಹ ಎಂಬ ತತ್ವಕ್ಕೆ ಸರಕಾರ ಬದ್ಧವಾಗಲಿ ಎಂದು ಅಪೇಕ್ಷಿಸಿದರು.

ಗೋವೆಯ ಸಮಸ್ಯೆಯು ಭಾರತದ ರಾಷ್ಟ್ರೀಯ ಸ್ವತ್ತು ಎಂದು ಕಮ್ಯೂನಿಸ್ಟ್ ಪಕ್ಷದ ಶ್ರೀ. ಗೋವಾಲನ್ ಹೇಳಿದರು. ಗೋವೆಯೊಳಗಿನ ಚಿತ್ರವನ್ನು ಕಂಡು ಲೋಕ ಬೆರಗಾಗಿದೆ, ಭಯಭೀತರದಿಂದ ಕೂಡಿದೆ ಎಂದರು ಆರ್ಥಿಕ ದಿಗ್ಬಂಧನವನ್ನು ಹೇರುವ ಅವಶ್ಯಕತೆಯನ್ನು ಅವರು ಪ್ರತಿಪಾದಿಸಿದರಲ್ಲದೆ, ಪರಿಸ್ಥಿತಿಯು ಒತ್ತಾಯಿಸಿದರೆ ಜೋಲೀಸು ಕ್ರಮವನ್ನು ತೆಗೆದುಕೊಳ್ಳಲು ಹಿಂಜರಿಯಬಾರದು ಎಂದರು. ತಿರು-ಕೊಚ್ಚಿಯ ಕ್ರೈಸ್ತ ಸದಸ್ಯ ಜೋರ್ಜ್ ಧೋಮಸರು ಕ್ರೈಸ್ತ ಧರ್ಮದ ರಕ್ಷಣೆಗಾಗಿ ಗೋವೆ ಪೋರ್ಚುಗೀಜರ ಕೈಯಲ್ಲಿರಬೇಕೆಂಬ ಡಾ. ಸಾಲಾಝೋರರ ವಾದ ಹಾಸ್ಯಾಸ್ಪದವಾಗಿದೆ ಎಂದು ಸಾರಿದರು. ಕಳೆದ ೧೯೦೦ ವರ್ಷಗಳಿಂದ ಭಾರತದಲ್ಲಿ ಕ್ರೈಸ್ತಧರ್ಮ ಬೆಳವಣಿಗೆಹೊಂದಿದೆ ಎಂದೂ ಗೋವೆಯು ಭೌಗೋಲಿಕ, ಚಾರಿತ್ರಿಕ, ಮತ್ತು ಸಾಂಸ್ಕೃತಿಕ ಕಾರಣಗಳಿಗಾಗಿ ಭಾರತದ ಅಂಗವೆಂದೂ ಭಾರತದಲ್ಲಿರುವ ಗೋಮಾಂತಕರು ಭಾರತೀಯರಷ್ಟೇ ನಾಗರಿಕ ಅಧಿಕಾರಗಳನ್ನು ಹೊಂದಿರುವರೆಂದೂ ತಿಳಿಸಿದರು. ಆಂಗ್ಲೊ—ಇಂಡಿಯನ್ ಸದಸ್ಯ ಡಾ. ಫ್ರಾಂಕ್ ಆಂಥೊನಿಯವರು ಗೋವೆಯ ಸಂಬಂಧವಲ್ಲಿ ಭಾರತ ಅನುಸರಿಸಿಕೊಂಡು ಬಂದಿರುವ ಧೋರಣೆಯು ಮಹಾರಾಷ್ಟ್ರವೊಂದಕ್ಕೆ ಉಚಿತವಾದ ಧೀಸತೆಯನ್ನು ಸಂಯಮವನ್ನು ಅನುಗುಣವಾಗಿದೆ ಎಂದರು. ನೆಹರುಗಳು ಭಾರತೀಯರನ್ನು ಅನಾವಶ್ಯಕವಾಗಿ ಉದ್ರೇಕಿಸುತ್ತಿರೆಂದು ಪಾಶ್ಚಾತ್ಯ ಪತ್ರಿಕೆಗಳ ಹೇಳುತ್ತಿರುವುದನ್ನು ಖಂಡಿಸಿ, ಭಾರತೀಯ ಜನತೆ

ಯ ಬೆಂಬಲ ಅವರಿಗಿದೆ ಎಂದರು. ಎಚ್ಚತ್ತ ಏಷ್ಯದಲ್ಲಿ ಗೋವೆಯಂಥ ವಸಾಹತು ಬಾಳಲಾರದೆಂದೂ ಪಾಶ್ಚಾತ್ಯದೇಶಗಳ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳು ಪೋರ್ಚುಗಾಲದ ಮೇಲೆ ಕಮ್ಮ ಪರ್ಚಸ್ಸನ್ನು ಬೀರಬೇಕೆಂದೂ ಅವರು ಹೇಳಿದರು. ಗೋವೆಯಲ್ಲಿರುವ ಕ್ರೈಸ್ತರು ಬಾರತದೊಡನೆ ವಿಲೀನ ಹೊಂದುವುದಕ್ಕೆ ವಿರೋಧವಿರುವರೆಂಬ ಹೇಳಿಕೆಯನ್ನು ನಿರಾಕರಿಸಿ ಸುತಿಕ್ಷಿತ ಗೋವಾಂತಕರೂ ಕ್ರೈಸ್ತ ಪಾದ್ರಿಗಳೂ ಸೇರ್ಪಡೆಗೆ ಅನುಕೂಲವಿದ್ದಾರೆಂದು ಘೋಷಿಸಿದರು

ಕೇಂದ್ರ ಸರಕಾರದ ಹಿಂದಿನ ಮಂತ್ರಿ ಶ್ರೀ ಗಾಡ್ಗೀಳರು ಕಾಂಗ್ರೆಸಿನ ನಿಲುಮೆಯನ್ನು ವಿವರಿಸುತ್ತಾ "ನಮ್ಮ ಉತ್ಸಾಹವು ನಮ್ಮಿಂದ ತಪ್ಪುಕೆಲಸವನ್ನು ಮಾಡಿಸದಿರಲಿ" ಎಂದು ಎಚ್ಚರಿಸಿದರು. "ಭಾರತವು ಗೋವೆಯ ಕುರಿತು ದುಡುಕಿತ ತಪ್ಪು ಹೆಜ್ಜೆಯನ್ನಿಟ್ಟರೆ ಅಂತಾರಾಷ್ಟ್ರೀಯ ಶಾಂತಿಗಾಗಿ ವ್ರಥಾನಿಗಳು ಮಾಡಿದ ಎಲ್ಲ ಪ್ರಯತ್ನ ವ್ಯರ್ಥವಾಗುವುದಲ್ಲದೆ, ನಮ್ಮ ಘನತೆ ಕುಂದುತ್ತದೆ. ಅದುಸರಿಂದ ನೋಲೀಸು ಕ್ರಮದ ಕುರಿತು ಸಹನೆಯಿಂದಿರೋಣ. ಜಗತ್ತಿನ ಅಭಿಪ್ರಾಯವನ್ನು ನಮ್ಮ ಪರವಾಗಿ ತಿರುಗಿಸೋಣ. ಎಂದೇ ಆಗಲಿ, ನಾವು ಈಗಿನ ನಿಲುಮೆಯನ್ನು ಬಿಟ್ಟುಗೊಡಬೇಕಾಗಿ ಬಂದರೆ, ಪೋರ್ಚುಗಾಲದ ಮೂರ್ಖತನದ ಮುಂದೆ ಭಾರತಕ್ಕೆ ಬೇರೆ ದಾರಿ ಇರಲಿಲ್ಲ ಎಂದು ಜಗತ್ತು ಹೇಳುವಂತೆ ನಮ್ಮ ವರ್ತನೆ ಇರಲಿ' ಎಂದರು ಕಾಂಗ್ರೆಸಿನ ಮುಸ್ಲಿಂ ಸದಸ್ಯ ಮೌಲಾನಾ ಹಿಜೂರ್ ರಹಮಾನರು ಮಸಾಹತು ವಾದದ ಪೋರ್ಚುಗೀಜ ಧೋರಣೆಯನ್ನು ಬೆಂಬಲಿಸಬಾರದಾಗಿ ಪಾಕಿಸ್ತಾನಕ್ಕೆ ಹೇಳಬೇಕು ಎಂದು ಸಲಹೆ ಮಾಡಿದರು. ಜನಸಂಘದ ಶ್ರೀ ಯು. ಎಂ ತ್ರಿವೇದಿಯವರೂ ಹಿಂದೂ ಮಹಾಸಭೆಯ ಶ್ರೀ ವಿ. ಜಿ ದೇಶಪಾಂಡೆಯವರೂ ವೈಶಾಚಿಕ ಕೃತ್ಯಗಳಿಗೆ ಹೇಸದ ಪೋರ್ಚುಗೀಜರ ಮುಂದೆ ಸತ್ಯಾಗ್ರಹದ ನಾಗರಿಕ ವಿಧಾನ ಪ್ರಯೋಜನಕ್ಕೆ ಬಾರದೆಂದೂ ಪೋಲೀಸು ಕ್ರಮ ಅಥವಾ ಬಲವಾದ ರಾಜಕೀಯ ನಿಲುಮೆ ಅಗತ್ಯವಾಗಿದೆ ಎಂದೂ ಅಭಿಪ್ರಾಯಪಟ್ಟರು

ಇವೆಲ್ಲ ಅಭಿಪ್ರಾಯಗಳ ವಿಮರ್ಶೆ ಮಾಡುತ್ತಾ ನೆಹರೂ ಭಾರತ ಸರಕಾರದ ನಿಲುಮೆಯನ್ನು ಹೀಗೆ ವಿವರಿಸಿದರು—"ಸರಕಾರದ ಧೋರಣೆಯ ಕುರಿತು ಟೀಕೆ ಕಂಡು ಬಂದರೂ ಸಾಮಾನ್ಯವಾಗಿ ಒಮ್ಮತ ವ್ಯಕ್ತವಾಗಿದೆ ಗೋವೆಯು ಭಾರತದ್ದೆಂಬ ಬಗ್ಗೆ ಯಾರೂ ಸಂದೇಹ ವ್ಯಕ್ತಪಡಿಸಿರುವುದಿಲ್ಲ; ಅಲ್ಲದೆ ಶಾಂತಿ ಮಾರ್ಗವನ್ನು ಬಿಟ್ಟುಗೊಡಬೇಕೆಂದೂ ಹೇಳಿರುವುದಿಲ್ಲ. ನ್ಯಾಟೋ ರಾಷ್ಟ್ರಗಳ ಕುರಿತು ಹೇಳುವುದಾದರೆ ನಾವು ಒಪ್ಪಲಿ, ಬಿಡಲಿ, ಜವಾಬ್ದಾರಿಯುಳ್ಳ ಧುರೀಣರು ಗೋವೆಯ ವಿಷಯಕ್ಕೂ ನ್ಯಾಟೋ ಒಪ್ಪಂದಕ್ಕೂ ಸಂಬಂಧವಿಲ್ಲ ಎಂದಿದ್ದಾರೆ ಪೋರ್ಚುಗಾಲಕ್ಕೆ ಬ್ರಿಟನಿನೊಡನೆ ಇರುವ ಒಪ್ಪಂದ ಬಹಳ ಹಳೆಯದಾಗಿದೆ—ಅದನ್ನು ಇಂದು ಬ್ರಿಟನು ಮನ್ನಿಸದೆಂದು ನನಗೆ ಸಂಪೂರ್ಣ ಭರವಸೆಯಿದೆ. ಪೋರ್ಚುಗಾಲಕ್ಕೆ ಬೇರೆ ರಾಷ್ಟ್ರಗಳೊಡನೆ ಇರಬಹುದಾದ ಒಪ್ಪಂದಕ್ಕೆ ಭಾರತವು ಬದ್ಧವಿಲ್ಲ. ಭಾರತದ ಸ್ವಾತಂತ್ರ್ಯದ ಕಲ್ಪನೆಯು ಯಾವುದೇ ಒಂದು ಭಾಗಕ್ಕೆ ಮಾತ್ರ ಸ್ವಾತಂತ್ರ್ಯವೆಂಬ ರೀತಿಯದಿರಲಿಲ್ಲ. ನೂರನಲುವತ್ತು ವರ್ಷಗಳ ಹಿಂದೆ ಅಮೇರಿಕದ ಭೂಖಂಡದಲ್ಲಿ ಐರೋಪ್ಯರು ಹಸ್ತಕ್ಷೇಪ ಮಾಡಬಾರದೆಂದು ಅಮೇರಿಕ ಮುನ್ರೊ ಘೋಷಣೆಯನ್ನು ಹೊರಡಿಸಿರುವುದನ್ನು ನೆನಪಿಟ್ಟುಕೊಂಡ., ನಾನು ಗೋವೆಯು ಪೋರ್ಚುಗೀಜರ ಕೈಯಲ್ಲಿರುವುದು ಭಾರತದ ರಾಜಕೀಯ ಪದ್ಧತಿಗೆ ಆತಂಕ ಎನ್ನುತ್ತೇನೆ.ಯಾವುದೇ ಪರರಾಷ್ಟ್ರ ಹಸ್ತಕ್ಷೇಪ ನಡೆಸಿದರೆ ಅದನ್ನು ಸ್ವತಂತ್ರ ಭಾರತದ ವ್ಯವಹಾರದಲ್ಲಿ ಆತಂಕ ಎನ್ನುತ್ತೇನೆ ಇದಕ್ಕೆ ವ್ಯತಿರಿಕ್ತವಾಗಿ ಹಸ್ತಕ್ಷೇಪ ನಡೆದ ಪಕ್ಷದಲ್ಲಿ ನಾವದನ್ನು ಪ್ರತಿಬಟಿಸುತ್ತೇವೆ ನಮ್ಮ ಶಕ್ತಿ ಸರ್ವಸ್ವವನ್ನು ಉಪಯೋಗಿಸಿ ವಿರೋಧಿಸುತ್ತೇವೆ."

ಮುಂದುವರಿದು ನೆಹರುಗಳು "ರಾಷ್ಟ್ರೀಯ ಐಕ್ಯ, ಭದ್ರತೆ ಮುಂತಾದ ಅನೇಕ ಕಾರಣಗಳಿಗಾಗಿ ಭಾರತದಲ್ಲಿ ಪರಕೀಯರ ಎಷ್ಟೇ ಸಣ್ಣ ತುಣುಕು ಉಳಿಯುವುದೂ ನಮಗೆ ಸಮ್ಮತವಿಲ್ಲ.ಅಂಥದೊಂದು ತುಣುಕು ಭವಿಷ್ಯದಲ್ಲಿ ಅಪಾಯಕರವಾದೀತು. ವಿವಿಧ ರೀತಿಯ ಒಪ್ಪಂದಗಳಿಗೆ ಕಟ್ಟು ಬಿದ್ದಿರುವ ಪೋರ್ಚುಗಾಲದಂಥ ರಾಷ್ಟ್ರದ ಕೈಯಲ್ಲಿನ ತುಣುಕಿನ ಸಂಬಂಧದಲ್ಲಂತೂ ಈ ಅಪಾಯ ಬಹಳ ಹೆಚ್ಚು" ಎಂದು ಸ್ಪಷ್ಟಪಡಿಸಿದರು. ಭಾರತದಲ್ಲಿ ವಿರೋಪ್ಯ ಸಂಸ್ಕೃತಿಯ ಭವ್ಯ ಪ್ರೋತಕ ಗೋವೆ ಎಂಬ ಪೋರ್ಚುಗೀಜರ ವಾದವನ್ನು ಪ್ರಸ್ತಾಪಿಸುತ್ತಾ "ಗೋವೆಯ ಈಗಿನ ಸಂಸ್ಕೃತಿ, ಅಥವಾ ಮಾತಿಗೆ ಬೇಕಾದರೆ ಪೋರ್ಚುಗಾಲದ ಈಗಿನ ಸಂಸ್ಕೃತಿ, ಐರೋಪ್ಯರ ಉನ್ನತ ಹಾಗು ಉದಾತ್ತ ಸಂಸ್ಕೃತಿಯನ್ನುರಾಜಕೀಯ, ಆರ್ಥಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ದೃಷ್ಟಿಯಿಂದ ಪ್ರತಿನಿಧಿಸುವುದೇ ಎಂದು ಐರೋಪ್ಯರನ್ನು ಕೇಳಲಿಚ್ಛಿಸುತ್ತೇನೆ" ಎಂದರು. ಧರ್ಮದ ಸಂಬಂಧವನ್ನೆತ್ತಿಕೊಂಡು ಗೋವೆಯ ವಿಲೀನೀಕರಣವು ಭಾರತ ಅನುಸರಿಸಿಕೊಂಡು ಬಂದಿರುವ ನಿಲುಮೆಯನ್ನು ಬದಲಿಸಲಾರದು ಎಂದು ತೀರ್ಪಿಸಿದರು ಗೋವೆಯು ಭಾರತದಲ್ಲಿ ಸೇರ್ಪಡೆಯೊಂದಬೇಕು ಎಂಬುದು ವಿವಾದಾತೀತವಾದ ವಿಷಯ. ಸರಕಾರವು ಹಿಂಸೆ ಅಥವಾ ಯುದ್ಧವನ್ನು ತೊರೆದಿಲ್ಲ; ಯಾವ ಸರಕಾರವೂ ತೊರೆಯಲಾರದು. ಕಾಶ್ಮೀರದಲ್ಲಿ ದಾಳಿಗಾರರನ್ನು ಎದುರಿಸಲು ಭಾರತ ಸರಕಾರ ಸೈನ್ಯಶಕ್ತಿ ಉಪಯೋಗಿಸಿದುದನ್ನು ಅಹಿಂಸೆಯ ಪೂಜಾರಿ ಗಾಂಧೀಜಿ ಅನುಮೋದಿಸಿದ್ದರು. ಸರಕಾರವು ಸಂರಕ್ಷಣೆಯ ಉದ್ದೇಶದಿಂದ ಯುದ್ಧ ಅಥವಾ ಹಿಂಸೆಮಾಡುವ ಅಧಿಕಾರಕೊಡದಿದೆ ಎಂದು ಹೀಗೆ ಅವರು ಒಪ್ಪಿದ್ದರು. ಆದರೆ ಭಾರತಸರಕಾರವು ಯುದ್ಧಕ್ಕೆ ಪ್ರಚೋದನೆಕೊಡದು, ಆಕ್ರಮಣ ಮಾಡಲಾರದು, ತಾನಾಗಿ ಯುದ್ಧವನ್ನು ಪ್ರಾರಂಭಿಸಲಾರದು. ಜಾಗತಿಕ ವಾತಾವರಣವು ಶಾಂತಿಯೆಡೆಗೆ ಪರಿವರ್ತನೆ ಹೊಂದುವ ಈಗಿನ ದಿನದಲ್ಲಿ ಯಂತೂ ಗೋವೆಯ ಕುರಿತು ಶಾಂತಿ ಮಾರ್ಗ ಅತ್ಯವಶ್ಯವಾಗಿದೆ ಎಂದು ಹೇಳಿದರು.

ಮಿತವಾದ ಯುದ್ಧ ಎಂಬುದಿಲ್ಲ ಎನ್ನುತ್ತಾ ಯುದ್ಧ ಎಷ್ಟೇ ಸಣ್ಣ ರೀತಿಯಲ್ಲಿ ತೊಡಗಲಿ, ಅದು ಮಹಾ ಯುದ್ಧಕ್ಕೆ ದಾರಿ ಮಾಡಿಕೊಡುತ್ತದೆ ಎಂದು ನೆಹರು ಹೇಳಿದರು. ನಾವು ಇದು ವರೆಗೆ ಅನುಸರಿಸಿಕೊಂಡು ಬಂದ ಶಾಂತಿಯ ಮೂಲತತ್ವಗಳ ವಿರುದ್ಧವಾದ ನೀತಿಗೆ ಮನಸ್ಸು ಮಾಡುವುದು ಬುದ್ಧಿವಂತಿಕೆಯಲ್ಲ ಎಂದರು. ತಪ್ಪು ಹೆಜ್ಜೆಯನ್ನಿಟ್ಟು ಸರಿಯಾದ ಮಾರ್ಗಾನುಸರಣೆಯಿಂದ ಸಿಗುವ ಲಾಭಕ್ಕೆ ಎರವಾಗ ಕೂಡದು ಎಂದು ಸಮಾಧಾನಪಡಿಸಿದರು.ಆರ್ಥಿಕದಿಗ್ಬಂಧನದಂಥ ಘೋರಣೆಯನ್ನು ಭಾರತ ಅನುಸರಿಸಬಹುದು. ಆದರೆ ಸರಕಾರವು ಸತ್ಯಾಗ್ರಹವನ್ನು ಸಂಘಟಿಸಲಾರದು ಎಂದರು. ಸರಕಾರಕ್ಕೂ ಸತ್ಯಾಗ್ರಹಕ್ಕೂ ಯಾವುದೇ ಸಂಬಂಧವಿಲ್ಲ. ಏನಾದರೂ ತಪ್ಪಿಗೆ ಸತ್ಯಾಗ್ರಹ ಎಡೆಮಾಡಿಕೊಟ್ಟರೆ, ತನ್ನ ಆಡಳಿತ ಪ್ರದೇಶದಲ್ಲಿ ಸರಕಾರ ಅದನ್ನು ತಡೆಯುತ್ತದೆ ಕಾಂಗ್ರೆಸನ್ನೊಳಗೊಂಡು ಬೇರೆ ಬೇರೆ ಪಕ್ಷಗಳು ತಾವು ಯಾವ ಕಾರ್ಯಕ್ರಮ ಅನುಸರಿಸಬೇಕು ಎಂದು ತೀರ್ಮಾನಿಸಬಹುದು. ಆದರೆ ಸರಕಾರ ಸತ್ಯಾಗ್ರಹದ ಆಲೋಚನೆ ಮಾಡಲಾರದು ಹಿಂಸೆಯಲ್ಲಿ ಪರಿವರ್ತನೆ ಹೊಂದದಿರುವಷ್ಟು ಕಾಲ ಅದು ಸುಮ್ಮನೆ ಕುಳಿತಿರಬಹುದು. ಹಿಂಸೆಯಾದೀತೆಂದೇ ಸಾಮೂಹಿಕಸತ್ಯಾಗ್ರಹಕ್ಕೆ ಸರಕಾರದ ಅನುಮೋದನೆ ಇಲ್ಲ. ಶಾಂತ ಸತ್ಯಾಗ್ರಹಿಗಳಿಗೆ ಉತ್ತಮ ತರಬೇತಿ ಬೇಕಾಗುತ್ತದೆ. ಎಲ್ಲರಿಗೂ ಸತ್ಯಾಗ್ರಹ ಮಾಡಲು ಬಿಟ್ಟರೆ ಸತ್ಯಾಗ್ರಹಿಯ ಯೋಗ್ಯತೆ ಇಲ್ಲದವರು ಸೇರಿ ಹಿಂಸೆಗೆ ಎಡೆ ದೊರಕೇತುಎಂದ. ನೆಹರು ಧ್ವನಿಸಿದರು.

ಪ್ರಧಾನ ಮಂತ್ರಿಗಳ ಈ ವಿವರಣೆ ಪಾಶ್ಚಾತ್ಯರ ಅಭಿಪ್ರಾಯದ ಮೇಲೆ ಗಂಭೀರ ಪರಿಣಾಮ ಮಾಡಿರುತ್ತದೆ. ಯುರೋಪಿನಿಂದ ದಕ್ಷಿಣ ಅಮೇರಿಕದ ವರೆಗಿನ ರಾಷ್ಟ್ರಗಳ ಮೇಲೆ ಭಾರತದ ನಿಲುಮೆಯ ಘೋಷಣೆ ತಪ್ಪು ಕಲ್ಪನೆಗಳನ್ನು ಸರಿಪಡಿಸುವುದಕ್ಕೆ ತುಂಬ ನೆರವೀಯದಿರದು. ಜಾಗತಿಕ ಪ್ರತಿಕ್ರಿಯೆಯು ಈಗ ಭಾರತಕ್ಕೆ ಅನುಕೂಲವಾಗುತ್ತಾ ಬರುತ್ತಿದೆ: ನ್ಯಾಟೋ ರಾಷ್ಟ್ರಗಳಿಗೆ ನೀಡಿದ ಎಚ್ಚರಿಕೆ ಉತ್ತಮ ಪರಿಣಾಮವನ್ನು ಮಾಡಿರುವಂತೆ ಕಾಣುತ್ತದೆ. ಪೋರ್ಚುಗಾಲದ ಬೆಂಬಲಿಗರು ವಿರಳವಾಗುತ್ತಿದ್ದಾರೆ— ನೆಹರುಗಳ ನಿಲುಮೆಯನ್ನೆ ಶ್ಲಾಘಿಸಲಾಗುತ್ತದೆ. ಈ ಕುರಿತು ಅಮೇರಿಕದ 'ನ್ಯೂಯಾರ್ಕ್ ಟೈಮ್ಸ್" ಎಂಬ ಜಗತ್ಪ್ರಸಿದ್ಧ ಪತ್ರಿಕೆ ಹೀಗೆ ಬರೆದಿದೆ—"ಭಾರತದ ಭೂಖಂಡದಲ್ಲಿ ಪೋರ್ಚುಗೀಜರ ವಸಾಹತನ್ನು ಅಂತ್ಯಗೊಳಿಸುವುದಕ್ಕೆ ನೆಹರು ಧೈರ್ಯದ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಸ್ವದೇಶದ ಬಲವಾದ ಒತ್ತಾಯವನ್ನು ಎದುರಿಸಿ ಅವರು ಹಿಂಸೆಯ ಪ್ರದರ್ಶನವನ್ನು ಬಿಟ್ಟುಗೊಟ್ಟಿದ್ದಾರೆ; ಶಾಂತ ಹಾಗು ನ್ಯಾಯಬದ್ಧವಾದ ಪರಿಹಾರ ಮಾರ್ಗವನ್ನೆ ಅಪೇಕ್ಷಿಸುತ್ತಾರೆ. ಭಾರತಕ್ಕೆ ಗೋವೆಯ ಹೋರಾಟ ಆರ್ಥಿಕ ಅಥವಾ ಸಮುದ್ರ ರಕ್ಷಣೆಯ ದೃಷ್ಟಿಯಲ್ಲಿ ಕ್ಷುಲ್ಲಕವಾಗಿದೆ— ಬಾರತದ ನೆಲದಲ್ಲಿ ಪರಕೀಯರ ತುಣುಕು ಇನ್ನೂ ಇರುವುದು ರಾಷ್ಟ್ರೀಯ ಅಭಿಮಾನವನ್ನು ಕೆಣಕುತ್ತದೆಂಬುದೇ ಮಹತ್ವದ ವಿಷಯ. ಪೋಪರ ರಾಜ್ಯದ "ಒಬ್ಸರ್ವೇಟರ್ ರೊಮಾನೊ" ಎಂಬ ಪತ್ರಿಕೆ "ಗೋವೆಯ ಪ್ರಶ್ನೆಯಲ್ಲಿ ಧಾರ್ಮಿಕತೆ ಇಲ್ಲ—ಅದು ಶುದ್ಧ ರಾಜಕೀಯ ವಿಷಯ. ರಾಜಕೀಯ ವಿವಾದದಲ್ಲಿ ಪೋಪರ ರಾಜ್ಯ ಪ್ರವೇಶಿಸುವುದಿಲ್ಲ. ಅದು ತಟಸ್ಥವಾಗಿ ಉಳಿಯಲು ಬಯಸುತ್ತದೆ. ಆದರೆ ಈ ವಿಷಯದಲ್ಲಿ ಬಲಾತ್ಕಾರ ಪ್ರಯೋಗ ಮಾತ್ರ ಸಡೆಯದಿರಲಿ ಎಂದು ಪೋಪರ ರಾಜ್ಯ ಸಲಹೆ ಕೊಡುತ್ತದೆ" ಎಂದು ಹೇಳಿದೆ. ಗೋವೆಯ ಕುರಿತು ಭಾರತೀಯರು ವಿಚಾರಶೂನ್ಯವಾಗಿ ಮೇಲಿನೆಲ್ಲಸಂಗತಿಗಳನ್ನು ಗಮನಕ್ಕೆ ತಂದುಕೊಂಡರೆ ಭಾರತ ಸರಕಾರದ ಧೋರಣೆ ಯೋಗ್ಯವೆಂದು ಮನವರಿಕೆಯಾಗದಿರದು.

ನಿಮ್ಮವ್ವಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ.— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಮೊದಲು ೧) ನವಭಾರತ ಪುಸ್ತಕ ಭಂಡಾರ, ಉಡುಪಿ
೨) ನವಯುಗ ಪ್ರೆಸ್, ಉಡುಪಿ, ದ. ಕ.

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ

ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ

ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ

Edited, Printed & Published By K. H. Shetty, at the Navayuga Press, Udipi S. India.

REGD. NO. M. 3618

LICENSE NO. 31
Licensed to Post without Prepayment

ನವಯುಗ

ಸಂಪುಟ ೩೪ VOL. 34

ಉಡುಪಿ, 11—8—1955

ಸಂಚಿಕೆ ೪೮ NO. 48

ಸಂಕ್ಷಿಪ್ತ ಸುದ್ದಿ

ಬಾಲಿ ಬಿದ್ದಿದ್ದ ಕ್ಯಾಷಿಯರ್ ಕೆಲಸಕ್ಕೆಂದಕ್ಕೆ ತುಂಬ ಮಂದಿ ಉಮೇದ್ವಾರರಾಗಿ ಬಂದಿದ್ದರು. ಅವರನ್ನು ಮುಖತಃ ಭೇಟಿ ಮಾಡಲು ನೇಮಕವಾಗಿದ್ದ ಸಮಿತಿಯವರು ಈಗ ಗುಂಡನನ್ನು ಒಳಗೆ ಕರೆದರು. ಸಂಬಂಧಿಸಿದ ಕಾಗದ ಪತ್ರಗಳನ್ನೆಲ್ಲ ನೋಡಿದಂತೆ ಮಾಡಿ "ಏನಯ್ಯಾ, ನಿನ್ನ ಪ್ರಾಮಾಣಿಕತೆಯ ಕುರಿತಾಗಿ ಯೋಗ್ಯ ರುಜುವಾತು ಬೇಕಾಗಿದೆಯಲ್ಲ! ಏನಾದರೂ ಸರ್ಟಿಫಿಕೇಟು ಕೊಡುವಿಯಾ, ಹೇಗೆ?" ಎಂದು ಸಮಿತಿಯ ಅಧ್ಯಕ್ಷ ಕೇಳಿದರು.

"ಇಷ್ಟೆಯಾ ಸ್ವಾಮಿ, ಕೋರ್ಟಿನ ಆರು ತೀರ್ಪುಗಳು ನನ್ನೊಡನಿವೆ. ಬೇರೆ ಬೇರೆ ಆರು ಸಿಂಸ್ಟಿಟಿಗಳಲ್ಲಿ ನಾನು ಕ್ಯಾಷಿಯರ್ ಆಗಿದ್ದಾಗ ನನ್ನ ಮೇಲೆ ವಿಶ್ವಾಸ ದ್ರೋಹದ ಅಪಾದನೆ ಹೊರಿಸಿದ್ದರು. ಪ್ರತಿಯೊಂದು ಮೊಕದ್ದಮೆಯಲ್ಲೂ ನಿರಪರಾಧಿ ಎಂದು ನನ್ನ ಬಿಡುಗಡೆಯಾಗಿದೆ" ಎನ್ನುತ್ತಾ ಒಂದು ಕಟ್ಟನ್ನು ಮುಂದಿಟ್ಟ ಗುಂಡ!

ಮದ್ರಾಸಿನ ಶಾಸನ ಸಭೆಯ ಮುಂದೆ ಸರಕಾರದ ಕಂದಾಯ ವಿಭಾಗದ ಆಡಳಿತವನ್ನು ವಿಚಾರಿಸಲು ಕಳೆದ ವರ್ಷದ ಜುಲಾಯಿಯಲ್ಲಿ ನೇಮಕವಾಗಿದ್ದ ಸಮಿತಿಯ ವರದಿಯು ಇದೇ ಆಗಸ್ಟ ದಿನಾಂಕ ಮಂಡಿಸಲ್ಪಟ್ಟಿತು. ಸಮಿತಿಯಲ್ಲಿ ಶ್ರೀ ಎಂ. ವಿ. ಸುಬ್ರಹ್ಮಣ್ಯಂ (ಅಧ್ಯಕ್ಷ), ಶ್ರೀ ಸಿ. ಎ. ರಾಮಕೃಷ್ಣನ್ (ಸದಸ್ಯ) ಮತ್ತು ಶ್ರೀ ಜಿ. ರಾಮಚಂದ್ರನ್ (ಕಾರ್ಯದರ್ಶಿ) ಇದ್ದರು. ಜಿಲ್ಲೆಯ ಎಲ್ಲ ಪ್ರದೇಶದ ಅಭಿವೃದ್ಧಿಯ ಚಟುವಟಿಕೆಗಳ ಹೊಣೆಯನ್ನು ಜೆನ್ನಾಗಿ ವಹಿಸಿಕೊಳ್ಳುವಂತೆ ಕಲೆಕ್ಟರರ ಕೆಲಸದ ಭಾರವನ್ನು ಹೇಗೆ ಕಡಿಮೆಮಾಡಬಹುದು, ಕಂದಾಯ ವಿಭಾಗದ ಆಡಳಿತವನ್ನು ಹೇಗೆ ಪರಿಷ್ಕರಿಸಬಹುದು, ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಹೇಗೆ, ಅಭಿವೃದ್ಧಿ ಕೆಲಸದಲ್ಲಿಯೂ ಕಂದಾಯ ವಿಭಾಗದಲ್ಲಿಯೂ ನುರಿತ ಕಾರ್ಯಕರ್ತರಾಗುವಂತೆ ತರಬೇತಿ ನೀಡುವುದು ಹೇಗೆ, ಕಲೆಕ್ಟರ್, ರೆವೆನ್ಯೂ ಡಿವಿಜನಲ್ ಆಫೀಸರ್ ಮತ್ತು ತಹಸೀಲ್ದಾರ್ ಇವರ ಕಚೇರಿಯಲ್ಲಿ ಕಾಲವಿಲಂಬವನ್ನು ದೂರ ಮಾಡಲು ಮತ್ತು ನಿತ್ಯದ ಕೆಲಸಗಳಲ್ಲಾಗುವ ತಪ್ಪುಗಳನ್ನು ತಿದ್ದಲು ಮಾಡಬೇಕಾದುದೇನು ಎಂದು ಮಂತಾದವುಗಳನ್ನು ವಿಚಾರಿಸಲು ಸರಕಾರ ಈ ಸಮಿತಿಯನ್ನು ಕೇಳಿತ್ತು. ಸಮಿತಿಯವರು ತಮಗೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲು ಕೆಲವು ಜಿಲ್ಲೆಗಳಲ್ಲಿ ಸಂಚಾರ ಕೈಗೊಂಡರು; ಕಂದಾಯ ವಿಭಾಗದ ಕಚೇರಿಗಳು ಕೆಲಸ ಮಾಡುವ ಬಗೆಯನ್ನು ನಿರೀಕ್ಷಿಸಿದರು. ಅಭಿವೃದ್ಧಿ ಕ್ಷೇತ್ರಗಳನ್ನೂ ಸಂದರ್ಶಿಸಿದರು.

ಸರಕಾರದ ಕಂದಾಯ ವಿಭಾಗ

ಆಡಳಿತಕ್ಕೂ ಅಭಿವೃದ್ಧಿಗೂ ಸಂಬಂಧಿಸಿದ ಅಧಿಕಾರಿಗಳೊಡನೆ ವಿಚಾರ ವಿನಿಮಯ ನಡೆಸಿದರು. ಮದ್ರಾಸಿನ ವ್ಯಾರಿ ಎಂಡ್ ಕಂಪೆನಿ, ಸ್ಟೆಂಡರ್ಡ್ ವೆಕ್ಯೂಂ ಆಯಿಲ್ ಕಂಪೆನಿ, ಸಿಂಪ್ಸನ್ ಎಂಡ್ ಕಂಪೆನಿ ಮುಂತಾದ ಖಾಸಗಿ ಸಂಸ್ಥೆಗಳಿಗೆ ಭೇಟಿಯನ್ನಿತ್ತು ಅಲ್ಲಿಯ ಪತ್ರ ವ್ಯವಹಾರ ಕ್ರಮಗಳ ಪರಿಚಯ ಮಾಡಿಕೊಂಡರು.

ಇಷ್ಟೆಲ್ಲ ಸಿದ್ಧತೆ, ನಿರೀಕ್ಷಣೆಗಳ ಮತ್ತು ವಿಚಾರ ವಿನಿಮಯ, ಪರ್ಯಾಲೋಚನೆಗಳ ಫಲಿತಾಂಶವಾಗಿ ಹೊರಬಿದ್ದಿರುವ ಸಮಿತಿಯ ವರದಿಯು ಅನೇಕ ಗಮನಾರ್ಹವಾದ ಸೂಚನೆಗಳನ್ನು ಮಾಡಿದೆ. ಆದರೆ, ಸಮಸ್ಯೆಯನ್ನು ವಿಶ್ಲೇಷಿಸಲು ಅದು ನೋಡಿದ ಬಗೆ ಮಾತ್ರ ಉತ್ಕೃಷ್ಟವಾದುದೆಂದು ಹೇಳುವಂತಿಲ್ಲ; ಅದರ ಕೆಲವು ಅಭಿಪ್ರಾಯಗಳಿಗೆ ಒಪ್ಪಿಗೆಯನ್ನು ಕೊಡುವುದೂ ಸಾಧ್ಯವಿಲ್ಲ. ಉದಾಹರಣೆಗೆ, ಸಾರ್ವಜನಿಕರ ಟೀಕೆಗಳಲ್ಲಿ ಹೇಳಲಾದಷ್ಟು ಕಾಲ ವಿಳಂಬವು ಕಂದಾಯ ವಿಭಾಗದಲ್ಲಿ ನಡೆಯುವುದಿಲ್ಲ; ಗಂಭೀರವಾಗಿ ವಿಚಾರಿಸಿ ಬೇಕಾದಷ್ಟು ಕಾರ್ಯಕ್ಷಮತೆಯು ಇಳಿದಿಲ್ಲ ಎಂದು ಹೇಳುತ್ತದೆ. ಹಾಗೆಂದು ಕೆಲವು ಅರ್ಜಿಗಳ ನಿಕಾಲೆಯಲ್ಲಿ ಆರು ತಿಂಗಳಿಂದ ಒಂದು ವರ್ಷದ ವರೆಗೂ ವಿಳಂಬವಾಗುತ್ತಿದೆ ಎಂಬ ವಿಷಯವನ್ನು ಸಮಿತಿ ನಿರಾಕರಿಸಿರುವುದಿಲ್ಲ—ಹೀಗೆ ವಿಳಂಬ ನಡೆಯುತ್ತಿರುವುದು ಕಡಿಮೆಯಾಗುತ್ತಾ ಬರುತ್ತಿದೆ ಎಂಬ ಶುಷ್ಕ ಸಮಾಧಾನವನ್ನಷ್ಟೇ ಸಾರ್ವಜನಿಕರಿಗೆಂದು ನೀಡಬಯಸುತ್ತದೆ. ಖಾಸಗಿ ಸಂಸ್ಥೆಗಳ ಪತ್ರ ವ್ಯವಹಾರ ಕ್ರಮಕ್ಕೂ ಕಂದಾಯ ವಿಭಾಗದಲ್ಲಿ ಅರ್ಜಿಗಳನ್ನು ನಿಕಾಲೆ ಮಾಡುವ ವಿಧಾನಕ್ಕೂ ಮಹದಂತರವಿದೆ ಎಂದು ಸಮಿತಿ ಹೇಳುತ್ತದೆ. ಸಾರ್ವಜನಿಕರ ದೃಷ್ಟಿಯಲ್ಲಿ "ಕಾಲ ವಿಳಂಬ—ಮತ್ತು ಅಸಮರ್ಪಕ ಉತ್ತರ" ಇವನ್ನೆ ಈ ವ್ಯತ್ಯಾಸವೆಂದು ಹೇಳಬಹುದು. ಆದರೆ, ಸಮಿತಿ ಹೀಗೆ ಅಭಿಪ್ರಾಯ ಪಡುವುದಿಲ್ಲ. ಕಂದಾಯ ವಿಭಾಗದ ಕಾರಕೂನರ ಬಳಿಗೆ ಬರುವ ಅರ್ಜಿ ಮತ್ತಿತರ ಪತ್ರಗಳನ್ನು ನಿಕಾಲೆ ಮಾಡುವುದು ಖಾಸಗಿ ಸಂಸ್ಥೆಗೆ ಬರೆದ ಪತ್ರಕ್ಕೆ ಉತ್ತರ ಬರೆಯುವಷ್ಟು ಸುಲಭವಲ್ಲ; ಬೇರೆ ಬೇರೆ ವಿಧಿ ನಿಯಮಗಳ ಒರೆಗಲ್ಲಿಗೆ ನಿರ್ಣಯಗಳನ್ನು ಕಂದಾಯ ವಿಭಾಗ ಹೆಚ್ಚಬೇಕಾಗುತ್ತದೆ; ಮೇಲಧಿಕಾರಿಗಳ ಅನುಮತಿಯನ್ನು ದೊರಕಿಸಿಕೊಳ್ಳಬೇಕಾಗುತ್ತದೆ. ಇದರ ತೊಂದರೆ ಖಾಸಗಿ ಸಂಸ್ಥೆಗಳಲ್ಲಿಲ್ಲ ಎಂದು ಸಮಿತಿಯ ಅಭಿಪ್ರಾಯ. ಖಾಸಗಿ ಸಂಸ್ಥೆಗಳ ವಿಧಿ ನಿಯಮಗಳಲ್ಲಿ ತೊಡಕುಗಳಿಲ್ಲ; ಅಲ್ಲಿ ಕಾರಕೂನನು ಮೆನೇಜರನ ಬಳಿಗೆ ಕೂಡಲೇ ಹೋಗಿ ಒಂದು ವಿಷಯದ ಮೇಲೆ ನಿರ್ಣಯ ಪಡೆಯಬಲ್ಲನು; ಮತ್ತು ಆ ನಿರ್ಣಯವನ್ನು ಸಾರ್ವಜನಿಕರು ಟೀಕಿಸುವುದಕ್ಕೂ ನ್ಯಾಯಾಲಯಗಳಲ್ಲಿ ಆಪ್ತಾನಿಸುವುದಕ್ಕೂ ಅವಕಾಶವಿರುವುದಿಲ್ಲ ಎಂದು ಸಮಿತಿ ಕಂದಾಯ ವಿಭಾಗದಲ್ಲಿ ಸಂಭವಿಸುತ್ತಿರುವ ವಿಳಂಬ ಮತ್ತು ತಪ್ಪು ತಡೆಗಳಿಗೆ ವಿವರಣೆಯನ್ನು ಕೊಡುತ್ತದೆ.

ಕಾಲಹರಣಕ್ಕೆ ಇಂಬು ಕೊಡುವ ಈ ಆಡಳಿತ ಕ್ರಮವನ್ನೆ ಸಾರ್ವಜನಿಕರು ಆಕ್ಷೇಪಿಸುತ್ತಿದ್ದಾರೆ ಎಂದರೆ ತಪ್ಪಾಗದು. ಪ್ರತಿಯೊಂದೂ ನಿರ್ಣಯಗಳಿಗೆ ಮೇಲಧಿಕಾರಿಗಳ ಮುಖವನ್ನು ನೋಡುವ ಈಗಿನ ಪ್ರಮೇಯ ತಪ್ಪಿ, ಆಯಾ ಕಚೇರಿಗಳ ಅಧಿಕಾರಿಗಳೇ ಅರ್ಜಿಗಳನ್ನು ಸೂಕ್ತ ರೀತಿಯಲ್ಲಿ ನಿಕಾಲೆ ಮಾಡಬೇಕು; ವಿಧಿನಿಯಮಗಳು ಅರ್ಥ ಮಾಡಿಕೊಳ್ಳಲು ಕಷ್ಟಕರವಾದಷ್ಟು ಜಿಡುಪಿನವೂ ವಿರೋಧಾಭಾಸಕರವಾದುವೂ ಆಗಿರಬಾರದು. ನಿರ್ಣಯಗಳ ವಿರುದ್ಧ ದೂರೊಯ್ಯುವ ಮತ್ತು ನ್ಯಾಯಾಲಯಗಳ ಆಶ್ರಯವನ್ನು ಪಡೆಯುವ ನಾಗರಿಕರ ಅಧಿಕಾರವನ್ನು ಕಸಿದು ಕೊಳ್ಳುವುದು ಇಷ್ಟವಲ್ಲ. ಇಂಥ ಪ್ರಸಂಗಗಳು ಕಡಿಮೆಯಾಗುವಂತೆ, ಕೆಳ ಕಚೇರಿಗಳಲ್ಲಿಯೇ ಸೂಕ್ತ ಪರಿಶೀಲನೆಯನ್ನು ನಿರ್ಣಯಕ್ಕೆ ಮುಂಚೆ ತೆಗೆದು ಕೊಳ್ಳುವುದು ಅಪೇಕ್ಷಣೀಯ. ಈ ಪರಿಶೀಲನೆ, ಸಂಬಂಧಿಸಿದ ಕಾಗದ ಪತ್ರಗಳ ತಪಾಸಣೆ ಇತ್ಯಾದಿಗಳಿಗೆ ಆರು ತಿಂಗಳಿಂದ ಒಂದು ವರ್ಷದ ವರೆಗೆ ಸಮಯ ಹಿಡಿಯುತ್ತದೆನ್ನುವುದು ಎಷ್ಟಕ್ಕೂ ನಂಬಲಾರದ ಮಾತು. ಅರ್ಜಿಗಳ ನಿಕಾಲೆಯು ಒಂದು ವಾರದೊಳಗೆ, ಹೆಚ್ಚೆಂದರೆ ಒಂದು ತಿಂಗಳೊಳಗೆ ಆಗಬೇಕು. ಮಾಡಿದ ಅರ್ಜಿ ಮುಟ್ಟಿದ ಬಗ್ಗೆ ಮತ್ತು ಆ ಕುರಿತು ಮುಂದೇನು ಮಾಡಲಾಗುವುದೆಂಬ ಬಗ್ಗೆ ಕೂಡಲೇ ಉತ್ತರ ಬರಬೇಕು. ಅರ್ಜಿಗಳು ಎಲ್ಲೋ ಬಿದ್ದು ಹೋಗಿವೆ ಅಥವಾ ಬರಲೇ ಇಲ್ಲ ಎಂಬ ಉತ್ತರ ಕೊಡುವ ಪ್ರವೃತ್ತಿಯನ್ನು ನಿಯಂತ್ರಿಸಬೇಕು. ಕೆಲಸದ ಹೊರೆಯು ಹೆಚ್ಚಾಗಿದ್ದರೆ ಕಾರಕೂನರ ಮತ್ತಿತರ ಅಧಿಕಾರಿಗಳ ಸಂಖ್ಯಾ ಪ್ರಮಾಣ

(ಮೇಲೆ ಪುಟ ನೋಡಿರಿ)

ಕಲ್ಯಾಣ ರಾಜ್ಯದ ಗುರಿಯನ್ನು ಸರಕಾರವು ಇಟ್ಟುಕೊಂಡಿದೆ. ಇದನ್ನು ಸಾಧಿಸಲು ಆಡಳಿತ ಯಂತ್ರವು ಒಳ್ಳೆಯ ಕಾರ್ಯಕ್ಷಮತೆಯನ್ನು ತೋರಿಸಬೇಕಾಗಿದೆ. ಆಡಳಿತದಲ್ಲಿಯ ಲೋಪದೋಷಗಳ ಬಗ್ಗೆ ಅಧಿಕಾರಿಗಳು ನಾಚಿಕೆ ಹೊಂದದಿರುವ ವರೆಗೆ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವುದು ಕಷ್ಟ. ಜನರ ದೂರುಗಳಿಗೆ ಕೂಡಲೇ ಪರಿಹಾರ ಸಿಗಬೇಕು; ಅರ್ಜಿಗಳು ಬೇಗನೆ ನಿಕಾಲೆಯಾಗಬೇಕು; ಪ್ರಾದೇಶಿಕ ಭಾಷೆಗಳಲ್ಲಿ ಬರೆದವರಿಗೆ, ಅದೇ ಭಾಷೆಯಲ್ಲಿ ಉತ್ತರ ಹೋಗಬೇಕು; ಶಾಸನ ಸಭೆಯಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳ ಮಾಹಿತಿಗಳನ್ನು ಒಂದೇ ವಾರಾವಧಿಯಲ್ಲಿ ಕಳಿಸಬೇಕು. ದಿನದ ಕೆಲಸವನ್ನು ಅದೇ ದಿನ ಮುಗಿಸಿ ಬಿಡುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಇದಕ್ಕಾಗಿ ಪರಿಹಸ್ತ ಹೊರಡಿಸಿದಷ್ಟಕ್ಕೆ ಕೆಲಸವಾಗದು—ಕಾರಣ, ಅಧಿಕಾರಿಗಳೂ ನೌಕರರೂ ಸಹಕಾರ ನೀಡಲು ತಪ್ಪಬಾರದು.

—ಮುರಾರಜಿ ದೇಸಾಯಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.,
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಭಂಡವಾಳ	ರೂ. 56,00,000	ಕ್ಷೇಮ ನಿಧಿ	ರೂ. 13,50,000
ಹೆತ್ತ ಭಂಡವಾಳ	ರೂ. 32,11,000	ಠೇವಣಾತಿಗಳು	ರೂ. 6,10,00,000
ಹೆತ್ತು ಬಂದ ಭಂಡವಾಳ	ರೂ. 35,55,737	ಚಲಾವಣೆ ಭಂಡವಾಳ	ರೂ. 7,32,00,000

[ತಾ. 30—6—1955ರಲ್ಲು]

ನಮ್ಮ ರಾಯಚೂರ (ಹೈದರಾಬಾದ ಸಂಸ್ಥಾನ) ಶಾಖೆಯು
ತಾ. 29-7-1955ರಂದು ತೆರೆಯಲ್ಪಟ್ಟಿದೆ.
ಮುಂಬಯಿ, ಮಿಂಟ್ರಸ್, ಆಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ 93 ಶಾಖೆಗಳಿದ್ದು
ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ.

ಟಿ. ಎ. ಪೈ, ಬಿ. ಕೋಂ.(ಜೊಂ.), ಎ. ಐ. ಐ. ಬಿ., ಎಂ. ಎಲ್. ಎ., ಜನರಲ್ ಮೆನೇಜರ್.
ಟಿ. ಎಂ. ಎ. ಪೈ. ಎಂ. ಬಿ., ಬಿ. ಎಸ್., ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ವಾರ್ಷಿಕ ಚಂದಾ: NAVAYUGA WEEKLY UDIPI ಬಿಡಿ ಸಂಚಿಕೆ

ಕರ್ನಾಟಕ ಏಕೀಕರಣದ "ಒಗಟು"

ಮೈಸೂರೇತರ ಕನ್ನಡಿಗರಿಗೆ ಹನುಮಂತಯ್ಯನವರ ಎಚ್ಚರಿಕೆ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗದ ಮುಂದೆ ಮೈಸೂರು ಸರಕಾರವು ಮನವಿಯನ್ನು ಒಪ್ಪಿಸಬೇಕೇ ಬೇಡವೇ ಎಂಬ ಪ್ರಶ್ನೆ ೧೯೫೫ನೇ ಜೂನಿನಲ್ಲಿ ಆ ರಾಜ್ಯದ ರಾಜಕೀಯ ಮುಂದಾಳುಗಳ ತಲೆ ತಿನ್ನುತ್ತಿದ್ದಾಗ ನಿಷ್ಪಕ್ಷಪಾತಸರೀಕ್ಷಕರಿಗೆಒಂದು ವಿಷಯ ಹೊಳೆದಿತ್ತು- ಮೈಸೂರೇತರ ಕನ್ನಡಭಾಗಗಳು ತಾಯಿಗೆ ಬೇಡವಾದ ಮಗುವಿನ ರೂಪದಲ್ಲಿ ಮೈಸೂರಿನೊಡನೆ ಸೇರಿಕೊಳ್ಳಬೇಕೆ, ಮೈಸೂರಿನವರು ತಮ್ಮ ಲಾಭ-ನಷ್ಟದ ಲೆಕ್ಕಾಚಾರವನ್ನು ಮಾಡಿಕೊಳ್ಳಲು ವ್ಯಾವಹಾರಿಕ ಬುದ್ಧಿವಂತಿಕೆಯನ್ನು ಉಪಯೋಗಿಸುತ್ತಿರುವಾಗ, ಉಳಿದ ಕನ್ನಡಿಗರು ಮಾತ್ರ ಭಾವನಾತ್ಮಕ ವಿಚಾರ ಪ್ರಣಾಳಿಯನ್ನು ಆಶ್ರಯಿಸಿಕೊಂಡು ಮೋಸಹೋಗಬೇಕೆ—ಎಂಬುದೇ ಆದು.

ಮೈಸೂರಿನ ಸರಕಾರ ತಜ್ಞರ ಸಮಿತಿಯನ್ನು ನೇಮಿಸಿ, ಆ ರಾಜ್ಯದ ಪರಿಸ್ಥಿತಿಯನ್ನು ಇತರ ಕನ್ನಡ ಪ್ರದೇಶಗಳ ಪರಿಸ್ಥಿತಿಯೊಡನೆ ತುಲನೆ ಮಾಡುವ ಉಪಕ್ರಮವನ್ನು ಕೈಗೊಂಡಾಗಲೂ ಮೈಸೂರು ಮೈಸೂರಾಗಿಯೇ ಉಳಿಯಲಿ - ಎಂಬ ಮನೋಭಾವವೇ ಆ ರಾಜ್ಯದ ಆಡಳಿತೆ ವಹಿಸಿಕೊಂಡಿರುವ ವರ್ಗಗಳಲ್ಲಿ ಬೇರು ಬಿಟ್ಟಿದೆ ಎಂಬ ವಿಚಾರ ಅನೇಕರ ತಲೆಯಲ್ಲಿ ಬಂದಿತ್ತು. ಸಮಿತಿ ತನ್ನ ವರದಿಯನ್ನು ಒಪ್ಪಿಸುವುದಕ್ಕೆ ಮುಂಚೆಯೇ ಆ ವರದಿ ಏನು ಹೇಳಬಹುದು ಎಂಬುದರ ಕುರಿತು ಯಾರಿಗೂ ಸಂಶಯವಿರಲಿಲ್ಲ. ಆದದ್ದೂ ಹಾಗೆಯೇ-ಮೈಸೂರೇತರ ಕನ್ನಡ ಪ್ರದೇಶಗಳವರು ಫಜಲ ಅಲಿ ಆಯೋಗಕ್ಕೆ ರಾಶಿಗಟ್ಟಳೆ ಮನವಿಯನ್ನು ಅರ್ಪಿಸಿ, ಮೈಸೂರನ್ನೊಳಗೊಂಡ ಸಂಯುಕ್ತ ಕರ್ನಾಟಕ ರಾಜ್ಯದ ನಿರ್ಮಾಣವಾಗಬೇಕೆಂದು ಹೇಳುತ್ತಿದ್ದಾಗ, ಹೊರಗಿನ ಕನ್ನಡ ಪ್ರದೇಶಗಳು, ದಕ್ಷಿಣ ಕನ್ನಡವನ್ನು ಬಿಟ್ಟರೆ, ಕೊರತೆಯನ್ನು ಅನುಭವಿಸುತ್ತಿವೆ ಎಂಬ ತೀರ್ಮಾನಕ್ಕೆ ಈ ಸಮಿತಿ ಬಂತು.

ಏಕೀಕರಣದ ಸಲ್ಲಿಯನ್ನು ಹಾಡುತ್ತಿದ್ದ ಮೈಸೂರೇತರ ಕನ್ನಡಿಗರಿಗೆ, ಮತ್ತು ಮೈಸೂರಿನಲ್ಲಿ ಸಹ ಸಾಹಿತ್ಯಾಭಿಮಾನಿಗಳೇ ಮುಂತಾದ ಅನೇಕರಿಗೆ, ಸಮಿತಿಯ ಈ ತೀರ್ಮಾನ ತೀವ್ರ ನಿರಾಶೆಯನ್ನು ತಾರದಿರಲಿಲ್ಲ. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಹೈದರಾಬಾದಿನ ಕಾಂಗ್ರೆಸು ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತಗಳ ರಚನೆಯನ್ನು ಪ್ರತಿಪಾದಿಸಿ, ನೆಪರುಗಳಿಂದ ಭೀಮಾರಿ ಹಾಕಿಸಿಕೊಂದರೂ ಕನ್ನಡಿಗರಿಂದ ಶಪಥಾಶನ್ನು ಪಡೆದಿದ್ದರು; ಮೈಸೂರೇತರ ಕನ್ನಡ ಪ್ರದೇಶಗಳಲ್ಲಿ ಸಂಚರಿಸುವಾಗ ಮೈಸೂರಿನೊಡನೆ ಸೇರುತ್ತೇವೆಂದು ನೀವು ಹೇಳಿದರೆ ಉಳಿದೆಲ್ಲನನ್ನೂ ತಾನು ಮಾಡುತ್ತೇನೆ ಎನ್ನುತ್ತಾ ಪ್ರಜಾಸೇವೆಯ ಸುರಿಮಳೆಯನ್ನು ಸಂಪಾದಿಸಿದ್ದರು. ಅಂಥ ವ್ಯಕ್ತಿಯು [illegible] ಸರಕಾರ ಮಾತ್ರ ಮೈಸೂರಿನ ರಾಜಕೀಯದ ಬಿಸಿ ತಗಲಿ, ಫಜಲ ಅಲಿ ಆಯೋಗಕ್ಕೆ ತನ್ನ ಯಾವ ಅಭಿಪ್ರಾಯವನ್ನೂ ತಿಳಿಸಲು ಹೋಗದೆ ಸುಮ್ಮನುಳಿಯಿತು ಎಂದರೆ ಯಾರಿಗೆ ಆಶ್ಚರ್ಯವಾಗದು? ಆದರೆ ಮೈಸೂರಿನ ಸರಕಾರಕ್ಕೆ ಅದರ ಗೊಡನೆ ಇದ್ದಂತಿಲ್ಲ. ಎಲ್ಲವನ್ನೂ ಆಯೋಗದ ಧಾರಾಳಬುದ್ಧಿಗೆ ಅದು ಬಿಟ್ಟುಗೊಟ್ಟಿರುವಂತೆ ಕಾಣುತ್ತದೆ.

ಈಗ ಫಜಲ ಅಲಿ ಆಯೋಗದವರು ಮನವಿ ಕೇಳುವುದನ್ನೆಲ್ಲ ಮುಗಿಸಿ, ತಮ್ಮ ಅಂತಿಮ ನಿರ್ಣಯಗಳನ್ನು ವರದಿಯ ರೂಪದಲ್ಲಿ ಬರೆಯುವುದರಲ್ಲಿರುವಾಗ ಹನುಮಂತಯ್ಯನವರು ಅನಾವಶ್ಯಕವಾಗಿ ಕನ್ನಡಿಗರಿಗೆ "ಎಚ್ಚರಿಕೆ" ಕೊಡುವ ಮಾತುಗಳನ್ನು ಆಡಹೋಗಿದ್ದಾರೆ ಹೊಸದೆಹಲಿಯ ವರ್ತಮಾನಗಳಲ್ಲಿ ವ್ಯಕ್ತವಾಗುತ್ತಿರುವ ಅಭಿಪ್ರಾಯವನ್ನು ಗಮನಿಸಿದರೆ ಪಕ್ಷದಲ್ಲಿ ಮೈಸೂರನ್ನೊಳಗೊಂಡ ಏಕೀಕೃತ ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕೆಂದು ಆಯೋಗದ ನಿರ್ಣಯವಿರುವಂತೆ ತೋರುತ್ತದೆ. ಈ ಆಯಕಟ್ಟಿನ ಸಮಯದಲ್ಲಿ, ಕನ್ನಡಿಗರು, ಕನಿಷ್ಠ ಮೈಸೂರೇತರ ಪ್ರದೇಶಗಳ ಕನ್ನಡಿಗರು, ಸಂತುಷ್ಟರಾಗಿರುವ ಕಾಲದಲ್ಲಿ, ಹನುಮಂತಯ್ಯನವರಿಂದ ಬಂದಿರುವ ಎಚ್ಚರಿಕೆಯ ಮಾತುಗಳು ಕನ್ನಡದ ಅಭಿಮಾನಿಗಳನ್ನು ಗೊಂದಲಕ್ಕೆ ನೂಕಿವೆಯೆಷ್ಟೇಯಲ್ಲ-ತಮ್ಮ ಭವಿಷ್ಯದ ಬಗ್ಗೆ ಅಪೇಕ್ಷಣೀಯವಲ್ಲದ ಚಿಂತೆಯನ್ನೂ ಹುಟ್ಟಿಸಿರುತ್ತವೆ.

ತತ್ಪರಿಣಾಮವಾಗಿ ಮೈಸೂರಿಗೆ ಸೇರೋಣ ಎಂಬ ನಮ್ಮ ಅಭಿಲಾಷೆ ಅತಿಯಾಗಲಿಲ್ಲವೆ, ಮೈಸೂರಿನವರಿಗೆ ಬೇಡವಾಗಿ ಉಳಿದ ಕನ್ನಡಿಗರು ಅವರೊಡನೆ ಸೇರಿಕೊಳ್ಳುವಂತಾದರೆ ಮಲತಾಯಿಯ ಆದರ ದೊರೆಯದೆ ಹೋಗದಿತೆ ಎಂದು ಸಂಶಯಿಸುತ್ತಿದ್ದವರು ಮೂರ್ಖರಲ್ಲ ಎಂಬ ಭಾವನೆಗೆ ಜಾಲನೆ ದೊರೆತಿದೆ. ಹನುಮಂತಯ್ಯನವರು ಕಾಂಗ್ರೆಸಿನ ಅಧಿವೇಶನ ಸೇರಿದ್ದ ಕಾಲದ ಹೈದರಾಬಾದಿನಲ್ಲಿಯಲ್ಲ-ಕರ್ನಾಟಕ ಸಾಹಿತ್ಯ ಮಂದಿರದ ನೇತೃತ್ವದಲ್ಲಿ ಜರಗಿದ ಇದೇ ಜೂಲೈಯ ಹೈದರಾಬಾದಿನಲ್ಲಿ ಕನ್ನಡಿಗರ ಮುಂದೆ ಅಪ್ಪಣೆ ಕೊಡಿಸಿದ ಮಾತುಗಳ ವೈಪರೀತ್ಯವನ್ನು ಏನು ಹೇಳೋಣ! ಮೈಸೂರು ಭಾರತದಲ್ಲಿಯೇ ಅತಿ ಹೆಚ್ಚಿನ ಕರಭಾರವನ್ನು ಅನುಭವಿಸುತ್ತಿರುವ ರಾಜ್ಯ; ಅದು ಎರಡು ವಿಶ್ವವಿದ್ಯಾನಿಲಯಗಳನ್ನು ನಡೆಸಿಕೊಂಡು ಹೋಗಬಲಾರದು; ಕೈಕೃಷಿಕ ಸಂಸ್ಥೆ ಇತ್ಯಾದಿಗಳಿಗೆ ಧಾರಾಳವಾದ ಸಹಾಯ ಧನವನ್ನು ಮುಂದರಿಸಲಾರದು. ಒಟ್ಟಾರೆ, ಮೈಸೂರಿಗೆ ಸೇರುವ ಕನ್ನಡಿಗರು ಸುಖದ ಆಲೆ ಕಟ್ಟಿಕೊಳ್ಳಬಾರದು; ಕಷ್ಟಕ್ಕೆಯೇ ಸಿದ್ಧರಾಗಬೇಕಲ್ಲದೆ ಕೈಲಾಸ ಕೈಗೆ ಬರುವ ಕನಸು ಕಾಣಲಾಗದು.

ಕರ್ನಾಟಕ ಏಕೀಕರಣದಪ್ರಶ್ನೆಯು ಈಗ ಪ್ರಚಾರದ ಹಂತವನ್ನು ಮೀರಿರುವುದರಿಂದ ತಾನು ಈ ಸತ್ಯ ಸಂಗತಿಗಳನ್ನು ಮುಂದಿಡುತ್ತಿದ್ದೇನೆ—ಎಂದು ಹನುಮಂತಯ್ಯನವರು ಪ್ರಾಮಾಣಿಕತೆಯ ನೋಗನ್ನು ಹಾಕಿಕೊಂಡಿದ್ದಾರೆ. ಆದರೆ, ಇವರಿಗೆ ಈ ಎಲ್ಲ ಮಾತುಗಳನ್ನು ಹೇಳಲು ಇಷ್ಟು ತಡವೇಕಾಯಿತೋ ತಿಳಿಯದು. ಮೈಸೂರಿನ ಹೊರಗಿರುವ ಪ್ರದೇಶಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಇವರು ಈಗ ಹೇಳುತ್ತಿರುವ "ಸತ್ಯ" ಸಂಗತಿಗಳನ್ನೆ ಅಲ್ಲಿಯ ಕನ್ನಡಿಗ ಬಂಧುಗಳ ಮುಂದಿಡುತ್ತಿದ್ದರೆ ಕೊಳ್ಳ ಹೋಗುತ್ತಿರಲಿಲ್ಲ; ಆಗ ಮೂಗಿಗೆ ತುಪ್ಪ ಹಚ್ಚುವ ರೀತಿಯಲ್ಲಿ ಬೆಸ್ಸೆಯಂಥ ಮಾತನ್ನಾಡಿ ಈಗ ಎಚ್ಚರಿಕೆಯ ಬಿರುನುಡಿಗಳನ್ನಾಡಲು ಮುಂದಾಗುವುದು ರಾಜಕೀಯ ಧೂರ್ತತನವಿರಬಹುದೇ ಹೊರತು, ಹೊಟ್ಟೆಯ ಕರುಳನ್ನು ಬಿಚ್ಚಿತೋರಿಸುವ ಪ್ರಾಮಾಣಿಕ ವರ್ತನೆ ಎನಿಸಲಾರದು. ಹೇಳಬೇಕಾದ ಮಾತನ್ನುತಕ್ಕ ಸಮಯದಲ್ಲಿ ಮುಂದಿಡುವುದನ್ನು ಪಾತ್ರ ಬುದ್ಧಿವಂತಿಕೆ ಎಂದು ಕರೆಯಬಹುದಲ್ಲದೆ, ಎಣ್ಣೆ ಬರುವಾಗ ಗಾಣ ಮುರಿಯಿತೆಂಬ ಉಪಮೆಗೆ ತಕ್ಕುದಾದ ಹೇಳಿಕೆಗಳನ್ನು ಕೊಡುವುದು ಹೊಣೆಗಾರ ವ್ಯಕ್ತಿಗೆ ಭೂಷಣವೆನಿಸದು.

ಮೈಸೂರೇತರ ಪ್ರದೇಶಗಳ ಕನ್ನಡಿಗರಲ್ಲಿ "ಹೆದರಿಕೆ" ಬರಿಸುವ ಹೇಳಿಕೆಗಳನ್ನು ತ್ತ ಹನುಮಂತಯ್ಯನವರು ಮೈಸೂರೊಡನೆ ಸೇರುವುದರಿಂದ ಹೊರಗಿನವರು ಅನುಭವಿಸಬೇಕಾಗಿ ಬರಬಹುದಾದ ಕಷ್ಟಗಳ ಪಟ್ಟಿಯನ್ನು ತಮಗೆ ಬೇಕೆನಿಸಿದರೆ ಇನ್ನಷ್ಟು ದೀರ್ಘ ಮಾಡಬಲ್ಲರು.— ಉದಾಹರಣೆಗಾಗಿ, ನಮ್ಮ ಜಿಲ್ಲೆಯಲ್ಲಿ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ತಪ್ಪಿಣಾಲಯ ಕೆಲಸ ಮಾಡುತ್ತಿದೆ; ಅದಕ್ಕೆ ಈಗ ಮದ್ರಾಸಿನ ಸರಕಾರದಿಂದ ಬಹಳ ನೆರವು ಸಿಗುತ್ತಿದೆ. ಆದರೆ, ಮೈಸೂರಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸೇರಿದರೆ, ಈ ಖಾಸಗಿ ಸಂಸ್ಥೆಗೆ ಸರಕಾರದಿಂದ ಕಾಸಿನ ನೆರವೂ ಸಿಗದು ಎಂದು ಹನುಮಂತಯ್ಯನವರು ಅಪ್ಪಣೆಕೊಡಿಸಬಹುದು; ಬೆಂಗಳೂರಿನಲ್ಲಿ ಇದೇ ಆಗೋಸ್ತು ೧೧ರಂದು ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಿರುವುದರಿಂದಂತೂ ಮೈಸೂರಿನ ಪಾಲಿಗೆ ಈ ಸಂಸ್ಥೆ ಹೊರಲಾಗದ ಹೊರೆಯಾಗಿ ಪರಿಣಮಿಸುವುದು ಎಂದವರು ಆಕ್ಷೇಪಿಸಬಹುದು. ಇಷ್ಟರವರೆಗೆ ದಕ್ಷಿಣ ಕನ್ನಡದ ರೈತರು ಮದ್ರಾಸು ಸರಕಾರಕ್ಕೆ ಸಹಸ್ರ ಸಂಖ್ಯೆಯಲ್ಲಿ ಅರ್ಜಿಗಳನ್ನು ಗುಜರಾಯಿಸಿ, ಮನವಿ ಮತ್ತು ಬಿನ್ನವತ್ತಳೆಗಳನ್ನು ಅರ್ಪಿಸಿ, ಭೂ ಸುಧಾರಣೆಯ ಮಸೂದೆಯೊಂದನ್ನು ಈ ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಗೆ ಅನ್ವಯಿಸತರಬೇಕೆಂದು ಹೇಳುತ್ತಾ ಬಂದಿದ್ದರು. ಈಗ ಮದ್ರಾಸಿನ ಸರಕಾರ ಇತ್ತ ಕಿವಿಗೊಡುತ್ತಿದೆ ಎಂಬ ಲಕ್ಷಣ ಕಾಣಿಸುವಾಗ, ಮೈಸೂರಿನೊಡನೆ ಸೇರಿದರೆ, ರೈತರ ಆಲೆ ಬುಡ ಮೇಲಾಗುವುದೇ ನಿಶ್ಚಯ. ಮೈಸೂರು ಭೂ ಸುಧಾರಣೆಯಂಥ ಕ್ರಮವನ್ನು ಅವಸರ ಮಾಡಿ ಇಲ್ಲಿಗೆ ಅನ್ವಯಿಸಲಾರದು; ಎಲ್ಲ ವಿಷಯಗಳ ಆಲೋಚನೆ ಮಾಡಬೇಕಾಗುತ್ತದೆ ಎಂದು ಹನುಮಂತಯ್ಯನವರು ಹೇಳಿದರೆ, ಆಗ ಮತ್ತೆ ಯಥಾ ಪ್ರಕಾರ ಮನವಿ ಮತ್ತು ಅರ್ಜಿಗಳೇ ನಮಗೆ ಗತಿಯಾಗುತ್ತದೆ.

ಇಷ್ಟು ಮಾತ್ರವಲ್ಲ—ಸಾಮಾನ್ಯ ಶಿಕ್ಷಣದ ವಿಷಯದಲ್ಲಿ ನಮ್ಮ ಜಿಲ್ಲೆ ಕರ್ನಾಟಕದಲ್ಲಿಯೇ ಮುಂದುವರಿದ ಪ್ರದೇಶ. ಆದುದರಿಂದ ಇಲ್ಲಿ ಇನ್ನು ಹೊಸ ಶಾಲೆಗಳನ್ನು ತೆರೆಯುವಂತಿಲ್ಲ; ಮೈಸೂರಿನ ಮಲೆನಾಡುಗಳಲ್ಲಿ ಶಾಲೆಗಳ ಅಭಾವವಿದೆ; ದಕ್ಷಿಣ ಕನ್ನಡಿಗರು ಈ ಸಂಗತಿಯನ್ನು ಗಮನಿಸಿ ಸಹಾನುಭೂತಿ ತೋರಿಸಬೇಕು ಎಂದು ಹನುಮಂತಯ್ಯನವರು ಹೇಳಬಹುದು. ಕೊಡಗಿನವರ ಕಡೆಗೆ ತಿರುಗಿ, ಕೇಂದ್ರ ಸರಕಾರದ ಕೃಪೆಯಿಂದ ನಿಮಗೆಲ್ಲ ಸಂಬಳ ಕೈ ತುಂಬ ಬರುತ್ತದೆ; ಆದರೆ ಮೈಸೂರಿನೊಡನೆ ಸೇರಿದರೆ, ನಿಮಗೆ ಅಷ್ಟು ಸಂಬಳ ಸಿಗಲಾರದು; ಮೈಸೂರಿನಲ್ಲಿ ಅಧಿಕಾರಿಗಳ ಮತ್ತಿತರ ನೌಕರ ವರ್ಗದ ಸಂಬಳ ಬಹಳ ಕಡಿಮೆಯಾಗಿದೆ ಎಂದು ಹೇಳಬಹುದು. ಮುಂಬಯಿ ಕರ್ನಾಟಕದ ಕಡೆಗೆ ಹೊರಳಿ, ನಿಮ್ಮಲ್ಲಿ ಬರುವ ಆದಾಯ ವೆಚ್ಚದ ಅಂಕಿಕ್ಕಿಂತ ಬಹಳ ಕಡಿಮೆಯಾಗಿದೆ—ಸಾಮಾನ್ಯ ಆಡಳಿತದ ವೆಚ್ಚವನ್ನುತೂಗಿಸಿಕೊಂಡು ಹೋಗುವುದಕ್ಕೆಯೇ ಕಷ್ಟವಾಗುತ್ತಿರುವಾಗ ಅಭಿವೃದ್ಧಿಗಾಗಿ ಹಣವನ್ನು ವ್ಯಯಿಸುವುದಕ್ಕೆ ಸಾಧ್ಯವಿಲ್ಲ; ನೀವು ಒತ್ತಾಯ ಮಾಡಬಾರದು ಎಂದು ಹೇಳಬಹುದು. ಹೀಗೆ ಆಕ್ಷೇಪಿಸುತ್ತಾ, ಮೈಸೂರನ್ನು ಅದರಷ್ಟಕ್ಕೆ ಬಿಡದೆ ನೀವು ದೊಡ್ಡ ತಪ್ಪು ಮಾಡಿದಿರಿ ಎಂಬಲ್ಲಿ ಬರೆಗಿನ ಅವರು ಹೋಗಬಹುದು, ಏಕೆಂದರೆ ದೋಷ

(೧೨ನೆ ಪುಟ ನೋಡಿರಿ)

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೀಮಿನಂತೆ)

ಜೀವ ವಿಮೆಗಾಗಲೀ, ವ್ಯಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಜೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಪೃಥ್ವಿಯ ಸುತ್ತಲೂ ತಿರುಗುತ್ತಿರುವ ಕೃತಕ ಉಪಗ್ರಹ

ವೈಜ್ಞಾನಿಕ ವಿಶ್ವಾಮಿತ್ರ ಸೃಷ್ಟಿಯ ಕೌತುಕಪೂರ್ಣ ಅದ್ಭುತ ರಮ್ಯ ಪ್ರಯೋಗ

ಭಾರತೀಯರಾದ ನಾವು ಪೌರಾಣಿಕ ಸಾಹಿತ್ಯದಲ್ಲಿ "ವಿಶ್ವಾಮಿತ್ರನ ಸೃಷ್ಟಿ" ಎಂದು ಪ್ರಖ್ಯಾತವಾದ "ತ್ರಿಶಂಕು ಸ್ವರ್ಗ" ಎಂಬುದಾಗಿ ಕರೆಯಲ್ಪಡುವ ನಕ್ಷತ್ರಪುಂಜದ ನಿರ್ಮಾಣದ ಕತೆಯನ್ನು ಕುತೂಹಲವಶರಾಗಿ ಓದಿದ್ದೇವೆ: ಅರ್ಣನೀಯವಾದ ಕೌತುಕವನ್ನು ಅನುಭವಿಸಿದ್ದೇವೆ. ಈಗ, ಇನ್ನೆರಡೇ ವರ್ಷಗಳಲ್ಲಿ, ಪೃಥ್ವಿಯ ಸುತ್ತಲೂ ದಿನಕ್ಕೆ ಹದಿನಾರು ಸಲ ಸುತ್ತು ಬರುವ ಚಂದ್ರನ ಮಾದರಿಯ ಉಪಗ್ರಹವೊಂದನ್ನು ಅಮೇರಿಕದ ವಿಜ್ಞಾನಿಗಳು ಸೃಷ್ಟಿಸಲಿದ್ದಾರೆ ಎಂದು ಬಂದಿರುವ ಸುದ್ದಿ ಹಿಂದಿನ ಆ ಪುರಾಣಕತೆಯು ನಿಜವಿದ್ದಿರಬಹುದು ಎಂಬ ಕಲ್ಪನೆಯನ್ನು ಉಂಟು ಮಾಡುತ್ತದೆ. ನವಬ್ರಹ್ಮರೆನಿಸಿದ ಅಣುಯುಗದ ವಿಜ್ಞಾನಿಗಳು ಕೃತಕ ಚಂದ್ರನನ್ನು ನಿರ್ಮಿಸುವ ಸಾಹಸದಲ್ಲಿ ಜಯಶೀಲರಾದರೆ ಚಂದ್ರಲೋಕಕ್ಕೂ ಮಂಗಳ ಗ್ರಹಕ್ಕೂ ಪ್ರಯಾಣ ಬೆಳೆಸಬಹುದಾದ ದಿನವನ್ನು ಈ ತಲೆಮಾರಿನವರು ಇದಿರು ನೋಡ ಬಲ್ಲರು; ಏಕೆಂದರೆ, ಕೇವಲ ನಾಲ್ಕೈದು ದಶಕಗಳಲ್ಲಿ ಸಂಭವಿಸಬಹುದಾದ ಮಾತು ಅದೆಂದು ತಜ್ಞರ ಅಭಿಪ್ರಾಯ.

ಇದೇ ಜುಲಾಯಿ ತಿಂಗಳ ೨೯ನೇ ದಿನಾಂಕ ಅಮೇರಿಕದ ವಿಜ್ಞಾನಿಗಳು ಕೈಗೊಳ್ಳಬೇಕೆಂದಿರುವ ಈ ಮಹಾ ಸಾಹಸಕ್ಕೆ ಅಧ್ಯಕ್ಷ ಐಸೆನ್ ಹೋವರ್ ಸಮ್ಮತಿಯನ್ನಿತ್ತರು; ಅಲ್ಲದೆ ಒಂದು ಕೋಟಿ ಡಾಲರುಗಳ ವೆಚ್ಚವನ್ನೂ ಮಂಜೂರು ಮಾಡಿದರು. ೧೯೫೭ನೇ ಜುಲಾಯಿಯಿಂದ ಒಂದು ವರ್ಷದ ವರೆಗೆ ಭೂಭೌತ ಶಾಸ್ತ್ರವನ್ನು ಪರ್ಯವೇಕ್ಷಿಸುವ ಕೆಲಸದಲ್ಲಿ ಸಂಬಂಧಿಸಿದ ಎಲ್ಲ ವಿಜ್ಞಾನಿಗಳೂ ಮಗ್ನರಾಗಬೇಕೆಂದು ಜಗತ್ತಿನ ನಲ್ವತ್ತು ರಾಷ್ಟ್ರಗಳು ನಿಶ್ಚಯಿಸಿರುತ್ತವೆ. ಅಮೇರಿಕ, ರಶಿಯ, ಭಾರತ, ಬ್ರಿಟನುಗಳಾದಿಯಾಗಿ ಅನೇಕ ಮಹಾ ರಾಷ್ಟ್ರಗಳೂ ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಗತಿಯ ಹೆಜ್ಜೆಯನ್ನಿಡುತ್ತಿರುವ ದೇಶಗಳೂ ಇದರಲ್ಲಿ ಭಾಗವಹಿಸುತ್ತವೆ. ವಿಜ್ಞಾನಿಗಳ ಈ ಉತ್ಸವದಲ್ಲಿ ತನ್ನ ಪಾಲಿನ ಸಾಹಸ ಕೃತ್ಯವೆಂಬುದಾಗಿ ಅಮೇರಿಕವು ಕೃತಕ ಚಂದ್ರ ಅಥವಾ ಪೃಥ್ವಿಯ ಉಪಗ್ರಹದ ರಚನೆಗೆ ಕೈಯಿಕ್ಕಿರುತ್ತದೆ. ಇದು ಕೇವಲ ವೈಜ್ಞಾನಿಕ ಮಹತ್ವದಿಂದ ಕೂಡಿದ ಉಪಕ್ರಮವಾಗಿದೆಯೆಂದೂ ಇದರ ಕುರಿತಾದ ಎಲ್ಲ ಮಾಹಿತಿಗಳನ್ನು ರಶ್ಯವನ್ನೊಳಗೊಂಡು ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಉಚಿತವಾಗಿ ಒದಗಿಸಿ ಕೊಡಲಾಗುವುದೆಂದೂ ಅಮೇರಿಕದ ಸರಕಾರ ಘೋಷಿಸಿರುತ್ತದೆ.

ನೂತನ ಆಕಾಶಕಾಯವೊಂದನ್ನು ಸೃಷ್ಟಿಸಬೇಕೆನ್ನುವ ವಿಚಾರಕ್ಕೆ ಅಂತಾರಾಷ್ಟ್ರೀಯ ಭೂಭೌತ ಶಾಸ್ತ್ರ ವರ್ಷದ ವಿಶೇಷ ಸಮಿತಿಯು ಕಳೆದ ಅಕ್ಟೋಬರದಲ್ಲಿ ರೋಮಿನಲ್ಲಿ ಸಭೆ ಜರಗಿಸಿದಾಗ ವಿಶೇಷವಾದ ಉತ್ತೇಜನೆ ದೊರೆಯಿತು. ಒಂದು ಗೊತ್ತುವಳಿಯ ಮೂಲಕ ಈ ಸಭೆಯು ಭೂಮಿಯ ತೀರ ಹೊರವಾತಾವರಣದಲ್ಲಿ ಪ್ರಕಾಶ ಕಿರಣಗಳ ಚಟುವಟಿಕೆ ಮತ್ತು ಭೂಭೌತ ಶಾಸ್ತ್ರದ ಕೌತುಕಗಳ ಬಗೆಗೆ ಹೆಚ್ಚಿನ ಗಮನವನ್ನಿತ್ತು ಸೂಕ್ಷ್ಮ ನಿರೀಕ್ಷಣೆಗಳನ್ನು ನಡೆಸಬೇಕೆಂದು ವಿಜ್ಞಾನಿಗಳನ್ನು ಬಿನ್ನವಿಸಿತು. ಇದಕ್ಕೆ ನೆರವಾಗುವಂತೆ, ಭೂಮಿಯ ತೀರ ಹೊರ ವಾತಾವರಣದಲ್ಲಿ ಉಪಗ್ರಹಗಳನ್ನು ಸೃಷ್ಟಿಸಿ, ಅವುಗಳು ಸಂಚರಿಸುವಂತೆ ಮಾಡಿ, ಹಾಗೆ ಮಾಹಿತಿಗಳನ್ನು ಪಡೆಯಲು ಸೂಕ್ತ ಕಾರ್ಯಕ್ರಮಗಳನ್ನು ರಾಷ್ಟ್ರಗಳು ಕೈಗೊಳ್ಳಲು ಮುಂದಾಗ ಬೇಕು ಎಂದೂ ಗೊತ್ತುವಳಿ ಹೇಳಿತು. ತದನುಸಾರವಾಗಿ ಶೀಘ್ರ ಕ್ರಮಗಳನ್ನು ಕೈಗೊಳ್ಳಲು ಮುಂದಾದ ರಾಷ್ಟ್ರವೇ ಅಮೇರಿಕ. ಅಂತಾರಾಷ್ಟ್ರೀಯ ಭೂಭೌತಶಾಸ್ತ್ರ ವರ್ಷದ ವಿಶೇಷ ಸಮಿತಿಯ ಅಧ್ಯಕ್ಷರಾದ ಆಕ್ಸ್‌ಫರ್ಡಿನ ಪ್ರೊಫೆಸರ್ ಸಿಡ್ನಿ ಚ್ಯಾಪ್ ಮ್ಯಾನ್ ಅವರಿಗೆ ಅಮೇರಿಕದ ಪ್ರತಿನಿಧಿ ಮಂಡಳದ ಅಧ್ಯಕ್ಷ ಪ್ರೊಫೆಸರ್ ಜೋಸೆಫ್ ಕಪ್ಲಾನ್ ಅವರು ಇದೀಗ ಒಂದು ಪತ್ರವನ್ನು ಬರೆದು ವಿಜ್ಞಾನಿಗಳ ಉತ್ಸವಕ್ಕೆ ತನ್ನ ವಂತಿಗೆಯಾಗಿ ಕೃತಕ ಉಪಗ್ರಹವನ್ನು ನೀಡುವುದು ನಿಶ್ಚಯ ಎಂದು ತಿಳಿಸಿದ್ದಾರೆ. ತಮ್ಮ ಕಾರ್ಯಕ್ರಮವು ಯಶಸ್ವಿಯಾಗುವುದಕ್ಕೆ ಇತರರಾಷ್ಟ್ರಗಳ ವಿಜ್ಞಾನಿಗಳ ಸಹಕಾರ ಬೇಕೆಂದು ಅವರು ಕೋರಿರುವುದು ಬಹಳ ಸಮಾಧಾನಕರವಾದ ವಿಷಯ.

ವಿಶೇಷ ಸಮಿತಿಯ ಮುಂದಿನ ಸಭೆಯು ಬರುವ ತಿಂಗಳ ೮ರಿಂದ ೧೪ನೇ ದಿನಾಂಕಗಳ ವರೆಗೆ ಬ್ರುಸ್ಸೆಲ್ಸ್ ನಗರದಲ್ಲಿ ಜರಗಿದಾಗ ಜಗತ್ತಿನ ವಿಜ್ಞಾನಿಗಳು ಕಪ್ಲಾನರು ಬರೆದಿರುವ ಈ ಪತ್ರದ ಕುರಿತು ಅತ್ಯಾಸಕ್ತಿಯ ಗಮನವಿತ್ತು ತಾವು ಹೇಗೆ ಸಹಕರಿಸಬಹುದೆಂದು ವಿಚಾರಿಸುವರಾಗಿ ತಿಳಿದು ಬರುತ್ತದೆ. ಇವರೆಲ್ಲರೂ ಒಮ್ಮತದ ತೀರ್ಮಾನಗಳಿಗೆ ಬಂದ ಪಕ್ಷದಲ್ಲಿ, ಅನೇಕ ಅಮೂಲ್ಯ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾದ ಸಂಶೋಧನೆಗಳು ನಡೆದು, ನೈಸರ್ಗಿಕ ರಹಸ್ಯಗಳನ್ನು ಕರಗತಮಾಡಿಕೊಳ್ಳುವುದು ಸಾಧ್ಯವಾದೀತು. ಈಗ ಭೂಮಿಯನ್ನು ಆವರಿಸಿಕೊಂಡಿರುವ ವಾತಗೋಲವು ಹೊರ ವಲಯದಲ್ಲಿರುವ ಪದಾರ್ಥಗಳಿಂದ ನಮಗೊಂದು ಬಗೆಯ ರಕ್ಷಣೆಯನ್ನು ನೀಡುತ್ತದೆ. ಉದಾಹರಣೆಗೆ ಅದು ಮಾನವನ ಜೀವಕ್ಕೆ ಅಪಾಯಕರವಾಗುವಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಡು ನೇರಳೆ ಪ್ರಕಾಶವಾಗಲೀ ವಿಶ್ವಕಿರಣವಾಗಲೀ ಭಾರದಂತೆ ತಡೆಯುತ್ತದಲ್ಲದೆ, ಭೂಮಿಯಂತಿರುವ ಬೇರೆಚಿಕ್ಕ ಹಾಗುದೊಡ್ಡ ಆಕಾಶಶಾಯಿಗಳು ನೇರಾಗಿ ಇಳಿದು ಬಂದು ನಮಗೆ ಡಿಕ್ಕಿಹೊಡೆಯದಂತೆಯೂ ನೋಡಿಕೊಳ್ಳುತ್ತದೆ. ಆದರೆ, ಈ ಪ್ರಯೋಜನವನ್ನು ನೀಡುತ್ತಿದ್ದಂತೆಯೆ ಅದು ಸ್ವಲ್ಪ ಮಟ್ಟಿನ ಕಿರುಕಳವನ್ನೂ ಕೊಡುತ್ತದೆ. ನಮ್ಮ ನಿತ್ಯ ಜೀವನವನ್ನು ಇನ್ನಷ್ಟು ಸುಖಕರವಾಗಿಯೂ ವೈವಿಧ್ಯ ಪೂರ್ಣವಾಗಿಯೂ ವಿಕಸಿತವಾಗಿಯೂ ಮಾಡಬಲ್ಲ ಮಹತ್ವದ ಸಂಶೋಧನೆಗಳನ್ನು ಕೈಗೊಂಡು ಪರ್ಯವೇಕ್ಷಿಸುವುದಕ್ಕೆ ಭೂಮಿಯ ವಾತಾವರಣ ತೊಡಕಾಗಿ ಪರಿಣಮಿಸಿರುತ್ತದೆ. ಈ ವಾತಗೋಲದ ಹೊದಿಕೆಯ ಆಚೆಗಿನ ವಿದ್ಯಮಾನಗಳನ್ನು ವಿವರವಾಗಿ ಪರ್ಯವೇಕ್ಷಿಸುವುದಕ್ಕೆ ಉಪಗ್ರಹದ ನಿರ್ಮಾಣವೇ ಯೋಗ್ಯ ಹಂಚಿಕೆ ಎಂಬ ನಿಶ್ಚಯ ವಿಜ್ಞಾನಿಗಳದು.

ಭೂಮಿಗೆ ಹೊಂದಿಕೊಂಡಿರುವ ವಾತಾವರಣದ ಹೊರಗಡೆ ಹೋಗುವಷ್ಟು ಶಕ್ತಿಸಂಪನ್ನವಾದ ರಾಕೆಟ್ ಈಗ ಕಂಡುಹಿಡಿಯಲ್ಪಟ್ಟಿದೆ ಎಂಬುದು ಸುಳ್ಳಲ್ಲ. ಉದಾಹರಣೆಗೆ ಅಮೇರಿಕದ ಗ್ಲೆನ್‌ಮಾರ್ಟನ್ ಕಂಪೆನಿಯು ಕಳೆದ ವರ್ಷದ ಮೇ ತಿಂಗಳಲ್ಲಿ ೧೫೫ ಮೈಲು ಎತ್ತರಕ್ಕೆ ಹಾರಬಲ್ಲ ರಾಕೆಟ್ ಯಂತ್ರವನ್ನು ಸಿದ್ಧಪಡಿಸಿತು. ಆ ದೇಶದ ರಾಕೆಟ್ ಸಂಘದ ತಜ್ಞರು ಇದೇ ಮಾರ್ಚಿ ತಿಂಗಳಲ್ಲಿ ಮನುಷ್ಯನೇನೂ ಇಲ್ಲದ, ಆಚೆ ತುದಿಯಿಂದ ಈಚೆ ತುದಿಯ ವರೆಗೆ ೮ ಅಡಿಯಷ್ಟು ಗಾತ್ರ ವಿರುವ ರಾಕೆಟ್ ಯಂತ್ರವನ್ನು ಭೂಮಿಗಿಂತ ೨೦೦ ಮೈಲು ಎತ್ತರಕ್ಕೆನೆಗೆಸಬಹುದು ಎಂದು ಅಭಿಪ್ರಾಯಪಟ್ಟರು. ಪ್ರತಿ ಕ್ಷಣಕ್ಕೆ ಐದು ಮೈಲುಗಳಷ್ಟು ವೇಗದಿಂದ ಇದು ನೆಗೆಯುವುದೆಂದೂ ನಿಶ್ಚಿತ ಎತ್ತರವನ್ನು ಮುಟ್ಟಿದ ಬಳಿಕ ಇದೇ ವೇಗದಲ್ಲಿ ಅದು ಭೂಮಿಗೆ ಪ್ರದಕ್ಷಿಣೆ ಹಾಕಬಹುದೆಂದೂ ಅವರು ಹೇಳಿದರು. ಕಳೆದ ವರ್ಷದ ಸಪ್ಟಂಬರದಲ್ಲಿ ರಶ್ಯದ ವಿಜ್ಞಾನಿಗಳು ೨೦೦ ಮೈಲು ಎತ್ತರಕ್ಕೆ ರಾಕೆಟ್ ಯಂತ್ರವನ್ನು ಕಳಿಸಲು ಸಮರ್ಥರಾದರು. ದ್ವಿತೀಯ ಮಹಾಯುದ್ಧದ ಕಾಲದ ಕೊನೆಯ ದಿನಗಳಲ್ಲಿ, ಜರ್ಮನಿಯ ಹಿಟ್ಲರನು ಬ್ರಿಟನಿನ ರಾಜಧಾನಿಯಾದ ಲಂಡನ್ ನಗರವನ್ನು ಉಧ್ವಸ್ತಗೊಳಿಸಲಿಕ್ಕೆ ಪ್ರಯೋಗಿಸಿದ

(ಐದನೇ ಪುಟ ನೋಡಿರಿ)

1954

A YEAR OF OUTSTANDING SUCCESS FOR UNITED INDIA!

Policyholders number	....	1,29,800
Life Assurance in Force	.... Rs.	30,56,26,000
Total Assets	.... ,,	9,73,00,000
Total Income	.... ,,	1,68,00,000
Life Assurance Fund	.... ,,	8,77,00,000
Total Claims paid in 1954	,,	52,85,000
NEW BUSINESS SECURED	Rs.	5,30,00,000

OUR BIENNIAL VALUATION ON 31st DECEMBER, 1954:

BONUS DECLARED:

Rs. 17/- per thousand per annum Whole Life Participating Policies.

Rs. 15/- per thousand per annum Endowment Participating Policies.

SURPLUS DISCLOSED: ... Rs. 51,38,221.

(Bonus Certificates will be despatched in due course. Policyholders are requested not to send any reminders meantime.)

*****

THE UNITED INDIA LIFE ASSURANCE COMPANY, LTD.

(ESTABLISHED 1906)

HEAD OFFICE: MADRAS.

ಹಿಂದೀ ಭಾಷೆಯ ಹೇರುವಿಕೆಯ ಕುರಿತಾದ ಸಂಶಯ ನಿವಾರಣೆ

ಕೇಂದ್ರದ ಆಡಳಿತ ಭಾಷೆ ಎಂದೇ ಅದರ ಹೆಚ್ಚುಗಾರಿಕೆ—ಆದರೆ ಅದೇ ರಾಷ್ಟ್ರಭಾಷೆಯಲ್ಲ

ರಾಷ್ಟ್ರಧ್ವಜವನ್ನು ಅಗ್ನಿ ನಾರಾಯಣನಿಗೆ ಆಹುತಿಕೊಡುವ ಆಂದೋಲನ ನಡೆಸುವೆನೆಂದು ದ್ರಾವಿಡ ಕಜಗದ ಮಂತ್ರೀ ರಾಮಸ್ವಾಮಿ ನಾಯಕ್ಕರರು ಹೂಲಿ ಎಬ್ಬಿಸಿದಂದಿನಿಂದ, ದಕ್ಷಿಣ ಭಾರತದಲ್ಲಿ ಹಿಂದೀ ಭಾಷೆಯ ಕುರಿತು ಯಾವ ಭಾವನೆಗಳಿವೆ ಎಂಬುದರ ಮೇಲೆ ವಿಶೇಷವಾದ ಬೆಳಕನ್ನು ಹೊಣೆಗಾರ ವ್ಯಕ್ತಿಗಳು ಬೀರಿದ್ದಾರೆ. ಮೊನ್ನೆ ಮದ್ರಾಸಿನ ಶಾಸನ ಸಭೆಯಲ್ಲಿ ಗವರ್ನರರ ಭಾಷಣದ ಮೇಲೆ ಚರ್ಚೆ ನಡೆದಾಗಲಂತೂ ಹಿಂದೀ ಭಾಷೆಯ ಸ್ಥಾನ ಮಾನವನ್ನು ಪ್ರಾದೇಶಿಕ ಭಾಷೆಯೊಡನೆ ತುಲನೆಮಾಡುವ ಅನೇಕ ಭಾಷಣಗಳನ್ನು ಸದಸ್ಯರು ಮಾಡಿದರು; ಮತ್ತು ಮಂತ್ರಿಗಳು ತಮ್ಮ ಉತ್ತರದಲ್ಲಿ ಸರಕಾರದ ಅಭಿಪ್ರಾಯವನ್ನು ಪುನಃ ಸ್ಪಷ್ಟೀಕರಿಸಿ, ಸಂಶಯ ನಿವಾರಣೆಗೆ ಪ್ರಯತ್ನಿಸಬೇಕಾಯಿತು.

ಸಂಶಯ ನಿರಸನ

ಹಿಂದಿಯು ಭಾರತದ ರಾಷ್ಟ್ರಭಾಷೆ ಎಂಬ ಭ್ರಮೆಗೊಳಗಾದವರ ಮತ್ತು ಪ್ರಾದೇಶಿಕ ಭಾಷೆಗಳು ಅಲಕ್ಷಿಸಲ್ಪಟ್ಟೇ ತೀರುವುವೆಂದು ಭಯಗೊಂಡವರ ಅಭಿಪ್ರಾಯಗಳನ್ನು ತಿದ್ದಲು ಈ ಭಾಷಣಗಳು ನೆರವಾಗಿರುವುದರಿಂದ ಅವುಗಳ ಸಾರವನ್ನು ಕೆಳಗೆ ಕೊಟ್ಟಿದ್ದೇವೆ. ಇದನ್ನು ಮನನ ಮಾಡಿದರೆ, ಗೊಂದಲ ಭಾವನೆಗೆ ಇಂಬು ದೊರೆಯುದೆಂದು ನಮ್ಮ ನಂಬಿಗೆ; ಮತ್ತು ಕೇಂದ್ರ ಸರಕಾರವು ರಾಜಾಜಿಯವರು ಮೊದಲ ಬಾರಿಗೆ ಅಕ್ಷೇಪಿಸಿದ ಸಂದರ್ಭದಲ್ಲಿ ಕೊಟ್ಟ ಭರವಸೆಯನ್ನು ಮುರಿಯದೆ ಪೂರೈಸಿ ಕೊಟ್ಟೇತೆಂದೂ ನಮ್ಮ ವಿಶ್ವಾಸ.

ನಾಡರರ ಮಾತು

ಮುಖ್ಯ ಮಂತ್ರಿ ಕಾಮರಾಜ ನಾಡರರು ರಾಷ್ಟ್ರಧ್ವಜ ದಹನದ ಉದ್ದೇಶವನ್ನು ಬಿಟ್ಟುಗೊಡಬೇಕೆನ್ನುತ್ತಾ ಹೀಗೆ ನುಡಿದಿದ್ದರು—

"ಸರಕಾರದ ಉದ್ದೇಶಗಳಿಗಾಗಿ ಹಿಂದೀ ಭಾಷೆಯನ್ನು ಉಪಯೋಗಿಸುವ ಕುರಿತು ಬಹಳ ತಪ್ಪು ಕಲ್ಪನೆಗಳಿರುವಂತೆ ಕಾಣುತ್ತದೆ. ಘಟನೆಗನುಸಾರವಾಗಿ ಕೇಂದ್ರ ಸರಕಾರದ ಆಡಳಿತ ಭಾಷೆಯು ಹಿಂದಿಯಾಗಬೇಕಾಗಿದೆ. ಆದರೆ ಇಷ್ಟರಿಂದಲೇ ಸರಕಾರವು ಹಿಂದೀ ಭಾಷೆಯನ್ನು ಹಿಂದೀಯೇತರ ಭಾಷೆಗಳವರ ಒಪ್ಪಿಗೆ ಇಲ್ಲದೆ, ಅವರ ಮನೋಭಾವವನ್ನು ಗಮನಿಸದೆ ಹೇರುವುದೆಂದು ಅರ್ಥ ಮಾಡಿಕೊಳ್ಳಬಾರದು. ಘಟನೆಯಲ್ಲಿಯೇ ಯಾವುದೇ ರಾಜ್ಯದ ಶಾಸನಾಂಗಗಳು ಆ ರಾಜ್ಯದಲ್ಲಿನ ಒಂದು ಅಥವಾ ಹೆಚ್ಚು ಭಾಷೆಯನ್ನು ರಾಜ್ಯ ಸರಕಾರದ ಕೆಲವು ಅಥವಾ ಎಲ್ಲ ಉದ್ದೇಶಗಳಿಗಾಗಿ ಬಳಸಬಹುದೆಂಬ ವಾಕ್ಯವಿದೆ. ಹಿಂದೀ ಭಾಷೆಯನ್ನು ರಾಜ್ಯಗಳಲ್ಲಿ ಯಾವುದೇ ಸರಕಾರದ ಉದ್ದೇಶಗಳಿಗಾಗಿ ಕಡ್ಡಾಯವಾಗಿ ಹೇರಿಗೊಡುವ ಅಂಶವು ಘಟನೆಯಲ್ಲಿರುವುದಿಲ್ಲ. ರಾಜ್ಯದ ಶಾಸನಾಂಗದ ತೀರ್ಮಾನಕ್ಕೆಯೇ ಅದು ಬಿಡಲ್ಪಟ್ಟಿದೆ.

ರಾಷ್ಟ್ರಾಧ್ಯಕ್ಷರ ಆಶ್ವಾಸನ

"ಇದನ್ನು ಚೆನ್ನಾಗಿ ತಿಳಿದುಕೊಂಡ ಬಳಿಕ, ನಾನು ಹೈದರಾಬಾದಿನಲ್ಲಿ ಈಚೆಗೆ ಭಾರತದ ರಾಷ್ಟ್ರಾಧ್ಯಕ್ಷರು ನೀಡಿದ ಭರವಸೆಯ ಕಡೆಗೆ ಜನರು ಗಮನವೀಯಬೇಕೆಂದು ಅಪೇಕ್ಷಿಸುತ್ತೇನೆ. ರಾಷ್ಟ್ರಾಧ್ಯಕ್ಷರು ದಕ್ಷಿಣದವರ ಮೇಲೆ ಹಿಂದಿಯನ್ನು ಹೇರುವ ಉದ್ದೇಶವಿಲ್ಲವೆಂದೂ ತಮ್ಮ ಮೇಲೆ ಹಿಂದೀ ಪ್ರಭುತ್ವವಾದಿಗಳ ದಾಳಿಯಾಗುವುದೆಂಬ ಭಯವನ್ನು ದಾಕ್ಷಿಣಾತ್ಯರು ತೊರೆಯಬೇಕೆಂದೂ ಹೇಳಿದ್ದಾರೆ. ಅಲ್ಲದೆ, ಹಿಂದೀ ಭಾಷೆಯ ಕುರಿತು ಘಟನೆಯಲ್ಲಿರುವ ಉಲ್ಲೇಖವು ಪ್ರಾದೇಶಿಕ ಭಾಷೆಗಳ ನಿರಾತಂಕವಾದ ಮತ್ತು ಪೂರ್ಣರೂಪದ ಅಭಿವೃದ್ಧಿಗೆ ಅವಕಾಶವಿಲ್ಲವೆಂಬ ಅರ್ಥವನ್ನು ಕೊಡುವುದಿಲ್ಲ; ಪ್ರಾದೇಶಿಕ ಭಾಷೆಗಳು ಬೆಳವಣಿಗೆ ಹೊಂದಿ ಮೆರೆಯುವಂತೆ ಎಲ್ಲ ಸೌಕರ್ಯಗಳನ್ನೂ ಒದಗಿಸಲಾಗುತ್ತದೆ ಎಂದೂ ರಾಷ್ಟ್ರಾಧ್ಯಕ್ಷರು ಆಶ್ವಾಸನೆ ನೀಡಿದ್ದಾರೆ. ಭಾಷೆಯ ಸಮಸ್ಯೆಯ ಕುರಿತು ಮದ್ರಾಸು ಸರಕಾರವು ಜೀವಂತವಾಗಿದೆ ಎಂದು ಸಂಬಂಧಿಸಿದ ಎಲ್ಲರಿಗೂ ನಾನು ತಿಳಿಸಲು ಬಯಸುತ್ತೇನೆ. ಶೈಕ್ಷಣಿಕ ಮತ್ತು ಆಡಳಿತ ಕ್ಷೇತ್ರದಲ್ಲಿ ಪ್ರಾದೇಶಿಕ ಭಾಷೆ ಯೋಗ್ಯ ಸ್ಥಾನವನ್ನು ಪಡೆಯುವಂತೆ ಮಾಡಲಾಗುತ್ತದೆ. ಹಿಂದಿಯನ್ನು ಹೆಚ್ಚು ಹೆಚ್ಚಾಗಿ ಕೇಂದ್ರ ಸರಕಾರ ಬಳಸುವಾಗ ಇದಕ್ಕೆ ತೊಂದರೆಯಾಗದಂತೆ ಜಾಗ್ರತೆ ವಹಿಸಲಾಗುತ್ತದೆ. ಹಿಂದೀಯೇತರ ಭಾಷೆಗಳವರ ಹಿತಕ್ಕೆ ಅಕ್ಷೇಪಕರವಾದ ಯಾವುದೇ ಹೆಜ್ಜೆಯನ್ನು ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರವಾಗಲೀ ಇಡುವುದಿಲ್ಲವೆಂದೂ ನಾನು ಹೇಳಬಯಸುತ್ತೇನೆ."

ಮುದಲಿಯಾರರ ಹಿತವಾದ

ಮದ್ರಾಸಿನ ಮೇಲ್ಮನೆಯಲ್ಲಿ ಪ್ರತಿಪಕ್ಷದ ಧುರೀಣರೂ ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಹಾಗು ಇತರ ಹೊಣೆಗಾರ ಸ್ಥಾನಗಳನ್ನು ನಿರ್ವಹಿಸುತ್ತಿರುವ ಮೇಧಾವಿಗಳೂ ಆದ ಡಾ. ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ಗವರ್ನರರ ಭಾಷಣದ ಮೇಲೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಹೀಗೆಂದರು—

"ಲೋಕ ಸಭೆಯಲ್ಲಿ ಇಷ್ಟರ ವರೆಗೆ ಇಂಗ್ಲಿಷಿನಲ್ಲಿ ಭಾಷಣ ಮಾಡುತ್ತಿದ್ದ ಸದಸ್ಯರಲ್ಲಿ ಹೆಚ್ಚಿನವರು ಹಿಂದಿಯಲ್ಲಿ ಮಾತಾನಾಡುತ್ತಾರೆಂದು ನಾನು ಕೇಳಿದ್ದೇನೆ. ಹೀಗಾಗಿ ದಕ್ಷಿಣದಿಂದ ಹೋದ ಪ್ರತಿನಿಧಿಗಳು ಚರ್ಚೆಯಲ್ಲಿ ಯಾವುದೇ ಮಹತ್ವದ ವಿಚಾರಗಳನ್ನು ಮಂಡಿಸಲು ಅವಕಾಶ ದೊರೆಯುತ್ತಿಲ್ಲ. ನಾವು ಲೋಕ ಸಭೆಗೆ ಹಿಂದಿ ಭಾಷೆಯನ್ನು ಕಲಿಯಲೆಂದು ಪ್ರತಿನಿಧಿಗಳನ್ನು ಕಳಿಸಿದ್ದೇವೆಯೆ? ಇಂಗ್ಲೀಷಿನಲ್ಲಿ ಮಾತನಾಡಲಾರದ ಕೆಲವರು ಹಿಂದಿಯಲ್ಲಿ ಮಾತನಾಡುವುದಕ್ಕೆ ನನ್ನ ಅಕ್ಷೇಪವಿಲ್ಲ. ಘಟನೆಗನುಸಾರವಾಗಿ ೧೯೬೫ನೇ ವರ್ಷದ ವರೆಗೆ ಇಂಗ್ಲೀಷು ಮತ್ತು ಹಿಂದಿ ಎರಡೂ ಭಾಷೆಗಳು ಉಪಯೋಗದಲ್ಲಿರುತ್ತವೆ. ಹೀಗಿರುವಾಗ ಹಿಂದಿಯನ್ನು ಹೇರಲಾಗುತ್ತಿಲ್ಲ ಎಂಬ ಹೇಳಿಕೆಯಲ್ಲಿ ಕಥ್ಯಾಂಶವೇ ಇಲ್ಲ. ಹಿಂದಿಯನ್ನು ಹೇರಲಾಗುತ್ತಿಲ್ಲವೆಂದು ಅಂತರ್ ವಿಶ್ವ ವಿದ್ಯಾಲಯದ ಸಭೆಯೊಂದರಲ್ಲಿ ಆಶ್ವಾಸನೆ ಕೊಡಲಾಯಿತು - ಆದರೆ ಕೇವಲ ಒಂದು ವಾರದ ಹಿಂದೆ ಹಿಂದಿಯನ್ನು ಹೇರುವ ವಿಷಯದ ಸರಿಪ್ರಶ್ನೆಕ್ಕೆ ಉತ್ತರ ಕೊಡಬೇಕೆಂಬ ಜ್ಞಾಪಕ ಪತ್ರ ಬಂತು! ಇದು ನಮ್ಮ ಮೇಲೆ ಆ ಭಾಷೆಯನ್ನು ಹೇರಲು ಹೇಗೆ ಪ್ರಯತ್ನ ನಡೆಯುತ್ತಿದೆ ಎಂಬುದನ್ನೆ ತೋರಿಸುತ್ತದೆ.

ಹಿಂದಿ ಕಲಿಯುವ ಅವಕಾಶ

"ಹಿಂದೀಯೇತರ ಪ್ರದೇಶಗಳಿಂದ ಬಂದ ಎಲ್ಲ ಕೇಂದ್ರ ಸರಕಾರದ ನೌಕರರೂ ಹಿಂದಿಯನ್ನು ಕಲಿಯಲೇ ಬೇಕೆಂಬ ನಿಯಮವಿದೆ. ಹಿಂದಿ ಭಾಷೆಯನ್ನಾಡುವ ಪ್ರದೇಶದ ನೌಕರರು ಹಿಂದೀಯೇತರ ಭಾಷೆಗಳನ್ನಾಡುವ ಪಲಯಕ್ಕೆ ಬಂದಾಗ ಏನು ವ್ಯವಸ್ಥೆ ಇದೆ? ಹಿಂದೀಯೇತರ ಪ್ರದೇಶಗಳಿಗೆ ವರ್ಗಾಯಿಸಲ್ಪಟ್ಟ ಹಿಂದೀ ಭಾಷೆಯಾಡುವ ನೌಕರನು ಆ ಪ್ರದೇಶದ ಭಾಷೆಯಲ್ಲಿ ಪ್ರಾವೀಣ್ಯವನ್ನು, ಕನಿಷ್ಠ ಪಕ್ಷಕ್ಕೆ ಭಾಷೆಯನ್ನು ತಿಳಿದುಕೊಳ್ಳುವಷ್ಟು ಜ್ಞಾನವನ್ನು, ಸಂಪಾದಿಸಿರಬೇಡವೆ? ಈ ಪ್ರಶ್ನೆಯ ವಿಷಯದಲ್ಲಿ ಸರಕಾರಕ್ಕೊಂದು ಕರ್ತವ್ಯವಿದೆ. ಕೇಂದ್ರ ಸರಕಾರದ ಆಡಳಿತ ಭಾಷೆಯಾಗಿ ಹಿಂದಿ ಇರಬೇಕೆಂದು ಹೇಳಿದ್ದ ಮಾತ್ರಕ್ಕೆ ಯಾವುದೇ ರಾಜ್ಯ ಸರಕಾರದ ಆಡಳಿತ ಭಾಷೆ

ADVERTISEMENT.

Examination for recruitment to the cadre of Stenographers in the Office of the Postmaster—General, Madras and other Administrative Offices of the P. & T. Department in the Madras Circle.

—ooo—ooo—ooo—

A competitive examinatian for recruitment to the cadre of Stenographers in the Office of the Postmaster—General, Madras and other Administrative Offices of P. & T. Department in the Madras Circle will be held in Madras on 10—9—55.

The anticipated number of vacancies to be filled up is 6. Out of these two are reserved, one for Scheduled Caste and other for Scheduled Tribe candidates.

The prescribed form of application and a copy of the Rules can be obtained from the Office of the Postmaster—General, Madras on payment of a fee of Rupee one anly in the form of an Indian Postal Order made payable to the Postmaster—General at the Mount Road Post Office.

Completed applications accompanied by an Indian Postal Order for Rs. 4/- (Rupees Four) only (Rupee one in the case of Scheduled caste and scheduled tribe candidates) made payable to the Postmaster—General, Madras as examination fee and attested copies of documents regarding age and educational qualifications and two testimoniels from Civil Gazetted or Commissioned Officers should be submitted so as to reach the office of the Postmaster-General, Madras by 31—8—1955.

The posts are in the prescribed scale of Rs. 80—5—120—KB 8—200—10/2—220 plus allowance under the Govt. of India Rules.

The applicant must have passed the Matriculation examination of a recognised University or its equivalent.

The applicant must be between the ages of 18 and 23 on the date of examination. In the case of Scheduled caste and Scheduled Tribe candidates, relaxation in the upper age limit upto 5 years will be allowed.

The canaidates will be given a piece of dictation consisting of 560 words at a speed of 80 words per minute and they will be required to transcribe it in 55 minutes. Five per cent errors will be allowed.

Candidates will be selected in the order of merit subject to the orders regarding reservation of vacancies for Scheduled caste and Scheduled tribe candidates.

The appointment of the selected candidates will be subject to their being found physically fit and their character and antecedents being found satisfactory on verification.

All correspondence should be addressed to the Postmaster—General by designation and not by name and superscribed "APPLICATION FOR APPOINTMENT AS STENOGRAPHER"

Postmaster—General,
MADRAS.

ಪಾಕಿಸ್ತಾನಕ್ಕೆ ಹೊಸ ಮಂತ್ರಿ ಮಂಡಳ

ರಚಿಸುವ ಧುರೀಣನಿಗಾಗಿ ಹುಡುಕಾಟ

ಪಾಕಿಸ್ತಾನದಲ್ಲಿ ಹಂಗಾಮಿ ಗವರ್ನರ ಜನರಲರಾಗಿ ಮಹಮ್ಮದಾಲಿಗಳ ಮಂತ್ರಿ ಮಂಡಳದಲ್ಲಿ ಒಳಾಡಳಿತೆಯ ಸಚಿವರಾಗಿದ್ದ "ಉಕ್ಕಿನ ಮನುಷ್ಯ" ಮೇಜರ್ ಜನರಲ್ ಇಸ್ಕಂದರ್ ಮಿರ್ಜಾರ ನೇಮಕವಾಗಿದೆ. ಗವರ್ನರ ಜನರಲರಾದ ಗುಲಾಂ ಮಹಮ್ಮದರ ದೀರ್ಘ ಕಾಲದ ಅಸ್ವಾಸ್ಥ್ಯವೇ ಮಿರ್ಜಾರ ನೇಮಕದ ಕಾರಣ.

ಲೀಗಿನ ಹೊಸ ಧುರೀಣ

ಇದೇ ಸಮಯದಲ್ಲಿ ಘಟನಾ ಸಮಿತಿಯಲ್ಲಿರುವ ಮುಸ್ಲಿಂ ಲೀಗಿನ ಸದಸ್ಯರು ತಮ್ಮ ಧುರೀಣನಾಗಿ ಅರ್ಥ ಸಚಿವ ಚೌಧುರಿ ಮಹಮ್ಮದಾಲಿಗಳನ್ನು ಆರಿಸಿಕೊಂಡಿದ್ದಾರೆ. ಪರಿಣಾಮವಾಗಿ ಪ್ರಧಾನ ಮಂತ್ರಿ ಮಹಮ್ಮದಾಲಿಗಳು, ಹಂಗಾಮಿ ಗವರ್ನರ ಜನರಲರಿಗೆ ತಮ್ಮ ರಾಜೀನಾಮೆಯನ್ನು ಕೊಡುವಂತಾಗಿದೆ. ಹೊಸ ಮಂತ್ರಿ ಮಂಡಳದ ರಚನೆಯಾಗುವವರೆಗೆ ಮಾತ್ರ ಅವರು ಅಧಿಕಾರದಲ್ಲಿ ಉಳಿಯುತ್ತಾರೆ.

ಆಲಿಗಳ ಪತನ

ಮಹಮ್ಮದಾಲಿಗಳ ಪತನವು ಯಾರನ್ನೂ ಆಶ್ಚರ್ಯಗೊಳಿಸಿಲ್ಲ. ಪೂರ್ವ ಬಂಗಾಲದ ಈ ವ್ಯಕ್ತಿಯ ವಿಷಯದಲ್ಲಿ ಪಶ್ಚಿಮ ಪಂಜಾಬಿನ ಮುಸ್ಲಿಂ ಲೀಗ್ ಪ್ರಭೃತಿಗಳಿಗೆ ವಿಶ್ವಾಸ ಹಾರಿಹೋಗುತ್ತಿದೆ ಎಂದು ಬಹಳ ಕಾಲದಿಂದಲೂ ಸುದ್ದಿ ಇತ್ತು. ಮಹಮ್ಮದಾಲಿಗಳು ಪೂರ್ವ ಬಂಗಾಲದಲ್ಲಿ ಬಹುಮತ ಸಂಪಾದಿಸಿರುವ ಫಜಲುಲ್ ಹಕ್ಕರ ಸಂಯುಕ್ತ ರಂಗದೊಡನೆ ಸಹಕರಿಸಿ ಹೊಸ ಮಂತ್ರಿಮಂಡಳವನ್ನು ರಚಿಸುವೆನೆಂದು ಕೆಲವು ಸಮಯದ ಹಿಂದೆ ಹೇಳಿದ್ದಾಗ, ಇವರನ್ನು ನಾಯಕನಾಗಿ ಆರಿಸಿದರಲ್ಲವೆ ಆ ಮಾತು ಎಂದು ಮುಸ್ಲಿಂ ಲೀಗಿನ ಧುರೀಣರು ಉತ್ತರವಿತ್ತಿದ್ದರು.

ಪ್ರಧಾನಿ ಪಟ್ಟ

ಹೊಸ ಪ್ರಧಾನಿಯಾಗಿ ಯಾರು ಅಧಿಕಾರವನ್ನು ವಹಿಸುವರೆಂದು ಈತನಕ ತಿಳಿದಿಲ್ಲ—ಆದರೆ ಓದುಗರ ಕೈಗೆ ಈ ಸಂಚಿಕೆ ಸೇರುವ ಮುಂಚೆ ಇದು ನಿಶ್ಚಯವಾಗಿತು. ನೂತನ ಸಚಿವ ಸಂಪುಟ ರಚಿಸುವುದು ಅಷ್ಟು ಸುಲಭವಿಲ್ಲ. ಏಕೆಂದರೆ ಮುಸ್ಲಿಂ ಲೀಗಿಗೆ ೮೦ ಸದಸ್ಯರುಳ್ಳ ಘಟನಾ ಸಮಿತಿಯಲ್ಲಿರುವುದು ೩೫ ಸ್ಥಾನಮಾತ್ರ; ಸಂಯುಕ್ತರಂಗಕ್ಕೆ ೧೬೦ ಮತ್ತು ಅವಾಮಿ ಲೀಗಿಗೆ ೧೫ ಸ್ಥಾನಗಳಿವೆ. ಆದುದರಿಂದ ಲೀಗೇತರರ ಸಹಕಾರವನ್ನು ಪಡೆಯದೆ ಸರಕಾರ ನಡೆಸುವುದು ಕಷ್ಟ.

ಸಹಕರಿಸುವವರು ಯಾರು?

ಯಾರ ಸಹಕಾರವನ್ನು ಯಾಚಿಸಬೇಕುಎಂಬುದೇ ಮುಸ್ಲಿಂಲೀಗಿನ ಹೊಸ ಧುರೀಣ ಚೌಧುರಿ ಮಹಮ್ಮದಾಲಿಗಳನ್ನು ಕಾಡುತ್ತದೆ. ಪ್ರಧಾನಿ ಪಟ್ಟವನ್ನು ತನಗೊಪ್ಪಿಸಿದರೆ ತನ್ನ ಅವಾಮಿ ಲೀಗಿನ ಬೆಂಬಲವನ್ನು ಸರಕಾರಕ್ಕೆ ದೊರಕಿಸಿಕೊಳ್ಳುತ್ತೇನೆ ಎಂದು ಶುಹ್ರವರ್ದಿ ಹೇಳಿದ್ದಾರೆ. ಸರಕಾರ ನಡೆಸಲು ಈ ನೆರವು ಸಾಕು—ಆದರೆ ಪ್ರಧಾನಿ ಪಟ್ಟವನ್ನು ಬಿಟ್ಟುಗೊಡಬೇಕಾಗಿ ಬಂದಿರುವ ಮಹಮ್ಮದಾಲಿಗಳು ಸುಹ್ರವರ್ದಿಗಳ ಉಚ್ಚಸ್ಥಾನವನ್ನು ಸಹಿಸಲಿಕ್ಕಿಲ್ಲ. ಅವರಿಗೆ ಈಗ ಹೆಕ್ಕರ ಸಂಯುಕ್ತರಂಗದ ಸಖ್ಯ ಹೆಚ್ಚಾಗಿದೆ.

ಸಂಯುಕ್ತ ಮಂತ್ರಿ ಮಂಡಳ?

ಆದುದರಿಂದ ಸಂಯುಕ್ತರಂಗದ ನೆರವು ಮಂತ್ರಿ ಮಂಡಳಕ್ಕೆ ದೊರೆಯದೆ ಹೋದರೆ, ಮಹಮ್ಮದಾಲಿಗಳೂ ಅವರ ಕೆಲವುಬೆಂಬಲಿಗರೂ ಸರಕಾರದ ಚಟುವಟಿಕೆಗಳಿಗೆ ಬಹಿರಂಗವಾಗಿಯಾಗಲೀ ಒಳಗೊಳಗೆಯೆ ಆಗಲೀ ಆತಂಕಮಾಡಬಹುದು. ಇದನ್ನು ತಪ್ಪಿಸಲು ಸಂಯುಕ್ತರಂಗದ ಸಹಕಾರ ಪಡೆಯುವುದೊಂದೇ ಉಪಾಯ. ಪ್ರಧಾನಿ ಪಟ್ಟಕ್ಕೆ ಸಂಯುಕ್ತರಂಗ ಬಾಯಿ ಬಿಡುವುದಿಲ್ಲ ಎಂಬುದೊಂದು ಅನುಕೂಲ. ಹೀಗಾಗಿ ಮೂರು ಪಕ್ಷಗಳ ಸಹಕಾರದಿಂದ ನೂತನ ಸಚಿವ ಸಂಪುಟ ರಚಿಸಲ್ಪಡಬಹುದೋ ಎಂದು ಊಹಿಸಲಾಗುತ್ತದೆ.

ಮಿರ್ಜಾರು ಏನಂತೆ?

ಮೂರೂ ಪಕ್ಷಗಳು ಸಹಕರಿಸಿ ಮಂತ್ರಿ ಮಂಡಳ ರಚಿಸದಿದ್ದರೆ, ಯಾರೇ ಸರಕಾರವನ್ನು ರಚಿಸಲಿ, ಅವರಿಗೆ ವಿರೋಧ ಬಹಳ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಪಾಕಿಸ್ತಾನದ ಘಟನಾ ಸಮಿತಿಯ ಕೆಲಸ ಎಣಿಸಿದಷ್ಟು ಸುಗಮವಾಗಿ ಮೊದಲನೆಯ ಅಧಿವೇಶನದಲ್ಲಿ ನಡೆಯಲಿಲ್ಲ. ನೂತನ ಸರಕಾರ ಆಡಳಿತ ನಿರ್ವಹಿಸಿಕೊಂಡು ಹೋಗುವುದೇ ಕಷ್ಟಕರವೆಂದು ಹಂಗಾಮಿ ಗವರ್ನರ ಜನರಲರು ಭಾವಿಸಿದರೆ, ಆಗ ಅವರೇ ಎಲ್ಲ ಅಧಿಕಾರವನ್ನೂ ತನ್ನ ಕೈಗೆ ತೆಗೆದು ಕೊಳ್ಳಬಹುದು. ಬಳಿಕ "ನಿಯಂತ್ರಿತ" ಪ್ರಜಾಪ್ರಭುತ್ವದಲ್ಲಿಯಷ್ಟೇ ವಿಶ್ವಾಸವುಳ್ಳ ಸೈನಿಕ ಮಿರ್ಜಾರ ಕೈಯಲ್ಲಿ ಪಾಕಿಸ್ತಾನ ಏನು ಸುಖ ಕಂಡೀತೋ—ಈಗ ಹೇಳಲು ಬಾರದು.

ಕಾಶ್ಮೀರ ಸಮಸ್ಯೆ

ಕಾಶ್ಮೀರದ ವಿಷಯದಲ್ಲಿ ಭಾರತದ ಗೃಹ ಮಂತ್ರಿ ಪಂತರು ಕಳೆದ ತಿಂಗಳ ಮೊದಲನೆಯ ವಾರ ಹೇಳಿದ ಮಾತುಗಳು ಸರಕಾರದ ಧೋರಣೆಗೆ ಅಸಂಗತವಾಗಿಲ್ಲವೆಂದು ಪ್ರಧಾನಿ ನೆಹರು ಲೋಕ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ತಿಳಿಸಿದ್ದಾರೆ. ಹಿಂದಿನ ವಾಗ್ದಾನಗಳನ್ನು ಅನಂತರದ ಬೆಳವಣಿಗೆಗಳ ಬೆಳಕಿನಲ್ಲಿ ಪರಿಶೀಲಿಸಬೇಕೆಂಬ ಪಂತರ ಹೇಳಿಕೆ ನ್ಯಾಯದಿಂದ ಕೂಡಿದೆ ಎಂದು ನೆಹರು ಅಭಿಪ್ರಾಯ ಪಟ್ಟಿದ್ದಾರೆ.

ಮತ್ತಿಬ್ಬರು ಹುತಾತ್ಮರು

ಗೋವೆಯಲ್ಲಿ ಈಚೆಗೆ ಇಬ್ಬರು ಸತ್ಯಾಗ್ರಾಹಿಗಳನ್ನು ನೇರಾಗಿ ಗುಂಡಿಟ್ಟು ಕೊಲ್ಲಲಾಯಿತು. ಹೀಗೆ ಹುತಾತ್ಮರಾದವರ ಸಂಖ್ಯೆ ನಾಲ್ಕಕ್ಕೆ ಏರಿದೆ. ಸತ್ಯಾಗ್ರಹಿಗಳನ್ನು ಹೀಗೆ "ತಿಕ್ಷೆ" ಗೆ ಗುರಿಪಡಿಸುವ ರಾಷ್ಟ್ರದ ಲೋಕದ ಯಾವುದೇ ನಾಗರಿಕ ರಾಷ್ಟ್ರಗಳಲ್ಲಿ ಇಲ್ಲವಷ್ಟೇಯಲ್ಲ ಸ್ವತಃ ಪೋರ್ಚುಗಾಲಿನಲ್ಲೂ ಇಲ್ಲ. ಹೀಗಿರುವಾಗ ಲೋಕದ ಎಲ್ಲ ಕಡೆಯಿಂದಲೂ ಪೋರ್ಚುಗೀಜರ ಹಿಂಸಾಚಾರದ ಖಂಡನೆಯು ಕೇಳಿ ಬರತೊಡಗಿದೆ.

ಡಲ್ಲೇಸರ ಬುದ್ಧಿವಾದ

ಅಮೇರಿಕದ ಡಲ್ಲೇಸರು ಗೋವೆಯ ಪ್ರಶ್ನೆಯನ್ನು ಶಾಂತ ವಿಧಾನದಿಂದ ಬಗೆಹರಿಸುವ ನೆಹರುಗಳ ನಿಲುಮೆಯನ್ನು ಅಭಿನಂದಿಸಿದ್ದಾರೆ— ಮಾತ್ರವಲ್ಲ ಪೋರ್ಚುಗಾಲವೂ ಶಾಂತ ವಿಧಾನದಿಂದ ಪರಿಹಾರವನ್ನು ಕಂಡು ಹಿಡಿಯಲು ಪ್ರಯತ್ನಿಸಬೇಕೆಂದು ಸಲಹೆ ಮಾಡಿದ್ದಾರೆ. ಆದರೆ ಪೋರ್ಚುಗಾಲವು ಡಲ್ಲೇಸರಿಗೆಯೇ ಬುದ್ಧಿ ಹೇಳಲು ಹೊರಟಿದೆ—ಸಂಯುಕ್ತ ರಾಷ್ಟ್ರಸಂಘದ ತಾಮ್ರಪಟದಂತೆ ಇನ್ನೊಂದ ರಾಷ್ಟ್ರದ ವಿರುದ್ಧ ದಂಗೆ ಎಬ್ಬಿಸಲು ಪ್ರೋತ್ಸಾಹ ಕೊಡಕೂಡದು—ಭಾರತ ಈ ಸೂತ್ರಕ್ಕೆ ವಿರುದ್ಧ ನಡೆದಿದೆ ಎಂದದರ ದೂರು.

ರಾಷ್ಟ್ರ ಸಂಘಕ್ಕೆ ದೂರು?

ಪರಿಣಾಮವಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಗೋವೆಯ ದೂರನ್ನು ಒಯ್ಯುವ ಸಿದ್ಧತೆಯನ್ನು ಅದು ನಡೆಸಿದೆಯಾಗಿ ವರದಿಗಳು ಹೇಳುತ್ತವೆ. ರಾಷ್ಟ್ರ ಸಂಘದಲ್ಲಿ ವಸಾಹತುವಾದಿ ಪೋರ್ಚುಗಾಲದ ಅಸಂಬದ್ಧ ಪ್ರಲಾಪಗಳಿಗೆ ಬೆಂಬಲ ದೊರೆಯಲಿಕ್ಕಿಲ್ಲ ಎಂಬುದು ನಿಜ; ಆದರೆ, ರಾಷ್ಟ್ರ ಸಂಘಕ್ಕೆ ಒಯ್ಯಲಾದ ಪ್ರಶ್ನೆಗಳ ಗತಿ ಕಾಶ್ಮೀರದಂತೆಯೇ ಆಗುತ್ತದೆ ಎಂಬುದನ್ನು ನಾವು ಮರೆಯಬಾರದು.

ಶೀಘ್ರ ಕ್ರಮ ಅವಶ್ಯ

ಗೋವೆಯ ಪ್ರಶ್ನೆಯನ್ನು ಹೀಗೆ ಅನಿಯಮಿತ ಅವಧಿಯವರೆಗೆ ಕೊಳೆಯಗೊಡುವುದೇ ಪೋರ್ಚುಗಾಲಿನ ಉದ್ದೇಶವಿರುವಂತೆ ಕಾಣುತ್ತದೆ. ಭಾರತ ಸರಕಾರ ಇದನ್ನು ಗಮನಿಸಿ ಸೂಕ್ತ ಉಪಾಯಗಳನ್ನು ವಿಳಂಬವಿಲ್ಲದೆ ಕೈಗೆದುಕೊಳ್ಳುವುದು ಅವಶ್ಯ. ಸರಕಾರದ ನಿಲುಮೆ ಏನು, ಅಗೋಸ್ತು ೧೫ರಂದು ನಡೆಯುವ ಸತ್ಯಾಗ್ರಹದ ಸ್ವರೂಪ ಏನಾದೀತು ಎಂಬುದೆಲ್ಲ ಈಗಲೂ ಊಹೆಯ ಸ್ಥಿತಿಯಲ್ಲಿದೆ. ಸತ್ಯಾಗ್ರಹಿಗಳ ಕೊಲೆಯಾಗುವುದನ್ನು ಭಾರತ ಸರಕಾರ ಎಷ್ಟರವರೆಗೆ ಸಹಿಸುತ್ತಾ ಕುಳಿತಿರುವುದೆಂದೂ ಕಾದು ನೋಡಬೇಕಾಗಿದೆ.

ಶಾಂತಿಗಾಗಿ ಅಣು

ಜಿನೇವದಲ್ಲಿ ಶಾಂತಿ ಕಾಲದ ಬಳಕೆಗಾಗಿ ಪರಮಾಣು ಶಕ್ತಿಯನ್ನು ಉಪಯೋಗಿಸುವ ಕುರಿತು ಭಾರತದ ಅಣು ವಿಜ್ಞಾನಿ ಡಾ. ಹೋಮಿ ಭಾಭಾರ ಅಧ್ಯಕ್ಷತೆಯಲ್ಲಿ ಹನ್ನೆರಡು ದಿನಗಳ ಪರಿಷತ್ತು ನಡೆಯುತ್ತಿದೆ. ಇದಕ್ಕೆ ೩೩ ರಾಷ್ಟ್ರಗಳ ೧೫೦ ವಿಜ್ಞಾನಿಗಳೂ ಬೇರೆ ೧೫೦ ವೀಕ್ಷಕರೂ ಬಂದಿದ್ದಾರೆ. ಪರಿಷತ್ತಿಗೆ ಶುಭ ಸಂದೇಶ ಕಳಿಸಿದ ಮಹಾರಾಷ್ಟ್ರಗಳ ವರಿಷ್ಠರು ವಿಧ್ವಂಸಕ ಕ್ಷೇತ್ರದಿಂದ ಅಣುಶಕ್ತಿ ರಚನಾತ್ಮಕ ರಂಗಕ್ಕೆ ಮುಖ ತಿರುಗಿಸಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ನೆಹರುಗಳು ಅಣುಬಾಂಬುಗಳ ಭೀಕರತೆಯನ್ನು ವಿಜ್ಞಾನಿಗಳು ಶಾಂತಚಿತ್ತದಿಂದ ಸರ್ಯಾಲೋಚಿಸಿ, ಶಾಂತಿಗೆ ನೆರವಾಗಲಿ ಎಂದಿದ್ದಾರೆ.

ಪಾಕಿಸ್ತಾನದ ನಾಣ್ಯ

ಆರು ವರ್ಷಗಳ ಹಿಂದೆ ಇಂಗ್ಲೆಂಡಿನ ಮಾದರಿಯನ್ನು ಅನುಸರಿಸಿ, ಭಾರತವನ್ನೊಳಗೊಂಡು ಸ್ಟರ್ಲಿಂಗ್ ಪ್ರದೇಶದ ೨೩ ರಾಷ್ಟ್ರಗಳು ತಮ್ಮ ನಾಣ್ಯಗಳವೌಲ್ಯ ವಿಚ್ಛೇದನ ಮಾಡಿದಾಗ ಪಾಕಿಸ್ತಾನ ಮಾತ್ರ ತನ್ನ ಕೋಳಿಗೆ ಮೂರು ಕಾಲು ಎಂದು ವಾದಿಸಿ ಬಿಮ್ಮನೆ ಕುಳಿತುಕೊಂಡಿತು. ಈಗ ಅದರ ಪರಿಣಾಮ ಘಾತಕರವಾಗುತ್ತಾ ಬರುತ್ತಿದೆ ಎಂದು ಪಾಕಿಸ್ತಾನಕ್ಕೆ ತಿಳಿಯ ಹತ್ತಿದೆ. ಆ ದೇಶದ ಹತ್ತಿ ಮತ್ತು ಸಣಬುಗಳಿಗೆ ಬೆಲೆ ಸಮರೀತ ವಿರುವ ದೆಸೆಯಿಂದ ಗಿರಾಕಿ ದೊರೆಯದೆ ಹೋಗಿದೆ; ಪಾಕಿಸ್ತಾನದ ರೂಪಾಯಿಯ ಬೆಲೆಯೂ ಜಾಗತಿಕ ಪೇಟೆಯಲ್ಲಿ ಇಳಿದಿದೆ. ಭಾರತ—ಪಾಕಿಸ್ತಾನಗಳ ನಡುವೆ ವ್ಯಾಪಾರ ಕುಂಠಿತವಾಗಿದೆ. ಆದುದರಿಂದ ಪರಿಸ್ಥಿತಿಯನ್ನು ಎದುರಿಸಲು ಭಾರತದ ರೂಪಾಯಿಗೆ ಸರಿಯಾಗುವಂತೆ ತನ್ನ ರೂಪಾಯಿಯ ಬೆಲೆಯನ್ನು ಪಾಕಿಸ್ತಾನ ಇಳಿಸಿದೆ.

ಉಡುಪಿಯ ದ್ವಿತೀಯ ಸತ್ಯಾಗ್ರಹಿಕಂಡ—ಉಡುಪಿಯಿಂದ ಗೋವಾ ಸತ್ಯಾಗ್ರಹಕ್ಕೆ ತೆರಳಿದ ಎರಡನೆಯ ಸತ್ಯಾಗ್ರಹಿ ಕಂಡವನ್ನು ಬೀಳ್ಕೊಡಲು ತಾ. 9ರಂದು ರಥ ಬೀದಿಯಲ್ಲಿ ಸರ್ವಪಕ್ಷೀಯ ಗೋವಾವಿಮೋಚನಾ ಸಮಿತಿಯವತಿಯಿಂದ ಶ್ರೀ ಎ. ಜಿ ಅಳ್ವಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಪಿ. ಶೀನನಾಯಕರು ಸತ್ಯಾಗ್ರಹಿಗಳ ಸರಿಚಯವಾಡಿಕೊಟ್ಟು ಸ್ವಾಗತಿಸಿದರು. ಶ್ರೀಗಳಾದ ಪದ್ಮನಾಭ ಶೆಟ್ಟಿಗಾರ, ಎನ್. ವಿ. ಕಾಮತ್, ನರಸಿಂಹ ಆಚಾರ್ಯ, ಬಸ್ನಂಜಿ ರಾಮಾಚಾರ್ಯರು ಸತ್ಯಾಗ್ರಹಿಗಳನ್ನು ಅಭಿನಂದಿಸಿದರು. ಸತ್ಯಾಗ್ರಹಿಗಳ ಪರವಾಗಿ ಶ್ರೀ ಜನಾರ್ದನ ಹಂದೆಯರು ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಬಿ. ಎಸ್. ಲೂಯೀಸರು ಧನ್ಯವಾದಸಮರ್ಪಿಸಿದರು. ತಾ. 10ನೇ ಬೆಳಿಗ್ಗೆ ಶ್ರೀಕೃಷ್ಣ ಮಠದಿಂದ ಸತ್ಯಾಗ್ರಹಿಗಳು ಹೊರಟು ಪುರಜನರ ಮೆರವಣಿಗೆಯೊಂದಿಗೆ ಬೀಳ್ಕೊಳ್ಳಲ್ಪಟ್ಟರು.

ಈ ಸತ್ಯಾಗ್ರಹಿಗಳ ತಂಡದ ಧುರೀಣತ್ವವನ್ನು ಕೋಯಲ್ ಮಹಾಲಿನ ಸ್ಥಾಲಕ ಶ್ರೀಕೆ ವೆಂಕಟ್ರಮಣ ಭಟ್ಟರು ವಹಿಸಿಕೊಂಡಿರುವರು. ಶ್ರೀಯುತರು ಕಾಂಗ್ರೆಸಿಗರಿದ್ದು ರಾಜಕೀಯ ಸಂತ್ರಸ್ತರಾಗಿ ದೊರೆಕಿದ್ದ ಹತ್ತು ಎಕ್ರೆ ಭೂಮಿಯನ್ನು ಭೂದಾನ ಯಜ್ಞಕ್ಕೆ ಅರ್ಪಿಸಿದವರಿದ್ದಾರೆ.

ಅಪೂರ್ವ ವೈದ್ಯಕೀಯ ಪ್ರದರ್ಶನ

ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆ ಮತ್ತು ರಕ್ತ ಕ್ರಿಯೆಗಳ ಜ್ಞಾನದ ಸಮಸಮೀಕರಣವನ್ನು ಜನತೆಗೆ ಮಾಡಿಕೊಡುವ ಧ್ಯೇಯೋದ್ದೇಶದಿಂದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಯೂನಿಯನ್ನಿನ ನೇತೃತ್ವದಲ್ಲಿ ಇದೇ ತಾ. 13, 14 ಮತ್ತು 15ಕ್ಕೆ ಮಣಿಪಾಲದಲ್ಲಿ ವೈದ್ಯಕೀಯ ಪ್ರದರ್ಶನವೊಂದನ್ನು ಏರ್ಪಡಿಸಲಾಗಿದೆ. ಈ ಕಾಲೇಜಿನ ಸಮರ್ಥ ಅಸುಖವ ಮತ್ತು ಜಯಶಾಲಿ ತಜ್ಞ ಪ್ರಾಧ್ಯಾಪಕರಿಂದ ಯೋಗ್ಯ ಸಲಹೆಸೂಚನೆಗಳಿಗೆ ಬೆಂಬಲವನ್ನು ಈ ಪ್ರದರ್ಶನಕಾರದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಆರೋಗ್ಯ ಪರೀಕ್ಷೆಮಾಡಿಸಿಕೊಳ್ಳುವ ನೂತನ ವ್ಯವಸ್ಥೆಯನ್ನೂ ಮಾಡಲಾಗಿದೆ.

ಶ್ರೀ ಪಿ. ನಾರಾಯಣ ಪ್ರಭುಗಳ ನಿಧನ—ಪ್ರಭಾಕರ ಪ್ರೆಸ್ಸಿನ ಸ್ಥಾಪಕರೂ ಸಮಾಜ ಸೇವಕರೂ ಹಿರಿಯರೂ ಸಾರ್ವಜನಿಕ ಸೇವೆ ಸಲ್ಲಿಸಿದವರೂ ಆದ ಶ್ರೀ ಪಿ. ನಾರಾಯಣ ಪ್ರಭುಗಳು ಇದೇ ತಾ. 7ನೇ ಅಗೋಸ್ತ ತನ್ನ 80ನೇ ವಯಸ್ಸಿನಲ್ಲಿ ದಿವಂಗತರಾದುದು ವಿಷಾದಕರವಿದೆ. ಇವರ ಜನನ 1-5-1876ರಲ್ಲಿ ಆಯಿತು. ಬಾಲ್ಯದಲ್ಲಿಯೇ ಸ್ವಸಹಾಯ ಸಮಿತಿಯ ಸದಸ್ಯರೂ, ಮುನ್ನೋಟಿಪುಳ್ಳವರೂ ಆಗಿದ್ದರು. 1909ರಲ್ಲಿ ಪ್ರಭಾಕರ ಪ್ರೆಸ್ಸನ್ನು ಸ್ಥಾಪಿಸಿದ್ದರು. ಇದೇ ಉಡುಪಿಯ ಪ್ರಥಮ ಮುದ್ರಣಾಲಯವೆಂದು ತಿಳಿದು ಬರುತ್ತದೆ. ಸ್ವತಃ ಉಪ್ಪಿಗೆಯೂ ಸರಳ ಮನೋವೃತ್ತಿಯವರೂ ಆಗಿದ್ದು ಸರ್ವ ಜನಪ್ರಿಯರಾಗಿದ್ದರು.

ಮಂಗಳೂರು

ಕಾಂಗ್ರೆಸ್ ಪಕ್ಷವು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸುವುದು:— ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯ ಸಭೆಯು 2—8—55ರಂದು ಜರಗಿ, ಕಾಂಗ್ರೆಸ್ ಪಕ್ಷವು ಬರುವ ಮಂಗಳೂರು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ನಿರ್ಣಯಿಸಿ ಈ ಬಗ್ಗೆ ಉಮೇದ್ವಾರರನ್ನು ಚುನಾಯಿಸಲು ಈ ಕೆಳಗಿನ ಮುನಿಸಿಪಲ್‌ಕೌನ್ಸಿಲ್‌ಗೊಂದ ಚುನಾವಣಾ ಸಮಿತಿಯನ್ನು ನೇಮಿಸಿತು.

ಜಿಲ್ಲಾ ಕಾಂಗ್ರೆಸ್‌ಕಮಿಟಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು, ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು, ಮತ್ತು ಶ್ರೀಗಳಾದ 1, ಬಿ. ವೈಕುಂಠ ಬಾಳಿಗ, ಎಂ. ಎಲ್. ಎ; 2, ಎಲ್. ಸಿ. ಪಿಕ್ಕಾಸ್, ಎಂ. ಎಲ್. ಎ; 3, ಸಿ. ಶಂಕರ ಅಳ್ವ, 4, ಕೆ. ಆರ್. ಆಚಾರ್, 5, ಕೆ. ಕೆ. ಶೆಟ್ಟಿ, 6, ಎಚ್. ಕೆ. ತಿಂಗಳಾಯ ಮತ್ತು 7. ಎಸ್. ಎನ್. ಹೊಳ್ಳ, ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಈ ಸಮಿತಿಯ ಸಂಚಾಲಕರಾಗಿರುವರು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ತಮ್ಮ ಅಭಿಪ್ರಾಯವನ್ನು ಇದೇ ತಾ. 14 ರೊಳಗೆ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಗೆ ತಿಳಿಸಬೇಕೆಂದೂ, ಇದನ್ನು ಪರ್ಯಾಲೋಚಿಸುವಂತೆ ಸದ್ರಿ ಕಾರ್ಯಕಾರಿ ಸಮಿತಿಯು ಇದೇ ತಾ. 16—8—55ರಂದು ಸಭೆ ಸೇರಬೇಕಾಗಿಯೂ ನಿರ್ಣಯಿಸಲಾಯಿತು.

ಇದೇ ತಾ. 5ರಲ್ಲಿ ಈ ಚುನಾವಣಾ ಸಮಿತಿ ಸಭೆ ಸೇರಿ ಶ್ರೀ ಕೆ. ಆರ್. ಆಚಾರ್ಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಬಿ. ಬಿ. ಶೆಟ್ಟಿರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಗಿದೆ. ತಾ. 5ರಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಉಮೇದ್ವಾರರಾಗಿ ನಿಲ್ಲುವವರು ಇದೇ ತಾ. 12ನೇ ಸಂಜೆ 5 ಗಂಟೆಯೊಳಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಮ್ಮ ಅರ್ಜಿಗಳನ್ನು ಸಲ್ಲಿಸಬೇಕೆಂದೂ ನಿರ್ಧರಿಸಲಾಯಿತು.

ತಿಲಕ ಜಯಂತಿಯು ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ವತಿಯಿಂದ:— ತಾ. 1-8-55ನೇ ಸಂಜೆ ಶ್ರೀ ಸುಬ್ರಾಯ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆರವ ಉದ್ದೇಶವನ್ನು ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಎಲ್. ಶೆಟ್ಟಿ ವಿವರಿಸಿದ ನಂತರ ಲೋಕಮಾನ್ಯ ಬಾಲ ಗಂಗಾಧರ ತಿಲಕರು ಮಾಡಿದ ದೇಶಸೇವೆ ಹಾಗೂ ಅವರ ಜೀವನದ ಮುಖ್ಯ ಘಟನೆಯ ಕುರಿತು ಶ್ರೀಗಳಾದ ಕೆ. ಆರ್. ಆಚಾರ್; ಕುಮಾರಿ ಪ್ರೇಮಲತಾ ಹೆಗ್ಡೆ; ಎಂ. ಎಲ್. ಶೆಟ್ಟಿ ಮತ್ತು ಅಧ್ಯಕ್ಷರು ಭಾಷಣಿಸಿದರು.

ಸ್ವಾತಂತ್ರ್ಯ ದಿನೋತ್ಸವ ಕಾರ್ಯಕ್ರಮ— ತಾ. 15-8-1955ನೇ ಸೋಮವಾರ 1. ಬೆಳಿಗ್ಗೆ ಗಂಟೆ 8ಕ್ಕೆ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಕೇಂದ್ರ ಮೈದಾನದಲ್ಲಿ ಧ್ವಜವಂದನೆ. 2, ಅಪರಾಹ್ನ ಘಂಟೆ 3 ರಿಂದ 6ರ ತನಕ ಕೇಂದ್ರ ಮೈದಾನದಲ್ಲಿ ವಿನೋದ ಉಡಿಗೆತೊಡಿಗೆ, ಮಂಗಳೂರಿನ ಪ್ರಾಮುಖ್ಯ ವ್ಯಾಯಾಮ ಶಾಲೆಗಳ ವಿದ್ಯಾರ್ಥಿಗಳಿಂದ ಅಂಗಸಾಧನೆ, ಮತ್ತು ರಕ್ತಿ ಪ್ರದರ್ಶನ, ಗಾಯನ ಮತ್ತು ಇತರ ವಿನೋದಾವಳಿಗಳು. 3. ಸಾಯಂಕಾಲ ಘಂಟೆ 6ಕ್ಕೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆ, ಬಹುಮಾನ ವಿತರಣೆ, ಭಾಷಣ, ಧನ್ಯವಾದ ಇತ್ಯಾದಿ.

ಅಂದೇ ಬೆಳಿಗ್ಗೆ ಗಂಟೆ 7—95ಕ್ಕೆ ಜಿಲ್ಲಾ ಕಲೆಕ್ಟರರು ಪೋಲೀಸಿನವರ ಗೌರವರಕ್ಷೆಯನ್ನು ಕರೆಸುವರು, ಅಲ್ಲದೆ 1955ನೇ ಕಲೆಕ್ಟರರ ಧೀರತ್ವ ಪದಕಗಳನ್ನು 6ನೆಯ ಸಾಹಸಿಗಳಿಗೆ ವಿತರಣೆ ಮಾಡಲಾಗುವುದು.

ಮಹಾಜನರೆಲ್ಲರೂ ಪಕ್ಷಪಂಗಡಗಳನ್ನು, ಜಾತಿ ಮತ ಭೇದಗಳನ್ನು ತೊರೆದು, ಈ ಉತ್ಸವದಲ್ಲಿ ಸರ್ವ ವಿಧದಿಂದ ಸಹಕರಿಸಬೇಕಾಗಿಯೂ, ದೇವಸ್ಥಾನ, ಇಗರ್ಜಿ, ಮಸೀದಿ, ಮಂದಿರ, ಮಠಗಳಲ್ಲಿ ರಾಷ್ಟ್ರಧ್ವಜವನ್ನು ಏರಿಸಿ, ರಾಷ್ಟ್ರದ ಶ್ರೇಯಸ್ಸಿಗಾಗಿ ಪ್ರಾರ್ಥಿಸಬೇಕಾಗಿಯೂ ವಿನಂತಿಸಲಾಗಿದೆ.

ಸರ್ವಪಕ್ಷೀಯ ಸಮಿತಿ— ಇದೇ ತಾ. 5ರಲ್ಲಿ ಶ್ರೀ ಕೆ. ಸಾರ್ವಭೌಮನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಗೋವಾ ವಿಮೋಚನೆಯ ಬಗ್ಗೆ ಜಿಲ್ಲೆಯ ಕಾರ್ಯಕ್ರಮ ರೂಪಿಸುವುದಕ್ಕಾಗಿ ಸಾರ್ವಜನಿಕ ಸಭೆಜರಿಗಿ ಸರ್ವಪಕ್ಷೀಯ ಸಮಿತಿಯೊಂದು ರಚಿಸಲ್ಪಟ್ಟಿತು. ಇತ್ತೀಚೆಗೆ ಪೋರ್ಚುಗೀಸರ ಗುಂಡಿಗೆ ಬಲಿಯಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸುವ, ಗೋವಾ ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸುವ, ಭಾರತ ಸರಕಾರವು ಯೋಗ್ಯತಾ ಕಾರ್ಯಕ್ರಮ ಕೈಕೊಳ್ಳಬೇಕೆನ್ನುವ ನಿರ್ಣಯಗಳಾದುವು. ಈ ಸಮಿತಿಗೆ ಸಂಚಾಲಕರಾಗಿ ಡಾ! ಸಂಜೀವನಾಥ, ಶ್ರೀ ಬಿ. ವಿ. ಕಕ್ಕಿಲ್ಲಾಯ ಹಾಗೂ ಶ್ರೀ ಪ್ರಭಾಕರ ಘಾಟೆ ಇವರು ಆರಿಸಲ್ಪಟ್ಟಿರುವರು. ತಾ. 6ರಲ್ಲಿ ಗಣಪತಿ ಪೈಸ್ಕೂಲಿನಲ್ಲಿ ಶ್ರೀ ಎಂ. ಸಿ. ಆಚಮ್ಮುದರ ಅಧ್ಯಕ್ಷತೆಯಲ್ಲಿ ಈ ಸಮಿತಿಯ ಸಭೆಜರಿಗಿ ಶ್ರೀ ಡಿ. ಮೊಹನ ರಾವ್, ಡಾ. ನಾಗಪ್ಪ ಅಳ್ವ, ಬಿ. ವಿ. ಕಕ್ಕಿಲ್ಲಾಯ್ಯ, ಬಿ. ಯಂ. ಇದಿನಬ್ಬ ಮೊದಲಾದವರು ಮಾತನಾಡಿ ಪೋರ್ಚುಗೀಜರ ಕೃತ್ಯಗಳನ್ನು ಖಂಡಿಸಿದರು.

ಮಂಗಳೂರು ಪತ್ರಿಕೋದ್ಯೋಗಿ ಸಂಘದವರು ಇದೇ ತಾ. 2ರಲ್ಲಿ ಮಂಗಳೂರಿಗೆ ಒಂದಿದ್ದ ಬೆಂಗಳೂರಿನ 'ಚಿತ್ರಗುಪ್ತ' ವಾರ ಪತ್ರಿಕೆಯ ಸಂಪಾದಕ ಶ್ರೀ ಎಂ. ಎಸ್. ಭಾರದ್ವಾಜ ಇವರಿಗೆ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಸತ್ಕಾರವೇರ್ಪಡಿಸಿದ್ದರು. ಶ್ರೀ ಬಿ. ಎಂ. ಇದಿನಬ್ಬನವರು ಅತಿಥಿಗಳ ಪರಿಚಯವನ್ನಾಡಿಕೊಟ್ಟರು. ಪತ್ರಿಕೋದ್ಯಮದ ಕುರಿತು ವಿಚಾರ ವಿನಿಮಯವಾದ ಮೇಲೆ ಕಾರ್ಯದರ್ಶಿ ಶ್ರೀ ಕೆ. ಎನ್. ಉಪಾಧ್ಯರು ಧನ್ಯವಾದಗಳನ್ನರ್ಪಿಸಿದರು.

ಕವಿ ರವೀಂದ್ರರ ದಿನಾಚರಣೆ— ಕವೀಂದ್ರ ರವೀಂದ್ರನಾಥ ಠಾಗೋರರ ದಿನಾಚರಣೆಯು ತಾ. 7ನೇ ಸಂಜೆ ಶ್ರೀ ಬೆನಗಲ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಂದ್ರ ಲೈಬ್ರೇರಿಯಲ್ಲಿ ಲೋಕಲ್ ಲೈಬ್ರೇರಿ ಅಥೋರಿಟಿಯ ಅಧ್ಯಕ್ಷ ಶ್ರೀ ಎಂ. ಎಸ್. ನಿಕಾಂಬರ ರಾಯರ ಸ್ವಾಗತದೊಂದಿಗೆ ಆಚರಿಸಲ್ಪಟ್ಟಿತು. ಉಡುಪಿ ಎಂ. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾವ್, ಶ್ರೀ ಪಿ. ಕೆ. ನಾರಾಯಣ ಇವರು ಠಾಗೋರರ ಜೀವನ ಮತ್ತು ಸಂದೇಶ ಅದರ್ಶಗಳನ್ನು ವಿವರಿಸಿ ಭಾಷಣಿಸಿದ್ದರು. ಕುಮಾರಿಯರಾದ ಲಿಮಿಯಾ, ಅರುಣ ಮತ್ತು ಶ್ರೀ ಎ. ಎಂ. ಐಸಾಕರು ಕವೀಂದ್ರರ ಕೆಲವು ಕೃತಿಗಳನ್ನು ಓದಿದ ಮೇಲೆ ಅಧ್ಯಕ್ಷರ ಭಾಷಣವಾಗಿ ಶ್ರೀ ಯು. ಕೃಷ್ಣಪ್ಪನವರ ಧನ್ಯವಾದಗಳೊಂದಿಗೆ ಸಭಾಕೃತ್ಯವಾಯಿತು.

ಜಿಲ್ಲಾ ಕಲೆಕ್ಟರರ ಪತ್ರಿಕಾ ಪರಿಷತ್ತು— ತಾ. 9ನೇ ಸಂಜೆ ಕಲೆಕ್ಟರರ ಕೋರ್ಟೂಟ ಹಾಲಿನಲ್ಲಿ ಜರಗಿತು. ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರು ಜಿಲ್ಲಾ ಭಿನ್ನಭಿನ್ನ ಯೋಜನೆಗಳಲ್ಲಿ ಈ ವರೆಗೆ ನಡೆದ ಕಾರ್ಯ, ಆದಕ್ಕೆ ಮೊರೆತ ಜನತಾ ಬೆಂಬಲ ಮುಂದೆ ಆಗತಕ್ಕ ಕೆಲಸಾದಿಗಳನ್ನು ವಿವರಿಸಿದರು. ಈಗ ಕೆಲವೇ ತಿಂಗಳುಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಕೆಲಸಗಳಾದ ಪ್ರಯುಕ್ತ ಈ ಜಿಲ್ಲೆಗೆ ಇಡೀ ಪ್ರಾಂತ್ಯದಲ್ಲಿಯೇ ಯೋಗ್ಯ ಸ್ಥಾನ ಸಿಕ್ಕಿದೆಯೆಂದು ಹೇಳಿದರು.

ಬೆಳ್ಳಾರೆ— ಕಳೆದ ತಾ. 30ರಲ್ಲಿ ಶ್ರೀ ವೇರಣ್ಣ ಶೆಟ್ಟರ ನೇತೃತ್ವದಲ್ಲಿ ಶ್ರೀ ರಾಮಾ ರಾವ್ ಬಿ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಕರ್ಣಾವಸಾನವೆಂಬ ಯಕ್ಷಗಾನ ಕೂಟವು ಮೃದಂಗ ವಿದ್ವಾನ್ ಬಾಬು ರೈಗಳ ಮೃದಂಗ ವಾದನದೊಂದಿಗೆ ಜರಗಿತು. ರಥುನಾಥ ಭಟ್ಟ ಮತ್ತು ಪಂಗಡಿಗರ ಸಂಗೀತ ಕಾರ್ಯಕ್ರಮವೂ ನಿರ್ಪಟ್ಟಿತ್ತು. ಅಧ್ಯಕ್ಷರ ಭಾಷಣದ ತರುವಾಯ ಶ್ರೀ ಬಿ. ಕಿಟ್ಟಣ್ಣ ರೈಗಳು ಧನ್ಯವಾದಗಳನ್ನಾತ್ತರು.

ಪಟ್ಲ— ಹಿರೆಬೆಟ್ಟು ಗ್ರಾಮದ ಪಟ್ಲ ಲೋಕಮಾನ್ಯ ತಿಲಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 6ರಂದು ತಿಲಕ ದಿನಾಚರಣೆಯು ಶ್ರೀ ಎಂ. ಎಸ್. ಅನಂತ ಕೃಷ್ಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮರ್ಕೆ ಗೋವಿಂದ ಶೆಟ್ಟರಿಂದ ಸ್ವಾಗತ ಭಾಷಣ, ಶ್ರೀ ಹಿರೆಬೆಟ್ಟು ಸದಾಶಿವ ಹೆಗ್ಡೇರಿಂದ ಸಂದೇಶ ವಾಚನ, ಮರ್ಕೆ ವಾಸುದೇವ ಭಟ್ಟರಿಂದ ಪರಿಚಯ ಭಾಷಣ ಅದಮೇಲೆ ಮುಖ್ಯ ಭಾಷಣ ಕರ್ತರಾದ ಶ್ರೀ ಕು. ಶಿ. ಹರಿದಾಸ ಭಟ್ಟರು "ಸ್ವರಾಜ್ಯ" ಎಂಬೀ ಕುರಿತು ಮಾತನಾಡುತ್ತ ಭಾರತ ಸ್ವಾತಂತ್ರ್ಯಹೋರಾಟಿ, ಇಂದಿನ ಪ್ರಜಾರಾಜ್ಯದ ರೂಪ ರೇಖೆಗಳನ್ನು ವಿವರಿಸಿ ತಿಲಕರ ರಾಜಕೀಯ ಜಾಣಾಕ್ಷತೆ, ಧೈರ್ಯ, ಉಗ್ರಗಾಮಿ ಮಾರ್ಗ ಮೊದಲಾದವನ್ನು ವಿವರಿಸಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣ ಧನ್ಯವಾದ ಪ್ರದಾನಾಭಿನಯದೊಂದಿಗೆ ಸಭಾಂತ್ಯವಾಯಿತು. ಬೆಳಿಗ್ಗೆ ಶ್ರೀ ಹಿರೆಬೆಟ್ಟು ಸದಾಶಿವ ಹೆಗ್ಡೇರಿಂದ ಧ್ವಜಾರೋಹಣ ನಡೆದಿತ್ತು.

ಕಾರ್ಕಳ— ಇದೇ ತಾ. 3ರಲ್ಲಿ ಇಲ್ಲಿಯ ಮನೆಯೊಂದಕ್ಕೆ ಬೆಂಕಿ ಬಿದ್ದೊಡನೆ ಉಡುಪಿ ಫಯರ್ ಸರ್ವಿಸಿನವರಿಗೆ ಫೋನ್ ಕರೆ ಕೊಟ್ಟಂತೆ ಸಬ್ ಆಫೀಸರ್ ಶ್ರೀ ಇ. ಗೊನ್ಸಾಲ್ವೀಸ್ ಇವರ ನೇತೃತ್ವದಲ್ಲಿ ಫಯರ್ ಸರ್ವಿಸ್ ದಳದವರು ಬೆಂಕಿಬಿದ್ದ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದುದರಿಂದಾಗಿಯೂ ಈ ಘಟನೆಯಿಂದ ಸುಮಾರು ಸಾವಿರ ರೂಪಾಯಿಯಷ್ಟು ನಷ್ಟ ಸಂಭವಿಸಿರುವುದಾಗಿಯೂ ತಿಳಿಯಬರುತ್ತದೆ.

ಉಡುಪಿ

ಠಾಗೋರ್ ದಿನಾಚರಣೆಯು ಎಂ. ಜಿ ಎಮ್. ಕಾಲೇಜಿನಲ್ಲಿ ಕಾಲೇಜ್ ಯೂನಿಯನ್ನಿನ ನೇತೃತ್ವದಲ್ಲಿ ಪ್ರಿನ್ಸಿಪಾಲ್ ಯು. ಸುಂದರ ರಾಯರ ಅಧ್ಯಕ್ಷತೆಯಲ್ಲಿ ತಾ. 8ನೇ ಸಂಜೆ ಆಚರಿಸಲ್ಪಟ್ಟಿತು. ಶ್ರೀ ತ್ಯಾಗರಾಜರು ಠಾಗೋರರ ರಾಜಕೀಯ ತತ್ವಜ್ಞಾನ, ಶ್ರೀ. ಕೆ. ಬಿ. ರಾಮಕೃಷ್ಣರಾಯರು ಠಾಗೋರರ ಕವನ, ಶ್ರೀ ರಾಮಚಂದ್ರ ಮೂರ್ತಿಯವರು ಸಾಹಿತ್ಯ ಕೃತಿ, ಶ್ರೀ ಕು. ಶಿ. ಹರಿದಾಸ ಭಟ್ಟರು ಠಾಗೋರರ ಸಂಸ್ಕೃತ, ಶ್ರೀಮತಿ ತೆರೆಸ್ ಜೋಸೆಫರು ಠಾಗೋರರೂ ಮಕ್ಕಳ ಕಾವ್ಯವೂ ಎಂಬ ಕುರಿತೂ, ಅಧ್ಯಕ್ಷ ಸ್ಥಾನದಿಂದ ಶ್ರೀ ಸುಂದರರಾಯರು ಠಾಗೋರರ ಮಾನವೀಯತೆಯ ಕುರಿತೂ ಮಾತನಾಡಿದರು.

ಶ್ರೀ ಯು. ಎಸ್. ನಾಯಕರಿಗೆ ಸತ್ಕಾರ:— ಹನುಮಾನ್ ಮೋಟಾರ್ ಕಂಪನಿಯ ಮೆನೇಜಿಂಗ್ ಡೈರೆಕ್ಟರರೂ ಸರ್ವಪಕ್ಷೀಯ ಗೋವಾ ವಿಮೋಚನಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಯು. ಎಸ್. ನಾಯಕರು ಗೋವಾಕ್ಕೆ ಸತ್ಯಾಗ್ರಹಿಗಳ ಮುಖಂಡರಾಗಿ ಹೋಗಲಿದ್ದ ಪ್ರಯುಕ್ತ ಅವರಿಗೆ ಆ ಕಂಪೆನಿಯ ಡ್ರಾಯಿಂಗ್ ರೂಮ್‌ನಲ್ಲಿ ಕೆಲಸಗಾರರೂ ತಾ. 5ರಂದು ಸತ್ಕಾರ ಕೂಟವನ್ನೇರ್ಪಡಿಸಿ ಮಾನಪತ್ರವನ್ನರ್ಪಿಸಿ ಬೀಳ್ಕೊಟ್ಟರು. ಶ್ರೀ ಬೇಳಿಂಜೆ ಕೃಷ್ಣಯ್ಯ ಹೆಗ್ಡೇರು ಸಭಾಧ್ಯಕ್ಷರಾಗಿದ್ದರು. ಶ್ರೀ ಬಿ. ರಂಗನಾಥ ಹೆಗ್ಡೆಯವರು ಶ್ರೀ ನಾಯಕರು ಸಲ್ಲಿಸಿದ ದೇಶ ಸೇವೆ ಕಂಪೆನಿಯ ಕಲ್ಯಾಣ ಮೊದಲಾದುವನ್ನು ವಿವರಿಸುವ ಬಿನ್ನವತ್ತಳೆಯನ್ನು ಓದಿ ಅರ್ಪಿಸಿದರು. ಕಂಪೆನಿಯ ಕೆಲಸಗಾರರ ಕಡೆಯಿಂದ ಶ್ರೀ ಎಂ. ಆರ್. ಭಟ್ಟರೂ ಶ್ರೀ ಕೃಷ್ಣಪ್ಪನವರೂ ಶ್ರೀ ನಾಯಕರ ದಕ್ಷತೆಯನ್ನು ಕೊಂಡಾಡಿದರು. ಶ್ರೀ ನಾಯಕರು ಆಭಾರ ಸೂಚಿಸಿ ಗೋವಾ ಸಮಸ್ಯೆಯನ್ನು ವಿವರಿಸಿದರಲ್ಲದೆ ಕಂಪೆನಿಯ ಅಭಿವೃದ್ಧಿಯನ್ನು ಕೋರಿ ಮಾತನಾಡಿದರು.

ಅಧ್ಯಕ್ಷರು ಶ್ರೀ ನಾಯಕರಿಗೆ ಜಯ ಕೋರಿದರು. ಶ್ರೀ ಯು. ವಾಸುದೇವ ಪೈಗಳು ಧನ್ಯವಾದವಿತ್ತರು.

ಉಡುಪಿ ಗೋವಾ ಸತ್ಯಾಗ್ರಹಿಗಳಿಗೆ ವಿದಾಯ— ಇದೇ ತಾ. 4ರಲ್ಲಿ ರಥಬೀದಿಯಲ್ಲಿ ಶ್ರೀ ಅಥಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀ ಯು. ಎಸ್. ನಾಯಕರ ನಾಯಕತ್ವದಲ್ಲಿ ಗೋವಾಕ್ಕೆ ತಾ. 15ರ ಚಳವಳಿಯಲ್ಲಿ ಭಾಗವಹಿಸಲು ಸೊರಟ 12 ಮಂದಿ ಸತ್ಯಾಗ್ರಹಿಗಳಿಗೆ ವಿದಾಯ ಸತ್ಕಾರಕಾರ್ಯವೇರ್ಪಡಿಸಲಾಯಿತು. ಶ್ರೀ ಬಿ. ಯಸ್. ಲೂಯಿಸರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀಗಳಾದ ಎ. ಜೆ. ಅಲ್ಬ, ತಂಗಪ್ಪ ನಾಯರ್, ಎಸ್. ಪದ್ಮನಾಭ ಶೆಟ್ಟಿ, ಮೊದಲಾದವರು ಗೋವಾ ಚಳವಳದ ಕುರಿತೂ, ಸತ್ಯಾಗ್ರಹಿಗಳ ತತ್ವದೀಕ್ಷೆಗಳ ಕುರಿತೂ ಮಾತನಾಡಿದರು. ಶ್ರೀ ಯು. ಎಸ್. ನಾಯಕರೂ, ಶ್ರೀ ದಾಸ ಸೇರಿಗಾರರೂ ಸತ್ಯಾಗ್ರಹಿಗಳ ಕಡೆಯಿಂದ ಮಾತಾಡಿ ಕೃತಜ್ಞತೆಯನ್ನರ್ಪಿಸಿದರು. ಅಧ್ಯಕ್ಷರು ಸತ್ಯಾಗ್ರಹಿಗಳಿಗೆ ಆಶೀರ್ವಾದವಿತ್ತ ಮೇಲೆ ಶ್ರೀ ನೀನಾನಾಯ್ಕರು ಧನ್ಯವಾದ ಸಲ್ಲಿಸಿದರು.

ಮರುದಿನ ಸಂಜೆ ಸತ್ಯಾಗ್ರಹಿಗಳು ಶ್ರೀಕೃಷ್ಣ ಮಠದಿಂದ, ಪರ್ಯಾಯ ಮತ್ತು ಅಥಮಾರು ಮಠದ ಶ್ರೀ ಪಾದಂಗಳವರಿಂದ ಫಲಮಂತ್ರಾಕ್ಷತೆ ಪಡೆದು ಪ್ರಚಂಡ ಜನಸ್ತೋಮದ ಮಧ್ಯ ಮೆರವಣಿಗೆಯಿಂದ ವಿದಾಯ ಪಡೆದು ಜಿಲ್ಲೆಯ ಗಡಿಯ ತನಕ ಕಾಲ್ನಡೆಯಿಂದಲೇ ಗೋವಕ್ಕೆ ಹೊರಟು ಹೋದರು. ಭಿಡ್ರಗಿರಿ, ಬ್ರಹ್ಮಾವರ, ಮೊದಲಾದ ಕಡೆಗಳಲ್ಲಿ ಸತ್ಯಾಗ್ರಹಿಗಳು ಸಂಭ್ರಮದ ಸ್ವಾಗತಪಡೆದು ಮುಂದುವರಿದರು. ಅಲ್ಲಲ್ಲಿ ಸಭೆ ಭಾಷಣಗಳೂ ಜರಗಿದವು.

ಎಂ. ಜಿ. ಯಂ. ಕಾಲೇಜಿನ— ವಿಜ್ಞಾನ ಸಂಘದ ಉದ್ಘಾಟನೆಯು ತಾ. 5ರಂದು ಡಾ. ಪಿ. ಜಿ. ಗೊಲ್ಲರೆಯವರಿಂದ ಪ್ರಿನ್ಸಿಪಾಲ್ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಂಘದ ಉಪಾಧ್ಯಕ್ಷ ಶ್ರೀ ಕೆ. ರಾಮದಾಸರು ಸ್ವಾಗತ ಮಾಡುವುದಕ್ಕನುವಾದದ ಮೇಲೆ ವಿಜ್ಞಾನಿಗಳು ಸತ್ಯಶೋಧಕರೆಂದೂ ಮತ ಧರ್ಮಗಳಿಗೂ ಜ್ಞಾನಿಕ್ಕೂ ಭೇದವಿಲ್ಲವೆಂದೂ ಮುಂತಾಗಿ ಗೊಲ್ಲಕೇರಿಯವರು ಹೇಳಿದರು. ಕಾರ್ಯದರ್ಶಿ ಶ್ರೀ ಶ್ರೀಶ ಆಚಾರ್ಯರು ಆಭಾರ ಸೂಚಿಸಿದರು.

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ

ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ

ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡುಪಿ

V. R. Kidiyur,

Advocate for Plaintiff

ಉಡುಪಿ ತಾ. 4—8—1955.

ಯೂ ಅದೇ ಆಗಬೇಕೆಂದು ಸೂಚಿಸಲಾಗರು. ಒಂದಕ್ಕಿಂತ ಹೆಚ್ಚು ಭಾಷೆಯನ್ನಾಡುವ ಮದ್ರಾಸಿನಲ್ಲಿ ಸರಕೀಯರು ಈ ಭಾಷೆಯಪ್ರಶ್ನೆಯನ್ನು ಹೇಗೆ ಬಿಡಿಸಿರುವರೆಂದುನಾವು ನೋಡಬೇಕು-ಈ ದೇಶದಲ್ಲಿ ಆಡಳಿತಗಾರರಾಗಿ ಬಂದ ಆಂಗ್ಲೇಯರು ಸಹ ಪ್ರಾದೇಶಿಕಭಾಷೆಗಳಲ್ಲಿ ಪರೀಕ್ಷೆಯೊಂದನ್ನು ಕೊಡಬೇಕೆಂಬ ನಿಯಮವಿತ್ತು. ಹಿಂದಿಯನ್ನು ಕಲಿಯಲು ಎಲ್ಲ ಸಂದರ್ಭಗಳನ್ನುಒದಗಿಸಿಕೊಡಬೇಕೆಂಬುದು ನಿಜ. ಮದ್ರಾಸು ವಿಶ್ವವಿದ್ಯಾಲಯದ ಮಟ್ಟಿಗೆ ೫೦—೬೦ ಕಾಲೇಜುಗಳಲ್ಲಿ ಹಿಂದಿಯನ್ನು ಐಚ್ಛಿಕ ವಿಷಯವಾಗಿ ಕಲಿಸಲಾಗುತ್ತದೆ. ಇಂಟರ್ ಮಿಡಿಯೆಟ್ ಮತ್ತು ಬಿ. ಎ. ಕ್ಲಾಸುಗಳಲ್ಲಿಯಷ್ಟೇಯಲ್ಲ — ಆದಕ್ಕೂ ಮೇಲಿನ ಪರೀಕ್ಷೆಗಳಲ್ಲಿ ಹಿಂದಿಗೆ ಪ್ರೋತ್ಸಾಹ ಕೊಡಲಾಗುತ್ತದೆ. ಆದುದರಿಂದ ಹಿಂದಿ ಭಾಷೆಯನ್ನು ಕಲಿಯುವ ವಿಷಯದಲ್ಲಿ ನಮಗೆ ದ್ವೇಷಭಾವನೆ ಇದೆ ಮತ್ತು ತಿರಸ್ಕಾರವಿದೆ ಎಂದು ಹೇಳುವುದು ಸರಿಯಲ್ಲ. ಆದರೆ ಹಿಂದಿಯನ್ನು ಐಚ್ಛಿಕವಾಗಿ ಹೇರಿದಾಗ ಮಾತ್ರ ಅದು ನ್ಯಾಯವೆ ಎಂಬ ಪ್ರಶ್ನೆ ಬರುತ್ತದೆ.

"ಹಿಂದಿಯೂ ಪರಭಾಷೆ"

"ಘಟನೆಗನುಸಾರವಾಗಿ, ಕೆಲಸ ಮತ್ತು ನೌಕರಿಗಳಿಗೆ ನೇಮಕದ ವಿಷಯದಲ್ಲಿ ಪ್ರತಿಯೊಬ್ಬನಿಗೂ ಸಮಾನ ಅವಕಾಶಗಳನ್ನು ಸಂಸ್ಕಾರ ಕೊಡಲು ಬದ್ಧವಿದೆ. ಆದರೆ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಈಗ ಹೊಸ ನಿಯಮಗಳಿಗನುಸಾರ ಈ ಸಮಾನ ಸಂದರ್ಭಗಳು ಸಿಗುತ್ತಿವೆಯೆ? ೧೯೬೫ರ ವರೆಗೆ ಹಿಂದಿ ಮತ್ತು ಇಂಗ್ಲೀಷುಗಳೆರಡೂ ಕೇಂದ್ರ ಸರಕಾರದ ಉಪಯೋಗದಲ್ಲಿರಬೇಕೆಂಬ, ಮತ್ತು ಆವಶ್ಯಕತೆ ಬಿದ್ದರೆ ಈ ಅವಧಿಯನ್ನು ಇನ್ನಷ್ಟು ವಿಸ್ತರಿಸಬಹುದೆಂಬ, ಸೂತ ಘಟನೆಯಲ್ಲಿರುವಾಗ, ಗೃಹ ಶಾಖೆಯು ಈಚೆಗೆ ಹೊರಡಿಸಿದ ಪತ್ರ ಘಟನೆಗೆ ಹೊಂದಿಕೊಳ್ಳುತ್ತಿಲ್ಲ...ಇಂಗ್ಲೀಷು ಭಾಷೆಯನ್ನು ನಿರಾಕರಿಸ ಬೇಕೆನ್ನುವವರು ಅದು ಪರಕೀಯರ ಭಾಷೆಯಾಗಿದೆ ಎನ್ನುತ್ತಾರೆ. ದಾಕ್ಷಿಣಾತ್ಯರಿಗೆ ಹಿಂದಿಯು ಇಂಗ್ಲೀಷಿನಂತೆ ಪರಕೀಯ ಭಾಷೆಯಾಗಿಲ್ಲ ಎಂಬುದು ನಂಬುವ ಮಾತಲ್ಲ. ಆದುದರಿಂದ ಸರಕಾರವು ಈ ಪ್ರಶ್ನೆಯನ್ನು ದೃಢವಾದ ತಳಹದಿಯ ಮೇಲೆ ಬಿಡಿಸುವುದು ಇಷ್ಟವಾಗಿದೆ."

ಪ್ರಧಾನ ಮಂತ್ರಿಗಳ ಅಭಿಪ್ರಾಯ

ಮದ್ರಾಸಿನ ಕೆಳಮನೆಯಲ್ಲಿ ಗವರ್ನರರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುತ್ತಾ ಸಭಾ ನಾಯಕ ಶ್ರೀ ಸುಬ್ರಹ್ಮಣ್ಯಂ ತಾನು ಪ್ರಧಾನಮಂತ್ರಿನೆಹರುಗಳ ಅಭಿಪ್ರಾಯವನ್ನೇಪ್ರಕಟಿಸುತ್ತಿದ್ದೇನೆ ಎಂದು ಕೆಳಗಿನಂತೆ ನುಡಿದರು—

"ಜನರಿಗಾಗಲೀ ಈ ಸಭೆಯ ಸದಸ್ಯರಿಗಾಗಲೀ ಭಾಷೆಯ ಕುರಿತು ಸರಕಾರದ ಧೋರಣೆ ಏನೆಂಬ ಬಗ್ಗೆ ತಪ್ಪು ಕಲ್ಪನೆ ಇರಬಾರದು. ಸರಕಾರವು 'ಇದರ' ಅಥವಾ 'ಅದರ' ವಿರುದ್ಧವಾಗಿಲ್ಲ. ಎಲ್ಲರಿಗೂ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಸಮಾನಾವಕಾಶವಿರಬೇಕು ಎಂಬುದೇ ಸರಕಾರದ ಉದ್ದೇಶ. ತಮ್ಮ ರಾಷ್ಟ್ರೀಯ ಜೀವನದಲ್ಲಿ ಹಿಂದಿಗಿರುವ ಸ್ಥಾನದ ಕುರಿತು ಉತ್ತರ ಭಾರತದಲ್ಲಿ ಬಹಳ ಗೊಂದಲ ನಡೆದಿದೆ. ನಾನು ಭಾರತದ ಪ್ರಧಾನ ಮಂತ್ರಿಗಳ ಅಧಿಕಾರ ವಾಣಿಯನ್ನು ಉಪಯೋಗಿಸಿ ಹಿಂದಿಯೇ ಭಾರತದ ರಾಷ್ಟ್ರ ಭಾಷೆಯಲ್ಲ ಎನ್ನುತ್ತೇನೆ; ಅದು ಭಾರತದ ಹದಿನಾಲ್ಕು ರಾಷ್ಟ್ರ ಭಾಷೆಗಳಲ್ಲಿ ಒಂದು ಮಾತ್ರ ಎನ್ನುತ್ತೇನೆ. ಘಟನೆಯ ಎಂಟನೇ ಅನುಬಂಧದಲ್ಲಿ ನಮೂದಿಸಲಾದ ಹದಿನಾಲ್ಕೂ ಭಾಷೆಗಳು ಭಾರತದ ರಾಷ್ಟ್ರ ಭಾಷೆಗಳಾಗಿವೆ. ಯಾವುದೇ ಭಾಷೆ ಇನ್ನೊಂದಕ್ಕಿಂತ ಉಚ್ಚ ಮಟ್ಟದ್ದಾಗಿಲ್ಲ. ಘಟನೆಯಲ್ಲಿ ಹೇಳಲಾದ ಪ್ರತಿಯೊಂದೂ ಭಾಷೆಯ ಅಭಿವೃದ್ಧಿಗೆ ಪ್ರಯತ್ನಿಸುವುದು ಕೇಂದ್ರ ಮತ್ತು ರಾಜ್ಯಸರಕಾರಗಳ ಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದೂ ಪ್ರದೇಶಕ್ಕೆ ತನ್ನ ವಲಯದ ಭಾಷೆಯನ್ನು ಬೆಳೆಸುವ ವಿಶೇಷವಾದ ಹೊಣೆಗಾರಿಕೆ ಇದೆ.

ಕೇಂದ್ರಕ್ಕೆ ಹಿಂದಿಯೇ ಆಶ್ರಯ

"ಹಿಂದಿಯ ಸ್ಥಾನವು ಘಟನೆಯಲ್ಲಿ ಹೇಳಿದಂತೆ ಕೇಂದ್ರ ಸರಕಾರದ ಆಡಳಿತ ಭಾಷೆ ಎಂದಿಷ್ಟೇ ಆಗಿದೆಯಲ್ಲದೆ, ಅದಕ್ಕಿಂತ ಹೆಚ್ಚಲ್ಲ. ಈಗಿನ ಮಾದರಿಯ ಸರಕಾರವಿರುವಾಗ ಕೇಂದ್ರ ಸರಕಾರಕ್ಕೆ ತನ್ನ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಲು ಒಂದು ಭಾಷೆಯ ಆಶ್ರಯ ಅವಶ್ಯವಾಗಿದೆ. ಇಂಗ್ಲೀಷನ್ನು ಉಪಯೋಗಿಸಬಹುದೋ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ-ನಿಜಕ್ಕೂ ಅದು ಕಷ್ಟಸಾಧ್ಯ, ರಾಷ್ಟ್ರದ ಒಗ್ಗಟ್ಟು ಮತ್ತು ಐಕ್ಯದಲ್ಲಿ ವಿಶ್ವಾಸವಿರುವವರು ೧೪ ಕೋಟಿ ಭಾರತೀಯರಾಡುವ ಭಾಷೆಯಾದ ಹಿಂದಿಯನ್ನು ಕೇಂದ್ರಸರಕಾರ ಬಳಸಲಿ ಎಂದು ಹೇಳುತ್ತಾರೆ. ಆದರೆ, ಪ್ರಾದೇಶಿಕ ಭಾಷೆಗಳನ್ನು ಕೆಳಮಟ್ಟಕ್ಕೆ ಅವರು ಇಳಿಸುತ್ತಿದ್ದಾರೆಂದು ಇದರ ಮೇಲಿಂದ ಹೇಳುವುದು ಸಲ್ಲದು

ಕೇಂದ್ರದ ನೌಕರಿ ಪರೀಕ್ಷೆ

"ರಾಜ್ಯಘಟನೆಯು ಜಾರಿಗೆ ಬಂದ ಐದು ವರ್ಷಗಳ ಕೊನೆಗೆ ಹಿಂದಿಯನ್ನು ಕೇಂದ್ರದ ಆಡಳಿತ ಭಾಷೆಯಾಗಿ ಉಪಯೋಗಿಸುವ ಕುರಿತು ಸಲಹೆ ಮಾಡಲು ಒಂದು ಆಯೋಗವನ್ನು ನೇಮಿಸಬೇಕಾಗಿದೆ. ಈ ಆಯೋಗವು ಹಿಂದೀಯೇತರ ಪ್ರದೇಶಗಳಲ್ಲಿಯ ಕಷ್ಟಗಳನ್ನೂ ಗಣನೆಗೆ ತಂದುಕೊಳ್ಳಬೇಕಾಗಿದೆ. ಕೇಂದ್ರ ಸರಕಾದ ಆಡಳಿತ ಮಂಡಳದ ಸ್ಥಾನಗಳಿಗೆ ನಿಂತ ಹುರಿಯಾಳುಗಳಲ್ಲಿ ಸಹ ಹಿಂದೀಯೇತರ ಪ್ರದೇಶಗಳವರು ಹಿಂದಿಯನ್ನು ಉಪಯೋಗಿಸುವುದು ಕಷ್ಟವೆಂದು ಭಾವಿಸುವಂತಾದರೆ, ಅದನ್ನು ಈ ಆಯೋಗವು ಗಮನಿಸಿ, ತಕ್ಕ ಸಿಫಾರಸುಗಳನ್ನು ಮಾಡಬೇಕಾಗಿದೆ ಇದಕ್ಕೆ ವಿರುದ್ಧ ನಡೆದರೆ ಆಯೋಗವು ಘಟನೆಯ ವಿರುದ್ಧ ಹೋದಂತಾಗುತ್ತದೆ. ದಕ್ಷಿಣದವರು ಹಿಂದಿಯನ್ನೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಳಸಬೇಕೆಂದು ಹೇಳುವದಾದರೆ, ಅವರು ಘಟನೆಯ ವಿಧಿಗಳನ್ನು ನೋಡಿಲ್ಲವೆಂದೇ ಅರ್ಥ. ಮದ್ರಾಸು ಸರಕಾರದವರು ಹಿಂದಿಯನ್ನು ಹಾಗೆ ಬಳಸುವ ಕುರಿತು ಬಲವಾಗಿ ನಿರೋಧಿಸಿದ್ದಾರೆ; ಹಿಂದಿಗೆ ವಿರುದ್ಧವಾಗಿದ್ದಾರೆಂದು ಸರಕಾರದವರು ವಿರೋಧಿಸಿರದೆ, ಹಿಂದೀಯೇತರ ಪ್ರದೇಶಗಳವರ ಹಿತಾಸಕ್ತಿಯ ಮೇಲೆ ದುಷ್ಪರಿಣಾಮ ಮಾಡಿದಂತಾಗುತ್ತದೆ ಎಂಬುದಕ್ಕಾಗಿಯೇ ಈ ವಿರೋಧವಿದೆ. ಸರಕಾರದ ಈ ನಿಲುಮೆಯನ್ನು ಕೇಂದ್ರವು ಪರಿಗಣಿಸಿರುತ್ತದೆ.

ಶಿಕ್ಷಣದ ಮಾಧ್ಯಮ

"ಪ್ರಾದೇಶಿಕ ಭಾಷೆಯ ಕುರಿತು ಸರಕಾರದ ಧೋರಣೆಯನ್ನು ವಿವರಿಸುವುದಾದರೆ, ಪ್ರಾದೇಶಿಕ ಭಾಷೆಯೇ ರಾಜ್ಯದ ಆಡಳಿತದ ಭಾಷೆಯೂ ಆಗಬೇಕೆಂದು ಸರಕಾರದ ಅಭಿಪ್ರಾಯ. ಆದರೆ ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಮದ್ರಾಸಿನಲ್ಲಿ ಮೂರು ಪ್ರಾದೇಶಿಕ ಭಾಷೆಗಳನ್ನು ರಾಜ್ಯದ ಆಡಳಿತ ಭಾಷೆಯಾಗಿ ಮಾಡಲು ಸಾಧ್ಯವಿಲ್ಲ ಆದುದರಿಂದ ರಾಜ್ಯಗಳ ಪುನರ್ಘಟನೆಯ ಆಯೋಗದ ವರದಿಯನ್ನು ಈ ವಿಷಯದಲ್ಲಿ ಕಾಯಬೇಕಾಗಿದೆ. ಆದರೆ ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಈ ತೊಡಕೇನೂ ಇಲ್ಲ. ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕೆಂದು ಸರಕಾರ ಎಂದೋ ನಿರ್ಧರಿಸಿದೆ. ಹಿಂದಿಯು ಕೇಂದ್ರ ಸರಕಾರದ ಆಡಳಿತ ಭಾಷೆ ಎಂಬುದೊಂದೇ ಕಾರಣದಿಂದ ಅದನ್ನು ಶಿಕ್ಷಣದ ಮಧ್ಯಮವಾಗಿ ಬಳಸುವ ಪ್ರಶ್ನೆಯಲ್ಲ. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಹಿಂದಿಯನ್ನು ಶಿಕ್ಷಣದ ಮಾಧ್ಯಮವಾಗಿ ಬಳಸುವುದು ನಿಜಕ್ಕೂ ಖಾನಿಕರ. ಹಿಂದಿಯಲ್ಲಿಯೇ ಶಿಕ್ಷಣವನ್ನು ಕೊಡುವ ವಿಶೇಷ ಮಾದರಿಯ ಶಿಕ್ಷಣ ಸಂಸ್ಥೆಗಳಿರಬಹುದು; ಆದರೆ ಸರಕಾರದ ಮಟ್ಟಿಗೆ, ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮ ಎಂಬುದು ದೃಢವಾದ ಹಾಗು ಆಗಿನಂತೆಗೆ ಘೋಷಿಸಲಾದ ನಿಶ್ಚಯ. ಅಖಿಲ ಭಾರತ ಸ್ವರೂಪದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದಿಯೊಂದೇಯಲ್ಲ, ಘಟನೆಯ ಎಂಟನೆಯ ಅನುಬಂಧದಲ್ಲಿ ಹೇಳಿದ ಹದಿನಾಲ್ಕೂ ಭಾಷೆಗಳು ಶಿಕ್ಷಣದ ಮಾಧ್ಯಮವಾಗಿರಬೇಕು. ಸಾಕಷ್ಟು ನೋಟೀಸನ್ನು ಕೊಟ್ಟರೆ, ಎಲ್ಲ ಪ್ರಾದೇಶಿಕ ಭಾಷೆಗಳನ್ನು ಈ ಪರೀಕ್ಷೆಯನ್ನು ನಡೆಸಲಾಗುವಂತೆ ಅಭಿವೃದ್ಧಿಗೊಳಿಸಬಹುದು. ಆಯ್ಕೆಯ ಎರಡು—ಮೂರು ವರ್ಷಗಳ ತರುವಾಯ ಹಿಂದೀಯೇತರ ಪ್ರದೇಶದ ಹುರಿಯಾಳುವಿಗೆ ಹಿಂದಿಯಲ್ಲಿ ಒಂದು ಸಣ್ಣ ಪರೀಕ್ಷೆ ಇರಬೇಕು ಹಾಗೆಯೇ ಹಿಂದಿ ಪ್ರದೇಶದ ಹುರಿಯಾಳು ಘಟನೆಯಲ್ಲಿ ಹೇಳಿದ ಬೇರೆ ೧೩ ಭಾಷೆಗಳಲ್ಲಿ ಯಾವುದಾದರೊಂದರಲ್ಲಿ ಪರೀಕ್ಷೆ ಕೊಡಬೇಕು. ಇದರಿಂದ ಭಾರತದಲ್ಲಿ ಎಲ್ಲಿ ಬೇಕಾದರೂ ಕೆಲಸ ಮಾಡಬಲ್ಲ ಯೋಗ್ಯತೆ ಪ್ರಾಪ್ತವಾಗುತ್ತದೆ. ಈ ನಮ್ಮ ಸೂಚನೆಯಲ್ಲಿ ಎಳ್ಳಷ್ಟೂ ಗೊಂದಲದ ಭಾವನೆಗೆ ಎಡೆ ಇರುವುದಿಲ್ಲ."

ಅಂತಿಮ ಮಾತು

ಮದ್ರಾಸಿನಲ್ಲಿ ತಮಿಳರ ಪ್ರಾಬಲ್ಯವಿದ್ದರೂ ಸಹ, ಮೇಲಿನೆಲ್ಲ ಸಂಗತಿಗಳು ಹಿಂದೀಯೇತರ ಪ್ರದೇಶಗಳವರು ಹೇಗೆ ಆಲೋಚಿಸುತ್ತಿದ್ದಾರೆ ಎಂಬುದನ್ನು ತೋರಿಸಿ ಕೊಡುವಂತೆ. ಹಿಂದಿಯನ್ನು ಕಲಿಯುವುದು ತಪ್ಪೆಂದು ಯಾರೂ ಹೇಳುವುದಿಲ್ಲ--ಕೇಂದ್ರದ ಆಡಳಿತ ಭಾಷೆ ಎಂಬುದರಿಂದ ಅದನ್ನು ಕಲಿಯಲು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಡಬೇಕೆಂಬುದಕ್ಕೂ ಯಾರದೂ ತಕರಾರಿಲ್ಲ. ಆದರೆ ರಾಷ್ಟ್ರ ಭಾಷೆ ನಮ್ಮದೆಂದು ಹಿಂದೀ ಪ್ರಿಯರು ಹೆಮ್ಮೆಪಡುವುದೂ ಪ್ರಾದೇಶಿಕ ಭಾಷೆಗಳನ್ನುಮೂಲೆಗೆ ತಳ್ಳಿ ಹಿಂದಿ ಸರ್ವತ್ರ ತಾನೇ ಸೆರೆಹಿಡುವುದೂ ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಹಿತಕರವೆನಿಸುವುದಿಲ್ಲ ಅಭಿಮಾನಶೂನ್ಯರಾಗಿ ಪ್ರಾದೇಶಿಕಭಾಷೆಗಳವರಿಲ್ಲ ಎಂಬುದು ಸ್ಪಷ್ಟ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಕನರ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಮದ್ರಾಸು ಮತ್ತಿನ್ನಿತರ ಪ್ರಾಂತೀಯ ಸರಕಾರಗಳು ತಾರೀಕು 16-8-1955ರಲ್ಲು ಎತ್ತುವ ಸಾಲಗಳ ಜೋಡುಗಳನ್ನು ಪಡಕೊಳ್ಳಲಿಚ್ಛಿಸುವ ಈ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ, ನಮೂದಿಸಿದ ಕ್ರಯದ ಸಾಲಿಯಾನ್ ಸೇಕಡಾ 90ರಷ್ಟು ಸೂಚಲಗಳನ್ನು ಸೇಕಡಾ 4½ಬಡ್ಡಿ ದರದಲ್ಲಿ ಮುಂಗಡವಾಗಿ ಸಾಲ ಕೊಡುವ ಸವಲತ್ತನ್ನು ನಿರ್ವಹಿಸಿದ್ದೇವೆ.

ವಿಶೇಷ ಮಾಹಿತಿಗೆ,

ನಮಗೆ ಸಮೀಪವಿರುವ ಈ ಬ್ಯಾಂಕಿನ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LIMITED

Estd:- 1906] [H. O. UDIPI (S.India).

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE POPULAR INSURANCE CO., LTD.

"POPULAR BUILDINGS" MANGALORE-1

ಕೀರ್ತಿಯ ಕೃಷ್ಣಪಿ

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಕಾಂಗ್ರೆಸ್ ಪಕ್ಷವು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸುವುದು:— ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯ ಸಭೆಯು 2—6—55ರಂದು ಜರಗಿ, ಕಾಂಗ್ರೆಸ್ ಪಕ್ಷವು ಬರುವ ಮಂಗಳೂರು ಮುನಿಸಿಪಲ್ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ನಿರ್ಣಯಿಸಿ ಆ ಬಗ್ಗೆ ಉಮೇದ್ವಾರರನ್ನು ಚುನಾಯಿಸಲು ಈ ಕೆಳಗಿನ ಮಹನೀಯರನ್ನೊಳಗೊಂಡ ಚುನಾವಣಾ ಸಮಿತಿಯನ್ನು ನೇಮಿಸಿತು.

ಜಿಲ್ಲಾ ಕಾಂಗ್ರೆಸ್‌ಕಮಿಟಿಯ ಅಧ್ಯಕ್ಷ ಮತ್ತು ಕಾರ್ಯವರ್ಶಿಗಳು, ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಮತ್ತು ಕಾರ್ಯವರ್ಶಿಗಳು, ಮತ್ತು ಶ್ರೀಗಳಾದ 1, ಬಿ. ಸೈಕುಂಠ ಬಾಳಿಗ, ಎಂ. ಎಲ್. ಎ 2, ಎಲ್. ಸಿ. ಪ್ರಭುಸ್, ಎಂ. ಎಲ್. ಎ 3, ಪಿ. ಬಂಗೇರ ಅಳ್ವ, 4, ಕೆ. ಆರ್. ಆಚಾರ್, 5, ಕೆ. ಕೆ. ಶೆಟ್ಟಿ, 6, ಎಸ್. ಕೆ. ತೀರ್ಥಾಳ ಮತ್ತು 7. ಎಸ್. ಎನ್. ಹೊಳ್ಳ, ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯವರ್ಶಿಗಳು ಈ ಸಮಿತಿಯ ಸಂಚಾಲಕರಾಗಿರುವರು.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಮಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಕಾರ್ಯಾಧ್ಯಕ್ಷರು ತಾ. 14 ರೊಳಗೆ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಗೆ ತಿಳಿಸಬೇಕೆಂದೂ, ಇದನ್ನು ಪರಿಶೀಲಿಸಿ ಚುನಾವಣೆ ಸ್ಪರ್ಧಿಸಲು ಕಾರ್ಯಕಾರಿ ಸಮಿತಿಯು ತಾ. 21—8—55ರಂದು ಸಭೆ ಸೇರಬೇಕಾಗಿದೂ ನಿರ್ಣಯಿಸಲಾಯಿತು.

ಇದೇ ತಾ. 12ರಂದು ಈ ಚುನಾವಣಾ ಸಮಿತಿಯ ಸಭೆ ಸೇರಿ ಶ್ರೀ ಕೆ. ಆರ್. ಆಚಾರ್ಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಪಿ. ಪಿ. ಸಿ ಪ್ರಭುಸ್ ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಗಿದೆ. ತಾ. [illegible] ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು. ಇನ್ನೂ ಕೆಲವು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಲಿರುವರು. ಇದೇ ತಾ. 21—8—55ರಂದು ಸಭೆ ಸೇರಬೇಕಾಗಿದೂ ನಿರ್ಣಯಿಸಲಾಯಿತು.

ತಿಳಿದ ಸಮಾಚಾರದಂತೆ ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ವತಿಯಿಂದ — ತಾ. 1—8—55ನೇ ಸಂಜೆ ಶ್ರೀ ಮಾಧವ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ಪಕ್ಷದ ಅಭ್ಯರ್ಥಿಗಳನ್ನು ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಎಲ್.

ಉಡುಪಿ ಜಿ. ಮು. ಕೋರ್ಟಿನಲ್ಲಿ—

ಕ್ರಿ. ಸಂಖ್ಯೆ 216/1955

ಉಡುಪಿ ಶ್ರೀ ಶೀರೂರು ಮಠದ ಶ್ರೀ ಶ್ರೀ ಶ್ರೀ ಪೇಜಾವರ ಮಠಾಧಿಪತಿಗಳು ಶ್ರೀ ಲಕ್ಷ್ಮೀವರ ತೀರ್ಥ ಸ್ವಾಮಿಯವರು—ವಾದಿಯು.

ಮತ್ತು

ಕೃಷ್ಣಯ್ಯ ಶೆಟ್ಟಿ ಸಂಗಪ್ಪ ಶೆಟ್ಟಿ ಅಳಿಯ, ಉಡುಪಿ ತಾಲೂಕು, ಕೊಡವೂರ್ ಗ್ರಾಮದ ಕೆಂಪುಮನೆ— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ,

ವಾದಿಗೆ ಸಂಬಂಧಿಸಿದಂತೆ ಪ್ರತಿವಾದಿಯು ಚಾಲಾಗಿದೆಗೆ ಅನುಭವಿಸಿದಂತೆ ಅಷ್ಟಗಳ ಸ್ವಾಧೀನವನ್ನೂ, ಬಹು ಸಂಗಡ ಗೇಣಿ ಬಡ್ಡಿ ಮತ್ತು ಪೆಟ್ಟುಬಳ್ಳಿಗೂ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿರುವ ಈ ದಾವೆಯು ತಾ. 22—8—1955ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಸದ್ರಿ ತಾ. 22—8—1955ನೇ ದಿನ್ಸು ಬೆಳಿಗ್ಗೆ ಹತ್ತು ಗಂಟೆಗೆ ಪ್ರತಿವಾದಿಯು ಸ್ವತಃ ಸ್ವ ವಕೀಲರ ಮುಕಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಿರಿಕ್ಕೆ ತಪ್ಪಿದ್ರೆ ಈ ವ್ಯಾಜ್ಯವನ್ನು ಅವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು ಎಂಬ ಸಂಗತಿ ತಿಳಿಸೋಣಾಗುತ್ತದೆ.

V. R. Kidiyur,
Advocate for Plaintiff
ಉಡುಪಿ ತಾ. 4—8—1955.

ಶೆಟ್ಟಿ ವಿವರಿಸಿದ ನಂತರ ಯೋಕೆಮಾನ್ಯ ಬಾಲ ಗಂಗಾಧರ ತಿಲಕರು ನೂಡಿದ ದೇಶಸೇವೆ ಹಾಗೂ ಅವರ ಜೀವನದ ಮುಖ್ಯ ಘಟನೆಯ ಕುರಿತು ಶ್ರೀಗಳಾದ ಕೆ. ಆರ್. ಆಚಾರ್; ಕುಮಾರಿ ಪ್ರೇಮಲತಾ ಹೆಗ್ಡೆ; ಎಂ. ಎಲ್. ಶೆಟ್ಟಿ ಮತ್ತು ಅಧ್ಯಕ್ಷರು ಭಾಷಣಮಿತ್ತರು.

ಸ್ವಾತಂತ್ರ್ಯ ದಿನೋತ್ಸವ ಕಾರ್ಯಕ್ರಮ — ತಾ. 15—8—1955ನೇ ಸೋಮವಾರ 1. ಬೆಳಿಗ್ಗೆ ಗಂಟೆ 8ಕ್ಕೆ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಕೇಂದ್ರ ಮೈದಾನದಲ್ಲಿ ಧ್ವಜವಂದನೆ. 2. ಅಪರಾಹ್ನ ಘಂಟೆ 3 ರಿಂದ 6ರ ತನಕ ಕೇಂದ್ರ ಮೈದಾನದಲ್ಲಿ ವಿನೋದ ಉದ್ಯಾನವೊಂದಿಗೆ. ಮಂಗಳೂರಿನ ಶಾಲಾ ಮುಖ್ಯ ವ್ಯಾಯಾಮ ಶಾಲೆಗಳ ವಿದ್ಯಾರ್ಥಿಗಳಿಂದ ಅಂಗಸಾಧನೆ, ಸುತ್ತು ಕತ್ತಿ ಪ್ರದರ್ಶನ, ಗಾಯನ ಮತ್ತು ಇತರ ವಿನೋದಾವಳಿಗಳು. 3. ಸಾಯಂಕಾಲ ಘಂಟೆ 6ಕ್ಕೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆ, ಬಹುಮಾನ ವಿತರಣೆ, ಭಾಷಣ, ಧನ್ಯವಾದ ಇತ್ಯಾದಿ.

ಅಂದೇ ಬೆಳಿಗ್ಗೆ ಗಂಟೆ 7—30ಕ್ಕೆ ಜಿಲ್ಲಾ ಕಲೆಕ್ಟರರು ಪೋಲೀಸಿನವರ ಗೌರವರಕ್ಷೆಸ್ವೀಕರಿಸುವರು. ಅಲ್ಲದೆ 1955ನೇ ಕಲೆಕ್ಟರರ ಧೀರತ್ವ ಪದಕಗಳನ್ನು 6ಜನ ಸಾಹಸಿಗಳಿಗೆ ವಿತರಣೆ ಮಾಡಲಾಗುವುದು.

ಸುಹಾಜನರೆಲ್ಲರೂ ಪಕ್ಷಪಂಗಡಗಳನ್ನು, ಜಾತಿ ಮತ ಭೇದಗಳನ್ನು ತೊರೆದು, ಈ ಉತ್ಸವದಲ್ಲಿ ಸರ್ವ ವಿಧದಿಂದ ಸಹಕರಿಸಬೇಕಾಗಿಯೂ, ಬಸದಿಸ್ಥಾನ, ಇಗರ್ಜಿ, ಸುನೀದಿ, ಮಂದಿರ, ಮಠಗಳಲ್ಲಿ ರಾಷ್ಟ್ರಧ್ವಜವನ್ನು ಏರಿಸಿ, ರಾಷ್ಟ್ರದ ಶ್ರೇಯಸ್ಸಿಗಾಗಿ ಪ್ರಾರ್ಥಿಸಬೇಕಾಗಿಯೂ ವಿನಂತಿಸಲಾಗಿದೆ.

ಸರ್ವಪಕ್ಷೀಯ ಸಮಿತಿ — ಇದೇ ತಾ. 5ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಗೋವಾವಿಮೋಚನೆಯ ಬಗ್ಗೆ ಜಿಲ್ಲೆಯ ಕಾರ್ಯಕ್ರಮ ರೂಪಿಸುವುದಕ್ಕಾಗಿ ಸಾರ್ವಜನಿಕ ಸಭೆಜರಗಿ ಸರ್ವಪಕ್ಷೀಯ ಸಮಿತಿಯೊಂದು ರಚಿಸಲ್ಪಟ್ಟಿತು. ಇತ್ತೀಚೆಗೆ ಪೋರ್ಚುಗೀಸರ ಗುಂಡಿಗೆ ಬಲಿಯಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸುವ, ಗೋವಾ ಸರಕಾರದ ದಬ್ಬಾಳಿಕೆಯನ್ನು ಖಂಡಿಸುವ, ಭಾರತ ಸರಕಾರವು ಯೋಗ್ಯಕಾರ್ಯಕ್ರಮ ಕೈಕೊಳ್ಳಬೇಕೆನ್ನುವ ನಿರ್ಣಯಗಳಾದುವು. ಈ ಸಮಿತಿಗೆ ಸಂಚಾಲಕರಾಗಿ ಡಾ! ಸಂಜೀವನಾಥ, ಶ್ರೀ ಬಿ. ವಿ. ಕಕ್ಕಿಲ್ಲಾಯ ಹಾಗೂ ಶ್ರೀ ಪ್ರಭಾಕರ ಘಾಟೆ ಇವರು ಆರಿಸಲ್ಪಟ್ಟರು. ತಾ. 8ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಎಂ. ಸಿ. ಅಹಮ್ಮದರ ಅಧ್ಯಕ್ಷತೆಯಲ್ಲಿ ಈ ಸಮಿತಿಯ ಸಭೆಜರಗಿ ಶ್ರೀ ಡಿ. ಮೋಹನ ರಾವ್, ಡಾ. ನಾಗಪ್ಪ ಆಳ್ವ, ಬಿ. ವಿ. ಕಕ್ಕಿಲ್ಲಾಯ, ಬಿ. ಯಂ. ಇದಿನಬ್ಬ ಮೊದಲಾದವರು ಮಾತನಾಡಿ ಪೋರ್ಚುಗೀಜರ ಕೃತ್ಯಗಳನ್ನು ಖಂಡಿಸಿದರು.

ಮಂಗಳೂರು ಪತ್ರಿಕೋದ್ಯೋಗಿ ಸಂಘದವರು ಇದೇ ತಾ. 2ರಲ್ಲಿ ಮಂಗಳೂರಿಗೆ ಬಂದಿದ್ದ ಬೆಂಗಳೂರಿನ ಚಿತ್ರಗುপ্ত ವಾರ ಪತ್ರಿಕೆಯ ಸಂಪಾದಕ ಶ್ರೀ ಎಂ. ಎಸ್. ಭಾರದ್ವಾಜ ಇವರಿಗೆ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಸತ್ಕಾರವರ್ಪಣಮಾಡಿದ್ದರು. ಶ್ರೀ ಬಿ. ಎಂ. ಇದಿನಬ್ಬನವರು ಅತಿಥಿಗಳ ಪರಿಚಯಮಾಡಿಕೊಟ್ಟರು. ಪತ್ರಿಕೋದ್ಯಮದ ಕುರಿತು ನಿಚಾರ ವಿನಿಮಯವಾದ ಮೇಲೆ ಕಾರ್ಯದರ್ಶಿ ಶ್ರೀ ಕೆ. ಎಸ್. ಉಪಾಧ್ಯರು ಧನ್ಯವಾದಗರ್ಪಣೆಸಿದರು.

ಕವಿ ರವೀಂದ್ರರ ದಿನಾಚರಣೆ— ಕವೀಂದ್ರ ರವೀಂದ್ರನಾಥ ಠಾಗೋರರ ದಿನಾಚರಣೆಯು ತಾ. 7ನೇ ಸಂಜೆ ಶ್ರೀ ಬೆನಗಲ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೇಂದ್ರ ಲೈಬ್ರೇರಿಯಲ್ಲಿ ಲೋಕಲ್ ಲೈಬ್ರೇರಿ ಅಥೋರಿಟಿಯ ಅಧ್ಯಕ್ಷ ಶ್ರೀ ಎಂ. ಎಸ್. ಏಕಾಂಬರ ರಾಯರ ಸ್ವಾಗತದೊಂದಿಗೆ ಆಚರಿಸಲ್ಪಟ್ಟಿತು. ಉಡುಪಿ ಎಂ. ಜಿ ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾವ್, ಶ್ರೀ ಪಿ. ಕೆ. ನಾರಾಯಣ ಇವರು ಠಾಗೋರರ ಜೀವನ ವಿಶ್ವಸಂದೇಶ ಅದರ್ಶಗಳನ್ನು ಸುಂದರ ಭಾಷಣಮಾಡಿದರು. ಕುಮಾರಿಯರಾದ ರಮಿಯಾ, ಅರುಣ ಮತ್ತು ಶ್ರೀ ಎ. ಎಂ. ಐಯಾಕರು ಕವೀಂದ್ರರ ಕೆಲವು ಕೃತಿಗಳನ್ನು ಓದಿದ ಮೇಲೆ ಅಧ್ಯಕ್ಷರ ಭಾಷಣವಾಗಿ ಶ್ರೀ ಯು. ಕಣ್ಣಪ್ಪನವರ ಧನ್ಯವಾದಗಳೊಂದಿಗೆ ಸಭಾಕೃತ್ಯವಾಯಿತು.

ಜಿಲ್ಲಾ ಕಲೆಕ್ಟರರ ಪತ್ರಿಕಾ ಪರಿಷತ್ತು — ತಾ. 8ನೇ ಸಂಜೆ ಕಲೆಕ್ಟರರ ಕೋರ್ಟು ಹಾಲಿನಲ್ಲಿ ಜರಗಿತು. ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರು ಜಿಲ್ಲಾ ಭೌಧ್ಯಭಿ ಯೋಜನೆಗಳಲ್ಲಿ ಈ ವರೆಗೆ ನಡೆದ ಕಾರ್ಯ, ಆದಕ್ಕೆ ದೊರೆತ ಜನತಾ ಬೆಂಬಲ ಮುಂದೆ ಆಗತಕ್ಕ ಕೆಲಸಾದಿಗಳನ್ನು ವಿವರಿಸಿದರು. ಈಗ ಕೆಲವೇ ತಿಂಗಳುಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಕೆಲಸಗಳಾದ ಪ್ರಯುಕ್ತ ಈ ಜಿಲ್ಲೆಗೆ ಇದೀಕ್ರಾಂತ್ಯದಲ್ಲಿಯೇ ಯೋಗ್ಯ ಸ್ಥಾನ ಸಿಕ್ಕಿದೆಯೆಂದು ಹೇಳಿದರು.

ಬೆಳ್ಳಾರೆ— ಕಳೆದ ತಾ. 30ರಲ್ಲಿ ಶ್ರೀ ದೇರಣ್ಣ ಶೆಟ್ಟರ ನೇತೃತ್ವದಲ್ಲಿ ಶ್ರೀ ರಾಮರಾವ್ ಬಿ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಕರ್ಣಾವಸಾನಸೆಂಟರ ಯಕ್ಷಗಾನ ಕೂಟವು ಮೃದಂಗ ವಿದ್ವಾನ್ ಬಾಬು ರೈಗಳ ಮೃದಂಗ ವಾದನದೊಂದಿಗೆ ಜರಗಿತು. ರಘುನಾಥ ಭಟ್ಟ ಮತ್ತು ಪಂಗಡಿಗರ ಸಂಗೀತ ಕಾರ್ಯಕ್ರಮವೂ ಏರ್ಪಟ್ಟಿತ್ತು. ಅಧ್ಯಕ್ಷರ ಭಾಷಣದ ತರುವಾಯ ಶ್ರೀ ಬಿ. ಕಿಟ್ಟಣ್ಣ ರೈಗಳು ಧನ್ಯವಾದಗಳನ್ನಿತ್ತರು.

ಪಟ್ಲ— ಹಿರಿಬೆಟ್ಟು ಗ್ರಾಮದ ಪಟ್ಲ ಲೋಕಮಾನ್ಯ ತಿಲಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. 6ರಂದು ತಿಲಕ ದಿನಾಚರಣೆಯು ಶ್ರೀ ಎಂ. ಎಸ್. ಅನಂತ ಕೃಷ್ಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮರ್ಜೆ ಗೋವಿಂದ ಶೆಟ್ಟಿರಿಂದ ಸ್ವಾಗತ ಭಾಷಣ, ಶ್ರೀ ಹಿರಿಬೆಟ್ಟು ಸದಾಶಿವ ಹೆಗ್ಡೇರಿಂದ ಸಂದೇಶ ವಾಚನ, ಮರ್ಜೆ ವಾಸುದೇವ ಭಟ್ಟರಿಂದ ಪರಿಚಯ ಭಾಷಣ ಆದಮೇಲೆ ಮುಖ್ಯ ಭಾಷಣ ಕರ್ತರಾದ ಶ್ರೀ ಕು. ಶಿ. ಹರಿದಾಸ ಭಟ್ಟರು "ಸ್ವರಾಜ್ಯ" ಎಂಬೀ ಕುರಿತು ಮಾತನಾಡುತ್ತ ಭಾರತ ಸ್ವಾತಂತ್ರ್ಯಹೋರಾಟ, ಇಂದಿನ ಪ್ರಜಾರಾಜ್ಯದ ರೂಪ ರೇಖೆಗಳನ್ನು ವಿವರಿಸಿ ತಿಲಕರ ರಾಜಕೀಯ ಚಾಣಾಕ್ಷತೆ, ಧೈರ್ಯ, ಉನ್ನಗಾಮಿ ದಾರಿ ಮೊದಲಾದುವನ್ನು ವಿವರಿಸಿದರು. ಸಭಿಕರ ಮತ್ತು ಅಧ್ಯಕ್ಷರ ಭಾಷಣ ಧನ್ಯವಾದ ಪ್ರದಾನಾಭಿನಯದೊಂದಿಗೆ ಸಭಾಕೃತ್ಯವಾಯಿತು. ಬೆಳಿಗ್ಗೆ ಶ್ರೀ ಹಿರಿಬೆಟ್ಟು ಸದಾಶಿವ ಹೆಗ್ಡೇರಿಂದ ಧ್ವಜಾರೋಹಣ ನಡೆದಿತ್ತು.

ಕಾರ್ಕಳ— ಇದೇ ತಾ. 3ರಲ್ಲಿ ಇಲ್ಲಿಯ ಮನೆಯೊಂದಕ್ಕೆ ಬೆಂಕಿ ಬಿದ್ದೊಡನೆ ಉಡುಪಿ ಫಯರ್ ಸರ್ವಿಸಿನವರಿಗೆ ಫೋನ್ ಕರೆ ಕೊಟ್ಟಂತೆ ಸಬ್ ಆಫೀಸರ್ ಶ್ರೀ ಇ. ಗೊನ್ಸಾಲ್ವೀಸ್ ಇವರ ನೇತೃತ್ವದಲ್ಲಿ ಫಯರ್ ಸರ್ವಿಸ್ ದಳದವರು ಬೆಂಕಿಬಿದ್ದ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದುವರಾಗಿಯೂ ಈ ಘಟನೆಯಿಂದ ಸುಮಾರು ಸಾವಿರ ರೂಪಾಯಿಯಷ್ಟು ನಷ್ಟ ಸಂಭವಿಸಿರುವುದಾಗಿಯೂ ತಿಳಿದುಬರುತ್ತದೆ.

ಉಡುಪಿ

ಠಾಗೋರ್ ದಿನಾಚರಣೆಯು ಎಂ. ಜಿ ಎಮ್. ಕಾಲೇಜಿನಲ್ಲಿ ಕಾಲೇಜ್ ಯೂನಿಯನ್ನಿನ ನೇತೃತ್ವದಲ್ಲಿ ಪ್ರಿನ್ಸಿಪಾಲ್ ಯಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ತಾ. 8ನೇ ಸಂಜೆ ಆಚರಿಸಲ್ಪಟ್ಟಿತು. ಶ್ರೀ ತ್ಯಾಗರಾಜರು ಠಾಗೋರರ ರಾಜಕೀಯ ತತ್ವಜ್ಞಾನ, ಶ್ರೀ. ಕೆ. ಬಿ. ರಾಮಕೃಷ್ಣರಾಯರು ಠಾಗೋರರ ಕವನ, ಶ್ರೀ ರಾಮಚಂದ್ರ ಮೂರ್ತಿಯವರು ಸಾಹಿತ್ಯ ಕೃತಿ, ಶ್ರೀ ಕು. ಶಿ. ಹರಿದಾಸ ಭಟ್ಟರು ಠಾಗೋರರ ಸಂಸ್ಕೃತಿ, ಶ್ರೀಮತಿ ತಿ ಎಸ್ ಜೋಸೆಫರು ಠಾಗೋರರೂ ಮಕ್ಕಳ ಕಾವ್ಯವೂ ಎಂಬ ಕುರಿತೂ, ಅಧ್ಯಕ್ಷ ಸ್ಥಾನದಿಂದ ಶ್ರೀ ಸುಂದರರಾಯರು ಠಾಗೋರರ ಮಾನವೀಯತೆಯ ಕುರಿತೂ ಮಾತನಾಡಿದರು.

ಶ್ರೀ ಯು. ಯೆಸ್. ನಾಯಕರಿಗೆ ಸತ್ಕಾರ:— ಹನುಮಾನ್ ಮೋಟಾರ್ ಕಂಪೆನಿಯ ಮೆನೇಜಿಂಗ್ ಡ್ಯಾರೆಕ್ಟರರೂ ಸರ್ವಪಕ್ಷೀಯ ಗೋವಾ ವಿಮೋಚನಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಯು. ಯೆಸ್. ನಾಯಕರು ಗೋವಾಕ್ಕೆ ಸತ್ಯಾಗ್ರಹಿಗಳ ಮುಖಂಡರಾಗಿ ಹೋಗಲಿದ್ದ ಪ್ರಯುಕ್ತ ಅವರಿಗೆ ಅ ಕಂಪೆನಿಯ ಡ್ಯಾರೆಕ್ಟರರೂ ಕೆಲಸಗಾರರೂ ತಾ. 5ರಂದು ಸತ್ಕಾರ ಕೂಟವನ್ನೇರ್ಪಡಿಸಿ ಮಾನಪತ್ರವನ್ನರ್ಪಿಸಿ ಬೀಳ್ಕೊಟ್ಟರು. ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೇರು ಸಭಾಧ್ಯಕ್ಷರಾಗಿದ್ದರು. ಶ್ರೀ ಬಿ. ರಂಗನಾಥ ಹೆಗ್ಡೆಯವರು ಶ್ರೀ ನಾಯಕರು ಸಲ್ಲಿಸಿದ ದೇಶ ಸೇವೆ ಕಂಪೆನಿಯ ಕಲ್ಯಾಣ ಮೊದಲಾದುವನ್ನು ವಿವರಿಸುವ ವಿನ್ನವತ್ತಳೆಯನ್ನು ಓದಿ ಅರ್ಪಿಸಿದರು. ಕಂಪೆನಿಯ ಕೆಲಸಗಾರರ ಕಡೆಯಿಂದ ಶ್ರೀ ಎಂ. ಆರ್. ಭಟ್ಟರೂ ಶ್ರೀ ಕೃಷ್ಣಪ್ಪನವರೂ ಶ್ರೀ ನಾಯಕರ ದಕ್ಷತೆಯನ್ನು ಕೊಂಡಾಡಿದರು. ಶ್ರೀ ನಾಯಕರು ಆಭಾರ ಸೂಚಿಸಿ ಗೋವಾ ಸಮಸ್ಯೆಯನ್ನು ವಿವರಿಸಿದರಲ್ಲದೆ ಕಂಪೆನಿಯ ಅಭಿವೃದ್ಧಿಯನ್ನು ಕೋರಿ ಮಾತನಾಡಿದರು.

ಅಧ್ಯಕ್ಷರು ಶ್ರೀ ನಾಯಕರಿಗೆ ಜಯ ಕೋರಿದರು. ಶ್ರೀ ಯು. ವಾಸುದೇವ ಪೈಗಳು ಧನ್ಯವಾದವಿತ್ತರು.

ಉಡುಪಿ ಗೋವಾ ಸತ್ಯಾಗ್ರಹಿಗಳಿಗೆ ವಿದಾಯ— ಇದೇ ತಾ. 4ರಲ್ಲಿ ರಥಬೀದಿಯಲ್ಲಿ ಶ್ರೀ ಅಥವಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀ ಯು. ಎಸ್. ನಾಯಕರ ನಾಯಕತ್ವದಲ್ಲಿ ಗೋವಾಕ್ಕೆ, ತಾ. 15ರ ಚಳವಳದಲ್ಲಿ ಭಾಗವಹಿಸಲು ಹೊರಟ 12 ಮಂದಿ ಸತ್ಯಾಗ್ರಹಿಗಳಿಗೆ ವಿದಾಯ ಸತ್ಕಾರವನ್ನೀಯಲಾಯಿತು. ಶ್ರೀ ಬಿ. ಯಸ್. ಲೂವಿಸರು ಸ್ವಾಗತ ಭಾಷಣ ಮಾಡಿದ ಮೇಲೆ ಶ್ರೀಗಳಾದ ಎ. ಜಿ. ಅಳ್ವ, ತಂಗಪ್ಪ ನಾಯರ್, ಎಸ್. ಪದ್ಮನಾಭ ಶೆಟ್ಟಿ, ಮೊದಲಾದವರು ಗೋವಾ ಚಳವಳದ ಕುರಿತೂ, ಸತ್ಯಾಗ್ರಹಿಗಳ ತತ್ವ ದೀಕ್ಷೆಗಳ ಕುರಿತೂ ಮಾತನಾಡಿದರು. ಶ್ರೀ ಯು. ಎಸ್. ನಾಯಕರೂ, ಶ್ರೀ ದಾಸ ಸೇರಿಗಾರರೂ ಸತ್ಯಾಗ್ರಹಿಗಳ ಕಡೆಯಿಂದ ಮಾತಾಡಿ ಕೃತಜ್ಞತೆಯನ್ನರ್ಪಿಸಿದರು. ಅಧ್ಯಕ್ಷರು ಸತ್ಯಾಗ್ರಹಿಗಳಿಗೆ ಆಶೀರ್ವಾದಮಿತ್ತ ಮೇಲೆ ಶ್ರೀ ಸೀನನಾಯ್ಕರು ಧನ್ಯವಾದ ಸಲ್ಲಿಸಿದರು.

ಮರುದಿನ ಸಂಜೆ ಸತ್ಯಾಗ್ರಹಿಗಳು ಶ್ರೀಕೃಷ್ಣ ಮಠದಿಂದ, ಪರ್ಯಾಯ ಮತ್ತು ಅಥವಾರು ಮಠದ ಶ್ರೀ ಪಾದಂಗಳವರಿಂದ ಫಲ ಮಂತ್ರಾಕ್ಷತೆ ಪಡೆದು ಪ್ರಚಂಡ ಜನಸ್ತೋಮದ ಮಧ್ಯ ಮೆರವಣಿಗೆಯಿಂದ ವಿದಾಯ ಪಡೆದು ಬಿಲ್ಲೆಯ ಗಡಿಯ ತನಕ ಕಾಲ್ನಡೆಯಿಂದಲೇ ಗೋವಕ್ಕೆ ಹೊರಟು ಹೋದರು. ಭಧ್ರಗಿರಿ, ಬ್ರಹ್ಮಾವರ, ಮೊದಲಾದ ಕಡೆಗಳಲ್ಲಿ ಸತ್ಯಾಗ್ರಹಿಗಳು ಸಂಭ್ರಮದ ಸ್ವಾಗತಪಡೆದು ಮುಂದುವರಿದರು. ಅಲ್ಲಲ್ಲಿ ಸಭೆ ಭಾಷಣಗಳೂ ಜರಗಿದವು.

ಎಂ. ಜಿ. ಯಂ. ಕಾಲೇಜಿನ— ವಿಜ್ಞಾನ ಸಂಘದ ಉದ್ಘಾಟನೆಯು ತಾ. 6ರಂದು ಡಾ. ಪಿ. ಜಿ. ಗೊಲ್ಲಕೇರಿಯವರಿಂದ ಪ್ರಿನ್ಸಿಪಾಲ್ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಸಂಘದ ಉಪಾಧ್ಯಕ್ಷ ಶ್ರೀ ಕೆ. ರಾಮಮಾಸರು ಸ್ವಾಗತ ನುಡಿಗಳನ್ನಾಡಿದ ಮೇಲೆ ವಿಜ್ಞಾನಿಗಳು ಸತ್ಯಶೋಧಕರೆಂದೂ ಮತ ಧರ್ಮಗಳಿಗೂ ಜ್ಞಾನಕ್ಕೂ ಭೇದವಿಲ್ಲವೆಂದೂ ಮುಂತಾಗಿ ಗೊಲ್ಲಕೇರಿಯವರು ಹೇಳಿದರು. ಕಾರ್ಯದರ್ಶಿ ಶ್ರೀ ಶ್ರೀಶ ಆಚಾರ್ಯರು ಆಭಾರ ಸೂಚಿಸಿದರು.

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ಪುಸ್ತಕಗಳ ಕೆಟಲಾಗಿಗೆ ಒರೆಯಿರಿ.

ನವಭಾರತ ಪುಸ್ತಕ ಭಂಡಾರ ಉಡ್ಪಿ.

ಯೂ ಅದೇ ಆಗಬೇಕೆಂದು ಸೂಚಿಸಲಾಗದು. ಒಂದಕ್ಕಿಂತ ಹೆಚ್ಚು ಭಾಷೆಯನ್ನಾಡುವ ಮದ್ರಾಸಿನಲ್ಲಿ ಸರಕೇಯರು ಈ ಭಾಷೆಯಪ್ರಶ್ನೆಯನ್ನು ಹೇಗೆ ಬಿಡಿಸಿರುವರೆಂದುನಾವು ನೋಡಬೇಕು-ಈ ದೇಶದಲ್ಲಿ ಆಡಳಿತಗಾರರಾಗಿ ಬಂದ ಆಂಗ್ಲೇಯರು ಸಹ ಪ್ರಾದೇಶಿಕಭಾಷೆಗಳಲ್ಲಿ ಪರೀಕ್ಷೆಯೊಂದನ್ನು ಕೊಡಬೇಕೆಂಬ ನಿಯಮವಿತ್ತು. ಹಿಂದಿಯನ್ನು ಕಲಿಯಲು ಎಲ್ಲ ಸಂದರ್ಭಗಳನ್ನುಒದಗಿಸಿಕೊಡಬೇಕೆಂಬುದು ನಿಜ. ಮದ್ರಾಸು ವಿಶ್ವವಿದ್ಯಾಲಯದ ಮಟ್ಟಿಗೆ ೫೦—೬೦ ಕಾಲೇಜುಗಳಲ್ಲಿ ಹಿಂದಿಯನ್ನು ಐಚ್ಛಿಕ ವಿಷಯವಾಗಿ ಕಲಿಸಲಾಗುತ್ತದೆ. ಇಂಟರ್ ಮೀಡಿಯೆಟ್ ಮತ್ತು ಬಿ ಎ. ಕ್ಲಾಸುಗಳಲ್ಲಿಯಷ್ಟೇಯಲ್ಲ — ಅದಕ್ಕೂ ಮೇಲಿನ ಪರೀಕ್ಷೆಗಳಲ್ಲಿ ಹಿಂದಿಗೆ ಪ್ರೋತ್ಸಾಹ ಕೊಡಲಾಗುತ್ತದೆ. ಆದುದರಿಂದ ಹಿಂದಿ ಭಾಷೆಯನ್ನು ಕಲಿಯುವ ವಿಷಯದಲ್ಲಿ ನಮಗೆ ದ್ವೇಷಭಾವನೆ ಇದೆ ಮತ್ತು ತಿರಸ್ಕಾರವಿದೆ ಎಂದು ಹೇಳುವುದು ಸರಿಯಲ್ಲ. ಆದರೆ ಹಿಂದಿಯನ್ನು ಒತ್ತಾಯವಾಗಿ ಹೇರಿದಾಗ ಮಾತ್ರ ಅದು ನ್ಯಾಯವೆ ಎಂಬ ಪ್ರಶ್ನೆ ಬರುತ್ತದೆ.

"ಹಿಂದಿಯೂ ಪರಭಾಷೆ"

"ಘಟನೆಗನುಸಾರವಾಗಿ ಕೆಲಸ ಮತ್ತು ನೌಕರಿಗಳಿಗೆ ನೇಮಕದ ವಿಷಯದಲ್ಲಿ ಪ್ರತಿಯೊಬ್ಬನಿಗೂ ಸಮಾನ ಅವಕಾಶಗಳನ್ನು ಸಂಕಾರ ಕೊಡಲು ಬದ್ಧವಿದೆ. ಆದರೆ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಈಗ ಹೊಸ ನಿಯಮಗಳಿಗನುಸಾರ ಈ ಸಮಾನ ಸಂದರ್ಭಗಳು ಸಿಗುತ್ತಿವೆಯೆ? ೧೯೬೫ರ ವರೆಗೆ ಹಿಂದಿ ಮತ್ತು ಇಂಗ್ಲೀಷುಗಳೆರಡೂ ಕೇಂದ್ರ ಸರಕಾರದ ಉಪಯೋಗದಲ್ಲಿರಬೇಕೆಂಬ, ಮತ್ತು ಆವಶ್ಯಕತೆ ಬಿದ್ದರೆ ಈ ಅವಧಿಯನ್ನು ಇನ್ನಷ್ಟು ವಿಸ್ತರಿಸಬಹುದೆಂಬ, ಸೂತ್ರ ಘಟನೆಯಲ್ಲಿರುವಾಗ, ಗೃಹ ಶಾಖೆಯು ಈಚೆಗೆ ಹೊರಡಿಸಿದ ಪತ್ರ ಘಟನೆಗೆ ಹೊಂದಿಕೊಳ್ಳುತ್ತಿಲ್ಲ...ಇಂಗ್ಲೀಷು ಭಾಷೆಯನ್ನು ನಿರಾಕರಿಸ ಬೇಕೆನ್ನುವವರು ಅದು ಪರಕೇಯರ ಭಾಷೆಯಾಗಿದೆ ಎನ್ನುತ್ತಾರೆ. ದಾಕ್ಷಿಣಾತ್ಯರಿಗೆ ಹಿಂದಿಯು ಇಂಗ್ಲೀಷಿನಂತೆ ಪರಕೇಯ ಭಾಷೆಯಾಗಿಲ್ಲ ಎಂಬುದು ನಂಬುವ ಮಾತಲ್ಲ. ಆದುದರಿಂದ ಸರಕಾರವು ಈ ಪ್ರಶ್ನೆಯನ್ನು ದೃಢವಾದ ತಳಹದಿಯ ಮೇಲೆ ಬಿಡಿಸುವುದು ಇಷ್ಟವಾಗಿದೆ."

ಪ್ರಧಾನ ಮಂತ್ರಿಗಳ ಅಭಿಪ್ರಾಯ

ಮದ್ರಾಸಿನ ಕೆಳಮನೆಯಲ್ಲಿ ಗವರ್ನರರ ಭಾಷಣದ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುತ್ತಾ ಸಭಾ ನಾಯಕ ಶ್ರೀ ಸುಬ್ರಹ್ಮಣ್ಯಂ ತಾನು ಪ್ರಧಾನಮಂತ್ರಿ ನೆಹರುಗಳ ಅಭಿಪ್ರಾಯವನ್ನೇ ಪ್ರಕಟಿಸುತ್ತಿದ್ದೇನೆ ಎಂದು ಕೆಳಗಿನಂತೆ ನುಡಿದರು—

"ಜನರಿಗಾಗಲೀ ಈ ಸಭೆಯ ಸದಸ್ಯರಿಗಾಗಲೀ ಭಾಷೆಯ ಕುರಿತು ಸರಕಾರದ ಧೋರಣೆ ಏನೆಂಬ ಬಗ್ಗೆ ತಪ್ಪು ಕಲ್ಪನೆ ಇರಬಾರದು. ಸರಕಾರವು 'ಇದರ' ಅಥವಾ 'ಅದರ' ವಿರುದ್ಧವಾಗಿಲ್ಲ. ಎಲ್ಲರಿಗೂ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಲು ಸಮಾನಾವಕಾಶವಿರಬೇಕು ಎಂಬುದೇ ಸರಕಾರದ ಉದ್ದೇಶ. ತಮ್ಮ ರಾಷ್ಟ್ರೀಯ ಜೀವನದಲ್ಲಿ ಹಿಂದಿಗಿರುವ ಸ್ಥಾನದ ಕುರಿತು ಉತ್ತರ ಭಾರತದಲ್ಲಿ ಬಹಳ ಗೊಂದಲ ನಡೆದಿದೆ. ನಾನು ಭಾರತದ ಪ್ರಧಾನ ಮಂತ್ರಿಗಳ ಅಧಿಕಾರ ವಾಣಿಯನ್ನು ಉಪಯೋಗಿಸಿ ಹಿಂದಿಯೇ ಭಾರತದ ರಾಷ್ಟ್ರ ಭಾಷೆಯಲ್ಲ ಎನ್ನುತ್ತೇನೆ; ಅದು ಭಾರತದ ಹದಿನಾಲ್ಕು ರಾಷ್ಟ್ರ ಭಾಷೆಗಳಲ್ಲಿ ಒಂದು ಮಾತ್ರ ಎನ್ನುತ್ತೇನೆ. ಘಟನೆಯ ಎಂಟನೇ ಅನುಬಂಧದಲ್ಲಿ ನಮೂದಿಸಲಾದ ಹದಿನಾಲ್ಕೂ ಭಾಷೆಗಳು ಭಾರತದ ರಾಷ್ಟ್ರ ಭಾಷೆಗಳಾಗಿವೆ. ಯಾವುದೇ ಭಾಷೆ ಇನ್ನೊಂದಕ್ಕಿಂತ ಉಚ್ಚ ಮಟ್ಟದ್ದಾಗಿಲ್ಲ. ಘಟನೆಯಲ್ಲಿ ಹೇಳಲಾದ ಪ್ರತಿಯೊಂದೂ ಭಾಷೆಯ ಅಭಿವೃದ್ಧಿಗೆ ಪ್ರಯತ್ನಿಸುವುದು ಕೇಂದ್ರ ಮತ್ತು ರಾಜ್ಯಸರಕಾರಗಳ ಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದೂ ಪ್ರದೇಶಕ್ಕೆ ತನ್ನ ವಲಯದ ಭಾಷೆಯನ್ನು ಬೆಳೆಸುವ ವಿಶೇಷವಾದ ಹೊಣೆಗಾರಿಕೆ ಇದೆ.

ಕೇಂದ್ರಕ್ಕೆ ಹಿಂದಿಯೇ ಆಶ್ರಯ

"ಹಿಂದಿಯ ಸ್ಥಾನವು ಘಟನೆಯಲ್ಲಿ ಹೇಳಿದಂತೆ ಕೇಂದ್ರ ಸರಕಾರದ ಆಡಳಿತ ಭಾಷೆ ಎಂದಿಷ್ಟೇ ಆಗಿದೆಯಲ್ಲದೆ, ಅದಕ್ಕಿಂತ ಹೆಚ್ಚಲ್ಲ. ಈಗಿನ ಮಾದರಿಯ ಸರಕಾರವಿರುವಾಗ ಕೇಂದ್ರ ಸರಕಾರಕ್ಕೆ ತನ್ನ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಲು ಒಂದು ಭಾಷೆಯ ಆಶ್ರಯ ಅವಶ್ಯವಾಗಿದೆ. ಇಂಗ್ಲೀಷನ್ನು ಉಪಯೋಗಿಸಬಹುದೋ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ-ನಿಜಕ್ಕೂ ಅದು ರಾಷ್ಟ್ರೀಯ, ರಾಷ್ಟ್ರದ ಒಗ್ಗಟ್ಟು ಮತ್ತು ಐಕ್ಯದಲ್ಲಿ ವಿಶ್ವಾಸವಿರುವವರು ೧೪ ಕೋಟಿ ಭಾರತೀಯರಾಡುವ ಭಾಷೆಯಾದ ಹಿಂದಿಯನ್ನು ಕೇಂದ್ರಸರಕಾರ ಬಳಸಲಿ ಎಂದು ಹೇಳುತ್ತಾರೆ. ಆದರೆ, ಪ್ರಾದೇಶಿಕ ಭಾಷೆಗಳನ್ನು ಕೆಳಮಟ್ಟಕ್ಕೆ ಅವರು ಇಳಿಸುತ್ತಿದ್ದಾರೆಂದು ಇದರ ಮೇಲಿಂದ ಹೇಳುವುದು ಸಲ್ಲದು

ಕೇಂದ್ರದ ನೌಕರಿ ಪರೀಕ್ಷೆ

"ರಾಜ್ಯಘಟನೆಯು ಜಾರಿಗೆ ಬಂದ ಐದು ವರ್ಷಗಳ ಕೊನೆಗೆ ಹಿಂದಿಯನ್ನು ಕೇಂದ್ರದ ಆಡಳಿತ ಭಾಷೆಯಾಗಿ ಉಪಯೋಗಿಸುವ ಕುರಿತು ಸಲಹೆ ಮಾಡಲು ಒಂದು ಆಯೋಗವನ್ನು ನೇಮಿಸಬೇಕಾಗಿದೆ; ಈ ಆಯೋಗವು ಹಿಂದೀಯೇತರ ಪ್ರದೇಶಗಳಲ್ಲಿಯ ಕಷ್ಟಗಳನ್ನೂ ಗಣನೆಗೆ ತಂದುಕೊಳ್ಳಬೇಕಾಗಿದೆ. ಕೇಂದ್ರ ಸರಕಾದ ಆಡಳಿತ ಮಂಡಳದ ಸ್ಥಾನಗಳಿಗೆ ನಿಂತ ಹುರಿಯಾಳುಗಳಲ್ಲಿ ಸಹ ಹಿಂದೀಯೇತರ ಪ್ರದೇಶಗಳವರು ; ಹಿಂದಿಯನ್ನು ಉಪಯೋಗಿಸುವುದು ಕಷ್ಟವೆಂದು ಭಾವಿಸುವಂತಾದರೆ, ಅದನ್ನು ಈ ಆಯೋಗವು ಗಮನಿಸಿ, ತಕ್ಕ ಶಿಫಾರಸುಗಳನ್ನು ಮಾಡಬೇಕಾಗಿದೆ ಇದಕ್ಕೆ ವಿರುದ್ಧ ನಡೆದರೆ ಆಯೋಗವು ಘಟನೆಯ ವಿರುದ್ಧ ಹೋದಂತಾಗುತ್ತದೆ. ಔತ್ತರೇಯರು ಹಿಂದಿಯನ್ನೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಳಸಬೇಕೆಂದು ಹೇಳುವದಾದರೆ, ಅವರು ಘಟನೆಯ ವಿಧಿಗಳನ್ನು ನೋಡಿಲ್ಲವೆಂದೇ ಅರ್ಥ. ಮದ್ರಾಸು ಸರಕಾರದವರು ಹಿಂದಿಯನ್ನು ಹಾಗೆ ಬಳಸುವ ಕುರಿತು ಬಲವಾಗಿ ವಿರೋಧಿಸಿದ್ದಾರೆ; ಹಿಂದಿಗೆ ವಿರುದ್ಧವಾಗಿದ್ದಾರೆಂದು ಸರಕಾರದವರು ವಿರೋಧಿಸಿರದೆ, ಹಿಂದೀಯೇತರ ಪ್ರದೇಶಗಳವರ ಹಿತಾಸಕ್ತಿಯ ಮೇಲೆ ದುಷ್ಪರಿಣಾಮ ಮಾಡಿದಂತಾಗುತ್ತದೆ ಎಂಬುದಕ್ಕಾಗಿಯೇ ಈ ವಿರೋಧವಿದೆ. ಸಂಕಾರದ ಈ ನಿಲುಮೆಯನ್ನು ಕೇಂದ್ರವು ಪರಿಗಣಿಸಿರುತ್ತದೆ.

ಶಿಕ್ಷಣದ ಮಾಧ್ಯಮ

"ಪ್ರಾದೇಶಿಕ ಭಾಷೆಯ ಕುರಿತು ಸರಕಾರದ ಧೋರಣೆಯನ್ನು ವಿವರಿಸುವುದಾದರೆ, ಪ್ರಾದೇಶಿಕ ಭಾಷೆಯೇ ರಾಜ್ಯದ ಆಡಳಿತದ ಭಾಷೆಯೂ ಆಗಬೇಕೆಂದು ಸರಕಾರದ ಅಭಿಪ್ರಾಯ. ಆದರೆ ಈಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಮದ್ರಾಸಿನಲ್ಲಿ ಮೂರು ಪ್ರಾದೇಶಿಕ ಭಾಷೆಗಳನ್ನು ರಾಜ್ಯದ ಆಡಳಿತ ಭಾಷೆಯಾಗಿ ಮಾಡಲು ಸಾಧ್ಯವಿಲ್ಲ. ಆದುದರಿಂದ ರಾಜ್ಯಗಳ ಪುನರ್ಘಟನೆಯ ಆಯೋಗದ ವರದಿಯನ್ನು ಈ ವಿಷಯದಲ್ಲಿ ಕಾಯಬೇಕಾಗಿದೆ. ಆದರೆ ಶಿಕ್ಷಣ ಮಾಧ್ಯಮದ ವಿಷಯದಲ್ಲಿ ಈ ತೊಡಕೇನೂ ಇಲ್ಲ. ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕೆಂದು ಸರಕಾರ ಎಂದೋ ನಿರ್ಧರಿಸಿದೆ. ಹಿಂದಿಯು ಕೇಂದ್ರ ಸರಕಾರದ ಆಡಳಿತ ಭಾಷೆ ಎಂಬುದೊಂದೇ ಕಾರಣದಿಂದ ಅದನ್ನು ಶಿಕ್ಷಣದ ಮಧ್ಯಮವಾಗಿ ಬಳಸುವ ಪ್ರಶ್ನೆಯಲ್ಲ. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಹಿಂದಿಯನ್ನು ಶಿಕ್ಷಣದ ಮಾಧ್ಯಮವಾಗಿ ಬಳಸುವುದು ನಿಜಕ್ಕೂ ಸಾಧಕರ. ಹಿಂದಿಯಲ್ಲಿಯೇ ಶಿಕ್ಷಣವನ್ನು ಕೊಡುವ ವಿಶೇಷ ಮಾದರಿಯ ಶಿಕ್ಷಣ ಸಂಸ್ಥೆಗಳಿರಬಹುದು; ಆದರೆ ಸರಕಾರದ ಮಟ್ಟಿಗೆ, ಪ್ರಾದೇಶಿಕ ಭಾಷೆಯೇ ಶಿಕ್ಷಣದ ಮಾಧ್ಯಮ ಎಂಬುದು ದೃಢವಾದ ಹಾಗು ಆಗಿಂದಾಗ್ಗೆ ಘೋಷಿಸಲಾದ ನಿಶ್ಚಯ. ಅಖಿಲ ಭಾರತ ಸ್ವರೂಪದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದಿಯೊಂದೇಯಲ್ಲ, ಘಟನೆಯ ಎಂಟನೆಯ ಅನುಬಂಧದಲ್ಲಿ ಹೇಳಿದ ಹದಿನಾಲ್ಕೂ ಭಾಷೆಗಳು ಶಿಕ್ಷಣದ ಮಾಧ್ಯಮವಾಗಿರಬೇಕು. ಸಾಕಷ್ಟು ನೋಟೀಸನ್ನು ಕೊಟ್ಟರೆ, ಎಲ್ಲ ಪ್ರಾದೇಶಿಕ ಭಾಷೆಗಳನ್ನು ಈ ಪರೀಕ್ಷೆಯನ್ನು ನಡೆಸಲಾಗುವಂತೆ ಅಭಿವೃದ್ಧಿಗೊಳಿಸಬಹುದು. ಆಯ್ಯೆಯ ಎರಡು—ಮೂರು ವರ್ಷಗಳ ತರುವಾಯ ಹಿಂದೀಯೇತರ ಪ್ರದೇಶದ ಹುರಿಯಾಳುವಿಗೆ ಹಿಂದಿಯಲ್ಲಿ ಒಂದು ಸಣ್ಣ ಪರೀಕ್ಷೆ ಇರಬೇಕು ಹಾಗೆಯೇ ಹಿಂದಿ ವಲಯದ ಹುರಿಯಾಳು ಘಟನೆಯಲ್ಲಿ ಹೇಳಿದ ಬೇರೆಗೂ ಭಾಷೆಗಳಲ್ಲಿ ಯಾವುದಾದರೊಂದರಲ್ಲಿ ಪರೀಕ್ಷೆ ಕೊಡಬೇಕು. ಇದರಿಂದ ಭಾರತದಲ್ಲಿ ಎಲ್ಲಿ ಬೇಕಾದರೂ ಕೆಲಸ ಮಾಡಬಲ್ಲ ಯೋಗ್ಯತೆ ಪ್ರಾಪ್ತವಾಗುತ್ತದೆ. ಈ ನಮ್ಮ ಸೂಚನೆಯಲ್ಲಿ ಎಳ್ಳಿನಷ್ಟೂ ಗೊಂದಲದ ಭಾವನೆಗೆ ಎಡೆ ಇರುವುದಿಲ್ಲ."

ಅಂತಿಮ ಮಾತು

ಮದ್ರಾಸಿನಲ್ಲಿ ತಮಿಳರ ಪ್ರಾಬಲ್ಯವಿದ್ದರೂ ಸಹ, ಮೇಲಿನೆಲ್ಲ ಸಂಗತಿಗಳು ಹಿಂದೀಯೇತರ ಪ್ರದೇಶಗಳವರು ಹೇಗೆ ಆಲೋಚಿಸುತ್ತಿದ್ದಾರೆ ಎಂಬುದನ್ನು ತೋರಿಸಿ ಕೊಡುವಂತಿವೆ. ಹಿಂದಿಯನ್ನು ಕಲಿಯುವುದು ತಪ್ಪೆಂದು ಯಾರೂ ಹೇಳುವುದಿಲ್ಲ—ಕೇಂದ್ರದ ಆಡಳಿತ ಭಾಷೆ ಎಂಬುದರಿಂದ ಅದನ್ನು ಕಲಿಯಲು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಡಬೇಕೆಂಬುದಕ್ಕೂ ಯಾರದೂ ತಕರಾರಿಲ್ಲ. ಆದರೆ ರಾಷ್ಟ್ರ ಭಾಷೆ ನಮ್ಮದೆಂದು ಹಿಂದೀ ಪ್ರಿಯರು ಹೆಮ್ಮೆಪಡುವುದೂ ಪ್ರಾದೇಶಿಕ ಭಾಷೆಗಳನ್ನುಮೂಲೆಗೆ ತಳ್ಳಿ ಹಿಂದಿ ಸರ್ವತ್ರ ತಾನೇ ಮೆರೆದಾಡುವುದೂ ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಹಿತಕರವೆನಿಸುವಷ್ಟು ಅಭಿಮಾನಶೂನ್ಯರಾಗಿ ಪ್ರಾದೇಶಿಕಭಾಷೆಗಳಪರಿಲ್ಲ ಎಂಬುದು ಸ್ಪಷ್ಟ.

ನವಯುಗ ಪ್ರೆಸ್, ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಮದ್ರಾಸು ಮತ್ತಿನ್ನಿತರ ಪ್ರಾಂತೀಯ ಸರಕಾರಗಳು ತಾರೀಕು 16-8-1955ರಲ್ಲು ಎತ್ತುವ ಸಾಲಗಳ ಬೋಂಡುಗಳನ್ನು ಪಡೆಕೊಳ್ಳಲಿಚ್ಛಿಸುವ ಈ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ, ನಮೂದಿಸಿದ ಕ್ರಯದ ಸಾಲಿಯಾನ್ ಸೇಕಡಾ 90ರಷ್ಟು ಮೊಬಲಗನ್ನು ಸೇಕಡಾ 4½ಬಡ್ಡಿ ದರದಲ್ಲಿ ಮುಂಗಡವಾಗಿ ಸಾಲ ಕೊಡುವ ಸವಲತ್ತನ್ನು ಏರ್ಪಡಿಸಿದ್ದೇವೆ.

ವಿಶೇಷ ಮಾಹಿತಿಗೆ,

ನಿಮಗೆ ಸಮೀಪವಿರುವ ಈ ಬ್ಯಾಂಕಿನ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LIMITED

Estd:- 1906] [H. O. UDIPI (S.India).

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE POPULAR INSURANCE CO., LTD.

"POPULAR BUILDINGS" MANGALORE-1

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉದಯ ೧೧-೮-೫೫	ಸಂಚಿಕೆ ೪೮

ಬಹುಮಾನದ ಒಗಟುಗಳು

ಚಕ್ರಬಂಧ ಸ್ಪರ್ಧೆ ಮತ್ತಿತರ ಬಗೆಯ ಬಹುಮಾನಗಳಿರುವ ಒಗಟುಗಳ ಸ್ಪರ್ಧೆಯನ್ನು "ನಿಯಂತ್ರಣ" ಕ್ಕೆ ಗುರಿಮಾಡಲು ಕೇಂದ್ರ ಸರಕಾರಕ್ಕೆ ಅಧಿಕಾರ ನೀಡಬೇಕೆಂಬ ಸೂಚನೆಗೆ ಮದ್ರಾಸಿನ ಉಭಯ ಶಾಸನಾಂಗಗಳೂ ಒಪ್ಪಿರುವುದು ಸಂತೋಷಕರವಾದ ವಿಷಯ. ಈ ವಿಷಯದಲ್ಲಿ ಸದಸ್ಯರ ಸರ್ವಾನುಮತದ ಬೆಂಬಲ ದೊರಕೆತೆಂದರೂ ತಪ್ಪಾಗಲಾರದು. ಎಲ್ಲೋ ಒಬ್ಬಿಬ್ಬರನ್ನು ಬಿಟ್ಟರೆ, ಹೆಚ್ಚಿನವರು ದೊಡ್ಡ ಮೊತ್ತದ ಬಹುಮಾನಗಳನ್ನು ಘೋಷಿಸಲಾದ ಆಕರ್ಷಕ ಒಗಟುಗಳ ಸ್ಪರ್ಧೆಗೆ ಅನಿಯಂತ್ರಿತವಾಗಿ ಹಾವಳಿ ನಡೆಸಲು ಬಿಡುವುದು ಎಷ್ಟಕ್ಕೂ ಇಷ್ಟವಲ್ಲ ಎಂದರು; ಕೆಲವು ಸದಸ್ಯರಂತೂ, ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಇವುಗಳ ಮೇಲೆ ಉಗ್ರ ನಿಯಂತ್ರಣವಿಟ್ಟರೆ ಸಾಲದು; ಸಂಪೂರ್ಣ ಬಹಿಷ್ಕಾರವನ್ನೆ ಹಾಕಬೇಕು ಎಂದರು. ಈ ಎರಡನೆಯ ಹೆಜ್ಜೆಯೇ ಅತ್ಯುಪಯುಕ್ತವಾದುದೆಂದು ನಮ್ಮ ಅಭಿಪ್ರಾಯ. ಯುದ್ಧದಲ್ಲಿ "ನಿಯಂತ್ರಿತ ಯುದ್ಧ" ಎಂಬುದು ಹೇಗಿಲ್ಲವೋ ಅದರಂತೆ ಹಾಸಿಕರವಾದ ಒಗಟುಗಳ ಸ್ಪರ್ಧೆಯಲ್ಲಿ ಬಹುಮಾನದ ಮೊತ್ತ ಹೆಚ್ಚೆಂದರೆ ಇಟ್ಟರಬೇಕೆಂದು ಗೊತ್ತುಪಡಿಸಿದ ಮಾತ್ರಕ್ಕೆ ಈ ಒಗಟುಗಳಲ್ಲಿ ಸಹಜವಾಗಿರುವ ದುಷ್ಟ ಹೇತುಗಳ ನಾಶವಾಗಲಾರದು. ಮದ್ಯಪಾನ ಪ್ರತಿಬಂಧದಂಥ ಸಾಮಾಜಿಕ ಮಹತ್ವದ ಶಾಸನ ಕ್ರಮವು ಯಶಸ್ವಿಯಾಗುವುದಕ್ಕೆ ಕುಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸುವುದೇ ಹೇಗೆ ಅಗತ್ಯವೆನಿಸಿದೆಯೋ ಒಗಟುಗಳಿಂದಾಗುವ ಅಪಾರ ಅನಾಹುತಗಳನ್ನು ತಡೆಗಟ್ಟುವುದಕ್ಕೆ ಒಗಟುಗಳ ಅಸ್ತಿತ್ವವನ್ನೆ ನಿರ್ಮೂಲಿಸುವುದು ಇಷ್ಟವಾಗಿದೆ. ನಾವು ಜೀವನದಲ್ಲಿ ವೈರಾಗ್ಯವನ್ನು ಹೊಂದಿ ಹೀಗೆ ಹೇಳುತ್ತಿಲ್ಲ—ಒಗಟುಗಳು ಈಗ ಮಾಡುತ್ತಿರುವ ಸಾಮಾಜಿಕ ಅಪರಾಧವನ್ನು ಗಮನಿಸಿ ಈ ನಿರ್ಣಯಕ್ಕೆ ಬಂದಿದ್ದೇವೆ. ಒಗಟುಗಳು ಸೌಮ್ಯ ಆನಂದವನ್ನು ನೀಡುತ್ತವೆ ಅವು ಬುದ್ಧಿವಂತಿಕೆಯ ಪರೀಕ್ಷೆಯನ್ನು ಮಾಡುತ್ತವೆ ಎಂದೆಲ್ಲ ಹೇಳುವವರಿದ್ದಾರೆ. ಆದರೆ ಇದನ್ನು ಯಾವ ವಿವೇಕಿಯೂ ಒಪ್ಪಲಾರನು. "—ಇಲ್ಲದೆ ದಿನಗಳೆಯುವುದು ಕಷ್ಟ" ಎಂಬ ಸಂಕೇತ ವಾಕ್ಯ (ಕ್ಲೂ) ವನ್ನು ಆಧಾರಕ್ಕೆ ತೆಗೆದುಕೊಂಡು "—" ಈ ಜಾಗಕ್ಕೆ ನಾವು ಎನ್ನು ಬೇಕಾದರೂ ಶಬ್ದಗಳನ್ನು ತುಂಬಿಸಬಹುದು: ಇದಕ್ಕೆ ಯಾವ ಬುದ್ಧಿವಂತಿಕೆಯೂ ಬೇಡ; ಆಲೋಚನೆಯೂ ಬೇಡ. ಹೀಗೆ ತುಂಬಿಸಿದ ಪ್ರತಿಯೊಂದೂ ಶಬ್ದವು ಅತ್ಯುತ್ತಮವಾದ ಆಯ್ಕೆಯಾಗಿದೆ ಎಂಬುದರ ಮೇಲೂ ಧಾರಾಳವಾಗಿ ವಾದಿಸುವುದು ಕಷ್ಟವಲ್ಲ. ಹೀಗಿರುವಾಗ ಒಗಟನ್ನು ಪ್ರಚಾರ ಮಾಡಿದ ಸಂಸ್ಥೆಯ ಮೂಲೆಯ ಕುರ್ಚಿಯೊಂದರಲ್ಲಿ ಕುಳಿತ ಮೂರ್ಖನ ಆಯ್ಕೆಯೇ ಅತ್ಯುತ್ತಮವಾದುದೆಂದೂ ಅದಕ್ಕೆ ಹೊಂದಿಕೊಳ್ಳುವಂತೆ ಹೀಗಟನ್ನು ಬಿಡಿಸಿದವರೇ ಧನ್ಯರೆಂದೂ ಮಾಡುವ ಈ ಪ್ರಚಾರದಲ್ಲಿ ಕೇವಲ ಮೋಸದ ಹೊರತು ಮತ್ತೇನೂ ಇಲ್ಲ. ಈಗಲಂತೂ ಶಬ್ದಗಳನ್ನು ಹುಡುಕಿ ತೆಗೆಯುವಷ್ಟೂ ಶ್ರಮವನ್ನು ವಹಿಸದೆ, ದೇವರ ಮೇಲೆ ಭಾರ ಹಾಕಿ, ಒಗಟನ್ನು ಪ್ರಚಾರ ಮಾಡಿದ ಮಹಾನುಭಾವನೇ ಎತ್ತಿ ತೋರಿಸಿದ ಎರಡು ಶಬ್ದಗಳಲ್ಲಿ ಒಂದು "ಕ್ರೇಸ್ಮ" ಎಂದು ಅಂಕಿಸಿದರೆ ಕೆಲಸವಾಗುವಷ್ಟು ಕೇಳು ಮಟ್ಟಕ್ಕೆ ಈ ಬಹುಮಾನ ಸ್ಪರ್ಧೆಗಳು ಇಳಿದಿರುತ್ತವೆ. ಇದರಿಂದ ಸುಶಿಕ್ಷಿತ ವರ್ಗದವರಷ್ಟೇ ಬುದ್ಧಿವಂತಿಕೆಯ ಈ ಅದೃಷ್ಟ ಪರೀಕ್ಷೆಗಿಳಿಯುವ ಪರಿಸ್ಥಿತಿಯು ಬದಲಾಗಿ ಮೂರ್ಖ ಶಿಖಾಮಣಿಗಳೂ ನಿರಕ್ಷರ ಕುಕ್ಷಿಗಳೂ ಬಹುಮಾನದಾಶೆಯಿಂದ ಪ್ರವೇಶ ಪತ್ರಕ್ಕೆ ಧಾರಾಳ ಹಣ ಸುರಿಯುವ ದಿನಗಳು ಬಂದಿವೆ. ನಾಲ್ಕಾಣೆಯಿಂದ ಎರಡು ರೂಪಾಯಿಗಳ ವರೆಗಿನ ಪ್ರವೇಶ ಧನವನ್ನಿತ್ತು, ಕೂಪನನ್ನು ದೈವ ಪ್ರೇರಣೆಯಾದಂತೆ ಭರ್ತಿಮಾಡಿ ಕಳುಹಿಸಿ ಕೊಟ್ಟು, ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚು ಮೊತ್ತದ ಪ್ರಥಮ ಬಹುಮಾನದ ಆಶೆಯನ್ನು ಕಟ್ಟಿಕೊಂಡು ಹಗಲು ಗನಸಿನಲ್ಲಿ ಲಕ್ಷಾಂತರ ಮಂದಿ ತೇಲುತ್ತಿರುವುದಕ್ಕೆ ಈ ಒಗಟುಗಳು ನೆಪವಾಗುತ್ತವೆ; ಇಷ್ಟೂ ಮಂದಿಯಿಂದ ಬಂದ ಹಣವು ಒಗಟನ್ನು ಪ್ರಚಾರಮಾಡುವ ಮಹಾನುಭಾವರು ಸಾರಿದ ಬಹುಮಾನದ ಮೊತ್ತಕ್ಕಿಂತ ಎಷ್ಟೋ ಪಟ್ಟು ಹೆಚ್ಚಾಗಿರುವುದಲ್ಲದೆ, ಅವರ ಎಲ್ಲ ಕರ್ಚುಗಳು ಕಳೆದು ಲಕ್ಷಾಂತರ ರೂಪಾಯಿಗಳ ಉಳಿತಾಯವಾಗುತ್ತದೆ. ಈ ಲಾಭದ ಮೇಲಿನ ಆಶೆಯಿಂದ "ಸುಲಭದಲ್ಲಿ ಭಾಗ್ಯ ಲಕ್ಷ್ಮಿಯ ಕೈ ಹಿಡಿಯಿರಿ" ಎಂದು ಜನರಿಗೆ ಉಪದೇಶಿಸುತ್ತಾ ಅವರೆಲ್ಲರನ್ನೂ ಮೋಸ ಮೊಸಿಸಿ ತಾವೇ ಕುಬೇರರಾಗುವ ಚಕ್ರಬಂಧ ಸ್ಪರ್ಧೆಗಳ ಪ್ರವರ್ತಕರ ಸಂಖ್ಯಾ ಪ್ರಮಾಣವೂ ಪ್ರತಿದಿನ ಹೆಚ್ಚಿಕೊಳ್ಳುತ್ತಿದೆ. ಜನರಲ್ಲಿ ಹೆಚ್ಚಿನವರು ಬಾರಿ ಬಾರಿಗೆ ನಿರಾಶೆಯನ್ನು ಹೊಂದಿದರೂ ಭಾಗ್ಯ ಚಕ್ರದ ಆಶೆಯನ್ನು ತೊರೆಯದಷ್ಟು ದುರ್ಬಲ ಮನೋಭಾವನೆಯನ್ನು ವ್ಯಕ್ತಪಡಿಸುತ್ತಿರುವುದು ನೈತಿಕ ದೃಷ್ಟಿಯಿಂದ ಎಷ್ಟಕ್ಕೂ ಸಲ್ಲದ ಈ ಸ್ಪರ್ಧೆಯ ವ್ಯಾಪಾರದಲ್ಲಿ ತೊಡಗಿದ ಮಹಾನುಭಾವರಿಗೆ ಪ್ರೋತ್ಸಾಹವಿತ್ತಂತೆಯೇ ಆಗಿದೆ. ಚಕ್ರಬಂಧ ಸ್ಪರ್ಧೆಯ ಪ್ರವರ್ತಕರು ತಾವು ಶ್ರೇಷ್ಠ ಉದ್ಯಮವನ್ನೇ ನಡೆಸುತ್ತಿದ್ದೇವೆ ಎಂದು ಡಂಗುರ ಸಾರಬಹುದು; ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿ, ತಮ್ಮ ಸಮರ್ಥನೆಗಾಗಿ ಪ್ರಯತ್ನವನ್ನೂ ಮಾಡಬಹುದು. ಆದರೆ ಸಾಮಾಜಿಕ ಅಪರಾಧಗಳ ಕುರಿತು ಸತರ್ಕರಾಗಿರುವ ವಿವೇಕಶೀಲರ ಅನುಮೋದನೆಯನ್ನು ಮಾತ್ರ ಅವರು ಪಡೆಯುವಂತಿಲ್ಲ. ಜನತೆಯು ಬಾರಿಬಾರಿಗೂ ಮೋಸ ಕೂಸದಲ್ಲಿ ಬೀಳುವುದನ್ನು ಕಲ್ಯಾಣ ರಾಷ್ಟ್ರವನ್ನು ಕಟ್ಟುವದೇ ಧ್ಯೇಯವಾಗಿರುವ ಶಾಸನಾಂಗ ಸುಮ್ಮನೆ ನೋಡಿ ಕುಳಿತಿರಲಾರದು. ಸರಕಾರಕ್ಕೆ ತನ್ನ ಪ್ರಜೆಗಳ ನೈತಿಕ ಶಕ್ತಿಯನ್ನು ಸಂವರ್ಧಿಸಿ ಅವರು ಉತ್ತಮ ಗುಣಶೀಲ ಸಂಪನ್ನರಾದ ನಾಗರಿಕರಾಗುವಂತೆ ಮಾಡುವ ಹೊಣೆಗಾರಿಕೆ ಇದೆ—ಸಾಮಾಜಿಕ ಸ್ವಾಸ್ಥ್ಯಕ್ಕೆ ಭಂಗವನ್ನು ತರುವ ಪ್ರತಿಯೊಂದೂ ಅಂಶವನ್ನು ದೂರಗೊಳಿಸಲು ಅದು ಬದ್ಧವಾಗಿದೆ. ಚಕ್ರಬಂಧ ಸ್ಪರ್ಧೆ ಮತ್ತಿತರ ಒಗಟುಗಳಿಂದ ಹಾನಿಗೊಳಗಾಗುವ ಜನರನ್ನು ಸರಿದಾರಿಗೆ ಹಚ್ಚಲಿಕ್ಕೆ ಪ್ರಯತ್ನಿಸುವುದು ಅದರ ಕರ್ತವ್ಯವಾಗಿದೆ. ಕೇಂದ್ರ ಸರಕಾರ ತರಬೇಕೆಂದಿರುವ ಶಾಸನ ಈ ಪ್ರಯತ್ನಗಳ ಮೊದಲನೇ ಹಂತವೆಂದಿಷ್ಟೇ ನಾವು ಭಾವಿಸುತ್ತೇವೆ. ಏಕೆಂದರೆ, ಕೇಂದ್ರ ಸರಕಾರ ಈ ಸ್ಪರ್ಧೆಗಳ ಮೇಲೆ ಬಹಿಷ್ಕಾರ ಹಾಕುವಷ್ಟು ಮುಂದೆ ಹೋಗಲು ಈಗ ಇಚ್ಛೆಪಡುತ್ತಿಲ್ಲ—ಬಹುಮಾನದ ಮೊತ್ತವನ್ನಷ್ಟೇ ನಿಗದಿ ಮಾಡುತ್ತದೆ. ಅದರ ಅಭಿಪ್ರಾಯ ಹತ್ತು ಸಾವಿರ ರೂಪಾಯಿಗಳ ಪರಮ ಮಿತಿಯನ್ನು ಹಾಕಿದರೆ ಸಾಕೆಂದಿದೆ. ಆದರೆ ಮದ್ರಾಸು ಸರಕಾರವು ಬಹಿಷ್ಕಾರ ಹಾಕುವಂತಿಲ್ಲವಾದರೆ ಬಹುಮಾನದ ಹಣವು ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿರಬಾರದೆಂದು ಹೇಳಿದೆಯಾಗಿಯೂ ಈ ಸೂಚನೆಗೆ ಕೇಂದ್ರ ಒಪ್ಪಿದೆಯೆಂದೂ ಮಂತ್ರಿಗಳ ಹೇಳಿಕೆಯಿಂದ ತಿಳಿದು ಬರುತ್ತದೆ. ಬಹುಮಾನದ ಮೊತ್ತವನ್ನು ಎಷ್ಟು ಕಡಿಮೆ ಇಡಲಾಯಿತೊ ಅಷ್ಟು ಮಟ್ಟಿಗೆ ಒಗಟುಗಳ ಆಕರ್ಷಣೆ ತಗ್ಗುತ್ತದೆ ಎಂಬ ಮಾತಿನಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿದೆ; ಆದರೆ ಜನರು ಮೋಸ ಹೋಗುವ ಅವಕಾಶ ಅನಂತರವೂ ದೂರವಾಗುವುದಿಲ್ಲವಲ್ಲ ಎಂಬುದೇ ನಮ್ಮ ವಿಷಾದ. ಮದ್ರಾಸು ಸರಕಾರದವರು ಸಂಪೂರ್ಣ ಬಹಿಷ್ಕಾರವೇ ಯೋಗ್ಯವೆಂದು ಮಾಡಿರುವ ಸೂಚನೆಯೇ ಅತ್ಯಂತ ಸಮಂಜಸವಾದದ್ದು — ಕೇಂದ್ರ ಸರಕಾರ ಇನ್ನಾದರೂ ಇವನ್ನು ಪರ್ಯಾಲೋಚಿಸಬೇಕು; ಸಂಸತ್ತಿನ ಸದಸ್ಯರು ಸಹ ನಿರ್ವಿಕಾರ ಬುದ್ಧಿಯಿಂದ ಈ ಸೂಚನೆಯನ್ನು ಪರಿಶೀಲಿಸಿ ಅದರ ಮಹತ್ವವನ್ನು ಕಂಡು, ಕೇಂದ್ರ ಸರಕಾರವು ಬಹಿಷ್ಕಾರವನ್ನೆ ಹಾಕುವಂತೆ ಒತ್ತಾಯಿಸಬೇಕು ಎಂದು ಕೇಳಿಕೊಳ್ಳುತ್ತೇವೆ. ಜುಗಾರಿಯಾಡುವ ಜನರ ಹುರುಪನ್ನೆ ಬಂಡವಾಳವಾಗಿ ಮಾಡಿಕೊಂಡು ಹೇರಳ ಲಾಭ ಸಂಪಾದಿಸುವ ಚಕ್ರಬಂಧ ಸ್ಪರ್ಧೆಗಳ ಪ್ರವರ್ತಕರ ಕೀಚ ಉದ್ದೇಶವನ್ನು ಬಹಿಷ್ಕಾರವೆಂಥ ಉಗ್ರ ಕ್ರಮದಿಂದಲೇ ವಿಫಲಗೊಳಿಸುವುದು ಸಾಧ್ಯ; ಹಾಗೆ ಮಾಡಿದರೆಯೇ ಅನಾವಶ್ಯಕವಾಗಿ ಹಾಳಾಗುವ ಹಣ, ಶಕ್ತಿ ಮತ್ತು ಸಮಯದ ಉಳಿತಾಯವಾದೀತು; ನಾಗರಿಕರ ನೈತಿಕ ನೆಲಗಟ್ಟು ಭದ್ರವಾದೀತು— ಎಂಬುದು ನಮ್ಮ ದೃಢವಾದ ಅಭಿಪ್ರಾಯ. ಚಕ್ರಬಂದ ಸ್ಪರ್ಧೆಯ ಹಣವೆಂದರೆ ಲಕ್ಷಾಂತರ ಜನರ ಭ್ರಮೆ ಮಾತ್ರ— ಎಂಬುದೂ ನೂರಕ್ಕೆ ನೂರರಷ್ಟು ನಿಜ.

"ಯುನೈಟೆಡ್ ಇಂಡಿಯ"ದ ಪ್ರಗತಿ

ಭಾರತದಲ್ಲಿ ಉತ್ತಮ ವ್ಯವಸ್ಥೆ ಮತ್ತು ದಕ್ಷ ಆಡಳಿತೆಗೆ ಹೆಸರಾಗಿರುವ ಜೀವವಿಮಾ ಕಂಪೆನಿಗಳಲ್ಲಿ ಮದ್ರಾಸಿನ ಯುನೈಟೆಡ್ ಇಂಡಿಯ ಅಶ್ಯೂರೆನ್ಸ್ ಕಂಪೆನಿ ಒಂದಾಗಿದೆ. ಅದು ಕಳೆದ ವರ್ಷ ಹೊಸ ವ್ಯವಹಾರದ ರೂಪದಲ್ಲಿ ರೂ. ೬೩೩೩೭೮೯ ಮೊತ್ತದ ೨೧೨೪ ಪ್ರಪೋಸಲುಗಳನ್ನು ಜನರಿಂದ ಪಡೆಯಿತು; ಮತ್ತು ರೂ. ೫೩೦೦೬೭೩ ಮೊತ್ತದ ೧೭೨೩೩ ಪಾಲಿಸಿಗಳನ್ನು ನೀಡಿತು. ವ್ಯವಹಾರದ ಈ ದಾಖಲೆಯು ಚೆನ್ನಾಗಿದೆ; ಆಡಳಿತದ ವಿವರಗಳೂ ತೃಪ್ತಿಯನ್ನುಕೊಡುತ್ತವೆ. ಪ್ರೀಮಿಯಂ ಆದಾಯಕ್ಕೆ ಅನುಗುಣವಾಗಿ ಹೆಚ್ಚಿದ ಪ್ರಮಾಣವು ೧೯೫೫ನೇ ವರ್ಷದಕ್ಕಿಂತ ಕಡಿಮೆಯಾಗಿ ೧೪. ೭೫% ಮಿಗೆ ಇಳಿದಿರುವುದು ಮಿತವ್ಯಯದ ದ್ಯೋತಕ. ಕಂಪೆನಿಯ ರೂ. ೮೭೭೧೪೮೫೫ ಮೊತ್ತದ ಜೀವವಿಮಾನಿಧಿ ಮತ್ತಿತರ ಆದಾಯದ ಬಾಬುಗಳನ್ನು ಯೋಗ್ಯ ಭದ್ರತೆಗಳಲ್ಲಿ ನಿಕ್ಷೇಪಿಸಲಾಗಿದೆ. ಸರಕಾರದ ಸಾಲಪತ್ರಗಳೇ ಮುಂತಾದುವುಗಳ ಪೇಟೆಯ ಬೆಲೆ ಈಗ ಮುಖ ಬೆಲೆಗಿಂತ ತಗ್ಗಿದ್ದರೂ ಕ್ಷೇಮನಿಧಿಯು ಸಾಕಷ್ಟಿರುವುದರಿಂದ ಇದಕ್ಕೆ ರಕ್ಷಣೆ ಸಿಕ್ಕಿರುತ್ತದೆ. ಕಂಪೆನಿಯು ಪಾಲುದಾರರಿಗೆ ನೂರು ರೂಪಾಯಿಯ ಪಾಲಿಗೆ ರೂ. ೫೨ ರಂತೆ ೧೯೫೪ರಲ್ಲಿಲಾಭಾಂಶವನ್ನು ಹಂಚಿದೆ. ಕಳೆದರೆಡು ವರ್ಷಗಳಿಗೆ (೧೯೫೩-೫೪) ಲಾಭಸಹಿತವಾಲಿಸಿದವರಿಗೆ ಅಜೀವ ವಿಮೆಯ ಸಂಗತಿಯಲ್ಲಿ ಪಾಲಿಸಿಯ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ ರೂ. ೧೭; ಮತ್ತು ಎಂಡೊಮೆಂಟ್ ವಿಮೆಯ ಸಂಗತಿಯಲ್ಲಿ ರೂ. ೧೫ ಹೀಗೆ ಬೋನಸ್ಸಿನ ವಿವರಣೆಮಾಡಿದೆ. ಇದಕ್ಕೆ ಆಧಾರವಾಗಿ ನಡಿಸಲಾದ ಕಂಪೆನಿಯ ೧೨ನೇ ವಿಮಾಗಣನೆಯು ಸಮಾಧಾನಕರವಾದ ಪರಿಣಾಮಗಳನ್ನು ವ್ಯಕ್ತಪಡಿಸಿದೆ. ಇದಕ್ಕೆ ಹಿಂದಿನ ವಿಮಾಗಣನೆಯ ಕಾಲದ ಮರಣಸಂಖ್ಯಾ ಪ್ರಮಾಣಕ್ಕಿಂತ ಈ ಸಲದ ಅನುಭವ ಕಡಿಮೆಯಾಗಿ ಕಂಡು ಬಂದಿತಲ್ಲದೆ, ಅಂದಾಜಿನ ೫೦. ೩% ಮಿಗೆ ಅದು ಇಳಿಯಿತು; ಹೆಚ್ಚಿದ ಪ್ರಮಾಣವು ಅಂದಾಜಿಗಿಂತ ಕಡಿಮೆಯೆಂದೇ ಕಂಡುಬಂತು. ಬಡ್ಡಿ ರೂಪದ ನಿಕ್ಕಿ ಆದಾಯ ೩೦ ೭% ಮಿಗೆ ಏರಿತು. ಆದುದರಿಂದ ಹಿಂದಿನ ಸಲದಂತೆ ೨೩% ದರವನ್ನು ಲೆಕ್ಕಕ್ಕೆ ಹಿಡಿಯುವ ಬದಲು ೩% ದಂತೆ ಬಡ್ಡಿಯನ್ನು ಗಣನೆಗೆ ತೆಗೆದುಕೊಂಡಿದ್ದರೂ ಸದ್ಯ ನಿಜವಾದ ಲಾಭವು ವಿಮಾಗಣನೆಯಲ್ಲಿ ವ್ಯಕ್ತವಾದುದಕ್ಕಿಂತಲೂ ಹೆಚ್ಚಿದೆಯೆಂದೂ ಇದು ಕಂಪೆನಿಯ ಭದ್ರತೆಯನ್ನು ಅಧಿಕ ಗೊಳಿಸುವುದಕ್ಕೆ ಮತ್ತು ಮುಂದಿನ ವಿಮಾಗಣನೆಗೆ ಸುರಕ್ಷಿತ ಅಸ್ತಿವಾರ ಹಾಕಿಕೊಡುವುದಕ್ಕೆ ಅವಕಾಶನೀಡುತ್ತದೆಂದೂ ತಿಳಿದುಬರುತ್ತದೆ. ಕಂಪೆನಿಯ ಈ ಪ್ರಗತಿಗಾಗಿ ಹರ್ಷವನ್ನು ಸೂಚಿಸುತ್ತಾ ಅದಕ್ಕೆ ಶುಭಾಶಯವನ್ನು ನಾವು ಅಭಿನಂದಿಸುತ್ತೇವೆ.

ನಿರೀಕ್ಷಿಸಿರಿ!

ಬರುವ ವಾರದ ನವಯುಗವು ವಾಡಿಕೆಯಂತೆ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆಯಾಗಿ

ಹೊರಡುವುದು.

೨೪ ಪುಟಗಳು .... ಎರಡಾಣೆ ಬೆಲೆ

(೦ನೇ ಪುಟದಿಂದ)

ನನ್ನು ಹೆಚ್ಚಿಸಬೇಕು;— ಇದು ಸಾಗರಿಕರ ಅಭಿಲಾಷೆಯಾಗಿದೆ. ಸಮಿತಿಯವರು ಇದಕ್ಕೆ ಸಂಬಂಧಿಸಿ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಅವುಗಳು ತೃಪ್ತಿಕರವಾಗಿವೆ—ಉದಾಹರಣೆಗೆ, ಎಂದ ಅರ್ಜಿಗಳನ್ನು ಜೋಪಾನವಾಗಿಡುವ ಕ್ರಮ, ಅಪ್ರಗಳು ಮುಟ್ಟಿದ ಬಗ್ಗೆ ಕೂಡಲೇ ಉತ್ತರ ಒರೆಯುವ ಅವಶ್ಯಕತೆ; ಮೇಲಧಿಕಾರಿಗಳು ಪ್ರತಿಯೊಂದೂ ಸಣ್ಣ ವಿಷಯಕ್ಕೆ ಗಮನ ಕೊಡಬೇಕಾದ ಇಂದಿನ ವಿಧಾನವನ್ನು ಪರಿಷ್ಕರಿಸಿ, ಅಷ್ಟು ಮಹತ್ವವಿಲ್ಲದ ವಿಷಯಗಳಲ್ಲಿ ತಹಸೀಲ್ದಾರ್, ರೆವಿನ್ಯೂ ಡಿವಿಜನಲ್ ಆಫೀಸರ್, ಪರ್ಸನಲ್ ಅಸಿಸ್ಟೆಂಟ್ ಟು ದಿ ಕಲೆಕ್ಟರ್ ಇವರೇ ಮುಂತಾದವರಿಗೆ ಹೆಚ್ಚಿನ ಅಧಿಕಾರ ನೀಡುವುದೇ ಮುಂತಾದ ತತ್ವಗಳನ್ನು ಮನ್ನಿಸಿ ವ್ಯವಹಾರ್ಯವಾದ ಸಿಫಾರಸುಗಳನ್ನು ಮುಂದಿಟ್ಟಿದೆ. ಅವುಗಳಿಗೆ ಮನ್ನಣೆ ದೊರಕಿದರೆ, ಇಂದಿನ ನೂರುಗಳೆಷ್ಟೋ ಕಡಿಮೆಯಾಗಬಹುದು.

ಸಮಿತಿಯು ಒಂದು ವಿಷಯದಲ್ಲಿ ಮಾತ್ರ ತೀವ್ರ ಅಸಂತೃಪ್ತಿಯನ್ನು ತೋರಿಸಿದೆ—ಅದರೆ ಈ ಅಸಮಾಧಾನಕ್ಕೆ ಸಿಕವಾದ ತಳಹದಿ ಇದೆ ಎಂದು ನಮಗೆನಿಸುವುದಿಲ್ಲ. ಕಾಲ ವಿಳಂಬದ ಕಾರಣಗಳನ್ನು ವಿವರಿಸುತ್ತಾ ಸಮಿತಿಯವರು ಕಾರಕೂನರ ಯೋಗ್ಯತೆಯ ಮೇಲೆ ಸಂಶಯ ದೃಷ್ಟಿಯನ್ನು ಬೀರಿದ್ದಾರೆ. ಎಸ್. ಎಸ್. ಎಲ್. ಸಿ. ತರಗತಿಯಷ್ಟು ಶಿಕ್ಷಣವನ್ನು ಪಡೆದವರ ಕೈಯಲ್ಲಿ ಆಡಳಿತ ಯಂತ್ರ ಸಿಕ್ಕಿ ಬಿದ್ದಿರುವುದೇ ಎಲ್ಲ ಕಾಲ ವಿಳಂಬ ಮತ್ತು ಲೋಪದೋಷಗಳಿಗೆ ಕಾರಣ ಎಂದವರು ಭಾವಿಸಿದಂತೆ ತೋರುತ್ತದೆ; ಕಾರಕೂನರ ಶೈಕ್ಷಣಿಕ ಯೋಗ್ಯತೆಯನ್ನು ಸಂಶಯಿಸಿರುವ ಸಮಿತಿಯ ಪ್ರಭೃತಿಗಳು ಹೆಚ್ಚಿನ ಸಂಬಳವನ್ನು ಕೊಟ್ಟರೆ, ಈ ಕಾರಕೂನರ ಕಾರ್ಯಕ್ಷಮತೆ ಅಧಿಕವಾಗುತ್ತದೆ ಎಂಬ ಅಭಿಪ್ರಾಯಕ್ಕೆ ಬಂದಿರುವುದು ಮಾತ್ರ ಆಶ್ಚರ್ಯಕರವಾಗಿದೆ. ಉತ್ತಮ ಶಿಕ್ಷಣವನ್ನು ಪಡೆದವರೆಲ್ಲ ಕೇಂದ್ರ ಸರಕಾರದ ಮತ್ತು ಖಾಸಗಿ ಸಂಸ್ಥೆಗಳ ನೌಕರಿಯಲ್ಲಿ ಸೇರಿಕೊಳ್ಳುತ್ತಾರೆಂದೂ ಅಲ್ಲಿ ಹೆಚ್ಚಿನ ಸಂಬಳ ಸಿಗುತ್ತಿರುವುದೇ ಇದಕ್ಕೆ ಕಾರಣವೆಂದೂ ಸಮಿತಿಯ ಅಭಿಪ್ರಾಯ. ಹಿಂದೆಯಾದರೆ ಸರಕಾರದ ನೌಕರಿಯಲ್ಲಿ ವಿರಾಮ ವೇತನ, ಪ್ರೊವಿಡೆಂಟ್ ಫಂಡ್ ಮುಂತಾದ ವಿಶೇಷ ಆಕರ್ಷಣೆಗಳಿದ್ದವು; ಈಗಲಾದರೆ ಕೂಲಿಕಾರ ಶಾಸನಗಳ ದೆಸೆಯಿಂದ ಖಾಸಗಿ ಸಂಸ್ಥೆಗಳಲ್ಲೂ ಈ ಬಗೆಯ ಸೌಲಭ್ಯ ಸಾಮಾನ್ಯವಾಗಿ ದೊರಕುತ್ತಿದೆ— ಆದುದರಿಂದ "ಎ-೧" ಮಾದರಿಯ ಆಡಳಿತ ಯಂತ್ರವಿರಬೇಕಾದ ಕಂದಾಯವಿಭಾಗದಲ್ಲಿ "ಸಿ-೩" ಮಾದರಿಯ ಕಾರಕೂನರೇ ತುಂಬಿ ಹೋಗಿದ್ದಾರೆ. ಹೆಚ್ಚಿನ ಸಂಬಳದ ಆಮಿಷವನ್ನು ತೋರಿಸಿದರೆ ಯೋಗ್ಯತಾವಂತರೂ ಪ್ರತಿಭಾವಂತರೂ ಈ ನೌಕರಿಗೆ ಸೇರಿಕೊಳ್ಳಬಹುದು ಎಂದು ಮುಂತಾಗಿ ಸಮಿತಿ ಹೇಳುತ್ತದೆ.

ಸಂಬಳದ ಮಟ್ಟಕ್ಕೆ ಕಾರ್ಯಕ್ಷಮತೆಯನ್ನು ತಳಕು ಹಾಕಿರುವುದು ಎಷ್ಟು ಮಾತ್ರಕ್ಕೂ ಸಮಂಜಸವೆನಿಸಲಾರದು. ಕಡಿಮೆ ಸಂಬಳಕ್ಕೆ ದುಡಿಯಬೇಕಾದ ಎಲ್ಲ ನೌಕರ ವರ್ಗದೊಡನೆಯೂ ನಮಗೆ ಧಾರಾಳವಾದ ಸಹಾನುಭೂತಿ ಇದೆ; ಮತ್ತು ಜೀವನಾವಶ್ಯಕವಾದಷ್ಟು ಸಂಬಳವನ್ನು ಪ್ರತಿಯೊಬ್ಬ ನೌಕರನಿಗೂ ಕೊಡಬೇಕೆಂಬುದಕ್ಕೆ ನಮ್ಮ ಸಮ್ಮತಿಯೂ ಇದೆ. ಆದರೆ, ಹೆಚ್ಚು ಸಂಬಳ ತೆಗೆದುಕೊಳ್ಳುವವರು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬಲ್ಲರು ಎಂಬ ಸಮಿತಿಯ ತೀರ್ಮಾನದೊಡನೆ ನಮಗೆ ಭಿನ್ನಾಭಿಪ್ರಾಯವಿದೆ. ಸಮಿತಿಯವರು ಸಾಲಭದಲ್ಲಿ ಊಹಿಸಿರುವಂತೆ ಸ್ವತಿಭಾವಂತರೆಲ್ಲರೂ ಹೆಚ್ಚಿನ ಸಂಪಾದನೆಯನ್ನು ಖಾಸಗಿ ಸಂಸ್ಥೆಗಳಲ್ಲಿ ಮತ್ತು ಕೇಂದ್ರ ಸರಕಾರದ ನೌಕರಿಗಳಲ್ಲಿ ಸ್ಥಾನ ದೊರಕಿಸಿಕೊಂಡು ಮಾಡುತ್ತಿಲ್ಲ. ಹಾಗೆ ನೋಡಹೋದರೆ, ಹೆಚ್ಚಿನ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ "ಪ್ರತಿಭಾನ್ವಿತ"ರಿಗೆ ಕಂದಾಯ ವಿಭಾಗದ ಕಾರಕೂನರಿಗೆ ಸಿಗುವಷ್ಟು ಸಂಬಳ ಸಿಗುತ್ತಿಲ್ಲ. ಸಿರುದ್ಯೋಗದ ಸಮಸ್ಯೆ ತಾಂಡವವಾಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಸಂಬಳದ ಮಟ್ಟಿಗೆ ತೀವ್ರ ಸ್ಪರ್ಧೆ ನಡೆದಿದೆ. ಎಲ್ಲರೂ ಕಡಿಮೆ ಸಂಬಳಕ್ಕೆಯೇ ಬಹಳ ಹೆಚ್ಚು ದುಡಿಯಬೇಕಾಗಿ ಬಂದಿದೆ. ಆದುದರಿಂದ ಸಮಿತಿಯವರು ಕೆಳವರ್ಗದ ಕಾರಕೂನರ ಸಂಬಳವನ್ನು ಹೆಚ್ಚಿಸುವುದಕ್ಕೆ ಸರಕಾರವು ಆರ್ಥಿಕ ಅನಾನುಕೂಲತೆಯ ನೆಪವನ್ನು ಮುಂದೊಡ್ಡಿದರೆ ಆಗ ಭವಿಷ್ಯದಲ್ಲಿ ಅಯೋಗ್ಯ ನೌಕರ ವರ್ಗವನ್ನೆ ನಂಬಿ, ಕುಂಠಿತ ಕಾರ್ಯಕ್ಷಮತೆಯನ್ನು ಸಹಿಸಿಕೊಂಡು ಕೆಲಸ ನಾಗಸಿಕೊಂಡು ಹೋಗಲೇಬೇಕೆಂದು ಹೇಳಿರುವುದು ಎಷ್ಟಕ್ಕೂ ಇಷ್ಟವಾದುದಲ್ಲ. ತಮಗೆ ಸಂಬಳ ಹೆಚ್ಚುಬೇಕೆಂದು ಕೆಳವರ್ಗದ ನೌಕರರೂ ಅವರಿಗೆ ಸಂಬಳ ಹೆಚ್ಚಿಸಿದರೆ, ತಮಗೂ ಹೆಚ್ಚಿಸುವುದು ಅತ್ಯವಶ್ಯವೆಂದು ಮೇಲಿನ ವರ್ಗದ ನೌಕರರೂ ಚಳವಳವನ್ನು ಹೊಸದಾಗಿ ನಡೆಸುವುದಕ್ಕೆ ಸಮಿತಿಯ ಈ ಸಿಫಾರಸು ಮತ್ತು ಅಭಿಪ್ರಾಯ ಪ್ರೋತ್ಸಾಹ ಕೊಟ್ಟೀತು— ಮನೆಯ ತಾಪತ್ರಯಗಳಿಂದ ಈಗಾಗಲೇ ಜರ್ಜರಿತರಾದ ಕಾರಣ ಕಾರ್ಯಕ್ಷಮತೆಯನ್ನು ಕಳೆದು ಕೊಂಡವರೆಂದು ಸಮಿತಿ ಭಾವಿಸಿರುವ ನೌಕರ ವರ್ಗ ಹೊಸ ಆಂದೋಲನದ ಸೆಳವಿಗೆ ಬಿದ್ದು ಇನ್ನಷ್ಟು ದಕ್ಷತಾಹೀನವಾಗಲು ಇದು ನೆಪವಾದೀತು.

ದಕ್ಷತೆ ತಗ್ಗದೆ ಎಂದು ಸಾರ್ವಜನಿಕರ ಅನುಭವಕ್ಕೆ ಬರಲು ಕಾರಣವೇನು ಎಂದು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಅಲ್ಲಿ ಎರಡು ಮುಖ್ಯಾಂಶಗಳು ಗೋಚರಿಸುತ್ತವೆ—ಮೊದಲನೆಯದಾಗಿ ಹಿಂದುಳಿದವರನ್ನು ಮುಂದೆ ತರುವ ಸರಕಾರದ "ಭಿನ್ನವಾದ" ಪ್ರಯತ್ನಗಳ ದೆಸೆಯಿಂದ ಹೆಚ್ಚು ದಕ್ಷತೆ, ಪ್ರತಿಭೆ ಮತ್ತು ಮೇಧಾನಿತನದಿಂದ ಕೂಡಿದ್ದ ಎಷ್ಟೋ ಮುಂದುವರಿದ ತರುಣರಿಗೆ ಸರಕಾರದ ನೌಕರ ವರ್ಗದಲ್ಲಿ ಪ್ರವೇಶ ಸಿಗುತ್ತಿಲ್ಲ. ಹಿಂದುಳಿದವರಿಗೆ ಪ್ರವೇಶ ಸಿಗಲು ಗೊತ್ತುಪಡಿಸಿದ ಗುಣಾಂಕಗಳಿಗೂ ಬ್ರಾಹ್ಮಣನಿಗೆ ಅದೇ ಕೆಲಸ ಸಿಗಲು ಅವನು ಗಳಿಸಿರಬೇಕಾದ ಗುಣಾಂಶಗಳಿಗೂ ಮಹದಂತರವಿದೆ. ಅಲ್ಲದೆ, ಹಿಂದುಳಿದವರಿಗೆ ೪೦% (ಕೆಲವೆಡೆ ಇದಕ್ಕೂ ಹೆಚ್ಚು) ಸ್ಥಾನಗಳನ್ನು ಕಾದಿರಿಸುವ ಮತ್ತು ಇವನ್ನು ಕಡಿಮೆ ಯೋಗ್ಯತೆಯ ಜನರಿಂದಲೇ ತುಂಬಿಸುವ ಸರಕಾರದ ಧೋರಣೆ ಕಾರ್ಯಕ್ಷಮತೆಯ ಮೇಲೆ ಗಂಭೀರವಾದ ಪರಿಣಾಮವನ್ನು ಮಾಡಿದೆ ಎಂದು ನಮಗೆ ಖಚಿತವಾಗಿದೆ. ಆದರೆ ಸಮಿತಿಯವರು ಇದನ್ನು ಪ್ರಸ್ತಾಪಿಸಿಯೇ ಇಲ್ಲ! ಹೀಗೆ ಯೋಗ್ಯತಾವಂತರನ್ನು ಬೇಕೆಂದೇ ಸಂಕಾರ ನಿರಾಕರಿಸುತ್ತಿರುವಾಗ, ಸಮಿತಿಯವರಿಗೆ ಕೊಡುವ ಸಂಬಳ ಸಾಲದು ಎಂಬ ಅಂಶವನ್ನೆತ್ತೇ ಕಂಡು, ಜಾತೀಯ ಕಳವಳದಿಯ ಮೇಲೆ ಅಯೋಗ್ಯರಿಗೂ ಜವಾಬ್ದಾರಿಯನ್ನು ವಹಿಸಿ ಕೊಡುವ ಸರಕಾರದ ಧೋರಣೆಯಲ್ಲಿ ಸಮಿತಿಯವರಿಗೆ ದೋಷ ಕಂಡು ಬಾರದಿರುವುದು ವಿಸ್ಮಯವನ್ನೆ ತರುತ್ತದೆ.

ಇಷ್ಟು ಮುಖ್ಯವಲ್ಲದ, ಆದಾಗ್ಯೂ ಸಾಕಷ್ಟು ಮಹತ್ವ ಪಡೆದ ಇನ್ನೊಂದು ವಿಷಯದ ಮೇಲೆ ಮಾತ್ರ ಸಮಿತಿ ಗಮನ ಹರಿಸಿದೆ— ಈಗಿನ ಕಾರಕೂನರಿಗೆ ಇಂಗ್ಲೀಷಿನಲ್ಲಿ ಸಾಕಷ್ಟು ಪ್ರಭುತ್ವವಿಲ್ಲ, ಪ್ರಾದೇಶಿಕ ಭಾಷೆಗಳಲ್ಲಿ ಅವರಿಗೆ ಶಿಕ್ಷಣವನ್ನು ಈಗ ಕೊಡಲಾಗುತ್ತಿರುವುದೇ ಇದಕ್ಕೆ ಕಾರಣ ಎಂಬುದೇ ಅದು. ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣವನ್ನು ನೀಡಬೇಕೆಂಬ ಯೋಜನೆಯನ್ನು ಕೈಗೊಂಡ ಸರಕಾರವು ನೌಕರವರ್ಗಗಳಿಗೆ ಸೇರುವವರಿಗೆ ಇಂಗ್ಲೀಷಿನಲ್ಲಿ ಪ್ರಾವೀಣ್ಯ ಇರಬೇಕೆಂದು ಒತ್ತಾಯಿಸುವುದೂ ಪ್ರಾದೇಶಿಕ ಭಾಷೆಯಲ್ಲಿ ನವತರುಣರು ಗಳಿಸಿರುವ ಜ್ಞಾನವನ್ನು ಉಪೇಕ್ಷಿಸುವುದೂ ಕಾರ್ಯಕ್ಷತೆ ತಗ್ಗುವುದರಲ್ಲಿ ಪರಿಣಮಿಸಿದೆ ಎಂಬುದು ನಿಜ. ಸಮಿತಿಯವರು ಈ ಬಗ್ಗೆ ಸರಕಾರಕ್ಕೆ ಒಂದು ಹಿತವಾದವನ್ನು ಹೇಳಿದ್ದಾರೆ: ಅದೇನಂತೆ, ತಿರುಚಿರಪಳ್ಳಿ ಜಿಲ್ಲೆಯಲ್ಲಿ ಕಂದಾಯ ವಿಭಾಗದ ಕೆಲಸಗಳೆಲ್ಲವನ್ನೂ ಪ್ರಾದೇಶಿಕ ಭಾಷೆಯಲ್ಲಿ ನಡೆಸುವ ಈಗಿನ ಪ್ರಯೋಗದ ಫಲಿತಾಂಶಗಳು ಪ್ರತ್ಯಕ್ಷವಾಗುವುದನ್ನು ಕಾಯದೆ, ಕೂಡಲೇ ಎಲ್ಲ ಜಿಲ್ಲೆಗಳಲ್ಲೂ ಪ್ರಾದೇಶಿಕ ಭಾಷೆಗಳಲ್ಲಿ ವ್ಯವಹರಿಸಲು ಬಿಟ್ಟರೆ ಅದರಿಂದ ಪ್ರಯೋಜನವಾದೀತು. ಹಾಗೇನೂ ಮಾಡದೆ, ಕಾಲವಿಲಂಬವಾಗುತ್ತದೆ, ಸೂಕ್ಷ್ಮ ನಿರ್ಣಯಗಳಲ್ಲಿ ತಪ್ಪುಗಳಾಗುತ್ತವೆ, ಕಾರ್ಯಕ್ಷಮತೆ ತಗ್ಗುತ್ತಾ ಹೋಗುತ್ತದೆ ಎಂದು ಆಕ್ಷೇಪಿಸುವುದು ನ್ಯಾಯವಾಗಲಾರದು. ಉತ್ತಮ ಮೇಲ್ವಿಚಾರಣೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ತಹಸೀಲ್ದಾರರ ಪ್ರವಾಸಕಾಲದಲ್ಲಿ ನಿರ್ಣಯ ಕೊಡಬಲ್ಲ ದಕ್ಷ ಪ್ರತಿನಿಧಿಯೊಬ್ಬ ಪ್ರತಿ ತಾಲೂಕು ಕಚೇರಿಯಲ್ಲಿರಬೇಕು, ಕೆಳವರ್ಗದ ಕಾರಕೂನರಿಗೂ ಮೇಲಿನ ವರ್ಗದ ಕಾರಕೂನರಿಗೂ ಸಿಗ ಎಂಬ ದಾಮಾಶೆಯ ವಿರಬೇಕು ಎಂದು ಸಮಿತಿ ಹೇಳಿದೆ. ಇದರಿಂದ ಲಘು ನಿರ್ಣಯಗಳಿಗಾಗಿಯೂ ಅಧಿಕಾರಿಗಳ ಬಾಯನ್ನೆ ಹಾರೈಸುವ ಮತ್ತು ದಕ್ಷತೆ ಇದ್ದರೂ ಮೇಲಿನ ಗೌರವದ ಸ್ಥಾನಕ್ಕೇರಲು ಅವಕಾಶವಿಲ್ಲದಿರುವ ಪರಿಸ್ಥಿತಿ ಸುಧಾರಿಸಬಲ್ಲುದು. ಮೇಲ್ವಿಚಾರಕರ ಕೊರತೆಯೂ ದೂರವಾಗಬಲ್ಲುದು. ಆದರೆ ಕೇವಲ "ಸೀನಿಯಾರಿಟಿ"ಯ ಮೇಲೆ ಭಡ್ತಿ ಸಿಕ್ಕುವ ಈಗಿನ ಕ್ರಮವಿರಬಾರದು. ಇವೆಲ್ಲ ವಿಷಯಗಳನ್ನು ಮನಗಂಡರೆ ಸಂಬಳ ವಿರಿಸುವ ಸೂಚನೆ ಕ್ಷುಲ್ಲಕವಾಗುತ್ತದೆ. ಸಂಬಳದ ಸೂಚನೆಗೆಯೇ ಅಂಟಿಕೊಂಡು, ಮೇಲೆ ಪ್ರಸ್ತಾಪಿಸಿದ ಕೆಲವು ಮೂಲಭೂತ ವಿಚಾರಗಳನ್ನು ಅಲಕ್ಷಿಸಿದರೆ, ಹಿಂದಿನ ಶಪ್ಪನ್ನೆ ಒಪ್ಪೆಂದು ಸಿದ್ಧ ಮಾಡಲು ಪ್ರಯತ್ನಿಸಿದ ಹಾಗಾಗುತ್ತದೆ—ಹೊರತು ಇಷ್ಟವಾದ ಪರಿಣಾಮವಾಗಲಾರದು.

—ಕಾರ್ತಿಕೇಯ.

ಸ್ವಂತ ಜವಾಬ್ದಾರಿಯ ಮೇರೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. o. Box No. 3219, BOBMAY 3-

NOTIFICATION.

UDIPI MUNICIPALITY.

Sealed tenders will be received by the Commissioner, Udipi Municipality up to 1-0 p.m on 18—8—1955 for the following work:-

Name of Work.	Estimate.	Earnest Money Deposit.
Providing surface dressing with pre-coated chips along Palmar Mutt Road.	Rs. 1,650/-	Rs. 85/-

Full particulars as to the conditions of contract etc. may be obtained from the Municipal Office, during office hours on working days.

Municipal Office,
Udipi
Dated: 2 -8 -1955

V. U. K Nambissan.
Commissioner,
Udip Municipality, Udipi

ಆವಶ್ಯಕ ಮಾಹಿತಿಗಳಿಂದ ಕೂಡಿರುವ
ಮಕ್ಕಳ ಮಗಿ ಪುಸ್ತಕ
ಬೆಲೆ ೦—1—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

ಪೃಥ್ವಿಯ ಸುತ್ತಲೂ ತಿರುಗುತ್ತಿರುವ ಕೃತಕ ಉಪಗ್ರಹ

(೩ನೇ ಪುಟದಿಂದ)

ನಿ—ಟು ಮಾದರಿಯ ಬಾಂಬು ದಾಳಿಯ ರಾಕೆಟ್‌ಗಳು ಎಷ್ಟು ಶಕ್ತಿಯಿಂದ ನುಗ್ಗುತ್ತಿದ್ದವೋ ಅದರ ಐದು ಸಾಲಿನಷ್ಟು—ಅಂದರೆ ೩೩ ಲಕ್ಷ ರಾತಲು—ಒತ್ತಡವನ್ನು ಸಮುದ್ರ ಮಟ್ಟದಲ್ಲಿ ಹುಟ್ಟಿಸಿ ನೆಗೆಯ ಬಲ್ಲ ರಾಕೆಟ್ ಯಂತ್ರವನ್ನು ರಶ್ಯ ಕಂಡು ಹಿಡಿದಿರುವುದೂ ನಿಜ. ಆದರೆ, ರಾಕೆಟ್ ಯಂತ್ರಗಳ ಆಯುಸ್ಸು ಅತ್ಯಲ್ಪ ಕಾಲಾವಧಿಯಲ್ಲಿಯೇ ಮುಗಿಯುತ್ತದೆಯಾದ ಕಾರಣ, ಭೂಭೌತ ಶಾಸ್ತ್ರದ ದೃಷ್ಟಿಯಿಂದ ಪ್ರಾಮುಖ್ಯತೆ ಸ್ವಲ್ಪವಿರುವ ವಿಷಯಗಳ ಸಂಗ್ರಹವನ್ನು ಅಪೇಕ್ಷಿತ ಪ್ರಮಾಣದಲ್ಲಿ ಮಾಡುವ ಅನುಕೂಲತೆ ಒದಗಿ ಬರುವುದಿಲ್ಲ.

ಕೃತಕ ಉಪಗ್ರಹದ ಈ ಉದ್ದೇಶಕ್ಕೆ ನೆರವಾಗಬಲ್ಲದೆಂದು ಈಗ ವಿಜ್ಞಾನಿಗಳ ಪಾಲಿತ ತೀರ್ಮಾನ. ಅವರ ಹೇಳಿಕೆಗನುಸಾರವಾಗಿ, ಈ ಉಪಗ್ರಹವು ಭೂಮಿಯಿಂದ ೨೦೦—೩೦೦ ಮೈಲು ಎತ್ತರಕ್ಕೆ ನೆಗೆದು ಹೋದ ಬಳಿಕ, ಒಡನೆಯೇ ತಾಸಿಗೆ ೧೮೦೦೦ ಮೈಲು ವೇಗದಲ್ಲಿ ಭೂಮಿಗೆ ಪ್ರದಕ್ಷಿಣೆಯನ್ನು ಹಾಕುತ್ತದೆ. ಅಂದರೆ, ಭೂಮಿಗೆ ಒಂದು ಸುತ್ತು ಬರಲು ಅದಕ್ಕೆ ಒಂದೂವರೆ ತಾಸು ಸಮಯ ಸಾಕು. ಕೆಲವು ದಿನಗಳ ವರೆಗೆ, ಅನುಕೂಲವಾದರೆ ಕೆಲವು ವಾರಗಳ ವರೆಗೆ ಸಹ, ಈ ಉಪಗ್ರಹ ಹೀಗೆ ಸುತ್ತುತ್ತಿರುತ್ತದೆ. ಆದರೆ ಇಷ್ಟು ಎತ್ತರದಲ್ಲಿ ಸಹ ಒಂದು ವಿಶಿಷ್ಟ ಬಗೆಯ ವಾತಗೋಲವಿರುವ ದೆಸೆಯಿಂದ, ಉಪಗ್ರಹವು ನಿಧಾನವಾಗಿ ಈ ಅವಧಿಯಲ್ಲಿ ತನ್ನ ಗತಿಯನ್ನು ಭೂಮಿಗೆ ತಾಗಿಕೊಂಡಿರುವ ವಾತಾವರಣಕ್ಕೆ ಹತ್ತಿರ ಹತ್ತಿರವಾಗುವಂತೆ ನಾಗಮುರಿಗೆಯಾಕಾರದಲ್ಲಿ ರೂಪಿಸಿಕೊಳ್ಳುತ್ತದೆ. ಭೂಮಿಯ ವಾತಾವರಣದಲ್ಲಿ ಪ್ರವೇಶಿಸಿದೊಡನೆಯೇ ಅದು ಸುತ್ತುಬರುವ ತನ್ನ ಶಕ್ತಿಯನ್ನು ಕಳೆದುಕೊಂಡು ಭಗ್ನ ನಕ್ಷತ್ರದಂತೆ ಕೆಳಗೆ ಬಿದ್ದು ಛಿನ್ನ ವಿಚ್ಛಿನ್ನವಾಗುತ್ತದೆ. ಆದರೆ, ತಾನು ಅವಸಾನ ಹೊಂದುವ ಮೊದಲೇ ಭೂಮಿಯನ್ನು ಅದು ನೂರಾರು ಬಾರಿ ಸುತ್ತಿರುವುದರಿಂದ ವಿಜ್ಞಾನಿಗಳು ತಮಗೆ ಬೇಕಿದ್ದ ಮಾಹಿತಿಗಳ ದಾಖಲೆಯನ್ನು ನಿರ್ವಿಘ್ನವಾಗಿ ಮಾಡಿಕೊಳ್ಳಬಲ್ಲರು.

ಯಾವ ವಿಶಿಷ್ಟ ಪದಾರ್ಥಗಳನ್ನು ಉಪಯೋಗಿಸಿ ಉಪಗ್ರಹ ರಚಿಸಬೇಕೆಂಬ ವಿಷಯದಲ್ಲಿ ವಿಜ್ಞಾನಿಗಳು ಇಷ್ಟರ ವರೆಗೆ ಏನನ್ನೂ ಹೇಳಲು ಶಕ್ತರಾಗಿಲ್ಲ. ಆದರೆ ಈ ಉಪಗ್ರಹವು ಸ್ವಲ್ಪ ದೊಡ್ಡದಾದ ಕಾಲ್ಚೆಂಡಿನ ಗಾತ್ರದಷ್ಟಿರಬಹುದೆಂದೂ ಅದರ ವ್ಯಾಸವು ೫೦ ಸೆಂಟಿ ಮೀಟರುಗಳಷ್ಟಿರಬಹುದೆಂದೂ ಅವರ ಅಂದಾಜು. ಉಪಗ್ರಹದ ಭಾರ ೧೧೦ ರಾತಲುಗಳಷ್ಟಿರಬಹುದು. ಅದರ ರಚನೆಯಲ್ಲಿ ಮೂರು ವಿಶಿಷ್ಟ ಭಾಗಗಳಿರಬಹುದು—ಉಪಗ್ರಹದ ಕೆಳ ಭಾಗವೆನ್ನಬಹುದಾದ ಅಂಶವು ಸುಮಾರು ೫೫ ಮೈಲುಗಳಷ್ಟು ಎತ್ತರ ಹೋದ ಬಳಿಕ ಕಳಚಿ ಬೀಳುವುದೂ ಉಪಗ್ರಹದ ಮುಖ್ಯ ಭಾಗವನ್ನು ಎತ್ತಿ ಹಿಡಿದಿರುವ ಎರಡನೆಯ ಭಾಗವು ೨೦೦ ಮೈಲು ಎತ್ತರದಲ್ಲಿ ಕಳಚಿ ಬೀಳುವುದೂ ಸಂಭವನೀಯ. ಈ ಆಧಾರ ತಪ್ಪಿದ ಬಳಿಕ ಉಪಗ್ರಹ ಹೊಸ ವಾತಗೋಲದಲ್ಲಿ ಬಿದ್ದು ಭೂಮಿಗೆ ಪ್ರದಕ್ಷಿಣೆ ಹಾಕ ತೊಡಗುತ್ತದೆ ಅದರ ನಿಶ್ಚಿತ ಭಾಗವೊಂದು ಯಾವಾಗಲೂ ಸೂರ್ಯನ ಎದುರಿಗೆಯೇ ಉಳಿಯುವಂತೆ ಜಾಗ್ರತೆ ವಹಿಸಲಾಗುತ್ತದೆ. ಸೌರವ್ಯೂಹದ ಪ್ರಕಾಶ ಪ್ರಸರಣ ಚಟುವಟಿಕೆಗಳೂ ಭೂಭೌತ ಶಾಸ್ತ್ರಕ್ಕೆ ಸಂಬಂಧಿಸಿದ ಅದ್ಭುತ ವಿಷಯಗಳೂ ಅಯಸ್ಕಾಂತದ ತೆಳು ಪಟ್ಟಿಯ ಮೇಲೆ ತಾಸಿಗೆ ಒಂದು ಮಿಲಿಮೀಟರಿನಷ್ಟು ಜಾಗವನ್ನು ಆವರಿಸಿಕೊಳ್ಳುವಂತೆ ದಾಖಲು ಮಾಡಿಡಲ್ಪಡುತ್ತವೆ.

ಮೊಗಲಿಗೆ ಈ ಉಪಗ್ರಹಗಳಲ್ಲಿ ಏನನ್ನಾದರೂ ಇಡಲು ಸಾಧ್ಯವೋ ಏನೆಂದು ಗೊತ್ತಾಗಿಲ್ಲ. ವಿದ್ಯುತ್ಕಣದಿಂದ ತುಂಬಿದ ಮೆದುಳನ್ನಿರಿಸುವ ಮೂಲಕ ಈ ಕೃತಕ ಚಂದ್ರಮನು ಕ್ರಮಿಸುವ ಮಾರ್ಗದ ಭವಿಷ್ಯ ಹೇಳುವುದು ಸಾಧ್ಯವೇ ಎಂದು ವಿಜ್ಞಾನಿಗಳು ಸೂರ್ಯಲೋಚಿಸುತ್ತಿದ್ದಾರೆ ಬರಿಕಣ್ಣಿಗೆ ಈ ಚಂದ್ರ ತಿರುಗುವುದನ್ನು ನೋಡುವುದು ಕಷ್ಟ ಸಾಧ್ಯ—ಆದರೆ ದೂರದರ್ಶಕ, ರಾಡರ್ ಇವೇ ಮುಂತಾದವುಗಳ ಮೂಲಕ ಉಪಗ್ರಹದ ಚಲನೆಯನ್ನೂ ಅದರ ಮೇಲೆ ಆಗುತ್ತಿರುವ ಪರಿಣಾಮಗಳನ್ನೂ ನಿರೀಕ್ಷಿಸಬಹುದೆಂದು ಹೇಳಲಾಗುತ್ತದೆ. ಪ್ಯಾರಂಭದಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಿಂದ ಕೆಲವು ಉಪಗ್ರಹಗಳನ್ನು ಹಾರಿಸಿದ ಬಳಿಕ, ಉತ್ತರ ಮತ್ತು ದಕ್ಷಿಣ ಧ್ರುವಗಳಿಂದಲೂ ಹಾರಿಸಿ ಅಗಿನ ಪರಿಣಾಮಗಳೇನೆಂದು ನಿರೀಕ್ಷಿಸಲಾಗುತ್ತದೆ. ಇದಕ್ಕಾಗಿ ಜಗತ್ತಿನ ಎಲ್ಲೆಡೆಯಲ್ಲೂ ನಿರೀಕ್ಷಣೆಯ ಸಿದ್ಧತೆಗಳು ನಡೆಯುವ ಅಗತ್ಯ ಬೀಳುತ್ತದೆ. ರಶ್ಯವು ೧೧೦೦ ವಿಜ್ಞಾನಿಗಳ ನೆರವನ್ನು ನೀಡಿ ೧೧೦ ನಿರೀಕ್ಷಣಾಲಯಗಳನ್ನು ನಡೆಸುವ ಮೂಲಕ ಈ ಸಾಹಸದಲ್ಲಿ ನೆರವಾಗುವುದೆಂದು ವರದಿಗಳು ತಿಳಿಸುತ್ತವೆ. ಪ್ರಥಮದ ಸಾಮಾನ್ಯ ಉಪಗ್ರಹವನ್ನು ನಿರ್ಮಿಸಲು ಹತ್ತು ಲಕ್ಷ ಡಾಲರುಗಳ ವೆಚ್ಚ ಬಂದೀತೆಂದು ಅಂದಾಜು. ಕೆಲವು ಸಾಮಾನ್ಯ ಉಪಗ್ರಹಗಳಾದರೂ ಕೆಲಸ ಮಾಡಿ ನಷ್ಟ ಹೊಂದಿದ ಮೇಲೆ, ರೇಡಿಯೊ ಸಲಕರಣೆಗಳನ್ನು ಒಳಗಿಟ್ಟು ತನ್ಮಾಲಕ ಹೆಚ್ಚಿನ ಮಾಹಿತಿ ಸಂಪಾದಿಸಬಹುದಾದ ಸುಧಾರಿತ ಉಪಗ್ರಹಗಳನ್ನು ಸೃಷ್ಟಿಸಬಹುದೆಂದೂ ಇದು ಸಫಲವಾದರೆ ಟೆಲಿವಿಜನ್ ಯಂತ್ರವನ್ನು ಈ ಉಪಗ್ರಹದಲ್ಲಿ ಜೋಡಿಸಿ ೨೦೦—೩೦೦ ಮೈಲು ಎತ್ತರದ ಪ್ರದೇಶದಲ್ಲಿ ಏನೆಲ್ಲ ನಡೆಯುತ್ತದೆಂಬುದನ್ನು ವಿಜ್ಞಾನಿಗಳು ಅತ್ಯಂತ ಸ್ಪಷ್ಟವಾಗಿ ಕಾಣುವ ದಿನಕ್ಕೆ ಹೆಚ್ಚು ಕಾಯಬೇಕಾಗದೆಂದೂ ಅಭಿಪ್ರಾಯ ಪಡಲಾಗುತ್ತದೆ.

ಇಷ್ಟು ಪ್ರಗತಿಯನ್ನು ಸಾಧಿಸಿದ ಪಕ್ಷದಲ್ಲಿ ಮತ್ತೆ ಚಂದ್ರ ಲೋಕಕ್ಕೂ ಮಂಗಳ ಗ್ರಹಕ್ಕೂ ಪ್ರಯಾಣಿಸುವುದೇ ನಮ್ಮ ಉದ್ದೇಶವಾಗುತ್ತದೆ. ಮನುಷ್ಯನಿಲ್ಲದ ಉಪಗ್ರಹಗಳ ಮೇಲಾಗುವ ಪರಿಣಾಮಗಳು ಮನುಷ್ಯನ ಸಹಿತವಾಗಿ ಉಪಗ್ರಹಗಳನ್ನು ಕಳಿಸಬಹುದು ಎಂಬುದಕ್ಕೆ ಅನುಕೂಲವಾದರೆ, ಈಗಿನ ವಿಮಾನಗಳಂತಿರುವ ಹೊಸ ಆಕಾಶಯಾನ ಸಿದ್ಧವಾಗಿಯೇ ತೀರುತ್ತದೆ. ಪ್ರಥಮತಃ ಈ ಆಕಾಶಯಾನದಲ್ಲಿ ಕುಳಿತು ಒಂದು ಗ್ರಹದಿಂದ ಇನ್ನೊಂದರ ಬಳಿಗೆ ಆಗ ಹಾರಬಹುದು; ಹಿಂದಿನಿಂದ ಹೊಸ ಗ್ರಹದಲ್ಲಿ ಕಾಲೂರಲೂ ಬಹುದು. ಇಂಥ ಆಕಾಶಯಾನವನ್ನು ನಡೆಸುವ ಇಂಧನವಾಗಿ ಅಣುಶಕ್ತಿ ದೊರೆಯುವ ಸಂಭವ ದೃಗ್ಗೋಚರವಾಗುತ್ತಿರುವುದರಿಂದ ಉರುಪಲಿನ ಹೆದರಿಕೆ ಏನೂ ಇಲ್ಲ; ಹಕ್ಕಿಯಂತೆ ಆಕಾಶದಲ್ಲಿ ಹಾರಬೇಕೆಂಬ ಮಕ್ಕಳ ಇಚ್ಛೆ ಈಗ ವಿಮಾನಗಳ ದೆಸೆಯಿಂದ ಪೂರೈಸಲ್ಪಡುವುದು ಸಾಧ್ಯವಾಗಿರುವಂತೆ ಚಂದ್ರಲೋಕಕ್ಕೂ ಇನ್ನು ನೆಗೆಯಬಹುದು. ಬಾಲಕ ಹನುಮಂತನು ಸೂರ್ಯನನ್ನೆ ಹಣ್ಣೆಂದು ಭ್ರಮಿಸಿ ತಿನ್ನಲು ನೆಗೆದಿದ್ದನೆಂಬ ಉತ್ತರ ರಾಮಾಯಣದ ಕತೆಯು ನಮ್ಮವರಲ್ಲೂ ಈ ತೆರನಾದ ಮಹಾತ್ವಾಕಾಂಕ್ಷೆ ಇದ್ದೇ ಇದೆ ಎಂಬುದರ ನಿದರ್ಶನ. ಪಾಶ್ಚಾತ್ಯ ದೇಶಗಳಲ್ಲಂತೂ ತಮ್ಮ ಜೀವಮಾನದಲ್ಲಿಯೇ ಒಂದು ಗ್ರಹದಿಂದ ಇನ್ನೊಂದಕ್ಕೆ ಪ್ರಯಾಣಮಾಡುವ ಸುಯೋಗ ಬಂದೀತೆಂದು ಅನೇಕರು ಈಗ ನಂಬಿದ್ದಾರೆ-ಕಳೆದ ಜೂನಿನಲ್ಲಿ ಅಮೇರಿಕದ ಮಹಿಳೆಯೊಬ್ಬಳು ಬ್ರಿಟನಿನ ವಿಮಾನ ಕಂಪೆನಿಯಲ್ಲಿ ಮಂಗಳ ಗ್ರಹಕ್ಕೆ ಪ್ರಯಾಣಿಸುವಾಗಿನ ಅಪಾಯದ ವಿರುದ್ಧ ಪಾಲಿಸಿ ತೆಗೆದಿದ್ದಳು! ಕಂಪೆನಿಯವರು ಮಾತ್ರ ಬುದ್ಧಿವಂತಿಕೆಯ ಒಂದು ವಾಕ್ಯವನ್ನು ಪಾಲಿಸಿಯಲ್ಲಿ ಬರೆಯಲು ಮರೆಯಲಿಲ್ಲ—"ಮಂಗಳ ಗ್ರಹದಿಂದ ಮರಳಿಬಾರದಿರುವುದೇ ಸಾವಿನ ರುಜುವಾತಲ್ಲ" ಎಂಬುದೇ ಅದು!

ಮಂಗಳ ಗ್ರಹಕ್ಕೆ ಪ್ರಯಾಣಿಸುವ ಆಶೆ ನೆರವೇರುವ ದಿನ ಈ ಶತಮಾನದೊಳಗೆ ಬಂದೀತೆಂದು ಖಗೋಲ ಶಾಸ್ತ್ರಿಗಳು ಹೇಳಿದ್ದಾರೆ. ಸಾಮಾನ್ಯ ವಿಮಾನವು ಈಗಿನ ಜೆಟ್ ವಿಮಾನದಷ್ಟು ಅಭಿವೃದ್ಧಿ ಹೊಂದಿರುವುದನ್ನು ನೆನಪಿಗೆ ತಂದು ಕೊಟ್ಟು ಅವರು ತಮ್ಮ ಕಲ್ಪನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇಂಥ ಹೊಸ ಬಗೆಯ ಆಕಾಶಯಾನಗಳ ನಿರ್ಮಾಣ ಕಷ್ಟವಾಗಲಿ ಬಿಡಲಿ—"ಆಕಾಶ ಪೀಠ"ಗಳ ಸೃಷ್ಟಿಯಾಗುವುದನ್ನು ಮಾತ್ರ ಸುಲಭದಿಂದ ಹೇಳಲಿಕ್ಕಾಗದು. ಉಪಗ್ರಹಗಳನ್ನು ಆಕಾಶ ಪೀಠಗಳಾಗಿ ಉಪಯೋಗಿಸಬೇಕೆಂಬ ಉದ್ದೇಶ ಪ್ರಬಲ ರಾಷ್ಟ್ರಗಳಿಗಿದೆ ಎಂಬುದು ಈಗ ಮುಚ್ಚುಮರೆಯ ಮಾತಾಗಿ ಉಳಿದಿಲ್ಲ. ಬೇರೊಂದು ದೇಶದ ಮೇಲೆ ಯುದ್ಧ ಸಿದ್ಧತೆಯಾಗುತ್ತಿದೆಯೆ ಎಂಬುದನ್ನು ನೋಡಲು ಈ ಆಕಾಶ ಪೀಠಗಳು ನೆರವಾಗುತ್ತವೆ ಎಂದು ಎಲ್ಲ ಸಂರಕ್ಷಣ ತಜ್ಞರೂ ಹೇಳ ತೊಡಗಿದ್ದಾರೆ. ಅಧ್ಯಕ್ಷ ಐಕರು ಜನೇವದ ವರಿಷ್ಠರ ಪರಿಷತ್ತಿನಲ್ಲಿ ವಿಮಾನ ಮೂಲಕ ಪರಸ್ಪರರ ಸೈನಿಕ ಕೇಂದ್ರಗಳ ಪರಿಶೀಲನೆ ನಡೆಸಗೊಡುವ ಸೂಚನೆಯನ್ನು ಮುಂದಿಟ್ಟಿದ್ದರಷ್ಟೇ — ಆಕಾಶ ಪೀಠಗಳ ರಚನೆ ಯಶಸ್ವಿಯಾದರೆ, ಈ ರೀತಿ ಯಾರಿಗೂ ಔದಾರ್ಯ ತೋರಿಸಬೇಕಾಗಿ ಬರಲಿಕ್ಕಿಲ್ಲ. ೧೯೫೭ ರಿಂದಲೇ ಅಮೇರಿಕ ಆಕಾಶಪೀಠಗಳ ರಚನೆಯ ಕುರಿತು ವಿಚಾರ ಮಾಡುತ್ತಿತ್ತೆಂದು ೧೯೫೧ರಲ್ಲಿ ಕೃತಕದಿಂದ ರಶ್ಯಕ್ಕೆ ಗುಟ್ಟಿನ ಸುದ್ದಿಗಳನ್ನು ಪೂರೈಸಿದ ಆರೋಪದ ಮೇಲೆ ಜೇಮಿಡಾ ಗ್ರೀನ್ ಗ್ಲಾಸ್ ಎಂಬ ಅಮೇರಿಕದ ಸೈನ್ಯಾಧಿಕಾರಿಯ ವಿಚಾರಣೆ ನಡೆದಾಗ ವ್ಯಕ್ತವಾಗಿದ್ದಿತು. ದೂರ ದರ್ಶಿಗಳಿಗೆ ೧೯೫೪ರಲ್ಲಿ ಸಂರಕ್ಷಣ ಶಾಖೆಯು ಆಕಾಶದಲ್ಲಿ ಉಪಗ್ರಹಗಳನ್ನು ನಿಲ್ಲಿಸುವ ವಿಚಾರ ಮಾಡುತ್ತಿದೆ ಎಂಬ ಅಮೇರಿಕದ ಮಾಜಿ ಮಂತ್ರಿ ದಿ. ಜೇಮ್ಸ್ ಫಾರೆಸ್ಟಲ್ ಅವರ ಹೇಳಿಕೆಯಿಂದ ಈ ಮಾತಿನ ಸುಳಿವು ಹತ್ತಿತ್ತಿಂದರೂ ಸಲ್ಲುತ್ತದೆ.

ಪೃಥ್ವಿಯ ಮೇಲೆ ಉಪಗ್ರಹ ನಿಲ್ಲಿಸುವಲ್ಲಿ ವೈಜ್ಞಾನಿಕ ಪ್ರಯೋಗದಿಂದ ಭೂಮಿಯ ಹೊರಗೆ ೬೫೦ರಿಂದ ೨೦೦ ಮೈಲು ದೂರ ವ್ಯಾಪಿಸಿರುವ ವಿದ್ಯುತ್ಕಣ ಪರಿಪೂರ್ಣ ಗೋಲದ ವಿಶೇಷ ಮಾಹಿತಿ ದೊರಕಬಹುದೆಂದೂ ಇದರಿಂದ ರೇಡಿಯೊ ಸಂಪರ್ಕವನ್ನು ಉತ್ತಮ ಗೊಳಿಸಲು ಸಾಧ್ಯವೆಂದೂ ಗೊತ್ತಾಗಿದೆ. ಹವಾಮಾನದ ಮುನ್ನೋಟವನ್ನು ತಪ್ಪಿಲ್ಲದಂತೆ ಹೇಳಲೂ ಸಾಧ್ಯವೆಂದು ತಿಳಿಯುತ್ತದೆ; ಪ್ರಕಾಶ ಕಿರಣಗಳ ಬೇರೆ ಬೇರೆ ಬಗೆಗಳ ಕುರಿತಾದ ವಿಶೇಷಜ್ಞಾನವೂ ಲಭಿಸುವ ಸಂಭವಕಾಣುತ್ತದೆ. ಬೇರೆಗ್ರಹಗಳಿಗೆ ಪ್ರಯಾಣಹೊರಡುವ ಸ್ವಪ್ನ ನಿಜವಾಗುವ ಭರವಸೆಯೂ ತೋರುತ್ತದೆ. ಪ್ರಯೋಗ ಶಾಲೆಗಳಲ್ಲಿ ಅನೇಕವರ್ಷಗಳ ವರೆಗೆ ಸಹಸ್ರಾರು ವಿಜ್ಞಾನಿಗಳು ತಪಸ್ಸು ಮಾಡಿದರೂ ಸಿಗಲಾರದ ಸಿದ್ಧಿಯು ಈ ಉಪಗ್ರಹದ ಕೆಲವೇದಿನಗಳ ಅಸ್ತಿತ್ವದಲ್ಲಿ ಕರಗತವಾಗುತ್ತದೆ. ಆದರೆ, ಇವೆಲ್ಲ ಪ್ರಯೋಜನಗಳೂ ಸೈನಿಕ ದೃಷ್ಟಿಯಿಂದ ಆಕಾಶ ಪೀಠಗಳಿಗೆ ಕೊಡಲಾಗುವ ಮಹತ್ವದ ದೆಸೆಯಿಂದ ಮೂಲೆಗುಂಪಾಗುತ್ತವೆ; ಆಕಾಶ ಪೀಠಗಳು ಬೇರೆ ದೇಶಗಳವರ ಯುದ್ಧಸಿದ್ಧತೆಯನ್ನು ನಿರೀಕ್ಷಿಸಲು ಹೇಗೆ ಆಶ್ರಯಕೊಡಬಲ್ಲವೋ ಅದರಂತೆ ತೀವ್ರಗಾಮಿ ಗಳಾದ ಮಾರಕಾಸ್ತ್ರಗಳನ್ನು ಶತ್ರು ರಾಷ್ಟ್ರದ ಮೇಲೆ ನೇರಾಗಿ ಒಗೆಯುವುದಕ್ಕೆಸಹ ನೆರವಾಗುವುದು ಸಂಭವನೀಯ. ಈ ಬಗೆಯ ಅನುಕೂಲತೆ ದೊರೆಯಲಿ ಎಂಬುದಕ್ಕಾಗಿಯೇ ರಶ್ಯಾ—ಅಮೇರಿಕಗಳು ಈಗ ಸಹಕರಿಸುತ್ತಿವೆ ಎಂದರೆ ತಪ್ಪಾಗದು. ಈ ದೇಶಗಳ ನಡುವೆ ಮುಂದಿನ ಸ್ಪರ್ಧೆ ಆಕಾಶ ಪೀಠದ ಕುರಿತಾಗಿಯೇ ನಡೆದೀತು. ಇದನ್ನು ಗಮನಿಸದೆ, ಕೃತಕ ಚಂದ್ರನ ಸೃಷ್ಟಿಯ ಕಲ್ಪನೆಯಲ್ಲಿ ಆಶ್ಚರ್ಯವನ್ನು ಲೋಕದ ಜನ ಕಾಣುತ್ತಿದ್ದರೆ, ಅದರಷ್ಟು ದೊಡ್ಡ ಅಜ್ಞಾನ ಬೇರೆ ಇರಲಾರದು. ಸ್ವೀಡನ್ನಿನ ವಿಜ್ಞಾನಿ ಪ್ರೊಫೆಸರ್ ಲಂಡ್ ಮಾರ್ಕ್ ಇವನ್ನು ಒತ್ತಿ ಹೇಳಿದ್ದಾರೆ. ವಿಷಯದ ಈ ಮುಖದಲ್ಲಿ ಬೆಳಕಿಲ್ಲ; ಅಲ್ಲಿರುವುದು ಕತ್ತಲು, ಕೇವಲ ಕತ್ತಲು. ಈ ಭಯದ ಮುಂದೆ ಎಲ್ಲ ಸುಖ ಸ್ವಪ್ನವೂ ಮಂಗಮಾಯ!

—ಕು.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:— (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

ಅಮೇರಿಕದ ನ್ಯೂಯಾರ್ಕ್ ಮತ್ತು ನ್ಯೂ ಜೆರ್ಸಿ ರಾಜ್ಯಗಳ ನಡುವ ಗುಡ್ಡಗಾಡುಗಳ ಮರೆಯಲ್ಲಿ ಒಂದೊಂದೂ ನದಿ ಹರಿಯುತ್ತದೆ. ಇದರ ದಂಡೆಯಲ್ಲಿ ಪ್ರಕೃತಿಯ ಮಡಿಲಲ್ಲಿ ನದಿಯನೇ ಬೆರೆಸಿನ ಗ್ರಾಮ ನೆಲಸಿದೆ. ಅಲ್ಲಿಯ ಚರ್ಚಿನಲ್ಲಿ ಪ್ರತಿ ಭಾನುವಾರ ಪ್ರವಚನ ನಡೆಯುತ್ತಿದ್ದಾಗ ಮತ್ತು ಉಚಿತ ಶಿಕ್ಷಣ ಕೊಡಲ್ಪಡುತ್ತಿದ್ದಾಗ ಆದರಿಂದ ಪ್ರಯೋಜನ ಹೊಂದಲು ಬರುತ್ತಿದ್ದವರಲ್ಲಿ ಆಯುಡುಗಿಯೂ ಸೇರಿದ್ದಳು.

ಒಂದು ಬುಧವಾರ ದಿನ ಬಹಳವರಿಗೆ ದಾನಮಾಡಲಿಕ್ಕೋಸ್ಕರ ಈ ಚರ್ಚಿಗೆ ಬಟ್ಟೆ ಬರೆಗಳಿಂದ ಕೂಡಿದ ನಾಲ್ಕಾರು ಪೆಟ್ಟಿಗೆಗಳನ್ನು ನ್ಯೂಯಾರ್ಕಿನಿಂದ ಉದಾರಿಗಳು ಕಳಿಸಿದ್ದರು—ಪಾದ್ರಿಗಳು ಮೊದಲನೆಯ ಪೆಟ್ಟಿಗೆಯನ್ನು ತೆರೆದು ವಸ್ತ್ರಗಳ ವಿತರಣೆ ಮಾಡುವ ಹೊತ್ತಿಗೆ ಸರಿಯಾಗಿ ಆ ಹುಡುಗಿ ಚರ್ಚನ್ನು ಪ್ರವೇಶಿಸಿದಳು. ಅವಳನ್ನು ನೋಡಿದರೆ, ಕರುಣೆ ಉಕ್ಕಿಬರುತ್ತಿದ್ದಿತು; ಅವಳ ಕಾಲಿನಲ್ಲಿ ಪಾದರಕ್ಷೆ ಇರಲಿಲ್ಲ; ಅವಳ ಅಂಗಿ ಹರಿದಿತ್ತಲ್ಲದೆ, ಅವಳ ದೇಹಕ್ಕೆ ಬಹಳ ಚಿಕ್ಕದಾಗಿ ತೋರುತ್ತಿದ್ದಿತು; ಅದರಲ್ಲಿ ತೇಪೆ ಹಾಕಿರದ ಜಾಗ ಇಲ್ಲವೇನೊ ಎಂದೆನಿಸುತ್ತಿದ್ದಿತು. ಅವಳು ಸುಮ್ಮನೆ ಹಿಂದಿನ ಬೆಂಚಿನ ಮೇಲೆ ಬಟ್ಟೆಗಳ ವಿತರಣೆಯಾಗುವುದನ್ನೆ ನೋಡುತ್ತ ಕುಳಿತಳು.

ಪಾದ್ರಿಗಳೀಗ ಎರಡನೆಯ ಪೆಟ್ಟಿಗೆಯ ಬಾಗಿಲು ತೆರೆದರು—ಅದರಿಗೆ ಮೊದಲೇ ಆ ಹುಡುಗಿ ಈ ಪೆಟ್ಟಿಗೆಯಿಂದ ಸಿಕ್ಕಿದ್ದು ಎಳೆ ಹಸುರು ಬಣ್ಣದ, ಕಾಳಿಯ ಜಾತಿಗೆ ಸೇರಿದ ಸುಗಂಧ ಗಿಡದ ಬಣ್ಣವನ್ನೆ ಹೋಲುವ, ಕಣ್ಣಾ

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	8
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂತ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ನೋಗಿನಲ್ಲಿ	0	12
12	ಗಂಧಾರೀಪ	1	0
13	ದೇಶಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ನೇನಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾರ	2	4
20	ಮೂರು ಪ್ರವಚನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರಗಳು ಅಥವಾ ದಶಾವತಾರಗಳು	0	12
25	ಆಕಾಶ ನೆಲಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸತ್ಯಸಾಗರ	0	12
32	ಜಮೀನ್ದಾರ	1	8
33	ಬಾಗಿನ ಬಡಗು	1	4
34	ಲೋಕಾಯುಪ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ವಾಕಿಸ್ಸರು ಬೇಕಾಗಿದ್ದಾರೆ.
ಕಿರಿಯರ ಪ್ರವಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಅಮೇರಿಕದ ಕತೆ—

ನೋವು ಕಾಣದ ಜೀವ

ಕೋಳ್ಯೆಸುವ ಜರತಾರಿಯ ಕೆಲಸಗಳಿಂದ ಕೂಡಿದ್ದ ಸಾಧಾರಣ ಎಂಟು ವರ್ಷ ಪ್ರಾಯದ ಹುಡುಗಿಗೆ ಒಷ್ಟಿದ ಒಂದು ಗವನ. ಅದನ್ನು ನೋಡಿದ ಎಲ್ಲರೂ ಬೆರಗಾದರು—ಯಾರಿಗೂ ಅನ್ನು ಉತ್ತಮವಾದ ಗವನನ್ನು ಪಡೆದುಕೊಳ್ಳುವ ಯೋಗ್ಯತೆ ತಮಗಿದೆ ಎಂದು ತೋರಲಿಲ್ಲ. ಪಾದ್ರಿಗಳು ಇದನ್ನು ಯಾರಿಗೆ ಕೊಡಲಿ ಎಂದು ವಿಚಾರಿಸಿ ನಿರ್ಣಯಿಸುವಷ್ಟರಲ್ಲಿ ಚೋದ್ಯವೊಂದು ನಡೆಯಿತು—ಹಿಂದಿನ ಸಾಲಿನಲ್ಲಿದ್ದ ಆ ಹುಡುಗಿ, ಸಟಕ್ಕನೆ ನೆಗೆದೋಡಿ ಬಂದು, ಪಾದ್ರಿಗಳ ಕೈಯಿಂದ ಆ ಗವನನ್ನು ಎಳೆದು ತೆಗೆದುಕೊಂಡು, ಬಾಣದಂತೆ ಹೊರಗೋಡಿದಳು.

ಮುಂದೆ ರಾಮೋಪೋ ಗ್ರಾಮಸ್ಥರು ಆ ಹುಡುಗಿಯ ಮೈ ಮೇಲೆ ಆ ಎಳೆ ಹಸುರು ಬಣ್ಣದ ಗವನನ ಕೊರತು ಬೇರಾವುದೇ ಸೋಷಾಕನ್ನು ನೋಡಲಿಲ್ಲ. "ಲ್ಯಾವೆಂಡರ್" ಎಂದು ತುಳಸಿಯ ಜಾತಿಯ ಎಳೆ ಹಸುರು ಬಣ್ಣದ ಸುಗಂಧ ಗಿಡಕ್ಕೆ ಇದ್ದ ಹೆಸರಿನಿಂದರೇ ಆ ಹುಡುಗಿ ಗ್ರಾಮಸ್ಥರ ಬಾಯಿಯಲ್ಲಿ ನೆಲೆಗೊಂಡಳು. ಹಗಲೆನ್ನದೆ, ರಾತ್ರಿಯೆನ್ನದೆ, ಮಳೆಯೆನ್ನದೆ, ಚಳಿಯೆನ್ನದೆ, ಸದಾಕಾಲ, ದಿನದ ಇಪ್ಪತ್ತನಾಲ್ಕೂ ತಾಸು ಆ ಹುಡುಗಿ ತ್ರಸುರು ವರ್ಣದ ಆ ಗವನನ್ನು ಹಾಕಿಕೊಂಡಿರುತ್ತಿದ್ದಳು—ಅದು ಅವಳ ಮೈಗೆ, ಪ್ರಕೃತಿಯ ಸಂಸರ ಹಿನ್ನೆಲೆಯಲ್ಲಿ, ಬಹಳ ಚೆನ್ನಾಗಿ ಒಪ್ಪುತ್ತಿತ್ತೆಂದು ಎಲ್ಲರೂ ಹೇಳುತ್ತಿದ್ದರು.

ಆದರೆ ಮುಂದಿನ ಚಳಿಗಾಲದಲ್ಲಿ ದುರಂತವೊಂದು ಸಂಭವಿಸಿತು—ಗರ್ಭಾಸೇ ಇಸವಿ ದ ಡಿಸೆಂಬರ ತಿಂಗಳಲ್ಲಿ ಹಿಂದೆಂದೂ ಕಾಣಿಸದಷ್ಟು ಉಗ್ರವಾದ ಶೀತಗಾಳಿ ಬೀಸತೊಡಗಿತು. ಹವಾಮಾನವು ಇಳಿದು ಹೆಪ್ಪುಗಟ್ಟುವ ಮಿತಿ (೩೨°F) ಗಿಂತಲೂ ಇಳಿ ಕಡಿಮೆಯಾಯಿತು. ಗ್ರಾಮಸ್ಥರು ಸ್ವಕೃತ ನಿತ್ಯದ ಕೆಲಸಗಳಿಗಾಗಿ ಹೊರಗೆ ಬರಬೇಕಾಗುತ್ತಿದ್ದರೂ ಚಳಿಯನ್ನು ಸಹಿಸಲು ಸಾಧ್ಯವಾಗುವಂತೆ ತುಂಬ ಬೆಚ್ಚನೆಯ ಉಡುಪನ್ನು ಹಾಕಿಕೊಂಡಿರುತ್ತಿದ್ದರು. ಆದರೆ, ಪಾಪ, ಆ ಹುಡುಗಿಗೆ ಬೆಚ್ಚನೆಯ ಉಡುಪಲ್ಲಿ ಸಿಗಬೇಕು? ಗ್ರಾಮಸ್ಥರು ಕೊಡ ಮಾಡಿದವರಾತಿಳಿ ಹಸುರು ವರ್ಣದ ಗವನನ ಬೋಷಾಕನ್ನು ಆ ಹುಡುಗಿ ಧರಿಸುವುದಕ್ಕೆ ಸಿದ್ಧಳಿರುವುದು ಸಂಶಯದ ಮಾತನನುಸುತ್ತಿತ್ತೆಂದು ತೋರುತ್ತದೆ. ಅಂತೂ ಆ ಹುಡುಗಿ ತನ್ನ ಪ್ರಿಯವಾದ ಬೋಷಾಕಿನಲ್ಲಿ ಚಳಿಯನ್ನು ಸಹಿಸಲಾರದೆ ಪ್ರಾಣತ್ಯಾಗ ಮಾಡಿದಳು.

ಹತ್ತು ವರ್ಷಗಳು ಕಳೆದಿರಬಹುದು ಗ್ರಾಮಸ್ಥರು ಸಾಧಾರಣವಾಗಿ ಅವಳನ್ನು ಮರೆತಿದ್ದರೂ ನೆನಪು ಮಟ್ಟಿಸುವ ಅದ್ಭುತ ಘಟನೆಯೊಂದು ನಡೆಯಿತು— ಒಂದು ಶನಿವಾರ ಟೊಕ್ಸೆದೊ ಪಾರ್ಕ್ ನಗರದಲ್ಲಿ ನಡೆಯಲಿದ್ದ ನೃತ್ಯಕೂಟಕ್ಕೆ ಹೋಗಲು ಪ್ಯಾಸುಬ್ಬನ್ ಕಾರ್ಖಾನೆಯ ಇಬ್ಬರು ಹುಡುಗರು ತನ್ನ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ರಾಮೋಪೊ ಹೊಳೆಯ ಕಣಿವೆಯಲ್ಲಿ ಕಾರು ಬರುತ್ತಿದ್ದಾಗ, ಅವರಿಗೆ ರಸ್ತೆಯ ಪಕ್ಕದಲ್ಲಿ ಒಬ್ಬ ಚೆಲುವೆ ನಿಂತಿರುವುದು ಗೋಚರಿಸಿತು. ಆಗ ಸೂರ್ಯಾಸ್ತವಾಗಿ ಎರಡು ಗಳಿಗೆಯಾಗಿರಬಹುದು—ಅವಳ ರೂಪ ಸೌಂದರ್ಯ ಎಂಥವರನ್ನೂ ಆಕರ್ಷಿಸಿ ನಿಲ್ಲಿಸುತ್ತಿದ್ದರೆ, ಹೊಳೆಯುವ ನೀಲಿ ಕಣ್ಣುಗಳು, ಮುಖದ ಮೇಲಿನ ಮುಸಿನಗೆ, ಬಂಗಾರದ ಎಳೆಗಳಂತಿದ್ದ ಕೂದಲು, ಶ್ವೇತ ವರ್ಣದ ಮೈ, ತುಂಬಿದ್ದ ಗುಲಾಬಿ ವರ್ಣದ ಕೆನ್ನೆ ಎಲ್ಲವೂ ಅಪ್ಸರೆಯ ನೆನಪು ಮಾಡಿಕೊಡುತ್ತಿದ್ದವೆಂದು ಬೇಕಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಅವಳು ತೊಟ್ಟುಕೊಂಡಿದ್ದ ಆ ಎಳೆ ಹಸುರು ವರ್ಣದ ಗವನ—ಅವಳನ್ನು ಈ ವೇಷದಲ್ಲಿ ಕಂಡ ಹುಡುಗರು ಕಾರು ನಿಲ್ಲಿಸಿ ತಮ್ಮೊಡನೆ ಬರಬೇಕೆಂದು ವಿನಂತಿಸಿ ಅವಳನ್ನು ಕರೆದೊಯ್ದರು.

ನೃತ್ಯ ಕೂಟದಲ್ಲಿ ಆ ಹುಡುಗಿ ಎಲ್ಲರೊಡನೆ ಸೇರಿಕೊಂಡಳು. ತನ್ನ ಹೆಸರು ಲ್ಯಾವೆಂಡರ್ ಎಂದು ಪರಿಚಯ ಮಾಡಿಸಿಕೊಟ್ಟಳು. ಕಾರ್ಯಕ್ರಮ ಮುಗಿದಾಗ ನಡು ರಾತ್ರಿ ಸುರಿತು. ಹೊರಗೆ ಸ್ನೆ ಕೊರೆಯುವ ವಿಶೇಷ ಚಳಿ—ಈ ಹುಡುಗಿ ಬೇಗ ಹೊರಗೆ ಹೋಗಲಿ ಎಂದು ಚಡಪಡಿಸಿದಳು. ಅವಳನ್ನು ಕಾರಿನಲ್ಲಿ ಕೂಡಿಸಿ ತಂದಿದ್ದ ಮಿತ್ರರಿಬ್ಬರಲ್ಲಿ ಒಬ್ಬ ತನ್ನ ಚೆಚ್ಚನೆಯ ತುಸ್ಪಟದ ಅಂಗಿಯನ್ನು ಅವಳಿಗೆ ಹೊದಿಸಿದುದರಿಂದ ಹುಡುಗಿ ಸಮಾಧಾನಗೊಂಡಳು. ಅದೇ ಕಾರಿನಲ್ಲಿ ಅವರುಮೂವರೂ ಮರಳಿದರು. ರಾಮೋಪೊ ಕಣಿವೆಯಲ್ಲಿ ಗುಡಿಸಿಲೊಂದರ ಬಳಿ ಅವಳು ಕಾರನ್ನು ನಿಲ್ಲಿಸಿ, ಮತ್ತೆ ನೋಡೋಣ ಎಂದು ಹುಡುಗರನ್ನು ಕಳಿಸಿಕೊಟ್ಟಳು. ಕಾರು ಮರೆಯಾಗುವವರೆಗೂ ಅವಳು ಸಂತೋಷದಿಂದ ಕೈಯಾಡಿಸುತ್ತಿದ್ದುದನ್ನು ಹುಡುಗರು ಗಮನಿಸಿದರು.

ಮರುದಿನ ಮುಂಜಾನೆ ತನ್ನ ತುಸ್ಪಟದ ಅಂಗಿ ಆ ಹುಡುಗಿದು ಹತ್ತಿರವೇ ಇದೆ ಎಂದು ಅದನ್ನು ತೊಡಿಸಿದ್ದ ಹುಡುಗನಿಗೆ ನೆನಪಾಯಿತು. ಅವನು ತನ್ನ ಸಂಗಾತಿಯೊಡನೆ ರಾಮೋಪೊ ಕಣಿವೆಯ ದಾರಿಯಲ್ಲಿ ಕಾರು ನಡೆಸುತ್ತಾ ಆ ಗುಡಿಸಿಲಿನ ಮುಂದೆ ಬಂದು, ಬಾಗಿಲು ತಟ್ಟಿದನು. ಒಬ್ಬ ಪಣ್ಣು ಮುದುಕಿ ಹೊರಗೆ ಬಂದಳು. ಏನು ಎಂದು ವಿಚಾರಿಸಿದಳು. ಲ್ಯಾವೆಂಡರಳನ್ನು ಕಾಣಬೇಕಾಗಿದೆ ಎಂದು ಹುಡುಗರು ಉತ್ತರಿಸಲು ಅವಳು ವಿಸ್ಮಯದಿಂದ ಕಣ್ಣುಗಳನ್ನು ಅಗಲಿಸಿದಳು. "ನೀವು ಅವಳ ಹಿಂದಿನ ಗೆಳೆಯರೇನು?" ಎಂದು ಪ್ರಶ್ನಿಸಿದಳು. ಹುಡುಗರು ಕಳೆದ ರಾತ್ರಿ ತಾವು ಮಾಡಿದ ಕೆಲಸದಿಂದ ಈ ಮುದುಕಿ ಕೋಪಗೊಂಡಿರಬಹುದೆಂದು ತಿಳಿದು, ಅದರಿಂದ ಪಾರಾಗಲು "ಹೌದು" ಎಂದರು.

ಮುದುಕಿ ಈಗ ನಿಟ್ಟುಸಿರು ಬಿಟ್ಟಳು— "ಹಾಗಾದರೆ ನಿಮಗೆ ತಿಳಿದಿರಲಾರದು. ಅವಳು ತೀರಿ ಹೋಗಿ ಈಗ ಎತ್ತು ವರ್ಷವಾಯಿತು. ನೋಡಿ- ರಸ್ತೆಯ ಆ ಪಕ್ಕದಲ್ಲಿ, ತೋಪಿನ ನಡುವೆ ಅವಳ ಸಮಾಧಿಯನ್ನೇ ಅವಳ ನೆನಪು ಮಾಡಿ ಕೊಡುತ್ತದೆ" ಎಂದಳು. ಹುಡುಗರಿಗೆ ಇದನ್ನು ನಂಬುವುದಾಗಲಿಲ್ಲ- "ಇಲ್ಲ, ನಿನ್ನೆ ನಮಗೆ ಅವಳು ಸಿಕ್ಕಿದ್ದಳು; ಮತ್ತೆ ಕಾಣುವುದಾಗಿ ಹೇಳಿದ್ದಳು. ನೀವು ಹೇಳಿದಂತೆ ಸತ್ತು ಹೋಗಿರುವ ಹುಡುಗಿ ಯಾರೋ ಬೇರೆ ಇರಬಹುದೇನೋ" ಎಂದವರು ವಾದಿಸಿದರು. ಮುದುಕಿ ಮಾತ್ರ ತನ್ನ ಊಹೆಗೆ ದೃಢವಾಗಿ ಅಂಟಿಕೊಂಡಳು— "ಇಲ್ಲ, ಆ ಹೆಸರಿನವರು ಈ ಊರಲ್ಲಿ ಬೇರೆ ಯಾರೂ ಇಲ್ಲ; ಹಾಗೆ ನೋಡಿದರೆ ಅದು ಅವಳ ಹೆಸರೂ ಅಲ್ಲ. ಅವಳದು ಲಿಲ್ಲಿ ಎಂದು ಹೆಸರು- ಏನೋ ಸಾಯುವುದಕ್ಕೆ ಕೆಲ ತಿಂಗಳ ಮುಂಚೆ ಅವಳಿಗೊಂದು ಎಳೆ ಹಸುರು ವರ್ಣದ ಗವನನ ಮೇಲೆ ಆಶೆಯಾದ ನೋಷಾಕಾಯಿತು— ಇದನ್ನು ಕಂಡ ಗ್ರಾಮಸ್ಥರು ಲ್ಯಾವೆಂಡರ್ ಎಂದು ಅವಳಿಗೆ ಹೆಸರಿಟ್ಟರು. ಅದನ್ನು ತೊಟ್ಟುಕೊಂಡಿದ್ದಾಗ ಅವಳನ್ನು ನೋಡುವುದೇ ಒಂದು ಸಂತೋಷ .....ಈಗ ಅವಳು ತೀರಿ ಹತ್ತು ವರ್ಷವಾಯಿತು....."

ಹುಡುಗರು ದಿಗ್ಭ್ರಮೆಗೊಂದರು. ಗುಡಿಸಲಿನಿಂದ ಹೊರಟು ಕಾರನ್ನು ಹತ್ತಿದರು. ನೂರು ಗಜ ಹೋಗುವಷ್ಟರಲ್ಲಿ ಮುದುಕಿ ತೋರಿಸಿದ ಆ ತೋಪು ರಸ್ತೆಯ ಪಕ್ಕದಲ್ಲಿ ಕಂಡಿತು; ಅಲ್ಲಿಯೊಂದು ಸಮಾಧಿ ಇದ್ದುದನ್ನು ನೋಡಿ, ಕುತೂಹಲವಶರಾಗಿ ತಟ್ಟನೆ ಕಾರು ನಿಲ್ಲಿಸಿ ಅವರು ಆದರ ಬಳಿ ಮೋದರು. ಅದರ ಸುತ್ತ ಪುಲ್ಲು ಬೆಳೆದಿತ್ತಲ್ಲದೆ ಮೇಲಿನ ಬಿಳಿ ಕಲ್ಲಿನಲ್ಲಿ "ಲಿಲ್ಲಿ-೧೯೯೯" ಎಂದು ಬರೆದಿದ್ದರು..ಅದರ ಹುಡುಗರು ಒಮ್ಮೆದೆ ದಂಗು ಬಡೆದರು: ಆ ಕಲ್ಲಿನ ಮೇಲೆ ನಿನ್ನೆ ಲ್ಯಾವೆಂಡರಳಿಗೆ ತೊಡಿಸಿದ್ದ ತುಸ್ಪಟದ ಅಂಗಿ-ಮಣ್ಣು ಬಣ್ಣದ್ದು— ಅಚ್ಚುಕಟ್ಟಾಗಿ ಮಡಚಲ್ಪಟ್ಟು ಇಟ್ಟಿರಲಾಗಿದ್ದಿತು!

[ಕಾರ್ಲ್ ಕಾಮರ್]

ಚೆಸ್ಟರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ವಾರಿಯಾನ್ ನೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹೆಡತಪ್ಪಿದ ಮತ್ತು ನಿಂತುಹೋದ ಮುಟ್ಟು ಹೋಷಗೆಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಗಕ್ಕೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ಟಾಕಿಸ್ಟರು: ರಾಜಾ ಕಂಪೆನಿ, ಮಂಗಳೂರು

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೩—೦; ಮುಂಗಡ ಸ್ವೀಕಾರ ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು. ನಾಲ್ಕು ಪ್ರತಿಗಳಿಗೆ ರಿಯಾಯಿತಿ ವರಾಯಿಸಿ. ವಿಚಾರಿಸಿರಿ.

ನವಯುಗ ಪ್ರೆಸ್ ಉಡುಪಿ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳಿಸಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಚಂಚಲೆ—

ಬರೆದವರು: ಎಸ್. ಆರ್. ಕೃಷ್ಣಮೂರ್ತಿ. ಪ್ರಕಾಶಕರು: ಸುಧಾ ಪ್ರಕಾಶನ, ೨೦೧,ಜನೆ ರಸ್ತೆ, ಜಾನುಬಾಜ ಪೇಟೆ, ಬೆಂಗಳೂರು ೨. ಬೆಲೆ: ರೂ. ೧-೦-೦.

ತರುಣ ಬರೆದಗಾರ "ಎಸ್ಸಾರ್ಕೆ" ಯವರ ಈ ಕಾದಂಬರಿ "ಚಂಚಲೆ" ಯ ಹೆಸರನ್ನು ಹೊಂದಿದ್ದರೂ ಆ ಹೆಸರಿನ ನೃತ್ಯಕಲಾವಿದೆಯ ತಾಯಿ ಅಂಬುಜಮ್ಮನದೇ ಕತೆ ಇದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಚಂಚಲೆಯ ಪಾತ್ರ ಉತ್ತರಾರ್ಧದಲ್ಲಿಯಷ್ಟೇ ಬರುತ್ತದೆ. ಆದರೆ ಅವಳ ಮಾತೃಸ್ಥಾನದಲ್ಲಿರುವ ಅಂಬುಜಮ್ಮಳ ಇಡೀ ಜೀವನಕ್ಕೆ ಈ ಕಾದಂಬರಿ ಕನ್ನಡಿ ಹಿಡಿಯುತ್ತದೆ. ಅಂಬುಜಮ್ಮಳ ಜೀವನ ನಾವು ಎಷ್ಟೋ ಕಾದಂಬರಿಗಳಲ್ಲಿ ಈಗಾಗಲೇ ಓದಿರಬಹುದಾದ ರೀತಿಯದೇ ಆಗಿದೆ—ಅಂದರೆ, ಅವಳು ನಾಟಕ ಮತ್ತು ಸಿನೆಮಾಗಳ ವಾತಾವರಣದಲ್ಲಿ ಸೇರಿದ್ದು, ಕೊನೆಗೆ ಮಾಸಗೇಡಿಯಾಗಿ ಸಾಯುವುದೇ ಇಲ್ಲಿಯ ಸತ್ಯ. ಅವಳ ಮಗಳಾದ ಚಂಚಲ ತಾಯಿಯ ಕಾಪಿದ ಫಲ! ಸೃಷ್ಟ್ಯಾಬ್ಯಾಸೆಲ್ಲವೇ ಮಾಡಿಸಿಟ್ಟಿರುವ ಚಂಚಲೆಯ ಶರೀರ ಸಂಪತ್ತನ್ನು ಕಂಡು ತಾಯಿ ಅವಳಿಗೆ ನೃತ್ಯ ಕಲಿಸುವ ವ್ಯವಸ್ಥೆ ಮಾಡಿಬಿಟ್ಟಳು. ಅವಳ ಬೆಳವೆ ಮಗಳಿಗೆ ತಾಯಿಯ ಸೂಳೆಗಾರಿಕೆ ಅಸಹ್ಯವಾಯಿತು; ಹಣದ ದಾಹ ಜಾಸ್ತಿಯನ್ನು ತಂದಿತು. ಅವಳು ರಂಕರನೆಂಬಗೆಳೆಯನೊಂದಿಗೆ ಓಡಿಹೋಗಿ ಹೆಚ್ಚಿನ ಸ್ಥಾನೀಯನ್ನನ್ನು ಸರ್ತನದಲ್ಲಿ ಸಂಪಾದಿಸುತ್ತಾಳೆ; ಕಲಾಕ್ಷೇತ್ರವನ್ನು ತೆರೆಯಬಹುದು ಸಿದ್ಧಿಯನ್ನು ಪಡೆಯುತ್ತಾಳೆ; ಕೊನೆಗೆ ನೃತ್ಯಗುರುವಿನ ಮೇಲೆಯೆಂತೆ—ಹಾಗು ಎಡೆಯ ಕರೆಯಂತೆ—ರಂಕರನ ಕೈಹಿಡಿಯುತ್ತಾಳೆ. ಇವೆಲ್ಲ ನಡೆಯುವಾಗ ತಾಯಿ ಮಾತ್ರ ಎಲ್ಲೋ ಏನೋ—ಮಗಳ ಮುಂದೆ ಹೋಗಲಾರದಆತ್ಮಸ್ಥೈರ್ಯಹೀನ ಈ ತಾಯಿ ಅಂಬುಜಮ್ಮಳನ್ನು ಕಾಡುತ್ತಿರುತ್ತದೆ; ಮಗಳ ಮುಖ ಎದುರಿಲ್ಲದೆಯೇ ಅವಳು ಸಾಯುತ್ತಾಳೆ. ಅಂಬುಜಮ್ಮಳ ಕೊನೆಯ ಏಕರ ಬರಿಸುತ್ತದೆ; ಆದರೆ ಅವಳ ಸೂಳೆಗಾರಿಕೆ ಹೇಸಿಕೆಯಾಗುತ್ತದೆ. ಅವಳು ನಾಟಕದಲ್ಲಿ ಹಾಡುತ್ತಿದ್ದಾಗ ಬಳ್ಳಿಯವಳಂತಿದ್ದಳು; ಸಿನೆಮಕ್ಕೆ ಸೇರಿದೊಡನೆಯೇ ಈ ಬಾಲವಿಧವೆಗೆ ಸಂಬಂಧಪಡಕಟ್ಟನ್ನೊದೆದಳೆಂದು ನಂಬುವುದು ಕಷ್ಟ. ಒಮ್ಮೆ ರಾಲಬಾಜಾರಿ, ಚಂಚಲೆಯಂಥ ಪಾತ್ರದ ಶಿರುವಿಗೆ ಜನನವಿತ್ತ ಸೋಲಾದರೂ ಅವಳು ತನ್ನ ಹಿಂದಿನ ಗಣಧರ್ಮಗಳ ಬಲದಿಂದ ಬಳ್ಳಿಯ ಜೀವನ ನಡೆಸದೆ, ಆಡಂಬರ, ವಿಲಾಸ, ಕುಡಿತಗಳಿಗೆ ಮಾರುಹೋದಳು ಎಂಬ ಮಾತಿನಲ್ಲಿಯೂ ವಿಶ್ವಾಸ ನಿಲ್ಲುವುದು ಕಷ್ಟ. ಚಂಚಲೆ ತಾಯಿಯನ್ನು ಹುಡುಕುವ ಚಿಂತೆಯನ್ನೆ ಕೊನೆಗೆ ಬಿಟ್ಟಳೆನ್ನುವುದು ಬಹಳ ಕ್ರೂರವಾದ ವಿಚಾರ-ಪಾತ್ರಚಿತ್ರಣಕ್ಕೆ ಸಂಬಂಧಿಸಿದ ಈ ಕೆಲವಂದಗಳನ್ನು ಬದಿಗೊತ್ತಿದರೆ ಶೈಲಿ, ಮಾತಿನಸರಣಿ, ನಿರೂಪಣೆಯ ಬಗೆ ಇವೆಲ್ಲ ಹೃದಯಂಗಮವಾಗಿವೆ; ತೃಪ್ತಿ ಸಮ್ಮತ್ತವೆ. ಅಂಬುಜಮ್ಮಳ "ಶೃಂಗಾರ" ಪ್ರಕರಣಗಳು ತುಸು ಅತಿಯಾದುವೇನೋ ಎಂದು ಕೊಂಡರೆ "ಕೆತ್ತರಿ ಪ್ರಯೋಗ" ಅಗತ್ಯವೆನಿಸುವುದಿಲ್ಲ. ತಮ್ಮ ಪಾತ್ರಗಳ ಮೇಲೆ ಆಸಕ್ತಿ ಸಿಕ್ಕಿದ ಗಮನವಿಟ್ಟುಬೇಕು; ಸೂತನ ವಿಚಾರಗಳಿಗೆ ಅವಕಾಶ ನೀಡುವ ವಸ್ತುವನ್ನೆ ಆರಿಸಬೇಕು—ಆಗ "ಎಸ್ಸಾರ್ಕೆ" ತಾವು ಈಗಾಗಲೇ ಕರಗತವಾಗಿರುವ ರೇಖಾಕಲೆಯಿಂದ ಉತ್ತಮ ಸಾಹಿತ್ಯಕೃತಿಗಳ ನಿರ್ಮಾಣ ಗೈಯಬಲ್ಲರು.

ಅಪರೋಕ್ಷಾನುಭೂತಿ-

ಅನುವಾದಕರು: ಹೊಸಕೆರೆ ಅನಂತಮೂರ್ತಿ ಶಾಸ್ತ್ರಿ. ಪ್ರಕಾಶಕರು: ಎಸ್. ಎಸ್. ಎನ್ ಬುಕ್ ಡಿಪೊ, ಸಿಟಿ ಮಾರ್ಕೆಟ್, ಬೆಂಗಳೂರು ೨. ಬೆಲೆ: ರೂ. ೦-೮-೦.

ವೇದಾಂತಿಗಳಲ್ಲಿ ಶ್ರೇಷ್ಠಸ್ಥಾನವನ್ನು ಗಳಿಸಿರುವ ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರ ಕೃತಿಗಳಲ್ಲಿ "ಅಪರೋಕ್ಷಾನುಭೂತಿ" ಒಂದಾಗಿದೆ. ಇದರಲ್ಲಿರುವುದು ೧೪೪ ಶ್ಲೋಕಗಳು ಮಾತ್ರವಾದರೂ ಬ್ರಹ್ಮಜ್ಞಾನಾಪೇಕ್ಷಿಯಾದ ಮುಮುಕ್ಷುವಿಗೆ ಮಾರ್ಗದರ್ಶನ ಮಾಡಿಸುವ ರೀತಿಯಲ್ಲಿ ಅವುಗಳಿವೆ. "ನಾನು ಸ್ಥೂಲಸೂಕ್ಷ್ಮಗಳೆಂಬ ಎರಡು ವಿಧವಾದ ಶರೀರಗಳಿಗಿಂತಲೂ ಬೇರೆಯಾದವನೂ ಎಲ್ಲದರ ತಿರುಳಾದವನೂ ಎಲ್ಲದರೊಳಗಿಲ್ಲಿ ಕಾಣುವವನೂ ಎಲ್ಲಕ್ಕೂ ಅತೀತನೂ ನಾನರಿತವನೂ ಪರಿಪೂರ್ಣನೂ ಆದ ಪರಮೇಶ್ವರನೇ ಆಗಿರುತ್ತೇನೆ"ಎಂಬ ನಿಶ್ಚಯಕ್ಕೆ ಶ್ರೀ ಶಂಕರರು ಮಹತ್ವವನ್ನು ಕೊಡುತ್ತಾರೆ. ವೇದೋಪನಿಷತ್ತುಗಳಿಂದಲೂ ಶ್ರುತಿಶಾಸ್ತ್ರಗಳಿಂದಲೂ ಇದಕ್ಕೆ ಸಮರ್ಥನೆಗಳನ್ನು ದೊರಕಿಸಿಕೊಂಡು "ಮಣ್ಣಿಗೆ ಗಡಿಗೆ' ಎಂಬ ಹೆಸರೂ ಚಿನ್ನಕ್ಕೆ ಆಂಡಲೆ' ಎಂಬ ಹೆಸರೂ ...ಹೇಗೆ ಬಂದಿದೆಯೋ ಹಾಗೆ ಪರಮಾತ್ಮನಿಗೆ 'ಜೀವ' ಎಂಬ ಹೆಸರಾಗಿದೆ... ಮಣ್ಣೇ ಗಡಿಗೆ' ಎಂಬ ಹೆಸರಿನಿಂದಲೂ ನೂಲೇ 'ಬಟ್ಟೆ' ಎಂಬ ಹೆಸರಿನಿಂದಲೂ ತೋರುವಂತೆ ಚೈತನ್ಯವೇ ಜಗತ್ತಿನ ಹೆಸರಿನಿಂದ ತೋರಿಕೊಳ್ಳುತ್ತದೆ" ಎಂದವರು ಹೇಳುತ್ತಾರೆ; ನಾವು ಕಟ್ಟುಕಲ್ಪನೆಗಳನ್ನು ಕಳೆದುಕೊಂಡು ವಸ್ತುಸ್ವರೂಪವನ್ನು ಅರಿತುಕೊಳ್ಳಬೇಕೆಂದು ಉಪದೇಶಿಸುತ್ತಾರೆ ಜ್ಞಾನಿಯಾದವನಿಗೆ ದೇಹಾತ್ಮಭಾವವು ಅಳಿಸಿ ಹೋಗುತ್ತದೆ; ಜ್ಞಾನಿಯ ದೃಷ್ಟಿಕೋನದಿಂದ ಎಲ್ಲವೂ ಪರಮಾತ್ಮಸ್ವರೂಪವೇ ಆಗಿರುವುದರಿಂದ ಹಿಂದಿನ ಜನ್ಮವೆಂಬ ಮಾತಿಗೂ ಅಧಾರ ಉಳಿಯುವುದಿಲ್ಲ; ಆಗ ಪ್ರಾರಬ್ಧ ಕರ್ಮವೆಂಬುದಕ್ಕೆ ಸ್ಥಾನವೇ ಸಿಗುವುದಿಲ್ಲವೆನ್ನುತ್ತಾ ಆಚಾರ್ಯರು ಅಕ್ಕಿಯಾಗುವವರೆಗೂ ಭತ್ತವನ್ನು ಕುಟ್ಟುತ್ತಿರಬೇಕಾದಂತೆ ಬ್ರಹ್ಮಜ್ಞಾನ ಪ್ರಾಪ್ತವಾಗುವವರೆಗೆ ಸಾಧನೆಮಾಡಬೇಕಾದ ಅವಶ್ಯಕತೆಯನ್ನು ಪ್ರತಿಪಾದಿಸಿ ಯಮನಿಯಮಾದಿಸಿದಿ ಧ್ಯಾನಗಳನ್ನು ವಿವರಿಸಿದ್ದಾರೆ. ಆದರೆ ಪತಂಜಲಿಗಿಂತ ಭಿನ್ನವಾದ, ವ್ಯಾಪಕವಾದ ಅರ್ಥಗಳನ್ನು ರಾಜಯೋಗದ ಈ ಪಾರಿಭಾಷಿಕ ಶಬ್ದಗಳಿಗೆ ವಿವರಣೆಯಾಗಿ ಅವರು ಕೊಟ್ಟಿದ್ದಾರೆ. ಇದು ಸಯುಕ್ತಿಕವಾಗಿದೆ; ಬುದ್ಧಿಗೆ ಸಮ್ಮತವೆನಿಸುತ್ತದೆ. ಅನುವಾದಕರು ಚುಟುಕದಲ್ಲಿ ತಮ್ಮ ಕೆಲಸವನ್ನು ಚೊಕ್ಕದಾಗಿ ಮಾಡಿದ್ದಾರೆ; ಕೊನೆಕೊನೆಗೆ ಅವರು ಶ್ಲೋಕಾರ್ಥವನ್ನು ಸ್ವಲ್ಪಮಟ್ಟಿಗೆ ವಿವರಿಸಲು ಹೋದಂತೆ ಭಾಸವಾಗುತ್ತದೆ. ಇಂಥ ಅನುವಾದಗಳಿಗೆ ತುಂಬ ವಿವರಣಾತ್ಮಕವಾದ ಟಿಪ್ಪಣಿ ಇದ್ದರೆ ಬಹಳ ಪ್ರಯೋಜನವಾಗುತ್ತದೆ. ಗಾತ್ರವಿಸ್ತಾರದ ಭಯದಿಂದ ಹಾಗೇನೂ ಇಲ್ಲಿ ಮಾಡಿಲ್ಲ, ನಿಜ. ಆದರೂ ಶ್ರೀ ಮಧ್ವಗವದ್ಗೀತೆಯ ಪಾರಾಯಣ ಮಾಡಿ ತಿರುಳನ್ನು ಗ್ರಹಿಸುವಂತೆ ಈ ಗ್ರಂಥವನ್ನೂ ಮನನಮಾಡಿ ಅನುಷ್ಠಿಸಿ, ಆಧ್ಯಾತ್ಮಿಕ ಶ್ರೇಯಸ್ಸನ್ನು ಪಡೆಯಬಹುದು. ವಿದ್ವಾಂಸರಾದ ಅನುವಾದಕರಿಗೆ ಧನ್ಯವಾದಗಳು!

ಲಘು ಪರಿಚಯ

● ಸುರತ್ಕಲ್ಲಿನ ವಿದ್ಯಾದಾಯಿನಿ ಹೈಸ್ಕೂಲಿನ ವಿದ್ಯಾರ್ಥಿ ಸಂಸ್ಥೆಯವರು "ನವೋದಯ" ಎಂಬ ತಮ್ಮ ಮುಖಪತ್ರದ ಆರನೆಯ ಸಂಚಿಕೆಯನ್ನು ಬಹಳ ಸುಂದರವಾಗಿ ಹೊರಡಿಸಿದ್ದಾರೆ. ಕನ್ನಡ—ಹಿಂದಿ—ಇಂಗ್ಲೀಷುಗಳಲ್ಲಿ ಓದಲು ಸೊಗಯಿಸುವ ವಿಚಾರ ಪ್ರಚೋದನೆ ಮಾಡುವ ಹಾಗು ಮನಸ್ಸನ್ನರಳಿಸುವ ನಾನಾ ಬಗೆಯ ಚಿಕ್ಕ ಲೇಖನಗಳು ಇದರಲ್ಲಿವೆ. ಮುದ್ರಣ ಹಾಗು ಸಂಪಾದನ ಕಾರ್ಯ ತೃಪ್ತಿಕರವಾಗಿದೆ. ವಿದ್ಯಾರ್ಥಿಗಳಿಗೆ ಶ್ರೇಯಸ್ಸನ್ನು ಕೋರುತ್ತೇವೆ.

● ಪುತ್ತೂರಿನ ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್, ಬಿ. ಜಿ. ಎಲ್., ಇವರು ಸುಮಾರಾಣಿ ಬೆಲೆಗೆ "ಭಗವಾನ್ ಶ್ರೀ ರಮಣ ಮಹರ್ಷಿಗಳ ಉಪದೇಶ ಸಾರ" ಎಂಬ ಚಿಕ್ಕ ಪುಸ್ತಕವನ್ನು ಅನುವಾದಿಸಿ, ಪ್ರಕಟಿಸಿದ್ದಾರೆ. ಇದರಲ್ಲಿ ಬ್ರಹ್ಮ ಶ್ರೀ ವಾಸಿಷ್ಠಗಣಪತಿ ಶಾಸ್ತ್ರಿಗಳು ಬರೆದ ಸಂಸ್ಕೃತ ಭಾಷೆಯ ಶ್ಲೋಕಗಳೂ ಪದ್ಯರೂಪದಲ್ಲಿ ಅವುಗಳ ಅನುವಾದವೂ ಇವೆ. ಅನುವಾದ ಕಾರ್ಯ ಚೆನ್ನಾಗಿಲ್ಲ; ಸಮರ್ಪಕವೂ ಆಗಿಲ್ಲ—ಪದ್ಯರೂಪದಲ್ಲಿ ಮಾಡಿರುವುದರಿಂದ ಅರ್ಥವೂ ಸುಲಭದಲ್ಲಿ ಆಗುವುದಿಲ್ಲ; ಪದ್ಯಗಳಿಗೆ ರಾಗ, ತಾಳಗಳನ್ನು ಕೊಟ್ಟಿದ್ದರೂ ಛಂದಸ್ಸು ಸರ್ವತ್ರ ಹೊಂದಿಕೊಳ್ಳುವುದಿಲ್ಲ. ಗದ್ಯಾನುವಾದ ಮಾಡುತ್ತಿದ್ದರೆ ಉಪಯುಕ್ತವಾಗುತ್ತಿತ್ತೆಂದೂ ಈ ಲೋಪದೋಷಗಳಿಗೆ ಎಡೆ ಇಲ್ಲದಿರುತ್ತಿತ್ತೆಂದೂ ನನಗೆ ತೋರುತ್ತದೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.
ಸಿರಿಯ ದೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಅಮೃತಾಂಜನ
ಎಲ್ಲಾ ತರದ ನೋವುಗಳಿಗೆ ಸಿದಿತ ಮದ್ದು
50 ವರ್ಷ ಹಳೆಯದು
ಹಾಲಿಯಾ ಫಾರ್ಮ್
ಅಮೃತಾಂಜನ ಮಾರ್ಗ, ಕಲ್ಕತ್ತಾ-29

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ವಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

Printed & Published by K. K. Shetty at the Navayuga Press, Udipi S. India

AVAYUGA
EPENDENCE
Y SPECIAL
1955

ನವಯುಗ

ಸ್ವಾತಂತ್ರ್ಯ
ದಿನೋತ್ಸವ ಸಂಚಿ
೧೯೫೫
(ಬೆಲೆ 0—2—0)

(ತಾ 30-6-1955 ರಂದು ನಮ್ಮ ಅಂಕೆ ಸಂಖ್ಯೆಗಳು)		
ಅಧಿಕೃತ ಭಂಡವಾಳ	ರೂ.	56,00,000
ಚೆತ್ತ ಭಂಡವಾಳ	ರೂ.	32,11,000
ತೆತ್ತು ಬಂದ ಭಂಡವಾಳ	ರೂ.	25,55,737
ಕ್ಷೇಮ ನಿಧಿ	ರೂ.	13,50,000
ಠೇವಣಾತಿಗಳು	ರೂ	6,10,00,000
ಚಲಾವಣೆ ಭಂಡವಾಳ	ರೂ	7,32,00,000

ದಕ್ಷಿಣ ಭಾರತದ **93** ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ನೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

(1925 ರಲ್ಲಿ ಸ್ಥಾಪಿತವಾದುದು)

ಧನಿಕ, ಬಡವನೆಂಬ ಭೇದವಿಲ್ಲದೆ ಪ್ರತಿಯೊಬ್ಬರಿಗೂ ತಕ್ಕ ಸಹಿವಾಟನ್ನು ಕಲ್ಪಿಸಿ ಕೊಡುತ್ತಿರುವ ಒಂದೇ ಒಂದು ಬ್ಯಾಂಕು.

"ಪಿಗ್ಮಿ" ಡಿಪೋಜಿಟ್ ಮತ್ತು ಇನ್ನಿತರ ವ್ಯವಹಾರಗಳಿಗೆ ನಿಮಗೆ ಸಮೀಪವಿರುವ ಮದ್ರಾಸು, ಮುಂಬಯಿ, ಆಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ

THE CANARA INDUSTRIAL & BANKING SYNDICATE LTD.

Head Office: UDIPI, S. India.

ESTD: 1925



ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

ನಿರಖು ರೇವಣಾತಿ		
24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD, MULKI.

ಪ್ರಾಚೀನ ತುಳುನಾಡು
(ಎನ್ ಎಸ್ ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಗೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ ಕ್ಷತ್ರಿಯನಲ್ಲಿಗೆ ಒಲಿದಿದ್ದ ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು ಆ ದುರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು' (ಪ್ರೊ! ಎಂ ಆರ್ ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ ಬೆಲೆ 0-6-0

ಮುರಲಿ

ನೋಲ್ಲರಗತಿಯ ಕವಿತೆಗಳ ಸಂಗ್ರಹ ಬೆಲೆ(0-12-0

ಮುನ್ನುಡಿಕಾರರು ಶ್ರೀ ಕಯ್ಯಾರ ಕಿಞ್ಞಣ್ಣ ರೈ)

ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ

ನವಭಾರತ ಪುಸ್ತಕ ಬಂಡಾರ ಉಡುಪಿ

ಸೂಚನೆ

'ನವಯುಗ'ದ 34ನೆಯ ಸಂಪುಟವು ಇದೇ ಅಗಸ್ಟ್ ಅಂತ್ಯಕ್ಕೆ ಮುಗಿಯುತ್ತದೆ ಸೆಪ್ಟಂಬರದಿಂದ 3 ನೆಯ ವರ್ಷವು ಆರಂಭವಾಗುತ್ತದೆ ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣ'ನ್ನೂ ಮುಂದಿನ ವರ್ಷದ ಚಂದಾಹಣವನ್ನೂ ಬೇಗನೆ ಕಳುಹಿಸಬೇಕೆಂತೆ ವಿನಂತಿ

ವಾರ್ಷಿಕ ಚಂದಾಹಣ ರೂ 5—12—0

ನವಯುಗ ವಾರಪತ್ರಿಕೆ, ಉಡುಪಿ.

ಮೈಸೂರು ಟೈಪ್ ಫೌಂಡ್ರಿ,
ಬೆಂಗಳೂರು — 2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ

ಮೈಸೂರು ಟೈಪ್ ಫೌಂಡ್ರಿಯಲ್ಲಿ

ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ

ವಿವರಗಳಿಗೆ ಇಂದೇ ಬರೆಯಿರಿ

The Mysore Type Foundry,
GANDHI NAGAR, BANGALORE-2.

ದಿ ಕೋಮನ್‌ವೆಲ್ತ್‌ನವರ ಪ್ರಖ್ಯಾತಿಪಟ್ಟ
ಉತ್ತಮ ತರಗತಿಯವೆಂದು ಸರ್ವತ್ರವೂ ತೃಪ್ತಿಪಡಿಸಿದ

ಬಾಸೆಲ್ ಮಿಶನ್
ಹಂಚು ದಂಬೆ

ಇತ್ಯಾದಿಗಳನ್ನು ನನ್ನ ಮುಖಾಂತ್ರ ಕೊಂಡುಕೊಳ್ಳಿರಿ.

ಕಾರ್ನಾಡ್ ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಬಸ್ ಸ್ಟೇಂಡಿನ ಹತ್ತಿರ, ಉಡುಪಿ ದ ಕ

KARNAD PANDURANGA RAO,
Commission Agent, Near Bus Stand, UDIPI, S K.

ಪೂರ್ಣ ಪರೀಕ್ಷೆಗಳಿಗೆ ನಿಲ್ಲುವ ಬಾಸೆಲ್ ಮಿಶನ್ ಹಂಚುಗಳನ್ನು ಕೊಂಡುಕೊಳ್ಳಿರಿ

ವರ್ಷ ೩೪ Vol. 34
ವಾರ ೪೯ No. 49

ನವಯುಗ

ಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ,
ಮದರಾಸು ಸರಕಾರದ ಆರೋಗ್ಯ ಮಂತ್ರಿ

ಸಂಚಾಲಕ ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ.

NAVAYUGA

INDEPENDENCE DAY SPECIAL 1955

ಅಶೋಕನ ವಂಶಜ - ನೆಹರು

ಬರೆದವರು ಡಾ ಹರೆಕೃಷ್ಣ ಮೆಹತಾಬ

ಕಲ್ಯಾಣ ರಾಷ್ಟ್ರವನ್ನು ಕಟ್ಟಲು ಮತ್ತು ಅಹಿಂಸೆಯನ್ನು ರಾಜಕಾರಣದಲ್ಲಿ ಅಳವಡಿಸಿಕೊಳ್ಳಲು ಅಶೋಕ ಚಕ್ರವರ್ತಿಯು ನಡೆಸಿದ ಪ್ರಯತ್ನಗಳ ಅದ್ಭುತ ವಿಕಾಸವನ್ನು ನಾವು ಪ್ರಧಾನಿ ನೆಹರುಗಳ ಚಟುವಟಿಕೆಗಳಲ್ಲಿ ಈಗ ಗುರುತಿಸಬಹುದಾಗಿದೆ. ಈ ಸವಾಲಿನ ಕತೆಯನ್ನು ರೋಮಾಂಚಕವಾಗಿ ಮುಂಬಯಿಯ ರಾಜ್ಯಪಾಲರೂ ಕಾಂಗ್ರೆಸಿನ ಪ್ರಮುಖರಲ್ಲೊಬ್ಬರೂ ಆಗಿರುವ ಡಾ. ಮೆಹತಾಬರು ಇಲ್ಲಿ ಹೇಳಿದ್ದಾರೆ.

೧೯೪೨ನೇ ಜನವರಿಯ ಮಧ್ಯದಲ್ಲಿ ಆಗ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಮೌಲಾನಾ ಅಝಾದರಿಂದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ವರ್ಧಾ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಬೇಕೆಂದು ವಿನಂತಿಸಲ್ಪಟ್ಟ ಬಳಿಕ ಮಹಾತ್ಮಾ ಗಾಂಧೀಜಿಯವರು ಅಹಿಂಸಾತ್ಮಕ ವಿಧಾನದಿಂದ ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸುವುದು ಹೇಗೆಂದು ವಿವರಿಸಿದರು. ಅಲ್ಲದೆ ವ್ಯವಹಾರದಲ್ಲಿ ದೇಶದ ಸಮಸ್ಯೆಗಳ ಪರಿಹಾರಕ್ಕೆ ಅಹಿಂಸಾತ್ಮಕ ವಿಧಾನವನ್ನು ಅನುಸರಿಸಬಲ್ಲ ತಮ್ಮ ಉತ್ತರಾಧಿಕಾರಿಯನ್ನೂ ಹೆಸರಿಸಿದರು. ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಗಾಂಧೀಜಿ ಹೀಗೆಂದರು—

"ನನ್ನ ಮಟ್ಟಿಗೆ ಅಹಿಂಸೆಯೇ ಧರ್ಮ ಮೂಲವಾದ ವಿಶ್ವಾಸ; ನನ್ನ ಜೀವನದ ಉಸಿರು. ಆದರೆ ಆಗಾಗಿನ ಅನೌಪಚಾರಿಕ ಮಾತುಕತೆಯಲ್ಲಿ ಹೊರತು ನಾನೆಂದೂ ಭಾರತದ ಮುಂದೆಯಾಗಲೀ ಬೇರೆ ಯಾರೊಡನೆಯೇ ಆಗಲೀ ಅಹಿಂಸೆಯನ್ನು ಧರ್ಮ ಮೂಲವಾದ ವಿಶ್ವಾಸದ ರೂಪದಲ್ಲಿ ಮಂಡಿಸಿಲ್ಲ. ನಾನು ಕಾಂಗ್ರೆಸಿನ ಮುಂದೆ ಅದನ್ನು ರಾಜಕೀಯ ಉದ್ದೇಶಕ್ಕೋಸ್ಕರ, ರಾಜಕೀಯ ಪ್ರಶ್ನೆಗಳ ಪರಿಹಾರಕ್ಕೋಸ್ಕರ ಮುಂಡಿಸಿದೆನು....ಒಬ್ಬರು ಜವಾಹರಲಾಲರನ್ನು ಹೆಸರಿಸಿ ನನ್ನನ್ನು ಅಗಲಿಸಿದ್ದಾರೆ. ನನ್ನನ್ನು ಬೇರ್ಪಡಿಸುವುದಕ್ಕೆ ಭಿನ್ನಾಭಿಪ್ರಾಯಗಳಿಗಿಂತಲೂ ಹೆಚ್ಚಿನದು ಬೇಕಾಗುತ್ತದೆ. ನಾವು ಸಹಕಾರ್ಯಕರ್ತರಾಗಿ ಕೆಲಸ ಮಾಡ ತೊಡಗಿದ ಗಳಿಗೆಯಿಂದಲೇ ನಮ್ಮಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಇರುತ್ತಾ ಬಂದಿವೆ. ಆದಾಗ್ಯೂ ಸಹ, ನಾನು ಕೆಲವು ವರ್ಷಗಳ ಹಿಂದೆಯೇಳುತ್ತಾ ಬಂದಿದ್ದ ಮಾತನ್ನೆ ಈಗಲೂ ಹುನರುಚ್ಚರಿಸಿ ಜವಾಹರಲಾಲರೇ ನನ್ನ ಉತ್ತರಾಧಿಕಾರಿ ಎನ್ನುತ್ತೇನೆ..."

ಮಹಾತ್ಮರ ಈ ಭವಿಷ್ಯದ ಹದಿಮೂರು ವರ್ಷಗಳ ತರುವಾಯ ಅದರ ಯಥಾರ್ಥತೆಯನ್ನು ನ್ಯಾಯದ ಮೇದಿಕೆಯ ಮೇಲೆ ನಿರ್ಧರಿಸುವ ಪರಿಸ್ಥಿತಿಯಲ್ಲಿ ಜಗತ್ತು ಇದೆ. ಗಾಂಧೀಜಿಯವರು ಭಾರತದಲ್ಲಿ ತಮ್ಮ ಕಾರ್ಯಕಲಾಪಗಳ ಮೂಲಕ ಜಗತ್ತಿಗೆ ಶಾಂತಿ ಮಾರ್ಗವನ್ನು ತೋರಿಸಲು ಬಯಸಿದ್ದರು. ಈಗ ಜವಾಹರಲಾಲರು ಈ ಕೆಲಸವನ್ನು ಅಕ್ಷರಶಃವಾಗಿಯೂ ಸ್ಫೂರ್ತಿಯುಕ್ತವಾಗಿಯೂ ನಡೆಸಿಕೊಂಡು ಹೋಗುತ್ತಿದ್ದಾರೆ. ಇನ್ನೊಂದು ಯುದ್ಧಕ್ಕೆ ಸಿದ್ಧತೆ ಮಾಡುವ ಗದ್ದಲ ಮತ್ತು ಗಡಿಬಿಡಿಯಲ್ಲಿ— ಈ ಯುದ್ಧ ಹಿಂದಿನ ಯುದ್ಧಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಅನಾಹುತಕರವಾಗುವುದು ನಿಸ್ಸಂಶಯ—ಅಶೋಕನ ದೂರದ ವಂಶಜ ಹಾಗು ಗಾಂಧೀಜಿಯ ಹತ್ತಿರದ ಉತ್ತರಾಧಿಕಾರಿಯಾದ ಜವಾಹರಲಾಲರೊಬ್ಬರೇ ಮಾನವೀಯ ಸಮಸ್ಯೆಗಳನ್ನು ಯುದ್ಧವು ಪರಿಹರಿಸಲಾರದೆಂದೂ ಪರಸ್ಪರ ತಿಳಿವಳಿಕೆ, ಸಹಾನುಭೂತಿಗಳು ಮಾತ್ರ ಜಗತ್ತಿಗೆ ಶಾಂತಿಯನ್ನು ತರಬಲ್ಲುವೆಂದೂ ಎತ್ತರದ ಧ್ವನಿಯಲ್ಲಿ ಉಚ್ಚರಿಸುತ್ತಿದ್ದಾರೆ.

ಈ ಧ್ವನಿಯನ್ನು ಜಗತ್ತು ಒಲ್ಲದ ಮನಸ್ಸಿನಿಂದಲೋ ಎಂಬಂತೆ ಆಲಿಸುತ್ತಿದೆ. ಗಮನವನ್ನು ಸೆಳೆಯಲು ಸಹಾಯಕವಾಗುವ ಸಂಪತ್ತಾಗಲೀ ಸೈನ್ಯ ಶಕ್ತಿಯಾಗಲೀ ಇಲ್ಲದಿರುವ ಒಂದು ದೇಶದ ಪ್ರಧಾನಿಯ ಈ ಎತ್ತರದ ಮಾತನ್ನು ಕೇಳಿ ಮಹಾರಾಷ್ಟ್ರಗಳು ಎಂದಿನಂತೆ ಮುಗುಳು ನಕ್ಕವು. ಕೆಲವರು ಬಾರತವನ್ನು ಕರುಣೆಯಿಂದ ಕಂಡು ಉದಾರ ಸಹಾಯಮಾಡುವವರ ಕನಿಕರವನ್ನು ತೋರಿಸಿದರು. ಆದರೆ ಈ ಮಂತ್ರಸನ್ನಾಡು ಗುಹೆಗಳಲ್ಲಿ ಕೊರೆಯಲಾದ, ನಾವಿಂದು ವರ್ಷಗಳ ಅಸ್ತಿತ್ವದಿಂದಲೂ ಮಾಜಿಹೋಗದ ಹಾಗು ಹಳೆಯದಾಗದ ಉಪದೇಶ ವಾಕ್ಯಗಳನ್ನು ಮರೆಯಲಿಲ್ಲ. ಮೊನ್ನೆಯಷ್ಟೇ ಇನ್ನೊಬ್ಬ ಮಹಾತ್ಮ— ಮೋಹನದಾಸ ಕರಮಚಂದ ಗಾಂಧೀಜಿ—ಇದೇ ಉಪದೇಶ ವಾಕ್ಯಗಳನ್ನು ಆಧುನಿಕ ಭಾಷೆಯಲ್ಲಿ ವಿವರಿಸಿದರು. ಅವರ ಉತ್ತರಾಧಿಕಾರಿಯೆಂದು ಘೋಷಿಸಲಾದ ಮಹಾನುಭಾವರು ಈಗ ಈ ದೇಶದ ಭವಿಷ್ಯವನ್ನು ರೂಪಿಸುವ ಕಾರ್ಯದಲ್ಲಿ ಒಳ್ಳೆಯ ಶಕ್ತ್ಯುತ್ಸಾಹಗಳಿಂದ ದುಡಿಯುತ್ತಿದ್ದಾರೆ.

ಅಶೋಕನ ಹಾಗು ಗಾಂಧೀಜಿಯು ಈ ನಾಡನ್ನು ಸೈನಿಕ ಶಕ್ತಿಯಿಂದಲೇ ದ್ರವ್ಯರಾತಿಯಾಗಲೀ ಭಯಜನಕತಾವಾಗಿ ಮಾಡಿಲ್ಲ. ಭಾರತ ದೇಶ ತನ್ನ ಸ್ವಂತ ನೆಲಗಟ್ಟಿನ ಮೇಲೆ ನಿಂತಿದೆ; ಮತ್ತು ಸೈನಿಕ ಶಕ್ತಿ ಸಂತಯದ ಹುಚ್ಚು ಹಿಡಿದಿರುವ ಜಗತ್ತಿನ ಮುಖದ ಎದುರಿಗೆಯೇ ಮಾನವತೆಯ ಉಳಿವಿನ ದಾರಿಯು ಪರಸ್ಪರ ತಿಳಿವಳಿಕೆ ಮತ್ತು ಸಹಾನುಭೂತಿಗೆ ಎಡೆ ಕೊಡುವ ಕರುಣ ಮತ್ತು ಪ್ರಜ್ಞೆಯಲ್ಲಿದೆ ಎಂದು ಹೇಳುತ್ತದೆ. ಪರಸ್ಪರ ವೈಷಮ್ಯದಲ್ಲಿ ಮುಳುಗಿರುವ ಸೈನಿಕ ಶಕ್ತಿಸಂಪನ್ನ ರಾಷ್ಟ್ರಗಳನ್ನು ನೋಡುವವರಿಗೆ ಚಿಕ್ಕದಾಗಿ ಕಾಣಿಸುವಂತೆ ಮಾಡುವ ಏನೋ ಒಂದು ಅಪೂರ್ವವಾದ ವಿಷಯ ಈ ಧೈರ್ಯದ ಘೋಷಣೆಯಲ್ಲಿದೆ.

ಮಹಾರಾಷ್ಟ್ರಗಳು ಇದರ ಅನುಭವದಿಂದ ದೂರವಾಗಿಲ್ಲ—ಆದರೆ, ವಿಜ್ಞಾನವು ಕಂಡು ಹಿಡಿದಿರುವ ಎಲ್ಲ ವಿಧ್ವಂಸಕ ಶಸ್ತ್ರಗಳನ್ನು ಸಂಗ್ರಹಿಸಿಕೊಂಡೂ ಶಾಂತಿಗಾಗಿಯೇ ನಾವು ಕೆಲಸ ಮಾಡುತ್ತಿದ್ದೇವೆ ಎಂಬ ನಟನೆಯ ಮೂಲಕ ಈ ಅನುಭವದಿಂದ ಪಾರಾಗಲು ಅವು ನೋಡುತ್ತಿವೆ. ಅವುಗಳು ತಮಗೆ ಬೇಕಾಗಲಿ, ಬೇಡವಾಗಲಿ, ಸದ್ಭಾವ ಹಾಗು ಶಾಂತಿಯ ಉನ್ನತ ಸಲಹೆಗೆ ಕಿವಿಗೊಡದೆ ಹಚ್ಚು ಸಮಯ ಇರುವುದು ಸಾಧ್ಯವಾಗದು. ಗಾಂಧೀಜಿಯವರು ಬಯಸಿದಂತೆ ಜವಾಹರಲಾಲರು ಶಾಂತಿ ದೂರನ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿಯೇ ತೀರುವರು ಎಂಬುದು ಸಂಶಯಾತೀತವಾದ ಮಾತು. ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಅಹಿಂಸೆಯು ಹೀಗೆ ವ್ಯವಹಾರ ರೂಪದಲ್ಲಿ ಅನ್ವಯಿಸಲ್ಪಡುತ್ತದೆ ಎಂಬುದನ್ನು ಅವರೇ ತೋರಿಸಬಲ್ಲರು.

ಅಶೋಕನಿಂದ ತೊಡಗಲ್ಪಟ್ಟ ಮತ್ತು ಗಾಂಧೀಜಿಯವರು ಅಪೂರ್ಣವಾಗಿಯೇ ಬಿಟ್ಟು ಹೋದ ಕೆಲಸವನ್ನು ಮುಂದುವರಿಸುವುದು ಜವಾಹರಲಾಲರದೇ ಅದೃಷ್ಟದತ್ತ ಹೊಣೆಗಾರಿಕೆಯಾಗಿದೆ. ಭಾರತವು ಜಗತ್ತಿಗೆದಾರಿತೋರಿಸಬೇಕೆಂಬ ಗಾಂಧೀಜಿಯ ಮಹತ್ವಾಕಾಂಕ್ಷೆಯನ್ನು ನೆರವೇ

(ಮುಂದಿನ ಪುಟ ನೋಡಿರಿ)

ಸಮಾಜ ವಿಕಾಸ ಕಾರ್ಯ - ಜನತೆಯ ಯೋಜನೆ

ಬರೆದವರು: ಶ್ರೀ ಎಸ್. ಕೆ. ಜೇ

ಅಲ್ಲಿ ಇಲ್ಲಿಂದಿನಿಲ್ಲ ಪರಕೀಯ ಸಾಮ್ರಾಜ್ಯ, ಸಮಾಜದ ಕತ್ತು ಸ್ವಾತಂತ್ರ್ಯದಲ್ಲಿರುವ ನಾಲ್ಕೈದು ದೇಶಗಳು ಸುತ್ತು ಅಣ್ವಾಸ್ತ್ರದ ಸಿದ್ಧ ಯುದ್ಧವನ್ನು ಸಾರಿದೆ ಹೊಸ ಕುರುಕ್ಷೇತ್ರವಾಗಿ ಭಾರತ ಸೋಷಲಿಸ್ಟರಾಗಿರುವುದು ಅಭಿಮಾನದ ವಿಷಯವಾಗಿದೆ. ಕತ್ತಲಾಗಿದ್ದ ಲೋಕ್ಕ ಸುತ್ತ ತೂಗಡಿಕೆಯ ಸ್ವಾತಂತ್ರ್ಯದಲ್ಲಿ ಜಾಗೃತ ಮತ್ತು ಚೈತನ್ಯದ ಸಲ್ಲಕ್ಷಣಗಳು ಗೋಚರಿಸುತ್ತಿರುವುದನ್ನು ಕಂಡು ಆನಂದಿಸದವರು ಯಾರು? ಸಮಾಜ ವಿಕಾಸ ಯೋಜನೆಗಳ ಅನೇಕ ಕ್ಷೇತ್ರದ ಪರಿಸ್ಕಾರಕ ಶ್ರೀ ಜೇ ಜನತೆಯ ಈ ಯೋಜನೆಯ ಮುಖ್ಯ ಆಕರ್ಷಣೆಗಳನ್ನು ಇಲ್ಲಿ ನಿರೂಪಿಸಿದ್ದಾರೆ.

ದಕ್ಷಿಣದ ಕನ್ಯಾ ಕುಮಾರಿಯಿಂದ ಉತ್ತರದ ಕಾಶ್ಮೀರದ ವರೆಗೆ, ಪೂರ್ವದ ಅಸ್ಸಾಮಿನಾಯ ಈಶಾನ್ಯ ಗಡಿವಾಲಯದ ವರೆಗೆ, ಆಯಾಕೆ ಎರಡು ಸಾವಿರ ಮೈಲು ದೂರ ವ್ಯಾಪಿಸಿರುವ, ಕೋಟ್ಯಾಂತರ ಮಾನವರುಂದಲೂ ಪ್ರಾಣಿಗಳಿಂದಲೂ ಸಸ್ಯ ಜಾತಿಗಳಿಂದಲೂ ತುಂಬಿ ತುಳುಕುತ್ತಿರುವ ಭಾರತದ ಗ್ರಾಮಗಳಲ್ಲಿ ಭಾರತವು ಏನಾಗಿ ತೂಕಡಿಸುತ್ತಿದೆ!

ಹೀಗಿದ್ದೂ ಒಂದು ಕಾಲದಲ್ಲಿ ನಮ್ಮ ಹಳ್ಳಿಗಳು ಕಾರ್ಯ ನಿರ್ವಹಣಾ ಸ್ಥಿತಿಯಲ್ಲಿರುವಾಗ ಗಾಯನ, ಗುಡಿಸಲಿನೊಳಗೆ ಮಕ್ಕಳ ಸಂಗೀತ ಇವುಗಳಿಂದ ಗುಂಯಿ ಗುಡುತ್ತಿದ್ದವು. ಜಗತ್ತಿನ ಎಲ್ಲ ಧರ್ಮಗಳಿಗೂ ನೆಲೆ ಇತ್ತಿರುವ, ಜ್ಞಾನಿಗಳಾದ ಆರ್ಯರಿಂದ ಹಿಡಿದು ಈಗ ಅನಾಗರಿಕರಾದ ಕಾಡು ಜನಾಂಗಗಳ ವರೆಗೆ ಎಲ್ಲರಿಗೂ ಆಶ್ರಯ ಕೊಡುವ ಗ್ರಾಮಗಳು ಎಂದಾಗಿದ್ದವು. 'ಒಬಿಯಕ್ಕು' ಹಾಗು 'ಬದುಕಗೊಡು' ಎಂಬುದೇ ಹಳ್ಳಿಗರ ಜೀವನದ ಸಲ್ಲ ವಿಯಾಗಿತ್ತು.

ಆಂಗ್ಲರು ಈ ಪುಟಗಳು ತಿರುವಲ್ಪಟ್ಟವು. ಸಹಜೀವನದ ತತ್ವವು ಸದ್ದೋಷಕ್ಕೆ ಅವಕಾಶ ಮಾಡಿಕೊಟ್ಟುದರಿಂದ ಸಮೃದ್ಧಿಯ ಗೋಪುರದಿಂದ ಜನರು ಕೆಳಗಿಳಿಯ ಹತ್ತಿದರು. ಕೊನೆಗೆ ನಾವು ಪರಕೀಯರ ಆಡಳಿತಕ್ಕೆ ಬಿದ್ದು ಬಿಟ್ಟೆವು.

ಪರಕೀಯ ಆಡಳಿತವನ್ನು ಸುತ್ತಲಿನ ಎಲ್ಲ ಪ್ರದೇಶಗಳ ಮೇಲೆ ಕಟ್ಟಿಡಲಾಗಿದ್ದ ಹಾಗು ಉಳಿಯುವಷ್ಟು ಶೋಷಿಸಲು ಅನುಕೂಲವಾದ ಕೋಟೆ ಕೊತ್ತಲಗಳಲ್ಲಿ ನಡೆಸುವುದು. ಸಾಧ್ಯವಿರಲಿಲ್ಲ. ಆಳುವವರು ಮತ್ತು ಆಳಿಗೆ ಒಂಟಿಕೊಂಡಿರುವವರ ಜೀವನ ಹಾಗು ಜೈಭವಕ್ಕೆ ಇದು ಅತ್ಯಾವಶ್ಯಕವಾಗಿತ್ತು. ಹೀಗೆ ನಮಗಲ್ಲೂ ಮತ್ತು ಇಲ್ಲೂ ಬೆಳೆದವು.

ಆದರೆ ಸ್ವಾತಂತ್ರ್ಯದಿಂದ ಈ ಕೋಟೆಗಳು ಒಡೆಯ ಕಾಣದ ವರೆಗೆ ಮುಂದೆ ಬರಲಾರದಾಯಿತು. ಶ್ರೀಮತಿ ಸರೋಜಿನಿ— ನಾವು ನಮ್ಮ ಹಿಂದಿನಿಂದ ಮುಕ್ತರಾಗಿ ಒಂದೆ ಪ್ರದೇಶದ ಮೇಲೆ ನಿಂತು,

(ಹಿಂದಿನ ತಾರೀಖಿನದು)

ಏನು ಕೊಡುವುದೆಂದು ಕಾಣಲಾರದೆ ಬಿಟ್ಟಿರೆ ಸ್ವಾತಂತ್ರ್ಯ ಪಡೆದಿದ್ದ ಪ್ರಜೆಯ ಈ ಸ್ಥಿತಿಯಿಂದ ಯಾರೂ ಜಗತ್ತಿನ ಸ್ವಾತಂತ್ರ್ಯವನ್ನು ಮಾಡಿದ ಪಿತ ನೆನಪನ್ನಾದರೂ ಕೊಡುವುದು—ಜವಾಹರ, ಗಾಂಧಿಜಿಯ ಸಾಧಾರ ಜಾತಿಯ ಧರ್ಮದಲ್ಲಿ ರಾಷ್ಟ್ರಕ್ಕೆ ಹಾಗು ಅಂತರಾಷ್ಟ್ರೀಯ ವ್ಯವಹಾರದಲ್ಲಿ ಜವಾಹರಲಾಲ್ ನೆಹರೂಗಳು ತೀರ ಹೊಸ ಧೋರಣೆಯನ್ನು ರೂಪಿಸಿದ ಸಮಾಜ ಯುಗದ ಹೊಸ ಯುಗ ಪ್ರಾರಂಭ ಆದ ಸ್ಥಳ ಬೇಕಾಗುತ್ತದೆ. ಈ ಯುಗವು ಶಾಂತಿ ಹಾಗು ಅಭಿವೃದ್ಧಿಯ ಹೆಸರಿನಿಂದ ಮುಂದೆ ಪ್ರಸಿದ್ಧವಾಗುವುದು ನಿಶ್ಚಯ.

ಗಾಂಧೀಜಿ ಅಗೋಸ್ತು ಗುರಿಯಂದು ಮಧ್ಯರಾತ್ರಿಗೆ ಘಂಟಾನಾದ ಮಾಯಿತು. ಪರಕೀಯ ಪ್ರಭುಗಳು ಈ ದೇಶವನ್ನು ಬಿಟ್ಟುಹೋದರು. ಇವರು ಒಳ್ಳೆಯ ಇಚ್ಛೆಯಿಂದಲೇ ನಮ್ಮನ್ನು ಅಗಲಿದವು. ಕಾಂಗ್ರೆಸ್ ವಿಜಾತಿಯ ಮತ್ತು ಸಂಗ್ರಹ ಸಾಕಷ್ಟಿಲ್ಲದ ಬಣಜದ ಬೀಗದ ಕೈಯನ್ನು ತಮ್ಮ ಉತ್ತರಾಧಿಕಾರಿಗಳಿಗೆ—ಅಂದರೆ ಜನರನ್ನು ಪರಕೀಯರ ವಿರುದ್ಧವಾದ ಚಳವಳಿದಲ್ಲಿ ಮುನ್ನಡೆಸಿದ ಧುರೀಣರ ಕೈಗೆ—ಒಪ್ಪಿಸಿಕೊಟ್ಟರು.

ಸ್ವತಂತ್ರ ಭಾರತವು ಏನನ್ನು ಆಗ ಎದುರಿಸಬೇಕಾಯಿತು? ಹಳೆಯದಾಗಿ ಶಿಥಿಲಗೊಂಡ ರೈಲುಗಳು; ಉತ್ಪಾದನೆ ಮಾಡಲು ಅಸಮರ್ಥ ಕಾರ್ಖಾನೆಗಳಿರುವ ಕ್ರಿಯಾಶಕ್ತಿ ಕುಂದಿದ ಕಾರ್ಖಾನೆಗಳು; ಒಡಿದಿದ ಗದ್ದೆಗಳು; ಕೋಟ್ಯಾಂತರ ಹಸಿದ ಹೊಟ್ಟೆಗಳು; ಇವೆಲ್ಲವಕ್ಕೆ ಮುಕುಟ ಪ್ರಾಯವಾಗಿ ತೀರ ಅಕಸ್ಮಿಕವಾಗಿ ದೇಶವನ್ನು ಇಬ್ಭಾಗಮಾಡಿದುದರಿಂದ ಹಳೆಯ ಬಿಂದಿಗಳಲ್ಲಿ ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ಅಲೆದಾಡುವ ಜನರು!

ನಿರಾಶ್ರಿತರಾಗಿ ಹೀಗೆ ಬಂದವರಿಗೆ ಯೋಗ್ಯವಾದ ಹಾಗು ಶ್ರೇಷ್ಠವಾದ ಪುನರ್ನಿವೇಶನದ ಸೌಕರ್ಯಗಳನ್ನು ಒದಗಿಸಿಕೊಡುವ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರಗೊಂಡಾಗ ಹೊಸ ಸರಕಾರವು ಹಾಳು ಬಿದ್ದಿದ್ದ ದೇಶವನ್ನು ಮರಳಿ ಕಟ್ಟುವ ಮತ್ತು ತೂಕಡಿಸುತ್ತಿರುವ ಜನರಲ್ಲಿ ನವಜಾಗೃತಿಯನ್ನು ಕಟ್ಟುವುದಕ್ಕಾಗಿ ಯೋಜನೆಗಳನ್ನು ಆಲೋಚಿಸಿತು. ಹೀಗೆ ಪ್ರಥಮ ಪಂಚ ವಾರ್ಷಿಕ ಯೋಜನೆಯು ಅಸ್ತಿತ್ವಕ್ಕೆ ಬಂತು. ಇದರಲ್ಲಿ ಆಹಾರದ ಉತ್ಪಾದನೆ, ವಿವಿಧೋದ್ದೇಶದ ಯೋಜನೆ, ಪಡಿ ಭೂಮಿಯ ಸಾಗುವಳಿ, ಅಭಿವೃದ್ಧಿ ಕೈಗಾರಿಕೆ ಮತ್ತು ಕೆಲವು ಸಮಾಜ ಉದ್ಯೋಗಗಳ ಅಭಿವೃದ್ಧಿ—ಇವಕ್ಕೆ ವಿಶೇಷವಾದ ಮಹತ್ವ ಕೊಡಲ್ಪಟ್ಟಿತು.

ಮೊದಲಿಗೆ ಅತ್ಯವಶ್ಯವಾಗಿ ಬೇಕಾಗಿದ್ದ ಆಹಾರದವನ್ನು ಸಿದ್ಧಿಯ ಫಲವರ್ಧಕ ಗೊಬ್ಬರದ ಉತ್ಪಾದನೆ ಮಾಡುವ ಕಾರ್ಖಾನೆ ಹೊರ್ಪಿಸಿದ. ಸಾವಿರಗಟ್ಟಲೆಯಲ್ಲಿ ಬೇಕಾಗಿದ್ದ ಟ್ರಿಲ್ಲಿ ಯಂತ್ರಗಳನ್ನು ಚೆಕ್ಕೊಸಲವರ ಕಾರ್ಖಾನೆ ಉತ್ಪಾದಿಸಲು ಪ್ರಾರಂಭಿಸಿತು. ಏರಿಯಾನ ಇರ್ಖಾನೆ, ಕಸ್ತೂರಿಭಾಯಿಯವರ ಕಾರ್ಖಾನೆ, ಕಡಗು ನವಸಾಗರದ ಕಾರ್ಖಾನೆ ಇತ್ಯಾದಿ ದೊಡ್ಡ ಉತ್ಪಾದಕ ಕೇಂದ್ರಗಳಿಂದ ಸರಕಾರ ಜನರ ವಿಶ್ವಾಸವನ್ನು ಹಾಕಲಾಯಿತು.

ಮುಖ್ಯ ಪಟ್ಟಣಗಳಲ್ಲಿ ಸರಕಾರದ ಕಟ್ಟಡಗಳ ಮೇಲೆ ಈಗ ತ್ರಿವರ್ಣ ಧ್ವಜವು ಪಟಪಟನೆ ಹಾರಾಡುತ್ತಿತ್ತು. ಆದರೆ ಕ್ರಾಂತಿಯ ಸಂದೇಶವು ಇನ್ನೂ ಪ್ರಾಣಶಾಂತಿಯನ್ನೆ ಅನುಭವಿಸುತ್ತಿದ್ದ, ಹಳ್ಳಿಗಳಲ್ಲಿ ವಾಸಿಸುತ್ತಿದ್ದ, ಭಾರತದ ಜನಸಂಖ್ಯೆಯಲ್ಲಿ ೮೫% ಪ್ರಮಾಣದಲ್ಲಿದ್ದ ಕೋಟ್ಯಾಂತರ ಜನರಿಗೆ ಮುಟ್ಟಿರಲಿಲ್ಲ. ಆದುದರಿಂದ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಮತ್ತು ಅಲ್ಲಿ ಹೊಸ ಚೈತನ್ಯವನ್ನು ತುಂಬಿಸುವುದೇ ಉದ್ದೇಶವಾಗುಳ್ಳ ನೂತನ ಯೋಜನೆಯೊಂದನ್ನು ರೂಪಿಸುವುದು ಅವಶ್ಯವಾಯಿತು...

ಜನರನ್ನೂ ಜನರ ಪ್ರತಿನಿಧಿಗಳನ್ನೂ ಜನರ ಸೇವಕರನ್ನೂ ಏಕಸೂತ್ರದಲ್ಲಿ ಪೋಣಿಸುವ ಹಾಗು ಪರಸ್ಪರ ಹತ್ತಿರಕ್ಕೆ ತರುವ ವಿಚಾರವನ್ನು ಈ ಚಳವಳಿದ ಮೂಲತತ್ವವಾಗಿ ಪರಿಗ್ರಹಿಸಲಾಯಿತು. ಹೀಗೆ ಸಮಾಜವಿಕಾಸ ಯೋಜನೆಯ ಜ್ಯಾಯಿಯಲ್ಲಿ ಬಂತು. ಇದೇ ಜನತೆಯ ಯೋಜನೆ, ಜನತೆಗಾಗಿ ಯೋಜನೆ, ಜನತೆಯಿಂದ ಕೈಗೊಂಡ ಯೋಜನೆ.

ಭಾರತದ ರಾಜ್ಯಾಧ್ಯಕ್ಷರಿಂದ ಉದ್ಘಾಟನೆ ಮತ್ತು ಪ್ರಧಾನ ಮಂತ್ರಿಗಳಿಂದ ದಿಲ್ಲಿಗೆ ಹತ್ತಿರದ ಹಳ್ಳಿಯೊಂದರಲ್ಲಿ ರಸ್ತೆಯೊಂದನ್ನು ನಿರ್ಮಿಸುವ ಉದ್ಘೋಷದಿಂದ ಕೆಲವು ಒಟ್ಟಿಗಳನ್ನು ಮಣ್ಣನ್ನು ಎತ್ತಿ ಹಾಕುವ ಕಾರ್ಯಕ್ರಮದಿಂದ ಈ ಚಳವಳ ಪ್ರಾರಂಭವಾಯಿತು. ರಾಜ್ಯಗಳ ಮುಖ್ಯ ಮಂತ್ರಿಗಳು, ಕೇಂದ್ರದ ಮಂತ್ರಿಗಳು ಜೀವನದ ಎಲ್ಲ ರಂಗುಗಳಲ್ಲಿಯೂ ಪ್ರಮುಖ ಸ್ಥಾನ ಪಡೆದವರು ತಮ್ಮ ಕಷ್ಟಿಯನ್ನು ಬಿಗಿದು ಕಟ್ಟಿ ಹೊಸ ಯುದ್ಧದಲ್ಲಿ ಭಾಗ ವಹಿಸಿದರು. ಈ ಯೋಜನೆ ಭಾರತದ ಗ್ರಾಮಾಂತರ ಪ್ರದೇಶದ ಜನರ ಇತಿಹಾಸದಲ್ಲಿ ನೂತನ ಅಧ್ಯಾಯವನ್ನು ಬರೆಯಿತು.

ರಸ್ತೆಗಳು ನಿರ್ಮಾಣವಾಗ ಹತ್ತಿದು, ಕಾಲೆಗಳು, ಜನತಾ ಭವನಗಳು, ಆಸ್ಪತ್ರೆಗಳು ಅಸ್ತಿತ್ವಕ್ಕೆ ಬಂದವು; ಪ್ರದರ್ಶನೋದ್ದೇಶವುಳ್ಳ ಪ್ರಾಯೋಗಿಕ ಕೇಂದ್ರಗಳು, ತಳಿ ಸುಧಾರಣೆ ಹಾಗು ಕೃತಕಬೀರ್ಯ ಪ್ರಯೋಗದ ಕೇಂದ್ರಗಳು, ಹಣ್ಣು ಹಂಪಲು, ತರಕಾರಿ ಹಾಗು ವಿಶೇಷ ಸಸ್ಯ ಜಾತಿಗಳ ತೋಟಗಳು ಕತ್ತೆ ಎತ್ತಿದವು. ಹಳ್ಳಿಗಳಲ್ಲಿ ಸೊಪ ಬಾವಿ, ಹಳೆಯ ಬಾವಿಗಳ ದುರಸ್ತಿ, ಹಿಡಿಗಳನ್ನು ಸಮಟಟ್ಟ ಮಾಡುವ ಕೆಲಸ, ಕೊಳವೆ ಪ್ರದೇಶಗಳ ನಿರ್ಮಾಣ ಇತ್ಯಾದಿ ಚಟುವಟಿಕೆಗಳು ಸಾರ್ವಜನಿಕರ ಹೊಸ ಅಂದೋಲನದಲ್ಲಿ ವ್ಯಕ್ತವಾದವು. ಶ್ರೀಮಂತರೂ ಬಡವರೂ ಮುದುಕರೂ ಹುಡುಗರೂ ದೊಡ್ಡ ಪಜ್ಜನ ಸಂಖ್ಯೆಯಲ್ಲಿ ಈ ಪವಿತ್ರ ಯಜ್ಞದಲ್ಲಿ ಭಾಗವಹಿಸುವ ಭಿನ್ನೋದ್ದೇಶದಿಂದ ಬರಹತ್ತಿದರು.

ಇದ್ದರವರೆಗೆ ಪರಕೀಯ ಒಡೆಯರ ಕೈಯಲ್ಲಿ ನಬ್ಬಾಳಿಕೆ ನಡೆಸುತ್ತಿದ್ದ ಹಾಗು ಎಲ್ಲರ ಸಂಪರ್ಕಕ್ಕು ಗುರಿಯಾಗಿದ್ದ ಸರಕಾರದ ಆಡಳಿತ ಯಂತ್ರವು ಹೊಸ ಗುಣಗಳಿಂದ ಶೋಭೆತೆಗೆದಿತು. ಮಂಚೆ ತಮ್ಮ ದಂತದ ಗೋಪುರಗಳಲ್ಲಿ ಮಿನುಗುತ್ತಿದ್ದ ಸರಕಾರದ ನೌಕರರು ನೂತನ ಅಂದೋಲನದ ಕ್ಷೇತ್ರಕ್ಕೆ ಮುನ್ನುಗ್ಗಿದರು, ಮತ್ತು ಹೀಗೆ ಜನವು, ರೋಗ ಹಾಗು ಅಜ್ಞಾನಗಳೆಂಬ ರಾಕ್ಷಸರನ್ನು ಬೆದರಿಸುತ್ತಿರುವ ಶತ್ರುಗಳ ವಿರುದ್ಧ ಜನರು ತೊಡಗಿದ ಯುದ್ಧದಲ್ಲಿ ಸಮ್ಮ ಸಹಕಾರ ನೀಡಲು ಪ್ರಾರಂಭಿಸಿದರು.

ಅಭಿವೃದ್ಧಿಯ ಮಟ್ಟವನ್ನು ಏರುವಲ್ಲಿ ಅಧಿಕಾರಿಗಳ ಸಂಘಗಳ ಪ್ರತಿಯೊಂದೂ ಮೆಟ್ಟಲಿನಲ್ಲಿ ನೆರವುತ್ತಿವು. ಗ್ರಾಮಪಟ್ಟದಲ್ಲಿ ಪಂಚಾಯತು ಮತ್ತು ಸಹಕಾರ ಸಂಘಗಳೇ ಸರಕಾರದ ಅಧಿಕೃತ ಉಪಾಂಗಗಳ ನೆರವಿನಿಂದ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಿ ನೆರವೇರಿಸುವುದು ಮುಂದಾದವು. ಅಭಿವೃದ್ಧಿಭಾರತದ ಮಟ್ಟದಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿರುವ ಕೇಂದ್ರ ಮಂಡಳಿಯೊಂದು ಈ ಕಾರ್ಯಕಲಾಪಗಳನ್ನು ನಿರ್ದೇಶಿಸುತ್ತದೆ ಇದರ ಕೈಕೆಳಗೆ ಭಾರತ ಸರಕಾರದ ಸಮಾಜ ವಿಕಾಸ ಯೋಜನೆಯ ಕೆಲಸವಾಗುತ್ತದೆ.

ಮೊದಲಿಗೆ ನೆಲೆಗೊಳಿಸಿದ ಈ ಸಮಾಜ ವಿಕಾಸ ಯೋಜನೆಗಳ್ಳು ಜನರು ತೋರಿಸಿದ ಸಹಕಾರವು ನಮ್ಮ ಹಳ್ಳಿಗರು ಮುಂಬರುವ ಸಂಬಿಕಗಳ್ಳನ್ನು ಎತ್ತಲುತ್ತಿರುವ

(ಮಂದೆ ಪುಟ ನೋಡಿರಿ)

ಏರಿಯದ ಸ್ಥಿತಿ ಚಿತ್ರ

(ಏರಿಯದ ಅರ್ಧಿಕ ಸ್ಥಿತಿ ಚಿತ್ರ)

ಬರೆದವರು. ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಜರ್ಜರಿತವಾದ ಭೂಮಿಯಾದ ಏರಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಗಮನಕ್ಕಾಗಿಯೂ, ವಿಶದವಾಗಿಯೂ, ಸಮರ್ಪಕವಾಗಿಯೂ ವಿವರಿಸುವ ಸಂಯುಕ್ತ ಗ್ರಂಥ

ಏರಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ ಬೆಲೆ ಎರಡು ರೂಪಾಯಿ.

ಪಾಠಶಾಲೆಯಗಳಿಗೆ ಅತ್ಯಗತ್ಯವಾದದ್ದು.

ನವಯುಗ ಪ್ರೆಸ್, ಉಡುಪಿ.

ಭಾರತೀಯರ ನಡುವೆ ಜಾತೀಯ ಸೌಹಾರ್ದ

ಬರೆದವರು: ಡಾ. ಕೈಲಾಸನಾಥ ಕಟ್ಜು

ರಾಷ್ಟ್ರದ ಒಗ್ಗಟ್ಟು ಮತ್ತು ಭದ್ರತೆಗೆ ಜಾತೀಯ ಸೌಹಾರ್ದತೆ ಅತ್ಯವಶ್ಯವಾಗಿ ನೆಲೆಗೊಳ್ಳಬೇಕಾಗಿದೆ. ರಾಜ್ಯಗಳ ಪುನರ್ಘಟನೆಯ ಪ್ರಶ್ನೆ ಬಂದಾಗಲೆಲ್ಲ ಭಾಷೆ, ಮತ, ಜಾತಿ ಮುಂತಾದ ಅನೇಕ ತಳಹದಿಯ ಮೇರೆ ಅಲ್ಪ ಸಂಖ್ಯಾಕರ ಆಸ್ತಿತ್ವವನ್ನು ಪ್ರಶ್ನಾರ್ಥಕ ದೃಷ್ಟಿಯಿಂದ ನೋಡುವ ಸಂಭವ ಬಂದಿತು. ಜಟಿಲವಾದ ಈ ಸಮಸ್ಯೆಗಳನ್ನು ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಸದ್ಭಾವದಿಂದ ಮಾತ್ರ ಬಿಡಿಸುವುದು ಸಾಧ್ಯ. ಭಾರತ ಸರಕಾರದ ಸಂರಕ್ಷಣಾ ಮಂತ್ರಿಗಳಾದ ಡಾ. ಕಟ್ಜು ತಮ್ಮ ಅಮೂಲ್ಯ ಸಲಹೆಗಳನ್ನು ಇಲ್ಲಿ ನೀಡಿದ್ದಾರೆ.

. ದೇಶದ ಕೆಲವೆಡೆಯ ಘಟನೆಗಳನ್ನು ಗಮನಿಸಿದರೆ ಜಾತೀಯ ಸೌಹಾರ್ದವು ಇಂದು ಅತಿಹೆಚ್ಚಿನ ಅವಶ್ಯಕತೆಯಾಗಿದೆ ಎಂಬ ನಂಬಿಕೆ ಮೂಡುತ್ತದೆ. ದೇಶದ ಐಕ್ಯಕ್ಕೆ, ರಾಜಕೀಯ ಸ್ವಾತಂತ್ರ್ಯವನ್ನು ಕಾಯ್ದುಕೊಂಡು ಹೋಗುವುದಕ್ಕೆ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಮುಂಚೆ ಜಾತೀಯ ಸೌಹಾರ್ದವನ್ನು ನೆಲೆಗೊಳಿಸಬೇಕಾಗುತ್ತದೆ. ಜಾತೀಯ ಸದ್ಭಾವನೆಯು ಇಲ್ಲದೆ ಹೋದರೆ, ಶಾರೀರಿಕ, ಮಾನಸಿಕ ಹಾಗು ಅಧ್ಯಾತ್ಮಿಕ ಶಾಂತಿ ಸಹ ಕೆಡುತ್ತದೆ. ಜಾತೀಯ ಭಾವನೆ ಖಂಡಿಸಲ್ಪಡುತ್ತಿರುವುದನ್ನೂ ಜಾತೀಯ ದೃಷ್ಟಿಕೋಣವನ್ನು ಇಟ್ಟುಕೊಂಡ ಸಂಸ್ಥೆಗಳು ಹಾನಿಮಾಡುತ್ತಾವೆಂದು ಹೇಳುತ್ತಿರುವುದನ್ನೂ ನಾವು ಕೇಳುತ್ತಿದ್ದೇವೆ. ಸುದೈವದಿಂದ ಭಾರತದಲ್ಲಿ ಪ್ರಜಾಸತ್ತಾತ್ಮಕ ಆಡಳಿತ ಪದ್ಧತಿಯು ರೂಢಿಯಲ್ಲಿದೆ; ಮತ್ತು ನಮ್ಮ ಎಲ್ಲ ರಾಜಕೀಯ ಹಾಗು ಪ್ರಾತಿನಿಧಿಕ ಸಂಸ್ಥೆಗಳಿಗೆ ವಯಸ್ಕರ ಮತದಾನ ಪದ್ಧತಿಯೇ ಮೂಲ ತಳಹದಿಯಾಗಿದೆ. ಭಾರತವು ವಿಭಜನೆ ಹೊಂದಿದ ಬಳಿಕದಅನೇಕ ಪರಿಣಾಮಗಳಲ್ಲಿ ಹಿಂದು ಮತದವರು ಜನಸಂಖ್ಯೆಯಲ್ಲಿ ಬಹುಮತಗಳಿಸಿರುವುದೂ ಒಂದು. ಇದರಿಂದಾಗ ಹಿಂದುಗಳು ಬಯಸಿದರೆ ಮತ್ತು ಅವರು ಆಂತರಿಕ ಮತ ಭೇದಕ್ಕೆ ಒಳಗಾಗಿ ಸುಟ್ಟು ನೂರಾಗದಿದ್ದರೆ ಶಾಂತಿ ಅಥವಾ ಯುದ್ಧಕ್ಕೆ ಮತ್ತಿತರ ವಿಷಯಗಳಿಗೆ ಸಂಬಂಧಿಸಿದ ಪ್ರತಿಯೊಂದೂ ಪ್ರಶ್ನೆಯಲ್ಲಿ ಅವರದೇ ಕೊನೆಯ ನಿರ್ಣಯವಾಗಬಲ್ಲುದು.

ಪ್ರಜಾ ಸತ್ತಾತ್ಮಕ ಪದ್ಧತಿಯಲ್ಲಿ ರಾಜಕೀಯ ಶಕ್ತಿಯು ಯಾವಾಗಲೂ ಬಹು ಸಂಖ್ಯಾಕರಾದ ಪ್ರಜೆಗಳಲ್ಲಿರುತ್ತದೆ. ಆದುದರಿಂದ ಬಹು ಸಂಖ್ಯಾಕರು ಪ್ರತಿಯೊಂದೂ ರಾಜಕೀಯ ವಿಷಯದಲ್ಲಿ ಅಂತಿಮ ನಿರ್ಣಯವನ್ನು ಕೈಗೊಳ್ಳುವಾಗ ರಾಷ್ಟ್ರದ ಸಮಷ್ಟಿಯ ಹಿತವನ್ನು ಗಮನದಲ್ಲಿಟ್ಟುಕೊಳ್ಳುವುದೂ ಯಾವುದೇ ಜಾತಿ ಅಥವಾ ಪಂಗಡದ ಕುರಿತಾಗಿ ಪೂರ್ವಾಗ್ರಹ ದೂಷಿತ ಭಾವನೆಗೆ ಎಡೆ ಕೊಡದಿರುವುದೂ ಪ್ರಶ್ನೆಯನ್ನು ಅದರ ಯೋಗ್ಯತೆಯ ಮೇಲಿಂದಲೇ ವಿಚಾರಿಸುವುದೂ ಅಪೇಕ್ಷಣೀಯ.

ಜಾತೀಯತೆಯ ನಿಷೇಧವು ಅಲ್ಪ ಸಂಖ್ಯಾಕ ವರ್ಗದವರನ್ನು ಮೆಚ್ಚದಿರುವುದು ಮತ್ತು ಅವರಲ್ಲಿ ವಿಶ್ವಾಸವಿಡದಿರುವುದು ಎಂಬಲ್ಲಿಗೆ ವ್ಯವಹಾರಗಳಲ್ಲಿ ಇಳಿಯುವುದುಂಟು—ಆದರೆ, ಹೀಗೆ ಮೆಚ್ಚದಿರುವುದೂ ಅವರಲ್ಲಿ ವಿಶ್ವಾಸವನ್ನಿಡದಿರುವುದೂ ಅಲ್ಪ ಸಂಖ್ಯಾಕರಿಗೆ ದೊಡ್ಡ ಅನ್ಯಾಯ ಮಾಡಿದಂತೆ ಎಂದು ನನ್ನ ಅಭಿಪ್ರಾಯ. ಬಹು ಸಂಖ್ಯಾಕರು ತಮ್ಮ ಒಳ್ಳೆಯದನ್ನು ಬಯಸಿಯಾದರೂ ಇಂಥ ದ್ವೇಷ ಭಾವನೆಯನ್ನು ದೂರಗೊಳಿಸುವುದು ಇಷ್ಟವಾಗಿದೆ.

ರಾಷ್ಟ್ರಕ್ಕೆ ಗಂಡಾಂತರ ಬಂದ ಸಂದರ್ಭಗಳಲ್ಲಿ ಅಲ್ಪ ಸಂಖ್ಯಾಕರು ನಂಬಿಕೆಗೆ ಪಾತ್ರರಾಗಲಿಕ್ಕಿಲ್ಲ ಮತ್ತು ಅವರು ರಾಷ್ಟ್ರದ ಘಟನೆಗೆ ಮತ್ತು ಸ್ವತಃ ರಾಷ್ಟ್ರಕ್ಕೆ ನಿಷ್ಠರಾಗಿ ಉಳಿಯಲಿಕ್ಕಿಲ್ಲ ಎಂಬ ಅವಿಶ್ವಾಸವೇ ಅಲ್ಪ ಸಂಖ್ಯಾಕರ ಕುರಿತಾದ ಅಪ್ರೀತಿಗೆ ಕಾರಣವಾಗಿ ಹೇಳಬಹುದಾದ ಮನೋ ಭೂಮಿಕೆಯಾಗಿದೆ ಎಂಬುದು ನಿಜ. ಇದನ್ನು ಯಾರೂ ಬಹಿರಂಗವಾಗಿ ಒಪ್ಪಲಿಕ್ಕಿಲ್ಲ, ಮನಸ್ಸಿನ ಆಳದಲ್ಲಿಯೇ ಈ ಭಾವನೆ ಸುಳಿಯುತ್ತಿರಬಹುದು, ಹೊರತು, ಅದಕ್ಕಿಂತ ಹೆಚ್ಚಿರಲಿಕ್ಕಿಲ್ಲ. ಆದರೆ, ನ್ಯಾಯವನ್ನು ಎತ್ತಿ ಹಿಡಿಯುವ ಮತ್ತು ಎಲ್ಲರನ್ನು ಸಮಾನ ದೃಷ್ಟಿಯಿಂದ ನಡೆಸಿಕೊಳ್ಳುವ ಉದ್ದೇಶ ನಮ್ಮದಾಗಬೇಕೆಂದು ನಾನು ಹೇಳುತ್ತೇನೆ. ಆದುದರಿಂದ ಸಂಶಯಾತೀತವಾದ ಕಾರಣಗಳಿಲ್ಲದೆ ಅಲ್ಪ ಸಂಖ್ಯಾಕರಲ್ಲಿ ಅಪನಂಬಿಕೆ ಮತ್ತು ಅಪ್ರೀತಿಯನ್ನು ಬಹು ಸಂಖ್ಯಾಕರು ತಾಳಬಾರದೆಂದು ನಾನು ಆಗ್ರಹದಿಂದ ಹೇಳಿಕೊಳ್ಳುತ್ತೇನೆ. ವಿಶ್ವಾಸವು ವಿಶ್ವಾಸವನ್ನು ತರುತ್ತದೆಂದೂ ಪ್ರೀತಿಯು ಪ್ರೀತಿಯನ್ನು ಹುಟ್ಟಿಸುತ್ತದೆಂದೂ ನಾವು ನೆನಪಿಟ್ಟುಕೊಳ್ಳೋಣ! ಈ ದಿಸೆಯಲ್ಲಿ ಪ್ರಥಮವಾದ ಹೆಜ್ಜೆಯನ್ನು ಮುಂದಿಡುವುದು ಬಹು ಸಂಖ್ಯಾಕರ ಕರ್ತವ್ಯವೆಂಬುದನ್ನೂ ಮರೆಯದಿರೋಣ!

ಅಲ್ಪ ಸಂಖ್ಯಾಕರಲ್ಲಿ ತಾವು ಸುರಕ್ಷಿತರಾಗಿದ್ದೇವೆ. ಸುಭದ್ರವಾಗಿದ್ದೇವೆ, ಸುಖಿಗಳಾಗಿದ್ದೇವೆ ಎಂಬ ಭಾವನೆಯು ಮೂಡಿಬರುವಂತೆ ಬಹು ಸಂಖ್ಯಾಕವರ್ಗ ಅಲ್ಪ ಸಂಖ್ಯಾಕರನ್ನು ಉದಾರವಾದ ಧೋರಣೆಯಿಂದ ನಡೆಸಿಕೊಳ್ಳುವುದು ಅವಶ್ಯ. ಅವರಿಗೆ ನೌಕರಿಯನ್ನು ಕೊಡುವುದರಲ್ಲಿ ಧಾರಾಳತನವನ್ನು ತೋರಿಸಬೇಕು; ಅವರಲ್ಲಿ ಸಾಕಷ್ಟು ಗಾಢವಾದ ವಿಶ್ವಾಸವನ್ನು ಇಡಬೇಕು; ರಾಷ್ಟ್ರದ ಬಗ್ಗೆ ಅವರಲ್ಲಿ ಪ್ರೀತಿ ಉತ್ಪನ್ನವಾಗುವಂತೆ ಬಹು ಸಂಖ್ಯಾಕರ ವರ್ತನೆ ಇರಬೇಕು. ಈ ದೇಶವು ತಮ್ಮದಲ್ಲವೆಂಬ ಮತ್ತು ತಮಗೆ ಇಲ್ಲಿ ಸ್ವಾಗತವಿಲ್ಲವೆಂಬ ಭಾವನೆಯು ಅವರಲ್ಲಿ ಉಂಟಾಗಲಿಕ್ಕೆ ಬಿಡಬಾರದು, ಅಧಿಕಾರ ಸ್ಥಾನಗಳಿಂದ ಅವರನ್ನು ಹೊರಗಿಡಲಾಗದು.

ಇದು ಕೇವಲ ಉಪದೇಶವೆಂದೂ ತೀರ ಸಾಮಾನ್ಯವಾದ ಮಾತೆಂದೂ ತೋರಬಹುದು. ಆದರೆ ಕೆಲವೊಮ್ಮೆ ಸಾಮಾನ್ಯ ತತ್ವಗಳನ್ನೆ ದುರ್ಲಕ್ಷಿಸಿದ್ದರಿಂದ ಅಪಾಯವಾಗುತ್ತದೆ. ನಾನು ಹೇಳುತ್ತಿರುವುದು ಕೇವಲ ನೌಕರಿ ಮತ್ತು ಅಧಿಕಾರ ಸ್ಥಾನಗಳನ್ನು ಕೊಡುವ ವಿಷಯಕ್ಕೆ ಮಾತ್ರ ಸಂಬಂಧಿಸಿದ ವಿಷಯವನ್ನಲ್ಲ ಇದು ಸಾಮಾಜಿಕ ವರ್ಗಗಳು ಹೇಗೆ ಸಮ್ಮಿಶ್ರ ವ್ಯವಸ್ಥೆಗೆ ಹೊಂದಿಕೊಳ್ಳಬೇಕು ಎಂಬ ಪ್ರಶ್ನೆಯಾಗಿದೆ. ಹಳೆಯ ದಿನಗಳಲ್ಲಿ ಬೇರೆ ಬೇರೆ ಜಾತಿಯ ಜನರು ಪರಸ್ಪರ ಸ್ನೇಹ ಮತ್ತು ತಿಳಿವಳಿಕೆಯ ದೆಸೆಯಿಂದ ಪರಸ್ಪರ ಒಂದುಗೂಡಿ ಬೆರೆಯುತ್ತಿದ್ದರು. ಬೇರೆ ಬೇರೆ ಜಾತಿಗಳಿಗೆ ಸೇರಿದ್ದರೂ ವ್ಯಕ್ತಿಗತವಾಗಿ ಮೂಡಿದ ಸ್ನೇಹ ಭಾವನೆಯು ಎಲ್ಲಅಗ್ನಿ ಪರೀಕ್ಷೆಗಳನ್ನೂ ಜಯಿಸಿ ಉಳಿದ ಉದಾಹರಣೆಗಳು ಅನೇಕ ಸಿಗುತ್ತವೆ. ಸ್ನೇಹ ಸಂಬಂಧದ ಒಂದು ಉಲ್ಲೇಖನೀಯ ವೈಶಿಷ್ಟ್ಯವೆಂದರೆ ತಾವು ಒಂದೇ ಹೊಟ್ಟೆಯಿಂದ ಬಂದವರೆಂಬಂತೆ ಈ ಸ್ನೇಹಿತರು ಇರುತ್ತಿದ್ದರೂ ಸಹ ತಮ್ಮ ತಮ್ಮ ರೂಢಿ ಸಂಪ್ರದಾಯಗಳಂತೆಯೇ ನಡೆಯುತ್ತಿದ್ದರು; ಯಾರೂ ಇನ್ನೊಬ್ಬನ ಪದ್ಧತಿಯ ನಡುವೆ ಬರುತ್ತಿರಲಿಲ್ಲ; ಸಮ್ಮಿಶ್ರ ಭೋಜನ ಮಾಡುತ್ತಿರಲಿಲ್ಲ; ಇನ್ನೊಬ್ಬನ ಕೈಯಿಂದ ಒಂದು ಲೋಟೆ ನೀರನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಈ ಬಗೆಯ ರೂಢಿಗಳು ಮೈತ್ರಿಗೆ ಯಾವ ಧಕ್ಕೆಯನ್ನೂ ಮಾಡುತ್ತಿರಲಿಲ್ಲ!

ಇಂದಿನ ವಾತಾವರಣವು ಸಂಪೂರ್ಣ ಬದಲಾವಣೆಯನ್ನು ಹೊಂದಿದೆ. ಈಗ ಆಯಾ ಜಾತಿಯ ಜನರು ತಮ ಧರ್ಮದಂತೆ ನಡೆದುಕೊಳ್ಳುತ್ತಿರುವರೆಂದು ಇಟ್ಟುಕೊಳ್ಳಲೇನೋ ಬಹುದು; ಆದರೆ ಜಾತೀಯ ಸೌಹಾರ್ದತೆ ಮತ್ತು ಮೈತ್ರಿ ಮಾತ್ರ ಉಳಿದಿಲ್ಲ. ಎಲ್ಲರೂ ಕೂಡಿ ಬಾಳುವ ನೆಲವೇ ಇಲ್ಲವೆಂಬಂತೆ ಪರಿಸ್ಥಿತಿ ಕಂಡು ಬರುತ್ತದೆ ಆದುದರಿಂದ ಭಾರತವು ಬಹು ಸಂಖ್ಯಾಕರದೆಸ್ಟೋ ಅಲ್ಪ ಸಂಖ್ಯಾಕರದೂ ರಾಷ್ಟ್ರವಾಗಿದೆಯೆಂದು ನಾನು ಹೇಳ ಬಯಸುತ್ತೇನೆ. ಆದರೆ ನೀವು ಬಹಳಷ್ಟು ನಿಮ್ಮ ಅಧಿಕಾರಗಳ ವಿಷಯ ಮಾತನಾಡುತ್ತಿರ ಬೇಡಿ ಎಂದೂ ಹೇಳುತ್ತೇನೆ. ನಿಮ್ಮ ರಾಷ್ಟ್ರ ಪ್ರೇಮವು ಉಳಿದ ಯಾರಿಗಿಂತಲೂ ಕಡಿಮೆಯಾಗಿಲ್ಲವೆಂಬುದನ್ನು ನಿಮ್ಮ ವರ್ತನೆಯಿಂದ ತೋರಿಸಿರಿ; ಪ್ರೀತಿ ಮತ್ತು ರಾಷ್ಟ್ರ ನಿಷ್ಠೆಯಿಂದ ಇದನ್ನು ಜಗತ್ತಿಗೆ ತಿಳಿಸಿರಿ.

ನನ್ನ ಮನಸ್ಸಿಗೆ ಜಾತೀಯ ಸೌಹಾರ್ದತೆಗೆ ವಿರುದ್ಧವಾದ ಇಂದಿನ ಪರಿಸ್ಥಿತಿಯನ್ನು ಗಮನಿಸುವುದೇ ಕಷ್ಟವೆನಿಸಿದೆ—ನನ್ನ ಊರಾದ ಮಧ್ಯ ಪ್ರದೇಶದ ಜಾಬೋರಾದಲ್ಲಿ ಜಾತೀಯತೆಯಸುಳಿವೂ ಇರಲಿಲ್ಲ. ನನ್ನ ಬಾಲ್ಯಕಾಲದಲ್ಲಿ ಅಲ್ಲಿ ಹಿಂದುಗಳು, ಮುಸಲ್ಮಾನರು, ಪಾರ್ಸಿಗಳು, ಜೈನರು ಎಲ್ಲರೂ ಕೂಡಿ ಬಾಳುತ್ತಿದ್ದುದನ್ನು ಕಂಡಿದ್ದೇನೆ, ನಾವು ದೊಡ್ಡ ಕುಟುಂಬದ ಬಂಧುಗಳಂತೆ ಇರುತ್ತಿದ್ದೆವು ದಸರೆಯ ಉತ್ಸವದಲ್ಲಿ ನವಾಬ ಸಾಹೇಬರು ಆಢ್ಯ ಪಾತ್ರವನ್ನು ವಹಿಸುತ್ತಿದ್ದರು. ಮೊಹರಮಿನಲ್ಲಿ ಹಿಂದುಗಳಾದ ನಾವು ಭಾಗವಹಿಸುತ್ತಿದ್ದೆವು. ಆಗ ಇನ್ನು ಸಹ ಭೋಜನ, ಅಂತರ್ಜಾತೀಯ ವಿವಾಹ ಮುಂತಾದ ವಿಚಾರಗಳು ತಲೆ ಎತ್ತಿರಲಿಲ್ಲ. ಯಾರೂ ಅದನ್ನು ಯೋಚಿಸುತ್ತಲೇ ಇದ್ದಿಲ್ಲ. ಅದಾಗ್ಯೂ ಬೇರೆ ಬೇರೆಜಾತಿಯವರಲ್ಲಿ ಬಂಧುಭಾವ ತುಳುಕುತ್ತಿತ್ತೆಂದು ಹೇಳಬಹುದು.

ಇಂದು ಹಳೆಯ ರೂಢಿ ಮತ್ತು ಸಂಪ್ರದಾಯಗಳು ಮಾಯವಾಗುತ್ತಾ ಸಹ ಭೋಜನ ಮತ್ತು ಅಂತರ್ಜಾತೀಯ ವಿವಾಹಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಾ ಇರುವಾಗ ಜಾತೀಯ ಸೌಹಾರ್ದ ಭಾವನೆಯ ಕೂರತೆಯೇ ಕಂಡುಬರುವುದು ಶೋಚನೀಯ. ಉದಾಹರಣೆಗೆ ಹಿಂ

(೨೦ನೇಪುಟನೋಡಿರಿ)

ಭಕ್ಷ್ಯೆ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಸಾಮಾಜಿಕ ಹೊಣೆಗಾರಿಕೆಯ ಆವಿರ್ಭಾವ

ಬರೆದವರು : ಶ್ರೀಮತಿ ಪದ್ಮಿನಿ ಸೇನಗುಪ್ತ

ಕೇವಲ ಅಂಧಶ್ರದ್ಧೆ, ಅಜ್ಞಾನ ಮತ್ತು ದಾರಿದ್ರ್ಯದಲ್ಲಿ ಮುಳುಗಿದೆ ಎನ್ನುತಿದ್ದ ಭಾರತದಲ್ಲಿ ಸ್ವಾತಂತ್ರ್ಯೋತ್ಕರ್ಷದಲ್ಲಿ ವ್ಯಕ್ತವಾದ ಸಮಾಜಾಗೃತಿಯ ಲಕ್ಷಣ ನೀರೀಕ್ಷಕರನ್ನು ಬೆರಗು ಗೊಳಿಸುತ್ತದೆ. ಸ್ವತಃ ಭಾರತೀಯರಲ್ಲಿ ಉತ್ತಮ ಜೀವನದ ತೀವ್ರ ಅಭಿಲಾಷೆಯನ್ನು ಹುಟ್ಟಿಸಿ ಪರಸ್ಪರ ಸಹಾಯಕ್ಕೆ ಮುಂದಾಗಿ ಶ್ರೇಯಸ್ಸನ್ನು ಸಂಪಾದಿಸಲು ಈ ಜಾಗೃತಿ ದಾರಿ ಮಾಡಿ ಕೊಡುತ್ತಿದೆ. ನಮ್ಮ ಸಾಧನೆ ಇನ್ನಷ್ಟು ಹೆಚ್ಚಬೇಕೆಂದು ಹೆಸರಾಂತ ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ಸೇನರು ಇಲ್ಲಿ ಅಭಿಪ್ರಾಯ ಪಡುತ್ತಾರೆ.

ಕೆಲವು ವರ್ಷಗಳ ಹಿಂದೆ ನಾನು ಮಿಸ್ ಮೂರಿಯೆಲ್ ಲೆಸ್ಟರ್ ಇವರನ್ನು ಕಂಡು ನಮ್ಮ ದೇಶದ ಕುರಿತು ನಿಮ್ಮ ವಿಚಾರವೇನು ಎಂದು ಕೇಳಿದೆನು. ಅದಕ್ಕೆ ಅವರು ಹೀಗೆ ಉತ್ತರವಿತ್ತರು—

"ಸಾಮಾಜಿಕ ಜಾಗೃತಿಯು ಕ್ಷಿಪ್ರದಲ್ಲಿ ಬೆಳೆಯುತ್ತಿರುವುದನ್ನು ಕಂಡು ನನಗೆ ಸಾನಂದಾಶ್ಚರ್ಯವಾಗಿದೆ. ಬಡತನದಿಂದ ನರಳುವ ಜನರು ಕೋಟ್ಯಾಂತರ ವಿದ್ದಾರೆಂಬುದನ್ನು ಚೆನ್ನಾಗಿ ಗ್ರಹಿಸಿರುವ ಈ ದೇಶದಲ್ಲಿ ಯಾವುದೂ ತಪ್ಪು ನಡೆಯಲಾರದು. ಭಾರತೀಯರಾದ ನಿಮಗೆ ನಿಮ್ಮ ಲೋಪದೋಷಗಳ ತಿಳಿವಳಿಕೆ ಇದೆ ಮತ್ತದನ್ನು ದೂರಗೊಳಿಸುವ ಆತುರವೂ ನಿಮ್ಮಲ್ಲಿದೆ."

ನಾಳೆಯ ತಲೆಮಾರಿನ ನಾಗರಿಕರಾಗುವ ಮಕ್ಕಳನ್ನು ಬೀದಿಗಳಲ್ಲಿ ಕಂಡಾಗ ಮತ್ತು ಶಿಕ್ಷಣವಿಲ್ಲದೆ, ಯೋಗ್ಯ ಪಾಲನೆ ಪೋಷಣೆಗಳಿಲ್ಲದೆ ಚರಂಡಿಯಲ್ಲಿ ಅಥವಾ ಓಣಿಯಲ್ಲಿ ಅವು ಆಡುತ್ತಿರುವುದನ್ನು ನಿರೀಕ್ಷಿಸಿದಾಗ ಮಿಸ್. ಲೆಸ್ಟರ್ ಹೇಳಿದ ಮಾತಿನಲ್ಲಿ ನನ್ನ ವಿಶ್ವಾಸ ನಡುಗಹತ್ತುತ್ತದೆ ಆಗ ನಾನು ೧೯೪೮ರಿಂದ ಭಾರತದಲ್ಲಿ ಎಷ್ಟು ಕ್ಷಿಪ್ರ ಪ್ರಗತಿಯಾಗಿದೆ ಎಂಬುದನ್ನು ಆಲೋಚಿಸುವುದರಿಂದಲೇ ಅವರು ಎಷ್ಟು ಸರಿಯಾದ ಉದ್ಗಾರವೆತ್ತಿದ್ದರೆಂದು ಸಮಾಧಾನ ಮಾಡಿಕೊಳ್ಳಬೇಕಾಗುತ್ತದೆ.

ಈಗ ಪ್ರತಿಯೊಂದು ಕಡೆಯಲ್ಲಿ ಸಾಮಾಜಿಕ ಜಾಗೃತಿಯ ಬೆಳವಣಿಗೆಯು ಸ್ಪಷ್ಟವಾಗಿ ಕಂಡು ಬರುತ್ತದೆ. ಮನೆಯ ಜಾವಡಿಯಲ್ಲಿ ಕುಳಿತು ಸ್ತ್ರೀಪುರುಷರು ಭಾರತದಲ್ಲಿ ಸುಖವಿಲ್ಲವೆಂದು ಹೇಳುತ್ತಾ ತಮ್ಮ ಕಷ್ಟಗಳನ್ನೆ ಚರ್ಚಿಸುತ್ತಾ ನಡೆಸುವ ಸಂಭಾಷಣೆಯಲ್ಲಿ ಅಥವಾ ನಮ್ಮ ಕೊಳಚೆ ಪ್ರದೇಶಗಳ ದುರ್ಗಂಧ ಮತ್ತು ಜುಗುಪ್ಸಾವಹ ಪರಿಸ್ಥಿತಿಯ ಕುರಿತಾದ ಹೆಂಗಸರ ವಾತುಕತೆಯಲ್ಲಿ ಈ ಜನರಿಗೆ ಒಳ್ಳೆಯದು ಬೇಕಾಗಿದೆ ಎಂಬ ಜ್ಞಾನವಿರುವುದೂಂದಲೇ ಇಷ್ಟೆಲ್ಲ ಅತೃಪ್ತಿ ಮೂಡಿದೆ. ಎಂಬ ಭಾವನೆಯನ್ನು ನಾನು ಗುರುತಿಸುತ್ತಿದ್ದೇನೆ. ಜನರು ನೆರೆಮನೆ ಪಾಸದ ಭೇಟಿಯಿಂದ ಮಾತನಾಡದೆ ಇರುವ ಅಥವಾ ಉದಾಸೀನತೆಯಿಂದ ಸುಮ್ಮನುಳಿಯುವ ದಿನಗಳು ಈಗ ಕಳೆದು ಹೋಗಿದೆ ಇಂದು ಭಾರತದಲ್ಲಿರುವಷ್ಟು ಹೆಚ್ಚು ವಾಕ್ ಸ್ವಾತಂತ್ರ್ಯವನ್ನು ಜಗತ್ತಿನ ಬೇರೆ ಯಾವ ಪ್ರದೇಶದ ನಾಗರಿಕನು ಅನುಭವಿಸುತ್ತಿಲ್ಲ. ಸಮ್ಮಾಪಗಳ ಹೆಚ್ಚಿನ ಸ್ತ್ರೀಯರು ಉಪಸಭೆಗಳನ್ನು ಇಂದು ತುಚ್ಛೀಕರಿಸುತ್ತಿಲ್ಲ.

ಸೇವೆಯನ್ನು ಕಲ್ಪಿಸುವ ಉತ್ಸಾಹದ ಭಾವನೆಯನ್ನು ಕೇವಲ ಪಟ್ಟಣಗಳಲ್ಲಿಯಷ್ಟೇಯಲ್ಲ—ಹಳ್ಳಿಗಳಲ್ಲೂ ಇಂದು ನಾವು ಕಾಣುತ್ತಿದ್ದೇವೆ ಗ್ರಾಮಮಟ್ಟದಲ್ಲಿ ಸೇವೆಯನ್ನು ಮಾಡುತ್ತಿರುವ ಈ ಕಾರ್ಯಕರ್ತರದು ಉಲ್ಲೇಖನೀಯ ವೈಶಿಷ್ಟ್ಯವೆಂದರೆ ಗಾಂಧೀಜಿಯ ಶಾಂತಸೂತ್ರಗಳ ಅನುಸರಣೆ ಮತ್ತು ಪ್ರಚಾರದ ಮೂಲಕ ಪ್ರಕಾಶಕ್ಕೆ ಬರಬೇಕೆಂಬ ಅಭಿಲಾಷೆಯ ಅಭಾವ. ತಮ್ಮ ಯೋಜನೆಗನುಸಾರ ಕೆಲಸ ನಡೆದರೆ ಅವರಿಗೆ ಸಾಕು—ಅವರ ಈ ಸೇವೆಯ ಫಲವನ್ನು ಜನರು, ಮುಖ್ಯವಾಗಿ ಹಳ್ಳಿಯ ಸ್ತ್ರೀಯರು ಮತ್ತು ಮಕ್ಕಳು, ಉಣ್ಣುತ್ತಿದ್ದಾರೆ, ಹೀಗೆ ದೇಶದ ಅತಿ ದೂರದ ಮೂಲೆಗಳಲ್ಲಿ ಸಹ ರಾಷ್ಟ್ರೀಯ ಪುನಾರಚನೆಯ ಭವನದ ನಿರ್ಮಾಣ ಕಾರ್ಯವನ್ನು ನಿಧಾನವಾಗಿಯೂ ದೃಢವಾಗಿಯೂ ಅವರು ಸಾಗಿಸುತ್ತಿದ್ದಾರೆ.

ಸಾಕಷ್ಟು ಚೆನ್ನಾಗಿಲ್ಲದ ಜಿಲ್ಲೆಯೊಂದಕ್ಕೆ ನಾನು ನೀಡಿದೊಂದು ಸಂದರ್ಶನ ನೆನಪಿಗೆ ಬರುತ್ತದೆ—ಅಲ್ಲಿ ಒಂದು ಯೋಜನೆಯನ್ನು ಕಾರ್ಯಗತಗೊಳಿಸಲು ಜನರು ಬಹಳವಾಗಿ ನೆರವನ್ನು ನೀಡಿದ್ದರು. ಪ್ರತಿಯೊಂದೂ ಕಡೆಯಲ್ಲಿ ನಾವು ಇದೇ ಕತೆಯನ್ನು ಕೇಳುತ್ತಿದ್ದೇವೆ. ಭಾರತದ ಜನರು ಪರಸ್ಪರ ಸಹಾಯವನ್ನು ಸಲ್ಲಿಸುತ್ತಿದ್ದಾರೆಯಷ್ಟೇಯಲ್ಲ, ಸ್ವಂತ ಉದ್ಧಾರದ ದೃಷ್ಟಿಯಿಂದ ತಮಗೆ ತಾವೇ ಸಹಾಯವನ್ನು ಮಾಡಿಕೊಳ್ಳುವ ಪ್ರಾಮಾಣಿಕ ಬುದ್ಧಿಯೂ ಬಲಿಯುತ್ತಿದೆ. ಪ್ರತಿಯೊಂದೂ ಕಡೆಯಲ್ಲಿ ಹೊರತೋರಿಕೆಗೆ ಕಾಣಿಸುವ ಬೆಳವಣಿಗೆಯ ಜೊತೆಯಲ್ಲಿ ಜನರು ಅವರಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸ್ತ್ರೀಯರೂ ಸೇರಿದ್ದಾರೆ, ಮೌನವಾಗಿ ಸಾಧಿಸಿದ ಕೆಲಸ ವ್ಯಕ್ತವಾಗುತ್ತದೆ. ಕೆಲವುಸಂದರ್ಭಗಳಲ್ಲಿ ಸಾರ್ವಜನಿಕಹಿತಕ್ಕೋಸ್ಕರ ತಮ್ಮ ಹತ್ತಿರ ಇದ್ದುದನ್ನೆಲ್ಲ ಅವರು ಎತ್ತಿಕೊಟ್ಟುಬಿಡುತ್ತಾರೆ. ಅಂಥವರ ನಡುವೆ ತಿರುಗಾಡಿದಾಗ ನಮ್ಮಲ್ಲಿ ಸಹ ಸ್ಫೂರ್ತಿ ಉಕ್ಕೇರುತ್ತದೆ; ಮತ್ತು ನಾವು ನಮ್ಮ ಸ್ವಂತ ಕೆಲಸಕ್ಕೆ ಮರಳಿ ಬಂದಾಗ ಈ ನಿಸ್ವಾರ್ಥ ಹಾಗು ಶ್ರದ್ಧಾವಂತರಾದ ಮಹನೀಯರ ಸಂದರ್ಶನದಿಂದ ಲಭಿಸಿದ ಅನುಭವ ನಮ್ಮನ್ನು ಇನ್ನಷ್ಟು ಶ್ರೀಮಂತವಾಗಿ ಮಾಡುತ್ತದೆ.

ಆದರೆ ಸಾಮಾಜಿಕ ಕಾರ್ಯವು ಒಬ್ಬನು ಎಷ್ಟು ಹೆಚ್ಚು ಕೊಟ್ಟನೋ ಅದಕ್ಕಿಂತಲೂ ಹೆಚ್ಚಿನದನ್ನು ಅಪೇಕ್ಷಿಸುತ್ತದೆ ಭಾರತದಂಥ ದೇಶಗಳಲ್ಲಿಯಂತೂ ಈ ಬೇಡಿಕೆ ಎಷ್ಟು ಅಧಿಕ ಪ್ರಮಾಣದಲ್ಲಿದೆಯೆಂದರೆ ಕೆಲವೊಮ್ಮೆ ಮುಂದೇನು ಮಾಡೋಣ ಎಂಬ ವಿಷಯ ನಮ್ಮನ್ನು ದಿಗ್ಮೂಢವಾಗಿ ಮಾಡುತ್ತದೆ. ವಿಶೇಷವಾಗಿ ಕೆಲಸಮಾಡಲು ಬಯಸದೆ, ಸೋಕಂಗಳಾಗಿ, ಬೇಡುವವರಂತಿ ದಿನಗಳೆಯುವುದರಲ್ಲಿ ಸಂತೋಷ ಕಾಣುವ ಮಕ್ಕಳ ಮನೋಭಾವ ಹೆದರಿಕೆಯನ್ನು ಬರಿಸುತ್ತದೆ. ಇದರಂತೆ ಮನೆಯಿಲ್ಲದ ಅನಾಥ ಮಕ್ಕಳು, ಅಂಗವಿಕಲರಾದ ಶಿಶುಗಳು, ಸರಿಯಾದ ರೀತಿಯಿಂದಲ್ಲದಿದ್ದರೆ, ತಪ್ಪು ವಿಧಾನದಿಂದಲೇ ಆಗಲಿ ದಿನ ದೂಡಲು ಸಾಕಾಗುವಷ್ಟು ಮಟ್ಟಿನ ಸಂಪಾದನೆಗಾಗಿ ಮುನ್ನುಗ್ಗುವ ಬಾಲಕ – ಬಾಲಕಿಯರ ಪರಿಸ್ಥಿತಿಯೂ ಉತ್ತೇಜಕವಾಗಿಲ್ಲ. ನಾವು ಎಲ್ಲಿಗೆ ಬೇಕಾದರೆ ಹೋಗಲಿ—ಭಿಕ್ಷೆಗಾಗಿ ಬೊಬ್ಬಿಡುತ್ತಾ, ಹೊಸಬರನ್ನು ಪೀಡಿಸುತ್ತಾ ಹಣವನ್ನು ಸಂಗ್ರಹಿಸುತ್ತಿರುವವರು ಅಥವಾ ಬೀದಿಯ ಮೂಲೆಯಲ್ಲಿ ಆಡಿ ಸಮಯ ಕಳೆಯುವವರು ಕಣ್ಣಿಗೆ ಬಿದ್ದೇ ಬೀಳುತ್ತಾರೆ.

ನಮ್ಮಲ್ಲಿ ಈ ಮಕ್ಕಳಿಗೆಲ್ಲ ಉಚಿತ ಶಿಕ್ಷಣವನ್ನು ಕೊಡಲು ಸಾಕಷ್ಟು ಶಾಲೆಗಳಿಲ್ಲ; ಇನೆಯೆಂದಿಟ್ಟು ಕೊಂಡರೂ ಸಹ, ಈ ಮಕ್ಕಳಿಗೆ ಶಾಲೆಗೆ ಹೋಗುವುದಕ್ಕಿಂತ ಆಡುವುದು, ಬೇಡುವುದು ಹೆಚ್ಚೇಕೆ ಕದಿಯುವುದು ಹೆಚ್ಚು ಸುಲಭವೆನಿಸುತ್ತದೆ. ಸಣ್ಣ ಹುಡುಗರು ಸಹ ಹೊಗೆಬತ್ತಿ ಸೇದಿಸುತ್ತಾರೆ; ಹಾನಿಕರ ಪದಾರ್ಥಗಳನ್ನು ತಿನ್ನುತ್ತಾರೆ. ಅಷ್ಟೇಯಲ್ಲ, ಅಮಲು ಬರಿಸುವ ಪಾನೀಯವನ್ನೂ ಕುಡಿಯುತ್ತಾರೆ. ನಾವು ಕೂಡಲೇ ಯೋಗ್ಯ ಕ್ರಮಗಳನ್ನು ಕೈಗೊಳ್ಳದಿದ್ದರೆ ನಾಳೆಯ ಜನಾಂಗ ಎಷ್ಟು ಕುರೂಪಿಯಾಗಿ ಹೇಗೆ ಬರಿತು ಎಂಬುದರ ತಿಳಿವಳಿಕೆಯಾಗಬೇಕಾದರೆ, ಕೊರೊ ಮಂಡಲ ತೀರದಲ್ಲಿನ ಬೆಸ್ತರ ಮಕ್ಕಳನ್ನು ನಿದರ್ಶನ ರೂಪದಲ್ಲಿ ನಿರೀಕ್ಷಿಸಬಹುದು. ಕಳೆದ ಸಲ ನಾನು ಅತ್ತ ಹೋಗಿದ್ದಾಗ ಸಮುದ್ರ ದಂಡೆಯ ಮೇಲೆ ಭಿಕ್ಷೆ ಬೇಡುತ್ತಿದ್ದ ಕೆಲವು ತೆಲುಗು ಮಕ್ಕಳನ್ನು ಕಂಡೆನು. ತಂಜಾವೂರ ಗಾಳಿಯ ಸೇವನೆಗೆಂದು ಅಲ್ಲಿ ನೆರೆದಿದ್ದವರನ್ನು ಈ ಮಕ್ಕಳು ಬಿಟ್ಟೂ ಬಿಡದೆ ಪೀಡಿಸುತ್ತಿದ್ದರು; ಸ್ವಲ್ಪ ಮಟ್ಟಿಗೆ ಹೆದರಿಸುತ್ತಲೂ ಇದ್ದರು. ಶಾಲೆಗೆ ಹೋಗುತ್ತಿದ್ದೀರೊ ಇಲ್ಲವೊ ಎಂದು ನಾನವರನ್ನು ವಿಚಾರಿಸಿದ್ದಕ್ಕೆ ತಮ್ಮ ಭಾಷೆ ತೆಲುಗೆಂದೂ ಶಾಲೆಯಲ್ಲಿ ಒರಿಯಾ ಕಲಿಸುತ್ತಿರುವುದರಿಂದ ತಾವು ಶಾಲೆಗೆ ಹೋಗಲು ಇಚ್ಛಿಸುತ್ತಿಲ್ಲವೆಂದೂ ಉತ್ತರ ಬಂತು.

ಅಲ್ಲಿಗೆ ಆಗ ಬಂದೊಬ್ಬ ಬೆಸ್ತನು ನಮ್ಮ ಸಂಭಾಷಣೆಯನ್ನು ಕೇಳಿ ಈ

(೨೦ನೇ ಪುಟ ನೋಡಿರಿ)

1954

A YEAR OF OUTSTANDING SUCCESS FOR UNITED INDIA!

Policyholders number	....	1,29,800
Life Assurance in Force	.... Rs.	30,56,26,000
Total Assets	.... ,,	9,73,00,000
Total Income	.... ,,	1,68,00,000
Life Assurance Fund	.... ,,	8,77,00,000
Total Claims paid in 1954	,,	52,85,000
NEW BUSINESS SECURED	Rs.	5,30,00,000

OUR BIENNIAL VALUATION ON 31st DECEMBER, 1954:

BONUS DECLARED:

Rs. 17/- per thousand per annum Whole Life Participating Policies.

Rs. 15/- per thousand per annum Endowment Participating Policies.

SURPLUS DISCLOSED: ... Rs. 51,38,221.

(Bonus Certificates will be despatched in due course. Policyholders are requested not to send any reminders meantime.)

*****

THE UNITED INDIA LIFE ASSURANCE COMPANY, LTD.

(ESTABLISHED 1906)

HEAD OFFICE: **MADRAS.**

ಶಾಂತಿಪ್ರಿಯ ಭಾರತದ ಸಶಸ್ತ್ರ ದಳ

ವಿಶ್ವ ಶಾಂತಿಯನ್ನು ಹೃತ್ಪೂರ್ವಕ ಬಯಸುತ್ತಿದ್ದರೂ ಸ್ವತಂತ್ರ ರಾಷ್ಟ್ರವಾದ ಭಾರತವು ತನ್ನ ಪ್ರತಿರಕ್ಷಣೆಯನ್ನು ಮಾಡಿಕೊಂಡು ಅಂತರಿಕ ಗೊಂದಲ್ಲ ಹಾಗು ಬಾಹ್ಯ ಶಕ್ತಿಗಳ ಆಕ್ರಮಣದ ಸಂಭವಗಳನ್ನು ಎದುರಿಸಬೇಕಾಗಿದೆ. ಸ್ವಾತಂತ್ರ್ಯೋತ್ತರದಲ್ಲಿ ಈ ದಿಸೆಯಲ್ಲಿ ಸಾಧಿಸಿದ ಪ್ರಗತಿ ಅಮೋಘವಾಗಿದೆ.

ಸ್ವಾತಂತ್ರ್ಯೋದಯದ ಎಂಟನೆಯ ವರ್ಷದ ಆರಂಭದಂದು ಭಾರತೀಯ ಸಶಸ್ತ್ರ ಪಡೆಗಳು ಹೆಮ್ಮೆಯಿಂದ ಹಿಂತಿರುಗಿ ನೋಡಿ ರಾಷ್ಟ್ರಕ್ಕೆ ಎಸಗಿದ ಸೇವೆಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಬಹುದು. ರಾಷ್ಟ್ರೀಯ ಸುರಕ್ಷತೆ ಹಾಗೂ ತನ್ನ ಪ್ರತಿ ರಕ್ಷಣೆಗಳ ಕ್ರೋಢೀಕರಣದ ಬಗ್ಗೆ ಸಲ್ಲಿಸಿದ ಸೇವೆಯೂ ಸಮಾಧಾನಕರವಾಗಿದೆ. ಇಂದು ಜಗತ್ತಿನಲ್ಲಿ ನೆಲೆಸಿರುವ ಅನಿಶ್ಚಿತ ಶಾಂತಿಯಲ್ಲಿ ನಮ್ಮ ಪ್ರತಿರಕ್ಷಣಾ ಸೇನೆಗಳು ನಿರಂತರ ಎಚ್ಚರಿಕೆಯಿಂದ ಜನತೆಗೆ ರಕ್ಷಣೆ ಕೊಡುವುದಕ್ಕಾಗಿ ನಮ್ಮ ಭೂ, ವಾಯು ಮತ್ತು ಜಲ ಮಾರ್ಗಗಳನ್ನು ರಕ್ಷಿಸುತ್ತಿವೆ.

ಸ್ವತಂತ್ರ ಭಾರತಕ್ಕೆ ಸಮತೋಲನದ ಪ್ರತಿರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ, ನೌಕಾ ಹಾಗೂ ವಿಮಾನ ಪಡೆಗಳನ್ನು ಅಭಿವೃದ್ಧಿಪಡಿಸುವವಿಷಯದಲ್ಲಿ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಒಂದು ಶತಮಾನದಿಂದಲೂ ದೀರ್ಘಾವಧಿಯ ಹೋರಾಟದ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವ ಭಾರತೀಯ ಸೇನೆಯು ಶಕ್ತಮಟ್ಟಿಗೆ ಹೋರಾಟದ ಪಡೆಯಾಗಿ ಅಭಿವೃದ್ಧಿ ಹೊಂದಿದೆ. ಇದೇ ಪ್ರಕಾರ ನೌಕಾ ಹಾಗು ವಿಮಾನ ದಳಗಳ ಶಕ್ತಿ ಸಂವರ್ಧನ ಕ್ರಮ ಹಾಗೂ ದಕ್ಷತೆಯನ್ನು ಬೆಳೆಸುವ ದಿಕ್ಕಿನಲ್ಲಿ ಸರ್ಕಾರದ ಪ್ರಯತ್ನಗಳನ್ನು ಹರಿಸಲಾಗಿದೆ. ಸ್ವಾತಂತ್ರ್ಯಾನಂತರ, ರಾಷ್ಟ್ರದ ಪ್ರತಿರಕ್ಷಣೆಯ ಮುಖ್ಯ ಜವಾಬ್ದಾರಿಯು ಭೂ ಸೇನೆಯ ಮೇಲೆ ಬಿದ್ದಿತು. ಭೂ ಸೇನೆಯು ತನ್ನ ದಕ್ಷತೆಯನ್ನು ಪ್ರದರ್ಶಿಸಿ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡಿದೆ.

ಪ್ರತಿರಕ್ಷಣೆಯ ತರಬೇತಿಯು ನಿರಂತರ ಕ್ರಮವಾಗಿದ್ದು ಅಡ್ಡಿ ಅಡಚಣೆಗಳನ್ನು ಸಹಿಸುವುದಿಲ್ಲ. ನಮ್ಮ ಪ್ರತಿ ರಕ್ಷಣಾದಳಗಳ ಕಾರ್ಯಾಚರಣೆ ದಕ್ಷತೆಯನ್ನು ಬಳಸಿಕೊಂಡು ಬರುವುದಕ್ಕೂ ಶಾಂತಿ ಕಾಲದಲ್ಲಿ ತರಬೇತಿಯ ಬಗ್ಗೆ ಸರ್ವ ಪ್ರಯತ್ನಗಳನ್ನು ಮಾಡಬೇಕಾಗುವುದು. ನಮ್ಮ ಸಶಸ್ತ್ರಪಡೆಗಳಾಗಲಿ ಅಥವಾ ಇನ್ನಾವುದೇ ರಾಷ್ಟ್ರದ ಸಶಸ್ತ್ರಪಡೆಗಳಾಗಲಿ ಸೋಪಾರಿಗಳಂತೆ ಇರಲು ಸಾಧ್ಯವಿಲ್ಲ. ಜೋಧನ ಜೀವನವು ಸೇವೆಗಾಗಿ ಮೀಸಲಾಗಿದೆ. ಯೋಧನು ರಾಷ್ಟ್ರದ ಪ್ರತಿರಕ್ಷಣೆಗಾಗಿ ತನ್ನ ಜೀವನವನ್ನು ಮುಡುಪಾಗಿಟ್ಟಿದ್ದಾನೆ. ಆದುದರಿಂದ, ಯೋಧರು ದಿನಂಪ್ರತಿ, ವರ್ಷಂಪ್ರತಿ ಬಾರದೇ ಇರುವ ತುರ್ತಿನ ಸಂದರ್ಭಕ್ಕಾಗಿ ಸಿದ್ಧರಾಗಿರುವರು.

ದಕ್ಷತೆಯನ್ನು ಉಳಿಸಿಕೊಂಡು ಬರುವ ಬಗ್ಗೆ ಇರುವ ವಿಧಾಯಕ ಅಗತ್ಯದೊಂದಿಗೆ ಉಳಿಸಬಹುದಾದ ನೆಚ್ಚವನ್ನೆಲ್ಲಾ ಮಿಗಿಸಿ ಪರಮಾವಧಿ ಮಿಗಿತಾಯವನ್ನು ಸಾಧಿಸಲು ಸರ್ವ ಪ್ರಯತ್ನವನ್ನೂ ಮಾಡಲಾಗಿದೆ. ಈ ಪ್ರಯತ್ನಗಳು ೬ ಕೋಟಿ ರೂಪಾಯಿಗಳ ಅವರ್ತ ಮಿಗಿತಾಯದಲ್ಲಿಯೂ ಹಾಗು ೪ ಕೋಟಿ ರೂಪಾಯಿಗಳ ಅವರ್ತವಲ್ಲದ ಮಿಗಿತಾಯವಲ್ಲಿಯೂ ಫಲಿತಗೊಂಡಿವೆ.

ಸ್ವಾತಂತ್ರ್ಯವು ಲಭಿಸಿದಾಗ, ಭಾರತೀಯ ನೌಕಾಪಡೆಯು ಶೈಶವಾವಸ್ಥೆಯಲ್ಲಿದ್ದಿತು ಈಗ ಅದು ಸಿಧಾನವಾಗಿ ಒಂದೇ ಸಮನೆ ವಿಸ್ತಾರಗೊಳ್ಳುತ್ತಿದೆ. 'ನೈಜೀರಿಯಾ' ಎಂಬ ಸಮರ ನೌಕೆಗೆ (ಕ್ರೂಸರ್). "ಮೈಸೂರು" ಎಂದು ನಾಮಕರಣಮಾಡಿ ಬ್ರಿಟನ್‌ನಲ್ಲಿಪುನಃ ಸಿದ್ಧಗೊಳಿಸಲಾಗುತ್ತಿದೆ. ೧೯೫೭ರಲ್ಲಿ ಕಾರ್ಯಾಚರಣೆಗೆ ಬಂದಾಗ ಈ ಸಮರ ನೌಕೆಯು ನಮ್ಮ ನೌಕಾ ಪಡೆಯಲ್ಲೆಲ್ಲಾ ಅತ್ಯಂತ ಆಧುನಿಕ ಜಹಜಾಗುವುದಲ್ಲದೆ ರಾಮುಲ್ ನೌಕಾದಳದ ಅತ್ಯುತ್ತಮ ಸಮರ ನೌಕೆ ಅಥವಾ ಕ್ರೂಸರ್‌ಗಳೊಂದಿಗೆ ಹೋಲಿಸಬಹುದಾದ ಸ್ಥಿತಿಯ ಲ್ಲಿರುವುದು.

ಭಾರತೀಯ ನೌಕಾ ಪಡೆಯಲ್ಲಿರುವ ಇತರ ಜಹಜುಗಳ ಪ್ರತಿಯಾಗಿ ನೂತನ ಹಾಗೂ ಆಧುನಿಕ ಜಹಜುಗಳನ್ನು ತರಲಾಗುತ್ತಿದೆ. ನೂತನ ನೌಕೆಗಳನ್ನು ಕ್ರಮೇಣ ಸೇರಿಸಲಾಗುವುದು. ವಿದೇಶೀಯ ಪೂರೈಕೆಗಳ ಮೇಲೆ ಈಗಿರುವ ನಮ್ಮ ಪರಾವಲಂಬನೆಯನ್ನು ತಗ್ಗಿಸುವ ಉದ್ದೇಶದಿಂದ, ಭಾರತದಲ್ಲಿಯೇ ನೌಕಾ ಪಡೆಗೆ ಬೇಕಾಗುವ ನೌಕೆಗಳನ್ನು ನಿರ್ಮಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಇದೊಂದು ಸಿಧಾನದ ಕಾರ್ಯ. ನೌಕಾ ಪಡೆಗೆ ಬೇಕಾದ ಜಹಜುಗಳನ್ನು ನಿರ್ಮಿಸಲು ಬೇಕಾಗುವ ನಾಕೌ ಶಿಲ್ಪಿಗಳನ್ನೂ ವಿಶೇಷ ರೀತಿಯ ಸಾಮಾನು ಸರಂಜಾಮನ್ನೂ ಅನೇಕ ವರ್ಷಗಳ ಅವಧಿಯಲ್ಲಿ ಮಾತ್ರ ನಿರ್ಮಿಸಬಹುದು. ವಿಶಾಖ ಪಟ್ಟಣದಲ್ಲಿರುವ ಹಿಂದುಸ್ಥಾನ್ ನೌಕಾಂಗಣವು ಭಾರತೀಯ ನೌಕಾ ಪಡೆಗಾಗಿ ಸಮುದ್ರ ತೀರದ ಸಮೀಕ್ಷಾ ಜಹಜನ್ನು ನಿರ್ಮಿಸಬೇಕೆಂದು ಕೇಳಲಾಗಿದೆ.

ಹಡಗುಗಳನ್ನು ದುರಸ್ತು ಪಡಿಸುವ ಅಂಗಳಗಳನ್ನು (ಡಾಕ್‌ಯಾರ್ಡ್) ವಿಸ್ತರಿಸುವ ಕಾರ್ಯಕ್ರಮವು ವೇಗದ ಪಟ್ಟಯಂತೆ ಮುಂದುವರಿಯುತ್ತಿದೆ.

ನಮ್ಮ ರಾಷ್ಟ್ರದಲ್ಲಿ ಕಲ್ಪಿಸಿರುವ ನೌಕಾ ಶಿಕ್ಷಣ ಸೌಲಭ್ಯಗಳು ಇಡೀ ಪೂರ್ವದಲ್ಲಿಯೇ ಅತ್ಯುತ್ತಮವಾದವೆಂದು ಭಾವಿಸಲಾಗಿದೆ. ನಾವು ಈ ವಿಷಯದಲ್ಲಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಿದ್ದೇವೆಯಲ್ಲದೆ ಸ್ವಲ್ಪ ಮಟ್ಟಿಗೆ ಇತರ ರಾಷ್ಟ್ರಗಳಿಗೂ ನೆರವನ್ನು ನೀಡಲು ಸಮರ್ಥ ಸಾಧ್ಯವಾಗಿದೆ.

ಪ್ರತಿ ವರ್ಷವೂ ಭಾರತೀಯ ನೌಕಾ ಪಡೆಯ ನೌಕೆಗಳು ಪೂರ್ವ ಮತ್ತು ಪಶ್ಚಿಮ ಏಷ್ಯಾ ಮತ್ತು ಭೂಮಧ್ಯ ಸಮುದ್ರ ರಾಷ್ಟ್ರಗಳಿಗೆ ಸಂದರ್ಶನವೀಯುತ್ತವೆ. ಈ ರೀತಿಯ ಪ್ರವಾಸಗಳು ನಮ್ಮ ರಾಷ್ಟ್ರದ ಪ್ರತಿಷ್ಠೆಯನ್ನು ಹೆಚ್ಚಿಸುವುದರಲ್ಲಿಯೂ ಹಾಗೂ ನಮ್ಮ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯವರಿಗೆ ತರಬೇತಿಯನ್ನು ಕಲ್ಪಿಸುವುದರಲ್ಲಿಯೂ ಅತಿ ಹೆಚ್ಚಿನ ಪ್ರಯೋಜನಕಾರಿಯಾಗಿರುವುವು. ಅಲ್ಲದೆ ಭಾರತೀಯ ನೌಕಾಪಡೆಯು ಕಾಲ ಕಾಲಕ್ಕೆ ಇತರ ರಾಷ್ಟ್ರಗಳ ಆಧುನಿಕ ನೌಕಾ ಪಡೆಗಳೊಂದಿಗೆ ಸೇರಿ ಅಭ್ಯಾಸಗಳನ್ನು ನಡೆಸುವುದು. ಈ ಅಭ್ಯಾಸಗಳು ಕೂಡ ಪ್ರಯೋಜನಕಾರಿಯಾಗಿರುವುವು.

ನವೀನ ಪ್ರತಿ ರಕ್ಷಣೆಯಲ್ಲಿ ವಾಯು ಬಲವು ಅತ್ಯಂತ ಹೆಚ್ಚಾದ ಮಹತ್ವವನ್ನು ಗಳಿಸಿದೆ. ೧೯೪೭ರಲ್ಲಿ ನಾವು ಗಳಿಸಿದ ಭಾರತೀಯ ವಿಮಾನ ಪಡೆಯನ್ನು ಬಲಿಷ್ಠವಾದ ಆಧುನಿಕ ವಿಮಾನ ಬಲವನ್ನಾಗಿ ಮಾಡುವ ಬಗ್ಗೆ ಯತ್ನಮಾಡಲಾಗುತ್ತಿದೆ. ಅತಿ ಹೆಚ್ಚಿನ ವೇಗದ ಹಾಗೂ ದೀರ್ಘ ವ್ಯಾಪ್ತಿಯ ವಿಮಾನಗಳನ್ನು ಅಭಿವೃದ್ಧಿಪಡಿಸುತ್ತಿರುವ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಭಾರತವು ಸ್ಪರ್ಧಿಸುವಂತಿಲ್ಲವಾದಾಗ್ಯೂ, ಬಲಿಷ್ಠ ವಿಮಾನ ಬಲವನ್ನು ಕ್ರಮೇಣ ಕಟ್ಟುವ ತುರ್ತಿನ ಅವಶ್ಯಕತೆ ಇದ್ದೇ ಇದೆ. ನಮ್ಮ ವಿಮಾನ ಖಂಡಗಳು (ಸ್ಕ್ವಾಡ್ರನ್) ಇಂದು ಆಧುನಿಕ ಜೆಟ್ ಫೈಟರ್‌ಗಳು, ವಾಂಪೈರ್ ಜೆಟ್‌ಗಳು ಮತ್ತು ಟೊರಗಾನ್‌ಗಳನ್ನು ಹೊಂದಿ (ಭಾರತೀಯ ವಿಮಾನ ಪಡೆಯು ಸ್ವಾಧೀನಕ್ಕೆ ಬಂದ ಮೇಲೆ ಇವನ್ನು ರೂಢನಿಗಳೆಂದು ಕರೆಯಲಾಗಿದೆ) ಸುಸಜ್ಜಿತಗೊಂಡಿವೆ.

ವಿದೇಶೀಯ ವಿಮಾನಗಳ ಮೇಲೆ ಪರಾವಲಂಬಿಗಳಾಗಿರುವುದಕ್ಕಿಂತ ಹೆಚ್ಚಾಗಿ ರಾಷ್ಟ್ರದಲ್ಲಿ ಪ್ರತಿರಕ್ಷಣಾ ಕೈಗಾರಿಕೆಗಳ ಬೆಳವಣಿಗೆಯಲ್ಲಿ ನಮ್ಮ ಯಥಾರ್ಥ ಪರೀಕ್ಷೆಯಿದೆಯೆಂದು ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಸಾರಿದ್ದಾರೆ. ನಮ್ಮದೇ ಆದ ವಿಮಾನ ಉದ್ಯಮವನ್ನು ಅಭಿವೃದ್ಧಿಪಡಿಸುವ ಬಗ್ಗೆ ವಿದೇಶೀಯ ತಯಾರಿಕಾಗಾರರೊಂದಿಗೆ ಮಾತುಕತೆಗಳು ನಡೆಯುತ್ತಿವೆ. "ಎಚ್. ಟಿ. ೨" ಟ್ರೈನರ್ ವಿಮಾನಗಳ ತಯಾರಿಕೆಯಲ್ಲಿ ಭಾರತವು ಈಗಾಗಲೇ ಗಣನೀಯವಾದ ಯಶಸ್ಸನ್ನು ಸಾಧಿಸಿದೆ. ಹಿಂದುಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ವಾಂಪೈರ್ ಜೆಟ್ ವಿಮಾನಗಳನ್ನು ನಿರ್ಮಿಸಲಾಗುತ್ತಿದೆ.

ಒಂದು ವಿಮಾನ ಕಾರ್ಖಾನೆ, ಒಂದು ಏರೋ ಎಂಜಿನ್ ಕಾರ್ಖಾನೆಗಳಿದ್ದ ಮಾತ್ರಕ್ಕೆ ಇಡೀ ವಿಮಾನ ದಳದ ಅವಶ್ಯಕತೆಗಳೆಲ್ಲವನ್ನೂ ಪೂರೈಸಿದಂತಾಗುವುದಿಲ್ಲ. ಭಾರತೀಯ ವಿಮಾನ ದಳವು ಇತರ ರಾಷ್ಟ್ರಗಳಲ್ಲಿ ಆಧುನಿಕ ವಿಮಾನಗಳ ನೂತನ ರಚನೆಗಳನ್ನು ನಿರಂತರವಾಗಿ ಗಮನಿಸುತ್ತಿದೆ. ಆವಶ್ಯ ಬಿದ್ದರೆ ಇವನ್ನು ಸಂಬಂಧಪಟ್ಟ ರಾಷ್ಟ್ರಗಳಿಂದ ಪಡೆಯಲಾಗುತ್ತಿದೆ.

ಸಮರ ಕಾಲದಂತೆಯೇ ಶಾಂತಿ ಕಾಲದಲ್ಲಿಯೂ ವಿಮಾನ ದಳದ ಸಂರಕ್ಷಣಾ ಕಾರ್ಯವು ವಿಮಾನ ದಳದ ಜೀವನಾಡಿಯಾಗಿದೆ. ದಕ್ಷತೆಯಿಂದ ವಿಮಾನಗಳು ಹಾರಾಡಲು ಅನುಕೂಲವಾಗುವಂತೆ ಕಾಸ್‌ಮುರದಲ್ಲಿ ಸಂರಕ್ಷಣಾ ವಿಭಾಗವನ್ನು ರಚಿಸಲಾಗಿದೆ.

ಪ್ರತಿ ರಕ್ಷಣಾ ಶಾಖೆಗೆ ಬೇಕಾಗುವ ಸಾಮಗ್ರಿಗಳು ಮತ್ತು ಸಾಮಾನು ಸರಂಜಾಮನ್ನು ಹೆಚ್ಚಾಗಿ ತಯಾರಿಸುವ ಬಗ್ಗೆ ಇರುವ ಸಾಧ್ಯತೆಗಳನ್ನು ಸವಿಸ್ತಾರವಾಗಿ ಪರೀಕ್ಷಿಸಲಾಗಿದೆ. ೧೭೦೦ ವಸ್ತುಗಳನ್ನು ಸ್ಥಳೀಯವಾಗಿ ತಯಾರಿಸುವ ಬಗ್ಗೆ ಸಿಫಾರಸು ಮಾಡಲಾಗಿದೆ. ಅದರಂತೆಯೇ ಯುದ್ಧೋಪಕರಣ ಕಾರ್ಖಾನೆಗಳು ಈಗಾಗಲೇ ಈ ವಸ್ತುಗಳಲ್ಲಿ ಅನೇಕವನ್ನು ತಯಾರಿಸಲು ಪ್ರಾರಂಭಿಸಲಾಗಿದೆ.

ಇತರ ಪ್ರತಿ ರಕ್ಷಣಾ ಕೈಗಾರಿಕೆಗಳನ್ನೂ ಕೂಡ ಅಭಿವೃದ್ಧಿ ಪಡಿಸಲಾಗುತ್ತಿದೆ. ದೃಷ್ಟಾಂತವಾಗಿ ಅಂಬರನಾಥ್‌ನಲ್ಲಿ ಮೆಷೀನ್ ಟೂಲ್ ಪ್ರೊಟೋಟೈಪ್ ಕಾರ್ಖಾನೆಯನ್ನು ೧೯೫೫ರ ಆದಿ ಭಾಗದಲ್ಲಿ ಸ್ಥಾಪಿಸಲಾಯಿತು. ಆಧುನಿಕ ಯುದ್ಧೋಪಕರಣಗಳನ್ನು ತಯಾರಿಸುವ ಬಗ್ಗೆ ಹಾಗೂ ರೇಡಿಯೋ ಮತ್ತು ಎಲೆಕ್ಟ್ರಾನಿಕ್ ಸಾಮಾನುಗಳನ್ನು ತಯಾರಿಸುವ ಬಗ್ಗೆ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ. ಭಾರತ್ ಇಲೆಕ್ಟ್ರಾನಿಕ್ಸ್ ಕಾರ್ಖಾನೆಯು ೧೯೫೫ರಲ್ಲಿ

(೧೮ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ರಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13.

ದ. ಕನ್ನಡದ ಎಳಗಿನ ವಿಜಂಟರಲ್ಲಿ ಸಿಗುವುದು.

1. ಶಾ ಕೆಂಪೆನ್ನಿ, ಮಂಗಳೂರು.
2. ವಿ. ವಿ. ಶೆಟ್ಟಿ, ಕಾಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU

ದಾಮೋದರ & ಕೊ,

ಮದ್ರಾಸ್—3.

ಸ್ವತಂತ್ರ ಭಾರತದಲ್ಲಿ ಮಾಧ್ಯಮಿಕ ಶಿಕ್ಷಣದ ಪಾತ್ರ

ರಿಂದ ಮಾಧ್ಯಮಿಕ ಶಿಕ್ಷಣವು ತನ್ನ ಮನೋಭಾವದಲ್ಲಿ ತೀರ ಏಕಾಭಿಮುಖವಾಗಿಯೂ, ಪಾಂಡಿತ್ಯ ಪೂರ್ಣವಾಗಿಯೂ ಇದ್ದು ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ಅವಶ್ಯಕತೆಗಳಿಗೆ ತಕ್ಕಂತೆ ಅಳವಡಿಸಿಕೊಂಡಿತ್ತು. ಸ್ಪಷ್ಟವಾಗಿ ನಿರೂಪಿಸಲಾಗಿರುವ ಸಾಮಾಜಿಕ ಅಥವಾ ತಾಂತ್ರಿಕ ಉದ್ದೇಶಗಳಿಗಾಗಿ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುತ್ತಿದ್ದ ಶಿಕ್ಷಣದ ಅಂತಸ್ತನ್ನು ಮಾಧ್ಯಮಿಕ ಶಿಕ್ಷಣವು ಪ್ರತಿನಿಧಿಸಲಿಲ್ಲ. ವಿದ್ಯಾರ್ಥಿಗಳಿಗೆ ಗುಮಾಸ್ತಗಿರಿ ತರಬೇತಿ ಕೊಡುವ ಇಂಗ್ಲೀಷ್ ಶಿಕ್ಷಣ ಪದ್ಧತಿಯು ಗಾನೇ ಶತಮಾನದಲ್ಲಿ ಬೆಳವಣಿಗೆ ಪಡೆಯಿತು. ಆದುದರಿಂದ ಈ ರೀತಿಯ ಶಿಕ್ಷಣ ಪದ್ಧತಿಯು ಸಾಮಾಜಿಕ ವ್ಯವಸ್ಥಾಕ್ರಮ, ವ್ಯಕ್ತಿಯ ಬೆಳವಣಿಗೆ, ಜ್ಞಾನಾಭಿವೃದ್ಧಿ, ಪಾಂಡಿತ್ಯ ಪ್ರೇಮ ಇವುಗಳ ಬಗ್ಗೆ ಹೆಚ್ಚು ಪ್ರಾಮುಖ್ಯತೆಯನ್ನು ತೋರಿಸದೆ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುವುದರ ಬಗ್ಗೆ ಹೆಚ್ಚು ಮಹತ್ವವನ್ನು ವ್ಯಕ್ತಪಡಿಸಿತು. ಪರೀಕ್ಷಾ ಕ್ರಮವು ಇಡೀ ಶಿಕ್ಷಣ ಪದ್ಧತಿಯ ಮೇಲೆ ಪ್ರಭಾವ ಬೀರಿ ಬೋಧನೆಯ ಬಗ್ಗೆ ಅಧ್ಯಾಯಾರ ಸ್ವಾತಂತ್ರ್ಯವನ್ನು ಮೊಟಕು ಮಾಡಿತು.

ಈಚಿನ ಕೆಲವು ವರ್ಷಗಳಿಂದಲೂ ಹೆಚ್ಚು ಹೆಚ್ಚಾಗಿ ಕುಂದು ಕೊರತೆಗಳನ್ನು ಶಿಕ್ಷಣ ಶಾಸ್ತ್ರಜ್ಞರು, ಅರಿತು ಕೊಂಡಿದ್ದಾರೆ, ಈ ಸಮಸ್ಯೆಯು ಬೃಹದಾಕಾರವಾಗಿದ್ದು ಶಕ್ತಿಯು ಜಡವಿಂದ ಕೂಡಿದ್ದು ಮೂಲತತ್ವದ ಬದಲಾವಣೆಗೆ ಬಹುದಿನ ಕಾಯ್ದುಬೇಕಾಯಿತು. ಮಾಧ್ಯಮಿಕ ಶಿಕ್ಷಣದ ಕ್ಷೇತ್ರವು ವಿಸ್ತರಿಸಿರುವುದರಿಂದ, ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳು ಮಾಧ್ಯಮಿಕ ಶಾಲೆಗಳಿಗೆ ಬರುತ್ತಿದ್ದಾರೆ. ಕೆಲ ಫಲವಾಗಿ ಇವರೆಲ್ಲರಿಗೂ ಸರಕಾರಿ ಉದ್ಯೋಗಗಳಲ್ಲಿ ಸ್ಥಾನಗಳನ್ನು ಕೊಡಲಿಕೊಡುವುದು ಸಾಧ್ಯವಾಗದೆ ಹೋಯಿತು. ಇದು ಸಮಸ್ಯೆಯ ಸ್ವರೂಪವನ್ನು ಬದಲಾಯಿಸಿ, ವಿವಿಧ ತರಬೇತಿಗಳನ್ನು

ಸ್ವತಂತ್ರ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವು ಜಾಗೃತವಾಗಿ ಉಳಿಯ ಬೇಕಾದರೆ, ಜನತೆಯು ಸಾಮಾನ್ಯ ವಿವೇಕದ ಮಟ್ಟ ಹೆಚ್ಚಬೇಕು. ಜನ ನಾಯಕರೊಡನೆ ಸ್ಥಳೀಯ ಸಮಸ್ಯೆಗಳನ್ನು ಮಂಡಿಸಿ, ಪ್ರಾಮಾಣಿಕ ರೀತಿಯಿಂದ ಅದನ್ನು ಬಿಡಿಸಲು ಪ್ರಯತ್ನಿಸಬಲ್ಲ, ಪ್ರತಿನಿಧಿಗಳಾಗಿ ಅವರು ರೂಪುಗೊಳ್ಳಬೇಕು. ಶ್ರೀ ಕೆ. ಜಿ. ಸಯಿದ್ದೀನ್ ಈ ವಿಷಯದಲ್ಲಿ ತನ್ನ ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಅರ್ಹತೆಗಳನ್ನೂ ಹೊಂದಿರುವ ವಿದ್ಯಾರ್ಥಿಗಳಿಗೆ ಅವರಿಗೆ ತಕ್ಕಂತಹ ಶಿಕ್ಷಣವನ್ನು ಕೊಡುವ ಬಗ್ಗೆ ಸವಿಸ್ತಾರದ ಪಾಠ್ಯ ಕ್ರಮವನ್ನು ಪಡೆಯುವುದು ಅವಶ್ಯಕ. ಈ ರೀತಿಯ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಉದ್ಯೋಗದ ಬಗ್ಗೆ ಇತರ ಮಾರ್ಗಗಳನ್ನು ತೆರೆದಂತಾಗುವುದು.

ಶಿಕ್ಷಣದಲ್ಲಿ ಕಸಬು ಹಾಗು ಉತ್ಪನ್ನಕಾರಕ ಕಾರ್ಯಗಳ ಬಗ್ಗೆ ಪ್ರಾಮುಖ್ಯತೆ ಕೊಟ್ಟಿರುವ ಮತ್ತು ಜ್ಞಾನ ಹಾಗು ಚಟುವಟಿಕೆಗಳನ್ನು ಸಮಗ್ರ ಮಾಡಲು ಯತ್ನಿಸುವ ಮೂಲ ಶಿಕ್ಷಣವನ್ನು ಪ್ರಾಥಮಿಕ ಘಟ್ಟದಲ್ಲಿಯೇ ಪ್ರಾರಂಭಿಸ ಬೇಕಾಗುವುದು. ಮಾಧ್ಯಮಿಕ ಶಿಕ್ಷಣದಲ್ಲಿಯೂ ಕೂಡ ಪಾಠ್ಯ ಕ್ರಮದಲ್ಲಿ ಸೂಕ್ತವಾದ ಕಸಬಿನ ಕೆಲಸ ಹಾಗು ತಾಂತ್ರಿಕ ವಿಷಯಗಳನ್ನು ಸೇರಿಸಬೇಕೆಂಬುದು ಸ್ವಾಭಾವಿಕ ಉಪಸಿದ್ಧಾಂತವಾಗಿದೆ. ಈ ಸಮಸ್ಯೆಯನ್ನು ಗಾಂಭೀರ್ಯದಲ್ಲಿ ಪ್ರಕಟಿಸಲಾದ ಭಾರತದ ಮಾಧ್ಯಮಿಕ ಶಿಕ್ಷಣ ಆಯೋಗದ ವರದಿಯಲ್ಲಿ ಪರಿಶೀಲಿಸಲಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ಹೆಚ್ಚು ಪ್ರಾಯೋಗಿಕ ಹಾಗು ಹೆಚ್ಚು ವಿಶಾಲತೆಯಿಂದಿರುವ ಪಾಠ್ಯ ಕ್ರಮವನ್ನು ಸೇರಿಸಬೇಕೆಂದು ಈ ಆಯೋಗ ವಾದಿಸಿತು.

ಸ್ವಾತಂತ್ರ್ಯವನ್ನು ತಂದ ರಾಷ್ಟ್ರೀಯ ಚಳವಳಿ ಪ್ರಜಾಸತ್ತಾತ್ಮಕ ಸಾಮಾಜಿಕ ಪರಂಪರೆಯನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನ. ಸಾಮಾಜಿಕ ಧರ್ಮದ ಧ್ಯೇಯ ಸಾಧನೆ -ಇವು ಮಾಧ್ಯಮಿಕ ಶಿಕ್ಷಣದ ಮಹತ್ವವನ್ನು ಹೆಚ್ಚಿಸಿದವು. ಇದು ಸೂಕ್ಷ್ಮವಾದ ಸಾಮಾಜಿಕ ಮನೋಭಾವವನ್ನೂ ಉದ್ದೇಶವನ್ನೂ ಅಭಿವೃದ್ಧಿ ಮಾಡಬೇಕಾಯಿತಲ್ಲದೆ, ರಾಷ್ಟ್ರೀಯ ಜೀವನವನ್ನು ರೂಪುಗೊಳಿಸುತ್ತಿದ್ದ ಸಾಮಾಜಿಕ ಚೇತನಗಳು ಹಾಗು ಚಳವಳಿಗಳೊಂದಿಗೆ ಸಂಬಂಧಿ ಬೇಕಾಯಿತು.

ಮಾಧ್ಯಮಿಕ ಶಿಕ್ಷಣದ ಮುಖ್ಯೋದ್ದೇಶವು "ಮಧ್ಯಸ್ಥಮಟ್ಟದಲ್ಲಿ ಮುಂದಾಳುತನ"ವನ್ನು ಒದಗಿಸುವಂತಿರಬೇಕೆಂದು ನಾನು ಭಾವಿಸುತ್ತೇನೆ. ಇದು ಎಲ್ಲ ರಾಷ್ಟ್ರಗಳ ವಿಷಯದಲ್ಲಿಯೂ ಪಾಸ್ತವಿಕವಾದದ್ದು. ಭಾರತದಂತಹ ರಾಷ್ಟ್ರಕ್ಕೆ ಇದು ವಿಶೇಷ ಚೇತನವಾಗಿರುವುದು. ಇದು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಅತ್ಯಂತ ಮೇಧಾವಿಗಳೂ ಪೂರ್ಣ ಪ್ರಜ್ಞರೂ, ಜಗತ್ತಿನಲ್ಲಿಯೇ ಖ್ಯಾತನಾಮರೂ ಆಗಿರುವ ರಾಷ್ಟ್ರೀಯ ನಾಯಕರನ್ನು ಕೊರತಂದಿದೆ. ಶಿಕ್ಷಣ ಸೌಲಭ್ಯಗಳು ದುರ್ಲಭವಿರುವುದರಿಂದ, ಹೇರಳವಾಗಿ ಅನಕ್ಷರಸ್ಥರೂ, ತಿಳಿವಳಿಕೆಯಿಲ್ಲದವರೂ ಇರುವುದರಿಂದ, 'ಜನಸಮೂಹ' ಹಾಗು 'ವರ್ಗ'ಗಳ ನಡುವೆ ಅಂತರ ಹೆಚ್ಚಿದೆ. ಈ ಅಂತರವನ್ನು ಕಡಿಮೆ ಮಾಡುವುದು ರಾಜಕೀಯ ಜಾಣತನವಾಗಿದೆ. ಈ ವಿಕ್ಕಿಗೇ ಮಹಾತ್ಮ ಗಾಂಧಿಯವರು ಪ್ರಾರಂಭಿಸಿದ ರಾಷ್ಟ್ರೀಯ ಚಳವಳಿಯ ಇಡೀ ರಚನೆಯು ನಿರ್ದೇಶಿಸಲ್ಪಟ್ಟಿತು. ಈ ಮಾರ್ಗದಲ್ಲಿ ತಕ್ಕಮಟ್ಟಿಗೆ ಕೆಲಸ ನಡೆದಿದ್ದಾಗ್ಯೂ, ಇನ್ನೂ ಸಾಧಿಸುವುದಿದೆ.

ಪ್ರಜಾಪ್ರಭುತ್ವದಲ್ಲಿ ಪ್ರಭಾವ ಶಾಲಿಗಳೂ, ಅತ್ಯಂತ ಚಾತುರ್ಯವುಳ್ಳವರೂ ಆದ ನಾಯಕರು ಒಂದು ಕಡೆ, ತಿಳಿವಳಿಕೆಯಿಲ್ಲದ ಜನರು ಒಂದು ಕಡೆ ಇರುವುದಾದರೆ, ಇಂತಹ ಪರಿಸ್ಥಿತಿಯು ಸರ್ವಾಧಿಕಾರಿತನಕ್ಕೆ ರಾಷ್ಟ್ರವನ್ನು ದೂಡಬಹುದು. ಆದುದರಿಂದ ಶಿಕ್ಷಣ, ಜಾಣತನ ಹಾಗು ರಾಜಕೀಯ ತಿಳಿವಳಿಕೆಯ ಸಾಮಾನ್ಯ ಮಟ್ಟವನ್ನು ಎತ್ತರಿಸುವುದು ಅವಶ್ಯಕ. ಆದರೆ ಇಷ್ಟೇ ಸಾಲದು.

ವಿಕೇಂದ್ರೀಕರಿಸಿದ ಮುಂದಾಳುತನವನ್ನು ಒದಗಿಸಲು ನಾವು ಯತ್ನಿಸಬೇಕು. ಅಂದರೆ ಸ್ವಭಾವದಿಂದ ಹಾಗು ಸಾಮಾಜಿಕ ಮತ್ತು ನೈತಿಕ ಗುಣಗಳಿಂದ ಬದ್ಧಿವಂತರಾದ ಜನರು ತಮ್ಮ ತಮ್ಮ ಸ್ಥಳೀಯ ವರ್ಗಗಳು ಹಾಗು ಸಮಾಜ ಕ್ಷೇತ್ರಗಳಲ್ಲಿ ಮುಂದಾಳುತನದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಮಾಡಬೇಕು. ಇಂತಹವರು ರಾಷ್ಟ್ರೀಯ ಮುಂದಾಳುತನ ಹಾಗು ಜನತೆಯ ನಡುವೆ ಮಧ್ಯವರ್ತಿಗಳಾಗಿರಬೇಕಲ್ಲದೆ ಸ್ಥಳೀಯ ವರ್ಗಗಳ ಅವಶ್ಯಕತೆಗಳನ್ನೂ, ಭಾವನೆಗಳನ್ನು ಅರಿತುಕೊಂಡು ಮೇಲಿರುವ ನಾಯಕರಿಗೆ ಹಿಟ್ಟತನದಿಂದಲೂ ಪ್ರಾಮಾಣಿಕತನದಿಂದಲೂ ವಿವರಿಸಬೇಕು; ಅಲ್ಲದೆ ಸ್ಥಳೀಯ ಚಳವಳಿಗಳನ್ನೂ ಹಾಗು ಸಹಕಾರಿ ಯೋಜನೆಗಳನ್ನೂ ಪ್ರಾರಂಭಿಸುವ ಸಾಮರ್ಥ್ಯ ಪಡೆದಿರಬೇಕು.

ಇದು ಮಾಧ್ಯಮಿಕ ಶಿಕ್ಷಣದ ಹಿರಿಯ ಹೊಣೆಗಾರಿಕೆಯಾಗಿದೆ. ಇದರ ಮಹತ್ವವು ಕೇವಲ ಜ್ಞಾನ ಪ್ರಸಾರದಲ್ಲಿಲ್ಲ. ಅದು ಇಡೀ ವ್ಯಕ್ತಿತ್ವದ ಶಿಕ್ಷಣದಲ್ಲಿದೆ. ಇಂದಿನ ಕೊಡಕೆನ ಜಗತ್ತಿನಲ್ಲಿ ನಮಗೆ ಅತ್ಯಂತ ಹೆಚ್ಚಾಗಿ ವಿಕಸಿಸಿದ, ಅತಿ ಹೆಚ್ಚಾದ ವಿವೇಚನೆಯುಳ್ಳ ಮತ್ತು ಅತಿ ಹೆಚ್ಚಾದ ಟೀಕಾತ್ಮಕ ಜ್ಞಾನವು ಅವಶ್ಯಕವಾಗಿದೆ.

ಇಂದಿನ ಜಗತ್ತು ಸಾಮಾಜಿಕವಾಗಿ ಹೆಚ್ಚು ಒಳಸಂಬಂಧವನ್ನು ಪಡೆದಿದೆ. ಹಾಗು ಅನ್ಯೋನ್ಯ ವರಾವಲಂಬಿಯಾಗಿದೆ. ಈ ಅಂಶವನ್ನು ಅರಿತುಕೊಳ್ಳಲಾರದವನು ಹಾಗು ಮಾನಸಿಕವಾಗಿ ಪ್ರತಿಕ್ರಿಯೆ ತೋರಲಾರದವನು ಅಪಾಯಕಾರಕವಾಗಿ ಅಶಿಕ್ಷಿತನಾಗಿಯೇ ಉಳಿಯುವನು. ಆದುದರಿಂದ ಶಿಕ್ಷಣ ಶಾಸ್ತ್ರಜ್ಞರು ದಿಟ್ಟತನದಿಂದಲೂ ದೃಢ ವಿಶ್ವಾಸದಿಂದಲೂ ಈ ಸಮಸ್ಯೆಯ ಬಗ್ಗೆ ದುಡಿಯಬೇಕು.

ಇಂತಹ ಸಾವಿಶಾಲ್ಯದ ಬಗ್ಗೆ ಅಥವಾ ಅಭಿಪ್ರಾಯದ ಬಗ್ಗೆ ಪಕ್ಷಪಾತವಿದೆಯೆಂದು ದೋಷಾರೋಪಣೆಹೊರಿಸ ಬಹುದು. ಅಲ್ಲದೆ ವಿಪತ್ತು ಭ್ರಮೆಯೇನಲ್ಲ ನನ್ನ ಅಭಿಪ್ರಾಯದಲ್ಲಿ ಯಥಾ ಪೂರ್ವದ ಬೆಂಬಲಿಗರು ಇದನ್ನು ಉತ್ಪ್ರೇಕ್ಷಿಸಬಹುದು.

ಭೌತಿಕ ಹಾಗು ಪಾರಮಾರ್ಥಿಕ ಮಹತ್ವಗಳ ನಡುವೆ ಸಮತೋಲನವನ್ನು ಸಾಧಿಸುವುದೊಂದು ಸಂಶೋಧಕ ಸಮಸ್ಯೆಯಾಗಿದೆ. ಅಮೇರಿಕಾದ ಸಂಯುಕ್ತ ಸಂಸ್ಥಾನಗಳಂತಹ ರಾಷ್ಟ್ರಗಳಲ್ಲಿ ಮಿತಿ ಮೀರಿದ ಸಂಪತ್ತು ಹಾಗು ಉತ್ಪಾದನೆಯ ಫಲವಾಗಿ ಅನೇಕ ಕ್ಲಿಷ್ಟ ಸಮಸ್ಯೆಗಳು ಉದ್ಭವಿಸುತ್ತವೆ. ಅಲ್ಲದೆ ಅಂತಹ ಕಡೆಗಳಲ್ಲಿ ಮಾನವನ ಸುಖ ಹಾಗು ಮಾನಸಿಕ ಶಾಂತಿಗಳ ನಡುವೆ ನಿಜವಾದ ಸಂಬಂಧವು ಏರ್ಪಡದೆ ವಿಫಲಗೊಳ್ಳುತ್ತಿದೆ, ಭಾರತದಂತಹ ರಾಷ್ಟ್ರಗಳಲ್ಲಿ ಬಡತನ ಕೊರತೆಯ ಅರ್ಥಿಕ ವ್ಯವಸ್ಥೆ— ಇವನ್ನು ಕವಿವರ್ಯ ರವೀಂದ್ರನಾಥ ಠಾಕೂರರು 'ವಸ್ತು"ವೆಂದು ಕರೆದ ಯಂತ್ರದ ಗುಲಾಮಂಗಾಗದೆ ಜಯಿಸ ಬೇಕಾಗಿದೆ.

'ಭೌತಿಕವಸ್ತು'ವಿನ ಮೇಲಣ ವಿಜಯದ ಅರಿವು ಉಪಪತ್ತಿಯಾಗಿದೆ. ಅಲ್ಲದೆ ಚೇತನದ ವಿಸ್ತರಣೆಯು ಕೊನೆಯಾಗಿದೆ. ಈ ಪಾಠ್ಯದ ಮೇಲಿನಿಂದ ನಾವು ಮಾಧ್ಯಮಿಕ ಶಿಕ್ಷಣದ ಸಮಸ್ಯೆಯನ್ನು ಗ್ರಹಿಸಬೇಕು.

ನಿಮ್ಮ ಬಳಲಿದ ದೇಹಕ್ಕೆ ಚೈತನ್ಯವನ್ನೀಯುವ
ದಣಿದ ಮನಸ್ಸಿಗೆ ಸ್ಫೂರ್ತಿಯನ್ನೀಯುವ
ಕೇಲ್‌ಗೂರ್ ಟೀ ಯನ್ನೇ
ಉಪಯೋಗಿಸಿರಿ.
ಸ್ವಾತಂತ್ರ್ಯೋತ್ಸವದ ಹರ್ಷದ ಪ್ರಾರ್ಥನೆಗಾಗಿ 'ಕೇಲ್‌ಗೂರ್ ಟೀ' ಸೇವಿಸಲು ಮರೆಯಬೇಡಿರಿ.
ವಿತರಣೆಗಾರರು:
ಜೈ ಭಾರತ್ ಮಿಲ್ಸ್ ಲಿಮಿಟೆಡ್
ಚಿತ್ತರಂಜನ ಬಿಲ್ಡಿಂಗ್ಸ್, ಉಡುಪಿ. ದ. ಭಾರತ.
Telephone: 11. Telegrams: PROTECTION.

೧೦ ವರ್ಷಕ್ಕೆ ಜಗಪ್ರಸಿದ್ಧ ಔರ ವಿಜಯಿ ಹೊಂದಿದವಾಲ್ಲ।
ಪ್ರತ್ಯೇಕ ಸ್ಟೋರ್ ಮೇ ಔರ ಅನ್ಯ ಸ್ಥಾನೋ ಪರ ಬಿಕ್ತಾ ಹೈ।
ಬಾಟಲೀವಾಲಾ ಎಯ್ಯಾಮಿಕ್ಸ್‌ಚರ್
ಔರ ಗೋಲಿಯಾಂ
ಮಲೇರಿಯಾ ಇನ್‌ಫ್ಲುಎಂಜಾ ಔರ ಪ್ರತ್ಯೇಕ ಪ್ರಕಾರಕೆ ಬುಖಾರ ಕೆ ಲಿಯೆ।
ಶೋಲ ಮೆನ್ಯುಫೆಕ್ಚರರ್. ಡ್ರ. ಎಚ್. ಎಲ್. ಬಾಟಲೀವಾಲಾ ಸನ್ಸ್ ಎಂಡ್ ಕಂ. ಲಿ.
ಬಾಟಲೀವಾಲಾ ಬಿಲ್ಡಿಂಗ್, ೩೩ ಬಿ. ಪೊರ್ಟುಗೀಝ್ ಚರ್ಚ್ ಸ್ಟ್ರೀಟ್,
Tele. Add. "CAWASHABAD" ದಾದರ, ಬಾಂಬೆ ೨೮.

ಸತ್ಯವಾದ ಭವಿಷ್ಯ- ಜಗತ್ತಿನಲ್ಲಿ ಭಾರತದ ಪಾತ್ರ

ಬರೆದವರು: ಶ್ರೀ ರಂಗನಾಥ ದಿವಾಕರ.

ಜಗತ್ತಿನಲ್ಲಿ ಭಾರತವು ತನ್ನ ಸೈನಿಕ ಶಕ್ತಿ ಎಷ್ಟೇ ಕಡಿಮೆಯಾಗಿದ್ದರೂ ಪರಂಪರಾಗತವಾಗಿ ಬಂದಿರುವ ಆಧ್ಯಾತ್ಮಿಕ ಶಕ್ತಿಯ ಪ್ರಭಾವದಿಂದ ಪುನಶ್ಚೇತನ ಪಡೆಸುವುದು ನಿಶ್ಚಯ ಎಂದು ಅಮೇರಿಕನ್ನರೊಬ್ಬರು ಹೇಳಿದ್ದರು. ಈ ಭವಿಷ್ಯ ವಾಕ್ಯ ಎಷ್ಟು ಸುಂದರವಾಗಿ ಅಕ್ಷರಶಃ ಸತ್ಯವಾಗಿ ಪರಿಣಮಿಸಿದೆ ಎಂಬುದನ್ನು ಬಿಹಾರದ ರಾಜ್ಯಪಾಲರೂ ಕರ್ನಾಟಕದ ಧುರೀಣರಲ್ಲಿಯೇ ಅಗ್ರಗಣ್ಯರೂ ಆಗಿರುವ ಶ್ರೀ ದಿವಾಕರರು ಇಲ್ಲಿ ಮನಮುಟ್ಟುವಂತೆ ವಿವರಿಸಿದ್ದಾರೆ.

ನಾಸಿಲ್ಲಿ ಯಾವನೊಬ್ಬ ಜ್ಯೋತಿಷಿ ಅಥವಾ ಹಸ್ತಸಾಮುದ್ರಿಕ ಶಾಸ್ತ್ರಜ್ಞನು ಸೇರಿದ ಭವಿಷ್ಯದ ಕುರಿತು ಮಾತನಾಡುತ್ತಿಲ್ಲ. ಇವೆರಡೂ ಇನ್ನೂ ನಿರ್ದೋಷ ವಿಜ್ಞಾನಗಳಾಗಿಲ್ಲ—ಆ ದಾರಿಯಲ್ಲಿ ಇರಬಹುದು, ಅಷ್ಟೇ. ಅಂತಃ ದೃಷ್ಟಿ, ಘಟನೆಗಳ ಮೂಲವನ್ನೂ ಅವುಗಳ ಸ್ವಾಭಾವಿಕ ಬೆಳವಣಿಗೆಯನ್ನೂ ವಿಚಕ್ಷಣತೆಯಿಂದ ಗ್ರಹಿಸುವ ಶಕ್ತಿಗಳ ಮೇಲೆ ನಿಂತಿರುವ ತೀರ ಇನ್ನೊಂದು ಬಗೆಯ ಭವಿಷ್ಯ ವಾಕ್ಯದ ಕುರಿತಾಗಿ ನಾನು ವಿಚಾರಿಸುತ್ತಿದ್ದೇನೆ. ಅದು ಮುಂದಾಲೋಚನೆಯ ಹಾಗೂ ದೂರಾಲೋಚನೆಯ ಫಲಿತಾಂಶವಾಗಿದೆ. ಇಷ್ಟು ಹೆಚ್ಚು ಸಮರ್ಪಕವಾಗಿ ಮುಂಬರುವ ವಿದ್ಯಮಾನಗಳ ಕುರಿತು ತೀರ್ಪು ಹೇಳುವುದಕ್ಕೆ ಪಸ್ತುಸ್ಥಿತಿ ಮತ್ತು ಸಂದರ್ಭಗಳ ತರ್ಕಬದ್ಧ ಕ್ರೋಢೀಕರಣ ಮತ್ತು ಪೂರ್ವಾಗ್ರಹ ದೂಷಿತವಲ್ಲದ ಬುದ್ಧಿಯಿಂದ ನಡೆಸುವ ಅವುಗಳ ಅಭ್ಯಾಸ ಅಗತ್ಯವಾಗುತ್ತದೆ.

ಇಂಥದೊಂದು ಭವಿಷ್ಯ ವಾಕ್ಯದ ಕುರಿತಾಗಿ ನಾನೀಗ ಪ್ರಸ್ತಾಪಿಸುತ್ತಿದ್ದೇನೆ.

ಆಗ್ನೇಯ ಏಶ್ಯದ ಸೈನಿಕ ದಳದಲ್ಲಿದ್ದ ಉನ್ನತ ದರ್ಜೆಯ ಅಮೇರಿಕನ್ ಸೈನ್ಯಾಧಿಕಾರಿಗಳೊಬ್ಬರು ೧೯೪೭ರಲ್ಲಿ ಬರೆದ ಕೆಲವು ವಿಷಯಗಳನ್ನು ನಾನು ಉದ್ಧರಿಸುತ್ತಿದ್ದೇನೆ. ಈ ಸೈನ್ಯಾಧಿಕಾರಿಗೆ ದ್ವಿತೀಯ ಮಹಾ ಯುದ್ಧದಲ್ಲಿ ಕೂಡಲೇ ವಿಜಯ ಪಡೆಯುವುದರಲ್ಲಿದ್ದು ದಕ್ಕಿಂತಲೂ ಮಾನವ ಜನಾಂಗದ ಶಾಂತಿಯ ವಿಶಾಲ ಸಮಸ್ಯೆಯಲ್ಲಿ ಆಸ್ಥೆ ಇದ್ದಂತೆ ಕಂಡು ಬರುತ್ತದೆ. ಜಗತ್ತಿನಲ್ಲಿರುವ ಎಲ್ಲ ಮನುಷ್ಯರೂ "ಮಾನವ ಜನಾಂಗದ ಸದಸ್ಯರು" ಎಂದು ಒತ್ತಿ ಹೇಳಿದ ಬಳಿಕ, ಈ ಸೈನ್ಯಾಧಿಕಾರಿಯು "ಜಗತ್ತಿನಲ್ಲಿ ವಾಸಿಸುವವರು ಅದನ್ನು ನಿಚ್ಚು ಸೂರಾಗಿ ಮಾಡುವುದಕ್ಕೆ ಪ್ರಯತ್ನಿಸುವಾಗಿಯೇ" ಶಾಶ್ವತ ಶಾಂತಿಯನ್ನು ಸಂಪಾದಿಸಲು ಜಾಗತಿಕ ಸರಕಾರ ರಾಷ್ಟ್ರದ ಭಾವನೆಯನ್ನು ಬೆಳೆಸುವುದು ಈ ಪೀಳಿಗೆಯ ಪ್ರಾಮುಖ್ಯ ಸಮಸ್ಯೆಯಾಗಿದೆ ಎಂದು ಹೇಳುತ್ತಾರೆ. ತಾನು ಅಧ್ಯಾತ್ಮಿಕ ಐಕ್ಯವನ್ನು ಹುಡುಕುತ್ತಾ ಏಶ್ಯದಲ್ಲಿ ಯುದ್ಧ ಕಾಲದ ತೀರ್ಥಯಾತ್ರೆ ಮಾಡಿದುದಾಗಿ ಅವರು ಹೇಳುತ್ತಾರೆ.

ಸುಮಾರು ಮೂರು ವರ್ಷಗಳ ವರೆಗೆ ಏಶ್ಯದಲ್ಲಿದ್ದು ೧೯೪೮ನೇ ಜನವರಿಯಲ್ಲಿ ಅವರು ಇಲ್ಲಿಂದ ಹೊರಟು ಹೋದರು. ಮುಂದೆ ೧೯೪೭ರಲ್ಲಿ "ಏಶ್ಯದಿಂದ ಸಮೃದ್ಧಿ" (Richer by Asia) ಎಂಬ ಅವರ ಪುಸ್ತಕ ಪ್ರಕಟವಾಯಿತು. ಅವರು ಭಾರತದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಂಗ್ರಹಿಸಲು ಮತ್ತು ಉದ್ಧರಿಸಲು ನಾನು ಇಚ್ಛಿಸುತ್ತಿರುವುದಕ್ಕೆ ಕ್ಷಮೆಯನ್ನು ಕೋರುತ್ತೇನೆ

ಅವರು ಹೇಳುತ್ತಾರೆ— "ಭಾರತದ ಜನತೆಯ ಇಚ್ಛೆಗೆ ವಿರುದ್ಧವಾಗಿ ಭಾರತವನ್ನು ಮುಂದೆಯೂ ಆಳುತ್ತ ಹೋಗುವುದು ಇಂಗ್ಲೆಂಡಿಗೆ ಅಸಾಧ್ಯವಾಗಿ ಪರಿಣಮಿಸುತ್ತದೆ ಎಂಬ ಪ್ರಜ್ಞೆಯ ಆಧಾರದ ಮೇಲಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿಯೇ ತೀರುವುದೆಂಬುದು ಎಂದೋ ಮುಟ್ಟಿದ ಅಂತಿಮ ತೀರ್ಮಾನವಾಗಿದೆ ಎಂದು ನನಗೆ ಖಚಿತವಾಯಿತು. ....ಅನಿವಾರಣೀಯವಾದ ಈ ಸಂಭವನವನ್ನು ಹೆಚ್ಚಿನ ಬ್ರಿಟಿಷರು ಪರಿಗಣಿಸಿದ್ದರು; ಮತ್ತು ಹೆಚ್ಚು ಕಡಿಮೆ ಅದಕ್ಕೆ ಶರಣಾಗತಂಗಿಯೂ ಇದ್ದರು." ಸ್ವತಂತ್ರ ಭಾರತವು ತನ್ನ ಆಂತರಿಕ ಸಮಸ್ಯೆಗಳನ್ನು ಹೇಗೆ ಪರಿಹರಿಸೀತು ಎಂಬ ಕುರಿತು ಅವರು ಹೇಳುತ್ತಾರೆ— "ಭಾರತವನ್ನು ಬಿಟ್ಟಾಗಿನ ನನ್ನ ಭಾವನೆಗಳು ಆಶಾದಾಯಕವಾಗಿದ್ದವು—ಏಕೆಂದರೆ, ಈ ರೋಗಗಳು (ಭಾರತದ ಸಮಸ್ಯೆಗಳೂ ಕೆಡುಕುಗಳೂ) ತಾತ್ವಿಕವಾಗಿ ಗುಣವಾಗಬಲ್ಲವಾದುದರಿಯವೆಂದು ನನಗೆ ಮನವರಿಕೆಯಾಗಿತ್ತು. ಕಾಂಗ್ರೆಸಿನ ಜಳವಳದಲ್ಲಿ ವ್ಯಕ್ತವಾದ ಆಧ್ಯಾತ್ಮಿಕ ಹಾಗು ರಾಜಕೀಯ ಪುನರುತ್ಥಾನವು ಕೊನೆಗಾದರೂ ಯೋಗ್ಯ ಚಿಕಿತ್ಸೆಯನ್ನು ಈ ಸಮಸ್ಯೆಗಳಿಗೆ ನೀಡಬಲ್ಲುದೆಂದು ನನಗೆ ಹೊಳೆಯಿತು."

ಇವರ ಅಭಿಪ್ರಾಯದಂತೆ ಏಕ ಜಾಗತಿಕ ಸರಕಾರದ ವಿಚಾರವು ಪ್ರಾಮುಖ್ಯವಾಗಿ ಅಮೇರಿಕವ್ವಾಗಿ—ಸಾಮಾನ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳದ್ವಾಗಿ—ಇದ್ದರೂ ಸಹ ಅವರ ಸಾಧನೆಯು ಏಶ್ಯದ ಸಹಾಯ, ಸಹಕಾರ ಮತ್ತು ಭಾಗವಹಿಸುವಿಕೆಯ ಹೊರತು ಕೈಗೂಡಿಬರಲಾರದು.

ಭಾರತಕ್ಕೆ ಸಂಬಂಧಿಸಿ ಅವರು ಹೀಗೆ ಕೇಳುತ್ತಾರೆ.—"ಭಾರತದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಬಹಳಷ್ಟು ಋಣಿಯಾಗಿರುವ, ಆದರ ಪ್ರಬಲವಾದ ಚೀನ ಮತ್ತು ಜಪಾನುಗಳ ಸಂಸ್ಕೃತಿಗಿಂತಲೂ ಅತ್ಯಧಿಕ ಸ್ವದೇಶಿಯಾಗಿರುವ ಏಶ್ಯದ ಸಂಸ್ಕೃತಿಯು ತಲೆ ಎತ್ತುತ್ತಿದೆ. ನೂತನ ಭವಿಷ್ಯದಲ್ಲಿ ಈ ನೂತನ ಸಂಸ್ಕೃತಿಯಿಂದ ಬರುವ ಸಂಗತಿಗಳನ್ನು ಕೇಳುವ ಸಂದರ್ಭ ಬರುತ್ತದೆ."

ಭಾರತದ ಪಾತ್ರವನ್ನು ಪುನಃ ಒತ್ತಿ ಹೇಳುತ್ತಾ ಅವರು ಬರೆದಿದ್ದಾರೆ— "ಹೆಚ್ಚು ತಡವಿಲ್ಲದೆಯೇ ನಾವು ಆಗ್ನೇಯ ಏಶ್ಯದ ಹೊಸ ಮಹಾರಾಷ್ಟ್ರವಾದ ಭಾರತದಿಂದ ವಿಸ್ಮಯಕರ ವಿಷಯಗಳನ್ನು ಕೇಳುವೆವೆಂದು ನನಗೆ ಅನುಮಾನವಾಗುತ್ತದೆ. ಈಗ ಚೀನದೊಡಗಿರುವುದಕ್ಕಿಂತ ಹೆಚ್ಚು ಪ್ರಬಲವಾದ ಸೈನ್ಯಶಕ್ತಿಯಿಂದ ಭಾರತ ಕೂಡಿರಲಾರದು, ಆದರೆ, ಭಾರತವು ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿ ಪಾಶ್ಚಾತ್ಯ ಪ್ರಜಾಸತ್ತಾತ್ಮಕ ರಾಷ್ಟ್ರಗಳಿಗೂ ರಶ್ಯಕ್ಕೂ ನಡುವೆ ಸ್ವತಂತ್ರವಾದ ಮಧ್ಯಸ್ಥಿಕೆಯ ಪಾತ್ರವನ್ನು ವಹಿಸಬಲ್ಲುದು, ಅದು ತನ್ನ ವಿದೇಶಾಂಗ ವ್ಯವಹಾರದಲ್ಲಿ ಇದಕ್ಕೆ ಅನುಗುಣವಾದ ನೀತಿಯನ್ನೇ ರೂಪಿಸಿಕೊಳ್ಳುವುದೆಂದು ನನ್ನ ವಿಚಾರ."

ಮುಂದುವರಿದು ಅವರು ಹೇಳುತ್ತಾರೆ, —"ಪಾಶ್ಚಾತ್ಯ ಲೋಕದ ಪ್ರಬಲ ಶಕ್ತಿ ಸಂಪನ್ನ ರಾಷ್ಟ್ರಗಳ ನಡುವೆ ಈಗ ತಾನೆ ವಸಾಹತುವಾದದಿಂದ ವಿಮೋಚನೆ ಹೊಂದಿದ ಹಿಂದುಳಿದ ಏಶ್ಯದ ರಾಷ್ಟ್ರವೊಂದು ಮಧ್ಯಸ್ಥನಂತೆ ವರ್ತಿಸುವುದೆಂಬ ವಿಚಾರ ಮಾತ್ರದಿಂದಲೇ ಪಾಶ್ಚಾತ್ಯರ ಮನಸ್ಸು ತಳಮಳಗೊಳ್ಳಬಹುದು. ಆದರೆ ಹೀಗಾಗುವುದು ಮಾತ್ರ ನಿಸ್ಸಂಶಯ"

ಅವರು ನಮ್ಮ ಗಮನವನ್ನು ಸೆಳೆದಿರುವ ಇನ್ನೊಂದು ಮುಖ್ಯ ವಿಷಯವೆಂದರೆ ಏಶ್ಯದ ರಾಷ್ಟ್ರಗಳು, ಮುಖ್ಯವಾಗಿ ಭಾರತ, ಯುಗ ಯುಗಾಂತರಗಳಿಂದ ಕೆಲವು ಆಧ್ಯಾತ್ಮಿಕ ಮೂಲ್ಯಗಳಿಗೆ ಕೊಡುತ್ತಿರುವ ಮಹತ್ವ. ಇದರಿಂದಾಗಿಯೇ ಅಣು ಶಕ್ತಿಯ ಪ್ರಳಯದಿಂದ ಜಗತ್ತನ್ನು ರಕ್ಷಿಸಲು ಸಾಧ್ಯವಾಗುವಂತೆ. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ನೈತಿಕ ಮಟ್ಟವನ್ನು ನೆಲೆಗೊಳಿಸುವ ಕುರಿತು ಮುಂದಾಳುವಾಗಿ ನಡೆಯಲು ಅದಕ್ಕೆ ಯೋಗ್ಯತೆ ಪ್ರಾಪ್ತವಾಗುತ್ತದೆ.

ಎಷ್ಟೋ ವಿಷಯಗಳಲ್ಲಿ ಬಹಳ ಹಿಂದುಳಿದಿದ್ದರೂ ಭಾರತವು ಜಗತ್ತಿನ ಸಂಸ್ಕೃತಿಗೆ ಮತ್ತು ಜಗತ್ತಿನ ಕಲ್ಯಾಣಕ್ಕೆ ರಚನಾತ್ಮಕ ನೆರವನ್ನು ನೀಡಬಲ್ಲುದೆಂದು ಹೇಳುವವರು ಈ ಸೈನ್ಯಾಧಿಕಾರಿಯೊಬ್ಬರೇ ಆಗಿಲ್ಲ. ೧೯೦೦ನೇ ಇಸವಿಯಷ್ಟು ಹಿಂದೆಯೇ ಪಾಶ್ಚಾತ್ಯ ನಾಗರಿಕತೆಯು ಅಧ್ಯಾತ್ಮಿಕ ನೆಲಗಟ್ಟಿನ ಮೇಲೆ ನಿಲ್ಲದಿದ್ದರೆ ನಾಶವಾಗುವುದೆಂದು ಸ್ವಾಮಿ ವಿವೇಕಾನಂದರು ಸಾರಿದ್ದರು. ಕುಮಾರ ಸ್ವಾಮಿಯವರ "ಶಿವ ತಾಂಡವ" (Dance of Shiva) ಎಂಬ ಪುಸ್ತಕಕ್ಕೆ ಉಪೋದ್ಘಾತವನ್ನು ಬರೆಯುತ್ತಾ ರೋಮೆ ರೋಲಾರು ಪೂರ್ವ ಮತ್ತು ಪಶ್ಚಿಮ ಸಂಸ್ಕೃತಿಗಳ ಸಂಶ್ಲೇಷಣವಾಗಬೇಕೆಂದೂ ಪೂರ್ವವೊಂದೇ ಶಾಂತಿ ಮತ್ತು ಸಮಚಿತ್ತತೆಯನ್ನು ನೀಡಬಲ್ಲುದೆಂದೂ ಹೇಳಿದ್ದರು. "ಪೌರಸ್ತ್ಯ ಪಿತೃಧನ" (Oriental Heritage) ಎಂಬ ತಮ್ಮ ಉದ್ಗ್ರಂಥದಲ್ಲಿ ವಿಲ್ ಡ್ಯೂರಾಂಟ್ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಭಾರತವು ತನ್ನ ಸಾಂಪ್ರತಿಕ ಜೀವನದಲ್ಲಿ ಇನ್ನೂ ಶಕ್ತಿ ಸಂಪನ್ನವಾಗಿದೆಯೆಂದೂ

(೨ನೇ ಪುಟ ನೋಡಿರಿ)

THE CANARA MUTUAL ASSURANCE COMPANY LTD.

Managing Director: T R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭ ಸಹಿತ ಪಾಲಿಸಿಗಳಿಗೆ

ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ರೂ. 15/-

ಹೋಲ್ ಲೈಫ್ ಎಶ್ಯೂರೆನ್ಸಿಗೆ ಎಂಡೋಮೆಂಟ್ ಎಶ್ಯೂರೆನ್ಸಿಗೆ

31—12—1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

*****

ಈ ವಿಮಾಗಣನೆಯನ್ನು ನಡೆಸಿದ ಸಲಹೆಗಾರ ವಿಮಾಗಣಕರಾದ ಶ್ರೀ. ಕೆ. ಎ. ಪಂಡಿತ್, ಬಿ ಎಸ್‌ಸಿ, ಎಫ್. ಐ. ಎ, ಅವರು ಇತರ ಸಂಗತಿಗಳೊಂದಿಗೆ ಹೀಗೆ ಹೇಳಿದುದರು—"ಕಳೆದ ಹಲವು ವರ್ಷಗಳಿಂದ ನೀವು ಕಾಯ್ದುಕೊಂಡು ಬಂದ ಧೃಢವಾದ ಕ್ಷೇಮನಿಧಿಯ ಸ್ಥಿತಿಯನ್ನು ಸಡಿಲಿಸದೆ, ನಿಜವಾಗಿಯೂ ಉನ್ನತ ಮಟ್ಟದ ಲಾಭಾಂಶವನ್ನು ಸಾರುವುದಕ್ಕೆ ನಿಮ್ಮ ಗಾತ್ರದ ಕಂಪನಿಗೆ ಸಾಧ್ಯವಾಗಿರುವುದು ನಮ್ಮೆಯ ವಿಷಯ."

*****

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ-] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಡೆದಿದ ಕಂಪನಿ.

CHIEF AGENTS:

THE COMMERCIAL CORPORATION OF INDIA LTD.,

"MUKUND NIVAS" UDIPI, S. INDIA

ನಮ್ಮ ಜಿಲ್ಲೆಯಲ್ಲಿ ಆಗಸ್ಟ್ ಕ್ರಾಂತಿಯ ಚಿತ್ರ

ಬರೆದವರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ.

ಎಲ್ಲರ ಗಮನವೂ ಗೋವೆಯ ಕಡೆಗೆ ತಿರುಗಿರುವ ಈ ಸಮಯದಲ್ಲಿ "ತೊಲಗಿ ಭಾರತದಿಂದ" ಎಂಬ ಮಹಾ ಉದ್ಯೋಷವನ್ನು ಮೊಳಗಿ, ಬ್ರಿಟಿಷರ ಸಾಮ್ರಾಜ್ಯ ಶಾಹಿತ್ವದ ಮೇಲೆ ಪ್ರಬಲ ಆಘಾತವನ್ನು ಮಾಡಿದ ೧೯೪೨ನೇ ಆಗೋಸ್ತು ೧೯ ಚಳ ವಳದ ಕತೆ ಹೊಸ ಸ್ಫೂರ್ತಿಯನ್ನು ಕೊಡಬಲ್ಲುದು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಎಲ್ಲ ಪೆಟ್ಟುಗಳನ್ನು ಸಹಿಸಿದ ಕ್ರಾಂತಿಕಾರರ ವೀರ ಚರಿತ್ರೆಯ ಕೆಲವು ನೆನಪುಗಳನ್ನು ಶ್ರೀ ಕಯ್ಯಾರರು ಇಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಸಾವಿರದ ಒಂಭೈನ್ನೂರ ನಲ್ವತ್ತೆರಡರ ಆಗಸ್ಟ್ ಮಹಾ ಕ್ರಾಂತಿಗಾಗಿ, ಮಾತೃ ಭೂಮಿಯ ಬಂಧ ವಿಮೋಚನಾ ಕಾರ್ಯಕ್ಕಾಗಿ, ಭಾರತದ ಸನ್ನಗ್ನ ಜನತೆಯೇ ಕುದಿಯುತ್ತಿತ್ತು! ಭಾರತದ ಭಾಗ್ಯವಿಧಾತನಾದ ಗಾಂಧೀಜಿ 'ಇದು ಕೊನೆಯ ಹೋರಾಟ' ಎಂಬುದನ್ನು ಭಾರತದ ಜನತೆಯ ಮುಂದೆ, ಬ್ರಿಟಿಷ್ ಪ್ರಭುತ್ವದ ಮುಂದೆ, ಅಖಿಲ ಜಗತ್ತಿನ ಮುಂದೆಯೂ ಎರದ ವಿಶದವಾಗಿ ಸಮರ್ಥಿಸಿ ಸಾರಿದ್ದರು.

ವರ್ಧಾದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಸೇರಿ, ಸ್ವಾತಂತ್ರ್ಯದ ಕೊನೆಯ ಹೋರಾಟದ 'ತೊಲಗಿ ಭಾರತದಿಂದ' ಘೋಷಣೆಯನ್ನು ಸಿದ್ಧಗೊಳಿಸಿ, ಅದರ ಮಹಾ ನಾಯಕನಾಗಿ ಗಾಂಧೀಜಿಯನ್ನು ನೇಮಿಸುವುದಾಗಿ ನಿಶ್ಚಯವಾಗಿತ್ತು. ಆ ನಿರ್ಣಯದ ವ್ಯಕ್ತೀಕರಣದ ಬಗ್ಗೆ ಸಂಧಾನ ಹಾಗೂ ಸಂಗ್ರಾಮ ಇವುಗಳ ಘೋಷಣೆಯ ಬಗ್ಗೆ ಮುಂಬಯಿಯಲ್ಲಿ ೧೯ಳುರ ಆಗಸ್ಟ್ ಏಳರಂದು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರ ಸಭೆ ಸೇರಿತ್ತು.

ಇಂತಹ ಉದ್ವಿಗ್ನ ಪರಿಸ್ಥಿತಿಯಲ್ಲಿಯೂ ಗಾಂಧೀಜಿ ತನ್ನ ನೆಲೆತಪ್ಪಿ ಹೋಗಲಿಲ್ಲ; ಸರಕಾರವು ಅಡ್ಡ ಹಾದಿ ಹಿಡಿದು ಉಗ್ರ ಮಾರ್ಗ ಕೈಕೊಳ್ಳುವ ಸಂಭವವನ್ನು ಅವರು ಮುಂದಾಲೋಚಿಸಿ, ಮುಂಬಯಿಯಲ್ಲಿ ಸೇರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮಾಡಿದ ನಿರ್ಣಯದ ಕುರಿತು ನೈಸರಾಯರೊಡನೆ ಚರ್ಚಿಸಿ, ಸಂಧಾನದ ಮಾತುಕತೆ ವಿಫಲವಾದರೆ ಮಾತ್ರ ಹೋರಾಟ ಹೂಡುವುದಾಗಿಯೂ, ತಮ್ಮ ಸ್ವಾತಂತ್ರ್ಯ ಹೋರಾಟದಿಂದಾಗಿ ಜಪಾನ್ ಜರ್ಮನಿಗಳಂತಹ ಫೇಸಿಸ್ಟ್ ಶಕ್ತಿಗಳಿಗೆ ಯಾವುದೇ ಬೆಂಬಲ ದೊರಕಲಾರದೆಂದೂ ತನ್ನದು ಶಾಂತ ಸ್ವಾತಂತ್ರ್ಯ ಹೋರಾಟವೆಂದೂ ಅವರು ಸ್ಪಷ್ಟಪಡಿಸಿದ್ದರು.

ಇಂತು ಸ್ಪಷ್ಟೀಕರಣವಿತ್ತು ಮುಂಬಯಿಯಲ್ಲಿ ಆಗಸ್ಟ್ ಏಳರಂದು ಅಖಿಲ ಭಾರತ ಕಾಂಗ್ರೆಸ್ [illegible] ಕೂಡಿತ್ತು; ಎಂಟನೇ ತಾರೀಕು ಸಂಜೆಯ ವರೆಗೆ ಸಭೆ ಜರಗಿತ್ತು: ರಾತ್ರಿ ಎಲ್ಲರೂ ನಿದ್ರೆ ಹೋಗಿದ್ದರು; ಅಂತಹ ಕಾಲದಲ್ಲಿ ಆ ಅವರ ರಾತ್ರಿಯಲ್ಲಿಯೇ, ಗಾಂಧೀಜಿ, ನೆಹರು, ಸರ್ದಾರ್ ಮೊದಲ್ಗೊಂಡು ರಾಷ್ಟ್ರದ ಆರಾಧ್ಯ ಧುರೀಣರನ್ನು—ಹಲವರನ್ನು-ಗೊತ್ತುಗುರಿಯಿಲ್ಲದ ಯಾವುದೋ ಸ್ಥಳಕ್ಕೆ ಸರಕಾರ ಒಯ್ದಿತೆಂಬ ಸುದ್ದಿ ಭಾರತದ ಜನತೆಯ ಮೇಲೆ ಸಿಡಿಲಿನಂತೆ ಎರಗಿತು!

ದೇಶಕ್ಕೆ ದೇಶವೇ ಉದ್ವಿಗ್ನಗೊಂಡಿತು!
'ಮಾಡಿರಿ ಇಲ್ಲವೇ ಮಡಿಯಿರಿ!'
'ತೊಲಗಿ ಭಾರತದಿಂದ'

—ಗಾಂಧೀಜಿಯ ಈ ದಿವ್ಯ ಮಂತ್ರಗಳೇ ವೇದ ವಾಕ್ಯಗಳಾಗಿ, ಜನತೆ ಸಂಗೆಯದ್ದಿತು! ಆಗಸ್ಟ್ ಮಹಾಕ್ರಾಂ[illegible]ತು ಪ್ರಾರಂಭವಾಯಿತು!

ಯಾವುದೇ ಸಾಮಾಜಿಕ ರಾಜಕೀಯ ವಿಚಾರಗಳಿರಲಿ, ಆ ಕುರಿತು, ಕೇವಲ ಉದ್ವೇಗಪರವಶರಾಗದೆ, ವಿವೇಕಪರ ಮಾರ್ಗ ಹಿಡಿಯುವ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮುಂದಾಳುಗಳಾದರೂ, ಈ ಆಗಸ್ಟ್ ಕ್ರಾಂತಿಯ ಪ್ರಾರಂಭವ ಸಂದರ್ಭದಲ್ಲಿ, ಗಾಂಧೀಜಿಯ ಸಾಯಾದ ಮಾರ್ಗದರ್ಶನವಿಲ್ಲದೆ ತುಸು ತಟಸ್ಥರೇ ಆಗಿದ್ದರು. ಯುವಜನಾಂಗ ಮಾತ್ರ, ನಮ್ಮ ಜಿಲ್ಲೆಯಲ್ಲಿಯೂ, ಅಖಿಲ [ಭಾರತದಲ್ಲಿ ಎಂತೋ ಅಂತೇ, ದೇಶಾಭಿಮಾನದಿಂದ, ಸ್ವಾತಂತ್ರ್ಯದಾಹದಿಂದ, ವೀರೋತ್ಸಾಹದಿಂದ ಕುದಿಯುತ್ತಿತ್ತು! ಆದರೂ, ಯಾರೂ, ಕೆಲದಿನಗಳ ತನಕ ಯಾವೊಂದು ಕಾರ್ಯಕಲಾಪವನ್ನೂ ಕೈಕೊಂಡಂತೆ ತೋರಲಿಲ್ಲ; ಯಾವ ದುಡುಕಿಗೂ ಇಳಿಯಲಿಲ್ಲ. ತಟಸ್ಥ ಪರಿಸ್ಥಿತಿ ಇಕ್ಕಡೆಯಲ್ಲಿಯೂ ಕೆಲದಿನಗಳ ಮಟ್ಟಿಗೆ ನೆಲಸಿತ್ತೆನ್ನಬಹುದು.

ಒಮ್ಮೆಲೇ ಶ್ರೀ ಕೆ. ಆರ್. ಕಾರಂತರನ್ನು ಆಗಸ್ಟ್ ಹನ್ನೊಂದನೇ ತಾರೀಕಿನ ಬೆಳಗ್ಗೆ ಬಂಧಿಸಿ ಎಲ್ಲಿಗೋ ಕೊಂಡೊಯ್ದರೆಂಬ ಸುದ್ದಿಯಾಯಿತು. ಜಿಲ್ಲೆಯ ಶಾಂತತೆ ಆಗ ಒಮ್ಮೆ ಕದಡಿತು. ಉರಿಯುತ್ತಿದ್ದ ಉಮಿಯ ರಾಶಿ ಹೀಗೆ ಒಮ್ಮೆ ಕೆದಕಲ್ಪಟ್ಟಿತು!

ಜಿಲ್ಲೆಯ ಮುಂದಾಳುಗಳೆಲ್ಲಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿದ್ದು ಮುಂಬಯಿ ಅಧಿವೇಶನಕ್ಕೆ ಹೋಗಿದ್ದ ಶ್ರೀ ಯು. ಎಸ್. ಮಲ್ಯರು ಪೋಲೀಸರ ಸೆರೆಗೆ ಸಿಕ್ಕದೆ ಅಸ್ಪರಲ್ಲಿಯೇ ಅಜ್ಞಾತವಾಸಿಯಾಗಿದ್ದರು. ಶ್ರೀಯುತರಾದ ಎ. ಬಿ. ಶೆಟ್ಟರನ್ನಾಗಲಿ, ವೆಂಕಟ್ರಾಯ ಬಾಳಿಗರನ್ನಾಗಲಿ ಇನ್ನಾವ ಧುರೀಣರನ್ನಾಗಲಿ ಬಂಧಿಸದೆ ಶ್ರೀ ಕಾರಂತರನ್ನು ಮಾತ್ರ ಕೂಡಲೇ ಬಂಧಿಸಲಿಕ್ಕೆ ಹಲವರು ಹಲವು ಕಾರಣಗಳನ್ನು ಹೇಳಿದರೂ, ಮುಖ್ಯತಃ ಅವರ ಸಹಜ ಗುಣವಾದ ಸ್ಪಷ್ಟ ವಕ್ತೃತ್ವವೇ ಕಾರಣವೆಂಬುದು ನಿರ್ವಿವಾದವೆನ್ನುವುದನ್ನು ಕೆಲಸಮಯದ ಹಿಂದೆಯೇ ನಡೆದ ಘಟನೆಯಿಂದ ಸಮರ್ಥಿಸಬಹುದಾಗಿತ್ತು.

ವೈಯಕ್ತಿಕ ಸತ್ಯಾಗ್ರಹ ಹೂಡಿ ಬಂಧನದಿಂದ ಬಿಡುಗಡೆಯಾಗಿ ಬಂದ, ಶ್ರೀಗಳಾದ ವೆಂಕಟ್ರಾಯ ಬಾಳಿಗರಿಗೂ, ಎ. ಬಿ. ಶೆಟ್ಟರಿಗೂ, ಕೆ. ಆರ್. ಕಾರಂತರಿಗೂ ಗೌರವ ಸಲ್ಲಿಸುವಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಒಂದು ಸತ್ಕಾರ ಕೂಟ ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ, ಶ್ರೀಯುತರಾದ ಶೆಟ್ಟರು ಮತ್ತು ಬಾಳಿಗರು ತಮ್ಮ ಸೆರೆಮನೆಯ ಕೆಲವು ಸ್ವಾರಸ್ಯದ ಅನುಭವಗಳನ್ನು ಇನ್ನಷ್ಟು ಸ್ವಾರಸ್ಯವಾಗುವಂತೆ ವಿವರಿಸಿ ಮಾತನಾಡಿದ್ದರು. ಅವರಿಬ್ಬರೂ, ಪ್ರಚಲಿತ ರಾಜಕೀಯದ ಕುರಿತು ವಿಶೇಷ ಯಾವೊಂದು ಅಭಿಪ್ರಾಯವನ್ನೂ ಅಂದು ವ್ಯಕ್ತಪಡಿಸಿರಲಿಲ್ಲ. ಶ್ರೀ. ಕಾರಂತರು ಮಾತ್ರ, ಆಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಸಭೆ ಸೇರಿ ಮಾಡುತ್ತಿರುವ ಮುಂದಿನ ಮಹಾ ಸ್ವಾತಂತ್ರ್ಯ ಸಂಗ್ರಾಮದ ವಿಷಯ ಪ್ರಸ್ತಾಪಿಸಿ, ಅದು ಕೊನೆಯ ಹೋರಾಟವಾಗಿದೆಯೆಂದೂ, ಅದರಲ್ಲಿ ಎಂತಹ ಬಲಿದಾನಕ್ಕಾದರೂ ನಾವು ಸಿದ್ಧರಿರಬೇಕೆಂದೂ ಅಂದು ಕರೆ ಕೊಟ್ಟಿದ್ದರು. ಅವರ ಆ ಕರೆಯ ಸುದ್ದಿ ಮದ್ರಾಸಿನ ಪ್ರಮುಖ ಪತ್ರಿಕೆಗಳಲ್ಲಿ ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿತ್ತು. ಇಂತಹ ಸ್ಪಷ್ಟ ಅಭಿಪ್ರಾಯ ಪ್ರಕಟಣೆಯೇ ಶ್ರೀ. ಕಾರಂತರ ಅಕಸ್ಮಾತ್ ಬಂಧನಕ್ಕೆ ಕಾರಣನೆಂದು ಯಾರಾದರೂ ತಿಳಿಯಬಹುದಾಗಿತ್ತು. ನಮ್ಮ ಜಿಲ್ಲೆಯಲ್ಲಿ ಕಲೆಕ್ಟರರಾಗಿದ್ದ ಓರ್ವ ಇಂಗ್ಲಿಷ್ ದೊರೆ, ಆಗ ಮದ್ರಾಸಿನಲ್ಲಿ ಮುಖ್ಯಾಧಿಕಾರದಲ್ಲಿದ್ದರೆಂದೂ, ಅವರು ನಮ್ಮಲ್ಲಿ ಕಲೆಕ್ಟರರಾಗಿದ್ದಾಗ, ಅವರ ಮೇಲೆ ಹೊಡಲಾದ ಒಂದು ದಾವೆಯಲ್ಲಿ, ಶ್ರೀ. ಕಾರಂತರು ಅವರು ವಿರುದ್ಧ ವಕಾಲತ್ ಮಾಡಿದ್ದರೆಂದೂ, ಆ ಸೇಡನ್ನು ಸಾಧಿಸಲು, ಆಗ ತಾನೇ ಸೆರೆಮನೆ ಸಂಕಷ್ಟವನ್ನನುಭವಿಸಿ ಬಂದಿದ್ದರೂ, ಅನಾರೋಗ್ಯದಿಂದಿದ್ದರೂ, ಆ ದೊರೆ ಶ್ರೀ ಕಾರಂತರನ್ನು ಬಂಧಿಸುವ ಅಪ್ಪಣೆ ಮಾಡಿದರೆಂದೂ ಕೆಲವರು ಊಹಿಸದೆ ಇರಲಿಲ್ಲ.

ಅಂತು, ಹೇಗಿದ್ದರೂ, ಜಿಲ್ಲೆಯ ಪ್ರಮುಖ ಮುಂದಾಳುಗಳಾದ ಶ್ರೀ ಕಾರಂತರನ್ನು ಒಮ್ಮೆಲೇ ಬಂಧಿಸಿ ಎಲ್ಲಿಗೋ ಒಯ್ದರೆಂಬ ಸುದ್ದಿ ಕೇಳಿ ಜಿಲ್ಲೆಯ ಜನತೆಯಲ್ಲಿ ಅಶಾಂತಿ ಹುಟ್ಟಿದ್ದು ಸಹಜವೇ ಆಗಿತ್ತು; ಇಂತಹ ಅಶಾಂತಿಯನ್ನು ಸರಕಾರವೇ ಪ್ರಚೋದಿಸಿತು.

ಜಿಲ್ಲೆಯಲ್ಲಿ ಅಶಾಂತಿ ಹುಟ್ಟಿದ್ದರೂ, ಯುವ ಜನಾಂಗ ಉದ್ರೇಕಗೊಂಡಿದ್ದರೂ ಅವರಿಗೆ ಇನ್ನೂ ಸರಿಯಾದ ಮಾರ್ಗದರ್ಶನ ದೊರೆತಿರಲಿಲ್ಲ. ಅಸ್ಪರಲ್ಲಿ, ಗಾಂಧೀಜಿಯ ಪಟ್ಟ ಶಿಷ್ಯ ಮಹಾದೇವ ದೇಸಾಯಿಯವರು ನಿಧನರಾದರೆಂಬ ಶೋಕ ವಾರ್ತೆಯೂ ಬಂದಿತು. ಶ್ರೀ ರಾಮನಿಗೆ ಲಕ್ಷ್ಮಣನಿದ್ದಂತೆ, ಗಾಂಧೀಜಿಗೆ ಮಹಾದೇವ ದೇಸಾಯಿ. ಈ ದುಃಖ ಇಡೀ ರಾಷ್ಟ್ರದ ದುಃಖವಾಯಿತು; ಅದಕ್ಕಾಗಿ ಅಖಿಲ ಭಾರತದಂತೆ, ಮಂಗಳೂರು ನಗರವಿಡೀ ಹರತಾಳ ವಾಚಂಯಲ್ಪಟ್ಟಿತು.

(೧೫ನೇ ಪುಟ ನೋಡಿರಿ)

Bhuvanendra Products Ltd.,
KATAPADI, S. KANARA.
Manufacturers of Shastric Ayurvedic Medicines
& Proprietory Preparations.

Head Office & Factory:-
KATAPADI,
S. Kanara.

Depot:-
UDIPI, S. Kanara.
MAHRATA GALLI, HUBLI.

ಎಲ್ಲರಿಗೂ ಸುಖವಾಗಲಿ! ಶುಭವಾಗಲಿ!! ಶಾಂತಿ ನೆಲಸಲಿ!!!
ಇದುವೆ ಸ್ವಾತಂತ್ರ್ಯ ದಿನಾಚರಣೆಯ
ನಮ್ಮ ಪ್ರಾರ್ಥನೆ.

ಉತ್ತಮ ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳನ್ನು ತಯಾರಿಸಿ ಇನ್ನೂ ಹೆಚ್ಚಿನ ರೀತಿಯಿಂದ ಜನತಾ ಸೇವೆ ಮಾಡುವಂತಾಗಲಿ. ದೇಶದ ಉದ್ಯಮ ಕ್ಷೇತ್ರದಲ್ಲಿ ನಮ್ಮ ಅಖಿಲ ಸೇವೆಯು ಪ್ರಗತಿದಾಯಕವಾಗಿ ಪರಿಣಮಿಸಲಿ. ಎಲ್ಲಾ ಗ್ರಾಹಕರಿಗೂ ಅಧಿಕ ವಿಶ್ವಾಸದ ಸೇವೆಯ ಸೂಚನೆಯನ್ನೀಯುತ್ತೇವೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಿಪಾಡಿ, ದ. ಕನ್ನಡ.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳ ಕಾರ್ಖಾನೆ.
ಡಿಪೋ:— 1. ಉಡುಪಿ. 2. ಮರಾಟಿ ಗಲ್ಲಿ, ಹುಬ್ಬಳ್ಳಿ.

ಪ್ರಾಚೀನ ಭಾರತದಲ್ಲಿ ಕಲ್ಯಾಣ ರಾಷ್ಟ್ರದ ಸ್ವರೂಪ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕಳೆದ ಎಪ್ಪತ್ತು ವರ್ಷಗಳ ಪೂರ್ವದಲ್ಲಿಯಷ್ಟೇ ಪ್ರಾದುರ್ಭಾವಕ್ಕೆ ಬಂದಿರುವ ಕಲ್ಯಾಣ ರಾಷ್ಟ್ರದ ಕಲ್ಪನೆಯು ಭಾರತದಲ್ಲಿ ಅಶೋಕ ಚಕ್ರವರ್ತಿಯ ಕಾಲದಷ್ಟು ಹಿಂದೆಯೇ ಕಾರ್ಯರೂಪದಲ್ಲಿ ಇಳಿದಿತ್ತೆಂದರೆ ನಮಗೆ ಅಭಿಮಾನವಾಗದೆ? ಅಶೋಕನು ಅಂದು ವಹಿಸಿರುವ ನಿಲುವಿಗೂ ಇಂದಿನ ನೆಹರು ಸರಕಾರದ ಧೋರಣೆಗೂ ನಾವು ಬಹಳ ನಿಕಟ ಸ್ವರೂಪದ ಸಾಮ್ಯವನ್ನು ಗುರುತಿಸಬಹುದು. ಸಂಜಾಬನ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಮತ್ತು ರಾಜ್ಯ ಶಾಸ್ತ್ರದ ಪಂಡಿತಂಗಿರುವ ಪ್ರೊ. ಇಂದ್ರರು ಈ ಪ್ರಾಥ ಲೇಖನ ವಿಷಯದ ಮೇಲೆ ವಿಶ್ಲೇಷಣವಾದ ಬೆಳಕನ್ನು ಚೆಲ್ಲುತ್ತದೆ.

"ನಾನು ಜನತೆಯ ಕಲ್ಯಾಣಕ್ಕಾಗಿ ಕೆಲಸವನ್ನು ಮಾಡಲೇಬೇಕೆಂದು ಭಾವಿಸುತ್ತೇನೆ, ಪ್ರಜೆಗಳ ಕಲ್ಯಾಣ ಕಾರ್ಯದ ಹೊರತು ಬೇರೆ ಮಹತ್ವದ ಕಲಸ ನನಗಿಲ್ಲವೆಂದು ನಾನು ತಿಳಿದಿದ್ದೇನೆ'—ಇದು ಕ್ರಿಸ್ತಪೂರ್ವದ ಸುಮಾರು ಶತಮಾನದಲ್ಲಿ ನಮ್ಮ ದೇಶವನ್ನು ಆಳಿದ ಚಕ್ರವರ್ತಿ ಅಶೋಕನು ತಿಲಾ ಲೇಖನ ಪೊಂದರಲ್ಲಿ ಕೆತ್ತಿಸಿದ್ದ ಘೋಷಣೆಯಾಗಿದೆ. ಪ್ರಜಾರಂಜನ ಕಾರ್ಯದಲ್ಲಿ ಅತ್ಯಂತ ದಕ್ಷತೆಯನ್ನು ತೋರಿಸಿದ ಅಶೋಕನು ಜನರಿಗೆ ಹೀಗೆ ತಿಳಿಯಪಡಿಸಿದ್ದಾನೆ —"ನಾನು ಭೋಜನ ಶಾಲೆಯಲ್ಲಿರಲಿ, ಅಂತಃಪುರದಲ್ಲಿರಲಿ, ಶೌಚಕೂಪದಲ್ಲಿರಲಿ, ಕುದುರೆಯ ಸವಾರಿ ಮಾಡುತ್ತಿರಲಿ, ಉದ್ಯಾನದಲ್ಲಿ ವಿಹರಿಸುತ್ತಿರಲಿ, ಎಲ್ಲಿಯೇ ಇರಲಿ, ದೂತರು ನನ್ನಲ್ಲಿಗೆ ವಿಳಂಬವಿಲ್ಲದೆ ಬಂದು ಜನತೆಯ ಆಗುಹೋಗುಗಳನ್ನು ತಿಳಿಸಲು ತಪ್ಪಬಾರದು. ನಾನು ಜನತೆಯ ಎಲ್ಲ ಕೆಲಸಗಳಿಗೂ ಯೋಗ್ಯ ಗಮನವನ್ನು ಕೊಡುತ್ತೇನೆ." ಪ್ರಿಯ ದರ್ಶಿ ಅಶೋಕನು ಜನತೆಯ ಸೇವೆಯನ್ನು ಹೀಗೆ ಮಾಡುತ್ತಿರುವ ತನ್ನ ಉದ್ದೇಶದ ಅಂತರ್ಯವನ್ನು ವಿವರಿಸುತ್ತಾ "ನನ್ನ ಧರ್ಮದ ಮರ್ಮವನ್ನು ತಿಳಿದು ಅದರಂತೆ ನಡೆಯುವುದೇ ನನ್ನ ಅಭಿಲಾಷೆ" ಎಂದೂ ಇನ್ನೊಂದು ಲೇಖನದಲ್ಲಿ ಕೆತ್ತಿಸಿದ್ದನು.

ರಾಜಕೀಯವು ನೂರಾರು ವರ್ಷಗಳವರೆಗೆ ನಿರಂತರವಾಗಿ ಬೆಳೆದು ಬಂದ ಕಾರಣದಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹತ್ತೈವತ್ತು ವರ್ಷಗಳ ಪೂರ್ವದಲ್ಲಿಯಷ್ಟೇ "ಕಲ್ಯಾಣ ರಾಷ್ಟ್ರ"ವನ್ನು ಕಟ್ಟಬೇಕೆಂಬ ವಿಚಾರಕ್ಕೆ ಚಾಲನೆ ದೊರಕಿತು. ಆದರೆ ಭಾರತದಲ್ಲಿ ಎರಡೂಕಾಲು ಸಾವಿರ ವರ್ಷಗಳಷ್ಟು ಹಿಂದೆಯೇ ದೇವನಾಮ ಪ್ರಿಯನಾದ ಅಶೋಕನು ಪ್ರಜೆಗಳ ಕಲ್ಯಾಣವೇ ಧ್ಯೇಯವಾಗುಳ್ಳ ಸರಕಾರವನ್ನು ನಡೆಸಲು ಪ್ರಯತ್ನಿಸಿದ್ದನು. ಇದಕ್ಕೂ ಹಿಂದೆ ರಾಮ ರಾಜ್ಯ"ವಿತ್ತೆಂಬುದೂ ಕಲ್ಯಾಣ ರಾಷ್ಟ್ರದ ಕಲ್ಪನೆಯನ್ನು ಪುರಾಣ ಯುಗದ ಈ ಕತೆಯ ವಿವರಣೆ ಚೆನ್ನಾಗಿಯೇಲುತ್ತದೆಂಬುದೂನಮಗೆಲ್ಲ ತಿಳಿದಿರುವ ವಿಷಯ. ಅಶೋಕನು ಪ್ರಾರಂಭದಲ್ಲಿ ಅತ್ಯಂತ ಕ್ರೂರಿಯಾಗಿದ್ದನೆಂದು ಚರಿತ್ರೆಯಿಂದ ನಮಗೆ ತಿಳಿದು ಬರುತ್ತದೆ. ಆದರೆ ಕಳಿಂಗ ಯುದ್ಧದಲ್ಲಿ ಸುಮಾರು ಒಂದುಲಕ್ಷ ಜನರು ಕೊಲ್ಲಲ್ಪಟ್ಟು ಒಂದೂವರೆ ಲಕ್ಷ ದಷ್ಟು ಜನರು ಒಂಧಿತರಾದ ಗ, ವಿಧವೆಯರ ಮತ್ತು ಅನಾಥ ಮಕ್ಕಳ ಗೋಳು ಹೆಚ್ಚಿಕೊಂಡಾಗ, ಅಶೋಕನ ಮನಸ್ಸು ಅಕಸ್ಮಿಕವಾಗಿ ಕರಗಿತು. ಅವನ ವಿವೇಕ ಜಾಗೃತವಾಯಿತು. ಇನ್ನು ಮುಂದ ಎಷ್ಟೇ ಅಲ್ಪ ಸಂಖ್ಯೆಯ ಲ್ಲಾಗಲಿ ಜನರು ನಾಶವಾದರೆ ಅದಾ ದು ಖಪೀಡಿತರಾದರೆ ತನಗೆ ಅಸಿಯೊದ ವೇದನೆಯೊಗುವದೆಂದು ಅವನು ಸಾರಿದನು.

ಇಷ್ಟು ಉತ್ತಮ ನಿಶ್ಚಯವನ್ನು ಕೈಗೊಂಡ ಅಶೋಕನು ಅನುಸರಿಸಿದ ಮಾರ್ಗವೂವುದು? "ದೇವನಾಮ ಪ್ರಿಯನಿಗೆ (ಅಶೋಕನಿಗೆ) ಪ್ರೇಮಕಾಗೂ ನ್ಯಾಯವಾದ ಮಾರ್ಗದಿಂದ ಲಭಿಸುವ ದರ್ಮವಿಜಯವಲ್ಲಿಯೇ ಹಚ್ಚಿನ ಆಸಕ್ತಿ. ಅದೇ ಮಹತ್ವದ ಮತ್ತು ಶಾಶ್ವತವಾದ ವಿಜಯ. ಈ ಮಾರ್ಗವನ್ನು ಅನುಸರಿಸಿಯೇ ದೇವನಾಮ ಪ್ರಿಯನು ಯವನ ಅರಸ ಅಂತಿಯೋಕನ, ಐಗುಪ್ತದ ತುರಮಾಯನ, ಮ್ಯಾಕೆಕೋನಿಯದ ಅಂತಿಕೋನನ, ಸಿರೀನದ ಮೇಗನ ಮತ್ತು ಗ್ರೀಸಿನ ಅಲೀಕಾ ಸುಂದರನ ದೇಶಗಳಲ್ಲಿ ಸಹ ವಿಜಯವನ್ನು ಸಂಪಾದಿಸಿದ್ದಾನೆ. ಇನ್ನು ಮುಂದೆ ನನ್ನ ಮಕ್ಕಳಾಗಲೀ ಮೊಮ್ಮಕ್ಕಳಾಗಲೀ ಯಾರೇ ಆಗಲಿ—ಖಡ್ಗವನ್ನು ಹಿಡಿದು ರಾಜ್ಯವನ್ನು ಸಂಪಾದಿಸಿಕೊಳ್ಳದಿರಲಿ! ಧರ್ಮದಿಂದ ಸಂಪಾದಿಸಿದ ರಾಜ್ಯವೇ ಕೊನೆಯವರೆಗೆ ಮೈತ್ರಿಯಿಂದಲೂ ಪ್ರೀತಿ ವಿಶ್ವಾಸದಿಂದಲೂ ಬಾಳಬಲ್ಲುದು. ಅದುದರಿಂದ ನನ್ನ ವಂಶದವರೆಲ್ಲ ಧರ್ಮ ಮಾರ್ಗದಿಂದ ರಾಜ್ಯಸಂಪಾದನೆ ಮಾಡುವುದೇ ನಿಜವಾದ ಸುಖಾನುಭವವೆಂದು ತಿಳಿದುಕೊಳ್ಳಲಿ!" ಎಂಬ ಶಿಲಾಶಾಸನವು ಈ ಭಾರತೀಯ ಚಕ್ರವರ್ತಿಯ ಉನ್ನತ ವಿಚಾರವನ್ನು ವ್ಯಕ್ತಪಡಿಸುತ್ತದೆ.

ಅಶೋಕನಿಗೆ ಮೊದಲು ಆಗಿಹೋಗಿದ್ದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಧರ್ಮವಿಜಯ, ಲೋಭವಿಜಯ ಮತ್ತು ಅಸುರವಿಜಯ, ಎಂದು ಮೂರುಬಗೆಯಾಗಿ ವಿಜಯಗಳನ್ನು ವಿಭಾಗಿಸಲಾಗಿದೆ. ಕೊನೆಯವರಲ್ಲಿ, ರಾಜನು ತನ್ನ ಪ್ರತಿಸ್ಪರ್ಧಿಯನ್ನು ಶಕ್ತಿಸರಂತೆ ಕಡಿದು ಹಾಕಿದನೆ, ಎರಡನಯದರಲ್ಲಿ ಒಡಕು ಹುಟ್ಟಿಸಿಯೂ ಸುಲಿಗೆ ಮತ್ತು ಲೂಟಿಗಳನ್ನು ನಡೆಸಿಯೂ ಪ್ರತಿಸ್ಪರ್ಧಿಯನ್ನು ಕೆಣಕಲು ಗುತ್ತದೆ. ಆದರೆ ಅಶೋಕನ ಮಟ್ಟಿಗೆ ಸಾರ್ವಜನಿಕ ಆಡಳಿತದ ಮೂಲಸೂತ್ರವಾಗಿ ಧರ್ಮ ವಿಜಯದ ಸಂಕಲ್ಪವಿತ್ತೆಂದರೆ ತಪ್ಪಾಗದು. ಈ ಮಾರ್ಗದ ಅನುಸರಣೆಯನ್ನು ಮಾಡುವ ಮೂಲಕ ಅಶೋಕನು ಪ್ರಜೆಗಳನ್ನು ಸಮಾನವಾಗಿ ಟ್ಟುದಷ್ಟೇಯಲ್ಲ ಅವರ ಹೃದಯಗಳನ್ನೂ ಗೆದ್ದುಕೊಂಡನು. ಅನುರಾಗವನ್ನೂ ವಿಶ್ವಾಸವನ್ನೂ ಅವರವನ್ನೂ ಸಂಪಾದಿಸಿದನು. ಅವನ ಆಡಳಿತವು ದಿಗ್ದೇಶಗಳಲ್ಲಿ ವ್ಯಾಪಿಸುವುದಾಯಿತು. ಜಗತ್ತಿನ ಇತಿಹಾಸದ್ದ ಪರ್ವ ವಿಜಯಕ್ಕೆ ಇದಕ್ಕಿಂತ ವ್ಯಾಪಕವಾದ, ವರ್ಚಸ್ವಿಯಾದ ಉದಾಹರಣೆ ಬೇರೊಂದು ಸಿಗುವುದಿಲ್ಲ. ಪ್ರಜೆಗಳ ಉತ್ಕರ್ಷ ಮತ್ತು ಕ್ಷೇಮದ ಚಿಂತನೆಯನ್ನು ಇಷ್ಟ ಹತ್ತು ಇಟ್ಟುಕೊಂಡ ಆಳರಸರೂ ವಿರಳ.

ಇನ್ನೊಂದು ಶಿಲಾಶಾಸನದಲ್ಲಿ ಅಶೋಕನು ಎಲ್ಲ ಪ್ರಜೆಗಳೂ ನನ್ನ ಮಕ್ಕಳು" ಎಂದು ಸಾರಿದ್ದಾನೆ. "ನನ್ನ ಮಕ್ಕಳಿಗೆ ಈ ಶೋಕನದ್ದು ಮಾತ್ರವಲ್ಲ ಎಲ್ಲೋ ಕದಲ್ಲಿಯೂ ಸಕಲ ಸೌಕರ್ಯಗಳೂ ಸುಖಗಳೂ ಸಿಗಬೇಕೆಂದು ನಾನು ಬಯಸುತ್ತಿರುವಂತೆಯೇ ನನ್ನ ಪ್ರಜೆಗಳಿಗೂ ಅದೇ ಮಾದಾಯ ಸುಖ ಸೌಕರ್ಯ ಸಂತೋಷಗಳು ಸಿಗಬೇಕೆಂದು ಇಚ್ಛಿಸುತ್ತಿದ್ದೇನೆ". ಅಶೋಕನು ವ್ಯಕ್ತಪಡಿಸಿದ್ದ ಈ ಪಿತೃ ಭಾವನೆಯನ್ನು ಪ್ರಜೆಗಳು ಮನ್ನಿಸುತ್ತಿದ್ದರೆಂದೂ ಗೊತ್ತಾಗುತ್ತದೆ. "ಅವನು ನನ್ನ ತಂದೆಯಂತಿರುವನು, ನಾವು ಅವನಿಗೆ ಮಕ್ಕಳಂತೆ ಇದ್ದೇವೆ. ತನ್ನ ಬಗ್ಗೆ ಅವನು ಎಷ್ಟು ಚಿಂತಿಸುತ್ತಿದ್ದಾನೋ ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಕಲ್ಯಾಣದ ಬಗ್ಗೆ ಅವನು ದಕ್ಷತೆಯನ್ನು ತೋರಿಸುತ್ತಿದ್ದಾನೆ" ಎಂದು ಪ್ರಜೆಗಳು ಸಾಮಾನ್ಯವಾಗಿ ಅಭಿಪ್ರಾಯ ಪಡುತ್ತಿದ್ದರು. ಜನರು ಭೌತಿಕ ದೃಷ್ಟಿಯಿಂದಷ್ಟೇ ಸಮೃದ್ಧಿಯಾಗಿದ್ದರೆ ಸಾಲದು—ನೈತಿಕ ಮತ್ತು ಆಧ್ಯಾತ್ಮಿಕ ದೃಷ್ಟಿಯಿಂದಲೂ ಉತ್ತಮ ಗುಣಶೀಲ ಸಂಪನ್ನರಾದ ನ್ಯಾಯ ಮತ್ತು ಧರ್ಮ ನಿಷ್ಠರಾದ ಪ್ರಜೆಗಳಿಂದ ಬಾಳುವುದಕ್ಕೆ ಅಶೋಕನ ಮಹತ್ವ

(ಉಳಿದ ಪುಟ ನೋಡಿರಿ)

ದೇಶ ಬಾಂಧವರಿಗೆ ಅಭಿನಂದನೆ

ರಾಷ್ಟ್ರಾಧ್ಯಕ್ಷ ಡಾ ರಾಜೇಂದ್ರ ಪ್ರಸಾದರು ಸ್ವಾತಂತ್ರ್ಯ ದಿನದಂದು ಜನಗಣಮನ ಭಾರತೀಯರಿಗೆ ಅರ್ಪಿಸುತ್ತಾ ಹೀಗೆಂದರು—"ದೇಶದಲ್ಲಿ ನಿಜವಾದ ಕಲ್ಯಾಣ ರಾಷ್ಟ್ರವನ್ನು ನಲೆಗೊಳಿಸಲು ನಾವು ದೃಢ ನಿರ್ಧಾರಮಾಡಿದ್ದೇವೆ. ಮೊದಲನೆಯ ಪಂಚವಾರ್ಷಿಕ ಯೋಜನೆಯು ನಾವು ಸರಿಯಾದ ದಾರಿ ಹಿಡಿದಿದ್ದೇವೆಂದು ತೋರಿಸಿಕೊಟ್ಟಿರುತ್ತದೆ. ವಿದೇಶ ದೋರಣೆಯ ಯಶಸ್ಸು ಸಹ ಕಡಿಮೆಯಾಗಿಲ್ಲ. ಶಾಂತ ಸಹಜೀವನದಲ್ಲಿ ಗಾಢವಾದ ವಿಶ್ವಾಸ ವನ್ನು ಉದಾತ್ತ ತತ್ವಗಳ ಪ್ರತಿಪಾದನೆಯ ಸಲವಾಗಿ ರೂಪ ಗೊಂಡಿರುವ ಪಂಚಶೀಲವು ರಾಷ್ಟ್ರ ರಾಷ್ಟ್ರಗಳ ಶಾಂತಿ ಗೌರವಗಳ ಸಂಕೇತವೆಂದು ಪರಿಗಣಿಸಲ್ಪಟ್ಟಿರುವುದು ಸಂತೋಷಕರ!"

NAVAYUGA
Popular Kannada Weekly
Founder —
Sri **A B SHETTY**, *M L A*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೧೮-೮-೫೫	ಸಂಚಿಕೆ ೪೯

ಎಂಟು ವರ್ಷಗಳ ಅನುಭವ

ನಾವು ಎಂಟು ವರ್ಷಗಳ ಪೂರ್ವದಲ್ಲಿ ಪಡೆದ ಸ್ವಾತಂತ್ರ್ಯವ ವಾರ್ಷಿಕೋತ್ಸವವನ್ನು ಮೊನ್ನೆ ಸಂಭ್ರಮದಿಂದ ಆಚರಿಸಿದ್ದೇವೆ—ಪ್ರಧಾನಿ ನೆಹರು ಬೇಳಿರುವಂತೆ ಸ್ವತಂತ್ರ ಭಾರತವು ಎಂಟು ವರ್ಷಗಳ ಬಾಲಕನಾಗಿ ಈಗ ರೂಪುಗೊಂಡಿದೆ ಭಾರತದ ಚರಿತ್ರೆಯ ಪಾರಗಳ ಪ್ರಯೋಜನವನ್ನು ಪಡೆದುಕೊಂಡು ಹಾಗು ಭಾರತದ ಉದಾತ್ತಸಂಸ್ಕೃತಿಯನ್ನುನಿತ್ಯ ವ್ಯವಹಾರದಲ್ಲಿ ಬಳಸಿಕೊಂಡು ಸ್ವಾತಂತ್ರ್ಯ ಶಿಶು ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಪ್ರಯತ್ನಿಸಿತು. ಇದರಲ್ಲಿ ಸಾಕಷ್ಟು ಯಶಸ್ವಿಯಾಗಿರುವುದರಿಂದ ಎಂಟು ವರ್ಷದ ಅವರ ಪೈಕಟ್ಟು ಸುಸ್ಪಷ್ಟವಾಗಿಯೂ ಆರೋಗ್ಯಕರವಾಗಿಯೂ ತೋರಿಬರುತ್ತಿದೆ; ಮನಸ್ಸು ಲೋಕದ ಗೌರವವನ್ನು ಸಂಪಾದಿಸುವಷ್ಟು ಪರಿಶುದ್ಧತೆಯಿಂದ ಕೂಡಿದೆ, ಅತ್ಯವು ಎಲ್ಲರ ಕಲ್ಯಾಣವಾಗಬೇಕೆಂಬ ಪ್ರೇಯೋ ಕಾಂಕ್ಷೆಯಿಂದ ತುಂಬುವಷ್ಟು ವಿಕಾಸವನ್ನು ತೋರಿಸಿದೆ. ನಮ್ಮ ಪ್ರಾಚೀನ ಪರಂಪರೆಯನ್ನು ಮರೆತು ಲೋಕದ ಇತರ ಜನಾಂಗಗಳಂತೆ ಭೌತಿಕ ಶ್ರೇಯಸ್ಸನ್ನೆ ಉದ್ದೇಶವಾಗಿಟ್ಟುಕೊಂಡು ನೈತಿಕ ಮೌಲ್ಯಗಳನ್ನು ಕಡೆಗಣಿಸಿದ್ದರೆ ಭಾರತವು ಎಂಟೇ ವರ್ಷಗಳ ಅವಧಿಯಲ್ಲಿ ಇಷ್ಟು ಹೆಚ್ಚಿನ ಮನ್ನಣೆಯ ಸ್ಥಾನವನ್ನು ಪಡೆಯುವುದು ಸಾಧ್ಯವಿರಲಿಲ್ಲ. ವ್ಯಾಪಾರಿಕ ಕ್ಷೇತ್ರದಲ್ಲಿ ಆದರ್ಶ ಭಾವನೆಗೆ ಯಾವ ಸ್ಥಾನ ಕೊಡಬೇಕೆಂಬ ಜಟಿಲ ಸಮಸ್ಯೆಯನ್ನು ನೆಹರುಗಳು ತಮ್ಮ ಪ್ರಧಾನಿಪಟ್ಟದ ಈ ಅವಧಿಯಲ್ಲಿ ಎಲ್ಲರ ಮುಂದೆ ಮಂಡಿಸಿದ್ದಾರೆ. ಇದೇ ಆದರ್ಶವು ಮರೀಚಿಕೆಯಂತೆ ನಿಷ್ಪ್ರಯೋಜಕವೆಂದು ಹೇಳುವವರುಂಟು; ಹಾಗೆಯೇ ವ್ಯವಹಾರಾಸಕ್ತಿಯೊಂದನ್ನೆ ಇಟ್ಟುಕೊಂಡರೆ ಪ್ರಗತಿಯ ಸ್ಪಷ್ಟ ಕಲ್ಪನೆಯಾಗದೆಂದು ಹೇಳುವವರೂ ಇದ್ದಾರೆ. ಇವೆರಡು ವಿಚಾರ ಪ್ರಣಾಳಿಗಳ ಸಮಸ್ವಯವನ್ನು ಭಾರತದ ಪ್ರಧಾನಿ ಯಶಸ್ವಿಯಾಗಿ ಸಾಧಿಸಿದ್ದಾರೆ. ನಮ್ಮ ಸರಕಾರವು ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಕೆಲವು ಮೂಲಭೂತ ಸಿದ್ಧಾಂತಗಳ ಮೇಲೆ ಭವ್ಯ ಭಾರತದ ನಿರ್ಮಾಣವಾಗಬೇಕೆಂದು ಹೇಳುತ್ತ ಬಂದಿದೆ; ಮತ್ತು ಅದಕ್ಕೆ ಸರಿಯಾದ ಧೋರಣೆಯನ್ನೂ ಅನುಸರಿಸಿಕೊಂಡು ಸೋಗಿದೆ ಲಘಂಗರ ಕ್ರೀಡಾಕ್ಷೇತ್ರವಾದ ರಾಜಕಾರಣದಲ್ಲಿ ಅಹಿಂಸೆ, ಸತ್ಯಸ್ಥೈರ್ಯ ಮುಂತಾದ ಗಾಂಧೀಜಿಯ ಪವಿತ್ರ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದು ಸಾಧ್ಯವೇ ಎಂಬ ಪ್ರಶ್ನೆಗೆ ನೆಹರುಗಳ ವಿದೇಶ ಧೋರಣೆತಕ್ಕ ಉತ್ತರವನ್ನು ಕೊಡುತ್ತದೆ. ರಾಷ್ಟ್ರಪಿತನು ಹಾಕಿಕೊಟ್ಟ ಮಾರ್ಗದಿಂದ ನೆಹರು ಸ್ವಲ್ಪವೂ ಕದಲದೆ ನಮ್ಮ ಈ ಮಹಾರಾಷ್ಟ್ರವನ್ನು ಶ್ರೇಯಸ್ಸಂಪನ್ನತೆಗೆ ಒಯ್ಯುತ್ತಿರುವುದಕ್ಕೆ ನಾವು ಅಭಿಮಾನವನ್ನು ವ್ಯಕ್ತಪಡಿಸುವುದು ತಪ್ಪಾಗಲಾರದು. ಪಂಚ ಶೀಲಗಳೆಂಬ ಪ್ರಾಚೀನ ತತ್ವಗಳಿಗೆ ಆಧುನಿಕ ವಾತಾವರಣಕ್ಕೆ ಯೋಗ್ಯವಾದ ಒಪ್ಪವಿಡುವ ಮೂಲಕ ಭಾರತವು ಜಾಗತಿಕ ದ್ವೇಷ ಶಮನಕ್ಕೆ ಉಲ್ಲೇಖನೀಯವಾದ, ಎಷ್ಟಕ್ಕೂ ಉಪೇಕ್ಷಿಸಲಸಾಧ್ಯವಾದ ಪಂತಿಗೆಯನ್ನು ನೀಡಿದೆ ದೇಶದೊಳಗೆ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಸರಕಾರ ಅಳವಡಿಸಿಕೊಂಡಿದೆ—ಆದರೆ ಇಲ್ಲಿ ಸಹ ಕೆಲವು ಮೂಲಭೂತ ತತ್ವಗಳನ್ನು ಕಡೆಗಣಿಸಿಲ್ಲ. ಭಾರತದಲ್ಲಿ ಕೋಟ್ಯಾಂತರ ಕೈಗಳು ಕೆಲಸವಿಲ್ಲದೆ ಬಿದ್ದಿವೆ ಎಂಬ ನಗ್ನಸತ್ಯವನ್ನು ಸರಕಾರ ಮರೆತಿಲ್ಲ—ಆದುದರಿಂದ ಚಿಕ್ಕ ಉದ್ದಿಮೆಗಳನ್ನೂ ಗುಡಿಕೈಗಾರಿಕೆಗಳನ್ನೂ ಅದು ಪ್ರೋತ್ಸಾಹಿಸುತ್ತದೆ. ಆದರೆ, ಅದೇ ಸಮಯದಲ್ಲಿ ಅಭಿವೃದ್ಧಿಯ ಬೆನ್ನೆಲುಬಿನಂತಿರುವ ಮೂಲ ಕೈಗಾರಿಕೆಗಳನ್ನು ನೆಲೆಗೊಳಿಸಲೂ ಸರಕಾರ ನೋಡಿದೆ. ಪ್ರಜೆಗಳ ಸಂಪೂರ್ಣ ಶಕ್ತಿಯು ರಾಷ್ಟ್ರದ ಮನಾರಚನೆಯಲ್ಲಿ ವಿನಿಯೋಗವಾಗುವಂತೆ ಅದು ಅನೇಕ ಉಪಾಯಗಳನ್ನು ಹೂಡಿದೆ ಸರಕಾರವೂ ಬಾಸಗಿ ಪಲಯಗಳೂ ಕೈಕೊಳ್ಳುವ ಕಾರ್ಯಕ್ರಮಗಳ ಹೊರತಾಗಿ ಸ್ವತಃ ಪ್ರಜೆಗಳು ಸ್ವೇಚ್ಛೆಯಿಂದ ಮತ್ತು ಸ್ವಂತ ಸಹಾಯದ ತತ್ವಕ್ಕೆ ಅನುಗುಣವಾಗಿ ಯಾವ್ಯಾವ ಅಭಿವೃದ್ಧಿ ಕಾರ್ಯಗಳನ್ನು ನಡೆಸಬಲ್ಲರು ಎಂಬ ವಿಷಯದ ಕಡೆಗೆ ಸರಕಾರ ಗಮನವನ್ನು ಸೆಳೆದಿದೆ. ಕಳೆದ ಎಂಟು ವರ್ಷಗಳಲ್ಲಿ ನಾವು ಆಹಾರದ ಕೊರತೆಯನ್ನು ಸಂಪೂರ್ಣ ನಿವಾರಿಸಿಕೊಂಡಿದ್ದೇವೆ, ಕಳೆದ ವರ್ಷ ಆಹಾರ ನಿಯಂತ್ರಣಗಳನ್ನು ಸರಕಾರ ರದ್ದು ಪಡಿಸಲು ಸಮರ್ಥವಾಯಿತು. ಬೆಲೆಗಳು ಇಳಿಮುಖವಾಗಿ ಮಧ್ಯಮ ವರ್ಗದವರಿಗಿದ್ದ ಕಷ್ಟಗಳು ನಿಧಾನವಾಗಿ ಕಡಿಮೆಯಾಗುತ್ತಿವೆ. ದೇಶದ ಯಾವ ಹಳ್ಳಿಯನ್ನೆ ನೋಡಲಿ-ಅಲ್ಲಿ, ಅಥವಾ ಅಮಾಸಿನಲ್ಲಿ, ಬಂದಲ್ಲಿದ್ದರೆಂದು ಜನೋಪಯೋಗಿ ಕೆಲಸ ನಡೆದಿರುವುದು ಕಂಡುಬರುತ್ತದೆ ಸ್ವಾತಂತ್ರ್ಯದ ಎಂಟುವರ್ಷಗಳಲ್ಲಿ ಏನೂ ಆಗಿಲ್ಲವೆಂದು ಟೀಕಿಸುವವರು ಎಂಟುವರ್ಷಗಳ ಹಿಂದೆ ಇದ್ದ ಭಾರತವನ್ನು ಇಂದಿನ ಭಾರತದೊಡನೆ ತೂಗಿನೋಡಲಿ—ಎಷ್ಟೋ ಹೊಸ ರಾಲೆಗಳು, ಬಸ್ತೆಗಳು, ಸಂಕಗಳು, ಆಸ್ಪತ್ರೆಗಳು ರಚಿಸಲ್ಪಟ್ಟುದನ್ನು, ವಿದ್ಯುಚ್ಛಕ್ತಿಯ ವಿಸ್ತರಣೆಯಾಗಿರುವುದನ್ನು, ವ್ಯವಸಾಯದಲ್ಲಿ ಸಂಘಾಧಿತ ಕ್ರಮಗಳು ಅನುಸರಿಸಲ್ಪಟ್ಟಿರುವುದನ್ನು ಅವರು ಆಗ ಕಾಣಬಲ್ಲರು. ನಾವು ಸಾಧಿಸಿದ ಪ್ರಗತಿ ಸಾಲದೆಂದು ತೋರಬಹುದು—ಹಾಗೆ ಅತೃಪ್ತರಾಗಿದ್ದರೆಯೇ ಪ್ರಗತಿಗೆ ಪ್ರೋತ್ಸಾಹ ಸಿಗುತ್ತದೆ. ನಮಗೆ ಈಗಿಗಿಂತಲೂ ಉತ್ತಮ ಜೀವನವನ್ನು ನಿರ್ವಹಿಸುವುದು ಸಾಧ್ಯವಾಗಬೇಕೆಂಬ ಅಭಿಲಾಷೆಯೇ ನಮ್ಮಿಂದ ಅಭಿವೃದ್ಧಿ ಪ್ರಯತ್ನಗಳನ್ನು ಮಾಡಿಸುತ್ತದೆ. ಪ್ರಗತಿಯ ಸೋಪಾನಗಳನ್ನು ನಾವು ಏರುವಂತೆ ಅದು ನೋಡುತ್ತದೆ. ಆದುದರಿಂದ ನಾವು ನಿರಾಶೆಯ ಸೋಗನ್ನು ಹಾಕಿಕೊಳ್ಳಬಾರದು; ಉದಾಸೀನತೆಯ ಮುಖವಾಡವನ್ನೂ ಧರಿಸಲಾಗದು. ಎಂಟು ವರ್ಷಗಳ ಸ್ವಾತಂತ್ರ್ಯದ ಅನುಭವ ನಮ್ಮನ್ನು ನಾವೇ ಅಳಿಕೊಳ್ಳಬಲ್ಲ ವಿದ್ಯಾಸವನ್ನು ದೃಢವಾಗಿಸಿದೆ; ನಮ್ಮ ಕೈಕಾಲುಗಳ ಶಕ್ತಿಯನ್ನು ಹೆಚ್ಚಿಸಿದೆ; ನಮ್ಮ ಮಿತ್ರರ ಬಳಗವನ್ನು ವಿಸ್ತರಿಸಿದೆ— ಇದಕ್ಕೆ ಕಾರಣವಾದ ಧೋರಣೆಗಳನ್ನು ಮುಂದಕ್ಕೂ ನಾವು ಅನುಸರಿಸಿದರೆ, ಅದರಿಂದ ಇನ್ನೂ ಹೆಚ್ಚಿನ ಶ್ರೇಯಸ್ಸು ದೊರಕಬಲ್ಲದು. ಒಂಭತ್ತನೇ ವರ್ಷದಲ್ಲಿ ಪ್ರವೇಶಿಸುತ್ತಿರುವ ನಾವು ಒಳ್ಳೆಯ ತತ್ವಗಳ ನೆರಳನಲ್ಲೆ ಮುನ್ನಡೆಯುವೆವೆಂದು ಪ್ರತಿಜ್ಞೆ ಮಾಡೋಣ! ಹೀಗೆ ಕಲ್ಯಾಣ ರಾಷ್ಟ್ರವನ್ನು ಕಟ್ಟಲು ಹಾಗು ಸಮಾಜವಾದಿ ಮಾದರಿಯ ಸಮಾಜ ರಚಿಸಲು ಸರಕಾರ ಕೈಗೊಂಡಿರುವ ನಿರ್ಧಾರದೊಡನೆ ಸಹಕರಿಸೋಣ!

ವೈದ್ಯಕೀಯ ಪ್ರದರ್ಶನ



ಡಾ। ಟಿ. ಮಾಧವ ಪೈ

ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನಲ್ಲಿ ತಾ. 13, 14, 15 ಮತ್ತು 16ನೇ ದಿನಗಳಲ್ಲಿ ಶೈಕ್ಷಣಿಕ ಮಹತ್ವದ ವೈದ್ಯಕೀಯ ಪ್ರದರ್ಶನವೊಂದನ್ನು ಕಾಲೇಜು ಸಂಘದವರು ಏರ್ಪಡಿಸಿದ್ದರು. ಇದರ ಉದ್ಘಾಟನೆಯನ್ನು ಬೆಲ್ಲಿಯ ವೈದ್ಯಕೀಯ ಅಧಿಕಾರಿಗಳಾದ ಡಾ. ಯು. ಮಾರುತಿರಾಯರು ತಾ. 13ರಂದು ಮಾಡುತ್ತಾ, ಈ ಬಗೆಯ ಪ್ರದರ್ಶನಗಳನ್ನು ವರ್ಷಕ್ಕೊಮ್ಮೆಯಾದರೂ ಏರ್ಪಡಿಸಿದರೆ ಜನರಲ್ಲಿ ತಿಳಿವಳಿಕೆ ಹೆಚ್ಚುವುದು ಎಂದರು.

ದ್ವಿತೀಯ ಯೋಜನೆಯ ಅವಧಿಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ನಡೆಯಲಿರುವ ಅಭಿವೃದ್ಧಿಯನ್ನು ಪ್ರಸ್ತಾಪಿಸುತ್ತಾ ಡಾ. ಮಾರುತಿರಾಯರು ಪ್ರತಿಯೊಂದೂ ಜಿಲ್ಲಾ ಕೇಂದ್ರದಲ್ಲಿ ತಜ್ಞ ವೈದ್ಯರನ್ನು ನೆಲೆಗೊಳಿಸಲಾಗುವುದೆಂದೂ ಉತ್ತಮ ಶಸ್ತ್ರೋಪಕರಣಗಳನ್ನು ಒದಗಿಸಲಾಗುವುದೆಂದೂ ಹೇಳಿದರು. ವಿಶೇಷ ರೋಗಗಳಿಗೆ ಉತ್ತಮ ಚಿಕಿತ್ಸೆಯ ವ್ಯವಸ್ಥೆ, ಸಂಚಾರಿ ವಾಹನಗಳ ಅನುಕೂಲತೆ, ಔಷಧಿಗಾಗಿ ಬಹ ಸೈಲುಗಿಂತ ಹೆಚ್ಚು ನಡೆಯ ಬೇಕಾಗದಂತೆ ಹೊಸ ಆಸ್ಪತ್ರೆಗಳ ರಚನೆ ಆಗುವುದೆಂದರು.

ಕಾಲೇಜಿನ ರಿಜಿಸ್ಟ್ರಾರರಾದ ಡಾ. ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿ ಜನರು ಆರೋಗ್ಯಕರವಾದ ಜೀವನವನ್ನು ನಿರ್ವಹಿಸುವುದಕ್ಕೆ ತಕ್ಕ ಮಾರ್ಗ ದರ್ಶನ ಈ ಪ್ರದರ್ಶನದಿಂದ ದೊರಕುತ್ತದೆಂದೂ ದೇಹದೊಳಗಿನ ಅವಯವಗಳ ಮತ್ತು ಅವುಗಳ ಚಟುವಟಿಕೆಗಳ ಕುರಿತಾದ ವಿಚಿತ್ರ ಕಲ್ಪನೆಗಳ ಸ್ಥಾನವನ್ನು ಅಮೂಲ್ಯ ಜ್ಞಾನ ಆಕ್ರಮಿಸುವುದಕ್ಕೆ ಇಂಥ ಪ್ರದರ್ಶನದಿಂದ ನೆರವು ಸಿಗುವುದೆಂದೂ ಹೇಳಿದರು. ಮಹಾಜನರು ಹಾಗು ಶೈಕ್ಷಣಿಕ ಸಂಸ್ಥೆಗಳ ವಿದ್ಯಾರ್ಥಿಗಳು ಇದರ ಸಂಪೂರ್ಣ ಪ್ರಯೋಜನ ಪಡೆಯುವರೆಂಬ ಆಶೆಯನ್ನು ಅವರು ವ್ಯಕ್ತಪಡಿಸಿದರು.

ಕಾಲೇಜು ಸಂಘದ ಅಧ್ಯಕ್ಷ ಶ್ರೀ ವಿ. ಜೆ. ವರ್ಗೀಸರು ಧನ್ಯವಾದವಿತ್ತ ಬಳಿಕ, ಅತಿಥಿಗಳನ್ನು ಪ್ರದರ್ಶನದ ಸುತ್ತ ಕರೆದೊಯ್ಯಲಾಯಿತು. ಡಾ. ಮಾಧವ ಪೈಗಳು ತಾ. 12ರಂದು ಉಡುಪಿಯ ಪತ್ರಿಕೋದ್ಯಮಿಗಳನ್ನು ಬರಮಾಡಿಕೊಂಡು ಈ ಪ್ರದರ್ಶನದ ಉದ್ದೇಶವನ್ನು ವಿವರಿಸಿ, ಪ್ರದರ್ಶನದ ಎಲ್ಲ ವಿಭಾಗಗಳನ್ನೂ ಸ್ವತಃ ತೋರಿಸಿದ್ದರು.

ಪ್ರದರ್ಶನವು ನಿಜಕ್ಕೂ ಭವ್ಯವಾಗಿದ್ದಿತು, ಸುಸಜ್ಜಿತವಾಗಿತ್ತಲ್ಲದೆ, ಬೋಧಪ್ರದವಾಗುವಂತೆ ಎಲ್ಲ ಪ್ರಯತ್ನಗಳನ್ನೂ ಸಂಬಂಧಿಸಿದವರು ನಡೆಸಿದ್ದರು. ದೇಹದ ಪ್ರತಿಯೊಂದು ಅವಯವವನ್ನೂ ಬೇರೆ ಬೇರೆಯಾಗಿ ಇಟ್ಟು ಅದರ ರಚನೆ ಮತ್ತು ಕ್ರಿಯೆಗಳನ್ನು ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ಜೆನ್ನಾಗಿ ವಿವರಿಸುತ್ತಿದ್ದರು. ಅನೇಕ ನಕ್ಷೆ ಮತ್ತು ಚಿತ್ರಗಳನ್ನು ತೂಗಿಸಿ, ಇತರ ವಿವರಗಳ ಮಾಹಿತಿಯನ್ನು ಒದಗಿಸಿದ್ದರು. ಕಾಲೇಜಿನ ವಿದ್ಯಾರ್ಥಿಗಳು ಕಲಿಯುವುದಕ್ಕೆ ಉಪಯೋಗಿಸುವ ಆಧುನಿಕ ಯಾಂತ್ರಿಕ ಸಲಕರಣೆಗಳಿಂದ ಏನು ಪ್ರಯೋಜನವೆಂಬುದನ್ನು ಪ್ರತ್ಯಕ್ಷ ತೋರಿಸುತ್ತಿದ್ದರು. ಆರೋಗ್ಯ ಪರೀಕ್ಷೆಯ ವ್ಯವಸ್ಥೆಯನ್ನೂ ಮಾಡಿದ್ದರು. ರೋಗ ನಿರೋಧ, ಗರ್ಭಿಣಿ ಮತ್ತು ಶಿಶುಗಳ ಪೋಷಣೆ, ಕುಟುಂಬ ಯೋಜನೆ ಮುಂತಾದುವಕ್ಕೆ ಸಂಬಂಧಿಸಿದ ವಿಶೇಷ ವಿಭಾಗಗಳು ಪ್ರದರ್ಶನದ ವೈಶಿಷ್ಟ್ಯ.

ಒಳ್ಳೆ ಅಚ್ಚುಕಟ್ಟನ್ನು ಪ್ರದರ್ಶನ ವ್ಯಕ್ತಪಡಿಸಿತು. ಒಂದೆಡೆ ಉರಗ ಸಂತಾನದಿಂದ ಮಾನವನ ವರೆಗೆ ಹೇಗೆ ಜೀವವಿಕಾಸ ನಡೆಯುತೆಂದು ಅಸ್ಥಿಪಂಜರಗಳ ಮೂಲಕ ತೋರಿಸಿದ್ದರು. ಗರ್ಭಕೋಶದ ರಚನೆ ಮತ್ತು ಭ್ರೂಣದ ಅಭಿವೃದ್ಧಿಯ ಬೇರೆ ಬೇರೆ ಹಂತಗಳನ್ನು ಇನ್ನೊಂದೆಡೆ ತೋರಿಸಿದ್ದರು. ಶ್ವಾಸಕೋಶ, ಮೂತ್ರಾಶಯ ಇತ್ಯಾದಿಗಳ ಮಾದರಿಗಳನ್ನಿಟ್ಟು ಕೆಲಸದ ಮಾಹಿತಿ ಕೊಡುತ್ತಿದ್ದರು. ಕಣ್ಣಿನ ದೋಷರಕ್ತ ಪೂರಣ ಕ್ರಮ ಇತ್ಯಾದಿಗಳ ಕುರಿತು ತಿಳಿವಳಿಕೆ

೨೯ ನಿಶ್ಶಸ್ತ್ರ ಸತ್ಯಾಗ್ರಹಿಗಳ ಬಲಿ

ಪೋರ್ಚುಗೀಸರ ಅನಾಗರಿಕ ವರ್ತನೆಯ ಖಂಡನೆ

ಆಗೋಸ್ತು ೧೫ — ಭಾರತವು ಸ್ವಾತಂತ್ರ್ಯದ ವರ್ಧಂತಿಯನ್ನು ಆಚರಿಸುತ್ತಿದ್ದಾಗ, ಗೋವೆಯ ವಸಾಹತಿನಲ್ಲಿ ಪೋರ್ಚುಗೀಸರ ಅನಾಗರಿಕ ಹಾಗು ಪಾಶವಿಕ ವರ್ತನೆಗಳ ಪರಿಣಾಮವಾಗಿ ಭಾರತದಿಂದ ಸೋಗಿದ್ದ ೨೯ ನಿಶ್ಶಸ್ತ್ರ ಸತ್ಯಾಗ್ರಹಿಗಳು ಗುಂಡಿನೇಟಿನ್ನು ಎದುರಿಸಿ ಹುತಾತ್ಮರಾದರು! ಇವರಲ್ಲದೆ ಸುಮಾರು ೧೫ ಸತ್ಯಾಗ್ರಹಿಗಳು ಗುಂಡಿನೇಟಿನ ಸಂಕಟದಿಂದ ನರಳುತ್ತಿದ್ದಾರೆಂದೂ ಬೇರೆ ನೂರಾರು ಸತ್ಯಾಗ್ರಹಿಗಳು ಪೋರ್ಚುಗೀಸರ ಹೊಡೆತ ಮತ್ತು ಚಿತ್ರ ಹಿಂಸೆಯಿಂದ ನುಗ್ಗಾಗಿರುವರೆಂದೂ ತಿಳಿದು ಬರುತ್ತದೆ.

ಸತ್ಯಾಗ್ರಹಿಗಳ ಪ್ರಗತಿ

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಿಂದ ತೆರಳಿದ್ದ ಸತ್ಯಾಗ್ರಹಿಗಳಲ್ಲಿ ಇಬ್ಬರಿಗೆ ಸ್ವಲ್ಪ ಪುಟ್ಟನ ಜಖಂ ಆಗಿದೆಯೆಂದೂ ಅವರು ಕಾರವಾರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದೂ ತಿಳಿದು ಬರುತ್ತದೆ ಉಳಿದ ಸತ್ಯಾಗ್ರಹಿಗಳು ಪೋರ್ಚುಗೀಸರ ಮರ್ದನ ಮತ್ತು ಹಿಂಸೆಗೆ ಗುರಿಯಾಗಿದ್ದಾರೆ; ಆದರೆ ಪ್ರಾಣಾಪಾಯವಿಲ್ಲದೆ ಸುರಕ್ಷಿತವಾಗಿದ್ದಾರೆ ಎಂದು ವರದಿಗಳು ಹೇಳುತ್ತವೆ. ಜಿಲ್ಲೆಯ ಪ್ರಜಾಸಮಾಜವಾದಿ ಮುಖಂಡ ಹಾಗು ಉಡುಪಿಯ ಗಣ್ಯ ವ್ಯಕ್ತಿ ಶ್ರೀ ಪಾಂಗಾಳ ಉಪೇಂದ್ರ ನಾಯಕರು ಒಂದು ತಂಡದ ಧುರೀಣರಾಗಿ ಒಳಗೆ ಹೋಗಿದ್ದಾರೆಂದು ಗೊತ್ತಾಗುತ್ತದೆ.

ನ್ಯಾಯ ವಿರುದ್ಧ ಅತ್ಯಾಚಾರ

ಅಂತಾರಾಷ್ಟ್ರೀಯ ನ್ಯಾಯ ಮತ್ತು ಶಾಸನಕ್ಕೆ ತೀರ ವಿರುದ್ಧವಾದ ಪೈಶಾಚಿಕ ಕೃತ್ಯಗಳನ್ನು ನಿಶ್ಶಸ್ತ್ರ ಸತ್ಯಾಗ್ರಹಿಗಳ ಪ್ರಗತಿಯನ್ನು ತಡೆಯಲು ಪೋರ್ಚುಗೀಸರು ಅನುಸರಿಸಿದುದಕ್ಕೆ ಲೋಕದ ಉತ್ತರವೇನು? ಎಂದು ಪ್ರಜಾಪ್ರತಿನಿಧಿಗಳು ಜಗತ್ತಿನ ನಯ ವಿದರನ್ನು ಕೇಳಿದ್ದಾರೆ. ಲೋಕ ಸಭೆಯಲ್ಲಿ ಅವರು ಒಂದು ಹೇಳಿಕೆಯನ್ನು ಕೊಟ್ಟು ಪೋರ್ಚುಗೀಸರ ಧಲನೆ ಎಷ್ಟೇ ಇರಲಿ, ಸತ್ಯಾಗ್ರಹ ಮುಂದೊತ್ತಲ್ಪಡುವ ಲಕ್ಷಣ ತೋರಿ ಬರುತ್ತಿದೆಯೆಂದೂ ಗೋವೆಯ ವಸಾಹತು ಭಾರತದೊಡನೆ ವಿಲೀನ ಹೊಂದುವ ವರೆಗೆ ಸತ್ಯಾಗ್ರಹ ನಡೆಯಬಹುದೆಂದೂ ತಿಳಿಸಿದ್ದಾರೆ.

ಹುತಾತ್ಮರಿಗೆ ಶ್ರದ್ಧಾಂಜಲಿ

ಲೋಕ ಸಭೆ ಮತ್ತು ರಾಜ್ಯ ಸಭೆಗಳಲ್ಲಿ ಸಭಾ ನಾಯಕರೂ ಸಭಾಧ್ಯಕ್ಷರೂ ಪೋರ್ಚುಗೀಸರ ಗುಂಡಿನೇಟಿಗೆ ಬಲಿಯಾದ ಸತ್ಯಾಗ್ರಹಿಗಳ ಗೌರವಾರ್ಥವಾಗಿ ಎದ್ದು ನಿಂತು ಪ್ರಾರ್ಥನೆ ಸಲ್ಲಿಸುವಂತೆ ಸದಸ್ಯರನ್ನು ಭಿನ್ನವಿಸಿಕೊಂಡರಲ್ಲದೆ, ಸಭೆಯನ್ನು ಅರ್ಧ ತಾಸು ಮುಂದರಿಸಿದರು ದೇಶದ ಎಲ್ಲಾ ಭಾಗಗಳಲ್ಲೂ ಹರತಾಳದಂಥ ಕ್ರಮಗಳಿಂದ ಪೋರ್ಚುಗೀಸರ ಬರ್ಬರ ವರ್ತನೆಗೆ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಯಿತು.

"ಶಾಂತ ವಿಧಾನ ತೊರೆಯೊಪ್ಪು

ಭಾರತ ಸರಕಾರದ ಖಂಡನೆಯು ಎಷ್ಟೇ ಉಗ್ರಸ್ವರೂಪದ್ದಿರಲಿ, ಶಾಂತ ವಿಧಾನವನ್ನು ಮಾತ್ರ ತೊರೆಯಲಾಗುವುದಿಲ್ಲ ಎಂದು ನೆಹರು ಪುನಃ ಪ್ರಕಟಪಡಿಸಿದ್ದಾರೆ. ನಮ್ಮನ್ನು ನ್ಯಾಯವಾದ ನಿಲುಮೆಗೆ ತಪ್ಪಿ ನಡೆಯುವಂತೆ ಒತ್ತಾಯಪಡಿಸಲಾಗುತ್ತದೆ; ಪೋರ್ಚುಗೀಸರು ನಾವು ಕಾಲುಜಾರುವುದನ್ನೇ ಕಾಯುತ್ತಿದ್ದಾರೆ—ಆದರೆ ನಾವೆಂದಿಗೂ ಶಾಂತ ವಿಧಾನವನ್ನು ಬಿಟ್ಟುಗೊಟ್ಟು ಸೈನ್ಯ ಶಕ್ತಿಯನ್ನು ಗೋವೆಯ ವಿಮೋಚನೆಗಾಗಿ ಉಪಯೋಗಿಸುವುದಿಲ್ಲ ಎಂದವರು ಹೇಳಿದ್ದಾರೆ. ಗೋವೆಯು ನೋಡಲಿಕ್ಕೆ ಸಣ್ಣ ಪ್ರದೇಶ; ಆದರೆ ಅದರೊಡನೆ ವ್ಯವಹರಿಸುವಂಗ ಜಟಿಲವಾದ ಅಂತಾರಾಷ್ಟ್ರೀಯ ಸಮಸ್ಯೆಗಳು ಇದಿರಾಗುತ್ತಿರುವುದರಿಂದ ಶಾಂತ ವಿಧಾನದ ಹೊರತು ಬೇರಾವುದರಿಂದಲೂ ಇಚ್ಛಿತ ಫಲಿತಾಂಶ ಸಿಗಲಾರದು ಎಂದು ನೆಹರು ತಮ್ಮ ನಿಲುಮೆಯ ಗುಟ್ಟನ್ನು ಹೊರಗೆಡವಿದ್ದಾರೆ.

———

ಹುಟ್ಟಿಸುತ್ತಿದ್ದರು. ಐದು ವರ್ಷಗಳ ಬಳಿಕ ಮಣಿಪಾಳ ಹೇಗಿರುವುದೆಂಬುದರ ನಕ್ಷೆಯನ್ನು ರಂಗೋಲೆಯ ಮೂಲಕ ಬರೆದಿದ್ದರು; ಕಾಲೇಜು ವಿದ್ಯಾರ್ಥಿನಿಯು ರಂಗೋಲೆಯಿಂದ ಬರೆದಿದ್ದ ಗಾಂಧೀಜಿಯ ಚಿತ್ರ ಬಹಳ ಆಕರ್ಷಕವಾಗಿದ್ದಿತು. ಉಪಾಹಾರದ ವ್ಯವಸ್ಥೆ ಒಂದೆಡೆ ಇತ್ತು—ಅದರ ದ್ವಾರದಲ್ಲಿ ತಿಂದ ಆಹಾರ ಜೀರ್ಣವಾಗುವ ವಿಚಿತ್ರವನ್ನು ತೋರಿಸುವ ಮಾದರಿಯನ್ನು ಇಟ್ಟಿದ್ದರು!

ವೈದ್ಯಕೀಯ ಮಹತ್ವದ ಚಿಲಚ್ಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು. ಅಂತೂ ಒಮ್ಮೆ ಸುತ್ತಾಡಿಬಂದಾಗ, ಅನುಭವ ಬಹಳಷ್ಟು ಹೆಚ್ಚಿಕೊಂಡು ಅಜ್ಞಾನ ಮತ್ತು ಹುಟ್ಟು ಕಲ್ಪನೆಗಳು ದೂರವಾಗುವಂತೆ ಈ ವೈದ್ಯಕೀಯ ಪ್ರದರ್ಶನ ವಿತ್ತೆಂದರೆ ತಪ್ಪಲ್ಲ. ಉಡುಪಿ ಮತ್ತು ಅಸುಪಾಸಿನವರಷ್ಟೆಯಲ್ಲ, ಜಿಲ್ಲೆಯ ಬೇರೆ ಬೇರೆ ಬಾಗಗಳಿಂದಲೂ ಜನರು ಬಂದು ಪ್ರದರ್ಶನದ ಪ್ರಯೋಜನವನ್ನು ಪಡೆದುಕೊಂಡುದು ಸ್ತುತ್ಯ.

———

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಸಂಶದಿಂದ ಪ್ರಶಂಸಿಸಲ್ಪಟ್ಟ

ಉಡುಪಿ ಬಂಗಾರ

(ಒಡೆಯರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್‌ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

TYPES & MACHINERY FOR THE PRINTING & ALLIED TRADES



ROTARY CUTTING MACHINE
18" size Rs. 800/-
24" ,, Rs. 1100/-

CAN BE HAD OF

NORTON & CO.,

1-16, BAKER THIRUVENGADA MUDALI ST.,

CHOOLAI, MADRAS, 7.

Phone. 3001 'Grams: CLEANTYPES

Write today for our Free Catalogue.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವನ ವಿಮೆಗಾಗಲೀ, ವ್ಯಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಬಾಬಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಪ್ರಾಚೀನ ಭಾರತದಲ್ಲಿ ಕಲ್ಯಾಣ ರಾಷ್ಟ್ರದ ಸ್ವರೂಪ

(೧೧ನೇ ಪುಟದಿಂದ)

ಕೊಡುತ್ತಿದ್ದನು. ಪ್ರಜೆ ಎಂದರೆ ಮಕ್ಕಳು; ನೃಪ ಎಂದರೆ ಆ ಮಕ್ಕಳ ತಂದೆ ಎಂಬ ಸಂಸ್ಕೃತ ಅರ್ಥವು ಅಶೋಕನ ಆಳಿಕೆ ಕಾಲಕ್ಕೆ ಚೆನ್ನಾಗಿ ಒಪ್ಪುತ್ತದೆ. "ಪ್ರಜೆಗಳ ಕಲ್ಯಾಣವೇ ಅರಸನ ಕಲ್ಯಾಣ; ಅವರ ಹಿತಕ್ಕಾಗಿ ಇರುವುದೆಲ್ಲ ಅರಸನ ಹಿತಕ್ಕಾಗಿಯೇ ಎಂದು ಭಾವಿಸಬೇಕಾದದ್ದು ಕರ್ತವ್ಯ; ಅರಸನಿಗೆ ಸ್ವಾರ್ಥವೆಂಬುದಿಲ್ಲವೇ ಇಲ್ಲ" ಎಂಬ ಚಾಣಕ್ಯನ ನಿರ್ದೇಶನದಂತೆ ಅಶೋಕನು ನಡೆಯುತ್ತಿದ್ದನು.

ಈ ತನ್ನ ಕಲ್ಯಾಣ ರಾಷ್ಟ್ರದ ಧೋರಣೆಯನ್ನು ಕಾರ್ಯರೂಪದಲ್ಲಿ ಇಳಿಸಲು ಅಶೋಕನು ಸಾಕಷ್ಟು ಜಾಗರೂಕತೆಯನ್ನು ವಹಿಸಿದ್ದನು. ಅರಸನು ಎಷ್ಟೇ ಸದುದ್ದೇಶದಿಂದ ಕೊಡಿರಲಿ, ಅವನ ಪರವಾಗಿ ಅಧಿಕಾರವನ್ನು ಪ್ರಜೆಗಳ ಮಧ್ಯದಲ್ಲಿ ಅವರ ನಿತ್ಯ ವ್ಯವಹಾರದಲ್ಲಿ ನಡೆಸುವ ನೌಕರ ವರ್ಗ ಸುಧಾರಿಸದಿದ್ದರೆ, ಯಾವ ಪ್ರಯೋಜನವೂ ಸಿಗಲಾರದು. ಆದುದರಿಂದ ಕಲ್ಯಾಣರಾಷ್ಟ್ರದ ಉದ್ದೇಶಕ್ಕೆ ಅನುಗುಣವಾಗಿ ಆಡಳಿತವು ರೂಪುಗೊಳ್ಳಬೇಕಾದರೆ ಸೇವೆಯ ಮನೋಭಾವ ಮತ್ತು ನಿಸ್ವಾರ್ಥ ಬುದ್ಧಿಯು ಬಲಿತಿರುವವರನ್ನೆ ಅಧಿಕಾರ ಸ್ಥಾನಕ್ಕೆ ಏರಿಸುವುದು ಮತ್ತು ಇತರರ ಕೈಗೆ ರಾಜ್ಯಸೂತ್ರ ಜಾರಿ ಹೋಗದಂತೆ ನೋಡಿಕೊಳ್ಳುವುದು ಅಪೇಕ್ಷಣೀಯ. ಅಶೋಕನು ತನ್ನ ಅಧಿಕಾರಿಗಳ ಅಭಿಪ್ರಾಯವು ಹಂಬದಕ್ಷತೆಯನ್ನು ತೋರಿಸುತ್ತಿದ್ದನೆಂದೂ ಕಾಲಕಾಲಕ್ಕೆ ಅವರಿಗೆ ಎಚ್ಚರಿಕೆಯನ್ನು ಕೊಟ್ಟು, ಅವರಲ್ಲಿ ಕರ್ತವ್ಯ ಪಾಲನೆಯ ಸಂಕಲ್ಪವನ್ನು ಜಾಗೃತಗೊಳಿಸುತ್ತಿದ್ದನೆಂದೂ ಶಾಸನಗಳಿಂದ ಗೊತ್ತಾಗುತ್ತದೆ. "ನಿಮ್ಮ ಮೇಲೆ ಸಾವಿರಾರು ಪ್ರಜೆಗಳ ಕ್ಷೇಮಾಭಿವೃದ್ಧಿಯ ಭಾರ ಬಿದ್ದಿರುತ್ತದೆ. ನೀವು ಜನರ ಪ್ರೀತಿಯನ್ನು ಸಂಪಾದಿಸಬೇಕು. ಪ್ರಜೆಗಳೆಂದರೆ ಮಕ್ಕಳು" ಎಂದು ಅಶೋಕನು ಬೋಧಿಸುತ್ತಿದ್ದನು.

ಅಧಿಕಾರಿಗಳನ್ನು ಪ್ರಾದೇಶಿಕರು, ರಜ್ಜುಕರು, ಯುಕ್ತರು ಮತ್ತು ರಾಷ್ಟ್ರೀಕರು ಎಂಬ ನಾಲ್ಕು ವರ್ಗಗಳಲ್ಲಿ ಅಶೋಕನು ವಿಂಗಡಿಸಿದ್ದನು. ಇವರಲ್ಲಿ ರಜ್ಜುಕರು ಈಗಿನ ಜಿಲ್ಲಾಧಿಕಾರಿಗಳ ಸ್ಥಾನಮಾನಗಳುಳ್ಳವರಾಗಿದ್ದರು. ಎಲ್ಲರೂ ಅವರವರ ಹೊಣೆಗಾರಿಕೆಯನ್ನು ವ್ಯತ್ಯಯವಿಲ್ಲದೆ ನಿರ್ವಹಿಸಿಕೊಂಡು ಹೋಗಬೇಕೆನ್ನುತ್ತ ಅಶೋಕನು "ರಜ್ಜುಕರು ಸ್ವಾರ್ಥಕ್ಕೆ ಬಲಿ ಬೀಳದೆ, ಅಂಜಿಕೆಗೆ ಆಸ್ಪದವಾಗದೆ, ಪ್ರಜೆಗಳ ಸುಖ ಸಮೃದ್ಧಿ ಮಾಡುವ ಕಲ್ಯಾಣ ಕಾರ್ಯಗಳಲ್ಲಿ ನಿರತರಾಗಲಿ; ಪ್ರಜೆಗಳನ್ನು ಕರುಣೆಯಿಂದ ನೋಡಿಕೊಳ್ಳಲಿ; ತಮ್ಮ ಕರ್ತವ್ಯವನ್ನು ಹೃತ್ಪೂರ್ವಕವಾಗಿ ನಿಷ್ಠೆಯಿಂದ ನಿರ್ವಹಿಸಲಿ!" ಎಂದು ಆದೇಶಿಸಿದ್ದಾನೆ. "ತಂದೆಯು ತನ್ನ ಮಗುವನ್ನು ಬುದ್ಧಿವಂತಳಾದ ತಾಯಿಯ ವಗಕ್ಕೆ ಒಪ್ಪಿಸಿಕೊಡುವಂತೆ ಮತ್ತು ಅವಳು ಅದನ್ನು ಆರೋಗ್ಯಕರವಾಗಿಯೂ ಪ್ರೀತಿಯಿಂದಲೂ ಸಂರಕ್ಷಿಸುವಳೆಂದು ನಂಬಿರುವಂತೆ, ನಾನು ರಜ್ಜುಕರೇ ಮುಂತಾದ ಶ್ರೇಷ್ಠ ಅಧಿಕಾರಿಗಳ ಕೈಗೆ ಪ್ರಜೆಗಳನ್ನು ಒಪ್ಪಿಸಿಕೊಟ್ಟು ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕೆಂದು ಸ್ಪಷ್ಟ ಪಡಿಸಿದ್ದೇನೆ." ಎಂದು ಅಶೋಕನು ನಿವರಿಸಿದ್ದಾನೆ. ಇಷ್ಟು ಉತ್ತಮ ಮನಸ್ಸಿನ, ಸ್ವಾಮಾಣಿಕ ವ್ಯಕ್ತಿತ್ವದ ಅರಸನ ಅಧಿಕಾರಿಗಳು ಕರ್ತವ್ಯ ಪರಾಙ್ಮುಖರೂ ಸ್ವಾರ್ಥಿಗಳೂ ಕ್ರೂರಿಗಳೂ ಆಗಿದ್ದರೆ ಪ್ರಜೆಗಳಿಗೆ ಏನು ಸುಖ ದೊರಕೀತು? ಅಶೋಕನು ಸರಕಾರದ ಆಡಳಿತ ವರ್ಗದಲ್ಲಿ ನೈರ್ಮಲ್ಯಕ್ಕೆ ಮಹತ್ವವಿರಬೇಕೆಂದು ಮನಗಂಡಿದ್ದನು; ಅದನ್ನು ರಕ್ಷಿಸಲು ಸದಾ ಎಚ್ಚರದಲ್ಲಿರುತ್ತಿದ್ದನು!

ಜನರೊಡನೆ ನೇರವಾದ ಸಂಪರ್ಕವನ್ನು ಬೆಳೆಸಿಕೊಂಡು ಅವರ ಆವಶ್ಯಕತೆಗಳನ್ನು ತಿಳಿದುಕೊಂಡು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಅಶೋಕನು ಅಧಿಕಾರಿಗಳಿಗೆ ಅಪ್ಪಣೆಮಾಡಿದ್ದನು. ಅಷ್ಟೇಯಲ್ಲದೆ, ತಾನು ಸ್ವತಃ ವರ್ಷದಲ್ಲಿ ೨೫೬ ದಿನಗಳ ಕಾಲ ದೇಶದಾದ್ಯಂತ ಸಂಚಾರವನ್ನು ಕೈಗೊಂಡು ಕಲ್ಯಾಣ ಕಾರ್ಯಗಳ ಪ್ರಗತಿಯನ್ನು ನಿರೀಕ್ಷಿಸುತ್ತಿದ್ದನು. ಅಧಿಕಾರಿಗಳು ಜನರಿಂದ ಬೇರೆಯಾಗಿ ಕುಳಿತಿರುವುದರಿಂದ ಅವರಲ್ಲಿ ಆಲಸ್ಯ ಮೂಡುವುದೆಂದೂ ಜಡತೆಯು ಕಾಣಿಸುವುದೆಂದೂ ಅಶೋಕನು ನಂಬಿದ್ದನು. ಪ್ರಜೆಗಳ ವಿಶ್ವಾಸವನ್ನು ಪ್ರೀತಿಯಿಂದ ಸಂಪಾದಿಸಿದರೆ ಮಾತ್ರ ಅವರ ಆವಶ್ಯಕತೆಗಳ ಪರಿಚಯಮಾಡಿಕೊಂಡು ಅವನ್ನು ಪೂರೈಸಲು ಸಾಧ್ಯವಾದೀತೆಂಬ ಗುಟ್ಟನ್ನು ಅಶೋಕನು ಚೆನ್ನಾಗಿ ತಿಳಿದಿದ್ದನು.

ಸಾರ್ವಜನಿಕ ವ್ಯವಹಾರದಲ್ಲಿ ಅಧಿಕಾರಿಗಳು ಎರಡು ವಿಶೇಷ ಸಂಗತಿಗಳಿಗೆ ಮಹತ್ವ ನೀಡಬೇಕೆಂದು ಅಶೋಕನು ಆದೇಶಿಸಿದ್ದನು.—ಮೊದಲನೆಯದು, ಶಾಸನದ ದೃಷ್ಟಿಯಿಂದ ಅರಸನ ಮಗನೂ ಸಾಮಾನ್ಯ ಪ್ರಜೆಯೂ ಒಂದೇ ಎಂಬ ಸಮಭಾವ; ಎರಡನೆಯದು, ಅಪರಾಧಿಯ ಸ್ಥಾನಮಾನಗಳೇನೆ ಇರಲಿ, ಅಪರಾಧಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸುವ ಸಮದಂಡ ಭಾವ. ಕಾನೂನುಗಳ ಆನ್ವಯದಲ್ಲಿಯಾಗಲೀ ನ್ಯಾಯದಾನದಲ್ಲಿಯಾಗಲೀ ಯಾವುದೇ ಭೇದ ಭಾವಕ್ಕೆ ಎಡೆ ಸಿಗಬಾರದೆಂದು ಅಶೋಕನ ಬಯಕೆಯಾದ ಅಭಿಪ್ರಾಯ. "ನಿರಪರಾಧಿಗೆ ಯಾವ ತರದ ಕಷ್ಟವೂ ಆಗಕೂಡದು; ಅದರಂತೆ ಅಪರಾಧಿಯು ತಪ್ಪಿಸಿಕೊಂಡು ಹೋಗುವುದಕ್ಕೂ ಎಡೆಸಿಗಕೂಡದು" ಎಂದು ಅವನು ಹೇಳುತ್ತಿದ್ದನು. ಧರ್ಮದ ಕ್ಷೇತ್ರದಲ್ಲಿ ಅಶೋಕನು ಬಹಳ ಉದಾರವಾದ ನೀತಿಯನ್ನು ಅನುಸರಿಸಿದ್ದನು.—ಧರ್ಮಾಚರಣೆಯಲ್ಲಿ ಪ್ರತಿಯೊಬ್ಬರಿಗೂ ಅವನು ಸ್ವಾತಂತ್ರ್ಯವನ್ನು ಕೊಟ್ಟಿದ್ದನು. "ಪ್ರಿಯದರ್ಶಿ ಅಶೋಕನು ಪಾಖಂಡಿಗಳನ್ನೊಳಗೊಂಡು ಎಲ್ಲರಿಗೂ ಕಾಣಿಕೆ ಮೊದಲಾದುವುಗಳನ್ನಿತ್ತು ಮನ್ನಣೆಸಲ್ಲಿಸುತ್ತಿದ್ದನು; ಎಲ್ಲರ ಶ್ರೇಯಸ್ಸನ್ನೂ ಅವನು ಬಯಸುತ್ತಿದ್ದನು."

"ಸಮವಾಯ ಏವ ಸಾಧುಃ" ಎಂಬ ಸೂಕ್ತಿಯಲ್ಲಿ— ಅಂದರೆ ಎಲ್ಲ ಧರ್ಮಗಳ ಸಮನ್ವಯದಲ್ಲಿ— ಅಶೋಕನ ನಿಷ್ಠೆ ಬಹಳ. ಧರ್ಮಸಹಿಷ್ಣುತೆಯನ್ನು ಅವನು ಪ್ರತಿಪಾದಿಸಲು ಇದೇ ಕಾರಣವಾಯಿತು. ತನ್ನ ಧರ್ಮವನ್ನು ಪ್ರತಿಯೊಬ್ಬನೂ ಗೌರವಿಸಿ ಅದರಂತೆ ಆಚರಿಸಬೇಕು; ಆದರೆ ಇನ್ನೊಬ್ಬರ ಧರ್ಮವನ್ನು ಎಷ್ಟಕ್ಕೂ ನಿಂದಿಸಬಾರದು; ಬದಲಿಗೆ ಸಮಯ ಸಂದರ್ಭಗಳನ್ನು ನೋಡಿಕೊಂಡು ಅವರನ್ನು ಆದರಿಂದ ಕಾಣುವುದೇ ಯೋಗ್ಯ ಎಂದು ಅಶೋಕನು ಶಾಸನವನ್ನು ಕೆತ್ತಿಸಿದ್ದನು. ಎಲ್ಲರಿಗೂ ಅವರವರ ಧರ್ಮಾಚರಣೆಯಲ್ಲಿ ಅಶೋಕನು ಸಹಾಯವನ್ನು ಸಲ್ಲಿಸುತ್ತಿದ್ದನು. ರಾಜಕೀಯದಲ್ಲಿ ಧಾರ್ಮಿಕ ಸಹಿಷ್ಣುತೆಯು ನಿಷ್ಕ್ರಿಯ ಪ್ರಧಾನವನ್ನಲ್ಲ— ಸತ್ಯಯುತವಾದ ವರ್ತನೆಯನ್ನು ಬೀರಿ, ಅವನ ಆಡಳಿತವನ್ನು ಬೆಳಗಿಸುತ್ತಿಂದು ಹೇಳಿದರೆ ಅತಿಶಯೋಕ್ತಿಯಾಗದು.

ಪ್ರಾಣಿ ಮಾತ್ರದ ಹಿತವನ್ನೆ ಚಿಂತಿಸುತ್ತಿದ್ದ ಅಶೋಕನು ಮನುಷ್ಯರಿಗೆ ಹೇಗೊಹಾಗೆ ಪ್ರಾಣಿಗಳಿಗೂ ಚಿಕಿತ್ಸೆಯ ವ್ಯವಸ್ಥೆ ಮಾಡಿಸಿದನು; ಪ್ರವಾಸಿಕರಿಗೆಮತ್ತು ದನಕರುಗಳಿಗೆ ನೆರಳಿಗಾಗಿ ದಾರಿಯ ಪಕ್ಕದಲ್ಲಿ ೧೮೮ ಮರಗಳನ್ನು ನೆಡಿಸಿದನು; ಕಣ್ಣುಹಾಯಲುಗಳಿಗಾಗಿ ಮಾವಿನ ತೋಪನ್ನು ಅಲ್ಲಿಲ್ಲಿ ಬೆಳೆಸಿದನು; ಕುಡಿಯುವ ನೀರಿನ ಬಾವಿಗಳನ್ನು ಅರ್ಧಕ್ರೋಶಕ್ಕೆ ಒಂದರಂತೆ ತೋಡಿಸಿದನು; ಪ್ರಯಾಣಕರಿಗೆ ಧರ್ಮ ಛತ್ರಗಳನ್ನು ಕಟ್ಟಿಸಿದನು; ಬಲಾಣಯಗಳನ್ನು ಅನೇಕ ಕಡೆ ನಿರ್ಮಿಸಿದನು. ಇಷ್ಟು ಮಾಡಿಯೂ "ಇವೆಲ್ಲ ಕ್ಷುಲ್ಲಕ ಸತ್ಕಾರ್ಯಗಳು. ಜನರನ್ನು ಸುಖಿಗಳಾಗಿಯೂ ಸಮೃದ್ಧಿಯಿಂದ ಕೂಡಿದವರಾಗಿಯೂ ಮಾಡಲು ಇನ್ನೂ ಹೆಚ್ಚಿನ ಕೆಲಸಗಳನ್ನು ಮಾಡಬೇಕೆಂದು ನೀನು ಇಚ್ಛಿಸುತ್ತೀಯೆ. ನಿಷ್ಠೆಯಿಂದಲೂ ಭಕ್ತಿಯಿಂದಲೂ ಧರ್ಮಮಾರ್ಗದ ಅನುಸಂಧಾನ ಮಾಡಬೇಕೆಂದು ನಾನು ಬಯಸುತ್ತಿದ್ದೇನೆ" ಎನ್ನುವಷ್ಟು ವಿನಯಶಾಲಿಯಾಗಿ ಅಶೋಕನಿದ್ದನು. ಈಗಿನ ಸಮಾಜ ಕಲ್ಯಾಣ ಮಂಡಳಾಧಿಕಾರಿಗಳನ್ನು ಹೋಲುವ ಧರ್ಮಾಮಾತ್ಯರ ನೇಮಕವನ್ನೂ ಅಶೋಕನು ಮಾಡಿ, ವಿಧವೆಯರು, ಅನಾಥರು, ಸನ್ಯಾಸಿಗಳ, ಭಿಕ್ಷುಕರ ಜೀವನ ಸುಖಕರವಾಗುವಂತೆ ನೋಡಿಕೊಂಡಿದ್ದನು. ಅನ್ಯಾಯದಿಂದ ಬಂಧನವಾಗದಂತೆಯೂ ವಿಚಾರಣೆಯಿಲ್ಲದೆ ಶಿಕ್ಷೆಯಾಗದಂತೆಯೂ ಅಶೋಕನು ಕಟ್ಟಳೆ ಮಾಡಿದ್ದನು. ಇವೆಲ್ಲ ಕಾರ್ಯಕಲಾಪಗಳನ್ನು ಸ್ವತಂತ್ರ ಭಾರತದ ಚಟುವಟಿಕೆಗಳೊಡನೆ ಹೋಲಿಸಿ ನೋಡಿದರೆ, ನಾವು ನಮ್ಮ ಪ್ರಾಚೀನ ಆದರ್ಶದ ನೆರಳಲ್ಲಿ ಮುನ್ನಡೆಯುತ್ತಿದ್ದೇವೆ ಎಂದೆನಿಸದಿರದು. ಕಲ್ಯಾಣರಾಷ್ಟ್ರವಾಗಿ ಭಾರತವನ್ನು ರೂಪಿಸುವ ಉದ್ದೇಶ ನಮ್ಮ ಸಂವಿಧಾನದಲ್ಲಿ ವ್ಯಕ್ತವಾಗಿದೆ—ಅಶೋಕ ಚಕ್ರಾಂಕಿತ ತ್ರಿವರ್ಣ ಧ್ವಜವೇ ಅದರ ಪ್ರತೀಕ ವೆಂದರೂ ಸಲ್ಲುತ್ತದೆ.

For all your requirements in

Paper, Boards, Stationery,

Inks Printing or Writing

Please enquire at

SRINIVAS BROTHERS,

WHOLESALE PAPER MERCHANTS & STATIONERS,

CAR STREET, POST BOX No. 139,

MANGALORE-1.

ನಮ್ಮ ಜಿಲ್ಲೆಯಲ್ಲಿ ಆಗಸ್ಟ್ ಕ್ರಾಂತಿಯ ಚಿತ್ರ

(೬ನೇ ಸುಟದಿಂದ)

ಹದಿನೆಂಟನೆಯ ತಾರೀಕಿನಿಂದ ಇಪ್ಪತ್ತನೆಯ ತಾರೀಕಿನ ವರೆಗೆ ಹ-ತಾಳ ಮುಂದುವರಿಯಿತು ಆಗಸ್ಟ್ ಹದಿನೆಂಟರಂದು ಪ್ರಚಂಡ ಮೆರವಣಿಗೆ ಮತ್ತು ಸಭೆಗಳಾದವು. ಹತ್ತೊಂಬತ್ತನೆಯ ತಾರೀಕಿಗ ವಿದ್ಯಾರ್ಥಿಗಳೂ ಶಾಲೆ ಕಾಲೇಜುಗಳಿಗೆ ಮುಷ್ಕರ ಹೂಡಿ ಮೆರವಣಿಗೆ ಸಭೆಗಳನ್ನು ಏರ್ಪಡಿಸಿದರು ಇದರಿಂದ ಜಿಲ್ಲೆಯ ಚಳವಳವು ಒಮ್ಮೆಲೇ ಒಂದು ಉಗ್ರ ರೂಪಕ್ಕೆ ಏರುವಂತಾಯಿತು

ಇಷ್ಟರಲ್ಲಿಯೇ ಅಖಿಲ ಭಾರತದಲ್ಲಿ ಜನತೆಯ ದಂಗೆ ಮಹೋಗ್ರವಾಗಿತ್ತು. ಸರಕಾರದ ದಬ್ಬಾಳಿಕೆ ನಿರ್ದಯವಾಗಿ ನಡೆದಿತ್ತು ಕರ್ನಾಟಕದ ಪಲವು ನಗರ ಗ್ರಾಮಗಳಲ್ಲಿ ಬಂಧನ ಲಾಧಿ ಪೆಟ್ಟು, ಗುಂಡೆಸೆತಗಳೂ ನಿರಂತರ ನಡೆಯುತ್ತಿದ್ದುವು ಸರಕಾರದ ಈ ದಬ್ಬಾಳಿಕೆಯನ್ನು ಖಂಡಿಸಿ ನಮ್ಮ ಜಿಲ್ಲೆಯ ಪ್ರಮುಖ ಪ್ರಾತಿನಿಧಿಕ ಸಂಸ್ಥೆಗಳ ಕಾಂಗ್ರೆಸ್ ಸದಸ್ಯರು, ಶಾಸನ ಸಭೆ, ಮುನ್ಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡು ಹಾಗೂ ಪಂಚಾಯತ ಬೋರ್ಡು ಮೆಂಬರರು ಸಹ ಅಮೇಲೆ ಒಬ್ಬೊಬ್ಬರಾಗಿಯೂ, ಸಾಮೂಹಿಕವಾಗಿಯೂ ರಾಜಿನಾಮೆ ಕೊಟ್ಟಿದ್ದರೂ, ಪ್ರಪ್ರಥಮವಾಗಿ ನಮ್ಮ ಜಿಲ್ಲೆಯಲ್ಲಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿ ತಮ್ಮ ತಮ್ಮ ಪ್ರಾತಿನಿಧಿಕ ಸ್ಥಾನಗಳಿಗೆ ರಾಜಿನಾಮೆಯಿತ್ತರು. ಆ ರೀತಿತಮ್ಮ ಅತೃಪ್ತಿಯನ್ನೂ, ಜನತೆಯ ಅತೃಪ್ತಿಯನ್ನೂ ವ್ಯಕ್ತಪಡಿಸಿದರು

ಇಷ್ಟರಲ್ಲಿ ಜಿಲ್ಲೆಯ ಮಂದಾಳುಗಳಿಗೆ ಆಗಸ್ಟ್ ಕ್ರಾಂತಿಯ ಕಾರ್ಯಕ್ರಮದ ಕುರಿತು ವಿವರಗಳು ಮನವರಿಕೆಯಾಗಿರಬೇಕೆಂದು ತೋರುತ್ತದೆ ಗಾಂಧೀಜಿಯ ಆಪ್ತ ವರ್ಗಕ್ಕೆ ಸೇರಿದವರು ಅನೇಕರು, ಅಜ್ಞಾತ ವೀರರು ಹಲವರು, ದೇಶದಾದ್ಯಂತ ಇದೇ ಸಂದೇಶವನ್ನು ಸಾರಿ ಸಂಚರಿಸಿ ತಿಳಿಸುತ್ತಿದ್ದರು ಅದಾಗಿ ೧೯೪೨ರ ಸಪ್ತಂಬರ ಒಂಭತ್ತನೆಯ ದಿನದಂದು ನಮ್ಮ ಜಿಲ್ಲೆಯಲ್ಲಿ ಬ್ರಹದ್ರೂಪದ ಆಂದೋಲನ ಹೂಡಲು ನಿಶ್ಚಯವಾಯಿತು ಅದರ ಮೂಡರಿಯ ಕಾರ್ಯಕ್ರಮವು ಮಂಗಳೂರಲ್ಲಿಯೇ ಪ್ರಾರಂಭವಾಯಿತು.

ಸಾವಿರದ ಒಂಭೈನ್ನೂರ ನಲ್ವತ್ತೆರಡನೆಯ ಇಸವಿ ಸಪ್ತಂಬರ ಒಂಭತ್ತನೆಯ ದಿನ ಪೂರ್ವಾಹ್ನ ಹತ್ತುಗಂಟೆಗೆ ಸರಿಯಾಗಿ ಸ್ವಯಂಸೇವಕ ದಳವು ಮಂಗಳೂರಿನ ಜಿಲ್ಲಾ ಕೋರ್ಟಿನ ಒಳಿಯಲ್ಲಿ ಪಿಕೆಟಿಂಗ್ ಪ್ರಾರಂಭಿಸಿತು. ಹೆಚ್ಚಿನ ವಕೀಲರು ಆ ದಿನ ಕೋರ್ಟಿಗೆ ಬಂದಿರಲಿಲ್ಲ, ಬಂದವರಲ್ಲಿ ಬಹುಜನರು ಸ್ವಯಂಸೇವಕರ ವಿನಂತಿಯನ್ನು ಮನ್ನಿಸಿ ಮರಳಿದರು. ಹಿಂದೆ, ಮುನ್ಸಿಪಾಲಿಟಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದು, ಆ ಮೇಲೆ, ಯುದ್ಧದ ಪ್ರಚಾರಕರಾಗಿ ಕೆಲಸ ಮಾಡುತ್ತಿದ್ದರೆಂದು ಹೇಳಲಾದ ಓರ್ವ ವಕೀಲ ಮಹಾಶಯರು ಮಾತ್ರ ಹಾದಿಯಲ್ಲಿ ಅಡ್ಡ ಮಲಗಿದ್ದ ಸ್ವಯಂಸೇವಕರನ್ನು ಆಕ್ಷೇಪಿಸುತ್ತಾ ತುಳಿದು ಮುನ್ನಡೆದಿದ್ದರು

ಪಿಕೆಟಿಂಗ್ ಹೀಗೆ ಸ್ವಲ್ಪಕಾಲ ಮುಂದುವರಿಯಿತು, ಮಧ್ಯಾಹ್ನ ಹೊತ್ತಿಗೆ ಪೋಲೀಸ್ ಪಡೆ ಪಿಕೆಟಿಂಗ್ ಮಾಡುತ್ತಿರುವಲ್ಲಿಗೆ ಬಂತು ಸ್ವಯಂಸೇವಕರನ್ನು ಚದರಿಸಿತು. ಚದರದ ಹದಿನಾಲ್ಕು ಮಂದಿಯನ್ನು ಬಂಧಿಸಿ ಸೆರೆಮನೆಗೊಯ್ದಿತು ಈ ಸಂದರ್ಭದಲ್ಲಿ ಪತ್ರಿಕಾ ವರದಿಗಾರನಾಗಿ ನಾನು ಕೂಡಾ ಆ ಸ್ಥಳಕ್ಕೆ ಹೋಗಿದ್ದೆನು ಪೋಲೀಸ್ ಅಧಿಕಾರಿಗಳು ನನ್ನ ಕೈಹಿಡಿದು, ನಾನೂ ಬಂಧಿಸಲ್ಪಟ್ಟಿರುವುದಾಗಿ ತಿಳಿಸಿದರು. ನನ್ನನ್ನು ಯಾವ ಕಾರಣ ಬಂಧಿಸಿದ್ದೀರೆಂದು ಕೇಳಿದೆನು. ಅದಕ್ಕೆ ಪಿಕೆಟಿಂಗ್ ಮಾಡಿದ್ದಕ್ಕೆಂದು ಗದರಿಸಿ ಹೇಳಿದರು. ನಾನು ಪಿಕಟಿಂಗಿಗೆ ಬಂದವನಲ್ಲ ಪತ್ರಿಕಾ ವರದಿಗಾರನೆಂದು ಹೇಳಿದೆ, ಅವರಿಗೆ ಆಗ ಏನು ತೋರಿತೊ? ನನ್ನ ಕೈ ಬಿಟ್ಟು ಹೊರಟು ಹೋದರು! 'ಮಹಾತ್ಮಾ ಗಾಂಧೀ ಕೀ ಜೈ' ಘೋಷ ಹೊಂಗಿನ ಜನರ ಸಹಸ್ರ ಕಂಠಗಳಿಂದಲೂ, ಪೋಲೀಸು ವೇಷ ನೊಳಗಿನ ಸ್ವಯಂ ಸೇವಕರ ಕಂಠಗಳಿಂದಲೂ ಉದ್ಘೋಷಿತವಾಗುತಿತ್ತು! ಸತ್ಯಾಗ್ರಹಿಗಳು ಸೆರೆಮನೆಯ ಕಡೆಗೆ ಸಾಗುತ್ತಿದ್ದರು

ಈ ಕೋರ್ಟ ಪಿಕೆಟಿಂಗ್‌ನಲ್ಲಿ ತರುಣರ ಅದರಲ್ಲೂ ವಿದ್ಯಾರ್ಥಿಗಳ ಭಾಗವೇ ಅಧಿಕವಾಗಿತ್ತು, ಸಹಜವಾಗಿ, ಆ ಘಟನೆಯಿಂದ ಅವರು ಉದ್ವಿಗ್ನಗೊಂಡರು ಆ ದಿನ ಮಂಗಳೂರಿನ ಶಾಲೆ ಕಾಲೇಜುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳು ಹೋಗದೆ ಮುಷ್ಕರ ಹೂಡಿದರು, ಪ್ರಚಂಡವಾದ ಮೆರವಣಿಗೆ ನಗರದಲ್ಲಿ ಬೀದಿ ಬೀದಿಗಳಲ್ಲಿ ಸಾಗಿ ಸಂಜೆಗೆ ಮೈದಾನಿನಲ್ಲಿ ಸಾರ್ವಜನಿಕ ಸಭೆ ಸೇರಿತು.

ಶ್ರೀ ಕಯ್ಯಾರ ಕಿಞ್ಞಣ್ಣ ರೈ.

ಮಹಿಳೆಯರು 'ವಂದೇ ಮಾತರಂ' ಹಾಡಿದರು, ಆ ದಿನ ಸಭಾಧ್ಯಕ್ಷರಾದ ಶ್ರೀ ಎಂ. ಡಿ. ಅಧಿಕಾರಿಗಳು ಪ್ರಾಸ್ತಾವಿಕ ಭಾಷಣಕ್ಕೆ ತೊಡಗಿದ್ದರು ಇಷ್ಟರಲ್ಲಿಯೇ ರಿಸರ್ವ್ ಪೋಲೀಸು ಪಡೆ ಅಧಿಕಾರಿಗಳೊಡನೆ ಅಲ್ಲಿಗೆ ಆಗಮಿಸಿ ಸಭೆಯನ್ನು ಚದರುವಂತೆ ಹೇಳಿತು, ಚದರುವಷ್ಟು ಅವಕಾಶವನ್ನು ಸಹ ಕಾಯದೆ, ಲಾಠೀ ಚಾರ್ಜಿನ ಸುರಿ ಮಳೆ ನಡೆಯಿತು. ಶ್ರೀ ಕೆ ಈಶ್ವರ, ಎಂ ಎಲ್ ಎ. ಮುಂತಾದವರೂ ಆ ಗುಂಪಿನಲ್ಲಿ ಇದ್ದರು, ಹಲವರು ಲಾಠಿ ಏಟ್ಟಿಗೆ ಉರುಳಿದರು ಕೆಲವರು ವಿಶೇಷ ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟರು

ಇಂತು ಅಕಸ್ಮಾತ್ ಸಭೆ ಚೆದರಿಸುವಲ್ಲಿ ನಡೆದ ಒಂದು ವಿಶೇಷ ಘಟನೆ ಇನ್ನೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಒಬ್ಬರು ಸರಕಾರೀ ನೌಕರರು—ಅವರು ಖಾದಿಧಾರಿಗಳಾಗಿದ್ದರು.—ಚೆದರುವ ಆಜ್ಞೆ ಆದ ಕೂಡಲೇ ಆ ಜಾಗದಿಂದ ತೊಲಗಿ ಹೋಗುತ್ತಿದ್ದರು. ಹೋಗುತ್ತಿರುವಾಗ, ಅವರಿಗೆ ಪೋಲೀಸರು ಹೊಡೆದರು ಪೋಲೀಸರು ಹೊಡೆದಾಗ ಅವರು ಸುಮ್ಮಗೆ ನಿಲ್ಲುವರು, ಹೊಡೆದು ಹೊಡೆದು ಸಾಕಾಗುವಾಗ ಅವರನ್ನು ಬಿಟ್ಟು ಹೋಗುವರು, ಹೊಡೆತ ನಿಂತ ಮೇಲೆ ಅವರ ಮುಂದೆ ಸಾಗುತ್ತಿದ್ದರು ಮುಂದೆ ಸಾಗುತ್ತಿದ್ದಾಗ ಇನ್ನೊಬ್ಬ ಪೋಲೀಸು ಒಡಿ ಬಂದು ಹೊಡೆಯುತ್ತಿದ್ದನು. ಈ ರೀತಿ ಮೈದಾನಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ತನಕ ಈ ರೀತಿ ಅನೇಕ ಭೀಕರ ದೃಶ್ಯ ನಡೆಯಿತು. ಬೆಕ್ಕವರೆನ್ನದೆ, ದುರ್ಬಲರೆನ್ನದೆ, ಸರಕಾರೀ ನೌಕರರೆನ್ನದೆ, ಕಣ್ಣು ಕಿವಿಯಿಲ್ಲದೆ ಓಡಿಸಿ ಓಡಿಸಿ ಹೊಡೆದು ಗಾಸಿಗೊಳಿಸಲಾಯಿತು. 'ರಾಷ್ಟ್ರಬಂಧು' ಪತ್ರಿಕೆಯ ವರದಿಗಾರರಾಗಿ ಅಲ್ಲಿಗೆ ಬಂದಿದ್ದ, ಸ್ಕೂಲಕಾಯರಾದುದರಿಂದ, ಓಡಲಾಗದ ಮೆಲ್ಲನೆ ಹೋಗುತ್ತಿದ್ದ ಶ್ರೀ. ಕೆ. ಕೃಷ್ಣರಾಯರಿಗೂ ಆ ತಾಂಡವ ನೃತ್ಯದ ಅಧಿಕಾರಿಗೂ ಆಗ ಸ್ವಲ್ಪ ಸರ್ಪಣೆ ನಡೆಯಿತು, ಆದರೆ, ವಿನೋ ಅವರ ಪುಣ್ಯದಿಂದ, ಅವರು ಆ ದಿನ ಅಲ್ಲಿಂದ ಬದುಕಿ ಬಂದರು

ಇದಾದ ಕೆಲವು ದಿನಗಳ ವರೆಗೆ ಮಂಗಳೂರು ನಗರದಲ್ಲಿ ಪ್ರಳಯ ತಾಂಡವವೇ ನಡೆಯಿತು. ಪೋಲೀಸರು ಬೀದಿ ಬೀದಿಗಳಲ್ಲಿ ಕೋವಿ ಹಿಡಿದು ತಿರುಗುತ್ತಿದ್ದರು. ಜನರ ಗುಂಪಿನಿಂದ ಯಾರೋ ಕಲ್ಲೆಸೆಯುತ್ತಿದ್ದರು ಅಷ್ಟು ಆದರೆ ಸಾಕು, ಓಡಿ ಬಂದು ಕೈಗೆ ಸಿಕ್ಕಿದವರಿಗೆ ಹೆಚ್ಚಾಗಿ ಓಡಲಾಗದ ದುರ್ಬಲರಿಗೆ ಮಕ್ಕಳಿಗೆ ಮನೆ ಅಂಗಡಿಗಳ ಒಳ ಹೊಕ್ಕು ಕೂಡಾ ಪೋಲೀಸರು ಹೆಚ್ಚರಂತೆ ಹೊಡೆಯುತ್ತಿದ್ದರು ಕೊನೆಗೆ ತಿಳಿಯಿತು. ಹೀಗೆ ಪೋಲೀಸರಿಗೆ ಮರ್ದನ ಮಾಡುವ ಅವಕಾಶ ಕಲ್ಪಿಸಿ ಕೊಡಲು ಸರಕಾರದಿಂದ ಪ್ರೇರಿತರಾಗಿ ಕೆಲವು ಛದ್ಮವೇಷಧಾರಿಗಳು ಜನರ ಗುಂಪಿನಲ್ಲಿ ಸೇರಿಕೊಂಡು ಕಲ್ಲು ಬೀಸಾಡುತ್ತಿದ್ದರೆಂದು. ಮಂಗಳೂರು ಕೋರ್ಟಿಗೆ ಮೇಲೆ ಹೋಗುವಲ್ಲಿ, ಈಗ ಎಲ ಶಿಯನ್ ಕಾಲೇಜಿನ ವಿದ್ಯಾರ್ಥಿ ಭವನವಿರುವ ಕಟ್ಟಡದಲ್ಲಿ ಆಗ "ಆನಂದ ಭವನ" ಎಂಬ ಊಟದ ಹೋಟೆಲೊಂದಿತ್ತು ನಾನು ಮಧ್ಯಾಹ್ನದ ಊಟಕ್ಕೆ ಅಲ್ಲಿಗೆ ಹೋಗುತ್ತಿದ್ದೆನು ಹೀಗೆ, ನಾನು ಮಧ್ಯಾಹ್ನ ಊಟಕ್ಕೆ ಹೋಗಿದ್ದಾಗ, ಅಲ್ಲಿಗೊಮ್ಮೆ ಪೋಲೀಸು ಬಂದಿತು. ಯಾ

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು
P. o Box No 3219, BOBMAY 3-

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು, ದೋಷಗಳನ್ನು ಹತೋಟಿಗೆ ತರುವವು
ಈ ಔಷದ ಸೇವನೆಯಿಂದ ಯಾವ ಬಾಧೆಗಳೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲ ರೂ 5/- ಸ್ಪೆಶಲ್ ರೂ 8/-
Mrs P. DEVEE, F Ds (N J) (ವಿ ಪಿ ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು ರಹಾಕಂಪೆನಿ, ಮಂಗಳೂರು

ರೋ ಆನಂದ ಭವನದ ಆ ಕಡೆಯಿಂದ ಕಲ್ಲು ಬೀಸಾಡಿದರೆಂದು ತಿಳಿಯಿತು. ಕೂಡಲೇ ಜನರನ್ನು ಚದರಿಸಿ ಓಡಿಸಿ ಹೊಡೆಯಲಾರಂಭವಾಯಿತು. ಆನಂದ ಭವನದ ಒಳ ಹೊಕ್ಕು ಹೊಡೆಯುವುದು ಬೇಡವೆಂದು ಮೆನೇಜರರು ಆದರ ಬಾಗಿಲು ಹಾಕಿದರು. ಪೋಲೀಸು ಪಡೆ ಬಂದು ಬಾಗಿಲಿಗೆ ಮೆಟ್ಟಿತು. ಒಳಗಿದ್ದವರೆಲ್ಲ ಥರ ಥರನಡುಗಲಾರಂಭಿಸಿದರು ಪೆಟ್ಟಿನವರು ಶಾಲೆ ಕಾಲೇಜುಗಳ ವಿದ್ಯಾರ್ಥಿಗಳು ಮಧ್ಯಾಹ್ನ ಊಟಕ್ಕೆ ಅಲ್ಲಿಗೆ ಬಂದಿದ್ದವರು. ನಾನೂ ಅದರೊಳಗೆ ಸಿಕ್ಕಿಕೊಂಡಿದ್ದೆನು. ಇನ್ನು ಬಾಗಿಲು ತೆಗೆಯದಿದ್ದರೆ ಪೋಲೀಸರು ಬಾಗಿಲು ಒಡೆದು ಒಳ ಬರುವುದು ಸಿದ್ಧಿಯ. ಹಾಗಾಗಿ ನಾವೇ ಬಾಗಿಲು ತೆರೆದು ಪಡೋಣವೆಂದು ಮೆನೇಜರರಿಗೆ ಹೇಳಿ ನಾನಿಬ್ಬರೂ ಹೋಗಿ ಬಾಗಿಲು ತೆರೆದೆವು.

ಆ ಪಡೆಯೊಡನೆ ಡಿ. ವ್ಯಾ. ಎಸ್. ಪಿ ಯವರೂ ಇದ್ದರು; ಅವರು ಕೈಯಲ್ಲಿ ರಿವಾಲ್ವರು ಹಿಡಿದಿದ್ದರು. ಕೆಲವರು ಕೋಲು, ಹಲವರು ಲಾಠಿ ಹಿಡಿದು ಒಳ ನುಗ್ಗಿದರು. ಡಿ. ವ್ಯಾ. ಎಸ್. ಪಿ. ಯವರು ಒಳಗಿಂದ ಕಲ್ಲು ಬಿಸಾಡಿದ್ದು ಯಾರೆಂದು ಪ್ರಶ್ನಿಸಿದರು; ಒಳಗಿಂದ ಯಾವ ನೋಟ್ಟನೂ ಕಲ್ಲು ಬಿಸಾಡಲಿಲ್ಲವೆಂದೂ, ಇಲ್ಲಿರುವವರೆಲ್ಲರೂ ಊಟಕ್ಕೆ ಬಂದವರೆಂದೂ ನಾವು ಅವರಿಗೆ ಹೇಳಿದೆವು. ಹೀಗೆ ಹೇಳುತ್ತಾ, ಒಳಗೆ ತೋರಿಸುತ್ತಿದ್ದಂತೆ, ಮಿಕ್ಕ ಪೋಲೀಸರು ಒಳನುಗ್ಗಿ ಕೈಗೆ ಸಿಕ್ಕಿದವರಿಗೆಲ್ಲಾ ಹೊಡೆಯಲಾರಂಭಿಸಿದರು. ಒಂದು ಕೋಣೆಯಲ್ಲಿ ಒಬ್ಬನು ಪೆಟ್ಟಿನ ನೋವಿಗೆ ಒಳಾಗಿ ಕೊನಿಸುವುದು ಕೇಳಿಸಿತು. ಆಗ ಡಿ. ವ್ಯಾ ಎಸ್. ಪಿ. ಸಹಿತ ನಾವು ಅಲ್ಲಿಗೆ ತಲಸಿದೆವು, ಪೆಟ್ಟಿನಿಂದ ಅತನ ತಲೆ ಒಡೆದಿತ್ತು; ಅವನ ಲಂಗ ಸ್ವಾಧಕ್ಕೆ ಪೋಲೀಸ್ ಮೆಟ್ಟುತ್ತಿದ್ದ! ಅತ ಕೂಗುತ್ತಿದ್ದ. ಅತ ಕಾಲೇಜಿನ ಹೈಸ್ಕೂಲು ವಿಭಾಗದಲ್ಲಿ ಕಲಿಯುವ ಒರ್ವ ಕ್ರಿಶ್ಚಿಯನ್ ವಿದ್ಯಾರ್ಥಿ. ಕಾಲೇಜಿನ ಹೈಸ್ಕೂಲ್ ವಿಭಾಗಕ್ಕೆ ನಾನು ಎಂಟು ತಿಂಗಳ ಮಟ್ಟಿಗೆ ಬದಲಿಗೆ ಅಧ್ಯಾಪಕನಾಗಿ ಹೋದ ಕಾರಣ, ಅತನ ಗುರುತು ನನಗೆ ಇತ್ತು; ನನ್ನನ್ನು ನೋಡಿ ಅತ ಮೊರೆಯಿಟ್ಟ; ನಾನು ಒಳಗಿದ್ದ ಡಿ. ವ್ಯಾ. ಎಸ್. ಪಿ ಗೆ ಅವನು ವಿದ್ಯಾರ್ಥಿಯಾಗಿದ್ದನೆಂದೂ, ಅಂತಹ ತಪ್ಪು ಕೆಲಸ ಮಾಡುವವನಲ್ಲವೆಂದೂ ಹೇಳಿದ್ದಕ್ಕೆ ಅವರು ಅತನನ್ನು ಪೋಲೀಸ್ ಕೈಯಿಂದ ಬಿಡಿಸಿದರು ಇಂತು ಹಲವರಿಗೆ ಹೊಡೆದು, ಹಲವರನ್ನು ಗಾಯಗೊಳಿಸಿ, ಈ ಮಾರಣ ಯಾಗ ಕೆಲಬೊತ್ತಿನಲ್ಲಿ ಮುಗಿಯಿತು. ಅವರೆಲ್ಲರೂ ಹೊರಟು ಹೋದರು. ಡಿ. ವ್ಯಾ. ಎಸ್. ಪಿ. ಜತೆಯಲ್ಲಿ ನಾವು ಬಾಗಿಲವರೆಗೆ ಬಂದು ಅವರನ್ನು ಕೈ ಮುಗಿದು ಕಳುಹಿಸಿದೆವು. ಕ್ರಿಶ್ಚಿಯನ್ ಹುಡುಗನಿಗೆ ಹೊಡೆಯುವಲ್ಲಿ ಸಿರಾಶೆಗೊಂಡ ಆ ಪೋಲೀಸನು, ಡಿ. ವ್ಯಾ. ಎಸ್. ಪಿ. ಅಲ್ಲಿಂದ ಹೋದಕೂಡಲೇ ನನ್ನ ಬಳಿಗೆ ಬಂದು "ಏನೋ ಕಾನೂನು ಮಾತನಾಡುತ್ತಿ?" ಎಂದು ಗದರಿಸಿದನು. "ನಾನು ಇದ್ದ ಸಂಗತಿಯನ್ನು ಅವರಿಗೆ ತಿಳಿಸಿದ್ದು; ಕಾನೂನು ಮಾತನಾಡಿದ್ದಲ್ಲ" ಎಂದೆನು. ಅಷ್ಟರಲ್ಲಿ ಯಾವನೋ ಎಳೆಮನಸ್ಸಿನ ಒಬ್ಬ ಪೋಲೀಸ್, ನೀವು ಒಳಗೆ ಯೋಗಿರಿ ಎಂದು ನಮ್ಮೊಡನೆ ಹೇಳಿ, ಆ ಪೋಲೀಸನ್ನು ಕರೆದುಕೊಂಡು ಬೇರೆ ಕಡೆಗೆ ಹೊರಟನು. ಆ ದಿನ ಡಿ ವ್ಯಾ. ಎಸ್. ಪಿ ಜತೆಯಲ್ಲಿ ನಾನಿಲ್ಲದಿದ್ದರೆ, ನಾಡಿನ ಸ್ವಾತಂತ್ರ್ಯಕ್ಕಾಗಿ ಪೆಟ್ಟುತಿನ್ನುವ ಪುಣ್ಯ ನನ್ನ ಪಾಲಿಗೂ ಒದಗುತ್ತಿತ್ತು!

ಇದಕ್ಕಿಂತ ರೋಮಾಂಚಕ ಬೀಭತ್ಸ ದೃಶ್ಯ ಅಸ್ಪರಲ್ಲಿಯೇ ಇಲ್ಲಿ ಇನ್ನೊಂದು ನಡೆದುಹೋಯಿತು. ಪೋಲೀಸರ ಇಂತಹ ಪೆಟ್ಟಿಗೆ ಹೆದರಿ, ಹತ್ತು ಹನ್ನೆರಡು ವರ್ಷದ ಹುಡುಗನೊಬ್ಬನು ಕೊಡಿಯಾಲ್ ಬೈಲು ಇಗರ್ಜಿಯ ಕಂಪೌಂಡಿನ ಒಳಗೆ ಓಡಿ ಹೋದನು. ಅಲ್ಲಿಗೂ ಅತನನ್ನು ಪೋಲೀಸರು ಬೆನ್ನಟ್ಟಿ ಹೋದರು. ಚರ್ಚಿನ ಸುತ್ತು ಅತ ಓಡಿದ; ಎಲ್ಲಾ ಕಡೆಯಿಂದಲೂ ಬಂದು ಅತನನ್ನು ಮುತ್ತಿ ಎಲ್ಲರೂ ಒಮ್ಮೆಗೇ ಅತನಿಗೆ ಹೊಡೆದರು. ಚರ್ಚಿನ ಮುಂದುಗಡೆ ಆ ಹುಡುಗ ನೆಲಕ್ಕೆ ಉರುಳಿದ; ಉರುಳಿದಲ್ಲಿಗೆ ಮನಃ ಹೊಡೆದರು; ಹೊಡೆದಲ್ಲಿಯೇ ಅತನ ಶರೀರ ಮುರುಟುತ್ತಿತ್ತು; ಸೀರೊಳ್ಳೆಗೆ ಹೊಡೆದರೆ ಅದು ಮುರುಟುವಹಾಗೆ; ಹಾಗೆ ಮುರುಟಿ ನಿಶ್ಚೇತನವಾದ ಅತನ ಶರೀರವನ್ನು ಅಲ್ಲಿಂದ ಎತ್ತಿ ತಂದು, ಬಾಲಸಾಹಿತ್ಯ ಮಂಡಲದ ಈಜಿಗೆ, ಹಿಂದೆ ಖಾದೀ ಭಂಡಾರ ಇದ್ದಲ್ಲಿ ಹೊರಗೆ ಹಲಗೆಯಲ್ಲಿ ಹಾಕಿದರು; ಅಲ್ಲೇ ಹೆಣದಂತೆ ಆ ಶಿಶುವಿನ ಶರೀರ ಬಹುಕಾಲ ಮುರುಟಿ ಬಿದ್ದಿತ್ತು; ಆ ಸಿರ್ಭಾಗ್ಯ ಶಿಶು ಸತ್ತಿತೋ ಬದುಕಿತೋ ಎಂಬುದು ಆ ಮೇಲೆ ನನಗೆ ಎಷ್ಟು ವಿಚಾರಿಸಿದರೂ ತಿಳಿಯಲಾಗಲಿಲ್ಲ!

ಹೀಗೆ ಜನರನ್ನು ಚದರಿಸುವ, ಹೊಡೆಯುವ ಈ ರುದ್ರಕಾರ್ಯಕ್ಕೆ ಮಂಗಳೂರು ನಗರದಲ್ಲಿ ಹಾಗೂ ಜಿಲ್ಲೆಯಲ್ಲಿ ೯-೯ ಘಟಿಕದಿಂದ ಮೊದಲ್ಗೊಂಡು ೧೫ಗಳ ಸೆಕ್ಷನ್ ಜಾರಿಯಾದದ್ದೇ ಕಾರಣವೆಂಬುದು ಆ ಮೇಲೆ ಎಷ್ಟೋ ದಿನಗಳ ನಂತರ ಪತ್ರಿಕೋದ್ಯಮಿಯಾಗಿದ್ದ ನನಗೇ ನಾನು ಕೆಲಸ ಮಾಡುತ್ತಿದ್ದ ಪತ್ರಿಕಾ ಕಚೇರಿಗೆ ಬಂದ ಕಲೆಕ್ಟರರ ಪ್ರಕಟಣೆಯಿಂದಾಗಿ ತಿಳಿದು ಬಂದಿತು. ನನಗೆ ನೆನಪಿದ್ದಂತೆ, ಆ ಆಜ್ಞೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾದುದು ೫-೯-೪೨ಕ್ಕೆ ಆಗಿದೆ. ಪತ್ರಿಕೆಯಲ್ಲಿ ಎಂತಹ ಸುದ್ದಿಯನ್ನಾದರೂ ಪ್ರಕಟಿಸಿ ಮಾಡುವ ಕುರಿತು ಆಗ ಬಹಳ ಸಿರ್ಬಂಧವೇ ಇತ್ತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ನಾವ್ರಪ್ರಕಟಿಸುವ ಸುದ್ದಿಯನ್ನು ಕಲೆಕ್ಟರರ ಆಫೀಸಿನಲ್ಲಿರುವ ಒರ್ವ ಮುಖ್ಯಾಧಿಕಾರಿಗಳಿಗೆ ನಾವು ಮುಂಚಿತವಾಗಿ ಒಪ್ಪಿಸಬೇಕಾಗಿತ್ತು ಆ ಸುದ್ದಿ ಬರೆದು ಕೊಟ್ಟ ಎರಡೋ ಮೂರೋ ವಾರಗಳ ನಂತರ, ಎಷ್ಟೋ ವಿಕಾರಗೊಂಡು ಅವುಗಳ ನಿಜ ರೂಪವನ್ನು ಬಿಟ್ಟು, ಸೆನ್ಸರ್ ಆಗಿ ನಮ್ಮ ಕಡೆಗೆ ಪ್ರಕಟಣೆಗೆ ಬರುತ್ತಿದ್ದವು. ಈ ಸಂದರ್ಭದ ಒಂದು ಘಟನೆ ನನಗೆ ಈಗಲೂ ಚೆನ್ನಾಗಿ ನೆನಪಿದೆ; ನಮ್ಮ ಜಿಲ್ಲೆಯಲ್ಲಿ ಬಹುರಃ ಮೂರ ಬಿದಿರೆ ಆಚೆ ಕಡೆಯಲ್ಲಿ, ಆಗ ಛಡಿ ಏಟಿನ ಶಿಕ್ಷೆಯನ್ನು ಸತ್ಯಾಗ್ರಹಿಗಳಿಗೆ ವಿಧಿಸಿದ್ದರು. ನಮಗೆ ಬಂದ ವರದಿಯಂತೆ, ಆ ಸುದ್ದಿಯನ್ನು ಸಪ ಬರೆದೇ, ನಾವು ಸೆನ್ಸರ್ ಅಧಿಕಾರಿಗಳಿಗೆ ಒಪ್ಪಿಸಿದೆವು. ಎರಡು ವಾರಗಳು ಕಳೆದ ಮೇಲೆ, ಆ ಅಧಿಕಾರಿಗಳ ಸ್ವಹಸ್ತಾಕ್ಷರದಲ್ಲಿಯೇ "ಛಡೀಏಟಿನ ಶಿಕ್ಷೆಯನ್ನು ಪ್ರಕಟಿಸಬಾರದು" ಎಂದು ಬರೆದು ಬಂತು! ಛಡೀ ಏಟಿನ ಶಿಕ್ಷೆಯಂತಹ ಶಿಕ್ಷೆಯನ್ನು ಕೊಡಬಾರದೆಂದಲ್ಲ; ಕೊಟ್ಟರೂ ಅದನ್ನು ಪ್ರಕಟಿಸಬಾರದೆಂದು! ಅದನ್ನು ಹಾಗೆ, ಆ ದಿನ ನಾನು ಆ ಫೀಸು ಫೈಲಲ್ಲಿ ಜಾಗರೂಕತೆಯಿಂದ ಇರಿಸಿದ್ದೇನೆ. ಹುಡುಕಿದರೆ ಆ ಆಫೀಸಿನಲ್ಲಿ ಇಂದಿಗೂ ಆ ವೇದ ವಾಕ್ಯ ದೊರಕೀತು! ಹೇಗಿದ್ದರೂ, ಆ ಅಧಿಕಾರಿಗಳು ಬ್ರಿಟಿಷ್ ಪ್ರಭುತ್ವದ ಕೈಕೆಳಗೆ ಉತ್ತಮ ಶ್ರದ್ಧಾ ಭಕ್ತಿಗಳಿಂದ ತನ್ನ ಕೆಲಸವನ್ನು ಮಾಡಿದ್ದಾರೆಂಬುದು ನಿರ್ವಿವಾದ; ಅದೇ ಶ್ರದ್ಧಾ ಭಕ್ತಿಗಳಿಂದ ಸ್ವತಂತ್ರ ಸರಕಾರದ ಅಧಿಕಾರದಲ್ಲಿಯೂ—ಭಾರತ ಸ್ವತಂತ್ರವಾದ ಮೇಲೂ ಅವರು ಸರಕಾರೀ ನೌಕರಿಯಲ್ಲಿದ್ದರು — ನಡೆಸಿರಬಹುದೆಂದೂ ನಾನು ನಂಬುತ್ತೇನೆ.

ಆಗಸ್ಟ್ ಕ್ರಾಂತಿಯ ಕಾಲದಲ್ಲಿ ಯುವಕರ ವಿದ್ಯಾರ್ಥಿಗಳ ಈ ವೀರೋತ್ಸಾಹದಿಂದ, ಆಂದೋಲನಕ್ಕೆ ಅಭೂತಪೂರ್ವ ಯಶಸ್ಸೇನೋ ಬಂದಿತು; ಆದರೆ ಸರಕಾರದ ನಿರ್ದಯ ಲಾಠಿಪೆಟ್ಟು, ಛಡೀ ಏಟು, ಗುಂಡೆಸತದಂತಹ ಭೀಕರ ಕೃತ್ಯಗಳಿಗೂ ಈ ತರುಣರು ವಿದ್ಯಾರ್ಥಿಗಳು ಬಲಿಯಾಗಬೇಕಾಯಿತು. ಅವರು ಬಲಿಯಾಗಲು ಹಿಂಜರಿಯಲೂ ಇಲ್ಲ. ಅಷ್ಟರಲ್ಲಿ ಅಂಥವರ ಸಂಖ್ಯೆ ಕಡಿಮೆಯಾಗಕ್ತಾ ಬರಲು ಹಿಂದಿನ ಸ್ವಾತಂತ್ರ್ಯ ವೀರರು ಕಾಂಗ್ರೆಸಿನ ಹಳೆಯ ಹುಲಿಗಳು ಸಮರ ರಂಗಕ್ಕೆ ಇಳಿಯಬೇಕಾಯಿತು; ತಮ್ಮ ವೃದ್ಧಾಪ್ಯದಲ್ಲಿ, ಅನುಭವಿಸಿದ ನಾನಾ ವಿಪತ್ತುಗಳಲ್ಲಿ ಸಹ ಕುಗ್ಗದೆ ಅನೇಕರು ಹಿಂದಿನ ಕಾಂಗ್ರೆಸ್ ಧುರೀಣರು ಆಗ ಮುಂದೆಬಂದರು; ಕಾಸರಗೋಡಿನಲ್ಲಿ ಶ್ರೀಯುತರಾದ ಉಮೇಶ ರಾಯರು, ದೇವಪ್ಪಾಳ್ವರೇ ಮೊದಲಾದವರು, ಉಡುಪಿಯಲ್ಲಿ ಶ್ರೀ ಪಾಂಗಾಳ ನಾಯ್ಕರು, ಶ್ರೀ ಕೆ. ಕೆ. ಶೆಟ್ಟರೇ ಮುಂತಾದವರು, ಮಂಗಳೂರಲ್ಲಿ ಶ್ರೀ ಕೈದೇಲ್ ತಿಮ್ಮಪ್ಪ ಶೆಟ್ಟಿ ಡಾ। ಮಲ್ಯರೇ ಮೊದಲಾದ ಪ್ರಮುಖರು ಸ್ವಾತಂತ್ರ್ಯ ಹೋರಾಟಕ್ಕೆ ನುಗ್ಗಿದರು. ಅಷ್ಟರಲ್ಲಿಯೇ—ಈಗ ಕುಂಬಾಮರದಲ್ಲಿ ಸಾಮಾಜಿಕ ವಿದ್ಯಾಭ್ಯಾಸದ ಸಂಘಟಕರಾಗಿರುವ ಧಾರವಾಡದ ತನ್ನ ಉಪಾಧ್ಯಾಯ ವೃತ್ತಿಯನ್ನು ಬಿಟ್ಟು ಶ್ರೀ ಕೆ. ಕೃಷ್ಣ ಸೆಟ್ಟರು — ಮಂಗಳೂರಿಗೆ ಮುಂದಾಳುಗಳ ಆದೇಶದಂತೆ ಬಂದಿದ್ದರು. ಜಳವಳವು ಹೊಸರೂಪದಿಂದ ಸಾಗುತ್ತಿತ್ತು. ಎಲ್ಲೆಲ್ಲಿಯೂ ಸರಕಾರಕ್ಕೆ ತಲೆನೋವು ಹೆಚ್ಚುತ್ತಿತ್ತು. ಬಹಳ ಪ್ರಯಾಸದಿಂದ ಸತ್ಯಾಗ್ರಹಿಗಳನ್ನು ಸಂಧಿಸಬೇಕಾಗಿತ್ತು. ಅಂತೂ ಕೊನೆಗೆ ಒಂದಲ್ಲ ಒಂದು ಸಂದರ್ಭದಲ್ಲಿ ಎಲ್ಲರೂ ಸರಕಾರದ ಕೈಗೆಸಿಕ್ಕಿಬೀಳದಿರಲಿಲ್ಲ; ಸ್ವಾತಂತ್ರ್ಯಕ್ಕಾಗಿ ಯಾವಕಷ್ಟವನ್ನಾದರೂ ಅನುಭವಿಸಲು ಯಾರೂ ಹಿಂದಾಗಲಿಲ್ಲ.

ಹೀಗೆ—ಒಂದಲ್ಲ ಹಲವು ವಿಧದಿಂದ, ಒಂದು ಪಂಗಡವಲ್ಲ, ಹಲವು ಪಂಗಡಗಳು, ಎಲ್ಲರೂ ಸ್ವಾತಂತ್ರ್ಯದ ದಿವ್ಯ ಸಂದೇಶದಿಂದ ಪ್ರೇರಿತರಾಗಿ ಮಾತೃಭೂಮಿಯ ಬಿಡುಗಡೆಗಾಗಿ ಹೋರಾಡಿದ್ದಾರೆ. ನಾನು ಇಲ್ಲಿ ವಿವರಿಸಿದ ಘಟನೆಗಳು ನನ್ನ ನೆನಪಿನಲ್ಲಿ ಉಳಿದವುಗಳಲ್ಲಿ ಕೆಲವು ಮಾತ್ರ; ನಾನು ಹೆಸರಿಸಿದ ಸ್ವಾತಂತ್ರ್ಯ ವೀರರು, ನನಗೆ ನೆನಪಿರುವವರಲ್ಲಿ ಕೆಲವರು ಮಾತ್ರ; ಇದಕ್ಕಿಂತಲೂ ಹೆಚ್ಚಿನ ರೋಮಾಂಚಕ ಘಟನೆ—ಇವರಿಗಿಂತಲೂ ಹೆಚ್ಚಿನ ಬಲಿದಾನ ಮಾಡಿದ ಮಹನೀಯರು ಎಷ್ಟೋಮಂದಿ ಅಜ್ಞಾತರಾಗಿಯೇ ನಮ್ಮ ಜಿಲ್ಲೆಯಲ್ಲಿ ಇದ್ದಾರೆ. ಅಂತಹ ಹಲವು ದೇಶಪ್ರೇಮಿಗಳನ್ನು ಜ್ಞಾತ ಅಜ್ಞಾತ ವೀರರೆಲ್ಲರನ್ನೂ ನಾವು ಈ ಸಂದರ್ಭದಲ್ಲಿ ಸ್ಮರಿಸಬೇಕು; ಅವರಿಗೆ ಕೃತಜ್ಞತೆ ಗೌರವ ಸಲ್ಲಿಸಬೇಕು

ಸ್ವಾತಂತ್ರ್ಯಾಪ್ತಿಯ ದಿನ ನಾವು ಮಾಡಬೇಕಾದ ಕರ್ತವ್ಯಗಳಲ್ಲಿ ಇದೂ ಒಂದಾಗಿದೆ; ಇದೂ ಶ್ರೇಷ್ಠವಾದ ಕರ್ತವ್ಯವೂ ಆಗಿದೆ.

ದೇಶ—ಧರ್ಮ—ದೇವರು—ಇಂತಹ ಸ್ಫೂರ್ತಿ ಜ್ಯೋತಿಗಳ ಮುಂದೆ ನಶ್ವರ ಮಾನವಜೀವನ ಕೇವಲ ಕ್ಷುಲ್ಲಕವಾಗಿದೆ

———

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೇಸಾಯಗಾರರ ಹೊಸ ಚಟುವಟಿಕೆ

ಕೇವಲ ಭೂಸುಧಾರಣೆಯ ಶಾಸನದಿಂದ ನಮ್ಮ ವ್ಯವಸಾಯ ಕ್ಷೇತ್ರದಲ್ಲಿ ಅದ್ಭುತ ಪ್ರಗತಿ ಸರಿವೇಗದಿಂದ ಸಾಗುವುದು ಕಷ್ಟ. ಸುಧಾರಿತವಾದ, ವೈಜ್ಞಾನಿಕ ಸಂಶೋಧನೆಗಳ ಪ್ರಯೋಜನವನ್ನು ಆಳವಡಿಸಿಕೊಂಡಿರುವ ಪರಿಪ್ಕ್ವತ ಪದ್ಧತಿಗಳನ್ನು ಅನುಸರಿಸಿದರೆ ಮಾತ್ರ ಉತ್ಪಾದನೆ ಹೆಚ್ಚಿಕೊಂಡೀತು. ಸ್ವತಂತ್ರ ಭಾರತದ ರೈತ ಇತ್ತ ನಿಧಾನವಾಗಿ ಗಮನಸಲೀಯುತ್ತಿದ್ದಾನೆ.

'ಆಹಾ'—ಎಂದ ವೃದ್ಧರಾಮ, ತನ್ನ ಮೊಮ್ಮಗನ ಕೈಯೊಳಗಿದ್ದ ಭತ್ತದ ಪೈರಿನ ನಿಂ-ವರ್ಣ ಪರ್ಣಗಳೆಡೆಗೆ ಬಾಗುತ್ತ ಅವನ ಮನೋಮಂಡಲದ ಹಿನ್ನೆಲೆಯಲ್ಲಿ ಕಳವಳದ ಭಾವವಿದ್ದಂತಿತ್ತು. ಕಣ್ಣಿರು ಸಿನಿಂದ ಕೂಡಿದ ಅವನ ನೇತ್ರಗಳಿಂದ ಗ್ರಾಮ್ಯ ನೋಟದ ಉತ್ತರವೂ ಬರಲಿಲ್ಲ. ಕೊಂಚ ಕಾಲಾನಂತರ ತನ್ನ ಹಲ್ಲಿಲ್ಲದ ಬಾಯಿಕಿರಿದು ಹುಸಿನಕ್ಕನಾತ.

ತನ್ನ ಬಾಡಿದ, ಗಂಟುಗಂಟಾದ ಬೆರಳುಗಳನ್ನು ರಾಮ ಲಾಲನೆಯ ಸ್ಪರ್ಶದೊಂದಿಗೆ ಪೈರಿನ ಮೇಲಾಡಿಸಿದ.

"ನಿನ್ನ ಗೆಳೆಯ ಹೇಳಿದ್ದು ನಿಜವಿರಬಹುದು" ಎಂದು ಆತ ನೆನಪು ಮಾಡಿಕೊಳ್ಳುತ್ತಿದ್ದಂತಿತ್ತು; "ಕಾಲ ಬದಲಾಗಿದೆ, ಎಂಬುದು ನಿನಗೆ ಗೊತ್ತು". ಸನಿಹದಲ್ಲಿದ್ದ ಉತ್ಸಾಹಿ ಯುವಕನತ್ತ ಮೊಮ್ಮಗ ನೋಡಿದ. ಆ ಯುವಕ ಹೊಸದಾಗಿ ಬಂದಿದ್ದ ಗ್ರಾಮ ವಿಸ್ತರಣೆ ಕೆಲಸಗಾರ.

ಹೌದು. ಕಾಲ ಬದಲಾಗಿದೆ. ಅದಕ್ಕೂ ಹೆಚ್ಚಾಗಿ ಭಾರತೀಯ ವ್ಯವಸಾಯದಲ್ಲಿ ಕಾಲವು ಬದಲಾವಣೆಯನ್ನು ತಂದಿದೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ಯೋಜಿತ ಅಭಿವೃದ್ಧಿಯ ಕಡೆಗೆ ಗುರಿಯಿಟ್ಟುಕೊಂಡನಂತರ, ಈ ಬದಲಾವಣೆಯ ವೇಗ ಹೆಚ್ಚಿದೆ.

ಈಚೀಚಿನ ವರೆಗೂ ಭಾರತದಲ್ಲಿ ಬೇಸಾಯದಲ್ಲಿ ಅನಿಶ್ಚಿತ ಅಂಶವಿತ್ತು. ಅದೊಂದು ಸರಳವಾದ ದಿನಚರಿಯಾಗಿತ್ತು. ಅದರ ಎಲ್ಲೆಕಟ್ಟು ಕಿರಿದಾಗಿತ್ತು. ಜಮೀನನ್ನು ಉತ್ತು, ಬೀಜ ಬಿತ್ತಿ, ದೊರಕಿದಂಥ ಗೊಬ್ಬರವನ್ನು ಹಾಕಲಾಗುತ್ತಿತ್ತು. ಉಳಿದುದೆಲ್ಲ ಅಂದಾಜಿನ ಕೆಲಸ. ನಂಬಿಕೆ ಹಾಗೂ ಪ್ರಾರ್ಥನೆ ಕೊನೆಯ ಕರ್ತವ್ಯಗಳಾಗುತ್ತಿದ್ದುವು. ಇದೇ ವಿಧಾನವು ಬಹಳ ಕಾಲದ ವರೆಗೂ ಅನುಷ್ಠಾನದಲ್ಲಿತ್ತು. ಭಾರತೀಯ ರೈತನ ಅನಿಶ್ಚಿತ ಭಾಗ್ಯಕ್ಕೆ ಯಾವ ರಕ್ಷೆಯೂ ಇರಲಿಲ್ಲ.

ಆದರೆ ಕಾಲ ಬದಲಾಗಿದೆ. ಭಾರತದಲ್ಲಿ ಬೇಸಾಯ ಸುವ್ಯವಸ್ಥೆಗೊಳ್ಳುತ್ತಿದೆ. ವರ್ಷಾಂತರಗಳ ವರೆಗೂ ಸರಕಾರದ ನೇತೃತ್ವದಲ್ಲಿ ಸಂಶೋಧನೆಗಳು ಕೃಷಿಯ ಬಗೆಗೆ ಜ್ಞಾನ ಹಾಗೂ ಅನುಭವವನ್ನು ದೊರಕಿಸಿಕೊಟ್ಟಿವೆ. ರಾಮ ಯುವಕನಾಗಿದ್ದಾಗ ಕಾಣಲಾಗದಿದ್ದ ಸೌಲಭ್ಯಗಳನ್ನು ಅವನ ಮೊಮ್ಮಗ ಕಾಣುತ್ತಾನೆ. ರಾಮನ ಕಾಲದಲ್ಲಿ ರೇಡಿಯೋ ಐಸೋಟೋಪ್‌ಗಳು ರೈತರಿಗೆ ಎಷ್ಟು ಉಪಯುಕ್ತವಾದುವೆಂಬುದು ಯಾರಿಗೆ ಗೊತ್ತಿತ್ತು? ಆದರೆ, ಇಂದು, ಭಾರತದ ಕೃಷಿ ಸಂಶೋಧನ ಸಂಸ್ಥೆಯಲ್ಲಿ, ಸಸ್ಯ ಜೀವನದಲ್ಲಿ ಪೌಷ್ಟಿಕ ಅಂಶಗಳು ಸಾಲದೆ ಬರುವುದರಿಂದ ಆಗುವ ಪರಿಣಾಮಗಳನ್ನು ಕಂಡುಹಿಡಿಯಲು ರೇಡಿಯೋ ಐಸೋಟೋಪ್‌ಗಳನ್ನು ಉಪಯೋಗಿಸಲಾಗುತ್ತಿದೆ.

ಅರ್ಧ ಶತಮಾನದ ಹಿಂದೆ, ಮಣ್ಣಿನ ಗುಣಾಂಶದ ವಿಷಯವು ಈಗಿನಂತೆ ಹೆಚ್ಚಿನ ಗಮನವನ್ನು ಸೆಳೆಯುತ್ತಿರಲಿಲ್ಲ. ಭೂಸುಧಾರಣೆಯಲ್ಲಿ ಮಣ್ಣಿನ ಸಮೀಕ್ಷೆಗೆ ಪ್ರಾಧಾನ್ಯ ಬರತೊಡಗಿತು. ಮಣ್ಣಿನ ಗುಣ ಸ್ಥಳದಿಂದ ಸ್ಥಳಕ್ಕೆ ಬದಲಾಗಿರುತ್ತದೆ ಕೆಲವು ಕ್ಷೇತ್ರದ ಮಣ್ಣಿನಲ್ಲಿ ರಂಜಕದ ಅಂಶವು ಕಡಿಮೆಯಾಗಿರುತ್ತದೆ. ಇನ್ನು ಕೆಲವು ಭಾಗಗಳಲ್ಲಿ ಪೊಟ್ಯಾಸಿಯಂ ಅಂಶ ಕಡಿಮೆ ಇರುತ್ತದೆ. ಬಹುಕಡೆ ಸಾರಜನಕದ ಅಂಶದ ಕೊರತೆಯಿರುವುದು.

ಮಣ್ಣಿನ ಸತ್ವಪರೀಕ್ಷೆಯ ಈ ಕಷ್ಟವೆಲ್ಲಾ ಏಕೆ? ಎಂದು ರಾಮ ಕೇಳಬಹುದು. ಅವನ ಮೊಮ್ಮಗ ಅದಕ್ಕೆ ಸಿದ್ಧವಾದ ಉತ್ತರ ಕೊಡಬಲ್ಲ. ಗೊಬ್ಬರವನ್ನು ಪರಿಣಾಮಕಾರಿಯಾಗಿ ಹಾಕಲು ಇದು ಅವಶ್ಯಕನೆಂದು ಅವನು ಹೇಳಬಲ್ಲ.

ಈ ಶತಮಾನದ ಮೊದಲನೆಯ ಅರ್ಧಭಾಗದಲ್ಲಿ ಫಾಸ್ಫೇಟುಗಳ ಉಪಯೋಗದ ಪರಿಣಾಮಗಳು ವಿಜ್ಞಾನಿಗಳನ್ನು ದಿಗ್ಭ್ರಾಂತಿಗೊಳಿಸಿದುವು. ಸಂಶೋಧನೆ ಮುಂದುವರಿದಂತೆ, ಫಾಸ್ಫೇಟ್‌ಗಳು ಬೇರಿನ ಬೆಳವಣಿಗೆಗೆ ಅತ್ಯುಪಯುಕ್ತವಾದ ವಸ್ತುಗಳೆಂದು ತಿಳಿದು ಬಂದಿತು. ಸರಿಯಾದ ರೀತಿಯಲ್ಲಿ ಫಾಸ್ಫೇಟ್‌ಗಳನ್ನು ಉಪಯೋಗಿಸುವುದರಿಂದ ಉತ್ತಮವಾದ ಬೆಳೆಯಾಗುವುದೆಂಬುದು ರಾಮನಿಗೆ ಗೊತ್ತಿರಲಿಲ್ಲ. ಈಗಗ್ರಾಮಾಂತರ ಹಾಗೂ ನಗರಗಳ 'ಕಂಪೋಸ್ಟ್' ಗೊಬ್ಬರಗಳೆರಡನ್ನೂ ಸುವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಲಾಗುತ್ತಿದೆ.

ಕೇವಲ ಉಳುವುದಿಂದ ಮಾತ್ರ ಜಮೀನು ಹದವಾಗುವುದಿಲ್ಲ. ಯಾವ ರೀತಿ ಉಳುಮೆ ಮಾಡಬೇಕೆಂಬುದನ್ನು ಅರಿಯುವುದು ಮುಖ್ಯ. ರಾಮನ ಕಾಲದಲ್ಲಿ ಉಳುಮೆಗಾಗಿ ಉಪಯೋಗಿಸಲಾಗುತ್ತಿದ್ದ ವಸ್ತುಗಳು ಉಪಯೋಗವಿಲ್ಲ. ಆಧುನಿಕ ಉಳುಮೆ ಯಂತ್ರದ ಉಪಯೋಗ ಹೆಚ್ಚು. ಬೇಸಾಯದ ಉಪಕರಣಗಳಿಗೆಲ್ಲಾ ಈ ತತ್ವ ಅನ್ವಯವಾಗುವುದು.

ಹಿಂದಿನ ಕಾಲದಲ್ಲಿ ಭೂಮಿಯನ್ನು ಉತ್ತ ನಂತರ ಬೀಜಗಳನ್ನು ಎರಚಲಾಗುತ್ತಿತ್ತು. ಆಗ ಸಾಲಾಗಿ ಬೀಜ ಬಿತ್ತುವ ವಿಷಯ ಗೊತ್ತಿರಲಿಲ್ಲ. ಈ ಬಿತ್ತನೆ ಪದ್ಧತಿಯು ಉತ್ತಮವಾದುದೆಂದು ಈಗ ಅನೇಕ ರೈತರ ಅನುಭವದ ಮಾತಾಗಿದೆ.

ಸರಿಯಾಗಿ ಬೀಜ ಬಿತ್ತುವುದೊಂದೇ ಸಾಲದು. 'ಯಾವ ರೀತಿಯ ಬೀಜ ಬಿತ್ತುವಿರಿ' ಎಂಬುದೂ ಮುಖ್ಯ. ರಾಮ ತನ್ನ ಹಳೆಯ ದಾಸ್ತಾನಿನಲ್ಲಿದ್ದ ಬೀಜವನ್ನು ಬಿತ್ತುತ್ತಿದ್ದ. ಅವನ ಮೊಮ್ಮಗನಿಗೆ ಉತ್ತಮವಾದ ಬೀಜದ ಕಾಳು ದೊರೆಯುವುದು.

ಉತ್ತಮವಾದ ಬಿತ್ತನೆಯ ಬೀಜ ಎಲ್ಲಿಂದ ಬರುತ್ತದೆ? ಸರ್ಕಾರದ ಹಲವು ಸಂಶೋಧನಾಲಯಗಳಲ್ಲಿ ನಡೆಸಿದ ಪ್ರಯೋಗದ ಫಲವಾಗಿ, ಹೆಚ್ಚಿನ ಬೆಳೆ ಕೊಡುವ, ಹೆಚ್ಚು ರೋಗ ನಿರೋಧಕ ಶಕ್ತಿಯುಳ್ಳ ಬೀಜಗಳನ್ನು ಕಂಡು ಹಿಡಿಯಲಾಗುವುದು.

(ಮುಂದಿನ ಪುಟಕ್ಕೆ)

* 17 Jewels, Glucidor Balance, Antimagnetic, Nivarox hairspring

	5120	5311	7936
Chromium Front Steel Back	Rs. 130/-	Rs. 130/-	–
Full Stainless Steel Case	Rs. 155/-	Rs 155/-	Rs. 158/-
20 Microns Rolled Gold Steel Back	Rs. 160/-	Rs 160/-	Rs 160/-

M. VAMAN NAYAK & SONS,
POST BOX NO. 8. MANGALORE-2.

INSIST ON Benlex STRAPS & BRACELETS

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂದ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಪಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ಒ ಔನ್ಸ್ ಸೀಸೆ ಗಿಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಕಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements — As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No 22, UDIPI, S K.

ಈಗ್ಗೆ ೩೦ ವರ್ಷಗಳ ಹಿಂದೆ ಕೊಳೆಕೆ ಬಾವಿಗಳನ್ನು ತೋಡಿ, ತನ್ನೊಲಕ ಬೇಸಾಯ ಮಾಡುವ ವಿಚಾರವು ಕೇವಲ ಕಲ್ಪನೆಯೆನ್ನಿಸಿತ್ತು. ಈಗ ಸಾವಿರಾರು ಮಂದಿ ರೈತರು ಕೊಳೆಕೆ ಬಾವಿಗಳ ಸಹಾಯದಿಂದಲೇ ಬೇಸಾಯ ಮಾಡುತ್ತಿರುವರು. ಭಾರತದಲ್ಲಿ ಅದು ತುಂಬಾ ಯಶಸ್ವಿಯಾಗಿದೆ.

ಪೈರುಗಳು ಬೆಳೆಯುತ್ತಿರುವ ಘಟ್ಟದಲ್ಲಿ ಅವುಗಳ ಬಗೆಗೆವಿಶೇಷ ರಕ್ಷಣೆ ಆಗತ್ಯ. ಕೀಟಗಳು ಮತ್ತು ರೋಗಗಳಿಂದ ಅವುಗಳನ್ನು ಮುಕ್ತಗೊಳಿಸಬೇಕಾಗುತ್ತದೆ. ವೈದಿಕ ರಕ್ಷಣೆ ಕೃಷಿ ಅಭಿವೃದ್ಧಿ ಕಾರ್ಯದಲ್ಲಿ ಮುಖ್ಯವಾದ ವಿಷಯವಾಗಿದೆ. ಕೀಟಗಳು ಮತ್ತು ರೋಗಗಳಿಗೆ ಔಷಧಿ ಭಾರತದಲ್ಲಿ ವರ್ಷದಲ್ಲಿ ಸೂರಕ್ಕೆ ಇಂದರಷ್ಟು ಬೆಳೆ ನಾಶಗೊಳ್ಳುವುದು. ಕಳೆಗಳ ಹತೋಟಿ, ಕಳೆಗಳ ನಾಶ, ಸಸ್ಯಕೀಟ ನಾಶ ಇತ್ಯಾದಿ ವಿಷಯಗಳ ಬಗೆಗೆ ಸತತವಾದ ಪ್ರಯೋಗಗಳನ್ನು ನಡೆಸಿ ಯಶಸ್ಸನ್ನು ಗಳಿಸಲಾಗಿದೆ.

ಕುಷ್ಟಿ ಬೇಸಾಯ ವಿಧಾನದಲ್ಲಿಯೂ ನಾಶಸ್ಟ ಪ್ರಗತಿಯಾಗಿದೆ. ಮಣ್ಣಿನ ರಕ್ಷಣೆಯ ಪ್ರಶ್ನೆಗೂ ಈಗ ತೀವ್ರ ಗಮನ ಕೊಡಲಾಗಿದೆ. ಪಡಗಳು ಇತ್ಯಾದಿಗಳನ್ನು ನಿರ್ಮಿಸಿ ಮಣ್ಣಿನ ಸವೆತವನ್ನು ತಡೆಹಿಡಿಯಲಾಗಿದೆ.

ಒಳ್ಳೆಯ ಸುಗ್ಗಿಯಾದರಷ್ಟೇ ಸಾಲದು. ಧಾನ್ಯಗಳನ್ನು ದಾಸ್ತಾನಿನಲ್ಲಿಡುವ, ಮಾರಾಟ ಮಾಡುವ ಪ್ರಶ್ನೆಯೂ ಬರುತ್ತದೆ. ಸಹಕಾರ ಮತ್ತು ವ್ಯವಸಾಯ ವಸ್ತುಗಳ ವರ್ಗೀಕರಣ ಚಳುವಳಿ ಈಗ ಬಳಕೆಯಲ್ಲಿದೆ. ಸಹಕಾರದಿಂದ ರೈತರ ಆರ್ಥಿಕ ಭದ್ರತೆ ಏರ್ಪಡುವುದು. ವಸ್ತುಗಳ ವರ್ಗೀಕರಣದಿಂದ ರೈತರಿಗೆ ತಮ್ಮ ವಸ್ತುಗಳಿಗೆ ಸರಿಯಾದ ಬೆಲೆ ದೊರೆಯುವುದು. ಹಣ್ಣುಗಳು ಮತ್ತು ತರಕಾರಿ ಕ್ಷೇತ್ರಗಳಲ್ಲಿಯೂ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿಯಲಾಗಿದೆ. ಹಣ್ಣನ್ನು ಕೆಡದಂತೆ ಡಬ್ಬಿಗಳಲ್ಲಿ ತುಂಬಿಸುವ ವಿಧಾನವನ್ನು ಪ್ರಯೋಗಗಳಿಂದ ನಿರ್ಧರಿಸಲಾಗಿದೆ.

ಪರಂ ಪಾಲನೆಯು ವ್ಯವಸಾಯದಲ್ಲಿ ಮತ್ತೊಂದು ಮುಖ್ಯವಾದ ಅಂಶವೆನ್ನಬಹುದು. ಇತ್ತೀಚೆಗೆ ಈ ಹಾದಿಯಲ್ಲೂ ತೀವ್ರವಾದ ಪ್ರಗತಿಯನ್ನು ಸಾಧಿಸಲಾಗಿದೆ. ಕೃತಕವೀರ್ಯ ಪ್ರಯೋಗ, ಇತ್ಯಾದಿ ವಿಧಾನಗಳಿಂದ ಭಾರತದಲ್ಲಿ ಪಶುಸಂಪತ್ತನ್ನು ಅಭಿವೃದ್ಧಿಗೊಳಿಸಲಾಗಿದೆ. ಹಿಂದೆ ಗೋವಾರಿ ರೋಗ ಭಯಂಕರವಾದ ರೋಗವೆಂದು ಪರಿಗಣಿಸಲಾಗಿತ್ತು. ಈಗ ಈ ರೋಗದ ಹಾವಳಿಯನ್ನು ಹತೋಟಿಗೆ ತಂದುಕೊಳ್ಳಲಾಗಿದೆ. ಜೈರಿಂಗಳನ್ನು ನಡೆಸುವುದರಲ್ಲಿ ಪ್ರಗತಿ ಸಾಧನೆಯಾಗಿದೆ. ಹಾಲಿನ ಪುಡಿಯ ಕೈಗಾರಿಕೆಯೂ ಅಭಿವೃದ್ಧಿಗೊಂಡಿದೆ.

ಪಶು ಶಾಸ್ತ್ರವೂ ಈಗ ರೈತನ ನೆರವಿಗೆ ಬರಹೊಡಗಿದೆ. ಹಿಂದೆ ರಾಮನು ಮಳೆಗಾಗಿ ಆಕಾಶ ನೋಡುತ್ತ ಮೋಡಗಳನ್ನು ನಿರೀಕ್ಷಿಸುತ್ತ ಕಾಯಬೇಕಾಗಿತ್ತು. ಈಗ ಅವನ ಮೊಮ್ಮಗನಿಗೆ ರೈತರಿಗಾಗಿ ಹೊರಡಿಸುವ ಹವಾಮಾನಗಳ ಪ್ರಕಟಣೆಯ ಸಾಲಭ್ಯ ದೊರೆಯುತ್ತದೆ. ಅದನ್ನನುಸರಿಸಿ ತನ್ನ ಬೇಸಾಯ ಕೆಲಸಗಳನ್ನು ವ್ಯವಸ್ಥೆಗೊಳಿಸಿಕೊಳ್ಳಬಲ್ಲನಾತ.

ವಿಮಾನ ಹಿಡಿಯುವ ಉದ್ಯೋಗದಲ್ಲಿ ಆಗಿರುವ ಅಭಿವೃದ್ಧಿ ಕಾರ್ಯವೂ ಮುಖ್ಯವಾದುದೇ. ಈ ಉದ್ಯೋಗವು ಗ್ರಾಮಾಂತರ ಪ್ರದೇಶದಲ್ಲಿ ಆಹಾರ ಉತ್ಪನ್ನವನ್ನು ಹೆಚ್ಚಿಸಲು ಪೂರಕವಾಗಿದೆ. ಅದರ ಜೊತೆಗೆ ರೈತರ ಜೀವನ ಮಟ್ಟವನ್ನು ಹೆಚ್ಚಿಸಲೂ ಅದು ಸಹಾಯಕವಾಗಿದೆ.

ಬೊಗಾಡಾಗಿದ್ದ, ರುಕ್ಷ ಪ್ರದೇಶಗಳಿಗೆ ನಿಸಿದ್ದ ಗುಡ್ಡಗಾಡು ಪ್ರದೇಶಗಳನ್ನು ಟ್ರಾಕ್ಟರ್‌ಗಳ ಸಹಾಯದಿಂದ ಹದಗೊಳಿಸಿ ಸಾಗುವಳಿಗೊಳಪಡಿಸಿದ್ದು ಸಾಮಾನ್ಯವಾದ ಕೆಲಸವೇನಲ್ಲ. ಬೇಸಾಯಕ್ಕೆ ಯಂತ್ರೋಪಕರಣಗಳ ಉಪಯೋಗ ದಿನೇ ದಿನೇ ಹೆಚ್ಚುತ್ತಿದೆ. ಈ ಬೇಸಾಯ ಸುಧಾರಣಾ ಪ್ರಯತ್ನಗಳನ್ನೆಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂಶೋಧನೆ ಮತ್ತು ಪ್ರಯೋಗಗಳ ಸಹಾಯದಿಂದ ಪೋಷಿಸಿಕೊಂಡು ಬಂದಿವೆ. ಬೇಸಾಯ ಸುಧಾರಣೆ ಹಾದಿಯಲ್ಲಾದ ಒಂದು ಮಹತ್ತರ ಪ್ರಯತ್ನವೆಂದರೆ, ಭಾರತ ಸರ್ಕಾರದ ಕೃಷಿ ಶಾಖೆಯವರ ಪ್ರಯತ್ನದಿಂದ ಬಳಕೆಗೆ ತರಲ್ಪಟ್ಟ ಚಪಾಸೀ ಪದ್ಧತಿಯಲ್ಲಿ ಭತ್ತವನ್ನು ಬೆಳೆಯುವುದು. ಮೂಲವಾದ ಅಂಶಗಳನ್ನು ರೈತರ ಗಮನಕ್ಕೆ ತರದ ಹೊರತು ಪ್ರಯೋಗ ವಿಜ್ಞಾನಕ್ಕೆ ಹೆಚ್ಚಿನ ಮಹತ್ವ ಬರುವುದಿಲ್ಲ.

ಅದಕ್ಕಾಗಿ ರೈತರಿಗೂ ಮತ್ತು ಗ್ರಾಮ ಸೇವಕರಿಗೂ ನಡುವೆ ಸಮನ್ವಯವೇರ್ಪಡುವ ಹೊಸ ತತ್ವವಾದ 'ವಿಸ್ತರಣೆ' ಸೇವೆಯ ಆರಂಭವಾಯಿತು. ಸಾರ್ವಜನಿಕ ಸಂಪರ್ಕ ಮತ್ತು ತಿಕ್ಷಣಗಳೆರಡನ್ನೂ ಸಾಧಿಸುವ ಜೀವಂತ ವಿಧಾನವಿದು. ಸಂಶೋಧನೆಯ ಫಲಿತಾಂಶಗಳನ್ನು ರೈತರ ಮನೆ ಬಾಗಿಲಿಗೆ ತರುವುದೂ, ರೈತರ ಸಮಸ್ಯೆಗಳನ್ನು ಪರಿಹಾರಾತಕ್ಕ ಸಲಹೆಗಳಿಗೆ ಸಂಬಂಧಪಟ್ಟವರಿಗೆ ಕಳುಹಿಸುವುದೂ ಗ್ರಾಮ ಸೇವಕರ ಕೆಲಸವಾಗುವುದು. ವಿಸ್ತರಣೆ ಸೇವೆಯ ಕೆಲಸಗಾರರು ಬೇಸಾಯ ತಂತ್ರಗಳಲ್ಲಿ ಸುಧಾರಣೆಯನ್ನು ಪ್ರೋತ್ಸಾಹಿಸುವುದಲ್ಲದೆ, ಗ್ರಾಮದಲ್ಲಿನ ಬೇಸಾಯ ಜೀವನದಲ್ಲಿ ಹೊಸ ಚೇತನವನ್ನು ತರುವರು. ರಾಮನಿಗೆ ಈ ಸೌಲಭ್ಯವೆಂದೆಂದಿಗೂ ದೊರೆತಿರಲಿಲ್ಲ. ಅವನ ಮೊಮ್ಮಗನಿಗೆ ಈ ಸೌಲಭ್ಯ ಸೌಕರ್ಯ ಉಚಿತವಾಗಿ ದೊರೆಯುತ್ತಿದೆ.

ವೃದ್ಧ ರಾಮನ ಮುಖದಲ್ಲಿ ಹರ್ಷ ತಾಂಡವಾಡುತ್ತಿದೆ. ಇಂದು ತನ್ನ ಮೊಮ್ಮಗನ ಕಾಲದಲ್ಲಿ, ಬೇಸಾಯ ವಿಧಾನದಲ್ಲಿ ಉಪಯುಕ್ತವಾದ ಸುಧಾರಣೆಗಳಾಗುತ್ತಿರುವುದನ್ನು ಅವನು ನೋಡುತ್ತಿದ್ದಾನೆ, ನೋಡಿ ಆನಂದಿಸುತ್ತಿದ್ದಾನೆ.

(೭ನೇ ಪುಟದಿಂದ)

ಉತ್ಪಾದನೆಯನ್ನು ಪ್ರಾರಂಭಿಸುವುದು.

ಸಮರ ಕಾಲದ ಸಾಮಾನು ಸರಂಜಾಮುಗಳು ಹಳೆಯದಾದಾಗ ಹೊಸ ಸಾಮಗ್ರಿಗಳನ್ನು ಕ್ರಮೇಣ ತುಂಬಲಾಗುವುದು.

ರಾಷ್ಟ್ರದ ಪ್ರತಿ ರಕ್ಷಣಾ ಕಾರ್ಯವು ಮುಖ್ಯವಾಗಿ ದಳಗಳ ಜವಾಬ್ದಾರಿಯಾದಾಗ್ಯೂ ಜನತೆಯ ವಿಶ್ವಾಸ, ಸ್ವಾವಲಂಬನೆ ಹಾಗು ಶಿಸ್ತನ್ನು ಆಧುನಿಕ ರಾಷ್ಟ್ರದ ಶಕ್ತಿಯು ಅವಲಂಬಿಸಿರುತ್ತದೆ ಇಕ್ಷ್ಯಯಲಿ ಕೆಡೆಟ್ ಕೋರ್‌ನಲ್ಲಿ ಈಗ ಐದು ಲಕ್ಷ ವಿದ್ಯಾರ್ಥಿಗಳು ಶಿಸ್ತು ಮತ್ತು ಸೈನಿಕ ಕರ್ತವ್ಯನ ಶಿಕ್ಷಣ ಹೊಂದುತ್ತಿದ್ದಾರೆ.

ವಯಸ್ಕರಿಗೆ ಅವರ ನಿತ್ಯದ ಕೆಲಸಗಳಿಗೆ ತೊಂದರೆಯಾಗದಂತೆ ಮಿಲಿಟರಿ ಶಿಕ್ಷಣವನ್ನು ಕೊಡುವುದಕ್ಕಾಗಿ ಟೆರಿಟೋರಿಯಲ್ ಸೇನಾ ಶಿಕ್ಷಣವನ್ನು ಏರ್ಪಡಿಸಲಾಗಿದೆ. ಇದು ರಾಷ್ಟ್ರದ ರಕ್ಷಣಾ ಪಡೆಗಳಿಗೆ ಅತ್ಯಮೂಲ್ಯ ಬೆಂಬಲವನ್ನೀಯುವುದಲ್ಲದೆ ಪ್ರತಿ ರಕ್ಷಣೆಯಲ್ಲಿ ಎರಡನೆಯ ಪಂಕ್ತಿಯಾಗಿರುವುದು.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಎಸ್.ಆರ್.
ಬೀಡಿಗಳು
25 ಬೀಡಿಗಳ ಕಟ್ಟುಗಳ
ಧೂಮ್ರಪಾನದ ಸಹಪಡವಾದ ಆನಂದಕ್ಕಾಗಿ
ಎಸ್.ಆರ್. ಬೀಡಿ ಧಕ್ಕೇ ಉಡುಪಿ ದ. ಕ.

ಮುಚ್ಚಿದರೆ ಮುಗುಳು! , ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿಪುವರಿಂದ

ಈಗ ೧೩ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಗೋವೆಯ ವಿಮೋಚನೆಗಾಗಿ ಆಂದೋಲನ

ಭಾರತವು ಸ್ವತಂತ್ರವಾಗಬೇಕೆಂದು ಸಂಕಲ್ಪಿಸಿದ್ದಾಗ ಬ್ರಿಟಿಸರು ಮಾತ್ರ ಇಲ್ಲಿಂದ ಹೊರಟರೆ ಸಾಕು ಎಂದು ಯಾರೂ ಅಭಿಪ್ರಾಯ ಪಟ್ಟಿರಲಿಲ್ಲ—ಬ್ರಿಟಿಷರಿದ್ದ ರೆಂತಲೇ ಫ್ರೆಂಚರೂ ಪೋರ್ಚುಗೀಜರೂ ತಮ್ಮ ತಮ್ಮ ತುಣುಕುಗಳಲ್ಲಿ ಉಳಿದಿದ್ದಾರೆ ಎಂದು ಜನರು ತಿಳಿದುಕೊಂಡಿದ್ದರು. ಬ್ರಿಟಿಸರ ಹಿಂದೆ ಇವರೂ ಭಾರತದಿಂದ ತಾವಾಗಿ ಕಾಲ್ತಿಗೆಯುವರೆಂದು ಊಹಿಸಲಾಯಿತು, ಫ್ರೆಂಚರು ಈ ಊಹೆಯಂತೆಯೇ ನಡೆದರು ಆದರೆ, ಪೋರ್ಚುಗೀಜರ ವರ್ತನೆಯಲ್ಲಿ ಇನ್ನೂ ಸುಯ ವಿನಯ ಕಾಣುತ್ತಿಲ್ಲ. ಗೋವೆಯ ಆವರ ವಸಾಹತು ವಿಮೋಚನೆಗೆಗೊಂಡು ಮಾತೃ ಭೂಮಿಯಾದ ಭಾರತದಲ್ಲಿ ಏಕೀಕೃತ ಹೊಂದಿದೆ ನಮ್ಮ ಸ್ವಾತಂತ್ರ್ಯದ ಪ್ರತಿಷ್ಠೆಯೂ ನಿಜಾರ್ಥದಲ್ಲಿ ನೆರವೇರುವುದಿಲ್ಲ ಈ ಸಂಗತಿಯನ್ನು ಭಾರತದಲ್ಲಿರುವ ಪರಕೀಯ ತುಣುಕುಗಳ ಎರುದ್ಧ ಸಂಘಟಿಸಲ್ಪಟ್ಟಿರುವ ಸಂಯುಕ್ತ ರಂಗದ ಅಧ್ಯಕ್ಷ ಶ್ರೀ. ಸಿ. ಡಿ ಸಿಗ್ಗಿ ಇಲ್ಲಿ ನಿವೇದಿಸಿದ್ದಾರೆ.

ಪರಕೀಯರ ಕೈಯಲ್ಲಿರುವ ವಸಾಹತು ಪ್ರದೇಶಗಳ ಸಮಸ್ಯೆಯು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದಂದಿನಿಂದ ತಲೆಯನ್ನು ತಿನ್ನ ಹತ್ತಿದೆ ದೊಡ್ಡ ಚಳವಳವನ್ನು ನಡೆಸಿದ ಬಳಿಕ ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಆದರ್ಶವನ್ನೇ ಅನುಸರಿಸಲು ಫ್ರೆಂಚರು ನಿಶ್ಚಯ ಗೈದಿದ್ದರೂ ಪೋರ್ಚುಗೀಸರು ಮಾತ್ರ ಇನ್ನೂ ಹಟಮಾರಿಗಳಾಗಿಯೇ ಉಳಿದಿದ್ದಾರೆ; ಭಾರತದಲ್ಲಿನ ಗೋವೆ ಎಂಬ ತಮ್ಮ ಸಾಮ್ರಾಜ್ಯಶಾಹಿ ಕೇಂದ್ರಕ್ಕೆ ಅವರು ಬಲವಾಗಿ ಅಂಟಿಕೊಂಡು ಕುಳಿತಿದ್ದಾರೆ.

ಭಾರತದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪೋರ್ಚುಗೀಜರು ಮೊದಲಿಗರೆನ್ನಬಹುದು-ಅವರನ್ನು ಹಿಂದಿನಿಂದ ಫ್ರೆಂಚರೂ ಡಚ್ಚರೂ ಅನುಸರಿಸಿದರು. ಗೋವೆ, ದಮಣ ಮತ್ತು ದೀವ್‌ಗಳೆಂಬ ಭಾರತದಲ್ಲಿನ ಪೋರ್ಚುಗೀಜ ವಸಾಹತುಗಳ ಒಟ್ಟು ವಿಸ್ತೀರ್ಣವು ೪೨೦೦ ಚದರ ಮೈಲು; ಒಟ್ಟು ಜನಸಂಖ್ಯೆಯ ಪ್ರಮಾಣ ೭ಲಕ್ಷ. ಇವರಲ್ಲಿ ಅರೆವಾಸಿಗಿಂತ ಸ್ವಲ್ಪ ಕಡಿಮೆ ಕ್ರೈಸ್ತರು.

ಮುಂಬಯಿಯಿಂದ ೨೦೦ ಮೈಲು ದಕ್ಷಿಣಕ್ಕಿರುವ ಗೋವೆಯು ಸಂತ ಫ್ರಾನ್ಸಿಸ್ ಜೇವಿಯರನ ಭೌತಿಕ ಅವಶೇಷ ನೆಲಸಿರುವ ಸ್ಥಳವೆಂದು ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿದೆ. ಅದು ಇನ್ನೂ ಪರಕೀಯರ ಪ್ರಭುತ್ವದಲ್ಲಿ ಉಳಿದಿರುವ ಭಾರತದ ತುಣುಕುಗಳಲ್ಲಿಯೇ ದೊಡ್ಡದು ಅಷ್ಟೇಯಲ್ಲ—ಭಾರತದಲ್ಲಿ ಪಶ್ಚಿಮದ ದೇಶಗಳವರ ಕೈಗೆ ಸೇರಿಹೋದ ಮೊದಲನೆಯ ಪ್ರದೇಶವು ಅದಾಗಿದೆ. ಬಿಜಾಪುರದ ಅದಿಲ ಶಾಹಿಗಳ ಕಾಲದಲ್ಲಿ ಸಮೃದ್ಧವ್ಯಾಪಾರದ ಕೇಂದ್ರವಾಗಿದ್ದ ಗೋವೆಯನ್ನು ಅಲ್ಫೊನ್ಸೊ ಡಿ ಅಲ್ಬುಕರ್ಕನು ವಿಜಯನಗರದ ಅರಸರ ನೌಕಾಪಡೆಯ ಸಹಾಯವನ್ನು ಪಡೆದು ೧೫೧೦ರಲ್ಲಿ ವಶಪಡಿಸಿಕೊಂಡನು. ಬಿಜಾಪುರದ ಅರಸರು ೧೫೪೬ರಲ್ಲಿ ಸಾಲ್ಸೆತ್ತನ್ನೂ ಬಾರ್ಡೆಸನ್ನೂ ಪೋರ್ಚುಗಾಲಿಗೆ ಬಿಟ್ಟುಕೊಟ್ಟರು. ಬಲಾತ್ಕಾರದಿಂದ ಹಿಂದುಗಳನ್ನೂ ಮುಸ್ಲಿಮರನ್ನೂ ಮತಾಂತರಿಸುವ ಕೆಲಸವು ನಿರಾತಂಕವಾಗಿ ನಡೆಯಿತಲ್ಲದೆ, ಪೋರ್ಚುಗೀಸ ಸೈನಿಕರು ನಿಷ್ಠುರತೆಯಿಂದ ಖಡ್ಗ ಪ್ರಯೋಗ ಗೈದು ಪ್ರಜೆಗಳ ಪೀಡನೆಯನ್ನೂ ಮಾಡತೊಡಗಿದರು.

ಕೇಂಬೆಯ ಕೊಲ್ಲಿಯ ಬಳಿಯಲ್ಲಿ ದಮಣವಿದೆ—ಅದರಲ್ಲಿ ದಮಣ, ಡ್ರಾಸ ಮತ್ತು ನಗರ ಹವೇಲಿಗಳೆಂಬ ವಿಭಾಗಗಳಿವೆ ನೂನೊ ಡಿ ಕುನ್ಹ ಎಂಬ ಪೋರ್ಚುಗೀಜನಿಂದ ಮುನ್ನಡೆಸಲ್ಪಟ್ಟ ಸೈನ್ಯವು ಇದನ್ನು ಕೇಂಬೆಯ ಸುಲ್ತಾನನಿಂದ ವಶಪಡಿಸಿಕೊಂಡಿತು. ಹಿಂದಿನಿಂದ ಸುಲ್ತಾನನು ಇದನ್ನು ತನ್ನ ವಶಕ್ಕೆ ತಂದುಕೊಂಡನು, ಆದರೆ ೧೫೫೬ರಲ್ಲಿ ಪೋರ್ಚುಗೀಸರಿಗೆ ಅವನು ಪುನಃ ಈ ಭಾಗವನ್ನು ಬಿಟ್ಟು ಕೊಡಬೇಕಾಯಿತು. ೬೬ ಚದರ ಮೈಲುಗಳಷ್ಟು ವಿಸ್ತೀರ್ಣದ ಈ ಪ್ರದೇಶದಲ್ಲಿರುವ ಜನಸಂಖ್ಯೆ ೬೫೦೦೦.

ದಮಣದ ವಾಯವ್ಯಕ್ಕೆ ೧೫೦ ಮೈಲುಗಳ ಅಂತರದಲ್ಲಿ ದೀವು ಇದೆ ದೀವು ಮತ್ತು ಪೌಲ ಕೋಟೆ ಎಂಬೆರಡು ಚಿಕ್ಕ ದ್ವೀಪಗಳು ಇಲ್ಲಿವೆ ಗೊಗೋಲ ಎಂಬ ಕರಾವಳಿಯ ಒಂದು ಚೂರು ಸಹ ಇದೆ. ಗೇರು ಬೀಜ, ಅಡಿಕೆ, ಮಾವಿನ ಹಣ್ಣು ಮತ್ತು ಕಬ್ಬು ಇಲ್ಲಿಯ ಮುಖ್ಯ ಕೃಷಿ ಉತ್ಪನ್ನಗಳಾಗಿವೆ.

ವಸಾಹತುಗಳಲ್ಲಿರುವ ಜನರ ಕಲ್ಪನೆಯನ್ನು ಭಾರತದ ಸ್ವಾತಂತ್ರ್ಯ ಸಂಗ್ರಾಮವು ಕೆರಳಿಸಿದೆ. ೧೯೪೭ರಲ್ಲಿ ಬ್ರಿಟಿಸರು ಭಾರತವನ್ನು ತೊಲಗಿ ಹೋದಾಗ ಅವರ ಮುದರಿಯನ್ನು ಫ್ರೆಂಚರೂ ಪೋರ್ಚುಗೀಜರೂ ಅನುಸರಿಸಿ, ತಮ್ಮ ಕೈಯಲ್ಲಿದ್ದ ವಸಾಹತುಗಳನ್ನು ಭಾರತಕ್ಕೆ ಹಸ್ತಾಂತರಿಸುವರೆಂದು ಎಲ್ಲರೂ ಭಾವಿಸಿದ್ದರು. ಮಾತೃ ಭೂಮಿಯ ಸ್ವಾತಂತ್ರ್ಯವು ಪರಕೀಯರ ತುಣುಕುಗಳಿಗೂ ಸ್ವಾತಂತ್ರ್ಯವನ್ನು ತರುವುದರಲ್ಲಿ ಮುಕ್ತಾಯವಾಗುವುದೆಂದು ಎಲ್ಲರೂ ಆಶಿಸಿದ್ದರು. ಫ್ರೆಂಚರು ನಿಜಕ್ಕೂ ಬ್ರಿಟಿಷರನ್ನು ಅನುಸರಿಸಿದರು — ಆದರೆ ಪೋರ್ಚುಗೀಸರು ಈ ತುಣುಕುಗಳಿಂದ ತೊಲಗಿ ಹೋಗುವುದರ ಬದಲಾಗಿ ಅವುಗಳನ್ನು ತಮ್ಮ ವಶದಲ್ಲಿ ಶಾಶ್ವತವಾಗಿ ಇಟ್ಟುಕೊಳ್ಳಲು ತಮಗಿರುವ ಅಧಿಕಾರದ ಕುರಿತು ಅಸಂಬದ್ಧ ಮಾತುಗಳನ್ನು ಹೇಳುತ್ತಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ತಾತ್ಪುರಪಟಕ್ಕೆ ಮಹತ್ವ ಸಲ್ಲುವ ಈ ದಿನಗಳಲ್ಲಿ, ವಸಾಹತು ಪ್ರದೇಶಗಳಿಗೆ ಸ್ವಯಂ ನಿರ್ಣಯಾಧಿಕಾರವಿರಬೇಕೆನ್ನುವ ಈ ವಾತಾವರಣದಲ್ಲಿ ಮಾತೃ ಭೂಮಿಯೊಡನೆ ಐಕ್ಯ ಹೊಂದಬೇಕೆಂಬ ನಮ್ಮ ಸಹೋದರರ ಹೋರಾಟ ನಿರ್ದಯವಾಗಿ ಪೋರ್ಚುಗೀಸರಿಂದ ಹತ್ತಿಕ್ಕಲಾಗುತ್ತದೆ. ಪೋರ್ಚುಗಾಲಿನ ತೀರ

ಧೇಬರರ ಸಂದೇಶ

೧೯೪೭ನೇ ಇಸವಿಯಿಂದಲೂ ಭಾರತದಲ್ಲಿರುವ ಪೋರ್ಚುಗೀಜ ವಸಾಹತುಗಳ ಸ್ವಾತಂತ್ರ್ಯದ ಪ್ರಶ್ನೆಯನ್ನು ತೀವ್ರವಾಗಿ ವಿಚಾರಿಸುತ್ತಾ ಜಾಗರಿಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ ಬಂದಿರುವ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಧೇಬರರು ತಮ್ಮ ಸ್ವಾತಂತ್ರ್ಯ ದಿನದ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ: "ಗೋವೆ, ದಮಣ ಮತ್ತು ದೀವಗಳಲ್ಲಿಯ ಸಾಗರಕರು ಭಾರತೀಯರ ಸುಖದುಃಖಗಳಲ್ಲಿ ಭಾಗವಹಿಸುವಂಥವರಲ್ಲಿ ನನಗೆ ಯಾವ ಸಂದೇಹವೂ ಇಲ್ಲ ದೇಶದ ಅಭಿವೃದ್ಧಿ ಕಾರ್ಯದಲ್ಲಿಯೂ ಅವರು ಭಾರತೀಯರೊಡನೆ ಒಂದಾಗುವುದು ನಿಶ್ಚಯ. ನಾವು ಪೋರ್ಚುಗೀಜರ ಕೈಯಲ್ಲಿ ಈಗ ಉಳಿದಿರುವ ವಸಾಹತುಗಳನ್ನು ಪ್ರತ್ಯೇಕಿಸಿ ಇಡಲು ಇಚ್ಛಿಸುವುದಿಲ್ಲ—ಅವು ಭಾರತದ ಅವಿಭಾಜ್ಯಅಂಗ."

ಸರ್ವಾಧಿಕಾರಿ ಮಾದರಿಯ ಸರಕಾರವು ಆಸ್ಟ್ರಿಯ ಮತ್ತು ಜೆಕೊಸ್ಲೊವಾಕಿಯಗಳಲ್ಲಿ ಹಿಟ್ಲರನು ಅನುಸರಿಸಿದ ವಿಧಾನಗಳನ್ನೇ ತಾನೂ ನಡೆಸುತ್ತದೆ.

ಪರಕೀಯರ ಈ ತುಣುಕುಗಳಲ್ಲಿ ಈಗ ಭಾರತ ಮತ್ತು ನೆಹರುಗಳನ್ನು ಪ್ರಶಂಸಿಸಿದ ಯಾವೊಬ್ಬನ ಆಸ್ತಿ ಮತ್ತು ಜೀವಕ್ಕೆ ಅಪಾಯವಿದೆ. ಬಿಳಿ ಟೋಪ್ಪಿ ಧರಿಸುವುದು ಮತ್ತು "ಜೈ ಹಿಂದ್" ಎಂದು ಘೋಷಿಸುವುದು ಗೋವೆಯಲ್ಲಿ ಮಹಾಪರಾಧವೆಂದು ಪರಿಗಣಿಸಲ್ಪಟ್ಟಿದೆ. ಮತ್ತು ಪೋಲೀಸರಿಂದ ಚಾಟಿಯೇಟು ಹಾಗು ಕೆಲವು ತಿಂಗಳ ಸೆರೆಮನೆ ವಾಸದ ಶಿಕ್ಷೆಯನ್ನವು ತರುತ್ತವೆ.

ಸೆರೆಮನೆಗಳ ವಾತಾವರಣದ ಕುರಿತು ಎಷ್ಟು ಕಡಿಮೆ ಹೇಳಿದೆವೋ ಅಷ್ಟು ಹಿತಕರ—ಗೋವೆಯ ಕಾರಾಗೃಹಗಳ ಒಳಗಡೆ ದಬ್ಬಲ್ಪಟ್ಟಿರುವ ಶಾಂತ, ಅಹಿಂಸಾತ್ಮಕ ಹಾಗು ನಿಶ್ಶಸ್ತ್ರ ಸತ್ಯಾಗ್ರಹಿಗಳನ್ನು ಬಂದೂಕಿನ ಮೊನೆಯಾದ ಕೊನೆಯಿಂದ ತಿವಿಯುವ ಮತ್ತು ಇತರ ಬಗೆಯಿಂದ ಚಿತ್ರಹಿಂಸೆಗೆ ಗುರಿಪಡಿಸುವ ನಿದರ್ಶನಗಳು ಅನೇಕ ಕಂಡು ಬಂದಿವೆ. ಈ ಸೆರೆಮನೆಗಳು ಸಾಕಷ್ಟು ಹೆಚ್ಚು ಅಳವನರಕ ಕೂಪಗಳಾಗಿಲ್ಲವೊ ಎಂಬಂತೆ ಲಿಸ್ಬನಿನ ಎದುಗಿರುವ ಪಿನಿಚೆ ದ್ವೀಪದ ಕಾರಾಗೃಹಕ್ಕೆ ರಾಷ್ಟ್ರೀಯ ಧುರೀಣರನ್ನು ಕಳಿಸಲಾಗುತ್ತದೆ. ಕೆಲವರನ್ನು ಅಫ್ರಿಕದಲ್ಲಿ ನಿಧಾನವಾದ ಸಾವನ್ನು ಅಪ್ಪಿಕೊಳ್ಳುವುದಕ್ಕೆ ರವಾನಿಸಿದ್ದಾರೆ.

ಪೋರ್ಚುಗೀಜರ ಇವೆಲ್ಲ ಛಳಿಸೆ ಮತ್ತ ದಬ್ಬಾಳಿಕೆಗಳದ್ದರೂ ಸಹ, ಗೋ

(ಮುಂದಿನ ಪುಟ ನೋಡಿರಿ)

ಡಿ. ಕಥೋಲಿಕ್ ಬೇಕ್ ಲಿಮಿಟೆಡ್, ಕುಂದಾಪುರ

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು, ನಮ್ಮ ಬ್ಯಾಂಕಿನಲ್ಲಿ ಬೆನ್ನದ ನಗಗಳ ಆಡಮಿನ ಮೇಲೆ ಸಾಲಪಡೆಕೊಂಡು ಕ್ಲಪ್ತ ವ್ಯಾಪಿಗೆ ಅಸಲು ಬಡ್ಡಿ ವಗೈರೆ ಸಲ್ಯಾಯಸದೆ, ಬಾಕಿಮಾಡಿಕೊಂಡಿರುವುದರಿಂದ, ಸದ್ರಿಯವರ ಸಾಲವನ್ನು ಬರೆಮಾಡಿಕೊಳ್ಳುವರೇ, ರಿಜಿಸ್ಟ್ರಿ ನೋಟೀಸಿನ ಮುಖಾಂತ್ರ ತಿಳಿಸಿದಾಗ್ಯೂ, ನಗಗಳನ್ನು ಬಿಡಿಸಿಕೊಂಡು ಹೋಗದೆಯಿರುವುದರಿಂದ, ಮತ್ತು ಕೆಲವರಿಗೆ ನೋಟೀಸು ಜಾರಿ ಆಗದೆ ವಾಪಾಸು ಬಂದಿರುವುದರಿಂದ, ಅಂತವರ ನಗಗಳನ್ನು ಯಿದೇ ಆಗೋಸ್ತು ತಿಂಗಳ ತಾರೀಕು 26ಕ್ಕೆ (ಶುಕ್ರವಾರ) ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ಅಗತ್ಯವಿದ್ದಲ್ಲಿ ಏಲಂಮನ್ನು ಮುಂದಿನ ನೋಟೀಸಿನ ಶಿವ್ಯಾ ಮುಂದರಿಸಲಾದೀತು.

ಸಾಲಪಡೆದ ತಾರೀಕು ಮತ್ತು ಸಾಲದ ನಂಬ್ರ	ಸಾಲ ಪಡೆದವರ ಹೆಸರು ಮತ್ತು ವಿಳಾಸ—.	ತಾ. 30-6-1955ರ ವರಿಗೆ ಬಡ್ಡಿ ಕೂಡ್ಸಿ ಬಾಕಿ ಆದ ಸೊಬಲಗು. ರೂ	ಆ	ಪೈ.
29/215 24-3-1953	ಶ್ರೀ ಕೆ. ಕೆರವಶಾಸ್, C/o. K. ರಾಮ ಚಂದ್ರಯ್ಯ ಟೀಚರ್, ಹರಿಜನ ಸ್ಕೂಲು. ಕುಂದಾಪುರ	157	6	0
29/478 3-6-1953	ಥ್ಯಲಿ ಮಂಜುನಾಥ ಸೇರೆಗಾರ, ಥ್ಯಲಿ ಸುಬ್ರಾಯ ಸೇರೆಗಾರರ ಮಗ, ಕಂದಾವರ ಗ್ರಾಮ, ಉಳ್ಳೂರು, ಕೋಣ P. O.	45	7	0
29 832 4-9-53	ಆರೋನ್ ಒಂಟೆರಾ, ರೆಸಾಯಿಲ್ ಬಲಿವೆರಾರ ಮಗ, ಹೆಮ್ಮಾಡಿ ಗ್ರಾಮ, ಕುಂದಾಪುರ	105	10	0
30/720 23-8-54	ಹಾಮೀದ್ ಸಾಹೀಬ್, ರಜಾಕ್ ಸಾಹೆಬರ ಮಗ, ಹೊಟೇಲ್ ಕೀಪರ್, ಕೋಡಿ P. O. ಕುಂದಾಪುರ.	12	7	0
30/131 27-2-1954	M. ಶಿವರಾಮ ಸೆಟ್ಟಿ ಟಿ ಕೊರ್ಗಯ್ಯ ಸೆಟ್ಟರ ಮಗ, ಹೊಳಪಳ್ಳಿ P. O ಕುಂದಾಪುರ	24	15	0
30/710 24-8-54	ಅಲ್ಫೋನ್ಸ್ ಡಿ ಸೋಜ, ಅಬ್ರಾಹಾಮ್ ಡಿ ಸೋಜರ ಮಗ ಟೈಲರ್, ಫರ್ನಾಂಡಿಸರ ಜವುಳಿ ಅಂಗಡಿಯಲ್ಲಿರುವವ, ಕುಂದಾಪುರ	23	1	0
30/840 14-9-54	ಶೀನಪ್ಪ ಸೆಟ್ಟಿ, ಗೆಳೆಯದ ಸೆಟ್ರು ಆಳಿಯ, ಬೆಳೂರು ಗ್ರಾಮ, ಕೋಟಾ P. O	31	0	0
29/906 23-9-53	B ಸಮಾಲಿನ ಸೆಟ್ಟಿ, B ಮಾಬ್ಲ ಸೆಟ್ರು ಆಳಿಯ, ದನ್ಯಾಡಿ ಮನೆ ಬೇಳೂರು ಗ್ರಾಮ ಕೋಟಾ P. O.	36	15	0
30/705 4-9-54	ಮಂಜುನಾಥ ಆಚಾರಿ, ವೀರಯ್ಯ ಆಚಾರಿ ಮಗ, ಪಡೇರಹೋಬಳಿ, ಕುಂದಾಪುರ	27	8	0

The Catholic Bank Ltd, Coondapoor, 12 8-1955 — J Menezes Agent.

(ಹಿಂದಿನ ಪುಟದಿಂದ)

ವೆ ಮತ್ತಿತರ ಪ್ರದೇಶಗಳಲ್ಲಿ ರಾಷ್ಟ್ರೀಯ ಚಳವಳಿಯ ಅಧಿಕ ಬೆಂಬಲವನ್ನು ಸಂಪಾದಿಸುತ್ತಾ ಬರುತ್ತದೆ. ರಾಷ್ಟ್ರೀಯ ಭಾವನೆಯ ಉಚ್ಚಾಟನೆಯನ್ನು ತಡೆಯಲು ನಿರಾಶರಾದ ಸಾಮ್ರಾಜ್ಯ ಶಾಹಿಗಳು ಕೈಗೊಂಡ ಅಂತಿಮ ಉಪಾಯಗಳಿಗೆ ನಿಡಂಬನಾತ್ಮಕ ಜನಮತ ಗಣನೆಯ ಕ್ರಮವನ್ನೂ "ಭಾರತದ ಸಾಮಾಜ್ಯಶಾಹಿ ಲಾಲಸೆ"ಯನ್ನು ಧಿಕ್ಕರಿಸುವುದಕ್ಕಾಗಿ ಸಂಘಟಿಸಿದ ಸಭೆಗಳನ್ನೂ ನಿದರ್ಶನವಾಗಿ ಕೊಡಬಹುದು.

ನಮ್ಮ ದೇಶಕ್ಕೆ ಪೋರ್ಚುಗೀಸರ ಕೈಯಲ್ಲಿರುವ ಈ ತುಣುಕುಗಳು ನೀಡುವ ಭಯವನ್ನು ಭಾರತೀಯರು ಎಷ್ಟು ಬೇಗನೆ ಮನವರಿಕೆ ಮಾಡಿಕೊಂಡರೊ ಅಷ್ಟು ಕ್ಷೇಮ. ಈ ತುಣುಕುಗಳು ಕಳ್ಳ ವ್ಯಾಪಾರಕ್ಕೆ ಅತಿಯಾದ ಸ್ವಾತಂತ್ರ್ಯವನ್ನು ನೀಡುವ ಕೇಂದ್ರಸ್ಥಾನಗಳಾಗಿರುವುದರಿಂದ ನಮ್ಮ ಆರ್ಥಿಕ ವ್ಯವಸ್ಥೆಗೆ ಗಂಡಾಂತರವನ್ನು ತರುತ್ತವೆ. ಯುದ್ಧ ಕಾಲದಲ್ಲಿ ಇವು ಪೋರ್ಚುಗೀಜರಿಂದ ನಿಸ್ಸಂಶಯವಾಗಿ ಸೈನಿಕ ಚಟುವಟಿಕೆಗಳ ಕೇಂದ್ರಗಳಾಗಿ ಉಪಯೋಗಿಸಲ್ಪಟ್ಟು ನಮ್ಮ ನಾಡಿಗೆ ಸಹ ಯುದ್ಧವನ್ನು ಸಂಕೋಚವಿಲ್ಲದೆ ಆಹ್ವಾನಿಸುತ್ತವೆ.

ಜಗತ್ತಿನ ವ್ಯವಹಾರದಲ್ಲಿ ಶಾಂತಿ ಸಾಧನೆಗೆ ಶ್ರಮಿಸುವ ನಮ್ಮ ಪಾತ್ರಕ್ಕೆ ಅನುಗುಣವಾಗಿಯೇ ಭಾರತ ಸರಕಾರದ ಧೋರಣೆಯು ಈಗಲೂ ಪರಕೀಯರ ವಶವಿರುವ ಈ ತುಣುಕುಗಳ ವಿಷಯದಲ್ಲಿ ಇದೆ ಎನ್ನಬೇಕಾಗುತ್ತದೆ. ಪ್ರತಿಯೊಂದೂ ವಿಷಯವನ್ನು ಮಾತುಕತೆಯ ಮೂಲಕ ತೀರ್ಮಾನಿಸಿಕೊಳ್ಳಬೇಕೆಂದೇ ಸರಕಾರದ ಇಚ್ಛೆಯಾಗಿರುವಂತೆ ತೋರುತ್ತದೆ.

ಆದರೆ ಈ ಬಗೆಯ ಉದಾರ ಧೋರಣೆಗೆ ಪೋರ್ಚುಗೀಸರ ಕಡೆಯಿಂದ ಸಹಕಾರ ದೊರೆಯದೆ ಹೋಗಿರುವುದು ವಿಷಾದಕರ. ಬಲಪ್ರಯೋಗಕ್ಕೆ ಹೇಸುವ ಭಾರತದ ಸುಪ್ರಸಿದ್ಧ ನೀತಿಯ ದುರುಪಯೋಗವನ್ನು ಪಡೆದುಕೊಂಡು ವಸಾಹತುಗಳಲ್ಲಿ ಭಯಕಾರಕ ಅಡಳಿತವನ್ನು ನಡೆಸಲು ಪೋರ್ಚುಗೀಜರು ಉದ್ಯುಕ್ತರಾಗಿದ್ದಾರೆ. ಗೋವೆಯು ಪೋರ್ಚುಗಾಲದ ಅಂಗವಾಗಿದೆ ಎಂದು ಘೋಷಿಸುವ ಯಾವ ಸಂದರ್ಭವನ್ನೂ ಸರ್ವಾಧಿಕಾರಿ ಸಾಲಾಝಾರರು ವ್ಯರ್ಥ ಹೋಗಗೊಡುವುದಿಲ್ಲ. ಪೋರ್ಚುಗೀಜರ ಅನುಚಿತ ವ್ಯವಹಾರಕ್ಕೆ ಪ್ರತಿಭಟನೆ ಸೂಚಿಸುವುದಕ್ಕೆಂದು ಭಾರತ ಸರಕಾರ ಎರಡು ವರ್ಷಗಳ ಹಿಂದೆ ಲಿಸ್ಬನಿನಲ್ಲಿರುವ ತನ್ನ ರಾಯಭಾರಿ ಕಚೇರಿಯನ್ನು ಮುಚ್ಚಿತು. ಈಚೆಗೆ ಹೊಸ ದೆಹಲಿಯಲ್ಲಿರುವ ಪೋರ್ಚುಗಾಲದ ರಾಯಭಾರಿ ಕಚೇರಿಯನ್ನು ಮುಚ್ಚಬೇಕೆಂದೂ ಅದು ಹೇಳಿತು.

ಪೋರ್ಚುಗೀಜರ ಕೈಯಲ್ಲಿರುವ ಈ ವಸಾಹತುಗಳನ್ನು ಯುದ್ಧ ಅಥವಾ ಮಾತುಕತೆಗಳಲ್ಲಿ ಒಂದರ ಮೂಲಕವಷ್ಟೇ ವಿಮೋಚನೆಗೊಳಿಸುವುದು ಸಾಧ್ಯ. ಶಾಂತಿಪ್ರಿಯ ರಾಷ್ಟ್ರವಾದ ಭಾರತವು ಮಾತುಕತೆಗಳ ವಿಧಾನವನ್ನೆ ಬಳಸಲು ಹಾತೊರೆಯುತ್ತಿದೆ; ಆ ನಿರ್ಧಾರಕ್ಕೆ ದೃಢವಾಗಿ ಅಂಟಿಕೊಂಡಿದೆ.

ಇಂದಿನ ನಮ್ಮ ಆದ್ಯ ಕರ್ತವ್ಯವೆಂದರೆ ಈ ವಸಾಹತುಗಳ ವಿಷಯದಲ್ಲಿ ಸರಕಾರದ ನೀತಿ ಏನೆಂಬುದನ್ನು ಜನರಲ್ಲಿ ಪ್ರಚಾರ ಮಾಡಿ, ಅವುಗಳು ಪ್ರಿಯವಾಗುವಂತೆ ನೋಡಿಕೊಳ್ಳುವುದೇ ಆಗಿದೆ. ನಮ್ಮ ನೆಲದ ಒಂದಂಗುಲ ಜಾಗದಲ್ಲೇ ಆಗಲಿ ಪರಕೀಯರ ಪ್ರಭುತ್ವದ ಸಂಕೇತವಾದ ಧ್ವಜವು ಹಾರಾಡುತ್ತಿದ್ದರೆ ಅಷ್ಟರ ವರೆಗೆ ಭಾರತವು ನಿಜವಾದ ಅರ್ಥದಲ್ಲಿ ಸ್ವತಂತ್ರ ರಾಷ್ಟ್ರ ಎಂದೆನಿಸಲಾರದು. ಅದರೆ ದುಡುಕಿ ನಡೆಯುವುದು ಮಾತ್ರ ಸಲ್ಲದು.

(೨ನೆ ಪುಟದಿಂದ)

ದು-ಸೀಬರ ಪ್ರಶ್ನೆಯನ್ನು ತೆಗೆದು ಕೊಳ್ಳೋಣ. ಇವರ ಸಂಬಂಧ ಬಹಳ ಹತ್ತಿರವಾಗಿದೆ--ಸೀಬರು ಹಿಂದುಗಳಿಗಿಂತ ಭಿನ್ನರಲ್ಲ. ರಾಷ್ಟ್ರಕ್ಕೆ ಗಂಡಾಂತರ ಬಂದಾಗ ಸೀಬರ ನೆರವನ್ನು ಭಾರತವು ಅಪೇಕ್ಷಿಸುತ್ತದೆ. ಆದಾಗ್ಯೂ ಹಿಂದು-ಸೀಬರಲ್ಲಿ ಪರಸ್ಪರ ಆರೋಪ-ಪ್ರತ್ಯಾರೋಪಗಳು ನಡೆಯುತ್ತಿರುವುದನ್ನು ಕಾಣುತ್ತೇವೆ. ಅವಿಶ್ವಾಸವೇ ಇವೆಲ್ಲದರ ಮೂಲ—ಇಂದು ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸುತ್ತಿರುವ ನಾವು ಇವೆಲ್ಲದರ ಬಗ್ಗೆ ವಿಚಾರ ಮಾಡಬೇಕು; ಮತ್ತು ಯೋಗ್ಯ ಜೀವನ ವಿಧಾನವನ್ನು ರೂಪಿಸಿಕೊಳ್ಳಬೇಕು.

(೬ನೇ ಪುಟದಿಂದ)

ಮಕ್ಕಳಿಗೆ ಸಮುದ್ರವೇ ಅತ್ಯುತ್ತಮ ಶಾಲೆಯಾಗಿದೆ ಎಂದು ಅಭಿಮಾನದಿಂದ ನುಡಿದನು. ಪರಂಪರಾಗತವಾಗಿ, ಸಂಪ್ರದಾಯದಂತೆ ನಡೆದು ಕೊಂಡು ಬಂದ ಉದ್ಯೋಗವು ನಿಜಕ್ಕೂ ಒಳ್ಳೆಯದನ್ನು ತರುವುದು ಎಂಬ ವಿಚಾರದಿಂದ ನನಗೆ ಅವನ ಮಾತು ಖೌದೆನಿಸಿತು. ಕಪ್ಪು ಬಣ್ಣದ ಈ ಚಿಕ್ಕ ಹುಡುಗರು ಸಮುದ್ರದಲ್ಲಿ ಹೆದರಿಕೆಯಿಲ್ಲದೆ, ಧೈರ್ಯದಿಂದ, ನಗ್ನರಾಗಿಯೇ ಮುನ್ನುಗ್ಗಿದಾಗ ನನ್ನಲ್ಲಿ ನಿಜಕ್ಕೂ ಮೆಚ್ಚಿಕೆಯ ಭಾವನೆ ಸುಳಿಯಿತು. ಹಾಗಾದರೆ, ಅವರು ಒಂದಾನೆಯನ್ನು ಏಕಾಗಿ ಬೇಡುತ್ತಾರೆ? ನಮ್ಮ ಮಕ್ಕಳ ಸಮಸ್ಯೆಯನ್ನು ಕುರಿತಾದ ಈ ಪ್ರಶ್ನೆಗೆ ಭಾರತದ ಎಲ್ಲೆಡೆಯಲ್ಲೂ ಅವಕಾಶ ಸಿಗುತ್ತದೆ. ಹೆತ್ತವರು ತಮ್ಮ ಸ್ವಾಭಿಮಾನವನ್ನು ಬಿಟ್ಟುಗೂಟ್ಟಿರುವಂತೆಯೇ ನಮಗೆ ಕಾಣುತ್ತದೆ; ತತ್ಪರಿಣಾಮವಾಗಿ ಅವರು ಮಕ್ಕಳಿಗೆ ಸುಲಭದಲ್ಲಿ ದುಡ್ಡನ್ನು ಸಂಪಾದಿಸಲು ಕಲಿಸುತ್ತಾರೆ!

ಹೀಗೆ ಮಧ್ಯಮವರ್ಗದಲ್ಲಿ ಪೇಟೆಯಲ್ಲಿ ಅವರಿಲಿ ಅಥವಾ ಹಳ್ಳಿಯಲ್ಲೇ ಇರಲಿ—ಸುಖಜೀವನದ ಆಶೆಯಿಂದ ಪ್ರೇರಿತವಾದ ಸಾಮಾಜಿಕ ಜಾಗೃತಿಯು ಬಲವಾಗಿ ವ್ಯಕ್ತವಾಗುತ್ತಿರುವಾಗ, ನಿನ್ನ ವರ್ಗದಲ್ಲಿ ತಮ್ಮ ಬಡತನವನ್ನು ಬೃಹದಾಕಾರದಲ್ಲಿ ವರ್ಣಿಸಿ ಭಿಕ್ಷೆಯನ್ನು ಪಡೆಯಲು ತಾವು ಅಧಿಕಾರ ಹೊಂದಿದ್ದೇವೆಂದು ತೋರಿಸಿಕೊಳ್ಳುವ ಪ್ರವೃತ್ತಿ ಕಂಡು ಬರುತ್ತದೆ. ಇದನ್ನು ಮೊಳಕೆಯಲ್ಲೆ ಮೊಟಕಾಗಿಸುವುದ. ಹೇಗೆ?

ಇಲ್ಲಿ ಬಹುಶಃ ಹೆಂಗಸರು ಸಹಾಯವನ್ನು ಮಾಡಬಲ್ಲರು—ಪರಾಧೀನತೆಯಿಂದ ಬಿಡುಗಡೆ ಹೊಂದುವುದನ್ನು ಮುಂದಿನ ಜನಾಂಗಕ್ಕೆ ಅವರೇ ಕಲಿಸಬಲ್ಲರು ತಲೆತಲಾಂತರದಿಂದ ನಾವು ನಂಬಿರುವಂತೆ, ಹೆಂಗಸು ಮನೆಯ ರಾಣಿಯಾಗಿದ್ದಾಳೆ. ಪ್ರಶ್ನಾರ್ಹವಾದ ರೀತಿಯಲ್ಲಿ ಗಂಡಸರು ಹಣ ಸಂಪಾದಿಸಿ ತರುವುದಕ್ಕೆ ಅವಳು ಅಕ್ಷೇಪವನ್ನು ವ್ಯಕ್ತಪಡಿಸಿದರೆ ಅವಳು ಮಧ್ಯಮ ವರ್ಗದ ಲೋಭತನವನ್ನು ನಿವಾರಿಸಬಲ್ಲಳು. ಸಮಾಜದಲ್ಲಿ ಮೇಲಿನ ವರ್ಗದವರು ಜೀವನ ನಿರ್ವಹಣದಪರಿಶುದ್ಧ ವಿಧಾನವನ್ನು ಸ್ವತಃ ಅನುಸರಿಸಿ ತೋರಿಸಿ ಕೊಟ್ಟರೆ, ಬಡವರೂ ಅದನ್ನು ಅನುಸರಿಸತೊಡಗುವುದು ನಿಶ್ಚಯ. ಮಧ್ಯವರ್ಗದ ಹೆಂಗಸರು ಬಡವರಿಂದ ತುಂಬಿದ ಗುಡಿಸಲು ಪ್ರದೇಶ ಇತ್ಯಾದಿಗಳತ್ತ ವಿಶೇಷ ಗಮನವನ್ನು ನೀಡಿದರೆ ಅವರಿಂದಲೂ ಮಹದುಪಕಾರವಾಗುತ್ತದೆ. ಹೆಚ್ಚು ಸಂಖ್ಯೆಯಲ್ಲಿ ವಿಸ್ತಾರಗೊಳ್ಳುತ್ತಿರುವ ಮಹಿಳಾ ಕಾರ್ಯಕರ್ತೆಯರ ಸೈನ್ಯವು ಪ್ರಗತಿಯ ಬೀಗದ ಕೈಯನ್ನು ತನ್ನಲ್ಲಿ ಇಟ್ಟುಕೊಂಡಿದೆ ಎಂದರೆ ತಪ್ಪಾಗದು.

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು

ಇವರ 1876ನೇ—ಇಸವಿಯಿಂದಲೂ

ಪ್ರಸಿದ್ಧಿಹೊಂದಿದ ಔಷಧಿಗಳು.

ಧಾತು ಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಕದ ಮಿಶ್ರಿತ) ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳ ಜ್ವರ, ಅಶಕ್ತತೆ, ಮಲಬದ್ಧತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ವೀರ್ಯವೃದ್ಧಿ ಉಂಟುಮಾಡುವುದು. ಮಾನಸಿಕ ಮತ್ತು ಕಾಯಶಕ್ತಿ ಹೆಚ್ಚಿಸುವುದು. ಡಬ್ಬಿ 1ರ ರೂ. 3—8—0.

ಕಸ್ತೂರಿ ಮಿಶ್ರಣ ದಶಮೂಲ ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. 24 ಔನ್ಸ ರೂ. 5—0—0, 12 ಔನ್ಸ ರೂ. 2-12—0, 8 ಔನ್ಸ ರೂ. 1—12—0.

ಚವನಪ್ರಾಶ (ಬಂಗಾರ ಮಿಶ್ರಿತ) ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಪೌಂಡು 1ರ ರೂ. 5—8—0. ½ ಪೌಂಡಿಗೆ ರೂ. 3—8—0

ಅಶೋಕಾರಿಷ್ಟ ಮತ್ತು **ಮಾತ್ರೆ** ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಬಾಟ್ಲಿ 1ರ ರೂ. 3—8—0

ಗರ್ಭ ರಕ್ಷಕ ಗರ್ಭಿಣಿಯರಿಗೆ ಉಂಟಾಗುವ ವಾಂತಿ, ಅರುಚಿ, ಅಶಕ್ತತೆ, ಜೆವಿರೋಗ, ವಾಯು ಉಪದ್ರ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಗರ್ಭಕ್ಕೆ ಶಕ್ತಿಯನ್ನು ಉಂಟು ಮಾಡುವುದು. ಬಾಟ್ಲಿ 1ರ ರೂ. 3—8—0.

ಔಷಧಿ ಸಿಕ್ಕುವ ಸ್ಥಳ:— 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ದಿಲ್ಬಾ ರೋಡ್, ಬ್ಯಾಕುಲ್ಲಾ ರೈಲ್ವೆ ಸ್ಟೇಶನ್ ಎದುರು ಬ್ಯಾಕುಲ್ಲಾ ಬೊಂಬಾಯಿ. 2) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, G. I. P. ಮಾಟುಂಗಾ, ಬೊಂಬಾಯಿ. 3) ಕುಮಟಾ ಫಾರ್ಮೆಸಿ, ಕುಮಟಾ. 4) ಯೆ. ಗಣಪತಿ ನ್ಯಾಕ್, ಮರ್ಚೆಂಟ್, ಕಾಸರಗೋಡು. 5) ಪೈ ಫಾರ್ಮೆಸಿ, ಪುತ್ತೂರು. 6) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. 7) ಕಾಂತಾವರ ವಾಸ್ತೇವ ಕಂಪ್ನಿ, ಬೆಳ್ತಂಗಡಿ. 8) ಕೆ. ವೆಂಕಟೇಶ ನ್ಯಾಕ್, ಗುರುವಾಯನ ಕೆರೆ. 9) ಎಚ್. ನರಸಿಂಹ ನ್ಯಾಕ್, ಶಂಕರ ನಾರಾಯಣ. 10) ಬಿ. ಗೋವಿಂದ ನೈ ಬೆಳ್ಳಾರೆ 11) ಹೊಮ್ಯೊಪೆಥಿಕ್ ಡಿಸ್‌ಪೆನ್‌ಸರಿ, ಪಂಜ.



ಮಕ್ಕಳ ಮಗ್ಗಿ ಪುಸ್ತಕ

ಬೆಲೆ 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.

ಸಮಾಜ ವಿಕಾಸ ಕಾರ್ಯ — ಜನತೆಯ ಯೋಜನೆ

(೪ನೇ ಪುಟದಿಂದ)

ರೆಂದೂ ಹೊಸ ವಿಚಾರಗಳನ್ನು ಗ್ರಹಿಸಲು ಇಷ್ಟಪಡುವುದಿಲ್ಲವೆಂದೂ ಹೇಳುತ್ತಿದ್ದವರ ಮಾತನ್ನು ಕೂಡಲೇ ಸುಳ್ಳಾಗಿಸಿತು. ಬದಲಿಗೆ, ಈ ಬಗೆಯ ಕಾರ್ಯಕ್ರಮವನ್ನು ವಿಸ್ತರಿಸುವಬೇಡಿಕೆಯೇ ಬರಲಾರಂಭವಾಯಿತು. ಆದರೆ ಸರಕಾರದ ಆದಾಯ ಮಿತವಾಗಿತ್ತು; ಯೋಗ್ಯ ತಾಂತ್ರಿಕ ಸಿಬಂಧಿಯ ಅಭಾವವೂ ವಿಶೇಷವಾಗಿತ್ತು—ಹಾಗೆಂದು ಜನರ ಬೇಡಿಕೆಯು ನಿರಾಕರಿಸಲಾಗದಷ್ಟು ಹೆಚ್ಚಾಗಿತ್ತು. ಕಾರಣ, ಸರಕಾರದವರು ಸಮಾಜ ವಿಕಾಸ ಯೋಜನೆಯಷ್ಟು ವ್ಯಾಪಕವಲ್ಲದ ಹಾಗು ಕಾಲವಿಳಂಬವಿಲ್ಲದೆ ಎಲ್ಲ ಹಳ್ಳಿಗಳಿಗೂ ವಿಸ್ತರಿಸಲು ಅನುಕೂಲವಾದ ರಾಷ್ಟ್ರೀಯ ವಿಸ್ತರಣೆ ಸೇವೆ ಎಂಬ ಹೊಸ ಯೋಜನೆಯನ್ನು ರೂಪಿಸಿದರು. ಸಮಾಜ ವಿಕಾಸ ಕೇಂದ್ರಗಳಲ್ಲಿ ವ್ಯಾಪಕ ಮಟ್ಟದಲ್ಲಿ ಅಭಿವೃದ್ಧಿ ಪ್ರಯತ್ನಗಳು ನಡೆಯುತ್ತಿದ್ದರೆ ರಾಷ್ಟ್ರೀಯ ವಿಸ್ತರಣೆಯ ಸೇವಾ ಕ್ಷೇತ್ರಗಳಲ್ಲಿ ಅಗತ್ಯವೆನಿಸಿದ ಮೂಲ ಸಿಬಂಧಿಯನ್ನೂ ಸ್ವಲ್ಪಾಂಶ ಧನವನ್ನೂ ಸರಕಾರ ನೀಡಿ, ತನ್ಮೂಲಕ ಜನರು ಸ್ವಂತ ಸಹಾಯವೆಂಬ ತತ್ವದ ತಳಹದಿಯ ಮೇಲೆ ಪುನಾರಚನೆಯ ಚಳವಳದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಈಗ ನಿರ್ಮಾಣಾವಸ್ಥೆಯಲ್ಲಿದೆ. ರಾಜ್ಯಸರಕಾರಗಳ ಅಭಿವೃದ್ಧಿ ಕಮಿಶನರರು ಭಾಗವಹಿಸಿದ ಅಖಿಲಭಾರತ ಸ್ವರೂಪದ ಸಮಿತಿಯು ದ್ವಿತೀಯ ಯೋಜನೆಯ ಅಂತ್ಯದೊಳಗೆ ಎಲ್ಲ ಹಳ್ಳಿಗಳನ್ನೂ ರಾಷ್ಟ್ರೀಯ ವಿಸ್ತರಣೆಯ ಸೇವೆಗೆ ಗುರಿಪಡಿಸಬೇಕೆಂದೂ ಈ ಹಳ್ಳಿಗಳಲ್ಲಿ ಅರ್ಧದಷ್ಟನ್ನು ವ್ಯಾಪಕ ಮಟ್ಟದ ಸಮಾಜವಿಕಾಸ ಕಾರ್ಯಕ್ರಮದ ಕ್ಷೇತ್ರವಾಗಿ ರೂಪಿಸಬೇಕೆಂದೂ ಸಲಹೆ ಮಾಡಿದೆ. ಈ ಮಹಾ ಕಾರ್ಯಕ್ರಮದ ಬೇಡಿಕೆಯನ್ನು ಪೂರೈಸಲಾಗುವಂತೆ ಎಲ್ಲ ರಂಗಗಳಲ್ಲೂ ಯೋಗ್ಯತರಬೇತಿಯನ್ನು ನೀಡುವ ಕೆಲಸವನ್ನು ವಿಸ್ತರಿಸಲಾಗುತ್ತಿದೆ.

ಭಾರತದ ಅಭಿವೃದ್ಧಿಯ ಗುರಿಯನ್ನಿಟ್ಟುಕೊಂಡ ಈ ಯೋಜನೆಗೆ ಗಾತ್ರದಲ್ಲಿ ಜಗತ್ತಿನಲ್ಲಿಯೇ ಎಣೆ ಇರಲಾರದು; ಅದರ ವಿವರಗಳು ಜೀವನದ ಎಲ್ಲ ಅಂಗಗಳನ್ನೂ—ಆದಿಭೌತಿಕ ಅನುಕೂಲತೆಯಿಂದ ಆಧ್ಯಾತ್ಮಿಕ ಕ್ಷೇಮವನ್ನಿನ ವರೆಗೆ—ಒಳಗೊಳ್ಳುತ್ತವೆ. ಭಾರತದ ಎಲ್ಲ ಭಾಗಗಳಿಂದಲೂ ಸಂದರ್ಶನ ಬಂದು ಯೋಜನೆ ಕಾರ್ಯಗತಗೊಳ್ಳುತ್ತಿರುವುದನ್ನು ನೋಡಿದ್ದಾರೆ; ಮತ್ತು ಹಿಂದುಳಿದವರೆಂದು ಹೇಳಲಾದ ಹಳ್ಳಿಯ ಸಹೋದರ—ಸಹೋದರಿಯರು ನಡೆಸುತ್ತಿರುವ ಪ್ರಯತ್ನದ ಪ್ರಮಾಣವನ್ನೂ ಸರಕಾರದ ಆಡಳಿತಾಂಗವು ತನ್ನ ದಂತದ ಗೋಪುರದಿಂದ ಇಳಿದು ಬಂದು ಜನತೆಯೊಡನೆ ಕೆಲಸ ಮಾಡುತ್ತಿರುವುದನ್ನೂ ಅಧಿಕಾರೇತರ ಧುರೀಣರು ಜನರಲ್ಲಿ ಉಸನ್ನಾಳ ಮುಂತಾದವುಗಳಿಂದ ನವ ಜಾಗೃತಿ ಮಟ್ಟಿಸುವುದನ್ನೂ ಕಂಡು ಇವರೆಲ್ಲ ಆಶ್ಚರ್ಯ ಚಕಿತರಾಗಿದ್ದಾರೆ.

ಭಾರತವು ಇನ್ನೂ ಹಿಂದುಳಿದಿರುವ ಆರ್ಥಿಕ ಮತ್ತು ಪಶ್ಚಿಮ ಹಾಗು ಆಗ್ನೇಯ ಏಶ್ಯದ ನಡುವೆ ನಿಂತಿರುವ ದೇಶ. ಈ ಭೌಗೋಳಿಕ ಸ್ಥಾನ ಮಹತ್ವ, ಸಂಸ್ಕೃತಿ ವಸ್ತು ಸಂಪ್ರದಾಯಗಳ ಪರಂಪರೆ, ಜನತೆಯ ನಿಲವು ಒಲವುಗಳಲ್ಲಿ ಕಂಡು ಬರುವ ವೈವಿಧ್ಯ ಮತ್ತು ಸಂಖ್ಯೆಯ ದೊಡ್ಡ ಪ್ರಮಾಣ—ಇವೆಲ್ಲವನ್ನು ಮನಗಂಡರೆ ಪ್ರಜಾಸತ್ತಾತ್ಮಕ ವಿಧಾನದಲ್ಲಿ ಅಭಿವೃದ್ಧಿ ಪ್ರಯತ್ನಗಳನ್ನು ಮೇಲೆ ಉಲ್ಲೇಖಿಸಿದ ಭೂಖಂಡಗಳ ವ್ಯಾಪಕ ಕ್ಷೇತ್ರದಲ್ಲಿ ಹೇಗೆ ಮುಂದೊತ್ತಬಹುದೆಂಬುದನ್ನು ಮನಗಾಣಿಸಿಕೊಡುವ ಪಲಯವಾಗಿ ಭಾರತ ಮೆರೆಯಬಲ್ಲುದು. ಸಮಾಜ ವಿಕಾಸ ಚಟುವಟಿಕೆಗಳು ಈಗ ಭೂಗೋಲದ ಎಲ್ಲ ದೇಶಗಳಿಗೂ ವಿಸ್ತರಿಸಲ್ಪಡುತ್ತಿವೆ—ಭಾರತವು ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಲಿದೆಎಂಬುದು ನಮಗೆ ಅಭಿಮಾನದ ವಿಷಯ ಇದರಲ್ಲಿ ಭಾರತಕ್ಕೆ ಜಯ ದೊರೆತರೆ—ಜಯ ಸಿಗಲೇಬೇಕು. ಮಾನವನ ಭವಿಷ್ಯದ ಮೇಲೆ ನಿಯಂತ್ರಣವನ್ನೀಗ ಇಟ್ಟುಕೊಂಡಿರುವ ಭಯ ಮತ್ತು ದ್ವೇಷಗಳ ಮಾನಸಿಕ ಕ್ಲೇಶದಿಂದ ಬಿಡುಗಡೆಯ ಹೊಸ ದಾರಿಯನ್ನು ಭಾರತವು ತೋರಿಸಿದಂತಾಗುತ್ತದೆ.

ಭಾರತ ಸರಕಾರವು ಇಂತಹ ಸಮಾಜವಾದಿ ಮಾದರಿಯ ಸಮಾಜರಚನೆಗೆ ಬದ್ಧ ಕಂಕಣವಾಗಿದೆ. ಆದರೆ ಯಾವುದೇ ಸಮಾಜವನ್ನು ಮೇಲಿನಿಂದ ಕಟ್ಟುವುದು ಸಾಧ್ಯವಿಲ್ಲ. ಸಮಾಜವು ಪಸೈಗಳಂತೆ ನೆಲದ ಮಟ್ಟದಿಂದ ಮೇಲಕ್ಕೆ ಬೆಳೆಯುತ್ತಿರುವ ಒಂದು ಸಜೀವ ಸಂಸ್ಥೆ—ಸಮಾಜ ವಿಕಾಸ ಯೋಜನೆಯ ಕಾರ್ಯಕ್ರಮವು ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ಬಗೆಯ ಹುರುಪನ್ನು ಉಂಟು ಮಾಡಿದೆ. ನಾವು ಶತಮಾನಗಳಿಂದ ಪಿತೃ ಧನದಂತೆ ಪಡೆದು ಬಂದ ಕೊಳಚೆ ಮತ್ತು ಆಲಸ್ಯವನ್ನು ಸುಟ್ಟು ಬಿಟ್ಟು ನೂತನ ಗುರಿಯ ಯಾತ್ರೆಯಲ್ಲಿ ಭಾಗವಹಿಸಲಾಗುವಂತೆ ನಮ್ಮನ್ನು ಪರಿಶುದ್ಧಗೊಳಿಸಬಲ್ಲ ಅಗ್ನಿಯನ್ನದು ಪ್ರತಿಷ್ಠಾಪಿಸಿ ಜ್ವಲಂತವಾಗಿಟ್ಟಿದೆ.

ಸಮಾಜವಾದಿ ಮಾದರಿಯ ಸಮಾಜ ರಚನೆ ಎಂದರೆ, ಮನುಷ್ಯನಿಗೆ ಬದುಕುವ ಅಧಿಕಾರವಿರಬೇಕು, ಬದುಕಲಿಕ್ಕಾಗಿ ಕೆಲಸ ಮಾಡುವ ಅಧಿಕಾರ ವಿರಬೇಕು ಮತ್ತು ತಾನು ಗಳಿಸಿದುದನ್ನು ಕೈಗೆ ಸಡೆದುಕೊಳ್ಳುವಅಧಿಕಾರವಿರಬೇಕುಎಂಬ ಅರ್ಥವಾಗುತ್ತದೆ. ಆದರೆ ಇವೆಲ್ಲ ಸಾಧ್ಯವಾಗಬೇಕಾದರೆ ಅವನು ಹೊಡಲು ಗಳಿಸಲು ಅನುಕೂಲವಾದ ವಾತಾವರಣವನ್ನು ಏರ್ಪಡಿಸಿಕೊಳ್ಳಬೇಕು. ಜನತೆಯನ್ನು ನಮ್ಮ ಸ್ವಂತ ಪ್ರಯತ್ನಗಳಿಂದ ನಾತ್ರ ತುಂಬಿಸಿಕೊಳ್ಳಬಹುದು. ಭಾರತದ ಮಹಾ ಸೊತ್ತೆಂದರೆ ಕೋಟ್ಯಾಂತರಸ್ವಪ್ರಮಾಣದಲ್ಲಿರುವ ಪ್ರಜೆಗಳ ಶಕ್ತಿಯೇ ನಿಜ. ಇದನ್ನು ಚೆನ್ನಾಗಿ ಉಪಯೋಗಿಸಿಕೊಳ್ಳದಿದ್ದರೆ ಈ ಮನುಷ್ಯ ಶಕ್ತಿ ಸಾಲರೂಪದ ಹೊರೆಯಾಗಿ ಪರಿಣಮಿಸುತ್ತದೆ ಎಂಬುದೂ ನಿಜ. ರಚನಾತ್ಮಕ ಕ್ರಿಯೆಗಳಲ್ಲಿ ಉದ್ಯುಕ್ತನಾಗುವವನಾ ಯೋಗ್ಯ ವಸ್ತು ಹಾಗು ವಿಷಯಗಳನ್ನು ರಕ್ಷಿಸಿಕೊಳ್ಳುವವನೂ ನಾರಕ್ಕೆ ಮುಂದಾಗುವವನೂ ಮನುಷ್ಯನೇ ಆಗಿದ್ದಾನೆ. ಸಮಾಜ ವಿಕಾಸ ಯೋಜನೆಯು ಭಾರತದ ಪ್ರಜೆಗಳಲ್ಲಿ ನಿಹಿತವಾಗಿರುವ ಅಪಾರ ಶಕ್ತಿಯನ್ನು ಕ್ರಿಯಾತ್ಮಕ ಕ್ಷೇತ್ರಕ್ಕೆ ಬಿಡುಗಡೆಗೊಳಿಸುವ ಪವಿತ್ರ ಸಾಧನವಾಗಿದೆ. ಆದನ್ನು ಕುರುಕ್ಷೇತ್ರದ ಹೊಸ ಯುದ್ಧವೆಂದು ಕರೆದರೂ ತಪ್ಪಲ್ಲ—ಆದರೆ ಇಲ್ಲಿ ಅಣ್ಣತಮ್ಮಂದಿರು ತಮ್ಮತಮ್ಮೊಳಗೆ ಸಮರಕ್ಕೆ ಇಳಿದಿಲ್ಲ; ಇದು ಎಲ್ಲರ ಸಮಾನ ಗುರಿಯನ್ನು ಮುಟ್ಟುವ ಪ್ರಯತ್ನದಲ್ಲಿ ಪರಸ್ಪರ ಹೆಗಲು ಕೊಟ್ಟು, ಮುನ್ನಡೆಯಲು ಸಹೋದರರೆಲ್ಲ ಒಟ್ಟಾಗಿರುವ ಕುರುಕ್ಷೇತ್ರ!

ದಿ. ವಿಜಯಾ ಬೇಂಕ್, ಲಿ., ಬೈಂದೂರು. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಬೇಂಕಿನಿಂದ ಜಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ಸ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿನೋಟೀಸುಗಳು ಕಾರಣಾಂತರಗಳಿಂದ ನಮಗೆನೇ ಪಾಪಾಸು ಬರುವುದರಿಂದಲೂ; ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ನಗಗಳನ್ನು ಇದೇ ಆಗೋಸ್ತು ತಿಂಗಳ ತಾ. 26ನೇ ಬುಧವಾರ ಅಪರಾಹ್ನ ಗಂಟೆ 3-೦ಕ್ಕೆ ಯಾ-ಬೇಂಕಿಗೆ ಯುಕ್ತಕಂದ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ, ಬೇಂಕಿನ ವರಾಂದದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಯಿತು. ತಿಳಿದಿರಲಿ.

ಸಾಲದ ಜಂಜಾ ಸಂಖ್ಯೆ	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.	ಪೈ.
146/52	ಶ್ರೀ ಯು. ತಿಮ್ಮಪ್ಪ ಶೆಟ್ಟಿ. ಮಂಜಯ್ಯ ಶೆಟ್ಟರ ಆಳಿಯ, ಮಾಯ್ಯೆಯ್ಯ ಶೆಟ್ಟರ ಮನೆ ಉಪ್ಪುಂದ P. O.	20	13	0
590/52	,, ಸಿ. ಸುಬ್ಬಣ್ಣ ಶೆಟ್ಟಿ. ಮಾಯ್ಯೆಯ್ಯ ಶೆಟ್ಟರ ಆಳಿಯ, ಚೀಕನಮಕ್ಕಿ, ಹೇರೂರು ಗ್ರಾಮ. ನಾವುಂದ P. O.	70	11	0
598/52	,, ಸುಬ್ರಾಯ ಲಿಂಗ ಮಡಿವಾಳ. ಲಿಂಗನ ಮಗ. ಶಿರೂರು ಗ್ರಾಮ, ಶಿರೂರು.	152	15	0
744/52	,, ಸೇಜ್ಕುಳಿದಾರ. ಲಿಂಗಯ್ಯ ಕೋಟಾರಿಯ ಆಳಿಯ ತಗ್ಗರ್ಸೆ ಗ್ರಾಮ, P. O. ಮಯ್ಯಾಡಿ.	67	4	0
136/53	,, D. K. ಖೂರಾ ಸಾಹೇಬ. ಅಬೂಮಹಮ್ಮದ್ ಸಾಹೇಬರ ಮಗ. ಕೇರಿ; ಬೈಂದೂರು.	186	13	0
376/53	—do—	129	0	0
203/53	,, ಸೇಜಿ ಉಸ್ಮಾನ್ ಸಾಹೇಬ. ಕಳಿಪಿತ್ತಿಲು ಅಹ್ಮದನ ಮಗ. ಶಿರೂರು.	23	4	0
283/53	,, ನಾಗೂರು ಶಂಕರ ಪೈ ನಾಗಪ್ಪ ಪೈಯವರ ಮಗ. ನಾಗೂರು ಗ್ರಾಮ. ಕಿರಿಮಂಜೇಶ್ವರ P. O.	140	13	0
143/54	—do—	197	5	0
207/54	—do—	201	8	0
598/53	,, ಬಿ. ಸೇಷಯ್ಯ. ಪ್ರೊಹಿಬಿಷನ್‌ಗಾರ್ಡ. ಬೈಂದೂರು ಹಾಲಿ ಉಳ್ಳಾಳ ಸ್ಟೇಷನಿನಲ್ಲಿರುವವರು.	13	8	0
827/53	,, ದಾಸಾನಾಡಿ ಹಸಿದ್ದೀನ್ ಸಾಹೇಬ. ಇಬ್ರಾಹಿಮ ಸಾಹೇಬರ ಮಗ. ಶಿರೂರು.	29	15	0
912/53	,, ತುಂಬಿಗದ್ದೆ ಮಂಜುನಾಥ ಸೇರುಗಾರ. ನಾಗಪ್ಪ ಸೇರುಗಾರರ ಮಗ. ಬಾಡ, ಬೈಂದೂರು.	38	8	0
509/54	,, V. ಜನಾರ್ಧನ ಹಂದೆ. ಲಕ್ಷ್ಮೀನಾರಾಯಣ ಹಂದೆಯವರ ಮಗ. ಗೋಳಿ ಹೊಳೆ ಗ್ರಾಮದ ಶ್ಯಾನುಭಾಗ್, ಯೇಳಜಿತ್. P. O.	33	10	0
510/54	—do—	55	13	0
511/54	—do—	471	3	0
525/54	,, ಬೇರೆಮನೆ ವೆಂಕಟ್ರಮಣ ಸೇರುಗಾರ. ದಾಸಪ್ಪ ಸೇರುಗಾರರ ಮಗ, ಕೋಟಿಬಾಗಿಲು, ಪಡುವರಿ.	14	9	0
533/54	,, ಹವಾಲ್ದಾರ ಸೇಸಯ್ಯ ಸೇರುಗಾರ. ದಾಸಪ್ಪ ಸೇರುಗಾರರ ಮಗ. ಕೋಟಿಬಾಗಿಲು. ಪಡುವರಿ.	27	14	0
545/54	,, M. ಪೆಂಕಟ್ರಮಣ ಸೇರುಗಾರ. ಸೇಷಯ್ಯ ಸೇರುಗಾರರ ಮಗ, ಮದೋಡಿ. ಮಯ್ಯಾಡಿ. P. O.	36	14	0
566/54	,, ಭೆಟ್ರಕಾರ್ಸ. ದುರ್ಗಯ್ಯನ ಮಂಜನ ಮನೆ, ಅಮ್ಮನವರ ತೊಪ್ಪಲು. ಉಪ್ಪುಂದ.	54	10	0
589/54	,, ಯರುಕೋಣೆ ಕುಪ್ಪಯ್ಯ ಶೆಟ್ಟಿ. ದುಗ್ಗಪ್ಪ ಶೆಟ್ಟರ ಆಳಿಯ, ಹೇರೂರು ಗ್ರಾಮ. ನಾವುಂದ ಪೋಸ್ಟು.	246	0	0
609/54 ,,	ನಾರಾಯಣ ಗಾಣಿಗ. ಶಿರೂರು ಗ್ರಾಮದ ಉಗ್ರಾಣಿ ಶಿರೂರು.	66	8	0
647/54 ,,	ಮಾಂಡುರಂಗ ಪೈ. ನರಸಿಂಗ ಪೈಯವರ ಮಗ. ಮಟ್ಟಿನ ಹೊಳೆ, ಕಾಲ್ತೋಡು ಗ್ರಾಮ, ಕಾಲ್ತೋಡು, ಪೋಸ್ಟು.	93	5	0
680/54 ,,	ಕೆ. ಮಂಜುನಾಥ ನಾಯಕ್, ಕೃಷ್ಣಪ್ಪ ನಾಯಕರ ಮಗ ಕಂಬದಕೋಣೆ.	77	2	0
684/54 ,,	ಗೋಳಿಹೊಳೆ ಖೂರಾ ಸಾಹೇಬ, ಹೈದ್ರುಸ್ ಸಾಹೇಬರ ಮಗ, ಗೋಳಿ ಹೊಳೆ ಗ್ರಾಮ, ಯೇಳಜಿತ್, P. O.	18	13	0
669/54 ,,	ಬಿ ಅಣ್ಣಪ್ಪ ಬಳೆಗಾರ, ನಾರಾಯಣ ಬಳೆಗಾರನ ಮಗ ಬಳೆ ಪ್ಯಾಕಾರಿ, ಹೂ ಮಾರ್ಕೆಟು ಬಳಿ, ಕುಂದಾಪುರ.	152	12	0
732/54 ,,	ನಾಕಟ್ಟೆ ಸೇಷ ಶೆಟ್ಟಿ, ದಾರ ಶೆಟ್ಟರ ಆಳಿಯ, ಬೈಂದೂರು,	33	4	0
761/54 ,,	ತಿಮ್ಮಪ್ಪ ಸೇರುಗಾರ, ಪಟಾವದ ಮಂಜಯ್ಯ ಸೇರುಗಾರರ ಮಗ, ಕೋಟಿಬಾಗಿಲು, ಪಡುವರಿ, P. O.	22	2	0

ಬೈಂದೂರು
ತಾ. 12-8-55

ಎಚ್. ರಾಜೀವ ಶೆಟ್ಟಿ
ಏಜಂಟ್

ಸತ್ಯವಾದ ಭವಿಷ್ಯ — ಜಗತ್ತಿನಲ್ಲಿ ಭಾರತದ ಪಾತ್ರ

(೯ನೇ ಪುಟದಿಂದ)

ಪಶ್ಚಿಮದಿಂದ ತಾನುಪಡೆದು ಕೊಳ್ಳಬಹುದಾದುದಕ್ಕಿಂತ ಎಷ್ಟೋ ಹೆಚ್ಚು ಬೆಲೆಯ ಅಂಶವನ್ನು ಜಗತ್ತಿನ ಸಂಸ್ಕೃತಿಗೆ ಅದು ನೀಡುವುದೆಂದೂ ಹೇಳಿದ್ದರು.

"ಏಶ್ಯದಿಂದ ಸಮೃದ್ಧಿ" ಪುಸ್ತಕವು ಗಂಭೀರದಲ್ಲಿ ಪ್ರಕಟವಾದ ಬಳಿಕ ಭಾರತವು ತುಂಬ ಆಶ್ಚರ್ಯಕರವಾದ ಮತ್ತು ಕ್ಷಿಪ್ರವಾದ ಪರಿವರ್ತನೆಗಳನ್ನು ಹೊಂದಿದೆ. ಈ ವಿಧಾನದಲ್ಲಿ ಅದರ ಕೃತ್ಯ ಏನನ್ನೆಲ್ಲ ಸೂಚಿಸಿದ್ದರೋ—ಮುಖ್ಯವಾಗಿ ವಿದೇಶಾಂಗ ನೀತಿಯ ಕುರಿತು ಏನು ಹೇಳಿದ್ದರೋ—ಅವೆಲ್ಲವೂ ಅಕ್ಷರಶಃ ಸತ್ಯವಾಗಿ ಪರಿಣಮಿಸಿವೆ.

ಸ್ವಾತಂತ್ರ್ಯ ಪ್ರಾಪ್ತಿಯು ಆಹಿಂಸಾತ್ಮಕ ಒತ್ತಡ ಮತ್ತು ಮನಃ ಕಷಾಯವಿಲ್ಲದ ಹೋರಾಟದ ಕ್ರಾಂತಿಕಾರಿ ಪದ್ಧತಿಯ ಫಲಿತಾಂಶವಾಗಿತ್ತಲ್ಲದೆ ಜಗತ್ತಿನ ಚರಿತ್ರೆಯಲ್ಲಿಯೇ ಅಭೂತಪೂರ್ವವಾದ ದಾಖಲೆಯಾಗಿ ಪರಿಣಮಿಸಿತು. ಅನಂತರದ ಪ್ರಾಮುಖ್ಯ ಪರಿವರ್ತನೆಯೆಂದರೆ, ಗಣರಾಜ್ಯ ಸ್ವರೂಪದ ಘಟನೆಯು ಹಾಗು ಸಂಸತ್ತಾತ್ಮಕ ಶಾಸನಾಂಗದ ಸ್ವೀಕಾರ. ತೃತೀಯ ಪರಿವರ್ತನೆಯೆಂದರೆ ನಾವೊಂದು ಕಲ್ಯಾಣ ರಾಷ್ಟ್ರವನ್ನು ಕಟ್ಟಲು ಪೆಣಗುತ್ತೇವೆ ಎಂಬ ಧ್ಯೇಯವಾಕ್ಯ. ನಾಲ್ಕನೆಯ ಹಾಗು ಇತ್ತೀಚಿಯ, ಅದರೆ ಬಹಳ ವ್ಯಾಮುಖ್ಯತೆಯಿಂದ ಕೂಡಿರುವ ಬದಲಾವಣೆಯೆಂದರೆ ಸಮಾಜವಾದಿ ಮಾದರಿಯ ಸಮಾಜ ರಚನೆಯಾಗುವಂತೆ ಧೋರಣೆಯನ್ನು ರೂಪಿಸಿಕೊಳ್ಳುವ ಸಂಕಲ್ಪ.

ಕಳೆದ ಎಂಟೇ ವರ್ಷಗಳ ಅವಧಿಯಲ್ಲಿ ಇವೆಲ್ಲ ನಡೆದಿವೆ. ಜನರು ತಿಮ್ಮ ಮುಂದಾಳುಗಳೊಡನೆ ಹೆಜ್ಜೆ ಇಡುತ್ತಿದ್ದಾರೆಂಬುದೂ ಪರಕೀಯರ ಕೈಯಲ್ಲಿದ್ದು ಪರಕೀಯರ ಹಿತಾಸಕ್ತಿಯನ್ನಷ್ಟೇ ಗಮನಿಸಲು ಸಮರ್ಥರಾಗುವಂತೆ ರೂಪಿಸಲ್ಪಟ್ಟಿದ್ದ ಆಡಳಿತ ಯಂತ್ರವು ಸಾರ್ವಜನಿಕರ ಅಭಿಪ್ರಾಯಕ್ಕೆ ಉದಾರವಾದ ಪ್ರತಿಕ್ರಿಯೆಯನ್ನು ತೋರಿಸುತ್ತಿದೆಯೆಂಬುದೂ ಕ್ಷುಲ್ಲಕ ಸಾಧನೆಯಾಗಿಲ್ಲ. ಜನಪ್ರಿಯ ಧೋರಣೆಗಳನ್ನು ಆಡಳಿತ ಯಂತ್ರವು ಈಗ ಶೀಘ್ರಗತಿಯಿಂದಲೂ ಕಾರ್ಯಕ್ಷಮತೆಯಿಂದಲೂ ಕಾರ್ಯಗತ ಗೊಳಿಸುತ್ತಿದೆ. ಪೊಲಿಸನೆಯ ಪಂಚವಾರ್ಷಿಕ ಯೋಜನೆಯ ಅವಧಿಯು ತನ್ನ ಯಶಸ್ವಿ ಮುಕ್ತಾಯದ ಘಟ್ಟಕ್ಕೆ ಸಮೀಪವಾಗಿ ಬಂದಿದೆ; ದ್ವಿತೀಯ ಪಂಚವಾರ್ಷಿಕ ಯೋಜನೆಯ ರೂಪರೇಖೆಗಳಿಗೆ ನಿರ್ಣಯವಾಗುತ್ತಿವೆ.

ಆದರೆ ಇವೆಲ್ಲಕ್ಕಿಂತಲೂ ಹೆಚ್ಚು ಮಹತ್ವದ ವಿಷಯವು ಭಾರತದ ವಿದೇಶಾಂಗ ಧೋರಣೆಯಲ್ಲಿ ವ್ಯಕ್ತವಾಗಿದೆ. ಕಳೆದ ಕೆಲವೇ ವರ್ಷಗಳ ಅವಧಿಯಲ್ಲಿ ಅದು ಜಗತ್ತಿಗೆ ಮಹತ್ವ ಪೂರ್ಣವಾಗಿ ತೋರಿದೆ. ಕ್ವೇಣ ಶಮನವನ್ನು ಮಾಡಿ ಜಾಗತಿಕ ಶಾಂತಿಯನ್ನು ನೆಲೆಗೊಳಿಸುವಲ್ಲಿ ಭಾರತವು ನೀಡಿದ ಪಾಲಿಗೆ ನಾಕಷ್ಟು ಅಧಿಕ ಪ್ರಮಾಣವಲ್ಲದೆ ಎಂದು ಪ್ರತಿಯೊಬ್ಬನಿಗೂ ಮನವರಿಕೆಯಾಗಿದೆ. ಶಸ್ತ್ರ ಹಾಗು ಸೈನ್ಯ ಬಲದಿಂದಾಗಲೀ ಚಾಣಕ್ಯ ತಂತ್ರದ ಮಾದರಿಯ ರಾಜಕೀಯ ಚಾತುರ್ಯಗಳಿಂದಾಗಲೀ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತವು ಇಂದಿನ ಸ್ಥಾನ ಮಾನವನ್ನು ಪಡೆದಿಲ್ಲ. ಕೇವಲ ನೈತಿಕ ಶಕ್ತಿಯೊಂದೇ ಭಾರತವನ್ನು ಜಗತ್ತು ಗೌರವಿಸುವಂತೆ ಮಾಡಿದೆ. ತನ್ನ ನಿಸ್ವಾರ್ಥ ಹಾಗು ಸ್ಥಿತ ಪ್ರಜ್ಞವೃತ್ತಿ, ಯಾವುದೇ ಶಕ್ತಿ ಕೂಟಗಳ ಪ್ರಭಾವಲಯದಿಂದ ಹೊರಗುಳಿಯುವ ನಿರ್ಧಾರ, ಸತ್ಯಕ್ಕೆ ಕಟ್ಟುಬೀಳುವ ಸಂಕಲ್ಪ, ವ್ಯವಹಾರದಲ್ಲಿ ಸ್ವಾಭಿಮಾನವನ್ನು ರಕ್ಷಿಸಿ ಗೌರವವನ್ನು ಉಳಿಸಿಕೊಂಡು ಹೋಗುವ ಮನೋಭಾವ, ಎಷ್ಟೇ ತ್ಯಾಗವನ್ನು ಅನುಭವಿಸಬೇಕಾಗಿ ಬಂದರೂ ಶಾಂತಿಯುತ ಮಾರ್ಗವನ್ನೆ ಅನುಸರಿಸುವ ಹಂಬಲ—ಇವೆಲ್ಲವೂ ಎಷ್ಟೇ ದೊಡ್ಡ ಸೈನಿಕ ಹಾಗು ಇತರ ಬಗೆಯ ಶಕ್ತಿಗಳಿಂದಲೂ ಪೂರೈಸಲ್ಪಡಲಾರದ ಅಗಾಧ ನೈತಿಕ ಶಕ್ತಿಯನ್ನು ಭಾರತಕ್ಕೆ ಸಂಪಾದಿಸಿಕೊಟ್ಟಿವೆ.

ಭಾರತವು ಸಹಜೀವನ ಮತ್ತು ಸಹಕಾರದಲ್ಲಿ ವಿಶ್ವಾಸವಿಡುತ್ತದೆ; ಇದೊಂದೇ ಶಾಂತಿಯಿಂದ ಬದುಕಿ ಉಳಿಯುವ ಮಾರ್ಗ ಎನ್ನುತ್ತದೆ. ಇದು ಬೇಡವೆಂದಾದರೆ ಸರ್ವನಾಶವೇ ಗತಿ! ಈ ನಗ್ನ ಸತ್ಯವನ್ನು ಎಲ್ಲ ಶಕ್ತಿ ಸಂಪನ್ನ ರಾಷ್ಟ್ರಗಳವರೂ ಪ್ರಗತಿಪರವಾಗಿ ತಿಳಿಯುತ್ತಾ ಬರುತ್ತಿದ್ದಾರೆ. ಸಹಜೀವನದ ತಳಹದಿಯನ್ನು ರೂಪಿಸಿರುವ ಪಂಚಶೀಲಗಳು ಜನಪ್ರಿಯವಾಗಿವೆಯಷ್ಟೇಯಲ್ಲ ಮಹಾರಾಷ್ಟ್ರಗಳೂ ಅವನ್ನು ಪುಷ್ಟೀಕರಿಸತೊಡಗಿವೆ. "ಶಿಖರ" ಸಮಾಲೋಚನೆಗಳಲ್ಲಿ ಭಾಗವಹಿಸಿದ ಸದಸ್ಯರು ಸಹ ಈ ತತ್ವಗಳ ಮುಂದೆ ಅಪ್ರತ್ಯಕ್ಷವಾಗಿಯಂದಲೇ ಆಗಲಿ ತಲೆ ತಗ್ಗಿಸ ಬೇಕಾಯಿತು. ಅಣು ಯುದ್ಧದ ವಿರುದ್ಧವಾಗಿಯೂ ಶಾಂತಿಯ ಪರವಾಗಿಯೂ ಸಂಘಟಿತವಾದ ಜಾಗತಿಕ ಅಭಿಪ್ರಾಯದ ಒತ್ತಡವೂ "ಶಿಖರ" ಸಮಾಲೋಚನೆಯು ಉಪಯುಕ್ತ ಘಟನೆಯಾಗುವುದಕ್ಕೆ ಸ್ವಲ್ಪ ಮಟ್ಟಿನ ನೆರವನ್ನಿತ್ತಿತು.

ಕೊರಿಯದಲ್ಲಿ ಯುದ್ಧವನ್ನು ನಿಲ್ಲಿಸಲು ಭಾರತ ವಹಿಸಿದ ಪಾತ್ರ, ಒಂದು ವರ್ಷದ ಹಿಂದೆ ಇಂಡೋ ಚೀನದ ಕುರಿತಾದ ಜನೇವ ಪರಿಷತ್ತಿಗೆ ಅದು ನೀಡಿದ ಸಹಕಾರ, ಈಚೆಗೆ ರಶ್ಯದಲ್ಲಿ ಹಾಗು ಇತರ ಕೆಲವು ಐರೋಪ್ಯ ದೇಶಗಳಲ್ಲಿ ಪ್ರಧಾನಿ ಜವಾಹರಲಾಲರು ಕೈಗೊಂಡ ಶಾಂತಿಯ ಚೈತ್ರ ಯಾತ್ರೆ ಮತ್ತು ಶಕ್ತಿ ಕೂಟಗಳನ್ನು ಹತ್ತಿರಕ್ಕೆ ತರುವಲ್ಲಿ ಭಾರತದ ಧೋರಣೆಯು ಮಾಡಿದ ಒಟ್ಟು ಪರಿಣಾಮ—ಇವೆಲ್ಲದರ ಗೌರವ ನಿಶ್ಚಯವಾಗಿಯೂ ಭಾರತಕ್ಕೆ ಸಲ್ಲುತ್ತದೆ. ಪರಿಸ್ಥಿತಿಯಲ್ಲಿ ಈಗ ಕಂಡು ಬರುವ ಬದಲಾವಣೆಯು ಹೆಚ್ಚಿನ ಅಂತಾರಾಷ್ಟ್ರೀಯ ಶಾಂತಿ ಮತ್ತು ಯುದ್ಧವನ್ನು ಅನಾಗರಿಕ ವರ್ತನೆ ಎಂದು ನಿಯಮ ಬಾಹ್ಯ ಮಾಡುವ ಕಡೆಗೆ ಪರಿಣಮಿಸೀತೆಂದು ಅಶಿಸೋಣ! ರಾಷ್ಟ್ರಗಳ ಹಾಗು ಗುಂಪುಗಳ ನಡುವಣ ಹಿತಾಸಕ್ತಿಗಳ ಘರ್ಷಣೆಯನ್ನು ಕಡಿಮೆ ಮಾಡುವಲ್ಲಿ, ಶಾಂತಿ ಮತ್ತು ಸೈನಿಕ ವಿಧಾನಗಳ ಮಧ್ಯೆ ನಡೆದಿರುವ ಮಾನವ ಹೋರಾಟದಲ್ಲಿ, ಭಾರತವು ಇನ್ನೂ ಅಧಿಕ ಪ್ರಾಮುಖ್ಯತೆಯ ಪಾತ್ರವನ್ನು ವಹಿಸುವುದೆಂದೂ ಭಾವಿಸೋಣ!

ಏಶ್ಯ ಮತ್ತು ಆಫ್ರಿಕ ಖಂಡದ ದೇಶಗಳ ಜಾಗೃತಿ ಮತ್ತು ಮುಂದಿಟ್ಟ ಹೆಜ್ಜೆಯ ಸರಿಯಾದ ತಿಳಿವಳಿಕೆ ಮತ್ತು ಪರಾಂಬರಿಕೆ. ಶಾಂತ ವಿಧಾನದಲ್ಲಿ ವಿಶ್ವಾತ್ಮಯಾವುದೇ ಸಮಸ್ಯೆಯ ಪರಿಹಾರಕ್ಕೆ ಯುದ್ಧವು ಒಂದು ಸಾಧನವೆಂಬುದರಲ್ಲಿ ಸಂಪೂರ್ಣ ಅಪನಂಬಿಕೆ, ಪರಸ್ಪರ ವಿನಾಶ ಹಾಗು ಮಾನವ ಜನಾಂಗದ ಅಂತ್ಯದ ಬದಲಿಗಿರುವುದು ಸಹಕಾರ ಮತ್ತು ಸಹಜೀವನ ಮಾತ್ರ ಎಂಬ ಮಾತಿನಲ್ಲಿ ಶ್ರದ್ಧೆ, ಪಂಚಶೀಲಗಳಲ್ಲಿಯೂ, ಕ್ರಿಯಾತ್ಮಕ ತಾಟಸ್ಥ್ಯದಲ್ಲಿಯೂ ನಿಷ್ಠೆ—ಇವೆಲ್ಲವನ್ನು ಭಾರತದ ಧೋರಣೆಯ ಮೂಲಭೂತ ಅಂಶಗಳೆಂದು ಹೇಳಬಹುದು. ಇವೆಲ್ಲವೂ ಇಷ್ಟರ ವರೆಗೆ ಭಾರತವನ್ನು ಯಶಸ್ವಿಯಾಗಿ ಮುನ್ನಡೆಸಿವೆ ನಿಕಟ ಭವಿಷ್ಯದಲ್ಲಿ ಸಹ ಇವು ರಾಷ್ಟ್ರಕ್ಕೆ ಸರಿಯಾದ ಮಾರ್ಗದರ್ಶನವನ್ನು ಮಾಡಬಲ್ಲವೆಂಬ ಆಶೆಗೆ ನಿಜಕ್ಕೂ ಅವಕಾಶವುಂಟು!

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೩—೦; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ೧೦ರೂಪಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್ ಉಡುಪಿ

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲಭಾಷಾಂತರ

ನವಯುಗ ಪ್ರೆಸ್, ಉಡುಪಿ.

ದಿ ಸಿಟಿ ಟೈಪ್ ಫೌಂಡರಿ
ಚಿಕ್ಕಪೇಟೆ, ಬೆಂಗಳೂರು ಸಿಟಿ.

* * *

ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಷಿನ್‌ಗಳೂ, ಮೌಲ್ಡುಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.

ವಿವರಗಳಿಗೆ ಇಂದೇ ಬರೆಯಿರಿ.

THE CITY TYPE FOUNDRY
CHICKPET, BANGALORE CITY.

4% ಮದ್ರಾಸು ಸರಕಾರದ ಸಾಲ 1967

ನಿಮ್ಮ ಜಿಲ್ಲೆಯ ಮತ್ತು ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಬೇಕಾಗಿ ಮದ್ರಾಸು ಸರಕಾರವು ಎತ್ತುವ ಈ ಸಾಲಕ್ಕೆ ನೀವು ಚಂದಾ ತೆತ್ತಿರುವಿರೇ?

ಈ ಬಗ್ಗೆ ನಿಮ್ಮಲ್ಲಿ ತಯಾರಿಸಿಟ್ಟ ಹಣವಿಲ್ಲದಿದ್ದಲ್ಲಿ ಸ್ಟೇಟ್ ಬೇಂಕ್, ಕೆನರಾ ಬೇಂಕಿಂಗ್ ಕೋರ್ಪರೇಶನ್ ಮತ್ತು ಇಂಡಿಯನ್ ಬೇಂಕ್ ಮೊದಲಾದ ಬೇಂಕುಗಳಲ್ಲಿ ನ್ಯಾಯವಾದ ಶರ್ತಗಳ ಮೇಲೆ ಮುಂಗಡ ಪಡೆಯಬಹುದು.

ಇಂದೇ ನಿಮ್ಮ ತಹಶೀಲ್ದಾರರನ್ನು ಹೆಚ್ಚಿನ ಮಾಹಿತಿ ಬಗ್ಗೆ ಕಾಣಿರಿ.

ಸಾಲವೆತ್ತುವ ಪ್ರಾರಂಭದ ದಿನ ತಾ. 16-8-55 ರಂದೇ ನಿಮ್ಮ ಚಂದಾ ಕಳುಹಿಸಿರಿ.

ಕಲೆಕ್ಟರ್.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ
ಮೈಸೂರೈಟ್ ಮತ್ತು ಐವರೈಟ್
ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಟಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಬಕಗಳು, ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗ ಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ ತಯಾರಿಸಲ್ಪಡುವುವು.

ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,

ಮೈಸೂರು ರೋಡ್, • ಬೆಂಗಳೂರು – ೨.

For

PROTECTION AND PROVISION:

CONSULT

The New Guardian of India

LIFE INSURANCE Co., LTD.,

UNITLD INDIA BUILDINGS"

(H. O.) MADRAS.

Estd· 1934.

RECORD OF PROGRESS IN 1954.

NEW BUSINESS	Exceeds ..	Rs.	**90** Lakhs.
PREMIUM INCOME	..	Rs.	**18,41,007**
LIFE FUND	Exceeds ..	Rs.	**87,22,116**
ASSETS:	Exceeds .	Rs.	**94** Lakhs.

BUSINESS IN FORCE Nearly Rs. **4** Crores.

A Policy in this Progressive Life Office is a good investment Its Agency is a valuable business connection.

Applications are invited for the posts of Inspectors and Organisers for South & North Kanara and other Districts in the Mysore State from energetic, influential persons; preferably with previous experience.

Please apply to:-

G. R. Wallia,
Branch Manager,
Hampankatta, MANGALORE (S K)

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931.

ಪ್ರಧಾನ ಕಛೇರಿ: ಮಂಗಳೂರು 3.

30–6–1955

ತೆತ್ತ ಭಂಡವಾಳ ಮತ್ತು ಕ್ಷೇಮ ನಿಧಿ	ರೂ.	11,38,000
ಜಮ್ಮಾ ಸಹಿವಾಟು	ರೂ.	70,84,000

ಕಾಯಂ ಠೇವಣಾತಿಯ ಈಗಿನ ದರಗಳು.

1 ತಿಂಗಳಿಗೆ	2%
2 ,,	2½%
3 ತಿಂಗಳಿಂದ 6 ತಿಂಗಳ ವರೆಗೆ	3½%
7 ,, 12 ,,	3¾%
24 ತಿಂಗಳಿಗೆ	4%

ರೂಪ್ಯಾ 15,000 ವ, ಮೇಲಿನ ಠೇವಣಾತಿಗೆ ½% ದರ ಬಡ್ಡಿ ಹೆಚ್ಚಿಗೆ ಕೊಡಲಾಗುವುದು.

ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ, ಬಿ. ಯಲ್., ವಕೀಲ್,
ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

ಅಂದ, ಚೆಂದ, ಗುಣ ಇವೆಲ್ಲಕ್ಕೂ

ಮೈಸೂರು ಮರದ ಸಾಮಾನುಗಳು

•

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು, ಸೌಂದರ್ಯ, ನಿಸ್ಸಂಶಯವಾದ ಗುಣ ಇವೆಲ್ಲವನ್ನೂ ಹೊಂದಿರುವ

ಮೈಸೂರಿನ ಮರದ ಸಾಮಾನುಗಳು

ಪ್ರತಿಯೊಂದು ಅನುಕೂಲವಿರುವ ಮನೆಗೂ ಚೆನ್ನಾಗಿ ಸಂತೋಷವುವು. ಉಪಯೋಗಿಸುವವರ ಅನುಕೂಲಾದಿಗಳನ್ನು ವಿಚಾರಿಸಿ, ಅವರವರ ಇಷ್ಟಾನುಗುಣವಾಗಿ, ಕುಶಲರಾದ ಕೆಲಸಗಾರರು ಈ ಸಾಮಾನುಗಳನ್ನು ತಯಾರಿಸಿದ್ದಾರೆ ಆದುದರಿಂದ ಮೈಸೂರಿನ ಮರದ ಸಾಮಾನುಗಳ ಕಲಾಪ್ರಾಪ್ತಿಯೂ, ಈಗ ನಿಸ್ಸಂಶಯವಾಗಿಯೂ ಸರ್ವಜನವಿದಿತವಾಗಿದೆ. ಅಂದಚೆಂದಗಳೂ, ಆಕರ್ಷಣೀಯ ಗುಣವೂ, ಖಂಡಿತವಾಗಿಯೂ ಆಧುನಿಕ ಗೃಹಕ್ಕೆ ಕಳೆ ಕಟ್ಟುತ್ತವೆ.

ತಯಾರಿಸುವವರು

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್,
ಮೈಸೂರು.

Regd No. M. 3618
LICENCE NO 31
Licenced to Post without Prepayment

ಸ್ಥಾಪನೆ 1906.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ ದ. ಭಾರತ.

(ಶೆಡ್ಯೂಲ್ಡ್ ಬ್ಯಾಂಕು)

1956

ಬ್ಯಾಂಕಿನ ಸುವರ್ಣ ಮಹೋತ್ಸವದ ವರುಷ!

ಈ ಜಿಲ್ಲೆಯ ಬ್ಯಾಂಕಿಂಗ್ ಸಂಸ್ಥೆಗಳಲ್ಲೆಲ್ಲಾ ಅತ್ಯಂತ ಹಿರಿಯದಾಗಿ 1906ರಿಂದಲೂ ದೇಶ ಸೇವೆ ಗೈಯುತ್ತಿರುವ ಈ ಬ್ಯಾಂಕು ತನ್ನ ಸುವರ್ಣ ಮಹೋತ್ಸವದ ವರುಷವನ್ನು 1956 ರಲ್ಲಿ ಹೆಮ್ಮೆಯಿಂದ ಆಚರಿಸಲಿದೆ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಇಡೀ ಪ್ರಪಂಚವನ್ನೇ ಅಲ್ಲೋಲ ಕಲ್ಲೋಲಗೊಳಿಸಿದ ಹಲವಾರು ಎಡರು ತೊಡರುಗಳನ್ನು ಧೈರ್ಯದಿಂದ ಇದಿರಿಸಿ, ಸ್ಥಾಪಿಸಲ್ಪಟ್ಟಂದಿನಿಂದಲೂ ವೃದ್ಧಿಯಿಂದ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುವಂತೆ ಇದರೊಡನೆ ಸಹಕರಿಸಿದ ಹಾಗೂ ಸಹಕರಿಸುತ್ತಿರುವ ಇದರ ಸಹಸ್ರಾರು ಭಾಗೀದಾರರಿಗೆ, ಗ್ರಾಹಕರಿಗೆ ಮತ್ತು ಹಿತಚಿಂತಕರಿಗೆ, ಈ ಸುಸಂದರ್ಭದಲ್ಲಿ ಇದು ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ವಿನಯ ಪೂರ್ವಕ ಸಲ್ಲಿಸುತ್ತಿದೆ.

ಅಂಕೆ ನಂಖ್ಯೆಗಳಲ್ಲಿ ಬ್ಯಾಂಕಿನ ಸಂಕ್ಷಿಪ್ತ ಪರಿಚಯ:

(ಸಾವಿರ ರೂಪ್ಯಾಗಳಿಗೆ ಸರಿಯಾಗಿ)

ದೆತ್ತು ಬಂಡ ಪಾಲು ಭಂಡವಾಳ	...	ರೂ	20,00,000
ಕ್ಷೇಮ ನಿಧಿಗಳು	....	ರೂ.	11,25,000
ಠೇವಣಾತಿಗಳು	....	ರೂ	3,88,59,000
ಕೊಟ್ಟ ಸಾಲಗಳು	....	ರೂ	1,75,75,000
ವ್ಯವಹಾರದಲ್ಲಿರುವ ಒಟ್ಟು ಮೊಬಲಗು	....	ರೂ.	4,89,02,000

(ಲೆಖ್ಖ ಪರಿಶೋಧನೆಗೆ ಒಳಪಟ್ಟು ತಾರೀಕು 30-6-1955ರಲ್ಲು)

ಬ್ಯಾಂಕಿನ ಈಗಿರುವ ಶಾಖೆಗಳು:

ಬೆಂಗಳೂರು	ಕೊಯಮುತ್ತೂರು	ಕೊಟ್ಟೂರು	ಪೊನ್ನಂಪೇಟೆ	ಸೋಮವಾರಪೇಟೆ
ಬಳ್ಳಾರಿ	ಕುಂದಾಪುರ	ಮದ್ರಾಸು	ರಾಯದುರ್ಗ	ತಲ್ಲಿಚೇರಿ
ಭದ್ರಾವತಿ	ಲಕ್ಷ್ಮೇಶ್ವರ	ಮಾಪ್ಲೆ	ಸಾಗರ	ತ್ರಿಚ್ಚೂರು
ಮುಂಬಯಿ (ಕೋಟೆ)	ಧಾರವಾಡ	ಮಂಗಳೂರು (ಬಂದರ)	ಸಕ್ಲೇಶಪುರ	ತೀರ್ಥಹಳ್ಳಿ
—ಡಿ— (ಮಾಂಡ್ವಿ)	ಪಾವನ	—ಡಿ— (ರಥಬೀದಿ)	ಸೇಲಂ (ಟೌನ್)	ಉಡುಪಿ
ಬ್ಯಾಡ್ಗಿ	ಪಾಲೇರಿ	ಮೆಟ್ಟುಪಾಳಯಂ	—ಡಿ— (ರಿವಾಪೇಟೆ)	ವೆಲ್ಲೂರು
ಕಣ್ಣಾನೂರು	ಹುಬ್ಬಳ್ಳಿ	ಮಡಿಕೇರಿ	ರಿವಮೊಗ್ಗ	ವಿರಾಜಪೇಟೆ.
ಕೊಚ್ಚಿ	ಕಲ್ಲಿಕೋಟೆ	ಮೈಸೂರು	ತಿರ್ವ	

ಸದ್ಯದಲ್ಲೇ ತೆರಯಲ್ಪಡುವ ಬ್ಯಾಂಕಿನ ಹೊಸ ಶಾಖೆಗಳು:

ರಾಣಿ ಬನ್ನೂರು (ಧಾರವಾಡ ಜಿಲ್ಲೆ) ಪಾಲ್ಘಾಟ್ (ಮಲಬಾರು ಜಿಲ್ಲೆ).

The Canara Banking Corporation Ltd.

Estd.- 1906] H. O.— UDIPI (S. INDIA).

REGD. NO. M. 3618

LICENCE NO. 31
Licensed to Post without Prepayment

ಸಮಯ

ಸಂಪುಟ ೩೪
VOL. 34

ಉಡುಪಿ, 25—8—1955

ಸಂಚಿಕೆ ೫೦
NO. 50

ಸಾರ್ವಜನಿಕ ಹರತಾಳ

ಸಂಪಾದಕೀಯ

ಮುಂಬಯಿ ಮತ್ತಿತರ ಕಡೆಗಳಲ್ಲಿ ನಿಯಂತ್ರಣವಿಲ್ಲದ ದೊಡ್ಡ ಜನ ಸಮೂಹವು ಪೋರ್ಚುಗೀಸರ ವಿರುದ್ಧ ಪ್ರದರ್ಶನ ನಡೆಯುತ್ತಿತ್ತು. ಹಿಂಸಾತ್ಮಕ ಕೃತ್ಯಗಳನ್ನು ಮಾಡಿರುವುದು ದುರ್ದೈವದ ವಿಷಯ. ಇದು ಗೋವೆಯಲ್ಲಿ ಶಾಂತ ರೀತಿಯ ಅಹಿಂಸಾತ್ಮಕ ಸತ್ಯಾಗ್ರಹ ನಡೆದ ದಾಖಲೆಯನ್ನು ಹಾಳು ಮಾಡಿದೆ. ಇದಕ್ಕಿಂತ ಹೆಚ್ಚು ಕೆಟ್ಟ ಸಂಗತಿಯೆಂದರೆ, ಈ ದೇಶದಲ್ಲಿರುವ ವಿದೇಶ ರಾಯಭಾರಿ ಕಚೇರಿಗಳ ಮೇಲೆ ಜನ ಸಮೂಹ ಮಾಡಿದ ದಾಳಿ. ಈ ಕಚೇರಿಗಳಿಗೆ ಗೌರವ ತೋರಿಸುವುದು ಸರಕಾರದ್ದಷ್ಟೇಯಲ್ಲ. ಜನರ ಕರ್ತವ್ಯವೂ ಹೌದು. ಅಂತಾರಾಷ್ಟ್ರೀಯ ಶಾಸನಾನುಸಾರ ನಾವು ಅವರನ್ನು ಮುಟ್ಟುವಂತಿಲ್ಲ, ರಾಷ್ಟ್ರೀಯ ನೀತಿಗನುಸಾರ, ನಮ್ಮ ಕಚೇರಿಗಳಿಗೆ ಬೇರೆ ದೇಶಗಳಲ್ಲಿ ದೊರೆಯಬೇಕೆಂದು ಅಪೇಕ್ಷಿಸುವ ರಕ್ಷಣೆ ಮತ್ತು ಗೌರವವನ್ನು ನಾವು ಇಲ್ಲಿ ಆ ದೇಶಗಳ ಕಚೇರಿಗಳಿಗೆ ಕೊಡಬೇಕಾದದ್ದು ನ್ಯಾಯ

—ಜವಾಹರಲಾಲ ನೆಹರು

ಅಗೋಸ್ತು ಹದಿನೈದರಂದು ಗೋವೆಯಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ಚಳವಳಿದಲ್ಲಿ ಭಾಗವಹಿಸಲು ಹೋದ ನಿಶ್ಶಸ್ತ್ರರ ಮೇಲೆ ಪೋರ್ಚುಗೀಜರು ಗುಂಡು ಹಾರಿಸಿ, ಸುಮಾರು ೩೦ ಮಂದಿಯನ್ನು ಬಲಿತೆಗದುಕೊಂಡರು, ಇನ್ನೂರಕ್ಕಿಂತಲೂ ಹೆಚ್ಚು ಮಂದಿಗೆ ತೀವ್ರ ಪೆಟ್ಟು ತಗಲಿತು. ಬೇರೆ ನೂರಾರು ಜನರನ್ನು ಮರ್ದನ ಮತ್ತಿತರ ಚಿತ್ರಹಿಂಸೆಯಿಂದ ನುಗ್ಗುಮಾಡಲಾಯಿತು. ಇದು ಲೋಕದ ಆತ್ಮವನ್ನು ಕುಕ್ಕುವ ಹೀಯ ವರ್ತನೆ ಎಂಬುದರಲ್ಲಿ ಅನುಮಾನವಿಲ್ಲ. ಪೋರ್ಚುಗೀಜರ ಪೈಶಾಚಿಕ ಕೃತ್ಯ ಜಗತ್ತನ್ನು ತಲ್ಲಣಗೊಳಿಸಿದೆ—ಎಂಬುದೂ ನಿಜ

ಶಾಂತರೀತಿಯ ಚಳವಳಿ ನಡೆಸಿ ಪ್ರಾಣವನ್ನು ಬಲಿಕೊಟ್ಟ ಸತ್ಯಾಗ್ರಹಿಗಳಿಗೆ ನಾವೇನಾದರೂ ಗೌರವವನ್ನು ತೋರಿಸಿ, ಶ್ರದ್ಧಾಂಜಲಿಯನ್ನು ಅರ್ಪಿಸುವುದಿದ್ದರೆ, —ಹಾಗೆ ಮಾಡಲು ನಾವು ಬದ್ಧರಿದ್ದೇವೆ —ಶಾಂತ ವಿಧಾನದಿಂದಲೇ ನಾವಿದನ್ನು ನೆರವೇರಿಸಬೇಕಲ್ಲವೆ? ಆದರೆ ದುರ್ದೈವದಿಂದ ಸಾರ್ವಜನಿಕರ ಹರತಾಳದ ಅನುಭವ ಕ್ಲೇಶದಾಯಕವಾಯಿತೇ ಹೊರತು, ಅದು ಶಾಂತ ಸತ್ಯಾಗ್ರಹಿಗಳ ಆತ್ಮಕ್ಕೆ ತೃಪ್ತಿ ಕೊಡುವ ರೀತಿಯಲ್ಲಿಲ್ಲ. ಸತ್ಯಾಗ್ರಹಿಗಳಿಗೆ ಗೌರವ ತೋರಿಸಿರೆಂದು ನಡೆಸಲಾದ ಜನಸಮೂಹದ ಮತ ಪ್ರದರ್ಶನ ಹಿಂಸಾಚರಣೆಯಲ್ಲಿ ಮುಕ್ತಾಯವಾಯಿತು

ಮುಂಬಯಿ, ಕಲ್ಕತ್ತಗಳಂಥ ದೊಡ್ಡ ಪಟ್ಟಣಗಳಿಂದ ಹಿಡಿದು ಮಂಗಳೂರಿನಂಥ ನಗರಗಳಲ್ಲೂ ಮತ ಪ್ರದರ್ಶಕರು ಹಿಂಸೆಯ ಹಾಗು ವಿಧ್ವಂಸಕ ಕೃತ್ಯಗಳಲ್ಲಿ ಮಗ್ನರಾಗಿ, ಗೋವೆಯ ಶ್ರೇಷ್ಠ ಧಾಖಲೆಗೆ ಮಸಿ ಬಳಿದರು. ಲೋಕದ ಮುಂದೆ ಶಾಂತಿಯುತ, ಅಹಿಂಸಾತ್ಮಕ ಸತ್ಯಾಗ್ರಹ ನಮ್ಮದೆಂದು ಹೇಳಿಕೊಳ್ಳುತ್ತಿರುವ ಭಾರತೀಯರು ಇದಕ್ಕೆ ತೀರ ವಿರುದ್ಧವಾದ ರೀತಿಯಲ್ಲಿ ಪ್ರದರ್ಶನ ನಡೆಸಿ, ಭಾರತದ ಸ್ವಾಭಿಮಾನವನ್ನು ಮಾರಿದರು, ಜಗತ್ತಿನ ಮುಂದೆ ನಮ್ಮ ದೇಶದ ಗೌರವವನ್ನು ತಗ್ಗಿಸಿ, ತಮ್ಮ ಅಪಮಾನವನ್ನು ತಾವೇ ಮಾಡಿಕೊಂಡರು

ಇದೆಲ್ಲ ಅಸಂಯತ ರೀತಿಯಲ್ಲಿ, ಉದ್ರಿಕ್ತರಾಗಿ ನಡೆದುಕೊಂಡುದರಿಂದ ಸಂಭವಿಸಿದ ಅನಾಹುತ—ನಾವು ಪೋರ್ಚುಗೀಜರ ಛಳಿನೆಯಿಂದ ಉದ್ರೇಕಗೊಳ್ಳುವಂತಿಲ್ಲ ಎಂದು. ರಾಷ್ಟ್ರಾಧ್ಯಕ್ಷರಂಥ ಹೂಣಿಗಾರ ಸ್ಥಾನದಲ್ಲಿರುವ ವ್ಯಕ್ತಿಗಳು ಹೇಳುತ್ತಿದ್ದಾಗ, ಮುಂಬಯಿ ಮತ್ತು ಕಲ್ಕತ್ತೆಗಳಲ್ಲಿ ಪೋರ್ಚುಗೀಜರ ರಾಯಭಾರ ಕಚೇರಿಗಳ ಮುಂದೆ ಮತ ಪ್ರದರ್ಶಕರು ಒಟ್ಟು ಸೇರಿ ಕನ್ನಡಿ ಬಾಗಿಲುಗಳನ್ನು ಕಲ್ಲು ಹೊಡೆದು ಒಡೆಯುತ್ತಿದ್ದರು ಎಲ್ಲ ಸಂಪ್ರದಾಯ ಮತ್ತು ಅಂತಾರಾಷ್ಟ್ರೀಯ ನಿಯಮಕ್ಕೆ ವಿರುದ್ಧವಾಗಿ, ಪೋರ್ಚುಗಾಲದ ಧ್ವಜವನ್ನು ಇಳಿಸಿ, ಭಾರತದ ತ್ರಿವರ್ಣ ಧ್ವಜವನ್ನು ಆ ಕಚೇರಿಯ ಧ್ವಜಸ್ತಂಭಕ್ಕೆ ಏರಿಸಿ, ಅದನ್ನು ಅರ್ಧಮಟ್ಟದಲ್ಲಿ ಶೋಕ ಸಂಕೇತವಾಗಿ ನಿಲ್ಲಿಸಿದರು

ಪೋರ್ಚುಗೀಜರು ಅಂತಾರಾಷ್ಟ್ರೀಯ ನಿಯಮಗಳ ಉಲ್ಲಂಘನೆಮಾಡಿ "ಡಂಡಂ" ಮಾದರಿಯ ಗುಂಡುಗಳನ್ನು ಉಪಯೋಗಿಸಿ ಗೋಳಿಬಾರು ಮಾಡಿದರು, ನಿಶ್ಶಸ್ತ್ರರಾದ ಶಾಂತ ಸತ್ಯಾಗ್ರಹಿಗಳನ್ನು ಕೂಂದರು ಎಂದು ಆರೋಪಿಸುವ ಬಾರತೀಯರು ತಾವು ಮತಪ್ರದರ್ಶನದ ಹೆಸರಿನಲ್ಲಿ ಅಂತಾರಾಷ್ಟ್ರೀಯ ಶಾಸನ ಭಂಗಮಾಡಿದುದನ್ನು ಹೇಗೆ ಸಮರ್ಥಿಸಿಕೊಳ್ಳಬಲ್ಲರು? ಇದನ್ನು ತಡೆಯಲು ಪೋಲೀಸರು ತಮ್ಮ ಬಂಧುಗಳ ಮೇಲೆಯೇ ಗುಂಡು ಹಾರಿಸುವುದಕ್ಕೆ ಸಿದ್ಧರಾಗಬೇಕಾದಷ್ಟು ಪರಿಸ್ಥಿತಿಯು ಮುಂಬಯಿಯಲ್ಲಿ ಹದಗೆಟ್ಟಿತ ಇಬ್ಬರು ತಕ್ಷಣ ಮೃತರಾದರು ಅನೇಕರು ಗಾಯಗೊಂಡರು. ಇದಕ್ಕಿಂತ ದೊಡ್ಡ ಸಾಕ್ಷಿಯು ಮತಪ್ರದರ್ಶಕರ ಹಿಂಸಾಚರಣೆಗೆ ಬೇರೆ ಬೇಡ

ಮತಪ್ರದರ್ಶಕರು ಸಾರ್ವಜನಿಕರನ್ನು ಹಿಂಸಿಸಿದ ಒಗೆಯು ಯಾವುದೇ ನಾಗರಿಕ ಸಮಾಜಕ್ಕೆ ಹೇಳಿಸಿದುದಲ್ಲ—ಪೋರ್ಚುಗೀಜರು ಒನಾಗರಿಕ ರಾಗು ಅಮಾನುಷ ಪೈಶಾಚಿಕ ಕೃತ್ಯಮಾಡುತ್ತಿರುವರೆಂದು ದೂರುವ ಭಾರತೀಯರು ಮುಂಬಯಿಯ ಮತಪ್ರದರ್ಶಕರು ತೋರಿಸಿದ ಉದ್ರೇಕವನ್ನು ಬಿಂಬಿಸಿದ್ದಿದ್ದರೆ ನ್ಯಾಯವಾಗದು. ಇವರು ಕಾರುಗಳಿಗೆ ಓಡಗೊಡಲಿಲ್ಲ, ಆವುಗಳ ಟಯರುಗಳನ್ನು ಒಡೆದುಹಾಕಿದರು ದಾರಿಯಲ್ಲಿ ಹೊಗುವವರ ಕುತ್ತಿಗೆಯಲ್ಲಿದ್ದ "ಟೈ"ಗ ಕೈಹಾಕಿ, ಅವರನ್ನು ಇಗ್ಗಿ, ಹೀಡಿಸಿದರು ಕಲಸಕ್ಕೆ ಹೋಗುತ್ತಿದ್ದವರನ್ನ ಬಲಾತ್ಕಾರವಾಗಿ ತಡೆದರು, ಸಚಿವಾಲಯ ದಲ್ಲಿ ಕೆಲಸಕ್ಕಿದ್ದವರನ್ನು ಹೊರಗೆ ಕಳಸಿರಿ ಎಂದು ಬೊಬ್ಬೆ ಹೊಡೆದರು ಮಂತ್ರಿಗಳೊಬ್ಬರನ್ನ ತಡೆದು "ನಿಮ್ಮ ತಲೆಯ ಮೇಲಿನ ಟೊಪ್ಪಿ ತೆಗದಿಡಿ" ಎಂದು ಒತ್ತಾಯಿಸಿ, ಒದಕ್ಕೆ ಅವರು ಜಗ್ಗದುದನ್ನು ಕಂಡು ಅವರ ಕಾರಿನ ಮುಂಭಾಗದಲ್ಲಿದ್ದ ರಾಷ್ಟ್ರ ಧ್ವಜವನ್ನು ಕಿತ್ತೆಸದು, ಕಾರಿಗೆ ಹಾನಿಗೈದರು. ಸಚಿವಾಲಯದ ಮೇಲೆ ಮತ್ತು ಇತರ ರಾಯಬಾರಿ ಕಚೇರಿಗಳ ಮೇಲೆ ಕಲ್ಲು ತೂರುವುದಂತೂ ನಡೆದೇ ನಡೆಯಿತು.

ಹುತಾತ್ಮರಿಗೆ ಗೌರವ ತೋರಿಸುವ "ನಾಗರಿಕ ವಿಧಾನ" ಇದೇ ಏನು? ಎಂದು ಇಲ್ಲಿ ಪ್ರಶ್ನಿಸಬೇಕಾಗುತ್ತದೆ ನಾವು ಮಾಡಿದ ಅಪಮಾನಕ್ಕೆ, ಹಿಂಸೆಗೆ ಯಾವ ಒಗೆಯ ಪ್ರಾಯಶ್ಚಿತ್ತ ಕೈಗೊಂಡರೂ ಆ ತಪ್ಪನ್ನು ಸರಿಪಡಿಸುವುದು ಅಸಾಧ್ಯವಾಗಿದ ಪ್ರಾಣ ಕಳೆದುಕೊಂಡವರನ್ನು ಜೀವಂತವಾಗಿಡುವುದು ನಮ್ಮ ಕೈಯಲ್ಲಿಲ್ಲ. ದಾಳಿಗೆ ಗುರಿಯಾದ ವಿದೇಶಗಳ ಕಚೇರಿಗಳಿಗೆ ನೆಹರುಗಳು ಕ್ಷಮಾಯಾಚನೆಯಿಂದ ಕೂಡುವ ಪರಿಹಾರವೂ ಕಳೆದ ಗೌರವವನ್ನು ಸಂಪಾದಿಸಿಕೊಡಲಾರದು ಮತಪ್ರದರ್ಶಕರ ಉದ್ರೇಕದ ದೆಸೆಯಿಂದ ನಮಗೆ ದೊರೆತ ಲಾಭವೆಂದರೆ "ನಮ್ಮ ಕಚೇರಿಗೆ ಯೋಗ್ಯ ಸಂರಕ್ಷಣೆಯ ಭದ್ರತೆ ಕೊಡುವಿರೊ ಇಲ್ಲವೊ" ಎಂದು ಪಾಕಿಸ್ತಾನದಿಂದ ಒಂದ ಪತ್ರ; ಮತ್ತು ತನ್ನ ಕಚೇರಿಗಾದ ಹಾನಿಗೆ "ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶಾಂತ ವಿಧಾನದಿಂದ ಪರಿಹರಿಸುವ ಭಾರತ ಸರಕಾರದ ಈ ನೂತನ ದಾಗು ಅಸಾಮಾನ್ಯ ಕ್ರಮವೇ ಹೂಸ" ಎಂದು ಪೋರ್ಚುಗಾಲಿನಿಂದ ಬಂದ ಪ್ರತಿಬಟನೆಯಲ್ಲಿರುವ ವ್ಯಂಗ್ಯ!

ಆದುದರಿಂದಲೇ ಪ್ರಧಾನ ಮಂತ್ರಿ ನೆಹರುಗಳು ಲೋಕ ಸಭೆಯಲ್ಲಿ ತುಂಬ ಕಳಕಳಿಯ ನಿವೇದನೆಯನ್ನು ಮಾಡಿಕೊಳ್ಳಬೇಕಾಯಿತು ಜನರು ಬಾರತದ ಗೌರವಕ್ಕೆ ಯೋಗ್ಯವಾದ ನಡತೆಯನ್ನು ತೋರಿಸದೆ ಘೋರ ಅನ್ಯಾಯ ಮಾಡಿದರು ಎಂದವರು ಪರಿತಪಿಸುವಂತಾಯಿತು

(ಇನ್ನೂ ಮುಂದೆ ನೋಡಿರಿ)

ಒಂದು ಸಲೆಗೆ ತೆರಳಲು ಅವರಲ್ಲಿ ಮಾತುಕತೆ ನಡೆಯುತ್ತಿತ್ತು— "ಆ ಇನ್ನೊಬ್ಬನಿಗೆ ತಿಳಿಸಿ ಹೇಳುವ ಪುನೋಭಾವದಿಂದ ಒಬ್ಬ 'ನಾವಲೇ ದುರಭಿಪ್ರಾಯ ಕಟ್ಟಿಕೊಂಡು ಘಾಸಣ ಕೇಳಲು ಹೋಗುವುದಾದರೆ ಆದರಿಂದೇನು ಪ್ರಯೋಜನ?' ಎಂದು ಪ್ರಶ್ನೆ ಹಾಕಿದ ಆದಕ್ಕೆ ಸಮಾಧಾನ ಕೂಡುವೇ ಬಂತು— "ಹೌದು, ಆ ಹಾಗೆ ನಾನು ಹೋಗುವರ್ಷ ಇಲ್ಲ ಘಾಸಣಕಾರ ಹೇಳುವ ಎಲ್ಲ ವಿಷಯವೂ ಬಿಂಬಿತವಾಗಿ ಅರ್ಥಶೂನ್ಯವಾದದ್ದೆಂಬ ದೃಢ ವಿಶ್ವಾಸದಿಂದ ನ ನಲ್ಲಿಗೆ ಹೋಗುತ್ತೇನೆ ದುರಭಿಪ್ರಾಯ ಇವರಲ್ಲಿ ಎಲ್ಲಿ ಬಂತು?"

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ,
ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ.

ಆಧಿಕೃತ ಭಂಡವಾಳ	ರೂ 56,00,000	ಕ್ಷೇಮ ನಿಧಿ	ರೂ 13,50,000
ಕೆತ್ತ ಭಂಡವಾಳ	ರೂ 32,11,000	ರೇವಣಾತಿಗಳು	ರೂ.7,10,00,000
ಕೆತ್ತು ಬಂದ ಭಂಡವಾಳ	ರೂ.26,56,737	ಜಲಾವಣೆ ಭಂಡವಾಳ	ರೂ 7,32,00,000

[ತಾ. 30—6—1955ರಲ್ಲು]

ನಮ್ಮ ರಾಯಬೂರ (ಹೈದರಾಬಾದ ಸಂಸ್ಥಾನ) ಶಾಖೆಯು
ತಾ 29-7-1955ರಂದು ತೆರೆಯಲ್ಪಟ್ಟಿದೆ
ಮುಂಬಯಿ, ಮದ್ರಾಸು, ಆಂಧ್ರ, ಮೈಸೂರು, ಹೈದರಾಬಾದ
ಮತ್ತು ತಿರೆ-ಕೊಚ್ಚಿ ಸಂಸ್ಥಾನಗಳಲ್ಲಿ 93 ಶಾಖೆಗಳನ್ನು
ಸಕಲ ವಿಧದ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತವೆ

ಟಿ ಎ ಪೈ, ಬಿ ಕೋಂ (ಆನರ್ಸ್),
ಎ ಐ ಐ ಬಿ, ಎಂ ಎಲ್ ಎ,
ಜನರಲ್ ಮೆನೇಜರ್

ಟಿ ಎಂ ಎ ಪೈ,
ಎಂ ಬಿ, ಬಿ ಎಸ್,
ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL & BANKING SYNDICATE LTD
Estd: 1925 H O UDIPI, S India

ಚತುರ ಆಡಳಿತ ನಿರ್ವಾಹಕನ ಗುಣಗಳು

ಭಾರತದ ಮಾಜಿ ಗವರ್ನರ ಜನರಲರಾದ ರಾಜಾಜಿಯ ವಿಚಾರ

ನಾವು ಬ್ರಿಟಿಷರನ್ನು ಹೊರಗಟ್ಟಿದೆವು. ನಮ್ಮನ್ನು ನಾವೇ ಆಳಿಕೊಳ್ಳುವುದು ಒಳ್ಳೆಯದೆಂದು ಭಾರತೀಯರಿಗೆಲ್ಲ ನಾವು ಹೇಳಿದೆವು. ಆದರೆ ಸಾವಧಾನ ಯೋಜನೆಯು ಕೆಲವು ಅನುಮಾನಗಳನ್ನು ತಂದಿಡೆ. ನಮ್ಮ ಆಡಳಿತ ವ್ಯವಸ್ಥೆಯು ಸಮರ್ಪಕವಾದಲ್ಲಿ ಹಾಗೂ ಸಮರ್ಪಕವಾದದ್ದು ಮಾತ್ರವೇ ನಮ್ಮ ಆಸೆಗಳು ಕೈಗೂಡಬಲ್ಲವು.

ಸರ್ಕಾರದ ಬಗೆಗೆ ಭಾರತದಲ್ಲಿ ಬಹುಜನರು ಯಾವ ಅಪೇಕ್ಷೆಯನ್ನಿಟ್ಟು ಕೊಂಡಿರುವರೆಂಬ ಪ್ರಶ್ನೆಯನ್ನು ಯಾರಾದರೂ ಕೂಲಂಕಷವಾಗಿ ವಿಚಾರಿಸಿದರೆ—ಅವರಿಗೆ ಪ್ರಜಾಪ್ರಭುತ್ವ ಬೇಕೆ, ಅವರಿಗೆ 'ಫೆಡರಲ್' ಅಥವಾ 'ಯೂನಿಟರಿ' ಸರ್ಕಾರ ಬೇಕೆ, ಅವರಿಗೆ ಅಮೆರಿಕನ್ ಮಾದರಿಯ ಪ್ರಜಾಪ್ರಭುತ್ವ ಬೇಕೆ, ಅಥವಾ ಅದು ಬ್ರಿಟಿಷ್ ಮಾದರಿಯದಿರಬೇಕೆ ಇತ್ಯಾದಿ ಪ್ರಶ್ನೆಗಳನ್ನು ಕೇಳಿದರೆ, ತಮಗೆ ಸತ್ಯಸಂಧರಾದ, ಸಮರ್ಥರಾದ, ಚುರುಕಾದ, ನ್ಯಾಯ ಮತ್ತು ಸಹಾನುಭೂತಿಪರರಾದ ಅಧಿಕಾರಿಗಳು ಬೇಕೆಂದೇ ಜನರು ಅಪೇಕ್ಷಿಸುವರಾಗಿ ನಾನು ಎಣಿಸುತ್ತೇನೆ. ಅವರಿಗೆ ಯಾವ ರೀತಿಯ ಸರ್ಕಾರವಿದ್ದರೂ ಚಿಂತೆಯಿಲ್ಲ.

ಭಾರತದ ಸಂವಿಧಾನವು ವಯಸ್ಕರ ಮತದಾನ ಪದ್ಧತಿಯ ತಳಹದಿಯ ಮೇಲೆ ರೂಪುಗೊಂಡ ಪ್ರಜಾಪ್ರಭುತ್ವ ಭಾರತದಲ್ಲಿರಬೇಕೆಂದು ತಿಳಿಸುತ್ತದೆ. ಹೀಗೆ ಶಾಸನಗಳ ಮೇಲೆ ಶ್ರೇಣ್ಯಾಧಿಕಾರ ಬೀರಬಲ್ಲ ಹಾಗೂ ಸಂವಿಧಾನಕ್ಕೆಯೇ ತಿದ್ದುಪಡಿ ತರಬಲ್ಲ ಪ್ರತಿನಿಧಿಗಳ ಆಯ್ಕೆಯ ಜವಾಬ್ದಾರಿಯನ್ನು ಜನಸಾಮಾನ್ಯರ್ಕೆ ವಹಿಸಲಾಗಿದೆ. ಅಲ್ಲಿ ಪ್ರತಿ ವ್ಯಕ್ತಿಯ ತೀರ್ಮಾನವೂ ಒಂದೇ ಸಮನಾದ ತೂಕವುಳ್ಳದ್ದಾಗಿರುತ್ತದೆ. ಉಮೇದುವಾರರಾಗಿ ನಿಲ್ಲುವುದಕ್ಕೆ ಯಾವ ಅರ್ಹತೆಯನ್ನೂ ನಿರ್ದೇಶಿಸಿಲ್ಲ; ಜನರು ಯಾರನ್ನೂ ಆರಿಸಬಹುದು. ಪ್ರತಿನಿಧಿಗಳನ್ನು ಆರಿಸುವ ವಿಷಯದಲ್ಲಿ ಅಂಚೆ ಪದ್ಧತಿಯ ದೋಷದ ಪ್ರಶ್ನೆಯನ್ನು ಬಗೆಹರಿಸಿದೆ. ಮತ್ತೊಬ್ಬ ಸ್ಲೇಟೊ ಅಥವಾ ಮನು ಹುಟ್ಟಿ ಬರುವವರೆಗೂ ಇದರಲ್ಲಿ ಬದಲಾವಣೆಯಾಗುವುದಿಲ್ಲ.

ಆದರೆ, ಭಾರತದಂಥ ದೊಡ್ಡ ಕ್ಷೇತ್ರವನ್ನು, ಜನಸಂಖ್ಯೆಯನ್ನು ಅಥವಾ ಮುಂಬೈ, ಉತ್ತರ ಪ್ರದೇಶ, ಬಂಗಾಳಗಳಂಥ ಒಂದೊಂದು ರಾಜ್ಯವನ್ನು ಸಮರ್ಥ ರೀತಿಯಲ್ಲಿ ಆಳಲು ಅಗತ್ಯವಾದ ಮಾದರಿಯ ಜನರ ಬಗೆಗೆ ಮಾತನಾಡುವಾಗ ನಾನು ಹೀಗೆ ಹೇಳುವುದು ಕಷ್ಟ. ಸ್ಥಾಯಿಯಾಗಿ ಅಥವಾ ಆಡಳಿತ ವಿಭಾಗದ ಅಧಿಕಾರಿಗಳ ಸ್ಥಾನವನ್ನು ಭರ್ತಿ ಮಾಡಲು ಅಧಿಕಾರಿಗಳನ್ನು ಆರಿಸುವಾಗ ಸರ್ವರೂ ಸಮನೆಂಬ ತತ್ವವು ಅನ್ವಯವಾಗುವುದಿಲ್ಲ. ಅರ್ಹತೆಗಳೂ ಅಲ್ಲಿ ಗಣನೆಗೆ ಬರುತ್ತವೆ.

ಜನರು ತಮ್ಮ ಸೌಖ್ಯದ ಮಟ್ಟ ಹೆಚ್ಚಬೇಕೆಂದು ನಿರೀಕ್ಷಿಸುತ್ತಾರೆ. ಆದರೆ, ಕೇವಲ ಒಂದು ವರ್ಗಕ್ಕಲ್ಲ, ಒಂದು ವರ್ಗದ ಶ್ರಮದಿಂದ ಮತ್ತೊಂದು ವರ್ಗಕ್ಕಲ್ಲ. ಸಾಮಾನ್ಯವಾಗಿ ಎಲ್ಲಾ ವರ್ಗಗಳಿಗೂ,—ಗ್ರಾಮಸ್ಥರಿಗೂ, ನಗರವಾಸಿಗಳಿಗೂ—ಈ ಸೌಲಭ್ಯ ಒದಗಬೇಕು ಎಂದು ಜನರ ಅಭಿಪ್ರಾಯ. ಆದುದರಿಂದ ಜನಸಾಮಾನ್ಯರ ಜೀವನ ಮಟ್ಟವನ್ನು ಹೆಚ್ಚಿಸುವ ಹಾದಿಯಲ್ಲಿ ಸಹಾಯಕವಾಗುವ, ಹೆಚ್ಚಿನ ಸರಾಸರಿ ರಾಷ್ಟ್ರೀಯ ಆದಾಯವನ್ನು ನೀಡುವ ತಾಂತ್ರಿಕ ಪ್ರಗತಿಯಲ್ಲದೆ, ಸಮರ್ಥ ಶಾಲಿಯಾದ ಆಡಳಿತ ವ್ಯವಸ್ಥೆಯೂ ಪ್ರಾಮುಖ್ಯತೆಯನ್ನು ಇಲ್ಲಿ ಪಡೆಯುತ್ತದೆ.

ಅಸಮರ್ಥ ಸರ್ಕಾರ ಅಥವಾ ಅನಿಶ್ಚಿತವಾದ ಮತ್ತು ಪಕ್ಷಪಾತ ಸರ್ಕಾರಗಳಿದ್ದರೆ, ಯಾರಿಗೂ ಸೌಖ್ಯವಿರುವುದಿಲ್ಲ. ಜಾತೀಯ ವೈಷಮ್ಯ ಮತ್ತು ವರ್ಗತಾರತಮ್ಯವು ಪ್ರಬಲಾವಸ್ಥೆಯಲ್ಲಿರುವ ಭಾರತದಲ್ಲಿ ಸುದೃಢ ಹಾಗು ನಿಷ್ಪಕ್ಷಪಾತ ದೃಷ್ಟಿಕೋಣದ ಅಧಿಕಾರಿಗಳ ಅಗತ್ಯ ಅತಿ ಹೆಚ್ಚು. ಇದು ಸಾಮಾನ್ಯ ಜನರಿಗೂ ಗೊತ್ತು.

ಯಾವುದೇ ಆಡಳಿತವು ಸಮಗ್ರವಾಗಿ ಉತ್ತಮವೂ ಸಮರ್ಥವೂ ಆಗಿರಬೇಕಾದರೆ ಅದಕ್ಕೆ ಸರಿಯಾದ ಜನರಿರಬೇಕು. ಕಾರಣ, ನಿಯಮಗಳನ್ನೂ ಅವುಗಳನ್ನು ಅನುಷ್ಠಾನಕ್ಕೆ ತರುವ ವಿಧಾನಗಳನ್ನೂ ವಿಧಿಸುವುದಕ್ಕಿಂತ ಆ ಸ್ಥಾನದಲ್ಲಿರುವ ಅಧಿಕಾರಿಯ ಗುಣಾಂಶವೇ ಇಲ್ಲಿ ಹೆಚ್ಚು ಮುಖ್ಯವಾಗುತ್ತದೆ. ಭಾರತದಲ್ಲಿ ಇಂದು ಜಾತೀಯತೆಯು ವಾಸ್ತವ ಭಾವಗಳಲ್ಲಿ ಒಂದಾಗಿದೆ—ನಿಜವಾಗಿಯೂ ಸಮರ್ಥ ಆಡಳಿತವಿರದಿದ್ದರೆ ಈ ಭಾವನೆ ದುಷ್ಟ ಭಾವ ಬೀರಬಲ್ಲದು.

ನಮ್ಮ ದೇಶದಲ್ಲಿ ಎಲ್ಲಾ ವರ್ಗಗಳವರೂ ದೃಷ್ಟಿಸಿ ನೋಡುವ ಸೌಖ್ಯದ ಮಟ್ಟವನ್ನು ಹೆಚ್ಚಿಸುವ ಕೆಲಸದಲ್ಲಿ ಅನೇಕ ವಿಷಯಗಳು ಒಟ್ಟು ಸೇರಿರುತ್ತವೆ. ನಮ್ಮ ಅಪೇಕ್ಷೆಯ ಪ್ರಮಾಣದಲ್ಲಿ ರಾಷ್ಟ್ರೀಯ ಆದಾಯ ಹೆಚ್ಚಿಲ್ಲ. ಆದ್ದರಿಂದ ನಮ್ಮ ಜನತೆಯ ಮಾನಸಿಕ ಸ್ಥಿತಿ, ಸ್ವಾತಂತ್ರ್ಯ ಗಳಿಸಿದ ಮೇಲೆ, ಸಂತೃಪ್ತಿಯಿಂದಿದೆಯೆಂದು ಹೇಳಲಾಗುವುದಿಲ್ಲ. ಶಾಲೆ ಅಥವಾ ಕಾಲೇಜು ಶಿಕ್ಷಣ ಪಡೆದವರ ಮನೋಸ್ಥಿತಿಗೆ ಇದು ವಿಶೇಷವಾಗಿ ಅನ್ವಯಿಸುತ್ತದೆ.

ಆಡಳಿತವು ಸಮರ್ಥ ರೀತಿಯಿಂದಿರಬೇಕಾದರೆ. ಅಧಿಕಾರ ಮತ್ತು ಜವಾಬ್ದಾರಿ ಸ್ಥಾನಗಳಲ್ಲಿ ಯೋಗ್ಯ ರೀತಿಯ ಮನುಷ್ಯರು ಅಗತ್ಯ. ಸದ್ಯದ ಆವೇಗ ಮತ್ತು ಯೋಜನಾರಹಿತವಾದ ಸಮಯದಲ್ಲಿ ಯಾವುದನ್ನೇ ಬೇಳಲಿ, ಅಥವಾ ಯೋಚಿಸಲಿ, ಈ ಅಧಿಕಾರಗಳಿಗೆ ಜನರು ವ್ಯವಸ್ಥಿತ ಪ್ರೌಢ ಶಿಕ್ಷಣ ಸಂಸ್ಥೆಗಳಿಂದ ಬಂದಿರಬೇಕು. ಆದರೆ ಹಲವು ಸಂದರ್ಭಗಳಲ್ಲಿ ಇದಕ್ಕೆ ಅಭೂತಪೂರ್ವ ವಿನಾಯಿತಿಗಳೂ ಇರಬಹುದು.

ಉದಾಹರಣೆಗೆ, ನಾಯಕರು ಮತ್ತು ವ್ಯವಸ್ಥಾಪಕರು ಆಗೊಮ್ಮೆ ಈಗೊಮ್ಮೆ ಯಾವ ಶಿಕ್ಷಣವೂ ಇಲ್ಲದೆ ತಮ್ಮ ಅಸಾಮಾನ್ಯ ಶಕ್ತಿಯಿಂದ ಮೇಲೆ ಬರುತ್ತಾರೆ. ಅವರೆಲ್ಲ ವಿನಾಯಿತಿಗಳಲ್ಲಿ ಸೇರುತ್ತಾರೆ. ಆಡಳಿತವನ್ನು ನಡೆಸುವ ಜನ ಪ್ರೌಢ ಶಿಕ್ಷಣ ಸಂಸ್ಥೆಗಳಿಂದ ಬರಬೇಕು ಎಂಬುದು ಸಾಮಾನ್ಯ ನಿಯಮ. ಅವರು ಮತ್ತೆಲ್ಲೂ ದೊರೆಯಲಾರರು. ಉತ್ತಮವಾದ ಆಡಳಿತ ವ್ಯವಸ್ಥೆಗೆ ಅಗತ್ಯವಾದ ಸನ್ನಾಹ ಮತ್ತು ಮನೋಸ್ಥಿತಿಯನ್ನು ಉಚ್ಚ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸುವಾಗ, ಗಮನದಲ್ಲಿಟ್ಟು ಕೊಂಡಿರಬೇಕು.

ಉತ್ತಮ ರೀತಿಯ ಆಡಳಿತದಲ್ಲಿ ನಾವು ನಿರೀಕ್ಷಿಸುವುದೇನು? ಇಲ್ಲಿ ಗುಣಸ್ವಭಾವವೇ ಮೂಲಭೂತವಾದ ಅಗತ್ಯ.

ಹಾಗೆಂದು ಅದೇ ಉತ್ತಮ ಆಡಳಿತಕ್ಕೆ ಅರ್ಹನನ್ನಾಗಿ ಮಾಡುವ ನಿರ್ಧಾರಕ ಅಂಶವಲ್ಲ. ಅತ್ಯಂತ ಒಳ್ಳೆಯ ಮನುಷ್ಯನು ಆಡಳಿತ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಅರ್ಹನಾಗಿರದಿರಬಹುದು. ನಿಜವಾಗಿಯೂ ಒಳ್ಳೆಯ ಮನುಷ್ಯರು ಆಡಳಿತೆಯಲ್ಲಿ ಮಾತ್ರ ದಕ್ಷತೆ ತೋರಿಸದೆ ಹೋದುದುಂಟು—ಆದರೆ ಇವರನ್ನು ಉದಾಹರಿಸುವುದು ಮಾತ್ರ ಅಪಾಯಕರ.

ಈ ವಿಷಯವನ್ನು ಒಪ್ಪಿಕೊಂಡ ಮೇಲೆ, ಪ್ರತಿಯೊಂದು ಇಲಾಖೆಯ ಕೆಲಸಗಳಲ್ಲಿ ಸುಭದ್ರವಾದ ತಾಂತ್ರಿಕ ಪ್ರಜ್ಞೆಯು ನಿರ್ಧಾರಕ ಅಂಶವಾಗುತ್ತದೆಯೆಂಬ ಭಾವನೆ ನಮ್ಮಲ್ಲಿ ಮೂಡಬಹುದು.. ಆದರೆ ಅದು ಸರಿಯಾದ ತೀರ್ಮಾನವಲ್ಲ. ವಿವಿಧ ಕೆಲಸಗಳಿಗೆ ಅಗತ್ಯವಾದ ಅರ್ಹತೆಗಳನ್ನು ನಿರ್ಲಕ್ಷಗೊಳಿಸಲು ಸಾಧ್ಯವಿಲ್ಲವೆಂಬುದು ನಿಜ. ಆದರೆ ತಜ್ಞರೇ ಆಡಳಿತವನ್ನು ನಡೆಸಲಾರರು; ಅವರಿಗೆ ನಿರ್ಧಾರದಿಂದ ಆಡಳಿತ ನಡೆಸಗೊಡುವುದೂ ಸಾಧ್ಯವಾಗಲಾರದು. ಏಕೆಂದರೆ, ಆಡಳಿತ ದೃಷ್ಟಿಯಿಂದ ಮುಖ್ಯವಾದ ಸ್ಥಾನಗಳಿಗೆ, ಆ ಇಲಾಖೆಗೆ ಅಗತ್ಯವಾಗಿ ಬೇಕಾಗುವ ತಾಂತ್ರಿಕ ಜ್ಞಾನವಷ್ಟೇ ಸಾಲದು.

ಉದಾಹರಣೆಗಾಗಿ, ಮದ್ರಾಸಿನಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆಯ ಉತ್ತಮ ಹಾಗೂ ತೀವ್ರ ಅಭಿವೃದ್ಧಿಗೆ ಜವಾಬ್ದಾರರಾದವರು ವಿದ್ಯುಚ್ಛಕ್ತಿ ಇಲಾಖೆಯ ತಂತ್ರಜ್ಞರಲ್ಲ ಕೇವಲ ಎಂಜಿನಿಯರಿಂದ ಈ ಕೆಲಸ ಸಾಧ್ಯವಾಗುತ್ತಿರಲಿಲ್ಲ.

ಮೇಲಧಿಕಾರಿಗಳಲ್ಲಿರಬೇಕಾದುದೇನೆಂದರೆ ಆಡಳಿತ ವಿಚಾರದಲ್ಲಿ ಬರುವ ಸಲಹೆಗಳನ್ನು ಕೂಲಂಕಷವಾಗಿ ವಿವೇಚಿಸಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ. ನ್ಯಾಯಾಲಯಗಳಲ್ಲಿ ಮಾತ್ರವಷ್ಟೆ ನ್ಯಾಯವು ಮುಖ್ಯವಲ್ಲ. ಆಡಳಿತ ವಿಚಾರಗಳಲ್ಲೂ ತೀವ್ರವಾಗಿ ಮತ್ತು ಸರಿಯಾಗಿ ನಿರ್ಧಾರಗಳನ್ನು ಕೈಗೊಳ್ಳುವುದೂ ಅತ್ಯವಶ್ಯ. ಆದರೆ ಈ ಯೋಗ್ಯತೆ ದೇವದತ್ತ ವರದಾಗಿಯೇ ಹೆಚ್ಚಾಗಿ ಬರಬೇಕಾಗುತ್ತದೆ.

ಉತ್ತಮ ಆಡಳಿತಗಾರರನ್ನು ರೂಪಿಸುವುದು ಇದೇಗುಣ. ಸಣ್ಣ ಅಥವಾ ದೊಡ್ಡ ವಿಚಾರಗಳಲ್ಲಿ ಸರಿಯಾದ ವಿವೇಚನೆ ಮತ್ತು ತೀವ್ರ ನಿರ್ಧಾರಗಳನ್ನು ಉತ್ತಮ ಆಡಳಿತಗಾರ ಕೈಗೊಳ್ಳಬಲ್ಲ. ಇದೊಂದು ದೊಟ್ಟಗುಣ. ಅಂಥ ಗುಣವುಳ್ಳವರನ್ನು ಪತ್ತೆಹಚ್ಚಿ ಅವರಿಂದ ಉಪಯೋಗ ಪಡೆಯುವ ಕೆಲಸವನ್ನು ನಾವು ಮಾಡಬಹುದು.

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited

Managing Director: T. R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18	ರೂ. 15
ಹೋಲ್ ಲೈಫ್ ಎಶ್ಯೂರೆನ್ಸಿಗೆ	ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12 1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚುವ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ವ್ಯವಹಾರದಲ್ಲಿ ಆದರ್ಶ ಮೇಳವಿಸಿದ ಉದ್ಯಮ

ಪತ್ರಿಕೆಯ ಜನಪ್ರಿಯತೆಯೊಂದೇ ಅದರ ಯೋಗ್ಯತೆಯ ಮಾನದಂಡವಲ್ಲ

ಎಲ್ಲ ಜೀವಂತ ವಸ್ತುಗಳಲ್ಲಿ ಕೆಲ ಮಟ್ಟಿನ ಐಕ್ಯಭಾವ, ವೀರ್ಯ ಹಾಗು ಬೆಳವಣಿಗೆಯ ತತ್ವ ಇರಬೇಕಾಗುತ್ತದೆ. ಒಂದು ಪತ್ರಿಕೆಯ ಸಂಗತಿಯಲ್ಲಿ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ. ಪತ್ರಿಕೆಗೆ ಸಂಬಂಧಿಸಿ ಐಕ್ಯ ಭಾವವು ಎಷ್ಟು ಸಮಗ್ರವೂ ಸ್ಪಷ್ಟವೂ ಆಗಿ ವ್ಯಕ್ತವಾಯಿತೋ ಅಷ್ಟು ಹೆಚ್ಚು ಶಕ್ತಿಯುತವಾಗಿ ಮತ್ತು ಸಫಲದಾಯಕವಾಗಿ ಬೆಳವಣಿಗೆಯು ರೂಪುಗೊಳ್ಳುತ್ತದೆ.

ಒಂದು ಪತ್ರಿಕೆಗೆ ಎರಡು ಪಕ್ಷಗಳಿವೆ: ಎಲ್ಲ ವ್ಯಾಪಾರ ವ್ಯವಹಾರದಂತೆ ಅದೂ ಒಂದು; ಆದ ಕಾರಣ, ಅದು ಬದುಕಿ ಬಾಳಬೇಕಾದರೆ ಭೌತಿಕ ಮಟ್ಟದಲ್ಲಿ ಅದು ಸಾಕಷ್ಟು ಹಣವನ್ನು ಸಂಪಾದಿಸಿ ಕೊಡಬೇಕಾಗುತ್ತದೆ. ಆದರೆ, ಅದು ಕೇವಲ ವ್ಯಾಪಾರ ವ್ಯವಹಾರವಲ್ಲ; ಅದಕ್ಕಿಂತಲೂ ಹೆಚ್ಚು ಮಹತ್ವದ ಸಂಸ್ಥೆಯೂ ಹೌದು. ಅದು ಸಮಾಜವನ್ನು ಇಡಿಯಾಗಿ ಪ್ರತಿನಿಧಿಸುತ್ತದೆ; ಸಮಾಜದ ಮೇಲೆ ಗಾಢವಾದ ಪರಿಣಾಮವನ್ನೂ ಮಾಡುತ್ತದೆ.

ಕೆಲವೊಂದು ಸಂದರ್ಭಗಳಲ್ಲಿ ಪತ್ರಿಕೆ ಇದಕ್ಕಿಂತಲೂ ವ್ಯಾಪಕವಾದ ಕಾರ್ಯ ಹಾಗು ಪರಿಣಾಮಗಳನ್ನು ಮಾಡಬಲ್ಲುದು. ತನ್ನ ದಾರಿಯಲ್ಲಿ ಅದು ಸರಕಾರದ ಸಾಧನವಾಗಿ ರೂಪುಗೊಂಡಿದೆ ಎಂದರೂ ತಪ್ಪಾಗದು. ಏಕೆಂದರೆ, ಅದು ಜನರ ಮನಸ್ಸು ಮತ್ತು ಆತ್ಮಗಳ ಮೇಲೆ ಪ್ರಭಾವ ಬೀರುತ್ತದೆ. ಪತ್ರಿಕೆಯು ಜನರನ್ನು ಸುಶಿಕ್ಷಿತರನಾಗಿ ಮಾಡಬಹುದು; ಅವರಲ್ಲಿ ಸ್ಫೂರ್ತಿ ಮತ್ತು ಉತ್ಸಾಹವನ್ನು ತುಂಬಬಹುದು— ಅಥವಾ ಇದಕ್ಕೆ ತೀರ ವಿರುದ್ಧವಾದ ಪರಿಣಾಮಕ್ಕೂ ಕಾರಣವಾಗಬಹುದು.

ಆದುದರಿಂದ ಪತ್ರಿಕೆಗೆ ಭೌತಿಕ ಅಸ್ತಿತ್ವವು ಹೇಗಿದೆಯೊ, ನೈತಿಕ ಅಸ್ತಿತ್ವವೂ ಇದೆ ಎನ್ನಬೇಕಾಗುತ್ತದೆ. ಇವೆರಡು ಶಕ್ತಿಗಳ ಹೊಂದಾಣಿಕೆಯ ನಡುವೆ ಪತ್ರಿಕೆಯು ಎಷ್ಟರ ಮಟ್ಟಿಗೆ ಸಮತೂಕವನ್ನು ಸಾಧಿಸಿಕೊಂಡು ಹೋಗುತ್ತದೆ ಎಂಬುದರ ಮೇಲಿಂದ ಪತ್ರಿಕೆಯ ಗುಣ ಧರ್ಮ ಮತ್ತು ವರ್ಚಸ್ಸನ್ನು ಅಳೆಯಲಾಗುತ್ತದೆ. ಒಂದು ಪತ್ರಿಕೆಯು ಲಾಭ ಅಥವಾ ಅಧಿಕಾರ ಸೂತ್ರವನ್ನೆ ತನ್ನ ಪ್ರಥಮ ಧ್ಯೇಯವಾಗಿ ಮಾಡಿಕೊಳ್ಳಬಹುದು; ತದ್ವಿರುದ್ಧವಾಗಿ ಅದು ಇದಕ್ಕಿಂತ ಉಚ್ಚ ಮಟ್ಟದ ಹಾಗು ತಾತ್ವಿಕದಾಯಕವಾದ ಸತ್ಕೃತಿಯಲ್ಲಿ ನಿರತವಾಗಬಹುದು.

ಉತ್ತಮ ಗುಣಧರ್ಮ ಎಂಬುದು ಮನವರಿಕೆ ಮಾಡಿಕೊಳ್ಳಲು ಕಷ್ಟಕರವಾದ ವಿಷಯ. ಅದಕ್ಕೆ ಅನೇಕ ಮುಖಗಳೂ ಬದಿಗಳೂ ಇವೆ. ಅದನ್ನು ಮಾತಿನಿಂದ ಹೆಚ್ಚಾಗಿ ತಿಳಿದುಕೊಳ್ಳುವಂತಿಲ್ಲ; ಕೇವಲ ಅನುಭವದ ಬಲದಿಂದಲೇ ಅದರ ಪರಿಚಯ ಸಾಧ್ಯ. ಹಿಂದಿನ ಕೆಲವು ಮತ್ತು ಆದರ್ಶ ಸಾಧನೆಯ ನಿಧಾನವಾದ ಸಂಗ್ರಹ ಅದೆಂದು ಹೇಳಬಹುದು. ಮನುಷ್ಯನ ಮಟ್ಟಿಗೆ ಅದು ಅತ್ಯ ಮೂಲ್ಯವಾದ ಆಸ್ತಿ; ಈ ಕಾಲದ ತೀರ ಅಧುನಿಕ ಬೆಳವಣಿಗೆಯ ಒಂದು ಅಂಗವಾಗಿರುವ ಪತ್ರಿಕೆಯ ವಿಷಯದಲ್ಲೂ ಈ ಮಾತು ಸಲ್ಲುತ್ತದೆ. ಮೂಲಭೂತವಾಗಿ ಈ ಆಸ್ತಿಯು ಪ್ರಾಮಾಣಿಕತೆ, ಚಿತ್ತಶುದ್ಧಿ, ಧೈರ್ಯ, ನ್ಯಾಯ ಬುದ್ಧಿ ಮತ್ತು ಕರ್ತವ್ಯ ನಿಷ್ಠೆ ಎಂಬಿತ್ಯಾದಿ ಉತ್ತಮಾಂಶಗಳನ್ನು ಒಳಗೊಳ್ಳುತ್ತದೆ.

ಪತ್ರಿಕೆಯ ಮುಖ್ಯ ಕರ್ತವ್ಯವೆಂದರೆ ಸುದ್ದಿಗಳ ಸಂಗ್ರಹ. ತನ್ನ ಆತ್ಮವನ್ನು ಅವಾಯಕ್ಕೆ ಗುರಿ ಮಾಡಿಯಾದರೂ ಅದು ಪೂರೈಕೆಯನ್ನು ಕಳಂಕ ರಹಿತವಾಗಿಡಬೇಕು. ಪತ್ರಿಕೆ ಕೊಡುವ ವಿಷಯದಲ್ಲಾಗಲೀ ಕೊಡದಿರುವ ವಿಷಯದಲ್ಲಾಗಲೀ ಅದು ವಿಷಯಗಳನ್ನು ಮುಂದಿಟ್ಟು ಪ್ರತಿಪಾದಿಸುವ ರೀತಿಯಲ್ಲಾಗಲೀ ಸತ್ಯದ ನಿಷ್ಕಲಂಕ ಮುಖಕ್ಕೆ ಅನ್ಯಾಯದ ನೆರಳು ಬೀಳಲಾಗದು. ಪತ್ರಿಕೆಗೆ ಟೀಕಿಸುವ ಸ್ವಾತಂತ್ರ್ಯವಿದೆ; ಆದರೆ ಸತ್ಯ ಸಂಗತಿಗಳ ರಕ್ಷಣೆಯೂ ಅಷ್ಟೇ ಪವಿತ್ರವಾಗಿದೆ. ಬಹಳವಾಗಿ ಜನರ ಬಾಯಿಯಲ್ಲಿ ನಲಿದಾಡುವ "ಪ್ರಚಾರ"ಗಳಿಗೆ ಪತ್ರಿಕೆಗಳು ಸಾಧನವಾಗಿ ಪರಿಣಮಿಸುವುದು ಸಲ್ಲದು.

ತನ್ನ ಸ್ನೇಹಿತರ ಧ್ವನಿಗೆ ಸ್ವಾಗತವನ್ನು ಒಂದು ಪತ್ರಿಕೆ ಎಷ್ಟು ಕೊಡುತ್ತದೋ ಪ್ರತಿಪಕ್ಷದವರ ಮಾತನ್ನೂ ಅದು ಸಾವಧಾನದಿಂದ ಕೇಳಿಕೊಳ್ಳುವುದು ಒಳ್ಳೆಯ ಸಂಪ್ರದಾಯ. ಟೀಕೆ ಮಾಡುವಾಗ ತನಗೆ ತಾನೇ ಹೇರಿಕೊಂಡ ಸಂಯಮವೂ ಮಹತ್ವದ ವಿಷಯ. ನಿಷ್ಕಪಟ ಹಾಗು ನಿರ್ದಾಕ್ಷಿಣ್ಯವಾಗಿರುವುದು ಯಾವಾಗಲೂ ಒಳ್ಳೆಯದು—ಆದರೆ, ನಿಷ್ಪಕ್ಷಪಾತ ಹಾಗು ನ್ಯಾಯ ಬುದ್ಧಿಯಿಂದ ನಡೆದುಕೊಳ್ಳುವುದು ಇನ್ನಷ್ಟು ಚಂದ. ತೋರಿಕೆಗೆ ಇದು ಕೇವಲ ಆದರ್ಶವೆನಿಸೀತು; ಮನುಷ್ಯನ ಸಾಧನೆಗೆ ಅದು ವಿರೋಧ ವಿಷಯ ಎಂದೂ ಕಂಡೀತು—ಆದರೆ ಪತ್ರಿಕೆಗಳು ಪ್ರಾಮಾಣಿಕ ಪ್ರಯತ್ನ ನಡೆಸಬಹುದು; ಕುಂದು ಕೊರತೆಗಳಿಗೆ ಕ್ಷಮೆಯನ್ನು ಯಾಚಿಸಿ, ಅಲ್ಲಿಗೆ ಮುಗಿಸಿ, ಮುನ್ನಡೆಯ ಬಹುದು.

ಪತ್ರಿಕೆಯ ಗುಣಧರ್ಮಗಳಲ್ಲಿ ಒಂದು —ಬಹುಶಃ ಅದೇ ಮುಖ್ಯವಾದ ಗುಣಧರ್ಮ—ಅದರ ಸ್ವಾತಂತ್ರ್ಯ. ಅದರ ಸ್ವಾತಂತ್ರ್ಯ ಮತ್ತು ಗುಣಶೀಲಗಳೇನೇ ಇರಲಿ, ಪತ್ರಿಕೆಗೆ ತನ್ನದೆಂಬ ಆತ್ಮ ಮಾತ್ರ ಇರಲೇಬೇಕು ಅದರೆ, ಬೇರೆ ವ್ಯಾಪಾರ ವ್ಯವಹಾರಗಳಂತೆ, ಪತ್ರಿಕೋದ್ಯಮದಲ್ಲಿಯೂ ಈಗಲೀಗ ಹಲವಾರು ಸಂಘಗಳ ಒಕ್ಕೂಟ ನಡೆಸುವುದರ ಕಡೆಗೆ ವಿಚಾರ ಮಾಡುತ್ತದೆ. ಪತ್ರಿಕೆಯ ಕಾರ್ಯಕಲಾಪಗಳು ವಿಸ್ತರಿಸಿದಂತೆ ಮತ್ತು ಅದರ ಬೆಳವಣಿಗೆಯು ಹೆಚ್ಚಾದಂತೆ, ಅದನ್ನು ನಡೆಸುವವೆಚ್ಚವೂ ಅಧಿಕವಾಗುತ್ತದೆ. ಕಣ್ಣಸ್ವರೂಪದ ಪತ್ರಿಕೆಗಳು ಕಠಿಣವಾದ ಕಾಲವನ್ನು ಎದುರಿಸಬೇಕಾಯಿತು; ಮತ್ತು ತತ್ಪರಿಣಾಮವಾಗಿ ಅವುಗಳಲ್ಲಿ ಎಷ್ಟೋ ಮೇಟೆಯಿಂದ ಮಾಯವಾಗಬೇಕಾಯಿತು. ಇವುಗಳ ಸ್ಥಾನದಲ್ಲಿ ನಾವೀಗ ಬೇರೆ ಬೇರೆ ಪ್ರಕಾಶನಗಳ ಆಡಳಿತವನ್ನೆಲ್ಲ ಒಟ್ಟಿಗೆ ನೋಡಿಕೊಳ್ಳುವ ಸಂಯುಕ್ತ ನಿಯಂತ್ರಣ ವಿಧಾನಕ್ಕೆ ಕಟ್ಟುಬಿದ್ದ ಸಂಸ್ಥೆಗಳನ್ನು ಕಾಣುತ್ತಿದ್ದೇವೆ. ಎಷ್ಟೋ ಸೇಳೆ ಇವುಗಳ ಪ್ರಕಟಣೆಗಳು ಪರಸ್ಪರ ವಿರುದ್ಧವಾದ ರಾಜಕೀಯ ಪ್ರಣಾಳಿಯನ್ನೆ ಪುರಸ್ಕರಿಸುತ್ತಿರುವುದೊಂದು ಚೋದ್ಯ!

ಇವತ್ತಿನ ಪರಿಸ್ಥಿತಿಯಲ್ಲಿ ಈ ವಿಧಾನ ಅನಿವಾರಣೀಯವಾದುದೆಂದು ಹೇಳುವವರಿರಬಹುದು; ಆದರೆ ಇದು ಸ್ಪಷ್ಟವಾದ ಕೆಡುಕುಗಳಿಗೆ ಎದೆ ಕೊಡುತ್ತದೆಂಬುದನ್ನು ಮರೆಯಲಾಗದು. ಸಂಸ್ಥೆಯು ಬೆಳೆದು ಬಂದಂತೆ ವ್ಯಕ್ತಿತ್ವವು ಮೂಲೆಗುಂಪಾದೀತು. ಒಂದು ಪತ್ರಿಕೆಯನ್ನು ಒಳ್ಳೆಯ ನಿಯಂತ್ರಣದಲ್ಲಿಟ್ಟು ನಡೆಸಿಕೊಂಡು ಹೋಗುವುದೇ ಮೂಗಿನ ತುದಿಯ ವರೆಗೆ ಬರುವ ಕೆಲಸ. ಹೀಗಿರುವಾಗ, ಇಷ್ಟೇ ಯಶಸ್ವಿಯಾಗಿ ಅರೇಳು ಪತ್ರಿಕೆಗಳನ್ನು ಒಬ್ಬನೇ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳ ಗುಂಪು ನಡೆಸುವುದು ಸಾಮರ್ಥ್ಯಕ್ಕೆ ಮಿಕ್ಕಿದ ಸಾಹಸ. ಇದರ ಅಪಾಯವನ್ನು ನಾವು ಅತಿಶಯೋಕ್ತಿಯಿಂದ ಬಣ್ಣಿಸಲೂ ಬಹುದು—ಏಕೆಂದರೆ, ಸಾರ್ವಜನಿಕರು ಇಂದು ಸ್ಪಷ್ಟವಾಗಿ ನೋಡಬಲ್ಲವರಾಗಿದ್ದಾರೆ. ಗಾಢ ವಿಶ್ವಾಸ ಮತ್ತು ಪೂರ್ಣ ಪ್ರಜ್ಞೆಯಿಂದ ಹೇಳಿದ ಮಾತುಗಳನ್ನು ಈಗ ಜನರು ಚೆನ್ನಾಗಿ ಗುರುತಿಸಬಲ್ಲರು; ಅಲ್ಲದೆ ಯಾವುದನ್ನು ನಂಬಿ ಸ್ವೀಕರಿಸಬೇಕು, ಯಾವುದನ್ನು ಉಪೇಕ್ಷಿಸಿ ಬಿಡಬೇಕು ಎಂಬುದೂ ಜನರಿಗೆ ಚೆನ್ನಾಗಿ ಗೊತ್ತು.

ಈಗಿನ ಪರಿಸ್ಥಿತಿಯು ಕೊನೆಗೆ ತನ್ನಷ್ಟಕ್ಕೆ ಒಂದು ತೀರ್ಮಾನವನ್ನು ತಂದುಕೊಳ್ಳುತ್ತದೆ; ಹಾಗಾಗಲು ಬಿಡುವುದೇ ಶ್ರೇಯಸ್ಕರ. ಆದರೆ, ಪತ್ರಿಕೆಯ ಕುರಿತಾಗಿ ಹಿಂದಿನ ಆದರ್ಶಗಳಲ್ಲಿ ವಿಶ್ವಾಸವಿಟ್ಟಿರುವವರು ಯಾರೂ ಈಗ ಅಪ್ರತಿಭಾಗಬೇಕಾಗಿಲ್ಲ. ತಮ್ಮ ಪತ್ರಿಕೆಯನ್ನು ಯಶಸ್ಸು ಸಂಪಾದಿಸುವುದಕ್ಕೆ ಮತ್ತು ಅದಕ್ಕೆ ತಕ್ಕ ಯೋಗ್ಯತೆಯಿಂದ ಕೂಡಿರುವಂತೆ ಸಜ್ಜುಗೊಳಿಸಿ ಉತ್ತಮವಾಗಿಡುವುದೇ ಅವರ ಕರ್ತವ್ಯ. ಒಂದು ಪತ್ರಿಕೆಯ ಮೂಲ್ಯಂಕನವು ಕೇವಲ ರೂಪಾಯಿ ಆಣೆ ಪೈಗಳಲ್ಲಿ ಮಾಡಲ್ಪಡುವುದಿಲ್ಲ. ತರುವ ಲಾಭವೊಂದೇ, ಗಳಿಸಿದ ಜನಪ್ರಿಯತೆಯೊಂದೇ ಪತ್ರಿಕೆಯ ಯೋಗ್ಯತೆಯಲ್ಲಿ ನಿರ್ಣಾಯಕ

(೧೦ನೇ ಪುಟ ನೋಡಿರಿ)

NOTICE:

In the court of the District Munsif of Coondapoor

O. S. No. 246/1955.

Between: Puttamma— Plaintiff.

and

Bhavani Shedthi daughter of Basrut Sheenappa Shetty, residing at Basrur of Coondapoor Taluk.

—Defendant.

To the defendant:

Please take notice that the above suit filed by the plaintiff for recovering rent and possession of the mulgeni holding against you, stands posted to 31—8—1955 If you fail to appear before the above court on that day at 11 A. M either in person or through a duly instructed pleader you will be declared expate and further orders will be passed in your absence.

(By order of court)

Sd. K. Ramappayya, B.A.B.L.

Advocate for plaintiff.

Coondapoor 19—8—1955.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಆಗೋಸ್ತು ಹದಿನೈದರ ಸತ್ಯಾಗ್ರಹದ ಪ್ರತಿಕ್ರಿಯೆ

ಗೋವೆಯೊಳಗೆ ಮುಖ್ಯ ಪಟ್ಟಣಗಳಲ್ಲಿ ಸ್ಥಳೀಯ ರಾಷ್ಟ್ರೀಯರಿಂದಲೇ ಸತ್ಯಾಗ್ರಹ ಚಳವಳಿ

ಆಗೋಸ್ತು ಹದಿನೈದರಂದು ಪೋರ್ಚುಗೀಜರು ನಡೆಸಿದ ಅತ್ಯಾಚಾರವನ್ನು ಭೀಕರ ನರಮೇಧ ಎಂಬುದಾಗಿ ಸಂದೇಹ ವಿಲ್ಲದೆ ಹೇಳಬಹುದು. ಆದರೆ, ನಿಶ್ಶಸ್ತ್ರ ಸತ್ಯಾಗ್ರಹಿಗಳ ಮೇಲೆ ಗುಂಡು ಹಾರಿಸಿ, ಘೋರ ದುರಂತವನ್ನು ತಂದೊಡ್ಡಿದರೂ ಸಹ, ಇದರಿಂದ ಭಾರತೀಯರಾಗಲೀ ಸ್ವತಃ ಗೋವಾಂತಕರಾಗಲೀ ಧೃತಿಗೆಟ್ಟಿಲ್ಲ ಎಂದು ವರದಿಗಳು ಹೇಳುತ್ತವೆ.

ರಾಷ್ಟ್ರೀಯರ ಸತ್ಯಾಗ್ರಹ

ಗೋವೆಯೊಳಗೆಯೇ ರಾಷ್ಟ್ರೀಯರು ಮೆರವಣಿಗೆ ತೆಗೆದಿದ್ದರು; ಪೋರ್ಚುಗೀಜರ ಆಡಳಿತೆಯ ವಿರುದ್ಧ ಘೋಷಣೆಗಳನ್ನು ಮಾಡುತ್ತಾ ಪಣಜಿ, ಮರ್ಮಗೋವ ಮುಂತಾದ ಮುಖ್ಯ ಪಟ್ಟಣಗಳಲ್ಲಿ ಅವರು ಶಾಂತ ಸತ್ಯಾಗ್ರಹವನ್ನು ನಡೆಸಿದ್ದರು—ಎಂದು ತಿಳಿದು ಬರುತ್ತವೆ. ಎಮ್ಮೋ ಸ್ಥಳಗಳಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು ಇನ್ನೆಲ್ಲರನ್ನೂ ಪೋಲೀಸರು ಬಂಧಿಸಿ, ಜೆನ್ನಾಗಿ ಪ್ರಹರಿಸಿ, ಹಿಂದಿನಿಂದ ಬಿಡುಗಡೆ ಮಾಡಿದರು.

ಹುತಾತ್ಮರಿಗೆ ಶ್ರದ್ಧಾಂಜಲಿ

ಹೀಗೆ ಛಲಸೆಗೆ ಗುರಿಯಾದ ಗೋಮಾಂತಕರ ಸಂಖ್ಯೆ ನೂರಇಪ್ಪತ್ತೈದಕ್ಕೆ ಕಡಿಮೆಯಾಗಿಲ್ಲವೆಂದು ತಿಳಿದು ಬರುತ್ತವೆ. ಇದಲ್ಲದೆ ಗೋವೆಯ ಹೊರಗಿನಿಂದ ಸತ್ಯಾಗ್ರಹಕ್ಕಾಗಿ ತೆರಳಿದ ಹದಿನಾಲ್ಕು ಮಂದಿ ಸಹಿತ ನೂರು ಮಂದಿ ಗೋವಾಂತಕರಿದ್ದರೆಂದು ಯಾವಿಗಳ ಪಟ್ಟಿಯಿಂದ ಗೊತ್ತಾಗುತ್ತದೆ. ಗುಂಡಿಗಾಹುತಿಯಾದ ಸತ್ಯಾಗ್ರಹಿಗಳಿಗೆ ಪೋರ್ಚುಗೀಜರೇ ಅಗ್ನಿಸಂಸ್ಕಾರ ನಡೆಸಿದಾಗ ಸ್ಥಳೀಯರು ಗೌರವದಿಂದ ಸತ್ಯಾಗ್ರಹಿಗಳ ಆತ್ಮಕ್ಕೆ ಶಾಂತಿ ಕೋರಿದರೆಂದೂ ಇದನ್ನು ಸಹಿಸದ ಪೋರ್ಚುಗೀಜರು ಜನರ ಗುಂಪು ಚದರಿಸಲು ಹಿಂಸಾಕೃತ್ಯ ಕೈಗೊಂಡರೆಂದೂ ಹೇಳಲಾಗುತ್ತದೆ.

ಕಾಂಗ್ರೆಸಿಗರ ಪಾತ್ರ

ಸತ್ಯಾಗ್ರಹಿಗಳಲ್ಲಿ ವೈಯಕ್ತಿಕವಾಗಿ ಭಾಗವಹಿಸಿದ ಕಾಂಗ್ರೆಸಿಗರ ಸಂಖ್ಯೆಯೂ ಇನ್ನೂರಕ್ಕೆ ಕಡಿಮೆಯಾಗಿಲ್ಲ—ಬಾಂದಾದಲ್ಲಿ ಗೋಳೀಬಾರು ನಡೆದಾಗ ಅಪ್ರತಿಮ ಧೈರ್ಯ ಸಾಹಸಗಳನ್ನು ತೋರಿಸಿ, ಸಿಂಹಿಣಿಯಂತೆ ಮೆರೆದ ಅಖ ವಯಸ್ಸಿನ ಮಧ್ಯಪ್ರದೇಶದ ಶ್ರೀಮತಿ ಸುಭದ್ರಾಬಾಯಿ ಸಾಗರರು ನಿಷ್ಠಾವಂತ ಕಾಂಗ್ರೆಸಿಗರು; ಐದು ಗುಂಡುಗಳ ಹೊಡೆತದಿಂದ ನುಗ್ಗಾಗಿದ್ದರೂ ಗುಣಹೊಂದಿದೊಡನೆಯೇ ತಾನು ಸುನಃ ಸತ್ಯಾಗ್ರಹದಲ್ಲಿ ಧುಮುಕುವೆನೆಂಬ ವೃಥ ಸಂಕಲ್ಪ ಅವರದು!

ಸುಲಭ ತೀರ್ಮಾನ

ಇದರಿಂದ ಗೋವೆಯ ಆಂದೋಲನವು ಭಾರತೀಯರ ಸಮಾನುಭೂತಿಯನ್ನು ಪಕ್ಷ ಪಂಗಡಗಳ ಭೇದವಿಲ್ಲದೆ ಸಂಪಾದಿಸಿದೆ ಎಂದೂ ಸ್ವತಃ ಗೋವಾಂತಕರು ತಮಗೆ ಸಾಧ್ಯವಿದ್ದ ಎಲ್ಲ ಬಗೆಯಿಂದಲೂ ಸತ್ಯಾಗ್ರಹಕ್ಕೆ ನೆರವಾಗಿ, ಪೋರ್ಚುಗೀಜರ ದಾಸ್ಯದಿಂದ ಮುಕ್ತರಾಗಲು ಪ್ರಯತ್ನಪಡುತ್ತಿರುವರೆಂದೂ ಸಂದೇಹದ ಲವಲೇಶವಿಲ್ಲದೆ ತೀರ್ಮಾನಿಸಬಹುದು.

ಅನುಕೂಲ ಮತ

ಪೋರ್ಚುಗೀಜರು ಗುಂಡಿನ ಹೊಸೆತ ನಡೆಸಿದಂದು ಅಲ್ಲಿದ್ದ ಪಾಶ್ಚಾತ್ಯ ಪತ್ರಿಕೆಗಳ ಸದ್ದಿಗಾರರ ಅನುಭವದ ಮೇಲಿಂದ ಹೇಳುವುದಾದರೆ, ಗೋವೆಯಲ್ಲಿ ಪ್ರಜಾಪ್ರಭುತ್ವಕ್ಕೆ ಸಮ್ಮತವಾದ ವಾತಾವರಣವನ್ನು ನಿರ್ಮಿಸಿ, ಜನರಿಗೆ ನಿರ್ಭಯವಾಗಿ ತಮ್ಮ ಅಭಿಪ್ರಾಯವನ್ನು ಒದಗಿಸಲು ಬಿಟ್ಟರೆ--ಆಗ ಭಾರತದೊಡನೆ ಸೇರ್ಪಡೆಹೊಂದಲು ಸಂಪೂರ್ಣ ಬಹುಮತ ವ್ಯಕ್ತವಾಗಬಲ್ಲುದು. ಆದರೆ, ಇಂದು ಅಲ್ಲಿ ಸೈನ್ಯದ ದರ್ಪವೇ ಕಂಡು ಬರುತ್ತದೆ.

ಪೋರ್ಚುಗೀಜರಿಗೆ ವಿರೋಧ

ಗೋಮಾಂತಕ ಅಧಿಕಾರಿಗಳಲ್ಲಿ ಪೋರ್ಚುಗೀಜರ ವಿರುದ್ಧವಾದ ಭಾವನೆ ಬಲಿಯುತ್ತಿರುವಂತೆ ಕಂಡು ಬರುತ್ತದೆ. "ವಿವಾ ಸಾಲಾಝಾರ್!" "ವಿವಾ ಗೋವಾ!" ಎಂದು ಬೊಬ್ಬಿಡುತ್ತಾ ಬೀದಿಯಲ್ಲಿ ಮೆರವಣಿಗೆ ತೆಗೆಯಲು ಈ ಅಧಿಕಾರಿಗಳ ಮಕ್ಕಳನ್ನು ಒತ್ತಾಯದಿಂದ ಉಪಯೋಗಿಸಲಾಗುತ್ತದೆ. ಆದರೆ ಸ್ವತಃ ಅಧಿಕಾರಿಗಳು ಸತ್ಯಾಗ್ರಹಿಗಳಿಗೆ ಅನುಕೂಲರಾಗಿದ್ದಾರೆ—ಅವರು ಚಿತ್ರಹಿಂಸೆ ಮಾಡುವುದಿಲ್ಲ; ಪೋರ್ಚುಗೀಜರ ಕಣ್ಣು ತಪ್ಪಿಸಿ ನೀರು, ಟೋಪ್ಪುಗಳನ್ನು ಉಚಿತವಾದಿಂದ ಕಂಗೆಟ್ಟ ಸತ್ಯಾಗ್ರಹಿಗಳಿಗೆ ನೀಡಿದ ಉದಾಹರಣೆಗಳು ಅನೇಕ ಈ ಅಧಿಕಾರಿಗಳ ಸಮೀಪ ಒಂಧುಗಳು ಸತ್ಯಾಗ್ರಹಕ್ಕೆ ತುಂಬ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ ಎಂದು ಪಾಶ್ಚಾತ್ಯ ಸದ್ದಿಗಾರರ ಅಭಿಪ್ರಾಯ.

ಪಾಶ್ಚಾತ್ಯ ಪತ್ರಿಕೆಗಳಲ್ಲಿ

ಇದನ್ನೆಲ್ಲ ಇದ್ದುದಿದ್ದಂತೆ ವರದಿಮಾಡಿದ್ದರೂ ಅವರ ಪತ್ರಿಕೆಗಳಲ್ಲಿ ಬಂದ ಟೀಕೆಗಳು ಭಾರತ ಸರಕಾರದ ಮೇಲೆ—ನೆಹರುಗಳ ಮೇಲೆ—ಆಗೋಸ್ತು ಹದಿನೈದರ ದುರಂತದ ಹೊಣೆಯನ್ನು ಹೇರುತ್ತವೆ ಎಂಬುದು ಶೋಚನೀಯವಾದ ವಿಚಾರ. ಅಮೇರಿಕದ ಯಾಗು ಬ್ರಿಟನಿನ ಹೆಚ್ಚಿನ ಪತ್ರಿಕೆಗಳು ಸತ್ಯಾಗ್ರಹಿಗಳನ್ನು ಭಾರತ ಸರಕಾರ ಗೋವೆಯಲ್ಲಿ ಪ್ರವೇಶಿಸಗೊಟ್ಟದರಿಂದಲೇ ಈ ಹತ್ಯಾಕಾಂಡ ನಡೆಯುವುದಕ್ಕೆ ಪ್ರಚೋದನೆ ದೊರೆಯಿತು ಎಂದು ಬರೆದಿರುತ್ತವೆ. ಇನ್ನೊಬ್ಬರ ಆಡಳಿತ ಕ್ಷೇತ್ರದಲ್ಲಿ ಎಷ್ಟೇ ಶಾಂತಿಯುತವಾಗಿಯಾಗಲಿ, ಆಕ್ರಮಣ ನಡೆಸುವುದೆಂದರೆ ಇಂಥ ದುರಂತಕ್ಕೆ ಸ್ವಾಗತವಿತ್ತಂತೆಯೆ ಎಂದು ಅವುಗಳ ಸಾಮಾನ್ಯಅಭಿಪ್ರಾಯ.

ಮಹತ್ವವನ್ನು ಗಮನಿಸಿಲ್ಲ

ಹೀಗೆ ಬರೆದ ಪತ್ರಿಕೆಗಳು ವಿಷಯದ ಮಹತ್ವವನ್ನು ಸ್ವಲ್ಪವೂ ಗಮನಿಸಿಲ್ಲ—ಗೋವೆ ಭಾರತದೊಡನೆ ಸೇರುವುದು ಎಷ್ಟು ಸ್ವಾಭಾವಿಕವಾದ ಅವಶ್ಯಕತೆ, ಅದರ ಮೇಲೆ ಭಾರತಕ್ಕೆ ಎಷ್ಟು ಹೆಚ್ಚಿನ ಅಧಿಕಾರವಿದೆ, ಗೋಮಾಂತಕರಿಗೆ ಸ್ವತಂತ್ರವಾಗಲು ಈ ಯುಗದಲ್ಲಿರುವ ಅಧಿಕಾರವೆಷ್ಟು ಎಂದು ಮುಂತಾದ ಯಾವ ಗಂಭೀರ ವಿಷಯಗಳನ್ನೂ ಸಮಾನುಭೂತಿಯಿಂದಲ್ಲದಿದ್ದರೆ ಹೋಗಲಿ—ನಿಷ್ಪಕ್ಷಪಾತವಾಗಿಯೂ ಈ ಟೀಕಾಕಾರರು ವಿಚಾರಿಸಿಲ್ಲ. ಬದಲಿಗೆ "ಕೆನಡದ ಮೇಲೆ ಅಮೇರಿಕದ ಸಂಯುಕ್ತ ರಾಜ್ಯಕ್ಕಿರುವ ಅಧಿಕಾರದಷ್ಟೇ ಗೋವೆಯ ಮೇಲೆ ಭಾರತಕ್ಕಿರುವ ಅಧಿಕಾರ" ಎಂದು ಒಂದು ಪತ್ರಿಕೆ ಸಾರಿತು!

ನ್ಯಾಟೊ—ಲಿಸ್ಬನಿನ ಶಕ್ತಿ ಕೇಂದ್ರ

ಸಾಮ್ರಾಜ್ಯ ಶಾಹಿ ಶಕ್ತಿಗಳನ್ನು ಪೋಷಿಸುವ "ಪ್ರಜಾ ಪ್ರಭುತ್ವ ಪ್ರಿಯರು" ಕೆಲವರಿದ್ದಾರೆಂತಲೆ ಗೋವೆಯ ಪ್ರಶ್ನೆ ಬಗೆ ಹರಿಯದೆ ಉಳಿದಿದೆ; ಅದು ಅಂತಾರಾಷ್ಟ್ರೀಯ ಸ್ವರೂಪದ ಜಟಿಲತೆಗಳಿಂದ ಕೂಡಿ, ಪರಿಹರಿಸಲು ಕಷ್ಟವೆನಿಸಿದೆ—ಎಂಬುದನ್ನು ಈಗ ಯಾರೂ ಅಲ್ಲಗಳೆಯುತ್ತಿಲ್ಲ. ಎಲ್ಲರಿಗೂ ತಿಳಿದಿರುವಂತೆ ಪೋರ್ಚುಗಾಲವು ಅಟ್ಲಾಂಟಿಕ ಒಪ್ಪಂದಕ್ಕೆ ಸೇರಿದ ರಾಷ್ಟ್ರ—ಗೋವೆ ತನ್ನ ವಸಾಹತಲ್ಲ, ಅದು ಮಾತೃ ಭೂಸಿಯಯಂದಂಶ ಎಂದು ವಿಚಿತ್ರವಾಗಿ ಪೋರ್ಚುಗಾಲವು ಸಾಧಿಸುತ್ತಿರುವುದರಿಂದ, ಈ ಸೈನಿಕ ಒಪ್ಪಂದಕ್ಕೆ ಸೈಗಟ್ಟಿರುವ ಅಮೇರಿಕ, ಬ್ರಿಟನುಗಳೇ ಮುಂತಾದ ಮಹಾರಾಷ್ಟ್ರಗಳು ಗೋವೆಯ ಕುರಿತು ತಮ್ಮ ಅಭಿಪ್ರಾಯ ಏನೆಂದು ಹೇಳದೆ, ಪ್ರಾಯಶಃ ಲೋಕದಪ್ರತಿಕ್ರಿಯೆ ಸ್ಪಷ್ಟವಾಗದು.

ನ್ಯಾಯ ನಮ್ಮದು

ಮೂಲಭೂತವಾದ ಈ ಅವಶ್ಯಕತೆಯ ಕಡೆಗೆ ಕೆಲವಾದರೂ ಪಾಶ್ಚಾತ್ಯ ಪತ್ರಿಕೆಗಳು ಗಮನವನೆಳೆದು, ಭಾರತದ ಸಿಲುಮೆಯನ್ನು ಕೊಂಡಾಡಿರುವುದನ್ನು—ಪಾಶ್ಚಾತ್ಯ ಪತ್ರಿಕೆಗಳ ಸಾಮಾನ್ಯ ಅಭಿಪ್ರಾಯ ಎಷ್ಟೇ ತುಚ್ಛವಿದ್ದರೂ ಸಹ—ನಾವು ಮೆಚ್ಚಬೇಕಾಗುತ್ತದೆ. ಅಟ್ಲಾಂಟಿಕ ಒಪ್ಪಂದದನ್ವಯ ಪೋರ್ಚುಗಾಲಿಗೆ ದೊರೆತ ರಕ್ಷಣೆಯು ಗೋವೆಯ ಸಂಬಂಧದಲ್ಲಿ ದೊರೆಯಲಾರದೆಂದೂ ಅದು ವಸಾಹತುವಿಗಿಂತ ಹೆಚ್ಚಿನ ಸ್ಥಾನಮಾನವನ್ನು

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ಪಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ವಕಿಸ್ವರು: ಶಹಾಕಂಪೆನಿ, ಮಂಗಳೂರು



Mr. K. K. Anchan, Business Manager of Aeronautical Publications of India Ltd., Proptietors of INDIAN SKYWAYS, Asia's biggest Aviation Magazine, who has gone on a business tour of Europe and U. K. It may be recalled that Mr. Anchan was a former aerodrome officer of Rajkot Aerodrome. Our best wishes go with Mr. Anchan for a successful business tour.

ಪ್ರತಿನಿಧಿ ಕಚೇರಿಗಳನ್ನು ಮುಚ್ಚಿಬಿಡಲು ಆಜ್ಞೆ

ಪೋರ್ಚುಗಾಲದ ವಿಚಿತ್ರ ನಿಲುಮೆಗೆ ಭಾರತ ಸರಕಾರದ ಖಂಡ ತುಂಡ ಉತ್ತರ

ಹೊಂದಿಲ್ಲವೆಂದೂ ಭೌಗೋಲಿಕ, ಚಾರಿತ್ರಿಕ, ಆರ್ಥಿಕ, ಸಾಂಸ್ಕೃತಿಕ ದೃಷ್ಟಿಯಿಂದ್ದದೆ ಸ್ವತಃ ಗೋವಾಂತಕೇಯರ ಮನಸ್ಸಿನಂತೆಯೂ ಭಾರತದೊಡನೆ ಇಲ್ಲಿ ಪೋರ್ಚುಗೀಜರ ಕೈಯಲ್ಲಿರುವ ಮೂರು ತುಣುಕುಗಳು ಸೇರಬೇಕಾದದ್ದು ನ್ಯಾಯವೆಂದೂ ಭವ್ಯ ಪ್ರತಿವಾದಿಸಿರುತ್ತವೆ.

ಪೌರಸ್ತ್ಯರ ಅಭಿಪ್ರಾಯ

ಪರಕೀಯರ ದಾಸ್ಯದಿಂದ ಈಗತಾನೆ ಬಿಡುಗಡೆ ಹೊಂದಿರುವ ಪೌರಸ್ತ್ಯ ದೇಶಗಳಿಂದಲೂ ಈ ಬಗೆಯ ಸಹಾನುಭೂತಿ ದೊರಕಿದೆ. ಬರ್ಮಾದ ಪ್ರಧಾನಿಗಳು ಪೋರ್ಚುಗೀಜರ ವರ್ತನೆಯನ್ನು ಕಟುವಾಗಿ ಟೀಕಿಸಿ ಭಾರತದ ನಿಯಮವನ್ನು ಪ್ರಶಂಸಿಸಿದ್ದಾರೆ. ಸಿಂಹಳದ ಸರಕಾರ ಪೋರ್ಚುಗಾಲದ ರಾಯಭಾರಿಕ ಚೇರಿಯನ್ನು ಆ ದ್ವೀಪದಲ್ಲಿ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ನಿರಾಕರಿಸಿದೆ. ಇಂಡೋನೇಶಿಯದ ಅಧ್ಯಕ್ಷರು ಪೋರ್ಚುಗಾಲದ ನಿಲುಮೆಯನ್ನು ಖಂಡಿಸಿದ್ದಾರೆ. ಕೆಂಪು ಚೀನ, ಜಪಾನು, ಸಿಂಹಳ ಮುಂತಾದೆಡೆಯ ಪತ್ರಿಕೆಗಳು ಉಗ್ರ ವಾಕ್ಯಗಳಲ್ಲಿ ಗೋವೆಯಲ್ಲಿ ಪೋರ್ಚುಗೀಜರು ನಡೆಸಿದ ಅಕೃತ್ಯಗಳಿಗೆ ಪ್ರತಿಭಟನೆ ವ್ಯಕ್ತಮಾಡಿ, ಬ್ರಿಟಿಷರೂ ಫ್ರೆಂಚರೂ ಭಾರತದಿಂದ ಹೊರಟು ಹೋದಂತೆ ಪೋರ್ಚುಗೀಜರೂ ಪೆಟ್ಟಿಗೆ ಕಟ್ಟಬೇಕೆಂದು ಪ್ರತಿವಾದಿಸಿರುತ್ತವೆ.

ಸುಹ್ರವರ್ದಿಗಳ ಅಪಸ್ವರ

ಪಾಕಿಸ್ತಾನದ ಸರಕಾರ ಮಾತ್ರತಾನು ಮಹಾಹತು ವಾದಕ್ಕೆ ವಿರುದ್ಧವಾದ ಬಾಂಡುಂಗಿನ ಪರಿಷತ್ತನ್ನು ಕರೆದ ಕೊಲೊಂಬೊ ರಾಷ್ಟ್ರಗಳಲ್ಲಿ ಒಂದಾಗಿದ್ದರೂ—ಪ್ರಕಟವಾಗಿ ಪೋರ್ಚುಗಾಲಕ್ಕೆ ಬೆಂಬಲ ಕೊಡುತ್ತಿರುವುದು ವಿಷಾದಕರ. ಅಲ್ಲಿ ಮೊನ್ನೆ ಮೊನ್ನೆಯ ಪರೆಗೆ ಪ್ರಧಾನಿಯಾಗುವರೆಂಬ ನಿರೀಕ್ಷೆ ಹುಟ್ಟಿಸಿದ್ದ ಮಿ. ಸುಹ್ರವರ್ದಿಯವರು ಭಾರತದ ವರದಲ್ಲಿರುವ ಕಾಶ್ಮೀರ ಪ್ರದೇಶದಲ್ಲಿ ಅಲ್ಲಿಂದ ಓಡಿ ಪಾಕಿಸ್ತಾನಕ್ಕೆ ಬಂದವರು ಮತ್ತು ಸ್ವತಃ ಪಾಕಿಸ್ತಾನಿಗಳು ಶಾಂತ ಸತ್ಯಾಗ್ರಹವನ್ನು ಹೂಡಲು ಮತ್ತು ಪಾಕಿಸ್ತಾನದೊಡನೆ ಅದು ಸೇರಬೇಕೆಂದು ಚಳವಳಿಸಲು ನುಗ್ಗಿದರೆ ನೆಹರು ಸರಕಾರ ಸುಮ್ಮನಿರುತ್ತದೆಯೆ ಎಂದು ಕೇಳಿದ್ದಾರೆ! ಆದರೆ, ಪಾಕಿಸ್ತಾನದ ಪ್ರಸಿದ್ಧ ಪತ್ರಿಕೆಯೊಂದು ಭಾರತವು ಸರಕಾರವು ಈ ಪ್ರಚೋದನೆಯ ವಾತಾವರಣದಲ್ಲಿ ತೋರಿಸಿದ ಸಂಯಮವನ್ನು "ಆಶ್ಚರ್ಯ"ವೆಂದು ಸಹಾನುಭೂತಿಪರವಾಗಿ ವರ್ಣಿಸಿತು — ಮತ್ತು ಪೋರ್ಚುಗೀಜರ ಅಕೃತ್ಯವನ್ನು ಬಲವಾಗಿ ನಿಷೇಧಿಸಿತು.

ಅಗ್ನಿ ಪರೀಕ್ಷೆ

ನಿಜಕ್ಕೂ ಭಾರತ ಸರಕಾರದ ಧುರೀಣರಾಗಿ ನೆಹರುಗಳು ಅಗ್ನಿ ಪರೀಕ್ಷೆಯ ಈ ಪ್ರಸಂಗದಲ್ಲಿ ತೋರಿಸಿದ ಸಂಯಮ ಜಗತ್ತನ್ನಂತೂ ಸರಿಯೇ — ಭಾರತೀಯರನ್ನೂ ಚಕಿತಗೊಳಿಸಿತು. ಅಹಿಂಸಾತ್ಮಕ ಸತ್ಯಾಗ್ರಹವನ್ನು ರಾಜಕೀಯ ಆಯುಧವಾಗಿ ಉಪಯೋಗಿಸಬಹುದು ಎಂಬ ಮಹಾತ್ಮಾಜಿಯವರ ಆದರ್ಶ ನಮ್ಮ ಮುಂದಿದ್ದರೂ ಭಾರತದ ಜನತೆಯ ಧುರೀಣರೆನಿಸುವ ಅನೇಕರು ಪೋಲೀಸು ಕ್ರಮವನ್ನು ಸಂಕಾರ ಕೈಗೊಳ್ಳಬಿದ್ದುದಕ್ಕೆ ವಿಷಾದ ಸೂಚಿಸಿದರೆಂದ ಮೇಲೆ—ಪಾಶ್ಚಾತ್ಯ ಪ್ರಪಂಚ ಈ ಸತ್ಯಾಗ್ರಹಕ್ಕೆ ನೈತಿಕವಾಗಿ ಸಲ್ಲತಕ್ಕ ಮಹತ್ವವನ್ನಾಗಲೀ ಮನ್ನಣೆಯನ್ನಾಗಲೀ ಕೊಡದೆ ಹೋದುದು ತೀರ ಸಹಜ. ನಿಷ್ಠೆಸ್ತ್ರವಾದ ಅಹಿಂಸಾತ್ಮಕ ಸತ್ಯಾಗ್ರಹಗಳನ್ನು ಆಕ್ರಮಣಕಾರರೆಂದೂ ಅವರ ಚಳವಳಿ ಕೇವಲ ದಾಳಿಯೆಂದೂ ಪಾಶ್ಚಾತ್ಯ ಪತ್ರಿಕೆಗಳು ವರ್ಣಿಸಿರುವುದಕ್ಕೆ ಇದೇ ಕಾರಣ.

ತತ್ವನಿಷ್ಠೆ ತೊರೆದಿಲ್ಲ

ಸತ್ಯಾಗ್ರಹವು ಈ ದೃಷ್ಟಿಯಿಂದ ಅಯಶಸ್ವಿಯಾಯಿತೆಂದು ಹೇಳಲಾಗುತ್ತದೆ—ಆದರೆ, ಭಾರತ ಸರಕಾರದ ರಾಜಕೀಯದ ಬೇರು ಸಂಘರ್ಷ ಸಾಧಕತೆಗಿಂತಲೂ ತತ್ವಾಲದ ಪ್ರಯೋಜನಕ್ಕಿಂತಲೂ ಆಳವಾಗಿ ಇಳಿದಿದೆ ಎಂಬ ಗಂಭೀರ ಸತ್ಯವನ್ನು ಅದು ಜಗತ್ತಿಗೆ ತೋರಿಸಿಕೊಟ್ಟಿತೆಂಬುದನ್ನು ಕಡೆಗಣಿಸಲಾಗದು. ಭಾರತ ಸರಕಾರದ ವರವಾಗಿ ರಾಷ್ಟ್ರಾಧ್ಯಕ್ಷ ಹ್ರಸಾದ, ಪ್ರಧಾನಿ ನೆಹರು, ಗೃಹಮಂತ್ರಿ ಪಂತ ಹಾಗು ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರು ಮಾನವತೆಯ ಕೈವಾರಿಗಳೆಂದೂ ಜಾಗತಿಕ ಶಾಂತಿಗಾಗಿ ಹಪಾಪಿಸುವವರೆಂದೂ ಹೇಳಿಕೊಳ್ಳುತ್ತಿರುವ ಪ್ರಜಾಪ್ರಭುತ್ವದ ಸುಸ್ಕರ್ತರಿಗೂ ಮಹಾಹತುವಾದದ ನಿಂದಕರಿಗೂ ಪೋರ್ಚುಗಾಲದ ನಿಲುಮೆ ಅಸಂಬದ್ಧವಾದುದೆಂದು ಗ್ರಹಿಸಲು ವಿನಂತಿಸಿರುವರು. ಸರಕಾರವು ತತ್ವನಿಷ್ಠವಾಗಿದೆ—ಅದು ತೈಲೀಯ ಮಹಾಯುದ್ಧಕ್ಕೆ ನಾಂದಿಯಾಗಿ ಗೋವೆಯ ಪ್ರಶ್ನೆಯನ್ನು ಬೆಳೆಯಗೊಡಲು ಇಚ್ಛಿಸುತ್ತಿಲ್ಲ ಎಂಬುದರಿಂದ ಅವರು ಹೀಗೆ ತಿಳಿಸಿದ್ದಾರೆ.

ಜನಾಭಿಪ್ರಾಯದ ಒತ್ತಡ

ಸಾಮಾನ್ಯ ಭಾರತೀಯರು ಈ ವಿನಂತಿಗಳು ಒಳ್ಳೆಯ ಪರಿಣಾಮವಾಗಬಹುದೆಂದು ಯೋಚಿಸುತ್ತಿಲ್ಲ. ಪೋರ್ಚುಗಾಲಿಗೆ ಬುದ್ಧಿ ತಗಲುವಂತೆ ಏನಾದರೂ "ಉಗ್ರಕ್ರಮ" ಕೈಗೊಳ್ಳಬೇಕೆಂದು ಜನರ ಅಭಿಪ್ರಾಯ. ಇದನ್ನು ಸಂಕಾರ ಮರೆತಿದೆ ಎಂದೇನಲ್ಲ—ಆದರೂ ಜನಮತವು ಸರಕಾರದ ನಿರ್ಧಾರಗಳುವ್ಯಕ್ತವಾಡುವುದಕ್ಕೆ ಮುಂಚೆಯೇ ಒಂದು ಹೆಜ್ಜೆ ಮುಂದೆ ಓಡುತ್ತದೆ. ಹೀಗಿರುವಾಗ ಸರಕಾರ ತೆಗೆದುಕೊಂಡ ಕ್ರಮಗಳಿಗೆ ಜನಾಭಿಪ್ರಾಯದ ಒತ್ತಡವೇ ಕಾರಣ ಎಂಬ ವಿಚಾರ ಹಲವರಲ್ಲಿ ಮೂಡುತ್ತದೆ ಅದೇನೇ ಇರಲಿ—ಭಾರತ ಸರಕಾರವು ಗೋವೆಯಲ್ಲಿ ನಡೆದ ಭಾರತೀಯರ ಕಗ್ಗೊಲೆಯನ್ನು ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಖಂಡಿಸಿ, ಪೋರ್ಚುಗಾಲಿಗೆ ಒಂದು ಪತ್ರವನ್ನು ಒಪ್ಪಿಸುತ್ತಾ ನಾಗರಿಕ ಸರಕಾರಗಳ ವರ್ತನೆಗೆ ತೀರ ವಿರೋಧವಾಗಿ ನಡೆದುಕೊಳ್ಳುವ ಪೋರ್ಚುಗಾಲದೊಡನೆ ನಮಗೆ ಯಾವ ಸಂಬಂಧವೂ ಬೇಡ ಎಂದು ತಿಳಿಸಿದೆ.

ಲಿಸ್ಬನಿಗೆ ಆಜ್ಞೆ

ಇದರ ಪ್ರಕಾರ ಇದೇ ಸಪ್ತಂಬರ ೧೧ನೇ ದಿನಾಂಕದಿಂದ ಮುಂಬಯಿ, ಕಲ್ಕತ್ತ ಮತ್ತು ಮದ್ರಾಸುಗಳಲ್ಲಿರುವ ಪೋರ್ಚುಗಾಲದ ಪ್ರತಿನಿಧಿ ಕಚೇರಿಗಳನ್ನು ಮುಚ್ಚಬೇಕಾಗುತ್ತದೆ. ಪೋರ್ಚುಗಾಲದ ರಾಯಭಾರಿ ಕಚೇರಿ ಈಗಾಗಲೇ ಭಾರತ ಸರಕಾರದ ಆಜ್ಞೆಯಂತೆ ಮುಚ್ಚಲ್ಪಟ್ಟಿರುತ್ತದೆ. ಗೋವೆಯಲ್ಲಿರುವ ಭಾರತ ಸರಕಾರದ ಪ್ರತಿನಿಧಿ ಕಚೇರಿಯನ್ನು ಭಾರತ ಸರಕಾರ ಸ್ವೇಚ್ಛೆಯಿಂದ ಇದೇ ಸಪ್ತಂಬರ ೧೧ರಂದು ಮುಚ್ಚುತ್ತದೆ. ಹೀಗೆ ಉಭಯರಾಷ್ಟ್ರಗಳಲ್ಲಿದ್ದ ಸಂಬಂಧದ ಕೊನೆಯ ಗೊಣಸು ತುಂಡಾಗುತ್ತದೆ. ಈಗ ಹೆಚ್ಚು ಕಡಿಮೆ ನಿಂತಂತಿರುವ ಗೋವೆ ಮತ್ತು ಭಾರತದ ನಡುವಣ ವ್ಯವಹಾರ ಆ ಬಳಿಕ ಸಂಪೂರ್ಣ ಸ್ಥಗಿತಗೊಳ್ಳುತ್ತದೆ. ಇದರಿಂದ ಗೋವೆಯೊಳಗಿನ ಪ್ರಜೆಗಳಿಗೆ ತೊಂದರೆ ಕೊಟ್ಟಂತಾಗುವುದೆಂದು ಹೇಳಲಾಗುತ್ತದೆ—ಲಿಸ್ಬನಿಂದ ಹೊರಟ ಪ್ರಕಟಣೆಯಂತೂ ಗೋವಾಂತಕರನ್ನು ಪೀಡಿಸುವುದೇ ಭಾರತ ಸರಕಾರದ ಉದ್ದೇಶ ಎಂದು ಆರೋಪಿಸುತ್ತದೆ. ಆದರೆ, ಸೈನಿಕ ಕ್ರಮಕ್ಕಿಂತ ಭಿನ್ನವಾದ ಆರ್ಥಿಕ ದಿಗ್ಬಂಧನವನ್ನು ಹಾಕುವುದು ಭಾರತ ಸರಕಾರ ಅನುಸರಿಸಿಕೊಂಡು ಬಂದಿರುವ ನೀತಿಗೆ ನ್ಯಾಯಸಮ್ಮತವೆಂಬುದರಲ್ಲಿ ಭಿನ್ನಾಭಿಪ್ರಾಯವಿರಲಾರದು.

ವ್ಯಾವಹಾರಿಕ ದಿಗ್ಬಂಧನ

ಶಾಂತಿಗೆ ಬದ್ಧವಾಗಿರುವ—ಬದ್ಧವಾಗಿರಲೇ ಬೇಕಾದ—ಭಾರತ ಸರಕಾರವು ಆರ್ಥಿಕ ದಿಗ್ಬಂಧನದ ಮೂಲಕ ಗೋವೆಯೊಡನೆ ನಡೆಯುತ್ತಿರುವ ಕಳ್ಳ ವ್ಯಾಪಾರ ಮತ್ತಿತರ ಅನಪೇಕ್ಷಿತ ವ್ಯವಹಾರಗಳನ್ನು ಯಶಸ್ವಿಯಾಗಿ ತಡೆಗಟ್ಟಿದರೆ, ಪೋರ್ಚುಗಾಲಕ್ಕೆ ಗೋವೆಯ ವಸಾಹತು ಹೊರಲಾಗದ ಹೊರೆಯಾಗಿ ಪರಿಣಮಿಸುತ್ತದೆ. ಗೋವಾಂತಕರು ಗೋವೆಯೊಳಗೆ ಈಗಾಗಲೇ ಅಲ್ಪ ಪ್ರಮಾಣದಲ್ಲಿ ತೊಡಗಿರುವ ಸತ್ಯಾಗ್ರಹವನ್ನು ಇನ್ನಷ್ಟು ತ್ವರಿತಗತಿಯಿಂದ ಅಭಿವೃದ್ಧಿಗೊಳಿಸಿದರೆ, ಆಗ ಗೋವೆಯ ವಿಮೋಚನೆಯ ದಿನ ನಿಜಕ್ಕೂ ಹತ್ತಿರವಾಗುತ್ತದೆ. ಭಾರತ ಸರಕಾರದ ಪರಿಷ್ಕಾರ ಜಗತ್ತಿನ ಮನಸ್ಸಾಕ್ಷಿಗೆ ಹಾಕಿರುವ ಗಂಭೀರ ಪ್ರಶ್ನೆಯನ್ನು—ಅದೂ ತನ್ನ ತತ್ವನಿಷ್ಠೆಯನ್ನು ಸ್ವಲ್ಪವೂ ತೊರೆಯದೆ, ಸಹನೆಯಿಂದ ವರ್ತಿಸುತ್ತಾ ವಿಚಾರಿಸಿರುವ ಅಂಶವನ್ನು—ಮಹಾ ರಾಷ್ಟ್ರಗಳೂ ಚಿಕ್ಕ ರಾಷ್ಟ್ರಗಳೂ ಉಪೇಕ್ಷಿಸಿ ಬಿಡುವುದು ಕಷ್ಟ.

ಕಾಲಾಂತರದ ಪರಿಣಾಮ

ಏಕೆಂದರೆ, ಆಗ ಭಾರತ ಸರಕಾರದ—ಭಾರತೀಯರ — ಸಹಾನುಭೂತಿಯನ್ನು ಆ ರಾಷ್ಟ್ರಗಳು ನಿಶ್ಚಯವಾಗಿಯೂ ಕಳೆದುಕೊಳ್ಳುತ್ತವೆ. ೩೫ ಕೋಟಿ ಭಾರತೀಯರ ಮನನೋಯಿಸಿ, ಈ ಪ್ರಪಂಚ ಉತ್ಕರ್ಷ ಹೊಂದುವುದು ಎಷ್ಟರ ಮಟ್ಟಿಗೆ ಸಾಧ್ಯ? ಆದುದರಿಂದ ಜಗತ್ತು ಗೋವೆಯ ಪ್ರಶ್ನೆಯನ್ನು ಸಿಧಾನವಾಗಿ, ಗಂಭೀರವಾಗಿ ವಿಚಾರಿಸಬೇಕಾಗಿದೆ—ಅಲ್ಲದೆ ಭಾರತೀಯರೂ ಸರಕಾರದ ನಿಲುಮೆಯ

(ಅನೇ ಪುಟ ನೋಡಿರಿ)

THE SOUTHERN INDIA APEX BANK, LTD.
(Under Member's Voluntary Winding Up.)

NOTICE

Notice is hereby given that a General Meeting of the Company, pursuant to Section 208 D of the Indian Companies Act, 1913, will be held on Monday the 12th Sept 1955 at 11 A. M, on the top floor of "Syndicate Building", Mukund Nivas, Udipi, S. Kanara. The presence of all the Members of the Company is requested at the Meeting.

UDIPI, 18th August, 1955. (*Sd.*) K. V. Shenoy, LIQUIDATOR.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಇದೇ ಆಗೋಸ್ತು ದಿನಾಂಕ 19ರಲ್ಲು ಬ್ಯಾಂಕಿನ ಹೊಸ ಶಾಖೆಯೊಂದು ಸ.ಭಾಸ್ ಚೌಕ್, ದೊಡ್ಡ ಪೇಟೆ, ರಾಣಿಬೆನ್ನೂರು (ಧಾರವಾಡ ಜಿಲ್ಲೆ) ಇಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED
Estd:- 1906] [H. O. UDIPI (S.India).

ಕರ್ನಾಟಕದ ಪ್ರಸಿದ್ಧ ವಿದ್ವಾಂಸರಾದ ಶ್ರೀ ಕುಡ್ಪಿ ವಾಸುದೇವ ತೆಣ್ಣೈಯವರ

ಓದಲೇಬೇಕಾದ ಮೂರು ಪುಸ್ತಕಗಳು

ಮಿರಿ ಮತ್ತು ನಾನು (೧೫ ಮಿರಿ ಕತೆಗಳು) 1—0—0
ಜಪಾನ್ ಚೆಳಲು ಮತ್ತು ಇತರ ಕಥೆಗಳು 1—0—0
ಕನದ ಹಬ್ಬಗಳು (೨೨ ಹರಟೆಗಳು) 1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೫-೮-೧೯೫೫	ಸಂಚಿಕೆ ೫೦

ಶಾಂತಿಗಾಗಿ ಪರಮಾಣು

ಜಿನೇವದಲ್ಲಿ ಹನ್ನೆರಡು ದಿನಗಳವರೆಗೆ ನಿರಂತರವಾಗಿ ನಡೆದು ಮೊನ್ನೆ ೨೦ನೇ ತಾರೀಕಿನಂದು ಮುಕ್ತಾಯವಾದ "ಶಾಂತಿಗಾಗಿ ಪರಮಾಣು" ಪರಿಷತ್ತು ಜಗತ್ತಿನ ನಾಗರಿಕತೆಯ ಚರಿತ್ರೆಯಲ್ಲಿ ಯೊಸ ಅಧ್ಯಾಯವೊಂದನ್ನು ಬರೆದಿದೆ ಎಂದರೆ ಅತಿಶಯೋಕ್ತಿಯಾಗದು. ಒಟ್ಟಿಗೆ ೭೩ ರಾಷ್ಟ್ರಗಳು ಇದರಲ್ಲಿ ಭಾಗವಹಿಸಿದ್ದವು. ೪೦೦ ಜನರು ಸೇರಿ ವಿಚಾರ ವಿನಿಮಯವನ್ನು ನಡೆಸಿದ್ದರು. ಇಷ್ಟು ವ್ಯಾಪಕ ಸ್ವರೂಪದಲ್ಲಿ ಯಾವುದೇ ಅಂತಾರಾಷ್ಟ್ರೀಯ ಪರಿಷತ್ತು ನಡೆದಿರುವುದು ದುರ್ಲಭ. ಇದರಲ್ಲೂ ಉಲ್ಲೇಖನೀಯವಾದ ವಿಷಯವೆಂದರೆ "ಪೂರ್ವ—ಪಶ್ಚಿಮ" ಎಂಬ ಭೇದಭಾವಕ್ಕೆ ಎಳ್ಳಷ್ಟೂ ಎಡೆಕೊಡದೆ ಸೌಹಾರ್ದಪೂರ್ಣವಾದ ವಾತಾವರಣದಲ್ಲಿ ಒಬ್ಬರಿನ್ನೊಬ್ಬರಿಗೆ ತಮ್ಮ ಸಾಧನೆಯ ವಿವರಗಳನ್ನು ನೀಡಿದ ಪ್ರಸಂಗ. ಅಣುಶಕ್ತಿಯ ಕ್ಷೇತ್ರದಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧಿಸಿರುವ ಅಮೇರಿಕ, ರಶ್ಯ ಮತ್ತು ಬ್ರಿಟನುಗಳಿಂದ ಹಿಡಿದು ತನ್ನದೇ ಸ್ವತಂತ್ರ ರೀತಿಯಲ್ಲಿ ಹೆಜ್ಜೆಯನ್ನು ಮುಂದಿಡುತ್ತಿರುವ ಭಾರತದ ವರೆಗೆ ಎಲ್ಲರೂ ಶಾಂತಿಕಾಲದ ಬಳಕೆಗೆ ಪರಮಾಣುವನ್ನು ಹೇಗೆ ಬಳಸಬಹುದೆಂದು ವಿವರಿಸಿದರು. ಹೀಗೆ ಬಹಿರಂಗಗೊಳಿಸಿದ "ಗುಟ್ಟು" ಇನ್ನು ಮುಂದೆ ಗುಟ್ಟಾಗಿ ಉಳಿಯಲಾರದು— ಏಕೆಂದರೆ, ೧೩ ಸಂಪುಟಗಳ ರೂಪದಲ್ಲಿ ಪ್ರಸಂಗದ ನಾಲ್ಕು ಪ್ರಮುಖ ಭಾಷೆಗಳಲ್ಲಿ ಈ ಉಪನ್ಯಾಸಗಳು ಇಷ್ಟರಲ್ಲೇ ಪ್ರಕಟಿಸಲ್ಪಡುತ್ತವೆ. ಆದುದರಿಂದ ಪರಿಷತ್ತಿನ ಅಧ್ಯಕ್ಷರೂ ಭಾರತದ ನಿಯೋಗದ ಧುರೀಣರೂ ಆದ ಶ್ರೀ ಹೋಮಿ ಜೆಹಾಂಗೀರ ಭಾಭಾ ಹೇಳಿರುವಂತೆ ಒಮ್ಮೆ ನೀಡಿದ ಜ್ಞಾನವನ್ನು ಹಿಂದೆಗೆದುಕೊಳ್ಳಲು ಸಾಧ್ಯವಿಲ್ಲ; ಈ ದೃಷ್ಟಿಯಿಂದ ತ್ವೇಷ, ವೈಷಮ್ಯಗಳಿರುವ ವಾತಾವರಣದಲ್ಲಿ ಪರಿಷತ್ತು ಸಂವಾದಿಸಿದ ಸಾಧನೆಯು ಹಿಂದೆ ಸರಿಯುವ ಪ್ರಶ್ನೆಯೇ ಉದ್ಭವಿಸದಂತೆ ಮುಂದಿಟ್ಟ ಹೆಜ್ಜೆ ಎಂಬುದು ಒಪ್ಪಲೇ ಬೇಕಾದ ವಿಷಯ. ರಾಜಕೀಯದ ಮೇಲೂ ಸತ್ಪರಿಣಾಮ ಬೀರುವಷ್ಟು ಪರಿಷತ್ತು ಸಫಲವಾದೀತು ಎಂದು ನಿರೀಕ್ಷಕರು ಬೇಳಿರುವುದಕ್ಕೆ ವಿಜ್ಞಾನಿಗಳು ತಂತಮ್ಮ ರಾಷ್ಟ್ರದ ಬೇಲಿಯ ಆವರಣದ ಹೊರಗೆ ನಿಂತು ಜಗತ್ಕಲ್ಯಾಣ ದೃಷ್ಟಿನೆಯೇ ಮಹತ್ವ ಕೊಟ್ಟು ಅನುಭವಗಳ ಆದಾನ ಪ್ರದಾನದಲ್ಲಿ ಸಂತೋಷ ಕಂಡದ್ದೇ ಕಾರಣ. ತತ್ಪರಿಣಾಮವಾಗಿ ಜಗತ್ತು ಎರಡು ಮುಖ್ಯ ವಿಷಯಗಳಲ್ಲಿ ಲಾಭವನ್ನು ಸಂಪಾದಿಸಿದೆ— ಮೊದಲನೆಯದಾಗಿ "ಪ್ರತಿ ಪ್ರವರ್ತಕ ಯಂತ್ರ"ಗಳನ್ನು ಸ್ಥಾಪಿಸಿ ಆದರಿಂದ ವಿಪುಲ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಪಡೆಯುವ ಸರಳ ವಿಧಾನವು ಗೋಚರಿಸಿದೆ; ಎರಡನೆಯದಾಗಿ ಔಷಧ ಮತ್ತು ಜೀವ ಜಂತುಗಳ ಬೆಳವಣಿಗೆಗೆ ಉಪಯುಕ್ತವಾದ ಐಸೋಟೋಪುಗಳನ್ನು ಜಗತ್ತಿನ ಎಲ್ಲ ದೇಶಗಳ ಜನರೂ ಹೆಚ್ಚಿನ ವೆಚ್ಚವಿಲ್ಲದೆ ಉಪಯೋಗಿಸುವ ದಿನ ಸಮೀಪವಿರುವಂತೆ ಕಂಡಿದೆ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಪ್ರತಿ ಪ್ರವರ್ತಕ ಯಂತ್ರಗಳನ್ನು ಸ್ಥಾಪಿಸುವುದಕ್ಕೆ ಕಲ್ಲಿದ್ದಲಿನಿಂದ ಸ್ಥಾಪಿಸಲ್ಪಡುವ ಯಂತ್ರಕ್ಕಿಂತ ಇನ್ನೂ ಹೆಚ್ಚು ತಗಲುತ್ತದೇನೊ ನಿಜ; ಆದರೆ ಇದು ಉತ್ಪಾದಿಸುವ ವಿದ್ಯುಚ್ಛಕ್ತಿಯನ್ನು ಬಹಳ ಅಗ್ಗದಲ್ಲಿ ಪೂರೈಸಬಹುದು ಎಂದು ವಿಜ್ಞಾನಿಗಳ ಅಭಿಪ್ರಾಯ. ಈ ಪ್ರಯೋಜನವು ಯುರೇನಿಯಂ, ಪ್ಲುಟೋನಿಯಂ ಮುಂತಾದ ವಿರಳ ಅಣು ವಿನಿಜಗಳ ಸ್ಥಾನದಲ್ಲಿ ಥೋರಿಯಂ ಧಾತುವನ್ನು ಉಪಯೋಗಿಸಬಹುದೆಂಬ ವಿಜ್ಞಾನಿಗಳ ಶೋಧದಿಂದ ಇನ್ನಷ್ಟು ಸ್ಪಷ್ಟವಾಗಿಕಾಣಿಸಿದೆ. ಆದರೆ, ಉಗಿನ ವಿದ್ಯುದುತ್ಪಾದಕ ಯಂತ್ರಗಳು ಶೀಘ್ರದಲ್ಲಿಯೇ ನಾಶವಾಗುತ್ತವೆ ಎಂದು ಇದರ ಅರ್ಥವಲ್ಲ— ಅವೂ ಉಳಿಯುತ್ತವೆ; ಕ್ರಮೇಣ ಅಣು ಯಂತ್ರಗಳಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡುತ್ತವೆ. ಅಣುಶಕ್ತಿಯ ಸ್ಫೋಟನ ಕ್ರಿಯೆಯು ಪ್ರಾಣಿ ಮತ್ತು ಮನುಷ್ಯಜೀವನದ ಮೇಲೆ ಎಷ್ಟರಮಟ್ಟಿಗೆ ಅನಾಹುತ ಮಾಡುತ್ತದೆ ಎಂಬ ವಿಷಯದ ಜರ್ಚೆಯೂ ಪರಿಷತ್ತಿನಲ್ಲಿ ನಡೆಯಿತು. ಶಾಂತಿಗಾಗಿ ಪರಮಾಣುವನ್ನು ಬಳಸುವಾಗ ಅಪಾಯ ತಟ್ಟದ ಮಿತಿಯೊಂದನ್ನು ಹಾಕಿಕೊಳ್ಳಬಹುದು ಎಂದು ವಿಚಾರ ವಿನಿಮಯದ ಕಾಲಕ್ಕೆ ವ್ಯಕ್ತವಾಯಿತು; ಆದರೆ ಅಣು ಮತ್ತು ಜಲಜನಕ ಬಾಂಬುಗಳ ಸ್ಫೋಟನವು ಈ ರಕ್ಷಣೆಯನ್ನು ಕೊಡಲಾರದೆಂದು ಹೇಳಲಾಗುತ್ತದೆ. ಪ್ರಾಣಿ ಸಸ್ತು ಮನುಷ್ಯವರ್ಗದ ಪ್ರಜೋತ್ಪಾದನಾ ಶಕ್ತಿ ಮತ್ತು ಭವಿಷ್ಯದ ಪೀಳಿಗೆಯ ಮೇಲೆ ಎಷ್ಟರಮಟ್ಟಿನ ದುಷ್ಪರಿಣಾಮವು ಅಣ ಶಕ್ತಿಯ ಸ್ಫೋಟನ ಕ್ರಿಯೆಯಿಂದಾಗುತ್ತದೆ ಎಂಬುದನ್ನು ನಿಶ್ಚಿತವಾಗಿ ಈಗ ಹೇಳಲಾರೆವು. ಸಂಶೋಧನೆಯನ್ನು ಈ ದಿಸೆಯಲ್ಲಿ ಮುಂದುವರಿಸಬೇಕಾಗಿದೆ ಎಂದು ಪರಿಷತ್ತು ಅಭಿಪ್ರಾಯಪಟ್ಟಿತು. ಈ ನಡುವೆ, ಶಾಂತಿಗಾಗಿ ಪರಮಾಣುವನ್ನು ಬಳಸುವಾಗಲೇ ಆಗಲಿ, ಅಪಾಯರಹಿತವಾದಮಿತಿಯಳತ್ತರಲ್ಲಿ ಒಂದಂಶದಷ್ಟೇ ಪ್ರಮಾಣದಲ್ಲಿ ಅಣು ವಿಸರಣವಾಗುವಂತೆ ಪ್ರಯೋಗಗಳನ್ನು ಮುಂದುವರಿಸುವುದು ಹಿತಕರ ಎಂದು ಶ್ರೀ ಭಾಭಾ ಸಲಹೆಮಾಡಿದರು. ಇದನ್ನು ಮನ್ನಿಸುವ ಪಕ್ಷದಲ್ಲಿ ಸೈನಿಕ ಉದ್ದೇಶಗಳಿಗೆ, ಬಾಂಬುಗಳಿಗೆ, ಅಣುಶಕ್ತಿಯನ್ನು ಉಪಯೋಗಿಸಿ, ಸ್ಫೋಟನ ಪ್ರಯೋಗ ನಡೆಸುವುದಕ್ಕೆ ಎಡೆಯೇ ಸಿಗಲಾರದು. ಈ ಸದ್ಬುದ್ಧಿ ಮಹಾ ರಾಷ್ಟ್ರಗಳದಾಗಲಿ; ಹಾಗೆಯೇ, ಇನ್ನೆರಡು ಮೂರು ವರ್ಷಗಳಲ್ಲಿ ಇನ್ನೊಮ್ಮೆ ಪರಿಷತ್ತಿನಲ್ಲಿ ಸೇರಬೇಕೆಂಬ ಅಣುವಿಜ್ಞಾನಿಗಳ ಹಾರೈಕೆ ಕಾರ್ಯಗತವಾಗಲಿ—ಎಂದು ಹಾರೈಸುತ್ತೇನೆ. ಜಾಗತಿಕ ಅಣುಶಕ್ತಿ ಮಂಡಳದ ರಚನೆಯಾಗಬೇಕೆಂಬ ಅಧ್ಯಕ್ಷ ಐಕರ ಮೂಲ ಸೂಚನೆಯ ಕುರಿತು ಈ ಪರಿಷತ್ತು ಅಷ್ಟು ಆಸ್ಥೆ ವಹಿಸಲಿಲ್ಲ—ಮಂಡಳದ ರಚನೆ ಮತ್ತು ನಿಯಂತ್ರಣದ ವಿಚಾರದಲ್ಲಿ ಭಿನ್ನಾಭಿಪ್ರಾಯವಿರುವಂತೆ ಕಾಣುತ್ತದೆ. ಆದರೆ ದೇಶಗಳು ವೈಯಕ್ತಿಕವಾಗಿ ಮಿತ್ರ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡು ಶಾಂತಿಗಾಗಿ ಪರಮಾಣು ಬಳಸುವ ವಿಧಾನವನ್ನು ತಿಳಿದುಕೊಳ್ಳುವ ಅವಕಾಶ ಹೆಚ್ಚಿದೆ— ಇದು ಕಡಮೆ ಸಂತೋಷದ ಸಂಗತಿಯಲ್ಲ.

ಮೊರೊಕ್ಕೊ - ಅಲ್ಜೀರಿಯಗಳ ಪ್ರಶ್ನೆ

ಸಂಯುಕ್ತ ರಾಷ್ಟ್ರ ಸಂಘಕ್ಕೆ ಒಯ್ಯಲ್ಪಡುವ ನಿರೀಕ್ಷೆ

ಉತ್ತರ ಆಫ್ರಿಕದಲ್ಲಿರುವ ಫ್ರೆಂಚರ ವಸಾಹತುಗಳಾದ ಅಲ್ಜೀರಿಯ ಮತ್ತು ಮೊರೊಕ್ಕೊಗಳಲ್ಲಿ ಛೀಕರ ಗಲಭೆಗಳು ಸಂಭವಿಸಿ, ೧೦೦ ಐರೋಪ್ಯರನ್ನೊಳಗೊಂಡು ೪೦೦ ಮಂದಿಗೂ ಹೆಚ್ಚು ಜನರು ಕೊಲೆಯಾದ ವಾರ್ತೆ ಬಂದಿದೆ. ಮೊರೊಕ್ಕೊದ ಸುಲ್ತಾನರನ್ನು ಪದಚ್ಯುತ ಮಾಡಿದ ದ್ವಿತೀಯ ವರ್ಷದ ದಿನಾಚರಣೆಯ ಸಂದರ್ಭದಲ್ಲಿ ಇದು ಘಟಿಸಿತು.

ವಸಾಹತು ವಾದವೇ ಮೂಲ

ಭಯಕಾರಕರು ಕಾಯಿದೆಯನ್ನು ಕೈಗೆ ತೆಗೆದುಕೊಂಡು ಹತ್ಯಾಕಾಂಡ ಮಾಡುತ್ತಿರುವುದನ್ನು ಕಂಡು ಫ್ರೆಂಚರ ಸೈನ್ಯಗಳನ್ನಲ್ಲಿ ಕಳಿಸಲಾಗಿದೆ. ಆದರೆ ಈ ಗಲಭೆಗಳ ಮೂಲವು ವಸಾಹತು ವಾದಕ್ಕೆ ಜನರು ತೋರಿಸುವ ವಿರೋಧದಲ್ಲಿದೆ ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ಆದುದರಿಂದ ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಈ ಪ್ರಶ್ನೆ ಎತ್ತಲ್ಪಡಬೇಕೆಂದು ಏಶ್ಯ-ಆಫ್ರಿಕ ರಾಷ್ಟ್ರಗಳು ತೀರ್ಮಾನಿಸಿವೆಯಾಗಿ ತಿಳಿದುಬರುತ್ತದೆ.

ನೆಹರುಗಳ ಹೇಳಿಕೆ

ಗೋವೆಯ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಒಯ್ಯಲಾಗುತ್ತದೆಯೆಂದು ಸಂಸತ್ತಿನಲ್ಲಿ ಪ್ರಧಾನಿ ನೆಹರುಗಳನ್ನು ಸದಸ್ಯರೊಬ್ಬರು ಪ್ರಶ್ನಿಸಿದರು. ಇಷ್ಟರ ವರೆಗೆ ಈ ದಿಸೆಯಲ್ಲಿ ಪ್ರಯತ್ನ ನಡೆದಂತಿಲ್ಲವೆಂದೂ ಆದರೆ ಆ ಸಂಶಯವಿದೆ ಎಂದೂ ನೆಹರು ಉತ್ತರಿಸಿದರು.

ವಿಮೋಚನೆಯ ಹೋರಾಟ

ಅಗೋಸ್ತು ಹದಿನೈದರ ಹತ್ಯಾಕಾಂಡದ ಬಳಿಕವೂ ವಿಮೋಚನೆಯ ಹೋರಾಟ ನಿಂತಿಲ್ಲ. ಸತ್ಯಾಗ್ರಹಿಗಳ ಮೂರು ತಂಡ ಆ ಬಳಿಕ ಗೋವೆಯಲ್ಲಿ ಪ್ರವೇಶಿಸಿದವು. ಸತ್ಯಾಗ್ರಹಿಗಳಾಗಿ ಗೋವೆಯ ವಿಮೋಚನೆಗೆ ಹೋರಾಡಲು ಸಹಸ್ರ ಸಂಖ್ಯೆಯಲ್ಲಿ ಇನ್ನೂ ಜನರು ಮುಂದೆ ಬರುತ್ತಿದ್ದಾರೆ. ಕರ್ನಾಟಕದ ಶ್ರೀ. ನಿಜಲಿಂಗಪ್ಪನವರನ್ನೊಳಗೊಂಡು ಸಂಸತ್ತಿನ ಕೆಲವು ಸದಸ್ಯರ ತಂಡವೊಂದು ಮುಂದಿನ ತಿಂಗಳ ಮಧ್ಯದಲ್ಲಿ ಸತ್ಯಾಗ್ರಹ ಹೂಡುತ್ತದೆ.

ತತ್ವನಿಷ್ಠ ಸತ್ಯಾಗ್ರಹಿ

ನಿಜವಾದ ಗಾಂಧಿ ತತ್ವದಂತೆ ಸತ್ಯಾಗ್ರಹವನ್ನು ಹೂಡಲು ಆಚಾರ್ಯ ವಿನೋಬರ ಆಶ್ರಮವಾಸಿ ಶ್ರೀ. ಸದಾಶಿವ ಸೇವಕರು ಸಪ್ತಂಬರ ೧೧ರಂದು ಗೋವೆಯಲ್ಲಿ ನುಗ್ಗುವರೆಂದು ವರದಿಗಳು ಹೇಳುತ್ತವೆ. ಶ್ರೀ ಸೇವಕರು ಒಂದು ನೋಟೀಸಿನ ಮೂಲಕ ಸತ್ಯಾಗ್ರಹದ ದಿನ, ವೇಳೆ, ಗೋವೆ ನುಗ್ಗುವ ಮಾರ್ಗ ಇತ್ಯಾದಿಗಳನ್ನು ಗೋವೆಯ ಗವರ್ನರ ಜನರಲರಿಗೆ ತಿಳಿಸುವರು; ತಡೆದು ನಿಲ್ಲಿಸಲಿ, ಗುಂಡು ಹಾರಿಸಲಿ, ಏಟು ಕೊಡಲಿ—ಸತ್ಯಾಗ್ರಹಿ ಹಿಂತಿರುಗಬಾರದು ಎಂದು ಶ್ರೀ ಸೇವಕರ ನಿರ್ಧಾರ.

ಬಿ. ಸಿ. ಜಿ. ದಾಕು

ಮದ್ರಾಸಿನ ಶಾಸನಸಭೆಯು ಗೋವೆಯ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು. ಬಿ. ಸಿ. ಜಿ. ದಾಕಿನ ಕುರಿತಾಗಿ ಸ್ವಾರಸ್ಯವಾದ ಪ್ರಶ್ನೋತ್ತರವೊಂದು ಇದೇ ೧೯ನೇ ದಿನಾಂಕ ನಡೆಯಿತು. ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ರಾಜ್ಯದಲ್ಲಿ ೧೫೫೧೪೩ ಜನರನ್ನು ಪರೀಕ್ಷಿಸಿ, ೪೩೩೮೨೨ ಮಂದಿಗೆ ದಾಕು ಹಾಕಲಾಗಿದೆ. ದೇಶದಲ್ಲಿ ೫ ಲಕ್ಷಕ್ಕಿಂತಲೂ ಹೆಚ್ಚು ಜನರಿಗೆ ದಾಕು ಹಾಕಲಾಗಿದೆ— ಆದರೆ ಬಂದ ದೂರುಗಳು ಕೇವಲ ೧೨ ಎಂದರು. ಇದರ ಮೇಲಿಂದ ಬಿ. ಸಿ. ಜಿ. ದಾಕು ಹಾನಿಕರವಲ್ಲ ಎಂದು ತಿಳಿಯಬಹುದಾಗಿ ಸಾರಿದರು.

ಹೊಸ ಸುಧಾರಣೆ

ಲೋಕಸಭೆಯಲ್ಲಿ ಇನ್ನು ಮುಂದೆ, ಒಂದು ವರ್ಷದ ಅವಧಿಯಲ್ಲಿ ಟಿಪ್ಪಾಲುಲಕಟ್ಟಿಗಳಲ್ಲಿನ ಉಳಿತಾಯ ಬೇಂಕುಗಳಲ್ಲಿ ಚೆಕ್ಕುಗಳ ಮೂಲಕ ವ್ಯವಹಾರ ನಡೆಸುವ ಪದ್ಧತಿಯನ್ನು ಜಾರಿಗೆ ತರುವ ಸೂಚನೆ ಮಾನ್ಯಮಾಡಲ್ಪಟ್ಟಿತು ಗ್ರಾಮಾಂತರ ಪ್ರದೇಶಗಳ ಟಪ್ಪಾಲುಲಕಟ್ಟಿಗಳಲ್ಲಿ ಅಧ್ಯಾಪಕವೃತ್ತಿಯವರನ್ನೆ ಅಧಿಕಾರಿಗಳಾಗಿ ನೇಮಿಸಿಕೊಂಡು ಈ ಪದ್ಧತಿಯನ್ನು ರೂಢಿಗೊಳಿಸುವುದು ಸರಕಾರದ ಉದ್ದೇಶವೆನ್ನಲಾಯಿತು. ಸದ್ಯಕ್ಕೆ ಮುಂಬಯಿ ನಗರದಲ್ಲಿ ಪ್ರಾಯೋಗಿಕವಾಗಿ ಹೊಸ ಪದ್ಧತಿಯನ್ನು ಪ್ರಾರಂಭಿಸಲಾಗುತ್ತದೆ.

ಸಾಲಗಳಿಗೆ ಮಂತಿಗೆ

ಹತ್ತು ರಾಜ್ಯಸರಕಾರಗಳು ಎತ್ತಿರುವ ಸಾಲಕ್ಕೆ ಜಣವು ಬೇಡಿಕೆಗಿಂತಲೂ ಹೆಚ್ಚು ಸಂದಾಯವಾಗಿದೆ. ಮದ್ರಾಸಿನ ಏಳುಕೋಟಿ ರೂಪಾಯಿಗಳ ಸಾಲಕ್ಕೆ ೧೫.೭೨ ಕೋಟಿ ಸಂದಾಯವಾಗಿದ್ದು, ಒಂದು ಲಕ್ಷಕ್ಕಿಂತಲೂ ಕಡಿಮೆ ಹಣವ

ಚಂದಾದಾರರಲ್ಲಿ ವಿನಂತಿ

ಈ ಪೊಸತೇ ತಿಳಿಸಿರುವಂತೆ 'ನವಯುಗ'ದ ೩೪ನೇ ಸಂಪುಟವು ಇದೇ ಅಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಸಪ್ತಂಬರದಿಂದ ೩೫ನೆಯ ಹೊಸ ಸಂಪುಟವು ಆರಂಭವಾಗುತ್ತದೆ. ಈ ಅವಧಿಗೆ ಚಂದಾ ಮುಗಿಯುವ ಚಂದಾದಾರರು ದಯಮಾಡಿ ತಮ್ಮ ಚಂದಾ ಹಣವನ್ನು ಕೂಡಲೇ ಕಳುಹಿಸಿ ಕೊಡುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ.

—ಮೆನೇಜರ್.

ನ್ನು ಸಂದಾಯ ಮಾಡಿದ ಚಿಕ್ಕ ಉಳಿತಾಯಗಾರರನ್ನು ನಿರಾಶೆಗೊಳಿಸಬಾರದೆಂಬ ಉದ್ದೇಶದಿಂದ ಸರಕಾರದವರು ಬಂದ ಹಣದಲ್ಲಿ ೯.೧೨ ಕೋಟಿ ರೂಪಾಯಿಯನ್ನು ಇಟ್ಟುಕೊಳ್ಳಲು ನಿರ್ಧರಿಸಿದ್ದಾರೆ. ಜನರ ಉತ್ಸಾಹಪೂರ್ಣ ಸಹಕಾರಕ್ಕೆ ಅವರು ಕೃತಜ್ಞತೆ ಸೂಚಿಸಿದ್ದಾರೆ.

ಉಳುವವನೇ ಹೊಲದೊಡೆಯ

ಮುಂಬಯಿ ರಾಜ್ಯದಲ್ಲಿ ೧೯೫೫ನೇ ಎಪ್ರೀಲಿನಿಂದ ಉಳುವವನನ್ನೇ ಹೊಲದೊಡೆಯನಾಗಿ ಮಾಡುವ ಕ್ರಾಂತಿಕಾರಕ ಹೆಜ್ಜೆಗೆ ಸಂಬಂಧಿಸಿದ ಮಸೂದೆಯನ್ನು ಶಾಸನ ಸಭೆಯಲ್ಲಿ ೨೨ನೇ ದಿನಾಂಕ ಮಂಡಿಸಲಾಯಿತು. ಒತ್ತಾಯದಿಂದಲೇ ಆಗಲಿ ದೇಶದಲ್ಲಿ ಉಳುವವನ ಸಂಬಂಧವನ್ನು ಹೊಲಕ್ಕೆ ನೇರಾಗಿ ಅನ್ವಯಿಸದಿದ್ದರೆ ರಾಷ್ಟ್ರದ ಕೃಷಿ ವಲಯದ ಆರ್ಥಿಕ ಪದ್ಧತಿ ಬೆಳೆದು ಬರಲಾರದು ಎಂದು ಮಂತ್ರಿ ಶ್ರೀ ಹಿರೆ ಹೇಳಿದರು.

ಬೇಂಕುಗಳ ವಿವಾದ

ಕೇಂದ್ರ ಸರಕಾರದವರು ಬೇಂಕುಗಳ ನೌಕರರ ವೇತನ ಮತ್ತಿತರ ಆನುಷಂಗಿಕ ವಿಷಯಗಳ ತೀರ್ಮಾನಕ್ಕಾಗಿ ನೇಮಿಸಿದ ಆಯೋಗವು ಮಾಡಿದ ಸಿಫಾರಸುಗಳನ್ನು ಈಗ ಪ್ರಕಟಿಸಲಾಗಿದೆ. ಇವುಗಳಲ್ಲಿ ಕೆಲವನ್ನು ಸರಕಾರ ಸಂಪೂರ್ಣವಾಗಿ ಸ್ವೀಕರಿಸಿದೆ ಎಂದು ಸಂಸತ್ತಿನಲ್ಲಿ ತಿಳಿಸಲಾಯಿತು. ಏಳೆಂಟು ವರ್ಷಗಳಿಂದ ನಡೆದಿರುವ ಈ ವಿವಾದ ಇನ್ನಾದರೂ ಕೊನೆಗೊಗ್ಗಲಿ ಎಂಬ ರೀತಿಯ ಪ್ರತಿಕ್ರಿಯೆ ಈ ಸಂದರ್ಭದಲ್ಲಿ ವ್ಯಕ್ತಗೊಂಡಿತು.

ನಿಜವಾದ ನ್ಯಾಯದಾನ

ರಾಷ್ಟ್ರಾಧ್ಯಕ್ಷರು ಸ್ವಾತಂತ್ರ್ಯ ದಿನೋತ್ಸವವನ್ನು ದಕ್ಷಿಣ ಭಾರತದಲ್ಲಿ ಆಚರಿಸಲು ನಿರ್ಧರಿಸಿ, ಆಂಧ್ರ ರಾಜ್ಯದಲ್ಲಿ ಕೆಲವು ದಿನಗಳ ವಾಸ್ತವ್ಯವನ್ನು ಮಾಡಿದ್ದರು. ಗುಂಟೂರಿನಲ್ಲಿ ಆಂಧ್ರದ ಮಂತ್ರಿಗಳೂ ನ್ಯಾಯಾಧೀಶರೂ ನೀಡಿದ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡುತಾ, ಕಾಯಿದೆಯ ಶಬ್ದದ ವ್ಯಾಖ್ಯೆಯಲ್ಲಿ ಮನಸ್ಸನ್ನು ತೊಡಗಿಸದೆ, ಅದರ ಮೂಲ ಉದ್ದೇಶಕ್ಕೆ ಮಹತ್ವವನ್ನು ಕೊಡುವುದೇ ನಿಜವಾದ ನ್ಯಾಯದಾನವಾಗಿದೆ ಎಂದರು.

ಮಹಿಳಾಮಂಡಲಿಗಳ ಭವಿಷ್ಯ

ಪಾಕಿಸ್ತಾನದಲ್ಲಿ ಜಾಧುರಿ ಮಹಿಳಾ ಮಂಡಲಿಗಳು ಪ್ರಧಾನಿಯಾಗಿದ್ದಾರೆ; ಸುಹ್ರವರ್ದಿಗಳ ತಂಡಕ್ಕೆ ಮಂತ್ರಿಮಂಡಳದಲ್ಲಿ ಸೇರಲು ಆಮಂತ್ರಣವಿತ್ತಿದ್ದರೂ ಸಂಯುಕ್ತರಂಗದ ಫಜಲುಲ ಹಕ್ಕರನ್ನು ಸಚಿವ ಸಂಪುಟದಲ್ಲಿ ಸೇರಿಸಿರುವುದರಿಂದ ಅವಾಮಿ ಲೀಗಿನ ಸಹಕಾರ ದೊರೆಯದೆ ಹೋಗಿದೆ. ಈ ಪರಿಸ್ಥಿತಿಯಲ್ಲಿ ಹಿಂದಿನ ಪ್ರಧಾನಿಮಹಿಳಾಮಂಡಲಿಗಳ ಭವಿಷ್ಯ ಏನೆಂದು ತಿಳಿದಿಲ್ಲ. ಅವರು ರಾಷ್ಟ್ರಸಂಘದಲ್ಲಿ ಪಾಕಿಸ್ತಾನದ ನಿಯೋಗದ ಧುರೀಣರಾಗುವರೆಂದೂ ಅಮೇರಿಕದಲ್ಲಿ ರಾಯಭಾರಿಯಾಗಿಯೂ ಕೆಲಸ ಮಾಡುವರೆಂಬೂ ಸುದ್ದಿ.

ಬೃಹನ್ಮೈಸೂರು

ಒಮ್ಮೆ ತೀರ್ಮಾನವಾಗಿರುವ ಬಳ್ಳಾರಿಯ ಪ್ರಶ್ನೆಯನ್ನು ಮರಳಿ ಎತ್ತಿ ಗೊಂದಲಕ್ಕೆ ಎಡೆ ಮಾಡಿಕೊಡುವುದು ಇಷ್ಟವಿಲ್ಲವೆಂದು ಫಜಲ ಅಲಿ ಆಯೋಗಕ್ಕೆ ಮೈಸೂರಿನ ಮುಖ್ಯ ಮಂತ್ರಿಗಳು ಪತ್ರ ಬರೆದಿರುವರೆಂದು ತಿಳಿದು ಬರುತ್ತದೆ. ಆಯೋಗದ ಸಿಫಾರಸಿನ ಫಲವಾಗಿ ಬೃಹನ್ಮೈಸೂರಿನ ರಚನೆಯಾಗುವ ನಿರೀಕ್ಷೆಯನ್ನು ಶ್ರೀ. ಹನುಮಂತಯ್ಯ ಹುಟ್ಟಿಸಿದ್ದಾರೆ.

ಉಡುಪಿ

ಸ್ವಾತಂತ್ರ್ಯ ದಿನಾಚರಣೆಯು—

ಉಡುಪಿಯಲ್ಲಿ ತಾ. 15ರಲ್ಲು ಯಶಸ್ವಿಯಾಗಿ ಜರಗಿತು ಅಂದು ಬೆಳಿಗ್ಗೆ ಅಜ್ಜರಕಾಡಿನಲ್ಲಿ ಡಾ ಟಿ. ಎಮ್. ಎ. ಪೈಗಳು ಧ್ವಜಾರೋಹಣ ಮಾಡಿದರು. ಸಂಜೆ ಬೋರ್ಡು ಹೈಸ್ಕೂಲಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ. ಎಂ. ಟಿ. ರಾಜಾರಾಮ್, ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ. ಟಿ. ಎ. ಪೈಗಳು ಸ್ವಾಗತ ಮಾತುಗಳನ್ನಾಡಿದರು. ಉಡುಪಿ ತಾಲೂಕಿನ ಹಳ್ಳಿವಲಯದ ವ್ಯಾಯಾಮ ಶಾಲೆಯವರು ವ್ಯಾಯಾಮ ಪ್ರದರ್ಶನವನ್ನಿತ್ತರು. ಶ್ರೀ. ಎ. ಜಿ. ಅಳ್ಳೆಯವರು ಧನ್ಯವಾದಗಳನ್ನರ್ಪಿಸಿದರು. ಎಲ್ಲಾ ವಿದ್ಯಾಸಂಸ್ಥೆಗಳಲ್ಲೂ ಸ್ವಾತಂತ್ರ್ಯ ದಿನಾಚರಣೆಯ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿದೆ. ಸ್ಥಳೀಯ ಬುನಾದಿ ತರಬೇತಿ ಶಾಲೆಯಲ್ಲಿ ಡಾ! ಪಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನೆರವೇರಿತು. ಬೆಳಿಗ್ಗೆ ಗಾ| ನ್ಯಾಯಾಧೀಶರಾದ ಶ್ರೀ ಕೆ. ಕೃಷ್ಣಯ್ಯನವರು ಧ್ವಜವನ್ನರೆಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ಯರು ವಿದ್ಯಾರ್ಥಿ ಅಧ್ಯಾಪಕರಿಗೆ ಕೆಲವು ಹಿತಸೂಚನೆಗಳನ್ನಿತ್ತರು. ಎಂ. ಜಿ. ಯಂ. ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಧ್ವಜಾರೋಹಣ ಮಾಡಿದ ಮೇಲೆ ಭಾಷಣ, ಯಕ್ಷಗಾನ ಪಂದ್ಯಾಟಗಳಾದುವು.

ದುಃಖಸೂಚಕಸಭೆ— ಸ್ಥಳೀಯ ಪ್ರಭಾಕರ ಮುದ್ರಣಾಲಯ ಸ್ಥಾಪಕರಾದ ಶ್ರೀ ನಾರಾಯಣ ಪ್ರಭುಗಳ ನಿಧನದ ಬಗ್ಗೆ ದುಃಖಸೂಚಿಸುವ, ಸಮಾಜ ಬಂಧುಗಳ ಸಭೆಯು ತಾ. 13ರಲ್ಲಿ ಶ್ರೀ ಕೇಶವ ಕಾಮತರ ಅಧ್ಯಕ್ಷತೆಯಲ್ಲಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಜರಗಿತು. ಶ್ರೀಗಳಾದ ಉಪೇಂದ್ರ ಪೈ, ಡಾ! ಮಾಧವ ಪೈ, ಡಾ! ಎಸ್. ಆರ್. ಪೈ, ಟಿ. ಎ. ಪೈ, ಎಮ್. ಎಲ್. ಎ; ಶಿವರಾಯ ಬಾಳಿಗ, ಶುಕಾಚಾರ್ಯ, ಕೊಟ್ಟಿಕಾರ್ ಪದ್ಮನಾಭ ಪೈ, ಸುಂದರೀಕ ಶೆಣೈ ಮತ್ತು ಎಮ್. ರಾಘವೇಂದ್ರ ಪೈಗಳು ದಿವಂಗತರ ಕುರಿತು ಭಾಷಣವಿತ್ತು ಅವರ ಸ್ಮಾರಕ ನಿಧಿಯನ್ನು ಸಂಗ್ರಹಿಸುವಅವಶ್ಯಕತೆಯನ್ನು ವಿವರಿಸಿದರು. ಸಭೆಯಲ್ಲಿ ಶ್ರೀ ಎಮ್. ವಾಸುದೇವ ಭಟ್ಟರು ಕನ್ನೇಸರರಾಗಿದುದು ಡಾ! ಸುಂದರ ರಾಮ ಪೈ, ಡಾ! ಟಿ. ಮಾಧವ ಪೈ, ಎಂ. ರಾಘವೇಂದ್ರ ಪೈ, ಯು. ಕೇಶವಕಾಮತರು ಸೆಂಬರರಾಗಿರುವ ಸ್ಮಾರಕ ಕಮಿಟಿಯು ರಚಿಸಲ್ಪಟ್ಟಿತು. ಸಭೆಯಲ್ಲಿಯೇ ರೂ. 500/- ನಿಧಿಗೆ ಸಂಗ್ರಹವಾಯಿತು.

ಕರ್ನಾಟಕ ಸಂಘದ— ಕಾರ್ಯವಾಹಿ ಸಮಿತಿಯ ವಿಶೇಷ ಸಭೆಯು ತಾ. 13ರಲ್ಲಿ ಡಾ! ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿ ಈ ಜಿಲ್ಲೆಯಲ್ಲಿ ಮುದ್ರಣೋದ್ಯಮದ ಬೆಳವಣಿಗೆ ಮೂಲಸುಮಪರಾದ ಹಾಗೂ ಈ ಸಂಸ್ಥೆದ ಹಲವು ವರ್ಷ ಉಪಾಧ್ಯಕ್ಷರಾಗಿದ್ದ ಶ್ರೀ ಪಿ. ನಾರಾಯಣ ಪ್ರಭುಗಳ ನಿಧನಕ್ಕೆ ಸಂತಾಪಸೂಚಿಸುವ ನಿರ್ಣಯವಾಯಿತು.

ಕಮ್ಯೂನಿಸ್ಟ್ ಪಾರ್ಟಿಯು— ಸ್ಥಳೀಯ ಮುನಿಸಿಪಲ್ ಚುನಾವಣೆಯಲ್ಲಿ ಐದು ವಾರ್ಡುಗಳಿಗೆ ತನ್ನ ಪುರಿಯಾಳುಗಳನ್ನು ನಿಲ್ಲಿಸುವುದೆಂದು ಪಾರ್ಟಿ ಕಾರ್ಯಕರ್ತರಿಗಳು ತಿಳಿಸುತ್ತಾರೆ.

ನಾಟಕ ಪ್ರಯೋಗ— ಸ್ಥಳೀಯ ದತ್ತಾತ್ರೇಯ ಕಲಾಮಂಡಳಿಯವರು ತಾ. 20ರಲ್ಲಿ ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಶ್ರೀ ನರಸಿಂಹ ಸೇರಿಗಾರರ ದತ್ತಮಂದಿರ ಸಂಗೀತ ಶಾಲೆಯ ಸಹಾಯಾರ್ಥವಾಗಿ ಶ್ರೀ ಕೆ. ಪ್ರಭಾಕರ ರಾಯರಿಂದ ಬರೆಯಲ್ಪಟ್ಟ 'ಘೋಷ ಯಾತ್ರೆ' ಎಂಬ ಸಾರಾಣಿಕ ಸಂಗೀತ ನಾಟಕವನ್ನು ಸೊಗಸಾಗಿ ಅಭಿನಯಿಸಿದರು. ಡಾ! ಟಿ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದು ನಾಟಕದ ಕುರಿತು ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಶ್ರೀ ಟಿ. ಸಂಜೀವ ಪೈಗಳು ಧನ್ಯವಾದವಿತ್ತರು.

ಪಾರ್ಷಿಕೋತ್ಸವ—ಸ್ಥಳೀಯಬ್ರಹ್ಮ ಬ್ರಾಹ್ಮಣರ ಭಜನಾ ಸಂಘದ ವಾರ್ಷಿಕೋತ್ಸವವು ತಾ. 14ರಲ್ಲಿ ಶ್ರೀ ಸಿ. ಆರ್. ಹನುಮಂತರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಪದ್ಮನಾಭ ಶೇಟ್ ವ್ಯಾಕರರು ಸ್ವಾಗತಭಾಷಣ ಮಾಡಿದರು. ಶ್ರೀ ಎಲ್. ರಮೇಶ ಶೇಟರುಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು— ತಾ. 18ರಲ್ಲಿ ಜೆರ್ಮನ್ ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ, ಗೋವಾ ಮುಕ್ತಾತ್ಮರ ಬಗ್ಗೆ ದುಃಖ ಸೂಚಿಸಿ ಮೌನಪ್ರಾರ್ಥನೆಯು ಅಧ್ಯಕ್ಷರ ಸೂಚನೆಯ ಮೇರೆಗೆ ನಡೆಯಿತು. ಬಳಿಕ ಗೋವಾಸತ್ಯಾಗ್ರಹಕ್ಕೆ ಶ್ರೀಗಳಾದ ಯು. ಯಸ್. ನಾಯಕ್ ಮತ್ತು ಕೆ. ವೆಂಕಟ್ರಮಣ ಭಟ್ಟರು ಮುಂದಾಳುಗಳಾಗಿದ್ದ ಸ್ವಯಂಸೇವಕ ತಂಡಗಳನ್ನು ಕಳುಹಿಸಿದ ಬಗ್ಗೆ ಸ್ಥಳೀಯ ಸರ್ವಪಕ್ಷೀಯ ಗೋವಾ ವಿಮೋಚನಾ ಸಮಿತಿಯೊಡನೆ ಸಹಾನುಭೂತಿಯನ್ನು ವ್ಯಕ್ತಗೊಳಿಸುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಮಣಿಪಾಲ—ಸ್ಥಾನಿಕ ಯೋಜನೆಯಂತೆ ಕಟ್ಟಲ್ಪಟ್ಟ ಪ್ರಾಥಮಿಕ ಶಾಲೆ ಹಾಗೂ ಟಿಪ್ಪಾಲುಕಟ್ಟೆಯ ಹೊಸ ಕಟ್ಟಡದ ಉದ್ಘಾಟನೆಯನ್ನು ತಾ. 16ರಲ್ಲಿ ಜಿಲ್ಲಾ ಕಲೆಕ್ಟರರ ಪತ್ನಿ ಶ್ರೀಮತಿ ರಾಜಾರಾಮರು ಸಾಂಗಗೊಳಿಸಿದರು. ಸಭಾಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರರು ವಹಿಸಿದ್ದರು, ಡಾ| ಟಿ. ಎಮ್. ಎ. ಪೈಗಳು ಸ್ವಾಗತಿಸಿದರು. ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಪಿ. ಪಿ. ನಾಯರರು ಸಂದರ್ಭೋಚಿತವಾದಾಶಗಳನ್ನಾಡುತ್ತ 2000 ಜನಸಂಖ್ಯೆಯುಳ್ಳ 183 ಗ್ರಾಮಗಳಲ್ಲೂ ಈ ಜಿಲ್ಲೆಯಲ್ಲಿ ಟಿಪ್ಪಾಲು ಆಫೀಸು ಸೌಕರ್ಯಗಳಿವೆ ಎಂಬೂ ಎರಡನೆ ಪಂಚವರ್ಷಿಕಯೋಜನೆಯಲ್ಲಿ ಒಂದು ಸಾವಿರ ಜನಸಂಖ್ಯೆಯುಳ್ಳ ಗ್ರಾಮಗಳಿಗೂ ಈ ಸೌಕರ್ಯ ಒದಗಿಸಲಾಗುವುದೆಂದರು. ಟೆಲಿಫೋನ್ ಸಾಕರ್ಯವನ್ನು ಒದಗಿಸುವುದರಲ್ಲಿ ಕೆಲವುಟ್ಟಿಗೆ ಈ ಜಿಲ್ಲೆ ಹಿಂದೆಬೀಳಲು ಜನ, ಧನ, ಸಾಮಾಗ್ರಿಗಳ ಅಭಾವವೇ ಕಾರಣವೆಂದರು. ಸ್ಥಾನಿಕಯೋಜನೆ ಸೌಕರ್ಯಗಳನ್ನು ಚೆನ್ನಾಗಿ ಪಡೆದು ಉಡುಪಿ ತಾಲೂಕು ಮುಂದರಿದುದು ಸಂತೋಷಕರವೆಂದು ಸಭಾಧ್ಯಕ್ಷರು ಹೇಳಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಅವರು ಧನ್ಯವಾದಗಳನ್ನರ್ಪಿಸಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ— ಜರಗಿಸಲಾದ ವೈದ್ಯಕೀಯ ಪ್ರದರ್ಶನದ ಮುಕ್ತಾಯ ಸಮಾರಂಭವು ತಾ. 16ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಟಿ ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಡಾ! ಟಿ. ಎಮ್. ಎ. ಪೈಗಳು ತಮ್ಮ ಸ್ವಾಗತ ಭಾಷಣದಲ್ಲಿ ಕಾಲೇಜು ವಿದ್ಯಾರ್ಥಿಗಳನ್ನೂ ಪ್ರಾಧ್ಯಾಪಕರನ್ನೂ ಅಭಿನಂದಿಸಿದರು. ಈ ಪ್ರದರ್ಶನದ ಉತ್ಪತ್ತಿಯನ್ನು ಸ್ಥಳೀಯ ಪೆರಿಗೆ ಕೇಂದ್ರಕ್ಕೆ ಕೊಡಲಾಗುವುದೆಂದು ಡಾ! ಎಸ್ ಎಳ್. ಗೋಡ್ ಬೊಲೆಯವರು ತಿಳಿಸಿ ರೂಪಾಯಿ 1000/-ನ್ನು ಸಭಾಧ್ಯಕ್ಷರ ಮೂಲಕ ಕೊಡಿಸಿದರು. ಕಾಲೇಜ್ ಡೀನ್ ಕೇಪ್ಟನ್ ಸುಂಗೇಶರಾಯರು ನಂದನೆಗಳನ್ನಿತ್ತರು.

ಹರಿಜನ ವಿವೇಕಾನಂದ ಹಾಸ್ಟೆಲಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಟಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಅವರ ಸಲಹೆಮೇರೆಗೆ ಹರಿಜನ ವಿದ್ಯಾರ್ಥಿಗಳಿಗೆ ಧನಸಾಹಾಯ ಉಡುಪುಗಳನ್ನು ವಿತರಣೆಮಾಡಿದರು. ಭವನ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈ, ಎಮ್. ಎಲ್. ಎ ಗಳವರು ಭವನದ ಚಟುವಟಿಕೆಗಳನ್ನು ವಿವರಿಸಿದ್ದು ವಾರ್ಡನ್ ಶ್ರೀ ಯು. ಸಂತಪ್ಪ ಸೈನ್ಯರು ಧನ್ಯವಾದಗಳನ್ನಿತ್ತರು.

ಜಿಲ್ಲೆಯ ಎಲ್ಲೆಡೆಗಳಲ್ಲೂ ಸ್ವಾತಂತ್ರ್ಯ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಸಂಭ್ರಮಾಂಗವಾಗಿ ಜರಗಿದ ಹಲವು ವರದಿಗಳು ಬಂದಿವೆ. ಸ್ಥಳಾಭಾವದಿಂದ ವಿವರವಾಗಿ ಕೊಡಲಾಗಲಿಲ್ಲ. —ಸಂ. ನ.

ಬೈಂದೂರಲ್ಲಿ ಶ್ರೀಗಳಾದ ಎಚ್. ಜಿ. ಕೆದಿಲಾಯರು ಮತ್ತು ಶ್ರೀ ಡಿ ಆರ್. ಕುಂಬಳೆಯವರ ನೇತೃತ್ವದಲ್ಲಿ, ಕುಕ್ಕಾವಿನಲ್ಲಿ ಗಿರಿಜಾ ಹಾ| ಶಾಲೆಯಲ್ಲಿ ಶ್ರೀ ಕೆ. ರಾಮಕೃಷ್ಣ ಭಟ್ಟ ಅಧ್ಯಕ್ಷತೆಯಲ್ಲಿ, ಮಹಿಳಾ ಸಂಸ್ಥೆಯಲ್ಲಿ ಶ್ರೀಮತಿ ಸುನಂದಾ, ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ, ನಿಡ್ಜೋಡಿ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿಯಲ್ಲಿ ಶ್ರೀ ಎ. ಕೆ ಸೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ರಾಮ ಪಟ್ಟಾಭಿಷೇಕ ಯಕ್ಷಗಾನ, ಸಿಂಬೂರು ಪಂಚಾಯತಬೋರ್ಡಿನ ವತಿಯಿಂದ ಶ್ರೀರಾಮ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ರಾಜು ಸೆಟ್ಟರಿಂದ ಧ್ವಜಾರೋಹಣ, ನಿಡ್ಜೋಡಿ ಶ್ರೀ ಸತ್ಯನಾರಾಯಣ ಪ್ರೌಢ ಪ್ರಾಥಮಿಕ ಶಾಲೆಯಲ್ಲಿ ಡಾ. ಕೆ. ಪ್ರಭಾಕರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ, ಕೆಲಿಂಜೂರಿನಲ್ಲಿ ಶಿಬರೂರು ಪಂಚಾಯತಬೋರ್ಡು ಅಧ್ಯಕ್ಷ ಶ್ರೀ ಮುದ್ದಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ, ಬೆಳ್ಳೆ ಮಯಸ್ಕರ ಶಿಕ್ಷಣ ಶಿಬಿರದಲ್ಲಿ ಶ್ರೀ ಎಚ್. ಎಲ್. ಹಂದೆಯವರ ಅಧ್ಯಕ್ಷತೆಯಲ್ಲಿ, ಆಲೂರು ಸರಸ್ವತಿ ಶಾಲೆಯಲ್ಲಿ ಶ್ರೀ ಎಚ್. ಮಾಧ್ವ ಸೆಟ್ಟಿ ಅಧ್ಯಕ್ಷತೆಯಲ್ಲಿ, ಹಡುಕಳತ್ತೂರು ಹಾ. ಎ. ಶಾಲೆಯಲ್ಲಿ ಶ್ರೀ ಯು. ರತ್ನಾಕರ ಆಡಿಗರ ಅಧ್ಯಕ್ಷತೆಯಲ್ಲಿ ಬೆಳ್ಳೆ ಬೋರ್ಡು ಹಾ. ಎ. ಶಾಲೆಯಲ್ಲಿ ವೆಟರನರಿ ಇನ್ಸ್‌ಪೆಕ್ಟರ್ ಶ್ರೀ ಕೆ ಅಚ್ಯುತ್ತ ನಾಯಕರ ಅಧ್ಯಕ್ಷತೆಯಲ್ಲಿ ಸುರತ್ಕಲ್ ಮುಕ್ಕ ಗಂಗಯ್ಯ ಸ್ಮಾರಕ ರಾತ್ರಿ ಶಾಲೆ ಮತ್ತು ಅಗ್ಗದಕರಿ ಹಾ| ಎ| ಶಾಲೆಯಲ್ಲಿ ಶ್ರೀ ಅಸೀಫ್ ಅಲಿ ಸಾಹೇಬರ ಅಧ್ಯಕ್ಷತೆಯಲ್ಲಿ, ಮುಕ್ಕ ಶ್ರೀ ಧಾಮಾವತಿ ಶಾಲೆಯಲ್ಲಿ ಶ್ರೀ ಎಮ್. ಮಹಾಬಲ ಮಾಸ್ತರರ ಅಧ್ಯಕ್ಷತೆಯಲ್ಲಿ' ಪೆರುವಾಯಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೋಟಣ್ಣ ರೈಗಳ ಅಧ್ಯಕ್ಷತೆಯಲ್ಲಿ ಕಕಂಳಕಜೆಯಲ್ಲಿ ಶ್ರೀ ಎಮ್. ವಾಮನ ನಾಯ್ಕರ ಅಧ್ಯಕ್ಷತೆಯಲ್ಲಿ ಕುದೆಪೂರು ಕಿಲ್ಲಾಡಿ ಶಾಲೆಯಲ್ಲಿ ಶ್ರೀ ಕಾಳಪ್ಪ ಭಂಡಾರಿಗಳ ಅಧ್ಯಕ್ಷತೆಯಲ್ಲಿ, ಕೆಂಜೂರು ವೀರೇಶ್ವರ ಹಾ. ಎ. ಶಾಲೆಯಲ್ಲಿ ಶ್ರೀ ಮಹಾಬಲ ಸೆಟ್ಟರ ಅಧ್ಯಕ್ಷತೆಯಲ್ಲಿ, ಬೈದೆ ಬೆಟ್ಟು ಶ್ರೀ ರಾಮಾ ಎಯುಡೆಸ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಅನಂತ ಕಾಮತರ ಅಧ್ಯಕ್ಷತೆಯಲ್ಲಿ, ಮೂಳಗಾರು (ಉಚ್ಚಿಲ)ದಲ್ಲಿ ಶ್ರೀ ಎಮ್. ಭೋಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜಾರ್ಕಾಳ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಟೇಲ್ ಪರಮೇಶ್ವರ ಗೌಡರ ಅಧ್ಯಕ್ಷತೆಯಲ್ಲಿ, ಪಟ್ಲ ಲೋಕಮಾನ್ಯ ತಿಲಕ ಹಾ- ಎ. ಶಾಲೆ ಮತ್ತು ಶ್ರೀ ಗಣಪತಿ ಎಯುಡೆಸ್ ಎಲಿಮೆಂಟರಿ ಶಾಲೆಗಳ ಕೂಡುವಿಕೆಯಿಂದ ಶ್ರೀ ಬೆಳ್ಳೆ ಎಡ್ವರ್ಡ್ ಡೇಸರ ಅಧ್ಯಕ್ಷತೆಯಲ್ಲಿ, ಸಾಲಿಗ್ರಾಮ ಕಾರ್ಕಡ ಸ್ಕೂಲ್ ಶಾಲೆಯಲ್ಲಿ ಶ್ರೀ ಕೆ. ಲಕ್ಷ್ಮೀನಾರಾಯಣ ಹೊಳ್ಳರ ಅಧ್ಯಕ್ಷತೆಯಲ್ಲಿ, ಜಾರ್ಕಳರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಕೆ. ಯಜ್ಞ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸೂಡಾ ಪಂಚಾಯತ ಬೋರ್ಡಿನಲ್ಲಿ ಶಾಲಾ ಮಕ್ಕಳ ಕೂಡುವಿಕೆಯಿಂದ ಶ್ರೀಯುತ ಪ್ರಾರ್ಥನೆ, ಬೆಳ್ಳಾರೆಯ ಹೈಸ್ಕೂಲಲ್ಲಿ ಶ್ರೀ ಬಿ. ಎಸ್. ತಂತ್ರಿಗಳ ಅಧ್ಯಕ್ಷತೆಯಲ್ಲಿ ಕಡೆಕಾರು ಮಹಾಗಣಪತಿ ಶಾಲೆಯಲ್ಲಿ ಶ್ರೀ ಕೆ. ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ತಲ್ಲೂರಲ್ಲಿ ಶ್ರೀ ಟಿ. ಮಹಾಬಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಕಡಬ ಯುವಕ ಸಂಘದಲ್ಲಿ ಶ್ರೀ ಐ ಟಿ. ಅರಿಗ ಜೈನಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರಗಿಸಲ್ಪಟ್ಟಿತು.

ಗೀತೆಯ ಕೈಗನ್ನಡಿ

* *

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿಯ— ಕಾರ್ಯಕಾರೀ ಸಮಿತಿ ಸಭೆಯು ತಾ. 16ರಲ್ಲಿ ನೀರಿ ಗೋವೆಯಲ್ಲಿ ನಿಸ್ಪೃಹ ಶಾಂತ ಸತ್ಯಾಗ್ರಹಿಗಳ ಮೇಲೆ ಪೋರ್ಚುಗೀಸ್ ಸರಕಾರವು ನಡೆಸಿದ ಅಮಾನುಷ ಅತ್ಯಾಚಾರವನ್ನು ಖಂಡಿಸಿ, ಪ್ರಜಾಸುತಿ ಕೊಟ್ಟಿರುವ ಸತ್ಯಾಗ್ರಹಿಗಳ ಕುರಿತು ಪಾರ್ಲಿಕ ದುಃಖವನ್ನು ಸೂಚಿಸಲಾಯಿತು. ಕರ್ನಾಟಕ ಪ್ರಾಂತಿಕ ದಲಿತವರ್ಗದವರ ಫೆಡರೇಶನ್‌ನವರು ಕಾಂಗ್ರೆಸಿನೊಡನೆ ಸೇರಬೇಕೆಂದು ಮಾಡಿದ ನಿರ್ಧಾರವನ್ನು ಸ್ವಾಗತಿಸುವ ನಿರ್ಣಯವಾಯಿತು.

ಮದ್ರಾಸು ರಾಜ್ಯಸರಕಾರ ಸಾಲ ಕ್ಕೆ— ವಿಶೇಷ ಸಮಿತಿಕ್ಕೆ ಚಂದಾ ಬಂದಿರುವ ವಿಷಯದಲ್ಲಿ ತ. ಕ. ಜಿಲ್ಲೆಯಿಂದ ಎಂಭತ್ತು ಲಕ್ಷ ರೂಪಾಯಿಗಳಷ್ಟು ಚಂದಾ ಬಿದ್ದಿರಲಾಗಿದೆ ಎಂದೂ ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

ಸ್ವಾತಂತ್ರ್ಯ ದಿನಾಚರಣೆಯು— ಮಂಗಳೂರಿನಲ್ಲಿ ತಾ. 15ರಲ್ಲಿ ಬೆಳಿಗ್ಗೆ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮ್ ಅವರಿಂದ ಧ್ವಜಾರೋಹಣ ಮೂಡಿಸಿ ಪ್ರಾರಂಭವಾಯಿತು. ಬಳಿಕ ಜಿಲ್ಲಾ ಕಲೆಕ್ಟರರು ಆಳಿಯಲ್ಲಿ ನೀರು ಪಾಲಾದ ಜನರಿಗೆ ಉಳಿಸಿದವರಿಗೆ ಸಾರಿತೋಷ ವಿತರಣೆಮಾಡಿದರು. ಶಾಲಾ ಕಾಲೇಜುಗಳಲ್ಲೂ ಧ್ವಜವಂದನೆ, ಸಭೆ ಇತ್ಯಾದಿ ಕಾರ್ಯಕ್ರಮಗಳಾದುವು. ಎಲೋಸಿಯಸ್ ಕಾಲೇಜಿನ ಸಮಾಜಸೇವಾ ಸಂಘದವರು ಕಾಲೇಜು ಪಟ್ಟಾದಲ್ಲಿ ಸಾಧಾರಣ ಮೂರು ಸಾವಿರ ಭಿಕ್ಷುಕರಿಗೆ ವಾಯವಾಸ್ತ ವಿತ್ತರು.

ನೀಜಿ ಕೇಂದ್ರ ಮೈದಾನದಲ್ಲಿ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿದ. ಶ್ರೀಗಳಾದ ಕೆ. ಕೆ. ಸಿಟ್ಟಿ, ಕೆ. ಆರ್. ಆಚಾರ್, ಎ. ಸದಾನಂದ ಅಳ್ವ ಮೊದಲಾದವರು ಭಾಷಣಮಾಡಿತ್ತರು. ಸ್ವಾತಂತ್ರ್ಯೋತ್ಸವದ ಅಂಗವಾಗಿ ಏರ್ಪಡಿಸಿದ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಹಂಚಲಾಯಿತು.

ಗೋವೆಯ ಹುತಾತ್ಮರಿಗೆ ಶ್ರದ್ಧಾಂಜಲಿ— ಕೇಂದ್ರ ಮೈದಾನದಲ್ಲಿ ತಾ. 17ರಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಗೋವೆಯ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶ್ರೀಗಳಾದ ಬಿ. ಪಿ. ಬಾಳಿಗ, ಬಿ. ಎಸ್. ಇದಿನಬ್ಬ, ಯು. ಎಸ್ ಕೃಷ್ಣರಾವ್, ಕೆ. ಕೆ. ಸಿಟ್ಟಿ ಮೊದಲಾದವರು ಕಾರ್ಯೋಚಿತವಾಗಿ ಮಾತನಾಡಿದರು. ಗೋವೆಯ ಬಿಡುಗಡೆಗೆ ಭಾರತಸರಕಾರ ತಕ್ಕ ಕ್ರಮ ಕೈಗೊಳ್ಳಬೇಕೆಂದು. ಗೋವೆಯಲ್ಲಿ ಪೋರ್ಚುಗೀಸರ ಹಿಂಸೆಯನ್ನು ಖಂಡಿಸುವ ನಿರ್ಣಯಗಳಾದುವು. ಶ್ರೀಗಳಾದ ಡಿ. ಮೋಹನರಾವ್, ಎ. ಕೃಷ್ಣ ಸಿಟ್ಟಿ, ಪ್ರಭಾಕರ ಶಾಸ್ತ್ರಿ, ಡಾ. ಕೆ. ನಾಗಪ್ಪ ಅಳ್ವ, ಶಾಂತಾರಾಂ ಶೈ, ಎಸ್. ಎಲ್. ಡಿ ಮಿಂಟೋ ಮೊದಲಾದವರು ನಿರ್ಣಯಗಳನ್ನು ಪ್ರತಿಪಾದಿಸಿ ಮಾತನಾಡಿದರು. ಇಂದು ಪ್ರಜಾಪ್ರತಿನಿಧಿಗಳು.

(ಜನೇ ಪುಟದಿಂದ)

ತಿರುಳನ್ನು ಜೆನ್ನಾಗಿ ಅರ್ಥಮಾಡಿಕೊಂಡು ಈ ದೇಶದ ಘನತೆಗೆ ಹೇಳಿಸಿದ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದೆ. ಹಿಂಸೆಯಿಂದ ಹಿಂಸೆಯನ್ನು ಎದುರಿಸಬೇಕಾಯಿತು ಎಂದು ಪೋರ್ಚುಗಾಲ ಸರಕಾರ ಮಾಡಿರುವ ಆಕ್ಷಾಪನೆಗೆ ಮತ್ತು ಭಾರತ ಪುಗಡಿಯಲ್ಲಿ ಸೈನ್ಯ ತಂದು ನಿಲ್ಲಿಸಿದೆಯೆಂದು ಎಲ್ಲರ ಮನಸ್ಸನ್ನು ಅಸಹ್ಯಾಚಾರದಿಂದ ಆ ಸರಕಾರ ಕಲುಷಿತಗೊಳಿಸಿರುವುದಕ್ಕೆ— ಭಾರತೀಯರು ಅಹಿಂಸೆಯಲ್ಲಿ ಪ್ರಶ್ಚಿಯನ್ನು ಮುಂದಿಟ್ಟು ವ್ಯಕ್ತಪಡಿಸಿ, ಸೈನಿಕ ಕ್ರಮವನ್ನು ಬಿತ್ತಿಯಮಾಡುವುದನ್ನು ಸ್ಪಷ್ಟಿಸಿ, ನೈತಿಕ ಸ್ಥೈರ್ಯ ತೋರಿಸುವುದೇ ನಿಜವಾದ ಉತ್ತರ.

ಶ್ರೀ ಬೋಳಾರ ವಿತಲ ರಾಯರಿಗೆ ಮಾನಪತ್ರ ಅರ್ಪಣೆ – ಮಂಗಳೂರಿನ ಹೊಸ್ಮಿಲರ್ ಇನ್ಶೂರೆನ್ಸ್ ಕಂಪೆನಿಯ ಸ್ಥಾಪಕ ಮೆನೇಜಿಂಗ್ ಡೈರೆಕ್ಟರ್ ಶ್ರೀ ಬೋಳಾರ ವಿಠಲರಾಯರಿಗೆ ಕಂಪೆನಿಯ ರಜತೋತ್ಸವದ ನೆನಪಿಗಾಗಿ ತಾ. 15 ಸ್ವಾತಂತ್ರ್ಯ ದಿನದಂದು ಕಂಪೆನಿಯ ಹೆಡ್ ಆಫೀಸಿನ ಪಿಬಂದಿಯವರು ಮಾನಪತ್ರವನ್ನಿತ್ತು ಗೌರವಿಸಿದರು. ಶ್ರೀ ಜಿ. ಎಮ್. ಪಿ. ಡಿ ಸೋಜರು ಮಾನಪತ್ರ ಹಾಗೂ ಕಾಣಿಕೆಯನ್ನು ಅರ್ಪಿಸಿದರು. ಸಭಿಕರಲ್ಲಿ ಶ್ರೀಗಳಾದ ಬಿ. ಪಿ. ಉದಯ, ಎಂ. ರೋಕಯ್ಯ ಸೆಟ್ಟಿ ಮೊದಲಾದವರು ಭಾಷಣಗಳನ್ನಿತ್ತರು. ಗೀತೆ ಪರಿಚಿತಗಳಾದ ಮೇಲೆ ಶ್ರೀ ವಿಟ್ಟಲ ರಾಯರು ತನ್ನ ಜೀವನದ ಕೆಲ ರಹಸ್ಯಗಳನ್ನು ಹೇಳಿ, ತನಗಿತ್ತ ಗೌರವ, ಸಿಬಂದಿಯವರ ಸಹಕಾರಕ್ಕಾಗಿ ಆಭಾರ ಸೂಚಿಸಿದರು. (ಇವರ ಪೂರ್ವ ಉತ್ತರವನ್ನು ಸ್ಥಳಾಭಾವದಿಂದ ಈ ಬಾರಿ ಕೊಡಲಾಗಲಿಲ್ಲ. ಸಂ. ನ.) ಭೋಜನ ಕೂಟ, ವಿವಿಧ ವಿನೋದಾವಳಿಗಳಾದ ಮೇಲೆ ಶ್ರೀ ಎಲ್. ಪಿ. ಕೈಲೊರೆಯವರು ಧನ್ಯವಾದಗಳನ್ನರ್ಪಿಸಿದರು.

ವಿದ್ಯಾದಾನ ಸಮಾರಂಭ — ಇದೇ ತಾ. 11ರಲ್ಲಿ ಕನೆರಾ ಪ್ರಾಸ್ಕೂಲಿನಲ್ಲಿ 'ನವ ನಿಧಿ' ಸಾಹಿತ್ಯಮಾಲೆಯ 'ನೇಸರ ಮಕ್ಕಳು' ಎಂಬ ಹೊಸಗ್ರಂಥದ ವಿತರಣೆಯ ವಿದ್ಯಾದಾನ ಸಮಾರಂಭವು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಈ ಮಾಲೆಯ ಸಂಪಾದಕರಾದ ಶ್ರೀ ಬಿ. ವಾಮೋದರ ಬಾಳಿಗರು ಹೊಸ ಪುಸ್ತಕದ ಕುರಿತು ಪ್ರಸ್ತಾವಿಸಿ ಮಾತನಾಡಿದರು. ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಆಡಿಗರು ಈ ಸಮಾರಂಭದ ಉದ್ಘಾಟನೆಮಾಡುತ್ತಾ ಶ್ರೀ ಬಾಳಿಗರ ನೂತನ ಉದ್ಯಮವನ್ನು ಪ್ರಶಂಸಿಸಿದರು. ರಾಷ್ಟ್ರಕವಿ ಎಮ್. ಗೋವಿಂದ ಪೈಗಳು ಶ್ರೀ ಬಾಳಿಗರ ಕಾರ್ಯವನ್ನು ಅಭಿನಂದಿಸಿದರು. ಈ ಗ್ರಂಥಗಳನ್ನು ಶಾಲೆಗಳಲ್ಲಿ ಉಚಿತವಾಗಿ ಹಂಚುವಂತೆ ಕಲೆಕ್ಟರರಿಗೆ ಪತ್ರಿ ಅವನ್ನು ವಿತರಣೆ ಮಾಡಿದರು. ಶ್ರೀ ಬಾಳಿಗರು ಧನ್ಯವಾದಗಳನ್ನಿತ್ತರು.

ಗೋವಾ ಸತ್ಯಾಗ್ರಹಿಗಳ ಅನುಭವ— ಮಂಗಳೂರಿಂದ ಗೋವಾ ಸತ್ಯಾಗ್ರಹಕ್ಕೆ ಹೋಗಿ ತಾ. 20ರಲ್ಲಿ ಮರಳಿ ಊರಿಗೆ ಬಂದಿರುವ ಪ್ರಜಾಸೋಶಿಯಲಿಸ್ಟ್ ಸತ್ಯಾಗ್ರಹಿಗಳ ನಾಯಕ ಶ್ರೀ ಅಮೈಂಬಲ್ ಬಾಳಪ್ಪ ಮತ್ತು ಜನಸಂಘ ವಿಭಿನ್ನದ ಸತ್ಯಾಗ್ರಹಿಗಳ ತಂಡದ ಮುಂದಾಳು ಶ್ರೀ ಮೂಲ್ಕಿ ಸುರತ್ಕಲ್ ಪ್ರಭು, ಕಮುನಿಸ್ಟ್ ಪಕ್ಷದ ನಾಯಕ ಶ್ರೀ ಬಿ. ವಿ. ಕಕ್ಕಿಲ್ಲಾಯ ಇವರ ಅನುಭವಗಳನ್ನು ಸ್ಥಳೀಯ ಪತ್ರಿಕಾ ಪ್ರತಿನಿಧಿಗಳಿಗೆ ವಿವರಿಸುತ್ತಾ, ಪೋರ್ಚುಗೀಸರನ್ನು ಎದುರಿರುವುದು ಬ್ರಿಟಿಷರನ್ನೆದುರಿಸಿದಷ್ಟು ಸುಲಭವಲ್ಲವೆಂದೂ ಸತ್ಯಾಗ್ರಹಿಗಳು ಧೈರ್ಯ ಸ್ಥೈರ್ಯ [illegible] ಳಿಂದೆದ್ದ ರೆಂದೂ ಎಲ್ಲರಿಯೂ ಐಕ್ಯತೆ ತೋರಿಬರುತ್ತಿದೆ ಎಂದೂ ಹೇಳಿದರು.

ಮಣಿಪಾಲ— ಸ್ಥಳೀಯ ಹೈಸ್ಕೂಲಿನ ಎ. ಸಿ. ಸಿ. ದಳವನ್ನು ತಾ. 9ರಲ್ಲು ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ, ಕಸ್ತೂರ್ಬಾ ಮೆಡಿಕಲ್‌ಕಾಲೇಜಿನ ಡಾ ಎಸ್ ಎಸ್. ಗೋಡ್‌ಬೋಲೆಯವರು ಉದ್ಘಾಟಿಸಿದರು.

ಬೆಳ್ಳಣ್ಣು— ಸಮಾಜ ವಿಕಾಸ ಯೋಜನೆಯ ಸರಕಾರಿಂದಲೂ ಊರವರ ಸಹಕಾರದಿಂದಲೂ ಕಳೆದ ಎರಡೂ ತಿಂಗಳಲ್ಲಿ ಸ್ಥಾಪಿಸಲ್ಪಟ್ಟ ಯುವಕ ಸಂಘವು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಾ ಇದೀಗ ಪುಸ್ತಕಗಳನ್ನು ಸರಬರಾಯಿಮಾಡುತ್ತಿದೆ. ಅಲ್ಲದೆ ಮಕ್ಕಳ ಸಾಲು ಆಟದ ಕೇಂದ್ರಗಳು ಸ್ಥಾಪಿಸಲ್ಪಟ್ಟು ಮಕ್ಕಳು ಅವುಗಳ ಸದುಪಯೋಗ ಪಡೆಯುತ್ತಿದ್ದಾರೆ. ಯುವಕ ಸಂಘದ ಕಾರ್ಯಾಲಯವು ಈಗ ಶ್ರೀ ಎಮ್. ವೆಂಕಟ್ರಾಯ, ಪಟೇಲ್, ಅವರು ಧರ್ಮಾರ್ಥವಾಗಿ ಕೊಟ್ಟ 'ರಾಘವೇಂದ್ರ ಸದನ'ದಲ್ಲಿರುವುದು. ಡಾ| ಕೊರಿಡ್ಕಲ್ ವೆಂಕಟ್ರಾಯ ಮತ್ತು ಶ್ರೀ ಬಿ. ವೆಂಕಟ್ರಾಯರು ಯುವಕ ಸಂಘದ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಅನುಕ್ರಮದಿಂದ ಆಯ್ಕೆಪಟ್ಟಿರುತ್ತಾರೆ.

ಬೈಲೂರು— ಇಲ್ಲಿಯ ಸುಬ್ರಹ್ಮಣ್ಯ ಕೇಂದ್ರ ಕಟ್ಟೋಣದ ರಂಗಸ್ಥಾಪನೆಯನ್ನು ತಾ. 13 ರಲ್ಲಿ ಶ್ರೀ. ಎಸ್. ಆರ್. ಗುರುರಾಘವೇಂದ್ರರಾಯರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ| ಎ. ಕೆ. ಲಕ್ಷ್ಮೀನಾರಾಯಣರಾಯರು ವಹಿಸಿದ್ದರು.

ಮೂಲ್ಕಿಯ ಶಿಮಂತೂರಿನಲ್ಲಿ ರೈತರಸಭೆ— ಇದೇ ತಾ. 10ರಲ್ಲಿ ಸಂಜೆ ಶಿಮಂತೂರು ದೇವಸ್ಥಾನದಲ್ಲಿ ಜರಗಿದ ಮೂಲ್ಕಿ ಮತ್ತು ಅಸುಪಾಸಿನ ರೈತರ ಸಭೆಯ ಅಧ್ಯಕ್ಷಸ್ಥಾನದಿಂದ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮ್, ಅವರು ಮಾತನಾಡುತ್ತಾ, ಬೆಳ್ಳಿಳ್ಳಿಗಳ ರೈತರು ಈ ರೀತಿ ಸಂಘಟಿತರಾಗಿ ಕೃಷ್ಣಿ ಸಂಪತ್ತನ್ನು ವೃದ್ಧಿಸುವುದರಲ್ಲಿ ವಿಚಾರ ವಿನಿಮಯ ಮಾಡುವುದು ಆತ್ಮಭಿನಂದನೀಯವೆಂದರು.

ಆರೋಗ್ಯದಲ್ಲಿ ಶ್ರೀ ಎಮ್. ಆರ್. ಎಚ್. ಪೂಜರು ಪೂಜ್ಯ ಅತಿಥಿಗಳನ್ನು ಸ್ವಾಗತಿಸುತ್ತಾ ಕೃಷಿ ಪ್ರಧಾನವಾದ ಭಾರತ ದೇಶವನ್ನು ಇರರ ದೇಶಗಳೊಡನೆ ಸರಿಹೋಲಿಸಿ ಇಲ್ಲಿಯ ರೈತರು ಬಹಳ ಹಿಂದುಳಿದಿರುವರೆಂದರು. ಬೆಳೆಯಲ್ಲಿ ತಂದಾ ಸುಧಾರಣೆಯಾಗಬೇಕೆಂದರು. ರೈತರ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಮೂಲ್ಕಿಯಲ್ಲಿ ಹಾಲು ಸರಬರಾಯಿ ಸಂಘ, ಗೊಬ್ಬರ ಪದೆಯಲು ಸಮಾಜವಿಕಾಸಯೋಜನೆಯನ್ನಯ ಶಾಲ, ಇವು ವಿನಯ ಮೂಲ್ಕಿ ಬೇಕಿನವುಗಳು ಕೆಲಮಟ್ಟಿನ ಶಾಲಕೊಡುವ ವ್ಯವಸ್ಥೆಯಿದೆಎಂದರು. ಸದ್ಯದೇ ಮೂಲ್ಕಿಯಲ್ಲಿ 'ಜಾನುವಾರುಗಳ ಕೃತಕ ಗರ್ಭವಾನ' ಕೇಂದ್ರ ಮತ್ತು ಕೃಷಿ ಇಲಾಖೆಯ ಆಫೀಸು ತೆರೆಯಲ್ಪಡುವುದೆಂದು ಸೂಚಿಸಿದರು. ಈ ಎಲ್ಲಾ ಸೌಕರ್ಯ ಅನುಕೂಲತೆಗಳನ್ನು ರೈತರು ಪಡೆಕೊಳ್ಳುವುದೇಕೆಂದು ಹೇಳಿದರು.

ನಂತರ ಶ್ರೀ ನಯಂಪಳ್ಳಿ ರಾಮರಾಯರು 'ನೇಚಿ ತಯಾರಿಸುವುದು ಮತ್ತು ಬಿತ್ತುವುದು, ಶ್ರೀ ಪೆಜಮಾದಿ ನಾಗೇಶ ಕಾಮತರು 'ಕಳೆ ತೆಗೆಯುವುದು' ಮತ್ತು ಮಣ್ಣು ಕದಡಿಸುವುದು; ಶ್ರೀ ಗೋಪಾಲಕೃಷ್ಣ ಭಟ್ಟರು 'ಹಟ್ಟಿ ಗೊಬ್ಬರ ಮತ್ತು ಕೃತಕ ಗೊಬ್ಬರ', ಮೂಡಬಿದ್ರೆಯ ಶ್ರೀ ಎ. ಜಿ. ಶೋನ್ಸರು 'ಸೊಪ್ಪು ಗೊಬ್ಬರ', ಮೂಲ್ಕಿ ಮಿಶನ್ ಅನಾಥಾಶ್ರಮದ ಮೇಲ್ವಿಚಾರಕ ರೆ| ಇ. ಪಿ. ಹೆರ್ನಾಂಡೀಸರು 'ಉತ್ತಮ ಬೀಜ ತಯಾರಿಸುವಿಕೆ', ಕೃಷಿ ಶಿಕ್ಷಣಾಧಿಕಾರಿ ಶ್ರೀ ಸಂಜಗುತ್ತು ಶಂಭು ಮಲ್ಲಿಯವರು 'ಆಧಾರಿತ ಬೀಜಗಳ ಪ್ರಯೋಜನ', ಜಿಲ್ಲಾ ಕೃಷಿ ಆಫೀಸರು 'ಭತ್ತ, ಕಬ್ಬು, ತೆಂಗು, ಅಡಿಕೆ ಮುಂತಾದವುಗಳಿಗೆ ಬರಬಹುದಾದ ರೋಗಗಳ ನಿವಾರಣೆಯ ವಿಧಾನ', ಮೂಲ್ಕಿ ಪೆಟೆಂಟರಿ ಇನ್ಸ್‌ಪೆಕ್ಟರ್ ಶ್ರೀ ರಾಮಚಂದ್ರನಾಯರವರು 'ಜಾನುವಾರುಗಳಿಗೆ ಕೃತಕ ಗರ್ಭವಾನ ವಿಧಾನ' ಮೊದಲಾದ ವಿಷಯಗಳಲ್ಲಿ ಉಪನ್ಯಾಸಗಳನ್ನಿತ್ತರು.

ಬಳಿಕ ಶ್ರೀ ಎಮ್. ಆರ್. ಎಚ್. ಪೂಂಜರು ಗ್ರಾಮಸ್ವರಾಜ್ಯವಾಗಿ ಲಿಂಗಪ್ಪಯ್ಯ ಕಾಡಿನಿಂದ ದರಖಾಸ್ತು ಕೊಡೋಣವಾದ ಕಳಪೆ ಅಕ್ಷೇಪ ಸೂಚಕ ಮನವಿಯನ್ನು ಕಲೆಕ್ಟರರಿಗೆ ಒಪ್ಪಿಸಿದರು. ಶ್ರೀ ಬಿ. ಸಂಜೀವ ಸಿಟ್ಟರು ಧನ್ಯವಾದಗಳನ್ನಿತ್ತರು. ಅಲ್ಲಿಗೆ ಸಭೆ ಮುಕ್ತಾಯವಾಯಿತು.

ಕೊರಂಗ್ರಪಾಡಿ—ಸ್ವಾತಂತ್ರ್ಯ ದಿನಾಚರಣೆ ಮತ್ತು ಗ್ರಾಮಸ್ವರಾಜ್ಯ ಸಭೆಯು ತಾ. 15 ರಲ್ಲು ಸರ್ವಾರ್ಥ ಉಡುಪಿ ತಹಶಿಲ್ದಾರ್ ಶ್ರೀ ಕೆ. ರಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈ, ಎಮ್.ಎಲ್.ಎ., ಅವರು ರಾಷ್ಟ್ರ ಧ್ವಜವನ್ನು ಅರಳಿಸಿ ಜನತೆಯ ಕರ್ತವ್ಯ ಹಾಗೂ ಜವಾಬ್ದಾರಿಯ ಕುರಿತು ಭಾಷಣಮಾಡಿತ್ತರು. ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಕೆ. ಬಾಲ ಕೃಷ್ಣ ಸೆಟ್ಟಿ, ಶ್ರೀ ಕೆ. ತೇಜಪ್ಪ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದ ಬಳಿಕ ಅಧ್ಯಕ್ಷರ ಸಮಾರೋಪ ಭಾಷಣವಾಯಿತು. ಆಲೂರು – ಕೊರಂಗ್ರಪಾಡಿ— ಉದ್ಯಾವರ ಹೊಸ ರಸ್ತೆಯನ್ನು ಶ್ರೀ ಟಿ. ಎ. ಪೈಗಳು ಉದ್ಘಾಟಿಸಿದ ನಂತರ ಸಮಾರಂಭ ಕೊನೆಗೊಂಡಿತು.

ಬೈಂದೂರು — ತಾ. 18ರಲ್ಲು ಇಲ್ಲಿಯ ಗ್ರಾಮಸೇವಾ ಸಮಿತಿಯ ಕಾರ್ಯಕಾರೀ ಸಮಿತಿಯ ವಿಶೇಷ ಸಭೆಯು 'ಶ್ರೀ ಪೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿ ಎನ್. ಇ. ಎಸ್. ನೆರವಿನಿಂದ ಕೂಡಲೇ ಬಂದು 'ಜಾನುವಾರು ಆಸ್ಪತ್ರೆ'ಯನ್ನು ಕಟ್ಟಿಸುವುದೆಂತ ಸರ್ವಾನುಮತದ ನಿರ್ಧಾರವಾಯಿತು.

ಆಧಮಾರು— ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಜರಗಿದ ವೈದ್ಯಕೀಯ ಪ್ರದರ್ಶನವನ್ನು ನೋಡಲು ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಾ. 12 ಮತ್ತು 13ರಲ್ಲು ಶೈಕ್ಷಣಿಕ ಪ್ರವಾಸವನ್ನು ಕೈಕೊಂಡರು.

ಶೆಕ್ಕಿಟ್ಟೆ— ತಾ. 15ರಂದು ಕುಂದಾಪುರ ತಾಲೂಕಿನ ಶೆಕ್ಕಟ್ಟೆಯಲ್ಲಿ ಶ್ರೀ ಕೆ. ಎಸ್. ಉಪಾಳರ ಹಿರಿತನದಲ್ಲಿ ಮಹಿಳಾ ಮಂಡಳಿಯೊಂದು ರಚಿಸಲ್ಪಟ್ಟಿತು. ಶ್ರೀಮತಿಯರು ಸುಶೀಲಾ ಶೆಟ್ಟಿ (ಅಧ್ಯಕ್ಷೆ) ಪ್ರೇಮಾಬಾಯಿ (ಉಪಾಧ್ಯಕ್ಷೆ), ಸೀತಾಬಾಯಿ (ಕಾರ್ಯದರ್ಶಿ), ಕಮಲಾಬಾಯಿ, ಗುಲಾಬಿ ಬಾಯಿ, ನಮೀನ ಬಾಯಿ (ಇನರು ಸದಸ್ಯೆಯರು) ಇವರಿರುವ ಕಾರ್ಯದರ್ಶಿ ಸಮಿತಿ ರಚಿಸಲ್ಪಟ್ಟಿತು. ಶ್ರೀ ಟಿ. ದೇವಪ್ಪ ಸೆಟ್ಟಿ ಮತ್ತು ಶ್ರೀಮತಿ ಸುಶೀಲಾ ಕಟಿಪಾಡಿ, ಅವರ ಭಾಷಣಗಳಾದ ಬಳಿಕ ಶ್ರೀ ಸಿ. ನಾಗಯ್ಯ ಸೆಟ್ಟಿರು ಧನ್ಯವಾದಗಳನ್ನಿತ್ತರು.

ಕುಂದಾಪುರ— ಕುಂದಾಪುರದಲ್ಲಿ ವಿದ್ಯುಚ್ಛಕ್ತಿಯ ಉದ್ಘಾಟನೆಯನ್ನು ತಾ. 15 ರಲ್ಲು ಶ್ರೀ ಪೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ, ಅವರು ನೆರವೇರಿಸಿದರು. ಡಿ|| ಮುನ್ಸಿಫ್ ಶ್ರೀ ಎಚ್. ಎಲ್. ಸಾಲಿಯಾನರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಸಂಕಪ್ಪ ಸೆಟ್ಟಿ, ಕೆ. ಎಲ್. ಕಾರಂತ, ಕೆ. ನಾಗಪ್ಪ ಕಾಮತ್ ಮೊದಲಾದವರು ಭಾಷಣವಿತ್ತರು. ರಾತ್ರಿ ಸ್ವಾತಂತ್ರ್ಯೋತ್ಸವದ ಸಂಬಂಧ ಭೋಜನಕೂಟವಿತ್ತು.

ತಾ. ಕೆ. ಎಸ್. ಕುಡ್ತರು ತಾ. 15ರಂದು ಅಶೋಕ ಕ್ಲಬ್ಬಿನ ಉದ್ಘಾಟನೆಯನ್ನು ಮಾಡಿದರು. ಪಂಚಾಯತಬೋರ್ಡ್ ಅಧ್ಯಕ್ಷ ಶ್ರೀ ವೆಂಕಪ್ಪ ಸೆಟ್ಟಿರು ಸಭಾಧ್ಯಕ್ಷತೆ ವಹಿಸಿದ್ದರು. ಡಿ| ಮುನ್ಸಿಫ್ ಶ್ರೀ ಎಚ್. ಎಲ್. ಸಾಲಿಯಾನರು ಸ್ವಾಗತಿಸಿತ್ತರು ಡಿಪ್ಯೂಟಿ ತಹಶಿಲ್ದಾರ್ ಶ್ರೀ ಸಂಜೀವ ಪ್ರಭುಗಳು ಧನ್ಯವಾದವಿತ್ತರು.

ಪೋರ್ಚುಗೀಸ ಅಮಾನುಷ ಕೃತ್ಯಗಳ ವಿಷೇಧಾರ್ಥ ಹರತಾಳವು— ಮಂಗಳೂರು, ಉಡುಪಿ, ಕಾರ್ಕಳ, ಕುಂದಾಪುರ ಮೊದಲಾದ ತಾಲೂಕುಗಳ ಕೇಂದ್ರಗಳಲ್ಲೂ ಅಲ್ಲದೆ ಗ್ರಾಮಾಂತರಗಳಲ್ಲೂ ಆಚರಿಸಲ್ಪಟ್ಟಿತು.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮಂಗಳ ಗಲ್ಲಿ, ಹುಬ್ಬಳ್ಳಿ.

ಉಡುಪಿಯ ಅಹಿಂಸಾತ್ಮಕ ಸತ್ಯಾಗ್ರಹಿಗಳ ಅನುಭವ ಕಥನ

"ಗೋವೆಯಲ್ಲಿ ಪೋಲೀಸು ಕ್ರಮಕ್ಕಾಗಿ ಸರಕಾರಕ್ಕೆ ಒತ್ತಾಯ ಬೇಡ"

ಆಗೋಸ್ತು೧೫ರಂದು ಗೋವೆಯ ವಿಮೋಚನೆಗಾಗಿ ಅಹಿಂಸಾತ್ಮಕ ಸತ್ಯಾಗ್ರಹವನ್ನು ಸಡೆಸಿ, ಜನ ಜಾಗೃತಿಯನ್ನು ಹುಟ್ಟಿಸಲು ಉಡುಪಿಯಿಂದ ಒಟ್ಟು ೩೨ ಸತ್ಯಾಗ್ರಹಿಗಳು ಎರಡು ತಂಡಗಳಲ್ಲಿ ಹೋಗಿದ್ದರು. ಅವರೆಲ್ಲರೂ ತಮ್ಮ ಕೆಲಸದಲ್ಲಿ ಯಶಸ್ಸನ್ನು ಸಂಪಾದಿಸಿ, ಮರಳಿದುದಕ್ಕೆ ಅಭಿನಂದನೆಯನ್ನು ಸೂಚಿಸಲು ಉಡುಪಿಯಲ್ಲಿ ಇದೇ ದಿನಾಂಕ ೨೧ರಂದು ಆತ್ಮೋತ್ಸವ ಏರ್ಪಾಡು ಮಾಡಲ್ಪಟ್ಟಿತು.

ತಂಡಗಳ ಮುಖಂಡರು

ಸತ್ಯಾಗ್ರಹಿಗಳ ಎರಡು ತಂಡಗಳಲ್ಲಿ ಮೊದಲಾಗಿ ಕಾಲ್ನಡಿಗೆಯಿಂದ ತೆರಳಿದ್ದ ೧೩ ಮಂದಿಯ ಧುರೀಣತ್ವವನ್ನು ಜಲ್ಲೆಯ ಪ್ರಜಾಸಮಾಜವಾದಿ ಪಕ್ಷದ ಉಪಾಧ್ಯಕ್ಷ ಹಾಗು ಸ್ಥಳೀಯ ಜನಪ್ರಿಯ ವ್ಯಕ್ತಿ ಶ್ರೀ. ಪಿ. ಉಪೇಂದ್ರ ಶ್ರೀನಿವಾಸ ನಾಯಕರು ವಹಿಸಿದ್ದರು; ಇವರನ್ನು ಹಿಂದಿನಿಂದ ಕೂಡಿಕೊಂಡ ೨೦ ಮಂದಿಯ ದ್ವಿತೀಯ ತಂಡಕ್ಕೆ ನಿಷ್ಠಾವಂತ ಕಾಂಗ್ರೆಸಿಗರಾದ "ರೋಯಲ್ ಮಹಾಲ್" ಮಾಲಕ ಶ್ರೀ. ಕೆ. ವೆಂಕಟರಮಣ ಭಟ್ಟರು ಧುರೀಣರಾಗಿದ್ದರು.

ಉಡುಪಿಯ ಸರ್ವಪಕ್ಷೀಯ ಗೋವಾ ವಿಮೋಚನಾ ಸಮಿತಿಯ ಪರವಾಗಿ ಸತ್ಯಾಗ್ರಹಕ್ಕೆ ತೆರಳಿದ ಈ ಉತ್ಸಾಹಿಗಳಲ್ಲಿ ಸ್ಥಳೀಯ ಜನಸಂಘದ ಕಾರ್ಯದರ್ಶಿ ಶ್ರೀ ಎಂ. ವಿಟ್ಟಲ ಕಿಣಿ, ಕಮ್ಯೂನಿಸ್ಟರ ಧುರೀಣ ಶ್ರೀ. ಕೆ. ದಾಸ ಸೇರಿಗಾರ, ಪ್ರಜಾಸಮಾಜವಾದಿ ಕಾರ್ಯಕರ್ತ ಶ್ರೀ. ಕೋಟ ಜನಾರ್ಧನ ಹಂದೆ ಇತ್ಯಾದಿ ಇದ್ದರು.

ಭವ್ಯ ಸ್ವಾಗತ

ನಗರ ಪ್ರವೇಶಕಾಲದಲ್ಲಿ ಇವರನ್ನು ಅಂಜಾರಿಹಾಕಿದ ಅನೆ, ಬಿರುದುಬಾವಲಿಗಳಿಂದ ಯುಕ್ತವಾದ ವೈಭವಪೂರ್ಣ ಮೆರವಣಿಗೆಯ ಮೂಲಕ ಸ್ವಾಗತಿಸಲಾಯಿತು. ಸತ್ಯಾಗ್ರಹಿಗಳಿಗೆ ಕುಂಕುಮದ ತಿಲಕವನ್ನಿಟ್ಟು, ಹೂವಿನ ಹಾರವನ್ನು ಹಾಕಿ ಗೌರವವನ್ನು ಸಲ್ಲಿಸಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯು ಸಾಗಿ, ಶ್ರೀಕೃಷ್ಣಮಠದ ಮುಂದೆ ನಿಂತು, ದೇವರ ದರ್ಶನಪಡೆದು, ಸತ್ಯಾಗ್ರಹಿಗಳ ಸ್ವಾಗತಕ್ಕೆ ಏರ್ಪಡಿಸಿದ್ದ ಸಭಾಂಗಣದಲ್ಲಿ ಎಲ್ಲರೂ ಸೇರಿದರು.

ಆಧ್ಯಮಾರು ಮಠಾಧೀಶರಾದ ಶ್ರೀ ವಿಭುದೇಶತೀರ್ಥ ಶ್ರೀ ಪಾದಂಗಳವರು ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀ ಪಿ. ಶೀನನಾಯಕರು ಸತ್ಯಾಗ್ರಹಿಗಳ ಪರಿಚಯವನ್ನು ಮಾಡಿಸಿಕೊಟ್ಟರು. ಶ್ರೀ ಲೂವಿಸರು ಸ್ವಾಗತಭಾಷಣವನ್ನು ಮಾಡಿ ಜನರ ಸಹಕಾರವನ್ನು ಕೋರಿದರು.

ಅನುಭವ ಕಥನ

ಸತ್ಯಾಗ್ರಹಿಗಳಲ್ಲಿ ಶ್ರೀ ವಿಟ್ಟಲ ಕಿಣಿಯವರು ಗೋವೆಯನ್ನು ನುಗ್ಗಿದ ಉಡುಪಿಯ ಒಂದು ತಂಡದ ಅನುಭವವನ್ನೂ ಶ್ರೀ ದಾಸ ಸೇರಿಗಾರರು ಇನ್ನೊಂದು ತಂಡದ ಅನುಭವವನ್ನೂ ಹೃದಯಂಗಮವಾಗಿ ವರ್ಣಿಸಿದರು.

ಕಾಲ್ನಡಿಗೆಯಿಂದ ಹೊರಟ ಸತ್ಯಾಗ್ರಹಿಗಳ ತಂಡಕ್ಕೆ ಪ್ರತಿಯೊಂದೂ ಊರಿನಲ್ಲಿ ಜನರ ಹಾರ್ದಿಕ ಸ್ವಾಗತ ದೊರಕಿತು; ಜನರು ಗೋವೆಯ ಸಮಸ್ಯೆಯನ್ನು ವಿಚಾರಿಸಲು ತೊಡಗುವುದಕ್ಕೆ ಈ ಸಭೆಗ ನೆರವಾಯಿತು ದಳದ ಮುಂದಾಳು ಶ್ರೀ ನಾಯಕರು ವಿಶೇಷ ದಕ್ಷತೆಯಿಂದ ಎಲ್ಲ ಸತ್ಯಾಗ್ರಹಿಗಳ ಯೋಗಕ್ಷೇಮವನ್ನು ವಿಚಾರಿಸಿಕೊಂಡಿರುತ್ತಿದ್ದರು—ಎಂದು ಶ್ರೀ ಕಿಣಿ ತಿಳಿಸಿದರು.

ಬಸ್ಸಿನಲ್ಲಿ ಹೊರಟಿದ್ದ ಎರಡನೆಯ ತಂಡವೂ ಭಟ್ಕಳದಲ್ಲಿ ಮೊದಲಿನ ತಂಡವನ್ನು ಕೂಡಿಕೊಂಡಿತು; ಕಾರವಾರಕ್ಕೆ ತಲುಪಿದ ಬಳಿಕ, ಅಲ್ಲಿಯ ಸರ್ವ ಪಕ್ಷೀಯ ಸಮಿತಿಯ ನಿರ್ದೇಶನದಂತೆ ಕಾರ್ಯ ಸಾಗಿಸಲಾಯಿತು ಎಂದೂ ಭಾಷಣಕಾರರು ಹೇಳಿದರು.

ಗೋವೆಯಲ್ಲಿ ಪ್ರವೇಶ

ಉಡುಪಿಯಿಂದ ತೆರಳಿದ್ದ ೩೨ ಸತ್ಯಾಗ್ರಹಿಗಳ ಜೊತೆಗೆ ಬೇರೆ ನಾಲ್ಕು ಮಂದಿ ಸೇರಿಕೊಂಡರು; ಇವರನ್ನು ೧೭ ಮತ್ತು ೨೦ ಸದಸ್ಯರುಳ್ಳ ಎರಡು ತಂಡವಾಗಿ ವಿಂಗಡಿಸಲಾಯಿತು. ಒಂದರ ಧುರೀಣತ್ವವನ್ನು ಶ್ರೀ ನಾಯಕರೂ ಇನ್ನೊಂದರದನ್ನು ಶ್ರೀ ಹಂದೆಯವರೂ ವಹಿಸಿದರು. ಹಂದೆಯವರ ತಂಡ ಕಾಣಕೋಣಸಿನಲ್ಲಿ ಮತ್ತು ನಾಯಕರ ತಂಡ ಪೋಳಿಮದಲ್ಲಿ ಸತ್ಯಾಗ್ರಹ ನಡೆಸಿತು, ಇವೆರಡೂ ತಂಡಗಳು ಮಾಜಾಳಿಯ ಗಡಿಯಲ್ಲಿ ಗೋವೆಯನ್ನು ಮಾರ್ಗದರ್ಶಕರ ಸಹಾಯದಿಂದ ಪ್ರವೇಶಿಸಿದವು.

ಎಲ್ಲ ಸತ್ಯಾಗ್ರಹಿಗಳಿಗೂ ಗೋವೆಯ ಒಳಗೆಡೆ ಹೇಗೆ ವರ್ತಿಸಬೇಕು ಎಂಬ ಕುರಿತು ಮಾಜಾಳಿ ಗಡಿಗೆ ಸಮೀಪದ ಅಂಗಡಿ ಎಂಬಲ್ಲಿ ಯೋಗ್ಯ ಸೂಚನೆಗಳನ್ನು ಕೊಡಲಾಯಿತು. ರಾತ್ರಿ ಹೊತ್ತಿನಲ್ಲಿ ಕಾಡಿನ ನಡುವೆ ದಾರಿ ಮಾಡಿಕೊಂಡು ಮಳೆಯನ್ನು ಲೆಕ್ಕಿಸದೆ ಮುಂದೊತ್ತಬೇಕಾಯಿತು. ಒಂದರಡು ಟಾಚುಗಳ ಬೆಳಕಿನಲ್ಲಿ ಕಗ್ಗತ್ತಲೆ ಕವಿದ, ದುರ್ಗಮವಾದ, ಅಂಕುಡೊಂಕಾದ, ನೆರೆ ತುಂಬಿ ಹರಿವ ತೋಡುಗಳಿರುವ, ಜಿಗಿಗಳು ರಕ್ತ ಹೀರುವ ಮಾರ್ಗದಲ್ಲಿ ಮುನ್ನಡೆದು, ರಾತ್ರಿಯಸ್ಮಿಡೀ ಹೀಗೆ ಕಳೆದು, ಗೋವೆಯನ್ನು ಹೊಕ್ಕಿದೆವು—ಎಂದು ಶ್ರೀ ದಾಸ ಸೇರಿಗಾರರು ತಮ್ಮ ಭಾಷಣದಲ್ಲಿ ಹೇಳಿದರು.

ಪೋರ್ಚುಗೀಜರ ಹೊಡೆತ

ಮೋಳಿಂ ತಲುಪುವ ಮಾರ್ಗದಲ್ಲಿ ಕೆಲವರು ನಮ್ಮನ್ನು ಕಂಡು ಓಡಿ ಹೋದರು; ಕೆಲವರೊಡನೆ ಮಾತನಾಡಿ ಮುಂದಿನ ದಾರಿ ತಿಳಿದುಕೊಂಡೆವು. ರಾಜ ಮಾರ್ಗ ಸಮೀಪಿಸಿದಾಗ ಜೀಪು ಬರುವ ಸಪ್ಪಳ ಕೇಳಿಸಿತು. ನಾವು ಮರೆಯಲ್ಲಿರಲು ಪ್ರಯತ್ನಿಸುತ್ತಿದ್ದರೂ ನಮ್ಮ ಛೋಟಪಡೆ ಕೇಳಿ ಜೀಪಿನಲ್ಲಿದ್ದ ಪೋರ್ಚುಗೀಜ ಸೈನಿಕರೂ ಅವರ ದಳದವರೂ ನಾವಿದ್ದ ಕಾಡನ್ನು ಹೊಕ್ಕರು. ಅಷ್ಟರಲ್ಲಿ ನಾವು ಸೇರಾಗಿ ಜೀಪಿನ ಮುಂದಕ್ಕೆಯೇ ಸಾಗಿದೆವು—ಅಲ್ಲಿ ನಮ್ಮ ಧ್ವಜವನ್ನು ಕಸಿದುಕೊಳ್ಳಲಾಯಿತು. ಇವತ್ತಾಗಿ ಮರ್ದನ, ಪ್ರಹಾರ ಹಾಗು ಒಡೆತಗಳಿಗೆ ಪೋರ್ಚುಗೀಜರು ಕೈಯಿಕ್ಕಿದರು—ಎಂದರು ಕಿಣಿ.

ಮುಂದುವರಿದು, ನಮ್ಮ ನಾಯಕನಾರು ಎಂದು ಪ್ರಶ್ನಿಸಿದಾಗ ಶ್ರೀ ನಾಯಕರು "ನಾನು" ಎಂದು ಧೈರ್ಯದಿಂದ ಮುಂದೆ ಬಂದರು. ಅವರು ನಾಲ್ಕು ಪೆಟ್ಟು ಹೆಚ್ಚು ತಿಂದರು. ನಮ್ಮ ಹೆಸರು—ವಿಳಾಸಗಳನ್ನು ಬರೆದುಕೊಳ್ಳಲಾಯಿತು. ದೂರದ ಕಾರಾಗೃಹಕ್ಕೆ ಒಯ್ಯಲಾಯಿತು ಚೆನ್ನಾಗಿ ಥಳಿಸುವುದು, ರಬ್ಬರಿನ ಪಟ್ಟಿಯ ಚಬುಕಿನಿಂದ ಬರೆ ಏಳುವಂತೆ ಹೊಡೆಯುವುದು ನಡೆಯಿತು. ನಾಯಕರ ಬೆನ್ನು ಊದಿಕೊಂಡಿತು. ಬೇರೆ ಕೆಲವರಿಗೆ ಅಪಾರ ವೇದನೆಯಾಯಿತು ಎಂದರು.

ಪ್ರತ್ಯೋತ್ತರದ ಚೋದ್ಯ

ಕಾಣಕೋಣಮನೆ ಕಚೇರಿಯ ಮೇಲೆ ಭಾರತದ ರಾಷ್ಟ್ರೀಯ ಧ್ವಜವನ್ನರಳಿಸಲು ಉದ್ದೇಶಿಸಿದ್ದರೂ ಅದಕ್ಕೆ ಮುಂಚೆಯೇ ಪೋರ್ಚುಗೀಜರು ನಮ್ಮನ್ನು ಕಂಡು, ಧ್ವಜವನ್ನು ಬಲಾತ್ಕಾರದಿಂದ ಕಸಿದು ಕೊಂಡರು. ಕಿಸೆ ಇತ್ಯಾದಿ ಮುಟ್ಟಿಸೋಡಿದರು. ಹೊಡೆತ ನುತ್ತು ಚಾಟಿ ಏಟುಗಳಿಂದ ಸತ್ಯಾಗ್ರಹಿಗಳನ್ನು ನುಗ್ಗಿಸಮಾಡಲಾಯಿತು. ಪಟ್ಟಿಗಿಂತಲೂ ಕಳಚಿಯಕೊಟ್ಟಿಗೆಯೊಂದರಲ್ಲಿ ನಮ್ಮನ್ನು ತಳ್ಳಿದರು. ಅಲ್ಲಿ ನೆಲದಲ್ಲಿ ಜಲ್ಲಿಕಲ್ಲು ಹಾಕಿದ್ದರು. ವೇದನೆಯಿಂದ ನರಳುವ ಸತ್ಯಾಗ್ರಹಿಗಳು ಸುಬದಿಂದ ಮಲಗಿಕೊಳ್ಳುವುದಕ್ಕೆ ಈ ನೆಲ ಬಿಡಲಿಲ್ಲ—ಎಂದರು ಶ್ರೀ ದಾಸ ಸೇರಿಗಾರರು.

ಎರಡೂ ತಂಡಗಳನ್ನೂ ಅನೇಕ ವಿಧವಾಗಿ ಪ್ರಶ್ನಿಸಲಾಯಿತು. "ನೀವು ಏಕೆ ಬಂದಿದ್ದೀರಿ? ನಿಮ್ಮನ್ನು ಯಾರು ಕಳುಹಿಸಿದರು? ಎಷ್ಟು ದುಡ್ಡು ನಿಮಗೆ ಕೊಡಲಾಯಿತು? ನಿಮ್ಮ ಊರು ಯಾವುದು? ನಿಮಗೆ ಅಲ್ಲಿ ಕೆಲಸವಿಲ್ಲವೊ? ನಿಮಗೆ ಕೊಂಕಣಿ ಬರುತ್ತದೆಯೇ?" ಎಂದು ಮುಂತಾಗಿ ವಿಚಾರಿಸಿ ಸತ್ಯಾಗ್ರಹಿಗಳ ಬಾಯಿಬಿಡಿಸುವ ಪ್ರಯತ್ನ ನಡೆಯಿತು. ಬಂದೂಕಿನ ಬಾಡದಿಂದ ಗುದ್ದುವುದು, ಬೂಟು ಗಾಲಿನಿಂದ ಒದೆಯುವುದು, ಬಲೂನೆಟಿನಿಂದ ತಿವಿದು ನೋಯಿಸುವುದು ನಡೆದೇ ನಡೆಯಿತು.

ನರಳುವ ಗಾಯಾಳುಗಳು

ನಾಯಕರ ತಂಡದಲ್ಲಿ ನೀರು ಬೇಕೆಂದಾಗ ಬೊರೆಯಿತು; ಆದರೆ ಹಂದೆಯವರ ತಂಡಕ್ಕೆ ನೀರನ್ನೂ ಕೊಡಲಿಲ್ಲ. ಎರಡೂ ಪಂಗಡದವರು ಉಪವಾಸವಿದ್ದರು. ಹಂದೆಯವರು ಪತ್ರಿಕೋರ್ಯಮ ಎಂಬುದನ್ನು ಕೇಳತಿಳಿದತರು ಪಾಯ, ತೀವ್ರಗಾಯಗೊಂಡಿದ್ದ ಸತ್ಯಾಗ್ರಹಿಗಳಿಗೆ ಪೋರ್ಚುಗೀಜರು ಪಟ್ಟಿಯನ್ನು ಹಚ್ಚಿ ಶುಶ್ರೂಷೆ ಮಾಡಿದರು. ಇದರಲ್ಲಿ ಪ್ರಚಾರೋದ್ದೇಶವೇ ಇತ್ತಲ್ಲದೆ, ಸಹಾನುಭೂತಿ ಇರಲಿಲ್ಲ—ಬೇರೆ ಯಾವ ತಂಡಕ್ಕೂ ಹೀಗೆ ಉಪಚಾರ ಮಾಡಿರಲಿಲ್ಲ.

ಏಳು ಕಡೆಯಿಂದ ಆಗೋಸ್ತು ೧೫ರಂದು ಗೋವೆಯನ್ನು ನುಗ್ಗಿದ್ದ ಸತ್ಯಾಗ್ರಹಿಗಳನ್ನು ಆರು ಕಡೆಯಲ್ಲಿ ಗೋಳಿಬಾರಿನಿಂದ ಚದರಿಸಲು ಪೋರ್ಚುಗೀಜರು ಪ್ರಯತ್ನಿಸಿದ್ದರು. ಆದರೆ ಮಾಜಾಳಿಯಲ್ಲಿ ಪ್ರವೇಶಿಸಿದ ಸತ್ಯಾಗ್ರಹಿಗಳ ಮೇಲೆ ಗೋಳಿಬಾರು ನಡೆಯಲಿಲ್ಲ. ಉಡುಪಿಯಿಂದ ತೆರಳಿದವರಲ್ಲಿ ಶ್ರೀ ಸದಾನಂದ ಮಲ್ಯ, ಶ್ರೀ ಶೇಷಪ್ಪ ಮುದಿವಾಳ, ಶ್ರೀ ಗುರುವ, ಜನಾಬ್ ಗುಲಾಮ್ ಮಹಮ್ಮದ್ ಇತ್ಯಾದಿ ಕೆಲವರು ತೀವ್ರ ಪೆಟ್ಟಿಗೆ ಬಲಿಯಾದರು.

ಗಡಿಯಲ್ಲಿ ದಬ್ಬುವಾಗ

ಸತ್ಯಾಗ್ರಹಿಗಳನ್ನು ಗಡಿಗೆ ತಂದು ಬಿಡುವಾಗಲೂ ಚಿತ್ರಹಿಂಸೆಯನ್ನು ಮಾಡಲಾಯಿತು. ಜೀಪಿನಲ್ಲಿ ಒಬ್ಬರಿನ್ನೊಬ್ಬರ ಮೈ ಮೇಲೆ ಬಿದ್ದಿದ್ದರೂ ಸಾಕಾಗದನ್ನು ಹೆಚ್ಚು ಜನರನ್ನು ತುರುಕಿಸಿ ತಂದು, ಅವರನ್ನು ಸಾಲಾಗಿ ನಿಲ್ಲಿಸಿ ಪುನಃ ಹೊಡೆಯುತ್ತಿದ್ದರು. ಗಡಿಯಲ್ಲಿ ಒಂದು ಸಣ್ಣ ಕಂದಿಯೊಳಗಿಂದ ಒಬ್ಬೊಬ್ಬನೇ ಸತ್ಯಾಗ್ರಹಿ ಹೊರಗೆ ಓಡಬೇಕೆಂದು ಅವರು ಆಜ್ಞಾಪಿಸುತ್ತಿದ್ದರು—ಈ ದಾರಿಯಲ್ಲಿ ಗಾಜಿನ ಚೂರುಗಳು ಇತ್ಯಾದಿಯನ್ನು ಹಾಕಿದ್ದುದರಿಂದ, ಪ್ರತಿಯೊಬ್ಬನ ಕಾಲೂ ನೋವಿನಿಂದಾಯಿತು.

ಗಡಿಯ ಈಚೆಗೆ, ಭಾರತದ ಪೋಲೀಸರು ಮತ್ತು ವಿಮೋಚನಾಸಮಿತಿಯ ಕಾರ್ಯಕರ್ತರು ಇವರಿಗೆಲ್ಲ ಸ್ವಾಗತನೀಡಿ, ಪ್ರಥಮ ಚಿಕಿತ್ಸೆ ನಡೆಸಿ, ಕಾಪಿತಿಂಡಿಯನ್ನಿತ್ತರು. ತೀವ್ರಗಾಯಗಳಿಗೆಲ್ಲ ಆಸ್ಪತ್ರೆಗೆ ಸಾಗಿಸಿ, ಚೆಟ್ಟಿನ ಶುಶ್ರೂಷೆ ನಡೆಸಲು ವ್ಯವಸ್ಥೆಗೈದರು. ಒಂದುದಿನವಿದೀ ಬಸವಳಿದು ಬೆಂಡಾದ ಸತ್ಯಾಗ್ರಹಿಗಳು ಭಾರತದ ಗಡಿಯಲ್ಲಿ ರಾತ್ರಿ ವಿರಮಿಸಿ, ಮರುದಿನ ಕಾರವಾರಕ್ಕೆ ಹಿಂತಿರುಗಿದರು.

ಸತ್ಯಾಗ್ರಹಿಗಳ ಅಭಿಪ್ರಾಯ

ಇಷ್ಟು ಅನುಭವಗಳ ವಿವರಣೆಮಾಡುತ್ತಾ ಭಾಷಣಕಾರರು ಗೋಮಾಂತಕದಾದ ಪೋಲೀಸರು ತಂಸು ಸಹಾನುಭೂತಿಯಿಂದ ನಡೆದುಕೊಳ್ಳುತ್ತಿದ್ದರೆಂದೂ ಆದರೆ ಪೋರ್ಚುಗೀಜರು ವಾತ್ರ ನಿರ್ದಯ ರಾಕ್ಷಸರಂತೆ ಹಿಂಸಿಸುತ್ತಿದ್ದರೆಂದೂ ಅಭಿಪ್ರಾಯಪಟ್ಟರು. ಗೋವೆಯ ಜನರಿಗೆ ಸಾಂತ್ರ್ಯಬೇಕಾಗಿದೆ; ಸತ್ಯಾಗ್ರಹಕ್ಕೆ ಅವರ ಸಹಾನುಭೂತಿ ಇದೆ ಎಂದು ತಮ್ಮ ಅಭಿಪ್ರಾಯವಿರುವುದಾಗಿ ಹೇಳಿದರು. ಎಲ್ಲ ಪಕ್ಷಗಳ ಸರಕಾರದ ಫಲವಾಗಿ ಈ ಸತ್ಯಾಗ್ರಹವು ಗೋವೆಯ ಕುರಿತು ಭಾರತೀಯರ ಕಳಕಳಿ ಎಷ್ಟುಹೆಚ್ಚಿದೆ ಎಂಬುದನ್ನು ಸರಕಾರದ ಗಮನಕ್ಕೆ ತಂದುಕೊಡುವ ಸಾಧನವಾಯಿತು ಎಂದು ಧ್ವನಿಸಿದರು.

ಶ್ರೀ ಉಪೇಂದ್ರ ನಾಯಕರು ಮಾತನಾಡುತ್ತಾ ತನ್ನ ಇಬ್ಬರು ಸುತ್ರರು ವರ್ಣಿಸಿದ ಅನುಭವ ಸತ್ಯವಾಗಿದ್ದರೂ ಅದರ ಕರಾಳ ಹಾಗು ಭೀಕರ ರೂಪವು ಇನ್ನು ಮುಂದೆ ಸತ್ಯಾಗ್ರಹಿಗಳಾಗಿ ಕೋಗುವವರಲ್ಲಿ ಹೆದರಿಕೆ ಬರಿಸಬಹುದು; ಆದುದರಿಂದ ಅದಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿಲ್ಲ ಎಂದರು. ಸತ್ಯಾಗ್ರಹಿಗಳು ಚಿತ್ರಹಿಂಸೆಯನ್ನೆಲ್ಲ ಅಹಿಂಸಾತ್ಮಕ ವಿಧಾನದಿಂದ ಸಹಿಸಿಕೊಳ್ಳಲು ಬದ್ಧರಿರುವುದಾಗಿ ಅವರು ವಿದಿತ ಪಡಿಸಿದರು. ಉಡುಪಿಯಿಂದ ಇನ್ನೂ ಒಂದೆರಡು ತಂಡಗಳನ್ನು ಸತ್ಯಾಗ್ರಹಕ್ಕೆ ಕಳಿಸಬೇಕೆಂಬ ಇಚ್ಛೆಯನ್ನೆವರು ಪ್ರಕಟಿಸಿ ಜನರ ಸಹಕಾರ ಯಾಚಿಸಿದರು.

ಪೋಲೀಸು ಕ್ರಮ ಬೇಡ

ಸರಕಾರದ ನಿಲುಮೇಗುನ್ನು ಪ್ರಸ್ತಾಪಿಸುತ್ತಾ, ಭಾರತದ ವರಿಷ್ಠರು ಗೋವೆಯ ಪ್ರಶ್ನೆಯನ್ನು ಸಾಧಾನವಾಗಿಯೂ ಗಂಭೀರವಾಗಿಯೂ ವಿಚಾರಿಸುತ್ತಿದ್ದಾರೆ; ಅವರು ಸರ್ವಾಪರ ನಿಯಮಗಳೆಲ್ಲವನ್ನೂ ತೂಗಿ ನೋಡುತ್ತಿದ್ದಾರೆ; ಗೋವೆಯ ವಿಮೋಚನೆಗಾಗಿ ಒಂದೊಂದೇ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ— ಆದುದರಿಂದ ಸರಕಾರದೊಡನೆ ಜನರು ಸಹಕರಿಸಬೇಕು ಎಂದು ವಿನಂತಿಸಿದರು.

ಗೋವೆಯ ಪ್ರಶ್ನೆಯ ಪರಿಹಾರಕ್ಕೆ ಪೋಲೀಸು ಕ್ರಮವನ್ನಾಗಲೀ ಸೈನಿಕರನ್ನು ಕಳುಹಿಸಿ ಯುದ್ಧವನ್ನಾಗಲೀ ತೊಡಗಿದರೆ, ನ್ಯಾಟೊ ಒಡಂಬಡಿಕೆಯ ೨೨ ರಾಷ್ಟ್ರಗಳೊಡನೆ ಭಾರತ ಸರಕಾರ ನೆಣಸಾಡಬೇಕಾದೀತು; ತೃತೀಯ ಮಹಾಯುದ್ಧಕ್ಕೆ ಇದೇ ನಾಂದಿಯಾದೀತು—ಎಂದು ಶ್ರೀ ನಾಯಕರು ಜನರನ್ನು ಎಚ್ಚರಿಸಿದರು. ಹೆಚ್ಚಿನ ಜನರು ಇದನ್ನು ತಿಳಿದಿಲ್ಲವಾದುದರಿಂದ ತಾನಿದನ್ನು ಸ್ಪಷ್ಟಪಡಿಸುತ್ತಿದ್ದೇನೆ ಎಂದರು.

ಹುತಾತ್ಮರಿಗೆ ಶ್ರದ್ಧಾಂಜಲಿ

ಸಭೆಯ ಸತ್ಯಾಗ್ರಹ ಗೈದು ಹುತಾತ್ಮರಾದವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿತು; ಚಿತ್ರಹಿಂಸೆಗೆ ಗುರಿಯಾದವರಿಗೆ ಸಹಾನುಭೂತಿಯನ್ನು ಸಲ್ಲಿಸಿತು; ವಿಮೋಚನೆಯ ಹೋರಾಟಗಾರರಿಗೆ ಬೆಂಬಲವನ್ನು ವ್ಯಕ್ತಪಡಿಸಿತು. ಉಡುಪಿಯ ಸತ್ಯಾಗ್ರಹಿಗಳಲ್ಲಿ ವಿಶೇಷ ಗಾಯಗೊಂಡವರ ಶುಶ್ರೂಷೆ ನಡೆಸಲು ಸಹಾಯಧನದ ರೂಪದಲ್ಲಿ ಆಧ್ಯಮಾರು ಮಠಾಧೀಶರ ರೂ. ೨೫ ಸಹಿತ ಒಟ್ಟಿಗೆ ರೂ. ೫೦—೧೦—೬ ಸಭೆಯಲ್ಲಿ ಪರಿಹಾರ ವರಿತಿಗೆಯ ಮೂಲಕ ಜಮೆಯಾಯಿತು.

ಸಭಾಂಗಣದಲ್ಲಿ ಡಾ. ಸಾಲಾಝುರರ "ಮೂರ್ತಿ"ಯೊಂದನ್ನು ನಿಲ್ಲಿಸಿದ್ದರು. ಅದನ್ನು ಸುಡಬೇಕೆಂದು ವ್ಯವಸ್ಥಾಪಕರು ಆಲೋಚಿಸಿದ್ದರು. ಆದರೆ, ಶ್ರೀ ಪಾದಂಗಳವರು ಹಾಗೆ ಉದ್ರೇಕವನ್ನು ತೋರಿಸುವುದು ಅಹಿಂಸಾತ್ಮಕ ಸತ್ಯಾಗ್ರಹದ ಉದ್ದೇಶಕ್ಕೆ ಪೋಷಕವಾದ ವಿಷಯವಲ್ಲ ಎಂದು ಸೂಕ್ತ ಸಲಹೆಗಳನ್ನು ನೀಡಿದುದರಿಂದ ಮೂರ್ತಿದಹನಕಾರ್ಯವನ್ನು ಬಿಟ್ಟುಕೊಡಲಾಯಿತು.

ಅಧ್ಯಕ್ಷರ ಕಾಲೋಚಿತ ಮಾತುಗಳ ತರುವಾಯ ಶ್ರೀ ಎ. ಜಿ. ಅಳ್ವೆಯರು ಧನ್ಯವಾದವನ್ನು ಅರ್ಪಿಸಿದರು. ಸಭೆ ನಡೆಯುತ್ತಿದ್ದಾಗ ಎರಡುಸಲ ಮಳೆಸುರಿಯಿತು; ಅದರೂ ಕಿಕ್ಕಿರಿದ ಜನಸ್ತೋಮ ಅಸಕ್ತಿಯಿಂದ ನಿಂತು ಕಾರ್ಯಕ್ರಮವನ್ನು ಸಾಂಗಗೊಳಿಸಿತು. ಇಷ್ಟು ದೊಡ್ಡ ಸಾರ್ವಜನಿಕ ಸಭೆ ಈಚೆಗೆ ಉಡುಪಿಯಲ್ಲಿ ನಡೆದಿರಲಿಲ್ಲ. ಹಾಗಿದ್ದೂ ಪತ್ರಿಕೋದ್ಯಮಿಗಳಿಗೆ ವರದಿಗಾಗಿ ವಿಶೇಷ ವ್ಯವಸ್ಥೆ ಮಾಡಿರದಿದ್ದುದು ಶೋಚನೀಯ.

—ಹೆ.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ ಇವರು

ಸೈಂಟ್ ಇಗ್ನೇಸಿಯಸ್ ಹೈಸ್ಕೂಲ್ ಸಹಾಯಾರ್ಥ "ಸಂಸಾರ ನೌಕೆ" ನಾಟಕವನ್ನು ತಾ ೬—೯—1955ನೇ ಮಂಗಳವಾರ ಘಂಟೆ ೩ಕ್ಕೆ ಭಾಂಗಾವಾಡಿ ಥಿಯೇಟರಿನಲ್ಲಿ ಆಭಿನಯಿಸುವರು.

ವ್ಯವಹಾರದಲ್ಲಿ ಆದರ್ಶ ಮೇಳವಿಸಿದ ಉದ್ಯಮ

(೩ನೇ ಪುಟದಿಂದ)

ವಾದ ಅಂಶವಲ್ಲ. ಆದರೆ, ಒಂದು ಪತ್ರಿಕೆಯ ಯಶಸ್ಸು ಸರ್ವತೋಮುಖವಾದ ಕಾರ್ಯಕ್ಷಮತೆ, ದಕ್ಷತೆ, ಪ್ರತಿಭೆಗಳಿಂದಲೇ ಸಾಧಿಸಲ್ಪಡಬೇಕಾದ ಮತ್ತು ಸಾಮಾನ್ಯ ಆದರ್ಶವೊಂದರಿಂದ ಪ್ರೇರೇಪಿಸಲ್ಪಟ್ಟ ಸಿಬಂಧಿಯು ಪರಸ್ಪರ ಸಂಪೂರ್ಣ ಸಹಕರಿಸುವುದರಿಂದಲೇ ಕೈಗೂಡಿಸಬೇಕಾದ ವಿಷಯ ಎಂಬುದು ಸಿಜ.

ಕೆಲವರಲ್ಲಿ ಪತ್ರಿಕೆಯೊಂದನ್ನು ನಡೆಸುವುದೆಂದರೆ ಬೆಂಕಿಗೆ ಗಾಳಿಯೂದಿದಷ್ಟೇ ಸುಲಭದ ಕೆಲಸವೆಂಬ, ಜ್ಞಾನ, ತರಬೇತಿ ಮತ್ತು ಒಲವುಗಳು ಅನಾವಶ್ಯಕವಾದ ವಿಷಯಗಳೆಂಬ ಭ್ರಮೆ ಇರುವಂತೆ ಕಂಡು ಬರುತ್ತದೆ. ಈ ಕಲ್ಪನೆಯ ಮೇಲೆ ಕೆಲವು ಪ್ರಯೋಗಗಳೂ ನಡೆದುದುಂಟು—ಆದರೆ ಅವುಗಳು ಜಯಪ್ರದವಾಗಲಿಲ್ಲ ಎಂಬುದನ್ನು ಸ್ಮರಿಸುವುದೊಳಿತು. ಯಾವುದೇ ದೊಡ್ಡ ವ್ಯವಹಾರವನ್ನು ಕೈಗೊಳ್ಳುವಾಗ ಅಗತ್ಯವಾದ ಔದ್ಯಮಿಕ ಕ್ರಿಯಾಶಕ್ತಿಯು ಪತ್ರಿಕೆಗೆ ನೊದಲಿನಿಂದಲೂ ಅತ್ಯಾವಶ್ಯಕವಾದ ಪೋಷಕಾಂಶ; ಆದರೆ ಕೆಲವೆಡೆ ನಾಡಿರುವುದು ಕಂಡು ಬಂದಿರುವಂತೆ, ಕೇವಲ ವ್ಯವಹಾರದ ಮುಖಕ್ಕೆ ಪತ್ರಿಕೆಯು ಒಟ್ಟು ಜೊಕಟ್ಟಿನಲ್ಲಿ ಅವಾಸ್ತವ ಮಹತ್ವವನ್ನು ಕೊಡುವುದು ಮಾತ್ರ ಅಪೇಕ್ಷಣೀಯವಲ್ಲ; ಏಕೆಂದರೆ ಇದು ಕ್ಷೋಭಕಾರಕ ಪರಿಣಾಮಗಳಿಗೆ ದಾರಿ ಮಾಡಿ ಕೊಡುತ್ತದೆ; ಹಾಗಾದ ನಿದರ್ಶನಗಳೇ ಅನೇಕ

ಸಾಕಷ್ಟು ಹೆಚ್ಚು ಬೆಲೆಯುಳ್ಳದ್ದಾಗಿ ಪತ್ರಿಕೆ ರೂಪುಗೊಳ್ಳುವುದಕ್ಕೆ ಅದು ಸಂಯುಕ್ತ ಪ್ರಯತ್ನದ ಮತ್ತು ಐಕ್ಯಭಾವದ ಫಲವಾಗಬೇಕು. ಪತ್ರಿಕೆಯ ಆದರ್ಶ ಮತ್ತು ಉದ್ದೇಶಗಳನ್ನು ಆದರ್ಶೆ ಸಂಬಂಧಿಸಿದ ಪ್ರತಿಯೊಂದೂ ಅಂಗ ಚೆನ್ನಾಗಿ ಮನನ ಮಾಡಿರಬೇಕು. ಪತ್ರಿಕೋದ್ಯಮದ ಎರಡು ಪ್ರಮುಖ ಅಂಗಗಳ್ಳು ಸಂಪಾದಕನೂ ಸಂಚಾಲಕನೂ ಇಬ್ಬರೂ ಪರಸ್ಪರ ಕೈಗೆ ಕೈ ಕೊಟ್ಟು ಸಾಗಬೇಕು— ಹೀಗೆ ಮನ್ನಡೆಯುವಾಗ ಸಂಪಾದಕನೇ ಸಂಚಾಲಕನಿಗಿಂತ ಕೆಲವು ಇಂಚುಗಳಷ್ಟು ಮುಂದಿರಬೇಕು ಎಂಬುದನ್ನು ಪತ್ರಿಕೆಯ ಯಶಸ್ಸನ್ನು ಬಯಸುವವರು ತಿಳಿದಿರುವುದೊಳಿತು.

ಸಿಬಂಧಿಗಳ ಕುರಿತಾಗಿಯೂ ಇದೇ ಮಾತನ್ನು ಹೇಳಬಹುದು ಅವರೆಲ್ಲ ಸ್ನೇಹಕೂಟದಂತೆ ವರ್ತಿಸಬೇಕು. ಅವರು ಪ್ರತಿಯೊಂದೂ ಸಣ್ಣ ವಿಷಯದಲ್ಲಿ ಸಹಮತವನ್ನು ವ್ಯಕ್ತಪಡಿಸಬೇಕಾದ ಅಗತ್ಯವಿಲ್ಲ; ಆದರೆ, ಅವರು ಸಾಮಾನ್ಯ ಉದ್ದೇಶ ಮತ್ತು ನಡೆದು ಬಂದ ದಾರಿಯ ಕುರಿತು ಒಮ್ಮತದ ಅಭಿಪ್ರಾಯವನ್ನು ಇಟ್ಟುಕೊಳ್ಳಬೇಕು. ಅವರೆಲ್ಲರ ಸಾಮಾನ್ಯವಾದ ಮತ್ತು ಅವಿರತವಾದ ಪ್ರಯತ್ನಗಳ ದೆಸೆಯಿಂದಲೇ ಒಂದು ಪತ್ರಿಕೆ ಬೆಳೆದು ಬಾಳುತ್ತದೆ. ಅವರ ಕೆಲಸ ಎಂದಿಗೂ ಯಾಂತ್ರಿಕ ಮಾದರಿಯದಿರಬಾರದು; ಕೇವಲ ಬೇಳಿ ನಡೆಯುವ ರೀತಿಯದೂ ಆಗಿರಬಾರದು. ಓಟಕ್ಕೆ ಸಿದ್ಧವಾಗಿ ನಿಂತ ದೋಣಿಯಲ್ಲಿನ ಜನರಂತೆ ಈ ಸಿಬಂಧಿಗಳಿರಬೇಕು—ಪ್ರತಿಯೊಬ್ಬನೂ ಹುಟ್ಟು ಹಾಕುತ್ತಾನೆ; ತನಗೆ ಉತ್ತಮವೆನಿಸಿದ ರೀತಿಯಿಂದ ಆವನು ಈ ಕೆಲಸ ಮಾಡುತ್ತಾನೆ:ಆದರೆ ಎಲ್ಲರ ಸಾಮಾನ್ಯ ಉದ್ದೇಶವಾದ ಗುರಿಯನ್ನು ಮುಟ್ಟುವುದೇ ಅವನ ಧ್ಯೇಯವಾಗಿರುತ್ತದೆ ಧ್ಯೇಯ ಸಾಧನೆಯುಅವನಂಥ ಹಲವರ ಸಾಮೂಹಿಕ ಪ್ರಯತ್ನದ ಫಲವಾಗುತ್ತದೆ.

ಹೀಗೆ, ಪತ್ರಿಕೋದ್ಯಮವು ಆತ್ಮಗೌರವದ ಮತ್ತು ಸ್ವಸಂತೋಷದ ಕೆಲಸ: ಇಲ್ಲಿ ಜೀವನದ ಪ್ರತಿಯೊಂದೂ ಘಟನೆಗೆ ಎಷ್ಟು ಮುಖವೊಡೆಯುತ್ತದೆ, ಎಷ್ಟು ವಿಸ್ತಾರವಾದ ಪ್ರತಿಕ್ರಿಯೆಯುಂಟಾಗುತ್ತದೆ! ಸಾಧನೆ ಮತ್ತು ಶ್ರೇಷ್ಠತ್ವ ಎಷ್ಟು ಸಂದರ್ಭಗಳಲ್ಲಿ ಇಲ್ಲಿ ವ್ಯಕ್ತವಾಗುತ್ತದೆ! ಪತ್ರಿಕೋದ್ಯಮಿಯು ದೊಡ್ಡಸ್ತಿಕೆಯ ನಟನೆ ಮಾತ್ರದಿಂದ ತೃಪ್ತಿ ಹೊಂದುವ ಒಣ ಹರಟೆಯ ಕೀಳ್ಮಟ್ಟದ ಲೇಖಕನೆಂದು ಜನರು ಭಾವಿಸುವುದುಂಟು. ಆದರೆ, ಇದಕ್ಕೆ ವಿರುದ್ಧವಾಗಿ ಪತ್ರಿಕೋದ್ಯಮಿಯು ವಾಸ್ತವದಲ್ಲಿ ಜಗತ್ತಿನಲ್ಲಿಯೇ ಅತ್ಯುತ್ತಮ ಲೇಖನ ಸಾಮರ್ಥ್ಯ ವದೆದೊಬ್ಬ ಪ್ರತಿಭಾಸ್ಪಿತ ವ್ಯಕ್ತಿಯಾಗುವುದು ಹೆಚ್ಚು. ವರ್ಷದಿಂದ ವರ್ಷಕ್ಕೆ, ಏಕೆ, ಪ್ರತಿ ದಿನವೆಂಬಂತೆ, ಅವನ ಲೇಖನದಲ್ಲಿ ಬೆಳವಣಿಗೆಯ ಲಕ್ಷಣ ವ್ಯಕ್ತವಾಗುತ್ತದೆ, ನೂತನ ಸಾಧನೆಯು ಮೈದೋರುತ್ತದೆ. ಒಂದು ಪತ್ರಿಕೆಯು ಇಂದಿನ ಸಂಚಿಕೆಯನ್ನು ಆರು ವರ್ಷಗಳ ಹಿಂದಿನ, ಹತ್ತು ಅಥವಾ ಇಪ್ಪತ್ತು ವರ್ಷಗಳ ಹಿಂದಿನ, ಸಂಚಿಕೆಯೊಡನೆ ಹೋಲಿಸಿ ನೋಡಿದರೆ—ಎಷ್ಟು ಮುನ್ನಡೆಯನ್ನು ಪತ್ರಿಕೆ ಸಾಧಿಸಿದೆ ಎಂಬ ವಿಷಯ ಸ್ಪಷ್ಟವಾಗುತ್ತದೆ.

ಒಂದು ಪತ್ರಿಕೆಯ ಕುರಿತು ವಿಶೇಷವಾದ ಆಸಕ್ತಿಯನ್ನು ಹುಟಿಸುವ ವಿಷಯವೆಂದರೆಯೇ ಇದು—ಅದು ಅನೇಕ ಒದಿಗಳನ್ನು ಹೊಂದಿರುವಂತೆ, ಜೀವನವನ್ನು ಅನೇಕ ಮುಖಗಳಿಂದ ಸ್ಪರ್ಶಿಸುತ್ತಿರುವಂತೆ, ಪ್ರತಿಯೊಂದೂ ಕ್ಷೇತ್ರದಲ್ಲಿ ಸುಧಾರಣೆ ಮತ್ತು ಅಭಿವೃದ್ಧಿಗೆ ಸ್ವಾಗತವನ್ನು ನೀಡುತ್ತಿರುವಂತೆ ಸಾಮಾನ್ಯವಾದ ಪರ್ಯವೇಕ್ಷಣೆಯೇ ಅಭಿಪ್ರಾಯವನ್ನು ಮೂಡಿಸುತ್ತದೆ. ಜನರು ಹೀಗೆ ಮೆಚ್ಚಿಕೊಂಡಾಗಲೂಪತ್ರಿಕೆಗೆ ಸಂಬಂಧಿಸಿದ ಆ ವ್ಯಕ್ತಿಗೆ—ಅವನು ಸಂಪಾದಕೀಯ ವಿಭಾಗದಲ್ಲಿರಲಿ, ಸಂಚಾಲಕ ವಿಭಾಗದಲ್ಲಿರಲಿ, ಯಾಂತ್ರಿಕ ವಿಭಾಗದಲ್ಲಿರಲಿ (ಯಾಂತ್ರಿಕ ವಿಭಾಗಕ್ಕೂ ಪತ್ರಿಕೋದ್ಯಮದಲ್ಲಿ ಮಹತ್ವ ಸಲ್ಲುತ್ತದೆ) ಆತ್ಮತೃಪ್ತಿಯಾದುದಕ್ಕಿಂತ ಕಡಿಮೆಯಾದುದೇನೂ ರುಚಿಸಬಾರದು; ಮತ್ತು "ಆತ್ಯುತ್ತಮ" ಎಂಬ ಈ ಆದರ್ಶವು ಈಗ ಇದ್ದ ಮಟ್ಟಕ್ಕಿಂತ ತುಸು ಮುಂದಕ್ಕೆಯೇ ಸದಾ ಕಾಲ ಇರಬೇಕು. ಇಲ್ಲಿಯೇ ಉದ್ಯಮವನ್ನು ನಡೆಸುವ ಸಾಮರ್ಥ್ಯ ಪರಿಗಣನೆಗೆ ಬರುತ್ತದೆ; ಗುಣಧರ್ಮವೂ ಮಹತ್ವ ಪಡೆಯುತ್ತದೆ. ಇವುಗಳನ್ನು ಆಧರಿಸಿದೇ ತಮ್ಮ ಹೆಸರಿಗೆ ತಕ್ಕಂತೆ ಶಕ್ತಿ ನಿರ್ವಹಣೆ ಕರ್ತವ್ಯ ಪಾಲನೆಯಲ್ಲಿ ನಿರತವಾದ ಎಲ್ಲ ಸಂಸ್ಥೆಗಳ ಮಾದಂಯನ್ನನುಸರಿಸಿ ಪತ್ರಿಕೋದ್ಯಮವೂ ಪ್ರಗತಿ ಪಥದಲ್ಲಿ ಹೆಜ್ಜೆ ಮುಂದಿಡ ಬೇಕಾಗುತ್ತದೆ.

[ಸಿ. ಪಿ. ಸ್ಕಾಟರ ಲೇಖನದಿಂದ]

●

ಸೂಚನೆ

"ನವಯುಗ"ದ ಮೂವತ್ತನಾಲ್ಕನೇ ಸಂಪುಟವು ಈ ಸಂಚಿಕೆಯೊಂದಿಗೆ ಮುಕ್ತಾಯವಾಗುತ್ತದೆ. ಪತ್ರಿಕೋದ್ಯಮದ ಕಷ್ಟ ನಿಷ್ಠುರಗಳನ್ನು ಸಹಾನುಭೂತಿಯಿಂದ ಕಾಣಬೇಕಾದ ಅಗತ್ಯವನ್ನು ಮೇರೆ ಉದ್ಧರಿಸಿದ "ಮೆಂಚೆಸ್ಟರ್ ಗಾರ್ಡಿಯನ್" ದೈನಿಕದ ಸಂಪಾದಕರ ಲೇಖನ ಚೆನ್ನಾಗಿ ಪ್ರತಿಪಾದಿಸುತ್ತದೆ. ಮುಂದಿನ ಸಂಚಿಕೆಯಿಂದ ತೊಡಗುವ "ನವಯುಗ"ದ ಹೊಸ ವರ್ಷದಲ್ಲಿ ಸಾರ್ವಜನಿಕರ ಹೃತ್ಪೂರ್ವಕ ಬೆಂಬಲ ಸಿಕ್ಕಿಯೇ ಸಿಗುವುದೆಂದು ನಾವು ನಂಬುತ್ತೇವೆ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ. ಮೆನೇಜರ್, ನವಯುಗ, ಉಡುಪಿ.

ಸ್ವಂತ ಜಾಣಾಟ್ಟಾರಿಯ ಸೇವೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

ಸಾಲ

P. o. Box No. 3219, BOBMAY 3-

ಅಸ್ಕಾಲಿಕಾ
ಎಲ್ಲಾ ವಿಧದ ಸಿಡಿತಕ್ಕೂ ನೋವುಗಳಿಗೆ
50 ವರ್ಷ ಉಪಯೋಗದ
ಪಾರಿಯ ಡಾರ್

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. E. P. 186/1955 Os 123/44

ಲೈತಪ್ಪ ರೈ ಸಹಾ— ಅರ್ಜಿದಾರರು.
ಮುದ್ದಪ್ಪ ರೈ ಸಹಾ-- ಯೆದ್ರಿರು.

೨ನೇ ಎದ್ರಿ—ಮುತ್ತಪ್ಪ ರೈ-ಪರಮೇಶ್ರೀ ಹೆಂಗ್ಸಿನ ಮಗ ಪುತ್ತೂರು ತಾಲೂಕು ಕಾಟಿಕುಕ್ಕೆ ಗ್ರಾಮದ ಪೂಕರೆಯೆಂಬಲ್ಲಿ ಇತ್ತಾನೆ.— ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಅರ್ಜಿದಾರರು ಮೇಲ್ಕಂಡ ಅನ್ಯಾಯದ ವಿಧ್ರ ವಿಧ ಮೇರೆಗೆ ತಮಗೆ ಬಹಾ ಕೃತಗಳ ಮೂಲ್ಕದಲ್ಲಿ ಬಾದಿರಿಗೆ ಸಲ್ಲತಕ್ಕ ಮಿಗ್ಗೆ ಕೋರ್ಟುಖರ್ಚು ನೈಗೆರೆ ಕಳ್ದು ಉಳಿಕೆ ಬಹಾ ಯಣ ರೂ. 5018--4--7ನ್ನು ತಮಗೆ ಯೆದ್ರಿರ ಹಕ್ಕಿನ ಆಸ್ತಿ ಜಪ್ತಿ ಮಾ ವಿಲಂಬಿಸದೆ ಕೊಡ್ಸ ಬೇಕಂತ ಬಗ್ಗೆರೆ ಮೃತ ಬಾದಿ ಮಂಜಕ್ಕೆಯ ವಾರಿಸ್ತಾರರಾದ ನಿಮ್ಮನ್ನು Section 50 ಪ್ರಕಾರ ಕಕ್ಷಿಯಲ್ಲಿ ಸೇರಿಸಿ ನಡ್ಸಿದ ಮೇಲ್ಕಂಡ ಅಮಲ್‌ಜ್ಯಾರಿ ತಾ. 31-8-55 ಕ್ಕೆ ತನ್ನಗೆ ಇಟ್ಟಿರುತ್ತದೆ. ಅ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ವ್ಯಾಜ್ಯದ ದಿನ ಮುದ್ದುಯಾ ವಕೀಲ ವ್ಯಾರಯಾಜ್ಯಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿಕ್ಷಾಮಾಡಿಯುಕ್ತಕಂದಂತೆ ತೀರ್ಮಾನಿಸಲಾದೀತು.

M. Sadashiva Rao
Pleader for Petrs.
Puttur 10--8--55

ಭಾರತದ ಗುರುಕುಲ
(ಯಕ್ಷಗಾನ)
ಮದರಾಸು ಸರಕಾರದಿಂದ
ಸಂಭಾವನೆ ಪಡೆದ ಗ್ರಂಥ.
ಬೆಲೆ: 0 8 0

ಚತುರ ಆಡಳಿತ ನಿರ್ವಾಹಕನ ಗುಣಗಳು

(೨೩ನೇ ಪುಟದಿಂದ)

ತೀವ್ರ ನಿರ್ಧಾರಗಳೆಂದರೆ, ಆತುರವಾಗಿ ಕೈಗೊಂಡ ನಿರ್ಧಾರಗಳಲ್ಲ; ಅಥವಾ ಸರಿಯಾದ ಸಮಾಲೋಚನೆ ಅಥವಾ ಚರ್ಚೆಯಿಲ್ಲದೆ ಕೈಗೊಂಡ ತೀರ್ಮಾನಗಳಲ್ಲ. ಆಡಳಿತಗಾರರು ತಜ್ಞರ ಅಭಿಪ್ರಾಯಗಳನ್ನು ಸಡೆದುಕೊಳ್ಳಬೇಕು. ಅವರು ಏನು ಹೇಳುತ್ತಾರೆಂಬದನ್ನು ಬೇಗ ಗ್ರಹಿಸಿಕೊಳ್ಳಬೇಕು. ಸಂಬಂಧಪಟ್ಟವರ ಅಭಿಪ್ರಾಯವನ್ನೂ ಅನುಭವವನ್ನೂ ತೆಗೆದುಕೊಳ್ಳಬೇಕು.

ಒಮ್ಮೆ ನಿರ್ಧಾರ ತೆಗೆದುಕೊಂಡ ಮೇಲೆ, 'ಅದು ಸರಿ' ಎಂದು ಎಲ್ಲರೂ ಹೇಳಬೇಕು. ಈ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರಿಗಳಲ್ಲಿ ತಮಗೆ ಸೂಕ್ತವಾದ ಬೆಂಬಲವಿದೆಯೆಂಬ ಭಾವನೆ ಮೂಡಬೇಕು. ಯಾವುದೇ ಪ್ರಭಾವದಿಂದಾಗಿ ತಮ್ಮನ್ನು ಕೆಳಗಿನವರು ಕೈ ಬಿಡಲಾರರು ಎಂಬ ನಂಬಿಕೆ ಅವರಲ್ಲಿ ಹುಟ್ಟಬೇಕು. ಆಡಳಿತದ ಯಶಸ್ಸಿಗೆ ಇದೇ ಬೆಂಗೋಲು.

ನಿರ್ಧಾರಗಳು ತೀವ್ರವಾಗಿರಬೇಕು. ಅವುಗಳನ್ನು ಕುರಿತು ಪೂರ್ಣವಾದ ಚರ್ಚೆಗೆ ಅವಕಾಶ ಕೊಡಬೇಕು. ನಮ್ಮ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವಂತಹ ಶಕ್ತಿಗಳಿಗೆ, ಪ್ರಭಾವಗಳಿಗೆ ಅವುಗಳನ್ನು ಅಧೀನಗೊಳಿಸಬಾರದು. ಆದರೆ ಯಾವ ನಿರ್ಧಾರವನ್ನೂ ಕೈಗೊಳ್ಳಲು ಸಾಧ್ಯವಿಲ್ಲವೆಂದು ವಿಷಯವನ್ನು ಮುಂದುವರಿಸಲೂ ಬಾರದು.

ಅನೇಕ ವೇಳೆ, ವಿಶ್ವದ ವಿಷಯಗಳಲ್ಲಿ ಅನೇಕ ತೊಡಕಾದ ಅಂಶಗಳಿರುತ್ತವೆ. ಯಾವುದೇ ಒಂದು ನಿರ್ಧಾರವು ಸರಿಯಾದ ಏಕ ಮಾತ್ರ ನಿರ್ಧಾರವಾಗಲಾರದು. ಆದರೆ ಅನಿಶ್ಚಿತ ಸ್ಥಿತಿಗಿಂತ ಯಾವುದಾದರೂ ಒಂದು ನಿಶ್ಚಿತ ಸ್ಥಿತಿ ಉತ್ತಮ. ಕೆಲವೊಮ್ಮೆ ನಿರ್ಧಾರವೇ ಸಂಬಂಧಪಟ್ಟ ಜನರ ವಾತಾವರಣ ಮತ್ತು ಮನಸ್ಥಿತಿಯನ್ನು ಬದಲಾಯಿಸುವುದುಂಟು. ಅವುಗಳ ಮೇಲೆ ಪರಿಣಾಮವನ್ನುಂಟು ಮಾಡುವುದುಂಟು.

ಭಗವದ್ಗೀತೆಯ ಎಂಟನೆಯ ಪಂಜ್ಜೀದದ ೧೪ನೇ ಶ್ಲೋಕದಲ್ಲಿ ಈ ವಿಷಯವನ್ನು ಸಮಾಲೋಚಿಸಿ ೫ ಕಾರಣಗಳನ್ನು ಕೊಡಲಾಗಿದೆ. ೫ನೇ ಹಾಗೂ ಕೊನೆಯ ಅಂಶವೇ ದೈವ-ಅಸೀರೀಕ್ಷಿತಘಟನೆಗಳೆಲ್ಲವನ್ನೂ ಸೇರಿಸುವುದಕ್ಕೆದುವ ಪಾರಿಭಾಷಿಕ ಶಬ್ದವಿದೆನ್ನಬಹುದು. ಹೀಗೆ ತತ್ವರೀತಿಯಿಂದಾಗಿ ಸೂಕ್ತವಾದ ನಿರ್ಧಾರವಾಗಿ ಪರಿಣಮಿಸಬಹುದು.

ಸೂಕ್ತವಾದ ಸಮಯವೂ ಮುಖ್ಯವಾದ ಅಂಶ. ಚತುರ ಆಡಳಿತಗಾರನಿಗೆ ತೀವ್ರ ನಿರ್ಧಾರಗಳನ್ನು ಕೈಗೊಳ್ಳಲು ಮಾತ್ರ ತಿಳಿದಿದ್ದರೆ ಸಾಲದು. ಯಾವಾಗ ಕೆಲಸವನ್ನು ಕೈಗೊಳ್ಳಬೇಕೆಂಬುದರ ಜ್ಞಾನವೂ ಅವನಿಗಿರಬೇಕು. ಹಲವರು ಯಶಸ್ವಿಯಾಗುವುದಕ್ಕೂ ಮತ್ತೆ ಕೆಲವರು ಅಯಶಸ್ವಿಗಳಾಗುವುದಕ್ಕೂ ಇದೇ ಕಾರಣ.

ಸರಿಯಾದ ರೀತಿಯಲ್ಲಿ ಏವೇಜನೆಯನ್ನು ಕೈಗೊಳ್ಳುವುದಕ್ಕೆ ಅಗತ್ಯವಾದದು ವ್ಯವಹಾರ ಕುಶಲತೆ ಮತ್ತು ಕಲ್ಪನಾ ಶಕ್ತಿ. ಇದು ಹುಟ್ಟು ಗುಣವೇ ಹೊರತು ಕಲಿಕೆಯಿಂದ ಬರುವ ಗುಣವಲ್ಲವೆಂದು ನನ್ನ ಅಭಿಪ್ರಾಯ. ಆದರೆ ಅನುಭವವು ಈ ಮೂಲ ಗುಣಗಳನ್ನು ಪರಿಪೋಷಿಸಬಲ್ಲದು.

ಸರಿಯಾದ ನಿರ್ಧಾರಗಳನ್ನು ಸೂಕ್ತ ಸಮಯಗಳಲ್ಲಿ ಕೈಗೊಳ್ಳುವ ಒಳ್ಳೆಯ ಆಡಳಿತಗಾರನಿಗೆ ಅವನ ಕೈಕೆಳಗಿನ ಅಧಿಕಾರಿಗಳು ನಿಷ್ಠಾವಂತರಾಗಿರುತ್ತಾರೆ. ಆ ನಿರ್ಧಾರಗಳನ್ನು ಕಾರ್ಯ ರೂಪದಲ್ಲಿ ತರುವಾಗ ಕೈ ಕೆಳಗಿನ ಅಧಿಕಾರಿಗಳಿಗೆ ಬೆಂಬಲ ನೀಡುವ ಭರವಸೆಯನ್ನು ಕೊಟ್ಟರೆ ಅವರಲ್ಲಿ ವಿಶ್ವಾಸ ಮೂಡುತ್ತದೆ.

ಆಡಳಿತಗಾರನು ತನ್ನ ಕೈಕೆಳಗಿನ ಅಧಿಕಾರಿಗಳೊಂದಿಗೆ ಸರಳವಾಗಿ ಮಾತುಕತೆ ನಡೆಸಿ ಅವರಲ್ಲಿ ವಿಶ್ವಾಸವನ್ನು ಹುಟ್ಟಿಸಬೇಕು. ಅವನಲ್ಲಿ ಸಮಾಧಾನ ಪ್ರವೃತ್ತಿ ಇರಬೇಕು. ಕೋಪವನ್ನು ವ್ಯರ್ಥನಿರ್ಧಾರದ ಸ್ಥಾನದಲ್ಲಿ ಪ್ರತಿಷ್ಠಾಪಿಸುವಂತಿಲ್ಲ. ಏಕೆಂದರೆ ಕೋಪಿಷ್ಠನಿಂದ ಒಳ್ಳೆಯವರು ದೂರ ಸರಿದು ಹೊಗಳು ಭಟರು ಮಾತ್ರ ಹತ್ತಿರ ಬಂದಾರು. ಅವನಲ್ಲಿ ವಿಶೇಷ ಪ್ರತಿಭೆ ಇರಬೇಕು; ಅಥವಾ ಮಾಡತಕ್ಕ ಸಾಮರ್ಥ್ಯವುಳ್ಳವರಿಗೆ ಕೆಲಸವನ್ನು ಸಹಿಸಿ ಅವರ ತೀರ್ಮಾನಗಳನ್ನು ಮರುಪ್ರಶ್ನೆಯಿಲ್ಲದೆ ಒಪ್ಪಿಕೊಳ್ಳುವಷ್ಟು ವ್ಯಾಂಜಲ ಬುದ್ಧಿಯಾದರೂ ಇರಬೇಕು.

ಒಂದು ನಿರ್ಧಾರವನ್ನು ಕೈಗೆಂಡು ಅದನ್ನು ಕಾರ್ಯರೂಪಕ್ಕೆ ತರುವಾಗ ಆಡಳಿತಗಾರ ತನ್ನ ಶಿಬ್ಬಂದಿಯಲ್ಲಿ ಒಂದು ಸಾಮಾಜಿಕ ಉದ್ದೇಶದ ಭಾವನೆಯನ್ನು ಕಲ್ಪಿಸಬೇಕು. ಯಾವುದೇ ದೊಡ್ಡ ನಿರ್ಧಾರವನ್ನು ಕೈಗೊಂಡಾಗಲಾಗಲಿ, ಯಾವುದೇ ಕೆಲಸವನ್ನು ಕಾರ್ಯರೂಪಕ್ಕೆ ತರುವಾಗಲಾಗಲಿ, ಅವನ ಶಿಬ್ಬಂದಿಗೆ ಅದು ಅರ್ಥವಾಗಿರಬೇಕು; ಅದರ ಉದ್ದೇಶ ಮತ್ತು ಮಹತ್ವವು ಅವರಿಗೆ ಗೊತ್ತಾಗಬೇಕು. ಅದನ್ನು ಕಾರ್ಯರೂಪಕ್ಕೆ ತರುವುದೆಂದರೆ, ಸಮಾಜಸೇವೆಯೆಂಬ ಭಾವನೆಯನ್ನುಂಟುಮಾಡಬೇಕು.

ನೂರು ವರ್ಷಗಳ ಹಿಂದೆ ಬ್ರಿಟನ್ನಿನಲ್ಲಿ ಅಧಿಕಾರಿಗಳು ಅಸಮರ್ಥರೂ, ಅಜ್ಞಾನಿಗಳೂ ಮತ್ತು ಲಂಚ ಕೋರರೂ ಆಗಿದ್ದರು. ಇಂದು ಅವರು ದಕ್ಷರಾಗಿದ್ದಾರೆ, ಅನುಭವಸ್ಥರಾಗಿದ್ದಾರೆ ಹಾಗೂ ಭಾವಶುದ್ಧಿಯುಳ್ಳವರಾಗಿದ್ದಾರೆ. ಪ್ರಜಾಸತ್ತಾತ್ಮಕ ರಾಜಕೀಯ ಅಥವಾ ಜಾತೀಯ ರಾಜಕಾರಣವು ಆತಂಕಿಸದೆ ಅವಕಾಶವನ್ನು ಕೊಟ್ಟರೆ ಮತ್ತು ಪ್ರಗತಿಯನ್ನೂ ಸಮತೆಯನ್ನೂ ಅಡ್ಡಗಟ್ಟದೆ ಹೋದರೆ ಮಾತ್ರ ನಮ್ಮ ರಾಷ್ಟ್ರದಲ್ಲಿ ಕೂಡ ನಾವು ಆದರ್ಶ ಅಧಿಕಾರಿಗಳನ್ನು ಪಡೆಯಲು ಸಾಧ್ಯವಾಗಬಹುದು.

ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಅಧಿಕಾರವು ಉಚ್ಚತಮವಾಗಿರಬೇಕು; ಅದು ಉಚ್ಚತಮವಾಗಿಯೂ ಇದೆ. ಆದರೆ ಕೆಲಸಕ್ಕೆ ನೇಮಿಸಿಕೊಳ್ಳುವುದು ಮತ್ತು ಬಡ್ತಿಗಳನ್ನು ಕೊಡುವ ಬಗ್ಗೆ ವಿಧಾನ ಮಂಡಲದ ಒಳಗೆ ಅಥವಾ ಅದರ ಹೊರಗೆ ಕೆಲಸ ಮಾಡುವ ರಾಜಕೀಯ ಹಾಗೂ ಸಾಮಾಜಿಕ ಪಕ್ಷ ಪಂಗಡಗಳ ಪ್ರಭಾವಕ್ಕೆ ಒಳಗಾದರೆ ಮಾತ್ರ ಪ್ರಜಾ ಪ್ರಭುತ್ವದ ಗುರಿಯು ವ್ಯರ್ಥವಾಗುತ್ತದೆ.

ವಿಮೋಚಿತವಾದ ಭಾರತದಲ್ಲಿ ಕ್ರಾಂತಿ ಕಾಲದಲ್ಲಿ ಹಾಗೂ ಅಸಹಕಾರ ಚಳುವಳಿಗಳ ಕಾಲದಲ್ಲಿ ಮುಂದೆ ಬಂದ ರಾಜಕಾರಣಿಗಳು ಅದಷ್ಟು ತೀಕ್ಷ್ಣವಾಗಿ ಆಡಳಿತ ನಿರ್ವಾಹಕರಾಗುವರೆಂದು ಅಶಿಸಲಾಗಿತ್ತು. ಆದರೆ ಈ ಕಾರ್ಯ ವಿಧಾನವು ನಿಧಾನವಾಗಿದೆ. ಅದಕ್ಕೆ ಪ್ರತಿಯಾಗಿ ಆಡಳಿತ ನಿರ್ವಾಹಕರೇ ಬಹುಪಾಲು ರಾಜಕಾರಣಿಗಳಾಗುತ್ತಿದ್ದಾರೆ. ಇದು ಅಷ್ಟು ಒಳ್ಳೆಯದಲ್ಲ.

ಈಗ ನಾನು ಹೇಳಿರುವುದು ಮಂತ್ರಿಗಳಿಗೂ ಸರ್ಕಾರದಲ್ಲಿರುವ ಆಡಳಿತಗಾರರಿಗೂ ಎಷ್ಟೋ ದೊಡ್ಡ ದೊಡ್ಡ ಅಧಿಕಾರೇತರ ಸಂಸ್ಥೆಗಳಿಗೂ ಅಷ್ಟೇ ಅನ್ವಯಿಸುತ್ತದೆ. ಈ ಅಧಿಕಾರೇತರ ಸಂಸ್ಥೆಗಳು ಕೈಗಾರಿಕೆಗಳಾಗಿರಬಹುದು, ವಿಸ್ತರಣಾ ಸಂಸ್ಥೆಗಳಾಗಿರಬಹುದು, ಅಥವಾ ಸಾಗಾಣಿಕೆ ಸಂಸ್ಥೆಗಳಾಗಿರಬಹುದು. ಅಥವಾ ಇನ್ನಾವುದೇ ಒಗೆಯವರಿರಬಹುದು. ಕಾಂಗ್ರೆಸು ಕಟ್ಟಬೇಕೆಂದಿರುವ ಕಲ್ಯಾಣರಾಷ್ಟ್ರದ ನಿರ್ಣಯದಪ್ರಕಾರ ಅವು ದೊಡ್ಡಪ್ರಮಾಣದ ವ್ಯಾಪಾರದಕಾಲದ ಮುಗಿದುಹೋಯಿತೆಂದು ಯೋಚಿಸಬಹುದು. ಆದರೆ ವಾಸ್ತವಾಗಿ ನೋಡಿದರೆ ಇದು ಆ ರೀತಿ ಇಲ್ಲ. ದೊಡ್ಡ ಪ್ರಮಾಣದ ವ್ಯಾಪಾರವು ಇನ್ನೂ ಅಗತ್ಯವಾಗಿದೆ ಹಾಗೂ ಇದು ಮುಂದುವರಿಯುತ್ತದೆ. ಇದುದರಿಂದ ಕಲ್ಯಾಣ ರಾಷ್ಟ್ರದಲ್ಲಿ ದಕ್ಷ ಆಡಳಿತಗಾರರನ್ನು ಪಡೆಯುವುದು ಸರಕಾರದ ಸಮಸ್ಯೆ ಎಷ್ಟೋ ಅಷ್ಟೇ ಖಾಸಗಿ ವಲಯದ ಪ್ರಶ್ನೆಯೂ ಆಗಿದೆ ಎಂದು ನನ್ನ ಅಭಿಪ್ರಾಯ.

ಗುಣ ಸ್ವಭಾವದ ಮೂಲಭೂತ ಅವಶ್ಯಕತೆಯನ್ನು ಇಲ್ಲಿ ನಾನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದೇನೆ. ಇದೊಂದೇ ಸಾಲದೆಂಬುದು ನಿಜ. ಆದರೆ ಗುಣಶೀಲಗಳು ಉತ್ತಮವಿರದಿದ್ದರೆ ಆಡಳಿತ ನಿರ್ವಾಹಕನೊಡನೆ ಏನಿದ್ದರೂ ಪ್ರಯೋಜನವಿಲ್ಲ. ಸೂರ್ಯನ ಬೆಳಕು ಜೀವನದ ಎಲ್ಲಾ ರೂಪುಗಳಿಗೂ ಅವಶ್ಯಕವಿರುವಂತೆ ಮುಖ್ಯ ಕಾರ್ಯದರ್ಶಿಯಿಂದ ಹಿಡಿದು ಕನಿಷ್ಠ ದರ್ಜೆಯ ನೇವಕನ ವರೆಗೂ ಗುಣ ಸ್ವಭಾವವು ಎಲ್ಲಾ ಹಂತಗಳಲ್ಲಿಯೂ ಆಡಳಿತಗಾರರಿಗೆ ಮುಖ್ಯವಾಗಿರುತ್ತದೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು	ಶೇಕಡಾತಿ.
24 ತಿಂಗಳಿಗೆ	4%
12 ,,	3¾%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ಮಕ್ಕಳ ಮಗ್ಗಿ ಪುಸ್ತಕ

ಬೆಲೆ ೦—1—೦

ವ್ಯಾಪಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.



ಇಟಲಿಗೆ ನೆಹರುಗಳ ಭೇಟಿ

ಗೋವೆಯ ಪ್ರಶ್ನೆಯಲ್ಲಿ ಧಾರ್ಮಿಕತೆ ಇಲ್ಲ ಎಂದು ಕ್ರೈಸ್ತ ಜಗದ್ಗುರು ಪೋಪರು ಸ್ಪಷ್ಟವಾಗಿ ಸಾರುವುದಕ್ಕೆ ಸರಿವಾದ ನೆಹರುಗಳ ರೋಂ ಸಂದರ್ಶನವು ಇಟಲಿ ಸರಕಾರದೊಡನೆ ಭಾರತದ ಸಂಬಂಧವನ್ನು ಇನ್ನಷ್ಟು ಸೌಹಾರ್ದಮಯಗೊಳಿಸಲೂ ಸಹಾಯಕವಾಯಿತು. ಪ್ರಧಾನಿಗಳ ಈ ಮೈತ್ರಿ ಯಾತ್ರೆಯನ್ನು "ಪ್ರೀತಿ ದಿಗ್ವಿಜಯ" ಎಂದು ರಾಜಾಜಿ ಮೊನ್ನೆ ಮುಂಬಯಿಯಲ್ಲಿ ಶ್ಲಾಘಿಸಿದರು. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಕೋಮಿ ಮತ್ತು ಸಿಡಿ ಮದ್ದುಗಳ ಉಪಯೋಗವನ್ನು ತ್ಯಜಿಸಲು ಪ್ರಯತ್ನಿಸುವ ಭಾರತಕ್ಕೆ ಇದು ತಕ್ಕ ಜೊಗಳಿಕೆ ಇಲ್ಲಿಯ ಚಿತ್ರಗಳಲ್ಲಿ(ಮೇಲೆ) ಇಟಲಿಯ ಮಧ್ಯ ಮತ್ತು ದೂರ ಪ್ರಾಚ್ಯ ಸಂಘದ ಪ್ರೊ. ಟ್ಯೂಸಿ ಪ್ರೀತಿಯ ಕಾಣಿಕೆಯಾಗಿ ಪೋಂಬತ್ತಿಯ ನಿಲುವನ್ನು ಕೊಡುತ್ತಿರುವುದು ಮತ್ತು (ಬದಿಗೆ) ಇಟಲಿಯ ಅಧ್ಯಕ್ಷ ಸಿನಾರ್ ಗಿಯೋವಾನಿ ಗ್ರಾಂಕಿ ಹಾರ್ದಿಕ ಸ್ವಾಗತವನ್ನು ನೀಡುತ್ತಿರುವುದು ಕಂಡು ಬರುತ್ತದೆ.

(ನಿನೇ ಪುಟದಿಂದ)

ಅವರು ಕೆಲವು ಕಟು ವಾಕ್ಯಗಳನ್ನೂ ಭಾರತೀಯರ ವರ್ತನೆಯ ವಿಷಯದಲ್ಲಿ ಆಡುವಂತಾಯಿತು—"ಇದು ಕೆಲವು ಪ್ರಶ್ನೆಗಳನ್ನು ಮುಂದೆ ತರುತ್ತದೆ: ನಮ್ಮ ಅಂತಾರಾಷ್ಟ್ರೀಯ ಮಹತ್ವದ ಸಮಸ್ಯೆಗಳನ್ನು ಕುರಿತಾದ ಧೋರಣೆಯನ್ನು ಸಂತೆಯಲ್ಲಿ ನೆರೆದ ಜನರ ನಿರ್ದೇಶದಂತೆ ರೂಪಿಸುವ ಅಗತ್ಯ ಬರುವುದಾದರೆ ಅಗ ಈ ಧೋರಣೆಗೆ ಹೊಣೆಗಾರನಾದ ವ್ಯಕ್ತಿಗೆ ತನ್ನ ಕೆಲಸ ಮುಂದುವರಿಸಿಕೊಂಡು ಹೋಗುವುದೇ ಅಸಾಧ್ಯವಾದೀತು" ಎಂದರು ನೆಹರು.

"ಭಾರತ ಸರಕಾರವು ವಿದೇಶಗಳ ರಾಯಭಾರಿ ವರ್ಗಕ್ಕೆ ರಕ್ಷಣೆ ಕೊಡುವಲ್ಲಿ ಮತ್ತು ಗೌರವವನ್ನು ತೋರಿಸುವಲ್ಲಿ ತನ್ನ ಜನರನ್ನು ನಂಬುವ ಹಾಗಿಲ್ಲದಿದ್ದರೆ, ಆದು ಭಾರತದ ಜನತೆ ಮತ್ತು ಸರಕಾರದ ಧಾಟಿಗೆ ಹೇರ್ತಿಗೆ ಹೇಳಿದ ವಿಷಯವಲ್ಲ" ಎಂದು ನೆಹರು ಗದ್ಗದಿತ ಕಂಠದಿಂದ ನುಡಿದರು. ನಮಗೆ ಇನ್ನೊಂದು ರಾಷ್ಟ್ರದ ಅಪಮಾನ ಮಾಡುವ ಅಧಿಕಾರವಿಲ್ಲ ಎಂಬ ಸತ್ಯವನ್ನು ಮತ ಪ್ರದರ್ಶಕರು ಮನವರಿಕೆ ಮಾಡಿಕೊಳ್ಳದೆ ಹೋಗಿ ಭಾರತವನ್ನು ಲೋಕ ನಿಂದಿಸುವಂತೆ ನಡೆದುಕೊಂಡರು ಎಂದರೆ ನಮ್ಮ ಜನತೆ ಎಲ್ಲಿ ಉಳಿಯಿತು? ನಮ್ಮ ರಾಷ್ಟ್ರ ಧ್ವಜದ ಅಪಮಾನವನ್ನು ಸಹಿಸದ ನಾವು ಪೋರ್ಚುಗೀಜರ ಧ್ವಜವನ್ನು ತುಳಿಯುವ ಆನಂದದಲ್ಲಿ ಭಾಗಿಯಾಗುವ ಅಧಿಕಾರ ಹೇಗಿದ್ದೀತೆಯೆ?—ಎಂದಿಗೂ ಇಲ್ಲ.

ಮತಪ್ರದರ್ಶನದ ಅಗತ್ಯವಾದರೂ ಇತ್ತೆ—ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ. ಯಾರಿಗೆ ಬುದ್ಧಿ ಹೇಳಲು ಈ ಪ್ರದರ್ಶನ? ಗೋವೆಯ ಕಡೆಗೆ ಜನರ ಗಮನ ತಿರುಗಿಸುವುದೇ ಉದ್ದೇಶವಾಗಿದ್ದರೆ ಅದಕ್ಕೆ ಹಿಂಸಾಚರಣೆಗೆ ತೊಡಗುವ ಅಗತ್ಯವಿದ್ದಿಲ್ಲ; ಸರಕಾರದ ಮಟ್ಟಗಂತೂ ಜನರಲ್ಲಿ ಇರುವುದಕ್ಕಿಂತ ಹೆಚ್ಚಾದ ಆಸಕ್ತಿಯು ಗೋವೆಯ ವಿಷಯದಲ್ಲಿದೆ ಎಂಬುದನ್ನು ಧುರೀಣರು ಪದೇ ಪದೇ ಮಾಡಿರುವ ಭಾಷಣಗಳು ಸ್ಪಷ್ಟಪಡಿಸುತ್ತವೆ. ಆದುದರಿಂದ ಮತಪ್ರದರ್ಶನವೇಕೆ? ಅದೂ ಅಲ್ಲದೆ, ಗೋವೆಯಲ್ಲಿ ಪೋರ್ಚುಗೀಜರ ಆಳಿಕೆ ಕೊನೆಗೊಳ್ಳಬೇಕು ಎಂಬುದಕ್ಕಾಗಿ ಮುಂಬಯಿ, ಕಲ್ಕತ್ತಗಳಲ್ಲಿ ಗೊಂದಲ ನಡೆಸಿದರೆ ಬರುವ ಲಾಭವೇನು?

ಮುಂಬಯಿಯ ಮುಖ್ಯಮಂತ್ರಿ ಶ್ರೀ ಮೊರಾರಜಿ ದೇಸಾಯರು "ಮತಪ್ರದರ್ಶನ ಯಾರವಿರುದ್ಧ?" ಎಂದು ಕೇಳಿದಾಗ ಇದನ್ನೆ ಧ್ವನಿಸಿದರು. ಸರಕಾರದ ಧುರೀಣರಿಗೆ ಮಾತ್ರ ಅಪ್ರಿಯವಾದ ಸಂಗತಿ ಇದಾಗಿಲ್ಲ—ಮುಂಬಯಿಯ ಪ್ರಜಾಸಮಾಜವಾದಿ ಧುರೀಣರಾದ ಶ್ರೀ ಪುರುಷೋತ್ತಮದಾಸ ತ್ರಿಕಮದಾಸರು ಸಹ "ಎಲ್ಲ ಹರತಾಳಗಳಲ್ಲಿ-ವಿಶೇಷವಾಗಿ ಮುಂಬಯಿಯಲ್ಲಿ ಪರಿಸ್ಥಿತಿಯು ಪ್ರಕೋಪಕ್ಕೆ ಹೋಗುತ್ತದೆ. ಕಾಕಪೋಕರು ಕರ್ಕಶ ಘೋಷಣೆ ನಡೆಸುವರಲ್ಲದೆ ಹಿಂಸಾಚರಣೆಯನ್ನೂ ಮಾಡುತ್ತಾರೆ. ಆದರೆ ಗೋವೆಯ ವಿರುದ್ಧ ನಡೆಸುವ ನಮ್ಮ ಯುದ್ಧವನ್ನು ನಮ್ಮ ಆಸ್ತಿಪಾಸ್ತಿಗಳಿಗೆಯೇ ಹಾನಿಮಾಡಿ ಮತ್ತು ನಮ್ಮ ಜನರನ್ನೆ ಭಯೋದ್ರೇಕಗಳಿಗೆ ಬಲಿಯಾಗಿಸಿ ನಡೆಸುವುದೆಂತೂ ತಿಳಿಯದು" ಎಂದು ಉದ್ಗಾರ ಹೊರಡಿಸಿ, ಈ ಗೊಂದಲವನ್ನು ನಿಷೇಧಿಸಿದರು.

ನಾವು ಹಿಂಸೆಗಾಗಿ ಹೋಗುತ್ತಿಲ್ಲ—ಅದಕ್ಕಾಗಿ ಮೆರವಣಿಗೆ ತೆಗೆಯುತ್ತಿಲ್ಲ, ಘೋಷಣೆ ಮಾಡುತ್ತಿಲ್ಲ ಎಂದೆಲ್ಲ ಹೇಳುವ ಸಂಭಾವಿತರು, ಜನಸಮೂಹದಲ್ಲಿ ಪೋಕರಿಗಳೂ ಪುಂಡರೂ ಸುಲಭದಲ್ಲಿ ಸೇರಿಕೊಳ್ಳುತ್ತಾರೆ, ತಮ್ಮ ಅಕೃತ್ಯಗಳನ್ನು ಅನಿಯಂತ್ರಿತ ರೀತಿಯಲ್ಲಿ ನಡೆಸುತ್ತಾರೆ, ಅವರ ಚಟುವಟಿಕೆ ಅಂಟುರೋಗವಾಗಿ ಉಳಿದವರನ್ನೂ ಉದ್ರಿಕ್ತಗೊಳಿಸಿ ಹಾನಿಕಾರಕ ಕಾರ್ಯಗಳನ್ನು ಮಾಡಿಸುತ್ತದೆ ಎಂಬ ದೂರದ ಪರಿಣಾಮಗಳನ್ನು ಕಡೆಗಣಿಸಬಾರದು ಎಂದು ಈಗಾಗಲೆ ನಡೆದಿರುವ ಗಲಭೆಗಳು ಸ್ಪಷ್ಟಪಡಿಸಿರುತ್ತವೆ. ನಮ್ಮ ಉದ್ದೇಶ ಪವಿತ್ರವಾಗಿರಬಹುದು—ಆದರೆ ಅದನ್ನು ಎಲ್ಲ ಜನರೂ ಒಪ್ಪಿ ನಡೆಯುವರೆಂದಾಗಲಿ, ಎಲ್ಲರಲ್ಲಿಯೂ ಈ ಉದ್ದೇಶದ ಫಲತೆಗೆ ತಕ್ಕುದಾದ ರೀತಿಯಲ್ಲಿ ವ್ಯವಹರಿಸುವ ತಾಳ್ಮೆ, ಸಂಯಮ ಮತ್ತು ದೂರದರ್ಶಿತ್ವವಿದೆಯೆಂದಾಗಲಿ ಭಾವಿಸಕೂಡದು.

ಗೋವೆಗೆ ತೆರಳಿದ್ದ ಐದಾರು ಸಾವಿರ ಸತ್ಯಾಗ್ರಹಿಗಳಲ್ಲಿ ಕೆಲವರು ಗುಪ್ತಚಾರ ವೇಷದ ಗೋಮಾಂತಕರು ಸೇರಿದ್ದರೆಂದೂ ಅವರು ಪೋರ್ಚುಗೀಜ ಅಧಿಕಾರಿಗಳಿಗೆ ಸತ್ಯಾಗ್ರಹಿಗಳ ಗುಟ್ಟನ್ನು ನೀಡುತ್ತಿದ್ದರೆಂದೂ ತಿಳಿದು ಬರುತ್ತದೆ. ಇದೇ ಬಗೆಯ ಅಪಾಯ "ಸಾಮೂಹಿಕ" ರೀತಿಯಲ್ಲಿ ಭಾರತೀಯರು ಸತ್ಯಾಗ್ರಹ ನಡೆಸಿದರೆ ಎದುರಾಗುತ್ತದೆ. ಆಗ ಜನಜಂಗುಳಿಯಲ್ಲಿ ಅಹಿಂಸೆಯಲ್ಲಿ ವಿಶ್ವಾಸವಿಲ್ಲದ, ಮುಖಂಡರ ಮಾತಿಗೆ ವಿಧೇಯರಾಗಿ ನಡೆದುಕೊಳ್ಳದ, ಸ್ವೈರ ವೃತ್ತಿಯ ಅದೂರದರ್ಶಿ ಮುಂಡರು ಸುಲಭದಲ್ಲಿ ಸೇರಿಕೊಳ್ಳಬಲ್ಲರು—ಆಗ ನಮ್ಮ ಸತ್ಯಾಗ್ರಹದ ಸ್ವರೂಪವೇ ಬದಲಾಗುವುದು ನಿಶ್ಚಯ. ಇದಕ್ಕಾಗಿಯೇ ಸರಕಾರ ಸಾಮೂಹಿಕ "ಮೋರ್ಚಾ" ನಡೆಸಲು ವಿರೋಧವಾಗಿದೆಎಂದು ಜನರು— ವಿವೇಕಶೀಲರು — ತಿಳಿದು ಕೊಳ್ಳಲಿ!

—ಕಾರ್ತಿಕೇಯ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

Edited, Printed & Published By K. H. Shetty, at the Navayuga Press, Udipi S. India

ಇಟಲಿಗೆ ನೆಹರುಗಳ ಭೇಟಿ

ಗೋವೆಯ ಪ್ರಶ್ನೆಯಲ್ಲಿ ಧಾರ್ಮಿಕತೆ ಇಲ್ಲ ಎಂದು ಕ್ರೈಸ್ತ ಜಗದ್ಗುರು ಪೋಪರು ಸ್ಪಷ್ಟವಾಗಿ ಸಾರುವುದಕ್ಕೆ ನೆರವಾದ ನೆಹರುಗಳ ರೋಂ ಸಂದರ್ಶನವು ಇಟಲಿ ಸರಕಾರದೊಡನೆ ಭಾರತದ ಸಂಬಂಧವನ್ನು ಇನ್ನಷ್ಟು ಸೌಹಾರ್ದಮಯಗೊಳಿಸಲೂ ಸಹಾಯಕವಾಯಿತು. ಪ್ರಧಾನಿಗಳ ಈ ಚೈತ್ರ ಯಾತ್ರೆಯನ್ನು "ಪ್ರೇಮ ದಿಗ್ವಿಜಯ" ಎಂದು ರಾಜಾಜಿ ಮೊನ್ನೆ ಮುಂಬಯಿಯಲ್ಲಿ ಶ್ಲಾಘಿಸಿದರು. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಕೋವಿ ಮತ್ತು ಸಿಡಿ ಮದ್ದುಗಳ ಉಪಯೋಗವನ್ನು ತ್ಯಜಿಸಲು ಪ್ರಯತ್ನಿಸುವ ಭಾರತಕ್ಕೆ ಇದು ತಕ್ಕ ಹೊಗಳಿಕೆ ಇಲ್ಲಿಯ ಚಿತ್ರಗಳಲ್ಲಿ(ಮೇಲೆ) ಇಟಲಿಯ ಮಧ್ಯ ಮತ್ತು ದೂರ ಪ್ರಾಚ್ಯ ಸಂಘದ ಪ್ರೊ. ಟ್ಯೂಸಿ ಪ್ರೀತಿಯ ಕಾಣಿಕೆಯಾಗಿ ಪೋಂಬತ್ತಿಯ ನಿಲುವನ್ನು ಹೊಡುತ್ತಿರುವುದು ಮತ್ತು (ಬದಿಗೆ) ಇಟಲಿಯ ಅಧ್ಯಕ್ಷ ಸಿನಾರ್ ಗಿಯೋವಾನಿ ಗ್ರಾಂಕಿ ಹಾರ್ದಿಕ ಸ್ವಾಗತವನ್ನು ನೀಡುತ್ತಿರುವುದು ಕಂಡು ಬರುತ್ತದೆ.

(೧ನೇ ಪುಟದಿಂದ)

ಅವರು ಕೆಲವು ಕಟು ವಾಕ್ಯಗಳನ್ನೂ ಭಾರತೀಯರ ವರ್ತನೆಯ ವಿಷಯದಲ್ಲಿ ಆಡುವಂತಾಯಿತು—"ಇದು ಕೆಲವು ಪ್ರಶ್ನೆಗಳನ್ನು ಮುಂದೆ ತರುತ್ತದೆ: ನಮ್ಮ ಅಂತಾರಾಷ್ಟ್ರೀಯ ಮಹತ್ವದ ಸಮಸ್ಯೆಗಳನ್ನು ಕುರಿತಾದ ಧೋರಣೆಯನ್ನು ಸಂತೆಯಲ್ಲಿ ನೆರೆದ ಜನರ ನಿರ್ದೇಶದಂತೆ ರೂಪಿಸುವ ಅಗತ್ಯ ಬರುವುದಾದರೆ ಆಗ ಈ ಧೋರಣೆಗೆ ಹೊಣೆಗಾರನಾದ ವ್ಯಕ್ತಿಗೆ ತನ್ನ ಕೆಲಸ ಮುಂದುವರಿಸಿಕೊಂಡು ಹೋಗುವುದೇ ಅಸಾಧ್ಯವಾದೀತು" ಎಂದರು ನೆಹರು.

"ಭಾರತ ಸರಕಾರವು ವಿದೇಶಗಳ ರಾಯಭಾರ ವರ್ಗಕ್ಕೆ ರಕ್ಷಣೆ ಕೊಡುವಲ್ಲಿ ಮತ್ತು ಗೌರವವನ್ನು ತೋರಿಸುವಲ್ಲಿ ತನ್ನ ಜನರನ್ನು ನಂಬುವ ಹಾಗಿಲ್ಲದಿದ್ದರೆ, ಅದು ಭಾರತದ ಜನತೆ ಮತ್ತು ಸರಕಾರದ ಧವಳ ಕೀರ್ತಿಗೆ ಹೇಳಿಸಿದ ವಿಷಯವಲ್ಲ" ಎಂದು ನೆಹರು ಗದ್ಗದಿತ ಕಂಠದಿಂದ ನುಡಿದರು. ನಮಗೆ ಇನ್ನೊಂದು ರಾಷ್ಟ್ರದ ಅಪಮಾನ ಮಾಡುವ ಅಧಿಕಾರವಿಲ್ಲ ಎಂಬ ಸತ್ಯವನ್ನು ಮತ ಪ್ರದರ್ಶಕರು ಮನವರಿಕೆ ಮಾಡಿಕೊಳ್ಳದೆ ಹೋಗಿ ಭಾರತವನ್ನು ಲೋಕ ನಿಂದಿಸುವಂತೆ ನಡೆದುಕೊಂಡರು ಎಂದರೆ ನಮ್ಮ ಘನತೆ ಎಲ್ಲಿ ಉಳಿಯಿತು? ನಮ್ಮ ರಾಷ್ಟ್ರ ಧ್ವಜದ ಅಪಮಾನವನ್ನು ಸಹಿಸದ ನಾವು ಪೋರ್ಚುಗೀಜರ ಧ್ವಜವನ್ನು ತುಳಿಯುವ ಆನಂದದಲ್ಲಿ ಭಾಗಿಯಾಗುವ ಅಧಿಕಾರ ಪಡೆದಿದ್ದೇವೆಯೆ?—ಎಂದಿಗೂ ಇಲ್ಲ.

ಮತಪ್ರದರ್ಶನದ ಅಗತ್ಯವಾದರೂ ಇತ್ತೆ—ಎಂಬ ಪ್ರಶ್ನೆಯೂ ಇಲ್ಲಿ ಉದ್ಭವಿಸುತ್ತದೆ. ಯಾರಿಗೆ ಬುದ್ಧಿಹೇಳಲು ಈ ಪ್ರದರ್ಶನ? ಗೋವೆಯ ಕಡೆಗೆ ಜನರ ಗಮನ ತಿರುಗಿಸುವುದೇ ಉದ್ದೇಶವಾಗಿದ್ದರೆ, ಅದಕ್ಕೆ ಹಿಂಸಾಚರಣೆಗೆ ತೊಡಗುವ ಅಗತ್ಯವಿದ್ದಿಲ್ಲ; ಸರಕಾರದ ಮಟ್ಟಗಂತೂ ಜನರಲ್ಲಿ ಇರುವುದಕ್ಕಿಂತ ಹೆಚ್ಚಾದ ಆಸಕ್ತಿಯು ಗೋವೆಯ ವಿಷಯದಲ್ಲಿದೆ ಎಂಬುದನ್ನು ಧುರೀಣರು ಪದೇ ಪದೇ ಮಾಡಿರುವ ಭಾಷಣಗಳು ಸ್ಪಷ್ಟಪಡಿಸುತ್ತವೆ. ಆದುದರಿಂದ ಮತಪ್ರದರ್ಶನವೇಕೆ? ಅದೂ ಅಲ್ಲದೆ, ಗೋವೆಯಲ್ಲಿ ಪೋರ್ಚುಗೀಜರ ಆಳಿಕೆ ಕೊನೆಗೊಳ್ಳಬೇಕು ಎಂಬುದಕ್ಕಾಗಿ ಮುಂಬಯಿ, ಕಲ್ಕತ್ತಗಳಲ್ಲಿ ಗೊಂದಲ ನಡೆಸಿದರೆ ಬರುವ ಲಾಭವೇನು?

ಮುಂಬಯಿಯ ಮುಖ್ಯಮಂತ್ರಿ ಶ್ರೀ ಮುರಾರಜಿ ದೇಸಾಯರು "ಮತಪ್ರದರ್ಶನ ಯಾರವಿರುದ್ಧ?" ಎಂದು ಕೇಳಿದಾಗ ಇದನ್ನೆ ಧ್ವನಿಸಿದರು. ಸರಕಾರದ ಧುರೀಣರಿಗೆ ಮಾತ್ರ ಅಪ್ರಿಯವಾದ ಸಂಗತಿ ಇದಾಗಿಲ್ಲ—ಮುಂಬಯಿಯ ಪ್ರಜಾಸಮಾಜವಾದಿ ಧುರೀಣರಾದ ಶ್ರೀ ಪುರುಷೋತ್ತಮದಾಸ ತ್ರಿಕಮದಾಸರು ಸಹ "ಎಲ್ಲ ಹರತಾಳಗಳಲ್ಲಿ—ವಿಶೇಷವಾಗಿ ಮುಂಬಯಿಯಲ್ಲಿ ಪರಿಸ್ಥಿತಿಯು ಪ್ರಕೋಪಕ್ಕೆ ಹೋಗುತ್ತದೆ. ಕಾಕಪೋಕರು ಕರ್ಕಶ ಘೋಷಣೆ ನಡೆಸುವರಲ್ಲದೆ ಹಿಂಸಾಚರಣೆಯನ್ನೂ ಮಾಡುತ್ತಾರೆ. ಆದರೆ ಗೋವೆಯ ವಿರುದ್ಧ ನಡೆಸುವ ನಮ್ಮ ಯುದ್ಧವನ್ನು ನಮ್ಮ ಆಸ್ತಿಪಾಸ್ತಿಗಳಿಗೆಯೇ ಹಾನಿಮಾಡಿ ಮತ್ತು ನಮ್ಮ ಜನರನ್ನೆ ಭಯೋದ್ರೇಕಗಳಿಗೆ ಬಲಿಯಾಗಿಸಿ ನಡೆಸುವುದೆಂತೊ ತಿಳಿಯದು" ಎಂದು ಉದ್ಗಾರ ಹೊರಡಿಸಿ, ಈ ಗೊಂದಲವನ್ನು ನಿಷೇಧಿಸಿದರು.

ನಾವು ಹಿಂಸೆಗಾಗಿ ಹೋಗುತ್ತಿಲ್ಲ—ಅದಕ್ಕಾಗಿ ಮೆರವಣಿಗೆ ತೆಗೆಯುತ್ತಿಲ್ಲ, ಘೋಷಣೆ ಮಾಡುತ್ತಿಲ್ಲ ಎಂದೆಲ್ಲ ಹೇಳುವ ಸಂಭಾವಿತರು, ಜನಸಮೂಹದಲ್ಲಿ ಪೋಕರಿಗಳೂ ಪುಂಡರೂ ಸುಲಭದಲ್ಲಿ ಸೇರಿಕೊಳ್ಳುತ್ತಾರೆ, ತಮ್ಮ ಆಕೃತ್ಯಗಳನ್ನು ಅನಿಯಂತ್ರಿತ ರೀತಿಯಲ್ಲಿ ನಡೆಸುತ್ತಾರೆ, ಅವರ ಚಟುವಟಿಕೆ ಕಂಟುರೋಗವಾಗಿ ಉಳಿದವರನ್ನೂ ಉದ್ರಿಕ್ತಗೊಳಿಸಿ ಹಾನಿಕಾರಕ ಕಾರ್ಯಗಳನ್ನು ಮಾಡಿಸುತ್ತದೆ ಎಂಬ ದೂರದ ಪರಿಣಾಮಗಳನ್ನು ಕಡೆಗಣಿಸಬಾರದು ಎಂದು ಈಗಾಗಲೆ ನಡೆದಿರುವ ಗಲಭೆಗಳು ಸ್ಪಷ್ಟಪಡಿಸಿರುತ್ತವೆ. ನಮ್ಮ ಉದ್ದೇಶ ಪವಿತ್ರವಾಗಿರಬಹುದು—ಆದರೆ ಅದನ್ನು ಎಲ್ಲ ಜನರೂ ಒಪ್ಪಿ ನಡೆಯುವರೆಂದಾಗಲಿ, ಎಲ್ಲರಲ್ಲಿಯೂ ಈ ಉದ್ದೇಶದ ಘನತೆಗೆ ತಕ್ಕದಾದ ರೀತಿಯಲ್ಲಿ ವ್ಯವಹರಿಸುವ ತಾಳ್ಮೆ, ಸಂಯಮ ಮತ್ತು ದೂರದರ್ಶಿತ್ವವಿದೆಯೆಂದಾಗಲಿ ಭಾವಿಸಕೂಡದು.

ಗೋವೆಗೆ ತೆರಳಿದ್ದ ಐದಾರು ಸಾವಿರ ಸತ್ಯಾಗ್ರಹಿಗಳಲ್ಲಿ ಕೆಲವರು ಗುಪ್ತಚಾರ ವೇಷದ ಗೋಮಾಂತಕರು ಸೇರಿದ್ದರೆಂದೂ ಅವರು ಪೋರ್ಚುಗೀಜ ಅಧಿಕಾರಿಗಳಿಗೆ ಸತ್ಯಾಗ್ರಹಿಗಳ ಗುಟ್ಟನ್ನು ನೀಡುತ್ತಿದ್ದರೆಂದೂ ತಿಳಿದು ಬರುತ್ತದೆ. ಇದೇ ಬಗೆಯ ಅಪಾಯ "ಸಾಮೂಹಿಕ" ರೀತಿಯಲ್ಲಿ ಭಾರತೀಯರು ಸತ್ಯಾಗ್ರಹ ನಡೆಸಿದರೆ ಎದುರಾಗುತ್ತದೆ. ಆಗ ಜನಜಂಗುಳಿಯಲ್ಲಿ ಅಹಿಂಸೆಯಲ್ಲಿ ವಿಶ್ವಾಸವಿಲ್ಲದ, ಮುಖಂಡರ ಮಾತಿಗೆ ವಿಧೇಯರಾಗಿ ನಡೆದುಕೊಳ್ಳದ, ಸ್ವೈರ ವೃತ್ತಿಯ ಅದೂರದರ್ಶಿ ಪುಂಡರು ಸುಲಭದಲ್ಲಿ ಸೇರಿಕೊಳ್ಳಬಲ್ಲರು—ಆಗ ನಮ್ಮ ಸತ್ಯಾಗ್ರಹದ ಸ್ವರೂಪವೇ ಬದಲಾಗುವುದು ನಿಶ್ಚಯ. ಇದಕ್ಕಾಗಿಯೇ ಸರಕಾರಿ ಸಾಮೂಹಿಕ "ಮೋರ್ಚಾ" ನಡೆಸಲು ವಿರೋಧವಾಗಿದೆಎಂದು ಜನರು— ವಿವೇಕಶೀಲರು — ತಿಳಿದು ಕೊಳ್ಳಲಿ!

—ಕಾರ್ತಿಕೇಯ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

Edited, Printed & Published By K. H. Shetty, at the Navayuga Press, Udipi S. India

ನಡವಳಿಕೆ

Sl No	Weeks	No of pages
1)	1-9-1955	12
2)	8-9-1955	12
3)	15-9-1955	12
4)	22-9-1955	12
5)	29-9-1955	12
6)	6-10-1955	12
7)	13-10-1955	12
8)	20-10-1955	12
9)	27-10-1955	12
10)	3-11-1955	12
11)	10-11-1955	12
12)	17-11-1955	12
13)	24-11-1955	12
14)	1-12-1955	12
15)	8-12-1955	12
16)	15-12-1955	12
17)	22-12-1955	12
18)	5-1-1955	12
19)	12-1-1955	12
20)	19-1-1955	12
		240

ನವಯುಗ

ಸಂಪುಟ ೩೫ — ಉಡುಪಿ, 1—9—1955 — ಸಂಚಿಕೆ ೧

VOL. 35 — NO. 1

ಚಾಟಿಯೇಟಿನ ಕೆಡುಕು

ರಾಜ್ಯ ಸಭೆಯು ಮಹತ್ವದ ಮಸೂದೆಯೊಂದನ್ನು ದಿನಾಂಕ ೨೨ರಂದು ಸ್ವೀಕರಿಸಿತು. ಇದರನ್ವಯ ಚಾಟಿಯೇಟಿನ ಶಿಕ್ಷೆಯು ಇನ್ನು ಮುಂದೆ ರದ್ದಾಗುತ್ತದೆ.

ಚಾಟಿಯೇಟನ್ನು ಶಿಕ್ಷೆಯ ವಿಧಾನ ಎಂಬುದಾಗಿ ಪರಿಗಣಿಸಿದ ದಿನಗಳು ಹಳೆಯ ಕಾಲಕ್ಕೆ ಸೇರಿ ಹೋಗಿವೆ. ನಮ್ಮ ದಂಡ ನೀತಿಯ ಪುಸ್ತಕದಲ್ಲಿ ಈ ಶಿಕ್ಷೆ ಇಷ್ಟರ ವರೆಗೆ ಉಳಿದಿದ್ದರೂ ಇತ್ತೀಚೆಯ ಕೆಲ ವರ್ಷಗಳಲ್ಲಿ ಚಾಟಿಯೇಟಿನ ಶಿಕ್ಷೆ ವಿಧಿಸಿದ ಪ್ರಸಂಗಗಳು ಬಹಳ ವಿರಳವಾಗಿವೆ.

ಉದಾಹರಣೆಗೆ ೧೯೫೩ನೇ ವರ್ಷದಲ್ಲಿ ಮುಂಬಯಿ ರಾಜ್ಯದಲ್ಲಿ ೪೦೦೨೭ ಅಪರಾಧ ಘಟಿಸಿತು; ಇವುಗಳ ಪರಿಣಾಮವಾಗಿ ಚಾಟಿಯೇಟಿನ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಕೇವಲ ೪೪. ಬೇರೆ ರಾಜ್ಯಗಳಲ್ಲಿ ಸಹ ಕೆಲವು ಲಕ್ಷಗಳ ವರೆಗೆ ಅಪರಾಧ ಘಟಿಸಿರುವಾಗ ಚಾಟಿಯೇಟಿನ ದಂಡನೆಗೆ ಅರ್ಹರೆಂದು ನ್ಯಾಯಾಲಯ ತೀರ್ಮಾನಿಸಿದ ಜನರ ಸಂಖ್ಯೆ ೧೫೫೩ ಮಾತ್ರ.

ಬ್ರಿಟಿಷರು ದಂಡ ನೀತಿಯ ಪುಸ್ತಕದಲ್ಲಿ ಚಾಟಿಯೇಟಿಗೆ ವಿಶಿಷ್ಟ ಸ್ಥಾನವನ್ನು ನೀಡಿದರು; ೧೯೦೯ರಲ್ಲಿ ಚಾಟಿಯೇಟನ್ನು ವಿಧಿಸಬಹುದಾದ ಅಪರಾಧಗಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ಶಾಸನ ಮಾಡಲಾಯಿತು. ಈಗ ಚಾಟಿಯೇಟನ್ನು ವಿಧಿಸುವುದು ಅನಾಗರಿಕ, ಪಾಶವಿಕ ಹಾಗು ಕ್ರೂರ ಕೃತ್ಯ ಎಂಬುದಾಗಿ ಪರಿಗಣಿಸಲ್ಪಡುತ್ತದೆ. ಸರಕಾರ ಇದನ್ನು ಮನಗಂಡು ಹೊಸ ಮಸೂದೆಯನ್ನು ತಂದಿದೆ.

ಅಹಿಂಸೆಯ ಆಚರಣೆಯು ಅದ್ಭುತ ರೀತಿಯಲ್ಲಿ ಸತ್ಪರಿಣಾಮ ಮಾಡುವುದೆಂದು ವಿಶ್ವಾಸವನ್ನು ವ್ಯಕ್ತಪಡಿಸಿದ ಗಾಂಧೀಜಿಯ ಈ ನಾಡಿನಲ್ಲಿ ವೈಷಮ್ಯಭಾವವನ್ನೂ ಮನಃಕ್ಲೇಶವನ್ನೂ ತೀವ್ರಭಾಗಿಸುವ ಶಿಕ್ಷಾ ವಿಧಾನವಾದ ಚಾಟಿಯೇಟಿಗೆ ಎಡೆಕೊಡುವುದು ಸಲ್ಲದ ವಿಚಾರ. ಕೇಂದ್ರ ಸರಕಾರ ಈ ದಿಸೆಯಲ್ಲಿ ಇಟ್ಟಿರುವ ಹೆಜ್ಜೆಯು ಅಪರಾಧಿಗಳ ಸುಧಾರಣೆಗೆ ಬಹಳವಾಗಿ ನೆರವಾದೀತು.

ಕ್ರೂರ ಶಿಕ್ಷೆಯು ಹೆದರಿಕೆ ಇಲ್ಲದಿದ್ದರೆ ಅಪರಾಧಗಳು ಕಡಿಮೆಯಾಗಲಿಕ್ಕಿಲ್ಲ ಎನ್ನುವವರು ಈಗಲೂ ಕೆಲವರಿದ್ದಾರೆ; ಮರಣ ದಂಡನೆ ವಿಧಿಸುವುದು ಮತ್ತು ಗೋಳೀಬಾರು ನಡೆಸುವುದು ಅನಾಗರಿಕವಲ್ಲದಿದ್ದರೆ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸುವುದು ಅಗತ್ಯವಿಲ್ಲ ಎನ್ನುವವರೂ ಇದ್ದಾರೆ. ಕೆಲವು ವಿಶಿಷ್ಟ ಅಪರಾಧಗಳಿಗೆ ಚಾಟಿಯೇಟನ್ನು ಕೊಡುವುದೇ ಸತ್ಪರಿಣಾಮ ಮಾಡಬಲ್ಲ ದಂಡನೆ ಎಂದೂ ಕೆಲವರ ಅಭಿಪ್ರಾಯ.

ಲೈಂಗಿಕ ಅಪರಾಧಗಳು, ಹೆಂಗಸರ ಮೇಲೆ ಅತ್ಯಾಚಾರ, ಹುಡುಗಿಯರಿಗೆ ಕೊಡುವ ಕೀಟಲೆ ಇತ್ಯಾದಿಗಳಲ್ಲಿ ಚಾಟಿಯೇಟಿನ ಶಿಕ್ಷೆಯನ್ನು ವಿಧಿಸುವುದರಿಂದಲೇ ಅಪರಾಧಿಯ ನೈತಿಕ ಬುದ್ಧಿಯನ್ನು ಜಾಗೃತವಾಗಿಟ್ಟು, ಸಮಾಜ ಹಾಳಾಗದಂತೆ ತಡೆಯುವುದು ಸಾಧ್ಯ ಎನ್ನಲಾಗುತ್ತದೆ. ಮುಂದರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹ ಈ ವಿಧಾನ ರೂಢಿಯಲ್ಲಿದೆ ಎನ್ನುತ್ತಾ ಅಮೇರಿಕದ ಡೆಲ್ವಾರಿಯಲ್ಲಿ ಯೋಗ್ಯ ಕಾರಣವಿಲ್ಲದೆ ಹೆಂಡತಿಯನ್ನು ಹೊಡೆಯುವ ಗಂಡನಿಗೆ ಚಾಟಿಯೇಟಿನ ಶಿಕ್ಷೆ ವಿಧಿಸಲ್ಪಡುತ್ತದೆ ಎಂದು ಒಬ್ಬ ಸದಸ್ಯರು ಹೇಳಿರುವುದನ್ನು ಗಮನಿಸಿದರೆ, ನಾವು ಅವರ ಸಟ್ಟೆಯೇ ಎಂದು ತೋರುತ್ತದೆ.

ಆದರೆ ಅಪರಾಧಿಗಳನ್ನು ತಾತ್ಕಾಲಿಕ ಭಯಕ್ಕೆ ಗುರಿಪಡಿಸಿದಷ್ಟಕ್ಕೆ ಸಮಾಜದ ಮತ್ತು ಸರಕಾರದ ಕರ್ತವ್ಯ ನೆರವೇರಿದಂತಾಯಿತೆ ಎಂಬ ಪ್ರಶ್ನೆಗೆ ಇಲ್ಲಿ ಏಳುತ್ತದೆ. ನೈತಿಕ ಸ್ವಾಸ್ಥ್ಯ, ಸಮಾಜದ ಹಿತ ಮುಂತಾದವುಗಳ ರಕ್ಷಣೆಗಾಗಿಯೇ ಅಪರಾಧಿಗಳನ್ನು ನಾವು ಕಾಣುವ ದೃಷ್ಟಿಯಲ್ಲಿ ಸುಧಾರಣೆಯಾಗಬೇಕಾಗಿದೆ ಎಂಬುದೇ ಈಗ ಸಾಮಾನ್ಯವಾಗಿ ಈ ಪ್ರಶ್ನೆಗೆ ಸಿಗುವ ಉತ್ತರ.

ಅಪಾರಾಧಿಗಳನ್ನು ಪುನರ್ನಿರೀಕ್ಷಣ ಗೊಳಿಸುವುದು ಕ್ಷಿಪ್ರದಲ್ಲಿ ಯಶಸ್ಸನ್ನು ತರುವ ಕಾರ್ಯ ವಿಧಾನವಲ್ಲ—ಅಲ್ಲಿ ಸಹನೆಗೂ ಕಾಲಕ್ಕೂ ಮಹತ್ವದ ಪಾತ್ರವನ್ನು ಅಭಿನಯಿಸಲು ಬಿಡಬೇಕಾಗಿದೆ. ಕಾರಾಗೃಹದಲ್ಲಿ, ಏಕಾಂತದಲ್ಲಿ, ಅಪರಾಧಿಗಳನ್ನು ಇಡುವಾಗ, "ಪತ್ತು ಮಂದಿಯೊಡನೆ ಸ್ವೇಚ್ಛೆಯಿಂದ ಕೂಡಿ ನಲಿಯಬಹುದಾಗಿದ್ದ ಜಗತ್ತಿಗೆ—ಸಮಾಜಕ್ಕೆ ನಾವು ಎಷ್ಟು ಕೃತಜ್ಞರಾಗಿ ನಡೆದುಕೊಂಡೆವು!" ಎಂಬ ಪಶ್ಚಾತ್ತಾಪದ ಭಾವನೆ ಈ ಅಪರಾಧಿಗಳಲ್ಲಿ ಮೂಡಬಹುದು—ಅಷ್ಟರಿಂದಲೇ ಕೆಲಸವಾಗದು; ಈ ಪಶ್ಚಾತ್ತಾಪಕ್ಕೋಭೆಯಲ್ಲಿ ಪರ್ಯವಸಾನ ಹೊಂದದಂತೆ ನೋಡುವುದು ಅತ್ಯಗತ್ಯ ಎಂದು ತಜ್ಞರ ಮತ.

ಸಮಾಜದೊಡನೆ ಹೊಂದಿಕೊಂಡು ಬದುಕುವ ಬುದ್ಧಿಯನ್ನು ಜಾಗೃತವಾಗಿಟ್ಟುಕೊಂಡು, ಅಪರಾಧ ಪ್ರವೃತ್ತಿಯನ್ನು ಹಿನ್ನೆಲೆಗೆ ತಳ್ಳಿ, ಸುಸಂಸ್ಕೃತ ವರ್ತನೆಯ ಆಕರ್ಷಣೆಯನ್ನು ಹೆಚ್ಚಿಸ ಬೇಕಾದರೆ, ಪೆಟ್ಟಿಗೆ ಪೆಟ್ಟು ಕೊಡುವ, ಹಿಂಸೆಗೆ ಪ್ರತಿ ಹಿಂಸೆ ಮಾಡುವ ದಂಡ ನೀತಿಯು ಪ್ರಯೋಜಕವಲ್ಲ. ಮರಣ ದಂಡನೆಯಲ್ಲಿ ಅಪರಾಧಿ ಬದುಕಿ ಉಳಿಯುವುದಿಲ್ಲ—ಆದುದರಿಂದ ಆತನು ಕ್ಷೋಭೆಪಟ್ಟು ಸಮಾಜದ ಸೇಡು ತೀರಿಸಲೆಂದು ಇನ್ನಷ್ಟು ಹಿಂಸೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಚಾಟಿಯೇಟಿನ ಬರೆಯು ಒಮ್ಮೆ ತಪ್ಪು ಕೆಲಸ ಮಾಡಿದ ಆ ಅಪರಾಧಿಯು ಬದುಕಿರುವಷ್ಟು ದಿನ ಸಮಾಜದ ವಿರುದ್ಧ ಆವನಿಗೆ ಪ್ರಚೋದನೆ ಕೊಡಬಲ್ಲುದು.

ಆದುದರಿಂದ, ಅದನ್ನು ರದ್ದುಪಡಿಸುವುದೇ ಹಿತಕರ ಎಂಬ ತೀರ್ಮಾನ ಪ್ರಶಂಸನೀಯವಾಗಿದೆ. ಕಾರಾಗಾರಗಳಲ್ಲಿ ಚಾಟಿಯೇಟನ್ನು ಶಿಕ್ಷೆಯಾಗಿ ಕೊಡುವುದನ್ನು ನಿಲ್ಲಿಸಿಬಿಡಬೇಕೆಂದೂ ಇದಕ್ಕೆ ತಕ್ಕ ಶಾಸನವಾದಬೇಕೆಂದೂ ರಾಜ್ಯಸರಕಾರಗಳಿಗೆ ಕೇಂದ್ರ ಸರಕಾರದವರು ನೀಡಿದ ಸಲಹೆಯೂ ಯೋಗ್ಯವಾಗಿದೆ. ಈ ಸೂಚನೆಯು ಕ್ಷಿಪ್ರದಲ್ಲಿಯೇ ಕಾರ್ಯಗತಗೊಂಡರೆ ನಾವು ಹೊಸಕಾಲದೊಡನೆ ಹೆಜ್ಜೆಯಿಟ್ಟು ನಡೆದಂತಾಗುತ್ತದೆ.

ಅಪರಾಧಿಗಳನ್ನು ಕಾಣುವ ಈಗಿನ ನೂತನ ಮನೋಭಾವವನ್ನು ಗೃಹಮಂತ್ರಿ ಪಂತರು ಹೀಗೆ ವರ್ಣಿಸಿದ್ದಾರೆ—"ಒಬ್ಬ ಮನುಷ್ಯನು ಅಪರಾಧವನ್ನು ಮಾಡಿದರೂಸಹ, ಆತನು ರಾಷ್ಟ್ರದ ಪ್ರಜೆಯಾಗಿದ್ದಾನೆಂಬ ಸಂಗತಿಯನ್ನು ಮರೆಯಕೂಡದು. ಇವನನ್ನು ಸಮಾಜದ ಯೋಗ್ಯ ನಾಗರಿಕನಾಗುವಂತೆ, ಅಪರಾಧದ ಕ್ಷೇತ್ರದಿಂದ ಹೊರಗೆಳೆದುಹೊಸಬಗೆಯ ಬದುಕನ್ನು ನಡೆಸುವಂತೆ ನಾವು ಉಪಾಯಗಳನ್ನು ಯೋಚಿಸಬೇಕಾಗಿದೆ." ಏಕೆಂದರೆ ಪ್ರಜೆಗಳು ಉತ್ತಮ ಗುಣಶೀಲ ಸಂಪನ್ನರಾಗಿದ್ದರೆ ಮಾತ್ರ ರಾಷ್ಟ್ರವು ನೆಮ್ಮದಿಯ ಉಸಿರನ್ನು ಬಿಡುತ್ತಿರಬಲ್ಲುದು.

ಬ್ರಿಟನಿನಲ್ಲಿ ಏಳು ವರ್ಷಗಳ ಹಿಂದೆಯೇ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸಲಾಯಿತು. ಶಿಕ್ಷೆ ಅಪರಾಧಿಗೆ ನಾಗರಿಕನ ಹೊಣೆಗಾರಿಕೆಯನ್ನು ತಿಳಿಸಿ ಹೇಳಿ, ಆವನ ಹೃದಯ ಪರಿವರ್ತನೆಯನ್ನು ಸಾಧಿಸಲು ವಿಶೇಷ ಸಿಬಂಧಿಗಳ ನೇಮಕ ಅಲ್ಲಿ ನಡೆಯಿತು. ಮನಪೂರಿಸುವಿಕೆ, ಪ್ರೀತಿ ಪ್ರದರ್ಶನ ಮತ್ತು ಉತ್ತಮ ಕಾರ್ಯದ ಪ್ರಶಂಸೆಗಳಿಂದ ಅಪರಾಧಿಗಳ ಕಾರ್ಯಶಕ್ತಿಯನ್ನು ರಚನಾತ್ಮಕ ರಂಗಕ್ಕೆ ತಿರುಗಿಸುವುದು ಸಾಧ್ಯ ಎಂಬ ಸಂಗತಿಯಲ್ಲಿ ಈಗ ಯಾರಿಗೂ ಸಂಶಯ ಉಳಿದಿಲ್ಲ.

ಭಾರತವು ಸಿದ್ಧಾನವಾಗಿ ಈ ದಿಸೆಯಲ್ಲಿ ಮುನ್ನಡೆಯುತ್ತಿರುವುದು ಸಂತೋಷ. ಹೆತ್ತವರು ಸುಳ್ಳು ಹೇಳುವುದನ್ನು ಕೇಳಿಯೇ ಮಕ್ಕಳೂ ಸುಳ್ಳಾಡುತ್ತಾರೆ ಎಂಬುದನ್ನು ಮನಗಂಡರೆ, ನಮ್ಮದಂದನೀತಿಯ ಎಷ್ಟೋ ಅಂಶಗಳನ್ನು ತಿದ್ದಿಕೊಳ್ಳಬೇಕೆಂದು ಸ್ಪಷ್ಟವಾಗುತ್ತದೆ. ಚಾಟಿಯೇಟಿನ ರದ್ದತಿಗೆಕೊಟ್ಟಒಪ್ಪಿಗೆಯು ತಪ್ಪನ್ನು ಸರಿಪಡಿಸಿಕೊಳ್ಳುವ ನಮ್ಮ ಪ್ರಯತ್ನದಲ್ಲಿ ಉಲ್ಲೇಖನೀಯವಾದ ಘಟ್ಟ. ಇದರ ದೂರಗಾಮಿ ಪರಿಣಾಮಗಳು ಆಶಾದಾಯಕವಾಗಿ ಕಂಡುಬಂದರೆ—ಹಾಗೆ ಕಾಣುವುದೇ ನಿಜ—ನಾವು ಮರಣದಂಡನೆಯನ್ನು ರದ್ದುಪಡಿಸುವ ದಿನವೂ ಸಮೀಪವಾದೀತು.

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು.)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ ನಿಮಗೆ ಸಲಿಸಲಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

21)	26- 1- 1956	44	Republic Day issue.
22)	2- 2- 1956	12	
23)	9- 2- 1956	12	
24)	16- 2- 1956	12	
25)	23- 2- 1956	12	
26)	1- 3- 1956	12	
27)	8- 3- 1956	12	
28)	15- 3- 1956	16	
29)	22- 3- 1956	12	
30)	29- 3- 1956	12	
31)	5- 4- 1956	12	
32)	12- 4- 1956	12	
33)	19- 4- 1956	12	
34)	26- 4- 1956	12	
35)	3- 5- 1956	12	
36)	10- 5- 1956	12	
37)	17- 5- 1956	12	
38)	24- 5- 1956	12	
39)	31- 5- 1956	12	
40)	7- 6- 1956	12	
		276	

ನವಯುಗ

ಸಂಪುಟ ೩೫ — ಉಡುಪಿ, 1—9—1955 — ಸಂಚಿಕೆ ೧

VOL. 35 — NO. 1

ಚಾಟಿಯೇಟಿನ ಕೆಡುಕು

ರಾಜ್ಯ ಸಭೆಯು ಮಹತ್ವದ ಮಸೂದೆಯೊಂದನ್ನು ದಿನಾಂಕ ೨೫ರಂದು ಸ್ವೀಕರಿಸಿತು. ಇದರನ್ವಯ ಚಾಟಿಯೇಟಿನ ಶಿಕ್ಷೆಯು ಇನ್ನು ಮುಂದೆ ರದ್ದಾಗುತ್ತದೆ.

ಚಾಟಿಯೇಟಿನ್ನು ಶಿಕ್ಷೆಯ ವಿಧಾನ ಎಂಬುದಾಗಿ ಪರಿಗಣಿಸಿದ ದಿನಗಳು ಹಳೆಯ ಕಾಲಕ್ಕೆ ಸೇರಿ ಹೋಗಿವೆ ನಮ್ಮ ದಂಡ ನೀತಿಯ ಪುಸ್ತಕದಲ್ಲಿ ಈ ಶಿಕ್ಷೆ ಇಷ್ಟರ ವರೆಗೆ ಉಳಿದಿದ್ದರೂ ಇತ್ತೀಚೆಯ ಕೆಲ ವರ್ಷಗಳಲ್ಲಿ ಚಾಟಿಯೇಟಿನ ಶಿಕ್ಷೆ ವಿಧಿಸಿದ ಪ್ರಸಂಗಗಳು ಬಹಳ ವಿರಳವಾಗಿವೆ.

ಉದಾಹರಣೆಗೆ ೧೯೫೩ನೇ ವರ್ಷದಲ್ಲಿ ಮುಂಬಯಿ ರಾಜ್ಯದಲ್ಲಿ ೮೦೨೭ ಅಪರಾಧ ಘಟಿಸಿತು; ಇವುಗಳ ಪರಿಣಾಮವಾಗಿ ಚಾಟಿಯೇಟಿನ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಕೇವಲ ೪೪. ಬೇರೆ ರಾಜ್ಯಗಳಲ್ಲಿ ಸಹ ಕೆಲವು ಲಕ್ಷಗಳ ವರೆಗೆ ಅಪರಾಧ ಘಟಿಸಿರುವಾಗ ಚಾಟಿಯೇಟಿನ ದಂಡನೆಗೆ ಅರ್ಹರೆಂದು ನ್ಯಾಯಾಲಯ ತೀರ್ಮಾನಿಸಿದ ಜನರ ಸಂಖ್ಯೆ ೧೫೯೫ ಮಾತ್ರ.

ಬ್ರಿಟಿಷರು ದಂಡ ನೀತಿಯ ಪುಸ್ತಕದಲ್ಲಿ ಚಾಟಿಯೇಟಿಗೆ ವಿಶಿಷ್ಟ ಸ್ಥಾನವನ್ನು ನೀಡಿದರು; ೧೯೦೯ರಲ್ಲಿ ಚಾಟಿಯೇಟಿನ್ನು ವಿಧಿಸಬಹುದಾದ ಅಪರಾಧಗಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ಶಾಸನ ಮಾಡಲಾಯಿತು. ಈಗ ಚಾಟಿಯೇಟನ್ನು ವಿಧಿಸುವುದು ಅನಾಗರಿಕ, ಪಾಶವಿಕ ಹಾಗು ಕ್ರೂರ ಕೃತ್ಯ ಎಂಬುದಾಗಿ ಪರಿಗಣಿಸಲ್ಪಡುತ್ತದೆ. ಸರಕಾರ ಇದನ್ನು ಮನಗಂಡು ಹೊಸ ಮಸೂದೆಯನ್ನು ತಂದಿದೆ.

ಅಹಿಂಸೆಯ ಆಚರಣೆಯು ಅದ್ಭುತ ರೀತಿಯಲ್ಲಿ ಸತ್ಪರಿಣಾಮ ಮಾಡುವುದೆಂದು ವಿಶ್ವಾಸವನ್ನು ವ್ಯಕ್ತಪಡಿಸಿದ ಗಾಂಧೀಜಿಯ ಈ ನಾಡಿನಲ್ಲಿ ವೈಷಮ್ಯಭಾವವನ್ನೂ ಮನಃಕ್ಲೇಶವನ್ನೂ ತೀವ್ರವಾಗಿ ಸೂಚಿಸಬಲ್ಲ ಶಿಕ್ಷಾ ವಿಧಾನವಾದ ಚಾಟಿಯೇಟಿಗೆ ಎಡೆಕೊಡುವುದು ಸಲ್ಲದ ವಿಚಾರ. ಕೇಂದ್ರ ಸರಕಾರ ಈ ದಿಸೆಯಲ್ಲಿ ಇಟ್ಟಿರುವ ಹೆಜ್ಜೆಯು ಅಪರಾಧಿಗಳ ಸುಧಾರಣೆಗೆ ಬಹಳವಾಗಿ ನೆರವಾದೀತು.

ಕ್ರೂರ ಶಿಕ್ಷೆಯ ಹೆದರಿಕೆ ಇಲ್ಲದಿದ್ದರೆ ಅಪರಾಧಗಳು ಕಡಿಮೆಯಾಗಲಿಕ್ಕಿಲ್ಲ ಎನ್ನುವವರು ಈಗಲೂ ಕೆಲವರಿದ್ದಾರೆ; ಮರಣ ದಂಡನೆ ವಿಧಿಸುವುದು ಮತ್ತು ಗೋಳೀಬಾರು ನಡೆಸುವುದು ಅನಾಗರಿಕವಲ್ಲದಿದ್ದರೆ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸುವುದು ಅಗತ್ಯವಿಲ್ಲ ಎನ್ನುವವರೂ ಇದ್ದಾರೆ. ಕೆಲವು ವಿಶಿಷ್ಟ ಅಪರಾಧಗಳಿಗೆ ಚಾಟಿಯೇಟನ್ನು ಕೊಡುವುದೇ ಸತ್ಪರಿಣಾಮ ಮಾಡಬಲ್ಲ ದಂಡನೆ ಎಂದೂ ಕೆಲವರ ಅಭಿಪ್ರಾಯ.

ಲೈಂಗಿಕ ಅಪರಾಧಗಳು, ಹೆಂಗಸರ ಮೇಲೆ ಅತ್ಯಾಚಾರ, ಹುಡುಗಿಯರಿಗೆ ಕೊಡುವ ಕೀಟಲೆ ಇತ್ಯಾದಿಗಳಲ್ಲಿ ಚಾಟಿಯೇಟಿನ ಶಿಕ್ಷೆಯನ್ನು ವಿಧಿಸುವುದರಿಂದಲೇ ಅಪರಾಧಿಯ ನೈತಿಕ ಬುದ್ಧಿಯನ್ನು ಜಾಗೃತವಾಗಿಟ್ಟು, ಸಮಾಜ ಹಾಳಾಗದಂತೆ ತಡೆಯುವುದು ಸಾಧ್ಯ ಎನ್ನಲಾಗುತ್ತದೆ. ಮುಂದಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹ ಈ ವಿಧಾನ ರೂಢಿಯಲ್ಲಿದೆ ಎನ್ನುತ್ತಾ ಅಮೇರಿಕದ ಡೆಲ್ಟಾರಿಯಲ್ಲಿ ಯೋಗ್ಯ ಕಾರಣವಿಲ್ಲದೆ ಹೆಂಡತಿಯನ್ನು ಹೊಡೆಯುವ ಗಂಡನಿಗೆ ಚಾಟಿಯೇಟಿನ ಶಿಕ್ಷೆ ವಿಧಿಸಲ್ಪಡುತ್ತದೆ ಎಂದು ಒಬ್ಬ ಸದಸ್ಯರು ಹೇಳಿರುವುದನ್ನು ಗಮನಿಸಿದರೆ, ನಾವು ಅವಸರ ಪಟ್ಟಿದೇ ಎಂದು ತೋರುತ್ತದೆ.

ಆದರೆ ಅಪರಾಧಿಗಳನ್ನು ತಾತ್ಕಾಲಿಕ ಭಯಕ್ಕೆ ಗುರಿಪಡಿಸಿದಷ್ಟಕ್ಕೆ ಸಮಾಜದ ಮತ್ತು ಸರಕಾರದ ಕರ್ತವ್ಯ ನೆರವೇರಿದಂತಾಯಿತೆ ಎಂಬ ಪ್ರಶ್ನೆಗೆ ಇಲ್ಲಿ ಏಳುತ್ತದೆ. ನೈತಿಕ ಸ್ವಾಸ್ಥ್ಯ, ಸಮಾಜದ ಹಿತ ಮುಂತಾದವುಗಳ ರಕ್ಷಣೆಗಾಗಿಯೇ ಅಪರಾಧಿಗಳನ್ನು ನಾವು ಕಾಣುವ ದೃಷ್ಟಿಯಲ್ಲಿ ಸುಧಾರಣೆಯಾಗಬೇಕಾಗಿದೆ ಎಂಬುದೇ ಈಗ ಸಾಮಾನ್ಯವಾಗಿ ಈ ಪ್ರಶ್ನೆಗೆ ಸಿಗುವ ಉತ್ತರ.

ಅಪರಾಧಿಗಳನ್ನು ಪುನರ್ನಿವೇಶನಗೊಳಿಸುವುದು ಕ್ಷಿಪ್ರದಲ್ಲಿ ಯಶಸ್ಸನ್ನು ತರುವ ಕಾರ್ಯ ವಿಧಾನವಲ್ಲ—ಅಲ್ಲಿ ಸಹನೆಗೂ ಕಾಲಕ್ಕೂ ಮಹತ್ವದ ಪಾತ್ರವನ್ನು ಅಭಿನಯಿಸಲು ಬಿಡಬೇಕಾಗಿದೆ. ಕಾರಾಗೃಹದಲ್ಲಿ, ಏಕಾಂತದಲ್ಲಿ, ಅಪರಾಧಿಗಳನ್ನು ಇಡುವಾಗ, "ಹತ್ತು ಮಂದಿಯೊಡನೆ ಸ್ವೇಚ್ಛೆಯಿಂದ ಕೂಡಿ ನಲಿಯಬಹುದಾಗಿದ್ದ ಜಗತ್ತಿಗೆ—ಸಮಾಜಕ್ಕೆ ನಾವು ಎಷ್ಟು ಕೃತಘ್ನರಾಗಿ ನಡೆದುಕೊಂಡೆವು" ಎಂಬ ಪಶ್ಚಾತ್ತಾಪದ ಭಾವನೆ ಈ ಅಪರಾಧಿಗಳಲ್ಲಿ ಮೂಡಬಹುದು—ಅಷ್ಟರಿಂದಲೇ ಕೆಲಸವಾಗದು; ಈ ಪಶ್ಚಾತ್ತಾಪಕ್ಕೋಭೆಯಲ್ಲಿ ಪರ್ಯವಸಾನ ಹೊಂದದಂತೆ ನೋಡುವುದು ಅತ್ಯಗತ್ಯ ಎಂದು ತಜ್ಞರ ಮತ.

ಸಮಾಜದೊಡನೆ ಹೊಂದಿಕೊಂಡು ಬದುಕುವ ಬುದ್ಧಿಯನ್ನು ಜಾಗೃತವಾಗಿಟ್ಟುಕೊಂಡು, ಅಪರಾಧ ಪ್ರವೃತ್ತಿಯನ್ನು ಹಿನ್ನೆಲೆಗೆ ತಳ್ಳಿ, ಸುಸಂಸ್ಕೃತ ವರ್ತನೆಯ ಆಕರ್ಷಣೆಯನ್ನು ಹೆಚ್ಚಿಸ ಬೇಕಾದರೆ, ಪೆಟ್ಟಿಗೆ ಪೆಟ್ಟು ಕೊಡುವ, ಹಿಂಸೆಗೆ ಪ್ರತಿ ಹಿಂಸೆ ಮಾಡುವ ದಂಡ ನೀತಿಯು ಪ್ರಯೋಜಕವಲ್ಲ. ಮರಣ ದಂಡನೆಯಲ್ಲಿ ಅಪರಾಧಿ ಬದುಕಿ ಉಳಿಯುವುದಿಲ್ಲ—ಆದುದರಿಂದ ಆತನು ಕ್ಷೋಭೆಪಟ್ಟು ಸಮಾಜದ ಸೇಡು ತೀರಿಸಲೆಂದು ಇನ್ನಷ್ಟು ಹಿಂಸೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಚಾಟಿಯೇಟಿನ ಬರೆಯು ಒಮ್ಮೆ ತಪ್ಪು ಕೆಲಸ ಮಾಡಿದ ಆ ಅಪರಾಧಿಯು ಬದುಕಿರುವಷ್ಟು ದಿನ ಸಮಾಜದ ವಿರುದ್ಧ ಆತನಿಗೆ ಪ್ರಚೋದನೆ ಕೊಡಬಲ್ಲುದು.

ಆದುದರಿಂದ, ಅದನ್ನು ರದ್ದುಪಡಿಸುವುದೇ ಹಿತಕರ ಎಂಬ ತೀರ್ಮಾನ ಪ್ರಶಂಸನೀಯವಾಗಿದೆ. ಕಾರಾಗಾರಗಳಲ್ಲಿ ಚಾಟಿಯೇಟನ್ನು ಶಿಕ್ಷೆಯಾಗಿ ಕೊಡುವುದನ್ನು ನಿಲ್ಲಿಸಿಬಿಡಬೇಕೆಂದೂ ಇದಕ್ಕೆ ತಕ್ಕ ಶಾಸನಮಾಡಬೇಕೆಂದೂ ರಾಜ್ಯಸರಕಾರಗಳಿಗೆ ಕೇಂದ್ರ ಸರಕಾರದವರು ನೀಡಿದ ಸಲಹೆಯೂ ಯೋಗ್ಯವಾಗಿದೆ. ಈ ಸೂಚನೆಯು ಕ್ಷಿಪ್ರದಲ್ಲಿಯೇ ಕಾರ್ಯಗತಗೊಂಡರೆ ನಾವು ಹೊಸಕಾಲದೊಡನೆ ಹೆಜ್ಜೆಯಿಟ್ಟು ನಡೆದಂತಾಗುತ್ತದೆ.

ಅಪರಾಧಿಗಳನ್ನು ಕಾಣುವ ಈಗಿನ ನೂತನ ಮನೋಭಾವವನ್ನು ಗೃಹಮಂತ್ರಿ ಪಂತರು ಹೀಗೆ ವರ್ಣಿಸಿದ್ದಾರೆ—"ಒಬ್ಬ ಮನುಷ್ಯನು ಅಪರಾಧವನ್ನು ಮಾಡಿದರೂಸಹ, ಆತನು ರಾಷ್ಟ್ರದ ಪ್ರಜೆಯಾಗಿದ್ದಾನೆಂಬ ಸಂಗತಿಯನ್ನು ಮರೆಯಕೂಡದು. ಇವನನ್ನು ಸಮಾಜದ ಯೋಗ್ಯ ನಾಗರಿಕನಾಗುವಂತೆ, ಅಪರಾಧದ ಕ್ಷೇತ್ರದಿಂದ ಹೊರಗೆಳೆದು ಹೊಸಬಗೆಯ ಬದುಕನ್ನು ನಡೆಸುವಂತೆ ನಾವು ಉಪಾಯಗಳನ್ನು ಯೋಜಿಸಬೇಕಾಗಿದೆ." ಏಕೆಂದರೆ ಪ್ರಜೆಗಳು ಉತ್ತಮ ಗುಣಶೀಲ ಸಂಪನ್ನರಾಗಿದ್ದರೆ ಮಾತ್ರ ರಾಷ್ಟ್ರವು ನೆಮ್ಮದಿಯ ಉಸಿರನ್ನು ಬಿಡುತ್ತಿರಬಲ್ಲುದು.

ಬ್ರಿಟನ್ನಿನಲ್ಲಿ ಏಳು ವರ್ಷಗಳ ಹಿಂದೆಯೇ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸಲಾಯಿತು. ಕೆಲ ಅಪರಾಧಿಗೆ ನಾಗರಿಕನ ಹೊಣೆಗಾರಿಕೆಯನ್ನು ತಿಳಿಸಿ ಹೇಳಿ, ಆವನ ಹೃದಯ ಪರಿವರ್ತನೆಯನ್ನು ಸಾಧಿಸಲು ವಿಶೇಷ ಸಿಬಂಧಿಗಳ ನೇಮಕ ಅಲ್ಲಿ ನಡೆಯಿತು. ಮನಪೊಲಿಸುವಿಕೆ, ಪ್ರೀತಿ ಪ್ರದರ್ಶನ ಮತ್ತು ಉತ್ತಮ ಕಾರ್ಯದ ಪ್ರಶಂಸೆಗಳಿಂದ ಅಪರಾಧಿಗಳ ಕಾರ್ಯಶಕ್ತಿಯನ್ನು ರಚನಾತ್ಮಕ ರಂಗಕ್ಕೆ ತಿರುಗಿಸುವುದು ಸಾಧ್ಯ ಎಂಬ ಸಂಗತಿಯಲ್ಲಿ ಈಗ ಯಾರಿಗೂ ಸಂಶಯ ಉಳಿದಿಲ್ಲ.

ಭಾರತವು ನಿಧಾನವಾಗಿ ಈ ದಿಸೆಯಲ್ಲಿ ಮುನ್ನಡೆಯುತ್ತಿರುವುದು ಸಂತೋಷ. ಹೆತ್ತವರು ಸುಳ್ಳು ಹೇಳುವುದನ್ನು ಕೇಳಿಯೇ ಮಕ್ಕಳೂ ಸುಳ್ಳಾಡುತ್ತಾರೆ ಎಂಬುದನ್ನು ಮನಗಂಡರೆ, ನಮ್ಮ ದಂಡನೀತಿಯ ಎಷ್ಟೋ ಅಂಶಗಳನ್ನು ತಿದ್ದಿಕೊಳ್ಳಬೇಕೆಂದು ಸ್ಪಷ್ಟವಾಗುತ್ತದೆ. ಚಾಟಿಯೇಟಿನ ರದ್ದತಿಗೆಕೊಟ್ಟ ಒಪ್ಪಿಗೆಯು ತಪ್ಪನ್ನು ಸರಿಪಡಿಸಿಕೊಳ್ಳುವ ನಮ್ಮ ಪ್ರಯತ್ನದಲ್ಲಿ ಉಲ್ಲೇಖನೀಯವಾದ ಘಟ್ಟ. ಇದರ ದೂರಗಾಮಿ ಪರಿಣಾಮಗಳು ಆಶಾದಾಯಕವಾಗಿ ಕಂಡುಬಂದರೆ—ಹಾಗೆ ಕಾಣುವುದೇ ನಿಜ—ನಾವು ಮರಣದಂಡನೆಯನ್ನು ರದ್ದುಪಡಿಸುವ ದಿನವೂ ಸಮೀಪವಾದೀತು.

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು.)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ
ನಿಮಗೆ ಸವಿೂಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

41)	14-6-1956	12	
42)	21-6-1956	12	
43)	28-6-1956	12	
44)	5-7-1956	12	
45)	12-7-1956	12	
46)	19-7-1956	12	
47)	26-7-1956	12	
48)	2-8-1956	12	
49)	9-8-1956	12	
50)	16-8-1956	28	కిష్టమంత్రిత్వశాఖ సంబంధి
51)	23-8-1956	12	
		148	

1) 240
2) 276
3) 148
664

REGD. NO. M. 3618

Licensed to Post without Prepayment

ನವಯುಗ

ಸಂಪುಟ ೩೫ VOL. 35

ಉಡುಪಿ, 1—9—1955

ಸಂಚಿಕೆ ೧ NO. 1

ಚಾಟಿಯೇಟಿನ ಕೆಡುಕು

ರಾಜ್ಯ ಸಭೆಯು ಮಹತ್ವದ ಮಸೂದೆಯೊಂದನ್ನು ದಿನಾಂಕ ೨೫ರಂದು ಸ್ವೀಕರಿಸಿತು. ಇದರನ್ವಯ ಚಾಟಿಯೇಟಿನ ಶಿಕ್ಷೆಯು ಇನ್ನು ಮುಂದೆ ರದ್ದಾಗುತ್ತದೆ.

ಚಾಟಿಯೇಟನ್ನು ಶಿಕ್ಷೆಯ ವಿಧಾನ ಎಂಬುದಾಗಿ ಪರಿಗಣಿಸಿದ ದಿನಗಳು ಹಳೆಯ ಕಾಲಕ್ಕೆ ಸೇರಿ ಹೋಗಿವೆ ನಮ್ಮ ದಂಡ ನೀತಿಯ ಪುಸ್ತಕದಲ್ಲಿ ಈ ಶಿಕ್ಷೆ ಇಷ್ಟರ ವರೆಗೆ ಉಳಿದಿದ್ದರೂ ಇತ್ತೀಚೆಯ ಕೆಲ ವರ್ಷಗಳಲ್ಲಿ ಚಾಟಿಯೇಟಿನ ಶಿಕ್ಷೆ ವಿಧಿಸಿದ ಪ್ರಸಂಗಗಳು ಬಹಳ ವಿರಳವಾಗಿವೆ.

ಉದಾಹರಣೆಗೆ ೧೯೫೩ನೇ ವರ್ಷದಲ್ಲಿ ಮುಂಬಯಿ ರಾಜ್ಯದಲ್ಲಿ ೮೫೦೨೭ ಅಪರಾಧ ಘಟಿಸಿತು; ಇವುಗಳ ಪರಿಣಾಮವಾಗಿ ಚಾಟಿಯೇಟಿನ ಶಿಕ್ಷೆಗೆ ಗುರಿಯಾದವರ ಸಂಖ್ಯೆ ಕೇವಲ ೪೪. ಬೇರೆ ರಾಜ್ಯಗಳಲ್ಲಿ ಸಹ ಕೆಲವು ಲಕ್ಷಗಳ ವರೆಗೆ ಅಪರಾಧ ಘಟಿಸಿರುವಾಗ ಚಾಟಿಯೇಟಿನ ದಂಡನೆಗೆ ಅರ್ಹರೆಂದು ನ್ಯಾಯಾಲಯ ತೀರ್ಮಾನಿಸಿದ ಜನರ ಸಂಖ್ಯೆ ೧೦೦೫೫ ಮಾತ್ರ.

ಬ್ರಿಟಿಷರು ದಂಡ ನೀತಿಯ ಪುಸ್ತಕದಲ್ಲಿ ಚಾಟಿಯೇಟಿಗೆ ವಿಶಿಷ್ಟ ಸ್ಥಾನವನ್ನು ನೀಡಿದರು; ೧೯೦೯ರಲ್ಲಿ ಚಾಟಿಯೇಟನ್ನು ವಿಧಿಸಬಹುದಾದ ಅಪರಾಧಗಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ಶಾಸನ ಮಾಡಲಾಯಿತು. ಈಗ ಚಾಟಿಯೇಟನ್ನು ವಿಧಿಸುವುದು ಅನಾಗರಿಕ, ಪಾಶವಿಕ ಹಾಗು ಕ್ರೂರ ಕೃತ್ಯ ಎಂಬುದಾಗಿ ಪರಿಗಣಿಸಲ್ಪಡುತ್ತದೆ. ಸರಕಾರ ಇದನ್ನು ಮನಗಂಡು ಹೊಸ ಮಸೂದೆಯನ್ನು ತಂದಿದೆ.

ಅಹಿಂಸೆಯ ಆಚರಣೆಯಲ್ಲಿ, ಅದ್ಭುತ ರೀತಿಯಲ್ಲಿ ಸತ್ಪರಿಣಾಮ ಮಾಡುವುದೆಂದು ವಿಶ್ವಾಸವನ್ನು ವ್ಯಕ್ತಪಡಿಸಿದ ಗಾಂಧೀಜಿಯ ಈ ನಾಡಿನಲ್ಲಿ ವೈಷಮ್ಯಭಾವವನ್ನೂ ಮನಃಕ್ಲೇಶವನ್ನೂ ತೀವ್ರವಾಗಿಸುವ ಶಿಕ್ಷಾ ವಿಧಾನವಾದ ಚಾಟಿಯೇಟಿಗೆ ಎಡೆಕೊಡುವುದು ಸಲ್ಲದ ವಿಚಾರ ಕೇಂದ್ರ ಸರಕಾರ ಈ ದಿಸೆಯಲ್ಲಿ ಇಟ್ಟಿರುವ ಹೆಜ್ಜೆಯು ಅಪರಾಧಿಗಳ ಸುಧಾರಣೆಗೆ ಬಹಳವಾಗಿ ನೆರವಾದೀತು.

ಕ್ರೂರ ಶಿಕ್ಷೆಯ ಹೆದರಿಕೆ ಇಲ್ಲದಿದ್ದರೆ ಅಪರಾಧಗಳು ಕಡಿಮೆಯಾಗಲಿಕ್ಕಿಲ್ಲ ಎನ್ನುವವರು ಈಗಲೂ ಕೆಲವರಿದ್ದಾರೆ; ಮರಣ ದಂಡನೆ ವಿಧಿಸುವುದು ಮತ್ತು ಗೋಳೀಬಾರು ನಡೆಸುವುದು ಅನಾಗರಿಕವಲ್ಲದಿದ್ದರೆ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸುವುದು ಅಗತ್ಯವಿಲ್ಲ ಎನ್ನುವವರೂ ಇದ್ದಾರೆ. ಕೆಲವು ವಿಶಿಷ್ಟ ಅಪರಾಧಗಳಿಗೆ ಚಾಟಿಯೇಟನ್ನು ಕೊಡುವುದೇ ಸತ್ಪರಿಣಾಮ ಮಾಡಬಲ್ಲ ದಂಡನೆ ಎಂದೂ ಕೆಲವರ ಅಭಿಪ್ರಾಯ.

ಲೈಂಗಿಕ ಅಪರಾಧಗಳು, ಹೆಂಗಸರ ಮೇಲೆ ಅತ್ಯಾಚಾರ, ಹುಡುಗಿಯರಿಗೆ ಕೊಡುವ ಕೀಟಲೆ ಇತ್ಯಾದಿಗಳಲ್ಲಿ ಚಾಟಿಯೇಟಿನ ಶಿಕ್ಷೆಯನ್ನು ವಿಧಿಸುವುದರಿಂದಲೇ ಅಪರಾಧಿಯ ನೈತಿಕ ಬುದ್ಧಿಯನ್ನು ಜಾಗೃತವಾಗಿಟ್ಟು, ಸಮಾಜ ಹಾಳಾಗದಂತೆ ತಡೆಯುವುದು ಸಾಧ್ಯ ಎನ್ನಲಾಗುತ್ತದೆ. ಮುಂದಿರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಹ ಈ ವಿಧಾನ ರೂಢಿಯಲ್ಲಿದೆ ಎನ್ನುತ್ತಾ ಅಮೇರಿಕದ ಡೆಲ್ಯಾವೆಯಲ್ಲಿ ಯೋಗ್ಯ ಕಾರಣವಿಲ್ಲದೆ ಹೆಂಡತಿಯನ್ನು ಹೊಡೆಯುವ ಗಂಡನಿಗೆ ಚಾಟಿಯೇಟಿನ ಶಿಕ್ಷೆ ವಿಧಿಸಲ್ಪಡುತ್ತದೆ ಎಂದು ಒಬ್ಬ ಸೆದಸ್ಯರು ಹೇಳಿರುವುದನ್ನು ಗಮನಿಸಿದರೆ, ನಾವು ಅವಸರ ಸಟ್ಟೆವೇ ಎಂದು ತೋರುತ್ತದೆ.

ಆದರೆ ಅಪರಾಧಿಗಳನ್ನು ತಾತ್ಕಾಲಿಕ ಭಯಕ್ಕೆ ಗುರಿಪಡಿಸಿದಷ್ಟಕ್ಕೆ ಸಮಾಜದ ಮತ್ತು ಸರಕಾರದ ಕರ್ತವ್ಯ ನೆರವೇರಿದಂತಾಯಿತೆ ಎಂಬ ಪ್ರಶ್ನೆಗೆ ಇಲ್ಲಿ ಏಳುತ್ತದೆ. ಸೈತಿಕ ಸ್ವಾಸ್ಥ್ಯ, ಸಮಾಜದ ಹಿತ ಮುಂತಾದವುಗಳ ರಕ್ಷಣೆಗಾಗಿಯೇ ಅಪರಾಧಿಗಳನ್ನು ನಾವು ಕಾಣುವ ದೃಷ್ಟಿಯಲ್ಲಿ ಸುಧಾರಣೆಯಾಗಬೇಕಾಗಿದೆ ಎಂಬುದೇ ಈಗ ಸಾಮಾನ್ಯವಾಗಿ ಈ ಪ್ರಶ್ನೆಗೆ ಸಿಗುವ ಉತ್ತರ.

ಅಪಾರಾಧಿಗಳನ್ನು ಪುನರ್ನಿವೇಶನಗೊಳಿಸುವುದು ಕ್ಷಿಪ್ರದಲ್ಲಿ ಯಶಸ್ಸನ್ನು ತರುವ ಕಾರ್ಯ ವಿಧಾನವಲ್ಲ—ಅಲ್ಲಿ ಸಹನೆಗೂ ಕಾಲಕ್ಕೂ ಮಹತ್ವದ ಪಾತ್ರವನ್ನು ಅಭಿನಯಿಸಲು ಬಿಡಬೇಕಾಗಿದೆ. ಕಾರಾಗೃಹದಲ್ಲಿ, ಏಕಾಂತದಲ್ಲಿ, ಅಪರಾಧಿಗಳನ್ನು ಇಡುವಾಗ, "ಹತ್ತು ಮಂದಿಯೊಡನೆ ಸ್ವೇಚ್ಛೆಯಿಂದ ಕೂಡಿ ನಲಿಯಬಹುದಾಗಿದ್ದ ಜಗತ್ತಿಗೆ—ಸಮಾಜಕ್ಕೆ ನಾವು ಎಷ್ಟು ಕೃತಘ್ನರಾಗಿ ನಡೆದುಕೊಂಡೆವು" ಎಂಬ ಪಶ್ಚಾತ್ತಾಪದ ಭಾವನೆ ಈ ಅಪರಾಧಿಗಳಲ್ಲಿ ಮೂಡಬಹುದು—ಅಷ್ಟರಿಂದಲೇ ಕೆಲಸವಾಗದು; ಈ ಪಶ್ಚಾತ್ತಾಪಕ್ಕೋಸ್ಕರ ಪರ್ಯವಸಾನ ಹೊಂದದಂತೆ ನೋಡುವುದು ಅತ್ಯಗತ್ಯ ಎಂದು ತಜ್ಞರ ಮತ.

ಸಮಾಜದೊಡನೆ ಹೊಂದಿಕೊಂಡು ಬದುಕುವ ಬುದ್ಧಿಯನ್ನು ಜಾಗೃತವಾಗಿಟ್ಟುಕೊಂಡು, ಅಪರಾಧ ಪ್ರವೃತ್ತಿಯನ್ನು ಹಿನ್ನೆಲೆಗೆ ತಳ್ಳಿ, ಸುಸಂಸ್ಕೃತ ವರ್ತನೆಯ ಆಕರ್ಷಣೆಯನ್ನು ಹೆಚ್ಚಿಸ ಬೇಕಾದರೆ, ಪೆಟ್ಟಿಗೆ ಪೆಟ್ಟು ಕೊಡುವ ಹಿಂಸೆಗೆ ಪ್ರತಿ ಹಿಂಸೆ ಮಾಡುವ ದಂಡ ನೀತಿಯು ಪ್ರಯೋಜಕವಲ್ಲ. ಮರಣ ದಂಡನೆಯಲ್ಲಿ ಅಪರಾಧಿ ಬದುಕಿ ಉಳಿಯುವುದಿಲ್ಲ—ಆದುದರಿಂದ ಆತನು ಕ್ಷೋಭೆಪಟ್ಟು ಸಮಾಜದ ಸೇಡು ತೀರಿಸಲೆಂದು ಇನ್ನಷ್ಟು ಹಿಂಸೆ ನಡೆಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಚಾಟಿಯೇಟಿನ ಬರೆಯು ಒಮ್ಮೆ ತಪ್ಪು ಕೆಲಸ ಮಾಡಿದ ಆ ಅಪರಾಧಿಯು ಬದುಕಿರುವಷ್ಟು ದಿನ ಸಮಾಜದ ವಿರುದ್ಧ ಅವನಿಗೆ ಪ್ರಚೋದನೆ ಕೊಡಬಲ್ಲುದು.

ಆದುದರಿಂದ, ಅದನ್ನು ರದ್ದುಪಡಿಸುವುದೇ ಹಿತಕರ ಎಂಬ ತೀರ್ಮಾನ ಪ್ರಶಂಸನೀಯವಾಗಿದೆ. ಕಾರಾಗಾರಗಳಲ್ಲಿ ಚಾಟಿಯೇಟನ್ನು ಶಿಕ್ಷೆಯಾಗಿ ಕೊಡುವುದನ್ನು ನಿಲ್ಲಿಸಿಬಿಡಬೇಕೆಂದೂ ಇದಕ್ಕೆ ತಕ್ಕ ಶಾಸನಮಾಡಬೇಕೆಂದೂ ರಾಜ್ಯಸರಕಾರಗಳಿಗೆ ಕೇಂದ್ರ ಸರಕಾರದವರು ನೀಡಿದ ಸಲಹೆಯೂ ಯೋಗ್ಯವಾಗಿದೆ. ಈ ಸೂಚನೆಯು ಕ್ಷಿಪ್ರದಲ್ಲಿಯೇ ಕಾರ್ಯಗತಗೊಂಡರೆ ನಾವು ಹೊಸಕಾಲದೊಡನೆ ಹೆಜ್ಜೆಯಿಟ್ಟು ನಡೆದಂತಾಗುತ್ತದೆ.

ಅಪರಾಧಿಗಳನ್ನು ಕಾಣುವ ಈಗಿನ ನೂತನ ಮನೋಭಾವವನ್ನು ಗೃಹಮಂತ್ರಿ ಪಂತರು ಹೀಗೆ ವರ್ಣಿಸಿದ್ದಾರೆ—"ಒಬ್ಬ ಮನುಷ್ಯನು ಅಪರಾಧವನ್ನು ಮಾಡಿದರೂಸಹ, ಆತನು ರಾಷ್ಟ್ರದ ಪ್ರಜೆಯಾಗಿದ್ದಾನೆಂಬ ಸಂಗತಿಯನ್ನು ಮರೆಯಕೂಡದು. ಇವನನ್ನು ಸಮಾಜದ ಯೋಗ್ಯ ನಾಗರಿಕನಾಗುವಂತೆ, ಅಪರಾಧದ ಕ್ಷೇತ್ರದಿಂದ ಹೊರಗೆಳೆದುಹೊಸಬಗೆಯ ಬದುಕನ್ನು ನಡೆಸುವಂತೆ ನಾವು ಉಪಾಯಗಳನ್ನು ಯೋಜಿಸಬೇಕಾಗಿದೆ." ಏಕೆಂದರೆ ಪ್ರಜೆಗಳು ಉತ್ತಮ ಗುಣಶೀಲ ಸಂಪನ್ನರಾಗಿದ್ದರೆ ಮಾತ್ರ ರಾಷ್ಟ್ರವು ನೆಮ್ಮದಿಯ ಉಸಿರನ್ನು ಬಿಡುತ್ತಿರಬಲ್ಲುದು.

ಬ್ರಿಟನಿನಲ್ಲಿ ಏಳು ವರ್ಷಗಳ ಹಿಂದೆಯೇ ಚಾಟಿಯೇಟಿನ ಶಿಕ್ಷೆಯನ್ನು ರದ್ದುಪಡಿಸಲಾಯಿತು. ಶಿಕ್ಷೆ ಅಪರಾಧಿಗೆ ನಾಗರಿಕನ ಹೊಣೆಗಾರಿಕೆಯನ್ನು ತಿಳಿಸಿ ಹೇಳಿ, ಅವನ ಹೃದಯ ಪರಿವರ್ತನೆಯನ್ನು ಸಾಧಿಸಲು ವಿಶೇಷ ಸಿಬಂಧಿಗಳ ನೇಮಕ ಅಲ್ಲಿ ನಡೆಯಿತು. ಮನಪೊಲಿಸುವಿಕೆ, ಪ್ರೀತಿ ಪ್ರದರ್ಶನ ಮತ್ತು ಉತ್ತಮ ಕಾರ್ಯದ ಪ್ರತಿಸೆಗಳಿಂದ ಅಪರಾಧಿಗಳ ಕಾರ್ಯಶಕ್ತಿಯನ್ನು ರಚನಾತ್ಮಕ ರಂಗಕ್ಕೆ ತಿರುಗಿಸುವುದು ಸಾಧ್ಯ ಎಂಬ ಸಂಗತಿಯಲ್ಲಿ ಈಗ ಯಾರಿಗೂ ಸಂಶಯ ಉಳಿದಿಲ್ಲ.

ಭಾರತವು ಸ್ವಿಧಾನವಾಗಿ ಈ ದಿಸೆಯಲ್ಲಿ ಮುನ್ನಡೆಯುತ್ತಿರುವುದು ಸಂತೋಷ. ಹೆತ್ತವರು ಸುಳ್ಳು ಹೇಳುವುದನ್ನು ಕೇಳಿಯೇ ಮಕ್ಕಳೂ ಸುಳ್ಳಾಡುತ್ತಾರೆ ಎಂಬುದನ್ನು ಮನಗಂಡರೆ, ನಮ್ಮ ದಂಡನೀತಿಯ ಎಷ್ಟೋ ಅಂಶಗಳನ್ನು ತಿದ್ದಿಕೊಳ್ಳಬೇಕೆಂದು ಪ್ರಶ್ನೆವಾಗುತ್ತದೆ. ಚಾಟಿಯೇಟಿನ ರದ್ದತಿಗೆಕೊಟ್ಟಿಒಪ್ಪಿಗೆಯು ತಪ್ಪನ್ನು ಸರಿಪಡಿಸಿಕೊಳ್ಳುವ ನಮ್ಮ ಪ್ರಯತ್ನದಲ್ಲಿ ಉಲ್ಲೇಖನೀಯವಾದ ಘಟ್ಟ. ಇದರ ದೂರಗಾಮಿ ಪರಿಣಾಮಗಳು ಆಶಾದಾಯಕವಾಗಿ ಕಂಡುಬಂದರೆ—ಹಾಗೆ ಆಗಲಿಯವುದೇ ನಿಜ—ನಾವು ಮರಣದಂಡನೆಯನ್ನು ರದ್ದುಪಡಿಸುವ ದಿನವೂ ಸಮೀಪವಾದೀತು.

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು.)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ
ನಿಮಗೆ ಸಮೀಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಶಿಕ್ಷಣ

ಸಮರ್ಥ ನಾಗರಿಕರಾಗಲು ಸಮಾನಾವಕಾಶ

ಭಾರತ ಸರಕಾರದ ಶಿಕ್ಷಣ ಖಾತೆಯ ಕಾರ್ಯದರ್ಶಿಗಳಾಗಿರುವ ಪ್ರೊ. ಹುಮಾಯೂನ ಕಬೀರರ ಅಭಿಮತದಂತೆ, ಪ್ರಜಾಸತ್ತಾತ್ಮಕ ರಾಷ್ಟ್ರದ ಕಲ್ಪನೆಯೇ ವ್ಯಕ್ತಿಗೆ ಕರ್ತವ್ಯ ಭಾರದೊಂದಿಗೆ ಹಕ್ಕು ಬಾಧ್ಯತೆಗಳನ್ನೂ ನೀಡಿತು. ಹಿಂದಿನ ಕಾಲದಲ್ಲಿ ಜನರಿಗೆ ಕರ್ತವ್ಯಗಳು ಮಾತ್ರವಿದ್ದವು; ಹಕ್ಕು ಬಾಧ್ಯತೆಗಳು ಹೆಚ್ಚಿರಲಿಲ್ಲ. ದೇಶದಲ್ಲಿ ಸಮಾಜವಾದಿ ಮಾದರಿಯ ಸಮಾಜರಚನೆಯನ್ನು ನೆಲೆಗೊಳಿಸಬೇಕು ಎಂಬ ಅಭಿಪ್ರಾಯ ಬಲಗೊಂಡ ಗಳಿಗೆಯಿಂದ ಕರ್ತವ್ಯ ಮತ್ತು ಹಕ್ಕುಗಳಲ್ಲಿ ಸಮಾನತೆಯನ್ನು ತರುವ ಪ್ರಯತ್ನ ಮುಂದೊತ್ತಲ್ಪಟ್ಟಿತು.

ಪ್ರಜಾಪ್ರಭುತ್ವದ ಯಶಸ್ಸು

ಎಲ್ಲರನ್ನೂ ಹೊಣೆಯರಿತ ನಾಗರಿಕರಾಗಿ ರೂಪಿಸುವುದರಿಂದ ಮಾತ್ರ ಪ್ರಜಾಪ್ರಭುತ್ವ ಪದ್ಧತಿಯು ಸಾರ್ಥಕವಾಗಬಲ್ಲುದು. ಶಿಕ್ಷಣ ಸೌಲಭ್ಯಗಳ ವಿಸ್ತರಣೆಯನ್ನು ಈ ಉದ್ದೇಶದಿಂದ ಕೈಗೊಳ್ಳುವುದು ಶ್ರೇಯಸ್ಕರ. ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಪ್ರಮಾಣವು ೧೧೦ ಲಕ್ಷದಿಂದ ೨೪೦ ಲಕ್ಷಕ್ಕೆ ಹೆಚ್ಚಿ ಕೊಂಡಿದೆ; ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಲಿಯುವವರ ಸಂಖ್ಯೆಯೂ ದ್ವಿಗುಣಿತವಾಗಿದೆ. ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣೆಯ ಸೇವೆ ಮುಂತಾದವುಗಳಿಂದ ಆದಷ್ಟು ಹೆಚ್ಚು ಗ್ರಾಮಗಳಿಗೆ ಶಿಕ್ಷಣದ ಅನುಕೂಲತೆಗಳನ್ನು ಒದಗಿಸಿ ಕೊಡಲಾಗುತ್ತದೆ; ಆದರೆ, ಈಗಲೂ ಅರೆವಾಸಿಯಷ್ಟು ಶಾಲಾ ಪ್ರಾಯದವರಿಗೆ ಶಿಕ್ಷಣ ದೊರಕುತ್ತಿಲ್ಲ.

ಹೊಸ ಸಮಾಜದ ರಚನೆ

ಪೌರನ ಕನಿಷ್ಠ ಕರ್ತವ್ಯಗಳ ಜ್ಞಾನವನ್ನುಂಟು ಮಾಡಿ, ಅವುಗಳನ್ನು ನಿರ್ವಹಿಸಿಕೊಂಡು ಹೋಗುವುದಕ್ಕೆ ೧೪ ವರ್ಷ ವಯಸ್ಸಿನ ವರೆಗೆ ನಡೆಯುವ ಪ್ರಾಥಮಿಕ ಶಿಕ್ಷಣ ಅತ್ಯವಶ್ಯವಾಗಿದೆ. ಆದರೆ ಕುಟುಂಬದ ಆರ್ಥಿಕ ದುರ್ದೆಶೆಯು ಎಷ್ಟೋ ಮಕ್ಕಳನ್ನು ಹತ್ತಿರ ಶಾಲೆಗಳಿದ್ದರೂ ಅಲ್ಲಿಂದ ದೂರವಿಡುತ್ತದೆ. ಆದುದರಿಂದ ಸಮಾಜವಾದಿ ಮಾದರಿಯ ಹೊಸ ಸಮಾಜದ ರಚನೆಗೆ ಆತುರ ಪಡುವವರು ಪ್ರಾಥಮಿಕ ಶಿಕ್ಷಣವನ್ನಾದರೂ ಉಚಿತವಾಗಿ ಕೊಡಬೇಕಲ್ಲದೆ ವಸ್ತ್ರ ಮತ್ತು ಪುಸ್ತಕಗಳನ್ನು ಒದಗಿಸಿ ಬಡಮಕ್ಕಳಿಗೆ ನೆರವಾಗಬೇಕಾಗುತ್ತದೆ. ಇಂದಿನ ಸಮಾಜದಲ್ಲಿ ಹಿಂದುಳಿದವರೆಂದು ಕರೆಯಲ್ಪಡುತ್ತಿರುವ ಜನರಮಟ್ಟಿಗೆ ಈ ಅವಶ್ಯಕತೆ ಬಹಳ ಹೆಚ್ಚು.

ಅಧ್ಯಾಪಕರ ತಾಪತ್ರಯ

ನಮ್ಮ ದೇಶದಲ್ಲಿ ೧೪ ವರ್ಷ ಪ್ರಾಯದ ವರೆಗೆ ಎಲ್ಲರಿಗೂ ಪ್ರಾಥಮಿಕಶಿಕ್ಷಣವನ್ನೊದಗಿಸುವುದಕ್ಕೆ ೩೦ ಲಕ್ಷ ಅಧ್ಯಾಪಕರು ಹೆಚ್ಚಾಗಿ ಬೇಕಾಗುತ್ತಾರೆಂದು ಅಂದಾಜು. ಇದರಂತೆ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲೂ ಅಧ್ಯಾಪಕರ ಪ್ರಮಾಣ ಸಹಜವಾಗಿ ಹೆಚ್ಚಿಕೊಳ್ಳುತ್ತದೆ. ಆದರೆ ಅಧ್ಯಾಪಕರ ದುಡಿಮೆಗೆ ತಕ್ಕ ಪ್ರತಿಫಲ ಈಗ ಕೊಡಲ್ಪಡುತ್ತಿಲ್ಲ ಎಂಬುದು ಶೋಚನೀಯವಾದ ವಿಷಯ. ಒಳ್ಳೆಯ ತರಬೇತಿಯನ್ನು ನೀಡುವುದರಿಂದ ಅಧ್ಯಾಪಕರ ಯೋಗ್ಯತೆಯನ್ನು ಹೆಚ್ಚಿಸಿ, ಶಿಕ್ಷಣದ ಮಟ್ಟವನ್ನು ಸುಧಾರಿಸಬಹುದು, ಎಂಬುದು ನಿಜ. ಆದರೆ ಇಷ್ಟರಿಂದಲೇ ಕೆಲಸವಾಗದು — ಅವರ ವೇತನ ಪ್ರಮಾಣವನ್ನು ಎತ್ತರಿಸಿ, ಹಂಗು-ದಾಕ್ಷಿಣ್ಯಗಳಿಗೊಳಗಾಗದೆ ಗೌರವಯುಕ್ತ ಜೀವನನಡೆಸಲು ಅಧ್ಯಾಪಕರಿಗೆ ಅನುಕೂಲತೆ ಕಲ್ಪಿಸಿಕೊಡುವುದು ರಾಷ್ಟ್ರದ ಪರಮ ಕರ್ತವ್ಯ.

ಏಶ್ಯದ ವ್ಯಾವಸಾಯಿಕ ತಂತ್ರ

ಸುಧಾರಣೆಯ ಆಶೆಗೆ ಎಡೆಕೊಡುವ ಮನೋಭಾವ

ವ್ಯವಸಾಯ ಕ್ಷೇತ್ರದ ಆರ್ಥಿಕ ತಜ್ಞರು ಹೆಲ್ಸಿಂಕಿಯಲ್ಲಿ ಈಚೆಗೆ ಅಂತಾರಾಷ್ಟ್ರೀಯ ಸ್ವರೂಪದ ಸಮ್ಮೇಳನವೊಂದರಲ್ಲಿ ನೆರೆದರು. ಭಾರತದ ಪರವಾಗಿ ಕೇಂದ್ರ ಆಹಾರ ಮತ್ತು ವ್ಯವಸಾಯ ಶಾಖೆಯ ಹಣಕಾಸಿನ ಹಾಗು ಸಂಖ್ಯಾ ವಿಭಾಗದ ಸಲಹೆಗಾರರಾದ ಡಾ. ಎಸ್. ಆರ್. ಸೇನ್ ಇದರಲ್ಲಿ ಭಾಗವಹಿಸಿದರಲ್ಲದೆ, ಏಶ್ಯದ ವ್ಯವಸಾಯದಲ್ಲಿ ತಾಂತ್ರಿಕ ಪ್ರಗತಿಯನ್ನು ವಿವರಿಸಿ ಮಾತನಾಡಿದರು. ಒಂದು ಕಾಲದಲ್ಲಿ ಪೂರ್ವವು ಎಂದೂ ಬದಲಾಗದ ವಲಯ ಎನ್ನಲ್ಪಡುತ್ತಿದ್ದರೂ ಇಂದು ಅದು ವ್ಯವಸಾಯಕ್ಷೇತ್ರವನ್ನೊಳಗೊಂಡು ಪ್ರತಿಯೊಂದೂ ರಂಗದಲ್ಲಿ ಪರಿವರ್ತನೆಯನ್ನು ಅಳವಡಿಸಿಕೊಳ್ಳುತ್ತಿರುವುದನ್ನು ಕಾಣಬಹುದು — ಎಂಬ ಸೇನರ ಮಾತು ಅರ್ಥಪೂರ್ಣವಾಗಿದೆ; ನವಯುಗದ ಸಂದೇಶ ನೀಡುವಂತಿದೆ — ಎಂದರೂ ಸಲ್ಲುತ್ತದೆ.

ಬದಲಾವಣೆಯ ಮುಖ

ಚಿಕ್ಕ ಸುಟ್ಟ ಯಂತ್ರಗಳ ಬಳಕೆ, ಸುಧಾರಿತ ತಾಂತ್ರಿಕ ವಿಧಾನ, ಫಲವರ್ಧಕ ಗೊಬ್ಬರಗಳ ಉಪಯೋಗ, ಉತ್ತಮ ಬೀಜಗಳಲ್ಲಿ ಆಸಕ್ತಿ, ಬೆಳೆಗಳ ಪರಿವರ್ತನೆ, ಸಾಗುವಳಿಯಲ್ಲಿ ಸಹಕಾರದ ಮನೋಭಾವ — ಇತ್ಯಾದಿ ನಾನಾಮುಖಗಳಿಂದ ಈ ಬದಲಾವಣೆ ವ್ಯಕ್ತಗೊಂಡಿದೆ ಎಂದು ಯಾರಿಗಾದರೂ ಹೊಳೆಯದಿರದು. ಆದರೆ, ಕೇಂದ್ರ ಏಶ್ಯದ ಸಾಮೂಹಿಕ ಕೃಷಿಪದ್ಧತಿಯಾಗಲೀ, ಆಗ್ನೇಯ ಏಶ್ಯದಲ್ಲಿ ಕಂಡುಬರುವ ವಿಶಾಲವಾದ ತೋಟಗಳ ವ್ಯವಸ್ಥೆಯಾಗಲೀ ಸಾಮಾನ್ಯವಾಗಿ ಜನರಿಂದ ಅನುಮೋದಿಸಲ್ಪಟ್ಟಿಲ್ಲ ಎಂಬುದನ್ನು ಮರೆಯಲಾಗದು.

ಸ್ವಾತಂತ್ರ್ಯ ಪ್ರಿಯ ರೈತ

ದಕ್ಷಿಣ ಹಾಗು ಪೂರ್ವ ಏಶ್ಯದ ಅನೇಕ ರಾಷ್ಟ್ರಗಳು ಈ ಕಾರಣದಿಂದಾಗಿ ಜನರಿಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟು, ಕೃಷಿಕ್ಷೇತ್ರದ ಪುನಾರಚನೆಗೆ ಪ್ರಯತ್ನ ನಡೆಸುತ್ತವೆ. ಬೆಳೆಯಲ್ಲಿ ಹೆಚ್ಚಿನ ಪಾಲನ್ನು ಭೂಮಾಲಿಕನು ಕಸಿದುಕೊಳ್ಳುವುದನ್ನು ನಿಲ್ಲಿಸಬೇಕೆಂದು, ಹಣಕಾಸಿನ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು, ಮಾರಾಟಕ್ರಮವನ್ನು ರೈತನ ಅನುಕೂಲತೆಗೆ ಸರಿಯಾಗಿ ಪರಿಷ್ಕರಿಸಬೇಕೆಂ[illegible]ಸಾಮಾನ್ಯವಾಗಿ ಅಪೇಕ್ಷಿಸಲಾಗುತ್ತದೆ. ಮೂಲಭೂತವಾದ ಈ ಅಂಶಗಳನ್ನು ಕಡೆಗಣಿಸಿ, ಕೇವಲ ತಂತ್ರ ಕೌಶಲ್ಯಗಳ ಉಪಯೋಗಕ್ಕೆ ಮಾತ್ರ ಮಹತ್ವ ಕೊಡುವುದನ್ನು ರೈತರು 'ಸರಿ' ಎನ್ನುವುದಿಲ್ಲ.

ಜಪಾನಿನ ಆದರ್ಶ

ಯಂತ್ರಗಳ ಪ್ರಾಬಲ್ಯವನ್ನು ಸಂತೋಷದಿಂದ ಕಾಣುವಷ್ಟು, ಸ್ವಾಗತಿಸುವಷ್ಟು ಮಹತ್ವದ ಪರಿವರ್ತನೆ ಈ ಪ್ರದೇಶದಲ್ಲಿ ಇನ್ನೂ ಆಗಿಲ್ಲ — ಅದು ಇಷ್ಟವಾದದ್ದೂ ಅಲ್ಲ; ಏಕೆಂದರೆ, ಜನಬಾಹುಳ್ಯ ಅತ್ಯಧಿಕವಿರುವ ಪ್ರದೇಶ ಇದಾಗಿದೆ; ಅಲ್ಲದೆ, ಪ್ರಾಣಿ ಶಕ್ತಿಯನ್ನು ಬಳಸಿಕೊಳ್ಳದಿದ್ದರೆ ಬೇರೆ ಜಟಿಲ ಸಮಸ್ಯೆಗಳು ತಲೆ ಎತ್ತುತ್ತವೆ. ಆದುದರಿಂದ ಪ್ರಾಣಿ ಶಕ್ತಿಯ ಉಪಯೋಗಕ್ಕೆ ತಡೆಯನ್ನೊಡ್ಡದೆ, ಉತ್ಪಾದನೆಯನ್ನು ಮಾತ್ರ ಗಣನೀಯವಾಗಿ ಹೆಚ್ಚಿಸಬಲ್ಲ ವಿಧಾನಗಳನ್ನು ಅನುಸರಿಸುವಂತಾದರೆಯೇ ಪ್ರಯೋಜನ. ಜಪಾನು ದೇಶವು ಈ ವಿಷಯದಲ್ಲಿ ಎಲ್ಲರಿಗೂ ಮಾರ್ಗದರ್ಶನ ಮಾಡಬಲ್ಲುದು — ನೇಗಿಲುಗಳ ಸುಧಾರಣೆ, ವಿದ್ಯುಚ್ಛಕ್ತಿಯಿಂದ ನಡೆಯುವ ಚಿಕ್ಕ ಯಂತ್ರಗಳ ಬಳಕೆ, ನೇಜಿ ನೆಡುವ ಮತ್ತು ಫಸಲು ಕೊಯ್ಯುವ ಪರಿಷ್ಕೃತ ವಿಧಾನ, ಭೂಮಿಯ ಸಾರ ಸಂವರ್ಧನಗೆ ನೆರವಾಗುವ ಮುಂಜಾಗರೂಕತೆಯ ಕ್ರಮ ಇವುಗಳಲ್ಲಿ ಜಪಾನು ದೇಶವು ಏಶ್ಯದ ಗಮನ ಸೆಳೆದಿದೆ. ರೈತರು ಹೆಚ್ಚು ಕರ್ಚಿಲ್ಲದೆ ಸುಧಾರಣೆಗಳನ್ನು ರೂಢಿಸಿಕೊಂಡು ಕೋಗಬಹುದು ಎಂದು ಜಪಾನು ತೋರಿಸಿ ಕೊಟ್ಟಿರುತ್ತದೆ.



ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.		
24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಆಡಳಿತಾಧಿಕಾರಿಗಳಿಗೆ ಪಂತರ ಹಿತವಾದ

ಪ್ರಾಮಾಣಿಕತೆ, ದಕ್ಷತೆ ಮತ್ತು ನ್ಯಾಯ ಪರತೆಯ ಆವಶ್ಯಕತೆ



ಪಂಡಿತ ಪಂತರು

"ಆಡಳಿತ ನಿವಹಣ ಸಮಸ್ಯೆಯು ನಿಜಕ್ಕೂ ಮಾನವತೆಯೊಡನೆ ಸಂಬಂಧ ವಿರಿಸಿಕೊಂಡಿದೆ. ಇದನ್ನು ಸಹಾನುಭೂತಿಯಿಂದಲೂ ತಿಳಿವಳಿಕೆಯಿಂದಲೂ ಉತ್ಸುಕತೆಯಿಂದಲೂ ಸಮೀಪಿಸಿ, ಬಿಡಿಸಲು ಪ್ರಯತ್ನಿಸಿದರೆ ಮಾತ್ರ ಪ್ರಯೋಜನ"—ಹೀಗೆಂದು ಕೇಂದ್ರ ಗೃಹಮಂತ್ರಿ ಪಂಡಿತ ಪಂತರು ಹೊಸ ದೆಹಲಿಯ ಆಕಾಶವಾಣಿಯಲ್ಲಿ ಮಾಡಿದ ಭಾಷಣದೊಂದರಲ್ಲಿ ಹೊನ್ನೆ ನುಡಿದರು. ಪಂಡಿತ ಪಂತರು "ಪ್ರಜಾ ಪ್ರಭುತ್ವದಲ್ಲಿ ಸರಕಾರದ ನೌಕರವರ್ಗದ ಸ್ಥಾನ" ಎಂಬ ವಿಷಯದ ಕುರಿತು ಮಾತನಾಡುತ್ತಿದ್ದರು.

ಕಲ್ಯಾಣ ರಾಷ್ಟ್ರದ ಧ್ಯೇಯ

ಆಡಳಿತಗಾರರು ಮಹಾಜನರ ಸೇವೆಯನ್ನು ಹೆಚ್ಚು ಹೆಚ್ಚಾಗಿ ಇಂದು ಸಲ್ಲಿಸಬೇಕಾಗಿದೆ—ಎಂದು ಪಂತರು ನುಡಿದರು. ಇದು ನಿಜವಾಗಿಯೂ ಭವಿತವ್ಯವಾದ ವಿಷಯ; ಅತ್ಯೋತ್ಸಾಹ ಮೂಡುವ ವಿಷಯ ಎಂದು ಅವರು ಅಭಿಪ್ರಾಯಪಟ್ಟರು. ಎಲ್ಲ ಪ್ರಜೆಗಳನ್ನೂ ಜನನದಿಂದ ಮರಣದ ವರೆಗೆ ಜೀವಾಧಾರ ಸಕಲಬಗೆಯ ನೌಕರ್ಯಗಳಿಂದ ಸಮಿಗಳಾಗಿಡುವುದು ಇಂದು ಸರಕಾರದ ಕರ್ತವ್ಯವಾಗಿದೆ. ಕಲ್ಯಾಣ ರಾಷ್ಟ್ರದ ಈ ಆದರ್ಶವನ್ನು ಸಾಧಿಸಬೇಕಾದರೆ ಆಡಳಿತ ವಿಧಾನದಲ್ಲಿ ಅಚ್ಚುಕಟ್ಟಿತನವೂ ಚೈತನ್ಯವೂ ತುಂಬಿ ಬರಬೇಕು—ಎಂದು ಪಂತರು ಹೇಳಿದರು.

ಆಡಳಿತವರ್ಗದ ಸಹಕಾರ

ಸರಕಾರವು ನಿರುದ್ಯೋಗ, ಬಡತನ, ರೋಗರುಜಿನಾದಿಗಳನ್ನು ದೇಶದಿಂದ ಮೂಲೋತ್ಪಾಟನ ಮಾಡಲು ಯೋಜನೆಗಳನ್ನು ಸಿದ್ಧಗೊಳಿಸಿದೆ. ಇವುಗಳನ್ನು ಸೂಕ್ತರೀತಿಯಲ್ಲಿ ಕಾರ್ಯಗತಗೊಳಿಸಲು ಸರಕಾರದ ನೌಕರರ ಸಹಕಾರ ಅತ್ಯವಶ್ಯವಾಗಿದೆ. ಇವರೆಲ್ಲರೂ ಹೊಣೆಗಾರಿಕೆಯನ್ನು ತಿಳಿದವರಾಗಿದ್ದು ಅದನ್ನು ದಕ್ಷತೆಯಿಂದ ನೆರವೇರಿಸಿಕೊಂಡು ಹೋಗಲು ತಪ್ಪಬಾರದು; ಇದರಂತೆ ಪರಮ ಪ್ರಾಮಾಣಿಕರಾಗಿಯೂ ಅವರು ನಿತ್ಯ ವ್ಯವಹಾರದಲ್ಲಿ ವರ್ತಿಸಬೇಕು ಎಂದು ಪಂತರು ಉಪದೇಶಿಸಿದರು. ಅನೇಕ ಅಧಿಕಾರಿಗಳು ನಿಸ್ಸಂಶಯವಾಗಿಯೂ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಕೂಡಿದ್ದಾರೆ; ಆದರೆ ಬುಡದಿಂದ ತುದಿಯವರೆಗೆ ಎಲ್ಲರ ಗುಣದಲ್ಲೂ ನಿಷ್ಪೃಹತೆ ಮತ್ತು ಲವಲವಿಕೆ ಮೂಡಿಬಂದರೆಯೇ ನಮಗೆ ಸಮಾಧಾನ ಎಂದರು.

ಸಾರ್ವಜನಿಕ ಹಣ

ತೆರಿಗೆದಾರರು ಕೊಟ್ಟ ಹಣವು ಕಷ್ಟದಿಂದ ಅರ್ಜಿಸಲ್ಪಟ್ಟದ್ದೆಂಬುದನ್ನು ಸರಕಾರದ ನೌಕರರು ತಿಳಿದುಕೊಂಡೇ ಯೋಜನೆಯ ನಿರ್ವಹಣೆಯಲ್ಲಿ ಅದನ್ನು ಉಪಯೋಗಿಸಬೇಕು. ಈ ಹಣವು ನ್ಯಾಯವಾದ ರೀತಿಯಲ್ಲಿ ಪ್ರಜೆಗಳಿಗೆ ಸಂಪೂರ್ಣ ಪ್ರಯೋಜನ ಸಿಗುವಂತೆ ವಿನಿಯೋಗವಾಗಬೇಕು. ದುಂದುಗಾರಿಕೆಗಾಗಲೀ ಅಪವ್ಯಯಕ್ಕಾಗಲೀ ಎಡೆಕೊಡಕೂಡದು. ಸಾರ್ವಜನಿಕರ ನಿಧಿಗೆ ಸರಕಾರದವರು ಧರ್ಮದರ್ಶಿಗಳಾಗಿದ್ದಾರೆ ಎಂಬುದನ್ನು ಮನವರಿಕೆ ಮಾಡಿಕೆ ಳಬೇಕು. ಹಣದ ಮಿಗತಾಯವಾಗಬೇಕೆಂದು ದಕ್ಷತೆಗೆ ತಿಲಾಂಜಲಿ ಕೊಡುವುದೂ ಸಲ್ಲದು—ಎಂದು ಗೃಹಮಂತ್ರಿಗಳು ಬೋಧಿಸಿದರು.

ನ್ಯಾಯಪರತೆಯ ಅಗತ್ಯ

ತನ್ನ ನಿಷ್ಕಳಂಕ ವರ್ತನೆ ಮತ್ತು ಉದಾತ್ತ ಧ್ಯೇಯಗಳಿಂದ ಭಾರತವು ಸಿದೇಶಗಳಲ್ಲಿ ಪ್ರತಿಷ್ಠೆಯನ್ನು ಸ್ಥಾಪಿಸಿದೆ. ಈ ಉನ್ನತ ಸ್ಥಾನಕ್ಕೆ ಚ್ಯುತಿ ಬಾರದಂತೆ ನಾವೆಲ್ಲರೂ ನಡೆದುಕೊಳ್ಳುವುದು ಅಪೇಕ್ಷಣೀಯ. ಹಿಂದಿನ ಕಾಲದಲ್ಲಿ ಚೀನದಿಂದ ಯಾತ್ರಿಕನಾಗಿ ಬಂದಿದ್ದ ಫಾಹಿಯಾನನು ಸರಕಾರದ ನೌಕರ ವರ್ಗದ ಸೇವೆಯ ಮನೋಭಾವ, ಸೃದಯತೆ, ದೂರದರ್ಶಿತ್ವ ಮುಂತಾದ ಗುಣಗಳನ್ನು ಹೊಗಳಿ ಬರೆದಿದ್ದಾನೆ. ಇದೇ ಚೇತನ ನಮ್ಮ ದೇಶದಲ್ಲಿ ಪುನಃ ವ್ಯಕ್ತವಾಗಲಿ ಎಂದು ಪಂತರು ಹಾರೈಸಿದರು ಸರಕಾರದ ನೌಕರರಿಂದ ಜನರಿಗೆ ನ್ಯಾಯ ಸಲ್ಲುತ್ತಿಲ್ಲ ಎಂಬ ದೂರುಗಳಿಗೆ ಆಸ್ಪದವಿಲ್ಲದಷ್ಟು ಶುದ್ಧಚಾರಿತ್ರಿಗಾಗಿ ಆಡಳಿತ ನಡೆಯಬೇಕು ತಾವು ಮೊರೆಗಳೆಂಬ ಭಾವನೆಯನ್ನು ಅಧಿಕಾರಿಗಳು ತ್ಯಜಿಸಿ ನಿರಾಡಂಬರವಾದ, ಸರಳ ಜೀವನ ವಿಧಾನವನ್ನು ಸ್ವೀಕರಿಸಬೇಕು. ಮೈಸೂರಿನ ಮುಂತಾದ ದುರ್ಜಟಿಗಳಿಂದ ದೂರವಿದು ಉತ್ತಮ ಆದರ್ಶವನ್ನು ಜನರ ಮುಂದೆ ಮಂಡಿಸಬೇಕು ಎನ್ನುತ್ತಾ ಗೃಹಮಂತ್ರಿಗಳು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಉಳುವವನೇ ಹೊಲದೊಡೆಯ

"ಇದು ಕೇವಲ ಘೋಷಣೆಯಲ್ಲ—ನಮ್ಮ ಆದರ್ಶ"

"ಉಳುವವನೇ ಹೊಲದೊಡೆಯನಾಗಬೇಕು—ಎಂಬುದು ಕೇವಲ ಘೋಷಣೆಯ ವಿಷಯವಾಗಿರದೆ, ಸರಕಾರದ ಧ್ಯೇಯವೇ ಆದಾಗಿದೆ. ಇತರರ ಶ್ರಮ ಅಥವಾ ಆದಾಯದಿಂದ ಜೀವಿಸುವ ವರ್ಗವು ಉತ್ಪಾದನೆಯ ಮೂಲ ಘಟ್ಟದಲ್ಲಿ ಉಳಿದುಕೊಳ್ಳುವುದಕ್ಕೆ ಬಿಡಬಾರದು. ಸರಕಾರವು ಸಮಾಜದ ಹಿತವೆಂಬ ವಿಶಾಲವಾದ ದೃಷ್ಟಿಯಿಂದ ನಿರ್ದಿಷ್ಟ ಮಿತಿಗಿಂತ ಹೆಚ್ಚಿರುವ ಜಮೀನುದಾರಿಗಳನ್ನೂ ಸರಪೂರಾಸಿ ಜಮೀನುದಾರಿಕೆಯನ್ನೂ ನಾಶಮಾಡಬೇಕೆಂದು ನಿರ್ಧರಿಸಿದೆ"—ಎಂಬುದಾಗಿ ಮುಂಬಯಿಯ ಆಂದಾಯ ಸಚಿವರಾದ ಶ್ರೀ ಭಾವು ಸಾಹೇಬ ಹಿರೆಯವರು ಆ ರಾಜ್ಯದಲ್ಲಿ ೧೯೩೭ನೇ ಎಪ್ರೀಲಿನಿಂದ ರೈತನಿಗೆ ಹೊಲದೊಡೆತನ ಕೊಡಿಸುವ ಮಸೂದೆಯನ್ನು ಮಂಡಿಸುತ್ತಾ ನುಡಿದರು. ಸದಸ್ಯರು ಅವರನ್ನು ಹರ್ಷೋದ್ಗಾರದಿಂದ ಸ್ವಾಗತಿಸಿದರು.

ಮುನ್ನಡೆಯ ಹೆಜ್ಜೆ

ಸಮಾಜವಾದಿ ಸ್ವರೂಪದ ಸಮಾಜದ ರಚನೆ ಮಾಡುವ ದಿಸೆಯಲ್ಲಿ ಈ ಮಸೂದೆಯು ಮಹತ್ವದ ಹೆಜ್ಜೆಯನ್ನಿಡುತ್ತದೆ. ಸಹಕಾರ, ಸಮಾನಾವಕಾಶ, ಜೀವನ ನಿರ್ವಹಣ ಮಾರ್ಗವನ್ನು ತೋರಿಸಿ ಕೊಡುವುದು, ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವುದು—ಇವೇ ಈ ಮಸೂದೆಯ ಮೂಲತತ್ವಗಳಾಗಿವೆ. ಎಲ್ಲರಿಗೂ ಹೊಟ್ಟೆತುಂಬ ಉಣ್ಣಲು ಸಿಗುವ, ಜನಸಂಖ್ಯೆಯು ವ್ಯವಸ್ಥಿತವಾಗಿ ಕೃಷಿ ಮತ್ತು ಔದ್ಯಮಿಕ ವಲಯದಲ್ಲಿ ಹಂಚಿಹೋಗುವ ಸುದಿನ ಬರುವುದಕ್ಕೆ ಸ್ಪಷ್ಟವದುವಣಕಾಲದಲ್ಲಿ ರೈತನಿಗೆ ಅರೆಹೊಟ್ಟೆಯಾದರೂ ಉಣಲು ಸಿಗಬೇಕೆಂಬ, ಮತ್ತು ಹಾಗೇ ಹಳ್ಳಿಗರ ಜೀವನಮಟ್ಟವನ್ನು ಸುಧಾರಿಸ ಬೇಕೆಂಬ ಹಿರಿಯಾಸೆಯಿಂದ ಈ ಮಸೂದೆಯನ್ನು ಮಂಡಿಸುತ್ತಿದ್ದೇನೆ—ಎಂದು ಹಿರೆ ಹೇಳಿದರು.

ವಿಷಮತೆಯ ನಿವಾರಣೆ

ಜೇಷಾಯವನ್ನೇ ಅವಲಂಬಿಸಿರುವವರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ; ಅವರ ಕೈಯಲ್ಲಿ ಐದು ಎಕ್ರೆಗಿಂತಲೂ ಕಡಿಮೆ ಭೂಮಿ ಇದೆ. ಹೀಗಾಗಿ ಅವರು ದಿನಗಳೆಯಲು ಒದ್ದಾಡಿದಷ್ಟೂ ಸಾಲದೆ ಹೋಗಿದೆ ಇಂಥ ಪರಿಸ್ಥಿತಿಯಲ್ಲಿ ಜನಸಂಖ್ಯೆಯ ಹತ್ತರಲ್ಲಿ ಒಂದೊಂದಷ್ಟೇ ಇರುವ ಭೂಮಾಲಕ ವರ್ಗದೊಡನೆಯೇ ಒಟ್ಟು ಭೂಮಿಯಲ್ಲಿ ಅರವತ್ತಾಯಿಷ್ಟಿರುವ ಈಗಿನ ವ್ಯವಸ್ಥೆ ಎಷ್ಟಕ್ಕೂ ಸಮರ್ಥನೀಯವಾಗಲಾರದು. ಈ ವಿಷಮತೆಯು ತನ್ನಿಂದ ತಾನೇ ಕಾಲರಾಯನ ಅನುಗ್ರಹದಿಂದ ನಿವಾರಣೆಯಾಗಲಿ ಎಂದು ಸರಕಾರ ಕಾಯಲಾರದು. ಸಮಾಜವಾದದ ಗತಿಯನ್ನು ತ್ವರಿತಗೊಳಿಸುವುದೇ ನಮ್ಮ ಉದ್ದೇಶ ಎಂದು ಹಿರೆಯವರು ಸ್ಪಷ್ಟವಾಗಿ ನುಡಿದರು.

ರೈತನ ಆಸ್ಥೆಯ ಗುಟ್ಟು

ಸಾಗುವಳಿಯ ಭೂಮಿಯಲ್ಲಿ ರೈತನಿಗೆ ನೇರವಾದ ಆಸ್ಥೆ ಇಲ್ಲದಿದ್ದರೆ ಜೇಷಾಯವು ಹಾಳಾಗುತ್ತದೆ. ಎರಡನೆಯವರ ಆಸ್ತಿಯಲ್ಲಿ, ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ, ಕೆಲಸಮಾಡುವುದು, ಅದನ್ನು ಅಭಿವೃದ್ಧಿಗೊಳಿಸುವುದು ಯಾರಿಗೂ ಬೇಕಾಗುವುದಿಲ್ಲ. ಸ್ವಂತ ಆಸ್ತಿ ಎಂದಾಗ ಮಾತ್ರ ಆಸೆ ಹುಟ್ಟುತ್ತದೆ. ಆದುದರಿಂದ ಸಾಧ್ಯವಿದ್ದ ಮತ್ತು ಸಾಮಾನ್ಯವಾಗಿ ಎಲ್ಲರಿಗೂ ನ್ಯಾಯ ಸಿಗುವ ರೀತಿಯಲ್ಲಿ ರೈತನಿಗೆ ಭೂಮಿಕೊಡಿಸಿ, ಆತನ ಸಂಬಂಧವನ್ನು ನೇರವಾಗಿ ಸರಕಾರದೊಡನೆ ಜೋಡಿಸುವುದು ನಮ್ಮ ಧೋರಣೆ ಎಂದು ಹಿರೆ ವಿವರಿಸಿದರು. ಈ ವಿಧೇಯಕಕ್ಕೆ ಸಮ್ಮಿಶ್ರ ಸ್ವಾಗತ ದೊರಕಿದ್ದು, ಪರಿಶೀಲಕ ಸಮಿತಿಯ ಮುಂದೆ ಇದು ಹೋಗಿರುತ್ತದೆ.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಕೊಂಯಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಎರಡನೆಯ ಪಂಚವಾರ್ಷಿಕ ಯೋಜನೆ

ಕಾರ್ಯವಿಧಾನದ ಮೇಲೆ ನಂದಾರ ಬೆಳಕು

ಮೊದಲನೆಯ ಪಂಚವಾರ್ಷಿಕ ಯೋಜನೆಯು ಇನ್ನಾರು ತಿಂಗಳಲ್ಲಿ ಕೊನೆಗೊಳ್ಳಲಿದೆ. ಬಳಿಕ ನಾವು ಯೋಜನೆಯ ದ್ವಿತೀಯ ಘಟ್ಟವನ್ನು ಕ್ರಮಿಸಲಿದ್ದೇವೆ. ಇಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ ಹೇಗಿರಬೇಕೆಂಬ ಕುರಿತು ತೀವ್ರವಾದ ಪರ್ಯಾಲೋಚನೆ ಬಹಳ ದಿನಗಳಿಂದ ನಡೆದಿದೆ ಎಲ್ಲ ಪಕ್ಷ ಪಂಗಡಗಳಂತೆ, ಕಾಂಗ್ರೆಸು ಸಹ ಈ ಕುರಿತು ವಿಚಾರಶೀಲವಾಗಿದೆ.

ನಂದಾರ ಪರಿಪತ್ರ

ಇದೇ ಸಪ್ತಂಬರದ ೩ನೇ ತಾರೀಕಿನಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಕಾರ್ಯಕಾರಿಣಿಯ ಸಭೆ ಸೇರಲಿದೆ ಅಲ್ಲಿ ಗೋವೆ ಮುಂತಾದ ಜ್ವಲಂತ ರಾಜಕೀಯ ಸಮಸ್ಯೆಗಳ ಒಟ್ಟಿಗೆ, ದ್ವಿತೀಯ ಯೋಜನೆಯ ಕುರಿತಾಗಿಯೂ ವಿಚಾರ ವಿನಿಮಯವಾಗುತ್ತದೆ. ಇದರಲ್ಲಿ ಭಾಗವಹಿಸುವವರ ತಿಳಿವಳಿಕೆಗಾಗಿ ಯೋಜನಾ ಖಾತೆಯ ಸಚಿವರಾದ ಶ್ರೀ ಗುಲಜಾರಿಲಾಲ ನಂದಾರು ಒಂದು ಪರಿಪತ್ರವನ್ನು ಹೊರಡಿಸಿ, ಮುಂದಿನ ಯೋಜನೆಯ ಮಾಹಿತಿ ನೀಡಿದ್ದಾರೆ.

ನೋಡುವ ಮನೋಭಾವ

ಯೋಜನೆಯನ್ನು ಸೂಪಿಸುವ ನಮ್ಮ ದೃಷ್ಟಿಕೋಣ ಹೇಗಿರಬೇಕು, ಅಲ್ಲಿ ಯಾವ ಮೂಲಭೂತ ಪ್ರಶ್ನೆಗಳಿಗೆ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕು ಎಂದು ವಿವರಿಸಿದ ಬಳಿಕ ನಂದಾರವರು ಈ ಪರಿಪತ್ರದಲ್ಲಿ ಇದೇ ನವಂಬರ ತಿಂಗಳ ಕೊನೆಗೆ ದ್ವಿತೀಯ ಯೋಜನೆಯ ಸ್ಥೂಲ ಕರಡನ್ನು ಸಿದ್ಧಗೊಳಿಸಿ ಆಸ್ಥೆಯುಳ್ಳ ಎಲ್ಲರಿಗೂ ನೋಡಸಿಗುವಂತೆ ಪ್ರಕಟಿಸಲಾಗುವುದು ಎಂದಿದ್ದಾರೆ. ಇದಕ್ಕೆ ದೊರಕುವ ಸ್ವಾಗತ ಮತ್ತು ಬಂದ ಟೀಕೆಗಳು, ಪ್ರತಿಕ್ರಿಯೆಗಳು ಇವನ್ನೆಲ್ಲ ಗಮನಿಸಿ ೧೯೫೬ನೇ ಎಪ್ರೀಲಿಗೆ ಕಾರ್ಯ ತೊಡಗಲಾಗುವಂತೆ ಕರಡನ್ನು ಪರಿಷ್ಕರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮಹಾಲನೋಬಿಸರ ಕಾರ್ಯ

ಪ್ರೊ. ಪಿ. ಸಿ. ಮಹಾಲನೋಬಿಸರು ಯೋಜನೆಯ ಮೂಲ ರೂಪರೇಖೆಗಳನ್ನು ಗೊತ್ತುಪಡಿಸುವುದರಲ್ಲಿ ತೋರಿಸಿದ ಬುದ್ಧಿವಂತಿಕೆಯನ್ನು ಸಚಿವರು ಪ್ರಶಂಸಿಸಿದ್ದಾರೆ. ಸಾರ್ವಜನಿಕ ಅಭಿಪ್ರಾಯಕ್ಕೆ ಯೋಗ್ಯ ಮಾರ್ಗದರ್ಶನವನ್ನು ಈ ಪ್ರೊಫೆಸರರು ನೀಡಿದರು ಎಂದು ನಂದಾ ಹೇಳಿದ್ದಾರೆ. ಇದರ ಪರಿಣಾಮವಾಗಿ ಸಮಾಜವಾದಿ ಮಾದರಿಯ ಸಮಾಜ ರಚನೆಗೆ ನೆರವಾಗುವಂತೆ ಪ್ರಜಾಸತ್ತಾತ್ಮಕ ಪದ್ಧತಿಯನ್ನಯ ಕೆಲಸ ಮಾಡುವ ಬಗೆ ಏನೆಂಬುದರ ಮೇಲೆ ವಿಶೇಷವಾದ ಬೆಳಕು ಬಿದ್ದಿದೆ ಎಂದು ಮಂತ್ರಿಗಳ ಖಚಿತ ಅಭಿಪ್ರಾಯ.

ಜನತೆಯ ಸಹಕಾರದ ಯೋಜನೆ

ಸ್ವಾವಲಂಬನ ಮತ್ತು ಸ್ಥಳೀಯ ಅಭಿವೃದ್ಧಿಯಲ್ಲಿ ಉತ್ಸಾಹ ತೋರಿಸುವ ಜನರ ಪಂಗಡಗೆ, ಶ್ರಮದಾನಗಳಿಗೆ ನಾಳೆಯ ಯೋಜನೆಯಲ್ಲೂ ಸ್ಥಾನವಿದೆ. ಯೋಜನೆಯು ಹೆಳ್ಳಿಯ ಮಟ್ಟದಿಂದ ರೂಪುಗೊಳ್ಳುತ್ತದೆ. ೧೨ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡುವಂತೆ ಯೋಜನೆಯ ಅಂಗಗಳನ್ನು ಸಂಘಟಿಸಲಾಗುತ್ತದೆ. ರಾಷ್ಟ್ರೀಯ ಆದಾಯವನ್ನು ೨೫% ಹೆಚ್ಚಿಸಬೇಕೆಂಬುದೇ ಯೋಜನೆಯ ಉದ್ದೇಶ. ಮೂಲ ಕೈಗಾರಿಕೆಗಳನ್ನು ಹೊಸತಾಗಿ ಸ್ಥಾಪಿಸಿ, ನಿತ್ಯೋಪಯೋಗದ ವಸ್ತುಗಳನ್ನು ವಿಸುಲ ಪ್ರಮಾಣದಲ್ಲಿ ಪೂರೈಸುವುದೂ ಯೋಜನೆಯ ಗುರಿಗಳಲ್ಲಿ ಒಂದು.

ಮೂಲಭೂತ ಕಾರ್ಯ ವಿಧಾನ

ರಾಷ್ಟ್ರೀಕರಣದ ಭಯದಿಂದ ಪತ್ತರಿಸುವ ಅವಶ್ಯಕತೆ ಇಲ್ಲವೆಂದು ಪರಿಪತ್ರದಲ್ಲಿ ಹೇಳಿದ ಸಂಗತಿಯಿಂದ ಮನಗಾಣಬಹುದು ಮೂಲ ಕೈಗಾರಿಕೆಗಳು, ಖನಿಜ ದ್ರವ್ಯಗಳು, ಸಾರಿಗೆ ವ್ಯವಸ್ಥೆ, ವಿದೇಶ ವ್ಯಾಪಾರ, ಆರ್ಥಿಕ ವ್ಯವಹಾರ ಸಂಸ್ಥೆಗಳು ಇವುಗಳಲ್ಲಿ ಸರಕಾರದ ನಿಯಂತ್ರಣ ಹೆಚ್ಚಿಕೊಳ್ಳುವಸಂಭವವಿದೆಯೆಂಬುದು ನಿಜ. ಆದರೆ ಖಾಸಗಿ ರಂಗವನ್ನು ಸಂಪೂರ್ಣ ಅಳಿಸಿ ಬಿಡುವ ಮನಸ್ಸುಸರ್ಕಾರಕ್ಕೆಯನ್ನು ಯೋಜನೆ ಇಟ್ಟುಕೊಂಡಿಲ್ಲವೆಂಬುದೂ ಸ್ಪಷ್ಟ. ಸಮಾಜವಾದಿ ಮಾದರಿಯ ಸಮಾಜ ರಚನೆ ಎಂಬ ಪದ ಸಮುಚ್ಚಯಕ್ಕೆ ಅನುಗುಣವಾಗುವಂತೆ, ಖಾಸಗಿ ರಂಗದ ವ್ಯಾಪ್ತಿಯನ್ನು ಸರಕಾರದ ಚಟುವಟಿಕೆಗಳ ಮುಂದೆ ತೀರ ಕುಗ್ಗಿಸಿ ಬಿಡುವುದೇ—ಅಂದರೆ ಸರಕಾರದ ಚಟುವಟಿಕೆಗಳನ್ನು ವಿಶೇಷವಾಗಿ ಬೆಳಸಿಕೊಳ್ಳುವುದೇ – ಯೋಜನೆಯ ಕಾರ್ಯ ವಿಧಾನದ ತಿರುಳು.

ಫಜಲ ಅಲಿ ಆಯೋಗದ ಸೂಚನೆಗಳು

"ಶಾಂತ ರೀತಿಯಿಂದ ಜನತೆ ಅಂಗೀಕರಿಸಲಿ"

ಇದೇ ಸಪ್ತಂಬರ ತಿಂಗಳ ಕೊನೆಯೊಳಗೆ ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗವು ವರದಿಗೆ ಸಹಿ ಹಾಕಿ, ಭಾರತ ಸರಕಾರಕ್ಕೆ ಅದನ್ನು ಒಪ್ಪಿಸುವುದೆಂದು ಆಯೋಗದ ಸದಸ್ಯರಲ್ಲಿ ಒಬ್ಬರಾದ ಸರದಾರ ಕೆ. ಎಂ. ಪಣಿಕ್ಕರರು ತಿಳಿಸಿದ್ದಾರೆ. ಕರ್ನಾಟಕ ಮತ್ತು ಕೇರಳ ರಾಜ್ಯಗಳು ನಿಸ್ಸಂಶಯವಾಗಿಯೂ ರಚಿಸಲ್ಪಡುತ್ತವೆ ಎಂದು ಹಬ್ಬಿರುವ ಸುದ್ದಿಯ ಕುರಿತು ಅವರನ್ನು ಕೇಳಿದಾಗ "ನನಗೇನೂ ಆ ವಿಷಯ ತಿಳಿಯದು" ಎಂಬ ಚುಟುಕಿನ ಉತ್ತರವನ್ನೆಕೊಟ್ಟು ಅವರುಜಾರಿಕೊಂಡರು –ಹೀಗೆ ಆಯೋಗದ ಗುಟ್ಟನ್ನು ಕಾಯ್ದುಕೊಂಡರು.

ಪಂತರ ಉಪದೇಶ

ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ಹೈದರಾಬಾದಿನಲ್ಲಿ ಸಾರ್ವಜನಿಕ ಭಾಷಣ ಮಾಡುತ್ತಾ ಫಜಲ ಅಲಿ ಆಯೋಗದ ಸಲಹೆಗಳನ್ನು ಜನರು ಶಾಂತ ಭಾವದಿಂದ ಒಪ್ಪಿಕೊಳ್ಳಬೇಕು ಎಂದು ವಿನಂತಿಸಿದರು. ಆಯೋಗದ ಸೂಚನೆಗಳು ಹೇಗಿರಬಹುದು, ಏನಿರಬಹುದು ಎಂದು ತನಗೆ ತಿಳಿದಿಲ್ಲ; ಸುಗಮ ಆಡಳಿತೆಯ ಮುಖ್ಯ ಪ್ರಶ್ನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆಯೋಗವು ತನ್ನ ನಿಷ್ಪಕ್ಷಪಾತ ದೃಷ್ಟಿಯ ವರದಿಯನ್ನು ಒಪ್ಪಿಸುವುದರಿಂದ ಜನರು ಉದ್ರೇಕಗೊಳ್ಳಬಾರದು. ವಿವಿಧ ಭಾಷೆಗಳನ್ನಾಡುವವರು ತಂತಮ್ಮ ಪ್ರದೇಶದ ಹೆಬ್ಬಾಗಿಲುಗಳನ್ನು ಮುಚ್ಚಿ ಕುಳಿತಿರುವುದು ಇಷ್ಟವಲ್ಲ ಎಂದು ಪಂತರು ಬುದ್ಧಿ ಹೇಳಿದರು.

ಬಳ್ಳಾರಿಯ ಮೇಲೆ ಕಣ್ಣು

ಆಂಧ್ರದ ಶಿಷ್ಟಮಂಡಳಿಯೊಂದು ಈ ಸಂದರ್ಭದಲ್ಲಿ ಗೃಹಮಂತ್ರಿಗಳನ್ನು ಕಂಡು, ಬಳ್ಳಾರಿಯನ್ನು ಆಂಧ್ರದೊಡನೆ ವಿಲೀನಗೊಳಿಸಬೇಕು; ಫಜಲಅಲಿ ಆಯೋಗದ ಸೂಚನೆಗಳನ್ನು ಕಾರ್ಯಗತಗೊಳಿಸುವ ಕಾಲದಲ್ಲಿ ಕೇಂದ್ರ ಸರಕಾರ ಇದನ್ನು ಗಮನಿಸಬೇಕು ಎಂದು ಮನವಿಯೊಪ್ಪಿಸಿರುವುದಾಗಿ ತಿಳಿದುಬರುತ್ತದೆ. ತುಂಗಭದ್ರೆಯ ಅಣೆಕಟ್ಟನ್ನೊಳಗೊಂಡು ಅಲ್ಲಿವರೆಗಿನ ಬಳ್ಳಾರಿ ಜಿಲ್ಲೆಯ ಭಾಗ ಆಂಧ್ರದಲ್ಲಿ ಸೇರಬೇಕೆಂದು ಮನವಿ ಹೇಳುತ್ತದೆ. ಮೈಸೂರಿನೊಡನೆ ಸೇರಿದಂದಿನಿಂದ ಬಳ್ಳಾರಿ ನಗರದ ಆರ್ಥಿಕ ಪರಿಸ್ಥಿತಿ ವಿಷಮವಾಗಿದೆ; ರಾಯಲಸೀಮೆಯೊಡನೆಯೇ ಬಳ್ಳಾರಿಗೆ ಸಂಬಂಧ ಹೆಚ್ಚು ಎಂದು ಮುಂತಾಗಿ ಶಿಷ್ಟಮಂಡಳಿ ವಾದಿಸಿದೆ. ಕನ್ನಡಿಗರ ವರವಾಗಿ ಬಳ್ಳಾರಿಯ ಪ್ರಶ್ನೆಯನ್ನು ಮುನಃ ಎತ್ತುವ ಸೂಚನೆ ಖಂಡಿಸಲ್ಪಟ್ಟಿದೆ: ಆಯೋಗವು ಶಾಂಧ ಅಧಿಕ ಪ್ರಸಂಗಕ್ಕೆ ಹೋಗಬಾರದು ಎಂದು ಕನ್ನಡಿಗರು—ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಸಹ—ಬಹಿರಂಗವಾಗಿ ಹೇಳುತ್ತಿದ್ದಾರೆ.

ಮೆನೊನ್ನರ ಅಭಿಪ್ರಾಯ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಬೇಕಾಗಿ ಬಂದುದಕ್ಕೆ ಭಾಷೆಯಮೇಲಿನ ಜನತೆಯಮೋಹನೇಕಾರಣ ಎಂಬುದನ್ನು ಇಲ್ಲಿ ಮರೆಯಲಾಗದು. ಸುಗಮ ಆಡಳಿತಕ್ಕೆ ಏಕ ಭಾಷೆಯೂ ಶುಂಬ ಅನುಕೂಲವಾದ ವಿಷಯ ಎಂಬ ಸಂಗತಿಯನ್ನು ಉಪೇಕ್ಷಿಸಲಾಗದು. ಆದಾಗ್ಯೂ ಕಚ್ಚಾಡುವುದು ಅಷ್ಟು ಇಷ್ಟವಲ್ಲ—ಭಾಷಾವಲಯಗಳು ಬಾಗಿಲುಮುಚ್ಚಿ ಕುಳಿತುಕೊಳ್ಳುವುದೂ ಅಪೇಕ್ಷಣೀಯವಲ್ಲ. ಈ ದೃಷ್ಟಿಯಿಂದ "ಭಾರತದ ಸಂಚಾರಿ ರಾಯಭಾರಿ" ಶ್ರೀ ವಿ. ಕೆ. ಕೃಷ್ಣಮೆನೊನ್ನರು ಮಾಡಿದ ಸಲಹೆ ಉತ್ತಮವಾಗಿದೆ— "ಶಾಂತಿಯುತ ಸಹ ಅಸ್ತಿತ್ವದ ತತ್ವವನ್ನು ಭಾಷಾರಂಗದಲ್ಲೂ ನಾವು ಅಳವಡಿಸಿಕೊಳ್ಳಬೇಕು" ಎಂಬ ಈ ಸೂಚನೆ ಯೋಗ್ಯ ಮಾರ್ಗದರ್ಶನ ಮಾಡುವಂತಿದೆ. ಅಯೋಗದವರು ಜನರ ಭಾವಾವೇಗವನ್ನು ಗಮನಿಸುವುದು ಸಂಶಯ—"ನ್ಯಾಯ" ಸಲ್ಲಿಸುವುದಕ್ಕೆಯೇ ಅವರು ನೋಡಬಹುದು. ಆದುದರಿಂದ ಈ ಸಲಹೆಗಳಿಗೆ ಜನರುಕಿವಿಗೊಡಬೇಕಾಗಿದೆ.

ಪೊಂಡಿಚೆರಿಯ ವರ್ಗಾವಣೆ

ಫ್ರೆಂಚರು ಕಳದ ವರ್ಷ ವ್ಯವಹಾರಾತ್ಮಕ ರೀತಿಯಲ್ಲಿ ಭಾರತ ಸರಕಾರಕ್ಕೆ ಬಿಟ್ಟು ಗೊಟ್ಟಿದ್ದ ಪೊಂಡಿಚೆರಿ ಮಾಹೆ, ಯಾನಂ ಮತ್ತು ಕಾರೈಕಲುಗಳನ್ನು ಶಾಸನ ಬದ್ಧವಾದ ಹಾಗು ನ್ಯಾಯ ಸಮ್ಮತವಾದ ರೀತಿಯಲ್ಲಿ ಒದನೆಯೇ ಭಾರತಕ್ಕೆ ವರ್ಗಾಯಿಸಬೇಕೆಂದು ಹೊಸತಾಗಿ ಚುನಾಯಿಸಲ್ಪಟ್ಟಿರುವ ಪೊಂಡಿಚೆರಿ ರಾಜ್ಯದ ರಾಸನ ಸಭೆ ಸರ್ವಾನುಮತದ ನಿರ್ಣಯವನ್ನು ಸ್ವೀಕರಿಸಿ, ಫ್ರಾನ್ಸಿನ ಸರಕಾರವನ್ನು ಆಗ್ರಹಪೂರ್ವಕ ವಿನಂತಿಸಿದೆ.

ರಾಷ್ಟ್ರೀಯ ಕಾಂಗ್ರೆಸಿನ ಸದಸ್ಯರೂ ಪ್ರತಿ ಪಕ್ಷದ ಸದಸ್ಯರೂ ಒಟ್ಟಿಗೆ ಕೂಡಿ ಈ ಗೊತ್ತುವಳಿಯ. ಕರಡನ್ನು ತಯಾರಿಸಿದರು; ಶಾಸನ ಸಭೆಯ ಮುಂದೆ ಸಹ ಇದು ಒಟ್ಟಿಗೆ ಮಂಡಿಸಲ್ಪಟ್ಟು ಒಂದೇ ಒಂದು ವಿರುದ್ಧ ಧ್ವನಿಯಿಲ್ಲದೆ ಅಂಗೀಕೃತವಾಯಿತು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠಿ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಮಕ್ಕಳ ಮಗಿ ಪುಸ್ತಕ
ಬೆಲೆ ೦—1—೦
ವ್ಯಾಪಾರಿ ಮಾಳ ಕಮಿಶನ್,
ನವಯುಗ ಪ್ರೆಸ್, ಉಡುಪಿ.

ಗೋವೆಯೊಳಗೆ ವಿಷಮ ವಾತಾವರಣ

ಡಾ. ಸಾಲಾಝೂರರಿಗೆ ಗವರ್ನರ ಜನರಲರ ಮನವಿ

ಪೋರ್ಚುಗೀಜರು ಫ್ರೆಂಚರನ್ನು ಆನುಕರಿಸಲಿಲ್ಲ; ತಮ್ಮ ಪರಮಸ್ನೇಹಿತರಾದ ಬ್ರಿಟಿಷರನ್ನೂ ಹಿಂಬಾಲಿಸಲಿಲ್ಲ. ಒಣ ಪ್ರತಿಷ್ಠೆಗೆ ಗುರಿಯಾಗಿ ಗೋವೆ ಮತ್ತಿತರ ಭಾರತದಲ್ಲಿನ ತಮ್ಮ ವಸಾಹತುಗಳಿಗೆ ಅಂಟಿ ಕುಳಿತಿದ್ದಾರೆ. ಇಲ್ಲಿ ತಾವು ಹೆಚ್ಚು ಸಮಯ ಕುಳಿತಿರುವಂತಿಲ್ಲವೆಂಬ ಹಣೆಬರಹವನ್ನು ಓದುವಷ್ಟು ಸಾಲಾಝೂರರಿಗೆ ಇನ್ನೂ ವಿವೇಕ ಬಂದಿಲ್ಲ ಎಂಬುದು ಶೋಚನೀಯವಾದ ವಿಷಯ.

ಹದಗೆಟ್ಟ ಪರಿಸ್ಥಿತಿ

ಇದೇ ಗುರುವಾರ (ದಿನಾಂಕ ೧) ದಿಂದ ಭಾರತಕ್ಕೆ ಗೋವೆಯೊಡನಿರುವ ಎಲ್ಲ ರಾಜಕೀಯ ಸಂಬಂಧವೂ ದೂರವಾಗುತ್ತದೆ. ಇದರಿಂದ ಉಂಟಾಗುವ ಪರಿಣಾಮವು ಭಾರತಕ್ಕಿಂತ ಹೆಚ್ಚು ಗೋವೆಯ ವಾತಾವರಣದ ಮೇಲೆಯೇ ದುಷ್ಪ್ರಭಾವ ಬೀರುತ್ತದೆ. ಈಗಿನ ವಿವಾದದ ದೆಸೆಯಿಂದ ಭಾರತಕ್ಕಾಗುವ ನಷ್ಟವೆಂದರೆ, ಮರ್ಮಗೋವೆಯ ಬಂದರನ್ನು ಉಪಯೋಗಿಸಿಕೊಳ್ಳದೆ, ಮುಂಬಯಿಯನ್ನೇ ಆಶ್ರಯಿಸಬೇಕಾಗಿ ಬಂದುದಷ್ಟೇ ಅಷ್ಟು ಮಾತ್ರ. ಆದರೆ, ಗೋವೆಯ ಆರ್ಥಿಕ ಪರಿಸ್ಥಿತಿಯು ಮಾತ್ರ ಸಂಪೂರ್ಣವಾಗಿ ಹದಗೆಟ್ಟಿದೆ — ಅದು ಕ್ಷೋಭೆ ಹುಟ್ಟಿಸುವುದೇ ನಿಶ್ಚಯ.

ಉಗ್ರ ದಿಗ್ಬಂಧನ ಕ್ರಮ

ಭಾರತ ಸರಕಾರದ ಉಗ್ರ ದಿಗ್ಬಂಧನ ಕ್ರಮಗಳಿಂದ ಗೋವೆಯ ಆರ್ಥಿಕ ಪರಿಸ್ಥಿತಿಯು ತುಂಬ ದುರ್ಬಲವಾಗಿದೆ. ಅಚಿಕ್ಕ ವಸಾಹತಿನಲ್ಲಿ ಸೈನಿಕರನ್ನು ಸಾಕುವುದು ಬಹಳ ಕಷ್ಟಕರವಾಗಿ ಪರಿಣಮಿಸಿದೆ. ಅಲ್ಲಿ ಆಹಾರ ಧಾನ್ಯಗಳ ಮತ್ತು ನಿತ್ಯ ಬಳಕೆಯ ವಸ್ತುಗಳ ಕೊರತೆ ಜನರನ್ನು ಸೈನಿಕರನ್ನೂ ಕೂಡಿಯೇ ಬಾಧಿಸುತ್ತಿದೆ. ಸರಕಾರದ ಹಣಕಾಸಿನ ವ್ಯವಹಾರ ಮಾಡುವ ಬೇಂಕು ತಾನು ಇನ್ನೂ ಇನ್ನೂ ಸಾಲ ಕೊಡುತ್ತಾ ಹೋಗುವಂತಿಲ್ಲ ಎಂದು ಗವರ್ನರ ಜನರಲರಿಗೆ ತಿಳಿಸಿದೆ.

ಮಿತಿಮೀರಿದ ಖರ್ಚು

ಆಡಳಿತದ ವೆಚ್ಚವು ಮಿತಿಮೀರುತ್ತಿರುವುದೊಂದು ಕಡೆ; ಸತ್ಯಾಗ್ರಹಿಗಳನ್ನು ತಡೆಗಟ್ಟುವ ಮತ್ತು ಅವರನ್ನು ಚಿತ್ರಹಿಂಸೆಗೆ ಗುರಿ ಮಾಡುವ ಉದ್ದೇಶದಿಂದ ತಂಡಕಗಳನ್ನು ಆಗೆಯುವುದು, ಸಾರಿಗೆ ವ್ಯವಸ್ಥೆಗಳನ್ನು ವಿಸ್ತರಿಸುವುದು ಇತ್ಯಾದಿ ಇತರ ಕೆಲಸಗಳ ಒತ್ತಡ ಮಗುದೊಂದು ಕಡೆ—ಹೀಗೆ ಗೋವೆಯಲ್ಲಿ ಹಣಕಾಸು ಎಷ್ಟಿದ್ದರೂ ಸಾಲದಾಗಿದೆ. ಭಾರತ ಸರಕಾರದ ಕ್ರಮಗಳ ಬಿಗಿ ಹೆಚ್ಚಿದ ಹಾಗೆಲ್ಲ ಪೋರ್ಚುಗಾಲಿನ ತಲೆ ಬಿಸಿ ಏರುವುದೂ ಖಂಡಿತ. ಸ್ವತಃ ಗೋವಾಂತಕರಾದರೂ ಭಾರತದಲ್ಲಿರುವ ತಮ್ಮ ಬಂಧುಗಳಿಂದ ಬರುವ ಹಣವಿಲ್ಲದೆ ದಿನಗಳೆಯುವುದು ಕಷ್ಟ.

ಸಾಲಾಝೂರರಿಗೆ ದೂರು

ಗೋವಾಂತಕರ ಈ ಕಷ್ಟವನ್ನು ಭಾರತ ಸರಕಾರದ ವಿರುದ್ಧ ಜುಗುಪ್ಸೆ ಹುಟ್ಟಿಸಲು ಪೋರ್ಚುಗೀಜರು ನೋಡುತ್ತಿದ್ದಾರೆ — ಆದರೆ, ಸ್ಥಳೀಯರು ಇದಕ್ಕೆ ಮೋಸ ಹೋಗದೆ, ಅವರ ರಾಷ್ಟ್ರೀಯ ಭಾವನೆಯೇ ಜಾಗೃತಗೊಂಡರೆ, ಪೋರ್ಚುಗೀಜರಿಗೆ ಮತ್ತೆ ಗೋವೆಯಲ್ಲಿ ನಿಲ್ಲಲು ಎಡೆಯಿಲ್ಲ. ಇದನ್ನು ಗವರ್ನರ ಜನರಲರು ಡಾ. ಸಾಲಾಝೂರರಿಗೆ ವಿದಿತ ಪಡಿಸಿರುವರೆಂದು ವರದಿಗಳು ಹೇಳುತ್ತವೆ. ಪೋರ್ಚುಗಾಲದ ಅವಿವೇಕದ ಪರಿಣಾಮವಾಗಿಯೇ ಗೋವೆಗೆ ಗಂಡಾಂತರ ಬಂದಿದೆ ಎಂದು ಆಫ್ರಿಕ, ಮಧ್ಯ ಏಶ್ಯ ಮತ್ತು ಪಾಕಿಸ್ತಾನಗಳಲ್ಲಿರುವ ಗೋವಾಂತಕರು ಅಭಿಪ್ರಾಯ ಪಡುತ್ತಿದ್ದಾರೆಂದೂ ಸದ್ಯದಲ್ಲೇ ಆಫ್ರಿಕಕ್ಕೆ ಮರಳಲಿರುವ ನೀಗ್ರೋ ಸೈನಿಕರು ಪೋರ್ಚುಗೀಜರ ವಿರುದ್ಧ ದೂರಿಡುವುದೇ ನಿಜವೆಂದೂ ಹೇಳಲಾಗುತ್ತದೆ.

ಹೊರಗಿನವರ ನೆರವು

ಡಾ. ಸಾಲಾಝೂರರು ಈ ಕುತ್ತಿದಿಂದ ಪಾರಾಗಲು ಭಾರತದ ನೆರೆಯ ರಾಷ್ಟ್ರಗಳಿಂದ ಪಾಕಿಸ್ತಾನ ಮತ್ತು ಸಿಂಹಳಗಳ ಸಹಾಯವನ್ನು ಯಾಚಿಸಿದ್ದಾರೆ. ಆದರೆ ಸಿಂಹಳವು ಪೋರ್ಚುಗಾಲದ ವಸಾಹತುವಾದಕ್ಕೆ ಬೆಂಬಲ ಕೊಡುವುದಿಲ್ಲ ಎಂದು ಮೇಲೆದೆ. ಪಾಕಿಸ್ತಾನ ಸರಕಾರ ಮಾತ್ರ ಪೋರ್ಚುಗಾಲಿಗೆ ಸರ್ವವಿಧದ ಸಹಾಯವನ್ನು ಪಲ್ಲಿಸುತ್ತಿರುವಂತೆ ಕಾಣುತ್ತದೆ. ಭಾರತ ಸರಕಾರದವರು ಸಿಂಹಳ ಮತ್ತು ಪಾಕಿಸ್ತಾನಗಳಿಗೆ ಸತ್ಯಮುಖೇನ ವಿಸಂತಿಯೊಂದನ್ನು ಕಳುಹಿಸಿ, ಬಾಂದಂಗಿನ ನಿಮ್ಮೇಳನದಲ್ಲಿ ವಸಾಹತುವಾದದ ಉಚ್ಚಾಟನೆಗೆ ಕೊಟ್ಟಿರುವ ಮಹತ್ವವನ್ನು ಮನಗಂಡು ಗೋವೆಯಲ್ಲಿ ಪೋರ್ಚುಗೀಜರು ನೆಲೆಯೂರುವುದಕ್ಕೆ ಸಹಾಯಕವಾದ ಧೋರಣೆಯನ್ನು ಅನುಸರಿಸಬಾರದು ಎಂದು ಕೇಳಿಕೊಂಡಿದ್ದಾರೆ.

ಪಾಕಿಸ್ತಾನದ ಪ್ರತಿಕ್ರಿಯೆ

ಈ ವಿಷಯದಲ್ಲಿ ಪಾಕಿಸ್ತಾನದ ಪ್ರತಿಕ್ರಿಯೆ ಇನ್ನೂ ವ್ಯಕ್ತವಾಗಿಲ್ಲ. ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ತನಗಾದ "ಮುಖಭಂಗ"ದ "ಸೇಡು" ತೀರಿಸಲು ಈಗ ಸಮಯ ಸಿದ್ಧವಾಗಿದೆ ಎಂದು ಪಾಕಿಸ್ತಾನ ಸರಕಾರ ಭಾವಿಸಿದರೆ, ಗೋವೆಯಲ್ಲಿ ಪೋರ್ಚುಗೀಜರು ನೆಲೆಯುತ್ತಿರುವ ಅವಧಿ ಇನ್ನಷ್ಟು ಮುಂದುವರಿದೀತು. ಆದರೆ, ಜಗತ್ತಿನ ದೃಷ್ಟಿಯಲ್ಲಿ ಪಾಕಿಸ್ತಾನವು ಪೋರ್ಚುಗಾಲಿಗೆ ನೀಡುವ ಸಕ್ರಿಯ ಸಹಾಯವು ಆ ರಾಷ್ಟ್ರದ ಕುರಿತಾಗಿ ಜುಗುಪ್ಸೆಯನ್ನು ತಾರದಿರದು. ವಸಾಹತುವಾದಕ್ಕೆ ಸಮ್ಮೇಳನಗಳಲ್ಲಿ ರಾಜಕೊಟ್ಟು, ವ್ಯವಹಾರದಲ್ಲಿ ಬೆಂಬಲ ನೀಡುವ ದ್ವಿಮುಖ ಧೋರಣೆಯು ಯಾರ ಪ್ರೀತಿಯನ್ನೂ ಪಾಕಿಸ್ತಾನಕ್ಕೆ ಸಂಪಾದಿಸಿ ಕೊಡಲಾರದು—ಎಲ್ಲರೂ ಅದನ್ನು ನಗುವ ಸಂದರ್ಭವೇ ಬಂದೀತು.

ನೆಹರುಗಳಿಗೆ ಬೆಂಬಲ

ಜಗತ್ತಿನಲ್ಲಿ ಭಾರತ ಸರಕಾರದ ಧೋರಣೆ ಹೆಚ್ಚು ಹೆಚ್ಚಾಗಿ ಬೆಂಬಲ ವ್ಯಕ್ತವಾಗುತ್ತಿದೆ—ಬರ್ಮದ ಪಾರ್ಲಿಮೆಂಟಿನಲ್ಲಿ ಮೊರೊಕ್ಕೊ-ಅಲ್ಜೀರಿಯಗಳಲ್ಲಿ ಫ್ರೆಂಚರ ಸಾಮ್ರಾಜ್ಯವಾದಿತ್ವವನ್ನು ಖಂಡಿಸುವ ಗೊತ್ತುವಳಿಯೊಂದಿಗೆ ಗೋವೆಯಲ್ಲಿ ಪೋರ್ಚುಗೀಜರು ಇನ್ನೂ ತಳವೂರಿರುವುದನ್ನು ನಿಷೇಧಿಸಿ, ಭಾರತ ಸರಕಾರದ ನಿಲುಮೆಗೆ ಬೆಂಬಲವನ್ನು ವ್ಯಕ್ತಪಡಿಸುವ ನಿರ್ಣಯ ಅಂಗೀಕೃತವಾಯಿತು. ಚೀನದ ರಾಜಧಾನಿಯಾದ ಪೇಕಿಂಗಿನಲ್ಲಿ ಪ್ರಚಂಡ ಮೆರವಣಿಗೆಯೊಂದು ನಡೆದು, ನೆಹರುಗಳಿಗೆ ಜೀಸೀಯರ ಬೆಂಬಲವಿದೆ ಎಂದು ತಿಳಿಸಲಾಯಿತು. ಲಂಡನ್ನಿನಲ್ಲಿ ಭಾರತೀಯ ವಿದ್ಯಾರ್ಥಿಗಳು ಪೋರ್ಚುಗಾಲದ ರಾಯಭಾರಿ ಕಚೇರಿಯ ಮುಂದೆ ಶಾಂತರೀತಿಯ ಮತ ಪ್ರದರ್ಶನ ನಡೆಸಿದರು. ಸಿಂಹಳದ ಪಾರ್ಲಿಮೆಂಟಿನಲ್ಲಿ ಪ್ರತಿಪಕ್ಷದ ಧುರೀಣರಾಗಿರುವ ಶ್ರೀ ಭಂಡಾರ ನಾಯಕೆಯವರು ಗೋವೆಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಸ್ವಯಂಸೇವಕರನ್ನು ಕಳಿಸಲು ಸಿದ್ಧನಿರುವೆನಾಗಿ ಸೂಚಿಸಿದ್ದಾರೆ.

ನವಜಾಗೃತಿಯ ಉದಯ

ವಾರ್ತಾಪತ್ರಿಕೆಗಳ ಸ್ವಂತಾಭಿಪ್ರಾಯ ಏನೇ ಇರಲಿ — ಗೋವೆಯ ವಾಸ್ತವ ಪರಿಸ್ಥಿತಿಯ ಕುರಿತು ಕೆಲವಂಗಡರು ಸುದ್ದಿಗಾರರು ತಂತಮ್ಮ ಪತ್ರಿಕೆಗಳಿಗೆ ಕಳಿಸಿರುವ ವಿಶೇಷ ಲೇಖನಗಳು ಭಾರತದೊಡನೆ ಗೋವೆ ಎಂಡು—ಮೂರು ವರ್ಷಗಳೊಳಗೆ ಲೀನವಾಗಲೇ ಬೇಕು—ಎಂದು ಸ್ಪಷ್ಟ ಪಡಿಸುತ್ತವೆ. ಭಾರತದ ಸಂಪರ್ಕವನ್ನು ಕಡಿದುಕೊಂಡು ಬಾಳುವಷ್ಟು ಸ್ವತಂತ್ರ ಅಸ್ತಿತ್ವವನ್ನು ಗೋವೆ ಮತ್ತಿತರ ಭಾರತದಲ್ಲಿನ ಪೋರ್ಚುಗೀಜರ ಸ್ವಾಸ್ತ್ಯಗಳು ಪಡೆದಿಲ್ಲ ಎಂದು ಈ ಲೇಖನಗಳು ಸಕಾರಣವಾಗಿ ವಿವರಿಸುತ್ತವೆ. ಈಗೋಸ್ತು ಗೆಜರ ಪ್ರಚಂಡ ಸತ್ಯಾಗ್ರಹ ಮತ್ತು ಪೋರ್ಚುಗೀಜರ ಗೋಳೀಬಾರಿನ ದೆಸೆಯಿಂದ, ಸ್ಥಳೀಯ ಗೋವಾಂತಕರಲ್ಲಿ ನವಜಾಗೃತಿಯೂ ಸ್ಫೂರ್ತಿಯೂ ಉಂಟಾಗಿದೆ; ಸ್ವತಃ ಚಳವಳಿ ನಡೆಸುವ ಹುಮ್ಮಸ್ಸೂ ಬಲಿತಿದೆ ಎಂದು ಗೊತ್ತಾಗಿದೆ.

ಸ್ಥಳೀಯರ ಒತ್ತಾಯ

ಇದರ ಸದುಪಯೋಗವನ್ನು ಪಡೆಯಲು ಗೋವೆಯ ರಾಷ್ಟ್ರೀಯ ಕಾಂಗ್ರೆಸು ಕಾರ್ಯಕಾರಿಣಿ ತನ್ನ ಸಭೆಯಲ್ಲಿ ಪೊನ್ನೆ ತಾನೆ ನಿರ್ಧರಿಸಿತು. ಗೋವೆಯೊಳಗಿದೆ ಸ್ವತಃ ಗೋವಾಂತಕರು ಸತ್ಯಾಗ್ರಹವನ್ನು ಹೇಗೆ, ಎಲ್ಲಿ, ಯಾವಾಗ ಪ್ರಾರಂಭಿಸಬೇಕು ಎಂದು ಮುಂತಾದ ವಿವರ ಸೂಚನೆಗಳನ್ನು ಕೊಡಲು ಕಾಂಗ್ರೆಸು ನಿರ್ಧರಿಸಿದೆ. ಇದನ್ನು ಗುಸ್ತವಾಗಿ ಗೋವಾಂತಕರಿಗೆ ನೀಡಲಾಗುತ್ತದೆ. ಈ ಸತ್ಯಾಗ್ರಹವು ಬಲಿಯುವಂತೆ ಎಲ್ಲ ಪ್ರೋತ್ಸಾಹವನ್ನು ಒದಗಿಸಲಾಗುತ್ತದೆ. ಗೋವೆಯೊಳಗಿನ ಜನರ ಈ ಒತ್ತಡಕ್ಕೆ ಪೋರ್ಚುಗಾಲದಲ್ಲಿನ ಜನರ ಬೆಂಬಲವೂ ದೊರಕಿದರೆ ಸಾಲಾಝೂರರ ಸರ್ವಾಧಿಕಾರ ಹೆಚ್ಚು ದಿನ ನಡೆಯದು. ಗೋವೆಯಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೋಸ್ಕರ ಸ್ವಾತಂತ್ರ್ಯ ದಾನ ಮಾಡಬೇಕೆಂದು ಪೋರ್ಚುಗಾಲಿನ್ನಿಲ್ಲಿ ಶಾಂತಿ ಸಮಿತಿ ಚಳವಳಿ ನಡೆಸಿದೆಯೆಂದು ಗೊತ್ತಾಗಿದೆ. ಗೋವಾಂತಕರ ಸ್ವಾತಂತ್ರ್ಯದ ಬೇಡಿಕೆಯನ್ನು ಬೆಂಬಲಿಸುವ ಮತ್ತು ಭಾರತದೊಡನೆ ವಿಲೀನ ವಾಗಬೇಕೆಂಬುದಕ್ಕೆ ಸಮ್ಮತಿಸುವ ಘೋಷಣೆಗಳನ್ನೂ ಮಾಡುತ್ತ ಪೋರ್ಚುಗಾಲಿನ ಪ್ರಮುಖ ಪಟ್ಟಣಗಳಲ್ಲಿ ಈ ಸಮಿತಿಯು ಮೆರವಣಿಗೆ ತೆಗೆಯುತ್ತಿದೆಯೆಂದು ಕೇಳುತ್ತೇವೆ.

ಸಾರ್ವಜನಿಕರ ಅಭಿಮತ

ಸಾರ್ವಜನಿಕ ಅಭಿಪ್ರಾಯವು ಇನ್ನು ಪ್ರಬಲವಾಗಿರುವಾಗ, ಗೋವೆಯ ವಿಮೋಚನೆ ಎಷ್ಟಕ್ಕೂ ಹಗಲುಗನಸಾಗದು. ಪರಿಸ್ಥಿತಿಯು ಸ್ಫಿರವಾಗಿಯೇ ಆಗಲಿ, ನಮಗೆ ಅನುಕೂಲವಾಗಿ ತಿರುಗಿ ಕೊಳ್ಳುತ್ತಿರುವಾಗ ನಾವು ಅವಸರಮಾಡುವುದೂ ಸಲ್ಲದು.

(೮ನೇ ಪುಟ ನೋಡಿರಿ)

ಖಾತ್ರಿ ಮ್ಹಾಲು! ಕಡಿಮೆ ಬೆಲೆ!

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂದಲು, ತೋಳಗ, ಗಡ್ಡ ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತಟಿಗೆ ಹೆಚ್ಚುವ ಮಿರುಗಿನ ಅಂಟು, ತಲೆಸೂಡಿಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

DHARAMSHI MULJI,
Dresswala, 132 C, Bhagatwadi, Bhuleshwar Road, BOMBAY—2.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧-೯-೧೯೫೫	೧

ದಕ್ಷಿಣ ಕನ್ನಡದ ಅಭಿವೃದ್ಧಿ

ಮದ್ರಾಸಿನ ಶಾಸನ ಸಭೆಗಳೆರಡೂ ಕಳೆದ ವಾರ ರಾಜ್ಯದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಸ್ಥೂಲ ಕಾರ್ಯಕ್ರಮಗಳನ್ನು ವಿವರಿಸುವ ಶ್ವೇತಪತ್ರವನ್ನು ಚರ್ಚಿಸಿ, ಅದಕ್ಕೆ ಅನುಮೋದನೆಯನ್ನು ಕೊಟ್ಟಿವೆ. ಸರಕಾರದವರು ಈ ಕರಡನ್ನು ಜನತೆಯ ಯೋಜನೆ ಎಂಬುದಾಗಿ ಕರೆಯಲ್ಪಡುವ ಮಾದರಿಯಲ್ಲಿ ಸಿದ್ಧಪಡಿಸಿರುವುದಾಗಿ ಹೇಳಿದ್ದಾರೆ—ಆದರೆ ಇದರ ಎಷ್ಟೋ ಅಂಶಗಳು ಟೀಕೆಗೆ ಗುರಿಯಾಗಿವೆ; ಅಲ್ಲದೆ ಪಶ್ಚಿಮ ಕರಾವಳಿಯ, ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಮರೆತೇ ಬಿಟ್ಟಂತಾಗಿದೆ ಎಂಬ ಆರೋಪವನ್ನೂ ಸರಕಾರದ ಮೇಲೆ ಹೊರಿಸಲಾಗಿದೆ. ಇದರಲ್ಲಿ ತಿರುಳಿಲ್ಲವೆಂದೇನಲ್ಲ—ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯು ಈಗ ತೀರ್ಮಾನದ ಘಟ್ಟಕ್ಕೆ ಸಮೀಪವಾಗುತ್ತಿದೆ; ಎಲ್ಲರ ನಿರೀಕ್ಷೆಯು ಸತ್ಯವಾದರೆ ಮಲಬಾರು ಜಿಲ್ಲೆಯು ನೂತನ ಕೇರಳ ರಾಜ್ಯದಲ್ಲಿಯೂ ದಕ್ಷಿಣ ಕನ್ನಡವು ಸಂಯುಕ್ತ ಕರ್ನಾಟಕ ರಾಜ್ಯದಲ್ಲಿಯೂ ಸೇರಿ ಹೋಗುತ್ತದೆ. ಹೀಗೆ ಮದ್ರಾಸಿನೊಡನೆ ಇವೆರಡು ಜಿಲ್ಲೆಗಳ ಸಂಬಂಧ ತಪ್ಪಿ ಹೋಗುವುದರಿಂದ ಸರಕಾರವು ದ್ವಿತೀಯ ಯೋಜನೆಯ ವಿಷಯದಲ್ಲಿ ಈ ಜಿಲ್ಲೆಗಳ ಆವಶ್ಯಕತೆಯನ್ನು ಗಮನಕ್ಕೆ ತಂದುಕೊಂಡಿಲ್ಲ ಎಂಬ ದೂರಿಗೆ ಎಡೆ ದೊರೆತಿದೆ. ಶ್ವೇತಪತ್ರವನ್ನು ನೋಡಿದರೆ, ಕೈಗಾರಿಕೆಯ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಉದ್ದೇಶ ಸ್ಪಷ್ಟವಾಗಿದ್ದರೂ ಈ ಜಿಲ್ಲೆಯಲ್ಲಿ ಯಾವ ಬಗೆಯ ಮಹೋದ್ಯಮವೂ ಸ್ಥಾಪಿಸಲ್ಪಡುವುದಿಲ್ಲ. ನಮ್ಮಲ್ಲಿ ಮಲೆನಾಡಿನ ಅರಣ್ಯ ಸಂಪತ್ತನ್ನು ದೊಡ್ಡ ಕೈಗಾರಿಕೆಯಲ್ಲಿ ಬಳಸಿಕೊಳ್ಳುವಂತೆ ಕಾರ್ಯಕ್ರಮವನ್ನು ರಚಿಸಿಕೊಳ್ಳಬಹುದು. ಬೆಂಕಿಪೆಟ್ಟಿಗೆ ಮತ್ತು ಕಾಗದ ತಯಾರಿಕೆಗಳಿಗೆ ಅರಣ್ಯ ಸಂಪತ್ತನ್ನು ಧಾರಾಳವಾಗಿ ಉಪಯೋಗಿಸಬಹುದು. ಅದರಂತೆ ಪಡು ಕರಾವಳಿಯಲ್ಲಿ ಸಮುದ್ರ ಮಧ್ಯದಲ್ಲಿ ಆಳವಾದ ಜಾಗಕ್ಕೆ ಹೋಗಿ ಮೀನು ಹಿಡಿಯುವ ಉದ್ಯಮವನ್ನು ಬೆಳೆಸುವುದು, ಮತ್ತು ಮೀನಿನ ಸುಲಭ ಸಾಗಾಟ ಮತ್ತು ಸಂಗ್ರಹ ವ್ಯವಸ್ಥೆಯನ್ನು ಕೈಗೊಳ್ಳುವುದು ಕಷ್ಟವಲ್ಲ. ನಮ್ಮ ಇವೆರಡು ನೈಸರ್ಗಿಕ ಸಂಪತ್ತುಗಳ ವಿಷಯದಲ್ಲಿ ಯೋಜನೆಯು ಏನೇನೂ ಲಕ್ಷ್ಯ ಕೊಟ್ಟಿಲ್ಲವೆಂಬುದು ವಿಷಾದಕರ. ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶಕ್ಕೆ ಇದು ಪೋಷಕವಾದುದಲ್ಲ—ಈ ತಪ್ಪನ್ನು ಸ್ವಲ್ಪಮಟ್ಟಿಗಾದರೂ ತಿದ್ದಿಕೊಳ್ಳಲು ಸರಕಾರ ಇನ್ನಾದರೂ ಪ್ರಯತ್ನಶೀಲವಾಗಬೇಕು; ಉದಾಹರಣೆಗೆ ಮಂಗಳೂರಿನಲ್ಲಿ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುತ್ತಿರುವ ಸಂಸ್ಥೆಯನ್ನು ಇಂಜಿನಿಯರಿಂಗಿನಲ್ಲಿ ವಿಶೇಷ ನೈಪುಣ್ಯ ಸಂಪಾದಿಸಿಕೊಡುವ ಕೇಂದ್ರವಾಗಿ ಸರಕಾರ ಪರಿವರ್ತಿಸಲು ನಿರ್ಧರಿಸುವುದೊಳಿತು. ವಿದ್ಯುಚ್ಛಕ್ತಿ ವಿಸ್ತರಣೆಯ ಕಡೆಗೆ ಸಹ ಈಗಿಗಿಂತ ಹೆಚ್ಚು ಗಮನವನ್ನು ಕೊಡಬೇಕು—ಅಲ್ಲದೆ ಅಗ್ಗವಾದ ದರದಲ್ಲಿ ರೈತರಿಗೆ ಮತ್ತು ಚಿಕ್ಕ ಮಟ್ಟದಲ್ಲಿ ಕೈಗಾರಿಕೆಗಳನ್ನು ನಡೆಸುವವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕು. ಜೋಗದಿಂದ ಬರುವ ವಿದ್ಯುಚ್ಛಕ್ತಿ ಬೇಗನೇ ಬಂದು, ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಬಳಸಲ್ಪಡುವಂತೆ ಸರಕಾರ ಇನ್ನಷ್ಟು ತ್ವರಿತಗತಿಯಿಂದ ಕೆಲಸಗಳನ್ನು ಮುಂದೊತ್ತಬೇಕು. ಜಿಲ್ಲೆಯಲ್ಲಿ ಹತ್ತಿಪ್ಪತ್ತು ಗ್ರಾಮಗಳಿಗೆ ಮಾತ್ರ ಈಗ ಕೈಗೆ ಎಟಕದ ದರದಲ್ಲಿ ವಿದ್ಯುಚ್ಛಕ್ತಿ ಪೂರೈಸಲ್ಪಡುತ್ತದೆ. ಬೆಲೆ ಹೆಚ್ಚು ಎಂಬ ಕಾರಣದಿಂದಾಗಿ ಅದನ್ನು ಉಪಯೋಗಿಸಲು ಜನರು ಅಷ್ಟು ಮುಂದಾಗಿಲ್ಲ—ನೀರಿನ ಆಶ್ರಯವಿದ್ದರೆ ಮೂರು ಬೆಳೆಗಳನ್ನೂ ನಮ್ಮ ಗದ್ದೆಗಳಲ್ಲಿ ತೆಗೆಯಬಹುದೆಂದೂ ಕಬ್ಬು ಮುಂತಾದ ರೊಕ್ಕದ ಪೈರುಗಳ ಕೃಷಿ ಮಾಡಬಹುದೆಂದೂ ಗೃಹೋದ್ಯಮಗಳ ಅಭಿವೃದ್ಧಿಯ ದಿಸೆಯಲ್ಲಿ ಹೆಜ್ಜೆ ಮುಂದಿಡಬಹುದೆಂದೂ ತಿಳಿದು, ವಿದ್ಯುಚ್ಛಕ್ತಿಯ ದರವನ್ನು ಅದಷ್ಟು ಕದಿಮೆ ಮಟ್ಟದಲ್ಲಿ ಇಡುವುದು ಅಪೇಕ್ಷಣೀಯ. ದ್ವಿತೀಯ ಯೋಜನೆಯು ಕೇವಲ ತಮಿಳು ನಾಡಿನದಾಗಬಾರದು; ಮದ್ರಾಸು ಸರಕಾರ ಇಷ್ಟು ವರ್ಷಗಳ ವರೆಗೆ ಈ ಜಿಲ್ಲೆಯ ಯೋಗಕ್ಷೇಮವನ್ನು ನೋಡಿಕೊಂಡಿದ್ದು, ಇಲ್ಲಿಯ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿದ್ದು, ಎರಡನೆಯ ಯೋಜನೆಯಲ್ಲಿ ಜಿಲ್ಲೆಯ ಜನರು ಅವಶ್ಯವೆನ್ನುವ ಕಾರ್ಯಕ್ರಮಗಳಿಗೆ ಸ್ಥಾನ ಕೊಡದಿದ್ದರೆ, ಸಂಯುಕ್ತ ಕರ್ನಾಟಕ ಅಸ್ತಿತ್ವಕ್ಕೆ ಬಂದಾಗ, ಜಿಲ್ಲೆಯ ಪಾಲಿಗೆ ಯಾವ ಯೋಜನೆಯೂ ಉಳಿಯದೆ ಹೋದೀತು ಎಂಬ ಹೆದರಿಕೆಗೆ ಎಡೆಯುಂಟು— ಈ ಜಿಲ್ಲೆಯ ಧುರೀಣರು ಈಚೆಗೆ ಸಮಾಲೋಚನೆ ನಡೆಸಿ ಸುಮಾರು ೩೦ ಕೋಟಿ ರೂಪಾಯಿ ವೆಚ್ಚ ಬರುವ ಕಾರ್ಯಕ್ರಮಗಳನ್ನು ಸಿದ್ಧಪಡಿಸಿರುವರೆಂಬ ತಿಳಿದು ಬರುತ್ತದೆ; ಇದನ್ನು ಮದ್ರಾಸಿನ ಸರಕಾರಕ್ಕೆ ಕೂಡಲೇ ಒಪ್ಪಿಸಿ, ಅದಷ್ಟು ಹೆಚ್ಚು ಯೋಜನೆಗಳಿಗೆ ಮನ್ನಣೆ ದೊರಕಿಸಿಕೊಳ್ಳುವುದು ಇಷ್ಟವಾಗಿದೆ. ಜಿಲ್ಲೆಯಲ್ಲಿ ಹಾಲಾಡಿ ನದಿಗೆ ಅಣೆಕಟ್ಟನ್ನು ಕಟ್ಟಿ, ನೀರಾವರಿಗೆ ನೆರವಾಗುವ ಒಂದು ಯೋಜನೆಗೆ ಪ್ರಾಶಸ್ತ್ಯ ದೊರೆತಿದೆ; ಅದರ ಇನ್ನೂ ಅನೇಕ ಸಣ್ಣ ಮಟ್ಟಿನ ಅಣೆಕಟ್ಟುಗಳಿಗೆ ಸರಕಾರದ ಪ್ರೋತ್ಸಾಹ ಅವಶ್ಯವಿದೆ. ಬಂದರು ಮತ್ತು ರೈಲುಗಳ ನಿರ್ಮಾಣದಲ್ಲಿ ಕೇಂದ್ರ ಸರಕಾರದ ಮಾತೇ ನಡೆಯುತ್ತದೆ ಎಂಬುದು ನಿಜ—ಆದರೂ ರಾಜ್ಯ ಸರಕಾರವು ಜನರ ಪ್ರತಿನಿಧಿ ತಾನೆಂಬ ಅಧಿಕಾರಬಲದಿಂದ ಈ ವಿಷಯದಲ್ಲಿ ತನ್ನ ಸಲಹೆಯನ್ನು ನೀಡಿ, ಜಿಲ್ಲೆಯ ಪ್ರಾಥಮಿಕ ಅವಶ್ಯಕತೆಗಳ ಪೂರೈಕೆಗೆ ನೆರವಾಗುವುದು ಹಿತಕರ. ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಯೋಜನೆಯಲ್ಲಿ ಕಾಲಂಶದಷ್ಟು ಹಣ ತೆಗೆದಿರಿಸಲ್ಪಟ್ಟಿದೆ—ಜಿಲ್ಲೆಯ ಅನೇಕ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲವೆಂಬ ಮತ್ತು ಸಮರ್ಪಕ ಸೇವೆಯು ಇಲ್ಲಿ ಜನರಿಗೆ ಸಿಗುತ್ತಿಲ್ಲವೆಂಬ ಸಂಗತಿ ಸರಕಾರದ ಕಣ್ಣಿಗೆ ಬಿದ್ದಿದೆ ಎಂದು ಭಾವಿಸುತ್ತೇವೆ; ಇದನ್ನು ಸರಿಪಡಿಸಲು ಮತ್ತು ಹೊಸ ವೈದ್ಯರನ್ನು ತರಬೇತಿಗೊಳಿಸುವ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿಗೆ ಇನ್ನಷ್ಟು ಉದಾರವಾದ ನೆರವು ನೀಡಲು ಸರಕಾರ ಕಾರ್ಯ ಪ್ರವೃತ್ತವಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ. ಜನರ ಶಕ್ತಿ ಮತ್ತು ಉತ್ಸಾಹಗಳ ಪ್ರಯೋಜನ ಪಡೆದುಕೊಳ್ಳುವ ಇರಾದೆಯಿಂದ ಸ್ಥಳೀಯ ಅಭಿವೃದ್ಧಿ ಯೋಜನೆಗಳಿಗೆ ಸಹ ಹೆಚ್ಚು ಹಣ ನಿಗದಿಯಾಗಿದೆ—ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಅನೇಕ ಉಪಯುಕ್ತ ಕೆಲಸಗಳು ಈ ಕ್ಷೇತ್ರದಲ್ಲಿ ನಡೆದಿವೆ; ಎರಡನೆಯ ಯೋಜನೆಯು ಈಗ ಉಂಟಾಗಿರುವ ಲವ ಲವಿಕೆಯ ಮನೋಭಾವವನ್ನು ಪೋಷಿಸಿಕೊಂಡು ಹೋಗುವುದೆಂದು ನಂಬುತ್ತೇವೆ. ಸರಕಾರದವರು ೨೫೫ ಕೋಟಿ ರೂಪಾಯಿ ವೆಚ್ಚದ ತಮ್ಮ ಯೋಜನೆಯ ಕರಡಿಗೆ ಕೊನೆಯ ರೂಪ ಕೊಡಲು, ಇಷ್ಟರಲ್ಲಿ ಯೇ ಪ್ರತಿಯೊಂದೂ ಜಿಲ್ಲೆಯ ಚುನಾಯಿತ ಜನ ಪ್ರತಿನಿಧಿಗಳನ್ನು ಸಮಾಲೋಚನೆಗಾಗಿ ಕರೆಸಿಕೊಳ್ಳುವರೆಂದು ತಿಳಿದಿದೆ—ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳುಸರಕಾರದಿಂದ ಇನ್ನಷ್ಟು ಹೆಚ್ಚು ಕೆಲಸಕ್ಕೆ ನಮ್ಮ ಜಿಲ್ಲೆಯಲ್ಲಿ ಒಪ್ಪಿಗೆ ಸಿಗುವಂತೆ ಪ್ರಯತ್ನಿಸಬೇಕೆಂದು ಒತ್ತಾಯಿಸುತ್ತೇವೆ. ನಾವು ಈ ಸರಕಾರದ ಮೇಲೆ ಈಗ ಪ್ರಭಾವ ಬೀರದಿದ್ದರೆ, ಮುಂದಿನ ಐದಾರು ವರ್ಷಗಳ ಕಾಲ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗುವ ಸಂಭವವೇ ಹೆಚ್ಚು-ಎಂದು ನಮ್ಮ ಅಭಿಪ್ರಾಯ.

ಇದು ಹೊಸ ವರ್ಷ

ನಮ್ಮನ್ನು ಈ ಸಂಚಿಕೆಯು "ನವಯುಗ"ದ ಉಪಯುಕ್ತ ರಾಷ್ಟ್ರೀಯ ಸೇವೆಯ ಒಂಬತ್ತನೇ ವರ್ಷಕ್ಕೆ ತಂದು ನಿಲ್ಲಿಸಿದೆ ಎಂಬ ವಿಷಯವನ್ನು ಸಹೃದಯ ವಾಚಕರ ಗಮನಕ್ಕೆ ತರಲು ನಾವು ಸಂತೋಷಪಡುತ್ತೇವೆ. ಅಗ್ಗದ ಟೀಕೆ ಮತ್ತು ಕೇವಲ ಮನೋರಂಜನೆಯ ಲಘು ಉದ್ದೇಶಕ್ಕಿಂತ ಎಷ್ಟೋ ಹೆಚ್ಚು ಮಹತ್ವ ಪಡೆದ ಪತ್ರಿಕೋದ್ಯಮದ ಘನವಾದ ಆದರ್ಶಗಳನ್ನಿಟ್ಟುಕೊಂಡು "ನವಯುಗ"ವು ಇಷ್ಟರ ವರೆಗೆ ನಾಡಿಗೆ ಸೇವೆ ಸಲ್ಲಿಸಿದೆ. ವಿಧಾಯಕ ಟೀಕೆ ಟಿಪ್ಪಣಿಗಳನ್ನಿತ್ತು, ಶುಚಿಯಾದ ಆಭಿರುಚಿಯನ್ನು ಬೆಳೆಸಿ, ಪ್ರಚಲಿತ ವಿಷಯಗಳ ಮೇಲೆ ಪ್ರಕಾಶ ಬೀರುವ ಲೇಖನಗಳನ್ನು ಕ್ರಮವಾಗಿ ಪ್ರಕಟಿಸಿ, ಪತ್ರಿಕೆಯು ಬೋಧಪ್ರದವೂ ವಿಚಾರ ಪ್ರಚೋದಕವೂ ಆಗುವಂತೆ ನಾವು ಬಹಳವಾಗಿ ಪರಿಶ್ರಮಪಟ್ಟಿದ್ದೇವೆ. ಎಷ್ಟೋ ವಿಷಯಗಳಲ್ಲಿ "ನವಯುಗ"ವು ಕನ್ನಡದ ಪತ್ರಿಕೋದ್ಯಮದಲ್ಲಿ ಮೇಲ್ಮಟ್ಟದ ಸ್ಥಾನ ಗಳಿಸಿದೆ ಎಂಬುದನ್ನು ನಾವು ಹೇಳಿಕೊಳ್ಳುವುದು ಅಷ್ಟು ಚಂದವೆನಿಸದಿದ್ದರೂ—ಅದು ಅಭಿಮಾನದ ವಿಷಯ ಎಂಬುದೇನು ಸುಳ್ಳಲ್ಲ. ನಮ್ಮ ಓದುಗರು ನಮ್ಮ ಬೆಂಬಲಕ್ಕೆ ನಿಂತರೆ, ಪತ್ರಿಕೆ ಇನ್ನಷ್ಟು ಚೆನ್ನಾಗಿ ನಡೆಯಬಲ್ಲುದು. ಬಹಳ ಕಾಲದಿಂದ ಚಂದಾದಾರರಾಗಿ ಪತ್ರಿಕೆಯನ್ನು ಪೋಷಿಸಿಕೊಂಡು ಬಂದವರು ಮುಂದಕ್ಕೂ ನಮ್ಮ ಬೆಂಗಾವಲಿಗೆ ನಿಂತು, ನಮ್ಮ ಅಡಚಣೆಗಳನ್ನು ದೂರ ಮಾಡಬೇಕು ಎಂದು ವಿನಂತಿಸುತ್ತೇವೆ. ಅನೇಕ ಅನಾನುಕೂಲತೆಗಳ ದೆಸೆಯಿಂದ ಕ್ಲಿಷ್ಟ ಸಮಯಕ್ಕೆ ಚಂದಾ ಹಣವನ್ನು ಪಾವತಿ ಮಾಡಲಾಗದಿದ್ದವರು, ಅದಷ್ಟು ಬೇಗನೆ ಹಣವನ್ನು ರವಾನಿಸಿ ಕೊಟ್ಟು ನೆರವಾಗಬೇಕು, ನಮಗೆ ಪ್ರೋತ್ಸಾಹ ನೀಡಬೇಕು ಎಂದು ಬಿನ್ನವಿಸುತ್ತೇವೆ. ಪತ್ರಿಕೆಯಲ್ಲಿ ಓದುಗರೂ ಚಂದಾದಾರರೂ ಅದಷ್ಟು ಹೆಚ್ಚು ಸಕ್ರಿಯ ಆಸ್ಥೆಯನ್ನು ತೋರಿಸಿದರೆ ನಾವು ಕೃತಜ್ಞರಾಗಿರುತ್ತೇವೆ. ಚಾಹೀರಾತುದಾರರ ನೆರವು ಸಹ ನಮಗೆ ಅತ್ಯವಶ್ಯವಾಗಿದೆ—"ನವಯುಗ"ವು ಕಾಲದೊಡನೆ ಪ್ರಗತಿಪಥದಲ್ಲಿ ಮುನ್ನಡೆಯನ್ನು ಇಡುತ್ತಾ, ಹೋದಂತೆ ನಮ್ಮ ಬಳಗವೂ ವಿಸ್ತಾರವಾಗಬೇಕು ಎಂದು ನಮ್ಮ ಉತ್ಕಟೇಚ್ಛೆಯಾಗಿದೆ; ಹಳೆಯ ಕಾಲದ, ಒಣ ಹರಟೆಯ ಪತ್ರಿಕೆ ಎಂಬ ಸಾಮಾನ್ಯ ತಿರಸ್ಕಾರವನ್ನು ತೋರಿಸದೆ, ಸಾರ್ವಜನಿಕರು "ನವಯುಗ"ದ ಘನತೆಯನ್ನು ಮೆಚ್ಚಿ ಆದರಿಸಬೇಕು ಎಂದು ಪ್ರಾರ್ಥಿಸಿ, ನಮಗೆ ನೆರವಾದ ಎಲ್ಲರಿಗೂ ಆಭಾರ ಸೂಚಿಸುತ್ತೇವೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಚರ್ಚೆ ಕಾಲದಲ್ಲಿ ಮದ್ರಾಸು ಎಸೆಂಬ್ಲಿಯಲ್ಲಿ ಶ್ರೀ ವೈ. ಮಂಜಯ್ಯ ಸೆಟ್ಟಿರು ಮಾಡಿದ ಭಾಷಣದ ಸಾರಾಂಶ:— "ಪ್ರಥಮ ಪಂಚವಾರ್ಷಿಕ ಯೋಜನೆಯ ಪರಿಣಾಮವಾಗಿ ಆದಾರದ ಮಟ್ಟಿಗೆ ದೇಶವು ಸರ್ವಸಾಧಾರಣ ಸ್ವಾವಲಂಬಿಯಾಯಿತು. ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ದೇಶದ ಕೈಗಾರಿಕೆಗಳನ್ನು ವೃದ್ಧಿಸುವುದಕ್ಕೆ ಸರಕಾರವು ಹೆಚ್ಚಿನ ಸ್ಥಾನವನ್ನು ಕೊಟ್ಟಿರುವುದು. ದೊಡ್ಡ ಮತ್ತು ಚಿಕ್ಕ ಮಟ್ಟದ ಕೈಗಾರಿಕೆಗಳ ಅಭಿವೃದ್ಧಿಯಾದರೆನೇ ದೇಶದ ಭಾಷೀ ಶ್ರೇಯಸ್ಸು ಸಾಧನವಾಗಿ ನಡೆಯುವುದೆಂದು ಪ್ರಧಾನ ಸೆಕರೂಲೆರವರು ಪದೇ ಪದೇ ಹೇಳುತ್ತಲಿದ್ದಾರೆ. ಪ್ರಥಮ ಪಂಚವಾರ್ಷಿಕ ಯೋಜನೆಯಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯು ಜನತೆಯ ಯೋಜನೆಯಾಗಿರುವುದು. ಆದುದರಿಂದ ಈ ಯೋಜನೆಯ ಸಾಫಲ್ಯಕ್ಕೆ ಜಿಲ್ಲಾ ಮಟ್ಟದಿಂದ ಸಲಹೆಗಳನ್ನು ಸಂಗ್ರಹಿಸಲು ರಾಜ್ಯ ಸರಕಾರವು ನಿರ್ಧರಿಸಿರುವುದು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಸರಕಾರವು ಜನತೆಯಲ್ಲಿ ಉಂಟುಮಾಡಿದ ಉತ್ಸಾಹವನ್ನು ದ್ವಿತೀಯ ಯೋಜನೆಯಲ್ಲೂ ದ್ವಿಗುಣಿತಗೊಳಿಸಬೇಕಾಗಿದೆ. ನೀರಾವರಿ ಯೋಜನೆಗೆ ಸಾಧಾರಣ 750ರಿಂದ 80 ಕೋಟಿ ರೂಪಾಯಿಗಳ ವೆಚ್ಚ ಮಾಡಲು ದ್ವಿತೀಯ ಯೋಜನೆಯಲ್ಲಿ ಅವಕಾಶವಿದೆ. ಹಿಂದುಳಿದ ಜಿಲ್ಲೆಯಲ್ಲಿ ನೀರಾವರಿ ಕೆಲಸಗಳನ್ನು ಪ್ರಾಧಾನ್ಯತೆ ಕೈಕೊಳ್ಳಬೇಕೆಂದು ಸರಕಾರದ ಉದ್ದೇಶವಿರುವುದು. ದ. ಕ. ಜಿಲ್ಲೆಯಲ್ಲಿ ಯೋಗ್ಯ ನೀರಾವರಿ ಯೋಜನೆಗಳಿಲ್ಲದೆ ಮಳೆಗಾಲದ ನೀರು ಆರೇಬಿಯಾ ಸಮುದ್ರದಲ್ಲಾಗುತ್ತಿರುವುದು ಬೇಸರದ ಸಂಗತಿ. ದ್ವಿತೀಯ ಯೋಜನೆಯಲ್ಲಿ ದ ಕ. ಜಿಲ್ಲೆಯ ಹಾಲಾಡಿ ನೀರಾವರಿ ಯೋಜನೆಯನ್ನು ಸರಕಾರವು ಸೇರಿಸಿದೆ ಎನ್ನಲು ಸಂತೋಷವಾಗುತ್ತದೆ. ಆದರೆ ಈ ಕಾರ್ಯವು ಸರ್ವಸ್ರೀಘ್ರವಾಗಬೇಕೆಂದು ನಾನೀ ಸಂದರ್ಭದಲ್ಲಿ ಸರಕಾರದ ಮನಕ್ಕೆ ತರಲಿಚ್ಛಿಸುತ್ತೇನೆ.

ಇದೇಕ್ಷಿಸಿಟಿ ಪ್ರಸಾರದಲ್ಲಿ ಸರಕಾರವು ಸಾಕಷ್ಟು ಗಮನವೀಯುತ್ತಿರುವುದಾದರೂ

(೨ನೇ ಪುಟದಲ್ಲಿ ಕಲಂ ನೋಡಿ)

ಅಲ್ಜೀರಿಯದಲ್ಲಿ ವಿಷಮ ಪರಿಸ್ಥಿತಿ

ಮೊರೊಕ್ಕೋಗೆ ಹೆಚ್ಚಿನ ಸ್ವಾತಂತ್ರ್ಯ

ಮೊರೊಕ್ಕೊ ಮತ್ತು ಅಲ್ಜೀರಿಯಗಳ ಗಲಭೆಯಲ್ಲಿ ಸುಮಾರು ಎರಡು ಸಾವಿರ ಜನರು ಹತರಾಗಿರುವರೆಂದು ತಿಳಿದುಬರುತ್ತದೆ. ಅಲ್ಜೀರಿಯದಲ್ಲಿ ಪರಿಸ್ಥಿತಿಯು ತೀರ ವಿಷಮಾವಸ್ಥೆಯಲ್ಲಿದ್ದು ಫ್ರೆಂಚ್ ಸರಕಾರವು ಇಡೀ ರಾಜ್ಯದಲ್ಲಿ ಜರೂರು ವಾತಾವರಣವನ್ನು ಘೋಷಿಸಿದೆ. ಇದರಿಂದ ನಾಗರಿಕರ ಚಲನ ವಲನ, ಸಾರಿಗೆ ಮತ್ತು ವ್ಯಾಪಾರಾದಿಗಳ ಮೇಲೆ ಸರಕಾರದ ನಿಯಂತ್ರಣ ಹೇರಲ್ಪಡುವುದಾಗಿದೆ.

ಮೊರೊಕ್ಕೊದಲ್ಲಿ

ವಸಾಹತುವಾದದ ನೊಗವನ್ನು ಕಳಚಿಕೊಳ್ಳಲು ರಾಷ್ಟ್ರೀಯರು ಹೋರಾಟ ನಡೆಸಿರುವುದೇ ಎಲ್ಲ ಗಲಭೆಗಳ ಮೂಲ. ಮೊರೊಕ್ಕೋದಲ್ಲಿ ಸ್ಥಳೀಯರಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟಾಗ, ಫ್ರೆಂಚರೂ ಫ್ರಾನ್ಸಿನ ಸರಕಾರವೂ ಇದಕ್ಕೆ ಒಪ್ಪದೆ ವಿರೋಧ ವ್ಯಕ್ತಪಡಿಸಿದುದರಿಂದ ಗೊಂದಲಕ್ಕೆ ಪ್ರಚೋದನೆ ದೊರೆಯಿತು.

ಹೆಚ್ಚಿನ ಸ್ವಾತಂತ್ರ್ಯ

ಇಲ್ಲಿಯ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರಸಂಘದ ಮುಂದೆ ಒಯ್ಯಬೇಕೆಂದು ಆಫ್ರಿಕ ಮತ್ತು ಏಶ್ಯದ ಗುಂಪುಗಳು ವಿಚಾರಿಸುತ್ತಿದ್ದಂತೆಯೇ ಫ್ರಾನ್ಸು ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಲು ಒಪ್ಪಿರುವ ವರದಿಗಳು ಬಂದಿವೆ. ಇದು ಮೊರೊಕ್ಕೊದ ಜನರ ಮೂಲ ಬೇಡಿಕೆಗಳಲ್ಲಿ ಹೆಚ್ಚಿನವನ್ನು ತೃಪ್ತಿಕರವಾಗಿ ಪೂರೈಸುವುದೆಂದು ಹೇಳಬಹುದು.

ಸುಡಾನಿನಲ್ಲಿ ದಂಗೆ

ಆಫ್ರಿಕದ ಇನ್ನೊಂದು ರಾಜ್ಯವಾದ ಸುಡಾನನ್ನು ಸಹ ಕಳೆದ ಕೆಲವು ದಿನಗಳಲ್ಲಿ ದಂಗೆಯ ವಾತಾವರಣ ಕವಿಯಿತು. ದಕ್ಷಿಣದ ಜನರು ಸರಕಾರಕ್ಕೆ ವಿರುದ್ಧರಂತರು ಇವರಿಗೆ ಇಜಿಪ್ಟಿನ ಪ್ರೋತ್ಸಾಹ ಇದೆ ಎನ್ನಲಾಗುತ್ತದೆ ಸದ್ಯಕ್ಕೆ ಈ ದಂಗೆ ವ್ಯರ್ಥವಾಗಿದೆ — ಗವರ್ನರ ಜನರಲರ ತೀಕ್ಷ್ಣ ಎಚ್ಚರಿಕೆಯ ಪರಿಣಾಮವಾಗಿ ದಂಗೆ ಎದ್ದ ಸೈನಿಕರು ಶರ್ತವಿಲ್ಲದೆ ಶರಣಾಗತರಾಗಿದ್ದಾರೆ.

ಶಾಂತಿಗಾಗಿ ಪರಮಾಣು

ಜಿನೇವದ ಪರಿಸ್ಥಿತ್ತಿನಲ್ಲಿ ಭಾಗವಹಿಸಿ ಮರಳಿರುವ ಭಾರತೀಯ ಶಿಷ್ಟ ಮಂಡಳಿದ ಸದಸ್ಯರೊಬ್ಬರು ಶಾಂತಿಗಾಗಿ ಪರಮಾಣು ಶಕ್ತಿಯನ್ನು ಬಳಸುವುದರಲ್ಲಿ ಪಶ್ಚಿಮದ ಎಷ್ಟೋ ರಾಷ್ಟ್ರಗಳಿಗಿಂತ ಭಾರತವು ಮುಂದುವರಿದಿದೆ ಎಂದು ಹೇಳಿದ್ದಾರೆ. ಇನ್ನೈದು ವರ್ಷಗಳಲ್ಲಿ ಭಾರತವು ಫ್ರಾನ್ಸಿನ ಮಟ್ಟವನ್ನು ಈ ಕ್ಷೇತ್ರದಲ್ಲಿ ಮುಟ್ಟಿ ಒಹದು ಎಂದವರ ಅಂದಾಜು. ಈಗಿರುವಂತೆ ಅಮೇರಿಕ, ರಶ್ಯ, ಬ್ರಿಟನು ಮತ್ತು ಫ್ರಾನ್ಸುಗಳು ಅನುಕ್ರಮವಾಗಿ ಈ ಕ್ಷೇತ್ರದಲ್ಲಿ ಮುಂದಿವೆ.

ಮಹಾತ್ಮರ ತತ್ವ ಶಿಕ್ಷಣ

ಭಾರತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಗಾಂಧೀಜಿಯ ತತ್ವ ಬೋಧೆಗೆ ಯೋಗ್ಯ ಸ್ಥಾನವನ್ನು ಕಲ್ಪಿಸಿಕೊಡುವ ವ್ಯವಸ್ಥೆಯೊಂದು ಇಷ್ಟರಲ್ಲೆ ಏರ್ಪಡಲಿದೆ. ಪ್ರತಿಯೊಂದು ಶಾಲೆಯಲ್ಲೂ ಗಾಂಧೀಜಿಯ ಸಾಹಿತ್ಯದ ಅಭ್ಯಾಸ ಮತ್ತು ಅವರ ತತ್ವಗಳ ಮಹತ್ವದ ತಿಳಿವಳಿಕೆಗೆ ಅವಕಾಶ ಒದಗಿಸಿ ಕೊಡುವ ಕಾರ್ಯಕ್ರಮಗಳನ್ನು ಇರಿಸಲಾಗುತ್ತದೆ ಎಂದು ಕೇಳ್ತೇನೆ.

ಉಡುಪಿ

ಶ್ರೀ ವಿ. ಜೆ. ಆಂದ್ರಾದೆಯವರಿಗೆ ವಿದಾಯ ಸತ್ಕಾರ

ಕಥೋಲಿಕ್ ಬೇಂಕಿನ ಉಡುಪಿ ಶಾಖೆಯ ದಕ್ಷ ಜನಪ್ರಿಯ ಮಾನೇಜರಾದ ಶ್ರೀ ವಿನ್ಸೆಂಟ್ ಜೆ. ಆಂದ್ರಾದೆಯವರು ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಕಳೆದ ತಾ. 28ನೇ ಸಂಜೆ ಕಥೋಲಿಕ್ ಬೇಂಕ್ ಕಟ್ಟಡದಲ್ಲಿ ಸತ್ಕಾರ ಸಮಿತಿಯವರಿಂದ ಅವರಿಗೆ ವಿದಾಯಸತ್ಕಾರ ಕೂಟವೊಂದು ಶ್ರೀ ಕೆ. ನರಸರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಸಿಂಟೊ ಮಾನಸತ್ರ ಓದಿ ಅರ್ಪಿಸಿದರು. ಉಪಾಸಾರಾನಂತರ ರೆಜಿತಿಯ ನಯವಿನಯ, ಪ್ರಾಮಾಣಿಕತನ ನೊದಲಾದ ಗುಣನಡತೆಗಳನ್ನು ಕೊಂಡಾಡಿ ಡಾ| ಟಿ. ಮಾಧವ ಪೈ, ಶ್ರೀಗಳಾದ ಬಿ. ಶ್ಯಾಮರಾಯ ಸೆಟ್ಟಿ, ಬಿ. ಎಸ್. ಲೂವಿಸ್, ಎನ್. ವಿ. ಕಾಮತ್, ಎನ್ ಸೀತಾರಾಮ ಕಾಮತ್, ಎಂ. ಹೇಗಾರವರು ಮಾತನಾಡಿದರು. ಮುಖ್ಯ ಅತಿಥಿಗಳು ಸತ್ಕಾರಕ್ಕೆ ಅಭಾರ ಸೂಚಿಸಿದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಶ್ರೀ ಎನ್. ಸೀತಾರಾಮ ಕಾಮತರು ಸಮಿತಿಯ ಪರವಾಗಿ ಸ್ವಾಗತ ಭಾಷಣ ಮಾಡಿದ್ದರು; ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಡಿ| ಮು| ಕೋರ್ಟಿನಲ್ಲಿ

ಕಳೆದ ತಾ. 27ರಲ್ಲು ವಕೀಲ ಸಂಘದ ಅಧ್ಯಕ್ಷ ಶ್ರೀ ಕೆ. ಟಿ. ಬಲ್ಲಾಳರು, ಮಂಗಳೂರಲ್ಲಿ ವಕಾಲತು ನಡೆಸುತ್ತಿದ್ದ ಶ್ರೀ ಕೋಟಿ ನಾರಾಯಣರಾಯರು ನಿಧನರಾದುದನ್ನು ತಿಳಿಸಿ ಸಂತಾಪ ವ್ಯಕ್ತಪಡಿಸಿದರು. ಡಿ. ಮುನ್ಸಿಫ್ ಶ್ರೀ ಪಿ. ಎಫ್. ರೇಗೋರವರು ಕೂಡಾ ಸಂತಾಪಸನ್ನು ಸೂಚಿಸಿ ಐದು ನಿಮಿಷ ಕೋರ್ಟನ್ನು ಮುಂದರಿಸಿದರು. ದಿವಂಗತರು ಆ ರಂಭದಲ್ಲಿ ಈ ಕೋರ್ಟಿನಲ್ಲಿ ಕೆಲಕಾಲ ವಕಾಲತು ನಡೆಸುತ್ತಿದ್ದರು.

ಸಿ. ಎಸ್. ಜಿ. ಎಮ್. ಕಾಲೇಜಿನಲ್ಲಿ—

ಶ್ರೀ ಕೆ. ಶಿವರಾಮ ಕಾರಂತರು ಕಳೆದ ತಾ. 26ರಲ್ಲಿ ಅಲ್ಲಿಯ ಭಾಷಾಸಂಘದ ಉದ್ಘಾಟನೆಯನ್ನು ನೆರವೇರಿಸಿ, 'ಕಾದಂಬರಿ ಸಮಸ್ಯೆ'ಯ ಕುರಿತು ಭಾಷಣಮಾಡಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಅಧ್ಯಕ್ಷತೆವಹಿಸಿದ್ದರು. ಭಾಷಾಸಂಘದ ಕಾರ್ಯದರ್ಶಿ ಶ್ರೀ ಮೋಹನ ರಾಯರು ವಂದನೆಗಳನ್ನಿತ್ತರು.

ನಗರಸಭೆ-

ಕಳೆದ ತಾ. 27ರಲ್ಲಿ ಜರಗಿದ ನಗರಸಭೆಯಲ್ಲಿ ಹಿಂದಿನ ಸದಸ್ಯರು ಶ್ರೀ ಗಳಾದ ಆರ್. ಎ. ಸ್ಯಾಮಾನ್ಸ್ ಮತ್ತು ಸುಂದರಕಾಮತರ ನಿಧನದ ಬಗ್ಗೆ ದುಃಖಸೂಚಕ ನಿರ್ಣಯವಾಗಿ ಎರಡು ನಿಮಿಷ ಮೌನವ್ರತ ನಡೆಯಿತು. ಡಾ| ಪಿ. ವಿ ವ್ಯಾಸರಾಯರು ಸಭಾಧ್ಯಕ್ಷತೆವಹಿಸಿದ್ದು ಶ್ರೀ ಎನ್. ಸೀತಾರಾಮ ಕಾಮತರು ನಿರ್ಣಯವನ್ನು ತಂದರು. ಮುನಸಿಪಾಲಿಟಿಯ ಪೇದೆಗಳಿಗೆ ಸಮವಸ್ತ್ರವನ್ನು ಕೊಡಲು ರೂಪಾಯಿ 320/- ಮಂಜೂರುಮಾಡಲಾಯಿತು. ಕಾಡಬೆಟ್ಟು ವಾರ್ಡಿನ ಹರಿಜನ ಕೊಲನಿಯಲ್ಲಿ ಬಾವಿಯೊಂದನ್ನು ಅಗೆಯುವ ಕುರಿತು ಬಂದ ಪತ್ರವನ್ನು ಓದಲಾಗಿ ಸದ್ರಿ ಬಾವಿಯು ಪ್ರತ್ಯೇಕವಾಗಿಯೋ ಅಥವಾ ಈಗ ತೋಡುತ್ತಿರುವ ಬಾವಿಯೋ ಎಂಬುದನ್ನು ಸ್ಪಷ್ಟವಾಗಿ ತಿಳಿಸುವಂತೆ ಜಿಲ್ಲಾ ವೆಲ್‌ಫೇರ್ ಆಫೀಸರರಿಗೆ ಬರೆಯಬೇಕೆಂದಾಯಿತು. ಮಂಗಳೂರು ಬಲೋಳಿಯರು ಧರ್ಮಾರ್ಥ ಹಂಚಲು ದಾನವಾಗಿ ಕೊಡುವ ಅಮೇರಿಕನ್ ಅಂಟಿಲನ್ನು ತರಿಸುವ ಬಗ್ಗೆ ರೂ. 150 ವೆಚ್ಚ ಮಂಜೂರಾಯಿತು. ಅಂಟುರೋಗ ನಿವಾರಣೆಗೆ ಪ್ರತ್ಯೇಕಿಸಿದಲು ಅದಿಉಡುಪಿಯಲ್ಲೊಂದು ಚಿಡ್ಡನ್ನು ಕಟ್ಟಲು ರೂ. 600/- ಸೇಂಕ್ಷನ್ ಮಾಡಲಾಯಿತು. ಇಲೆಕ್ಟ್ರಿಕ್ ದೀಪಗಳನ್ನು ಕೆಲವೊಂದು ಸ್ಥಳಗಳಲ್ಲಿ ಹಾಕಬೇಕೆನ್ನುವ ನಿರ್ಣಯಗಳು ಲೈಟಿಂಗ್ ಕಮಿಟಿ ತೀರ್ಮಾನಕ್ಕೆಒಪ್ಪಿಸಬೇಕೆನ್ನುವ ಸೂಚನೆಗೆ ಬಹುಮತ ದೊರೆಯಿತು. ಈ ಕುರಿತು ಘರ್ಷಣೆಕೂಡಾ ನಡೆಯಿತು.

ಬಹುಮಾನ—

ಸೇಲ್ಸ್‌ಟೇಕ್ಸ್ ಕೊಡಲು ತಪ್ಪಿಸಿಕೊಂಡವರನ್ನು ಪತ್ತೆಹಚ್ಚಿಕೊಟ್ಟವರಿಗೆ ಮದ್ರಾಸು ಸರಕಾರವು ನಗದು ಬಹುಮಾನಕೊಡಲು ನಿರ್ಧರಿಸಿರುವುದು. ಪತ್ತೆ ಹಚ್ಚಲಾದ ಸೇಲ್ಸ್ ಟೇಕ್ಸಿನಲ್ಲಿ ಅರ್ಧಾಂಶ ಪಣವು ಅಧಿಕ ಹೆಚ್ಚಿಗೆ ಅಂದರೆ ರೂಪಾಯಿ 100 ರ ತನಕ ಕೊಡಲಾಗುವುದು. ಈ ಕಾರ್ಯದಲ್ಲಿ ಮಾಜಾಸರ ಸರ್ಕಾರ ಕೋರಲಾಗಿದೆ. ಪತ್ತೆ ಹಚ್ಚಲಾಗುವ ವಿಷಯಗಳನ್ನು ಡಿಸ್ಟ್ರಿಕ್ಟ ಕಮರ್ಶಿಯಲ್ ಟೇಕ್ಸ್ ಆಫೀಸರ್ ಉಡುಪಿ ಅಥವಾ ಅಸಿಸ್ಟಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ತಿಳಿಸಬೇಕು.

ನಗರಸಭೆಯ ಆಡಳಿತವರದಿಯು

ಲ್ಲಿ—1951-55ನೆ ವರ್ಷಕ್ಕೆ ಸಂಬಂಧಿಸಿದ ಸೈಶಿಸ್ಟಿಕ್ಸ್‌ಗಳು - ಜನಸಂಖ್ಯೆ ಗತವರ್ಷದಂತೆ 20,131 ಇತ್ತು. ಕೌಸ್ಲು ಸಭೆಗಳು 48ಸಲ ಜರಗಿದ್ದವು. ಪಣದ ಕೊರತೆಯಿಂದಾಗಿ ಮೊಸರನ್ನೆಗಳನ್ನು ಹೆಚ್ಚು ಪ್ರಮಾಣದಲ್ಲಿ ಮಾರಲಾಗಲಿಲ್ಲ. ನಗರದ ಆಡಳಿತಕ್ಕೊಳಪಟ್ಟ ಎಲಿಮೆಂಟರಿ ಶಾಲೆಗಳಲ್ಲಿ 651 ಹುಡುಗರು ಮತ್ತು 718 ಹುಡುಗಿಯರು ವಿದ್ಯೆಕಲಿಯುತ್ತಿದ್ದರು. ಪ್ರಾಥಮಿಕ ಶಿಕ್ಷಣವು ಧರ್ಮಾರ್ಥ ಕೊಡಲಾಗುತ್ತಿತ್ತು. ನಗರಕ್ಷೇತ್ರದಲ್ಲಿ ವಸೂಲಾದ ವಿದ್ಯಾತೆರಿಗೆಯು ರೂಪಾಯಿ 23,475 ಆಗಿತ್ತು. ತೆರಿಗೆ ವಸೂಲಿಯು ಸಮರ್ಪಕನೆನ್ನಲಾಗಲಿಲ್ಲ. ಸರಕಾರದಿಂದರೇ ಮೂಲಧನದ ಟೀಕ್ಸು ರೂಪಾಯಿ 79270 ವಸೂಲಾಗಲಿಲ್ಲ. ಕಮೊರನರ್ ಚೆರ್‌ಮೆನ್ ಮತ್ತು ಮೆಂಬರರೊಳಗೆ ಮೈತ್ರಿಯಿತ್ತು ಎಂದು ಹೇಳಲಾಗಿತ್ತು.

ಹೊಂಬಾಡಿ ಮಂಡಾಡಿ—

ಸ್ಥಳೀಯ ವಿವೇಕೋದಯ ಎಯಿಡೆಡ್ ಎಲಿಮೆಂಟರಿ ಶಾಲೆಯನ್ನು ಪ್ರೌಢ ಪ್ರಾಥಮಿಕ ಶಾಲೆಯನ್ನಾಗಿ ಮಾರ್ಪಡಿಸ ಬೇಕೆ ಆಗತ್ಯವಿರುವ ಸ್ಥಳಾವಕಾಶವನ್ನು ಒದಗಿಸಲು, ಮದ್ರಾಸು ಸರಕಾರದ 1955—56ನೇ ವರ್ಷದ ಸ್ಥಳೀಯ ಅಭಿವೃದ್ಧಿ ಯೋಜನೆಯ ಮೇರೆಗೆ ಕಟ್ಟಲಿರುವ ನೂತನ ಕಟ್ಟಡದ ಶಂಕು ಸ್ಥಾಪನೆಯನ್ನು ದ. ಕ. ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಬೋರ್ಡ ಮೆಂಬರ್ ಶ್ರೀ. ಎನ್. ಎಸ್. ಪರಮೇಶ್ವರಯ್ಯನವರು ವಹಿಸಿದ್ದರು. ಶಾಲಾ ಆಡಳಿತದಾರ್ ಶ್ರೀ. ಕೆ. ಸಂಜೀವ ಸೆಟ್ಟಿರು ಶಾಲಾಭ್ಯುದಯದ ವರದಿಯನ್ನೋದಿದರು. ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್. ಹೆಗ್ಡೆ ಮೊದಲಾದವರು ಶಾಲೆಯ ಅಭ್ಯುದಯವನ್ನು ಹಾರೈಸಿ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ. ಜಿ. ಮಯಾಬಲ ಸೆಟ್ಟಿರು ಧನ್ಯವಾದಗಳನ್ನಿತ್ತರು.

ಕುಂದಾಪುರ—

ಗೋವಾ ವಿಮೋಚನಾ ಚಳವಳದಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಲು ಕಳೆದ ತಾ. 17ರಲ್ಲು ಕುಂದಾಪುರದಲ್ಲಿ ಹರತಾಳವಾಚರಿಸಲ್ಪಟ್ಟಿತು. ಆಂದು ಸಂಜೆ ಶ್ರೀ ಎಸ್. ಎಸ್. ಕೊಳ್ಳೆಬೈಲ್, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಎನ್. ಎಸ್. ಪರಮೇಶ್ವರಯ್ಯ, ಕೆ. ಎಲ್. ಕಾಂತಂತ, ಪಿ. ಆರ್. ಸೆಟ್ಟಿ, ವಿ. ಶ್ರೀನಿವಾಸ ಸೆಟ್ಟಿ, ಬಿ. ಸುಬ್ಬಣ್ಣ ಸೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಪೋರ್ಚುಗೀಸರ ದರ್ಪನೆ ಖಂಡಿಸುವ ಹಾಗೂ ಹುತಾತ್ಮರಿಗೆ ಶ್ರದ್ಧಾಂಜಲಿಗಳನ್ನರ್ಪಿಸುವ ನಿರ್ಣಯಗಳನ್ನು ಶ್ರೀ ವೈ. ಮಂಜಯ್ಯ ಸೆಟ್ಟಿರು ಸಭೆಯ ಮುಂದಿರಿಸಿದರು. ಶ್ರೀ ಎಮ್. ಎಮ್. ಹೆಗ್ಡೆಯವರು ಅನುಮೋದಿಸಿದರು.

(ಜನೇಪುಟದಿಂದ)

ದ. ಕ. ಜಿಲ್ಲೆಯಲ್ಲಿ ಹತ್ತು ಗ್ರಾಮಗಳಿಗೆ ಮಾತ್ರ ಕೈಮಗ್ಗಗಾರಿಕೆಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿರುವುದು ಸಂತೃಪ್ತಿಯಲ್ಲ, ಆದುದರಿಂದ ಜೋಗದ ವಿದ್ಯುತ್ತನ್ನು ಆದಷ್ಟು ಬೇಗನೆ ದ. ಕ. ಜಿಲ್ಲೆಗೆ ಪ್ರಸಾರಗೊಳಿಸುವಂತೆ ಬಿತ್ತಿಬೇಕಿದರೆ ತಪ್ಪಾಗಲಾರದು.

ವೃಷಭ ಯೋಜನೆಯಲ್ಲಿ ಗ್ರಾಮಾಂತರಗಳಲ್ಲಿ ವೈದ್ಯಕೀಯ ಸೌಕರ್ಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗಿರಲ್ಲಿನ್ನೆಲು ಬೇಡವೆನಿಸುತ್ತದೆ. ದ್ವಿತೀಯ ಯೋಜನೆಯಲ್ಲಾದರೂ ಈ ಕೊರತೆ ನೀಗುವಂತಾಗಬೇಕೆಂದು ಅಪೇಕ್ಷಿಸುತ್ತೇನೆ. ದಾಕ್ಟರರ ಅಭಾವವನ್ನು ನೀಗಲು ಸರಕಾರಿ ಮೆಡಿಕಲ್ ಕಾಲೇಜುಗಳಿಗೆ ದಾಖಲಾಗುವ ಎಲ್ಲಾ ವಿದ್ಯಾರ್ಥಿಗಳೂ ತಮ್ಮ ಶಿಕ್ಷಣ ಮುಗಿದ ಬಳಿಕ ಎರಡು ಮೂರು ವರ್ಷಗಳಾದರೂ ಹಳ್ಳಿಗಳಲ್ಲಿ ಕೆಲಸಮಾಡುವಂತೆ ಎಂದು ಪ್ರತಿಜ್ಞೆ ಕೈಕೊಳ್ಳುವಂತೆ ಏರ್ಪಾಡು ಮಾಡಬೇಕಾಗಿ ಸರಕಾರಕ್ಕೆ ಸಲಹೆ ಕೊಡಲು ಬಯಸುತ್ತೇನೆ.

ವಿದ್ಯಾಕ್ಷೇತ್ರದಲ್ಲೂ ಸೆಕೆಂಡರಿ ಶಿಕ್ಷಣ ತನಕ ಸಂಬಳ ರಿಯಾಯಿತಿ ದೊರೆಯುವಂತಾಗಬೇಕು. ಬುನಾದಿ ಶಿಕ್ಷಣ ತರಬೇತಿ ಕೇಂದ್ರಗಳು ಗ್ರಾಮಾಂತರಗಳಲ್ಲಿಯೇ ತೆರೆಯಲ್ಪಡುವುದು ಸಂತಾಗಬೇಕು. ದ್ವಿತೀಯ ಯೋಜನೆಯಲ್ಲಿ ಎಸ್. ಜಿ. ಪಿ.-ಳ ಕನಿಷ್ಠ ವೇತನವು ರೂ. 50/- ಆದರೂ ಇರಗೊಡಿಸುವಂತಾಗಬೇಕು. ಸಮಾಜವಾದಿ ತಳಪಾಯದ ರಾಷ್ಟ್ರನಿರ್ಮಾಣ ಕ. ಎಂದೆ ಬಯಸ್ಸುಗೆ ಭೂಸುಧಾರಣೆ ಹಾಗೂ ಸಿರಿವಂತರ ಮತ್ತು ಬಡವರ ಆಸ್ತಿತ್ತಿಯಲ್ಲಿ ಏರ್ಪಿಸ್ಸ ಸಿರಿಸುನ್ನು ನಿರ್ಧರಿಸಬೇಕು ಎಂದು ಸಹ ಸರಕಾರವನ್ನು ನಾನು ಕೇಳಿಕೊಳ್ಳುತ್ತೇನೆ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ವಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶ್ರೀ. ಬೋಳಾರ ವಿಟ್ಠಲ ರಾಯರ ಸಾಫಲ್ಯ ಜೀವನ



(ಇದೇ ಸ್ವಾತಂತ್ರ್ಯೋತ್ಸವದಂದು ಪೊಮ್ಮುಲರ್ ಪ್ರಧಾನ ಕಚೇರಿಯ ಸಿಬಂದಿಯವರು ಆರ್ಪಿಸಿದ ಮಾನಪತ್ರಕ್ಕೆ ಶ್ರೀ ರಾಯರು ಕೊಟ್ಟ ಉತ್ತರದಿಂದ)

ಮಹಾರಾಯರೇ,

ಇಂದಿನ ಸಂಜೆಯ ಈ ಸಮಾರಂಭವು ನನ್ನ ಮನಮುಟ್ಟಿದೆ. ನೀವೆಲ್ಲರೊಂದಾಗಿ, ನಿಮ್ಮೆಲ್ಲ ಶಕ್ತಿ, ಸಾಮರ್ಥ್ಯಗಳನ್ನು ಕೇಂದ್ರೀಕರಿಸಿ, ಪೊಮ್ಮುಲರ್ ನಿಮಾ ಸಂಸ್ಥೆಯ ರಜತೋತ್ಸವ ಕಾಲದಲ್ಲಿ ನನಗೀ ಸಂಭ್ರಮದ ಸತ್ಕಾರವಿತ್ತುದಕ್ಕಾಗಿ ಪ್ರಭುತ್ವತ ನಿಮ್ಮೆಲ್ಲರನ್ನು ಅಭಿನಂದಿಸುವೆನು.

ನನ್ನ ಗತ ವ್ಯವಹಾರ ಜೀವನದ ಕೆಲ ಅನುಭೋಗಗಳನ್ನು ತರುಣ ಮಿತ್ರರಾದ ನೀವು ಅಗತ್ಯ ತಿಳಿಯಬೇಕಾಗಿದೆ 1897ರಲ್ಲಿ ನಾನು ಪುಸ್ತಕ ವ್ಯಾಪಾರ ಪ್ರಾರಂಭಿಸಿದೆ ಅದರ ಹೆಸರು ಕೆನರಾ ಬುಕ್ ಡಿಪೊ. ನಂತರ ಚಿಕ್ಕ ಪ್ರಿಂಟಿಂಗ್ ಪ್ರೆಸ್ಸನ್ನು ಸ್ಥಾಪಿಸಿ ‘ಸುವಾಸಿನಿ’ ಎಂಬ ಕನ್ನಡ ಮಾಸಪತ್ರಿಕೆಯನ್ನು ಆರಂಭಿಸಿದೆ. 1909ರಲ್ಲಿ ಭಾರತ ಇನ್ಶ್ಯೂರೆನ್ಸ್ ಕಂಪನಿಯ ಮದ್ರಾಸು ಪ್ರೆಸಿಡೆನ್ಸಿಯ ಚೀಫ್ ಸಜಂಟನಾಗಿ ನೇಮಕಹೊಂದಿದೆನು. 1911ರಲ್ಲಿ ನನ್ನ ಕೆಲಸದ ಬಗ್ಗೆ ತೃಪ್ತಿಹೊಂದಿದ ಕಂಪನಿಯು ಬಂಗಾರದ ಪದಕವನ್ನು ಪಾರಿತೋಷವಾಗಿ ಕೊಟ್ಟಿರು. ಉತ್ತರಹಿಂದುಸ್ಥಾನದ ಕೆಲವು ಬೇಕೂಗಳು ದುರಾದೃಷ್ಟವಶಾತ್ ಪತನಹೊಂದಿದುದರ ಪರಿಣಾಮವಾಗಿ ನಾನು ಪಿಜನ್ನು ಬಿದಬೇಕಾಯಿತು ಪ್ರಥಮ ಮಹಾಯುದ್ಧದ ಆರಂಭದಲ್ಲಿ ದ. ಕ. ಜಿಲ್ಲೆಯ ಮೋಟಾರ್ ಸಾಕಿಯಾವನ್ನು ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಮೂಲಕ ಬಡಗಿಸಿದೆನು ಆದರೆ ಕ್ರಮೇಣ ಎನುರಾಳಿಗಳ ಅಕ್ಕಪಾಣದಿಂದಾಗಿ ಮೋಟಾರ್ ಕಂಪನಿಯನ್ನೂ ಬಿಡಬೇಕಾಗಿ ಬಂತು ಆದರೆ ನನ್ನಲ್ಲಿಯ ಉತ್ಸಾಹದಿಂದಾನು ಪೊಮ್ಮುಲರ್ ಮೋಟಾರ್ ಸರ್ವಿಸನ್ನು ಸ್ಥಾಪಿಸಿದೆ. ಆಸ್ಪರಲ್ಲಿ ಕತ್ರಿಕೋಡ್ಯನುವು ನನ್ನನ್ನು ಎಳೆಯಿತು ಪರಿಣಾಮವಾಗಿ1917ರಲ್ಲಿ ‘ಕಂಠೀರವ’ ಪತ್ರಿಕೆ ಉದಯಕ್ಕೆ ಬಂತು 1923ರಲ್ಲಿ ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಸ್ಥಾಪಿಸಲ್ಪಟ್ಟಿತು. ಕಂಠೀರವದ ಸಂಪಾದಕ, ಪೊಮ್ಮುಲರ್ ಮೋಟಾರ್ ಸರ್ವಿಸಿನ ಪ್ರೊಪ್ರೈಟರ್ ಮತ್ತು ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಅದರ ಮೆನೇಜಿಂಗ್ ಡೈರೆಕ್ಟರನಾಗಿದ್ದುಕೊಂಡು ಮೂರೂ ಸಂಸ್ಥೆಗಳ ಬೆಳವಣಿಗೆಯನ್ನು ನಡೆಸಿದೆನು 1929ನೆ ಇಸವಿ ಸಪ್ಟಂಬರ್ ತಿಂಗಳಲ್ಲಿ (ಪೊಮ್ಮುಲರ್) ಬಿಚಿಸ್ತಿ ಮಾಡಲ್ಪಟ್ಟಿತು. ಈ ಕಂಪೆನಿಯ ಇತಿಹಾಸವು ನಿಮಗೆಲ್ಲರಿಗೂ ಗೊತ್ತೇ ಇದೆ ಬರೇ ಅಂಕೆಗಳಿಂದ ಮಾತ್ರ ಈ ಕಂಪೆನಿಯ ಅಭಿವೃದ್ಧಿಯನ್ನು ನೋಡುವುದಲ್ಲಿ ಅದರ ಜಿದ್ರತೆಯು ಇನ್ಶೂರೆನ್ಸ್ ಕ್ಷೇತ್ರದಲ್ಲಿ ಕೊಂಡಾಡಲ್ಪಟ್ಟಿದನ್ನು ನೋಡಬೇಕು. ಇದಕ್ಕೆ ಅಂದಿನ ವೆಲ್ಯುಯೇಶನ ವರದಿಯೇ ಸಾಕ್ಷಿಯಾಗಿದೆ

ನೀವು ಕಂಪೆನಿಯ ಎಳೆಗಿಬಗ್ಗೆರುಂಬಾ ಮಾಡಿದಿರುವಿರಿ. ಅಲ್ಲದೆ ನನ್ನೊಡನೆ ಸಹಕರಿಸಿರುವಿರಿ. ಈ ಸಹಕಾರವು ಸರ್ವತ್ರ ಮುಂದೆಯೂ ಬರುವಂತಾಗಲಿ.

ಬೈರಂಜೆ— ಸ್ಥಳೀಯ ಶ್ರೀ ಶಾರದಾ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಿ. ನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು. ಶ್ರೀಗಳಾದ ಕೆ ಕೇಶವನಾಯ್ಕ ಮತ್ತು ಬಿ. ಅಚ್ಚುತ್ತ ನಾಯ್ಕರು ಶಾರೋಚಿತ ಭಾಷಣಗಳನ್ನಾಡಿದರು.

ತಲ್ಲೂರು— ಈ ಸೆಂಟರಿನ ಅಧ್ಯಾಪಕ ಸಂಘದ ಸಭೆಯು ತಾ. 20ರಲ್ಲಿ ಶ್ರೀ ಎಚ್. ಅಚ್ಚುತ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಗೋಣಿಯಲ್ಲಿ ಮಡಿದ ವೀರರಿಗಾಗಿ ಶೃದ್ಧಾಂಜಲಿಯನ್ನು ಅರ್ಪಿಸಿ ಮೌನ ಪ್ರಾರ್ಥನೆ ಮಾಡಲಾಯಿತು. ಈ ಸಭೆಯಲ್ಲಿ ಮಾಜಿ ಕಾರ್ಯದರ್ಶಿಗಳಾಗಿದ್ದ ಶ್ರೀ ಎಮ್ ತ್ರೈಂಬಕ ರಾಯರನ್ನು ಬೀಳ್ಕೊಡಲಾಯಿತು.

ಉಳ್ಳೂರು — ಸ್ಥಳೀಯ ಗ್ರಾಮಸೇವಾ ಸಮಿತಿಯವರಿಂದ ತಾ. 22ರಲ್ಲಿ ಹೊಸ ವಾಚನಾಲಯವೊಂದು ತೆರೆಯಲ್ಪಟ್ಟಿತು. ಅದರ ಕಾರ್ಯಕಲಾಪವನ್ನು ನಡೆಸುವರೆ ಶ್ರೀಗಳಾದ ಬಿ. ರಘುರಾಮ ಶೆಟ್ಟರು ಅಧ್ಯಕ್ಷರಾಗಿಯೂ, ಕಾಳಿಂಗ ಶೆಟ್ಟಿ ಮತ್ತು ಯು. ತಮ್ಮಯ್ಯ ಅಡಿಗರು ಜತೆಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರು.

ಕುಂಬಳೆ— ಸ್ಥಳೀಯ ಪಂಚಾಯತ ಬೋರ್ಡಿನ ಚಾರ್ಜನ್ನು ಉಪಾಧ್ಯಾಕ್ಷ ಶ್ರೀ ಕೆ. ಎಸ್. ಹೆಗ್ಡೆಯವರು ವಹಿಸಿರುವರು

ಗುಲ್ವಾಡಿ — ಸ್ಥಳೀಯ ಮಹಾತ್ಮಾ ಗಾಂಧಿ ಸಾಕ್ಷರತಾ ಮಂದಿರದ ಉದ್ಘಾಟನಾ ಸಮಾರಂಭವು ತಾ. 23ರಲ್ಲಿ ಗುಲ್ವಾಡಿ ಪಂಚಾಯತಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗೋವರ್ಧನ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಬೆಳ್ಳಾರೆ— ಕಳದ ತಾ. 20ರಲ್ಲಿ ಗ್ರಾಮಸೇವಾ ಸಂಘದ ಆಶ್ರಯದಲ್ಲಿ (ಸಮಾಜಶಿಕ್ಷಣ ಕೇಂದ್ರ)ದ ಉದ್ಘಾಟನಾ ಸಮಾರಂಭವು ಶ್ರೀ ಕೆ. ಎಸ್. ಬಾಬು ಶೆಟ್ಟಿ, ಬ್ಲೋಕ್ ಡೆವಲಪ್ ಮೆಂಟ್ ಆಫೀಸರ್, ಇವರಿಂದ ಜರಗಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ರಾಮಾಣ್ಣ, ಬಿ. ಎ ಬಿ. ಟಿ. ಇವರು ವಹಿಸಿದ್ದರು. ಈ ಊರಿನ ಶ್ರೀ ಬಿ. ಬಿ. ಶೆಟ್ಟರು ಗಾಜು ಕೈಗಾರಿಕೆಯಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮುಗಿಸಿ ಜಪಾನಿನಿಂದ ಬಂದಿದ್ದರು ಇವರನ್ನು ಶ್ರೀ ಎಸ್ ಎಸ್ ಭಟ್, ಇವರು ಸಂಘದ ಪರವಾಗಿ ಸ್ವಾಗತಿಸಿದರು ಸಭಿಕರ ಭಾಷಣ, ಅಧ್ಯಕ್ಷರ ಭಾಷಣಗಳಾದ ಬಳಿಕ ಸಂಘದ ಅಧ್ಯಕ್ಷ ಶ್ರೀ ಬಿ. ಕಿಟ್ಟಣ್ಣ ರೈಗಳು ಅಭಿನಂದಿಸಿದರು.

ಕಾಪು— ಉಡುಪಿಯ ಗೋವಾ ಸತ್ಯಾಗ್ರಹಿ ತಂಡದ ನಾಯಕರು ಶ್ರೀಗಳಾದ ಯು ಎಸ್ ನಾಯಕ್, ಕೆ. ವೆಂಕಟ್ರಮಣ ಭಟ್, ಮತ್ತು ಅವರ ಅನುಯಾಯಿಗಳನ್ನು ಕಳದ ತಾ. 20ರಲ್ಲಿ ಕಾಪು ಜೋರ್ಡು ಸಾಎ ಫಾರೆಯ ಬಳಿ ಸ್ಥಳೀಯ ಪ್ರಜೆಯರು ವಾದ್ಯಘೋಷಗಳಿಂದ ಎದುರ್ಗೊಂಡು ಡಾ| ಬಿ. ಕೆ ಬೇಕಲರ ಅಧ್ಯಕ್ಷತೆಯಲ್ಲಿ ಸ್ವಾಗತ ಸಭೆಯನ್ನು ಜರಗಿಸಿ ಗೌರವಿಸಿದರು

ಕಾಪು ಬಂಗ್ಲೆ ಮೈದಾನಿನ- ಮುಂಭಾಗದ ಸರಕಾರಿ ಸ್ಥಳದಲ್ಲಿ ಕಟ್ಟಲಿರುವ ಹೆರಿಗೆ ಮನೆಯ ಶಂಕುಸ್ಥಾಪನೆಯು ತಹಸೀಲ್ದಾರ್ ಶ್ರೀ ಕೆ. ಲಿಂಗಸ್ವಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ ಪೈ, ಎಮ್. ಎಲ್. ಎ ಅವರಿಂದ ನೆರವೇರಿಲ್ಪಟ್ಟಿತು. ಈ ಕಾರ್ಯವು ಸ್ಥಳೀಯ ಅಭಿವೃದ್ಧಿ ಯೋಜನೆ ಮತ್ತು ಪದು, ಮಲ್ಲಾರು, ಉಳಿಯಾರಗೋಳಿ, ಮೂಳೂರು, ಮಜೂರು ಗ್ರಾಮಗಳ ಪಂಚಾಯತ ಬೋರ್ಡುಗಳ ಸಹಾಯದಿಂದ ನಡೆಯುವುದು. ಉದ್ಯಾಪಕರು ತಮ್ಮ ಭಾಷಣದಲ್ಲಿ ಈ ಕಟ್ಟಡದ ಕೆಲಸವು ಬೇಗನೆ ಪೂರ್ಣವಾಗುವಂತೆ ಗ್ರಾಮಸ್ಥರು ಸಹಕರಿಸಬೇಕೆಂದೂ ಕೇಳಿಕೊಂಡರು.

(ಇದೇ ಹುಟದಿಂದ)

ಗೋವೆಯಲ್ಲಿ ಮೋಲೀಸು ಕ್ರಮವನ್ನು ತೆಗೆದುಕೊಂಡರೆ ಅದು ಯುದ್ಧವೆಂದೇ ಪರಿಗಣಿಸಲ್ಪಡುತ್ತದೆ ಎಂದು ಪ್ರಜಾಸಮಾಜವಾದಿ ಧುರೀಣರಾದ ಶ್ರೀ ಅಶೋಕ ಮೆಹತ ಸಹ ಒಪ್ಪಿದ್ದಾರೆ. ಸತ್ಯಾಗ್ರಹಿಗಳಲ್ಲಿಯೂ ಅನೇಕರು ಶಾಂತ ವಿಧಾನದಿಂದಲೇ ಗೋವೆಯ ವಿಮೋಚನೆ ಸಾಧಿಸಬಹುದು ಎನ್ನುತ್ತಿದ್ದಾರೆ. ಭಾರತ ಸರಕಾರದ ಧುರೀಣರೆಲ್ಲರೂ ಹಿಂಸಾಚಾರ ಇಲ್ಲದೆಯೇ ಗೋವೆಯ ವಿಮೋಚನೆಯನ್ನು ಶೀಘ್ರದಲ್ಲಿ ಸಾಧಿಸಬಲ್ಲೆವೆಂದು ಆತ್ಮವಿಶ್ವಾಸದ ಮಾತುಗಳಿಂದ ಜನರನ್ನು ಸಮಾಧಾನಪಡಿಸುತ್ತಿದ್ದಾರೆ. ಇದನ್ನು ಹುರುಳಿಲ್ಲದ ಮಾತೆಂದು ಕಡೆಗಣಿಸುವುದು ವಿವೇಕವಾಗದು.

ಸರಿಯಾದ ಮಾರ್ಗ

ಪೋರ್ಚುಗಾಲವು ನ್ಯಾಟೊ ರಾಷ್ಟ್ರವಾದುದರಿಂದ ಆ ಸೈನಿಕ ಒಪ್ಪಂದದ ಬಲ ಅದಕ್ಕೆ ಎಷ್ಟಿದೆ, ಗೋವೆಗೆ ಅದು ಎಷ್ಟು ಅನ್ವಯವಾದೀತು ಎಂಬ ವಿಷಯ ಮಾತ್ರ ಇನ್ನೂ ಸ್ಪಷ್ಟಗೊಂಡಿಲ್ಲ. ಆದರೆ ಶ್ರೀ ಕೃಷ್ಣಮೆನೂನ್ಸರಂಥ ಭಾರತೀಯ ಮುತ್ಸದ್ದಿಗಳು ನ್ಯಾಟೊ ರಾಷ್ಟ್ರಗಳಿಗೆ ಗೋವೆಯಲ್ಲಿ ಆಸ್ಥಿಇಲ್ಲವೆಂದೂ ಈ ವಿಷಯದಲ್ಲಿ ಅವುಪ್ರವೇಶಿಸುವುದು ಅಸಂಭವನೆಂದೂ ಮದ್ರಾಸಿನಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಅದೇನಿದ್ದರೂ ಶಾಂತರೀತಿಯ ಕ್ರಮ ಕೈಗೊಳ್ಳುವ ಭಾರತ ನ್ಯಾಟೊ ರಾಷ್ಟ್ರಗಳಿಗೆ ಬೆದರಬೇಕಾಗಿಲ್ಲ-ಆ ಯೋಚನೆ ಮಾಡಬೇಕಾಗಿಯೂ ಇಲ್ಲ. ನೆಹರುಗಳು ತಾವು ಪ್ರತಿಪಾದಿಸಿದ ತತ್ವಗಳನ್ನು ಅಗ್ನಿಪರೀಕ್ಷೆಯ ಕಾಲದಲ್ಲಿಯೂ ವ್ಯವಹಾರದಲ್ಲಿ ಆಚರಿಸಿ ತೋರಿಸುವವರೆಂಬ ಸಂಗತಿಯು ಅಗೋಸ್ತು ೧೫ರ ಗೋಳೀ ಬಾರನ ಉದ್ವೇಗ ಜನಕ ವಾತಾವರಣದಲ್ಲೂ ಅವರು ತೋರಿಸಿದ ಸಂಯಮದಿಂದ ಮತ್ತು ದೂರದರ್ಶಿತ್ವದಿಂದ ವ್ಯಕ್ತವಾಗಿದೆ. ಜಗತ್ತಿನ ನೈತಿಕ ದೃಷ್ಟಿಯಲ್ಲಿ ಇದು ಮಹತ್ವದ ವಿಷಯ—ಭಾರತಗಳಿಸಿದ ಅಪೂರ್ವ ವಿಜಯ ಇದೆಂದರೂ ಸಲ್ಲುತ್ತದೆ. ನೈತಿಕ ಮೂಲ್ಯಗಳಿಗೆ ಬೆಲೆ ಅಪಾರ—ಮತ್ತು ಪರಿಣಾಮ ಶಾಶ್ವತ ಎಂಬುದನ್ನು ಮನಗಂಡರೆ, ನಾವು ಅನುಸರಿಸುತ್ತಿರುವ ಮಾರ್ಗ ಯೋಗ್ಯವೆಂಬುದರಲ್ಲಿ ಸಂಶಯ ಉಳಿಯದು.

ಶ್ರೀಯು ಎಸ್ ನಾಯಕರಿಗೆ ಗೌರವ ಸತ್ಕಾರ

ಕಟಪಾಡಿ ಶ್ರೀ ವೆಂಕಟರಮಣಸ್ವಾಮಿ ವಿದ್ಯಾರ್ಥಿಕ ಸಂಘದ ಅಧ್ಯಕ್ಷ ಶ್ರೀ ಯು. ಎಸ್ ನಾಯಕರಿಗೆ, ಗೋವಾ ಸಿಪೋಚನಾ ಚಳವಳಿಯಲ್ಲಿ ಉಡುಪಿ ಸತ್ಯಾಗ್ರಹಿ ತಂಡದ ನಾಯಕರಾಗಿ ತೆರಳಿದ್ದು ಕ್ಷೇಮದಿಂದ ಮರಳಿದ ಸಂತೋಷಸೂಚನಾರ್ಥವಾಗಿ ಅವರನ್ನು ಗೌರವಿಸಲು ಸ್ಥಳೀಯ ಎಸ್ ವಿ. ಎಸ್ ಹೈಸ್ಕೂಲು ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳ ಅಧ್ಯಾಪಕ ವೃಂದದವರು ಅವರ ಸತ್ಕಾರ ಸಮಾರಂಭವನ್ನು ಕಳೆದ ತಿಂಗಳ ದಿನಾಂಕ 26ರಂದು ಸಂಜೆ ದಿವಂಗತ ಸದಾನಂದ ನಾಯಕ್ ಸ್ಮಾರಕ ಸಭಾ ಭವನದಲ್ಲಿ ಜರಗಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಜರ್ಜಪ್ಪ ಶ್ಯಾನುಭಾಗರು ವಹಿಸಿದ್ದರು. ಲಘು ಉಪಾಹಾರದಾನದ ಬಳಿಕ ಅಧ್ಯಾಪಕ ವೃಂದದ ಪರವಾಗಿ ಶ್ರೀ ಮಾರ್ನಲ್ ಅಲ್ಲರು ಮುಖ್ಯ ಅತಿಥಿಗಳಿಗೆ ಸುಸ್ವಾಗತವನ್ನಿತ್ತು ಪುಷ್ಪಹಾರವನ್ನರ್ಪಿಸಿದರು. ಶ್ರೀಗಳಾದ ಕೆ. ಆರ್. ಅನಂತ ಸುಬಾಣಿಕೆ ವಿದ್ವಾನ್, ಕೆ. ಗೋಪಾಲ ಶೆಟ್ಟಿ ಯು. ಆರ್ ಮುಳ್ಳು, ಕೆ. ಸುಬ್ಬರಾವ್, ಕೆ. ರಾಮಚಂದ್ರ ಭಟ್ ವಿದ್ವಾನ್—ಅವರು ಶ್ರೀ ನಾಯಕರ ಧೈರ್ಯ, ಶೈರ್ಯ ಸಾಹಸ ಸಾರ್ವಜನಿಕ ಸೇವೆಗಳನ್ನು ವಿವರಿಸಿ, ಅವರು ಹೇಗೆ ಮಾರ್ಗದರ್ಶಿಗಳಾಗಲು ಸಮರ್ಥರು ಎಂಬುದನ್ನು ವಿವರಿಸಿದರು. ಶ್ರೀ ನಾಯಕರು ಗೋವಾ ಸತ್ಯಾಗ್ರಹದ ಅನುಭವದ ಸ್ಥೂಲಪರಿಚಯವನ್ನು ಮಾಡಿಕೊಟ್ಟುದಲ್ಲದೆ ಅವರೆಲ್ಲರೂ ಶಿಸ್ತನ್ನು ಪರಿಪಾಲಿಸಬೇಕಾಗಿ ಹಿತೋಪದೇಶವನ್ನಿತ್ತರು ಎರಡೂ ಶಾಲಾ ಮಕ್ಕಳಿಗೆ ಈ ಸಮಾರಂಭದ ಕುರುಹು ಆಗಿ ಶ್ರೀಗಳಾದ ಎಸ್ ಎನ್. ಕಾಮತ್ ಮತ್ತು ಪಲ್ಲಿ ಪದ್ಮನಾಭ ನಾಯಕರ ಉದಾರ ನೆರವಿನಿಂದ ತಿಂಡಿಯಂಜಲಾಗಿತ್ತು.

ಗೋವಾ ಸತ್ಯಾಗ್ರಹದ ತನ್ನ ಅನುಭವಗಳನ್ನು ವಿವರಿಸಿ ಈ ಆಂದೋಲನದ ಕುರಿತು ಭಾರತ ಸರಕಾರವು ವಹಿಸಿದ ಧೋರಣೆಯನ್ನು ಸಮರ್ಥಿಸಿ, ಈ ಸತ್ಯಾಗ್ರಹ ಚಳವಳಿಯು ಮುಂದುವರಿದು ಶೀಘ್ರದಲ್ಲೇ ಗೋವಾ ವಿಮೋಚನೆಯುನಡೆಯುವುದೆಂಬ ಸರಲ್ಲಿ ತಮಗೆ ದೃಢವಾದ ವಿಶ್ವಾಸವಿರುವುದಾಗಿಯೂ, ಅವರ ಕುರಿತು ಸರ್ಕಾರಿ ತನುಮನಭವನಗಳಿಂದ ಸಹಕರಿಸುವುದು ಅಗತ್ಯವೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು. ಅಧ್ಯಕ್ಷರ ಸಂದರ್ಭೋಚಿತವಾದ ಭಾಷಣದ ತರುವಾಯ ಶ್ರೀ ಕೆ. ಪಾಂಡುರಂಗ ಮಲ್ಯರಿಂದ ಧನ್ಯವಾದ ಸಮರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು

ಈ ಸಮಾರಂಭದ ಆದಿಯಲ್ಲಿ ಶ್ರೀ ನಾಯಕರನ್ನು ಹ್ಯಾಸ್ಕೂಲು ವಿದ್ಯಾರ್ಥಿಗಳು ಸನ್ಮಾನಿಸಿದರು. ಅವರಿಗೆ ಶ್ರೀ ನಾಯಕರು ಗೋವಾ ಸತ್ಯಾಗ್ರಹದ ಅನುಭವದ ಸ್ಥೂಲಪರಿಚಯವನ್ನು ಮಾಡಿಕೊಟ್ಟುದಲ್ಲದೆ ಅವರೆಲ್ಲರೂ ಶಿಸ್ತನ್ನು ಪರಿಪಾಲಿಸಬೇಕಾಗಿ ಹಿತೋಪದೇಶವನ್ನಿತ್ತರು ಎರಡೂ ಶಾಲಾ ಮಕ್ಕಳಿಗೆ ಈ ಸಮಾರಂಭದ ಕುರುಹು ಆಗಿ ಶ್ರೀಗಳಾದ ಎಸ್ ಎನ್. ಕಾಮತ್ ಮತ್ತು ಪಲ್ಲಿ ಪದ್ಮನಾಭ ನಾಯಕರ ಉದಾರ ನೆರವಿನಿಂದ ತಿಂಡಿಯಂಜಲಾಗಿತ್ತು.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ನ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೊ:- (1) ಉಡುಪಿ (2) ಮರಾಠಾ ಗಲ್ಲಿ, ಹುಬ್ಬಳ್ಳಿ.

60 ವರ್ಷಕ್ಕೆ ಜಗಪ್ರಸಿದ್ಧ ಶೀರ ವಿಜಯಿ ಹೊಸೆವಾಲಾ.
ಪ್ರತ್ಯೇಕ ಸ್ಟೋರ್ ಮೇ ಶೀರ ಸಬ ಸ್ಥಾನೋ ಪರ ಬಿಕತಾ ಹೈ
ವಾಟಲೀವಾಲಾ ಎಸ್ಸೆನ್ಸಿಯಲ್
ಶೀರ ಗೋಲ್ಡ್‌ಮೆಡಲ್
ಮಹೋರಿಯಾ ಇನ್‌ಫ್ಲುಎಂಜಾ ಶೀರ ಪ್ರತ್ಯೇಕ ಪ್ರಕಾರಕ ಬುಖಾರ ಕೆ ಲಿಯೆ।
ಸೋಲ ಮೆನ್ಯುಫೆಕ್ಚರರ. ಡ್ರ. ಎಚ್. ಎಲ್. ವಾಟಲೀವಾಲಾ ಸನ್ಸ ಎಂಡ್ ಕಂ. ಲಿ.
ವಾಟಲೀವಾಲಾ ಬಿಲ್ಡಿಂಗ, ೩೩ ಬಿ. ಪೋರ್ಟುಗೀಝ ಚರ್ಚ ಸ್ಟ್ರೀಟ,
Tele Add "CAWASHABAD" ದಾದರ, ಬಾಂಬೆ ೨೮.

ಮಂಗಳೂರು

ಮುಂಬರುವ ನಗರಸಭಾ ಜುನಾವಣೆಗೆ— ಇದೇ ತಾ. 13, 14, 15,ರಲ್ಲಿ ನಾಮಪತ್ರ ಸ್ವೀಕರಿಸಲಾಗುವುದು. ಅಕ್ಟೋಬರ ತಿಂಗಳ ತಾ. 27ರಲ್ಲಿ ಮತದಾನ ನಡೆದು ಮರುದಿವಸ ಮತಗಳ ಎಣಿಕೆ ನಡೆಯಲಿರುವುದು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾ ಸಭೆಯು— ಇದೇ ತಾ. 4ನೇ ಆದಿತ್ಯವಾರ ಅಪರಾನ್ಹ 3 ಗಂಟೆಗೆ ಜಾನಟಿ-ಎಡ್ವೆಯಲ್ಲಿರುವ ಕಮಿಟಿ ಆಫೀಸಿನಲ್ಲಿ ಜರಗಲಿರುವುದು. ಎರಡನೆ ಪಂಚವಾರ್ಷಿಕ ಯೋಜನೆ ಬಗ್ಗೆ ಸೂಚನೆಗಳು ಕಾಂಗ್ರೆಸ್ ಕಮಿಟಿಗಳ ಜುನಾವಣೆ, ನಿಧಿಸಂಗ್ರಹ ಮೊದಲಾದ ವಿಷಯಗಳು ಪರಿಶೀಲಿಸಲ್ಪಡುವವು.

ಜಿಲ್ಲೆಯಲ್ಲಿ ಜೇನುಸೃವಸಾಯ— ಅಖಿಲಭಾರತ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಜೇನು ಸೃವಸಾಯ ಶಾಖೆಯ ಸಂಚಾಲಕ ಶ್ರೀ ಎಸ್. ಕೆ. ಕಲ್ಲಾಪುರ ಅವರು ಈಚೆಗೆ ಮಂಗಳೂರಿಗೆ ಬಂದಿದ್ದು ಜಿಲ್ಲಾ ಸಹಕಾರಿ ಜೇನು ಸೃವಸಾಯ ಮತ್ತು ಮಾರಾಟ ಸಂಘದ ಆಶ್ರಯದಲ್ಲಿ ಜರಗಿದ ಜೇನು ಸೃವಸಾಯಗಳ ಮತ್ತು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದರು.

. ಈ ಸಭೆಗೆ ಶ್ರೀರಂಗಾದ ಮೊಳಪಳ್ಳಿ ಶಿವರಾವ್, ಪೈಲೂರು ಲಕ್ಷ್ಮಿನಾರಾಯಣ ರಾವ್ ಮತ್ತು ಸುಬ್ರಾಯ ಪ್ರಾಂತದ ಜೇನು ಸೃವಸಾಯಾಭಿವೃದ್ಧಿ ಅಧಿಕಾರಿ ಶ್ರೀ ಎಚ್. ವಿಶ್ವನಾಥ ಮೊದಲಾದವರು ಬಂದಿದ್ದರು. ದ. ಕ. ಜಿಲ್ಲೆಯಲ್ಲಿ ಒಂದು ಲಕ್ಷ ರಾತ್ಲುಗಳಿಗಿಂತಲೂ ಅಧಿಕವಾಗಿ ಜೇನು ಉತ್ಪತ್ತಿಯಾಗುವುದರಿಂದ ಈ ಜಿಲ್ಲೆಯನ್ನು ಪ್ರತ್ಯೇಕ ಪ್ರದೇಶವಾಗಿ ಪರಿಗಣಿಸಲಾಗಿದೆ. ಹತ್ತು ಗ್ರಾಮಗಳ ಒಂದೊಂದು ಕೇಂದ್ರವನ್ನು ಮಾಡಿ ಅಲ್ಲಿಗೆ ಒಬ್ಬ ಸೃವಸಾಯ ಶಿಕ್ಷಕನನ್ನು ನೇಮಿಸಲಾಗುವುದು. ಈ ಯೋಜನೆಯಂತೆ ಮಂಗಳೂರಲ್ಲೂ ಒಂದು ಕೇಂದ್ರ ತೆರೆಯಲ್ಪಡುವುದು. ಈ ಕೇಂದ್ರಗಳಲ್ಲಿರುವ ಪ್ರಾಥಮಿಕ ಶಾಲೆಗಳಲ್ಲೂ ಜೇನು ಸೃವಸಾಯ ಕಲಿಸುವ ಯೋಜನೆ ಸಹ ಇದೆಯಾಗಿ ತಿಳಿಸಿದರು.

ಗೋವಾ ಸತ್ಯಾಗ್ರಹಿಗಳಿಗೆ ಸ್ವಾಗತ: ದ. ಕ. ಜಿಲ್ಲೆಯಿಂದ ಗೋವಾ ಸತ್ಯಾಗ್ರಹಕ್ಕೆ ತೆರಳಿ ಬಂದ ಯಾತ್ರಿಕ ಸತ್ಯಾಗ್ರಹಿಗಳನ್ನು ಗೌರವಿಸುವ ಸಭೆಯೊಂದು ಕೇಂದ್ರ ಮೈದಾನದಲ್ಲಿ ತಾ. 28ರಲ್ಲು ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ ಕೆ. ನಾಗಪ್ಪ ಅಳ್ವರು ಸತ್ಯಾಗ್ರಹಿಗಳ ಪರಿಚಯ ಮಾಡಿಕೊಟ್ಟರು. ಶ್ರೀಗಳಾದ ಎಸ್. ಮರ್ತಪ್ಪ ಪ್ರಭು, ಎ. ಬಾಳಪ್ಪ, ಬಿ. ವಿ. ಕಕ್ಕಿಲ್ಲಾಯರು ತಮ್ಮ ಅನುಭವಗಳನ್ನು ವಿವರಿಸಿದರು. ಶ್ರೀ ಪ್ರಭಾಕರ ಘಾಟೆಯವರು ಧನ್ಯವಾದಗಳನ್ನರ್ಪಿಸಿದರು.

ಯುವಕ ಸಂಘದ ಉದ್ಘಾಟನೆ— ಮಂಗಳೂರು ಯುವಕ ಸಂಘದ ಉದ್ಘಾಟನೆಯನ್ನು ತಾ. 28ರಲ್ಲಿ ಶ್ರೀ ಬೆನಗಲ್ ಸಂಜೀವ ರಾಯರು ನೆರವೇರಿಸಿತ್ತು, ನಿಸ್ವಾರ್ಥ ಸೇವಾನಿರತೆ, ಪರಿಸರಾಗತವಾಗಿ ಬಂದ ಧರ್ಮ, ನೀತಿ, ಸಂಸ್ಕೃತಿಗಳ ರಕ್ಷಣೆ, ಸಮಾಜದ ಉದ್ಧಾರ ಇವುಗಳನ್ನು ಧ್ಯೇಯವಾಗಿಟ್ಟುಕೊಂಡು ಯುವಕರು ಮುನ್ನಡೆಯಬೇಕೆಂದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ನಗರ ಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಆಡಿಗರು ವಹಿಸಿದ್ದರು. ಶ್ರೀ ಎಸ್. ಶ್ರೀನಿವಾಸರಾಯರು ಸ್ವಾಗತಭಾಷಣಮಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ಬಿ. ಬ್ರಹ್ಮಾವರ್, ಅವರು ಸಂಘದ ಉದ್ದೇಶಗಳನ್ನು ಸಭೆಯ ಮುಂದಿರಿಸಿದರು. ಉಪಕಾರ್ಯದರ್ಶಿ ಶ್ರೀ ಪಿ. ರಮಾನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ನಗರಸಭೆಯು— ತಾ. 27ರಲ್ಲಿ ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕದ್ರಿ ಬಂಗ್ಲೆಯ ಬಳಿಯ ಖಾಲಿ ಸ್ಥಳವನ್ನು ಹೆಗ್ಗೆ ಮತ್ತು ಶಿಶು ಸಂಗೋಪನಾ ಕೇಂದ್ರದ ಕಟ್ಟಡ ಕಟ್ಟಿಸಲು ನಗರ ಸಭೆಗೆ ಕೊಡಬೇಕೆಂದು ಕೇಳಿಕೊಳ್ಳುವ ನಿರ್ಣಯವಾಯಿತು.

ನಗರ ಸಭೆಯ ಮಹಿಳಾವೈದ್ಯಾಧಿಕಾರಿಗಳ ವಾಹನ ಭತ್ತೆಯನ್ನು ತಿಂಗಳಿಗೆ ರೂಪಾಯಿ 150ರಿಂದ 60ಕ್ಕೆ ಏರಿಸಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಲಾಯಿತು. ಪೆಜ್ಜರ್ ಮೂರ್ಕೇಟಿನ ಬೀರ್ಗೊದ್ದಾರ ಮಾಡಲು ಎಂಟುಲಕ್ಷ ರೂಪಾಯಿ ಸಾಲಪತ್ರಲು ಸರಕಾರ ಅನುಮತಿಕೊಡುವಂತೆ ಒತ್ತಾಯಮಾಡಲು ನಿರ್ಧಾರವಾಯಿತು. ಸಭಾರಂಭದಲ್ಲಿ; ಭಾರತದಲ್ಲಿನ ಪೋರ್ಚುಗೀಸ್ ವಸಾಹತುಗಳ ವಿಮೋಚನಾ ಚಳವಳಿದಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಿ, ಒಂದು ನಿಮಿಷದ ಮೌನಾಚರಣೆ ಗೈದು, ಸಭೆಯ ಕಾರ್ಯಕಲಾಪಗಳನ್ನು ಹತ್ತುನಿಮಿಷ ಮುಂದರಿಸಲಾಯಿತು. ಜೆಪ್ಪು ಮಾರ್ಕೆಟಿನಿಂದ ಜೆಪ್ಪು ಕಾಮನ್ ಸೆಲ್ಟ್ ಟ್ಯೂಲ್ ಕಾರ್ಖಾನೆವರೆಗೆ ಸುತ್ತು ಜೋಕಾರ್ ವಾರ್ಡಿನ ಟೈಲರಿ ರಸ್ತೆವರೆಗೆ ಬಾಮುರು ಹಾಕಬೇಕೆನ್ನುವ ಶ್ರೀ ಕೊರಗಪ್ಪ ಕೈಗಳ, ಮಾರ್ಕೆಟುರಸ್ತೆಯ ಸರ್ವೆಯನ್ನು ಪರಿಶೀಲನೆಮಾಡಲು ಜಿಲ್ಲಾಸರ್ವೆಯರನ್ನು ನೇಮಿಸಬೇಕೆಂದು ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳುವ ಮತ್ತು ಅಕ್ಷೇಪಾರ್ಹ ಬೆಸಲು ತಡೆಗಳನ್ನು ತೆಗೆಸಿ, ಇನ್ನು ಆವುಗಳಿಗೆ ಸಿಕ್ಕಾಬಟ್ಟೆ ಲ್ಯಾಸೆನ್ಸು ಕೊಡದಂತೆ ನೋಡಿಕೊಳ್ಳಬೇಕೆನ್ನುವ ಡಾ. ಕೆ. ನಾಗಪ್ಪ ಅಳ್ವರ ನಿರ್ಣಯಗಳು ಮಂಜೂರಾದವು.

ಕಾಂಗ್ರೆಸಿಗೆ ಸೇರುವ ನಿರ್ಧಾರ— ಕಳದ ತಾ. 25ರಲ್ಲಿ ನಾಗೂರಲ್ಲಿ ಹರಿಜನ ಸಭೆಯೊಂದು ಕರ್ನಾಟಕ ಪ್ರಾಂತೀಯ ದಲಿತ ವರ್ಗಗಳ ಫೆಡರೇಶನ ಅಧ್ಯಕ್ಷರಾಗಿದ್ದ ಶ್ರೀ ಎಸ್. ಗೋಪಾಲ ಶಾಲೆನ್ನರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ದಲಿತ ವರ್ಗಗಳು ಕಾಂಗ್ರೆಸಿಗೆ ಸೇರುವುದನ್ನು ಸ್ವಾಗತಿಸುವ, ಗೋವಾ ಸ್ವತಂತ್ರತೆಯನ್ನು ಸ್ಥಾಪಿಸುವ ಇತ್ಯಾದಿ ನಿರ್ಣಯಗಳಾದವು. ಹರಿಜನರು ಕಾಂಗ್ರೆಸಿಗೆ ಸೇರಿ ರಾಷ್ಟ್ರ ಕಲ್ಯಾಣಕ್ಕಾಗಿ ದುಡಿಯಬೇಕಾದುದು ಅನಿವಾರ್ಯವೆಂದು ಅಧ್ಯಕ್ಷರು ಹೇಳಿದರು. ಸಭೆಯಲ್ಲಿದ್ದವರೆಲ್ಲರೂ ಕಾಂಗ್ರೆಸಿಗೆ ಸೇರಲು ಒಪ್ಪಿದರು.

ಗವರ್ನ್‌ಮೆಂಟ್ ಆರ್ಟ್ಸ್ ಕಾಲೇಜಿನ ಕನ್ನಡ ಮಹಾಸಭೆಯು ಶ್ರೀ ಕೆ. ಶಿವರಾಮ ಕಾರಂತರಿಂದ ಕಳದ ತಾ. 25ರಂದು ಉದ್ಘಾಟಿಸಲ್ಪಟ್ಟಿತು.

. **ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವ—** ಮಂಗಳೂರು ಅನಂದ ಸಂಗೀತ ವಿದ್ಯಾಲಯದ ವಾರ್ಷಿಕೋತ್ಸವವು ಕಳದೆ ತಾ. 21ರಲ್ಲಿ ಶ್ರೀಮತಿ ಮನೋರಮಾ ಎಸ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆರ್. ಆಚಾರ್ ಮೊದಲಾದವರು ವಿದ್ಯಾಲಯವನ್ನು ಹರಸಿ ಮಾತನಾಡಿದರು ಶ್ರೀಮತಿ ವತ್ಸಲ ತಾಳಿತ್ತಾಯ ಮತ್ತು ಶಾಲಾ ಮಕ್ಕಳ ಸಂಗೀತ ಗೋಷ್ಠಿ ನಡೆಯಿತು.

ಹಡಗಿನಲ್ಲಿ ಸ್ವಾತಂತ್ರ್ಯ ದಿನೋತ್ಸವ

ಈಗ ಯುರೋಪಿನ ಪ್ರವಾಸದಲ್ಲಿರುವ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸುಯೇಜಿನ ಬಳಿ ಉಗಿಹಡಗು "ಎಂ. ವಿ. ವಿಕ್ಟೋರಿಯಾ"ದಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಹಡಗದಲ್ಲಿ ಸುಮಾರು 55ಮಂದಿ ಹಿಂದೀಯರಿದ್ದರು. ಡಾ ಮಲ್ಯರು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೆಂದು ತಿಳಿದೊಡನೆ ಅವರನ್ನೇ ಸಭಾಧ್ಯಕ್ಷರನ್ನಾಗಿ ಮಾಡಲಾಯಿತು. ಕಲಿವ ಭಾಷಣಗಳಾಗಿ, ಭಾರತ ರಾಷ್ಟ್ರಧ್ವಜರಿಗೆ ರಾಜಭಕ್ತಿಯ ಸಂದೇಶವನ್ನು ಕಳುಹಿಸಲಾಯಿತು. ತರುವಾಯ ಭಾರತೀಯ ರೀತಿಯ ಲಘು ಉಪಹಾರವಾಯ್ತು. ಸಭೆಯಲ್ಲಿ ಹಿಂದೀಯರಲ್ಲದ ಕೆಲವು ಅತಿಥಿಗಳು, ಹಡಗಿನ ಕೆಲವು ಅಧಿಕಾರಿಗಳೂ ಭಾಗವಹಿಸಿದ್ದು. ಈ ಸಭೆದಿನದಲ್ಲಿ ಅಭಿನಂದನೆಗಳನ್ನು ಕೊಟ್ಟಿದ್ದರು. ಈ ಸಮಾರಂಭವು ಗಂಭೀರವಾಗಿ ಜರಗಿ, ಹಡಗಿನಲ್ಲಿದ್ದ ಪ್ರತಿಯೋರ್ವ ಹಿಂದೀಯನಿಗೂ ಈ ಸ್ವಾತಂತ್ರ್ಯ ದಿನೋತ್ಸವದಲ್ಲಿ ಭಾಗಿಯಾಗುವ ಸುಯೋಗವು ಒದಗಿದುದಕ್ಕಾಗಿ ಬಹಳ ಸಂತೃಪ್ತಿಕರವಾಗಿತ್ತು.

ಟೆಂಡರು ನೋಟೀಸು

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಿಂದ ಈ ಮೂಲಕ ತಿಳಿಸುವುದೇನೆಂದರೆ—

ಕದ್ರಿ ಭಂಡಾರದ ದೆವತಾತಾರ ಮೇಳದ ಹಳೇ ಸಾಮಾನುಗಳ ದುರಸ್ತಿಯನ್ನು ವಹಿಸಿಕೊಳ್ಳುವರೆ ತಾ. 10—9—55ನೆ ಶನಿವಾರ ದಿನ ಸಂಜೆ ಗಂಟೆ 3ಕ್ಕೆ ಮೇಲ್ಕಂಡ ಆಫೀಸಿನಲ್ಲಿ ಟೆಂಡರ್ ಸ್ವೀಕರಿಸಲಾಗುವುದು. ಖಾಯಸುಳ್ಳವರು ಹಾಜರಾಗಿ ರೂ. 50/- ದಿಪೋಜಿಟ್ ಕಟ್ಟಿ ರಶೀದಿ ಪಡೆದು ಟೆಂಡರು ಕೊಡತಕ್ಕದ್ದು. ವಿಳಾಜಿಟ್ ವಿನದ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ. ಏಲಂನ ಎಲ್ಲಾ ಶರತ್ತುಗಳನ್ನು ಆಫೀಸಿನಿಂದ ತಿಳಿಯತಕ್ಕದ್ದು.

ಮಂದಾರ್ತಿ) Sd) B Umesh Rao
29-8-55) Executive officer

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ಶೆಣೈಯವರ

ಓದಲೇಬೇಕಾದ ಮೂರು ಪುಸ್ತಕಗಳು

ಮೀರೆ ಮತ್ತು ನಾನು (೧೫ ಮೀರಾ ಕತೆಗಳು) 1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು 1—0—0
ಕನಸದ ಡಬ್ಬಿಗಳು (೩೪ ಹರಟೆಗಳು) 1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮಧ್ರಾಸಿನ ನಿಮ್ಮಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ನಿಮ್ಮಪ್ಪಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:— ಸಾಧಾರಣ ಪ್ರತಿ— ರೂ ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ.	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	3
4 ಕುರಲವ	0	8
5 ತಾಯ್ನ ಸಾಮ್ರಾಜ್ಯ	1	8
6 ಸುಧುವನ	3	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು	1	4
9 ಹೆಂಡ್ತಿ ಗಂಡನಾದರೆ	0	4
10 ಪುರುಷ ವಧು	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	1	0
13 ದೇಶಭಕ್ತ	1	4
14 ಪ್ರೇಮ ವಿಜಯ	1	4
15 ರಂಗಭೂಮಿ	0	10
16 ಸೇವಾವ್ರತ	0	6
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾಶ	1	4
20 ಮೂರು ಪ್ರಹಸನಗಳು	1	4
21 ನಗೆ ನೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	13
25 ಆಕಾರ ಗಂಗೆ	2	8
26 ಸ್ವಾತಂತ್ರ್ಯ ಸೇರಿ ಸಾವರಕರವರು	1	4
27 ಜೀವನ ಸಂಗ್ರಾಮ	1	8
28 ಕಮಲ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜಮೀನ್ದಾರ	1	8
33 ಬಾಳಿನ ಬೆಡಗು	1	4
34 ರೋಜಾಮುಯ್ಯಿ	1	0
35 ಜೇನುರು	0	10
36 ನನ್ನ ಕಥೆಗಳು	0	10
37 ನಕ್ಕರೂ ನಗಬಹುದು	0	10
38 ಧರ್ಮ ಸಂಕಟ	0	[illegible]

ನಿಮಗವಶ್ಯವಾದ ಕೆಟಲಾಗಿಗೆ ಬರೆಯಿರಿ.
ನವಭಾರತ ಬುಕ್ ಡಿಪೊ, ಉಡುಪಿ.

ಪೂರ್ವ ಆಫ್ರಿಕದ ಪ್ರವಾಸಾನುಭವ

ಉಗಾಂಡ, ಕೆನಿಯ, ಟೆಂಗನಿಯಾಕಗಳ ಜನಜೀವನ

ಮೈಸೂರಿನ ರಾಜಪ್ರಮುಖರು ಪೂರ್ವ ಆಫ್ರಿಕದಲ್ಲಿ ಸಂಚರಿಸಿ, ಅಲ್ಲಿಯ ವನ್ಯ ಮೃಗಗಳ ಜೀವನವನ್ನು ಪರಿಶೀಲಿಸಲು, ಮತ್ತು ಈ ನೈಸರ್ಗಿಕ ಸಂಪತ್ತನ್ನು ಬೆಳೆಸಿಕೊಂಡು ಹೋಗಲು ಏನು ಮಾಡಿದರಾಗಬಹುದೆಂದು ವಿಚಾರಿಸಲು ಹೆವಣಿಸಿ, ಏಳು ವಾರಗಳ ವರೆಗೆ ಪ್ರವಾಸವನ್ನು ಕೈಗೊಂಡಿದ್ದರು. ಇದೀಗ ಮೈಸೂರಿಗೆ ಮರಳಿರುವ ಅವರು "ನಮ್ಮ ದೇಶದಲ್ಲಿಯೇ ನಾವು ಎಷ್ಟು ಕಲಿಯಬಹುದೋ ಅದಕ್ಕಿಂತ ಹೆಚ್ಚಿನದೇನಾದರೂ ಆಫ್ರಿಕದಲ್ಲಿ ಕಲಿಯಲಿದೆಯೆಂದು ನನಗೆ ತೋರುವುದಿಲ್ಲ" ಎಂದು ಪತ್ರಿಕಾ ಪರಿಷತ್ತೊಂದರಲ್ಲಿ ಹೇಳಿದ್ದಾರೆ.

ಕೋಣಗಳ ಬೇಟೆ

ಆಫ್ರಿಕದ ಅರಣ್ಯಗಳಲ್ಲಿ ಕಾಡುಕೋಣಗಳ ಬೇಟೆಯಾಡುವುದೊಂದು ಮಾತ್ರ ರೋಮಾಂಚಕ ಅನುಭವ ಎಂದು ಅವರು ಹೇಳಿದರು. ರಾಜಪ್ರಮುಖರನ್ನು ಬೇಟೆಯ ಸಂದರ್ಭದಲ್ಲಿ ಕಾಡುಕೋಣವೊಂದು ತಿವಿಯಲು ಬಂದಿತ್ತೆಂದೂ ಆದರೆ ಅದನ್ನು ಗುಂಡಿನಿಂದ ಕೆಡವಲಾಯಿತೆಂದೂ ಅವರ ಸಂಗಾತಿಯೊಬ್ಬರು ಹೇಳಿದರು. ತಾನು ಸುಮಾರು ೧೯೯ ಜಾತಿಯ ವನ್ಯ ಪಶು ಸಂಪತ್ತನ್ನು ಭಾರತಕ್ಕೆ ತಂದಿರುವುದಾಗಿಯೂ ಇದರಲ್ಲಿ ಟೆಂಗನಿಯಾಕದ ದೊಡ್ಡ ಕಾಡುಕೋಣವು ಉಲ್ಲೇಖನೀಯವೆಂದೂ ರಾಜಪ್ರಮುಖರು ತಿಳಿಸಿದರು.

ಜನರ ಜೀವನ

ಭಾರತದ ವನ್ಯ ಮೃಗ ಮಂಡಳದ ಅಧ್ಯಕ್ಷರಾಗಿರುವ ಮೈಸೂರಿನ ರಾಜ ಪ್ರಮುಖರು ಕೇವಲ ಕಾಡು ಪ್ರಾಣಿಗಳ ಮತ್ತು ಪಕ್ಷಿಗಳ ನಿರೀಕ್ಷಣೆಯನ್ನಷ್ಟೇ ಮಾಡಿ ಪೂರ್ವ ಆಫ್ರಿಕದಿಂದ ಮರಳಿಲ್ಲ. ಕೆನಿಯದ ಮೂರು, ಉಗಾಂಡದ ಎರಡು ಮತ್ತು ಟೆಂಗನಿಯಾಕದ ಒಂದು ವನ್ಯ ಮೃಗ ಕ್ರೀಡಾಂಗಣವನ್ನು ನೋಡಿದಂತೆ, ಆ ದೇಶಗಳಲ್ಲಿ ನೆಲಸಿರುವ ಭಾರತೀಯರ ಸ್ಥಿತಿಗತಿಯನ್ನೂ ರಾಜಪ್ರಮುಖರು ವಿಚಾರಿಸಿ, ತಿಳಿದುಕೊಂಡರು. ಭಾರತೀಯರಿಂದಾಗಿ ಈ ದೇಶಗಳಲ್ಲಿ ಆರ್ಥಿಕ ಪ್ರಗತಿಯು ಸಾಧಿಸಲ್ಪಟ್ಟಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮೃದ್ಧ ಪ್ರದೇಶ

ಉಗಾಂಡವು ಮೈಸೂರಿನಂತೆಯೇ ಕಾಣುತ್ತದೆ. ಅಲ್ಲಿ ಧಾರಾಳವಾದ ನೈಸರ್ಗಿಕ ಸಂಪತ್ತಿದೆ; ಅಲ್ಲಿಯ ಜನರು ಜಲವಿದ್ಯುಚ್ಛಕ್ತಿಯ ಯೋಜನೆಗಳನ್ನು ತೊಡಗಿದ್ದಾರೆ. ನಮ್ಮ ಯೋಜನೆಗಳಿಂದ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿಯೊಡನೆ ಹೋಲಿಸಿದರೆ ಈ ಪ್ರಯತ್ನ ದೊಡ್ಡದೆನಿಸುವುದಿಲ್ಲ. ಅದರೆ, ಆ ದೇಶಗಳಲ್ಲಿ ಬಹಳ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುದು ಸಂತೋಷಕರವಾದ ವಿಷಯ. ಟೆಂಗನಿಯಾಕ ಮತ್ತು ಕೆನಿಯದ ಪ್ರಜೆಗಳಿಗಿಂತಲೂ ಉಗಾಂಡದ ಜನರು ಮುಂದುವರಿದಿದ್ದಾರೆ; ಅವರಲ್ಲಿ ಸಾಕಷ್ಟು ರಾಜಕೀಯ ಜಾಗೃತಿ ಉಂಟಾಗಿದೆ—ಅದರಿಂದಲೇ ಈ ದೇಶ ಉಳಿದೆರಡಕ್ಕಿಂತ ಸಮೃದ್ಧವಾಗಿದೆ ಎಂದು ರಾಜಪ್ರಮುಖರು ವಿವರಿಸಿದರು.

ವರ್ಣಭೇದದ ಧೋರಣೆ

ವರ್ಣಭೇದದ ಧೋರಣೆಯ ಕುರಿತು ನಿಮಗೇನು ತೋರಿತು ಎಂಬ ಪ್ರಶ್ನೆಗೆ ಉತ್ತರಕೊಡುತ್ತಾ ರಾಜಪ್ರಮುಖರು ಬಹಿರಂಗವಾಗಿ ಇದೆಷ್ಟು ಆಚರಿಸುತ್ತಿಲ್ಲ; "ಆದರೆ ನಿಮಗದರ ಅನುಭವ ಆಗದೆ ಹೋಗುವುದಿಲ್ಲ" ಎಂದರು. ಈಗಅಲ್ಲಿವಿವಿಧ ಜನಾಂಗಗಳು ಕೂಡಿಕೊಂಡು ಪರಸ್ಪರ ಪ್ರೀತಿ ಮತ್ತು ಸೌಹಾರ್ದತೆಯಿಂದ ದಿನಗಳೆಯುವ ಸೂತ್ರವೊಂದನ್ನು ಕಂಡು ಹಿಡಿಯುವ ಪ್ರಯತ್ನ ನಡೆದಿರುವಂತೆ ಕಾಣುತ್ತದೆ ಎಂದು ಹೇಳಿದರು. ಕೆನಿಯದಲ್ಲಿ ಈ ಅಗತ್ಯ ಬಹಳ—ಈ ಪ್ರಯತ್ನಗಳು ಸಫಲವಾಗಲಿ ಎಂದು ನಾವು ಹಾರೈಸೋಣ ಎಂದು ರಾಜಪ್ರಮುಖರು ಆಶಾದಾಯಕ ಮಾತುಗಳನ್ನಾಡಿದರು.

ಹೊರಗಿನ ನೆರವು

ಟೆಂಗನಿಯಾಕವು ತೀರ ಹಿಂದುಳಿದಿದೆ—ಆಫ್ರಿಕದವ, ಏಶ್ಯದವ ಎಂಬ ಭೇದಭಾವ ಇಲ್ಲಿಲ್ಲ. ಸರಕಾರವು ಈ ದೇಶದ ಅಭಿವೃದ್ಧಿಗೆ ತುಂಬ ಪೆಣಗುತ್ತದೆ. ನನ್ನ ಅಭಿಪ್ರಾಯದಂತೆ ಇವೆಲ್ಲ ದೇಶಗಳಿಗೂ ಅಭಿವೃದ್ಧಿ ಹೊಂದಲು ಧಾರಾಳವಾದ ಸಹಾಯವನ್ನು ಕೊಡಬೇಕು. ಆರ್ಥಿಕ ಕ್ಷೇತ್ರದಲ್ಲಿ ಭಧ್ರವಾದ ಬುನಾದಿಯನ್ನು ಹಾಕಿ ಔದ್ಯಮಿಕ ಪ್ರಗತಿಗೆ ತಾಂತ್ರಿಕ ನೆರವನ್ನು ನೀಡಬೇಕು. ಜಗತ್ತು ಹೀಗೆ ಔದಾರ್ಯದಿಂದ ನಡೆದುಕೊಂಡರೆ, ಪೂರ್ವ ಆಫ್ರಿಕದ ಈ ದೇಶಗಳಲ್ಲಿ ಕಂಡು ಬರುವ ಸಾಂಸ್ಕೃತಿಕ ವೈಶಿಷ್ಟ್ಯವನ್ನೂ ಅಲ್ಲಿಯ ಸಮಾಜದ ಪರಂಪರೆಯನ್ನೂ ನಿರಾತಂಕವಾಗಿ ಕಾಪಾಡಿಕೊಂಡು ಹೋಗಬಹುದು ಉತ್ಕರ್ಷದ ಮೆಟ್ಟಿಲೇರಲು ಹವಣಿಸುವ ಈ ಜನರ ಕೃತಜ್ಞತೆಗೆ ಅಗ ಜಗತ್ತು ಪಾತ್ರವಾಗಬಲ್ಲುದು ಎಂದರು.

ನೋಟೀಸು

ಉಡುಪಿ ಡಿ. ಮುಂ. ಕೋರ್ಟನಲ್ಲಿ

ಕ್ರೆಸಸಂಬ್ರ 246/55.

ಜೋಸೆಫ್, ಡಿ. ಸೋಜ— ವಾದಿ

ಮತ್ತು

ಗಸ್ಪಾರ ಡಿ. ಸೋಜ ಕೂಡ 6 ಜನರು— ಪ್ರತಿವಾದಿರು.

2ನೇ ಪ್ರತಿವಾದಿ ಅಂತೋನಿ ಲೀನಾ ಡಿ. ಸೋಜ 4ನೇ ಪ್ರತಿವಾದಿ ಬೋನಿಫಾಸ್ ಡಿ. ಸೋಜ— ಪಾರ್ಸಲ್ ಡಿ. ಸೋಜರ ಮಗಂದಿರು. ಉಡುಪಿ ತಾಲೂಕು ಕೊಡಪೂರು ಗ್ರಾಮದ ಕಲ್ಯಾಡಿಯಲ್ಲಿರುವವರು— ಇವರಿಗೆ.

ದಾವಾ ಆಸ್ತಿಯನ್ನು ನೀವು ಕೂಡ 6ಜನ ಪ್ರತಿವಾದಿರು ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬಂದು, ತಾ. 31—8—55ಕ್ಕೆ ನಿಮ್ಮಿಂದ ಕೂಡ ಬರತಕ್ಕ ಮೂಲಗೇಣಿ ಬಾಕಿಗೆ ದಾಖ್ಲುಮಾಡಿದ ಮೇಲ್ಮಾಣಿಸಿದ ದಾವೆಯು ತಾ. 12-9-55ಕ್ಕೆ ತಪ್ಪಿಗೆ ಇಟ್ಟಿರುವುದರಿಂದ, ನೀವು ಸದ್ರಿ ತಾರೀಕು ಪನಲು ಘಂಟೆ 11ಕ್ಕೆ ಈ ಕೋರ್ಟುಮುಂದೆ ಹಾಜರಾಗಬೇಕೆಂತಲೂ, ಇಲ್ಲವಾದ್ರೆ ನಿಮ್ಮನ್ನು ತಿಳ್ಯಾಮಾಡಿ ದಾವೆಯನ್ನು ತಿರ್ಮಾನಮಾಡಲಾದೀತೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

(By order of court)

K. Vittal Nayak.

Vakil for Plaintiff.

ಉಡುಪಿ 23-8-55

ವಿದ್ಯುತ್ತನ್ನು ಉತ್ಪಾದಿಸಬಲ್ಲ ಪ್ರತಿ ಪ್ರವರ್ತಕ ಯಂತ್ರ

ಇನ್ನು ಏಳೆಂಟು ವರ್ಷಗಳಲ್ಲಿ ಭಾರತದಲ್ಲಿ ಸ್ಥಾಪನೆ

ಜಿನೇವದಲ್ಲಿ "ಶಾಂತಿಗಾಗಿ ಪರಮಾಣು" ಪರಿಷತ್ತು ಜರಗಿದ್ದಾಗ ಜಗತ್ತಿನ ಯುವಕರ ಸಮ್ಮೇಳನವೊಂದು ಆ ನಗರದಲ್ಲಿ ಸೇರಿತು. ಇಲ್ಲಿ ಭಾಷಣ ಮಾಡಿದ ಬ್ರಿಟಿನಿನ ಅಣುತಜ್ಞ ಸರ್ ಜಾನ್ ಕೊಕ್‌ಕ್ರೋಫ್ಟ್ ಅವರು ಭಾರತದಲ್ಲಿ ಇನ್ನು ಏಳೆಂಟು ವರ್ಷಗಳಲ್ಲಿ, ಅಂದರೆ ೧೯೬೨ನೇ ಇಸವಿಯ ಹೊತ್ತಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲ ಪ್ರತಿ ಪ್ರವರ್ತಕ ಯಂತ್ರ ಸ್ಥಾಪಿಸಲ್ಪಡಬಹುದು ಎಂದು ಪ್ರಕಟಿಸಿದರು.

ಅಗ್ಗದರದಲ್ಲಿ ಶಕ್ತಿ

ಜಲವಿದ್ಯುಚ್ಛಕ್ತಿಯನ್ನು ಅಭಿವೃದ್ಧಿಗೊಳಿಸಲು ಸಾಕಷ್ಟು ಅನುಕೂಲತೆ ಇಲ್ಲದ ಪ್ರದೇಶಗಳಲ್ಲಿ ಅಣುಶಕ್ತಿಯ ಬೆಸೆಯಿಂದ ಕೆಲಸಮಾಡುವ ಪ್ರತಿಪ್ರವರ್ತಕ ಯಂತ್ರಗಳನ್ನು ಉಪಯೋಗಿಸಿ ಅಗ್ಗದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು. ಇದರಂತೆ ಕಲ್ಲಿದ್ದಲನ್ನು ಸಾಗಿಸುವ ಹೆಚ್ಚು ಹೆಚ್ಚಾಗುವ ದೂರದ ಊರುಗಳಲ್ಲಿಯೂ ಅಣುಶಕ್ತಿಯನ್ನುಪಯೋಗಿಸಿ ಉತ್ಪಾದಿಸಿದ ವಿದ್ಯುಚ್ಛಕ್ತಿಯು ಬಳಸಲ್ಪಡಬಹುದು ಎಂದು ಅವರ ಅಭಿಪ್ರಾಯ. ಜಗತ್ತಿನಲ್ಲಿ ನೈಸರ್ಗಿಕ ಸಂಪತ್ತನ್ನೇನೂ ಪಡೆದಿರದ, ಅಂದರೆ ವಿದ್ಯುತ್ತನ್ನು ಜಲಶಕ್ತಿಯಿಂದ ಉತ್ಪಾದಿಸಲು ಅನುಕೂಲತೆ ಇಲ್ಲದ ಪಶ್ಚಿಮ ಅಸ್ಟ್ರೇಲಿಯ, ದಕ್ಷಿಣ ಹಾಗು ನೈಋತ್ಯ ಆಫ್ರಿಕ, ಇಸ್ರೇಲ್ ಮುಂತಾದ ದೇಶಗಳೂ ವಿದ್ಯುದುತ್ಪಾದನೆಯ ಹೊಸ ಬಗೆಯಿಂದ ಲಾಭ ಪಡೆಯಬಹುದು ಎಂದವರು ತಿಳಿಸಿದರು.

ವಿದ್ಯುದುತ್ಪಾದನೆಯ ಪ್ರಮಾಣ

ನಮ್ಮ ದೇಶದಲ್ಲಿ ಉಪಯೋಗಿಸಲ್ಪಡುವ ಇಂಧನ ಶಕ್ತಿಯ ಲಂ% ಕೇವಲ ಬೆರಣಿಯನ್ನು ಸುಡುವುದರಿಂದ ಸಂಪಾದಿಸಲ್ಪಡುತ್ತದೆ. ಇದರಿಂದಾಗಿ ಭೂಸಾರದ ಸಂವರ್ಧನೆಗೆ ಉಪಯೋಗಿಸಬಹುದಾದ ಅತ್ಯಮೂಲ್ಯವಾದ ಗೊಬ್ಬರ ನಾಶ ಹೊಂದುತ್ತದೆ. ಅಣುಶಕ್ತಿಯನ್ನು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಳಸುವುದರಿಂದ ಇಂಧನದ ಸಮಸ್ಯೆ ಬಹಳಷ್ಟು ಪರಿಹಾರವಾಗಬಲ್ಲುದು. ಪ್ರಕೃತ, ಈ ದೇಶದಲ್ಲಿ ಬಳಸಲ್ಪಡುವ ವಿದ್ಯುಚ್ಛಕ್ತಿಯು ಬ್ರಿಟಿನಿನ ಪ್ರಮಾಣದ ಎಂಭತ್ತರಷ್ಟು ಒಂದಂಶವಾತ್ರ: ಪಂಚವಾರ್ಷಿಕ ಯೋಜನೆಯಲ್ಲಿ ದೇಶದೊಳಗಿನ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ಏಳು ಪಾಲಿನಷ್ಟು ಹೆಚ್ಚಿಸುವ ಪ್ರಯತ್ನ ನಡೆದಿದೆಯಾದರೂ ಬ್ರಿಟಿನಿನ ೫೦೦ ಲಕ್ಷ ಕಿಲೋವಾಟಿನ ವಾರ್ಷಿಕ ಉತ್ಪನ್ನದ ಮುಂದೆ ಭಾರತದ ೩೫ ಲಕ್ಷ ಕಿಲೋವಾಟಿನ ಉತ್ಪಾದನೆ ಬಹಳ ಕಡಿಮೆಯಾಗಿ ತೋರುತ್ತದೆ. ಭಾರತದಲ್ಲಿ ಹೆಚ್ಚೆಂದರೆ ೩೦೦ ಲಕ್ಷ ಕಿಲೋವಾಟಿನಷ್ಟು ವಿದ್ಯುಚ್ಛಕ್ತಿಯನ್ನು ಜಲಯೋಜನೆಗಳಿಂದುತ್ಪಾದಿಸಬಹುದೆ ನಾವುತ್ತ ವಿಷಯವನ್ನು ಬೇಗನೆ ಮುಟ್ಟುವ ಲಕ್ಷಣ ಕಾಣಿಸುತ್ತಿದುದರಿಂದ ಅಣುಶಕ್ತಿಯನ್ನು ಆದಷ್ಟು ಬೇಗ ಆಶ್ರಯಿಸಿ, ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲುಪ್ರಯತ್ನಿಸಬೇಕಾಗುತ್ತದೆ. ಜಲಯೋಜನೆಗಳಿಗೆ ಬಹಳ ಬಂಡವಾಳ ಬೇಕಾಗುವುದರಿಂದ ಅಣುಶಕ್ತಿಯನ್ನು ಬಳಸುವುದು ಮಿತವ್ಯಯದ ದೃಷ್ಟಿಯಿಂದಲೂ ಪ್ರಯೋಜನಕರ.

ಮೇಧಾವಿಗಳಿಗೆ ಕೊರತೆ

ಇದನ್ನು ಮನಗಂಡರೆ, ನಮ್ಮ ದೇಶದಲ್ಲಿ, ಮತ್ತು ಹಿಂದುಳಿದ ಇತರ ದೇಶಗಳಲ್ಲಿ, ಉದ್ಯೋಗ್ಯವಿ ಅಣುವಿಜ್ಞಾನಿಗಳನ್ನು ಸಕಲ ರೀತಿಯಿಂದ ಪೋಷಿಸಿ, ಪ್ರೋತ್ಸಾಹಿಸುವ ಆವಶ್ಯಕತೆ ಎಷ್ಟೆಂದು ಸ್ವಯಮೇವ ವ್ಯಕ್ತವಾಗುತ್ತದೆ. ೧೯೬೨-೬೭ನೇ ವರ್ಷಗಳಲ್ಲಿ ಭಾರತದ ಕೆಲವು ಸ್ಥಳಗಳಲ್ಲಾದರೂ ಪ್ರತಿ ಪ್ರವರ್ತಕ ಯಂತ್ರಗಳು ಸ್ಥಾಪಿಸಲ್ಪಟ್ಟು ಕೆಲಸ ಮಾಡುತ್ತವೆ ಎಂಬ ಆಶೆ ಉಂಟಾಗಿರುವುದರಿಂದ, ನಮ್ಮ ಶಕ್ತಿಯ ಕುರಿತಾಗಿ ಸಂಶಯ ಪಡುವ ಅಗತ್ಯ ಈಗ ಉಳಿದಿಲ್ಲ. ರಾಷ್ಟ್ರದ ಪುನಾರಚನೆಯಲ್ಲಿ ಪರಿಶ್ರಮ ಪೂರ್ವಕ ದುಡಿಯಬಲ್ಲ ಮೇಧಾವಿಗಳ ಆವಶ್ಯಕತೆಯನ್ನು ಪೂರೈಸುವುದಕ್ಕೆಯೇ ನಾವು ಮಹತ್ವ ಸಲ್ಲಿಸುವುದು ಹಿತಕರ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಪಡಿಸಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ.ಪಿ.ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)

CALCUTTA—40 ಸ್ವಾಕಿಸ್ಟರು: ಶಹಾಕಂಸೆಪ್ಸಿ, ಮಂಗಳೂರು

ನಾಡಿನ ಶಾಸನ ಹಾಗು ನಾಗರಿಕ ಕಾಯಿದೆಗೆ ತೋರಿಸಬೇಕಾದ ವಿಧೇಯತೆ

ನಮ್ಮದು ನಿರಂಕುಶ ಪದ್ಧತಿಯನ್ನು ಅಂಗೀಕರಿಸಿದ ನಾಡಲ್ಲ— ಪ್ರಜಾಪ್ರಭುತ್ವಕ್ಕೆ ಸಮ್ಮತಿಸಿರುವ ದೇಶ. ಜನತೆಯ ಆಳ್ವಿಕೆಯೇ ಪ್ರಜಾಪ್ರಭುತ್ವ ಎಂಬ ಸಾಮಾನ್ಯ ಕಲ್ಪನೆಯನ್ನು ನಾವು ಕಟ್ಟಿಕೊಂಡಿದ್ದೇವೆ. ಹೀಗಿರುವಾಗ ಆಡಳಿತದಲ್ಲಿ ಶಾಸನದ ಸ್ಥಾನಮಾನಗಳೇನು ಎಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಉತ್ತರವನ್ನು ಕೊಡಲು ಭಾರತ ಸರಕಾರದ ಕಾಯಿದೆ ಪಂಡಿತರಾದ ಶ್ರೀ ಎಂ. ಸಿ. ಸೆಟಲ್‌ವಾಡ್ ಮದ್ರಾಸಿನಲ್ಲಿ ಪ್ರಯತ್ನಿಸಿದರು. ಅವರ ಅಭಿಪ್ರಾಯದಂತೆ, ಆಡಳಿತಾಧಿಕಾರಿಯು ತನ್ನ ಮನಸ್ಸಿಗೆ ಬಂದಂತೆ ನಡೆಯುವುದರ ವಿರುದ್ಧ ರಕ್ಷಣೆಯನ್ನು ನಾಗರಿಕನಿಗೆ ಕೊಟ್ಟು ಶಾಸನಾಂಗದ ಕಕ್ಷೆಗೆ ಒಳಪಟ್ಟು ಕೆಲಸ ನಿರ್ವಹಿಸುವುದೇ ಪ್ರಜಾಪ್ರಭುತ್ವದ ತಿರುಳು. ಶಾಸನದ ವಿಧಿ ನಿಯಮಗಳು ವ್ಯಕ್ತಿಯ ಮೂಲಭೂತ ಸ್ವಾತಂತ್ರ್ಯವನ್ನು ಅಪಹರಿಸದಂತಿದ್ದರೆ, ಅದಕ್ಕೆ ಮನ್ನಣೆಯನ್ನು ಸಲ್ಲಿಸಲೇಬೇಕೆಂಬುದು ಇಲ್ಲಿಗ ಮನಿಸಬೇಕಾದ ಅಂಶ.

ಬಹುಮತದ ಸರಕಾರ

ಜನತೆಯ ಪ್ರತಿನಿಧಿ ಸ್ವರೂಪದಲ್ಲಿ ಬಹುಮತವನ್ನು ಸಂಪಾದಿಸಿ, ಚುನಾವಣೆಯಲ್ಲಿ ಗೆದ್ದು ಬಂದ ರಾಜಕೀಯ ಪಕ್ಷವು ಸರಕಾರವನ್ನು ರಚಿಸುವುದು ಪ್ರಜಾಪ್ರಭುತ್ವದ ಸಂಪ್ರದಾಯ. ತಾತ್ವಿಕವಾಗಿ ಈ ಸರಕಾರ ಜನತೆಯದಾಗಿದೆ; ವ್ಯವಹಾರದಲ್ಲಿ ಮಾತ್ರ ಅದು ಪಕ್ಷದ ಪ್ರಭೃತಿಗಳ ಕೈಯಲ್ಲಿ ಜುಟ್ಟನ್ನು ಕೊಟ್ಟಿರುತ್ತದೆ. ಸರಕಾರದ ಆಡಳಿತ ಯಂತ್ರಕ್ಕೂ ಚುನಾಯಿತ ಸಭೆಗೂ ಗೊಣಸಿನಂತಿರುವ ಸಚಿವ ಸಂಘಟನೆ ತನ್ನ ನಿತ್ಯ ವ್ಯವಹಾರಗಳನ್ನು ಬಹುಮತದ ಸ್ಥಿತಿಯನ್ನು ಸಂಪಾದಿಸುವ ರೀತಿಯಲ್ಲಿ ಸಾಗಿಸಿಕೊಂಡು ಹೋಗಬೇಕಾಗುತ್ತದೆ ಇದರ ನಿಜವಾದ ಅರ್ಥವೇನೆಂದರೆ, ಬಹುಮತದ ಮಾತೇ ನಡೆಯುತ್ತದೆ. ಅಪಕ್ಷದ ಧ್ಯೇಯವೇ ಸಾಧಿಸಲ್ಪಡುತ್ತದೆ. ಪ್ರತಿಪಕ್ಷದ ವಿರೋಧ ಕಡೆಗಣಿಸಲ್ಪಡುವುದೂ ಮತೂವೆಗಳು ಅವಸರವಾಗಿ, ಪಕ್ಷದ ಪ್ರಭೃತಿಗಳಿಂದ ಅನೇಕಿಸಲ್ಪಟ್ಟು ಚರ್ಚೆಗೆ ಬರುವುದೂ ತೀರ ಸಾಮಾನ್ಯ.

ಶಾಸನದ ಬಲ

ಕೆಲವೇ ಜನರು ಜನತೆಯ ಹೆಸರಿನಲ್ಲಿ ಅಧಿಕಾರ ನಡೆಸುತ್ತಿರುವರೆಂದು ಪ್ರಜಾಪ್ರಭುತ್ವದ ಈ ವರ್ಣನೆ ಧ್ವನಿಸುತ್ತದೆ. ಆದರೆ ವ್ಯಕ್ತಿ ಸ್ವಾತಂತ್ರ್ಯವನ್ನು ಯಾವ ಶಾಸನವೂ ಹತ್ತಿಕ್ಕಲಾರದು; ಘಟನೆಯ ಸೂತ್ರಗಳಿಗೆ ನ್ಯಾಯವಿರುದ್ಧವಾದ ಅಂಶಗಳನ್ನು ಸರಕಾರ ಜನರ ಮೇಲೆ ಹೇರಲಾರದು. ಜನರ ಮಾತನ್ನು ತಿರಸ್ಕರಿಸಬೇಕಾದರೆ, ಸರಕಾರದ ಸರವಾಗಿ ವ್ಯವಹರಿಸುವ ಅಧಿಕಾರಿಗೆ ಶಾಸನದ ಬೆಂಬಲವಿರಬೇಕು. ಇದು ಎಷ್ಟರಮಟ್ಟಿಗೆ ಇದೆ; ಮತ್ತು ಅಧಿಕಾರಿಗಳಿಂದಲೂ ಸರಕಾರದಿಂದಲೂ ಎಲ್ಲಿ ಉಲ್ಲಂಘಿಸಲ್ಪಟ್ಟಿದೆ ಎಂಬ ಸಂಗತಿಯಲ್ಲಿ ಉಚ್ಚ ನ್ಯಾಯಾಲಯಗಳ ತೀರ್ಮಾನ ನಿಂಧನಾಗುತ್ತದೆ. ತನ್ನ ಹಕ್ಕು ಬಾಧ್ಯತೆಗಳು ಹತ್ತಿಕಲ್ಪಟ್ಟಿವೆ ಅಥವಾ ಕಡೆಗಣಿಸಲ್ಪಟ್ಟಿವೆ ಎಂದು ಕಂಡ ನಾಗರಿಕನು ಸಾಮಾನ್ಯ ಕಚೇರಿಯಲ್ಲಿ ನ್ಯಾಯಸ್ಥಾನಗಳಿಗೆ ಅರ್ಜಿಸಲ್ಲಿಸಿ, ಸಮಾಧಾನ ಪಡೆಯಬಲ್ಲನು. ನಿರಂಕುಶ ಆಡಳಿತಕ್ಕೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲವೆಂದೂ ಅಧಿಕಾರಿಗಳು ದೇಶದ ಕಾನೂನಿಗೆ ವಿರೋಧವಾಗಿ ಎಷ್ಟೇ ಸದುದ್ದೇಶದ ಹೆಜ್ಜೆಯನ್ನಾದರೂ ಇಡುವಂತಿಲ್ಲವೆಂದೂ ಇದರಿಂದ ವ್ಯಕ್ತವಾಗುತ್ತದೆ.

ನಾಗರಿಕರ ಅಧಿಕಾರ

ಘಟನೆಯು ಮೂಲಭೂತ ಹಕ್ಕುಗಳನ್ನು ಕೊಡಮಾಡಿದೆಯಾದರೂ ಅದು ತಿದ್ದಲ್ಪಡಲಾರದ ಶಾಶ್ವತ ಆಯುಷ್ಯವುಳ್ಳ ಸೂತ್ರವಲ್ಲ—ಎಂಬುದನ್ನು ನೆನಪಿಡುವುದೊಳಿತು. ಅದುದರಿಂದ ಶಾಸನಬದ್ಧವಾದ ಆಡಳಿತವು ಸುಖಾವಹವಾಗಿ ಪರಿಣಮಿಸಬೇಕಾದರೆ ಪ್ರಜೆಗಳ ಮನೋಭಾವದಲ್ಲಿ ಶೀಘ್ರ ಜಾಗೃತಮೂಡುವುದು ಅತ್ಯವಶ್ಯವಾಗಿದೆ. ತನ್ನ ಕರ್ತವ್ಯ ಮತ್ತು ಹಕ್ಕು ಬಾಧ್ಯತೆಗಳ ಸ್ಪಷ್ಟ ಕಲ್ಪನೆಯುಳ್ಳ ಪ್ರಜೆಯಿಂದಲೇ ಶಾಸನಾನುಸಾರವಾದ ರಾಜ್ಯ ಭಾರಕ್ಕೆ ಪೋಷಕನಾದ ಸರಕಾರ ಬಂದೀತು. ಸಾರ್ವಭೌಮಾಧಿಕಾರವುಳ್ಳ ಶಾಸನಾಂಗದ ತೀರ್ಮಾನಗಳಿಗೆ ನ್ಯಾಯ ಸ್ಥಾನದ ಅನುಮೋದನೆ ದೊರೆತ ಬಳಿಕ ವ್ಯಕ್ತಿಯು ಅದಕ್ಕೆ ತಲೆಬಾಗಲೇಬೇಕು—ಹಾಗೆ ಮಾಡದೆ, ಕಲಹಪ್ರಿಯನಾಗಿ, ಕಾಯಿದೆಯನ್ನು ಕೈಗೆ ತೆಗೆದುಕೊಳ್ಳಲು ಇಚ್ಛಿಸಿದ ಪಕ್ಷದಲ್ಲಿ ಯಾವ ಆಡಳಿತವೂ ಸುಗಮವಾಗಿ ನಡೆಯಲಾರದು. ಹಕ್ಕುಬಾಧ್ಯತೆಗಳಿಗಾಗಿ ಹವಾಪಿರುವ, ನ್ಯಾಯಕ್ಕಾಗಿ ಆತುರ ತೋರಿಸುವ ನಾಗರಿಕರು ತಮ್ಮ ಈ ಕರ್ತವ್ಯದ ನಿರ್ವಹಣೆಯಿಂದ ಸರಾಮ್ಯುಖವಾಗಿ ಕೂಡುದು.

ಏಶ್ಯದ ಅಭಿವೃದ್ಧಿಯಲ್ಲಿ ರಶ್ಯದ ಪಾತ್ರ

ತಾಂತ್ರಿಕ ಹಾಗು ತಜ್ಞರ ನೆರವಿನ ಆಶ್ವಾಸನೆ

ಸಂಯುಕ್ತ ರಾಷ್ಟ್ರ ಸಂಘದ "ಇಕ್ಯಾಫೆ" ವಿಭಾಗದಲ್ಲಿ ಏಶ್ಯದ ಆರ್ಥಿಕ ಮಂಡಳದ ಕಾರ್ಯದರ್ಶಿಯಾಗಿರುವ ಡಾ. ಸಿ. ಎಸ್. ಲೋಕನಾಥನ್ ಇದೀಗ ತಮ್ಮ ರಶ್ಯದ ಪ್ರವಾಸದಿಂದ ಮರಳಿದ್ದಾರೆ—ಏಶ್ಯದ ರಾಷ್ಟ್ರಗಳಿಗೆ ರಶ್ಯವು ಭಾರವಾಗಿ ತಾಂತ್ರಿಕ ಸಹಾಯವನ್ನು ಒದಗಿಸಲು ಸಿದ್ಧವಿದೆ ಎಂಬ ಸಂದೇಶವನ್ನು ಅವರು ತಂದಿದ್ದಾರೆ. ಏಶ್ಯದ ತಜ್ಞರಿಗೆ ವಿಶೇಷ ಮಾಹಿತಿಯನ್ನು ನೀಡಲು ರಶ್ಯ ಸಿದ್ಧವಿದೆ; ಅವಶ್ಯಕ ಪ್ರಸಂಗಗಳಲ್ಲಿ ರಶ್ಯದ ಸರಕಾರ ಏಶ್ಯದ ರಾಷ್ಟ್ರಗಳಿಗೆ ತಜ್ಞರನ್ನೂ ತಾಂತ್ರಿಕ ಸಲಕರಣೆಗಳನ್ನೂ ಒದಗಿಸಿ ಕೊಡಲು ಮುಂಬಂದಿದೆ ಎಂದು ಅವರ ಹೇಳಿಕೆಯಿಂದ ಗೊತ್ತಾಗುತ್ತದೆ.

ಒತ್ತಾಯದ ಹೇರುವಿಕೆಯಿಲ್ಲ

ಮಂಜಾರ್ಷಿಕ ಯೋಜನೆಗಳಿಗೆ ಒಳಪಡಾದ ರಶ್ಯದಲ್ಲಿ ಅಭಿವೃದ್ಧಿಯ ಕ್ರಮಗಳನ್ನು ಪರಿತೀರಿಸಲು ಲೋಕನಾಥನ್ ಹೋಗಿದ್ದರು. ರಶ್ಯದ ಪದ್ಧತಿಯು ಬೇರೆ ದೇಶಗಳಿಗೆ—ಅದು ಪಹ ಪ್ರಜಾಸತ್ತಾತ್ಮಕ ಪದ್ಧತಿಯು ಏಶ್ಯದ ರಾಷ್ಟ್ರಗಳಿಗೆ— ಒಪ್ಪಿಗೆಯಾಗಲಿಕ್ಕಿಲ್ಲ. ಇದನ್ನು ರಶ್ಯದ ಸರಕಾರ ತಿಳಿದಿದೆ; ಆದುದರಿಂದ ತಮ್ಮನ್ನು ಅನುಸರಿಸಲೇ ಬೇಕೆಂದು ಸರಕಾರದ ಪ್ರಭೃತಿಗಳು ಯಾರಿಗೂ ಹೇಳುವುದಿಲ್ಲ; ಜೀನಸ್ತ್ರೆ ತಜ್ಞರನ್ನು ಕೊಡುವಾಗಲೂ 'ನಿಮ್ಮ ಅಭಿಪ್ರಾಯವನ್ನು ಒತ್ತಾಯದಿಂದ ಹೇರಬೇಕಾಗಿಲ್ಲ" ಎಂದು ಅವರಿಗೆ ರಶ್ಯದ ಸರಕಾರ ತಿಳಿಸಿತು. ಅದರೆ ರಶ್ಯನರಿಗೆ ತಮ್ಮ ಪದ್ಧತಿ ರೂಢಿಯಾಗಿ ಹೋಗಿದೆ ಎಂದರೆ ತಪ್ಪಾಗದು.

ಒಳಗಿನ ವಾತಾವರಣ

ರಶ್ಯದಲ್ಲಿ ಅವಶ್ಯಕವಾದ ನಿತ್ಯೋಪಯೋಗದ ವಸ್ತುಗಳು ಧಾರಾಳವಾಗಿ, ಸಾಕಷ್ಟು ಅಗ್ಗವಾಗಿ ಸಿಗುತ್ತವೆ; ಆದರೆ ಆಡಂಬರ ಮತ್ತು ವಿಲಾಸದ ಉಪಕರಣಗಳು ವಿರಳವಾಗಿಯೇ ಉಪಯೋಗಿಸಲ್ಪಡುತ್ತವೆ—ಏಕೆಂದರೆ ಇವುಗಳಿಗೆ ಹಣ ತೆರಬಲ್ಲ ಶಕ್ತಿ ಎಲ್ಲರಿಗಿಲ್ಲ. ಸಾಮಾನ್ಯ ಜನರನ್ನು ಇನ್ನೂ ಮನೆಯೆ ಕೊರತೆ ಬಾಧಿಸುತ್ತದೆ. ಸರಕಾರ ಈ ಸಮಸ್ಯೆಯ ನಿವಾರಣೆಗೆ ಪ್ರಯತ್ನಶೀಲವಾಗಿದೆ. ಆರ್ಥಿಕ ವೈಷಮ್ಯ ರಶ್ಯದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ—ಆಲ್ಲಿ ಕಾರಖಾನೆಯ ಕೂಲಿಕಾರ ಮತ್ತು ಮೆನೇಜರನ ಸಂಬಳದಲ್ಲಿರುವ ಅಂತರ ಐದಾರು ಪಾಲಿನಷ್ಟು ಮಾತ್ರ. ಕೂಲಿಕಾರರಿಗೆ ಯಾವಾಗಲೂ ಹೆಚ್ಚು ಉತ್ಪಾದನೆಮಾಡಲು ಪ್ರೋತ್ಸಾಹಕೊಡಲಾಗುತ್ತದೆ. ಮುನ್ಸರಗಳು ನಡೆಯಲಾರವು; ಅದರಂತೆ ಖಾಸಗಿ ವ್ಯಕ್ತಿಯು ಲಾಭಕ್ಕಾಗಿ ಸ್ವತಂತ್ರ ರೀತಿಯ ಉದ್ಯೋಗವನ್ನು ಅವಲಂಬಿಸಲಾರನು.

ತಾಂತ್ರಿಕ ಶಿಕ್ಷಣ

ಪ್ರಗತಿ ಪಥದಲ್ಲಿ ಇಷ್ಟುದೂರ ರಶ್ಯ ಕ್ರಮಿಸಿ ಒಂದಿರುವುದಕ್ಕೆ ಅಲ್ಲಿಯ ಶಿಕ್ಷಣ ವಿಧಾನವೇ ಕಾರಣ. ಉಚ್ಚಶಿಕ್ಷಣ ಮತ್ತು ತಾಂತ್ರಿಕಶಿಕ್ಷಣಗಳನ್ನು ಈ ದೇಶದಲ್ಲಿ ಕೊಡಲ್ಪಡುವಷ್ಟು ವಿಸ್ತೃತ ಪ್ರಮಾಣದಲ್ಲಿ ಬೇರೆಲ್ಲೂ ಸಾವಕಾಣುವುದು ಕಷ್ಟ. ವಿಶ್ವವಿದ್ಯಾನಿಲಯಗಳಲ್ಲದೆ, ಬೇರೆ ಬೇರೆ ಕ್ಷೇತ್ರಗಳಲ್ಲಿ ಸಂಶೋಧನೆಗೆ ನೆರವಾಗುವ ಸಂಸ್ಥೆಗಳು ಅನೇಕ ಇವೆ—ಇಲ್ಲಿ ತರುಣರೂ ತರುಣಿಯರೂ ನಾಡಿನ ಪುನಾರಚನೆಯ ಕುರಿತು ತಮ್ಮ ಬುದ್ಧಿಶಕ್ತಿಯನ್ನು ವ್ಯಯಿಸುತ್ತಾರೆ. ಇಂಜನಿಯರುಗಳನ್ನೂ ಖನಿಜ ಪದಾರ್ಥಗಳ ಕುರಿತಾದ ತಜ್ಞರನ್ನೂ ಬಟ್ಟೇ ತಿಂ ನಾವಿರ ಭೂಗರ್ಭ ರಾಸ್ತ್ರಜ್ಞರು ರಶ್ಯದಲ್ಲಿರುವರೆಂದರೆ ಆಶ್ಚರ್ಯವಾಗದೆ? ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿ ಇಂಥ ಬದಲಾವಣೆಯನ್ನು ನಾವೆಂದು ಕಾಣಬಹುದೋ ಕಾದು ನೋಡಬೇಕಾದ ವಿಷಯ.

ಪ್ರಕಟಣೆ

ಉತ್ತರಾಲೂರು ಸೂರಾಲು ಮಾಗಣೆ ಕುದಿಗ್ರಾಮದ ದಿಬೂಳಿ ಕೆಳದುನೆಯಲ್ಲಿರುವ ಮುನ್ಗಪ್ಪ ಶೆಟ್ಟಿ ಮಗ ಕರಿಯಣ್ಣ ಶೆಟ್ಟಿಯು ಈ ಮೂಲಕ ತಿಳಿಯಪಡಿಸುವುದೇನಂದರೆ:—

ನಮ್ಮ ಇತೀ ಕುಟುಂಬದಲ್ಲಿ ಸಾಧಾರಣ ೩೦ ವರ್ಷಗಳ ಹಿಂದೆ ಅದ ವಿಭಜನೆ ಪಾಲುಪಟ್ಟಿ ಪ್ರಕಾರ ಕೆಲವು ಆಸ್ತಿಗಳನ್ನು ನನ್ನ ಹಿರಿಯಳು ಸರ್ವೇಶ್ರೀ ಶೆಟ್ಟಿಗೆ ಕಾಯಾಗಿ ಇಟ್ಟಿದ್ದುದಾದ ನಂಗಮಿನ ಸದ್ರಿ ಕಾಯಿದಲ್ಲಿ ಈಗ ನಾನು ಮತ್ತು ನನ್ನ ಹೆಂಡತಿಯ ಮಾವ ರಾಮಣ್ಣ ಶೆಟ್ರ ಮಾತ್ರ ಸದ್ರಿ ಆಸ್ತಿಗಳಿಗೆ ಸಂಪೂರ್ಣ ವಸ್ತುವಾರಸಾಗಿರುತ್ತೇವೆ. ಸದರಿ ರಾಮಣ್ಣ ಶೆಟ್ರಿಗೆ ಈಗ 60 ವರ್ಷಗಳಿಗೆ ಮೇಲ್ಪಟ್ಟು ವಯಸ್ಸಾಗಿ ಸದ್ರಿಯವರಿಗೆ ತತ್ಕಾಲ ಯೆಸದಿಷ್ಟ. ಇದೂ ಅಲ್ಲದೆ ಅವರಿಗೆ ಸಕ್ಕರೆ ಕಾಯಿಲೆಯೂ ಯೆನ್ತದೆ. ಸೊಲ್ಲಂಡಿ ಆಸ್ತಿಗಳಲ್ಲಿ ಸದ್ರಿಯವರಿಗೆ ಯಿರುವುದೆಂಬ ಹಕ್ಕನ್ನು ಸದ್ರಿಯವರಿಂದ ಕಾನೂನಿಗೆ ವಿರೋಧವಾಗಿ ಮೋಸ ಮಂಜಸಿಗಳಿಂದ ನನ್ನ ಹೈತಿಕರೂ ಸಂಬಂಧಪಟ್ಟ ಇನ್ನಿತರೂ ಯೇನೊಂದು ಪ್ರತಿಫಲ ಇಲ್ಲದೆ ಸರಾಧೀನಪಡಿಸಿಕೊಳ್ಳುವ ಇರಾಧೆಯಲ್ಲಿರುತ್ತಾರೆಂದು ತಿಳಿಯಬರುತ್ತದೆ. ಸದ್ರಿ ರಾಮಣ್ಣ ಶೆಟ್ರಿಂದ ಮಾಡಿಕೊಂಡ ಯಾವ ತರದ ಸರಾಧಾನವೂ ತಾನೂನು ಸಕ್ಕರೆ ವಿರುದ್ಧ ನ, ಮಂಜೂರಾಗಲಾರದು ಯೆಂಬ ವಿಷಯವನ್ನು ಸರ್ವರಿಗೂ ತಿಳಿಯಪಡಿಸಿದೆವು.

ಉಡುಪಿ ; ಶರಿಯಣ್ಣ
ತಾರೀಖು ೪೦-೧೦-೧೯೫೫. ; ಸದ್ರಿ ಅಡಿಯ

ಚೆತರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕೆಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½.

ಬಡವ ಬಲ್ಲಿದನೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ ೫೦ ವರ್ಷ ಪ್ರಾಯದ

ಜಲ ಸೇನೆಯ ನೂತನ ಅಧಿಪತಿ

ಭಾರತ ಸರಕಾರದವರು ಬ್ರಿಟಿಷನಲ್ಲಿ ಉತ್ತಮ ನೌಕಾಧಿಕಾರಿ ಎಂದು ಪೆಸರಾಗಿರುವ ಪೈಸ್ ಆ್ಯಡ್ಮಿರಲ್ ಎಚ್. ಎಸ್. ಕಾರ್ಲಾ ಇವರನ್ನು ಭಾರತೀಯ ಜಲ ಸೇನೆಯ ಅಧಿ

ಪತಿಯಾಗಿ ನೇಮಿಸಿದ್ದಾರೆ. ಇವರು ಕಳೆದ ವಾರ ಮದ್ರಾಸ್ ಮತ್ತು ಕೊಚ್ಚಿಯಲ್ಲಿರುವ ಜಲ ಸೇನೆಯ ಕೇಂದ್ರಗಳಿಗೆ ಸೌಜನ್ಯದ ಭೇಟಿಯನ್ನಿತ್ತು ಅಲ್ಲಿಯ ಜಲ-ಪಡೆಗಳನ್ನು ಪರಿಶೀಲಿಸಿದರು. ಜಲ ಸೇನೆಯ ಜವಾನರ ಕಾರ್ಯಾಸಕ್ತಿಯನ್ನು ತನ್ನ ಮೆಚ್ಚಿಗೆಯನ್ನು ಸೂಚಿಸಿದರು. ಭಾರತದ ಜಲ ಸೇನೆಗೆ ಬ್ರಿಟನಿನಿಂದ ತೀರ ಹೊಸ ಸೂಡರಿಯ ಪಡೆಗಳು ಬಂದಿರುವುದರಿಂದ ಅವುಗಳನ್ನು ನಡೆಸುವುದೇ ಮುಂತಾದ ತಾಂತ್ರಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದು ಅತ್ಯವಶ್ಯವಾಗಿದೆ ಎಂದರು "ನಾನಿನ್ನೂ ಬಹಳ ದೂರ ಹೋಗಲಿದೆ-ನೀವೂ ನಾನೂ ಕೂಡಿಯೇ ಈ ಮಾರ್ಗದಲ್ಲಿ ಮುನ್ನಡೆಯುವೆವೆಂದು ನಂಬುತ್ತೇನೆ" ಎಂದು ಕಾರ್ಲಾ ಹೇಳಿದರು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ದೇವರ ಮಕ್ಕಳು —

ಬರೆದವರು ದಾಮೋದರ ಜಾಳಿಗ, ಬಿ ಎ ಪ್ರಕಾಶಕರು ನವಜೀವನ ಕಾರ್ಯಾಲಯ, ರಥಬೀದಿ, ಮಂಗಳೂರು ೧. ಬೆಲೆ. ರೂ. ೧-೧೫ ನಿ.

ಚಿಕ್ಕ ಮಕ್ಕಳಿಗೆ ಹಾಡಲು ಅನುಕೂಲಿಸುವ ಪದಗಳನ್ನು ರಚಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು, ಆ ದಿಸೆಯಲ್ಲಿ ಪ್ರಯತ್ನಿಸಿ, ಪ್ರಕಟಿಸಿರುವ ಈ ಕವನ ಸಂಕಲನವು ತನ್ನ ಧ್ಯೇಯ ಸಾಧನೆಯಲ್ಲಿ ತಕ್ಕಷ್ಟು ಯಶಸ್ಸನ್ನು ಒಡೆದಿದೆ—ಎಂದು ಹೇಳಬಹುದು. ಪ್ರಾಥಮಿಕ ಶಾಲೆಯ ಮಕ್ಕಳಿಗೆ ಈ ಪುಸ್ತಕದಲ್ಲಿರುವ ಅನೇಕ ಪದ್ಯಗಳು ರಾಗವಾಗಿ ಹಾಡಲು ಉಪಯುಕ್ತವಾಗಬಹುದು. ಪುಸ್ತಕವನ್ನು ಬಣ್ಣದ ಚಿತ್ರಗಳಿಂದ ನಡು ನಡುವೆ ಅಲಂಕರಿಸಿರುವುದರಿಂದ, ಒಂದು ಬಗೆಯ ಹೊಸ ಆಕರ್ಷಣೆ ಅದಕ್ಕೆ ಒದಗಿರುತ್ತದೆ. ಆದರೆ ಪದ್ಯಗಳು ವಿಶೇಷವಾಗಿ ಭಾವಾರ್ಥಕ್ಕೆ ದೃಷ್ಟಿಗೆ ತಿರುಗಿಕೊಂಡಿರುವುದರಿಂದಲೂ ಎರಡು ಅಥವಾ ಮೂರನೆಯ ವರ್ಗದ ಮಕ್ಕಳ ದೃಷ್ಟಿಯಲ್ಲಿ ಕ್ಲಿಷ್ಟವಾಗಿ ಕಾಣಬಹುದಾದ ಅನೇಕ ಪದಗಳನ್ನು ಈ ಪದ್ಯಗಳಲ್ಲಿ ಬಳಸಿರುವುದರಿಂದಲೂ ಮಕ್ಕಳ ಮನಸ್ಸನ್ನು ಕೂಡಬೇಗ ಸೆಳೆದು ನಿಲ್ಲಿಸುವ ಶಕ್ತಿ ಎಲ್ಲಿ ಪದ್ಯಗಳಲ್ಲಿ ಕಾಣುವುದಿಲ್ಲವೆಂದು ಹೇಳಬೇಕಾಗಿದೆ. ಮಕ್ಕಳಿಗೆ ಅತಿ ಪ್ರಿಯವಾದ ಪ್ರಾಣಿಗಳ ಅನೇಕ ಕಡೆಗಳಲ್ಲಿ ಭಂಗ ಬಂದಿದೆ; ಚಂದಸ್ಸಿನ ದೃಷ್ಟಿಯಿಂದಲೂ ದೋಷಯುಕ್ತವಾದ ಸಾಲುಗಳು ಅನೇಕ. ಇವುಗಳನ್ನೆಲ್ಲ ಸರಿಪಡಿಸಿಕೊಳ್ಳುವುದು ಅಪೇಕ್ಷಣೀಯ. ಪುಸ್ತಕದ ಬೆಲೆಯನ್ನು ಅದಾಸಿಯಸ್ಸಾದರೂ ತಗ್ಗಿಸುವುದು ನ್ಯಾಯ. ಸುದೈವದಿಂದ ಈ ಪುಸ್ತಕದ ಮುದ್ರಣ ಪೆಚ್ಚಕ್ಕೆ ಹಲವಾರು ಸುಹೃದಯರ ಉದಾರ ಸಹಾಯ ದೊರಕಿದೆಯೆಂದೂ ಚಿತ್ರಿಯ ಪ್ರತಿಯೊಂದೂ ಶಾಲೆಗೆ ಪುಸ್ತಕದ ಒಂದೊಂದು ಪ್ರತಿಯನ್ನು ಉಚಿತವಾಗಿ ಕೊಡಲಾಗಿದೆ ಎಂದೂ ಕೊನೆಯ ರಕ್ಷಾಕವಚದಲ್ಲಿ ಕೊಟ್ಟ ಪ್ರಕಟಣೆಯಿಂದ ತಿಳಿದುಬರುತ್ತದೆ. ವಿದ್ಯಾದಾನದ ಈ ಪುಣ್ಯ ಕಾರ್ಯವನ್ನು ನಾವು ಮನಸಾರೆ ಶ್ಲಾಘಿಸುತ್ತೇವೆ ಮತ್ತು ಇಂಥ ಕೆಲಸಕ್ಕೆ ಮಹಾಜನರ ಸಹಕಾರ ಇನ್ನಷ್ಟು ಹೆಚ್ಚಾಗಿ ಸದಾ ದೊರಕುತ್ತಿರಲಿ ಎನ್ನುತ್ತೇವೆ.

ಲಘು ಪರಿಚಯ

ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನ ಇದನೇ ವಾರ್ಷಿಕ ಸಂಚಿಕೆ (೧೯೫೫) ತನ್ನ ಎಂದಿನ ವೈಶಿಷ್ಟಗಳನ್ನು ಚೆನ್ನಾಗಿ ಕಾಯ್ದುಕೊಂಡು ಪ್ರಕಟವಾಗಿದೆ. ಸುಂದರ ಮುದ್ರಣದೊಡನೆ, ಅನೇಕಚಿತ್ರಗಳಿಂದ ಕೂಡಿದ ಈ ವಾರ್ಷಿಕ ಸಂಚಿಕೆಯು ಕಾಲೇಜಿನ ವಿದ್ಯಾರ್ಥಿವೃಂದದ ಚಟುವಟಿಕೆಗಳ ಮೇಲೆ ಪ್ರಕಾಶವನ್ನು ಚೆಲ್ಲುತ್ತದೆ. ಅದರಂತೆ ವಿದ್ಯಾರ್ಥಿಗಳು ಅಧ್ಯಾಪಕರೂ ಬರೆದಿರುವ ವಿಚಾರ ಪ್ರಚೋದಕವೂ ಬೋಧಪ್ರದವೂ ಆದ ಲೇಖನಗಳಿಂದ ತುಂಬಿತುಳುಕುತ್ತದೆ. ಸಾಂಖ್ಯ ತತ್ವಜ್ಞಾನ, ಅಣುರಸ್ತ್ರಗಳ ಪ್ರಯೋಗ ಸಾಧಸಂಬಂಧಿ ಮಹತ್ವದ ವಿಷಯಗಳಿಂದ ಹಿಡಿದು ನೀನುನ ಆನಂದದ ವರ್ಣನೆಯಂಥ ನಗೆ ಬರಿಸುವ ಅಮೂಲ್ಯ ಲೇಖನಗಳನ್ನಲ್ಲಿ ಕಾಣುತ್ತೇವೆ ಕನ್ನಡ, ಹಿಂದಿ ಮತ್ತು ಸಂಸ್ಕೃತ ವಿಭಾಗಗಳೂ ಸಾಕಷ್ಟು ವಿಷಯ ಪರಿಪುಷ್ಟವಾಗಿವೆ—ಕಲಾವಿದ ಕೃಷ್ಣ ಹೆಬ್ಬಾರರನ್ನು ಕುರಿತ ಕಾರಂತರ ಲೇಖನ, ತುಳಸೀದಾಸನ ಭಕ್ತಿಯ ಉರಿವಾದ ಭಕ್ತಿಪ್ರಿಯರ ಮಿಮಾಂಸೆ ಇತ್ಯಾದಿಗಳು. ಆಂಗ್ಲ ವಿಭಾಗದಲ್ಲಿ ವ್ಯಕ್ತವಾದ ಪ್ರೌಢಿಮೆಯನ್ನೆ ಉಳಿಸಿಕೊಂಡಿವೆ. ಸಂಚಿಕೆಯ ಸಂಪಾದಕರಾಗಿ ಚೆನ್ನಾಗಿ ಕೆಲಸಮಾಡಿ ಕೃತಕೃತ್ಯರಾಗಿರುವ ಪ್ರಿನ್ಸಿಪಾಲ್ ಸುಂದರ್ ರಾವ್ ಮತ್ತು ಶ್ರೀ ಕು. ಶಿ. ಹರಿದಾಸ ಭಟ್ ಇವರನ್ನು ಅಭಿನಂದಿಸುತ್ತೇವೆ.

ಭಾರತದ ಕೇಂದ್ರ ತೆಂಗಿನ ಸಮಿತಿಯವರು ಎರ್ಣಾಕುಳಂದಿಂದ ಪ್ರಕಟಿಸುತ್ತಿರುವ ಬುಲ್ಲೆಟಿನ್ನ ಅಗೋಸ್ತು, ೧೯೫೫ನೇ ಸಂಚಿಕೆಯು ಸ್ವಾತಂತ್ರ್ಯದಿನದ ನೆನಪಿಗಾಗಿ ವಿಶೇಷ ರೀತಿಯಿಂದ ಹೊರಬಂದಿದೆ. ತೆಂಗಿನ ತೋಟಗಾರಿಕೆಯ ವಿಷಯ ಗಾರವಕ್ಕೆ ಒಸ್ಸುವ ತ್ರಿವರ್ಣರಂಜಿತ ಮುಖಚಿತ್ರವಲ್ಲದೆ ತೆಂಗಿನ ಕೃಷಿಮಾಡುವವರಿಗೆ ಪ್ರಯೋಜನಕರವಾದ ಅನೇಕವಿಷಯಗಳ ಮೇಲೆ ಅಧಿಕೃತ ಸಲಹೆ, ಸೂಚನೆ ಮತ್ತು ವಿಮರ್ಶೆಗಳಿಂದ ಕೂಡಿದ ಲೇಖನಗಳು ಇದರಲ್ಲಿವೆ. ಆನಾನಾಸನ್ನು (ತೆಂಗಿನತೋಟಗಳ ಮತ್ತು ಇಂಡೋಚೀನಗಳಲ್ಲಿ ಯುದ್ಧ ನಿಲ್ಲಿಸುವ ಪ್ರಯತ್ನವನ್ನು ಭಾರತ ನಡೆಸಿದ್ದಾಗ ಇವರು ವಹಿಸಿದ ಪಾತ್ರ ಸ್ಪೃಹಣೀಯವಾಗಿದೆ. ಭಾರತದ ವಿದೇಶಾಂಗ ಕಚೇರಿಯಲ್ಲಿ ಪ್ರಧಾನ ಜವಾಬ್ದಾರಿಯವರ ಮಾರ್ಗದರ್ಶನದಲ್ಲಿ ಈ ನೆರವು ಕೆಲಸಮಾಡಿ, ತುಂಬ ಆಳವಾದ ಅನುಭವ ಪಡೆದಿದ್ದಾರೆ. ಚೀನದೊಡನೆ ಭಾರತದ ಪ್ರಾಚೀನ ಸ್ನೇಹ ಸಂಬಂಧವನ್ನು ದೃಢವಾಗಿಸುವಲ್ಲಿ ಇವರ ಚಟುವಟಿಕೆ ಮಹತ್ವದ್ದಾಗಿ ಬಹುದೆಂದು ನಂಬಲು ಆಧಾರಗಳಿವೆ. ಚೀನಕ್ಕೆ ಬುದ್ಧನಕಾಲದಿಂದ ಭಾರತದೊಡನೆ ಮೈತ್ರಿ ಇದೆ; ಅಲ್ಲಿ ಬೌದ್ಧ ಧರ್ಮದಂತೆ ಕ್ರೈಸ್ತ ಧರ್ಮವೂ ಪ್ರಚಾರದಲ್ಲಿತ್ತೆಂದು ಡಾ. ರಘುವೀರರವರು ಹೇಳಿಕೆಯೊಂದು ತಿಳಿಸುತ್ತದೆ. ಶಾಂತಿ ಸೂಕ್ತ ಮತ್ತು ಗಾಯತ್ರಿಮಂತ್ರಗಳ ಪಠಣವೂ ಚೀನದ ಮಂದಿರಗಳಲ್ಲಿ ನಡೆಯುತ್ತದೆ. ರಾಯಭಾರಿ ನೆರವುಗಳು ರಾಜಕೀಯ ಮಟ್ಟದಲ್ಲಿ ಉಭಯ ರಾಷ್ಟ್ರಗಳು ಒಪ್ಪಿರುವ ಪಂಚಶೀಲಗಳ ಬೆಸುಗೆಯನ್ನು ದೃಢಗೊಳಿಸಲಿ!

ಚೀನದೊಡನೆ ಭಾರತದ ಸಂಬಂಧ

ಮುಂದಿನ ತಿಂಗಳಲ್ಲಿ ಕೆಂಪುಚೀನದಲ್ಲಿ ಭಾರತದ ರಾಯಭಾರಿಯಾಗಿ ಶ್ರೀ ಆರ್. ಕೆ. ನೆಹರು ಅಧಿಕಾರವನ್ನು ವಹಿಸಲಿದ್ದಾರೆ. ಇವರು ಐವತ್ತು ವರ್ಷಗಳ ಸೇವೆಯಲ್ಲಿ ಕೊರಿಯ

ಲ್ಲಿ ಸತ್ಯ) ಬೆಳೆಯಬಹುದಾದ ಕ್ರಮ, ತುಳಸಿಯ ಜಾತಿಗೆ ಸೇರಿದ ಗಿಡಗಳ ಪ್ರಕಾರ ಮತ್ತು ಪ್ರಯೋಜನ ಇತ್ಯಾದಿಗಳು ಸಾಕಷ್ಟು ಹಿಡಿಗನಿಗೂ ಬ್ಲ್ಯಾನಲಾಭ ಮಾಡಿಕೊಡುವಂತಿವೆ. ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು ಸಂಚಿಕೆಯ ಸೌಂದರ್ಯವನ್ನು ಇಮ್ಮಡಿಸಿವೆ. ಕೇವಲ ಆರಾಣಿಯ ವಾರ್ಷಿಕ ಚಂದಾಪಣವನ್ನು ಪಡೆದು, ಸಮಿತಿಯು ತೆಂಗಿನ ತೋಟಗಾರರಿಗೆ ಈ ಬುಲ್ಲೆಟಿನ್ನ ಮೂಲಕ ನೀಡುವ ನೆರವು ಅಪಾರವಾಗಿದೆ—ಸಂಪಾದಕರ ಪ್ರಯತ್ನ ಸ್ತುತ್ಯವಾಗಿದೆ.

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ರಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ದ. ಕನ್ನಡದ ಕೆಳಗಿನ ವಿಜಂಟರಲ್ಲಿ ಸಿಗುವುದು

1. ಶಾ ಕಂಪೆನಿ, ಮಂಗಳೂರು.
2. ವಿ ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಹೊಸಕೆರೆ
ಚಿದಂಬರಯ್ಯನವರ

ಭಗವದ್ಗೀತೆಯು

ಸಮೂಲ ಭಾಷಾಂತರ

ಪೊಕೆಟ್ ಎಡಿಷನ್.

ಸುಮಾರು 450 ಪುಟಗಳು

ಪ್ರತಿಗಳು ಸಿಗುವ ಸ್ಥಲ:
ನವಯುಗ ಪ್ರೆಸ್, ಉಡುಪಿ.

ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ.

ನೂಲ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3-

ವೈಷ್ಣವ ಶಿಯಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ 0—2—0; ಮೂರಾಣಿ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್ ಉಡುಪಿ

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — ಉಡುಪಿ, 8—9—1955 — ಸಂಚಿಕೆ ೨

VOL. 35 — NO. 2

ಬಿ. ಸಿ. ಜಿ. ಚಳವಳಿ

ದೊಡ್ಡವರೂ ತಪ್ಪು ಮಾಡುವುದುಂಟು ಎಂಬ ಅನುಭವ ನಮಗೆ ಹಿಂದೆ ಎಷ್ಟೋಸಲ ಆಗಿದೆ—ಮಹತ್ವದ ವಿಷಯಗಳಿಗೆಯೇ ಇವು ಸಂಬಂಧಿಸಿವೆ ಉದಾಹರಣೆಗಾಗಿ, ೪೦ ವರ್ಷಗಳ ಹಿಂದೆ. ಬ್ರಿಟಿಷಿನ ಪ್ರಚಂಡ ಪುತ್ರ ಜಾರ್ಜ್ ಬರ್ನಾರ್ಡ್ ಶಾ ಸಿಡುಬಿನ ವಿರುದ್ಧ ದಾಕು ಹಾಕುವ ಸಂಪ್ರದಾಯದ ಕುರಿತು "ಭವಿಷ್ಯ"ನುಡಿಯುತ್ತಾ "ದಾಕುಹಾಕುವ ಈ ಉಪಕ್ರಮ ಎರಡೇ ವರ್ಷಗಳಲ್ಲಿ ನಾಶವಾಗುವುದು'' ಎಂದಿದ್ದರು. ಶಾರವರು ಹರಿತವಾದ ಮಾತುಗಳಿಂದ ದಾಕುಹಾಕುವುದನ್ನು ವಿರೋಧಿಸಿ, ಟೀಕಾಕಾರರಲ್ಲಿಯೇ ಉಗ್ರವಾದಿ ತಾವೆಂದು ಆಗ ಹೆಸರಾಗಿದ್ದರು.

—ಇಂದು, ಶಾರವರ ಭವಿಷ್ಯ ಸಂಪೂರ್ಣ ಸುಳ್ಳಾಗಿರುವುದನ್ನು ಕಾಣುತ್ತೇವೆ. ದಾಕು ಹಾಕಿಸುವ ಆವಶ್ಯಕತೆ ಜನರಿಗೆ ಚೆನ್ನಾಗಿ ಮನದಟ್ಟಾಗಿದೆ, ಅಲ್ಲದೆ ಮಕ್ಕಳಿಗೆ ಕಡ್ಡಾಯವಾಗಿ ದಾಕುಹಾಕುವ ಅಧಿಕಾರಿಯ ಬಗ್ಗೆ ಗೌರವದ ಭಾವನೆ ತಲೆದೋರಿದೆ. ತನ್ನ ಕಾರ್ಯಕ್ಷೇತ್ರದಲ್ಲಿ ಸಂಭವಿಸುವ ಮರಣ ಮತ್ತು ಅದರ ಕಾರಣಗಳ ಅಂಕೆಸಂಖ್ಯೆಗಳು ದಾಕುಹಾಕುವ ಅಧಿಕಾರಿಯ ಜನಪ್ರಿಯತೆಯನ್ನು ನಾಶಮಾಡಿ, ಮರ್ಯಾದೆಗೆಡುಂದು ತರುತ್ತವೆ ಎಂಬುದಾಗಿ ಹೇಳುತ್ತಿದ್ದ ಶಾರವರ ಮಾತು ಹುಸಿ ಹೋಗಿದೆ. ಮರಣ ಸಂಖ್ಯೆ ಹೆಚ್ಚುವ ಬದಲು ಗಣನೀಯವಾಗಿ ತಗ್ಗಿಕೊಂಡಿರುವುದಕ್ಕೆ ಸಿಡುಬಿನ ದಾಕು ನೇರವಾಗಿದೆ— ಎಂಬ ಕುರಿತು ಈಗ ಭಿನ್ನಾಭಿಪ್ರಾಯವಿಲ್ಲ

ಮಾನ್ಯ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಬಿ. ಸಿ. ಜಿ ದಾಕಿನ ಕುರಿತಾಗಿ ಈಚೆಗೆ ಕೆಲವು ತಿಂಗಳುಗಳಿಂದ ವ್ಯಕ್ತಪಡಿಸುತ್ತಾ ಬಂದಿರುವ ಅಭಿಪ್ರಾಯಗಳು ಶಾರವರು ಸಿಡುಬಿನ ದಾಕಿನ ಕುರಿತು ಹೇಳಿದ ಮಾತಿನಂತೆಯೇ ಸಂಪೂರ್ಣ ಹುಸಿ ಹೋಗುವ ಸಂಭವವೇ ನಮಗೆ ಕಾಣುತ್ತದೆ. ಬಿ. ಸಿ. ಜಿ. ದಾಕು ಅಪ್ರಯೋಜಕವೆಂದು ಸಾರಲ್ಪಟ್ಟು, ಜಗತ್ತಿನ ವಿಜ್ಞಾನಿಗಳು ಅದರ ಸುದ್ದಿ ಎತ್ತುವುದನ್ನೆ ಬಿಟ್ಟುಗೊಟ್ಟು ಮರೆತು ಬಿಡುವ ದಿನವನ್ನು ರಾಜಾಜಿ ನಿರೀಕ್ಷಿಸುತ್ತಿದ್ದಾರೆ—ಆದರೆ ಸತ್ಯ ಇದಕ್ಕೆ ತೀರ ವಿರುದ್ಧವಾಗಿದೆ ಎಂಬುದನ್ನು ನಮ್ಮ ಕೈಗೆ ಬಂದಿರುವ ಮದ್ರಾಸು ಮತ್ತು ಕೇಂದ್ರ ಸರಕಾರಗಳ ಎರಡು ಪ್ರಕಟಣೆಗಳು ಸಾರುತ್ತವೆ.

ಮದ್ರಾಸಿನ ಪ್ರಕಟಣೆಯ ಪ್ರಥಮ ಭಾಗವು ಬಿ. ಸಿ. ಜಿ. ದಾಕನ್ನು ಕುರಿತಾದ ನಿಜ ಸಂಗತಿಗಳನ್ನು ಪ್ರಶ್ನೋತ್ತರಗಳ ರೂಪದಲ್ಲಿ ತಿಳಿಸಿ ಹೇಳುತ್ತದೆ. ಇದರ ದ್ವಿತೀಯ ಭಾಗವು ರಾಜಾಜಿಯವರು ಬಿ. ಸಿ. ಜಿ. ದಾಕಿನ ಕುರಿತು ಮಾಡಿರುವ ಅನೇಕ ಗಂಭೀರ ಸ್ವರೂಪದ ಆರೋಪಗಳಲ್ಲಿ ಏನಾದರೂ ಹುರುಳಿದೆಯೆ ಎಂಬುದನ್ನು ಪರಿಶೀಲಿಸಿ, ''ಇಲ್ಲ'' ಎಂಬ ನಿರ್ಣಯಕ್ಕೆ ಸರಕಾರವು ಬಂದಿರುವುದನ್ನು ವಿವರಿಸುತ್ತದೆ. ವಿಷಯದ ಪ್ರತಿಪಾದನೆಗೆ ಅನುಕೂಲವಾದ ಅನುಬಂಧವನ್ನೂ ಕೊನೆಯಲ್ಲಿ ಕೊಡಲಾಗಿದೆ. ಕೇಂದ್ರ ಸರಕಾರದ ಪುಸ್ತಕದಲ್ಲಿ ಬಿ. ಸಿ. ಜಿ. ದಾಕಿನ ಇತಿಹಾಸ, ಭಾರತದಲ್ಲಿ ಅದರ ಪ್ರಗತಿ, ತಜ್ಞರು ದಾಕಿನ ಉಪಯುಕ್ತತೆಯ ಬಗ್ಗೆ ಪಟ್ಟ ಸದಭಿಪ್ರಾಯ ಇತ್ಯಾದಿವಿಷಯಗಳಿವೆಯಲ್ಲದೆ ಬ್ರಿಟಿಷಿನಲ್ಲಿ ಬಿ. ಸಿ. ಜಿ. ದಾಕು ಎಷ್ಟರ ಮಟ್ಟಿಗೆ ಉಪಯೋಗದಲ್ಲಿದೆ ಎಂಬುದನ್ನೂ ಅದು ವಿವರಿಸುತ್ತದೆ

ಇವೆರಡೂ ಪುಸ್ತಕಗಳಲ್ಲಿ ತಜ್ಞರ ಅಭಿಪ್ರಾಯಗಳ ಕ್ರೋಢೀಕರಣವಾಗಿರುವುದನ್ನು ಕಾಣತ್ತೇವೆ. ಎಲ್ಲರಿಗೂ ತಿಳಿದಿರುವಂತೆ ಬಿ ಸಿ ಜಿ. ದಾಕನ್ನು ಐಚ್ಛಿಕವಾಗಿ ಕ್ಷಯರೋಗದ ಆಕ್ರಮಣದಿಂದ ರಕ್ಷಣೆಕೊಡಲು ಹಾಕಲಾಗುತ್ತದೆ ಯಾರಲ್ಲಿ ಸ್ವಾಭಾವಿಕವಾದ ಕ್ಷಯ ರೋಗ ನಿರೋಧ ಶಕ್ತಿ ಇಲ್ಲವೆಂಬುದನ್ನು ಸಣ್ಣ ಪರೀಕ್ಷೆಯೊಂದರ ಮೂಲಕ ಸ್ಪಷ್ಟವಾಗಿ ತಿಳಿದು, ಅವರಿಗೆ ಮಾತ್ರ ದಾಕನ್ನು ಪ್ರಯೋಗಿಸಲಾಗುತ್ತದೆ. ಕ್ಷಯರೋಗದಿಂದ ಪೀಡಿತರಾದವರಿಗೆ ದಾಕಿನಿಂದ ಪ್ರಯೋಜನವಿದೆಯೆಂದು ಬಿ ಸಿ. ಜಿ ದಾಕಿನ ಪ್ರತಿಪಾದಕರು ಎಲ್ಲಿಯೂ ಹೇಳಿಲ್ಲ; ಹಾಗೆ ಜನರನ್ನು ಮೋಸಪಡಿಸಿಲ್ಲ.

ಸ್ವಾಭಾವಿಕವಾಗಿ ಕ್ಷಯರೋಗ ನಿರೋಧ ಶಕ್ತಿಯುಳ್ಳವರು ೮೦% ಜನರಿದ್ದಾರೆಂದು ರಾಜಾಜಿಯ ಅಭಿಪ್ರಾಯ—ಆದುದರಿಂದ ಉಳಿದ ೨೦% ಜನರಿಗೆ ಸಹ ಸ್ವಾಭಾವಿಕ ರೀತಿಯಲ್ಲೇ ರೋಗ ನಿರೋಧ ಶಕ್ತಿಯನ್ನು ಬೆಳೆಸಗೊಡುವುದು ವಿಹಿತವೆಂದು ಅವರ ಸೂಚನೆ. ಈ ಅಂಕೆ ಸಂಖ್ಯೆಗಳು ನಾಕಷ್ಟು ಆಧಾರದಿಂದ ಕೂಡಿರುವಂತೆ ಕಾಣುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕ್ಷಯರೋಗ ನಿರೋಧ ಶಕ್ತಿಯುಳ್ಳವರ ಪ್ರಮಾಣ ಇಷ್ಟು ಹೆಚ್ಚಾಗಿಲ್ಲ ಅದಲ್ಲದೆ, ಸ್ವಾಭಾವಿಕವಾಗಿ ನಿರೋಧಶಕ್ತಿಯು ಹೆಚ್ಚಿಕೊಳ್ಳುವ ರೀತಿಯಲ್ಲಿ ಕೆಲವೊಮ್ಮೆ ಅಕ್ರಮಗಳು ಸಂಭವಿಸಿ, ಈ ನಿರೋಧಶಕ್ತಿಯೇ ಕ್ಷಯರೋಗಕ್ಕೆ ಆ ವ್ಯಕ್ತಿಯನ್ನು ಗುರಿಪಡಿಸುವ ಅಪಾಯವಿದೆ, ಬಿ ಸಿ ಜಿ. ದಾಕು ಈ ಬಗೆಯ ಅಪಾಯವಿಲ್ಲದೆ, ನಿರೋಧಶಕ್ತಿಯನ್ನು ಬೆಳೆಸಿಕೊಳ್ಳಲು ನೆರವಾಗಿ— ಒಮ್ಮೆ ದಾಕುಹಾಕಿದ ಬಳಿಕ ಕನಿಷ್ಠ ಐದು ವರ್ಷಗಳ ತಾಳಿಕೆಯನ್ನು ಉಂಟುಮಾಡುತ್ತದೆ.

ಮಕ್ಕಳ ಮೇಲಿನ ಕ್ರಿಮಿ ಯುದ್ಧ ಎಂದು ರಾಜಾಜಿಯವರು ಬಿ. ಸಿ. ಜಿ. ಚಳವಳವನ್ನು ಕರೆದಿದ್ದಾರೆ—ಇದೂ ಸರಿಯಲ್ಲ. ಮಕ್ಕಳು ಬೆಳೆದು ದೊಡ್ಡವರಾದಾಗ ಸ್ವಾಭಾವಿಕವಾಗಿ ನಿರೋಧ ಶಕ್ತಿಯನ್ನು ಪಡೆಯುವರೆಂದು ರಾಜಾಜಿಯ ಯೋಚನೆಯಾಗಿದೆ— ಆದರೆ ಅತ್ಯಂತ ಸಮೃದ್ಧವಾದ ಮತ್ತು ಉನ್ನತ ಜೀವನ ಮಟ್ಟವಿದೆ ಎನ್ನಲಾದ ಅಮೇರಿಕದಲ್ಲಿ ಸರ್ವೇಕ್ಷಣೆಯಿಂದ ೨೪% ಮಕ್ಕಳು ಕ್ಷಯರೋಗ ಜನಕ ಕಾರಣಗಳಿಂದಲೇ ಮೃತರಾಗಿರುವುದನ್ನು ನೆನೆದರೆ, ಮಕ್ಕಳಿಗೆ ಬಿ ಸಿ ಜಿ ದಾಕು ಹಾಕುವುದರಿಂದ ಅಪಾರ ಲಾಭವಿದೆ; ನಮ್ಮ ದೇಶದಲ್ಲಿಯಂತೂ ಕ್ಷಯರೋಗ ನಿರೋಧಕ್ಕೆ ಇದು ರಾಮಬಾಣದಷ್ಟು ಫಲಕಾರಿಯಾದ, ಪರಿಣಾಮಕಾರಿಯಾದ ಮುಂಜಾಗ್ರತೆಯ ಕ್ರಮ ಎಂದು ಹೇಳಬೇಕಾಗುತ್ತದೆ.

ಜೀವನ ಮಟ್ಟ ಕಡಿಮೆಯಾಗಿರುವ, ಯೋಗ್ಯ ಪಾಲನೆ ನೋಷಣೆಗಳಿಲ್ಲದೆ ನಿತ್ಯ ದಾರಿದ್ರ್ಯವನ್ನನುಭವಿಸುತ್ತಿರುವ ದೇಶಗಳಲ್ಲಿ ಬಿ. ಸಿ. ಜಿ. ದಾಕಿನ ಚಳವಳವನ್ನು ಸಾಮೂಹಿಕ ತಳಹದಿಯ ಮೇಲೆ ನಡೆಸುವುದರಿಂದ ಗಂಡಾಂತರ ಕಟ್ಟಿಟ್ಟದ್ದೆಂದು ರಾಜಾಜಿ ಹೇಳುತ್ತಾರೆ. ಆದರೆ ಸತ್ಯವು ಇದಕ್ಕೆ ವಿರುದ್ಧವಾಗಿದೆ—ಎಲ್ಲಿ ಉತ್ತಮ ಆಹಾರ, ವಸತಿ ವ್ಯವಸ್ಥೆ ಇತ್ಯಾದಿಗಳಿಲ್ಲದೆ ಜನರು ನಿಕೃಷ್ಟ ಜೀವನವನ್ನು ನಡೆಸುವರೋ ಅಲ್ಲಿಯೇ ಜನರು ಹೆಚ್ಚಾಗಿ ರೋಗಕ್ಕೆ ಬಲಿ ಬೀಳುತ್ತಾರೆ; ಕ್ಷಯ ರೋಗವೂ ಇಲ್ಲಿ ಹೆಚ್ಚು ಪ್ರಮಾಣದಲ್ಲಿ ಹಾವಳಿ ನಡೆಸುತ್ತದೆ ಬಿ. ಸಿ ಜಿ. ದಾಕನ್ನು ಉಪಯೋಗಿಸುವುದರಿಂದ ಯಾವ ಕೆಟ್ಟ ಪರಿಣಾಮವೂ ದೇಹದಲ್ಲಾಗಲೆ, ಕ್ಷಯ. ರೋಗ ನಿರೋಧ ಶಕ್ತಿ ಬೆಳೆಯುವುದರಿಂದ, ಅದನ್ನು ಹಿಂದುಳಿದ ರಾಷ್ಟ್ರಗಳ ದೃಷ್ಟಿಯಲ್ಲಿ ವರದಾನವೆಂದೇ ಕರೆಯುವುದೂಂಟು. ಭಾರತದ ಯೋಜನಾ ಆಯೋಗವು ಇದನ್ನು ಗಮನಿಸಿ—ಸಾಮೂಹಿಕವಾಗಿ ದಾಕು ಹಾಕುವ ಚಳವಳಕ್ಕೆ ಮನ್ನಣೆ ನೀಡಿತು. ಯುದ್ಧ ಮತ್ತಿತರ ಕಾರಣಗಳಿಂದ ಜೀವನ ನಿರ್ವಹಣವು ಕಷ್ಟತರವೆಂದು ಕಂಡು ಬಂದಾಗಲೇ ಯುರೋಪಿನ ದೇಶಗಳು ಬಿ. ಸಿ. ಜಿ ದಾಕನ್ನು ಮುಂಜಾಗ್ರತೆಯ ಕ್ರಮವೆಂದು ಆಶ್ರಯಿಸಿ, ತಮ್ಮ ರಕ್ಷಣೆ ಮಾಡಿಕೊಂಡವೆಂಬುದನ್ನು ಮರೆಯಲಾಗದು.

ನಮ್ಮ ದೇಶದೊಡನೆ ಹೋಲಿಕೆಯುಳ್ಳ ಜಪಾನಿನಲ್ಲಿ ಪ್ರತಿಯೊಂದು ಲಕ್ಷಕ್ಕೆ ೨೮೦ ಜನರಂತೆ ೧೯೪೮ರಲ್ಲಿ ಕ್ಷಯರೋಗದಿಂದ ಸಾಯುತ್ತಿದ್ದರು ಬಿ ಸಿ. ಜಿ ದಾಕಿನ ಸಾಮೂಹಿಕ ಪ್ರಯೋಗದ ಚಳವಳವನ್ನು ಅಲ್ಲಿ ತೊಡಗಿದ ಏಳು ವರ್ಷಗಳ ಬಳಿಕ, ಅಂದರೆ ೧೯೫೨ರಲ್ಲಿ ಮರಣ ಪ್ರಮಾಣವು ಇಳಿದು ೮೦ ಆಯಿತು. ತಜ್ಞರ ಅಭಿಪ್ರಾಯ ಮತ್ತು ಇದುವರೆಗಿನ ಅನುಭವದ ಬಲದಿಂದ ಹೇಳುವುದಾದರೆ, ಬಿ. ಸಿ ಜಿ ದಾಕು ಕ್ಷಯರೋಗ ಪೀಡಿತರ ಸಂಖ್ಯೆಯನ್ನು ನೂರಕ್ಕೆ ಎಂಭತ್ತರಷ್ಟು ಕಡಿಮೆ ಮಾಡುತ್ತದೆ. ಬಿ. ಸಿ. ಜಿ. ದಾಕನ್ನು ಕ್ಷಯರೋಗ ನಿರೋಧ

(೧೨ನೇ ಪುಟ ನೋಡಿರಿ)

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ
ನಿಮಗೆ ಸವಿಧಾನವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD

ಉದ್ಯೋಗನಿರತರಾದ ಸುಶಿಕ್ಷಿತ ಸ್ತ್ರೀಯರು

ಅವರಿಂದ ವಾತಾವರಣದ ಮೇಲಾಗುವ ಸುಪರಿಣಾಮ

ನಮ್ಮ ದೇಶದಲ್ಲಿ ಇಂದು ಸ್ತ್ರೀಯರಿಗೆ ಸ್ಥಾನವಿಲ್ಲದ ಯಾವುದಾದರೊಂದು ಕ್ಷೇತ್ರವಿದೆಯೆ?—ಎಂಬ ಆಶ್ಚರ್ಯ ಹುಟ್ಟುವಷ್ಟು ಮಹಿಳೆಯರು ಮುಂದರಿದಿದ್ದಾರೆ. ಕಲಾಕ್ಷೇತ್ರದಿಂದ ಹಿಡಿದು ಕಠಿಣವಾದ ಕೈಗಾರಿಕೆಗಳಲ್ಲಿಯೂ ಸಿಷ್ಕರ ನ್ಯಾಯ ಸ್ಥಾನಗಳಲ್ಲಿಯೂ ಹೆಂಗಸರು ಪುರುಷರ ಭುಜಕ್ಕೆ ಭುಜಹೊಡ್ಡಿ ಕೆಲಸ ಮಾಡುತ್ತಿರುವುದನ್ನು ಇಂದು ಕಾಣಬಹುದಾಗಿದೆ.

ಸ್ತ್ರೀಯರ ಅದೃಷ್ಟ

ಕೇವಲ ಕೈಗಾರಿಕೆಗಳಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚು ಹೆಂಗಸರು ದುಡಿಯುತ್ತಿದ್ದಾರೆ; ಕೃಷಿ ವಲಯದಲ್ಲಿಯಂತೂ ಪ್ರತಿಯೊಬ್ಬ ರೈತ ಮಹಿಳೆಯೂ ತನ್ನ ಗಂಡನೊಡನೆ ಸಹಕರಿಸಿ, ಶ್ರಮವಹಿಸಿ ಕಾರ್ಯ ಪೂರೈಸ ವನಳಾಗಿದ್ದಾಳೆ. ಸುಶಿಕ್ಷಿತ ಸ್ತ್ರೀಯರು ಆರಾಮದ ಜೀವನ ನಡೆಸಬಹುದಾದ ಸ್ಥಾನಗಳಿಗೆ ಪುರುಷರೊಡನೆ ಕರುಣೆ ಇಲ್ಲದೆ ಸ್ಪರ್ಧಿಸುತ್ತಾರೆ—ಮತ್ತು ಈಗ ನಿರುದ್ಯೋಗಿ ಪುರುಷರಿಗಿಂತ ಸುಶಿಕ್ಷಿತ ಸ್ತ್ರೀಯರ ಅದೃಷ್ಟವೇ ಬಲವಿರುವಂತೆ ತೋರುತ್ತದೆ. ಹೆಚ್ಚು ಯೋಗ್ಯತೆಯುಳ್ಳ ಗಂಡಸಿಗೆ ಸಿಗದ ಕೆಲಸ ಸಾಮಾನ್ಯ ಅರ್ಹತೆಯ ಹೆಂಗಸಿಗೆ—ಅವಳು ಹೆಂಗಸೆಂಬ ಕಾರಣದಿಂದ—ಸಿಗುವುದು ವಿರಳವಲ್ಲ.

ಸುಶಿಕ್ಷಿತ ಸ್ತ್ರೀಯರು ಟೈಪಿಸ್ಟುಗಳಾಗಿ ಶೀಘ್ರ ಲಿಪಿಕಾರರಾಗಿ, ಕಾರಕೂನರಾಗಿ, ನರ್ಸುಗಳಾಗಿ, ಡಾಕ್ಟರರಾಗಿ, ಅಧ್ಯಾಪಕಿಯರಾಗಿ ಹೆಚ್ಚು ದಕ್ಷತೆಯನ್ನು ತೋರಿಸುತ್ತಿದ್ದಾರೆ. ನೋಲೀಸುಪಡೆಯ ಸದಸ್ಯರಾಗಿ, ವಕೀಲರಾಗಿ, ನ್ಯಾಯಾಧೀಶರಾಗಿ ಸಹ ಸ್ತ್ರೀಯರು ಪುರುಷರಿಗಿಂತ ಹಿಂದುಳಿದವರು ತಾವಲ್ಲ ಎಂಬ ನಂಬಿಕೆ ಹುಟ್ಟಿಸುತ್ತಿದ್ದಾರೆ. ಅನೇಕ ಹೆಂಗಸರು ಸಂಶೋಧಕರಾಗಿ, ವಿಧಾಯಕ ಕಾರ್ಯಕರ್ತರಾಗಿ, ರಾಜಕೀಯ ಪಟುಗಳಾಗಿ, ರಾಯಭಾರಿಗಳಾಗಿ, ಚತುರ ಶಾಸಕರಾಗಿ ಮೆರೆಯುತ್ತಿದ್ದಾರೆ. ಗೃಹಿಣಿಯರಾಗಿದ್ದರೂ ಸಮಾಜದ ಸಂಪರ್ಕವನ್ನು ಹೆಚ್ಚಾಗಿ ಬೆಳೆಸಿಕೊಳ್ಳುವ ಅವರ ಆತುರ ಹೆಚ್ಚುತ್ತಲಿದೆ.

ಏಳಿಗೆಗಾಗಿ ಹೆಣಗಾಟ

ಕೇಂದ್ರ ಸರಕಾರದ ನೌಕರಿಯಲ್ಲಿಯೇ ಇಪ್ಪತ್ತು ಸಾವಿರ ಮಹಿಳಾಮಣಿಯರಿದ್ದಾರೆಂದು ತಿಳಿದು ಬರುತ್ತದೆ. ಕೈಗಾರಿಕೆಯ ಸಂಸ್ಥೆಗಳಲ್ಲಿ ಸರಕಾರದವರು ಕೊಡುವ ಸಂಬಳಕ್ಕಿಂತ ಹೆಚ್ಚು ಸಂಬಳ ಹೆಂಗಸರಿಗೆ ಸಿಗುತ್ತದೆ. ಆದರೂ ಕೆಲಸದ ಸೌಕರ್ಯವನ್ನು ಹುಡುಕುತ್ತಾ ಸರಕಾರದ ನೌಕರಿಯಲ್ಲಿ ಸ್ಥಾನ ದೊರಕಿಸಿಕೊಳ್ಳಲು ಹೆಂಗಸರು ಯೋಗುತ್ತಾರೆ. ರೈಲ್ವೆ ಖಾತೆಯಲ್ಲಿ ಮತ್ತು ಟೆಲಿಫೋನಿನ ಕಾರ್ಯಾಲಯಗಳಲ್ಲಿ ಹೆಂಗಸರು ಹೆಚ್ಚಾಗಿ ಕಂಡುಬರುತ್ತಾರೆ ವಿದೇಶ ಖಾತೆಯೂ ಸಾಕಷ್ಟು ಹೆಚ್ಚು ಹೆಂಗಸರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತದೆ.

ಹೆಂಗಸರು ಪುರುಷರಷ್ಟೇ ಜಿನ್ನಾಗಿ ಕೆಲಸಮಾಡಬಲ್ಲರೆಂಬ ಸತ್ಯವನ್ನು ಭಾರತದಲ್ಲಿ ಮೊದಲು ಪ್ರತಿಪಾದಿಸಿ, ಹೆಂಗಸರ ಏಳಿಗೆಗಾಗಿ ಹೆಣಗಾಟ ಹೂಡಿದವರೆಂದರೆ ಗಂಡಸರಾದ ಗಾಂಧೀಜಿ! ರಾಷ್ಟ್ರೀಯ ಹೋರಾಟದಲ್ಲಿ ಪುರುಷರಿಂದ ಎಷ್ಟೋ ಅಷ್ಟೇ ಸಹಕಾರವನ್ನು ಗಾಂಧೀಜಿ ಮಹಿಳೆಯರಿಂದಲೂ ಪಡೆಯಲು ನೋಡಿದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತ, ದಿವಂಗತೆ ಸರೋಜಿನಿ ನಾಯ್ಡು ಡಾ. ಆ್ಯನಿಬೆಸೆಂಟರೇ ಮುಂತಾದ ಸ್ತ್ರೀರತ್ನಗಳ ಚಟುವಟಿಕೆ ಹೆಂಗಸರನ್ನು ಪೂಜ್ಯಭಾವದಿಂದ ಕಾಣುವಂತೆ ಭಾರತೀಯರಲ್ಲಿ ಜಾಗೃತಿಯನ್ನು ಹುಟ್ಟಿಸಿತು.

ಉತ್ತಮ ಪ್ರಭಾವ

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಹೆಂಗಸರಿಗೆ ಪುರುಷರಷ್ಟೇ ಸಮಾನ ಸ್ಥಾನಮಾನಕೊಡಲ್ಪಟ್ಟಿದ್ದರೂ ಬ್ರಿಟಿಸಿನಲ್ಲಿ ಪ್ರಾಚೀನ ಸಂಪ್ರದಾಯ ಸಂಪೂರ್ಣ ಅಳಿದುಹೋಗಿಲ್ಲ. ಪ್ರಜಾಪ್ರಭುತ್ವದ ಪ್ರತಿಪಾದಕ ರಾಷ್ಟ್ರಗಳಲ್ಲಿ ಹೆಸರಾದ ಬ್ರಿಟಿಸಿನಲ್ಲಿ ೧೯೫೧ನೇ ಇಸವಿಯಷ್ಟು ಈಚೆಗಷ್ಟೇ ಹೆಂಗಸರಿಗೆ ಮತಾಧಿಕಾರವನ್ನು ನೀಡಲಾಯಿತು. ವೈದ್ಯಕೀಯ ವೃತ್ತಿಯಲ್ಲಿ ನಿರತಳಾದ ಹೆಂಗಸು ಮದುವೆಯಾದೊಡನೆಯೇ ತನ್ನ ಉದ್ಯೋಗವನ್ನು ಬಿಟ್ಟು ನಡೆಯಬೇಕೆಂಬ ನಿರ್ಬಂಧ ಬ್ರಿಟಿಸಿನಲ್ಲಿದೆ ಎಂದರೆ ಯಾರಿಗೆ ಆಶ್ಚರ್ಯವಾಗದು? ಅನೇಕ ರಾಷ್ಟ್ರಗಳಲ್ಲಿ ಗಂಡಸರಷ್ಟು ಹೆಚ್ಚು ಕೆಲಸವನ್ನು ಹೆಂಗಸರು ಮಾಡುವುದಿಲ್ಲವೆಂಬ ಕಾರಣದಿಂದ ಅವರಿಗೆ ಕಡಿಮೆ ಸಂಬಳ ಕೊಡಲಾಗುತ್ತದೆ

ಇದು ಇಷ್ಟವಲ್ಲವೆಂದೂ ಹೆಂಗಸರು ಮಾಡಿ ಮುಗಿಸುವ ಕೆಲಸ ಕಡಿಮೆ ಇರಬಹುದಾದರೂ ಅವರು ತಮ್ಮ ದುಡಿಮೆಯ ಕ್ಷೇತ್ರದ ಮೇಲೆ ಉತ್ತಮ ಪ್ರಭಾವ ಬೀರುವರೆಂದೂ ಪಾಶ್ಚಾತ್ಯ ರಾಷ್ಟ್ರಗಳಲ್ಲೀಗ ಪ್ರತಿಪಾದಿಸಲಾಗುತ್ತದೆ. ಉದಾಹರಣೆಗೆ ಎಚ್. ಜಿ. ವೆಲ್ಸರಂಥ ಮೇಧಾವಿಗಳು "ಕಾರ್ಖಾನೆಯಲ್ಲಿ ಹೆಂಗಸರಿದ್ದರೆ ಅಲ್ಲಿಯ ಸೈರ್ಯಲ್ಯ, ಹೊರಣ ಮತ್ತು ಅಚ್ಚುಕಟ್ಟು ಹೆಚ್ಚುತ್ತದೆ; ಜೀವನದಲ್ಲಿ ಸಂತೋಷ, ಉಲ್ಲಾಸಗಳಿವೆ ಎಂಬ ಅನುಭವವಾಗುತ್ತದೆ; ಕ್ರೌರ್ಯ ಮತ್ತು ಕಟು ವರ್ತನೆಗಳು ಕಡಿಮೆಯಾಗುತ್ತವೆ; ಸ್ನೇಹ ಮತ್ತು ಸಹಕಾರದ ಭಾವನೆ ಬಲಿಯುತ್ತದೆ" ಎನ್ನುತ್ತಾರೆ. ಅಪ್ರತ್ಯಕ್ಷ ಸ್ವರೂಪದ ಈ ಸತ್ಪರಿಣಾಮವು ಹೆಂಗಸಿನ ಕೆಲಸದ ಪ್ರಮಾಣದಲ್ಲಿ ವ್ಯಕ್ತವಾದ ಕೊರತೆಯನ್ನು ಧಾರಾಳವಾಗಿ ತುಂಬಿ ಕೊಡುತ್ತದೆ ಎಂದವರ ಅಭಿಪ್ರಾಯ. ಪಾಳೆಯಗಾರಿಕೆಯ ಸ್ಥಾನವನ್ನು ಪ್ರಜಾಪ್ರಭುತ್ವ ಪದ್ಧತಿಯು ಆಕ್ರಮಿಸಿರುವ ಈ ಸಮಯದಲ್ಲಿ ವೆಲ್ಸರ ಮಾತಿನ ಕುರಿತು ಭಿನ್ನಾಭಿಪ್ರಾಯವಿರಲಾರದು.

ಅಮೇರಿಕದ ಸೇನಾಪಡೆ

ಇಳಿತಾಯದ ಕೆಲವು ವಿವರ

ಇತ್ತೀಚೆಗೆ ರಶ್ಯವು ತನ್ನ ಸೈನ್ಯ ಬಲದಿಂದ ೬೪೦೦೦೦ ಜನರನ್ನು ನಿವೃತ್ತಿಗೊಳಿಸಿ, ದೇಶದ ಸೈನ್ಯ ಪ್ರಮಾಣವನ್ನು ಇಳಿಸುವ ಘೋಷಣೆಯನ್ನು ಮಾಡಿತು. ಅಲ್ಲದೆ, ಇನ್ನೊಂದು ಸಾಮ್ಯವಾದಿ ರಾಷ್ಟ್ರವಾದ ಝೆಕೊಸ್ಲೊವಾಕಿಯವು ೩೪೦೦೦ ಸೈನಿಕರನ್ನು ತನ್ನ ಸೇನೆಯಿಂದ ಕಡಿಮೆ ಮಾಡುವುದಾಗಿಹೇಳಿತು. ಅದರೆ ಇವಾವುದೂ ತಂತಮ್ಮ ದೇಶದಲ್ಲಿರುವ ಸಶಸ್ತ್ರ ಸೈನ್ಯದ ನಿಜವಾದ ಪ್ರಮಾಣ ಎಷ್ಟು ಎಂಬುದರ ಮೇಲೆ ವಿಶೇಷ ಪ್ರಕಾಶವನ್ನು ಚೆಲ್ಲಿಲ್ಲ—ಈ ದೃಷ್ಟಿಯಿಂದ ಸೈನ್ಯದಲ್ಲಿ ಕಡಿತ ಮಾಡಿದ ಸುದ್ದಿಯ ಪ್ರಸಾರವು ಪ್ರಚಾರ ತಂತ್ರವೇ ನಿಜ.

ಆದಾಗ್ಯೂ ನಮ್ಮಲ್ಲಿ ಅನೇಕರಿಗೆ, ಅಮೇರಿಕ ತನ್ನೊಡನೆ ಇಟ್ಟುಕೊಂಡಿರುವ ಸೈನ್ಯವೆಷ್ಟು ಅದರ ಪ್ರಮಾಣ ಈಚೆಯ ವರ್ಷಗಳಲ್ಲಿ ಏರುತ್ತಿದೆಯೆ ಅಥವಾ ತಗ್ಗುತ್ತಿದೆಯೆ, ಹಾಗಿದ್ದರೆ ಎಷ್ಟು—ಎಂದು ಮುಂತಾಗಿ ತಿಳಿದುಕೊಳ್ಳ ಬೇಕೆಂಬ ಕೂತೂಹಲ ವಿರಬಹುದು. ಮೇಲೆ ಪ್ರಸ್ತಾಪಿಸಿದ ಸುದ್ದಿಗಳಿಂದ ಈ ಕುತೂಹಲ ಈಗ ಕೆರಳಿಸಿತು ಕಾಡಿಸುತ್ತಿರುವುದೂ ಸಹಜ.

ಜೂನಿನ ನಿರ್ಣಯ

ಅಮೇರಿಕದ ಸರಕಾರವು ಅಧಿಕೃತವಾಗಿ ಪ್ರಕಟಿಸಿರುವ ಮೇರೆಗೆ, ರಶ್ಯವು ತನ್ನ ಪಡೆಗಳಲ್ಲಿನ ಕಡಿತಗಳ ಬಗ್ಗೆ ಘೋಷಣೆ ಮಾಡುವುದಕ್ಕೆ ಕೆಲವು ವಾರಗಳ ಹಿಂದೆಯೇ, ಅಂದರೆ ಜೂನಿನ ೩೦ರಂದು, ಅಮೇರಿಕದ ಪ್ರತಿನಿಧಿ ಸಭೆಯು ೧೯೫೬ನೇ ವರ್ಷದ ಸಂರಕ್ಷಣೆಗೆ ಸಂಬಂಧಿಸಿದ ಮುಂಗಡ ಪತ್ರಕ್ಕೆ ಒಪ್ಪಿಗೆಯನ್ನಿತ್ತು, ಸೈನ್ಯದಲ್ಲಿ ಹೆಚ್ಚಿನ ಕಡಿತವನ್ನು ಮಾಡಲು ಸಮ್ಮತಿಯನ್ನು ವ್ಯಕ್ತಪಡಿಸಿದ್ದಿತು. ಆ ತಾರೀಕಿಗೆ ಸೇವೆಯಲ್ಲಿದ್ದ ೨೯೪೦೦೦೦ ಸೈನಿಕರ ಪೈಕಿ, ಬರುವ ವರ್ಷದಲ್ಲಿ ೧೦೦೦೦ ಕಡಿಮೆಯಾಗಿ, ನಿವೃತ್ತಿಗೊಳಿಸಲ್ಪಡುವರೆಂದು ಅಧ್ಯಕ್ಷ ಐಸೆನ್ ಹೋವರ್ ಹೇಳಿದ್ದಾರೆ.

ಮೇಲೆ ಉಲ್ಲೇಖಿಸಿದ ಮುಂಗಡ ಪತ್ರವು ಮಂಜೂರಾಗುವುದಕ್ಕೆ ಕೇವಲ ಆರು ತಿಂಗಳ ಹಿಂದೆ ಅಮೇರಿಕದಲ್ಲಿ ೩೨೧೮೦೦೦ ಸೈನಿಕರಿದ್ದರು. ಇದನ್ನು ಗಮನಿಸಿದರೆ, ಆರು ತಿಂಗಳುಗಳ ಅವಧಿಯಲ್ಲಿ ೨೬೮೦೦೦ ಜನರನ್ನು ಅಮೇರಿಕವು ಸೈನ್ಯ ಬಲದಿಂದ ನಿವೃತ್ತಿಗೊಳಿಸಿತೆಂದು ತಿಳಿದು ಬರುತ್ತದೆ.

ಏರಿಳಿತದ ವಿವರ

ಬರುವ ಜೂನಿನಲ್ಲಿ ಸೈನ್ಯದ ಪ್ರಮಾಣವು ೨೮೫೦೦೦೦ ಆದಾಗ, ಅಮೇರಿಕದ ಸೇನೆಯಲ್ಲಿ ಸೇವೆಗೆ ನಿಂತ ಜನರ ಸಂಖ್ಯೆಯು ೧೯೫೨ರಲ್ಲಿ ಕೊರಿಯದ ಯುದ್ಧವು ಪರಾಕಾಷ್ಠೆಯಲ್ಲಿದ್ದಾಗ ಇದ್ದುದಕ್ಕಿಂತ ೨೦% ಕಡಿಮೆಯಾಗುತ್ತದೆ. ಆ ಸಮಯದಲ್ಲಿ ಅಮೇರಿಕದ ಹತೋಟಿಯಲ್ಲಿಲ್ಲದ ವಿದ್ಯಮಾನಗಳ ದೆಸೆಯಿಂದ ಸೈನ್ಯ ಪ್ರಮಾಣ ೩೬೫೦೦೦ ಆಗಿದ್ದಿತು.

ಕೊರಿಯದ ಯುದ್ಧವು ೧೯೫೦ರಲ್ಲಿ ಪ್ರಾರಂಭವಾದಾಗ ಅಮೇರಿಕದ ಸೈನ್ಯದಲ್ಲಿ ಕೇವಲ ೧೫೬೦೦೦ ಜನರು ಸಮವಸ್ತ್ರಗಳಲ್ಲಿದ್ದರು. ದ್ವಿತೀಯ ಮಹಾಯುದ್ಧದ ಬಳಿಕ ೧೯೪೮ರಲ್ಲಿ ಸೈನ್ಯೀಕರಣವು ಸಾಧಿಸಲ್ಪಟ್ಟುದಾಗಿನಿಂದ ಅಮೇರಿಕದ ಸೈನ್ಯ ಸಂಖ್ಯೆ ಇದೇ ಕೆಳ ಮಟ್ಟದ

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited

Managing Director: T. R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ

ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಖಾಸಗಿ ಪಲಯದ ಪರಿಮಿತ ಕಾರ್ಯಕಲಾಪ

ತಾಂತ್ರಿಕ ಶಿಕ್ಷಣದ ಸೌಲಭ್ಯ ಹೆಚ್ಚಿಸಲು ಒತ್ತಾಯ

ಸಮಾಜವಾದಿ ಮಾದರಿಯ ಸಮಾಜ ರಚನೆಗೆ ಪ್ರಯತ್ನಿಸುವ ಭಾರತ ಸರಕಾರವು ಖಾಸಗಿ ರಂಗಕ್ಕೆ ಕಡಿಮೆ ಪ್ರಾಮುಖ್ಯತೆ ಕೊಡುತ್ತಿರುವುದನ್ನು ಅಖಿಲಭಾರತ ಉತ್ಪಾದಕರ ಸಂಘವು ವಿಷಾದ ಪೂರ್ವಕ ಟೀಕಿಸಿದೆ. ಸುಮಾರು ೬೫೦೦ ಕೋಟಿ ರೂಪಾಯಿ ಮೆಚ್ಚವನ್ನು ತರುವಷ್ಟು ದೊಡ್ಡ ಗಾತ್ರದ ಯೋಜನೆಗೆ ಕೈಯಿಕ್ಕಿರುವುದನ್ನೂ ೧೧೦ ಲಕ್ಷ ಜನರಿಗೆ ಕೆಲಸವೊದಗಿಸುವ ಗುರಿ ಇಟ್ಟುಕೊಂಡಿರುವುದನ್ನೂ ಅದು ಸ್ವಾಗತಿಸಿದೆ ಯೇನೊ ನಿಜ-ಆದರೆ ಸರಕಾರದ ಸಾಮಾನ್ಯ ಧೋರಣ ಅದಕ್ಕೆ ಅಷ್ಟು ಸಮ್ಮತವಿಲ್ಲ.

ಬೆಳವಣಿಗೆಯ ಪರಿಶೀಲನೆ

ದ್ವಿತೀಯ ಯೋಜನೆಯಲ್ಲಿ ೪೫೦೦ ಕೋಟಿ ರೂಪಾಯಿಗಳನ್ನು ಸರಕಾರವು ವ್ಯಯಿಸಲಿದ್ದು ಈ ಮೊತ್ತವು ಪ್ರಥಮ ಯೋಜನೆಯ ಮೆಚ್ಚದ (ರೂ. ೨೩೫೦ ಕೋಟಿ) ಇಮ್ಮಡಿಯಾಗುತ್ತದೆ; ಆದರೆ ಖಾಸಗಿ ರಂಗದಲ್ಲಿ ವ್ಯಯಿಸಬೇಕೆಂದಿರುವ ೨೨೦೦ ಕೋಟಿ ರೂಪಾಯಿ ಮೊತ್ತವು ಪ್ರಥಮಯೋಜನೆಯ ಮೆಚ್ಚದ (ರೂ. ೧೮೫೦ ಕೋಟಿ) ಗಾತ್ರಕ್ಕೆ ೪೩ ಶ ಮಾಣದಲ್ಲಿಯಷ್ಟೇ ಇರುತ್ತದೆ.

ಮೇಲಿನ ಮೆಚ್ಚದಲ್ಲಿ ಕೈಗಾರಿಕೆ ಮತ್ತು ಖಸಿಜ ದ್ರವ್ಯಗಳ ಅಭಿವೃದ್ಧಿಗೆ ಬಳಸುವ ಹಣವಲ್ಲಿ ಸಹ ಸರಕಾರ ಮತ್ತು ಖಾಸಗಿ ರಂಗದ ಚಟುವಟಿಕೆಗಳು ಗಮನಾರ್ಹ ವ್ಯತ್ಯಾಸವನ್ನು ತೋರಿಸುತ್ತವೆ. ಪ್ರಥಮ ಯೋಜನೆಯಲ್ಲಿ ಸರಕಾರವು ಕೈಗಾರಿಕೆ ಮತ್ತು ಖನಿಜಗಳ ಬೆಳವಣಿಗೆಗೆ ೧೭೮ ಕೋಟಿ ರೂಪಾಯಿಗಳನ್ನು ಮಾತ್ರ ವ್ಯಯಿಸಿತು; ಖಾಸಗಿರಂಗ ೩೫೩ ಕೋಟಿ ರೂಪಾಯಿಗಳ ಮೆಚ್ಚ ಮಾಡಿತು. ಆದರೆ ಮಂದಿನ ಯೋಜನೆಯಲ್ಲಿ ಸರಕಾರದ ಮೆಚ್ಚ ೧೧೦೦ ಕೋಟಿ ರೂಪಾಯಿಗಳಿಗೆ ಏರುತ್ತದೆ; ಖಾಸಗಿ ರಂಗಕ್ಕೆ ೪೦೦ ಕೋಟಿ ರೂಪಾಯಿಗಳ ಮೆಚ್ಚದ ಕಾರ್ಯಕ್ರಮವನ್ನಷ್ಟೆ ಬಿಡಲಾಗುತ್ತದೆ.

ಉಗ್ರ ನಿಯಂತ್ರಣ ಕ್ರಮ.

ಉತ್ಪಾದಕರ ಸಮಿತಿಯು ಎಲ್ಲ ಮೂಲ ಉದ್ಯೋಗಗಳನ್ನು ಸರಕಾರ ತನ್ನ ಸ್ವಾಧೀನಕ್ಕೇ ಇಟ್ಟುಕೊಂಡು ಮೇಲಿಸಬೇಕಾದ ಅಗತ್ಯವಿಲ್ಲವೆಂದು ಹೇಳುತ್ತದೆ. ಸರಕಾರವು ಈಗಾಗಲೇ ಕೈಗಾರಿಕೆಗಳ ಅಭಿವೃದ್ಧಿ ಮತ್ತು ನಿಯಂತ್ರಣದ ಶಾಸನ, ಆವಶ್ಯಕ ವಸ್ತುಗಳ ಶಾಸನ, ಕಂಪೆನಿ ಶಾಸನದ ಪರಿಷ್ಕಾರ, ಘಟನೆಗೆ ತಗ್ಗುಹಿಡಿ ಇತ್ಯಾದಿ ಕ್ರಮಗಳಿಂದ ಖಾಸಗಿ ರಂಗದ ಮೇಲೆ ಬಲವಾದ ಹತೋಟಿಯನ್ನು ಇಟ್ಟುಕೊಂಡಿದೆ. ಆದುದರಿಂದ ಖಾಸಗಿ ರಂಗವನ್ನು ಅಳಿಸಿಬಿಟ್ಟು ಸರಕಾರಕ್ಕೆಯೇ ಎಲ್ಲ ಮೂಲ ಉದ್ಯೋಗಗಳ ಮೇಲೆ ಒಡೆತನವಿರಬೇಕೆಂಬ ತತ್ವವನ್ನು ಪ್ರತಿಪಾದಿಸುವುದು ಇಷ್ಟವಲ್ಲ ಎಂದು ಉತ್ಪಾದಕರ ಸಮಿತಿಯ ಅಭಿಪ್ರಾಯ.

ನಿತ್ಯೋಪಯೋಗದ ವಸ್ತುಗಳಿಗೆ ಹಣವನ್ನು ನಿಗದಿ ಮಾಡುವಾಗ ಸಹ ಖಾಸಗಿ ರಂಗವನ್ನು ಕಡೆಗಣಿಸಿ, ಸರಕಾರದ ಪಾತ್ರಕ್ಕೆ ಮಹತ್ವ ಕೊಡಲಾಗಿದೆ ಎಂದು ಅದು ದೂರುತ್ತದೆ. ಖಾಸಗಿ ರಂಗಕ್ಕೆ ೧೦೦ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಮಾತ್ರ ಹಾಕಿಕೊಳ್ಳಲು ಹೇಳಿ ಸರಕಾರವು ತನ್ನ ಮಟ್ಟಿಗೆ ೨೦೦ ಕೋಟಿ ರೂಪಾಯಿಗಳ ಕಾರ್ಯಕ್ರಮ ಹಾಕಿಕೊಂಡಿದೆ ಎಂದದರೆ ಅಕ್ಷೇಪ, ಗುಡಿ ಕೈಗಾರಿಕೆಗಳನ್ನೂ ಲಘು ಉದ್ಯಮಗಳನ್ನೂ ಅಭಿವೃದ್ಧಿಗೊಳಿಸಬೇಕು ಎಂಬ ವಿಷಯದಲ್ಲಿ ಅದಕ್ಕೆ ಭಿನ್ನಾಭಿಪ್ರಾಯವಿಲ್ಲ—ಆದರೆ ಅವುಗಳ ಬೆಳವಣಿಗೆಗಾಗಿ ದೊಡ್ಡ ಕೈಗಾರಿಕೆಗಳ ಮೇಲೆ ಮತ್ತು ಕಾರ್ಖಾನೆಗಳ ಮೇಲೆ ಒತ್ತಾಯದ ಕ್ರಮಗಳನ್ನು ಹೇರಲಾಗದೆಂದು ಸಮಿತಿಯ ಹಿತವಾದ.

ಉತ್ಪಾದಕ ತಂತ್ರ

ಆಧುನಿಕ ರೀತಿಯ ಉತ್ಪಾದಕ ತಂತ್ರಗಳನ್ನು ಅನುಸರಿಸುವುದು ಸುಲಭವಾಗಿರುವಾಗ ಹೆಚ್ಚು ಕರ್ಚಿನ ರೀತಿಗಳೇ ಜೋತು ಬೀಳುವುದು ಬುದ್ಧಿವಂತಿಕೆಯಲ್ಲ— ಎಂದು ಸಮಿತಿ ಎಚ್ಚರಿಕೆ ಕೊಡುತ್ತದೆ ನಿಮ್ಮಚ್ಛಕ್ತಿಯನ್ನು ಉಪಯೋಗಿಸಿ ಯಾಂತ್ರಿಕ ಸಲಕರಣೆಗಳ ಕಾರ್ಯಕ್ಷಮತೆಯನ್ನು ಗುಡಿಕೈಗಾರಿಕೆಗಳಲ್ಲಿ ಸಹ ಹೆಚ್ಚಿಸಿಕೊಳ್ಳುವ ಜಗತ್ಯದ ಕುರಿತು ಅದು ಗಮನವನ್ನು ಸೆಳೆದಿದೆ.

ಈಗ ಕೈಮಗ್ಗದಂಥ ಸಾಮಾನ್ಯ ಗೃಹೋದ್ಯಮಗಳಲ್ಲಿ ನಿರತರಾಗಿರುವವರು ಮನೆತನದ ಕಸುಬೆಂಬ ಮೋಹದಿಂದ ಮನೆ ತ್ಯಜಿಸಲಾರದ ಜನರೇ ಹೊರತು, ತಾಂತ್ರಿಕ ಕ್ಷೇತ್ರದಲ್ಲಿ ಆಸಕ್ತಿ ಉಳ್ಳವರಲ್ಲ. ಸುಶಿಕ್ಷಿತರು ಮತ್ತು ಔದ್ಯೋಗಿಕ ವಲಯದಲ್ಲಿ ಹುಡಿಯಲಾರೆಯುಳ್ಳವರು ಕೈಕಸುಕ್ಕಿಂತ ಯಂತ್ರಗಳನ್ನು ಮೆಚ್ಚುತ್ತಾರೆ. ಆದುದರಿಂದ ಇದಕ್ಕೆ ಪೋಷಕವಾದ ನೀತಿಯನ್ನು ಅನುಸರಿಸಬೇಕು— ಇಲ್ಲದಿದ್ದರೆ ೧೧೦ ಲಕ್ಷ ಹೊಸ ಉದ್ಯೋಗಗಳಲ್ಲಿ ಸೇರಿಕೊಳ್ಳಲು ಜನರೇ ಸಿಗಲಿಕ್ಕಿಲ್ಲ ಎಂದು ಸಮಿತಿ ಹೆದರಿಸುತ್ತದೆ; ಅಲ್ಲದೆ ಅಂಥ ಪ್ರಸಂಗದಲ್ಲಿ ನಿತ್ಯೋಪಯೋಗದ ವಸ್ತುಗಳ ಉತ್ಪಾದನೆಯನ್ನು ಗುಡಿಕೈಗಾರಿಕೆಗಳಿಗೆ ವಿಸಲಿಡುವ ನಿಶ್ಚಯದ ಪರಿಣಾಮ ಕಟ್ಟಿದಾದೀತೆಂದು ಸಾರುತ್ತದೆ.

ತಾಂತ್ರಿಕ ಕ್ಷೇತ್ರದಲ್ಲಿ ಶಿಕ್ಷಣ

ಯೋಜನೆಯ ಯಶಸ್ವಿಗೋಸ್ಕರ ಸಮಿತಿಯು ಮಾಡಿರುವ ಮುಖ್ಯ ಸೂಚನೆಗಳಲ್ಲಿ ತಾಂತ್ರಿಕ ತರಬೇತಿಯ ಅವಕಾಶಗಳನ್ನು ಹೆಚ್ಚಿಸಬೇಕೆಂಬುದು ಉಲ್ಲೇಖನೀಯ. ಸಣ್ಣ ಕಾಲಾವಧಿಯಲ್ಲಿ ನುರಿತ ಔದ್ಯೋಗಿಕ ಶಿಕ್ಷಣವನ್ನು ನೀಡುವ ಕೇಂದ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದು ಬರಬೇಕೆಂದು ಸಮಿತಿ ಸಲಹೆ ಮಾಡಿದೆ. ತರಬೇತಿ ಪಡೆದು ಬಂದವರು ಸ್ವಲ್ಪ ಸಮಯದ ವರೆಗೆ ಕೈಗಾರಿಕೆಯ ಕೇಂದ್ರಗಳಲ್ಲಿ ದುಡಿದು, ವ್ಯವಹಾರಾತ್ಮಕ ಜ್ಞಾನವನ್ನು ಸಂಪಾದಿಸಿಕೊಳ್ಳುವಂತೆ ಒತ್ತಾಯಿಸಬೇಕು ಎಂದು ಸಮಿತಿ ಹೇಳಿದೆ. ಈ ವಿಷಯದಲ್ಲಿ ಖಾಸಗಿ ರಂಗದ ವಿಶ್ವಾಸವನ್ನೂ ಸರಕಾರ ಸಂಪಾದಿಸಿಕೊಂಡು, ಸಹಕಾರ ಪಡೆಯುವುದವಶ್ಯವೆಂದು ಸಮಿತಿ ಒಪ್ಪಿದೆ.

ನಮ್ಮಲ್ಲಿ ಕಟ್ಟಿಲಿರುವ ಉಕ್ಕಿನ ಕಾರ್ಖಾನೆಗಳಿಗಾಗಿಯೇ ೫೦೦೦ ಇಂಜಿನಿಯರುಗಳೂ ೧೦೦೦೦ ತಾಂತ್ರಕುಶಲರೂ ಬೇಕಾಗುವರೆಂಬ ಅಂದಾಜಿನಿಂದಲೇ ಭಾರತದಲ್ಲಿ ತಾಂತ್ರಿಕ ಶಿಕ್ಷಣದ ವ್ಯಾಪ್ತಿ ಎಷ್ಟು ಹೆಚ್ಚಬೇಕೆಂದು ಊಹಿಸಬಹುದು. ಇದಲ್ಲದೆ ಬೇರೆ ಬೇರೆ ಬಗೆಯ ಕಾರ್ಖಾನೆಗಳನ್ನು ನಡೆಸಲು ಅನುಭವ ಸಂಪನ್ನರಾದ ಆಡಳಿತಾಧಿಕಾರಿಗಳೂ ಭಾರತಕ್ಕೆ ಬೇಕು. ಸರಕಾರ ಈ ಸಂಬಂಧದಲ್ಲಿ ಉಚ್ಚ ಮಟ್ಟದ ದಿಗ್ದರ್ಶಕ ಮಂಡಳಿಯೊಂದನ್ನು ನೇಮಿಸಲಿದೆಯಾಗಿ ವಾಣಿಜ್ಯ ಮಂತ್ರಿಗಳ ಹೇಳಿಕೆಯಿಂದ ತಿಳಿದು ಬರುತ್ತದೆ—ಇದು ಅತ್ಯುತ್ತಮದಲ್ಲಿ ಬಂದು ಕಾರ್ಯವೃತ್ತವಾದಾಗ ಉತ್ಪಾದಕರ ಅಮೂಲ್ಯ ಸೂಚನೆಗಳಲ್ಲಿ ಒಂದಾದರೂ ಮನ್ನಿಸಲ್ಪಟ್ಟಂತಾಗುತ್ತದೆ.

ಜಿಲ್ಲೆಯ ಸುಪುತ್ರನೊಬ್ಬನ ಕಣ್ಮರೆ

ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಶ್ರದ್ಧಾಂಜಲಿ

ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರು ಅಲ್ಪಾವಧಿಯ ಅನಾರೋಗ್ಯದಿಂದಾಗಿ ೩೦ನೇ ಅಗೋಸ್ತು, ೧೯೫೫ರಂದು ನಿಧನರಾದರೆಂದು ಬರೆಯಲು ವಿಷಾದವಾಗುತ್ತದೆ. ಮರಣಕಾಲದಲ್ಲಿ ಹೆಗ್ಗಡೆಯವರ ವಯಸ್ಸು ೬೬ವರ್ಷ.

ದಕ್ಷಿಣಕನ್ನಡ ಜಿಲ್ಲೆಯ ಮಲೆನಾಡಿನ ಹಳ್ಳಿಯಾದ ವಿಟ್ಲದಲ್ಲಿ ಕುಲೀನ ಜೈನ ಮನೆತನದಲ್ಲಿ ೧೮೮೯ನೇ ಇಸವಿಗೆ ಜನಿಸಿದ ಹೆಗ್ಗಡೆಯವರು ೧೯೧೮ರಲ್ಲಿ ಧರ್ಮಸ್ಥಳದ ಪೀಠವನ್ನೇರಿದರು. ಅಂದಿನಿಂದ ಅವರು ಶ್ರೀ ಕ್ಷೇತ್ರದ ಸುವ್ಯವಸ್ಥೆ ಮತ್ತು ಅಭಿವೃದ್ಧಿಗಾಗಿ ನಿರಂತರ ದುಡಿದಿದ್ದರು.

ಜನಾನುರಾಗಿಯಾದ ಜೀವ

ದಿವಂಗತ ಹೆಗ್ಗಡೆಯವರು ಧರ್ಮಭೀರುಗಳಾಗಿದ್ದರು; ಜನಾನುರಾಗಿ ಗಳಾಗಿದ್ದರು; ಮುಕ್ತಹಸ್ತದಿಂದ ಅವರು ನೆರವಾಗುತ್ತಿದ್ದರು. ಶ್ರೀ ಕ್ಷೇತ್ರಕ್ಕೆ ಯಾತ್ರಿಕರಾಗಿ ಬರುವವರಿಗೆ ಒಳ್ಳೆಯ ವ್ಯವಸ್ಥೆಗಳನ್ನು ಏರ್ಪಡಿಸಿದ್ದಲ್ಲದೆ, ೧೯೩೫ನೇ ಇಸವಿಯಿಂದ ದೀಪೋತ್ಸವದ ಸಂದರ್ಭದಲ್ಲಿ ಸರ್ವಧರ್ಮ ಸಮ್ಮೇಳನ ಇತ್ಯಾದಿಗಳನ್ನು ಏರ್ಪಡಿಸಿಕೊಂಡು ಬಂದಿದ್ದರು.

ಅತ್ಯಂತ ವಿದ್ಯುಂಭಣೆಯಿಂದ ನಡಾವಳಿಯನ್ನು ಇವರು ೧೯೩೦ರಲ್ಲಿ ಜರಗಿಸಿದ್ದರು. ಅನೇಕ ಸಾಹಿತ್ಯ ಸಭೆಗಳು, ಕಲಾ ಪ್ರದರ್ಶನಗಳು ಇವರ ಉದಾರ ನೆರವಿನಿಂದ ನಡೆದಿವೆ. ಭವ್ಯ ಕಲಾಭವನವೊಂದನ್ನು ದೇವಸ್ಥಾನಕ್ಕೆ ಸಮೀಪದಲ್ಲಿ ಹೆಗ್ಗಡೆಯವರು ಈಚೆಗೆ ಕಟ್ಟಿಸಿದ್ದರು.

ಸೇವಾನಿರತಾಯಣತೆ

ಮಲೆನಾಡಿನ ಜನರ ಪ್ರಯೋಜನಕ್ಕೆ ಹೆಗ್ಗಡೆಯವರು ತುಂಬ ಕೆಲಸ ಮಾಡಿದ್ದರು—ವೈದ್ಯಕೀಯ ಪಥಕವೊಂದನ್ನು ಅವರು ನಡೆಸುತ್ತಿದ್ದರಲ್ಲದೆ, ಸಿದ್ಧವನದಲ್ಲಿ ಗುರುಕುಲವನ್ನೂ ಕರ್ನಾಟಕ ವಿದ್ಯಾಲಯವೆಂಬ ಹೈಸ್ಕೂಲನ್ನೂ ಸ್ಥಾಪಿಸಿದ್ದರು. ಶೈಕ್ಷಣಿಕ ಸಂಸ್ಥೆಗಳಿಗೆ ಉದಾರ ನೆರವನ್ನೂ ರೋಗಿಗಳಿಗೆ ಧರ್ಮಾರ್ಥ ಔಷಧವನ್ನೂ ಸಾಹಿತಿ ಹಾಗು ಕಲಾವಿದರಿಗೆ ಪ್ರೋತ್ಸಾಹವನ್ನೂ ನೀಡುವುದರಲ್ಲಿ ಅವರು ಮುಂದಾಗಿದ್ದರು.

ರಾಜಕೀಯದಲ್ಲಿಯೂ ಹೆಗ್ಗಡೆಯವರು ಹೆಸರು ಗಳಿಸಿದ್ದರು. ೧೯೩೭ನೇ ಇಸವಿಯಿಂದ ಇಪ್ಪತ್ತು ವರ್ಷಗಳ ಕಾಲ ಮದ್ರಾಸಿನ ಶಾಸನಸಾಂಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಹೆಗ್ಗಡೆಯವರ ನಿಧನವು ಜಿಲ್ಲೆಗೆ ತುಂಬಿಬಾರದ ನಷ್ಟ. ಅವರ ಆತ್ಮಕ್ಕೆ ಶಾಂತಿ ಕೋರುವ ಸಾವಿರಾರು ನಾಗರಿಕರೊಡನೆ ನಾವೂ ಸೇರಿಕೊಂಡು ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ. ಅವರ ಸುಸಂಸ್ಕೃತ ಜೀವನದಿಂದ ಜನರು ಸ್ಫೂರ್ತಿ ಪಡೆಯಲಿ ಎಂದು ಹಾರೈಸುತ್ತೇವೆ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಚ್ಛಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಜೇಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ; ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಅಮೃತಾಂಜನ

ಎಲ್ಲಾಕಡೆ ಸಿದ್ಧತ ಮತ್ತು ನೋವುಗಳಿಗೆ 50 ವರ್ಷ ಪ್ರಾಯದ

ಯೋಜನೆಯ ಕಾರ್ಯಾಚರಣೆಗಾಗಿ ಅಧಿಕ ತೆರಿಗೆ

ಗೋವೆಯಲ್ಲಿ ಸತ್ಯಾಗ್ರಹಕ್ಕೆ ಭಾರತೀಯರು ಹೋಗುವ ಬಗ್ಗೆ ಕಾಂಗ್ರೆಸಿನ ಪ್ರಕಟಿ ಆಕ್ಷೇಪ

ಹೊಸ ಶಿಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯು ಸೇರಿ ನಾಲ್ಕು ಮುಖ್ಯ ವಿಷಯಗಳನ್ನು ಪರಿಶೀಲಿಸಿ, ನಿರ್ಣಯಗಳನ್ನು ಕಳೆದ ವಾರ

ಕೈಗೊಂಡಿತು. ಇವುಗಳು (೧) ಆಡಳಿತೆ ಮತ್ತು ಸಂಘಟನೆಯ ಅಂಗಗಳಲ್ಲಿ ಸಹಕಾರ (೨) ದ್ವಿತೀಯ ಯೋಜನೆಯ ಗೊತ್ತು ಗುರಿಗಳು (೩)ಗ್ರಾಮೋದ್ಯೋಗಗಳ ಸ್ಥಾನಮಾನ ಮತ್ತು (೪) ಗೋವೆಯ ಕುರಿತು ಕಾಂಗ್ರೆಸಿನ ನಿಲುಮೆ—ಈ ವಿಷಯಗಳಿಗೆ ಸಂಬಂಧಿಸಿವೆ. ಇದಲ್ಲದೆ ಮುಂಬರುವ ಚುನಾವಣೆಗಳ ಕುರಿತಾಗಿಯೂ ಸಾಕಷ್ಟು ವಿಚಾರ ವಿನಿಮಯ ನಡೆದು ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಗೆ ಸದಸ್ಯರನ್ನು ಆರಿಸಲಾಗಿದೆ.

ಅಧ್ಯಕ್ಷರ ಅಭಿಪ್ರಾಯ

ಕಾಂಗ್ರೆಸಿನ ಅಧ್ಯಕ್ಷ ಶ್ರೀ ಢೇಬರರು ಸಂಸ್ಥೆಯ ತಳಹದಿಯು ಭದ್ರವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕಾಂಗ್ರೆಸಿನ ಪರಂಪರೆಯ ನೆನಪನ್ನು ತಂದುಕೊಟ್ಟು ಇಂದಿನ ವಾತಾವರಣದಲ್ಲಿ ಕಾಂಗ್ರೆಸಿಗರು ತಮ್ಮ ಕರ್ತವ್ಯದ ಬಗ್ಗೆ ತತ್ಪರತೆ ವಹಿಸಲು ಭಿನ್ನವಿಸಿಕೊಂಡಾಗಲೆಲ್ಲ ಕಾರ್ಯಕರ್ತರಲ್ಲಿ ಜಾಗೃತಿ ಮೂಡುತ್ತದೆ. ಅಧಿಕಾರ ಲಾಲಸೆಯೇ ಕಾಂಗ್ರೆಸಿಗರಲ್ಲಿ ತುಂಬಿದೆ ಎಂದು ಹೇಳಲಿಕ್ಕಾಗದಿದ್ದರೂ ಆ ಸ್ಥಾನಗಳ ಆಕರ್ಷಣೆ ಪೂರ್ಣ ನಶಿಸಿಹೋಗಿದೆ ಎಂದೇನಲ್ಲ—ಎಂದು ಅಧ್ಯಕ್ಷರು ಹೇಳಿದ್ದಾರೆ.

ಒಳಜಗಳದ ಖಂಡನೆ

ಅಧ್ಯಕ್ಷರು ಗಮನಸೆಳೆದ ಮುಖ್ಯ ವಿಷಯಗಳಲ್ಲಿ ಕಾಂಗ್ರೆಸಿನೊಳಗೆ ಕೆಲವರು ಪಂಗಡಗಳನ್ನು ಬೆಳೆಸಿಕೊಂಡು, ಹುಟ್ಟಿಸುವ ತಿಕ್ಕಾಟವು ಉಲ್ಲೇಖನೀಯ. ದೇಶದ ಅನೇಕ ಕಡೆಗಳಲ್ಲಿ ಇಂಥ ಘರ್ಷಣೆಗಳು ನಡೆದಿವೆ. ಇವುಗಳಿಗೆ ಜಾತೀಯತೆಯಿಂದ ಹಿಡಿದು ಪ್ರತಿಷ್ಠೆಯ ವ್ಯಾಮೋಹದ ವರೆಗಿನ ಹಲವಾರು ದುಷ್ಟ ಪ್ರವೃತ್ತಿಗಳೇ ಕಾರಣ. ಪರಿಣಾಮವಾಗಿ ಆಡಳಿತದ ಮೊಣಕೆ ಹೊತ್ತಿರುವ ಕಾಂಗ್ರೆಸಿಗೆ ಸಂಘಟನೆಯ ರಂಗದಲ್ಲಿ ಸಾಕಷ್ಟು ಬೆಂಬಲ ಸಿಗದೆ ಜನರು ಧುರೀಣರಾದವರ ಜಗಳಗಳ ಕಡೆಗೆ ಬೊಟ್ಟು ಮಾಡಿ ತೋರಿಸಿ ನಗುವಂತಾಗುತ್ತದೆ. ಕಾಂಗ್ರೆಸನ್ನು ದುರ್ಬಲಗೊಳಿಸುವ ಇಂಥ ಹವ್ಯಾಸಗಳನ್ನು ತ್ಯಜಿಸಬೇಕು ಎಂದು ಅವರು ಉಪದೇಶಿಸಿದ್ದಾರೆ.

ನಾಳೆಯ ಯೋಜನೆ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕರಿತು ಸಮಿತಿಯು ಮಾಡಿದ ನಿರ್ಧಾರದಂತೆ ದೇಶದಲ್ಲಿ ೧೫೦ ಲಕ್ಷ ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡುವಂತೆ ಕಾರ್ಯಕ್ರಮವನ್ನು ರೂಪಿಸಲಾಗುತ್ತದೆ. ಭೂಸುಧಾರಣೆಗೆ ಅತ್ಯಧಿಕ ಪ್ರಾಶಸ್ತ್ಯವನ್ನು ಕೊಡುವುದಲ್ಲದೆ ಇತರ ಕ್ಷೇತ್ರಗಳಲ್ಲಿರುವ ಆರ್ಥಿಕ ವೈಷಮ್ಯವನ್ನು ತಗ್ಗಿಸಲು ಪ್ರಯತ್ನ ನಡೆಸಲಾಗುತ್ತದೆ ಯೋಜನೆಯ ಪೆಚ್ಚಕ್ಕೆ ಹೆಚ್ಚಿನ ಹಣವು ಜನತೆಯಿಂದ ಬರಬೇಕಾಗಿರುವುದರಿಂದ ತ್ಯಾಗ ಬುದ್ಧಿಯನ್ನು ಜನರಲ್ಲಿ ಹುಟ್ಟಿಸಲು ಕಾಂಗ್ರೆಸಿಗರು ಶ್ರದ್ಧೆಯಿಂದ ದುಡಿಯಬೇಕೆಂದೂ ಸಮಾಜವಾದಿ ಮಾದರಿಯ ಸಮಾಜ ರಚನೆಗಾಗಿ ಕಾರ್ಯಕರ್ತರು ಈ ರಂಗಕ್ಕೆ ಧುಮುಕಬೇಕೆಂದೂ ಸಮಿತಿ ವಿನಂತಿಸಿದೆ.

ಅಧಿಕ ಕರಭಾರ

ಶ್ರೀ ಗುಲಜಾರಿಲಾಲ ನಂದಾರು ಒಂದು ಸಾವಿರ ಕೋಟಿ ರೂಪಾಯಿಗಳ ಕೊರತೆ ಧನ ವಿನಿಯೋಗವನ್ನು ಅವಲಂಬಿಸಿದ ಬಳಿಕವೂ ೪೦೦ ಕೋಟಿ ರೂಪಾಯಿಗಳ ನಮ್ಮ ದ್ವಿತೀಯ ಯೋಜನೆಗೆ ೮೦ ಕೋಟಿ ರೂಪಾಯಿಗಳ ಕೊರತೆಯಾಗುತ್ತದೆ—ಎಂದು ನಿವೇದಿಸಿದ್ದಾರೆ. ಆದುದರಿಂದ ದೇಶವು ಹೆಚ್ಚಿನ ಕರಭಾರವನ್ನು ಹೊರಲು ಸಿದ್ಧವಾಗದಿದ್ದರೆ ನಮ್ಮ ಮಹತ್ವಾಕಾಂಕ್ಷೆಯು ಕೈಗೂಡಿ ಬರುವುದು ಸಂಶಯ ಎಂದವರು ಹೇಳುತ್ತಾರೆ. ಈಗ ಭಾರತದಲ್ಲಿ ರಾಷ್ಟ್ರೀಯ ಉತ್ಪನ್ನದ ೭% ತೆರಿಗೆಯ ರೂಪದಲ್ಲಿ ಸರಕಾರಗಳಿಗೆ ಸಿಗುತ್ತದೆ. ಈ ಪ್ರಮಾಣವನ್ನು ಏರಿಸಿ ೯% ಮಾಡಿದರೆ, ಯೋಜನೆಯಲ್ಲಿಟ್ಟು ಕೊಂಡ ಗುರಿಯನ್ನು ಮುಟ್ಟಬಹುದೆಂದು ನಂದಾರ ಅಭಿಪ್ರಾಯ.

ಹೆಚ್ಚಿನ ಉದ್ಯೋಗ

ಸಮಿತಿಯ ಸದಸ್ಯರ ಅಭಿಪ್ರಾಯಗಳನ್ನು ಗಮನಿಸಿದರೆ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಬೇಕೆಂಬ ಕುರಿತು ಒಮ್ಮತಸಿದುವಂತೆ ಕಂಡು ಬರುತ್ತದೆ. ಯೋಜನೆಯ ಗುರಿಗಳನ್ನು ಹೆಚ್ಚಿಸಿಯಾದರೂ ೧೫೦ ಲಕ್ಷ ಜನರಿಗೆ ಉದ್ಯೋಗದ ಅವಕಾಶ ಒದಗಿಸಿಕೊಡಬೇಕೆಂಬ ಕುರಿತು ಸದಸ್ಯರು ಆಗ್ರಹ ಪಡಿಸುವಂತೆ ತೋರುತ್ತದೆ. ಮೊದಲನೆಯ ಯೋಜನೆಯನ್ನು ಪ್ರಾರಂಭಿಸಿದಾಗ (೧೯೫೧) ದೇಶದಲ್ಲಿ ೧೪ ಕೋಟಿ ೩೦ ಲಕ್ಷ ಜನರು ಕೆಲಸ ಮಾಡುತ್ತಿದ್ದರು. ಈಗ ೧೫ ಕೋಟಿ ೨೦ ಲಕ್ಷ ಜನರು ಕೆಲಸಮಾಡುತ್ತಿದ್ದಾರೆ-ಅಲ್ಲದೆ ೩೦ ಲಕ್ಷದಷ್ಟು ನಿರುದ್ಯೋಗಿಗಳಿದ್ದಾರೆ. ಈ ನಿರುದ್ಯೋಗಿಗಳಿಗೂ ಹೆಚ್ಚುವ ಜನ ಸಂಖ್ಯೆಯ ದೆಸೆಯಿಂದ ಮುಂದಿನ ಐದು ವರ್ಷಗಳಲ್ಲಿ ನಿರುದ್ಯೋಗಿಗಳ ಸಾಲಿಗೆ ಸೇರಬಹುದಾದವರಿಗೂ ಕೆಲಸ ಒದಗಿಸಿ ಕೊಡುವುದು ಯೋಜನೆಯ ಉದ್ದೇಶ

ಗ್ರಾಮೋದ್ಯೋಗಗಳಿಗೆ ಮಹತ್ವ

ಗಿರಣಿಗಳ ಉತ್ಪಾದನೆಯನ್ನು ೫೦೦ ಕೋಟಿ ಗಜಕ್ಕೆ ಪರಿಮಿತವಾಗಿಟ್ಟು ಉಳಿದ ಬಟ್ಟೆಯನ್ನು ಕೈಮಗ್ಗಗಳಿಗೆ ಉತ್ಪಾದಿಸಲು ಬಿಡಬೇಕು; ದೊಡ್ಡ ಉದ್ದಿಮೆಗಳ ಮೇಲೆ ಹೇರುವ ಮಿತಿಯು ನಿರುದ್ಯೋಗದ ನಿವಾರಣೆಗೆ ಅನುಕೂಲವಾದ ವಿಷಯವೆಂಬುದನ್ನು ಮನಗಾಣಬೇಕು ಎಂಬುದಾಗಿ ಗ್ರಾಮೋದ್ಯೋಗಗಳ ವಿಷಯದಲ್ಲಿ ಕಾಂಗ್ರೆಸು ಸಮಿತಿ ಹೇಳಿದೆ. ಪ್ರಧಾನಿ ನೆಹರು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತಾ ಉತ್ಪಾದನೆಯನ್ನು ತ್ವರಿತ ಗತಿಯಿಂದ ಹೆಚ್ಚಿಸುವ ದೃಷ್ಟಿಯಿಂದ ಗ್ರಾಮೋದ್ಯೋಗಗಳ ಉಪಯುಕ್ತತೆಯ ಬಗ್ಗೆ ಸಂಶಯಪಡೆಯಬಹುದು; ಆದರೆ ಉದ್ಯೋಗದ ಅವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಇದಕ್ಕೆ ಬಹಳ ಮಹತ್ವ ಸಲ್ಲುತ್ತದೆ ಎಂದಿದ್ದಾರೆ. ದೇಶವು ಮೂಲ ಉದ್ದಿಮೆಗಳ ವಿಷಯದಲ್ಲಿ ಸ್ವಾವಲಂಬಿಯಾಗದಿದ್ದರೆ ಸ್ವಾತಂತ್ರ್ಯದ ರಕ್ಷಣೆ ಕಷ್ಟವಾದೀತು ಎಂದು ಎಚ್ಚರಿಕೆ ಕೊಡುತ್ತಾ ಹೆಚ್ಚು ತೆರಿಗೆಯನ್ನು ಸಂತೋಷದಿಂದ ಕೊಡಲು ಜನರು ಸಿದ್ಧರಾಗಬೇಕೆಂದು ಅವರು ಸ್ಪಷ್ಟಪಡಿಸಿದ್ದಾರೆ.

ಸಹಕಾರ ಭಾವ

ಸಂಘಟನಾತ್ಮಕ ಕ್ಷೇತ್ರದಲ್ಲಿ ಮಾಡಲಾದ ಸೂಚನೆಗಳು ಪ್ರದೇಶ ಕಾಂಗ್ರೆಸು ಸಮಿತಿ ಮತ್ತು ಮಂತ್ರಿ ಮಂಡಳದ ಸದಸ್ಯರಲ್ಲಿ ಹೆಚ್ಚಿನ ಸಹಕಾರವಿರಬೇಕೆಂಬ ವಿಷಯವನ್ನು ಪ್ರತಿಪಾದಿಸುತ್ತವೆ. ಆಗಾಗ್ಗೆ ಒಟ್ಟಿಗೆ ಸೇರಿ ಸಮಾಲೋಚನೆಗಳನ್ನು ನಡೆಸಿ, ಜನತೆಯ ದೂರುಗಳ ಕಡೆಗೆ ಮತ್ತು ಕಾಂಗ್ರೆಸಿನ ಧ್ಯೇಯಗಳ ಕಾರ್ಯಾಚರಣೆಯ ಬಗೆಗೆ ಬಂದ ಸೂಚನೆಗಳನ್ನು ಸಮಾಧಾನಚಿತ್ತದಿಂದ ವಿಚಾರಿಸಬೇಕು ಭಿನ್ನಾಭಿಪ್ರಾಯಗಳನ್ನು ಪಾರ್ಲಿಮೆಂಟರಿ ಬೋರ್ಡಿನ ಮೂಲಕ ಬಗೆಹರಿಸಿಕೊಳ್ಳಬೇಕಲ್ಲದೆ ಬಹಿರಂಗ ಟೀಕೆ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆಯ ಮೂಲಕ ವ್ಯಕ್ತಪಡಿಸಬಾರದು. ಯಾವ ಸಂದರ್ಭದಲ್ಲಿಯೂ ದೈನಂದಿನ ಆಡಳಿತದಲ್ಲಿ ಕಾಂಗ್ರೆಸಿಗರು ಹಸ್ತಕ್ಷೇಪ ಮಾಡಲಾಗದು. ವಿಧಾಯಕ ಕಾರ್ಯಗಳಲ್ಲಿ ಕಾಂಗ್ರೆಸಿಗರ ಸಕ್ರಿಯ ಸಹಕಾರ ಸರಕಾರಕ್ಕೆ ದೊರಕುತ್ತಿರಬೇಕು. ಪ್ರತಿ ಜಿಲ್ಲೆಯಲ್ಲಿ ಸಂಬಳ ಪಡೆದು ಪೂರ್ಣಾವಧಿ ಕೆಲಸ ಮಾಡುವ ಕಾರ್ಯಕರ್ತರನ್ನು ನೇ



ಮಿಸಿ, ಸಂಘಟನೆಯನ್ನು ಬಲಗೊಳಿಸಬೇಕು. ಅಭಿವೃದ್ಧಿ ಸಮಿತಿಗಳಲ್ಲಿ ಕಾಂಗ್ರೆಸಿಗರ, ಮತ್ತು ಅಧಿಕಾರೇತರರ ಪ್ರಾತಿನಿಧ್ಯಕ್ಕೆ ಪ್ರಾಶಸ್ತ್ಯ ಸಲ್ಲಬೇಕು — ಎಂದು ಮುಂತಾದ ಸಲಹೆಗಳು ಬಂದಿವೆ.

ಗೋವೆಯ ವಿಮೋಚನೆ

ಕಾಂಗ್ರೆಸಿಗರಾದ ಕೆಲವು ಎಂ. ಪಿ. ಗಳು ಗೋವೆಯ ವಿಮೋಚನೆಗಾಗಿ ನಡೆಯುತ್ತಿರುವ ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ಭಾಗ ವಹಿಸುವ ತಮ್ಮ ವಿಚಾರವನ್ನು ನೆಹರು ಹಾಗು ಢೇಬರರಿಗೆ ತಿಳಿಸಿದಾಗ, ಕಾಂಗ್ರೆಸು ಸಮಿತಿಯು ಈ ಬಗ್ಗೆ ಕೈಗೊಳ್ಳಲಿರುವ ತೀರ್ಮಾನ ತಿಳಿಯುವ ವರೆಗೆ ಕಾದು ಕುಳಿತಿರಬೇಕೆಂಬ ಸಲಹೆ ಬಂತು. ಈಗ ಕಾಂಗ್ರೆಸಿನ ಅಭಿಪ್ರಾಯ ಗೋವೆಯ ವಿಷಯದಲ್ಲಿ ಸ್ಪಷ್ಟವಾಗಿದೆ. ಆದು ಸರಕಾರ ಕೈಗೊಳ್ಳುತ್ತಾ ಬಂದಿರುವ ಕ್ರಮಗಳಿಗೆ ಸಹಜವಾಗಿಯೇ ಅನುಮೋದನೆ ಕೊಟ್ಟಿದೆ. ಗೋವೆಯ ವಿಮೋಚನೆಯಾಗುವ ಕುರಿತು ಸಂದೇಹವೇ ಇಲ್ಲವೆಂಬ ಅಭಿಪ್ರಾಯವನ್ನು ಪುನರುಚ್ಚರಿಸಿದೆ. ಆದರೆ ಅಹಿಂಸಾತ್ಮಕ ಸತ್ಯಾಗ್ರಹವೆನ್ನು ಕೈಗೊಳ್ಳಲು ಯಾವ ಭಾರತೀಯನೂ ಗೋವೆ, ದೀವ ಮತ್ತು ದಮಣಗಳಲ್ಲಿ ಪ್ರವೇಶಿಸುವುದು ಇಂದಿನ ಪರಿಸ್ಥಿತಿಯಲ್ಲಿ ಯೋಗ್ಯವಲ್ಲ ಎಂದು ಸಾರಿದೆ. ನೆಹರುಗಳು ಇದರ ಅರ್ಥವನ್ನು ಸ್ಪಷ್ಟಪಡಿಸುತ್ತಾ ಭಾರತ ಸರಕಾರವು ಪೋರ್ಚುಗೀಜರ ಈ ವಸಾಹತುಗಳ ಗಡಿಯನ್ನು ಮುಚ್ಚಿರುವುದರಿಂದ ಭಾರತೀಯರು ಅಲ್ಲಿ ಸತ್ಯಾಗ್ರಹಕ್ಕೆ ಹೋಗುವುದು ಯೋಗ್ಯವಾಗುವುದಿಲ್ಲ ಎಂದಿದ್ದಾರೆ. ಈ ಪ್ರದೇಶಗಳು ಇನ್ನೂ ಭಾರತ ಸರಕಾರದ ಅಂಗವಾಗಿಲ್ಲ; ಅಲ್ಲಿ ಪೋರ್ಚುಗೀಜರ ಆಡಳಿತವಿರುವಷ್ಟು ದಿನ ಬೇರೆ ರಾಷ್ಟ್ರದೊಡನೆ ವ್ಯವಹರಿಸುವಂತೆ ನಾವೂ ನಡೆದುಕೊಳ್ಳಬೇಕಾಗಿದೆ— ಅಲ್ಲಿ ವಸಾಹತು ವಾದವನ್ನು ಕೊನೆಗೊಳಿಸುವುದೇ ನಮ್ಮ ಪ್ರಥಮ ಉದ್ದೇಶ; ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಆ ಪ್ರದೇಶಗಳು ಭಾರತದೊಡನೆ ಸೇರಿಕೆಯಾಗುವ ಕುರಿತು ತಮ್ಮ ನಿರ್ಣಯ ಕೈಕೊಳ್ಳಬಹುದು ಎಂದೂ ನೆಹರು ತಿಳಿಸಿದರು.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಇದೇ ಅಗೋಸ್ತು ದಿನಾಂಕ 19ರಲ್ಲು ಬ್ಯಾಂಕಿನ ಹೊಸ ಶಾಖೆಯೊಂದು ಸುಭಾಸ್ ಚೌಕ್, ದೊಡ್ಡ ಪೇಟೆ, ರಾಣಿಬೆನ್ನೂರು (ಧಾರವಾಡ ಜಿಲ್ಲೆ) ಇಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED

Estd:- 1906] [H. O. UDIPI (S.India).

ರಾಜ್ಯಗಳ ಪುನರ್ಘಟನೆಯ ಪ್ರಶ್ನೆ

ಕಾಂಗ್ರೆಸಿಗರಿಗೆ ಗೃಹ ಮಂತ್ರಿಗಳ ಬಿನ್ನಹ

ಕಾಂಗ್ರೆಸು ಸಮಿತಿಯ ಸಭೆಯು ಹೊಸ ದೆಹಲಿಯಲ್ಲಿ ಜರಗಿದಾಗ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು

ಪ್ರಸ್ತಾಪಿಸಿ ಮಾತನಾಡಿದರು ಫಜಲ ಅಲಿ ಆಯೋಗದ ಸೂಚನೆಗಳೇನೆಂದು ತನಗೆ ತಿಳಿಯದು; ಆದರೆ ಅವು ಏನೇ ಇರಲಿ, ಒಮ್ಮತದಿಂದ ಕಾರ್ಯರೂಪಕ್ಕೆ ಆ ಸೂಚನೆಗಳನ್ನು ಇಳಿಸಲು ಕಾಂಗ್ರೆಸಿಗರು ನೆರವಾಗಬೇಕು. ಇದಕ್ಕೆ ಪೋಷಕವಾದ ವಾತಾವರಣವನ್ನು ನಿರ್ಮಿಸಬೇಕು ಎಂದವರು ವಿನಂತಿಸಿದರು.

ಮಲ್ಯರ ಆಯ್ಕೆ

ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗವನ್ನು ಲೋಕ ಸಭೆಯಲ್ಲಿ ಪ್ರತಿನಿಧಿಸುವ ಕಾಂಗ್ರೆಸಿಗರೂ ರಾಷ್ಟ್ರೀಯ ಕಾಂಗ್ರೆಸಿನ ಮಾಜಿ ಕಾರ್ಯದರ್ಶಿಗಳೂ ಕರ್ನಾಟಕದ ಮುಂದಾಳುಗಳಲ್ಲೊಬ್ಬರೂ ಆಗಿರುವ ಶ್ರೀ ಯು. ಶ್ರೀನಿವಾಸ ಮಲ್ಯರು ಕಾಂಗ್ರೆಸಿನ ಕೇಂದ್ರ ಚುನಾವಣಾ ಸಮಿತಿಗೆ ಆರಿಸಿ ಬಂದಿದ್ದಾರೆ. ಇವರೊಂದಿಗೆ ಶ್ರೀಮತಿ ಇಂದಿರಾ ಗಾಂಧಿ, ಶ್ರೀ ಲಾಲ ಬಹಾದುರ ಶಾಸ್ತ್ರಿ, ಶ್ರೀ ಕಾಮರಾಜ ನಾಡರ ಮತ್ತು ಡಾ. ಬಿ. ಸಿ. ರಾಯರ ಆಯ್ಕೆಯೂ ಆಗಿದೆ.

ಕೇಂದ್ರ ಸಮಿತಿಯ ಸದಸ್ಯರು

ಕಾಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡಿನಲ್ಲಿ ಈಗಾಗಲೆ ಇರುವ ಆರು ಮಂದಿ ಸದಸ್ಯರೂ ಹೊಸಕಾಗಿ ಸಮಿತಿ ಚುನಾಯಿಸಿರುವ ಈ ಐವರೂ ಸೇರಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸು ಹುರಿಯಾಳಾಗಿ ಯಾರ್ಯಾರನ್ನು ನಿಲ್ಲಿಸಬೇಕೆಂದು ತೀರ್ಮಾನಿಸುತ್ತಾರೆ. ಪಾರ್ಲಿಮೆಂಟರಿ ಬೋರ್ಡಿನಲ್ಲಿರುವ ಸದಸ್ಯರೆಂದರೆ ಶ್ರೀ ಧೇಬರ, ಶ್ರೀ ನೆಹರು, ಮೌಲಾನಾ ಆಜಾದ, ಪಂಡಿತ ಪಂತ, ಶ್ರೀ ಮುರಾರ್ಜಿ ದೇಸಾಯಿ ಮತ್ತು ಶ್ರೀ ಜಗಜೀವನ ರಾಮ.

ಮೈಸೂರಿನ ಗತ್ತು

ಕರ್ನಾಟಕ ಏಕೀಕರಣವು ನಡೆದೇ ತೀರುವ ಸಲ್ಲಕ್ಷಣಗಳು ಗೋಚರಿಸುತ್ತಿವೆ—ಮೈಸೂರಿನವರು ಈ ಸಂಭವ ಅನಿವಾರಣೀಯವಾದುದೆಂಬುದನ್ನು ಮನಗಂಡಿದ್ದಾರೆ. ನಾಳೆಯ ಬ್ರಹನ್ಮೈಸೂರಿನಲ್ಲಿ ಹೊರಗಿನ ಕನ್ನಡ ಪ್ರದೇಶಗಳ ಸದಸ್ಯರ ಬೆಂಬಲ ತಮಗೆ ಎಷ್ಟರ ಮಟ್ಟಿಗೆ ಸಿಕ್ಕಬಹುದು ಎಂಬ ಗಾಢಾಲೋಚನೆಯಲ್ಲಿ ಮೈಸೂರಿನ ಪ್ರಭೃತಿಗಳು ಮುಗ್ಧರಾಗಿದ್ದಾರೆಂದೂ ಮನವೊಲಿಸುವಿಕೆಯ ತಂತ್ರಗಳನ್ನು ಅವರು ನಡೆಸ ತೊಡಗಿರುವರೆಂದೂ ಹೇಳಲಾಗುತ್ತದೆ.

ಬಳ್ಳಾರಿಯ ಭವಿಷ್ಯ

ಕನ್ನಡಿಗರನ್ನು ಉದ್ರೇಕಿಸುವ ಪ್ರಶ್ನೆಯೆಂದರೆ ಬಳ್ಳಾರಿಯ ಭವಿಷ್ಯವಾಗಿದೆ. ಆಂಧ್ರರು ತುಂಗಭದ್ರೆಯ ಅಣೆಕಟ್ಟಿನ ನೀರನ್ನು ಮುಂದುಮಾಡಿ ಬಳ್ಳಾರಿಯ ಕುರಿತು ಹಿಂದೆ ಇಬ್ಬರು ನ್ಯಾಯಾಧೀಶರು ಮಾಡಿದ್ದ ತೀರ್ಮಾನದ ವಿರುದ್ಧ ಫಜಲ ಅಲಿ ಆಯೋಗ ಶೋಗುವಂತೆ ಪ್ರಯತ್ನಿಸುತ್ತಿದ್ದಾರೆ. ಇದನ್ನು ಮುಂಬಯಿ, ಕರ್ನಾಟಕ ನುತ್ತು ಮೈಸೂರುಗಳ ಶಾಸನ ಸಭಾ ಸದಸ್ಯರು ಖಂಡಿಸಿ, ಮನವಿಯನ್ನು ಆಯೋಗಕ್ಕೆ ಕಳಿಸಿದ್ದಾರೆ.

ಜಿಲ್ಲೆಯ ಸಮಸ್ಯೆ

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕನ್ನು ನೇತ್ರಾವತಿ ಹೊಳೆಯ ವರೆಗೆ ವಿಸ್ತರಿಸಿ ಇಡೀ ತಾಲೂಕನ್ನು ಕೇರಳದೊಡನೆ ಸೇರಿಸಿ ಬಿಡಲಾಗುವುದೆಂದು ಸುದ್ದಿ ಬಂದಿರುತ್ತದೆ. ಇದು ಪರಮ ಅನ್ಯಾಯವಾಗುವುದರಿಂದ ಜಿಲ್ಲಾ ಕಾಂಗ್ರೆಸು ಪಕ್ಷದ ಒಂದು ಗೊತ್ತುವಳಿಯನ್ನು ಸ್ವೀಕರಿಸಿ, ತನ್ನ ವಿರೋಧವನ್ನು ವ್ಯಕ್ತಪಡಿಸಿರುವುದೆ ಫಜಲ ಅಲಿ ಆಯೋಗಕ್ಕೆ ತಿಳಿಕಳಿಸಿ, ಹಾಗೆ ಮಾಡಬೇಕಾಗಿದೆಂದು ವಿನಂತಿಸಿದೆ.

ಪೋರ್ಚುಗೀಜರಿಗೆ ನೆರವು

ಗೋವೆಯ ಸ್ಥಿತಿ ಅರ್ಥಿಕ ಪರಿಸ್ಥಿತಿಯು ಹಾಳು ಹಾದಗೆಟ್ಟಿದೆ ಎಂದೂ ಜೆಗಳು ಒಹಳ ಏರಿಕೆಯಲ್ಲಿದೆಯೆಂದೂ ವರದಿ ಬರುತ್ತದೆ. ಪಾಕಿಸ್ತಾನ ಸರಕಾರವು ಪೋರ್ಚುಗೀಜರಿಗೆ ಎಲ್ಲ ಬಗೆಯ ಸಹಕಾರಗಳನ್ನು ಒದಗಿಸುತ್ತಿದೆ. ಪಾಕಿಸ್ತಾನ ವಾರದ ಸಿಮೋಲನೆಗೆ ಸೆರಿಬಾಗ ಬೇಕೆಂದು ಭಾರತ ಸರಕಾರ ಮಾಡಿಕೊಂಡಿರುವ ವಿನಂತಿಯನ್ನು ಪಾಕಿಸ್ತಾನ ಉಪೇಕ್ಷೆಯಿಂದ ನೋಡಿದೆ. ಬಾಹ್ಯ ಸಹಾಯ ಪೋರ್ಚುಗೀಜರಿಗೆ ಈ ಗೆ ಒದಗುತ್ತಿದ್ದರೂ ಭಾರತ ಸರಕಾರವು ಉಗ್ರ ಆರ್ಥಿಕ ಕ್ರಮಗಳನ್ನು ಇನ್ನಷ್ಟು ಬಿಗಿಗೊಳಿಸುತ್ತಿದೆ. ಪೋರ್ಚುಗಾಲದ ಯಾವುದೇ ನೌಕೆಗೆ ಭಾರತದಲ್ಲಿ ರೆಂಗಲು ಅವಕಾಶ ಕೊಡುತ್ತಿಲ್ಲ ಎಂದು ಸ್ಪಷ್ಟಪಡಿಸಿದೆ.

ಮೆನೆಜಿಸ್ಸರ ಅಭಿಪ್ರಾಯ

ಭಾರತದ ಸಂಚಾರಿ ರಾಯಭಾರಿ ಶ್ರೀ

ಕೃಷ್ಣ ಮೆನೆಜಿಸ್ಸರು ಗೋವೆಯ ಸ್ಥಿತಿಯಲ್ಲಿ ನ್ಯಾಟೊ ಒಪ್ಪಂದದ ರಾಷ್ಟ್ರಗಳು ಕೈ ಹಾಕಲಾರದೆಂದು ವ್ಯಕ್ತಪಡಿಸಿದ ಅಭಿಪ್ರಾಯವು ಸತ್ಯಕ್ಕೆ ವಿಸಂಗತವಾದದ್ದಲ್ಲವೆಂಬ ಕುರಿತು ವಿರೋಧ ಜೆಳು ಬಿದ್ದಿದೆ. ಅಮೇರಿಕದ "ವಾಷಿಂಗ್ಟನ್ ಪೋಸ್ಟ್" ಎಂಬ ಪತ್ರಿಕೆಯು ನ್ಯಾಟೊ ಒಪ್ಪಂದದ ವ್ಯಾಪ್ತಿಯ ಸೂತ್ರವನ್ನು ಉದ್ಧರಿಸಿದ್ದು, ಅದರಲ್ಲಿ ಗೋವೆಯು ಒಪ್ಪಂದದ ಕಕ್ಷೆಯಲ್ಲಿ ಬರುತ್ತದೆಂಬ ಉಲ್ಲೇಖ ಕಾಣುವುದಿಲ್ಲ.

ಬಿ. ಸಿ. ಜಿ. ಪಾಕು

ರಾಜಾಜಿಯವರು ಬಿ ಸಿ ಜಿ ಪಾಕನ್ನು ಮಕ್ಕಳ ಹೆತ್ತವರು ಒಪ್ಪಿಗೆಯಿಲ್ಲದೆ, ಸಾಮೂಹಿಕವಾಗಿ ಚುಚ್ಚುವುದಕ್ಕೆ ತಮ್ಮ ವಿರೋಧವನ್ನು ಮತ್ತೆ ಪ್ರಕಟಿಸಿದ್ದಾರೆ. ಕ್ಷಯ ರೋಗದಿಂದ ಸಾಯುವ ಮಕ್ಕಳು ಕಿಂಚಿತ್ ಮಾತ್ರವೆಂದೂ ಇವರ ಉಪಚಾರಕ್ಕೆ ಬೇರೆ ವ್ಯವಸ್ಥೆ ಮಾಡಬಹುದೆಂದೂ ಅವರ ಅಭಿಪ್ರಾಯ. ಕೇಂದ್ರ ಆರೋಗ್ಯ ಮಂತ್ರಿಗಳು ರಾಜಾಜಿಯವರ ಆರೋಪಗಳಲ್ಲಿ ಯಾವುದೂ ಸಿದ್ಧವಾಗಿಲ್ಲವೆಂದು ಉತ್ತರಿಸಿದ್ದಾರಲ್ಲದೆ, ತಜ್ಞ ವೈದ್ಯರಿಗೆ ಬಿ. ಸಿ. ಜಿ. ಪಾಕಿನ ಕುರಿತಾಗಿ ಅಭಿಪ್ರಾಯ ವ್ಯಕ್ತಮಾಡಬಾರದೆಂದು ನಿರ್ಬಂಧಿಸಿಲ್ಲ ಎಂಬ ಸ್ಪಷ್ಟೀಕರಣವನ್ನೂ ಕೊಟ್ಟಿದ್ದಾರೆ.

ಅಮರನಾಥ ಝೂರ ನಿಧನ

ಸುಪ್ರಸಿದ್ಧ ವೈದ್ಯಕೀಯ ತಜ್ಞರಾದ ಡಾ. ಅಮರನಾಥ ಝೂರವರು ಇಟ್ಟಾವದಲ್ಲಿ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಅವರು ಇಂಗ್ಲೀಷ, ಭಾರತೀಯ ಯೂ ಉರ್ದು, ಬಂಗಾಲಿ ಮತ್ತು ಹಿಂದಿ ಸಾಹಿತ್ಯಗಳಲ್ಲಿಯೂ ವೈದ್ಯ ವಿದ್ವಾಂಸರಾಗಿದ್ದರು. ಬೇರೆ ಬೇರೆ ವಿಶ್ವ ವಿದ್ಯಾನಿಲಯಗಳಲ್ಲಿ ಕೆಲವು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಭಾರತ ಸಾರ್ವಜನಿಕ ಸೇವಾ ಮಂಡಳಿಗೆ ಸದಸ್ಯರಾಗಿದ್ದರು.

ರಾಜಕುಮಾರಿಗೆ ಶುಭಾಶಯ

ಆಗೋಸ್ತು ೧೫—ಭಾರತವು ಸ್ವಾತಂತ್ರ್ಯವನ್ನು ಪಡೆದ ದಿನ. ಪ್ರತಿ ವರ್ಷದಂತೆ ಈ ಸಲವು ನಾವು ಆ ದಿನವನ್ನು ಸಂಭ್ರಮದಿಂದ ಆಚರಿಸಿದ್ದೇವೆ, ಸ್ವಾತಂತ್ರ್ಯವಿತ್ತು ಮೌನವಾಗಿ ತೆರಳಿದ ಬ್ರಿಟಿಷರೊಡನೆ ಸ್ನೇಹ ಸಂಬಂಧವನ್ನು ಕಾಯ್ದುಕೊಂಡು ಹೋಗಲಿಕ್ಕೂ ನಿರ್ಧರಿಸಿದ್ದೇವೆ.



ಭಾರತೀಯರ ಈ ಸೌಜನ್ಯ ಬ್ರಿಟಿಷರಿಗೆ ಆಗೋಸ್ತು ೧೫ನೇ ದಿನ ಸಂತೋಷವನ್ನೆ ಬರಿಸುತ್ತದೆ ಈ ಸಂತೋಷಕ್ಕೆ ಕಳೆಗೂಡುವಂತೆ ಇನ್ನೊಂದು ಸಂಯೋಗವೂ ಈಗೆದೆ ವರ್ಷಗಳಿಂದ ಅವರಿಗೆ ಲಭಿಸಿದೆ—ಅದೆಂದರೆ ಬ್ರಿಟಿಷನ ರಾಣಿ ಎರಡನೇ ಎಲಿಜಬೆಥರ ಮಗಳು ರಾಜಕುಮಾರಿ ಆನಿಯ ಹುಟ್ಟುಹಬ್ಬ. ಹೌದೆ ಆಗೋಸ್ತು ೧೫ರಂದು ಅವಳ ಐದನೇ ಹುಟ್ಟುಹಬ್ಬ ಆಚರಿಸಲ್ಪಟ್ಟಿತು.

ರಾಜಕುಮಾರಿಗೆ ಶುಭಾಶಯ ಸಲ್ಲಿಸಿದವರು ತಮ್ಮ ಮನೆಯಲ್ಲಿ ಇಂಥ ಮುದ್ದು ಮಕ್ಕಳಿಗೆ ಬಳಸ ಹೆತ್ತವರು, ಎಂದಾರಿಸಿರಬೇಕಲ್ಲವೆ? ಸಮಗ್ರರೂ ಹಾಗೆ ಮಾಡುತ್ತಿದೆ.

ಮಕ್ಕಳ ಮಗಿ ಪುಸ್ತಕ
ಬೆಲೆ ೦-೧೦
ಮ್ಯಾನೇಜರ್ ಧಾರವಾಡ ಕರ್ನಾಟಕ ನವಯುಗ ಪ್ರೆಸ, ಲಿಮಿಟೆಡ್.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೮-೯-೧೯೩೫	೨

ಗೋವೆಯ ಆಂದೋಲನ

ಅಖಿಲ ಭಾರತೆ ಕಾಂಗ್ರೆಸು ಸಮಿತಿಯು ಸದ್ಯದ ವಿಶಿಷ್ಟ ಪರಿಸ್ಥಿತಿಯಲ್ಲಿ ಗೋವೆ ಮತ್ತಿತರ ಭಾರತದಲ್ಲಿನ ಪೋರ್ಚುಗೀಜರ ವಸಾಹತುಗಳಲ್ಲಿ ಅಹಿಂಸಾತ್ಮಕ ಸತ್ಯಾಗ್ರಹವನ್ನು ಹೂಡಲು ಭಾರತೀಯರು ಪ್ರವೇಶಿಸುವುದು ಅಪೇಕ್ಷಣೀಯವಲ್ಲವೆಂದು ಹೇಳಿರುವ ವಿಷಯ ಸಾಮಾನ್ಯವಾಗಿ ಜನರಲ್ಲಿ ಆಶ್ಚರ್ಯವನ್ನು ಹುಟ್ಟಿಸಿದೆ. ಗೊತ್ತುವಳಿಯ ಯೋಗ್ಯತೆಯನ್ನು ಮನಗಾಣುವುದಕ್ಕೆ ಜನರಿಗೆ ಕಷ್ಟವೆನಿಸಿದೆ ಎಂದರೂ ತಪ್ಪಲ್ಲ. ಕಾಂಗ್ರೆಸಿನ ಈ ನಿಶ್ಚಯವೇ ಭಾರತ ಸರಕಾರದ ನಿರ್ಧಾರವೂ ಆಗಿದೆ ಎಂಬ ಸಂಗತಿಯು ರಾಜ್ಯ ಸಭೆಯಲ್ಲಿ ದಿನಾಂಕ ೬ರಂದು ವಿದೇಶಾಂಗ ನೀತಿಯ ಚರ್ಚೆಯ ಸಂದರ್ಭದಲ್ಲಿ ನೆಹರುಗಳಿತ್ತ ಭಾಷಣದಿಂದ ವ್ಯಕ್ತವಾಗುತ್ತದೆ. ರಾಜ್ಯ ಸಭೆಯು ಸರಕಾರದ ಧೋರಣೆಗೆ ಬೆಂಬಲವಿತ್ತಿದೆ; ಲೋಕ ಸಭೆಯಲ್ಲಿ ಇಷ್ಟರಲ್ಲೆ ಚರ್ಚೆ ನಡೆಯಲಿದ್ದು ಅಲ್ಲಿ ಸಹ ಸರಕಾರದ ನಿಲುವೆಗೆ ಸಭೆಯ ಒಪ್ಪಿಗೆ ಸಿಗುವ ಭರವಸೆಯಿದೆ. ಆದುದರಿಂದ, ಕಾಂಗ್ರೆಸು ಸ್ವೀಕರಿಸಿ, ಭಾರತ ಸರಕಾರವು ಅನುಮೋದಿಸಿರುವ ಹೊಸ ನಿಲುವೆಯ ತಿರುಳೇನು— ಎಂದು ಪರಿಶೀಲಿಸುವುದು ಅಗತ್ಯವಾಗಿದೆ. ಸಂಸತ್ತಿನ ಹೊರಗಡೆ ಈ ಕುರಿತು ವ್ಯಕ್ತವಾದ ಪ್ರತಿಕ್ರಿಯೆಗಳು ಕಾಂಗ್ರೆಸು ಮತ್ತು ಭಾರತ ಸರಕಾರದ ಹೊಸ ನಿಶ್ಚಯವು ಜನಪ್ರಿಯವಾಗಿಲ್ಲವೆಂಬುದನ್ನು ಎತ್ತಿ ತೋರಿಸುತ್ತವೆ. ಸ್ವತಃ ಕಾಂಗ್ರೆಸು ಪಕ್ಷದಲ್ಲಿಯೇ ತೀವ್ರ ಭಿನ್ನಾಭಿಪ್ರಾಯವಿದೆ ಎನ್ನಲಾಗುತ್ತದೆ—ಶಿಸ್ತಿಗೆ ಕಟ್ಟು ಬಿದ್ದು ಹೊಸ ನಿಲುವೆಗೆ ಕಾಂಗ್ರೆಸಿಗರು ಬೆಂಬಲ ದೊರಕುತ್ತಿದೆಯೇಪೊರತು, ಈ ನಿಲುವೆ ಕಾಂಗ್ರೆಸಿಗರಲ್ಲಿಯೇ ಹಲವರಿಗೆ ಅರ್ಥವಾಗಿಲ್ಲ; ಮೆಚ್ಚಿಕೆಯಾಗಿಲ್ಲವೆಂದು ಹೇಳಲಾಗುತ್ತದೆ. ಗೋವೆಯ ಸಮಸ್ಯೆಯು ಕುರಿತು ಮೂರು ದಿನಗಳ ಬರೆಗೆ ಎಡೆಬಡೆ ಕಾಂಗ್ರೆಸು ಕಾರ್ಯ ಸಮಿತಿ ಚರ್ಚೆ ನಡೆಸಿತೆಂಬುದನ್ನು ಇದಕ್ಕೆ ನಿದರ್ಶನವಾಗಿ ಕೊಡಲಾಗುತ್ತದೆ. ಕಾಂಗ್ರೆಸು ನಿರ್ಣಯವೊಂದನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಗಂಭೀರವಾಗಿ ವಿಚಾರ ವಿನಿಮಯ ನಡೆಸಿದೆ —ಎಂಬುದರಿಂದ ಕಾಂಗ್ರೆಸಿನಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಹೇಳುವುದು ನನಗೆ ಸರಿ ಕಾಣುವುದಿಲ್ಲ. ಸಾಮಾನ್ಯ ಜನತೆಯ ಪ್ರತಿಕ್ರಿಯೆಗಳನ್ನು ಕಾಂಗ್ರೆಸಿನ ಗಮನಕ್ಕೆ ತಂದು ಕೊಡಲು ಪ್ರಯತ್ನಿಸುವ ಸದಸ್ಯರು ಎಲ್ಲ ಅಭಿಪ್ರಾಯಗಳ ಸಂಗಮ ಕೇಂದ್ರವಾಗಿ ಸಮಿತಿಯನ್ನು ಮಾಡುತ್ತಾರೆ. ಆದರೆ, ಕೊನೆಯ ನಿರ್ಣಯಕ್ಕೆ ಬದ್ಧರಾಗಿರಲು ಅವರು ತಪ್ಪುವುದಿಲ್ಲ; ಅದನ್ನು ಟೀಕಿಸಲೂ ಹೋಗುವುದಿಲ್ಲ ಎಂಬುದನ್ನು ವರಿಯಲಾಗದು. ಆದುದರಿಂದ ಕಾಂಗ್ರೆಸಿಗರು ಹೊಸ ನಿಲುಮೆಗೆ ಬೆಂಬಲ ಕೊಡದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ— ಆದರೆ ಎಲ್ಲ ಜನರ ಮಟ್ಟಿಗೆ ಹೀಗಿದೆ ಎಂದು ಹೇಳಲಿಕ್ಕಾಗದು. ಏಕೆಂದರೆ ಗೋವೆಯ ಪ್ರಶ್ನೆಯು ಸಾಮಾನ್ಯವಾಗಿ ಭಾರತೀಯರೆಲ್ಲರನ್ನೂ ಉದ್ವಿಗ್ನಗೊಳಿಸಿದೆ; ಅವರಲ್ಲಿ ಹೊಸ ಸ್ಫೂರ್ತಿ, ಉತ್ಸಾಹ, ತ್ಯಾಗ ಮತ್ತು ಹೋರಾಟದ ಭಾವನೆಯನ್ನು ಬಲಗೊಳಿಸಿದೆ. ಅಹಿಂಸಾತ್ಮಕ ಸತ್ಯಾಗ್ರಹವನ್ನು ಯಶಸ್ವಿಯಾಗಿ ಹೂಡಿ, ಗೋವೆಯ ವಿಮೋಚನೆಗೆ ಹೆಣಗಾಡಲು ಭಾರತೀಯರು ಉತ್ಸುಕರಾಗಿದ್ದಾರೆ. ಇದು ನಿಜಕ್ಕೂ ಕೊಂಡಾಡಬೇಕಾದ ಮನೋಭಾವವಾಗಿದೆ—ರಾಷ್ಟ್ರೀಯ ಜಾಗೃತಿಯು ಸದುದ್ದೇಶವೊಂದರ ವಿಷಯದಲ್ಲಿ ಈ ರೀತಿ ವ್ಯಕ್ತವಾಗುತ್ತಿರುವುದು ಅಭಿಮಾನದ ವಿಷಯ. ಆದರೆ ಗೋವೆಯಲ್ಲಿ ಅಗೋಸ್ತು ೧೫ನೇ ದಿನಾಂಕ ನಡೆದ ಪೈಶಾಚಿಕ ಹತ್ಯಾಕಾಂಡ ಮತ್ತು ಆ ಬಳಿಕ ನಡೆದ ಘಟನೆಗಳೂ ಜಗತ್ತು ಈ ಸತ್ಯಾಗ್ರಹವನ್ನು ನೋಡಿದ ದೃಷ್ಟಿಯೂ ಸತ್ಯಾಗ್ರಹ ಹೂಡುವ ನಮ್ಮ ಹುಮ್ಮಸ್ಸನ್ನು ಸಹ ನಿಯಂತ್ರಣದಲ್ಲಿಟ್ಟುಕೊಂಡು, ಇನ್ನಷ್ಟು ಹೆಚ್ಚು ಸಂಯಮವನ್ನು ತೋರಿಸಬೇಕೆಂದು ಒತ್ತಾಯಿಸುತ್ತವೆ. ಗೋವೆಗೆ ಸೈನ್ಯ ಕಳಿಸಿ, ಅಲ್ಲಿಂದ ಪೋರ್ಚುಗೀಜರನ್ನು ಓಡಿಸುವ ಅಥವಾ ಪೋಲೀಸು ಕಾರ್ಯಾಚರಣೆಯಿಂದ ಗೋವೆಯ ವಿಮೋಚನೆ ಸಾಧಿಸುವ ಕ್ರಮಗಳನ್ನು ಕೈಗೊಳ್ಳಲು ಭಾರತದೊಳಗಿನ ಜನರಿಂದಲೂ ಕಾಂಗ್ರೆಸ್ಸೇತರ ಪಕ್ಷಗಳ ಧುರೀಣರಿಂದಲೂ ಪ್ರೋತ್ಸಾಹ ಸಿಗುವಂತಿದ್ದ ಗಳಿಗೆಯಲ್ಲಿ ಹಾಗೆ ಮಾಡುವುದು ನಾವು ಪ್ರತಿಪಾದಿಸಿಕೊಂಡು ಬಂದಿರುವ ಮೂಲ ತತ್ವಗಳಿಗೆ ಉಚಿತವಾಗದು ಎಂಬ ಸ್ಪಷ್ಟೀಕರಣವನ್ನು ಕೊಟ್ಟು ಭಾರತ ಸರಕಾರ-ಮತ್ತು ಕಾಂಗ್ರೆಸು—ಅಪೂರ್ವವಾದ ಸಂಯಮವನ್ನೂ ಧೈರ್ಯವನ್ನೂ ತೋರಿಸಿವೆ. ಈಗ ಅಹಿಂಸಾತ್ಮಕ ಸತ್ಯಾಗ್ರಹಕ್ಕಾಗಿ ಭಾರತೀಯರು ಹೋಗ ತಕ್ಕದ್ದಲ್ಲ ಎಂದು ಮಾಡಿರುವ ತೀರ್ಮಾನವು ಈ ದಿಸೆಯಲ್ಲಿ ಇನ್ನೊಂದು ಯೋಗ್ಯ ಹೆಜ್ಜೆ ಯಾಗಿದೆ— ಜನತೆಯ ಭಾವಾವೇಗ ಮತ್ತು ಮನದೊಲವು ಹರಿಯುತ್ತಿರುವ ದಿಸೆಯನ್ನು ಗಮನಿಸಿಯೂ ಕೈಗೊಂಡ ವಿವೇಕದ ನಿರ್ಣಯವಾಗಿದೆ. ಆಗೋಸ್ತು ೧೫ರ ಹತ್ಯಾಕಾಂಡವು ಪಾಶ್ಚಾತ್ಯ ರಾಷ್ಟ್ರಗಳಿಗೆ ಅಹಿಂಸಾತ್ಮಕ ಸತ್ಯಾಗ್ರಹದ ಮಹತ್ವ ತಿಳಿದಿಲ್ಲವೆಂದು ಸ್ಪಷ್ಟಪಡಿಸಿತು; ಪಾಶ್ಚಾತ್ಯ ಪತ್ರಿಕೆಗಳು ನೆಹರುಗಳು ಭಾರತೀಯರನ್ನು ಗೋವೆಗೆ ನುಗ್ಗಲು ಬಿಟ್ಟದ್ದೇ ತಪ್ಪು ಎಂದು ಹೇಳಿದವು; ಪೋರ್ಚುಗೀಜರ ಅಧಿಕಾರವು ಆ ಭೂಮಿಯದಲ್ಲಿ ನಡೆಯುತ್ತಿರುವಷ್ಟು ಕಾಲ ಅದು ತಮ್ಮದೆಂದು ಹೇಳಿಕೊಂಡು ಎಷ್ಟೇ ಶಾಂತ ರೀತಿಯಿಂದಾಗಲಿ, ಗಡಿಯನ್ನು ಅತಿಕ್ರಮಿಸುವುದು ಹತ್ಯಾಕಾಂಡದಂಥ ಭೀಭತ್ಸ ಕ್ರಮಕ್ಕೆ ಪ್ರಚೋದನೆ ಕೊಡುವ ಹವ್ಯಾಸ ಎಂದವು ಸಾರಿದವು ನಮ್ಮ ದೇಶದಲ್ಲಿ ನಾವು ಅಹಿಂಸಾತ್ಮಕ ಸತ್ಯಾಗ್ರಹವನ್ನು ಹೂಡಿದ್ದೇವೆ— ನಮ್ಮನ್ನು ಆಳುತ್ತಿರುವವರ ವಿರುದ್ಧ ನಾವೇ ಇಲ್ಲಿ ಹೋರಾಡಿದ್ದೇವೆ. ಆಗ ಬೇರೆ ಪ್ರಭುತ್ವದಲ್ಲಿದ್ದ ಜನರು ಸತ್ಯಾಗ್ರಹಿಗಳಾಗಿ ಭಾರತಕ್ಕೆ ಬಂದು, ನಮ್ಮೊಡನೆ ಸೇರಿರಲಿಲ್ಲ- ನಮ್ಮೊಡನೆ ಸಹಾನುಭೂತಿ ವ್ಯಕ್ತಪಡಿಸಿದ ರಾಷ್ಟ್ರಗಳಿದ್ದವೆಂಬುದು ಸುಳ್ಳಲ್ಲ; ಆದರೆ ಪ್ರತ್ಯಕ್ಷವಾಗಿ ಸತ್ಯಾಗ್ರಹದ ರಂಗದಲ್ಲಿ ಭಾರತೀಯರು ಮಾತ್ರ ಇಳಿದಿದ್ದರು. ಭಾರತವು ಸ್ವಾತಂತ್ರ್ಯಗೊಂಡ ಬಳಿಕ ದೇಶೀಯ ಸಂಸ್ಥಾನಗಳಲ್ಲಿ ತೀವ್ರ ಚಳವಳಿ ನಡೆದಾಗ ಸಹ, ಅಲ್ಲಿಯ ಪ್ರಜೆಗಳೇ ಹೋರಾಟ ಹೂಡಿದರಲ್ಲದೆ, ಹೊರಗಿನ ಭಾರತೀಯರು—ಅಥವಾ ಕಾಂಗ್ರೆಸು—ಅದರಲ್ಲಿ ಭಾಗ ವಹಿಸಲಿಲ್ಲ. ನೈತಿಕ ಬೆಂಬಲವನ್ನಷ್ಟೇ ನೀಡಲಾಯಿತು. ಗೋವೆಯಲ್ಲಿ ನಾವು ಸತ್ಯಾಗ್ರಹಕ್ಕೆ ಹೋಗುವುದೆಂದರೆ ಅದು ರಾಷ್ಟ್ರೀಯ ಸ್ವರೂಪದ ಹೋರಾಟವಾಗಿ ಉಳಿಯದೆ, ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಎಡೆ ಕೊಡುತ್ತದೆ. ಗೋವೆಯ ವಿಮೋಚನೆಗಾಗಿ ಗೋವಾಂತಕರೇ ಹೋರಾಟ ನಡೆಸಬೇಕು-ಎಂದು ಕಾಂಗ್ರೆಸು (ಮತ್ತು ಭಾರತ ಸರಕಾರ) ಮೊದಲಿಂದಲೂ ಹೇಳುತ್ತಾ ಬಂದಿದ್ದುದರ ಗುಟ್ಟು ಇದೇ ಆಗಿದೆ. ಈಚೆಗೆ ಈ ಮೂಲಭೂತ ಅಂಶವನ್ನು ಪ್ರಾಯೋಗಿಕವಾಗಿ ಸ್ವಲ್ಪ ಮಟ್ಟಿಗೆ ಬದಲಾಯಿಸಲಾಯಿತು-ಆದರೆ ಅದರಿಂದ ವಾತಾವರಣ ಕೆಡುವ ಮತ್ತು ಗೋವೆಯ ವಿಮೋಚನೆಯ ಸಂಭವ ದೂರ ಹೋಗುವ ಲಕ್ಷಣ ಕಾಣಿಸಿದೆ. ಆದುದರಿಂದ ಬದಲಾಯಿಸಿದ ವ್ಯೂಹ ಕೈಬಿಡುವ ಅವಶ್ಯಕತೆ ಬಂದಿದೆ. ಇಷ್ಟರಿಂದಲೇ ಗೋವಾಂತಕರ ಕೈಯನ್ನು ನಡುನೀರಿನಲ್ಲಿ ಬಿಟ್ಟು ಹೋಗುತ್ತಿದ್ದೇವೆಂದು ಯಾರೂ ಭಾವಿಸಬಾರದು—ಅವರ ಹೋರಾಟಕ್ಕೆ ಸಂಪೂರ್ಣ ಸಹಾನುಭೂತಿ ಇದೆ; ಅಲ್ಲದೆ ಪೋರ್ಚುಗಾಲು ಮತ್ತು ಭಾರತಗಳೆರಡೂ ಭಾಗಿಯಾಗಿರಬಹುದಾದ ಅಂತಾರಾಷ್ಟ್ರೀಯ ಸ್ವರೂಪದ ಒಪ್ಪಂದಗಳಿಗೆ ಭಂಗ ಬಾರದ ರೀತಿಯಲ್ಲಿ ಉಗ್ರ ದಿಗ್ಬಂಧನ ಕ್ರಮಗಳನ್ನು ಭಾರತ ಸರಕಾರವು—ಭಾರತೀಯರಿಗೂ ತನಗೂ ಎಷ್ಟೇಕಷ್ಟವಾಗಲಿ—ಕೈಗೊಂಡು, ಪೋರ್ಚುಗೀಜರಿಗೆ ಗೋವೆಯಲ್ಲಿ ಉಳಿಯುವುದನ್ನು ತೀರ ಕಷ್ಟಕರವಾಗಿ ಮಾಡಿ ಗೋವಾಂತಕರ ಹೋರಾಟದ ಶಕ್ತಿ ಹೆಚ್ಚುವಂತೆ ಸಹಕಾರ ನೀಡುತ್ತಿದೆ. ಈ ಅಂಶವನ್ನು ಗಮನಿಸದೆ ಪ್ರಕಟವಾಗಿ ಸತ್ಯಾಗ್ರಹದಲ್ಲಿ ಭಾರತೀಯರು ಭಾಗ ವಹಿಸುವುದಕ್ಕೆ ಅಕ್ಷೇಪಿಸಿದ ವಿಷಯಕ್ಕೆಯೇ ಅವಾಸ್ತವ ಮಹತ್ವ ಕೊಡುವುದು ನ್ಯಾಯವಾಗದು. ಸತ್ಯಾಗ್ರಹಿಗಳಿಗೆ ಏನಾದರೂ ಅಪಾಯ ಘಟಿಸಿದರೆ, ಗೋವೆಯಲ್ಲಿರುವ ಪೋರ್ಚುಗೀಜ ಸರಕಾರದೊಡನೆ ಸಂಬಂಧ ಬೆಳೆಸಲು— ನಮ್ಮ ಕಚೇರಿಯನ್ನು ಅಲ್ಲಿ ಪ್ರತಿಘಟನಾರ್ಥವಾಗಿ ಮುಚ್ಚಿದ ಬಳಿಕ- ಅವಕಾಶ ವಿರುವುದಿಲ್ಲ. ಬಂಧಿತ ಸತ್ಯಾಗ್ರಹಿಗಳ ಭೇಟಿಗೆ ಭಾರತ ಸರಕಾರ ಯೋಗ್ಯ ವ್ಯವಸ್ಥೆಯನ್ನು ಮಾಡಿಕೊಡುವುದು ಸಹಕಷ್ಟ. ಹೀಗೆಲ್ಲ ತೊಂದರೆಗಳಿರುವಾಗ ಸತ್ಯಾಗ್ರಹಿಗಳಾಗಿ ಹೋಗಲು ಭಾರತೀಯರು ಆಗ್ರಹಪಡಬಾರದು. ಗೋವಾಂತಕರಿಗೆ ಸ್ವಾತಂತ್ರ್ಯದ ಚಳವಳದಲ್ಲಿ ಏನೇನೂ ಆಸಕ್ತಿ ಇಲ್ಲ; ಭಾರತೀಯರದೇ ಗೊಂದಲವಿದೆಂದು ಪಾಶ್ಚಾತ್ಯ ಲೋಕದಲ್ಲಿ ಸಾರ್ವತ್ರಿಕವಾಗಿ ಅಭಿಪ್ರಾಯ ಪಡಲಾಗುತ್ತದೆ. ಇದನ್ನು ಗೋವಾಂತಕರೇ ತಮ್ಮುಕಾರ್ಯಾಚರಣೆಯಿಂದ ಹುಸಿಗೊಳಿಸಿ, ಭಾರತೀಯರ ಮೇಲಿನ ಗಂಭೀರ ಆಪವಾದವನ್ನು ದೂರಮಾಡಬೇಕಾಗಿದೆ. ಕರ್ತವ್ಯ ಭಾವನೆಯಿಂದ ರಾಷ್ಟ್ರೀಯ ಪ್ರವೃತ್ತಿಯ ಗೋವಾಂತಕರು ಇದಕ್ಕೆ ಶಕ್ತಿ ಮೀರಿ ಪ್ರಯತ್ನಿಸುವರೆಂದು ನಂಬುತ್ತೇವೆ. ಪಣಜಿ ಮುಂತಾದ ಗೋವೆಯ ಕೈದಳು ಭಾಗದಲ್ಲಿ ಸತ್ಯಾಗ್ರಹ ನಡೆಸಿದ ಗೋವಾಂತಕ ವೀರರ ಕೈಯನ್ನು ಬಲಪಡಿಸಲು ಸಾಹಸ ಮಾಡದಿಂದ ಶೋಷಿಸಲ್ಪಡುತ್ತಿರುವ ಗೋವೆಯ ಜನತೆ ನೋಡಬೇಕಲ್ಲದೆ, ಗಡಿಯೊಳಗೆ ಕೆಲವು ಮೈಲು ದೂರ ಘೋಷಣೆ ಮಾಡುತ್ತ ಹೋಗಿ, ಪೋರ್ಚುಗೀಜರ ಕೈಯಲ್ಲಿ ಹಿಂಸೆಗೆ ಗುರಿಯಾಗಿ, ಭಾರತಕ್ಕೆ ಮರಳುವ ಸತ್ಯಾಗ್ರಹಿಗಳ ಮೇಲೆಯೇ ಅವರು ತಮ್ಮ ಭವಿಷ್ಯವನ್ನು ಅವಲಂಬಿಸಗೊಡಬಾರದು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು — ತಾ. ೪ರಲ್ಲಿ ಶ್ರೀ ಎಫ್. ಯಕ್ಸ್. ಡಿ. ಸಿಂಟೊರವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಜರಗಿತು. ಕಾಸರಗೋಡು ತಾಲೂಕನ್ನು ನೇತ್ರಾವತಿ ನದಿಯವರೆಗೆ ಕೂಡಿಸಿ, ಪ್ರತ್ಯೇಕ ಕೇರಳರಾಜ್ಯ ರಚಿಸಬೇಕೆಂದು ಖ್ಯಾತ್ಯ ಪುನರ್ರಚನಾ ಆಯೋಗದವರು ಶಿಫಾರಸುಮಾಡಿರುವರೆಂಬ ಸುದ್ದಿಯೊಂದು ಪ್ರಕಟವಾಯಿತು ನಿಜವೆಂದಾದರೆ, ಅದರಿಂದ ಇಡೀ ಜಿಲ್ಲೆಯೇ ತಳಮಳಗೊಳ್ಳಬಹುದಾದುದರಿಂದ ಅಂತಹ ಯೋಜನೆಯೇನಾದರೂ ಆಯೋಗದವರಿಗಿದ್ದರೆ ಅದನ್ನು ಬಿಟ್ಟುಕೊಡಬೇಕೆಂದು ಆಯೋಗದ ಅಧ್ಯಕ್ಷರಿಗೆ ತಿಳಿಸಬೇಕೆಂದಾಯಿತು. ಗೋವಾ ಸತ್ಯಾಗ್ರಹದಲ್ಲಿ ಬಾಗವಹಿಸಿದ ಸತ್ಯಾಗ್ರಹಿಗಳನ್ನು ಅಭಿನಂದಿಸುವ, ಪೋರ್ಚುಗೀಸ್ ದಬ್ಬಾಳಿಕೆಯನ್ನು ನಿವೇದಿಸುವ, ಗೋವಾ ಪ್ರಶ್ನೆಯಲ್ಲಿ ನೆಹರುಗಳ ಧೋರಣೆಯನ್ನು ಸಮರ್ಥಿಸ ವ, ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆರ ನಿಧನಕ್ಕೆ ಸಂತಾಪ ಸೂಚಿಸುವ, ಕಾಂಗ್ರೆಸ್ ಸಂಘಟನೆಗಾಗಿ ಇಬ್ಬರು ಸಂಘಟಕರನ್ನು ನೇಮಿಸಬೇಕೆನ್ನುವ, ಭೂದಾನ ಸಮಿತಿಯ ಕಾರ್ಯಕ್ರಮದಲ್ಲಿ ಸಹಕರಿಸಬೇಕೆನ್ನುವ, ಸೇವಾದಳವನ್ನು ನಿರ್ಮಿಸಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಪಂಚವಾರ್ಷಿಕ ಯೋಜನೆಯ ನಮ್ಮ ಜಿಲ್ಲೆಯ ಅವಶ್ಯಕತೆಗಳನ್ನು ಸಂಗ್ರಹಿಸಿ ಸಂಬಂಧಪಟ್ಟವರಿಗೆ ಕಳುಹಿಸುವರೆ ಜಿ. ಕಾಂ. ಕಮಿಟಿಯ ಅಧ್ಯಕ್ಷ, ಕಾರ್ಯದರ್ಶಿಗಳು, ರಾಜ್ಯಸಭಾ ಕಾಂಗ್ರೆಸ್ ಸದಸ್ಯರು, ಶ್ರೀಗಳಾದ ಕೆ. ಆರ್. ಆಚಾರ್, ಕೆ. ಕೆ. ಶೆಟ್ಟಿ, ಯಂ. ಉಮೇಶರಾವ್, ಕೆ. ಕೆ. ಪಿ. ರಾಮ ಹುದುವಾಳ, ಎಂ. ಕೃಷ್ಣಯ್ಯ ಶೆಟ್ಟರಿರುವ ಉಪಸಮಿತಿಯನ್ನೂ ಕಾಂಗ್ರೆಸ್ ಪಕ್ಷದ ಮಹಿಳಾ ವಿಭಾಗವೊಂದನ್ನು ರಚಿಸುವರೆ ಶ್ರೀಮತಿಗಳಾದ ಕಲ್ಯಾಣಿ ಡಿ. ಶೆಟ್ಟಿ, ಕಾಂದಂಬರಿ ಹೊಳ್ಳ, ಮತ್ತು ಮೇರಿ ಬ್ರಿಟೊ ಇವರ ಉಪಸಮಿತಿಯೊಂದನ್ನೂ ರಚಿಸಲಾಯಿತು.

ಕುಂಬಳೆ— ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಸಭೆಯು ತಾ. ೩ರಲ್ಲಿ ಶ್ರೀ ಪಿ. ಲಕ್ಷ್ಮಣಾಚಾರ್, ಅವರ ಅಧ್ಯಕ್ಷತೆಯಲ್ಲಿ ಕಜಂಪಾಡಿ ಶಾಲೆಯಲ್ಲಿ ಜರಗಿತು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಗೋವೆ ಮತ್ತು ಪಾಕಿಸ್ತಾನ

ಬಾಂಡುಂಗಿನ ಘೋಷಣೆಗೆ ವಿಸಂಗತವಾದ ನಿಲುಮೆ

ಪಾಕಿಸ್ತಾನದ ನೂತನ ಪ್ರಧಾನಿ ಚೌಧುರಿಮಹಮ್ಮದಾಲಿಗಳು ವಹಿಸಿರುವ ಧೋರಣೆ ವಿಚಿತ್ರವಾಗಿ ಕಾಣುತ್ತದೆ. ಅವರು ಮೊರೊಕ್ಕೊ ಮತ್ತು ಅಲ್ಜೀರಿಯಗಳಲ್ಲಿ ವಸಾಹತು ವಾದವು ನಾಶವಾಗಬೇಕೆಂದು ಹೇಳುತ್ತಾರೆ; ಅಲ್ಲಿಯ ಜನರ ರಾಷ್ಟ್ರೀಯಸ್ವಾತಂತ್ರ್ಯದ ಹೋರಾಟಕ್ಕೆ ಬೆಂಬಲ ಕೊಡುತ್ತಾರೆ—ಆದರೆ ಗೋವೆಯ ಕುರಿತು ತುಟಿ ಬಿಚ್ಚುವುದಿಲ್ಲ.

ವಿನಂತಿಗೆ ನಕಾರ

ಸುದ್ದಿಗಾರರು ಅವರನ್ನು ಕೆಣಕಿದಾಗ ಗೋವೆಯ ಕುರಿತು ತಾನೇನೂ ಹೇಳುವುದಿಲ್ಲ ಎಂದರು. ವಸಾಹತು ವಾದವನ್ನು ಖಂಡಿಸಿದ ಆಫ್ರೇಸ್ಯ ರಾಷ್ಟ್ರಗಳ ಬಾಂಡುಂಗ್ ಪರಿಷತ್ತನ್ನು ಕರೆದ ಕೊಲೊಂಬೊ ರಾಷ್ಟ್ರಗಳಲ್ಲಿ ಪಾಕಿಸ್ತಾನವೂ ಒಂದೆಂಬುದನ್ನು ಅವರು ಮರೆತಿರುವಂತೆ ಕಾಣುತ್ತದೆ. ಭಾರತ ಸರಕಾರ ಈ ಗೊತ್ತುವಳಿಯ ಉದ್ದೇಶಕ್ಕೆ ಘಾತುಕವಾದ ಧೋರಣೆ ವಹಿಸಬಾರದೆಂದು ವಿನಂತಿ ಮಾಡಿಕೊಂಡಾಗ, ಪಾಕಿಸ್ತಾನ ಅದಕ್ಕೆ ಗಮನವೀಯಲಿಲ್ಲ.

ಧಾರಾಳ ಸಹಾಯ

ಪರಿಣಾಮವಾಗಿ, ಗೋವೆಯಲ್ಲಿ ಪೋರ್ಚುಗೀಜರು ಚಳವೂರುವುದಕ್ಕೆ ನೆರವಾಗುವ ಯಾವ ವ್ಯಾಪಾರ ವ್ಯವಹಾರಕ್ಕೂ ಆವಕಾಶ ಕೊಡದೆ ಭಾರತವು ದಿಗ್ಬಂಧನ ಕ್ರಮಕ್ಕೆ ಇಳಿದಿದ್ದರೂ ಪಾಕಿಸ್ತಾನದಿಂದ ಎಲ್ಲ ಬಗೆಯ ಸೌಕರ್ಯ ಗೋವೆಗೆ ದೊರಕುತ್ತಿದೆ. ಪಾಕಿಸ್ತಾನದಲ್ಲಿ ಪೋರ್ಚುಗಾಲದ ರಾಯಭಾರಿ ಕಚೇರಿ ತೆರೆಯಲು ಅನುಮತಿ ದೊರೆತಿದೆ; ಕರಾಚಿಯಿಂದ ಗೋವೆಗೆ ವಿಮಾನ ಹಾರಾಡುತ್ತಿದೆ; ಅಲ್ಲಿಯ ಬಂದರುಗಳಲ್ಲಿ ಸೌಕರ್ಯ ಸಿಗುತ್ತಿದೆ; ಅಕ್ಕಿ ಮತ್ತಿತರ ಆವಶ್ಯಕ ವಸ್ತುಗಳ ಪೂರೈಕೆ ಪಾಕಿಸ್ತಾನದಿಂದ ನಡೆಯುತ್ತಿದೆ.

ಸೇಡಿನ ಮನೋಭಾವ

ಕಾಶ್ಮೀರ ಸಮಸ್ಯೆಯ ಕುರಿತು ತನಗಿರುವ ವೈಮನಸ್ಯದ ಸೇಡು ತೀರಿಸಲು ಪಾಕಿಸ್ತಾನವು ಪ್ರಕಟವಾಗಿ ಹೀಗೆ ವರ್ತಿಸುತ್ತಿದೆ ಎಂಬುದಾಗಿ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾರತವು ಪಾಕಿಸ್ತಾನ ಪೋರ್ಚುಗಾಲಿಗೆ ಕೊಡುತ್ತಿರುವ ಈ ಸಹಾಯವನ್ನು "ವಿಷಾದಪೂರ್ವಕ" ಗಮನಿಸುವುದಕ್ಕಿಂತ ಹೆಚ್ಚೇನೂ ಮಾಡುವಂತಿಲ್ಲ. ಈ ನೆರವು ಸಿಗುವಷ್ಟು ಕಾಲ, ಭಾರತದ ದಿಗ್ಬಂಧನವು ಪೋರ್ಚುಗೀಜರ ಮೇಲೆ ಗಂಭೀರ ಪರಿಣಾಮ ಮಾಡಲಾರದೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಕಾಶ್ಮೀರ ಸತ್ಯಾಗ್ರಹ

ಪಾಕಿಸ್ತಾನದ ಸರಕಾರವು ಕಾಶ್ಮೀರ ಪ್ರಶ್ನೆಯ ಕುರಿತು ರಾಷ್ಟ್ರೀಯ ಧೋರಣೆಯನ್ನು ರೂಪಿಸುವುದಕ್ಕಾಗಿ ಎಲ್ಲ ಪಕ್ಷಗಳ ಧುರೀಣರ ಸಭೆ ನೆರೆಯಿಸುವುದೆಂದು ತಿಳಿದು ಬರುತ್ತದೆ. ಇದನ್ನು ಗಮನಿಸಿ, ಗೋವೆಯಲ್ಲಿ ಭಾರತೀಯರು ಸತ್ಯಾಗ್ರಹ ಹೂಡಿದುದನ್ನು ಅಣಕಿಸುವ ಉದ್ದೇಶದಿಂದ ಪ್ರಚೋದಿಸಿದಾದ "ಕಾಶ್ಮೀರ ಸತ್ಯಾಗ್ರಹ" ಹಿಂದೆಗೆದು ಕೊಳ್ಳಲ್ಪಡಬಹುದೆಂದು ಪ್ರಧಾನಿ ಆಶಿಸಿದ್ದಾರೆ. ಈ ಸತ್ಯಾಗ್ರಹದ ಕಲ್ಪನೆಯನ್ನು ಮೊದಲು ಕುಟ್ಟಿಸಿದ ಮಹಾನುಭಾವ ಸುಪ್ರಸಿದ್ಧ ಎಂಬುದನ್ನಿಲ್ಲಿ ನೆನೆಯಬಹುದು.

ಇಸ್ಲಾಂ ಪ್ರಭುತ್ವದಲ್ಲಿ

ಅಲ್ಪ ಸಂಖ್ಯಾಕರಿಗೆ ಪಾಕಿಸ್ತಾನದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕೊಡುವ ಭರವಸೆ ಗವರ್ನರ ಜನರಲರಿಂದ ಬಂದಿದೆ. ಕೇಂದ್ರ ಮಂತ್ರಿ ಮಂಡಳದಲ್ಲಿ ಅಲ್ಪ ಸಂಖ್ಯಾಕ ವರ್ಗದಿಂದ ಇನ್ನೊಬ್ಬ ಮಂತ್ರಿಯನ್ನು ಸೇರಿಸುವ ಮತ್ತು ಪೂರ್ವ ಬಂಗಾಲದ ಸರಕಾರದಲ್ಲಿ ಅಲ್ಪ ಸಂಖ್ಯಾಕರಿಗೆ ಪಾಕಷ್ಟು ಪ್ರಾತಿನಿಧ್ಯ ಕೊಡುವ ಕ್ರಮಗಳು ನಡೆದಿವೆ. ಆದರೆ ಇಸ್ಲಾಂ ತತ್ವಗಳಿಗನುಸಾರ ರೂಪಿಸಲ್ಪಡುವ ಪಾಕಿಸ್ತಾನದ ಘಟನೆಯಲ್ಲಿ ಅಲ್ಪ ಸಂಖ್ಯಾಕರ ಗತಿ ಏನಾದೀತೆಂದು ಊಹಿಸುವುದು ಕಷ್ಟವಲ್ಲ.

ಗಾಝಾದಲ್ಲಿ ತಿಕ್ಕಾಟ

ಮೊರೊಕ್ಕೊ ಮತ್ತು ಅಲ್ಜೀರಿಯಗಳ ಪರಿಸ್ಥಿತಿ ಇನ್ನು ಸುಧಾರಿಸಿಲ್ಲ. ಈ ನಡುವೆ ಗಾಝಾ ಗಡಿವಲಯದಲ್ಲಿ ಇಸ್ರೇಲ್ ಮತ್ತು ಈಜಿಪ್ಟುಗಳು ಭೀಕರ ಘರ್ಷಣೆ ನಡೆಸಿವೆ. ಯುದ್ಧವಿರಾಮಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಮೇಲ್ವಿಚಾರಕರು ವಿನಂತಿಸಿ, ಉಭಯ ಪಕ್ಷದವರನ್ನು ಒಪ್ಪಿಸಿದ ಬಳಿಕ ಸಹ ತಿಕ್ಕಾಟ ನಡೆದೆವರದಿ ಬಂದಿದೆ.

ಅರಬರ ವಿರೋಧ

ಇಸ್ರೇಲದ ಅಸ್ತಿತ್ವವನ್ನು ಒಪ್ಪಲು ಅರಬ ರಾಷ್ಟ್ರಗಳು ಸಿದ್ಧವಾಗಿಲ್ಲವೆಂಬುದೇ ಈ ಘರ್ಷಣೆಯ ಮೂಲ. ಅಲ್ಲಿ ರಾಷ್ಟ್ರ ಸಂಘವು ಆಯಾ ರಾಷ್ಟ್ರಗಳ ಗಡಿಯನ್ನು ನಿರ್ಧರಿಸಿರುವಂತೆ ಕಂಡರೂ ವ್ಯವಹಾರದಲ್ಲಿ ಅದಕ್ಕಿನ್ನೂ ಮನ್ನಣೆ ಸಿಕ್ಕಿಲ್ಲ. ಅರಬ ರಾಷ್ಟ್ರಗಳಿಗೆ ರಶ್ಯದ ಶಸ್ತ್ರಾಸ್ತ್ರಗಳ ಪೂರೈಕೆ ಯಾಗಲಿದೆ ಎಂದು ಸುದ್ದಿ ಬಂದಿದ್ದು, ಪಾಶ್ಚಾತ್ಯ ರಾಷ್ಟ್ರಗಳಿಗೆ ಸಲ್ಲಿಸಿದ ಬೇಡಿಕೆ ನೆನೆಗೆದಿನುವುದೇ ಇದಕ್ಕೆ ಕಾರಣವೆನ್ನಲಾಗಿದೆ.

ಪ್ರತಿಷ್ಠೆಗೆ ಧಕ್ಕೆ

ಸುಡಾನಿನಲ್ಲಿ ಸೈನಿಕ ದಂಗೆಯು ವಿಫಲವಾದುದರಿಂದ ಈಜಿಪ್ಟಿನ ಪ್ರತಿಷ್ಠೆಗೆ ಪೆಟ್ಟು ತಗಲಿತೆನ್ನಬಹುದು. ಆ ದೇಶವು ಈ ಜಿಪ್ಟಿನೊಡನೆ ನೇರ್ಪಡೆಹೊಂದುವುದಿರಲಿ, ಸಹಕರಿಸಲು ಕೂಡ ಸಿದ್ಧವಿಲ್ಲವೆಂದು ಕಾಣುತ್ತದೆ. ಈಜಿಪ್ಟಿನ ಸರಕಾರದಲ್ಲಿ ಸುಡಾನಿಗೆ ಸಂಬಂಧಿಸಿದ ವ್ಯವಹಾರದ ಮಂತ್ರಿಗಳನ್ನು ಸೈನಿಕ ಮಂಡಳವು ಕೆಲಸದಿಂದ ತೆಗೆದು ಹಾಕುವಷ್ಟು ಪರಿಸ್ಥಿತಿ ವಿಷಮಿಸಿದೆ.

ಸೈಪ್ರೆಸಿನ ಭವಿಷ್ಯ

ಭೂಮಧ್ಯ ಸಮುದ್ರದಲ್ಲಿ ಸೈಪ್ರೆಸ್ ಎಂಬ ನಡು ಗಡ್ಡೆ ಇದ್ದು ಅದರಲ್ಲಿ ಗ್ರೀಕರು ಬಾಹುಳ್ಯರಿದೆ; ತುರ್ಕರೂ ಇದ್ದಾರೆ; ಆದರೆ ಅಧಿಕಾರ ನಡೆಸುವ ದೇಶವೆಂದು ಬ್ರಿಟನ್ ರಾಷ್ಟ್ರೀಯರು ಅಲ್ಲಿ ಭೂಯೋತ್ಪಾದಕ ಚಟುವಟಿಕೆಗಳನ್ನು ತೊಡಗಿ, ಗ್ರೀಸಿನೊಡನೆ ದ್ವೀಪದ ಸೇರ್ಪಡೆಯಾಗಬೇಕು ಎನ್ನುತಿದ್ದಾರೆ. ಗ್ರೀಸಿನ ಸರಕಾರದ ಬೇಡಿಕೆಯೂ ಇದೇ ಆಗಿದೆ—ಆದರೆ, ನ್ಯಾಟೊ ಒಪ್ಪಂದದ ತಮ್ಮ ಪೊಣೆಗಾರಿಕೆಗಳನ್ನು ನೆರವೇರಿಸಲು ಈ ದ್ವೀಪದಲ್ಲಿ ತಮ್ಮ ಅಧಿಕಾರವಿರ ಬೇಕಾಗಿದೆ ಎಂದು ಬ್ರಿಟನು ಹೇಳುತ್ತದೆ.

ಮಲಯದ ಬೇಡಿಕೆ

ಮಲಯಾದಲ್ಲಿ ಚುನಾವಣೆಯ ಬಳಿಕ ಸಮ್ಮಿಶ್ರ ಮಂತ್ರಿ ಮಂಡಳ ರಚಿಸಿರುವ ಅಬ್ದುಲ್ಲರು ನಾಲ್ಕು ವರ್ಷಗಳಾಗಿ ಬ್ರಿಟಿಷರು ಈ ದೇಶಕ್ಕೆ ಸ್ವಾತಂತ್ರ್ಯ ನೀಡಬೇಕೆಂದು ಶಾಸನ ಸಭೆಯ ಪ್ರಧಾನ ಸಭೆಯಲ್ಲಿ ಬೇಡಿಕೆಯನ್ನು ಮುಂಎಟ್ಟಿದ್ದಾರೆ. ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿರುವ ಕಮ್ಯುನಿಸ್ಟರಿಗೆ ಕ್ಷಮೆ ನೀಡಲು ಅವರು ಮುಂಬದಿದ್ದು, ಯೋಗ್ಯ ಪ್ರಜೆಗಳಂತೆ ಅವರು ಬಾಳಬೇಕು ಎಂದಿದ್ದಾರೆ.

ಚುನಾವಣೆಯಲ್ಲಿ ಮಕ್ಕಳು

ಚಿಕ್ಕ ಮಕ್ಕಳನ್ನು ಚುನಾವಣೆಯ ಪ್ರಚಾರಕ್ಕಾಗಿ ಉಪಯೋಗಿಸ ಬಾರದೆಂದು ಕೇಂದ್ರ ಸರಕಾರವು ಅಭಿಪ್ರಾಯ ಪಟ್ಟಿದೆ, ರಾಜ್ಯ ಸರಕಾರಗಳು ಎಲ್ಲ ಶೈಕ್ಷಣಿಕ ಸಂಸ್ಥೆಗಳ ಗಮನಕ್ಕೆ ಇದನ್ನು ತರಬೇಕೆಂದು ಅದು ಹೇಳಿದೆ.

ಸಾರ್ವಜನಿಕ ಸಾಲ

ಕೆಲವು ರಾಜ್ಯ ಸರಕಾರಗಳು ಈ ವರ್ಷ ಎರಡನೆಯ ಸಲ ಸಾರ್ವಜನಿಕ ಸಾಲವನ್ನೂ ತೆಗೆದು ಕೊಂಡಿವೆ. ಇದು ಸಂಪೂರ್ಣ ತುಂಬಿಬಂದಿದ್ದ ಎಲ್ಲ ರಾಜ್ಯ ಸರಕಾರಗಳು ಎರಡೂಸಲ ಸೇರಿ ಒಟ್ಟು ೪೭ ಕೋಟಿ ೫೦ ಲಕ್ಷ ರೂಪಾಯಿಗಳ ಸಾಲ ಎತ್ತಿದಂತಾಯಿತು.

ಹಿಂದಿಯ ಬಳಕೆ

ಆರೋಪಗಳ ಹೇಳಿಕೆ ವತ್ತು ನ್ಯಾಯಾಧೀಶರ ತೀರ್ಪುಗಳು ಮಾತ್ರ ಇಂಗ್ಲಿಷಿನಲ್ಲಿರ ಬಹುದೆಂದೂ ಉಳಿದೆಲ್ಲ ನ್ಯಾಯ ಸ್ಥಾನದ ವ್ಯವಹಾರಗಳು ಹಿಂದಿಯಲ್ಲಿರ ಬೇಕೆಂದೂ ನಿರ್ಬಂಧನಿರುವ ಸುದ್ಯ ಪ್ರದೇಶದ ಹೈ ಕೋರ್ಟು ಇಂಗ್ಲಿಷಿನ ಬದಲು ಹಿಂದಿಯನ್ನು ನ್ಯಾಯಾಲಯಗಳ ಲ್ಲಿ ಬಳಸಲು ೧೫ ವರ್ಷಗಳ ಅವಧಿಸಾಲದೆಂದು ಯೇಲ್ ಸಮಿತಿಗೆ ತಿಳಿಸಿದೆ.

ಉಡುಪಿ

ಸೌರ ಶ್ರೀ ಕೃಷ್ಣಾಷ್ಟಮಿಯು

ಇದೇ ತಾ. ೨೮ರಲ್ಲಿ ಆಚರಿಸಲ್ಪಟ್ಟಿದ್ದು ಮರುದಿನ ಶ್ರೀ ಕೃಷ್ಣಪುರದಲ್ಲಿ ಪಟ್ಟಣಂಡಿ ಕ್ರೀಡೋತ್ಸವ ಜರಗಿತು.

ನಗರ ಸೈರ್ಮಲ್ಯದ ಕಡೆಗೆ ಮುನ್ಸಿಪಲ್

ಆರೋಗ್ಯಾಧಿಕಾರಿಗಳು ತಕ್ಕ ಗಮನಕೊಡಬೇಕೆಂದೂ ಸುಸಿಗಳ ಕಾಟ ಸಿಪೀತವಾಗಿರುವುದರಿಂದ ಕಕ್ಕಲದ ಕೊಂಪೆಗಳಿಗೆ ಹಿಂದಿನಂತೆ ಸುಸಿಹಾರಕ ದ್ರವವನ್ನು ಚಿಮುಕಿಸುವ ವ್ಯವಸ್ಥೆಯನ್ನು ಕೈಗೊಳ್ಳುವುದು ಸೂಕ್ತವೆಂದೂ ಜಾತ್ರಿದಾರರೊಬ್ಬರು ಬರೆಯುತ್ತಾರೆ.

ಮುನಿಸಿಪಲ್ ಚುನಾವಣೆ ಬಗ್ಗೆ

ಇದೇತಿಂಗಳ ತಾ. 13, 14, 15,ರಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಯಿತು ತಾ. 16ರಲ್ಲು ನಾಮಪತ್ರಗಳ ಪರಿಶೀಲನೆ ನಡೆಯುವುದು. ಅಕ್ಟೋಬರ್ ತಿಂಗಳ ತಾ. 27ರಲ್ಲಿ ಮತದಾನ, ತಾ. 28ರಲ್ಲಿ ಮತ ಎಣಿಸುವ ಕಾರ್ಯ ನಡೆದು ಫಲಿತಾಂಶ ಪ್ರಕಟಿಸಲಾಗುವುದು

ನಗರದ 17 ವಾರ್ಡುಗಳಿಗೆ 17 ಜನರಲ್ ಸೀಟುಗಳಲ್ಲಿನ ಎರಡು ಸೀಟುಗಳು ಹೆಂಗಸರಿಗೆ ಮತ್ತು ಒಂದು ಹರಿಜನರಿಗೆ ಕಾದಿಡಲ್ಪಟ್ಟಿವೆ. ಒಟ್ಟು ಸೀಟುಗಳು ಇಪ್ಪತ್ತು.

ಪಿಣಂಹಬ್ಬವು— ಸ್ಥಳೀಯ ಕೇರಳ ಸಮಾಜದವರಿಂದ ಕಳೆದ ತಾ.31ರಲ್ಲಿ ಮೋದರ್ಸ್ ಹಾ. ಎ. ಶಾಲೆಯಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಉಪಸ್ಥಾಪಕಿ ಡಾ. ಶ್ರೀಮತಿ ಪದ್ಮಾ ರಾವ್, ಅವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಪ್ರಾರ್ಥನಾನಂತರ ಡಾ. ವೇಲಾಯುಧನ್, ಅವರು ಸ್ವಾಗತ ಭಾಷಣವಿತ್ತರು. ಸಮಾಜ ಕಾರ್ಯದರ್ಶಿ ಶ್ರೀ ಟಿ. ಎ. ವಾಸುದೇವನ್, ಅವರು ವರದಿಯನ್ನು ಓದಿದರು. ಮಲೆಯಾಳಿಗಳ ಸರ್ವಪ್ರಥಮ ಪಿಣಂ ಹಬ್ಬದ ಕುರಿತು ಶ್ರೀಗಳಾದ ಎಮ್. ಕೆ. ಜಿ. ಸಾಹೆಬರ್, ಕುಂಞಾರಾಮನ್ ನಾಯರ್, ಎ. ಕೆ. ದೇವದಾಸ ಮೊದಲಾದವರು ಕಾರ್ಯೋಚಿತವಾಗಿ ಮಾತನಾಡಿದರು. ಡಾ. ಟಿ ಎಮ್. ಎ. ಪೈಗಳು ತಮ್ಮ ಭಾಷಣದಲ್ಲಿ ಸರ್ವ ಹಂತದವರೂ ಇಂತಹ ಸಮಾರಂಭಗಳನ್ನು ಏರ್ಪಡಿಸುವುದುತ್ತಮವೆಂದು ಅಭಿಪ್ರಾಯಪಟ್ಟು, ಹಿಂದಿ ಸಂಪ್ರದಾಯದಲ್ಲಿ ಗೆದ್ದ ಡಾ. ಪದ್ಮರಾವ್, ಸಂಕಾರಬೇಡಿಸಿ ಕೆಲ್ಕಾನರಿಗೆ ಕಪ್ಪನ್ನು ಪಾರಿತೋಷವಿತ್ತರು. ಅಧ್ಯಕ್ಷೆಯರ ಭಾಷಣ, ಸಂಗೀತ ನೃತ್ಯಾದಿ ಮನರಂಜನ ಕಾರ್ಯಗಳಾದ ಬಳಿಕ ಮುನಿಸಿಪಲ್ ಕಮಿಶನರ್ ಶ್ರೀ ವಿ. ಯು ಕೆ. ನಂಬೀಶನ್ ಅವರು ವಂದನೆಗಳನ್ನಿತ್ತರು.

ಉಡುಪಿಗೆ ಸಬ್‌ಕೋರ್ಟು—

ಮುಂದಿನ ಜನವರಿ ತಿಂಗಳಾರಂಭದಿಂದ ಉಡುಪಿಯಲ್ಲಿ ಸಬ್ ಕೋರ್ಟು ತೆರೆಯಲ್ಪಡುವುದಾಗಿ ವಿಜ್ಞಾಪನೆಯ ವಾರ್ತೆ ಬಂದಿದೆ.

ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಸಭೆಯು—

ಶ್ರೀ ಬಾಳ್ಳಟ್ಟಿ ಬೀದಿ ಕೃಷ್ಣಯ್ಯ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಇದೇ ತಾ. 8ರಂದು ಜರಗಿ ಜಿಲ್ಲಾಕಾಂಗ್ರೆಸ್ ಕಮಿಟಿಯ ತಾ. 23—8—55ರ ಆದೇಶದಂತೆ ಉಡುಪಿ ನಗರ ಸಭೆಯ ಸದಸ್ಯರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಸ್ಪರ್ಧಿಸಬೇಕೆಂಬು ನಿರ್ಣಯಿಸಲಾಯಿತು. ಕಾಂಗ್ರೆಸ್ ಟಿಕೇಟನಲ್ಲಿ ನಿಲ್ಲಿ ಬಯಸುವ ಉಮೇದ್ವಾರರು, ಇದೇ ತಾ.10ನೇ ದಿನವಾರ ಸಂಜೆ ಐದುಗಂಟೆಯೊಳಗೆ ತಮ್ಮ ಅರ್ಜಿಗಳನ್ನು ಹತ್ತು ರೂಪಾಯಿ ಪ್ರವೇಶಧನ ದೊಂದಿಗೆ ಕಾಂಗ್ರೆಸ್ ಕಚೇರಿಗೆ ತಲ್ಲಿಸತಕ್ಕದ್ದೆಂದೂ ನಗರಾಡಳಿತದಲ್ಲಿ ಸುಧಾರಣೆಯನ್ನು ಬಯಸುವ ನಾಗರಿಕರು ಕಾಂಗ್ರೆಸ್ ಉಮೇದ್ವಾರರಿಗೆನೇ ತಮ್ಮ ಸಂಪೂರ್ಣ ಸದಸ್ಕರ ಪ್ರೋತ್ಸಾಹಗಳನ್ನೀಯಬೇಕೆಂದೂ ವಿನಂತಿ ಮಾಡಿಕೊಳ್ಳಬೇಕೆಂದಾಯಿತು.

ಉಡುಪಿಯ ಪ್ರೀ ಎಮ್. ಎ. ಕ್ರಮತರು—

ಪೊಂಡಾಯಿಯ ಪ್ರೀಪ್ರೈಸ್ ಬೊರ್ಡಿನ್ ಸಂಘದವರಿಂದ ಇದೀಗ ಸಿ. ಟಿ. ಐ. ಅಮೇರಿಕಾ ಪ್ರತಿನಿಧಿಗಳಾಗಿ ಸೇವಕ ಹೊಂದಿರುವರೆಂದೂ ಸದ್ಯಕ್ಕೆ ಮೇರಿಕಾ ದೇಶಕ್ಕೆ ತೆರಳಲಿರುವರೆಂದೂ ತಿಳಿಯಬರುತ್ತದೆ.

ಪುತ್ತೂರಿನಲ್ಲಿ ಕಾಲೇಜು ತೆರೆಯುವ ಯೋಜನೆ—

ಪುತ್ತೂರಿನ ಸೈಂಟ್ ವಿಕ್ಟರ್ ಹೈಸ್ಕೂಲು ಹಾಲಿನಲ್ಲಿ ಇದೇ ತಾ ೨೮ರಲ್ಲಿ ಮಂಗಳೂರ ಬಿಶೋಪ್‌ಗಾರ್ಟ್ ರೆ. ಡಾ। ಬಿ. ಎಸ್. ಪೇರೆರ ಅಧ್ಯಕ್ಷತೆಯಲ್ಲಿ ಸುರ ಪ್ರಮುಖರ ಸಭೆಯೊಂದು ಜರಗಿ ಪುತ್ತೂರಲ್ಲಿ ಪ್ರಥಮ ಶ್ರೀಮಿಯ ಆರ್ಟ್ಸ್ ಕಾಲೇಜು ತೆರೆಯುವ ಅವಶ್ಯಕತೆಯಿದೆ ಎಂಬುದಾಗಿ ಒಮ್ಮತದ ಅಭಿಪ್ರಾಯವಾಯಿತು. ತತ್ಸಂಬಂಧ ಮುಂದಿನ ಕಾರ್ಯಕ್ರಮ ಕೈಕೊಳ್ಳಲು ಕಾರ್ಯ ನಿರ್ವಾಹಕ ಸಮಿತಿಯೊಂದು ರಚಿಸಲ್ಪಟ್ಟಿತು ರೆ. ಫಾ. ಎ. ಪಿಕ್ಸಾನ್, ಅಧ್ಯಕ್ಷ, ಶ್ರೀ ಬೆಳ್ಳೆ ರಾಮಚಂದ್ರ ರಾವ್ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರು.

ಸೂಚನೆ

'ನವಯುಗ'ದ 34ನೆಯ ಸಂಪುಟವು ಇದೇ ಆಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ 35ನೆಯ ವರ್ಷವು ಆರಂಭವಾಗಿರುತ್ತದೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನೂ ಮುಂದಿನ ವರ್ಷದ ಚಂದಾಹಣವನ್ನೂ ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಪಿ ಮಾ 10ಆಣೆ ಹೆಚ್ಚಿಗೆಬೇಕುವುದರಿಂದ ಚಂದಾವಾರ್ಷಿಕ ಹಣವನ್ನು ಮನಿಯಾರ್ಡರು ಮಾಡಬೇಕಾಗಿ ವಿನ್ನಪ.

ವಾರ್ಷಿಕ ಚಂದಾಹಣ ರೂ. 5—12—0

ಪದುಬೆಟ್ಟು—ಪೆರಣಂಕಿಲ ಗ್ರಾಮದ ಪಡುಬೆಟ್ಟು ಸಂಗಮದಲ್ಲಿ ಹೊಸದಾಗಿ ತೆರೆದ 'ಶ್ರೀ ಒತ್ಯಾನಂದ ಯೈಟೆಡ್ ಎರಿಮೆಂಟರಿ ಶಾಲೆ'ಯಲ್ಲಿ ತಾ. 2—9—1955ರಲ್ಲು ಆ ಪರಾದ ಸಾರ್ವಜನಿಕ ಸಭೆಯು ಗ್ರಾಮದ ಪ ರೇಲಾದ ಶ್ರೀ. ವಿ. ಗೋವಿಂದರಾಜ ಹೆ ಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಶಾಲೆಯ ಪಾಯಂ ಕಟ್ಟೋಣವನ್ನು ಕಟ್ಟಿ ಸುವ ಸಲುವಾಗಿ ಈ ಕೆಳಗ ಕಾಣಿಸಿದಂತೆ, ಶ್ರೀಗಳಾದ ವಿ.ಗೋವಿಂದರಾಜ ಹೆಗ್ಡೆ, ಕೆ. ನಾ ರಾಯಣ ತಂತ್ರಿ, ಪಿ. ನಾರಾಯಣ ಶೆಟ್ಟಿ, ಪಿ. ವಿಠಲ ಶೆಟ್ಟಿ, ಪಿ. ಮಂಜಯ್ಯಶೆಟ್ಟಿ, ಪಿ. ನೀಲಯ್ಯ ಶೆಟ್ಟಿ, ಪಿ. ಕಿರಿಯಣ್ಣ ಶೆಟ್ಟಿ, ಪಿ. ಶೇಷಪ್ಪ ನಾಯಕ್, ಪಿ. ಪದ್ಮನಾಭ ಕಾಮತ್, ಪಿ. ಅನಂತರಾಮ ಭಟ್, ಯನ್. ಶಿ ಮ್ಮಪ್ಪ ಶೆಟ್ಟಿ, ಪಿ. ನಾರಾಯಣ ನಾಯಕ್ ಇವರನ್ನೊಳಗೊಂಡ ಶಾಲಾ ಕಟ್ಟೋಣ ಕಮಿ ಟಿಯನ್ನು ನಿಯಮಿಸಿ, ಕಟ್ಟೋಣ ಕಟ್ಟಿಸುವ ಅಧಿಕಾರವನ್ನು ಆ ಕಮಿಟಿಗೆ ಕೊಡಲಾಯಿ ತು. ನೆರೆದ ಸಭಿಕರಲ್ಲಿ ಸಹಾಯವನ್ನು ಅಪೇ ಕ್ಷಿಸಿ, ಆವರು ಕೊಡಲಿರುವ ಸಹಾಯವನ್ನು ರಿಕಾರ್ಡು ಮಾಡಲಾಯಿತು. ಶ್ರೀ. ವಿ. ಗೋವಿಂದರಾಜ ಹೆಗ್ಡೆಯವರಿಂದ ಶಂಕು ಸ್ಥಾಪನೆಯಾದ ಬಳಿಕ, ಶ್ರೀ. ಪಿ. ಗೋವಿಂ ದ ನಾಯಕರ ಮತ್ತು ಅಧ್ಯಕ್ಷರ ಭಾಷಣ, ತಂದಿ ವಿತರಣೆ, ಶ್ರೀ ಪಿ. ನಾರಾಯಣ ನಾಯ ಕರಿಂದ ಧನ್ಯವಾದವಾಗಿ ಸಭೆ ಮುಕ್ತಾಯ ವಾಯಿತು

ಶೆಂಕನಿಡಿಯೂರು— ಸ್ಥಳೀಯ ಗರ ಡಿ ಮಂಜಲು ಬೋರ್ಡು ಹಾ. ಎ. ಶಾಲೆಗಾಗಿ ಕಟ್ಟಿಸಲಿರುವ ನೂತನ ಕಟ್ಟಡದ ಶಂಕುಸ್ಥಾ ಪನಾ ಸಮಾರಂಭವು ರೆ| ಪಾ |ಜೆ. ಡಿಸೋ ಜರ ಅಧ್ಯಕ್ಷತೆಯಲ್ಲಿ ಇದೇ ತಾ. 1ರಲ್ಲಿ ಪೂ ರ್ವಾಹ್ನ ಜಿ. ಕೆ. ಜಿಲ್ಲಾಬೋರ್ಡು ಅಧ್ಯಕ್ಷ ಡಾ. ಕೆ. ಕೆ ಹೆಗ್ಡೆಯವರ ಹಸ್ತದಿಂದ ನಡೆ ಯಿತು. ಶಾಲಾ ಹೆಡ್ಮಾಸ್ಟರ್ ಶ್ರೀ. ಚಂದ್ರ ಶೇಖರರಾಯರು ಸ್ವಾಗತ ಮಾಡುಗಳನ್ನಾಡಿ ದರು. ಸ್ಥಾನಿಕ ಅಭಿವೃದ್ಧಿ ಯೋಜನೆಯ ಉ ಪಯೋಗ, ವಿದ್ಯಾಕ್ಷೇತ್ರವಲ್ಲಾಗಬೇಕಾದ ಸುಧಾರಣೆಗಳು ಮೊದಲಾದ ವಿಷಯಗಳನ್ನೆತ್ತಿ ಡಾ ಟಿ ಸೂಧನ ಪೈ, ಶ್ರೀಗಳಾದ ಎ. ಜಿ ಅಲ್ಲೆ, ಕೆ. ಲಿಂಗಪ್ಪಯ್ಯ, ಕೆ ಶಂಕರ ನಾರಾಯಣ ಉಪಾಧ್ಯಾಯ ಮೊದಲಾದವರು ಮಾತನಾಡಿದರು ಜಿಲ್ಲಾ ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಡಾ| ಕೆ. ಕೆ. ಹೆಗ್ಡೆ ಯವರು ಶಾಲಾಭಿವೃದ್ಧಿ ಕಾರ್ಯದಲ್ಲಿ ಜೆತ್ತ ವರ ಹಾಗೂ ಗ್ರಾಮಸ್ಥರ ಸಹಕಾರ ಬೆಂಬಲ ವನ್ನು ಅಪೇಕ್ಷಿಸಿದರು. ಶ್ರೀ. ನೀಲಕಂಠ ನಾವಡರು ಧನ್ಯವಾದಗಳನ್ನಿತ್ತರು.

ದೇಲಂಪಾಡಿ— ಶ್ರೀ ಇಚ್ಲಂಪಾಡಿ ರಾಮಯ್ಯ ನಾಯ್ಕರು ಹೊಸದಾಗಿ ಕಟ್ಟಿಸಿದ ಕಟ್ಟೋಣದಲ್ಲಿ ದೇಲಂಪಾಡಿ ಪಂಚಾಯತ ಬೋರ್ಡು ಆಫೀಸಿನ ಪ್ರವೇಶ ಸಮಾರಂಭವು ಕಳೆದ ತಾ. 25ರಲ್ಲಿ ಶ್ರೀ ಕೆ ಎಲ್. ಕಲ್ಲೂ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪುಳ್ಳಳಿಂದ ಧ್ವಜವಂದನೆಯಾಗಿ ಶ್ರೀ ಡಿ. ಮಹಲಿಂಗೇಶ್ವರ ಭಟ್ಟರು ಕಟ್ಟಿದ ಉದ್ಘಾಟ ನೆಮಾಡಿದರು. ಶ್ರೀ ಬಿ ಟಿ. ರೈಗಳು ಧನ್ಯ ವಾದಗಳನ್ನಿತ್ತರು. ರಾತ್ರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ನಾಟಕ ಸಭಾ, ಆವರಿಂದ ಯಕ್ಷಗಾನ ಕಾಲಕ್ಷೇಪವು ಶ್ರೀ ಕೃಷ್ಣಯ್ಯ ಪ್ರಭುಗಳ ಹಾಡುಗಾರಿಕೆಯಿಂದ ಯಶಸ್ವಿಯಾ ಗಿ ಜರಗಿತು.

ನಿಂಜೂರು— ಶ್ರೀ ವಿವೇಕಾನಂದ ಸೇವಾಸಂಘದ ಆಶ್ರಯದಲ್ಲಿ ಸರಾಜ ವಿಕಾ ಸ ಯೋಜನೆಯವರಿಂದ ತೆರೆದ 'ಯುವಕ ಸಂಘ'ದ ಉದ್ಘಾಟನೆಯನ್ನು ಜಿಲ್ಲಾ ಸಮಾ ಜ ವಿಕಾಸ ಯೋಜನೆ ಅಧಿಕಾರಿ ಶ್ರೀ ಎಚ್. ನರಸಿಂಹನವರು ನೆರವೇರಿಸಿದರು ಈ ಸಂದ ರ್ಭದಲ್ಲಿ ಶ್ರೀ ವಿವೇಕಾನಂದ ಸೇವಾಸಂಘದ ಭವನದ ಶಂಕುಸ್ಥಾಪನೆಯೂ ನೆರವೇರಿತು.

ಕುಂದಾಪುರ— ಕುಂದಾಪುರ ಮತ ದಾರ ಕ್ಷೇತ್ರದ 1955ರ ಮತದಾರಪಟ್ಟಿಯು ತಾ. 30—8—55ರಲ್ಲಿ ಆಯ್ಕೆಯ ಪ್ರಕಟಿಸ ಲಾಗಿದೆಯೆಂದು ಸಂಬಂಧ ಪಟ್ಟವರು ತಿಳಿಸು ತ್ತಾರೆ.

ಕುಂದಾಪುರದಲ್ಲಿ ಜಿಲ್ಲಾ ವಿದ್ಯಾ ಪರಿಷತ್ತು— ಕಳೆದ ತಾ. 28ರಲ್ಲಿ ಕುಂ ದಾಪುರ ಬೋರ್ಡು ಹೈಸ್ಕೂಲು ಪರಾರದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎನ್ ಎಸ್. ಪರಮೇಶ್ವರಯ್ಯ ನವರ ಅಧ್ಯಕ್ಷತೆಯಲ್ಲಿ ಜರ ಗಿ, ಗ. ಕ. ಜಿಲ್ಲಾ ಪರಿಷತ್ತನ್ನು ಕುಂದಾಪು ರದಲ್ಲಿ ತಾ. 28-10-55ರಲ್ಲಿ ಜರಗಿಸುವು ದೆಂದು ನಿರ್ಣಯಿಸಲಾಯಿತು ಆ ಬಗ್ಗೆ 31 ಮಂದಿ ಸದಸ್ಯರುಳ್ಳ ಸ್ವಾಗತ ಕಮಿಟಿ ರಚಿಸ ಲಾಯಿತು. ಶ್ರೀ ವೈ ಮಂಜಯ್ಯ ಶೆಟ್ಟಿ, ಎಮ್. ಎಲ್ ಎ. ಅಧ್ಯಕ್ಷರಾಗಿಯೂ ಶ್ರೀ ಗಳಾದ ಎಲ್ ಎಸ್ ಕೊಳ್ಳಿ ಬೈಲ, ಎಮ್. ಎಲ್ ಎ, ಮತ್ತು ಎನ್ ಎಸ್. ಪರಮೇಶ್ವರಯ್ಯ, ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಎಸ್. ಉಡಾಳ್ ಮತ್ತು ಎಮ್. ಎಮ್. ಹೆಗ್ಡೆ, ಪ್ರಧಾನಕಾರ್ಯದ ರ್ಶಿಗಳಾಗಿಯೂ ಶ್ರೀ ಎಂ. ಕೆ. ಪಿಟ್ಟಪ್ಪ ಮತ್ತು ಕೆ ಜನಾರ್ಧನ ಹೆಬ್ಬಾರರು ಸಹಾಯ ಕ ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಬಿ. ಸದಾಶಿವ ರಾಯರು ಕೋಶಾಧಿಕಾರಿಗ ಳಾಗಿಯೂ ಆರಿಸಲ್ಪಟ್ಟರು.

ಕೊಲ್ಲೂರು— ಕೊಲ್ಲೂರು ಗ್ರಾಮ ಸೇವಾ ಸಂಘದ ರೇಡಿಯೋ ಉದ್ಘಾಟನೆಯು ಕಳೆದ ತಾ. 27ರಲ್ಲಿ ಕೊಲ್ಲೂರು ದೇವಸ್ಥಾನ ದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಬಿ. ನಾ ರಾಯಣ ಸೆಟ್ಟಿರ ನೇತೃತ್ವದಲ್ಲಿ ಜರಗಿತು.

ಗಂಗೊಳ್ಳಿ— ಬೈಂದೂರು ಬ್ಲಾಕಿನ ಸಾಧಾರಣ 61 ಗ್ರಾಮಗಳ 81 ಮಂದಿ ಗ್ರಾ ಮ ಸಾಯಕರ ತರಬೇತಿ ಶಿಬಿರವನ್ನು ಗಂ ಗೊಳ್ಳಿಯಲ್ಲಿ ಕಳೆದ ತಾ. 27ರಲ್ಲಿ ಜಿಲ್ಲಾ ಕ ಲೆಕ್ಟರ್ ಶ್ರೀ ಎಮ್. ಜಿ ರಾಜಾರಾಮ್, ಆವರು ಉದ್ಘಾಟಿಸಿದರು. ಶಿಬಿರವು ಮೂರು ದಿವಸಗಳ ತನಕ ನಡೆದು ಕೊನೆಗೊಂಡಿತು. ಗ್ರಾಮನಾಯಕರು ರಸ್ತೆ ರಿಪೇರಿ, ಬಾರ್ಮ ಕೇಣಿ ಯನ್ನು ಚೊಕ್ಕಟಗೊಳಿಸುವುದು ಇತ್ಯಾದಿ ಶ್ರ ಮದಾನ ಕೆಲಸವನ್ನು ಮಾಡಿದರು.

ಜಿಲ್ಲಾ ಪರಿಷಾಲನಾಧಿಕಾರಿ ಶ್ರೀ ಸುಕು ಮಾರನ್ ನಾಯರ್, ಮಂಗಳೂರು ಸಹಕಾ ರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಶೆಟ್ಟಿ, ಆಯಿಲಭಾರತ ಬಾಧಿ ಬೋ ರ್ಡಿನ ಪ್ರತಿನಿಧಿ ಶ್ರೀ ಆರ್. ಎಮ್. ಜೋ ಶಿ, ಮಂಗಳೂರ್ ಕೆನರಾ ಹೈಸ್ಕೂಲು ಅ ಧ್ಯಾಪಕ ಶ್ರೀ ಎಸ್. ಮುಂಕುದ ರಾವ್, ಬೈಂದೂರು ಬ್ಲಾಕ್ ಡೆವಲಪ್ ಮೆಂಟ್ ಆ ಫೀಸರ್ ಶ್ರೀ ಎಚ್. ಗಣಪತಿ ಕೆದ್ಲಾಯ, ಕುಂದಾಪುರ ಡಿಪ್ಯುಟಿ ತಹಶಿಲ್ದಾರ್ ಶ್ರೀ ಕೆ ಸಂಜೀವ ಪ್ರಭು, ಗಂಗೊಳ್ಳಿ ಎಸ್. ವಿ. ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಜಿ. ಆರ್. ಶೆಣೈ, ಶ್ರೀಗಳಾದ ಎನ್. ರಾಮರಾವ್, ಆರ್. ಎಮ್. ಶಿರಿ, ಕೆ. ಶೀನಪ್ಪ, ಕೆ. ಸು ಬ್ಬರಾವ್ ಮೊದಲಾದವರು ವಿವಿಧ ವಿಷಯ ಗಳಲ್ಲಿ ಉಪನ್ಯಾಸಗಳನ್ನಿತ್ತರು.

ಕಿದಿಯೂರು— ನಿಡಂಬೂರು ಗ್ರಾಮ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಕಳೆದ ತಾ 19ರಲ್ಲಿ ಗ್ರಾಮಸ್ಥರ ಸಭೆಯು ಶ್ರೀ ಟಿ. ಎ. ಪೈ ಎಮ್. ಎಲ್. ಎ; ಆವರ ಅಧ್ಯಕ್ಷತೆ ಯಲ್ಲಿ ಜರಗಿತು. ಕಮಿತಿ ಅಧ್ಯಕ್ಷ ಶ್ರೀ ಶಂ ಕರ ರಾಯರು ಸ್ವಾಗತಭಾಷಣಮಾಡಿ ಕೆಲ ವೊಂದು ರಸ್ತೆಗಳ ರಚನೆಕುರಿತು ಪ್ರಸ್ತಾವಿಸಿ ದರು. ಕಾರ್ಯದರ್ಶಿ ಶ್ರೀ ವೆಂಕಟ್ರಾಯರು ವರದಿವಾಚನಮಾಡಿದರು. ಮಟ್ಟಿಗೆ ಪಾಡಿ-ಪ ಡುಗರೆ, ಕಿದಿಯೂರು-ಪಡುಗರೆ, ಕನ್ನರಪಾಡಿ -ಪಡುಗರೆ ರಸ್ತೆ ನಿರ್ಮಾಣಕಾರ್ಯವನ್ನು ಸ್ಥಾನಿಕ ಯೋಜನೆ ಸಹಾಯದಿಂದ ಕೈಕೊ ಳ್ಳಲು ನಿರ್ಧಾರವಾಯಿತು.

ಬಂಟ್ವಾಳ— ಸ್ಥಳೀಯ ಸರ್ ಮೆಜಿ ಸ್ಟ್ರೇಟ್ ಶ್ರೀ ಕೆ.ಸ್ಟಿಲಿನೊ ಆವರ ಅಧ್ಯಕ್ಷತೆ ಯಲ್ಲಿ "ಜನತಾ ಕ್ಲಬ್" ಎಂಬ ವಿಚಾರ ಕೇಂದ್ರವು ತೆರೆಯಲ್ಪಟ್ಟಿತು ಡಾ| ಎಮ್. ಎಸ್. ಹೆಗ್ಡೆ, ಬಿ ಕೇಶವ ಬಾಳಿಗ ಮೊದ ಲಾದವರು ಕಾರ್ಯೋಚಿತ ಮಾತುಗಳನ್ನಾಡಿದ ರು ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಬಿ. ಜನಾ ರ್ಧನ ಶೆಟ್ಟಿರು ಧನ್ಯವಾದವಿತ್ತರು.

ಬ್ರಹ್ಮರಕೂಟ್ಲು— ಬೋರ್ಡು ಎಲಿ ಮೆಂಟರಿ ಶಾಲಾ ಹೊಸ ಕಟ್ಟಡದ ಶಂಕು ಸ್ಥಾಪನೆಯು ಡಾ| ಕೆ. ನಾಗಪ್ಪ ಆಳ್ವರಿಂದ ನೆರವೇರಿಸಲ್ಪಟ್ಟಿತು. ಶಾಲಾ ಅಧ್ಯಾಪಕ ಶ್ರೀ ಎಕ್ಸ್ ಡಿ'ಸೋಜರು ವಂದನೆಗಳನ್ನರ್ಪಿಸಿದರು

ಅಜೆಕಾರು—ಸಮಾಜ ವಿಕಾಸ ಯೋ ಜನೆಯ ಆಶ್ರಯದಲ್ಲಿ ತಾ. 1ರಲ್ಲು ವಯ ಸ್ಕರ ಸಂಜೆ ಶಾಲೆಯೊಂದನ್ನು ಡಿ. ಬೊ. ಸ ದಸ್ಯ ಡಾ| ಯು. ಕೃಷ್ಣಸವರು ಉದ್ಘಾಟಿಸಿ ದರು. ಶಾಲೆಯ ಯಶಸ್ವಿಗಾಗಿ ಶ್ರೀಗಳಾದ ವೈ. ದೇವರಾಜ ಹೆಗ್ಡೆ ಅಧ್ಯಕ್ಷರಾಗಿಯೂ, ಬಿ. ಸುಂದರ ಶೆಟ್ಟಿರು ಕಾರ್ಯದರ್ಶಿಯರಾ ಗಿಯೂ ಇರುವ ಒಂಭತ್ತು ಮಂದಿ ಸದಸ್ಯ ರುಳ್ಳ ಕಮಿಟಿ ರಚಿಸಲಾಯಿತು. ಈ ಕೇಂದ್ರ ದ ಅಧ್ಯಾಪಕ ಸಂಘದ ಸಭೆಯು ತಾ. 2ರಲ್ಲಿ ಸೇರಿ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಯವರ ನಿಧನದ ಬಗ್ಗೆ ಸಂತಾಪ ಸೂಚಿಸಲಾ ಯಿತು.

ಕಳಂಜ ಬಾಳಿಲ— ಜಪಾನಿನಲ್ಲಿ ಎ ರಡು ವರ್ಷ ಕಾಲವಿದ್ದು ಗಾಜು ವಿಜ್ಞಾನದ ಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಹಿಂತಿರು

ಗಿದ ಶ್ರೀ ಬಿ ಬಿ. ಸೆಟ್ಟರು ತಾ. 2ರಲ್ಲಿ ಜ ಪಾನಿನ ಕೈಗಾರಿಕೆ ಮತ್ತು ಕೃಷಿಯ ಕುರಿತು ಸ್ಥಳೀಯ ಗ್ರಾಮಸೇವಾ ಸಂಘದ ಆಶ್ರಯದ ಲ್ಲಿ ಸೇರಿದ ಸಭೆಯಲ್ಲಿ ಭಾಷಣವಿತ್ತರು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂ ಗಳೂರು—ಕಳೆದ ಆಗಸ್ಟ್ 7ನೆಯ ತಾರೀ ಕಿನಲ್ಲಿ ಸರ್ವಾನುಮತದಿಂದ ಅಂಗೀಕೃತ ವಾದ ನಿರ್ಣಯ:

ವಿಶೇಷ ರೀತಿಯ ಪರಿಶೀಲನೆ ನಡೆಸಿದ ಮೇಲೆ ಇದೀ ಬಳ್ಳಾರಿ ಜಿಲ್ಲೆಯು ಕನ್ನಡ ನಾಡಿನ ಒಂದು ಭಾಗವೆಂದು ನ್ಯಾಯಮೂರ್ತಿ ಸಿಶ್ರಾ ಮೊದಲಾದ ಮಹಾನೀಯರು ಮಿಚ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಇದೀ ಬಳ್ಳಾರಿ ಜಿಲ್ಲೆಯನ್ನು ಮೈಸೂರು ಸಂಸ್ಥಾನ ಕ್ಕೆ ಸೇರಿಸಬೇಕಾಗಿದ್ದರೂ ಕೂಡ ಕೇವಲ 7 ತಾಲೂಕುಗಳನ್ನು ಸೇರಿಸಿ ಕನ್ನಡಿಗರಿಗೆ ಕುಂಬಾ ಅನ್ಯಾಯವನ್ನು ಉಂಟು ಮಾಡಲಾ ಗಿದೆ. ಈಗ ಮತ್ತೆ ಇದೀ ಬಳ್ಳಾರಿ ಜಿಲ್ಲೆಯ ನ್ನು ಹೈದರಾಬಾದಿನ ಗುಲ್ಬರ್ಗ, ಬೀದರ್ ಜಿಲ್ಲೆಗಳನ್ನೂ ಆಂಧ್ರಕ್ಕೆ ಬಿಟ್ಟು ಕೊಡಬೇಕೆಂ ಬ ಅಭಿಪ್ರಾಯವನ್ನು ಪ್ರಾಂತ ಪುನರ್ವಿಂಗಡ ಣಾ ಸಮಿತಿಯವರುಯೊಂದಿದ್ದಾರೆಂಬ ಊಹಾ ಪೋಹವು ಹೊರಟಿರು ವುದರಿಂದ ಬಳ್ಳಾರಿ ಜ ಸರಿಗೆ ಅಲ್ಲದೆ ಇದೀ ಕನ್ನಡ ನಾಡಿಗೆ ಕಳಂಕ ಉಂಟಾಗಿದೆ ಒಂದುವೇಳೆ ಪ್ರಾಂತಪುನ ರ್ವಿಂಗಡಣಾ ಸಮಿತಿಯವರು ಈ ರೀತಿ ತೀ ರ್ಮಾನ ಮಾಡಿದರೆ ಸಂಸ್ಕೃತಿಯ ದೃಷ್ಟಿಯಿಂ ದ ಕನ್ನಡಿಗರಲ್ಲಿ ಅನಿವಾರ್ಯ ಕ್ರಾಂತಿಟುನ್ನೆ ಬ್ಬಿಸಿದಂತಾಗುತ್ತದೆಂದು, ಎಚ್ಚರಿಕೆಯ ರೂ ಪವಾಗಿ ಈ ಸಭೆಯು ಸೂಚಿಸಬಯಸುತ್ತದೆ. ಆ ಸಮಿತಿಯು ಈ ಮೇಲಿನ ಅಭಿಪ್ರಾಯವ ನ್ನು ತಳೆಯಲ್ಲದೆಂದು ಬಾವಿಸುತ್ತದೆ. ಒಂದು ವೇಳೆ ಇಂಥ ಅಭಿಪ್ರಾಯ ಮಾಡಿದ್ದಲ್ಲಿ ಅದ ನ್ನು ಕೂಡಲೇ ಬಿಟ್ಟುಬಿಡಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಪಡಿಸುತ್ತದೆ.

ಮಂಗ್ಳೂರು ದಿ. ಮುನ್ಸ೿ಫ್ ಕೋರ್ಟಿನಲ್ಲಿ

S C No. 321/1955.

ಕೆ. ರಂಕ್ರ ನಾರಾಯಣ ಭಟ್ಟ — ವಾದಿ

ಮತ್ತು

ಕುಂಞಂಣ ಶೆಟ್ಟಿ — ಪ್ರತಿವಾದಿ.

ಪ್ರತಿವಾದಿಗೆ—

ಮಂಗ್ಳೂರು ತಾಲ್ಲುಕ್ ಕೈರಂಗಳ ಗ್ರಾಮ ದಲ್ಲಿರುವ ಕೋರಿಕಾರು ತ್ಯಾಂಪಣ್ಣ ಶೆಟ್ಟಿ ಮಗ ಕುಂಞಂಣ ಶೆಟ್ಟಿಗೆ—

ವಾದಿಗೆ ಪ್ರತಿಯಿಂದ ತಾ. 19-7 1951 ರಲ್ಲು ಬರಕೊಟ್ಟ ಪ್ರೊನೋಟಿನ ಬಾಬ್ತು ಬ ರಬೇಕಾದ ಅ್ಯಾಬತಿನ ಕುರಿತು ನಾಕ್ಲುಮಾಡಿ ದ ದಾವೆಯು ತಾ. 15—9—1955 ಅಪ ರಾಹ್ನ ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ. ಸದ್ರಿ ದಿನ ಪ್ರತಿವಾ ದಿಯು ಸ್ವತಹಾ ಅ ಪೇಕ್ಷಿಲದ ಮುಖಾಂತ್ರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಯಕ್ಷಪಾ ರ್ಟಿ ನೆಲೆಯಲ್ಲಿ ಪ್ರತಿವಾದಿ ಮೇಲೆ ದಿಕ್ಕಿ ಆಗು ವುದು ಎಂತ ತಿಳಿಯತಕ್ಕದ್ದು.

(ಕೋರ್ಟು ಸುಕುಂ ಪ್ರಕಾರ)

ಕೆ. ವ್ಯಾಸರಾವ್.

ವಾದಿಕಡೆ ಯಜ್ಞಕೇಟು.

ಮಂಗ್ಳೂರು ತಾ. 5—9—55

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಪುಸ್ತಾಪಿಸಿ ವಿದ್ಯಾಂಗದ ಪೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ಡಿ. ಕೆ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರು 'ನವಯುಗ' ಸಾಪತ್ರಿಕೆಯನ್ನು ತರಿಸಿಕೊಳ್ಳ ಬಸು ದೆಂದು ಮಂಜೂರು ಮಾಡಿರುತ್ತಾರೆ

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತ ವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸ ಬೇಕಾಗಿ ವಿನಂತಿ

ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ,

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ರಾಷ್ಟ್ರೀಯಾಲಯಗಳಿಗೆ ಆಪೇಕ್ಷಿತವಾದದ್ದು.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಉದ್ಘಾಟನೆ— ಕೆನರಾ ಹೈಸ್ಕೂಲಿನ ಉಪಾಧ್ಯಕ್ಷರ, ಅಲ್ಲಿಯ ಎ. ಸಿ. ಸಿ. ಯ ಉದ್ಘಾಟನೆಯು ಕಳೆದ ತಾ. 26ರಲ್ಲಿ ಸದ್ರಿ ಶಾಲಾ ಮೇನೇಜರ್ ಶ್ರೀ ಎಮ್. ಆಪ್ಪುರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಕೇಶವರಾಯರು ಉದ್ಘಾಟನಾ ಪ್ರಾಸ್ತಾವಗಳನ್ನಾಡಿದರು. ಶ್ರೀಗಳಾದ ಎಸ್. ಎಸ್. ಕಾಮತ್ ಮತ್ತು ಕೆ. ರಾಮಚಂದ್ರ ಭೈಗಳು ದಳಕ್ಕೆ ಶುಭವನ್ನು ಕೋರಿದರು. ಶ್ರೀ ಬಿ. ಸೋಮಪ್ಪನವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ವಕೀಲ ಗುಮಾಸ್ತ ಸಂಘದ ಮಹಾಸಭೆಯು ಕಳೆದ ತಾ. 28ರಲ್ಲಿ ಶ್ರೀ ಕೆ. ದೇಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಸದಿವಾಜಪನಾದ ಬಳಿಕ ಹೊಸಸದಸ್ಯರ್ಕ್ಕೆ ಶ್ರೀಗಳಾದ ಕೆ. ದೇಜಪ್ಪ, ಅಧ್ಯಕ್ಷ; ಬಿ. ವೆಂಕಟ್ರಾಮ್, ಉಪಾಧ್ಯಕ್ಷ; ಎಸ್. ಕೇಶವ ಕಾಮತ್, ಕಾರ್ಯದರ್ಶಿ, ಕೆ. ವಾಸುದೇವ ರಾವ್ ಜತೆಕಾರ್ಯದರ್ಶಿ ಮತ್ತು ಬಿ. ನಾರಾಯಣ ಭಟ್, ಕೋಶಾಧಿಕಾರಿಗಳಾಗಿರುವ ಕಾರ್ಯನಿರ್ವಾಹಕ ಮಂಡಳಿ ಸದಸ್ಯರ ಚುನಾವಣೆ ನಡೆಯಿತು.

ರೋಟರಿ ಕ್ಲಬ್ಬಿನಲ್ಲಿ ಭಾಷಣ— ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ತಾ. 1ರಂದು ರಾತ್ರಿ "ಶಿಕ್ಷಣರಂಗದಲ್ಲಿ ಕವಲುದಾರಿ" ಎಂಬೀ ವಿಷಯದ ಮೇಲೆ ಶ್ರೀ ಎಮ್. ಎಸ್. ಶಿಕಾಂಬರ ರಾಯರು ಮಾತನಾಡುತ್ತಾ ಮಾನವರಿಗೆ ಬರೆ ವೃತ್ತಿಮಾರ್ಗವನ್ನು ಕಲ್ಪಿಸುವುದೊಂದೆ ವಿದ್ಯೆಯ ಧ್ಯೇಯವಾಗಿರ ಕೂಡದು. ವೃತ್ತಿಯಲ್ಲಿರುವ ಸುಪ್ತ ಚೇತನಗಳನ್ನು ಅರಿತು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ಸಹಕರಿಸುವ ಶಿಕ್ಷಣವೇ ನಿಜವಾದ ವಿದ್ಯೆ. ಭಾರತದ ವೈಶಿಷ್ಟ್ಯತೆಗೆ ಒಪ್ಪುವಂತೆ ಗಾಂಧೀಜೀಯವರು ತನ್ನ ಸ್ವಾನುಭವದಿಂದ ರೂಪಿಸಿದ ಮೂಲಶಿಕ್ಷಣ ಪದ್ಧತಿಯಿಂದ ಈ ಗುರಿಯನ್ನು ಸಾಧಿಸ ಬಹುದು ಎಂದರು. ಶ್ರೀ ಎಚ್. ಆರ್. ಕಾಮತರು ಸಭಾಧ್ಯಕ್ಷತೆ ವಹಿಸಿದ್ದು, ಪಾಶ್ಚಾತ್ಯ ದೇಶದಲ್ಲಿ ಶಿಕ್ಷಣದ ಕುರಿತು ತನ್ನ ಕೆಲವೊಂದು ಅನುಭವಗಳನ್ನು ವಿವರಿಸಿ ಕ್ರಿಯಾತ್ಮಕವಾದ ರೀತಿಯ ಶಿಕ್ಷಣ ಕ್ರಮವಿರಬೇಕೆಂದರು. ಕೆ. ವಿಶ್ವನಾಥ ಕಾಮತರು ಧನ್ಯವಾದಗಳನ್ನಿತ್ತರು.

ಸಾರ್ವಜನಿಕ ಗಣೇಶೋತ್ಸವ ಸಮಿತಿ ಸಭೆಯು— ತಾ. 1ರಲ್ಲಿ ಶ್ರೀ ಕೆ. ತಾರಾನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿ ಈ ವರ್ಷದ ಗಣೇಶೋತ್ಸವವನ್ನು ಇದೇ ತಾ. 20ರಿಂದ 24ರ ತನಕ ಸ್ವತಾಂತ್ರ ನಗರದ ಬಜರಂಗ ವ್ಯಾಯಾಮ ಶಾಲೆಯಲ್ಲಿ ಜರಗಿಸಬೇಕೆಂದು ನಿರ್ಧಾರವಾಯಿತು. ಉತ್ಸವದ ಅಂಗವಾಗಿ ವಿವಿಧ ಸಂದ್ಯಾಟಗಳೂ ಜರುಗುವುದು ಸಂದ್ಯಾಟವೂ ತಾ. 18ನೇ ಆದಿತ್ಯವಾರ ಉರ್ವ ಕೆನರಾ ಹೈಸ್ಕೂಲಿನ ಬಳಿಯ ಮೈದಾನದಲ್ಲಿ ಬೆಳಿಗ್ಗೆ ಜರಗಲಿರುವುದು.

ಸಂಯುಕ್ತ ಯಕ್ಷಗಾನ ಸಭೆಯ ಉದ್ಘಾಟನೆಯು— ತಾ. 3ರಲ್ಲಿ ರಾತ್ರಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಮಂಡಳಿಯ ಆಶ್ರಯದಲ್ಲಿ ಶ್ರೀ ಸೈ. ಉಮೇಶ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ. ಗಣಪತಿ ಹೊಳ್ಳ ಮತ್ತು ಕೃಷ್ಣ ತಂತ್ರಿಗಳು ಅನುಕ್ರಮವಾಗಿ ಕಾರ್ಯದರ್ಶಿ ಮತ್ತು ಸಹಾಯಕ ಕಾರ್ಯದರ್ಶಿಗಳಾಗಿ ಆಯಲ್ಪಟ್ಟರು.

ಗವರ್ನ್‌ಮೆಂಟ್ ಕಾಲೇಜಿನಲ್ಲಿ— ಅಲ್ಲಿಯ ಕಾಮರ್ಸ್ ಎಸೋಸಿಯೇಶನ ಉದ್ಘಾಟನೆಯನ್ನು ತಾ. 1ರಲ್ಲಿ ಮುನಿಸಿಪಲ್ ಚೇರ್‌ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ನೆರವೇರಿಸಿದರು. ಶ್ರೀ ಡಿ. ರಾಮಾಚಾರ್ಯ, ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಬಿ. ಎಸ್. ಗಂಗೆಪ್ಪಯವರು ಧನ್ಯವಾದಗಳನ್ನಿತ್ತರು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನಿಧನದ ಬಗ್ಗೆ ದಿಲ್ಲಿಯ ಸಂತಾಪಸೂಚಕ ಸಭೆಯು— ಮಂಗಳೂರಲ್ಲಿ ಕೆನರಾ ಹೈಸ್ಕೂಲ್ ಮತ್ತು ಉರ್ವ ಶಾಲೆ, ಕೆನರಾ ಗರ್ಲ್ಸ್ ಹೈಸ್ಕೂಲು, ಬೆಸೆಂಟ್ ಶಾಲೆಗಳ ಶಾರದಾ ಮತ್ತು ಶ್ರೀನಿವಾಸ ಶಾರದಾದೇವಿಯಲ್ಲಿ ಪ್ರಾರ್ಥನೆಗಳ ಸಹಿತವಾಗಿ ಸಂತಾಪಸೂಚಕ ಸಭೆಗಳು ಜರುಗಿದುವು. ಅಂತೆಯೇ ಮಂಗಳೂರು ಕ್ರೈಸ್ತ ಬ್ರಾಹ್ಮಣ ಸಂಘದಲ್ಲಿ ಶ್ರೀ ಎಸ್. ಎಸ್. ಕೇಶವ ಅಧ್ಯಕ್ಷತೆಯಲ್ಲಿ, ಉಡುಪಿ ಸರ್ವಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಲ್ಲಿ ಶ್ರೀ ಸಾಧಕ ಕೈಗಳ ಅಧ್ಯಕ್ಷತೆಯಲ್ಲಿ, ಬೆಳ್ತಂಗಡಿಯಲ್ಲಿ ಶ್ರೀ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ, ಸುಳ್ಯದಲ್ಲಿ ಶ್ರೀ ಕೆ. ಪುಸ್ ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ, ಪಿಟ್ಟಿದಲ್ಲಿಯ ಹೈಸ್ಕೂಲಿನಲ್ಲಿ ಶ್ರೀ ಕೆ. ವೆಂಕಪ್ಪಯ್ಯನವರ ಅಧ್ಯಕ್ಷತೆಯಲ್ಲಿ, ಶಿರ್ವಾಡಿಯಲ್ಲಿ ಶ್ರೀ ಎಸ್. ಧರ್ಮ ಸಾಮ್ರಾಜ್ಯರ ಅಧ್ಯಕ್ಷತೆಯಲ್ಲಿ, ಕಾರ್ಕಳದಲ್ಲಿ ಎಡ್ವರ್ಡ್ ಕೊರೊನೇಶನ್ ಕ್ಲಬ್ಬಿನಲ್ಲಿ ಮತ್ತು ಜೈಹಿಂದ್ ಟಾಕೀಜದಲ್ಲಿ ಶ್ರೀ ಆರ್. ಹರಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ, ಮಿತ್ತಬಾಗಿಲು ಮತ್ತು ಕಡಿರುದ್ಯಾವರದಲ್ಲಿ ಶ್ರೀ ಕೆ. ವೆಂಕಟ ಸುಬ್ರಾಯರ ಅಧ್ಯಕ್ಷತೆಯಲ್ಲಿ, ಸಂತಾಪ ಸೂಚಕ ಸಭೆಗಳು ಜರಗಿದವು.

ಬೊಂಬಾಯಿ ದೇವಾಡಿಗ ಸುಧಾರಕ ಸಂಘದ— ವಾರ್ಷಿಕೋತ್ಸವವು ಕಳೆದ ತಾ. 2ರಲ್ಲಿ ಸ್ಥಳೀಯ ಸರ್ ಕಟಾಸ್ಜಿ, ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಶ್ರೀ ಯು. ಜಿ. ಪುತ್ರಿ, ಅವರ ಅಧ್ಯಕ್ಷತೆಯ ಕೆಳಗೆ ಸಂಭ್ರಮದಿಂದ ಜರಗಿತು. ಪರಿವಾರದ ಸಾಂಸ್ಕೃತಿಕ ಸಂಸ್ಥೆಯ ಸದಸ್ಯರ ಬಾಲ್ಯ ಪ್ರತಿಭೆಗಳ ಪ್ರದರ್ಶನ ಜರಗಿತು. ಅಧ್ಯಕ್ಷ ಭಾಷಣದಲ್ಲಿ ಸಮಾಜದ ಸಂಘಟನೆಯ ಮಹತ್ವ ಮತ್ತು ಸಮಾಜದ ಪ್ರಗತಿಯ ಬಗ್ಗೆ ಸಲಹೆಗಳನ್ನು ಕೊಟ್ಟರು. ಕಾರ್ಯದರ್ಶಿ ಶ್ರೀ ಎಸ್. ಆರ್. ಬಾಕ್ಕೂರರು ಧನ್ಯವಾದಗಳನ್ನರ್ಪಿಸಿದರು. ರಾಷ್ಟ್ರ ಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಜೀವನಾನ—

ಬರೆದವರು: ನಾರಾಯಣ ಯಲಗಿ, ಎಂ. ಎ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಭಗತಸಿಂಗ ಬೀದಿ, ಧಾರವಾಡ. ಬೆಲೆ: ರೂ. ೧—೦—೦

ದೈದರಾಬಾದು ರಾಜ್ಯದಲ್ಲಿ ರಜಾಕಾರರು ಹಾಸಿಗೆ ನಡೆಸುತ್ತಿದ್ದ ದುರ್ದಿನಗಳ ಹಿನ್ನೆಲೆಯಲ್ಲಿ ಈ ಕಾದಂಬರಿಯನ್ನು ಬರೆಯಲಾಗಿದೆ ಅನಂತನೆಂಬ ಉತ್ಸಾಹಶೀಲ ತರುಣನು ಮೋಲೀಸು ಖಾತೆಯ ಮೊದ್ದಹಾಗು ಜವಾಬ್ದಾರಿಯುಳ್ಳ ಹುದ್ದೆಯಲ್ಲಿದ್ದುಕೊಂಡು ಜನತೆಯ ಸೇವೆಯಲ್ಲಿ ತತ್ಪರತೆಯಿಂದ ದುಡಿದು, ಕೊನೆಗೆ ಕಮ್ಯೂನಿಸ್ಟರನ್ನು ಹತ್ತಿಕ್ಕುವಾಗ ಗುಂಡಿಗಾಹುತಿಯಾದ ಬಗೆಯನ್ನು ಇದು ವಿವರಿಸುತ್ತದೆ. ಅನಂತನು ಸಮಾಜ ಸುಧಾರಣೆಯಲ್ಲಿ ಆತ್ಮಾಸಕ್ತಿಯನ್ನು ವಹಿಸುತ್ತಿದ್ದನೆಂದೂ ಎಲ್ಲ ಜಾತಿಗಳಲ್ಲಿ ಸದ್ಭಾವನೆಯನ್ನುಂಟುಮಾಡಲು ಹೆಣಗುತಿದ್ದನೆಂದೂ ತೋರಿಸಲು ಲೇಖಕರು ಪ್ರಯತ್ನ ಪಟ್ಟಿದ್ದಾರೆ. ಅವನ ಸ್ವೈತಿಕ ಶಕ್ತಿಯು ಉತ್ಕೃಷ್ಟವಾಗಿದ್ದಂಬುದನ್ನು ನಿರೂಪಿಸುವಂತೆ ಮಣಿಯಲ್ಲಿದ್ದ ಕೆಲವು ದಿನಗಳ ಬಳಿಕಿನ ವರ್ಣನೆಯಲ್ಲಿ ತೋರಿಸಿದ್ದಾರೆ—ಅವರೆ ಸರೋಜಿನಿಯನ್ನು ಸುಲಭದಲ್ಲಿಯೇ ಪತ್ನಿಯಾಗಿ ಸ್ವೀಕರಿಸಲು ಅವನೊಪ್ಪುವ ರೀತಿಯು ಅವನ ನಿರ್ಭಯ ವ್ಯಕ್ತಿತ್ವಕ್ಕೆ ಅನುಗುಣವಾಗಿದೆಯೆಂಬ-ಎಂಬ ಸಂಶಯಕ್ಕೆ ಎಡೆಕೊಡುತ್ತದೆ. ಕತೆಯ ನಿರೂಪಣೆಯು ಸಾಮಾನ್ಯ ಮಟ್ಟದಲ್ಲದೆ; ಸಾಹಿತ್ಯ ಪೋಷಕವೂ ವಿಶೇಷವಾದ ಆಕರ್ಷಣೆಗಳಿಲ್ಲದೆ, ಯೋಗ್ಯ ಹಿನ್ನೆಲೆಯ ಬೆಂಬಲವಿಲ್ಲದೆ, ಪೇಲೋ ಸಾಗುತ್ತದೆ. ಸನ್ನಿವೇಶ ಚಿತ್ರಣಗಳಲ್ಲಿ ವ್ಯಕ್ತವಾದ ಕೌಶಲ ಸಾಲದು. ಸೆಸರ ಲೇಖಕರೊಬ್ಬರ ಕೃತಿ ಎಂಬುದಿಷ್ಟೇ ಸಮಾಧಾನ: ಅವರ ವೃತ್ತಿಯಾಕ್ಕೆ ಯಾವನ್ನು ಕೋರುವುದೇ ಇಲ್ಲಿ ವಿಮರ್ಶಕನ ಮಾಡಿದ ಕೆಲಸ

— ಕು.

ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	8
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುಪನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
0	ಪುರುಷ ಪಥ	0	4
1	ಸನ್ಯಾಸಿಯ ಸೋಗಿನಲ್ಲಿ	0	12
2	ನಂದಾದೀಪ	1	0
3	ದೇವಭಕ್ತ	1	1
4	ಪ್ರೇಮ ವಿಜಯ	1	4
5	ರಂಗಭೂಮಿ	0	10
6	ಸೇವಾಪಥ	0	8
7	ನಾರೀ ಹೃದಯ	1	8
8	ಭಾರತೀಯ ಕತೆಗಳು	1	12
9	ಪ್ರಕಾಶ	2	4
0	ಮೂರು ಪ್ರಸಂಗಗಳು	1	4
1	ನಗೆ ನೋಟಗಳು	1	4
2	ಅನ್ನದೇವರು ಮತ್ತಿತರ ಕತೆಗಳು	1	0
3	ಭಾರತದಲ್ಲಿ ಜಾತಿಭೇದ	1	0
4	ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವಂತರಗಳು	0	12
5	ಆಕಾಶ ಗಂಗೆ	2	8
6	ಸ್ವಾತಂತ್ರ್ಯವೀರ ಸಾವರಕರರು	1	4
7	ಚೀನದ ಸಂಗ್ರಾಮ	1	8
8	ಕದಂಬ	1	4
9	ಕವಿತಾಕಾಮಿನಿ	2	0
10	ಸ್ವರಾಜ್ಯ ವಿಜಯ	0	8
11	ಸಪ್ತಸಾಗರ	0	12
12	ಜವಿಯಾನ್ದಾರ	1	8
13	ಬಾಳಿನ ಬೆಡಗು	1	1
14	ಯೋಗಾಮುದ್ರೆ	1	0
15	ಚಿಗುರು	0	10
16	ನನ್ನ ಕೆಳೆಗಳು	0	10
17	ಸತ್ಯರೊ ನಗಬಹುದು	0	10
18	ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ಬರೆಯಿರಿ.

ನವಭಾರತ ಬುಕ್ ಡಿಪೋ, ಉಡುಪಿ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮಲ್ಪೆ ಗಲ್ಲಿ, ಹುಬ್ಬಳ್ಳಿ.

ಖಾತ್ರಿ ಮ್ಹಾಲು! ಕಡಿಮೆ ಬೆಲೆ!

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂದಲು, ತೋಫನ್, ಗಡ್ಡ ಮುಂಡಾಸು, ಕಿರೀಟಿ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತಾಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂಡಿಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

DHARAMSHI MULJI,

Dresswala, 132 C, Bhagatwadi, Bhuleshwar Road, BOMBAY—2.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋಂಬಿಸನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂಸಾರದಲ್ಲೆಲ್ಲ ಪ್ರತಿಯೊಂದು ನೃತ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ ....ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

ದಶಮಾಂಶ ಪದ್ಧತಿಯ ನಾಣ್ಯಗಳ ಬಳಕೆ

೧೯೫೬ನೇ ಅಕ್ಟೋಬರದಲ್ಲಿ ಪ್ರಾರಂಭವಾದೀತು

ಶ್ರೀಷ್ಠ ಮುತ್ಸದ್ದಿ ರಾಜಾಜಿಯವರು ೧೯೫೬ನೇ ವರ್ಷದ ಆದಿಯಲ್ಲಿ ಭಾರತದ "ನಡುಗಾಲ' ಸರಕಾರದ ಉದ್ದಿಮೆಮತ್ತು ಪೂರೈಕೆ ಮಂತ್ರಿಯಾಗಿದ್ದಾಗ ದಶಮಾಂಶ ಪದ್ಧತಿಯನ್ನು ನಾಣ್ಯ, ತೂಕ ಮತ್ತು ಅಳತೆಗಳಿಗೆ ಅಳವಡಿಸಿಕೊಳ್ಳುವ ವಿಚಾರವನ್ನು ಮುಂದಿಡುತ್ತಾ ಹೀಗೆ ಬೇಳಿದ್ದರು—

"ಬದಲಾವಣೆ ಗಿರುವ ಅಡಚಣೆಗಳನ್ನು ಉತ್ಪ್ರೇಕ್ಷಿಸುವುದು ಸುಲಭ. ಸಾಂಪ್ರದಾಯಿಕ ವಿಧಾನಗಳ ಪ್ರೀತಿಯನ್ನು ನಾನಾ ರೀತಿಯ ವಾದಗಳಾಗಿ ರೂಪಾಂತರಿಸುವುದೂ ಕಷ್ಟವಲ್ಲ. ಆದರೆ ಆಧುನಿಕ ಜೀವನದಲ್ಲಿ ನಿರ್ದಿಷ್ಟವೂ ಸುಲಭವೂ ಆದ ತೂಕ, ಅಳತೆಯ ನಿಯಮಗಳಿರುವುದು ಅತ್ಯವಶ್ಯವೆಂಬಲ್ಲಿ ಸಂಶಯವಿಲ್ಲ."

ಜನರು ತಯಾರಾಗಲಿ!

ಈಗ ನಾವು ಬದಲಾವಣೆಯನ್ನು ತೆರೆದ ಹೃದಯದಿಂದ ಸ್ವಾಗತಿಸಬೇಕಾದ ದಿನಗಳು ಸಮೀಪಿಸಿವೆ. ಸಂಪತ್ತಿನಲ್ಲಿ ದಶಮಾಂಶ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೊದಲನೆಯ ಹಜ್ಜೆಯಾಗಿ ನಾಣ್ಯಪದ್ಧತಿಯಲ್ಲಿ ಪರಿಷ್ಕಾರವನ್ನು ತರುವ ಯೋಜನೆ ಮನ್ನಣೆ ಪಡೆದಿದೆ, ಅಲ್ಲದೆ, ಹೊಸತೂಕ, ಅಳತೆಗಳನ್ನು ಜಾರಿಗೆ ತರಲು ಬೇಕಾದ ಪೂರ್ವ ಸಿದ್ಧತೆಯನ್ನು ಭಾರತದ ಈಗಿನ ಉದ್ದಿಮೆ ಮಂತ್ರಿ ಶ್ರೀ ನಿತ್ಯಾನಂದ ಕಾನುಂಗೊ ಅಧ್ಯಕ್ಷರಾಗಿರುವ ಸಮಿತಿಯೊಂದು ಪಡೆಸಿದೆ.

ಆದುದರಿಂದ ರಾಜಾಜಿಯವರ ಉಪರೋಕ್ತಮಾತುಗಳ ಉಪಯುಕ್ತತೆಯನ್ನು ಮನಗಂಡು ನಾವು ಪ್ರಶ್ನೆಯನ್ನು ಸಮೀಕ್ಷಿಸುವುದು ಅವಶ್ಯವಾಗಿದೆ ಪರದಿಗಳನ್ನು ನಂಬುವುದಾದರೆ, ೧೯೫೬ನೇ ಇಸವಿಯ ಕೊನೆಯ ಭಾಗದಲ್ಲಿ, ಪ್ರಾಯಶಃ ಗಾಂದೀಜಯಂತಿ(ಅಕ್ಟೋಬರ್ತಿಯಂದು ದಶಮಾಂಶ ಪದ್ಧತಿಯ ನಾಣ್ಯಗಳನ್ನು ರೂಢಿಗೆ ತಂದಾಗುತ್ತದೆ. ಜನರು ಇದನ್ನು ಸ್ವೀಕರಿಸಲು ಈಗಿನಿಂದಲೇ ತಯಾರಿಯುವುದೂ ಸೂಕ್ತ.

ನಾಣ್ಯಗಳ ಅನುಕ್ರಮ

ಹೊಸ ಪದ್ಧತಿಯಲ್ಲಿ ಮುಖ್ಯ ನಾಣ್ಯವನ್ನು ರೂಪಾಯಿ ಎಂದೇ ಕರೆಯಲಾಗುತ್ತದೆ. ಆ ರೂಪಾಯಿಗೆ ಮಾತ್ರ ಈಗಿನಂತೆ ೧೬ ಆಣೆ ಮತ್ತು ೧೯೨ ಪೈಗಳಿರುವ ಬದಲೂ ೧೦೦ "ನಯಾ ಪೈಸಾ"ಗಳಿರುತ್ತವೆ ವ್ಯವಹಾರದಲ್ಲಿ ಅನುಕೂಲತೆಯನ್ನು ಹೆಚ್ಚಿಸುವುದಕ್ಕಾಗಿ ೨, ೫, ೧೦, ೨೫ ಮತ್ತು ೫೦ "ನಯಾ ಪೈಸಾ"ಗಳ ಹೊಸ ನಾಣ್ಯಗಳನ್ನು ಸೃಷ್ಟಿಸಲಾಗುತ್ತದೆ ಇವುಗಳಲ್ಲಿ ಮೊದಲಿನ ಮೂರು ಘಟಕಗಳ ಹೆಸರು ಇನ್ನೂ ನಿರ್ಧಾರವಾಗಿಲ್ಲ; ಕೊನೆಯ ಎರಡು ಘಟಕಗಳನ್ನು ಕ್ರಮವಾಗಿ ಕಾಲು ರೂಪಾಯಿ ಮತ್ತು ಅರ್ಧ ರೂಪಾಯಿ ಎಂದು ಕರೆಯಲಾಗುತ್ತದೆ

ನವ್ಯ ರಾಜ್ಯ ಘಟನೆಯು ಮುನ್ನಿಸಿರುವ ಅಂತರಾಷ್ಟ್ರೀಯ ಸ್ವರೂಪದ ಅಂಕೆಗಳನ್ನು ನಾಣ್ಯಗಳ ಒಂದು ಒದಿಯಲ್ಲಿ ಬೆಲೆಯನ್ನು ಬರೆಯಲು ಉಪಯೋಗಿಸಲಾಗುತ್ತದೆ. ಸ್ಥಳವಿದ್ದರೆ ಅಲ್ಲಿ ಅಶೋಕ ವೃಷಭ ಅಥವಾ ಅಶ್ವದ ಮುದ್ರೆಯೊತ್ತಲಾಗುತ್ತದೆ ನಾಣ್ಯಗಳ ಇನ್ನೊಂದು ಬದಿಯಲ್ಲಿ ಅಶೋಕ ಸ್ತಂಭದ ಸಿಂಹ ಮುದ್ರೆಯನ್ನು ಒತ್ತಿ ಕೆಳಗಡೆ "ಭಾರತ ಸರಕಾರ" ಎಂಬ ಅಕ್ಷರಗಳನ್ನು ಹಿಂದಿಯಲ್ಲಿ ಬರೆಯಲಾಗುತ್ತದೆ

ಮಧ್ಯಂತರ ವ್ಯವಸ್ಥೆ

ಈಗ ಬಳಕೆಯಲ್ಲಿರುವ ನಾಣ್ಯಗಳನ್ನು ಹೊಸ ನಾಣ್ಯಗಳನ್ನು ಜಾರಿಗೆ ತಂದೊಡನೆಯೇ ಹಿಂದುಗೆದುಕೊಳ್ಳಲಿಕ್ಕಿಲ್ಲವೆಂದೂ ಹೈದರಾಬಾದಿನಲ್ಲಿ ಮಾಡಿದಂತೆ ಕೆಲವು ಸಮಯದ ವರೆಗೆ ಎರಡೂ ವಿಧದ ನಾಣ್ಯಗಳನ್ನು ಚಲಾವಣೆಯಲ್ಲಿಟ್ಟು, ನಿಧಾನವಾಗಿ ಈಗ ಬಳಕೆಯಲ್ಲಿರುವ (ಆಗ ಹಳೆಯದೆನಿಸುವ) ನಾಣ್ಯಗಳ ಉಪಯೋಗವನ್ನು ನಿಲ್ಲಿಸಿ ಬಿಡಬಹುದೆಂದೂ ಅಧಿಕೃತ ವಲಯಗಳಲ್ಲಿ ಹೇಳಲಾಗುತ್ತದೆ

ಮಧ್ಯಂತರ ವ್ಯವಸ್ಥೆಯ ಈ ಅವಧಿಯು ನಾಲ್ಕು ವರ್ಷಗಳಿರಬಹುದು—ಆಗ ಕೆಲವು ತೊಡಕುಗಳನ್ನು ನಿತ್ಯ ವ್ಯವಹಾರದಲ್ಲಿ ವಸ್ತುಗಳ ಕ್ರಯ, ಲೆಕ್ಕಪತ್ರ, ಹೊಸ ಮತ್ತು ಹಳೆ ನಾಣ್ಯಗಳ ವಿನಿಮಯ ಬೆಲೆ ಇತ್ಯಾದಿ ಕ್ಷೇತ್ರಗಳಲ್ಲಿ ಇದಿರಿಸಬೇಕಾದೀತು ಆದರೆ ಮುಂದೆ ಎಲ್ಲ ಕಿರುಕುಳಗಳೂ ನಿಂತು, ಜಗತ್ತಿನಲ್ಲಿ ಈಗಾಗಲೇ ದಶಮಾಂಶ ನಾಣ್ಯ ಪದ್ಧತಿಯನ್ನು ಸ್ವೀಕರಿಸಿರುವ ಬೇರೆ ಐವತ್ತಕ್ಕಿಂತಲೂ ಹೆಚ್ಚು ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಲು ನಾವು ಅರ್ಹತ ಪಡೆಯುತ್ತೇವೆ



ಈಶಾನ್ಯ ಗಡಿಪ್ರದೇಶದಲ್ಲಿ ಗೊಂದಲ

ಆಡಳಿತಾತ್ಮಕ ನಿಯಂತ್ರಣದಿಂದ ತಪ್ಪಿಸಿಕೊಳ್ಳುವ ಚಪಲ

ನಮ್ಮ ದೇಶದ ಈಶಾನ್ಯ ಗಡಿಯಲ್ಲಿ ಶಿಲಾಯುಗದ ನಾಗರಿಕತೆಯನ್ನೆ ಅವಲಂಬಿಸಿರುವ "ಅನಾಗರಿಕ" ಕಾಡು ಜನಾಂಗಗಳು ಬೀಡುಬಿಟ್ಟಿದ್ದು ಅಲ್ಲಿ ಆದುನಿಕ ರೀತಿಯ ಶಾಸನ ನಡೆಸುವುದು ಕಷ್ಟಕರವಾಗಿ ಪರಿಣಮಿಸಿದೆ. ಅಸ್ಸಾಮು ರಾಜ್ಯದ ಪೂರ್ವ, ಈಶಾನ್ಯ, ಆಗ್ನೇಯ ಹಾಗು ದಕ್ಷಿಣ ಗಡಿಭಾಗಗಳಲ್ಲಿ ದಟ್ಟವಾದ ಅರಣ್ಯಗಳ ನಡುವೆ ಈ ಬಾರತೀಯರು ಇರುತ್ತಿದ್ದು, ಪ್ರಾಚೀನ ಸಭ್ಯತೆಯನ್ನು ತೊರೆದು ಆಧುನೀಕರಣಕ್ಕೆ ಸೈಗುಟ್ಟಲು ವಿರೋಧವನ್ನವರು ವ್ಯಕ್ತಪಡಿಸುತ್ತಿದ್ದಾರೆ.

ರಾಜಕೀಯ ಜಾಗೃತಿ

ಇವರನ್ನು ನಿಧಾನವಾಗಿ, ಮನವೊಲಿಸುವಿಕೆಯ ಮೂಲಕ ಇಂದಿನ ಸುಧಾರಿತ ವಾತಾವರಣಕ್ಕೆ ಒಗ್ಗಿಸಿಕೊಳ್ಳಲಾಗುತ್ತದೆ. ಒಂದು ಕಾಲದಲ್ಲಿ ನರಬೇಟೆಯಾಡುತ್ತಿದ್ದ ಈಗಲೂ ಈ ಅಭ್ಯಾಸ ಸಂಪೂರ್ಣ ನಶಿಸಿಲ್ಲ—ನಾಗಾಜನರಲ್ಲಿ ಸಾಕಷ್ಟು ಶಿಕ್ಷಣಹೊಂದಿದ ಧುರೀಣರು ಕಂಡುಬರುವಷ್ಟು ಪ್ರಗತಿಯನ್ನು ಈ ಕ್ಷೇತ್ರದಲ್ಲಿ ಸಾಧಿಸಲಾಗಿದೆ.

ಇದರ ಪರಿಣಾಮವಾಗಿ, ನಾಗಾ ಜನರಲ್ಲಿ ರಾಜಕೀಯ ಜಾಗೃತಿ ಮೂಡಿದೆ, ಆದರೆ ಇದು ಭಾರತದ ಪ್ರಭುತ್ವವನ್ನು ಧಿಕ್ಕರಿಸಿ, ಪ್ರತ್ಯೇಕ ರಾಜ್ಯವನ್ನು ಕೇಳುವಷ್ಟು ಮುಂದೆ ಹೋಗಿರುವುದು ಶೋಚನೀಯ ಇಂದ ಬೇಡಿಕೆಯನ್ನು ಬಾರತ ಸರಕಾರ ಮನ್ನಿಸದುದರಿಂದ ನಾಗಾ ಜನರು ಈಶಾನ್ಯ ಗಡಿ ವಲಯದ ಬೇರೆ ಕಾಡು ಜನಾಂಗಳನ್ನು ಭಯಗೊಳಿಸಿ ವಾತಾವರಣ ಗೊಂದಲಮಯವಾಗುವಂತೆ ಮಾಡುತ್ತಿದ್ದಾರೆ.

ಭಯಂಕಾರಕ ವಾತಾವರಣ

ಸರಕಾರದ ಅಧಿಕಾರಿಗಳನ್ನು ಹಿಂಸಿಸುವುದು, ಸರಕಾರಕ್ಕೆ ನಿಷ್ಠೆ ತೋರಿಸಿದ ಪ್ರಾಚೀನ ಸಂಸ್ಕೃತಿಯ ಜನರನ್ನು ನೋಯಿಸಿ, ಅವರ ಮನೆಮಾರುಗಳಿಗೂ ಬೆಂಕಿ ಕೊಡುವುದು—ಇತ್ಯಾದಿ ಘಟನೆಗಳು ಜರಗಿದುದರಿಂದ ಅಲ್ಲಿಗೆ ಭಾರತದ ಸೇನೆಯ ರಜಪೂತ ದಳವನ್ನು ಕಳುಹಿಸಿ, ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಡುವ ಪ್ರಯತ್ನ ನಡೆದಿದೆ. ಟ್ರೈಬಲ್ ಟ್ರಾಂಗ್ ಪ್ರದೇಶದಲ್ಲಿ ದಂಗೆ ಕೋರರನ್ನು ಸೆರೆ ಹಿಡಿಯುವ ತಂತ್ರಗಳನ್ನು ನಡೆಸಲಾಗುತ್ತದೆ.

ದಟ್ಟವಾದ ಅರಣ್ಯಗಳಿರುವ ದೆಸೆಯಿಂದ ದಂಗೆಕೋರರು ಸೈನ್ಯದ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಅಡಗಿರಲು ಸಾಧ್ಯವಾಗುತ್ತದೆ. ಎಚ್ಚರಿಕೆಯನ್ನಿತ್ತು ಶರಣಾಗತರಾಗಲು ಕೇಳಿಕೊಂಡರೂ ದಂಗೆ ಕೋರರು ಶಸ್ತ್ರತ್ಯಾಗಕ್ಕೆ ಸಿದ್ಧರಾಗಿಲ್ಲದಿರುವುದಕ್ಕೆ ಈ ನೈಸರ್ಗಿಕ ಆವರಣದ ಬಲವೇ ಕಾರಣ.

ನೆಹರುಗಳ ಹೇಳಿಕೆ

ಪ್ರಧಾನಿ ನೆಹರುಗಳ ಹೇಳಿಕೆಯಂತೆ, ತಮ್ಮ ವ್ಯವಹಾರ ಮತ್ತು ಜೀವನದಲ್ಲಿ ಹೊರಗಿನವರು ಪ್ರವೇಶಿಸಬಾರದೆಂಬ ಪ್ರಾಚೀನ ಜನಾಂಗದವರ ಮನೋಬಾವನೇಎಲ್ಲ ಗೊಂದಲದ ಮೂಲ. ಶಮ್ಯಷ್ಟಕ್ಕೆ ತಮ್ಮನ್ನು ಇರಗೂಡಬೇಕೆಂದು ಅವರ ಇಚ್ಛೆಯಿದ್ದಂತೆ ಕಾಣುತ್ತದೆ. ಆದರೆ, ಅ ನಾಗರಿಕರನ್ನು ಸುಧಾರಿಸುವ ಇಚ್ಛೆಯಿಂದಲ್ಲಿವಾದರೂ, ರಾಜಕೀಯ ಭದ್ರತೆ ಮತ್ತು ರಾಷ್ಟ್ರದ ಸಂರಕ್ಷಣೆಯ ದೃಷ್ಟಿಯಿಂದ ಈ ಜನರ ಮೇಲೂ ಆಡಳಿತಾತ್ಮಕ ನಿಯಂತ್ರಣಗಳನ್ನು ಹೇರಲೇ ಬೇಕಾಗಿದೆ.

ಭಾರತ ಸರಕಾರಕ್ಕೆ ಪ್ರಾಚೀನ ಜನಾಂಗಗಳ ಸಂಸ್ಕೃತಿಯನ್ನೂ ಸಂಪ್ರದಾಯವನ್ನೂ ನಾಶ ಮಾಡುವ ಉದ್ದೇಶವಿಲ್ಲ—ಆಧುನಿಕ ಆಡಳಿತ ಕ್ರಮವನ್ನು ಮೆಚ್ಚಿಕೊಳ್ಳುವಂತೆ ಆ ಜನರ ಹೃದಯಗೆದ್ದುಕೊಳ್ಳಬೇಕಂದು ಮಾತ್ರ ಅದು ಬಯಸುತ್ತದೆ ಇಲ್ಲಿ ಸಹನೆಗೂ ಕಾಲಕ್ಕೂ ಮಹತ್ವ ಸಲ್ಲುತ್ತದೆ—ಅನೇಕ ವರ್ಷಗಳ ಪ್ರಯತ್ನದ ಫಲವಾಗಿ ಇಲ್ಲಿ ಆಡಳಿತ ಕ್ಷೇತ್ರದ ವ್ಯಾಪ್ತಿ ಹೆಚ್ಚುತ್ತಿದೆ; ಗೊಂದಲಗಳು ನಡೆಯುತ್ತಿದ್ದರೂ ಅವುಗಳನ್ನು ಶೀಘ್ರ ನಿಯಂತ್ರಣಕ್ಕೆ ತರಲಾಗುತ್ತದೆ

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧೆಕೂಡ ಉಂಟಾಗದೆ ತೀವ್ರ ಗುಣಹೊಂದಬಹುದು ಬೆಲೆ. ರೂ 5/- ಸ್ಪೆಶಲ್ ರೂ 8/-

Mrs. P. DEVEE, Ph Ds (N J) (ನಿ ಪಿ ಪಿ. ಪ್ರತ್ಯೇಕ)

CALCUTTA—40 ಸ್ವಾಕಿಸ್ವರು ಶಹಾಕಂಪೆನಿ, ಮಂಗಳೂರು

ಪಡು ಕರಾವಳಿಯ ಅನನಾಸು

ಪೌಷ್ಟಿಕ ದ್ರವ್ಯವುಳ್ಳ ಹಣ್ಣು

ಉಷ್ಣವಲಯದ ಹಣ್ಣುಹಂಪಲುಗಳಲ್ಲಿ ಅನಾನಾಸು ಒಂದಾಗಿದೆ. ಅದರ ಮೂಲವು ದಕ್ಷಿಣ ಅಮೇರಿಕದಲ್ಲಿದ್ದರೂ ನಾಲ್ಕು ಶತಮಾನಗಳ ಹಿಂದೆ ಭಾರತಕ್ಕೆ ಈ ಫಲವು ಬಂದಂದಿನಿಂದ ಈಗ ಪ್ರತಿ ವರ್ಷ ಅದರ ಜನಪ್ರಿಯತೆ ಹೆಚ್ಚುತ್ತಾ ಸಾಗಿದೆ.

ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಭಾರತೀಯರು ತಮ್ಮ ನಿತ್ಯದ ತಿನಿಸು—ಉಣಿಸುಗಳಲ್ಲಿ ಹೆಚ್ಚುಹೆಚ್ಚಾಗಿ ಹಣ್ಣುಹಂಪಲುಗಳನ್ನು ಬಳಸಲು ಮುಂದಾಗಿದ್ದಾರೆ- ಇವರನ್ನು ಸಂತೃಪ್ತಿಗೊಳಿಸಲು ಅನೇಕರು ಅನಾನಾಸಿನ ಕೃಷಿಯನ್ನು ವಿಪುಲ ಪ್ರಮಾಣದಲ್ಲಿ ಕೈಗೊಂಡಿದ್ದಾರೆ. ಆದರೆ ಭಾರತದಲ್ಲಿ ಕೇವಲ ಹತ್ತು ಸಾವಿರ ಎಕ್ರೆ ಸ್ಥಳದಲ್ಲಿ ಮಾತ್ರ ಇದರ ಕೃಷಿಯಾಗುತ್ತದೆ.

ಕೃಷಿ ಮಾಡುವ ಕ್ರಮ

ಸಾಮಾನ್ಯವಾಗಿ ಅನಾನಾಸನ್ನು ಸಹಾಯಕ ಪೈರಾಗಿಯೇ ಬೆಳೆಸಲಾಗುತ್ತದೆ; ಮುಖ್ಯ ಕೃಷಿಯಾಗಿ ಬೆಳೆಸುವುದೂ ವಿರಳವಲ್ಲ. ಇದು ತೆಂಗು, ಮಾವು ಮುಂತಾದವುಗಳಿಗಿಂತಲೂ ಬೇಗನೆ ಫಲ ಕೊಡುವ ಫಸಲಾಗಿದೆ. ತೇವ ಭರಿತ ಹವಾಗುಣವುಳ್ಳ ಉಷ್ಣ ಪ್ರದೇಶದಲ್ಲಿ ಅನಾನಾಸು ಹುಲುಸಾಗಿ ಬೆಳೆಯುತ್ತದೆ. ಚಳಿ ಪ್ರದೇಶದಲ್ಲಿ ಅದು ಚೆನ್ನಾಗಿ ಬೆಳೆಯಲಾರದು.

ಕ್ಯೂ ಎಂಬ ದೊಡ್ಡ ಜಾತಿಯ ಅನನಾಸು ೫-೧೦ ರಾತಲು ತೂಗುತ್ತದೆ. ೧೫ ರಾತಲು ತೂಗುವ ಹಣ್ಣುಗಳೂ ನೋಡ ಸಿಗುತ್ತವೆ. ಇದು ಬಹಳ ಕೋಮಲವಾದ ಜಾತಿ—ಒಂದು ಕಡೆಯಿಂದ ಇನ್ನೊಂದೆಡೆಗೆ ಇದನ್ನು ಕಳುಹಿಸಿ ಕೊಡುವುದು ಸ್ವಲ್ಪ ಕಷ್ಟ.ಆದರೆ ಮೌರೀಶಿಯಸೆಂಬ ಸಣ್ಣ ಜಾತಿಯು ಸ್ವಲ್ಪ ಗಟ್ಟಿಯಾಗಿರುವುದರಿಂದ ದೂರದೂರುಗಳಿಗೆಗೆ ಇದನ್ನೆ ಕಳಿಸಲಾಗುತ್ತದೆ. ಈ ಜಾತಿಯ ಹಣ್ಣು ನಾಲ್ಕು ರಾತಲಿಗಿಂತ ಹೆಚ್ಚು ತೂಗುವುದಿಲ್ಲ.

ಹೆಚ್ಚು ಗೊಬ್ಬರದ ಅವಶ್ಯಕತೆ

ಉತ್ತಮ ಚರಂಡಿ ವ್ಯವಸ್ಥೆಯುಳ್ಳ ಮುರಮಣ್ಣು ಹಾಗು ಮಧ್ಯಮ ತರಗತಿಯ ನೆಲದಲ್ಲಿ ಅನಾನಾಸಿನ ಬೆಳೆ ಮಾಡಬಹುದು. ಅನಾನಾಸಿಗೆ ತುಂಬ ಆಹಾರ ಬೇಕು— ಚೆನ್ನಾಗಿ ಗೊಬ್ಬರ ಹಾಕದಿದ್ದರೆ ಬೆಳೆ ತೃಪ್ತಿಕರವಾಗಲಿಕ್ಕಿಲ್ಲ. ಒಂದು ಎಕ್ರೆ ಸ್ಥಳದಲ್ಲಿ ೩-೪ ಸಾವಿರ ಅನಾನಾಸಿನ ಮೊಳಕೆಗಳನ್ನು ನಡಬಹುದು. ಕನಿಷ್ಠ ೧೦-೧೫ ಗಾಡಿ ಸೆಗಣಿಯನ್ನು ಈ ಗಿಡಕ್ಕೆ ಹಾಕಬೇಕಲ್ಲದೆ ಅಮೋನಿಯಂ ಸಲ್ಫೇಟು, ಮೀನಿನ ಗೊಬ್ಬರ ಇತ್ಯಾದಿಗಳಿಂದ ಪೋಷಿಸಬೇಕು.

ಮೊಳಕೆಗಳ ತುದಿಯಲ್ಲಿ ಕೆಸರುನಿಲ್ಲಲು ಬಿಡಬಾರದು; ನೀರು ಮಡಿ ಅಥವಾ ಹೊಂಡಗಳಲ್ಲಿ ನಿಲ್ಲದೆ ಕೂಡಲೇ ಹರಿದು ಹೊಗುವಂತೆ ತಕ್ಕವ್ಯವಸ್ಥೆ ಮಾಡಬೇಕು. ಫಲಬಿಡಲು ಅನಾನಾಸಿಗೆ ೧೮—೨೪ ತಿಂಗಳ ಅವಧಿ ಬೇಕಾಗುತ್ತದೆ. ಈ ಅವಧಿಯಲ್ಲಿ ಅನಾನಾಸು ಗಿಡಗಳ ಸುತ್ತ ಬೆಳೆದಿರಬಹುದಾದ ಕಳೆಗಳನ್ನು ಕೀಳುತ್ತಾ, ಬೇಸಿಗೆಯಲ್ಲಿ ಮಣ್ಣಿನ ತೇವ ಅರಿಹೋಗದಂತೆ ಗಿಡದ ಬುಡವನ್ನು ಹೊದಿಕೆಯಿಂದ ಮುಚ್ಚುತ್ತಾ ನೀರೆರೆಯುತ್ತಾ ಕಾಪಾಡಿಕೊಳ್ಳುವುದು ಅಪೇಕ್ಷಣೀಯ.

ರುಚಿಕರವಾದ ಫಲ

ಫಲಬಿಡಲು ಪ್ರಾರಂಭಿಸಿದ ಬಳಿಕ ಅನಾನಾಸಿನ ಗಿಡಗಳಲ್ಲಿ ಕಕ್ಷಾಂಕುರಗಳು ಮೊಳೆಯುತ್ತವೆ. ಇವುಗಳಲ್ಲಿ ಒಂದೆರಡನ್ನು ಮಾತ್ರ ತಾಯಿ ಗಿಡದೊಂದಿಗೆ ಬೆಳೆಯಗೊಟ್ಟು, ಉಳಿದವುಗಳನ್ನು ಕತ್ತರಿಸಿ ತೆಗೆದು, ಬೇರೆಡೆ ನೆಡುವುದೊಳಿತು. ಸಾಮಾನ್ಯವಾಗಿ ನಾಲ್ಕು ವರ್ಷಗಳ ತನಕ ಕಕ್ಷಾಂಕುರವೊಂದರಿಂದ ಫಲ ತೆಗೆಯಬಹುದು. ಮುಂದೆ ಅದರ ಫಲಗಳು ಗಾತ್ರದಲ್ಲಿ ಸಣ್ಣದಾಗುತ್ತವೆ ಯಾದುದರಿಂದ ಕೃಷಿಯು ಲಾಭಕರವಾಗುವುದಿಲ್ಲ.

ಕಾಡು ಬೆಕ್ಕು, ಅಳಿಲು, ಇಲಿ, ನಾಯಿ, ಕಾಡು ಹಂದಿ, ಒಂದು ಜಾತಿಯ ತಗಣಿ ಇತ್ಯಾದಿಗಳಿಂದ ಅನಾನಾಸನ್ನು ಕಾಪಾಡಿಕೊಳ್ಳುವುದು ಮಹತ್ವದ ವಿಷಯ. ಅನಾನಾಸನ್ನು ಉಪಬೆಳೆಯಾಗಿ ಬೆಳೆಸುವುದರಿಂದ ಮಣ್ಣಿನ ಸವೆತ ನಿಲ್ಲುವುದಲ್ಲದೆ, ಮಣ್ಣಿನ ಪದರನೆಲ್ಲಿ ಗಾಳಿ ಸಂಚಾರಕ್ಕೆ ಎಡೆ ದೊರಕುತ್ತದೆ. ಅನೇಕ ಬಗೆಯ ತಿಂಡಿಗಳನ್ನೂ ಪಾನೀಯಗಳನ್ನೂ ಅನಾನಾಸಿನಿಂದ ತಯಾರಿಸಬಹುದು. ಮನುಷ್ಯರು ಬಿನಾಡುವ ಹಣ್ಣಿನ ಅಂಗಗಳನ್ನು ಜಾನುವಾರುಗಳಿಗೆ ತಿನ್ನಿಸಿ, ಪುಷ್ಟಿಯಾಗಿಡಬಹುದು. ಅನಾನಾಸಿನ ಎಲೆಯು ಉತ್ತಮ ಜಾತಿಯ ನಾರನ್ನು ಕೊಡುತ್ತದೆ; ಅದರಿಂದ ಉಚ್ಚ ವರ್ಗದ ಬಟ್ಟೆ ತಯಾರಿಸಿ ಉಡಬಹುದು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಪ್ರಾಚೀನ ತಾಮ್ರಲಿಪ್ತಿಯ ಸಂಸ್ಕೃತಿ

ಸಂಶೋಧನೆಯ ಹೊಸ ಬೆಳಕು

ಈಗಿನ ಪಶ್ಚಿಮ ಬಂಗಾಳದಲ್ಲಿರುವ ತಾಮ್ರಲಿಪ್ತಿ ನಿವೇಶನದಲ್ಲಿ ನಡೆಯುತ್ತಿರುವ ಭೂಶೋಧನೆಗಳು ಪೂರ್ವದ ಕರಾವಳಿಯಲ್ಲಿನ ಪ್ರಾಚೀನ ರೇವು ಪಟ್ಟಣವಾದ ತಾಮ್ರಲಿಪ್ತಿಯ ಸಂಸ್ಕೃತಿಯ ಬಗ್ಗೆ ಬೆಳಕನ್ನು ಚೆಲ್ಲುತ್ತವೆ.

ತಾಮ್ರಲಿಪ್ತಿಯ ಹೆಸರು ಪ್ರಾಚೀನ ಹಿಂದೂ.ಬೌದ್ಧ ಹಾಗು ಜೈನಸಾಹಿತ್ಯಗಳಲ್ಲಿ ಸೂಚಿತವಾಗಿದೆ. ವಿದೇಶೀಯ ಸ್ರವಾಸಿಕರು ತಾಮ್ರಲಿಪ್ತಿಯನ್ನು ಧಾರ್ಮಿಕ, ಕಲಾ ಹಾಗು ಜ್ಞಾನನಿವೇಶನೆಂದು ವರ್ಣಿಸಿದ್ದಾರೆ.

ಸಫಲ ಅನುಸಂಧಾನ

ಜನಜನಿತವಾದ ಈ ವಿಖ್ಯಾತ ತಾಮ್ರಲಿಪ್ತಿ ನಿವೇಶನದ ಬಗ್ಗೆ ಪ್ರಾಚೀನವಸ್ತು ಶೋಧನ ಇಲಾಖೆಯ ಪೂರ್ವವಿಭಾಗದ ಅಧಿಕಾರಿಗಳು ಈ ವರ್ಷದ ಮಾರ್ಚ್ ಮಧ್ಯಭಾಗದಿಂದ ಭೂಶೋಧನೆಗಳನ್ನು ನಡೆಸಿದರು. ಪ್ರಾಚೀನ ಪೂರ್ವ ಭಾರತದ ಸಂಸ್ಕೃತಿಯ ಬಗ್ಗೆ ಹೆಚ್ಚಿನ ವಿವರಗಳು ದೊರೆಯಬಹುದೆಂಬುದು ಭೂಶೋಧನೆಯನ್ನು ಆರಂಭಿಸಿದ ತರುವಾಯ ಶೀಘ್ರವಾಗಿಯೇ ಅನುಭವಕ್ಕೆ ಬಂದಿತು.

ಎರಡು ತಿಂಗಳ ಕಾಲದ ಭೂಶೋಧನೆಗಳ ಫಲವಾಗಿ ಪೂರ್ತಿಯಾಗಿ ಸುಡದಿರುವ ಪ್ರಾಚೀನ ಕಾಲದ ಮಣ್ಣಿನ ಸಾಮಾನುಗಳು, ನವಶಿಲಾಯುಗದ ಶಿಲಾ ಸಲಕರಣೆಗಳು, ಮೌರ್ಯ, ಸುಂಗ, ಕುಶಾನ ಮತ್ತು ಗುಪ್ತರ ಕಾಲದ ಮಣ್ಣಿನ ಬೊಂಬೆಗಳು, ತಾಮ್ರದ ನಾಣ್ಯಗಳು, ಮಣಿಗಳು, ಪಿಂಗಾಣಿ ಸಾಮಾನುಗಳು ಇತ್ಯಾದಿ ಸಿಕ್ಕಿರುತ್ತವೆ.

ರೋಮಿನೊಡನೆ ಸಂಪರ್ಕ

ಕ್ರಿಸ್ತ ಪೂರ್ವ ೩—೨ನೇ ಶತಮಾನದ (ಮೌರ್ಯ ಹಾಗು ಸುಂಗರ ಕಾಲದ) ಸುಂದರವಾದ ಮಣ್ಣಿನ ಪ್ರತಿಮೆಗಳು ದೊರೆತಿವೆ, ಈ ಮೃಣ್ಮಯ ಪ್ರತಿಮೆಗಳು ಇಷ್ಟರ ವರೆಗೆ ಭಾರತದಲ್ಲಿ ದೊರೆತಿರುವ ಪ್ರತಿಮೆಗಳಲ್ಲೆಲ್ಲಾ ವೈಶಿಷ್ಟ್ಯಪೂರ್ಣವಾದವುಗಳಾಗಿವೆ. ಎರಡು ಹಳ್ಳಿಗಳಲ್ಲಿ ದೊರೆತ ತಾಮ್ರದ ನಾಣ್ಯಗಳು ಕೂಡ ಇದೇ ಕಾಲಕ್ಕೆ ಸಂಬಂಧಿಸಿದಂತೆ ತೋರುತ್ತವೆ.

ರೋಮನ್ನರಿಗೆ ಸಂಬಂಧಿಸಿದ ಮಣ್ಣಿನ ವಸ್ತುಗಳು ತಾಮ್ರ ಲಿಪ್ತಿ ನಿವೇಶನದಲ್ಲಿ ದೊರೆತಿವೆ. ಇದರಿಂದ ಬಹುಶಃ ಕ್ರಿಸ್ತಶಕ ೧—೨ನೇ ಶತಮಾನಕ್ಕೆ ಸಂಬಂಧಿಸಿದ ಮೂರನೆಯ ಅವಧಿಯಲ್ಲಿ ಭಾರತವು ಭೂಮಧ್ಯ ಸಮುದ್ರದ ದೇಶಗಳೊಂದಿಗೆ ಈ ರೇವು ಪಟ್ಟಣದ (ತಾಮ್ರಲಿಪ್ತಿ) ಮೂಲಕ ವಾಣಿಜ್ಯ ಸಂಪರ್ಕ ಪಡೆದಿತ್ತೆಂದು ವ್ಯಕ್ತವಾಗುತ್ತದೆ.

ಕ್ರಿಸ್ತಶಕಾರಂಭದಲ್ಲಿ

ಈಗಿನ ತಾಮ್ಲುಕಿನ ದಕ್ಷಿಣ ಭಾಗದಲ್ಲಿ ತೋಡಿರುವ ಎರಡು ಹಳ್ಳಗಳಲ್ಲಿ ಕ್ರೈಸ್ತ ಶಕೆಯ ಆರಂಭದಲ್ಲಿ ಜನ ಜೀವನ ಹೇಗಿತ್ತೆಂಬುದನ್ನು ಹೊರಪಡಿಸುವ ವಿಷಯಗಳು ವ್ಯಕ್ತಪಟ್ಟಿವೆ. ತಾಮ್ರಲಿಪ್ತಿನ ಗರದ ದಕ್ಷಿಣಭಾಗದಲ್ಲಿನ ಈ ಸೂಚನ ಉಪನಗರಗಳು ಕ್ರೈಸ್ತ ಶಕೆಯ ಆರಂಭದಲ್ಲಿ ಸ್ಥಾಪಿತವಾಗಿರಬಹುದೆಂದು ಸಂಶೋಧನೆಗಳು ತಿಳಿಸುತ್ತವೆ. ಈ ಹಳ್ಳಗಳಲ್ಲಿ ಕಂಡುಬಂದಿರುವ ಮೆಟ್ಟಲುಗಳು ಳ್ಳ ಸರಸ್ಸು,ಭಾವಿ ಮೊದಲಾದುವು ಈ ಕಾಲಕ್ಕೆ ಸಂಬಂಧಪಟ್ಟವುಗಳೇ ನಿಜ

ನಾಲ್ಕನೆಯ ಅವಧಿಯ ಬಗ್ಗೆ ಸಾಕಷ್ಟು ಪ್ರಮಾಣಗಳು ದೊರತಿಲ್ಲ. ದೊರೆಕಿರುವ ಕ್ರಿಸ್ತಶಕ ಮೂರು ಮತ್ತು ನಾಲ್ಕನೇ ಶತಮಾನದ ಸುಂದರವಾದ ಮಣ್ಣಿನ ಪ್ರತಿಮೆಗಳು ಕುಶಾನರ ಹಾಗು ಗುಪ್ತರ ಪ್ರಭಾವವನ್ನು ಪಡೆದಿವೆ.

ಕೊನೆಯ ಅವಶೇಷ

ಗುಪ್ತರ ಕಾಲದ ಬಳಿಕದ ಇತಿಹಾಸ ಏನೆಂದು ಕೇಳುವುದು ಸ್ವಲ್ಪ ಕಷ್ಟ—ಈ ಅವಧಿಯಲ್ಲಿ ತಾಮ್ರ ಲಿಪ್ತಿಯು ಹಿಂದಿನ ಪ್ರಾಮುಖ್ಯತೆಯನ್ನು ಕಳೆದು ಕೊಂಡಂತೆ ಕಾಣಿಸುತ್ತವೆ. ಸ್ಥಳೀಯ ಜನರು ಕೆರೆಗಳನ್ನು ತೋಡಿದಾಗ ಅಲ್ಲಿ ಇಲ್ಲಿ ಕಾಣಿಸಿದ ಪಾಲ ಹಾಗು ಸೇನ್ ಕಾಲದ ಶಿಲಾ ಪ್ರತಿಮೆಗಳು ಈ ಅಂಧಕಾರ ಕಾಲದ ಬಗ್ಗೆ ಸ್ವಲ್ಪ ಮಟ್ಟಿನ ಬೆಳಕನ್ನು ಚೆಲ್ಲುತ್ತವೆ.

ಕೊನೆಯ ಮಜಲಿನ (ಕ್ರಿಸ್ತಶಕ ೧೮-೧೯ನೇ ಶತಮಾನ) ಅವಶೇಷಗಳಲ್ಲಿ ಸ್ಥಳೀಯ ರಾಜರಿಂದಲೂ ಉಪ್ಪಿನ ಕಾರ್ಖಾನೆಗಳ ಮಾಲಿಕರಿಂದಲೂ ನಿರ್ಮಿಸಲ್ಪಟ್ಟ ಇಟ್ಟಿಗೆಯ ಕಟ್ಟಡಗಳು ಸೇರಿವೆ.

(೨ನೇ ಪುಟದಿಂದ)

ಲ್ಲಿತ್ತೆಂದು ದಾಖಲೆಗಳು ಹೇಳುತ್ತವೆ.

ಯುದ್ಧ ತಜ್ಞರ ಆಶ್ಚರ್ಯ

ಸಶಸ್ತ್ರ ಪಡೆಗಳಿಂದ ೧೯೪೭ರಲ್ಲಿ ಸೈನಿಕರನ್ನು ನಿವೃತ್ತರಾಗಿ ಮಾಡಿದ ವೇಗವನ್ನು ನೆನಸಿ, ಈಗಲೂ ಕೆಲವು ಸಮರವೀರರು ಆಶ್ಚರ್ಯ ಪಡುತ್ತಾರೆ. ೧೯೪೫ರಲ್ಲಿ ಅಮೇರಿಕದ ಸೈನ್ಯ ಪ್ರಮಾಣವು ಶಿಖರಾವಸ್ಥೆಯನ್ನು ಮುಟ್ಟಿದ್ದಿತು—ಆದರಲ್ಲಿ ೧೮೧೩೩೪೪ ಮಂದಿ ಸ್ತ್ರೀ ಪುರುಷರು ಸೇರಿದ್ದರು. ಅನಂತರದ ವರ್ಷಗಳಲ್ಲಿ ಅಮೇರಿಕವು ತನ್ನ ಸಶಸ್ತ್ರ ಪಡೆಗಳನ್ನು ೯೦ ಲಕ್ಷಕ್ಕೂ ಮಿಕ್ಕಿದ ಪ್ರಮಾಣದಲ್ಲಿ ಕಡಿಮೆ ಮಾಡಿತು. ೧೯೪೮ರಲ್ಲಿ ಸೈನ್ಯಾಬಲದಲ್ಲಿ ಕೇವಲ ೩೦ ಲಕ್ಷ ಜನರಿದ್ದರು. ೧೯೫೭ರಲ್ಲಿ ಈ ಸಂಖ್ಯೆ ಇದರ ಅರ್ಧಕ್ಕೆ ಇಳಿಯಿತು!

ದೊಡ್ಡಪ್ರಮಾಣದ ಸೇನೆಗಳನ್ನಿಟ್ಟುಕೊಳ್ಳಲು ತಾವು ಬಯಸುವುದಿಲ್ಲ ಎಂದು ಅಮೇರಿಕನ್ನರ ಸರವಾಗಿ ಹೇಳಲಾಗುತ್ತದೆ. ದ್ವಿತೀಯ ಮಹಾಯುದ್ಧಕ್ಕೆ ಮುಂಚೆ ಅಮೇರಿಕದೊಡನೆ ಇದ್ದಂಥ ಚಿಕ್ಕ ಪ್ರಮಾಣದ ಸೈನ್ಯಗಳನ್ನು ಮಾತ್ರ ಸಾಕೆಂದರೆ ಸಾಕಾಗುವ ದಿನಗಳನ್ನೆ ತಾವು ಪುನಃ ಇದಿರುನೋಡುತ್ತಿರುವುದಾಗಿ ಅಮೇರಿಕನ್ನರ ಅಭಿಪ್ರಾಯ—ಅಗಿನ ಒಳ್ಳೆಯ ಕಾಲದಲ್ಲಿ ಅಮೇರಿಕದಲ್ಲಿ ಇದ್ದ ಸೈನಿಕರ ಪ್ರಮಾಣ ೩೦೦೦೦ ಮಾತ್ರ. ಯುದ್ಧ ಭಯವು ಬಹಳಷ್ಟು ತಗ್ಗಿ ಧಾರಿಗೆ ಮೋಷಕವಾದ ಸೌಹಾರ್ದಮಯ ವಾತಾವರಣವು ಕಂಡು ಬರುತ್ತಿರುವ ಈ ದಿನಗಳನ್ನು ರಾಜಕೀಯ ಲಾಭಕ್ಕಾಗಿ ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಂಡರೆ, ಸೈನ್ಯದ ಹೆಚ್ಚುವನ್ನಿಳಿಸುವುದು ಅಸಾಧ್ಯವೇನಲ್ಲ.

(೧ನೇ ಪುಟದಿಂದ)

ಶಕ್ತಿ ಇಲ್ಲದ ಪ್ರತಿಯೊಬ್ಬನಿಗೂ ಚುಚ್ಚುವ ಡೆನ್ಮಾರ್ಕ್‌ನಲ್ಲಿ ಜಗತ್ತಿನಲ್ಲಿಯೇ ಅತಿ ಕಡಿಮೆ ಕ್ಷಯ ರೋಗಿಗಳಿದ್ದಾರೆ— ಎಂಬ ಸಂಗತಿಯನ್ನು ಗಮನಿಸಿದರೆ, ಬಿ. ಸಿ. ಜಿ ದಾಕಿನ ಉಪಯುಕ್ತತೆ ಮನವರಿಕೆಯಾಗುತ್ತದೆ.

ಬಿ.ಸಿ.ಜಿ. ದಾಕಿನ ಮದ್ದನ್ನು ತಯಾರಿಸುವಾಗ ತುಂಬ ಜಾಗರೂಕತೆಯನ್ನು ವಹಿಸಲಾಗುತ್ತದೆ. ಮದ್ರಾಸಿನ ಗಿಂಡಿಯಲ್ಲಿ ಸರಕಾರದ ಅಧೀನ ವಿರುವ ಪ್ರಯೋಗ ಶಾಲೆಯಲ್ಲಿ ಮಾತ್ರ ಭಾರತವುಈ ದಾಕಿನ ಮದ್ದನ್ನು ಉತ್ಪಾದಿಸುತ್ತದೆ. ಇಲ್ಲಿ ತಯಾರಾದ ಮದ್ದು ಸಿಂಹಳ, ಮಲಯ, ಬರ್ಮ, ಅಫಘಾನಿಸ್ತಾನ ಇತ್ಯಾದಿ ನೆರೆಕರೆಯ ರಾಷ್ಟ್ರಗಳಿಗೆ ಸಹ ರವಾನೆಯಾಗಿ ಉಪಯೋಗಿಸಲ್ಪಟ್ಟಿರುತ್ತದೆ. ಆದರೆ ಇವಾವ ದೇಶಗಳಿಂದಲೂ ಬಿ. ಸಿ. ಜಿ. ದಾಕಿನ ಅವಾಯಕರ ಮುಖದ ಕುರಿತಾಗಿ ಒಂದೇ ಒಂದು ದೂರು ಬಂದಿಲ್ಲ. ರಾಜಾಜಿಯವರು ಇದೇ ಮೇ ತಿಂಗಳಲ್ಲಿ ತಮ್ಮ ಅಕ್ಷೇಪವನ್ನುಪ್ರಕಟಿಸಿದಂದಿನಿಂದ ಭಾರತದಲ್ಲಿ, ಮುಖ್ಯವಾಗಿ ಕೊಯಮುತ್ತೂರು ಜಿಲ್ಲೆಯಲ್ಲಿ,ಸತ್ತಿಸ್ವತ್ತು ದೂರುಗಳು ಕೇಳಿ ಬಂದವು. ಅವುಗಳಲ್ಲಿ ಹೆಚ್ಚಿನವುಗಳ ವಿಚಾರಣೆಯನ್ನು ವೈದ್ಯಕೀಯ ಕ್ಷೇತ್ರದ ನಿಷ್ಣಾತರು ನಡೆಸಿ, ಬಿ. ಸಿ. ಜಿ. ದಾಕಿಗೂ ಈ ದೂರುಗಳಿಗೂ ಯಾವುದೇ ಸಂಬಂಧವಿಲ್ಲ ಎಂಬ ತೀರ್ಪು ಕೊಟ್ಟಿದ್ದಾರೆ ಬಿ. ಸಿ. ಜಿ. ದಾಕು ಹಾಕಿದವರಿಗೆ ಬೇರೆ ರೋಗಗಳು ಬರಬಾರದೆಂದಿಲ್ಲ— ಹಾಗೆ ಕಣ್ಣು ಕುರುಡಾದುದೇ ಮುಂತಾದ ಘಟನೆಗಳು ಕೇವಲ ಆಕಸ್ಮಿಕ ಸಂಯೋಗವಷ್ಟೆ, ಬಿ. ಸಿ. ಜಿ. ದಾಕಿನ ಪರಿಣಾಮ ಅವೆಂದು ಗ್ರಹಿಸುವುದು ತಪ್ಪು ಎಂದಿವರ ಖಚಿತ ಅಭಿಪ್ರಾಯ.

ತಾನು ೧೯೪೭ನೇ ಇಸವಿಯಲ್ಲು ಹಿಂದೆಯೇ ಸಿಡುಬಿನ ದಾಕನ್ನು ಹಾಕಿಸಿಕೊಂಡಿದ್ದೆನೆಂದೂ ಅದರ ಉಪಯುಕ್ತತೆಯ ಕುರಿತು ತನಗೆ ಸಂದೇಹವಿದ್ದಿಲ್ಲವೆಂದೂ ರಾಜಾಜಿ ಹೇಳುತ್ತಾರೆ. ಬಿ. ಸಿ. ಜಿ ದಾಕಿನ ವಿಷಯದಲ್ಲಿ ಅವರು ಪಡುವ ಸಂದೇಹಗಳಿಗೂ ಕಾರಣವಿರುವುದಿಲ್ಲ. ಈ ದಾಕನ್ನು ಫ್ರಾನ್ಸಿನ ಪ್ಯಾಶ್ಚರ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸಮಾಡುತ್ತಿದ್ದ ಇಬ್ಬರು ಸಂಶೋಧಕರು ೧೯೪೮ನೇ ಇಸವಿಯಲ್ಲಿ ಕಂಡುಹಿಡಿದರು. ಮುಂದೆ ೧೩ ವರ್ಷಗಳ ಕಾಲ ನಿರಂತರ ಪ್ರಯೋಗಗಳನ್ನು ನಡೆಸಿ, ಅದರ ಸಾಧಕ ಬಾಧಕ ಅಂಶಗಳನ್ನು ಪರಿಶೀಲಿಸಿ, ಮಾನವ ದೇಹದಲ್ಲಿ ಪ್ರಯೋಗಕ್ಕೆ ಯೋಗ್ಯವಾದ ಕ್ಷಯರೋಗ ಪ್ರತಿಬಂಧಕ ಔಷಧವಿದೆಂದುತೀರ್ಮಾನಿಸಿದರು. ೧೯೩೧ರಲ್ಲಿ ಫ್ರಾನ್ಸಿನಲ್ಲಿ ಈ ದಾಕನ್ನು ಸರ್ವಪ್ರಥಮವಾಗಿ ಮನುಷ್ಯ ಶಿಶುವೊಂದಕ್ಕೆ ಚುಚ್ಚಲಾಯಿತು. ಮುಂದೆ ಹೆಚ್ಚಿನ ಐರೋಪ್ಯ ರಾಷ್ಟ್ರಗಳಲ್ಲಿಯೂ ಅಮೇರಿಕದ ಕೆಲವು ರಾಷ್ಟ್ರಗಳಲ್ಲಿಯೂ ಏಶ್ಯ ಆಫ್ರಿಕಗಳಲ್ಲಿಯೂ ಚಳವಳಿ ಮುಂದರಿಸಲ್ಪಟ್ಟಿತು. ೧೯೪೮ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಭಾರತದಲ್ಲಿ ಈ ಚಳವಳಿಕ್ಕೆ ಪ್ರೋತ್ಸಾಹಕೊಟ್ಟಿತು. ೧೯೫೧ರಿಂದ ನಮ್ಮ ದೇಶದಲ್ಲಿ ಸಾಮೂಹಿಕ ಸ್ವರೂಪದಲ್ಲಿ ಒತ್ತಾಯವಿಲ್ಲದೆ ದಾಕುಹಾಕುವ ಕೆಲಸ ನಡೆದಿರುತ್ತದೆ.

ವಿಶ್ವದ ವೈದ್ಯಕೀಯ ಇತಿಹಾಸದಲ್ಲಿ ಬಿ. ಸಿ. ಜಿ. ದಾಕಿನ ಪರಿಣಾಮವಾಗಿ ಸತ್ತವರ ಸಂಖ್ಯೆ ೩ ಮಂತ್ರ—ಆದರೆ ೧೯೫೧ನೇ ಜುಲಾಯಿಯ ಬಳಿಕ ೧೯೫೫ನೇ ಎಪ್ರಿಲುವರೆಗಿನ ಅತ್ಯಲ್ಪ ಅವಧಿಯಲ್ಲಿ ೫೦೦೪೧೦೫ ಜನರಿಗೆದಾಕು ಹಾಕಲಾಗಿದೆಯೆಂದೂ ಭಾರತದಲ್ಲಿಯೇ ೫೬೬೫೧೯೯ ಜನರನ್ನು ಪರೀಕ್ಷಿಸಿ ೧೯೯೧೩೦ ಮಂದಿಗೆ ದಾಕು ಚುಚ್ಚಲಾಗಿದೆಯೆಂದೂ ಮದಗಂಡ ಪಕ್ಷದಲ್ಲಿ ಬಿ. ಸಿ. ಜಿ. ದಾಕಿನಿಂದ ಸತ್ತ ಮೂರು ಮಂದಿಗೆ ಹೆದರಿ, ಅಥವಾ ರಾಜಾಜಿಯ ಆಕ್ಷೇಪದ ಬಳಿಕ ಬಂದಿರುವ ಹತ್ತಿಪ್ಪತ್ತು ದೂರುಗಳಿಂದ ಕಂಗೆಟ್ಟು ಈ ಜನೋಪಯೋಗಿ ಚಳವಳವನ್ನು ಬಿಟ್ಟುಗೊಡುವ ಪ್ರಶ್ನೆಯೇ ಇಲ್ಲವೆಂದು ಖಚಿತವಾಗುತ್ತದೆ. ಸತ್ತ ಮೂರು ಮಂದಿಯಲ್ಲೂ ಬಿ. ಸಿ ಜಿ ಮದ್ದು ಅವಾಯಕರವಾಗಿ ತಿರುಗಿಕೊಂಡದ್ದು ಮರಣಕ್ಕೆ ಕಾರಣವಲ್ಲ, ದೈಹಿಕ ಅಕ್ರಮವೇ ಇದರ ಹೇತು ಎಂದು ತಜ್ಞರು ಸ್ಪಷ್ಟೀಕರಿಸಿದ್ದಾರೆ. ಬಿ. ಸಿ. ಜಿ. ಮದ್ದು ಕ್ಷಯರೋಗಕ್ಕೆ ವ್ಯಕ್ತಿಯನ್ನು ನೂಕಲಾರದು- ಆ ಮದ್ದಿನಿಂದಲೇ ಒಬ್ಬನು ಕ್ಷಯ ರೋಗಿಯಾಗಲಾರನು. ಆಫ್ರಿಕದಲ್ಲಿಯೊಮ್ಮೆ ಕೈತಪ್ಪಿ ಸಾಮಾನ್ಯ ಪ್ರಮಾಣಕ್ಕಿಂತ ೧೫೦೦ ವಾಲು ಹೆಚ್ಚಿನ ಮದ್ದನ್ನು ನಾಲ್ಕು ದಿನದ ಶಿಶುವೊಂದಕ್ಕೆ ಚುಚ್ಚಿದ್ದರು. ಆದರೆ ಆ ಮಗುವಿಗೆ ಏನೂ ಆಗಲಿಲ್ಲ!

ರಾಜಾಜಿಯವರು ಯಾವ ತಜ್ಞರ ಹೇಳಿಕೆಗಳು ತಮ್ಮ ಬೆಂಬಲಕ್ಕೆವೆ ಎಂದಿದ್ದಾರೋ ಅವೇ ಮಹಾನುಭಾವರ ಕೊನೆಯ ನಿರ್ಣಯಗಳು ಬಿ. ಸಿ. ಜಿ. ದಾಕು ಅಪಾಯಕರವಾಗಿದೆ ಎಂಬುದಕ್ಕೆ ವಿರುದ್ಧವಿರುವ ಕೊಟೇಶನ್ನನ್ನು ಮದ್ರಾಸು ಸರಕಾರದ ಪುಸ್ತಕ ತೋರಿಸಿ ಕೊಡುತ್ತದೆ. "ನಾಗರಿಕ ಜಗತ್ತಿನ ಪ್ರತಿಭಾಸ್ವಿತ ಹಾಗು ಪ್ರಖ್ಯಾತ ವೈದ್ಯಕೀಯ ತಜ್ಞರ" ಅಭಿಪ್ರಾಯಗಳನ್ನು ರಾಜಾಜಿ ತಮ್ಮತವಾಗಿ ತಿಳಿದು ಕೊಂಡಿರುವಂತೆ ಭಾಸವಾಗುತ್ತದೆ. ಅವರಂತೆ ಅಭಿಪ್ರಾಯವುಳ್ಳ ಯೌವನಾದರೊಬ್ಬ ವೈದ್ಯಕೀಯ ತಜ್ಞನಿದ್ದರೆ ಅಮೆರಿಕದ ಮಿನ್ನಿಸೋಟದಲ್ಲಿರುವ ಡಾ. ವೈಸ್ಮಾತ್ರ. ಆದರೆ ಇನ್ನಿಸಹ ಮಿನ್ನಿಸೋಟದಲ್ಲಿ ಬಿ. ಸಿ. ಜಿ. ಚಳವಳ ಅವಗತ್ಯವೆಂಬುದನ್ನು ಸಿದ್ಧಗೊಳಿಸುವುದೇ ಅವರ ಉದ್ದೇಶವಾಗಿತ್ತಲ್ಲದೆ, ಆ ಚಳವಳ ನಿರುಪಯುಕ್ತವೆಂದು ಡಾ. ವೈಸ್ ಭಾವಿಸಿದಂತೆ ತೋರುವುದಿಲ್ಲ ಮಿನ್ನಿಸೋಟಕ್ಕಿಂತ ಲೋಕದ, ಅದರಲ್ಲೂ ಭಾರತದ, ಪರಿಸ್ಥಿತಿಯು ತೀರ ಹೆಚ್ಚು ಚಿಂತಾಜನಕವಾಗಿದೆ; ಸರಕಾರವಲ್ಲದೆ ಖಾಸಗಿಯಾಗಿ ಯಾರೂ ಸಾರ್ವಜನಿಕ ಆರೋಗ್ಯದ ಕುರಿತು ಸಾಕಷ್ಟು ಗಮನಕೊಡುವಂತಿಲ್ಲ. ಆದುದರಿಂದ ಅತ್ಯಾಧುನಿಕ ಚಿಕಿತ್ಸಾಕ್ರಮಗಳುಳ್ಳ ಆರೋಗ್ಯಧಾಮಗಳನ್ನು ತೆರೆದು, ಅಲ್ಲಿ ಕ್ಷಯರೋಗಿಗಳನ್ನು ನೆಲೆಗೊಳಿಸಿ, ಶುಶ್ರೂಷೆ ನಡೆಸಬೇಕಾದ ಪರಿಸ್ಥಿತಿಯನ್ನು ಅಸ್ಟು ವೆಚ್ಚವಿಲ್ಲದ, ಸುಲಭ ಹಾಗು ನಿರಪಾಯಕರ ವಿಧಾನವೊಂದರ ಮೂಲಕ ನಿಯಂತ್ರಣಕ್ಕೆ ರುವುದರಲ್ಲಿ ಯಾವ ಹಾನಿಯೂ ಇರುವುದಿಲ್ಲ. ಬಿ. ಸಿ. ಜಿ. ದಾಕಿನ ಚಳವಳದ ಉದ್ದೇಶ ಇದೇ— ಇದನ್ನು ೧೯೪೮ರಲ್ಲಿ ಮಿರಾಷ್ಟ್ರಗಳತಜ್ಞರು ಭಾಗ ವಹಿಸಿದ ಅಂತಾರಾಷ್ಟ್ರೀಯ ಪರಿಷತ್ತು ಸ್ಪಷ್ಟ ಪಡಿಸಿದೆ, ೧೯೫೫ನೇ ಸಪ್ತಂಬರದಷ್ಟು ಈಚೆಗೆ ರಂಗೂನಿನಲ್ಲಿ ಸೇರಿದ ಇನ್ನೊಂದು ಸಭೆಯೂ ಅನುಮೋದಿಸಿದೆ. ತಜ್ಞರ ಅಭಿಪ್ರಾಯಕ್ಕೆ ಬೆಲೆ ಇಲ್ಲದಿಲ್ಲ ಎಂದು ವಾದಿಸುವುದು ಎಷ್ಟರ ಮಟ್ಟಿಗಾತ್ಮ ಸರಿಯಾಗಬಹುದು? ಬಿ. ಸಿ. ಜಿ. ದಾಕಿನ ಸಾಮೂಹಿಕ ಚಳವಳ ನಡೆಸುವ ಸರಕಾರ ವಿರುದ್ಧ ಸೂಕ್ತಿನ ಕತ್ತಿ ಹಿರಿದು ನ ಇತರೆ ಪ್ರಯೋಜನವಿಲ್ಲ—ಆದುದರಿಂದ ನರು ತಾವು ಭೀತರಾಗ ಬೇಕಾದ ಅ ಪ್ರದಾಶ್ಯಕತೆಇಲ್ಲವೆಂದು ತಿಳಿಯಲ್ಲಿ!

1 Truth about B C G -- Why Government have launched a mass campaign.

2 Facts about B C G Vaccination.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಯನ್ನು ಇಂದೇ ತೆರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦ (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.	
24 ತಿಂಗಳಿಗೆ	4%
12 ,,	3¾%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾವಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
●
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

ಸಾಲ
ಸ್ವಂತ ಜವಾಬ್ದಾರಿಯ ಮೇರೆ ... ದೊರೆಯುತ್ತದೆ. ಸುಲಭಕಂತಿನ ಮರುಪಾವತಿ. ... ಗ್ಲಿಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿ ... ಕೊಳ್ಳುವುದು.
P. o. Box No. 3219, BOBMAY 3-

Edited, Printed & Published By K. H. Shetty, at the Navayuga Press, Udipi S. India

R36D. NO. M. 3010

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — ಉಡುಪಿ, 15—9—1955 — ಸಂಚಿಕೆ ೩

VOL. 35 — NO. 3

ಯೋಜಕರಿಗೆ ನಿವೇದನೆ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಶಿವರಾಮ ಕಾರಂತರು ಕನ್ನಡ ನಾಡಿನ ಸಮುದ್ರ ತೀರದ ಐಶ್ವರ್ಯವನ್ನು ಕುರಿತು ಬರೆದಿದ್ದ ವಿಚಾರ ಪ್ರಚೋದಕ ಲೇಖನವನ್ನು ಕೆಲಸಮಯದ ಹಿಂದೆಯೇ ನಾವು ಮರು ಮುದ್ರಣದ ಮೂಲಕ ಓದುಗರ ಅವಗಾಹನೆಗೆ ತಂದಿದ್ದೇವೆ. ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಒಗ್ಗೆ ತೀವ್ರ ವಿಚಾರಮಾಡುತ್ತಿರುವ ಎಲ್ಲರೂ ಇದನ್ನು ಗಮನಿಸಬೇಕೆಂಬುದೇ ನಮ್ಮ ಆಶಯವಾಗಿದ್ದಿತು.

ಈಗ ಕರ್ನಾಟಕದ ಇತರ ಸಂಪತ್ತುಗಳ ಕುರಿತು ಯೋಗ್ಯವಾದ ವಿವರಣೆಯನ್ನು ನೀಡಲು ನಾವು ಸಂತೋಷಿಸುತ್ತೇವೆ. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಚನ್ನಬಸಪ್ಪ ಅಂಬಲಿಯವರು ಕಾಂಗ್ರೆಸಾಧ್ಯಕ್ಷರಿಗೆ ಮೊನ್ನೆ ತಾನೆಕಳುಹಿಸಿದ ಮನವಿಯು ದ್ವಿತೀಯ ಯೋಜನೆಯ ಘಟ್ಟನಲ್ಲಿ ಕನ್ನಡಿಗರು ಏನೆಲ್ಲ ಕಾರ್ಯಕ್ರಮಗಳನ್ನು ಸರಕಾರದ ನೆರವಿನಿಂದ ಕೈಗೊಳ್ಳಬಲ್ಲರು ಎಂದು ವಿವರಿಸುತ್ತದೆ.

ಪ್ರದೇಶ ಕಾಂಗ್ರೆಸಿನ ಅಧಿಕಾರವ್ಯಾಪ್ತಿಗೆ ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಬೆಳಗಾವಿ, ಧಾರವಾಡ ಮತ್ತು ಬಿಜಾಪುರಗಳ ಏಳು ಸಾವಿರ ಚದರ ಮೈಲಿ ವಿಸ್ತೀರ್ಣದ ಪ್ರದೇಶ ಒಳಪಡುತ್ತದೆ. ಇದರ ಮೈಲು ಉದ್ದದ ಕರಾವಳಿ ತೀರ ಸಂಗರ ಪಾಲಿನ ವಿಶೇಷ ಸಂಪತ್ತು. ಕರ್ನಾಟಕದಲ್ಲಿ ಉತ್ತಮ ವರ್ಗದ ತೇಗಿ ಇಲ್ಲಿಯ ದೊರಕುತ್ತದೆ - ಕನ್ನಡ ನಾಡಿನ್ನ ದೊರಕುವ ತೇಗು ಮತ್ತಿತರ ಕಾಷ್ಠಗಳು ಇದಕ್ಕಿಂತ ನಿಕೃಷ್ಟವಾಗಿಲ್ಲ. ಮೈಸೂರಿನಲ್ಲಿ ಗಂಧದ ಮರ ಸೊಂಪಾಗಿ ಬೆಳೆಯುತ್ತದೆ, ಕರ್ನಾಟಕದ ಇತರ ಪ್ರದೇಶಗಳಲ್ಲಿ ಉತ್ಪಾದಿಸಲ್ಪಡುವ ಗಂಧದ ಕಟ್ಟಿಗೆಯು ಯೋಗ್ಯತೆಯಲ್ಲಿ ಇದರೊಡನೆ ಯಶಸ್ವಿಯಾಗಿ ಸ್ಪರ್ಧಿಸಬಲ್ಲುದು.

ಮುಂಬಯಿಗೆ ಈಗ ಸೇರಿರುವ ಕನ್ನಡ ಪ್ರದೇಶದಲ್ಲಿ ಒಂದೂವರೆ ಲಕ್ಷ ಮೀಲುಗಳಷ್ಟು ಹತ್ತಿ ಬೆಳೆಯುತ್ತದೆ. ನೆಲಗಡಲೆ ಮುಂತಾದ ಎಣ್ಣೆಯ ಧಾನ್ಯಗಳು ಸಹ ವಿಪುಲವಾಗಿ ಪೇಟೆಗೆ ಬರುತ್ತವೆ. ಹೊಗೆಸೊಪ್ಪು, ಅಡಕೆ, ಗೇರು ಬೀಜ, ಕೊಬ್ಬರಿಮೆಣಸು, ಏಲಕ್ಕಿ, ಮೆಣಸಿನ ಕಾಯಿ, ಅಂಬಾರ ಜೀನಸುಗಳು ಕನ್ನಡ ನಾಡಿನ ಇತರ ಮುಖ್ಯ ಕೃಷಿಗಳಲ್ಲಿ ಉಲ್ಲೇಖನೀಯ. ಇವೆಲ್ಲ ಸರಕುಗಳ ನಿರ್ಯಾತ ವ್ಯಾಪಾರವೇ ಈಗ ನಡೆದಿದೆ—ಅವುಗಳನ್ನು ಬಳಸಿಕೊಳ್ಳುವ ಕಾರ್ಖಾನೆಗಳು ಕನ್ನಡ ಪ್ರದೇಶದಲ್ಲಿ ಸ್ಥಾಪಿಸಲ್ಪಡುವಂತೆ ಪ್ರಯತ್ನ ನಡೆಯಬೇಕು.

ಒಟ್ಟೆಯ ಗಿರಣಿ, ಎಣ್ಣೆ ಮತ್ತು ಸಾಬೂನಿನತಯಾರಿಕೆಯ ಕೇಂದ್ರಗಳಂತೆ ಅರಣ್ಯ ಸಂಪತ್ತಿನ ಸದುಪಯೋಗ ಪಡೆಯುವ ಕೆಲಸವೂ ನಡೆಯಬೇಕಾಗಿದೆ ಕಾಗದದ ತಯಾರಿಕೆಗೆ ಕರ್ನಾಟಕದಲ್ಲಿ ತುಂಬ ಅನುಕೂಲವಿದೆ. ಬೆಂಕಿ ಪೆಟ್ಟಿಗೆ ತಯಾರಿಸುವುದು, ಬೆತ್ತದ ಕೈಗಾರಿಕೆಗಳನ್ನು ನಡೆಸುವುದು ಇವುಗಳಿಗೆ ಸಹ ತಕ್ಕ ಪ್ರೋತ್ಸಾಹ ಸಿಗಬೇಕು.

ಅಗ್ರದಲ್ಲಿ ಶಕ್ತಿಯನ್ನು ಪೂರೈಸಲು ನಾವು ತಂಬಿ ಹರಿದು ಧುಮುಕುವ ನದಿಗಳನ್ನು ಬಳಸಿಕೊಳ್ಳಬಹುದು. ಜೋಗದ ಜಲಪಾತ ವೈಸೂರಿನದೆಂದು ಹೇಳಿದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕು ಮಹಾ ಯೋಜನೆಗಳಿಗೆ ಅವಕಾಶವಿದೆ, ಕಾಳಿ ನದಿಯ ಯೋಜನೆಯು ಈಗಾಗಲೇ ಎಲ್ಲರ ಮನಸ್ಸನ್ನು ಸೆಳೆದಿದ್ದು ೫ ಲಕ್ಷ ಕಿಲೋವಾಟ್-ಗಳಷ್ಟು ವಿದ್ಯುತ್ತನ್ನು ಇದು ಉತ್ಪಾದಿಸಬಲ್ಲುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮನಸ್ಸು ಮಾಡಿದರೆ ಸಣ್ಣ ವಟ್ಟನೆ ವಿದ್ಯುತ್ತಾದನ ಕೇಂದ್ರಗಳನ್ನು ತೆರೆಯಬಹುದು.

ಉತ್ತಮ ರೇವು ಸೌಕರ್ಯಗಳನ್ನು ನೀಡಬಲ್ಲ ಒಂದರದ ರಚನೆ ನವಿಗೆ ಅಗತ್ಯವಾಗಿ ಬೇಕಾಗಿದೆ, ಸೂಚಿಸಲ್ಪಟ್ಟಿರುವ ನಾಲ್ಕು ಹೆಸರುಗಳಲ್ಲಿ ಉಪಯುಕ್ತವಾದೊಂದನ್ನು ಆಯ್ದು ಈ ದಿಸೆಯಲ್ಲಿ ಕೂಡಲೇ ಹೆಜ್ಜೆ ಮುಂದಿಡಬೇಕಾಗಿದೆ ಮಲ್ಪೆ ಪ್ರಬುದ್ಧ ಬಂದರವಾಗಲಿ, ಬಿಡಲಿ ಮತ್ಸ್ಯ ವ್ಯವಸಾಯದ ಉತ್ಕೃಷ್ಟ ಕೇಂದ್ರ ಎಂದು ಈದು ಭಾರತದಲ್ಲಿ ಪಡೆದಿರುವ ಹೆಸರನ್ನು ಊರ್ಜಿತವಾಗಿಡಲು ಪ್ರಯತ್ನಿಸಬೇಕಾದದ್ದು ಕರ್ತವ್ಯ. ಅದರಂತೆ, ಕಾರವಾರವನ್ನು ದೊಡ್ಡ ಬಂದರವಾಗಿ ಬೆಳೆಸದಿದ್ದರೂ ಸಹ ಅಲ್ಲಿ ನೌಕಾಂಗಣದ ರಚನೆಗೆ ಮನಸ್ಸು ಮಾಡುವುದು ವಿಹಿತ.

ಕೃಷಿ ಕ್ಷೇತ್ರದ ಅಭಿವೃದ್ಧಿಗೆ ನಮ್ಮ ಮುಂದಿನ ಯೋಜನೆಯಲ್ಲಿ ಸಾಕಷ್ಟು ಗಮನ ಬೀಳಲೇ ಬೇಕಾಗಿದೆ— ಏಕೆಂದರೆ ಬಿಜಾಪುರ, ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಆಗಾಗ್ಗೆ ಬರಗಾಲವು ತಾಂಡವವಾಡುತ್ತದೆ. ಘಟಪ್ರಭೆಯ ಯೋಜನೆಯ ಪ್ರಥಮ ಘಟ್ಟವು ಅಭಿವೃದ್ಧಿಯ ಆಸೆಗೆ ನೀರೆರೆದಿದೆ; ಇದರ ದ್ವಿತೀಯ ಹಾಗು ತೃತೀಯ ಘಟ್ಟಗಳಿಗೆ ಹೆಚ್ಚು ಮಹತ್ವ ಸಲ್ಲುವುದರಿಂದ ಯೋಜನಾ ಕರ್ತರು ಇತ್ತ ಗಮನಿಸುವಂತೆ ಒತ್ತಾಯಿಸುತ್ತೇವೆ.

ಇದಲ್ಲದೆ, ಅನೇಕ ಹೊಳೆಗಳಿಗೆ ಚಿಕ್ಕ ಅಣೆಕಟ್ಟುಗಳನ್ನು ಕಟ್ಟಿ ಸಮೃದ್ಧ ಕೃಷಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳನ್ನು ನಮ್ಮ ಯೋಜನೆ ಒಳಗೊಳ್ಳಬೇಕು. ದಕ್ಷಿಣ ಕನ್ನಡದಲ್ಲಿ ಹಾಲಾಡಿ ಯೋಜನೆಗೆ ಮಂಜೂರಾತಿ ದೊರಕಿದೆ; ಕೊಡಗಿನಲ್ಲಿ ಬರ ಹೊಳೆ ಯೋಜನೆಯ ಬೆನ್ನ ಹಿಂದೆ ಮತ್ತು ಉತ್ತರ ಕರ್ನಾಟಕದಲ್ಲಿ ಘಟಪ್ರಭಾ ಯೋಜನೆಗೆ ಬೇರೆಹಲವು ಯೋಜನೆಗಳಿಗೆ ಜನರ ಒತ್ತಾಯವಿದೆ ಇವುಗಳನೆಲ್ಲ ಒಮ್ಮೆಲೆ ಕೈಗೂಳ್ಳುವುದು ಕಷ್ಟ ಸಾಧ್ಯವಾದರೂ ಪ್ರಾಶಸ್ತ್ಯಾನುಕ್ರಮವನ್ನು ಗೊತ್ತುಪಡಿಸಿ, ಆಯಾ ಜನರ ಸಮಾಧಾನಕ್ಕೆ ಯೋಜನಾ ಕರ್ತರು ಸಾಹಸಪಡಬೇಕು.

ಖನಿಜ ಸಂಪತ್ತಿನ ದೃಷ್ಟಿಯಿಂದ ಮೈಸೂರೇತರ ಕನ್ನಡ ಪ್ರದೇಶವೇನು ಬೆಂಗಾಡಾಗಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಸುಣ್ಣದ ಕಲ್ಲುಗಳಿವೆ. ಇವುಗಳನ್ನು ಸಿಮೆಂಟಿನ ಉತ್ಪಾದನೆಯಲ್ಲಿ ಬಳಸಬಹುದು. ಬಾಗಲಕೋಟೆ, ಲೋಕಾಪುರ ಯೋಧವಾಡಗಳಲ್ಲಿ ಸಿಮೆಂಟಿನ ಕಾರ್ಖಾನೆಗಳನ್ನು ಹೊಸತಾಗಿ ಸ್ಥಾಪಿಸಬಹುದು. ಬೆಳಗಾವಿಯಲ್ಲಿ ಅಲ್ಯುಮಿನಿಯಂ ಕೈಗಾರಿಕೆಯನ್ನು ನೆಲೆಗೊಳಿಸಬಹುದು. ಇಲ್ಲಿ ಲೋಹ ಮಂಡೂರ, ಅಭ್ರಕಗಳಲ್ಲದೆ ಬಾಕ್ಸೈಟಿನ ಅದುರೂ ಸಿಗುತ್ತದೆ.

ಉತ್ತರ ಕನ್ನಡದಲ್ಲಿ ಕಬ್ಬಿಣದ ಅದುರು ಸಿಗುತ್ತದೆ. ಭಾರತದಲ್ಲಿಯೇ ಉತ್ತಮವಾದ ಸ್ಲೇಟಿನ ಕಲ್ಲುಗಳು ಬಿಜಾಪುರದಲ್ಲಿ ಸಿಗುತ್ತವೆ. ಇವುಗಳ ಉಪಯೋಗ ಮಾಡಿಕೊಳ್ಳಲು ಈಗಿರುವ ಕಾರ್ಖಾನೆಗಳನ್ನು ವಿಸ್ತರಿಸುವುದು ಹಾಗು ಹೊಸ ಕಾರ್ಖಾನೆಗಳನ್ನು ತೆರೆಯುವುದು ಅಪೇಕ್ಷಣೀಯ. ಬಗೆಬಗೆಯ ಬಣ್ಣದ ಕಲ್ಲುಗಳಿಗೆ ಸಹ ಕರ್ನಾಟಕದ ಈ ಪ್ರದೇಶ ಹೆಸರಾಗಿದೆ

ಗ್ರಾಮೋದ್ಯೋಗಗಳಲ್ಲಿ ಹೆಸರಿಸಬೇಕಾದದ್ದೆಂದರೆ ಕೈಮಗ್ಗದ ಉದ್ದಿಮೆಯಾಗಿದೆ—ಇಲ್ಲಿ ೬೦೦೦೦ ಕೈಮಗ್ಗಗಳನ್ನು ಬಡ ಜನರು ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಕಂಬಳಿಗಳನ್ನು ಹೊಸೆದು ವಿಕ್ರಯಿಸುವುದು ಸಹ ಲಾಭದಾಯಕವಾದ ಉದ್ಯೋಗವಾಗಿದೆ. ಬಳೆ, ಅಂಗಿಯ ಗುಂಡಿ ಇತ್ಯಾದಿಗಳನ್ನು ತಯಾರಿಸುವುದು, ಹುರಿಹಗ್ಗ ಮತ್ತು ಜಾಪೆಗಳನ್ನು ಹೆಣೆಯುವುದು, ತಾಳೆ ಬೆಲ್ಲ ಮತ್ತು ಜೇನಿನ ವ್ಯವಸಾಯ— ಇವುಗಳಿಗೆ ಹಚ್ಚಿನ ಅವಕಾಶ ಕನ್ನಡ ನಾಡಿನಲ್ಲಿದೆ ಎಂಬುದನ್ನು ಮರೆಯಲಾಗದು.

ಪ್ರೇಕ್ಷಣೀಯ ಸ್ಥಳಗಳಿಗೂ ವ್ಯಾಪಾರ ಕೇಂದ್ರಗಳಿಗೂ ಯೋಗ್ಯ ಸಂಪರ್ಕ ಮತ್ತು ಸಾರಿಗೆಯ ವ್ಯವಸ್ಥೆ ಇಲ್ಲದಿರುವುದಕ್ಕೆ ಗಮನವಿತ್ತು ನ್ಯೂನತೆಗಳನ್ನು ನಿವಾರಿಸಬೇಕಾಗಿದೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡಗಳನ್ನು ಜೋಡಿಸಬಲ್ಲ ಸಂಪರ್ಕ ವ್ಯವಸ್ಥೆಗೆ ಹೆಚ್ಚಿನ ಪ್ರಾಶಸ್ತ್ಯಸಲ್ಲಬೇಕು ಮೋಟಾರು ಸಂಚಾರಕ್ಕೆ ಮಾರ್ಗಗಳೂ ಲಂಕಗಳೂ ಸರಕುಗಳ ಸಾಗಾಟಕ್ಕೆ ಉಪಯುಕ್ತವಾದ ರೈಲ್ವೆಗಳೂ ಕನ್ನಡ ನಾಡಿನಲ್ಲಿ ವಿಸ್ತಾರವಾದ ಬೆಳವಣಿಗೆಯನ್ನು ಹೊಂದಬೇಕು. ಮಲ್ಪೆಯ ಸವಿಪದ ತೋಸ್ಸೆ ಪಾರಿನಂಥ ಸಮುದ್ರ ದ್ವೀಪದ ಸೌಂದರ್ಯದಿಂದ ಹಿಡಿದು, ಬಾದಾಮಿ ಮತ್ತು ಪಟ್ಟದ ಕಲ್ಲುಗಳ ಶಿಲ್ಪ ಕಲೆಯ ವೈಭವ ದರ್ಶನ ಮಾಡಿಕೊಡುವ ವರೆಗಿನ ಸಂಚಾರದ ವ್ಯವಸ್ಥೆಯ ಸಾಂಸ್ಕೃತಿಕ ಮಹತ್ವವನ್ನು ಹೇಳಿ ತೀರದು

ದಕ್ಷಿಣ ಭಾರತದ **93** ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು)

"ಪಿಗ್ಮಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ
ನಿಮಗೆ ಸವಿಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಬಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

ಸಮಾಜವಾದಿ ಮಾದರಿಯ ಸಮಾಜದ ಆದರ್ಶ

ಯೋಜನಾಕರ್ತರು ಗಮನಿಸಬೇಕಾದ ಮೂಲಭೂತ ವಿಚಾರಗಳ ಪರಿಶೀಲನೆ

ಸಮಾಜವಾದಿ ಮಾದರಿಯ ಸಮಾಜ ವ್ಯವಸ್ಥೆಯ ರಚನೆಯ ಗುರಿಯನ್ನು ಭಾರತದ ಸಂಸತ್ತು ಹಾಗೂ ಕಾಂಗ್ರೆಸ್ ಸಂಸ್ಥೆಗಳು ಅಂಗೀಕರಿಸಿವೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿನ ಪ್ರಾಶಸ್ತ್ಯಗಳನ್ನೂ ಗುರಿಗಳನ್ನೂ ಕುರಿತ ವಿಸ್ತೃತವಾದ ಸಮಾಲೋಚನೆಯ ಸಮಯದಲ್ಲಿ ಈ ಗುರಿಯ ಸಾಧನೆಗೆ ಅಗತ್ಯವಾಗಿ ಕೊಡಬೇಕಾದ ಲಕ್ಷ್ಯವನ್ನು ಕೊಡದೆ ಹೋಗಬಾರದು. ಆದುದರಿಂದ ಅದರ ಅರ್ಥದ ಬಗ್ಗೆ ಸ್ಪಷ್ಟವಾಗಿರುವುದು ಮತ್ತು ಅದನ್ನು ಯಾವ ರೀತಿಯಲ್ಲಿ ಸಾಧಿಸಬೇಕೆಂಬ ವಿಚಾರದಲ್ಲಿ ನಿರ್ದಿಷ್ಟವಾಗಿರುವುದು ಅಗತ್ಯ.

ಸಮಾಜವಾದಿ ಮಾದರಿಯ ಸಮಾಜ ವ್ಯವಸ್ಥೆಯಲ್ಲಿ ಸಾಮಾಜಿಕ ಬದಲಾವಣೆಯ ವಿಧಾನವಿರುತ್ತದೆ. ನಮ್ಮ ಆರ್ಥಿಕಾಭಿವೃದ್ಧಿ ಯೋಜನೆಗಳು ಈ ಸಾಮಾಜಿಕ ಬದಲಾವಣೆಯ ಗುರಿಯನ್ನು ಸಾಧಿಸಲು ಪ್ರಯತ್ನಪಡಬೇಕು. ಈ ಸಾಮಾಜಿಕ ಪರಿವರ್ತನೆಯ ಮುಖ್ಯ ತಿರುಳೆಂದರೆ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಆಸ್ತಿ ಮತ್ತು ಹಕ್ಕು ಬಾಧ್ಯತೆಗಳು ಯಾವುದೇ ರೂಪದಲ್ಲಾದರೂ ಗಳಿಸಿರುವ ಸ್ಥಾನಗಳನ್ನು ಮಿತಿಗೊಳಿಸುವುದು ಮತ್ತು ಎಲ್ಲಾ ಪೌರರಿಗೂ ಸಮಾನಾವಕಾಶಗಳನ್ನು ಒದಗಿಸುವುದು—ಎನ್ನಬಹುದು.

ಮೂಲಭೂತ ಕಾರ್ಯ

ಸಮಾಜವಾದಿ ಸಮಾಜ ವ್ಯವಸ್ಥೆಯೆಂದರೆ, ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ವಿಶಾಲ ವ್ಯಾಪ್ತಿಯುಳ್ಳ ಮತ್ತು ಬೆಳವಣಿಗೆಗೆ ಅವಕಾಶವಿರುವಂತಹ ಸಾರ್ವಜನಿಕ ಉದ್ಯಮಕ್ಕೆ ಪ್ರೋತ್ಸಾಹವಿರುವುದೆಂದರ್ಥ. ಮುಖ್ಯವಾಗಿ ಮೂಲ ಕೈಗಾರಿಕೆಗಳು, ಲೋಹಗಳು, ಸಾಗಾಣಿಕೆ, ಹಣಕಾಸಿನ ಸಂಸ್ಥೆಗಳು ಮತ್ತು ವಿದೇಶಿ ವಾಣಿಜ್ಯ—ಈ ಕ್ಷೇತ್ರಗಳು ಸಾರ್ವಜನಿಕ ಉದ್ಯಮ ಕ್ಷೇತ್ರಕ್ಕೆ ಒಳಪಡುತ್ತವೆ. ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ಕೈಗೊಳ್ಳಲಾಗುವ ಹೊಸ ಅಭಿವೃದ್ಧಿ ಯೋಜನೆಗಳ ಸಮಗ್ರವು ಅಭಿವೃದ್ಧಿ ಯೋಜನೆಯ ಪ್ರಕಾರ ಅದಕ್ಕೆ ಒದಗಿಸಲಾಗುವ ಸಾಧನ ಸಂಪತ್ತುಗಳಲ್ಲಿ ಬಹುಭಾಗವನ್ನು ಸಾರ್ವಜನಿಕ ಮತ್ತು ಖಾಸಗೀಕಾರ್ಯಕ್ಷೇತ್ರಗಳಿಗೆರಡಕ್ಕೂ ಉಪಯೋಗವಾಗುವ ವಿದ್ಯುಚ್ಛಕ್ತಿ, ಸಾಗಾಣಿಕೆ ಮತ್ತು ಸಂಪರ್ಕ ವ್ಯವಸ್ಥೆ ಇಂತಹ ಮೂಲಭೂತ ಕಾರ್ಯಕ್ರಮಗಳಿಗಾಗಿ ಉಪಯೋಗಿಸಬೇಕಾಗುವುದು.

ಪ್ರಸ್ತುತದಲ್ಲಿ ಸರ್ಕಾರದ ಸ್ವಾಮ್ಯದಲ್ಲಿರುವ ಸಂಸ್ಥೆಗಳ ನಿವ್ವಳ ಉತ್ಪನ್ನವನ್ನು ದೇಶದ ನಿವ್ವಳ ಉತ್ಪನ್ನದೊಡನೆ ಹೋಲಿಸಿದರೆ ಅದು ಕೇವಲ ಶೇಕಡ ೩ರಷ್ಟು ಮಾತ್ರ ಆಗುತ್ತದೆ. ಆದರೆ ನಾವು ಸಾರ್ವಜನಿಕ ಉದ್ಯಮಗಳ ವ್ಯಾಪ್ತಿ ಇಲ್ಲದಿರುವಂತಹ, ಬೇಸಾಯ ಇತ್ಯಾದಿ ಉದ್ಯಮಗಳ ಉತ್ಪನ್ನವನ್ನು ಖಾಸಗೀ ಉದ್ಯಮ ಉತ್ಪನ್ನದಿಂದ ಬೇರ್ಪಡಿಸಿ ಬಳ್ಳ ಹಾಕಿದರೆ ಆಗ ಸರ್ಕಾರದ ಸಂಸ್ಥೆಗಳ ಉತ್ಪನ್ನದ ಪ್ರಮಾಣ ಏರಿ ಶೇಕಡ ೧೧ರಷ್ಟು ಆಗುತ್ತದೆ.

ಸರ್ಕಾರದ ಪಾಲು

ಆದುದರಿಂದ ಸಾರ್ವಜನಿಕ ಕಾರ್ಯಕ್ಷೇತ್ರವು ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಗಮನಾರ್ಹವಾದ ಸ್ಥಾನಗಳಿಸಬೇಕಾದರೆ, ಅದನ್ನು ಬಹಳವಾಗಿ ಹೆಚ್ಚಿಸಬೇಕಾಗುತ್ತದೆ. ನೂತನ ಅಭಿವೃದ್ಧಿಯ ಮಾತುಗಳಲ್ಲಿ ಹೇಳುವುದಾದರೆ, ಸಾರ್ವಜನಿಕ ಕಾರ್ಯಕ್ಷೇತ್ರಗಳ ಪಾಲು. ಖಾಸಗೀ ಕಾರ್ಯಕ್ಷೇತ್ರಗಳಿಗಿಂತ ಬಹಳ ಹೆಚ್ಚಾಗಿರಬೇಕು.

ಆದರೆ ಈ ವಿಧಾನವು, ಕೆಲವು ಸ್ಪಷ್ಟವಾದ ಹಣಕಾಸಿನ ಮಿತಿಗೊಳಗಾಗಿದೆ. ಖಾಸಗೀ ಕ್ಷೇತ್ರವನ್ನು ಸಾಧ್ಯವಾದಷ್ಟು ವಿಸ್ತರಿಸುವುದರ ಜೊತೆಗೆ ಸಹಕಾರೀ ಕಾರ್ಯಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವುದರ ಮೂಲಕವೂ ಖಾಸಗೀ ಕಾರ್ಯಕ್ಷೇತ್ರಗಳನ್ನು ಪುನರ್ವ್ಯವಸ್ಥೆಗೊಳಿಸುವುದರ ಮೂಲಕವೂ ಸಮಾಜವಾದಿ ಮಾದರಿಯ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸಬೇಕಾಗಿದೆ.

ಒಳನಾಡಿನ ಚಟುವಟಿಕೆ

ನಮ್ಮ ರಾಷ್ಟ್ರೀಯ ಸಂಪತ್ತಿನಲ್ಲಿ ನೂರಕ್ಕೆ ಐಂಕ್ಕಿಂತ ಹೆಚ್ಚು ಭಾಗ ಕೃಷಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಬರುತ್ತದೆ. ಈ ಕ್ಷೇತ್ರಗಳಲ್ಲಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಒಳದೇಶದ ವಾಣಿಜ್ಯದಲ್ಲಿ ಸಹಕಾರ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು, ಸಮಾಜವಾದಿ ಮಾದರಿಯ ಸಮಾಜ ವ್ಯವಸ್ಥೆಯ ಗುರಿ ಸಾಧನೆಯ ಕಾರ್ಯಕ್ರಮದಲ್ಲಿ ಅತಿ ಮುಖ್ಯವಾದ ಏಕೋದ್ದೇಶವಾಗಿರಬೇಕು.

ಈ ಉದ್ಯಮ ಕ್ಷೇತ್ರಗಳಿಗಾಗಿ ತಯಾರಾದ ಕಾರ್ಯಕ್ರಮಗಳಲ್ಲಿ ಸಹಕಾರವು ಒಂದು ವಾಸ್ತವಿಕ ವಿಭಾಗವಾಗಿರಬೇಕು; ಕೆಲಸದ ವಿಭಾಗವಾಗಿರಬೇಕು. ರಾಜ್ಯ ಸರ್ಕಾರಗಳು ಈ ಸಹಕಾರೀ ವಿಧಾನವನ್ನು ಎಷ್ಟರ ಮಟ್ಟಿಗೆ ಸಮಗ್ರವಾಗಿ ಆಚರಣೆಗೆ ತರುವುವೋ ಅಷ್ಟರ ಮಟ್ಟಿಗೆ ಅದಕ್ಕೆ ಯಶಸ್ಸು ದೊರೆಯುತ್ತದೆ. ಈ ಪಾಠಿಯಲ್ಲಿ ಇದು ವರೆಗೆ ನಡೆದಿರುವುದು ಕೇವಲ ಅಲ್ಪ.

ರಾಷ್ಟ್ರದ ಆರ್ಥಿಕ ಚಟುವಟಿಕೆಯಲ್ಲಿ ಸುಮಾರು ಅರ್ಧದಷ್ಟು ಭಾಗವನ್ನಾದರೂ ಮುಂದಿನ ೧೦—೧೫ ವರ್ಷಗಳಲ್ಲಿ ಸಹಕಾರ ತತ್ವಗಳ ಆಧಾರದ ಮೇಲೆ ಸಾಧಿಸಬೇಕೆಂಬುದು ಸಮಾಜವಾದಿ ಮಾದರಿಯ ಸಮಾಜ ವ್ಯವಸ್ಥೆಯ ಸಾಧನೆಯಲ್ಲಿ ಮುಖ್ಯವಾದ ಗುರಿಯೆಂದು ಅಂಗೀಕರಿಸಬೇಕಾಗುತ್ತದೆ. ನಾವು ಹಿಂದೆ ಸಹಕಾರೀ 'ಕಾಮನ್ ವೆಲ್ತ್' ವಿಚಾರವಾಗಿ ಮಾತನಾಡಿದ್ದೇವೆ. ಆದರೆ ಅದನ್ನು ಆಸ್ತಿತ್ವಕ್ಕೆ ತರಲು ಏನೂ ಮಾಡಿಲ್ಲ.

ಸಮಾನ್ಯತೆಯ ತತ್ವ

ಸಮಾಜವಾದಿ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುವ ಆರ್ಥಿಕ ವ್ಯವಸ್ಥೆಯು, ಖಾಸಗೀ ಕಾರ್ಯಕ್ಷೇತ್ರದ ಇರುವಿಕೆಯನ್ನು—ಅದರಲ್ಲೂ ಕೃಷಿ, ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ವಾಣಿಜ್ಯ ವ್ಯವಹಾರಗಳನ್ನು—ಪ್ರತಿಬಂಧಿಸುವುದಿಲ್ಲ. ಸಾರ್ವಜನಿಕ ಹಾಗೂ ಖಾಸಗೀ ಕಾರ್ಯಕ್ಷೇತ್ರಗಳ ನಡುವೆ ಸಮನ್ವಯವನ್ನು ಏರ್ಪಡಿಸುವುದೇ ಇಂದಿನ ಆವಶ್ಯಕತೆಯಾಗಿದೆ.

ದೊಡ್ಡ ಪ್ರಮಾಣದ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಖಾಸಗೀ ಉದ್ಯಮಗಳು ಕೆಲಸ ಮಾಡುವ ವಿಧಾನದಲ್ಲಿ, ಗಾಂಧೀಜಿಯವರು ಹೇಳಿರುವ 'ಧರ್ಮದರ್ಶಿ' ತತ್ವವನ್ನು ಅನುಷ್ಠಾನಕ್ಕೆ ತರಬೇಕಾದುದು ಅಗತ್ಯ. ಖಾಸಗೀ ಕಾರ್ಯಕ್ಷೇತ್ರಗಳವರು ಗಮನದಲ್ಲಿಟ್ಟುಕೊಳ್ಳಬೇಕಾಗಿರುವ ಮುಖ್ಯ ಗುರಿಯು ವೈಯಕ್ತಿಕ ಲಾಭ ಮತ್ತು ಸಾಧನ ಸಂಪತ್ತುಗಳ ಮೇಲಿನ ಹತೋಟಿಯಲ್ಲ—ಸಮಾಜ ಸೇವೆಯೇ ಆವರ ಮುಖ್ಯ ಗುರಿಯಾಗಿರಬೇಕು. ಅದರ ಜೊತೆಗೆ ಬದಲಾಗುವ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ವ್ಯವಸ್ಥೆಯನ್ನೂ ಅಳವಡಿಸಿಕೊಳ್ಳಬೇಕು.

ನಿರ್ದಿಷ್ಟ ಪಾತ್ರ

ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳೆರಡರಲ್ಲೂ ಕಾರ್ಮಿಕರು ಮತ್ತು ಆಡಳಿತ ವರ್ಗದ ಬಾಂಧವ್ಯವು ಔದ್ಯಮಿಕ ಸಂಸ್ಥೆಯ ಮೇಲೆ ಪರಿಣಾಮವನ್ನುಂಟು ಮಾಡುವಂತಹ ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ಪರಸ್ಪರರಲ್ಲಿ ನಿರ್ದಿಷ್ಟವಾದ ಪಾತ್ರ ಮತ್ತು ವಾಲನ್ನು ಕೊಡುವಂತಹದಾಗಿರ ಬೇಕು. ನಾವು ಕಾಣುತ್ತಿರುವ ನಾನಾ ಹಿತಗಳ ಘರ್ಷಣೆಗೆ ಭವಿಷ್ಯದಲ್ಲಿನ ಸಂಸ್ಥೆಗಳ ಯೋಜನೆಯಲ್ಲಿ ಸ್ಥಾನವಿರಲೇ ಬಾರದು.

ಖಾಸಗೀ ಕ್ಷೇತ್ರದ ಪುನರ್ವ್ಯವಸ್ಥೆಯಲ್ಲಿ ಪರಿಶೀಲಿಸಬೇಕಾದ ಮುಖ್ಯವಾದ ಮತ್ತೊಂದು ವಿಚಾರವೆಂದರೆ! ಪ್ರತಿಯೊಂದು ಕೈಗಾರಿಕೆಗೂ ಅಭಿವೃದ್ಧಿ ಮಂಡಳ ಮೊದಲಾದ ಸಂಸ್ಥೆಗಳ ಮೂಲಕ ಆ ಕೈಗಾರಿಕೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಇಡೀ ಯೋಜನೆ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಕೂಡಿ, ಪರಿಶೀಲಿಸಿ ಸಾಧನ ಸಂಪತ್ತುಗಳು, ಪ್ರಮಾಣೀಕರಣ, ಉತ್ಪಾದನೆಯಲ್ಲಿ ಹೆಚ್ಚುವರಿ ಮತ್ತು ತರಬೇತಿ ಕಾರ್ಯಕ್ರಮ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಾಮರ್ಥ್ಯವಿರುವಂತಹ ನಾಯಕತ್ವವನ್ನು ಒದಗಿಸುವ ಕಾರ್ಯ ಆಡಳಿತ ಮಂಡಲಿ. ಕುಶಲ ಕೆಲಸಗಾರರು ಮತ್ತು ಸಾಮಾನ್ಯ ಕೆಲಸಗಾರರು ಇವರುಗಳ ಪ್ರಾತಿನಿಧ್ಯವು ಆ ನಾಯಕತ್ವದಲ್ಲಿರಬೇಕು.

(೧೧ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಉಡುಪಿ ದಿ. ಮು. ಕೋರ್ಟನಲ್ಲಿ

O. S. No. 249/55.

ಪದ್ಮಾವತಿ ಅಮ್ಮ— ವಾದಿಳು

ಮತ್ತು

ಯೋರೆನ್ಸ್‌ದಾಲ್ಮೆಡ-ಜೂಜಿದಾಲ್ಮೆದರ ಮಗ-ಉಡುಪಿ ತಾಲೂಕು ಉದಿಯಾವರ ಗ್ರಾಮದ ಅಂಕುದ್ರು— ಪ್ರತಿವಾದಿ.

ಇದರೊಳಗೆ-

ಸದ್ರಿ ಪ್ರತಿವಾದಿಗೆ ತಿಳಿಸುವದೇನೆಂದರೆ -

ಮೇಲ್ಕಂಡ ವಾದಿಳಿಗೆ ಪ್ರತಿವಾದಿಯಿಂದ ಬರತಕ್ಕ ಮೂಲಗೇಣಿ ಬಾಕಿಗೆ-ದಾಕ್ಲು ಮಾಡಿದ ದಾವೆಯಲ್ಲಿ ಪ್ರತಿವಾದಿಯ ನೋಟೀಸು ಬಗ್ಗೆ ತಾರೀಕು 28—9—55ಕ್ಕೆ ಇಡೋಣಾಗಿಯದೆ- ಅಕ್ಷೇಪಪೇಳತಕ್ಕದ್ದು ಇದ್ರೆ ಆ ದಿವ್ಸ ಮೇಲ್ಕಂಡ ಕೋರ್ಟುಮುಂದೆ ಪೂರ್ವಾಹ್ನ ಗಂಟೆ 10ಕ್ಕೆ ಹಾಜ್ರಾಗಿ ಜಾಹೀರುಪಾದಿಕೊಳ್ಳತಕ್ಕದ್ದು- ಎಂಬಸಂಗ್ತಿ ತಿಳಿಸೋಣಾಗಿಯದೆ. —

N. V. Kamath

Advocate for Plaintiff.

ಉಡುಪಿ 7.9.1955.

ಭಾರತ - ರಶ್ಯ ಸ್ನೇಹ ಸಂಬಂಧ

ಪರಸ್ಪರರನ್ನು ಚೆನ್ನಾಗಿ ತಿಳಿದುಕೊಳ್ಳುವ ಪ್ರಯತ್ನ

ಭಾರತದ ಪ್ರಾಚೀನ ಸಂಸ್ಕೃತಿಯ ಭವ್ಯ ಸ್ವಾರಕಗಳನ್ನು ರಶ್ಯದ ಜನರು ಬಲ್ಲರು ಮತ್ತುಅವರದನ್ನುಹೆಚ್ಚಾಗಿಮೆಚ್ಚುತ್ತಾರೆ ಆಧುನಿಕ ಭಾರತೀಯ ಸಂಸ್ಕೃತಿಯಲ್ಲಿಯೂ, ಹಿರಿಯ ಭಾರತೀಯ ಜನತೆಯ ಜೀವನದಲ್ಲಿಯೂ ರಶ್ಯದ ಜನರು ಸಚೇತನವಾದ ಹಾಗೂ ಆಳವಾದ ಆಸಕ್ತಿಯನ್ನು ಪ್ರದರ್ಶಿಸುತ್ತಾರೆ. ಭಾರತದ ಜನರು ಸಹ ರಶ್ಯದ ಸಂಸ್ಕೃತಿಯಲ್ಲಿಯೂ ಪ್ರಾಚೀನ ಪರಂಪರೆಯಲ್ಲಿಯೂ ಅತ್ಯಂತ ಆಸಕ್ತಿಯನ್ನು ವ್ಯಕ್ತ ಪಡಿಸುತ್ತಾರೆ. ಪರಸ್ಪರರ ಆಧ್ಯಾತ್ಮಿಕ ಜೀವನವನ್ನರಿಯಲು, ಸಾಂಸ್ಕೃತಿಕ ಸಂಬಂಧಗಳನ್ನುತಿಳಿಯಲು ಪರಸ್ಪರರ ಆಸಕ್ತಿಯನ್ನು ಸಾಧ್ಯವಾದಷ್ಟು ಪೂರ್ಣವಾಗಿ ತೃಪ್ತಿಗೊಳಿಸಿಕೊಳ್ಳಲು ಭಾರತದ ಮತ್ತು ರಶ್ಯದ ಜನರು ಪ್ರಯತ್ನಿಸುತ್ತಾರೆ.

ಸಂದರ್ಶಕರ ವಿನಿಮಯ

ಈ ವಿಷಯದಲ್ಲಿ ಪ್ರತಿನಿಧಿ ಮಂಡಲಗಳ ವಿನಿಮಯವು ಅತ್ಯಂತ ಫಲಕಾರಿಯಾಗಿದೆ. ಕಳೆದ ಐದು ವರ್ಷಗಳಲ್ಲಿ ರಶ್ಯದ ಒಕ್ಕೂಟಕ್ಕೆ ಭೇಟಿಯನ್ನಿತ್ತ ಭಾರತೀಯ ಪ್ರತಿನಿಧಿ ಮಂಡಲಗಳ ಸಂಖ್ಯೆಯೂ ಭಾರತದೇಶವನ್ನು ಸಂದರ್ಶಿಸಿದ ಪ್ರತಿನಿಧಿ ಮಂಡಲಗಳ ಸಂಖ್ಯೆಯೂ ವರ್ಷ ವರ್ಷಕ್ಕೆ ಬೆಳೆದಿದೆಯೆಂದು ಹೇಳುವುದಕ್ಕೆ ಆತ್ಯಾನಂದವಾಗುತ್ತದೆ. ಹೀಗಾಗಿ, ೧೯೫೧ರಲ್ಲಿ ರಶ್ಯದ ಒಕ್ಕೂಟಕ್ಕೆ ಮೂರು ಭಾರತೀಯ ಪ್ರತಿನಿಧಿ ಮಂಡಲಗಳು ಭೇಟಿಯನ್ನಿತ್ತಲ್ಲಿ, ೧೯೫೪ರ ವೇಳೆಗೆ ಆ ಸಂಖ್ಯೆಯು ಹದಿನಾರಕ್ಕೆ ಏರಿತು. ೧೯೫೧, ೧೯೫೨ ಅಥವಾ ೧೯೫೩ ಕ್ಕಿಂತಲೂ ಹೆಚ್ಚಾಗಿ ೧೯೫೪ರಲ್ಲಿ ಹೆಚ್ಚು ಗಣನೀಯ ಪ್ರಮಾಣದಲ್ಲಿ ರಶ್ಯದ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಕೆಲಸಗಾರರ ಕ್ರೀಡಾಪಟುಗಳೂ ಭಾರತದೇಶವನ್ನು ಸಂದರ್ಶಿಸಿದರು. ಪ್ರಚಲಿತ ವರ್ಷದ ಪ್ರಥಮಾರ್ಧದಲ್ಲಿ ಸಹ ಅನೇಕ ಭಾರತೀಯ ಪ್ರತಿನಿಧಿಮಂಡಲಗಳು ರಶ್ಯದ ಒಕ್ಕೂಟವನ್ನು ಸಂದರ್ಶಿಸಿದುವು.

ರಶ್ಯಕ್ಕೆ ಭೇಟಿಯನ್ನಿತ್ತ ಭಾರತದ ಸಾಂಸ್ಕೃತಿಕ ಕ್ಷೇತ್ರದಲ್ಲಿನ ಕೆಲಸಗಾರರು ಭಾರತದ ಆರ್ಥಿಕವ್ಯವಸ್ಥೆ ಮತ್ತು ಸಂಸ್ಕೃತಿಯ ವಿಷಯವಾಗಿಭಾಷಣಗಳನ್ನೂ ಸಂಭಾಷಣೆಗಳನ್ನೂ ರಶ್ಯದ ವೈಜ್ಞಾನಿಕರ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ದುಡಿಯುವ ಜನರ ದೊಡ್ಡ ಕ್ಷೇತ್ರವೃಂದಗಳಿಗೆ ಒದಗಿಸಿದರು.

ಸದಭಿಪ್ರಾಯದ ಪ್ರಸಾರ

ಭಾರತ ದೇಶವನ್ನು ಈ ವರ್ಷ ಸಂದರ್ಶಿಸಿದ ರಶ್ಯದ ಪ್ರತಿನಿಧಿ ಮಂಡಲಗಳಲ್ಲಿ ಸೋವಿಯಟ್ ಲೇಖಕರ ಸಂಘದ ಪ್ರಥಮ ಕಾರ್ಯದರ್ಶಿ ಎ. ಸುರ್ಕೋವ್‌ರವರ ನೇತೃತ್ವದಲ್ಲಿದ್ದ ಒಂದು ಸಾಂಸ್ಕೃತಿಕ ಕೆಲಸಗಾರರ ಪ್ರತಿನಿಧಿ ಮಂಡಲವೂ, ಸೋವಿಯಟ್ ವಿಜ್ಞಾನಿಗಳ ಒಂದು ಪ್ರತಿನಿಧಿ ಮಂಡಲವೂ ಮತ್ತು ಸೋವಿಯಟ್ 'ಲಾಯರು'ಗಳ, ಅರಣ್ಯ ಶಾಸ್ತ್ರಜ್ಞರ ಪ್ರತಿನಿಧಿ ಮಂಡಲಗಳೂ ಇದ್ದುವು.

ರಶ್ಯದ ಒಕ್ಕೂಟಕ್ಕೆ ಹಿಂದಿರುಗಿದ ಮೇಲೆ ಈ ಪ್ರತಿನಿಧಿ ಮಂಡಲಗಳ ಸದಸ್ಯರು ರಶ್ಯದ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಅಥವಾ ಸಾರ್ವಜನಿಕ ಸಭೆಗಳಲ್ಲಿ ಭಾಷಣವನ್ನಿತ್ತು, ಸಂಭಾಷಣೆಗಳನ್ನು ನಡೆಸಿ, ತಾವು ಭಾರತದಲ್ಲಿ ಕಂಡ ವಿಷಯಗಳನ್ನು ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಭಾರತೀಯ ಪ್ರತಿನಿಧಿ ಮಂಡಲದ ಸದಸ್ಯರೂ ಜ್ಞಾನ ಪ್ರಸಾರಕ್ಕೆ ಇದೇರೀತಿ ಪ್ರಯತ್ನಿಸಿದರು.

ಪ್ರಧಾನಿಗಳ ಚೈತ್ರಯಾತ್ರೆ

ಭಾರತ ಮತ್ತು ರಶ್ಯದ ಸಂಬಂಧಗಳ ಇತಿಹಾಸದಲ್ಲಿ ನಡೆದ ಮಹೋನ್ನತ ಘಟನೆಯೆಂದರೆ, ಭಾರತದ ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರೂರವರು ರಶ್ಯಕ್ಕೆ ಕೊಟ್ಟಭೇಟಿ. ಭಾರತ ಸರಕಾರದ ಪ್ರಮುಖ ವ್ಯಕ್ತಿಗೆ ರಶ್ಯದ ಜನತೆಯಿಂದ ದೊರೆತ ಆದರದ ಸ್ವಾಗತವು ಭಾರತದ ಮಹಾಜನತೆಯ ಬಗ್ಗೆ ಸೋವಿಯಟ್ ಜನತೆಯು ತೋರಿಸುತ್ತಿರುವ ಆಳವಾದ ಸಹಾನುಭೂತಿ ಮತ್ತು ಸ್ನೇಹಭಾವನೆಗಳ ಸುಸ್ಪಷ್ಟವಾದ ಪ್ರದರ್ಶನವಾಗಿದೆ. ಸೋವಿಯಟ್ ಜನತೆಯೊಡನೆ ಅವರ ನಿಕಟ ಸಂಪರ್ಕ, ಸೋವಿಯಟ್ ಸರಕಾರದ ಮುಖಂಡರೊಡನೆ ಅವರ ವೈಯಕ್ತಿಕ ಸಂಪರ್ಕ, ಮತ್ತು ಅಂತ್ಯತಃ. ಜಂಟಿ ಘೋಷಣೆಗೆ ಸಹಿಹಾಕಿದುದು-ಇವೆಲ್ಲವೂ ಸಾರ್ವತ್ರಿಕ ಶಾಂತಿ ಮತ್ತು ಭದ್ರತೆಗಳಿಗಾಗಿ ಎರಡೂ ದೇಶಗಳ ನಡುವಣ ಸ್ನೇಹ—ಸಹಕಾರಗಳನ್ನು ಇನ್ನೂ ಬಲಪಡಿಸಲು ಹೊಸಶಕ್ತಿಯಿಂದ ಕೂಡಿದ ಉತ್ತೇಜನೆಯಾಗಿ ಪರಿಣಮಿಸಿರುತ್ತವೆ.

ರಶ್ಯ ಮತ್ತು ಭಾರತದೇಶಗಳ ನಡುವಣ ಸಾಂಸ್ಕೃತಿಕ ಸಮೀಕರಣದಲ್ಲಿ ಒಂದು ಮುಖ್ಯವಾದ ಪಾತ್ರವನ್ನು ರಶಿಯನ್ ಭಾಷೆಯಲ್ಲಿಯೂ ಆ ದೇಶದ ಇತರ ಭಾಷೆಗಳಲ್ಲಿಯೂ ಪ್ರಕಟವಾದ ಭಾರತೀಯಲೇಖಕರ ಕೃತಿಗಳಅನುವಾದಗಳು ಸಹಿಸಿವೆ. ರಶ್ಯದ ಓದುಗರ ಬೇಡಿಕೆಯನ್ನು ತೃಪ್ತಿಗೊಳಿಸುವ ಪ್ರಯತ್ನದಲ್ಲಿ ರಶ್ಯದ ಪ್ರಕಾಶನ ಸಂಸ್ಥೆಗಳು ೧೯೫೮ರಿಂದಲೂ ರಶಿಯನ್ ಭಾಷೆಯಲ್ಲಿ ಮತ್ತು ರಶ್ಯದ ಇತರ ಭಾಷೆಗಳಲ್ಲಿ ಕೂಡ ಭಾರತೀಯ ಗದ್ಯ ಲೇಖಕರ ಹಾಗೂ ಕವಿಗಳ ಕೃತಿಗಳ ೧೬ಕ್ಕಿಂತಲೂ ಹೆಚ್ಚು ಸಂಸ್ಕರಣಗಳನ್ನು ಪ್ರಕಟಿಸಿವೆ. ಇಲ್ಲಿ ಅಗಾಗ್ಯೆ ತಮ್ಮ ಕೃತಿಗಳ ಪ್ರಕಟನೆಯನ್ನು ಸಡೆದ ಲೇಖಕರಲ್ಲಿ ಶ್ರೀಗಳಾದ ಪ್ರೇಮಚಂದ್, ಕೃಷ್ಣ ಚಂದ್ರ, ಮುಲ್ಕ್‌ರಾಜ್ ಆನಂದ್, ವಲ್ಲತ್ತೋಳ್, ಅಲಿ ಸರ್ದಾರ್ ಜಾಫ್ರಿ, ಯಶಪಾಲ್, ಭಟ್ಟಾಚಾರ್ಯ, ನವತೇಜ್, ಮುಕರ್ಜಿ, ಮತ್ತಿತರ ಹೆಸರುಗಳನ್ನು ನಾವು ಕಾಣುತ್ತೇವೆ.

ಪುಸ್ತಕ ಪ್ರಕಾಶನ

ಭಾರತದ ಹಿರಿಯ ಲೇಖಕರಾದ ಶ್ರೀ ರವೀಂದ್ರನಾಥ ಠಾಕೂರರ ಕೃತಿಗಳ ಬಗ್ಗೆ ವಿಶೇಷ ಉಲ್ಲೇಖವನ್ನಲ್ಲಿ ಮಾಡಬೇಕಾಗಿದೆ. ರಶ್ಯದಲ್ಲಿ ಕವೀಂದ್ರ ರವೀಂದ್ರರ ಹೆಚ್ಚು ಕಡಿಮೆ ಎಲ್ಲಾ ಕೃತಿಗಳೂ ಪ್ರಕಟವಾಗಿವೆ. ಈ ವರ್ಷ ಈ ಭಾರತೀಯ ಶ್ರೇಷ್ಠ ಸಾಹಿತಿಯ ಸಂಕಲಿತ ಕೃತಿಗಳ ಎಂಟು ಸಂಪುಟಗಳ ಸಂಸ್ಕರಣದ ಪ್ರಕಟನೆಯನ್ನು ರಶ್ಯನ್ನರು ಕಾಣಲಿದ್ದಾರೆ.

ಈ ವರ್ಷ ಪ್ರಕಟವಾದ ಶ್ರೀ ನೆಹರೂರವರ "ಭಾರತ ದರ್ಶನ"ದ ರಶಿಯನ್ ಭಾಷಾಂತರವು ಜನತೆಯಲ್ಲಿ ಅತ್ಯಂತ ಕುತೂಹಲವನ್ನು ಕೆರಳಿಸಿದೆ. ಎಸ್. ಚಟರ್ಜಿ ಮತ್ತು ಡಿ. ದತ್‌ರವರ "ಭಾರತದ ಪ್ರಾಚೀನ ದರ್ಶನ ಶಾಸ್ತ್ರ" ವೆಂಬ ಉದ್ಗ್ರಂಥವು ಹೆಚ್ಚು ಪ್ರಮಾಣದಲ್ಲಿ ಮಾರಾಟವಾಗುತ್ತಿದೆ.

ಸಾಂಸ್ಕೃತಿಕ ಪ್ರದರ್ಶನ

ರಶ್ಯದ ಕಲಾಸರಿಷತ್ತಿನಲ್ಲಿ ಈ ವರ್ಷ ತೆರೆಯಲಾದ ಭಾರತೀಯ ಸಂಸ್ಕೃತಿ ಕಲಾಪ್ರದರ್ಶನದಲ್ಲಿ, ಮೆಧಾವಿಗಳಾದ ಭಾರತೀಯ ಜನತೆಯ ಸ್ಫೂರ್ತಿಪೂರ್ಣವಾದ ಕಲೆಯ ಹಾಗು ಭಾರತವನ್ನು ಕುರಿತು ಚಿತ್ರಿಸಲಾದ ಸ್ವಾತಂತ್ರ್ಯೋತ್ತರದ ಕೃತಿಗಳ, ಮತ್ತು ಭಾರತದೇಶಾಧ್ಯಯನ ಶಾಸ್ತ್ರದ ಇತಿಹಾಸದ ಪರಿಚಯವನ್ನು ಮಾಸ್ಕೋ ನಗರದ ಜನರು ಮಾಡಿಕೊಂಡರು.

ಪ್ರದರ್ಶನವು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿ, ಸದಾಕಾಲದಲ್ಲಿಯೂ ಜನರ ಅಸಾಧಾರಣ ಆಸಕ್ತಿಯನ್ನು ಸೆಳೆಯಿತು. ವಿಶ್ವ ಸಂಸ್ಕೃತಿಯಬಜಾನಗೆಭಾರತೀಯ ಜನತೆಯುನೀಡಿದ ಮಹತ್ವ ಕೊಡುಗೆಯ ನಿದರ್ಶನವಾಗಿತ್ತು. ಈ ಪ್ರದರ್ಶನ. ರಶ್ಯದಲ್ಲಿ ಭಾರತದೇಶದ ರಾಯಭಾರಿಗಳಾಗಿರುವ ಶ್ರೀ ಕೆ. ಪಿ. ಎಸ್. ಮೆನೋನ್ ಇವರ ಮಾತುಗಳಲ್ಲಿ ಅದು ಬೇರೆ ಜನತೆಗಳ ಮಹಾತ್ಸಾಧನೆಗಳನ್ನು ಮೆಚ್ಚಲು ರಶ್ಯದ ಜನತೆಗಿರುವ ಸಂಯೋಗ್ಯತೆಯ ಉದಾಹರಣೆಯಾಯಿತು.

ಮಾಸ್ಕೋ ನಗರದಲ್ಲಿ ಈ ಭಾರತೀಯ ಸಂಸ್ಕೃತಿ ಕಲಾ ಪ್ರದರ್ಶನವು ನಡೆಯುತ್ತಿದ್ದ ವೇಳೆಯಲ್ಲಿಯೇ, ಭಾರತದೇಶದಲ್ಲಿ, ಭಾರತದ ರಾಜಧಾನಿಯಾದ ಹೊಸ ದೆಹಲಿ ಮತ್ತು ಇತರ ದೊಡ್ಡ ಪಟ್ಟಣಗಳಲ್ಲಿ ರಶ್ಯದ ಜನಪ್ರಿಯ ಕಲಸಗಾರರ ಜೀವನವನ್ನು ಚಿತ್ರಿಸುವ ಒಂದು ಛಾಯಾಚಿತ್ರ ಪ್ರದರ್ಶನಪೂರಶ್ಯದ ಹಸ್ತಕೌಶಲ್ಯದ ಮತ್ತು ಕೈಗಾರಿಕೋದ್ಯಮದ ವಸ್ತುಗಳಿಂದ ಕೂಡಿದ ಇನ್ನೊಂದು ಪ್ರದರ್ಶನವೂ ನಡೆಯುತ್ತಿದ್ದುವು.

ಅಧ್ಯಯನಕ್ಕೆ ಪ್ರೋತ್ಸಾಹ

ಭಾರತ ದೇಶಾಧ್ಯಯನ ಶಾಸ್ತ್ರವನ್ನು ಕಲಿಸುವುದರ ಜತೆಗೇ, ಮಾಸ್ಕೋ, ಲೆನಿನ್‌ಗ್ರಾಡ್, ಟಾಷ್ಕೆಂಟ್, ಟ್ಬಿಲಿಸಿ ವಿಶ್ವವಿದ್ಯಾನಿಲಯಗಳು ಭಾರತ ದೇಶದ ಇತಿಹಾಸ, ಆರ್ಥ ವ್ಯವಸ್ಥೆ ಮತ್ತು ಸಂಸ್ಕೃತಿಗಳ ವಿಷಯವಾಗಿ ಸಂಶೋಧನೆಗಳನ್ನು ನಡೆಸುತ್ತಿವೆ. ದಿಲ್ಲಿಯ ವಿಶ್ವವಿದ್ಯಾಲಯವು ಭಾರತದಲ್ಲಿ ಇದೀಗ ಮೊದಲ ಬಾರಿ ರಶ್ಯನ್ ಭಾಷೆಗೆ ಶೈಕ್ಷಣಿಕ ಕ್ರಮದಲ್ಲಿ ಸ್ಥಾನವಿತ್ತಿದೆ.

ಮಾಸ್ಕೋ ನಗರದಲ್ಲಿ ರಶ್ಯದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಪೌರಸ್ತ್ಯ ಅಧ್ಯಯನ ವಿದ್ಯಾ ಮಂದಿರದಲ್ಲಿ ಸಹ ಭಾರತ ದೇಶಾಧ್ಯಯನ ಶಾಸ್ತ್ರದಲ್ಲಿ ಸಂಶೋಧನೆ ನಡೆಯುತ್ತಿದೆ. ಸಂಸ್ಕೃತ, ಪ್ರಾಕೃತ ಮತ್ತು ಇತರ ಆಧುನಿಕ ಭಾರತೀಯ ಭಾಷೆಗಳಲ್ಲಿರುವ ಭಾರತೀಯ ಪಾಂಡುಲಿಪಿಗಳ ಪರೀಕ್ಷೆ ಮತ್ತು ವಿವರಣೆ ಇಲ್ಲಿ ನಡೆಯುತ್ತಿದೆ.

ಮಾಸ್ಕೋ ನಗರದಲ್ಲಿರುವ ಪೌರಸ್ತ್ಯ ಸಂಸ್ಕೃತಿಗಳ ವಿವಿಧ ವಸ್ತು ಸಂಗ್ರಹಾಲಯದಲ್ಲಿಯೂ ಲೆನಿನ್‌ಗ್ರಾಡ್ ನಗರದಲ್ಲಿರುವ "ಪರ್ಣಕುಟಿ" ವಸ್ತು ಸಂಗ್ರಹಾಲಯದಲ್ಲಿಯೂ ಭಾರತೀಯ ಕಲೆಯು ವಿಶೇಷತಃ ಅಭ್ಯಸಿಸಲ್ಪಡುತ್ತಿದೆ. ಭಾರತ ದೇಶದ ಮಾನವ ಕುಲವಿವರಣ ಶಾಸ್ತ್ರದ ಅಧ್ಯಯನವು ರಶ್ಯದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಮಾನವ ಕುಲ ವಿವರಣ ಶಾಸ್ತ್ರ ವಸ್ತು ಸಂಗ್ರಹಾಲಯದಲ್ಲಿ ನಡೆಯುತ್ತಿದೆ. ಪೌರಸ್ತ್ಯ ಅಧ್ಯಯನಗಳ ವಿದ್ಯಾಮಂದಿರದಲ್ಲಿಯೂ, ಪರದೇಶ ಭಾಷೆಗಳ ಮತ್ತು ರಾಷ್ಟ್ರೀಯ ಭಾಷೆಗಳ ಶಬ್ದಕೋಶಗಳ ರಾಜ್ಯ ಪ್ರಕಟನಾಲಯದಲ್ಲಿಯೂ ಶಬ್ದಕೋಶಗಳ ಸಂಕಲನದ ಪ್ರಾರಂಭ ಕಾರ್ಯವು ನಡೆಯುತ್ತಿದೆ.

ವೈಜ್ಞಾನಿಕ ಸಮ್ಮೇಳನ

ನಲವತ್ತೈದನೆಯ ವಿಜ್ಞಾನ ಸಮ್ಮೇಳನದ ಸಭೆಯಲ್ಲಿ ರಶ್ಯದ ವಿಜ್ಞಾನಿಗಳು

(೧೨ನೆಯ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಸೆನ್ಸಿ, ಮಂಗಳೂರು.
2. ವಿ. ವಿ. ಲೈಬ್ರೆರಿ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿಸ್ತರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,

ಮದ್ರಾಸ್—3.

ಹೊಸ ರೂಪ ತಳೆದಿರುವ ಗೋವೆಯ ಹೋರಾಟ

"ಗೋಮಾಂತಕರಿಗೆ ಬೇಕಾದವರಾಗಿಯೂ ಪೋರ್ಚುಗೀಜರು ಇರಲಾಗದು"

ರಾಜ್ಯ ಸಭೆಯಲ್ಲಿ ಗೋವೆಯ ಕುರಿತು ನಡೆದ ಚರ್ಚೆಗೆ ಉತ್ತರ ಕೊಡುತ್ತಾ ನೆಹರುಗಳು ಸದ್ಯದ ಪರಿಸ್ಥಿತಿಯಲ್ಲಿ ಸತ್ಯಾಗ್ರಹವು ಏಕೆ ಇಷ್ಟವಲ್ಲ ಎಂಬುದನ್ನು ವಿವರಿಸಿದರು. ಗೋವೆಯ ಗಡಿಯನ್ನು ಭಾರತ ಸರಕಾರವು ಸಂಪೂರ್ಣ ಮುಚ್ಚಿರುವುದರಿಂದ ಸರಹದ್ದನ್ನು ಮೀರಿ ಪ್ರವೇಶಿಸುವುದು ಭಾರತೀಯರಿಗೆ ಉಚಿತವಲ್ಲವೆಂದು ಅವರ ಹೇಳಿಕೆಯ ಸಾರ.

ಸ್ವಾತಂತ್ರ್ಯವೇ ಧ್ಯೇಯ

ಪೋರ್ಚುಗೀಜರ ವಶವಿರುವ ಈ ತುಣುಕು ನೆಲಗಳ ಕುರಿತು ಭಾರತದ ಧೋರಣೆ ಏನೆಂಬುದನ್ನು ಸಹ ಪ್ರಧಾನಿಗಳು ಸ್ಪಷ್ಟ ಮಾತುಗಳಲ್ಲಿ ಪುನರುಚ್ಚರಿಸಿದರು. ವಸಾಹತು ಆಳಿಕೆಯು ಅಲ್ಲಿ ಕೊನೆಗೊಳ್ಳಬೇಕು; ಅದಕ್ಕಾಗಿ ಭಾರತವು ಪ್ರಯತ್ನಿಸುತ್ತದೆ. ಒಮ್ಮೆ ಈ ಪ್ರದೇಶಗಳು ಸ್ವತಂತ್ರವಾದರೆ, ತಮ್ಮ ಭವಿಷ್ಯವನ್ನು ಅವೇ ನಿರ್ಣಯಿಸಲು ಶಕ್ತವಾಗುತ್ತವೆ ಎಂದರು.

ಪೋರ್ಚುಗೀಜರು ಇರಲಾಗದು

ಭಾರತದೊಡನೆ ಸೇರ್ಪಡೆ ಹೊಂದ ಬೇಕೆಂಬ ನಿರ್ಣಯವನ್ನೆ ಈ ಪ್ರದೇಶಗಳು ಸ್ವಾತಂತ್ರ್ಯ ಸಂಪಾದಿಸಿದ ಬೆನ್ನಿಗೆ ಮಾಡುವವೆಂಬುದರಲ್ಲಿ ತನಗೆ ತಿಲಾಂಶ ಸಂದೇಹವೂ ಇಲ್ಲವೆಂದು ನೆಹರು ಸಾರಿದರು. ಅದೇನೇ ಇರಲಿ— ಗೋಮಾಂತಕರು ಆಕ್ಷೇಪಿಸದಿದ್ದರೂ ಸಹ, ಪೋರ್ಚುಗೀಜರು ಭಾರತದ ಭೂಭಾಗದಲ್ಲಿ ಇನ್ನೂ ರಾಣ್ಯ ಹೊಡೆದು ನಿಲ್ಲುವುದನ್ನು ತಾನಾಗಲೀ ಸರಕಾರವಾಗಲೀ ಎಷ್ಟಕ್ಕೂ ಸಹಿಸುವುದಿಲ್ಲ ಎಂದವರು ಖಂಡತುಂಡವಾಗಿ ಹೇಳಿದರು.

ಪ್ರತಿ ಪಕ್ಷಗಳ ಪ್ರತಿಕ್ರಿಯೆ

ರಾಜ್ಯ ಸಭೆಯು ನೆಹರುಗಳ ನೀತಿಯನ್ನು ಅನುಮೋದಿಸಿತು. ಆದರೆ, ದೇಶದಲ್ಲಿ ಎಲ್ಲರ ಪ್ರತಿಕ್ರಿಯೆ ಇಷ್ಟು ಸೌಮ್ಯವಾಗಿಲ್ಲ ಸತ್ಯಾಗ್ರಹವು ಇಷ್ಟವಲ್ಲ ಎಂದು ಕಾಂಗ್ರೆಸಾಗಲೀ ಸರಕಾರವಾಗಲೀ ಒಂದು ತಿಂಗಳ ಮೊದಲೇ ಹೇಳುತ್ತಿದ್ದರೆ ಮತ್ತು ಸತ್ಯಾಗ್ರಹಿಗಳನ್ನು ಆಗಲೇ ತಡೆಯುತ್ತಿದ್ದರೆ, ಆಗೋಕ್ತು ಗೂರಂದು ನಡೆದ ವ್ಯರ್ಥ ಹತ್ಯಾಕಾಂಡಕ್ಕೆ ಎಡೆ ಸಿಗುತ್ತಿರಲಿಲ್ಲ ಎಂದು ಕೆಲವರು ಹೇಳುವರಾದರೆ, ಗೋವೆಯ ವಿಮೋಚನೆಗಾಗಿ ಹೋರಾಡುವವರ ಬೆನ್ನಿನಲ್ಲಿ ಇರಿಯುವ ಧೋರಣೆ ಇದು ಎಂದು ಇನ್ನು ಕೆಲವರು ಟೀಕಿಸಿದ್ದಾರೆ.

ಬೇರೆಯೇ ನಿಲುಮೆ

ಕಾಂಗ್ರೆಸಿನ ಅಭಿಪ್ರಾಯವನ್ನು ಸರಕಾರ ಒಪ್ಪಿಕೊಂಡಿದೆ ಎಂಬುದು ಸ್ಪಷ್ಟವಾಗಿರುವಾಗ, ಪ್ರಜಾ ಸಮಾಜವಾದಿ, ಜನ ಸಂಘ, ಕಮ್ಯುನಿಸ್ಟೇತರ ಮುಂತಾದ ಪಕ್ಷದ ಧುರೀಣರು ಇದು ರಾಷ್ಟ್ರದ ನಿರ್ಣಯವಾಗಲಾರದು ಎಂದು ಹೇಳಿ, ವಿಮೋಚನೆಯ ಹೋರಾಟವನ್ನು ಮುಂದುವರಿಸಲು ತಾವು ಕೈಗೊಳ್ಳಬೇಕಾದ ಕ್ರಮಗಳನ್ನು ಕಾಂಗ್ರೆಸು ಮತ್ತು ಸರಕಾರದಿಂದ ಸ್ವತಂತ್ರವಾಗಿ ನಿರ್ಣಯಿಸುವುದಾಗಿ ಪ್ರಕಟಿಸಿದ್ದಾರೆ

ಅಳ್ವಾರೀಸರ ನಿಶ್ಚಯ

ಅಹಿಂಸಾತ್ಮಕ ಸತ್ಯಾಗ್ರಹವನ್ನು ಸಂಘಟಿಸುತ್ತಿದ್ದ ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಸಹಕಾರವನ್ನು ಇವರು ಪಡೆಯಲಿದ್ದಾರೆ. ಇದಕ್ಕೆ ಮುಂಚೆ ರಾಷ್ಟ್ರೀಯ ಕಾಂಗ್ರೆಸಿನ ಧುರೀಣರಾದ ಶ್ರೀ ಪೀಟರ ಅಳ್ವಾರೀಸರು ನೆಹರುಗಳನ್ನು ಕಾಣಲಿರುವರೆಂದೂ ಈ ಭೇಟಿಯ ಪರಿಣಾಮವು ಪ್ರತಿಪಕ್ಷಗಳ ನಿಶ್ಚಯದ ಮೇಲೆ ಆಗದಿರದೆಂದೂ ಹೇಳಲಾಗುತ್ತದೆ.

ಪಕ್ಷಗಳ ಸ್ವಾರ್ಥ

ರಾಷ್ಟ್ರದ ಅಂತಾರಾಷ್ಟ್ರೀಯ ಧೋರಣೆಯ ಕುರಿತು ದೇಶದ ಜನತೆಯ ಮತ್ತು ಎಲ್ಲ ಪಕ್ಷಗಳ ವಿಶ್ವಾಸವನ್ನು ಸರಕಾರದ ಪ್ರಭೃತಿಗಳು ಸಂಪಾದಿಸಬೇಕಾಗಿದೆ ಎಂಬುದು ನಿಜ. ಆದರೆ, ಅತಿರೇಕವಾದಿಗಳಾಗಿ ಭಾವನಾತ್ಮಕ ರಂಗದಲ್ಲೆ ಪ್ರತಿ ಪಕ್ಷಗಳು ವಿಹರಿಸುತ್ತಿರುವಷ್ಟು ಕಾಲ ಇದು ನೆರವೇರುವುದು ಕಷ್ಟ. ಗೋವೆಯ ಆಂದೋಲನವನ್ನು ರಾಜಕೀಯ ಸ್ವಾರ್ಥಕ್ಕಿಂತ ಮಿಕ್ಕಿದ ಪ್ರಶ್ನೆ ಎಂದು ಭಾವಿಸಬೇಕಾಗಿದ್ದರೂ ಸತ್ಯಾಗ್ರಹವನ್ನು ನಿಲ್ಲಿಸಿ, ಕೇವಲ ಸರಕಾರದ ಮಟ್ಟದಲ್ಲಿ ವಿಮೋಚನೆ ಸಾಧಿಸುವ ಈಗಿನ ನಿರ್ಣಯವು ಪ್ರತಿಪಕ್ಷಗಳಿಗೆ ಜನಪ್ರಿಯತೆಯನ್ನು ಸಂಪಾದಿಸುವ ಸದವಕಾಶವನ್ನು ತಪ್ಪಿಸಿದೆ ಎಂಬುದು ಸುಳ್ಳಲ್ಲ.

ಪ್ರತಿಷ್ಠಿತರ ಅಭಿಪ್ರಾಯ

ಕಾಂಗ್ರೆಸು ತನಗೆಯೇ ಗೋವೆಯನ್ನು ವಿಮೋಚನೆಗೊಳಿಸಿದ ಕೀರ್ತಿ ಸಿಗಬೇಕೆಂದು ಸತ್ಯಾಗ್ರಹವನ್ನು ತಡೆಗಟ್ಟಲು ನಿರ್ಧರಿಸಿತೆಂದು ಆರೋಪಿಸಲಾಗುತ್ತದೆ. ಆದರೆ, ಸರ್ದಾರ ಕೆ. ಎಂ. ಪಣಿಕ್ಕರ, ಶ್ರೀ ವಿ. ಕೆ. ಕೃಷ್ಣ ಮೆನೊನ್ ಮುಂತಾದ ಅಂತಾರಾಷ್ಟ್ರೀಯ ಖ್ಯಾತಿಯ ರಾಜಕಾರಣಿಗಳು ನೈತಿಕ ಹೊಣೆಗಾರಿಕೆ ಇಲ್ಲದ ಪೋರ್ಚುಗೀಜರ ವಿರುದ್ಧ ಸತ್ಯಾಗ್ರಹವನ್ನು ಭಾರತೀಯರು ಹೂಡುವುದು ಅಸಂಬದ್ಧವೆಂದು ಅಭಿಪ್ರಾಯ ಪಟ್ಟಿದ್ದಾರೆ.

ವ್ಯರ್ಥ ಆಕ್ಷೇಪ

ಪಾಶ್ಚಾತ್ಯ ಲೋಕದ ಒತ್ತಾಯಕ್ಕೆ ಭಾರತ ಸರಕಾರ ಮಣಿದಿದೆ ಎಂದೂ ಟೀಕಿಸಲಾಗುತ್ತದೆ. ಆದರೆ ಇದರಲ್ಲಿ ತಥ್ಯಾಂಶ ಎಳ್ಳಷ್ಟೂ ಇಲ್ಲ—ಏಕೆಂದರೆ ಭಾರತದ ನಿಲುಮೆಗೆ ಪಾಶ್ಚಾತ್ಯ ದೇಶಗಳ ಬೆಂಬಲವೂ ಸಾಕಷ್ಟು ಹೆಚ್ಚು ಸಿಕ್ಕಿದೆಯಾಗಿ ನೆಹರುಗಳು ತಿಳಿಸಿದ್ದಾರೆ. ಸತ್ಯಾಗ್ರಹವು ಶಾಂತ ರೀತಿಯಲ್ಲಿ ನಡೆದಿಲ್ಲ; ಅದು ತೀರ ಅಯಶಸ್ವಿಯಾಯಿತು ಎಂದು ಗೋವೆಯ ಗವರ್ನರರು ಕಾಂಗ್ರೆಸಿನ ನಿಶ್ಚಯದ ಕುರಿತು ಕಟ್ಟಿಕೊಂಡ ಅರ್ಥವೆಷ್ಟು ಹಾಸ್ಯಾಸ್ಪದವೋ ಭಾರತ ಸರಕಾರವು ಪಾಶ್ಚಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ಮುಂದೆ ತಲೆ ತಗ್ಗಿಸಿತೆಂಬುದೂ ಅಷ್ಟೇ ಆಧಾರವಿಲ್ಲದ ಕುಹಕ

ಪೋಲೀಸರಿಂದ ತಡೆ

ಸತ್ಯಾಗ್ರಹವನ್ನು ಮುಂದೊತ್ತಲು ಈಗಲೂ ಕೆಲವು ಸಾಹಸಗಳು ನಡೆಯುತ್ತಿವೆ—ಆದರೆ ಭಾರತೀಯ ಪೋಲೀಸರು ಅವರನ್ನೆಲ್ಲ ತಡೆದು ನಿಲ್ಲಿಸುತ್ತಿದ್ದಾರೆ. ಕಳ್ಳ ವ್ಯಾಪಾರವನ್ನು ಅಡಸ್ಟು, ಕಡಿಮೆ ಮಾಡಲು ಸುಂಕದ ಅಧಿಕಾರಿಗಳು ವಿಶೇಷ ದಕ್ಷತೆಯಿಂದ ಕೆಲಸಕ್ಕೆ ತೊಡಗಿದ್ದಾರೆ. ಆರ್ಥಿಕ ದಿಗ್ಬಂಧನ ಕ್ರಮಗಳ ಪರಿಣಾಮವು ಗೋವೆಯಲ್ಲಿ ನಿಧಾನವಾಗಿ ಕಂಡು ಬರ ತೊಡಗಿದೆ.

ಅಡವಿಡುವ ಹವಣು

ತಮ್ಮ ಅಡಚಣೆಗಳನ್ನು ದೂರಮಾಡಿಕೊಳ್ಳಲು ಪೇಚಾಡುತ್ತಿರುವ ಪೋರ್ಚುಗೀಜರು ಪಾಕಿಸ್ತಾನದ ಸಹಾಯವನ್ನು ಹೆಚ್ಚು ಹೆಚ್ಚಾಗಿ ಪಡೆಯಲು ನೋಡುತ್ತಿದ್ದಾರೆ ಅವರಿಗೆ ದೀವ ಮತ್ತು ದಮಣಗಳ ಮೇಲೆ ಈಗ ಆಶೆಯೇನೂ ಉಳಿದಿಲ್ಲವೆಂದು ವರದಿಗಳು ಹೇಳುತ್ತವೆ. ನಮಗೆ ಬರುತ್ತಿರುವ ಸುದ್ದಿಗಳನ್ನು ನಂಬಬಹುದಾದರೆ, ಇವೆರಡು ತುಣುಕು ನೆಲಗಳನ್ನು ಪಾಕಿಸ್ತಾನಕ್ಕೆ ಅಡವಿನ ರೂಪದಲ್ಲಿ ಕೊಟ್ಟು, ಅದಕ್ಕೆ ಪ್ರತಿಯಾಗಿ ಆಕ್ಕೆ ಮತ್ತಿತರ ನಿತ್ಯೋಪಯೋಗದ ಸರಕುಗಳನ್ನೂ ವಿಮಾನ ಸಾರಿಗೆಯ ಸೌಕರ್ಯವನ್ನೂ ಪಡೆಯಲು ಪೋರ್ಚುಗೀಜರು ಹವಣಿಸಿದ್ದಾರೆ.

ಪಾಕಿಸ್ತಾನದ ಅಡ್ಡಿ

ಗೋವೆಗೆ ಪಾಕಿಸ್ತಾನವು ತನ್ನ ಸೈನಿಕರನ್ನು ಕಳಿಸಿದೆ ಎಂಬ ಸುದ್ದಿ ನಿರಾಧಾರವಾದುದೆಂದು ನೆಹರು ತಿಳಿಸಿದ್ದಾರೆ. ಆದರೆ ಪಾಕಿಸ್ತಾನವು ಬಾಂಡುಂಗಿನ ಆಕ್ರೇಸ್ಯ ಪರಿಷತ್ತಿನ ರಾಷ್ಟ್ರವಾಗಿದ್ದುಕೊಂಡು ಗೋವೆಯಲ್ಲಿನ ವಸಾಹತು ವಾದದ ಕುರಿತು ಭಾರತದೊಡನೆ ಸಹಾನುಭೂತಿ ಪರವಾಗಿ ವರ್ತಿಸುವ ಅವಶ್ಯಕತೆ ಬಹಳಷ್ಟಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ ಹೀಗಿರುತ್ತಾ ದೀವ ಮತ್ತು ದಮಣಗಳನ್ನು ಪಾಕಿಸ್ತಾನ ಒತ್ತೆ ಇಟ್ಟುಕೊಳ್ಳುವಷ್ಟು ಮುಂದರಿದರೆ, ಅದರ ಮಾತು ಮತ್ತು ಕೃತಿಗಳಲ್ಲಿ ಎಷ್ಟು ಅಂತರವಿದೆ ಎಂದು ತಿಳಿದು ಬರುವುದಷ್ಟೇಯಲ್ಲ— ಅದರ ಅಂತಾರಾಷ್ಟ್ರೀಯ ಘನತೆಯೂ ತಗ್ಗುತ್ತದೆ. ಭಾರತದ ಮಟ್ಟಿಗೆ ಪೋರ್ಚುಗೀಜರು ಹೊಸ ಪೀಕಲಾಟವೊಂದನ್ನು ಉಂಟುಮಾಡಿದಂತಾಗುತ್ತದೆ.

ಪುತ್ತೂರು ಡಿ. ಮುಂ. ಕೋರ್ಟಿನಲ್ಲಿ

R. E P. 75/55 O. S 348/41

R. E. A. 292/55-.

ಸುಬ್ಬಮ್ಮ— ಅರ್ಜಿದಾರಳು

ವೆಂಕಪ್ಪಯ್ಯ ಸಹಾ— ಎದ್ರಿರು.

ವಾದಿರು 1 ವೆಂಕಪ್ಪಯ್ಯ ಮಹಾಬಲಯ್ಯನವರ ಮಗ ಉಜ್ರಿ ಗ್ರಾಮಸ್ತ— ೨, ಪದ್ಮ ಮ್ಯಾಲಿ ಲಚ್ಚು ಮ್ಯಾಲಿ ಅಳಿಯ ದೇವಸ್ಥ ಮೂಡೂರುಗ್ರಾಮ— ೩, ಜಾಕು-೩ನೇ ಎದ್ರಿ ಪದ್ಮ ಮ್ಯಾಲಿ ಸೂಸೆ ಉಜ್ರಿಗ್ರಾಮ— ೪, ನೇ ಮಕ್ಕ—ಸದ್ರಿ ೩ನೇ ಎದ್ರಿ ಪದ್ಮ ಮ್ಯಾಲಿ ಸೂಸೆ- ದೇವಸ್ಥ ಮೂಡೂರು ಗ್ರಾಮ- ೭, ರಾಮಚಂದ್ರ ಆಚಾರ್ಯ ಶ್ರೀನಿವಾಸ ಆಚಾರ್ಯರ ಮಗ ಕೊಳನಾಡು ಗ್ರಾಮಸ್ತ ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲ್ಯ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ಅಮ್ಲುಜಾರಿಯಲ್ಲಿ ದಿಕ್ರಿ ಪ್ರಕಾರ ಅರ್ಜಿದಾರಳಿಗೆ ಬಹಾ ಜೀವನಾಂಶಕ್ಕೆ ಜವಾಬ್ದಾರಿಯಿರುವ ಆಸ್ತಿ ಮಾರಾಟದ ಕುರಿತು ಹಾಜ್ರು ಪಡ್ಸಿದ ಆಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವರೆಯೂ, ಏಲಂನಲ್ಲಿ ದರ ಕಾಸ್ತಿಗೆ ನಿಲ್ಲುವದೇ ತನಗೂ ಕಮಿಶನ್ ಕೊಡ್ಸಬೇಕೆಂತ ಕೊಟ್ಟ R E A 29 /5 ನೇ ಅರ್ಜಿಕೂಡಾ ತಾ. 17—9—55ಕ್ಕೆ ಕ್ರಾಯದೆ ಇಟ್ಟಿರುವದರಿಂದ ಆ ಕುರಿತು ಅಳ್ವೇಪ ಉಳ್ಳವರು ಸದ್ರಿ ವ್ಯಾದದಿನ ಪೂರ್ವಾಹ್ನ ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜ್ರಾಗಿ ಉದಪರಿಸತಕ್ಕದ್ದು— ತಪ್ಪಿದ್ರೆ ನಿಮನ್ನು ಶಿಕ್ಷಾಮಾಡಿ ಯುಕ್ತಕಂದಂತೆ ತೀರ್ಮಾನಿಸಲಾದೀತು—

M. Sadashiva Rao,

Pleader for Petr.

ಪುತ್ತೂರು ತಾ. 31-8-55.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಮಿಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆಗೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ



೧೫ ಅಥವಾ ೧೭ ಘಟಕಗಳ ಭಾರತ

ಫಜಲ ಅಲಿ ಆಯೋಗದ ಸೂಚನೆಗಳ ಮೇಲೆ ಮುಂಬೆಳಕು

ರಾಜ್ಯಗಳ ಮರುಸಂಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗದ ವರದಿಯು ಈ ತಿಂಗಳಾಂತ್ಯದೊಳಗೆ ಪ್ರಕಟವಾಗಲಿದೆಯೆಂದು ಹೇಳಲಾಗುತ್ತದೆ. ಆಯೋಗದ ಸೂಚನೆಗಳ ಕುರಿತು ಈಗ ಕೇವಲ ಊಹಾಮೋಹೆಗಳು ನಡೆದಿವೆ; ಮತ್ತು ಕೆಲವು ಸುದ್ದಿಗಳಿಗೆ ಇದು ಅವಕಾಶ ಮಾಡಿಕೊಟ್ಟಿರುತ್ತದೆ.

ಪ್ರಮುಖರ ಅಭಿಪ್ರಾಯ

ಇಂಥ ಸುದ್ದಿಗಳನ್ನು ಹಬ್ಬಿಸುವುದರಲ್ಲಿ ಪ್ರಮುಖ ಧುರೀಣರೂ ಸೇರಿದ್ದಾರೆ ಎಂಬುದರಿಂದ ಇವುಗಳಿಗೆ ಸ್ವಲ್ಪ ವಜ್ಜನ ಮಹತ್ವ ಬಂದಿದೆ. ಕಳೆದ ವಾರ ಆಂಧ್ರದ ಮುಖ್ಯ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿ ಮತ್ತು ತಿರು-ಕೊಚ್ಚಿಯ ಮುಖ್ಯ ಮಂತ್ರಿ ಶ್ರೀ ಪಿ ಗೋವಿಂದ ಮೆನೊನ್ನರು ಆಯೋಗದ ವರದಿಯ ಸೂಚನೆಗಳ ಕುರಿತು ತಮಗೆ ತಿಳಿದು ಬಂದ ಕೆಲವು ವಿವರಗಳನ್ನು ಭಾಷಣದ ಮೂಲಕ ಪ್ರಕಟಿಸಿದರು.

ಹೈದರಾಬಾದಿನ ಭವಿಷ್ಯ

ಇವರ ಹೇಳಿಕೆಯಂತೆ, ಭಾರತವನ್ನು ೧೫ ಅಥವಾ ೧೭ ಘಟಕಗಳುಳ್ಳ ರಾಷ್ಟ್ರವಾಗಿ ಮರುಸಂಘಟಿಸಬೇಕೆಂದು ಆಯೋಗದ ಅಭಿಪ್ರಾಯ ಹೈದರಾಬಾದನ್ನು ಒಡೆದು ಅದರ ಕನ್ನಡ ಮತ್ತು ಮರಾಠಿ ಪ್ರದೇಶಗಳನ್ನು ಬೇರ್ಪಡಿಸಿ, ಆ ಭಾಷೆಗಳ ತಳಹದಿಯ ಮೇಲೆ ರೂಪುಗೊಳ್ಳುವ ರಾಜ್ಯಗಳಿಗೆ ಸೇರಿಸಲಾಗುತ್ತದೆ. ತೆಲಂಗಾಣವೆಂಬ ತೆಲುಗು ಭಾಷೆಯೇ ಪ್ರಧಾನವಾಗುಳ್ಳ ಹೊಸ ರಾಜ್ಯವನ್ನು ನಿರ್ಮಿಸಿ, ನಿಜಾಮರನ್ನು ಅಲ್ಲಿ ಪ್ರತಿಷ್ಠಾಪಿಸಲಾಗುತ್ತದೆ.

ಕಾಸರಗೋಡು ಕೇರಳದೊಳಗೆ

ಕೇರಳ ರಾಜ್ಯದಲ್ಲಿ ತಿರುಕೊಚ್ಚಿಯ ದಕ್ಷಿಣದ ತಮಿಳು ತಾಲೂಕುಗಳು ಸೇರುವುದಿಲ್ಲವಾದರೂ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಇಡೀ ಕಾಸರಗೋಡು ತಾಲೂಕು ಸೇರಿಸಲ್ಪಡುತ್ತವೆ. ಆಯೋಗದ ಶಿಫಾರಸು ಈ ಪ್ರಕಾರವಿದ್ದ ಪಕ್ಷದಲ್ಲಿ ಇದು ಕನ್ನಡಿಗರೇ ಹೆಚ್ಚಿರುವ ಕಾಸರಗೋಡಿನ ಜನತೆಗೆ ಮಾಡಿದ ಸರನು ಅನ್ಯಾಯವೆಂಬುದನ್ನು ಸ್ಪಷ್ಟಪಡಿಸಿ, ಇಂಥ ತಪ್ಪಿಗೆ ಎಡೆ ಕೊಡಬಾರದೆಂದು ಹೇಳಬೇಕಾಗಿದೆ. ಕಾಸರಗೋಡಿನಲ್ಲಿ ಚಂದ್ರಗಿರಿ ನದಿಯ ತೆಂಕು ಪಾರ್ಶ್ವವನ್ನು ಮಾತ್ರ ಮಲೆಯಾಳಿಗಳ ಬಾಹುಲ್ಯವಿರುವ ಪ್ರದೇಶವೆಂದು ಹೇಳಬಹುದು.

ಮೈಸೂರಿಗೆ ಕನ್ನಡ ಪ್ರದೇಶ

ಈಗ "ಕ" ವರ್ಗವೆಂದು ಕರೆಯಲ್ಪಡುವ ಎಲ್ಲಾ ರಾಜ್ಯಗಳೂ ರದ್ದಾಗುತ್ತವೆ. ರಾಜಸ್ಥಾನವನ್ನು ಬಿಟ್ಟರೆ, ಉಳಿದೆಲ್ಲ "ಬ" ವರ್ಗದ ರಾಜ್ಯಗಳ ಸ್ವರೂಪವೂ ಬದಲಾಗುತ್ತದೆ. ಮೈಸೂರಿನೊಡನೆ ಕನ್ನಡ ಮಾತನಾಡುವ ಉಳಿದ ಪ್ರದೇಶಗಳು ಸೇರ್ಪಡೆಯಾಗಿ, ಸಂಯುಕ್ತ ಕರ್ನಾಟಕ ರಾಜ್ಯವು ತಲೆ ಎತ್ತುತ್ತದೆ. ಈಗ "ಕ" ವರ್ಗದ ರಾಜ್ಯವಾಗಿರುವ ಕೊಡಗು ಏಕೀಕೃತ ಕರ್ನಾಟಕದಲ್ಲಿಯೇ ಸೇರಿಹೋಗುತ್ತದೆ.

ಚುನಾವಣೆಯ ತಯಾರಿ

ಚುನಾವಣೆಗಳನ್ನು ಮುಂದೆ ದೂಡಬಾರದೆಂದು ಪಕ್ಷದ ಅಭಿಪ್ರಾಯ ಪಡುತ್ತಿರುವಂತಾಗಿ ವರದಿಗಳು ತಿಳಿಸುತ್ತವೆ. ಸಂದರ್ಭದ ಮುಂದೆ ಫಜಲ ಅಲಿ ಆಯೋಗದ ವರದಿಯನ್ನು ಸಾದರಪಡಿಸಿ, ಮುಂದೆ ತ್ವರಿತದಲ್ಲಿಯೇ ಎಲ್ಲ ಪ್ರಶ್ನೆಗಳನ್ನು ನಿರ್ಣಯಿಸಿ, ಚುನಾವಣೆಯು ೧೯೫೭ನೇ ಇಸವಿಯ ಪ್ರಾರಂಭದಲ್ಲಿ ನಡೆಯಲು ತಯಾರಾಗಬೇಕೆಂಬ ಹುಮ್ಮಸ್ಸು ಅವರದಿರುವಂತೆ ಕಾಣುತ್ತದೆ. ಕಾಂಗ್ರೆಸು ಪಕ್ಷವು ಈಗಾಗಲೇ ಹುರಿಯಾಳುಗಳ ಆಯ್ಕೆಯ ಕುರಿತು ಮಾಡಬೇಕಾದ ಪೂರ್ವ ಸಿದ್ಧತೆಗಳತ್ತ ಗಮನಕೊಡ ತೊಡಗಿದೆ.

ಕಂಪೆನಿ ವಿಧೇಯಕ

ಲೋಕ ಸಭೆಯು ಕಳೆದ ಕೆಲವು ದಿನಗಳಲ್ಲಿ ಬಹಳ ಚರ್ಚಾಸ್ಪದವಾದ ಕಂಪೆನಿ ವಿಧೇಯಕವನ್ನು ಎಳೆ ಎಳೆಯಾಗಿ ಚರ್ಚಿಸಿ, ಅಂಗೀಕರಿಸಿತು. ಇದು ಕಂಪೆನಿಗಳ ಮೇಲೆ ಸರಕಾರದ ಹಿಡಿತವನ್ನು ಬಿಗಿಪಡಿಸುವುದಲ್ಲದೆ, ಅನೇಕ ಮಹತ್ವದ್ದವಿಷಯಗಳ ಮೇಲೆ ಸಾರ್ವಜನಿಕ ಹಿತಕ್ಕೂ ಔದ್ಯಮಿಕಹಿತಕ್ಕೂ ಘರ್ಷಣೆಯನ್ನು ಕಡಿಮೆ ಮಾಡುವಂತೆ ರೂಪಿತವಾಗಿದೆ. ಒಟ್ಟು ೧೧೮ ಸೂತ್ರಗಳನ್ನು ಮತ್ತು ೧೨ ಅನುಬಂಧಗಳನ್ನು ಈ ವಿಧೇಯಕ ಒಳಗೊಂಡಿದೆ.

ಬಹುಮಾನದ ಒಗಟುಗಳು

ಇದೇ ೧೫ನೇ ದಿನಾಂಕ ಬಹುಮಾನದ ಒಗಟುಗಳನ್ನು ಪ್ರಕಟಿಸುವುದಕ್ಕೆ ಉದ್ದೇಶಿಸಿದ ಕೇಂದ್ರ ಸರಕಾರದ ಮನೋದೆ ಲೋಕ ಸಭೆಯಲ್ಲಿ ಮಂಡಿಸಲ್ಪಟ್ಟಿತು. ಬಹುಮಾನದ ಮೊತ್ತ ಒಂದು ಸಾವಿರ ರೂಪಾಯಿಯನ್ನು ಮೀರ್ತ ಕೂಡದೆಂದು ಮನೋದೆ ವಿಧಿಸುತ್ತದೆ. ಇದಲ್ಲದೆ, ಪೂರ್ವಾನುಮತಿಯನ್ನು ಒಗಟುಗಳ ಪ್ರಕಟಿಸುವವರು ಪಡೆದಿರಬೇಕೆಂದೂ ಇದು ಹೇಳುತ್ತದೆ. ಜನರ ಬುದ್ಧಿ ಪರೀಕ್ಷೆ ಮತ್ತು ಜ್ಞಾನ ಕೌಶಲ್ಯಕ್ಕೆ ಪ್ರೋತ್ಸಾಹ ಕೊಡುವ ಹೇಳದಲ್ಲಿ ಜನರ ಮನೋಭಾವಕ್ಕೆ ನೀರೆರೆಯುವುದು ಸಲ್ಲದು—ಎಂಬುದೇ ಮನೋದೆಯ ಹಿಂದಿನ ತತ್ವವೆಂದು ವ್ಯಕ್ತಪಡಿಸಲಾಗಿದೆ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೫-೯-೧೯೫೫	೩

ಕಾಸರಗೋಡು ತಾಲೂಕು

ಪ್ರಧಾನ ನೆಹರುಗಳಿಂದ ಹಿಡಿದು ಎಲ್ಲ ರಾಜಕೀಯ ಧುರೀಣರೂ ಈಗ ಫಜಲ ಅಲಿ ಆಯೋಗದ ಸೂಚನೆಗಳನ್ನು ಶಾಂತವಾಗಿ ಅಂಗೀಕರಿಸಬೇಕೆಂದು ಜನತೆಯನ್ನು ಬನ್ನವಿಸುವುವರಲ್ಲಿ ನಿರತರಾಗಿದ್ದಾರೆ. ಆಯೋಗದಲ್ಲಿರುವ ಮೂವರೂ ಮೇಧಾವಿಗಳೆಂಬುದರಲ್ಲಿ ಪ್ರತಿ ಮಾತಿಲ್ಲ; ಅವರು ನಿಷ್ಪಕ್ಷಪಾತಿಗಳಾಗಿ ನಡೆಯಲು ಆತುರವುಳ್ಳವರೂ ನ್ಯಾಯ ನಿಷ್ಠುರರೂ ಆಗಿದ್ದಾರೆ ಎಂಬುದೂ ಸುಳ್ಳಲ್ಲ. ರಾಷ್ಟ್ರದ ಐಕ್ಯ ಮತ್ತು ಭದ್ರತೆಗೆ ಅವರು ಮಹತ್ವ ಕೊಡದಿರಲಾರರು; ಕೊಡಲೇ ಬೇಕು. ಅದೇ ಸಮಯದಲ್ಲಿ ಜನರ ಬಹು ದಿನಗಳ ಆಶೋತ್ತರಕ್ಕೂ ಮನ್ನಣೆ ಕೊಡುವ ಹೊಣೆಗಾರಿಕೆಯನ್ನು ಹೊತ್ತವರೂ ಅವರಾಗಿದ್ದಾರೆ. ಆಯೋಗವನ್ನು ಭಾಷಾನುಗುಣವಾಗಿ ಭಾರತದ ರಾಜ್ಯಗಳನ್ನು ಪುನರ್ಘಟನೆಮಾಡಬೇಕೆಂಬ ಬೇಡಿಕೆಯು ಬಲವತ್ತರವಾದ ದೆಸೆಯಿಂದ ನೇಮಿಸಲಾಯಿತು—ಕೇಂದ್ರ ಸರಕಾರವು ಭಾಷೆಗೆ ಅತ್ಯಧಿಕ ಮಹತ್ವ ಕೊಡಬೇಕು ಎಂದು ಭಾವಿಸಿಲ್ಲ. ಆಡಳಿತದ ಅನುಕೂಲತೆ, ಆರ್ಥಿಕ ವ್ಯವಹಾರದ ಸಂಬಂಧ, ಸಾಂಸ್ಕೃತಿಕ ಪರಂಪರೆ ಇತ್ಯಾದಿ ಇತರ ಅನೇಕ ವಿಷಯಗಳೊಡನೆ ಭಾಷೆಯನ್ನೂ ಗಮನಕ್ಕೆ ತೆಗೆದುಕೊಂಡು ರಾಜ್ಯಗಳ ಪುನರ್ಘಟನೆಯ ಕುರಿತು ಸೂಚನೆಗಳನ್ನು ಮಂಡಿಸಬೇಕೆಂದು ಅದು ಆಯೋಗಕ್ಕೆ ಹೇಳಿದೆ. ಆಯೋಗದ ವರದಿಯು ಈ ತಿಂಗಳ ಕೊನೆಯಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ—ಅದರ ಶಿಫಾರಸುಗಳ ಕುರಿತು ಈಗಲೇ ಏನನ್ನೂ ಯಾರೂ ಹೇಳುವಂತಿಲ್ಲ. ವರದಿಯನ್ನು ಬರೆದು ಮುಗಿಸಿಯಾಗಿದೆ ಎಂಬ ಸುದ್ದಿಗಳೂ ಬಂದಿವೆ; ವರದಿಗೆ ಕೊನೆಯ ರೂಪ ಕೊಡುತ್ತಿರುವರೆಂಬ ವಾರ್ತೆಗಳೂ ಬರುತ್ತಿವೆ— ವಿವಾದಾತ್ಮಕ ಗಡಿ ಪ್ರದೇಶಗಳ ವಿಷಯದಲ್ಲಿ ಆಯೋಗದವರು ಇಂಥಿಂಥ ಸೂಚನೆಗಳನ್ನು ಮಾಡಿರುವರೆಂದೂ ಹೇಳಲಾಗುತ್ತದೆ. ಇವುಗಳೆಲ್ಲ ಅನಧಿಕೃತ ವಂದಿಗಳಾದುದರಿಂದ ನಾವು ಅವುಗಳನ್ನು ಕೇಳಿ, ಉದ್ವಿಗ್ನರಾಗುವ ಹಾಗಿಲ್ಲ. ಅಥವಾ ಸಂತುಷ್ಟರಾಗುವ ಹಾಗಿಲ್ಲ. ಆಯೋಗದ ವರದಿಯನ್ನು ನೋಡಿಯೇ ಸತ್ಯವೇನೆಂದು ತಿಳಿಯಬೇಕಾಗಿದೆ; ಆದರೆ ಆಯೋಗದ ವರದಿಯು ಒಮ್ಮೆ ಪ್ರಕಟವಾದ ಬಳಿಕ, ಅದರಲ್ಲಿ ಮಹತ್ವದ ಬದಲಾವಣೆಯನ್ನು ಜನರು ಸಾಧಿಸುವುದು ಕಷ್ಟಕರವಾದ ವಿಷಯ. ಸರಕಾರದ ಮೇಲೆ ಒತ್ತಾಯವನ್ನು ಯಾವ ಕಾಲಕ್ಕೂ ಹಾಕಬಹುದು; ಹಾಕಬಾರದೆಂದೇನಿಲ್ಲ. ಸರಕಾರವು ಜನಾಭಿಪ್ರಾಯವನ್ನು ಗಮನಿಸಲೇಬೇಕೆಂದು ಅಪೇಕ್ಷಿಸುವುದು ಪ್ರಜಾಪ್ರಭುತ್ವದ ತಿರುಳು—ಎಲ್ಲ ನಿಜ. ಆದರೆ ಆಯೋಗದವರೇ ಜನಾಭಿಪ್ರಾಯಕ್ಕೆ ಅನುಗುಣವಾಗಿ ನಡೆದುಕೊಂಡರೆ, ಇನ್ನಷ್ಟು ಹಿತವಲ್ಲವೆ ಎಂದು ತೋರುತ್ತದೆ. ಸರಕಾರದವರು ಆಯೋಗದ ಸೂಚನೆಗಳನ್ನು ಶಾಂತ ರೀತಿಯಿಂದ ಜಾರಿಗೆ ತರಲು ಬಯಸುವರೆಂದು ಎಲ್ಲ ಧುರೀಣರೂ ಹೇಳುತ್ತಿದ್ದಾರೆ—ಜನರು ಸಹಕರಿಸಬೇಕೆಂದು ವಿನಂತಿಸುತ್ತಿದ್ದಾರೆ. ಆಯೋಗದ ವರದಿಯ ಕುರಿತು ಮಾತನಾಡುತ್ತಿದ್ದ ನೆಹರು ಎಲ್ಲರನ್ನೂ ತೃಪ್ತಿಪಡಿಸುವುದು ಯಾರಿಗೂ ನೀಗದ ಕೆಲಸ ಎಂಬುದನ್ನು ನೆನಪಿಗೆ ತಂದು ಕೊಟ್ಟಿದ್ದಾರೆ. ಆಯೋಗದ ಕೆಲವು ಸಲಹೆಗಳು ವಿಶಿಷ್ಟ ಹಿತಾಸಕ್ತಿಯುಳ್ಳ ಕೆಲವು ಗುಂಪುಗಳಿಗೆ ಮೆಚ್ಚಿಕೆಯಾಗಲಿಕ್ಕಿಲ್ಲ ಎಂಬುದೇ ಇದರ ಅರ್ಥವೆಂದು ಊಹಿಸಬಹುದು. ಮುಖ್ಯವಾಗಿ ಭಾಷೆಯ ಮೇಲಿನ ಅಭಿಮಾನವಿರುವ ಜನರು ಗಡಿ ಪ್ರದೇಶಗಳ ಭವಿಷ್ಯದ ಕುರಿತು ಆಯೋಗದ ಸಲಹೆಗೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಕೊಡಬಹುದು ಆಯೋಗವು ಸೂಚಿಸಬಹುದಾದ ಹೊಸ ಘಟಕಗಳ ಗಡಿ ರೇಖೆಯ ಕುರಿತು ಯಾರೂ ಮನಸ್ತಾಪಕಟ್ಟಿಕೊಳ್ಳಿಬಾರದು; ಅವುಗಳನ್ನು ರಾಷ್ಟ್ರಹಿತದ ವಿಶಾಲ ಮನೋಭಾವನೆಯಿಂದ ಕಾಣಬೇಕು ಎಂದು ಮುಂತಾಗಿ ನೆಹರುಗಳಿಂದ ಸಲಹೆ ಬಂದಿದೆ. ಗಡಿ ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಎರಡೂ ಕಡೆಯವರ ಜಗ್ಗಾಟ ಇದ್ದೇ ಇರುತ್ತದೆ. ಗಡಿ ಬದಲಾವಣೆಯನ್ನು ಸೂಚಿಸುವವರು ಜಿಲ್ಲೆ, ತಾಲೂಕು, ಗ್ರಾಮ ಇತ್ಯಾದಿಗಳಲ್ಲಿ ಯಾವುದನ್ನು ಕನಿಷ್ಠ ಘಟಕನೆಂದು ಲೆಕ್ಕಕ್ಕೆ ತೆಗೆದುಕೊಳ್ಳುವರೆಂಬುದರ ಮೇಲೆ ಇಲ್ಲಿಯ ಭವಿಷ್ಯ ನಿಂತಿರುತ್ತದೆ. ಕನ್ನಡನಾಡಿಗೆ ಅನ್ವಯಿಸಿ ಹೇಳುವುದಾದರೆ, ಬೆಳಗಾವಿ, ಶೋಲಾಪುರ, ಬಳ್ಳಾರಿ, ಕೋಲಾರ, ಅನಂತಪುರ, ಕೊಯಮುತ್ತೂರು, ದಕ್ಷಿಣಕನ್ನಡ ಇತ್ಯಾದಿ ಜಿಲ್ಲೆಗಳ ಗಡಿವಲಯದಲ್ಲಿ ಕನ್ನಡವಲ್ಲದೆ ಬೇರೆ ಭಾಷೆಗಳವರು ತಮ್ಮ ಪ್ರಭಾವದ ಕೈಯನ್ನು ಆಡಿಸತೊಡಗಿದ್ದಾರೆ. ಇವುಗಳ ವಿಷಯದಲ್ಲಿ ಸತ್ಯವನ್ನು ತಿಳಿಸಲು ಜನರು ಬದ್ಧರಾಗಬೇಕಾಗಿದ್ದರೂ ಭಾಷೆಗಳ ಮೇಲಿನ ಪ್ರೀತಿ ಮತ್ತು ಆದಷ್ಟು ಹೆಚ್ಚು ಪ್ರದೇಶಗಳನ್ನು ಸಾಧ್ಯವಿದ್ದ ಎಲ್ಲ ವಿಧಾನದಿಂದಲೂ ತಂತಮ್ಮ ಭಾಷೆಯ ವಲಯದಲ್ಲಿ ಉಳಿಸಿಕೊಳ್ಳುವ ಛಲ—ಇವುಗಳು ವಿಷಯವನ್ನು ನಿಮ್ಮುರ ನ್ಯಾಯದ ಹಿನ್ನೆಲೆಯಲ್ಲಿ ಸಂತೀಲಿಸಲು ತಡೆಯೊಡ್ಡುತ್ತವೆ. ಆಯೋಗದ ಸದಸ್ಯರಿಂಥ ಸಂಭಾವಿತ ಪುರುಷರೇ ಇದಕ್ಕೆ ಸಮರ್ಥರೆಂದು ಸೈಗುಟ್ಟಬೇಕಾಗುತ್ತದೆ. ಅವರು ಗಡಿ ವಲಯದ ಕುರಿತು ಏನು ತೀರ್ಮಾನ ಕೊಡಲಿರುವರೋ ಗೊತ್ತಿಲ್ಲ—ಆದರೆ, ನಮ್ಮ ಜಿಲ್ಲೆಯ ಜನರನ್ನೆಲ್ಲ ಉದ್ವೇಗಕ್ಕೆ ಗುರಿಮಾಡಿದ ಅನಧಿಕೃತ ಸುದ್ದಿಯೊಂದು ಬಂದಿದ್ದು, ಅದು ಕಾಸರಗೋಡು ತಾಲೂಕಿನ ಭವಿಷ್ಯಕ್ಕೆ ಸಂಬಂಧಿಸಿದೆ ಕೇರಳದೊಡನೆ ಇಡೀ ಕಾಸರಗೋಡು ತಾಲೂಕನ್ನು ಸೇರಿಸಲಾಗುವುದೆಂಬುದೇ ಈ ಸುದ್ದಿಯ ಸಾರಾಂಶ. ಜನರು ಇದಕ್ಕೆ ತೀವ್ರ ಪ್ರತಿಭಟನೆಯನ್ನು ಸೂಚಿಸಿದ್ದಾರೆ—ರಾಷ್ಟ್ರಾಧ್ಯಕ್ಷರಿಗೂ ಶ್ರೀಧರನಿಗಳಿಗೂ ಜಿಲ್ಲೆಯ ಹಾಗು ಕರ್ನಾಟಕದ ಮುಖಂಡರಿಗೂ ಆಯೋಗದ ಅಧ್ಯಕ್ಷರಿಗೂ ಕಾಸರಗೋಡನ್ನು ಇಡಿಯಾಗಿ ಕೇರಳಕ್ಕೆ ಸೇರಿಸಬಾರದೆಂದು ವಿನಂತಿಸುವ ತಂತಿಗಳು ಹೋಗಿವೆ; ಇನ್ನೂ ಹೋಗುತ್ತವೆ. ಇದು ಜನಜಾಗೃತಿಯ ಲಕ್ಷಣವಾಗಿದೆ—ನಿರ್ವಹಿಸಲೇಬೇಕಾದ ಕರ್ತವ್ಯವಾಗಿದೆ. ಕಾಸರಗೋಡು ತಾಲೂಕನ್ನು ಉಳಿಸಿಕೊಳ್ಳಲು ಇಷ್ಟರಿಂದಲೇ ನಾವು ಸಮರ್ಥರಾಗುತ್ತೇವೊ ಇಲ್ಲವೊ—ಹೇಳುವಂತಿಲ್ಲ. ಆದರೆ ನಮ್ಮ ನಿಲುಮೆ ಏನೆಂಬುದನ್ನು ಈ ತಂತಿಗಳು ಸ್ಪಷ್ಟಪಡಿಸಿವೆ. ಜನಾಭಿಪ್ರಾಯವನ್ನು ಮಥಿಸಿದರೆ ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯ ದಕ್ಷಿಣದಲ್ಲಿರುವ ಪ್ರದೇಶವನ್ನು ಮಾತ್ರ ಮಲೆಯಾಳಿ ಭಾಷೆಯ ಜನರ ಬಾಹುಳ್ಯವಿರುವ ಕ್ಷೇತ್ರವಾಗಿ ಪರಿಗಣಿಸಬಹುದು. ಅದನ್ನಷ್ಟು ಕೇರಳಕ್ಕೆ ಸೇರಿಸುವುದಾದರೆ ಯಾರದೂ ವಿರೋಧವಿಲ್ಲ. ಆದರೆ ಕಾಸರಗೋಡಿನ ಬೇರೆ ಪ್ರದೇಶ ಕನ್ನಡದ ನೆಲವಾಗಿಯೇ ಉಳಿಯಬೇಕು; ಅದು ದಕ್ಷಿಣ ಕನ್ನಡ ಜಿಲ್ಲೆಯ ಅಂಗವಾಗಬೇಕು ಎಂದು ಜನರ ತೀರ್ಮಾನ. ಕಾಸರಗೋಡು ತಾಲೂಕಿನ ಯಾವ ಭಾಗಗಳನ್ನು ಮಲೆಯಾಳಕ್ಕೆ ಸೇರಿಸಬಹುದೆಂಬ ಕುರಿತು ಶ್ರೀ ಮಾಧವ ಮೆನೋನ್ನರು ಸಾಗುವಳಿ ಭೂಮಿಗೆ ಅನ್ವಯಿಸಿ ತಂದಿದ್ದ ಒಂದು ಮಸೂದೆ ಬೆಳಕನ್ನು ಚೆಲ್ಲುತ್ತದೆ. ಅದರಲ್ಲಿ ಕೆಲವು ಗ್ರಾಮಗಳ ಉಲ್ಲೇಖವನ್ನು ಕಾಣುತ್ತೇವೆ—ಆ ಗ್ರಾಮಗಳು ಬೇಕಾದರೆ ಕೇರಳಕ್ಕೆ ಹೋಗಲಿ. ಆದರೆ ಇಡಿಯ ಕಾಸರಗೋಡು ತಾಲೂಕಲ್ಲ. ಗಡಿ ಬದಲಾವಣೆಯು ಗ್ರಾಮಗಳ ತಳಹದಿಯನ್ನು ಅವಲಂಬಿಸಿದ್ದರೆ, ನಮ್ಮ ಈ ಮಾತಿಗೆ ಬೆಲೆ ಬರುತ್ತದೆ; ಜಿಲ್ಲೆಯ ತಳಹದಿಯನ್ನು ಅವಲಂಬಿಸಿದ್ದರೂ ಬೆಲೆ ಬರುತ್ತದೆ. ಆದರೆ ಆಯೋಗವು ತಾಲೂಕನ್ನೆ ಕನಿಷ್ಠ ಘಟಕವಾಗಿ ಲೆಕ್ಕಕ್ಕೆ ಹಿಡಿದಿರುವಂತೆ ತೋರುತ್ತದೆ— ಹಾಗಿದ್ದ ಪಕ್ಷದಲ್ಲಿ ನಮ್ಮ ವಿನಂತಿಗಳ ಗತಿ ಏನಾದೀತೊ ತಿಳಿಯದು. ಆದರೆ ಕಾಸರಗೋಡು ತಾಲೂಕಿನಲ್ಲಿ ಸಹಮೂರರಲ್ಲಿ ಒಂದಂಶದಷ್ಟು ಮಾತ್ರ ಮಲೆಯಾಳ ಪ್ರದೇಶವಾದುದರಿಂದ ನ್ಯಾಯವಾಗಿ ಅದು ತಾಲೂಕಿನ ಮೂರರಲ್ಲಿ ಎರಡಂಶದೊಡನೆ ಕರ್ನಾಟಕಕ್ಕೆ ಸೇರಬೇಕು ಎಂದು ನಮ್ಮ ಅಭಿಪ್ರಾಯ. ಹೀಗಿದ್ದರೂ ನಾವು ನಿರಾಶರಾಗುವ ಪ್ರಸಂಗವೇ ಬಂದೀತು. ಆದರೆ, ನಾವು ಮಾಡುವಷ್ಟು ಮಾಡಿ, ಒತ್ತಾಯಿಸುವಷ್ಟು ಒತ್ತಾಯಿಸಿ, ಜನರನ್ನು ಎಚ್ಚರಿಸುವಷ್ಟು ಎಚ್ಚರಿಸಿ, ಸಂಬಂಧಿಸಿದವರಿಗೆ ತಿಳಿಸಿ ಹೇಳುವಷ್ಟು ಹೇಳಿ—ನಿರುಪಾಯರಾಗಿ ಕೈಕಟ್ಟಿ ಕುಳಿತಿರಬೇಕಾಗಿದೆ ಎಂಬುದೇ ಆಗ ನಮ್ಮ ಪಾಲಿಗೊದಗುವ ಸಮಾಧಾನ. ಪರ್ಯಾಯವಾಗಿ ಇದನ್ನೆ ಅಸಮಾಧಾನವೆಂದೂ ಹೇಳಬಹುದು. ಅದಕ್ಕೆ ಅವಕಾಶವಿಲ್ಲದಂತೆ ಮಾಡಬಹುದಾಗಿದ್ದರೆ, ಮಾಡದಿರಬಾರದು ಎಂದೇ ನಾವು ಈ ಕೊನೆಯ ಗಳಿಗೆಯಲ್ಲಿ ಸಂಬಂಧಿಸಿದ ಎಲ್ಲರನ್ನು ಪ್ರಾರ್ಥಿಸುತ್ತೇವೆ.

ಡಾ| ಅೈಡೆನೂರರ ಮೊಸ್ಕೊ ಪ್ರಯಾಣ

ಚೀನ—ಅಮೇರಿಕಗಳೊಳಗೆ ಸಂಧಾನ

ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅೈಡೆನೂರರು ಮೊಸ್ಕೋಗೆ ಕಳೆದ ವಾರ ಯಾತ್ರೆ ಮಾಡಿದರು. ಅವರಿಗೆ ರಶ್ಯದ ಪ್ರಧಾನಿ ಬುಲ್ಗೇನಿನ್ನರು ಪ್ರೀತಿಯ ಸ್ವಾಗತವನ್ನಿತ್ತರು. ಉಭಯ ದೇಶಗಳ ನಡುವೆ ರಾಜಕೀಯ ಸಂಬಂಧವನ್ನು ಏರ್ಪಡಿಸಿ, ವ್ಯಾಪಾರಾಭಿವೃದ್ಧಿಗೆ ಅವಕಾಶ ಮಾಡಿ ಕೊಡಬೇಕೆಂಬುದೇ ಈ ಭೇಟಿಯ ಉದ್ದೇಶ.

ಮಾತುಕತೆಯ ವಿರಸ

ಆದರೆ ಇದನ್ನು ಸಾಧಿಸುವುದರಲ್ಲಿ ಎಷ್ಟರ ಮಟ್ಟಿಗೆ ಫಲ ದೊರೆಯಿತೊ ತಿಳಿದು ಬಂದಿಲ್ಲ— ಇದೇ ೧೪ನೇ ದಿನಾಂಕ ಕೊನೆಯ ನಿರ್ಣಯಗಳು ತಿಳಿದು ಬರಬಹುದು. ಭೇಟಿಯ ಪ್ರಥಮ ವರದಿಗಳನ್ನು ಗಮನಿಸಿದರೆ ವಿರಸಕ್ಕೆ ಅೈಡೆನೂರರು ಎಡೆ ಮಾಡಿ ಕೊಟ್ಟಿದ್ದಾರೆ ಎಂದೆನ್ನಬೇಕಾಗುತ್ತದೆ.

ಜರ್ಮನಿಯ ಏಕೀಕರಣ

ಅೈಡೆನೂರರು ಜರ್ಮನಿಯ ಏಕೀಕರಣವಾಗಬೇಕು ಎಂದರು. ನ್ಯಾಟೋ ಒಪ್ಪಂದದಲ್ಲಿ ತಾನು ಸೇರಿದ್ದು ಯೋಗ್ಯ ಎಂದು ಸ್ವಸಮರ್ಥನೆ ಗೈದರು. ಬುಲ್ಗೇನಿನ್ನರು ಇದಕ್ಕೆ ಉತ್ತರಿಸುತ್ತಾ ಪೂರ್ವ ಜರ್ಮನಿಯ ಸಲಹೆಯನ್ನು ಏಕೀಕರಣದ ಕುರಿತು ತೆಗೆದುಕೊಳ್ಳಬೇಕಾಗಿದೆ ಎಂದರು. ನ್ಯಾಟೋ ಒಪ್ಪಂದದಲ್ಲಿ ಜರ್ಮನಿ ಸೇರಿ ಕೊಂಡುದು ರಶ್ಯಕ್ಕೆ ಸಮ್ಮತವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

ನಿರಾಶೆಯೇ ಗತಿ

ಪೂರ್ವ ಜರ್ಮನಿಯೊಡನೆ ಏಕೀಕರಣದ ಕುರಿತು ಮಾತುಕತೆ ನಡೆಸಲು ಅೈಡೆನೂರರು ಸಿದ್ಧರಿದ್ದಂತಿಲ್ಲ. ರಶ್ಯಕ್ಕೆ ಪಶ್ಚಿಮ ಜರ್ಮನಿಯ ಸಶಸ್ತ್ರೀಕರಣ ಎಷ್ಟು ಭಯ ಹುಟ್ಟಿಸಿದೆ ಎಂದರೆ ತಟಸ್ಥೀಕರಣಕ್ಕೆ ಜರ್ಮನಿ ಒಪ್ಪುವುದಿಲ್ಲವಾದರೆ ಅದು ಏಕೀಕರಣಕ್ಕೆ ಅವಕಾಶ ಕಲ್ಪಿಸಿಕೊಡಲಾರದು. ಹೀಗಾಗಿ ಕನಸಿನ ಮಂಡಿಗೆಯೇ ಜರ್ಮನರ ಪಾಲಿಗೆ ಉಳಿಯುತ್ತದೆ. ಆದರೆ ರಾಯಭಾರ ಸಂಬಂಧ ಇತ್ಯಾದಿಗಳಿಂದ ಕ್ರಮೇಣ ಪರಿಸ್ಥಿತಿ ಸುಧಾರಿಸೀತು.

ಸಫಲ ಸಂಧಾನ

ಜಿನೇವದಲ್ಲಿ ಚೀನ ಮತ್ತು ಅಮೇರಿಕಗಳ ನಡುವೆ ಅಗೋಸ್ತು ೧೧ರಿಂದ ನಡೆಯುತ್ತಿದ್ದ ಮಾತುಕತೆ ಈಗ ತನ್ನ ಉಪಯುಕ್ತತೆಯನ್ನು ಮನವರಿಕೆ ಮಾಡಿಕೊಟ್ಟಿದೆ. ಇದರ ಪರಿಣಾಮವಾಗಿ ಅಮೇರಿಕದಲ್ಲಿರುವ ಚೀನೀಯ ನಾಗರಿಕರೂ ಚೀನದಲ್ಲಿರುವ ಅಮೇರಿಕದ ನಾಗರಿಕರೂ ಸ್ವದೇಶಕ್ಕೆ ಮರಳಲು ಅವಕಾಶ ದೊರೆತಿದೆ.

ಭಾರತದ ಪಾತ್ರ

ಭಾರತವು ಇಂಥ ಮಾತುಕತೆ ನಡೆಯ ವಂತೆ ಪ್ರಸಿದ ಪಾತ್ರ ಸ್ಮರಣೀಯ

ವಾಗಿದೆ. ಅಮೇರಿಕದಲ್ಲಿರುವ ಚೀನೀಯರು ತಮ್ಮ ಮರಳುವಿಕೆಯಲ್ಲಿ ಉದ್ಭವಿಸಬಹುದಾದ ತೊಂದರೆಗಳನ್ನು ಭಾರತದ ರಾಯಭಾರಿಗಳಿಗೆ ತಿಳಿಸಿ, ನಿವಾರಿಸಿಕೊಳ್ಳಬಹುದೆಂದೂ ಚೀನದಲ್ಲಿರುವ ಅಮೇರಿಕನ್ನರು ಆ ದೇಶದಲ್ಲಿರುವ ಬ್ರಿಟಿಸಿನ ರಾಯಭಾರಿಗಳ ಮೂಲಕ ಕಿರುಕುಳಗಳನ್ನು ಬಗೆಹರಿಸಬಹುದೆಂದೂ ಒಪ್ಪಲಾಗಿದೆ.

ಕಂಬೋಡಿಯದ ಚುನಾವಣೆ

ಇಂದೋಚೀನದ ಕಂಬೋಡಿಯದಲ್ಲಿ ಚುನಾವಣೆ ನಡೆದು, ಅದರ ಫಲಿತಾಂಶ ಪ್ರಕಟವಾಗಿದೆ. ಚುನಾವಣೆಯಲ್ಲಿ ಹೋರಾಡಲೆಂದೇ ಅರಸು ಪಟ್ಟವನ್ನು ಬಿಟ್ಟುಗೊಟ್ಟ ನರೋತ್ತಮ ಸಿಹನೌಕರ ಪಕ್ಷಕ್ಕೆ ಪ್ರಚಂಡ ಬೆಂಬಲ ಸಿಕ್ಕಿದೆ ವೀಟನಾಮಿನಲ್ಲಿ ಮಾತ್ರ ಚುನಾವಣೆಯ ಸಿದ್ಧತೆ ನಡೆದೇ ಇಲ್ಲ. ಇದರ ಕುರಿತು ವಿಚಾರಿಸಲು ಇಷ್ಟರಲ್ಲೇ ಜನೇವ ಒಪ್ಪಂದಕ್ಕೆ ಸಹಿ ಹಾಕಿದ ದಶರಾಷ್ಟ್ರಗಳ ಪರಿಷತ್ತು ಸೇರಲಿದೆ.

ಟಪ್ಪಾಲು ಪ್ರಾರಂಭ

ಗೋವೆ ಮತ್ತು ಭಾರತಗಳ ನಡುವೆ ಇಷ್ಟರಲ್ಲೇ ಟಪ್ಪಾಲು ವ್ಯವಹಾರವು ಪುನರಾರಂಭಿಸುವುದೆಂದು ತಿಳಿದುಬರುತ್ತದೆ. ಇದನ್ನು ಅಧಿಕೃತವಾಗಿ ಮುಗಿಸಿರಲಿಲ್ಲವೆಂಬುದರಿಂದ ಮತ್ತು ಗೋವೆಯ ಜನರಿಗೆ ತೊಂದರೆಕೊಡುವುದು ಭಾರತ ಸರಕಾರದ ಉದ್ದೇಶವಲ್ಲ ವೆಂಬುದರಿಂದ ಹೊಸ ಏರ್ಪಾಡು ಇದಕ್ಕಾಗಿ ನಡೆಯಿತೆಂದು ತೋರುತ್ತದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 351/1955.

ಶ್ರೀ ಕೃಷ್ಣಾಸುರ ಮಠ ಉಡ್ಪಿ. ಇದರ ಮೆನೇಜರ್ ಶ್ರೀ ಬಿ. ರಾಮಕೃಷ್ಣಾಚಾರ್ಯ ಬಿ. ಎ.— ವಾದಿ.

ಮತ್ತು

ಅಬ್ದುಲ್‌ರಹಿಮಾನ್ ಸಾಬೇಬ ಕೂಡಾ 4 ಜನರು.— ಪ್ರತಿವಾದಿರು.

ಇವರೊಳಗೆ-

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿ. ಉಡ್ಪಿ ತಾಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಚಿಟ್ಪಾಡಿಯಲ್ಲಿರುವ ಗ್ರೆಗೋರಿ ಡಿಸೋಜರ ಮಗ ಹೊಲ್ಲಿ ಡಿ ಸೋಜರಿಗೆ ಈ ಮೂಲಕ ತಿಳಿಸುವುದೇನಂದ್ರೆ:—

ವಾದಿನೆ ಪ್ರತಿವಾದಿರು ತಾ. 9.4.1953 ರಲ್ಲಿ ಒಂದು ವರ್ಷದ ಬಗ್ಗೆ ರಿ. ನಶಿ ಬರಕೊಟ್ಟ ಬಾಡಿಗೆ ಚೀಟಿನಲ್ಲಿ ಕಾಣುವ ಆಸ್ತಿಯ ಸ್ವಾಧೀನತೆಗೂ, ಹುಟ್ಟುವಳ್ಳಿ ಮತ್ತು ಬಾಡಿಗೆ ಬಾಕಿ ಪ, ಮುನಿಸಿಪಲ್ ಟೆಕ್ಸ್ ಅ್ಯಾಜುಗಳಿಗೂ ಕೂಡಾ ರೂ. 642—0—9ಕ್ಕೆ ದಾವ್ಕಾ ಮಾಡಿರುವ ಮೇಲ್ಕಂಡ ವ್ಯಾಜ್ಯವು 3ನೇ ಪ್ರತಿವಾದಿಯ ಸೋಟೀಸ-ಬಗ್ಗೆ, ಮತ್ತು ಸದ್ರಿ ವ್ಯಾಜ್ಯವಲ್ಲಿ ಜಪ್ತಿಂಟು ಮುಂಡಿ ಜಪ್ತಿಕೇಳಿ ಮಾಡಿಕೊಂಡ R.I.A. No. 653/55 ನೇ ಅರ್ಜಿಯಲ್ಲಿ ಕೂಡಾ ನೋಟೀಸು ಮತ್ತು ಪ್ರೊ. ಓರ್ಡರ್ ಬಗ್ಗೆ ತಾ. 21—9—55ಕ್ಕೆ ಇಟ್ಟಿರುತ್ತದೆ. ಆದುದರಿಂದ ಸದ್ರಿ 3ನೇ ಪ್ರತಿವಾದಿಗೆ ಆ ಎಲ್ಲಾ ಬಾಬಿನಲ್ಲಿ ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ. 21—9—1955ನೇ ದಿವಸ ಬೆಳಗ್ಗೆ 10 ಘಂಟೆಗೆ ಸೇಲ್ಸಂಗ್ ಕೋರ್ಟಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರುಸಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಪ್ರತಿವಾದಿ ಸದ್ರಿ ವ್ಯಾಜ್ಯವು ಪೈಸಲು ಮಾಡಲ್ಪಡುವುದು.

P. V. Achar.
Vakil for Plaintiff.

ಉಡುಪಿ ತಾ. 12-9-1955.

ಮೈಸೂರಿನ ಅಭಿಪ್ರಾಯ

ಕರ್ನಾಟಕದ ಭಾಗಗಳು ಮೈಸೂರಿನಲ್ಲಿ ಸೇರುವುದಕ್ಕೆ ಮೈಸೂರಿನ ಹೆಚ್ಚಿನ ವಿರೋಧವಿದೆ ಎಂದು ಸೂಚಿಸಬೇಕಾಗಿ ಮುಖ್ಯ ಮಂತ್ರಿಗಳಿಗೆ ಶಾಸನ ಸಭೆಯ ಕೆಲವು ಸದಸ್ಯರು ಒತ್ತಾಯಿಸಿದ್ದಾರೆ. ಈ ಕುರಿತು ಹೆಚ್ಚಿನ ವಿಚಾರವಿನಿಮಯಕ್ಕಾಗಿ ಇಷ್ಟರಲ್ಲೇ ಸಭೆಯೊಂದು ಜರಗಲಿದ್ದಾಗಿ ತಿಳಿದು ಬರುತ್ತದೆ.

ಧರ್ಮಸ್ಥಳದ ಪೀಠ

ಶ್ರೀ ಮಂಜಯ್ಯ ಹೆಗ್ಗಡೆಯವರ ನಿಧನದಿಂದ ತೆರವಾದ ಧರ್ಮಸ್ಥಳದ ಹೆಗ್ಗಡೆ ಪೀಠದಲ್ಲಿ ಶ್ರೀ ರತ್ನವರ್ಮರಾಜರನ್ನು ಪಟ್ಟಕ್ಕೆ ಇದೇ ದಿನಾಂಕ ೧೩ರಂದು ಏರಿಸಲಾಯಿತು. ಈ ಸಮಾರಂಭವು ಬಹಳ ವೈಭವದಿಂದ ನೆರವೇರಿತು.

ರಾಷ್ಟ್ರಾಧ್ಯಕ್ಷರ ಪ್ರಶಸ್ತಿ

ಹೊಸದಿಹಲಿಯ ದರ್ಬಾರ ಮಹಲಿನಲ್ಲಿ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಕಳೆದ ವಾರ ಭಾರತದ ಶ್ರೇಷ್ಠ ಪುತ್ರರಿಗೆ ಪ್ರಶಸ್ತಿ ಪತ್ರಗಳನ್ನು ದಯಪಾಲಿಸಿದರು. "ಭಾರತ ರತ್ನ" ಎಂಬ ಸರ್ವೋಚ್ಚ ಪ್ರಶಸ್ತಿಯನ್ನು ಪ್ರಧಾನಿ ನೆಹರು, ಡಾ. ಭಗವಾನದಾಸ ಮತ್ತು ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಪಡೆದರು. "ಪದ್ಮವಿಭೂಷಣ" ಪ್ರಶಸ್ತಿಯನ್ನು ಪಡೆದವರಲ್ಲಿ ಶ್ರೀ ಜಿ. ಆರ್. ಡಿ. ಟಾಟಾ ಮತ್ತು ಶ್ರೀ ವಿ. ಕೆ. ಕೃಷ್ಣ ಮೆನೊನ್ನರು ಉಲ್ಲೇಖನೀಯ. "ಪದ್ಮವಿಭೂಷಣ" ಮತ್ತು "ಪದ್ಮಶ್ರೀ" ಪ್ರಶಸ್ತಿಗಳನ್ನು ಬೇರೆ ಕೆಲವರು ಕಂಪಾದಿಸಿದರು. ಸಮಾರಂಭದ ಕೊನೆಗೆ ಉಪಾಹಾರವಿತ್ತು ಅತಿಥಿಗಳನ್ನು ಗೌರವಿಸಲಾಯಿತು.

ಒರಿಸ್ಸದ ಸಂತ್ರಸ್ತರು

ಒರಿಸ್ಸದಲ್ಲಿ ನೆರೆಹಾವಳಿಯು ಆರೇಳು ಲಕ್ಷ ಜನರನ್ನು ಸಂತ್ರಸ್ತರಾಗಿ ಮಾಡಿದೆ ಮಹಾನದಿಯು ತುಂಬಿ ಹರಿಯುತ್ತಿರುವದೆಸೆಯಿಂದ ಸುಮಾರು ೬೦೦೦ ಚದುರ್ಮೈಲು ಪ್ರದೇಶದಲ್ಲಿರುವ ಐನೂರಕ್ಕೆಂತಹೆಚ್ಚು ಗ್ರಾಮಗಳಲ್ಲಿ ನೀರುನಿಂತಿದ್ದು, ಜನರಿಗೆ ಅನೇಕ ಬಗೆಯಿಂದ ತೊಂದರೆಯಾಗಿದೆ. ಆಹಾರ ಧಾನ್ಯಗಳನ್ನೂ ವೈದ್ಯಕೀಯ ಚಿಕಿತ್ಸೆಯ ಸೌಲಭ್ಯಗಳನ್ನೂ ಒದಗಿಸಲು ಪ್ರಯತ್ನ ನಡೆದಿದೆ. ವಿಮಾನ ದಳದ ಹಾಗು ನೈಸಿಕ ಇಂಜಿನಿಯರುಗಳ ಸಹಾಯದಿಂದ ಪರಿಹಾರ ಕ್ರಮಗಳು ಮುಂದೊತ್ತಿಲಾಗುತ್ತವೆ.

ಹೊಲ ಸಾಗುವಳಿ ಮಸೂದೆ

ಮುಂಬಯಿ ರಾಜ್ಯದಲ್ಲಿ ಹೊಲ ಸಾಗುವಳಿಯನ್ನು ಸುಧಾರಿಸಿ, ಉಳುವವನಿಗೆ ಹೊಲದೊಡೆಯನಾಗಿ ಮಾಡುವ ಮಸೂದೆಯಲ್ಲಿ ಪರಿಶೀಲಕ ಸಮಿತಿಯು ಕೆಲವು ಬದಲಾವಣೆ ಮಾಡಿದೆ. ಇದರಲ್ಲಿ ಚಿಕ್ಕ ಹಿಡುವಳಿಗಳಿಗೆ ದೊರೆತ ರಕ್ಷಣೆಯೂ ಪರಿಹಾರ ರೂಪದಲ್ಲಿ ಶೈತನು ಹೊಲದೊಡೆಯನಿಗೆ ಕೊಡಬೇಕಾದ ಹಣದ ಕನಿಷ್ಠ ಪ್ರಮಾಣವನ್ನು ಇಳಿಸಿರುವುದೂ ಉಲ್ಲೇಖನೀಯ.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು

ತಾ. 10ರಲ್ಲಿ ಸಂಜೆ ಚೆರ್‌ಮನ್ ಡಾ. ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಾನಿಕ ಅಭಿವೃದ್ಧಿಯೋಜನೆಗಳಿಗಾಗಿ ಜಿಲ್ಲಾ ಕಲೆಕ್ಟರರು ನಗರಸಭೆಗಳಿಗೂ ಕೊಡಬಹುದಾದ ಸಹಾಯಧನವನ್ನು ಉಡುಪಿಗೂ ಉಪಯೋಗಿಸಬಹುದೆಂದು ಸೂಚಿಸಿದ ಆಫೀಸು ನೋಟು ಓದಲಾಯಿತು. ಸಂತೆಮಾಕೇಟು, ಸಿಟಿಬಸ್‌ಸ್ಟೆಂಡ್, ಕಿನ್ನಿಮುಲ್ಕಿ ರಾಲಾಕಟ್ಟಿದದ ಮತ್ತು ಪ್ರಯಾಣಿಕರ ಬಸ್ಸ್ ಸುಧಾರಣೆಗಾಗಿ ಸಾಧಾರಣ ರೂ 18,000 ಹೆಚ್ಚಿಸಬೇಡುವುದೆಂದು ಅಭಿಪ್ರಾಯವಾಗಿ ಈ ಬಾಬಿನಲ್ಲಿ ಅರ್ಧಾಂಶ ಹಣವನ್ನು ಗ್ರಾಂಟುರೂಪದಲ್ಲಿ ಕೊಡುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿ ಸಲಾಯಿತು. ಕಾಲಾಂಶ ಹಣವನ್ನು ಜನತೆಯಿಂದ ಸಂಗ್ರಹಿಸಲು ಡಾ. ಪಿ. ವಿ. ವ್ಯಾಸರಾವ್, ಬಿ. ಎಸ್. ಆಚಾರ್, ಪಿ. ವಿ. ಆಚಾರ್, ಕೆ. ದೇವೇಂದ್ರ ಶೆಟ್ಟಿ, ಯು. ರಾಮಚಂದ್ರ ನವರಿಂದ ಕಮಿಟಿ ರಚಿಸಲಾಯಿತು.

ಧನಸಹಾಯ — ಪಂಡಿತ ನೆಹರೂರವರ ಪರಿವಾರ ನಿಧಿಗೆ ಉಡುಪಿಯ ದ. ಕ. ಜಿಲ್ಲಾ ನೆರೆಹಾವಳಿ ಸಂಕಷ್ಟ ನಿವಾರಣಾ ಸಮಿತಿಯ ಕಡೆಯಿಂದು ಮುನ್ನೂರು ರೂಪಾಯಿ ಕಳುಹಿಸಲಾಗಿದೆ.

ಆಚಾರ್ಯ ವಿನೋಬಾರವರ ಜನ್ಮ ದಿನಾಚರಣೆಯು— ತಾ. 11ರಲ್ಲಿ ಸಂಜೆ ರಥಬೀದಿಯಲ್ಲಿ ಎಸ್. ಜಿ. ಎಸ್. ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಶ್ರೀನಿವಾಸ ಪೈ, ಎ. ಜಿ. ಆಳ್ವ, ಕೃಷ್ಣ ಭಟ್, ಸುಬ್ರಾಯ ಶೆಣೈ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು. ಶ್ರೀ ನಾರಾಯಣ ನಾಯ್ಕರು ಕಿಂಜಿತ್ ಭೂಮಿಯನ್ನು ಭೂದಾನಯಜ್ಞಕ್ಕೆ ಧಾರೆಯೆರೆದರು

ಎಮ್. ಜಿ. ಎಮ್. ಕಾಲೇಜಿನಲ್ಲಿ— ಈಚೆಗೆ ಸಾರ್ವಜನಿಕ ಪ್ರತಿನಿಧಿಗಳ ಸಭೆಯೊಂದು ಶ್ರೀ ಕೊಚ್ಚಿಕಾರ್ ಪದ್ಮನಾಭ ಸೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಟಿ. ಎಮ್. ಎ. ಪೈಗಳು ಸಭೆಕರೆದುದರ ಉದ್ದೇಶವನ್ನು ತಿಳಿಸುತ್ತಾ, ಮುಂದಿನ ವರ್ಷದಲ್ಲಿ ಬಿ. ಕಾಮ್ ಸಾಯನ್ಸ್ ತರಗತಿ ಳನ್ನು ತೆರೆಯುವ ಅವಶ್ಯಕತೆಯನ್ನು ಸೂಚಿಸಿ ಆ ಬಗ್ಗೆ ನಿಧಿ ಸಂಗ್ರಹ, ಕಟ್ಟಡ ವಿಸ್ತರಣೆಗೆ ಮೊದಲೇಪಟ್ಟಿಗಳನ್ನು ವಿವರಿಸಿದರು.

ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಜನತೆಯ ಸಹಕಾರ ಕೋರಿಮಾತನಾಡಿದರು. ಅನಂತರ ಡಾ. ಪಿ. ಆರ್. ನಾಯಕ್, ಡಾ. ಪಿ. ಜಿ. ಆಚಾರ್, ಶ್ರೀ ಎ. ಜಿ. ಆಳ್ವ ಮೊದಲಾದವರ ಸ್ವೋತ್ಸಾಹದಪರ ಭಾಷಣಗಳ ಮೇರೆ ಮುಂದಿನವರ್ಷದಿಂದ ಹೊಸ ತರಗತಿಗಳನ್ನು ತೆರೆಯುವ ಬಗ್ಗೆ ಸಾರ್ವಜನಿಕ ತೆಗಳನ್ನು ಈಗಲೇ ಪ್ರಾರಂಭಿಸಬೇಕೆಂದು ಸಭೆಯ ಅಭಿಪ್ರಾಯವಾಯಿತು.

ಕಲಾಮೃಂದ-ದಲ್ಲಿ ಶ್ರೀಕೃಷ್ಣ ಜಯಂತ್ಯುತ್ಸವವು ಶ್ರೀ ಎ. ರಮಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಕೆ. ಶ್ಯಾಮ ಭಟ್, ಹರಿದಾಸ ಉಪಾಧ್ಯಾಯ, ಅನಂತಪದ್ಮನಾಭ ಭಟ್, ರಾಮಕೃಷ್ಣಾಚಾರ್ಯ ಮೊದಲಾದವರ ಭಾಷಣಗಳೊಂದಿಗೆ ಆಚರಿಸಲ್ಪಟ್ಟಿತು.

ನಿಂಜೂರು — ಸ್ಥಳೀಯ ಶ್ರೀ ಜಿವೇಶಾನಂದ ಸೇವಾಸಂಘದ ಯುವಕ ಸದಸ್ಯರು ತಾ. 9ರಲ್ಲಿ ಶ್ರೀ ಕೃಷ್ಣ ಜಯಂತಿಯನ್ನು ಸಭೆ, ಭಾಷಣ, ಯಕ್ಷಗಾನ ಕಾಲಕ್ಷೇಪಾದಿ ಕಾರ್ಯಕ್ರಮಗಳಿಂದ ಜಯಶೀಲವಾಗಿ ಆಚರಿಸಿದರು. ಅಲ್ಲದೆ ಇದರ ಕಾರ್ಯಕಾರಿ ಸಭೆಯು ತಾ. 11ರಲ್ಲಿ ಜರಗಿ ಶ್ರೀ ಜಿವೇಶಾನಂದ ಭವನದ ಸಾಧಾರಣ ಹತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಕಟ್ಟಬೇಕೆಂದು ನಿರ್ಧಾರವಾಯಿತು. ಕಟ್ಟಡ ನಿರ್ಮಾಣ ಸಮಿತಿಗೆ ಶ್ರೀಗಳಾದ ರಾಜು ಶೆಟ್ಟಿ, ಸಂಜೀವಶೆಟ್ಟಿ, ಕರುಣಾಕರ ಹೆಗ್ಡೆ ಮತ್ತು ಮುದ್ದು ಶೆಟ್ಟರನ್ನು ಆರಿಸಲಾಯಿತು.

ಬೈಲೂರು— ಸ್ಥಳೀಯ ಹೋರ್ಮ್ ಹ್ಯಾಸ್ಕೂಲ್ ಕಟ್ಟಿದವ ಶಂಕುಸ್ಥಾಪನೆಯು ಇದೇ ತಾ. 15ರಲ್ಲಿ ಅಪರಾಹ್ನ 3ಗಂಟೆಗೆ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಮದ್ರಾಸಿನ ಡಾ. ಯು. ಎಲ್. ನಾರಾಯಣ ರಾಯರ ಹಸ್ತದಿಂದ ನೆರವೇರಲಿರುವುದು.

ಬಂಟಕಲ್ಲು— ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಮೆನೇಜಿಂಗ್ ಕಮಿಟಿ ಪತಿಯಿಂದ ಇದೇ ತಾ. 4ರಲ್ಲು ಉಡುಪಿಯಿಂದ ಗೋವೆಗೆ ಹೋಗಿ ಹಿಂತಿರುಗಿದ ಸತ್ಯಾಗ್ರಹಿಗಳಿಗೆ ಸ್ವಾಗತ ನೀಡಲಾಯಿತು. ಮಧ್ಯಾಹ್ನ ಶ್ರೀ ಕೆ. ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಎಸ್. ಸಾಧು ನಾಯ್ಕರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಎಸ್. ಲೂವೀಸರು ಸತ್ಯಾಗ್ರಹಿಗಳ ಪರಿಚಯವನ್ನು ಮಾಡಿಕೊಟ್ಟರು. ಶ್ರೀಗಳಾದ ಬಿ. ಶೀನಪ್ಪ ಶೆಟ್ಟಿ, ಯು. ಎಸ್. ನಾಯಕ್ ಲೋಕಯ್ಯ, ರಾಮಚಂದ್ರ ನಾಯಕ್ ಮೊದಲಾದವರ ಭಾಷಣಗಳಾದುವು, ಬಳಿಕ ಸತ್ಯಾಗ್ರಹಿಗಳಿಗೂ ಇತರ ಅತಿಥಿಗಳಿಗೂ ತಿಂಡಿ ತೀರ್ಥಗಳಾದುವು.

ಸೂಚನೆ

'ನವಯುಗ'ದ 34ನೆಯ ಸಂಪುಟವು ಇದೇ ಆಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ 35ನೆಯ ವರ್ಷವು ಆರಂಭವಾಗಿರುತ್ತದೆ. ಈ ಅವಧಿಗೆ ಯಾರ ಯಾರ ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನೂ, ಮುಂದಿನ ವರ್ಷದ ಚಂದಾಹಣವನ್ನೂ ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಪಿ. ಮಾ 10ಆಣೆ ಹೆಚ್ಚಿಗೆಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ಬಿನ್ನಹ.

ವಾರ್ಷಿಕಚಂದಾಹಣ ರೂ. 5—12—0

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ನವಯುಗ ಪ್ರೆಸ್, ಉಡುಪಿ.

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: 0 6 0

ಪವಿತ್ರ ಜನ್ಮ ಸ್ಥಳ

ದಿವಂಗತ ಮೋತಿಲಾಲರು ಮಾಡಿದ ಮಹಾಕಾರ್ಯವೇನು—ಎಂಬ ಪ್ರಶ್ನೆಗೆ ಭಾವಾವೇಶಲಾಲರನ್ನು ಭಾರತಕ್ಕೆ ಕೊಟ್ಟುದು ಎಂಬುದೇ ಸಮರ್ಪಕವಾದ ಉತ್ತರವೆಂದೊಬ್ಬ ಇತಿಹಾಸದ ಅಧ್ಯಾಪಕರ ಅಭಿಪ್ರಾಯ ಹೀಗೆ ವ್ಯಕ್ತಿಯನ್ನು ಗೌರವಿಸಬಹುದಾದರೆ, ಆ ವ್ಯಕ್ತಿಗೆ ಜನ್ಮವಿತ್ತ ಸ್ಥಳಕ್ಕೂ ಮನ್ನಣೆ ಸಲ್ಲಬೇಡವೆ?



ಪ್ರಥಮ "ಭಾರತ ರತ್ನ", ಶ್ರೇಷ್ಠ ಮಂತ್ರಿದ್ದಿ ಹಾಗು ಭಾರತದ ಮಹಾನಾಯಕ ರಾಜಾಜಿಯವರು ಸೇಲಮಿನ ಹೊಸೂರಿಗೆ ಸೇರಿದ ತೊರಪಳ್ಳಿಯ ಮನೆಯೊಂದರಲ್ಲಿ ಏಳು ದಶಕಗಳ ಹಿಂದೆ ಜನಿಸಿದರು ಈ ಮನೆಯನ್ನು ರಾಷ್ಟ್ರೀಯ ಮಹತ್ವದ ಕೇಂದ್ರವಾಗಿ ಕಾಯ್ದುಕೊಳ್ಳಬೇಕೆಂಬ ಗ್ರಾಮ ಪಾಸಿಗಳ ಬೇಡಿಕೆಯನ್ನು ಮದ್ರಾಸಿನ ಗವರ್ನರರಾದ ಶ್ರೀ ಶ್ರೀ ಪ್ರಕಾಶರಿಗೆ ಸರಿ ತೋರಿದೆ. ಇದಕ್ಕೆ ತಗಲುವ ಕರ್ಚನ್ನಲ್ಲಿ ತನ್ನ ಪಾಲೆಂದು ರೂ. ೧೦೦೦ ವನ್ನು ಅವರು ದಾನವಿತ್ತಿದ್ದಾರೆ, ಅಲ್ಲದೆ ಒಂದು ಸಮಿತಿಯನ್ನು ರಚಿಸಿ, ಮುಂದಿನ ಕಾರ್ಯಕ್ರಮದ ಬಗ್ಗೆ ರಾಜಾಜಿಯ ಸಲಹೆ ಕೇಳಿರಿ ಎಂದು ಬೋಧಿಸಿದ್ದಾರೆ. ರಾಜಾಜಿಯ ಪುತ್ರ ಶ್ರೀ ಸಿ. ಆರ್. ನರಸಿಂಹನ್ ಅವರು ಗವರ್ನರರಿಗೆ ಮನೆಯನ್ನು ತೋರಿಸಿದರು. ಅಲ್ಲಿ ರಾಜಾಜಿಯ ಭಾವಚಿತ್ರವೊಂದನ್ನು "ಭಾರತ ರತ್ನ" ಡಾ. ಭಗವಾನ್ ದಾಸರ ಪುತ್ರರಾದ ಗವರ್ನರ ಶ್ರೀ ಪ್ರಕಾಶರು ಅನಾವರಣಗೈದರು.

ಕಣ್ಮರೆಯಾದ ಜೀವಜ್ಯೋತಿ

ಕೀರ್ತಿಶೇಷ ಧನುಸ್ಥಳ ಮಂಜಯ್ಯ ಹೆಗ್ಗಡೆಯವರ ಪವಿತ್ರಾತ್ಮವು ತಾ 31-8-1955 ನೆ ಬುಧವಾರದಂದು ರಾತ್ರಿ ಗಂಟೆ 10-5ಕ್ಕೆ ಅವರ ಮನುಷ್ಯ ದೇಹವನ್ನು ಬಿಟ್ಟು ಪಂಚ ಮಂತ್ರ ನಮಸ್ಕಾರಗಳ, ಕೊನೆಯ ಸುರಿ ನೊದಿಗೆ ಲೀನವಾಯಿತು ಅತಿ, ತಿಥಿಲವಾಗಿದ್ದ ಅವರ ನಶ್ವರ ದೇಹವು 66 ವರ್ಷಗಳ ತನಕ ಚರಿಸುವಂಗವಾದ, ಆ ಪುಣ್ಯ ಸುರಾಷ್ಟ್ರದ ಅತ್ಮವನ್ನು ಧರಿಸಿ, ಪ್ರಭಾವಳಿಯನ್ನು ಬೀರಿತು, ಧರ್ಮಸ್ಥಳದ ಅಧರ್ಮ ಜೋತಿಯ ನಸ್ಸಿನಿಯಲ್ಲಿ. ಫಕೀರರು, ವೀರರು, ಕಲಾಬಲ್ಲರು, ಸಾಹಿತಿಗಳು, ಧರ್ಮಜ್ಞರು, ಕಾರ್ಮಿಕರು, ಕವಿಗಳು, ಗಮಕಿಗಳು, ನಟ್ಟುವರು, ಶಿಲ್ಪಿಗಳು, ಸಂಗೀತಜ್ಞರು, ಬಡವರು, ಒಲ್ಲದರೆಲ್ಲರೂ ಕಿತಕಿಕೊಂಡಿದ್ದು, ನೋಡಿದರು, ಮಾತನಾಡಿದರು, ಧಾರಾ ನಗರಪತಿಯಂತಿದ್ದ ಅ ಭವ್ಯಾತ್ಮನ ದಿನ್ಯವಾಣಿಗಳನ್ನು ಕೇಳಿದರು. ಕಡೆದರು, ಸಂಭಾವನೆಗಳನ್ನು ಪಡೆದರು ಅನ್ನದಾನ, ಅಭಯದಾನ, ಔಷಧ ದಾನ, ವಿದ್ಯಾದಾನಗಳನ್ನು ಕೊಡುಗೈಗಳಿಂದ ನೀಡುತ್ತಿದ್ದ ದಾನ ವೀರ, ಶ್ರೀಮಂತರ ಔದಾರ್ಯ, ಸಮೆ, ದಾನ, ಕ್ಷಮೆ, ಶಾಂತಿಗಳೊಡ ಪೆರಸಿದ, ಶೀಲಗುಣಗಳಿಗೆ ಬೆರಗಾದ ಜನತೆಯು, ಅವರನ್ನು ಮಾತನಾಡುವ ಮಂಜುನಾಥ ಸ್ವಾಮಿಯೆಂದೇ ನಚ್ಚಿನ ಹೆಸರಿಟ್ಟು ಕರೆದರು. ಹೀಗೊಂದು ಬದಿಯಿಂದ ಅಮೃತ ಗಂಗೆಯು ಅವರನ್ನು ಅಭಿಷೇಕಗೊಳಿಸುತ್ತಿತ್ತು. ಮತ್ತೊಂದು ಕಡೆಯಿಂದ, ಅಜ್ಞಿನರ ದೇವಾಲಯಕ್ಕೆ ಜ್ಞಿನಾಧಿಕಾರಿಯೇ? ಜ್ಞಿನನಾದವನು. ಅಜ್ಞಿನ ಬಿಂಬದ ಆರಾಧಕನಾಗಬಹುದೇ? ಎಂಬಿತ್ಯಾದಿ ಮತ ಘರ್ಷಣೆಗಳ ಕಾವಿನ ಕಿಚ್ಚು ಸುಡುತ್ತಿತ್ತು. ಹೀಗೆ ಈ ಶೀತೋಷ್ಣಗಳ ಪರುರವಣಿಗೊಳಗಾದ ಶ್ರೀಮಾನರು, ಧರ್ಮಸ್ಥಳದ ದೀಪೋತ್ಸವದ ಸಮಯದಲ್ಲಿ, ಸರ್ವ ಧರ್ಮ ಸಮ್ಮೇಲನವನ್ನು ಜರಗಿಸುವ ಏರ್ಪಾಡನ್ನು ಮಾಡಿ. ಸುಶಿಕ್ಷಿತರಾದ, ಎಲ್ಲಾ ಮತಪಂಥಗಳ ವಿದ್ವಾಂಸರನ್ನು ಕರೆಯಿಸಿ, ಮತ ಖಂಡನೆಗಳಿಗೆ ಅಪ್ಪದಕೊಡದೆ, ಪ್ರತಿಯೊಂದು ಧಾರ್ಮಿಕ ಪಂಥಗಳ, ಪಾರಭೂತವಾದ ತಿರುಳಿನ ಉಪದೇಶಗಳನ್ನು ಮಾಡಿಸಿದರು. ಹಿಂದು, ಕ್ರೈಸ್ತ, ಮುಸಲ್ಮಾನ, ಶೈವ, ವೈಷ್ಣವ, ಸ್ಯಾತ್ರ, ಜಿನ, ಬುದ್ಧ, ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳೆಂಬ, ಮತ, ಪಂಥಗಳ ಮಹಾನದಿ, ನದಿಗಳೆಲ್ಲಾ ಅ ಮೊದೇ ಧರ್ಮಸಮುದ್ರದೊಳಗೆ ಅಂತರ್ಭೂತವಾಗುತ್ತದೆಂಬ ತತ್ವಗಳನ್ನು ಸರ್ವ ಧರ್ಮ ಸಮ್ಮೇಲನದ ಮೂಲಕ, ಬೋಧಿಸುವಂತೆಮಾಡಿ ಧರ್ಮಜಾಗ್ರತಿಯನ್ನುಂಟುಮಾಡಿದರು. ದಿವಂಗತ ಹೆಗ್ಗಡೆಯವರು, ಸ್ವಧರ್ಮ ನಿಷ್ಠರಾಗಿದ್ದಂತೆ, ಪರಧರ್ಮದಲ್ಲಿಯೂ, ವಿಶ್ವಾಸವುಳ್ಳವರಾಗಿದ್ದರು. ಅವರ ವಿಪುಲವಾದ ಗ್ರಂಥ ಭಂಡಾರದಲ್ಲಿ, ಧಾರ್ಮಿಕ, ಸಾಮಾಜಿಕ, ರಾಜಕೀಯಗಳ ವಿಭಾಗಗಳುಳ್ಳ-ನಾನಾ ವಿಷಯಗಳ, ಅಮೌಲ್ಯ ಗ್ರಂಥರಾಶಿಗಳು ಇದ್ದು ವಿದ್ವಜ್ಜನರಿಗೂ, ವಿದ್ಯಾರ್ಥಿಗಳಿಗೂ ಸದಾ ನೆರವನ್ನು ನೀಡುತ್ತಿದ್ದವು. 1918ನೆ ಇಸವಿಯಲ್ಲಿ ಶ್ರೀ॥ ಚಂದಯ್ಯ ಹೆಗ್ಗಡೆಯವರೆ ಉತ್ತರಾಧಿಕಾರಿಯಾಗಿ ಧರ್ಮಸ್ಥಳದ ಧರ್ಮಾಧಿಕಾರವನ್ನು ಶ್ರೀ ಮಂಜಯ್ಯ ಹೆಗ್ಗಡೆಯವರು ವಹಿಸಿಕೊಂಡು, 37 ವರುಷಗಳು ಸತತ ಪರಿಶ್ರಮದಿಂದ, ಪುರಾತನ ಕುಡುವನನ್ನು, ನೂತನ ಧರ್ಮಸ್ಥಳವಾಗಿ ಪರಿವರ್ತನೆಗೊಳಿಸಿದರು, ಚಿತ್ರಕಲಾ ಶಿಲ್ಪಿಯೂ, ವೈದ್ಯಸ್ಯ ವಿಜ್ಞಾನಿಯೂ, ಆಗಿದ್ದ ದಿವಂಗತ ಹೆಗ್ಗಡೆಯವರು, ಕಾರ್ಕಿಗುರುಕುಲ, ಗುಜರಾತ ವಿದ್ಯಾಪೀಠ, ಶಾಂತಿನಿಕೇತನ ಮೊದಲಾದ ವಿದ್ಯಾಸಂಸ್ಥೆಗಳ ಉದ್ದೇಶಗಳನ್ನು ಮನಗಂಡು, ಉಜಿರೆಯಲ್ಲಿ "ಸಿದ್ಧವನ ಗುರುಕುಲ" ವನ್ನು ಸ್ಥಾಪಿಸಿ, ಜಾತಿ, ಮತಗಳ ಭೇದವಿಲ್ಲದೆ ಧರ್ಮಾರ್ಥವಾಗಿ ವಿದ್ಯಾರ್ಥಿಗಳಿಗೆ, ಅನ್ನದಾನಗಳನ್ನೂ ವಿದ್ಯಾದಾನವನ್ನು ಮಾಡಿದರು ಈ ಗುರುಕುಲದಲ್ಲಿ ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲಿಷು, ಸಂಗೀತ, ವ್ಯಾಯಾಮಗಳ, ಶಿಕ್ಷಣವು ದೊರೆಯುತ್ತಿದೆ. ಅದೇ ಸಿದ್ಧವನ ಗುರುಕುಲದ ಸಮೀಪದಲ್ಲಿಯೇ 'ಕರ್ಣಾಟಕ ವಿದ್ಯಾಲಯ"ವೆಂಬ ಹೈಸ್ಕೂಲನ್ನು ಕಾರಣಭೂತರಾಗಿ ಸ್ಥಾಪಿಸಿ, ಅದರ ಕಾಲಜನೆಯನ್ನು ಮಾಡುತ್ತಿದ್ದರು. ಧರ್ಮಸ್ಥಳದಲ್ಲಿ ನಡಿಸಿಕೊಂಡು ಬರುವ ಅಸ್ಪತ್ರೆಯಲ್ಲದೆ— ಕಳೆದ ವರ್ಷದಿಂದ ಸಂಚಾರಿ ಮೋಟರ ವೇನಿನ ಧರ್ಮಾಸ್ಪತ್ರೆಯೊಂದನ್ನು ತೆರೆದು, ಧರ್ಮಸ್ಥಳದಿಂದ 10-12 ಮೈಲುಗಳಿಗಿಂತಲೂ, ದೂರ ಪ್ರದೇಶಗಳಲ್ಲಿದ್ದ ರೋಗಿಗಳಿಗೆ ಔಷಧ ದಾನವನ್ನು ಮಾಡಿಸುತ್ತಿದ್ದರು. ಯಾವದೊಂದು ಧಾರ್ಮಿಕ, ವಿದ್ಯಾ, ಸಾರ್ವಜನಿಕ, ಸಂಸ್ಥೆಗಳಿಗಾಗಲೀ, ವಿದ್ಯಾರ್ಥಿ, ರೋಗಿ, ಮೊದಲಾದ ಆರ್ಥಿಕ ಕಷ್ಟ-ಳಿಗೆ ಗುರಿಯಾದ ವ್ಯಕ್ತಿಗಳಿಗಾಗಲೀ, ಅವರು ನೆರವನ್ನು ಕೇಳಿದರೆಗೆ ತಕ್ಕ ಸಹಾಯವನ್ನು ನಗುಮುಖದ ಪ್ರಸನ್ನ ಚಿತ್ತದಿಂದ ದಯವಾಲಿಸುತ್ತಿದ್ದರು ಸಾವಿರಾರುಜನರ, ವಾದ, ವಿವಾದಗಳ ದೂರನ್ನು ಕೇಳಿ ಕಕ್ಷಿ ಪ್ರತಿಕಕ್ಷಿಗಳು, ಸತ್ಯವನ್ನು ನಚ್ಚಿ ನಡೆಯುವಂತೆ ತೀರ್ಮಾನಿಸುತ್ತಿದ್ದರು. ಹೀಗೆ, ಚತುರ್ಮುಖ ವಿಧಿಯಾಗಿ, ಬೇಸರವಿಲ್ಲದೆ, ಶಾಂತ ಹೃದಯದಿಂದ, ಜನತಾ ಸೇವೆಯನ್ನು ಮಾಡುತ್ತಿದ್ದು, ನಿಷ್ಕಾಮಕರ್ಮಯೋಗಿಗಳೆನಿಸಿದ ಜೀವನ್ಮುಕ್ತರಾಗಿದ್ದರು.

ಯಟ್ಟಿಗೊಂದು ಮರೆಯಬಿದೆಯೆಂಬದನ್ನು, ಜನಸಾಮಾನ್ಯರೆಲ್ಲರೂ ತಿಳಿದಿರುವಂತಾದರೂ, ಮಾನವ ಜೀವಿತದ ನೆಲೆ ಮತ್ತು ಬೆಲೆಯನ್ನು, ಕೀರ್ತಿ ಶೇಷರಾದ ಮಂಜಯ್ಯ ಹೆಗ್ಗಡೆಯವರಂತೆ ತಿಳಿದುಕೊಂಡವರು ಬಹುಕಡಿಮೆ ಸಂಖ್ಯೆಯಲ್ಲಿರಬಹುದಷ್ಟೆ? ಆದುದರಿಂದಲೇ ಅವರ ಸಂಕಲ್ಪಕಾರ್ಯಗಳೆಲ್ಲಾ, ಶುಭಪ್ರದವಾಗಿ ಯಶಸ್ವಿಯಾಗಿ, ನೆರವೇರಿಸಲ್ಪಟ್ಟು ದಿವಂಗತರು ತಮ್ಮ ಜೀವಿತದ ದಿನಗಳನ್ನು, ಉತ್ತಮ ಭಾವನೆಯಿಂದ, ಭೌತಿಕ ಸಂಪತ್ತಿನೊಡನೆ ಸದ್ವ್ಯಯಗೊಳಿಸಿ, ನಮ್ಮವಾಸುವ ದೇಶದಿಂದ ಸ್ವಾಪ್ರಾಪ್ತಿಯನ್ನು ಪಡೆದು, ಕೃತಾರ್ಥರಾದರು ಮೋಕ್ಷಗಾಮಿಯಾದ ಆ ಉದಾರ ಚರಿತನ, ಪರಿಶುದ್ಧ ವರ್ತನೆ, ದೂರದೃಷ್ಟಿ, ಅತಿಥಿಸತ್ಕಾರ, ಧರ್ಮವಾತ್ಸಲ್ಯ, ಕಲಾಸೇವೆ, ಜನತಾ ಸೇವೆ, ನಡೆ, ನುಡಿ, ಶೀಲ, ಗುಣಗಳ ಕುರಿತು, ದೊಡ್ಡದಾದ ಒಂದು ಗ್ರಂಥವನ್ನೇ ಬರೆಯಬೇಕಾಗುವದು. ಜನರ ಕಣ್ಣಿಗೆ ಮರೆಯಾದರೂ, ಹೃದಯದಲ್ಲಿ ನೆಲಸಿರುವ ಆ ಭವ್ಯಾತ್ಮನ ಸ್ಥಾನವು ತಂದಿಸಿಕೊಳ್ಳಲಾರದ ನಷ್ಟವಿನ ಸುಂದದಿಗೊಳ್ಳುತ್ತಿರುವ ಜಗತ್ತಿಗೆ ಶ್ರೀಮಾನ ಹೆಗ್ಗಡೆಯವರಂಥಾ, ಬಯಸುವಂತಿ ಕರ್ಮಯೋಗಿಗಳ ಅಗತ್ಯವಿದೆ. ಇದ್ದವರೊಬ್ಬರೂ ಸತ್ಯಸ್ವರ್ಗವಿದೆಯೆಂಬ, ಕಂಬನಿಯ ಧಾರಾ ವರ್ಷದ ಸೂತು ಎಲ್ಲಾ ಕಡೆಗಳಿಂದಲೂಕೇಳಬರುತ್ತಿದೆ, ಆತ್ಮಿಯ ಬಂಧುಗಳಿಂದಿಲ್ಲ. ಮಾನವರ ಹೃದಯದೇ ಸುರುಕಗೊಂಡಿದೆ. ಪ್ರಾತಃಸ್ಮರಣೀಯರಾದ ಅವರ ಭವ್ಯ ಶೀಲ ಗುಣಗಳು ಮಾರ್ಗದರ್ಶಕಗಳಾಗಿವೆ. ದಿವಂಗತರ ಉತ್ತರಾಧಿಕಾರಿಗಳಾಗಿ ಬರಲಿರುವ ಮುಂದಣ ದರ್ಮಾಧಿಕಾರಿಗಳಿಂದ ಧರ್ಮಸ್ಥಳದ ಪವಿತ್ರ ಕೀರ್ತಿಯು ಬೆಳೆಗಿ ಬಾಳುವಂತೆ, ಮಹತೋಭಾರ ಶ್ರೀ ಮಂಜುನಾಥ ಸ್ವಾಮಿಯು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಕೆ. ಪಿ. ವೆಂಕಪ್ಪ ಶೆಟ್ಟಿ

ಆಲೂರು—ಇಲ್ಲಿಯ ಸರಸ್ವತಿ ಎಯಿಡೆಡ್ ಎಲಿಮೆಂಟರಿ ಶಾಲೆಯ ಮಕ್ಕಳ ಹೆತ್ತವರ ಕೂಟವು ಇನೇ ತಾ. 18ರಲ್ಲು ಶ್ರೀ ಚಿತ್ತೂರು ಅಣ್ಣಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಚಂದ್ರಶೇಖರ ಶೆಟ್ಟಿ ಮೊದಲಾದವರು ಹೆತ್ತವರ ಹೊಣೆಗಾರಿಕೆ ಕುರಿತು ಮಾತನಾಡಿದರು. ಮಕ್ಕಳಿಗೆ ತಿಂಡಿ ತಂಪೋಣ, ಹರಕೆದೆ, ನರ್ತನೆ ಮೊದಲಾದ ಮನರಂಜನ ಕಾರ್ಯಗಳಾದ ಬಳಿಕ ರಾಂಗ ಸೆಕ್ರೆಟರಿ ಶ್ರೀ. ಎಚ್. ಸಂಜೀವ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು

ಬಂಟರ ಯಾನೆ ನಾಡವರ ಸಂಘ

ಮುಂಬಾಯಿ—ಸಂಘದ ಆಜೀವ ಸದಸ್ಯರಾಗಿದ್ದು ಸಂಘದ ಏಳಿಗೆಗಾಗಿ ಸದಾ ಪ್ರಯತ್ನಿಸುತ್ತಿದ್ದ ಹಾಲ್ಕರ್ ಬಂಟವಾಳ ಗೋವಿಂದ ಶೆಟ್ಟಿರು ತಾ 24.8.1955ರಲ್ಲಿ ಮೃತಪಟ್ಟರೆಂದು ತಿಳಿಯುವರೆ ತುಂಬಾ ವಿಷಾದಪಡುತ್ತೇವೆ.

ತಾ. 4.9.1955ರಲ್ಲಿ ಜರಗಿದ ಸಂಘದ ಆಡಳಿತ ಮಂಡಳಿಯ ಸಭೆಯಲ್ಲಿ ಮೃತರ ಶರೀರಕ್ಕೆ ಶಾಂತಿಯನ್ನೀಯಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತಲ್ಲದೆ ಅವರ ಕುಟುಂಬದ ದುಃಖದಲ್ಲಿ ನಾವು ಸಹ ಭಾಗಿಗಳಾಗಿರುವೆವು ಎಂದು ಗೌ॥ ಕಾರ್ಯದರ್ಶಿ ಶ್ರೀ ಮೂಲ್ಕಿ ಗಂಗಯ ಶೆಟ್ಟಿ ಬರೆಯುತ್ತಾರೆ

ಕನ್ನಡ ಸಂಘ, ಭವನ್ಸ್ ಕಾಲೇಜ್, ಮುಂಬಯಿ-ಇವರ ಉದ್ಘಾಟನೆಯು ತಾ. 6.9.55ರಂದು ಶ್ರೀ ಎಮ್ ವಿ ಕಾಮತ್, ಸಂಪಾದಕ ಫ್ರೀ ಪ್ರೆಸ್ ಬುಲೆಟಿನ್ ಇವರಿಂದ ನೆರವೇರಿಸಲ್ಪಟ್ಟಿತು ಉದ್ಘಾಟನಾ ಭಾಷಣಾನಂತರ ಕಾರ್ಯದರ್ಶಿ, ಶ್ರೀ. ಎಂ. ಕೆ. ಪ್ರಭಾಕರ್ ಶೆಟ್ಟರು ವಂದನೆಗಳನ್ನರ್ಪಿಸಿದರು

ಈ ವರ್ಷದ ಆಂತರ ಕಾಲೇಜ್ ಕನ್ನಡ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಮೂರು ಕಾಲೇಜುಗಳಲ್ಲಿಂದಾದ ಭವನ್ಸ್ ಕಾಲೇಜಿನ "ಸತ್ಯವಂತ ಬಾಬಿ"ಯಲ್ಲಿ ಜಯವು ಪಾತ್ರವನ್ನು ವಹಿಸಿದ್ದ ಶ್ರೀ. ಎಂ. ಕೆ. ಪ್ರಭಾಕರ್ ಶೆಟ್ಟಿಯವರು ಉತ್ತಮ ನಟನೆಂದು ಆರಿಸಲ್ಪಟ್ಟು ಪ್ರಥಮ ಬಹುಮಾನ ಪಡೆದರು.

ಕರ್ಣಾಟಕ ಸಂಘ ಮದ್ರಾಸು—ತಾ 4.9.55ರಂದು ಸರ್ ಯಮ್. ಸಿಟಿ ಮುತ್ತಯ್ಯ ಚೆಟ್ಟಿಯಾರ್ ಹೈಸ್ಕೂಲಿನಲ್ಲಿ ಸಂಗೀತ ಕಚೇರಿಯೊಂದು ನಡೆಯಿತು ಶ್ರೀಮತಿ ರೆಸೂದೇವಿ, ಕೆ. ಯನ್. ರಾಮಾಯಿರವು ಶ್ರೀ. ಯನ್ ವಿ. ಮೂರ್ತಿ (ತಬಲಾ) ಶ್ರೀ. ಕೆ. ಸಿ. ನಿಡ್ಲೆಲ್ (ಪಿಟೀಲು) ಇವರ ಹಿಮ್ಮೇಳದೊಂದಿಗೆ ಅನೇಕ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಸಭಿಕರನ್ನು ನೆಚ್ಚಿಸಿದರು. ಶ್ರೀ. ಯಮ್. ಮರಿಯಪ್ಪ ಚೆಟ್ಟರು ಕರ್ಣಾಟಕ ಸಂಗೀತದ ಕುರಿತು ವಿಚಾರಸ್ಫೂರ್ತಿ ಭಾಷಣವನ್ನಿತ್ತರು.

ಕಾರ್ಕಳ ಡಿ. ಮು ಕೋರ್ಟಿನಲ್ಲಿ

ಕ್ರಮ ನಂಬ್ರ 215/1955.

ಮಂಜಯ್ಯ ಶೆಟ್ಟಿ —ವಾದಿ.

ಸುತ್ತು

ಗಂಗಿ ಶೆಟ್ಟಿ ಸಂ — ಪ್ರತಿವಾದಿರು.

ಇವರೊಳಗೆ

ಈ ಮೂಲಕ ಸದ್ರಿ ದಾವೆಯ 3ನೇ ಪ್ರತಿವಾದಿ, ಮಾದಯ್ಯ ಶೆಟ್ಟಿ—ಗಂಗಿ ಶೆಟ್ಟಿರ ಮಗ, ಕಾರ್ಕಳ ತಾಲ್ಕು ಬಾರ ಗ್ರಾಮದ ಕರಾಡಿ ಎಂಬಲ್ಲಿರುವವರಿಗೆ ತಿಳಿಸುವದೇನಂದ್ರೆ

ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾರೀಕು 30.9.1955ಕ್ಕಿಟ್ಟಿದೆ. ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರು ದ್ವಾರಾ ಹಾಜರಾಗಿ ಉದಾಹರಿಸತಕ್ಕದ್ದು ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾಯಿಮಾಡಿ ಸದ್ರಿ ದಾವಾ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

(By order of the Court)

N. M. Adyanthaya,
Advocate for Plaintiff

Karkal, 12-9-1955

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.		
24	ತಿಂಗಳಿಗೆ	4%
12	,,	3½%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD, MULKI.

ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಬಾವತಿ ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o Box No 3219, BOMBAY 9.

ಸಾಲ

ಗೀತೆಯ ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ

ಮಂಗಳೂರು

ರೋಟರಿ ಕ್ಲಬ್ಬಿನಲ್ಲಿ ಭಾಷಣ— ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ಇದೇ ತಾ 8ರಲ್ಲಿ ರಾತ್ರಿ ಡಾ. ಕೆ ಬಾಲಸ್ವಾಮಿ ಸೆಟ್ಟರ ಅಧ್ಯಕ್ಷತೆಯಲ್ಲಿ, ಅಂತರ ರಾಷ್ಟ್ರೀಯ ರೋಟರಿಯ 56ನೆ ಜಿಲ್ಲೆಯ ಗವರ್ನರರಾದ ಶ್ರೀ ಬಸಪ್ಪ ಪುರಿಕರ್ ಅವರಿಗೆ ಭೋಜನ ಸತ್ಕಾರವಿತ್ತು. ಗೌರವಿಸಲಾಯಿತು.

ಶ್ರೀ ಬಿ.ವೈಕುಂಠ ಬಾಳಿಗ, ಎಮ್. ಎಲ್. ಎ, ಅವರು ಅತಿಥಿಗಳಿಗೆಸ್ವಾಗತ ವಾಚನ ಮಾಡಿದುದಕ್ಕೆ ಮಂಗಳೂರು ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಉತ್ತರವಿತ್ತರು. ಮುಖ್ಯ ಅತಿಥಿಗಳಾದ ಶ್ರೀ ಹಸನ್ ಮಾಂಕ್ಕರ್ ಅವರು ತನಗಿತ್ತ ಗೌರವಕ್ಕೆ ಆಭಾರ ಸೂಚಿಸಿ, ಸ್ವಾಥಕ್ಕಿಂತ ಪರಾರ್ಥವಿಗಿಲು ಎಂಬ ತತ್ವವೇ ಅಂತರ ರಾಷ್ಟ್ರೀಯ ರೋಟರಿಯ ಧ್ಯೇಯವಾಗಿದ್ದು ಅಂತರ ರಾಷ್ಟ್ರೀಯ ಸಾಹಾರ್ದತೆ ಮತ್ತು ಶಾಂತಿ ಸಾಧಿಸಲು ಸಂಸ್ಥೆಯು ತುಂಬಾ ಸಹಕಾರಿಯಾಗಿದೆ ಎಂದು ಹೇಳಿದರು.

ಧ್ವಜ ದಿನಾಚರಣೆ— ಹಿಂದೂ ಕುಷ್ಠ ನಿವಾರಣಾ ಸಂಘದ ಮಂಗಳೂರು ಶಾಖೆಯ ಸಭೆಯು ತಾ. 8ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕುಷ್ಠನಿವಾರಣಾ ಸಂಘದ ನಿಧಿಗೆ ಧನಸಂಗ್ರಹ ಮಾಡುವ ಬಗ್ಗೆ ಜಿಲ್ಲೆಯಾಧ್ಯಂತ ಧ್ವಜಮಾರಾಟ ದಿನವನ್ನು ಆಚರಿಸಲು ನಿರ್ಧಾರವಾಗಿ, ಆ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದಾಯಿತು. ಸಾರ್ವಜನಿಕ ಸಭೆ, ಚಿತ್ರಪ್ರದರ್ಶನ ಮೊದಲಾದ ಕಾರ್ಯಕ್ರಮಗಳಿಂದ ಜಿಲ್ಲೆಯಲ್ಲಿ ಪ್ರಚಾರಕಾರ್ಯ ಕೈಕೊಳ್ಳಬೇಕೆಂದಾಯಿತು. ಕುಷ್ಠರೋಗ, ಕ್ಷಯ, ಮಲೇರಿಯಾ, ಗುಹ್ಯರೋಗ, ಅನೇಕಾಲು ಇತ್ಯಾದಿ ಮಹಾ ರೋಗಗಳನ್ನು ತಡೆಗಟ್ಟಲು ಪ್ರಚಾರ ನಿಧಿ ಸಂಗ್ರಹಾದಿ ಕಾರ್ಯಕ್ರಮ ಕೈಗೊಳ್ಳುವರೆ ತಾಲೂಕು ಆರೋಗ್ಯ ಸಮಿತಿಗಳನ್ನು ಸಂಘಟಿಸುವರೆ ನಿರ್ಣಯವಾಯಿತು.

ಗ್ರಾಮ ವೈದ್ಯಕೀಯ ಸೇವಾ ವಿಭಾಗ— ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಗ್ರಾಮಸೇವಾ ವಿಭಾಗದವರು ಪ್ರತಿ ಆದಿತ್ಯವಾರ ಮಧ್ಯಾಹ್ನ 2ಗಂಟೆಯಿಂದ 5ಗಂಟೆವರೆಗೆ ಗುರುಪುರದ ಹಿಂದೂ ಹಾ. ಎ. ಶಾಲೆಯಲ್ಲಿ ಉಚಿತ ವೈದ್ಯಕೀಯ ಸಲಹೆಗಳನ್ನು ಕೊಡಲಿರುವರು. ಇದೇ ತಾ. 18ರಿಂದ ಈ ಸೇವಾ ಕಾರ್ಯವು ಪ್ರಾರಂಭವಾಗುವುದು.

ಮಹಿಳಾ ಪರಿಷತ್ ದಿನಾಚರಣೆ— ಅಖಿಲಭಾರತ ಮಹಿಳಾ ಪರಿಷತ್ ದಿನಾಚರಣೆಯು ತಾ. 6ರಲ್ಲಿ ಸಂಜೆ ಕೊಡಿಯಾಲ ಬೈಲಿನ ಬೆಸೆಂಟ್ ಮಂದಿರದಲ್ಲಿ ಶ್ರೀಮತಿ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಭಗವತಿ ಸಮಾಜದ ಗೌ. ಜತೆಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟರಿಂದ ಸ್ವಾಗತಗಳಾದ ಬಳಿಕ ಗೋವಾ ಗುತಾತ್ಮರಿಗೆ ಮತ್ತು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರಿಗೆ ಶ್ರದ್ಧಾಂಜಲಿಗಳನ್ನರ್ಪಿಸುವ ನಿರ್ಣಯವಾಯಿತು. ಆ ಮೇಲೆ ಶ್ರೀಮತಿ ಲೀಲಾ ಬಾಯಿ ವಕ್ಕಾಂಬರ ರಾಯರು ಅ. ಭಾ. ಮಹಿಳಾ ಪರಿಷತ್ತಿನ ಅಧ್ಯಕ್ಷೆಯರ ಸಂದೇಶವಾಚನ ಮಾಡಿದರು. ಭಗಿನೀ ಸಮಾಜದ ಗೌ. ಜತೆ ಕಾರ್ಯದರ್ಶಿ ಶ್ರೀಮತಿ ಉಮಾ, ಪಿ. ಕಾಮತರು ವರದಿಯನ್ನೋದಿದರು. ಶ್ರೀಮತಿ ವತ್ಸಲಾ ತಾಳಿತ್ತಾಯರ ಸಂಗೀತ, ಧನ್ಯವಾದಾರ್ಪಣೆಗಳಾಗಿ ಸಭಾಂತ್ಯವಾಯಿತು.

ಉದ್ಘಾಟನಾ ಸಮಾರಂಭ— ಕರ್ನಾಟಕ ಪೊಲಿಟೆಕ್ನಿಕ್ ಸಿವಿಲ್ ಎಸೋಸಿಯೇಶನಿನ ಉದ್ಘಾಟನಾ ಸಮಾರಂಭವು ತಾ. 5ರಲ್ಲಿ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ವರವೇರಿಕಟ್ಟಪ್ಪಿತು ಶ್ರೀ ಬಿ. ವಿಲ್. ಪೇರರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಆರ್. ಕೆ. ಗುಪ್ತರು ವರದಿಯನ್ನೋದಿದರು. ಶ್ರೀ ಕೆ. ಶ್ರೀನಿವಾಸ ಭಟ್ಟರು ಸ್ವಸ್ತಿವಾಚನಮಾಡಿದರು. ಶ್ರೀ ನಾಗೇಶ ರಾಯರು ಉತ್ತರವಿತ್ತರು.

ವಿದ್ಯಾರ್ಥಿ ಸಂಘದ ಉದ್ಘಾಟನೆ— ಕರ್ನಾಟಕ ಪೊಲಿಟೆಕ್ನಿಕಿನ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ತಾ. 7ರಲ್ಲು ಸಂಜೆ ಮದ್ರಾಸಿನ ನಿವೃತ್ತ ಜೊಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ರಾವ್ ಬಹದೂರ್ ಶ್ರೀ ಎನ್. ಎಮ್. ಅಡ್ಯಂತಾಯರು ನೆರವೇರಿಸುತ್ತಾ, ತಾಂತ್ರಿಕ ಶಿಕ್ಷಣ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ತರಬೇತಿ ಕೊಡಲು ಅನುಕೂಲವಾಗುವಂತೆ ದೇಶದಾದ್ಯಂತ ಕಾರ್ಖಾನೆಗಳಲ್ಲೆಲ್ಲಾ ಉದ್ಯೋಗಾಭ್ಯಾಸೀ ಪದ್ಧತಿಯನ್ನು ಜಾರಿಗೆತರುವ ಅಗತ್ಯವಿದೆಯೆಂದರು. ಬೇರೆ ಶುದ್ಧಕಾಭ್ಯಾಸಕ್ಕೆ ಮಾತ್ರ ಹೆಚ್ಚು ಗಮನಕೊಟ್ಟರೆ ಸಾಲದೆಂದೂ ವ್ಯಾವಹಾರಿಕ ಕೆಲಸಕ್ಕೂ ಹೆಚ್ಚಿನ ಗಮನವೀಯಬೇಕಾಗಿದೆ ಎಂದು ಕೂಡಾ ವಿದ್ಯಾರ್ಥಿಗಳಿಗೆ ಉಪದೇಶವಿತ್ತರು.

ಕುಷ್ಠರೋಗ ನಿವಾರಣಾ ಜಿಲ್ಲಾ ಶಾಖೆಯ ಉದ್ಘಾಟನೆ— ಮಹಿಳಾಸಭೆ, ಭಗಿನೀ ಸಮಾಜ, ಸೇವಾ ಸಮಾಜ, ಇಂಡಿಯನ್ ಮೆಡಿಕಲ್ ಎಸೋಸಿಯೇಶನ್ ಮತ್ತು ಹಿಂದೂ ಕುಷ್ಠನಿವಾರಣಾ ಸಂಘಗಳ ಸಂಯುಕ್ತ ಆಶ್ರಯದಲ್ಲಿ ತಾ. 11ರಲ್ಲಿ ಬಾವಟೆ ಗುಡ್ಡೆಯಲ್ಲಿಯ ಮಹಿಳಾ ಸಭಾಸದನದಲ್ಲಿ ಜಿಲ್ಲೆಯ ಕುಷ್ಠರೋಗ ನಿರೋಧ ಚಳವಳಿಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಉದ್ಘಾಟಿಸಿದರು. ಶ್ರೀಮತಿ ಕಮಲಾ ಎಸ್. ಅಳ್ವರು ಸ್ವಾಗತಸಾಂತಾಗಳನ್ನಾಡಿದರು. ಡಾ. ಎ. ಎಫ್. ಕೊಯಿಲೋ, ಡಾ. ಕೆ. ನಾರಾಪ್ಪ ಅಳ್ವ, ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ; ಶ್ರೀಮತಿ ಶಾಂತೇರಿ ಪ್ರಭೃತಿಗಳು ಶುಭಾಶಂಸನಾತ್ಮಕಾಭಿಪ್ರಾಯಗಳನ್ನಾಡಿದರು. ಡಾ. ಬಿ. ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ನಗರಸಭೆ— ಮಂಗಳೂರು ನಗರಸಭೆಯು ತಾ. 10ರಲ್ಲಿ ಸಂಜೆ ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಕಾಸರಗೋಡು ತಾಲೂಕನ್ನು ಕೇರಳ ಪ್ರಾಂತ್ಯಕ್ಕೆ ಸೇರಿಸಲಿರುವ ಬಿಲ ವರವೇರಿಯನ್ನು ಕೇಳಿ ಈ ಸಭೆಯು ಗಾಬರಿಗೊಂಡಿದೆ. ಕನ್ನಡ ಮತ್ತು ಕೇರಳ ಪ್ರದೇಶಗಳೊಳಗಿನ ಪ್ರಾಕೃತಿಕ ಗಡಿಯಂತಿರುವ ಚಂದ್ರಗಿರಿ (ಪಯಸ್ವಿನಿ) ಹೊಳೆಯ ದಕ್ಷಿಣದ ಮಲಯಾಳಿಗಳು ಅಧಿಕವಿರುವ ಕಾಸರಗೋಡು ತಾಲೂಕಿನ ಭಾಗವನ್ನು ಮಾತ್ರ ರಚಿಸಲಿರುವ ಕೇರಳ ಪ್ರಾಂತ್ಯಕ್ಕೆ ಸೇರಿಸಿ, ಉತ್ತರದ ಭಾಗವನ್ನು ಕನ್ನಡ ಪ್ರಾಂತ್ಯಕ್ಕೆ ಸೇರಿಸಬೇಕೆಂದು ಈ ಸಭೆಯ ಪ್ರಾಂತ್ಯ ಪುನರ್ರಚನಾ ಸಮಿತಿಗೆ ವಿನಂತಿಸುತ್ತದೆ ಎಂಬ ನಿರ್ಣಯವು ಒಮ್ಮತದಿಂದ ಜಾರಿಯಿತು. ಸ್ಥಳೀಯ ಅಭಿವೃದ್ಧಿಯೋಜನೆಗೆ ಮಂಜೂರಾದ ಹಣದಿಂದ ಸೇಕಡಾ 50ರಷ್ಟು ಧನಸಹಾಯ ಪಡೆದು, ನಗರಸಭೆಯು ಕೈಕೊಳ್ಳಬಹುದಾದ ಕಾರ್ಯಗಳ ಕುರಿತು ಸೂಚನೆ ತಯಾರಿಸಬೇಕೆಂದಾಯಿತು.

ಜಿಲ್ಲಾ ಬೋರ್ಡು ಸಭೆ— ಇದೇ ತಾ. 12ರಂದು ದ. ಕ. ಜಿಲ್ಲಾ ಬೋರ್ಡಿನ ಜರೂರು ಸಭೆಯೊಂದು ಜರಗಿ, ಅದರಲ್ಲಿ ಇದೇ ಕಾಸರಗೋಡು ತಾಲೂಕು ದ. ಕ. ಜಿಲ್ಲೆಯಲ್ಲೇ ಉಳಿಯಬೇಕು ಎಂಬ ನಿರ್ಣಯದ ಕುರಿತು ಚರ್ಚೆ ನಡೆದಾಗ ಕಾಸರಗೋಡಿನ ಎಂಟು ಮಂದಿ ಪ್ರತಿನಿಧಿಗಳಲ್ಲಿ ಐದು ಮಂದಿ ಸಭಾ ತ್ಯಾಗಮಾಡಿದರು. "ತಾವು ಚರ್ಚೆಯಲ್ಲಿ ಭಾಗವಹಿಸಲು ಇಚ್ಛಿಸುವುದಿಲ್ಲವೆಂಬುದೇ ಇವರ ಪ್ರತಿಭಟನೆಯಾಗಿತ್ತು. ಸಭಾಧ್ಯಕ್ಷರಾಗಿದ್ದ ಡಾ| ಕೆ. ಕೆ. ಹೆಗ್ಡೆಯವರು ಅವಸರದ ಸಭೆಯನ್ನು ಕರೆದ ಉದ್ದೇಶನನ್ನು ವಿವರಿಸಿದರು. ಆರಂಭದಲ್ಲೇ ಶ್ರೀ. ಎನ್. ಕುಂಞಾಂಬುನವರು ಒಂದು ನಿರ್ಣಯವನ್ನಿತ್ತಿದರು. ಅಧ್ಯಕ್ಷರು ಅದಕ್ಕೆ ಉತ್ತರವಿಸಿದರು. ಶ್ರೀ. ಎ. ಕೃಷ್ಣ ಶೆಟ್ಟರು ತಮ್ಮ ಅಭಿಪ್ರಾಯವನ್ನು ಸೂಚಿಸಿದ ಬಳಿಕ ಶ್ರೀ. ಎನ್. ಜಿ. ಕಾಮತರು ಸಭೆ ಜರುಗಿಸಿದ ಕ್ರಮಕ್ಕೆ ತಮ್ಮ ವಿರೋಧವನ್ನು ಸೂಚಿಸಿದರು. ಶ್ರೀ. ಬಿ. ಮಂಜಯ್ಯ ಹೆಗ್ಡೆಯವರು ಈ ವಿಷಯದಲ್ಲಿ ಒಕ್ಕೆಟ್ಟನಿಂದೊಡಗೂಡಿದ ಒಂದೇ ಅಭಿಪ್ರಾಯವು ಅಗತ್ಯವೆಂದು ಶರಾವನ್ನು ಮಂಡಿಸಿದರು. ಶರಾವು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿದುದರಿಂದ ಅದರ ಚರ್ಚೆ ನಡೆಯಲು ಕಾಲಾವಕಾಶ ದೊರೆಯಲಿಲ್ಲ. ಆಗ ಶ್ರೀ. ಡೆಸ್ಸಾ ಪಿಂಟೋರವರ ಚರ್ಚೆ ಮುಕ್ತಾಗೊಳಿಸಲು ಸೂಚಿಸಿದರು. ಇದನ್ನು ಶ್ರೀ. ಎಂ. ಎಂ. ಹೆಗ್ಡೆಯವರು ಅನುಮೋದಿಸಿದರು. ಶ್ರೀ. ಕೆ. ಕೆ. ಶೆಟ್ಟರು ಬೆಂಬಲವಿತ್ತರು ಡಾ| ಕೆ. ನಾಗಪ್ಪಯ್ಯರು ಈ ಚರ್ಚೆಗೆ ಒಮ್ಮತದ ಅಭಿಪ್ರಾಯ ಅಗತ್ಯವೆಂದು ಶರಾವನ್ನು ಮತಕ್ಕೆ ಹಾಕುವ ಬೇಕೆಗೆ ಈ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ ಎಂಬ ವಿರೋಧ ವ್ಯಕ್ತಪಡಿಸಿದ ಮೇರೆಗೆ, ಕಾಸರಗೋಡು ತಾಲೂಕಿನ ದಕ್ಷಿಣ ಭಾಗದವರು ಪ್ರತಿನಿಧಿಗಳು ಸಭಾತ್ಯಾಗ ಮಾಡಿದರು. ಶರಾವು ಸಂಜೂರಾಯಿತು. ಅಲ್ಲದೆ ಸಭೆಯಲ್ಲೇ ಇದ್ದ ಶ್ರೀ. ಎ. ಕೃಷ್ಣ ಶೆಟ್ಟರು ತಟಸ್ಥರಾಗಿ ಉಳಿದರು. ಆ ಬಳಿಕ ನಡೆದ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯಲ್ಲಿ ಸಭಾತ್ಯಾಗಿಗಳು ಭಾಗವಹಿಸಿದರು. ಸಾಮಾನ್ಯ ಸಭೆಯಲ್ಲಿ ಗೋವಾ ಹುತಾತ್ಮರಿಗೂ ಶ್ರೀ ಧರ್ಮಸ್ಥಲ ಮಂಜಯ್ಯ ಹೆಗ್ಡೆಯವರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು

ಡಾ| ಲೋಹಿಯಾರ ಬೆಂಬಲಿಗರ ನಿರ್ಣಯ— ಪ್ರಜಾಸೋಶಲಿಸ್ಟ್ ಪಕ್ಷದ ಡಾ. ರಾಮ ಮನೋಹರ ಲೋಹಿಯರ ಬೆಂಬಲಿಗರು ತಾ. 11ರಲ್ಲಿ ಬೆಸೆಂಟ್ ಮಂದಿರದಲ್ಲಿ ಸಭೆಸೇರಿ ಹೊಸ ಸೋಶಿಯಲಿಸ್ಟ್ ಪಕ್ಷ ರಚಿಸುವ ಡಾ. ಲೋಹಿಯರ ನಿರ್ಧಾರಕ್ಕೆ ಬೆಂಬಲವಿತ್ತರು. ಮುಂದಿನ ಅಕ್ಟೋಬರ ತಿಂಗಳಲ್ಲಿ ಜಿಲ್ಲಾ ಸೋಶಿಯಲಿಸ್ಟ್ ಸಮ್ಮೇಳನವನ್ನು ಕರೆಯಬೇಕೆಂಬ ನಿರ್ಣಯವಾಯಿತು.

ಸಭೆಯಲ್ಲಿ ಗೋವಾವಿಮೋಚನಾ ಚಳವಳಿಕ್ಕೆ ಬೆಂಬಲವೀಯುವ, ಒಕ್ಕಲುಬಿತ ಸಮಾಜವೆಯನ್ನು ಇನ್ನೂ ತೀವ್ರವಾದುದನ್ನು ಮಂಡಿಸಿ, ರೈತರೆಲ್ಲರೂ ಹೊಸ ಸೋಶಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ಸಂಘಟಿಸಬೇಕೆನ್ನುವ ಇತ್ಯಾದಿ ಗೊತ್ತುವಳಿಗಳಾದುವು.

ಸಂತಾಪ ಸೂಚಕ ಸಭೆ— ಶ್ರೀ ಧರ್ಮಸ್ಥಲ ಮಂಜಯ್ಯ ಹೆಗ್ಡೆಯವರ ನಿಧನದ ಬಗ್ಗೆ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ತಾ. 11ರಲ್ಲಿ ಶ್ರೀ ಎಚ್. ಭೀಮರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ಶ್ರೀಮತಿ ಇಂದಿರಾ ಗಾಂಧಿಯವರು ಮುಂದಿನ ತಿಂಗಳ ತಾ. 25ರಲ್ಲು ಮಂಗಳೂರನ್ನು ಸಂದರ್ಶಿಸಲಿರುವರಾಗಿ ತಿಳಿದು ಬರುತ್ತದೆ.

ಭೂಮಿ ಮಾರಾಟಕ್ಕಿದೆ

ಉಡುಪಿ ತಾಲೂಕು ಬಾಂತಾರು ಗ್ರಾಮದಲ್ಲಿ 3 ಬೆಳೆ ಮಾಡುವ 20 ಮುರಿ ಅವಲ್ ಜೀರಸಾಲೆ ಬೆಟ್ಟಿಗೆ ಅಕ್ಕಿಯ ಭೂಮಿ ಮಾರಾಟಕ್ಕೆ ಇದೆ. ಉತ್ತಮ ಗಿರಾಕಿಗಳು—

X C/o ನವಯುಗ, ಉಡುಪಿ. ವಿಳಾಸಕ್ಕೆ ಬರೆಯಿರಿ.

ಕುಂದಾಪುರ ಡಿ. ಮು. ಕೋರ್ಟನಲ್ಲಿ

S. C. 387/1955.

ವಾದಿ—ಕೆ. ವಿಠಲ ಮಂಜುನಾಥ ಕಾಮತ್.

ಪ್ರತಿವಾದಿ—ರ್‍ಯಾಮಂಡ್ ಬರೇಟೋ.

ಪ್ರತಿವಾದಿ ರ್‍ಯಾಮಂಡ್ ಬರೇಟೊ. ಸೈಮನ್ ಬರೇಟರ ಮಗ, ಕುಂದಾಪುರ ಕಸಬಾಗ್ರಾಮ. P. O. Coondapoor ಇವರಿಗೆ.

ವಾದಿಯ ಅಂಗಡಿಯಲ್ಲಿ ಪ್ರತಿವಾದಿಯು ತಾ. 28-2-53 ವ 17-11-1953ರಲ್ಲು ಬಿಲ್ ನಂಬ್ರ 115ನೇ ಪ್ರಕಾರ ಪಡೆದ ಸಾಮಾನುಗಳ ಬಾಬ್ತು ರೂಪಾಯಿ 105.9-6ಕ್ಕೆ ಮೇಲ್ಕಂಡ ದಾವಾ ವಾದಿಯು ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಅಕ್ಷೇಪಣೆ ಇದ್ದಲ್ಲಿ ತಾರೀಕು 23-9-1955ನೇ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟನಲ್ಲಿ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಪ್ರ ತಿವ್ಯಯೇ ಕಸ್ಸ್ಕ್ವಾವಾಗಿ ತೀರ್ಮಾನಿಸಲಾದೀತು—ಎಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ....

K. Raghunatha Shenai.
Pleader for Plaintiff.
Coondapoor 6-9-55

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಖಾಸ್ತಿ ಮ್ವಾಲು! ಕಡಿಮೆ ಬೆಲೆ!

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೊಡಲು, ತೋಳ್ಬಂದ, ಗಡ್ಡ ಮುಂಡಾಸು, ಕಿರೀಟ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ಹಟಿಗೆ ಹೆಚ್ಚುವ ಮಿರುಗಿನ ಅಂಟು, ತಲೆಸೂಡಿಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

DHARAMSHI MULJI, DRESSWALA,
132 C, Bhagatwadi, Bhuleshwar Road, BOMBAY—2.

ಪುತ್ತೂರು ಡಿ. ಮುನ್ಸಿಫ್, ಕೋರ್ಟನಲ್ಲಿ

O. S. No. 103/1955

ಶಿನಂಣ ಗೌಡ ... ... —ವಾದಿ.

ಮತ್ತು

ನಾರಾಯಣ ಗೌಡ, ನೆಟ್ಟಾರೆ ಸೋಮ ಗೌಡರ ಮಗ, ನಾಲ್ಕೂರು ಗ್ರಾಮ-ಕಲ್ಲಜಟ್ಟೆಲು, ಪುತ್ತೂರು ತಾಲ್ಲೂ, P. O. ಗುತ್ತಿಗಾರು

—ಪ್ರತಿವಾದಿರೀಗೆ

ಅಸ್ತಿ ಸ್ವಾಧೀನತೆಗೆ ವ ಗೇಣಿಗೆ ಕೊಡಾ ವಾದಿಯು ಮಾಡಿದ ಮೇರೆಗೆ ದಾವೆಯು ತಾ. 17-9-55ಕ್ಕೆ ಇಟ್ಟಿರುವುದ್ರಿಂದ ನಿಮ್ಮ ಆಕ್ಷೇಪ ಇದ್ರೆ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಹರಿಸದಿದ್ರೆ ನಿಮ್ಮನ್ನು ತಿವ್ಯಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

Sd. H. Pundarika Bhat,
Vakil for Plff.
ಪುತ್ತೂರು, 30-8-1955.

ಕುಷ್ಠರೋಗದ ನಿಯಂತ್ರಣಕ್ಕೆ ಸಲ್ಫೋನ್ಸಿನ ಚಿಕಿತ್ಸೆ

ಮದ್ರಾಸು ರಾಜ್ಯದಾದ್ಯಂತ ತೀವ್ರ ಪ್ರಚಾರ

ಇದೇ ಸೆಪ್ಟೆಂಬರ ತಿಂಗಳಲ್ಲಿ ಮದ್ರಾಸು ರಾಜ್ಯದ ಪ್ರತಿಯೊಂದೂ ಹಳ್ಳಿ ಪಟ್ಟಣಗಳಲ್ಲಿ ಕುಷ್ಠರೋಗದ ಕುರಿತು ಜನರಲ್ಲಿ ಜಾಗೃತಿ ಹುಟ್ಟಿಸಬೇಕೆಂದು ಉದ್ದೇಶಿಸಲಾಗಿದೆ. "ಕುಷ್ಠ ರೋಗವನ್ನು ಗುಣಪಡಿಸುವುದು ಸಾಧ್ಯ"ಎಂಬ ವಿಚಾರವನ್ನು ಮಂದಟ್ಟು ಪಡಿಸಲು ಅದಷ್ಟು ಹೆಚ್ಚು ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಅಖಿಲ ಭಾರತ ಸ್ವರೂಪದ ಭಾರತೀಯ ಕುಷ್ಠರೋಗ ನಿವಾರಣ ಸಂಘದ ಮದ್ರಾಸು ಶಾಖೆ ನಿರ್ಣಯಿಸಿದೆ.

ಮಾನ್ಯ ಮಂತ್ರಿಗಳ ಬಿನ್ನಹ

ಮೊನ್ನೆ ದಿನಾಂಕ ೫ರಂದು ಸಾರ್ವಜನಿಕರ ಸಂತ್ತು ಪತ್ರಿಕೆಗಳ ಸಹಕಾರವನ್ನು ಯಾಚಿಸಲು ಮದ್ರಾಸಿನಲ್ಲಿ ಒಂದು ಸಭೆಯನ್ನು ಕರೆದಿದ್ದರು ಅಲ್ಲಿ ಕುಷ್ಠರೋಗ ನಿವಾರಣೆಗೆ ಪ್ರಯತ್ನಿಸಬೇಕಾದ ಅವಶ್ಯಕತೆ ಮತ್ತು ವೈದ್ಯಕೀಯ ವಿಜ್ಞಾನವು ಇದಕ್ಕೆ ನೆರವಾಗಿರುವ ಬಗೆಯನ್ನು ತಜ್ಞರು ವಿವರಿಸಿದರು.

ಗಾಂಧೀಜಿಗೆ ಅತಿಪ್ರಿಯವಾಗಿದ್ದ ಭಾರತೀಯ ಕುಷ್ಠರೋಗ ನಿವಾರಣ ಸಂಘದ ಮದ್ರಾಸು ಶಾಖೆಯ ವರವಾಗಿ ನೆರೆದ ಈ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ವಹಿಸಿದ್ದರು ಸಭೆಗಳನ್ನೂ ಪ್ರದರ್ಶನಗಳನ್ನೂ ರಾಜ್ಯದಾದ್ಯಂತ ಏರ್ಪಡಿಸಿ ಜನರಲ್ಲಿ ತಿಳಿವಳಿಕೆಯನ್ನು ಹೆಚ್ಚಿಸಿ, ಕುಷ್ಠರೋಗ ನಿವಾರಣೆಗೆ ನೆರವಾಗುವಂತೆ ಸಹಾನುಭೂತಿಯನ್ನು ಸಂಪಾದಿಸಬೇಕಾದ ಅವಶ್ಯಕತೆಯನ್ನು ಅವರು ಸಾರಿ ಹೇಳಿದರು.

ಸಹಾಯದ ಯೋಜನೆ

ರಾಜ್ಯದ ಗವರ್ನರರೂ ಕುಷ್ಠರೋಗ ನಿವಾರಣ ಸಂಘದ ಮದ್ರಾಸು ಶಾಖೆಯ ಅಧ್ಯಕ್ಷರೂ ಆಗಿರುವ ಮಾನ್ಯ ಶ್ರೀ ಶ್ರೀ ಪ್ರಕಾಶರು ಜನತೆಗೆ ಶಿಕ್ಷಣ ಕೊಡುವುದರ ಮಹತ್ವವನ್ನು ವಿವರಿಸುವ ಸಂದೇಶಕಳುಹಿಸುತ್ತಾ ಸಂಘದ ಸದಸ್ಯರಾಗಿ ಸೇರಿ ಸಾರ್ವಜನಿಕರು ಕುಷ್ಠರೋಗ ನಿವಾರಣ ಕಾರ್ಯಕ್ಕೆ ತನು ಮನೆಧನಗಳಿಂದ ಸಹಾಯ ಸಲ್ಲಿಸಬೇಕೆಂದು ವಿನಂತಿಸಿದರು,

ಕೇಂದ್ರ ಆರೋಗ್ಯ ಮಂತ್ರಿ ಹಾಗು ಭಾರತೀಯ ಕುಷ್ಠರೋಗ ನಿವಾರಣ ಸಂಘದ ಅಧ್ಯಕ್ಷೆಯಾಗಿರುವ ರಾಜಕುಮಾರಿ ಅಮೃತ ಕೌರರು ತಮ್ಮ ಸಂದೇಶದಲ್ಲಿ ಕುಷ್ಠರೋಗವನ್ನು ಗುಣಪಡಿಸುವುದು ಕಷ್ಟವಲ್ಲ ಎಂಬ ವಿಷಯದ ಕಡೆಗೆ ಹೆಚ್ಚಿನ ಜನರ ಗಮನವನ್ನು ಸೆಳೆಯ ಬೇಕು ಎಂದರು. ಸಲ್ಫೋನ್ಸೆಂಬ ನೂತನವಾದ ಮತ್ತು ಪರಿಣಾಮ ಕಾರಿಯಾದ ಔಷಧವನ್ನು ಪ್ರತಿಯೊಂದು ಹಳ್ಳಿಗೆ ಮುಟ್ಟಿಸಲು ನೋಡಬೇಕೆಂದೂ ಆಸ್ಪತ್ರೆಗಳೂ ವೈದ್ಯರೂ ಸಲ್ಲಿಸುವ ಸೇವೆಯ ವಿಶಾಲ ಕ್ಷೇತ್ರದಲ್ಲಿ ಕುಷ್ಠ ರೋಗ ನಿವಾರಣೆಗೆ ಸಹ ನೆರವು ದೊರಕುವಂತೆ ಯೋಗ್ಯ ತರಬೇತಿ ನೀಡಬೇಕೆಂದೂ ಸೂಚಿಸಿದರು.

ಚಿಕಿತ್ಸೆಯ ವ್ಯವಸ್ಥೆ

ತಜ್ಞರ ಅಭಿಪ್ರಾಯದಂತೆ ಕುಷ್ಠ ರೋಗದಿಂದ ಪೀಡಿತರಾದವರು ಭಾರತದಲ್ಲಿ ೫ ಲಕ್ಷದಷ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿಯೇ ಕನಿಷ್ಠ ೧೧೦೦ ಜನರಾದರೂ ಕುಷ್ಠ ರೋಗದಿಂದ ತೀವ್ರ ಯಾತನೆ ಪಡುತ್ತಿದ್ದಾರೆ. ಕಂಕನಾಡಿಯಲ್ಲಿಯ ಫಾದರ್ ಮುಲ್ಲರ್ ಆಸ್ಪತ್ರೆಯನ್ನು ಬಿಟ್ಟರೆ, ಬದಿಯಡ್ಕ ಮತ್ತು ತಿರ್ವದಲ್ಲಿರುವ ಆಸ್ಪತ್ರೆಗಳಲ್ಲಿ ಕೆಲವು ಮಂದಿಗೆ ಚಿಕಿತ್ಸೆ ದೊರೆಯುತ್ತದೆ. ಈಚೆಗೆ ಓಡಿಶಾದಲ್ಲೊಂದು ಆಸ್ಪತ್ರೆ ತೆರೆದು, ಕುಷ್ಠ ರೋಗಿಗಳಿಗೆ ನೆರವಾಗುವ ಪ್ರಯತ್ನ ನಡೆದಿದೆ.

ಆದರೆ ರೋಗ ನಿವಾರಣೆಗಾಗಿ ಕೈಗೊಳ್ಳಲ್ಪಟ್ಟಿರುವ ಇಂಥ ಸಾಹಸಗಳು ಸಮಸ್ಯೆಯ ಅಂಚನ್ನೂ ಮುಟ್ಟಿಲ್ಲವೆಂಬುದು ಸ್ಪಷ್ಟವಾಗಿದೆ. ಆಧುನಿಕ ವಿಜ್ಞಾನವು ಕುಷ್ಠ ರೋಗದ ನಿವಾರಣೆಗಾಗಿ ಸಲ್ಫೋನ್ಸೆಂಬ ಉತ್ತಮ ಔಷಧಪೊಂದನ್ನು ನೀಡಿದೆ. ಇದು ಕ್ಷಿಪ್ರದಲ್ಲಿ ಕುಷ್ಠರೋಗವನ್ನು ಗುಣಪಡಿಸುವುದಲ್ಲದೆ ವರ್ಷಕ್ಕೆ ರೂ. ೩-೧೨-೦ ಮಾತ್ರ ಕರ್ಚು ತಗಲುವಷ್ಟು ಅಗ್ಗದಲ್ಲಿ ದೊರೆಯುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ಇದನ್ನು ಪೂರೈಸುವ ಯೋಗ್ಯ ಕಾರ್ಯಕ್ರಮ ರೂಪಿಸಲ್ಪಡುವುದು ಅಪೇಕ್ಷಣೀಯ

ತರಬೇತಿ ನಿಲಯ

ಈ ಆಧುನಿಕ ಚಿಕಿತ್ಸೆಯನ್ನು ನಡೆಸುವುದಕ್ಕೆ ನಿಷ್ಣಾತ ವೈದ್ಯರ ನೆರವು ಬೇಕಾಗುತ್ತದೆ ರೋಗದ ಲಕ್ಷಣಗಳನ್ನು ಪ್ರಾರಂಭಾವಸ್ಥೆಯಲ್ಲಿಯೇ ಗುರುತಿಸುವಷ್ಟು ಬುದ್ಧಿವಂತಿಕೆಯನ್ನು ವೈದ್ಯರು ಪಡೆದಿರುವುದೂ ಸ್ವಲ್ಪ ಸಂಶಯ ತೋರಿದೊಡನೆಯೇ ನೈದ್ಯರಿಂದ ಪರೀಕ್ಷೆ ನಡೆಸಿಕೊಳ್ಳುವಷ್ಟು ಜನರು ಮುಂಜಾಗ್ರತೆ ವಹಿಸುವುದೂ ಇಷ್ಟವಾಗಿದೆ ಸರಕಾರದವರು ಚೆಂಗಲ್ಪೇಟೆಯಲ್ಲಿ ಪ್ರತಿ ವಾರದಲ್ಲಿ ೧೦೦ ವೈದ್ಯರಿಗೆ ಕುಷ್ಠ ರೋಗದ ಚಿಕಿತ್ಸೆಯ ಕುರಿತು ವಿಶೇಷ ತರಬೇತಿ ಕೊಡುವ ಕೇಂದ್ರವನ್ನೇಗ ತೆರೆದಿದ್ದಾರೆ. ಇದು ಯೋಗ್ಯವಾದ ಹೆಜ್ಜೆಯಾಗಿದೆ.

ಕುಷ್ಠ ರೋಗಿಗಳಿಗೆ ಬಿ. ಸಿ. ಜಿ ದಾಕನ್ನು ಹಾಕುವುದರಿಂದ ರೋಗ ನಿವಾರಣೆಗೆ ಸಹಾಯವಾಗುತ್ತದೆಯಾಗಿ ತಿಳಿದಿದೆ ದಕ್ಷಿಣ ಆಫ್ರಿಕ ಮತ್ತು ನೈಜೀರಿಯಗಳಲ್ಲಿ ಸಾಕಷ್ಟು ಹೆಚ್ಚು ಸಂಶೋಧನೆಗಳನ್ನು ಈ ದಿಸೆಯಲ್ಲಿ ನಡೆಸಲಾಗಿದೆ. ಚೆಂಗಲ್ಪೇಟೆ ಕುಷ್ಠ ರೋಗಿಗಳ ಆಸ್ಪತ್ರೆಯಲ್ಲಿ ನಡೆಸಿದ ಪ್ರಯೋಗಗಳಿಂದ ೫೦% ರೋಗಿಗಳಲ್ಲಿ ಬಿ. ಸಿ. ಜಿ. ದಾಕು ಪರಿಣಾಮಕಾರಿಯಾಗಿರುವುದು ಕಂಡು ಬಂದಿದೆ. ಸುಮಾರು ಏಳಂಟು ತಿಂಗಳ ತನಕ ಕುಷ್ಠ ರೋಗವು ಈ ದಾಕಿನ ಪರಿಣಾಮವಾಗಿ ನಿಯಂತ್ರಿಸಲ್ಪಡುತ್ತದೆಂದು ಅಲ್ಲಿ ವ್ಯಕ್ತವಾಗಿರುತ್ತದೆ.

ನಿಯಂತ್ರಣದ ಸಮಸ್ಯೆ

ಸಲ್ಫೋನ್ಸುಗಳನ್ನು ಉಪಯೋಗಿಸುವುದು ನಿಂತ ಬಳಿಕ ರೋಗ ಮರುಕಳಿಸಿದ ಸಂದರ್ಭಗಳಿವೆ; ಅಲ್ಲದೆ, ರೋಗ ನಿವಾರಣೆಯಾಗಿದ್ದರೂ ರೋಗದ ಕಲೆಗಳು ಮೈಯಲ್ಲಿ ಉಳಿದಿರುವುದನ್ನು ಕಂಡ ಜನರು ರೋಗ ಗುಣವಾಗಿಯೇ ಇಲ್ಲವೆಂದು ತಪ್ಪಾಗಿ ಅಭಿಪ್ರಾಯಪಟ್ಟು ಆ ವ್ಯಕ್ತಿಯನ್ನು ದೂರವಿಡುತ್ತಾರೆ. ಒಂದೆರಡು ವರ್ಷಗಳ ವರೆಗೆ ನಿರಂತರವಾಗಿ ವೈದ್ಯರಲ್ಲಿಗೆ ಹೋಗಬೇಕಾದುದರಿಂದ ರೋಗಿಗೂ ವೈದ್ಯರಿಗೂ ಕೂಡಿಯೇ ಬೇಸರವಾಗುತ್ತದೆ. ಮದ್ದಿನ ಕ್ರಯವು ವರ್ಷಕ್ಕೆ ನಾಲ್ಕು ರೂಪಾಯಿಗೆ ವಿರಾದಿದ್ದರೂ ಈ ಓಡಾಟ ಮತ್ತು ವೈದ್ಯರಿಗೆ ಕೊಡಬೇಕಾಗಿ ಬರುವ ಪ್ರತಿಫಲ ಜನರನ್ನು ನಿರುತ್ಸಾಹಗೊಳಿಸುತ್ತದೆ. ಉಗ್ರಾವಸ್ಥೆಯನ್ನು ಮುಟ್ಟಿದ ರೋಗಿಗಳು ಏಳೆಂಟು ವರ್ಷಗಳ ತನಕ ಆಸ್ಪತ್ರೆಗಳಲ್ಲಿದ್ದುಕೊಂಡು ಚಿಕಿತ್ಸೆ ಪಡೆಯಬೇಕಾಗುವುದರಿಂದ, ಗುಣಮುಖರಾಗಿ ಹೊರಗೆ ಬಂದ ಬಳಿಕ ಈ ವ್ಯಕ್ತಿಗಳು ಜೀವನೋಪಾಯದ ಮಾರ್ಗವೇನೆಂದು ತಿಳಿಯದೆ ತೊಂದರೆಗೆ ಗುರಿಯಾಗುತ್ತಾರೆ. ಇವೆಲ್ಲ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸಾರ್ವಜನಿಕರು ಸಹಾನುಭೂತಿ ಪೂರ್ವಕ ಸಹಕಾರವನ್ನು ನೀಡಬೇಕಾದದ್ದು ಅವರ ಆದ್ಯ ಕರ್ತವ್ಯ.

1 DDS (= diamino—diphenyle—sulphone).

(೩ನೇ ಪುಟದಿಂದ)

ಹಾಜರಿದ್ದುದೂ, ಭಾರತ ದೇಶಾಧ್ಯಯನ ಶಾಸ್ತ್ರದ ಸದಸ್ಯರುಗಳನ್ನು ಕುರಿತು ನಿರೀಕ್ಷಣ ಕಾರ್ಯದಲ್ಲಿ ತೊಡಗಿರುವ ರಶ್ಯದ ವಿಜ್ಞಾನ ಸಂಶೋಧನ ವಿದ್ಯಾಮಂದಿರಗಳಿಗೆ ಭಾರತೀಯ ವೈಜ್ಞಾನಿಕರು ಕೊಟ್ಟ ಸಂದರ್ಶನಗಳೂ, ಪರಸ್ಪರ ವೈಜ್ಞಾನಿಕ ಆಲೋಚನೆಗಳಿಗೆ ಹೆಚ್ಚು ಸಹಾಯವನ್ನಿತ್ತಿವೆ, ಮತ್ತು ಎರಡೂ ದೇಶಗಳಲ್ಲಿಯೂ ವೈಜ್ಞಾನಿಕ ಸಂಶೋಧನೆಯ ಮುನ್ನಡೆಯುತ್ತಿರುವ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರಿವೆ.

ಸ್ನೇಹಪರರಾದ ಭಾರತೀಯ ಜನತೆಯ ಸಂಸ್ಕೃತಿಯ ಬಗ್ಗೆ ಅತ್ಯಂತ ಉತ್ಸುಕತೆಯನ್ನೂ ಮತ್ತು ಆಳವಾದ ಗೌರವವನ್ನೂ ವ್ಯಕ್ತಪಡಿಸುತ್ತಾ, ರಶ್ಯದ ಜನರು ಭಾರತೀಯ ಸಂಸ್ಕೃತಿಗೆ ಮಹತ್ವಪೂರ್ಣವಾದ ದಿನಾಚರಣೆಗಳನ್ನು ಗೌರವಿಸುತ್ತಾರಲ್ಲದೆ ವಿಸ್ತೃತವಾಗಿ ನಡೆಸುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಸೋವಿಯೆಟ್ ಸಾರ್ವಜನಿಕ ಸಂಸ್ಥೆಗಳೂ ಪತ್ರಿಕೆಗಳೂ ಇತ್ತೀಚೆಗೆ ಸುಪ್ರಸಿದ್ಧ ಭಾರತೀಯ ಲೇಖಕರಾದ ಶ್ರೀ ಪ್ರೇಮಚಂದರವರ ೭೫ನೆಯ ಜನ್ಮದಿನಾಚರಣೆಯನ್ನು ಆಚರಿಸಿದುವು. ಕಳೆದ ಜೂನ್ ತಿಂಗಳಲ್ಲಿ ಮಾಸ್ಕೋ ನಗರದಲ್ಲಿ ಕವಿ ರವೀಂದ್ರ ನಾಥ ಠಾಕೂರರಿಗೆ ವಿಶಾಲವಾಗಿ ಒಂದುಸಂಜೆ ಅವರ ಸಂಕಲಿತ ಕೃತಿಗಳ ಮೊದಲನೆಯ ಸಂಪುಟದ ಪ್ರಕಟನೆಯ ಸಂದರ್ಭದಲ್ಲಿ ಸಭೆಯನು ನಡೆಸಲಾಯಿತು ಸಂಗೀತ ಭವನಗಳಲ್ಲಿಯೂ, ಬಯಲು ರಂಗ ಮಂಟಪಗಳಲ್ಲಿಯೂ ಭಾರತದ ಗೀತೆಗಳು ಹಾಡಲ್ಪಡುತ್ತವೆ. ನೃತ್ಯಗಳು ಪ್ರದರ್ಶಿಸಲ್ಪಡುತ್ತವೆ, ಭಾರತೀಯ ಲೇಖಕರ ಕೃತಿಗಳ ಭಾಗಗಳು ಈ ಸಭೆಗಳಲ್ಲಿ ಪಠಿಸಲ್ಪಡುತ್ತವೆ.

—TASS

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಗಳ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ **'ನವಯುಗ'** ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯ ಮಂತ್ರಿ, ಶ್ರೀ ಎ ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ **'ನವಯುಗ'**ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ವಾರ್ಷಿಕ ಚಂದಾ ರೂ. 5-12-0 ಮಾತ್ರ. ಮೆನೇಜರ್, ನವಯುಗ, ಉಡುಪಿ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾರ ಗಲ್ಲಿ, ಹುಬ್ಬಳ್ಳಿ.

ಸಮಾಜವಾದಿ ಮಾದರಿಯ ಸಮಾಜದ ಆದರ್ಶ

(೨ನೇ ಪುಟದಿಂದ)

ಪ್ರಯತ್ನಕ್ಕೆ ತಕ್ಕ ಪ್ರತಿಫಲ

ಉತ್ಪಾದನೆದ ಪ್ರಶ್ನೆಯು ಖಾಸಗೀ ಕ್ಷೇತ್ರದಲ್ಲಿ ಆಗಾಗ್ಯೆ ಕೇಳಿಬರುತ್ತದೆ. ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕೆಗಳಲ್ಲಿ ನಿರ್ಧರಾಗಿರುವವರಿಗೆ ತಮ್ಮ ಪ್ರಯತ್ನಗಳಿಗೆ ತಕ್ಕ ಪ್ರತಿಫಲವಿರಬೇಕೆಂಬತತ್ವವನ್ನು ಅಂಗೀಕರಿಸ ಬೇಕು. ಆದರೆ, ಯಾವ ಪ್ರಮಾಣದಲ್ಲಿ ಈ ಪ್ರತಿಫಲವನ್ನು ಒದಗಿಸಬೇಕೆಂಬುದು ನಿರ್ಧಾರವಾಗಬೇಕು. ಆರ್ಥಿಕ ಮಟ್ಟ ಮತ್ತು ಅದರ ಅಭಿವೃದ್ಧಿಗೆ ಸಂಬಂಧ ಪಡುವ ಸಾಮಾಜಿಕ ಮತ್ತು ಆರ್ಥಿಕ ತತ್ವಗಳಿಗೆಅನುಗುಣವಾಗಿ ಪ್ರತಿಫಲ ದೊರೆಯುವಂತಿರಬೇಕು. ಯಾವ ಸಮಯದಲ್ಲಾದರೂ ಸಟ್ಟಾ ವ್ಯಾಪಾರದ ಹಾಗೂ ಅಕ್ರಮ ಸಂಪಾದನೆಗಳನ್ನು ತೊಡೆದು ಹಾಕುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಮೇಲೆ ಸೂಚಿಸಿದ ಪ್ರಕಾರ, ಹಣಕಾಸಿನ ಸಾಧನ ಸಂಪತ್ತಿನ ಮಿತಿಯ ದೆಸೆಯಿಂದ, ದ್ವಿತೀಯ ಪಂಚವಾರ್ಷಿಕಯೋಜನೆಯ ಕೊನೆಯಲ್ಲಿಯೂ ಸಾರ್ವಜನಿಕ ಕಾರ್ಯಕ್ಷೇತ್ರದ, ಸಾದೃಶ್ಯದಿಂದ, ಚಿಕ್ಕದಾಗಿ ಉಳಿಯುತ್ತದೆ. ಆದಾಗ್ಯೂ ಮುಂದಿನ ೫ವರ್ಷಗಳಲ್ಲಿ ಸಹಕಾರೀ ಕಾರ್ಯಕ್ಷೇತ್ರದ ಬೆಳವಣಿಗೆ ಮತ್ತು ಖಾಸಗೀ ಕಾರ್ಯಕ್ಷೇತ್ರದ ಪುನರ್ವ್ಯವಸ್ಥೆಗ ಮನಾರ್ಹವಾದ ರೀತಿಯಲ್ಲಿ ಆಗುವುದರಲ್ಲಿ ಅನುಮಾನವಿಲ್ಲ.

ಸಕ್ತಿಯ ಆಸಕ್ತಿ ಅವಶ್ಯ

ದ್ವಿತೀಯ ಪಂಚವಾರ್ಷಿಕಯೋಜನೆಗಾಗಿ ವಿವರವಾದ ಕಾರ್ಯಕ್ರಮಗಳನ್ನು ಸಿದ್ಧಗೊಳಿಸುವಾಗ ಈ ಎರಡು ಉದ್ದೇಶಗಳಿಗೆ ಪ್ರಮುಖ ಸ್ಥಾನವನ್ನು ಕೊಡಬೇಕು. ಇದಕ್ಕೆ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದ ಮತ್ತು ಕಾಂಗ್ರೆಸ್ ಸಂಸ್ಥೆಯಿಂದ ವಿಶೇಷ ಪ್ರಯತ್ನದ ಅವಶ್ಯಕತೆ ಇರುವುದು. ಏತಕ್ಕೆಂದರೆ, ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಆಡಕವಾದ ಈ ಸಂಬಂಧದತಿಭಾರಗಳು ಅಷ್ಟಾಗಿ ಅನುಷ್ಠಾನಕ್ಕೆ ಬಂದಿಲ್ಲ ಎಂಬುದು ಅನುಭವ ವೇದ್ಯವಾಗಿದೆ.

ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವುದಕ್ಕೂ, ದೇಶದ ಆರ್ಥಿಕ ಮತ್ತು ಸಾಮಾಜಿಕ ರಚನೆಯಲ್ಲಿ ಅಪೇಕ್ಷಿತ ಪರಿವರ್ತನೆಯನ್ನುಂಟು ಮಾಡಿಕೊಡುವುದಕ್ಕೂ ವಿವಿಧ ಘಟ್ಟಗಳಲ್ಲಿ ಕೊಂಚಮಟ್ಟಿನ ಸಂಯಮ ಮತ್ತು ಶಿಸ್ತನ್ನು ವಿಧಿಸಬೇಕಾಗುವುದು. ಈ ಶಿಸ್ತು ಮತ್ತು ಸಂಯಮ ಎಲ್ಲಿಯೋ ದೂರದಲ್ಲಿರುವ ಹತೋಟಿಯಿಂದ ವಿಧಿಸಲ್ಪಟ್ಟದ್ದಾಗಿರದೆ ಸ್ವಯಂಸ್ಫೂರಿತ ನಿಯಮಪಡೆದ ಗುಂಪುಗಳಿಂದ ಆದರಲ್ಲಿಯೂ ಮುಖ್ಯವಾಗಿ ಸಹಕಾರ ತತ್ವಗಳ ಆಧಾರದ ಮೇಲೆ ರಚಿತವಾಗಿರುವ ಗುಂಪುಗಳಿಂದ ವಿಧಿಸಲ್ಪಟ್ಟದ್ದಾಗಿರುವುದಾದರೆ, ಹೆಚ್ಚು ಪರಿಣಾಮವಾದೀತು.

ವಿಷಮತೆಯ ನಿವಾರಣೆ

ಸ್ಪರ್ಧನು ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಆದಾಯ ಮತ್ತು ಸಂಪತ್ತಿನ ತಾರತಮ್ಯವನ್ನು ಕಡಿಮೆಮಾಡಲು ಭೂಸುಧಾರಣೆಯ, ಹರೋಕ್ಷ ವಿಧಾನದ ಮೂಲಕ ಕ್ರಮಕೈಗೊಂಡಿರುವುದರ ಹೊರತು, ಮತ್ತೇನು ಹೆಚ್ಚಿನ ಕೆಲಸ ನಡೆದಿಲ್ಲ. ಈ ತಾರತಮ್ಯಗಳನ್ನು ಕಡಿಮೆಮಾಡುವುದೂ ಮಾನವ ಪ್ರಯತ್ನದ ಫಲಗಳ ಸಮಾನ ಹಂಚಿಕೆಯೂ ಸಮಾಜವಾದೀ ವ್ಯವಸ್ಥೆಯ ಸಾಧನೆಯಲ್ಲಿ ಮುಖ್ಯವಾದ ಅಂಶಗಳೆಂಬುದನ್ನು ಮರೆಯಬಾರದು.

ತಾರತಮ್ಯಗಳನ್ನು ಆರ್ಥಿಕ ಜೀವನದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ತೊಡೆದು ಹಾಕಬೇಕು. ಕೇವಲ ಭೂಮಿ ಮತ್ತು ಸಾರ್ವಜನಿಕ ನೌಕರರ ವೇತನಗಳಿಗೆ ಸಂಬಂಧ ಪಟ್ಟಂತಹ ತಾರತಮ್ಯಗಳನ್ನು ತೊಡೆದು ಹಾಕಿದರೆ ಸಾಲದು; ಖಾಸಗೀ ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ಕಂಡುಬರುತ್ತಿರುವ ತಾರತಮ್ಯಗಳನ್ನು ಸಹ ತೊಡೆದುಹಾಕಬೇಕು. ಪ್ರತಿಯೊಂದು ಪ್ರಸಂಗದಲ್ಲಿಯೂ ಅನುಸರಿಸುವ ಕಾರ್ಯ ವಿಧಾನ ಮತ್ತು ಫಲಿತಾಂಶದ ಕಾಲ ಭಿನ್ನ ಭಿನ್ನವಾಗಿದ್ದರೂ ಅವುಗಳಲ್ಲಿ ಸಮಾನತೆಯ ತತ್ವದ ಮೇಲೆ ರೂಪುಗೊಳ್ಳುವ ಸಮಾಜ ರಚನೆಯನ್ನು ಬೇಗ ನಿರ್ಮಿಸುವುದಕ್ಕೆ ಅವಕಾಶವಿರುವಂತಹ ಒಂದು ಸಮನ್ವಯ ಕಾರ್ಯನೀತಿಯನ್ನು ಅನುಸರಿಸಿಕೊಂಡು ಬರಬೇಕು.

ಸಾಧನೆಯ ಮಾರ್ಗ

ಪ್ರತ್ಯಕ್ಷ ಪರೋಕ್ಷ ಮಾರ್ಗಗಳೆರಡನ್ನೂ ಈ ಗುರಿಯ ಸಾಧನೆಗಾಗಿ ಆಲೋಚಿಸಿ ಸಿದ್ಧಗೊಳಿಸಬೇಕು. ಏಕೆಂದರೆ ಈಗ ಈ ಆದರ್ಶದ ಸಾಧನೆಯ ವಿಚಾರದಲ್ಲಿ ಅನಿರ್ದಿಷ್ಟ ಮಾತುಗಳನ್ನು ಹೇಳುತ್ತಿರಲಾಗಿದೆಯೇ ಹೊರತು ಅದರಿಂದ ಏನನ್ನೂ ಸಾಧಿಸಲು ಸಾಧ್ಯವಾಗಲಿಲ್ಲ. ಮೇರೆ ಮೀರಿಗಳಲ್ಲದ ಬಳಕೆ ಮತ್ತು ದುಂದುಗಾರಿಕೆ ಇವುಗಳನ್ನು ತಪ್ಪಿಸಬೇಕು ಇಲ್ಲದಿದ್ದರೆ ದೇಶದ ಸಂಪತ್ತಿನ ಹಾನಿಯಾಗುವುದಲ್ಲದೆ; ಬಡಜನರಲ್ಲಿ ಅತೃಪ್ತಿಹಾಗೂ ಭಗ್ನ ಮನೋಭಾವನೆ ಬೆಳೆಯಲು ಇದು ಕಾರಣವಾಗುತ್ತದೆ.

ಭಾರತದಲ್ಲಿ ಸಮಾಜವಾದಿ ಮಾದರಿಯ ಸಮಾಜದ ಸ್ಥಾಪನೆಯಜೊತೆಗೆ ಮತ್ತೆರಡು ಧ್ಯೇಯಗಳನ್ನು ಅಂಗೀಕರಿಸಲಾಗಿದೆ. ಅವೆಂದರೆ (೧) ಅಧಿಕಾರ ವಿಕೇಂದ್ರೀಕರಣ ಮತ್ತು (೨) ಸಾಮಾನ್ಯ ಪ್ರಜೆಯ ಮತ್ತು ಗ್ರಾಮಾಂತರ ಜನರ ಅಸಕ್ತಿಗಳನ್ನು ಪೋಷಿಸುವ ರೀತಿಯಲ್ಲಿ ವಿವಿಧ ಸಾಮಾಜಿಕ ಹಾಗೂ ಆರ್ಥಿಕ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಯತ್ನ.

ಸರ್ವೋದಯದ ಆದರ್ಶ

ದೊಡ್ಡ ಪ್ರಮಾಣದ ಕೈಗಾರಿಕೆಗಳು ಮತ್ತು ಆಧುನಿಕ ಔದ್ಯೋಗಿಕ ತಂತ್ರಗಳ ಕ್ಷೇತ್ರಗಳಲ್ಲಿ ಸರ್ವಾಜವು ಅಧಿಕಾರ ಮತ್ತು ಸಾಧನ ಸಂಪತ್ತುಗಳು ಕೆಲವರ ಕೈಯಲ್ಲಿಯೇ ಕೇಂದ್ರೀಕೃತವಾಗುವಂತೆ ಮಾಡಿದೆ, ವಾರ್ತಾ ಪತ್ರಿಕೆಗಳ ಸ್ವಾತಂತ್ರ್ಯವನ್ನು ಕುಂಠಿತಗೊಳಿಸಿದೆ. ನಾವು ಪ್ರಜಾಸತ್ತಾತ್ಮಕ ವಿಧಾನ ಮತ್ತು ಸರ್ವೋದಯಮಾರ್ಗದಲ್ಲಿ ನಡೆದು ಸಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವ ಇಚ್ಛೆಯುಳ್ಳದ್ದರೆ, ಈ ಅಪಾಯಗಳ ವಿರುದ್ಧವಾಗಿ ತಕ್ಕ ಎಚ್ಚರಿಕೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

ಸ್ವಾತಂತ್ರವಾದ ರಾಷ್ಟ್ರೀಯ ಆಕಾಂಕ್ಷೆಗಳೊಳಗೆ, ಸ್ಥಳೀಯ ಪ್ರಯತ್ನ ಮತ್ತು ನಿರ್ಧಾರಗಳಿಗೆ ಅವಕಾಶವಿರುವಂತಹ ಆರ್ಥಿಕವ್ಯವಸ್ಥೆಯನ್ನು ರಚಿಸಿ ಬೆಳೆಸಿಕೊಂಡು ಬರುವುದರಿಂದ ಮಾತ್ರವೇ ಆರ್ಥಿಕ ಹಾಗೂ ಸಾಮಾಜಿಕ ಗುರಿಗಳ ನಡುವೆ ಸೂಕ್ತವಾದ ಸಮತೂಕವನ್ನು ಸಾಧಿಸಲು ಸಾಧ್ಯವೆಂದು ಆಶಿಸ ಬಹುದು. ಆರ್ಥಿಕ ವ್ಯವಸ್ಥೆಯನ್ನು ಪರಿಶೀಲಿಸುವಾಗ ನಾವು ಅದರಲ್ಲಿ ಅಡಗಿರುವ ಭೌತಿಕ ಅಂಶ ಹಾಗೂ, ಈ ವ್ಯವಸ್ಥೆಯು ಅವಲಂಬನೆಗೊಂಡಿರುವ ಗುಣಗಳು, ಪ್ರೇರಣಶಕ್ತಿ ಮತ್ತು ಮಾನವೀಯತೆ—ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

[ಗುಲಜಾರಿಲಾಲ ನಂದಾರ ಲೇಖನ]



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣಿ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೩—೦
ಸಣ್ಣ ಬಾಟ್ಲಿಗೆ ರೂ. ೭—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦; ಸೂರಾಣಿ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ಹೊಸ ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್ ಉಡುಪಿ

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಗಕ್ಕೆವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಥಾನಿಕರು: ಶಶಾಂಕಸೆನ್ಸಿ, ಮಂಗಳೂರ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ ನ)

ಎಡತಿದ ಹೆಣ್ಣು —

ಬರೆದವರು ಎಂ ಜೀವನ ಸುರಾಟ ಗಾರರು ಸಮಾಜ ಪುಸ್ತಕಾಲಯ, ಬಾರವಾಡ ಬೆಲೆ ೧—೦—೦.

ಒತ್ತಾಯ ಮತ್ತು ಬಲಾತ್ಕಾರಗಳ ಮೇಸೆಯಿಂದ ಕಾರ್ಯಾರ್ಥ ಭಂಗಕ್ಕೆ ಗುರಿಯಾಗಿ, ಬಗೆ ಬಗೆಯ ಭವಣೆಗಳಿಗೆ ಸಿಲುಕಿ, ಯೇಸಿ, ಆತ್ಮಹತ್ಯೆಗೆ ಉಸ್ಮುಕ್ತಳಾದ ಪಾರ್ವತಿಯು ರಾಜುಪಿನ ಮಮತೆಯ ಜರ್ತನೆ ಹಾಗು ಭ್ರಾತೃವಾತ್ಸಲ್ಯದ ದೆಸೆಯಿಂದ ಮರ್ಯಾದೆಯ ಮಾರ್ಗ ಹಿಡಿದು ಬದುಕುವ ಚಿತ್ರವನ್ನು ಈ ಕಾದಂಬರಿ ಒದಗಿಸಿ ಕೊಡುತ್ತದೆ ಕತೆಯನ್ನು ಲೇಖಕರು ಚೆನ್ನಾಗಿ ಹೇಳಿದ್ದಾರೆ; ರಾಜುವಿನ ಒತ್ತಾಯ ಆದರ್ಶವಾದುತ್ವವನ್ನು ಎತ್ತಿ ಹಿಡಿಯುತ್ತದೆ, ಕುಲಟೆಯಾಗಿ ಬಾಳಲು ಇಚ್ಛಿಸದೆ, ಸನ್ಮಾರ್ಗ ಗಾಮಿಯಾಗುವ ಸಮುದ್ದೇಶವಿಟ್ಟುಕೊಂಡ ಹೆಣ್ಣಿನ ಪ್ರತಿನಿಧಿಯಾಗಿ ಪಾರ್ವತಿ ತೋರುತ್ತಾಳೆ ಕತೆಯ ನಡುವೆ ಲೇಖಕರು ಸಮಾಜದ ತಾತ್ವಿಕ ವಿಚಾರಣೆಗೆ ಸಂಭಾಷಣೆಗಳ ಮೂಲಕ ಪ್ರಯತ್ನಿಸಿದ್ದಾರೆ — ಆದರೆ, ಇಲ್ಲಿ ಕೆಲವೊಮ್ಮೆ ವಿರೋಧಾಭಾಸ ವ್ಯಕ್ತವಾಗಿದೆ ಉದಾ ಆ ನ ಕೃ ಸಾ ಹಿ ತ್ಯ ದ ಕುರಿತು (ಹಾಗೆಂದು ಹೆಸರೆತ್ತಿ ಹೇಳಿಲ್ಲ) ಅವರು ಪುಟ ೧೪೧-೪೨ರಲ್ಲಿ ಹೇಳಿದ ಮಾತಿಗೂ ಅದೇ ಪುಸ್ತಕದ ಬಾಯಿಯಿಂದ ಪತ್ರಿಕೆಗಳಲ್ಲಿ ಲೇಖನ ಬರೆಯುವ ಕುರಿತು ಪುಟ ೧೪೫-೪೬ರಲ್ಲಿ ಹೇಳಿದ ಮಾತಿಗೂ ತಾಳೆ ಬೀಳುವುದಿಲ್ಲ —ಅಥವಾ ಹೊದಲು ಹೂಡಿದ ತರ್ಕಕ್ಕೆ ಎರಡನೆಯದೇ ವಿವೇಚಕಿಲರ ಸಮಾಧಾನವೊ? ಏನೇ ಇರಲಿ, ಶ್ರೀ ಜೀವನರು ಉತ್ತಮ ಕಾದಂಬರಿಗಳನ್ನು ಬರೆಯ ಬಲ್ಲರು

ಜವಾನದ ಕೈಗಾರಿಕೆಗಳು—

ಬರೆದವರು ಸಂಜೀವ ರಾವ ಕಲ್ಲಾಪುರ, ಬಿ ಎ, ಎಲ್ ಎಲ್ ಬಿ ಪ್ರಕಾಶಕರು: ಮುಂಬಯಿ ಗ್ರಾಮೋದ್ಯೋಗ ಮಂಡಳ, ಕರ್ನಾಟಕ ಶಾಖೆ, ಧಾರವಾಡ ಬೆಲೆ: ರೂ ೧—೮—೦

ನಮ್ಮ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನೂರೊಂದ್ಯಮಗಳನ್ನು ಬೆಳೆಸುವು, ಶಿತ್ಯೋಪಯೋಗದ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಸಂಪಟಿತ ಗ್ರಾಮೋದ್ಯೋಗಗಳ ಮತ್ತು ಚಿಕ್ಕ ಕೈಗಾರಿಕೆಗಳ ಮೂಲಕ ನಿರುದ್ಯೋಗವನ್ನು ನಿರ್ಮೂಲಿಸುವ ವಿಷಯಗಳಿಗೆ ಪ್ರಾಶಸ್ತ್ಯ ನಿಗಬೇಕೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ ಮಹತ್ವದ ಈ ಸಂದರ್ಭದಲ್ಲಿ ಶ್ರೀ ಕಲ್ಲಾಪುರರಿಂದ ಬರೆಯಲ್ಪಟ್ಟ ಪ್ರಸ್ತುತ ಗ್ರಂಥವು ನಿಜಕ್ಕೂ ಅಭ್ಯಾಸ ಯೋಗ್ಯವಾಗಿದೆ ಜಪಾನಿನಲ್ಲಿ ಸಂಚಾರವನ್ನು ಕೈಗೊಂಡು, ಅಲ್ಲಿಯ ಕೈಗಾರಿಕೆಗಳನ್ನು ಚೆನ್ನಾಗಿ ಪರಿಶೀಲಿಸಿ, ವಿಸರವಾದ ಮಾಹಿತಿಗಳನ್ನು ಸಂಗ್ರಹಿಸಿ, ಭಾರತಕ್ಕೆ ಜಪಾನಿನ ವಿಧಾನವನ್ನು ಹೇಗೆ ಹೊಂದಿಸಿಕೊಳ್ಳಬಹುದೆಂದು ತರ್ಕಿಸಿ, ಬರದಿರುವ ಈ ಪುಸ್ತಕವು ಅತ್ಯಮೂಲ್ಯವಾದ ಹಲವು ವಿಷಯಗಳ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ ಜಪಾನಿನ ಜನರ ಶಿಸ್ತು, ಉದ್ಯಮ ಶೀಲತೆ, ಕಸವನ್ನು ಸಹ ಕಡೆಗಣಿಸದೆ ಅದರ ಉಪಯುಕ್ತತೆಯನ್ನು ಗ್ರಹಿಸುವ ಮನೋಭಾವ, ಯಾಂತ್ರಿಕ ಶಕ್ತಿಯನ್ನು ನಿರುದ್ಯೋಗಕ್ಕೆ ಎಡೆಕೊಡದಂತೆ ಬಳಸಿರುವ ಜಾತುರ್ಯ, ಕೈಗಾರಿಕೆಗಳನ್ನು ವಿಕೇಂದ್ರೀಕರಿಸಿಯೂ ಸುಸಂಘಟಿತವಾಗಿಟ್ಟಿರುವ ಅದ್ಭುತ, ಪರದೇಶಗಳ ಪೇಟೆಯಲ್ಲಿ ಯಶಸ್ವಿ ಸ್ಪರ್ಧೆ ಹೂಡಲು ನೆರವಾದ ಅಂಶಗಳನ್ನು ಈ ಪುಸ್ತಕ ಸರಳವಾದ ಮಾತಿನಲ್ಲಿ ನಿವರಿಸುತ್ತದೆ ಪ್ರಸ್ತುತ ಪುಸ್ತಕದ ಸಮಗ್ರ ಜ್ಞಾನವನ್ನು ಮಾಡಿಕೊಂಡರೆ, ದ್ವಿತೀಯ ಯೋಜನೆಯ ಕಾಲದಲ್ಲಿ ನಮ್ಮ ಕಾರ್ಯಕ್ರಮ ಯಾವ ರೀತಿಯದಿರಬೇಕೆಂಬುದನ್ನು ನಿರ್ಣಯಿಸುವುದು ಕಷ್ಟವಾಗಲಾರದು ಕನ್ನಡಿಗರಿಗೆ ಹೀಗೆ ಮಾರ್ಗದರ್ಶನ ಗೈದು ನೆರವಾದ ಶ್ರೀ ಕಲ್ಲಾಪುರರಿಗೆ ನಾವು ಶ್ರೇಯಸ್ಸನ್ನು ಕೋರುತ್ತೇವೆ.

ಬದುಕಿನ ಚಿತ್ರಗಳು —

ಬರೆದವರು ಎನ್ ವಿ ರಾವ್. ಪ್ರಕಾಶಕರು ಪ್ರಗತಿ ಪಬ್ಲಿಕೇಶನ್, ರಾಮಮೋಹನ ಎಕ್ಸ್ ಟೆನ್ಶನ್, ಬೆಂಗಳೂರು ೨ ಬೆಲೆ ರೂ ೧—೦—೦

ಓದಲು ಕತೆಯಂತಿರುವ ಮನೋರಂಜಕ ಬರೆಹಗಳ ಈ ಸಂಗ್ರಹವು ಬದುಕಿನ ನಾನಾ ಮುಖಗಳ ಮೇಲೆ ಓರೆ ನೋಟವನ್ನು ಬೀರುತ್ತದೆ ಶೈಲಿಯಲ್ಲಿ ವ್ಯಂಗ್ಯವಿದ್ದಂತೆ ವಿಚಾರದಲ್ಲಿ ಸತ್ಯವನ್ನು ಅರಸಿಕೊಂಡು ಹೋಗುವ ದೃಷ್ಟಿಯೂ ವ್ಯಕ್ತವಾಗಿದೆ ಲೇಖಕರಿಗೆ ಸಾಹಿತ್ಯದ ಹಿಡಿತ ಸಿಕ್ಕಿದೆ, ಅದನ್ನು ಅಭಿವೃದ್ಧಿಗೊಳಿಸಲಿ!

ಮಿತವ್ಯಯ—

ಬರೆದವರು ರಾ ನ ಮಳಗಿ ಪ್ರಕಾಶಕರು ಪ್ರತಿಭಾ ಗ್ರಂಥಮಾಲೆ, ಧಾರವಾಡ ಬೆಲೆ ಆರಾಣ

ಹಣವನ್ನು ಸಂಪಾದಿಸುವುದು ದೊಡ್ಡ ಮಾತಲ್ಲ-ಅದನ್ನು ವಿನಿಯೋಗಿಸುವುದರಲ್ಲಿ ಅನುಸರಿಸಬೇಕಾದ ಜಾತುರ್ಯವೇ ಮಹತ್ವದ ವಿಷಯ. ಶ್ರೀ ಮಳಗಿಯವರು ಬರೆದ ಈ ಚಿಕ್ಕ ಪುಸ್ತಕವು ಹಣದ ವಿಷಯ ನಾವು ಹೇಗೆ ಜಾಗರೂಕತೆ ವಹಿಸಬೇಕೆಂದು ಮನೋಹರವಾಗಿ ವಿವರಿಸುತ್ತದೆ. ಅವರು ವಿಷಯವನ್ನು ನೇರಾಗಿ ವಿವರಿಸುತ್ತಾರೆ, ಅವರ ಸಲಹೆಗಳಿಗೆ ಅನುಭವದ, ವಿವೇಕದ ಆಧಾರವಿದೆ. ಆದುದರಿಂದ ಪುಸ್ತಕವು ಉಪಯುಕ್ತವಾಗಿದೆ ಎಂದು ಹೇಳಬಹುದು.

ಅಶ್ವಪಥ—

(ಇದರ ಲೇಖಕರೂ ಪ್ರಕಾಶಕರೂ ಮೇಲಿನವರೇ—ಬೆಲೆ ಐದಾಣೆ)

ಮಹಾಭಾರತದ ಕೊನೆಯಲ್ಲಿ ಧರ್ಮರಾಯನು ಅಶ್ವಮೇಧ ಯಜ್ಞವನ್ನು ಮಾಡಿದನೆಂದು ಹೇಳಿದೆ ಆದರೆ ಯಜ್ಞ ಕುದುರೆಯು ಸುತ್ತಾಡಿ ಬಂದ ವಿಷಯ ಮಾತ್ರ ಸಮಗ್ರವಾಗಿ ಎಲ್ಲೂ ದೊರೆತಿಲ್ಲ ವ್ಯಾಸರ ಕಥನಕ್ಕೂ ಅವರ ಶಿಷ್ಯ ಜೈಮಿನಿಯ ಹೇಳಿಕೆಗೂ ಮಹತ್ವದ ವ್ಯತ್ಯಾಸಗಳಿವೆ, ಜೈಮಿನಿಯನ್ನು ಕನ್ನಡದಲ್ಲಿಳಿಸಿದ ಲಕ್ಷ್ಮೀಶನ ಭಾಗೋಲಿಕ ಹಾಗು ಕಾಲಜ್ಞಾನಗಳ ಕುರಿತು ಸಂಶಯಕ್ಕೆ ಎಡೆ ದೊರೆತಿದೆ ಇವೆಲ್ಲ ವಿಷಯಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಈ ಚಿಕ್ಕ ಪುಸ್ತಕದಲ್ಲಿ ವಿವೇಚಿಸಲಾಗಿದೆ ಸಾಹಿತ್ಯಾಭ್ಯಾಸಿಗಳಿಗೆ ಪ್ರಯೋಜನಕಾರಿಯಾಗಿ ಕಂಡು ಬಂದೀತು

ಲಘು ಪರಿಚಯ

ಶ್ರೀ ಪುಟ್ಟಣ್ಣಯ "ನವಯುಗ" ದೈನಿಕದ ಸ್ವಾತಂತ್ರ್ಯ ಹಾಗು ವಾರ್ಷಿಕ ಸಂಚಿಕೆಯು ಸುಂದರವಾದ ತ್ರಿವರ್ಣ ಮುಖಪುಟದೊಂದಿಗೆ ಪ್ರಕಟವಾಗಿದೆ ಪ್ರೌಢ ಲೇಖನಗಳೂ ಲಘುಬರಹಗಳೂ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬಂದು, ಎಲ್ಲ ಅಭಿರುಚಿಯ ಜನರಿಗೂ ಸಂತಸಕ್ಕೆ ಪ್ರಿಯವಾಗುವಂತೆ ಮಾಡಿದೆ.

ಮುಂಡಬಿದ್ರೆಯ ಶ್ರೀ ಬಳ್ಳಂಜೆ ಸುಬ್ಬರಾಯರು ಡಾ ಆ್ಯನಿಬೆಸೆಂಟರು ಲೌಕಿಕರಿಗಾಗಿ ಅಧ್ಯಾತ್ಮ ಜೀವನದ ತತ್ವಗಳನ್ನು ವಿವರಿಸಿ ಮಾಡಿದ್ದ ಭಾಷಣವನ್ನು ಮುದ್ರಿಸಿ ಧರ್ಮಾರ್ಥ ಹಂಚಲು ಉದ್ದೇಶಿಸಿದ್ದಾರೆ. ನಮಗೆ ಬಂದಿರುವ "Spiritual Life for the Man of the World" ಎಂಬೀ ಪುಸ್ತಕವು ಮನನೀಯವಾಗಿದೆ, ಹೆಚ್ಚಿನ ತಿಳಿವಳಿಕೆಯನ್ನು ಸಂಪಾದಿಸಿ ಕೊಡಬಲ್ಲುದಾಗಿದೆ.

— ಕು.

ಮರಳುಗಾಡಿಗೆ ನೀರು



ಅಸ್ಪೃಶ್ಯತೆಯ ನಿವಾರಣೆಗಾಗಿ ಹಂಬಲಿಸುತ್ತಿದ್ದ ಕೋಟ್ಯಾಂತರ ಪ್ರಜೆಗಳಿಗೆ ಕೃಷ್ಟಿಯನ್ನೊದಗಿಸಿ, ಸಮಾಧಾನ ಪಡಿಸಿದ ಶ್ರೇಯಸ್ಸು ಪ್ರಥಮ ಪಂಚವಾರ್ಷಿಕ ಯೋಜನೆಗೆ ಸೇರುತ್ತದೆ ದೇವಾಲಯಗಳಲ್ಲಿ ಮೂರ್ತಿಗಳನ್ನು ನಿಲ್ಲಿಸಿದ ಪ್ರಾಚೀನ ಪರಂಪರೆಯೇ ಇಂದು ದೊಡ್ಡ ದೊಡ್ಡ ಆಣೆಕಟ್ಟುಗಳನ್ನು ರಚಿಸುವುದರಲ್ಲಿ ವ್ಯಕ್ತವಾಗಿದೆ. ರಜಪುತಾನದ ಮರುಭೂಮಿಗೆ ನೀರುಣಿಸುವ ಚಂಬಲಿನ ಯೋಜನೆಯು ಕಲಾವಿದನ ಕುಂಚದಲ್ಲಿ ಮೇಲಿನಂತೆ ವ್ಯಕ್ತವಾಗಿದೆ—ಇದು ನಿಜಕ್ಕೂ ರಾಷ್ಟ್ರದ ಪ್ರಗತಿಯ ಚಿತ್ರ!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.
ಬೆಲೆ - ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಕ್ಕಳ ಮಗ್ಗಿ ಪುಸ್ತಕ
ಬೆಲೆ ೦—1—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

NOTICE

In the Court of the District Munsif of Mangalore.

O S No 173/1955

Between

Laxmi Hengsu — Plaintiff

and

Kavamma and others— Defendants

To

The 1st defendant Kavamma, daughter of Rudramma, now residing at Attavar Babugudde, Mangalore—with her husband A. Vittappa

Please take notice that the above suit filed for recovery of mortgage amount due to plaintiff stands posted to 24—9—1955 in the above Court, and if you fail to appear that day the same will be decided exparte

P. Sridhar Rao,
Advocate for Plff

Mangalore, 10 9-55

Edited, Printed & Published By K. H. Shetty, at the Navayuga Press, Udipi S. India

Licensed to Post without Prepayment

ನವಯುಗ

ಸಪ್ತಂಟೆ ೩೫ — ಉಡುಪಿ, 22—9—1955 — ಸಂಚಿಕೆ ೪

VOL. 35 — NO. 4

ಭಯಾನಕವಾದ ವಿನೋದ

ಪ್ರಕಟಣೆಯೊಂದು ಅಶ್ಲೀಲವಾಗಿದೆ ಎಂಬ ಆಪಾದನೆಯ ಮೇಲೆ ಖಟ್ಲೆ ಹಾಕಲಾಯಿತು; ನ್ಯಾಯಾಧೀಶರು ಎಲ್ಲ ಸಂಗತಿಗಳನ್ನು ಪರಾಮರ್ಶಿಸಿ "ಪ್ರಕಟಣೆಯು ಅಶ್ಲೀಲ ಸಾಹಿತ್ಯವಲ್ಲ' ಎಂದು ತೀರ್ಪು ಕೊಟ್ಟರು. ಇದರಿಂದ ಲೇಖಕ ಮಹಾಶಯರು ಮಾತ್ರ ಸಂತೋಷರಾಗದೆ ಅಪೀಲು ಮಾಡಲು ಅಪ್ಪಣೆ ಕೇಳಿದರು ಎಂದೊಂದು ವಿನೋದಕತೆ ಹೇಳುತ್ತದೆ.

ಲೋಕ ಸಭೆಯ ಮುಂದೆ ಇದೇ ೧೫ನೇ ದಿನಾಂಕ ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು



"ಭಯಾನಕ ವಿನೋದ' ಗಳನ್ನು ಪ್ರತಿಬಂಧಿಸುವ ಕರಿತು ಮಂಡಿಸಿದ ಮಸೂದೆಯ ಯೋಗ್ಯತೆಯನ್ನು ಮೇಲಿನ ಸ್ವಾರಸ್ಯವಾದ ವಿನೋದ ಕತೆಯ ತಿರುಳಿನ ಹಿನ್ನೆಲೆಯಲ್ಲಿ ಪರಿಶೀಲಿಸಬೇಕೆಂದು ನಮಗೆ ತೋರುತ್ತದೆ.

ವಿಧೇಯಕದ ಉದ್ದೇಶವೇನೆಂಬುದನ್ನು ಪಂಡಿತ ಪಂತರು ಹೀಗೆ ವಿವರಿಸಿದ್ದಾರೆ—ಅಪರಾಧಗಳನ್ನು, ಹಿಂಸಾಚಾರಗಳನ್ನು ಮತ್ತು ಅನೈತಿಕ ವ್ಯಾಪಾರಗಳನ್ನು ತಲೆಗೇರುವಂತೆ ಚಿತ್ರ ಹಾಗು ಲೇಖನಗಳ ಸಹಾಯದಿಂದ ಬಣ್ಣಿಸಿ, ಭಾರತದಲ್ಲೆಲ್ಲ ಅತ್ಯಧಿಕ ಪ್ರಮಾಣದಲ್ಲಿ ಪ್ರಚುರ ಪಡಿಸುವುದು ಕಂಡು ಬಂದಿದೆ. ಇವುಗಳ ದೆಸೆಯಿಂದ ಮಕ್ಕಳಲ್ಲಿ ಸಮಾಜ ಘಾತುಕ ಪ್ರವೃತ್ತಿಯು ಬೆಳೆದು ಬರುವುದಕ್ಕೆ ಪ್ರೋತ್ಸಾಹ ಸಿಗುತ್ತದೆ. ತರುಣ ಜನಾಂಗದ ಮನೋಭಾವದ ಮೇಲೆಯೂ ಅನಿಷ್ಟ ಪರಿಣಾಮವಾಗುತ್ತದೆ- ಆದುದರಿಂದ ಇದನ್ನು ಪ್ರತಿಬಂಧಿಸುವುದು ಅವಶ್ಯವಾಗಿದೆ."

ಜಮ್ಮು ಮತ್ತು ಕಾಶ್ಮೀರಗಳನ್ನುಳಿದು ಸಮಸ್ತ ಭಾರತಕ್ಕೆ ಅನ್ವಯವಾಗುವ ಪಂಡಿತ ಪಂತರ ವಿಧೇಯಕವು ಚಿತ್ರಗಳ ಸಹಾಯದಿಂದ ಅಥವಾ ಚಿತ್ರಗಳಿಲ್ಲದೆ ಅಥವಾ ಕೇವಲ ಚಿತ್ರಗಳಿಂದ ಅಪರಾಧಗಳ ಕ್ರೂರ ಕೃತ್ಯಗಳ, ಹಿಂಸಾಚಾರದ ಮತ್ತು ಬೇರಾವುದೇ ಭಯಂಕರ ಹಾಗು ಅನಿಷ್ಟಪ್ರದ ಘಟನೆಗಳನ್ನು ವರ್ಣಿಸುವ ಕತೆಗಳ ಪುಸ್ತಕ, ಪತ್ರಿಕೆ, ನಿಯತಕಾಲಿಕೆ, ಕರಪತ್ರ ಅಥವಾ ಅಂಥ ಬೇರಾವುದೇ ಬಗೆಯ ಪ್ರಕಟಣೆಯನ್ನು ಅಪಾಯಕರವೆಂದು ಹೇಳುತ್ತದೆ.

ಇಂಥ ಪ್ರಕಟಣೆಗಳು ಯಾವನಾದರೊಬ್ಬ ತರುಣನ ಕೈಗೆ ಸಿಕ್ಕಿದರೆ, ಅವನನ್ನು ಅಪರಾಧ ಅದುಮಾಡುವುದಕ್ಕೆ ಪ್ರೋತ್ಸಾಹಿಸಬಹುದು; ಉದ್ರೇಕಿಸಬಹುದು; ಹಿಂಸಾಚಾರ, ಕ್ರೂರ ಕೃತ್ಯ ಅಥವಾ ಬೇರೆ ಯಾವುದೇ ಅನಿಷ್ಟಪ್ರದ ಕಾರ್ಯಗಳನ್ನು ನಡೆಸಲು ಅವನನ್ನು ಹುರಿದುಂಬಿಸಬಹುದು. ಹಾಗೆ ಮಾಡುತ್ತವೆ ಎಂದು ನಿರ್ಣಯಿಸಲ್ಪಟ್ಟ ಪ್ರಕಟಣೆಗಳಿಗೆ ಹೊಣೆಗಾರನಾದವನನ್ನು ಶಿಕ್ಷಿಸುವ ಅಧಿಕಾರವನ್ನು ಸರಕಾರಕ್ಕೆ ಈ ವಿಧೇಯಕವು ಕೊಡುತ್ತದೆ.

ತರುಣರಿಂದರೆ ಇಪ್ಪತ್ತು ವರ್ಷದೊಳಗಿನ ಸ್ತ್ರೀಪುರುಷರೆಂದು ವಿಧೇಯಕವು ಹೇಳುತ್ತದೆ. ಇದನ್ನು ಇಪ್ಪತ್ತೈದು ವರ್ಷಗಳಿಗಾದರೂ ಏರಿಸಬೇಕೆಂದು ನಮ್ಮ ಅಭಿಪ್ರಾಯ. ಏಕೆಂದರೆ ಪುರುಷರ ಪಟ್ಟಗಾದರೂ ವಯೋಮಾನದ ಮಿತಿಯನ್ನು ೨೫ ಎಂದಿಡದಿದ್ದರೆ ಉದ್ದೇಶವು ಸಫಲ ರೂಪದಲ್ಲಿ ಈಡೇರಲಿಕ್ಕಿಲ್ಲವೆಂದು ನಮಗೆ ತೋರುತ್ತದೆ. ವಿಧೇಯಕದ ಚರ್ಚೆಯ ಕಾಲಕ್ಕೆ ಸದಸ್ಯರು ಇದನ್ನು ಗಮನಿಸುವರೆಂದು ಆಶಿಸುತ್ತೇವೆ

ಯಾರಾದರೊಬ್ಬನು ಅಪಾಯಕರ ಪ್ರಕಟಣೆಗಳನ್ನು ಮಾರುವನಾದರೆ, ಇನ್ನೊಬ್ಬನಿಗೆ ಕೊಡುವನಾದರೆ, ಹಂಚುವನಾದರೆ, ಒಹಿರಂಗವಾಗಿ ಪ್ರದರ್ಶಿಸುವನಾದರೆ, ಬೇರೆ ರೀತಿಯಲ್ಲಿ ಪ್ರಸಾರಕ್ಕೆ ನೆರವಾಗುವನಾದರೆ, ಮುದ್ರಿಸುವನಾದರೆ, ತನ್ನೊಡನೆ ಇಟ್ಟುಕೊಂಡಿರುವನಾದರೆ, ತನ್ನೊಡನೆ ಇಂಥ ಪ್ರಕಟಣೆಗಳಿವೆ ಎಂದು ಯಾವ ವಿಧಾನದಿಂದಲಾದರೂ ಸೂಚಿಸುವನಾದರೆ, ಅಥವಾ ಇಂಥವರಿಂದ ಪಡೆಯಬಹುದೆಂದು ತಿಳಿಯಪಡಿಸುವನಾದರೆ ಅವನಿಗೆ ಆರು ತಿಂಗಳ ಸೆರೆಮನೆವಾಸದ, ಅಥವಾ ದಂಡದ. ಅಥವಾ ಇವೆರಡರಿಂದ ಕೂಡಿದ ಶಿಕ್ಷೆಯಾಗುತ್ತದೆ ವ್ಯಾಪಾರಿ ಸಂಸ್ಥೆಗಳಿಗೆ ಸಹ ಇದು ಅನ್ವಯವಾಗುತ್ತದೆ ಎಂಬುದನ್ನಿಲ್ಲಿ ಮರೆಯಬಾರದು.

ನ್ಯಾಯಸ್ಥಾನವು ಅಪರಾಧ ಸ್ಥಾಪನೆಯ ಬಳಿಕ ಇಂಥ ಪ್ರಕಟಣೆಗಳ ನಾಶಕ್ಕೆ ಆಜ್ಞಾಪಿಸಬಹುದು. ಸರಕಾರದವರು ತಮ್ಮ ಪ್ರಧಾನ ಕಾನೂನು ಪಂಡಿತರೊಡನೆ ಪರ್ಯಾಲೋಚನೆ ನಡೆಸಿ, ಯಾವುದೇ ಪ್ರಕಟನೆಯನ್ನು ಅಪಾಯಕರವೆಂದು ಘೋಷಿಸುವರಾದರೆ, ಈ ಸಂಗತಿಯನ್ನು ಸರಕಾರದ ಅಧಿಕೃತ ಗಜೆಟನಲ್ಲಿ ಪ್ರಕಟಿಸಿ, ತಮ್ಮ ನಿರ್ಣಯಕ್ಕೆ ಹಕ್ಕ ಕಾರಣಗಳನ್ನು ಹೇಳಿ, ಆ ಪ್ರಕಟಣೆಯ ಎಲ್ಲ ಪ್ರತಿಗಳನ್ನೂ ಸರಕಾರದ ವಶಕ್ಕೆ ಕೊಡಬೇಕೆಂದು ಸಾರಬಹುದು. ಇಂಥ ಅಪ್ಪಣೆಯಿಂದ ನೊಂದವರು ಹೈಕೋರ್ಟಿಗೆ ಸರಕಾರದ ನಿರ್ಣಯವನ್ನು ತಳ್ಳಿಹಾಕಬೇಕೆಂದು ಮನವಿಮಾಡಿಕೊಳ್ಳಬಹುದು.

ಹೈಕೋರ್ಟಿಗೆ ಸಲ್ಲಿಸುವ ಮನವಿಯನ್ನು ಆಜ್ಞೆಯಏರಡು ತಿಂಗಳುಗಳೊಳಗೆ ಮಾಡಬಹುದೆಂದು ವಿಧೇಯಕವು ವಿಧಿಸುತ್ತದೆ. ನಮ್ಮ ಅಭಿಪ್ರಾಯದಂತೆ, ಈ ಅವಧಿಯನ್ನು ಒಂದು ತಿಂಗಳಿಗೆ ಇಳಿಸುವುದು ಅಪೇಕ್ಷಣೀಯವಾಗಿದೆ. ಏಕೆಂದರೆ ಅಪಾಯಕರ ಪ್ರಕಟಣೆಯ ಪ್ರಸಾರವನ್ನು ಅದಷ್ಟು ಕಡಿಮೆಮಾಡುವುದಕ್ಕೆ ಅವಧಿ ನಿರ್ಬಂಧವು ಕರಿಣವಾಗಿರಬೇಕು; ನ್ಯಾಯದಾನಕ್ಕೆ ಧಾರಾಳ ಅವಕಾಶವನ್ನು ಒದಗಿಸಿಕೂಡಬೇಕೆನ್ನುವುದು ನಿಜವಾದರೂ ಅಪಾಯಕರ ಪ್ರಕಟಣೆಗಳನ್ನು ನಿರುತ್ತೇಜಿಸುವುದೇ ಮುಖ್ಯವಾದ ವಿಷಯವಾದುದರಿಂದ ಈ ಪ್ರಕಟನೆಗಳಿಗೆ ಹೊಣೆಗಾರರಾದವರು ದಿನ ಕಳ್ಳುವುದಕ್ಕೆ ಬಿಡಲಾಗದು.

ಸರಕಾರದಿಂದ ಅಧಿಕಾರ ಹೊಂದಲ್ಪಟ್ಟ ಯಾವನೇ ಪೋಲೀಸು ಅಧಿಕಾರಿಯು ಅಪಾಯಕರ ಪ್ರಕಟಣೆಗಳನ್ನು ವಶಪಡಿಸಿಕೊಳ್ಳಬಲ್ಲನು. ಮೊದಲನೆ ವರ್ಗದ ಮೆಜಸ್ಟ್ರೇಟರ ವಾರಂಟಿನ ಬಲದಿಂದ ಸಬ್-ಇನ್ಸ್‌ಪೆಕ್ಟರನಿಗಿಂತ ಕಡಿಮೆ ತರಗತಿಯವನಲ್ಲದ ಪೋಲೀಸು ಅಧಿಕಾರಿಯು ಅಪಾಯಕರ ಪ್ರಕಟಣೆಗಳಿರುವ ಅಥವಾ ಆ ಸಂಶಯವಿರುವ ಯಾವುದೇ ಸ್ಥಳವನ್ನು ಪ್ರವೇಶಿಸಿ ಜಪ್ತಿ ನಡೆಸಬಲ್ಲನು; ಮತ್ತು ಪ್ರಕಟಣೆಯ ಎಲ್ಲ ಪ್ರತಿಗಳನ್ನೂ ವಶಪಡಿಸಿಕೊಳ್ಳಬಲ್ಲನು. ಇವುಗಳನ್ನು ನ್ಯಾಯಸ್ಥಾನದ ಮುಂದೆ ಮಂಡಿಸಬೇಕಾಗುತ್ತದೆ.

ಪಂಡಿತಪಂತರ ವಿಧೇಯಕದ ಸಾರಾಂಶವು ಮೇಲಿನಂತಿದೆ—ಇಂಥ ಕ್ರಮಗಳನ್ನು ತೆಗೆದುಕೊಳ್ಳುವ ಆವಶ್ಯಕತೆಯು ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ನಮ್ಮ ಸಾಹಿತ್ಯ ಕೃತಿಗಳನ್ನೆ ತೆಗೆದುಕೊಂಡರೆ, ಅಲ್ಲಿ ಚಿತ್ರಸಲ್ಪಡುವ ಸನ್ನಿವೇಶಗಳು ವಾಸ್ತವಿಕತೆಯನ್ನು ಪ್ರತಿಬಿಂಬಿಸುವ ಸೋಗಿನಲ್ಲಿ ಅನಿಷ್ಟಪ್ರಭಾವಗಳಿಗೆ ದುರ್ಬಲ ಮನುಷ್ಯರನ್ನು ಗುರಿಮಾಡುತ್ತವೆ.

ಯಾವ ಅನೈತಿಕ ಸಂಗತಿಗಳನ್ನು ನೋಡಲು, ಕೇಳಲು, ತಿಳಿಯಲು ಸಹಜ ವಾತಾವರಣದಲ್ಲಿ ಅವಕಾಶವಿಲ್ಲವೋ—ಅವುಗಳನ್ನು ನಿಸ್ಸಂಕೋಚವಾಗಿ ವರ್ಣಿಸುವ ಕಾದಂಬರಿಗಳೂ ಕತೆಗಳೂ ಅಗ್ಗಕ್ರಯಕ್ಕೆ ಸಿಗತೊಡಗಿದವು; ಸಾಹಿತ್ಯವು ಜನಜೀವನದ ಕೈಗನ್ನಡಿ ಎನ್ನುವ ಲೇಖಕರು ಮುನ್ನುಡಿಯಲ್ಲಿ ತಾವು ಕೊಳಚೆಯ ನಿರ್ಮೂಲನಕ್ಕೆ ಹವಣಿಸುತ್ತಿದ್ದೇವೆಂದು ಕೊಚ್ಚಿಕೊಳ್ಳುತ್ತಿದ್ದರೂ ನಿಜವಾಗಿ ಅವರು ದುಷ್ಟವೃತ್ತಿಗಳ ಪ್ರಾಬಲ್ಯಕ್ಕೆ ಕಾರಣ ಭೂತರಾಗುತ್ತಾರೆ ಎಂದು ಪ್ರಾಜ್ಞರ ಮತ.

ಸಾಹಿತ್ಯದಲ್ಲಿಯಷ್ಟೇಯಲ್ಲ — ಬೇರೆ ಅನೇಕ ಬಗೆಯಿಂದಲೂ ಸಮಾಜ ಘಾತಕವಾದ ಅಂಶಗಳು ಪ್ರಚಾರವಾಗುತ್ತವೆ. ಚಿಕ್ಕ ಮಕ್ಕಳ ಸಲುವಾಗಿ ವಾರ ಪತ್ರಿಕೆಗಳು ಪ್ರಕಟಿಸುವ ಚಿತ್ರ

(ಇದೇ ಸುಟ ನೋಡಿರಿ)

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ನೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು.)

"ಸಿಗ್ಮಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ ನಿಮಗೆ ಸವಿೂಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

ರಾಷ್ಟ್ರದ ಭದ್ರತೆ ಮತ್ತು ಒಗ್ಗಟ್ಟು

ಕಲೆಯು ರೂಪಿಸಬೇಕಾದ ಮನೋಭಾವ

ಫಜಲಅಲಿ ಆಯೋಗದ ಸದಸ್ಯರಲ್ಲೊಬ್ಬರಾದ ಹಾಗು ಪ್ರಸಿದ್ಧ ಇತಿಹಾಸಕಾರರಾದ ಸರದಾರ ಕೆ ಎಂ ಪಣಿಕ್ಕರರು ನೊನ್ನೆ ಮದ್ರಾಸಿನಲ್ಲಿ "ಕಲೆ"ಯ ಕುರಿತು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಅನುಷಂಗಿಕವಾಗಿ ಅವರು ಭಾರತದಲ್ಲಿ ಐಕ್ಯ ಮತ್ತು ಭದ್ರತೆಯನ್ನು ಸ್ಥಾಪಿಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದರು ಅವರ ಅಮೂಲ್ಯ ವಿಚಾರಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

ಅದ್ಭುತ ಪುನರುತ್ಥಾನ

ಕಳೆದ ಕೆಲವು ವರ್ಷಗಳಲ್ಲಿ ಕಲಾಕ್ಷೇತ್ರದಲ್ಲಿ ವ್ಯಕ್ತವಾಗಿರುವ ಪುನರುತ್ಥಾನ ಶಕ್ತಿಯು ಅಸದೃಶವಾಗಿದೆ, ಅದ್ಭುತವಾಗಿದೆ ಸರದಾರ ಪಣಿಕ್ಕರರಂಥವರ ಬಾಲ್ಯಕಾಲದಲ್ಲಿ ಕಲೆಯ ಅವಹೇಳನೆ ವ ದುತ್ತಿದ್ದರು, ಕಲಾವಿದರನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಿದ್ದರು ಇಂದು ಪರಿಸ್ಥಿತಿಯಲ್ಲಿ ಕಂಡು ಬರುವ ಬದಲಾವಣೆಯು ಗಮನೀಯವಾಗಿದೆ

ಸ್ವಾಭಾವಿಕವಾಗಿಯೇ ಈ ಬದಲಾವಣೆ ಘಟಿಸಿದೆ— ಕೇವಲ ಕಲಾಕ್ಷೇತ್ರದಲ್ಲಿಯಷ್ಟೇಯಲ್ಲ, ಪ್ರತಿಯೊಂದೂ ವಿಧಾಯಕ ಚಟುವಟಿಕೆಯನ್ನು ಸಮರ್ಥಿಸುವ ಜನರ ಮನೋಭಾವದಲ್ಲಿ ಪರಿವರ್ತನೆಯಾಗಿರುತ್ತದೆ. ನಮ್ಮ ರಾಷ್ಟ್ರೀಯ ಜೀವನದ ಬೆಳವಣಿಗೆಯಲ್ಲಿ ಇದನ್ನು ಉಲ್ಲೇಖನೀಯ ಅಭಿವೃದ್ಧಿ ಎಂದು ಹೆಸರಿಸಿದರೆ ತಪ್ಪಾಗಲಾರದು

ಜೀವನದಲ್ಲಿ ರಾಜಕೀಯ ಆರ್ಥಿಕ ಮುಖಗಳಿಗೆ ಕೊಡಬೇಕಾದಷ್ಟೇ ಮಹತ್ವವನ್ನು ಲಲಿತ ಕಲೆಗಳಿಗೂ ನೀಡಬೇಕೆಂಬ ಬುದ್ಧಿ ಭಾರತೀಯರಿಗೆ ಬಂದಿರುವುದು ಶುಭ ಲಕ್ಷಣ ರಾಷ್ಟ್ರವು ಉಚ್ಛ್ರಾಯಾವಸ್ಥೆಯನ್ನು ಇನ್ನೂ ಮುಟ್ಟದಾಗ ಲಲಿತ ಕಲೆಗಳು ತಮಗೆ ಯೋಗ್ಯವಾದ ಉಚ್ಚಸ್ಥಾನವನ್ನು ಪಡೆಯದಿರಲಿಕ್ಕಿಲ್ಲ ಎಂಬ ಆಶೆಗೆ ಇಂದಿನ ವಾತಾವರಣ ಎಡೆಕೊಡುತ್ತದೆ,



ಚಿತ್ರದಲ್ಲಿರುವುದು ಹತ್ತಂದಿ ಪದಿನೆಂಟನೇ ಶತಮಾನದ ವರೆಗಿನ ಕಂಚಿನ ಪುತ್ತಳಿಯ ಮೂರ್ತಿ ಕಲೆಯ ವೈಭವ—"ಸತ್ಯಂ ಶಿವಂ ಸುಂದರಂ" ಎಂಬ ಮೂಲ ತತ್ವದ ಚೌಕಟ್ಟಿನಲ್ಲಿ ಇಂದು ಲಲಿತ ಕಲೆ ಸಾಧಿಸಬೇಕಾದ ವಿಷಯವೆಂದರೆ ರಾಷ್ಟ್ರದ ಒಗ್ಗಟ್ಟು

ಪ್ರಾಚೀನ ಪ್ರವಾಹ

ದೇಶದ ಬೇರೆ ಬೇರೆ ಭಾಗಗಳಲ್ಲಿ ಲಲಿತ ಕಲೆಗಳು ಹೇಗೆ ಅಭಿವ್ಯಕ್ತವಾಗುತ್ತವೆ? ಎಂಬುದನ್ನು ತಿಳಿದ ಕೊಳ್ಳಬೇಕಾದರೆ ಹೊಸದೆಹಲಿಯಲ್ಲಿ ಈಚೆಗೆ ನಡೆದಿದ್ದ ಭಾರತೀಯ ಭಾಷೆಗಳ ನಾಟಕಾಭಿನಯದತ್ತ ದೃಷ್ಟಿ ಹೊರಳಿಸುವುದು. ಅಪೇಕ್ಷಣೀಯ. ಈ ಕಾರ್ಯಕ್ರಮವು ಕಾಳಿದಾಸನ ಸಂಸ್ಕೃತ ನಾಟಕ ಶಾಕುಂತಲದಿಂದ ತೊಡಗಿತು, ಭಾಸನ ಸಂಸ್ಕೃತ ನಾಟಕ ವಾಸವದತ್ತಾ ದೊಡನೆ ಮುಕ್ತಾಯವಾಯಿತ. ನಮ್ಮ ಜನರ ಭಾವನೆಗಳಲ್ಲಿ ಪ್ರಾಚೀನ ಗುಣ ಪ್ರವಾಹವೇ ಈಗಲೂ ಹರಿಯುತ್ತಿದೆ ಎಂಬ ದಕ್ಕೆ ಇದು ಉತ್ಕೃಷ್ಟವಾದ ನಿದರ್ಶನ

ಭಾರತದಲ್ಲಿ ಹಿಂದಿನ ಸಾಮಾಜಿಕ ಪರಂಪರೆಯೇ ಈಗಲೂ ಮುಂದರಿಯುತ್ತಿದೆ, ಆಧುನಿಕ ಸಂಸ್ಕಾರಗಳು ಜನತೆಯ ಮನೋಭಾವದ ಹೊರ ರೂಪವನ್ನು ಬದಲಾಯಿಸಿರಬಹುದಾದರೂ ಮನಸ್ಸಿನ ರಚನೆಯನ್ನು, ತಿರುಳನ್ನು, ಪರಿವರ್ತಿಸಲು ಶಕ್ತವಾಗಿಲ್ಲ ಇದನ್ನು ನೋಡಿದ ಪಾಶ್ಚಾತ್ಯರು ಭಾರತದಲ್ಲಿ ಎತ್ತಿನ ಬಂಡಿಯನ್ನೂ ರಾಂಲ್ಸರಾಯ್ಸ್ ಮೋಟಾರು ಕಾರನ್ನೂ ಜೊತೆಯಾಗಿಟ್ಟೇ ಜೀವಿಸುವ ಪ್ರವೃತ್ತಿ ಕಂಡು ಬರುತ್ತದೆ-ಎಂದು ಹೇಳುವಂತಾಗಿದೆ

ಅಭಿಮಾನದ ವಿಷಯ

ಪ್ರಾಚೀನ ಭಾರತೀಯರ ವಿಶ್ವಾಸ ಮತ್ತು ನಂಬಿಕೆಗಳಿಗಿಂತ ತೀರಭಿನ್ನವಾದುದನ್ನು ಇಂದಿನ ಭಾರತೀಯರಲ್ಲಿ ಗುರುತಿಸುವುದು ಕಷ್ಟ. ಸಾಮಾಜಿಕ ಜೀವನದ ವಿಧಿನಿಯಮಗಳು ಈಗಲೂ ಬಹುಮಟ್ಟಿಗೆ ಹಳೆಯ ಕಾಲದವುಗಳೇ ಆಗಿವೆ, ಅವುಗಳನ್ನು ನಿಷ್ಠೆ ಮತ್ತು ಶ್ರದ್ಧೆಯಿಂದ ಅನುಸರಿಸಿಕೊಂಡು ಬರುವುದರಲ್ಲೇ ಭಾರತೀಯರು ಸಂತೋಷವನ್ನು ಕಾಣುತ್ತಿದ್ದಾರೆ ಜೀವನದ ಮೂಲಬೂತ ವಿಷಯಗಳ ಕುರಿತು ಭಾರತೀಯರು ವಿಚಾರಿಸುವ ರೀತಿಯೂ ಒಂದೇ ತೆರನಾಗಿದೆ—ಅದು ಹಿಂದಿನ ಕಾಲದಂತೆಯೇ ಉಳಿದಿದೆ

ಜಗತ್ತಿನಲ್ಲಿ ಐಗುಪ್ತ ಬೆಬಿಲೋನಿಯ ರೋಂ ಮುಂತಾದ ಬೇರೆದೆಯ ಸಂಸ್ಕೃತಿಯು ಪ್ರಬಲಾಘಾತಗಳಿಗೆ ಗುರಿಯಾಗಿ ಸುಚ್ಚುನೂರಾಗಿ ಹೋಗಿರುವಾಗ, ಭಾರತದಲ್ಲಿ ಇನ್ನೂ ಪ್ರಾಚೀನ ಸಂಪ್ರದಾಯ ಉಳಿದಿರುವುದು ಅಭಿಮಾನದ ವಿಷಯ. ಭಾರತವು ತನ್ನ ವೈಶಿಷ್ಟ್ಯವನ್ನು ಇದೇ ರೀತಿ ಮುಂದಕ್ಕೂ ಕಾಪಾಡಿಕೊಂಡು ಹೋಗಬೇಕು ಭಾರತದ ಸನಾತನ ನಾಗರಿಕತೆ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿದು, ಅಜರಾಮರವಾಗಬೇಕು.

ರಾಜಕೀಯ ಬಲ

ಐರೋಪ್ಯ ದೇಶಗಳಲ್ಲೇಗ ಚಿಕ್ಕ ದೇಶಗಳವರು ತಾವು ಮಹಾನಾಗರಿಕತೆಯೊಂದರ ಅಂಗಾಂಶಗಳಾಗಿದ್ದೇವೆ ಎಂಬ ತಿಳಿವಳಿಕೆಯನ್ನು ನಿಧಾನವಾಗಿ ಹೊಂದುತ್ತಿದ್ದಾರೆ, ಚಿಕ್ಕ ಗುಂಪುಗಳಾಗಿ ತಾವು ಒಡೆದಿರುವುದರಿಂದ ಸಾಂಸ್ಕೃತಿಕ ಸಾಮರಸ್ಯಕ್ಕೆ ತೊಂದರೆಯಾಗಿದ ಎಂದು ಭಾವಿಸತೊಡಗಿದ್ದಾರೆ ಭಾರತವು ಇಂದು ಆ ಸ್ಥಿತಿಯಲ್ಲಲ್ಲ ಅದು ಒಂದೇ ಸಂಸ್ಕೃತಿಯ ಪ್ರಭಾವಕ್ಕೆ ಗುರಿಯಾದ ಮಹಾ ಭೂಖಂಡ—ಇಂದು ಸುದೈವದಿಂದ ಅದು ಒಂದೇ ಆಡಳಿತದೊಳಗ ಸಹಬಂದು, ರಾಜಕೀಯ ಭದ್ರತೆಗೂ ಐಕ್ಯಕ್ಕೂ ದಾರಿಮಾಡಿ ಕೊಟ್ಟಿದೆ

ದೇಶಕ್ಕೆ ಈ ಭದ್ರತೆಯನ್ನು ನೂತನ ರಾಜಕೀಯ ಬಲವನ್ನು, ನೀಡಿದವರು ಯಾರು? ಕೆಲವು ರಾಜ್ಯ ಶಾಸ್ತ್ರ ಪ್ರವೀಣರಿಗೆ ಅಥವಾ ಬ್ರಿಟಿಷರ ಸೈನ್ಯಬಲಕ್ಕೆ ಈ ಮನ್ನಣೆಯನ್ನು ಕೆಲವರು ಸಲ್ಲಿಸುತ್ತಾರೆ— ಆದರೆ ಭಾರತೀಯರ ಒಮ್ಮನಸ್ಸಿನ ಇಚ್ಛೆಯೇ ಈ ಒಗ್ಗಟ್ಟನ್ನು

(೧೨ನೇ ಪುಟ ನೋಡಿರಿ)

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S C 454/1955

ವಾದಿ ಮಂಜಯ್ಯ ಶೆಟ್ಟಿ
ಪ್ರತಿವಾದಿಗಳು 1 ದೇವಿ 2 ದ್ರಾರ

ಕುಂದಾಪುರ ತಾಲ್ಲೂ ಬಂಬದ ಕೋಣೆ ಗ್ರಾಮದಲ್ಲಿರುವ ಹಳ್ಳಿಗೆರೆ ದೊಡ್ಡಮನೆ ಬುದ್ಧಿವಂತ ಶೆಟ್ಟರ ಆಳಿಯ ಮೇಲಿನ ವಾದಿಯ ವಾದಿ ಮಂಜಯ್ಯ ಶೆಟ್ಟಿಯು ಕುಂದಾಪುರ ತಾಲ್ಲೂ ಬಂಬದ ಕೋಣೆ ಗ್ರಾಮದ ತಿಂಕಬೆಟ್ಟುನಲ್ಲಿರುವ 1ನೇ ಪ್ರತಿವಾದಿಳು ಬಿಲ್ಲಸೇವಿ ಹೆಂಗ್ಸಿನ ತಮ್ಮ 2ನೇ ಪ್ರತಿವಾದಿ ದಾರನೆ ಈ ಮೂಲಕ ತಿಳಿಯಪಡಿಸುವದೇನಂದ್ರೆ,

ಪ್ರತಿವಾದಿರು ವಾದಿಗೆ ರೂಪ್ಯಾ 105 0_0 ಕ್ಕೆ ತಾ 5—10 54ರಲ್ಲಿ ಬರಕೊಟ್ಟ ಡಿಮಾಂಡು ನೋಟಿನ ಒಟ್ಟು ಹಣ ಬಡ್ಡಿ ಕೂಡಾ ರೂಪ್ಯಾ 109—3—6ಕ್ಕೆ ಪ್ರತಿವಾದಿರ ಮೇಲೆ ಸಾಮಾನ ಮೇಲಿನ ದಾವೆಯ ತಾರೀಕು 8—10—1955ಕ್ಕೆ ತಪ್ಪದೆ ಇ ಹೋಣಾಗಿಯದೆ ಆ ಕುರಿತು ಯೋಗ್ಯದ್ರ ಅಕ್ಷೇಪವಿದ್ದರೆ ತನ್ನ ದಿಸ್ಸ ಮೇಲಿನ ಕೋರ್ಟನಲ್ಲಿ ಜಾಹೀರುಮಾಡಿಕೊಳ್ಳತಕ್ಕದ್ದು. ತಿಳಿದಿರುವದು

SoorappaShetty Kolkebail
Advocate for plaintiff
ತಾ 15_9_55 ಮೊಕ್ಕಾಂ ಕುಂದಾಪುರ

THE CANARA MUTUAL
Assurance Company Limited
Managing Director T R A PAI
Head Office UDIPI, S. India] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ] [ಸ್ಥಾಪನೆ ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ

CHIEF AGENTS
THE COMMERCIAL CORPORATION OF INDIA LTD,
"Mukund Nivas" UDIPI, S India

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

ನಿರಖು ಠೇವಣಾತಿ	
24 ತಿಂಗಳಿಗೆ	4%
12 ,,	3¾%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD, MULKI

ವಿಂಧ್ಯ ಪ್ರದೇಶದಲ್ಲಿ ಪ್ರವಾಸ

ರಾಜ್ಯದ ಅಭಿವೃದ್ಧಿಯಲ್ಲಿ ಪ್ರಧಾನಿಗಳ ಆಸಕ್ತಿ

ಪ್ರಧಾನಿ ನೆಹರು ಕಳೆದ ವಾರ ವಿಂಧ್ಯ ಪ್ರದೇಶದಲ್ಲಿ ೩ ದಿನಗಳ ಪ್ರವಾಸವನ್ನು ಕೈಗೊಂಡರು. ಈ ಅವಧಿಯಲ್ಲಿ ಅವರು ೪೦೦ ಮೈಲಿಗಳಷ್ಟು ಸಂಚಾರ



ಮಾಡಿ ಬಂದರು. ಸುಮಾರು ೧೫ ಲಕ್ಷ ಜನರಿಗೆ ತಮ್ಮ ಪ್ರೀತಿಯ ಧುರೀಣನನ್ನು ಕಾಣುವ ಮತ್ತು ಅವನ ಭಾಷಣವನ್ನು ಕೇಳುವ ಸದವಕಾಶ ಲಭಿಸಿತು. ನೆಹರುಗಳೊಂದಿಗೆ ಅವರ ಮಗಳು ಶ್ರೀಮತಿ ಇಂದಿರಾ ಗಾಂಧಿಯವರೂ ಇದ್ದರು.

ಜನತೆ ಹಾಗು ಯೋಜನೆ

ಹೋದಲ್ಲೆಲ್ಲ ನೆಹರುಗಳು ಭಾರತ ಮಾತೆಯ ಪುತ್ರರು ತಾವಾಗಿದ್ದೇವೆಯೆಂಬ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಳ್ಳುವಂತೆ ಜನರಿಗೆ ಬೋಧಿಸಿದರು. ವಿಂಧ್ಯ ಪ್ರದೇಶದ ಜನರು ತಾವು ಉಳಿದ ಭಾರತೀಯರಿಗಿಂತ ಬೇರೆಯವರೆಂಬ ಭಾವನೆಯನ್ನು ಇಟ್ಟುಕೊಳ್ಳಲಾಗದೆಂದು ಹೇಳಿದರು.

ರಾಷ್ಟ್ರವು ಪುನಾರಚನೆಯ ಕಾರ್ಯದಲ್ಲಿದ್ದು, ಅಭಿವೃದ್ಧಿಯ ಅನೇಕ ಪ್ರಯತ್ನಗಳನ್ನು ಕೈಗೊಂಡಿದೆ ಎಂದು ನೆಹರು ತಿಳಿಸಿದರು. ಜನರು ಈ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಯೋಗ್ಯ ಸಹಕಾರವನ್ನು ನೀಡಿದರೆ ನಾವು ಬೇಗನೆ ಗುರಿಯನ್ನು ಸಾಧಿಸುವ ಆಶೆ ಇದೆ ಎಂದು ನೆಹರು ವಿವರಿಸಿದರು.

ನೆಹರುಗಳಿಗೆ ಕಾಣಿಕೆ

ಜನರು ಪ್ರಧಾನಿಗಳಿಗೆ ಭವ್ಯ ಸ್ವಾಗತವನ್ನು ನೀಡಿದರು. ರಸ್ತೆಯಲ್ಲೆಲ್ಲ ಕಮಾನುಗಳನ್ನು ನಿಲ್ಲಿಸಿದ್ದರು; ಹಳ್ಳಿಯ ಜನರು ಪದೇ ಪದೇ ಜಯಜಯಕಾರಗಳನ್ನು ಮಾಡುತ್ತಿದ್ದರು. ಕಾರ್ಯಕ್ರಮ ಪಟ್ಟಿಯಲ್ಲಿ ಸಮೂಹದಿಸಲಾದ ಹಳ್ಳಿ ಪಟ್ಟಣಗಳಲ್ಲಿ ನೆಹರುಗಳ ಭಾಷಣ ನಡೆದೇ ನಡೆಯಿತು. ಈ ನಡುವೆ ಎಲ್ಲೆಲ್ಲಿ ಹಳ್ಳಿಗರು ಗುಂಪು ತಮಗಾಗಿ ಕಾದು ನಿಂತಿರುವುದು ಕಂಡಿತೊ, ಅಲ್ಲೆಲ್ಲ ನೆಹರು ಕಾರು ನಿಂದಿಳಿದು, ಚಿಕ್ಕ ಮಕ್ಕಳ ಬೆನ್ನು ತಟ್ಟಿ, ಹಳ್ಳಿಯವರೊಡನೆ ನಾಲ್ಕಾರು ಕುಶಲ ಮಾತುಗಳನ್ನಾಡಿ, ಅವರನ್ನು ಹರ್ಷಗೊಳಿಸಿ ಮುಂದೆ ಹೋಗುತ್ತಿದ್ದರು.

ಸಂಪ್ರೀತರಾದ ಜನರು ರಾಷ್ಟ್ರದ ಮಹಾನಾಯಕನಿಗೆ ಸಂತ್ರಸ್ತ ಪ್ರದೇಶಗಳಿಗೆ ಸಹಾಯ ಸಲ್ಲಿಸಲೆಂದು ಮತ್ತು ಸ್ಥಳೀಯ ಅಭಿವೃದ್ಧಿ ಕಾರ್ಯಗಳಲ್ಲಿ ವಿನಿಯೋಗಿಸಲೆಂದು ಕೆಲವು ಸಾವಿರ ರೂಪಾಯಿಗಳ ನಿಧಿಯನ್ನು ಭಕ್ತಿ ಪುರಸ್ಸರವಾಗಿ ಅರ್ಪಿಸಿದರು.

ಸುಂದರನಾದ ನಾಡು

ತಮ್ಮ ಸಂಚಾರದ ಕೊನೆಯಲ್ಲಿ ನೆಹರುಗಳು ಪತ್ರಿಕೋದ್ಯಮಿಗಳೊಡನೆ ಮಾತನಾಡುತ್ತ "ವಿಂಧ್ಯ ಪ್ರದೇಶವು ನೈಸರ್ಗಿಕ ಸಂಪತ್ತಿನಿಂದ ತುಂಬಿದ್ದರೂ ಬಡ ದೇಶವಾಗಿ ಉಳಿದಿದೆ ಅದನ್ನು ಹಿಂದಿನ ರಾಜ-ಮಹಾರಾಜರು ಕಡೆಗಣಿಸಿದರು. ಆದುದರಿಂದ ಈಗಿನ ಸರಕಾರ ಅಭಿವೃದ್ಧಿ ಪ್ರಯತ್ನಗಳ ಕುರಿತು ತುಸು ಹೆಚ್ಚಿನ ಗಮನವೀಯಬೇಕಾಗಿದೆ" ಎಂದರು.

ಪ್ರವಾಸ ಸುಖದ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತ "ಇದು ಸುಂದರವಾದ ಪ್ರದೇಶ. ಬೀರೆ ಭೂಮಿಯಾಗಿರುವ ಹೆಸೆಯಿಂದ ಬೇರೆ ರಾಜ್ಯಗಳ ಹವೆಗಿಂತ ಇಲ್ಲಿನ ವಾತಾವರಣ ತಂಪಾಗಿದೆ. ವಿಂಧ್ಯ ಪ್ರದೇಶದ ಪ್ರವಾಸ ಆಕರ್ಷಣೀಯವೆನಿಸುತ್ತದೆ" ಎಂದುದಾಗಿ ಹೇಳಿದರು

ಆಕರ್ಷಕ ಜಲಪಾತ

ಕೇವಲ ಪ್ರವಾಸಿಕರ ದೃಷ್ಟಿಯಿಂದ ನೋಡಿದರೂ ನೆಹರುಗಳು ಹೇಳಿರುವ ಮಾತುಗಳಲ್ಲಿ ಅತಿಶಯೋಕ್ತಿ ಏನೂ ಇಲ್ಲ. ವಿಂಧ್ಯ ಪ್ರದೇಶದ ರಾಜಧಾನಿಯಾದ ರೇವಾ ನಗರದ ೨೦ ಮೈಲು ದೂರದಲ್ಲಿ ಚಾಚ್ಯಾ ಎಂಬ ಮನೋಹರ ಜಲಪಾತವಿದೆ. ಇದನ್ನು ನೋಡಲು ನೆಹರು ತೆರಳಿದಾಗ ರಸ್ತೆಯ ಇಕ್ಕೆಲ್ಲದಲ್ಲೂ ಹೆಸರಾದ ಭತ್ತದ ಗದ್ದೆಗಳಲ್ಲಿ ಸೈರು ತೊನೆದಾಡುತ್ತಿರುವುದನ್ನು ಕಂಡು ಸಂತೋಷಿಸಿದರು.

ಜಲಪಾತವು ೨೦೦ ಅಡಿಯಷ್ಟು ಅಗಲವಿದೆ ೩೫೦ ಅಡಿಯಷ್ಟು ಎತ್ತರದಿಂದ ನೀರು ಕೆಳಗೆ ದುಮುಕುತ್ತದೆ. ಇಂಜಿನಿಯರುಗಳು ಮತ್ತು ವಿಜ್ಞಾನಿಗಳು ಈ

(೧೨ ನೆಯ ಪುಟ ನೋಡಿರಿ)



A branch of the Bank will be opened at PALGHAT(S.Malabar) on 24—9—55

ಪೊಂಡಿಚೆರಿಗೆ ನೆಹರುಗಳ ಭೇಟಿ

ಇದೇ ಅಕ್ಟೋಬರ ೨೦ರಂದು ನೆಹರು ತಮಿಳುನಾಡಿನಲ್ಲಿ ಸ್ವಾಧಿಪತ್ಯಕ್ಕೆಗೊಳ್ಳುತ್ತಾರೆ. ಆಗ ಎರಡು ದಿನಗಳ ವರೆಗೆ ಕಳೆದವರ್ಷವಷ್ಟೇ ಭಾರತಕ್ಕೆ ವ್ಯಾಪಾರಾರಿಕವಾಗಿ ಅಡಳಿತದ ಮಟ್ಟಿಗೆ ವರ್ಗಾಯಿಸಲಾಗಿರುವ ಪೋಂಡಿಚೇರಿ ಮತ್ತು ಕಾರೈಕಲುಗಳಿಗೂ ನೆಹರು ತೆರಳಿ, ಅನೇಕ ಕಾರ್ಯಕ್ರಮಗಳನ್ನು ನೆರವೇರಿಸಲಿದ್ದಾರೆ.

ಭಾರತದೊಡನೆ ನೇರವಾದ ಸಂಪರ್ಕವನ್ನು ಪಡೆದ ಬಳಿಕ ತಮ್ಮ ನಾಡಿಗೆ ಬರುವ ಪ್ರಧಾನಿ ನೆಹರುಗಳಿಗೆ ಪ್ರಚಂಡವೂ ಭವ್ಯವೂ ಆದ ಸ್ವಾಗತವನ್ನು ನೀಡಲು ಅಲ್ಲಿಯ ಜನತೆ ನಿರ್ಧರಿಸಿದ್ದಾರೆ. ನೆಹರುಗಳು ತಮ್ಮನ್ನು ಕಾಣಬಯಸುತ್ತಿರುವುದಕ್ಕೆ ಧುರೀಣರಂತೆ ಜನತೆಗೂ ಸಂತೋಷವಾಗಿದೆ.

ಪೊಂಡಿಚೆರಿಯ ರಾಷ್ಟ್ರೀಯ ಮಂಡಳದ ಸದಸ್ಯರಾದ ಶ್ರೀ ಫಕೀರಿ ಸ್ವಾಮಿ ಪಿಳ್ಳೆಯವರು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಎಂಟು ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳನ್ನು ಪೊಂಡಿಚೆರಿ ರಾಜ್ಯಕ್ಕಾಗಿ ರೂಪಿಸಲಾಗುವುದು ಎಂದಿದ್ದಾರೆ. ಕಾಂಗ್ರೆಸಿನ ಆಡಳಿತವು ಹೊಸ ಚುನಾವಣೆಗಳ ಬಳಿಕ ರಾಜ್ಯದಲ್ಲಿ ನಡೆಯ ತೊಡಗಿ ಒಂದು ತಿಂಗಳು ಮಾತ್ರವಾಗಿದ್ದರೂ ಅನೇಕ ಸುಧಾರಣೆಗಳನ್ನು ಮಾಡಲಾಯಿತೆಂದು ಅವರು ತಿಳಿಸಿದ್ದಾರೆ.

ಉದಾಹರಣೆಗೆ ಒಟ್ಟು ತೆರಿಗೆಯನ್ನು ೬೦೦ರಿಂದ ೩ ½ ದಷ್ಟು ಇಳಿಸಲಾಯಿತು; ಮನೆ ತೆರಿಗೆಯನ್ನು ೧/೩ ಅಂಶ ಕಡಿಮೆ ಮಾಡಲಾಯಿತು; ನೀರಿನ ತೆರಿಗೆಯನ್ನೂ ಕಡಿಮೆಗೊಳಿಸಲಾಯಿತು. ನೌಕರರ ವೇತನ ಪ್ರಮಾಣವನ್ನು ಕೇಂದ್ರ ಸರಕಾರದ ಮಟ್ಟಕ್ಕೆ ತರಲು ಪ್ರಯತ್ನ ನಡೆದಿದೆ. ವ್ಯಾಪಾರಿಗಳಿಗೆ ಸೌಕರ್ಯ ಕೊಡಲು ಎಲ್ಲ ವಸ್ತುಗಳ ಮೇಲೆ ಆಮದು ಸುಂಕವನ್ನು ೫% ರಿಯಾಯಿತಿ ತೋರಿಸಲಾಗುತ್ತಿದೆಯಲ್ಲದೆ, ಭಾರತದ ಬೇರೆ ರಾಜ್ಯಗಳು ತರಿಸಲಾಗದ ಕೆಲವು ಸರಕುಗಳಿಗೆ ಇಲ್ಲಿ ಉತ್ಪಾದನೆ ಕೊಡಲಾಗುತ್ತದೆ. ಬೇಸಾಯಗಾರರಿಗೆ ಬೆಂಬಲ ಕೊಡುವ ಕ್ರಮಗಳು ಶೀಘ್ರವೇ ಕೈಗೊಳ್ಳಲ್ಪಡುತ್ತವೆ. ದೊಡ್ಡ ಕೈಗಾರಿಕೆಗಳನ್ನೂ ಸ್ಥಾಪಿಸಲಾಗುತ್ತದೆ. ಗೃಹ ಕೈಗಾರಿಕೆಗಳನ್ನು ಬೆಳೆಸಿ, ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲಾಗುತ್ತದೆ—ಎಂದು ಮುಂತಾಗಿ ಶ್ರೀ ಪಿಳ್ಳೆ ಹೇಳಿದ್ದಾರೆ. ಹಿಂದೆ ಸ್ಪೇಂಚರ ಕೈಯಲ್ಲಿದ್ದ ಈ ಪ್ರದೇಶಗಳ ಶಾಸನಬದ್ಧ ಹಸ್ತಾಂತರ ಕ್ರಮಕ್ಕೆ ನಿರ್ಬಂಧವಾಗದೆಂದೂ ಅದರ ಬಗ್ಗೆ ಮಾತುಕತೆ ಮುಂತಾದ ಅನೇಕ ನಿಯಮಾವಳಿಗಳ ಮತ್ತು ಆರ್ಥಿಕ ವ್ಯವಸ್ಥೆಗಳ ಸರಿಪಡಿಸಲೆ ಇಡೆಯಬೇಕಾಗಿದೆ ಎಂದೂ ಭಾರತದ ವಿದೇಶ ಶಾಖೆಯ ಉಪಮಂತ್ರಿ ಶ್ರೀ ಚಂದಾ ಹೇಳಿದ್ದಾರೆ.

ಪೋಂಡಿಚೆರಿಯ ಡ್ಯೂಪ್ಲೆ ರಸ್ತೆಯ ಒಂದು ನೋಟ. ನೆಹರುಗಳ ಸಂದರ್ಶನ ಕಾಲದಲ್ಲಿ ಇಲ್ಲಿಷ್ಟು ಕಮಾನುಗಳು ಕಂಡು ಬಂದವು, ಜನಸಂದಣಿ ಇನ್ನೂ ಹೆಚ್ಚಿದ್ದಿತು — ಊಹಿಸಿ, ನೋಡೋಣ!

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ವ್ಯಾಪಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ. ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೆಂಬಾಯಿ, ಮಂಗಳೂರು ಮತ್ತು ಕುಯಮುತ್ತೂರು

The Bombay Life Assurance Co., Ltd., Bombay.

ಗೋವೆಯ ಕುರಿತು ಲೋಕ ಸಭೆಯ ಚರ್ಚೆ

ವಿರೋಧಿ ಗುಂಪುಗಳ ಧುರೀಣರಿಂದ ಟೀಕೆಯ ಸುರಿಮಳೆ

ರಾಜ್ಯ ಸಭೆಯಲ್ಲಿ ಈಗಾಗಲೇ ಚರ್ಚೆ ಸಲ್ಪಟ್ಟು ಅನುಮೋದನೆ ದೊರಕಿರುವ ಭಾರತ ಸರಕಾರದ ವಿದೇಶ ನೀತಿಗೆ ಲೋಕ ಸಭೆಯೂ ಪ್ರಚಂಡ ಬೆಂಬಲವನ್ನು ಇದೇ ೧೭ನೇ ದಿನಾಂಕ ಚರ್ಚೆ ನಡದಾಗ ವ್ಯಕ್ತಪಡಿಸಿತು ಸರಕಾರದೊಡನೆ ಗೋವೆಯ ವಿಷಯದಲ್ಲಿ ಸೂತ್ರ ಪ್ರತಿಪಕ್ಷಗಳವರು ವಿರೋಧಾಭಿಪ್ರಾಯವನ್ನು ಪ್ರಕಟಿಸಿದರು. ಆದರೆ ಅವರು ಈ ಬಗ್ಗೆ ತಂದ ತಿದ್ದುಪಡಿಯು ೨೬ ವಿರುದ್ಧ ೧೫೭ ಮತಗಳಿಂದ ಪರಾಭವಗೊಂಡಿತು.

ಶಿಸ್ತುಭಂಗ ಮತ್ತು ಉದ್ರೇಕ

ಚರ್ಚೆಯನ್ನು ಪ್ರಾರಂಭಿಸಿದ ಪ್ರಧಾನಿ ನೆಹರುಗಳು ಗೋವೆಯ ವಿಮೋಚನೆಗಾಗಿಹೂಡಲ್ಪಡುವ ಸತ್ಯಾಗ್ರಹದಲ್ಲಿಭಾರತೀಯರು ಭಾಗವಹಿಸಬಾರದೆಂದು ಸರಕಾರ ಏಕೆ ನಿರ್ಧರಿಸಿತೆಂಬ ವಿಷಯವನ್ನು ವಿವರಿಸಿದರು. ಆಗೋಸ್ತು ೧೫ನೇ ದಿನಾಂಕದ ಹತ್ಯಾಕಾಂಡವು ಭಾರತೀಯರಲ್ಲಿ ಉದ್ರೇಕವನ್ನು ಹುಟ್ಟಿಸಿತು, ಮುಂಬಯಿ ಮತ್ತಿತರ ಕಡೆಗಳಲ್ಲಿ ಗಲಭೆ ನಡೆಯಿತು. ಸಮಸ್ಯೆಯನ್ನು ಶಾಂತವಾಗಿ ಸಮಚಿತ್ತರಾಗಿ ವಿವೇಚಿಸುವುದಕ್ಕೆ ಪೋಷಕವಾದ ವಾತಾವರಣವನ್ನು ಉಂಟು ಮಾಡುವ ಬದಲು ಸತ್ಯಾಗ್ರಹವು ಅಶಿಸ್ತು ಮತ್ತು ಅಶಾಂತಿಗಳನೂ ದೇಶದೊಳಗೆ ಹಿಂಸಾಕೃತ್ಯಗಳಗೂ ಪ್ರೇರೇಪಣೆ ಕೊಡುವುದರಲ್ಲಿ ಪರಿಣಮಿಸಿತು ಎಂದು ನೆಹರು ವಿಷಾದದಿಂದ ಹೇಳಿದರು.

ಸ್ವಪ್ರೇರಣೆಯ ನಿಶ್ಚಯ

ತನ್ನ ಮೂಲಭೂತ ತತ್ವಗಳಿಗೆ ವಿರುದ್ಧವಾದ ದುಷ್ಪರಿಣಾಮಗಳನ್ನು ಅಹಿಂಸಾತ್ಮಕ ಸತ್ಯಾಗ್ರಹವುಮಾಡಿದ ದೆಸೆಯಿಂದ, ಸರಕಾರವು ತನ್ನ ಅಂತಸ್ತನ್ನು ಕಾಯ್ದುಕೊಳ್ಳಲು ತೀವ್ರ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಸತ್ಯಾಗ್ರಹದಲ್ಲಿ ಭಾರತೀಯರು ಭಾಗ ವಹಿಸಬಾರದೆಂದು ನಿರ್ಣಯಿಸಿರುವುದಕ್ಕೆ ಇದೇ ಕಾರಣವಲ್ಲದೆ, ಹೊರಗಿನವರ ಒತ್ತಾಯ ಮತ್ತು ಪ್ರತಿ ಕ್ರಿಯೆಗಳಲ್ಲ ಎಂದು ನೆಹರು ಸ್ಪಷ್ಟಪಡಿಸಿದರು ದೇಶದೊಳಗಿನ ವಾತಾವರಣವು ಕೆಡುತ್ತಿರುವುದನ್ನು ಕಂಡು, ಅದನ್ನು ತಪ್ಪಿಸಿ, ಸಂಶುದ್ಧವಾಗಿಡಲು ಸರಕಾರ ಬಯಸಿತು— ಎಂದು ನೆಹರು ನಿವೇದಿಸಿದರು.

ಆಗೋಸ್ತು ೧೫ನೇ ದಿನಾಂಕ ಗೋವೆಯೊಳಗೆ ೧೭೧೧ ಅಹಿಂಸಾತ್ಮಕ ಸತ್ಯಾಗ್ರಹಿಗಳು ಭಾರತದಿಂದ ನುಗ್ಗಿದರು ಇವರಲ್ಲಿ ೩೦ ಮಂದಿ ಪೋರ್ಚುಗೀಜರ ಗುಂಡಿನೇಟಿಗೆ ಬಲಿಯಾದರು ಇದರಿಂದ ಕುಪಿತರಾದ ಕೆಲವು ಭಾರತೀಯರು ಮುಂಬಯಿ, ಕಲ್ಕತ್ತಗಳಾದಿಯಾಗಿ ಪ್ರಮುಖ ನಗರಗಳಲ್ಲಿ ಹಿಂಸೆಗೆ ಕೈಯಿಕ್ಕಿದರು. ಇದನ್ನೂ ಇತರ ಸಂಗತಿಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸರಕಾರವು ಸತ್ಯಾಗ್ರಹದಲ್ಲಿ ಭಾರತೀಯರು ಧುಮುಕುವುದಕ್ಕೆ ಈಗ ತಡೆ ಹಾಕಿದೆ- ಮೇಲಿನ ಚಿತ್ರದಲ್ಲಿ ಹುತಾತ್ಮನೊಬ್ಬನನ್ನು ಅಮೇರಿಕದ ಪತ್ರಿಕೋದ್ಯೋಗಿಗಳಿಬ್ಬರು ಭಾರತದ ಗಡಿಯೊಳಗೆ ಹೊತ್ತು ತರುತ್ತಿರುವುದನ್ನು ಕಾಣಬಹುದು ಈ ದಯಾಮಯ ವರ್ತನೆಯು ಪೋರ್ಚುಗೀಸರ ಕಾರುಣ್ಯಕ್ಕೆ ನಾಗರಿಕ ಜನತೆಯ ನೇರಾದ ಉತ್ತರ.

ಶಾಂತಿಯ ಮಾರ್ಗಾನುಸರಣ

ಗೋವೆಯ ಕುರಿತು ಭಾರತೀಯರಲ್ಲಿ ಕೆಲಮಟ್ಟಿನ ಗೊಂದಲದ ಭಾವನೆ ಉಂಟಾಗುವುದಕ್ಕೆ ಸರಕಾರನ ಮೊದಲಿನ ನೀತಿಯು ಕಾರಣವಾಯಿತು ಎಂಬ ಆರೋಪವನ್ನು ನೆಹರುಗಳು ಒಪ್ಪಿಕೊಂಡರು ಆದರೆ, ತಪ್ಪು ದಾರಿಯಲ್ಲಿ ಬಹಳ ದೂರ ಕ್ರಮಿಸುವುದಕ್ಕೆ ಮುಂಚೆಯೇ ಸರಿಯಾದ ದಾರಿಯನ್ನು ಗುರುತಿಸಿಕೊಂಡು, ಅದರಲ್ಲಿ ಮುನ್ನಡೆಯಲು ಸರಕಾರ ನೋಡಿತೆಂದು ಅವರು ಸ್ಮರಣೆಗೆ ತಂದು ಕೊಟ್ಟರು ನಮ್ಮದು ಶಾಂತವಾದ ವಿಧಾನ—ಗೋವೆಯ ವಿಮೋಚನೆಯಾಗಬೇಕು ಎಂಬುದೇ ನಮ್ಮ ಧ್ಯೇಯ. ಇದಕ್ಕಾಗಿ ನಾವು ಸೈನಿಕ ಕ್ರಮವನ್ನು ಮಾತ್ರ ತೆಗೆದುಕೊಳ್ಳುವುದಿಲ್ಲ ರಾಜಕೀಯ, ಆರ್ಥಿಕ ಹಾಗು ಇತರ ಕ್ರಮಗಳನ್ನು ಅನುಸರಿಸಿ, ನಾವು ಧ್ಯೇಯ ಸಾಧನೆಗೆ ಹೆಣಗುತ್ತೇವೆ ಎಂದು ನೆಹರು ತಮ್ಮ ನಿಲುಮೆನ್ನು ಸಾರಿದರು.

ಹಿನ್ನೆಲೆಯ ಶಕ್ತಿ

ಸತ್ಯಾಗ್ರಹದಲ್ಲಿ ಧುಮುಕಲು ಭಾರತೀಯರಿಗೆ ಅಧಿಕಾರವಿಲ್ಲ ಎಂದು ನಾನು ಹೇಳಲು ಹೋಗುವುದಿಲ್ಲ—ಆದರೆ ಸರಕಾರದ ನೀತಿಗೆ ಭಾರತೀಯ ನಾಗರಿಕರ ವರ್ತನೆಯು ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ವಿಚಾರಿಸಿ ಕುಳಿತಿರುವುದು ಮಾತ್ರ ಆಗದು ಸರಕಾರವು ಲೋಕದ ಎಲ್ಲ ಜಟಿಲ ಸಮಸ್ಯೆಗಳನ್ನು ಮಾತುಕತೆ, ಸೌಹಾರ್ದ ಪೂರ್ಣ ನಡವಳಿಕೆ ಮತ್ತು ಶಾಂತವಾದ ಮಾರ್ಗಾನುಸರಣೆಯಿಂದ ತಿಳಿಗೊಳಿಸಬೇಕೆಂದು ಹೇಳುತ್ತ ಬಂದಿದೆ, ಈ ತತ್ವಕ್ಕೆ ಅಂಟಿಕೊಂಡು ಅದು ನಡೆಸಿದ ಚಟುವಟಿಕೆಗಳು ಎಲ್ಲ ರಾಷ್ಟ್ರಗಳ ಮೆಚ್ಚುಗೆಯನ್ನು ಸಂಪಾದಿಸಿವೆ ಭಾರತದ ಅಂತಸ್ತನ್ನೂ ಇದು ಹೆಚ್ಚಿಸಿದೆ—ಆದುದರಿಂದ ಗೋವೆಯ ಪ್ರಶ್ನೆಯನ್ನು ಸಹ ಇದೇ ಹಿನ್ನೆಲೆಯಲ್ಲಿ ಸಮೀಪಿಸಬೇಕಾಗಿದೆ ಅದೇ ಸರಿಯಾದ, ಶಾಂತಿಯುತವಾಗಿ ಸಂಧಾನ ಎಂದು ನೆಹರು ನುಡಿದರು.

ವಿರೋಧಿಗಳ ಟೀಕೆ

ಸರಕಾರದ ಧೋರಣವನ್ನು ಟೀಕಿಸುವಲ್ಲಿ ಪ್ರತಿಪಕ್ಷದ ಮುಂದಾಳುಗಳು ಯಾವ ಸಂಕೋಚಕ್ಕೂ ಎಡೆಯನ್ನು ಕೊಡಲಿಲ್ಲ. ಪ್ರಜಾ ಸಮಾಜವಾದಿ ಪಕ್ಷದ ಧುರೀಣ ಶ್ರೀ ಅಶೋಕ ಮೆಹತ, ಕಮ್ಯೂನಿಸ್ಟರ ಮುಖಂಡ ಶ್ರೀ ಎ ಕೆ. ಗೋಪಾಲನ್ ಮತ್ತು ಹಿಂದು ಮಹಾಸಭೆಯ ಶ್ರೀ ಎನ್. ಸಿ ಚಟರ್ಜಿ ಇವರು ಒಬ್ಬರ ಹಿಂದೊಬ್ಬರಾಗಿ ಗೋವೆಯ ಕುರಿತು ಸರಕಾರ ವಹಿಸಿರುವ ನೀತಿಯನ್ನು ಕಟುವಾದ ಮಾತುಗಳಲ್ಲಿ ಟೀಕಿಸಿದರು. ಸತ್ಯಾಗ್ರಹವು ಅಹಿಂಸಾತ್ಮಕ ಸ್ವರೂಪದಲ್ಲಿ ಶಾಂತಿಯುತವಾಗಿ ನಡೆಯುತ್ತಿದ್ದಾಗ ಅದನ್ನು ನಿರುತ್ತೇಜಿಸುವ ಸರಕಾರದ ಧೋರಣೆಯು ಎಷ್ಟಕ್ಕೂ ಯೋಗ್ಯವಾದುದಲ್ಲ ಎಂದವರು ಹೇಳಿದರು ಗೋವೆಯ ವಿಮೋಚನೆಗಾಗಿ ಸಂಯುಕ್ತ ರಂಗವನ್ನುಕಟ್ಟಿಕೊಂಡು ಹೋರಾಡುತ್ತಿದ್ದ ರಾಷ್ಟ್ರೀಯರ ಬೆನ್ನಲ್ಲಿ ಇರಿದಂತಾಯಿತು, ಗೋವಾಂತಕರನ್ನು ಪೋರ್ಚುಗೀಜರ ಸರ್ವಾಧಿಕಾರಿತ್ವಕ್ಕೆ ಆಹುತಿ ಕೊಟ್ಟಂತಾಯಿತು ಎಂದು ಮುಂತಾಗಿ ಇವರು ಹೇಳಿದರು

ಪೋಲೀಸು ಕಾರ್ಯಾಚರಣೆ

ಶ್ರೀ ಗೋಪಾಲನ್ನರು ಒಂದು ಹೆಜ್ಜೆ ಮುಂದೆ ಹೋಗಿ ಪೋಲೀಸು ಕಾರ್ಯಾಚರಣೆಯನ್ನು ಸರಕಾರ ಕೈಗೊಳ್ಳಲೇಬೇಕೆಂದು ಒತ್ತಾಯಿಸಿದರು. ಪಂಚಶೀಲ ತತ್ವಗಳಲ್ಲಿ ಒಬ್ಬರ ಒಳಾಡಳಿತೆಯಲ್ಲಿ ಇನ್ನೊಬ್ಬರು ಪ್ರವೇಶಿಸಬಾರದೆಂಬುದು ಒಂದಾಗಿದೆಯೆಂದೂ ಗೋವೆಯು ಭಾರತದ ಒಂದಂಗವಾದುದರಿಂದ ಪೋಲೀಸು ಕಾರ್ಯಾಚರಣೆಯು ಪಂಚಶೀಲಗಳ ತಳಹದಿಯ ಮೇಲೆನಿಂತಿರುವ ಶಾಂತ ಧೋರಣೆಗೆ ವಿರುದ್ಧವಾಗುವುದಿಲ್ಲವೆಂದೂ ಹೇಳಿದರು.

ಮುಖ್ಯ ವ್ಯತ್ಯಾಸ

ಸತ್ಯಾಗ್ರಹಕ್ಕೆ ಅನುಮತಿ ಕೊಡಬೇಕೆಂದು ಉಳಿದವರ ವಾದಕ್ಕೂ ಗೋಪಾಲನ್ನರ ಟೀಕೆಗೂ ಇದ್ದ ಮುಖ್ಯ ವ್ಯತ್ಯಾಸವನ್ನಿದು ವ್ಯಕ್ತಪಡಿಸುತ್ತದೆ. ಪ್ರತಿಪಕ್ಷಗಳ ಸಹನೆ ಎಷ್ಟು ಕೆಟ್ಟಿದೆ ಎಂಬುದನ್ನು ಮೆಹತರ ಹೇಳಿಕೆಯೊಂದು ಸ್ಪಷ್ಟಗೊಳಿಸುತ್ತದೆ—"ಹಿಟ್ಲರನೊಡನೆ ಮೈತ್ರಿಯನ್ನು ಶಾಂತ ಸಮಾಲೋಚನೆಗಳಿಂದ ಸಾಧಿಸುವೆನೆಂದು ಹದಿನಾರು ವರ್ಷಗಳ ಹಿಂದೊಬ್ಬ ಪ್ರಧಾನಿ ಹೇಳುತ್ತಿದ್ದರು- ಬ್ರಿಟನಿನ ಚೆಂಬರ್ಲೀನರ ಈ ಉತ್ಸಾಹ ಹೇಗೆ ನಿಂದೆಗೀಡಾಯಿತೆಂಬುದನ್ನು ಲೋಕಕ್ಕೆ ನೆನಪು ಮಾಡಬೇಕಾಗಿಲ್ಲ. ನೆಹರುಗಳು ಸರ್ವಾಧಿಕಾರಿಯೊಬ್ಬನ ವಿರುದ್ಧ ರಾಜಕೀಯ ಒತ್ತಾಯ ತಂದು ಗೋವೆ

NOTICE

Notice is hereby given that 10 shares of the Bank numbered 7596 to 7605 covered under Share Certificate No 83 in the name of Sri Krishna Mundappa, Canteen, Grant Road Goods Yard, Grant Road, Bombay, having been sold by the Bank on 30-12-1954 by public auction to Mr Evarist Mascarenhas of Bombay, in exercise of the paramount lien vested in the Bank under article 33 of the Articles of Association of the Bank and the purchaser Mr Evarist Mascarenhas having applied to the Bank for the issue of a fresh Share Certificate since the original shareholder Sri Krishna Mundappa having failed to deliver the original Share Certificate No 83 in respect of the above 10 shares inspite of the registered notice dated 18—1—1955 issued by the Bank, a fresh Share Certificate in respect of the above shares cancelling the original Share Certificate No 83, will be issued in the place of the original Share Certificate No 83 Any person who may deal with the said original Share Certificate No 83, which stands cancelled, will do so at his own risk

The Vijaya Bank Ltd
Head Office, MANGALORE 3
Dated 20—9—1955

(Sd) B Mahabala Shetty,
Secretary.

७० वर्षोंसे जगप्रसिद्ध और विजयी होनेवाला।

प्रत्येक स्टोर में और सब स्थानों पर बिकता है।

बाटलीवाला एग्यूमिक्चर और गोलीयां

मलेरिया इन्फ्लुएंजा और प्रत्येक प्रकारके बुखार के लिये।

सोल मेन्युफेक्चरर डी एच एल बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्टुगीझ चर्च स्ट्रीट,
Tele Add "CAWASHABAD" दादर, बम्बई २८

ಯ ವಿಮೋಚನೆಯನ್ನು ಸಾಧಿಸುತ್ತೇನೆ ಎನ್ನುವುದು ಇಷ್ಟೇ ಹಾಸ್ಯಾಸ್ಪದ" ಎಂದವರು ನಿಶ್ಚಯದಿಂದ ಉದ್ಗರಿಸಿದರು.

ಕಾಂಗ್ರೆಸಿಗರ ಅಭಿಪ್ರಾಯ

ಕಾಂಗ್ರೆಸಿನ ಶ್ರೀ ಟಂಡನ್ನರೂ ಶ್ರೀ. ಗಾಡ್ಗೀಳರೂ ಮತ್ತಿತರರೂ ಸರಕಾರಕ್ಕೆ ಸಂಪೂರ್ಣ ಬೆಂಬಲವನ್ನಿತ್ತು ಮಾತನಾಡಿದರು. ಭಾರತದ ಸರ್ಕಾರವು ಗೋವೆಯ ಕುರಿತು ಅನುಸರಿಸಿದ ಧೋರಣೆ ಬದಲಾದುದೇ ಶಕ್ತ ಎಂಬುದು ಟೀಕೆಯ ವಿಷಯವಾಗಕೂಡದು—ಹೀಗೆ ಬದಲಾಯಿಸಿದುದರಿಂದ ಲಾಭವಾಗುವುದೆ, ಅದು ಸರಿಯಾದ ಪರಿಣಾಮವನ್ನು ಮಾಡುವುದೆ ಎಂದು ವಿಚಾರಿಸುವುದಕ್ಕೆ ಪುರಸ್ಕೃತಿಕೊಡಬೇಕು ಎಂಬುದಾಗಿ ಅವರು ಹೇಳಿದರು. ಹೊಸ ಧೋರಣೆಯನ್ನು ಈ ದೃಷ್ಟಿಯಿಂದ ವಿಮರ್ಶಿಸಿದ ಪಕ್ಷದಲ್ಲಿ ಅದು ಸಮರ್ಪಕವೂ ಫಲಕಾರಿಯೂ ಆದ ನಿಲುಮೆ ಎಂದು ವ್ಯಕ್ತವಾಗುತ್ತದೆ ಎಂದೆವರು ತಮ್ಮ ನಿರ್ಣಯವನ್ನು ಸಾರಿದರು.

ಸತ್ಯಾಗ್ರಹವೆಂದರೆ ಯಜ್ಞ

ಅಹಿಂಸಾತ್ಮಕ ಸತ್ಯಾಗ್ರಹವು ಒಂದು ಯಜ್ಞದಂತಿದೆ; ಸದಾಕಾಲ ಅನರಲ್ಲಿ ತೊಡಗಿರುವುದು ಸಲ್ಲದು; ಯೋಗ್ಯ ಕಾಲ ಮತ್ತು ಸಂದರ್ಭಗಳನ್ನು ನೋಡಿಕೊಂಡು, ಘನವಾದ ಉದ್ದೇಶಕ್ಕೆ ಅದನ್ನು ಅನುಸರಿಸಬೇಕು-ಅಗೋಸ್ತು ೧೫ನೇ ದಿನಾಂಕ ಸತ್ಯಾಗ್ರಹ ಯಶಸ್ವಿಯಾಯಿತು. ಇನ್ನು ಸ್ವಲ್ಪ ಸಮಯದ ವರೆಗೆ ಸತ್ಯಾಗ್ರಹದ ಸುದ್ದಿ ಎತ್ತದಿರುವುದೇ ಲೇಸು ಎಂದು ಶ್ರೀ ಟಂಡನ್ನರು ತಮ್ಮ ಉತ್ತುಂಗ ಶೈಲಿಯಲ್ಲಿ ತಿಳಿಸಿದರು. ಸರಕಾರದವರು ರಾಜಕೀಯ ಮಟ್ಟದಲ್ಲಿ ಗೋವೆಯ ವಿಮೋಚನೆ ಸಾಧಿಸುವೆವೆಂದು ಹೇಳುತ್ತಿದ್ದಾರೆ—ಇವುಗಳ ಫಲಿತಾಂಶವನ್ನು ಸ್ವಲ್ಪ ಸಮಯ ನಿರೀಕ್ಷಿಸುತ್ತಿರೋಣ ಎಂದು ಹೆಚ್ಚಿನ ಕಾಂಗ್ರೆಸಿಗರು ಅಭಿಪ್ರಾಯಪಟ್ಟರು.

ಪ್ರಧಾನಿಗಳ ಉತ್ತರ

ನೆಹರುಗಳು ಚರ್ಚೆಗೆ ಉತ್ತರ ಕೊಡುತ್ತಾ ಈ ವರೆಗೆ ಸರಕಾರವು ತೆಗೆದುಕೊಂಡ ಆರ್ಥಿಕ ಮತ್ತಿತರ ಕ್ರಮಗಳು ಯೋಗ್ಯ ಪರಿಣಾಮವನ್ನು ಮಾಡತೊಡಗಿದ್ದು ಗೋವೆಯ ವಿಮೋಚನೆಯ ಸಾರಿಯನ್ನವು ಸುಗಮ ಮಾಡಿಕೊಟ್ಟಿವೆ ಎಂದರು. ಶ್ರೀ ಹುಂಡಿ ವಿಷ್ಣು ಕಾಮತರು ಈ ಕ್ರಮಗಳ ವಿವರ ಕೇಳಿದಾಗ ಅದನ್ನೊಪ್ಪಿಸುವುದು ಸಂಪ್ರದಾಯವಲ್ಲ ಎಂದು ನೆಹರು ಉತ್ತರಿಸಿದರು. ಆದರೆ ಸರಕಾರವು ಇನ್ನೂ ಹೆಚ್ಚಿನ ಕ್ರಮಗಳನ್ನು ಸಹ ಅನುಸರಿಸಬಹುದೆಂದು ನೆಹರು ಸೂಚಿಸಿದರು. ನಾವೀಗ ಸರಿಯಾದ ಧೋರಣೆಯನ್ನು ಅನುಸರಿಸುತ್ತಿದ್ದೇವೆ; ಇದು ಸಫಲವನ್ನು ಕೊಡುವುದು ನಿಶ್ಚಯ ಎಂದು ಪುನಃ ಹೇಳಿದರು.

ಗೊಂದಲ ಬೇಡ

ಗೋವೆಯಲ್ಲಿ ಪೋಲೀಸು ಕಾರ್ಯಾಚರಣೆಯನ್ನು ಕೈಗೊಳ್ಳದೆ ಹೇಡಿತನವನ್ನು ಸರಕಾರ ತೋರ್ಪಡಿಸಿಕೊಳ್ಳುತ್ತಿದೆ ಎನ್ನಲಾಗುತ್ತದೆ. ನನ್ನ ದೃಷ್ಟಿಯಲ್ಲಿ ಪೋಲೀಸು ಕಾರ್ಯಾಚರಣೆಗಾಗಿ ಜನರ ಒತ್ತಾಯವಿದ್ದರೂ ಅದಕ್ಕೆ ಬಗ್ಗದಿರುವುದೇ ಧೈರ್ಯದ ಹೆಜ್ಜೆಯಾಗಿದೆ—ಹೇಡಿತನವಲ್ಲ ಎಂದು ನೆಹರು ಸಾರಿದರು. ಪ್ರತಿಪಕ್ಷದ ಎಷ್ಟೋ ಸದಸ್ಯರು ಸರಕಾರದ ಧೋರಣೆ ಸರಿಯಾದುದೆಂದು ತಮಗೆ ಮನವರಿಕೆಯಾಗಿದೆ ಎಂದು ನನ್ನೊಡನೆ ಹೇಳಿದ್ದಾರೆ; ಆದರೆ ಬಹಿರಂಗವಾಗಿ ತಾವಿದನ್ನು ಪ್ರಕಟಿಸುವಂತಿಲ್ಲವೆಂದೂ ಅವರು ತಿಳಿಸಿದ್ದಾರೆ. ಆ ಸದಸ್ಯರ ಹೆಸರನ್ನೆತ್ತಿ ಹೇಳಲು ನಾನು ಇಚ್ಛಿಸುವುದಿಲ್ಲ. ಆದರೆ ಜನತೆ ಗಲಿಬಿಲಿಗೊಳ್ಳಬಾರದೆಂದು ಇದನ್ನು ಹೊರಗೆಡವುತ್ತಿದ್ದೇನೆ ಎಂದರು ನೆಹರು.

ಭಾರತೀಯರ ಹಿತಸಂಬಂಧ

ಪೋರ್ಚುಗೀಜರ ಸೆರೆಮನೆಯಲ್ಲಿರುವ ಭಾರತೀಯ ಕೈದಿಗಳ ಹಿತರಕ್ಷಣೆಯನ್ನು ನೋಡಿಕೊಂಡಿರುವುದಕ್ಕೋಸ್ಕರ ನಮ್ಮೊಡನೆ ಸ್ನೇಹಶೀಲರಾಗಿರುವ ಕೆಲವು ಪಾದ್ರಿಗಳನ್ನು ಕೇಳಿಕೊಂಡಿದ್ದೇನೆ: ಅದಕ್ಕೆ ಅವರು ಒಪ್ಪಿ, ದಕ್ಷತೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ ಎಂದು ನೆಹರು ಕೃತಜ್ಞತೆಯೊಡನೆ ತಿಳಿಸಿದರು. "ಗೋವೆಯ ವಿಮೋಚನೆಯಾಗಲೇಬೇಕೆಂಬ ಭಾರತೀಯರ ಅಭಿಲಾಷೆಯು ಸರಕಾರದ ಹೃದಯವನ್ನು ಮುಟ್ಟಿರುತ್ತದೆ; ಈ ಧ್ಯೇಯ ಸಾಧನೆಗೆ ದುಡಿದು ತೀರುವ ಸಂಕಲ್ಪ ನಮ್ಮದು" ಎಂಬ ಭರವಸೆಯನ್ನು ಪ್ರಧಾನಿಗಳು ತಮ್ಮ ಉತ್ತರದಲ್ಲಿ ಪುನಃ ಹುಟ್ಟಿಸಿದರು.

ಬಳ್ಳಾರಿ ಮತ್ತು ಕಾಸರಗೋಡುಗಳ ಭವಿಷ್ಯ

ಏಕೀಕರಣದ ಸಂತೋಷದ ನಡುವೆ ಕಾಣಿಸಿರುವ ವಿರಸ

ಸಂಯುಕ್ತ ಕರ್ನಾಟಕ ರಾಜ್ಯ ರಚನೆಯ ಕನಸು ಬೇಗನೆ ನನಸಾಗುವ ಸಕಲ ಲಕ್ಷಣಗಳನ್ನು ಫಜಲ ಅಲಿ ಆಯೋಗದ ವರದಿಯ ಕುರಿತು ಬಂದಿರುವ ಅನಧಿಕೃತ ಸುದ್ದಿಗಳು ವ್ಯಕ್ತಪಡಿಸುತ್ತಿದ್ದರೂ ಕನ್ನಡಿಗರ ಮನಸ್ಸನ್ನು ನೋಯಿಸುವ ಅಂಶಗಳನ್ನೂ 'ಅವೇ ವಾರ್ತೆಗಳು ತಂದಿವೆ; ತರುತ್ತಿವೆ.

ಚಿಂತೆಯ ವಿಷಯ

ಕೊಳ್ಳೇಗಾಲ ತಾಲೂಕು, ಇಡೀ ಬೆಳಗಾಂವಿ ಜಿಲ್ಲೆ, ಮತ್ತು ಹೈದರಾಬಾದಿನ ಕನ್ನಡ ಪ್ರದೇಶಗಳನ್ನು ಸಂಯುಕ್ತ ಕರ್ನಾಟಕವು ಒಳಗೊಳ್ಳುವುದಾದರೂ ಮೈಸೂರಿನೊಡನೆ ಈಗಾಗಲೇ ಸೇರಿಸಲಾಗಿರುವ ಬಳ್ಳಾರಿ ಜಿಲ್ಲೆಯ ವಿಳರಲ್ಲಿ ಸೂರು ತಾಲೂಕುಗಳನ್ನು ಮತ್ತು ದಕ್ಷಿಣ ಕನ್ನಡದ ಕಾಸರಗೋಡು ತಾಲೂಕನ್ನು ಕ್ರಮವಾಗಿ ಆಂಧ್ರ ಮತ್ತು ಕೇರಳ ರಾಜ್ಯಗಳಿಗೆ ಸೇರಿಸಲಾಗುವುದೆಂದು ವರದಿಗಳು ಹೇಳುತ್ತವೆ.

ತೆಲುಗರ ನೆಪ

ತುಂಗಭದ್ರೆಯ ಆಣೆಕಟ್ಟಿನ ನೆಪದಲ್ಲಿ ಬಳ್ಳಾರಿ ಜಿಲ್ಲೆಯ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಹೋಗಿರುವ ಆಂಧ್ರರ ಒತ್ತಾಯವು ಗೆಲ್ಲುವುದೆಂದು ಈ ವರದಿಗಳಿಂದ ತಿಳಿಯಬೇಕಾಗುತ್ತದೆ. ಬಳ್ಳಾರಿ, ಸಿರಗುಪ್ಪ ಮತ್ತು ಹೊಸಪೇಟೆ ಎಂಬ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಿ ಬಟ್ಟು ಆಣೆಕಟ್ಟಿನ ಪೂರ್ಣ ಫಲವನ್ನು ಆಂಧ್ರರಿಗೆ ವಹಿಸಿಕೊಡುವ ನಿಶ್ಚಯ ಆಯೋಗದ್ದಿರುವಂತೆ ತೋರುತ್ತದೆ.

ಕನ್ನಡಿಗರ ಪ್ರತಿಭಟನೆ

ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಅಂಬಲಿಯವರು ಇದು ಅನ್ಯಾಯವೆಂದು ಫಜಲ ಅಲಿ ಆಯೋಗಕ್ಕೆ ತಂತಿ ಕಳಿಸಿದ್ದಾರೆ. ಬಳ್ಳಾರಿಯ ಜನರು ಅಹಿಂಸಾತ್ಮಕ ಸತ್ಯಾಗ್ರಹ ಮತ್ತು ಅಸಹಕಾರ ಚಳವಳಿಯನ್ನು ನಡೆಸಬೇಕಾದೀತೋ ಎಂದು ತಮ್ಮಲ್ಲಿ ವಿಚಾರಿಸಿಕೊಳ್ಳುತ್ತಿದ್ದಾರೆಂದು ತಿಳಿದು ಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಸರಗೋಡು ತಾಲೂಕನ್ನು ನೇತ್ರಾವತಿ ಹೊಳೆಯ ವರೆಗೆ ವಿಸ್ತರಿಸಿ, ಆ ಇಡೀ ತಾಲೂಕನ್ನು ಕೇರಳಕ್ಕೆ ಸೇರಿಸಲಾಗುವುದೆಂಬ ಸುದ್ದಿಯಿಂದ ಜಾಗೃತರಾದ ಕನ್ನಡಿಗರು ಪ್ರತಿಭಟನೆಯ ತಂತಿಯನ್ನು ಈಗಲೂ ಕಳಿಸುತ್ತಿದ್ದಾರೆ; ಸಭೆಗಳನ್ನು ಸೇರಿಸಿ ತಮ್ಮ ಅಭಿಪ್ರಾಯವನ್ನು ಸಾರುತ್ತಿದ್ದಾರೆ.

ಶಿವರಾಯರ ಭರವಸೆ

ಜಿಲ್ಲೆಯ ದಕ್ಷಿಣ ಭಾಗವನ್ನು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ಶ್ರೀ. ಜಿ. ಶಿವರಾಯರು ಒಂದು ಹೇಳಿಕೆಯನ್ನು ಹೊರಡಿಸಿ ತಾನು ಪಾರ್ಲಿಮೆಂಟಿನಲ್ಲಿರುವ ಜಿಲ್ಲೆಯ ಇತರ ಇಬ್ಬರು ಪ್ರತಿನಿಧಿಗಳ ನೆರವಿನೊಡನೆ, ಆಯೋಗವು ಜನತೆಗೆ ಅನ್ಯಾಯ ಮಾಡದಂತೆ ಶಕ್ತಿ ಮೀರಿ ಪ್ರಯತ್ನಿಸುವುದಾಗಿ ಹೇಳಿದ್ದಾರೆ. ಇದನ್ನು ನಂಬಿ ಜನರು ಕುಳಿತುಕೊಳ್ಳುವಂತಿಲ್ಲದಿದ್ದರೂ ಅವರ ಪ್ರಯತ್ನಗಳು ಫಲಸಲೆಂಬುದೇ ನಮ್ಮ ಹಾರೈಕೆಯಾಗಿದೆ.

ಜಿಲ್ಲೆಯಲ್ಲಿ ಜಾಗೃತಿ

ಬೇರೆ ಬೇರೆ ಪತ್ರಿಕೆಗಳು ಕಾಸರಗೋಡು ತಾಲೂಕನ್ನು ಇಡಿಯಾಗಿ ಕೇರಳಕ್ಕೆ ಸೇರಿಸುವ ಕುರಿತು ಅಭಿಪ್ರಾಯ ವ್ಯಕ್ತಪಡಿಸುತ್ತಾ ತಮ್ಮ ವಿರೋಧವನ್ನು ಒತ್ತಿ ಹೇಳಿರುತ್ತವೆ. ಕಾಸರಗೋಡು ತಾಲೂಕಿನ ಆರ್ಥಿಕ ಹಾಗು ಆಡಳಿತ ಸಂಬಂಧಗಳು ಸಹ ಭಾಷೆಯಂತೆ ದಕ್ಷಿಣ ಕನ್ನಡದ ಉಳಿದ ನೆಲದೊಡನೆಯೇ ಹೊಂದಿಕೊಂಡಿವೆ ಎಂದು ಸಮರ್ಥ ರೀತಿಯಲ್ಲಿ ಪ್ರತಿಪಾದಿಸುವ ಲೇಖನಗಳು ಪ್ರಕಟವಾಗಿವೆ.

ಹೀಗಿದ್ದೂ ಆಶ್ಚರ್ಯ

ಇನ್ನೊಂದು ವಾರದಲ್ಲಿ ಆಯೋಗದ ವರದಿ ಪ್ರಕಟವಾಗಲಿದೆ— ಸರಕಾರವು ಜನರ ಪ್ರತಿಕ್ರಿಯೆಗಳನ್ನು ಗಮನಿಸದೆ ಇರುವಂತಿಲ್ಲ; ಆದರೆ ಭುವನಾಸ ಮುಂತಾದ ಬೆದರಿಕೆಗಳಿಗೆ ಸರಕಾರ ಸೋಲಲಾರದು ಎಂದು ನೆಹರುಗಳು ಸ್ಪಷ್ಟಪಡಿಸಿದ್ದಾರೆ. ಇಂಥ ಪರಿಸ್ಥಿತಿಯಲ್ಲಿಯೂ ಮೈಸೂರಿನ ಕೆಲವರು ಸಂಯುಕ್ತ ಕರ್ನಾಟಕದ ರಚನೆಗೆ ವಿರೋಧವನ್ನು ಮತ್ತು ತಮಿಳು ನಾಡಿನ ಪ್ರಮುಖರು ಮೈಸೂರು, ಕೊಡಗು, ತಿರು-ಕೊಚ್ಚಿ, ಮದ್ರಾಸುಗಳನ್ನೊಳಗೊಂಡ ದಕ್ಷಿಣ ಭಾರತ ರಾಜ್ಯದ ಸ್ಥಾಪನೆಯ ಇಚ್ಛೆಯನ್ನು ಸೂಚಿಸುತ್ತಿರುವುದು ಆಶ್ಚರ್ಯ.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

NAVAYUGA
Popular Kannada Weekly
Founder:—
Sri **A. B. SHETTY,** *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೨೨-೯-೧೯೫೫	ಸಂಚಿಕೆ ೪

ಹಳ್ಳಿಯಲ್ಲಿ ಆರೋಗ್ಯ ಕೇಂದ್ರ

ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ರೋಗನಿದಾನ ವಿಭಾಗದ ಆಶ್ರಯದಲ್ಲಿ ಮಂಗಳೂರಿಗೆ ಸಮೀಪದ ಗುರುಪುರದಲ್ಲಿ ಇದೇ ೧೮ನೇ ದಿನಾಂಕ ಗ್ರಾಮ ವೈದ್ಯಕೀಯ ಚಿಕಿತ್ಸೆಯ ಕೇಂದ್ರವೊಂದನ್ನು ತೆರೆಯಲಾಗಿರುವ ಸುದ್ದಿಯನ್ನು ಕೇಳಿ ನಾವು ತುಂಬ ಸಂತೋಷಗೊಂಡಿದ್ದೇವೆ; ನಮಗಿಂತಲೂ ಹೆಚ್ಚಿನ ಸಂತೋಷವನ್ನು ಗುರುಪುರ ಮತ್ತು ಆಸುಪಾಸಿನ ಗ್ರಾಮಗಳ ಜನರು ಹೊಂದಿರಬೇಕೆಂದೂ ಭಾವಿಸುತ್ತೇವೆ. ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ಯೋಗ್ಯವಾದ ವೈದ್ಯಕೀಯ ಚಿಕಿತ್ಸೆಯ ಅನುಕೂಲತೆ ಇಲ್ಲವೆಂದು ಪದೇಪದೇ ದೂರಿಕೊಳ್ಳುತ್ತಿದ್ದೇವೆ—ಇದು ಕೇವಲ ನಮ್ಮ ಜಿಲ್ಲೆಯ ಹಳ್ಳಿಗಳಿಗಷ್ಟೇ ಅನ್ವಯಿಸುವ ದೂರಾಗಿರದೆ, ಸಮಸ್ತ ಭಾರತವನ್ನು ಈ ಕೊರತೆಯು ಬಾಧಿಸುತ್ತದೆ. ಇದನ್ನು ಸ್ವಲ್ಪ ಮಟ್ಟಿಗಾದರೂ ದೂರಗೊಳಿಸುವ ಪ್ರಯತ್ನಗಳು ಎಲ್ಲಿಯೇ ನಡೆಯಲಿ ಅವಕ್ಕೆ ಹಾರ್ದಿಕ ಸ್ವಾಗತವನ್ನಿತ್ತು, ಪ್ರೋತ್ಸಾಹವನ್ನು ನೀಡಬೇಕಾದದ್ದು ಸಮಸ್ಯೆಯಲ್ಲಿ ಆಸ್ಥೆಯುಳ್ಳ ಪ್ರಾಜ್ಞರ ಹಾಗು ಇಂಥ ಅನುಕೂಲತೆಯಿಂದ ಪ್ರಯೋಜನ ಪಡೆಯಬಲ್ಲ ಜನರ ಆದ್ಯಕರ್ತವ್ಯವಾಗಿದೆ. ಸರಕಾರವು ಹಳ್ಳಿಗಳ ಆರೋಗ್ಯ ಸಮಸ್ಯೆಯನ್ನು ನಿರ್ಲಕ್ಷ್ಯಸಬಾರದೆಂಬುದು ನಿಜವಾದರೂ ಎಲ್ಲ ಹೊಣೆಗಾರಿಕೆಯನ್ನೂ ತನ್ನ ತಲೆಯ ಮೇಲೆಯೇ ಹೊತ್ತುಕೊಳ್ಳುವಷ್ಟು ಸಂಪನ್ನ ಸ್ಥಿತಿಯು ಸರಕಾರದದ್ದಾಗಿಲ್ಲ—ಉದಾರ ಮನೋಭಾವದ ಸ್ಥಳೀಯ ಧುರೀಣರು ಈ ಕ್ಷೇತ್ರದಲ್ಲಿ ತಮ್ಮ ಸಹಕಾರವನ್ನು ನೀಡಲು ಮುಂಬಂದಾಗಲೆಲ್ಲ ಅದು ತನ್ನಿಂದ ಸಾಧ್ಯವಾದ ಸಹಾಯವನ್ನು ಸಲ್ಲಿಸುವ ಹಿಂಜರಿವಿಲ್ಲ; ಹಿಂಜರಿಯುವುದಿಲ್ಲ ಎಂಬುದರಿಂದಲೇ ಸರಕಾರಕ್ಕೆ ಗ್ರಾಮಾಂತರ ಪ್ರದೇಶದ ಜನರನ್ನು ಸುಖಿಗಳಾಗಿಡುವ ಕಡೆಗೆ ತುಂಬ ಆಸಕ್ತಿ ಇದೆ ಎಂದು ವ್ಯಕ್ತವಾಗುತ್ತದೆ. ಗುರುಪುರದಲ್ಲಿ ತೆರೆಯಲ್ಪಾಗಿರುವ ಕೇಂದ್ರಕ್ಕೂ ಸರಕಾರವು ಧನ ಸಹಾಯವನ್ನು ನೀಡಲು ಮುಂದೆ ಬಂದಿದೆ—ಇದು ಸ್ತುತ್ಯ; ಆವಶ್ಯಕತೆಯು ಹೆಚ್ಚಿದ ಹಾಗೆಲ್ಲ ಈಗಿಂತಲೂ ಧಾರಾಳವಾದ ನೆರವನ್ನದು ನೀಡಲು ಹಿಂದುಳಿಯಬಾರದೆಂದಿದ್ದೇ ಇಲ್ಲಿ ನಮ್ಮ ನಮ್ರ ಪ್ರಾರ್ಥನೆಯಾಗಿದೆ. ಹಳ್ಳಿಗಳಲ್ಲಿ ಹೋಗಿ, ನೆಲೆ ನಿಲ್ಲುವಂತೆ ವೈದ್ಯಕೀಯ ಪದವೀಧರರ ಮೇಲೆ ಒತ್ತಾಯ ಹೇರಬೇಕೆಂಬ ಮತ್ತು ಕಡಿಮೆ ಅವಧಿಯ ವೈದ್ಯಕೀಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಸೂಚನೆಗಳನ್ನು ವಿಚಾರಿಸುವುದಕ್ಕೆ ಸರಕಾರ ಮುಹೆತ್ವ ಕೊಡಬೇಕಾಗಿ ಬಂದಿರುವ ಈ ದಿವಸಗಳಲ್ಲಿ ಗುರುಪುರದಲ್ಲಿ ನಡೆದಿರುವಂಥ ಸಾಹಸವನ್ನು ಸಹೃದಯತೆಯಿಂದಲೂ ಸಹಾನುಭೂತಿಯಿಂದಲೂ ಕೃತಜ್ಞತೆಯ ದೃಷ್ಟಿಯಿಂದಲೂ ನೋಡಬೇಕಾಗಿದೆ— ಈ ಕೇಂದ್ರವನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಿದ ಕಾಲೇಜಿನ ಪ್ರಭೃತಿಗಳು ಉದಾತ್ತ ಧ್ಯೇಯವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದಾರೆಂಬುದು ಸ್ಪಷ್ಟ: ಹಳ್ಳಿಯ ಆರೋಗ್ಯದ ಕುರಿತು ವಿಶೇಷ ಗಮನ ಕೊಡುವಂತೆ ವಿದ್ಯಾರ್ಥಿಗಳನ್ನು ಪ್ರೇರಿಸಿದಲೂ ಸಿದ್ಧಗೊಳಿಸುವುದೇ ಅವರ ಸಂಕಲ್ಪವಾಗಿರುತ್ತದೆ; ಮಣಿಪಾಲದಂಥ ಗ್ರಾಮ ಕೇಂದ್ರದಲ್ಲಿ ಕಾಲೇಜನ್ನು ಸ್ಥಾಪಿಸುವಾಗಲೂ ಈಗ ವೈದ್ಯಕೀಯ ಸಹಾಯದ ಕೇಂದ್ರವನ್ನು ತೆರೆಯುವಾಗಲೂ ಅವರ ಮುಂದಿದ್ದುದು ಇದೇ ಆದರ್ಶ. ಗುರುಪುರದ ಚಟುವಟಿಕೆಗಳನ್ನು ವಿಸ್ತರಿಸಿ, ಆಸುಪಾಸಿನ ಪ್ರತಿಯೊಂದು ಗ್ರಾಮದ ಮನೆಮನೆಗೂ ಹೋಗಿ, ಅಲ್ಲಿ ರೋಗಿಗಳನ್ನು ಪರೀಕ್ಷಿಸಿ, ಚಿಕಿತ್ಸೆ ನಡೆಸುವುದೇ ಈ ಕೇಂದ್ರದಲ್ಲಿ ಕೆಲಸ ಮಾಡುವ ವಿದ್ಯಾರ್ಥಿ ವೃಂದ ಮತ್ತು ದಕ್ಷ ಅಧ್ಯಾಪಕರು ಹಾಕಿ ಕೊಂಡಿರುವ ಕಾರ್ಯಕ್ರಮ. ಸಂಚಾರಿ ವಾಹನವೊಂದು ಇವರ ನೆರವಿಗೆ ಸಿಗುತ್ತದೆಯಾಗಿ ಕೇಳುತ್ತೇವೆ. ನಡೆದು ಹೋಗಲು ತುಂಬ ಸಮಯ ಬೇಕಾದುದರಿಂದ ಇಂಥ ವಾಹನವು ಹೆಚ್ಚಿನ ಸಂಖ್ಯೆಯಲ್ಲಿ ಹಾಗು ಕ್ಷಿಪ್ರವಾಗಿ ರೋಗಿಗಳಿಗೆ ಶುಶ್ರೂಷೆ ನಡೆಸಲು ಸಹಾಯಕವೆನಿಸುತ್ತದೆ. ವಿದ್ಯಾರ್ಥಿಗಳ ಪಾಲಿಗೆ ಇದೊಂದು ಬಗೆಯ ಪ್ರತ್ಯಕ್ಷ ಶಿಕ್ಷಣವೇ ಆಗುತ್ತದೆ—ಮಂಗಳೂರಿನಂಥ ಕೇಂದ್ರದ ಆಸ್ಪತ್ರೆಗಳಿಗೆ ಹಳ್ಳಿಗಳ ವಾತಾವರಣಕ್ಕೆ ವಿಶಿಷ್ಟವಾದ ರೋಗಗಳಿಂದ ಪೀಡಿತರಾದ ಜನರು ಚಿಕಿತ್ಸೆಗಾಗಿ ಬಂದು ಸೇರುವುದು ವಿರಳ; ಏಕೆಂದರೆ, ಅದಕ್ಕೆ ಬೇಕಾದ ಅನುಕೂಲತೆ ಹಳ್ಳಿಗರಿಗೆ ಸಾಮಾನ್ಯವಾಗಿ ಲಭ್ಯವಿರುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳಿಗೆ ಹಳ್ಳಿಯ ರೋಗಗಳ ಪರಿಚಯ ಸುತ್ತು ಚಿಕಿತ್ಸೆಯ ಕ್ರಮವನ್ನು ತಿಳಿದುಕೊಳ್ಳಲಿಕ್ಕೆ ಈ ಕೇಂದ್ರವು ಉಪಯುಕ್ತವೆನಿಸುತ್ತದೆ; ಹಳ್ಳಿಯ ಸಮಸ್ಯೆಗಳನ್ನು ಮನಗಂಡ ವಿದ್ಯಾರ್ಥಿಗಳು ಶಿಕ್ಷಣೋತ್ತರದಲ್ಲಿ ಯಾರದೇ ಒತ್ತಾಯವಿಲ್ಲದೆ ಹಳ್ಳಿಗಳಲ್ಲಿ ತಮ್ಮ ಸ್ವತಂತ್ರ ವೃತ್ತಿಯನ್ನು ತೊಡಗುವಂತೆಯೂ ತಕ್ಕ ಪ್ರಭಾವವನ್ನು ಗ್ರಾಮ ಕೇಂದ್ರಗಳು ಮಾಡಬಹುದು:—ಎಂದಾಶಿಸಿದರೆ ತಪ್ಪಾಗದು. ಹಳ್ಳಿಯ ಜನರಿಗೆ ವಿದ್ಯಾರ್ಥಿಗಳೊಡನೆ ಪ್ರವೀಣರೂ ನಿಷ್ಣಾತರೂ ಆದ ಅಧ್ಯಾಪಕ ವೈದ್ಯರ ಸೇವೆಯ ಪ್ರಯೋಜನ ಸಿಗುತ್ತದೆ; ಎಂಥ ಕಠಿಣ ಪ್ರಸಂಗದಲ್ಲಿಯೂ ಉತ್ತಮ ಸಲಹೆಯನ್ನಿವರು ಕೊಡಬಲ್ಲರು; ತಕ್ಕ ಔಷಧ ಹತ್ತಿರದಲ್ಲಿದ್ದರೆ, ಅದನ್ನು ನೀಡಬಲ್ಲರು. ಗ್ರಾಮ ಕೇಂದ್ರದಲ್ಲಿ ಔಷಧದ ಸಂಗ್ರಹ ಧಾರಾಳವಾಗಿರುವಂತೆಯೂ ಆಧುನಿಕ ಔಷಧಗಳ ಅಭಾವವಿರದಂತೆಯೂ ಮಹಾಜನರು ಮುಕ್ತಹಸ್ತದಿಂದ ಸಹಾಯ ಸಲ್ಲಿಸಬೇಕೆಂದು ವಿನಂತಿಸುವುದು ಇಲ್ಲಿ ಅಪ್ರಸ್ತುತವಾಗಲಾರದು. ಚಿಕಿತ್ಸೆಯ ಕ್ಷೇತ್ರದಲ್ಲಿ ಇಷ್ಟು ಕೆಲಸ ನಡೆಸುವುದಲ್ಲದೆ, ರೋಗ ಬಾರದಂತೆ ತಡೆಗಟ್ಟುವ ಕಡೆಗೂ ಈ ಕೇಂದ್ರ ಗಮನ ಕೊಡುವುದೆಂದು ತಿಳಿದು ಬರುತ್ತದೆ. ಶುದ್ಧ ನೀರು, ಪೋಷಕ ಆಹಾರ, ಉತ್ತಮ ವಸತಿ ವ್ಯವಸ್ಥೆಗಳ ಬಗ್ಗೆ ಮತ್ತು ಮಕ್ಕಳ ಆರೋಗ್ಯದ ಕಡೆಗೆ ವಿದ್ಯಾರ್ಥಿಗಳೂ ಅಧ್ಯಾಪಕರೂ ಹಳ್ಳಿಗರಲ್ಲಿ ಜಾಗೃತಿಯನ್ನೂ ಹುಟ್ಟಿಸಲು ಪ್ರಯತ್ನಿಸುವಾಗ, ತಿಳಿವಳಿಕೆಯುಳ್ಳ ಸ್ಥಳೀಯರು ಅವರ ಬೆಂಬಲಕ್ಕೆ ನಿಲ್ಲಬೇಕು. ಹೀಗೆ ಗುರುಪುರದ ಕೇಂದ್ರವು ಯಶಸ್ವಿಯಾದರೆ, ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣ ಹೆಚ್ಚಿದಂತೆಲ್ಲ ಹೊಸ ತಂಡಗಳನ್ನು ಜಿಲ್ಲೆಯ ಬೇರೆ ಬೇರೆ ಗ್ರಾಮ ಕೇಂದ್ರಗಳಲ್ಲಿ ನೆಲೆಗೊಳಿಸುವುದಕ್ಕೂ ಪ್ರತಿದಿನವೂ ಈ ಕೇಂದ್ರಗಳು ಕೆಲಸ ಮಾಡುವಂತೆ ನೋಡಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಹಾಗಾಗಲಿ ಎಂದು ಹೃತ್ಪೂರ್ವಕ ಹಾರೈಸುತ್ತೇವೆ.

ಉಡುಪಿ

ಮುನಿಸಿಪಲ್ ಚುನಾವಣೆ ಅವಿರೋಧ ಆಯ್ಕೆಗಳು ಟೌನ್‌ಪಲ್ ವಾರ್ಡು— ಡಾ. ಪಿ. ಜಿ. ಆಚಾರ್ಯ. **ಕಡಿಯಾಳಿ-** ಎ. ನಾರಾಯಣ ನಾಯಕ್. **ಸೆಂಟ್ರಲ್-** ಶ್ರೀನಿವಾಸ ನಾಯಕ್. **ಕಾಡಬೆಟ್ಟು ಹರಿಜನ-** ಬೆಳಿಯ. **ಅಜ್ಜರಕಾಡು ಲೇಡಿ ರಿಜರ್ವ್—** ಶ್ರೀಮತಿ ಎಲ್. ಫೆರ್ನಾಂಡೀಸ್. **ಕನಪಾಡಿ-** ಕೆ. ರಾಮರಾವ್. **ಗುಂಡಿಬೈಲ್ ಲೇಡಿರಿಜರ್ವ್—** ಶ್ರೀಮತಿ ಮನೋರಮಾ ಜೇನಿ. **ಒಳಕಾಡು.** ಕೆ. ಚೇಳೇಂದ್ರ ಶೆಟ್ಟಿ. **ಪಣಿಯಾಡಿ—** ಬಿ. ವಾಸುದೇವ ರಾವ್. **ಅಂಬಲಪಾಡಿ—** ಸಿ. ರಮೇಂದ್ರ ನಾಯಕ್. **ಅಜ್ಜರಕಾಡು** – ಎಸ್. ವಿಠಲ ಶೆಣೆ.

ಸ್ಪರ್ಧೆಯಿರುವ ವಾರ್ಡುಗಳು.

ತೆಂಕಪೇಟೆ— ಕೆ. ಕೆ. ಪೈ. ಉಮಾನಾಥಾಚಾರ್ಯ. **ಕುಂಜಿಬೆಟ್ಟು—** ಕೆ. ಕೆ. ಪೈ. ಪಿ. ವಿ. ಆಚಾರ್ಯ, ದಾಸ ಸೇರಿಗಾರ ದಾಮೋದರ. **ಗುಂಡಿಬೈಲು** ದಾಸ ಸೇರಿಗಾರ, ಆರ್. ಆರ್. ಕುಂಜಾರು ವೆಂಕಟ್ರಮಣ ರಾವ್. **ಮೂಡನಿಡಂಬೂರು-** ವಿಠಲ ಶೆಟ್ಟಿ, ಪಿ. ಶೀನ ನಾಯಕ್, **ಬನ್ನಂಜೆ—** ಡಾ! ಪಿ. ವಿ. ವ್ಯಾಸರಾವ್, ಎಸ್. ಗುರುವ, **ಕಾಡಬೆಟ್ಟು-** ಎ. ಜಿ. ಅಲ್ಲಿ, ಟಿ. ಎ. ವಾಸುದೇವನ್, ಎಸ್. ಶೀತಾರಾಮ ಕಾಮತ್. **ಕನ್ನಿಮೂಲ್ಕಿ** ಇಮಾಸ್ಲೆಲ್ ಜತ್ತನ್ನ, ಜೆ. ಮೈಕಾ. **ಬೈಲೂರು.** ಎ. ಮಂಜುನಾಥ ರಾವ್, ಎಚ್. ವೆಂಕಟೇಶ ನಾಯ್ಕ, **ಶಿರಿಬೀಡು.** ಇಮಾಮ್ ಸಾಹೇಬ್, ಭಾವುಜನ್, ಎ. ಜಿ. ಅಲ್ಲಿ.

ಅಕ್ಕಿ ಹಂಚೋಣಿ— ಇದೇ ತಾ. 25 ನೆ ಆದಿತ್ಯವಾರ ಮಧ್ಯಾಹ್ನ 12½ ಗಂಟೆಗೆ ಉಡುಪಿ ಪಾಂಗಾಳ ನಾಯಕ್ ಬೇಂಕ್ ವಠಾರದಲ್ಲಿ ದೊಡ್ಡವರಿಗೆ ½ ಸೇರು ಅಕ್ಕಿ ಮತ್ತು ಎರಡಾಣೆ, ಚಿಕ್ಕವರಿಗೆ ಒಂದುಪಾವು ಅಕ್ಕಿ ಮತ್ತು ಒಂದಾಣೆಯಂತೆ ಅಕ್ಕಿ ಮತ್ತು ಮೊಬಲಗನ್ನು ಹಂಚುವುದಾಗಿಯೂ ಬಾಂಧವರು ಸಹಕರಿಸಬೇಕಾಗಿಯೂ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ವಿನಂತಿಸುತ್ತಾರೆ.

ಪ್ರಾರಂಭೋತ್ಸವ— ಇದೇ ತಾ. 17 ರಂದು ಪಕೇಲ್ ಬಿ. ಶೀನಪ್ಪ ಹೆಗ್ಡೇರ ಅಧ್ಯಕ್ಷತೆಯಲ್ಲಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿಯ ಶಾಖಾ ಕಚೇರಿಯ ಪ್ರಾರಂಭೋತ್ಸವವು ನೆರವೇರಿತು. ಶ್ರೀ ಎಂ. ಕೆ. ಮುಲ್ಕರ ಸ್ವಾಗತ ಭಾಷಣ, ಅಧ್ಯಕ್ಷರ ಭಾಷಣಗಳಾದ ಮೇಲೆ ಶ್ರೀ ಕೃಷ್ಣಯ್ಯ ಸೆಟ್ಟಿ, ಕೊಳ್ಳೆಬೈಲರು ಲಘಾಹಾರಸೂಚಿಸಿದರು. ಅತಿಥಿಗಳಿಗೆ ಉಪಾಹಾರ ಸತ್ಕಾರವಿತ್ತು.

ಪ್ರವಾಸಚಿತ್ರ ಪ್ರದರ್ಶನ— ಇದೇ ತಾ. 17ರಂದು ಸ್ಥಳೀಯ ಮಹಿಳಾ ಸಮಾಜದ ಆಶ್ರಯದಲ್ಲಿ, ಮೋರ್ಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ. ಇತ್ತೀಚೆಗೆ ಅಮೇರಿಕಾ ಪ್ರವಾಸವನ್ನು ಮುಗಿಸಿಕೊಂಡು ಬಂದ ಶ್ರೀ ಕೆ. ವಿಠಲ ಶೆಟ್ಟಿಯವರು ತಮ್ಮ ಪ್ರವಾಸಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ವಿವರಣೆಗಳೊಂದಿಗೆ ಮಾಯಾಲಾಂಪ್ರದ ಮೂಲಕ ಪ್ರದರ್ಶಿಸಿದರು.

THE VIJAYA BANK, LTD., BRAHMAVAR.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲ ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ 30—9—'55ನೇ ದಿನ್ರವಾರ ಅಪರಾಹ್ನ ಗಂಟೆ 4ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆ ನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಹಿತ 30-6-55ರ ವರೆಗೆ.		
214/53	ಜೇಸ್ಸು ಡಿಲೀಮ P.C.830 ಬ್ರಹ್ಮಾವರ ಪೋಲೀಸು ಸ್ಟೇಶನ್, ಬ್ರಹ್ಮಾವರ	21	0	0
603/53	ಕೆ. ಜೇನಿಸ್ ಡಿ'ಸೋಜ, ಮಿನ್ಸೆ ಡಿ'ಸೋಜರ ಮಗ, ಮೈಲ್ ರಸ್ಟರ್, ಅರೂರು ಗ್ರಾಮ, ಪೋಸ್ಟು ಕುಂಜಾಲು.	47	5	0
722/54	ಐ. ರಾಜೀವ ಸೆಟ್ಟಿ, ಐ. ನಾರಾಯಣ ಸೆಟ್ರ ಅಳಿಯ, ಕುಂಜಾಲು, ಪೋಸ್ಟು ಕುಂಜಾಲು.	168	6	0
728/54	ಲೇಸಿ, ರುಕ್ಕು ಉಪ್ಪಾರ್ತಿ ಮಗಳು, ಉಪ್ಪಿನ ಕೋಟೆ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	11	2	0
736/54	ಯಸ್ತಪಿನ್ ಸುವಾರಿಸ್, ಲೋರೆಸ್ ಸುವಾರಿಸರ ಮಗಳು, ಏರೋಡಿ ಗ್ರಾಮ, ಪೋಸ್ಟು ಸಾಸ್ತಾನ.	73	9	0
740/54	ನಾಗಪ್ಪ ಮಲ್ಲ, ಬಾಬಣ್ಣ ಮಲ್ಕರ ಮಗ, ಚಾಂತಾರು ಗ್ರಾಮ, ಪೋಸ್ಟು ಬ್ರಹ್ಮಾವರ.	110	0	0
907/54	ಗಿರಿಯ ಪೂಜಾರಿ, ಬೈರಾಡಿ ಶೇಷ ಪೂಜಾರಿ ಮಗ, ಕುಪ್ಪು ಗೋಡು ಗ್ರಾಮ, ಪೋಸ್ಟು ಬ್ರಹ್ಮಾವರ.	27	2	0
945/54	ಕೆ. ಅಣ್ಣಪ್ಪ ಸೆಟ್ಟಿ, ಕೃಷ್ಣಯ್ಯ ಸೆಟ್ರ ಅಳಿಯ, ಕಾಡೂರು ಗ್ರಾಮ, ಪೋಸ್ಟು ಕೊಕ್ಕರ್ಣೆ.	128	15	0
984/54	ಯು. ಸಂಜೀವ, ರಾಮಣ್ಣ ಸೆರ್ವಗಾರರ ಮಗ, ಹೆರೆಬೆಟ್ಟು, ಉಪ್ಪೂರು ಗ್ರಾಮ, ಪೋಸ್ಟು ಉಪ್ಪೂರು.	26	14	0

ಬ್ರಹ್ಮಾವರ
15—9—55.

ಬಿ. ಭಾಸ್ಕರ ಸೆಟ್ಟಿ,
ಮೆನೇಜರ್.

ಅರ್ಜೆಂಟೀನದ ಸೇನೆಯ ದಂಗೆ

ಮೊಸ್ಕೋದೊಡನೆ ಅಯೆನ್ಸ್ಆರರ ಸ್ನೇಹ

ದಕ್ಷಿಣ ಅಮೇರಿಕದ ಪ್ರಬಲ ರಾಜ್ಯಗಳಲ್ಲಿ ಒಂದಾದ ಅರ್ಜೆಂಟೀನದಲ್ಲಿ ಮರಳಿ ಸೇನಾಧಿಕಾರಿಗಳ ದಂಗೆ ನಡೆದಿದೆ. ಕೆಲವು ತಿಂಗಳ ಹಿಂದೊಮ್ಮೆ ನಡೆದ ಬಂಡಾಯವನ್ನು ಅಧ್ಯಕ್ಷ ಪೆರೋನರು ಕ್ಷಿಪ್ರದಲ್ಲಿಯೇ ಶಮನ ಮಾಡಿದ್ದರು. ಆದರೆ ಈ ಸಲದ ಕದನ ಉಗ್ರಸ್ವರೂಪವನ್ನು ತಳೆದಿದೆ; ಬಂಡುಗಾರರೇ ಮೇಲ್ಗೈ ಹೊಂದಿರುವರೆಂದು ಬಂದಿರುವ ವರದಿಗಳು ತಿಳಿಸುತ್ತವೆ.

ಮೂಲ ಕಾರಣ

ಪೆರೋನರಿಗೂ ಕ್ರೈಸ್ತ ಇಗರ್ಜಿಗಳಿಗೂ ಹೊಂದಿಕೆ ಇರಲಿಲ್ಲ. ಇದೇ ಮೂರು ತಿಂಗಳ ಪೂರ್ವದಲ್ಲಿ ನಡೆದ ದಂಗೆಯ ಮೂಲ ಕಾರಣ. ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ಪೆರೋನರು ಘಟನಾತ್ಮಕ ರಾಜ್ಯವನ್ನು ಸ್ಥಾಪಿಸುವೆನೆಂದು ಹೇಳಿದ್ದರು. ಆದರೆ ಇದು ಕಾಲಹರಣದ ಕುಹಕವೆಂದು ದಂಗೆಗಾರರು ಭಾವಿಸಿದುದರಿಂದ ಅಧ್ಯಕ್ಷರು ಪ್ರತಿ ಹಿಂಸೆಗೆ ತೊಡಗಿದರು.

ಪೆರೋನರಿಗೆ ಬೆಂಬಲ

ಕೂಲಿಕಾರರ ಬೆಂಬಲವು ಅಧ್ಯಕ್ಷ ಪೆರೋನರಿಗೆ ಧಾರಾಳವಾಗಿ ಇದೆ ಎನ್ನಲಾಗುತ್ತದೆ. ತಾನು ರಾಜೀನಾಮೆ ಕೊಡುವೆನೆಂದಾಗ ಕೂಲಿಕಾರರು ಹಾಗೆ ಮಾಡಬಾರದೆಂದು ಅಧ್ಯಕ್ಷರನ್ನು ಒತ್ತಾಯಿಸಿದ್ದರೆಂಬುದು ನಿಜ. ಆದರೆ, ಈ ಸಲದ ದಂಗೆಯಲ್ಲಿ ಜಲ ಮತ್ತು ವಾಯು ಸೇನೆಯೊಡನೆ ನೆಲ ಸೇನೆಯ ಕೆಲವು ವಿಭಾಗಗಳೂ ಅಧ್ಯಕ್ಷರಿಗೆ ತಿರುಗಿ ಬಿದ್ದಿವೆ.

ಯಾತ್ರೆಯ ಫಲಶ್ರುತಿ

ಮೋಸ್ಕೋಗೆ ಪ್ರಯಾಣ ಬೆಳೆಸಿದ ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅೈಡೆನೊರರು ರಾಯಭಾರಿ ಸಂಬಂಧವನ್ನು ಸ್ಥಾಪಿಸುವುದಕ್ಕೆ ಸಮ್ಮತಿಸಿ ಬಂದಿದ್ದಾರೆ. ಬೇಗನೆ ವ್ಯಾಪಾರ ಸಂಬಂಧವನ್ನು ತೊಡಗಿಸುವುದಕ್ಕೂ ವ್ಯವಸ್ಥೆ ಮಾಡಬೇಕೆಂದು ಒಪ್ಪಿದ್ದಾರೆ. ಆದರೆ ಜರ್ಮನಿಯ ಏಕೀಕರಣದ ಆಶೆ ಮಾತ್ರ ಸ್ವಲ್ಪವೂ ಫಲಿಸಿಲ್ಲ.

ಸೆರೆಯಾಳುಗಳ ಬಿಡುಗಡೆ

ಅೈಡೆನೊರರು ಇನ್ನೊಂದು ಕೆಲಸವನ್ನೂ ಸಾಧಿಸಿ ಬಂದರು. ದ್ವಿತೀಯ ಮಹಾಯುದ್ಧ ಕಾಲದಲ್ಲಿ ರಶ್ಯನರು ಸೆರೆ ಹಿಡಿದಿದ್ದ ಜರ್ಮನರ ಬಿಡುಗಡೆಗೆ ರಶ್ಯವನ್ನು ಒಪ್ಪಿಸಿದರು. ಆದರೆ ಎಲ್ಲ ಕೈದಿಗಳ ಮುಕ್ತಿಯಾಗುವ ಆಶೆ ಕಾಣಿಸುತ್ತಿಲ್ಲ—ಅೈಡೆನೊರರ ಅಂದಾಜಿನಲ್ಲಿ ಕನಿಷ್ಠ ಒಂದು ಲಕ್ಷದಷ್ಟಾದರೂ ಜರ್ಮನರು ರಶ್ಯದಲ್ಲಿದ್ದಾರೆ; ರಶ್ಯದ ಹೇಳಿಕೆಯಂತೆ ಈ ಸಂಖ್ಯೆ ಹತ್ತು ಸಾವಿರದಷ್ಟೂ ಇಲ್ಲ!

ಏಕೀಕರಣದ ಬೆಲೆ

ಪಾಶ್ಚಾತ್ಯ ದೇಶಗಳಿಗೂ ಸ್ವತಃ ಪಶ್ಚಿಮ ಜರ್ಮನಿಗೂ ಅೈಡೆನೊರರ ಸಾಧನೆ ಕಣ್ಣಿಗೇನೂ ಹಿಡಿಸಿಲ್ಲ. ಕೆಲವು ಸಾವಿರ ಜರ್ಮನರನ್ನು ರಶ್ಯದಿಂದ ಬರಮಾಡಿಕೊಳ್ಳಲು ರಾಯಭಾರ ಸಂಬಂಧ ಮುಂತಾದುವಕ್ಕೆ ಒಪ್ಪಿದ ಅೈಡೆನೊರರು ಪೂರ್ವ ಜರ್ಮನಿಯ ೧೮ ಲಕ್ಷ ಬಾಂಧವರನ್ನು ಸೇರಿಸಿಕೊಳ್ಳುವ ಏಕೀಕರಣದ ಸಾಧನೆಗೆ ಎಸುಬೆಲೆ ಕೊಡಬೇಕಾಗಿ ಬಂದೀತು—ಎಂದು ಪ್ರಶ್ನಿಸಲಾಗುತ್ತದೆ.

ರಕ್ಷದ ತಂತ್ರ

ಕೈದಿಗಳ ಬಿಡುಗಡೆಯ ಕೀರ್ತಿಯಲ್ಲಿ ಪೂರ್ವ ಜರ್ಮನಿಗೆ ರಶ್ಯವು ಪಾಲನ್ನು ಕೊಡದಿರಲಿಕ್ಕಿಲ್ಲವೆಂದು ಹೇಳಲಾಗುತ್ತದೆ ಇವಲ್ಲದೆ ಯುದ್ಧ ಕಾಲದಲ್ಲಿ ಒಂದು ಪಶ್ಚಿಮ ಜರ್ಮನಿಯಲ್ಲಿ ನಿರಾಶ್ರಿತರಂತೆ ಉಳಿದಿರುವ ಒಂದುಲಕ್ಷ ರಶ್ಯನರಿದ್ದಾರೆಂದೂ ಅವರೆಲ್ಲರ ಬಿಡುಗಡೆ ಮಾಡಬೇಕೆಂದೂ ರಶ್ಯ ಪ್ರತಿಸೂಚನೆಯನ್ನು ಮಾಡಿರುತ್ತದೆ.

ಪಾಶ್ಚಾತ್ಯರ ಅಧೈರ್ಯ

ಹೀಗೆ ಬೆಲೆಕೊಡುವುದಲ್ಲಿ ಧಾರಾಳತನವನ್ನು ವ್ಯಕ್ತಪಡಿಸಿದ ಪಶ್ಚಿಮ ಜರ್ಮನಿಯು ಏಕೀಕರಣದ ಆಶೆಯಿಂದ ನ್ಯಾಟೋ ರಾಷ್ಟ್ರಗಳಿಗೆ ದ್ರೋಹ ಬಗೆಯದೆ ಎಂದು ಪಾಶ್ಚಾತ್ಯ ಗುಂಪಿನ ಸಂದೇಹ. ಈ ರೀತಿ ತಪ್ಪು ಕಲ್ಪನೆಯನ್ನು ಕಟ್ಟಿಕೊಳ್ಳ ಬಾರದು ನ್ಯಾಟೋ ಒಪ್ಪಂದದಿಂದ ಹೊರ ಬರುವ ಪ್ರಶ್ನೆಯೇ ಇಲ್ಲ. ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಂತೆ ರಾಯ ಭಾರ ಸಂಬಂಧವನ್ನು ಪಶ್ಚಿಮ ಜರ್ಮನಿ ಬೆಳೆಸಿಕೊಂಡಿದೆ—ಎಂಬುದೇ ಇದಕ್ಕೆ ಅೈಡೆನೊರರ ಸಮಾಧಾನ.

ಗುಲಾಂ ಮಹಮ್ಮದರು

ಪಾಕಿಸ್ತಾನದ ಗವರ್ನರ ಜನರಲರಾದ ಮಿ. ಗುಲಾಂ ಮಹಮದರು ಎರಡು ತಿಂಗಳ ರಜೆ ತೆಗೆದುಕೊಂಡಿದ್ದರು. ಈಗ ಆ ರಜೆಯ ಅವಧಿಮುಗಿಯುವ ಆಕ್ಟೋಬರ ೬ನೇ ತಾರೀಕಿನಿಂದ ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ; ಅದು ಸ್ವೀಕಾರಗೊಂಡು, ಹಂಗಾಮಿ ಗವರ್ನರ ಜನರಲರಾದ ಮೇ ಜ. ಇಸ್ಕಂದರ್ ಮಿರ್ಜಾರ ನೇಮಕ ಕಾಯಮಾಗಿದೆ.

ಏಕ ಘಟಕ ಮಸೂದೆ

ಪಶ್ಚಿಮ ಪಾಕಿಸ್ತಾನದ ಒಕ್ಕೂಟ ರಚನೆಯ ಅಧ್ವರ್ಯು ಹೀಗೆ ನಿವೃತ್ತರಾಗುವುದಾದರೂ ಪಾಕಿಸ್ತಾನದ ಉಕ್ಕಿನ ಮನುಷ್ಯ ಮಿರ್ಜಾರು ಗುಲಾಂ ಮಹಮದರ ಅಪೂರ್ಣ ಆಶೆಯನ್ನು ನೆರವೇರಿಸಿಕೊಡುವುದು ನಿಶ್ಚಯ. ಘಟನಾ ಸಮಿತಿಯಲ್ಲಿ ಪ್ರತಿಪಕ್ಷದ ನಿತ್ಯ ಟೀಕೆಗಳ ನಡುವೆ ಏಕ ಘಟಕ ರಚನೆಯ ಮಸೂದೆಯ ಪ್ರಥಮ ವಾಚನ ಸ್ವೀಕಾರವಾಗಿದೆ. ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಬೇಕೆಂಬ ಸೂಚನೆ ತಿರಸ್ಕೃತವಾಯಿತು.

ಗಾಫರಖಾನರ ಬಂಧನ

ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಇಂಥ ಗಂಭೀರ ಪ್ರಶ್ನೆಗಳ ನಿರ್ಣಯ ಕೈಗೊಳ್ಳಕೂಡದೆಂದು ಗಡಿನಾಡಿದ ಗಾಂಧಿ ಗಾಫರಖಾನರು ಹೇಳುತ್ತಿದ್ದರು. ಈಗ ಬಲೂಚಿಸ್ತಾನದಲ್ಲಿ ಪ್ರವೇಶಿಸಿ ತಮ್ಮ ಮೇಲಿನ ಸಂಚಾರ ನಿರ್ಬಂಧವನ್ನು ಮುರಿದರೆಂಬ ಕಾರಣದಿಂದ ಅವರನ್ನು ಈಗ ಸೆರೆ ಹಿಡಿಯಲಾಗಿದೆ.

ರಾಜ ಕುಮಾರರ ವಿಜಯ

ಕಂಬೋಡಿಯದಲ್ಲಿ ನಡೆದ ಚುನಾವಣೆಯು ರಾಜಕುಮಾರರ "ಸಮಾಜವಾದಿ" ಪಕ್ಷಕ್ಕೆ ಎಲ್ಲ ಸ್ಥಾನಗಳನ್ನೂ ದೊರಕಿಸಿಕೊಟ್ಟಿತು. ಘಟನಾತ್ಮಕ ಅರಸೊತ್ತಿಗೆಯುಳ್ಳ ಸರಕಾರದ ರಚನೆ ತನ್ನ ಧ್ಯೇಯವೆಂದು ಅವರು ಹೇಳಿದ್ದಾರೆ. ಸೀಟೋ ಮುಂತಾದ ಸೈನಿಕ ಒಪ್ಪಂದದಲ್ಲಿ ತನ್ನ ಸರಕಾರ ಸೇರುವುದಿಲ್ಲ; ತಾಟಸ್ಥ್ಯವೇ ತನ್ನ ನಿಲುಮೆ ಎಂದಿದ್ದಾರೆ. ಆದರೆ ಅಮೇರಿಕದ ಸಹಾಯ ಸ್ವೀಕರಿಸಲು ಅವರಿಗೆ ಆತುರವಿದೆ—ಇದುಮಾತ್ರ ಜಿನೇವಾದ ಒಡಂಬಡಿಕೆಗೆ ಸಮ್ಮತವಾಗುವುದು ಸಂಶಯ.

ರಾಷ್ಟ್ರಸಂಘದ ಸಭೆ

ಸಂಯುಕ್ತ ರಾಷ್ಟ್ರಸಂಘದ ಅಧಿವೇಶನ ಇದೇ ಮಂಗಳವಾರ (ದಿನಾಂಕ ೨೦) ಪ್ರಾರಂಭವಾಗಿದೆ. ಈ ಸಲ ಎಲ್ಲ ರಾಷ್ಟ್ರಗಳ ಮೇಲೆ ಜಿನೇವ ಮತ್ತು ಬಾಂಡುಂಗಿನ ಸಮ್ಮೇಲನಗಳ ಸತ್ಪ್ರಭಾವಬಿದ್ದಿದೆ ಎಂದು ಸುದ್ದಿ. ನೆಹರುಗಳು ಜಾಗತಿಕ ವಾತಾವರಣವನ್ನು "ಕೋಣಯಲ್ಲಿ ಮದ್ದು ತುಂಬಿರುವುದು ನಿಜ; ಆದರೆ ಬೆರಳನ್ನು ಅದರ ಕುದುರೆಯ ಮೇಲೆ ಯಾರೂ ಇಟ್ಟು ನಿಂತಿಲ್ಲ" ಎಂದು ವರ್ಣಿಸಿರುವುದರಲ್ಲಿ ಅತಿರೇಕೋಕ್ತಿ ಇಲ್ಲವೆನ್ನಲಾಗುತ್ತದೆ.

ನ್ಯಾಯವಾದ ಪಕ್ಷ

ಗೋವೆಯ ಕುರಿತು ನೆಹರುಗಳು ತಳೆದಿರುವ ಧೀರೋದಾತ್ತವಾದನಿಲುಮೆಯು ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆ ಸತ್ಪರಿಣಾಮ ಮಾಡಿದೆಯೇ ಹೊರತು ಹಲವರು ಭಾವಿಸಿರ ಬಹುದಾದಂತೆ ಕೆಡುಕನ್ನಲ್ಲ. ಭಾರತವು ತಾನು ಉಪದೇಶಿಸುವ ತತ್ವವನ್ನು ಅನುಸರಿಸಿಯೂ ತೋರಿಸುತ್ತಿದೆ ಎಂದು ಎಲ್ಲರ ಗಮನಕ್ಕೂ ಗೋವೆಯ ಪ್ರಶ್ನೆ ತೋರಿಸಿಕೊಟ್ಟಿದೆ. ಗೋವೆಯ ಸಮಸ್ಯೆಯ ಪರಿಹಾರಕ್ಕೆ ವಿದೇಶದ ರಾಷ್ಟ್ರವೊಂದು ಪ್ರಯತ್ನಿಸುತ್ತಿರುವುದಾಗಿಯೂ ಅದು ಗೋವೆಯ ಮೇಲೆ ಭಾರತಕ್ಕಿರುವ ನ್ಯಾಯವಾದ ಹಕ್ಕನ್ನು ಅಲ್ಲಗಳೆಯಲಾಗದೆಂದು ಪೋರ್ಚುಗಾಲಿಗೆ ಬೋಧಿಸುತ್ತಿರುವುದಾಗಿಯೂ ತಿಳಿದು ಬರುತ್ತದೆ.

ಅತಿಥಿಗಳ ಸಮೂಹ

ಇನ್ನು ಕೆಲವೇ ತಿಂಗಳುಗಳಲ್ಲಿ ರಶ್ಯದ ಪ್ರಧಾನಿ ಮತ್ತು (ಬಹುಶಃ ಕ್ರುಶ್ಚೇವರನ್ನೊಳಗೊಂಡು) ಅವರ ಸಹಕಾರಿಗಳು, ಇಥಿಯೋಪಿಯದ ಚಕ್ರವರ್ತಿ, ಇರಾನಿನ ಶಹಾ, ಸೌದಿ ಅರೇಬಿಯದ ಅರಸ, ಇಂಡೋನೇಶಿಯ ಮತ್ತು ಪಶ್ಚಿಮ ಜರ್ಮನಿಗಳ ಉಪಾಧ್ಯಕ್ಷರು, ಕೆನಡ, ಆಸ್ಟ್ರೇಲಿಯ ಮತ್ತು ಇಟಲಿಗಳ ವಿದೇಶ ಮಂತ್ರಿಗಳು ಭಾರತಕ್ಕೆ ಬರುವರೆಂದು ಪ್ರಧಾನಿ ನೆಹರು ತಿಳಿಸಿದ್ದಾರೆ.

ಎಣ್ಣೆ ಬರುವಾಗ....

ಮದ್ರಾಸಿನಲ್ಲಿ ಬರುವುದು, ಬರುವುದು ಎಂದಿದ್ದ ನ್ಯಾಯವಾದ ಗೇಣಿ ನಿರ್ಣಯದ ಮಸೂದೆಯು ಶಾಸನ ಸಭೆಯ ಮುಂದಿನ ಸಭೆಯಲ್ಲೆ ಮಂಡಿಸಲ್ಪಟ್ಟು ಪರೀಲಕ ಸಮಿತಿಗೆ ಒಪ್ಪಿಸಲ್ಪಡುವ ನಿರೀಕ್ಷೆಯನ್ನು ಮುಖ್ಯ ಮಂತ್ರಿ ಶ್ರೀ ನಾಡರರು ವ್ಯಕ್ತಪಡಿಸಿದ್ದಾರೆ. ಅದರೆ ಎಣ್ಣೆ ಬರುವಾಗ ಗಾಣ ಮುರಿಯಿತು ಎಂಬ ಗಾದೆಯಂತೆ, ಕರ್ನಾಟಕ ಏಕೀಕರಣವು ನಡೆಲಿರುವ ದಿನೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಇದರಿಂದ ಏನೂ ಪ್ರಯೋಜನವಾಗದು. ಏಕೀಕರಣದಿಂದ ನಮ್ಮ ಜಿಲ್ಲೆಯ ರೈತರಿಗೆ ಮೊದಲು ಸಿಕ್ಕುವ ಉತ್ತೂಗೊರೆ ಈ ನಿರಾಶೆಯ ರೂಪದಲ್ಲಿದೆ ಎಂದು ಹೇಳಬೇಕಾಗುತ್ತದೆ.

ಪರಿಸಮ ಪಾಲು

ನಾಡರರು ನ್ಯಾಯವಾದ ಗೇಣಿ ಎಂದರೆ ಭೂಕಂದಾಯ, ನೀರಿನ ತೆರಿಗೆ ಇತ್ಯಾದಿಗಳನ್ನೂ ಕಳೆದು ಉಳಿದದರ ಅರ್ಧವೆಂದು ಹೇಳಿದ್ದಾರೆ. ಬಾಕಿ ಅರ್ಧವಾಗುವಳಿದಾರನಿಗೆ ಸೇರುತ್ತದೆ. ಇದಕ್ಕಿಂತ ಯೋಗ್ಯವಾದ ಹಂಚುವಿಕೆಯು ಕ್ರಮವಿಲ್ಲವೆಂದು ಸರಕಾರದ ಅಭಿಪ್ರಾಯ. ಔದ್ಯಮಿಕ ಸಂಸ್ಥೆಗಳಲ್ಲಿ ಬಂಡವಾಳವನ್ನು ಒದಗಿಸಿದ ಪಾಲುದಾರರು ಮತ್ತು ಕೆಲಸಮಾಡಿದ ಸಿಬಂಧಿಯವರು ಲಾಭವನ್ನು ಹಂಚಿಕೊಳ್ಳುವ ಬಗೆ ಇದೇ ರೀತಿಯಾಗಿದೆ—ಎಂದು ನಾಡರರು ಸ್ವಸಮರ್ಥನೆ ಮಾಡಿಕೊಂಡಿದ್ದಾರೆ.

ಅಳಿಯ ಸಂತಾನ ಕ್ರಮ

ಹಿಂದು ವಾರಸು ಮಸೂದೆಗೆ ಪರೀಲಕ ಸಮಿತಿಯು ಕೆಲವು ತಿದ್ದುಪಡಿಗಳನ್ನುಮಾಡಿದೆ ಅಳಿಯ ಸಂತಾನ, ಮರುಮಕ್ಕತ್ತಾಯಂ ಮತ್ತುನಂಬೂದರಿ ಪದ್ಧತಿಗಳಿಗೊಳಪಟ್ಟ ಮಿತಾಕ್ಷರಿ ಪಾಲುಗಾರಿಕೆಯನ್ನು ಮೂಲಮಸೂದೆಯಲ್ಲಿ ಹೊರಗಿಟ್ಟಿದ್ದರು. ಅವುಗಳಿಗೆ ಸಕ ಹೊಸ ಮಸೂದೆ ಅನ್ವಯವಾಗಬೇಕೆಂದು ಪರೀಲಕ ಸಮಿತಿ ಸಿಫಾರಸು ಮಾಡಿರುತ್ತದೆ.

ಶ್ರೀ ಬಿ. ಬಿ. ಶೆಟ್ಟಿರಿಗೆ ಸತ್ಕಾರ — ಇದೇ ದಿನಾಂಕ 17ರಂದು ಸ್ಥಳೀಯ ಮುಕುಂದ ನಿವಾಸದಲ್ಲಿ ಇತ್ತೀಚೆಗೆ ಜಪಾನದಿಂದ ಹಿಂತಿರುಗಿರುವ ಶ್ರೀ ಬಿ. ಬಿ. ಶೆಟ್ಟಿರಿಗೆ ಶ್ರೀ ರಮೇಶಪೈಗಳು, ಒಂದು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ಪೈಗಳು ಸ್ವಾಗತಿಸಿದ ಬಳಿಕ ಶ್ರೀ ಶೆಟ್ಟರು ಜಪಾನಿನ ಗೃಹಕೈಗಾರಿಕೆಗಳ ಕುರಿತು ಭಾಷಣಮಾಡಿದರು ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು. ಶ್ರೀ ರಮೇಶ ಪೈಗಳು ಧನ್ಯವಾದಗಳನ್ನಿತ್ತರು.

ಡಾ! ಮಾಧವ ಪೈಗಳಿಗೆ ಮಾತೃವಿಯೋಗ— ಶ್ರೀ ಉಪೇಂದ್ರ ಪೈ (ಮಹಾರಾಷ್ಟ್ರ ಎಕ್ಸ್ಪೋರ್ಟರೇಶನ ಮೆನೇಜಿಂಗ್ ಪ್ರೈರೆಕ್ಟರ್) ಡಾ. ಟಿ. ಮಾಧವ ಪೈ (ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಚೆಯರ್ ಮ್ಯಾನ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್) ಶ್ರೀ ರಘುನಾಥ ಪೈ (ಕೆನರಾ ಸ್ಟೂಜುವಲ್ ಎಕ್ಸ್ಟೋರೆಸ್ಟ್ ಕಂಪನಿಯ ಮೆನೇಜಿಂಗ್ ಡ್ಯಾರೆಕ್ಟರ್) ಇವರುಗಳ ಮಾತೃ ಶ್ರೀ ಯಶೋದಮ್ಮನವರು ವೃದ್ಧಾಪ್ಯದ ದೆಸೆಯಿಂದ ಇತ್ತೀಚೆಗೆ ಅಸ್ವಸ್ಥದಲ್ಲಿದ್ದು, 81ನೇ ವಯಸ್ಸಿನಲ್ಲಿ ಇದೇ ತಾ. 14ನೇ ಅಪರಾಹ್ನ ಸ್ವರ್ಗಸ್ಥರಾದುದು ವಿಷಾದಕರವಿದೆ.

ದಿವಂಗತೆಯರು ಅತ್ಯಂತ ದೈವಭಕ್ತೆಯೂ ಸರ್ವರನ್ನೂ ತನ್ನವರಂತೆ ವಾತ್ಸಲ್ಯದಿಂದ ಕಾಣುವ ಉದಾರಗುಣಸಂಪನ್ನೆಯೂ ಆಗಿದ್ದರು. ಡಾ. ಮಾಧವ ಪೈಗಳು ತಮ್ಮ ವೈದ್ಯಕೀಯ ವೃತ್ತಿಯನ್ನು ಹೊಂಕೋಂಗ್ ಅಥವಾ ಮುಂಬಯಿನಲ್ಲಿ ಆರಂಭಿಸಬೇಕೆಂದಿದ್ದಾಗ ಅದನ್ನು ತಾವು ಪ್ರತಿಭಟಿಸಿ ಉಡುಪಿಯಲ್ಲೇ ನಿಂತು ವೈದ್ಯವೃತ್ತಿಯನ್ನು ಪ್ರಾರಂಭಿಸುವಂತೆ ಮಾಡಿದ್ದರೆಂದು ಡಾ. ಪೈಗಳ ಇಂದಿನ ಬಯಸುವಿಕೆ ಉಡುಪಿಗೆ ಹೊರಹೋಗುತ್ತಲಿಲ್ಲ. ಮೃತರ ಪುತ್ರ ಪಾತ್ರರ ಬಂಧುಬಳಗದವರು ಮೃತರಲ್ಲಿ ನಮ್ಮ ಸಾಂತ್ವನಾಪೂರ್ವಕ ವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಶಾಂತಿ ಬಯಸುವೆವು.

ಮಕ್ಕಳ ಮಗ್ಗಿ ಪುಸ್ತಕ
ಬೆಲೆ ೦—1—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೨-೯-೧೯೫೫	೪

ಹಳ್ಳಿಯಲ್ಲಿ ಆರೋಗ್ಯ ಕೇಂದ್ರ

ಕಸ್ತೂರ್ಬಾ ವೈದ್ಯಕೀಯ ಕಾಲೇಜಿನ ರೋಗನಿದಾನ ವಿಭಾಗದ ಆಶ್ರಯದಲ್ಲಿ ಮಂಗಳೂರಿಗೆ ಸಮೀಪದ ಗುರುಪುರದಲ್ಲಿ ಇದೇ ೧೮ನೇ ದಿನಾಂಕ ಗ್ರಾಮ ವೈದ್ಯಕೀಯ ಚಿಕಿತ್ಸೆಯ ಕೇಂದ್ರವೊಂದನ್ನು ತೆರೆಯಲಾಗಿರುವ ಸುದ್ದಿಯನ್ನು ಕೇಳಿ ನಾವು ತುಂಬ ಸಂತೋಷಗೊಂಡಿದ್ದೇವೆ; ನಮಗಿಂತಲೂ ಹೆಚ್ಚಿನ ಸಂತೋಷವನ್ನು ಗುರುಪುರ ಮತ್ತು ಆಸುಪಾಸಿನ ಗ್ರಾಮಗಳ ಜನರು ಹೊಂದಿರಬೇಕೆಂದೂ ಭಾವಿಸುತ್ತೇವೆ. ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ಯೋಗ್ಯವಾದ ವೈದ್ಯಕೀಯ ಚಿಕಿತ್ಸೆಯ ಅನುಕೂಲತೆ ಇಲ್ಲವೆಂದು ಪದೇಪದೇ ದೂರಿಕೊಳ್ಳುತ್ತಿದ್ದೇವೆ—ಇದು ಕೇವಲ ನಮ್ಮ ಜಿಲ್ಲೆಯ ಹಳ್ಳಿಗಳಿಗಷ್ಟೇ ಅನ್ವಯಿಸುವ ದೂರಾಗಿರದೆ, ಸಮಸ್ತ ಭಾರತವನ್ನು ಈ ಕೊರತೆಯು ಬಾಧಿಸುತ್ತದೆ. ಇದನ್ನು ಸ್ವಲ್ಪ ಮಟ್ಟಿಗಾದರೂ ದೂರಗೊಳಿಸುವ ಪ್ರಯತ್ನಗಳು ಎಲ್ಲಿಯೇ ನಡೆಯಲಿ ಅವಕ್ಕೆ ಹಾರ್ದಿಕ ಸ್ವಾಗತವನ್ನಿತ್ತು, ಪ್ರೋತ್ಸಾಹವನ್ನು ನೀಡಬೇಕಾದದ್ದು ಸಮಸ್ಯೆಯಲ್ಲಿ ಆಸ್ಥೆಯುಳ್ಳ ಪ್ರಾಜ್ಞರ ಹಾಗು ಇಂಥ ಅನುಕೂಲತೆಯಿಂದ ಪ್ರಯೋಜನ ಪಡೆಯಬಲ್ಲ ಜನರ ಆದ್ಯಕರ್ತವ್ಯವಾಗಿದೆ. ಸರಕಾರವು ಹಳ್ಳಿಗಳ ಆರೋಗ್ಯ ಸಮಸ್ಯೆಯನ್ನು ನಿರ್ಲಕ್ಷಿಸಬಾರದೆಂಬುದು ನಿಜವಾದರೂ ಎಲ್ಲ ಹೊಣೆಗಾರಿಕೆಯನ್ನೂ ತನ್ನ ತಲೆಯ ಮೇಲೆಯೇ ಹೊತ್ತುಕೊಳ್ಳುವಷ್ಟು ಸಂಪನ್ನ ಸ್ಥಿತಿಯು ಸರಕಾರದ್ದಾಗಿಲ್ಲ—ಉದಾರ ಮನೋಭಾವದ ಸ್ಥಳೀಯ ಧುರೀಣರು ಈ ಕ್ಷೇತ್ರದಲ್ಲಿ ತಮ್ಮ ಸಹಕಾರವನ್ನು ನೀಡಲು ಮುಂಬಂದಾಗ ಸ್ವಲ್ಪ ಹೆಚ್ಚಿನ ಸಾಧ್ಯವಾದ ಸಹಾಯವನ್ನು ಸಲ್ಲಿಸಲು ಹಿಂಜರಿಯಲ್ಲ; ಹಿಂಜರಿಯುವುದಿಲ್ಲ ಎಂಬುದರಿಂದಲೇ ಸರಕಾರಕ್ಕೆ ಗ್ರಾಮಾಂತರ ಪ್ರದೇಶದ ಜನರನ್ನು ಸುಖಿಗಳಾಗಿಡುವ ಕಡೆಗೆ ತುಂಬ ಆಸಕ್ತಿ ಇದೆ ಎಂದು ವ್ಯಕ್ತವಾಗುತ್ತದೆ. ಗುರುಪುರದಲ್ಲಿ ತೆರೆಯಲ್ಪಟ್ಟಿರುವ ಕೇಂದ್ರಕ್ಕೂ ಸರಕಾರವು ಧನ ಸಹಾಯವನ್ನು ನೀಡಲು ಮುಂದೆ ಬಂದಿದೆ—ಇದು ಸ್ತುತ್ಯ; ಆವಶ್ಯಕತೆಯು ಹೆಚ್ಚಿದ ಹಾಗೆಲ್ಲ ಈಗಿಗಿಂತಲೂ ಧಾರಾಳವಾದ ನೆರವನ್ನದು ನೀಡಲು ಹಿಂದುಳಿಯುವಾರದೆಂದಿಷ್ಟೇ ಇಲ್ಲಿ ನಮ್ಮ ನವ್ರ ಪ್ರಾರ್ಥನೆಯಾಗಿದೆ. ಹಳ್ಳಿಗಳಲ್ಲಿ ಹೋಗಿ, ನೆಲೆ ನಿಲ್ಲುವಂತೆ ವೈದ್ಯಕೀಯ ಪದವೀಧರರ ಮೇಲೆ ಒತ್ತಾಯ ಹೇರಬೇಕೆಂಬ ಮತ್ತು ಕಡಿಮೆ ಅವಧಿಯ ವೈದ್ಯಕೀಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂಬ ಸೂಚನೆಗಳನ್ನು ವಿಚಾರಿಸುವುದಕ್ಕೆ ಸರಕಾರ ಮುದತ್ತ ಕೊಡಬೇಕಾಗಿ ಬಂದಿರುವ ಈ ದಿವಸಗಳಲ್ಲಿ ಗುರುಪುರದಲ್ಲಿ ನಡೆದಿರುವಂಥ ಸಾಹಸವನ್ನು ಸಹೃದಯತೆಯಿಂದಲೂ ಸಹಾನುಭೂತಿಯಿಂದಲೂ ಕೃತಜ್ಞತೆಯ ದೃಷ್ಟಿಯಿಂದಲೂ ನೋಡಬೇಕಾಗಿದೆ— ಈ ಕೇಂದ್ರವನ್ನು ತೆರೆಯುವುದಕ್ಕೆ ವ ನಸ್ಸು ಮಾಡಿದ ಕಾಲೇಜಿನ ಪ್ರಭೃತಿಗಳು ಉದಾತ್ತ ಧ್ಯೇಯವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದಾರೆಂಬುದು ಸ್ಪಷ್ಟ; ಹಳ್ಳಿಯ ಆರೋಗ್ಯದ ಕುರಿತು ವಿಶೇಷ ಗಮನ ಕೊಡುವಂತೆ ವಿದ್ಯಾರ್ಥಿಗಳನ್ನು ಪ್ರೊದಲಿಸಿಂದಲೂ ಸಿದ್ಧಗೊಳಿಸುವುದೇ ಅವರ ಸಂಕಲ್ಪವಾಗಿರುತ್ತದೆ; ಮಣಿಪಾಲದಂಥ ಗ್ರಾಮ ಕೇಂದ್ರದಲ್ಲಿ ಕಾಲೇಜನ್ನು ಸ್ಥಾಪಿಸುವಾಗಲೂ ಈಗ ವೈದ್ಯಕೀಯ ಸಹಾಯದ ಕೇಂದ್ರವನ್ನು ತೆರೆಯುವಾಗಲೂ ಅವರ ಮುಂದಿದ್ದುದು ಇದೇ ಆದರ್ಶ. ಗುರುಪುರದ ಚಟುವಟಿಕೆಗಳನ್ನು ವಿಸ್ತರಿಸಿ, ಆಸುಪಾಸಿನ ಪ್ರತಿಯೊಂದು ಗ್ರಾಮದ ಮನೆಮನೆಗೂ ಹೋಗಿ, ಅಲ್ಲಿ ರೋಗಿಗಳನ್ನು ಪರೀಕ್ಷಿಸಿ, ಚಿಕಿತ್ಸೆ ನಡೆಸುವುದೇ ಈ ಕೇಂದ್ರದಲ್ಲಿ ಕೆಲಸ ಮಾಡುವ ವಿದ್ಯಾರ್ಥಿ ವೃಂದ ಮತ್ತು ದಕ್ಷ ಅಧ್ಯಾಪಕರು ಹಾಕಿ ಕೊಂಡಿರುವ ಕಾರ್ಯಕ್ರಮ. ಸಂಚಾರಿ ವಾಹನವೊಂದು ಇವರ ನೆರವಿಗೆ ಸಿಗುತ್ತದೆಯಾಗಿ ಕೇಳುತ್ತೇವೆ. ನಡೆದು ಹೋಗಲು ತುಂಬ ಸಮಯ ಬೇಕಾದುದರಿಂದ ಇಂಥ ವಾಹನವು ಹೆಚ್ಚಿನ ಸಂಖ್ಯೆಯಲ್ಲಿ ಹಾಗು ಕ್ಷಿಪ್ರವಾಗಿ ರೋಗಿಗಳಿಗೆ ಶುಶ್ರೂಷೆ ನಡೆಸಲು ಸಹಾಯಕವೆನಿಸುತ್ತದೆ. ವಿದ್ಯಾರ್ಥಿಗಳ ಪಾಲಿಗೆ ಇದೊಂದು ಬಗೆಯ ಪ್ರತ್ಯಕ್ಷ ಶಿಕ್ಷಣವೇ ಆಗುತ್ತದೆ—ಮಂಗಳೂರಿನಂಥ ಕೇಂದ್ರದ ಆಸ್ಪತ್ರೆಗಳಿಗೆ ಹಳ್ಳಿಗಳ ವಾತಾವರಣಕ್ಕೆ ವಿಶಿಷ್ಟವಾದ ರೋಗಗಳಿಂದ ಪೀಡಿತರಾದ ಜನರು ಚಿಕಿತ್ಸೆಗಾಗಿ ಬಂದು ಸೇರುವುದು ವಿರಳ; ಏಕೆಂದರೆ, ಅದಕ್ಕೆ ಬೇಕಾದ ಅನುಕೂಲತೆ ಹಳ್ಳಿಗರಿಗೆ ಸಾಮಾನ್ಯವಾಗಿ ಲಭ್ಯವಿರುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳಿಗೆ ಹಳ್ಳಿಯ ರೋಗಗಳ ಪರಿಚಯ ಮತ್ತು ಚಿಕಿತ್ಸೆಯ ಕ್ರಮವನ್ನು ತಿಳಿದುಕೊಳ್ಳಲಿಕ್ಕೆ ಈ ಕೇಂದ್ರವು ಉಪಯುಕ್ತವೆನಿಸುತ್ತದೆ; ಹಳ್ಳಿಯ ಸಮಸ್ಯೆಗಳನ್ನು ಮನಗಂಡ ವಿದ್ಯಾರ್ಥಿಗಳು ಶಿಕ್ಷಣೋತ್ತರದಲ್ಲಿ ಯಾರದೇ ಒತ್ತಾಯವಿಲ್ಲದೆ ಹಳ್ಳಿಗಳಲ್ಲಿ ತಮ್ಮ ಸ್ವತಂತ್ರ ವ್ಯವಸಾಯವನ್ನು ತೊಡಗುವಂತೆಯೂ ತಕ್ಕ ಪ್ರಭಾವವನ್ನು ಗ್ರಾಮ ಕೇಂದ್ರಗಳು ಮಾಡಬಹುದು—ಎಂದಾಶಿಸಿದರೆ ತಪ್ಪಾಗದು. ಹಳ್ಳಿಯ ಜನರಿಗೆ ವಿದ್ಯಾರ್ಥಿಗಳೊಡನೆ ಪ್ರವೀಣರೂ ನಿಷ್ಣಾತರೂ ಆದ ಅಧ್ಯಾಪಕ ವೈದ್ಯರ ಸೇವೆಯ ಪ್ರಯೋಜನ ಸಿಗುತ್ತದೆ; ಎಂಥ ಕಠಿಣ ಪ್ರಸಂಗದಲ್ಲಿಯೂ ಉತ್ತಮ ಸಲಹೆಯನ್ನಿವರು ಕೊಡಬಲ್ಲರು; ತಕ್ಕ ಔಷಧ ಹತ್ತಿರದಲ್ಲಿದ್ದರೆ, ಅದನ್ನು ನೀಡಬಲ್ಲರು. ಗ್ರಾಮ ಕೇಂದ್ರದಲ್ಲಿ ಔಷಧದ ಸಂಗ್ರಹ ಧಾರಾಳವಾಗಿರುವಂತೆಯೂ ಆಧುನಿಕ ಔಷಧಗಳ ಅಭಾವವಿರದಂತೆಯೂ ಮಹಾಜನರು ಮುಕ್ತಹಸ್ತದಿಂದ ಸಹಾಯ ಸಲ್ಲಿಸಬೇಕೆಂದು ವಿನಂತಿಸುವುದು ಇಲ್ಲಿ ಅಪ್ರಸ್ತುತವಾಗಲಾರದು. ಚಿಕಿತ್ಸೆಯ ಕ್ಷೇತ್ರದಲ್ಲಿ ಇನ್ನು ಕೆಲಸ ನಡೆಸುವುದಲ್ಲದೆ, ರೋಗ ಬಾರದಂತೆ ತಡೆಗಟ್ಟುವ ಕಡೆಗೂ ಈ ಕೇಂದ್ರ ಗಮನ ಕೊಡುವುದೆಂದು ತಿಳಿದು ಬರುತ್ತದೆ. ಶುದ್ಧ ನೀರು, ಪೋಷಕ ಆಹಾರ, ಉತ್ತಮ ವಸತಿ ವ್ಯವಸ್ಥೆಗಳ ಬಗ್ಗೆ ಮತ್ತು ಮಕ್ಕಳ ಆರೋಗ್ಯದ ಕಡೆಗೆ ವಿದ್ಯಾರ್ಥಿಗಳೂ ಅಧ್ಯಾಪಕರೂ ಹಳ್ಳಿಗರಲ್ಲಿ ಜ್ಞಾನವನ್ನೂ ಜಾಗೃತಿಯನ್ನೂ ಹುಟ್ಟಿಸಲು ಪ್ರಯತ್ನಿಸುವಾಗ, ತಿಳಿವಳಿಕೆಯುಳ್ಳ ಸ್ಥಳೀಯರು ಅವರ ಬೆಂಬಲಕ್ಕೆ ನಿಲ್ಲಬೇಕು. ಹೀಗೆ ಗುರುಪುರದ ಕೇಂದ್ರವು ಯಶಸ್ವಿಯಾದರೆ, ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣ ಹೆಚ್ಚುದಂತೆಲ್ಲ ಹೊಸ ತಂಡಗಳನ್ನು ಜಿಲ್ಲೆಯ ಬೇರೆ ಬೇರೆ ಗ್ರಾಮ ಕೇಂದ್ರಗಳಲ್ಲಿ ನೆಲೆಗೊಳಿಸುವುದಕ್ಕೂ ಪ್ರತಿದಿನವೂ ಕೇಂದ್ರಗಳು ಕೆಲಸ ಮಾಡುವಂತೆ ನೋಡಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಹಾಗಾಗಲಿ ಎಂದು ಹೃತ್ಪೂರ್ವಕ ಹಾರೈಸುತ್ತೇವೆ.

ಉಡುಪಿ

ಮುನಿಸಿಪಲ್ ಚುನಾವಣೆ ಅವಿರೋಧ ಆಯ್ಕೆಗಳು ಟೌನ್‌ಪಲ್ ವಾರ್ಡು— ಡಾ. ಪಿ. ಜಿ. ಆಚಾರ್ಯ. **ಕಡಿಯಾಳಿ-** ಎ. ನಾರಾಯಣ ನಾಯಕ್. **ಸೆಂಟ್ರಲ್-** ತ್ರಿವಿಕ್ರಮ ನಾಯಕ್. **ಕಾಡಬೆಟ್ಟು ಹರಿಜನ-** ಜಿಳಿಯ. **ಅಜ್ಜರಕಾಡು ಲೇಡಿ ರಿಜರ್ವ್—** ಶ್ರೀಮತಿ ಎಲ್. ಫೆರ್ನಾಂಡೀಸ್. **ಕನಕಾಡಿ-** ಕೆ. ರಾಮರಾವ್. **ಗುಂಡಿಬೈಲ್ ಲೇಡಿರಿಜರ್ವ್—** ಶ್ರೀಮತಿ ಮನೋರಮಾ ದೇವಿ. **ಒಳಕಾಡು.** ಕೆ. ದೇವೇಂದ್ರ ಶೆಟ್ಟಿ. **ಪಣಿಯಾಡಿ—** ಬಿ. ವಾಸುದೇವ ರಾವ್. **ಅಂಬಲಪಾಡಿ—** ಪಿ. ರವೀಂದ್ರ ನಾಯಕ್. **ಅಜ್ಜರಕಾಡು –** ಎಸ್. ವಿಠಲ ಕಿಣಿ.

ಸ್ಪರ್ಧೆಯಿರುವ ವಾರ್ಡುಗಳು.

ತೆಂಕಪೇಟೆ— ಕೆ. ಕೆ. ಪೈ. ಉಮಾನಾಥಾಚಾರ್ಯ. **ಕುಂಜಿಬೆಟ್ಟು—** ಕೆ. ಕೆ. ಪೈ, ಪಿ. ವಿ. ಆಚಾರ್ಯ, ದಾಸ ಸೇರಿಗಾರ ದಾಮೋದರ. **ಗುಂಡಿಬೈಲು** ದಾಸ ಸೇರಿಗಾರ, ಆರ್. ಆರ್. ಕುಂಜೂರು ವೆಂಕಟ್ರಮಣ ರಾವ್. **ಮೂಡನಿಡಂಬೂರು-** ವಿಠಲ ಶೆಟ್ಟಿ, ಪಿ. ಶೀನ ನಾಯಕ್, **ಬನ್ನಂಜೆ—** ಡಾ! ಪಿ. ವಿ. ವ್ಯಾಸರಾವ್, ಎಸ್. ಗುರುಸ, **ಕಾಡಬೆಟ್ಟು-** ಎ. ಜಿ. ಅಳ್ಳೆ, ಟಿ. ಎ. ವಾಸುದೇವನ್, ಎನ್. ಶೀತಾರಾಮ ಕಾಮತ್. **ಕಿನ್ನಿಮೂಲ್ಕಿ** ಇಮಾನ್ಸೆಲ್ ಜತ್ತನ್ನ, ಪಿ. ಮ್ಯಕಾ. **ಬೈಲೂರು.** ಎ. ಮಂಜುನಾಥ ರಾವ್, ಎಚ್. ವೆಂಕಟೇರ ನಾಯ್ಕ, **ಶಿರಿಬೀಡು.** ಇಮಾಮ್ ಸಾಹೇಬ್, ಭಾಪು ಜನ್, ಎ. ಜಿ. ಅಳ್ಳೆ.

ಅಕ್ಕಿ ಹಂಚೋಣಿ— ಇದೇ ತಾ. 25 ನೆ ಆದಿತ್ಯವಾರ ಮಧ್ಯಾಹ್ನ 12½ ಗಂಟೆಗೆ ಉಡುಪಿ ಪಾಂಗಾಳ ನಾಯಕ್ ಬೇಂಕ್ ವಠಾರದಲ್ಲಿ ದೊಡ್ಡವರಿಗೆ ½ ಸೇರು ಅಕ್ಕಿ ಮತ್ತು ಎರಡಾಣೆ, ಚಿಕ್ಕವರಿಗೆ ಒಂದಾಣೆ ಅಕ್ಕಿ ಮತ್ತು ಒಂದಾಣೆಯಂತೆ ಅಕ್ಕಿ ಮತ್ತು ಹೊಬಲಗನ್ನು ಹಂಚುವುದಾಗಿಯೂ ಬಾರಧಿವರು ಸಹಕರಿಸಬೇಕಾಗಿಯೂ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ವಿನಂತಿಸುತ್ತಾರೆ.

ಪ್ರಾರಂಭೋತ್ಸವ— ಇದೇ ತಾ. 17 ರಂದು ವಕೀಲ್ ಬಿ. ಶೀನಪ್ಪ ಹೆಗ್ಡೇರ ಅಧ್ಯಕ್ಷತೆಯಲ್ಲಿ ನ್ಯೂ ಇಂಡಿಯಾ ಎಡ್ಯೂಕೇಶನ್ಸ್ ಕಂಪೆನಿಯ ಶಾಖಾ ಕಚೇರಿಯ ಪ್ರಾರಂಭೋತ್ಸವವು ನೆರವೇರಿತು. ಶ್ರೀ ಎಂ. ಕೆ. ಮಲ್ಯರ ಸ್ವಾಗತ ಭಾಷಣ, ಅಧ್ಯಕ್ಷರ ಭಾಷಣಗಳಾದ ಮೇಲೆ ಶ್ರೀ ಕೃಷ್ಣಯ್ಯ ಸೆಟ್ಟಿ, ಕೊಳ್ಳೆಬೈಲರು ಆಭಾರಸೂಚಿಸಿದರು. ಅತಿಥಿಗಳಿಗೆ ಉಪಾಹಾರ ಸತ್ಕಾರವಿತ್ತು.

ಪ್ರವಾಸಚಿತ್ರ ಪ್ರದರ್ಶನ— ಇದೇ ತಾ. 17 ರಂದು ಸ್ಥಳೀಯ ಮಹಿಳಾ ಸಮಾಜದ ಆಶ್ರಯದಲ್ಲಿ, ಪೋಸ್ಟಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ. ಇತ್ತೀಚೆಗೆ ಅಮೆರಿಕಾ ಪ್ರವಾಸವನ್ನು ಮುಗಿಸಿಕೊಂಡು ಬಂದ ಶ್ರೀ ಕೆ. ವಿಠಲ ಶೆಟ್ಟಿಯವರು ತಮ್ಮ ಪ್ರವಾಸಕ್ಕೆ ಸಂಬಂಧಪಟ್ಟ ಚಿತ್ರಗಳನ್ನು ವಿವರಣೆಗಳೊಂದಿಗೆ ಮಾಯಾಲಾಂಪ್ರದ ಮೂಲಕ ಪ್ರದರ್ಶಿಸಿದರು.

THE VIJAYA BANK, LTD., BRAHMAVAR.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸುಹೃದಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಸಲ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಬರುವ 30—9—55ನೇ ಶುಕ್ರವಾರ ಅಪರಾಹ್ನ ಗಂಟೆ 4ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರೆ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ನಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-9-55ರ ವರೆಗೆ.		
214/53	ಜೇನ್ಸ್ ಡಿಲೀಮ P.C.839 ಬ್ರಹ್ಮಾವರ ಪೋಲೀಸು ಸ್ಟೇಶನ್, ಬ್ರಹ್ಮಾವರ	21	0	0
603/53	ಕೆ. ಜೇನ್ಸನ್ ಡಿ'ಸೋಜ, ಮಿನ್ಸ ಡಿ'ಸೋಜರ ಮಗ, ಮೈಲ್ ರನ್ನರ್, ಅರೂರು ಗ್ರಾಮ, ಪೋಸ್ಟು ಕುಂಜಾಲು.	47	5	0
722/54	ಐ. ರಾಜೀವ ಸೆಟ್ಟಿ, ಐ. ನಾರಾಯಣ ಸೆಟ್ರಿ ಅಳಿಯ, ಕುಂಜಾಲು, ಪೋಸ್ಟು ಕುಂಜಾಲು.	168	6	0
728/54	ಬೇಪಿ, ರುಕ್ಕು ಉಸ್ಮಾತ್ರಿ ಮಗಳು, ಉಪ್ಪಿನ ಕೋಟೆ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	11	2	0
736/54	ಯತ್ತಪಿನ್ ಸುವಾರಿಸ್, ಲೋರೇಸ್ ಸುವಾರಿಸರ ಮಗಳು, ಐರೋದಿ ಗ್ರಾಮ, ಪೋಸ್ಟು ಸಾಸ್ತಾನ.	73	0	0
740/54	ನಾಗಪ್ಪ ಮಲ್ಯ, ಬಾಬಣ್ಣ ಮಲ್ಯರ ಮಗ, ಚಾಂತಾರು ಗ್ರಾಮ, ಪೋಸ್ಟು ಬ್ರಹ್ಮಾವರ.	110	0	0
907/54	ಗಿರಿಯ ಪೂಜಾರಿ, ಬೈರಾದಿ ಶೇಷ ಪೂಜಾರಿ ಮಗ, ಕುಪ್ರು ಗೋಡು ಗ್ರಾಮ, ಪೋಸ್ಟು ಬ್ರಹ್ಮಾವರ.	27	2	0
945/54	ಕೆ. ಅಣ್ಣಪ್ಪ ಸೆಟ್ಟಿ, ಕೃಷ್ಣಯ್ಯ ಸೆಟ್ರಿ ಅಳಿಯ, ಕಾಡೂರು ಗ್ರಾಮ, ಪೋಸ್ಟು ಕೊಕ್ಕರ್ಣೆ.	128	15	0
984/54	ಯು. ಸಂಜೀವ, ರಾಮಣ್ಣ ಸೆರ್ವೆಗಾರರ ಮಗ, ಹೆರೆಬೆಟ್ಟು, ಉಪ್ಪೂರು ಗ್ರಾಮ, ಪೋಸ್ಟು ಉಪ್ಪೂರು.	26	14	0

ಬ್ರಹ್ಮಾವರ
15—9—55.

ಬಿ. ಭಾಸ್ಕರ ಸೆಟ್ಟಿ,
ಮ್ಯಾನೇಜರ್.

ಅರ್ಜೆಂಟೀನದ ಸೇನೆಯ ದಂಗೆ

ಪೊಸ್ಕೋದೊಡನೆ ಅಡೆನ್ಯೂರರ ಸ್ನೇಹ

ದಕ್ಷಿಣ ಅಮೇರಿಕದ ಪ್ರಬಲ ರಾಜ್ಯಗಳಲ್ಲಿ ಒಂದಾದ ಅರ್ಜೆಂಟೀನದಲ್ಲಿ ಮರಳಿ ಸೇನಾಧಿಕಾರಿಗಳ ದಂಗೆ ನಡೆಯಿತು. ಕೆಲವು ತಿಂಗಳ ಹಿಂದೊಮ್ಮೆ ನಡೆದ ಬಂಡಾಯವನ್ನು ಅಧ್ಯಕ್ಷ ಪೆರೋನರು ಸ್ಥಿರದಲ್ಲಿಯೇ ಶಮನ ಮಾಡಿದ್ದರು. ಆದರೆ ಈ ಸಲದ ಕದನ ಉಗ್ರ ಸ್ವರೂಪವನ್ನು ತಳೆದಿದೆ; ಬಂಡುಗಾರರೇ ಮೇಲ್ಗೈ ಹೊಂದಿದ್ದಾರೆಂದು ಬಂದಿರುವ ವರದಿಗಳು ತಿಳಿಸುತ್ತವೆ.

ಮೂಲ ಕಾರಣ

ಪೆರೋನರಿಗೂ ಕ್ರೈಸ್ತ ಇಗರ್ಜಿಗಳಿಗೂ ಹೊಂದಿಕೆ ಇರಲಿಲ್ಲ. ಇದೇ ಮೂರು ತಿಂಗಳ ಪೂರ್ವದಲ್ಲಿ ನಡೆದ ದಂಗೆಯ ಮೂಲ ಕಾರಣ. ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ಪೆರೋನರು ಘಟನಾತ್ಮಕ ರಾಜ್ಯವನ್ನು ಸ್ಥಾಪಿಸುವೆನೆಂದು ಹೇಳಿದ್ದರು. ಆದರೆ ಇದು ಕಾಲಹರಣದ ಕುತಂತ್ರವೆಂದು ದಂಗೆಗಾರರು ಭಾವಿಸಿದುದರಿಂದ ಅಧ್ಯಕ್ಷರು ಪ್ರತಿ ಹಿಂಸೆಗೆ ತೊಡಗಿದರು.

ಪೆರೋನರಿಗೆ ಬೆಂಬಲ

ಕೂಲಿಕಾರರ ಬೆಂಬಲವು ಅಧ್ಯಕ್ಷ ಪೆರೋನರಿಗೆ ಧಾರಾಳವಾಗಿ ಇದೆ ಎನ್ನಲಾಗುತ್ತದೆ. ತಾನು ರಾಜೀನಾಮೆ ಕೊಡುವೆನೆಂದಾಗ ಕೂಲಿಕಾರರು ಹಾಗೆ ಮಾಡಬಾರದೆಂದು ಅಧ್ಯಕ್ಷರನ್ನು ಒತ್ತಾಯಿಸಿದ್ದರೆಂಬುದು ನಿಜ. ಆದರೆ, ಈ ಸಲದ ದಂಗೆಯಲ್ಲಿ ಜಲ ಮತ್ತು ವಾಯು ಸೇನೆಯೊಡನೆ ನೆಲ ಸೇನೆಯ ಕೆಲವು ವಿಭಾಗಗಳೂ ಅಧ್ಯಕ್ಷರಿಗೆ ತಿರುಗಿ ಬಿದ್ದಿವೆ.

ಯಾತ್ರೆಯ ಫಲಶ್ರುತಿ

ಪೋಸ್ಕೋಗೆ ಪ್ರಯಾಣ ಬೆಳೆಸಿದ ಪಶ್ಚಿಮ ಜರ್ಮನಿಯ ಛಾನ್ಸಲರರಾದ ಡಾ. ಅಡೆನೂರರು ರಾಯಭಾರಿ ಸಂಬಂಧವನ್ನು ಸ್ಥಾಪಿಸುವುದಕ್ಕೆ ಸಮ್ಮತಿಸಿ ಬಂದಿದ್ದಾರೆ. ಬೇಗನೆ ವ್ಯಾಪಾರ ಸಂಬಂಧವನ್ನು ತೊಡಗಿಸುವುದಕ್ಕೂ ವ್ಯವಸ್ಥೆ ಮಾಡಬೇಕೆಂದು ಒಪ್ಪಿದ್ದಾರೆ. ಆದರೆ ಜರ್ಮನಿಯ ಏಕೀಕರಣದ ಆಶೆ ಮಾತ್ರ ಸ್ವಲ್ಪವೂ ಫಲಿಸಿಲ್ಲ.

ಸೆರೆಯಾಳುಗಳ ಬಿಡುಗಡೆ

ಅಡೆನೂರರು ಇನ್ನೊಂದು ಕೆಲಸವನ್ನೂ ಸಾಧಿಸಿ ಬಂದರು. ದ್ವಿತೀಯ ಮಹಾಯುದ್ಧ ಕಾಲದಲ್ಲಿ ರಶ್ಯನರು ಸೆರೆ ಹಿಡಿದಿದ್ದ ಜರ್ಮನರ ಬಿಡುಗಡೆಗೆ ರಶ್ಯವನ್ನು ಒಪ್ಪಿಸಿದರು ಆದರೆ ಎಲ್ಲ ಕೈದಿಗಳ ಮುಕ್ತಿಯಾಗುವ ಆಶೆ ಕಾಣಿಸುತ್ತಿಲ್ಲ—ಅಡೆನೂರರ ಅಂದಾಜಿನಲ್ಲಿ ಕನಿಷ್ಠ ಒಂದು ಲಕ್ಷದಷ್ಟಾದರೂ ಜರ್ಮನರು ರಶ್ಯದಲ್ಲಿದ್ದಾರೆ; ರಶ್ಯದ ಹೇಳಿಕೆಯಂತೆ ಈ ಸಂಖ್ಯೆ ಹತ್ತು ಸಾವಿರದಷ್ಟೂ ಇಲ್ಲ!

ಏಕೀಕರಣದ ಬೆಲೆ

ಪಾಶ್ಚಾತ್ಯ ದೇಶಗಳಿಗೂ ಸ್ವತಃ ಪಶ್ಚಿಮ ಜರ್ಮನಿಗೂ ಅಡೆನೂರರ ಸಾಧನೆ ಕಣ್ಣಿಗೇನೂ ಹಿಡಿಸಿಲ್ಲ. ಕೆಲವು ಸಾವಿರ ಜರ್ಮನರನ್ನು ರಶ್ಯದಿಂದ ಬರಮಾಡಿಕೊಳ್ಳಲು ರಾಯಭಾರ ಸಂಬಂಧ ಮುಂತಾದುವನ್ನೆ ಒಪ್ಪಿದ ಅಡೆನೂರರು ಪೂರ್ವ ಜರ್ಮನಿಯ ೧೮೦ ಲಕ್ಷ ಬಾಂಧವರನ್ನು ಸೇರಿಸಿಕೊಳ್ಳುವ ಏಕೀಕರಣದ ಸಾಧನೆಗೆ ಎನುಬೆಲೆ ಕೊಡಬೇಕಾಗಿ ಬಂದೀತು—ಎಂದು ಪ್ರಶ್ನಿಸಲಾಗುತ್ತದೆ.

ರಶ್ಯದ ತಂತ್ರ

ಕೈದಿಗಳ ಬಿಡುಗಡೆಯ ಕೀರ್ತಿಯಲ್ಲಿ ಪೂರ್ವ ಜರ್ಮನಿಗೆ ರಶ್ಯವು ಪಾಲನ್ನು ಕೊಡದಿರಲಿಕ್ಕಿಲ್ಲವೆಂದು ಹೇಳಲಾಗುತ್ತದೆ ಇದಲ್ಲದೆ ಯುದ್ಧ ಕಾಲದಲ್ಲಿ ಬಂದು ಪಶ್ಚಿಮ ಜರ್ಮನಿಯಲ್ಲಿ ನಿರಾಶ್ರಿತರಂತೆ ಉಳಿದಿರುವ ಒಂದುಲಕ್ಷ ರಶ್ಯನರಿದ್ದಾರೆಂದೂ ಅವರೆಲ್ಲರ ಬಿಡುಗಡೆ ಮಾಡಬೇಕೆಂದೂ ರಶ್ಯ ಪ್ರತಿಸೂಚನೆಯನ್ನು ಮಾಡಿರುತ್ತದೆ.

ಪಾಶ್ಚಾತ್ಯರ ಅಧೈರ್ಯ

ಹೀಗೆ ಬೆಲೆಕೊಡುವುದಲ್ಲಿ ಧಾರಾಳತನವನ್ನು ಪ್ರಕಟಪಡಿಸಿದ ಪಶ್ಚಿಮ ಜರ್ಮನಿಯು ಏಕೀಕರಣದ ಆಶೆಯಿಂದ ನ್ಯಾಟೋ ರಾಷ್ಟ್ರಗಳಿಗೆ ದ್ರೋಹ ಬಗೆಯದೆ ಎಂದು ಪಾಶ್ಚಾತ್ಯ ಗುಂಪಿನ ಸಂದೇಹ. ಈ ರೀತಿ ತಪ್ಪು ಕಲ್ಪನೆಯನ್ನು ಕಟ್ಟಿಕೊಳ್ಳಬಾರದು ನ್ಯಾಟೋ ಒಪ್ಪಂದದಿಂದ ಹೊರ ಬರುವ ಪ್ರಶ್ನೆಯೇ ಇಲ್ಲ. ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಂತೆ ರಾಯ ಭಾರ ಸಂಬಂಧವನ್ನಷ್ಟೆ ಪಶ್ಚಿಮ ಜರ್ಮನಿ ಬೆಳೆಸಿಕೊಂಡಿದೆ—ಎಂಬುದೇ ಇದಕ್ಕೆ ಅಡೆನೂರರ ಸಮಾಧಾನ.

ಗುಲಾಂ ಮಹಮ್ಮದರು

ಪಾಕಿಸ್ತಾನದ ಗವರ್ನರ ಜನರಲರಾದ ಮಿ. ಗುಲಾಂ ಮಹಮದರು ಎರಡು ತಿಂಗಳ ರಜೆ ತೆಗೆದುಕೊಂಡಿದ್ದರು. ಈಗ ಆ ರಜೆಯ ಅವಧಿಮುಗಿಯುವ ಅಕ್ಟೋಬರ ೬ನೇ ತಾರೀಕಿನಿಂದ ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ; ಅದು ಸ್ವೀಕಾರಗೊಂಡು, ಹಂಗಾಮಿ ಗವರ್ನರ ಜನರಲರಾದ ಮೇ ಜ. ಇಸ್ಕಂದರ್ ಮಿರ್ಜಾರ ನೇಮಕ ಕಾಯಮಾಗಿದೆ.

ಏಕ ಘಟಕ ಮಸೂದೆ

ಪಶ್ಚಿಮ ಪಾಕಿಸ್ತಾನದ ಒಕ್ಕೂಟ ರಜನೆಯ ಅಧ್ಯಕ್ಷರೂ ಹೀಗೆ ನಿವೃತ್ತರಾಗುವರಾದರೂ ಪಾಕಿಸ್ತಾನದ ಉಕ್ಕಿನ ಮನುಷ್ಯ ಮಿರ್ಜಾರು ಗುಲಾಂ ಮಹಮದರ ಅಪೂರ್ಣ ಆಶೆಯನ್ನು ನೆರವೇರಿಸಿಕೊಡುವುದು ನಿಶ್ಚಯ. ಘಟನಾ ಸಮಿತಿಯಲ್ಲಿ ಪ್ರತಿಪಕ್ಷದ ನಿತ್ಯ ಟೀಕೆಗಳ ನಡುವೆ ಏಕ ಘಟಕ ರಜನೆಯ ಮಸೂದೆಯ ಪ್ರಥಮ ವಾಚನ ಸ್ವೀಕಾರವಾಗಿದೆ. ಅದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಕಳಿಸಬೇಕೆಂಬ ಸೂಚನೆ ತಿರಸ್ಕೃತವಾಯಿತು.

ಗಾಫರಖಾನರ ಬಂಧನ

ಸಾರ್ವಜನಿಕ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಇಂಥ ಗಂಭೀರ ಪ್ರಶ್ನೆಗಳ ನಿರ್ಣಯ ಕೈಗೊಳ್ಳಕೂಡದೆಂದು ಗಡಿನಾಡಿದ ಗಾಂಧಿ ಗಾಫರಖಾನರು ಹೇಳುತ್ತಿದ್ದರು. ಈಗ ಬಲೂಚಿಸ್ತಾನದಲ್ಲಿ ಪ್ರವೇಶಿಸಿ ತಮ್ಮ ಮೇಲಿನ ಸಂಚಾರ ನಿರ್ಬಂಧವನ್ನು ಮುರಿದರೆಂಬ ಕಾರಣದಿಂದ ಅವರನ್ನು ಈಗ ಸೆರೆ ಹಿಡಿಯಲಾಗಿದೆ.

ರಾಜ ಕುಮಾರರ ವಿಜಯ

ಕಂಬೋಡಿಯದಲ್ಲಿ ನಡೆದ ಚುನಾವಣೆಯು ರಾಜಕುಮಾರರ "ಸಮಾಜವಾದಿ" ಪಕ್ಷಕ್ಕೆ ಎಲ್ಲ ಸ್ಥಾನಗಳನ್ನೂ ದೊರಕಿಸಿಕೊಟ್ಟಿತು. ಘಟನಾತ್ಮಕ ಅರಸೊತ್ತಿಗೆಯುಳ್ಳ ಸರಕಾರದ ರಚನೆ ತನ್ನ ಧ್ಯೇಯವೆಂದು ಅವರು ಹೇಳಿದ್ದಾರೆ. ನೀಟೋ ಮುಂತಾದ ಸೈನಿಕ ಒಪ್ಪಂದದಲ್ಲಿ ತನ್ನ ಸರಕಾರ ಸೇರುವುದಿಲ್ಲ; ತಾಟಸ್ಥ್ಯವೇ ತನ್ನ ನಿಲುಮೆ ಎಂದಿದ್ದಾರೆ. ಆದರೆ ಅಮೇರಿಕದ ಸಹಾಯ ಸ್ವೀಕರಿಸಲು ಅವರಿಗೆ ಆತುರವಿದೆ—ಇದುಮಾತ್ರ ಜನೇವಾದ ಒಡಂಬಡಿಕೆಗೆ ಸಮ್ಮತವಾಗುವುದು ಸಂಶಯ.

ರಾಷ್ಟ್ರಸಂಘದ ಸಭೆ

ಸಂಯುಕ್ತ ರಾಷ್ಟ್ರಸಂಘದ ಅಧಿವೇಶನ ಇಂದೇ ಮಂಗಳವಾರ (ದಿನಾಂಕ ೨೦) ಪ್ರಾರಂಭವಾಗಿದೆ. ಈ ಸಲ ಎಲ್ಲ ರಾಷ್ಟ್ರಗಳ ಮೇಲೆ ಜನೇವ ಮತ್ತು ಬಾಂಡುಂಗಿನ ಸಮ್ಮೇಲನಗಳ ಸತ್ಪ್ರಭಾವಬಿದ್ದಿದೆ ಎಂದು ಸುದ್ದಿ. ನೆಹರುಗಳು ಜಾಗತಿಕ ವಾತಾವರಣವನ್ನು "ಕೋಣಿಯಲ್ಲಿ ಮದ್ದು ತುಂಬಿರುವುದು ನಿಜ; ಆದರೆ ಬೆರಳನ್ನು ಅದರ ಕುದುರೆಯ ಮೇಲೆ ಯಾರೂ ಇಟ್ಟು ನಿಂತಿಲ್ಲ" ಎಂದು ವರ್ಣಿಸಿರುವುದರಲ್ಲಿ ಅತಿಶಯೋಕ್ತಿ ಇಲ್ಲವೆನ್ನಲಾಗುತ್ತದೆ.

ನ್ಯಾಯವಾದ ಬೆಕ್ಕು

ಗೋವೆಯ ಕುರಿತು ನೆಹರುಗಳು ತಳೆದಿರುವ ಧೀರೋದಾತ್ತವಾದನಿಲುವೆಯು ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆ ಸತ್ಪರಿಣಾಮ ಮಾಡಿದೆಯೇ ಹೊರತು ಹಲವರು ಭಾವಿಸಿರ ಬಹುದಾದಂತೆ ಕೆಡುಕನ್ನಲ್ಲ. ಭಾರತವು ತಾನು ಉಪದೇಶಿಸುವ ತತ್ವವನ್ನು ಅನುಸರಿಸಿಯೂ ತೋರಿಸುತ್ತಿದೆ ಎಂದು ಎಲ್ಲರ ಗಮನಕ್ಕೂ ಗೋವೆಯ ಪ್ರಶ್ನೆ ತೋರಿಸಿಕೊಟ್ಟಿದೆ. ಗೋವೆಯ ಸಮಸ್ಯೆಯ ಪರಿಹಾರಕ್ಕೆ ವಿದೇಶದ ರಾಷ್ಟ್ರವೊಂದು ಪ್ರಯತ್ನಿಸುತ್ತಿರುವುದಾಗಿಯೂ ಅದು ಗೋವೆಯ ಮೇಲೆ ಭಾರತಕ್ಕಿರುವ ನ್ಯಾಯವಾದ ಹಕ್ಕನ್ನು ಅಲ್ಲಗಳೆಯಲಾಗದೆಂದು ಪೋರ್ಚುಗಾಲಿಗೆ ಬೋಧಿಸುತ್ತಿರುವುದಾಗಿಯೂ ತಿಳಿದು ಬರುತ್ತದೆ.

ಅತಿಥಿಗಳ ಸಮೂಹ

ಇನ್ನು ಕೆಲವೇ ತಿಂಗಳುಗಳಲ್ಲಿ ರಶ್ಯದ ಪ್ರಧಾನಿ ಮತ್ತು (ಬಹುಶಃ ಕ್ರುಶ್ಚೆವರನ್ನೊಳಗೊಂಡು) ಅವರ ಸಹಕಾರಿಗಳು, ಇಂಡೋನೇಶಿಯದ ಚಕ್ರವರ್ತಿ, ಇರಾನಿನ ಶಹಾ, ಸೌದಿ ಅರೇಬಿಯದ ಅರಸ, ಇಂಡೋನೇಶಿಯ ಮತ್ತು ಪಶ್ಚಿಮ ಜರ್ಮನಿಗಳ ಉಪಾಧ್ಯಕ್ಷರು, ಕೆನಡ, ಆಸ್ಟ್ರೇಲಿಯ ಮತ್ತು ಇಟಲಿಗಳ ವಿದೇಶ ಮಂತ್ರಿಗಳು ಭಾರತಕ್ಕೆ ಬರುವರೆಂದು ಪ್ರಧಾನಿ ನೆಹರು ತಿಳಿಸಿದ್ದಾರೆ.

ಎಣ್ಣೆ ಬರುವಾಗ...

ಮದ್ರಾಸಿನಲ್ಲಿ ಬರುವುದು, ಬರುವುದು ಎಂದಿದ್ದ ನ್ಯಾಯವಾದ ಗೇಣಿ ನಿರ್ಣಯದ ಮಸೂದೆಯು ಶಾಸನ ಸಭೆಯ ಮುಂದಿನ ಸಭೆಯಲ್ಲಿ ಮಂಡಿಸಲ್ಪಟ್ಟು ಪರೀಕ್ಷಕ ಸಮಿತಿಗೆ ಒಪ್ಪಿಸಲ್ಪಡುವ ನಿರೀಕ್ಷೆಯನ್ನು ಮುಖ್ಯ ಮಂತ್ರಿ ಶ್ರೀ ನಾಡರರು ವ್ಯಕ್ತಪಡಿಸಿದ್ದಾರೆ. ಆದರೆ ಎಣ್ಣೆ ಬರುವಾಗ ಗಾಣ ಮುರಿಯಿತು ಎಂಬ ಗಾದೆಯಂತೆ, ಕರ್ನಾಟಕ ಏಕೀಕರಣವು ನಡೆಲಿರುವ ದೆಸೆಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಇದರಿಂದ ಏನೂ ಪ್ರಯೋಜನವಾಗದು. ಏಕೀಕರಣದಿಂದ ನಮ್ಮ ಜಿಲ್ಲೆಯ ರೈತರಿಗೆ ಮೊದಲು ಸಿಕ್ಕುವ ಉತ್ತಾಗೊರೆ ಈ ನಿರಾಶೆಯ ರೂಪದಲ್ಲಿದೆ ಎಂದು ಹೇಳಬೇಕಾಗುತ್ತದೆ.

ಸರಿಸಮ ಪಾಲು

ನಾಡರರು ನ್ಯಾಯವಾದ ಗೇಣಿ ಎಂದರೆ ಭೂಕಂದಾಯ, ನೀರಿನ ತೆರಿಗೆ ಇತ್ಯಾದಿಗಳನ್ನೂ ಕಳೆದು ಉಳಿದದರ ಅರ್ಧವೆಂದು ಹೇಳಿದ್ದಾರೆ. ಬಾಕಿ ಅರ್ಧವಾಗುವಳಿದಾರನಿಗೆ ಸೇರುತ್ತದೆ. ಇದಕ್ಕಿಂತ ಯೋಗ್ಯವಾದ ಹಂಚುವಿಕೆಯು ಇರಲಿಲ್ಲವೆಂದು ಸರಕಾರದ ಅಭಿಪ್ರಾಯ. ಔದ್ಯಮಿಕ ಸಂಸ್ಥೆಗಳಲ್ಲಿ ಬಂಡವಾಳವನ್ನು ಒದಗಿಸಿದ ಪಾಲುಗಾರರು ಮತ್ತು ಕೆಲಸಮಾಡಿದ ಸಿಬಂದಿಯವರು ಲಾಭವನ್ನು ಹಂಚಿಕೊಳ್ಳುವ ಬಗೆ ಇದೇ ರೀತಿಯಾಗಿದೆ—ಎಂದು ನಾಡರರು ಸ್ವಸಮರ್ಥನೆ ಮಾಡಿಕೊಂಡಿದ್ದಾರೆ.

ಅಳಿಯ ಸಂತಾನ ಕ್ರಮ

ಹಿಂದು ವಾರಸು ಮಸೂದೆಗೆ ಪರಿಶೀಲಕ ಸಮಿತಿಯು ಕೆಲವು ತಿದ್ದುಪಡಿಗಳನ್ನು ಮಾಡಿದೆ ಅಳಿಯ ಸಂತಾನ, ಮರುಮಕ್ಕತ್ತಾಯಂ ಮತ್ತು ನಂಬೂದರಿ ಪದ್ಧತಿಗಳಿಗೊಳಪಟ್ಟ ಮಿತಾಕ್ಷರ ಪಾಲುಗಾರಿಕೆಯನ್ನು ಮೂಲಮಸೂದೆಯಲ್ಲಿ ಹೊರಗಿಟ್ಟಿದ್ದರು. ಅವುಗಳಿಗೆ ಸಕ ಹೊಸ ಮಸೂದೆ ಅನ್ವಯವಾಗಬೇಕೆಂದು ಪರಿಶೀಲಕ ಸಮಿತಿ ಶಿಫಾರಸು ಮಾಡಿರುತ್ತದೆ.

ಶ್ರೀ ಬಿ. ಬಿ. ಶೆಟ್ಟರಿಗೆ ಸತ್ಕಾರ — ಇದೇ ದಿನಾಂಕ 17ರಂದು ಸ್ಥಳೀಯ ಮುಂದಿನ ಇಪ್ಪಾಸದಲ್ಲಿ ಇತ್ತೀಚೆಗೆ ಜಪಾನದಿಂದ ಹಿಂತಿರುಗಿರುವ ಶ್ರೀ ಬಿ. ಬಿ. ಶೆಟ್ಟರಿಗೆ ಶ್ರೀ ಸೋದೆಪೈಗಳು, ಬಂದು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ಪೈಗಳು ಸ್ವಾಗತಿಸಿದ ಬಳಿಕ ಶ್ರೀ ಶೆಟ್ಟರು ಜಪಾನಿನ ಗೃಹಕೈಗಾರಿಕೆಗಳ ಕುರಿತು ಸಾತನುಡಿದರು ಶ್ರೀ ಕೊಚ್ಚಿಗಾರ್ ಪದ್ಮನಾಭ ಪೈಗಳು ತಮ್ಮ ಪೀಠಿಕೆಯನ್ನು ವ್ಯಕ್ತಪಡಿಸಿದರು. ಶ್ರೀ ರಮೇಶ ಪೈಗಳು ಧನ್ಯವಾದಗಳನ್ನಿತ್ತರು.

ಡಾ| ಮಾಧವ ಪೈಗಳಿಗೆ ಮಾತೃವಿಯೋಗ— ಶ್ರೀ ಉಪೇಂದ್ರ ಪೈ (ಮಾಜಿ ರಾಷ್ಟ್ರ ಎಸೆಕ್ಸ್ ಕೋಪರೇಶನ ಮೆಸೇಜಿಂಗ್ ಡೈರೆಕ್ಟರ್) ಡಾ. ಟಿ. ಮಾಧವ ಪೈ ಕೆನರಾ ಇಂಡಸ್ಟ್ರೀಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಚೆಯರ್ ಮ್ಯಾನ್ ಮತ್ತು ಮೆನೇಜಿಂಗ್ ಡೈರೆಕ್ಟರ್) ಶ್ರೀ ರಘುನಾಥ ಪೈ (ಕೆನರಾ ಮ್ಯೂಚುವಲ್ ಎಕ್ಸ್ಟೆನ್ಸಿಯ ಮೆನೇಜಿಂಗ್ ಡೈರೆಕ್ಟರ್) ಇವರುಗಳ ಮಾತೃ ಶ್ರೀ ಯಶೋದಮ್ಮನವರು ವೃದ್ಧಾಪ್ಯದ ದೆಸೆಯಿಂದ ಇತ್ತೀಚೆಗೆ ಅಸ್ವಸ್ಥಳಾಗಿದ್ದು 81ನೇ ಪ್ರಾಯದಲ್ಲಿ ಇದೇ ತಾ. 14ರಂದು ಅಪರಾಹ್ನ ಸ್ವರ್ಗಸ್ಥರಾದುದು ವಿಷಾದಕರವಿದೆ.

ದಿವಂಗತೆಯರು ಅತ್ಯಂತ ದೈವಭಕ್ತೆಯೂ ಉದಾರತೆಯನ್ನು ತನ್ನವರಂತೆ ವಾತ್ಸಲ್ಯದಿಂದ ಕಾಣುವ ಉದಾರಗುಣಸಂಪನ್ನೆಯೂ ಆಗಿದ್ದರು. ಡಾ. ಮಾಧವ ಪೈಗಳು ತಮ್ಮ ವೈದ್ಯಕೀಯ ವೃತ್ತಿಯನ್ನು ಹೊಂಕೋಂಗ್ ಅಥವಾ ಮುಂಬಯಿನಲ್ಲಿ ಆರಂಭಿಸಬೇಕೆಂದಿದ್ದಾಗ ಅದನ್ನು ಅವರು ಪ್ರತಿಭಟಿಸಿ ಉತ್ತಮಿಯಲ್ಲೇ ನಿಂತು ವೈದ್ಯವೃತ್ತಿಯನ್ನು ಪ್ರಾರಂಭಿಸುವಂತೆ ಮಾಡಿದ್ದರೆಂದು ಡಾ. ಪೈಗಳ ಇಂದಿನ ಬಯಸುವಿಕೆಯಲ್ಲಿ ಉಡುಪಿಗೆ ಮೊದಲಿಕ್ತಿರಲಿಲ್ಲ. ಮೃತರ ಪುತ್ರ ಪಾತ್ರಗಳ ಬಂಧುಬಳಗದವರಿಗೆ ಸಂಬಂಧಪಟ್ಟಿ ನಮ್ಮ ಸಹಾನುಭಾವವನ್ನು ವ್ಯಕ್ತಪಡಿಸಿ ಮೃತರ ಆತ್ಮಕ್ಕೆ ಶಾಂತಿ ಬಯಸುವುದು.

ಮಕ್ಕಳ ಮಗ್ಗಿ ಪುಸ್ತಕ
ಬೆಲೆ ೦—1—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

ಧರ್ಮಸ್ಥಳ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ದಿವಂಗತ ಮಂಜಯ್ಯ ಹೆಗ್ಗಡೆಯವರ ಅತ್ಯಂತಾಂತಿಗಾಗಿ ನಡೆಯಬೇಕಾದ ಪದಿನಾರನೇ ದಿನ ಅಭಿಷೇಕಾದಿ ಶಾಂತಿ ಕಾರ್ಯಗಳು ತಾ. 15ರಲ್ಲಿ ಸಾಂಗವಾಗಿ ನೆರವೇರಿದವು. ಮಧ್ಯಾಹ್ನ ಶ್ರೀ ಮಂಜುನಾಥ ಸ್ವಾಮಿಗೆ ಶತರುದ್ರಾಭಿಷೇಕ ಶ್ರೀ ಅಮ್ಮನವರಿಗೆ ಪವಮಾನಾಭಿಷೇಕಗಳೂ ಹೆಗ್ಗಡೆಯವರ ಬೀಡಿನಲ್ಲಿ ದೇವಕಾರ್ಯವೂ ಜರಗಿತು. ಸಾಂಜೆ ಸಭಾಭವನದಲ್ಲಿ ಸಂತಾಪಸೂಚಕ ಸಭೆಯು ಸ್ವಸ್ತಿ ಶ್ರೀ ನೇಮಿಸಾಗರ ವರ್ಣಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಕಳ ದಾನಶೂರಲಾದುರೆದ ಶ್ರೀ ಶ್ರೀ ಅಲಂಕೃತಿಭೂಷಣರೆಕರು, ಹೊಂಬುಜ್ಜ ಮಠದ ಶ್ರೀ ಶ್ರೀ ಚೇಂದ್ರಕೀರ್ತಿ ಭಟ್ಟಾರಕರು, ಶ್ರೀಗಳಾದ ಕೆ. ಆರ್. ಕಾರಂತ, ಎಸ್. ಸರ್ವಪ್ಪಯ್ಯ, ಎಂ. ಎಲ್. ಸಿ. ಶಿವರಾಮ ಕಾರಂತ, ಬಿ. ಕೇಶವ ಬಾಳಿಗ, ಬೆನರಾಜ ಶಾಸ್ತ್ರಿ ಮೊದಲಾದವರು ಶ್ರೀ ಹೆಗ್ಗಡೆಯವರ ಗುಣಕೀರ್ತನವಾಡಿ ಸಂತಾಪ ವ್ಯಕ್ತಪಡಿಸಿದರು. ಶ್ರೀ ಸಂಜೀವಯ್ಯ ಮತ್ತು ಶ್ರೀ ವರ್ಧಮಾನ ಹೆಗ್ಗಡೆ ಮೊದಲಾದವರು ದಿವಂಗತ ಶ್ರೀ ಹೆಗ್ಗಡೆಯವರ ಕುರಿತು ತಾವು ಬರೆದ ಕವಿತೆಗಳನ್ನು ಹಾಡಿದರು. ಸಭಾರಂಭದಲ್ಲಿ ಸ್ವೀಡನಿನ ರಾಜಪ್ರತಿನಿಧಿಯರು, ಬಿಹಾರ್ ಗವರ್ನರ್ ಶ್ರೀ ಆರ್. ಆರ್. ದಿವಾಕರ್, ಕೇಂದ್ರಮಂತ್ರಿ ಶ್ರೀ ಬಿ. ಎನ್. ದಾತಾರ್, ಮದ್ರಾಸಿನ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿ ಮೊದಲಾದವರಿಂದ ಬಂದ ಸಂತಾಪಸೂಚಕ ಪತ್ರಗಳನ್ನು ಶ್ರೀ ಕೆ. ಬಿ. ಬೆನರಾಜ ಹೆಗ್ಗಡೆಯವರು ಓದಿದರು. ರಾತ್ರಿ ಬೀಡಿನಿಂದ ಸಿಂಗರಿಸಿದ ಆನೆಗಳ ಮೇಲೆ ಬಿರುಮಬಾಣಸಲಿಗೆಯೊಡನೆ ಕಲಶೋದಕ ಮೆರವಣಿಗೆ ಹೊರಟು ಬಸದಿಗೆ ತೆರಳಿ, ಅಲ್ಲಿ ದಿವಂಗತರ ಆತ್ಮಶಾಂತಿಗಾಗಿ 504 ಕಲಶಾಭಿಷೇಕವು ಜರಗಿತು. ಈ ಕಾರ್ಯಗಳೆಲ್ಲವೂ ಶ್ರೀ ರತ್ನವರ್ಮರಾಜ ಹೆಗ್ಗಡೆಯವರ ನೇತೃತ್ವದಲ್ಲಿ ಸಾಂಗವಾದುವು.

ಗುರುಪುರ— ಮಂಗಳೂರು ಕಸ್ತೂರ್ಬಾ ಮೆಡಿಕಲ್‌ಕಾಲೇಜಿನ ಕ್ಲಿನಿಕಲ್ ವಿಭಾಗದ ಆಶ್ರಯದಲ್ಲಿ ಗುರುಪುರ ಮತ್ತು ಅಸುಪಾಸಿನ ಗ್ರಾಮಗಳ ಜನರಿಗೆ ವೈದ್ಯಕೀಯ ಸಹಾಯ ಸಲಹೆಗಳನ್ನೊದಗಿಸಲು ತಾ. 18ರಲ್ಲಿ ಗುರುಪುರದ ಹಿಂದೂ ಹಾ ಎ. ಶಾಲೆಯಲ್ಲಿ ಗ್ರಾಮೀಣ ವೈದ್ಯಕೀಯ ಕೇಂದ್ರವೊಂದನ್ನು ಶ್ರೀ ಬಿ ಸ್ವಿಕುಂಠ ಬಾಳಿಗ, ಎಸ್. ಎಲ್. ಎ. ಅವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ವಹಿಸಿದ್ದರು.

ಗುರುಪುರದ ಸನಿತಾ ಸಮಾಜವರಿಂದ ಪ್ರಾರ್ಥನೆಯಾದ ಬಳಿಕ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ರಮಣ ಮೂರ್ತಿಯವರು ಸ್ವಾಗತ ಭಾಷಣಮಾಡುತ್ತಾ ಈ ಕೇಂದ್ರದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಡಾ. ಕೆ. ಎಸ್. ಶಿವರಾಮನ್ ಅವರು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕೆ. ಕಾಮರಾಜ್, ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಮ್. ಪೂಣಚ್ಚ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಜಿ. ಸೆಲ್ವಿನರು ವಂದನೆಗಳನ್ನರ್ಪಿಸಿದರು.

ತೆಕ್ಕಟ್ಟೆ—ಸ್ಥಳೀಯ ಮಹಿಳಾ ಮಂಡಳಿಯ ನೇತೃತ್ವದಲ್ಲಿ ಆಚಾರ್ಯ ವಿನೋಬಾಜೀಯವರ 61ನೇಜನ್ಮದಿನಾಚರಣೆಯು ಶ್ರೀ ಕೆ. ಎಸ್. ಉರಾಳರ ಅಧ್ಯಕ್ಷತೆಯಲ್ಲಿ ಜರಗಿತು. ಸಾಮೂಹಿಕ ಸೂತ್ರಯಜ್ಞದ ನಂತರ ಪ್ರಾರ್ಥನೆಯಾಗಿ ಶ್ರೀ ಟಿ. ದೇವಪ್ಪ ಶೆಟ್ಟರ ಭಾಷಣವಾಯಿತು. ಗ್ರಾಮಸೇವಕ ಶ್ರೀ ವಿ. ನಾಗಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕಮಲಶಿಲೆ— ರಾ. ವಿ. ಯೋಜನೆಯನುಸಾರ ಕಮಲ ಶಿಲೆಯ ಗ್ರಾಮಸೇವಾ ಸಂಘಕ್ಕೆ ಸಂಜೂರುಮಾಡಿದ ಪುಸ್ತಕ ಭಂಡಾರದ ಉದ್ಘಾಟನೆಯನ್ನು ಶ್ರೀ ಕೆ. ಕೆ. ಶೆಟ್ಟರು ತಾ. 18ರಲ್ಲಿ ನೆರವೇರಿಸಿದರು. ಗ್ರಾಮಸೇವಾ ಸಂಘದ ಅಧ್ಯಕ್ಷ ಶ್ರೀ ಎ. ಶೇಷಪ್ಪಚಾತ್ರರು ಧನ್ಯವಾದಗಳನ್ನರ್ಪಿಸಿದರು.

ಕಾರ್ಕಳ— ಈ ತಾಲೂಕಿನ ಮಾಜಿ ಸೈನಿಕರ ಸಭೆಯೊಂದು ತಾ. 11ರಲ್ಲಿ ಜರಗಿ ತಾಲೂಕು ಮಾಜಿಸೈನಿಕರ ಸಂಘ ಸ್ಥಾಪನೆಗೊಳಿಯಿತು. ಶ್ರೀಗಳಾದ ಎ. ಎಸ್. ಮೂರ್ತಿ ಹಸನ್ ಸಾಹೇಬರು ಅಧ್ಯಕ್ಷರಾಗಿಯೂ ವಿಠ್ಠಲಯ್ಯ. ಲೋಬೊ ಉಪಾಧ್ಯಕ್ಷರಾಗಿಯೂ ಹೆಸ್ರಿ ಸಿಕೇರರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು.

ಕಾಸರಗೋಡು— ಈ ಸರ್ಕಲಿನ ಸಹಕಾರಿ ಸಂಘಗಳ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಶ್ರೀ ಎಮ್. ಕೃಷ್ಣಯ್ಯ ಶೆಟ್ಟರು ಕಲ್ಲಿಕೋಟೆ ಕ್ಷೇತ್ರದ ನೇಕಾರ ಸಂಘಗಳ ಮಾರ್ಕೆಟಿಂಗ್ ಆಫೀಸರರಾಗಿ ನೇಮಕೆ ಹೊಂದಿರುವರು. ಮಂಗಳೂರು ಸರ್ಕಲ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಶೆಟ್ಟರು ಕಾಸರಗೋಡು ಸರ್ಕಲಿಗೂ ಅಧಿಕಾರಿಸ್ಥರಾಗಿದ್ದಾರೆ.

ಬೈಲೂರು— ಸ್ಥಳೀಯ ಬೋಯ್ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆಯು ಇದೇ ದಿನಾಂಕ ೧೫ರಂದು ಡಾ! ಯು. ಎಲ್. ನಾರಾಯಣರಾವ್‌ರವರಿಂದ, ಡಾ! ಕೆ. ಕೆ. ಹೆಗ್ಡೆ, ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷ ಇವರ ಸನ್ನಾಸ್ಯ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಶಾಲೆಯ ಮುಖ್ಯೋಪಾಧ್ಯಾಯರೇ ಮೊದಲಾದವರು ಶಾಲೆಯ ಸಂಕ್ಷಿಪ್ತ ವರದಿ ವಾಚನ, ಸ್ವಾಗತ ಭಾಷಣಗಳನ್ನು ಮಾಡಿದರು. ಶ್ರೀಗಳಾದ ಡಾ! ಎ. ಕೆ. ಲಕ್ಷ್ಮೀನಾರಾಯಣರಾಯ, ಟಿ. ರಮೇಶ ಶೈ, ಕೆ. ಜಿ. ಶೆಣೈ, ಬಿ. ಶ್ಯಾಮರಾಯ ಶೆಟ್ಟಿ, ಶ್ರೀಪತಿ ಆಚಾರ್, ಯಂ. ಕೃಷ್ಣಯ್ಯ ಶೆಟ್ಟರೇ ಮೊದಲಾದವರು ಭಾಷಣ ವಿತ್ತರು. ಡಾ! ರಾಯರು ಶಂಕುಸ್ಥಾಪನೆ ಮಾಡುತ್ತಾ ಪ್ರಕೃತ ಕಾರ್ಯಕ್ಕಾಗಿ ೫೦೦೦ ರೂ. ಗಳನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಡಾ! ಹೆಗ್ಡೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ‹ಪ್ರತಿಯೊಂದು ಕೇಂದ್ರದಲ್ಲೂ ಹೈಸ್ಕೂಲುಗಳ ಅಗತ್ಯ ವಿದೆಯೆಂದರಲ್ಲದೆ, ಇಂದಿನ ಹೈಸ್ಕೂಲು ವಿದ್ಯಾಭ್ಯಾಸವು ಕೇವಲ ಉದ್ಯೋಗಕ್ಕಾಗಿ ಮಾತ್ರವಲ್ಲ ಮನೋವಿಕಾಸಕ್ಕಾಗಿ ಎಂದರು. ಶ್ರೀ. ಬಿ. ಕೇಶವ ಕಿಣಿಗಳು ಧನ್ಯವಾದಗಳನ್ನರ್ಪಿಸಿದರು.

ಕಡೆಕಾವು— ಸ್ಥಳೀಯ ಶ್ರೀ ಮಹಾಗಣಪತಿ ಶಾಲೆಯಲ್ಲಿ ಇದೇ ತಾ. 15ರಂದು ಡಾ. ಕೆ. ಮೋಹನದಾಸಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಕೂಡಿ ಪಿಗರ್‌ಟ್ಟಾ ರಸ್ತೆ ನಿರ್ಮಾಣದ ಕುರಿತು ವಿಚಾರವಿನಿಮಯ ನಡೆಯಿತು. ಇಷ್ಟರಲ್ಲೇ ಊರವರ ಶ್ರಮದಾನದಿಂದ ಒಂದು ಫರ್ಲಾಂಗು ರಸ್ತೆ ಮಾಡಲಾಗಿದ್ದು ಮುಂದಿನ ಕಾರ್ಯಕ್ರಮಕ್ಕಾಗಿ ಸಮಿತಿಯೊಂದು ರಚಿಸಲ್ಪಟ್ಟಿತು.

ನಿಧನ ಸ್ಮರಣೆಯ ಕಾಣಿಕೆ—

ಮಹಾಪುರುಷರ ಶ್ರೇಣಿಯಲ್ಲಿ ರತ್ನ ಕಲಶದಂತೆಬೆಳಗಿ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಐಕ್ಯತ್ವವರುಸಕಾಲ ಅವಿಶ್ರಾಂತವಾಗಿ ದುಡಿದು, ದಯೆ, ದಾನಧರ್ಮಗಗಳ್ಲಿ ಅದ್ವಿತೀಯರೆನಿಸಿ, ಸರಳ ಜೀವನದಲ್ಲಿ ಉದಾತ್ತ ತತ್ವಗಳನ್ನು ಬೆಳಗಿಸಿ, ಮಾನವಕುಲದ ಸರ್ವತೋಮುಖ ಪ್ರಗತಿಗೆ ಆದರ್ಶರಾಗಿದ್ದು, ಮಾನವ ಸಹಜ ಮರಣದ ದ್ವಾರ ತಾ. 31-8-1955ರಂದು ಅಮರಲೋಕಕ್ಕೇರಿದ, "ಮಾತನಾಡುವ ಮಂಜುನಾಥ"ರೆಂಬ ಕೀರ್ತಿಶೇಷರಾದ ಶ್ರೀ ಧರ್ಮಸ್ಥಳದ ಡಿ. ಮಂಜಯ್ಯ ಹೆಗ್ಗಡೆಯವರ ಮರಣ ವಾರ್ತೆಯು ಅಖಂಡ ಕರ್ನಾಟಕ್ಕೆ ಸಿಡಿಲು ಬಡಿದಂತಾಗಿ, ಧರ್ಮಾಭಿಮಾನಿಗಳೂ, ದೇಶಾಭಿಮಾನಿಗಳೂ ಶೋಕಗ್ರಸ್ತರಾಗಿರುವ ಈ ಸನ್ನಿವೇಶದಲ್ಲಿ ಭಕ್ತಾದಿಗಳು ತಮ್ಮ ಸಂತಾಪವನ್ನು ಅಭಿವ್ಯಕ್ತಪಡಿಸುವಂತಾಗಿದೆ.

ಶ್ರೀ ಹೆಗ್ಗಡೆಯವರು ಮರ್ತ್ಯಲೋಕದಿಂದ ಮರೆಯಾದರೂ, ಇವರಲ್ಲಿ ಸಹಜವಾಗಿ ಮನೆಮಾಡಿದ್ದ ನಯ, ವಿನಯ, ಸೌಜನ್ಯ, ಮಾನವಪ್ರೇಮ, ತತ್ವಜೀವನ, ಸೇವಾಭಾವನೆ, ಸಾಮ್ಯತೆಪಣ, ಸರ್ವಸಮತಾಭಾವ, ಧರ್ಮಾಭಿಮಾನ, ದೇಶಭಕ್ತಿ, ಮೊದಲಾದ ಕಲ್ಯಾಣ ಗುಣಗಳು ಸೂರ್ಯ-ಚಂದ್ರರಿರುವವರೆಗೂ ಕಾಲ ಮಾನವರಿಗೆ ಆದರ್ಶ ಅನುಕರಣೀಯಗಳಾಗಿರಲಿ!

ಶ್ರೀ ಹೆಗ್ಗಡೆಯವರ ಮರಣದಿಂದ ಉಂಟಾದ ವ್ಯಾಕುಲವನ್ನು ಸಹಿಸಲು ಇವರ ಕಿರಿಯ ಸಹೋದರರಾದ ಶ್ರೀ ಡಿ. ಪುಟ್ಟಸ್ವಾಮಿಯವರಿಗೂ ಎಲ್ಲಾ ಬಂಧುಮಿತ್ರರಿಗೂ ಶ್ರೀ ಭಗವಂತನು ಮನೋಶಾಂತಿ, ಸ್ಥೈರ್ಯಗಳನ್ನು ಅನುಗ್ರಹಿಸಲೆಂದೂ, ಶ್ರೀ ಕ್ಷೇತ್ರದ ಶ್ರೀ ಮಂಜುನಾಥಸ್ವಾಮಿಯು ತನ್ನ ಭಕ್ತರಾದ ಶ್ರೀ ಮಂಜಯ್ಯ ಹೆಗ್ಗಡೆಯವರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಲೆಂದೂ ಅನನ್ಯ ಭಕ್ತಿಯಿಂದ ಪ್ರಾರ್ಥಿಸುವ, ಧರ್ಮಸ್ಥಳ ಕ್ಷೇತ್ರದ ಭಕ್ತ ವೃಂದದ,

ಸಿ. ಎಚ್. ಹುಲಿಯಪ್ಪ,

ಮೈಸೂರು, 6-9-1955.

15 ದಿವಸಗಳ ರಿಯಾಯತಿ

ಒಂದು ಫ್ರಾಂಟಿನ್ ಪೆನ್ ಅಥವಾ ಒಂದು ಸಿಗರೇಟು ಲೈಟರ್ ಧರ್ಮಾರ್ಥ. ಪ್ರತಿಯೊಂದಕ್ಕೆ 5 ವರ್ಷ ಗ್ಯಾರಂಟಿ. ವಾಚೆಲ್ ವಾಚ್ 9/-, ಉತ್ತಮ 11/-. ಟ್ರಾಂಜಿಸ್ಟರ್ (ಆಲಾರಮ್) 12/; ಉತ್ತಮ 14/.

ಸೈಜು 7½ ನಂಬ್ರ 15



15 ಜುವೆಲುಗಳ ರೋಲ್ಡ್ ಗೋಲ್ಡ್ -31/-
5 ಜುವೆಲುಗಳ ಉತ್ತಮ - 21/-

ಸೈಜು 9½ ವಾಟರ್‌ಪ್ರೂಫ್ ನಂಬ್ರ 16



17 ಜುವೆಲುಗಳುಳ್ಳ ಸ್ವೀಡಿನದ್ದು 40/-
15 ಜುವೆಲುಗಳುಳ್ಳ ,, 35/-

ಸೈಜು 8½ ನಂಬ್ರ 18



15 ಜುವೆಲುಗಳುಳ್ಳ ರೋಲ್ಡ್‌ಗೋಲ್ಡ್ 28/-
5 ,, (ಲೇಡಿಸ್ ಮತ್ತು ಜಂಟ್ಸ್) 20/-
18 ಸ್ಕ್ವಾಜ್ ನಿಕ್ಕಲ್ - 16/-

ಪತ್ರವ್ಯವಹಾರ ಇಂಗ್ಲೀಷಿನಲ್ಲಿ. ಟಿಪ್ಪಾಲು ಪೆಜ್ಜ 1-8-0.

CALCUTTA WATCH CO. (Sec. 268)
Post Box No. 12203, CALCUTTA—5.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾಡೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ.....ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ—ಸುಂದರ ಮುದ್ರಣ—ಬೆಲೆ: 0-4-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಖಾತ್ರಿ ಮ್ಹಾಲು! ಕಡಿಮೆ ಬೆಲೆ!

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನ, ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂದಲು, ತೋಳಪಟ್ಟಿ, ಗಡ್ಡ ಮುಂಡಾಸು, ಕಿರೀಟಿ, ಜರಿ ಜಲ್ಲರಿ, ಜರಿ ರವಕೆ, ಕಿವಿ ಬೆಂಡೋಲೆ, ತಾಟಿಗೆ ಹೆಚ್ಚುವ ಮಿರುಗಿನ ಅಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರ ಲ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

DHARAMSHI MULJI, DRESSWALA,

132 C, Bhagatwadi, Bhuleshwar Road, BOMBAY—2.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ಪ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಕ ಗಲ್ಲಿ, ಹುಬ್ಬಳ್ಳಿ.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಿತ ಕರ್ಣ ನಟಿತ್ತ ಎಂದೆಂದೂ ಜನಮನದಿಂದ ಮಾಸಿ ಹೋಗದು. (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ಕರಗತಿಯ ಕವಿತೆಗಳ ಸಂಗ್ರಹ. ಬೆಲೆ(0-12-0.

ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

ಮಂಗಳೂರು

ಪೋಸ್ಟೆಲ್ ಡ್ಯಾರೆಕ್ಟರರ ಆಗಮನ—ಸುದ್ರಾಸು ಟಿಸ್ಟಾಲು ಇಲಾಖೆಯ ಡ್ಯಾರೆಕ್ಟರ್ ಶ್ರೀ ಎ. ಸ್ವಾಮಿನಾಥನ್ ರವರು ಮಂಗಳೂರಿಗೆ ಆಗಮಿಸಿ ತಾ. 15ರಲ್ಲಿ ಬೆಂದೂರಿನಲ್ಲಿರುವ ಪೋಸ್ಟಲ್ ಸುಪರಿಂಟೆಂಡೆಂಟರ್ ಆಫೀಸಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಈ ಜಿಲ್ಲೆಯಲ್ಲಿಯ ಅಂಚೆ ವಿಭಾಗದ ಪ್ರಗತಿಯನ್ನು ತಿಳಿಸಿದರು.

ಈ ಜಿಲ್ಲೆಯಲ್ಲಿ 1951ರಲ್ಲಿ ಒಂದು ಹೆಡ್ ಪೋಸ್ಟಾಫೀಸು, 42 ಸಬ್ ಪೋಸ್ಟಾಫೀಸುಗಳು 306 ಬ್ರಾಂಚ್ ಪೋಸ್ಟಾಫೀಸುಗಳು ಮತ್ತು 21 ಟೆಲಿಗ್ರಾಫ್ ಆಫೀಸುಗಳಿದ್ದುವು. ಈಗ ಮಂಗಳೂರು ಮತ್ತು ಉಡುಪಿಗಳಲ್ಲಿ ಎರಡು ಹೆಡ್‌ಪೋಸ್ಟಾಫೀಸುಗಳು, 88 ಸಬ್ ಪೋಸ್ಟಾಫೀಸುಗಳು, 351 ಬ್ರಾಂಚ್ ಪೋಸ್ಟಾಫೀಸುಗಳು, 35 ಟೆಲಿಗ್ರಾಫ್ ಆಫೀಸುಗಳು 21 ಟೆಲಿಫೋನ್ ಆಫೀಸುಗಳು ಮತ್ತು 4 ಟೆಲಿಫೋನ್ ಎಕ್ಸ್‌ಚೇಂಜುಗಳಿವೆ.

ಪೆಂಟ್ಲಾಂಡ್ ಪೇಟೆಯಲ್ಲೊಂದು ಟೆಲಿಗ್ರಾಫ್ ಆಫೀಸು ಕಳದ ತಿಂಗಳಲ್ಲಿ ತೆರೆಯಲಾಗಿದೆ. ಇನ್ನು 9 ಬ್ರಾಂಚ್ ಪೋಸ್ಟಾಫೀಸುಗಳನ್ನು ಅಬ್ಬೆ, ಅಲೂರು, ಗುಲ್ವಾಡಿ, ಹೊಸೂರು, ಇರ್ದೆ, ಕರಾಯ, ನೆರಿಯ ಪಟ್ಟೆ ಕಡಪ್ಪರ ರಂ ಮತ್ತು ಪೆರ್ನಾಲ್ (ಶಿವಪ) ಇವಿಷ್ಟು ಕೇಂದ್ರಗಳಲ್ಲಿಯೂ 11 ಟೆಲಿಗ್ರಾಫ್ ಆಫೀಸುಗಳನ್ನು ಬಜ್ಪೆ, ರಥಬೀದಿ, ಪಾಣೆಮಂಗಳೂರು, ಬಾಕೂರು, ಗಂಗೊಳ್ಳಿ ಬಂದರ, ಹಿರಿಯಡಕ, ಕಾರ್ಕಳ ಬಜಾರ್, ಕಿನ್ನಿಗೋಳಿ, ಕೋಟೇಶ್ವರ, ಶಿವಪ, ಉದ್ಯಾವರ, (ಉಡುಪಿ) ಈ ಕೇಂದ್ರಗಳಲ್ಲೂ ಬೇಗನೆ ತೆರೆಯಲಾಗುವುದು. ಜಿಲ್ಲೆಯಲ್ಲಿ ಟಿಸ್ಟಾಲು ಬಟವಾಡೆ ಸರಿಯಾಗಿ ಆಗುವಂತೆ ಮೈಲ್‌ಬಸ್ ಸರ್ವಿಸುಗಳ ವ್ಯವಸ್ಥೆಯನ್ನು ಹೆಚ್ಚಿಸುವ ಯೋಜನೆಯಿದೆ. ಉಡುಪಿ ಮತ್ತು ಕಾರ್ಕಳಗಳಿಂದ ಬೊಂಬಾಯಿಗೆ ಹೋಗುವ ಟಿಸ್ಟಾಲನ್ನು ಅದೇ ದಿನ ಬೊಂಬಾಯಿಗೆ ಕಳುಹಿಸುವಂತೆ ವ್ಯವಸ್ಥೆ ಮಾಡುವ ಕುರಿತು ಪರಿಶೀಲನೆಮಾಡಲಾಗುತ್ತಿದೆ ಎಂದು ಹೇಳಿದರು.

ಬಾಲಕಾಶ್ರಮಕ್ಕೆ ಸಹಾಯ—ಮಂಗಳೂರು ಬೋಳಾರದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದ ಬಾಲಕಾಶ್ರಮಕ್ಕೆ ಒಂದು ಭೋಜನ ಗೃಹ ಮತ್ತು ಅಡಿಗೆಮನೆಕಟ್ಟಿಸಲು ರೂ. 5000/-ವನ್ನೂ ಆಶ್ರಮಾರ್ಥಿಗಳ ಚಿಕಿತ್ಸಾಲಯಕ್ಕೆ ಬೇಕಾದ ಸಲಕರಣೆಗಳಿಗೆ ರೂ.3000/-ವನ್ನೂ ಕೇಂದ್ರಸಮಾಜ ಹಿತಚಿಂತನಾ ಬೋರ್ಡಿನವರು ಸಹಾಯಾರ್ಥವಾಗಿ ಮಂಜೂರುಮಾಡಿರುವರು.

ಶುದ್ಧೀ ಸಮಾಚಾರ— ಸ್ಥಳೀಯ ಆರ್ಯಸಮಾಜ ಮಂದಿರದಲ್ಲಿ ತಾ. 15ರಲ್ಲಿ ಬೆಳಿಗ್ಗೆ ಸಮವು ಕುಲಶೇಕರದ ನಿವಾಸಿಗಳಾದ ರೋಮನ್ ಕಥೋಲಿಕ್ ಮತದ ಶ್ರೀ ಲಿಗೋರಿ ಕುಟಿಂಞ್ (ಸಿಸ್ಟರ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್) ಮತ್ತು ಇವರ ಹೆಂಡತಿ ಶ್ರೀಮತಿ ಅಂಬೀಲಾ ಮತ್ತು ಮಗು ರಿಚಾರ್ಡ್ ಅಂತೋನಿ ಈ ಮೂವರು ಶುದ್ಧಿಸಂಸ್ಕಾರವು ವೈದಿಕ ರೀತಿಯಿಂದ ಶ್ರೀ ಪೋಶನಪ್ಪ ತಿಂಗಳಾಯರ ಪೌರೋಹಿತ್ಯದಲ್ಲಿ ಜರಗಿತು. ಗಾಯತ್ರಿ ಮಂತ್ರೋಪದೇಶದ ತರುವಾಯ ಅನುಕ್ರಮವಾಗಿ ಸತ್ಯವರ್ಮ ಪ್ರಭು, ಮನೋರಮಾದೇವಿ, ರಮೇಶ ಪ್ರಭು ಎಂದು ನಾಮಕರಣ ಮಾಡಲಾಯಿತು.

ಜಿಲ್ಲಾ ಬೋರ್ಡು ಸಭೆಯು—ತಾ. 12ರಲ್ಲಿ ಜರಗಿ ಜಿಲ್ಲಾ ಬೋರ್ಡಿನ ಪರವಾಗಿ ಸ್ಥಳೀಯ ಸರಕಾರಿ ಗೋಶ್ರನ್ ಅಸ್ಪತ್ರೆಯ ಸಲಹಾ ಸಮಿತಿಗೆ ಶ್ರೀಮತಿ ಪೆಬಲ್ ಬ್ರಿಟೊರನ್ನು ಆರಿಸಲಾಯಿತು. ಸಿಬ್ಬಂದಿಗಳ ಸಂಬಳ, ಭತ್ತೆಗಳನ್ನು ಸುಧಾರಿಸುವ ಕುರಿತು ಪರಿಶೀಲಿಸಿ ಬೋರ್ಡಿಗೆ ವರದಿಮಾಡುವಂತೆ ಅಧ್ಯಕ್ಷ ಮತ್ತು ಶ್ರೀಗಳಾದ ಭಾಸ್ಕರ ರೈ, ಬಿ. ಸಂಜಯ್ಯ ಹೆಗ್ಡೆ, ಡೆನ್ನಿಸ್ ಪಿಂಟೊ ಮತ್ತು ಡಾ| ನಾಪ್ತ ಅಳ್ವರನ್ನೊಳಗೊಂಡ ಸಮಿತಿಗೊಪ್ಪಿಸಲಾಯಿತು. ತಾಲೂಕಿಗೊಬ್ಬರಂತೆ ಪ್ರಾಥಮಿಕ ಶಾಲೆಗಳನ್ನು ಸಂವರ್ಧಿಸಿ ಮೇಲ್ವಿಚಾರಣೆಮಾಡಲು ಸುಪರ್ ವೈಜರುಗಳನ್ನು ನೇಮಿಸಬಹುದೆಂಬ ಸೂಚನೆಯನ್ನು ಬೋರ್ಡು ಅಂಗೀಕರಿಸಿತು.

ಉಡುಪಿ ನಗರಸಭಾ ಕ್ಷೇತ್ರದೊಳಗಿನ ಜಿಲ್ಲಾ ಬೋರ್ಡು ನಿಬ್ಬಂಧಿಯವರಿಗೆ ಮೂರು ರೂಪಾಯಿಯಂತೆ ಮನೆಬಾಡಿಗೆ ಭತ್ತೆ ತಾ.1-4-55 ರಿಂದ ಸರಕಾರದ ಅನುಮತಿ ಪಡೆದು ಕೂಡುವುದೆಂದಾಯಿತು. ಬೋರ್ಡಿನ ತೈಕೆಳಗಿನ ಕೆಳದರ್ಜೆಯ ನೌಕರರಿಗೆ ಪಡಾರಗಳನ್ನು ಕೇಂದ್ರ ಸರಕಾರದ ಕಡಿಮೆ ಸಂಬಳದವರಿಗಾಗಿ ಮನೆಕಟ್ಟುವ ಯೋಜನೆಯಂತೆ ಕಟ್ಟಿಸುವ ಬಗ್ಗೆ ಈ ಬೋರ್ಡಿಗೆ ರೂಪಾಯಿ 2½ ಲಕ್ಷ ಸಾಲ ಒದಗಿಸುವ, ಬೋರ್ಡು ಶಾಲೆಗಳಲ್ಲಿ ಧನಾರ್ಜಾರ್ಥ ಸ್ಲೇಟು ಪುಸ್ತಕಗಳ ವಿತರಣೆಯ ಸಲತ್ತನ್ನು ಎಲ್ಲಾ ಬಡಮಕ್ಕಳಿಗೂ ಒದಗಿಸಲು ಸರಕಾರವನ್ನು ಕೇಳಿಕೊಳ್ಳುವ, ಇಪ್ಪತ್ತು ಹೊಸಹಾಯರ್ ಗ್ರೇಡ್ ಉಪಾಧ್ಯಾಯರ ಹುದ್ದೆಗಳನ್ನು ಮಂಜೂರುಮಾಡುವ, ಜಿಲ್ಲೆಯಲ್ಲಿ ಮೂವತ್ತು ಹೊಸ ಹಿರಿಯ ಉಪಾಧ್ಯಾಯ ಶಾಲೆಗಳನ್ನು ತೆರೆಯುವ ಇತ್ಯಾದಿ ಕಾರ್ಯಗಳು ಸುಂಜೂರಾದುವು. ಕಾಸರಗೋಡು ತಾಲೂಕಿನ ಕಾನತ್ತೂರು ಬೋರ್ಡು ಪ್ರಾಥಮಿಕ ಶಾಲೆಯಲ್ಲಿ ಕನ್ನಡವನ್ನು ಎರಡನೇ ಭಾಷೆಯಾಗಿ ಆರಂಭಿಸಲು ಮತ್ತು ಹೈಸ್ಕೂಲ್ ಕ್ಲಾಸುಗಳಲ್ಲಿ ಹಿಂದೀ ಶಿಕ್ಷಣವನ್ನು ಎರಡನೇ ತರಗತಿಯ ಪಂಡಿತರಾಗಿ ಪರಿಗಣಿಸಿ ಇತರ ಭಾಷಾ ಶಿಕ್ಷಕರೊಳಗೂ ಹಿಂದೀ ಶಿಕ್ಷಕರೊಳಗೂ ಸಂಬಳ ದರದಲ್ಲಿ ಭೇದ ಭಾವ ತೋರಿಸಬಾರದೆಂದಾಗಿಯೂ ನಿರ್ಣಯಿಸಲಾಯಿತು.

ಸರ್ವ ಪಕ್ಷೀಯ ಸಭೆ—ಜಿಲ್ಲೆಯ ಎಲ್ಲಾ ಪಕ್ಷಗಳ ಮುಖಂಡರೂ, ನಗರ ಪ್ರಮುಖರೂ, ಕಾಸರಗೋಡು ತಾಲೂಕಿನ ಪ್ರಮುಖರೂ ಸೆಂಟ್ರಲ್ ಕೋಪರೇಟಿವ್‌ಬೇಂಕಿನ ಮಾಳಿಗೆಯಲ್ಲಿ ತಾ, 14ರಲ್ಲಿ ಶ್ರೀ. ಕೆ. ಅರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಇದೀ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸುವ ಸೂಚನೆಯನ್ನು ಖಂಡಿಸಿ, ಚಂದ್ರಗಿರಿಯ ಉತ್ತರ ಭಾಗವನ್ನು ಕೇರಳದಲ್ಲಿ ಸೇರಿಸಕೂಡದೆಂದು ವಿನಂತಿಸುವ ನಿರ್ಣಯ ಪಾಸಾಗಿ, ಅದನ್ನು ಪ್ರಾಂತ ಪುನರ್ನಿರ್ವಹಣ ಸಮಿತಿಗೆ ಮತ್ತು ಜಿಲ್ಲೆಯ ಎಮ್. ಪಿ.ಗಳಿಗೆ ತಂತಿ ಮೂಲಕ ತಿಳಿಸಲು ನಿರ್ಧಾರವಾಯಿತು. ಮುಂದಿನ ಕಾರ್ಯ ನಿರ್ವಹಿಸಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ. ಬಿ. ಬಿ. ಸೆಟ್ಟಿರು ಸಂಚಾಲಕರಿರುವ ಒಂದು ಸಮಿತಿ ರಚಿಸಲಾಯಿತು. ಶ್ರೀಗಳಾದ ಕೆ. ಅರ್. ಕಾಶಾಂತ, ಬಿ. ವಿ. ಕಕ್ಕಿಲ್ಲಾಯ, ಕೆ. ಬಿ. ಜಿನರಾಜ ಹೆಗ್ಡೆ, ಎಮ್. ಉಮೇಶರಾವ್, ಕೆ. ಮಾಹಬಲ ಭಂಡಾರಿ, ಬಿ. ಪಿ. ಬಾಳಿಗ, ಎಸ್. ನರಸ್ವಯ್ಯ, ಡಾ| ಬಿ. ವಿ. ಶೆಣೈ ಮೊದಲಾದವರು ಭಾಗವಹಿಸಿದ್ದರು.

ಅಂಚೆ ತಾಕಕರ ಹಾಲಾ ಹವಾಲಿಗಳು— ಡ್ಯಾರೆಕ್ಟರ್ ಒಫ್ ಪೋಸ್ಟಲ್ ಸರ್ವಿಸಸ್, ಶ್ರೀ ಎ. ಸ್ವಾಮಿನಾಥನ್, ಅವರನ್ನು ಮೂರನೆ ವರ್ಗದ ಅಂಚೆ ಇಲಾಖಾ ನೌಕರ ಸಂಘದವರು ತಾ. 15ರಲ್ಲಿ ಭೇಟಿಯಾಗಿ ಅವರ ಮುಂದೆ ತಮ್ಮ ಹಾಲು ಹವಾಲಿಗಳನ್ನು ನಿವೇದಿಸಿದರು. ಅವುಗಳಲ್ಲಿ ಮುಖ್ಯವಾದುವು ಗಳಾವುವೆಂದರೆ ಹೆಡ್ ಪೋಸ್ಟಾಫೀಸಿನ ವರಾಂಡದಲ್ಲಿರುವ ಪೋಸ್ಟ್‌ಎಂಡ್ ಟೆಲಿಗ್ರಾಫ್ ರಿಕ್ರಿಯೇಶನ್ ಕ್ಲಬ್ಬಿಗೆ ಕೆಂಟೀನಿಗೆ ಭೋಜನ ಶಾಲೆಗೆ ಮತ್ತು ವಿಶ್ರಾಂತಿಯ ಕೋಣೆಗೆ ಸರಿಯಾದ ಕಟ್ಟಡ ನೈರ್ಮಲ್ಯ ಪುತ್ತೂರು ಪೋಸ್ಟಾಫೀಸು ಕಟ್ಟಡದ ಪಿಸರಣೆ. ಟೆಲಿಗ್ರಾಫ್ ತರಬೇತಿಗೆ ಹೆಚ್ಚಿನ ಜಾಗವನ್ನು ಕಲುಹಿಸುವ ವ್ಯವಸ್ಥೆಮಾಡುವುದು.

ರೇಡಿಯೋ ಸೆಟ್ಟು— ಮಾಜಿ ಶಿಕ್ಷಣಾಧಿಕಾರಿಯ ಕ್ಷಯರೋಗಿ ಮಗ್ಗಾಲಯದಲ್ಲಿ ಜಿಲ್ಲಾ ಸಮಾಜವಿಕಾಸ ಖಾತೆಯವರು. ಕೊಟ್ಟ ರೇಡಿಯೋ ಸೆಟ್ಟನ್ನು ಇದೇ ತಾ. 10ರಲ್ಲಿ ಸಂಜೆ ಇರಿಸಲಾಯಿತು ಈ ಸಂದರ್ಭದಲ್ಲಿ ಮಂಗಳೂರಿನ ಸೇವಾಸಮಾಜದವರು ಅಲ್ಲಿನ ರೋಗಿಗಳಿಗೆ ತಿಂಡಿಹಂಚಿದರು.

ನಗರ ಸಭಾ ಚುನಾವಣೆ—ಮಂಗಳೂರು ನಗರ ಸಭಾ ಚುನಾವಣೆಗೆ ತಾ. 13 ರಿಂದ 15ರ ತನಕ 34 ವಾರ್ಡುಗಳ 36 ಸ್ಥಾನಗಳಿಗೆ (ದರಜನ 1ಮತ್ತು ನುಹಿಳೆಗೊಂದು ಕೂಡಾ) 109 ಮಂದಿ ಉಮೇದ್ವಾರರು 227 ನಾಮಪತ್ರಗಳನ್ನು ಸಲ್ಲಿಸಿರುವರು.

22ನೇ ಪಲ್ಲೇದಿ ಪೂರ್ವ ವಾರ್ಡಿಗೆ ಕಾಂಗ್ರೆಸ್ ಪಕ್ಷದ ಹಾಗೂ ಈಗಲೂ ನಗರ ಸಭಾ ಸದಸ್ಯೆಯಾಗಿರುವ ಶ್ರೀಮತಿ ಮೇರಿ ಗ್ರೇಸಿ ಪ್ರಿಟೋರವರು ಒಬ್ಬರೇ ನಾಮಪತ್ರ ಹಾಕಿದುದರಿಂದ ಅವರು ಸ್ಪರ್ಧೆಯಿಲ್ಲದೆ ಆಯ್ಕೆ ಹೊಂದುವರು ಈಗ ನಗರ ಸಭಾ ಸದಸ್ಯರಾಗಿರುವ 36 ಮಂದಿಯಲ್ಲಿ 24 ಮಂದಿ ಮಾತ್ರ ಸ್ಪರ್ಧೆಗಿಳಿದಿರುವರು. ನಗರ ಸಭಾಪತಿಗಳಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಮರಿದ್ದು ಮಂಗಳೂರು ಪುರಜನರ ಸಂಘದ ಕಾರ್ಯದರ್ಶಿ ಶ್ರೀ ಎ. ಕೆ. ಸೇವಕ್ ಮತ್ತು ಡಾ| ಎಮ್. ಎಸ್. ಶಾಸ್ತ್ರಿ ಮತ್ತು ಶ್ರೀ ಕೊಟ್ಟಿಕಾಲ್ ನರಸಿಂಹ ಪೈಗಳು ನಾಮಪತ್ರ ಸಲ್ಲಿಸಿರುವರು. ಪೈಗಳಿಗೆ ಪ್ರ. ಶ್ರೀ ಎ. ಎಸ್. ಭಾಸ್ಕರ ರೈಗಳ ವಿರುದ್ಧವಾಗಿ ಪುರಜನರ ಸಂಘದ ಕಾರ್ಯದರ್ಶಿ ಶ್ರೀ. ಎ. ಕೆ. ಸೇವಕ್ ಮತ್ತು ಶ್ರೀ ಸಂಜೀವ ಪಂಜಾರಿಯವರು ನಾಮಪತ್ರ ಸಲ್ಲಿಸಿರುವರು. ಈಗಿನ ನಗರ ಸಭಾ ಸದಸ್ಯರಾದ ಶ್ರೀಗಳಾದ ಬಿ. ಪುರುಷೋತ್ತಮ್ ಪೈ ಮತ್ತು ಎಮ್. ರಮಾನಾಥರು ಚುನಾವಣೆಗೆ ಸ್ಪರ್ಧಿಸುವುದಕ್ಕಾಗಿಯೇ ತಮ್ಮ ಉಪಾಧ್ಯಾಯ ವೃತ್ತಿಗೆ ರಾಜೀನಾಮೆಯನ್ನಿತ್ತಿರುವರು.

ನಾಮಪತ್ರ ಹಿಂತೆಗೆಯುವ ಕೊನೆಯ ದಿನ 26 ಮಂದಿ ತಮ್ಮ ನಾಮಪತ್ರಗಳನ್ನು ಹಿಂತೆಗೆದರು. 30ನೆ ಮಂಗಳಾದೇವಿ ವಾರ್ಡಿನಲ್ಲಿಯ ಇಬ್ಬರು ನಾಮಪತ್ರ ಹಿಂತೆಗೆದುದರಿಂದ ಶ್ರೀ ಎಮ್. ರಘುರಾಮ ಸೆಟ್ಟಿರು ಅವಿರೋಧ ಆಯ್ಕೆ ಹೊಂದುವಂತಾಯಿತು, ಇವರು ಕಾಂಗ್ರೆಸ್ ಪಕ್ಷದ ಪ್ರತಿಷ್ಠೆಗೆ ಸಹಿ ಹಾಕಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರೆಂದು ಹೇಳಲಾಗಿದೆ. ಆದುದರಿಂದ ಎರಡು ಸ್ಥಾನಗಳು ಕಾಂಗ್ರೆಸಿಗೆ ಸಿಕ್ಕಿದಂತಾಯಿತು. ಉಳಿದ 34 ಸ್ಥಾನಗಳಿಗೆ 87 ಮಂದಿ ಉಮೇದ್ವಾರರು ಸ್ಪರ್ಧಿಸುವರು.

(೧ನೇ ಪುಟದಿಂದ)

ಕತೆಗಳು ಕ್ರೂರ ಕೃತ್ಯಗಳ ವರ್ಣನೆಯಿಂದ ಕೂಡಿರುತ್ತವೆ; ಪತ್ತೇದಾರಿಕೆಯ ಅದ್ಭುತಗಳನ್ನು ವಿವರಿಸುವ ಪ್ರಕಟನೆಗಳು ಓದುಗನಿಗೆ ರೋಮಾಂಚಕರ ಅನುಭವ ನೀಡುವುದರೊಡನೆ ಹಿಂಸಾಚಾರಗಳ ಬೀಜಾರೋಪಣವನ್ನು ಅವನಲ್ಲಿ ಮಾಡುತ್ತವೆ. ಇವುಗಳಿಗೆಲ್ಲ ಎಡೆಕೊಡಬಾರದೆನ್ನುವ ಸರಕಾರದ ಸಂಕಲ್ಪ ನಿಜಕ್ಕೂ ಪ್ರಶಂಸೆಗೆಯೇಯಾಗಿದೆ.

ಮದ್ಯಪಾನ, ಸಂಗೀತ, ಚಲಚ್ಚಿತ್ರ, ಚಕ್ರಬಂಧ ಮುಂತಾದ ಎಲ್ಲ ಸ್ಪೇತ್ರದಲ್ಲೂ ಮಿತಿವಂತರಾಗುವಂತೆ ಸರಕಾರವು ಒತ್ತಾಯಿಸುವುದು ಸಾಮಾನ್ಯರಿಗೆ ಬೇಸರ ತಂದೀತು. ಶಾಸನವು ಮನುಷ್ಯನನ್ನು ಉತ್ತಮನಾಗಿ ಮಾಡಲಾರದೆಂದೂ ತೋರೀತು.--ಆದರೆ, ಸಾಮಾಜಿಕ ವಾತಾವರಣವು ನಿಧಾನವಾಗಿ ಸುಧಾರಣೆಗೊಳ್ಳುವುದಕ್ಕೆ ಶಾಸನಗಳು ನೆರವಾಗತ್ತವೆ ಎಂಬುದರಲ್ಲಿ ಪ್ರತಿಮಾತಿರಲಾರದು ಅನ್ಯಥಾ ನಾಗರಿಕತೆಯ ದೀರ್ಘ ಇತಿಹಾಸಕ್ಕೆ ಬೆಲೆಯೇ ಉಳಿಯದೆ ಅದು ಕೇವಲ ಭ್ರಮೆಯಾಗುತ್ತದೆ.

SR
ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್.ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಂಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, UDIDI, S.K.

ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!
"ರಿಕರಿಂಗ್" ಠೇವಣಾತಿ.
ಬರೇ ರೂಪಾಯಿ ಒಂದು ತಿಂಗಳ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ನಾಲಿಯಾನ್ ಸೇಕಡಾ 4½%.
ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.
ದಿ ವಿಜಯ ಬೇಂಕ್ ಲಿಮಿಟೆಡ್.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಎತ್ತಿನ ಗಾಡಿಯ ಅನಿಶ್ಚಿತ ಭವಿಷ್ಯ

ಸ್ಪರ್ಧೆಯಲ್ಲಿ ಉಳಿಯಲು ಸುಧಾರಣೆಯ ಅಗತ್ಯ

ಸರದಾರ ಕೆ. ಎಂ. ಪಣಿಕ್ಕರರು "ಎತ್ತಿನ ಗಾಡಿಯಿಂದ ರಾಲ್ಸ್‌ರಾಯ್ಸ್ ಮೋಟಾರಿನ ವರೆಗೆ ಎಲ್ಲ ಹಂತಗಳ ನಾಗರಿಕತೆ ಇರುವ ನಾಡು" ಎಂದು ಭಾರತವನ್ನು ಕರೆಯಲಾಗುತ್ತದೆ ಎಂದು ಇತ್ತೀಚೆ ನುಡಿದುದರ ಉಲ್ಲೇಖವನ್ನು ಬೇರೆಡೆ ಕೊಟ್ಟಿದ್ದೇವೆ. ನಮಗೆ ತಿಳಿದಂತೆ ಈ ಅದ್ಭುತ ಉದ್ಗಾರವನ್ನು ಮೊದಲು ಎತ್ತಿದವರು ಬ್ರಿಟಿಸಿನಲ್ಲಿ ಭಾರತದ ಮಂತ್ರಿಯಾಗಿದ್ದ ಶ್ರೀ ಎಲ್. ಎಸ್. ಅಮೆರಿ. ಅವರ ವರ್ಣನೆಯು ಭಾರತದ ಇಂದಿನ ಪರಿಸ್ಥಿತಿಗೂ ಹಿಂದಿನಷ್ಟೇ ಚೆನ್ನಾಗಿ ಒಪ್ಪುತ್ತದೆ.

ದೇಶಕ್ಕೆ ಸಲ್ಲಿಸುವ ಸೇವೆ

ಬಡ ದೇಶವಾದ ಭಾರತದಲ್ಲಿ ಎತ್ತಿನ ಬಂಡಿಗಳ ಕಾಲ ಇನ್ನೂ ಮುಗಿದು ಹೋಗಿಲ್ಲ—ಬೇಗನೆ ಮುಗಿಯಲಿಕ್ಕೂ ಇಲ್ಲ. ಏಕೆಂದರೆ, ಎತ್ತಿನ ಗಾಡಿಗಳು ನಮ್ಮ ಹಳ್ಳಿಗಳಿಗೆ ಸಲ್ಲಿಸುತ್ತಿರುವ ಸೇವೆಯ ಪ್ರಮಾಣ ಅಗಾಧವಾಗಿದೆ. ರೈಲ್ವೆಗಳು ಸಾಗಿಸುವ ಸರಕಿನ ಒಟ್ಟು ಪ್ರಮಾಣದ ಅರ್ಧದಷ್ಟನ್ನು ಎತ್ತಿನ ಗಾಡಿಗಳು ಒಯ್ಯುತ್ತವೆ. ಮೋಟಾರು ಲಾರಿಗಳ ಗಾಡಿಗಳು ಒಯ್ಯುವ ಸರಕಿನ ಪ್ರಮಾಣದಲ್ಲಿ ೧/೩ ಮಾತ್ರ ಸಾಗಿಸುತ್ತವೆ. ೧೯೫೧ನೇ ಜನಗಣನೆಗನುಸಾರವಾಗಿ ಭಾರತದಲ್ಲೀಗ ಒಂದು ಕೋಟಿ ಎತ್ತಿನ ಗಾಡಿಗಳು ಕೆಲಸ ಮಾಡುತ್ತವೆ.

ಪ್ರವಾಸಿಕರನ್ನು ಒಯ್ಯುವಲ್ಲಿಯೂ ಎತ್ತಿನ ಗಾಡಿಗಳು ವಹಿಸುವ ಪಾತ್ರ ಮಹತ್ವದ್ದಾಗಿದೆ—ರೈಲ್ವೆಗಳು ಒಟ್ಟು ಪ್ರವಾಸಿಕರಲ್ಲಿ ೬೦% ಸಾಗಿಸುತ್ತಿದ್ದರೆ, ಎತ್ತಿನ ಗಾಡಿಗಳು ೩೦% ಪ್ರವಾಸಿಕರನ್ನು ಭಾರತದ ಹಳ್ಳಿಗಳ ಮೂಲೆ ಮೂಲೆಗಳಿಗೆ ಒಯ್ಯುತ್ತವೆ. ಮೋಟಾರು ಬಸ್ಸುಗಳಲ್ಲಿ ಪ್ರಯಾಣಿಸುವವರ ಪ್ರಮಾಣ ಒಟ್ಟು ಪ್ರಯಾಣಿಕರ ೧೦% ಮಾತ್ರ.

ತೀಕ್ಷ್ಣವಾದ ಸ್ಪರ್ಧೆ

ಕಳೆದ ಇಪ್ಪತ್ತೈದಕ್ಕಿಂತಲೂ ಹೆಚ್ಚಿನ ವರ್ಷಗಳಲ್ಲಿ ಗಾಡಿಗಳ ಸಂಖ್ಯೆಯು ಇಳಿಮುಖವಾಗತೊಡಗಿದೆ. ನಮ್ಮ ಜಿಲ್ಲೆಯಲ್ಲಿ ಕೋಟಿ-ಚೆನ್ನಯರ ಕತೆಯ ಕಾಲಕ್ಕೆ ಇದ್ದಿರಬಹುದಾದ ಎತ್ತಿನ ಗಾಡಿಗಳೊಡನೆ ಈಗಿನ ಪ್ರಮಾಣವನ್ನು ತೋಲಿಸಿ ನೋಡಿದರೆ ೧೧೦:೧ ಎಂಬ ಅನುಪಾತವನ್ನು ನಾವು ಮುಟ್ಟುತ್ತೇವೊ ಎಂಬ ಭಯವಾಗುತ್ತದೆ. ಮೋಟಾರು ಲಾರಿಗಳೂ ಬಸ್ಸುಗಳೂ ಕಳೆದ ಮೂರು ನಾಲ್ಕು ದಶಕಗಳಲ್ಲಿ ನಮ್ಮ ಎತ್ತಿನ ಗಾಡಿಗಳನ್ನು ಎಲ್ಲ ಪ್ರಮುಖ ರಸ್ತೆಗಳಿಂದಲೂ ಉಚ್ಚಾಟನೆ ಮಾಡಿವೆ ಎಂದು ಇದರ ತಾತ್ಪರ್ಯ. ತಜ್ಞರ ಅಭಿಪ್ರಾಯದಂತೆ ಈ ಗಾಗಲೇ ೯೦% ಗಾಡಿಗಳನ್ನು ಅವು ಮೂಲೆಗುಂಪು ಮಾಡಿರುತ್ತವೆ.

ಸ್ಪರ್ಧೆಯು ಇಷ್ಟು ತೀಕ್ಷ್ಣವಾಗಿದ್ದರೂ ನಮ್ಮಲ್ಲಿ ಒಂದು ಕೋಟಿಯಷ್ಟು ಎತ್ತಿನ ಗಾಡಿಗಳು ಉಳಿದಿರುವುದು ಹೇಗೆ? ಇದಕ್ಕೆ ಒಂದೇ ಒಂದು ಕಾರಣವಿದೆ—ಈಗ ಪ್ರತಿಯೊಂದು ಹಳ್ಳಿಯನ್ನು ಮುಟ್ಟುವುದಕ್ಕೆ ಮೋಟಾರು ಸಾರಿಗೆಗೆ ಅನುಕೂಲವಾದ ರಸ್ತೆಗಳಿಲ್ಲ. ಸ್ಥಳೀಯ ಅಭಿವೃದ್ಧಿ ಪ್ರಯತ್ನಗಳ ದೆಸೆಯಿಂದ ಯೋಗ್ಯ ರಸ್ತೆಗಳನ್ನು ರಚಿಸುವ ಕೆಲಸ ಈಡೇರಿದ ಪಕ್ಷದಲ್ಲಿ ಎತ್ತಿನ ಗಾಡಿಗಳ ಸ್ಥಾನವನ್ನು ಮೋಟಾರು ಸಾರಿಗೆ ಆಕ್ರಮಿಸುವುದು ಖಂಡಿತ.

ಸಾವಕಾಶವಾದ ನಾಶ

ಎತ್ತಿನಗಾಡಿಗಳನ್ನುಮೂಲೆಗುಂಪುಮಾಡಿದರೆ ಎರಡುಕೋಟಿ ಎತ್ತುಗಳಿಗೆಗತಿಯಿಲ್ಲವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಒಂದುಕೋಟಿ ಗಾಡಿಯಾಳುಗಳು ಜೀವನಯಾಪನೆಯ ಉಪಾಯವೇನೆಂದು ತಿಳಿಯದೆ ಪೇಚಾಡಬೇಕಾಗುತ್ತದೆ. ಗಾಡಿಗಳನ್ನು ಕಟ್ಟುವ ಬಡಗಿಗಳೂ ಕಮ್ಮಾರರೂ ಲಾಳಕಟ್ಟುವವರೂ ತಮ್ಮ ಉದ್ಯೋಗಕ್ಕೆ ತಿಲಾಂಜಲಿಯನ್ನು ಕೊಡಬೇಕಾಗುತ್ತದೆ. ದೇಶದಲ್ಲಿ ಇಂಥ ಅನರ್ಥವಾಗಬೇಕೆಂದಿದ್ದ ಎರಡುಲಕ್ಷ ಹೊಸ ಮೋಟಾರು ವಾಹನಗಳನ್ನು ತಂದರೆ ಸಾಕು— ಆದರೆ, ಇದನ್ನು ಯಾರಾದರೂ ಬಯಸಿಯಾರೆ?

ಮೋಟಾರು ಸಾರಿಗೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಆತುರವುಳ್ಳವರು ಎತ್ತಿನ ಗಾಡಿಯ ಕುರಿತು ಹೇಳುವ ದೂರುಗಳನ್ನು ಇಲ್ಲಿ ವಿಚಾರಿಸುವುದು ಅಪೇಕ್ಷಣೀಯ—ಮೊದಲನೆಯದಾಗಿ ಎತ್ತಿನ ಗಾಡಿಗಳು ಬಹಳ ನಿಧಾನವಾಗಿ ಸರಕನ್ನಾಗಲೀ ಪ್ರಯಾಣಿಕರನ್ನಾಗಲೀ ಸಾಗಿಸುತ್ತವೆ; ಎತ್ತಿನ ಗಾಡಿಗಳಿಗೆ ಕೊಡಬೇಕಾದ ಬಾಡಿಗೆ ಹೆಚ್ಚಾಗಿರುತ್ತದೆ; ಎತ್ತಿನ ಗಾಡಿಗಳು ತಾವು ಸಂಚರಿಸುವ ಮಾರ್ಗವನ್ನು ಬಹಳಬೇಗನೆ ಹಾಳುಗೆಡವುತ್ತವೆ. ಈ ದೂರುಗಳ ಕುರಿತು ನಾವೇನು ಪರಿಹಾರ ಯೋಚಿಸಬಹುದು?

ಬದುಕುವ ಮಾರ್ಗ

ಹಳ್ಳಿಗಳಲ್ಲಿ ರಸ್ತೆಗಳು ಎಷ್ಟು ಕೆಟ್ಟ ಪರಿಸ್ಥಿತಿಯಲ್ಲಿರುತ್ತವೆಯೆಂದರೆ, ಮೋಟಾರು ಸಾರಿಗೆಗಳಿರಲಿ, ಎತ್ತಿನ ಗಾಡಿಗೆ ಸಹ ಈ ರಸ್ತೆಗಳ ಮೇಲಿಂದ ಕೆಲವೊಮ್ಮೆ ಹೋಗಲಾಗುವುದಿಲ್ಲ; ಮಳೆಗಾಲದಲ್ಲಿಯಂತೂ ಎತ್ತಿನಗಾಡಿಗಳು ಓಡಾಡಲಾರದೆ ಸುಮ್ಮನೆ ಬಿದ್ದಿರಬೇಕಾಗುವ ಪ್ರಸಂಗವೇ ಹೆಚ್ಚು. ಮೋಟಾರಿನ ಸುಧ್ದಿಯನ್ನೆತ್ತಬೇಕಾದರೆ ರಸ್ತೆಯನ್ನು ಚೆನ್ನಾಗಿಡಬೇಕಾಗುತ್ತದೆ. ಹೀಗೆ ಚೆನ್ನಾಗಿಇಟ್ಟರೂ ಎತ್ತಿನಗಾಡಿಗಳನ್ನು ಈಗಿರುವಂತೆ ಓಡಾಡಗೊಟ್ಟರೆ, ರಸ್ತೆ ಹಾಳಾಗದಿರದು, ರಸ್ತೆ ದುರಸ್ತಿಗೆ ಕರ್ಚಾಗುವ ಹಣದಲ್ಲಿ ಅರೆವಾಸಿಯಷ್ಟು ಎತ್ತಿನ ಗಾಡಿಗಳ ಓಡಾಟದ ದೆಸೆಯಿಂದ ಕೆಟ್ಟುಹೋದ ರಸ್ತೆಗಳನ್ನು ಸರಿಪಡಿಸುವುದಕ್ಕೆಯೇ ವ್ಯಯವಾಗುತ್ತದೆ.

ಇದನ್ನು ನಿಲ್ಲಿಸಲು ಒಂದು ಉತ್ತಮ ಉಪಾಯವನ್ನು ಅವಲಂಬಿಸಬಹುದು: ಅದೆಂದರೆ, ಎತ್ತಿನ ಚಕ್ರಗಳಿಗೆ ರಬ್ಬರಿನ ಟಾಯರಿನ ಉಪಯೋಗ. ಇದರಿಂದ ರಸ್ತೆಯನ್ನು ಕೆಡಿಸುತ್ತವೆ ಎಂಬ ಆಪವಾದ ತಪ್ಪುತ್ತದೆ. ಎತ್ತಿನಗಾಡಿಗಳ ಓಡಾಟವೂ ಸುಗಮವಾಗುತ್ತದೆ. ಎತ್ತುಗಳು ಇಮ್ಮಡಿ ಭಾರವನ್ನು ಹೊರುವುದೂ ಆಗ ಸಾಧ್ಯವಾಗುತ್ತದೆ. ಇದರಿಂದ ಮೋಟಾರು ಸಾರಿಗೆ ದರದ ಅರೆವಾಸಿಯಷ್ಟಕ್ಕೆ (ಅಂದರೆ ಮೈಲಿಗೆ ೩ಂಪೈ) ಎತ್ತಿನ ಗಾಡಿಗಳ ಸಾರಿಗೆದರವನ್ನು ಇಳಿಸಬಹುದಾಗುತ್ತದೆ. ಆಗ ಎತ್ತಿನ ಗಾಡಿಯನ್ನು—ಪ್ರವಾಸಕ್ಕಲ್ಲದಿದ್ದರೂ, ವ್ಯಾಪಾರಕ್ಕಾಗಿ—ಬಳಸಲು ಜನರು ಹಿಂಜರಿಯಲಿಕ್ಕಿಲ್ಲ. ಇಂಥ ಸದ್ಬುದ್ಧಿ ನಮ್ಮ ಗಾಡಿಯಾಳುಗಳಿಗೆ ಬರಲಿ! ಅವರಿಗೆ ನೆರವಾಗಲು ಸರಕಾರವೂ ನೋಡಲಿ! ವಿಮಾನ, ಹಡಗ, ರೈಲ್ವೆ ಮುಂತಾದುವುಗಳನ್ನು ರಚಿಸುವ ಯೋಜನೆಗಳೊಡನೆ ಇದಕ್ಕೂ ಪ್ರೋತ್ಸಾಹ ಸಿಗುವಂತಾಗಲಿ.

(ಸಂಕಲಿತ)



ಭಾರತದಲ್ಲಿ ಸಮುದ್ರ ವ್ಯಾಪಾರ

ಲೋಕ ಸಭೆಯಲ್ಲಿ ಖಾಸಗಿ ಗೊತ್ತುವಳಿಯೊಂದರ ಚರ್ಚೆ ನಡೆದಾಗ ನಮ್ಮ ದೇಶದ ಸಮುದ್ರ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಹೆಚ್ಚಿನ ಪ್ರಯತ್ನವನ್ನು ನಡೆಯಬೇಕೆಂದು ಎಲ್ಲ ಸದಸ್ಯರೂ ಅನೇಕ ಸಲಹೆಗಳನ್ನು ಮುಂದಿಟ್ಟರು. ಎಂಡನೆಯ ಪಂಚವಾರ್ಷಿಕ



ಯೋಜನೆಯಲ್ಲಿ ನೌಕೆಗಳ ಬೆಳವಣಿಗೆಗಾಗಿ ಮೀಸಲಿರಿಸಿದ ೧೦೦ ಕೋಟಿ ರೂಪಾಯಿಗಳು ಏತಕ್ಕೂ ಸಾಲವೆಂದು ಹೇಳಲಾಯಿತು. ನಿರಾಶ ಪಟ್ಟಣದ ನೌಕಾರಂಗದ ಪ್ರಗತಿಯು ನಿಧಾನವಾಗಿದೆ ಎಂದು ದೂರಲಾಯಿತು. ಇಟಲಿ, ಜರ್ಮನಿ, ಮತ್ತು ಜಪಾನುಗಳಿಗೆ ಯುದ್ಧದ ದೆಸೆಯಿಂದ ದಿಕ್ಕುತಪ್ಪಾದ ತಮ್ಮ ಸಡಗರ ಕಟ್ಟುವ ಉದ್ಯಮವನ್ನು ಬೆಳೆಸಿಕೊಳ್ಳುವುದು ಸಾಧ್ಯವಾಗಿದ್ದರೆ ಭಾರತಕ್ಕೇಕೆ ಸಾಧ್ಯವಿಲ್ಲ ಎಂದು ಕೆಲವರು ಪ್ರಶ್ನೆ ಹಾಕಿದರು



ನಿಜಕ್ಕೂ ನಮ್ಮ ದೇಶದಲ್ಲಿ ಹಡಗಗಳ ನಿರ್ಮಾಣ ಮತ್ತು ಸಮುದ್ರ ವ್ಯಾಪಾರ ತೀವ್ರ ಗತಿಯಿಂದ ಹೆಚ್ಚಾಗಬೇಕಾಗಿದೆ. ಇಲ್ಲಿಪ್ರಥಮ ಚಿತ್ರದಲ್ಲಿ ತೋರಿಸಿರುವ ಮಾದರಿಯ ಭಾರಿ ವ್ಯಾಪಾರಿ ಹಡಗುಗಳು ನಮ್ಮಲ್ಲಿ ರಚಿಸಲ್ಪಡಬೇಕು. ದ್ವಿತೀಯ ಚಿತ್ರದಲ್ಲಿ ತೋರಿಸಿರುವ ಮಾದರಿಯ, ಪ್ರವಾಸಿಕರ ಅನುಕೂಲತೆಗಾಗಿ ಕಟ್ಟಲಾದ, ದೊಡ್ಡ ಹಡಗಗಳು ನೀರಿಗಿಳಿಯುವುದನ್ನು ನಾವು ನೋಡುವ ದಿನವೂ ನಿಕಟವಾಗಬೇಕು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOMBAY-3

ಲಾವೋಸಿನ ರಾಜಕುಮಾರರ ಭಾರತ ಸಂದರ್ಶನ

ಭಾರತದೊಡನೆ ಅನಾದಿ ಕಾಲದಿಂದ ಸಂಪರ್ಕವಿರುವ ನಾಡಿನ ಧುರೀಣ

ಇದೇ ೧೧ನೇ ದಿನಾಂಕದಿಂದ ಹತ್ತು ದಿನಗಳ ವರೆಗೆ ಭಾರತವು ಪೂರ್ವ ಏಶಿಯದ ರಾಜಸರಿವಾರವೊಂದಕ್ಕೆ ಆತಿಥ್ಯವನ್ನು ನೀಡಲಿದೆ. ಇಂದೋನೇಶಿಯದ ಮೂರು ತುಣುಕು ರಾಜ್ಯಗಳಲ್ಲಿ ಒಂದಾದ, ಲಾವೋಸಿನ ರಾಜಕುಮಾರ ಸಾವಂಗ ವತನರೂ ಅವರ ಪತ್ನಿಯೂ ಈ ರಾಜ್ಯದ ಮುಖ್ಯ ಮಂತ್ರಿ ಕಾಟೇ ಸಸೋರಿತರೊಡನೆ ಭಾರತದಲ್ಲಿ ಸಂಚರಿಸಿ ಬೌದ್ಧ ಕ್ಷೇತ್ರಗಳ ದರ್ಶನ ಮಾಡುವ, ಡೆಹರಾಡೂನ್, ಚಿತ್ತರಂಜನ, ಆಗ್ರಾ, ಸಿಂಧ್ರಿ ಮುಂತಾದ ಕೇಂದ್ರಗಳನ್ನು ಭೇಟಿಯಾಗುವ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ

ಕಳೆದ ವರ್ಷ ಭಾರತದ ಪ್ರಧಾನಿನೆಹರುಗಳು ಚೀನದ ಪ್ರವಾಸಕ್ಕೆ ಹೋಗಿದ್ದಾಗ, ಮಾರ್ಗದಲ್ಲಿ ಲಾವೋಸಿನ ರಾಜಧಾನಿಯಲ್ಲಿ ತಂಗಿ, ಈ ರಾಜಕುಮಾರರೊಡನೆ ಮಾತುಕತೆ ನಡೆಸಿದ್ದರು ಮಾತುಕತೆಯು ಜಿನೇವ ಒಪ್ಪಂದದಂತೆ ಏರ್ಪಡಿಸಲಾಗಿರುವ ಅಂತಾರಾಷ್ಟ್ರೀಯ ಸೇಲ್ವಿಚಾರಣಾ ಮಂಡಳದ ಅಧ್ಯಕ್ಷ ಸ್ಥಾನದಲ್ಲಿರುವ ಭಾರತವು ನಿರ್ವಹಿಸಬೇಕಾದ ಕರ್ತವ್ಯಗಳ ಸುತ್ತಲೂ ಕೇಂದ್ರೀಕೃತವಾಗಿದ್ದಿತು

ಚೀನದ ಸಂಚಾರ ಕಾಲದಲ್ಲಿ ಕಳೆದ ವರ್ಷ ಲಾವೋಸಿನ ರಾಜಕುಮಾರರೊಡನೆ ನೆಹರು ಸಂಭಾಷಣೆ ನಡೆಸುತ್ತಿದ್ದಾಗ ತೆಗೆದ ಚಿತ್ರ— ಈ ಸಲ ಹೊಸದೆಹಲಿಯಲ್ಲಿ ಮಾತುಕತೆ ನಡೆಯುವಾಗಿನ ದೃಶ್ಯ ಇದಕ್ಕಿಂತ ಭಿನ್ನವಿರಲಾರದು

ಸಂಗೀತಪ್ರಿಯ ಜನರು

ಲಾವೋಸ್ ರಾಜ್ಯದ ಪಶ್ಚಿಮಕ್ಕೆ ಥಾಯ್‌ಲ್ಯಾಂಡ್ ಮತ್ತು ಬರ್ಮಾಗಳಿವೆ. ಉತ್ತರದಲ್ಲಿ ಚೀನಾ, ದಕ್ಷಿಣದಲ್ಲಿ ಕಾಂಬೋಡಿಯಾ ಇದೆ ಇಂಡೋ-ಚೀನಾದ ಮೂರು ರಾಜ್ಯಗಳಲ್ಲಿ ಇದು ವಿಸ್ತಾರದಲ್ಲಿ ಎರಡನೆಯ ಸ್ಥಾನವನ್ನು ಪಡೆಯುತ್ತದೆ. ಈ ರಾಜ್ಯದ ವಿಸ್ತೀರ್ಣ ೮೦,೦೦೦ ಚದರ ಮೈಲುಗಳು. ಈ ರಾಜ್ಯದ ಆರ್ಥಿಕ ವ್ಯವಸ್ಥೆಯು ಬೇಸಾಯವನ್ನವಲಂಬಿಸಿದೆ ಇಲ್ಲಿ ಭತ್ತವೇ ಮುಖ್ಯ ಬೆಳೆ ತಂಬಾಕು, ಹತ್ತಿ ಮತ್ತು ಸೌಬು ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತದೆ.

ಬರ್ಮಾದ ಷಾನರೂ ಸಯ್ಯಾಮಿಗಳೂ ಲಾವೋಸ ಜನತೆಯಲ್ಲಿ ಸೇರಿರುವರು ಅವರನ್ನು ಥಾಯ್ ಸಂತತಿಯೆಂದು ಕರೆಯುವರು ಇವರು ಬೌದ್ಧ ಮತದ ಹೀನಾಯಾನ ಪಂಥಕ್ಕೆ ಸೇರಿದವರು ಅವರು ಸಂಗೀತ ಪ್ರಿಯರಾಗಿರುವರು. ಅವರ ಭಾಷೆಯು ಥಾಯ್ ಭಾಷೆಯಂತೆಯೇ ಇದ್ದರೂ ಅವರ ಸಾಹಿತ್ಯ ಬಾರತೀಯ ಮಹಾ ಕಾವ್ಯಗಳೊಂದಿಗೆ ಹೆಚ್ಚಿನ ಸಾಮ್ಯವನ್ನು ಹೊಂದಿದೆ. ಪವಿತ್ರವಸ್ತುಗಳ ಮೇಲಿನ ಗದ್ಯ ಕಾವ್ಯಗಳನ್ನೂ ಪದ್ಯ ಕಾವ್ಯದಲ್ಲಿರುವ ಐತಿಹಾಸಿಕ ಪ್ರಣಯ ಪ್ರಸಂಗಗಳನ್ನೂ ರಾಮಾಯಣ ಮಹಾ ಭಾರತಗಳಿಂದ ಆರಿಸಿಕೊಳ್ಳಲಾಗಿದೆ

ಪುರಾತನ ಇತಿಹಾಸ

ಕ್ರಿಸ್ತಯುಗದ ಆದಿಕಾಲದಿಂದ ಲಾವೋಸಿನ ಇತಿಹಾಸವು ಆರಂಭವಾಗುತ್ತದೆ. ಇದರ ಮೂಲಕ್ರಿಸ್ತನಾಮ ಥೈನ್ ಲಾ ಎಂದು ಆಲ್ಲಿನ ನಿವಾಸಿಗಳಿಗೆ ಬೆಮಾರಿನ್ ಎಂದೂ ಹೆಸರಿತ್ತು ಈ ರಾಜ್ಯದಲ್ಲಿ ಆಡುಸಿತ, ಮಧ್ಯ ಮತ್ತು ದಕ್ಷಿಣ ಲಾವೋಸ್, ದಕ್ಷಿಣ ಕಾಂಬೋಡಿಯಾ ಮತ್ತು ಪೂರ್ವಥಾಯ್‌ಲೇಂಡಗಳೂ ಸೇರಿದ್ದವು. ಈ ರಾಜ್ಯದ ಒಡೆಯರು ವ ಪರ್ಷಿಕಂಬುವಿನ ಸಂತತಿಯವರು. ಅವರಿಗೆ ಭಾರತೀಯ ಹೆಸರಿತ್ತು ಅವರು ಬಂಡೆಗಳ ಮೇಲೆ ಮತ್ತು ಕಲ್ಲು ಕಂಬಗಳ ಮೇಲೆ ಭಾರತೀಯರ ರೀತಿಯಲ್ಲಿ ಶಾಸನಗಳನ್ನು ಕೆತ್ತಿರುವರು. ಸಂಸ್ಕೃತವು ಅಧಿಕೃತ ಭಾಷೆಯಾಗಿತ್ತು. ಹಿಂದೂಮತ ಮತ್ತು ಪರ್ಶಾರ್ಯಮ ಧರ್ಮವನ್ನು ಬಹಳವಾಗಿ ಅಂಗೀಕರಿಸಲಾಗಿತ್ತು. ಈ ಭಾರತೀಯ ಗುಣಾಂಶಗಳು. ವ್ಯಾಪಾರಿಗಳು ಸಾಹಸಿಗಳು ಮತ್ತು ಸನ್ಯಾಸಿಗಳ ಮೂಲಕ ಹರಡಿಸಯೆನ್ನಬಹುದು

೧೯ನೇ ಶತಮಾನದ ಉತ್ತರಾರ್ಧದಲ್ಲಿ ಈ ರಾಜ್ಯವು ಭಾನವರ್ಮನ್ ಮತ್ತು ಈಶಾನ ವರ್ಮನ್ ದೊರೆಗಳ ಆಡಳಿತದಲ್ಲಿ ವಿಸ್ತಾರಗೊಂಡಿತು ಅವರ ಕಾಲದ ಶಾಸನಗಳು ಪಲ್ಲವ ಲಿಪಿಯಲ್ಲಿ ಕುದ್ದ ಸಂಸ್ಕೃತದಲ್ಲಿವೆ. ಕ್ರಿ. ಶ. ೧೦೦೦ರಿಂದ ೧೨೦೦ ನೇ ಇಸವಿಯ ನಡುವಿನ ಕಾಲದಲ್ಲಿ ಈ ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂಬುದನ್ನು ಈ ಶಾಸನಗಳು ತೋರಿಸುತ್ತವೆ. ಆಂಗ್ ಕೋರ್ ನಗರ ಹಾಗೂ ದೇವಾಲಯದ ನಿರ್ಮಾಣಕಾರ್ಯ ಆ ಕಾಲದಲ್ಲಾಯಿತು. ಇಂದ್ರವರ್ಮನ್ ಮತ್ತು ಯಶೋವರ್ಮನ್ ದೊರೆಗಳು ಇವುಗಳನ್ನು ಕಟ್ಟಿಸಿದ್ದರು.

ಫ್ರೆಂಚರ ಕೈಯಲ್ಲಿ

ಈ ರಾಜ್ಯವು ೧೪ನೇ ಶತಮಾನದಲ್ಲಿ ವಿಭಜನೆಗೊಂಡು ಲಾವೋಸ್ ಮತ್ತು ಕಾಂಬೋಡಿಯಾ ಮುಂತಾದ ತುಣುಕುಗಳಿಗೆ ಎಡೆ ದೂರೆಯಿತು. ಅನಂತರ ಲಾವೋಸ್ ಫ್ರೆಂಚರ ಅಧೀನದಲ್ಲಿ ಇಂಡೋ-ಚೀನಾ ಯೂನಿಯನ್ನಿನ ಒಂದು ಕೇಂದ್ರಗಳಲ್ಲೊಂದಾಯಿತು. ೧೯೪೧—೪೫ರ ಅವಧಿಯಲ್ಲಿ ಲಾವೋಸ್ ಜಪಾನೀಯರ ಅಧೀನದಲ್ಲಿತ್ತು. ಜಪಾನು ಶರಣಾಗತವಾದ ಮೇಲೆ ಲಾವೋಸಿನ ವಿಮೋಚನಾ ದಳವು ದೇಶವನ್ನು ಸ್ವತಂತ್ರವೆಂದು ಘೋಷಿಸಿತು ಸ್ವತಂತ್ರ ಲಾವೋಸ್ ಸರ್ಕಾರವು ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಿ ದೊರೆಯನ್ನು ಸಂವಿಧಾನಾತ್ಮಕವಾದ ದೊರೆಯನ್ನಾಗಿ ಮಾಡಿತು. ಆದರೆ ಫ್ರೆಂಚರು ೧೯೪೬ರಲ್ಲಿ ಅದನ್ನು ಪುನಃ ಹಿಡಿದರು. ಸ್ವತಂತ್ರ ಲಾವೋಸ್ ಮಂಡಳದವರು ದೇಶಭ್ರಷ್ಟರಾದರು. ಅವರಲ್ಲಿ ಲಾವೋಸಿನಲ್ಲಿ ಈಗ ಪ್ರಧಾನಿಯಾಗಿರುವ ಕಾಟೇ ಸಸೋರಿತರೂ ಸೇರಿದ್ದಾರೆ

ಮುಂದೆ ೧೯೪೭ರಲ್ಲಿ ಸಂವಿಧಾನ ಸಭೆಗೆ ಚುನಾವಣೆ ನಡೆಯಿತು ಅದೇ ವರ್ಷ ಮೇ ತಿಂಗಳಲ್ಲಿ ಹೊಸ ಸಂವಿಧಾನವನ್ನು ಘೋಷಿಸಲಾಯಿತು. ದೊರೆಯು ಸಂವಿಧಾನಾತ್ಮಕವಾಗಿ ಪ್ರಮುಖನಾಗಿದ್ದು ಶಾಸನ ಸಭೆಗೆ ಜವಾಬ್ದಾರರಾದ ಮಂತ್ರಿಗಳ ಮೂಲಕ ಆಡಳಿತ ನಡೆಸುವ ಸರ್ಕಾರವು ಏರ್ಪಟ್ಟಿತು. ಸ್ವತಂತ್ರ ಲಾವೋಸ್ ವಿಮೋಚನ ದಳಕ್ಕೆ ಇದರಿಂದಲೂ ತೃಪ್ತಿಯುಂಟಾಗಲಿಲ್ಲ. ೧೯೫೦ರ ಆಗಸ್ಟ್‌ನಲ್ಲಿ ಅವರು ಸಮಾನಾಂತರ ಸರ್ಕಾರವನ್ನು ಸ್ಥಾಪಿಸಿ ಈ ರಾಜ್ಯದ ಈಶಾನ್ಯ ಭಾಗವನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು.

ಜಿನೇವದ ಒಡಂಬಡಿಕೆ

೧೯೫೪ನೇ ಆಗಸ್ಟ್ ೩ರಂದು ಜಿನೇವಾ ಒಪ್ಪಂದದ ಪ್ರಕಾರ ಯುದ್ಧಸ್ಥಂಭನವನ್ನು ಕೈಗೊಳ್ಳಲಾಯಿತು. ರಾಯಲ್ ಲಾವೋಸಿನ ಸರ್ಕಾರದ ಸರವಾಗಿ ಫ್ರೆಂಚ್ ಹೈಕಮ್ಯಾಂಡಿನವರೂ, ವಿಯೆಟ್-ನಾಂ ದಳದ ಹೈಕಮ್ಯಾಂಡ್‌ನವರೂ ಈ ಒಪ್ಪಂದಕ್ಕೆ ಸಹಿ ಹಾಕಿರುವರು ಆಗಸ್ಟ್ ೧೧ರಿಂದ ಅಂತಾರಾಷ್ಟ್ರೀಯ ಮೇಲ್ವಿಚಾರಣ ಮಂಡಳವು ತನ್ನ ಕೆಲಸವನ್ನು ಆರಂಭಿಸಿತು ಆರಂಭದಲ್ಲಿ ಜಿನೇವಾ ಒಪ್ಪಂದದ ಅನುಷ್ಠಾನದಲ್ಲಿ ಕೊಂಚ ತಡವಾದರೂ ಕಾಲಕ್ರಮೇಣ ಸಮರ್ಪಕವಾದ ಪ್ರಗತಿಯಾಯಿತು ನವೆಂಬರ್ ೨೦ರ ಹೊತ್ತಿಗೆ ಫ್ರೆಂಚ್ ಮತ್ತು ವಿಯೆಟ್—ನಾಂ ಸೇನೆಯು ಲಾವೋಸನ್ನು ಬಿಟ್ಟಿತು.

ರಾಯಲ್ ಸರ್ಕಾರ ಮತ್ತು ವಿಯೆಟ್ ರೊ ಹೈಕಮ್ಯಾಂಡ್‌ನವರಿಗೂ ರಾಜಕೀಯ ಇತ್ಯರ್ಥವನ್ನು ಜೀನೆವಾ ಒಪ್ಪಂದ ತಂದಿತು ಅದರ ಪ್ರಕಾರ ಲಾವೋಸಿನ ಪ್ರದೇಶಗಳು ಮತ್ತು ಪ್ರಾಂತಗಳು ಒಂದು ಸರ್ಕಾರದ ಅಧೀನದಲ್ಲಿ ಸಂಯುಕ್ತಗೊಳ್ಳುವುವು ಆದರೆ ದುರದೃಷ್ಟದಿಂದ ಈ ರಾಜಕೀಯ ಇತ್ಯರ್ಥವನ್ನೂ ಕಾರ್ಯರೂಪದಲ್ಲಿಳಿದಿಲ್ಲ ಈ ಹಿಂದೆ ನಡೆದ ಮಾತುಕತೆಗಳಿಂದ ಯಾವ ತೀರ್ಮಾನವೂ ಆಗಿಲ್ಲ ಈಗ ಪುನಃ ಮಾತುಕತೆಗಳು ಇನ್ನೂ ನಡೆಯುತ್ತಿವೆ. ಎರಡು ಪರಸ್ಪರ ವಿರೋಧಾಭಿಪ್ರಾಯವುಳ್ಳ ದಳಗಳಿರುವುದರಿಂದ ಮಿಲಿಟರಿ ಘರ್ಷಣೆಗಳೂ ಆಗಾಗ ಆಗುವುದುಂಟು. ಆದರೆ, ಲಾಭಯ ಪ್ರದೇಶಗಳಲ್ಲಿ ಮಾತುಕತೆಗಳು ಆರಂಭವಾದ ಮೇಲೆ ಉತ್ತರದ ಪ್ರಾಂತಗಳಲ್ಲಿ ಮಿಲಿಟರಿ ಪರಿಸ್ಥಿತಿ ಉತ್ತಮಗೊಂಡಿದೆ—ಎಂಬುದು ಗಮನಿಸಬೇಕಾದ ವಿಷಯ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಘಾತಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ. ರೂ. 5/- ಸ್ಪೆಶಲ್ ರೂ 8/- (ಅಂಚೆ ಪ್ರತ್ಯೇಕ)

Mrs. P. DEVEE, F Ds (N J)
CALCUTTA—10

ಸ್ವಾಕಿಸ್ಟರು ಶಹಾಕಂಪೌಂಡ್, ಮಂಗಳೂರು

NOTICE

Notice is hereby given that Share Certificate No 2264 for 25 shares issued by The Vijaya Bank, Limited to Sri Ponkra Hoovaya Shetty, New Shanthi Bhavan, Kika Street, Gulhlwadi, Bombay-4, is reported to be lost and an application has been received for the issue of a fresh Share Certificate in the place of the original Any person having any objection whatsoever for the issue of a fresh Share Certificate in the applicant's name, should communicate immediately to the undersigned If no objection is filed with the undersigned within 15 days from this date a fresh Share Certificate in the place of Share Certificate No. 2264 for 25 shares, will be issued in the name of Sri Ponkra Hoovaya Shetty

The Vijaya Bank Ltd,
Head Office, MANGALORE-3
Dated 20—9—1955

(Sd.) B. Mahabala Shetty,
Secretary.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ ಸ.)

ಜೀವ ಈಶ್ವರ ಧರ್ಮ—

ಬರೆದವರು: ಸ್ವಾಮಿ ವಿವೇಕಾನಂದ. ಪ್ರಕಾಶಕರು: ಶ್ರೀ ರಾಮಕೃಷ್ಣಾಶ್ರಮ, ಮೈಸೂರು. ಬೆಲೆ: ರೂ. ೩—೦—೦.

ಸ್ವಾಮಿ ವಿವೇಕಾನಂದರು ಈ ಶತಮಾನದ ಅತ್ಯಂತ ಮೇಧಾವಿ ಮಹಾಪುರುಷರಲ್ಲೊಬ್ಬರು. ಅವರು ಭಾರತದ ಸನಾತನಧರ್ಮದ ತಿರುಳೇನೆಂಬುದನ್ನು ಪಾಶ್ಚಾತ್ಯ ಲೋಕಕ್ಕೆ ಅರ್ಥವಾಗುವ ಸುಲಭ ರೀತಿಯ ಹೃದಯಂಗಮವಾದ ಶೈಲಿಯಲ್ಲಿ ಭಾಷಣಗಳ ಮೂಲಕ ವಿವರಿಸಿದ ಮಹಾನುಭಾವರು. ಅವರ ವಾಣಿಯು ಅತಿ ಗಂಭೀರವಾಗಿದೆ; ಅವರ ಮಾತಿನ ಸರಣಿಯು ಸಂಯುಕ್ತಿಕವಾಗಿದೆ; ಅವರ ವಿಚಾರಗಳು ಹರಿಯದ್ಧವಾಗಿವೆ. ತೀಕ್ಷ್ಣವಾದ ಅವರ ವಾಗ್ಧಾರೆಯು ಜಡಭರಿತನಲ್ಲಿಯೂ ಜಾಗೃತಿಯನ್ನು ಉಂಟು ಮಾಡುವಷ್ಟು ಸಚೇತನಶಾಲಿಯಾಗಿದೆ. ಅವರ ಉಪನ್ಯಾಸಗಳನ್ನು ಕೇಳುತ್ತಾ ಹೋದಂತೆ ರೋಮಾಂಚನವಾಗುವುದೆಂದು ಅನೇಕರು ತಮ್ಮ ಅನುಭವಗಳನ್ನು ಬರೆದಿಟ್ಟಿದ್ದಾರೆ. ಇಂಗ್ಲೀಷು ಮೂಲದಲ್ಲಿರುವ ಈ ಭಾಷಣಗಳನ್ನು ಅನುವಾದ ಮಾಡುವವರು ಅನುವಾದಿಸಲ್ಪಟ್ಟ ಭಾಷೆಯಲ್ಲಿ ಹಿಡುವಾಗಲೂ ಇಂಥದೇ ಅದ್ಭುತ ಅನುಭವ ವೇದ್ಯವಾಗುವಂತೆ ಮಾಡಿದರೆ ಮಾತ್ರ ಅನುವಾದವು ಸಾರ್ಥಕ. ಈ ಒರೆಗಲ್ಲಿಗೆ ಹಚ್ಚಿದಲ್ಲಿ "ಜೀವ ಈಶ್ವರ ಧರ್ಮ"ವು ಮೂಲದ ಗಾಂಭೀರ್ಯವನ್ನೂ ಮೋಹಕತೆಯನ್ನೂ ಉಳಿಸಿಕೊಂಡಿದೆ ಎಂದು ಹೇಳಲು ನಮಗೆ ಸಂತೋಷವಾಗುತ್ತದೆ. ಇಲ್ಲಿ ಸ್ವಾಮಿಯವರ ೨೩ ಭಾಷಣಗಳನ್ನು ಆಯ್ದು, ಅವುಗಳನ್ನು ಕ್ರಮಬದ್ಧವಾಗಿ ಮೋಣಿಸಿಕೊಂಡು, ಸಾಮಾನ್ಯ ಮನುಷ್ಯನು ಧನ್ಯ ಜೀವನವನ್ನು ನಡೆಸಲು ಪೋಷಕವಾದ ಅಧ್ಯಾತ್ಮಿಕ ಸುಸ್ತ್ವದ ಅಂಶಗಳೆಲ್ಲವೂ ಹೊರ ಹೊಮ್ಮುವಂತೆಚೆನ್ನಾಗಿ ಸಜ್ಜುಗೊಳಿಸಿದ್ದಾರೆ. ಈ ಪುಸ್ತಕವು ಮುಮುಕ್ಷುಗಳಿಗೆ ಕೈದೀಪಿಗೆಯಾಗಿದೆ. ಇಲ್ಲಿ ಪ್ರಸ್ತಾಪ ಮಾಡಿರದ ಧರ್ಮದ ಯಾವ ಅಂಶವೂ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಪಾಶ್ಚಾತ್ಯ ಜಗತ್ತು ಪಾರಸ್ಪರ್ಯ ಸಂಸ್ಕೃತಿಗಳ ಅನೇಕ ಪ್ರಮೇಯಗಳ ಸೂಕ್ಷ್ಮತರ ಚಿತ್ರಣ, ವಿಶ್ಲೇಷಣೆ, ಸಂಶ್ಲೇಷಣೆ ಮತ್ತು ಸಮನ್ವಯಗಳನ್ನು ಇಲ್ಲಿ ಕಾಣುತ್ತೇವೆ. ಕನ್ನಡಿಗರು ಅಮೂಲ್ಯವಾದ ಈ ಪುಸ್ತಕದಿಂದ ಧಾರಾಳ ಪ್ರಯೋಜನವನ್ನು ಪಡೆಯಲಿ.

ಭಾರತದ ಪುನಾರಚನೆ—

ಬರೆದವರು ಎಸ್. ಎನ್. ಅಗರ್‌ವಾಲಾ. ಅನುವಾದಕರು: ಜಿ. ವಿ. ನಾರಾಯಣ ಮೂರ್ತಿ ಪ್ರಕಾಶಕರು: ವಿಚಾರ ಸಾಹಿತ್ಯ ಲಿಮಿಟೆಡ್, ಬಳೇಪೇಟೆ, ಬೆಂಗಳೂರು ೨. ಬೆಲೆ: ರೂ. ೦—೮—೦.

ಭಾರತವು ನಮ್ಮ ಹಳ್ಳಿಗಳಲ್ಲಿದೆ. ಅಲ್ಲಿಯ ಜನರ ಜೀವನವು ಉತ್ತಮವಾಗದಿದ್ದರೆ ನಾವೇನನ್ನು ಸಾಧಿಸಿದರೂ ಸಾಧಿಸಿದಂತಾಗಲಿಲ್ಲ. ಪುನಾರಚನೆಯ ಮಾತಂತೂ ದೂರವೇ ಉಳಿಯುತ್ತದೆ. ಏನು ಕೆಲಸಗಳನ್ನು ಕೈಗೊಂಡರೆ, ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡು ನಿಷ್ಠೆಯಿಂದ ದುಡಿದರೆ, ಭಾರತದ ನವನಿರ್ಮಾಣ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಬಹುದು ಎಂಬುದನ್ನು ಪ್ರಾಣ ವಿದ್ವಾಂಸರೂ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳೂ ಲೋಕಸಭೆಯ ಸದಸ್ಯರೂ ಆಗಿರುವ ಶ್ರೀ ಅಗರ್‌ವಾಲ ಇಲ್ಲಿ ತಿಳಿಯದ ಭಾಷೆಯಲ್ಲಿ ವಿವರಿಸಿದ್ದಾರೆ. ಅನುವಾದವು ಸ್ವಚ್ಛವಾಗಿದೆ. ಮುಖ್ಯವಾಗಿ ಕಾಂಗ್ರೆಸಿಗರನ್ನು ಈ ಪುಸ್ತಕವು ಉದ್ದೇಶಿಸಿದ್ದರೂ ಎಲ್ಲ ವಿಧಾಯಕ ಕಾರ್ಯಕರ್ತರೂ ಅದರಿಸಬಹುದಾಗಿದೆ; ಪ್ರಸ್ತಾಪಿಸಲಾಗಿರುವ ಸುಮಾರು ೨೫ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಬಹುದಾಗಿದೆ. ಪ್ರಾಯಶಃ ಪುಸ್ತಕವನ್ನು ಮೂಲದಲ್ಲಿ ಬರೆದ ೨೯ ನಿಷ್ಠ ಎರಡು ವರ್ಷಗಳಾದರೂ ಸಂದಿರಬೇಕು— ಹೀಗಾಗಿ ಕೆಲವು ಹೇಳಿಕೆಗಳು ಈಗಿನ ವಾತಾವರಣಕ್ಕೆ ಒಪ್ಪುವುದಿಲ್ಲ. (ಉದಾ: ಘಟನೆಗೆ ತಿದ್ದುಪಡಿ— ಪುಟ ೬, ಸಮುದಾಯ ಯೋಜನೆ—ಪುಟ ೧೫ ಇತ್ಯಾದಿ). ಅದರೆ ಪುಸ್ತಕದ ಧೋರಣೆಗೆ ಇದು ಎಷ್ಟೂ ಕುಂದಲ್ಲ.

— ಕು.

ಭೂಮಿ ಮಾರಾಟಕ್ಕಿದೆ

ಉಡುಪಿ ತಾಲೂಕು ಚಾಂತಾರು ಗ್ರಾಮದಲ್ಲಿ 3 ಬೆಳೆ ಮಾಡುವ 20 ಮುಡಿ ಅವಲ್ ಬೀಜಗಳ ಬೆಲ್ತಿಗೆ ಅಕ್ಕಿಯ ಭೂಮಿ ಮಾರಾಟಕ್ಕೆ ಇದೆ. ಉತ್ತಮ ಗಿರಾಕಿಗಳು—

X.C/o ನವಯುಗ, ಉಡುಪಿ.

ವಿಳಾಸಕ್ಕೆ ಬರೆಯಿರಿ.

(೨ನೇ ಪುಟದಿಂದ)

ತಂದಿತು ಎನ್ನುವುದೇ ನಿಜವಾದ ಮಾತು. ರಾಷ್ಟ್ರೀಯ ಜೀವನದ ಸಾಂಸ್ಕೃತಿಕ ಹಾಗು ಸಾಮಾಜಿಕ ಕ್ಷೇತ್ರದಲ್ಲಿ ವ್ಯಕ್ತವಾದ ಒಮ್ಮನಸ್ಸು ರಾಜಕೀಯ ರಂಗದಲ್ಲಿ ಇಷ್ಟು ದೀರ್ಘಕಾಲದ ಬಳಿಕ ಪ್ರತಿಫಲನ ಗೊಂಡಿತು.

ರಾಷ್ಟ್ರೀಯರ ಕರ್ತವ್ಯ

ನಾವು ಈ ಅನುಪಮ ಸಾಧನೆಯ ಪೂರ್ಣ ಪ್ರಯೋಜನವನ್ನು ಹೊಂದಬೇಕು. ಪ್ರಾಂತೀಯ ಭಾವನೆಗೆ ಅವಕಾಶ ಕೊಡಕೂಡದು ಭಾರತದ ಯಾವ ಪ್ರದೇಶದಲ್ಲಿ ಹೋಗಿ ನೆಲೆನಿಲ್ಲಲೂ ಇಂದುನವ್ಯನಾಗರಿಕರಿಗೆ ಅವಕಾಶವಿದೆ—ಇದನ್ನು ಯಾವ ರಾಜ್ಯಸರಕಾರವೂ ನಿರಾಕರಿಸಲಾಗದು. ದುರ್ದೈವದಿಂದ ಎಲ್ಲರೂ ಹೀಗೆ ಯೋಚಿಸುವುದಿಲ್ಲ. ತಮ್ಮ ಸ್ವಂತ ಪ್ರದೇಶಕ್ಕಿಂತ ದೊಡ್ಡದಾದ ಬಲಯ ದೇಶದಲ್ಲಿ ಬೇರೊಂದಿಲ್ಲ ಎಂಬ ತಪ್ಪು ತಿಳಿವಳಿಕೆಯಿಂದ ಅನೇಕರು ಪರ ಪ್ರಾಂತ್ಯಗಳವರನ್ನು ಹೀಗಳೆಯುತ್ತಿದ್ದಾರೆ.

ಲೋಕದ ಬೇರೆ ದೇಶಗಳಲ್ಲಿ ಜನರು ಹೀಗೆ ಪ್ರಾಂತೀಯ ಭಾವನೆಯಿಂದ ದೂಷಿತರಾಗಿರುವುದು ಕಂಡು ಬರುತ್ತಿಲ್ಲ. ಭಾರತದಲ್ಲಿ ನವಜಾತಿಯನ್ನು ಹುಟ್ಟಿಸಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಅದನ್ನು ಸಂಪಾದಿಸಿಕೊಟ್ಟವರ ಕಾಲ ಮುಗಿತ್ತಾ ಬಂತು. ಅವರು ಪ್ರಾಂತ್ಯಕ್ಕಲ್ಲ, ಭಾರತಕ್ಕೆ ಸ್ವಾತಂತ್ರ್ಯವನ್ನೂ ಸ್ವರಾಜ್ಯವನ್ನೂ ಗಳಿಸಿ, ಇಂದಿನ ಜನಾಂಗದ ಕೈಗೆ ನೀಡಿದರು. ಇಂದಿನವರು ಮುಂದಿನವರಿಗಾಗಿ ರಾಷ್ಟ್ರದ ಒಗ್ಗಟ್ಟನ್ನು ಕಾಯ್ದುಕೊಂಡು ಹೋಗಬೇಕು. ಇದಕ್ಕೆ ನೆರವಾಗುವ, ಇಂಥ ಮನೋಭಾವನೆಯನ್ನು ಪೋಷಿಸುವ, ಕೆಲಸಕ್ಕಿಂತ ದೊಡ್ಡದಾದ ಕರ್ತವ್ಯವು ಕಲೆ ಮತ್ತು ಸಾಹಿತ್ಯದ ಅಭಿಮಾನಿಗಳಿಗೆ ಇಂದಿನ ಕಾಲದಲ್ಲಿ ಬೇರೊಂದಿರಲಾರದು.

(೩ನೇ ಪುಟ ದಿಂದ)

ಅಪಾರ ಶಕ್ತಿಯನ್ನು ವಿದ್ಯುತ್ತಿನ ಉತ್ಪಾದನೆಗೆ ಬಳಸುವ ಕುರಿತು ಇನ್ನೂ ವಿಚಾರಿಸಲಿಕ್ಕೆ ತೊಡಗಿಲ್ಲವೆಂಬುದರಿಂದ ಪ್ರವಾಸಿಗಳ ಸಂತೋಷಕ್ಕೆ ಏನೇನೂ ಚ್ಯುತಿ ಬಂದಿಲ್ಲ.

ಖಜುರಾಹೋ ದೇವಾಲಯ

ಹುಲಿಗಳಿರುವ ದಟ್ಟವಾದ ಅರಣ್ಯಗಳ ನಡುವೆ ಸಹ ನೆಹರುಗಳ ಕಾರು ಓಡಿತು. ಅವರು ಖಜುರಾಹೊ ದೇವಾಲಯಗಳನ್ನು ಸಹ ಸಂದರ್ಶಿಸಿದರು. ಮಧ್ಯ ಭಾರತದಲ್ಲಿ ೯ರಿಂದ ೧೩ನೇ ಶತಮಾನದವರೆಗಿನ ೪೦೦ ವರ್ಷಗಳ ಕಾಲ ವೈಭವದಿಂದ ಆಳುತ್ತಿದ್ದ ಚಂದೇಲ ರಾಜವಂಶಜರು ಈ ದೇವಾಲಯಗಳನ್ನು ಕಟ್ಟಿಸಿದ್ದರು. ನೋಡಲು ಅಳ ದೇವಾಲಯಗಳಿದ್ದರೂ ೧೪ ದೇವಾಲಯಗಳು ಮಾತ್ರ ಒಳ್ಳೆಯ ಸ್ಥಿತಿಯಲ್ಲಿವೆ— ಮಹಾ ದೇವನ ಂದಿರವು ಬಹಳ ಚೆಲೋದಾಗಿದೆ. ಎಲ್ಲ ಮಂದಿರಗಳಲ್ಲೂ ಕಲ್ಲಿನಲ್ಲಿ ನಾಟ್ಯ ನಡೆದಿದೆ; ಶಿಲ್ಪ ವೈಭವದ ನಾಗರ ವಿಧಾನಕ್ಕೆ ಈ ಮಂದಿರಗಳು ಹೆಸರಾಗಿವೆ ಎಂದು ತಜ್ಞರ ಅಭಿಪ್ರಾಯ.

ಇನ್ನಿತರ ಸ್ಥಳಗಳು

ಪ್ರಧಾನಿಗಳು ನೋಡಲಾಗದ ಬೇರೆ ಮುಖ್ಯ ಪ್ರವಾಸ ಕ್ಷೇತ್ರಗಳಲ್ಲಿ ಧಾರಾ ಹೊತದ ಸ್ತೂಪವು ಉಲ್ಲೇಖನೀಯ. ಪ್ರಾಚೀನ ಕಾಲದಲ್ಲಿ ಪಶ್ಚಿಮದ ಭೃಗಕಚ್ಛದಿಂದ ಪೂರ್ವ ತೀರದ ಪ್ರಸಿದ್ಧ ಬಂದರು ಸ್ಥಳವಾದ ತಾಮ್ರಲಿಪ್ತಿಗೆ ಹೋಗುವ ಮಾರ್ಗವು ವಿಂಧ್ಯ ಪ್ರದೇಶದ ನಡುವೆ ಸಾಗುತ್ತಿತ್ತು—ಈ ರಸ್ತೆಯ ಎಡ ಬಲ ಬದಿಗಳಲ್ಲಿ ಮಂದಿರಗಳೂ ವ್ಯಾಪಾರ ಕೇಂದ್ರಗಳೂ ಶೈಕ್ಷಣಿಕ ಸಂಸ್ಥೆಗಳೂ ಇದ್ದವು. ಕೋಶಾಂಬಿ, ವಿದಿಶಾ, ಪಾಟಲಿಪುತ್ರ ಮುಂತಾದ ಪ್ರಸಿದ್ಧ ಶೈಕ್ಷಣಿಕ ಕ್ಷೇತ್ರಗಳೊಂದಿಗೆ ಸೇರಿಸಬಹುದಾದ ಬಾರ್‌ಹೂತವು ವಿಂಧ್ಯ ಪ್ರದೇಶದಲ್ಲಿದೆ. ಇಲ್ಲಿಯ ಸ್ತೂಪದಲ್ಲಿ ಬುದ್ಧನ ಅಸ್ತಿಗಳಿವೆ ಎಂದು ಪ್ರತೀತಿ ಇದ್ದಿತಾದರೂ ಈಗ ಅದೇನು ಕಂಡು ಬರುವುದಿಲ್ಲ.

೧೭ ಮತ್ತು ೧೮ನೇ ಶತಮಾನದ ಕಲೆಯ ಭವ್ಯ ದ್ಯೋತಕವಾಗಿ ದಾತಿಯ ಅರಮನೆಯ ಭಿತ್ತಿ ಚಿತ್ರಗಳಿವೆ. ಜೈನರ ನೂರಾರು ದೇವಾಲಯಗಳು ಪಪೌರಾದಲ್ಲಿವೆ. ಮೊಗಲರ ಕಾಲದಲ್ಲಿ ಮೆರೆಯುತ್ತಿದ್ದ ಹಿಂದೀ ಕವಿಗಳ ಬೀಡಾದ ಓರ್ಛಾದಲ್ಲಿ ವೀರಸಿಂಗದೇವ I ಇವನು ಕಟ್ಟಿಸಿದ, ಅಗ್ರಾದ ಕೋಟೆಯಷ್ಟೇ ಭವ್ಯವಾದ ಕೋಟೆಯಿದೆ. ಕಾಳಿದಾಸನ "ಮೇಘದೂತ"ದಲ್ಲಿನ ಆಮ್ರಕೂಟವು ವಿಂಧ್ಯ ಪ್ರದೇಶದಲ್ಲಿದೆ. ಈ ಬೆಟ್ಟದೂರಿನಿಂದ ನರ್ಮದೆಯನ್ನೊಳಗೊಂಡು ಮೂರು ಪವಿತ್ರ ನದಿಗಳು ಜುಳು ಜುಳು ನಿನಾದದೊಡನೆ ಹರಿಯಲಾರಂಭಿಸುತ್ತವೆ. ಹೀಗೆ ಪ್ರಾಚೀನ ವಿಂಧ್ಯಾಟವಿಯು, ತುಂಡು ಬಾಜರ, ನೆಲವು ಶೋಭಿಸುತ್ತದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

R. I. A. No 803/55 O. S. 474/55

ಡಾ. ಗೋಪಾಲಕೃಷ್ಣಯ್ಯ—ಅರ್ಜಿದಾರ ವಾದಿ ಮತ್ತು

ಬಾಗಿ ಪೂಜಾರ್ತಿ ಕೂಡ— ಎದ್ರಿರು, ಪ್ರತಿವಾದಿರು,

ಇವರೊಳಗೆ

ವಾದಿಯು 2ನೇ ಪ್ರತಿವಾದಿ ಮೇಲೆ ಉಡುಪಿ ಡಿ. ಮು. ಕೋರ್ಟು S. C. No. 174/54 ನೇಗೆ ಪಡದ ಡಿಕ್ರಿಪ್ರಕಾರ ನಡ್ಸಿದ R. E P. No. 346/54 ರಲ್ಲಿ 2ನೇ ಪ್ರತಿವಾದಿಯ ಮೂಲಗೇಣಿ ಹಕ್ಕನ್ನು ಜಪ್ತಿ ಮಾಸ್ತಿದಾಗ್ಯೆ ಅದನ್ನು ಆತನು ತಾ. 26—5—51 ರಲ್ಲಿ ತನಗೆ ರಿಲೀಜು ಮಾಡಿಕೊಟ್ಟಿರುತ್ತಾನೆಂಬ ಸಬಬಿನ ಮೇಲೆ 1ನೇ ಪ್ರತಿವಾದಿಳು ಬಾಡ್ಕತೆಕೊಟ್ಟು—ಅದು ಅವಳ ಗುಣಕ್ಕೆ ತೀರ್ಮಾನವಾಗಿರುವುದರಿಂದ ಸದ್ರಿ ತೀರ್ಪು ರದ್ದತಿ ವಗೈರೆ ಕೇಳಿ ವಾದಿಯು ಪ್ರತಿವಾದಿರುಮೇಲೆ ಸಿ. ಪ್ರೊ. ಕೋಡಿನ XXI ನೇ ಆರ್ಡರು 63ನೇ ರೂಲು ಪ್ರಕಾರ ದಾವಾ ದಾಖಲುಮಾಡಿ ಕಾನೂನು ಆತಂಕ ನಿವಾರಣೆ ಗೋಸ್ಕರ ಮಾತ್ರ 2ನೇ ಪ್ರತಿವಾದಿಯ ಯಿತರ ಸಾಲಗಾರರ (creditors) ಪರವಾಗಿ ಕೂಡಾ ದಾವಾ ಮಾಡಲಿಕ್ಕೆ— ಸಿ. ಪ್ರೊ. ಕೋಡಿನ 1ನೆ ಆರ್ಡರು 8ನೇ ರೂಲು ಪ್ರಕಾರ ಪರ್ಮಿಶನ್ ಕೇಳಿರುತ್ತಾನೆ. ಪ ಆ ಪ್ರಕಾರ ಸದ್ರಿ ನಂಬ್ರವನ್ನು ತಾ. 6-10-1955 ಕ್ಕೆ ತನ್ನಗೆ ಇಟ್ಟಿರುತ್ತದೆ. ಆದುದರಿಂದ 2ನೇ ಪ್ರತಿವಾದಿಯ ಬೇರೆ ಸಾಲಗಾರರು (creditors) ಇದ್ದರೆ ಆ ದಿವ್ಸ ಬೆಳಿಗ್ಗೆ 10ಗಂಟೆಗೆ ಸದ್ರಿಕೋರ್ಟು ಮುಂದೆ ಹಾಜರಾಗಿ ತಮ್ಮನ್ನು ಸದ್ರಿವ್ಯಾಜ್ಯದಲ್ಲಿ ಪಾರ್ಟಿಯಾಗಿ ಸೇರಿಸಿಕೊಳ್ಳುವಂತೆ ಸೂಚಿಸಿಕೊಳ್ಳಬಹುದು.

K. J. Ballal.

Pleader for Plaintiff.

ಉಡುಪಿ 15—9—55.

ಹೊಸಕೆರೆ ಚಿದಂಬರಯ್ಯನವರ

ಗೀತೆಯ ಸಮೂಲಭಾಷಾಂತರ

ನವಯುಗ ಪ್ರೆಸ್, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: 0 8 0

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಪ್ತಂಬರ ೩೫.
VOL. 35

ಉಡುಪಿ, 29—9—1955

ಸಂಚಿಕೆ ೫
NO. 5

ಮೋಹಕವಾದ ಕುಶಲ ಕಲೆ

ಮಗುವೊಂದನ್ನು ಅದಂಸ್ಟಕ್ಕೆ ಕೆಲಸ ಮಾಡಲು ಬಿಟ್ಟರೆ, ಅದು ಎಷ್ಟು ತತ್ಪರತೆಯನ್ನು ತನ್ನ ಕೆಲಸದಲ್ಲಿ ತೋರಿಸುತ್ತದೆ! ಈ ಕೆಲಸದಲ್ಲಿ ಅದು ಆನಂದವನ್ನು ಅನುಭವಿಸುತ್ತದೆ— ತನ್ನ ಮನಸ್ಸನ್ನೆಲ್ಲ ಕೇಂದ್ರೀಕರಿಸಿ, ತನ್ನೆಲ್ಲ ಕೌಶಲವನ್ನು ಕೆಲಸದಲ್ಲಿ ವ್ಯಕ್ತಗೊಳಿಸಲು ನೋಡುತ್ತದೆ. ಇದು ಮಗುವಿನ ಪಾಲಿಗೆ ಮೋಹಕವಾದ ಆಟ— ನೋಡುವವರ ಪಾಲಿಗೆ ಇದು ಕುಶಲ ಕಲೆಯು ವ್ಯಕ್ತವಾಗುವ ಬಗೆ!

ನಮ್ಮ ದೇಶದಲ್ಲಿರುವ ಲಕ್ಷಾಂತರ ಕುಶಲ ಕೆಲಸಗಾರರನ್ನು ನಾವು ಮಕ್ಕಳಂತೆ ತತ್ಪರತೆಯಿಂದ ತಂತಮ್ಮ ಕಾರ್ಯದಲ್ಲಿ ಕೆಲಸ ಮಾಡಲು ಬಿಟ್ಟರೆ, ಅವರ ಹಸ್ತ ಕೌಶಲ್ಯದ ಪರಿಣಾಮವಾಗಿ ಉತ್ಪಾದಿತವಾಗುವ ಸರಕು ಇತ್ಯಾದಿಗಳು ಎಷ್ಟು ಉನ್ನತ ಮಟ್ಟದವಾಗುತ್ತವೆ! ಇವರಿಗೆ ದೇವರು ತಮ್ಮ ಕೆಲಸದಲ್ಲಿ ಪರಿಪೂರ್ಣತೆಯನ್ನು ತಂದು ಕೊಡುವ ಮೂಲಕವೇ ವ್ಯಕ್ತವಾಗುತ್ತಾನೆ! ಪರಿಪೂರ್ಣತೆಯ ಹೊಸ ಮಿರುಗನ್ನು ತಮ್ಮ ಕೈಚಳಕಕ್ಕೆ ಕೊಡುತ್ತಿರು – ಎಂಬುದೇ ಈ ಕೆಲಸಗಾರರ ನಿತ್ಯದ ಪ್ರಾರ್ಥನೆಯಾಗಿರುತ್ತದೆ.

ವ್ಯಕ್ತಿತ್ವದ ಪೂರ್ಣ ಪ್ರತಿಫಲನಕ್ಕೆ ಅವಕಾಶ ಮಾಡಿಕೊಡುವ ಗೃಹೋದ್ಯಮಗಳಿಗೆ ಎತ್ತರಕ್ಕೆ ಬೆಳೆಯಲು ಅವಕಾಶಕೊಡಬೇಕು— ಆಗ ಮಾತ್ರ ಮನುಷ್ಯ ಸಹಜವಾದ ಸೌಂದರ್ಯ ದೃಷ್ಟಿಗೆ, ನೂತನ ಸೃಷ್ಟಿಯನ್ನು ಮಾಡುವ ಪ್ರವೃತ್ತಿಗೆ ಕೆಲಸದಲ್ಲಿ ಪರಿಪೂರ್ಣತೆಯನ್ನು ಸಾಧಿಸುವ ಮನೋಭಾವಕ್ಕೆ ಯೋಗ್ಯ ಸಂದರ್ಭ ಸಿಗಬಲ್ಲುದು. ಯಂತ್ರಗಳ ಅಬ್ಬಿತ್ತುಪಿಕೆಗಿಂತ ಭಿನ್ನವಾದ, ನಾನಾ ಬಗೆಯ ಅಭಿರುಚಿಗಳಿಗೊಪ್ಪುವ ಸೊಬಗಿನ ವಸ್ತುಗಳನ್ನು ಉಪಭೋಗಿಸುವ ಅನುಕೂಲತೆ ದೊರಕಬಲ್ಲುದು.

ಭಾರತ ಸರಕಾರವು ೧೯೫೨ನೇ ನವಂಬರದಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿರುವ ಅಖಿಲ ಭಾರತ ಕರಕುಶಲ ಕೈಗಾರಿಕೆಗಳ ಮಂಡಳವು ಈ ದಿಸೆಯಲ್ಲಿ ತನ್ನಿಂದಾದಷ್ಟು ಚೆನ್ನಾಗಿ ಕೆಲಸಗಳನ್ನು ನೆರವೇರಿಸುತ್ತಿದೆ. ಉತ್ಪಾದನೆ ಮತ್ತು ಮಾರಾಟದ ವ್ಯವಸ್ಥೆಗಳನ್ನು ಸಂಘಟಿಸಿ, ಬಡ ಕೆಲಸಗಾರರಿಗೆ ಧನ ಸಹಾಯ ಮುಂತಾದವನ್ನಿತ್ತು, ಪ್ರಮುಖ ಪಟ್ಟಣಗಳಲ್ಲಿ ಪ್ರದರ್ಶನ ಗೃಹಾದಿಗಳನ್ನು ತೆರೆಯುವ ಮೂಲಕ ಜನರನ್ನು ಆಕರ್ಷಿಸಿ—ಅವರಲ್ಲಿ ವಿಶೇಷವಾದ ಪ್ರೀತಿಯನ್ನು ಈ ಕೈಗಾರಿಕೆಗಳ ಮೇಲೆ ಹುಟ್ಟಿಸಲು ಮಂಡಳವು ತುಂಬ ಶ್ರಮವನ್ನು ಪಡಿಸುತ್ತಿದೆ. ಇದೇ ತಿಳಿನೇ ದಿನಾಂಕದಿಂದ ೩೦ರ ವರೆಗೆ ಮದ್ರಾಸಿನಲ್ಲಿ ಒಂದು ಸಪ್ತಾಹದ ವಿಶೇಷ ಕಾರ್ಯಕ್ರಮವನ್ನು ಅದು ಏರ್ಪಡಿಸಿರುತ್ತದೆ.

ಲಕ್ಷಾಂತರ ಜನರಿಗೆ ಕೆಲಸವನ್ನೂ ಅನ್ನವನ್ನೂ ಒದಗಿಸುವ ಕುಶಲ ಕಲೆಗಳನ್ನು ಭಾರತೀಯ ಜನತೆ ಎಷ್ಟು ಮಾತ್ರಕ್ಕೂ ನಿರ್ಲಕ್ಷಿಸಲಾಗದು. ಈ ಕಲೆಗಳು ನೂರಾರು ಬಗೆಯಾಗಿವೆ — ಮದ್ರಾಸು ಪ್ರಾಂತ್ಯದಲ್ಲಿಯೇ ಸುಮಾರುಳಂ ಬಗೆಯ ಪ್ರಾಮುಖ್ಯ ಕುಶಲ ಕಲೆಗಳಿವೆಯೆಂದು ಅಂದಾಜು. ನಮ್ಮ ಕೆಲಸಗಾರ ಸ್ವೋತ್ಪೋಷಯೋಗಕ್ಕೆ ಉಪಯುಕ್ತವಾದ ಹಲವಾರು ಕ್ಷೇತ್ರಗಳಲ್ಲಿ ತಮ್ಮ ನೈಪುಣ್ಯವನ್ನು ಪ್ರದರ್ಶಿಸಿರುತ್ತಾರೆ—ಅದರೆ, ದುರ್ದೈವದಿಂದ ಅವರಿಗೆ ಜನರಿಂದ ಸಾಕಷ್ಟು ಪ್ರೋತ್ಸಾಹವು ಸಿಗುತ್ತಿಲ್ಲ. ಪರಿಣತರಾಗತವಾಗಿ ಬಂದಿರುವ ಕುಶಲ ಕರ್ಮಗಳಿಂದ ಹೊಟ್ಟೆ ಹೊರೆಯುವುದುಸಾಧ್ಯವಾಗದೆ ಅನೇಕ ಕೆಲಸಗಾರರು ಬೇರೆ ಉದ್ಯೋಗಗಳನ್ನು ಕೈ ಗೆಕ್ಕಳ್ಳುವಂತೆ ಪರಿಸ್ಥಿತಿಯು ಒತ್ತಾಯಿಸಿರುತ್ತದೆ.

ಸ್ವೋತ್ಸಾಹವು ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣ ನಮ್ಮ ಬಡತನ ನೆಂದು ಹೇಳಬೇಕು. ಜನರಿಗೆ ಉದರ ನಿರ್ವಹಣವೇ ದೊಡ್ಡ ಪ್ರಶ್ನೆಯಾಗಿ ಪರಿಣಮಿಸಿದಾಗ ಹೆಚ್ಚು ಬೆಲೆಯನ್ನು ತೆರಬೇಕಾಗಿ ಬರುವ ಸರಕುಗಳ ಖರೀದಿಗೆ ಹಣವನ್ನು ಒದಗಿಸಿ ಕೊಳ್ಳುವುದು ಕಷ್ಟಕರ ವಾಗುತ್ತದೆ. ಹೀಗಾಗಿ ಆಡಂಬರದ ಸಲಕರಣೆಗಳ ಮಾರಿರಲಿ, ಅತ್ಯಾಗತ್ಯದ ನಿತ್ಯೋಪಯೋಗದ ವಸ್ತುಗಳನ್ನು ಸಹ, ಎಷ್ಟು ಅಗ್ಗಕ್ಕೆ ಸಾಧ್ಯವೋ ಅಷ್ಟು ಅಗ್ಗಕ್ಕೆ ತೆಗೆದು ಕೊಳ್ಳಲು ಮನಸ್ಸಾಗುವುದೇ ದೊರತು, ಹೆಚ್ಚು ಕರ್ಚಿನ ವಸ್ತುಗಳಿಗೆ ಹಣ ಸುರುವಲು ಇಚ್ಛೆಯಾಗುವುದಿಲ್ಲ.

ಯಾಂತ್ರಿಕ ಪ್ರಾಬಲ್ಯವು ಸರಕುಗಳು ಅಗ್ಗವಾಗಿ ಸಿಗುವಂತೆ ಮಾಡಿರುತ್ತವೆ. ಹಸ್ತಕೌಶಲ್ಯದ ವಸ್ತುಗಳ ಉತ್ಪಾದನೆಯಲ್ಲಿ ಕರ್ಚು ಸಹಜವಾಗಿಯೇ ಹೆಚ್ಚು ಬೀಳುತ್ತದೆ. ಅದರೆ, ಇದರಲ್ಲಿರುವ ಆಕರ್ಷಣೆ ಮತ್ತು ಬೆಡಗು ಯಾಂತ್ರಿಕ ಸಲಕರಣೆಯಲ್ಲಿಲ್ಲ. ಈ ಬೆಡಗಿಗೆ ಮನಸೋಲದವರು ಇರಲಾರರೆಂದರೂ ಕಿಸೆಯಲ್ಲಿ ಹಣದ ಅನುಕೂಲತೆ ಇರುವವರು ಮಾತ್ರ ವಿರಳ. ಹಿಂದಿನ ಕಾಲದಲ್ಲಿ ಶ್ರೀಮಂತರೂ ರಾಜಮಹಾರಾಜರೂ ಇವುಗಳ ಆಶ್ರಯದಾತರಾಗಿದ್ದರು—ಈಗ ಸರಕಾರ ಆಶ್ರಾತ್ರವನ್ನು ನಿರ್ವಹಿಸಬೇಕೆಂಬುದು ನಿರ್ವಿವಾದ.

ಕಂಚು, ಹಿತ್ತಾಳೆ, ತಾಮ್ರಗಳ ಸುಂದರವಾದ ಒಡವೆಗಳನ್ನು ತಯಾರಿಸುವುದು, ಕೊಜೆ ಮಣ್ಣಿನಿಂದ ನಾನಾ ಪಾತ್ರೆಗಳನ್ನು ರಚಿಸುವುದು ನಮ್ಮ ಹಳ್ಳಿಗಳ ಮುಖ್ಯ ಉದ್ಯೋಗ. ಇವುಗಳ ಹೊಳಪು ಮತ್ತು ಸೌಂದರ್ಯ ಆಕರ್ಷಕವಾಗಿರುತ್ತದೆ. ನಾನಾ ಬಗೆಯ ಮೂರ್ತಿಗಳನ್ನು ಮಾಡುವ ಕುಶಲ ಕೆಲಸಗಾರರನ್ನೂ ಅನೇಕ ಒಣ್ಣಗಳಿಂದ ಮೂರ್ತಿಗಳ ಅಲಂಕಾರವನ್ನು ವೃದ್ಧಿಸುವವರನ್ನೂ ಕಾಣಬಹುದು. ದೀಪಾವಳಿಯ ಸಂದರ್ಭದಲ್ಲಿ ಚಿಕ್ಕ ಮಕ್ಕಳ ಕಣ್ಣುಸಗಳನ್ನು ನೆರೆ ಹಿಡಿಯಬಲ್ಲ ಅನೇಕ ಗೊಂಬೆಗಳನ್ನು ಮಾಡಿಡಲಾಗುತ್ತದೆ. ಇವುಗಳಲ್ಲಿ ಒಂದೊಂದರ ಸೋಟು; ಮಾಟ, ಒನಪು, ವೈಯ್ಯಾರಗಳು ಭಿನ್ನ ಭಿನ್ನವಿರುತ್ತವೆ.

ನೇಯುಗೆಯು ಕೇರ ಸಾಮಾನ್ಯವಾದ ಕುಶಲ ಕೆಲಸ. ಹೆಲ್ಲು, ಹೆತ್ತಿ, ಉಣ್ಣೆ, ರೇಶ್ಮೆ ಇತ್ಯಾದಿಗಳು ಇದರ ಕಚ್ಚಾಸರಕು. ಇವುಗಳಿಂದ ಮುಂದರವಾದ ಚಾಪೆಗಳಿಂದ ಹಿಡಿದು, ಜಮಖಾನೆ, ಕಂಬಳಿ, ಸತ್ತಲ, ಶಾಲು ಮುಂತಾದ ಎಷ್ಟೋ ರೀತಿ ವಸ್ತುಗಳನ್ನು ತಯಾರಿಸಲಾಗುತ್ತದೆ. ಬಿದಿರು, ಬೆತ್ತಗಳಿಂದ ಸಹ ಹಲವಾರು ಬಗೆಯ ಸರಕುಗಳನ್ನು ಸಿದ್ಧಪಡಿಸಲಾಗುತ್ತದೆ ಬೀಣೆ, ತಂಬೂರಿ, ಕೊಳಲು ಮುಂತಾದ ವಾದ್ಯೋಪಕರಣಗಳನ್ನು ತಯಾರಿಸುವುದೂ ಇದೆ ರೂಪ ಮತ್ತು ಚಿತ್ರಗಳಿಂದ ಬಳೆಗಳನ್ನು ಮಾಡುವುದಿಂದ ಹಿಡಿದು, ವಿಶಾಲವಾದ ಮಂದಿರ ಮತ್ತು ಆಕಾಶಕ್ಕೆ ನೆಗೆವ ಶಿಂತ ಗೋಪುರಗಳ ರಚನೆಯಲ್ಲಿ ಪರಿಣತವಾದ ಸ್ಥಪತಿಗಳ ವರೆಗೆ ಈ ನಾಡಿನಲ್ಲಿ ಇದ್ದಾರೆ. ಲೋಹದಂತೆ ಮರದ ಉಪಯುಕ್ತತೆಯೂ ನಮ್ಮವರಿಗೆ ಚೆನ್ನಾಗಿ ಗೊತ್ತು.

ಇವೆಲ್ಲ ಕುಶಲ ಕಲೆಗಳನ್ನು ಜತನದಿಂದ ಉಳಿಸಿಕೊಂಡರೆ, ಮತ್ತು ಕುಶಲ ಕರ್ಮಿಗಳಿಗೆ ಹೊಟ್ಟೆಗೆ ಹೇರಾಡದೆ, ಸುಖ ಜೀವನ ನಡೆಸುವುದಕ್ಕೆ ಅನುಕೂಲತೆಯನ್ನು ಒದಗಿಸಿದೆವಾದರೆ—ಭಾರತವು ಪ್ರಾಚೀನ ಸಾಂಸ್ಕೃತಿಕ ವೈಭವದ ಪರಂಪರೆಯನ್ನು ಉಳಿಸಿಕೊಂಡು, ಮೆರೆಯಬಹುದು, ಬೇಲೂರಿನ ಶಿಲಾಬಾಲಿಕೆ, ಅಜಂತದ ಭಿತ್ತಿಚಿತ್ರ, ತಮಿಳುನಾಡಿನ ಗೋಪುರಗಳ ಸಂಪ್ರದಾಯವನ್ನು ಪುನರುಜ್ಜೀವನಗೊಳಿಸಲು ಶಕ್ತರಾಗಬಹುದು. ಸರಕಾರವು ಇದಕ್ಕೆ ನೆರವಿರುವ ಪ್ರಯತ್ನ ಬಹಳ ಕಡಿಮೆಯಾಗಿದೆ— ಜನರು ಸಾಧ್ಯವಿದ್ದಷ್ಟು ಮಟ್ಟಿಗೆ ಅಭಿರುಚಿಗಳನ್ನು ಪರಿಷ್ಕರಿಸಿಕೊಂಡು, ಇದ್ದುದರಲ್ಲಿಯೇ ಅನುವು ಮಾಡಿಕೊಂಡು, ಮೋಹಕವಾದ ಕುಶಲ ಕಲೆಗಳಿಗೆ ಬೆಂಬಲ ನಿತ್ತರೆ ಅವು ಸಾಯದೆ ಉಳಿದಾವು. ಸರಕಾರವೊಂದೇ ಅವುಗಳನ್ನು ಬಾಳಿಸುವ ಭಾರವನ್ನು ಕಡೆಯ ವರೆಗೆ ಹೊರಲಾರದು.

ದಕ್ಷಿಣ ಭಾರತದ 93 ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ್ ವ್ಯವಹಾರಗಳಿಗೆ ನಿಮಗೆ ಸಮೀಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

ಚಲಾವಣೆ ಭಂಡವಾಳ ರೂ. 7,59,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.

ಹೊಸಕೆರೆ ಚಿದಂಬರಯ್ಯನವರ
ಗೀತೆಯ ಕೈಗನ್ನಡಿ
ಗೀತೆಯ ಸಮೂಲ ಭಾಷಾಂತರ
ನವಯುಗ ಪ್ರೆಸ್, ಉಡುಪಿ.

ವಾರ್ಷಿಕ ಚಂದಾ:
ರೂ. ೫—೧೨—೦ NAVAYUGA WEEKLY UDIPI ಬಿಡಿ ಸಂಚಿಕೆ
ಎರಡಾಣೆ

ರಾಜಕೀಯ ರಂಗದ ದುರ್ಬಲ ಎಡ ಗುಂಪು

ಪ್ರಜಾಪ್ರಭುತ್ವದಲ್ಲಿ ಪ್ರತಿಪಕ್ಷಗಳ ಪಾತ್ರ

ಕಾಂಗ್ರೆಸಿನಲ್ಲಿ ಒಳ ಜಗಳಗಳು ನಿತ್ಯವೂ ಕಂಡು ಬರುತ್ತವೆ. ಮುಖ್ಯವಾಗಿ ಶಾಸನಾಂಗಕ್ಕೂ ಸಂಘಟನಾಂಗಕ್ಕೂ ಭಿನ್ನಾಭಿಪ್ರಾಯಗಳು ವ್ಯಕ್ತವಾಗುತ್ತಿರುತ್ತವೆ. ವಿಧಾಯಕರಂಗದಲ್ಲಿ ಪರಸ್ಪರ ಹೊಂದಿಕೊಂಡು ಸಾಗುವಷ್ಟು ಸೌಮನಸ್ಯ ರಾಷ್ಟ್ರ ವ್ಯಾಪಿಯಾಗಿರುವ ಕಾಂಗ್ರೆಸಿನಂಥ ಭವ್ಯ ಸಂಸ್ಥೆಯಲ್ಲಿಲ್ಲದಿರುವುದು ವಿಷಾದಕರ—ಎಂದೆಲ್ಲ ಹೇಳಲಾಗುತ್ತದೆ. ಕಾಂಗ್ರೆಸಿನ ಶಕ್ತಿಯನ್ನು ಹೆಚ್ಚಿಸುವುದಕ್ಕೆ ತೀವ್ರ ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳುವುದು ಅತ್ಯಾವಶ್ಯಕ ಎನ್ನಲಾತ್ತದೆ.

ಪ್ರತಿಪಕ್ಷಗಳಿಗೆ ಪ್ರಶ್ನೆ

ಇದರ ಕಡೆಗೆ ಕಾಂಗ್ರೆಸಿನ ಧುರೀಣರು ಸಾಕಷ್ಟು ಗಮನವನ್ನು ಪದೇ ಪದೇ ಹರೈಸಿದ್ದಾರೆ; ತಮ್ಮ ಸಂಸ್ಥೆಯನ್ನು ಬಲಪಡಿಸಿ, ಟೀಕೆಗಳು ಆದಷ್ಟು ಕಡಿಮೆಯಾಗುವಂತೆ ಮಾಡುವುದರಲ್ಲಿ ಈ ಮುಖಂಡರು ತತ್ಪರತೆಯನ್ನು ಬಹಳಷ್ಟು ತೋರಿಸುತ್ತಿದ್ದಾರೆ. ಟೀಕಾಕಾರರಲ್ಲಿ ಹೆಚ್ಚಿನವರು ಪ್ರತಿ ಪಕ್ಷಗಳವರಾದುದರಿಂದ, ಅವರಿಗಾಗಿ ಒಂದು ಮಾತನ್ನು ಬೇಳಬೇಕಾಗುತ್ತದೆ: ಅದೇನೆಂದರೆ ನೀವು ಸಂಸ್ಥೆಯನ್ನು ಕಟ್ಟಿಕೊಂಡಿರುವ ಉದ್ದೇಶ ಎಷ್ಟರ ಮಟ್ಟಿಗೆ ಸಾಧಿಸಲ್ಪಟ್ಟಿದೆ? ಮತ್ತು ನಿಮ್ಮ ಸಂಸ್ಥೆಯ ಸದಸ್ಯರಲ್ಲಿ ಎಷ್ಟರ ಮಟ್ಟಿಗೆ ಪರಸ್ಪರ ಹೊಂದಿಕೊಳ್ಳುವ ಮನೋಭಾವವು ವ್ಯಕ್ತವಾಗಿದೆ? ಈ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಕಾಂಗ್ರೆಸಿನವರು ಅಪೇಕ್ಷಿಸುವರೆಂದಲ್ಲ— ಜನತೆ ಬಯಸುತ್ತದೆ; ಪ್ರಜಾಪ್ರಭುತ್ವವು ಬಯಸುತ್ತದೆ. ಆದುದರಿಂದ ಇದನ್ನು ಉಪೇಕ್ಷಿಸುವುದು ಎಷ್ಟು ಮಾತ್ರಕ್ಕೂ ಸಲ್ಲದು. ಪ್ರತಿ ಪಕ್ಷಗಳು, ಸರಕಾರವನ್ನು ವಿರೋಧಿಸುತ್ತಿರುವ ಗುಂಪುಗಳು, ಕೆಣಕುವ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡದಿರಬಾರದು.

ಟೀಕೆಯೊಂದೇ ಸಾಲದು

ಪ್ರತಿಪಕ್ಷಗಳು ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಈಗ ಇವೆಯೇ? ಇಲ್ಲವೆಂದು ದುಃಖಪೂರ್ವಕ ಹೇಳಬೇಕಾಗುತ್ತದೆ. ಜನತೆಯ ಮುಂದೆ ಪ್ರತಿಪಕ್ಷಗಳು ಈಗ ಮುಖ ಉಳಿಸಿಕೊಳ್ಳುವುದು ಕಷ್ಟಕರವಾಗಿ ಪರಿಣಮಿಸಿದೆ. ತಮ್ಮ ಆಂತರಿಕ ದೌರ್ಬಲ್ಯವು ನಿಯಂತ್ರಣಕ್ಕೆ ಒಳಗಾಗದೆ ಪ್ರದರ್ಶಿಸಲ್ಪಡುತ್ತಿರುವುದನ್ನು ಕಂಡು ಪ್ರತಿಪಕ್ಷಗಳಿಗೆ ದಿಗ್ಭ್ರಮೆಯಾಗಿದೆ ಎಂದರೆ ತಪ್ಪಾಗದು. ಸ್ವಾತಂತ್ರ್ಯ ಪ್ರಾಪ್ತಿಯ ಪ್ರಾರಂಭದ ಕಠಿಣ ದಿನಗಳಲ್ಲಿ ಸರಕಾರವನ್ನು ನಿರಾಶ್ರಿತರ ಸಮಸ್ಯೆಯಿಂದ ಹಿಡಿದು ಆಹಾರಾಭಾವದ ವರೆಗಿನ ಎಲ್ಲ ಪ್ರಶ್ನೆಗಳನ್ನು ಮುಂದೆ ಮಾಡಿ ಪ್ರತಿಪಕ್ಷಗಳವರು ಟೀಕಿಸುತ್ತಿದ್ದರು. ಚುನಾವಣೆಯು ನಡೆದು, ಈಗ ಮೂರು ವರ್ಷಗಳಾದ ಬಳಿಕ ಪ್ರತಿಪಕ್ಷಗಳಿಗೆ ಕಾಂಗ್ರೆಸನ್ನು ಟೀಕಿಸುವುದು ಅಷ್ಟು ಸುಲಭ ಸಾಧ್ಯವಾಗಿಲ್ಲ; ಸರಕಾರದ ನಿಂದೆಯು ಜನಪ್ರಿಯತೆಯನ್ನು ಸಂಪಾದಿಸಿ ಕೊಡುತ್ತದೆಂಬ ಹಿಂದಿನ ಕಲ್ಪನೆಯು ಈಗ ಮೂರ್ಖತನವೆಂದು ಪ್ರತಿಪಕ್ಷಗಳಿಗೆ ಸಹನಿಧಾನವಾಗಿ ಮನದಟ್ಟಾಗಿದೆ. ಕಾಂಗ್ರೆಸಿನ ರಚನಾತ್ಮಕ ಚಟುವಟಿಕೆಗಳು ಹೆಚ್ಚಾದಂತೆ, ಸರಕಾರಕ್ಕೆ ಜೆಂಬಲ ಹೆಚ್ಚು ಹೆಚ್ಚಾಗಿ ಜನರಿಂದ ಸಿಗುತ್ತಿರುವುದು ಸ್ಪಷ್ಟವಾಗಿಯೇ ವ್ಯಕ್ತವಾಗಿರುತ್ತದೆ.

ಯೋಗ್ಯತೆಯ ಒರೆಗಲ್ಲು

ಸರಕಾರವು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ, ಅಲ್ಲಿ ಪ್ರತಿಪಕ್ಷಗಳಿಗೆ ಸ್ಥಾನವೇ ಇಲ್ಲ ಎಂದು ಇಷ್ಟರ ಮೇಲಿಂದಲೇ ತೀರ್ಮಾನಿಸಲಾಗದು ಪ್ರಜಾಪ್ರಭುತ್ವದ ಯಶಸ್ವಿಗೆ ಪ್ರತಿಪಕ್ಷಗಳ ಅಸ್ತಿತ್ವವು ಅತ್ಯವಶ್ಯವಾಗಿದೆ: ಆದರೆ ಅದು ಸಮರ್ಥವಾಗಿರಬೇಕೆಂಬುದೇ ಇಲ್ಲಿ ಗಮನಿಸಬೇಕಾದ ವಿಷಯ. ಸರಕಾರವು ಒಳ್ಳೆಯ ಕೆಲಸಗಳನ್ನೆ ಮಾಡುತ್ತಿದ್ದರೆ, ಇನ್ನಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುವಂತೆ ಪ್ರತಿಪಕ್ಷಗಳು ಒತ್ತಾಯಿಸಬೇಕು; ಕೆಟ್ಟ ದಾರಿಯಲ್ಲಿ ನಡೆಯುತ್ತಿದ್ದರೆ ಸರಿಯಾದ ಮಾರ್ಗವೇನೆಂದು ತೋರಿಸಿ ಕೊಡಬೇಕು. ಅಧಿಕಾರಾರೂಢವಾದ ಪಕ್ಷದ ಪ್ರಭಾವದಿಂದಾಗಿ ಅವು ಇದ್ದೂ ಇಲ್ಲದಂತಾಗುವಷ್ಟು ನಿಕೃಷ್ಟ ಸ್ಥಾನಕ್ಕೆ ಇಳಿಯಬಾರದು; ಕಾಲ ಬಂದಾಗ ಅಧಿಕಾರವನ್ನು ವಹಿಸಿ, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವಷ್ಟು ಸಾಮರ್ಥ್ಯ ಮತ್ತು ಯೋಗ್ಯತೆಗಳನ್ನು ಎಡ ಗುಂಪು ಪಡೆದಿದ್ದರೆ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾದೀತು.

ಲೋಹಿಯರ ನಿಲುಮೆ

ಯೋಗ್ಯತೆಯ ಈ ಒರೆಗಲ್ಲಿಗೆ ತಿಕ್ಕಿದರೆ ಭಾರತದ ರಾಜಕೀಯ ರಂಗದಲ್ಲಿ ಕಂಡಿದಾಡುವ ಪ್ರತಿಪಕ್ಷಗಳ ಬಣ್ಣ ಬಯಲಾಗುತ್ತದೆ. ಪ್ರಜಾ ಸಮಾಜವಾದಿ ಪಕ್ಷವನ್ನೆ ತೆಗೆದುಕೊಳ್ಳೋಣ: ಅದು ದೊಡ್ಡ ಪಕ್ಷ; ವ್ಯಕ್ತಿಶಃ ಉತ್ತಮ ಗುಣ ಸಂಪನ್ನರಿಂದ, ಕರ್ತೃತ್ವಶಾಲಿಗಳಿಂದ ಆ ಪಕ್ಷ ಕೂಡಿದೆ. ಆದರೆ ಇವರಲ್ಲಿ ಒಮ್ಮನಸ್ಸು ಇಲ್ಲವೇ ಇಲ್ಲವೆಂಬುದು ಎಷ್ಟು ಸ್ಪಷ್ಟವಾಗಿದೆಯೆಂದರೆ, ಡಾ. ರಾಮಮನೋಹರ ಲೋಹಿಯರು ತನ್ನೊಡನೆ ಸಹಕಾರ ಭೂತಿಯುಳ್ಳ ಲಕ್ಷಾಂತರ ಜನರ ನೆರವನ್ನು ಪಡೆದು ಹೊಸ ಪಕ್ಷವನ್ನು ಸ್ಥಾಪಿಸಲು ಮುಂದಾಗಿದ್ದಾರೆ. ಕಾಂಗ್ರೆಸಿನೊಡನೆ ಹೊಂದಿಕೊಂಡು ಹೋಗಬೇಕು ಎನ್ನುವ ಒಂದು ಗುಂಪು ಪ್ರಜಾಸಮಾಜವಾದಿಗಳಲ್ಲಿದೆ ಎಂದು ದೂರುತ್ತಾ ಲೋಹಿಯರು ನಿಜವಾದ ಸಮಾಜವಾದಿ ಪಕ್ಷದ ಸ್ಥಾಪನೆಯೇ ತನ್ನ ಉದ್ದೇಶವೆಂದು ಬಹಿರಂಗಗೊಳಿಸಿದ್ದಾರೆ. ಪ್ರಸಿದ್ಧ ಪಕ್ಷವು ಲೋಹಿಯರು ಕೊಟ್ಟಿರುವ ಪೆಟ್ಟಿನಿಂದ ಚೇತರಿಸಿಕೊಳ್ಳುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಂಡೀತೋ ಹೇಳುವುದು ಕಷ್ಟ. ಕಾಂಗ್ರೆಸು ಸಂಸ್ಥೆಯು ಸಮಾಜವಾದಿ ಮಾದರಿಯ ಸಮಾಜ ರಚನೆಯೇ ತನ್ನ ಧ್ಯೇಯವೆಂಬುದನ್ನು ಅವಡಿಯ ಅಧಿವೇಶನದಲ್ಲಿ ಸ್ಪಷ್ಟವಾಗಿ ಸಾರಿರುವುದರಿಂದಂತೂ ಈ ಪಕ್ಷದ ಕಡೆಗೆ ಜನರ ಒಲವು ಕಡಿಮೆಯಾಗಿದೆ. ದುರ್ಬಲ ಪಕ್ಷದಲ್ಲಿದ್ದು ತಾವು ಸಾಧಿಸಲಾರದ ಆದರ್ಶವನ್ನು ಮುಟ್ಟುವುದಕ್ಕಾಗಿ ಕಾಂಗ್ರೆಸನ್ನು ಆಶ್ರಯಿಸುವುದು ಘನತೆಗೆ ಕುಂದ್ಲವೆಂದು ತಿಳಿದು ಪ್ರಮುಖ ಧುರೀಣರು ಸಾಲು ಸಾಲಾಗಿ ಕಾಂಗ್ರೆಸಿಗೆ ಸೇರುತ್ತಿದ್ದಾರೆ. ಇದನ್ನು ಕಂಡ ಪ್ರಜಾಸಮಾಜವಾದಿ ಹಾಗು ಇತರ ಪ್ರತಿಪಕ್ಷಗಳ ಪರಿಷ್ಕರು ಗಲಿಬಿಲಿಯಲ್ಲಿ ಬಿದ್ದಿದ್ದಾರೆ: ಏನು ಮಾಡುವುದೆಂದು ಅವರಿಗೆ ತಿಳಿದಿಲ್ಲ.

ಕಮ್ಯೂನಿಸ್ಟರ ಕಷ್ಟ

ಇನ್ನೊಂದು "ಪ್ರಬಲ" ಪಕ್ಷವನ್ನು ಕಮ್ಯೂನಿಸ್ಟರು ಕಟ್ಟಿಕೊಂಡಿದ್ದಾರೆ— ಅದರೆ ಇವರ ಮನೋಭೂಮಿಕೆಯೂ ಗೊಂದಲಮಯವಾಗಿದೆ. ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್ ಇವರ ಬೋಧನೆಗಳಿಗನುಗುಣವಾದ ಸಮಾಜ ರಚನೆಗೆ ಆತುರ ಪಡುವ ಕಮ್ಯೂನಿಸ್ಟರು ತಮ್ಮ ಮೂಲತತ್ವಗಳಿಗೆ ವಿರೋಧವಾದ ನೀತಿಯನ್ನು ಅನುಸರಿಸುತ್ತಿರುವುದು ನಿಜಕ್ಕೂ ಆಶ್ಚರ್ಯ. ಉದಾಹರಣೆಗೆ, ಭಂಡವಾಳವಾದಿ ಮತ್ತು ಶ್ರಮಜೀವಿ ವರ್ಗಗಳಲ್ಲಿ ಯಾವುದಾದರೂ ಒಂದು ಜಗತ್ತಿನಲ್ಲಿ ಉಳಿಯಬೇಕೆಂಬ ವರ್ಗ ಸಮರ ತತ್ವವನ್ನು ಕಮ್ಯೂನಿಸ್ಟರು ಪೂಜಿಸುತ್ತಿರುವ ಮಹಾನುಭಾವರು ಪ್ರತಿಪಾದಿಸಿದ್ದರು. ಈ ಸಮರದಲ್ಲಿ ಶ್ರಮಜೀವಿಗಳೇ ಅತ್ಯಧಿಕವಾಗಿರುವ ಜನತೆಯ ಗುಂಪಿಗೆ ವಿಜಯ ಕಟ್ಟಿಟ್ಟದ್ದು ಎಂಬುದು ಅವರ ವಿಶ್ವಾಸ. ಆದರೆ ಈಗ, ಕ್ರುಶ್ಚೇವರಿಂದ ಹಿಡಿದು ಗೋಪಾಲನ್ನರ ವರೆಗೆ ಎಲ್ಲ ಕಮ್ಯೂನಿಸ್ಟರು ಪರಸ್ಪರ ಭಿನ್ನ ನಿಲುಮೆಯುಳ್ಳವರೂ ಸಹ ಅಸ್ತಿತ್ವದಲ್ಲಿರಬಹುದೆಂದು ಒಪ್ಪುತ್ತಿದ್ದಾರೆ. ಇದು ಚೋದ್ಯವಲ್ಲವೆ? ತಮ್ಮ ಮೂಲತತ್ವಗಳನ್ನು ತಾವೇ ಕೊಲೆಮಾಡುತ್ತಿರುವ ಕಮ್ಯೂನಿಸ್ಟರು ಜನರ ಮುಂದೆ ತಮ್ಮ ಆದರ್ಶವನ್ನು ನಿಶ್ಚಿತ ರೂಪದಲ್ಲಿ ಮಂಡಿಸುವುದು ಹೇಗೆಂದು ತಿಳಿಯದೆ ಬೇಜಾರುಮಾಡುತ್ತಿದ್ದಾರೆ. ರಶಿಯದ ತವರು ಮನೆಯಿಂದ ಸ್ಫೂರ್ತಿ ಪಡೆಯುವ ಭಾರತೀಯ ಕಮ್ಯೂನಿಸ್ಟರು ರಶಿಯದ ಧುರೀಣರಿಗೆ ಅಪ್ರಿಯವಾಗುವ ರೀತಿಯಲ್ಲಿ ಕಾಂಗ್ರೆಸನ್ನು ಡನೆ ಸಿರೋಧಿಸುವುದಿಲ್ಲವೆಂದು ನಿರ್ಧರಿಸಿರುವುದು ಅವರ ಈಚೆಯ ಹೇಳಿಕೆಗಳಿಂದ ವ್ಯಕ್ತವಾಗುತ್ತದೆ.

ಸೋಲಿನ ಹೇತು

ಜನಸಂಘ ಮತ್ತಿತರ ಪಕ್ಷಗಳ ಕುರಿತು ಏನನ್ನು ಹೇಳುವುದೂ ಅಗತ್ಯವಿಲ್ಲ— ಅವುಗಳ ಕಡೆಗೆ ಜನರು ನೋಡುವಂತೆಯೇ ಇಲ್ಲ; ಅವು ಅಷ್ಟು ದುರ್ಬಲವಾಗಿವೆ ಎಂದರೆ ತೀರಿತು. ಪರಿಸ್ಥಿತಿ ಇಷ್ಟು ಮಟ್ಟಿಗೆ ವಿಷಮಿಸಲು ಕಾರಣವೇನು? ಒಂದೊಂದು ಪಕ್ಷದ ವಿಷಯದಲ್ಲಿ ಒಂದೊಂದು ಬಗೆಯ ಕಾರಣಗಳಿದ್ದಂತೆ ತೋರುತ್ತದೆ. ಉದಾಹರಣೆಗೆ ಕಮ್ಯೂನಿಸ್ಟರ ಧೋರಣೆಯು ಅಯಶಸ್ವಿಯಾಗಿರುವುದಕ್ಕೆ ಅದು ಮಾಸ್ಕೋ ಪ್ರೇರಿತವಾಗಿರುವುದೇ ಮುಖ್ಯ ಹೇತು: ನಮ್ಮ ಕಮ್ಯೂನಿಸ್ಟರು ರಶಿಯ ಮತ್ತು ಚೀನಗಳ ಅಭಿವೃದ್ಧಿಯ ರಮ್ಯ ಚಿತ್ರಗಳನ್ನು ಭಾರತೀಯರ ಮುಂದಿಟ್ಟು ಮನಪೊಲಿಸಲು ನೋಡುತ್ತಿದ್ದಾರೆಯೆ ಹೊರತು, ತಮ್ಮ ಕಾರ್ಯಕ್ರಮಗಳಿಂದ ಜನತೆಯ ಬೆಂಬಲ ಪಡೆಯಲು ಹವಣಿಸುತ್ತಿಲ್ಲ. ಮುಷ್ಕರ ಇತ್ಯಾದಿಗಳನ್ನು ಸಂಘಟಿಸುವುದೇ ತಮ್ಮ ಕಾರ್ಯಕ್ರಮವೆಂದು ಅವರು ತಿಳಿದುಕೊಂಡಂತಿದೆ. ಕಮ್ಯೂನಿಸಮ್ಮನ್ನು ಸ್ವೀಕರಿಸಿರುವ ರಶಿಯ ಮತ್ತು ಚೀನಗಳು ಇತರ ದೇಶಗಳಿಂದ ಸ್ಫೂರ್ತಿ ಪಡೆಯದೆ ತಮ್ಮದೇ ನೆಲೆಯಲ್ಲಿ ನಿಂತು ಅಭಿವೃದ್ಧಿ ಹೊಂದುತ್ತಿವೆಎಂಬ ಸತ್ಯವನ್ನು ಅವರು ಮರೆಯುತ್ತಾರೆ. ತಮ್ಮ ಕಾಲಿನಡಿಯನ್ನು ನೋಡಿಕೊಳ್ಳಲು ಇವರು ಜನರಿಗೆ ಬೋ

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಧಿಸುತ್ತಿಲ್ಲ; ರಕ್ಷದ ವೈಭವದಿಂದ ಕಣ್ಣು ಕುಕ್ಕಿಸಿಕೊಳ್ಳಿ ಎಂದಿವರ ಉಪದೇಶ.

ಪ್ರಾರಂಭದ ತಪ್ಪು

ಪ್ರಜಾ ಸಮಾಜವಾದಿಗಳ ದೌರ್ಬಲ್ಯಕ್ಕೆ ಅವರು ಕಾಂಗ್ರೆಸಿನಿಂದ ಈಚೆಗಷ್ಟೇ ಮೊದಲೇ ಅಲ್ಲಿ ಸಿಡಿದು ನಿಂತುದು ಕಾರಣ. ಈ ಶತಮಾನದ ಮೂರನೇ ದಶಕದಲ್ಲಿ ಸ್ವಾತಂತ್ರ್ಯದ ಹೋರಾಟವು ಉಗ್ರವಾಗಿ ನಡೆಯುತ್ತಿದ್ದಾಗ ಶ್ರೀ ಜಯಪ್ರಕಾಶ ನಾರಾಯಣರ ಮುಂದಾಳು ತನದಲ್ಲಿ ಭಾರತೀಯ ಸಮಾಜವಾದಿ ಗುಂಪಿನ ರಚನೆಯಾಯಿತು. ಕಾಂಗ್ರೆಸಿನಲ್ಲಿದ್ದು ಕೊಂಡೇ ಅವರು ಈ ಗುಂಪನ್ನು ಸಂಘಟಿಸಲು ನೋಡಿದರು. ಸ್ವಾತಂತ್ರ್ಯ ಪ್ರಾಪ್ತಿಯೇ ಕಾಂಗ್ರೆಸಿನ ಧ್ಯೇಯವಾಗಿತ್ತಾದರೂ ಈ ನಡುವೆ ಅದು ಕೆಲವು ವಿಶಿಷ್ಟ ಕಾರ್ಯಕ್ರಮಗಳನ್ನು ಮಹಾತ್ಮಾಜೀಯವರ ನೇತೃತ್ವದಲ್ಲಿ ಕೈಗೊಳ್ಳಲು ಮರೆಯಲಿಲ್ಲ. ಆದರೆ ಸಮಾಜವಾದಿ ಗುಂಪು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ ವಹಿಸುವುದಕ್ಕಿಂತ ಹೆಚ್ಚು ಮಹತ್ವದ ಜನರ ಹೃದಯ ಸಿಂಹಾಸನವನ್ನು ಗೆದ್ದು ಕೊಡಬಲ್ಲ ಮಹಾತ್ಮಾಜೀಯ ರಚನಾತ್ಮಕ ಕಾರ್ಯಕ್ರಮಕ್ಕೆ ಸಂತೂಗಬಲ್ಲ, ಕೆಲಸಗಳಿಗೆ ಇಳಿಯಲಿಲ್ಲ—ಇದು ಇನ್ನೊಂದು ತಪ್ಪು. ಪ್ರಜಾಪ್ರಭುತ್ವ ಪದ್ಧತಿಯ ಆಡಳಿತ ಸ್ಥಾಪಿಸಲ್ಪಟ್ಟಾಗ, ಜನತೆಯ ಪರವಾಗಿ ಹೊಣೆ ಹೊರುವುದಕ್ಕೆ ಶಕ್ತಿಯನ್ನು ಸಂಪಾದಿಸಿಕೊಡಬಲ್ಲ ನಿಶ್ಚಿತ ಕಾರ್ಯ ವಿಧಾನವನ್ನು ಸಮಾಜವಾದಿಗಳು ಆಗ ಇಟ್ಟುಕೊಳ್ಳಲಿಲ್ಲ. ಕಾಂಗ್ರೆಸಿನ ಉದ್ದೇಶವು ಸ್ವಾತಂತ್ರ್ಯ ಸಂಪಾದನೆಯ ಆಚೆಗೆ, ರಾಜಕೀಯ ವಾಹೆಯನ್ನು ಕೈಯಲ್ಲಿ ತೆಗೆದುಕೊಂಡು ಕಲ್ಯಾಣ ರಾಷ್ಟ್ರದ ಕಡೆಗೆ ಜನತೆಯನ್ನೊಯ್ಯುವುದಾಗಿತ್ತೆಂಬ ಸತ್ಯವನ್ನು ಗಮನಿಸದೆ ಸಮಾಜವಾದಿಗಳು ಮೂರನೇ ತಪ್ಪನ್ನು ಮಾಡಿದರು.

ಏಳಿಗೆ ಹೇಗೆ?

ಇನ್ನಾದರೂ ಪ್ರತಿಪಕ್ಷಗಳು ಚೇತನವನ್ನು ತಂದುಕೊಳ್ಳಬಲ್ಲವೆ? ತಂದುಕೊಳ್ಳಬೇಕು ಎಂಬುದಂತೂ ಸ್ಪಷ್ಟವಾಗಿದೆ—ಕಾಂಗ್ರೆಸು ಕೇವಲ ಸರ್ವಾಧಿಕಾರವನ್ನು ನಡೆಸುತ್ತಿದೆ ಎಂಬ ಆರೋಪವನ್ನು ಹೋಗಲಾಡಿಸುವುದಕ್ಕೆ ಮತ್ತು ಆಡಳಿತದಲ್ಲಿ ಹೆಚ್ಚು ಹೆಚ್ಚು ಜನರಿಗೆ ಸುಖವಾಗುವುದಕ್ಕೆ ಪ್ರತಿಪಕ್ಷಗಳು ಹೆಚ್ಚಿನ ಕ್ರಿಯಾಶೀಲತೆಯನ್ನು ತೋರಿಸಬೇಕು. ಕಾಂಗ್ರೆಸಿನಷ್ಟೇ ವ್ಯಾಪ್ತಿಯನ್ನು ಪಡೆಯಲು ಅವುಗಳಿಗೆ ಕೆಲವು ದಶಕಗಳ ಕಾಲವಾದರೂ ಬೇಕಾದೀತು— ಆದರೆ ಈ ಅವಧಿಯಲ್ಲಿ ಸಹ ಅವುಗಳ ಘೋಷಣೆಗಳು ಮತ್ತು ಕೆಲಸದ ಬಗೆಗಳು ನಿಶ್ಚಿತ ನೆಲೆಯೊಂದರ ಮೇಲೆ ನಿಂತಿರದೆ ಕಾಂಗ್ರೆಸಿನ ಸಣ್ಣ ಸಣ್ಣ ತಪ್ಪುಗಳನ್ನೂ ಲೋಪದೋಷಗಳನ್ನೂ ಭೂತಗನ್ನಡಿಯ ಮೂಲಕ ನೋಡಿ, ತತ್ಕಾಲಕ್ಕೆ ಮಾತ್ರ ಜನರನ್ನು ಉದ್ರೇಕಿಸಿ, ಅವರ ಬೆಂಬಲ ಪಡೆಯುವ ರೀತಿಯಲ್ಲಿದ್ದರೆ, ಅವುಗಳಿಗೆ ಯಾವ ಭವಿಷ್ಯವೂ ಇರಲಾರದು; ಅವು ಕತ್ತಲಲ್ಲೇ ತೇಲಾಡುತ್ತಿರಬೇಕಾಗುತ್ತಿರುವುದು ಖಂಡಿತ. ಆ ಪ್ರತಿಪಕ್ಷಗಳು ಈಗ ಲೋಪದೋಷಗಳ ಶೋಧಕರ ಪಾತ್ರ ವಹಿಸುವುದಕ್ಕಿಂತಲೂ ಜನರಿಗೆ ಒಪ್ಪಿಗೆಯಾಗುವ, ಕಲ್ಯಾಣಪ್ರದ ಕಾರ್ಯ ವಿಧಾನಗಳನ್ನು ರೂಪಿಸಲಿ! ಪ್ರಜಾಪ್ರಭುತ್ವದ ಬೇರು ಆಳವಾಗಿ ಇಳಿಯುವಂತೆ ಜನತೆಯ ಹೃದಯ ಕ್ಷೇತ್ರವನ್ನು ಹಸನುಗೊಳಿಸಲಿ! ಅವರಲ್ಲಿ ಕನುವು ಹೆಚ್ಚಲಿ, ನಿಜಾರ ಪ್ರಣಾಳಿಯು ತುಂಬ ಸ್ಫುಟವಾಗಲಿ, ನೊಂದಲದ ಭಾವನೆ ತೊಲಗಿ ಹೋಗಲಿ!

—ಸಾಧಾ.

ಹಿಂದು ವಾರೀಸು ವಿಧೇಯಕ

ಸೂಚಿತ ಮಾರ್ಪಾಟುಗಳ ಸಾರಾಂಶ

ಮೃತ್ಯು ಪತ್ರವನ್ನು ಮಾಡಿರದೆ ಮರಣ ಹೊಂದಿದ ಹಿಂದು ಗಂಡಸಿನ ವಾರೀಸು ಕ್ರಮದಲ್ಲಿ ಕ್ರಾಂತಿಕಾರಿಯಾದ ಬದಲಾವಣೆಗಳನ್ನು ಸಂಸತ್ತಿನ ಪರಿಶೀಲಕ ಸಮಿತಿಯು ವರದಿ ಮಾಡಿರುತ್ತದೆ—ಎಂಬುದು ಹೆಚ್ಚಿನ ಓದುಗರಿಗೆ ಗೊತ್ತಿರಲು ಸಾಕು. ಈ ವರದಿಯ ಮುಖ್ಯಾಂಶಗಳೇನೆಂಬುದನ್ನು ತಿಳಿದುಕೊಳ್ಳುವುದು ಅಪೇಕ್ಷಣೀಯವಾಗಿದೆ.

ಅನ್ವಯ ಕ್ರಮ

ವಿಧೇಯಕದ ಉದ್ದೇಶವನ್ನು ಪೂರ್ಣರೂಪದಲ್ಲಿ ಸಾಧಿಸುವುದಕ್ಕೋಸ್ಕರ ಮಿತಾಕ್ಷರಪದ್ಧತಿಯಲ್ಲಿಯೂ ಮಗಳಿಗೊಂದು ಪಾಲು ಕೊಡಲು ಮತ್ತು ಅಳಿಯ ಸಂತಾನ, ಮರುಮಕ್ಕತ್ತಾಯಂ ಮತ್ತು ನಂಬೂದ್ರಿ ಪದ್ಧತಿಗಳಲ್ಲಿ ಮೃತ್ಯುಪತ್ರ ಮಾಡಿರದೆ ಮರಣ ಹೊಂದಿದವರ ಆಸ್ತಿಯನ್ನು ಕೆಲವು ನಿಬಂಧನೆಗಳಿಗೆ ಒಳಪಡಿಸಲು ಸಮಿತಿಯು ಸೂಚಿಸಿರುತ್ತದೆ. ಆದರೆ ವಿಶೇಷ ವಿವಾಹ ಶಾಸನ ಮುಂತಾದ ಬೇರೆ ಕಾಯಿದೆಗಳಿಂದ ನಿಯಂತ್ರಿತವಾದ ಉತ್ತರಾಧಿಕಾರ ಕ್ರಮಕ್ಕೆ ಪ್ರಸ್ತುತ ವಿಧೇಯಕ ಅನ್ವಯಿಸುವುದಿಲ್ಲ. ಹಿಂದಿನ ಸಂಸ್ಥಾನಿಕರ ಆಸ್ತಿಯೂ ವಿಧೇಯಕದ ಕಕ್ಷೆಯಿಂದ ಹೊರಗಿರುತ್ತದೆ. ಹಿಂದು ತಂದೆಯ ಆಸ್ತಿಯ ಮಗಳಿಗೆ ಮಗನಷ್ಟೇ ಪಾಲು ಸಿಗಬೇಕು ಎಂದು ಪರಿಶೀಲಕ ಸಮಿತಿಯ ಅಭಿಪ್ರಾಯ. ಈ ವಿಷಯದಲ್ಲಿ ಮಗನಿಗೂ ಮಗಳಿಗೂ ಹಿಂದುಗಳಲ್ಲಿ ವ್ಯತ್ಯಾಸ ಮಾಡುವುದಕ್ಕೆ ನ್ಯಾಯವಿಲ್ಲ ಎಂದದರ ತೀರ್ಮಾನ.

ಮಗಳಿಗೂ ತಾಯಿಗೂ ಪಾಲು

ಮೃತ್ಯುಪತ್ರ ಮಾಡಿರದೆ ಒಬ್ಬನು ಮರಣ ಹೊಂದಿದರೆ, ಅವನ ಆಸ್ತಿಪಾಸ್ತಿಯಲ್ಲಿ, ಪರಿಶೀಲಕ ಸಮಿತಿಯ ವರದಿಯ ಪ್ರಕಾರ, ಮೃತನ ಮಗ, ಮಗಳು ಮತ್ತು ತಾಯಿ ಇವರಿಗೊಟ್ಟಿಗೆ ಎಂದು ಪಾಲು; ಮೃತನ ವಿಧವೆಗೆ ಒಂದು ಪಾಲು; ಈ ಮೊದಲೇ ಮರಣ ಹೊಂದಿರುವ ಮೃತನ ಪ್ರತಿಯೊಬ್ಬ ಮಗ ಅಥವಾ ಮಗಳ ವಾರೀಸುದಾರರಿಗೆ ಒಟ್ಟಿಗೆ ಒಂದು ಪಾಲು— ಹೀಗೆ ಸರಿಸಮವಾದ ಮೂರು ಪಾಲಾಗಬೇಕಾಗುತ್ತದೆ. ಒಂದೊಂದು ಪಾಲಿನಲ್ಲಿ ಮತ್ತೆ ಆ ಗುಂಪಿಗೆ ಸೇರಿದವರ ಸಂಖ್ಯಾನುಸಾರ ಪುನಃ ಪಾಲಾಗುತ್ತದೆ.

ಸ್ತ್ರೀಯರಿಗೆ ಸಂಪೂರ್ಣ ಹಕ್ಕು

ಇನ್ನು ಮುಂದೆ, ಹೆಂಗಸಿಗೆ ಅವಳ ಆಸ್ತಿಯಲ್ಲಿ ಸಂಪೂರ್ಣ ಅಧಿಕಾರ ಬರುತ್ತದೆ. ಇಷ್ಟರ ವರೆಗೆ ಪರಿಮಿತಾಧಿಕಾರ ಮಾತ್ರ ಹೆಂಗಸಿಗಿದೆ ಎನ್ನುತ್ತಿದ್ದರು—ಇನ್ನು ಹಾಗೆ ಭಾವಿಸಲು ಎಡೆಯಿಲ್ಲ. ಆದರೆ ಹೆಂಗಸು ಸಂತಾನ ವಿಹೀನಳಾಗಿ ಮರಣ ಹೊಂದಿದರೆ, ಆಗ ಅವಳು ತಂದೆಯಿಂದ ಪಡೆದ ಆಸ್ತಿಪಾಸ್ತಿಯು ತಂದೆಯ ಕುಟುಂಬಕ್ಕೂ ಗಂಡ ಅಥವಾ ಮಾವನಿಂದ ಪಡೆದ ಆಸ್ತಿಪಾಸ್ತಿಯು ಗಂಡನ ಉತ್ತರಾಧಿಕಾರಿಗಳಿಗೂ ಸೇರುತ್ತದೆ. ಈ ನಿಯಮಕ್ಕೆ ಒಳಪಟ್ಟು ಹಿಂದು ಹೆಂಗಸಿನ ಆಸ್ತಿಪಾಸ್ತಿಯಲ್ಲಿ ಉತ್ತರಾಧಿಕಾರಿಗಳ ನ್ಯಾಯವಾದ ಅನುಕ್ರಮಣಿಕೆ ಹೀಗಿದೆ-(೧) ಗಂಡ, ಗಂಡು ಮತ್ತು ಹೆಣ್ಣು ಮಕ್ಕಳು ಮತ್ತು ಈ ಮೊದಲೇ ತೀರಿ ಹೋಗಿರುವ ಗಂಡು ಮತ್ತು ಹೆಣ್ಣು ಮಕ್ಕಳ ಮಕ್ಕಳು; (೨) ತಂದೆ ಮತ್ತು ತಾಯಿ; (೩) ತಂದೆಯ ಉತ್ತರಾಧಿಕಾರಿಗಳು; (೪) ತಾಯಿಯ ಉತ್ತರಾಧಿಕಾರಿಗಳು; ಮತ್ತು (೫) ಗಂಡನ ಉತ್ತರಾಧಿಕಾರಿಗಳು.

ಅಳಿಯ ಸಂತಾನದಂತೆ

ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯಂ ಪದ್ಧತಿಗೆ ಒಳಪಟ್ಟ ಹೆಂಗಸರ ಸಂಗತಿಯಲ್ಲಿ ಈ ಅನುಕ್ರಮಣಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ—ಅದರ ಪ್ರಕಾರ ಮೃತ ಹೆಂಗಸಿನ (೧) ತಾಯಿ, ಗಂಡು ಮತ್ತು ಹೆಣ್ಣು ಮಕ್ಕಳು ಮತ್ತು ಈ ಮೊದಲೇ ತೀರಿ ಹೋಗಿರುವ ಗಂಡು ಮತ್ತು ಹೆಣ್ಣು ಮಕ್ಕಳ ಮಕ್ಕಳು; (೨) ತಂದೆಯ ಉತ್ತರಾಧಿಕಾರಿಗಳು; ಮತ್ತು (೩) ಗಂಡನ ಉತ್ತರಾಧಿಕಾರಿಗಳು ಇವರಿಗೆ ಸಮವಾಗಿ ಅವಳ ಆಸ್ತಿಪಾಸ್ತಿಯಲ್ಲಿ ಅಧಿಕಾರ ಬರುತ್ತದೆ. ಸಾಮಾನ್ಯ ಹಿಂದುಗಳಲ್ಲಿ ಪ್ರಥಮ ಹಾಗು ದ್ವಿತೀಯ ವರ್ಗದ ಉತ್ತರಾಧಿಕಾರಿಗಳಲ್ಲದಿದ್ದರೆ ಒಬ್ಬ ಗಂಡಸಿನ ಆಸ್ತಿಪಾಸ್ತಿಯ ಮೇಲೆ ಮೊದಲು ತಂದೆಯ ಕಡೆಯ ಸಂಬಂಧಿಕರಿಗೆ ಮತ್ತು ಆ ನಂತರ ಉಳಿದ ಬಂಧುಗಳಿಗೆ ಅಧಿಕಾರ ಬರುತ್ತದೆ. ಆದರೆ ಅಳಿಯಸಂತಾನ ಮತ್ತು ಮರುಮಕ್ಕತ್ತಾಯಂ ಪದ್ಧತಿಗಳಲ್ಲಿ ತಂದೆಯಕಡೆಯ ಸಂಬಂಧಿಕರಿಗೂ ಉಳಿದ ಬಂಧುಗಳಿಗೂ ಸರಿಸಮ ಪಾಲಾಗಬೇಕೆಂದು ಪರಿಶೀಲಕ ಸಮಿತಿ ಹೇಳಿರುತ್ತದೆ.

ಅನೌರಸ ಸಂತಾನದ ಅಧಿಕಾರ

ಉತ್ತರಾಧಿಕಾರಿ ಯೊಬ್ಬನು ತನ್ನ ಆಸ್ತಿಯ ಮೇಲಿನ ಪರೋಜನಗಳನ್ನು ವರ್ಗಾಯಿಸಲು ಬಯಸುವವನಾದರೆ, ಉಳಿದ ಉತ್ತರಾಧಿಕಾರಿಗಳಿಗೆ ಆ ಪರೋಜನಗಳನ್ನು ಪಡೆಯುವ ಪ್ರಥಮ ಬಾಧ್ಯತೆಯನ್ನು ಕೊಡಬೇಕು; ಅವರು ಅದನ್ನು ಇಚ್ಛಿಸುತ್ತಿಲ್ಲವಾದರೆ ಮಾತ್ರ ಬೇರೆಯವರಿಗೆ ಕೊಡಬೇಕು. ಉತ್ತರಾಧಿಕಾರಿಯಾದ ಮಗಳಿಗೆ ವಾಸದ ಮನೆಯಲ್ಲಿ ಪಾಲನ್ನು ಕೇಳುವ ಅಧಿಕಾರವು ಗಂಡು ಮಕ್ಕಳಿಗೆ ಸಮ್ಮತವಾಗುವಂತಿದ್ದರೆ ಮಾತ್ರ ಬರುತ್ತದೆ; ಆದರೆ ಅಂಥ ಹೆಂಗಸರಿಗೆ ಪಾಲಾಗದಿದ್ದರೂ ಕುಟುಂಬದ ಮನೆಯಲ್ಲಿ ಯಾರ ಹೆಂಗೂ ಇಲ್ಲದೆ ವಾಸಿಸುವ ಅಧಿಕಾರ ಇರುತ್ತದೆ. ಮೃತನ ತಾಯಿಯನ್ನು ಮತ್ತು ಮೃತನಿಗಿಂತ ಮೊದಲೇ ಮರಣ ಹೊಂದಿರಬಹುದಾದ ಆತನ ಮಕ್ಕಳ ಮಗಳಂದಿರನ್ನು ಪ್ರಥಮವರ್ಗದ ಉತ್ತರಾಧಿಕಾರಿಯಾಗಿ ಪರಿಶೀಲಕ ಸಮಿತಿ ಪರಿಗಣಿಸಿದೆ. ಅನೌರಸ ಸಂತಾನದ ಸಂಗತಿಯಲ್ಲಿ, ತಂದೆಯು ಇಂಥವನೆಂದು ಸ್ಪಷ್ಟವಿದ್ದರೆ ಅವನ ಸ್ವಾರ್ಜಿತ ಆಸ್ತಿಯಲ್ಲಿ ಅವರಿಗೆ ಪಾಲುಸಿಗಬೇಕೆಂದು ಸಮಿತಿ ಹೇಳಿರುತ್ತದೆ.

ಭಿನ್ನಾಭಿಪ್ರಾಯದ ಕೇಂದ್ರ

ಸಮಿತಿಯ ಬಹುಮತದ ಸೂಚನೆಗಳಿಗೆ ಭಿನ್ನವಾದ ಅಭಿಪ್ರಾಯಗಳನ್ನು ಸನ್ನೊಂದುಮಂದಿ ಸದಸ್ಯರು ವ್ಯಕ್ತಗೊಳಿಸಿದ್ದಾರೆ. ಅವರ ಮತಭೇದದ ಸಾರಾಂಶ ಹೀಗಿದೆ— (೧) ಅನೌರಸ ಸಂತಾನಕ್ಕೆ ಪಿತನ ಆಸ್ತಿಯಲ್ಲಿ ಪಾಲು ಕೊಡುವುದರಿಂದ ಸೂಳೆಗಾರಿಕೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ; ಬಹುಪತ್ನಿತ್ವವನ್ನು ತಪ್ಪಿಸುವ ಉದ್ದೇಶ ವಿಫಲವಾಗುತ್ತದೆ; ಅನೀತಿ ಬೆಳೆಯುತ್ತದೆ; ಕೆಲವು ತಪ್ಪುಗಳನ್ನು ಸಮಾಜ ಸಹಿಸಬಹುದಾದರೂ ತಪ್ಪುಗಳನ್ನು ಬೆಂಬಲಿಸುವುದು ಇಷ್ಟವಾದುದಲ್ಲ; (೨) ಮಗಳಿಗೆ ಮಗನಷ್ಟೇ ಪಾಲನ್ನು ಕೊಡುವುದರಿಂದ ಅವಳಿಗಿಂತ ಮಗನ ಸ್ಥಿತಿಯು ನಿಕೃಷ್ಟವಾಗುತ್ತದೆ. (೩) ಮೃತನ ಆಸ್ತಿಯಲ್ಲಿ ತಾಯಿಗೆ ಪಾಲು ಕೊಡುವುದೂ ತಂದೆಗೆ ಕೊಡದಿರುವುದೂ ಯೋಗ್ಯವಲ್ಲ. ಮೃತನ ತಂದೆ ಮತ್ತು ತಾಯಿ ಇಬ್ಬರ ಜೀವನಾಧಾರಕ್ಕೆ ವ್ಯವಸ್ಥೆ ಅವಶ್ಯಕ. (೪) ಹೆಂಡತಿಗೆ ಅವಳ ತಂದೆಯಿಂದ ಪಡೆದ ಆಸ್ತಿಯಲ್ಲಿ ಅವಳಿಗೆ ಸಂತಾನವಿದ್ದಾಗ ಮಾತ್ರ ಗಂಡನಿಗೆ ಪಾಲು ಸಿಗುವ ಕ್ರಮ ಯೋಗ್ಯವಲ್ಲ; ಗಂಡನಿಗೆ ಸಂತಾನವಿರಲಿ, ಇಲ್ಲದಿರಲಿ, ಹೆಂಡತಿಗೆ ಪಾಲು ಸಿಗುವಾಗ ಹೀಗೆ ನಿರ್ಬಂಧ ಹಾಕುವುದು ಅನ್ಯಾಯ (೫) ಮೃತನ ಮದುವೆಯಾಗದ ಹೆಣ್ಣು ಮಕ್ಕಳ ವರದಕ್ಷಿಣೆ, ಮದುವೆಯ ಕರ್ಚು ಇತ್ಯಾದಿಗಳಿಗೆ ಆತನ ಆಸ್ತಿಪಾಸ್ತಿಯು ಪಾಲಾಗುವ ಪೂರ್ವದಲ್ಲಿಯೇ ಹಣ ತೆಗೆದಿಡಬೇಕು. (೬) ವಿಶೇಷ ಶಾಸನಗಳಿಂದ ನಿಯಂತ್ರಿಸಲ್ಪಟ್ಟಿರುವ ಉತ್ತರಾಧಿಕಾರದ ಕ್ರಮಗಳಿಗೆ ಈ ಶಾಸನವನ್ನು ಅನ್ವಯಿಸದಂತೆ ಮಾಡಿರುವುದರಿಂದ ವಿಶೇಷ ವಿವಾಹ ಶಾಸನದಂತೆ ಮದುವೆಯಾಗುವವರಿಗೆ ಆಸ್ತಿಪಾಸ್ತಿಯಲ್ಲಿ ಅಧಿಕಾರ ಉಳಿದವರಿಗಿಂತ ಕಡಿಮೆಯಾಗುತ್ತದೆ. ಇನು ಆ ಶಾಸನದ ಪ್ರಯೋಜನವನ್ನು ಪಡೆದುಕೊಳ್ಳುವವರ ಸಂಖ್ಯೆಯನ್ನು ಕಡಿಮೆ ಮಾಡಬಹುದು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ನೈಪುಣ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮಂಗಳಗಲ್ಲಿ, ಹುಬ್ಬಳ್ಳಿ.

ರೂಪಾಯಿಗೆ ಎರಡಾಣೆಯಂತೆ ತೀರ್ವೆ ಏರಿಸುವ ಮಸೂದೆ

ಪ್ರತಿಪಕ್ಷಗಳ ಸಭಾತ್ಯಾಗದ ನಡುವೆ ಮದ್ರಾಸಿನ ಕೆಳಮನೆಯಲ್ಲಿ ಸ್ವೀಕಾರ

ಇದೇ ೨೫ನೇ ದಿನಾಂಕ ಮದ್ರಾಸಿನ ಶಾಸನಾಂಗದ ಕೆಳಮನೆಯಲ್ಲಿ ಕಂದಾಯ ಮಂತ್ರಿ ಶ್ರೀ ಮಾಣಿಕ್ಯನೇಲು ನಾಯಕ್ಕರರು ಭೂಕಂದಾಯವನ್ನು ಪ್ರತಿಯೊಂದು ರೂಪಾಯಿಗೆ ಎರಡಾಣೆಯಷ್ಟು ಹೆಚ್ಚಿಸುವ ಮಸೂದೆಯನ್ನು ಮಂಡಿಸಿದರು. ಭೂಕಂದಾಯವನ್ನು ಕೊಡುವ ಪ್ರತಿಯೊಬ್ಬ ಪಟ್ಟಾದಾರನೂ ಈ ಹೆಚ್ಚಿನ ತೀರ್ವೆಯನ್ನು ಕೊಡಬೇಕಾಗುತ್ತದೆ. ಎಕ್ರೆಗೆ ಹತ್ತು ರೂಪಾಯಿಯ ಪರನು ಮತಿಗೆ ಮೀರದಷ್ಟು ನೀರಿನ ತೆರಿಗೆಗೂ ಈ ಅಧಿಕ ತೆರಿಗೆ ಅನ್ವಯಿಸುತ್ತದೆ; ಹಾಗೆಂದು ಕಳೆದ ವರ್ಷ ಭೂಕಂದಾಯದಲ್ಲಿ ಮೇಲ್ತೆರಿಗೆ ಹಾಕುವ ಶಾಸನದಂತೆ ವಸೂಲು ಮಾಡಲ್ಪಡುವ ಹೆಚ್ಚಿನ ಕಂದಾಯದ ಮೇಲೆ ಈಗಿನ ಅಧಿಕ ತೆರಿಗೆ ಕೊಡಬೇಕಾಗಿಲ್ಲ. ಮೂಲ ಕಂದಾಯಕ್ಕೆ ಮಾತ್ರ ಈ ಮಸೂದೆ ಲಗಾವಾಗುತ್ತದೆ ಎಂದಿದರ ಅರ್ಥ.

ಹೆಚ್ಚಿಸುವ ಉದ್ದೇಶ

ಮಸೂದೆಯನ್ನು ತರಬೇಕಾಗಿ ಬಂದ ಕಾರಣಗಳನ್ನು ಮಂತ್ರಿಗಳು ವಿವರಿಸುತ್ತಾ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಮಸೂದೆಯಂತೆ ವಸೂಲಾದ ಹಣವನ್ನು ಅವುಗಳಿಗೆ ಕೊಡಲಾಗುವುದು ಎಂದರು. ಈ ಹಣದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಗ ರಚಿಸುವುದೇ ಮುಂತಾದ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ಸಾಧ್ಯವಾಗುವುದೆಂದು ಆಶಿಸಿದರ. ಸರಕಾರವು ಪಂಚಾಯತು ಶಾಸನದಂತೆ ತಾನು ವಸೂಲು ಮಾಡಿದ ಭೂಕಂದಾಯದಲ್ಲಿ ೧/೮ನೇ ಅಂಶವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾಗಿರುತ್ತದೆ; ಆದರೆ, ಸರಕಾರದ ಆರ್ಥಿಕ ಅಡಚಣೆಯು ಹೇಳಿ ತೀರದಷ್ಟಿರುವುದರಿಂದ, ಆ ಹೊಣೆಯನ್ನು ಇಳಿಸಿಕೊಂಡು ಭೂಕಂದಾಯವನ್ನು ಹೆಚ್ಚಿಸುವ ಪ್ರಸ್ತುತ ಉಪಾಯವನ್ನು ಅನುಸರಿಸಬೇಕಾಯಿತು—ಎಂದು ವ್ಯಕ್ತಪಡಿಸಿದರು.

ಕೃಷಿಕರಿಗೆ ಕಷ್ಟವಿಲ್ಲ

ರೈತರು ಈ ತೆರಿಗೆಯನ್ನು ಸಂತೋಷದಿಂದ ಕೊಡುವರೆಂದು ಮಂತ್ರಿಗಳು ಹಾರೈಸಿದರು. ೧೯೩೭ನೇ ಇಸವಿಯಿಂದೀಚೆಗೆ ಭೂಕಂದಾಯದ ಪುನರ್ವಿಮರ್ಶೆ ಮಾಡಿಲ್ಲ. ಎಲ್ಲ ಕಡೆಗಳಲ್ಲಿಯೂ ಉತ್ಪಾದನೆ ಹೆಚ್ಚಿರುತ್ತದೆ. ದವಸಧಾನ್ಯಗಳ ಬೆಲೆಯು ಯುದ್ಧಪೂರ್ವದಲ್ಲಿದ್ದುದಕ್ಕಿಂತ ಕೆಲವು ಪಾಲು ಅಧಿಕವಾಗಿರುತ್ತದೆ. ಇಂಥ ಸ್ಥಿತಿಯಲ್ಲಿ ಭೂಕಂದಾಯವನ್ನು ರೂಪಾಯಿಗೆ ಎರಡಾಣೆಯಷ್ಟು ಏರಿಸಲು ಸರಕಾರನಿರ್ಧರಿಸಿದುದಕ್ಕೆ ಯಾರೂ ಕೋಪಿಸಿಕೊಳ್ಳುವಂತಿಲ್ಲ. ಭೂಕಂದಾಯದ ಪುನರ್ವಿಮರ್ಶೆಗೆ ಸರಕಾರ ಕೈಹಾಕಿದರೆ, ಆಗ ಇದಕ್ಕಿಂತ ಹೆಚ್ಚು ತೆರಿಗೆಯನ್ನೆ ರೈತರು ಕೊಡಬೇಕಾಗಿ ಬಂದೀತು—ಎಂದು ಮಂತ್ರಿಗಳು ಹೇಳಿದರು. ಆದರೆ, ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಪಕ್ಷದ ಸದಸ್ಯರು ಮೊದಲಿನಿಂದ ಕೊನೆಯ ವರೆಗೆ ಮಸೂದೆಯನ್ನು ವಿರೋಧಿಸಿದರು. ರೈತರಲ್ಲಿ ಯಾರೊಬ್ಬರೂ ಹೆಚ್ಚು ಭೂಕಂದಾಯವನ್ನು ಕೊಡುವ ಪರಿಸ್ಥಿತಿಯಲ್ಲಿಲ್ಲ ಎಂದಿವರು ವಾದಿಸಿದರು. ದವಸಧಾನ್ಯಗಳ ಬೆಲೆಯು ತುಂಬ ಇಳಿದಿದೆ; ತಮ್ಮ ಉತ್ಪನ್ನಗಳಿಗೆ ಪೇಟೆ ದೊರಕದೆ ರೈತರು ಕೇಜಾಡುತ್ತಿದ್ದಾರೆ—ಎಂದು ವಿರೋಧಿಗುಂಪಿನವರು ವಾದಿಸಿದರು. ಬೇರೆ ಸರಕಾರಗಳು ಹತ್ತು ರೂಪಾಯಿಗಿಂತ ಕಡಿಮೆ ಭೂಕಂದಾಯ ತೆರುವವರ ತೀರ್ವೆ ಮಾಫಿ ಮಾಡಿರುವಾಗ, ಮದ್ರಾಸು ಸರಕಾರವು ಇದ್ದ ತೀರ್ವೆಯನ್ನು ಹೆಚ್ಚಿಸುವುದು ಸರಿಯಲ್ಲ ಎಂದರು.

"ತೇಪೆ ಹಾಕುವ ಕೆಲಸ"

ಉಡುಪಿಯ ಶ್ರೀ ಟಿ. ಅನಂತ ಶೈಗಳು ಈ ಮಸೂದೆಯಂತೆ ಸ್ಥಳೀಯ ಸಂಸ್ಥೆಗಳಿಗೆ ಹಣವನ್ನು ಹೆಂಚುವ ತತ್ವವೇನೆಂದು ಹೇಳಿಲ್ಲ; ಕೇವಲ ತೇಪೆ ಹಾಕುವ ಕೆಲಸಕ್ಕಿಂತಲೂ ಶಾಶ್ವತವಾಗಿ ಸ್ಥಳೀಯ ಸಂಸ್ಥೆಗಳ ಆದಾಯವನ್ನು ಹೆಚ್ಚಿಸುವ ಉಪಾಯಗಳನ್ನು ಅನುಸರಿಸಬೇಕು ಎಂದರು. ಭೂಕಂದಾಯವನ್ನು ಪಂಚಾಯತುಗಳಿಗೊಡನೆ ಪಾಲು ಮಾಡಿಕೊಳ್ಳುವ ಸರಕಾರದ ಹೊಣೆಗಾರಿಕೆಯನ್ನು ತಪ್ಪಿಸಿ ಕೊಳ್ಳುವುದು ಯೋಗ್ಯವಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಬೇರೆ ಕೆಲವು ಸದಸ್ಯರು ಮಂತ್ರಿಗಳ ಪ್ರಯಾಣ ಇತ್ಯಾದಿಗಳಲ್ಲಿ ಮಿತವ್ಯಯವನ್ನು ಸಾಧಿಸಿ, ಸರಕಾರ ಹಣವುಳಿಸಬೇಕೆಂದರು. ಭೂಸುಧಾರಣೆಯ ಲಾಭಗಳನ್ನು ರೈತರಿಗೆ ಕೊಡದೆ, ಅವರ ನೆತ್ತರನ್ನೆ ಹೀರುವ ಈ ಮಸೂದೆ ತಂದು ದಕ್ಕ ಮತ್ತೆ ಕೆಲವರು ಸರಕಾರವನ್ನು ದೂರಿದರು. ಸರಿತೀಲಕ ಸಮಿತಿಗೆ ಮಸೂದೆಯನ್ನು ಒಪ್ಪಿಸಿಕೊಡಬೇಕೆಂದು ವಿರೋಧಿ ಗುಂಪು ಹಟಹಿಡಿಯಿತು.

ನಾಯಕ್ಕರರ ಸ್ವಸಮರ್ಥನೆ

ಚರ್ಚೆಗೆ ಉತ್ತರ ಕೊಡುತ್ತಾ ಮಂತ್ರಿಗಳು ಪರಿತೀಲಕ ಸಮಿತಿಗೆ ಮಸೂದೆಯನ್ನು ಒಪ್ಪಿಸುವ ಆವಶ್ಯಕತೆ ಇಲ್ಲವೆಂದು ಹೇಳಿದರು. ಪ್ರತಿಪಕ್ಷದವರು ಮಸೂದೆಯನ್ನು ವಿರೋಧಿಸುತ್ತಿರುವುದನ್ನು ನೋಡಿದರೆ, ಪರಿತೀಲಕ ಸಮಿತಿಗೆ ಒಪ್ಪಿಸಿದರೂ ಏನೂ ಪ್ರಯೋಜನವಾಗದು ಎಂದರು. ಕಳೆದ ಫೆಬ್ರವರಿ ತಿಂಗಳಲ್ಲಿಯೇ ಇಂಥ ಮಸೂದೆ ತರುವ ಸೂಚನೆಯನ್ನು ಸರಕಾರ ಕೊಟ್ಟಿತ್ತೆಂದು ಅವರು ನೆನಪಿಗೆ ತಂದುಕೊಟ್ಟರು. ಈ ಮಸೂದೆಯು ಗ್ರಾಮ ಪಂಚಾಯತು ಶಾಸನದ ೭೧ನೇ ಸೂತ್ರವನ್ನು ತೆಗೆದು ಹಾಕುತ್ತದೆ; ಆ ಸೂತ್ರದಂತೆ ಸರಕಾರಕ್ಕೆ ನಡೆಯಲು ಸಾಧ್ಯವಾಗದಿದ್ದುದೇ ಇದರ ಕಾರಣ—ಎಂದು ಮಂತ್ರಿಗಳು ವಿವರಿಸಿದರು. ಕೃಷಿ ಉತ್ಪನ್ನಗಳ ಆದಾಯದ ಮೇಲೆ ತೆರಿಗೆ ಹಾಕುವ ವಿಷಯದಲ್ಲಿ ಸರಕಾರ ನಿಧಾನದಿಂದಿದೆ; ಏಕೆಂದರೆ ರೈತರಿಗೆ ಆಗ ಯೋಗ್ಯ ಲೆಕ್ಕಪತ್ರಗಳನ್ನಿಟ್ಟುಕೊಳ್ಳುವುದು ಕಷ್ಟಕರವಾಗಿ, ಆ ಮಸೂದೆ ಕಿರುಕುಳ ಕೊಡಬಹುದು. ಈಗಿನ ಮಸೂದೆ ಅವರ ಹೆಚ್ಚಿನ ಆದಾಯದಲ್ಲಿ ಅಲ್ಪಾಂಶವೊಂದನ್ನು ಅವರ ಅನುಕೂಲಕ್ಕಾಗಿ ಕೇಳುತ್ತದೆ; ಅಷ್ಟೆ— ಎಂದು ತಮ್ಮನ್ನು ಸಮರ್ಥಿಸಿಕೊಂಡರು.

ಪ್ರತಿಪಕ್ಷಗಳ ಸಭಾತ್ಯಾಗ

ಕಲಮುವಾರು ಚರ್ಚೆ ನಡೆದಾಗ ವಿರೋಧಿ ಗುಂಪುಗಳವರು ಹಲವು ತಿದ್ದುಪಡಿಗಳನ್ನು ತಂದರು. ಹೆಚ್ಚಿನ ತೆರಿಗೆಯನ್ನು ರೂಪಾಯಿಗೆ ಎರಡಾಣೆಯ ಬದಲು ಒಂದಾಣೆ, ಅಥವಾ ಅರ್ಧಾಣೆಗೆ ಇಳಿಸಬೇಕೆಂದು ಕೆಲವರೂ ವರ್ಷಕ್ಕೆ ೧೫ ಅಥವಾ ೩೦ ರೂಪಾಯಿಗಿಂತ ಕಡಿಮೆ ಭೂಕಂದಾಯ ಕೊಡುವ ಪಟ್ಟಾದಾರರಿಗೆ ಈ ಹೆಚ್ಚಿನ ತೆರಿಗೆಯನ್ನು ಅನ್ವ

ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್, ಎಲ್. ಐ. ಎಮ್.,
ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಶನರ್,
ಸ್ವ ಗಕರ್ತರು.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ ಮದ್ದು HOME REMEDIES

ಬರೆದವರು: ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written--Quite up-to-date valuable service"

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್,
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಮುಂಬಯಿಯ ಸಾಗುವಳಿ ಶಾಸನ

ಹಿರಿಯವರಿಂದ ಸರಕಾರದ ನಿಲುಮೆಯ ಸಮರ್ಥನೆ

ಯಿಸಬಾರದೆಂದು ಕೆಲವರೂ ಈ ಮಸೂದೆಯಂತೆ ಎಷ್ಟು ಹಣ ಹೆಚ್ಚಿನ ತೆರಿಗೆಯಿಂದ ವಸೂಲಾಯಿತೊ ಅಷ್ಟೇ ಹಣವನ್ನು ಸರಕಾರವು ತನ್ನ ಆದಾಯದಿಂದ ಹಾಕಿ, ಇವೆರಡನ್ನೂ ಪಂಚಾಯತುಗಳಿಗೆ ಒಪ್ಪಿಸಿಕೊಡಬೇಕೆಂದು ಕೆಲವರೂ ತಿದ್ದುಪಡಿಗಳ ಮೂಲಕ ವಾದಿಸಿದರು. ಇದನ್ನು ವಿರೋಧಿಸಿದ ಮಂತ್ರಿಗಳು ಸರಕಾರದ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ ಎಂಬುದರಿಂದ ಈ ಮಸೂದೆ ತರಲಾಯಿತು; ಆದುದರಿಂದ ತನ್ನ ಆದಾಯದಲ್ಲಿ ಒಂದಂಶವನ್ನು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದೇ ಮಸೂದೆಯ ಉದ್ದೇಶ; ಆದುದರಿಂದ ತೆರಿಗೆಯನ್ನು ಎರಡಾಣೆಗಿಂತ ಕಡಿಮೆ ಮಾಡುವುದು ಅಥವಾ ಕೆಲವು ವರ್ಗಗಳಿಗೆ ವಿನಾಯಿತಿ ಕೊಡುವುದು ಸಾಧ್ಯವಿಲ್ಲ ಎಂದರು. ತಮ್ಮ "ನ್ಯಾಯ"ವಾದ ಕೇಳಿಕೆಗಳಲ್ಲಿ ಒಂದಕ್ಕೂ ಮನ್ನಣೆ ಸಿಕ್ಕಲಿಲ್ಲ; ಆದುದರಿಂದ ಈ ಮಸೂದೆಗೆ ತಾವು ಹೊಣೆಯಾಗಲು ಬಯಸುವುದಿಲ್ಲ-ಎನ್ನುತ್ತಾ ಪ್ರಜಾಸಮಾಜವಾದಿಗಳೂ ಕಮ್ಯೂನಿಸ್ಟರೂ ದ್ರಾವಿಡ ಪಕ್ಷಗಳವರೂ ಸಭಾತ್ಯಾಗ ಮಾಡಿದರು. ಮಂತ್ರಿಗಳು ಮಸೂದೆ ಉದಾರವಾಗಿದೆ ಎನ್ನುತ್ತಾ ತೃತೀಯ ವಾಚನವನ್ನು ಮುಗಿಸಿದ ಬಳಿಕ, ಸಭೆ ಅದನ್ನು ಮಂಜೂರು ಮಾಡಿತು.

ಮುಂಬಯಿ ಸರಕಾರದವರು ಉಳುವವನನ್ನು ಹೊಲದೊಡೆಯನಾಗಿ ಮಾಡಲೆಂದು ತಂದಿರುವ ಮಸೂದೆಯನ್ನು ಶಾಸನಾಂಗದ ಕೆಳಮನೆಯಲ್ಲಿ ಇದೇ ೨೪ನೇ ದಿನಾಂಕ ಮಂಜೂರು ಮಾಡಲಾಯಿತು. ಇದರ ಚರ್ಚೆಗೆ ೨೨ ದಿನ ಹಿಡಿಯಿತು; ಸುಮಾರು ೨೦೦ ತಿದ್ದುಪಡಿಗಳನ್ನು ಪ್ರತಿಪಕ್ಷದವರು ತಂದಿದ್ದರು.

ಹಿರಿಯವರ ಘೋಷಣೆ

೧೯೫೭ನೇ ಎಪ್ರೀಲಿನ ೧ನೇ ತಾರೀಕಿಗೆ ಉಳುವವನು ಹೊಲದೊಡೆತನವನ್ನು ಬಿರೀದಿಗೆ ಪಡೆಯುವಂತೆ ಮಾಡುವ ಈ ವಿಧೇಯಕವನ್ನು ಶಾಂತವಾದ ರೀತಿಯಲ್ಲಿ ಕ್ರಾಂತಿಯನ್ನು ಸಾಧಿಸುವ ಶಾಸನವೆಂದು ಕಂದಾಯ ಮಂತ್ರಿ ಶ್ರೀ ಹಿರೆ ಹೇಳಿದರು. ಲಕ್ಷಾಂತರ ಬೇಸಾಯಗಾರರ ಅಂತಸ್ತನ್ನು ನಿಗದಿಗೊಳಿಸಿ, ಮಧ್ಯವರ್ತಿಗಳನ್ನು ತೆಗೆದು ಹಾಕುವ ಈ ಮಸೂದೆಯು ಭಾರತದ ಇತರ ರಾಜ್ಯಗಳಿಗೊಂದು ಮಾದರಿಯಾಗಿದೆ ಎಂದವರು ಘೋಷಿಸಿದರು.

ವಿರುದ್ಧ ದಿಕ್ಕಿಗೆ ಎಳೆದಾಟ

ಪ್ರತಿಪಕ್ಷದವರು ವಿಧೇಯಕವನ್ನು ಎರಡು ತುತ್ತ ತುದಿಗಳಿಗೆ ಎಳೆದಾಡಿದರು. ಭೂಮಾಲಿಕರ ಪಕ್ಷಪಾತಿಗಳು ಅವರಿಗೆ ಲಾಭವಾಗುವಂತೆಯೂ ಸಾಗುವಳಿದಾರರೊಡನೆ ಸಮಾನುಭೂತಿಯುಳ್ಳವರು ಅವರಿಗೆ ಪ್ರಯೋಜನ ಹೆಚ್ಚು ಸಿಗುವಂತೆಯೂ ವಾದಿಸಿದರು. ಸರಕಾರದವರು ವ್ಯಕ್ತಿಯ ಅಧಿಕಾರವನ್ನು ಕ್ರಮೇಣ ಸಾಮಾಜಿಕ ಹಿತಕ್ಕೆ ಅಧೀನವಾಗಿಸುವ ದಿಸೆಯಲ್ಲಿ ಹೆಜ್ಜೆ ಮುಂದಿಟ್ಟರು. ಈ ವಿಧೇಯ ತಂದ ಮಾತ್ರದಿಂದಲೇ ಸರಕಾರದ ಹೊಣೆ ಮುಗಿಯಿತೆಂದು ಅರ್ಥ ಮಾಡಲಾಗದು:—ಎಂದು ಹಿರೆ ಹೇಳಿದರು.

ತಿದ್ದುಪಡಿಗಳ ಗೆದ್ದಲ

ಕರ್ನಾಟಕ ವಿಭಾಗಕ್ಕೆ ವಿಧೇಯಕವನ್ನು ಅನ್ವಯಿಸಬಾರದೆಂಬ ತಿದ್ದುಪಡಿ ನಿರಾಕೃತವಾಯಿತು. ಚಿಕ್ಕ ಹಿಡುವಳಿದಾರರಿಗೆ ಪ್ರಯೋಜನಕರವಾದ ತಿದ್ದುಪಡಿಯು ಸ್ವೀಕಾರಗೊಂಡಿತು. ಕಾಯಂ ಸಾಗುವಳಿದಾರನು ಗೇಣಿಯ ಅರುಪಟ್ಟು ಮತ್ತು ಇತರೆ ಬಗೆಯ ಸಾಗುವಳಿದಾರನು ತೀರ್ವೆಯ ಮೂಲಕ ಮೂಲ ಪಟ್ಟು ಹಣವನ್ನು ಪರಿಹಾರವಾಗಿ ಭೂಮಿಗೆ ಕೊಡಬೇಕೆಂಬ ನಿರ್ಬಂಧವನ್ನು ಸಡಿಲುಗೊಳಿಸಲು ಮಂತ್ರಿಗಳು ಒಪ್ಪದೆ, ತಂದ ತಿದ್ದುಪಡಿಗಳನ್ನೆಲ್ಲ ಜಯಶೀಲವಾಗಿ ವಿರೋಧಿಸಿದರು. ಹಿಡುವಳಿಯ ಸರಮಾವಧಿ ಮಿತಿಯನ್ನುಯೋಗ್ಯಸಂದರ್ಭಗಳಲ್ಲಿ ಭೂಮಿಯ ಫಲವತ್ತತೆ ಇತ್ಯಾದಿಗಳನ್ನು ನೋಡಿಕೊಂಡು ಹೆಚ್ಚಿಸಲು ಅವರು ಸಮ್ಮತಿಸಿದರು. ಸ್ವಂತ ಸಾಗುವಳಿಯ ವ್ಯಾಖ್ಯೆಯನ್ನು ಪರಿಶೀಲಕ ಸಮಿತಿ ವಿಸ್ತರಿಸಿರುವುದಕ್ಕೆ ಸಭೆ ಅನುಮೋದನೆ ನೀಡಿತಲ್ಲದೆ ಪರಮಾವಧಿ ಹಿಡುವಳಿಯ ಇಮ್ಮಡಿಯನ್ನು ಭೂಮಾಲಿಕರು ಸ್ವಂತ ಸಾಗುವಳಿಗಾಗಿ ಇಟ್ಟುಕೊಳ್ಳಬಲ್ಲರೆಂಬ ಸರಕಾರದ ತಿದ್ದುಪಡಿಯನ್ನೂ ಅಂಗೀಕರಿಸಿತು.

ಭಾರತದ ಹಿತಸಂಬಂಧ

ಪ್ರಧಾನಿ ನೆಹರುಗಳು ಗೋವೆಯಲ್ಲಿ ಭಾರತದ ಹಿತಸಂಬಂಧವನ್ನು ನೋಡಿಕೊಳ್ಳಲು ಮಿತ್ರ ರಾಷ್ಟ್ರವೊಂದನ್ನು ವಿನಂತಿಸುವ ವಿಚಾರ ಸರಕಾರಕ್ಕೆ ಇದೆ ಎಂದು ಇದೇ ಸೋಮವಾರ ತಿಳಿಸಿದರು. ಆದರೆ ಮಿತ್ರ ರಾಷ್ಟ್ರದ ಹೆಸರನ್ನು ಮಾತ್ರ ಅವರು ಹೇಳಲಿಲ್ಲ. ಇದಕ್ಕೆ ಮುಂಚೆ, ಹಿಂದು ಮಹಾಸಭೆಯ ಶ್ರೀ ಚಟರ್ಜಿಯವರು ಗೋವೆಯ ಕುರಿತು ಭಾರತದ ಪ್ರಾರ್ಥನೆಯಂತೆ ಮಿತ್ರ ರಾಷ್ಟ್ರವೊಂದು ಮಧ್ಯಸ್ಥಿಕೆಯನ್ನು ನಡೆಸುತ್ತಿದೆ ಎಂದಿದ್ದರು.

ಜನಮತ ಗಣನೆಯೆ?

ಚಟರ್ಜಿಯವರು ಗೋವೆಯ ಕುರಿತು ಜನಮತ ಗಣನೆ ನಡೆಸುವ ಸೂಚನೆಯು ಮಾಡಲ್ಪಡಬಹುದೆಂಬ ಅಭಿಪ್ರಾಯವನ್ನೂ ವ್ಯಕ್ತಗೊಳಿಸಿದ್ದಾರೆ. ಈಚೆಗೆ ಲಂಡನಿನಲ್ಲಿದ್ದಾಗ ಅನೇಕರು ಈ ಬಗ್ಗೆ ತನ್ನನ್ನು ಪ್ರಶ್ನಿಸಿದರೆಂದು ಚಟರ್ಜಿಯವರು ತಿಳಿಸಿದರು. ಸೋರ್ಬೋನ್‌ಗಾಲದ ಅಧ್ಯಕ್ಷರು ಇದೇ ಅಕ್ಟೋಬರದ ಕೊನೆಯಲ್ಲಿ ಲಂಡನಿಗೆ ಸಂದರ್ಶನ ನೀಡುವರೆಂದು ತಿಳಿದು ಬಂದಿದ್ದು, ಬ್ರಿಟನೇ ಗೋವೆಯ ಕುರಿತು ಸಂಧಾನ ನಡೆಸುತ್ತಿದೆಯೆ ಎಂದು ಸಂಶಯವೆದ್ದಿದೆ. ಭಾರತ ಸರಕಾರವು ತಾನಾಗಿ ಸಂಧಾನವನ್ನು ಸಾಧಿಸಲು ಯಾರನ್ನೂ ಕೇಳಿಕೊಳ್ಳುವುದಿಲ್ಲ ಎಂದಿದೆ; ಆದರೆ ಭಾರತದೊಡನೆ ಸಹಾನುಭೂತಿಯುಳ್ಳ ರಾಷ್ಟ್ರವೊಂದು ಸ್ವೇಚ್ಛೆಯಿಂದ ಈ ಕುರಿತು ಪ್ರಯತ್ನಿಸುವುದಕ್ಕೆ ಭಾರತ ಸರಕಾರದ ಆಕ್ಷೇಪವಿಲ್ಲ.

ಜಪಾನಿನ ನಿರ್ಧಾರ

ಬಾಂಡುಂಗಿನ ಆಫ್ರೇಸ್ಯ ಸಮ್ಮೇಳನವನ್ನು ಕರೆದ ಕೊಲೊಂಬೊ ರಾಷ್ಟ್ರಗಳಲ್ಲಿ ತಾನು ಒಂದಾಗಿದ್ದರೂ ಪಾಕಿಸ್ತಾನವು ಗೋವೆಯ ಪೋರ್ಚುಗೀಜರೊಡನೆ ಸಾಮಾನ್ಯ ವ್ಯಾಪಾರ ಸಂಬಂಧಗಳನ್ನು ಕಡಿದುಕೊಳ್ಳಲು ಕಾರಣವಿಲ್ಲ ಎಂದು ಹೇಳಿರುತ್ತದೆ. ಆದರೆ ದೂರ ಪೂರ್ವದ ಜಪಾನು ದೇಶವು ಬಾಂಡುಂಗಿನಲ್ಲಿ ವಸಾಹತು ವಾದದ ಕುರಿತು ಸ್ವೀಕರಿಸಿದ ಗೊತ್ತುವಳಿಯನ್ನು ಲಕ್ಷಿಸಿ, ಕಬ್ಬಿಣ ಮತ್ತು ಮೆಂಗನೀಜಗಳ ಅದುರಿನ ಅವಶ್ಯಕತೆ ತನಗೆ ಬಹಳವಾಗಿದ್ದರೂ ಗೋವೆಯಿಂದ ಅದನ್ನು ತರಿಸುವ ಕೆಲಸವನ್ನು ನಿಲ್ಲಿಸಿಬಿಡಲು ನಿಶ್ಚಯಿಸಿರುತ್ತದೆ.

ಬಲವಾದ ಆಘಾತ

ಹಿಂದು ಸಾಗರದಲ್ಲಿರುವ ಎಲ್ಲ ಜಪಾನಿ ಹಡಗುಗಳಿಗೆ ಗೋವೆಗೆ ಅದುರುಗಳನ್ನು ತುಂಬಲು ಅಥವಾ ಬೇರಾವುದೇ ವ್ಯಾಪಾರಕ್ಕೆ ಹೋಗಬಾರದೆಂದು ಆಯೊಹಡಗು ಕಂಪೆನಿಗಳು ಸೂಚಿಸಿರುತ್ತವೆ. ಜಪಾನಿಗೆ ಬೇಕಾದ ಎಲ್ಲ ಅದುರನ್ನೂ ಭಾರತವೇ ಪೂರೈಸಲು ಸಮರ್ಥವಾಗಿದೆ; ಅದನ್ನು ಪೂರೈಸಲು ಸಿದ್ಧವಾಗಿದ್ದೇವೆ ಎಂದು ಭಾರತೀಯ ಗಣಿಗಳ ಮೂಲಕರ ಸಂಘದ ಅಧ್ಯಕ್ಷರು ಜಪಾನಿಗೆ ತಿಳಿಸಿದ್ದಾರೆ. ಇವನ್ನು ಮನ್ನಿಸಿ, ಜಪಾನು ಗೋವೆಯೊಡನೆ ವ್ಯಾಪಾರ ಮಾಡುವುದನ್ನು ಬಿಟ್ಟುಗೊಟ್ಟರೆ, ಗೋವೆಯ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಕುಸಿದು ಬೀಳುವುದು ನಿಶ್ಚಿತ.

ಇನ್ನೂ ಹೆಚ್ಚಿನ ಕ್ರಮ

ಕಟಕಿನ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ ನೆಹರುಗಳು ಗೋವೆಯ ವಿಮೋಚನೆಗಾಗಿ ತಕ್ಕಕಾಲದಲ್ಲಿ ಸೂಕ್ತಕ್ರಮಗಳನ್ನು ಸರಕಾರ ಕೈಗೊಳ್ಳುವುದೆಂಬ ವಿಷಯದಲ್ಲಿ ಯಾರಿಗೂ ಸಂಶಯ ಬೇಡ ಎಂದು ಮನದಟ್ಟಾಗಿಸಿದರು. ಭಾರತ ಸರಕಾರವು ಕೈಕೊಂಡಿರುವ ಆರ್ಥಿಕ ದಿಗ್ಬಂಧನದ ಕ್ರಮಗಳು ಉತ್ತಮ ಪರಿಣಾಮಗಳನ್ನು ಮಾಡುತ್ತಿವೆ; ಇನ್ನೂ ಹೊಸ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಹೋಗುತ್ತೇವೆ ಎಂದು ನೆಹರು ತಿಳಿಸಿದರು. ಗೋವೆಯ ಗವರ್ನರ ಜನರಲರು ಹಣಕಾಸಿನ ಅಭಾವದಿಂದ ತೀರ ಕೆಂಗೆಟ್ಟು—"ಸೈನಿಕರನ್ನು ಹಿಂದಕ್ಕೆ ಕರೆಸಿಕೊಂಡು, ಅವರಿಗಾಗಿ ಪ್ರತಿದಿನ ಬೆಚ್ಚುವಾಗುವ ಒಂದೊಂದು ಲಕ್ಷ ರೂಪಾಯಿಗಳನ್ನು ಉಳಿಸಿಕೊಳ್ಳಬೇಕು; ಇಲ್ಲದಿದ್ದರೆ ಕಠಿಣ ಪರಿಸ್ಥಿತಿಯನ್ನು ಎದುರಿಸುವುದು ತಪ್ಪದು" ಎಂಬುದಾಗಿ ಅವರು ಲಿಸ್ಬನಿನ ಸರಕಾರಕ್ಕೆ ತಿಳಿಸಿರುವರೆಂದು ಕೇಳುತ್ತೇವೆ.

ಜನತೆಯ ಆವಗಾಹನೆಗೆ

ಫಜಲ ಅಲಿ ಆಯೋಗದ ವರದಿಯನ್ನು ಶಾಂತ ರೀತಿಯಿಂದ ಸ್ವಾಗತಿಸಲು ಜನರು ತಕ್ಕ ಮನೋಭಾವವನ್ನು ರೂಪಿಸಿ

(೨೯ನೇ ಪುಟ ನೋಡಿರಿ)

ಬಹುಮಾನದ ಒಗಟುಗಳು

ನಿಯಂತ್ರಣಕ್ಕೆ ಒಪ್ಪಿಗೆ

ಲೋಕ ಸಭೆಯು ಇದೇ ಸೋಮವಾರ (ದಿನಾಂಕ ೨೬) ಬಹುಮಾನದ ಒಗಟುಗಳನ್ನು ನಿಯಂತ್ರಿಸುವ ಮಸೂದೆಗೆ ಸರ್ವಾನುಮತದ ಬೆಂಬಲವನ್ನು ವ್ಯಕ್ತಪಡಿಸಿತು. ಗೃಹಮಂತ್ರಿ ಪಂಡಿತ ಪಂತರು ಮಸೂದೆಯ ಕುರಿತು ಮಾತನಾಡುತ್ತಾ ಚಕ್ರಬಂಧ ಸ್ಪರ್ಧೆಗಳ ನಡೆಸುವಿಕೆಯನ್ನು "ಸಂಘಟಿತ ವಂಚನೆ" ಎಂದು ಕರೆದರು. ವಿದ್ಯಾರ್ಥಿ ಮತ್ತು ಆಲಿಬುರುಕ ಮಧ್ಯಮ ವರ್ಗಗಳು ಈ ಒಗಟುಗಳ ಬಲೆಗೆ ಬೀಳುತ್ತವೆ; ಇದು ಸಮಾಜಕ್ಕೆ ಘಾತಕವಾದ ವಿಷಯ ಎಂದವರು ಸಾರಿದರು.

ಮಸೂದೆಗೆ ಕೆಲವು ಪ್ರಾಮುಖ್ಯ ತಿದ್ದುಪಡಿಗಳನ್ನು ಮಾಡಲಾಯಿತು. ಇದರಿಂದ ನಿಯಂತ್ರಣ ಕ್ರಮವು ಇನ್ನಷ್ಟು ಉಗ್ರವಾಗಿ ಪರಿಣಮಿಸಿರುತ್ತದೆ. ಮೂಲ ಮಸೂದೆಯು ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣವನ್ನು ಯಾವ ಚಕ್ರಬಂಧ ಸ್ಪರ್ಧೆಯಲ್ಲೂ ಕೊಡಲಾಗದೆಂದಿದ್ದರೆ, ಈಗ ಈ ಮಿತಿಯನ್ನು ಉಳಿಸಿಕೊಳ್ಳುವುದಲ್ಲದೆ, ಪ್ರವೇಶ ಪತ್ರಗಳ ಸಂಖ್ಯೆಯು ಎರಡು ಸಾವಿರವನ್ನು ಮೀರಲಾಗದೆಂದೂ ನಿಯಮ ಮಾಡಲಾಗಿದೆ; ಭಾರತದ ಹೊಂಗೆ ವ್ಯವಹಾರಗಳನ್ನು ನಡೆಸಿ, ವಿಧೇಯಕದ ಉದ್ದೇಶವನ್ನು ವಿಫಲಗೊಳಿಸದಂತೆಯೂ ತಡೆ ಹಾಕಲ್ಪಟ್ಟಿರುತ್ತದೆ.

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. No. 89/1955.

ಸಂಜೀವಿ ಶೆಟ್ಟಿ ಕೂಡಾ — ವಾದಿರು.

ಮತ್ತು

ಲಚ್ಚಮ್ಮ ಶೆಟ್ಟಿ ಕೂಡಾ — ಪ್ರತಿವಾದಿರು.

ಕಾರ್ಕಳ ತಾಲ್ಲೂ ಕುಚ್ಚೂರು ಗ್ರಾಮದ ಕಾಣಿಬೆಟ್ಟು ಜಡ್ಡಿನಲ್ಲಿರುವ ಲಚ್ಚಮ್ಮ ಶೆಟ್ಟಿ ಮಗ 3ನೇ ಪ್ರತಿವಾದಿ— ನಾರಾಯಣ ಶೆಟ್ಟಿ, ಮತ್ತು ಕುಂದಾಪುರ ತಾಲ್ಲೂ ಅಲ್ಬಾಡಿ ಗ್ರಾಮದ ಕೆಜಾಡಿ ದೊಡ್ಡ ಮನೆಯಲ್ಲಿರುವ ನಾಗಮ್ಮ, ಹೆಗ್ಗಡ್ತಿ ಮಕ್ಕಳು 11ನೇ ಮತ್ತು 12ನೇ ಪ್ರತಿವಾದಿರು— ಬಾಲಕೃಷ್ಣ ಹೆಗ್ಡೆ ಮತ್ತು ಮಹಾಬಲ ಹೆಗ್ಡೆ ಇವರೇಗೆ.

ಮೇಲಿನ ದಾವೆಯಲ್ಲಿ ವಾದಿಯರು ಮತ್ತು ಪ್ರತಿವಾದಿಯರ ಕುಟುಂಬದ ಬಾಬ್ತು ಯಾವತ್ತೂ ಸೊತ್ತುಗಳನ್ನು ಮದ್ರಾಸು ಆಳಿಯ ಸಂತಾನ ಆಕ್ಟು ಪ್ರಕಾರ ಹಿಸಿ ಸಿಗಬೇಕೆಂದು ವಗೈರೆ ನಿವೃತ್ತಿ ಕೇಳಿ ವಾದಿಯರು ದಾಕ್ಲು ಮಾಡಿದ ದಾವೆಯು ತಪ್ಪಿಗೆ ತಾರೀಕು 10—10—1955ಕ್ಕೆ ಮೇಲಿನ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿನದ ಮೇಲಿನ ಕೋರ್ಟು ಮುಂದೆ ಹಗಲು ಘಂಟೆ 11ಕ್ಕೆ ನಿಮಿ ಮುದ್ದಾಗಲೀ ಯಾ ವಕೀಲರ ಮುಖಾಂತರವಾಗಲೀ ಹಾಜರಾಗಿ ಜ್ಞಾಪಿಸಿ ಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

(Sd.) B. M. Hegde,
Advocate for Plaintiffs.

ಮಂಗಳೂರು 26-9-1955.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೯-೯-೧೯೫೫	೫

ಸಾಗುವಳಿದಾರರಿಗೆ ಸಾಲ

ಹಳ್ಳಿಯ ಕೇಂದ್ರಗಳಲ್ಲಿ ತೆರೆಯಬೇಕೆಂದಿದ್ದ ೨೫ ಗ್ರಾಮೀಣ ಬೇಂಕುಗಳಲ್ಲಿ ಇದೇ ಜುಲಾಯಿಯ ಸುಮಾರಿಗೆ ೧೫ ಬೇಂಕುಗಳು ಕೆಲಸವನ್ನು ಪ್ರಾರಂಭಿಸಿವೆಯಾಗಿ ಮದ್ರಾಸಿನ ಆರೋಗ್ಯ ಹಾಗು ಸಹಕಾರ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟಿಯವರು ಪ್ರಶ್ನೆಯೊಂದಕ್ಕೆ ಶಾಸನಸಾಂಗದ ಕೆಳಮನೆಯಲ್ಲಿ ಉತ್ತರಿಸುತ್ತಾ ತಿಳಿಸಿದ್ದಾರೆ. ಉಳಿದ ಬೇಂಕುಗಳೂ ಇಷ್ಟರಲ್ಲಿಯೇ ಕೆಲಸವನ್ನು ತೊಡಗಿರಬಹುದೆಂದು ಅವರು ಅರಿಸಿದ್ದಾರೆ. ರೈತ ವರ್ಗಕ್ಕೆ ಅತ್ಯಾವಶ್ಯಕ ವೆನಿಸಿದಹಣವನ್ನು ಸಾಲ ರೂಪದಲ್ಲಿ ಒದಗಿಸಿ ಕೊಡುವುದು ಈ ಬೇಂಕುಗಳ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ; ಆದರೆ ಇತರ ಸಹಕಾರಿ ಬೇಂಕುಗಳಿಗಿಂತ ಭಿನ್ನವಾದ ಇನ್ನೊಂದು ಪ್ರಾಮುಖ್ಯ ಉದ್ದೇಶಕ್ಕಾಗಿಯೂ ಇವು ಶ್ರಮವಹಿಸುತ್ತವೆ: ಅದೆಂದರೆ ಹಳ್ಳಿಗರ ಉಳಿತಾಯದ ಸಂಗ್ರಹ ಕೇವಲ ಸಾಲವನ್ನಷ್ಟೆ ಪೂರೈಸಿದರೆ ಸಾಲದು; ಗ್ರಾಮಾಂತರ ಪ್ರದೇಶಗಳವರಿಗೆ ತಮ್ಮ ಕೈಯಲ್ಲಿರಬಹುದಾದ ಹಣವನ್ನು ನಿಕ್ಷೇಪಿಸುವ ಅವಕಾಶಗಳನ್ನು ನೀಡಬೇಕು; ಹಾಗೆ ಉಳಿತಾಯಕ್ಕೆ ಪ್ರೋತ್ಸಾಹವನ್ನು ನೀಡಿ ಭಂಡವಾಳ ನಿರ್ಮಾಣ ಕಾರ್ಯಕ್ಕೆ ನೆರವಾಗಬೇಕು—ಎಂಬ ಧ್ಯೇಯದಿಂದ ಪ್ರಾರಂಭವಾದ ಗ್ರಾಮೀಣ ಬೇಂಕುಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿವೆ ಎಂದು ತಿಳಿಯಲು ಎರಡು-ಮೂರು ತಿಂಗಳ ಕಾರ್ಯಾವಧಿ ಬಹಳ ಕಡಿಮೆಯಾಯಿತು. ಆದರೆ ಇಷ್ಟು ಮಾತ್ರ ಹೇಳಬಹುದು—ಉಳಿತಾಯದ ಹಣವನ್ನು ಸಂಗ್ರಹಿಸುವ ಉದ್ದೇಶ ಸಫಲವಾಗದಿದ್ದರೂ ಸಾಲವಾಗಿ ಹಣವನ್ನೊದಗಿಸುವ ಕೆಲಸವಷ್ಟೇ ಚೆನ್ನಾಗಿ ನಡೆದರೆ ಸಾಕು—ಇಂಥ ಬೇಂಕುಗಳ ಉಪಯುಕ್ತತೆ ಕಡೆಗಣಿಸಲಾರದಾಗುತ್ತದೆ. ನಮ್ಮ ರಾಜ್ಯದಲ್ಲಿ ಸಹಕಾರ ಸಂಘಗಳ ಮೂಲಕ ಈಗ ಪ್ರಯೋಜನ ಪಡೆಯುತ್ತಿರುವ ರೈತ ವರ್ಗದ ಪ್ರಮಾಣ ಬಹಳ ಕಡಿಮೆಯಾಗಿದೆ. ಮಾನ್ಯ ಮಂತ್ರಿಗಳೇ ಬೇರೊಂದು ಸಂದರ್ಭದಲ್ಲಿ ತಿಳಿಯಪಡಿಸಿರುವಂತೆ, ರಾಜ್ಯದಲ್ಲಿ ಕೃಷಿಕರಿಗೆ ಸಾಲವಿತ್ತು ನೆರವಾಗುವ ೧೦೦೯೫ ಸಹಕಾರ ಸಂಘಗಳಿದ್ದಾಗ್ಯೂ ಅವುಗಳ ಸದಸ್ಯರ ಬಲ ಹತ್ತು ಲಕ್ಷದಷ್ಟೂ ಇಲ್ಲ. ಸುಮಾರು ಪ್ರತಿ ಎರಡು ಗ್ರಾಮಕ್ಕೊಂದರಂತೆ ಈ ಸಂಘಗಳಿರುವುವಾದರೂ ಐದರಲ್ಲಿ ಒಂದು ಕುಟುಂಬಕ್ಕೆ ಮಾತ್ರ ಇವುಗಳಿಂದ ಪ್ರಯೋಜನ ಸಿಗುತ್ತದೆ. ಈ ಸಂಘಗಳು ಸಹ ಚೆನ್ನಾಗಿ ಕೆಲಸವನ್ನು ನಡೆಸುತ್ತಿಲ್ಲ—ಅವುಗಳ ದೈನಂದಿನ ವ್ಯವಹಾರ ಕ್ರಮದಲ್ಲಿ ಮೊದಲಿನಿಂದ ಕೊನೆಯ ವರೆಗೆ ಸುಧಾರಣೆಯನ್ನು ಸಾಧಿಸಬೇಕಾಗಿದೆ ಎಂಬ ಅಂಶವನ್ನು ಕಡೆಗಣಿಸಲಾಗದು. ಅದರಂತೆ ಸಹಕಾರ ಸಂಘಗಳು ರೈತರಿಗೆ ಈಗ ಪೂರೈಸುತ್ತಿರುವ ಸಾಲದ ನೊತ್ತಪು ಆವಶ್ಯಕತೆಗಿಂತ ಬಹಳ ಕಡಿಮೆಯಾಗಿದೆ ಎಂಬ ಸಂಗತಿಯನ್ನೂ ಗಮನಿಸದೆ ಇರಬಾರದು. ನಮ್ಮ ರಾಜ್ಯದಲ್ಲಿ ೭೦ ಕೋಟಿ ರೂಪಾಯಿಗಳನ್ನು ಸಾಲ ರೂಪದಲ್ಲಿ ರೈತರು ಪ್ರತಿ ವರ್ಷ ಅಪೇಕ್ಷಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಇದರಲ್ಲಿ ಸಹಕಾರ ಸಂಘಗಳಿಂದ ಸಿಗುವ ಹಣ ೫ ಕೋಟಿ ರೂಪಾಯಿ (ಅಂದರೆ ಸುಮಾರು ೭%) ಮಾತ್ರ—ಪರಿಸ್ಥಿತಿ ಹೀಗಿರುವಾಗ, ರೈತರಿಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸುವುದು ತೀರ ಅಗತ್ಯವಾಗಿದೆ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಸರಕಾರದವರು ಇದನ್ನು ಸುಧಾರಿಸಲು ತಕ್ಕ ಕಾರ್ಯಕ್ರಮಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಬೇಕಾಗಿದೆ. ಭೂಉಧಾರಣೆಯ ಶಾಸನ ಕ್ರಮಗಳನ್ನು ಜ್ಯಾರಿಗೆ ತರುತ್ತಿರುವುದರಿಂದ ಮತ್ತು ಸಮಾಜವಾದಿ ಮಾದರಿಯ ಸಮಾಜದ ರಚನೆಯೇ ಸರಕಾರದ ಧ್ಯೇಯವಾಗಿರುವುದರಿಂದ ಈಗ ಭೂಮಾಲಿಕರ ಮತ್ತು ಶ್ರೀಮಂತರ ಮೂಲಕ ರೈತರಿಗೆ ಸಿಗುತ್ತಿರುವ ಸಹಾಯವು ಇನ್ನು ಮುಂದೆ ದೊರಕುವುದು ಸಂಶಯ; ರೈತರ ಸಾಲಗಳಿಗೆ ಸಂರಕ್ಷಣೆಯೊದಗಿಸುವುದೇ ಮುಂತಾದ ಕ್ರಮಗಳನ್ನು ಸರಕಾರ ಕೈಗೊಂಡಿರುವುದನ್ನು ಕಂಡ ಬಳಿಕ ಹಳ್ಳಿಯಲ್ಲಿ ಸಾಲವು ಸುಲಭದಲ್ಲಿ ಸಿಗಲಾರದಾಗಿದೆ ಎಂಬುದೇನು ಅತಿಶಯೋಕ್ತಿಯಲ್ಲ. ಆದುದರಿಂದ ಸರಕಾರದವರೇ ರೈತರ ಕಷ್ಟಗಳನ್ನು ನಿವಾರಿಸುವ ಹೊಣೆಯನ್ನು ಹೊರಬೇಕಾಗಿದೆ: ಇದನ್ನು ಸರಕಾರ ಮರೆತಿಲ್ಲವೆಂದು ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ದ್ವಿತೀಯ ಯೋಜನೆಯ ಕಾಲದಲ್ಲಿ ಮದ್ರಾಸಿನಲ್ಲಿ ೧೫ ಕೋಟಿ ರೂಪಾಯಿಗಳನ್ನಾದರೂ ಪ್ರತಿ ವರ್ಷ ರೈತರಿಗೆ ಸಾಲ ರೂಪದಲ್ಲಿ ಕೊಡಲಾಗುವಂತೆ ಸಹಕಾರ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದೆಂದು ಹೇಳಲಾಗಿದೆ. ಇದಕ್ಕಾಗಿ ತಯಾರಿಸಲಾಗಿರುವ ಯೋಜನೆಯಂತೆ ಪ್ರತಿ ಎರಡರಲ್ಲಿ ಒಂದು ಕುಟುಂಬಕ್ಕೆ ಇದರ ಪ್ರಯೋಜನ ಸಿಗುವುದು; ಸಾಲದ ಒಟ್ಟು ಆವಶ್ಯಕತೆಯ ೨೦% ಪೂರೈಸಲ್ಪಡುವುದು ಎನ್ನಬೇಕಾಗಿದೆ. ಸರಕಾರದವರು ಬಡ್ಡಿಯ ದರವನ್ನು ಇಳಿಸಲು ಆತುರರಾಗಿರುವರೆಂದೂ ಹೇಳಲಾಗುತ್ತದೆ. ಈಗಿನ ೬೧½% ದರದಷ್ಟು ಕಡಿಮೆ ಬಡ್ಡಿಯಲ್ಲಿ ಬೇರೆ ಕಡೆಗಳಲ್ಲಿ ಸಾಲ ಸಿಗುವುದಿಲ್ಲವೆಂಬುದರಿಂದ ಸಹಕಾರ ಸಂಘಗಳು ನೀಡುವ ಸೇವೆ ಅಮೋಘವಾದುದೇ ನಿಜ. ಹಾಗಿದ್ದರೂ ಬಡ್ಡಿಯನ್ನು ಇದಕ್ಕಿಂತಲೂ ಕಡಿಮೆ ಮಾಡಲಾಗದೆ—ಎಂದು ವಿಚಾರಿಸುವುದರಲ್ಲಿ ಕೆಡುಕಿಲ್ಲ; ಕಡಿಮೆ ಮಾಡುವಂತಿದ್ದರೆ ಪ್ರಯೋಜನವೇ ಹೆಚ್ಚು. ಸಹಕಾರ ಸಂಘಗಳ ಕೆಲಸದಲ್ಲಿ ಬಾಧೆಯನ್ನೊಡ್ಡುವ ಒಂದು ಮುಖ್ಯ ಸಂಗತಿಯೆಂದರೆ— ತಾವು ಆಪತ್ಕಾಲದಲ್ಲಿ ಸಹಾಯವನ್ನು ಪಡೆದರೂ ಸಂಪನ್ನ ಸ್ಥಿತಿಯನ್ನು ಮುಟ್ಟಿದಾಗ, ಕೊಟ್ಟ ಮಾತಿನಂತೆ, ಸಾಲವನ್ನು ಸಂದಾಯಿಸಲು ಎಷ್ಟೋ ರೈತರು ಮನಸ್ಸು ಮಾಡುವುದಿಲ್ಲ. ಸುಲಭ ಕಂತುಗಳಲ್ಲಿ ಪಾವತಿ ಮಾಡುವ ಅನುಕೂಲತೆ ಇದ್ದೂ ಬಾಕಿಯಾಗಿರುವ ಸಾಲದ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಪ್ರತಿ ಎಂಟರಲ್ಲಿ ಒಬ್ಬರು ಸಾಲವನ್ನು ಪಾವತಿ ಮಾಡದೆ ತೊಂದರೆ ಕೊಡುತ್ತಾರೆಂದು ತಿಳಿದಿದೆ. ಉಳಿದವರಲ್ಲಿ ಸಹ ತಗಾವೆ ಬಾರದ ಹೊರತು ಕರಾರಿನಂತೆ ತಾವಾಗಿಯೇ ಸಾಲ ಸಂದಾಯ ಮಾಡಲು ಹೋಗುವವರು ಸಿರಳ. ಇದು ನಮ್ಮ ರೈತರ ನಡತೆಗೆ ಭೂಷಣವಾದ ವಿಷಯವಲ್ಲ—ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮಗಳನ್ನು ಪೋಷಿಸುವ ದಾಖಲೆಯೂ ಅಲ್ಲ. ಈ ಮಟ್ಟಿಗೆ ರೈತರ ಹೊಣೆಗಾರಿಕೆಯೇ ಹೆಚ್ಚು. ಅವರು ಸಾಲ ಪೂರೈಕೆಯ ಕಾರ್ಯಕ್ರಮದ ಯಶಸ್ಸನ್ನು ಬಯಸುವವರಾದರೆ, ಹೀಗೆ ಕೆರುಕುಳಿ ಕೊಡುವುದನ್ನು ಬಿಟ್ಟು ಬಿಡುವುದು ಲೇಸು. ಈ ಸೂಚನೆ ನಮ್ಮ ರೈತ ವರ್ಗದ ಹೃದಯವನ್ನು ಮುಟ್ಟುವುದೆಂದು ನಂಬುತ್ತೇನೆ.

ವಿಶ್ವದ ಸಮಸ್ಯೆಗಳ ಇತ್ಯರ್ಥ

ನೆಹರುಗಳ ಸೂಚನೆಗೆ ಮೊಲೊಟೋಫರ ಬೆಂಬಲ

ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನವು ಜಿನೇವದ ಸಮಾಲೋಚನೆಯ ಶಾಂತ ವಾತಾವರಣವನ್ನು ಕಾಯ್ದುಕೊಳ್ಳುವಂತೆ ಬಹಳ ಪ್ರಯತ್ನಪಡಲಾಗುತ್ತಿದೆ ಎಂದು ತಿಳಿದು ಬರುತ್ತದೆ. ಬ್ರಿಟನು ಮತ್ತು ಫ್ರಾನ್ಸುಗಳು ಅಮೇರಿಕ-ರಶಿಯಗಳ ಸಂಬಂಧದಲ್ಲಿ ಜಿನೇವದ ವಾತಾವರಣ ಸಾಧಿಸಿಕೊಟ್ಟ ಹದವು ಕೆಡದಂತೆ ವಿಶೇಷ ಜಾಗರೂಕತೆ ವಹಿಸಿವೆ ಎನ್ನಲಾಗುತ್ತದೆ.

ಶಾಂತ ಭಾಷಣ

ಅಧಿವೇಶನದಲ್ಲಿ ಡಲ್ಲೇಸರ ಭಾಷಣವು ಜಿನೇವದ ವಾತಾವರಣಕ್ಕೆ ಉಪಯುಕ್ತತೆಯನ್ನು ಮನಗಾಣಿಸಿ ಕೊಡುವಹಾಗಿತ್ತೆಂದು ಹೇಳಬಹುದು. ಆದರೆ ಹೆಚ್ಚಿನ ಪ್ರತಿನಿಧಿಗಳನ್ನು ಆಕರ್ಷಿಸಿದ ಮತ್ತು ಸಮಾಧಾನಗೊಳಿಸಿದ ವಿಷಯವೆಂದರೆ ರಶಿಯದ ವಿದೇಶ ಮಂತ್ರಿ ಮೊಲೊಟೋಫರ ಭಾಷಣ. ಅದು ತುಂಬ ಸೌಹಾರ್ದಪೂರ್ಣವಾಗಿತ್ತೆಂದು ಪ್ರೇಕ್ಷಕರಂತೆ ಸದಸ್ಯರೂ ಒಪ್ಪಿದರು. ರಶಿಯದ ಯಾವುದೇ ಧುರೀಣನು ಮಾಡಿರಬಹುದಾದ ಭಾಷಣಗಳಲ್ಲಿಯೇ ಇದು ಸೌಮ್ಯವಾದುದೆಂದು ಹೇಳಲಾಗುತ್ತದೆ.

ನೆಹರುಗಳಿಗೆ ಬೆಂಬಲ

ಮೊಲೊಟೋಫರು ತಮ್ಮ ಭಾಷಣದಲ್ಲಿ ಭಾರತ ಸರಕಾರದ ಧುರೀಣರಾಗಿ ಶ್ರೀ. ಜವಾಹರಲಾಲ ನೆಹರುಗಳು ಶಾಂತಿ ಸಾಧನೆಗೆ ಪ್ರಯತ್ನಿಸುತ್ತಿರುವುದರ ಉಲ್ಲೇಖವನ್ನು ನಾಲ್ಕು ಬಾರಿ ಮಾಡಿ, ಮುಕ್ತಕಂಠದಿಂದ ಅದನ್ನು ಪ್ರಶಂಸಿಸಿದರು. ವಿಶ್ವದ ದ್ವಿತೀಯ ಮಹಾರಾಷ್ಟ್ರವಾದ ಭಾರತದ ಸುಹೃಜನರು ಸ್ವಾತಂತ್ರ್ಯದ ಹೋರಾಟದಲ್ಲಿ ತೋರಿಸಿದ ಧೀರ ಮನೋಭಾವವನ್ನು ಶಾಂತಿ ರಕ್ಷಣೆಗಾಗಿ ಜಗತ್ತಿನ ಬೇರೆ ಜನಾಂಗಗಳೊಡನೆ ಸಹಕರಿಸಿ ನಡೆಯುವುದರಲ್ಲಿಯೂ ವ್ಯಕ್ತಪಡಿಸಿರುವುದನ್ನು ವಿಶೇಷವಾಗಿ ಅವರು ಪ್ರಸ್ತಾಪಿಸಿದರು.

ವಿಶ್ವದ ಸಮಸ್ಯೆ

ಬಾಂಡುಂಗಿನ ಪರಿಸತ್ತು ಅತ್ಯಂತ ಫಲಪ್ರದವಾದ, ಆಫ್ರಿಕ ಮತ್ತು ಏಶ್ಯ ಖಂಡಗಳ ಜನತೆಯ ಆಶೋತ್ತರಗಳನ್ನು ಬಿಂಬಿಸುವ ಐತಿಹಾಸಿಕ ಮಹತ್ವದ ಘಟನೆ ಎಂದು ಮೊಲೊಟೋಫರು ಸಾರಿದರು. ವಿಶ್ವದ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಜಿನೇವದ ಮಾದರಿಯ ಉಚ್ಚಮಟ್ಟದ ಸಭೆಯನ್ನು ನೆರೆಯಿಸಬೇಕೆಂದು ಪ್ರಧಾನಿ ನೆಹರುಗಳು ಮಾಡಿದ್ದ ಸೂಚನೆಯನ್ನು ಮೊಲೊಟೋಫರು ಎತ್ತಿ ಹೇಳಿ, ಅದನ್ನು ಬಲವಾಗಿ ಸಮರ್ಥಿಸಿದರು.

ವರ್ಣ ಭೇದ

ಅಧಿವೇಶನದಲ್ಲಿ ಯಾವ ಪ್ರಾಮುಖ್ಯ ವಿಷಯಗಳ ಚರ್ಚೆ ನಡೆಯಬೇಕೆಂಬುದರಿತು ಮಾರ್ಗದರ್ಶಕ ಸಮಿತಿ ವಿಚಾರಿಸಿತು. ದಕ್ಷಿಣ ಆಫ್ರಿಕದ ವರ್ಣಭೇದ ಘೋರಣೆಯನ್ನು ಚರ್ಚಿಸುವುದಕ್ಕೆ ಆ ದೇಶದ ಪ್ರತಿನಿಧಿಗಳು ತಮ್ಮ ವಿರೋಧವನ್ನು ಪುನಃ ವ್ಯಕ್ತಪಡಿಸಿದರು. ಆದರೆ ಭಾರತದ ಪ್ರತಿನಿಧಿಗಳು ಹಿಂದಿನ ನಿರ್ಣಯಗಳಿಗನುಸಾರವಾಗಿ ರಾಷ್ಟ್ರ ಸಂಘವು ಈ ವಿಷಯವನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಮಂಡಿಸಲೇ ಬೇಕೆಂದು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿ ಜಯಶೀಲರಾದರು.

ವಸಾಹತು ವಾದ

ಅಲ್ಜೀರಿಯದ ಜ್ವಲಂತ ಸಮಸ್ಯೆಯನ್ನು ಚರ್ಚಿಸಬೇಕೆಂದು ಆಫ್ರಿಕ ಮತ್ತು ಏಶಿಯದ ರಾಷ್ಟ್ರಗಳು ಒತ್ತಾಯಿಸಿದವು. ಆದರೆ ಇದಕ್ಕೆ ಪಾಶ್ಚಾತ್ಯ ದೇಶಗಳು ಒಪ್ಪದುದರಿಂದ, ಸೂಚನೆ ಬಿದ್ದು ಹೋಯಿತು. ಸೈಪ್ರಸಿನ ಸಮಸ್ಯೆಯನ್ನು ಚರ್ಚಿಸಲ್ಪಡಲಾಗದೆಂದು ನಿರ್ಣಯವಾಯಿತು. ಭಾರತದ ಪ್ರತಿನಿಧಿಗಳು ವಸಾಹತು ವಾದದ ಉಚ್ಚಾಟನೆಗೋಸ್ಕರ ಪ್ರಯತ್ನಿಸಬೇಕೆಂದು ಇವೆರಡೂ ಪ್ರಶ್ನೆಗಳ ವಿಷಯದಲ್ಲಿ ಸಾರಿ ಹೇಳಿ, ಬೆಂಬಲ ನೀಡಿದರು. ಆದರೆ ಅಮೇರಿಕದ ಪ್ರತಿನಿಧಿಗಳು ಇದಕ್ಕೆ ವಿರುದ್ಧವಾದ ನಿಲುಮೆಯನ್ನು ವಹಿಸಿದರು

ಅಸಹಕಾರ ಚಳವಳಿ

ಸೈಪ್ರಸಿನಲ್ಲಿರುವ ಗ್ರೀಕರು ಬ್ರಿಟನ್ನೊಡನೆ ಅಸಹಕಾರವನ್ನು ಹೂಡುವರೆಂದು ತಿಳಿದಿದೆ. ರಾಷ್ಟ್ರ ಸಂಘೀಯ ಪ್ರಶ್ನೆಯಲ್ಲಿ ಆಸಕ್ತಿಯನ್ನು ತೋರಿಸದಿದ್ದರೆ, ಗ್ರೀಕರಿಗೆ ಹಿಂಸೆಯೊಂದೇ ದಾರಿಎಂದು ಅಧಿವೇಶನದಲ್ಲಿ ಎಚ್ಚರ ಕೊಟ್ಟಿದ್ದು ನಿಷ್ಫಲವಾದುದರಿಂದ, ತಮ್ಮ ಉದ್ದೇಶ ಸಾಧನೆಗೆ ನೇರಾಗಿ ಬ್ರಿಟನಿನ ಆಡಳಿತದೊಡನೆ ಹೋರಾಡುವುದೇ ಯೋಗ್ಯವೆಂದು ಗ್ರೀಕರು ನಿರ್ಧರಿಸಿರುವಂತೆ ತೋರುತ್ತದೆ.

ಸ್ವತಂತ್ರ ರಾಷ್ಟ್ರ

ಸುಮಾರು ೯೨ ವರ್ಷಗಳ ವರೆಗೆ ಫ್ರಾನ್ಸಿನ ಸಂರಕ್ಷಣೆಯಲ್ಲಿದ್ದ ಇಂಡೋಚೀನ

ದ ಕಂಬೋಡಿಯವು ಈಗ ಸ್ವತಂತ್ರರಾಷ್ಟ್ರವೆಂದು ಘೋಷಿಸಲು ಸಿದ್ಧವಾಗಿದೆ. ಇನ್ನುಮುಂದೆ ಫ್ರಾನ್ಸಿನೊಡನೆ ಕೇವಲ ವ್ಯಾಪಾರ ಮತ್ತು ಆರ್ಥಿಕ ಸಂಬಂಧವನ್ನಷ್ಟೆ ಅದು ಇಟ್ಟು ಕೊಳ್ಳುತ್ತದೆ. ಜಿನೇವದ ಒಡಂಬಡಿಕೆಯಂತೆ ಈಚೆಗೆ ನಡೆದ ಚುನಾವಣೆಯಲ್ಲಿ ಪ್ರತಿನಿಧಿ ಸಭೆಯ ಎಲ್ಲ ಸ್ಥಾನಗಳನ್ನೂ ಪಡೆದ ರಾಜಕುಮಾರ ಸಿಹನೌಕರು ರಾಜ್ಯಭಟನೆಯಲ್ಲಿ ಅಗತ್ಯವುಳ್ಳ ತಿದ್ದುಪಡಿಯನ್ನು ಇದೇ ೫ನೇ ದಿನಾಂಕ ಮಾಡಿಕೊಂಡರು.

ಪೂರ್ವ ಜರ್ಮನಿ

ಬೈಡೆನೂರರ ಮೊಸ್ಕೋ ಯಾತ್ರೆಯು ಬೆನ್ನಿಗೆ ಪೂರ್ವ ಜರ್ಮನಿಯ ಪ್ರಧಾನಿಗಳು ಮೊಸ್ಕೋಗೆ ಹೋಗಿದ್ದರು. ಅಲ್ಲಿ ರಶಿಯದ ಧುರೀಣರೊಡನೆ ನಾಲ್ಕುದಿನ ಮಾತನಾಡಿದ ಬಳಿಕ, ಪಶ್ಚಿಮ ಜರ್ಮನಿಗೆ ಪಾಶ್ಚಾತ್ಯ ರಾಷ್ಟ್ರಗಳು ಸಾರ್ವಭೌಮಾಧಿಕಾರವನ್ನು ಕೊಟ್ಟಂತೆ, ಪೂರ್ವ ಜರ್ಮನಿಗೂ ಪರಮಾಧಿಕಾರವನ್ನು ರಶಿಯವು ಕೊಡುವಂತೆ ಮಾಡಲು ಸಮರ್ಥರಾದರು. ಪಶ್ಚಿಮ ಜರ್ಮನಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಸೈನ್ಯಗಳಿರುವಷ್ಟು ಕಾಲ ಪೂರ್ವ ಜರ್ಮನಿಯಲ್ಲಿ ರಶಿಯದ ಸೈನ್ಯ ಉಳಿಯುತ್ತದೆ; ಆದರೆ ನಿತ್ಯ ವ್ಯವಹಾರದಲ್ಲಿ ಅದು ಕೈಹಾಕುವುದಿಲ್ಲ.

ಸರ್ವಾಧಿಕಾರಿಯ ಪತನ

ಅರ್ಜೆಂಟೀನದ ಅಧ್ಯಕ್ಷ ಪೆರೋನರು ದಂಗೆ ಎದ್ದ ಸೈನ್ಯಾಧಿಕಾರಿಗಳಿಗೆ ಶರಣಾಗತರಾದರಲ್ಲದೆ, ತಾವು ಪಲಾಯನ ಸೂತ್ರವನ್ನು ಪರಿಸಿ, ಪೆರುಗ್ವೆ ರಾಜ್ಯದ ರಕ್ಷಣೆಯನ್ನು ಪಡೆದಿದ್ದಾರೆ. ಕ್ರಾಂತಿಕಾರರ ಧುರೀಣ ಜನರಲ್ ಎಡ್ವರ್ಡೋ ಲೊನಾರ್ಡಿಯವರು ಹತ್ತು ಮಂದಿಯ ಸರಕಾರವೊಂದನ್ನು ಸ್ಥಾಪಿಸಿದ್ದಾರೆ. ಇವರಿಗೆ ಕಾರ್ಮಿಕ ವರ್ಗದ ವಿರೋಧವನ್ನು ಎದುರಿಸಬೇಕಾಯಿತು. ಈಗ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಕಾರ್ಮಿಕರ ವಿಶ್ವಾಸ ಸಂಪಾದಿಸುವ ವರೆಗೆ ಕಿರುಕಳ ತಪ್ಪದು. ಹೊಸ ಸರಕಾರಕ್ಕೆ ಅನೇಕ ರಾಷ್ಟ್ರಗಳು ಮನ್ನಣೆಯನ್ನು ಕೊಟ್ಟಿರುತ್ತವೆ.

ಮಲಯದ ಆತುರ

ಇತ್ತೀಚೆಯ ಚುನಾವಣೆಯಲ್ಲಿ ಗೆದ್ದು ಬಂದಿರುವ ಮಲಯದ ರಾಷ್ಟ್ರಯರ ಧುರೀಣ ಹಾಗು ಮುಖ್ಯ ಮಂತ್ರಿ ರಹಮಾನರು ರಕ್ತ ಪಾತವಿಲ್ಲದೆ ಸ್ವಾತಂತ್ರ್ಯವನ್ನು ಸ್ಥಾಪಿಸುವುದು ತನ್ನ ಧ್ಯೇಯವೆಂದು ಪುನರುಚ್ಚರಿಸಿದರು. ಮಲಯಕ್ಕೆ ಸ್ವಾತಂತ್ರ್ಯವನ್ನು ಕೊಡುವ ಭರವಸೆಯನ್ನು ಬ್ರಿಟನು ನೀಡಿರುತ್ತದೆ. ಈ ವಿಷಯದಲ್ಲಿ ಮಾತುಕತೆ ನಡೆಸಲು ಮುಂದಿನ ಜನವರಿಯಲ್ಲಿ ತಾನು ಹೋಗಲಿದ್ದೇನೆ ಎಂದವರು ತಿಳಿಸಿದರು

ಬಗ್ದಾದಿನ ಒಪ್ಪಂದ

ಪಾಕಿಸ್ಥಾನವು ಬಗ್ದಾದಿನ ಒಪ್ಪಂದವೆಂದು ಹೆಸರಾದ ಸೈನಿಕ ಸ್ನೇಹಕ್ಕೆ ಮನ್ನಣೆಯ ಕೊನೆಯ ಮುದ್ರೆಯನ್ನು ಕಳೆದವಾರ ಒತ್ತಿತು. ಬ್ರಿಟನು, ತುರ್ಕಿ, ಮತ್ತು ಇರಾಕುಗಳು ಈ ಒಪ್ಪಂದದ ಇತರ ರಾಷ್ಟ್ರಗಳಾಗಿವೆ. ತುರ್ಕಿಯು ಇಸ್ರೇಲಿಗೆನೇರಾಗಿ ಸಹಾಯ ನೀಡುತ್ತಿರುವುದನ್ನು ಕಂಡೂ ಪಾಕಿಸ್ತಾನವು ಅದರೊಡನೆ ಸೈನಿಕ ಒಪ್ಪಂದ ಮಾಡಿಕೊಂಡುದಕ್ಕೆ ಅರಬರಾಷ್ಟ್ರಗಳ ನಿಷೇಧವನ್ನು ವ್ಯಕ್ತಪಡಿಸಲಾಗಿದೆ. ಆದರೆ ಪಾಕಿಸ್ತಾನಕ್ಕೆ ಪಾಶ್ಚಾತ್ಯ ರಾಷ್ಟ್ರಗಳ ಆರ್ಥಿಕವಾದವಿದೆ. ಎಂಬುದು ಸ್ಪಷ್ಟವಾದ ವಿಷಯ.

ಭಾರತ-ರಶಿಯ ಸಂಬಂಧ

ರಶಿಯದ ಪ್ರಧಾನಿ ಬುಲ್ಗೇನಿನ್ನರು ಇದೇ ನವಂಬರದ ಮಧ್ಯದಲ್ಲಿ ಭಾರತಕ್ಕೆ ಬರುವರೆಂದು ಹೇಳಲಾಗುತ್ತದೆ. ಈ ಕುರಿತು ರಶಿಯದ ಅಧ್ಯಕ್ಷರಿಂದ ಬಂದೊಂದು ಪತ್ರದಲ್ಲಿ ಭಾರತದ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರಿಗೆ ರಶಿಯದ ಸಂದರ್ಶನಕ್ಕಾಗಿ ಆಮಂತ್ರಣ ಕೊಡಲಾಗಿದೆ ಎಂದೂ ಅದನ್ನು ಮನ್ನಿಸಿ ಪ್ರಸಾದರು ಬರುವ ಎಸ್ರಿಲಿನಲ್ಲಿ ರಶಿಯಕ್ಕೆ ಭೇಟಿಕೊಡುವರೆಂದೂ ಸುದ್ದಿ.

ನೆಹರುಗಳಿಗೆ ಕರೆ

ಪ್ರಧಾನಿ ನೆಹರುಗಳಿಗೆ ಆಸ್ಟ್ರೇಲಿಯವನ್ನು ಸಂದರ್ಶಿಸ ಬೇಕೆಂದು ಆಮಂತ್ರಣವನ್ನುಕೊಡಲಾಗಿದೆಯೆಂಗಿಆದೇಶದ ಪತ್ರಿಕೆಯೊಂದು ವರದಿಮಾಡಿದೆ. ಆಸ್ಟ್ರೇಲಿಯದ ವಿನಂತಿಯನ್ನು ಮನ್ನಿಸಿದರೆ, ನ್ಯೂಜೀಲೇಂಡಿಗೆ ಸಹ ಬರಬೇಕೆಂದು ನೆಹರುಗಳನ್ನು ತಾನು ಕೇಳಿಕೊಳ್ಳುವುದಾಗಿ ನ್ಯೂಜೀಲೇಂಡಿನ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಲಾವೋಸಿನ ಗೆಳೆತನ

ಲಾವೋಸಿನ ರಾಜಕುಮಾರರು ಪ್ರಧಾನಿ ನೆಹರುಗಳೊಡನೆ ಮಾತುಕತೆ ನಡೆಸಿದ ಕುರಿತು. ಪ್ರಕಟಣೆಯೊಂದು ಹೊರಬಿದ್ದಿದೆ. ಪಂಚಶೀಲಗಳನ್ನು ರಾಜಕುಮಾರರು ಒಪ್ಪಿರುವರೆಂದು ಅದರಲ್ಲಿ ಹೇಳಲಾಗಿದೆ. ಉಭಯ ರಾಷ್ಟ್ರಗಳ ಪ್ರಾಚೀನ ಸಂಬಂಧವನ್ನು ಕಾಯ್ದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸಲಾಗಿದೆ. ರಾಜ ಕುಮಾರರು ತಮ್ಮ ಸರಕಾರಕ್ಕೆ ವಿರುದ್ಧವಿರುವ ಗುಂಪನ್ನು ಸಮಾಧಾನಪಡಿಸಲು ನೆಹರುಗಳ ನೆರವನ್ನು ಕೇಳಿದರು ಎನ್ನಲಾಗುತ್ತದೆ. ಈ ಗುಂಪಿಗೆ ಕೊಮ ಚೀನದ ಬೆಂಬಲವಿದೆಯೆಂದೂ ನೆಹರುಗಳು ಬೇಕಿಂಗಿನ ಸರಕಾರಕ್ಕೆ ವಿನಂತಿಸಿಕೊಂಡರೆ, ಉಪಟಳಗಾರರ ಆರೋಪ ಕಡಿಮೆಯಾದೀತೆಂದೂ ರಾಜಕುಮಾರರ ಅಭಿಪ್ರಾಯ.

ಯುದ್ಧ ಕೈದಿಗಳ ಭವಿಷ್ಯ

ಕೊರಿಯದ ಯುದ್ಧ ಕೈದಿಗಳಲ್ಲಿ ಸುಮಾರು ೪೦ ಮಂದಿ ಭಾರತದಲ್ಲಿಯೇ ಇಷ್ಟರ ವರೆಗೆ ಇದ್ದರು. ಅವರ ಭವಿಷ್ಯವನ್ನು ನಿರ್ಧರಿಸಿ, ಬೇರೆ ಯಾವುದಾದರೂ ದೇಶಕ್ಕೆ ಅವರನ್ನು ಕಳಿಹಿಸಿ, ತನ್ನ ಮೇಲಿನ ಹಣಕಾಸಿನ ಭಾರವನ್ನೂ ಇತರ ಹೊಣೆಯನ್ನೂ ಕಡಿಮೆಮಾಡಬೇಕೆಂದು ಭಾರತ ರಾಷ್ಟ್ರ ಸಂಘವನ್ನು ವಿನಂತಿಸಿದ ಮೇರೆಗೆ, ದಕ್ಷಿಣ ಅಮೇರಿಕದ ಬ್ರೇಜೀಲು ಈ ಕೈದಿಗಳನ್ನು ಬರಮಾಡಿಕೊಳ್ಳಲು ಒಪ್ಪಿರುತ್ತದೆ. ಶಾಂತವಾದ ನಾಗರಿಕ ಜೀವನ ನಡೆಸಲು ಸಿದ್ಧರಿದ್ದರೆ ಕೈದಿಗಳಿಗೆ ಸ್ವಾಗತ ಎಂದಿದೆ ಬ್ರೇಜೀಲಿನ ಸರಕಾರ.

ಸಾಲಕ್ಕೆ ಸಂರಕ್ಷಣೆ

ಆಂಧ್ರ ಸರಕಾರವು ರೈತರ ಸಾಲಕ್ಕೆ ಸಂರಕ್ಷಣೆ ಕೊಡುವ ವಿಚಾರ ಮಾಡುತ್ತಿದೆಯೆಂದು ಮುಖ್ಯ ಮಂತ್ರಿ ಶ್ರೀ ರೆಡ್ಡಿ ಹೇಳಿದರು. ಈಸಂಬಂಧವ ಏರ್ಪಡಿಗೊತ್ತು ವಳಿಯೊಂದರ ಚರ್ಚೆ ನಡೆದಾಗ ಈ ಸಂಗತಿಯನ್ನವರು ವ್ಯಕ್ತಪಡಿಸಿದರು,

ಸ್ವೀಕರರ ಆಯ್ಕೆ

ಮದ್ರಾಸಿನ ಶಾಸನಾಂಗದ ಕೆಳಮನೆಯಲ್ಲಿ ಸ್ವೀಕರರಾಗಿದ್ದ ಶ್ರೀ ಶಿವಷಣ್ಮುಗಂ ಪಿಳ್ಳೆಯವರು ಅಖಿಲ ಭಾರತ

ಮಾಜಿ ಅಧ್ಯಕ್ಷ ಶ್ರೀ ಪಿಳ್ಳೆ.

ಸೇವಾ ಮಂಡಳದ ಸದಸ್ಯರಾಗಿ ನೇಮಕಗೊಂಡುದರಿಂದ ತೆರವಾದ ಸ್ಥಾನಕ್ಕೆ ಇದೇ ೨೭ನೇ ದಿನಾಂಕ ಚುನಾವಣೆ ನಡೆಯಿತು. ಕಾಂಗ್ರೆಸಿನ ಶ್ರೀ ಎನ್ ಗೋವಿಂದ ಮೆನನ್ನರು ಸ್ಪರ್ಧೆಯಲ್ಲಿ ಜಯಶೀಲರಾದರು.

ಶಿವರಾಯರ ವಿನಂತಿ

ಜಿಲ್ಲೆಯ ದಕ್ಷಿಣ ಭಾಗದಿಂದ ಲೋಕ ಸಭೆಗೆ ಆರಿಸಿ ಹೋಗಿರುವ ಶ್ರೀ ಬಿ. ಶಿವರಾಯರು ಸತ್ಯಾಗ್ರಹ ಮತ್ತಿತರ ಉಗ್ರ ಕ್ರಮಗಳನ್ನು ಕೇರಳಕ್ಕೆ ಕಾಸರಗೋಡು ತಾಲೂಕನ್ನು ಸೇರಿಸುವ ಸುದ್ದಿಯ ಕಾರಣ ಜನರು ತೆಗೆದು ಕೊಳ್ಳಲಾಗದೆಂದೂ ಶಾಂತರೀತಿಯಲ್ಲಿ ಸರಕಾರಕ್ಕೆ ತಮ್ಮ ಅಭಿಪ್ರಾಯ ತಿಳಿಸಲು ಪ್ರಯತ್ನಿಸಬೇಕೆಂದೂ ಕೇಳಿಕೊಂಡಿದ್ದಾರೆ.

ಉಕ್ಕಿನ ಉತ್ಪಾದನೆ

ಭಾರತ ಸರಕಾರದ ಮೂರನೇ ಉಕ್ಕಿನ ಕಾರ್ಖಾನೆಯನ್ನು ದುರ್ಗಾಪುರದಲ್ಲಿಯೂ ಸಾಲ್ಕುನೆಯದನ್ನು ಬೊಕಾರೋದಲ್ಲಿಯೂ ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ.

ಪ್ರಾಥಮಿಕ ಶಿಕ್ಷಣ

ಮದ್ರಾಸು ಸರಕಾರ ನೇಮಿಸಿರುವ ಪ್ರಾಥಮಿಕ ಶಿಕ್ಷಣ ಸಮಿತಿಯವರು ಇದೇ ಅಕ್ಟೋಬರ ೨೧ರಂದು ತಮ್ಮ ವರದಿಯನ್ನು ಸರಕಾರಕ್ಕೆ ಒಪ್ಪಿಸಿಕೊಡುವರೆಂದು ತಿಳಿದಿದೆ.

ಹಿಂದೀ ಭಾಷೆ

ಅಖಿಲ ಭಾರತ ಸೇವಾ ಮಂಡಳದ ಪರೀಕ್ಷೆಗಳಲ್ಲಿ ಉಪಯೋಗಿಸುವ ಭಾಷೆಯ ಕುರಿತು ಮಾತನಾಡುತ್ತಾ ಗೃಹಮಂತ್ರಿ ಪಂಡಿತ ಪಂತರು ಹಿಂದಿಯನ್ನು ಬಲಾತ್ಕಾರವಾಗಿ ಹೇರುವುದಿಲ್ಲ ಎಂದು ಪುನರುಚ್ಚರಿಸಿದ್ದಾರೆ. ಮನ್ರಾಸು ಸರಕಾರದ ನಿಲುವೆಯು ಬೇರೆ ಆಯೋಗ ವರದಿ ಒಪ್ಪುವ ವರೆಗೆ ಹಾಗಿನಂತೆಯೇ ಇರಲಿ ಎಂದಿದೆ— ಈ ಕುರಿತು ೨೦ನ ಸಭೆ ಇಷ್ಟರಲ್ಲಿಯೇ ಚರ್ಚೆಯನ್ನು ನಡೆಸಲಿದೆ.

ಉಡುಪಿ

ಶಿಬಿರದ ಉದ್ಘಾಟನೆ— ಮಂಗಳೂರು ಸಂಕಾರಿ ತರಬೇತಿ ಕಾಲೇಜಿನ ಸೆಕೆಂಡರಿ ಗ್ರೇಡ್ ವಿಭಾಗದ ಪೌರತನ ಶಿಕ್ಷಣ ಶಿಬಿರದ ಉದ್ಘಾಟನಾಸಮಾರಂಭವು ತಾ. ೨೩ರಲ್ಲು ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಆ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕ್ಯಾಂಪ್ ಆಫೀಸರ್ ಶ್ರೀ ಬಿ. ಸಿ. ರಮಾನರವರು ಸ್ವಾಗತ ಭಾಷಣಮಾಡಿದರು. ಪೂಲಿ ಗವರ್ನಮೆಂಟ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಠಲ ಶೆಟ್ಟಿಯವರು ಶಿಬಿರದ ಉದ್ಘಾಟನೆಯನ್ನು ಮಾಡುತ್ತಾ, ಅದರ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಜಿ. ಎಸ್ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು. ಶಿಬಿರದ ಕಾರ್ಯವನ್ನು ನಿರ್ವಹಿಸಲು ಪ್ರಿಬೆರ ಸಾಯಕ ಮತ್ತು ಸಾಯಕ ಮಂತ್ರಿಗಳಾಗಿ ಶ್ರೀ ಪಾಲ್ ಪೆಸಿಡಿಕ್ಸರೂ, ಉಪಸಾಯಕ ಮಂತ್ರಿಗಳಾಗಿ ಶ್ರೀ ಪೀತಾಂಬರ ಪೈಗಳು ಶ್ರೀಗಳಾದ ವಾಮನ್ ಜಿ ಹೆಗ್ಡೆ(ಪ್ರೀಕರ್), ರಾಮಚಂದ್ರ ಕಾಮತ್ (ಸಹಪ್ರೀಕರ್)ಗಳಾಗಿ ಆರಿಸಲ್ಪಟ್ಟಿರುವರು.

ಅಕ್ಕಿ ವಿತರಣೆ— ಶ್ರೀ ಯು. ಎಸ್. ನಾಯ್ಕರು ತಾ ೨೮ರಲ್ಲಿ ಬಾಂಗ್ರ ಮಂಜೇಶ್ವರ ಪಟ್ಟಾರದಲ್ಲಿ ವ್ಯಾಪಾರಸ್ಥರಿಗೆ ಅಕ್ಕಿ ಸರು ಅಕ್ಕಿ ಮತ್ತು ವಿರವಾಡಿ. ಒಬ್ಬನಿಗೆ ಒಂದು ಪಾವು ಅಕ್ಕಿ ಮತ್ತು ಒಂದಾಣೆಯಂತೆ ಸವಾರು ೪೦೦ಕಾಸಿನರ ಜನರಿಗೆ ವಿತರಣೆ ಮಾಡಿದರು.

ಉದ್ಘಾಟನಾ ಸಮಾರಂಭ— ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮಂಗಳೂರು ಸರಕಾರಿ ಕಲಾಶಾಲೆಯ ಬಿ. ಟಿ. ತರಗತಿಯ ವಿದ್ಯಾರ್ಥಿಗಳ ಪೌರಶಿಕ್ಷಣ ಶಿಬಿರದ ಉದ್ಘಾಟನಾ ಸಮಾರಂಭವು ತಾ ೨೪ರಲ್ಲಿ ಸಂಜೆ ಸಾಕಲ್ ಶ್ರೀ ಶೀನಪ್ಪ ಹೆಗ್ಡೆಯವರಿಂದ ಜರಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಬಿ. ಎಸ್. ಕಾಮತ್ ಅವರು ವಹಿಸಿದ್ದರು. ಶಿಬಿರವು ತಾ. ೩—10ರವರೆಗೆ ನಡೆಯುವುದು.

ನಗರ ಸಭೆಯು— ತಾ. ೨೪ರಲ್ಲಿ ಸಂಜೆ ಸ್ಥಾನಿಕ ಶ್ರೀ ಪಿ. ಸಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪಟ್ಟಿಕೆ ಹಾಗೂ ಮನೆ ಅಳತೆಪಟ್ಟಿಯಿರುವ ರಸ್ತೆಗಳಲ್ಲಿ ಸೇರಿದ ೨೦ ಸ್ಥಾನಗಳು ರಿಸರ್ವ್ಡ್ ಜಾತಿಯವರಿಗೂ ೨೮ ಸ್ಥಾನ ಹಿಂದುಳಿದ ವರ್ಗದವರಿಗೂ ರಿಜರ್ವ್ ಆಗಿರಬೇಕೆಂದು ಸೂಚಿಸಿದ ಸರಕಾರಿ ಆದೇಶವನ್ನು ರಿಕಾರ್ಡುಮಾಡಲಾಯಿತು. ಮೂಡನಡಂಬೂರು ಗ್ರಾಮದ ಸರ್ವೆನಂಬ್ರ 90/11ರಲ್ಲಿ ಸ್ಥಾನಿಕ ಅಧಿವೃದ್ಧಿ ಯೋಜನೆಗನುಸಾರವಾಗಿ ಜಾಗವೊಂದನ್ನು ಆಗಿಯಲು ಸೆಂಕ್ಷನ್ ಆಗಿರುವುದಾಗಿ ಸೂಚಿಸಿದ ಡಿಲ್ಲಾ ಕಲೆಕ್ಟರರ ಪ್ರೊಸೀಡಿಂಗ್ಸನ್ನು ರಿಕಾರ್ಡುಮಾಡಲಾಯಿತು. ತೆರಿಗೆ ದಿವಾಂದು ನೋಟೀಸು 100/—ಕ್ಕೆ ರೂಪಾಯಿ ಒಂದರಂತೆ ಬರವಣಿಗೆ ಮಜೂರಿ ಕೊಡಬಹುದೆಂದಾಯಿತು. ಉಡುಪಿ-ಕಾರ್ಕಳ ಹೈಸ್ಕೂಲಿಗೆ ರಕ್ತಯಿಂದ ಪರಿಜನ ಕೊಲ್ಲಗೆಗೆ ಹೋಗುವಲ್ಲಿಗೆ ನೋರಿಯೊಂದನ್ನು ಕಟ್ಟಬೇಕೆಂದಾಯಿತು.

ಸೂಚನೆ

'ನವಯುಗ'ದ 34ನೆಯ ಸಂಪುಟವು ಇದೇ ಆಗಸ್ಟ್ ಅಂತ್ಯಕ್ಕೆ ಮುಗಿದು ಸಪ್ಟಂಬರದಿಂದ 35ನೆಯ ವರ್ಷವು ಆರಂಭವಾಗಿರುತ್ತದಷ್ಟೆ. ಈ ಅವಧಿಗೆ ಯಾರು ಯಾರು ಚಂದಾಹಣ ಮುಗಿಯುತ್ತದೊ ಅವರೆಲ್ಲರೂ ಬಾಕಿ ಚಂದಾಹಣವನ್ನೂ ಮುಂದಿನ ವರ್ಷದ ಚಂದಾಹಣವನ್ನೂ ಬೇಗನೆ ಕಳುಹಿಸುವಂತೆ ವಿನಂತಿ. ವಿ. ಪಿ. ಪಿ. ಮೂ 10ಆಣೆ ಹೆಚ್ಚಿಗೆಬೀಳುವುದರಿಂದ ಚಂದಾದಾರರು ಹಣವನ್ನು ಮನಿಯಾರ್ಡರು ಮಾಡಬೇಕಾಗಿ ವಿನ್ನಯ.

ವಾರ್ಷಿಕಚಂದಾಹಣ ರೂ.5—12—0

ಅಪೀಲು ಡಿಸ್ ಮಿಸ್ ಆಗಿ ಮೂಲತೀರ್ಪು ಖಾಯಂ-ತಾ.17-10-51 ರಲ್ಲಿ ಜರಗಿದ ಜಿಲ್ಲಾ ಬೋರ್ಡು ಚುನಾವಣೆಯ ದಿನ ಕಾಂಗ್ರೆಸ್ ಪಕ್ಷದ ಮುಂದಾಳಾಗಿ ಕೆಲಸಮಾಡುತ್ತಿದ್ದ ಕುರುಕಾಲು ಗಣಪಯ್ಯ ಶೆಟ್ರಿಗೆ ವಿರೋಧಿ ಪಕ್ಷದ ಕೆಲಸಗಾರರಾದ, ಮೂಡುಬೆಟ್ಟು ಹೈಸ್ಕೂಲ ಶಾಲಾ ಅಧ್ಯಾಪಕ ಅಣ್ಣಯ್ಯ ಶೆಟ್ರು ಕೂಡಾ ಇಬ್ಬರು ಕುರುಕಾಲು ಸೋಲಿಂಗ್ ಸ್ಟೇಶನ ಪಕಾರದಲ್ಲಿ ಹೊಡೆದ ಕುರಿತು ಹೂಡಲ್ಪಟ್ಟ ಸರಕಾರೀ ಮೊಕದ್ದಮೆಯಲ್ಲಿ ತಾ. 15-6-55ರಲ್ಲಿ ದ ಕ. ಜಿಲ್ಲಾ ಸೆಶನ್ಸ್ ಜಡ್ಜರರು ಅಣ್ಣಯ್ಯ ಶೆಟ್ರಿಗೆ ಶ್ರೀ ಕೆ. ಗಣಪಯ್ಯ ಶೆಟ್ರಿಗೆ ಪರಿಹಾರ ರೂಪ್ಯ ರುಪ್ಯಾ 50/-ಕೂಡಾ ರೂಪ್ಯಾ 200/- ಜುರ್ಮಾನೆಯನ್ನೂ ಒಂದು ದಿನದ ಕೋರ್ಟು ಸಜೆಯನ್ನೂ ವಿಧಿಸಿದ ಸಂಬಂಧವಾಗಿ ಸದ್ರಿ ಅಣ್ಣಯ್ಯ ಶೆಟ್ರು ದ. ಕ ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ ಹೂಡಿದ ಅಪೀಲು ನಂಬ್ರವು ತಾ. 23-9-55ರಲ್ಲಿ ಜಿಲ್ಲಾ ಜಡ್ಜರಿಂದ ಡಿಸ್ ಮಿಸ್ ಮಾಡಲ್ಪಟ್ಟು ಮೂಲತೀರ್ಪು ಕಾಯಂಗೊಳಿಸಲಾಯ್ತು.

ಅಣ್ಣಯ್ಯ ಶೆಟ್ರ ಕಡೆಯಿಂದ ಶ್ರೀ ಜಿ. ಸೋಸುಪೇಜರ ರಾಯರೂ, ಪ್ರೊಸಿಕ್ಯೂಶನ್ ಕಡೆಯಿಂದ ಶ್ರೀಗಳಾದ ಯಂ. ಯಂ. ಪ್ರಭು, ಮತ್ತು ಯಸ್. ನರ್ಸಪ್ಪಯ್ಯ ನವರೂ ವ್ಯವಹರಿಸಿದ್ದರು.

(ಹಣೆ ಪುಟದಿಂದ)

ಕೊಳ್ಳಬೇಕೆಂದು ಬಾಂಬಯಿ ಸರಕಾರ ಪ್ರಕಟಣೆಯೊಂದನ್ನು ಹೊರಡಿಸಿರುತ್ತದೆ. ಉದ್ರೇಕಗೇಡು ಹಿಂಸಾತ್ಮಕ ಕೃತ್ಯಗಳಿಗೆ ಜನರು ಇಳಿದರೆ ಅದನ್ನು ಎಷ್ಟ ಕ್ಕೂ ಸಹಿಸುವುದಿಲ್ಲ; ಉಗ್ರ ಕ್ರಮಗಳನ್ನು ಕೈಗೊಂಡು ಅದನ್ನು ಹತ್ತಿಕ್ಕಲು ಸರಕಾರ ಪ್ರಯತ್ನಿಸುವುದೆಂದು ಪ್ರಕಟಣೆ ಸ್ಪಷ್ಟಪಡಿಸುತ್ತದೆ. ಆಯೋಗದ ವರದಿಯ ತೀರ್ಮಾನವೇ ಕೊನೆಯದ್ದೆಂಗಡಿ ಬದಲಾವಣೆಗಳಿದ್ದರೆ ಸಂಬಂಧಿಸಿದ ರಾಜ್ಯಗಳ ಶಾಸನಾಂಗವೂ ಲೋಕಸಭೆಯೂ ಚರ್ಚಿಸಿ, ಜನಾಭಿಪ್ರಾಯದೊಡನೆ ಅದನ್ನು ಹೊಂದಿಸಿಕೊಳ್ಳಲಾಗುವುದು—ಎಂದೂ ಪ್ರಕಟಣೆ ತಿಳಿಸುತ್ತದೆ.

ಜ್ವಲಂತ ಪ್ರಶ್ನೆ

ಬಳ್ಳಾರಿಯ ಜ್ವಲಂತ ಪ್ರಶ್ನೆಯ ಕುರಿತು ಮೈಸೂರಿನ ನಾಯ್ಕ ಮಂತ್ರಿ ಶ್ರೀ ಹನುಮಂತಯ್ಯನವರು ಖಂಡತುಂಡವಾದ ಮಾತುಗಳನ್ನಾಡಿದ್ದಾರೆ— ಪ್ರಧಾನ ಮಂತ್ರಿಗಳ ಹೇಳಿಕೆಗೆ ಮತ್ತು ಇಬ್ಬಿಟ್ಟರು ನ್ಯಾಯಮೂರ್ತಿಗಳ ತೀರ್ಮಾನಕ್ಕೆ ಏನಾದರೂ ಪಾವಿತ್ರ್ಯವಿದ್ದರೆ, ಒಮ್ಮೆ ಇತ್ಯರ್ಥವಾಗಿದೆ ಎಂದು ಸಾರಿ ಹೇಳಿ ಮೈಸೂರಿನೊಡನೆ ಸೇರಿಸಲ್ಪಟ್ಟಿರುವ ಬಳ್ಳಾರಿ ಜಿಲ್ಲೆಯ ಸಿಳು ತಾಲೂಕುಗಳ ಕುರಿತು ಮತ್ತೆ ವಿವಾದಕ್ಕೆ ಆಸ್ಪದ ಮಾಡಿಕೊಡಲಾಗದು ಎಂದವರು ಹೇಳಿದ್ದಾರೆ, ಕರ್ನಾಟಕ ಏಕೀಕರಣದ ಕುರಿತು ಅವರಿಗೆ ಸಹಾನುಭೂತಿ ಇದ್ದಂತೆ ಕಾಣುತ್ತದೆ—ಅದರೆ, ಮೈಸೂರಿನ ಶಾಸನಾಂಗದ ಸುಮಾರು ೨೦ ಮಂದಿ ಸದಸ್ಯರು ಕಾಂಗ್ರೆಸಿನ ಪ್ರತೋದಾಂಶಗಳಾಗಿದ್ದ ಶ್ರೀ ಹುಚ್ಚೆ ಮಾಸ್ತಿ ಗೌಡರ ಧುರೀಣತ್ವದಲ್ಲಿ ಕರ್ನಾಟಕ ಏಕೀಕರಣದ ವಿರುದ್ಧ ಚಳವಳಿ ನಡೆಸಲು ಹವಣಿಸಿದ್ದಾರೆ; ಇವರ ವಿರೋಧಕ್ಕೆ ಮೂವರು ಮಂತ್ರಿಗಳ ಬೆಂಬಲವೂ ಇದ್ದಂತೆ ತೋರುತ್ತದೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P.o. Box No. 3219 BOMBAY-

ಕೊಡ್ಯಡ್ಕ-ಇದೇ ತಾ. 11ರಲ್ಲು ಶ್ರೀ. ಎಸ್. ಆನಂದ ನಾಯ್ಕರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ «ಕೊಡ್ಯಡ್ಕ ಯಂಗ್ ಮೆನ್ಸ್ ಸ್ಪೋರ್ಟ್ಸ್ ಕ್ಲಬ್» ಸ್ಥಾಪನೆಗೊಂಡು ಅದರ ಕಾರ್ಯನಿರ್ವಹಣದ ಬಗ್ಗೆ ಕಾರ್ಯವಾಹೀ ಸಮಿತಿಯೊಂದು ರಚಿಸಲಾಯಿತು. ಶ್ರೀಗಳಾದ ಎಮ್. ರಘುರಾಮ ಸೆಟ್ಟರು ಅಧ್ಯಕ್ಷ ಹಾಗೂ ಖಜಾನ್ಚಿ, ಎಸ್. ಸದಾಶಿವ ಸೆಟ್ಟರು ಉಪಾಧ್ಯಕ್ಷರು ಮತ್ತು ಎಮ್. ಉಪೇಂದ್ರ ನಾಯಕ್ ಹಾಗು ಎಮ್. ಕೇಶವ ನಾಯ್ಕರು ಜತೆ ಕಾರ್ಯದರ್ಶಿಗಳಾಗಿಯೂ ಆಯಸಲ್ಪಟ್ಟರು.

ಮಾಯಿಪ್ಪಾಡಿ—ಸ್ಥಳೀಯ ಸರಕಾರಿ ಬುನಾದಿ ತರಬೇತಿ ಶಾಲಾ ಅಧ್ಯಾಪಕ ವಿದ್ಯಾರ್ಥಿಗಳು ತಾ. 16ರಲ್ಲು ಶ್ರೀ.ಎಮ್. ಎಸ್. ಆಚಾರ್ಯರ ನೇತೃತ್ವದಲ್ಲಿ ನೀಲೇಶ್ವರ ಖಾದಿ ಕೇಂದ್ರ, ಶ್ರೀ ಸಾವೊಗರ ಕೃಷಿ ಪಲಯ, ಕಾಂಞಂಗಾಡ್ ರಾಮನಗರ ಬೇಕಲ ಕೋಟೆ, ಕಾಸರಗೋಡಿನ ಗಾಜು ಕಾರ್ಖಾನೆ, ಕುರುಡರ ಶಾಲೆ, ಕೂಡ್ಲು ತಿಂಗಿನ ಪರಿಶೋಧನಾ ಕ್ಷೇತ್ರಗಳನ್ನು ಸಂದರ್ಶಿಸಿ ತಾ. 18ರಲ್ಲು ಸ್ವಸ್ಥಾನಕ್ಕೆ ಬಂದರು

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ತಾ. 21ರಲ್ಲು ಸೇರಿ ಶಿರ್ವದಲ್ಲಿ ಹರಡಿರುವ ವಿಷಮ ಜ್ವರವನ್ನು ನಿಯಂತ್ರಿಸುವರೆ ಸಾರ್ವತ್ರಿಕವಾಗಿ ಇಂಜಕ್ಷನ್ ಕೊಡಿಸುವ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಶಿರ್ವ ಪಳ್ಳಿ ರಸ್ತೆ, ಮಂಚಕಲ್ಲು ತೊಟ್ಟಿಗುರಿ ರಸ್ತೆ ಮೊದಲಾದುವುಗಳಿಗೆ ಮೆಟಲಿಂಗ್ ಯೋಜನೆ ಮೊದಲಾದ ವಿಷಯಗಳಲ್ಲಿ ನಿರ್ಣಯಗಳಾದುವು.

ಕಟಪಾಡಿ—ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾವರ್ಧಕ ಸಂಘದ ಅಡಳಿತೆಗೊಳಪಟ್ಟ 12 ಪ್ರಾಥಮಿಕ ಶಾಲೆಗಳು ಮತ್ತು ಒಂದು ಹೈಸ್ಕೂಲಿನ 89 ಅಧ್ಯಾಪಕರ ಸಮ್ಮೇಳನವು ತಾ. 24ರಲ್ಲು ಸ್ಥಳೀಯ ಎಸ್. ಪಿ. ಎಸ್. ಹಾ. ಎ. ಶಾಲೆಯಲ್ಲಿ ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣಮಾಡಿದ ಬಳಿಕ ಉಡುಪಿ ದೆವ್ವಣ ಶ್ರೀಣಿಯ ಶಾಲೆಗಳ ಪರೀಕ್ಷಾಧಿಕಾರಿ ಶ್ರೀ ಎಚ್. ಸಂಜೀವ ರಾಯರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಇಂತಹ ಸಮ್ಮೇಳನಗಳ ಆವಶ್ಯಕತೆಯನ್ನು ಸೂಚಿಸಿದರು ಅಧ್ಯಾಪಕರ ಪರಸ್ಪರ ಪರಿಚಯ ಆದ ಬಳಿಕ ಸಭಾಧ್ಯಕ್ಷರು ಸಂಘದ ಕಾರ್ಯಕಲಾಪಗಳಲ್ಲಿ ಅಧ್ಯಾಪಕರ ಸಹಕಾರನನ್ನು ಕೋರಿದರು. ಮದ್ಯಾಹ್ನದ ಅಧಿವೇಶನವು ಸಂಘದ ಕಾರ್ಯದರ್ಶಿಗಳ ಅನ್ಯಕ್ಷತೆಯಲ್ಲಿ ಜರಗಿತು. ಸಂಘದ ಪ್ರಾಥಮಿಕ ಶಾಲೆಗಳ ಗೌರವ ಸುಪರ್ ವೈಜರ್ ಶ್ರೀ ಕೆ. ಆರ್. ಶೆಟ್ಟಿಯವರು ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಅನುದಿನದ ಕಾರ್ಯಕ್ರಮಕ್ಕೆ ಅವಶ್ಯಕ ಸಲಹೆಗಳನ್ನಿತ್ತರು. ನೂಲ್ಕಿ ಸರಕಾರೀ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಠಲ ಶೆಟ್ಟಿಯವರು ನಮ್ಮ ನಾಡಿನ ವಿದ್ಯಾಭ್ಯಾಸದ ಧೋರಣೆ, ಅದರ ಪ್ರಕೃತದ ಪರಿಸ್ಥಿತಿ, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸಕ್ಕೆ ಕೊಡೋಣಾದ ಸ್ಥಾನ ಮೊದಲಾದ ವಿಷಯಗಳನ್ನೆತ್ತಿ ಸೂಕ್ತಸಲಹೆಗಳನ್ನಿತ್ತರು. ವಂದನಾರ್ಪಣೆಯಾಗಿ ಅಧಿವೇಶನ ಕೊನೆಗೊಂಡಿತು.

ಸ್ಥಳೀಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ «ಸ್ಕಾಪಕರ ದಿನಾಚರಣೆ» ಯು ಅಕ್ಟೋಬರ ದಿನಾಂಕ 1ರಂದು ಜರಗಲಿರುವುದು. ಈ ಸಮಾರಂಭದ ಅಂಗವಾಗಿ ಆ ದಿನ ರಾತ್ರಿ 9 ತಾಸಿಗೆ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಶಾಲೆಗಳ ಅಧ್ಯಾಪಕರ ಕೂಡುವಿಕೆಯಿಂದ ಶ್ರೀ ಕೋಟಿ ಸುಬ್ಬ ರಾಯರ ನಾಯಕತ್ವದಲ್ಲಿ «ಗುರುದಕ್ಷಿಣೆ» ಎಂಬ ತಾಳಮದ್ದಳೆಯೂ ಜರಗಲಿದೆ. ಸರ್ವರಿಗೂ ಸುಸ್ವಾಗತವಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹುತ್ತೂರು— ಮಲೇರಿಯಾ ನಿರೋಧಯೋಜನೆ, ದ. ಕ. ಹುತ್ತೂರು— ಇದರ ಆರೋಗ್ಯಾಧಿಕಾರಿಗಳಾಗಿದ್ದ ಡಾ. ಎಚ್. ಎಸ್. ನಾಯಕರು «ಆರೋಗ್ಯ ಶಿಕ್ಷಣ» ದ ಕುರಿತು ಹೆಚ್ಚಿನ ವ್ಯಾಸಂಗಕ್ಕಾಗಿ ಇದೇ ತಾ. 18ರಂದು ಮದ್ರಾಸಿನಿಂದ ವಿಮಾನ ಮೂಲಕ ಇಂಗ್ಲಾಂಡಿಗೆ ತೆರಳಿದರು. ಶ್ರೀ ನಾಯಕರಿಗೆ ಜಾಗತಿಕ ಆರೋಗ್ಯ ಸಂಸ್ಥೆಯ ವತಿಯಿಂದ ಲಂಡನ್ ಯುನಿವರ್ಸಿಟಿ ಇನ್ಸ್‌ಟಿಟ್ಯೂಟ್ ಆಫ್ ಎಡ್ಯುಕೇಶನ್—ಇದರಲ್ಲಿ ಹನ್ನೆರಡು ತಿಂಗಳ ವಿಶೇಷ ವ್ಯಾಸಂಗಕ್ಕಾಗಿ ವಿದ್ಯಾವೇತನ ನೂರಿತಿರುವುದು.

ಕುಂಬಳೆ—ಜನತಾ ಎಕ್ಸ್ ಪ್ರೆಸ್ ಗಾಡಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ತಾ. 25ರಲ್ಲಿ ಕನ್ನಾನೂರಿಗೆ ಹೋಗುತ್ತಿರುವಾಗ ಕುಂಬಳೆ ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಸಂಘ ಸಂಸ್ಥೆಗಳಿಂದ ಸ್ವಾಗತ ಪತ್ರಗಳು ಅರ್ಪಿಸಲಾದುವು.

ಇದೇ ಅಕ್ಟೋಬರ ತಿಂಗಳ ಆರಂಭದಿಂದ ಕುಂಬಳೆ ರೈಲ್ವೆ ನಿಲ್ದಾಣದಲ್ಲಿ ಮೈಲ್ ಗಾಡಿಯನ್ನು ನಿಲ್ಲಿಸುವುದಿಲ್ಲವೆಂಬ ಸುದ್ದಿ ನಿಜವೆಂದಾದರೆ, ವ್ಯಾಪಾರಸ್ಥರಿಗೂ ದೂರ ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಅನಾನುಕೂಲತೆಗಳುಂಟಾಗಬಹುದಾದುದರಿಂದ ಆ ಯೋಜನೆಯನ್ನು ಕಾರ್ಯಗತ ಮಾಡಕೂಡದಾಗಿಯೂ ಸಿಯನ್ ರೈಲ್ವೆ ಮಂತ್ರಿಗಳಿಗೂ, ದಕ್ಷಿಣ ರೈಲ್ವೆ ಜನರಲ್ ಮೆನೇಜರರಿಗೂ ಶ್ರೀ ಬಿ. ಶಿವರಾವ್, ಎಮ್. ಪಿ. ಯವರಿಗೂ ವಿನಂತಿಗಳನ್ನು ತಂತಿ ಮೂಲಕ ಕಳುಹಲಾಗಿದೆ.

ಹೊಸದುರ್ಗ— ಇಲ್ಲಿಯ ಪುರಜನರ ಸಭೆಯೊಂದು ತಾ. 16ರಲ್ಲಿ ಶ್ರೀ ಸಿ. ಕೃಷ್ಣಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಎಂದಿನಂತೆ ಮೈಲ್‌ಬಂಡಿಯು ಮುಂದೆಯೂ ಇಲ್ಲಿ ನಿಲ್ಲುವಂತಾಗಬೇಕೆಂಬ ನಿರ್ಧಾರವಾಯಿತು.

ನೀಲೇಶ್ವರ— ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ನೀಲೇಶ್ವರ ಬ್ಲಾಕಿನಲ್ಲಿ ತಾ 1—10—55ರಲ್ಲಿ ನೀಲೇಶ್ವರ, ಉದನೂರ್, ಚಿಮೆನಿ, ಪಾರಪ್ಪ, ಪರುಂಬಟ್ಟ ಮತ್ತು ಚಿತ್ತಾರಿಕಲ್—ಈ ಆರು ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು. ನೀಲೇಶ್ವರ ಕೇಂದ್ರದ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರರು ನೆರವೇರಿಸಲಿರುವರು.

ಹೆರಡಾಲ— ಮಂಜೇಶ್ವರ ಬ್ಲೋಕ್ ಸಲಹಾ ಸಮಿತಿ ಸಭೆಯು ತಾ. 21ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಬ್ಲೋಕ್ ಡೆವಲಪ್ ಮೆಂಟ್ ಆಫೀಸರ್ ಶ್ರೀ ಎಚ್. ಮುದ್ದಣ್ಣ ಸೆಟ್ಟರು ವರದಿಯನ್ನೋದಿದರು. ಶ್ರೀಗಳಾದ ಕೆ. ಗೋವಿಂದ ನಾಯಕ್, ಬಿ. ಮಾಧವ ಪೈ, ಟಿ. ನಾರಾಯಣ ಭಟ್, ಎಮ್. ಅಮೃತ ಕೃಷ್ಣರಾವ್, ಕೆಮಲಾಕ್ಷಪೈ, ಬಿ ದೇವಪ್ಪ ಅಳ್ವ, ಜಿ. ಕೆ. ಕದಿಲಾಯ ಮೊದಲಾದವರು ಸಲಹೆಗಳನ್ನಿತ್ತರು.

ತಾ. 21ರಲ್ಲು ನೇರಿದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಪೆರಡಾಲ ಸಮಾಜ ವಿಹಾರ ಕೇಂದ್ರವನ್ನು ತೆರೆದರು. ಪಂಚಾಯತ ಅಧ್ಯಕ್ಷ ಡಾ. ಪಿ. ಎಸ್. ಶಾಸ್ತ್ರಿಗಳು ಸ್ವಾಗತ ಮಾತುಗಳನ್ನಾಡಿದರು.

ಬದಿಯಡ್ಕ—«ಸೇವಾ ಸಮಾಜ»ದ ಆಶ್ರಯದಲ್ಲಿ ತಾ. 21ರಲ್ಲು ನೇರಿದ ಮಹಾಜನ ಸಭೆಯಲ್ಲಿ ಅಧ್ಯಕ್ಷ ಸ್ಥಾನ ವಹಿಸಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರು ಈಷ್ಟ ದೋಷ ನಿವಾರಣಾ ಕಾರ್ಯದಲ್ಲಿ ಸರ್ವರೂ ಸಹಕರಿಸಬೇಕಾಗಿ ಕೇಳಿಕೊಂಡರು.

ಬೊಂಬಾಯಿ— ಶ್ರೀ ಗಜಾನನ ಅಖಿಲ ಕರ್ನಾಟಕ ಯಕ್ಷಗಾನ ಮಂಡಳಿಯ ವಾರ್ಷಿಕೋತ್ಸವದಂಗವಾಗಿ ತಾ 1-10-55 ನೆ ಶನಿವಾರ ಅಪರಾಹ್ನ 2-30ಕ್ಕೆ ಸರಿಯಾಗಿ ಪಡಲ ದ್ವಾರಕಾನಾಥ ಭುವನದ ಹಾಲಿನಲ್ಲಿ ಶ್ರೀ ಮಾ. ಶ. ಸಾಮಗ ಹರಿದಾಸರು, ಉಡುಪಿ ಭಾಗವತ ನಾರಾಯಣ ಸೆಟ್ಟರು ಮತ್ತು ಉಡುಪಿ ಬಸವನವರ ಕೂಡುವಿಕೆಯಿಂದ «ರಾಮಾಂಜನೇಯ ಮತ್ತು ರುಗ್ಮಾಂಗದಚರಿತ್ರೆ» ಎಂಬ ಯಕ್ಷಗಾನ ಆಟ ಜರಗಲಿದೆ.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 422/1955

ಕಾಳುಸೆಟ್ಟಿ — ವಾದಿ

ಮತ್ತು

ಅಕ್ಕು ಸೂಜಾರ್ತಿ ಕೂಡ—ಪ್ರತಿವಾದಿರು

ಇವರೊಳಗೆ

2ನೇಪ್ರತಿವಾದಿ—ಕರಿಯ ಪೂಜಾರಿ- 1ನೇ ಪ್ರತಿವಾದಿಯ--ಅಕ್ಕು ಸೂಜಾರ್ತಿ ಸಹೋದರ—ಉಡ್ಪಿ ತಾಲ್ಲುಕ್ ಕೋಟೆ ಗ್ರಾಮದ ಅಂಬಾಡಿಯಲ್ಲಿರುವವ.

ಮೇಲ್ಕಂಡ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ,—

ವಾದಿಗೆ ಪ್ರತಿವಾದಿರಿಂದ ಪ್ಲೆಂಟ್ ಅಸ್ತಿಗಳಿಬಾಬ್ತು ಬಹಾಜಯ ಸಂವತ್ಸರದ ಗೇಣಿ, ನಂತ್ರದ ಬಡ್ಡಿ,ಮನ್ಮಥ ಸಂವತ್ಸರದ ಆದಿಲಾಗ್ಯಾತಿನ ಹುಟ್ಟುವಳ್ಳಿ, ಆಸ್ತಿ ಸ್ವಾಧೀನತೆ ವಗೈರೆ ಕೇಳಿ ವಾದಿಯು ದಾಖಲು ಮಾಡಿದ ಮೇಲ್ಕಂಡ ನಂಬ್ರವನ್ನು ತಾ. 1-10-55 ಕ್ಕೆ 2ನೇ ಪ್ರತಿವಾದಿನೋಟೀಸು ಬಗ್ಗೆ ಯಿಟ್ಟಿರುತ್ತದೆಂತಲೂ. ಸದ್ರಿ ಪ್ರತಿವಾದಿಯು ತನ್ನ ಉದಾಹರಣೆ ಯಿದ್ದಲ್ಲಿ ಸದ್ರಿದಿನ್ನ ಕೋರ್ಟು ಮುಂದೆ ಹಾಜರಾಗಿ ಜೌಹೀರು ಮಾಡಿಕೊಳ್ಳ ತಕ್ಕದ್ದೆಂತಲೂ-ತಪ್ಪಿದರೆ ಆತನನ್ನು ಎಕ್ಸ್ ಪಾರ್ಟಿ ಮಾಡಿ ಸದ್ರಿದಾವೆಯು ತೀರ್ಮಾನಿಸಲ್ಪಡುವುದೆಂತಲೂ ಈ ಮೂಲಕ ತಿಳಿಸೋಣಾಗಿದೆ

K. J. Ballal
Pleader for Plaintiff

ಉಡ್ಪಿ ತಾ.27—9—55

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬.—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮಂಗಳೂರು

ಮಂಗಳೂರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು—

ಸುಂದರ ನೆಹರೂರವರ ಪುತ್ರಿಯರೂ ಶ್ರೀ ಫಿರೋಜ್ ಗಾಂಧಿ ಎಮ್. ಪಿ. ಅವರ ಪತ್ನಿಯವರೂ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯೆಯೂ ಆಗಿರುವ ಶ್ರೀಮತಿ ಇಂದಿರಾ

ಗಾಂಧಿಯವರು ತಾ. 25ರಲ್ಲಿ ಪೂರ್ವಾಹ್ನ ಬೊಂಬಾಯಿಯಿಂದ ವಿಮಾನದಲ್ಲಿ ಬಜ್ಪೆಗೆ ಬಂದಿಳಿದರು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಮಹಿಳಾ ವಿಭಾಗದ ಸಂಚಾಲಿಕೆ ಶ್ರೀಮತಿ ಲೀಲಾ ಬಾಯಿ ಮಾಗಡಿ, ಸೇವಾಸಮಾಜ ಅಧ್ಯಕ್ಷೆ ಶ್ರೀಮತಿ ರಾಜಾಲಕ್ಷ್ಮಿ ರಾವ್, ಜಿಲ್ಲಾ ಕಲೆಕ್ಟರ್ ಜಿಲ್ಲಾಬೋರ್ಡು ಅಧ್ಯಕ್ಷ, ಮುನಿಸಿಪಲ್ ಚೆರ್‌ಮೇನ್, ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ, ಕಾರ್ಯದರ್ಶಿ ಮೊದಲಾದವರು ವಿಮಾನ ನಿಲ್ದಾಣದಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಇಂದಿರಾ ಗಾಂಧಿಯವರು ಬಜ್ಪೆಗೆ ಬಂದು ಅಲ್ಲಿ ಸಮಾಜವಿಕಾಸ ಯೋಜನೆಯವರ ಸಹಾಯದಿಂದ ಬಜ್ಪೆ ಪಂಚಾಯತರು ಸಮಾಜ ಮಂದಿರದ ಬಳಿ ಕಟ್ಟಿಸಿದ, ಮಹಿಳಾ ಮಂದಿರ ಜಾನಿಲಿ ನಿಲಯ ಮತ್ತು ಬಾಲವಿಹಾರಗಳನ್ನು ಉದ್ಘಾಟಿಸಿದರು. ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರು ಸಭಾಧ್ಯಕ್ಷತೆ ವಹಿಸಿದ್ದರು. ರೆ ಫಾ. ಲಿಯೋ ಕರ್ವಾಲೋರವರು ಸ್ವಾಗತಮಾತುಗಳನ್ನಾಡಿದರು. ಡಾ. ಪಿ. ಭಾಸ್ಕರ ರಾಯರು ಧನ್ಯವಾದವಿತ್ತರು. ನಂತರ ಕಿನ್ನಿಕಂಬಳ ಬೋರ್ಡು ಹಾಯ್ ಎ ಶಾಲೆ, ರೋಸಾ ಮಿಸ್ಟಿಕಾ ಮಹಿಳೆಯರ ಮೂಲಶಿಕ್ಷಣ ತರಬೇತಿ ಶಾಲೆಗಳ ಬಳಿಯಲ್ಲಿ ಜನರೂ ವಿದ್ಯಾರ್ಥಿಗಳೂ ಸ್ವಾಗತವಿತ್ತರು.

ಅಲ್ಲಿಂದ ಶ್ರೀಮತಿಯವರು ಗುರುಪುರಕ್ಕೆ ಬಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಶ್ರಯದಲ್ಲಿ ನಡೆಯುವ ಗ್ರಾಮ ಆರೋಗ್ಯ ಸೇವಾ ವಿಭಾಗವನ್ನು ಪರಿಶೀಲಿಸಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಈ ಕೇಂದ್ರಕ್ಕೆ ಸಹಾಯ ನೀಡಲು ಸಾಧ್ಯವೇ ಎಂಬುದನ್ನು ತಾನು ಪರಿಶೀಲಿಸುವುದಾಗಿ ಹೇಳಿದರು.

ಮಂಗಳೂರಿಗೆ ಆಗಮಿಸಿದೊಡನೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ಕಾಂಗ್ರೆಸ್ ಮಹಿಳಾ ವಿಭಾಗದ ಉದ್ಘಾಟನೆಯನ್ನು ಮಾಡಿದರು. ಶ್ರೀಮತಿ ಲೀಲಾಬಾಯಿ ಬಾಳಿಗರು ಪ್ರಾರ್ಥನೆ ಮಾಡಿದ ತರುವಾಯ ಶ್ರೀಮತಿ ಲೀಲಾ ಬಾಯಿ ವಿಕಾಂಬರರಾಯರು ಮಾಲಿಕೆಯನ್ನರ್ಪಿಸಿದರು. ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿಯವರು ಸ್ವಾಗತ ನೀಡಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಪರವಾಗಿ ಶ್ರೀ. ಬಿ. ಬಿ. ಸೆಟ್ಟಿರು ಅರ್ಪಿಸಿದ ಮನವಿಯಲ್ಲಿ ಶ್ರೀಮತಿಯವರ ಸಹಕಾರ ಬೆಂಬಲಗಳನ್ನು ಅಪೇಕ್ಷಿಸಲಾಗಿತ್ತು ಅಲ್ಲದೆ ಇದೀ ಕಾಸರಗೋಡು ತಾಲೂಕಿನ ಬದಲು ಚಂದ್ರಗಿರಿ ನದಿಯ ದಕ್ಷಿಣ ಭಾಗ ಮಾತ್ರ ಕೇರಳಕ್ಕೆ ಸೇರಿಸುವಂತಾಗಬೇಕು ಎಂದು ಹೇಳಲಾಗಿತ್ತು. ನಂತರ ಮಹಿಳಾ ಸಭೆಗೆ ಬಂದು ಮಹಿಳಾ ಸಭಾ, ಭಗಿನಿ ಸಮಾಜ ಶ್ರೀ ಸೇವಾ ಸಮಿತಿ ಮತ್ತು ಮಹಿಳೆಯರ ನಾಡಿಕೈಗಾರಿಕೆ ಸಂಘಗಳ ಪರವಾಗಿ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿಯವರು ಮನವಿಯನ್ನರ್ಪಿಸಿದರು. ಶ್ರೀಮತಿ ಇಂದಿರಾ ಅತ್ತಾವರರು ವಂದನೆಗಳನ್ನರ್ಪಿಸಿದರು.

ಮಹಿಳಾ ಸಭೆಯಿಂದ ಶ್ರೀಮತಿ ಇಂದಿರಾ ಗಾಂಧಿಯವರು ಕೊಡಿಯಾಲ ಬೈಲಿನ ಕನಕದಾಸ ಜಾಸ್ತಿಲನ್ನು ಸಂದರ್ಶಿಸಿದರು. ಮದ್ಯಾಹ್ನ ಬೇಂದೂರಿನ ಸ್ಟೆಂಟ್ ಅಗ್ನೀಸ್ ಕಾಲೇಜಿಗೆ ಭೆಟ್ಟಿಯಿತ್ತು ಅಲ್ಲಿಂದ ಈಶ್ವರಾನಂದ ಮಹಿಳಾ ಸೇವಾಸಂಘದ ಬಾಲಿಕಾಶ್ರಮ, ಕಂಕನಾಡಿಯ ಸಿಸ್ಟರ್ಸ್ ಆಫ್ ಚೇರಿಟಿಯವರ ಅನಾಥಾಲಯ, ವೃದ್ಧಾಶ್ರಮ; ಮಕ್ಕಳ ಹೋಷಣಾಕೇಂದ್ರ ಮೊದಲಾದುವನ್ನು ಸಂದರ್ಶಿಸಿದರು. ಅಲ್ಲಿಂದ ಹೊರಟು ಶ್ರೀ ರಾಮಕೃಷ್ಣಾಶ್ರಮಕ್ಕೆ ಬಂದು ಅಲ್ಲಿಯ ಬಾಲಕಾಶ್ರಮ, ಧರ್ಮಚಿಕಿತ್ಸಾಲಯವನ್ನು ಅವಲೋಕಿಸಿ, ಸ್ವಾಮಿ ಆನಂದ ಸೇವಾಶ್ರಮವನ್ನು ನೋಡಿ ಎಸ್. ಸಿ. ಸಿ. ಬೇಂಕಿನ ಸಭಾಭವನದಲ್ಲಿ ಸುರಪ್ರಮುಖರಿಂದ ಏರ್ಪಡಿಸಲಾದ ಸತ್ಕಾರಕೂಟದಲ್ಲಿ ಭಾಗವಹಿಸಿದರು. ಶ್ರೀ ಬಿ. ವೈಕುಂಠ ಬಾಳಿಗರು ಸ್ವಾಗತಭಾಷಣಮಾಡಿದರು. ಶ್ರೀ ಬಿ. ಬಿ. ಸೆಟ್ಟಿರು ವಂದನೆಗಳನ್ನರ್ಪಿಸಿದರು.

ನಂತರ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರೂ ಯೋಗ್ಯ ಸಾತ್ರವನ್ನು ವಹಿಸಬೇಕು ರಾಷ್ಟ್ರದ ಪ್ರಗತಿ ಅಭಿವೃದ್ಧಿಯಾಗಲು ಮಹಿಳೆಯರೂ ಶ್ರಮಿಸಬೇಕು. ಭಾರತೀಯರು ರಾಷ್ಟ್ರಾಭಿಮಾನದಿಂದ ಶ್ರಮ ವಹಿಸಿ ದುಡಿಯುತ್ತಿದ್ದಾರೆ. ಈಗಿನ ಸುನಹಮೈಸಮ್ಮಗಳು ನಮ್ಮಲ್ಲಿ ತಲೆಯೆತ್ತಲಾಕ್ರಂಭವಾಗಿವೆ. ಇವನ್ನು ದೂರೀಕರಿಸಿ ಭಾರತೀಯರೆಲ್ಲರೂ ನವರಾಷ್ಟ್ರ ನಿರ್ಮಾಣ ಪಥದಲ್ಲಿ ಮುನ್ನಡೆಯಬೇಕು ಎಂದು ಮೊದಲಾಗಿ ಹೇಳಿದರು. ಶ್ರೀ ಬಿ. ಬಿ. ಸೆಟ್ಟಿರು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಶ್ರೀಮತಿ ಇಂದಿರಾ ಗಾಂಧಿಯವರು ಸಂಜೆಯ ಜನತಾ ಎಕ್ಸ್ ಪ್ರೆಸ್ಸಿನಲ್ಲಿ ಪುಲಬಾರು ಜಿಲ್ಲಾ ಪ್ರವಾಸ ಕೈಕೊಂಡರು.

ಪ್ರಾ ಸು. ಸಮಿತಿ ಚೆರ್‌ಮೇನರಿಗೆ ನಿವೇದನೆ— ಶ್ರೀಗಳಾದ ಎ. ಬಿ. ಸೆಟ್ಟಿ (ಮದ್ರಾಸ ಆರೋಗ್ಯಮಂತ್ರಿ), ಯು. ಶ್ರೀನಿವಾಸ ಮಲ್ಯ, ಎಮ್. ಸಿ. ಬಿ. ಶಿವರಾಮ್ ಎಮ್. ಪಿ. ಮತ್ತು ಟಿ. ಎ. ಪೈ, ಎಮ್. ಎಲ್. ಎ, ಇವರು ಪ್ರಾಂತೀಯ ಪುನರ್ರಚನಾ ಸಮಿತಿಯ ಚೆರ್‌ಮೆನ್ ಶ್ರೀ ಫಜಲ್ ಅಲಿಯವರನ್ನು ತಾ. 19ರಲ್ಲಿ ಅಪರಾಹ್ನ ನವದೆಹಲಿಯಲ್ಲಿ ಭೇಟಿಯಾಗಿ ಸುಮಾರು ಒಂದು ಗಂಟೆತನಕ ಸಂಭಾಷಣೆ ನಡೆಸಿದರೆಂದು ತಿಳಿದುಬರುತ್ತದೆ. ಹೊಸ ಕೇರಳಪ್ರಾಂತಕ್ಕೆ ಕಾಸರಗೋಡು ತಾಲೂಕನ್ನು ಸೇರಿಸಲು ಸಮಿತಿಯು ಸೂಚಿಸಿಯದೆ ಎಂದು ಹೇಳಲಾದ ಶಿಫಾರಸಿನ ವಿರುದ್ಧ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪ್ರಬಲವಾದ ಆಂದೋಲನವು ನಡೆಯುತ್ತಿದೆ. ಎಂಬ ವಿಚಾರವನ್ನು ಚೆರ್‌ಮೇನರ ಅವಗಾಹನೆಗೆ ತಂದಿರಬಹುದಾಗಿ ಹೇಳಲಾಗಿದೆ.

ಭಾಷಣ— ಸ್ಥಳೀಯ ಪುಸ್ತಕ ಭಂಡಾರ ಸಮಿತಿಯ ಆಶ್ರಯದಲ್ಲಿ ತಾ. 19ರಲ್ಲಿ ಕರ್ನಾಡ ಸಬಾಶಿವರಾವ್ ಸ್ಮಾರಕ ಪುಸ್ತಕಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಶಿವರಾಮ ಕಾರಂತರು 'ಹಿಂದುವಿನ ಸ ಪ್ರಶಂಜ' ಎಂಬ ವಿಷಯದಲ್ಲಿ ಉಪನ್ಯಾಸವಿತ್ತರು. ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಧ್ಯಕ್ಷತೆ ವಹಿಸಿದ್ದರು. ಪುಸ್ತಕಾಲಯ ಸಮಿತಿ ಅಧ್ಯಕ್ಷ ಶ್ರೀ ಎಸ್. ಎಸ್. ವಿಕಾಂಬರರಾಯರು ಸ್ವಾಗತ ಭಾಷಣ ಮಾಡುತ್ತಾ, ಸಮಿತಿಯ ಕಾರ್ಯಕಲಾಪಗಳನ್ನು ವಿವರಿಸಿದರು. ಲೈಬ್ರೆರಿಯನ್ ಶ್ರೀ ಬಿ. ಸದಾಶಿವರಾಯರು ಧನ್ಯವಾದಗಳನ್ನಿತ್ತರು.

ಆರ್ಚ್‌ಬಿಶಪ್ ಹೋತಕಮರಿಯವರ ಭಾಷಣ— ತಾ. 24ರಲ್ಲಿ ಸಂಜೆ ಸ್ಥಳೀಯ ಕಥೋಲಿಕ್ ಕ್ಲಬ್ಬಿನಲ್ಲಿ ಜಿಲ್ಲಾ ಕಥೋಲಿಕ್ ಎಸೋಸಿಯೇಶನ ಆಶ್ರಯದಲ್ಲಿ ನಡೆದ ಸಭೆಯಲ್ಲಿ ಬೆಂಗಳೂರಿನ ಆರ್ಚ್ ಬಿಶಪ್ ಹೋತಕಮರಿಯವರು ಭಾಷಣಮಾಡುತ್ತಾ, 'ಅಲ್ಪ ಸಂಖ್ಯಾಕ ಮತದವರ ರಕ್ಷಣೆಗಾಗಿ ಪ್ರತ್ಯೇಕ ಮತದಾನದ ಹಕ್ಕು ಅಗತ್ಯವಿಲ್ಲ. ರಾಜಕೀಯ ವಿಚಾರಗಳು ಧಾರ್ಮಿಕ ಕ್ಷೇತ್ರದಲ್ಲಿ ಹಾನಿಕರವಾಗಲಾರವೆಂದು ನಾನು ಭಾವಿಸುತ್ತೇನೆ ಎಂದು ಹೇಳಿದರು. ಸಭೆಯಲ್ಲಿ ಬಳ್ಳಾರಿಯ ಬಿಶಪ್ ಹೇಗನ್ ಮತ್ತು ಮೈಸೂರಿನ ಬಿಶಪ್ ಫ್ಲೋಗಾರನರೂ ಮಂಗಳೂರಿನ ಬಿಶಪ್ ಡಾ. ಬಿ. ಎಸ್. ಪೀರೀಸರೂ ಉಪಸ್ಥಿತರಿದ್ದರು. ಸಭಾರಂಭದಲ್ಲಿ ಶ್ರೀ ಯು. ಕೃಷ್ಣಪ್ಪನವರು ಸ್ವಾಗತ ಭಾಷಣಮಾಡಿದರು ಎಸೋಸಿಯೇಶನ್ ಕಾರ್ಯದರ್ಶಿ ಶ್ರೀ ಪಿ. ಎಸ್. ರೋಡ್ರಿಗ್ಸರು ವಂದನೆಗಳನ್ನರ್ಪಿಸಿದರು.

ಸಮಾಜ ವಿಕಾಸ ಯೋಜನಾ ಸಭೆ. ಮದ್ರಾಸು ಸರಕಾರದ ಕ್ಷಯ ರೋಗ ನಿವಾರಣಾ ಯೋಜನೆಯಂತೆ ಬಿ. ಸಿ. ಜಿ. ವಾಕ್ಸಿನಾಕರಣ ಕಾರ್ಯಕ್ರಮವು ದ. ಕ. ಜಿಲ್ಲೆಯ ಗ್ರಾಮಾಂತರಗಳಲ್ಲಿ ತಾ. 17-10-1955 ರಂದು ಪ್ರಾರಂಭವಾಗಲಿದೆಯೆಂದು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ತಾ. 24ರಲ್ಲಿ ಜರಗಿದ ಸಮಾಜವಿಕಾಸಯೋಜನೆಯ ಸಲಹಾಸಮಿತಿ ಸಭೆಯಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಸಿ. ಎಸ್. ರಾಮಚಂದ್ರ ಪೈಗಳು ಜಾಹೀರು ಮಾಡಿದರು.

ಪ್ರೊಜೆಕ್ಟ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಎಚ್. ನರಸಿಂಹನವರು ಮತ್ತು ಅಸಿಸ್ಟಾಂಟ್ ಪ್ರೊಜೆಕ್ಟ್ ಆಫೀಸರ್ ಶ್ರೀ ಕೆ. ಎಲ್. ಸೂರ್ಯನಾರಾಯಣನ್ ರವರು ವರದಿಯನ್ನೋದಿದರು. ದ. ಕ. ಜಿಲ್ಲೆಯ ಸಮಾಜ ವಿಕಾಸ ಯೋಜನಾ ಕ್ಷೇತ್ರದಲ್ಲಿ ಕೈಕೊಂಡ ಅಭಿವೃದ್ಧಿ ಕಾರ್ಯಗಳಿಗೆ ಸ್ಥಳೀಯ ಜನರು ರೂ. 7,08,990ನ್ನು ಶ್ರಮ ಮತ್ತು ಸಾಮಗ್ರಿಗಳ ರೂಪದಲ್ಲಿಯೂ ರೂಪಾಯಿ 1,72,134 ನ್ನು ನಗದಿ ಹಣದಲ್ಲಿಯೂ ಕೂಡಿ ಒಟ್ಟು ರೂಪಾಯಿ 8,81,130 ರಷ್ಟರ ಮಂತಿಗೆ ಸಹಾಯ ನೀಡಿದ್ದಾರೆ. ಮಂಗಳೂರು-ಮೂಲ್ಕಿ-ಸುರತ್ಕಲ್ ಮತ್ತು ಕಾಸರಗೋಡ್ಜಾದಿ, ಮುಂದ್ಯೂರುಗಳಿಗೆ ಗ್ರಾಮ ಕುಡಿಯ ನೀರು ಯೋಜನೆ (ರೂ. 7.603 ಲಕ್ಷ ಮೊತ್ತ 278 ಕೆರೆ ಬಾವಿಗಳು) ಗಳನ್ನು ಸರಕಾರ ಮಂಜೂರುಮಾಡಿದ್ದು ಇವುಕ್ಕೆ ಬೇಗನೇ ಕಾರ್ಯಾರಂಭವಾಗುವುದು. ಉಡುಪಿ-ಪೆರ್ಡೂರ ಕುಡಿಯ ನೀರು ಯೋಜನೆಗೆ (ರೂಪಾಯಿ 1.46 ಲಕ್ಷ) ಬೇಗನೆ ಸರಕಾರ ಮಂಜೂರಾತಿ ಕೊಡುವ ನಿರೀಕ್ಷೆಯಿದೆ. ಮೂಸ್ ಸಾಕುವ ಒಂದು ಕೇಂದ್ರವನ್ನು ಕಾರ್ಕಳದಲ್ಲಿ ತೆರೆಯುವ ಯೋಜನೆ ತಯಾರಾಗುತ್ತಿದೆ. ಮೂಲ್ಕಿ, ಶಾಸಂಜೆಗಳಲ್ಲಿ ಮೀನುಸಾಕಣೆಯ ಕೇಂದ್ರ ತೆರೆಯಲು ಸಿದ್ಧತೆಗಳಾಗುತ್ತಿವೆ. ಕಾರ್ಕಳದಲ್ಲಿ ಪ್ರಾಂತೀಯ ಸರಕಾರದವರೇ ಒಂದು ಪಶು ವೈದ್ಯಾಲಯವನ್ನು ತೆರೆಯುವರೆ ಮಂಜೂರಾತಿಯಿತ್ತಿರುವರು ಎಂದು ಮುಂತಾಗಿ ವರದಿಯಲ್ಲಿ ಹೇಳಲಾಗಿತ್ತು. ಸಭೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ದೆಗ್ಗಡೆಯವರ ನಿಧನದ ಬಗ್ಗೆ ಸಂತಾಪಸೂಚಿಸುವ ನಿರ್ಣಯ ವಾಯಿತು.

ವಿದ್ಯಾರ್ಥಿ ನೇಕನೆ— ಪಶ್ಚಿಮ ವಿಭಾಗದ ಡಿಸ್ಟ್ರಿಕ್ಟ್ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಶ್ರೀ ಎ. ನಾರಾಯಣ ರೈಗಳ ಮತ್ತು ಶ್ರೀ ಎ. ದೀನನಾಥ ರೈಗಳು ಸುಬ್ರಾಯ ಸೆಟ್ಟಿ ಕಾರದ ಸ್ಮಾರ್ಕ ಎಂಡೋಮೆಂಟ್ ವಿದ್ಯಾರ್ಥಿ ವೇತನ ಪಡೆದ ಟೆಕ್ಸ್‌ಟೈಲ್ ಕೆಮಿಸ್ಟ್ರಿಯಲ್ಲಿ ಹೆಚ್ಚಿನ ಅಭ್ಯಾಸಕ್ಕಾಗಿ ಇಂಗ್ಲಾಂಡಿಗೆ ತೆರಳಿರುವರು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 308/1955

ಚೆನ್ನಪ್ಪ ಸೇನೆಗಾರ — ವಾದಿ.

ಮತ್ತು

ಆನಂದ ಮರಕಾಲ—ಸೂರು ಮರಕಾಲ್ತಿ ಮಗ—ಉಪ್ಪಿ ತಾಲೂಕು ಉಚ್ಚಿಲ ಗ್ರಾಮ — — 2ನೇ ಪ್ರತಿವಾದಿ.

ಇವರೊಳಗೆ.

ಸದ್ರಿ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ನೀವು ಮತ್ತು 1ನೇ ಪ್ರತಿವಾದಿ ಸೂರು ಮರಕಾಲ್ತಿ ಕೂಡಾ ವಾದಿಗೆ ತಾರೀಕು 26—8—1951ರಲ್ಲು ರೊಕ್ಕ. 450/-ಕ್ಕೆ ಬರೆಕೊಟ್ಟಿ ದಿವಾಂಡು ನೋಟಿನ ಅಲ್ಲು ಬಡ್ಡಿ ಅಪೇಜು ಮತ್ತು ರಿಜಿಸ್ಟ್ರಿ ನೋಟೀಸು ಬರ್ಚು ಸಹಾ ಪಣಂಗಳನ್ನು ಬರಮಾಡಿ ಕೊಳ್ಳುವರೆ ವಾದಿಯು ದಾವಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 1—10—1955ಕ್ಕೆ ಯಿಟ್ಟಿದೆ—ಉಚಾವರೆಸುವಂಥಾದಿದ್ದರೆ ಅದಿನ್ನ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀದು ಮಾಡಿಕೊಳ್ಳತಕ್ಕದ್ದು—ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Ramakrishna Rao
Vakil for Plaintiff

Udipi —Date 26—9—1955.

ಭೂಮಿ ಮಾರಾಟಕ್ಕಿದೆ

ಉಡುಪಿ ತಾಲೂಕು ಚಾರಾಡಿ ಗ್ರಾಮದಲ್ಲಿ 3 ಬೆಳೆ ಮಾಡುವ 20 ಮುರಿ ಅಳವು ಜೀರಿಗೆ ಬೆಳ್ತಿಗೆ ಅಕ್ಕಿಯ ಭೂಮಿ ಮಾರಾಟಕ್ಕಿದೆ. ಉತ್ತಮ ಗಿರಾಕಿಗಳು—

X C/o ನವಯುಗ, ಉಡುಪಿ.

ವಿಳಾಸಕ್ಕೆ ಬರೆಯಿರಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣು ಮುಚ್ಚಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂಗಾದವೆಲ್ಲೆಲ್ಲ ಪ್ರತಿಯೊಂದು ದೃಶ್ಯವನ್ನು, ನಾನಾ ಗಾಮೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ ....ಶೈಲಿಯು ಚಲನೀಯವೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಪೂರ್ಣ ಕಾಸರಗೋಡು ತಾಲೂಕನ್ನು ಕೇರಳ ರಾಜ್ಯಕ್ಕೆ ಸಮರ್ಪಿಸಬೇಕೆಂದು ಫಜಲ ಅಲಿ ಆಯೋಗದವರು ಶಿಫಾರಸು ಮಾಡಿರುವುದಾಗಿ ತಿಳಿದು ಬರುತ್ತದೆ. ಚಂದ್ರಗಿರಿ ಹೊಳೆಯ ಉತ್ತರದಲ್ಲಿರುವ ಕಾಸರಗೋಡಿನ ನಿವಾಸಿಗಳು ಈ ಸಂಭವವನ್ನು ಸರ್ವಥಾ ಸಿಹಿಕ್ಷಿಸಿರಲಿಲ್ಲ. ಮೇಲ್ಕಟ್ಟಿದ ಸಮಿತಿಯವರು ಮಂಗಳೂರಿಗೆ ಬಂದಿದ್ದಾಗ ಹೊಸದುರ್ಗ ಉಪತಾಲೂಕಿನ ಹೊರತು ಉಳಿದ ಭಾಗವನ್ನು ಕೇರಳಕ್ಕೆ ಕೊಡುವ ಹಾಗಿಲ್ಲ. ಎನ್ನುವ ಆಶ್ವಾಸನೆಯ ಮಾತನ್ನು ಸರದಾರ ಕೆ. ಎಂ. ಪಣಿಕ್ಕರರು ಹೇಳಿದ್ದರು.

ಶಾಂತ ಭೂವಲಯ

ಇಡೀ ಕಾಸರಗೋಡು ತಾಲೂಕಿನಲ್ಲಿ ನಾಲ್ಕುಲಕ್ಷಕ್ಕೂ ಮಿಕ್ಕಿ ಜನಸಂಖ್ಯೆಯಿದೆ. ಭತ್ತದ ಬಯಲುಗಳು, ಅಡಿಕೆ ಮತ್ತು ತೆಂಗಿನ ತೋಟಗಳು, ಕಾಳುಮೆಣಸಿನ ತಪ್ಪಲುಗಳು, ೯ ಹೈಸ್ಕೂಲುಗಳು, ಒಂದು ಸಂಸ್ಕೃತ ಕಲಾಶಾಲೆ, ಉಪಾಧ್ಯಾಯರ ತರಬೇತಿ ಶಾಲೆ, ಹಲವಾರು ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳು, ಹಸುರು ಭಂಗಾರದ ಗಸಿಯಂತಿರುವ ಪರಪ್ಪೆಯ ಕಾಡು, ವಿಶಾಲಕ್ಕೆಹರಡಿದಫಲಸಮೃದ್ಧವಾದ ಸಮುದ್ರ ತೀರ, ಜಾತೀಯ ವೈಷಮ್ಯಗಳಿಗೆ ಎಡೆಕೊಡದ ಪುರಾತನ ಸಂಸ್ಕೃತಿ, ತೀರದ ಉದ್ದಕ್ಕೂ ಹಾಯುವ ರೈಲುಮಾರ್ಗ— ಇವೆಲ್ಲವನ್ನೊಳಗೊಂಡ, ಐದು ಫಿರ್ಕಗಳಲ್ಲಿ ೧೧೪ ಗ್ರಾಮಗಳಿದ್ದು ಆಡಳಿತೆಗೆ ಯಾವ ತೊಂದರೆಯೂ ಇರದ ರಾಜಕೀಯ ಪಕ್ಷಗಳ ವಿಶೇಷ ಘರ್ಷಣೆಗಳಿಲ್ಲದ, ಶಾಂತಸ್ವಭಾವದ ಈ ಭೂಪ್ರದೇಶವನ್ನು ಕೇರಳ ಪ್ರಾಂತಕ್ಕೆ ಸೇರಿಸುವುದರಲ್ಲಿ ಯಾವ ನ್ಯಾಯವೂ ಇಲ್ಲ; ಮಾತ್ರವಲ್ಲದೆ ಅದು ಅನ್ಯಾಯವೆಂದರೂ ಸಹಜ.

ತುಳುನಾಡಿನ ಇತಿಹಾಸ

ಭಾಷೆ, ಸಂಸ್ಕೃತಿ, ಆರ್ಥಿಕ ಸ್ಥಿತಿ, ವ್ಯಾಪಾರ ವಹಿವಾಟು, ಆಡಳಿತೆಯ ಸೌಕರ್ಯ ಇವುಗಳನ್ನು ಬೇರೆಬೇರೆಯಾಗಿ ಅಥವಾ ಒಟ್ಟಿಗೆ ವಿಚಾರಿಸಿದಲ್ಲಿ ಒಂದೇ ಒಂದು ನಿರ್ಣಯ ವಾದೀತು: ಕರ್ನಾಟಕದಿಂದ ಇಲ್ಲಿಯ ನಿವಾಸಿಗಳನ್ನು ಬೇರ್ಪಡಿಸುವುದೆಂದರೆ ಅದು ಜನರ ಜೀವನದ — ಬದುಕಿನ ಪ್ರಶ್ನೆಯಾಗುತ್ತದೆ. ಒಂದು ಸಾವಿರ ಚದರ ಮೈಲಿಗಿಂತಲೂ ಹೆಚ್ಚು ವಿಸ್ತೀರ್ಣದ ಈ ಭೂ ಭಾಗ ತುಳುನಾಡು. ತೌಳವರು ಕನ್ನಡವನ್ನೆ ವ್ಯವಹಾರ ಭಾಷೆಯಾಗಿ ಅಂಗೀಕರಿಸಿದರು. ಇಕ್ಕೇರಿ ರಾಯರ (೧೫ನೇ ಶತಮಾನ) ಕಾಲದಲ್ಲಿ ಕಟ್ಟಿಸಲ್ಪಟ್ಟ ಕುಂಬಳೆ, ಕಾಸರಗೋಡು, ಚಂದ್ರಗಿರಿ, ಬೇಕಲ, ಕಾಂಚನಗಡ (ಕಾಂಞಂಗಾಡು ಅಥವಾ ಹೊಸದುರ್ಗ) ಇಲ್ಲೆಲ್ಲ ಇಂದೂ ಇರುವ ಕೋಟೆಗಳೂ ಈ ಕೋಟೆಗಳ ಸುತ್ತಲೂ ಇಂದೂ ಸಾವಿರಗಟ್ಟಲೆಯಲ್ಲಿ ಸ್ಥಿರವಾಸದಲ್ಲಿರುವ ಕನ್ನಡಿಗರೂ ಇದಕ್ಕೆ ಸಾಕ್ಷಿ ಸಾಕು! ಕಣ್ವತೀರ್ಥ, ಕಣ್ವಾಪುರ, ಅಡೂರು, ಮಧೂರು, ವಿಷ್ಣು ಮಂಗಲ ಇತ್ಯಾದಿ ಪವಿತ್ರ ಸ್ಥಳಗಳು ತುಳು ರಾಜ್ಯದಲ್ಲಿ ಪ್ರಖ್ಯಾತವಾಗಿದ್ದವು. ಇಂದಿನ ಕವ್ಯಾ (ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿ)ಗಿಂತಲೂ ದಕ್ಷಿಣದ ಪೆರುಂಪುಯದ (ದೊಡ್ಡ ಹೊಳೆ) ವರೆಗೂ ತುಳು ರಾಜ್ಯವು ಗೋಕರ್ಣದಿಂದ ದಕ್ಷಿಣಕ್ಕೆ, ಪಶ್ಚಿಮ ಘಟ್ಟಗಳ ಪಶ್ಚಿಮಕ್ಕೆ ವ್ಯಾಪಿಸಿತ್ತೆಂದು ಡಾ. ಬಿ. ಎ. ಸಾಲೆತ್ತೂರರು ಬರೆದ ಪ್ರಾಚೀನ ಕರ್ನಾಟಕ ಪುಸ್ತಕದಲ್ಲಿ ಕಾಣಬಹುದು.

ವ್ಯವಹಾರದಲ್ಲಿ ಕನ್ನಡ

ಬ್ರಿಟಿಷರಿಂದ ವಿಭಾಗಿಸಲ್ಪಟ್ಟ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಜನರು ಕನ್ನಡವನ್ನು ಬೋಧ ಭಾಷೆಯೂ ವ್ಯವಹಾರದ ಭಾಷೆಯೂ ಆಗಿ ಇಟ್ಟುಕೊಂಡಿದ್ದರು. ಇಂದಿಗೂ ಕಾಸರಗೋಡು ತಾಲೂಕಿನ ಎಲ್ಲ ಗ್ರಾಮ ರಿಕಾರ್ಡುಗಳೂ ಕಾಸರಗೋಡು, ಮಂಜೇಶ್ವರ ಮತ್ತು ಹೊಸದುರ್ಗಗಳ ಉಪಜಿಸ್ತ್ರಾರರ ಕಚೇರಿಯಲ್ಲಿ ವ್ಯವಹಾರದ ಭಾಷೆಯೂ ಕನ್ನಡವಾಗಿದೆ. ಇಲ್ಲಿಯ ಎಲ್ಲ ಶಾಲೆಗಳಲ್ಲಿ ಶಿಕ್ಷಣ ಭಾಷೆಯು ಕನ್ನಡ. ಎಲ್ಲ ವಹಿವಾಟುಗಳನ್ನು ಬರೆದಿಡುವ ದಾಖಲೆಗಳು ಕನ್ನಡದಲ್ಲಿವೆ. ನ್ಯಾಯ ಸ್ಥಾನದ ಭಾಷೆಯೂ ಕನ್ನಡ. ವಿದ್ಯಾರ್ಥಿಗಳು ಉಚ್ಚ ಶಿಕ್ಷಣಕ್ಕೆ ಮಂಗಳೂರಿಗೆ ಹೋಗುತ್ತಾರೆ. ಇತ್ತೀಚೆಯ ವರೆಗೆ ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಕನ್ನಡವನ್ನು ಕಲಿಸುತ್ತಿದ್ದರು. ಹೊಸದುರ್ಗದ ಹೈಸ್ಕೂಲಿನಲ್ಲಿ ಕನ್ನಡವಿದೆ. ೧೯೪೮ರ ಅಂತ್ಯದಲ್ಲಿ ಕಾಸರಗೋಡಿನಲ್ಲಿಯೇ ಕರ್ನಾಟಕ ಏಕೀಕರಣ ಹಾಗು ಸಾಹಿತ್ಯ ಪರಿಷತ್ತುಗಳು ಜರಗಿದವು. "ಕೇರಳವು ಚಂದ್ರಗಿರಿ ಹೊಳೆಯ ಉತ್ತರಕ್ಕೆ ಇರುವ ಪ್ರದೇಶವನ್ನು ಆಶಿಸಲು ಸಾಧ್ಯವಿಲ್ಲ" ಎಂದು ೧೯೪೮ರಲ್ಲಿ ತಿರುವನಂತಪುರ ಮತ್ತು ತ್ರಿಚೂರುಗಳಲ್ಲಿ ಸೇರಿದ್ದ ಮಲೆಯಾಳ ಪರಿಷತ್ತುಗಳಲ್ಲಿ ಅಂದು ಮದ್ರಾಸಿನ ನ್ಯಾಯಾಂಗ ಮಂತ್ರಿಯಾಗಿದ್ದ ಶ್ರೀ ಮಾಧವ ಮೆನೋನರೂ "ಕೇರಳದ ಗಾಂಧಿ" ಕೇಳಪ್ಪನವರೂ ಹೇಳಿದ್ದರು.

ವ್ಯಾಪಾರ ಮತ್ತು ಪ್ರಾಕೃತಿಕ ದೃಷ್ಟಿಯಲ್ಲಿ

ಪ್ರಾಕೃತಿಕ ದೃಷ್ಟಿಯಲ್ಲಿ ನೋಡಿದರೂ ಈ ತಾಲೂಕು ಈಗಿನಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲೆ ಇದ್ದು ಕರ್ನಾಟಕವನ್ನೆ ಸೇರಬೇಕು ಈ ಜಿಲ್ಲೆಯ ಅತಿ ದಕ್ಷಿಣದಲ್ಲಿ ಪಶ್ಚಿಮಘಟ್ಟಗಳೇ ಕರಾವಳಿಗೆ ಸಮೀಪಿಸಿ ಕೇರಳಕ್ಕೂ ಕರ್ನಾಟಕಕ್ಕೂ ಪ್ರಾಕೃತಿಕ ಮೇರೆಯಾಗಿ ಮಧ್ಯೆ ನಿಂತಿರುವುದನ್ನು ಯಾರಾದರೂ ರೈಲಿನಿಂದಲೇ ನೋಡಬಹುದಾಗಿದೆ. ಇಲ್ಲಿಯ ಆಡಳಿತೆಯು ಮಂಗಳೂರು ಕೇಂದ್ರದಿಂದ ನಡೆಸಲ್ಪಟ್ಟಿದೆ. ಹೊಸದುರ್ಗವನ್ನು ಬಿಟ್ಟು ಉಳಿದ ತಾಲೂಕಿನ ಉತ್ತರ ಪ್ರದೇಶದಲ್ಲಿ ಆರ್ಥಿಕ ದೃಷ್ಟಿಯಲ್ಲಿ ಮುಖ್ಯವಾದ ಬೆಳೆ ಅಡಿಕೆಯಾಗಿದೆ. ಅತ್ಯುತ್ತಮವಾದ ಬಿಳಿಗೋಟು ಈ ಪ್ರದೇಶದಲ್ಲಿ ಉತ್ಪಾದನೆ ಹೊಂದುತ್ತದೆ. ಇಲ್ಲಿ ಬೆಳೆಯುವ ಸುಮಾರು ಒಂದು ಕೋಟಿ ರೂಪಾಯಿ ಮೂಲ್ಯದ ಸುಮಾರು ಹದಿನೈದು ಸಾವಿರ ಖಂಡಿಯಷ್ಟು ಅಡಿಕೆಯು ಮಂಗಳೂರಿನ ಬಂದರದ ಮೂಲಕವೇ ವಿಕ್ರಯವಾಗುತ್ತದೆ.

ಮಂಗಳೂರಿಗೆ ಆಘಾತ

೧೯೪೮ರಲ್ಲಿ ಭಾಷಾವಾರು ಪ್ರಾಂತರ ಜನಾಸಮಿತಿಯು ಪ್ರಕಟಿಸಿದ ಪ್ರಶ್ನಾವಳಿಗಳನ್ನು ಉತ್ತರಿಸಿದವರ ಅಭಿಪ್ರಾಯ ಸಮರ್ಥನೆಯ ಆಧಾರವಾಗಿಯಾದರೂ ಮಂಗಳೂರಿನಲ್ಲಿ ಕಳೆದ ವರ್ಷ ಮಳೆಗಾಲದಲ್ಲಿ ಫಜಲ ಅಲಿ ಆಯೋಗದವರು ವಿವಿಧ ನಿಯೋಗಗಳಿಗೆ ಕೊಟ್ಟ ಆಶ್ವಾಸನೆಯ ಮೇರೆಗಾದರೂ ಕಾಸರಗೋಡು ತಾಲೂಕಿನ ತೀರ ದಕ್ಷಿಣದ ಕೆಲವು ಗ್ರಾಮಗಳ ಹೊರತು ಮಿಕ್ಕವು ಕೇರಳವನ್ನು ಸೇರುವ ಪ್ರಶ್ನೆಯೇ ಇರುವುದಿಲ್ಲ. ನೇತ್ರಾವತಿ ನದಿಯ ದಕ್ಷಿಣದ ವರೆಗೆ ಕೇರಳ ಪ್ರಾಂತ ವಿಸ್ತರಿಸಿದರಂತೂ ಮಂಗಳೂರಿನ ಅವನತಿ ಖಂಡಿತ. ಇದು ಕರ್ನಾಟಕ ಮತ್ತು ಕೇರಳಗಳ ಬಂದರಾಗುತ್ತದೆ. ದಕ್ಷಿಣ ರೈಲ್ವೆಯಲ್ಲಿ ಆಗ ಕರ್ನಾಟಕಕ್ಕೆ ಏನೇನೂ ಹಕ್ಕೇರದು. ಹಾಸನ ರೈಲ್ವೆಯು ಉಳ್ಳಾಲದಿಂದ ಕವಲೊಡೆದು ಹೋಗುವುದಾದರೆ ಉಳ್ಳಾಲವೂ ಸ್ವಾಭಾವಿಕವಾಗಿ ಅಭಿವೃದ್ಧಿಯಾಗಿ ಈ ಹೊಳೆ ರೈಲ್ವೆಯಲ್ಲಿಯೂ ಕೇರಳದ ಪ್ರಭಾವ ಉಳಿಯುತ್ತದೆ. ಮಡಿಕೇರಿಯು ಮಂಗಳೂರಿಗಿಂತ ಕುಂಬಳೆ, ಕಾಸರಗೋಡು, ಹೊಸದುರ್ಗಗಳಿಗೆ ಸಮೀಪವೆನಿಸುತ್ತದೆ; ಕೊಡಗಿನ ಎಲ್ಲ ಗ್ರಾಮಗಳ ಸೋಲೆ ಕೇರಳದ ಪ್ರಭಾವ ಬಲಗೊಳ್ಳುತ್ತದೆ. ಮಂಗಳೂರಿನ ವ್ಯಾಪಾರ ಕ್ಷೀಣಿಸುತ್ತದೆ.

ಒಕ್ಕೊರಲಿನ ಅಭಿಪ್ರಾಯ

ನಿಜ ಸ್ಥಿತಿ ಹೀಗಿರುವಾಗ ಆಯೋಗದವರು ಈ ತಾಲೂಕನ್ನು ಕೇರಳಕ್ಕೆ ಸೇರಿಸುವಂತೆ ಜನತೆಯ ಅಭಿಪ್ರಾಯಕ್ಕೆ ಘಾತಕವಾದ ವರದಿಯನ್ನು ಮಾಡುವುದಾದರೆ, ಅಂಥ ಅನ್ಯಾಯವನ್ನು ವಿರೋಧಿಸಲು ಸಮಯೋಚಿತವಾದ ಕಾರ್ಯಕ್ರಮವನ್ನು ಈ ತಾಲೂಕಿನವರೂ ದಕ್ಷಿಣ ಕನ್ನಡ ಜಿಲ್ಲೆಯವರೂ ವಿಶಾಲ ಕರ್ನಾಟಕದವರೂ ಕೈಗೊಳ್ಳಬೇಕಾಗಬಹುದು—ಬೇಕಾಗಿದೆ "ದಕ್ಷಿಣ ಕನ್ನಡವನ್ನು ವಿಭಜಿಸದೆ ಇಡೀ ಜಿಲ್ಲೆಯೂ ಕರ್ನಾಟಕದಲ್ಲಿ ಸೇರಬೇಕು" ಎಂಬುದೇ ನಮ್ಮ ಒಕ್ಕೊರಲಿನ ಕೂಗು ದಿಲ್ಲಿಯ ತನಕ ಕೇಳಬೇಕು— ಅರಣ್ಯರೋದನವಾಗಬಾರದು. ಕನ್ನಡಾಂಬೆಯ ಆಕಾರ ಮತ್ತು ಸಂಪತ್ತನ್ನು ಕಾಪಾಡುವುದಕ್ಕೆ ರಾಜ್ಯ ಮತ್ತು ಕೇಂದ್ರ ಸರಕಾರಗಳ ಪ್ರತಿನಿಧಿಗಳೂ ಇತರ ಧುರೀಣರೂ ಮುಂದಾಗಿ ಸರಕಾರವನ್ನು ಎಚ್ಚರಿಸಿ, ತಕ್ಕ ಸಲಹೆಗಳನ್ನು ಕೊಡುವ ಜವಾಬ್ದಾರಿಯನ್ನು ನಿರ್ವಹಿಸಿ ಜಯಶೀಲರಾಗುವರೆಂದು ನಂಬೋಣ!

("ರಾಷ್ಟ್ರಮತ"ದಿಂದ ಉದ್ಧೃತ)

ಕಾಸರಗೋಡು ತಾಲೂಕು

ಕನ್ನಡದ ನೆಲವೆಂಬುದು ತೀರ ಸ್ಪಷ್ಟ

ಸಂಪೂರ್ಣ ಕಾಸರಗೋಡು ತಾಲೂಕನ್ನು ಕೇರಳ ರಾಜ್ಯಕ್ಕೆ ಸಮರ್ಪಿಸಬೇಕೆಂದು ಫಜಲ ಅಲಿ ಆಯೋಗದವರು ಶಿಫಾರಸು ಮಾಡಿರುವುದಾಗಿ ತಿಳಿದು ಬರುತ್ತದೆ. ಚಂದ್ರಗಿರಿ ಹೊಳೆಯ ಉತ್ತರದಲ್ಲಿರುವ ಕಾಸರಗೋಡಿನ ನಿವಾಸಿಗಳು ಈ ಸಂಭವವನ್ನು ಸರ್ವಥಾ ಸಿಹಿಕ್ಷಿಸಿರಲಿಲ್ಲ. ಮೇಲ್ಕಟ್ಟಿದ ಸಮಿತಿಯವರು ಮಂಗಳೂರಿಗೆ ಬಂದಿದ್ದಾಗ ಹೊಸದುರ್ಗ ಉಪತಾಲೂಕಿನ ಹೊರತು ಉಳಿದ ಭಾಗವನ್ನು ಕೇರಳಕ್ಕೆ ಕೊಡುವ ಹಾಗಿಲ್ಲ. ಎನ್ನುವ ಆಶ್ವಾಸನೆಯ ಮಾತನ್ನು ಸರದಾರ ಕೆ. ಎಂ. ಪಣಿಕ್ಕರರು ಹೇಳಿದ್ದರು.

ಶಾಂತ ಭೂವಲಯ

ಇಡೀ ಕಾಸರಗೋಡು ತಾಲೂಕಿನಲ್ಲಿ ನಾಲ್ಕುಲಕ್ಷಕ್ಕೂ ಮಿಕ್ಕಿ ಜನಸಂಖ್ಯೆಯಿದೆ. ಭತ್ತದ ಬಯಲುಗಳು, ಅಡಿಕೆ ಮತ್ತು ತೆಂಗಿನ ತೋಟಗಳು, ಕಾಳುಮೆಣಸಿನ ತಪ್ಪಲುಗಳು, ೯ ಹೈಸ್ಕೂಲುಗಳು, ಒಂದು ಸಂಸ್ಕೃತ ಕಲಾಶಾಲೆ, ಉಪಾಧ್ಯಾಯರ ತರಬೇತಿ ಶಾಲೆ, ಹಲವಾರು ಮಾಧ್ಯಮಿಕ ಮತ್ತು ಪ್ರಾಥಮಿಕ ಶಾಲೆಗಳು, ಹಸುರು ಭಂಗಾರದ ಗಸಿಯಂತಿರುವ ಪರಪ್ಪೆಯ ಕಾಡು, ವಿಶಾಲಕ್ಕೆಹರಡಿದಫಲಸಮೃದ್ಧವಾದ ಸಮುದ್ರ ತೀರ, ಜಾತೀಯ ವೈಷಮ್ಯಗಳಿಗೆ ಎಡೆಕೊಡದ ಪುರಾತನ ಸಂಸ್ಕೃತಿ, ತೀರದ ಉದ್ದಕ್ಕೂ ಹಾಯುವ ರೈಲುಮಾರ್ಗ— ಇವೆಲ್ಲವನ್ನೊಳಗೊಂಡ, ಐದು ಫಿರ್ಕಗಳಲ್ಲಿ ೧೧೪ ಗ್ರಾಮಗಳಿದ್ದು ಆಡಳಿತೆಗೆ ಯಾವ ತೊಂದರೆಯೂ ಇರದ ರಾಜಕೀಯ ಪಕ್ಷಗಳ ವಿಶೇಷ ಘರ್ಷಣೆಗಳಿಲ್ಲದ, ಶಾಂತಸ್ವಭಾವದ ಈ ಭೂಪ್ರದೇಶವನ್ನು ಕೇರಳ ಪ್ರಾಂತಕ್ಕೆ ಸೇರಿಸುವುದರಲ್ಲಿ ಯಾವ ನ್ಯಾಯವೂ ಇಲ್ಲ; ಮಾತ್ರವಲ್ಲದೆ ಅದು ಅನ್ಯಾಯವೆಂದರೂ ಸಹಜ.

ತುಳುನಾಡಿನ ಇತಿಹಾಸ

ಭಾಷೆ, ಸಂಸ್ಕೃತಿ, ಆರ್ಥಿಕ ಸ್ಥಿತಿ, ವ್ಯಾಪಾರ ವಹಿವಾಟು, ಆಡಳಿತೆಯ ಸೌಕರ್ಯ ಇವುಗಳನ್ನು ಬೇರೆಬೇರೆಯಾಗಿ ಅಥವಾ ಒಟ್ಟಿಗೆ ವಿಚಾರಿಸಿದಲ್ಲಿ ಒಂದೇ ಒಂದು ನಿರ್ಣಯ ವಾದೀತು: ಕರ್ನಾಟಕದಿಂದ ಇಲ್ಲಿಯ ನಿವಾಸಿಗಳನ್ನು ಬೇರ್ಪಡಿಸುವುದೆಂದರೆ ಅದು ಜನರ ಜೀವನದ — ಬದುಕಿನ ಪ್ರಶ್ನೆಯಾಗುತ್ತದೆ. ಒಂದು ಸಾವಿರ ಚದರ ಮೈಲಿಗಿಂತಲೂ ಹೆಚ್ಚು ವಿಸ್ತೀರ್ಣದ ಈ ಭೂ ಭಾಗ ತುಳುನಾಡು. ತೌಳವರು ಕನ್ನಡವನ್ನೆ ವ್ಯವಹಾರ ಭಾಷೆಯಾಗಿ ಅಂಗೀಕರಿಸಿದರು. ಇಕ್ಕೇರಿ ರಾಯರ (೧೫ನೇ ಶತಮಾನ) ಕಾಲದಲ್ಲಿ ಕಟ್ಟಿಸಲ್ಪಟ್ಟ ಕುಂಬಳೆ, ಕಾಸರಗೋಡು, ಚಂದ್ರಗಿರಿ, ಬೇಕಲ, ಕಾಂಚನಗಡ (ಕಾಂಞಂಗಾಡು ಅಥವಾ ಹೊಸದುರ್ಗ) ಇಲ್ಲೆಲ್ಲ ಇಂದೂ ಇರುವ ಕೋಟೆಗಳೂ ಈ ಕೋಟೆಗಳ ಸುತ್ತಲೂ ಇಂದೂ ಸಾವಿರಗಟ್ಟಲೆಯಲ್ಲಿ ಸ್ಥಿರವಾಸದಲ್ಲಿರುವ ಕನ್ನಡಿಗರೂ ಇದಕ್ಕೆ ಸಾಕ್ಷಿ ಸಾಕು! ಕಣ್ವತೀರ್ಥ, ಕಣ್ವಾಪುರ, ಅಡೂರು, ಮಧೂರು, ವಿಷ್ಣು ಮಂಗಲ ಇತ್ಯಾದಿ ಪವಿತ್ರ ಸ್ಥಳಗಳು ತುಳು ರಾಜ್ಯದಲ್ಲಿ ಪ್ರಖ್ಯಾತವಾಗಿದ್ದವು. ಇಂದಿನ ಕವ್ಯಾ (ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಗಡಿ)ಗಿಂತಲೂ ದಕ್ಷಿಣದ ಪೆರುಂಪುಯದ (ದೊಡ್ಡ ಹೊಳೆ) ವರೆಗೂ ತುಳು ರಾಜ್ಯವು ಗೋಕರ್ಣದಿಂದ ದಕ್ಷಿಣಕ್ಕೆ, ಪಶ್ಚಿಮ ಘಟ್ಟಗಳ ಪಶ್ಚಿಮಕ್ಕೆ ವ್ಯಾಪಿಸಿತ್ತೆಂದು ಡಾ. ಬಿ. ಎ. ಸಾಲೆತ್ತೂರರು ಬರೆದ ಪ್ರಾಚೀನ ಕರ್ನಾಟಕ ಪುಸ್ತಕದಲ್ಲಿ ಕಾಣಬಹುದು.

ವ್ಯವಹಾರದಲ್ಲಿ ಕನ್ನಡ

ಬ್ರಿಟಿಷರಿಂದ ವಿಭಾಗಿಸಲ್ಪಟ್ಟ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಜನರು ಕನ್ನಡವನ್ನು ಬೋಧ ಭಾಷೆಯೂ ವ್ಯವಹಾರದ ಭಾಷೆಯೂ ಆಗಿ ಇಟ್ಟುಕೊಂಡಿದ್ದರು. ಇಂದಿಗೂ ಕಾಸರಗೋಡು ತಾಲೂಕಿನ ಎಲ್ಲ ಗ್ರಾಮ ರಿಕಾರ್ಡುಗಳೂ ಕಾಸರಗೋಡು, ಮಂಜೇಶ್ವರ ಮತ್ತು ಹೊಸದುರ್ಗಗಳ ಉಪಜಿಸ್ತ್ರಾರರ ಕಚೇರಿಯಲ್ಲಿ ವ್ಯವಹಾರದ ಭಾಷೆಯೂ ಕನ್ನಡವಾಗಿದೆ. ಇಲ್ಲಿಯ ಎಲ್ಲ ಶಾಲೆಗಳಲ್ಲಿ ಶಿಕ್ಷಣ ಭಾಷೆಯು ಕನ್ನಡ. ಎಲ್ಲ ವಹಿವಾಟುಗಳನ್ನು ಬರೆದಿಡುವ ದಾಖಲೆಗಳು ಕನ್ನಡದಲ್ಲಿವೆ. ನ್ಯಾಯ ಸ್ಥಾನದ ಭಾಷೆಯೂ ಕನ್ನಡ. ವಿದ್ಯಾರ್ಥಿಗಳು ಉಚ್ಚ ಶಿಕ್ಷಣಕ್ಕೆ ಮಂಗಳೂರಿಗೆ ಹೋಗುತ್ತಾರೆ. ಇತ್ತೀಚೆಯ ವರೆಗೆ ನೀಲೇಶ್ವರದ ರಾಜಾಸ್ ಹೈಸ್ಕೂಲಿನಲ್ಲಿ ಕನ್ನಡವನ್ನು ಕಲಿಸುತ್ತಿದ್ದರು. ಹೊಸದುರ್ಗದ ಹೈಸ್ಕೂಲಿನಲ್ಲಿ ಕನ್ನಡವಿದೆ. ೧೯೪೮ರ ಅಂತ್ಯದಲ್ಲಿ ಕಾಸರಗೋಡಿನಲ್ಲಿಯೇ ಕರ್ನಾಟಕ ಏಕೀಕರಣ ಹಾಗು ಸಾಹಿತ್ಯ ಪರಿಷತ್ತುಗಳು ಜರಗಿದವು. "ಕೇರಳವು ಚಂದ್ರಗಿರಿ ಹೊಳೆಯ ಉತ್ತರಕ್ಕೆ ಇರುವ ಪ್ರದೇಶವನ್ನು ಆಶಿಸಲು ಸಾಧ್ಯವಿಲ್ಲ" ಎಂದು ೧೯೪೮ರಲ್ಲಿ ತಿರುವನಂತಪುರ ಮತ್ತು ತ್ರಿಚೂರುಗಳಲ್ಲಿ ಸೇರಿದ್ದ ಮಲೆಯಾಳ ಪರಿಷತ್ತುಗಳಲ್ಲಿ ಅಂದು ಮದ್ರಾಸಿನ ನ್ಯಾಯಾಂಗ ಮಂತ್ರಿಯಾಗಿದ್ದ ಶ್ರೀ ಮಾಧವ ಮೆನೋನರೂ "ಕೇರಳದ ಗಾಂಧಿ" ಕೇಳಪ್ಪನವರೂ ಹೇಳಿದ್ದರು.

ವ್ಯಾಪಾರ ಮತ್ತು ಪ್ರಾಕೃತಿಕ ದೃಷ್ಟಿಯಲ್ಲಿ

ಪ್ರಾಕೃತಿಕ ದೃಷ್ಟಿಯಲ್ಲಿ ನೋಡಿದರೂ ಈ ತಾಲೂಕು ಈಗಿನಂತೆ ದಕ್ಷಿಣಕನ್ನಡ ಜಿಲ್ಲೆಯಲ್ಲೆ ಇದ್ದು ಕರ್ನಾಟಕವನ್ನೆ ಸೇರಬೇಕು ಈ ಜಿಲ್ಲೆಯ ಅತಿ ದಕ್ಷಿಣದಲ್ಲಿ ಪಶ್ಚಿಮಘಟ್ಟಗಳೇ ಕರಾವಳಿಗೆ ಸಮೀಪಿಸಿ ಕೇರಳಕ್ಕೂ ಕರ್ನಾಟಕಕ್ಕೂ ಪ್ರಾಕೃತಿಕ ಮೇರೆಯಾಗಿ ಮಧ್ಯೆ ನಿಂತಿರುವುದನ್ನು ಯಾರಾದರೂ ರೈಲಿನಿಂದಲೇ ನೋಡಬಹುದಾಗಿದೆ. ಇಲ್ಲಿಯ ಆಡಳಿತೆಯು ಮಂಗಳೂರು ಕೇಂದ್ರದಿಂದ ನಡೆಸಲ್ಪಟ್ಟಿದೆ. ಹೊಸದುರ್ಗವನ್ನು ಬಿಟ್ಟು ಉಳಿದ ತಾಲೂಕಿನ ಉತ್ತರ ಪ್ರದೇಶದಲ್ಲಿ ಆರ್ಥಿಕ ದೃಷ್ಟಿಯಲ್ಲಿ ಮುಖ್ಯವಾದ ಬೆಳೆ ಅಡಿಕೆಯಾಗಿದೆ. ಅತ್ಯುತ್ತಮವಾದ ಬಿಳಿಗೋಟು ಈ ಪ್ರದೇಶದಲ್ಲಿ ಉತ್ಪಾದನೆ ಹೊಂದುತ್ತದೆ. ಇಲ್ಲಿ ಬೆಳೆಯುವ ಸುಮಾರು ಒಂದು ಕೋಟಿ ರೂಪಾಯಿ ಮೂಲ್ಯದ ಸುಮಾರು ಹದಿನೈದು ಸಾವಿರ ಖಂಡಿಯಷ್ಟು ಅಡಿಕೆಯು ಮಂಗಳೂರಿನ ಬಂದರದ ಮೂಲಕವೇ ವಿಕ್ರಯವಾಗುತ್ತದೆ.

ಮಂಗಳೂರಿಗೆ ಆಘಾತ

೧೯೪೮ರಲ್ಲಿ ಭಾಷಾವಾರು ಪ್ರಾಂತರ ಜನಾಸಮಿತಿಯು ಪ್ರಕಟಿಸಿದ ಪ್ರಶ್ನಾವಳಿಗಳನ್ನು ಉತ್ತರಿಸಿದವರ ಅಭಿಪ್ರಾಯ ಸಮರ್ಥನೆಯ ಆಧಾರವಾಗಿಯಾದರೂ ಮಂಗಳೂರಿನಲ್ಲಿ ಕಳೆದ ವರ್ಷ ಮಳೆಗಾಲದಲ್ಲಿ ಫಜಲ ಅಲಿ ಆಯೋಗದವರು ವಿವಿಧ ನಿಯೋಗಗಳಿಗೆ ಕೊಟ್ಟ ಆಶ್ವಾಸನೆಯ ಮೇರೆಗಾದರೂ ಕಾಸರಗೋಡು ತಾಲೂಕಿನ ತೀರ ದಕ್ಷಿಣದ ಕೆಲವು ಗ್ರಾಮಗಳ ಹೊರತು ಮಿಕ್ಕವು ಕೇರಳವನ್ನು ಸೇರುವ ಪ್ರಶ್ನೆಯೇ ಇರುವುದಿಲ್ಲ. ನೇತ್ರಾವತಿ ನದಿಯ ದಕ್ಷಿಣದ ವರೆಗೆ ಕೇರಳ ಪ್ರಾಂತ ವಿಸ್ತರಿಸಿದರಂತೂ ಮಂಗಳೂರಿನ ಅವನತಿ ಖಂಡಿತ. ಇದು ಕರ್ನಾಟಕ ಮತ್ತು ಕೇರಳಗಳ ಬಂದರಾಗುತ್ತದೆ. ದಕ್ಷಿಣ ರೈಲ್ವೆಯಲ್ಲಿ ಆಗ ಕರ್ನಾಟಕಕ್ಕೆ ಏನೇನೂ ಹಕ್ಕೇರದು. ಹಾಸನ ರೈಲ್ವೆಯು ಉಳ್ಳಾಲದಿಂದ ಕವಲೊಡೆದು ಹೋಗುವುದಾದರೆ ಉಳ್ಳಾಲವೂ ಸ್ವಾಭಾವಿಕವಾಗಿ ಅಭಿವೃದ್ಧಿಯಾಗಿ ಈ ಹೊಳೆ ರೈಲ್ವೆಯಲ್ಲಿಯೂ ಕೇರಳದ ಪ್ರಭಾವ ಉಳಿಯುತ್ತದೆ. ಮಡಿಕೇರಿಯು ಮಂಗಳೂರಿಗಿಂತ ಕುಂಬಳೆ, ಕಾಸರಗೋಡು, ಹೊಸದುರ್ಗಗಳಿಗೆ ಸಮೀಪ

ಸಿಂಹ ಮೇಳ ಕಾಲದ ನಾಸಿಕ

ರಾಮಾಯಣದ ನೆನಪಾಗುವ ಮಂದಿರಗಳ ನಗರ

ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ೧೯೫೪ನೇ ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಜರಗಿದ ಕುಂಭ ಮೇಳದ ನೆನಪು ಮಾಡಿಕೊಡುವ ಸಿಂಹ ಮೇಳವು ನಾಸಿಕದಲ್ಲಿ ಇದೇ ೨೦ನೇ ದಿನಾಂಕದಿಂದ ತೊಡಗಿದೆ. ಭಾರತದ ಎಲ್ಲೆಡೆಯಿಂದಲೂ ದಿನಕ್ಕೆ ಸಂಖಾರಿ ಕತ್ತಿ ಸಾವಿರದಂತೆ ಯಾತ್ರಿಕರು ನಾಸಿಕ ಮತ್ತು ಅದಕ್ಕೆ ಹದಿನೆಂಟು ಮೈಲು ಪಶ್ಚಿಮದಲ್ಲಿರುವ ತ್ರ್ಯಂಬಕೇಶ್ವರಗಳಿಗೆ ಈ ಸರ್ವಕಾಲದಲ್ಲಿ ಬರುತ್ತಿದ್ದಾರೆ.

ಪ್ರಸಿದ್ಧ ಪುಣ್ಯ ಕ್ಷೇತ್ರ

ರಾಮಾಯಣ ಕಾಲದಲ್ಲಿ ದಂಡಕಾರಣ್ಯ ಎಂಬುದಾಗಿ ಪ್ರಸಿದ್ಧವಾಗಿದ್ದ ಪಲಯದಲ್ಲಿ ನಾಸಿಕ ನೆಲಸಿದೆ. ಮಹಾರಾಷ್ಟ್ರದ ತಿಲಕದಂತಿರುವ ಈ ನಗರಕ್ಕೆ ರಾಜಕೀಯ, ಧಾರ್ಮಿಕ ಹಾಗು ಸಾಂಸ್ಕೃತಿಕ ದೃಷ್ಟಿಯಿಂದ ತುಂಬ ಮಹತ್ವ ಸಲ್ಲುತ್ತದೆ. ನಮ್ಮ ಸರಕಾರದ ಮನ್ನಣೆ ಪಡೆದು ನೋಟು ಮತ್ತು ಅಂಚೆಚೀಟುಗಳ ರೂಪದಲ್ಲಿ ಚಲಾವಣೆಗೆ ಬರುವ ಕಾಗದದ ಚೂರುಗಳ ಮುದ್ರಣ ನಡೆಸುವ ಕಾರ್ಖಾನೆ ಈ ನಗರಕ್ಕೆ ಹತ್ತಿರದಲ್ಲಿಯೇ ಇದೆ.

ವೈಷ್ಣವರಿಗೆ ನಾಸಿಕವು ಪುಣ್ಯಕ್ಷೇತ್ರ; ಶೈವರಿಗೆ ತ್ರ್ಯಂಬಕೇಶ್ವರವು ಯಾತ್ರಾಸ್ಥಳ. ಇವರೆರಡೂ ಗೋದಾವರಿ ನದಿಯ ದಂಡೆಯಲ್ಲಿವೆ. ನದಿಯ ಮೂಲ ತ್ರ್ಯಂಬಕೇಶ್ವರದಲ್ಲಿದೆ. ಸಿಂಹಮೇಳದ ಉತ್ಸವ ನಡೆದಾಗ ಸಮುದ್ರ, ನದಿ, ಕುಂಡಗಳಾದಿಯಾಗಿ ಎಲ್ಲ ತೀರ್ಥಗಳೂ ಗೌತಮರಾದಿಯಾಗಿ ಆಶ್ರಮ ವಾಸಿಗಳಾದ ಎಲ್ಲ ಋಷಿಗಳೂ ಸ್ವರ್ಗದಲ್ಲಿರುವ ಇಂದ್ರಾದಿ ಸಮಸ್ತ ದೇವತೆಗಳೂ ಕಾತರಿಯೇ ಮುಂತಾದ ಪವಿತ್ರ ಸ್ಥಾನಗಳೂ ಗೋದಾವರಿ ನದಿಯಲ್ಲಿ ಸಮಾವೇಶಗೊಂಡು ಅದರ ಪಾವಿತ್ರ್ಯ ಸಂವರ್ಧನೆಯಾಗುತ್ತದೆಂದು ಜನರ ವಿಶ್ವಾಸ.

ಗೋದಾವರಿಯ ರಮಣೀಯತೆ

ಆದುದರಿಂದಲೇ ಗೋದಾವರಿಯಲ್ಲಿ ಸ್ನಾನಮಾಡಿ, ಪಾಪಶೇಷಗಳನ್ನೆಲ್ಲ ಕಳೆಯುವ ಹಂಬಲ ಜನರಿಗೆ ಆಗುತ್ತದೆ. ಕೃತಯುಗದಲ್ಲಿ ನಡೆದ ಅನೇಕ ಘಟನೆಗಳು ನಾಸಿಕದ ಮಹಿಮೆಯನ್ನು ಕೊಂಡಾಡುತ್ತವೆ. ತ್ರೇತಾಯುಗದ ಸೀತಾರಾಮರ ಪಾಲಿಗೆ ಗೋದಾವರಿಯ ತಟವು ಅರಮನೆಯಲ್ಲಿಯೂ ಸಿಗಲಾರದ ಶಾಂತಿ, ಸಮಾಧಾನಗಳನ್ನು ದೊರಕಿಸಿ ಕೊಟ್ಟಿತು. ಇಲ್ಲಿಯ ರಮಣೀಯತೆಯನ್ನು ವಾಲ್ಮೀಕಿ ವರ್ಣಿಸಿರುವ ವೈಖರಿಯು ಓದುಗನನ್ನು ಮುಗ್ಧಗೊಳಿಸುತ್ತದೆ.

ಉತ್ಸವ ಕಾಲದಲ್ಲಿ ಭಾರತದ ಬೇರೆ ಬೇರೆ ಮತಗಳ ಅಧಿಪತಿಗಳು ತಮ್ಮ ಶಿಷ್ಯ ಸಮೂಹದೊಡನೆ ಇಲ್ಲಿಗೆ ಚಿತ್ತೈಸುತ್ತಾರೆ. ದೊಡ್ಡ ಮೆರವಣಿಗೆಯನ್ನು ತೆಗೆದು ರಾಮಕುಂಡದಲ್ಲಿ ಸ್ನಾನ ಮಾಡುವುದಕ್ಕೋಸ್ಕರ ಹೋಗುತ್ತಾರೆ. ಅವರ ದಳಗಳ ಮುಂದೆ ವಿಶೇಷ ಧ್ವಜಗಳು ಹಾರಾಡುತ್ತಿರುತ್ತವೆ; ಬಗೆಬಗೆಯ ಆಟಗಳನ್ನು ಆಡುವವರು ಮೆರವಣಿಗೆಯಲ್ಲಿರುತ್ತಾರೆ; ಇದರಿಂದಲೂ ಉತ್ಸಾಹದ ಘೋಷಣೆ ಮಾಡುತ್ತಾ ಮೆರವಣಿಗೆಯಲ್ಲಿ ಸಾಗುವವರಿಂದಲೂ ಎಲ್ಲ ಜನರಿಗೂ ಆನಂದವಾಗುತ್ತದೆ.

ಶಾಸ್ತ್ರಿಗಳ ಭಿನ್ನಾಭಿಪ್ರಾಯ

ಶಾಸ್ತ್ರ ವಾರಂಗತರಲ್ಲಿ ಸಿಂಹಮೇಳದ ಸ್ವರೂಪದ ಕುರಿತು ಈ ಸಲ ಭಿನ್ನಾಭಿಪ್ರಾಯ ಕಂಡು ಬಂತು. ಗುರುವು ಸಿಂಹರಾಶಿಯಲ್ಲಿ ಕ್ರಮಿಸುವಾಗ ಈ ಉತ್ಸವ ಆಚರಿಸಲ್ಪಡುತ್ತದೆ—ಈ ಕ್ರಮಣ ಕಾಲವು ಅಖಂಡವಾಗಿದೆ ಎಂದು ನಾಸಿಕದ ಪಂಡಿತರು ಹೇಳುತ್ತಿದ್ದಾರೆ; ತ್ರ್ಯಂಬಕೇಶ್ವರದವರು ಎರಡು ಸಲ ಗುರುವಿನ ಕ್ರಮಣಕ್ಕೆ ಭಂಗ ಬರುವುದೆನ್ನುತ್ತಾ ತ್ರಿಖಂಡ ಸರ್ವಕಾಲವೆಂದು ಅಭಿಪ್ರಾಯ ಪಡುತ್ತಿದ್ದಾರೆ

ಪಂಡಿತರು ಕೆಲವರು ಜನಿವಾಹಿತರಿಗೆ ಬೇಸರ ತರಿಸುವ ಒಂದು ನಿರ್ಣಯವನ್ನು ಮಾಡಿದರೆಂದು ತಿಳಿದು ಬರುತ್ತದೆ. ಉತ್ಸವದ ಕಾಲದಲ್ಲಿ ಮದುವೆ ನಡೆಸುವುದು ಶಾಸ್ತ್ರ ವಿರುದ್ಧವೆಂದು ಇವರ ಅಭಿಪ್ರಾಯ. ಆದರೆ ಇದು ಪಂಡಿತೋತ್ತಮ ವರ್ಗದ ಬೇರೆ ಕೆಲವರಿಗೆ ಒಪ್ಪಿಗೆಯಾಗಲಿಲ್ಲ. ಭಾರತದ ಮೂಲೆಮೂಲೆಯಿಂದ ಕಲೆತ ಉದ್ದಾಮ ಶಾಸ್ತ್ರಿಗಳು ಬೇರೆ ಬೇರೆ ಶಾಸ್ತ್ರ ಗ್ರಂಥಗಳನ್ನು ಬಿಡಿಸಿ ಬಿಡಿಸಿ ನೋಡಿ, ಸುಮಾರು ಹನ್ನೆರಡು ದಿನಗಳನ್ನು ಹುಡುಕಿ ತೆಗೆದು, ಈ ಮುಹೂರ್ತಗಳಲ್ಲಿ ಮದುವೆ ನಡೆಸಬಹುದು ಎಂಬುದಾಗಿ ಈಗ ತೀರ್ಪು ಕೊಟ್ಟಿದ್ದಾರೆ.

ಕಾಲಾರಾಮ ಮಂದಿರ

ಪುಣ್ಯ ಸ್ನಾನದ ಉತ್ಸುಕತೆ ಇಲ್ಲದಿದ್ದರೂ ನಾಸಿಕ ಮತ್ತು ಆಸುಪಾಸಿನ ಪ್ರೇಕ್ಷಣೀಯ ದೃಶ್ಯಗಳಿಂದ ಸಂತೋಷಪಡುವುದಕ್ಕೋಸ್ಕರವಾದರೂ ಪ್ರವಾಸಿಪ್ರಿಯರು ಅಲ್ಲಿಗೆ ಹೋಗಬೇಕು-ಕಾಲಾರಾಮ ಮಂದಿರ ಎಂಬುದು ಇಲ್ಲಿಯ ವಿಶಾಲವಾದ ದೇವಾಲಯ; ಇದನ್ನು ನೋಡದೆಯಾರೂ ಮರಳಬಾರದು. ೧೭೭೮ರಲ್ಲಿ ಇದನ್ನು ಈಗಿನ ರೂಪದಲ್ಲಿ ರಚಿಸುವ ಕೆಲಸವನ್ನು ತೊಡಗಿ, ಹನ್ನೆರಡು ವರ್ಷಗಳಲ್ಲಿ ಈ ಕಾರ್ಯವನ್ನು ಮುಗಿಸಲಾಯಿತು.

ಮಂದಿರದ ಕಳಸವು ಸುವರ್ಣಖೋಚಿತವಾಗಿದೆ—ಎರಡು ಸಾವಿರ ಜನರು ಸುಖದಿಂದ ಕುಳಿತಿರುವಷ್ಟು ವಿಶಾಲವಾದ ಸಭಾಂಗಣವಿದೆ. ಪೂರ್ವ ದ್ವಾರವನ್ನು ಎಷ್ಟು ಚಮತ್ಕಾರದಿಂದ ಕಟ್ಟಿಸಲಾಗಿದೆ ಎಂದರೆ, ಮೇಷ ಮತ್ತು ತುಲಾ ಸಂಕ್ರಮಣದ ದಿನಗಳಲ್ಲಿ ಸೂರ್ಯೋದಯದ ಹೊತ್ತಿಗೆ ರವಿ ಕಿರಣಗಳು ನೇರಾಗಿ ಕರಿ ಶಿಲೆಯಿಂದ ಮಾಡಿದ ಗರ್ಭಗುಡಿಯ ಮೂರ್ತಿಗಳ ಮೇಲೆ ಬೀಳುತ್ತವೆ!

ನದಿಗೆ ಹೋಗುವ ಮಾರ್ಗದಲ್ಲಿ ಗೋರಾರಾಮ ಮಂದಿರ ಎಂಬ ಇನ್ನೊಂದು ದೇವಾಲಯವಿದೆ—ಇಲ್ಲಿರುವ ಮೂರ್ತಿಗಳನ್ನು ಶಿಲಿತಿಲೆಯಲ್ಲಿ ಕೆತ್ತಿದ್ದಾರೆ. ಮಂದಿರದಿಂದ ನದಿಗೆ ಇಳಿದು ಹೋಗಲು ೪೦ ಪಾವಟಿಗೆಗಳಿವೆ. ಸುಂದರ ನಾರಾಯಣ ಎಂಬುದು ಇನ್ನೊಂದು ಪ್ರಸಿದ್ಧ ಮಂದಿರ ಇಲ್ಲಿಯ ಸ್ಥಾಪತ್ಯ ಹಾಗು ಚಿತ್ರ ಕಲೆಯ ವೈಭವ ಕಣ್ಮನಗಳನ್ನು ಸೂರೆಗೊಳ್ಳುತ್ತದೆ; ತೃಪ್ತಿಪಡಿಸುತ್ತದೆ. ೧೭೫೭ರಲ್ಲಿ ಕಟ್ಟಿಸಲಾದ ಈ ಮಂದಿರದ ವಿಶೇಷವೆಂದರೆ, ಬೈತ್ರ ಶುಕ್ಲ ಪ್ರತಿಪದೆಯಂದು ಸೂರ್ಯೋದಯದ ಹೊತ್ತಿಗೆ ದೇವಮೂರ್ತಿಯ ಚರಣಸ್ಪರ್ಶವನ್ನು ರವಿಕಿರಣಗಳು ಮಾಡುತ್ತವೆ!

ಸುಂದರ ಪಂಚವಟಿ

ಇಲ್ಲಿಯ ಕಪಾಲೇಶ್ವರ ಮಂದಿರವು ಭವ್ಯವಾಗಿದೆ—ಅಷ್ಟೇ ಕೌತುಕಪ್ರದವೂ ಆಗಿದೆ. ಏಕೆಂದರೆ, ಶಿವದೇವಾಲಯಗಳಲ್ಲಿ ಸಹಜವಾಗಿ ಕಂಡು ಬರುವ ನಂದಿಯ ಮೂರ್ತಿ ಇಲ್ಲಿಲ್ಲ. ಭಾರತದಲ್ಲಿ ಇಂಥ ನಂದಿ ವಿಹೀನ ಶಿವ ದೇವಾಲಯ ಬೇರೊಂದಿದ್ದರೆ, ಅದು ಕಾಶಿಯಲ್ಲಿ ಮಾತ್ರ; ಇಲ್ಲಿಯ ಕಪಾಲೇಶ್ವರ ಮಂದಿರದಲ್ಲಿ ಸಹ ನಂದಿಯಿಲ್ಲ.

ನಗರದ ಪ್ರವೇಶ ದ್ವಾರದಲ್ಲಿ ೧೭೯೦ನೇ ಇಸವಿಯಲ್ಲಿ ಕಟ್ಟಿಸಲಾದ ಭದ್ರಕಾಳಿಯ ಮಂದಿರವಿದೆ. ಪೇಶ್ವೆಯರ ಕಾಲದಲ್ಲಿ ಈ ದೇವಾಲಯಕ್ಕೆ ತುಂಬ ಮನ್ನಣೆಯನ್ನು ಜನರು ಕೊಡುತ್ತಿದ್ದರು. ನವರಾತ್ರಿಯ ಸಮಯ ಇಲ್ಲಿ ಈಗಲೂ ವಿಜೃಂಭಣೆಯ ಉತ್ಸವ ನಡೆಯುತ್ತದೆ. ನ್ಯಾಯ ನಿರ್ಣಯವನ್ನು ಮರಾಠ ಪ್ರಮುಖರು ಇಲ್ಲಿ ಮಾಡುತ್ತಿದ್ದ ಸಂಪ್ರದಾಯ ಈಗಲೂ ಪೂರ್ಣ ನಶಿಸಿಲ್ಲ.

ಪಂಚವಟಿಯಲ್ಲಿ ಸೀತೆಯು ವಾಸಿಸುತ್ತಿದ್ದಳೆಂದು ಹೇಳಲಾದ ಒಂದು ಗುಹೆ ಇದೆ—ನಾಲ್ಕೈದು ದ್ವಾರಗಳಿಂದ ಒಳ ಹೊಕ್ಕು ಗುಹೆಯಲ್ಲಿ ನುಗ್ಗಿದರೆ ಸೀತಾರಾಮರ ಹಾಗು ಲಕ್ಷ್ಮಣನ ಮೂರ್ತಿಗಳು ನೋಡಸಿಗುತ್ತವೆ. ಇನ್ನೂ ಒಳಗೆ ಹೋದರೆ ಶಿವಮೂರ್ತಿ ಇರುವ ಸಣ್ಣ ಗುಹೆಯೊಂದು ಸಿಗುತ್ತದೆ. ಗುಹೆಯ ಹೊರ ಭಾಗದಲ್ಲಿ ಐದು ವಟವೃಕ್ಷಗಳು ಈಗಲೂ ನೋಡಸಿಗುತ್ತವೆ.

ಆರೋಗ್ಯ ಕೇಂದ್ರ

ಸ್ವಾಸ್ಥ್ಯ ದೃಷ್ಟಿಯಿಂದ ನಾಸಿಕವು ಆಸ್ಯತ್ತಮವಾದ ಆರೋಗ್ಯ ಧಾಮವಾಗಿದೆ—ಇಲ್ಲಿಯ ಹವೆಯು ತಂಪಾಗಿದೆ; ಚೇತನದಾಯಕವಾಗಿದೆ. ಸಮುದ್ರ ಮಟ್ಟದಿಂದ ಎರಡು ಸಾವಿರ ಅಡಿಗಳಷ್ಟು ಎತ್ತರವಿರುವ ಈ ನಗರದಲ್ಲಿ ಕ್ಷಯರೋಗಿಗಳು ಆರೋಗ್ಯ ಲಾಭಕ್ಕಾಗಿ ಬಂದು ನೆಲೆಸುತ್ತಾರೆ. ನಾಸಿಕ್ ರೋಡ್ ಮತ್ತು ದೇವಲಾಲಿ ಎಂಬ ಪ್ರಮುಖ(ಉಪ) ನಗರಗಳನ್ನು ಬಿಟ್ಟರೆ ಕೇವಲ ನಾಸಿಕದಲ್ಲಿಯೇ ಒಂದು ಲಕ್ಷದ್ದಿಂತ ಹೆಚ್ಚು ಜನ ಸಂಖ್ಯೆ ಇದೆ.

ಗೋದಾವರಿ ನದಿಯ ದಂಡೆಗಳು ಯಾವಾಗಲೂ ಜನರಿಂದ ತುಂಬಿ ಕೊಂಡಿರುತ್ತವೆ. ಎತ್ತರ ಎತ್ತರಕ್ಕೆ ನೆಗೆದು ನಿಂತಿರುವ ಮಂದಿರಗಳ ಸಾಲು, ಉತ್ತಮವಾದ ಸ್ನಾನಘಟ್ಟಗಳು, ಮೋಹಕವಾಗಿ ಜುಳು ಜುಳು ನಿನಾದದೊಡನೆ ಹರಿಯುವ ನದಿ-ಆಕರ್ಷಣೀಯವಾದ ಆನಂದವನ್ನು ಕೊಡುತ್ತವೆ. ನಾಸಿಕದ ತಾಮ್ರ ಮತ್ತು ಪಿತ್ತಳೆಯ ಪಾತ್ರೆಗಳು ಭಾರತದಲ್ಲಿ ತುಂಬ ಹೆಸರುವಾಸಿಯಾಗಿವೆ. ಯಾತ್ರೆಗೆ ಹೋದವರು ಕೆಲವನ್ನಾದರೂ ಕೊಂಡುಕೊಳ್ಳದೆ ಬರುವುದು ವಿರಳ—ಹೆಂಗಸರಿಗಂತೂ ವಾತ್ರೆಯ ವ್ಯಾಮೋಹವನ್ನು ತ್ಯಜಿಸುವುದು ಸಾಧ್ಯವೇ ಇಲ್ಲ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. 130/55

ಅಕ್ಕಣಿ ಸೆಟ್ಟಿ ಕೂಡಾ — ಅರ್ಜಿದಾರರು

ಮತ್ತು

ಅಕ್ಕಂಮ ಸೆಟ್ಟಿ — ಎದ್ರಿಳು.

ಇದರೊಳಗೆ

ಈ ಮೂಲ್ಕ ತಿಳಿಯಪಡಿಸುವದೇನೆಂದರೆ;—

ಮೃತ ಮುದ್ದಣ ಸೆಟ್ರ ಮೇಲ್ಕಂಡ ಅರ್ಜಿಯ-A ಶೆಡ್ಯೂಲಿನಲ್ಲಿ ನಿವ್ರಸ್ತನ ಸೊತ್ತುಗಳನ್ನು ಸದ್ರಿ ಮುದ್ದಣ ಸೆಟ್ರ ವಾರೀಸುದಾರರಾದ ಅರ್ಜಿದಾರರು ಪಸೂಲಿ ಪಡಿಯುವ ಬಗ್ಗೆ 1ನೇ ಅರ್ಜಿದಾರಳಿ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 13-10-55ಕ್ಕೆ ಇದೋಣಾಗಿಯದೆಂತಲೂ ಆವತ್ತಕ್ಕೆ ಅಕ್ಷೇಪಿಸುವವರು ಸದ್ರಿ ತಾರೀಕಿಗೆ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಬಿತೆ ಮಾಡಿಕೊಳ್ಳತಕ್ಕದ್ದೆಂತಲೂ ಈ ಮೂಲ್ಕ ಸರ್ವರಿಗೂ ತಿಳಿಸೋಣಾಗಿಯದೆ.

K. J. Ballal,

Pleader for Petitioners

ಉಡ್ಪಿ, ತಾ. 21-9 55.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಧವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಬಾಲಿಯಾನ್ ಸೇಕಡಾ 4½ಸ.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಅಮೃತಧಾರಿಷ್ಟ

ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ಮಾರಕರು: ಡಾಕ್ಟರ್

ಅಮೃತಾಂಜನ ಲಿಮಿಟೆಡ್, ಮದ್ರಾಸ್-17

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಶಿಶು ಅಥವಾ ಬಿದಿಗೆಯ ಚಂದ್ರ—

ಅನುವಾದಕರು: ನರೇಗಲ್ಲ ಪ್ರಹ್ಲಾದ ರಾಯರು. ಸಹಾಯಕರು: ಲಕ್ಷ್ಮೀಶ್ವರ ಲಕ್ಷ್ಮೀಕಾಂತರು. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ. ಬೆಲೆ ರೂ. ೧.೦-೦.

ಆಗೋಸ್ತು ೧೫ನೇ ದಿನಾಂಕ ರಾಜಕೀಯ ಸ್ವಾತಂತ್ರ್ಯದ ಉಷ್ಣವನ್ನು ಆಚರಿಸಿದ ಕನ್ನಡಿಗರ ಸಂಭ್ರಮಕ್ಕೆ ಸಾಹಿತ್ಯ ಸರಸ್ವತಿಯು ಕಾಣಿಕೆಯ ರೂಪದಲ್ಲಿ 'ಶಿಶು" ಎಂಬ ಉತ್ತಮ ಕಾವ್ಯ ಗ್ರಂಥವನ್ನು ಮಿಂಚಿನ ಬಳ್ಳಿಯವರು ಬಡಗಿಸಿರುವುದನ್ನು ಕಂಡು ನಮಗೆ ಪರಮಾನಂದವಾಗಿದೆ. ಇದರ ಮೂಲ ರಚಕರು ಗುರುದೇವ ರವೀಂದ್ರನಾಥ ಠಾಕೂರರಾಗಿದ್ದಾರೆ. ಅವರ "ಗೀತಾಂಜಲಿ"ಯನ್ನು ಮೂಲ ವಂಗ ಭಾಷೆಯಿಂದ ಕನ್ನಡಕ್ಕೆ ಸಮರ್ಥರೀತಿಯಲ್ಲಿ ಅನುವಾದಿಸಿದ ಶ್ರೀ ನರೇಗಲ್ಲರೇ ಈ ಶಿಶು ಸಾಹಿತ್ಯವನ್ನೂ ಕನ್ನಡಿಸಿದ್ದಾರೆ. ಪುಸ್ತಕವು ಅಂಗ್ಲ ಭಾಷೆಯಲ್ಲಿ ಗುರುದೇವರು ಪ್ರಕಟಿಸಿರುವ "Crescent Moon" ("ಬಿದಿಗೆಯ ಚಂದ್ರ")— ಇದರಲ್ಲಿರುವ ನಲ್ವತ್ತು ಗೀತೆಗಳನ್ನೊಳಗೊಂಡಿದೆ. ಆದರೆ ಅನುವಾದಕರು ಆಂಗ್ಲಾನುವಾದವನ್ನು ಅನುಲಂಬಿಸದೆ, ವಂಗಮೂಲಕ್ಕೆ ಒಪ್ಪಿಗೆಯಾಗುವಂತೆ ಕನ್ನಡಿಸಲು ಪ್ರಯತ್ನಿಸಿರುವುದರಿಂದ ಕಾವ್ಯದ ಅಚ್ಚುಕಟ್ಟು ಮತ್ತು ಸೊಗಸುಗಳನ್ನು ಬಲಿಷ್ಠವಾಗಿ ಉಳಿಸಿಕೊಳ್ಳುವುದು ಸಾಧ್ಯವಾಗಿದೆ. ವಂಗ ಮೂಲದ "ಶಿಶು" ಎನ್ನಿಂದ ೩೪, "ಕಡಿಪಿಕಮಲ" ದಿಂದ ೪, "ಸೋನಾರತರಿ" ಪಾಗು "ಗೀತಿಮಾಲ್ಯ" ನಲಿಂದ ಒಂದೊಂದು ಗೀತೆಗಳನ್ನು ಆಯ್ದು ರವೀಂದ್ರರು "ಬಿದಿಗೆಯ ಚಂದ್ರ" ಎಂಬ ಹೆಸರಿನಿಂದ ಪ್ರಕಟಿಸಿದ್ದರು. ಅಂಗ್ಲ ಶಿಶು ಸಾಹಿತ್ಯದ ಭಾವಾತ್ಮಕ ಮುಖಕ್ಕೆ ಇದುನಷ್ಟು ಅಮೂಲ್ಯವಾದ ಶೋಭೆಯನ್ನು ತಂದಿತೋ ಕನ್ನಡಸಾಹಿತ್ಯದಲ್ಲಿಯೂ ಉಚ್ಚಸ್ಥಾನವನ್ನು ನರೇಗಲ್ಲರ ಅನುವಾದ ಹೊಂದಲು ಅರ್ಹವಾಗಿದೆ. ರವೀಂದ್ರರ ಕವಿತೆಗಳು ಮಕ್ಕಳ ಕಲ್ಪನೆಗಳನ್ನು ರಮ್ಯವಾಗಿ ಚಿತ್ರಿಸುತ್ತವೆ; ಮಾತ್ರ ಹೃದಯದ ವಾತ್ಸಲ್ಯದ ಅಳವನ್ನು ಬಿಂಬಿಸುತ್ತವೆ; ಶಿಶುವಿನ ಬಲವು ನಿಲವುಗಳ ಭಾವ ಸೂಕ್ಷ್ಮವನ್ನರಿತು, ಅವುಗಳನ್ನು ಕಾವ್ಯಮಯ ಶೈಲಿಯಲ್ಲಿಯೂ ಆಹ್ಲಾದಕರವಾದ ಭಾಷೆಯಲ್ಲಿಯೂ ಈ ಗೀತಗಳು ವ್ಯಕ್ತಗೊಳಿಸುತ್ತವೆ. ಶಿಶುವಿನ ಅಂತರಂಗ ಜೀವನದ ವಿಲಾಸ ಇಲ್ಲಿ ಎದ್ದು ಕಾಣುತ್ತದೆ— ಎಂದ ಮುನ್ನುಡಿಕಾರ ಡಾ. ಕಿರ್ಕಿಯವರ ಮಾತು ಅಕ್ಷರಶಃ ಸತ್ಯ. ಗೀತಗಳನ್ನು ಓದುತ್ತಾ ಹೋದಂತೆ ಕಿನ್ನರ ಲೋಕದಲ್ಲಿ ಪ್ರವಾಸ ಮಾಡುತ್ತಿರುವ ಅನುಭವವಾಗುತ್ತದೆ; ನಕ್ಷತ್ರಗಳೊಡನೆ ಸಖ್ಯ ಸ್ಥಾಪಿಸಿಕೊಳ್ಳುವ ಉತ್ಸಾಹ ಮೂಡುತ್ತದೆ, ನುಮತೆಯ ಯೋಗ ಮಾಯೆಯಲ್ಲಿ ಸದಾಕಾಲ ಮುಳುಗಿರೋಣವೆಂಬ ಮನಸ್ಸು ಭಾವಿಸುತ್ತದೆ. ಪುಸ್ತಕಕ್ಕೆ ವರ್ಣರಂಜಿತ ಮುದ್ರಣವು ವಿಶೇಷ ಆಕರ್ಷಣೆಯನ್ನು ಕೊಟ್ಟಿರುತ್ತದೆ. ಪ್ರಯತ್ನ ವಿಶಾಸವನ್ನುಂಟು ಮಾಡುವ ಈ ಕಾವ್ಯಕ್ಕೆ ಸ್ವಾಗತವನ್ನು ಕೋರುತ್ತೇನೆ.

ಜಯ ಗೋಮಂತಕ—

ಬರೆದವರು: ಆನಂದ ಪರ್ವ. ಪ್ರಕಾಶಕರು: ಸುಧಾ ಪ್ರಕಾಶನ, ೨೦೦,೫ ನೇ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು ೨. ಬೆಲೆ: ರೂ. ೧--೦—೦.

ಗೋವೆಯ ವಿಮೋಚನೆಗಾಗಿ ನಡೆಯುತ್ತಿರುವ ಹೋರಾಟವು ಭಾರತೀಯರಲ್ಲಿ ಉದ್ವೇಗವನ್ನು ಹುಟ್ಟಿಸಿರುವ ಈಕಾಲದಲ್ಲಿ ಕಾದಂಬರಿಯ ರೂಪದಲ್ಲಿ ಆ ರಾಜಕೀಯ ಚಳವಳಿದ ಪರಿಚಯಮಾಡಿಕೊಡುವ ಕೃತಿಯೊಂದು ಪ್ರಕಟವಾಗಿರುವುದಕ್ಕೆ ಸಂತೋಷವಾಗುತ್ತದೆ. ಇದನ್ನು ಬರೆದವರು ಹತ್ತೊಂಭತ್ತು ವಯಸ್ಸಿನ ಕಾಲೇಜು ವಿದ್ಯಾರ್ಥಿಗಳಾಗಿದ್ದಾರೆ ಕಾರವಾರದವರಾಗಿರುವುದರಿಂದ ಗೋವೆಯ ಹೆಟ್ಟಿನ ಪರಿಚಯಮಾಡಿಕೊಳ್ಳಲು ಸಮರ್ಥರಾಗಿದ್ದಾರೆ; ಸಾಹಿತ್ಯ ಕ್ಷೇತ್ರದಲ್ಲಿ ಹಸ್ತಪ್ರತಿಕೊಂದರೆ ಸಂಪಾದಕನಾಗಿ, ಮತ್ತು ಕತೆ-ಲೇಖನಗಳನ್ನು ಬರೆದು ಸಾಕಷ್ಟು ಸುರಿತರುವುದರಿಂದ ಕಾದಂಬರಿಯ ರೂಪದಲ್ಲಿ ಗೋವೆಯ ಹೋರಾಟವನ್ನು ಚೆನ್ನಾಗಿಯೇ ಚಿತ್ರಿಸಿದ್ದಾರೆ. ಇಲ್ಲಿಯ ನಾಯಕ ಶ್ರೀಧರ ಸತ್ಯಾಗ್ರಹಿ; ಹಳ್ಳಿಯ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಪೋರ್ಚುಗೀಜ ಅಧಿಕಾರಿಗಳಿಗೆ ತಿಳಿಯದಂತೆ ಸ್ವಾತಂತ್ರ್ಯ ಸಾಧನೆಗಾಗಿ ಬಡಿಯುವ ವ್ಯಕ್ತಿ ಆತ. ಅವನಂತೆ ಮುಕ್ತಿಗಾಗಿ ಹಾತೊರೆಯುವ ಕಾರ್ಯಕರ್ತರಲ್ಲಿ ಜಯಂತ ನಂಥ "ಸುಭಾಷ್" ಗುಂಪಿನವರೂ ಜಾನ್, ಪೀಟರ್ ಮುಂತಾದ ಕ್ರೈಸ್ತರೂ ಇದ್ದಾರೆ. ಪೀಟರನ್ನ ತಂಗಿ ಸಿಂಧಿಯಾಳೊಡನೆ ಶ್ರೀಧರನ ಪ್ರೇಮ ಕೂಡುತ್ತದೆ— ಕ್ರೈಸ್ತ ಹುಡುಗಿಯೊಬ್ಬಳೊಡನೆ ಹಿಂದು ರಕ್ತ ಸಂಬಂಧ ಬೆಳೆಸುವುದು ದಿಕ್ಕಾರಸರಿಂದ "ಸ್ವರ್ಗ" ಗೃಹಿಸಿ ಹಾಗು ಪೋರ್ಚುಗೀಜರ ಗುಲಾಮರಿಗೆ ಒಗ್ಗುವುದಿಲ್ಲ. ಶ್ರೀಧರನ ತಂದೆಯೂ ಅಷ್ಟೇ- ಮನೆಗೆ ಕೆಲಸಅವರಿಗೆ ಸ್ವಲ್ಪವೂ ಇಷ್ಟವಿಲ್ಲ; ಬೆಳಗ ಪಿಯಿಂದ ಹೊರಡುವ ಸತ್ಯಾಗ್ರಹಿಗಳ ತಂಡದಲ್ಲಿ ಸೇರಿಕೊಂಡು, ತಂಡದ ಗುಟ್ಟನ್ನು ಮುಂದಾಗಿ ಪೋರ್ಚುಗೀಜರಿಗೆ ಹಣದಾಸೆಗಾಗಿ ತಿಳಿಸಲು ಉದ್ಯುಕ್ತನಾಗುವಷ್ಟು ಪೀಡೆ ಈ ತಂದೆ ರಾಮ ಭಟ್ಟ. ಅವನ ಉದ್ದೇಶ ಶ್ರೀಧರನ ಸಕಾಲಿಕ ಪ್ರಯತ್ನದಿಂದ ವಿಫಲವಾಗುತ್ತದೆ—ಆದರೆ ಶ್ರೀಧರ ಗೋವೆಯ ಹೋಲೀ ಸರ ಹೆಟ್ಟಿಗೆ ಬಲಿಯಾಗುತ್ತಾನೆ! ಕಾದಂಬರಿಯು ಪತ್ರಿಕೆಗಳಲ್ಲಿ ನಿತ್ಯವೂ ನಾವೀಗ ಓದುತ್ತಿರುವ ಸಂಗತಿಗಳನ್ನೆ ಕಲಾತ್ಮಕವಾಗಿ ನಿರೂಪಿಸುತ್ತದೆ; ಶ್ರೀಧರ - ಸಿಂಧಿಯಾರ ಪ್ರೇಮ ಪ್ರಕರಣವು ಆದರೆ ವಿಶೇಷ ಆಕರ್ಷಣೆಯಾಗಿದೆ. ಭಾಷೆ ಸುಂದರವಾಗಿದೆ; ನಿರೂಪಣೆಯೂ ಸೊಗಸಾಗಿದೆ. ವರ್ಣಿಯವರಿಗೆ ಧನ್ಯವಾದ.

— ಕು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾರತೀಯ ಸಾಹಿತ್ಯ ಕೃತಿಗಳ ಅನುವಾದ

ಕನ್ನಡದ ವಚನಗಳ ಆಯ್ಕೆ

ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮಂಡಳಿದೆಡೆ ಸಹಕರಿಸಲು ಭಾರತದಲ್ಲಿ ನೇಮಕವಾಗಿರುವ ಸಮಿತಿಯು ತನ್ನ ಇತ್ತೀಚೆಯ ಸಭೆಯಲ್ಲಿ ಸಾಮಾನ್ಯ ಜನರ ಉಪಯೋಗಾರ್ಥವಾಗಿ ವೈಜ್ಞಾನಿಕ ವಿಷಯಗಳ ತಿಳಿವಳಿಕೆಯನ್ನು ಹೆಚ್ಚಿಸುವ ಜನಪ್ರಿಯ ಸಾಹಿತ್ಯವನ್ನು ಬರಬೇಕೆಂದು ತೀರ್ಮಾನಿಸಿದೆಯಾಗಿ ತಿಳಿದುಬರುತ್ತದೆ.

ವಿನಿಮಯ ಕಾರ್ಯ

ಭಾರತೀಯ ಸಂಸ್ಕೃತಿಯ ತಿಳಿವಳಿಕೆಯನ್ನು ಪಾಶ್ಚಾತ್ಯರೆಲ್ಲರಿಗೆ ಹೆಚ್ಚು ಹೆಚ್ಚಾಗಿ ಮಾಡಿಕೊಳ್ಳಲು ಅನುಕೂಲವಾಗುವಂತೆ ತಕ್ಕ ಪ್ರಮಾಣಗಳನ್ನು ಕೈಗೊಳ್ಳಬೇಕೆಂದೂ ಸಮಿತಿಯು ನಿಶ್ಚಯಿಸಿರುತ್ತದೆ. ಪ್ರದರ್ಶನಗಳನ್ನು ಏರ್ಪಡಿಸುವುದು ಕಲಾಕೃತಿಗಳ ವಿನಿಮಯ ಮಾಡುವುದು, ಅಧ್ಯಾಪಕರ ಆದಾನ ಪ್ರದಾನವನ್ನು ಏರ್ಪಡಿಸುವುದು ಇತ್ಯಾದಿ ಸೂಚನೆಗಳು ಸಮಿತಿಯ ಮುಂದಿವೆ. ಭಾರತೀಯ ಸಂಗೀತವನ್ನು ಪಾಶ್ಚಾತ್ಯರಲ್ಲಿ ಜನಪ್ರಿಯಗೊಳಿಸಲು ಉತ್ತಮ ರಿಕಾರ್ಡು ಸಂಗೀತಗಳನ್ನೊದಗಿಸಬೇಕೆಂದೂ ಸಮಿತಿಯ ಅಭಿಪ್ರಾಯ.

ವಚನಗಳ ಅನುವಾದ

ಕೆಲವು ಅತ್ಯುತ್ತಮ ಗ್ರಂಥಗಳನ್ನು ಪಾಶ್ಚಾತ್ಯ ಭಾಷೆಗಳಿಗೆ ಅನುವಾದಿಸಿ, ಭಾರತೀಯ ಸಾಹಿತ್ಯದ ಪರಿಚಯವನ್ನು ಪುಷ್ಟಿಮಾಡ ಜನಕ್ಕೆ ಮಾಡಿಕೊಡಬೇಕೆಂದೂ ಸಮಿತಿ ನಿರ್ಣಯ ಮಾಡಿದೆ. ಸಾಹಿತ್ಯ ಅಕಾಡೆಮಿಯವರು ಈ ವಿಷಯದಲ್ಲಿ ಸಮಿತಿಗೆ ಒತ್ತಾಸೆಗೈದರೆಂದು ತಿಳಿದು ಬರುತ್ತದೆ. ಸಮಿತಿಯು ಯುನೆಸ್ಕೋದ ಮೂಲಕ ಅನುವಾದದ ವ್ಯವಸ್ಥೆ ಮಾಡಬೇಕೆಂದಿರುವ ಭಾರತೀಯ ಸಾಹಿತ್ಯ ಕೃತಿಗಳಲ್ಲಿ ಕನ್ನಡದಲ್ಲಿರುವ ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು ಸೇರಿರುತ್ತವೆ.

ಕೃತಿಗಳ ಆಯ್ಕೆ

ಅಸ್ಸಾಮಿನ ೧೫ನೇ ಶತಮಾನದ ಶಂಕರದೇವರ ಭಕ್ತಿ ಪರ ಗೀತೆಗಳು ಬಂಗಾಳದ ಚಂಡೀದಾಸ ಮತ್ತು ವಿದ್ಯಾಪತಿಯ ಪದ್ಯಗಳು ಮತ್ತು ರವೀಂದ್ರರ ಸಣ್ಣ ಕತೆ ಮತ್ತು ಗೀತೆಗಳು, ಗುಜರಾತಿನ ನರ್ಸಾಲ ದಳಪತರಾಯರ ಪದ್ಯ ಮತ್ತು ಝುವೇರಿಚಂದ ಮೇಘಾಣಿಯವರ ಕೃತಿಗಳು, ಮರಾಠಿಯಾಳದ ಪ್ರಾಚೀನ ಸಾಹಿತ್ಯ ಮತ್ತು ಚಂದ್ರ ಮೆನೊನ್ನರ "ಇಂದು ರೇಖಾ" ಕಾದಂಬರಿ, ಪಂಜಾಬಿನ ವಾರಿಸ್ ಶಾಹರ "ಹೀರ್", ತಮಿಳಿನ ಸುಬ್ರಹ್ಮಣ್ಯ ಭಾರತಿಯವರ ಕೃತಿಗಳು, ತೆಲುಗಿನ "ಪೇಸನ ಪದ್ಯಗಳು" ಮತ್ತು ಜಿ ಅಪ್ಪಾರಾಯರ "ಕನ್ಯಾ ಶುಲ್ಕಮು" ಎಂಬ ಕಾದಂಬರಿ, ಉರ್ದು ಕವಿಗಳಾದ ಘಾಲಿಬ್, ಮೀರ್, ನಾಜೀರ್ ಅಕಬರಾಬಾದಿ, ಅಕ್ಬರ್ ಅಲಹಾಬಾದೀ ಇವರ ಪದ್ಯಗಳು ಇಷ್ಟಲ್ಲದೆ ಕಾಶ್ಮೀರಿ, ಸಿಂಧಿ, ಸಂಸ್ಕೃತ ಈ ಭಾಷೆಗಳ ಕೆಲವು ಕೃತಿಗಳು ಪಾಶ್ಚಾತ್ಯ ಭಾಷೆಗಳಿಗೆ ಅನುವಾದಿಸಲ್ಪಡುತ್ತವೆ.

ಮೊದಲಿನ ಕೆಲಸ

ಯುನೆಸ್ಕೋವು ಸಮಿತಿಯು ಇದಕ್ಕೆ ಮೊದಲೇ ಕಳುಹಿಸಿರುವ ಕೆಲವು ಭಾರತೀಯ ಗ್ರಂಥಗಳ ಅನುವಾದಕ್ಕೆ ಸಮ್ಮತಿ ಕೊಟ್ಟಿರುತ್ತದೆ. ಪಾಶ್ಚಾತ್ಯ ಭಾಷೆಗಳಲ್ಲಿ ಪ್ರಕಟವಾಗುವ ಈ ಭಾರತೀಯ ಗ್ರಂಥಗಳಲ್ಲಿ ಪ್ರೇಮಚಂದರ "ಗೋದಾನ", ಜಯಶಂಕರ ಪ್ರಸಾದರ "ಕಾನಾಯನಿ", ತುಳಸೀದಾಸರ "ರಾಮಚರಿತ ಮಾನಸ" (ಹಿಂದಿ), ಬಂಕಿಂ ಚಂದ್ರರ "ಕೃಷ್ಣಾಕಾಂತನ ಉಯಿಲು" (ಬಂಗಾಳಿ), "ಕಂಬ ರಾಮಾಯಣಂ", "ಸಿಲ್ಪದಿಗಾರಂ" ಮತ್ತು "ತಿರುಕ್ಕುರಳ್" (ತಮಿಳು), "ಧ್ಯಾನೇಶ್ವರಿ", ಮತ್ತು "ತುಕಾರಾಮರ ಅಭಂಗ" (ಮರಾಠಿ) ಇವುಗಳಲ್ಲದೆ ಪಂಜಾಬಿ, ಕಾಶ್ಮೀರಿ ಮತ್ತು ಸಂಸ್ಕೃತದ ಒಂದೊಂದು ಕೃತಿಗಳೆ. ಕಾಳಿದಾಸನ "ಕುಮಾರ ಸಂಭವಂ" ಸಹ ಅನುವಾದವಾಗುತ್ತದೆ. ಕಬೀರನ ಪದಗಳು ಮತ್ತು ಖುಗ್ವೇದದ ಸೂಕ್ತಗಳು ಫ್ರೆಂಚಿನಲ್ಲಿ ಅನುವಾದಿಸಲ್ಪಡುವುದಕ್ಕೆ ಸಮಿತಿಯು ನೆಸ್ಕೋಗೆ ಒಪ್ಪಿಗೆಯನ್ನು ಕೊಟ್ಟಿರುತ್ತದೆ.

ಕಾರ್ಕಳ ಡಿ. ಮುಂ. ಕೋರ್ಟಿನಲ್ಲಿ

O. S. No. 162/1955.

ರಾಜೀನಿ ಯಾನೆ ಲಕ್ಷ್ಮಿ ಅಮ್ಮ- ವಾದಿಳು
ನರಶಿಂಹ ಪ್ರಭು ಸಹಾ- ಪ್ರತಿವಾದಿರು

ಕೋರ್ಟು ಹುಕುಂ ಪ್ರಕಾರ ಸದ್ರಿ ದಾವೆಯ 2-4ನೇ ಪ್ರತಿವಾದಿರು. ಬೆಳುವಾಯಿ ಗ್ರಾಮದ ಕೆಸ್ಸಗುಡ್ಡೆಯಲ್ಲಿರುವ ಶ್ರೀನಿವಾಸ ಮಲ್ಯರ ಮಗ ನಾರೇರ ಮಲ್ಯ 1, ಸದ್ರಿ ಶ್ರೀನಿವಾಸ ಮಲ್ಯರ ವಿಧವೆ ರಮಾ ಯಾನೆ ಸರಸ್ವತಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಸುವುದೇನೆಂದ್ರೆ,

ವಾದಿಳು ಪ್ರತಿವಾದಿರ ಮೇಲೆ ದಾಖ್ಲುಮಾಡಿದ ಸದ್ರಿ ದಾವೆಯು ಸದ್ರಿ 2.4ನೇ ಪ್ರತಿವಾದಿರ ಹಾಜರಿ ಬಗ್ಗೆ ತಾ. 14.10.55ಕ್ಕೆ ಇಟ್ಟಿದೆ. ಆದ್ರಿಂದ ಆ ಕುರಿತು ಅಕ್ಷೇಪ ಇದ್ರೆ ಸದ್ರಿ ತಾ. 14-10-55ನೇ ದಿವ್ಸ ಸದ್ರಿ ಕೋರ್ಟುಮುಂದೆ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ದಾವೆ ಸದ್ರಿ ಪ್ರತಿವಾದಿರ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

(Sd H.K Gopalkrishna Rao
Vakil for plaintiff.
Karkala 23—9—55

Edited, Printed & Published By K. H. Shetty, at the Navayuga Press, Udipi S. India

REGD. NO. M. 3010

LICENCE NO. 31
Licensed to Post without Prepayment

ನವಯುಗ

ಸಪುಂಟೆ ೩೫ ಉಡುಪಿ, 6—10—1955 ಸಂಚಿಕೆ ೬

VOL. 35 NO. 6

ಆದರ್ಶ ಮಾರ್ಗದರ್ಶಕ

ಗೋವೆಯ ಪ್ರಶ್ನೆಯು ಅತ್ಯಂತ ಮಹತ್ವದ ನೈತಿಕ ಸಮಸ್ಯೆಯಾಗಿ ಮತ್ತು ಅಗ್ನಿ ಪರೀಕ್ಷೆಯ ಪ್ರಸಂಗವಾಗಿ ಭಾರತದ ಮುಂದಿನಿತು. ನಿಂತಿದ ಗಾಂಧೀಜಿಯವರು ಇರುತ್ತಿದ್ದರೆ- ಸತ್ಯವನ್ನು ಅಹಿಂಸೆಯ ಮಾರ್ಗದಿಂದ ಸಾಧಿಸಬೇಕು ಎಂದ ಅವರು ಮೋಲೀಸ ಕಾರ್ಯಾಚರಣೆ ಎಂಥವಾ ಭಾರತೀಯರ ಸತ್ಯಾಗ್ರಹವನ್ನು ಪುರಸ್ಕರಿಸುತ್ತಿದ್ದರೆ/ಅಳವಾಗಿ ವಿಚಾರಿಸಿದರೆ "ಇಲ್ಲ" ಎಂಬ ಉತ್ತರವೇ ಸಿಗುತ್ತದೆ ಒಂದೊಮ್ಮೆ ಸತ್ಯಾಗ್ರಹಕ್ಕೆ ಅನುಮತಿ ನೀಡಿ. ರೂ ಅದು ತಪ್ಪುದಾರಿಯನ್ನು ತುಳಿದಾಗ—ತಕ್ಷಣ ಆ ಚಳವಳವನ್ನು ಹಿಂದೆಗೆದುಕೊಳ್ಳಲು ಅವರು ತಪ್ಪುತ್ತಿರಲಿಲ್ಲ.

ನೆಹರುಗಳ ನಾಯಕತ್ವದ ಸರಕಾರ ಇದನ್ನೆಮಾಡಿತು ಅದೇ ಗಾಂದೀಜಿಗೆ ಪ್ರಿಯವಾದ ಕೆಲಸ, ಅವರ ಬೋಧನೆಗೆ ಅನುಗುಣವಾದ ನಿಲುಮೆ ಶಸ್ತ್ರಬಲವಿಲ್ಲದಿದ್ದರೂ ನೈತಿಕ ಶಕ್ತಿಯಿಂದ ಲೋಕದ ಮೇಲೆ ಪ್ರಭಾವ ಬೀರಬಹುದೆಂಬ ಗಾಂಧೀಜಿಯ ತತ್ವವನ್ನೂ ಇದೇ ನೆಹರು ಅನುಷ್ಠಾನಕ್ಕೆ ತಂದಿಳಿಸಿದರು ಅವರು ಲೋಕದ ಪಾಲಿನ ಶಾಂತಿ ದೂತರಾದರು ಹತ್ತು ವರ್ಷಗಳ ವರೆಗೆ ಒಂದೆಡೆ ಸೇರದಿದ್ದ ಚತುರಾಷ್ಟ್ರಗಳ ವರಿಷ್ಠರನ್ನು ಜಿನೇವದಲ್ಲಿ ಸಂಧಾನದ ಮೇಜಿನ ಮುಂದೆ ಕುಳ್ಳಿರಿಸಿದ ನೆಹರುಗಳ ಸಾಧನೆಗೆ ಗಾಂಧೀಜಿಯವರಿಂದ ಎಷ್ಟ ಪೆಚ್ಚಿಕೆಯ ಮಾತು ಬರುತ್ತಿತ್ತೋ— ರಾಜಾಜಿ, ರಾಜೇಂದ್ರ ಪ್ರಸಾದರಿಂದ ಅಷ್ಟು ಸಮಂಜಸವಾದ ಪ್ರಶಂಸೆ ಬರಲಿಲ್ಲ, ಬರುವುದು ಸಾಧ್ಯವೂ ಇಲ್ಲ

ಅಂತರಿಕ ವಿಷಯಗಳನ್ನು ನೋಡಿದರೆ ಗಾಂಧೀಜಿಗೆ ಪ್ರಿಯವಾಗಬಹುದಾದ [illegible] ನಡೆದುಕೊಂಡ ಬರುತ್ತದೆ. [illegible] ಈ ವರ್ಷದ ಸ್ವಾತಂತ್ರ್ಯ ದಿನದಂದು ಕೆಂಪುಕೋಟೆಯ ಮೇಲೆ ಆದರ್ಶದ ಸ್ವರ್ಣ ಗಿರಿಯ ಮಂದಿರದಲ್ಲಿ [illegible] ರಾಜ್ಯಗಳ [illegible] ಹೊಲದೂಡೆತನ ಕೂಡದ ಒಂದು ಶಾಸನವನ್ನು ತರಲು ಮುಂದಾದವು. ಹರಿಜನರ ಮತ್ತು ದಲಿತ ವರ್ಗದ ಬಂಧುಗಳ ಉದ್ಧಾರಕ್ಕಾಗಿ ಸರಕಾರವು ಶಕ್ತಿ ಮೀರಿ ಹಣವನ್ನು ವ್ಯಯಿಸುತ್ತಿದಯಲ್ಲದೆ, ವಿಶೇಷ ಅನುಕೂಲತೆಗಳನ್ನೂ ಒದಗಿಸುತ್ತಿದೆ. ಇದನ್ನು ಕಂಡು ಗಾಂಧೀಜಿ ನಿಜಕ್ಕೂ ಸಂತೋಷ ಪಡುತ್ತಿದ್ದರು

ದ್ವಿತೀಯ ಪಂಚವರ್ಷದ ಕಾರ್ಯಾಚರಣೆಯ ಕುರಿತು ನಾವೀಗ ಆಲೋಚಿಸುವಾಗಲೂ ಗಾಂಧೀಜಿಯ ಆದರ್ಶವನ್ನು ಕಣ್ಣು ಮುಂದಿಟ್ಟುಕೊಂಡಿದ್ದೇವೆ. ಸ್ವೋದ್ಯೋಗಗಳನ್ನು ಕಡೆಗಣಿಸದೆ ಮೂಲೋದ್ಯೋಗಗಳನ್ನು ಸ್ಥಾಪಿಸುವ ಮತ್ತು ನಿರುದ್ಯೋಗ ನಿರ್ಮೂಲನಕ್ಕೆ ನೆರವಾಗುವ ರೂಪವನ್ನು ಯೋಜನೆಗೆ ಕೊಟ್ಟಿದ್ದಾರೆ. ಯಂತ್ರವು ಮನುಷ್ಯನನ್ನು ನಿರುದ್ಯೋಗಿ ಯಾಗಿಯೂ ಕೆಲಸಗಳ್ಳನಾಗಿಯೂ ಮಾಡಬಾರದು, ಕುಶಲಕಲೆಗಳಿಗೆ ಅವಸಾನ ತಂದಿರಬಾರದು ಎಂದು ಗಾಂಧೀಜಿ ಹೇಳುತ್ತಿದ್ದರು. ಸರಕಾರವು ಕೈಮಗ್ಗದ ಒಟ್ಟಿ ಇತ್ಯಾದಿಗಳಿಗೆ ಕೂಡುವ ಪ್ರೋತ್ಸಾಹವು ಯೋಗ್ಯವಾದುದೆಂದು ಗಾಂಧೀಜಿ ಈಗಿರುತ್ತಿದ್ದರ ಹೇಳುತ್ತಿದ್ದರು

ಸ್ತ್ರೀಯರ ಹಕ್ಕು ಚಾರ್ಯತೆಗಳ ಶ್ರೇಷ್ಠ ಪ್ರತಿವಾದಕರೆಂದು ಗಾಂಧೀಜಿಯನ್ನು ಕರೆಯಲಾಗುತ್ತದೆ. ಹಿಂದು ವಾರೀಸು ವಿಧೇಯಕವು ಗಂಡು ಮಗನಷ್ಟೇ ಹೆಣ್ಣು ಮಗಳಿಗೂ ಆಸ್ತಿ ಪಾಸ್ತಿಯಲ್ಲಿ ಅಧಿಕಾರವನ್ನು ನೀಡುತ್ತದೆ. ಇದು ಈ ವರ್ಷ ಮುಂದಿಟ್ಟ ಮಹತ್ವದ ಹೆಜ್ಜೆ . ಘಟನಾತ್ಮಕವಾಗಿ ಹೆಣ್ಣಿಗೆ ಗಂಡಸರಷ್ಟೇ ಸಮಾನ ಮನ್ನಣೆಯನ್ನು ಭಾರತ ಸರಕಾರ ಈ ಮೊದಲೇ ಕೊಟ್ಟಿರುತ್ತದೆ

ನಾವು ಹೀಗೆಯೇ ಇನ್ನೂ ಹಲವಾರು ವಿಷಯಗಳನ್ನು ಎತ್ತಿಕೊಂಡು ಗಾಂಧೀ

[೧-ನೇ ಪುಟ ನೋಡಿರಿ]

ಇದೇ ಅಕ್ಟೋಬರ ೨ನೇ ದಿನಾಂಕ ನಾವು ಅತ್ಯಂತ ಸಂಭ್ರಮದಿಂದ ಮತ್ತು ಶ್ರದ್ಧೆಯಿಂದ ಗಾಂಧೀ ಜಯಂತಿಯನ್ನು ರಾಷ್ಟ್ರದಾದ್ಯಂತ ಆಚರಿಸಿದ್ದೇವೆ. ಗಾಂಧೀಜಿ ನಮ್ಮ ನಡುವೆ ಈಗ ಇರುತ್ತಿದ್ದರೆ ಅ ವರ್ಷ ಪ್ರಾಯದ ಅಜ್ಜಯ್ಯನಾಗುತ್ತಿದ್ದರು ಸ್ವತಂತ್ರ ಭಾರತದ ದ ದೈವದಿಂದ ಅವರ ನೆನಪು, ಬೋಧನೆ ಸಾಕಿಕೂಟ್ಟ ಮಾರ್ಗಗಳಷ್ಟೆ ಈಗ ನಮ್ಮ ಪಾಲಿಗೆ ಉಳಿದಿವೆ

ನಾವು ಈ ಬೋಧನೆಗೆ ಕಿವಿಗೊಡುತ್ತಿದ್ದೇವೆಯೆ? ಅವರು ಹಾಕಿ ಕೊಟ್ಟ ಮಾರ್ಗದಲ್ಲಿಮುನ್ನಡೆಯುತ್ತಿದ್ದೇವೆಯೆ? ಅವರ ನೆನಪನ್ನು ಹೃತ್ಕಮಲದಲ್ಲಿಟ್ಟುಕೊಂಡು ನಿತ್ಯ ಪೂಜೆ ಮಾಡುವಾಗ ಅವರ ಆತ್ಮಕ್ಕೆ ತೃಪ್ತಿಯಾಗುವಂತನಮ್ಮ ದೈನಂದಿನ ವ್ಯವಹಾರವನ್ನು ರೂಪುಗೊಳಿಸಿದ್ದೇವೆಯೆ? ಪ್ರತಿಯೊಬ್ಬ ಭಾರತೀಯನಂತೆ ಭಾರತ ಸರಕಾರವೂ ಇದಕ್ಕೆ ಉತ್ತರ ಕೊಡಬೇಕು. ಈ ಉತ್ತರವನ್ನೆ ರಾಷ್ಟ್ರದ ಭವಿಷ್ಯ ಅವಲಂಬಿಸಿದೆ.

ಸತ್ಯ ಶೋಧನೆ ಎಂಬುದಾಗಿ ತನ್ನ ಜೀವನವನ್ನು ಕರೆದ ಗಾಂಧೀಜಿಯ ಸರಣಿಯನ್ನು ಅನುಸರಿಸಿ ಭಾರತವು ಹೃದಯ ಶೋಧನೆ ಮಾಡಿಕೊಂಡರೆ,ಈ ಸಲದ ಜಯಂತಿಯ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗಾದರೂ ರಾಷ್ಟ್ರ ಹಿತದ ಆತ್ಮಕ್ಕೆ ಸಮಾಧಾನಕರವಾದ ಶಾಂತಿ ನೀಡಬಲ್ಲಕೆಲಸಗಳನ್ನು ಮಾಡಿದೆ ಎಂದು ವ್ಯಕ್ತವಾಗುತ್ತದೆ ನಾವು ಗಾಂಧೀಜಿಯ ಬೋಧನೆಗಳನ್ನೂ ಆದರ್ಶವನ್ನೂ ಸಂಪೂರ್ಣಮರೆತು ಬಿಟ್ಟಿದ್ದೇವೆ ಎಂದುಹೇಳುವುದು ಸಮಂಜಸ ಮಾರ್ಗಲಿಕ್ಕಿಲ್ಲ

ದಕ್ಷಿಣ ಭಾರತದ **93** ಪ್ರಾಮುಖ್ಯ ಪಟ್ಟಣಗಳಲ್ಲಿಯೂ
ದಕ್ಷಿಣ ಕನ್ನಡದ ಪ್ರತಿಯೊಂದು ಪ್ರಾಮುಖ್ಯ ಗ್ರಾಮದಲ್ಲಿಯೂ
ಶಾಖೆಗಳನ್ನು ತೆರೆದು ತನ್ಮೂಲಕ
ಜನತೆಗೆ ಸೇವೆಯನ್ನು ಸಲ್ಲಿಸುತ್ತಿರುವ ನಿಮ್ಮದೇ ಸಂಸ್ಥೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್.

(1925ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದುದು)

"ಸಿಗ್ನಿ ಡಿಪೋಜಿಟ್" ಮತ್ತು ಇನ್ನಿತರ ಬ್ಯಾಂಕಿಂಗ ವ್ಯವಹಾರಗಳಿಗ
ನಿಮಗೆ ಸಮೀಪವಿರುವ ನಮ್ಮ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿ

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ

THE CANARA INDUSTRIAL & BANKING SYNDICATE LTD

ಕನ್ನಡ ಪ್ರದೇಶದ ಪ್ರಾಚೀನ ವೈಭವ

ಪುರಾಣ ಯುಗದಿಂದ ೧೬ನೇ ಶತಮಾನದ ವರೆಗೆ ಮೆರೆದ ನಾಡು

ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ವ್ಯಾಸಂಗ ವಿಸ್ತರಣ ಮಾಲೆಯಲ್ಲಿ ಕಳೆದ ತಿಂಗಳ ೨೨, ೨೩ ಮತ್ತು ೨೪ನೇ ದಿನಾಂಕ ಕನ್ನಡ ನಾಡಿನ ಪ್ರಾಚೀನ ವೈಭವದ ಕುರಿತು ಮೂರು ಉಪನ್ಯಾಸಗಳನ್ನು ಏರ್ಪಡಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದ ಅಚ್ಚ ಕನ್ನಡಿಗ, ಶ್ರೇಷ್ಠ ಇತಿಹಾಸಜ್ಞ ಹಾಗು ಈಗ ಭಾರತ ಸರಕಾರದ ಶಿಲಾ ಶಾಸನ ವಿಭಾಗದ ದಿಗ್ದರ್ಶಕರಾಗಿರುವ ಡಾ. ಬಿ. ಎ. ಸಾಲೆತೋರರು ಈ ಭಾಷಣಗಳನ್ನು ಮಾಡಿದರು. ಈ ಉಪನ್ಯಾಸಗಳು ಮನನೀಯವಾಗಿರುವುದರಿಂದ ಅವುಗಳ ಸಾರಾಂಶವನ್ನು ಪ್ರತಿಯೊಬ್ಬ ಕನ್ನಡಿಗನೂ ತಿಳಿದಿರುವುದೊಳಿತು.

ರಾಮಾಯಣ ಕಾಲದ ನಿದರ್ಶನ

ಡಾ. ಸಾಲೆತೋರರು ಹೇಳುವಂತೆ, ರಾಮಾಯಣ ಮತ್ತು ಮಹಾಭಾರತ ಕಾಲಗಳಲ್ಲಿಯೂ ಕನ್ನಡ ನಾಡು ಉಚ್ಚ ಸ್ಥಾನದಲ್ಲಿತ್ತೆಂದು ಭಾವಿಸುವುದಕ್ಕೆ ಅನೇಕ ನಿದರ್ಶನಗಳೂ ಉಲ್ಲೇಖಗಳೂ ದೊರಕುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಳಲಂಕೆ ಎಂಬ ಊರು ರಾವಣನ ಸಾಮ್ರಾಜ್ಯವು ಈ ಜಿಲ್ಲೆಯ ವರೆಗೆ ಹಬ್ಬಿರಬಹುದೆಂಬ ಅನುಮಾನವನ್ನು ಹುಟ್ಟಿಸುತ್ತದೆ. ರಾಮ ಮತ್ತು ಸುಗ್ರೀವರ ಸಖ್ಯ ಸಂಘಟಿಸಿದ ಸ್ಥಳವೇ ವಿಜಯನಗರದ ರಾಜಧಾನಿಯಾಗಿ ಮುಂದೆ ಮೆರೆದ ಹಂಪೆಯಾಗಿದೆ. ರಾವಣನೊಡನೆ ಕಾದಿದ ಜಟಾಯು ವಿಶ್ರಾಂತಿಸ್ಥಳವು ಮೈಸೂರಿನ ಚಿತ್ರದುರ್ಗ ಜಿಲ್ಲೆಯಲ್ಲಿನದೆ ಎಂದು ಕತೆಗಳು ಹೇಳುತ್ತವೆ. ಲಂಕೆಯಿಂದ ರಾಮನು ಸೀತಾ ಸಮೇತ ಮರಳುವಾಗ ಮುಳಬಾಗಿಲಿನ ಹತ್ತಿರ ತಂಗಿದ್ದನೆಂದೂ ಹೇಳಲಾಗುತ್ತದೆ.

ಮಹಾಭಾರತದ ಆಧಾರ

ಕನ್ನಡನಾಡಿನಲ್ಲಿ ಪಾಂಡವರು ಅಜ್ಞಾತವಿದ್ದರೆಂಬುದಕ್ಕೂ ಆಧಾರಗಳು ಸಿಗುತ್ತವೆ. ರಾಜಸೂಯ ಯಜ್ಞವನ್ನು ಮುಗಿಸಿದ ಬಳಿಕ ಪಾಂಡವರು ಮೈಸೂರಿನ ಶಿಕಾರಿಪುರ ತಾಲೂಕಿನ ಊರೊಂದಕ್ಕೆ ಬಂದಿದ್ದರು; ಮೈಸೂರಿನ ಚಂದ್ರವಳ್ಳಿಯೇ ಹಿಡಿಂಬವನ; ಚಂದ್ರಹಾಸನು ರಾಜ್ಯವಾಳಿದ ಕುಂತಳ ದೇಶವೇ ಕರ್ನಾಟಕ; ಇದು ಆಜಂತದಿಂದ ಬೆಳಗಾವಿ, ಧಾರವಾಡ, ಬಿಜಾಪುರ, ಬಳ್ಳಾರಿ ಮತ್ತು ಮೈಸೂರಿನ ಉತ್ತರ ಭಾಗಗಳನ್ನೊಳಗೊಂಡಿದ್ದ ದೊಡ್ಡ ರಾಜ್ಯ— ಎಂದು ಮುಂತಾಗಿ ತಿಳಿದು ಬರುತ್ತದೆ.

ಕ್ರಿಸ್ತಾಬ್ದದಲ್ಲಿ

ಕ್ರಿಸ್ತ ಪೂರ್ವದಲ್ಲು ಪ್ರಾಚೀನ ಕಾಲದಲ್ಲಿ ಉತ್ತರದ ನಂದರೂ ಮೌರ್ಯರೂ ದಕ್ಷಿಣಕ್ಕೆ ಬಂದು ತಮ್ಮ ಚಟುವಟಿಕೆಯನ್ನು ನಡೆಸಿದ್ದರು. ಚಂದ್ರಗುಪ್ತನು ಶ್ರವಣಬೆಳಗೊಳದಲ್ಲಿ ತಪಸ್ಸನ್ನು ಮಾಡಿದ್ದನು. ಅಶೋಕನ ಕಾಲದಲ್ಲಿ ಕನ್ನಡ ನಾಡು ಅತನ ಸಾಮ್ರಾಜ್ಯದ ಒಂದು ಅಂಗವಾಯಿತು. ಅತನ ಕಾಲದಲ್ಲಿ ನಿರ್ಮಿತವಾದ ಬೌದ್ಧ ಸ್ತೂಪಗಳು ಕೊಲ್ಲಾಪುರದಲ್ಲಿ ನೋಡಸಿಗುತ್ತವೆ. ಬಳ್ಳಾರಿ ಮತ್ತು ಕರ್ನೂಲುಗಳಲ್ಲಿ ಆಳ್ವಿಕೆ ನಡೆಸಿದ ಶಾತವಾಹನ ಅಥವಾ ಶಾಲಿವಾಹನರು ಕ್ರಿಸ್ತಪೂರ್ವ ಹಾಗು ಕ್ರಿಸ್ತ ಶಕಾರಂಭದ ಗೊಣಸಿನಂತೆ ಇದ್ದಾರೆ. ಇವರು ಕನ್ನಡ ನಾಡಿನ ಪ್ರಭುಗಳೆಂಬುದಕ್ಕೆ ಅನೇಕ ಸಾಕ್ಷಿಗಳನ್ನು ಕೊಡಬಹುದು— ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯಲ್ಲಿರುವ ಕಲ್ಲೇಶ್ವರ ಗುಡಿಯಲ್ಲಿನ ಶಾಸನವೊಂದು ಶಾಲಿವಾಹನರನ್ನು ಉಲ್ಲೇಖಿಸುತ್ತದೆ; ಬನವಾಸಿ ಮತ್ತು ಚಿಕ್ಕಮಗಳೂರುಗಳಲ್ಲಿ ದೊರೆತ ಶಿಲಾ ಲೇಖಗಳಲ್ಲಿಯೂ ಚಂದ್ರವಳ್ಳಿಯಲ್ಲಿ ದೊರೆತ ನಾಣ್ಯಗಳಲ್ಲಿಯೂ ಶಾಲಿವಾಹನರ ಆಳಿಕೆಯ ಸ್ಪಷ್ಟ ಉಲ್ಲೇಖವಿರುವುದನ್ನು ಕಾಣಬಹುದು.

ಅಬಾಧಿತ ಆಡಳಿತ

ಸುಮಾರು ೬ನೇ ಶತಮಾನದಿಂದ ೧೬ನೇ ಶತಮಾನದ ವರೆಗೆ ಕನ್ನಡಿಗರು ದಕ್ಷಿಣ ಭಾರತದಲ್ಲಿ ಅಬಾಧಿತವಾದ ರಾಜ್ಯಭಾರವನ್ನು ಮಾಡಿದರು. ಆಗ ಕನ್ನಡ ನಾಡು ಗೋದಾವರಿಯಿಂದ ಕಾವೇರಿಯ ವರೆಗೆ ವಿಸ್ತರಿಸಿತ್ತೆಂಬುದಕ್ಕೆ ನೃಪತುಂಗನಿಂದ ಹಿಡಿದು ಕೃಷ್ಣದೇವ ರಾಜನ ಆಳಿಕೆಯ ವರೆಗಿನ ಬರಹಗಳಿಂದ ಗೊತ್ತಾಗುತ್ತದೆ. ಬಾದಾಮಿಯಲ್ಲಿ ಆಳುತ್ತಿದ್ದ ಕನ್ನಡ ಅರಸು ಇಮ್ಮಡಿ ಪುಲಕೇಶಿಯು ಉತ್ತರ ಭಾರತದ ಸಾಮ್ರಾಟ ಹರ್ಷವರ್ಧನನ ದಂಡನ್ನು ತಡೆದು ನಿಲ್ಲಿಸಿ, ಸೋಲಿಸಿ, ಓಡಿಸಿದ್ದನು. ಅವನು ಮೂರು ಮಹಾರಾಷ್ಟ್ರಗಳ ಚಕ್ರವರ್ತಿಯಾಗಿದ್ದನೆಂದೂ ೯೯೦೦ ಹಳ್ಳಿಗಳು ಅವನ ಆಧಿಪತ್ಯದಲ್ಲಿದ್ದವೆಂದೂ ತಿಳಿದುಬರುತ್ತದೆ. ಈಗಿನ ಕಲಬುರ್ಗಿಯನ್ನು ೧೧೪೫ ರಲ್ಲಿದ್ದ ಪದ್ಮರಸನು ಮುಕ್ತ ಕಂಠದಿಂದ ಹೊಗಳಿದ್ದನು.

(ಸಶೇಷ)

ರಾಷ್ಟ್ರದ ಅತ್ಯಮೂಲ್ಯ ಸಂಪತ್ತು

ಇದೇ ೨ನೇ ದಿನಾಂಕ ದೇಶದ ಎಲ್ಲೆಡೆಯಲ್ಲೂ ಗಾಂಧೀಜಿಯ ಜಯಂತಿಯನ್ನು ಶ್ರದ್ಧೆಯಿಂದ ಆಚರಿಸಲಾಯಿತು.



ಗಾಂಧೀಜಿಯವರು ಭಾರತದ ಸೇವೆಗಾಗಿ ಕೆಲವೇ ವಸ್ತುಗಳನ್ನು ಬಿಟ್ಟು ಹೋಗಿದ್ದರು. ಚಿತ್ರದಲ್ಲಿ ಅವರ ಮರದ ಪಾದುಕೆಗಳು, ಚಪ್ಪಲಿ, ಕನ್ನಡಕ ಊಟದ ಪಾತ್ರೆ ಮತ್ತು ಚಮಚಗಳನ್ನು ನೋಡಬಹುದು. ಅವರ ಪ್ರಾರ್ಥನೆಯ ಶ್ಲೋಕ ಮತ್ತು ಗೀತೆಗಳಿಂದ ಕೂಡಿದ ಪುಸ್ತಕ ಮತ್ತು ತನ್ನ ಗುರುಗಳಿಂದು ಅವರು ಕರೆಯುತ್ತಿದ್ದ ಮೂರು ಮಂಗಗಳ ಮೂರ್ತಿಗಳೂ ಚಿತ್ರದಲ್ಲಿ ಕಂಡು ಬರುತ್ತವೆ. ಈ ಮಂಗಗಳು "ಕೆಟ್ಟದ್ದನ್ನು ನೋಡಬೇಡ", "ಕೆಟ್ಟದ್ದನ್ನು ಕೇಳಬೇಡ", "ಕೆಟ್ಟದ್ದನ್ನು ಮಾತಾಡಬೇಡ" ಎನ್ನುತ್ತವೆ!

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

- CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಇದೇ ಸಪ್ತಂಬರ್ದ ದಿನಾಂಕ 24ರಲ್ಲು ಬ್ಯಾಂಕಿನ ಶಾಖೆಯೊಂದು ದಕ್ಷಿಣ ಮಲಬಾರ್ ಜಿಲ್ಲೆಯ ಪಾಲ್ಘಾಟಿನ ಬಿಗ್ ಬಜಾರಿನಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED
Estd:- 1906] [H. O. UDIPI (S.India).

ಅಸ್ಪೃಶ್ಯತೆಯು ಸಾಮಾಜಿಕ ಅನ್ಯಾಯ

ಸದ್ಧರ್ಮ ಸೂತ್ರ ಅದಕ್ಕೆ ಮನ್ನಣೆ ಕೊಡುವುದಿಲ್ಲ

ಭಾರತದ ಸಾಮಾಜಿಕ ಕಾರ್ಯಗಳ ಮಂಡಳದ ಹೊಸ ದೆಹಲಿಯಲ್ಲಿ ಕಳೆದ ವಾರ "ಜಾತೀಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆ ಎಂಬ ಕುರಿತು ವಿಚಾರ ಗೋಷ್ಠಿಯೊಂದನ್ನು ನಡೆಸಿತು. ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ



ರು ಈ ಸಂದರ್ಭದಲ್ಲಿ ಸಂದೇಶವೊಂದನ್ನು ಕಳುಹಿಸುತ್ತಾ ಹೀಗೆಂದರು; ಜಾತೀಯತೆ ಮತ್ತು ಅಸ್ಪೃಶ್ಯತೆಗಳೆಂಬ ಕೆಡುಕುಗಳು ಸಮಾಜದಲ್ಲಿ ಈಗ ಉಳಿದಿಲ್ಲವೆಂಬ ಅಥವಾ ಅದನ್ನು ನಿವಾರಿಸುವುದು ಕೇವಲ ಶಾಸನಾಂಗದ ಕರ್ತವ್ಯವೆನ್ನುವ ಭಾವನೆ ಕೆಲವರಲ್ಲಿದೆ. ನಮ್ಮ ಘಟನೆಯ ಮೂಲಕ ಅಸ್ಪೃಶ್ಯತೆಯನ್ನು ನಿವಾರಿಸಲಾಗಿದೆ; ಮತ್ತು ಅದರ ಆಚರಣೆಯನ್ನು ನಿಷೇಧಿಸಲಾಗಿದೆ ಆದಾಗ್ಯೂ ಸಮಾಜದ ಕೆಲವು ವಿಶಿಷ್ಟವರ್ಗಗಳಿಗಿದ್ದ ತೊಂದರೆಗಳೂ ಅನರ್ಹತೆಗಳೂ ಇನ್ನೂ ವ್ಯವಹಾರ ಕ್ಷೇತ್ರದಿಂದದೂರವಾಗಿಲ್ಲ ಆರ್ಥಿಕ, ಸಾಮಾಜಿಕ ಹಾಗು ಇತರ ಮುಖಗಳುಳ್ಳ ಅನೇಕವಿಷಯಗಳು. ಇದಕ್ಕೆ ಕಾರಣವಾಗಿವೆ. ಈ ವಿಷಯದ ಕುರಿತು ಸಾರ್ವಜನಿಕರಿಗೆ ಅತಿ ಹೆಚ್ಚಿನ ತಿಳಿವಳಿಕೆಯನ್ನು ಮಾಡಿಕೊಡುವ ಆವಶ್ಯಕತೆ ಇದೆ"

ಸಾಮಾಜಿಕ ಅಪರಾಧ

ವಿಚಾರ ಗೋಷ್ಠಿಯನ್ನು ಪ್ರಸಿದ್ಧ ತತ್ವಜ್ಞಾನಿ ಹಾಗು ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಉದ್ಘಾಟಿಸಿದರು ಅವರು ತಮ್ಮ ಗಂಭೀರ ಹಾಗು ಮಾರ್ಮಿಕ ಭಾಷಣದಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ಸಾಮಾಜಿಕ ಅಪರಾಧವೆಂದು ಕರೆದರು. ಇದನ್ನು ದೇಶದ ಜನರು ಎಷ್ಟು ಬೇಗನೆ ತ್ಯಜಿಸಿದರೋ ಅಷ್ಟು ಮಟ್ಟಿಗೆ ದೇಶದ ಶುಭನಾಮ ಬೆಳಗುವುದೆಂದೂ ರಾಷ್ಟ್ರೀಯ ಐಕ್ಯ ಕಾಯ್ದುಕೊಳ್ಳಲ್ಪಡುವುದೆಂದೂ ಸಾರಿದರು.

"ಅಸ್ಪೃಶ್ಯತೆಯ ಆಚರಣೆಯು ಸಮಾಜ ಘಾತಕವಾದುದಷ್ಟೇಯಲ್ಲ ಧರ್ಮ ತತ್ವಗಳಿಗೆ ವಿರುದ್ಧವೂ ಆಗಿದೆ. ಆಧುನಿಕ ರಾಜಕೀಯ ವಿಚಾರ ಪ್ರಣಾಳಿಗೆ ಸಮ್ಮತವಾದ ವಿಷಯವೂ ಅದಲ್ಲ. ಸರಕಾರವು ಅಸ್ಪೃಶ್ಯತೆಯ ಆಚರಣೆಯನ್ನು ನ್ಯಾಯ ವೇದ್ಯ ಅಪರಾಧವೆಂದು ಸಾರಿ ನಾಗರಿಕರಲ್ಲಿ ಭೇದಭಾವವನ್ನು ತೋರಿಸುತ್ತಿರುವುದಕ್ಕೆ ತಡೆ ಹಾಕಿದೆ" ಎಂದರು

ಗೊಂದಲದ ಭಾವನೆ

ಡಾ. ರಾಧಾಕೃಷ್ಣನ್ನರು ಧಾರ್ಮಿಕ ತತ್ವಗಳನ್ನು ಸಾಮಾಜಿಕ ಸಂಪ್ರದಾಯಗಳೊಡನೆ ಹೋಲಿಸಬಾರದೆಂದೂ ಅವೆರಡೂ ಒಂದೇ ಎಂಬ ಗೊಂದಲದ ಭಾವನೆಗೆ ಎಡೆಕೊಡಬಾರದೆಂದೂ ಜನರನ್ನು ವಿನಂತಿಸಿದರು "ಧಾರ್ಮಿಕ ತತ್ವಗಳ ಸ್ವರೂಪ ಮೂಲಭೂತವಾಗಿದೆ. ಸಹಿಷ್ಣುತೆಯ ಭಾವದಿಂದ ಕೂಡಿದೆ ಸಾಮಾಜಿಕ ಸಂಪ್ರದಾಯಗಳು ಬದಲಾಗುತ್ತಿರುತ್ತವೆ. ಇಂಥ ಬದಲಾವಣೆಯನ್ನು ಸಾಮಾಜಿಕ ಸಂಪ್ರದಾಯದಲ್ಲಿ ಅಪೇಕ್ಷಿಸಿದಾಗಲೆಲ್ಲ ಧರ್ಮವು ಗಂಡಾಂತರದಲ್ಲದೆ ಎಂದು ಬೊಬ್ಬೆ ಕಾಕಲಾಗುತ್ತದೆ — ಆದರೆ ಈ ಬೊಬ್ಬೆಯಕಾರಣ ಕೇವಲ ಸುಳ್ಳು ಎಂದವರು ತಿಳಿಸಿದರು.

"ಕ್ರೈಸ್ತಶಕದ ಪ್ರಾರಂಭದಲ್ಲಿ ಜಾತೀಯವಿಚಾರ ಮತ್ತದರ ಆಚರಣೆಯುಳುರಿತಾದ ನಮ್ಮ ಭಾವನೆಗಳು ಬಹಳ ಸಡಿಲಾಗಿದ್ದವು, ಈಗಿನಷ್ಟು ಬಿಗಿಯಾಗಿರಲೇ ಇಲ್ಲ, ಕಠಿಣ ಅರ್ಥದಲ್ಲಿ ಅದು ನಿರ್ಬಂಧಿಸಲ್ಪಟ್ಟಿರಲಿಲ್ಲ ಅನುಲೋಮ ವಿವಾಹಗಳಂತೆ ಪ್ರತಿ ಲೋಮವಿವಾಹದ ಉಲ್ಲೇಖವಿರುವುದನ್ನು ನೋಡಿದರೆ. ನಮ್ಮ ಚರಿತ್ರೆಯ ಪ್ರಗತಿಪರಕಾಲದಲ್ಲಿ ಅಂತರ್ಜಾತೀಯ ವಿವಾಹಗಳು ದಾರಾಳವಾಗಿ ನಡೆಯುತ್ತಿದ್ದವೆಂಬುದು ಸ್ಪಷ್ಟ ಧರ್ಮವು ತನ್ನ ನೈತಿಕ ಶಕ್ತಿಯನ್ನು ಮತ್ತು ಆಧ್ಯಾತ್ಮಿಕ ಧ್ಯೇಯವನ್ನು ಕಳೆದು ಕೊಂಡು ತೆಲ್ಲಿ ಜಾತೀಯತೆ ಬಲಿತುಕೊಂಡಿತು ಮತ್ತು ಜಾತೀಯ ವಿಧಿ—ನಿಯಮಗಳನ್ನು ಬಿಗಿಗೊಳಿಸಲಾಯಿತ. ಎಂದು ಉಪರಾಷ್ಟ್ರಾಧ್ಯಕ್ಷರು ವಿವರಿಸಿದರು.

ಬದಲಾವಣೆಯೇ ಜೀವಾಳ

ಇಂದು ನಾವು ಹೊಸಯುಗದ ಹೊಸ್ತಿಲಿನಲ್ಲಿ ನಿಂತಿದ್ದೇವೆ. ನಾವು ಕಾಲದ ಪುರೋಗತಿಯನ್ನು ತಡೆಹಿಡಿಯುವಂತಿಲ್ಲ. ಗತಕಾಲದ ಸಂಪ್ರದಾಯಗಳನ್ನೆಲ್ಲ ಅಪ್ಪಿಕೊಂಡಿದ್ದರೆ, ಇವತ್ತು ಬೆಲೆ ಇಲ್ಲದ ವಿಷಯಕ್ಕೆ ಮೋಹವನ್ನು ತ್ಯಜಿಸಲಾರೆವಾದರೆ, ನಾವು ಬಹಳ ಹಿಂದ ಉಳಿಯುತ್ತೇವೆ ನಾವು ಪ್ರಾಮುಖ್ಯ ಸಂಗತಿಗಳನ್ನು ನೆನಪಿಟ್ಟುಕೊಳ್ಳುವುದಕ್ಕೋಸ್ಕರ, ಅನೇಕ ಗೌಣ ವಿಷಯಗಳನ್ನು ಮರೆಯಲೇಬೇಕಾಗುತ್ತದೆ. ಬದಲಾವಣೆಯನ್ನು ವಿರೋಧಿಸಿದರೆ ಸಮಾಜವು ಕೊಳೆಯ ಕೂಪವಾಗುತ್ತದೆ, ದುರ್ಗಂಧಮಯವಾಗುತ್ತದೆ. ಬದಲಾವಣೆಯನ್ನು ವಿವೇಕದಿಂದ ಅಳವಡಿಸಿಕೊಂಡರೆ ಉನ್ನತಿ ಸಾಧಿಸಲ್ಪಡುತ್ತದೆ. ನಮ್ಮ ಭವ್ಯ ಸಂಪ್ರದಾಯದಲ್ಲಿ ಬದಲಾವಣೆಯ ಭಂಗಕ್ಕೆ ಸ್ಥಾನವಿಲ್ಲ" ಎಂದು ರಾಧಾಕೃಷ್ಣನ್ನರು ಘೋಷಿಸಿದರು.

ಪರಿವರ್ತನೆಯೇ ಜೀವನದ ಮೂಲ ಸೂತ್ರ ಎನ್ನುತ್ತಾ "ವಿವೇಕ ಶೀಲರು ತಮ್ಮ ಸಂಪ್ರದಾಯವನ್ನು ಕಾಲದೇಶಗಳಿಗನುಸಾರ ಮಾರ್ಪಡಿಸಿಕೊಳ್ಳುತ್ತಾರೆ; ಇದಕ್ಕೆ ಕೂನೆ ಎಂಬುದಿಲ್ಲ ನಮ್ಮ ಮೂಲಭೂತವಾದ ನಿಲುಮೆಗೆ ಶೃದ್ಧೆ ತೋರಿಸಿದವಾದರೆ, ಉಚಿತ ಬದಲಾವಣೆಗೆ ಅದೇ ಅವಕಾಶ ಕೊಡುತ್ತದೆ. ನಮ್ಮ ಮಾತಿಗೂ ನಡತೆಗೂ ಹೊಂದಿಕೆ ಇರಬೇಕಾಗಿದೆ ಸಮಾಜವನ್ನು ಮನುಷ್ಯ ನಿರ್ಮಿತ ಅನ್ಯಾಯ, ಅಸಮಾನತೆಗಳಿಂದಲೂ ಸಮಾನ ಅವಕಾಶಗಳ ಅಭಾವದಿಂದಲೂ ರಕ್ಷಿಸಬೇಕಾಗಿದ ಮಾನವತೆಯು ತನ್ನ ಸಾಹಸ ಕಾರಣಗಳ ವಿರುದ್ಧ ಕಾರ್ಯಾಚರಣೆ ನಡೆಸಬೇಕಾಗಿದೆ. ನಾವು ಆರ್ಥಿಕ ನ್ಯಾಯವೂ ಉತ್ಕರ್ಷದ ಅವಕಾಶವೂ ಪ್ರತಿಯೊಬ್ಬನಿಗೂ ಸಿಗುವ ಸಮಾಜವನ್ನು ನಿರ್ಮಿಸೋಣ" ಎಂಬುದಾಗಿ ಅವರು ಹಾರೈಸಿದರು. ಸಮಾಜದ ದುರ್ಬಲ ವರ್ಗಗಳಿಗೆ ವಿಶೇಷ ಅವಕಾಶಗಳನ್ನು ಒದಗಿಸಿಕೊಡಬೇಕೆಂದೂ ರಾಧಾಕೃಷ್ಣನ್ನರು ಸಲಹೆ ಮಾಡಿದರು

ಭಾಷೆಯ ಅತಿರೇಕ ಮೋಹ ಬೇಡ

ಜಾತೀಯ ಭಾವನೆಯೂ ಖಂಡನಾರ್ಹ

ಫಜಲ ಅಲಿ ಆಯೋಗದ ವರದಿ ಪ್ರಕಟವಾಗುವ ಸಂದರ್ಭವನ್ನು ನೋಡಿಕೊಂಡು ಸರಕಾರದ ಧುರೀಣರು ಜಾತೀಯತೆಯನ್ನೆಂತೊ ಹಾಗೆಯೇ ಭಾಷೆಯ ಕುರಿತಾದ ದುರಭಿಮಾನವೂ ಸಲ್ಲದೆಂದು ಜನತೆಗೆ ಉಪದೇಶಿಸಲು ಮುಂದಾಗಿದ್ದಾರೆ. ಕಳೆದವಾರ ಕೇಂದ್ರ ಸರಕಾರದ ವಸತಿ ಮತ್ತು ಪೂರೈಕೆಯ ಮಂತ್ರಿ ಸರದಾರ ಸ್ವರಣ ಸಿಂಘರು ಪಂಜಾಬಿನ ಸಾರ್ವಜನಿ



ಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ "ಭಾಷೆಯ ಕುರಿತಾಗಿ ಅಥವಾ ಫಜಲ ಅಲಿ ಆಯೋಗದ ವರದಿಯ ಶಿಫಾರಸುಗಳುವ ಆತ್ಯಪ್ತರಾಗಿ ನಡೆಸುವ ಯಾವುದೇ ಅಭ್ಯಾಸ ಮತ್ತು ಎಂದೋಲನವನ್ನು ಖಂಡಿಸಬೇಕು ಎಂದು ಸಾರಿದರು.

ಜಾತೀಯತೆಯ ಖಂಡನೆ

[illegible] ವಿಷ[illegible] ಅತಿಳರ್ಕ್ಕೆ ಸ[illegible] ಬಂಧಿಸಿದೆ ಎಂದವರು ಸಾರಿದರು. ತಮ್ಮ ಅಪೇಕ್ಷೆಗೆ ಅನುಸಾರವಾಗಿಯೇ ಆಯೋಗವು ಸಿವಾರಸುಗಳನ್ನು ಮಾಡಿದ್ದರೆ ಉಗ್ರ, ಚಳವಳವನ್ನು ನಡೆಸಲಾಗುವುದು ಎಂದು ಬೆದರಿಕೆ ಹಾಕುವವರ ನಿಲುಮೆ ಅರ್ಥಹೀನವಾದುದೆಂದು ಅವರು ಹೇಳಿದರು.

ಜಾತೀಯತೆಯನ್ನೂ ಸಚಿವರು ಖಂಡಿಸಿದರು. ಕದಡಿದ ನೀರಿನಲ್ಲಿ ಮೀನು ಹಿಡಿಯಲು ಬಯಸುವ ಕೆಲವು ರಾಜಕೀಯ ಪಕ್ಷಗಳ ಕುರಿತು ಅವರು ಎಚ್ಚರಿಕೆಯನ್ನು ಕೊಟ್ಟರು ದೇಶವು ಧಾರ್ಮಿಕ ತಳಹದಿಯ ಮೇಲೆ ವಿಭಜನೆ ಬೇಡಬೇಕೆಂದು ಮತ್ತು ಜಾತೀಯ ಭಾವನೆಗೆ ಬೆಂಬಲ ದೊರಕಬೇಕೆಂದು ಜನರು ಬಾವಿಸಿದರೆ, ಪ್ರಗತಿ ಕುಂಠಿತವಾಗುವುದೆಂದು ಅವರು ಉಪದೇಶಿಸಿದರು.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ 1 ರಾತಲಿಗೆ ರೂ 6/8, ½ ರಾತಲಿಗೆ ರೂ. 1/13

ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು

1. ಶಾ ಕಂಸೆನಿ, ಮಂಗಳೂರು
2. ವಿ ವಿ ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ

ವಿಸ್ತರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ

ZANDU ದಾಮೋದರ & ಕೊ.
ಮದ್ರಾಸ್—3



ಕನ್ನಡ ಪ್ರದೇಶದ ಪ್ರಾಚೀನ ವೈಭವ

ಪುರಾಣ ಯುಗದಿಂದ ೧೬ನೇ ಶತಮಾನದ ವರೆಗೆ ಮೆರೆದ ನಾಡು

ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ವ್ಯಾಸಂಗ ವಿಸ್ತರಣ ಮಾಲೆಯಲ್ಲಿ ಕಳೆದ ತಿಂಗಳ ೨೨, ೨೩ ಮತ್ತು ೨೪ನೇ ದಿನಾಂಕ ಕನ್ನಡ ನಾಡಿನ ಪ್ರಾಚೀನ ವೈಭವದ ಕುರಿತು ಮೂರು ಉಪನ್ಯಾಸಗಳನ್ನು ಏರ್ಪಡಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದ ಅಚ್ಚ ಕನ್ನಡಿಗ, ಶ್ರೇಷ್ಠ ಇತಿಹಾಸಜ್ಞ ಹಾಗು ಈಗ ಭಾರತ ಸರಕಾರದ ಶಿಲಾ ಶಾಸನ ವಿಭಾಗದ ದಿಗ್ದರ್ಶಕರಾಗಿರುವ ಡಾ. ಬಿ. ಎ. ಸಾಲೆತೋರರು ಈ ಭಾಷಣಗಳನ್ನು ಮಾಡಿದರು. ಈ ಉಪನ್ಯಾಸಗಳು ಮನನೀಯವಾಗಿರುವುದರಿಂದ ಅವುಗಳ ಸಾರಾಂಶವನ್ನು ಪ್ರತಿಯೊಬ್ಬ ಕನ್ನಡಿಗನೂ ತಿಳಿದಿರುವುದೊಳಿತು.

ರಾಮಾಯಣ ಕಾಲದ ನಿದರ್ಶನ

ಡಾ. ಸಾಲೆತೋರರು ಹೇಳುವಂತೆ, ರಾಮಾಯಣ ಮತ್ತು ಮಹಾಭಾರತ ಕಾಲಗಳಲ್ಲಿಯೂ ಕನ್ನಡ ನಾಡು ಉಚ್ಚ ಸ್ಥಾನದಲ್ಲಿತ್ತೆಂದು ಭಾವಿಸುವುದಕ್ಕೆ ಅನೇಕ ನಿದರ್ಶನಗಳೂ ಉಲ್ಲೇಖಗಳೂ ದೊರಕುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಳಲಂಕೆ ಎಂಬ ಊರು ರಾವಣನ ಸಾಮ್ರಾಜ್ಯವು ಈ ಜಿಲ್ಲೆಯ ವರೆಗೆ ಹಬ್ಬಿರಬಹುದೆಂಬ ಅನುಮಾನವನ್ನು ಹುಟ್ಟಿಸುತ್ತದೆ. ರಾಮ ಮತ್ತು ಸುಗ್ರೀವರ ಸಖ್ಯ ಸಂಘಟಿಸಿದ ಸ್ಥಳವೇ ವಿಜಯನಗರದ ರಾಜಧಾನಿಯಾಗಿ ಮುಂದೆ ಮೆರೆದ ಹಂಪೆಯಾಗಿದೆ. ರಾವಣನೊಡನೆ ಕಾದಿದ ಜಟಾಯು ಪಿದ್ದಸ್ಥಳವು ಮೈಸೂರಿನ ಚಿತ್ರದುರ್ಗ ಜಿಲ್ಲೆಯಲ್ಲಿದೆ ಎಂದು ಕತೆಗಳು ಹೇಳುತ್ತವೆ. ಲಂಕೆಯಿಂದ ರಾಮನು ಸೀತಾ ಸಮೇತ ಮರಳುವಾಗ ಮುಳಬಾಗಲಿನ ಹತ್ತಿರ ತಂಗಿದ್ದನೆಂದೂ ಹೇಳಲಾಗುತ್ತದೆ.

ಮಹಾಭಾರತದ ಆಧಾರ

ಕನ್ನಡನಾಡಿನಲ್ಲಿ ಪಾಂಡವರು ಅಡ್ಡಾಡಿದ್ದರೆಂಬುದಕ್ಕೂ ಆಧಾರಗಳು ಸಿಗುತ್ತವೆ. ರಾಜಸೂಯ ಯಜ್ಞವನ್ನು ಮುಗಿಸಿದ ಬಳಿಕ ಪಾಂಡವರು ಮೈಸೂರಿನ ಶಿಕಾರಿಪುರ ತಾಲೂಕಿನ ಊರೊಂದಕ್ಕೆ ಬಂದಿದ್ದರು; ಮೈಸೂರಿನ ಚಂದ್ರ ವಳ್ಳಿಯೇ ಹಿಡಿಂಬವನ; ಚಂದ್ರಹಾಸನು ರಾಜ್ಯವಾಳಿದ ಕುಂತಳ ದೇಶವೇ ಕರ್ನಾಟಕ; ಇದು ಅಜಂತದಿಂದ ಬೆಳಗಾವಿ, ಧಾರವಾಡ, ಬಿಜಾಪುರ, ಬಳ್ಳಾರಿ ಮತ್ತು ಮೈಸೂರಿನ ಉತ್ತರ ಭಾಗಗಳನ್ನೊಳಗೊಂಡಿದ್ದ ದೊಡ್ಡ ರಾಜ್ಯ— ಎಂದು ಮುಂತಾಗಿ ತಿಳಿದು ಬರುತ್ತದೆ.

ಕ್ರಿಸ್ತಾಬ್ದದಲ್ಲಿ

ಕ್ರಿಸ್ತ ಪೂರ್ವದಷ್ಟು ಪ್ರಾಚೀನ ಕಾಲದಲ್ಲಿ ಉತ್ತರದ ನಂದರೂ ಮೌರ್ಯರೂ ದಕ್ಷಿಣಕ್ಕೆ ಬಂದು ತಮ್ಮ ಚಟುವಟಿಕೆಯನ್ನು ನಡೆಸಿದ್ದರು. ಚಂದ್ರಗುಪ್ತನು ಶ್ರವಣಬೆಳಗೊಳದಲ್ಲಿ ತಪಸ್ಸನ್ನು ಮಾಡಿದ್ದನು ಅಶೋಕನ ಕಾಲದಲ್ಲಿ ಕನ್ನಡ ನಾಡು ಆತನ ಸಾಮ್ರಾಜ್ಯದ ಒಂದು ಅಂಗವಾಯಿತು. ಆತನ ಕಾಲದಲ್ಲಿ ನಿರ್ಮಿತವಾದ ಬೌದ್ಧ ಸ್ತೂಪಗಳು ಕೊಲ್ಲಾಪುರದಲ್ಲಿ ನೋಡಸಿಗುತ್ತವೆ. ಬಳ್ಳಾರಿ ಮತ್ತು ಕರ್ನೂಲುಗಳಲ್ಲಿ ಆಳ್ವಿಕೆ ನಡೆಸಿದ ಶಾತವಾಹನ ಅಥವಾ ಶಾಲಿವಾಹನರು ಕ್ರಿಸ್ತಪೂರ್ವ ಹಾಗು ಕ್ರಿಸ್ತ ಶಕಾರಂಭದ ಗೊಣಸಿನಂತ ಇದ್ದಾರೆ. ಇವರು ಕನ್ನಡ ನಾಡಿನ ಪ್ರಭುಗಳೆಂಬುದಕ್ಕೆ ಅನೇಕ ಸಾಕ್ಷಿಗಳನ್ನು ಕೊಡಬಹುದು— ಶಿವಮೊಗ್ಗ ಜಿಲ್ಲೆಯ ಮಳವಳ್ಳಿಯಲ್ಲಿರುವ ಕಲ್ಲೇಶ್ವರ ಗುಡಿಯಲ್ಲಿನ ಶಾಸನವೊಂದು ಶಾಲಿವಾಹನರನ್ನು ಉಲ್ಲೇಖಿಸುತ್ತದೆ; ಬನವಾಸಿ ಮತ್ತು ಚಿಕ್ಕಮಗಳೂರುಗಳಲ್ಲಿ ದೊರೆತ ವಿಲಾ ಲೇಖಗಳಲ್ಲಿಯೂ ಚಂದ್ರವಳ್ಳಿಯಲ್ಲಿ ದೊರೆತ ನಾಣ್ಯಗಳಲ್ಲಿಯೂ ಶಾಲಿವಾಹನರ ಆಳಿಕೆಯ ಸ್ಪಷ್ಟ ಉಲ್ಲೇಖವಿರುವುದನ್ನು ಕಾಣಬಹುದು.

ಅಬಾಧಿತ ಆಡಳಿತ

ಸುಮಾರು ೬ನೇ ಶತಮಾನದಿಂದ ೧೬ನೇ ಶತಮಾನದ ವರೆಗೆ ಕನ್ನಡಿಗರು ದಕ್ಷಿಣ ಭಾರತದಲ್ಲಿ ಅಬಾಧಿತವಾದ ರಾಜ್ಯಭಾರವನ್ನು ಮಾಡಿದರು. ಆಗ ಕನ್ನಡ ನಾಡು ಗೋದಾವರಿಯಿಂದ ಕಾವೇರಿಯ ವರೆಗೆ ವಿಸ್ತರಿಸಿತ್ತೆಂಬುದಕ್ಕೆ ನೃಪತುಂಗನಿಂದ ಹಿಡಿದು ಕೃಷ್ಣದೇವ ರಾಜನ ಆಳಿಕೆಯ ವರೆಗಿನ ಬರಹಗಳಿಂದ ಗೊತ್ತಾಗುತ್ತದೆ. ಬಾದಾಮಿಯಲ್ಲಿ ಆಳುತ್ತಿದ್ದ ಕನ್ನಡ ಅರಸು ಇಮ್ಮಡಿ ಪುಲಕೇಶಿಯು ಉತ್ತರ ಭಾರತದ ಸಾಮ್ರಾಟ ಹರ್ಷವರ್ಧನನ ದಂಡನ್ನು ತಡೆದು ನಿಲ್ಲಿಸಿ, ನೋಲಿಸಿ ಓಡಿಸಿದ್ದನು. ಅವನು ಮೂರು ಮಹಾರಾಷ್ಟ್ರಗಳ ಚಕ್ರವರ್ತಿಯಾಗಿದ್ದನೆಂದೂ ೯೯೦೦೦ ಹಳ್ಳಿಗಳು ಅವನ ಅಧಿಪತ್ಯದಲ್ಲಿದ್ದವೆಂದೂ ತಿಳಿದುಬರುತ್ತದೆ. ಈಗಿನ ಕಲಬುರ್ಗಿಯನ್ನು ೧೧ಳಜ ದಲ್ಲಿದ್ದ ಪಡ್ಡರನು ಮುಕ್ತ ಕರದಿಂದ ಹೊಗಳಿದ್ದನು.

(ಸರೇಷ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Niwas" UDIPI, S. India

ರಾಷ್ಟ್ರದ ಅತ್ಯಮೂಲ್ಯ ಸಂಪತ್ತು

ಇದೇ ೨ನೇ ದಿನಾಂಕ ದೇಶದ ಎಲ್ಲೆಡೆಯಲ್ಲೂ ಗಾಂಧೀಜಿಯ ಜಯಂತಿಯನ್ನು ಶ್ರದ್ಧೆಯಿಂದ ಆಚರಿಸಲಾಯಿತು.



ಗಾಂಧೀಜಿಯವರು ಭಾರತದ ಪೀಳಿಗೆಗಾಗಿ ಕೆಲವೇ ವಸ್ತುಗಳನ್ನು ಬಿಟ್ಟು ಹೋಗಿದ್ದರು. ಚಿತ್ರದಲ್ಲಿ ಅವರ ಮರದ ಪಾದುಕೆಗಳು, ಚಪ್ಪಲಿ, ಕನ್ನಡಕ ಊಟದ ಪಾತ್ರೆ ಮತ್ತು ಚಮಚಗಳನ್ನು ನೋಡಬಹುದು. ಅವರ ಪ್ರಾರ್ಥನೆಯ ಶ್ಲೋಕ ಮತ್ತು ಗೀತೆಗಳಿಂದ ಕೂಡಿದ ಪುಸ್ತಕ ಮತ್ತು ತನ್ನ ಗುರುಗಳೆಂದು ಅವರು ಕರೆಯುತ್ತಿದ್ದ ಮೂರು ಮಂಗಗಳ ಮೂರ್ತಿಗಳೂ ಚಿತ್ರದಲ್ಲಿ ಕಂಡು ಬರುತ್ತವೆ. ಈ ಮಂಗಗಳು "ಕೆಟ್ಟದ್ದನ್ನು ನೋಡಬೇಡ", "ಕೆಟ್ಟದ್ದನ್ನು ಕೇಳಬೇಡ", "ಕೆಟ್ಟದ್ದನ್ನು ಮಾತಾಡಬೇಡ" ಎನ್ನುತ್ತವೆ!

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ಇದೇ ಸಪ್ಟಂಬರ್ ದಿನಾಂಕ 24ರಲ್ಲು ಬ್ಯಾಂಕಿನ ಶಾಖೆಯೊಂದು ದಕ್ಷಿಣ ಮಲಬಾರ್ ಜಿಲ್ಲೆಯ ಪಾಲ್ಘಾಟಿನ ಬಿಗ್ ಬಜಾರಿನಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED
Estd.- 1906] [H. O UDIPI (S India)

ಅಸ್ಪೃಶ್ಯತೆಯು ಸಾಮಾಜಿಕ ಅನ್ಯಾಯ

ಸದ್ಧರ್ಮ ಸೂತ್ರ ಅದಕ್ಕೆ ಮನ್ನಣೆ ಕೊಡುವುದಿಲ್ಲ

ಭಾರತದ ಸಾಮಾಜಿಕ ಕಾರ್ಯಗಳ ಮಂಡಳದ ಹೊಸ ದೆಹಲಿಯಲ್ಲಿ ಕಳೆದ ವಾರ "ಜಾತೀಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆ ಎಂಬ ಕುರಿತು ವಿಚಾರ ಗೋಷ್ಠಿಯೊಂದನ್ನು ನಡೆಸಿತು. ರಾಷ್ಟ್ರಾಧ್ಯಕ್ಷ ಡಾ ರಾಜೇಂದ್ರ ಪ್ರಸಾದ



ರು ಈ ಸಂದರ್ಭದಲ್ಲಿ ಸಂದೇಶವೊಂದನ್ನು ಕಳುಹಿಸುತ್ತಾ ಹೀಗೆಂದರು; ಜಾತೀಯತೆ ಮತ್ತು ಅಸ್ಪೃಶ್ಯತೆಗಳೆಂಬ ಕೆಡುಕುಗಳು ಸಮಾಜದಲ್ಲಿ ಈಗ ಉಳಿದಿಲ್ಲವೆಂಬ ಅಥವಾ ಅದನ್ನು ನಿವಾರಿಸುವುದು ಕೇವಲ ಶಾಸನಾಂಗದ ಕರ್ತವ್ಯವೆನ್ನುವ ಭಾವನೆ ಕೆಲವರಲ್ಲಿದೆ. ನಮ್ಮ ಘಟನೆಯ ಮೂಲಕ ಅಸ್ಪೃಶ್ಯತೆಯನ್ನು ನಿವಾರಿಸಲಾಗಿದೆ. ಮತ್ತು ಅದರ ಆಚರಣೆಯನ್ನು ನಿಷೇಧಿಸಲಾಗಿದೆ. ಅದಾಗ್ಯೂ ಸಮಾಜದ ಕೆಲವು ವಿಶಿಷ್ಟವರ್ಗಗಳಿಗಿದ್ದ ತೊಂದರೆಗಳೂ ಅನರ್ಹತೆಗಳೂ ಇನ್ನೂ ವ್ಯವಹಾರ ಕ್ಷೇತ್ರದಿಂದದೂರವಾಗಿಲ್ಲ ಆರ್ಥಿಕ, ಸಾಮಾಜಿಕ ಹಾಗು ಇತರ ಮುಖಗಳುಳ್ಳ ಅನೇಕವಿಷಯಗಳು. ಇದಕ್ಕೆ ಕಾರಣವಾಗಿವೆ. ಈ ವಿಷಯದ ಕುರಿತು ಸಾರ್ವಜನಿಕರಿಗೆ ಅತಿ ಹೆಚ್ಚಿನ ತಿಳಿವಳಿಕೆಯನ್ನು ಮಾಡಿಕೊಡುವ ಆವಶ್ಯಕತೆ ಇದೆ"

ಸಾಮಾಜಿಕ ಅಪರಾಧ

ವಿಚಾರ ಗೋಷ್ಠಿಯನ್ನು ಪ್ರಸಿದ್ಧ ತತ್ವಜ್ಞಾನಿ ಹಾಗು ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನ್ನರು ಉದ್ಘಾಟಿಸಿದರು ಅವರು ತಮ್ಮ ಗಂಭೀರ ಹಾಗು ಮಾರ್ಮಿಕ ಭಾಷಣದಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ಸಾಮಾಜಿಕ ಅಪರಾಧವೆಂದು ಕರೆದರು. ಇದನ್ನು ದೇಶದ ಜನರು ಎಷ್ಟು ಬೇಗನೆ ತ್ಯಜಿಸಿದರೋ ಅಷ್ಟು ಮಟ್ಟಿಗೆ ದೇಶದ ಶುಭನಾಮ ಬೆಳಗುವುದೆಂದೂ ರಾಷ್ಟ್ರೀಯ ಐಕ್ಯತಾಯತ್ನ ಕೊಳ್ಳಲ್ಪಡುವುದೆಂದೂ ಸಾರಿದರು.

"ಅಸ್ಪೃಶ್ಯತೆಯ ಆಚರಣೆಯು ಸಮಾಜ ಘಾತಕವಾದುದಷ್ಟೇಯಲ್ಲ ಧರ್ಮ ತತ್ವಗಳಿಗೆ ವಿರುದ್ಧವೂ ಆಗಿದೆ. ಆಧುನಿಕ ರಾಜಕೀಯ ವಿಚಾರ ಪ್ರಣಾಳಿಗೆ ಸಮ್ಮತವಾದ ವಿಷಯವೂ ಅದಲ್ಲ. ಸರಕಾರವು ಅಸ್ಪೃಶ್ಯತೆಯ ಆಚರಣೆಯನ್ನು ನ್ಯಾಯವೇದ್ಯ ಅಪರಾಧವೆಂದು ಸಾರಿ, ನಾಗರಿಕರಲ್ಲಿ ಭೇದಭಾವವನ್ನು ತೋರಿಸುತ್ತಿರುವುದಕ್ಕೆ ತಡೆ ಹಾಕಿದೆ" ಎಂದರು.

ಗೊಂದಲದ ಭಾವನೆ

ಡಾ. ರಾಧಾಕೃಷ್ಣನ್ನರು ಧಾರ್ಮಿಕ ತತ್ವಗಳನ್ನು ಸಾಮಾಜಿಕ ಸಂಪ್ರದಾಯಗಳೊಡನೆ ಹೋಲಿಸಬಾರದೆಂದೂ ಅವೆರಡೂ ಒಂದೇ ಎಂಬ ಗೊಂದಲದ ಭಾವನೆಗೆ ಎಡೆಕೊಡಬಾರದೆಂದೂ ಜನರನ್ನು ವಿನಂತಿಸಿದರು "ಧಾರ್ಮಿಕ ತತ್ವಗಳ ಸ್ವರೂಪ ಮೂಲಭೂತವಾಗಿದೆ. ಸಹಿಷ್ಣುತೆಯ ಭಾವದಿಂದ ಕೂಡಿದೆ. ಸಾಮಾಜಿಕ ಸಂಪ್ರದಾಯಗಳು ಬದಲಾಗುತ್ತಿರುತ್ತವೆ. ಇಂಥ ಬದಲಾವಣೆಯನ್ನು ಸಾಮಾಜಿಕ ಸಂಪ್ರದಾಯದಲ್ಲಿ ಅಪೇಕ್ಷಿಸಿದಾಗಲೆಲ್ಲ ಧರ್ಮವು ಗಂಡಾಂತರದಲ್ಲದೆ ಎಂದು ಬೊಬ್ಬೆ ಕಾಳಲಾಗುತ್ತದೆ — ಆದರೆ ಈ ಬೊಬ್ಬೆಯಕಾರಣ ಕೇವಲ ಸುಳ್ಳು ಎಂದನರು ತಿಳಿಸಿದರು.

"ಕ್ರೈಸ್ತಶಕದ ಪ್ರಾರಂಭದಲ್ಲಿ ಜಾತೀಯವಿಚಾರ ಮತ್ತದರ ಆಚರಣೆಯಕುರಿತಾದ ನಮ್ಮ ಭಾವನೆಗಳು ಬಹಳ ಸಡಿಲಾಗಿದ್ದವು, ಈಗಿನಷ್ಟು ಬಿಗಿಯಾಗಿರಲೇ ಇಲ್ಲ. ಕಠಿಣ ಅರ್ಥದಲ್ಲಿ ಅದು ನಿರ್ಬಂಧಿಸಲ್ಪಟ್ಟಿರಲಿಲ್ಲ ಅನುಲೋಮ, ವಿವಾಹಗಳಂತೆ ಪ್ರತಿ ಲೋಮವಿವಾಹದ ಉಲ್ಲೇಖ ವಿರುವುದನ್ನು ನೋಡಿದರೆ ನಮ್ಮ ಚರಿತ್ರೆಯ ಪ್ರಗತಿಪರಕಾಲದಲ್ಲಿ ಅಂತರ್ಜಾತೀಯ ವಿವಾಹಗಳು ಧಾರಾಳವಾಗಿ ನಡೆಯುತ್ತಿದ್ದವೆಂಬುದು ಸ್ಪಷ್ಟ, ಧರ್ಮವು ತನ್ನ ನೈತಿಕ ಶಕ್ತಿಯನ್ನು ಮತ್ತು ಉದ್ಯಾತ್ಮಿಕ ಧ್ಯೇಯವನ್ನು ಕಳೆದು, ಕೊಂಡುತೆಲ್ಲ ಜಾತೀಯತೆ ಬಲತುಕೊಂಡಿತು ಮತ್ತು ಜಾತೀಯ ವಿಧಿ—ನಿಯಮಗಳನ್ನು ಬಿಗಿಗೊಳಿಸಲಾಯಿತು. ಎಂದು ಉಪರಾಷ್ಟ್ರಾಧ್ಯಕ್ಷರು ವಿವರಿಸಿದರು.

ಬದಲಾವಣೆಯೇ ಜೀವಾಳ

ಇಂದು ನಾವು ಹೊಸಯುಗದ ಹೊಸ್ತಿಲಿನಲ್ಲಿ ನಿಂತಿದ್ದೇವೆ. ನಾವು ಕಾಲದ ಪುರೋಗತಿಯನ್ನು ತಡೆಹಿಡಿಯುವಂತಿಲ್ಲ:ಗತಕಾಲದ ಸಂಪ್ರದಾಯಗಳನ್ನೆಲ್ಲ ಉಳಿಸಿಕೊಂಡಿದ್ದರೆ, ಇವತ್ತು ಬೆಲೆ ಇಲ್ಲದ ವಿಷಯಕ್ಕೆ ಮೋಹವನ್ನು ತ್ಯಜಿಸಲಾರೆವಾದರೆ, ನಾವು ಬಹಳ ಹಿಂದ ಉಳಿಯುತ್ತೇವೆ ನಾವು ಸ್ವಾಮ್ಯ ಸಂಗತಿಗಳನ್ನು ನೆನಪಿಟ್ಟುಕೊಳ್ಳುವುದಕ್ಕೋಸ್ಕರ, ಅನೇಕ ಗೌಣ ವಿಷಯಗಳನ್ನು ಮರೆಯಲೇಬೇಕಾಗುತ್ತದೆ. ಬದಲಾವಣೆಯನ್ನು ವಿರೋಧಿಸಿದರೆ ಸಮಾಜವು ಕೊಳೆಯ ಕೂಪವಾಗುತ್ತದೆ, ದುರ್ಗಂಧಮಯವಾಗುತ್ತದೆ. ಬದಲಾವಣೆಯನ್ನು ವಿವೇಕದಿಂದ ಆಳವಡಿಸಿಕೊಂಡರೆ ಉನ್ನತಿ ಸಾಧಿಸಲ್ಪಡುತ್ತದೆ. ನಮ್ಮ ಭವ್ಯ ಸಂಪ್ರದಾಯದಲ್ಲಿ ಬದಲಾವಣೆಯ ಭಯಕ್ಕೆ ಸ್ಥಾನವಿಲ್ಲ" ಎಂದು ರಾಧಾಕೃಷ್ಣನ್ನರು ಘೋಷಿಸಿದರು.

ಪರಿವರ್ತನೆಯೇ ಜೀವನದ ಮೂಲಸೂತ್ರ ಎನ್ನುತ್ತಾ "ವಿವೇಕ ಶೀಲರು ತಮ್ಮ ಸಂಪ್ರದಾಯವನ್ನು ಕಾಲದೇಶಗಳಿಗನುಸಾರ ಮಾರ್ಪಡಿಸಿಕೊಳ್ಳುತ್ತಾರೆ; ಇದಕ್ಕೆ ಕೊನೆ ಎಂಬುದಿಲ್ಲ ನಮ್ಮ ಮೂಲಭೂತವಾದ ನಿಯಮಗಳ ಕೃಷ್ಟಿ ತೆಗೆದಿಟ್ಟರೆ, ಉಚಿತ ಬದಲಾವಣೆಗೆ ಎಲ್ಲೆಲ್ಲಾ ಅವಕಾಶ ಕೊಡುತ್ತಾರೆ. ನಮ್ಮ ಮಾತಿಗೂ ನಡತೆಗೂ ಹೊಂದಿಕೆ ಇರಬೇಕಾಗಿದೆ ಸಮಾಜವನ್ನು ಮೇಲ್ಮೈ ಸಿಮಿರಿ ತನ್ನಾಯ, ಅಸಮಾನತೆಗಳಂಥಂತ ಸಮಾನ ಅವಕಾಶಗಳ ಅಭಾವದಿಂದಲೂ ರಕ್ಷಣೆಗಾಗಿದೆ ಮಾನವತೆಯು ತನ್ನ ನಾಶದ ಕಾರಣಗಳ ವಿರುದ್ಧ ಕಾರ್ಯಾಚರಣೆ ನಡೆಸಬೇಕಾಗಿದೆ ನಾವು ಆರ್ಥಿಕ ನ್ಯಾಯವೂ ಉತ್ತಮವಾದ ಅವಕಾಶವೂ ಪ್ರತಿಯೊಬ್ಬನಿಗೂ ಸಿಗುವ ಸಮಾಜವನ್ನು ನಿರ್ಮಿಸೋಣ' ಎಂಬುದಾಗಿ ಅವರು ಹೇಳಿದರು ಸಮಾಜದ ದುರ್ಬಲ ವರ್ಗಗಳಿಗೆ ವಿಶೇಷ ತಿದ್ದುಕಾಳಗಳನ್ನು ಒದಗಿಸಿಕೊಡಬೇಕೆಂದೂ ರಾಧಾಕೃಷ್ಣನ್ನರು ಸಲಹೆ ಮಾಡಿದರು

ಭಾಷೆಯ ಅತಿರೇಕ ಮೋಹ ಬೇಡ

ಜಾತೀಯ ಭಾವನೆಯೂ ಖಂಡನಾರ್ಹ

ಫಜಲ ಅಲಿ ಆಯೋಗದ ವರದಿ ಪ್ರಕಟವಾಗುವ ಸಂದರ್ಭವನ್ನು ನೋಡಿಕೊಂಡು ಸರಕಾರದ ಧುರೀಣರು ಜಾತೀಯತೆಯನ್ನೆಂತೂ ಹಾಗೆಯೇ ಭಾಷೆಯ ಕುರಿತಾದ ದುರಭಿಮಾನವೂ ಸಲ್ಲದೆಂದು ಜನತೆಗೆ ಉಪದೇಶಿಸಲು ಮುಂದಾಗಿದ್ದಾರೆ. ಕಳೆದವಾರ ಕೇಂದ್ರ ಸರಕಾರದ ಪತಿ ಮತ್ತು ಸೂರ್ಯಕಿಯ ಮಂತ್ರಿ ಸರದಾರ ಸ್ವರಣ ಸಿಂಘರು ಪಂಜಾಬಿನ ಸಾರ್ವಜನಿ



ಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ "ಭಾಷೆಯ ಕುರಿತಾಗಿ ಅಥವಾ ಫಜಲ ಅಲಿ ಆಯೋಗದ ವರದಿಯ ಸಿಫಾರಸುಗಳಿಂದ ಅಕೃಪ್ತರಾಗಿ ನಡೆಸುವ ಯಾವುದೇ ಅಕೃತ್ಯಗಳನ್ನು ಮತ್ತು ಆಂದೋಲನವನ್ನು ಸರಕಾರ ನಡೆಸೆನು" ಎಂದು ಸಾರಿದರು.

ಜಾತೀಯತೆಯ ಖಂಡನೆ

ರಾಜ್ಯಗಳನ್ನು ಸ್ಥಾಪಿಸುವ ವಿಷಯದಲ್ಲಿ ಸಂಪೂರ್ಣವಾಗಿ ಆಡಳಿತಕ್ಕೆ ಸಂಬಂಧಿಸಿದೆ ಎಂದವರು ಸಾರಿದರು. ತಮ್ಮ ಅಪೇಕ್ಷೆಗೆ ಅನುಸಾರವಾಗಿಯೇ ಆಯೋಗವು ಸಿಫಾರಸುಗಳನ್ನು ಮಾಡದಿದ್ದರೆ ಉಗ್ರ ಚಳವಳಿಯನ್ನು ನಡೆಸಲಾಗುವುದು ಎಂದು ಬೆದರಿಕೆ ಹಾಕುವವರ ನಿಲುವೆ ಅರ್ಥಹೀನವಾದುದೆಂದು ಅವರು ಹೇಳಿದರು.

ಜಾತೀಯತೆಯನ್ನೂ ನಡೆವರು ಖಂಡಿಸಿದರು. ಕದಡಿದ ನೀರಿನಲ್ಲಿ ನಿಮಾನು ಹಿಡಿಯಲು ಬಯಸುವ ಕೆಲವು ರಾಜಕೀಯ ಪಕ್ಷಗಳ ಕುರಿತು ಅವರು ಎಚ್ಚರಿಕೆಯನ್ನು ಕೊಟ್ಟರು. ದೇಶವು ಧಾರ್ಮಿಕ ತಳಹದಿಯ ಮೇಲೆ ವಿಭಜನೆ ಹೊಂದಬೇಕೆಂದು ಮತ್ತು ಜಾತೀಯ ಭಾವನೆಗೆ ಬೆಂಬಲ ದೊರಕಬೇಕೆಂದು ಜನರು ಭಾವಿಸಿದರೆ, ಪ್ರಗತಿ ಕುಂಠಿತವಾಗುವುದೆಂದು ಅವರು ಉಪದೇಶಿಸಿದರು.

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅನ್ನಕ್ಕೆ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಸ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8, ½ ರಾತಲಿಗೆ ರೂ. 1/13

ವ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು

1. ಶಾ ಕಂಪೆನಿ, ಮಂಗಳೂರು
2. ವಿ. ವಿ. ಲೆಜೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ.

ವಿಸ್ತರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಆಡಳಿತ ಭಾಷೆಯಾಗಿ ಹಿಂದಿಯ ಬಳಕೆ

ಹಿಂದೀಯೇತರ ವರ್ಗಗಳಿಗೆ ಪಂತರ ಭರವಸೆ

ಘಟನೆಯಲ್ಲಿ ಹೇಳಿದಂತೆ ಭಾರತ ಸರಕಾರದವರು ಈಗಾಗಲೇ ನೇಮಿಸಿರುವ ಹಿಂದಿ ಆಯೋಗಕ್ಕೆ ಸಂಬಂಧಿಸಿದ ವೆಚ್ಚದ ಬೇಡಿಕೆಯನ್ನು ಲೋಕಸಭೆಯ ಮುಂದೆ ಮೊನ್ನೆ ಗೃಹ ಮಂತ್ರಿ ಪಂಡಿತ ಪಂತರು ಮಂಡಿಸಿದಾಗ, ದಕ್ಷಿಣ ಭಾರತದ ಅನೇಕ ಸದಸ್ಯರು ಕೇಂದ್ರ ಸರಕಾರವು ಹಿಂದಿ ಭಾಷೆಯ ಬಗಿತು ಎಚ್ಚರಿಕೆಯ ನಡವಳಿಕೆಯನ್ನು ಅನುಸರಿಸಬೇಕು ಎಂದು ಸಲಹೆ ಮಾಡಿದರು. ಮುಖ್ಯವಾಗಿ ಹಿಂದೀಯೇತರ ವರ್ಗದವರ ಹಿತಾಸಕ್ತಿಗೆ ಸೆಟ್ಟು ತಗಲದಂತೆ ಕೇಂದ್ರ ಸರಕಾರ ನೋಡಿಕೊಳ್ಳಬೇಕು ಎಂದರು.



ಸರ್ವಾನುಮತದ ನಿರ್ಣಯ

ಪಂಡಿತ ಪಂತರು ಅನೇಕ ಭರವಸೆಯ ಮಾತುಗಳಿಂದ ಸದಸ್ಯರನ್ನು ಸಮಾಧಾನ ಪಡಿಸುತ್ತಾ ಹೀಗೆಂದರು– "ನನಗೆ ಯಾರ ಮನಸ್ಸನ್ನು ನೋಯಿಸುವುದೂ ಇಷ್ಟವಿಲ್ಲ. ಹಿಂದಿ ಭಾಷೆಯ ಜ್ಞಾನವನ್ನು ಪಡೆಯುವ ಕುರಿತು ಯಾರಲ್ಲಾದರೂ ಇನ್ನೂ ಸಂಶಯದ ವಿಷಯಗಳಿದ್ದರೆ ಅದನ್ನು ತೆಗೆಯಲು ಪ್ರಯತ್ನಿಸುತ್ತೇನೆ ಹಿಂದಿಯನ್ನು ಒತ್ತಾಯದಿಂದ ಹೇರಲಾಗುತ್ತದೆ ಎಂಬ ವಾದಕ್ಕೆ ಆರ್ಥವಿಲ್ಲ. ಹಿಂದಿಯನ್ನು ಕೇಂದ್ರ ಸರಕಾರದ ಅಧಿಕೃತ ಭಾಷೆಯಾಗಿ ಘಟನಾ ಸಮಿತಿಯು ಸರ್ವಾನುಮತದಿಂದ ಸ್ವೀಕರಿಸಿತು ಇದನ್ನು ಮನ್ನಿಸಿದ ಸದಸ್ಯರಲ್ಲಿ ಹಿಂದೀಯೇತರ ಭಾಷೆಗಳವರೂ ಇದ್ದರು. ಇವರೆಲ್ಲರೂ ಹಿಂದಿಯನ್ನು ಬಳಕುವ ಕುರಿತು ಸಮ್ಮತಿಯನ್ನು ವ್ಯಕ್ತಪಡಿಸಿದ್ದರು

ಹಿಂದೀಯೇತರರ ಭಾವನೆ

ಹಿಂದಿ ಆಯೋಗದಲ್ಲಿ ಪ್ರಾದೇಶಿಕ ಭಾಷೆಗಳಿಗೆ ಸಾಕಷ್ಟು ಪ್ರತಿನಿಧಿತ್ವವನ್ನು ಒದಗಿಸಿಲ್ಲ ಎನ್ನುವುದು ಸರಿಯಲ್ಲ ಎಂದವರು ಆಯೋಗದ ಸದಸ್ಯರ ಹೆಸರನ್ನೋದಿ ವಿವರಿಸಿದರು. "ಹಿಂದೀಯೇತರ ಭಾಷೆಗಳವರ ಭಾವನೆಗೆ ಸಾಕಷ್ಟು ವಿಶೇಷ ಗಮನವನ್ನು ಕೊಡಬೇಕೆಂದೂ ಸರಕಾರದ ನೌಕರಿ ಸ್ಥಾನಗಳಲ್ಲಿ ಅವರ ನ್ಯಾಯಬದ್ಧ ಬೇಡಿಕೆಗಳನ್ನು ಪೂರೈಸುವುದಕ್ಕೆ ಅಡ್ಡಿಯಾಗದ ವಿಧಾನವನ್ನು ಅನುಸರಿಸುವುದು ಹೇಗೆಂದು ತಿಳಿಸಬೇಕೆಂದೂ ಆಯೋಗಕ್ಕೆ ಹೇಳಿದ್ದೇವೆ. ನನ್ನ ಮಟ್ಟಿಗೆ ಹಿಂದಿಯನ್ನು ಯಾರ ಮೇಲೂ ಒತ್ತಾಯದಿಂದ ಹೇರುವ ಪ್ರಶ್ನೆಯಿಲ್ಲ. ಹಿಂದಿಯ ಸೌಂದರ್ಯ, ಪರಿಸ್ಥಿತಿಯ ಒತ್ತಡ, ರಾಷ್ಟ್ರೀಯ ಸಂಸ್ಕೃತಿಯ ಸ್ನೇಹ ಇವುಗಳಿಂದ ಹಿಂದೀಯೇತರ ವರ್ಗಗಳು ಆ ಭಾಷೆಯನ್ನು ಕಲಿಯಲು ತಾವಾಗಿ ಮುಂದೆ ಬರಬಹುದೆಂದು ನಾನೆಣಿಸುತ್ತೇನೆ" ಎಂದು ಪಂತರು ಆಶಿಸಿದರು.

ಭರವಸೆಯ ಮಾತು

ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕುಂಠಿತಗೊಳಿಸುವ ಯಾವುದೇ ಪ್ರಯತ್ನಕ್ಕೆ ತನ್ನ ಬೆಂಬಲವಿಲ್ಲ ಎಂದು ಪಂತರು ಸಾರಿದರು. ಪ್ರಾದೇಶಿಕ ಭಾಷೆಗಳಲ್ಲಿ ವಿಮಲ ಸಾಹಿತ್ಯ ಸೃಷ್ಟಿಯಾಗಬೇಕು; ಅವುಗಳಿಂದ ನಮ್ಮ ಸಂಸ್ಕೃತಿಯ ಪೋಷಣೆಯಾಗಬೇಕು— ಎಂಬುದೇ ತನ್ನಿಚ್ಛೆ ಎಂದರು. "ಆದರೆ ಅಖಿಲ ಭಾರತದ ವ್ಯವಹಾರದಿ ಮಟ್ಟಿಗೆ ಒಂದು ಭಾಷೆಯನ್ನು ಆಶ್ರಯಿಸಲೇಬೇಕಾಗಿದೆ; ಭಾರತಕ್ಕೆ ಹಿಂದಿಯನ್ನು ಬಿಟ್ಟರೆ ಬೇರೊಂದು ಭಾಷೆ ಇದಕ್ಕೆ ಯೋಗ್ಯವಾಗಿ ಸಿಗಲಾರದು. ಆದುದರಿಂದ ನೌಕರಿಗಾಗಿ ನಡೆಸುವ ಪರೀಕ್ಷೆಗಳಲ್ಲಿ ಹಿಂದಿಯ ಜ್ಞಾನವಿಲ್ಲ ಎಂಬುದೊಂದೇ ದೋಷವನ್ನು ಲೆಕ್ಕಕ್ಕೆ ಹಿಡಿದು ಉಳಿದೆಲ್ಲ ರೀತಿಯಿಂದ ಸಮರ್ಥರಾದ ಹಿಂದೀಯೇತರ ಪ್ರದೇಶಗಳ ಉಮೇದುವಾರರನ್ನು ಹೊರಗಿಡುವುದಿಲ್ಲ" ಎಂಬ ಆಶ್ವಾಸನೆಯನ್ನು ನೀಡಿದರು.

ವಿಶೇಷ ವಿನಂತಿ

ಪಂತರು ಹಿಂದಿಯೇತರ ಪ್ರದೇಶಗಳವರಿಗೆ ಹಿಂದಿಯನ್ನು ಕಲಿಯಲು ವಿಶೇಷವಾದ ವಿನಂತಿಯನ್ನು ಮಾಡಿದರು ಘಟನೆಯಲ್ಲಿ ಹೇಳಲಾದ ಧ್ಯೇಯಗಳನ್ನು ಸಾಧಿಸುವಲ್ಲಿ ಎಲ್ಲರ ಸಹಕಾರ ಬೇಕು ಎನುತ್ತಾ "ಆ ಸಹಕಾರ ದೊರೆತು ೧೯೬೫ನೇ ಇಸವಿಯೊಳಗೆಯೇ ಹಿಂದಿಯನ್ನು ಕೇಂದ್ರ ಸರಕಾರದ ಆಡಳಿತ ಭಾಷೆಯಾಗಿ ರೂಢಿಸುವುದು ಸಾಧ್ಯವಾಗಲಿ" ಎಂದು ಹಾರೈಸಿದರು. "ಹಿಂದೀಯೇತರ ಭಾಷೆಗಳವರ ಸಹಕಾರವಿಲ್ಲದಿದ್ದರೆ ಈ ದಿಸೆಯಲ್ಲಿ ಪ್ರಗತಿಯನ್ನು ಸಾಧಿಸುವುದು ಕಷ್ಟ; ಅವರ ಸ್ನೇಹಾಚಾರ, ಸೌಹಾರ್ದ ಭಾವನೆ ಮತ್ತು ರಾಷ್ಟ್ರದ ಒಗ್ಗಟ್ಟು ಮತ್ತು ಶ್ರೇಯಸ್ಸಿಗಾಗಿ ಹಿಂದಿ ಭಾಷೆಯನ್ನು ಅಂಗೀಕರಿಸುವ ಮುನ್ನೋಟ ಅತ್ಯಾವಶ್ಯಕವಾಗಿದೆ. ಈ ದೃಷ್ಟಿಯಿಂದ ಎಲ್ಲರೂ ಉಪಯೋಗಿಸುವ ಭಾಷೆಯಾಗಿ ಭಾರತದಲ್ಲಿ ಹಿಂದಿಯು ಬಳಕೆಗೆ ಬರುವಂತೆ ಹಿಂದೀಯೇತರ ಭಾಷೆಗಳವರು ನೆರವಾಗಬೇಕು" ಎಂದು ಕೇಳಿಕೊಂಡರು.

ಕೈಮಗ್ಗದ ಬಟ್ಟೆಗಳಲ್ಲಿ ಅಮೇರಿಕನ್ನರ ಆಸೆ

ದೊಡ್ಡ ಪ್ರಮಾಣದಲ್ಲಿ ಪೂರೈಸುವ ಸಾಧ್ಯತೆ

ಭಾರತದ ಕೈಮಗ್ಗದ ಬಟ್ಟೆಗಳಿಗೆ ಅಮೇರಿಕದಲ್ಲಿ ಪೇಟೆಯು ದೊರೆಯುವ ಸಂಭವವಿರುವಂತೆ ಕಂಡು ಬರುತ್ತದೆ. ಕೆಲವು ವಿಶಿಷ್ಟ ನಮೂನೆಯ ಕೈಮಗ್ಗದ ಬಟ್ಟೆಗಳನ್ನು ನಿಶ್ಚಿತ ಮಟ್ಟವನ್ನು ಕಾಯ್ದುಕೊಂಡು ನಿಯಮಿತ ಅವಧಿಯೊಳಗೆ ಪೂರೈಸಲು ಸಾಧ್ಯವೇ? ಎಂಬುವಾಗಿ ಅಮೇರಿಕದ ವ್ಯಾಪಾರಿ ಸಂಸ್ಥೆಗಳು ವಿಚಾರಿಸುತ್ತಿವೆ.

ಕಳೆದ ಐದಾರು ತಿಂಗಳುಗಳಿಂದ ನ್ಯೂಯೋರ್ಕಿನಲ್ಲಿರುವ ಭಾರತದ ಪ್ರತಿನಿಧಿ ಕಚೇರಿಯ ವ್ಯಾಪಾರ ಕೇಂದ್ರ ವಿಭಾಗದಲ್ಲಿ ಆರಿಸಿದ ಕೈಮಗ್ಗದ ಬಟ್ಟೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಇದರಿಂದ ಅಮೇರಿಕದ ವ್ಯಾಪಾರಿಗಳಿಗೆ ಕೈಮಗ್ಗದ ಬಟ್ಟೆಯ ಕುರಿತು ಆಸಕ್ತಿ ಹುಟ್ಟಿತೆಂದು ಹೇಳಬಹುದು. ಅಮೇರಿಕದ ಜನತೆಯ ಅಂತಸ್ತು ಮತ್ತು ಅಭಿರುಚಿಗೆ ಯೋಗ್ಯವಾದ ಕೈಮಗ್ಗದ ಬಟ್ಟೆಗಳ ನಮೂನೆಗಳನ್ನು ಭಾರತದಲ್ಲಿ ಸಂಚರಿಸಿದ ಅಮೇರಿಕದ ಅನೇಕ ವ್ಯಾಪಾರಿಗಳು ಪಡೆದಿದ್ದರು. ಹೊಸ ಹೊಸ ನಕಾಶೆಗಳಿಂದ ಜನರ ಮನೋರಂಜನೆ ಮಾಡುವುದು ಸಾಧ್ಯವೇ ಎಂದೂ ಅವರು ವಿಚಾರಿಸುತ್ತಿದ್ದರು.

ಪ್ರದರ್ಶನದಲ್ಲಿಟ್ಟ ಭಾಗು ಮಾದರಿಯಾಗಿ ಪೂರೈಸಿದ ಬಟ್ಟೆಗಳ ಅಂತಸ್ತನ್ನು ಕಾಯ್ದುಕೊಂಡು ಹೋಗುವುದೇ ಅಮೇರಿಕದ ಬೇಡಿಕೆಯನ್ನು ಪೂರೈಸುವುದರಲ್ಲಿರುವ ಕಷ್ಟ. ಎರಡು ವರ್ಷಗಳಿಂದೀಚೆಗೆ ಅಖಿಲ ಭಾರತ ಕೈ ಮಗ್ಗದ ಒಟ್ಟಿಗೆ ಮಂಡಳವೂ ಸರಕಾರವೂ ನೇಕಾರರನ್ನು ಸಹಕಾರ ತತ್ವದ ಮೇಲೆ ಸಂಘಟಿಸಿ, ಆವಶ್ಯಕ ಮಟ್ಟಿಗೆ ನಿಶ್ಚಿತ ಯೋಗ್ಯತೆಯ ಬಟ್ಟೆಗಳನ್ನೆ ಉತ್ಪಾದಿಸುವಂತೆ ಪ್ರೋತ್ಸಾಹವನ್ನು ಕೊಡುತ್ತಿವೆ. ಆದರೆ ಈ ಪ್ರಯೋಗ ಸಂಪೂರ್ಣ ಯಶಸ್ವಿಯಾಗಿದೆ ಎಂದು ಹೇಳುವ ಸ್ಥಿತಿಯಲ್ಲಿ ನಾವಿಲ್ಲ.

ಸೈನ್ಯ ಖಾತೆಯಲ್ಲಿ ಖಾದಿಯನ್ನು ಸಮವಸ್ತ್ರಕ್ಕೆ ಉಪಯೋಗಿಸುವುದು ಸಾಧ್ಯವಾಗಿಲ್ಲ– ಏಕೆಂದರೆ ದೊಡ್ಡ ಪ್ರಮಾಣದಲ್ಲಿ ಒಂದೇ ಯೋಗ್ಯತೆಯ ಕೈಮಗ್ಗದ ಬಟ್ಟೆ ದೊರಕಿಸಿಕೊಳ್ಳುವ ಪ್ರಯತ್ನ ಫಲಿಸಿಲ್ಲ ಎಂದು ಕೇಂದ್ರ ಸರಕಾರದ ಮಂತ್ರಿಗಳು ಕೆಲವು ದಿನಗಳ ಹಿಂದೆ ಹೇಳಿದ್ದರು. ಇದನ್ನು ನೋಡಿದರೆ, ಅಮೇರಿಕದವರು ೧೦ ಲಕ್ಷ ಗಜ ಕೈಮಗ್ಗದ ಬಟ್ಟೆಗೆ ಕೊಡುವ ಆರ್ಡರನ್ನು ನಮಗೆ ಸ್ವೀಕರಿಸಿ, ಪೂರೈಸಲು ಸಾಧ್ಯವಾದೀತೇ ಎಂಬ ಸಂಶಯ ತಲೆದೋರುತ್ತದೆ.

ಅಮೇರಿಕದ ಬೇಡಿಕೆಯು ತಾತ್ಕಾಲಿಕ ಸ್ವರೂಪದ್ದಿರಬಾರದು– ಮುಂದರಿಯುತ್ತಾ ಹೋಗಬೇಕು. ಹಾಗಿದ್ದರೆ, ಬೇಡಿಕೆಯನ್ನು ಪೂರೈಸುವುದು ಕಷ್ಟವಲ್ಲ ಎಂದು ಕೈಮಗ್ಗದ ಬಟ್ಟೆಗಳ ಮಂಡಳದ ಸದಸ್ಯ ಶ್ರೀ. ಸೋಮಪ್ಪನವರು ಹೇಳುತ್ತಾರೆ. ಎಮ್ಮಗನೂರಿನಲ್ಲಿರುವ ಕೇಂದ್ರವೊಂದೇ ೫ ಲಕ್ಷ ಗಜ ಕೈಮಗ್ಗದ ಬಟ್ಟೆಯನ್ನು ಪೂರೈಸಬಲ್ಲುದು. ಇಡೀ ಭಾರತದಲ್ಲಿ ಕೈಮಗ್ಗದ ಉತ್ಪಾದನೆಯ ಸಾಮರ್ಥ್ಯ ಇದಕ್ಕಿಂತ ಎಷ್ಟೊ ಹೆಚ್ಚಿಗಿರುತ್ತದೆ. ಅಮೇರಿಕದ ವ್ಯಾಪಾರಗಾರರು "ಮಾದರಿ"ಗಳನ್ನು ಸಡೆದ ಬಳಿಕ ಬರೀದಿಗೆ ಹೆಚ್ಚು ವಿಳಂಬವನ್ನು ಮಾಡಲಾಗದು—ಎಂದೂ ಸೋಮಪ್ಪನವರ ಅಭಿಪ್ರಾಯ.

ಸಾಮಾನ್ಯವಾಗಿ ಇತರರ ಅಭಿಪ್ರಾಯವೂ ಇದೇರೀತಿಯಾಗಿದೆ ನೇಕಾರರನ್ನು ದೊಡ್ಡ ಪ್ರಮಾಣದ ಪೂರೈಕೆಯನ್ನು ಕ್ಲಿಷ್ಟಕಾಲಕ್ಕೆ ಪೂರೈಸುವಂತೆ ಸಂಘಟಿಸಿ, ಒಂದೇ ಯೋಗ್ಯತೆಯ ಒಟ್ಟಿಗಳ ಉತ್ಪಾದನೆಯಲ್ಲಿ ತರಬೇತಿಗೊಳಿಸಲು ಒಮ್ಮೆ ಸಮರ್ಥರಾದೆವೆಂದರೆ, ಮತ್ತೆ ಅಮೇರಿಕದ ಬೇಡಿಕೆಗಳನ್ನು ಕ್ರಮಪ್ರಕಾರ ಪೂರೈಸಬಹುದು ಎಂದು ಹೇಳಲಾಗುತ್ತದೆ. ಜಪಾನಿನ ಒಟ್ಟಿಗಳ ಸ್ಪರ್ಧೆಯಿಂದ ಭಾರತವು ದೂರಪೂರ್ವ ಹಾಗೂ ಆಫ್ರಿಕದ ಪೇಟೆಗಳನ್ನು ಕಳೆದುಕೊಳ್ಳುತ್ತಿರುವ ಸಂಧಿಕಾಲದಲ್ಲಿ ಅಮೇರಿಕದಲ್ಲುಂಟಾದ ಆಸಕ್ತಿಯನ್ನು ಉಳಿಸಿಕೊಳ್ಳುವುದೇ ಜಾಣತನವೆಂದು ಎಲ್ಲರೂ ಒಪ್ಪುತ್ತಾರೆ.

ಕೈಮಗ್ಗದ ಮಂಡಳದ ಅಧಿಕಾರಿಗಳು ಈಗ ವಿಚಾರವಿನಿಮಯವನ್ನು ಗಾಢವಾಗಿ ನಡೆಸುತ್ತಿದ್ದಾರೆಂದು ತಿಳಿದು ಬರುತ್ತದೆ. ಮದ್ರಾಸಿನ ಕೈಮಗ್ಗದ ಬಟ್ಟೆಗಳಿಗೆ ವಿಶಿಷ್ಟ ಬೇಡಿಕೆ ಇದ್ದಂತೆ ಕಂಡು ಬರುತ್ತದೆ. ಅಮೇರಿಕದಲ್ಲಿ ಶಾಖೆಯೆರುವ ಭಾರತೀಯ ಕಂಪೆನಿಯೊಂದು ಮದ್ರಾಸಿನಿಂದ ಕೈಮಗ್ಗದ ಬಟ್ಟೆಗಳ ಕೆಲವು ನಮೂನೆಗಳನ್ನು ತರಿಸಿಕೊಂಡಿದೆಯೆಂದೂ ಒಂದು ಲಕ್ಷ ಗಜದಷ್ಟು ಬಟ್ಟೆಯನ್ನು ಪೂರೈಸಲು ಹೇಳಿದೆ ಎಂದೂ ಗೊತ್ತಾಗಿದೆ. ಸದ್ಯ ಅಮೇರಿಕವು ಬೇಡುತ್ತಿರುವ ೧೦ ಲಕ್ಷ ಗಜ ಕೈಮಗ್ಗದ ಬಟ್ಟೆಗಳು ಬರುವ ಬೇಸಿಗೆಯ ಉಪಯೋಗಕ್ಕೆಂದೂ ಈ ವ್ಯಾಪಾರ ಯಶಸ್ವಿಯಾದರೆ ಮುಂದೆ ಕಾಯಂಬೇಡಿಕೆ ಬಂದೀತೆಂಬಅಂದಾಜು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಬುಲೆ, ಸರಿಯಾಗಿ ಬಸಿಸ್ಥೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತಿಂಗಳ ಔಷಧಿ ರೂ. ೪–೦–೦

ನಮ್ಮ ಸ್ವಾಕಿಸ್ವರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ —ಬೆಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಫಜಲ ಅಲಿ ಆಯೋಗದ ವರದಿ

ಇದೇ ವಾರ ಹೊರಬೀಳುವ ಸಂಭವ

ಫಜಲ ಅಲಿ ಆಯೋಗದ ವರದಿಯ ಕುರಿತು ಶಾಂತ ಭಾವನೆಯನ್ನೂ ಸರ್ಕಾರ ಬುದ್ಧಿಯನ್ನೂ ಜನರು ಇಟ್ಟುಕೊಳ್ಳಲಿ; ಉದ್ರೇಕಗೊಳ್ಳದೆ ಸಂಯಮವನ್ನು ಸಾಧಿಸಲಿ—ಎಂದು ದಕ್ಷಿಣ ಭಾರತದ ಸಂಚಾರ ಕಾರ್ಯಕ್ರಮವನ್ನು ಕಳೆದ ವಾರ ಇಟ್ಟುಕೊಂಡಿದ್ದ ಪ್ರಧಾನಿ ನೆಹರು ಮದ್ರಾಸಿನ ಸಾರ್ವಜನಿಕ ಸಭೆಯೊಂದರಲ್ಲಿ ನಿವೇದಿಸಿದರು. ಉದ್ರೇಕಯುಕ್ತರಾಗಿದ್ದರೆ ಸಮಸ್ಯೆಯನ್ನು ಸ್ವಚ್ಛಭಾವದಲ್ಲಿ ವಿಚಾರಿಸಲು ಸಾಧ್ಯವಾಗುವುದಿಲ್ಲ. ಸಮಸ್ಯೆಗಳ ಪರಿಹಾರದಲ್ಲಿ ಉಪವಾಸ, ಸತ್ಯಾಗ್ರಹ ಮುಂತಾದ ಬೆದರಿಕೆಗಳೂ ಉಪಯುಕ್ತವಾಗಿಲ್ಲ ಎಂದು ನೆಹರು ತಿಳಿಸಿದರು.

ಇಷ್ಟರಲ್ಲಿಯೇ ಪ್ರಕಟಣೆ

ಆಯೋಗವು ತನಗೆ ಒಪ್ಪಿಸಿದ ಅವಧಿಯ ಕೊನೆಯ ದಿನವಾದ ಸಪ್ತಂಬರ ೩೦ ರಂದು ಪೂರ್ವಾಹ್ನ ವರದಿಯನ್ನು ಕೇಂದ್ರ ಗೃಹ ಖಾತೆಯ ವಶಕ್ಕೆ ನೀಡಿತು. ಅಂದು ಅಪರಾಹ್ನ ಪಂಡಿತ ಪಂತರು ರಾಷ್ಟ್ರಾಧ್ಯಕ್ಷರಿಗೂ ಪ್ರಧಾನಿಗಳಿಗೂ ವರದಿಯ ಪ್ರತಿಗಳನ್ನು ಕಳಿಸಿದರು. ವರದಿಯು ೨೮೦ ಪುಟಗಳಷ್ಟು ವಿಸ್ತೃತವಾಗಿದೆ ಎಂದು ತಿಳಿದು ಬರುತ್ತದೆ. ಭಾರತ ಸರಕಾರವು ರಾಜ್ಯ ಸರಕಾರಗಳ ಅವಗಾಹನೆಗಾಗಿ ವರದಿಯ ಪ್ರತಿಗಳನ್ನು ಇಷ್ಟರಲ್ಲಿಯೇ ಕಳಿಸಿದೆ ಎಂಬುದಾಗಿಯೂ ಗೃಹ ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ಹನ್ನೆಲೆಯನ್ನು ತಿಳಿದುಕೊಳ್ಳದೆ ವರದಿಯಲ್ಲಿ ಅಡಕವಾದ ಸಿಫಾರಸುಗಳನ್ನು ಮಾತ್ರ ಪ್ರಕಟಿಸುವುದು ನ್ಯಾಯಕ್ಕೆ ಉಚಿತನೆನಿಸುವುದಿಲ್ಲ; ಜನತೆಗೆ ಸಂಪೂರ್ಣ ಚಿತ್ರವು ಕಣ್ಣ ಮುಂದಿದ್ದರೆ ಮಾತ್ರ ಪ್ರಯೋಜನವಾದುದರಿಂದ, ಸಾಕಷ್ಟು ಪ್ರತಿಗಳು ಸಿದ್ಧವಾದೊಡನೆಯೇ ವರದಿಯನ್ನು ಪ್ರಕಟಿಸಲಾಗುವುದು—ಎಂದು ಸರಕಾರದ ಪರವಾಗಿ ಹೇಳಲಾಗಿದೆ.

ಪಾರ್ಲಿಮೆಂಟಿಗೆ ಪರಮಾಧಿಕಾರ

ರಾಜ್ಯ ಸರಕಾರಗಳ ಶಾಸನಾಂಗಕ್ಕೆ ವರದಿಯ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗುತ್ತದೆ; ರಾಷ್ಟ್ರದ ಪ್ರಮುಖ ಪಕ್ಷಗಳ ಅಭಿಪ್ರಾಯವನ್ನೂ ಗಮನಿಸಲಾಗುತ್ತದೆ; ಜನರ ಪ್ರತಿನಿಧಿಗಳಿಂದ ಬರುವ ಉಪಯುಕ್ತ ಸೂಚನೆಗಳನ್ನೂ ವಿಚಾರಿಸಲಾಗುತ್ತದೆ. ಆದರೆ ಸಂಸತ್ತಿನ ನಿರ್ಣಯವೇ ಕೊನೆಯದೆನಿಸುತ್ತದೆ; ಸಂಸತ್ತಿನ ಅಭಿಪ್ರಾಯವನ್ನು ತಿಳಿದುಕೊಳ್ಳದೆ ಸರಕಾರವು ಯಾವ ತೀರ್ಮಾನವನ್ನೂ ಕೈಗೊಳ್ಳುವುದಿಲ್ಲ—ಎನ್ನಲಾಗಿದೆ. ಎಲ್ಲರೂ ತ್ರಿಕರಣ ಪೂರ್ವಕ ಸಹಕರಿಸಿದರೆ ವರದಿಯನ್ನು ಕಾರ್ಯರೂಪದಲ್ಲಿಳಿಸಲು, ಗಡಿವಲಯದ ಮತದಾರ ಸಂಘಗಳನ್ನು ಸುಸಂಘಟಿಸಲು ಬೇಗನೆ ಸಾಧ್ಯವಾದೀತು; ಆಗ ಚುನಾವಣೆಯನ್ನು ೧೯೫೭ನೇ ಇಸವಿಯ ಆದಿ ಭಾಗದಲ್ಲಿ ನಡೆಸಬೇಕೆಂಬ ಸರಕಾರದ ಇಚ್ಛೆಯೂ ನೆರವೇರೀತು—ಎಂದು ನೆಹರು ಮತ್ತು ಪಂತರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಗಡಿವಲಯದ ವಿವಾದ

ತಮ್ಮ ವರದಿಯನ್ನು ಜ್ಯಾರಿಗೆ ತರುವ ಹೊಣೆಯು ಆಯೋಗದ ಮೇಲಿಲ್ಲ; ಅದರ ಸರಕಾರಕ್ಕೆ ಬೇಕಾದ ಸ್ಪಷ್ಟೀಕರಣಗಳನ್ನು ಅದು ಒದಗಿಸಬಲ್ಲುದು. ನಮ್ಮ ಈ ಸಂಚಿಕೆಯು ಓದುಗರ ಕೈ ಸೇರಿದ ನಾಲ್ಕಾರು ದಿನಗಳೊಳಗೆ ವರದಿಯಲ್ಲಿ ಅಡಕವಾದ ಸಿಫಾರಸುಗಳು ಪ್ರಕಟವಾಗಬಹುದು. ಈ ಸಿಫಾರಸುಗಳ ಕುರಿತು ಶಂಬ ಭಿನ್ನಾಭಿಪ್ರಾಯವಿರಬಹುದೆಂಬುದರಲ್ಲಿ ಸಂಶಯವೇ ಇಲ್ಲ—ಮುಖ್ಯವಾಗಿ ಗಡಿ ಪ್ರದೇಶಗಳ ಪ್ರಶ್ನೆ ಗಂಭೀರವಾಗುವುದು ಸಹಜವು. ಬೇರೆ ಬೇರೆ ಹಿತ ಸಂಬಂಧಗಳು ಕಂಡು ಬರುವಾಗ ಎಲ್ಲರಿಗೂ ಸಮ್ಮತವಾದ ಸೂಚನೆಗಳನ್ನು ಮುಂದಿಡುವುದು ಕಷ್ಟ ಸಾಧ್ಯವಾದ ವಿಷಯ. ಸರಕಾರವು ಈ ವಿಷಯವನ್ನು ಎಷ್ಟು ಮಟ್ಟಿಗೆ ಸಾಧ್ಯವಾಗಿ ಮಾಡಿ ತೋರಿಸುವುದೋ ನೋಡಬೇಕಾಗಿದೆ. ಮಾಡಿಕೆಯು ಪ್ರಜಾಸತ್ತಾತ್ಮಕ ವಿಧಾನವೊಂದೇ ಸರಕಾರ ಅನುಸರಿಸಬಹುದಾದ ಮಾರ್ಗ— ನಾವದನ್ನು ಅನುಸರಿಸಲು ತಪ್ಪುವುದಿಲ್ಲ ಎಂದು ನೆಹರು ಹೇಳಿದ್ದಾರೆ. ಸಂಸತ್ತಿನ ಅಭಿಪ್ರಾಯ ಏನಿದೆಯೋ ಅದು ಸಿದ್ಧವಾಗುವುದು—ಎಂದೇ ಇದರ ಅರ್ಥ.

ಭೂಹಿಡುವಳಿಯ ಪರಮ ಮಿತಿ ನಿರ್ಣಯ

ಯೋಜನಾ ಆಯೋಗದ ಸಲಹೆ

ಕೃಷಿ ಭೂಮಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹಣಕಾಸಿನ ಪೂರೈಕೆಗೆ ನಿಶೇಷವಾಗಿ ಸಂಬಂಧಿಸಿದ ಭಾರತ ಸರಕಾರದ ಆರ್ಥಿಕ ಧೋರಣೆಗೆ ಲೋಕ ಸಭೆಯು ಇದೇ ೧೧ನೇ ದಿನಾಂಕ ಮನ್ನಣೆಯನ್ನು ಕೊಟ್ಟು ಅನಿಶ್ಚಿತ ಅವಧಿಯವರೆಗೆ ಮುಂದರಿಯಿತು.

ಹಿಡುವಳಿಯ ಮಿತಿ

ಆಹಾರ ಮತ್ತು ಕೃಷಿ ಶಾಖೆಯ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರು ಭೂಮಿಯ ಹಿಡುವಳಿಯ ಪರಮ ಮಿತಿಯನ್ನು ಸರಕಾರ ನಿಶ್ಚಯಿಸುವುದೆಂದು ಈ ಸಂದರ್ಭದಲ್ಲಿ ನಡೆದ ಚರ್ಚೆಗೆ ಉತ್ತರ ಕೊಡುತ್ತಾ ಪುನಃ ಹೇಳಿದರು. ಯೋಜನಾ ಆಯೋಗವು ಭಾರತದಲ್ಲಿರುವ ಕಿಸಾನರ ಮತ್ತು ಜಮೀನುದಾರರ ವಶದ ಭೂಮಿಯ ಬಾಸೇಸುವಾರಿಯನ್ನು ತೆಗೆಯಲು ಹೇಳಿದೆ; ಈ ಕೆಲಸ ಮುಗಿದಾಗ ಭೂಮಿಯ ವಿತರಣೆಯನ್ನು ಹರಿಜನರು, ಅದಿ ವಾಸಿಗಳು ಮತ್ತಿತರ ಭೂರಹಿತ ವರ್ಗಕ್ಕೆ ವಿತರಿಸುವ ಕೆಲಸ ಭರದಿಂದ ಮುಂದೊತ್ತಲ್ಪಡುವುದು—ಎಂದು ಅವರು ಹೇಳಿದರು.

ಒಕ್ಕಲುಗಳಿಗೆ ರಕ್ಷಣೆ

ಭೂಮಾಲಿಕರು ಒಕ್ಕಲೆಬ್ಬಿಸುವುದನ್ನು ಪರಮ ಅನ್ಯಾಯವೆಂದು ಮಂತ್ರಿಗಳು ಸಾರಿದರು ಸರಕಾರವು ಸಾಧ್ಯವಿದ್ದ ಎಲ್ಲ ಶಾಸನ ಬದ್ಧಕ್ರಮಗಳನ್ನು ಉಪಯೋಗಿಸಿ ಒಕ್ಕಲೆಬ್ಬಿಸುವುದನ್ನು ನಿಷೇಧಿಸುವುದೆಂದು ತಿಳಿಸಿದರು. ಆದರೆ, ಕೇವಲ ಶಾಸನದಿಂದಲೇ ಒಕ್ಕಲುಗಳು ಎಬ್ಬಿಸಲ್ಪಡದೆ ಉಳಿಯುವುದು ಕಷ್ಟ; ಅವರು ಸುಸಂಘಟಿತ ವರ್ಗವಾಗಿ, ಜಾಗೃತರಾಗುವುದು ಅತ್ಯಾವಶ್ಯಕ ಎಂದು ಅವರು ಸಲಹೆ ಮಾಡಿದರು.

ಸಾಗುವಳಿದಾರರಿಗೆ ಸಾಲ

ರೈತರ ಉತ್ಪಾದನೆಗಳಿಗೆ ನ್ಯಾಯವಾದ ಬೆಲೆ ದೊರಕುವಂತೆ ಮಾರಾಟದ ವ್ಯವಸ್ಥೆ ಮಾಡಲಾಗುವುದೆಂಬ ಭರವಸೆಯನ್ನು ಮಂತ್ರಿಗಳು ಕೊಟ್ಟರು. ಗ್ರಾಮಾಂತರ ಪ್ರದೇಶಗಳ ನಾಗರಿಕರಿಗೆ ಸಾಲದ ಸೌಕರ್ಯ ಧಾರಾಳವಾಗಿ ದೊರಕುವಂತೆಯೂ ಎಲ್ಲ ಪ್ರಯತ್ನಗಳನ್ನು ನಡೆಸಲಾಗುವುದು ಎಂದರು. ಆದರ್ಶ ಗ್ರಾಮ ಕೇಂದ್ರಗಳನ್ನು ನೆಲೆಗೊಳಿಸಿಯೂ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ಮುಂತಾದ ಇತರ ರೀತಿಯಿಂದಲೂ ಹಳ್ಳಿಗಳ ಅಂತಸ್ತನ್ನು ಗಣನೀಯವಾಗಿ ಹೆಚ್ಚಿಸಿ, ರೈತರನ್ನು ಸುಖವಾಗಿಡಲು ಸರಕಾರ ಬದ್ಧವಿದೆ ಎಂದು ನುಡಿದರು. ಸರಕಾರದ ಆಹಾರ ನೀತಿಯು ಯಶಸ್ವಿಯಾಗಿದೆ ಎಂದೂ ಅವಶ್ಯಕ ಪ್ರಸಂಗದಲ್ಲಿ ಉಪಯೋಗಕ್ಕೆಂದು ೧೦ ಲಕ್ಷ ಟನ್ನುಗಳಷ್ಟು ಗೋಧಿಯನ್ನೂ ಅಕ್ಕಿಯನ್ನೂ ಸಂಗ್ರಹದಲ್ಲಿಡಲಾಗುವುದೆಂದೂ ಪ್ರಕಟಿಸಿದರು.

UDIPI MUNICIPALITY

TENDER NOTICE.

Sealed tenders will be received by the Commissioner, Udipi Municipality, Udipi, at his office up to 4.0 p. m. on 14--10--1955 for the following works:-

Name of work.	Estimate.	Earnest money deposit.
(1) Providing surface dressing with pre-coated chips along Munsif Court Back Road	Rs. 6400/-	Rs. 320/-
(2) Providing surface dressing with pre-coated chips along Mission Hospital Road	Rs. 7200/-	Rs. 360/-

Tenders must be submitted in sealed covers separately for each work and they will be opened at 4-30 p. m. on the same.

Further particulars, if any, may be obtained from the Municipal Office, Udipi, during office hours on working days.

Municipal Office, Udipi, Dated: 30-9-1955.

V. U. K. NAMBISSAN, Commissioner, Udipi Municipality, Udipi.

15 ದಿವಸಗಳ ರಿಯಾಯಿತಿ

ಒಂದು ಫೌಂಟನ್ ಪೆನ್ ಅಥವಾ ಒಂದು ಸಿಗರೇಟು ಲೈಟರ್ ಫರ್ಮಾಫ್ರ. ಪ್ರತಿಯೊಂದಕ್ಕೆ 5 ವರ್ಷ ಗ್ಯಾರಂಟಿ. ಪಾಕೆಟ್ ವಾಚ್ 9/-, ಉತ್ತಮ 11/-. ಟಾಯಂಟೀಸು (ಅಲಾರಮ್) 12/; ಉತ್ತಮ 14/.

ಸೈಜು 7½ ನಂಬ್ರ 15



15 ಜುವೆಲುಗಳ ರೋಲ್ಡ್ ಗೋಲ್ಡು -31/-
5 ಜುವೆಲುಗಳ ಉತ್ತಮ - 24/-

ಸೈಜು 9½ ವಾಟರ್‌ಪ್ರೂಫ್ ನಂಬ್ರ 16

17 ಜುವೆಲುಗಳುಳ್ಳ ಸ್ಟೀಲಿನದ್ದು 40/-
15 ಜುವೆಲುಗಳುಳ್ಳ ,, 35/-

ಸೈಜು 8½ ನಂಬ್ರ 18



15 ಜುವೆಲುಗಳುಳ್ಳ ರೋಲ್ಡ್‌ಗೋಲ್ಡ್ 28/-
5 ,, (ಲೇಡೀಸ್ ಮತ್ತು ಜಂಟ್ಸ್) 20/-
13 ಸ್ಟೋನ್ ಸೆಕ್ಕಲ್ - 16/-

ಪ್ರತ್ಯೇಕ ವ್ಯವಹಾರ ಇಂಗ್ಲೀಷಿನಲ್ಲಿ. ಟಪ್ಪಾಲು ಪೆಚ್ಚ 1-8-0.

CALCUTTA WATCH CO. (Sec. 268)
Post Box No 12203, CALCUTTA--5.





NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೬-೧೦-೫೫	೬

ಬೀಸುವ ಗಾಳಿ

ಅವಡಿಯ ಕಾಂಗ್ರೆಸು ಅಧಿವೇಶನದಲ್ಲಿ ಸ್ವೀಕರಿಸಲಾದ ಸಮಾಜವಾದಿ ಮಾದರಿಯ ಸಮಾಜ ರಚನೆಯ ಧೋರಣೆಗೆ ಸರಕಾರವು ಬದ್ಧವಾಗಿದೆ ಎಂದು ಪ್ರಧಾನಿ ನೆಹರು ಈ ವಾರ ತಮ್ಮ ಸಂಚಾರ ಕಾಲದಲ್ಲಿ ಪುನಃ ಹೇಳಿದ್ದಾರೆ. ಇದನ್ನೂ ಸರಕಾರದ ಇತರ ಕಾರ್ಯಕಲಾಪಗಳನ್ನೂ ಸೂಕ್ಷ್ಮವಾಗಿ ವೀಕ್ಷಿಸಿದರೆ, ಸಂಪತ್ತನ್ನು ಸಂಗ್ರಹಿಸಿ ಇಟ್ಟುಕೊಂಡು ಉಪಭೋಗಿಸುವ ಮತ್ತು ಹೆಂಡತಿ-ಮಕ್ಕಳಿಗೆಂದು ಈಗಿನಿಂದಲೇ ಕೂಡಿಡುವ ಸಾಂಪ್ರದಾಯಿಕ ಪ್ರಯತ್ನವನ್ನು ಸರಕಾರವು ಸಂಪೂರ್ಣ ವಿಫಲಗೊಳಿಸುವುದೆಂಬುದು ಗೋಡೆಯ ಮೇಲೆ ಬರೆದಿಟ್ಟಷ್ಟು ಸ್ಪಷ್ಟವಾಗುತ್ತದೆ. ವೇತನದ ಪರಮ ಮಿತಿ, ಭೂಹಿಡುವಳಿಯ ಪರಮ ಮಿತಿ—ಇವೆಲ್ಲವನ್ನು ನಿರ್ಣಯಿಸುವ ಮೂಲಕ ವ್ಯಕ್ತಿಯು ಸಾಮಾಜಿಕ ಶೋಷಣೆ ಅಥವಾ ವಿಷಮತೆಯ ಬೀಜಾರೋಪಣೆ ಮಾಡುವ ಸಂದರ್ಭಗಳನ್ನು ನಿವಾರಿಸಲು ಸರಕಾರ ಆತುರವಾಗಿರುವಂತೆ ತೋರುತ್ತದೆ. ಕೆಲವು ಸರಕಾರಗಳಂತೂ ಈಗಲೇ ಕ್ರಾಂತಿಕಾರಿಯಾದ ಕ್ರಮಗಳನ್ನು ಕೈಗೊಂಡಿವೆ— ಉದಾಹರಣೆಗಾಗಿ, ನೆರೆಯ ಮುಂಬಯಿ ರಾಜ್ಯದಲ್ಲಿ ಉಳುವವನನ್ನೆ ಹೊಲದೊಡೆಯನಾಗಿ ಮಾಡಗೊಡುವ ವಿಧೇಯಕವು ಶಾಸನಾಂಗದ ಉಭಯ ಸಭೆಗಳಲ್ಲೂ ಮಂಜೂರಾಗಿದೆ. ಈ ಸಂದರ್ಭದಲ್ಲಿ ಮಂತ್ರಿ ಶ್ರೀ ಹಿರೆಯವರು ಮಾಡಿದ ಭಾಷಣವು ಸರಕಾರದ ಧೋರಣೆ ಯಾವ ದಿಸೆಯಲ್ಲಿ ಸಾಮಾನ್ಯವಾಗಿ ಹರಿದು ಹೋಗುತ್ತಿದೆ ಎಂಬುದನ್ನು ವ್ಯಕ್ತಪಡಿಸುವಂತಿದೆ — ಬ್ಯಾಂಕೇ ಮುಂತಾದವುಗಳಲ್ಲಿ ಹಣವನ್ನು ನಿಕ್ಷೇಪಿಸಿದವರ ಗೋಜಿಗೆ ಹೋಗದೆ ಭೂಮಿಯನ್ನು ಕೊಂಡುಕೊಳ್ಳಲು ಹಣ ಸುರುವಿದವರ ಮೇಲೆಯೇ ಸರಕಾರದ ಕಣ್ಣೋಕೆ ಎಂಬುದಕ್ಕೆ ಅವರ ಉತ್ತರ ಬಹಳ ಮಾರ್ಮಿಕವಾಗಿದೆ. ಬ್ಯಾಂಕಿನಲ್ಲಿ ಸಿಗುವ ಬಡ್ಡಿ ಅಥವಾ ಹಣವನ್ನು ಬೇರೆ ಕೈಗಾರಿಕೋದ್ಯಮಗಳಲ್ಲಿ ತೊಡಗಿದಾಗ ಸಿಗುವ ಲಾಭವು ಭೂಮಿಯ ಮೇಲೆ ವಸೂಲು ಮಾಡುವ ಗೇಣಿಗಿಂತ ಬಹಳ ಕಡಿಮೆಯಾಗಿದೆ—ಅಂದರೆ ಗೇಣಿದಾರರ ನಿತ್ಯ ಶೋಷಣೆಯನ್ನೆ ಭೂಮಿಯಲ್ಲಿ ಹಣ ಹಾಕಿದವರು ಇಷ್ಟರ ವರೆಗೆ ಮಾಡುತ್ತಾ ಬಂದಿದ್ದಾರೆ; ಅಳತೆ ಮೀರಿದ ಗೇಣಿಯ ಮೂಲಕ ಅವರು ಭೂಮಿಗೆ ಸುರಿದ ಹಣದಲ್ಲಿ ಹೆಚ್ಚಿನಂಶವನ್ನು ಇಷ್ಟರೊಳಗೆಯೇ ಮರಳಿ ಪಡೆದಿದ್ದಾರೆ ಇನ್ನೂ ಹೆಚ್ಚು ಲಾಭವನ್ನು ಅವರಿಗೆ ಮಾಡಿಕೊಡಬೇಕಾಗಿಲ್ಲ— ಎಂದು ಮಂತ್ರಿಗಳು ಅಭಿಪ್ರಾಯಪಟ್ಟಿದ್ದಾರೆ. ಬೇಂಕು ಇತ್ಯಾದಿಗಳಲ್ಲಿ ಹಣವನ್ನು ಸಂಗ್ರಹಿಸಿ ಇಟ್ಟವರೂ ಚಿನ್ನಾಭರಣ ಮುಂತಾದವುಗಳಲ್ಲಿ ಹಣವನ್ನು ನಿಕ್ಷೇಪಿಸಿದವರೂ ಗೆದ್ದರೆಂದು ಇದರ ಅರ್ಥವಲ್ಲ. ಸರಕಾರವು ಕಾರ್ಯಕ್ರಮದ ಸ್ವಾಶಸ್ತ್ಯಾನುಕ್ರಮಣಿಕೆಯನ್ನು ನಿರ್ಧರಿಸುವಾಗ ಸಾಗುವಳಿದಾರರ ಸಮಸ್ಯೆಗೆ ಪ್ರಥಮ ಸ್ಥಾನ ಕೊಟ್ಟಿದೆ ಎಂಬುದನ್ನಷ್ಟೇ ಇದು ವ್ಯಕ್ತಪಡಿಸುತ್ತದೆ. ಸಂಪತ್ತನ್ನು ಸಮಾಜದ ವಶಪಡಿಸುವ ಕೆಲಸ ಮುಂದೊತ್ತಲ್ಪಟ್ಟಿಂತೆ ಇತರ ವಿಷಯಗಳಿಗೂ ಸರಕಾರದ ಗಮನ ಬೀಳುವುದು ಖಂಡಿತ. ಇನ್ನು ಮುಂದೆ ವ್ಯಕ್ತಿಯು ಸಮಾಜ ಹಿತಕ್ಕೆ ಮಹತ್ವವನ್ನು ಕೊಟ್ಟೇ ತನ್ನ ವ್ಯವಹಾರವನ್ನು ಸಾಗಿಸಬೇಕು. ಮುಂಬಯಿಯ ನೂತನ ಶಾಸನವನ್ನೆ ತೆಗೆದುಕೊಂಡರೆ, ಉಳುವವನು ಹೊಲದೊಡೆತನವನ್ನು ಸಂಪಾದಿಸಿದ ಬಳಿಕ ಕೃಷಿಗಿಂತಲೂ ಲಾಭದಾಯಕವಾದ ಬೇರೊಂದು ಉದ್ಯೋಗವನ್ನು ಅವಲಂಬಿಸಲು ಇಚ್ಛೆ ಪಟ್ಟರೆ, ತನ್ನ ವಶದಲ್ಲಿರುವ ಬೇಸಾಯದ ಭೂಮಿಯನ್ನು ಯಾರಾದರೊಬ್ಬ ಶ್ರೀಮಂತನಿಗೆ ಅಥವಾ ದುಡ್ಡುಳ್ಳವನಿಗೆ ಮಾರಲು ಅಧಿಕಾರ ಪಡೆದಿಲ್ಲ- ಅವನು ಕಲೆಕ್ಟರರ ವಶಕ್ಕೆ ಭೂಮಿಯನ್ನು ಒಪ್ಪಿಸಬೇಕೇ ಹೊರತು, ವ್ಯಕ್ತಿಗಳು ಪುನಃ ಸಮಾಜ ಶೋಷಣೆಯ ಅವಕಾಶ ಪಡೆಯುವಂತೆ ವರ್ತಿಸಲಾಗದು. ಹೀಗಿದ್ದರೂ ಅತನು ಭೂಮಿಯನ್ನು ಸ್ವಂತ ಬೇಸಾಯ ಮಾಡುತ್ತಿರುವಷ್ಟು ಕಾಲ ನೆಮ್ಮದಿಯಿಂದ, ತನ್ನ ಸ್ವಂತ ಆಸ್ತಿ ಎಂದೇ ತಿಳಿದು ಉಪಭೋಗಿಸಬಲ್ಲನು. ಸಹಕಾರ ತತ್ವದ ಅಥವಾ ಸಾಮೂಹಿಕ ರೂಪದ ಕೃಷಿಗೆ ಅತನನ್ನು ಒತ್ತಾಯಿಸಲಾಗುವುದಿಲ್ಲ. ಭಾರತದಲ್ಲಿ ವ್ಯಕ್ತಿಗತವಾದ ಅಧಿಕಾರದ ಮೋಹವನ್ನು ಒಮ್ಮೆಗೆಯೇ ನಿರ್ಮೂಲಿಸುವುದು ಕಷ್ಟ ಎಂಬುದೇ ಈ ವ್ಯವಸ್ಥೆಯ ಕಾರಣ. ಇಂಥ ಸೂಕ್ಷ್ಮ ವಿಷಯಗಳನ್ನು ಪ್ರತಿಯೊಬ್ಬನೂ ಗ್ರಹಿಸಿಕೊಳ್ಳಬೇಕು— ಸರಕಾರವು ಶೋಷಣೆ ಮತ್ತು ವಿಷಮತೆಗೆ ಅವಕಾಶ ಕೊಡದಿರಲು ಗೊತ್ತು ಪಡಿಸಬಹುದಾದ ಪರಮ ಮಿತಿಯೊಳಗೆ ತಮ್ಮ ಸೊತ್ತು ಮತ್ತು ಆಸ್ತಿಗಳನ್ನಿಟ್ಟುಕೊಂಡು, ಆದಾಯದ ಈ ಮಿತಿಗೆ ಒಳಪಟ್ಟು ಜೀವನವನ್ನು ರೂಢಿಸಿಕೊಳ್ಳಲು ಉಳಿವರ ವರ್ಗ ಈಗಿಂದೀಗಲೇ ಪ್ರಯತ್ನಿಸಬೇಕು. ಕಾಲಗತಿಯು ಬದಲಾಗಿದೆ; ಪರಿವರ್ತನೆಯ ವೇಗವೂ ಅಧಿಕವಾಗಿದೆ—ಎಂಬ ಸತ್ಯವನ್ನು ಮನವರಿಕೆ ಮಾಡಿಕೊಳ್ಳಲು ತಪ್ಪದರೆ, ಮುಂದೆ ಪಶ್ಚಾತ್ತಾಪಪಡಬೇಕಾದೀತು ಎನ್ನುವ ಮಂತ್ರಿಗಳ ಮಾತಿನ ಗೂಢವನ್ನು ತಿಳಿದುಕೊಳ್ಳೋಣ. ಸರಕಾರವು ಜನರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿರುವುದರಿಂದ ಕ್ರಾಂತಿಕಾರಿ ಸುಧಾರಣೆಗಳಿಂದ ಸುಗಮ ಸಾಮಾಜಿಕ ವ್ಯವಸ್ಥೆಯೇ ಕುಸಿದು ಬೀಳುವುದೆಂದು ಭಯಪಡಿಸುವ ವಿಶಿಷ್ಟ ಹಿತಸಂಬಂಧವುಳ್ಳ ಚಿಕ್ಕ ಗುಂಪಿಗೆ ಕಿವಿಗೊಡದೆ, ಮುಂದೊತ್ತುತ್ತಿದೆ; ಎಷ್ಟೇ ಆತಂಕವನ್ನು ಈ ಗುಂಪು ಪ್ರಕಟಿಸಿದರೂ ಸರಕಾರ ಅದನ್ನು ಗಮನಿಸುವ ಭಾವದಲ್ಲಿ ಈಗಿಲ್ಲ ಎನ್ನ ಬೇಕಾಗುತ್ತದೆ. ಇದನ್ನು ಮನಗಂಡು ವ್ಯರ್ಥ ಪ್ರತಿಭಟನೆ ಮತ್ತು ಆಕ್ರೋಶಗಳಲ್ಲಿ ಶಕ್ತಿಯನ್ನು ವ್ಯಯಿಸದೆ, ನವಯುಗದ ಸಂದೇಶದಂತೆ, ಸಾಮಾಜಿಕ ಸಮತೆಯ ಭಾವನೆಯೊಡನೆ ಸಮಂಜಸವಾದ ಸಮರಸತೆಯನ್ನು ಸಾಧಿಸುವುದೇ ಜಾಣತನ.

ಅಲ್ಜೀರಿಯದ ಸಮಸ್ಯೆ

ರಾಷ್ಟ್ರ ಸಂಘದ ನಿರ್ಣಯಕ್ಕೆ ಫ್ರಾನ್ಸಿನ ಪ್ರತಿಭಟನೆ

ಅಲ್ಜೀರಿಯವು ಉತ್ತರ ಆಫ್ರಿಕದಲ್ಲಿದೆ. ಅದು ಫ್ರೆಂಚರ ವಸಾಹತು. ಅಲ್ಲೀಗ ಜನತೆಗೂ ಫ್ರೆಂಚ ಟಿಕ ಸಂಬಂಧಗಳಿಗೂ ಭೀಕರ ಘರ್ಷಣೆ ನಡೆದಿದೆ. ಪರಿಸ್ಥಿತಿಯು ತೀರ ಪ್ರಕ್ಷುಬ್ಧವಾಗಿರುವುದನ್ನು ಕಂಡ ಆಫ್ರೇಸ್ಯ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದ ಮಹಾಧಿವೇಶನದಲ್ಲಿ ಇದನ್ನು ಎತ್ತಲು ಮೊನ್ನೆ ಪ್ರಯತ್ನಿಸಿದವು.

ಹಾಸ್ಯಾಸ್ಪದ ಅಭಿಪ್ರಾಯ

ಮಾರ್ಗದರ್ಶನ ಸಮಿತಿಯು ಈ ಪ್ರಶ್ನೆಯ ಚರ್ಚೆ ನಡೆಯಬೇಕಾಗಿಲ್ಲ ಎಂದು ಇದಕ್ಕೆ ಮುಂಚೆ ತೀರ್ಮಾನಿಸಿದ್ದಿತು. ಫ್ರಾನ್ಸು ಬಹುತ್ತ ಅಮೇರಿಕ, ಬ್ರಿಟನು, ಕೆನಡಗಳನ್ನೊಳಗೊಂಡು ಅದರ ಬೆಂಬಲಿಗ ರಾಷ್ಟ್ರಗಳು ಅಲ್ಜೀರಿಯವು ಫ್ರಾನ್ಸಿನ ಆಂತರಿಕ ಪ್ರಶ್ನೆ; ಆ ಪ್ರದೇಶವು ಫ್ರಾನ್ಸಿನ ಮಾತೃ ಭೂಮಿಗೆಯೇ ಸೇರಿದೆ—ಎಂದು ವಾದಿಸಿದವು. ಈ ಹಾಸ್ಯಾಸ್ಪದ ನಿಲುಮೆಗೂ ೨೭ ಮತಗಳು ದೊರೆತವು; ಆದರೆ ವಿರುದ್ಧವಾಗಿ ೨೮ ಮತಸಿಕ್ಕಿ, ಆಫ್ರೇಸ್ಯ ರಾಷ್ಟ್ರಗಳ ಸೂಚನೆಯೇ ಮಾನ್ಯವಾಯಿತು.

ಫ್ರಾನ್ಸಿನ ಸಿಟ್ಟು

ಇದರಿಂದ ಫ್ರಾನ್ಸು ಕೋಪಗೊಂಡಿದೆ. ಅಧಿವೇಶನಕ್ಕೆ ಕಳಿಸಿದ್ದ ತನ್ನ ಶಿಷ್ಟಮಂಡಳವನ್ನು ಕೂಡಲೇ ಹಿಂದೆ ಕರೆಸಿಕೊಂಡಿದೆ. ರಷ್ಯವು ಫ್ರಾನ್ಸಿನ ನಿಲುಮೆಗೆ ವಿರುದ್ಧ ಮತಕೊಟ್ಟುದರಿಂದ ಆ ದೇಶಕ್ಕೆ ಪ್ರವಾಸ ಹೊರಡಲಿದ್ದ ಫ್ರಾನ್ಸಿನ ಪ್ರಭೃತಿಗಳು ಕಾರ್ಯ ಕೈಸುವನ್ನು ರದ್ದುಗೊಳಿಸಿದ್ದಾರೆ. ಸಿಟ್ಟಿನ ಭರದಲ್ಲಿ ಇಷ್ಟೆಲ್ಲ ಮಾಡಲಾಯಿತು.—ಮಂತ್ರಿ ಮಂಡಳದ ಪತನವೂ ನಡೆದೀತುಎನ್ನಲಾಗಿದೆ.

ಭಾರತದ ಮತ

ವಿವೇಕಶೀಲರು ಮಾತ್ರ ಫ್ರಾನ್ಸಿನ ನಿಲುಮೆಯನ್ನು ಬೆಂಬಲಿಸುವ ಹಾಗಿಲ್ಲ. ಪೋರ್ಚುಗಾಲಿನಿಂದ ಸಾವಿರಾರು ಮೈಲು ದೂರವಿರುವ ಗೋವೆಯು ಆ ದೇಶದೊಡನೆ ಮೂಲ ಭೂತವಾಗಿ ಹೊಂದಿಕೊಂಡ ಪ್ರದೇಶ ಹೇಗಾಗಲಾರದೊ ಹಾಗೆಯೇ ಭೂಮಧ್ಯ ಸಮುದ್ರದಿಂದ ಪ್ರತ್ಯೇಕಿಸಲ್ಪಟ್ಟ ಆಫ್ರಿಕ ಖಂಡದಲ್ಲಿರುವ ಅಲ್ಜೀರಿಯವು ಫ್ರಾನ್ಸಿನ ಮೂಲ ಭೂಸಿರಿಯ ತುಣುಕಾಗಲಾರದು. ಅಲ್ಜೀರಿಯದ ಜನರು ಫ್ರೆಂಚರಲ್ಲ—ಬ್ರಿಟಿಷರು ಭಾರತವನ್ನು ವಸಾಹತುವಾಗಿ ಮಾಡಿಕೊಂಡು ಆಳುತ್ತಿದ್ದರೆಂದ ಮಾತ್ರದಿಂದ ಭಾರತೀಯರನ್ನು ಬ್ರಿಟಿಷರೆಂದು ಕರೆದರೆ? ಇಲ್ಲ-ಹಾಗೆ ಕರೆಯುತ್ತಿದ್ದರೆ ಒಪ್ಪುವವರಿರಲಿಲ್ಲ.

ವರ್ಣಭೇದ ಧೋರಣೆ

ಆಂತರಿಕ ಪ್ರಶ್ನೆ ಎಂಬ ಪರದೆಯ ಹಿಂದೆ ತಮ್ಮ ದುರಾಚಾರಗಳನ್ನು ಮುಚ್ಚಿಟ್ಟುಕೊಳ್ಳುವ ಹವ್ಯಾಸ ಇನ್ನೂ ಕೆಲವು ರಾಷ್ಟ್ರಗಳಲ್ಲಿದೆ. ದಕ್ಷಿಣ ಆಫ್ರಿಕದ ಸರಕಾರವು ವರ್ಣಭೇದ ಧೋರಣೆಯೂ ಆ ದೇಶದಲ್ಲಿರುವ ಭಾರತೀಯರ ಪ್ರಶ್ನೆಯೂ ತನ್ನ ಆಂತರಿಕ ಆಡಳಿತಕ್ಕೆ ಸೇರಿದ ವಿಷಯ ಎಂದು ಹೇಳಿತು. ಆದರೆ ಈ ಪ್ರಶ್ನೆಯಲ್ಲೂ ಆಫ್ರೇಸ್ಯ ರಾಷ್ಟ್ರಗಳ ನಿಲುಮೆ ಜಯಶೀಲವಾಯಿತು. ಮಹಾಧಿವೇಶನವು ಈ ಪ್ರಶ್ನೆಯನ್ನು ಚರ್ಚಿಸಲು ಅಧಿಕಾರವಿದೆ ಎಂದು ನಿರ್ಣಯಿಸಿತು.

ಈಜಿಪ್ಟಿಗೆ ಶಸ್ತ್ರಾಸ್ತ್ರ

ಪಾಶ್ಚಾತ್ಯ ಗುಂಪನ್ನು ಕೆಣಕಿರುವ ಇನ್ನೊಂದು ಸಂಗತಿ ಜೆಕೊಸ್ಲೊವಾಕಿಯ ಮತ್ತು ರಶ್ಯಗಳಿಂದ ಈಜಿಪ್ಟು ಮತ್ತಿತರ ಅರಬ ಗುಂಪಿನ ರಾಷ್ಟ್ರಗಳು ಕರಿಸುವ ಶಸ್ತ್ರಾಸ್ತ್ರಗಳು. ಈಜಿಪ್ಟನ್ನು ಹಣ್ಣು ಮಾಡುವ, ಅರಬ ಗುಂಪನ್ನು ಒಡೆದು ನಿರ್ಮೂಲಿಸುವ ಉದ್ದೇಶದಿಂದ ಬಗ್ದಾದಿನ ಸೈನಿಕ ಒಪ್ಪಂದವನ್ನು ಪಾಶ್ಚಾತ್ಯ ರಾಷ್ಟ್ರಗಳು ಅನುಷ್ಠಾನಕ್ಕೆ ತಂದವು. ಈಜಿಪ್ಟ ಶಸ್ತ್ರಾಸ್ತ್ರಗಳಿಗಾಗಿ ಸಲ್ಲಿಸಿದ ಬೇಡಿಕೆಯನ್ನು ಪೂರೈಸದೆ ಕುಳಿತವು. ಇದರಿಂದ ಬೇಸತ್ತ ಈಜಿಪ್ಟು ಎಲ್ಲಿಂದಾದರೆ ಅಲ್ಲಿಂದ-ಶಸ್ತ್ರಾಸ್ತ್ರಗಳು ಬಂದರೆ ಸರಿ ಎಂದಿದೆ.

ಅಮೇರಿಕದ ಕೋಪ

ಇಸ್ರೇಲಿನೊಡನೆ ಈಜಿಪ್ಟಿನ ಸಂಬಂಧ ಇನ್ನುಮುಂದೆ ಹದಗೆಡಬಹುದುಎಂದು ಪಾಶ್ಚಾತ್ಯ ರಾಷ್ಟ್ರಗಳ ಭಯ. ಅಮೇರಿಕದವರ್ಲ್ಲೇಸರು ಈಜಿಪ್ಟಿಗೆ ಎಚ್ಚರಿಕೆ ಮತ್ತು ಬುದ್ಧಿವಾದಗಳ ಮಾತನ್ನು ಬಹಳವಾಗಿ ಹೇಳಿದರು; ರಶ್ಯದ ಗುಂಪಿನೊಡನೆ ಈಜಿಪ್ಟು ಸ್ನೇಹ ಬೆಳೆಸದಂತೆ ನೋಡುವುದೇ ಅವರ ಉದ್ದೇಶ. ಆದರೆ ಇದೇ ದಲ್ಲೇಸರು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಿ, ಅದರೊಡನೆ ಸೈನಿಕ ಒಪ್ಪಂದ ಮಾಡಿಕೊಳ್ಳುವುದರಿಂದ ಪರಿಸ್ಥಿತಿಯ ಸಮತೋಲ ತಪ್ಪುವುದೆಂಬ ಭಾರತದ ಪ್ರತಿಭಟನೆಗೆ ಕಿವಿಗೊಡದೆ ಕುಳಿತಿದ್ದರೆಂಬುದನ್ನು ಭಾರತೀಯರು ಮರೆಯುವಂತಿಲ್ಲ. ಈಗ ಅವರ ಹಿತಸಂಬಂಧಕ್ಕೆ ಕೆಡುಕಾಗುತ್ತಿದೆ-ಎಂಬುದರಿಂದ ಈಜಿಪ್ಟನ್ನು ಪ್ರತಿಭಟಿಸುವುದು ಭಾರತಕ್ಕೆ ಅವರು ಕೊಟ್ಟ ಉತ್ತರಕ್ಕೆ ಹೊಂದಿಕೊಂಡ ವಿಷಯವಲ್ಲ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

ಏಕಘಟಕದ ವಿಷಯ

ಪಾಕಿಸ್ತಾನವು ಪ್ರಬಲ ವಿರೋಧವನ್ನು ಲೆಕ್ಕಿಸದೆ "ಪ್ರಗತಿ" ಪಥದಲ್ಲಿ ಘನವಾದ ಹೆಜ್ಜೆಯೊಂದನ್ನು ಕಳೆದ ವಾರ ಮುಂದಿಟ್ಟಿತು. ಪಶ್ಚಿಮ ಪಾಕಿಸ್ತಾನವನ್ನು ಏಕಘಟಕವಾಗಿ ರೂಪಿಸುವ ಶಾಸನವನ್ನು ಘಟನಾ ಸಮಿತಿ ಅಂಗೀಕರಿಸಿತಲ್ಲದೆ, ಗವರ್ನರ ಜನರಲರಾದ ಮಿರ್ಜಾರೂ ಅದಕ್ಕೆ ಅಂಕಿತ ಹಾಕಿದರು. ಇನ್ನು ಮುಂದೆ ಪ್ರಜಾರಾಜ್ಯವಾಗಿ ಪಾಕಿಸ್ತಾನವನ್ನು ಘೋಷಿಸುವ ಕೆಲಸಕ್ಕೆ ಘಟನಾ ಸಮಿತಿ ಕೈಯಿಕ್ಕುವುದೆಂದೂ ಈ ಘಟಿಸಿದಲ್ಲಿ ಅವಾಮಿ ಲೀಗಿನ ಬೆಂಬಲ ಸಂಪಾದಿಸುವ ಉದ್ದೇಶದಿಂದ ಸುಪ್ರೀಮ್‌ಕೋರ್ಟಿನವರನ್ನು ಮಂತ್ರಿಮಂಡಳದಲ್ಲಿ ಸೇರಿಸಿಕೊಳ್ಳುವ ಸ್ಪಬಲ ಪ್ರಯತ್ನ ನಡೆದಿದೆ ಎಂದೂ ತಿಳಿದು ಬರುತ್ತದೆ.

ಗಾಫರಖಾನರ ಬಿಡುಗಡೆ

ಏಕಘಟಕದ ಶಾಸನವನ್ನು ಬಲವಾಗಿ ವಿರೋಧಿಸಿದವರಲ್ಲಿ ಸುಹ್ರವರ್ದಿಗಳೂ ಒಬ್ಬರು. ಬಂಗಾಲಿಗಳ ಜನಸಂಖ್ಯಾ ಪ್ರಮಾಣದೊಡನೆ ಪಂಜಾಬಿಗಳ ಶ್ರೀಮಂತಿಕೆ ಮತ್ತು ಸೈನಿಕ ದರ್ಪದ ಹೊಂದಾಣಿಕೆ ಸ್ಥಾಪಿಸಲು ಗುಲಾಂ ಮಹಮದರು ರೂಪಿಸಿದ ಏಕಘಟಕ ಮಸೂದೆಗೆ "ಗಡಿನಾಡಿನ ಗಾಂಧಿ" ಕೊನೆಯವರೆಗೆ ವಿರೋಧವನ್ನು ವ್ಯಕ್ತಪಡಿಸುವುದಾಗಿ ಸಾರಿದ್ದಾರೆ. ಅವರಿಗೆ ಪಠಾಣರ ಮತ್ತು ಬಲೂಚಿಗಳ ಬೆಂಬಲವಿದ್ದರೂ ಸರಕಾರ ಆದರಿಂದ ಭಯಗೊಂಡಂತೆ ತೋರುವುದಿಲ್ಲ. ಬಂಧನದಲ್ಲಿಟ್ಟ ಗಾಫರಖಾನರನ್ನು ಬಿಡುಗಡೆಗೊಳಿಸಿರುವುದೇ ಇದಕ್ಕೆ ನಿದರ್ಶನ.

ಭಾರತದ ಹಿತಸಂಬಂಧ

ಭಾರತ ಸರಕಾರವು ಪೋರ್ಚುಗಾಲಿನಲ್ಲಿರುವ ತನ್ನ ಹಿತಸಂಬಂಧಗಳನ್ನು ನೋಡಿಕೊಳ್ಳಲು ವಿಶ್ವರಾಷ್ಟ್ರವಾದ ಈಜಿಪ್ಟನ್ನು ಕೇಳಿಕೊಂಡಿದೆ; ಇದಕ್ಕೆ ಈಜಿಪ್ಟು ಸಮ್ಮತಿಸಿದೆ. ಗೋವೆಯಲ್ಲಿನ ಹಿತ ಸಂಬಂಧಗಳನ್ನು ಪ್ರಾಮಾಣಿಕರಾದ ಇಬ್ಬರು ಪಾದ್ರಿಗಳು ಈಗ ನೋಡಿಕೊಳ್ಳುತ್ತಿದ್ದಾರೆ. ಬೇಗನೆ ಮಿತ್ರರಾಷ್ಟ್ರವೊಂದಕ್ಕೆ ಈ ಕೆಲಸವನ್ನು ಭಾರತ ಒಪ್ಪಿಸಬಹುದು.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಪ್ರಜಾಸಮಾಜವಾದಿ ಧುರೀಣರಾದ ಶ್ರೀ ಗೋರೆ ಮತ್ತು ಶ್ರೀ ಲಿಮಯೆ ಇವರು ಗೋವೆಯಲ್ಲಿ ಪ್ರವೇಶಿಸಿ ಸತ್ಯಾಗ್ರಹ ಮಾಡುತ್ತಿದ್ದಾಗ ಬಂಧಿಸಲ್ಪಟ್ಟಿದ್ದರು—ಇಬ್ಬರ ವಿಚಾರಣೆಯನ್ನೂ ಗೋವೆಯ ಸೈನಿಕ ನ್ಯಾಯಮಂಡಳ ನಡೆಸಿ, ಪ್ರತಿಯೊಬ್ಬರಿಗೂ ಹತ್ತು ವರ್ಷಗಳ ಕಠಿಣ ಶಿಕ್ಷೆ ಮತ್ತು ನಿತ್ಯ ದಂಡವನ್ನು ವಿಧಿಸಿದೆ. ಶಿಕ್ಷೆಯ ಅವಧಿಯ ನಂತರ ಗೋವೆಯಿಂದ ಅವರನ್ನು ಗಡೀಪಾರು ಮಾಡಲಾಗುವುದಂತೆ!—ಈ ತೀರ್ಪಿನ ವಿರುದ್ಧ ವರಿಷ್ಠ ನ್ಯಾಯಾಲಕ್ಕೆ ಇಬ್ಬರೂ ಅಪೀಲು ಮಾಡಿಕೊಳ್ಳುವರೆಂದು ಕೇಳುತ್ತೇನೆ.

ಪೊಂಡಿಚೆರಿಯಲ್ಲಿ ನೆಹರು

ಪ್ರಧಾನಿ ನೆಹರುಗಳು ಕಳೆದ ವರ್ಷ ಭಾರತಕ್ಕೆ ಹಸ್ತಾಂತರಗೊಂಡ ಪಾಂಡಿಚೆರಿ ಮತ್ತು ಕರೈಕಲುಗಳಲ್ಲಿ ೩-ಆನೇ ದಿನಾಂಕ ಸಂಚರಿಸಿದರು. ಶಾಸನಬದ್ಧವಾಗಿ ಭಾರತಕ್ಕೆ ಇಲ್ಲಿಯ ಅಧಿಕಾರವನ್ನು ಹಸ್ತಾಂತರಿಸುವ ಕೆಲಸ ವಿಳಂಬಿಸಿದೆಂದು ಅವರು ಅಶಿಸಿದರು. ಈ ಪ್ರದೇಶಗಳ ಜನಜೀವನ, ಸಂಪ್ರದಾಯ ಮತ್ತು ಸಂಸ್ಕೃತಿಗಳಲ್ಲಿ ಹಸ್ತಕ್ಷೇಪ ಮಾಡುವ ಇಚ್ಛೆ ಭಾರತ ಸರಕಾರಕ್ಕೆ ಇಲ್ಲವೆಂದು ಸ್ಪಷ್ಟಪಡಿಸಿದರು.

ಪೆರಂಬೂರಿನ ಕಾರ್ಖಾನೆ

ಮದ್ರಾಸಿಗೆ ಹತ್ತಿರ ಪೆರಂಬೂರಿನಲ್ಲಿ ಪೂರ್ಣಾಕಾರದ ರೈಲು ಗಾಡಿ ತಯಾರಿಸುವ ಕಾರ್ಖಾನೆಯನ್ನು ಉದ್ಘಾಟಿಸುತ್ತಾ ಪ್ರಧಾನಿಗಳು ಗಾಂಧೀಜಿ ನಮ್ಮ ನಡುವೆ ಇರುತ್ತಿದ್ದರೆ ಭಾರತವು ಪ್ರಗತಿ ಪಥದಲ್ಲಿ ಸಾಗುತ್ತಿರುವುದರ ಸಾಕ್ಷಿಯಾದ ಈ ಕಾರ್ಖಾನೆಯನ್ನು ಕಂಡು ಸಂತೋಷಿಸುತ್ತಿದ್ದರು—ಎಂದರು. ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಾವು ಯಂತ್ರೋಪಕರಣಗಳನ್ನು ಸ್ವದೇಶದಲ್ಲಿಯೇ ತಯಾರಿಸಲು ಸಮರ್ಥರಾಗಬೇಕು. ಗಾಂಧೀಜಿ ಯಂತ್ರಗಳ ವಿರೋಧಕರಾಗಿದ್ದರೆಂದು ಹೇಳುವುದು ಸಂಕುಚಿತ ಭಾವ್ಯವಾದೀತು. ಮೂಲೋದ್ಯೋಗಗಳ ಸ್ಥಾಪನೆಯನ್ನು ಅವರು ಪ್ರತಿಭಟಿಸುತ್ತಿರಲಿಲ್ಲ—ಆದರೆ ಕೈಯಿಂದ ಮಾಡಬಹುದಾದ ಕೆಲಸಗಳನ್ನು ಯಂತ್ರಗಳಿಗೆ ಗುತ್ತಿಗೆ ಕೊಡುವುದು ಮಾತ್ರ ಅವರಿಗೆ ಇಷ್ಟವಿರಲಿಲ್ಲ ಎಂದು ನೆಹರು ವಿವರಿಸಿದರು.

ಮುಂಬಯಿಯ "ಮಣಿ ಭವನ"

ಮುಂಬಯಿಯಲ್ಲಿ ಗಾಂಧೀ ಜಯಂತಿಯ ಶುಭದಿನದಂದು "ಮಣಿ ಭವನ" ಎಂಬ ಸ್ಮಾರಕ ಗೃಹವನ್ನು ಲೋಕ ಸಭೆಯ ಅಧ್ಯಕ್ಷಶ್ರೀ ಮಾವಳಂಕರರು ಉದ್ಘಾಟಿಸಿ ಗಾಂಧೀಜಿ ೧೯೧೭ರಿಂದ ೧೯೩೯ನೇ ಇಸವಿಯ ವರೆಗೆ ಈ ಭವನದಲ್ಲಿದ್ದು ನಡೆಸಿದ ಚಟುವಟಿಕೆಗಳನ್ನು ಹೃದಯಂಗಮವಾಗಿ ವರ್ಣಿಸಿದರು. ಮುಂದಿನ ಪೀಳಿಗೆಯ ದೃಷ್ಟಿಯಲ್ಲಿ ಈ ಗಾಂಧಿ ಸ್ಮಾರಕಗೃಹಕ್ಕೆ ಮಹತ್ವವಿದೆ ಎಂದರು. ಖಾದಿ ಹುಂಡಿಯ ಮಾರಾಟ, ಕ್ಷಯರೋಗ ನಿಧಿಗಾಗಿ ಬಿಲ್ಲೆಯ ಮಾರಾಟ ಇತ್ಯಾದಿ ವಿಧಾಯಕ ಕಾರ್ಯಕ್ರಮಗಳಿಂದ ಗಾಂಧೀ ಜಯಂತಿಯು ಶೋಭಿಸಿತು.

ಹೊಲಸಾಗುವಳಿ ವಿಧೇಯಕ

ಮುಂಬಯಿಯ ಹೊಲ ಸಾಗುವಳಿ ವಿಧೇಯಕಕ್ಕೆ ಕೊನೆಯ ಗಳಿಗೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಯಿತು. ಇವುಗಳಲ್ಲಿ ಒಂದು ಸ್ವಂತ ಸಾಗುವಳಿಗಾಗಿ ಇರಿಸಿಕೊಂಡ ಭೂಮಿಯು ಐದು ಮೈಲು ವ್ಯಾಸದಲ್ಲಿರುವ ಬದಲಿಗೆ, ಆ ಭೂಮಿಯು ಯಾವುದೇ ಭಾಗವು ಐದು ಮೈಲಿಗಿಂತ ದೂರವಿರಬಾರದು ಎನ್ನುತ್ತದೆ. ಇನ್ನೊಂದು ತಿದ್ದುಪಡಿಯು ಹಿಡುವಳಿಯ ಮಾರಾಟದ ಸೂತ್ರ ಅನ್ವಯವಾಗದ ಚಿಕ್ಕ ಹಿಡುವಳಿದಾರರ ಆನಾಯವು ವರ್ಷಕ್ಕೆ ಭತ್ತೆಗಳನ್ನು ಸೇರಿಸದೆ ೯೦೦ ರೂಪಾಯಿಗಳನ್ನು ಮೀರಲಾರದೆಂದಿರುವುದನ್ನು ಭತ್ತೆ ಸಹಿತವಾಗಿ ೧೫೦೦ ರೂಪಾಯಿಗಳೆಂದು ನಿಗದಿ ಮಾಡಿರುತ್ತದೆ.

ಉಡುಪಿ

ಗಾಂಧೀಜಿಯಂಶಿಯು— ಉಡುಪಿಯಲ್ಲಿ ತಾ. 2ರಲ್ಲಿ ಸಂಜೆ ರಥಬೀದಿಯಲ್ಲಿ ಶ್ರೀ ಎಸ್. ಎನ್. ಮಥಾಯಸ್ ರವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಆಚರಿಸಲ್ಪಟ್ಟಿತು. ಆರಂಭದಲ್ಲಿ ಸೂತ್ರಯಜ್ಞ, ಲಾವಣಿ ಹಾಡು ಏಕಗಳಾದುವು. ಬಳಿಕ ಶ್ರೀಗಳಾದ ಎಜ್. ಸುಂದರ ರಾವ್, ಕೆ. ಶ್ರೀನಿವಾಸ ಸೈ, ರಕ್ಷಾಕರ ಶೆಣೈ, ಉಸ್ಮಾನ್ ಸಾಹೇಬ್, ಕುಮಾರಿ ಸೀತಾರತ್ನ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷ ಭಾಷಣಾನಂತರ ಶ್ರೀ ಉ. ಲ. ಕಣಿಯವರು ಧನ್ಯವಾದಗಳನ್ನರ್ಪಿಸಿದರು.

ನಗರಸಭಾ ಕಚೇರಿಯಲ್ಲಿ—ಮುನಿಸಿಪಲ್ ಫಂಡಿನಿಂದ ಪಡಕೊಂಡ ಜಡ್ಡಿ ಮತ್ತು ಅಂಗಿ ಮತ್ತು ಸೀರೆಕುಪ್ಪಸಗಳನ್ನು ಮುನಿಸಿಪಲ್ ಗಂಡಸು ಮತ್ತು ಹೆಂಗಸು ಸ್ವೀಪರ್ಸ್ ರವರಿಗೆ ಚೆರ್‌ಮೆನ್ ಹಾ. ಸಿ. ವಿ. ಸ್ವಾಸರಾಯರು ವಿತರಣೆ ಮಾಡಿದರು. ಕೌನ್ಸಿಲು ಸದಸ್ಯರು ಶ್ರೀಗಳಾದ ಯು. ರಾಮಚಂದ್ರ ಮತ್ತು ಕೆ. ದಾಸಸೇರಿಗಾರರು ಕಾಲೋಚಿತ ಮಾತುಗಳನ್ನಾಡಿದರು.

ಸಹಕಾರಿ ವಿಚಾರಣಾ ಸಮಿತಿಯ ಸದಸ್ಯರಾದ ಶ್ರೀ ಬಿ. ವೆಂಕಟರತ್ನಂ, ಡಾ. ಪಿ. ನಟೇಶನ್ ಮತ್ತು ಮೊಳಹಳ್ಳಿ ಶಿವರಾಮ್ ಇವರು ಮಂಗಳೂರಿಂದ ಡಿಪ್ಟಿ ರಿಜಿಸ್ಟ್ರಾರ್ ಶ್ರೀ ಕಾಳಪ್ಪ ಸೆಟ್ಟಿ ಮತ್ತು ಶ್ರೀ ಟಿ. ಎ. ಪೈ ಎಂ. ಎಲ್. ಎ. ಅವರೊಂದಿಗೆ ತಾ. 4ನೇ ಬೆಳಿಗ್ಗೆ ಉಡುಪಿಗೆ ಆಗಮಿಸಿದರು. ಅಧ ಮಾರು ಸುರದಲ್ಲಿ ಭೋಜನ ಸತ್ಕಾರವಾದ ಮೇಲೆ ಸಮಿತಿಯ ಸದಸ್ಯರು ಸಿಲ್ಕ್ ಸೊಸೈಟಿಯಲ್ಲಿ ಡಾ ಟಿ. ಎಮ್. ಎ. ಪೈ ಡಾ. ಸುಂದರರಾಮ ಪೈ, ಶ್ರೀ ಸಿ. ಕೆ. ಶೇಷಗಿರಿ ರಾವ್, ಎಂ. ವಾಮನ ಭಟ್ ಮೊದಲಾದವರಿಂದ ಸ್ವಾಗತಿಸಲ್ಪಟ್ಟು ಮಾರಾಟಕಾರದ ವಿನಾಯಿತಿ, ಬೀಜಪತ್ತಿಗೆ ಸಹಾಯ ಮುಲ್ಲು ಹಾವಲಿನ ಅನುಕೂಲತೆಗಳ ಕುರಿತು ಚರ್ಚೆ ಕೈಗೆಡೆದರು. ಸರಕಾರಿ ತತ್ವದ ಮೇಲೆ ನಿರ್ಮಾಣಗೊಂಡ ಕಸ್ತೂರ್ಬಾ ಮೆಮೊರಿಯಲ್ ಕಾಲೇಜನ್ನು ಸದಸ್ಯರು ಸಂದರ್ಶಿಸಿ ಸಂತೋಷಗೊಂಡರು. ಡಾ. ನಟೇಶನರು ಕಾಲೇಜಿನ ನಿರ್ಮಾಣ ತತ್ವವನ್ನು ಕೊಂಡಾಡಿ ತಾವು ಇಲ್ಲಿಗೆ ಬಂದುದರಿಂದ ಸಹಕಾರಿ ತತ್ವದ ಪಚ್ಚಿನ ಮಹತ್ವ ತಿಳಿದಂತಾಯಿತೆಂದರು. ಬಳಿಕ ಪೇಪರ್ಸ್ ಸೊಸೈಟಿಯಲ್ಲಿ ಸದಸ್ಯರು ಶ್ರೀ. ಕೆ. ಗುರುರಾಜ ರಾವ್, ರಾಮ ರಾವ್ ಮೊದಲಾದವರಿಂದ ಸ್ವಾಗತಿಸಲ್ಪಟ್ಟರು. ನೇಕಾರರಿಗೆ ಗೃಹ ನಿರ್ಮಾಣದ ಬಗ್ಗೆ ಸಹಾಯ ಕೊಡುವ ಸೂಚನೆಯನ್ನಲ್ಲಿ ಕೊಡಲಾಯಿತು. ಬಳಿಕ ಟಾಸ್ ಕೋಆಪರೇಟಿವ್ ಬ್ಯಾಂಕಿಗೆ ತೆರಳಿ ವಿಚಾರ ವಿನಿಮಯ ಮಾಡಿದರು. ಅಲ್ಲಿ ಶ್ರೀ ವಕೀಲ್ ಕೆ. ಜಿ. ಬಲ್ಲಾಳರು ರೇಂಜ್ ಪೋಸ್ಟೇಜ್ ಬ್ಯಾಂಕ್ ಮತ್ತಿತರ ಸಹಕಾರಿ ಸಂಸ್ಥೆಗಳ ಬೆಳವಣಿಗೆಯ ಕುರಿತು ಅನುಭವ ಪೂರ್ಣ ಸಾಕ್ಷ್ಯವಿತ್ತರು. ಸಂಜೆ ಸದಸ್ಯರು ಮಂಗಳೂರಿಗೆ ತೆರಳಿದರು.

ಸಂದರ್ಶಕರ ದಿನಾಚರಣೆ—ಎಂ. ಜಿ. ಯಂ. ಕಾಲೇಜಿನಲ್ಲಿ ಪ್ರಾರಂಭಿಸಲ್ಪಟ್ಟ ಸೆಕೆಂಡರಿ ಟ್ರೈನಿಂಗ್ ವಿಭಾಗದ ಭಾರತೀಯ ಶಿಕ್ಷಣ ಶಿಬಿರದ ಸಂದರ್ಶಕರ ದಿನಾಚರಣೆಯು ತಾ. 1ರಂದು ನಿವೃತ್ತ ಹೆಡ್‌ಮಾಸ್ಟರ್ ಶ್ರೀ. ಆರ್. ಫರ್ನಾಂಡಿಸ್, ಬಿ. ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿಸಲ್ಪಟ್ಟಿತು.

ವಿಶೇಷ ಮಳೆ—ಒಂದು ವಾರದಿಂದ ವಿಶೇಷ ಮಳೆ ಬೀಳುತ್ತಿದ್ದು ಕೃಷಕರಿಗೆ ಹೆಚ್ಚಿನ ಹಾನಿಯನ್ನುಂಟು ಮಾಡಿದೆ.

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಾಯಿ

ಮುಂಡಳಿಯು 52ನೇ ವಾರ್ಷಿಕೊತ್ಸವ ಸಮಾರಂಭವನ್ನು ಇದರಿಂದ ನಡಿಸಲ್ಪಡುವ ಮೊಗವೀರ್ ಪ್ರೀಸ್ಟೈಟ್ ಫೈಸ್ಟಾಲಿನ ಪಾರಿತೋಷಕ ವಿತರಣೆಯು ತಾ. 15-9-1955ರಲ್ಲು ಸರ್ಕಾರ್ವಾಡಿ ಜಯಂಗೀರ್ ಸಾರ್ವಜನಿಕ ಸಭಾಭವನದಲ್ಲಿ ಶ್ರೀ ಯನ್. ಯಸ್. ಮುದಿಮನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಮಂಡಳಿಯ ಅಧ್ಯಕ್ಷರಾದ ಶ್ರೀ ಯಂ. ಪಿ. ಕರ್ಕೇರರು ಸ್ವಾಗತಿಸಿದರು.

ಸಭಿಕರ ಪೈಕಿ ಶ್ರೀಗಳಾದ ಜಿ. ಯನ್. ಅಯ್ಯರ್. ಜಿ. ಎನ್. ವೈದ್ಯ, ಸರ್ದಾರ್ ಮನಮೋಹನ್‌ಸಿಂಗ್ ಭೇದಿ, ಡಾ. ಆರ್. ಯನ್. ನಾಯಕ್, ಡಾಮೋದರ ಕೋಟ್ಯಾನ್, ಗೋಪಾಲ್ ಕೋಟ್ಯಾನ್ ಮತ್ತು ನಾಗೇಶ ಆರ್. ಕೋಟ್ಯಾನ್. ಇವರು ಮಂಡಳಿಯು ಕಳೆದ 52 ವರ್ಷಗಳಿಂದ ಸಮಾಜಕ್ಕು ಮೇರಕ್ಕು ನೀಡಿದ ಅತ್ಯುತ್ತಮ ಸೇವೆಯನ್ನು ಕೊಂಡಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದ, ನಾಟಕ ಪ್ರದರ್ಶನದೊಂದಿಗೆ ಸಭಾಂತ್ಯವಾಯಿತು.

ಪ್ರಕಟಣೆ

ಉಡುಪಿ ತಾಲೂಕು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಗರ್ಭಗೃಹದ ಮಾಡಿಗೆ ತಾಮ್ರ ಮುಚ್ಚಲು ತಗ್ಗಿದ ತಾಮ್ರದ ತಗಡುಗಳಲ್ಲಿ, 16"x12"ರ ಸೈಜುಗಳಾಗಿ ಕತ್ತರಿಸಿದ ತುಂಡುಗಳು 8ಮಣ 21ರಾತ್ಲು ಮತ್ತು ಚೂರು ತಗಡುಗಳು 3ಮಣ 26ರಾತ್ಲು ಉಳಿದಿದ್ದನ್ನು, ತಾ. 15-10-55ನೇ ದಿವಸ ಅಪರಾಹ್ನ ಗಂಟೆ 3ಕ್ಕೆ ಬ್ರಹ್ಮಾವರ ಮಹಲಿಂಗೇಶ್ವರ ದೇವಸ್ಥಾನದಲ್ಲಿ, ಮಂದಾರ್ತಿ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರು, ಹಾಜರಿದ್ದ ಟ್ರಸ್ಟಿಗಳು ಮತ್ತು H. R. E. ಇನಸ್ಪೆಕ್ಟರುಗಳ ಹಾಜರಿಯಲ್ಲಿ ಏಲಂಕರೆಯಲಾಗುವುದು. ಸದ್ರಿ ತಾಮ್ರದ ತುಂಡುಗಳೆಲ್ಲವನ್ನೂ ಏಲಂನಲ್ಲಿ ಪಡಕೊಂಡವರೇ ಮಂದಾರ್ತಿಯಿಂದ, ಸದ್ರಿಯವರೆ ಖರ್ಚಿನಿಂದಲೇ, ಸಾಗಿಸಿಕೊಂಡು ಹೋಗತಕ್ಕದ್ದು. ಅಲ್ಲದೆ ಸದ್ರಿ ತಗಡುಗಳನ್ನು ನೋಡಲಪೇಕ್ಷಿಸುವವರು ಏಲಂ ದಿವಸದ ಮುಂಚಿತವಾಗಿಯೇ ಮಂದಾರ್ತಿ ದೇವಸ್ಥಾನಕ್ಕೆ ಬಂದು ನೋಡಿಕೊಂಡು ಹೋಗತಕ್ಕದ್ದು. ಏಲಂನಲ್ಲಿ ನ್ಯಾಯವಾದ ಬೆಲೆ ಬಾರದೆ ಹೋದಲ್ಲಿ ಏಲಂನ್ನು ಮುಂದುವರಿಸಲಾಗುವುದು. ಏಲಮಿಗೆ ಇಚ್ಛಿತಕ್ಕವರು ರೂ. 50/-ನ್ನು ಮುಂಚಿತವಾಗಿ ಡಿಪೋಜಿಟ್ ಕಟ್ಟತಕ್ಕದ್ದು. ಕಾರ್ಯಂ ಆಗದಿರುವ ವಿಷ್ಟರಿಗೆ ಸದ್ರಿ ಪೆಣವು ಕೂಡಲೆ ವಾಪಾಸುಕೊಡಲಾಗುವುದು.

(Sd) B. UMESHA RAO
Executive officer.
ಮಂದಾರ್ತಿ ದೇವಸ್ಥಾನ ತಾ. 3—10—55.

Tel: "MENONCO."
Phone: No. 671.

T. N. MENON & COMPANY

Wholesale & retail merchants in:- Sole-crepe, Plastic-Sheets, All kinds of Leathers, Leather goods, Leather-cloth, Wax, Thread, Twine, Panel Pins, Paper, Straw-board, Students' Note-Book, Zip Fasteners, Batteries, Photo-Frames, Tarpaulin, Ply-wood, Wire Mesh & All items of Fittings & Making materials for Foot-wears, Suit-cases, Hand bags, Money-purses, Steel-Trunks, Etc. Etc.

POST BAG No. 1, BEACH ROAD, QUILON.

'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc. No. 466 N/50 dated 12-12-1950 of the Director of public Instruction, Madras.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮಾಯಿಪಾಡಿ—ಸ್ಥಳೀಯ ಬುನಾದಿ ತರಬೇತು ಶಾಲೆಯಲ್ಲಿ ನೂರು ತಿಂಗಳ ತರಬೇತು ಮುಗಿಸಿ ಹಿಂತಿರಿಳುವ ಉಪಾಧ್ಯಾಯರನ್ನು ಬೀಳ್ಕೊಡುವ ಸಮಾರಂಭವು ತಾ. ೨೨ರಲ್ಲು ಹೆಡ್ಮಾಸ್ತರ್ ಶ್ರೀ. ಕೆ. ರಾಮಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ವಾಸುದೇವ ನಾಯಕ್, ಕುಂಞಣ್ಣ ಸೆಟ್ಟಿ, ನಾರಾಯಣ ಸೆಟ್ಟಿ, ಟಿ. ಕೆ. ಭಟ್ ಬಿ. ಎಫ್. ಅಬ್ದುಲ್ ರಹಿಮಾನ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ನಾರಾಯಣ ಮಂಗಲ—ಇಲ್ಲಿ ಈ ತನಕ ಇದ್ದ ಮಹಿಳಾಭಿವೃದ್ಧಿ ಕೇಂದ್ರವನ್ನು ಕುಂಬಳೆಗೆ ಸ್ಥಳಾಂತರಿಸಲಾಗಿದೆ. ಇದರ ಪ್ರಾರಂಭೋತ್ಸವವು ಕಳೆದ ತಾ. ೨೫ರಲ್ಲಿ ಶ್ರೀಮತಿ ಲೀಲಾಬಾಯಿ ಪಿಕಾಂಬರರಾಯರ ಹಿರಿತನದಲ್ಲಿ ಜರಗಿತು.

ಅಜೆಕಾರು—ಸ್ಥಳೀಯ ಬೋರ್ಡು ಹಾಯಿ ಶಾಲೆಯ ಸಹಾಯಕ ಅಧ್ಯಾಪಕ ಶ್ರೀ ಎಮ್. ಎಸ್. ಕಲ್ಯಾರಿಂಗೆ ಮುನಿಯಾಲ್ ಬೋರ್ಡು ಹಾ. ಎ. ಶಾಲೆಯ ಪ್ರಾಧ್ಯಾಪಕರಾಗಿ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವೊಂದು ಈಚೆಗೆ ಶ್ರೀ ಎ. ಪಾಂಡುರಂಗ ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಸುಂದರ ಸೆಟ್ಟಿ, ಶಂಬ್ರತ್ತಣ್ಣ ಅಡಿಗ ಮತ್ತು ಬಿ. ನೇಮಿರಾಜ ಹೆಗ್ಡೆರು ಕಾಲೋಚಿತ ಮಾತುಗಳನ್ನಾಡಿದರು.

ಹೆಮ್ಮಾಂಡೆ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯ ಮಕ್ಕಳ ಹೆತ್ತವರ ಕೂಟವು ಕಳೆದ ತಾ. ೨೮ರಲ್ಲಿ ಡಿ. ಬೋ. ಮೆಂಬರ ಡಾ. ಯು. ಕೃಷ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಾಪಕ ಶ್ರೀ ಕೆ. ರಾಮಕೃಷ್ಣ ರಾಯರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಎಸ್. ಕೃಷ್ಣಯ್ಯ ಸೆಟ್ಟಿ, ಅನಂತರಾಮ ಭಟ್, ವೈ ಆನಂದ ಹೆಗ್ಡೆ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ ವಿವಿಧ ವಿನೋದಾವಳಿಗಳಾಗಿ ಸಮಾರಂಭ ಕೊನೆಗೊಂಡಿತು.

ಕುರಾಡಿ— ಸ್ಥಳೀಯ ಶಾಲಾ ಪ್ರಾಕ್ತನ ವಿದ್ಯಾರ್ಥಿ ಸಂಘದ ಪ್ರಥಮಾದ ವೇತನವು ತಾ. ೩೦ರಲ್ಲಿ ಹಳೆವಿದ್ಯಾರ್ಥಿ ಶ್ರೀ ಎಸ್. ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು. ಬಳಿಕ ಶಾಲಾ ಬಾಲಕರ ಮತ್ತು ಹಳೆವಿದ್ಯಾರ್ಥಿಗಳ ಚಟುವಟಿಕೆಗಳು ಪ್ರದರ್ಶನಪಟ್ಟವು. ಶ್ರೀ ರಾಮದಾಸ ಸಾಮಗರಿಂದ ಪರಿಕೀರ್ತನೆಯಾದ ಬಳಿಕ ಡಾ ಕೆ. ಕಲ್ಯಾರರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಗೆ ಸಭಾಂತ್ಯವಾಯಿತು.

ಬ್ರಹ್ಮಾವರ— ಬೋರ್ಡು ಎಲಿಮೆಂಟರಿ ಶಾಲೆ, ಅಂಗಡಿಬೆಟ್ಟು, ಚಾತಾರು, ಈ ಹೊಸಶಾಲೆಯ ಪ್ರಾರಂಭೋತ್ಸವವು ತಾ. ೩೦ರಲ್ಲಿ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಪಿ. ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ನಾಗೇಶ ನಾಯ್ಕ, ಶ್ರೀನಿವಾಸ ಉಪಾಧ್ಯ, ಸೀತಾರಾಮ ಸೆಟ್ಟಿ ಮೊದಲಾದವರು ಶಾಲೆಯ ಅವಶ್ಯಕತೆಯನ್ನೆತ್ತಿ ಮಾತನಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎ. ನಾರಾಯಣ ಸೆಟ್ಟರು ವಂದನೆಗಳನ್ನರ್ಪಿಸಿದರು.

ಕುಂಬಳೆ— ತ್ರಿಕರಪುರ ಪಂಚಾಯತನ್ನು ಸದ್ಯದಲ್ಲೇ ಮೇಜರ್ ಪಂಚಾಯತನ್ನಾಗಿ ಮಾರ್ಪಡಿಸುವ ಯೋಜನೆ ನಡೆಯುತ್ತಿದೆಯಾಗಿ ತಿಳಿದುಬರುತ್ತದೆ.

ಬಂಬ್ರಾಣ—ದಲ್ಲಿ ಅಣೆಕಟ್ಟು ನಿರ್ಮಾಣ ಬೇಕೆಂಬ ಊರವರ ಕೇಳಿಕೆಯನ್ನು ಮನ್ನಿಸಿ ಮದ್ರಾಸು ಸರಕಾರವು ಅಣೆಕಟ್ಟು ನಿರ್ಮಾಣಕ್ಕೆ ಮಂಜೂರಾತಿ ಕೊಟ್ಟಿರುವುದಾಗಿ ಹೇಳಲಾಗುತ್ತಿದೆ

ದೇಲಂಪಾಡಿ—ದಿವಂಗತ ದೇಲಂಪಾಡಿ "ಖಾಟೂರಾಯ ಲಕ್ಷ್ಮೀನಾರಾಯಣಯ್ಯ" ನವರ ಸ್ಮಾರಕಾರ್ಥವಾಗಿ ಡಿ. ಮಹಾಲಿಂಗೇಶ್ವರ ಭಟ್ ಮತ್ತು ಸಹೋದರರು ತಮ್ಮ ಖರ್ಚಿನಿಂದ ಡಿ. ಕೆ. ಎಲ್. ಎಸ್. ವಾಚನಾಲಯವನ್ನು ತಾ. ೧—೨—೫೫ರಲ್ಲಿ ತೆರೆದು ವಾಚಕರಿಗೆ ಉಚಿತವಾಗಿ ಸುಸ್ತಕಗಳನ್ನು ಓದಲು ಕೊಡುತ್ತಿರುವುದು ಸ್ತುತ್ಯ.

ಕಾಸರಗೋಡು — ಸ್ಥಳೀಯ ವಿಜಯಾ ಬೇಂಕಿನ ಕಟ್ಟಿಡದ ಮಾಡಿನ ಹಂಚುತೆಗೆದು ತಾ. ೩೦ನೇ ಜಾನಪೊತ್ತಿನಲ್ಲಿ ಯೂರೋಬಳನುಗ್ಗಿ, ನಿದ್ದೆಮಾಡುತ್ತಿದ್ದ ಬ್ಯಾಂಕಿನ ಏಜಂಟ್ ಶ್ರೀ ಶ್ರೀನಿವಾಸ ಸೆಟ್ಟರನ್ನೂ ಅವರ ಪತ್ನಿ ಶ್ರೀಮತಿ ಸುಮತಿ ಬಾಯಿಯವರನ್ನೂ ತಿವಿದು ಗಾಯಗೊಳಿಸಿದರೆಂದೂ ಇವರ ಬೊಬ್ಬೆಕೇಳಿ ನೆರೆಕರೆಯವರು ಓಡಿಬಂದು ಜಖಂಗೊಂಡ ದಂಪತಿಗಳನ್ನು ಚಿಕಿತ್ಸಾಲಯಕ್ಕೊಯ್ದರೆಂದೂ ತಿಳಿದುಬರುತ್ತದೆ.

ಈ ಸುದ್ದಿ ಮುಟ್ಟಿದೊಡನೆ ಮಂಗಳೂರಿನಿಂದ ಬ್ಯಾಂಕಿನ ಸುಪರಿಂಟೆಂಡೆಂಟ್ ಶ್ರೀ ಪಿ. ಜಯರಾಮ ಸೆಟ್ಟರು ಡಾ. ಕಲ್ಲಿಯವರೊಡನೆ ಕಾಸರಗೋಡಿಗೆ ಧಾವಿಸಿ, ಗಾಯಗೊಂಡ ದಂಪತಿಗಳನ್ನು ಮಂಗಳೂರಿಗೊಯ್ದು ವೆನ್ಲೋಕ್ ಆಸ್ಪತ್ರೆಗೆ ಸೇರಿಸಿರುವರೆಂದೂ ಶ್ರೀಮತಿಯವರಪರಿಸ್ಥಿತಿ ಚಿಂತಾಜನಕವೆಂದೂ ತಿಳಿದುಬರುತ್ತದೆ.

ಬೆಳ್ಳಾರೆ— ಕಾಸರಗೋಡು ಗಾಜುಬಳೆ ಮತ್ತು ಮಣಿಗಳ ತರಬೇತಿ ಕೇಂದ್ರದ ಸುಪರಿಂಟೆಂಡೆಂಟ್ ಆಗಿದ್ದು ಇತ್ತೀಚೆಗೆ ಜಪಾನಿನಲ್ಲಿ ಗಾಜು ತಯಾರಿಕಾ ಕೈಗಾರಿಕೆಯಲ್ಲಿ ಎರಡು ವರ್ಷಗಳ ತರಬೇತು ಹೊಂದಿಬಂದಿರುವ ಶ್ರೀ ಬಿ. ಬಿ. ಸೆಟ್ಟರನ್ನು ಮದ್ರಾಸು ಸರಕಾರವು ಗ್ಲಾಸ್‌ಟೆಕ್ನೊಲೊಜಿಸ್ಟ್ ಆಗಿ ನೇಮಿಸಿರುತ್ತದೆಂದು ತಿಳಿದುಬರುತ್ತದೆ.

ಇಲ್ಲಿಯ ಹೈಸ್ಕೂಲಿನಲ್ಲಿ ಕಳೆದ 1952ರಲ್ಲಿ 1ನೇ ಮತ್ತು 2ನೇ ಫಾರ್ಮುಗಳಲ್ಲಿ ಎರಡನೇ ಭಾಗದ ಐಚ್ಛಿಕ ವಿಷಯವಾಗಿ ಸಂಸ್ಕೃತವನ್ನು ಕಲಿಸುವ ವ್ಯವಸ್ಥೆಯನ್ನು ಜಿಲ್ಲಾ ಬೋರ್ಡಿನ ಕಚೆಯಿಂದ ಮಾಡಲಾಗಿತ್ತು. ಆದರೆ, ಈಗ ಸಂಸ್ಕೃತ ಉಪಾಧ್ಯಾಯರನ್ನು ಬೋರ್ಡು ಕೊಡದೆ 4ನೆ ಫಾರ್ಮಿನ ಸಂಸ್ಕೃತ ವಿದ್ಯಾರ್ಥಿಗಳನ್ನು ನಡು ನೀರಲ್ಲಿ ತೇಲ ಬಿಟ್ಟಂತಾಗಿರುವುದು ಜಿಲ್ಲಾ ಬೋರ್ಡಿನವರು ಈ ಕಡೆ ಗಮನ ಕೊಟ್ಟು ಸಂಸ್ಕೃತ ಅಧ್ಯಾಪಕರನ್ನು ಕೂಡಲೇ ನೇಮಿಸಬೇಕಾಗಿ ಬಾಹ್ಮಿದಾರರೊಬ್ಬರು ಬರೆಯುತ್ತಾರೆ.

ಕಿನ್ನಿಕಂಬಳ—'ರೋಸ ಮಿಸ್ತಿಕ' ಬುನಾದಿ ತರಬೇತಿಶಾಲೆಯಲ್ಲಿ, ಮೂರು ತಿಂಗಳ ಬುನಾದಿ ಮರು ತರಬೇತಿ ತರಗತಿಯವರು ತಮ್ಮ ಶಿಕ್ಷಣವನ್ನು ಪೂರೈಸಿಕೊಂಡು ಹೋಗುವ ಸಂದರ್ಭದಲ್ಲಿ ತಾ. ೨೫ರಲ್ಲಿ ಸಾಂಸ್ಕೃತಿಕ ಸಮಾರಂಭವೊಂದು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪ್ರಾಧ್ಯಾಪಕಿ ಸ್ವಾಗತಮಾತುಗಳನ್ನಾಡಿದರು. ಪಂಡಿತ ಪದ್ಮನಾಭಾಚಾರ್ಯರು ಸಮಾರಂಭದ ಉದ್ದೇಶವನ್ನು ವಿವರಿಸಿದರು. ಶ್ರೀಮತಿ ಮೂರ್ಯಸ್ತರವರು ತರಬೇತಿಶಿಬಿರದ ವರದಿಯನ್ನೋದಿದರು. ಶ್ರೀಗಳಾದ ಭಾಸ್ಕರ ರೈ, ನಾರಾಯಣನ್ ಮತ್ತು ಶ್ರಿಮತಿ ಕಲ್ಯಾಣಿ ಸೆಟ್ಟಿಯವರು ಬುನಾದಿ ಶಿಕ್ಷಣದ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣಾನಂತರ ಸಮಾರಂಭ ಕೊನೆಗೊಂಡಿತು.

ಬೈಲೂರು—ಸಮಾಜ ವಿಕಾಸ ಯೋಜನೆಯಂತೆ ಊರವರ ಪ್ರೋತ್ಸಾಹದಿಂದ ಕಾರ್ಕಳ ತಾಲೂಕು ಬೈಲೂರು ಕೇಂದ್ರದಲ್ಲಿ ಹೆಚ್ಚು ಅಭಿವೃದ್ಧಿ ಕಾರ್ಯಗಳು ನಡೆದುದಕ್ಕಾಗಿ ಈ ಕೇಂದ್ರಕ್ಕೆ ಪಾರಿತೋಷಕವೊಂದು ದೊರೆಯುವುದು. ಈ ಪಾರಿತೋಷವನ್ನು ಸ್ವೀಕರಿಸುವ ಬಗ್ಗೆ ಮದ್ರಾಸಿಗೆ ತೆರಳಿದ್ದ ಡಾ! ಎ. ಕೆ. ಲಕ್ಷ್ಮೀನಾರಾಯಣ ರಾಯರನ್ನು ಬೀಳ್ಕೊಡುವ ಸಮಾರಂಭವು ತಾ. ೨೮ರಲ್ಲು ಶ್ರೀ. ಜಯರಾಮನ್, ಅಸಿಸ್ಟಾಂಟ್ ಎಂಜಿನಿಯರ್ ಸ. ವಿ. ಯೋಜನೆ, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಕಟಪಾಡಿ— ಎಸ್. ವಿ. ಎಸ್. ಹಾಯಿ ಶಾಲೆಯಲ್ಲಿ ಇದೇ ತಾ 1ರಲ್ಲಿ 'ಶಾಲಾ ಸ್ಥಾಪಕರ ದಿನಾಚರಣೆ' ದಕ್ಷಿಣ ಶ್ರೇಣಿ ಶಾಲೆಗಳ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಗ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯು. ಆರ್ ಮುಯ್ಯರು ಶಾಲಾ ಚಟುಕುಸರದಿಯನ್ನೋದಿದರು. ಶ್ರೀಗಳಾದ ಕೆ. ರಾಮಚಂದ್ರ ಭಟ್, ಕೆ. ಸುಬ್ಬರಾವ್, ಕೆ. ಆರ್. ಶೆಟ್ಟಿ ಮೊದಲಾದವರು ಶಾಲಾಸ್ಥಾಪಕ ವಿಷಯಗತ ಪಾಂಗಾಳ ಶ್ರೀನಿವಾಸ ನಾಯಕರ ಗುಣಗಾನ ಮಾಡಿ ಭಾಷಣಮಾಡಿದರು. ಅಧ್ಯಕ್ಷರ ಭಾಷಣ ಶಾಲಾ ಬಾಲಬಾಲಿಕೆಯರಿಂದ ಮನರಂಜನ ಚಟುವಟಿಕೆ ಕಾರ್ಯಕ್ರಮಗಳಾಗಿ ಸಭಾಂತ್ಯವಾಯಿತು. ಆ ದಿನ ರಾತ್ರಿ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಶಾಲೆಗಳ ಉಪಾಧ್ಯಾಯರ ಸಂಯುಕ್ತ ಕೂಡುವಿಕೆಯಿಂದ 'ಗುರು ದಕ್ಷಿಣೆ' ಎಂಬ ಯಕ್ಷಗಾನ ತಾಳಮದ್ದಳೆ ಕೂಟ ಜರಗಿತು.

In the Court of the District Munsiff of Mangalore.

S. C. 486/1955.

The Bunt alias Nadavara Sangha S. K. by its Secretary Sri K. S. R. Shetty ... Plaintiff.

and

K. Govardhana Rao .. Defendant.

To defendant,

K. Govardhana Rao, Sculptor, at Regede Compound. Field Street, Mangalore, now residing at 5/131 Khareghat Road, Bombay 14.

Please take notice that the above plaintiff has instituted a suit against you for the reliefs claimed in the plaint, and the same is posted to 1—11—1955 for your appearance. You are hereby requested to appear on that day either in person or through a lawyer. In default the suit will be heard and determined in your absence.

(By order of Court)

K. Shantharam Shetty,
Advocate for Plaintiff.

Mangalore, 30-9-'55.

ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಹೆಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.		
24	ತಿಂಗಳಿಗೆ	4%
12	,,	3¼%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. **P. DEVEE**, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವಾಕಿಸ್ಟರು: ಶಹಾಕಂಪೆನಿ, ಮಂಗಳೂರು

ನಿಮ್ಮಾಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ನಗರಸಭೆಯ ಕುರಿತು ಕಲೆಕ್ಟರರ ಅಭಿಪ್ರಾಯ— ಮಂಗಳೂರು ನಗರ ಸಭೆಯ 1954-55ನೆ ವರ್ಷದ ಆಡಳಿತ ವರದಿಯ ಕುರಿತು ಜಿಲ್ಲಾ ಕಲೆಕ್ಟರರು ಈ ರೀತಿ ಷೆರ್ಸ್ ಮಾಡಿರುವರು. ನಗರ ಸಭೆಯ ಸ್ವ ಸಮಯೋತ್ಸವವನ್ನು ಸಾಂಗವಾಗಿ ಜರಗಿಸಿರುತ್ತದೆ. 1000 ಸಸಿಗಳು ನೆಟ್ಟಿದ್ದರೂ 256 ಸಸಿಗಳು ಮಾತ್ರ ಬೇಂತಪಿರುತ್ತವೆ. 1954ರ ಸ್ಪರ್ಧೆಯಲ್ಲಿ ಕಂಟ್ ಟೆಡ್ಡಾ ಉದ್ಯಾನಕ್ಕೆ ಪ್ರಥಮ ಬಹುಮಾನ ದೊರೆತುದು ಸಂತೋಷಕರ.

ವರದಿ ವರ್ಷದಲ್ಲಿ ಜನನ ಮರಣಗಳು ಕಡಿಮೆಯಾಗಿವೆ. ಆದರೆ ಶ್ವಾಸೋಚ್ಛ್ವಾಸ ಅಂಗ ರೋಗ ಸಂಬಂಧಿಸಿದ ರೋಗಗಳು ಹೆಚ್ಚಿವೆ. ನಗರದ ಅಂತಿತದಲ್ಲಿ ಅಂಟುರೋಗಗಳ ಆಸ್ಪತ್ರೆಯೊಂದು ಇದೆ. ಸೊಳ್ಳೆಗಳ ಕಾಟನಿವಾರಣಾ ಕಾರ್ಯವು ಅಷ್ಟೊಂದು ಪ್ರಯೋಜನಕಾರಿಯಾಗಿಲ್ಲ. ಈ ಕುರಿತು ತೀಕ್ಷ್ಣವಾದ ಕಾರ್ಯಕ್ರಮ ಕೈಕೊಳ್ಳಬೇಕು, ಎಲ್ಲಾ ಮನೆಗಳಿಗೂ ಪಾಯಿಖಾನೆಗಳಿಲ್ಲ. ನಗರ ಸಭೆಯು ಈ ವಿಚಾರದಲ್ಲಿ ಮದ್ರಾಸು ಸರಕಾರದ ಸಾರ್ವಜನಿಕ ಕಾಯಿದೆಯಂತೆ ತೀವ್ರ ಕಾರ್ಯ ಕೈಕೊಳ್ಳಬೇಕು. ಕಳದ ವರ್ಷ ಸೂಚಿಸಿದಂತೆ ಇಲ್ಲಿನ ಪಾಯಿಖಾನೆಗಳನ್ನು 'ಫ್ಲಸ್ ಟಿಟ್' ರೀತಿಯವುಗಳಾಗಿ ಮಾರ್ಪಡಿಸಬೇಕು. ನೀರಿನ ಸರಬರಾಯಿ ಕೆಲಸ ತೃಪ್ತಿಕರವಾಗಿದೆ. ಕಂಪೋಸ್ಟು ಗೊಬ್ಬರ ಮಾರಾಟ ಮತ್ತು ನಗರ ರಚನಾ ಯೋಜನೆಗಳಿಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕು.

ಬೆಸೆಂಟ್ ಮಾತೆಯ ದಿನಾಚರಣೆ ಮಂಗಳೂರಿನ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಸಾಲಾದಿನವಾದ ಬೆಸೆಂಟ್ ಮಾತೆಯ ದಿನವು ತಾ. 1ರಲ್ಲಿ ಸಂಜೆ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣನ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಎಸ್. ಕೇಶವ ಪೈಗಳ ಸ್ವಾಗತಮಾತುಗಳಾದ ನಂತರ ಶ್ರೀ ಜಿ. ಸೋಮಶೇಖರ ರಾಯರು ಬೆಸೆಂಟ್ ಸ್ಮಾರಕ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ರಾಧಾಎಲ್ ರಾಯರು ಶಾಲಾ ವರದಿಯನ್ನೋದಿದರು. ರಾಷ್ಟ್ರದ ಪ್ರಗತಿ ಸಾಧಿಸಬೇಕಾದರೆ ಸ್ತ್ರೀಯರಿಗೂ ಸರಿಯಾದ ಶಿಕ್ಷಣಕೊಡಬೇಕಾದ ಆವಶ್ಯಕತೆಯನ್ನು ಸಭಾಧ್ಯಕ್ಷರು ತಿಳಿಸಿದರು. ಬಹುಮಾನ ವಿತರಣೆಯಾದ ನಂತರ ಡಾ. ಬಿ. ಜಿ. ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು. ಶಾಲಾವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳಾದುವು.

ಮಹಿಳೆಯರ ದಿನ— ಬೆಸೆಂಟ್ ದಿನಾಚರಣೆಯ ಅಂಗವಾಗಿ ಮಹಿಳೆಯರ ದಿನಾಚರಣೆಯು ತಾ. 30ರಲ್ಲಿ ಶ್ರೀಮತಿ ಪ್ರೇಮಾ ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಕೆ. ರಾಧಾ ಎಲ್. ರಾಯರು ಸ್ವಾಗತಿಸಿದರು. ಕುಮಾರಿ ಕೆ. ಮನೋರಮಾ ಬಾಯಿಯವರು ವರದಿಯೊಪ್ಪಿಸಿದರು. ಅಧ್ಯಕ್ಷೆಯರು ತಮ್ಮ ಭಾಷಣದಲ್ಲಿ, ಸ್ತ್ರೀಯರು ದೇಶದ ಅಭಿವೃದ್ಧಿಯಲ್ಲಿ ಸರಿಯಾದ ಪಾತ್ರ ವಹಿಸಬೇಕಾದರೆ ಅವರಿಗೆ ಸರಿಯಾದ ಶಿಕ್ಷಣ ದೊರೆಯಬೇಕೆಂದರು. ಧನ್ಯವಾದ, ಕಲಾಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಸಹಕಾರೀ ವಿಚಾರಣಾಸಮಿತಿ— ಮದ್ರಾಸು ಸರಕಾರದಿಂದ ನೇಮಿಸಲಾದ ಸಹಕಾರೀ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಬಿ. ವೆಂಕಟ ರತ್ನಂ, ಡಾ. ಪಿ. ನಟೇಶನ್ ಮತ್ತು ಶ್ರೀ ಎಮ್. ಶಿವರಾಮ್ ಮತ್ತು ಸಮಿತಿಕಾರ್ಯದರ್ಶಿ ಶ್ರೀ ವಿ. ಕೆ. ಅಪ್ಪಂಡರಾಜನರು ತಾ. 2ರಂದು ಸಂಜೆ ಕಲ್ಲಿಕೋಟೆಯಿಂದ ಮಂಗಳೂರಿಗೆ ಆಗಮಿಸಿದರು. ಸಮಿತಿಯವರು ಅಭಿಪ್ರಾಯ ಸಂಗ್ರಹಿಸುವಾಗ ಶ್ರೀಗಳಾದ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಮತ್ತು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರು ಸಹಾಯಕ ಸದಸ್ಯರಾಗಿ ಸಹಕರಿಸಿದರು. ಮಂಗಳೂರು ನಗರದ ಸಹಕಾರಿ ಸಂಘಗಳಿಗೆ ಸದಸ್ಯರು ಸಂದರ್ಶನವಿತ್ತು ವಿಚಾರ ವಿನಿಮಯ ಮಾಡಿ ಅಭಿಮತಗಳನ್ನು ಸಂಗ್ರಹಿಸಿದರು.

ಡಾ. ಪಂಜಾಬ ರಾವ್ ದೇಶಮುಖರು ಬರುವರು— ಕೇಂದ್ರದ ಕೃಷಿ ಮಂತ್ರಿ ಡಾ. ದೇಶಮುಖರು ಇದೇ ತಾ. 15 ಕ್ಕೆ ಮುಂಬಯಿಯಿಂದ ಇಲ್ಲಿಗೆ ಬರುವರೆಂದು ತಿಳಿದುಬರುತ್ತದೆ.

ನೇಕಾರರ ಪರಿಷತ್ತು— ನೇಕಾರರ ಸಹಕಾರ ಸಂಘಗಳ ದ್ವೈಮಾಸಿಕ ಪರಿಷತ್ತು ತಾ. 30ರಲ್ಲಿ ಎಸ್. ಸಿ. ಸಿ. ಬೇಂಕಿನ ಸಭಾಭವನದಲ್ಲಿ ರಿಜಿಸ್ಟ್ರಾರ್ ಶ್ರೀ ಕೆ. ಕಾಳಪ್ಪ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಸಬ್ ರಿಜಿಸ್ಟ್ರಾರ್ ಶ್ರೀ ಎಸ್. ವೀರ ಶೇಖರ, ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಶ್ರೀ ಮೊಳಹಳ್ಳಿ ಶಿವರಾಯರು, ಉಪಸ್ಥಿತರಿದ್ದರು. ಕಳದ ಪರಿಷತ್ತಿನ ವರದಿವಾಚನವಾದ ಬಳಿಕ ನೇಕಾರರಿಗೆ ಸಂಬಂಧಿಸಿದ ಹಲವಾರು ವಿಚಾರಗಳು ಚರ್ಚಿಸಲ್ಪಟ್ಟವು.

ಕೆನರಾ ಚೇಂಬರ್ ಆಫ್ ಕಮರ್ಸಿನ—ವಾರ್ಷಿಕ ಮಹಾಸಭೆಯು ತಾ. 30ರಲ್ಲಿ ಶ್ರೀ ಗಣಾಸನ ರಾವ್ ಪಂಡಿತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕುಬ್ಬಿ ಶ್ರೀನಿವಾಸ ಶೆಟ್ಟಿ, ಅಧ್ಯಕ್ಷ; ಎಸ್. ಶ್ರೀನಿವಾಸ ನಾಯಕ್, ಉಪಾಧ್ಯಕ್ಷ; ಸಿ. ನರಸಿಂಗ ರಾವ್, ಕೋಶಾಧಿಕಾರಿ; ಯು. ಸುಬ್ರಾಯ ಮಲ್ಯ ಮತ್ತು ಎಮ್. ಬಿ. ಅನಂತ ಶೆಟ್ಟಿ, ಗೌರವ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಮಂಗಳೂರಲ್ಲಿ...ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಕೇಂದ್ರ ಮೈದಾನದಲ್ಲಿ ಶ್ರೀ ಆರ್ ಬೈಲು ಭೋಜರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಜರಗಿತು. ಶ್ರೀಗಳಾದ ಎ. ಶಂಕರ ಅಳ್ವ, ಬಿ. ಜಗನ್ನಾಥ ಶೆಟ್ಟಿ, ಎಸ್. ಎನ್. ಹೊಳ್ಳ, ಕೆ. ಕೆ. ಶೆಟ್ಟಿ ಮೊದಲಾದವರ ಭಾಷಣಗಳಾದುವು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಚುನಾವಣೆಯ ಕಾರ್ಯಕ್ರಮ.

ಆಯಾ ಸರ್ಕಲುಗಳಲ್ಲಿರುವ ಮತಗಟ್ಟೆಗಳ ವಿವರ ಮತ್ತು ಮತಗಟ್ಟೆಗಳಿಗೆ ಸಂಬಂಧಪಟ್ಟ ಹದ್ದಿನ ವಿವರಗಳು ಮತ್ತು ಈ ಕೆಳಗಿನ ಕಾರ್ಯಕ್ರಮಗಳ ಪಟ್ಟಿಯನ್ನು ಸಂಬಂಧಪಟ್ಟ ಸ್ಥಳಗಳಲ್ಲಿ ತಾ. 30-9-1955ಕ್ಕೆ ಪ್ರಕಟವಾಗಿರುತ್ತವೆ.

ನಾಮಪತ್ರಗಳನ್ನು ಸಲ್ಲಿಸುವ ತಾರೀಕು 10—10—55ರಿಂದ 12—10—55ನ ವರೆಗೆ ಅಪರಾಹ್ನ ಗಂಟೆ 2ರಿಂದ 6ರ ವರೆಗೆ. ನಾಮಪತ್ರಗಳ ಪರಿಶೀಲನೆ 13-10-1955 ಅಪರಾಹ್ನ 3 ಗಂಟೆಗೆ. ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಅಪ್ಪಿಲು ಮಾಡುವ ಅಪ್ಪೈರು ವ್ಯಾದೆ: 18—10—1955 ಸಂಜೆ ಗಂಟೆ 6. ಅಪ್ಪಿಲು ನಿರ್ಣಯದ ಅಪ್ಪೈರು ವ್ಯಾದೆ: 28—10—1955 ಸಂಜೆ ಗಂಟೆ 6 ಸ್ಪೀಕರಿಸಲ್ಪಟ್ಟ ನಾಮಪತ್ರಗಳ ಪ್ರಕಟಣೆ: 1—11—1955 ಸಂಜೆ ಗಂಟೆ 6. ನಾಮಪತ್ರವನ್ನು ಹಿಂತೆಗೆಯುವ ಅಪ್ಪೈರು ವ್ಯಾದೆ: 4—11—1955 ಸಂಜೆ ಗಂಟೆ 6. ಚುನಾವಣಾ ತಾರೀಕು ಮತ್ತು ಸಮಯದ ಪ್ರಕಟಣೆ: 5-11-55, ಚುನಾವಣಾ ತಾರೀಕು ಮತ್ತು ಸಮಯ 12—11—55ಪೂರ್ವಾಹ್ನ ಗಂಟೆ 9ರಿಂದ ಅಪರಾಹ್ನ ಗಂಟೆ 4ರ ವರೆಗೆ. ಮತಗಳ ಎಣಿಕೆ: 12-11-1955 ಅಪರಾಹ್ನ ಗಂಟೆ 4ಕ್ಕೆ. ಚುನಾವಣಾಪರಿಣಾಮಗಳಿಪ್ರಕಟಣೆ: 16-11-1955. ಹೆಚ್ಚಿನ ಮಾಹಿತಿಯನ್ನು ಆಯಾ ಸರ್ಕಲ್ ಕಾಂಗ್ರೆಸ್ ಕಮಿಟಿಗಳಿಂದ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದಲೂ ಪಡೆಯಬಹುದೆಂದು ಜಿಲ್ಲಾ ಚುನಾವಣಾಧಿಕಾರಿ ಶ್ರೀ ಎ. ರಂಗರಾಳ್ವರು ತಿಳಿಸುತ್ತಾರೆ.

In the Court of the District Munsif of Karkala.

O. S. No. 255/1955.

Between,

Thangappe and others...Plaintiffs

Marudevi and another ...

Defendants.

To

The defendants—

1, Marudevi, 2, Gunapala Kambali—Children of Ananthamathi, residing at Hamani Hosamane in Andinje village of Karkala Taluk.

Whereas the plaintiffs have filed the above suit for recovery of Rs. 588—8—0 with interest and costs due under a demand promissory note and the same stands posted to 18—10—1955 for your appearance; you are hereby required to appear before the said Court at 10 A. M. on the said date and state your defence, if any, failing which the suit will be decided exparte.

H P. A. Jain,
Pleader for plaintiffs.

Karkal, Dated 1-10-1955.

ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ,
ಬಿ. ಎ., ಬಿ. ಎಲ್., ಎಮ್. ಬಿ. & ಸಿ. ಎಮ್.
(ಮದ್ರಾಸ್ ಗವರ್ನಮೆಂಟ್ ಸ್ಕೂಲ್ ಆಫ್ ಇಂಡಿಯನ್ ಮೆಡಿಸಿನ್—ಇದರ ಮಾಜಿ ಪ್ರಿನ್ಸಿಪಾಲ್)— ಮನ್ನುಡಿಕಾರರು.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ ಮದ್ದು HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

—ಪ—

"Ably written--Quite up-to-date valuable service"

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್,
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಬೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಸುಲಭವಾಗಿ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪೇರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಪೆರಂಬೂರಿನ ಕಾರ್ಖಾನೆಯ ನೋಟ

ಪ್ರತಿ ಆರು ತಾಸಿಗೊಂದು ರೈಲು ಗಾಡಿ

ತಮ್ಮ ದಕ್ಷಿಣ ಭಾರತದ ಸಂಚಾರ ಕಾಲದಲ್ಲಿ ಮದ್ರಾಸಿನ ವಾಯವ್ಯ ದಿಕ್ಕಿನಲ್ಲಿರುವ ಪೆರಂಬೂರಿನ ಪೂರ್ಣಾಕಾರದ ರೈಲು ಗಾಡಿ ತಯಾರಿಸುವ ಕಾರ್ಖಾನೆಯನ್ನು ಇದೇ ದಿನಾಂಕ ೨೧ರಂದು ಪ್ರಧಾನಿ ನೆಹರು ಉದ್ಘಾಟಿಸಿದರು. ಏಶ್ಯದಲ್ಲಿಯೇ ಅತ್ಯಂತ ಹಿರಿದಾದ ಈ ಕಾರ್ಖಾನೆಯು ಅಂದಿನಿಂದ ಉತ್ಪಾದನೆಯನ್ನು ಪ್ರಾರಂಭಿಸಿತು.

ತಯಾರಿಕೆಯ ವೇಗ

ಪೆರಂಬೂರಿನ ಕಾರ್ಖಾನೆಯನ್ನು ಪ್ರಪಂಚದ ಪ್ರಥಮ ಶ್ರೇಣಿಯ ಕಾರ್ಖಾನೆಗಳ ಸಾಲಿನಲ್ಲಿ ಸೇರಿಸಬಹುದು. ೫೨ ಎಕ್ರೆ ವಿಸ್ತೀರ್ಣದಲ್ಲಿ ನಿರ್ಮಿತವಾಗಿರುವ ಈ ಕಾರ್ಖಾನೆಯು ಸರ್ವಸಜ್ಜಿತವಾಗಿದೆ. ಯಂತ್ರ ಶಾಲೆಗಳಿಂದ ಹಿಡಿದು ಕಾರ್ಮಿಕರ ವಸತಿ ಗೃಹಗಳ ವರೆಗಿನ ಎಲ್ಲ ಸೌಕರ್ಯಗಳನ್ನೊಳಗೊಂಡಿದೆ. ಭಾರತಮತ್ತು ಸ್ವೀಜರಲೇಂಡುಗಳ ಹಾರ್ದಿಕ ಸಹಕಾರದಿಂದ ರೂಪುಗೊಂಡ ಈ ಕಾರ್ಖಾನೆಗೆ ಬೇರೆ ಹಲವು ಐರೋಪ್ಯ ರಾಷ್ಟ್ರಗಳೂ ನೆರವನ್ನು ನೀಡಿರುತ್ತವೆ.

ಉತ್ಪಾದನೆಯನ್ನು ಪ್ರಾರಂಭಿಸಿದ ಪ್ರಥಮ ವರ್ಷದಲ್ಲಿ ಈ ಕಾರ್ಖಾನೆಯು ಸ್ವೀಜರಲೇಂಡಿನಿಂದ ಆಮದು ಮಾಡಿಕೊಂಡ ಬಿಡಿ ಭಾಗಗಳನ್ನು ಜೋಡಿಸಿ ವರ್ಷಕ್ಕೆ ೨೦ ರೈಲು ಗಾಡಿಗಳನ್ನು ತಯಾರಿಸುತ್ತದೆ. ಮುಂದೆ ಹೆಚ್ಚಾಗಿ ಭಾರತದಲ್ಲಿಯೇ ತಯಾರಾದ ಬಿಡಿ ಭಾಗಗಳನ್ನು ಉಪಯೋಗಿಸಿ ಎರಡನೆಯ ವರ್ಷದಲ್ಲಿ ೧೦೦, ಮೂರನೆಯ ವರ್ಷದಲ್ಲಿ ೨೦೦, ನಾಲ್ಕನೆಯ ವರ್ಷದಲ್ಲಿ ೩೦೦ ರೈಲು ಗಾಡಿಗಳನ್ನು ಸಿದ್ಧಗೊಳಿಸುತ್ತದೆ. ಐದನೇ ವರ್ಷದಲ್ಲಿ, ಅಂದರೆ ೧೯೬೦ನೇ ವರ್ಷದ ಸುಮಾರಿಗೆ, ಕೆಲಸದ ಸಮಯದ ಪ್ರತಿ ಆರು ಗಂಟೆಗಳಿಗೊಂದು, ಅಂದರೆ ವರ್ಷಕ್ಕೆ ೩೫೦ ಪೂರ್ಣಾಕಾರದ ಗಾಡಿಗಳನ್ನು ಇದು ಉತ್ಪಾದಿಸುತ್ತದೆ. ಬೇಕಾದ ಎಲ್ಲ ಬಿಡಿ ಭಾಗಗಳನ್ನು ಅಷ್ಟು ಹೊತ್ತಿಗೆ ಇಲ್ಲಿಯೇ ತಯಾರಿಸಲಾಗುತ್ತದೆ.

ಹೊಸ ದಾಖಲೆ

ಇಲ್ಲಿ ತಯಾರಾದ ಗಾಡಿಗಳು ವಿಶೇಷ ವೈಶಿಷ್ಟ್ಯಗಳಿಂದ ಕೂಡಿವೆ. ಅವು ಪೂರ್ಣಾಕಾರದವು; ಅಂದರೆ, ಈಗಿನ ರೈಲು ಗಾಡಿಗಳಿಗಿರುವಂತೆ ಕವಚವನ್ನು ಉಕ್ಕಿನ ಕೆಳಚೌಕಟ್ಟಿಗೆ ಜೋಡಿಸದೆ, ಅವುಗಳನ್ನು ಏಕಾಂಶವಾಗಿ ತಯಾರಿಸಲಾಗುತ್ತದೆ. ಇದರಿಂದ ರೈಲು ಪ್ರಯಾಣದ ಕಾಲದಲ್ಲಿ ಗಾಡಿಯು ಅಲ್ಲಾಡದೆ ಪ್ರಯಾಣವು ಸುಖಕರವಾಗುತ್ತದೆ. ಈಗ ಬಳಕೆಯಲ್ಲಿರುವ ಗಾಡಿಗಳಿಗಿಂತ ೭ ಟನ್ನುಗಳಷ್ಟು ಇವುಗಳ ಭಾರ ಕಡಿಮೆಯಾಗಿರುವುದರಿಂದ ಯಂತ್ರವು ಹೆಚ್ಚು ಗಾಡಿಗಳನ್ನೆಳೆಯಬಲ್ಲುದು. ಅಪಘಾತಕಾಲದಲ್ಲಿ ಇವು ಚೂರುಚೂರಾಗದೆ ಉಳಿಯುವುದಲ್ಲದೆ ಪ್ರಯಾಣಿಕರಿಗೆ ಧಕ್ಕೆಯಿಂದ ರಕ್ಷಣೆಯನ್ನೂ ಕೊಡುತ್ತವೆ. ವಿಶೇಷತರದ ವಿದ್ಯುನ್ನಿರೋಧಕ ವಸ್ತುಗಳನ್ನು ಈ ಗಾಡಿಯಲ್ಲಿ ಉಪಯೋಗಿಸುವುದರಿಂದ ಉಷ್ಣ ಮತ್ತು ಶಬ್ದಗಳನ್ನು ಈ ಗಾಡಿಯಲ್ಲಿ ನಿಯಂತ್ರಿಸಬಹುದು. ಹೀಗೆ ಪ್ರವಾಸ ಸೌಕರ್ಯದಲ್ಲಿ ಈ ಗಾಡಿಗಳು ಯುರೋಪಿನಲ್ಲಿ ಬಳಕೆಯಲ್ಲಿರುವ ಅತ್ಯುತ್ತಮ ಗಾಡಿಗಳಿಗೆ ಸರಿತೂಗುತ್ತವೆ. ಅಖಿಲ ಭಾರತದಲ್ಲಿ ಇವು ಹೊಸ ಅಂತಸ್ತನ್ನೂ ದಾಖಲೆಯನ್ನು ಸ್ಥಾಪಿಸುತ್ತವೆ.

ಶ್ರೇಷ್ಠ ವ್ಯವಸ್ಥೆ

ವರನೂವಧಿ ಉತ್ಪಾದನೆಯು ನಡೆದಾಗ ವಿವಿಧ ಬಗೆಯ ಸುಮಾರು ೬೦೦ಯಂತ್ರಗಳು ಈ ಕಾರ್ಖಾನೆಯಲ್ಲಿ ನೆಲೆಗೊಳಿಸಲ್ಪಡುತ್ತವೆ. ಇವು ಗಳಿಗಾಗಿ ಬೃಹದಾಕಾರದ ಯಂತ್ರ ಶಾಲೆಗಳನ್ನು ಕಟ್ಟಿಸಿದ್ದು ೧೦೦೦ ಅಡಿ ಉದ್ದ ಹಾಗೂ ೫೫೦ ಅಡಿ ಅಗಲದ ಯಂತ್ರಶಾಲೆಯು ಭಾರತದಲ್ಲಿಯೇ ಅತಿ ದೊಡ್ಡದೆನಿಸುತ್ತದೆ. ಸರ್ವಸಜ್ಜಿತವಾಗಿರುವ ಈ ಕಾರ್ಖಾನೆಯಲ್ಲಿ ಉತ್ಪಾದನೆಯನ್ನು ವ್ಯವಸ್ಥಿತಗೊಳಿಸಲು ಬೇರೆ ಬೇರೆ ವಿಭಾಗಗಳಿವೆ. ಬಿಡಿಭಾಗಗಳನ್ನು ವೇಗವಾಗಿ ತಯಾರಿಸಬಲ್ಲಂಥ ಹಾಗು ವಿವಿಧೋಪಕರಣಗಳನ್ನು ತ್ವರಿತವಲ್ಲಿ ಸಿದ್ಧ ಮಾಡಬಲ್ಲಂಥ ಅನೇಕ ಯಂತ್ರಗಳಿವೆ. ತಯಾರಿಕೆಯ ಕಾರ್ಯಾಚರಣೆಯಲ್ಲಿ ಪ್ರತಿ ಕೆಲಸಕ್ಕೂ ವೈಯಕ್ತಿಕ ಗಮನವನ್ನು ಕೊಡುವ ಅವಶ್ಯಕತೆ ಬಾರದಂತೆ ೬೭೦ ವಿಶೇಷ ಬಗೆಯ ಯಂತ್ರಗಳು ಇಲ್ಲಿವೆ. ಮಿತವ್ಯಯವನ್ನು ಸಾಧಿಸಲು ಬಹಳ ಗಮನ ಕೊಡಲಾಗಿದೆ. ಪ್ರತಿಯೊಂದು ಭಾಗದ ಉತ್ಪಾದನೆಗೆ ತಗಲುವ ವೆಚ್ಚವೆಷ್ಟೆಂದು ತಿಳಿಯಲು ಪರಿಶೀಲನೆಯ ವ್ಯವಸ್ಥೆಯೂ ಇದೆ.

ಸಿಬಂಧಿಗೆ ತರಬೇತಿ

೧೯೬೦ನೇ ವರ್ಷದ ಸುಮಾರಿಗೆ ಕಾರ್ಖಾನೆಯು ೪೦೦೦ ಮಂದಿ ಕಾರ್ಮಿಕರಿಂದ ಕೂಡುತ್ತದೆ. ಇವರಿಗಾಗಿ ನಿರ್ಮಿಸಲಾಗಿರುವ ವಸತಿ ಗೃಹಗಳಲ್ಲಿ ಉದ್ಯಾವನಗಳು, ಕ್ರೀಡಾಕ್ಷೇತ್ರಗಳು, ಮತ್ತಿತರ ಆಧುನಿಕ ಸೌಲಭ್ಯಗಳಿವೆ. ಆಡಳಿತ ವರ್ಗಕ್ಕೂ ಕೆಲಸಗಾರರಿಗೂ ತ್ವರಿತ ಸಂಬಂಧವನ್ನು ಕಲ್ಪಿಸಿ ಕೊಡುವಂತೆ ಧ್ವನಿವರ್ಧಕದ ವ್ಯವಸ್ಥೆ ಮಾಡಲಾಗಿದೆ. ವಸತಿ ಗೃಹಕ್ಕೂ ಯಂತ್ರ ಶಾಲೆಗೂ ೬೦ ಲಕ್ಷ ಯುನಿಟುಗಳಷ್ಟು ವಿದ್ಯುಚ್ಛಕ್ತಿಯನ್ನೊದಗಿಸಲಾಗುತ್ತದೆ. ಯಂತ್ರ ವಿಜ್ಞಾನದಲ್ಲಿ ಪರಿಣತರಾದ ತಾಂತ್ರಿಕರ ಆವಶ್ಯಕತೆ ಬಹಳವಾಗಿರುವುದರಿಂದ ಅದಕ್ಕೂ ಸಾಕಷ್ಟು ಗಮನ ಸೂಚಿಸಲಾಗುತ್ತದೆ. ೧೯೫೫ನೇ ಮಾರ್ಚಿಯಲ್ಲಿ ಪ್ರಾರಂಭಿಸಿದ ಶಾಲೆಯಲ್ಲಿ ೫೦೦ ಮಂದಿ ತರಬೇತಿ ಹೊಂದುತ್ತಿದ್ದಾರೆ. ಸ್ವಿಜರಲೇಂಡಿನಲ್ಲಿ ೪೦ ಮಂದಿ ಈಗಾಗಲೇ ವಿಶೇಷ ತರಬೇತಿ ಮುಗಿಸಿರುವರಲ್ಲದೆ ೧೯ ಮಂದಿಯು ತರಬೇತಿ ಮುಂದರಿಯುತ್ತಿದೆ. ಭಾರತೀಯರೈಲ್ವೆಗಳ ಕುಂದು ಕೊರತೆಗಳನ್ನು ದೂರೀಕರಿಸುವಲ್ಲಿ ಮತ್ತು ಪ್ರಯಾಣದ ಸೌಲಭ್ಯಗಳನ್ನು ಹೆಚ್ಚಿಸುವಲ್ಲಿ ಅಕ್ಟೋಬರ ೨ನೇ ದಿನಾಂಕವು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುವುದು ನಿಶ್ಚಿತ.

SR

ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಂಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, (UDIRI) S.K.

ಪುಸ್ತಕ ಭಂಡಾರಗಳಿಂದ ಶಿಕ್ಷಣ

ಗೃಹ ಮಂತ್ರಿ ಪಂತರ ಅಭಿಪ್ರಾಯ

ಹೊಸದೆಹಲಿಯಲ್ಲಿ "ಸಾಮಾಜಿಕ ಶಿಕ್ಷಣದಲ್ಲಿ ಪುಸ್ತಕ ಭಂಡಾರಗಳ ಪಾತ್ರ" ಎಂಬ ವಿಷಯದ ಕುರಿತು ವಿಚಾರ ಗೋಷ್ಠಿಯೊಂದನ್ನು ಇದೇ ೫ನೇ ದಿನಾಂಕ ಕೇಂದ್ರದ ಗೃಹ ಮಂತ್ರಿ ಪಂಡಿತ ಪಂತರು ಉದ್ಘಾಟಿಸಿದರು. "ದೇಶಕ್ಕೆ ಹೆಚ್ಚಿನ ಪುಸ್ತಕ ಭಂಡಾರಗಳ ಅವಶ್ಯಕತೆ ಇದೆ. ಏಕಂದರೆ ಅಕ್ಷರಸ್ಥರ ಮತ್ತು ಹೊಸತಾಗಿ ಅಕ್ಷರಾಭ್ಯಾಸ ನಡೆಸಿರುವವರ ಶಿಕ್ಷಣವನ್ನು ಮುಂದುವರಿಸಲು ಪುಸ್ತಕ ಭಂಡಾರಗಳೇ ಶ್ರೇಷ್ಠ ಸಾಧನ" ಎಂದು ಅವರು ಈ ಸಂದರ್ಭದಲ್ಲಿ ಹೇಳಿದರು.

ಅಯ್ಯೆಯಲ್ಲಿ ಜಾಗ್ರತೆ

ಪುಸ್ತಕ ಭಂಡಾರಗಳಿಗಾಗಿ ಗ್ರಂಥಗಳನ್ನು ಆರಿಸುವಾಗ ಬಹಳ ಜಾಗರೂಕತೆಯನ್ನು ವಹಿಸಬೇಕು ಎಂದು ಪಂತರು ನುಡಿದರು. ಪುಸ್ತಕಗಳ ಮೂಲಕ ನಾವು ಜನರಿಗೆ ಕೊಡುವ ಶಿಕ್ಷಣ ಮತ್ತು ಜ್ಞಾನವು ಅನುಚಿತ ಹಾಗು ಅಹಿತಕರವಾಗದಂತೆ ಮಾಡುವುದಕ್ಕೆ ತಪ್ಪಬಾರದು ಎಂದವರು ತಿಳಿಸಿದರು. ನಮ್ಮ ಘನಉದ್ದೇಶಗಳಿಗೆ ಪೋಷಕವಾಗುವಂತೆ ಪುಸ್ತಕಗಳನ್ನು ಆಯ್ದು ಜನರಿಗೆ ನೀಡಬೇಕು ಎಂದವರು ಉಪದೇಶಿಸಿದರು.

ದ್ವಿತೀಯ ಯೋಜನೆಯಲ್ಲಿ

ಮುಂದಿನ ಪಂಚ ವಾರ್ಷಿಕ ಯೋಜನೆಯಲ್ಲಿ ರಾಷ್ಟ್ರದ ಪ್ರತಿಯೊಂದೂ ಗ್ರಾಮವನ್ನು ಸಾಮುದಾಯಿಕ ಯೋಜನೆಗಳ ಅಥವಾ ರಾಷ್ಟ್ರೀಯ ವಿಸ್ತರಣ ಸೇವೆಯ ಕಕ್ಷೆಗೆ ತರಲಾಗುತ್ತದೆ. ಪ್ರತಿಯೊಬ್ಬ ಹುಡುಗ ಹಾಗು ಹುಡುಗಿಗೆ ಅನುಕೂಲವಾದಷ್ಟು ಹತ್ತಿರದಲ್ಲಿ ಮೂಲ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಲಾಗುತ್ತದೆ, ಮಕ್ಕಳಿಗೆ ಹೀಗೆ ಕೊಡುವ ವಿದ್ಯಾಭ್ಯಾಸವನ್ನು ಸಾರ್ಥಕಗೊಳಿಸುವ ಮೂರಕ ಸೇವೆಯಾಗಿ ಪುಸ್ತಕ ಭಂಡಾರಗಳ ಪ್ರಯೋಜನವನ್ನು ಪರಿಗಣಿಸ ಬಹುದು. ಈ ದಿಸೆಯಲ್ಲಿ ಯೋಗ್ಯ ಪ್ರಯತ್ನಗಳನ್ನು ಮಾಡದಿದ್ದರೆ, ಹುಡುಗರು ತಾವು ಕಲಿತುದನ್ನು ಮರೆತುಬಿಡಬಹುದು; ವಯಸ್ಕರೂ ಇದಕ್ಕೆ ಅಪವಾದವಲ್ಲ ಎಂದು ಪಂತರು ಹೇಳಿದರು.

ಪುಸ್ತಕಗಳ ಮಹತ್ವ

ಅಕ್ಷರಾಭ್ಯಾಸ ಮತ್ತು ಶಿಕ್ಷಣಗಳು ಮನುಷ್ಯನಲ್ಲಿ ಚೇತನವನ್ನು ತುಂಬಿ ಸಮಾಜವನ್ನು ಉನ್ನತ ಸ್ಥಿತಿಗೆ ಒಯ್ಯುವ ಸಾಧನಗಳೆಂದು ಪಂತರು ಸಾರಿದರು. ಪ್ರಗತಿಯನ್ನು ಸಾಧಿಸಿಕೊಳ್ಳುವ ನೂರಾರು ಬಗೆಗಳನ್ನು ನಾಗರಿಕರು ತಿಳಿದಿರಬೇಕಾಗಿದೆ; ಪ್ರಜಾಪ್ರಭುತ್ವದ ತತ್ತ್ವವನ್ನು ಮನಗಂಡಿರಬೇಕಾಗಿದೆ; ಶಿಸ್ತು ಮತ್ತು ಸಾಮಾಜಿಕ ಹಿತದ ಮನೋಭಾವನೆಯನ್ನು ಅಳವಡಿಸಿಕೊಳ್ಳಬೇಕಾಗಿದೆ; ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದರಿಸಿಕೊಂಡು ಹೋಗಬೇಕಾಗಿದೆ—ಇವೆಲ್ಲ ಆದರ್ಶಗಳನ್ನು ಹೇಗೆ ವ್ಯವಹಾರದಲ್ಲಿ ರೂಢಿಸಿಕೊಳ್ಳಬಹುದೆಂದು ಒಳ್ಳೆಯ ಪುಸ್ತಕಗಳು ತಿಳಿಸುತ್ತವೆ. ಆದುದರಿಂದ ಉತ್ತಮ ಪುಸ್ತಕಗಳಿಂದ ಕೂಡಿದ ಭಂಡಾರಗಳು ದೇಶದ್ದು ತುಂಬ ಬೇಗನೆ ವ್ಯಾಪಿಸಲಿ—ಎಂದವರು ಆಶಿಸಿದರು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಸಿನಲ್ಲಿ ಕೆಲಸದ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

·o·PBox No. 3219 BOMBAY-

ಕೃಷಿ ಕಾರ್ಮಿಕರ ಸ್ಥಿತಿಗತಿಯ ಸಮೀಕ್ಷೆ

ದಕ್ಷಿಣ ಭಾರತದಲ್ಲಿ ನಿರುದ್ಯೋಗ ಮತ್ತು ಸಾಲ—ಎರಡೂ ಹೆಚ್ಚು

ಕೃಷಿ ಕ್ಷೇತ್ರದಲ್ಲಿ ದುಡಿಯಲು ಸಿದ್ಧರಾದ ಕಾರ್ಮಿಕರು, ಅದರಲ್ಲಿಯೂ ಮಹಿಳೆಯರು, ಹೇರಳವಾಗಿರುವುದರಿಂದ ಅವರಿಗೆ ಸಾಕಷ್ಟು ಉದ್ಯೋಗ ದಕ್ಷಿಣ ಭಾರತದಲ್ಲಿ ದೊರಕುತ್ತಿಲ್ಲ ಎಂಬುದಾಗಿ ಭಾರತ ಸರಕಾರದವರು ನಡೆಸಿರುವ ವಿಚಾರಣೆಯಿಂದ ತಿಳಿದು ಬರುತ್ತದೆ. ಕೃಷಿ ಕಾರ್ಮಿಕರ ನಿರುದ್ಯೋಗಕ್ಕೆ ಭಾರತದ ಈ ಭಾಗದಲ್ಲಿ ಕಲಾ ಒಬ್ಬೊಬ್ಬರಿಗೆ ಇರುವ ಹಿಡುವಳಿಯು ಪ್ರಮಾಣ ಅತ್ಯಲ್ಪವಾಗಿರುವುದು ಇನ್ನೊಂದು ಮುಖ್ಯ ಕಾರಣವೆಂದೂ ಈ ಪರಿಶೀಲನೆ ತಿಳಿಸುತ್ತದೆ.

ಏಶ್ಯದಲ್ಲಿಯೆ ದೊಡ್ಡ ಸಮೀಕ್ಷೆ

ಏಶ್ಯದಲ್ಲಿಯೇ ಅತಿ ದೊಡ್ಡ ಮಟ್ಟದ ಮತ್ತು ಪ್ರಥಮ ಸಲದ ಈ ಸಮೀಕ್ಷೆಯನ್ನು ಸಾಮಾನ್ಯ ಗ್ರಾಮ ಸಮೀಕ್ಷೆ, ಸಾಮಾನ್ಯ ಕುಟುಂಬ ಸಮೀಕ್ಷೆ ಮತ್ತು ಕೇಂದ್ರೀಕೃತ ಕುಟುಂಬ ಸಮೀಕ್ಷೆ ಎಂಬ ಮೂರು ಘಟ್ಟಗಳಲ್ಲಿ ನಡೆಸಲಾಯಿತು, ಕೊನೆಯ ಘಟ್ಟದಲ್ಲಿ ವಿಚಾರಣೆಯು ತೀವ್ರ ಗತಿಯಿಂದ ನೆರವೇರಿತು. ಸಮೀಕ್ಷೆಯನ್ನು ನಡೆಸುವುದಕ್ಕೋಸ್ಕರ ಭಾರತವನ್ನು ಅರು ವಲಯಗಳಾಗಿ ವಿಂಗಡಿಸಲಾಯಿತು. ಇವುಗಳಲ್ಲಿ ಉತ್ತರ ಮತ್ತು ಪೂರ್ವ ವಲಯಗಳ ಬಗ್ಗೆ ವರದಿಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಈಗಿನ ವರದಿಯು ಮೂರನೆಯ ವಲಯವಾದ ದಕ್ಷಿಣ ಭಾರತಕ್ಕೆ ಸಂಬಂಧಿಸಿದೆ. ಇವರಲ್ಲಿ ಈ ವಲಯದಲ್ಲಿನ ಕೃಷಿಕಾರ್ಮಿಕರಿಗೆ ಅನ್ವಯವಾಗುವ ಉದ್ಯೋಗ, ನಿರುದ್ಯೋಗ ವೇತನ ಮತ್ತದರ ಸ್ವರೂಪ, ಆದಾಯ, ವೆಚ್ಚ, ಮತ್ತು ಸಾಲಗಳ ವಿಷಯದಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ವಿಚಾರಣೆಗಾಗಿ ಮದ್ರಾಸಿನ ೮೪, ಮೈಸೂರಿನ ೩೮, ತಿರು-ಕೊಚ್ಚಿಯ ೧೬ ಮತ್ತು ಕೊಡಗಿನ ೪ ಹೀಗೆ ಒಟ್ಟು ೧೮೮ ಗ್ರಾಮಗಳನ್ನು ಆರಿಸಿದ್ದರು. ಮದ್ರಾಸಿನ ೧೯೩೫, ಮೈಸೂರಿನ ೬೬೫, ತಿರು-ಕೊಚ್ಚಿಯ ೨೮೪ ಮತ್ತು ಕೊಡಗಿನ ೪೦— ಹೀಗೆ ಇಡೀ ವಲಯದಲ್ಲಿ ಒಟ್ಟು ೩೩೩೪ ಕೃಷಿಕಾರ್ಮಿಕ ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದ್ದರು.

ಉದ್ಯೋಗದ ಪ್ರಮಾಣ

ವರದಿಯಲ್ಲಿ ವ್ಯಕ್ತವಾದ ಮೇರೆಗೆ ದಕ್ಷಿಣ ಭಾರತದಲ್ಲಿ ಕೃಷಿಕಾರ್ಮಿಕನಿಗೆ ವರ್ಷಕ್ಕೆ ಸರಾಸರಿ ೧೮೧ ದಿನಗಳ ಕಾಲ ಮಾತ್ರ ಉದ್ಯೋಗ ಸಿಗುತ್ತದೆ. ಈ ಮಟ್ಟಿಗೆ ಅಖಿಲ ಭಾರತದ ಸರಾಸರಿಯು ೨೧೮ ದಿನಗಳಾಗಿವೆ. ಕೃಷಿ ಕ್ಷೇತ್ರದಲ್ಲಿ ದುಡಿಯುವ ಗಂಡಾಳುಗಳಿಗೆ ತಿರು-ಕೊಚ್ಚಿಯಲ್ಲಿ ವಲಯದಲ್ಲಿಯೇ ಅತಿ ಹೆಚ್ಚು ದಿನಗಳ ವರೆಗೆ, ಅಂದರೆ ವರ್ಷಕ್ಕೆ ಸರಾಸರಿ ೧೮೫ ದಿನ, ಕೆಲಸ ಸಿಗುತ್ತಿದ್ದರೆ ಮೈಸೂರು ಮತ್ತು ಕೊಡಗುಗಳಲ್ಲಿ ವಲಯದಲ್ಲಿಯೇ ಅತಿ ಕಡಿಮೆ, ಅಂದರೆ ೧೩೦ ದಿನ ಮಾತ್ರ ಉದ್ಯೋಗ ಲಭಿಸುತ್ತದೆ; ಮದ್ರಾಸಿನಲ್ಲಿ ೧೫೫ ದಿನಗಳ ಉದ್ಯೋಗ ವ್ಯಾಪ್ತಿಯೊಳಗಾಗುತ್ತದೆ.

ವ್ಯವಸಾಯಕ್ಕೆ ಸಂಬಂಧಿಸದ ಕೆಲಸಗಳ ಸಂಗತಿಯಲ್ಲಿ ಮೈಸೂರು, ಮದ್ರಾಸು ಮತ್ತು ತಿರು-ಕೊಚ್ಚಿ ರಾಜ್ಯಗಳಲ್ಲಿ ಉದ್ಯೋಗ ವ್ಯಾಪ್ತಿಯ ಪ್ರಮಾಣ ಹೆಚ್ಚು ವ್ಯತ್ಯಾಸವನ್ನು ತೋರಿಸುವುದಿಲ್ಲ; ವರ್ಷಕ್ಕೆ ೧೯ (ಮದ್ರಾಸು) ದಿನಗಳಿಂದ ೩೦ (ತಿರು-ಕೊಚ್ಚಿ) ದಿನಗಳ ವರೆಗೆ ಈ ಪ್ರಮಾಣವಿರುತ್ತದೆ. ಕೊಡಗಿನಲ್ಲಿ ಮಾತ್ರ ವ್ಯವಸಾಯಕ್ಕೆ ಸಂಬಂಧಿಸದ ಕ್ಷೇತ್ರದಲ್ಲಿ ಉದ್ಯೋಗ ದೊರಕುವ ಪ್ರಮಾಣ ವರ್ಷಕ್ಕೆ ೧೦೧ ದಿನಗಳಷ್ಟು ಹೆಚ್ಚಿರುತ್ತದೆ.

ನಿರುದ್ಯೋಗದ ಪ್ರಮಾಣವು ದಕ್ಷಿಣ ಭಾರತದಲ್ಲಿಯೇ ಅತಿ ಹೆಚ್ಚಿನದೆಂದು ಇದು ತೋರಿಸಿ ಕೊಡುತ್ತದೆ. ಭಾರತದ ಸರಾಸರಿಯು ವರ್ಷಕ್ಕೆ ೮೨ ದಿನಗಳ ಕಾಲ ಕೃಷಿ ಕಾರ್ಮಿಕರು ನಿರುದ್ಯೋಗಿಗಳಾಗಿರುವರೆನ್ನುತ್ತಿದ್ದರೆ, ದಕ್ಷಿಣ ಭಾರತದಲ್ಲಿ ಈ ಪ್ರಮಾಣ ೧೧೫ ದಿನಗಳು. ಮದ್ರಾಸಿನಲ್ಲಿ ಗಂಡಾಳುಗಳು ಇಡಿ ವಲಯದಲ್ಲಿಯೇ ಅತಿಹೆಚ್ಚು ಅಂದರೆ ವರ್ಷಕ್ಕೆ ೧೧೬ ದಿನಗಳಕಾಲ ನಿರುದ್ಯೋಗಿಗಳಾಗಿರುವರಾದರೆ, ಮೈಸೂರಿನಲ್ಲಿ ವಲಯದಲ್ಲಿಯೇ ತೀರ ಕಡಿಮೆ, ಅಂದರೆ ೬೨ ದಿನಗಳ ಕಾಲ ಮಾತ್ರ ಅವರಿಗೆ ಉದ್ಯೋಗವಿರದೆ ಹೋಗುತ್ತದೆ. ತಿರು—ಕೊಚ್ಚಿಯಲ್ಲಿ ಸರ್ವದಲ್ಲಿ ೧೦೮ ಮತ್ತು ಕೊಡಗಿನಲ್ಲಿ ೯೧ ದಿನಗಳ ಕಾಲ ಕೃಷಿಕಾರ್ಮಿಕರಿಗೆ ಕೆಲಸ ಸಿಗುತ್ತಿಲ್ಲ. ಸೋಮಾರಿತನ, ಅಲಸಿಕೆ ಮುಂತಾದುವುಗಳಿಗಿಂತಲೂ ಕೆಲಸವಿಲ್ಲದಿರುವುದೇ ಈ ನಿರುದ್ಯೋಗದ ಮೂಲ ಕಾರಣ.

ಆದಾಯ ಮತ್ತು ಕರ್ಚು

ಅಖಿಲ ಭಾರತದಲ್ಲಿ ಕೃಷಿ ಕಾರ್ಮಿಕ ಕುಟುಂಬದ ಸರಾಸರಿ ಆದಾಯವು ವರ್ಷಕ್ಕೆ ೪೪೭ ರೂಪಾಯಿಗಳಾಗಿದ್ದರೆ, ಈ ವಲಯದ ಪ್ರಮಾಣವು ೩೮೨ ರೂಪಾಯಿಗಳು ಮಾತ್ರ. ರಾಜ್ಯಗಳಿಗನುಸಾರವಾಗಿ ನೋಡಿದರೆ ಮದ್ರಾಸಿನ ಲ್ಲಿ೩೬೫, ಮೈಸೂರಿನಲ್ಲಿ ೩೫೬, ತಿರು ಕೊಚ್ಚಿಯಲ್ಲಿ ೫೪೧ ಮತ್ತು ಕೊಡಗಿನಲ್ಲಿ ೬೪೫ ರೂಪಾಯಿಗಳಷ್ಟು ವರ್ಷಕ್ಕೆ ಸರಾಸರಿ ಆದಾಯವು ಪ್ರತಿ ಕೃಷಿಕಾರ್ಮಿಕ ಕುಟುಂಬಕ್ಕೆ ಬರುತ್ತದೆ. ಕೊಡಗನ್ನು ಬಿಟ್ಟು ಉಳಿದ ರಾಜ್ಯಗಳ ಕೃಷಿ ಕಾರ್ಮಿಕರು ಬೇಸಾಯದಿಂದಲೇ ಹಣ ಸಂಪಾದಿಸುತ್ತಾರೆ; ಕೊಡಗಿನಲ್ಲಿ ಮಾತ್ರ ತೋಟಗಳಲ್ಲಿ ಹೆಚ್ಚಿನ ಮಜೂರಿಯ ಮೇಲೆ ಕೃಷಿ ಕಾರ್ಮಿಕರಿಗೆ ಕೆಲಸ ದೊರಕುತ್ತದೆ.

ಆದಾಯ ಪ್ರಮಾಣಕ್ಕಿಂತ ವೆಚ್ಚವೇ ಅತ್ಯಧಿಕ: ಅಂದರೆ ವರ್ಷಕ್ಕೆ ಸರಾಸರಿ ೫೯೭ ರೂಪಾಯಿ— ಇದರಲ್ಲಿ ಸಮಾರಂಭಗಳಿಗೆ ವ್ಯಯವಾಗುವ ೬ ರೂಪಾಯಿಗಳನ್ನು ಸೇರಿಸಿಲ್ಲ. ಕುಟುಂಬದ ಒಟ್ಟು ಆದಾಯದಲ್ಲಿ ೩೫೩ ರೂಪಾಯಿ ಅಥವಾ ಶೇ.೩೫ ಆಹಾರಕ್ಕಾಗಿಯೇ ವೆಚ್ಚವಾಗುತ್ತದೆ. ಕುಟುಂಬದ ವೆಚ್ಚದ ಪ್ರಮಾಣವು ಮದ್ರಾಸಿನಲ್ಲಿ ೫೭೯, ಮೈಸೂರಿನಲ್ಲಿ ೪೮೯, ತಿರು-ಕೊಚ್ಚಿಯಲ್ಲಿ ೫೪೦ ಮತ್ತು ಕೊಡಗಿನಲ್ಲಿ ೬೬೬ ಆಗಿರುತ್ತದೆ.

ವ್ಯಕ್ತಿಗತವಾಗಿ ನೋಡಿದರೆ ಈ ವಲಯದಲ್ಲಿ ಪ್ರತಿಯೊಬ್ಬನ ಸರಾಸರಿ ವಾರ್ಷಿಕ ಆದಾಯವು ವರ್ಷಕ್ಕೆ ೧೧ ರೂಪಾಯಿ—ಅಖಿಲ ಭಾರತದ ಸರಾಸರಿ ೧೦೪ ರೂಪಾಯಿ. ರಾಜ್ಯಗಳಿಗನುಸಾರವಾಗಿ ಈ ಪ್ರಮಾಣ ಮದ್ರಾಸಿನಲ್ಲಿ ೮೭, ಮೈಸೂರಿನಲ್ಲಿ ೯೨, ತಿರು-ಕೊಚ್ಚಿಯಲ್ಲಿ ೧೧೩ ಮತ್ತು ಕೊಡಗಿನಲ್ಲಿ ೧೫೭ ರೂಪಾಯಿ ಆಗಿರುತ್ತದೆ ವೆಚ್ಚದ ಪ್ರಮಾಣ ವರ್ಷಕ್ಕೆ ಸರಾಸರಿ ೧೫ ರೂಪಾಯಿ. ಇದನ್ನು ಮದ್ರಾಸಿನಲ್ಲಿ ೯೦, ಮೈಸೂರಿನಲ್ಲಿ ೧೦೦, ತಿರು-ಕೊಚ್ಚಿಯಲ್ಲಿ ೧೧೩ ಮತ್ತು ಕೊಡಗಿನಲ್ಲಿ ೧೪೨ ಎಂದು ವಿವರಿಸಬಹುದು.

ಸಾಲ ಪೀಡಿತ ಕುಟುಂಬ

ಇಡೀ ದೇಶದಲ್ಲಿ ಕೃಷಿಕಾರ್ಮಿಕರಿಗೆ ಅನ್ವಯಿಸಿ, ಋಣ ಬಾಧಿತವಾದ ಕುಟುಂಬಗಳ ಪ್ರಮಾಣ ೪೫% ಆಗಿದ್ದರೆ, ದಕ್ಷಿಣ ಭಾರತದಲ್ಲಿ ೫೭% ಕುಟುಂಬಗಳು ಋಣಬಾಧಿತವಾಗಿವೆ ಎಂದು ಪರಿಶೀಲನೆ ತಿಳಿಸುತ್ತದೆ. ಸಾಲದ ಅಖಿಲಭಾರತ ಸರಾಸರಿಯು ಪ್ರತಿ ಕುಟುಂಬಕ್ಕೆ ೧೧೫ ರೂಪಾಯಿಗಳಾಗಿದ್ದರೆ, ಈ ವಲಯದಲ್ಲಿ ೧೨೨ ರೂಪಾಯಿಗಳಷ್ಟಿರುತ್ತದೆ. ಋಣ ಬಾಧಿತ ಕುಟುಂಬಗಳ ವಿವರ ಹೀಗಿದೆ— ಕೊಡಗಿನಲ್ಲಿ ಸಾಲದ ಪ್ರಮಾಣ ೧೦೦ ರೂಪಾಯಿ, ಸಾಲಪೀಡಿತ ಕುಟುಂಬಗಳ ಪ್ರಮಾಣ ೮೨%; ಮೈಸೂರಿನಲ್ಲಿ ಸಾಲ ೩೫೫ ರೂಪಾಯಿ, ಕುಟುಂಬಗಳ ಪ್ರಮಾಣ ೩೭೧%; ತಿರು-ಕೊಚ್ಚಿಯಲ್ಲಿ ಸಾಲ ೫೯ ರೂಪಾಯಿ, ಕುಟುಂಬಗಳ ಪ್ರಮಾಣ ೫೮%; ಮತ್ತು ಮದ್ರಾಸಿನಲ್ಲಿ ಸಾಲ ೮೪ ರೂಪಾಯಿ; ಕುಟುಂಬಗಳ ಪ್ರಮಾಣ ೪೮%. ಸಾಲವನ್ನು ನಿತ್ಯ ಬಳಕೆಯವಸ್ತುಗಳನ್ನು ಕೊಂಡುಕೊಳ್ಳುವುದಕ್ಕಾಗಿಯೇ ಹೆಚ್ಚಾಗಿ ಮಾಡಲಾಗುತ್ತದೆ. ಸಾಲ ಕೊಡುವವರಲ್ಲಿ ಕೃಷಿ ಕಾರ್ಮಿಕರ ಸ್ನೇಹಿತರು, ಸಂಬಂಧಿಕರು, ಮಾಲಿಕರು, ಪರಿಚಯದ ಅಂಗಡಿಯವರೆ ಪ್ರಮುಖರಾಗಿದ್ದಾರೆ— ಹಣ ಸಾಲಕೊಡುವುದನ್ನೇ ಉದ್ಯಮವಾಗಿರುವವರನ್ನು ಕೃಷಿಕಾರ್ಮಿಕರು ಹೆಚ್ಚಾಗಿ ಆಶ್ರಯಿಸುವುದಿಲ್ಲ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S. 404/1955.

ವಾದಿ. ಉಪ್ಪುಂದ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಭಂಡಾರ.

ಪ್ರತಿವಾದಿರು. ಪಟೇಲ್ ಸಂಕ್ಕ ಭಟ್ಟ ಕೂಡಾ 4ನೇ ಪ್ರತಿವಾದಿ. ಸತ್ಯನಾರಾಯಣ ಭಟ್ಟ ವೇಂಕಟ್ರಮಣ ಭಟ್ಟ ಮಗ. ಕುಂದಾಪುರ ತಾಲ್ಲೂ ಉಪ್ಪುಂದ ಗ್ರಾಮದಲ್ಲಿರುವವ.

ಸದ್ರಿ 4ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ ವಾದಿ ಭಂಡಾರಕ್ಕೆ ನೀವು ಕೂಡಾ ಪ್ರತಿವಾದಿರಿಂದ ವಿಕೃತಿ ಸಂಗ್ರಹದಲಗ್ನಾತುಜಯ ಸಂ|ರವೆವರೆಗೆ ಬರತಕ್ಕ ಗೇಣಿ ಬಾಕಿವ, ಬಡ್ಡಿ ರೂಪ್ಯಾ 1140—2—2ಕ್ಕೆ ವಾದಿಯು ಮಾಡಿದ ಮೇಲಿನ ದಾವೆಯು ತಾರೀಕು 13-10-1955ಕ್ಕೆ ತನ್ನಾಗೆ ಇಟ್ಟಿರುತ್ತದೆ. ಅ ಕುರಿತು ನಿಮ್ಮವೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಹಗಲು ಘಂಟೆ 11ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜವಾಬೀರುಮಾಡಿಕೊಳ್ಳತಕ್ಕದ್ದು.- ಇಲ್ಲದಿದ್ದಲ್ಲಿ ನಿಮ್ಮನ್ನು ಯೆಕ್ಸಪಾರ್ಟ ಮಾಡಲಾದೀತೆಂತ ಈ ಮೂಲಕ ತಿಳಿಸಿರುತ್ತಾರೆ.

(By order of the court)

Y. Tejappa Shetty.

Advocate for Plaintiff.

Coondapoor 27—9—55

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 502/42 S. E. P. 213/55

ಅರ್ಜಿದಾರ.— ರಂಗರ ಸೆಟ್ಟಿ

ಎದ್ರಿರು.— ಕೊಲ್ಲು ಸೆಟ್ಟಿ ಕೂಡಾ

7ನೇ ಎದ್ರಿ. ತಿಮ್ಮಪ್ಪ ಸೆಟ್ಟಿ. ವರದೇಶ್ವರಿ ಸೆಟ್ಟಿ ಮಗ. ಕುಂದಾಪುರ ತಾಲ್ಲೂ ಬಿದೂರು ಕನ್ಯಾದಿಗ್ರಾಮ.

11ನೇ ಎದ್ರಿ. ಚೆನ್ನಯ್ಯ ಸೆಟ್ಟಿ. ಅತ್ರಾಡಿ ಪುಟ್ಟಯ್ಯ ಹೆಗ್ಗೇರ ಅಳಿಯ. ಕುಂದಾಪುರ ತಾಲ್ಲೂ ಪಂಚೆ ಗ್ರಾಮದ ಅತ್ರಾಡಿಯಲ್ಲಿರುವವ—

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ- ಮೇಲಿನ ಡಿಕ್ರಿ ಪಕ್ಕ ತನಗೆ ಟ್ರಾನ್ಸ್ಫರ್ ಆದ್ದನ್ನು ಸಂಜಾಯ್ಸಮಾಡಿಕೊಳ್ಳುವ ಬಗ್ಗೆ ಮತ್ತು ಪ್ರತಿವಾದಿಗಳು ಸ್ವಿರಾಸ್ತಿ ಯೇಲಂ ಬಗ್ಗೆ ವಾದಿಯು ಮೇಲಿನ ಅಮಲ್ಜಾರಿಯನ್ನು ವಾಕಲುಮಾಡಿರುತ್ತಾನೆ. ಆದುದರಿಂದ ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಣೆಯಿದ್ದರೆ ತಾ. 10—10—1955ನೇ ದಿನ ಬೆಳಿಗ್ಗೆ 11ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಬೀರುಮಾಡಿಕೊಳ್ಳತಕ್ಕದ್ದು. ಇಲ್ಲದಾದಲ್ಲಿ ನಿಮ್ಮನ್ನು ಯೆಕ್ಸಪಾರ್ಟ ಮಾಡಲಾದೀತೆಂತ ತಿಳಿಸಿರುತ್ತದೆ.

(By order of the court)

Y. Tejappa Shetty

Advocate for Plaintiff.

Coondapoor 27—9—55.

ಉದ್ಯಮಗಳಲ್ಲಿ ರಾಷ್ಟ್ರ ಸ್ವಾಮ್ಯ

ಸಮರ್ಥ ಆಡಳಿತದ ಅಭಾವ

ಶ್ರೀ ಜೆ ಆರ್ ಡಿ ತಾತಾ

ಭಾರತವಲ್ಲಿ ಔದ್ಯಮಿಕ ಕ್ಷೇತ್ರದ ಅಭಿವೃದ್ಧಿಗೆ ಹೆಣಗಿದ ಸಾಹಸಿ, ನಾಗರಿಕ ವಿಮಾನ ಸಾರಿಗೆಯಲ್ಲಿ ಸುರಿತ ಧೀರ ಹಾಗೂ ಮಹಾದಾನಿ ಎಂದು ಹೆಸರಾಂತ ಶ್ರೀ ತಾತಾರನ್ನು ರಾಷ್ಟ್ರಾಧ್ಯಕ್ಷರು "ಪದ್ಮ ವಿಭೂಷಣ" ಪ್ರಶಸ್ತಿಯನ್ನಿತ್ತು ಗೌರವಿಸಿದ್ದಾರೆ. ದೇಶವನ್ನು ಮುಂದುವರಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸುವುದಕ್ಕೆ ಪ್ರಯತ್ನಿಸುತ್ತಿರುವ ಕೆಲವೇ ಪ್ರಮುಖರಲ್ಲಿ ಒಬ್ಬನೆನಿಸಿದ ಈ ಸುಹೃದಭಾವನ ಕರ್ತೃತ್ವ ಲಕ್ಷ್ಮಿ ಅವಾರನಾಗಿದೆ

ಡಾ ಡಿ. ಕೆ. ಕರ್ವೆ



ಸಾಮಾಜಿಕ ಕ್ಷೇತ್ರದಲ್ಲಿ ಅಮೃತಮಯ ಸೇವೆಯನ್ನು ಸಲ್ಲಿಸುತ್ತಾ ತಮ್ಮ ವ್ರತಸಿದ್ಧ ಸರಿಸಿ ಜೀವನದಿಂದ ಉಳಿದವರ ಮುಂದೊಂದು ಆದರ್ಶವನ್ನು ಮುಂದಿಸುತ್ತಾ ಶುಶ್ರೂಷೆಯಲ್ಲಿ ಮಹಿಳೆಯರಿಗಾಗಿ ಶ್ರೀಮತಿ ವಿದ್ಯಾಪೀಠವನ್ನು ಸ್ಥಾಪಿಸಿ ಸ್ತ್ರೀ ಶಿಕ್ಷಣಕ್ಕೂ ಸಾರ್ಥಕ ಪತಿಯರ ಉದ್ಧಾರಕ್ಕೂ ಸ್ಫೂರ್ತಿ ದುಡಿಯುತ್ತಾ ಬಂದಿರುವ ಡಾ" ಕರ್ವೆಯವರಿಗೆ ರಾಷ್ಟ್ರಾಧ್ಯಕ್ಷರಿಂದ "ಪದ್ಮ ವಿಭೂಷಣ" ಪ್ರಶಸ್ತಿ ದೊರಕಿರುತ್ತದೆ. ಸಮಾಜಸೇವೆಯ ಸೇವೆಗೆ ಇದು ಯೋಗ್ಯ ಮನ್ನಣೆಯಾಗಿದೆ, ಎಲ್ಲರ ಪಾಲಿನ ಸಂತೋಷವಾಗಿದೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ ಸಂ ನ)

ಅಕ್ಕ ಮಹಾದೇವಿಯವರ ವಚನಗಳು—

ಸಂಕಲಿಸಿದವರು ಕೆ ಎಸ್ ಹೆಬಸೂರ, ಬಿ ಎಸ್‌ಸಿ ಪ್ರಕಾಶಕರು ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ ಬೆಲೆ ರೂ ೦—೪—೦

ಶಿವರಹಸ್ಯ ರಲ್ಲಿ ಬ್ರಹ್ಮರಂಧ್ರ ಅಕ್ಕ ಮಹಾದೇವಿಯವರ ವಚನಗಳು ಕನ್ನಡದ ವಚನ ಸಾಹಿತ್ಯದಲ್ಲಿ, ಆಧ್ಯಾತ್ಮಿಕ ಸಾಹಿತ್ಯದಲ್ಲಿ, ವಿಶಿಷ್ಟವಾದ ಉನ್ನತ ಸ್ಥಾನವನ್ನು ಹೊಂದಿವೆ. ಶ್ರೀ ಚನ್ನಮಲ್ಲಿಕಾರ್ಜುನನನ್ನು ತ್ರಿಕರಣ ಶುದ್ಧಿಯಿಂದ ಆರಾಧಿಸಿ, ಅವನನ್ನೆ ಪತಿಭಾವದಿಂದ ಕಂಡು ಭವ ಬಂಧನದಿಂದ ಬಿಡುಗಡೆ ಹೊಂದಲು ಶಕ್ತರಾದ ಅಕ್ಕನವರ ವಚನಗಳು ವಿಶೇಷ ಅಕರ್ಷಣೆಯಿಂದ ಕೂಡಿವೆ. ಭಗವಂತನನ್ನು ಪತಿಭಾವದಿಂದ ಪೂಜಿಸಿ ಒಲಿಸುವ ಸಡಗರದಲ್ಲಿ ಅಕ್ಕನವರಿಂದ ಹೊರಬಿದ್ದ ವಚನ ಸುಧೆಯು ಶೃಂಗಾರ ಸಾಹಿತ್ಯದ ನೆನಪನ್ನು ಮರುಕೊಡುವಂತಿದ್ದರೂ ಅಲಿಯ ಭಾವ ಶುದ್ಧಿಯು ಶ್ರೀಮಲ್ಲಿಕಾರ್ಜುನ ಲಕ್ಷಣಕ್ಕೆ ಒಪ್ಪುವ ಮಾನಸಿಕ ಸ್ಥಿತಿಯನ್ನಿದು ಬೆನ್ನಾಗಿ ವ್ಯಕ್ತಪಡಿಸುತ್ತದೆ ಅಕ್ಕನವರಿಗೆ ಬಸವಣ್ಣ, ಪ್ರಭುದೇವ, ಸಿದ್ಧರಾಮಯ್ಯ ಮುಂತಾದ ಸಮಕಾಲೀನ ವಿವರಣರ ಸಹವಾಸ ಲಾಭ ದೊರಕಿರುವುದರಿಂದ ತುಂಬ ಸಂತೋಷವಾಗಿರುವುದು ವಚನಗಳಿಂದಸ್ಪಷ್ಟಪಡುತ್ತದೆ— ಇದಕ್ಕಾಗಿ ಅಕ್ಕನವರು ತಮ್ಮ ಕೃತಜ್ಞತೆಯನ್ನು ವಿನಯದಿಂದ ಸೂಚಿಸಿದ್ದಾರೆ ಅವರ ವಚನಗಳಲ್ಲಿ ಹೆಚ್ಚಿನವು ಸಮಕಾಲ ನಾಲಿಗೆಯ ಮೇಲೆ ಕುಣಿದಾಡುತ್ತಿರಬಹುದಾದ ನಾನ್ನುಡಿಗಳ ರೂಪಗಳನ್ನೆ ಕೂಡಿವೆ, ಲೋಕ ವ್ಯವಹಾರಕ್ಕೆ ತನ್ನದಿ ಹಿರಿದು, ಹೊರಲಾರ್ಥಕ ಸುಖ ಸಾಧನೆಯೇ ಜೀವನದ ಉದ್ದೇಶವೆಂದು ತೋರಿಸಿ ಕೊಡುವಂತಿವೆ ಸಂಗ್ರಾಹಕರು ವಚನಗಳ ಅರ್ಥವನ್ನು ಚುಟುಕಿನಲ್ಲಿ ಹೊಸಗನ್ನಡ ಗದ್ಯ ಶೈಲಿಯಲ್ಲಿ ವಿವರಿಸಿರುವುದರಿಂದ ಓದುಗರ ಕೊನೆಯಲ್ಲಿ ಕರಿಣ ಶಬ್ದಗಳ ಅರ್ಥವನ್ನು ಹೇಳುವ ಸೂಚಿಯನ್ನು ಒದಗಿಸಿರುವುದರಿಂದಲೂ ಪುಸ್ತಕವು ಮನನ-ಅಧ್ಯಯನಗಳಿಗೆ ತುಂಬ ಉಪಯುಕ್ತವಾಗಿದೆ ಮೊದಲ ಮಾತಿನ ಮೂಲಕ ಅಕ್ಕನವರ ಜೀವನ ವೃತ್ತಾಂತವನ್ನು ಅರು ಪುಟಗಳಲ್ಲಿ ಚೆನ್ನಾಗಿ ಕೊಡಲಾಗಿರುವುದು ಇನ್ನೊಂದು ವೈಶಿಷ್ಟ್ಯ ಅಲ ವಚನಗಳಿಂದ ಕೂಡಿದ ಈ ಪುಸ್ತಕ ಮನುಷ್ಯನ ಅಜ್ಞಾನವನ್ನು ಪರಿಹರಿಸಿ, ಶ್ರೇಷ್ಠ ಜ್ಞಾನವನ್ನೊದಗಿಸಿ ಕೊಟ್ಟು, ನೀತಿವಂತನಾಗಿ ಅವನನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲುದು

ಲಘು ಪರಿಚಯ

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನ "ಮಿತ್ರ ಮಂಡಳ ಪ್ರಕಾಶನ"ದವರು ಶ್ರೀ ವೈ ಮಹಾಲಿಂಗ ಭಟ್ಟರಿಂದ ಬರೆಯಲಾದ "ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ಕರ್ನಾಟಕದ್ದು" ಎಂಬ ಚಿಕ್ಕ ಪುಸ್ತಕವನ್ನು ಒಂದಾಣೆ ಬೆಲೆಗೆ ಪ್ರಕಟಿಸಿದ್ದಾರೆ "ಪಣಿಕ್ಕರ ರೆಂಥ ಒಬ್ಬ ಮಲೆಯಾಳಿ ವ್ಯಕ್ತಿಯನ್ನು (ಪ್ರಾಂತ ಪುನರ್ನಿರ್ಮಾಣ ಆಯೋಗದಲ್ಲಿ) ಸೇರಿಸುವಾಗ-ಒಬ್ಬ ಕನ್ನಡಿಗನೂ ಈ ಸಮಿತಿಯಲ್ಲಿ ಪ್ರಯೇರ ಕೊಡಬೇಕಾಗಿತ್ತು— ಅದರೆ ಕೊಡಲಿಲ್ಲ ಪರಿಣಾಮ ನಮಗೆ ಹೇಗೆ ಅನ್ಯಾಯಕಾರಿಯಾಯಿತೆಂಬುದನ್ನು ಇದೀಗ ಕೇಳುತ್ತಿದ್ದೇವೆ' (ಪುಟ ೩) ಎಂಬ ಪೀಠಿಕೆ ಪುರಿತ ಬಾವನೆಯ ತಳಪದಿಯ, ಮೇಲೆ ಇಲ್ಲಿನ ವಿವೇಚನೆ ನಿಂತಿದೆ "ಆಯೋಗದವರು ಹೇಳಿದರೆ ಕೇಳುವುದಂತಿರಲಿ—ಸಾಕ್ಷಾತ್ ಸೃಷ್ಟಿಕರ್ತನೇ ಬಂದು ಸಿದೇದಿಸಿಕೊಂಡರೂ ಪ್ರತಿಭಟಿಸಿಯೇ ತೀರುವೆವ' (ಕೊನೆಯ ಪುಟ-೧೧)—ಎಂಬ ಬಯಲಾಟದ ಆಟೋಪದ ಮಾತುಗಳಿಂದ ಪುಸ್ತಕ ಲೊನಿಗೊಳ್ಳುತ್ತದೆ ಕಳೆದ ಬಾನೇಸುವಾರಿಯಲ್ಲಿ ನುಳಿಯಾಳಿ ಅಧಿಕಾರಿಗಳೂ ಜನತೆಯೂ ಕಾಸರಗೋಡಿನ ಕನ್ನಡಿಗರಿಗೆ ದ್ರೋಹ ಬಗೆದಿದ್ದರೆಂದು ಈಗ-ನಾಲ್ಕು ವರ್ಷಗಳ ಬಳಿಕ- ಈ ಪುಸ್ತಕದಲ್ಲಿ ದೂರಲಾಗುತ್ತದೆ ಪುಸ್ತಕ ಬರೆದ ಉದ್ದೇಶ ಎಷ್ಟೇ ಸಸನವಾಗಿರಲಿ— ಪ್ರತಿಪಾದನೆಯಲ್ಲಿ ತಿರುಳಿಗಿಂತ ಟೊಳ್ಳು ಹೆಚ್ಚಾಗಿದೆ ಎನ್ನಲು ವಿಷಾದಿಸುತ್ತೇವೆ.

—ಕು

ರಾಷ್ಟ್ರದ ಪ್ರಗತಿಗೆ ಅವಶ್ಯಕನಾದ ಉದ್ಯಮಗಳನ್ನು ಸರಕಾರದ ವಶದಲ್ಲಿ ಇಟ್ಟುಕೊಂಡರೆ ಸಮಾಜದ ಹಿತ ಸಾಧಿಸಲ್ಪಡಬಹುದು, ವ್ಯಕ್ತಿಗಳ ಕೈಗೆ ಇವನ್ನು ಒಪ್ಪಿಸಿದರೆ ಅವರು ಸ್ವಾರ್ಥಸಾಧಿಸುವರೇ ಹೊರತು ಸಮಷ್ಟಿಯ ಕಲ್ಯಾಣಕ್ಕೆ ಮನಸ್ಸು ಮಾಡುವುದಿಲ್ಲ— ಎಂಬುದೇ ರಾಷ್ಟ್ರ ಸ್ವಾಮ್ಯತತ್ವದ ತಿರುಳು ಆದರೆ, ಬಾರತದ ಸರಕಾರಕ್ಕೆ ಒತ್ತಡನವನ್ನು ಸಮರ್ಥ ರೀತಿಯಲ್ಲಿ ನಡೆಸಬಲ್ಲಷ್ಟು ಯೋಗ್ಯತೆ ಪ್ರಾಪ್ತವಾಗಿದೆಯೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ ಈ ವಿಷಯದಲ್ಲಿ ಇಷ್ಟರ ವರೆಗಿನ ಅನುಭವ ಅಷ್ಟು ಆರಾಧಾಯಕವಾಗಿಲ್ಲವೆಂಬುದು ಶೋಚನೀಯ. ಉದಾಹರಣೆಗಾಗಿ ವಿಶಾಖಪಟ್ಟಣದ ಹಡಗು ಕಟ್ಟುವ ಕಾರ್ಖಾನೆ ಜಾಲ ಹಳ್ಳಿಯ ಯಂತ್ರೋಪಕರಣ ನಿರ್ಮಿತಿಯ ಕಾರ್ಖಾನೆಗಳ ಪ್ರಗತಿ ನಿರೀಕ್ಷಣೆ ಸಾಧಿಸಲ್ಪಟ್ಟಿಲ್ಲ ಸಾತ್ರನಲ್ಲಿ, ಕೃಷ್ಣಪಟ್ಟಿ ನದಿಯಲ್ಲಿಯೂ ಅಲ್ಲಿ ಕಾಣಿಸುತ್ತಿಲ್ಲ ಎಂದು ಸರಕಾರದ ಗಮನಕ್ಕೆ ಈಗ ತಂದು ಕೊಡಲಾಗಿದೆ. ಇಂಥಹೇರಿ ಉದಾಹರಣೆಗಳು ಹೇರಳವಾಗಿ ದೊರಕುತ್ತವೆ

ದಕ್ಷ ಸಿಬ್ಬಂದಿ

ಈಗಿನ ಬಾಸಗಿ ಉದ್ಯಮಗಳಲ್ಲೇ ಚೆನ್ನಾಗಿ ಸರಕಾರದ ಅಧೀನವಿರುವ ಕೈಗಾರಿಕೆಗಳೂ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಅನೇಕ ಸಲಹೆಗಳಿಂದ ಕೂಡಿದ ಅಂದಾಜು ಸಮಿತಿಯ ವರದಿ ಸೊನ್ನೆ ಲೋಕ ಸಭೆಯ ಮುಂದೆ ಮುಂದಿಸಲ್ಪಟ್ಟಿತು "ಬಾರತೀಯ ಔದ್ಯಮಿಕ ಹಾಗೂ ವಾಣಿಜ್ಯ ಸೇವಾ ಮಂದಳ' ಎಂಬುವನ್ನು ಸ್ಥಾಪಿಸಿ ಸಮರ್ಥ ಆಡಳಿತಗಾರರನ್ನು ರಾಷ್ಟ್ರೀಕೃತ ಕೈಗಾರಿಕೆಗಳಿಗೆ ಒದಗಿಸಿಕೊಡಬೇಕು ಎನ್ನುವ ಸಿಫಾರಸು ಉಲ್ಲೇಖನೀಯವಾಗಿದೆ ವ್ಯಾಪಾರ ವ್ಯವಹಾರದಲ್ಲಿಯಷ್ಟು ಔದ್ಯಮಿಕ ಕ್ಷೇತ್ರದಲ್ಲಿ ನುರಿತವರನ್ನು ಆಯ್ದು ಪೆಟ್ಟು ಪ್ರಮಾಣದಲ್ಲಿ ಸರಕಾರವನ್ನ ಸಿಬಂಧಿಯಲ್ಲಿ ಸೇರಿಸಿಕೊಳ್ಳಬೇಕೆಂದು ಇದರ ಉದ್ದೇಶ. ವಿಶೇಷ ರೀತಿಯ ತರಬೇತಿಯನ್ನು ಪಡೆದ ತರುಣರನ್ನು ಸಹ ರಾಷ್ಟ್ರೀಕೃತ ಉದ್ಯಮಗಳ ಸಿಬಂಧಿಯಲ್ಲಿ ಸೇರಿಸಬೇಕೆಂದು ಸಮಿತಿಯ ಅಭಿಪ್ರಾಯ. ಬಾಸಗಿ ಸಂಸ್ಥೆಗಳ ಅಧಿಕಾರಿಗಳ ವೇತನದ ಪರಮಮಿತಿಯನ್ನು ಶಾಸನದ ಮೂಲಕ ನಿರ್ಧರಿಸಿ, ಅದೇ ಮಟ್ಟಕ್ಕೆ ರಾಷ್ಟ್ರೀಕೃತ ಉದ್ಯಮಗಳ ವೃತ್ತಿಪರ ನೋಡಿಕೊಳ್ಳುವ ಸರಕಾರದ ಅಧಿಕಾರಿಗಳ ಸಂಬಳವನ್ನು ತಂದರೆ, ಉತ್ತಮ ಯೋಗ್ಯತೆಯ ಜನರನ್ನು ಆಕರ್ಷಿಸುವುದು ಕಷ್ಟವಲ್ಲ ಎಂದು ಸಮಿತಿ ಸೂಚಿಸಿರುತ್ತದೆ.

ಇತರ ಸಿಫಾರಸು

ವಿದೇಶಗಳ ನೆರವನ್ನು ಪಡೆಯುವ ಸಂದರ್ಭಗಳಲ್ಲೆಲ್ಲ ಆದಷ್ಟು ಹೆಚ್ಚು ಮಾಹಿತಿಯನ್ನು ಸಂಪಾದಿಸಬೇಕೆಂದೂ ಸ್ವಯಾರದಲ್ಲಿ ಪ್ರಮಾಣಕತೆ ಇರುವಂತೆ ಗಮನಕೊಡಬೇಕೆಂದೂ ಸಮಿತಿ ಹೇಳಿದೆ ಉದ್ಯಮವು ಧೃವವಾದ ತಳಪದಿಯಲ್ಲಿ ನೆಲೆಸಿರುವಂತೆ ವ್ಯಾಪಾರಿಗಳು, ಕಾರ್ಮಿಕರು, ಗ್ರಾಹಕರುಮತ್ತು ಶಾಸನಾಂಗದ ಪ್ರತಿನಿಧಿಗಳಿಂದ ಕೂಡಿದ ಸಲಹಾ ಮಂಡಳಿಯನ್ನು ಸ್ಥಾಪಿಸಬೇಕಾದರೂ ಸಮಿತಿಯಿದೆ ಬೈರೆಕ್ಟರರ ಮಂಡಳವನ್ನು ನೇಮಿಸುವ ಬದಲು ಆಯಾ ಉದ್ಯಮದ ಗಾತ್ರವನ್ನು ಆಗುಮಾಡಿಸಿ, ಒಬ್ಬನಿಂದ ನಾಲ್ವರು ಮಂದಿಯ ವರೆಗೆ ಮ್ಯಾನೇಜಿಂಗ್ ಡೈರೆಕ್ಟರರನ್ನು ನೇಮಿಸಬೇಕು—ಅಗ ಕಾರ್ಯಕ್ಷಮತೆ ಹೆಚ್ಚು ಬಲ್ಲುದು ಎಂದು ಸಮಿತಿ ಸೂಚಿಸಿದೆ ಸಾರ್ವಜನಿಕರಿಗೆ ಭಂದವಾಳದ ಕಾಲಂಶವನ್ನಾದರೂ ಒದಗಿಸಲು ಅವಕಾಶ ನೀಡಬೇಕೆಂದೂ ಆದರೆ ಯಾವುದೇ ವ್ಯಕ್ತಿ ಅಥವಾ ವಿಶಿಷ್ಟ ಗುಂಪಿಗೆ ಉದ್ಯಮದಲ್ಲಿ ಪ್ರಾಬಲ್ಯ ಸಿಗದಂತೆ ಕಾಲು ಭಂಡವಾಳದ ಪರಮಮಿತಿಯೊಂದನ್ನು ನಿರ್ಧರಿಸಬೇಕೆಂದು ಸಮಿತಿಸಲಹೆ ಮಾಡಿದೆ ಸಮರ್ಥ ಆಡಳಿತದ ಅಭಾವವನ್ನು ದೂರೀಕರಿಸುವುದೇ ರಾಷ್ಟ್ರೀಕೃತ ಉದ್ಯಮಗಳ ಭವಿಷ್ಯತ್ತನ್ನು ಉಜ್ವಲಗೊಳಿಸುವ ಕ್ರಮವೆಂದು ಸಾಮಾನ್ಯವಾಗಿ ಇದರಿಂದ ವ್ಯಕ್ತಪಡುತ್ತದೆ

[೧ನೇ ಪುಟದಿಂದ]

ಜಿಗೆ ತೃಪ್ತಿ ನೀಡಬಹುದಾಗಿದ್ದ ಕೆಲಸ ನನ್ನದಾಗಿದೆ ಎನ್ನಬಹುದು. ಮುಖ್ಯವಾಗಿ ಗ್ರಾಮ ಜೀವನದಲ್ಲಿ ಸುಖಾವಹವಾದ ಬದಲಾವಣೆಯನ್ನು ತರಲು ನಾವು ಪ್ರಯತ್ನಿಸತ್ತಿರುವುದನ್ನು ಉಲ್ಲೇಖಿಸ ಬಹುದು. ಆದರೆ ಇನ್ನೂ ಎಷ್ಟೋ ವಿಷಯಗಳಲ್ಲಿ ನಾವು ವ್ಯಕ್ತಿಗತವಾಗಿ ಬೋಧನೆಗಳನ್ನು ರೂಢಿಸಿಕೊಳ್ಳಬೇಕಾಗಿದೆ ಅವುಗಳ ಕುರಿತು ಭಾರತೀಯರು ಹೆಚ್ಚು ಆಸಕ್ತಿಯನ್ನು ವಹಿಸಲಿ ಎಂದು ವಿನಂತಿಸುತ್ತೇವೆ ಆದರ್ಶ ಮಾರ್ಗದರ್ಶಕರಾದ ಮಹಾತ್ಮಾಜೀಯನ್ನು ನಾವು ಎಷ್ಟು ಹೆಚ್ಚು ಅನುಸರಿಸಿದವೋ ಅಷ್ಟು ಮಟ್ಟಿಗೆ ಕಲ್ಯಾಣವಾಗುತ್ತದೆ

ತಾಂತ್ರಿಕ ತರಬೇತಿ ಕೇಂದ್ರ



ಮೊನ್ನೆ ಪೆರಂಬೂರಿನಲ್ಲಿ ಪ್ರಧಾನಿಗಳು ಉದ್ಘಾಟಿಸಿದ ಅಮಂದ ರೈಲು ಗಾಡಿ ತಯಾರಿಸುವ ಕಾರ್ಖಾನೆಯಲ್ಲಿ ತಾಂತ್ರಿಕ ತರಬೇತಿಯನ್ನು ಕೊಡಲೆಂದು ಕಟ್ಟಿಸಿರುವ ಶಿಕ್ಷಣ ಗೃಹದ ಹೊರ ನೋಟ ನಮಗಿಂದು ಬೇಕಾಗಿರುವುದು ಇಂಥ ಶಿಕ್ಷಣಾಲಯಗಳೇ ಹೊರತು ಪುಸ್ತಕ ವಿದ್ಯೆಗಷ್ಟೇ ಪ್ರಾಮುಖ್ಯತೆ ಕೊಡುವ ಕೇಂದ್ರಗಳಲ್ಲ

Edited, Printed & Published By K. H. Shetty, at the Navayuga Press, Udipi, S. India

Licensed to Post without Prepayment

ನವಯುಗ

ಸಪ್ತಂಟಿ ೩೫ | ಉಡುಪಿ, 13—10—1955 | ಸಂಚಿಕೆ ೭

VOL. 35 | NO. 7

ಓದುವ ಅಭಿರುಚಿ

ಗ್ರಂಥಾಲಯಗಳ ಅಭಿವೃದ್ಧಿಯ ಕುರಿತು ವಿಚಾರ ವಿನಿಮಯ ನಡೆಸಲು ಹೊಸ ದೆಹಲಿಯಲ್ಲಿ ಯುನೆಸ್ಕೊ ಸಮ್ಮೇಳನವೊಂದು ಇದೇ ೬ನೇ ದಿನಾಂಕ ಭಾರತ ಸರಕಾರದ ಶಿಕ್ಷಣ ಮಂತ್ರಿ ಮೌಲಾನಾ ಅಜಾದರಿಂದ ಉದ್ಘಾಟಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಪ್ರಾಚೀನ ಹಾಗು ಆಧುನಿಕ ಜ್ಞಾನದ ಬೀಜ ಸಂಗ್ರಹವೇ ಗ್ರಂಥಾಲಯವೆಂದೂ ಆದುದರಿಂದ ರಾಷ್ಟ್ರೀಯ ಶಿಕ್ಷಣಾಭಿವೃದ್ಧಿಯ ಕಾರ್ಯಕ್ರಮದಲ್ಲಿ ಪುಸ್ತಕ ಭಂಡಾರಗಳ ವಿಸ್ತರಣೆಗೆ ಹೆಚ್ಚು ಮಹತ್ವಕೊಡಬೇಕೆಂದೂ ಹೇಳಿದರು.

ಇದು ಎಲ್ಲರೂ ಒಪ್ಪತಕ್ಕ ಮಾತಾಗಿದೆ. ನಮ್ಮ ದೇಶದಲ್ಲಿ ಪುಸ್ತಕಾಲಯಗಳು ಬಹಳ ಕಡಿಮೆಪ್ರಮಾಣದಲ್ಲಿವೆ. ೩೬ ಕೋಟಿಯಷ್ಟಿರುವಜನಸಂಖ್ಯೆಯ ಮಾನದಿಂದ ನೋಡಿದರೆ ಈಗಿರುವ ೩೦೦೦ ಗ್ರಂಥಾಲಯಗಳು ಎಷ್ಟಕ್ಕೂ ಸಾಲವು ಈ ಗ್ರಂಥಾಲಯಗಳಾದರೂ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳುವಂತಿಲ್ಲ ಏಕೆಂದರೆ ಹೆಚ್ಚಿನವು ಹೆಸರಿಗಷ್ಟೇಗ್ರಂಥಾಲಯಗಳಾಗಿವೆ—ಹೊರತು ಜ್ಞಾನ ವಿಕಸನದ ಕಾರ್ಯದಲ್ಲಿ ಪ್ರಭಾವ ಬೀರುವಷ್ಟು ಚೈತನ್ಯವಿರುವವುಗಳು ವಿರಳ.

ಪರಿಣಾಮವಾಗಿ, ಓದುವ ಅಭಿರುಚಿಯು ಭಾರತದಲ್ಲಿ ಶೋಚನೀಯವೆನಿಸುವಷ್ಟು ಕೆಳಮಟ್ಟದಲ್ಲಿದೆ. ಏನಿತ್ತು ಮಂದಿಗೆ ಒಂದರಂತೆಯೂ ನಮ್ಮ ದೇಶದ ಗ್ರಂಥಾಲಯಗಳಲ್ಲಿ ಪುಸ್ತಕಗಳು ಲಭ್ಯವಿಲ್ಲ. ಶೇಕಡಾ ಹತ್ತಕ್ಕಿಂತ ಹೆಚ್ಚು ಜನರು ವರ್ಷಕ್ಕೆ ಒಂದು ಪುಸ್ತಕವನ್ನಷ್ಟೆ ಓದುವುದರಿಂದ ತೃಪ್ತರಾಗಬೇಕಾದ ಪರಿಸ್ಥಿತಿ ಇಲ್ಲಿದೆ ಸಾಮಾನ್ಯ ಸುಶಿಕ್ಷಿತ ಭಾರತೀಯನು ಓದುವ ಪುಸ್ತಕಗಳ ಏಳು ಪಾಲಿನಷ್ಟನ್ನು ಬ್ರಿಟನಿನ ನಾಗರಿಕನು ಓದುತ್ತಾನೆ ಎಂದು ತಿಳಿದು ಬರುತ್ತದೆ.

ವಾತಾವರಣವನ್ನು ಸುಧಾರಿಸಲು ನಾವೇನಾದರೂ ಪ್ರಯತ್ನ ಮಾಡಬೇಡವೆ. ಪ್ರಧಾನಿ ನೆಹರುಗಳು ಈ ಆವಶ್ಯಕತೆಯನ್ನು ಮದ್ರಾಸಿನಲ್ಲಿ ದಕ್ಷಿಣ ಭಾರತದ ನಾಲ್ಕು ಭಾಷೆಗಳಲ್ಲಿ ಕಡಿಮೆ ಬೆಲೆಗೆ ಉತ್ಕೃಷ್ಟ ಸಾಹಿತ್ಯವನ್ನೊದಗಿಸಿ ಕೊಡುವ ಧ್ಯೇಯವಿಟ್ಟುಕೊಂಡ ಮಂಡಳವೊಂದರ ಉದ್ಘಾಟನೆಯ ಕಾಲದಲ್ಲಿ ಒತ್ತಿ ಹೇಳಿದ್ದಾನೆ. ಯಾವುದೇ ರಾಷ್ಟ್ರದ ಪ್ರಗತಿಯು ಅಲ್ಲಿಯ ಜನರಲ್ಲಿ ಎಷ್ಟು ಹೆಚ್ಚು ಮಂದಿಗೆ ಬರೆಯಲು ಮತ್ತು ಓದಲು ಬರುತ್ತದೆ—ಎಂಬುದರ ಮೇಲೆ ನಿಂತಿದೆ ಎಂದವರು ಹೇಳಿದ್ದಾರೆ! ಸಾರ್ವಜನಿಕರಿಗೆ ಜ್ಞಾನವನ್ನು ಸಂವರ್ಧಿಸಿ ಕೊಳ್ಳಲು ಎಷ್ಟು ಹೆಚ್ಚು ಅವಕಾಶಗಳು ಸಿಗುತ್ತವೆ ಎಂಬುದು ದೇಶದ ಏಳಿಗೆಗೆ ಆಧಾರಭೂತವಾದ ವಿಷಯವೆಂದೂ ಅವರು ಸಾರಿದ್ದಾರೆ.

ಇದರ ಕಾರಣವೇನು? ನೆಹರುಗಳೇ ಹೇಳಿದಂತೆ, ಓದುವ ಅಭಿರುಚಿಯು ಬಲಿತರೆ, ಹೊಸ ಹೊಸ ವಿಚಾರಗಳು ಮನಸ್ಸಿನಲ್ಲಿ ಉಂಟಾಗುತ್ತವೆ, ಬರೆಯುವ ಶಕ್ತಿ ಇದ್ದರೆ, ಅವುಗಳಿಗೊಂದು ವ್ಯಕ್ತ ಸ್ವರೂಪವನ್ನು ಕೊಡಲು ಸಾಧ್ಯವಾಗುತ್ತದೆ ಸದಭಿರುಚಿಗೆ ಪೋಷಕವಾದ ವಿಚಾರಗಳು, ರಾಷ್ಟ್ರಕ್ಕೆ ಕಲ್ಯಾಣವನ್ನು ಮಾಡುವಷ್ಟು ಶಕ್ತಿಯುತವಾಗಿವೆ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಗಳ ಅಭಿಪ್ರಾಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವುದರಿಂದ ನಾಗರಿಕರಲ್ಲಿ ಎಷ್ಟು ಹೆಚ್ಚು ಜಾಗೃತಿಯಾಯಿತೋ, ಎಷ್ಟು ಒಳ್ಳೆಯ ಆಲೋಚನೆಗಳು ಅವರ ಮನಸ್ಸಿನಲ್ಲಿ ಮೂಡಿದವೋ ಅಷ್ಟು ಬೇಗ ಶ್ರೇಯಸ್ಸು ಸಾಧಿಸಲ್ಪಡತ್ತದೆ.

ಆಧುನಿಕ ಯುಗವು ವಿಚಾರಶೀಲರ, ವಿವೇಕಶೀಲರ ಕೈವಾಡದ ದೆಸೆಯಿಂದ ಬಹಳವಾಗಿ ಮುಂದರಿದಿದೆ. ಮುಖ್ಯವಾಗಿ ತಾಂತ್ರಿಕ, ವೈಜ್ಞಾನಿಕ ಕ್ಷೇತ್ರದಲ್ಲಿ ಈ ಪ್ರಗತಿ ಕಣ್ಣಿಗೆ ಬೀಳುತ್ತದೆ. ಆದರೆ ಮಾನಸಿಕ ದಾರ್ಢ್ಯ ಮತ್ತು ನೈತಿಕ ಶಕ್ತಿಗೆ ಪೋಷಕವಾದ ದಿಸೆಯಲ್ಲಿ ವಿಚಾರವು ಪ್ರಗತಿಪಥ ಹಿಡಿದಂತೆ ಕಾಣಿಸುವುದಿಲ್ಲ ಎಂದು ನೆಹರುಗಳ ಅಭಿಪ್ರಾಯ. ಇದು ಸಮಾಧಾನಕರವಾದ ಸಂಗತಿಯಲ್ಲ. ಇವೆರಡು ಅಂಶಗಳಲ್ಲಿ ಸಮನ್ವಯವನ್ನು ಸಾಧಿಸಲು ಪ್ರಯತ್ನ ನಡೆಯಬೇಕು.

ಒಬ್ಬರ ಅಭಿರುಚಿಯನ್ನು ಒಳ್ಳೆಯ ದಿಕ್ಕಿಗೆ ತಿರುಗಿಸುವ ಪ್ರಯತ್ನಕ್ಕೆ ಸದ್ಯದ ಭಾರತದಲ್ಲಿ ಪಲ ಒಂದೇತೆ? ಓದುವ ಅಭ್ಯಾಸವು ಸಾಮಾನ್ಯವಾಗಿ ಮನೆಯ ವಾತಾವರಣದಿಂದ ಬೆಳೆಯಬೇಕಾದುತ್ತದೆ, ಹಿರಿಯರು ಓದುತ್ತಿದ್ದರೆ, ಮಕ್ಕಳಿಗೂ ಆಸೆ ಹಿಡಿಯುತ್ತದೆ ದಬ ಕಾಣಿಸದ ಪ್ರಶ್ನೆಯೊಂದೇ ಮುಖ್ಯ ವಿಷಯವಲ್ಲ. ಏಕಂದರೆ ಅವೇಕಿಕವು ಸಂಪನ್ನ ರಾಷ್ಟ್ರವಾಗಿದ್ದರೂ ಬ್ರಿಟನು ಮತ್ತು ಫ್ರಾನ್ಸುಗಳಲ್ಲಿ ಓದುತ್ತಿರುವ ಜನರ ಪ್ರಮಾಣ ಅಮೇರಿಕಕ್ಕಿಂತ ಹೆಚ್ಚಾಗಿದೆ. ಹಣ ಕಾಣಿಸದ ಪ್ರಶ್ನೆ ಇಲ್ಲಿ ಉದ್ಭವಿಸುವುದೇ ಇಲ್ಲವೆಂದೇನು ಇದರ ಅರ್ಥವಲ್ಲ. ಭಾರತದಂಥ ದೇಶದಲ್ಲಿ ಸಂಪಾದನೆಯ ೯೦% ಅಂಶ ಕೂಟ್ಟಿಬಟ್ಟೆಗಾಗಿಯೇ ವಿನಿಯೋಗವಾಗುವಾಗ, ಪುಸ್ತಕಗಳನ್ನು ಕೊಂಡುಕೊಳ್ಳುವಷ್ಟು ಸಾಮರ್ಥ್ಯ ಇರುವವರು ಹೆಚ್ಚಾಗುವ ಸಾಧ್ಯವಿಲ್ಲ.

ಪುಸ್ತಕಗಳನ್ನು ಅಗ್ಗ ಕ್ರಯದಲ್ಲಿ ಮಾರ್ಪಡಿಸಲು ಶಕ್ತರಾದರೆ ಸ್ವಲ್ಪ ಮಟ್ಟಿಗೆ ಪರಿಸ್ಥಿತಿ ಸುಧಾರಿಸಬಹುದು. ಅದರಂತೆ ಗ್ರಂಥಾಲಯಗಳು ಹೆಚ್ಚಿಕೊಂಡು, ಅವು ಹೆಚ್ಚು ಹೆಚ್ಚು ಪುಸ್ತಕಗಳನ್ನು ತರಿಸಿ ಕೊಟ್ಟರೆ ಬಡವರು ಓದಿ, ಆನಂದಿಸಿಯಾರು. ಭಾರತ ಸರಕಾರದವರು ಕಡಿಮೆ ಕ್ರಯದಲ್ಲಿ ಪುಸ್ತಕ ಪೂರೈಸಲು ಒಂದು ರಾಷ್ಟ್ರೀಯ ಗ್ರಂಥನಿಧಿ ಎಂಬ ಸಂಸ್ಥೆಯನ್ನು ಇಷ್ಟರಲ್ಲಿಯೇ ಸ್ಥಾಪಿಸಲಿದ್ದಾರೆಂದು ಕೇಳುತ್ತೇವೆ. ಭಾರತೀಯ ಭಾಷೆಗಳಲ್ಲಿಯೂ ಆಂಗ್ಲ ಭಾಷೆಯಲ್ಲಿಯೂ ಪಾರ್ಶ್ವಾತ್ಯ ಹಾಗು ಪೌರ್ವಾತ್ಯ ದೇಶಗಳ ಶಾಸ್ತ್ರೀಯ ಮಹತ್ವದ ಗ್ರಂಥಗಳನ್ನೂ ಕಲೆ ಮತ್ತು ವೈಜ್ಞಾನಿಕ ವಿಷಯಗಳನ್ನು ಕುರಿತಾದ ಪುಸ್ತಕಗಳನ್ನೂ ಪ್ರಕಟಿಸುವ ಧ್ಯೇಯ ಈ ಸಂಸ್ಥೆಗೆ ಇದೆ. ಇದು ನಿಜಕ್ಕೂ ಸ್ತುತ್ಯವಾದವಿಚಾರ. ಇದಲ್ಲದೆ ದ್ವಿತೀಯ ಯೋಜನೆಯಲ್ಲಿ ಪುಸ್ತಕಾಲಯಗಳ ವಿಸ್ತರಣೆಗೆ ಸಾಕಷ್ಟು ಗಮನ ಕೊಡಲಾಗುವುದೆಂದೂ ಮಂತ್ರಿಗಳು ಹೇಳಿರುವುದು ಸ್ವಾಗತಾರ್ಹವಾದ ವಿಷಯ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ
ಪ್ರಧಾನ ಕಾರ್ಯಾಲಯ ಉಡುಪಿ] [ಸ್ಥಾಪನೆ 1925.
ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?
ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ ಕೆಲವು ವರ್ಷಗಳನ್ನು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆನ್ನು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ ನಾವು ಇವಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.
ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.
THE CANARA INDUSTRIAL & BANKING SYNDICATE LTD.
Head Office UDIPI, S India] [Estd 1925

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್
ಸುಮಾರು 450 ಪುಟಗಳು
ಕ್ರಯ 0—12—0
ಪ್ರತಿಗಳು ಸಿಗುವ ಸ್ಥಳ
ನವಯುಗ ಪ್ರೆಸ್, ಉಡುಪಿ.

'NAVAYUGA' WEEKLY
is in the list of periodicals and Newspapers approved for use in Secondary Schools as per proceedings Ro. No 466 N/C dated 12-12-1950 of the Director of public Instructions Madras

ಪ್ರವಾಸಿಯನ್ನು ಮೆಚ್ಚಿಸುವ ಪ್ರೇಕ್ಷಣೀಯ ಜಗತ್ತು

ವಿದೇಶಿ ವಿನಿಮಯದೊಡನೆ ಗೆಳೆತನದ ಲಾಭವಾಗುವ ಮಾರ್ಗ

ಅಧಿಕೃತ ಪ್ರವಾಸ ಸಂಘಗಳ ಅಂತಾರಾಷ್ಟ್ರೀಯ ಮಂಡಳದ ೧೦ನೇ ವಾರ್ಷಿಕ ಅಧಿವೇಶನವು ಇದೀಗ ಮೊದಲ ಬಾರಿಗೆ, ಯುರೋಪಿನ ಹೊರಗೆ, ಹೊಸ ದೆಹಲಿಯಲ್ಲಿ ೧೯ನೇ ದಿನಾಂಕ ಜರಗಲಿದೆ. ಪ್ರಧಾನ ಮಂತ್ರಿ ನೆಹರುಗಳು ಇದನ್ನು ಉದ್ಘಾಟಿಸುವರೆಂದೂ ಅಧಿವೇಶನಕ್ಕೆ ಅಲ್ಪದೆಶ್ಯ ರಾಷ್ಟ್ರಗಳಿಂದಲ್ಲದೆ, ಇದೇ ಪ್ರಥಮವಾಗಿ ಅರ್ಜೆಂಟೀನ, ಬಲ್ಗೇರಿಯ, ಪೋಲೆಂಡೇ ಮುಂತಾದ ರಾಷ್ಟ್ರಗಳಿಂದಲೂ ನಿರೀಕ್ಷಕ ಮಂಡಳಗಳು ಬರಲಿವೆಯೆಂದೂ ತಿಳಿದು ಬರುತ್ತದೆ.

ಸಂಸ್ಥೆಗಳ ಅಭ್ಯುದಯ

ಆಧುನಿಕ ಸರಿಭಾಷೆಗೆ ಅನುಗುಣವಾಗಿ, ತಜ್ಞ ಸಂಸ್ಥೆಗಳು ಪ್ರವಾಸ ಪ್ರವೃತ್ತಿಯನ್ನು ಪ್ರೋತ್ಸಾಹಿಸುವ ಬಗೆಯು ಇತ್ತೀಚೆಗೆ ತುಂಬ ಬಲಿತು ಕೊಂಡಿದೆ. ರಚೆಯನ್ನು ಯೋಜನಾ ಬದ್ಧವಾದ ಕಾರ್ಯಕ್ರಮಗಳಿಂದ ಸುಖಮಯವಾಗಿ ಕಳೆಯುವಂತೆ ಜನರಿಗೆ ನೆರವಾಗುವ ಪ್ರವಾಸ ಸಂಸ್ಥೆಗಳು ಯುರೋಪಿನಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಹುಟ್ಟಿಕೊಂಡವು; ಈ ಶತಮಾನದ ದ್ವಿತೀಯ ದಶಕದಲ್ಲಿ ಅಮೇರಿಕನ್ನರು ಹೆಚ್ಚು ಸಂಖ್ಯೆಯಲ್ಲಿ ಯುರೋಪಿಗೆ ಬರತೊಡಗಿದಾಗ ಮತ್ತು ಐರೋಪ್ಯರು ಪೂರ್ವ ದೇಶಗಳಿಗೆ ಬೇಸರ ಕಳೆಯಲೆಂದು ಪ್ರವಾಸ ಹೊರಡಲು ಪ್ರಾರಂಭಿಸಿದಾಗ ಈ ಸಂಸ್ಥೆಗಳ ಪ್ರಾಬಲ್ಯ ಬಹಳ ಹೆಚ್ಚಿತು.

ಪ್ರಥಮ ಹಾಗು ದ್ವಿತೀಯ ಮಹಾಯುದ್ಧಗಳು ಜನರಿಗೆ ಬೇರೆ ಅನೇಕ ದೇಶಗಳ ಪರಿಚಯವನ್ನು ಮಾಡಿಕೊಟ್ಟವೆ. ಶತ್ರು ದಮನಕ್ಕೆಂದು ಹೋದವರನ್ನು ಅಲ್ಲಿಯ ಸಂಸ್ಕೃತಿಯ ಮೋಹ ಕಾಡಿದೆ. ಪ್ರವಾಸ ಪ್ರಿಯತೆ ಈ ರೀತಿಯಾಗಿ ಎಲ್ಲರಲ್ಲೂ ಹೆಚ್ಚಿಕೊಂಡಿದೆ. ಏಕೈಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಕಚ್ಚಾ ಸರಕುಗಳು ಹೇಗೆ ವಿಪುಲ ಪ್ರಮಾಣದಲ್ಲಿ ಸಿಗುತ್ತವೆಯೋ ಹಾಗೆಯೇ ಪ್ರವಾಸ ಸಂಸ್ಥೆಗಳ ಚಟುವಟಿಕೆಯು ಅಗಾಧವಾಗಿ ಬೆಳೆದು ಕೊಳ್ಳಲು ಬೇಕಾದ ಸರಕುಗಳೂ ಹೇರಳವಾಗಿವೆ. ಇದನ್ನು ಪ್ರವಾಸ ಸಂಸ್ಥೆಗಳು ಮನವರಿಕೆ ಮಾಡಿಕೊಂಡಿರುವುದಕ್ಕೆ ಹೊಸ ದೆಹಲಿಯಲ್ಲಿ ಈ ಸಲ ಅಧಿವೇಶನವನ್ನು ಕರೆದುದೇ ನಿದರ್ಶನ.

ಡಾಲರಿನ ಸಂಪಾದನೆ

ಕಳೆದ ಮಹಾ ಯುದ್ಧದ ತರುವಾಯ ವಿದೇಶ ವಿನಿಮಯವನ್ನು, ಮುಖ್ಯವಾಗಿ ಡಾಲರನ್ನು, ಸಂಪಾದಿಸಲು ಪ್ರವಾಸ ಪ್ರಿಯತೆಗೆ ಪ್ರೋತ್ಸಾಹವನ್ನು ಕೊಡುವುದು ಉತ್ತಮ ಫಲವನ್ನು ನೀಡಬಲ್ಲ ಉಪಾಯವೆಂದು ಸ್ಪಷ್ಟವಾಯಿತು. ಯುದ್ಧ ತ್ರಸ್ತವಾದ ಐರೋಪ್ಯ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯು ಕುಸಿದು ಬೀಳುತ್ತಿದ್ದಾಗ ಅಮೇರಿಕದ ನೆರವನ್ನು ಪಡೆಯಲು ಆ ದೇಶದ ಪ್ರವಾಸಿಕರನ್ನು ಆಕರ್ಷಿಸುವುದೂ ಒಂದು ರೀತಿ ಎಂಬ ಸತ್ಯ ಹೊಳೆಯಿತು. ಮಾರ್ಶಲ್ ಸಹಾಯದ ಬಹು ದೊಡ್ಡ ಮೊತ್ತವನ್ನು ಇಟಲಿ, ಆಸ್ಟ್ರಿಯ ಮುಂತಾದ ರಾಷ್ಟ್ರಗಳು ತಮ್ಮ ದೇಶದಲ್ಲಿ ಪ್ರವಾಸಿಗಳಿಗೆ ಉಳಕೊಳ್ಳಲು ಯೋಗ್ಯವಾಗಿ ಹೋಟೆಲುಗಳನ್ನು ದುರಸ್ತಿಪಡಿಸುವುದೇ ಮುಂತಾದ ಕೆಲಸಗಳಿಗೆ ಉಪಯೋಗಿಸಿದವೆಂಬ ಸಂಗತಿಯಿಂದಲೇ ಪ್ರವಾಸ ಸೌಲಭ್ಯಗಳಿಗೆ ಅವು ಕೊಡುವ ಮಹತ್ವವನ್ನು ಆಳಿಯಬಹುದು.

ಪಶ್ಚಿಮ ಯುರೋಪಿನ ರಾಷ್ಟ್ರಗಳು ೧೯೫೨ನೇ ಇಸವಿಯ ಹೊತ್ತಿಗೆ ಬೇಂಕುದೇ ಕೈಗಾರಿಕೆಯೊಂದರಿಂದ ಸಂಪಾದಿಸಿದಷ್ಟು ಡಾಲರನ್ನು ಅಮೇರಿಕದಿಂದ ಬಂದ ಪ್ರವಾಸಿಗಳಿಂದ ಗಳಿಸಿದವು. ಯುರೋಪಿನಲ್ಲಿ ಪ್ರವಾಸ ಸಂಸ್ಥೆಗಳು ಎಷ್ಟು ದೊಡ್ಡ ಕೈಗಾರಿಕೆಯ ಪಾತ್ರವನ್ನು ವಹಿಸುತ್ತಿವೆ ಎಂಬುದನ್ನು ಕೆಳಗಿನ ಕೋಷ್ಟಕದಿಂದ ತಿಳಿಯಬಹುದು:—

ದೇಶ	ಪ್ರವಾಸಿಗಳ ಸಂಪಾದಿಸಿದ ವಿದೇಶ ಸಂಖ್ಯೆ	ವಿನಿಮಯರೂಪದಲ್ಲಿ
ಬ್ರಿಟನು	೭೦೯೯೫೫	೨೨೯೫೪೦೦೦ ಡಾಲರ್
ಫ್ರಾನ್ಸು	೩೧೯೧೦೦೦	೧೩೩೦ ,,
ಸ್ವಿಜರ್ಲೇಂಡು	೫೩೩೦೦೦	೧೩೫೯ ,,
ಇಟಲಿ	೫೪೦೦೫೩	೨೪೩೦ ,,

ಸಾಂಸ್ಕೃತಿಕ ಮಹತ್ವ

ಮೇಲಿನ ತಖ್ತೆಯು ೧೯೫೨ನೇ ವರ್ಷದ ಸ್ಥಿತಿಯನ್ನು ಮುಂದಟ್ಟುಪಡಿಸುತ್ತದೆ. ಅಂದಿನಿಂದೀಚೆಗೆ, ಈ ಉದ್ಯಮ ಬಹಳ ವಿಕಾಸವಾಗಿದೆ. ಉದಾಹರಣೆಗೆ, ಬ್ರಿಟನಿಗೆ ಈ ವರ್ಷ ೧೦ ಲಕ್ಷ ಪ್ರವಾಸಿಕರು ಬರಬಹುದೆಂದು ಅಂದಾಜು. ಆ ದೇಶದಿಂದ ಅಮೇರಿಕಕ್ಕೆ ನಿರ್ಯಾತವಾಗುವ ಯಾವುದೇ ಸರಕಿಗಿಂತ, ಅಮೇರಿಕದಿಂದ ಬಂದ ಪ್ರವಾಸಿಕರ ಮೂಲಕ ಸಂಪಾದಿಸಲ್ಪಡುವ ವಿದೇಶ ವಿನಿಮಯ ಹೆಚ್ಚಾಗಿದೆ.

ಪ್ರವಾಸದ ಅನುಕೂಲತೆಗಳು ಹೆಚ್ಚಿಕೊಂಡಂತೆಲ್ಲ ಜಗತ್ತಿನಲ್ಲಿ ವಿದೇಶಿ ವಿನಿಮಯವನ್ನು ಸಂಪಾದಿಸಿ ಕೊಡುವ ಈ ಉದ್ಯಮದ ಕಡೆಗೆ ಅತ್ಯಧಿಕ ಲಕ್ಷ್ಯವನ್ನು ಪೂರೈಸಲು ಯಾರೂ ತಪ್ಪಲಿಕ್ಕಿಲ್ಲ. ಕೇವಲ ಧನವನ್ನು ಸಂಪಾದಿಸಿಕೊಳ್ಳುವುದಕ್ಕಾಗಿಯೇ ಪ್ರವಾಸ ಪ್ರವೃತ್ತಿಗೆ ಪ್ರೋತ್ಸಾಹ ಕೊಡಬೇಕು ಎಂದಿದರೆ ಅರ್ಥವಲ್ಲ. ಒಂದು ದೇಶದ ಜನರು ಬೇರೆ ದೇಶಗಳ ಜನರ ನಡುವೆ ಬೆರೆತು ಕೆಲವು ದಿನಗಳನ್ನು ಕಳೆಯುವಾಗ, ಸಹಜವಾಗಿಯೇ ಸಾಮಾಜಿಕ ಹಾಗು ಸಾಂಸ್ಕೃತಿಕ ಪರಿಣಾಮಗಳಾಗುತ್ತವೆ. ಲಕ್ಷಗಟ್ಟಲೆಯಲ್ಲಿ ಜನರು ತಿರುಗಾಡ ತೊಡಗಿ, ಅಪರಿಚಿತರನ್ನೂ ಸುಪರಿಚಿತರಾಗಿ ಮಾಡಿಕೊಂಡು ದಿನಗಳೆಯಲು ನೋಡಿದಾಗ, ಒಂದು ಬಗೆಯ ವಿಶೇಷ ತಿಳಿವಳಿಕೆ, ಸಹಾನುಭೂತಿ ಮತ್ತು ಸದ್ಭಾವ ಅವರಲ್ಲಿ ತಮ್ಮ ಸಂಚಾರದ ದೇಶದ ಕುರಿತಾಗಿಯೂ ಅಲ್ಲಿಯ ಜನರ ಕುರಿತಾಗಿಯೂ ಉಂಟಾಗುತ್ತದೆ. ರಾಜಕೀಯ ರಂಗದ ಕೋಲಾಹಲಗಳೇನೇ ಇರಲಿ—ಜನರನ್ನು ಅವರಷ್ಟಕ್ಕೆ ಬಿಟ್ಟರೆ ಅವರು ಸುಲಭದಲ್ಲಿ ಸ್ನೇಹಿತರನ್ನು ದೊರಕಿಸಿಕೊಳ್ಳುವರೆಂದೂ ಪ್ರೀತಿಯಿಂದ ನಡೆದುಕೊಳ್ಳಲು ತಪ್ಪುವುದಿಲ್ಲವೆಂದೂ ಯಾರಿಗೆ ಗೊತ್ತಿಲ್ಲ?

ಭಾರತದ ಕಾರ್ಯಕಲಾಪ

ಇವೆಲ್ಲವನ್ನೂ ಕಣ್ಣು ಮುಂದಿಟ್ಟುಕೊಂಡು ನಾವು ಭಾರತದಲ್ಲಿ ಈ ದಿಸೆಯಲ್ಲಿ ಏನು ಪ್ರಯತ್ನ ನಡೆದಿದೆ ಎಂದು ವಿಚಾರಿಸುವುದು ಅಪೇಕ್ಷಣೀಯ ಸರಕಾರದವರು ಇತ್ತ ಗಮನವನ್ನು ಕೊಟ್ಟದ್ದುದ್ದೂ ೧೯೪೮ರಲ್ಲಿ ಎನ್ನಬಹುದು. ಆಗ ನೇಮಿಸಲಾದ ಸಮಿತಿಯೊಂದು ೧೯೪೬ನೇ ಮೇ ತಿಂಗಳಲ್ಲಿ ತನ್ನ ವರದಿಯನ್ನು ಒಪ್ಪಿಸಿ, ಹೀಗೆ ಹೇಳಿತು—"ಭಾರತವು ತನ್ನ ಪ್ರಾಚೀನ ಸಂಸ್ಕೃತಿಯ ತಿಳಿವಳಿಕೆಯನ್ನು ಬೇರೆ ದೇಶಗಳವರಿಗೆ ಮಾಡಿಕೊಡಲು ಪ್ರವಾಸ ಪ್ರವೃತ್ತಿಗೆ ಪ್ರೋತ್ಸಾಹ ಕೊಡಬೇಕು. ಪ್ರವಾಸ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ನೆಚ್ಚ ಮಾಡುವ ಹಣಕ್ಕೆ ಯೋಗ್ಯ ಪ್ರತಿಫಲ ಸಿಗುವ ಭರವಸೆ ಇದೆಯಲ್ಲದೆ ಭಾರತಕ್ಕೆ ಪ್ರತ್ಯಕ್ಷಾ ಪ್ರತ್ಯಕ್ಷ ರೀತಿಯಿಂದ ಹೆಚ್ಚಿನ ಸಂಪಾದನೆಯಾಗುವ ಸಂಭವವೂ ಉಂಟು. ಯೋಗ್ಯ ರೀತಿಯಲ್ಲಿ ಸಂಘಟಿಸಿದರೆ, ಗ್ರಾಮೋದ್ಯೋಗಗಳಿಗೆ ಒಳ್ಳೆಯ ಪೇಟೆಯನ್ನೂ ಈ ಉದ್ಯಮ ಒದಗಿಸಿ ಕೊಡಬಲ್ಲುದು."

ಆದರೆ ಈ ವರದಿಯು ೧೯೫೨ನೇ ವರ್ಷದ ವರೆಗೆ ಸರಕಾರದ ಗಮನವನ್ನು ಸೆಳೆಯಲಿಲ್ಲ—ಸ್ವಾತಂತ್ರ್ಯ ಪ್ರಾಪ್ತಿ ಮತ್ತು ಆ ಬಳಿಕದ ಗೊಂದಲಮಯ ವಾತಾವರಣದಲ್ಲಿ ಅದು ಮೂಲೆ ಗುಂಪಾಯಿತು. ಆದರೆ ರಾಜಕೀಯ ರಂಗದಲ್ಲಿ ಸ್ಥಿಮಿತ ಸ್ಥಾಪನೆಯಾದ ಬಳಿಕ ಶಂಕಾರ ಇತ್ತ ಗಮನವಿತ್ತಿತು. ಐರೋಪ್ಯ ರಾಷ್ಟ್ರಗಳಂತೆ, ಜಪಾನು, ತುರ್ಕಿ, ಸಿಂಹಳ, ಈಜಿಪ್ಟುಗಳಂಥ ಏಶ್ಯದ ರಾಷ್ಟ್ರಗಳೂ ಪ್ರವಾಸೋದ್ಯಮವನ್ನು ವ್ಯವಸ್ಥಿತ ಗೊಳಿಸಲು ಪ್ರಯತ್ನಿಸುವುದನ್ನು ಕಂಡ ಭಾರತ ಸರಕಾರವು ನ್ಯೂಯಾರ್ಕಿನಲ್ಲಿ ಪ್ರಥಮ ಸಾಗರೋತ್ತರ ಪ್ರವಾಸ ಕಾರ್ಯಾಲಯವನ್ನು ತೆರೆದು, ಅಮೇರಿಕರನ್ನು ಭಾರತಕ್ಕೆ ಆಕರ್ಷಿಸ ತೊಡಗಿತು. ಅಲ್ಲಿನಿಂದೀಚೆಗೆ ಸಾನ್ ಫ್ರಾನ್ಸಿಸ್ಕೊ ಮತ್ತು ಲಂಡನುಗಳಲ್ಲಿ ಕಾರ್ಯಾಲಯ ತೆರೆಯಲಾಗಿದೆ. ಪಶ್ಚಿಮ ಜರ್ಮನಿ, ಸ್ಕ್ಯಾಂಡಿನೇವಿಯ, ಅರ್ಜೆಂಟೀನ, ಆಸ್ಟ್ರೇಲಿಯ, ಸಿಂಹಳ ಮತ್ತು ಫ್ರಾನ್ಸುಗಳಲ್ಲಿ ಕಾರ್ಯಾಲಯಗಳು ಇಷ್ಟರಲ್ಲೇಯೇ ಪ್ರಾರಂಭಿಸಲ್ಪಡುತ್ತವೆ.

ದೇಶದೊಳಗೆ—

ಕೇವಲ ವಿದೇಶಗಳ ಪ್ರವಾಸಿಕರನ್ನು ಮಾತ್ರ ಭಾರತಕ್ಕೆ ಆಕರ್ಷಿಸಿದರೆ ಕೆಲಸವಾಗದೆಂದು ಈಗ ಸ್ಪಷ್ಟವಾಗಿದೆ; ದೇಶೀಯರನ್ನೂ ಪ್ರವಾಸಕ್ಕಾಗಿ ಉತ್ತೇಜಿಸುವ ಆವಶ್ಯಕತೆ ಕಡಿಮೆಯಾಗಿಲ್ಲ. ಭಾರತ ದಂಥ ವಿಶಾಲ ಭೂಖಂಡದಲ್ಲಿ, ನಾನಾ ಭಾಷೆಗಳ, ಆಚಾರ ವಿಚಾರಗಳ ಮತ್ತು ವಿಶಿಷ್ಟ ಸಂಸ್ಕೃತಿಯ ಜನರಿರುವ ದೇಶದಲ್ಲಿ ಈ ಆವಶ್ಯಕತೆ ಬಹಳ ಹೆಚ್ಚೆಂದೇ ಹೇಳಬಹುದು. ನಮ್ಮ ದೇಶವು ೧೯೫೧ರಿಂದ ೧೯೫೪ನೇ ವರ್ಷದ ಹೊತ್ತಿಗೆ ಆಕರ್ಷಿಸಿದ ವಿದೇಶಿ ಪ್ರವಾಸಿಕರ ಸಂ

(೧೧ನೇ ಪುಟ ನೋಡಿರಿ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 259/1955.

P. ಸದಾಶಿವಂಪಾ, ರಿಸೀವರ್— ವಾದಿ ಮತ್ತು

ಗುಂಮಂಣ ಶೆಟ್ಟಿಗಾರ ಸಾ—ಪ್ರತಿವಾದಿರು ಯಿವರೊಳಗೆ

ಕೋರ್ಟ್ ಹುಕುಂಪ್ರಕಾರ ಸದ್ರಿ ದಾವೆಯ 2ನೆತ್ತು 8ನೇ ಪ್ರತಿವಾದಿರಾದ ಕಾರ್ಕಳ ಬಡಗ ಎಡಪದವು ಗ್ರಾಮವಲ್ಲಿರುವ ಸೇಸು ಶೆಟ್ಟಿಗಾರರ ಮಕ್ಕಳು ತಿಮ್ಮಯ್ಯ ಶೆಟ್ಟಿಗಾರರಿಗೆ ಮತ್ತು ನಾರಾಯಣ ಶೆಟ್ಟಿಗಾರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಪ್ರತಿವಾದಿರ ಕುಟುಂಬದ ಪ್ರಯೋಜನದ ಬಗ್ಗೆ, 1ರಿಂದ 8ರ ವರೇಗಿನ ಪ್ರತಿವಾದಿರ ತಂದೆ ವೃ 9ನೇ ಪ್ರತಿವಾದಿಳ ಗಂಡ ಹಾಲಿ ಮೃತಪಟ್ಟ ಸೇಸು ಶೆಟ್ಟಿಗಾರರು ಮೂಡಬಿದ್ರಿ ಶ್ರೀ ಕೂಶ್ಮಾಂಡಿನಿ ದೇವರ ಭಂಡಾರಕ್ಕೆ ತಾ. 26—3—1940ರಲ್ಲಿ ರೂಪಾ 1000—0—0ಕ್ಕೆ ಬರಕೊಟ್ಟ ತೋರಿಕೆವು ದಸ್ತಾವೇಜನ ಅಸಲು ಬಡ್ಡಿ ರೂಪಾ 1222—13—8ಕ್ಕೆ ಸಿದ್ಧಿ ಕೂಶ್ಮಾಂಡಿನಿ ದೇವರ ಭಂಡಾರದ ಸೊತ್ತುಗಳಿಗೆ ಸಬ್ ಕೋರ್ಟು O. S No 279/1952ರಲ್ಲಿ ನೇಮಕಪಟ್ಟ ರಿಸೀವರಾದ ವಾದಿಯು ಮಾಡಿದ ಸದ್ರಿ ದಾವೆಯ 2—8ನೇ ಪ್ರತಿವಾದಿರ ಹಾಜರಿ ಬಗ್ಗೆ ತಾ. 31—10—1955ಕ್ಕೆ ಇಟ್ಟಿರುತ್ತದೆ. ಆದ್ರಿಂದ ಸದ್ರಿ ದಾವೆ ಕುರಿತು ಅಕ್ಷೇಪಯಿದ್ರೆ ಸದ್ರಿ 2—8ನೇ ಪ್ರತಿವಾದಿರು ಸದ್ರಿ 31—10—55ನೇ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.— ತಪ್ಪಿದ್ರೆ ಸದ್ರಿ ದಾವೆಯು ಸದ್ರಿ 2—8ನೇ ಪ್ರತಿವಾದಿರ ಗೈರಹಾಜ್ರಿಯಲ್ಲಿ ತೀರ್ಮಾನಿಸಲ್ಪಡುತ್ತದೆ.

H. K. Gopalkrishna Rau
Vakil for Plaintiff.

Karkala 5—10—55,

THE BOMBAY LIFE ASSURANCE Co., Ltd.

Excellent Bonuses!

1954 VALUATION.

Whole Life --- Rs. 19/- per 1000/- per year.
Endowment --- Rs. 15/- per 1000/- per year.
Record Business: Over Rs, 5 Crores.

It pays you to consult for Representation or Insurance:-

KOCHIKAR BROTHERS, LTD.,

CHIEF AGENTS, **UDIPI.**

or any of their offices at:-

Bangalore, Coimbatore, Kozhikode, Madura, Mangalore and Trivandrum.

ಕೈಗಾರೀಕರಣದಲ್ಲಿ ಸಾಧನಯಂತ್ರಗಳ ಪಾತ್ರ

ಜಾಲಹಳ್ಳಿಯಲ್ಲಿ ಹೊಸ ಕಾರ್ಖಾನೆಯ ಉದ್ಘಾಟನೆ

ಬೆಂಗಳೂರಿನಲ್ಲಿ ಇದೇ ೬ನೇ ದಿನಾಂಕ ಪ್ರಧಾನ ಮಂತ್ರಿ ನೆಹರುಗಳಿಂದ ಸಾಧನ ಯಂತ್ರ ಕಾರ್ಖಾನೆಯ ವಿಧ್ಯುಕ್ತ ಉದ್ಘಾಟನೆಯನ್ನು ನಡೆಸಲಾಯಿತು. "ನಾವು ಈ ದೇಶದಲ್ಲಿ ಔದ್ಯೋಗೀಕರಣವನ್ನು ಸಾಧಿಸಲು ದೃಢ ನಿರ್ಧಾರ ಮಾಡಿದ್ದೇವೆ; ನಮ್ಮೆಲ್ಲ ಯಂತ್ರಗಳನ್ನೂ ಸಾಧನೋಪಕರಣಗಳನ್ನೂ ಇಲ್ಲಿಯೇ ತಯಾರಿಸಲು ನಾವು ಬದ್ಧರಾದ್ದೇವೆ. ಇದನ್ನು ಎಷ್ಟು ತ್ವರ್ಯ ನೆರವೇರಿಸಿದೆವೋ ಅಷ್ಟು ಶ್ರೇಯಸ್ಸಾದೀತು. ನಾವು ಈ ವಿಷಯದಲ್ಲಿ ಹೆಚ್ಚು ವೇಗವನ್ನು, ಹೆಚ್ಚು ಕಾರ್ಯಕ್ಷಮತೆಯತೆಯನ್ನು, ಹೆಚ್ಚು ನೈಪುಣ್ಯವನ್ನು ತೋರಿಸಬೇಕು; ವಿಳಂಬಕ್ಕೆ ಎಷ್ಟಕ್ಕೂ ಅವಕಾಶ ಕೊಡದೆ ಪರಿಷ್ಕಾರವಾಗಿ ಕೆಲಸ ಸಾಗಿಸಿಕೊಂಡು ಹೋಗಲು ಯೋಜನಾ ಸುನೋಭಾವವನ್ನು ಮೈಗೂಡಿಸಿಕೊಳ್ಳಬೇಕು" ಎಂದು ನೆಹರುಗಳು ಈ ಸಂದರ್ಭದಲ್ಲಿ ಹೇಳಿದರು.

ಐತಿಹಾಸಿಕ ಘಟನೆ

ಮೂಲಭೂತವೆನಿಸಿದ ಹಾಗು ಭದ್ರವಾದ ಬುನಾದಿಯಲ್ಲಿ ಸ್ಥಾಪಿಸಲ್ಪಟ್ಟ ಈ ಸಾಧನ ಯಂತ್ರ ಕಾರ್ಖಾನೆಯು ಭಾರತದ ಸಾಲಿನ ಐತಿಹಾಸಿಕ ಮಹತ್ವದ ಘಟನೆಯಾಗಿದೆ. ಏಕೆಂದರೆ, ಇಂದು ಕೈಗಾರಿಕಾಭಿವೃದ್ಧಿಯಲ್ಲಿ ಮತ್ತು ರಾಷ್ಟ್ರೀಯ ಸ್ವಾವಲಂಬನದ ಗುರಿಯತ್ತ ಒಯ್ಯುವಲ್ಲಿ ಸಾಧನ ಯಂತ್ರ ಕಾರ್ಖಾನೆಗೆ ಅತ್ಯುನ್ನತ ಸ್ಥಾನವಿದೆ; ಆರ್ಥಿಕ ಭದ್ರತೆಯನ್ನು ಈ ಬಗೆಯ ಕಾರ್ಖಾನೆಯಿಲ್ಲದೆ ಪಡೆಯುವುದೇ ಸಾಧ್ಯವಿಲ್ಲವೆನ್ನುವಷ್ಟು ಆದು ಶ್ರೇಷ್ಠವಾದ ಪಾತ್ರವನ್ನು ನಿರ್ವಹಿಸುತ್ತದೆ.

ಯಂತ್ರಗಳ ರಚನೆಗೆ ಅನುಕೂಲವಾದ ರೀತಿಯಲ್ಲಿ ಲೋಹಗಳನ್ನು ಕತ್ತರಿಸಿ, ಅವುಗಳಿಗೆ ಅಪೇಕ್ಷಿತ ರೂಪವನ್ನು ಕೊಡುವ 'ಲೇತ್' ಎಂದು ಆಂಗ್ಲ ಭಾಷೆಯಲ್ಲಿ ಕರೆಯುವ "ಕಡಿವು ಹಿಡಿಯುವ" ಸಲಕರಣೆಗಳನ್ನು ಈ ಕಾರ್ಖಾನೆಯು ಈಗ ಉತ್ಪಾದಿಸಲು ಪ್ರಾರಂಭಿಸಿರುತ್ತದೆ. ಅತ್ಯುತ್ಕೃಷ್ಟ ಮಟ್ಟವನ್ನು ಇಲ್ಲಿ ಕಾಯ್ದುಕೊಳ್ಳಲಾಗಿದೆಯಲ್ಲದೆ, ಕೃಷ್ಣೇಣ ಉತ್ಪಾದನೆಯನ್ನು ವಿಸ್ತರಿಸುವ ಮತ್ತು ಯಂತ್ರಗಳೆಲ್ಲವನ್ನೂ ಇಲ್ಲಿಯೇ ತಯಾರಿಸುವ ಗುರಿ ಕಾರ್ಖಾನೆಗಿದೆ ಎಂದು ತಿಳಿದು ಬರುತ್ತದೆ.

ಜಾಸಗಿ ರಂಗದ ಕಾರ್ಯ

ನಮ್ಮ ದೇಶದಲ್ಲಿ - ಬೆಂಗಳೂರಿಗೆ ಆಮೈಲು ದೂರದ ಜಾಲಹಳ್ಳಿಯಲ್ಲಿ ನೆಲಸಿರುವ ಈ ಕಾರ್ಖಾನೆಯೇ ಸಾಧನ ಯಂತ್ರದ ತಯಾರಿಕೆಯಲ್ಲಿ ದೊಡ್ಡದು. ೧೯೯೦ ವರ್ಷ ಹಿಂದಿನಿಂದ ಸಣ್ಣ ಮಟ್ಟದಲ್ಲಿ ಇಂಥ ಕಾರ್ಖಾನೆಗಳನ್ನು ಕೆಲವು ಕಡೆಗಳಲ್ಲಿ ಭಾರತೀಯರು ನಡೆಸುತ್ತಿದ್ದರು. ತಾವು ಸ್ಥಾಪಿಸಿದ ಕಾರ್ಖಾನೆಯಲ್ಲಿನ ಯಂತ್ರಗಳ ದುರಸ್ಥಿತಿಗೆ ಅಗತ್ಯವೆನಿಸಿದ ಬಿಡಿ ಭಾಗಗಳನ್ನು ತಯಾರಿಸಿಕೊಳ್ಳುವುದ ಕೈಯೇ ಅವರು ಮಹತ್ವ ಕೊಡುತ್ತಿದ್ದರು; ಹೊರತು ವೇಟೆಗೆ ತಂದು ಮಾರುವ ಉದ್ದೇಶವನ್ನು ಇಟ್ಟು ಕೊಂಡಿರಲಿಲ್ಲ.

ಭಾರತೀಯ ತಯಾರಕರ ಸರಕುಗಳ ಗುಣಾಂಶವೂ ಬಹಳ ಕಡಿಮೆಯಾಗಿತ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ, ಹೊರದೇಶಗಳಿಂದ ಆಮದು ಮಾಡಿಕೊಂಡೇ ಈ ದೇಶದ ಅವಶ್ಯಕತೆಯನ್ನು ಪೂರೈಸಿಕೊಳ್ಳುವ ಪರಿಸ್ಥಿತಿ ಇತ್ತಿನ್ನಬಹುದು. ಕಳೆದ ಯುದ್ಧಕಾಲದಲ್ಲಿ ದೇಶದೊಳಗೆ ಚಟುವಟಿಕೆಗಳು ಹೆಚ್ಚಿಕೊಂಡರೂ ಗಣನೀಯ ಹೆಚ್ಚಿಳಿಯನ್ನು ಜಾಸಗಿ ವಲಯದವರು ಇತರೆ ಯಂತ್ರೋಪಕರಣಗಳಿಗೆ ಕೊಡಲಾದಷ್ಟು ಪ್ರಾಶಸ್ತ್ಯವನ್ನೂ ಮಹತ್ವವನ್ನೂ ಇತರ ಬಗೆಯ ಸರಕುಗಳಿಗೆ ಕೊಡಲಿಲ್ಲ.

ಸರಕಾರದ ನಿರ್ಧಾರ

ಹೀಗೆ ಖಾಸಗಿ ರಂಗವು ತೀರ ಅಸಮರ್ಥವಾಗಿದೆ ಎಂದು ಸಿದ್ಧವಾದಾಗ, ಭಾರತ ಸರಕಾರ ತಾನೇ ಈ ದೊಡ್ಡ ಕೈಗಾರಿಕೆಯನ್ನು ಸ್ಥಾಪಿಸಲು ಮುಂದಾಯಿತು. ದಿವಂಗತ ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರು ಕೇಂದ್ರದಲ್ಲಿ ಕೈಗಾರಿಕಾ ಖಾತೆಯ ಮಂತ್ರಿಯಾಗಿದ್ದಾಗ ಈ ಅಭಿದ್ಧಮಕ್ಕೆ ವಿಶೇಷವಾದ ಚಾಲನೆ ದೊರಕಿತು. ೧೯೪೮ರಲ್ಲಿ ಯೋಜನೆಯ ಪ್ರಥಮ ಕಲ್ಪನೆಯು ೩೨ ಕೋಟಿ ರೂಪಾಯಿಗಳ ವೆಚ್ಚವನ್ನು ತರುವಷ್ಟು ದೊಡ್ಡದಿತ್ತು. ದೂರ ಹೆಣಕಾಸಿನ ಮುಗ್ಗಟ್ಟಿನಿಂದಾಗಿ ಅದನ್ನು ಪುನಃ ಪರಿಶೀಲಿಸಿ ೨೩ ಲಕ್ಷ ರೂಪಾಯಿಗಳ ಈಗಿನ ವೆಚ್ಚದ ಮಟ್ಟಕ್ಕೆ ಇಳಿಸಲಾಯಿತು.

ಕಾರ್ಖಾನೆಯನ್ನು ಸ್ವಿಜರಲೆಂಡಿನ ಕಂಪೆನಿಯೊಂದರ ಸಹಕಾರದಿಂದ ಕಟ್ಟಲಾಗಿದೆ. ಇದರ ನೇತೃತ್ವದಲ್ಲಿ ಉತ್ಪಾದನೆಯನ್ನು ಸಮರ್ಥ ರೀತಿಯಲ್ಲಿ ನಡೆಸಿಕೊಳ್ಳಲು ಸಾಧ್ಯವಾಗುವುದಲ್ಲದೆ ತಾಂತ್ರಿಕ ವಿಭಾಗದಲ್ಲಿ ದಕ್ಷತೆಯಿಂದ ಕೆಲಸ ನಡಸಬಲ್ಲ ಭಾರತೀಯ ಕಾರ್ಮಿಕರನ್ನು ತರಬೇತಿಗೊಳಿಸುವ ಕಾರ್ಯಕ್ರಮವೂ ನೆರವೇರುತ್ತದೆ. ಕಾರ್ಖಾನೆಯಲ್ಲಿ ಸಾಮಾನ್ಯ ಕೆಲಸಗಾರರಿಗಲ್ಲದಿದ್ದರೂ ಆವಶ್ಯಕ ಸಿಬ್ಬಂದಿಗೆ ವಸತಿ ಸೌಕರ್ಯದ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ.

ಸಮನ್ವಯ ಕಾರ್ಯಕ್ರಮ

ಸಾಧನಯಂತ್ರವು ಯಾವುದೇ ಔದ್ಯೋಗೀಕರಣ ಕಾರ್ಯಕ್ರಮದಲ್ಲಿ ಅತ್ಯವಶ್ಯಕ ಭಾಗವಾಗುತ್ತದೆ. ನಮ್ಮ ಪ್ರಥಮ ಯೋಜನೆಯಲ್ಲಿ ಕೈಗಾರಿಕೆಗಳು ಸಾಕಷ್ಟು ವಿಸ್ತರಿಸಿದೆ; ದ್ವಿತೀಯ ಯೋಜನೆಯಲ್ಲಿಯಂತೂ ಕೈಗಾರಿಕೆಗಳ ವ್ಯಾಪ್ತಿಯು ಬಹಳಷ್ಟು ಹೆಚ್ಚುತ್ತದೆ ಆದುದರಿಂದ ಈಗಿರುವ ಯಂತ್ರೋಪಕರಣಗಳಿಗೆ ಬದಲಾಯಿಸಲು ಬೇಕಾಗುವ ಯಂತ್ರ ಭಾಗಗಳಲ್ಲದೆ ಹೊಸತಾಗಿ ಸ್ಥಾಪನೆಗೊಳ್ಳುವ ಕಾರ್ಖಾನೆಗಳಿಗೂ ಯಂತ್ರ ಭಾಗಗಳು ಬೇಕಾಗುತ್ತವೆ. ಇದನ್ನು ಗಮನಿಸಿದರೆ ಸಾಧನಯಂತ್ರ ಕಾರ್ಖಾನೆಯ ಉತ್ಪಾದನೆಗೆ ನಿರಂತರವಾದ ಬೇಡಿಕೆ ಇರುವುದು ಸ್ಪಷ್ಟವೆನ್ನಲು ಆಕ್ಷೇಪವಿಲ್ಲ.

ಸರಕಾರದವರು ಸ್ಥಾಪಿಸಿದ ಜಾಲಹಳ್ಳಿಯ ಕಾರ್ಖಾನೆಯು ದೇಶದಲ್ಲಿ ಈಗಾಗಲೇ ಖಾಸಗಿ ಉತ್ಪಾದಕರು ನೆಲೆಗೊಳಿಸಿರುವ ಸಮಾನಾಂತರ ಕಾರ್ಖಾನೆಗಳೊಡನೆ ಸ್ಪರ್ಧೆ ನಡೆಸಬೇಕಾದ್ದೆಂದು ತಿಳಿದು ಬರುತ್ತದೆ. ಖಾಸಗಿ ರಂಗದೊಡನೆ ಸರಕಾರ ಸಹಕಾರ ಇರಿಸಿಕೊಂಡಿದೆಯೆಂದೂ ಹೊಸ ಕಾರ್ಖಾನೆಯ ವಸ್ತುಗಳನ್ನು ಖಾಸಗಿಯವರು ಸಮಸ್ವಯ ಸಾಧಿಸಲು ಉದ್ದೇಶಿಸಿದೆಯೆಂದೂ ತಿಳಿಯಲಾಗಿದೆ. ಆದುದರಿಂದ ಯಾರ ಮನಸ್ಸನ್ನೂ ನೋಯಿಸದೆ ಭಾರತದ ಔದ್ಯೋಗೀಕರಣಕ್ಕೆ ಈ ಕಾರ್ಖಾನೆಯು ವಿಶಿಷ್ಟ ರೀತಿಯಲ್ಲಿ ನೆರವಾಗಿ ಸ್ವಾವಲಂಬನೆಗೊಯ್ಯುವುದೆಂದು ಭರವಸೆಯನ್ನು ತಾಳಬಹುದು.

ಅಮೃತಾಂಜನ

ಎಲ್ಲಾಕಡೆ ೫೦ ವರ್ಷ ಸಿದಿದ ಮತ್ತು ಸ್ವಾಯದ ನೋವುಗಳಿಗೆ

ಮಾರ್ಕೆಟ್ ಲಿಮಿಟೆಡ್

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್ ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಪೆರಂಬೂರಿನ ತಯಾರಿಕೆ



ಸ್ವಾವಲಂಬಿಯಾಗಿ ಭಾರತವನ್ನು ರೂಪಿಸುವ ಪ್ರಯತ್ನದಲ್ಲಿ ಪೆರಂಬೂರಿನಲ್ಲಿ ಪೂರ್ಣಕಾರದ ರೈಲುಬಂಡಿಯನ್ನು ತಯಾರಿಸುವ ಕಾರ್ಖಾನೆಯನ್ನು ನೆಲೆಗೊಳಿಸಿರುವುದು ಪ್ರಾಮುಖ್ಯವಾದೊಂದು ಹೆಜ್ಜೆಯಾಗಿದೆ. ಮೂರನೆಯ ವರ್ಗದ ಈ ಡಬ್ಬಿಯು ಆತ್ಯಾಧುನಿಕ ಮಾದರಿಯದ್ದಾಗಿದೆ, ಆಕರ್ಷಕ, ಪ್ರಯಾಣದಲ್ಲಿ ಭದ್ರತೆಯನ್ನೂ ಹೆಚ್ಚಿನ ಸೌಲಭ್ಯವನ್ನೂ ಕೊಡುತ್ತದೆ. ಸ್ವಾತಂತ್ರ್ಯಗಳಿಂದ ಗಾಂಧೀ ಜಯಂತಿಯಂದು ಈ ಮಾದರಿಯ ಪ್ರಥಮ ಬಂಡಿ ಉದ್ಘಾಟಿಸಲ್ಪಟ್ಟಿದ್ದು ಸಾವಿರಾರು ಜನರ ಸ್ವಾಗತ ಕೋರಿತು.

ಫಜಲ ಅಲಿ ಆಯೋಗದ ವರದಿಯ ಮೇಲೆ ಬೆಳಕು

ರಾಷ್ಟ್ರದ ಸಮಗ್ರ ಆವಶ್ಯಕತೆಗೆ ಒಳಪಟ್ಟು ರಾಜ್ಯಗಳ ಸ್ವರೂಪ ನಿರ್ಣಯ

ಎಲ್ಲರೂ ಕುತೂಹಲದಿಂದ ಕಾಯುತ್ತಿದ್ದ ಫಜಲ ಅಲಿ ಆಯೋಗದ ವರದಿಯು ಇದೇ ೧೦ನೇ ದಿನಾಂಕ ಪ್ರಕಟವಾಗಿದೆ; ಊಹಾಪೋಹಗಳ ರೂಪದಲ್ಲಿ ಹಬ್ಬಿದ ಸುದ್ದಿಗಳಲ್ಲಿ ಹೆಚ್ಚಿನವು ನಿಜವಾಗಿವೆ ಎಂಬುದನ್ನು ವರದಿಯ ಸಾಮಾನ್ಯ ನೋಟ ಮನಗಾಣಿಸುತ್ತದೆ. ಆದುದರಿಂದ ಆಶ್ಚರ್ಯಚಕಿತರನ್ನಾಗಿ ಜನರನ್ನು ವರದಿಯು ಮಾಡಿಲ್ಲ. ಮೊದಲು ಸಂತಸಗೊಂಡಿದ್ದವರಿಗೆ ಈಗ ಸಂತೋಷದ ವಾರ್ತೆಯನ್ನೇ ವರದಿ ತಂದಿದೆ; ಕಳವಳಗೊಂಡವರ ಪಾಲಿಗೆ ಈಗಲೂ ಗೊಂದಲವೇ ಉಳಿದಿದೆ. ಯಾರಿಗೂ ಅಜ್ಞಾತವಾಗದಂತೆ ಊಹಾಪೋಹಗಳು ರಕ್ಷಣೆ ಕೊಟ್ಟು, ವರದಿಯ ಪ್ರಕಟಣೆಯ ಕಾಲವನ್ನು ಹದಗೊಳಿಸಿದವು—ಎನ್ನಬಹುದು.

ಕಾಲ ಅನುಕೂಲ

ವರದಿಯಲ್ಲಿ ಭಾರತದ ರಾಜ್ಯಗಳನ್ನು ಪುನರ್ಘಟಿಸುವ ಆವಶ್ಯಕತೆ ಇದೆಯೆ? ಇದ್ದರೂ ಈಗ ಸಮಯ ಯೋಗ್ಯವಾಗಿದೆಯೆ? ಎಂಬಿತ್ಯಾದಿ ಪ್ರಶ್ನೆಗಳನ್ನು ವಿವೇಚಿಸಿ ಉತ್ತರ ಕೊಡಲಾಗಿದೆ. "ಭಾಷಾನುಗುಣವಾದ ರಾಜ್ಯಗಳ ರಚನೆಯಲ್ಲಿ ಪರಿಣಾಮವಾಗುವುದೆಂಬ ಕಾರಣವನ್ನು ಮುಂದಿಟ್ಟು ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ಬಲವಾಗಿ ವಿರೋಧಿಸಲಾಗುತ್ತದೆ. ಭಾಷಾನುಗುಣ ರಾಜ್ಯಗಳಾಗುವವೆಂಬ ಭಾವನೆಯೊಂದಲ್ಲದಿದ್ದರೆ, ಈಗಿನ ರಾಜ್ಯಗಳನ್ನೆಲ್ಲ ಸುಸಂಬದ್ಧವಾದ ರೀತಿಯಲ್ಲಿ ಪುನರ್ಘಟನೆಗೆ ಒಳಪಡಿಸುವ ಕುರಿತು ಸಾಮಾನ್ಯವಾಗಿ ಸದಭಿಪ್ರಾಯವೇ ಇದೆ. .....ನಾವು ವಿಷಯವನ್ನು ಕೆಲಸಮಯದ ವರೆಗೆ ಮುಂದೂಡಬಹುದು; ಆದರೆ ಆಂಧ್ರ ರಾಜ್ಯದ ಸ್ಥಾಪನೆಯೂ ಅನಂತರದ ಘಟನೆಗಳೂ ಪ್ರಶ್ನೆಯನ್ನು ಅವಸರದಿಂದ ಗಮನಿಸುವಂತೆ ಮಾಡಿವೆ..... ಆದುದರಿಂದ ಭಾರತದ ರಾಜ್ಯಗಳ ನಕ್ಷೆಯನ್ನು ಮರಳಿ ಬರೆಯುವ ಕಾರ್ಯವನ್ನು ಎಷ್ಟು ಕಡಿಮೆ ವಿಳಂಬ ಸಾಧ್ಯವೋ ಅಷ್ಟು ಬೇಗನೇ ಮುಗಿಸಬೇಕು; ಈ ವಿಷಯದಲ್ಲಿ ಉಂಟಾಗುವ ಬದಲಾವಣೆಗಳು ಭಾರತದಲ್ಲಿ ಹೆಚ್ಚಿನ ಜನರಿಗೆ ತೃಪ್ತಿ ತರುತ್ತವೆಂದು ಭಾವಿಸಬೇಕು"— ಎಂದು ವರದಿ ಹೇಳುತ್ತದೆ.

ವ್ಯಾಪಕವಾದ ಪತ್ರ

ತನ್ನ ಸಿಫಾರಸುಗಳ ಆಧಾರವೇನೆಂದು ಸ್ಪಷ್ಟ ಪಡಿಸುವುದಕ್ಕೂ ಆಯೋಗವು ನೋಡಿದೆ. ಮುಖ್ಯವಾಗಿ ರಾಷ್ಟ್ರೀಯ ಭಾವನೆಗೆ ಅಡ್ಡಿಯಾಗದಂತೆ ಮತ್ತು ಭದ್ರತೆಗೆ ಆತಂಕವಾಗದಂತೆ ಜಾಗ್ರತೆ ವಹಿಸಲಾಗಿದೆ; ಕೇವಲ ಭಾಷೆಯ ತಳಹದಿಯೊಂದರ ಮೇಲಿಂದಲೇ ಪುನರ್ಘಟನೆಯ ಪ್ರಶ್ನೆಯನ್ನು ವಿವೇಚಿಸುವುದು ಯೋಗ್ಯವಲ್ಲವೆಂದೂ ಸಮನ್ವಯ ದೃಷ್ಟಿಯನ್ನಿಟ್ಟು ಇತರ ವಿಷಯಗಳೊಡನೆ ತೂಗಿ ನೋಡಬೇಕೆಂದು ಅದು ಹೇಳಿದೆ; ಆದರೆ ಆರ್ಥಿಕ ಘಟಕಗಳಾಗಿಯೇ ರಾಜ್ಯಗಳನ್ನು ವಿಂಗಡಿಸುವುದು ಸಾಧ್ಯವಲ್ಲ ಎಂದಿದೆ. ಆಡಳಿತದ ಸೌಕರ್ಯ ಮತ್ತು ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತುವ ದೃಷ್ಟಿಯಲ್ಲಿ ಭೌಗೋಲಿಕ ಹಿನ್ನೆಲೆಯನ್ನು ಗಮನಿಸಬೇಕೆಂದೂ ಈಗಿನ ವಿದ್ಯಮಾನಗಳಿಗೆ ಪ್ರಾಚೀನ ಇತಿಹಾಸಕ್ಕಿಂತ ಹೆಚ್ಚು ಮಹತ್ವ ಕೊಡಬೇಕೆಂದೂ ಆಯೋಗ ಅಭಿಪ್ರಾಯಪಟ್ಟಿದೆ. ಸಾಂಸ್ಕೃತಿಕ ಸಂಬಂಧ ಮತ್ತು ಶೈಕ್ಷಣಿಕ ಆವಶ್ಯಕತೆಗಳನ್ನೂ ಆಯೋಗ ಗಮನದಲ್ಲಿಟ್ಟುಕೊಂಡಿದೆ. ಜಾತೀಯ ಭಾವನೆಗೆ ಪೋಷಣೆ ದೊರೆಯಬಾರದೆಂಬ ನಿಲುಮೆಯನ್ನು ಅದು ಹೊಂದಿದೆ. ಏಕ ಭಾಷೆ—ಏಕ ಸ್ವಾಂತ್ಯ ಎಂಬ ಪಲ್ಲವಿಯೂ ಹುರುಳಿಲ್ಲದೆಂದು ಅದು ನಂಬಿದೆ.

ಹೊಸ ರಾಜ್ಯಗಳ ಹೆಸರು

ಇಷ್ಟು ವಿಶಾಲವಾದ ವ್ಯಾಪಕವಾದ ಮತ್ತು ಪರಸ್ಪರ ಗಾಢವಾಗಿ ಹೆಣೆದು ಕೊಂಡ ತತ್ವಗಳ ಹಿನ್ನೆಲೆಯಲ್ಲಿ ಆಯೋಗವು ಸೂಚನೆಗಳನ್ನು ಮಾಡಿದೆ. ಇದರ ಪ್ರಕಾರ ಕರ್ನಾಟಕ, ಕೇರಳ, ಮದ್ರಾಸು, ಆಂಧ್ರ, ತೆಲಂಗಾಣ, ಒಡಿಸ, ಬಂಗಾಲ, ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಪಂಜಾಬ, ರಾಜಸ್ಥಾನ, ಮಧ್ಯ ಪ್ರದೇಶ, ವಿದರ್ಭ, ಮತ್ತು ಮುಂಬಯಿಗಳೆಂಬ ಹದಿನೈದು ರಾಜ್ಯಗಳೂ ದಿಲ್ಲಿ, ಮಣಿಪುರ ಮತ್ತು ಅಂಡಮಾನ-ನಿಕೋಬಾರಗಳೆಂಬ ಕೇಂದ್ರದ ಆಡಳಿತಕ್ಕೊಳಪಟ್ಟ ಮೂರು ಪ್ರದೇಶಗಳೂ ರಚಿಸಲ್ಪಡುತ್ತವೆ ಆಯೋಗವು ಈಶಾನ್ಯ ಗಡಿವಲಯದ ಆಡಳಿತವು ಈಗಿನಂತೆಯೇ ಮುಂದರಿಯಬೇಕೆಂದು ಹೇಳಿದೆ; ಆದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಕುರಿತು ಅದು ಏನನ್ನೂ ಹೇಳಲು ಹೋಗಿಲ್ಲ. ಈಗಿರುವ ಎ, ಬಿ, ಸಿ ಎಂಬ ಮೂರು ವರ್ಗದ ರಾಜ್ಯಗಳ ಪದ್ಧತಿಯನ್ನು ತೆಗೆದು ಹಾಕಬೇಕೆಂದು ಆಯೋಗ ಸೂಚಿಸಿದೆ; ಮತ್ತು ಹೊಸ ರಾಜ್ಯಗಳಲ್ಲಿ ಭಾರತ ದೇಶದ ನಾಗರಿಕ ತಾನೆಂಬ ಭಾವನೆಗೆ ಪೋಷಕವಲ್ಲದ ಯಾವದೇ ಕ್ರಮಗಳು ಇರಲಾಗದೆಂದು ಹೇಳಿ, ಇದಕ್ಕಾಗಿ ಅನುಸರಿಸಬೇಕಾದ ಕ್ರಮಗಳನ್ನು ವಿವರಿಸಿದೆ.

ರಾಜ ಪ್ರಮುಖರು ಬೇಡ

ಹೊಸ ರಾಜ್ಯಗಳ ರಚನೆಯೊಂದಿಗೆ ಆಯೋಗ ಮಾಡಿದ ಇನ್ನೊಂದು ವ್ಯಾಮುಖ್ಯವಾದ ಸೂಚನೆಯು "ರಾಜ ಪ್ರಮುಖ" ಹುದ್ದೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಿಸಿದೆ. ಪ್ರಜಾಪ್ರಭುತ್ವದ ಭಾವನೆಗೆ ರಾಜಪ್ರಮುಖ ಹುದ್ದೆಯು ಪೋಷಕವಾಗಿಲ್ಲವೆಂದು ಅದು ಹೇಳಿದೆ; ಒಂದು ವೇಳೆ ರಾಜ ಪ್ರಮುಖರನ್ನು ಅಧಿಕಾರದಲ್ಲಿಡಬೇಕಾಗಿ ಬಂದರೂ ಅವರವರ ರಾಜ್ಯದಲ್ಲಿಯೇ ಅವರನ್ನು ಪಟ್ಟಕ್ಕೇರಿಸುವ ಈಗಿನ ಕ್ರಮವನ್ನು ಬದಲಿಸಿ, ಇತರ ಯಾವುದಾದರೊಂದು ರಾಜ್ಯಕ್ಕೆ ಅವರನ್ನು ನೇಮಿಸಬೇಕು ಎಂದು ಹೇಳಿದೆ. ಆಯೋಗದ ಸೂಚನೆಯಂತೆ ಮೈಸೂರು, ತಿರುಕೊಚ್ಚಿ, ಹೈದರಾಬಾದು, ಸೌರಾಷ್ಟ್ರ, ಪೆಪ್ಸು ಈ ಬ ವರ್ಗದ ರಾಜ್ಯಗಳೂಕೊಡಗು, ಮಧ್ಯ ಭಾರತ, ಭೋಪಾಳ, ವಿಂಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಅಜ್ಮೀರ ಮತ್ತು ತ್ರಿಪುರಗಳೆಂಬ ಇತರ ರಾಜ್ಯಗಳೂ ಮಾಯವಾಗುತ್ತವೆ. ತನ್ನ ಸಿಫಾರಸುಗಳನ್ನು ೧೯೫೬ನೇ ಇಸವಿಯ ವಾರ್ಷಿಕ ತಿಂಗಳೊಳಗಾಗಿ ಜಾರಿಗೆ ತರುವುದು ವಿಹಿತವೆಂದು ಆಯೋಗ ಸಲಹೆ ಮಾಡಿದೆ. ಹಾಗಲ್ಲದಿದ್ದರೆ ಅಷ್ಟು ಹೊತ್ತಿಗೆ ನೇಮಕವಾಗುವ ದ್ವಿತೀಯ ಆರ್ಥಿಕ ವಿಚಾರಣಾ ಮಂಡಳಕ್ಕೆ ಹೊಸ ರಾಜ್ಯಗಳ ಹಣಕಾಸಿನ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗದೆ ಹೋದೀತೆಂದು ಅದು ತಿಳಿಸಿದೆ.

೨೨ ತಿಂಗಳ ಕಾರ್ಯ

ಆಯೋಗದಲ್ಲಿ ಪರಿಷ್ಠ ನ್ಯಾಯಾಲಯದ ಹಿಂದಿನ ನ್ಯಾಯಾಮೂರ್ತಿ ಹಾಗು ಒಡಿಸಾದ ಮಾಜಿ ಗವರ್ನರರಾದ ಶ್ರೀ ಸೈಯದ್ ಫಜಲ್ ಅಲಿಯವರೂ (ಅಧ್ಯಕ್ಷ), ರಾಜ್ಯ ಸಭೆಯ ಸದಸ್ಯ ಹಾಗು ಶ್ರೇಷ್ಠ ಆರ್ಥಿಕ ನಿಪುಣ ಡಾ. ಹೃದಯನಾಥ ಕುಂಜ್ರು ಮತ್ತು ಈಜಿಪ್ಟು ಮತ್ತು ಚೀನದಲ್ಲಿ ಭಾರತದ ರಾಯಭಾರಿಯಾಗಿದ್ದ ಮತ್ತು ಇತಿಹಾಸ ಪಂಡಿತರೆಂದು ಹೆಸರಾದ ಸರದಾರ ಕೆ. ಎಂ. ಪಣಿಕ್ಕರ—ಇವರೂಇದ್ದರು. ೧೯೫೩ನೇ ದಶಂಬರ ತಿಂಗಳಲ್ಲಿ ಆಯೋಗವನ್ನು ನೇಮಿಸುವ ಘೋಷಣೆಯನ್ನು ಪ್ರಧಾನ ಮಂತ್ರಿ ನೆಹರು ಸಂಸತ್ತಿನಲ್ಲಿ ಮಾಡಿದರು. ಆಯೋಗದವರು ೨೨ ತಿಂಗಳುಗಳ ಕಾಲ ಪರಿಶ್ರಮವನ್ನು ವಹಿಸಿ ತನ್ನ ವರದಿಯನ್ನು ತಯಾರಿಸಿತು. ೩೮೦೦೦ ಮೈಲುಗಳಿಗಿಂತಲೂ ಹೆಚ್ಚು ಸಂಚರಿಸಿ ೧೦೪ ಸ್ಥಳಗಳಿಗೆ ಅದು ಭೇಟಿ ನೀಡಿತು; ೯ ಸಾವಿರ ಜನರ ಸಂದರ್ಶನವನ್ನು ಪಡೆಯಿತು. ೧೫೨೩೦೦ ಮನವಿಗಳನ್ನು ಸ್ವೀಕರಿಸಿತು; ಇವುಗಳಲ್ಲಿ ೨ ಸಾವಿರದಷ್ಟು ಮನವಿಗಳು ತುಂಬ ಅಭ್ಯಾಸ ಪೂರ್ಣವಾದ ವಿವರಗಳಿಂದ ಕೂಡಿದ್ದವು. ಇನ್ನೆಲ್ಲ ಆಯೋಗ ಪರಿಶೀಲಿಸಿದೆಯಲ್ಲದೆ, ಜನಾಭಿಪ್ರಾಯವನ್ನು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಕೇಳಿಕೊಂಡಿರುತ್ತದೆ.

ಉಲ್ಲೇಖನೀಯ ವೈಶಿಷ್ಟ್ಯ

ಮುಂಬಯಿ ಮತ್ತು ಪೆಪ್ಸುಗಳು ಆಯೋಗದ ಸೂಚನೆಯಂತೆ ದ್ವಿಭಾಷಾ ರಾಜ್ಯಗಳಾಗುತ್ತವೆ. ಮಧ್ಯ ಪ್ರದೇಶವು ವಿಸ್ತಾರದಲ್ಲಿ ಬಹಳ ದೊಡ್ಡದೆನಿಸುತ್ತದೆ; ಕೇರಳವು ಅತಿ ಚಿಕ್ಕ ರಾಜ್ಯವಾಗುತ್ತದೆ. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಇರುತ್ತದೆ; ವಿದರ್ಭವು ಜನಸಂಖ್ಯೆ ಬಹಳ ಕಡಿಮೆಯಾಗಿರುವ ರಾಜ್ಯವಾಗುತ್ತದೆ. ಉತ್ತರ ಪ್ರದೇಶ ಮತ್ತು ಒಡಿಸಗಳ ಗಡಿಯಲ್ಲಿ ಆಯೋಗವು ಯಾವ ಬದಲಾವಣೆಯನ್ನೂ ಸೂಚಿಸಿಲ್ಲ. ಆದರೆ ಉತ್ತರ ಪ್ರದೇಶವನ್ನು ಎರಡು ಭಾಗವಾಗಿ ಮಾಡಬೇಕೆಂದು ಸರ್ದಾರ ಪಣಿಕ್ಕರರು ತಮ್ಮ ವಿಚಾರವನ್ನು ಬಲವಾಗಿ ಪ್ರತಿಪಾದಿಸಿದ್ದಾರೆ. ಆಯೋಗದ ಅಧ್ಯಕ್ಷರು ಹಿಮಾಚಲ ಪ್ರದೇಶವನ್ನು ಪಂಜಾಬಿನಲ್ಲಿ ಸೇರಿಸುವುದಕ್ಕೆ ವಿರೋಧವನ್ನು ಸೂಚಿಸಿದ್ದಾರೆ; ಅಲ್ಲದೆ ಬಿಹಾರಿನೊಡನೆ ತನಗಿದ್ದ ಗಾಢ ಸಂಪರ್ಕವನ್ನು ದೃಷ್ಟಿಯಲ್ಲಿಟ್ಟುಕೊಂಡು, ಆ ರಾಜ್ಯದ ಪುನರ್ಘಟನೆಯ ವಿಚಾರದಲ್ಲಿ ತಾಟಸ್ಥ್ಯವನ್ನೂ ವಹಿಸಿದ್ದಾರೆ. ಸಾಮಾನ್ಯವಾಗಿ ಜಿಲ್ಲೆಗಳನ್ನು ಒಡೆಯಬಾರದೆಂದು ಹೇಳಿದರೂ ತಾಲೂಕುಗಳನ್ನು ತಮಗೆ ತೋರಿದ ಆವಶ್ಯಕತೆಗನುಸಾರ ಬೇರ್ಪಡಿಸಿದ್ದಾರೆ; ಮತ್ತು ತುಂಗಭದ್ರೆಯ ಅಣೆಕಟ್ಟಿನ ನೆಪದಲ್ಲಿ ಮಲ್ಲಾಪುರಂ ಉಪತಾಲೂಕಿನ ಕೆಲವು ಭಾಗಗಳನ್ನು ಪ್ರತ್ಯೇಕಿಸುವುದಕ್ಕೂ ನೋಡಿದ್ದಾರೆ. ಭಾಷೆಯ ದೃಷ್ಟಿಯಿಂದ ಪ್ರತ್ಯೇಕ ರಾಜ್ಯವಿಲ್ಲದವರೆಂದರೆ ಗುಜರಾತಿಗಳು ಮಾತ್ರ.

ಮನನೀಯ ಸಿಫಾರಸುಗಳು

ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾಗಿ ಹೊಸ ರಾಜ್ಯಗಳಲ್ಲಿ ಪರಿಣಮಿಸುವವರ ಹಿತದ ಸಲುವಾಗಿ ಆಯೋಗ ಮಹತ್ವದ ಸೂಚನೆಗಳನ್ನು ಮಾಡಿದೆ. ಅವರವರ ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಕೊಡಲ್ಪಡಬೇಕೆಂದು ಅದು ತಿಳಿಸಿದೆ. ಹಿಂದುಳಿದ ಕೆಲವು ಪ್ರದೇಶಗಳು ಭೌಗೋಲಿಕ ಮಹತ್ವದ ದೆಸೆ

(೧೯ನೇ ಪುಟ ನೋಡಿರಿ)

ದಿ ಜುಪಿಟರ್ ಜನರಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ-1.

ಒಟ್ಟು ನಿಧಿ ರೂಪಾಯಿ 3 ಕೋಟಿ 50 ಲಕ್ಷಕ್ಕೆ ಮೀರಿ ಇದೆ.

ಪೋಲಿಸಿದಾರರಿಗೆ ಆಗಾಗ್ಗೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.

ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ, ಪಾಕಿಸ್ತಾನ, ಬರ್ಮಾ, ಸಿಲೋನ್, ಬ್ರಿಟಿಷ್ ಆಫ್ರಿಕಾ, ಲಂಡನ್ ಇತ್ಯಾದಿ ಕಡೆಗಳಲ್ಲಿ ಶಾಖಾ, ಆಫೀಸುಗಳೂ ಏಜನ್ಸಿ ಆಫೀಸುಗಳೂ ಇವೆ.

ಪ್ರಾತಿನಿಧ್ಯಕ್ಕೆ ವ ಇತರ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ:

ಯಸ್. ಎ. ಹೆಗ್ಡೆ,

ಸುಪರಿಂಟೆಂಡೆಂಟ್, ಆಫ್ ಏಜನ್ಸಿಸ್,

ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಪೋಸ್ಟ್ ಶಿರ್ವ, ದ. ಕ.

ಸೂಚಿತ ಕರ್ನಾಟಕ ವಲಯದ ರೂಪ

ಬಳ್ಳಾರಿ ಮತ್ತು ಕಾಸರಗೋಡುಗಳು ಈ ರಾಜ್ಯದಲ್ಲಿಲ್ಲ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಸ್ತಾರವಾಗಿ ಪರಿಶೀಲಿಸಿದ ಫಜಲ್ ಅಲಿ ಆಯೋಗದ ಸಿಫಾರಸಿನ ಪರಿಣಾಮವಾಗಿ ಕರ್ನಾಟಕ ಏಕೀಕರಣದ ಬಹು ದಿನಗಳ ಆಶೆ ಫಲಿಸುವ ದಿನ ಬಹಳ ಸಮೀಪವಾಗಿದೆ. ಅನಧಿಕೃತ ಸುದ್ದಿಗಳನ್ನು ನಂಬುವುದಾದರೆ ಮುಂದಿನ ಗಾಂಧೀ ಜಯಂತಿಯಂದು (ತಾ. ೨-೧೦-೧೯೫೬) ಸಂಯುಕ್ತ ಕರ್ನಾಟಕ ರಾಜ್ಯವು ಅಸ್ತಿತ್ವದಲ್ಲಿ ಬರಬಹುದು. ಆಯೋಗದ ಸಿಫಾರಸು ಕನ್ನಡ ರಾಜ್ಯದಲ್ಲಿ ಒಳಗೊಳ್ಳಬೇಕಾದ ಪ್ರದೇಶಗಳ ವಿಷಯದಲ್ಲಿ, ಮುಖ್ಯವಾಗಿ ಗಡಿ ಪ್ರದೇಶಗಳ ಭವಿಷ್ಯವನ್ನು ನಿರ್ಧರಿಸುವಲ್ಲಿ, ತುಂಬ ಅಸಮಾಧಾನಕರವಾಗಿದ್ದರೂ ಸಹ ೧೯೫೦ ಲಕ್ಷ ಜನಸಂಖ್ಯೆಯುಳ್ಳ ವಿಶಿಷ್ಟ ಚಿದರ ಮೈಲು ವಿಸ್ತಾರವಾದ ಕರ್ನಾಟಕದ ರಚನೆಗೆ ಅನುಮೋದನೆ ಸಿಕ್ಕಿರುವುದಕ್ಕೆ ಸಂತೋಷವಾಗಿರುವುದನ್ನು ಯಾರೂ ಮುಚ್ಚಿಟ್ಟುಕೊಳ್ಳುವಂತಿಲ್ಲ; ಮುಚ್ಚಿಟ್ಟುಕೊಂಡಿಲ್ಲ.

ಸೂಚಿತ ಕರ್ನಾಟಕ

ಆಯೋಗದವರು ಸೂಚಿಸಿರುವ ಕರ್ನಾಟಕ ರಾಜ್ಯದಲ್ಲಿ ಚಂದ್ರಗಡ ತಾಲೂಕನ್ನು ಬಿಟ್ಟುಳಿದ ಬೆಳಗಾಂವಿ ಜಿಲ್ಲೆ; ಧಾರವಾಡ—ವಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆ; ಕಾಸರಗೋಡು ತಾಲೂಕನ್ನು ಬಿಟ್ಟುಳಿದ ದಕ್ಷಿಣ ಕನ್ನಡ ಜಿಲ್ಲೆ; ಕೊಡಗು; ಕೊಯಮುತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕು; ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ಮತ್ತು ಸುಲ್ತಾನಪುರಂ ಉಪತಾಲೂಕಿನ ಒಂದೂವರೆವನ್ನು ಬಿಟ್ಟುಳಿದ ಈಗಿನ ಮೈಸೂರು; ರಾಯಚೂರು ಮತ್ತು ಕಲ್ಬರ್ಗಿ ಜಿಲ್ಲೆಗಳು—ಇವಿಷ್ಟು ಸಮಾವೇಶಗೊಳ್ಳುತ್ತವೆ.

ಕನ್ನಡಿಗರು ಈಗ ಅನುಭವಿಸುತ್ತಿರುವ ಶೋಚನೀಯ ಪರಿಸ್ಥಿತಿಯನ್ನು ಆಯೋಗವು ತನ್ನ ವರದಿಯಲ್ಲಿ ಪ್ರಸ್ತಾಪಿಸಿದೆ. ಬ್ರಿಟಿಷರ ಕಾಲದಲ್ಲಿ ಪ್ರಾಂತಗಳ ವಿಭಜನೆಯಾದಾಗ ಕರ್ನಾಟಕವೇ ಬಹಳ ಹೆಚ್ಚಿನ ಹಾನಿಗೊಳಗಾಯಿತೆಂದು ಅದು ಒಪ್ಪಿದೆ. ಕರ್ನಾಟಕವು ಮೂರು ರಾಜ್ಯಗಳಲ್ಲಿ ಹಂಚಿ ಹೋಯಿತು; ಅವಾದರೂ ಆಯಾ ರಾಜ್ಯಗಳ ಒಂದು ಶಾಖೆಯಲ್ಲಿದ್ದುದರಿಂದ ಸರಕಾರದ ಗಮನವನ್ನು ಸಾಕಷ್ಟು ಪಡೆಯದೆ, ಅಲ್ಪ ಸಂಖ್ಯಾಕರಿಗೆ ಸಾಮಾನ್ಯವಾದ ಕೊಂದಲಿಗಳಿಗೀಡಾದವು—ಎಂಬ ನಿಲುಮೆಗೆ ಆಯೋಗದ ಸಮರ್ಥನೆ ದೊರೆತಿದೆ.

ಏಕೀಕರಣದ ಚಳವಳಿ

ಕನ್ನಡ ಪ್ರದೇಶಗಳನ್ನೆಲ್ಲ ಒಟ್ಟು ಮಾಡಿ, ತಮ್ಮ ಸ್ವರಕ್ಕೂ ಮಹತ್ವ ಬರಬೇಕೆಂಬ ಕನ್ನಡಿಗರ ನ್ಯಾಯವಾದ, ಬೇಡಿಕೆಯ ೧೯೩೭ರ ಕಾಂಗ್ರೆಸು ಸಮಿತಿಯು ನಿರ್ಣಯದಿಂದೀಚೆಗೆ ಪ್ರತಿಯೊಂದೂ ಸಂದರ್ಭದಲ್ಲಿ ಬಲವಾಗಿ ಪ್ರತಿಪಾದಿಸಲಾಯಿತು; ಈಚೆಗೆ ನೇಮಿಸಿದ ದರ್ ಸಮಿತಿ ಸಹ ಕನ್ನಡಿಗರ ನ್ಯಾಯವಾದ ಅಹೋತ್ತರಗಳನ್ನು ನೆರವೇರಿಸಿ ಕೊಡಬಲ್ಲ ರಾಜ್ಯದ ನಿರ್ಮಾಣವಾದರೆ ಅವರು ಪ್ರಗತಿಯನ್ನು ಹೊಂದಬಲ್ಲರೆಂದು ಸ್ಪಷ್ಟಪಡಿಸಿತು—ಎಂಬುದನ್ನು ಆಯೋಗ ಗಮನಕ್ಕೆ ತೆಗೆದುಕೊಂಡಿದೆ.

ಸೂಚಿತ ಕರ್ನಾಟಕ ರಾಜ್ಯದ ವಿಷಯದಲ್ಲಿ ಇತ್ತೀಚೆಯ ವರೆಗೆ ಕನ್ನಡಿಗರಲ್ಲಿ ಭಿನ್ನಾಭಿಪ್ರಾಯವಿರಲಿಲ್ಲವೆಂದು ಹೇಳುತ್ತಾ ಆಯೋಗವು ಈಚೆಗೆ ಕೆಲಸಮಯದಿಂದ ಮಾತ್ರ ಕರ್ನಾಟಕ ಪ್ರದೇಶದ ಆರ್ಥಿಕ ಸಂಸ್ಥಿತಿ ಮತ್ತು ಮೈಸೂರನ್ನು ಸೇರಿಸಿಕೊಂಡು ಕನ್ನಡ ರಾಜ್ಯದ ಸ್ಥಾಪನೆಯಾಗುವುದರ ಒಳಿತು ಕೆಡುಕುಗಳ ಕುರಿತು ತುಸು ಭಿನ್ನಾಭಿಪ್ರಾಯ ವ್ಯಕ್ತವಾಯಿತೆಂದು ತಿಳಿಸಿದೆ. ನೆಹರೂ ಸಮಿತಿಯು ಹಿಂದೆ ತಿಳಿದುಕೊಂಡಂತೆ ಮೈಸೂರೇತರ ಕನ್ನಡ ಪ್ರದೇಶವು ಆರ್ಥಿಕ ದೃಷ್ಟಿಯಲ್ಲಿ ಸ್ವಯಂಪೂರ್ಣವಾದ ಘಟಕವಾಗುವುದೆಂದು ಈಗ ತಿಳಿಯಲ್ಪಡುವುದಿಲ್ಲ; ಸತ್ಯ ಸ್ಥಿತಿಯನ್ನು ಪರಿಶೀಲಿಸಲೆಂದು ಮೈಸೂರು ಸರಕಾರ ನೇಮಿಸಿದ ಶೇಷಾದ್ರಿ ಸಮಿತಿಯು ಹೊರಗಿನ ಕನ್ನಡ ಪ್ರದೇಶಗಳು ಭವಿಷ್ಯದ್ಧಿ ಹೊಂದಿಲ್ಲ; ಅವು ಕೊರತೆ ವಲಯ ಎಂದು ಅಭಿಪ್ರಾಯ ಪಟ್ಟಿದೆ—ಎಂಬುದಾಗಿ ಆಯೋಗ ನಿರೂಪಿಸಿದೆ.

ಆರ್ಥಿಕ ವಿಚಾರ

ಆದರೆ ಈ ಅಭಿಪ್ರಾಯದಲ್ಲಿ ಹುರುಳಿದೆ ಎಂದು ಆಯೋಗ ಭಾವಿಸಿಲ್ಲ. ಮೈಸೂರೇತರ ಕನ್ನಡ ಪ್ರದೇಶಗಳು ಹಿಂದುಳಿದಿವೆ ಎಂಬುದನ್ನು ಆಯೋಗ ಒಪ್ಪುವುದಿಲ್ಲ. ಮುಂಬಯಿ ರಾಜ್ಯದಲ್ಲಿ ಈಗ ಇರುವ ಕನ್ನಡ ಜಿಲ್ಲೆಗಳು ಉತ್ತಮ ಆಡಳಿತೆಯ ಪರಂಪರೆಯನ್ನು ಹೊಂದಿವೆ; ಅಲ್ಲಿಯ ಜನರಿಗೆ ಯೋಗ್ಯ ಶಿಕ್ಷಣದ ವ್ಯವಸ್ಥೆ ಏರ್ಪಟ್ಟಿದೆಯಲ್ಲದೆ, ವಿಶ್ವವಿದ್ಯಾಲಯವೂ ಕೊಡಲ್ಪಟ್ಟಿದೆ; ಸಾರಿಗೆ ವ್ಯವಸ್ಥೆಯನ್ನು ಭಾರತದಲ್ಲಿಯೇ ಉನ್ನತ ಮಟ್ಟದ ಸಂಸ್ಥೆಯು ನಿರ್ವಹಿಸುತ್ತಿದೆ ಎಂದು ಮುಂತಾಗಿ ಆಯೋಗ ಹೇಳಿದೆ.

ಹೈದರಾಬಾದಿನಲ್ಲಿರುವ ಕನ್ನಡ ಪ್ರದೇಶಗಳ ಕುರಿತಾಗಿಯೂ ಭಯವಿಲ್ಲವೆಂದು ಆಯೋಗ ಅಭಿಪ್ರಾಯಪಟ್ಟಿದೆ. ಸುಮಾರು ಒಂದು ಕೋಟಿ ರೂಪಾಯಿಯಷ್ಟು ಒಟ್ಟಾರೆ ಕೊರತೆ ಬೀಳಬಹುದಾದರೂ ಅದನ್ನು ಆಡಳಿತದಲ್ಲಿ ಉಂಟಾಗುವ ಅನುಕೂಲತೆಯ ದೆಸೆಯಿಂದ ತುಂಬಿಕೊಳ್ಳಬಹುದು; ತುಂಗಭದ್ರೆಯ ಅಣೆಕಟ್ಟು, ಘಟಪ್ರಭೆಯ ಯೋಜನೆ ಇತ್ಯಾದಿಗಳಿಂದ ಈ ಪ್ರದೇಶ ಸಮೃದ್ಧವಾಗಬಲ್ಲದು; ಮತ್ತು ಕೃಷಿ ಕ್ಷೇತ್ರದಲ್ಲಿ ಮೈಸೂರನೊಡನೆ ಸ್ಪರ್ಧಿಸಬಲ್ಲುದು ಎಂದು ಆಯೋಗ ವರದಿ ಮಾಡಿದೆ. ರೈಲು ಸಂಪರ್ಕವು ತೃಪ್ತಿಕರವಾಗಿಲ್ಲದಿದ್ದರೂ ಈಗ ಯೋಜಿಸಲಾಗಿರುವ ನೀತಿಯಂತೆ ನಡೆದು ಉತ್ತರ ತುದಿಯನ್ನು ಬೆಂಗಳೂರಿಗೆ ಜೋಡಿಸುವುದು ಕಷ್ಟವಲ್ಲ ಎಂದಿದೆ.

ಜಾತೀಯ ಜಗಳ

ಮೈಸೂರನ್ನು ಪ್ರತ್ಯೇಕ ರಾಜ್ಯವಾಗಿಡಬೇಕು ಎಂಬ ವಾದದಲ್ಲಿ ಜಾತೀಯ ಪ್ರಶ್ನೆಯು ಅಡಗಿಕೊಂಡಿದೆ ಎಂಬ ಸಂಗತಿಯನ್ನು ಆಯೋಗದ ವರದಿ ಹೊರಗೆಡವಿದೆ. ಮೈಸೂರಿನಲ್ಲಿ ೨೯%, ಒಕ್ಕಲಿಗರಿರುವರೆಂದೂ ಹೊರಗಿನ ಪ್ರದೇಶದಲ್ಲಿ ೪೦% ಲಿಂಗಾಯತರಿರುವರೆಂದೂ ಇವರಲ್ಲಿ ಸ್ಪರ್ಧೆ ನಡೆಯುತ್ತಿರುವುದೇ ಒಂದಕ್ಕಿಂತ ಹೆಚ್ಚು ಕನ್ನಡ ರಾಜ್ಯಗಳ ರಚನೆಯ ಕುರಿತು ಕೆಲವರು ವಾದಿಸುತ್ತಿರುವುದರ ಮೂಲವೆಂದೂ ಆಯೋಗ ಸ್ಪಷ್ಟಪಡಿಸಿದೆ. ಜಾತೀಯ ತ್ವೇಷವನ್ನು ಶಮನಗೊಳಿಸಲು ಯಾವದೇ ವಿಶಿಷ್ಟ ಜಾತಿಗೆ ಬಹುಮತ ಸಿಗಲಾರದಂತೆ ಕನ್ನಡ ಪ್ರದೇಶಗಳನ್ನೆಲ್ಲ ಒಟ್ಟುಗೂಡಿಸುವುದೇ ರಾಮಬಾಣ ಔಷಧವೆಂದು ಆಯೋಗ ಭಾವಿಸಿದೆ. ಮೈಸೂರು ಸಹಿತವಾದ ಸಂಯುಕ್ತ ಕರ್ನಾಟಕ ರಾಜ್ಯವೇ ಸಮಸ್ಯೆಗೆ ಯೋಗ್ಯ ಪರಿಹಾರವೆಂದೂ ಇದರಿಂದ ನಾಳೆಯ ಕರ್ನಾಟಕದಲ್ಲಿ ೨೦% ಲಿಂಗಾಯತರು, ೧೫% ಒಕ್ಕಲಿಗರು, ೧೮% ಹರಿಜನರು ಇರುವಂತಾಗಿ ಜಾತೀಯ ಜಗಳ ತಪ್ಪುವುದೆಂದೂ ಆಯೋಗ ತೀರ್ಮಾನಿಸಿದೆ.

ಇದರಂತೆ ಕೊಡಗು ಪ್ರತ್ಯೇಕವಾಗಿ ಉಳಿಯಬೇಕೆನ್ನುವ ವಾದವನ್ನೂ ಆಯೋಗ ತಿರಸ್ಕರಿಸಿದೆ. ಕೊಡಗಿನ ಸಂಬಂಧವು ಮೈಸೂರು ಮತ್ತಿತರ ಕನ್ನಡ ಪ್ರದೇಶಗಳೊಡನೆಯೇ ಹೆಚ್ಚಾಗಿದೆ ಎಂದು ಹೇಳುತ್ತಾ ಕೊಡಗಿನ ಸಂಪತ್ತು ಮಲೆನಾಡಿನ ಕೊಡುಗೆಯೆಂದೂ ಮಲೆನಾಡಿನ ಬಹು ದೊಡ್ಡ ಸೆರಗು ಕನ್ನಡ ಪ್ರದೇಶದಲ್ಲಿರುವುದರಿಂದ ಆ ವಲಯದೊಡನೆ ಸೇರಿಕೊಂಡು ಹೋಗುವುದರಿಂದಲೇ ಕೊಡಗು ಇನ್ನಷ್ಟು ಅಭಿವೃದ್ಧಿಯನ್ನು ಹೊಂದಬಹುದೆಂದೂ ಆಯೋಗ ಪರಿಗಣಿಸಿದೆ. ಆದರೆ ಕೊಡಗಿನ ವಿಶಿಷ್ಟ ಜನಜೀವನ ಮತ್ತು ಸಂಸ್ಕೃತಿಯನ್ನು ಲಕ್ಷಿಸಿ ಅದನ್ನು ಪ್ರತ್ಯೇಕ ಜಿಲ್ಲೆಯಾಗಿ ಉಳಿಸಬೇಕು ಎಂದು ಆಯೋಗ ಸೂಚಿಸಿದೆ.

ಗಡಿ ವಲಯದ ಕುರಿತು

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಕೊಡಬಾರದಲು ಆಯೋಗವು ಹೇಳಿದ ಕಾರಣಗಳಲ್ಲಿ ಕಾಸರಗೋಡು ತಾಲೂಕಿನ ಜನರಲ್ಲಿ ೭೬% ಮಲೆಯಾಳ ಮಾತನಾಡುವವರಿದ್ದಾರೆ ಎಂಬುದು ಬಿಟ್ಟೆಂಬುದೂ ಕನ್ನಡಿಗರು ಚಂದ್ರಗಿರಿ ದೊಳೆಯ ವರೆಗಿನ ಕಾಸರಗೋಡು ತಾಲೂಕಿನ ಮೇಲೆ ಮಾತ್ರ ಕೇರಳದ ಅಧಿಕಾರವಿದೆ ಎಂದು ಹೇಳುತ್ತಾರೆ; ಅದರೆ ಮಲೆಯಾಳ ಮಾತನಾಡುವ ಜನರ ಬಾಹುಳ್ಯವಿರುವ ಈ ತಾಲೂಕನ್ನು ಆಡಳಿತದ ಸುಗಮತೆಗಾಗಿ ಇಡಿಯಾಗಿಯೇ ಕೇರಳಕ್ಕೆ ಸೇರಿಸುವುದು ಹಿತಕರ; ಹೊರತು ಭಾಷೆಯ ತಳಹದಿಯ ಮೇಲೆ ತುಂಡರಿಸುವುದು ಇಷ್ಟವಲ್ಲ—ಎಂದು ಆಯೋಗ ಹೇಳಿದೆ.

ಕೋಲಾರ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಆಯೋಗವು ಆಡಳಿತದ ಅನುಕೂಲತೆಯ ಹೆಸರಿನಲ್ಲಿ ತಿರಸ್ಕರಿಸಿದೆ. ಕೋಲಾರದ ಚಿನ್ನದ ಗನಿಯಲ್ಲಿ ಮೈಸೂರಿನ ಅರ್ಧ ಬಹಳ ದಿಂದಿನಿಂದ ಬೆಳೆದು ಬಂದಿದೆ; ಅದರ ಅಭಿವೃದ್ಧಿಗಾಗಿ ಮೈಸೂರು ಸರಕಾರ ತುಂಬ ಪ್ರಯತ್ನ ಮಾಡಿದೆ ಎಂದು ಮುಂತಾಗಿ ಹೇಳಿ, ಕೋಲಾರದ ತೆಲುಗು ಭಾಷೆ ಪ್ರಧಾನವಾಗುಳ್ಳ ಪ್ರದೇಶವಾದರೂ ಮೈಸೂರಿನಲ್ಲಿಯೇ ಉಳಿಯಬೇಕು ಎಂದಿದೆ.

ಇಲ್ಲಿ ಮುಂದಿಟ್ಟ ವಾದವನ್ನು ತುಂಗಭದ್ರ ಅಣೆಕಟ್ಟಿನ ನೆಪದಲ್ಲಿ ಮುಂದರಿಸಿ, ಒಮ್ಮೆ ಮೈಸೂರಿನೊಡನೆ ಸೇರ್ಪಡೆಗೊಂಡು, ಕರ್ನಾಟಕ ಏಕೀಕರಣದ ನಾಂದಿ ಹಾಡಿದ ಬಳ್ಳಾರಿ ಜಿಲ್ಲೆಯ ಕನ್ನಡ ಭಾಗಗಳನ್ನು ಆಂಧ್ರಕ್ಕೆ ಆಯೋಗವು ಕೊಡಬಾರದೆಂದು ಬಳ್ಳಾರಿ ನಗರದ ರಾಯರ ಸೀಮೆಯ ಪ್ರಧಾನ ವ್ಯಾಪಾರ ಕೇಂದ್ರವಾಗಿತ್ತೆಂದೂ ತುಂಗಭದ್ರ ಅಣೆಕಟ್ಟನ್ನು ರಾಯರ ಸೀಮೆಗೂ ಶ್ರೇಯಸ್ಸಿಗಾ

(೨ನೇ ಪುಟ ನೋಡಿರಿ)

TENDER NOTICE

Sealed tenders are invited by the undersigned from the registered contractors up to 4 p m. on 31—10—1955 for the work shown below [to be executed at the temple]

The tenders should be sent in sealed cover, accompanied by a chalan in token of having remitted the prescribed earnest money deposit in to the temple treasury Intending tenderers can peruse the estimate in the office of the undersigned during the office hours on any working day. Tenderers, or their authorised agents may be present in the office of the undersigned at 4-15 pm. on 31—10—55 when the tenders will be opened· The undersigned reserves to himself the right of rejecting any tender, without assigning reasons therefor.

Name of work	Amout of Estimate	Earnest money Deposit
1 Const: ting Quarters for the teachers of the temple Elementary School, Perdoor S. K. ...	Rs 2,500/-	Rs. 65/-
9 Painting to the Copper roof of the temple [Inner powly)	Rs 500 -	—
3 well sinking Rough Estimate (Temple School)	Rs 500/-	—

K. B. Shetty
Executive Officer
Ananthapadmanabha Temple, Perdoor.

Perdoor,
Date 8—10—55.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೧೩-೧೦-೫೫	ಸಂಚಿಕೆ ೬

ಸಮ್ಮಿಶ್ರ ಸ್ವಾಗತ

ಎಲ್ಲರಿಗೂ ಶ್ಲಾಘನೀಯವಾದ ರೀತಿಯಲ್ಲಿ ಯಾವ ಪ್ರಶ್ನೆಯನ್ನೂ ಬಗೆಹರಿಸುವುದು ಸಾಧ್ಯವಿಲ್ಲ; ಯಾವ ಮಂಡಳಕ್ಕೂ ಆ ಶಕ್ತಿ ಇರುವುದಿಲ್ಲ—ಎಂಬ ಅಂಶವನ್ನು ನದೇ ಪದೇ ಜನತೆಯ ಮುಂದಿಟ್ಟು ಧುರೀಣರು ಫಜಲ ಅಲಿ ಆಯೋಗದ ವರದಿಗೆ ಸಮ್ಮಿಶ್ರ ಸ್ವಾಗತ ದೊಂಕಿರುವುದಕ್ಕೆ ಆಶ್ಚರ್ಯಪಡುವಂತಿಲ್ಲ. ಆಯೋಗದ ಶಿಫಾರಸುಗಳನ್ನು ಸಾಮಾನ್ಯವಾಗಿ ಅಂಗೀಕರಿಸ ಲಾಗುವುದೆಂದೂ ಆದರೆ ಅದಕ್ಕೆ ಮುಂಚೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ವ್ಯಕ್ತವಾದ ಜನಾಭಿಪ್ರಾಯವನ್ನು ಗಮನಿಸಲಾಗುವುದೆಂದೂ ಪ್ರಧಾನಿಗಳು ಹೇಳಿದ್ದರು. ಅವರು ಆಯೋಗದ ವರದಿಯನ್ನು ಶಾಂತ ಹಾಗು ನಿರ್ವಿಕಾರ ಭಾವದಿಂದ ಪರಿಶೀಲಿಸಬೇಕೆಂದು ಈಗ ಮರಳಿ ಜನರನ್ನು ವಿನಂತಿಸಿಕೊಂಡಿದ್ದಾರೆ. ಆಯೋಗದ ವರದಿಯು ಬಹಳ ಆಶ್ಚರ್ಯಕರವೆನಿಸುವಷ್ಟು ಒಮ್ಮತದ ಸೂಚನೆಗಳಿಂದ ಕೂಡಿದೆ; ಆದರೆ ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶಗಳ ಭವಿಷ್ಯದ ವಿಷಯದಲ್ಲಿ ಸಮಿತಿಯ ಇಬ್ಬರು ಸದಸ್ಯರು ಆಶ್ಚರ್ಯಕರವೆನಿಸುವ ರೀತಿಯಲ್ಲಿ ಸಬಲ ಕಾರಣಗಳೊಡನೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ! ಸತ್ಯ ಸಂಗತಿಯು ಹೀಗಿರುವುದರಿಂದ ಸಾಮಾನ್ಯ ಜನಾಭಿಪ್ರಾಯವು ಅನೇಕ ವಿವರಗಳ ವಿಷಯದಲ್ಲಿ ತೀವ್ರ ಮತ ಭೇದವನ್ನು ವ್ಯಕ್ತಪಡಿಸಿ, ಆಯೋಗದ ಸೂಚನೆಗಳನ್ನು ವಿರೋಧಿಸುವ ಸಂಭವ ಕಾಣಿಸುತ್ತಿರುವುದರಲ್ಲಿ ವಿಸ್ಮಯಕರವಾದುದಾಗಲೀ ಅನಿರೀಕ್ಷಿತವಾದ ದಾಗಲೀ ಏನೂ ಇಲ್ಲ. ಅದು ಸಹಜ-ತಮ್ಮ ಒಜ ದಿನಗಳ ಘೋಷಣೆಗೆ, ಆಕಾಂಕ್ಷೆಗೆ ಮನ್ನಣೆ ಸಿಗದ ಸಂದರ್ಭಗಳಲ್ಲೆಲ್ಲ ಜನರು ಪ್ರತಿಭಟನೆಯನ್ನು ತೋರಿಸಿ, ಸರಕಾರವುಆಯೋಗದಶಿಫಾರಸುಗಳನ್ನು ಇದ್ದುದಿದ್ದಂತೆ ಸ್ವೀಕರಿಸದೆ, ಜನಸುಖಕ್ಕೆ ಹೊಂದಿಕೊಳ್ಳುವಂತೆ ತಿದ್ದಿಕೊಳ್ಳಲು ಒತ್ತಾಯಿಸುವುದು ಸ್ವಾಭಾವಿಕ. ಇಂಥ ಒತ್ತಾಯವು ಗಡಿವಲಯದ ವಿಷಯದಲ್ಲಿ ಬಹಳ ಹೆಚ್ಚಾಗುವ ನಿರೀಕ್ಷೆ ಇದೆ: ಅಲ್ಲದೆ, ಸೂಚಿತ ಪಂಜಾಬು ಮತ್ತು ಮುಂಬಯಿ ರಾಜ್ಯಗಳ ರಚನಾತ್ಮಕದ ವಿರುದ್ಧವಾಗಿಯೂ ಬಲವಾದ ಆಂದೋಲನ ನಡೆಯುವ ಲಕ್ಷಣ ಕಂಡು ಬಂದಿದೆ. ಇಂಥ ವಿರೋಧಕ್ಕೆ ನೆಲೆ ಏನು? ಎಂಬುದನ್ನು ಹೆಚ್ಚು ದೂರದ ವರೆಗೆ ವಿಚಾರಿಸಿಕೊಂಡು ಹೋಗಬೇಕಾದ ಆವಶ್ಯಕತೆ ಇಲ್ಲ-ಆಯೋಗದವರು ತಮ್ಮ ತೀರ್ಮಾನಗಳಿಗೆ ತೋರಿಸಿದ ಕಾರಣಗಳಲ್ಲೇ ಸಬಲ ಕಾರಣಗಳಿಂದ ವಿರೋಧಿಕರು ತಮ್ಮ ಪಕ್ಷಪನ್ನು ಮಂಡಿಸಬಲ್ಲರು ಮತ್ತು ಹೀಗೆ ಪಕ್ಷವನ್ನು ಮಂಡಿಸುವುದಕ್ಕೆ ನೆರವಾಗುವ ತತ್ವಗಳು ಆಯೋಗದವರು ತಾವು ಗಮನಿಸಿರುವೆವೆಂದು ಹೇಳುವ ಹಲವು ವ್ಯಾಪಕವಾದ ತತ್ವಗಳ ನೆಲೆಯಲ್ಲಿಯೇ ಬರುತ್ತವೆ—ಎಂಬುದನ್ನು ಗಮನಿಸಬೇಕಾಗಿದೆ, ಆಯೋಗದವರು ಯಾವದೇ ನಿಶ್ಚಿತ ತತ್ವಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆನ್ನುವಷ್ಟು ಪರಸ್ಪರ ವಿರುದ್ಧ ಭಾವನೆಗಳಿಗೆ ಪುಟ ಕೊಡುವ ತತ್ವಗಳನ್ನು ಅವರು ತಳಹದಿಗೆ ಆರಿಸಿಕೊಂಡಿದ್ದಾರೆ—ಖಾದರಸದಂತೆ ಆಯೋಗದವರ ಮನಸ್ಸು ಓಡಿದತ್ತಮುಲಭದಲ್ಲಿ ಚಲಿಸುವ ರೂಪದಲ್ಲಿ ಈ ತತ್ವಗಳ ರಚನೆಯಾಗಿದೆ. ಬಹು ದಿನಗಳಿಂದ ಭಾಷಾನುಗುಣ ಪ್ರಾಂತಗಳ ರಚನೆಮಾಡಬೇಕೆಂದು ಸರಕಾರವನ್ನು ಕೇಳಿಕೊಂಡ ಜನರ ಆಶೆಯನ್ನು ಸಾಮಾನ್ಯವಾಗಿ ಆಯೋಗ ಅಂಗೀಕರಿಸಿದೆ; ಇದು ಸಂತೋಷಕರವಾದ ವಿಷಯ. ಆದರೆ ಇದಕ್ಕೂ ಅದು ಅಪವಾದಗಳನ್ನು ಸೃಷ್ಟಿಸಿದೆ; ಉದಾಹರಣೆಗೆ, ಗುಜರಾತಿಗಳಿಗಾಗಿ ಅದು ಪ್ರತ್ಯೇಕ ರಾಜ್ಯವನ್ನು ನಿರ್ಮಿಸಲು ಶಿಫಾರಸು ಮಾಡಿಲ್ಲ; ಮಹಾರಾಷ್ಟ್ರೀಯರಿಗೆ ವಿದರ್ಭವೆಂಬ ರಾಜ್ಯವನ್ನು ಕೊಡ ಮಾಡಿದ್ದರೂ ಮುಂಬಯಿ ಮತ್ತು ಹೈದರಾಬಾದುಗಳ ಮಹಾರಾಷ್ಟ್ರೀಯರಿಗೆ ಮಹಾರಾಷ್ಟ್ರ ರಾಜ್ಯವನ್ನು ನೀಡಲು ಹೋಗಿಲ್ಲ. ಪೆಪ್ಸುವಿನ ಹಿಂದಿ ಪ್ರದೇಶಗಳನ್ನಾಗಲೀ ಹಿಮಾಚಲ ಪ್ರದೇಶದ ಹಿಂದಿ ವಲಯವನ್ನಾಗಲೀ ಪ್ರತ್ಯೇಕಿಸಿದೆ, ಪಂಜಾಬಿ ಭಾಷೆಯ ಪ್ರದೇಶಗಳೊಡನೆಯೇ ಅವುಗಳನ್ನು ಸೇರಿಸಿದೆ. ಏಕ ಭಾಷೆ-ಏಕ ರಾಜ್ಯ ತತ್ವವನ್ನು ವಿರೋಧಿಸಿದೆ ಎಂದು ಕಲ್ಪನೆ ಬರುವಂತೆ ಅದರ ಕೆಲವು ಶಿಫಾರಸುಗಳಿದ್ದರೆ, ಉಳಿದ ಕೆಲವು ಇದಕ್ಕೆ ಪೋಷಕವಾಗಿರುವಂತೆಯೂ ವ್ಯಕ್ತವಾಗುತ್ತದೆ. ವಿಶಾಲಾಂಧ್ರವನ್ನು ಈಗಲೇ ರಚಿಸಲು ಅದು ಸಮ್ಮತಿಸದೆ, ತೆಲಂಗಾಣವು ಮುಂದಿನ ಚುನಾವಣೆಯ ಪರೆಗೆ ಪ್ರತ್ಯೇಕ ರಾಜ್ಯವಾಗಿ ಉಳಿಯಬೇಕೆಂದೂ ಅನಂತರ ಅದು ಈಗಿನ ಆಂಧ್ರದಲ್ಲಿ ಸೇರಿ ಹೋಗುವ ಕುರಿತು ನಿರ್ಣಯ ಕೈಗೊಳ್ಳಬೇಕೆಂದೂ ಸಲಹೆ ಮಾಡಿದೆ. ಆದರೆ ಮೈಸೂರನ್ನು ಪ್ರತ್ಯೇಕವಾಗಿಟ್ಟು ಒಂದಕ್ಕಿಂತ ಹೆಚ್ಚು ಕರ್ನಾಟಕ ರಾಜ್ಯಗಳನ್ನು ರಚಿಸುವ ಸೂಚನೆಗೆ ವಿರೋಧಸನ್ನು ಪ್ರಕಟಿಸಿ, ಕರ್ನಾಟಕ ಏಕೀಕರಣಕ್ಕೆಯೇ ಬೆಂಬಲ ವಿತ್ತಿದೆ ಮೈಸೂರು ಮತ್ತು ಮೈಸೂರೇತರ ಪ್ರದೇಶಗಳ ಜನರಲ್ಲಿ ಜಾತೀಯ ಭಾವನೆಯು ಘರ್ಷಣೆಗೆ ಎಡೆ ಕೊಡುತ್ತಿರುವುದನ್ನು ಗಮನಕ್ಕೆ ತೆಗೆದುಕೊಂಡ ಆಯೋಗದವರು ಸಿಕ್ಕರ ಬೇಡಿಕೆಯನ್ನು ಜಾತೀಯ ಹಿನ್ನೆಲೆ ಇದಕ್ಕಿದೆ ಎಂಬ ಕಾರಣದಿಂದಲೇ ತಿರಸ್ಕರಿಸಿದ್ದಾರೆ. ಮದ್ರಾಸು ನಗರದ ಸುದ್ದಿಯನ್ನು ಎತ್ತುವಂತಿಲ್ಲವೆಂದು ತೆಲುಗರಿಗೆ ಬುದ್ಧಿ ಹೇಳಿದ್ದಾರೆ; ಮುಂಬಯಿ ನಗರದ ಮಟ್ಟಿಗೆ ಮಾತ್ರ ದೋಲಾಯಮಾನ ನೀತಿಯನ್ನು ಅನುಸರಿಸಿ, ಗುಜರಾತಿಗಳೂ ಮರಾಟಿಗರೂ ಒಟ್ಟಿಗೆ ಲಾಭ ಪಡೆಯಬಹುದಾದ ಕೇಂದ್ರ ಸ್ಥಾನವಾಗಿ ಇದಿರಬೇಕೆನ್ನುತ್ತಾ ಸೌರಾಷ್ಟ್ರ ಸಮೇತವಾದ ಗುಜರಾತ್ಭವನ್ನೊಳಗೊಳಿಸಿ ಮರಾಟಿಗರಿಗೆ ಹೊಸ ಮುಂಬಯಿ ರಾಜ್ಯದಲ್ಲಿ ಗುಜರಾತಿಗಳ ಪ್ರಬಲ ಸಂಖ್ಯಾಬಲ ಸ್ಪರ್ಧೆಯನ್ನೊದಗಿಸಿದ್ದಾರೆ. ಸಾಮಾನ್ಯವಾಗಿ ಜಿಲ್ಲೆಯನ್ನು ಒಡೆಯಬಾರದೆಂದು ಹೇಳಿದರೂ ತಾಲೂಕುಗಳನ್ನು ಬೇಕಾದಂತೆ ಪ್ರತ್ಯೇಕಿಸಿದ್ದಾರೆ; ಅಷ್ಟೇಯಲ್ಲ ಬಳ್ಳಾರಿ ಜಿಲ್ಲೆಯ ಮಲ್ಲಾಪುರಂ ಉಪತಾಲೂಕಿನ ಕೆಲವು ಗ್ರಾಮಗಳನ್ನು ಆಂಧ್ರಕ್ಕೆ ಕೊಡಮಾಡುವಷ್ಟು ಔದಾರ್ಯವನ್ನು ತೋರಿಸಿದ್ದಾರೆ. ಆದರೆ ಚಂದ್ರಗಿರಿ ಹೊಳೆಯ ತೆಂಕು ಬದಿಯ ಗ್ರಾಮಗಳನ್ನಷ್ಟೆ ಕೇರಳಕ್ಕೆ ನೀಡಬಹುದೆಂದೂ ಅನ್ಯಥಾ ಇಡೀ ಕಾಸರಗೋಡು ತಾಲೂಕನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೆ ಉಳಿಸಬೇಕೆಂದೂ ಹೇಳುತ್ತಿದ್ದ ದಕ್ಷಿಣ ಕನ್ನಡದವರ ಬೇಡಿಕೆಯನ್ನು ವಿಚಾರಿಸುವಾಗ ತುಂಗಭದ್ರದ ಅಣೆಕಟ್ಟಿನ ನೆಪದಲ್ಲಿ ತಾವು ವ್ಯಕ್ತಪಡಿಸಿದ ಔದಾರ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಹೋಗಿದ್ದಾರೆ. ಆಯೋಗವು ಹೀಗೆ ಯಾವುದೇ ನಿಶ್ಚಿತ ತತ್ವಕ್ಕೆ ತಾನು ಅಂಟಿ ಕುಳಿತಿಲ್ಲವೆಂದು ತೋರಿಸಲು ಬಹಳ ಪ್ರಯತ್ನಿಸಿದೆ—ಕೋಲಾರವು ತೆಲುಗು ಪ್ರದೇಶವಾಗಿದ್ದರೂ ಅದನ್ನು ಮೈಸೂರಿನಲ್ಲಿ ಉಳಿಸಿದೆ; ಬಳ್ಳಾರಿಯು ಕನ್ನಡ ಪ್ರದೇಶವಾದರೂ ಆಂಧ್ರಕ್ಕೆ ಕೊಟ್ಟಿದೆ; ಬೆಳಗಾಂವಿ ನಗರದಲ್ಲಿ ಮರಾಟಿಗರ ಬಾಹುಳ್ಯವಿದ್ದರೂ ಅದನ್ನು ಕನ್ನಡದಲ್ಲಿ ಸೇರಿಸಿದೆ; ಕಾಸರಗೋಡಿನಲ್ಲಿ ಮಲೆಯಾಳಿಗಳ ಬಾಹುಳ್ಯವಿದೆ ಎಂಬುದಕ್ಕಾಗಿ, ಇಷ್ಟರ ವರೆಗಿನ ನೂರೈವತ್ತು ವರ್ಷಗಳ ಸಂಬಂಧವನ್ನು ಕಡೆಗಣಿಸಿ, ದಕ್ಷಿಣ ಕನ್ನಡ ಜಿಲ್ಲೆಯಿಂದ ಅದನ್ನು ಬೇರ್ಪಡಿಸಿದೆ; ಬೆಂಗಳೂರಿಗೆ ಬಹಳ ದೂರವಾಗುವುದೆಂದು ಬೀದರವನ್ನು ತೆಲಂಗಾಣಕ್ಕೆ ಸೇರಿಸಿದೆ, ಬಿಹಾರಿನ ಕೆಲವಂಶಗಳನ್ನು ಬಂಗಾಲಕ್ಕೆ ಕೊಡಮಾಡುವಾಗಲೂ ಭಾಷೆಗಿಂತ ಆಡಳಿತ ಸೌಕರ್ಯಕ್ಕೆ ಮತ್ತು ಬಂಗಾಲ ರಾಜ್ಯದ ಅಭಿವೃದ್ಧಿಗೆ ಮಹತ್ವವಿತ್ತಿದೆ. ಭಾಷೆಯ ತಳಹದಿಯ ಮೇಲೆ ಪ್ರದೇಶಗಳನ್ನು ಮನರ್ಘಟಿಸುವಾಗ ಅದು ಸಾಮಾನ್ಯವಾಗಿ ಖಾನೇಸುಮಾರಿಯ ಅಂಕೆ ಸಂಖ್ಯೆಗಳನ್ನು ಆಧರಿಸಿದೆ; ಆದರೆ ಈ ಅಂಕೆಸಂಖ್ಯೆಗಳ ಸತ್ಯಾಂಶದ ಕುರಿತಾಗಿ ಸಂಶಯ ವ್ಯಕ್ತಪಡಿಸುವುದಕ್ಕೂ ಅದುಯೋಗಿದೆ ಗಡಿ ಪ್ರದೇಶದ ವಿವರಗಳ ಕುರಿತು ಆಯೋಗ ಸಾಕಷ್ಟು ಹೆಚ್ಚಿನ ಗಮನ ಕೊಟ್ಟಿಲ್ಲವೆಂದು ಭಾವಿಸಲು ಬಲವಾದ ಕಾರಣಗಳಿವೆ. ನ್ಯಾಯಮೂರ್ತಿ ಮಿಶ್ರರು ಬಳ್ಳಾರಿಯ ಕುರಿತು ತೀರ್ಪು ಕೊಡುವಾಗ ಕೇವಲ ಭಾಷೆಗೆ ಮಹತ್ವ ಕೊಟ್ಟರೆಂದು ದೂರುವ ಆಯೋಗದವರು ಕಾಸರಗೋಡಿನಲ್ಲಿ ನಂಬಿಕೆಗೆ ಅರ್ಹವಲ್ಲದ ಅಂಕೆಸಂಖ್ಯೆಗಳ ಆಧಾರದ ಮೇಲೆ ೭೨% ಮಲೆಯಾಳಿ ಮಾತನಾಡುವವರು ಆ ತಾಲೂಕಿನಲ್ಲಿದ್ದಾರೆಂದು ತೀರ್ಮಾನಿಸಿ, ಅದೊಂದೇ ಆಧಾರದಿಂದ ಕೇರಳಕ್ಕೆ ಸೇರಿಸಿಬಿಡಲು ಸೂಚಿಸಿರುವುದು ನ್ಯಾಯೋಚಿತವಾದುದಲ್ಲ; ಅವರು ಹಾಕಿಕೊಂಡ ಸೂತ್ರಗಳಿಗೆ ಅನುಗುಣವಾದ ತೀರ್ಮಾನವೂ ಅದಲ್ಲ. ರಾಷ್ಟ್ರೀಯ ಭಾವನೆಗೆ ಬಹಳ ಮಹತ್ವಕೊಡುವ ಮತ್ತು ಆಡಳಿತದ ವಿಷಯಗಳಿಗೆ ಪ್ರಾಮುಖ್ಯತೆ ಕೊಡುವ ಆಯೋಗದವರು ಕೇಂದ್ರ ಸರಕಾರಕ್ಕೆ ನದಿ ಯೋಜನೆಗಳ ಕುರಿತು ಮಂಡಳಗಳನ್ನು ರಚಿಸುವ ಮತ್ತು ಇವುಗಳ ಕುರಿತು ರಾಜ್ಯ ಸರಕಾರಗಳಲ್ಲಿರ ಬಹುದಾದ ಭಿನ್ನಾಭಿಪ್ರಾಯವನ್ನು ನಿವಾರಿಸಲು ನೆರವಾಗುವ ಶಾಸನ ರೂಪಿಸುವ ಅಧಿಕಾರ ವಿರುವುದನ್ನು ಕಡೆಗಣಿಸಿ ಕನ್ನಡಿಗರಿಗೂ ಆಂಧ್ರದಷ್ಟೇ ಪ್ರಯೋಜನ ಸಿಗುವ ತುಂಗಭದ್ರ ಅಣೆಕಟ್ಟಿನ ಪ್ರದೇಶಗಳನ್ನು ಪ್ರಧಾನಿಗಳೂ ಗೃಹಮಂತ್ರಿಗಳೂ ಹಿಂದೆ ಕೊಟ್ಟಿದ್ದ ಆಶ್ವಾಸನೆಯನ್ನು ಧಿಕ್ಕರಿಸಿ ವರ್ಗಾಯಿಸಲು ನೋಡಿರುವುದು ಸಮರ್ಥನೀಯವಾಗಲಾರದು. ಈಗಾಗಲೇ ಆಂಧ್ರಕ್ಕೆ ಸೇರಿಸಲಾಗಿರುವ ಬಳ್ಳಾರಿಯ ಮೂರು ತಾಲೂಕುಗಳಲ್ಲಿ ಸಹ ಕನ್ನಡಿಗರಿಗೆ ಹಕ್ಕಿದೆ ಎಂದೂ ಗಡಿ ಸಮಿತಿಯೊಂದು ಇದನ್ನು ಪರಿಶೀಲಿಸಬೇಕೆಂದೂ ಕೇಂದ್ರ ಸರಕಾರದ ಪರವಾಗಿ ಒಪ್ಪಿಗೆಯನ್ನು ನೀಡಲಾಗಿರುವಾಗ ಬಳ್ಳಾರಿ ನಗರವನ್ನು ಬೆಳಗಾಂವಿಯಂತೆ ಕನ್ನಡ ಪ್ರದೇಶಗಳೊಡನೆಯೇ ಆಡಳಿತದ ಅನುಕೂಲತೆಗಾಗಿ ಇರಗೊಳಿಸದೆ ಆಂಧ್ರಕ್ಕೆ ದಾನ ಮಾಡುವುದು ಸರಿಯಾಗಿ ಕಾಣುವುದಿಲ್ಲ. ಪ್ರತಿಯೊಂದು ವಿಷಯವನ್ನೂ ಸೂಕ್ಷ್ಮವಾಗಿ ಆಯೋಗದವರು ತೂಗಿ ನೋಡಿರಬಹುದು-ಆದರೆ, ಅವರ ನಿರ್ಣಯಗಳೇ ಕೊನೆಯ ಮಾತೆನಿಸುವಷ್ಟು ಯೋಗ್ಯತೆಯಿಂದ ಕೂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ; ಕೋಲಾರವನ್ನೂ ಬೆಳಗಾವಿಯನ್ನೂ ಕನ್ನಡದಲ್ಲಿ ಉಳಿಸುವುದರಿಂದಾಗುವ ಲಾಭವು ಬಳ್ಳಾರಿಯ ಕೆಲವು ಪ್ರದೇಶಗಳನ್ನು ಆಂಧ್ರದಲ್ಲಿ ಸೇರಿಸುವುದಕ್ಕಿಂತ ಹೆಚ್ಚಾಗಿದೆ—ಎಂದು ಆಯೋಗದವರು ಕನ್ನಡಿಗರಿಗೆ ಬುದ್ಧಿ ಹೇಳಿದ್ದರೂ ಅದನ್ನು ಮನ್ನಿಸುವ ಸ್ಥಿತಿಯಲ್ಲಿ ನಾವಿಲ್ಲವೆಂದು ಸೂಚಿಸಲು ಬಯಸುತ್ತೇವೆ. ಇಷ್ಟು ಹೇಳಿದ ಮಾತ್ರಕ್ಕೆ ಆಯೋಗವು ಬಹಳ ಹೆಗುರವಾಗಿ ತನ್ನ ಕೆಲಸವನ್ನು ನಿರ್ವಹಿಸಿದೆ ಎಂದು ನಾವು ಭಾವಿಸಿಲ್ಲ—ರಾಷ್ಟ್ರದ ಹಿತವನ್ನು ಅದು ಸಾಮಾನ್ಯವಾಗಿ ಇಟ್ಟು ಕೊಂಡಿದೆ ಎಂದು ನಾವೂ ಒಪ್ಪುತ್ತೇವೆ. ಆದರೆ ನಮಗೆ ಸಂತೋಷ ಕೊಡುವ ಅಂಶಗಳನ್ನು ಎತ್ತಿ ಹೇಳುವುದಕ್ಕೆ ಮುಂಚೆ ಬಹುದ ಅನುಭವವನ್ನು ವಿವರಿಸಿ ಹೇಳಬೇಕಾಗಿದೆ; ಇದನ್ನು ಆದಷ್ಟು ಬೇಗನೆ ಮುಂದಿಟ್ಟುಪಡಿಸಿ, ಸರಕಾರದ ಮೇಲೆ ಬೀರಿಸಬೇಕಾಗಿದೆ.— ಇದೇ ನಮ್ಮ ಮೇಲಿನ ಮಾತುಗಳ ಆಶಯ.

ಚಂದಾದಾರರಲ್ಲಿ ವಿನಂತಿ.

ನವಯುಗದ ಚಂದಾ ಹಣವನ್ನು ಮನಿಯಾರ್ಡರು ಮಾಡಿರಿ, ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಿರಿ, ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಜಮಾ ಮಾಡಿರಿ.

ಇಲ್ಲವಾದರೆ

ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸಿರಿ.

—ಮೇನೇಜರ್.

ನೂತನ ಘಟಕಗಳ ನಿರ್ಮಾಣ

ಮುಂದಿನ ಸ್ವಾತಂತ್ರ್ಯ ದಿನೋತ್ಸವದ ಹೊತ್ತಿಗೆ ಆಗುವ ಅಂದಾಜು

ಪ್ರಧಾನ ನೆಹರುಗಳು ಜನತೆಯನ್ನು ಉದ್ದೇಶಿಸಿ ೧೯ನೇ ದಿನಾಂಕ ಮಾಡಿದ ಪ್ರಸಾರ ಭಾಷಣದಲ್ಲಿ ಫಜಲ ಅಲಿ ಆಯೋಗದ ವರದಿಯು ದೇಶದ ಜನರ ಸಹನೆ ಮತ್ತು ದೂರಾಲೋಚನೆಗಳ ಅಗ್ನಿ ಪರೀಕ್ಷೆಯನ್ನು ನಡೆಸುವ ವಿಷಯವೆಂದು ಹೇಳುತ್ತಾ, ಜನರು ಈ ಪರೀಕ್ಷೆಯಲ್ಲಿ ತೃಪ್ತಿಕರವಾಗಿ ಉತ್ತೀರ್ಣರಾಗಬೇಕೆಂದು ವಿನಂತಿಸಿದ್ದಾರೆ. ಗಲಭೆ-ಗೊಂದಲಗಳಿಗೆ ಎಡೆಕೊಡದೆ, ಸಮಾಧಾನ ಚಿತ್ತದಿಂದ ವರದಿಯನ್ನು ಪರಿಶೀಲಿಸಿ, ಅಭಿಪ್ರಾಯ ಮಥನ ಮಾಡಿ, ಸರಕಾರದೊಡನೆ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ.

ಸಮ್ಮಿಶ್ರ ಪ್ರತಿಕ್ರಿಯೆ

ದೇಶದೊಳಗಿನ ಪ್ರತಿಕ್ರಿಯೆಗಳನ್ನು ನೋಡಿದರೆ, ಅವು ಸಮ್ಮಿಶ್ರ ಸ್ವರೂಪದ್ದಾಗಿವೆಯೆಂದು ಮನವರಿಕೆಯಾಗುತ್ತದೆ. ಭಾಷಾನುಗುಣ ಪ್ರಾಂತ ರಚನೆಯ ತತ್ವವನ್ನು ಬಹಳ ಮಟ್ಟಿಗೆ ಮನ್ನಿಸಿದಂತಾಗಿದೆ-ಎಂದು ತೃಪ್ತಿ ಒಂದೆಡೆ ಇದೆ. ಈ ಮಟ್ಟಿಗೆ ಅತೃಪ್ತಿ ಹೊಂದಿರುವವರೆಂದರೆ ಅಕಾಲಿದಳದ ಮುಖಂಡರು ಮತ್ತು ಮುಂಬಯಿಯಲ್ಲಿರುವ ಮಹಾರಾಷ್ಟ್ರೀಯರ ಧುರೀಣರು ಎಂದೆನ್ನಬಹುದು. ಗಡಿವಲಯಗಳ ಭವಿಷ್ಯವನ್ನು ನಿರ್ಧರಿಸುವಲ್ಲಿ ಬಿಹಾರದ ಮನಭೂಮಿಯಿಂದಲೂ ಕರ್ನಾಟಕದ ಬಳ್ಳಾರಿ ಮತ್ತು ಕಾಸರಗೋಡುಗಳಿಂದಲೂ ಇಷ್ಟರೊಳಗೆಯೇ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ

ಕಾಂಗ್ರೆಸಿನ ಸಭೆ

ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಇದೇ ಗುರುವಾರದಿಂದ ಸಭೆ ಸೇರಲಿದ್ದು ಆಗ ವರದಿಯ ಪ್ರಾಸ್ತಾವಿಕ ಪರಿಶೀಲನೆಯನ್ನು ಅದು ನಡೆಸುವುದೆಂದು ತಿಳಿದು ಬರುತ್ತದೆ. ಜೇಗನೇ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವನ್ನು ಕರೆಯಲು ಕಾರ್ಯಕಾರಿ ಸಮಿತಿಯು ನಿರ್ಧರಿಸಬಹುದೆಂದು ಹೇಳಲಾಗುತ್ತದೆ. ಹೈದರಾಬಾದಿನ ವಿಭಜನೆಯ ಮಹತ್ವದ ಪ್ರಶ್ನೆಗೆ ಆ ರಾಜ್ಯದ ಮುಖ್ಯ ಮಂತ್ರಿಗಳಿಂದ ಸಮಾಧಾನಕರವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಜ ಪ್ರಮುಖರ ಹುದ್ದೆಯನ್ನು ರದ್ದುಗೊಳಿಸುವ ಕ್ರಾಂತಿಕಾರಿ ಸೂಚನೆಗೆ ಸಹ ಜನರ ಸಾಮಾನ್ಯ ಅನುಮೋದನೆ ದೊರಕಿದೆ. ಸಂಯುಕ್ತ ಕರ್ನಾಟಕದ ರಚನೆಯ ವಿಷಯದಲ್ಲಿ ಮೈಸೂರೇತರ ವರ್ಗಗಳಲ್ಲಿ ತುಂಬ ತೃಪ್ತಿ ವ್ಯಕ್ತವಾಗಿದ್ದರೂ ಮೈಸೂರಿನ ಸರಕಾರ ಏನು ಭಾವಿಸುತ್ತದೆ ಎಂಬುದನ್ನು ತಿಳಿಯುವುದು ಇಷ್ಟರ ವರೆಗೆ ಸಾಧ್ಯವಾಗಿಲ್ಲ; ಮುಖ್ಯ ಮಂತ್ರಿಗಳು ಅವಸರವಾಗಿ ಏನನ್ನೂ ಹೇಳುವ ಸ್ಥಿತಿಯಲ್ಲಿ ತಾನಿಲ್ಲ ಎಂದಿದ್ದಾರೆ

ಚುನಾವಣೆ ಮುಂದೂಡುವುದಿಲ್ಲ

ಎಲ್ಲವೂ ಸುಗಮವಾಗಿ ನಡೆದರೆ, ಮುಂದಿನ ಅಗೋಸ್ತು ೧೫ರ ಹೊತ್ತಿಗೆ ಹೊಸ ರಾಜ್ಯಗಳು ಅಸ್ತಿತ್ವದಲ್ಲಿ ಬರಬಹುದೆಂದು ಅಂದಾಜು. ೧೯೫೭ನೇ ಇಸವಿಯ ಆದಿಭಾಗದಲ್ಲಿ ನಡೆಯಬೇಕಾದ ಮಹಾ ಚುನಾವಣೆಯನ್ನು ಮುಂದೂಡಲು ಸರಕಾರವು ಬಯಸುತ್ತಿಲ್ಲವೆಂದೂ ಪ್ರಬಲ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಸರಕಾರದ ಈ ನಿಲುಮೆಯನ್ನು ಬೆಂಬಲಿಸುತ್ತಿದೆಯೆಂದೂ ಕೇಳುತ್ತೇವೆ. ಚುನಾವಣೆಗಳು ನಡೆಯುವುದಕ್ಕೆ ಅನುಕೂಲವಾದ ವಾತಾವರಣವನ್ನು ನಿರ್ಮಿಸುವ ಮಹತ್ವದ ಕೆಲಸ ಇದಕ್ಕೆ ಮುಂಚೆ ನಡೆಯಬೇಕಾಗಿದೆ. ಮುಖ್ಯವಾಗಿ ಸಂಬಂಧಿಸಿದ ರಾಜ್ಯ ಸರಕಾರಗಳು ತಮ್ಮ ಶಾಸನಾಂಗದ ಮುಂದೆ ವರದಿಯನ್ನು ಚರ್ಚಿಗಿಟ್ಟು ಅವುಗಳ ಅಭಿಪ್ರಾಯವನ್ನು ಸಂಗ್ರಹಿಸಬೇಕಾಗುತ್ತದೆ. ಸಂಸತ್ತು ಕೊನೆಯ ನಿರ್ಣಯವನ್ನು ಸ್ವೀಕರಿಸುವುದಕ್ಕೆ ಸಹ ಕಾಲಾವಕಾಶವೇಕು. ಮತದಾರ ಸಂಘಗಳ ಪುನರ್ಘಟನೆ, ಗಡಿ ನಿರ್ಣಯ ಇತ್ಯಾದಿ ಜಟಿಲ ಪ್ರಶ್ನೆಗಳೂ ಚುನಾವಣೆಗೆ ಮೊದಲೇ ಚರ್ಚಿಸಲ್ಪಡಬೇಕಾಗುತ್ತವೆ.

ಉಡುಪಿ

ಗಾಂಧಿಜಯಂತಿ— ಸರ್ವೋದಯದ ಸ್ಥಳೀಯ ಬುನಾದಿ ತರಬೇತಿ ಶಾಲೆಯಲ್ಲಿ ಡಾ. ೭ರಂದು ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಶೇಖರ ಶೆಟ್ಟರು ಸ್ವಾಗತಭಾಷಣ ಮಾಡಿದರು. ಶಾಲಾ ವಿದ್ಯಾರ್ಥಿಗಳ ಭಾಷಣಾನಂತರ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಕೆ. ರಾಘಾಕೃಷ್ಣ ಕಾರಂತರು ಕಾರ್ಯೋಚಿತ ಭಾಷಣ ಮಾಡಿದರು. ಶಾಲಾ ಮೆಟ್ರಾನ್ ಶ್ರೀ ಪಿ. ಎಸ್. ಅಚಾರ್ ಅವರು ಗಾಂಧಿಜೀವನದ ಕುರಿತು ವಿಷಯಗಳನ್ನು ಪ್ರಸ್ತಾಪಿಸಿದರು. ಶಾಲಾ ಸಾಂಸ್ಕೃತಿಕ ಮಂತ್ರಿ ಶ್ರೀ ಮಂಜುನಾಥ ಭೈರಿಗ ಧನ್ಯವಾದಗಳನ್ನರ್ಪಿಸಿದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ— ಡಾ. ೫ ಎಮ್. ಎ. ವೈಗಳ ಅಧ್ಯಕ್ಷತೆಯಲ್ಲಿ ಗಾಂಧಿಜಯಂತಿ ಆಚರಿಸಲ್ಪಟ್ಟಿತು. ಶ್ರೀಗಳಾದ ಎಚ್. ಸುಂದರ ರಾವ್, ಸಿ. ವಿ. ರಮಣ, ವಿದ್ಯಾರ್ಥಿ ಮುಖಂಡ ಶ್ರೀ ಕೆ. ರಾಘಾಕೃಷ್ಣ ಕಾರಂತ ಮೊದಲಾದವರು ಮಾತನಾಡಿದರು.

ಮುನಿಸಿಪಲ್ ಕೌನ್ಸಿಲು ಸಭೆಯು— ಡಾ. ೭ರಂದು ಸಂಜೆ ಡಾ. ಪಿ. ಪಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಎ. ಸುಂಬಯನಾಥ ರಾಯರು ಎಡ್ಡರ್‌ನ ಮೆಂಟ್ ಸೂಚನೆಯೊಂದನ್ನು ತಂದು ಹೋಟೆಲುಗಳಿಗೆ ಈಚೆಗೆ ಶರತ್ತಾಕ್ಕೆ ಕೊಡಲಾದ ಲೈಸೆನ್ಸುಗಳ ಕುರಿತು ಚರ್ಚಿಸಬೇಕಾದ ಅವಶ್ಯಕತೆಯಿದೆ ಎಂದರು. ಇತರ ಸದಸ್ಯರು ಕೂಡಾ ಇದಕ್ಕೆ ಸಮ್ಮತಿಕೊಟ್ಟುದರಿಂದ ಸಭಾಪತಿಗಳು ಸೂಚನೆಯನ್ನು ಮಾನ್ಯಮಾಡಿದರು. ಹೊಟೆಲುಗಳಿಗೆ ಶರತ್ತಾಕ್ಕೆ ಲೈಸೆನ್ಸು ಕೊಟ್ಟಾಗ್ಗೂ, ಶರತ್ತುಗಳನ್ನು ಪಾಲಿಸಲು ಮೂಲಕರು ಅಸಮರ್ಥರಿದುದರ ಬಗ್ಗೆ ಶ್ರೀ ರಾಯರು ಹೇಳಿದರು. ಲೈಸೆನ್ಸು ಶರತ್ತಾಕ್ಕೆ ಈ ನಗರಸಭೆಯು ಮೊದಲೇ ಅಂಗೀಕರಿಸಿದ್ದು ಈಗ ಮಾತ್ರ ಅವುಗಳನ್ನು ಕಡಿಸಿ ರೀತಿಯಿಂದ ಜಿಲ್ಲಾಯಿಸಬಾರದೆಂದು ಬೆಲ್ಟ್ ಅಶೀಸರದನ್ನು ಸೂಚಿಸಿ ಸಮರ್ಥಿಸಿದರೂ ಹೇಗೆಂದೂ ಲೈಸೆನ್ಸು ಶರತ್ತಾಕ್ಕೆ ಪರಿಶೀಲಿಸಲಾಗಿ ಆಜಂಟ್ ಸಭೆಯನ್ನು ಕರೆಯುವುದು ಉತ್ತಮವೆಂದೂ ಶ್ರೀ ಪಿ. ಪಿ. ಆಚಾರ್ಯರು ಹೇಳಿದರು. ಇತರ ಸದಸ್ಯರಿಗೂ ಇದೇ ಸರಿಯೆಂದು ತೋರಿದುದರಿಂದ ಸಭಾಪತಿಗಳು ಶ್ರೀ ಆಚಾರ್ಯರ ಸೂಚನೆಗೆ ಬೆಲೆಕೊಟ್ಟರು. ಮುನಿಸಿಪಲ್ ಸೆಕ್ರೆಟರಿ ಮೇಸ್ತ್ರಿಯವರು ಆಚರಿಸಿದ ಖರ್ಚಿನ ಕೆಲವು ಕೊಟೆಗೆ ಕಾಸರ್ಗೂಡಾಗುವುದು ಕಾಲಕ್ಕೆ ಮೇಸ್ತ್ರಿಯನ್ನು ಬೆಲ್ಟ್ ಅಶೀಸರರು ಸಹಾನುಭೂತಿಯಿಂದ ನೋಡಬೇಕೆಂದು ಆಪರನ್ನು ವಿನಂತಿಸಲಾಯಿತು. ಮುನಿಸಿಪಲ್ ಮಹಾತ್ಮಾಗಾಂಧಿ ಎಲಿಮೆಂಟರಿಶಾಲೆ, ಮುನಿಸಿಪಲ್ ಉತ್ತರ ಮತ್ತು ದಕ್ಷಿಣ ಶಾಲೆಗಳಿಗೆ ಮತ್ತು ಕನ್ನಡಮೂಲಿ ಶಾಲೆಗೆ ಹೆಂಗಾಸುಯಾಗಿ ನೇಮಿಸಲಾದ ಉಪಾಧ್ಯಾಯಿ, ಉಪಾಧ್ಯಾಯಿನಿಯರನ್ನು ಕಾಯಂ ಮಾಡಬಹುದೆಂದಾಯಿತು ಮುನಿಸಿಪಲ್ ಬಂಗ್ಲೆಯ ಹೊರಪಡೆ ಹೊಸರಸ್ತೆಗೆ ಇಲೆಕ್ಟ್ರಿಕ್ ದೀಪಗಳನ್ನು ಹಾಕುವ ನಿರ್ಣಯವಾಯಿತು.

ಮಂತ್ರಿಗಳು ಬರುವರು—

ಕೇಂದ್ರದ ಕೃಷಿಮಂತ್ರಿ ಡಾ. ಪಿ. ಸುಬ್ಬರಾಯನ್ ದೇವಮುಟಿಯ ಇದೇ ತಾ 15ನೇ ಬೆಳಿಗ್ಗೆ ಮುಂಬಯಿಯಿಂದ ನಮ್ಮ ಜಿಲ್ಲೆಗೆ ಆಗಮಿಸುವರು. ಬಜ್ಪೆಯಲ್ಲಿ ಸ್ವಾಗತಿಸಲ್ಪಟ್ಟು ಉಡುಪಿಗೆ ಬಂದು ಮಧ್ಯಾಹ್ನ 12 ಗಂಟೆಯಿಂದ 1ರ ತನಕ ಸುಳ್ಳೆ, ಮೆಡಿಕಲ್ ಕಾಲೇಜ್ ಸಮೀಪ 2-15ಕ್ಕೆ ಮಂಗಳೂರಿಗೆ ಹೊರಡುವರು. ಸಂಜೆ ಮತ್ತು ಮರುದಿನ ಮಂಗಳೂರು ಕಾರ್ಯಕ್ರಮ ಮುಗಿಸಿ ಮಧ್ಯಾಹ್ನ 3-25ಕ್ಕೆ ಹಿಂತಿರುಗುವರು.

ಮದ್ರಾಸು ಕೃಷಿಮಂತ್ರಿ ಶ್ರೀ ಎಂ. ಭಕ್ತವತ್ಸಲಂರವರು ಇದೇ ತಾ. 17ರಂದು ಮಂಗಳೂರಿಗೆ ಬರುವ ಬೆಲ್ಲಾಸಂಚಾರವಾಗಿ 19ನೇ ಬೆಳಿಗ್ಗೆ ವಿಮಾನಮೂಲಕ ಕೊಚ್ಚಿಗೆ ಹೋಗುವರು. 18ನೇ ಬೆಳಿಗ್ಗೆ ಉಡುಪಿಗೆ ಬಂದು 9 ಗಂಟೆಗೆ ಅಲೆವೂರು ಪ್ರಕೃತಿಕಾ ಕೇಂದ್ರದ ಉದ್ಘಾಟನೆ, ಅನಂತರ 9—45ರಿಂದ ಮತ್ತೂರು, ಕೆಮ್ಮಣ್ಣುಗಳಲ್ಲಿ ನಿಯೋಜಿತ ಕೆಲಸಗಳನ್ನು ಬೆಳಗಿಸುವುದು, ಬಳಿಕ 10—30ರಿಂದ 11—30ರ ತನಕ ಮಣಿಪಾಲದಲ್ಲಿ ಕಸ್ತೂರಬಾಯಿ ಕೇಂದ್ರಾರೋಗ್ಯ ಉದ್ಘಾಟನೆವಾಗಿ ಮಧ್ಯಾಹ್ನ ಮಂಗಳೂರಿಗೆ ಹೋಗುವರು.

ವೈಷ್ಣವ ವಿದ್ವಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಹರಿದಾಸ್ಯದ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0

ನವಯುಗ ಪ್ರೆಸ್ ಉಡುಪಿ

(ಜನೇ ಪುಟದಿಂದ)

ಗಿಯೇ ಯೋಜಿಸಲಾಯಿತೆಂದೂ ಆಂಧ್ರ ರಾಜ್ಯದ ಶ್ರೇಯಸ್ಸಿಗೆ ನೆರವಾಗುವ ಈ ಯೋಜನಾ ಕ್ಷೇತ್ರದ ಮೇಲೆ ಆ ರಾಜ್ಯಕ್ಕೆ ಅಧಿಕಾರ ನ್ಯಾಯವಾಗಿ ಇರಬೇಕೆಂದೂ ರಾಯಲಸೀಮೆಯೊಡನೆ ನೂರಾರು ವರ್ಷಗಳಿಂದ ಬಳ್ಳಾರಿ ಪಡೆದಿದ್ದ ಸಂಬಂಧವನ್ನು ಭಾಷೆಯ ತಳಹದಿಯ ಮೇಲೆ ಕೊನೆಗಾಣಿಸುವುದು ಇಷ್ಟವಲ್ಲವೆಂದೂ ಸಮಿತಿ ಸಾರಿ, ತನ್ನ ನಿರ್ಣಯವನ್ನು ಸಮರ್ಥಿಸಿಕೊಂಡಿದೆ.

ಬಂದರದ ಅನುಕೂಲತೆ

ಕನ್ನಡಿಗರಿಗೆ ಭಾಷೆ ಹಾಗು ಭೌಗೋಲಿಕವಾಗಿ ಔಸ್ತ್ಯಯುಕ್ತವಾದ ರಾಜ್ಯವನ್ನು ತಾವು ಕೊಡಮಾಡಿದ್ದೇವೆ ಎಂದು ಆಯೋಗದವರು ಹೇಳಿದ್ದಾರೆ. ಆರ್ಥಿಕ ಹಾಗು ವಾಣಿಜ್ಯ ದೃಷ್ಟಿಯಿಂದ ವಿಚಾರಿಸಿದರೂ ಕರ್ನಾಟಕ ರಾಜ್ಯದ ನಿರ್ಮಾಣವು ಸಮರ್ಥನೀಯವಾಗುವುದೆಂದು ಅವರು ಪ್ರತಿಪಾದಿಸಿದ್ದಾರೆ. ಉದಾಹರಣೆಗೆ ಅನೇಕ ವರ್ಷಗಳಿಂದ ಮುಂಬಯಿ ಕರ್ನಾಟಕ ಮತ್ತು ಮೈಸೂರಿನವರು ಗೂರುತ್ತಿದ್ದ ಬಂದರದ ಪ್ರಶ್ನೆಯು ಇನ್ನು ಸಾಗಮಾಡಾಗಬಲ್ಲುದು; ಮಲೆಯನ್ನು ೧೯೫೦ನೇ ಇಸವಿಯ ಪ್ರಬುದ್ಧ ಬಂದರ ಸಮಿತಿಯು ಬೆಳವಣಿಗೆಗಾಗಿ ಸಿಫಾರಸು ಮಾಡಿದೆ; ಮತ್ತು ಪೂರ್ವ ಸರಿಶೀಲನೆಗೆ ಹೆಗೆದುಕೊಳ್ಳಲ್ಪಟ್ಟಿದೆ — ಎಂದು ಆಯೋಗ ತಿಳಿಸಿರುತ್ತದೆ. ಸಾಮಾನ್ಯವಾಗಿ ಸೂಚಿತ ಕರ್ನಾಟಕ ರಾಜ್ಯಕ್ಕೆ ಒಂದೂವರೆ ಕೋಟಿ ರೂಪಾಯಿಗಳ ಕೊರತೆಯಾದೀತು; ಆದರೆ ಇದು ಅಭಿವೃದ್ಧಿ ಪ್ರಯತ್ನಗಳ ದೆಸೆಯಿಂದಾಗುವ ಕೊರತೆಯೇ ಹೊರತು, ಏಕೀಕರಣದ ಫಲವಲ್ಲ; ಎಲ್ಲ ರಾಜ್ಯಗಳಿಗೂ ಸಾಮಾನ್ಯವಾದವಿಷಯ. ಇದಾಗಿದೆಯಾದುದರಿಂದ ಭಯಪಡಲು ಕಾರಣವಿಲ್ಲ ಎಂದು ಆಯೋಗ ಸಮಾಧಾನ ಪಡಿಸಿದೆ.

ಮಲೆನಾಡಿನ ಸೆರಗು

ಸಂಯುಕ್ತ ಕರ್ನಾಟಕ ರಾಜ್ಯದ ರಚನೆಯಿಂದ ಮಲೆನಾಡಿನ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹೆಚ್ಚಿನ ಉತ್ತೇಜನೆ ಸಿಗಬಲ್ಲುದೆಂದು ಆಯೋಗ ವರದಿಯಲ್ಲಿ ನಿರೂಪಿಸಿದೆ. ಇಷ್ಟರ ವರೆಗೆ ಮಲೆನಾಡು ಐದು ರಾಜ್ಯಗಳ ಅಡಳಿತೆಗೆ ಒಳಪಟ್ಟಿದ್ದುದರಿಂದ ಯಾವುದೇ ಮಹತ್ವದ ಅಭಿವೃದ್ಧಿ ಪ್ರಯತ್ನಗಳನ್ನು ನಡೆಸುವುದು ಸಾಧ್ಯವಾಗಲಿಲ್ಲ. ಇನ್ನು ಮುಂದೆ ಮಲೆನಾಡಿನ ಸೆರಗು ಇಡಿಯಾಗಿ ಕರ್ನಾಟಕದಲ್ಲಿ ಬರುವುದರಿಂದ ಆರ್ಥಿಕ ಲಾಭಗಳನ್ನು ಹೊಂದಲಾಗುವಂತೆ ಯೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಂಡು, ಕೆಲಸ ಮಾಡಬಹುದು ಎಂದು ಆಯೋಗ ಭಾವಿಸಿದೆ. ಮೈಸೂರಿನವರು ಈಗ ಅಷ್ಟಾಗಿ ಅಭಿವೃದ್ಧಿ ಹೊಂದಿಲ್ಲವೆನ್ನುವ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅನೇಕ ನೀರಾವರಿ ಯೋಜನೆಗಳು ಕಾರ್ಯಗತ ಗೊಳ್ಳುತ್ತಿವೆ; ಅವುಗಳ ಫಲವಾಗಿ ಇಷ್ಟು ಸಮೃದ್ಧ ಕೃಷಿಯನ್ನು ನಡೆಸಲು ಅನುಕೂಲವಾಗುತ್ತದೆ. ಹೆಚ್ಚಿನ ಉತ್ಪಾದನೆಯ ಉಪಯೋಜನವನ್ನು ದಕ್ಷಿಣದಲ್ಲಿರುವ ಕೊರತೆಯ ಪ್ರದೇಶವಾದ ಮೈಸೂರು ಸಹಪಡೆಯಬೇಕಾದರೆ, ಸಂಯುಕ್ತ ಕರ್ನಾಟಕ ರಾಜ್ಯವನ್ನು ನಿರ್ಮಿಸುವುದೇ ಯೋಗ್ಯವಾದ ಉಪಾಯ. ಆದುದರಿಂದ ಏಕೀಕರಣದಿಂದ ಉತ್ತರ ಕರ್ನಾಟಕವೇ ಮೈಸೂರಿಗಿಂತ ಹೆಚ್ಚು ಸಯೋಜನ ಪಡೆಯಲು ಹೆವಣಿಸಿದೆ ಎನ್ನುವುದು ಸರಿಯಲ್ಲ—ಎಂದು ಸಮಿತಿ ಸ್ಪಷ್ಟಪಡಿಸಿದೆ. "ಕರ್ನಾಟಕದಲ್ಲಿ ವಿಪುಲವಾದ ಖನಿಜಸಂಪತ್ತೂ, ಅರಣ್ಯ ಸಂಪತ್ತೂ, ಜಲಸಂಪತ್ತೂ ಇದೆ—ನಾವು ಹೇಗೆ ನಿಚಾರಿಸಿದರೂ ಭೌಗೋಲಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕವು ಸುದೃಢವಾದ, ಅಸ್ತಿತ್ವವನ್ನು ಪಡೆಯಲು ಶಕ್ತವಾದ ರಾಜ್ಯ. ಒಂದೇ ಭಾಷೆಯ ಬಂಧನಕ್ಕೆಂತು ಇದು ಹೆಚ್ಚು ಸ್ವತಂತ್ರವಾದ ಒಗ್ಗಟ್ಟಿನ ಸ್ಥಿತಿಯನ್ನು ಸೂಚಿಸುತ್ತದೆ"—ಎಂಬುದು ಆಯೋಗದ ಖಚಿತ ಅಭಿಪ್ರಾಯ.

ಕುಚಿಯೊಡೆ ಕಾರ್ಮಿಕ ವಸಾಹತು

ಕೈಗಾರಿಕೆಗಳ ವಿಸ್ತರಣೆಯಿಂದ ಜನನಿಬಿಡವಾದ ಪಟ್ಟಣಗಳಲ್ಲಿ ಪ್ರಗತಿಯ ಜೀವನಾದಿಯಂತಿರುವ ಕಾರ್ಮಿಕರ ಆರೋಗ್ಯಕ್ಕೆ ಧೋಷಕವಾದ ಕುಚಿಯೊಡೆ ವಸತಿ ಗೃಹದಲ್ಲಿಪ್ರೀತಿಗೆ ಸಾಕಷ್ಟು ಮುಕ್ತ ಕೊಡಲಾಗುತ್ತಿಲ್ಲ ಎಂಬುದು ಶೋಚನೀಯವಾದ ವಿಚಾರ ಕೆಲಸಗಾರರ ಮಕ್ಕಳ ಯೋಗಕ್ಷೇಮಕ್ಕಾಗಿಯೂ ಸಂಬಂಧಿಸಿದ ಕೈಗಾರಿಕೆಗಳವರು ಗಮನ ಪೂರೈಸುತ್ತಿಲ್ಲ ಪ್ರಧಾನ ನಗರಗಳು ತಮ್ಮ ಇತ್ತೀಚೆಯ ದಕ್ಷಿಣ ಭಾರತ ಸಂಚಾರ ಕಾಲದಲ್ಲಿ ಇವೆರಡೂ ಕೊರತೆಗಳನ್ನು ನಿವಾರಿಸಲು ಬದ್ಧಕಂಕಣರಾಗಿದೆ ಕೆಂದು ಹೇಳಿದ್ದಾರೆ ಸುದೈವದಿಂದ ಸರಕಾರದ ಪರವಾಗಿ ಇತ್ತೆ ಎತ್ತಿದ ಕಾರ್ಖಾನೆಗಳು ಈ ವಿಷಯದಲ್ಲಿ ಮೊದಲಿ ಹಾಕಿಕೊಟ್ಟಿವೆ- ಉದಾಹರಣೆಗೆ, ಕರಂಬರಿನ ಕಾರ್ಖಾನೆಗೆ ಒಂದಿಕೊಂಡು ೪೦೦ ಕಾರ್ಮಿಕ ಕುಟುಂಬಗಳಿಗೆ ವಸತಿಯನ್ನಿದೆ ಮಕ್ಕಳಿಗೆ ಮೇಲಿನ ಚಿತ್ರದಲ್ಲಿ ತೋರಿಬರುವ ಸೊಗಸಾದ ಕ್ರೀಡಾರಂಗ ಮತ್ತು ಉಸ್ತುವಳನದ ವ್ಯವಸ್ಥೆಯು ಏರ್ಪಟ್ಟಿರುತ್ತದೆ

ಮುನಿಂಯಾಲು— ಸ್ಥಳೀಯ ಯುವಕ ಸಂಘದ ವತಿಯಿಂದ ಗಾಂಧಿಜಯಂತಿಯು ತಾ ೨೯ ಬೆಳಿಗ್ಗೆ ಪ್ರಭಾತಫೇರಿಯಿಂದ ಪ್ರಾರಂಭವಾಯಿತು ಶ ಲಂಮಕ್ಕಳಿಗೆ ಶ್ರೀ ಶ್ರೀನಿವಾಸ ಶೆಟ್ಟಿ ತಿಂಡಿಯಂಚಿದರು ನಂತರ ಶ್ರೀ ಎಂ ವಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ ಯು ಕೃಷ್ಣ, ಶ್ರೀ ಪೂಣಿ ಸಟ್ಟಿ ಮೊದಲಾದವರು ಕಾರ್ಯೋಚಿತವಾಗುಗಳನ್ನಾಡಿದರು ಶ್ರೀ ಎಂ ಎಸ್ ಕಲ್ಯಾರವು ಸನ್ಮಾನಪತ್ರವನ್ನಿತ್ತರು ಸಂಜೆ ಸಾರ್ವಜನಿಕ ಸಭೆಯು ಆಸ್ಪತ್ರೆಯ ಪ್ರೊಜೆಕ್ಟ್ ಆಫೀಸರ್ ಶ್ರೀ ವಿ ರಘುನಾಥ ರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಂಡ್ರಾಡಿ ಕೃಷ್ಣಯ್ಯ ಸಟ್ಟಿ ಮೊದಲಾದವರು ಮಾತನಾಡಿದರು, ಪ ಹಿಳಾ ಸಂಘ, ಸಮಾಜ ಶಿಕ್ಷಣ ಸಂಘಗಳ ಕಡೆಯಿಂದಲೂ ಗಾಂಧಿಜಯಂತಿ ಆರಿಸಲ್ಪಟ್ಟಿತು

ಸುರತ್ಕಲ್— ಶ್ರೀ ಸದಾಶಿವ ದೇವಾಲಯದ ವಾರ್ಷಿಕ ಮಹಾಸಭೆಯು ಕಳೆದ ತಾ ೩೦ರಲ್ಲಿ ಇತ್ಯ ವಿದ್ಯಾವಾಯಿನಿ ಬಾಲಾ ಮುಖ್ಯಶಿಕ್ಷಕಿಯ ಶ್ರೀ ಎಚ್ ದಾಮೋದರ ಮಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎ ಸ್ ತರ್ ಹೆಬ್ಬಾರರಿಂದ ದೇವತಾ ಪ್ರಾರ್ಥನೆ, ಸ್ವಾಗತಭಾಷಣವಾಯಿತು ನಂತರ ಮುಂಬಯಿ ಸುರತ್ಕಲ್ ಕುಲಾಲ ಪರಿಷ್ಕರ ಸಹಾಯಕ ಸಭೆಯಿಂದ ಬಂದಿದ್ದ ಸಂದೇಶ ಓದಲಾಯಿತು ಸಭೆಗರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾಗಿ ದೇವತಾ ಪ್ರಸಾದ ವಿತರಣೆಯೊಂದಿಗೆ ಸಭೆಯು ಕೊನೆಗೊಂಡಿತು

ಮಚ್ಚಿನ— ಇಲ್ಲಿಯ ಬೋರ್ಡು ಹೈಸ್ಕೂಲಿನಲ್ಲಿ ತಾ ೭ರಲ್ಲಿ ಗಾಂಧಿಜಯಂತಿಯ ಶ್ರೀ ಹರಿಶ್ಚಂದ್ರ ಸಂಪಿಗಾಪ್ರಿಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಬಹುಮಾನ ಕಾರ್ಯಕ್ರಮಗಳಿಂದ ಗಾಂಧಿಜಯಂತಿ ಆರಿಸಲ್ಪಟ್ಟಿತು

ನಿಂಜೂರು— ಸ್ಥಳೀಯ ಶ್ರೀ ವಿವೇಕಾನಂದ ಸೇವಾಸಂಘಕ್ಕೆ ಹೊಸ ಭವನ ಕಟ್ಟಿಸಲು ಶ್ರೀ ನಂಜುಂಡರು ಸಿಮಾರಾವು ರಾಯರು ಅರ್ಧ ಎಕ್ರೆ ಸ್ಥಳವನ್ನು ರಿಜಿಸ್ಟ್ರಿಸಿ ದಾನ ನಿತ್ತುದು ಸ್ತುತ್ಯರ್ಹವೆನಿಸಿದೆ

ಕುಂಬಳೆ ಬೂಂ— ಇಲ್ಲಿಯ ಹಾ ಎ ಶಾಲಾ ಉತ್ಸಾಹಿ ಹಾಗೂ ತರುಣ ಅಧ್ಯಾಪಕ ಶ್ರೀ ಸಂಜೀ ಸದಾನಂದ ಸೆಟ್ಟಿರು ತಾ ೩ರಲ್ಲಿ ಅಕಾಲ ನಿಧನಕ್ಕೆ ತುತ್ತಾಗಿದುದು ತುಂಬಾ ವಿಷಾದಕರವಿದ—ಇವರ ಬಂಧು ಬಳಗದವರೊಡನೆ ನಮ ಸಂತಾಪವಿದೆ

ಹೆಜ್ ಮಾಡಿ ಸ್ಥಳೀಯ ಬೋರ್ಡು ಹೈಸ್ಕೂಲಿನ ಕನ್ನಡ ಸಾಹಿತ್ಯ ಸಂಘದ ಪ್ರಾರಂಭೋತ್ಸವವು ತಾ ೨೩ರಲ್ಲಿ ಶ್ರೀ ಕೆ ಅನಂತಪದ್ಮನಾಭ ಉದುಪರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯರಿಂದ ಸ್ವಾಗತ ಶ್ರೀ ವೈ ಕಾಳಪ್ಪ ಸಟ್ಟಿರಿಂದ ಅತಿಥಿಗಳ ಪರಿಚಯ ಭಾಷಣಗಳಾದುವು ಶ್ರೀ ಶಂಕರ ಸಟ್ಟಿರು ಧನ್ಯವಾದಗಳನ್ನರ್ಪಿಸಿದರು

ಉಳ್ಳಾಲ— ಸ್ಥಳೀಯ ಕೇಂದ್ರ ಗೇರು ಬೀಜ ಸಂಶೋಧನಾ ಕ್ಷೇತ್ರದಲ್ಲಿ ಧೃತಿ ದಿನಾಚರಣೆಯು ತಾ ೭ರಲ್ಲಿ ನಿವೃತ್ತ ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಕೆ ಎಸ್ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು

ಹೆಗ್ಗಸುಗರ್ಗೆ— ಸರ್ವಾಂಗ ಸಮಾಜಸೇವಾ ಸಮಿತಿಯ ಸದಸ್ಯರು ಶ್ರೀಗಳಾದ ಕೊಂಕಣಿರತ್ನಂ, ಎಸ್ ಶ್ರೀರಾಮ್ ಮತ್ತು ಕಾರ್ಯದರ್ಶಿ ಶ್ರೀ ಅಪ್ಪಂಡ ರಾಜನ್ ರವರು ಮಂಗಳೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಶ್ರೀ ಕೆ ಕಾಳಪ್ಪ ಸಟ್ಟಿರೊಂದಿಗೆ ತಾ ೫ರಲ್ಲಿ ಕಂಚಿ ಬಂದು ಪೆರ್ಕಾಟಿಂಗ್ ಸರ್ವಾಸ್ಟಿ ಹೌಸ್ ಬೇಂಕ್ ಮೊದಲಾದ ಸಂಸ್ಥೆಗಳನ್ನು ಸಂದರ್ಶಿಸಿದರು ತಾ ೬ ರಂದು ಬೆಳಿಗ್ಗೆ ಕಾಳರಗೋಡು ಮತ್ತು ಕೃಷ್ಣಾಯಿಗಳ ಸಂಗಡ ಪರವಾಗಿ ಮನೆ ಸಿಂಗಾರಂದನ್ನು ಸ್ವೀಕರಿಸಿದರು.

ಕುದಿ—ಇಲ್ಲಿಯ ಎಲಿಮೆಂಟರಿ ಶಾಲಾ ಬಾಲಕರು ತಾ ೩೦ಲ್ಲು ಕುದಿ ಶಾಲೆಯಿಂದ ಕೊಕ್ಕಡೆ ಗ್ರಾಮಸ್ಥರು ಮಾಡುವ ರಸ್ತೆಯ ಕೆಲಸದಲ್ಲಿ, ತಮ್ಮ ಉಪಾಧ್ಯಾಯರ ನೇತೃತ್ವದಲ್ಲಿ ಭಾಗವಹಿಸಿದರು

ಮೂಡು ಕೊಣಾಜೆ— ಉಡುಪಿ ಮತ್ತು ಕುಂದಾಪುರ ತಾಲೂಕು ಹರಿಜನ ಪೆಲ್ಲೋಸ್ ಶಾಖೆಗಳ ಪೈಕಿ ಉತ್ತಮವೆನಿಸಿದ ಮೂಡುಕೊಣಾಜೆ ಹರಿಜನ ಪೆಲ್ಲೋಸ್ ಶಾಖೆಗೆ ಗಾಂಧಿ ಜಯಂತಿ ದಿನದ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ವಿ ದೇವಪ್ಪ ನ್ಯಾಯಕರು ಬಳ್ಳಿಯ ಕಪ್ ಮತ್ತು ಮೆಡಲನ್ನು ಬಹುಮಾನ ನಿತ್ತರು

ಮುದ್ರಾಡಿ— ಸ್ಥಳೀಯ ಸಮಾಜ ಸಿಹಾರ ಕೇಂದ್ರದ ಆಶ್ರಯದಲ್ಲಿ ಗಾಂಧಿ ಜಯಂತಿಯಂದು ಮೈರಾಪಣ ಕಾಳಗ ಪೆಂಬ ಲಂಕ್ಷಗಾನ ತಾಳಮದ್ದಳೆ ಕೂಟ ಜರಗಿತು

ದ ಕ ಜಿಲ್ಲಾ ವಿದ್ಯಾ ಪರಿಷತ್ತು

ಜಿಲ್ಲಾ ಶಿಕ್ಷಕ ಸಂಘದ ಆಶ್ರಯದಲ್ಲಿ ಕುಂದಾಪುರ ಸೈಂಟ್ ಮೇರೀಸ್ ಹಾಯರ್ ಎಲಿಮೆಂಟರಿ ಶಾಲಾ ಪರಿಸರದಲ್ಲಿ ತಾ. 23.10.1955 ನೆ ಆದಿತ್ಯವಾರ ಶ್ರೀ ಬಿ ವೈಕುಂಠ ಬಾಳಿಗ, ಎಂಎಸ್ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರಗುವುದು ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಶ್ರೀ ಎ ಬಿ. ಸೆಟ್ಟಿರು ಪರಿಷತ್ತನ್ನು ಉದ್ಘಾಟಿಸುವರು

ಬೆಳ್ಳಾರೆ— ಗ್ರಾಮ ಸೇವಾ ಸಂಘದ ನೇತೃತ್ವದಲ್ಲಿ ಇದೇ ತಾ 16 ನುತ್ತು 17ರಲ್ಲಿ ದಸರಾಮಹೋತ್ಸವವು ಅನುತ್ಸವವಾಗಿ ಶ್ರೀ ಕೆ ಕೆ ಸೆಟ್ಟಿ ಮತ್ತು ಶ್ರೀ ಎಂ ಆನಂದ ರಾವ್, ಎಂ ಎ, ಬಿ ಟಿ ಎಲ್ ರವರ ಅಧ್ಯಕ್ಷತೆಗಳಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿರುವುದು.

ಮಣಿಪಾಲ— ಇಲ್ಲಿಯ ಹಾ ಎ ಶಾಲೆಯಲ್ಲಿ ಗಾಂಧಿಜಯಂತಿಯು ತುಶೀಲ್ದಾರ್ ಶ್ರೀ ಕೆ ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಡಾ. ಟಿ ಎಸ್ ಎ ಪೈಗಳು ಸ್ವಾಗತಭಾಷಣಮಾಡಿದರು ಪೆಲ್ಲೋಸ್ ಎಕ್ಸಟೆನ್‌ಸನ್ ಪ್ರೊಜೆಕ್ಟಿನವರತಿಯಿಂದ ರಚಿಸಲ್ಪಟ್ಟ ಕ್ರೀಡಾಂಗಣವು ಈ ಸಂದರ್ಭದಲ್ಲಿ ತೆರೆಯಲ್ಪಟ್ಟಿತು

ತೆಂಕನಿಡಿಯೂರು ಗರಡಿ ಮಜಲು ಬೋರ್ಡು ಹಾಯ ಎ ಶಾಲೆಯಲ್ಲಿ ಗಾಂಧೀಜಿಯವರ ಭಾವ ಚಿತ್ರವನ್ನು ಶ್ರೀ ಟಿ ಎ ಪೈ ಎಂಎಲ್ ಎ, ಅವರು ಅನಾವರಣಮಾಡಿದರು ಶ್ರೀ ಎ ಜೆ. ಅಳ್ಳಿಯವರು ಸಭಾಧ್ಯಕ್ಷತೆ ವಹಿಸಿದ್ದರು.

ಕಾಸರಗೋಡು— ಈ ತಾಲೂಕಿನ ಸಂಯುಕ್ತ ಕರ್ನಾಟಕ ಸಂಘದ ಸದಸ್ಯರ ಸಭೆಯು ಶ್ರೀ ಎಸ್ ಉಮೇಶ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ ಆರ್ ಕಾರಂತ, ವಿ ನಿ ಬಾಳಿಗ, ಎಂ ಎಲ್ ಎ, ಕೆ ಆರ್ ಅಚ್ಚರ್ ಮೊದಲಾದವರು ಮಾತನಾಡಿ ಚಂದ್ರಗಿರಿ ಹೆಸರಿಯ ಉತ್ತರ ಪ್ರಾಂತವನ್ನು ಕರ್ನಾಟಕದಲ್ಲೇ ಇರಿಸಲು ವಿಸೃಂಕೆಂಬ ಕುರಿತು ಗಟ್ಟಿ ಪ್ರಯತ್ನಿಸಲು ಡಿಲ್ಲಿಗೆ ಶಿಷ್ಟಮಂಡಲವೊಂದನ್ನು ಕಳುಹಿಸಬೇಕೆಂದು ನಿರ್ಧರಿಸಲಾಯಿತು

ಕಾರ್ಕಳ- ಸ್ಥಳೀಯ ಹರಿಜನ ಕ್ಷೇಮ ಚಿಂತನಾ ಸಮಿತಿ ಸಭೆಯು ಈಚೆಗೆ ಶ್ರೀ ಆರ್ ಪಿ ಶೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರಗಿತು ಸರ್ವಾಗ್ರಾಮ ಚಲಚಿತ್ರ ಪ್ರದರ್ಶನದಿಂದ ಜಮೆಯಾದ ರೂಪಾಯಿ 555/ ನ್ನು ಹರಿಜನರಿಗೆ ವೈದ್ಯಕೀಯ ಸಹಾಯ ಕೊಡಲಿಕ್ಕಾಗಿ ನೆಲೆ, ಬೆಂಕಿ ಮೊದಲಾದ ಅನಾಹುತಗಳಿಗೆ ಸಂತ್ರಸ್ತರಿಗೆ ಸಹಾಯ ಕೊಡಲಿಕ್ಕಾಗಿ ಉಪಯೋಗಿಸಬೇಕೆಂದು ತೀರ್ಮಾನಿಸಲಾಯಿತು

ಚಂದಾವಣಿ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ
O. S 330/1955

ಗಾಬ್ರಿಯೆಲ್ ಮಿನೇಜಸ್ —ವಾದಿ.
ಮತ್ತು

ಲೋರಸ್ ಬರ್ನೇಜ—ಕಾಪ್ಕಿರ್ ಬರ್ನೇಜರ ಮಗ—ಉಡ್ಪಿ ತಾಲ್ಲೂಕು ಶಿವಗ್ರಾಮದ ಸೊಕಳಿ ಹಿಮ್ಮಲ —ಪ್ರತಿವಾದಿ,

ಇವರೊಳಗೆ—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ -

ನೀವು ವಾದಿಗೆ ತಾರೀಕ 5-12-1952 ರಲ್ಲು ರೂಪಾಯಿ 500/ ಕ್ಕೆ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಅಸೇಜುಗಳನ್ನು ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾರೀಕು 21-10-1955ಕ್ಕೆ ಇಟ್ಟಿರುವುದರಿಂದ ಆ ಕುರಿತು ಉದಾಸೀನಸುವಂತಿದ್ದಿದ್ದರೆ ಸದ್ರಿ ದಿನ ಮುನ್ಸೀಫ್‌ರ ಕೋರ್ಟಿನಲ್ಲಿ ಪೂರ್ವಾಹ್ನ 10 ಗಂಟೆಗೆ ಹಾಜರಾಗಿ ವ್ಯಾಜ್ಯೀರು ಮಾಡಿಕೊಳ್ಳುವುದು ತಪ್ಪಿದ್ದರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲಾವೀತು

K Ramakrishna Rao,
Vakil for Plaintiff

Udipi, 10 10 1955

ಮುನಿಂಯಾಲು ಯುವಕ ಸಂಘದ ಗಾಂಧಿಜಯಂತಿ

ತಾ ೨೯ ಬೆಳಿಗ್ಗೆ ಪ್ರಭಾತಫೇರಿಯಿಂದ ಪ್ರಾರಂಭವಾಯಿತು ಶಾಲಾಮಕ್ಕಳಿಗೆ ಶ್ರೀ ಶ್ರೀನಿವಾಸ ಶೆಟ್ಟಿ ತಿಂಡಿಯಂಚಿದರು ನಂತರ ಶ್ರೀ ಎಂ ವಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಡಾ ಯು ಕೃಷ್ಣ, ಶ್ರೀ ಪೂಣಿ ಸಟ್ಟಿ ಮೊದಲಾದವರು ಕಾರ್ಯೋಚಿತವಾಗುಗಳನ್ನಾಡಿದರು ಶ್ರೀ ಎಂ ಎಸ್ ಕಲ್ಯಾರವು ಸನ್ಮಾನಪತ್ರವನ್ನಿತ್ತರು ಸಂಜೆ ಸಾರ್ವಜನಿಕ ಸಭೆಯು ಆಸ್ಪತ್ರೆಯ ಪ್ರೊಜೆಕ್ಟ್ ಆಫೀಸರ್ ಶ್ರೀ ವಿ ರಘುನಾಥ ರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಂಡ್ರಾಡಿ ಕೃಷ್ಣಯ್ಯ ಸಟ್ಟಿ ಮೊದಲಾದವರು ಮಾತನಾಡಿದರು, ಪ ಹಿಳಾ ಸಂಘ, ಸಮಾಜ ಶಿಕ್ಷಣ ಸಂಘಗಳ ಕಡೆಯಿಂದಲೂ ಗಾಂಧಿಜಯಂತಿ ಆರಿಸಲ್ಪಟ್ಟಿತು

ಕುಂದಾಪುರದ ಮುನ್ಸೀಫ್ ಕೋರ್ಟಿನಲ್ಲಿ
O S No 305/1955

ರಂಗಪ್ಪಾಸ ಭಟ್ಟ —ವಾದಿ

ಶಿವಭಾಭ ಕಾಮತ್ ಕೊಡಾ ಪ್ರಭವಾದಿರು

6ನೇ ಪ್ರತಿವಾದಿ, ವೆಂಕಟೇಶ ಕಾಮತ್, ಗಣಪಯ್ಯ ಕಾಮತರ ಮಗ, residing at 11/1 Yarandona Koath Road, Post Deccan Gymkhana Poona 4

ಇವರೊಳಗೆ—

ವಾದಿಗೆ ತಾರೀಕು 17 8 1953ರಲ್ಲು ರೂಪಾಯಿ 700-0-0ಕ್ಕೆ ಬರೆಕೊಟ್ಟ ರಿಜಿಸ್ಟ್ರಿ ಈಡುದಾಖತ್ತಿನ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ಮೇಲ್ಕಂಡ ದಾವಾ ಮಾಡಿರುವದರಿಂದ ಆ ಕುರಿತು ನಿಮ್ಮ ಉತ್ತರವಾದ್ರು ಲಿಖಿತವಾಗಿ ಇದ್ದಲ್ಲಿ ತಾರೀಕ 19 10 1955ನೇ ದಿನದ ಹಗಲು 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರ್ ಆಗಿ ವ್ಯಾಜ್ಯೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲಾಗುತ್ತದೆ ಎಂಬ ಸರ್ಕಾರ ಕೋರ್ಟ ಕುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿದೆ

K Raghunatha Shenai,
Pleader for Plaintiff

Coondapoor, 10—10—55

ಪಾರ್ವತಿಯು ಶಿವನ ಮುಂದೆ ನರ್ತಿಸುತ್ತಿರುವುದನ್ನು ನೋಡುತ್ತಿರುವನು (ಉಡುಪಿಯಲ್ಲಿ, ಶ್ರೀ ಕೆ ಪರಿಯಪ್ಪ ಶೆಡ್ಡಿಯವರಲ್ಲಿ ಕಳೆದ ತಿಂಗಳಲ್ಲಿ ಚಾತಿ ಹುಟ್ಟುವ ಆಚರಿಸಲ್ಪಟ್ಟಾಗ ತೆಗೆದ ಚಿತ್ರ ಈ ಚಿತ್ರದಲ್ಲಿ ಶಿವ ಪಾರ್ವತಿ ವಿಗ್ರಹಗಳನ್ನು ರಚಿಸಿದವರು ಉಡುಪಿಯ ಪೈಂಟರ್ ಮಂಜುನಾಥಟೀಯವರು. ಗಣಪತಿ ವಿಗ್ರಹ ರಚಿಯಿತರು-ಪೈಂಟರ್ ಗಣಪತಿ ರಾವ್.

ಮಂಗಳೂರು

ಪಂಚಾಯತ ಆಫೀಸರರ ಕಾರ್ಯಕ್ಷೇತ್ರ ಬದಲಾವಣೆ—

ದ. ಕ. ಜಿಲ್ಲಾ ಎಡಿರನಲ್ ಡಿಸ್ಟ್ರಿಕ್ಟ್ ಪಂಚಾಯತ ಆಫೀಸರರ ಸುಪರ್ದಿಗೊಳಪಟ್ಟ ಡಿಸ್ಟ್ರಿಕ್ಟ ಪಂಚಾಯತ ಆಫೀಸರರ ಕಾರ್ಯಕ್ಷೇತ್ರದಲ್ಲಿ ಈ ಕೆಳಗಿನ ಬದಲಾವಣೆಗಳು ಮಾಡಲ್ಪಟ್ಟಿವೆ ಎಂದೂ ಉಪ್ಪಿನಂಗಡಿ ಮತ್ತು ಉಡುಪಿ ಡಿಸ್ಟ್ರಿಕ್ಟ ಪಂಚಾಯತ ಆಫೀಸರರ ಕಚೇರಿಗಳ ಜೆಲ್ಲಂಗಡಿ ಮತ್ತು ಕುಂದಾಪುರಕ್ಕೆ ಬಯ್ಯಲ್ಪಟ್ಟವೆಯಾಗಿಯೂ ಎ. ಡಿ. ಪಂಚಾಯತ ಆಫೀಸರ್ ಶ್ರೀ. ಪಿ. ಟಿ. ಅಳ್ಳೂರು ತಿಳಿಸುತ್ತಾರೆ.

1 ಡಿಸ್ಟ್ರಿಕ್ಟ ಪಂಚಾಯತ ಆಫೀಸರ್ ಕುಂದಾಪುರ. ಕುಂದಾಪುರ ತಾಲೂಕು ಮತ್ತು ಉಡುಪಿ ತಾಲೂಕಿನ ಕೋಟಾ ಫಿಕಾರ್.

2 ಡಿ. ಪಂಚಾಯತ ಆಫೀಸರ ಕಾರ್ಕಳ. ಉಡುಪಿ ತಾಲೂಕಿನ ಕಾಪ್ಸು ಉಡುಪಿ ಮತ್ತು ಬ್ರಹ್ಮಾವರ ಫಿಕಾರ್‌ಗಳು ಮತ್ತು ಕಾರ್ಕಳ ತಾಲೂಕಿನ ಅಜೆಕಾರು ಮತ್ತು ಕಾರ್ಕಳ ಫಿಕಾರ್‌ಗಳು.

3 ಡಿ ಪಂಚಾಯತ ಆಫೀಸರ್ ಬೆಲ್ಲಂಗಡಿ, ಕಾರ್ಕಳ ತಾಲೂಕಿನ ಮೂಡಬಿದ್ರೆ ಮತ್ತು ಮೇಣೂರು ಫಿಕಾರ್‌ಗಳು, ಬೆಲ್ತಂಗಡಿ ಮತ್ತು ಕೊಕ್ಕಡ ಫಿಕಾರ್‌ಗಳು ಮತ್ತು ಉಪ್ಪಿನಂಗಡಿ ಫಿಕಾರ್.

ರೈತ ದಿನಾಚರಣೆ—

ಕಂಕನಾಡಿಯ ಸರಕಾರಿ ಭತ್ತ ಸಂಶೋಧನಾ ಕ್ಷೇತ್ರದಲ್ಲಿ ತಾ. 8ರಲ್ಲಿ ಸಂಜೆ ಜರಗಿದ ರೈತ ದಿನಾಚರಣೆಯ ಸಂದರ್ಭದಲ್ಲಿ 1954–55ನೇ ಇಸವಿಯ ಭತ್ತದ ಬೆಳೆಯ ಸ್ಪರ್ಧೆ ಬಹುಮಾನಗಳನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮ್ ಅವರು ವಿತರಣೆ ಮಾಡುತ್ತಾ, ದ. ಕ. ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಮುನ್ನೆಡೆಯ ಪರಿಶೀಲನೆ ಕೈಗೊಂಡು ಎಲ್ಲಿ ಯಾವರೀತಿಯ ಮುನ್ನಡೆ ಎಂಬ ಸತ್ಯ ಸಂಶೋಧನೆ ನಡೆಯಬೇಕಾಗಿದೆ ಎಂದರು ಮುಡಿಪಾಲ್ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಪ್ರಿನ್ಸಿಪಾಲ್ ಡಾ. ಟಿ. ಎಸ್. ಎ. ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕೊಯಮುತ್ತೂರು ಕೃಷಿ ಇಲಾಖಾ ಡಿಪ್ಯುಟಿ ಡೈರೆಕ್ಟರ್ ಶ್ರೀ ಬಿಚೈಯಲ್ಲಾ ರಾಮರವರು ಸ್ವಾಗತಮಾಡುಗಳನ್ನಾಡಿದರು. ಭತ್ತದ ಪರಿಶೋಧನಾ ಕ್ಷೇತ್ರದ ಸುಪರಿಂಟೆಂಡೆಂಟ್ ಶ್ರೀ ಕೆ. ಹನುಮಂತ ರಾಯರು ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಲ್ಲಾದ ಕಾರ್ಯಗಳ ವರದಿಯನ್ನೋದಿದರು. ಅಸಿಸ್ಟಾಂಟ್ ಫ್ರೂಟ್ ಸ್ಪೆಶಲಿಸ್ಟ್ ಶ್ರೀ ಸಿ. ಎನ್. ಮಾಧವ ರಾಯರು ಪಡೀಲಿನ ಫಲ ಪರಿಶೋಧನಾ ಕ್ಷೇತ್ರದಲ್ಲಿ ಕೈಕೊಳ್ಳಲಾದ ಕಾರ್ಯಕ್ರಮಗಳನ್ನು ವಿವರಿಸಿದರು. ಕೀಟ ಶಾಸ್ತ್ರಜ್ಞ ಶ್ರೀ ಕೆ. ಪಿ. ಅನಂತ ನಾರಾಯಣನ್, ಶಿಲೀಂಧ್ರ ಶಾಸ್ತ್ರಜ್ಞ ಶ್ರೀ ಎಮ್. ಕಂದಸ್ವಾಮಿ, ಶ್ರೀ ಪೊರೈರಾಜ್, ಶ್ರೀ ಪಿ. ಎಸ್. ವೇಣಾ ರವರು ಭಾಷಣಮಾಡಿದರು.

ಒಂದು ಎಕ್ರೆ ಭೂಮಿಯಲ್ಲಿ 7875 ರಾತ್ಲು (124 ಮುಡಿ) ಭತ್ತ ಬೆಳೆಸಿ 1954–55ನೆ ಸಾಲಿನಲ್ಲಿರುವ ತಾಲೂಕು ಬಹುಮಾನಪಡೆದ ಶ್ರೀ ಮರಕಡ ರಾಮಣ್ಣ ರೈಗಳಿಗೆ ಪದಕವನ್ನು ಪ್ರದರ್ಶಿಸತ್ತಿರುವುದನ್ನೂ ಫಿಕಾರ್ ಬಹುಮಾನಗಳನ್ನು ಶ್ರೀ ಪಡೇಕಲ ಕೋಟ್ಯಣ್ಣಾಳ್ವ, ಶ್ರೀ ಶಂಕರ ಸೇಮಿತ ಗುರುಪುರ, ಶ್ರೀ ಪಿ. ಸಂಜೀವ ಶೆಟ್ಟಿ ಮೂಲ್ಕಿ, ಶ್ರೀ ಎಸ್. ರಾಮಣ್ಣ ರೈಗಳಿಗೆ ಜಿಲ್ಲಾ ಕಲೆಕ್ಟರರು ಬಹುಮಾನಗಳನ್ನು ವಿತರಣೆ ಮಾಡಿದರು.

ಸಭಾಧ್ಯಕ್ಷ ದಾ. ಮಾಧವ ಪೈಗಳು ರೈತರ ದಿನಾಚರಣೆಯನ್ನು ಒಡಗಿಸುವುದರಿಂದ ಕೃಷಿ ಇಲಾಖಾ ಅಧಿಕಾರಿಗಳೂ, ಜಿಲ್ಲಾ ರೈತರೂ ಜತೆಕೂಡಿ ತಂತಮ್ಮ ಅನುಭವಗಳ ಕುರಿತು ವಿಚಾರ ವಿನಿಮಯ ಮಾಡಲು ಅನುಕೂಲವಾಗುವುದೆಂದು ತಿಳಿಸಿದರು. ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಕೆ. ಸಂಜೀವ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ರೈತದಿನಾಚರಣೆ ಸಂಬಂಧವಾಗಿ ಕೃಷಿಪ್ರದರ್ಶನವೊಂದು ಏರ್ಪಡಿಸಲಾಗಿತ್ತು.

ಅತ್ಯುತ್ತಮ ಗ್ರಾಮಾಭಿವೃದ್ಧಿ ಕಾರ್ಯಗಳಿಂದ ಗ್ರಾಮಗಳಿಗೆ ಪಾರಿತೋಷ—

ದ. ಕ. ಜಿಲ್ಲೆಯ ಇನ್ನ, ನಾಲ್ಕೂರು, ಪೆರ್ಲಾಲ, ಉಪ್ಪುಂದ, ಶಿರ್ವಾದಿ ಮತ್ತು ಪೈಲೂರು ಗ್ರಾಮಗಳಲ್ಲಿ, ಅತ್ಯುತ್ತಮ ಗ್ರಾಮಾಭಿವೃದ್ಧಿ ಕಾರ್ಯಗಳಾದ ಬಗ್ಗೆ ಆ ಗ್ರಾಮಗಳಿಗೆ ಪ್ರತಿಯೊಂದಕ್ಕೆ ರೂಪಾಯಿ 1000/–ನಗದು ಬಹುಮಾನ ಮತ್ತು ಒಂದೊಂದು ಯೋಗ್ಯತಾ ಪತ್ರಪಾರಿತೋಷವಾಗಿ ಗಾಂಧಿ ಜಯಂತಿ ದಿನ ಮುಂಜಾನೆಯಲ್ಲಿ ಕೊಡಲಾಯಿತು.

ಜಿಲ್ಲಾ ಬೋರ್ಡು ಸಭೆಯು—

ಇದೇ ತಾ. 15ರಲ್ಲಿ ಮಧ್ಯಾಹ್ನ 2ಗಂಟೆಗೆ ಬೋರ್ಡಿನ ಸಭಾಭವನದಲ್ಲಿ ಜರಗಲಿರುವುದು.

ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಸ್ಮಾರಕವಾಗಿ—

ಉತ್ತಮ ಕನ್ನಡ ಸಾಹಿತ್ಯಕ್ಕೆ ಬಹುಮಾನ ಸಿಕ್ಕುವಂತ ಯೋಜನೆಯನ್ನು ಅವರ ಬಂಧು ಮಿತ್ರರು ಕೈಕೊಂಡಿದ್ದು ಆ ಯೋಜನೆಯಂತೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಸ್ಮಾರಕ ಸಂಭಾವನಾನಿಧಿಯನ್ನೇ ಪಾಠ ಸಲಹಾಗುವುದೆಂದೂ ಕನ್ನಡ ಸಾಹಿತ್ಯಗಳು ತನ್ನ ಕೃತಿಗಳನ್ನು ಕಳುಹಿಸಿಕೊಟ್ಟು ಸಹಕರಿಸಬೇಕೆಂದೂ ಮುಂಗಳೂರು ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಡಿ. ಪುಟ್ಟು ಸ್ವಾಮಿಯವರು ಹೇಳಿದುವರು.

ಸರಕಾರಿ ಕಾಲೇಜು ವಿದ್ಯಾರ್ಥಿ ಹಾಲಿಡೆಮೆಂಟು ಸಭೆಯನ್ನು—

ತಾ. 7ರಲ್ಲಿ ವಿದ್ಯಾರ್ಥಿ ಸರಕಾರದ ಅಧ್ಯಕ್ಷ ಹಾಗೂ ಕಾಲೇಜು ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣಪ್ಪ, ಆವರು ಅರಂಭಿಸಿದರು. ಪ್ರಧಾನ ಮಂತ್ರಿ ಶ್ರೀ ಕೆ. ಟಿ. ಕರುಣಾಕರ ರೈಗಳು ಗೋವಾ ಸತ್ಯಾಗ್ರಹದ ಕುರಿತು ಹೇಳಿಕೆಯೊಂದನ್ನಿತ್ತರು. ಅಧಿವೇಶನದ ಅಧ್ಯಕ್ಷತೆಯನ್ನು ಕುಮಾರಿ ಕೆ. ಜೆ. ಗ್ರೇಸಿಯವರು ವಹಿಸಿದ್ದರು. ಶ್ರೀ ಟಿ. ಎನ್. ವಾಸುದೇವ ರಾಯರು ಘಟನಾ ಸಲಹೆಗಾರರಿದ್ದರು. ಸರಕಾರೀ ಪಕ್ಷದ ನಾಯಕರಾಗಿ ಶ್ರೀ ಎಸ್. ವಿಠಲ ಶೆಟ್ಟರೂ, ಪ್ರತಿಪಕ್ಷ ನಾಯಕನಾಗಿ ಶ್ರೀ ಕೆ. ಶ್ರೀನಿವಾಸ ರಾಯರೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು.

ಕುಂದಾಪುರ ಡಿ. ಮುನ್ಸೀಫ್ ಕೋರ್ಟಿನಲ್ಲಿ

S. C. 503/1955

ವಾದಿರು. ಪೊಂತು ಪ್ಯಾಸ,
ಜೋನ್ ಪ್ಯಾಸ
ಪೀಟರ್ ಪ್ಯಾಸ.

ಪ್ರತಿವಾದಿರು. ಪದ್ಮನಾಭ ಕಾಮತ್ ಕೂಡಾ.
4. ಕೆ. ಲಕ್ಷ್ಮಿನಾರಾಯಣ ಕಾಮತ್,
6 ವೆಂಕಟೇಶ ಕಾಮತ್. —ಗಣಪಯ್ಯ ಕಾಮತರ ಮಕ್ಕಳು,
residing at 11/1 Yarandona
Koath Road P. O. Deccan
Gymkhana Poona. No. 4.

ಇವರಿಗೆ—

ವಾದಿರ ತಂದೆಯ್ಯತ ಅಲ್ಬರ್ಟ್ ಪ್ಯಾಸರಿಗೆ ಪ್ರತಿವಾದಿರು ತಾ. 27–10–1941 ರಲ್ಲು ರೂಪ್ಯಾ 2000–0–0ಕ್ಕೆ ಬರಕೊಟ್ಟ ಕಂತು ಕರಾರಿನಬಾಬ್ತು 1954ನೇ ಇಸವಿಯ ಕಂತಿನ ರೂಪ್ಯಾ200–0–0ವಬಡ್ಡಿ ಬಗ್ಗೆ ವಾದಿರು ಮೇಲ್ಕಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆಯಿದ್ದಲ್ಲಿ ತಾರೀಕು 1–11–1955ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಬಿರು ಮಾಡಿಕೊಳ್ಳತಕ್ಕದ್ದು. ತಪ್ಪುವಲ್ಲಿ ನಿಮ್ಮ ಉಜ್ರು ಶಿಕ್ಷಾಯೋಗ್ಯಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai.
Pleader for Plaintiffs.
Coondapoor, Date 8–10–1955.

ಪಾಕಿಸ್ತಾನ ಮತ್ತು ಇಂಡಿಯಾಕ್ಕೆ ಅತೀ ಪೂರ್ವದ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ನವರ ದಂಡಯಾತ್ರೆ

ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜದ ಸ್ವಾತಂತ್ರಿಗಳಿಬ್ಬರು, ಇತರ ಮೂವರು ಪಾದಚಾರಿಗಳೊಡನೆ ಸಪ್ಟಂಬರ ತಾ. 1ರಂದು ಲಂಡನ್ ಸಿಂಗಾಪುರ್| ಲಂಡನ್ ಭೂಪ್ರದಕ್ಷಿಣೆ ಸಂಚಾರವನ್ನೂ 30,000 ಮೈಲು ದೂರ ಕೈಗೊಂಡು ಒಂದು ವರ್ಷದಲ್ಲಿ ಮುಗಿಸಲುದ್ದೇಶ್ಯವಾಗಿರುವರು. 1947ರ ನಂತರ ಪಾಕಿಸ್ತಾನ, ಇಂಡಿಯಾ ಮತ್ತು ಬರ್ಮಾದೇಶಗಳಲ್ಲಿ ಭೂಗೋಳಿಕ ಹಾಗೂ ಆರ್ಥಿಕ ಪ್ರಗತಿಗಳನ್ನು ಪರಿಶೀಲಿಸುವುದೇ ಈ ಸಂಚಾರದ ಮುಖ್ಯೋದ್ದೇಶವಾಗಿರುವುದು. ಈ ಸಂಚಾರಿ ಗುಂಪಿಗೆ ಲಂಡನ್ನಿನ ರೋಯಲ್‌ಜಿಯೊಗ್ರಾಫಿಕಲ್ ಸೊಸೈಟಿಯ ಕೊಡುಗೆಯ ಪ್ರದರ್ಶನದ ಪಾಕಿಸ್ತಾನ ಮತ್ತು ಇಂಡಿಯಾ ಸರಕಾರಗಳು ತಂತಮ್ಮ ಸಹಕಾರಗಳನ್ನು ನೀಡಲು ಒಪ್ಪಿರುವುವು.

ಸಂಚಾರಿ ಗುಂಪಿನವರು ನೆಲದಾರಿಯಲ್ಲಿ ಪಾಕಿಸ್ತಾನ ಮತ್ತು ಹಿಂದೂಸ್ಥಾನಕ್ಕೆ ಪ್ರಯಾಣಮಾಡುವಾಗ ಜಗತ್ತಿನ ಕೆಲವೊಂದು ಕಷ್ಟಸಾಧ್ಯವಾದ ಭೂಭಾಗಗಳನ್ನು ದಾಟಬೇಕಾಗುವುದು. ಪೇರಿಸ್, ಮ್ಯೂನಿಚ್, ವಿಯೆನ್ನ, ಬೆಲ್ಗ್ರೇಡ್, ಇಸ್ತಾಂಬುಲ್, ಅಂಕರ, ಟೀರ್ಟ್ ದಮಾಸ್ಕಸ್, ಬಾಗ್ದಾದ್, ಮಾನಾಕ್ಷಿನ್ ಮತ್ತು ತೆಹರಾನ್ ರಾಜ್ಯಗಳನ್ನೂ ಹಾದು ಇಬೇಕ್ಕೋಬರ ತಾ. 13ರಲ್ಲಿ ಕರಾಚಿಗೆ ಬಂದು ಸೇರುವ ಕಾರ್ಯಕ್ರಮವು ಹಾಕಲಾಗಿದೆ. ಕರಾಚಿಯಿಂದ ಈ ಸಂಚಾರಿ ಗುಂಪಿನವರು ಎರಡು ಸಂಗಡಗಳಾಗಿ ಪಾಕಿಸ್ತಾನ ಮತ್ತು ಉತ್ತರ ಹಿಂದೂಸ್ಥಾನವನ್ನೂ ಸಂದರ್ಶಿಸಿ ನವಂಬರ ಕೊನೆಯ ವಾರದಲ್ಲಿ ಕಲ್ಕತ್ತದಲ್ಲಿ ಒಟ್ಟುಗೂಡುವರು. ದಾರಿಯಲ್ಲಿ ಲಾಹೋರು, ಅಂಬಲ, ದಿಲ್ಲಿ, ಅಲ್ಲಹಾಬಾದ್ ಮತ್ತು ಪಾಟ್ನಾ ಹಾದು ಹೋಗುವರು.

ಪಾಕಿಸ್ತಾನ ಮತ್ತು ಇಂಡಿಯಾದಲ್ಲಿ—

ಸಂಚಾರಿ ಗುಂಪಿನವರು ಎಂಟು ವಾರ ತನಕ ಸುತ್ತಾಡಿ ಹಲವಾರು ವಿಷಯಗಳಲ್ಲಿ ಶೋಧನೆಮಾಡುವರು. ತಾಲ್ ಮರ�ು ಭೂಮಿ, ಲೋನರ್‌ಸಿಂದ, ಮತ್ತು ಪಶ್ಚಿಮ ಬಂಗಾಳದಲ್ಲಿಯ ಬ್ರಹತ್ ನೀರಾವರಿ ಯೋಜನೆಗಳನ್ನೂ, ಬಕ್ರಸಂಗಲ್ ಮತ್ತು ಡಿ. ವಿ. ಸಿಯ ವಿವಿಧೋದ್ದೇಶ ಸ್ವಾಧೀನಕ್ಕುಗಳನ್ನೂ, ಯುದ್ಧೋತ್ತರ ಕೃಷಿ, ಕೈಗಾರಿಕೆಗಳ ಪ್ರಗತಿಯನ್ನೂ ಪರಿಶೀಲಿಸುವರು(ಒಂದು ಸಂಗಡ ದವರು ಸೇನಾಲಯಕ್ಕೂ ಭೇಟಿಕೊಡುವರು)

ಸಂಚಾರಿ ಯಾತ್ರಿಕ ಗುಂಪಿನವರಿಗೆ ಹಲವಾರು ಸಂಸ್ಥೆಗಳು ಹಲವಾರು ವಿಧಗಳಲ್ಲಿ ಸಹಕಾರ ಸಹಾಯ ನೀಡುತ್ತಿರುವಂತೆ ಬ್ರೂಕ್‌ಬಾಂಡ್ ಸಂಸ್ಥೆಯು ಪಾಕಿಸ್ತಾನ ಮತ್ತು ಹಿಂದೂಸ್ಥಾನದಲ್ಲಿ ಈ ಸಂಚಾರಿಗಳ ಟೀ ಮತ್ತು ಕಾಫಿ ಪಾನೀಯಗಳ ವ್ಯವಸ್ಥೆ ಕೈಗೊಂಡಿರುವರು. ಸಂಚಾರಿ ಗುಂಪಿನವರು ತಲಗಾವಲ್ಲಿಲ್ಲಾ ಅವರಿಗೆ ಟೀ ಕಾಫಿ ವ್ಯವಸ್ಥೆಯನ್ನು ಬ್ರೂಕ್‌ಬಾಂಡ್‌ನವರು ಮಾಡಿರುವರಲ್ಲದೆ ಪ್ರೆಸ್ ಸಂಸ್ಥೆಗಳಿಗೆ ಭೇಟಿ, ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನ ವ್ಯವಸ್ಥೆ ಕೊಡಲಾದುದನ್ನು ಮಾಡಿರುವರು.

ಕಲ್ಕತ್ತದಿಂದ ಸಂಚಾರಿ ಸದಸ್ಯರು ಅಸ್ಸಾಮಿಗೆ ಹೋಗಿ ಬ್ರೂಕ್‌ಬಾಂಡಿನ ಜುಲಯಾಜಾ ತೋಟದಲ್ಲಿ ಕಂಪೆಯ ಅತಿಥಿಗಳಾಗಿ ಕಳೆಸುವರು. ಅಸ್ಸಾಮಿನಿಂದ ಬರ್ಮಾದೇಶಕ್ಕೂ ಹೋಗಲಿರುವರು. ರಾಜಕೀಯ ವಾತಾವರಣವು ಅನುಕೂಲವಾಗಿದ್ದಲ್ಲಿ ಸಿಂಗಾಪುರಕ್ಕೂ ಪ್ರಯಾಣಬೆಳೆಸಲಿರುವರು. ಇದು ಯಶಸ್ವಿಯಾದರೆ ಲಂಡನ್ನಿಂದ ಸಿಂಗಾಪುರಕ್ಕೆ ನೆಲದಾರಿಯಲ್ಲಿ ಸಂಚಾರಮಾಡಿದ ಪ್ರಥಮ ಸಮಯಾದಾಗಿ ಈ ಸಂಚಾರಿ ಗುಂಪಿಗೆ ದೊರಯುವುದು.

(ಇನೇ ಪುಟದಿಂದ)

ಯಿಂದ ಮುಂದರಿದ ಪ್ರದೇಶಗಳೊಡನೆ ಹೊಸ ರಾಜ್ಯಗಳನ್ನು ಸೇರಿ ಹೋಗುವುದರಿಂದ, ಅಭಿವೃದ್ಧಿ ಮಂಡಳಗಳ ರಚನೆ ಯಾಗಬೇಕೆಂದು ಆಯೋಗ ಹೇಳಿತೆ. ಅಖಿಲ ಭಾರತ ದೃಷ್ಟಿಯನ್ನಿಟ್ಟು ಕೊಂಡು ಔದ್ಯಮಿಕ ಘೇರಾಕೆಯನ್ನು ರೂಪಿಸಬೇಕೆಂದು ಸಲಹೆ ನೀಡಿತೆ. ರಾಷ್ಟ್ರೀಯ ಭಾವನೆಯನ್ನು ಸದಾ ಜಾಗೃತವಾಗಿಡಲು ಅನುಕೂಲಿಸುವಂತೆ ರಾಜ್ಯಗಳ ಸೇವೆ ಮತ್ತು ನೌಕರಿಗಳ ಸ್ವಾಧೀನಕ್ಕೆ ಇತರ ರಾಜ್ಯಗಳ ಉಮೇದುವಾರರಿಗೂ ಅವರ ಯೋಗ್ಯತಾನುಸಾರ ಪ್ರವೇಶಕೊಡಬೇಕೆಂದೂ ಒಂದಕ್ಕಿಂತ ಹೆಚ್ಚು ರಾಜ್ಯಗಳಿಗಾಗಿ ಸಾರ್ವಜನಿಕ ಅಡಳಿತಮಂಡಳದ ರಚನೆಯಾಗಬೇಕೆಂದೂ ಹೈಕೋರ್ಟುಗಳಲ್ಲಿ ಹೊರ ರಾಜ್ಯಗಳ ನ್ಯಾಯ ಮೂರ್ತಿಗಳಿಗೆ ಸಾಕಷ್ಟು ಹೆಚ್ಚು ಸ್ಥಾನ ಸಿಗಬೇಕೆಂದೂ ಆಯೋಗ ಹೇಳಿತೆ. ದಕ್ಷಿಣ ಭಾರತದ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಭಾರತ ಸರಕಾರ ವಹಿಸಿಕೊಳ್ಳಬೇಕೆಂದೂ ಇದರ ಹೊರತಾಗಿ ಇನ್ನೊಂದು ವಿಶ್ವವಿದ್ಯಾಲಯವನ್ನು ದಕ್ಷಿಣದಲ್ಲಿ ನೆಲೆಗೊಳಿಸಿ ಇವೆರಡರಲ್ಲೂ ಹಿಂದಿಯನ್ನು ಮಾಧ್ಯಮವಾಗಿ ಬಳಸಬೇಕೆಂದೂ ಹೇಳಿತೆ. ಹಿಂದಿಯನ್ನು ಅಭಿವೃದ್ಧಿ ಪಡಿಸಲು ಪ್ರಯತ್ನ ನಡೆಯಬೇಕು; ಆದರೆ ಇಂಗ್ಲಿಷನ್ನೂ ಉಳಿಸಿಕೊಳ್ಳಬೇಕು—ಎಂದು ಆಯೋಗ ಖಚಿತ ಪಡಿಸಿತೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ಮೊದಲುತ್ತೆನೆ. ಸಾಲದ ಕರಾರ ಮಾಡುವಾಗ. ಬಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219 BOMBAY-

Tel: "MENONCO." Phone: No. 671
T. N. MENON & COMPANY
Wholesale & retail merchants in:- Sole-crepe, Plastic-Sheets, All kinds of Leathers, Leather goods, Leather-cloth, Wax, Thread, Twine, Panel Pins, Paper, Straw-board, Students' Note-Book, Zip Fasteners, Batteries, Photo-Frames, Tarpaulin, Ply-wood, Wire Mesh & All items of Fittings & Making materials for Foot-wears, Suit-cases, Hand bags, Money-purses, Steel-Trunks, Etc. Etc.
POST BAG No. 1, BEACH ROAD, QUILON.

ಸಭೆ ಮುಂದಿರಿಸುವ ನಿಲುವಳಿ ಸೂಚನೆ

ಜನರ ಪ್ರತಿನಿಧಿಗಳ ಮಹತ್ವದ ಅಧಿಕಾರ

ಶಾಸನಾಂಗದ ಅಧಿವೇಶನವು ಪ್ರಾರಂಭವಾದ ದಿನದಿಂದ ಅಧಿವೇಶನದ ಮುಕ್ತಾಯ ದಿನದ ವರೆಗೆ ಪ್ರತಿನಿತ್ಯವೆಂಬಂತೆ ನಮ್ಮ ದೇಶದಲ್ಲಿ ವಿಶಿಷ್ಟ ವಿಷಯವೊಂದರ ಚರ್ಚೆಗಾಗಿ ಸಭೆ ಮುಂದಿರಿಸಬೇಕೆಂದು ಕೇಳಿಕೊಳ್ಳುವ ನಿಲುವಳಿ ಸೂಚನೆಗಳು ಮಂಡಿಸಲ್ಪಡುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಈ ನಿಲುವಳಿ ಸೂಚನೆಗಳಿಗೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಏನು ಸ್ಥಾನವಿದೆ—ಎಂದು ತಿಳಿದುಕೊಳ್ಳುವ ಕುತೂಹಲ ನಮಗಿರುವುದು ಸ್ವಾಭಾವಿಕ.

ಮೂಲಭೂತ ಅಧಿಕಾರ

ಭಾರತದಲ್ಲಿ ಇಂದು ಕಂಡ ಬರುವ ಶಾಸನಾಂಗವು ಬ್ರಿಟನನ ಸಂಸತ್ತನ್ನು ಸಾಮಾನ್ಯವಾಗಿ ಹೋಲುತ್ತದೆ. ಆದೇಶದ ಪದ್ಧತಿಯನ್ನು ನೋಡಿದರೆ ಅಲ್ಲಿ ಸಂಸತ್ತಿನ ಸದಸ್ಯನಿಗೆ ತನಗೆ ಮಹತ್ವದ್ದೆಂದು ಕಂಡುಬಂದ ವಿಷಯದ ಮೇಲೆ ಸಂಬಂಧಿಸಿದ ಮಂತ್ರಿಗಳಿಂದ ವಿವರಣೆ ಪಡೆಯುವ ಮೂಲಭೂತ ಅಧಿಕಾರವಿಲ್ಲ; ಅದನ್ನು ಚಲಾಯಿಸುವುದಕ್ಕೆ ಆತಂತ್ರವಿಲ್ಲ ಎಂದು ಗೊತ್ತಾಗುತ್ತದೆ.

ಪ್ರತಿವಾರದ ಮೊದಲನೇ ನಾಲ್ಕು ದಿನಗಳಲ್ಲಿ ಮೊದಲನೇ ಶಾಸನ ಸ್ರಗ್ರೂತ್ತರಗಳಿಗಾಗಿ ಬ್ರಿಟನನ ಸಂಸತ್ತಿನಲ್ಲಿ ಮೀಸಲಾಗಿದೆ. ಪ್ರತಿಯೊಬ್ಬ ಮಂತ್ರಿಯೂ ತನ್ನ ಶಾಖೆಯ ಕೆಲಸದ ಕುರಿತಾಗಿ ಸದಸ್ಯರು ಕೇಳುವ ಪ್ರಶ್ನೆಗಳಿಗೆ, ಆಗ ಸಮರ್ಪಕ ಉತ್ತರ ಕೊಡಬೇಕಾಗುತ್ತದೆ. ಯಾವಾದರೊಬ್ಬ ಸದಸ್ಯನಿಗೆ ಮಂತ್ರಿಯ ಉತ್ತರ ತೃಪ್ತಿಕರವಲ್ಲ ಎಂದು ಕಂಡರೆ "ನಾನು ಈ ವಿಷಯವನ್ನು ಅದಸ್ಪು ಬೇಗನೇ ಮರಳಿ ಎತ್ತುತ್ತೇನೆ" ಎಂಬಾತನು ನೋಟೀಸು ಕೊಡಬಲ್ಲನು.

ಅರೆತಾಸಿನ ಚರ್ಚೆ

ಇದರಿಂದಾಗಿ, ಆತನಿಗೆ ಬೇಗನೇ ಸಂಸತ್ತಿನ ನಿತ್ಯ ಕಾರ್ಯಕಲಾಪಗಳ ಕೊನೆಯಲ್ಲಿ ಅರ್ಧ ತಾಸಿನ ವರೆಗೆ ಸಂಬಂಧಿಸಿದ ಶಾಖೆಯ ಮಂತ್ರಿ ಅಥವಾ ಪ್ರತಿನಿಧಿಯೊಡನೆ ಸಂಸತ್ತಿನಲ್ಲಿ ವಿವರವಾಗಿ ಚರ್ಚೆ ನಡೆಸುವ ಅವಕಾಶ ಸಿಗುತ್ತದೆ. ಆದರೆ ಈ ಚರ್ಚೆಗಳು ಯಾವುದೇ ವಿಶಿಷ್ಟ ವಿಷಯದ ಕುರಿತು ಶಾಸನಮಾಡಬೇಕೆಂದಾಗಲೀ ಸಂಸತ್ತಿನಿಂದ ಈ ಮೊದಲೇ ಮಂಜೂರಾಗದ ವಿಷಯಕ್ಕೆ ಹಣವನ್ನು ಸೈಯಿಸಬೇಕೆಂದಾಗಲೀ ಕೆಳಬಾರದು.

ಈ ಮಿತಿಗೊಳಪಟ್ಟು ಚರ್ಚೆಯನ್ನು ಬೇಡುವ ಅಧಿಕಾರವು ಸಂಸತ್ತಿನ ಸದಸ್ಯರಿಗೆ ದೊರೆತ ಮಹತ್ವದ ಅಧಿಕಾರಗಳಲ್ಲಿ ಒಂದಾಗಿದೆ. ತಾತ್ವಿಕವಾಗಿ ಇಂಥ ಚರ್ಚೆಯು ಕೊನೆಯಲ್ಲಿ ಮತದಾನ ನಡೆಯ ಬಹುದಾಗಿದ್ದರೂ ಸಾಮಾನ್ಯವಾಗಿ ಹಾಗೇನೂ ಆಗುವುದಿಲ್ಲ. ಸಂಬಂಧಿಸಿದ ಸದಸ್ಯನಿಗೂ ಮಂತ್ರಿಗೂ ತಮ್ಮ ನಿಲುವುಮೆಯನ್ನು ಚರ್ಚೆಯ ವಿಶಿಷ್ಟ ವಿಷಯದ ಕುರಿತು ವಿವರವಾಗಿ ತಿಳಿಸಲು ಅವಕಾಶದೊರಕುವುದೆಂಬುದೇ ಇದರಹಿಚ್ಚುಗಾರಿಕೆ ಧೋರಣೆಯ ಕುರಿತಾದ ಸಂಗತಿಗಳು ಸಾಮಾನ್ಯವಾಗಿ ಇಂಥ ಚರ್ಚೆಯಲ್ಲಿ ಎತ್ತಲ್ಪಡುವುದಿಲ್ಲವಾದಕಾರಣ, ಮಂತ್ರಿಯ ಸಹಾಯಕನೇ ಸರಕಾರದ ಪರವಾಗಿ ಸದಸ್ಯನಿಗೆ ಉತ್ತರಕೊಡುತ್ತಾನೆ.

ಕೊರತೆಯ ಮೇಲೆ ಬೆಳಕು

ಹೆಚ್ಚಾಗಿ, ಸರಕಾರದ ಲೋಪದೋಷಗಳ ಕುರಿತು ಸ್ಪಷ್ಟವಾದ ಪ್ರತಿಕ್ರಿಯೆಯು ಇಲ್ಲಿ ವ್ಯಕ್ತವಾಗುತ್ತದೆ. ತಂತಮ್ಮ ಮತದಾರ ಕ್ಷೇತ್ರದ ಅಗುಹೋಗುಗಳ ಕುರಿತಾಗಿಯೇ ಸದಸ್ಯರು ಸಾಮಾನ್ಯವಾಗಿ ಚರ್ಚೆಮಡೆಸುವುದರಿಂದ ಅಲ್ಲಿಯ ಜನತೆ ಸರಕಾರದ ನಿಲುಮೆಯ ಕುರಿತು ವಿಶೇಷವಾದ ಗಮನವನ್ನು ಕೊಡುತ್ತದೆ. ಜನಪ್ರಿಯತೆಯ ಮೇಲೆ ಸರಕಾರದ ಭವಿಷ್ಯ ಹೊಂದಿಕೊಂಡಿರುವುದರಿಂದ ಬಂದ ಟೀಕೆಗಳ ಬೆಳಕಿನಲ್ಲಿ ತಪ್ಪನ್ನು ತಿದ್ದಿಕೊಳ್ಳಲು ಮತ್ತು ಧೋರಣೆಯನ್ನು ಸರಿಪಡಿಸಲು ಮಂತ್ರಿಗಳು ಮುಂದಾಗುತ್ತಾರೆ.

ಎಲ್ಲ ಬಗೆಯ ವಿಷಯಗಳ ಮೇಲೂ ಚರ್ಚೆನಡೆಯುತ್ತದೆ. ಸರಕಾರದ ಆಡಳಿತದ ಮೇಲೆ ಒಂದುಬಗೆಯ ನಿಯಂತ್ರಣವನ್ನು ಇಂಥ ವಿವರವಾದ ಚರ್ಚೆ ಒದಗಿಸಿಕೊಡುವುದೆಂದು ಬ್ರಿಟನನಲ್ಲಿ ಸಂಸತ್ತಿನ ಸದಸ್ಯರು ನಂಬುತ್ತಾರೆ; ಸರಕಾರವೂ ಜನಬಯಂಗುಳಿಯ ಅಸಮ್ಮತಿಗಳಿಂದ ದೂರವಾಗಲು ಪ್ರಯತ್ನಿಸುವುದಕ್ಕೆ ಇದನ್ನು ಸಾಧನವೆಂದು ಭಾವಿಸಿದೆ. ನಮ್ಮ ದೇಶದಲ್ಲಿಯೂ ಈ ಭಾವನೆ ಸಂಬಂಧಿಸಿದವರಲ್ಲಿ ಬೆಳೆದುಬಂದರೆ ಪ್ರಜಾಪ್ರಭುತ್ವದಿಂದ ಹೆಚ್ಚು ಪ್ರಯೋಜನ ಸಿಗಬಹುದು.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ರೆಣ್ಣೈಯವರ

ಓದಲೇಬೇಕಾದ ಮೂರು ಪುಸ್ತಕಗಳು

ಮೀರೆ ಮತ್ತು ನಾನು (೧೫ ಮೀರಾ ಕತೆಗಳು) 1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು 1—0—0
ಕಸದ ಡಬ್ಬಿಗಳು (೨೪ ಹರಟೆಗಳು) 1—1—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ಪಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕನ್ನಡ ಪ್ರದೇಶದ ಪ್ರಾಚೀನ ವೈಭವ

ಸಾಗರೋತ್ತರ ಸಾಂಸ್ಕೃತಿಕ ಕೇಂದ್ರಗಳ ಪ್ರಭಾವ

ಡಾ. ಬಿ. ಎ. ಸಾಲೆತೋರೆರು ಕನ್ನಡ ನಾಡಿನ ನಾಗರಿಕತೆಯ ಹಿರಿಮೆಯ ಮೇಲೆ ವಿಶೇಷವಾದ ಬೆಳಕು ಚೆಲ್ಲುವ ಅಂಶಗಳನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದರು. ಕನ್ನಡಿಗರ ತೀಲ, ಪ್ರಾಮಾಣಿಕ ಬುದ್ಧಿ, ರಾಷ್ಟ್ರಪ್ರೇಮ, ಧೈರ್ಯಶೌರ್ಯಾದಿಗಳನ್ನು ವಿಶೇಷಗಳಿಂದ ಬಂದ ಪ್ರಸಾಸಿಕರು ಮುಕ್ತಕಂಠದಿಂದ ಹೊಗಳಿರುವರೆಂದೂ ನಮ್ಮಲ್ಲಿ ಈಗಲೂ ಕಂಡು ಬರುವ ವೀರಗಲ್ಲುಗಳು, ಮಾಸ್ತೀಗಲ್ಲುಗಳು ಈ ಸದ್ಗುಣಗಳನ್ನು ಎತ್ತಿ ತೋರಿಸುವ ಸಾಕ್ಷಿಗಳಾಗಿವೆಯೆಂದೂ ಅವರು ವಿವರಿಸಿದರು.

ರಾಜಕೀಯ ಜಾಗೃತಿ

ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಕನ್ನಡ ನಾಡಿನ ಜನರು ಭದ್ರತೆಯನ್ನು ಕೊಡುತ್ತಿದ್ದರು; ಹಿರಿಯರ ದತ್ತಿ, ಶಿಲಾಲೇಖ, ತಾಮ್ರಲಿಪಿ ಇತ್ಯಾದಿಗಳನ್ನು ಚೆನ್ನಾಗಿ ಕಾಯುತ್ತಿದ್ದರು. ಭಾರತದ ಒಂದು ಅಂಗ ಮಾತ್ರ ಕನ್ನಡ ನಾಡು ಎಂಬ ಭಾವನೆಯನ್ನು ಜನರು ಇಟ್ಟುಕೊಂಡಿದ್ದರು. "ಭರತ ವರ್ಷದ ದೇಶಂಗಳೊಳ್ ಚಾರು ಕರ್ನಾಟ ದೇಶಂ" ಎಂಬ ಮಾತು ಇದನ್ನು ಪುಷ್ಟೀಕರಿಸುತ್ತದೆ. ಭಾರತೀಯ ಸಂಸ್ಕೃತಿಯೊಡನೆ ಕನ್ನಡಿಗರು ಹಾಸುಹೊಕ್ಕಾಗಿದ್ದರು ಎಂದಿದರೆ ಅರ್ಥ.

ಇಲ್ಲಿಯ ರಾಜಕೀಯ ಸ್ಥೈರ್ಯವು ಅದ್ಭುತವಾಗಿದೆ; ಸ್ವೃಹೇಯವಾಗಿದೆ. ಅನೇಕ ಶತಮಾನಗಳ ವರೆಗೆ ಬೆಳಲಿಯ ಕೇಂದ್ರವನ್ನು ಅಳಿದ ರಾಜವಂಶಗಳಲ್ಲಿ ಒಬ್ಬ ಅರಸನು ಸತ್ತರೆ ಇನ್ನೊಬ್ಬನು ಪಟ್ಟಕ್ಕೆ ಬರುವ ವರೆಗೆ ಕೋಲಾಹಲವೇ ಕೋಲಾಹಲವಾಗಿ, ಸೈನ್ಯಗಳ ಮೂಲಕ ಸಿಂಹಾಸನಾಪೇಕ್ಷಿಗಳು ಹೊಡೆದಾಡಿಕೊಳ್ಳುತ್ತಿದ್ದರು. ಕೆಲವು ಸಮುದಾಯದ ವರೆಗೆ ಅಂಥಾಜಕತೆ ಇರುತ್ತಿತ್ತೆಂದರೂ ತಪ್ಪಲ್ಲ. ಆದರೆ ಕನ್ನಡನಾಡಿನಲ್ಲಿ ಎಲ್ಲಿ ಬದಲಾವಣೆಗಳೂ ಶಾಂತರೀತಿಯಲ್ಲಿ ಜರಗುತ್ತಿತ್ತೆಂಬುದನ್ನು ಎತ್ತಿಹೇಳಬೇಕಾದ ವಿಷಯ. ಒನೇ ಶತಮಾನದಲ್ಲಿ ಅಳಿದುಹೋದ ರಾಷ್ಟ್ರಕೂಟರು ಅನೇ ಶತಮಾನದಲ್ಲಿ ಮರಳಿ ಅಧಿಕಾರಾರೂಢರಾದರು. ೨೦೦ ವರ್ಷಗಳ ವರೆಗೆ ಭೂಗತವಾದ ರಾಜವಂಶವೊಂದು ಮತ್ತೆ ತಲೆಎತ್ತಿಕೊಂಡು ಬಾಳಿದ ನಿದರ್ಶನ ಇತಿಹಾಸದಲ್ಲಿ ಬೇರೆ ದೊರೆತಂತಿಲ್ಲ. ಇದೇ ರಾಜಕೀಯ ಜಾಗೃತಿಯ ದ್ಯೋತಕ.

ವಿದೇಶಗಳ ಗೆಳೆತನ

ಸಾವಿರಾರು ವರ್ಷಗಳ ಹಿಂದೆ, ಕ್ರಿಸ್ತಪೂರ್ವ ಕಾಲದಲ್ಲಿ, ಆಗಿಹೋದ ಬೆಬಿಲೋನಿಯ, ಅಸ್ಸೀರಿಯಾ ಮತ್ತು ಐಗುಪ್ತಗಳ ಸಂಸ್ಕೃತಿ ಮತ್ತು ನಾಗರಿಕತೆಗಳೊಡನೆ ಸಾಮ್ಯವನ್ನು ಪಡೆದ ಎಷ್ಟೋ ವಸ್ತುಗಳು ಕನ್ನಡನಾಡಿನಲ್ಲಿ ದೊರಕಿರುತ್ತವೆ. ಇವುಗಳಿಂದ ಆದೇಶಗಳೊಡನೆ ಕನ್ನಡ ನಾಡಿನ ವ್ಯಾಪಾರವು ಸವ್ಯಸ್ಥವಾಗಿತ್ತೆಂದೂ ಬಳಕೆಯು ಧಾರಾಳವಾಗಿತ್ತೆಂದೂ ಸಂಭವವು ಸೌಹರ್ದಮಯವಾಗಿತ್ತೆಂದೂ ಊಹಿಸಬಹುದು.

ಪಶ್ಚಿಮ ಕರಾವಳಿಯಲ್ಲಿರುವ ಮಂಗಳೂರು, ಮಲ್ಪೆ, ಭಟ್ಕಳ, ಬೈಂದೂರು, ಸಂಗಾಬಳಟ್ಟೆ ಇತ್ಯಾದಿ ಬಂದರುಗಳಿಂದ ವ್ಯಾಪಾರ ಚೆನ್ನಾಗಿ ನಡೆಯುತ್ತಿತ್ತೆಂಬುದನ್ನು ಅನೇಕ ಶಿಲಾಲೇಖಗಳು ತಿಳಿಸುತ್ತವೆ. ಅನೆ, ಕುದುರೆ ಮುಂತಾದ ಸೈನಿಕ ಮಹತ್ವದ ಪ್ರಾಣಿಗಳ ವ್ಯವಹಾರವನ್ನೂ ಮತ್ತು ರತ್ನ ಇತ್ಯಾದಿ ಅಮೂಲ್ಯ ವಸ್ತುಗಳ ವ್ಯಾಪಾರವನ್ನೂ ನಡೆಸುತ್ತಿದ್ದ ವ್ಯಾಪಾರಿಗಳ ಹೆಸರುಗಳನ್ನು ಚರಿತ್ರೆಯು ಉಲ್ಲೇಖಿಸುತ್ತದೆ. ಜೇನಸು, ಜಟ್ಟಿ ಮತ್ತಿತರ ಅಲಂಕಾರ ದ್ರವ್ಯಗಳು, ಬಲ್ಲಿ ಮತ್ತಿತರ ಆಯುಧಗಳು ಮತ್ತು ಪಶ್ಚಿಮ ಮತ್ತು ಯುರೋಪುಗಳಿಗೆ ಹೋಗುತ್ತಿದ್ದವೆಂದೂ ತಿಳಿದು ಬರುತ್ತದೆ.

ಪ್ರಾಚೀನ ಪ್ರಭಾವ

ಸಾಂಸ್ಕೃತಿಕ ದೃಷ್ಟಿಯಿಂದ ಬಹಳ ಮಹತ್ವದ ಸಂಗತಿಗಳನ್ನು ನಾವು ಮರೆಯುವಂತಿಲ್ಲ—ಉದಾಹರಣೆಗೆ ನಮ್ಮ ಶಿಲಾ ಶಾಸನಗಳನ್ನು ತೆಗೆದುಕೊಳ್ಳಬಹುದು. ಇವುಗಳನ್ನು ಬರೆದ ರೀತಿಯು ಅಸ್ಸೀರಿಯದ ಪದ್ಧತಿಯನ್ನು ಬಹುಳವಾಗಿ ಹೋಲುತ್ತದೆ. ದೇವತಾಸ್ತುತಿ, ಅರಸರ ಬಿರುದಾವಳಿ ಹಾಗು ಶೌರ್ಯ ಕೃತ್ಯಗಳ ವರ್ಣನೆಯಲ್ಲಿ ಇದು ವಿಶೇಷವಾಗಿ ವ್ಯಕ್ತವಾಗುತ್ತದೆ. ದೇವಾಲಯದ ಆವಾರಗಳಲ್ಲಿ ಶಿಲಾ ರೇಖಗಳನ್ನು ನೆಡುವಕ್ರಮವೂ ಅಸ್ಸೀರಿಯದ ಸಂಸರ್ಗ ಫಲ. ಅಸ್ಸೀರಿಯ ಮತ್ತು ಐಗುಪ್ತಗಳಲ್ಲಿ ಅರಸನು ಸತ್ತಾಗ ಅವನಿಗೆ ಪ್ರಿಯವಾದ ವಸ್ತುಗಳನ್ನೂ ಅವನ ಹೆಂದಂದಿರನ್ನೂ ಭೃತ್ಯ ವರ್ಗವನ್ನೂ ಅ ಹೆಣದೊಂದಿಗೆಯೇ ಸಮಾಧಿ ಮಾಡುತ್ತಿದ್ದರು. ಈ ಪದ್ಧತಿ ಕನ್ನಡ ನಾಡಿನಲ್ಲಿ ಸ್ವಲ್ಪ ಮಟ್ಟಿನ ಪರಿವರ್ತನೆ ಹೊಂದಿ ನಡೆದು ಹೋಗುವುದು, ಗರುಡರಾಯನುದು ಎಂದಾಯಿತೆಂದು ತೋರುತ್ತದೆ.

ನಮ್ಮಲ್ಲಿ ಅರಮನೆಗಳು ಉಪಯೋಗಿಸುತ್ತಿದ್ದ (ಈಗಲೂ ಮೈಸೂರಿನಲ್ಲಿ ಉಪಯೋಗಿಸಲ್ಪಡುವ) ಗಂಡ ಭೇರುಂಡ ಪಕ್ಷಿಯ ಧ್ವಜ ಚಿಹ್ನೆವು ಕನ್ನಡ ಸಂಸ್ಕೃತಿಯನ್ನು ಮೊಹೆಂಜೊದಾರೊ ಸಂಸ್ಕೃತಿಯ ಕಾಲಕ್ಕೆ ಹತ್ತಿರ ತರುತ್ತದೆ. ನಮ್ಮ ದೇವ ದೇವತೆಗಳ ಪರಂಪರೆಯೂ ಪರಪ್ಪ ಮೊಹೆಂಜೊದಾರೊ, ಬೆಬಿಲೋನಿಯ, ಅಸ್ಸೀರಿಯ ಇತ್ಯಾದಿ ಸಮಕಾಲೀನ ಸಾಂಸ್ಕೃತಿಕ ಕೇಂದ್ರಗಳೊಡನೆ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಲಿಂಗ, ಆನೆ, ಹಂದಿ, ಎತ್ತು ಇವುಗಳಿಗೆ ಕನ್ನಡ ಅರಸರು ಕೊಟ್ಟ ಮಹತ್ವವು ಸಳನು ಹುಲಿಯನ್ನು ಬೊಯ್ಯುವ ಚಿತ್ರ, ಪಂಚ ತಂತ್ರದ ಕತೆಗಳು ಯುರೋಪಿಗೆ ಹೋದ ಬಗೆ ಇವುಗಳೂ ಕನ್ನಡ ಸಂಸ್ಕೃತಿಯ ಪ್ರಾಚೀನತೆಯನ್ನು ಸ್ಪಷ್ಟಪಡಿಸುತ್ತವೆ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಫೋನ್:— (1) ಉಡುಪಿ (2) ಮಲಾತ ಗಲ್ಲಿ, ಹುಬ್ಬಳ್ಳಿ.



ಕುಮಾರಿ ಬಿಲ್ಲೆಗಳು (ಸರಕಾರ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಚಿತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾವಕವೂ ಉಂಟಾಗದೆ ತೀವ್ರ ಗುಣದೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40 ಸ್ಥಾನಿಕ್ಕರು: ರಘುಕಾಂಪೆನ್ಸಿ, ಮಂಗಳೂರು ೧

(೨ನೇ ಪುಟದಿಂದ)

ನ್ಯಾ ಪ್ರಮಾಣವು ಇನ್ನೂ ಹೆಚ್ಚಿಯಾಗಿದ್ದರೂ ಸಂಖ್ಯೆ ೯೯ ಸಾವಿರದಷ್ಟು ಕಡಿಮೆ ಯಾಗಿದ್ದಲ್ಲಿದೆ. ಇವರಿಂದ ಸುಮಾರು ೦೦ ಕೋಟಿ ರೂಪಾಯಿಗಳ ವಿದೇಶಿ ವಿನಿ ಮಯದ ಗಳಿಕೆಯಾಗಿದ್ದರೂ ಭಾರತದ ಯಾತ ವ್ಯಾಪಾರದ ಸಂಪಾದನೆಯೊ ದನೆ ಹೋಲಿಸಿದರೆ ಇದು ೧% ಮಾತ್ರ ವಾಗುತ್ತದೆ. ಆದುದರಿಂದ ವಿದೇಶಿ ಪ್ರವಾ ಸಿಕರು ಬಯಸುವ ಉನ್ನತ ಮಟ್ಟದ ಸೌ ಲಭ್ಯಗಳಿಗಾಗಿ ಹೆಚ್ಚು ಮಾಡುವ ಹಣವು ಸಾರ್ಥಕವಾಗಬೇಕಾದರೆ, ದೇಶದೊಳಗೆ ಪ್ರವಾಸ ಹೊರಡುವ ಜನರ ಸಂಖ್ಯಾ ಪ್ರಮಾಣದಲ್ಲಿ ತುಂಬ ವೃದ್ಧಿಯಾಗಲೇ ಬೇಕು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಗ್ಗೆ ಯೋಗ್ಯ ವ್ಯವ ಸ್ಥೆ ಮಾಡುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ ಎಂದು ತಿಳಿದು ಬರುತ್ತದೆ.

ಉಳುಮೆಯ ಕೆಲಸ

ಮೊದಲನೇ ಯೋಜನೆಯಲ್ಲಿ ಈ ಬಗ್ಗೆ ಏನೂ ಏರ್ಪಾಡು ಮಾಡಲಿಲ್ಲ ಎಂದು ಯಾರೂ ಭಾವಿಸಲಾಗದು. ಬಹಳ ಮಹ ತ್ವದ ಉಳುಮೆಯ ಕೆಲಸವು ಈಗಾಗಲೇ ನಡೆದಿದೆ. ಮುಂಬಯಿ, ದೆಹಲಿ, ಕಲ್ಕತ್ತ, ಮದ್ರಾಸು, ಶ್ರೀನಗರ, ಆಗ್ರ, ಕಾಶಿ, ಜೈಪುರ, ಬೊಂಗಾಬಾದು, ಬೆಂಗಳೂರು,

---

ಪ್ರಕಟಣೆ

ಈ ಮೂಲಕ ಸರ್ವ ಜನರಿಗೂ ತಿಳಿಯಪ ಡಿಸುವುದೇನೆಂದರೆ—

ನನ್ನ ಅಳಿಯ, ಸ, ಗುಳ್ಳಾಡಿ ಮಂಜುನಾ ಥ ಪ್ರಭುಗಳ ಮಗ ಶ್ರೀನಿವಾಸ ಪ್ರಭು ಎಂ ಬವನು ಬಹಳ ಚಂಚಲ ಮತ್ತು ಬುದ್ಧಿ ಸ್ಥ ಸ್ತಿತಿಯಲ್ಲಿದೆ ಇರುವವನಾಗಿದ್ದು ಆತನನ್ನು ಸಾಕಾರು ಲಕ್ಷ್ಮಣ ಸೆಟ್ರು ಮಗ ಕೆ. ಎಲ್. ಮಂಜಯ್ಯ ಸೆಟ್ರು ಪ್ರೇರಿಸಿ ಸಾ 30—8—55ರಲ್ಲು ಒಂದು ಕ್ರಯ ದಸ್ತಾವೇ ಜನ್ನು ಮಾಡಿಸಿಕೊಂಡು ತೋಟ್ಟಿಕೆ ಪೂರ್ತಿ ರುಪಾಯಿಯನ್ನು ಶಂಕರನಾರಾಯಣ ಸಬ್. ರಿಜಿಸ್ಟ್ರಾರರ ಸಮಕ್ಷಮ ಕೊಟ್ಟಿದ್ದೇನೆ ಎಂತಸಾಡಿ ತನ್ನ ಹೆಸರಿಗೆ ಕ್ರಯದಸ್ತಾವೇಜ ನ್ನು ಮಾಡಿಸಿ ಕೊಂಡಿರುತ್ತಾರೆ. ಅಲ್ಲದೆ ಸದ್ರಿ ಶ್ರೀನಿವಾಸ ಪ್ರಭುವನ್ನು ನನ್ನವಟ್ಟಿಗೆ ಕೂಡ ದೇ ಬರುವರೆ ಕೆ. ಎಲ್. ಮಂಜಯ್ಯ ಸೆಟ್ರು ಕಲೂಲಿಮಾಡದೆ ಇದ್ದವರಿಂದಲೂ ಸದ್ರಿ ಕೆ. ಎಲ್. ಮಂಜಯ್ಯ ಸೆಟ್ರು ಆತನನ್ನು ಕರಕೊಂಡು ಸ್ವಲ್ಪಕಾಲಮಾಯದಲ್ಲಿ ನನ್ನ ಮನೆ ಗೆ ಬರುತ್ತೇನಾಗಿ ವಿಶ್ವಾಸ ಪೂರ್ವಕ ನನ್ನನ್ನು ನಂಬಿಸಿದ್ದರಿಂದಲೂ ಸದ್ರಿ ನನ್ನ ಅಳಿಯಶ್ರೀ ನಿವಾಸ ಪ್ರಭುವನ್ನು ನಾನು ಅವರ ಸ್ವಾಧೀನ ಬಿಟ್ಟು ನಗರಕ್ಕೆ ವಾಪಾಸು ಹೋಗಿದ್ದೆ. ಆದ ರೆ ಅವರಿಬ್ಬರೂ ನನ್ನ ಮನೆಗೆ ಬಾರದೆ ಯು ದ್ದರಿಂದ ನಾನು ಸ್ವಲ್ಪ ದಿನಮಗಳ ನಂತರ ಕೆ. ಎಲ್. ಮಂಜಯ್ಯ ಸೆಟ್ಟರನ್ನು ನೋಡಿ ಅವರ ಕೂಡೆ ನನ್ನ ಅಳಿ ಯನ ವಿಶಯ ವಿಚಾರಿಸಿದ್ದಲ್ಲಿ ಅವರು ಸಂಶ ಯ ಅಸ್ಪದ ಮತ್ತು ಸಮರ್ಪಕವಲ್ಲದ ಜವಾ ಬು ಕೊಟ್ಟಿದ್ದಲ್ಲದೆ ಸದ್ರಿ ನನ್ನ ಅಳಿಯನ ವಿ ಷಯದಲ್ಲಿ ಏನೂ ವಿಚಾರ ನನಗೆ ತಿಳಿಸಲಿಲ್ಲ. ಆದು ದರಿಂದ ಸದ್ರಿ ನನ್ನ ಅಳಿಯನ ವಿಶಯ ನನಗೆ ಬಹಳ ಸಂಶಯ ಉಂಟಾಗಿಯದೆ. ಅವನಿಗೆ ಸುಮಾರು 30 ವರ್ಷಪ್ರಾಯ ಬಣ್ಣ ಎಣ್ಣೆಗೆ ಪ್ಪು ತಲೆಯಲ್ಲಿ ಸಣ್ಣ ಜುಟ್ಟು ಸುಮಾರು ೫ ಅಡಿ ಎತ್ತರ. ಈತನ ಪತ್ತೆಮಾಡುವರೆ ಸಾರಾಂದರು ವರ್ತಮಾನ ನನಗೆ ಕೊಟ್ಟರೆ ನಾನು ಅವರಿಗೆ ಚಿರಋಣಿಯಾಗಿರುತ್ತೇನೆ.

ಕೆ. ನರಸಿಂಹ ಕಮ್ತಿ ಕಂದ್ಲೂರು ಗೋ ವಿಂದ ಕಮ್ತಿಯವರ ಮಗ, ಹಾಲಿ ವಳೆನಗ ದಲ್ಲಿರುವವ. ಪೋಸ್ಟು ನಗರ ಶಿವಮೊಗ್ಗಾ ಸ್ಟೇಟ್ ಮೈಸೂರು. ಸ್ಟೇಟ್.

ಕುಂದಾಪುರ 4—10—1955.

ಸ್ವತಂತ್ರ ಜಗತ್ತಿನ ಅಭಿವೃದ್ಧಿ ಕಾರ್ಯಕ್ರಮ

ಏತಿಯದ ಏಳಿಗೆಗೆ ಕೊಲ್ಲೊಂಬೋ ಯೋಜನೆಯ ನೆರವು

ಸಿಂಗಾಪುರದಲ್ಲಿ ಇದೇ ೧೩ನೇ ದಿನಾಂಕ ದಿಂದ ೨೨ನೇ ದಿನಾಂಕದ ವರೆಗೆ ಕೊಲೊಂ ಬೋ ಯೋಜನೆಯ ಸಲಹಾಸಮಿತಿಯ ಸಭೆ ಸೇರಿಲಿದೆ. ಈ ಯೋಜನೆಯನ್ನು ಅನುಷ್ಠಾನ ಕ್ಕೆ ತಂದ ಕಳೆದ ಐದು ವರ್ಷಗಳು ಸ್ವತಂತ್ರ ಜಗತ್ತಿನ ಆರ್ಥಿಕ ಅಭಿವೃದ್ಧಿಗೆ ಬಹಳ ನೆರ ವನ್ನು ಸಲ್ಲಿಸಿದೆ. ಇದರಿಂದಾಗಿ ಸಲಹಾ ಸಮಿ ತಿಯ ವಾರ್ಷಿಕ ಸಭೆಗಳಿಗೆ ಅಂತಾರಾಷ್ಟ್ರೀ ಯ ಮಹತ್ವ ದೊರಕಿದೆ.

ಯೋಜನೆಯ ಮನೋಭಾವ

೧೯೫೦ನೇ ಇಸವಿಯಲ್ಲಿ ಯೋಜನೆಯನ್ನು ಸಿದ್ಧಗೊಳಿಸಿದಾಗ ದಕ್ಷಿಣ ಮತ್ತು ಆಗ್ನೇಯ ಏಶ್ಯದ ರಾಷ್ಟ್ರಗಳಿಗಾಗಿ ಆರು ವರ್ಷಗಳ ಅಭಿವೃದ್ಧಿಯ ಕಾರ್ಯಕ್ರಮಕ್ಕೆ ಪ್ರಾಮುಖ್ಯ ತೆ ನೀಡಲ್ಪಟ್ಟಿತು; ಜನಸಾಮಾನ್ಯರ ಜೀವನ ಮಟ್ಟ ವನ್ನು ಎತ್ತರಿಸಿ ನಾಗರಿಕತೆಯ ಮೂಲಭೂ ತ ಆವಶ್ಯಕತೆಗಳನ್ನು ಪೂರೈಸುವ ಧ್ಯೇಯವ ನ್ನು ಆಗ ಇಟ್ಟುಕೊಳ್ಳಲಾಯಿತು.

ಆದರೆ ಸಿಂಗಾಪುರದಲ್ಲಿ ನಾಡಿನ ಸೇರಿರು ವ ಸಲಹಾಸಮಿತಿಯು ಕೇವಲ ಆರು ವರ್ಷಗಳ ವರೆಗಷ್ಟೇ ದೃಷ್ಟಿ ಹಾಯಿಸಿ, ಕುಳಿತಿ ರುವುದಿಲ್ಲ; ಅದರ ಪರಿಣಾಮ ರಾಷ್ಟ್ರಗಳು ಈಗಾಗಲೇ ಬಹಳ ಬೇಗನಾಗಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಅನುಸರಿಸಲು ನಿರ್ಧರಿ ಸಿದೆ ಎಂದು ತೋರಿಸಿಕೊಡುವುದು ಇಷ್ಟವು.

ಉದಾಹರಣೆಗಾಗಿ, ಭಾರತವು ತನ್ನ ದ್ವಿತೀ ಯ ಪಂಚವರ್ಷೀಯ ಯೋಜನೆಯ ಕುರಿತು ಗಂಭೀರವಾಗಿ ವಿಚಾರಿಸುತ್ತಿರುವುದನ್ನು ನಾವೀ ಗ ಕಾಣುತ್ತಿದ್ದೇವೆ. ಜನಸಾಮಾನ್ಯರ ಜೀವನ ಮ ಟ್ಟವನ್ನು ಎತ್ತರಿಸಿ ರಾಷ್ಟ್ರೀಯ ಆದಾಯದ ಪ್ರತಿ ೨೫% ಹೆಚ್ಚಳವನ್ನು ಸಾಧಿಸುವ ಮತ್ತು ೧೩೦ ಲಕ್ಷ ಜನರಿಗೆ ಕೆಲಸವನ್ನು ಒದಗಿಸುವ ಮಹಾಗುರಿಯನ್ನು ಅದು ಇಟ್ಟುಕೊಂಡಿದೆ. ಇದನ್ನು ನೋಡಿದರೆ, ಕೊಲೊಂಬೋ ಯೋ ಜನೆಯು ಅಭಿವೃದ್ಧಿಯ ಅರಿಯನ್ನು ಹಿಟ್ಟಿಸು ವುದಕ್ಕೆ ಮಾತ್ರ ನೆರವಾಯಿತುಎನ್ನಬೇಕಾಗು ತ್ತದೆ.

ಅಭಿವೃದ್ಧಿಯ ಕಾರ್ಯಕ್ರಮ

ಹೀಗಿದ್ದರೂ ಏಶ್ಯದ ಏಳಿಗೆಯ ದೃಷ್ಟಿಯಿಂ ದ ಕೊಲೊಂಬೋ ಯೋಜನೆಯ ಪಾತ್ರವನ್ನು ಕಡೆಗಣಿಸುವಂತಿಲ್ಲ ಎಂಬುದು ನಿಜ. ಬ್ರಿಟನ್ನಿ ನೊಡನೆ ಹೊಂದಿಕೊಂಡ "ಕಾಮನ್‌ವೆಲ್ತ್" ರಾಷ್ಟ್ರಗಳಿಗೆಂದು ಮೊಲದಲ್ಲಿ ತಯಾರಿಸಲಾ ದ ಈ ಯೋಜನೆಯು ಕ್ರಮೇಣ ೨೧ ರಾಷ್ಟ್ರ ಗಳ ಕ್ರಿಯಾಪೂರ್ಣ ಸಹಕಾರವನ್ನು ಪಡೆದು ದೇ ಇದೆಕೆ ನಿದರ್ಶನ. ಜಾಗತಿಕ ಬ್ಯಾಂಕು, ಆಂತರಾಷ್ಟ್ರೀಯ, ರಾಷ್ಟ್ರ ಸಂಘದ ತಾಂತ್ರಿಕ ಸಹಕಾರ ಮುಂದಿನ ಇತ್ಯಾದಿ ಜಗತ್ಪ್ರಸಿದ್ಧ ಸಂ ಸ್ಥೆಗಳೂ ಕೊಲೊಂಬೋ ಯೋಜನೆಯೊಡನೆ ಸಹಕರಿಸುತ್ತಿರುವುದು ಸಂತೋಷದಾಯಕವಾ ದ ವಿಷಯ.

ಆಹಾರದ ಉತ್ಪಾದನೆಯನ್ನು ತ್ವರಿತ ಗತಿ ಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾ ಣಕ್ಕೆ ಹೊಂದಿಕೊಳ್ಳುವಂತೆ ಅಧಿಕ ಗೊಳಿಸು ವುದು ಯೋಜನೆಯ ಧ್ಯೇಯಗಳಲ್ಲಿ ಒಂದಾಗಿ ದೆ ಏಶ್ಯದ ಈ ಪಲಯದಲ್ಲಿ ಮುಂದಿನ ಒಂ ದೇ ತಲೆಮಾರಿನೊಳಗೆ ೧೫ ಕೋಟಿ (ಅಂದರೆ ಅಮೇರಿಕದಲ್ಲಿ ಉಗಿಸುವಷ್ಟು) ಜನ ಸಂಖ್ಯೆ ಹೆಚ್ಚಬಹುದೆಂದು ಅಂದಾಜು!

ನೀರಾವರಿ ಮುಂತಾದ ಯೋಜನೆಗಳಿಗೆ ಈ ಕಾರಣಕ್ಕಾಗಿಯೇ ಪ್ರಾಶಸ್ತ್ಯವನ್ನು ಕೊ ಡಲಾಗಿದೆ. ಇದರೊಂದಿಗೆ, ಜಲವಿದ್ಯುದುತ್ಪಾ ದನಾಯೋಜನೆಗಳಿಗೂ ಸಂಚಾರ ಮತ್ತು ವ್ಯಾ ಪಾರ ಸೌಕರ್ಯಗಳಿಗೂ ಸಾಕಷ್ಟು ಪ್ರಾಮು ಖ್ಯತೆಯನ್ನು ನೀಡಲಾಗಿದೆ. ಶಕ್ತಿಯ ಪೂರೈ ಕೆ ಮತ್ತು ವ್ಯಾಪಾರದ ಸೌಲಭ್ಯಗಳು ಯೋ ಗ್ಯ ರೀತಿಯಲ್ಲಿದ್ದರೆ ಮಾತ್ರ ಕೈಗಾರಿಕೆಯನ್ನು ಬೆಳೆಸಲು ಸಾಧ್ಯ—ಎಂದಿಗೂ ಎಲ್ಲರಿಗೂ ವಿ ದಿತವಾಗಿದೆ.

ತಾಂತ್ರಿಕ ಶಿಕ್ಷಣ

ಕೈಗಾರಿಕೆಗಳ ಅಭಿವೃದ್ಧಿಗೆ ಅತ್ಯಾವಶ್ಯಕ ವಾದ ಸಂಗತಿಗಳ ಪೂರೈಸುವಲ್ಲಿ ಕೊ ಲೊಂಬೋ ಯೋಜನೆಯ ಪಾತ್ರ ಅದ್ವಿತೀಯ ವಾಗಿದೆ. ಆಧುನಿಕ ವಾಣಿಜ್ಯಮತ್ತು ಆರ್ಥಿಕ ಕ್ಷೇತ್ರಕ್ಕೆ ಸುಶಿಕ್ಷಿತ ಕೆಲಸಗಾರರು, ತಾಂತ್ರಿಕ ಶಿಕ್ಷಣ ಪಡೆದ ತಜ್ಞರು, ತರಬೇತಿ ಹೊಂದಿದ ಶ್ರೀಸಾಮಾನ್ಯರು ಅತ್ಯಗತ್ಯವಾಗಿದ್ದು, ಕೊ ಲೊಂಬೋ ಯೋಜನೆ ಈ ದಿಸೆಯಲ್ಲಿ ತುಂಬ ನೆರವಾಗಿದೆ.

ಯೋಜನೆಯ ಹೊರ ವಲಯದ ದೇಶಗ ಳಿಂದ ತಜ್ಞರನ್ನು ಪೂರೈಸುವುದು, ಯೋಜನೆ ಯಿಂದ ಪ್ರಯೋಜನ ಪಡೆಯುವ ದೇಶಗಳ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು ನೀ ಡುವುದು, ಹೀಗೆ ಪರಿಣತರಾದವರನ್ನು ಆಯಾ ದೇಶದಲ್ಲಿಯೇ ಯೋಗ್ಯ ಉಮೇದ್ವಾ ರರನ್ನು ತರಬೇತಿಗೊಳಿಸಲು ಯತ್ನಿಸುವುದು— ಇತ್ಯಾದಿ ವಿಭಾಗಗಳನ್ನು ಯೋಜನೆಯಂತೆ ಅನುಸರಿಸಲಾಗುತ್ತದೆ. ಇದಕ್ಕೆ ಬೇಕಾದ ಸಾಧನಸಲಕರಣೆಗಳ ಪೂರೈಕೆಯ ಕಡೆಗೆ ಸಹ ಗಮನ ಪೂರೈಸಲ್ಪಡುತ್ತಿದೆ.

ಅಮೇರಿಕದ ಸಹಾಯದನ್ನೊಳಗೊಂಡು, ಈ ವಲಯದ್ದೆ ೧೩00 ತಜ್ಞರನ್ನು ಕೊಲೊಂ ಬೋ ಯೋಜನೆಯ ರಾಷ್ಟ್ರಗಳು ಕಳಿಸಿದೆಯ ಸ್ಥದೆ ವಲಯದ ೩000 ವಿದ್ಯಾರ್ಥಿಗಳಿಗೆ ತರ ಬೇತಿಯ ಸೌಕರ್ಯವನ್ನು ನೀಡಿದೆ. ವಿಶ್ವ ಸಂಸ್ಥೆಯ ಸಹಾಯವನ್ನು ಲೆಕ್ಕಕ್ಕೆ ತೆಗೆದು ಕೊಂಡರೆ ಈ ಸಂಖ್ಯೆಯು ಪ್ರಮಾಣಾಗಿ ೩೫00 ಮತ್ತು ೭000 ಆಗುತ್ತದೆ.

ಹಣಕಾಸಿನ ಮೂಲ

ಬ್ರಿಟನು ೧೫೫ ಮುಂದಿ ತಜ್ಞರನ್ನು ಒದಗಿ ಸಿತ್ತಲ್ಲದೆ ಭಾರತ, ಸಿಂಹಳ, ಪಾಕಿಸ್ತಾನ ಇ ತ್ಯಾದಿ ರಾಷ್ಟ್ರಗಳಿಂದ ಬಂದ ಬಹಳ ವಿದ್ಯಾ ರ್ಥಿಗಳಿಗೆ ತರಬೇತಿಯ ಸೌಕರ್ಯವನ್ನು ನೀ ಡಿತು. ದೊಡ್ಡಮನವರ ಈ ಔದಾರ್ಯ ಸಹಾಯ ದಿಂದಾಗಿಯೇ ಬಹುರದಲ್ಲಿ ಜಾರಿಯಾದ ಸದಿ ಯೋಜನೆ, ಸಿಂಹಳದ ಗಾಲ್ ಓಯಾ ಯೋ ಜನೆ ಇತ್ಯಾದಿ ರೂಪಗೊಳ್ಳುವಂತಾಗಿದೆ ಎಂ ದರೆ ತಪ್ಪಿಸ್ಥ. ಇವುಗಳು ಲಕ್ಷಾಂತರ ಎಕ್ರೆ ಜಮೀನಿಗೆ ನೀರಿನಸೌಲಭ್ಯವನ್ನೂ, ಸಿದ್ಧಿಶಕ್ತಿ ಯ ಪೂರೈಕೆಯನ್ನೂ ಮಾಡುತ್ತವೆ.

ಯೋಜನೆಯ ಮೊದಲಿನ ಮೂರು ವರ್ಷ ಗಳಲ್ಲಿ ಕಾರ್ಯಕ್ರಮದಂತೆ ಪ್ರಗತಿಯ ದರವು ಮೂರರಲ್ಲಿ ಒಂದರ ಹೊರಗಿನವರ ನೆರವಿನ ರೂಪದಲ್ಲಿ ಬಂತು. ಈ ಸಹಾಯದ ಮೊತ್ತ ೭೪ ಕೋಟಿ ಪೌಂಡುಗಳು; ಇದಲ್ಲದೆ ಸಿಂಹ ಳ, ಪಾಕಿಸ್ತಾನ ಮತ್ತು ಭಾರತಗಳಿಗೆ ಪ್ರಿಟಿ ನು ಒಟ್ಟಿಗೆ ೪೨೦ ಲಕ್ಷ ಪೌಂಡುಗಳಷ್ಟು ಸ್ಟ ರ್ಲಿಂಗನ್ನು ಈ ಆವಧಿಯಲ್ಲಿ ಬಿಡುಗಡೆಗೊಳಿ ಸಿತು.

ಇದೆಂದ ಮಾತ್ರಕ್ಕೆ, ಯೋಜನೆಯ ವಲ ಯದ ದೇಶಗಳು ಸುಮ್ಮನೆ ಕುಳಿತಿದ್ದವೆಂದು ಭಾವಿಸಲಾಗದು. ತಮ್ಮ ಅಭಿವೃದ್ಧಿಗಾಗಿ ಅವು ಅದಸ್ಟು ಹೆಚ್ಚು ಹಣವನ್ನು ಕೂಡಿಸಲು ಪ್ರಯತ್ನಿಸಿದೆ; ಈ ಪ್ರಯತ್ನ ಈಗಲೂ ಮುಂ ದೆಯುತ್ತಿದೆ. ಖಾಸಗಿ ವಿನಿಮಯವನ್ನು ಸಂ ಪಾದಿಸಿ ಕೊಡಲ್ಪಟ್ಟಿದೆ ನಿರ್ಯಾತ ವ್ಯಾಪಾರ ದೆಚ್ಚಿಸುವಕೆಗೆಗೊಂಡಿದ್ದರೆ ಸಾಲದ ಹರಿದಿದೆ. ಸ್ವಾವಲಂಬನ ಮತ್ತು ಸಹಕಾರವೇ ಯೋಜ ನೆಯ ಬೀಜ ಮಂತ್ರ ಎಂದು ಅವುಗಳಿಗೆ ಗೊ ತ್ತಾಗಿದೆ.

B.I.S.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಸ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬದವ ಬಲ್ಲದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಭಾರತ ರತ್ನ ಶ್ರೀ ನೆಹರು

ರಾಷ್ಟ್ರಾಧ್ಯಕ್ಷ ಡಾ! ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗೆ ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು ಜನಾಪರನೆಂಬ ಹೆಸರಿನಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತದೆ

ಗ್ರಾಮ ಜ್ಯೋತಿ ಕೇಂದ್ರ

ರಾಜಸ್ಥಾನದ ಸರ್ಕಾರ ಶಾಲೆಯಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂ ಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ಸ ನೈಪುಣ್ಯದ, ವೃತ್ತಿಗಳಲ್ಲಿಯೂ ಪಾರಂಗತರಾಗುವಂತೆ ಜನ್ಮಾದ ಶಿಕ್ಷಣ ನೀಡಲ್ಪಡುತ್ತ ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಅವಶ್ಯಕವಾಗಿದೆಯೋ ಸಾಂ ದಾಯಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾ ವನ್ನು ಕೊಡುವುದೂ ಅಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ ಮಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇ

ಸ್ವೀಕಾರ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ ಸಂ ನ)

ಸಾವಿಗೆ ಮುಂಚೆ ಸಮಾಧಿ—

ಬರೆದವರು ಧನ್ವಂತ ಪ್ರಕಾಶಕರು ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ಬೆಲೆ ರೂ ೨—೦—೦

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತಮಾನದಲ್ಲಿ ಆಗಿಹೋದ ಈ ಸಾರ್ವಭೌಮ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ವೃತ್ತಾಂತಗಳೇ ಕಂಡುಬರುತ್ತವೆ ಒಗಟೊಂದನ್ನು ಬಿಡಿಸುವ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಬಹುದು. ಲಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ಬೊರತಿಲ್ಲ—ಆದರೆ ಇವುಗಳು ಮನುಷ್ಯ ಕೃತಪ್ರಯೋಗದಲ್ಲಿ ಸಾಧಾರಣ ಬಿಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ ಹಾಗೆ ನಿರೂಪಿಸುವಾಗ ಗೂಢಸತ್ಯವೊಂದನ್ನು ನಿಧಾನವಾಗಿ ಮುಂದಿಟ್ಟು ಪಡಿಸುವುದಕ್ಕೆ ಲಾಂಛಕರು ಸಮರ್ಥರಾಗುತ್ತಾರೆ ಎಂಬುದೂ ಹೊಳೆಯದಿರದು ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಷ್ಟರ ವರೆಗೆ ಸಾಕಷ್ಟು ಹೆಚ್ಚಾಗಿ ಆದರೆದ ಪುಸ್ತಕಗಳ ಬಗೆಯೊಂದು ಈ ಅನುವಾದದಿಂದ ಪದಾರ್ಪಣ ಮಾಡಿದೆ ಮೋನ ಈ ಕನ್ನಡ ರೂಪದಲ್ಲಿ ಕಸುವಿದೆ, ಭಾಷಾಮರ್ಯಾದೆಗೆ ಗೌರವ ಕೊಡಲಾಗಿದೆ. ಈ ದೃಷ್ಟಿಯಿಂದ ಧನ್ವಂತರ ಕೆಲಸ ಚೊಕ್ಕರೀತಿಯಲ್ಲಿ ನಡೆದಿದೆ ಎನ್ನಬೇಕು

ಕು

ಲಘು ಪರಿಚಯ

ಮದಿಕೇರಿಯಿಂದ ಶ್ರೀ ಬಿ. ಎಸ್ ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ 'ನಂದಾದೀಪ' ಇದೇ ಅಕ್ಟೋಬರದಲ್ಲಿ ಬೆಳಗಿದೆ ಪತ್ರಿಕೆಗೆ ಸ್ವಾಗತಕೋರಿ ಒಳ್ಳೆಯ ಮಟ್ಟವನ್ನು ಉದ್ಯ ಮ ಶೀಲತೆಯಲ್ಲಿ ಪ್ರದರ್ಶಿಸಿ, ಆಯು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಹೃಷಿ ಕೇರದ ದಿವ್ಯದಾನದಲ್ಲಿ ಸ್ವಾಮಿ ಶಿವಾನಂದರ ಆಶ್ರಯದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮಿಜಿಯ ಒಂದೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅನೇಕ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ

ಮಾದರಿವಾದ ಜಿಲ್ಲಾ ಸರ್ಕಾರದ ಸಂ ಜನೆ, ಅರವಟಿಗೆ ಇವರು ೧—೪—೧ ರಿಂದ ೩೦—೩—೧೯೫೫ ವರೆಗಿನ ತಮ್ಮ ಟುವಟಿಕೆಯ ಆರನೇ ವರ್ಷಕ್ಕೆ ಸಂಬಂ ಪ್ರಕಟಿಸಿರುವ ವರದಿಯು ಸರ್ಕಾರ ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯ ಕಾರ್ಯಕರ್ತರು ಸಾಧಿಸಿರುವರೆಂದು ತಿ ಸಿ ಕೊಡುತ್ತದೆ ಗ್ರಾಮ ಜೀವನವನ್ನು ಕರವಾಗಿ ಮಾಡುವ ಸೆಲವಾರು ವಿಧಾ ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರು ವಿವರಗಳು ತುಂಬ ಸಮಾಧಾನಕರವಾ ಸರ್ಕಾರದ ಸಮಿತಿಗೆ ಇತೋಸ್ಫೂರ್ತಿ ವಾದ ಶ್ರೇಯಸ್ಸನ್ನು ಕೋರುತ್ತೇವೆ

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್

"Ably written—Quite up to date valuable service"

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್ ಬಿ. ಸಿ ಎಮ್ ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹಾಗೆ ವಿದಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟ ಖರ್ಚು ಬೇರೆ)

ಪ್ರತಿಗಳು ಸಿಗುವ ಮುಖ್ಯ ಸ್ಥಳ

ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಾಚೀನ ತುಳುನಾಡ

(ಎನ್ ಎಸ್. ಕಿಲ್ಲೆ ಮತ್ತು ಎಸ್ ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆ ವಿವರಿಸುವ ಪುಸ್ತಕ (ಶ್ರೀ ಮಂ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು ಬೆಲೆ ಕಾಗದ ಆಕರ್ಷಕ ರಕ್ಷಾಪತ್ರ ಬೆಲೆ 2-(

ಭಾರತದ ಕರ್ಣ

"ಭಾರತದ ಕರ್ಣನು ದಿ ಕಿಲ್ಲೆ ಒಲಿದಿದ್ದ ಇದು ಅವರ ಕರ್ಣನ ಪಾ ನೆ ಬೆಡಿದವರಿಗೇ ಗೊತ್ತು ಆ ಮರೂತ ನಚಿತ್ರ ಎಂದೆಂದೂ ಜನಮನದಿಂದ ಹೋಗದು (ಪ್ರೊ ಎಂ ಆರ್ ಶ ಮುನ್ನುಡಿಯಿಂದ) ಭಾರತದ ಕರ್ಣ ವನ್ನು ವರ್ಣಿಸುವ ಪುಸ್ತಕ ಬೆಲೆ 0

ಮುರಲಿ

ಮೇಲ್ಕರಗಡಿಯ ಕವಿತೆಗಳ ಸಂ

ಬೆಲೆ(0-12-0.

ಮುನ್ನುಡಿಕಾರರು ಶ್ರೀ ಕಿಲ್ಲಾಣ್ಣ, ಪೈ)

ನಿಮಗೆ ಬೇಕಾದ ಪ್ರತಿಗಳಿಗೆಬರೆ

ನವಭಾರತ ಪುಸ್ತಕ ಭಂಡಾರ

P. K. U. Shetty at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಪ್ತಂಬರ ೩೫
VOL. 35

ಉಡುಪಿ, 20—10—1955

ಸಂಚಿಕೆ ೮
NO. 8

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ಸೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯ ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ— ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಛಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ; ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಿಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೆಂದು ಕೇಳುತ್ತೇವೆ. ಪ್ರಾಥಮಿಕ ಶಾಲೆಗಳಲ್ಲಿ ಮೂಲ ಶಿಕ್ಷಣವನ್ನು ತೊಡಗಬೇಕು; ಕ್ರಮೇಣ ಮಾಧ್ಯಮಿಕ ಮತ್ತು ಪ್ರಾಥಮಾಧ್ಯಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಅವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ಒಂಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ಖರ್ಚಾಗುತ್ತದೆ; ಇದರಲ್ಲಿ ೧೧೦ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ೩೦೦ರಿಂದ ೫೦೦ಜನರ ವರೆಗಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ—ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳವನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವತಿಯಲ್ಲಿಯೇ ಕೊಡಬೇಕು. ಊರಿನವರು ಅರ್ಧ ಕರ್ಚನ್ನು ಹೊರುವ ಶಕ್ತಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು-ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ಸುಮಾರಿಂದ ೧೫ವರ್ಷ ವಯಸ್ಸಿನ ೬೩ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೨ಲಕ್ಷ ಮಾತ್ರ. ಘಟನೆಯಂತೆ ಸರಕಾರದ ಮೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಆದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದೈವದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಸದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು-ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡುವುದಕ್ಕೆ ಜನಾಭಿಪ್ರಾಯ ಅನುಕೂಲವಿಲ್ಲ, ಆದರೆ ನೈತಿಕ ಶಿಕ್ಷಣ ಕೊಡುವುದಕ್ಕೆಯಾಂದೂ ವಿರೋಧವಿಲ್ಲ ಎಂದು ಸಮಿತಿ ಹೇಳಿದೆಯೆಂದು ವರದಿಯಾಗಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಮೊಂಟೆಸೋರಿ ಪದ್ಧತಿಯನ್ನು ಸ್ಥಳೀಯ ವೈತಿಷ್ಟ್ಯಗಳಿಗನುಸಾರವಾಗಿ ತಿದ್ದಿಕೊಂಡು ಅನುಸರಿಸುವ ಶಾಲೆಗಳನ್ನು ತೆರೆಯಬಹುದೆಂದೂ ಅದು ಸೂಚಿಸಿದೆಯಂತೆ. ಏಕೋಪಾಧ್ಯಾಯ ಶಾಲೆಗಳಲ್ಲಿ ಕೆಲಸ ಮಾಡುವುದಕ್ಕೆ ಉತ್ತೇಜನೆಯ ರೂಪದಲ್ಲಿ ವಸತಿ ಸೌಕರ್ಯವನ್ನೂ ಒದಗಿಸಿಕೊಡಬೇಕು; ಗ್ರಾಮರಲ್ಲಿ ಮಾಡಿದ ಪಾಠ ಪಟ್ಟಿಯನ್ನು ಪರಿಷ್ಕರಿಸಲು ಸಿಬಂಧಿಯನ್ನು ನೇಮಿಸಬೇಕು; ಎಂಟನೇ ತರಗತಿಯ ಕೊನೆಗಿನ ಸರಕಾರಿ ಪರೀಕ್ಷಾ ಪದ್ಧತಿ ಈಗಿನಂತೆಯೇ ಮುಂದರಿಯಬೇಕು; ಆದರೆ ೫ನೇ ತರಗತಿಯಿಂದ ೮ನೇ ತರಗತಿಯ ವರೆಗೆ ಇಂಗ್ಲೀಷಿನ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕು —ಎಂದು ವರದಿಯಲ್ಲಿದೆಯಾಗಿ ಗೊತ್ತಾಗುತ್ತದೆ.

ಶಾಲೆಗಳ ಆಡಳಿತೆಯನ್ನು ವ್ಯಕ್ತಿಯೊಬ್ಬ ನೇವಹಿಸಿಕೊಂಡಿರುವುದಕ್ಕೆ ಬಿಡಬಾರದು; ಪ್ರತಿಯೊಂದೂ ಶಾಲೆಗೆ ಆಡಳಿತ ಮಂಡಳವನ್ನು ನೇಮಿಸಬೇಕು. ಇದರಲ್ಲಿ ಒಬ್ಬಿಬ್ಬರು ಸರಕಾರದ ಪ್ರತಿನಿಧಿಗಳಿರಬೇಕು. ಉಪಾಧ್ಯಾಯರೇ ಆಡಳಿತ ನಡೆಸುವ ಶಾಲೆಗಳಿಗೂ ಈ ಕ್ರಮವನ್ನು ಅನ್ವಯಿಸಬೇಕು—ಎಂದು ಸಮಿತಿಯು ತಿಳಿಸಿದೆಯಂತೆ. ಇನ್ನು ಮುಂದೆ ಜಿಲ್ಲಾ ಬೋರ್ಡು ಮತ್ತು ಗ್ರಾಮ ಪಂಚಾಯತುಗಳಿಗೆ ಶಾಲೆಗಳನ್ನು ನಡೆಸಿಕೊಡಬಾರದು. ತನ್ನ ಅಧಿಕಾರ ವಲಯದಲ್ಲಿ ನಗರ ಸಭೆ ಶಾಲೆಗಳನ್ನು ನಡೆಸಬಹುದು; ಆದರೆ ಅದರ ಹೊರಗೆ ಪ್ರಾದೇಶಿಕ ಮಂಡಳಕ್ಕೆ ಆ ಅಧಿಕಾರ ಕೊಡಬೇಕು. ಈ ಮಂಡಳದಲ್ಲಿ ಜಿಲ್ಲಾ ಬೋರ್ಡು, ಮತ್ತು ಗ್ರಾಮ ಪಂಚಾಯತುಗಳ ಪ್ರತಿನಿಧಿಗಳಲ್ಲದೆ ಸರಕಾರದ ಪ್ರತಿನಿಧಿಗಳೂ ಇರಬೇಕು. ಮಂಡಳದ ಅಧಿಕಾರಾವಧಿ ೩ ವರ್ಷ; ಸುಮಾರು ೨೦೦ ಶಾಲೆಗಳ ಆಡಳಿತವನ್ನು ಇಂಥ ಒಂದು ಮಂಡಳಕ್ಕೆ ಒಪ್ಪಿಸಬಹುದು; ಅದಕ್ಕಿಂತ ಹೆಚ್ಚಲ್ಲ. ಜಿಲ್ಲಾ ಬೋರ್ಡಿಗೆ ಶಿಕ್ಷಣ ಸಂಬಂಧದಲ್ಲಿ ಈಗ ಬರುವ ಆದಾಯ ಈ ಪ್ರಾದೇಶಿಕ ಮಂಡಳಕ್ಕೆ ಇನ್ನು ಮುಂದೆ ಸಲ್ಲುತ್ತದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1935.

ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಸೂಚಿಸಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತು ಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಥ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Head Office: UDIPI, S. India.] [Estd: 1925

ಕೊಡಗಿನ ಜನಜೀವನದ ಬೆಡಗು

ತಲ ಕಾವೇರಿಯ ರೋಮಾಂಚಕ ಸಂದರ್ಶನ

ಮೊನ್ನೆ ಸೋಮವಾರ ತುಲಾ ಸಂಕ್ರಮಣದಂದು ದಕ್ಷಿಣ ಭಾರತದ ಎಲ್ಲೆಡೆಯಿಂದಲೂ ಮಡಿಕೇರಿಗೆ, ಅಲ್ಲಿಂದ ತಲ ಕಾವೇರಿಗೆ, ಜನರು ಯಾತ್ರೆ ಹೊಂಟಿದ್ದರು. ಆ ಪರ್ವದಿನದಲ್ಲಿ ಕಾವೇರಿಯ ಪುಣ್ಯ ಜಲದಲ್ಲಿ ತೀರ್ಥಸ್ನಾನಮಾಡಿ, ಧನ್ಯರಾಗುವುದೇ ಅವರ ಉದ್ದೇಶ.

ಪವಿತ್ರ ಪುಣ್ಯ ಕ್ಷೇತ್ರ

ತಲಕಾವೇರಿಯು ಕೊಡಗಿನ ಅತ್ಯಂತ ಪ್ರೇಕ್ಷಣೀಯ ಸ್ಥಳವೂ ಹೌದು. ಇಲ್ಲಿ ಪುಣ್ಯಕಾಮಿಗಳಷ್ಟೇ ಬರುವುದಲ್ಲ; ಕೊಡಗಿಗೆಬಂದ ಪ್ರವಾಸಿಗಳತಂಡವೂ ತಲ ಕಾವೇರಿಯನ್ನು ಸಂದರ್ಶಿಸಲು ತಪ್ಪುವುದಿಲ್ಲ; ಮಡಿಕೇರಿಯಿಂದ ೨೮ ಮೈಲುಗಳಷ್ಟು ದೂರ ಚಿನ್ನಾದ ಮಾರ್ಗದಲ್ಲಿಸಂಚರಿಸಿ, ಪ್ರಕೃತಿಯ ಮಡಿಲಲ್ಲಿಕೆಲವು ಗಳಿಗೆಗಳನ್ನು ಕಳೆಯಲು ಎಲ್ಲರಿಗೂ ಆನಂದವಾಗುತ್ತದೆ.

ಬ್ರಹ್ಮಗಿರಿ ಎಂದು ಕರೆಯಲ್ಪಡುವ ಉನ್ನತ ಬೆಟ್ಟವೇ ದಕ್ಷಿಣ ಭಾರತದ ಜೀವನಾಡಿಯಂತಿರುವ ಕಾವೇರಿಯ ಉಗಮ ಸ್ಥಳ. ಇಲ್ಲಿಂದ ಹರಿಯತೊಡಗಿ ೫೦೦ ಮೈಲುಗಳಿಗಿಂತಲೂ ಹೆಚ್ಚುದೂರ ಸಂಚರಿಸಿ; ಇಕ್ಕೆಲಗಳಲ್ಲಿಯೂ ಹಸಿರು ತುಂಬಿದ ಭತ್ತದ ಪೈರಿನಿಂದ ಕಂಗೊಳಿಸಿ, ಬಂಗಾಳಕಾಲುತವನು ಕಾವೇರಿಯು ಸೇರುತ್ತದೆ. ದಕ್ಷಿಣ ಭಾರತದ ಸಮೃದ್ಧಿಯ ಎಲ್ಲ ಶ್ರೇಯಸ್ಸೂ ಕಾವೇರಿಗೆ ಸಲ್ಲುತ್ತದೆ.

ನೈಸರ್ಗಿಕ ದೃಶ್ಯ

ಪ್ರವಾಸಿಯು ಬಸ್ಸು ಅಥವಾ ಕಾರಿನಲ್ಲಿ ಹೋಗುವಾಗ ಸುತ್ತಲೂ ಮನಸ್ಸನ್ನು ಮುಗ್ಧಗೊಳಿಸುವ ಚೆಲುವಿನ ನೋಟಗಳು ಕಣ್ಣಿಗೆ ಬೀಳುತ್ತವೆ. ಭತ್ತದ ಗದ್ದೆಗಳೂ, ಕಾಫಿ, ಏಲಕ್ಕಿ, ಮತ್ತು ಕಿತ್ತಳೆ ಹಣ್ಣಿನ ಮರಗಳಾದ ಬೆಳೆಯಿರುವ ತೋಟಗಳೂ ಅರಣ್ಯ ಸಂಪತ್ತಿನಿಂದ ತುಂಬಿ ತುಳುಕುವ ಕೊಡಗಿಗೆ ಇನ್ನಷ್ಟು ಐಶ್ವರ್ಯವನ್ನು ನೀಡುತ್ತವೆ. ಮನುಷ್ಯ ಕೃತ ಸಾಹಸಗಳನ್ನು ನಾಚಿಸುವಂತೆ ನಿಸರ್ಗದ ನರ್ತನವೇ ಇಲ್ಲಿ ನಡೆದಿದೆ ಎಂಬುದು ಪ್ರವಾಸಿಯ ಮೊದಲ ಅನುಭವವಾಗುತ್ತದೆ.

ಕೈಯಲ್ಲೊಂದು ಬಂದೂಕು ಹಿಡಿದಿದ್ದರೆ, ತಲಕಾವೇರಿಯಲ್ಲಿ ಬೇಟೆಯ ವಿನೋದದಲ್ಲಿ ತನ್ಮಯರಾಗಬಹುದು; ಬರಿಗೈಯಲ್ಲೇ ಹೋದರೂ ಕಾವೇರಿ ಬೆಟ್ಟದ ಸೆಡುವೆ ಝುಳು ಝುಳು ನಿನಾದದೊಡನೆ ಹರಿದು ಹೋಗುವ ರಮ್ಯ ಚಿತ್ರವನ್ನು ಕಂಡು ನಮಗೆ ಆನಂದವಾಗದಿರದು. ಸುತ್ತಲೂ ಎತ್ತರವಾಗಿ ನೆಗೆದು ನಿಂತಿರುವ ಬೆಟ್ಟಗಳಿರುವಾಗ ನಡುವೆ ಕಣಿವೆಯಲ್ಲಿ ಹಸಿರಿನ ಶೋಭೆ ಅವರ್ಣನೀಯವಾದ ಆನಂದವನ್ನು ತಂದುಕೊಡುತ್ತದೆ.

ನಾಡಿನ ಇತಿಹಾಸ

ಕೊಡಗು ಈಗ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿದೆ; ಕೇಂದ್ರ ಸರಕಾರದ ನೇರಾದ ಆಡಳಿತಕ್ಕೆ ಇದು ಒಳಪಟ್ಟಿದೆ. ಕಳೆದ ಜುನಾನಣೆಯ ಬಳಿಕ ಜನರಿಗೆ ಹೊಣೆಗಾರವಾದ ಶಾಸನ ಸಭೆಯೂ ಮಂತ್ರಿಮಂಡಳವೂ ಕೊಡಗಿನಲ್ಲಿ ಏರ್ಪಟ್ಟಿದೆ. ಈಚೆಗೆ ಪ್ರಕಟವಾದ ಫಜಲಿಅಲಿ ಆಯೋಗದ ವರದಿಯು ಕಾರ್ಯಗತವಾದರೆ, ಸಂಯುಕ್ತ ಕರ್ನಾಟಕ ರಾಜ್ಯದಲ್ಲಿಕೊಡಗು ಒಂದುಜಿಲ್ಲೆಯ ರೂಪದಲ್ಲಿಸೇರಿಹೋಗುತ್ತದೆ. ಆಗ ಉಳಿದ ಕನ್ನಡ ಪ್ರದೇಶಗಳೊಡನೆ ಕೊಡಗಿನ ಸಂಪರ್ಕ ಮತ್ತು ಸಂಬಂಧ ಇನ್ನಷ್ಟು ಗಾಢವಾಗುವುದು ನಿಶ್ಚಯ.

ಸುಮಾರು ೧೫೦೦ ಚದರ ಮೈಲು ವಿಸ್ತೀರ್ಣದ ಕೊಡಗು ಮೈಸೂರಿನೊಡನೆ ಈ ಗಾಗಲೇ ಅರ್ಧಿಕ ಸಂಬಂಧವನ್ನು ಹೊಂದಿರುತ್ತದೆ. ಭೌಗೋಲಿಕವಾಗಿಯೂ ಸಾಂಸ್ಕೃತಿಕವಾಗಿಯೂ ಕೊಡಗನ್ನು ಮೈಸೂರಿನಿಂದ ಬೇರ್ಪಡಿಸುವುದು ಸಾಧ್ಯವಿಲ್ಲವೆಂದರೂ ತಪ್ಪಲ್ಲ. ಮಲೆನಾಡಿನ ಬಹು ದೊಡ್ಡ ಅಂಶವು ಮೈಸೂರಿನಲ್ಲಿದೆ; ಕೊಡಗು ಕೇವಲ ಮಲೆನಾಡು. ಸಂಯುಕ್ತ ಕರ್ನಾಟಕ ರಾಜ್ಯವು ಮಲೆನಾಡಿನ ಅಭಿವೃದ್ಧಿಗೆ ಉತ್ತಮ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬಲ್ಲುದಾದುದರಿಂದ ಕೊಡಗಿನ ಸಂಪತ್ತು ಭವಿಷ್ಯದಲ್ಲಿ ಹೆಚ್ಚಿಕೊಳ್ಳುವ ಸಂಭವ ಸ್ಪಷ್ಟವಾಗಿ ಕಾಣಿಸುತ್ತದೆ.

ಜನ ಜೀವನ

ಮಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸುವಾಗ ಮಡಿಕೇರಿಯ ದೊಡ್ಡ ಪೇಟೆನಡುವೆ ಸಿಗುತ್ತದೆ. ಇದು ಕೊಡಗಿನ ರಾಜಧಾನಿ—ಟಿಪ್ಪು ಸುಲ್ತಾನನ ವೈಭವಯುಕ್ತ ಆಡಳಿತೆಯ ಬಳಿಕ,೧೮೦೦-೧೮೫೪ ನೇ ವರ್ಷದ ವರೆಗೆ ಸ್ಥಳೀಯ ಅರಸರ ಆಳಿಕೆಯನ್ನು ಅದು ಅನುಭವಿಸಿತು. ಬ್ರಿಟಿಷರು ಇಮ್ಮಡಿ ವೀರ ರಾಜ ಅರಸರನ್ನು ರಾಜ್ಯಭ್ರಷ್ಟರಾಗಿಮಾಡಿ,ಕೊಡಗನ್ನು ತಮ್ಮ ಕಮಿಶನರರಿಗೆ ಒಪ್ಪಿಸಿ ಕೊಟ್ಟರು.

ಕೊಡಗಿನ ಜನಸಂಖ್ಯೆ ಸುಮಾರು ೨೫೦,೦೦೦. ಇವರೆಲ್ಲ ಕನ್ನಡ ಬಲ್ಲವರು; ವ್ಯವಹಾರದಭಾಷೆಯೂಕನ್ನಡ.ಆದರೆಕೊಡಗರೆಂದು ಕರೆಯಲ್ಪಡುವ ವಿಶಿಷ್ಟ ಜನ ಸಮುದಾಯವೊಂದು ಇಲ್ಲಿದೆ—ಇವರ ಸಂಖ್ಯಾ ಪ್ರಮಾಣ ಸುಮಾರು ೬೦,೦೦೦ ಈ ಜನರ ಅಭಿರುಚಿಯಲ್ಲಿ ಒಳ್ಳೆಯ ಪರಿಷ್ಕಾರ ಕಂಡುಬರುತ್ತದೆ.ಅವರು ನಿಷ್ಣಾತರಾದ ಬೇಟೆಗಾರರು; ಯುದ್ಧ ಕ್ಷೇತ್ರದಲ್ಲಿ ನಿಷ್ಣಾತರಾಗಿ ಮೆರೆಯಬಲ್ಲ ಪರಂಪರೆಯುಳ್ಳವರು; ಸಾಹಸಿಗಳೂ ಶೂರರೂ ಆಗಿರುವಂತೆ ಕಲಾಪ್ರಿಯರೂ ಹೌದು.

ಸುಸಂಸ್ಕೃತ ಪುತ್ರರು

ಭಾರತದ ಪದಾತಿದಳದ ಸರ್ವ ಪ್ರಥಮ ಭಾರತೀಯ ಸೇನಾಪತಿಯಾಗಿ ಹೆಸರು ಪೊಂದಿ, ಈಗ ಆಸ್ಟ್ರೇಲಿಯದಲ್ಲಿ ಭಾರತ ಸರಕಾರದ ರಾಯಭಾರಿಯಾಗಿರುವ ಜನರಲ್ ಕರಿಯಪ್ಪನವರೂ ಕೊಡಗಿನಲ್ಲಿ ಯುದ್ಧ ಕೈದಿಗಳ ಯೋಗಕ್ಷೇಮವನ್ನು ನೋಡಿಕೊಂಡ ದಕ್ಷ ಭಾರತೀಯ ಸೇನಾಪತಿ ಲೆಫ್ಟನೆಂಟ್ ಜನರಲ್ ತಿಮ್ಮಯ್ಯ ನವರೂ ಕೊಡಗಿನ ಸುಪುತ್ರರು.

ಸಾಮಾನ್ಯ ಭಾರತೀಯರಿಗಿಂತ ಭಿನ್ನವಾದ ಸಂಸ್ಕಾರವನ್ನು ಕೊಡಗರು ಹೊಂದಿರುವರೆಂದು ಅವರ ಉಡುಪು ತೊಡುಪುಗಳೇ ವ್ಯಕ್ತಪಡಿಸುತ್ತವೆ. ಹೆಬ್ಬಹರಿದಿನಗಳಲ್ಲಿಯೂ ಮುದುವೆ ಮುಂಜಿಗಳಲ್ಲಿ ತಮ್ಮರಾಷ್ಟ್ರೀಯ ಪೋಷಾಕನ್ನುಧರಿಸಿ ಬರುವ ಕೊಡಗರು ಸಾಮಾನ್ಯ ಸಂದರ್ಶಕರಿಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ; ಅವರ ಗಂಭೀರ ನರ್ತನ, ಉಲ್ಲಾಸ ಮತ್ತು ಉತ್ಸಾಹದ ಹೊಳೆ ಹರಿಸುವ ಹಾಡು—ಅವರ ಸಂಸ್ಕೃತಿಯ ಕುರಿತು ಅಭಿಮಾನ ಮೂಡಿಸುತ್ತದೆ.

ಕೃಷಿಯಲ್ಲಿ ಆಸಕ್ತಿ

ಮಡಿಕೇರಿಯಲ್ಲಿದ್ದಾಗ ಓಂಕಾರೇಶ್ವರ ಮಂದಿರವನ್ನು ನೋಡಿ, ಅಲ್ಲಿ ಹಿಂದು ಯೋಗು ಮುಸ್ಲಿಂ ಕಲೆಯು ಸಂಗಮವಾಗಿರುವುದನ್ನು ಕಂಡು ಪ್ರವಾಸಿಕರು ಆನಂದಿಸಬಹುದು. ಕೊಡಗಿನ ಹಿಂದಿನ ರಾಜರ ಕೋಟೆಯನ್ನೂ ಅರಮನೆಯನ್ನೂ ನೋಡಿ ಸಂತೋಷಿಸಬಹುದು. ಯಾವನಾದರೊಬ್ಬ ತೋಟಗಾರನ ಅತಿಥ್ಯ ಲಭ್ಯವಾದರೆ, ಮೋಜಿನ ವೃಗಯಾವಿಹಾರಕ್ಕೂ ಸಿದ್ಧರಾಗಬಹುದು.

ಕೊಡಗಿನ ಮಹಿಳೆಯರನ್ನು ಅವರು ಸೀರೆಯುಡುವ ಪದ್ಧತಿಯಿಂದಲೂ ತಲೆಗೆ ಕಟ್ಟಿಕೊಳ್ಳುವ ಬಣ್ಣದ ರುಮಾಲಿನಿಂದಲೂ ಕೂಡಲೇ ಪ್ರತ್ಯೇಕಿಸಿ, ಗುರುತಿಸಬಹುದು. ಈ ನಾಡಿನಲ್ಲಿ ಎಲ್ಲರೂ ಗಟ್ಟಿಮುಟ್ಟಾದ ಆಳುಗಳು; ಸುಂದರ ಸೌಸ್ವವ ಪಡೆದ ಪುಣ್ಯ ಜೀವಿಗಳು. ದುಡಿಯುವುದರಲ್ಲಿ ಅವರಿಗೆ ತುಂಬಾ ಪ್ರೀತಿ—ಅವರ ಹೊತ್ತಿರಿ ಬಾಡು ಕೃಷಿಯಲ್ಲಿ ಅವರಿಗಿರುವ ಅಭಿಮಾನದ ದ್ಯೋತಕವಾಗಿದೆ. ಇದು ಕೊಡಗಿನ ಕುರಿತಾಗಿಸಂದರ್ಶಕರಲ್ಲೂ ಸದ್ಭಾವನವನ್ನು ಹೆಚ್ಚಿಸುತ್ತದೆ. ನಮ್ಮ ಜಿಲ್ಲೆಯ ಪ್ರಸಿದ್ಧ ಕನ್ನಡ ಕವಿ ದಿವಂಗತ ಪಂಜೆಯವರು ಕೊಡಗಿನ ಬೆಡಗನ್ನು ವರ್ಣಿಸಿ ಬರೆದ ಆ ಕವಿತೆಗಳ ಸಾಲುಗಳು ಪದೇ ಪದೇ ನಮ್ಮ ನೆನಪಿಗೆ, ಆ ನಾಡಿಗೆ ಹೋಗಿಬಂದ ಬಳಿಕ, ಬರುತ್ತಿರುತ್ತವೆ.



THE CANARA MUTUAL
Assurance Company Limited
Managing Director: **T. R. A. PAI**
Head Office: **UDIPI,** S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | **ರೂ. 15** ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷದ್ದು ಬೋನಸ್ ಕಂಟಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund · Navis" UDIPI, S. India

15 ದಿವಸಗಳ ರಿಯಾಯಿತಿ

ಒಂದು ಫೌಂಟನ್ ಪೆನ್ ಅಥವಾ ಒಂದು ಸಿಗರೇಟು ಲೈಟರ್ ಧಾರಾಳ. ಪ್ರತಿಯೊಂದಕ್ಕೆ 5 ವರ್ಷ ಗ್ಯಾರಂಟಿ. ಪಾಕೆಟ್ ವಾಚ್ 9/-, ಉತ್ತಮ 11/-. ಟೇಬಲ್‌ಪೀಸು (ಅಲಾರಮ್) 12/; ಉತ್ತಮ 14/.

ಸೈಜು 7¾ ನಂಬ್ರ 15



15 ಜುವೆಲುಗಳ ರೋಲ್ಡ್ ಗೋಲ್ಡ್–31/-
5 ಜುವೆಲುಗಳ ಉತ್ತಮ – 24/-

ಸೈಜು 9¾ ವಾಟರ್‌ಪ್ರೂಫ್ ನಂಬ್ರ 16



17 ಜುವೆಲುಗಳುಳ್ಳ ಸ್ಟೀಲಿನದ್ದು 40/-
15 ಜುವೆಲುಗಳುಳ್ಳ ,, 35/-

ಸೈಜು 8¾ ನಂಬ್ರ 18



15 ಜುವೆಲುಗಳುಳ್ಳ ರೋಲ್ಡ್‌ಗೋಲ್ಡ್ 28/
5 ,, (ಲೇಡೀಸ್ ಮತ್ತು ಜಂಟ್ಸ್)30/
13 ಸ್ಟೋನ್ ಇಶ್ಟಲ್ – 16/

ಪತ್ರವ್ಯವಹಾರ ಇಂಗ್ಲೀಷಿನಲ್ಲಿ. ಟಪ್ಪಾಲ ವೆಚ್ಚ 1-8-0.

CALCUTTA WATCH CO. (Sec. 268)
Post Box No. 12203, CALCUTTA—5

ಮೈಸೂರಿನ ವೈಶಿಷ್ಟ್ಯ ರಕ್ಷಕರ ಪ್ರಕಟಣೆ

ಸಂಯುಕ್ತ ಕರ್ನಾಟಕ ರಾಜ್ಯದ ಕುರಿತು ತೀವ್ರ ಭಿನ್ನಾಭಿಪ್ರಾಯ

ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸಲು ಸಜಲಿ ಅಲಿ ಆಯೋಗವು ಸಿದ್ಧಾರಸು ಮಾಡಿರುವುದರಿಂದ ಸಾಮಾನ್ಯವಾಗಿ ಮೈಸೂರಿನ ಪ್ರಜೆಗಳಿಗೂ ಮೈಸೂರೇತರ ಪ್ರದೇಶಗಳ ನಾಗರಿಕರಿಂತೆ ಸಂತೋಷವಾಗಿದೆ, ಆದರೆ "ಮೈಸೂರಿನ ವೈಶಿಷ್ಟ್ಯ"ವನ್ನು ರಕ್ಷಿಸಿಕೊಳ್ಳುವುದರಲ್ಲಿ ವಿಶೇಷವಾದ ಆಸ್ತಿಯುಳ್ಳ ಕೆಲವು ವರ್ಗಗಳು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವುವೆಂದು ವರದಿಗಳಿಂದ ತಿಳಿದು ಬರುತ್ತದೆ

ವಿರಸದ ಕಾರಣ

ಆಯೋಗ ಶೇಮುಕ ಗೊಂಡ ಕೆಲಸ ಮುಗಿದ ಬಳಿಕ ನಿಧಾನವಾಗಿ ವ್ಯಕ್ತವಾಗ ತೊಡಗಿದ ಮೈಸೂರಿನ ಕೆಲವು ಪ್ರಮುಖರ ನಿಲುಮೆಯು ಈಗ ವಿಲಕ್ಷಣವಾದ ವಿರೋಧದ ಸ್ವರೂಪವನ್ನು ತಾಳಿದೆ. ರಾಜಕೀಯ ಕೈವಾಡವಿರುವ ಈ ವಿರೋಧಕ್ಕೆ ವಿದ್ಯಾರ್ಥಿಗಳೂ ಧುಮುಕಿ, ಪ್ರಶ್ನೆಯನ್ನು ಅನಾವಶ್ಯಕವಾಗಿ ಜಟಿಲವಾಗಿ ಮಾಡುತ್ತಿದ್ದಾರೆ ಎರಡು ಕರ್ನಾಟಕ ರಾಜ್ಯಗಳನ್ನು ರಚಿಸುವುದಕ್ಕೆ ಆಯೋಗವು ಸಮ್ಮತಿಸದಿರುವುದು ಮತ್ತು ರಾಜ ಪ್ರಮುಖರ ಹುದ್ದೆಗಳನ್ನು ರದ್ದುಗೊಳಿಸಲು ಅದು ಸಿಫಾರಸು ಮಾಡಿರುವುದು ಮೈಸೂರಿನ ವೈಶಿಷ್ಟ್ಯದ ರಕ್ಷಕರಿಗೆ ಬಲವಾದ ಆಘಾತವನ್ನು ಉಂಟ ಮಾಡಿದೆ ಅವರು ಬಹಿರಂಗವಾಗಿ ಚಳವಳ ನಡೆಸಿ ವಿರಸದ ವಾತಾವರಣವನ್ನು ಸೃಷ್ಟಿಸಿರುವುದಕ್ಕೆ ಇದೇ ಮೂಲಕಾರಣ

ಪ್ರಬಲ ಭಿನ್ನಾಭಿಪ್ರಾಯ

ಮೈಸೂರಿನ ಮಂತ್ರಿ ಮಂಡಳದಲ್ಲಿ ವಿಕೀಕರಣದ ವಿರೋಧ ಧ್ವನಿಯು ಆಗಾಗ್ಗೆ ಏಳುತ್ತಿತ್ತೆಂದು ಮುಂಬೆಯೇ ಘಟನೆಗಳು ಸ್ಪಷ್ಟ ಪಡಿಸಿದ್ದವು, ಮುಖ್ಯವಾಗಿ ಶಿಕ್ಷಣ ಮಂತ್ರಿ ಶ್ರೀ ಎ ಜಿ ರಾಮಚಂದ್ರ ರಾವ್, ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪ ಮತ್ತು ಆರೋಗ್ಯ ಮಂತ್ರಿ ಶ್ರೀ ಟಿ ಚಿನ್ನಯ್ಯ ಇವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸಂಯುಕ್ತ ಕರ್ನಾಟಕ ರಾಜ್ಯದ ರಚನೆಗೆ ತೋರಿಸುತ್ತಿದ್ದ ಸಹಾನುಭೂತಿಯನ್ನು ವಿರೋಧಿಸುತ್ತಿದ್ದರು ಇತ್ತೀಚೆಯವರೆಗೆ ಶಾಸನಾಂಗದ ಕಾಂಗ್ರೆಸು ಪಕ್ಷದ ಪ್ರತೋದ ಸ್ಥಾನದಲ್ಲಿದ್ದ ಶ್ರೀ ಎನ್ ಹುಚ್ಚಮಾಸ್ತಿ ಗೌಡರಲ್ಲದೆ ಬೇರೆ ಕೆಲವು ಜನ ಪ್ರತಿನಿಧಿಗಳೂ ಮುಖ್ಯ ಮಂತ್ರಿಗಳ ನಿಲುಮೆಯನ್ನು ವಿರೋಧಿಸಿ, ಭಿನ್ನಾಭಿಪ್ರಾಯ ವ್ಯಕ್ತ ಪಡಿಸಿದ ಮಂತ್ರಿಗಳನ್ನು ಬೆಂಬಲಿಸುತ್ತಿದ್ದರು. ಮಂತ್ರಿ ಮಂಡಳದಲ್ಲಿ ಪ್ರಬಲ ಭಿನ್ನಾಭಿಪ್ರಾಯ ವಿದ್ದ ದಸೆಯಿಂದಲೇ ಶೇಷಾದ್ರಿ ಸಮಿತಿಯನ್ನು ರಚಿಸಲಾಯಿತೆಂದೂ ಈವರದಿಗೆ ಬಹು ಸಂಖ್ಯಾಕ ಜನ ಪ್ರತಿನಿಧಿಗಳ ಬೆಂಬಲ ದೊರೆತಿರುವುದರಿಂದ ಸಂಪುಟದಲ್ಲಿ ವಿರೋಧ ಮತ್ತು ಉಳಿದುದರಿಂದ ಆಯೋಗಕ್ಕೆ ಮೈಸೂರು ಸರ್ಕಾರ ತನ್ನ ಅಭಿಪ್ರಾಯವನ್ನು ತಿಳಿಸುವುದಂಗಲಿಲ್ಲವೆಂದೂ ಈಗ ಸ್ಪಷ್ಟವಾಗಿದೆ

ಸಚಿವತ್ರಯರ ಪ್ರಕಟಣೆ

ಇದೇ ೧೦ನೇ ದಿನಾಂಕ ಮೈಸೂರಿನಲ್ಲಿ ಪ್ರಾರಂಭವಾಗಿರುವ ಶಾಸನಾಂಗದದ ದಸರೆಯ ಅಧಿವೇಶನಕಾಲದಲ್ಲಿ ಮಂತ್ರಿಮಂಡಳದಲ್ಲಿರುವ ಭಿನ್ನಾಭಿಪ್ರಾಯವು ಸಂಯುಕ್ತ ಪ್ರಕಟಣೆಯೊಂದರ ಮೂಲಕ ಅತ್ಯಂತ ಸ್ಪಷ್ಟರೂಪದಲ್ಲಿ ವ್ಯಕ್ತವಾಯಿತು ಮೇಲೆ ಉಲ್ಲೇಖಿಸಿದ ಮಂತ್ರಿತ್ರಯರ ಮತ್ತು ಶಾಸನಾಂಗದ ಕೆಲವು ಸದಸ್ಯರ ಸಹಿಯೊಡನೆ ಹೊರಬಿದ್ದಿರುವ ಈ ಹೇಳಿಕೆಯು ಶಾಸನಾಂಗದಲ್ಲಿ ತೀಕ್ಷ್ಣ ಚರ್ಚೆಯ ವಿಷಯವಾಯಿತು ಪ್ರಕಟಣೆ ಹೀಗ ಕೇಳುತ್ತದೆ— "ರಾಜ್ಯಗಳ ಪುನರ್ಸಂಘಟನೆಯ ಪ್ರಶ್ನೆಯನ್ನು ವಿಚಾರಿಸಿದ ಆಯೋಗದ ಸಂಜಸಿಗಳು ಹೈದರಾಬಾದು ಮತ್ತು ವಿದರ್ಭಗಳಿಗೆ ಏನು ನಿಂಡಲಾಗಿದೆಂಬ ತೀರ್ಮಾನವನ್ನು ಮಂಡಿಸಿದಾಗ ಮೈಸೂರನ್ನು ಮಂಡಿಸಿದ ಆಯೋಗದವರು ರಚಿಸಿರುವ ಭಾರತದ ಮುಂದಿನ ಭೂಪಟದಲ್ಲಿ ಮೈಸೂರಿಗಿಂತ ಕಡಿಮೆ ಜನಸಂಖ್ಯೆಯಿರುವ ಮೇಲಿನೆರಡು ರಾಜ್ಯಗಳು ಸ್ಥಾನ ಪಡೆದಿವೆ. ಅವರು ತನ್ನ ಮಹಾರಾಜರುಗಳಿಂದ ಭವ್ಯವಾಗಿ ಕಟ್ಟಲ್ಪಟ್ಟು ಮಾದರಿ ರಾಜ್ಯವೆಂಬ ಹೆಸರುಗೊಂಡಿದ ಮೈಸೂರನ್ನು ಅಪಾರ ಭಾರತದ ಚಿತ್ರದಿಂದ ಒಳಸಿಬಿಡಲಾಗಿದೆ. ಮೈಸೂರೆಂಬ ಹೆಸರನ್ನಾದರೂ ಮುಂದರಿಸಲು ಕೂಡ ಆಯೋಗ ಬಿಟ್ಟಿರುವುದಿಲ್ಲ ತನಗಿಂತ ವಿಸ್ತಾರವಾದ ಹಿಂದುಳಿದ ಪ್ರದೇಶದಲ್ಲಿ ಅದನ್ನು ಸಮಾವೇಶಗೂಳಿಸಲಾಗಿದೆ ಇಂದ ಪರಿಸ್ಥಿತಿಯಲ್ಲಿ ಮೈಸೂರಿನ ಪ್ರಗತಿ ಸಂಪ್ರದಾಯವು ಕುರಿತವಾಗುವುದು ಸಿದ್ಧಿಸಿ, ಬಹ್ಯಾರಿ ಮೈಸೂರಿನ ಮಂಡಳ ಸಚಿವರಿಗಲು ನಿಜವಾಗಿಯ ಪ್ರತಿಕ್ರಿಯೆ ಗಿದೆ

(ಕೃಷ್ಣ ಪ್ರಭ ದೇಸಾಯಿ)

ಆದಕಾರಣವೇ ಇತರ ಯಾವದೇ ಚಹಾಗಿಂತಲೂ

ಬ್ರೂಕ್ ಬಾಂಡ್ ಚಹಾವನ್ನೇ

ಹೆಚ್ಚು ಜನರು ಕುಡಿಯುತ್ತಾರೆ!

(೩ನೇ ಪುಟದಿಂದ)

"ಎರಡು ಕರ್ನಾಟಕ"

ಮಂತ್ರಿಗಳ ಹೇಳಿಕೆ ಮುಂದೆ ಹೀಗೆ ತಿಳಿಸುತ್ತದೆ—"ಮೈಸೂರಿನ ಜನರು ಕನ್ನಡ ಪ್ರದೇಶಗಳನ್ನು ಎರಡು ರಾಜ್ಯಗಳಲ್ಲಿ ವಿಭಾಗಿಸಬೇಕೆಂದು ಕೇಳುತ್ತಿದ್ದಾರೆ. ಕೊಳ್ಳೆಗಾಲ, ಕೊಡಗು ಮತ್ತು ದಕ್ಷಿಣ ಕನ್ನಡವನ್ನೊಳಗೊಂಡ ಮೈಸೂರು ಒಂದು ರಾಜ್ಯವಾಗಲಿ; ಮೈಸೂರಿನಉತ್ತರಕ್ಕಿರುವ ಕನ್ನಡ ಪ್ರದೇಶಗಳನ್ನೆಲ್ಲಒಟ್ಟುಗೂಡಿಸಿ ಕರ್ನಾಟಕವೆಂಬಹೆಸರಿನ ಇನ್ನೊಂದುರಾಜ್ಯವಾಗಲಿ! ಇವೆರಡು ರಾಜ್ಯಗಳು ಜನಸಂಖ್ಯೆಯಲ್ಲಾಗಲೀ ವಿಸ್ತಾರದಲ್ಲಾಗಲೀ ಪ್ರದೇಶಗಳ ಆರ್ಥಿಕ ಹೊಂದಿಕೆಯಲ್ಲಾಗಲೀ ಸಮಾನ ಸ್ವರೂಪವನ್ನು ತಾಳುತ್ತವೆ. ಇವುಗಳು ತಮ್ಮೆರಡೂ ರಾಜ್ಯಗಳಿಗೆ ಶಾಂತಿಯನ್ನೂ ಉತ್ಕರ್ಷವನ್ನೂ ಸಂತೋಷವನ್ನೂ ತರುತ್ತವೆ; ಮತ್ತು ಭಾರತದ ಶಕ್ತಿಯನ್ನು ಹೆಚ್ಚಿಸುವ ಸಾಧನಗಳಾಗುತ್ತವೆ."

ಚಳವಳದ ಬಲಾಬಲ

ಮೊದಲೇ ವಿಭಾಜಿತವಾಗಿರುವ ಬಳ್ಳಾರಿ ಜಿಲ್ಲೆಯನ್ನು ಪುನಃ ತುಂಡರಿಸುವುದಕ್ಕೆ ಈ ಮಂತ್ರಿಗಳ ವಿರೋಧವನ್ನು ಸೂಚಿಸಿದ್ದಾರೆ; ಆದರೆ, ಈ ಕಡೆಗೆ ಇತರರ ಮಾತಿರಲಿ, ಸ್ವತಃ ಬಳ್ಳಾರಿ ಜನತೆಯ ಗಮನವೂ ಸಾಕಷ್ಟು ಹೋಗಿಲ್ಲ. ಎಲ್ಲರೂ "ಎರಡು ಕರ್ನಾಟಕ"ಗಳ ಪ್ರತಿಪಾದನೆಯ ಕುರಿತಾಗಿಯೇ ಲಕ್ಷ್ಯವನ್ನು ಪೂರೈಸುತ್ತಿದ್ದಾರೆ; ಈ ಆಂದೋಲನದ ಪರಿಣಾಮವೇನಾಗುವುದೋ ಎಂದು ಶಂಕಿಸುತ್ತಿದ್ದಾರೆ. ಎರಡು ಕರ್ನಾಟಕಗಳರಚನೆಯನ್ನು ವಿರೋಧಿಸಿ, ಸಂಯುಕ್ತ ಕರ್ನಾಟಕ ರಾಜ್ಯದ ತತ್ವವನ್ನು ಎತ್ತಿ ಹಿಡಿಯುವ ವಿಷಯದಲ್ಲಿ ಮೈಸೂರಿನೊಳಗೆ ಜನಾಭಿಪ್ರಾಯವನ್ನು ಸಂಘಟಿಸುವ ಕೆಲಸ ಸಾಕಷ್ಟು ತತ್ಪರತೆಯಿಂದ ನಡೆದಿರುವಂತೆ ಕಂಡು ಬರುತ್ತಿಲ್ಲ. ಆದರೆ, ಶೇಷಾದ್ರಿ ಸಮಿತಿಯ ವರದಿಯನ್ನು ಚರ್ಚಿಸಿದ ಕಾಲದಲ್ಲಿ ಏಕೀಕರಣಕ್ಕೆ ಜೆಂಬಲ ಕೊಟ್ಟ ಬಹು ಸಂಖ್ಯಾಕ ಸದಸ್ಯರು ಆಯೋಗದ ಸೂಚನೆಗಳಿಗೆ ಸಹ ಜೆಂಬಲ ನೀಡಬಹುದೆಂದು ಏಕೀಕರಣವಾದಿಗಳ ವಿಶ್ವಾಸ. ಇದಲ್ಲದೆ, ಮೈಸೂರಿನ ಅಭಿಪ್ರಾಯಕ್ಕಿಂತಲೂ ಕೇಂದ್ರದ ಸಂಸತ್ತು ತಳೆಯುವ ನಿಲುಮೆಯೇ ಆಯೋಗದ ಶಿಫಾರಸುಗಳಿಗೆ ಕೊನೆಯ ರೂಪ ಕೊಡುವುದರಿಂದ ಈ ಭಿನ್ನಾಭಿಪ್ರಾಯಕ್ಕೆ ಮಹತ್ವ ಕೊಡದಿದ್ದರೂ ನಡೆದೀತೆಂದು ಏಕೀಕರಣವಾದಿಗಳು ನಂಬಿರುವ ಹಾಗೆ ಕಾಣುತ್ತದೆ.

ಉಮೇದುವಾರರ ಅರ್ಹತೆ

ಕಾಂಗ್ರೆಸಿನ ಅಷ್ಟ ಸೂತ್ರಗಳ ಒರೆಗಲ್ಲು

ಭಾರತ ಸರಕಾರವು ೧೯೫೭ನೇ ಫೆಬ್ರವರಿ—ಎಪ್ರೀಲುಗಳ ನಡುವೆ ಚುನಾವಣೆಗಳನ್ನು ನಡೆಸುವ ವಿಚಾರವನ್ನು ಇಟ್ಟುಕೊಂಡಿರುವುದರಿಂದ, ಸದ್ಯ ಅಧಿಕಾರಾರೂಢವಾಗಿರುವ ಹಾಗು ರಾಷ್ಟ್ರದಲ್ಲಿ ಅತ್ಯಂತ ಪ್ರಬಲ ಹಾಗು ಸುಸಂಘಟಿತ ಪಕ್ಷವಾಗಿರುವ ಕಾಂಗ್ರೆಸ್ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ತೀವ್ರ ಸಮಾಲೋಚನೆಗಳನ್ನು ಈಗಾಗಲೇ ತೊಡಗಿರುತ್ತದೆ. ಕೇಂದ್ರ ಚುನಾವಣಾ ಸಮಿತಿಯೊಂದನ್ನು ಅದು ಕೆಲವು ವಾರಗಳ ಹಿಂದೆಯೇ ರಚಿಸಿಕೊಂಡಿತ್ತು; ಇದೀಗ ಮೊನ್ನೆ ೧೨-೧೪ ರಂದು ಜರಗಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಕಾಂಗ್ರೆಸು ಪಕ್ಷದ ತಿಕೇಟನ್ನು ಪಡೆದು ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರಲ್ಲಿ ಯಾವ್ಯಾವ ಯೋಗ್ಯತೆಗಳಿರಬೇಕೆಂಬುದನ್ನು ಅಷ್ಟ ಸೂತ್ರಗಳ ಮೂಲಕ ನಿರ್ದೇಶಿಸಿರುತ್ತದೆ.

ಮನೋಭಾವದ ಪರಿಗಣನೆ

ಸಮಾಜವಾದಿ ಮಾದರಿಯ ಸಮಾಜವನ್ನು ರಚಿಸುವುದೇ ಕಾಂಗ್ರೆಸಿನ ಉದ್ದೇಶವಾಗಿರುವುದರಿಂದ, ಈ ಪಕ್ಷದ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವವರ ಮನೋಭಾವವು ಈ ಧ್ಯೇಯ ಸಾಧನೆಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಪರಿಗಣಿಸಬೇಕೆಂದು ಚುನಾವಣಾ ಸಮಿತಿ ತಿಳಿಸಿದೆ. ಅಸ್ಪೃಶ್ಯತೆಯ ಉಚ್ಚಾಟನೆ, ಭೂಸುಧಾರಣೆ, ಆರ್ಥಿಕ ಸಮತೆ, ಶ್ರಮಜೀವಿಗಳ ಕಲ್ಯಾಣ ಇತ್ಯಾದಿಗಳ ಕುರಿತು ಉಮೇದುವಾರನ ನಿಲುಮೆಗಳು ಎಷ್ಟರ ಮಟ್ಟಿಗೆ ಅನುಕೂಲವಾಗಿವೆ ಎಂಬುದಕ್ಕೆ ಮಹತ್ವ ಕೊಡಲ್ಪಟ್ಟಿವೆ. ಇದರೊಡನೆ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಥವಾ ಯಾವುದೇ ವಿಧಾಯಕ ಕಾರ್ಯ ನಡೆಸುವ ಸಂಘದ ಚಟುವಟಿಕೆಗಳಲ್ಲಿ ಉಮೇದುವಾರನು ಶ್ರದ್ಧೆಯಿಂದ ಭಾಗ ವಹಿಸಿರುವನೇ ಎಂಬುದು ಸಹ ವಿಚಾರಿಸಲ್ಪಡಬೇಕೆಂದು ಸಮಿತಿ ಹೇಳಿದೆ.

ಮತದಾರರೊಡನೆ ಸಂಪರ್ಕ

ಈಗಾಗಲೇ ಜನರ ಪ್ರತಿನಿಧಿಯಾಗಿದ್ದರೆ, ಅಂಥ ಉಮೇದುವಾರನು ತನ್ನ ಮತದಾರ ಕ್ಷೇತ್ರದೊಡನೆ ಗಾಢವಾದ ಸಂಬಂಧವನ್ನು ಇಟ್ಟುಕೊಂಡಿರುವನೆ, ಅಲ್ಲಿಯ ಕ್ಷೇಮಾಭ್ಯುದಯಕ್ಕಾಗಿ ಕೆಲಸ ಮಾಡಿ, ಜನರ ಪ್ರೀತಿ ಸಂಪಾದಿಸಿರುವನೆ ಎಂಬುದನ್ನು ವಿಚಾರಿಸಬೇಕೆಂದು ಸಮಿತಿ ತೀರ್ಮಾನಿಸಿದೆ. ಕುರಿಯಾಳ್ತನಕ್ಕಾಗಿ ಅರ್ಜಿ ಹಾಕಿದವರಿಗೆ ಸಂಸತ್ತಿನ ಸದಸ್ಯತ್ವ, ಶಾಸನಾಂಗದ ಸದಸ್ಯತ್ವ, ಸ್ಥಳೀಯ ಸಂಸ್ಥೆಗಳ ಸದಸ್ಯತ್ವ ಇತ್ಯಾದಿ ಪ್ರಾತಿನಿಧಿಕ ಸ್ವರೂಪದ ಕೆಲಸ ನಿರ್ವಹಿಸಿ ಅನುಭವ ವಿದೆಯೆ, ಇದ್ದರೆ ಈ ಅನುಭವ ಎಷ್ಟರ ಮಟ್ಟಿಗೆ ಮಧುರವಾಗಿದೆ ಎಂಬುದನ್ನು ಗಮನಿಸಬೇಕಾಗಿ ಸಮಿತಿ ನಿರ್ಣಯಿಸಿದೆ. ಕುರಿಯಾಳು ಹಿಂದೆ ನಡೆಸಿದ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದೂ ಅದರ ಅಭಿಪ್ರಾಯವಾಗಿದೆ

ಪಕ್ಷನಿಷ್ಠೆಯ ಒರೆಗಲ್ಲು

ಉಮೇದುವಾರನು ಪಕ್ಷಕ್ಕೆ ನಿಷ್ಠೆಯನ್ನು ತೋರಿಸುತ್ತಿರುವನೇ ಎಂಬುದು ಸಹ ಮುಖ್ಯವಾದ ವಿಷಯ. ಕಟ್ಟುನಿಟ್ಟಾಗಿ ಶಿಸ್ತಿನ ಪಾಲನೆ ಮಾಡುವವನನ್ನೆ ಕುರಿಯಾಳಾಗಿ ಆರಿಸಬೇಕೆಂದು ಸಮಿತಿ ನಿಶ್ಚಯಿಸಿದೆ. ಆತನು ಕ್ರಿಯಾಶೀಲ ಸದಸ್ಯನಾಗಿರಬೇಕೆಂದೂ ಪಕ್ಷಕ್ಕೆ ಸಲ್ಲಿಸಬೇಕಾದ ವಂತಿಗೆ ಹಣವನ್ನು ಕ್ರಮ ಪ್ರಕಾರ ಕೊಡುತ್ತಿರುವವನಾಗಿರಬೇಕೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿದೆ. ಕುರಿಯಾಳಾಗಿ ನಿಲ್ಲುವವರು ಮಾತ್ರ ಮೇಲಿನ ವಿಷಯಗಳನ್ನು ಗಮನಿಸಬೇಕೆಂದು ಭಾವಿಸುವುದು ತಪ್ಪು; ಜನರು ಸಹ ಈ ಅಷ್ಟ ಸೂತ್ರಗಳಕಡೆಗೆ ಗಮನ ಕೊಡುವುದು ಅವಶ್ಯವಾಗಿದೆ. ಏಕೆಂದರೆ, ಯೋಗ್ಯತೆಯುಳ್ಳ ಕುರಿಯಾಳುಗಳನ್ನು ಹುಡುಕುವುದರಲ್ಲಿ ಈ ಸೂತ್ರಗಳ ಒರೆಗಲ್ಲು ಜನರಿಗೆ ನೆರವಾಗುತ್ತದೆ.

ಆಯ್ಕೆಯ ಕ್ರಮ

ಕಾಂಗ್ರೆಸಿನ ಆಯ್ಕೆಯ ಕ್ರಮವು ಜನತೆಯ ಅಭಿಪ್ರಾಯವು ಸ್ಪಷ್ಟ ರೀತಿಯಲ್ಲಿ ವ್ಯಕ್ತಗೊಳ್ಳುವುದಕ್ಕೆ ಪೋಷಕವಾಗಿದೆ; ನಾಮಪತ್ರ ಸಲ್ಲಿಸುವ ದಿನದ ಆರು ತಿಂಗಳ ಮೊದಲೇ ಪ್ರದೇಶ ಕಾಂಗ್ರೆಸು ಸಮಿತಿಯು ಜಿಲ್ಲೆಯ ಕಾಂಗ್ರೆಸು ಸಮಿತಿಗಳಿಂದ ಆಯಾ ಜಿಲ್ಲೆಯ ಮತದಾರ ಕ್ಷೇತ್ರಗಳಲ್ಲಿ ನಿಲ್ಲಿಸಬೇಕಾದ ಉಮೇದುವಾರರ ಬಗ್ಗೆ ಸಲಹೆಗಳನ್ನು ಕೇಳಲಿದೆ. ಮುಂದೆ ಕೇಂದ್ರ ಚುನಾವಣಾ ಸಮಿತಿಯ ಒಬ್ಬ ಪ್ರತಿನಿಧಿಯೊಡನೆ ತನ್ನ ಕೆಲವು ಪ್ರತಿನಿಧಿಗಳನ್ನು ಸೇರಿಸಿ, ಈ ಸಂಯುಕ್ತ ಮಂಡಳವನ್ನು ಪ್ರತಿಯೊಂದು ಜಿಲ್ಲಾ ಕೇಂದ್ರಕ್ಕೆ ಕಳಿಸಿ, ಅಲ್ಲಿಯ ಸ್ಥಳೀಯ ಅಭಿಪ್ರಾಯವನ್ನು ಕೇಳಿಕೊಳ್ಳಲಿದೆ. ಕಾಂಗ್ರೆಸಿನ ಅಭ್ಯುದಯದಲ್ಲಿ ಆಸ್ಥೆಯುಳ್ಳವರು ಆಗ ಪ್ರತಿನಿಧಿ ಮಂಡಳಕ್ಕೆ ಯೋಗ್ಯ ಸೂಚನೆಗಳನ್ನು ಕೊಡಬಲ್ಲರು; ಸಾರ್ವಜನಿಕರು ಸಹ ಉತ್ತಮ ಮಾರ್ಗದರ್ಶನವನ್ನು ಈ ಸಂದರ್ಭದಲ್ಲಿ ಮಾಡಬಲ್ಲರು.

ಕುರಿಯಾಳುಗಳ ಯಾದಿ

ಸ್ಥಳೀಯ ಅಭಿಪ್ರಾಯವನ್ನು ಗಮನಿಸಿದ ಬಳಿಕ, ಈ ಮಂಡಳವು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಸಂಬಂಧಿಸಿ, ಐದಕ್ಕಿಂತ ಹೆಚ್ಚಲ್ಲದ ಕುರಿಯಾಳುಗಳ ಯಾದಿಯೊಂದನ್ನು ಪ್ರದೇಶ ಕಾಂಗ್ರೆಸು ಸಮಿತಿಗೆ ಒಪ್ಪಿಸುತ್ತದೆ. ಈ ಯಾದಿಯೊಳಗಿಂದ ಪ್ರದೇಶ ಕಾಂಗ್ರೆಸು ಸಮಿತಿಯು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಯಾರು ಉಮೇದುವಾರನಾಗಬೇಕೆಂದು ಆಯ್ಕೆಮಾಡುತ್ತದೆ; ಮತ್ತು ತನ್ನ ಆಯ್ಕೆಯ ಕಾರಣಗಳನ್ನು ವಿವರವಾಗಿ ನಮೂದಿಸಿ ಕೇಂದ್ರ ಚುನಾವಣಾ ಸಮಿತಿಗೆ ಈ ಹೆಸರನ್ನು ಕಳಿಸುತ್ತದೆ. ಒಂದು ನೇಳಿ ಪ್ರದೇಶ ಕಾಂಗ್ರೆಸಿನ ಆಯ್ಕೆಯು ಒಮ್ಮತದ್ದಲ್ಲವಾದರೆ, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದವರ ಭಿನ್ನಾಭಿಪ್ರಾ

(೮ನೇ ಪುಟ ನೋಡಿರಿ)

ನಮ್ಮ ಹೊಸ ಯೋಜನೆ:

ಥ್ರಿಫ್ಟ್ ಡಿಪೋಜಿಟ್ ಖಾತೆ:

ಎಲ್ಲರಿಗೂ ಅನುಕೂಲವಾಗುವ ಉಳಿತಾಯ ಯೋಜನೆ.
ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿ.
ಧಾರಾಳವಾದ ಸೌಲತ್ತು.

ಇಂದೇ ಥ್ರಿಫ್ಟ್ ಡಿಪೋಸಿಟ್ ಖಾತೆಯನ್ನು ಪ್ರಾರಂಭಿಸಿ ನಿಮ್ಮ ಉಳಿತಾಯದಲ್ಲಿ ಅಧಿಕ ಮುನಾಫೆಯನ್ನು ಪಡೆಯಿರಿ.

ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ:

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

1956: ನಮ್ಮ ಸುವರ್ಣ ಮಹೋತ್ಸವದ ವರ್ಷ.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಆಂದೋಲನದ ಮನೋಭಾವ ಬೇಡ

ಕಾಂಗ್ರೆಸಿಗರ ಕರ್ತವ್ಯದ ಕುರಿತು ಎಚ್ಚರಿಕೆ

ಹೊಸದೆಹಲಿಯಲ್ಲಿ ೧೮ರಿಂದ ೧೪ನೇ ತಾರೀಕಿನ ವರೆಗೆ ಮೊನ್ನೆ ಸೇರಿದ ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಬರುವ ನವಂಬರದ ೮ ಮತ್ತು ೯ನೇ ದಿನಾಂಕಗಳಲ್ಲಿ ಅಖಿಲ ಭಾರತ ಕಾಂಗ್ರೆಸಿನ ಪೂರ್ಣಾಧಿವೇಶನವನ್ನು ನೆರೆಯಿಸಲು ತೀರ್ಮಾನಿಸಿದೆ. ಇಲ್ಲಿ ಫಜಲ ಅಲಿ ಆಯೋಗದ ವರದಿಯನ್ನು ಕೂಲಂಕಷವಾಗಿ ಚರ್ಚಿಸಿ, ಕಾಂಗ್ರೆಸು ಪಕ್ಷವು ತನ್ನ ನಿಲುಮೆಯನ್ನು ನಿರ್ಧರಿಸುತ್ತದೆ.

ಧುರೀಣರೊಡನೆ ಸಮಾಲೋಚನೆ

ಎಲ್ಲರಿಗೂ ಒಪ್ಪಿಗೆಯಾದ ನಿಶ್ಚಿತ ತೀರ್ಮಾನಗಳಿಗೆ ಬರಲಾಗುವಂತೆ ವಿವಿಧ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರನ್ನು ನವಂಬರದ ೭ನೇ ತಾರೀಕು ಕಾಂಗ್ರೆಸಾಧ್ಯಕ್ಷ ಶ್ರೀ ಧೇಬರರು ಕರೆಸಿಕೊಳ್ಳುವರೆಂದು ತಿಳಿದಿದೆ. ಇಲ್ಲಿ ನಡೆಯುವ ಸಮಾಲೋಚನೆಯೂ ಇದೇ ತಿಂಗಳ ೨೧ನೇ ತಾರೀಕು ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳು ಹೊಸದೆಹಲಿಯಲ್ಲಿ ಸೇರಿ ನಡೆಸುವ ವಿಚಾರ ವಿನಿಮಯಗಳೂ ಕಾಂಗ್ರೆಸಿನ ಧೋರಣೆಗೆ ನಿಶ್ಚಿತ ರೂಪವನ್ನು ಕೊಡಲು ಸಹಾಯಕವಾಗ ಬಹುದೆಂದು ವಿಶ್ವಾಸ ಪಡಲಾಗಿದೆ.

ಸಾಮಾನ್ಯ ಸ್ವಾಗತ

ಕಾರ್ಯಕಾರಿ ಸಮಿತಿಯು ಸಾಮಾನ್ಯವಾಗಿ ಆಯೋಗದ ಸೂಚನೆಗಳನ್ನು ಸ್ವಾಗತಿಸಿದೆ; ಸಾಧ್ಯವಾದಷ್ಟು ಮಟ್ಟಿಗೆ ಆಯೋಗದ ಶಿಫಾರಸುಗಳನ್ನು ಇದ್ದುದಿದ್ದಂತೆ ಅಂಗೀಕರಿಸಬೇಕೆಂದು ಅಲ್ಲಿ ಧುರೀಣರು ಅಭಿಪ್ರಾಯ ವ್ಯಕ್ತಪಡಿಸಿದರೆಂದು ವರದಿಯಾಗಿದೆ. ಇದಕ್ಕೆ ಎಲ್ಲರ ಅನುಮೋದನೆ ದೊರೆತಿಲ್ಲವೆಂದೂ ಕೆಲವು ವಿಶಿಷ್ಟ ವಿಷಯಗಳಲ್ಲಿ ಆಯೋಗದ ಸಲಹೆಗಳನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲವೆಂಬ ವಾದ ಮುಂದೆ ಬಂದಿರುವುದಾಗಿಯೂ ತಿಳಿದು ಬರುತ್ತದೆ.

ಕಾಂಗ್ರೆಸಿಗರ ಭಿನ್ನಾಭಿಪ್ರಾಯ

ಪುನರ್ಘಟಿತ ರಾಜ್ಯಗಳ ಮೇರೆಯನ್ನು ನಿರ್ಧರಿಸುವುದು ಕಾಂಗ್ರೆಸಿಗೆ ನುಂಗಲಾರದ ತುತ್ತಾಗಿದೆ-ಏಕೆಂದರೆ ಭಾಷೆಯ ತಳಹದಿಯ ಮೇಲೆ ರಚಿಸಲ್ಪಟ್ಟಿರುವ ವಿವಿಧ ಪ್ರದೇಶ ಕಾಂಗ್ರೆಸುಗಳು ಗಡಿವಲಯದ ಮೇಲೆ ತಮ್ಮ ಅಧಿಕಾರವೇ ನ್ಯಾಯಬದ್ಧವಾದುದೆಂದು ವಾದಿಸುತ್ತಿವೆ. ಪ್ರದೇಶ ಕಾಂಗ್ರೆಸುಗಳ ನಿಲುಮೆಗೆ ಕೆಲಮಟ್ಟಿಗೆ ಸಂಬಂಧಿಸಿದ ರಾಜ್ಯಗಳ ಮುಖ್ಯ ಮಂತ್ರಿ ಮತ್ತು ಸರಕಾರಿ ವಲಯದ ಬೆಂಬಲವೂ ಸಿಗುತ್ತಿದೆ. ಹೀಗೆ ಕಾಂಗ್ರೆಸಿಗರೇ ಜಗಳಾಡುವ ಪರಿಸ್ಥಿತಿ ಏರ್ಪಟ್ಟಿದೆ ಎಂದು ಸಾಮಾನ್ಯವಾಗಿ ಹೇಳಬಹುದು.

ಮೈಸೂರಿನ ಸಹಕಾರವಿಲ್ಲ.

ಕರ್ನಾಟಕದ ಮಟ್ಟಿಗೆ ಬಹಳ ಕಠಿಣವಾದ ಪರಿಸ್ಥಿತಿಯೇ ಎದುರಿಗಿದೆ—ಮೈಸೂರು ಪ್ರದೇಶ ಕಾಂಗ್ರೆಸಿನ ಪ್ರತಿಕ್ರಿಯೆಯು ಇನ್ನೂ ತಿಳಿದು ಬಂದಿಲ್ಲ; ಅಲ್ಲಿಯ ಅಧ್ಯಕ್ಷ ಶ್ರೀ ಚೆನ್ನಯ್ಯನವರು ಎಲ್ಲ ಅಭಿಪ್ರಾಯಗಳವರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಆತುರವನ್ನು ವ್ಯಕ್ತಪಡಿಸಿರುವುದೇನೊ ನಿಜ. ಆದರೆ ಮೈಸೂರಿನ ಹೆಸರನ್ನು ಉಳಿಸಗೊಡದಷ್ಟು ಮುಂದಕ್ಕೆ ಆಯೋಗ ಹೋಗಿರುವುದಕ್ಕೆ ತಮ್ಮ ಅಸಮಾಧಾನವನ್ನು ಸೂಚಿಸಲು ಅವರು ಸಂಕೋಚಪಟ್ಟಿಲ್ಲ. ಇದು ಭಿನ್ನಾಭಿಪ್ರಾಯ ಹೊಂದಿರುವ ಗುಂಪಿನ ಬಲ ಹೆಚ್ಚಲು ನೆರವಾಗಬಹುದು. ಈ ಭಿನ್ನಾಭಿಪ್ರಾಯವಿರುವ ದೆಸೆಯಿಂದಲೇ ಮೈಸೂರು ಸರಕಾರ ಯಾವ ಸಮರ್ಥವಾದವನ್ನೂ ಮುಂದೆ ಇಡುವ ಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟ.

ಸಮ್ಯಸಾಹಿತ್ಯದ ಅಗತ್ಯ

ಶ್ರೀ ಅಂಬಲಿಯವರು ಅಧ್ಯಕ್ಷರಾಗಿರುವ ಕರ್ನಾಟಕ ಪ್ರದೇಶ ಕಾಂಗ್ರೆಸು ಈಗ ಸಮ್ಯಸಾಹಿತ್ಯವನ್ನೆ ತೋರಿಸಬೇಕಾಗಿದೆ—ಎಂದರೆ ಯಾವುದೇ ಸರಕಾರದ ಬೆಂಬಲವಿಲ್ಲದೆ ಅವರು ಮಂತಾರನ್ನು, ತೆಲುಗರನ್ನು, ತಮಿಳರನ್ನು ಮತ್ತು ಕೇರಳೀಯರನ್ನು ಎದುರಿಸಬೇಕಾಗಿದೆ. ಮಂತಾರರು ಬೆಳಗಾಂವಿ, ನಿಪ್ಪಾಣಿಗಳ ಮೇಲಷ್ಟೇಯಲ್ಲ, ಕಾರವಾರದ ಮೇಲೆ ಸಹ ತಮ್ಮ ಅಧಿಕಾರವಿದೆ ಎಂದಿದ್ದಾರೆ; ಆಂಧ್ರದ ಬಾಯಿಗೆ ಬಳ್ಳಾರಿ ಆಹುತಿಯಾಗಿ ಬಿದ್ದಿದೆ; ತಮಿಳರ ಪಾಲಿಗೆ ನೀಲಗಿರಿ ಜಿಲ್ಲೆಯಂಧ್ರಪ್ರದೇಶ ಹೋಗಿದೆ; ಕೇರಳೀಯರು ಕಾಸರಗೋಡನ್ನು ನುಂಗುತ್ತಿದ್ದಾರೆ; ಈ ಪರಿಸ್ಥಿತಿಯನ್ನು ಸುಧಾರಿಸಲೆಂದು ಕರ್ನಾಟಕ ಪ್ರದೇಶ ಕಾಂಗ್ರೆಸು, ಉಳಿದ ಪ್ರದೇಶಗಳ ಕಾಂಗ್ರೆಸಿನೊಡನೆ ವೈರ ಕಟ್ಟಿಕೊಳ್ಳಬಲ್ಲುದೆ? ಹಾಗೆ ಮಾಡಲು ಮಂತ್ರಿಯ ಸಮ್ಮತಿಸಿಯಾರೆ?

ಎಚ್ಚರಿಸುವ ಗೊತ್ತುವಳಿ

ಇಲ್ಲವೆಂದು ಈಗ ತೀರ ಚೆನ್ನಾಗಿ ತಿಳಿದು ಬಂದಿದೆ; ಕಾಂಗ್ರೆಸು ಕಾರ್ಯಕಾರಿ ಸಮಿತಿಯು "ಪರಸ್ಪರ ತಳುವಳಿಕೆಯಿಂದ ಒಮ್ಮತಕ್ಕೆ ಬರಬಹುದಾದರೆ ಅಡ್ಡಿಯಿಲ್ಲ; ಆದರೆ "ಚಳವಳಿ ನಡೆಸಲು ತಾನು ಬಿಡುವಂತಿಲ್ಲ" ಎಂದು ಗೊತ್ತುವಳಿಯೊಂದರ ಮೂಲಕ ಸಾರಿರುತ್ತದೆ ಶಿಫಾರಸುಗಳನ್ನು ಸಮಗ್ರ ದೃಷ್ಟಿಕೋಣದಿಂದ ವಿಚಾರಿಸಿಯೇ ತೀರ್ಮಾನಕ್ಕೆ ಬರಬೇಕು ಎಂದು ತಿಳಿಸಿರುತ್ತದೆ. ಒತ್ತಾಯವನ್ನಾಗಲೀ ಆಂದೋಲನವನ್ನಾಗಲೀ ಸ್ವೇಯ ಸಾಧನೆಗೆ ಉಪಯೋಗಿಸುವ ಇತರ ಗುಂಪುಗಳೊಡನೆ ಕಾಂಗ್ರೆಸಿಗರು ಸೇರಿಕೊಳ್ಳಬಾರದೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿದೆ. ಬಚ್ಚು ಮನಸ್ಸಿನ ಅಭಿಪ್ರಾಯಗಳನ್ನು ಕಾಂಗ್ರೆಸಿಗರು ವರಿಷ್ಠರ ಮುಂದೆ ಮಂಡಿಸಬಹುದೆಂದೂ ಆದರೆ ಅಶಾಂತಿಯನ್ನು ಹುಟ್ಟಿಸಬಹುದಾದ ಚಟುವಟಿಕೆಗಳಲ್ಲಿ ತೊಡಗಬಾರದೆಂದೂ ಈ ಗೊತ್ತುವಳಿಯ ನಿಜವಾದ ಅರ್ಥ.

ಫಜಲ ಅಲಿ ಆಯೋಗದ ವರದಿ

ಕೃಪಲಾನಿಯವರ ಪ್ರತಿಕ್ರಿಯೆ

ಪ್ರಜಾಸಮಾಜವಾದಿ ಪಕ್ಷದ ಧುರೀಣ ಆಚಾರ್ಯ ಕೃಪಲಾನಿಯವರು ಮದ್ರಾಸಿನಲ್ಲಿ ಪತ್ರಿಕೋದ್ಯೋಗಿಗಳ ಪ್ರಶ್ನೆಗೆ ಉತ್ತರಿಸುತ್ತಾ ಫಜಲ ಅಲಿ ಆಯೋಗದ ವರದಿಯ ಕುರಿತು ತಮ್ಮ ಸಮಾಧಾನಕರವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ವಿನೋದಕ್ಕಾಗಿ ಅವರು ಈ ಸೂಚನೆಗಳಿಂದಾಗಿ "ಭಾರತದ ಯಾವುದೇ ಭಾಗವು ಭಾರತದ ಹೊರಗಡೆ ಸೇರಿ ಸಲ್ಪಟ್ಟಿಲ್ಲ"! ಎಂದು ಹೇಳಿದರೂ ಆಯೋಗವು ಅತ್ಯುತ್ತಮವಾದ ಕೆಲಸವನ್ನು ಮಾಡಿದೆ ಎಂದು ತೃಪ್ತಿಯನ್ನು ಸೂಚಿಸಿದರು.

ಬೇರೆ ಬೇರೆ ಭಾಷಾನುಗುಣ ಪ್ರದೇಶಗಳವರ್ಗ ಪರಸ್ಪರ ಸಂಗತವಲ್ಲದ ಭಿನ್ನ ಭಿನ್ನ ಬೇಡಿಕೆಗಳನ್ನು ಕೃತ್ರಿಪಡಿಸುವುದು ಸಾಧ್ಯವೇ ಇಲ್ಲ ಎನ್ನುತ್ತಾ ಆಚಾರ್ಯ ಕೃಪಲಾನಿಯವರು ಯಾವುದೇ ಆಯೋಗವು ಇದಕ್ಕಿಂತ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಡೆಸುವಂತಿರಲಿಲ್ಲ ಎಂದರು.

ತಮ್ಮದೇ ಆದ ವಿಶಿಷ್ಟ ಭಾಷೆಯುಳ್ಳ ಬೇರೆ ಬೇರೆ ಪ್ರದೇಶಗಳು ಆಡಳಿತ ಕ್ಷೇತ್ರದಲ್ಲಿ ಒಟ್ಟಿಗೆ ಕೆಲಸ ಮಾಡಬಲ್ಲವೆ ಎಂಬ ಪ್ರಶ್ನೆಗೆ ಆಚಾರ್ಯ ಕೃಪಲಾನಿಯವರು ದ್ವಿಭಾಷಾ ರಾಜ್ಯಗಳ ರಚನೆಯನ್ನು ವಿರೋಧಿಸಲು ತಕ್ಕೇನೂ ಕಾರಣ ಕಾಣುವುದಿಲ್ಲ ಎಂದರು. ಭಾರತದ ಭೂಪಟದ ಮನಾರಂಜನೆಯ ಯಾವದೇ ಬಗೆಯದಾಗಲಿ ಇಲ್ಲಿ ದ್ವಿಭಾಷಾ ಸಮಸ್ಯೆಯಿಲ್ಲದಂತೆ ಪ್ರದೇಶಗಳನ್ನು ಪುನರ್ಘಟಿಸುವುದು ಸಾಧ್ಯವಿಲ್ಲದ ವಿಷಯ ಎಂದು ಸಾರಿದರು.

ಭಾಷಾನುಗುಣವಾಗಿ ರಾಜ್ಯಗಳನ್ನು ನಿಂಗಡಿಸುವುದು ರಾಷ್ಟ್ರದ ಐಕ್ಯದ ಮೇಲೆ ದುಷ್ಪರಿಣಾಮ ಬೀರುವುದೇ ಎಂಬ ಪ್ರಶ್ನೆಗೆ "ನನಗೆ ಭಾರತದ ಮೂಲ ಭೂತ ಐಕ್ಯದ ವಿಷಯದಲ್ಲಿ ಸಂಪೂರ್ಣ ವಿಶ್ವಾಸವಿದೆ; ಭಿನ್ನಾಭಿಪ್ರಾಯಗಳು ಗೌಣವಾಗಿವೆ, ಮತ್ತು ಅವುಗಳು ಸ್ಥಳೀಯ ಸ್ವರೂಪದ್ದಿವೆ" ಎಂದು ಉತ್ತರ ಕೊಟ್ಟರು. ಭಾರತದ ಒಗ್ಗಟ್ಟನ್ನು ರಕ್ಷಿಸುವ ಸಂಗತಿ ಇಲ್ಲಿಯ ಸಂಸ್ಕೃತಿಯಾಗಿದೆ; ಈ ಸಂಸ್ಕೃತಿಯು ಒಂದೇ ಮೂಲದಿಂದ ಬಂದಿರುವುದರಿಂದ ಅದು ಭಾರತದ ಎಲ್ಲೆಡೆಯಲ್ಲೂ ಒಂದೇ ತೆರನಾಗಿದೆ—ಎಂದೂ ಅವರು ಹೇಳಿದರು.

ವಿದೇಶಗಳ ಉದಾಹರಣೆಯನ್ನು ಕೊಡುತ್ತಾ ಅವರ "ಯುಗೊಸ್ಲಾವಿಯದಲ್ಲಿ ಐದು ಮತ್ತು ಸ್ವಿಟ್ಜರ್‌ಲೇಂಡಿನಲ್ಲಿ ಮೂರು ಭಾಷೆಗಳನ್ನಾಡುತ್ತಾರೆ. ಹೀಗೆ ಅವು ಬಹು ಭಾಷಾ ದೇಶಗಳಾಗಿದ್ದರೂ ಆ ರಾಷ್ಟ್ರಗಳ ಸಾಮಾನ್ಯ ಒಗ್ಗಟ್ಟಿಗೆ ಭಾಷೆಗಳಿಂದ ಅಡಂಕವಾಗಿಲ್ಲ.' ಎಂಬುದಾಗಿ ಸ್ಪಷ್ಟ ಪಡಿಸಿದರು.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿನ್ಹೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಚಂದಾದಾರರಲ್ಲಿ ವಿನಂತಿ.

ನವಯುಗದ ಚಂದಾ ಹಣವನ್ನು ಮನಿಯಾರ್ಡರು ಮಾಡಿರಿ, ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಿರಿ, ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಸಾವತಿ ಮಾಡಿರಿ.

ಇಲ್ಲವಾದರೆ

ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸಿರಿ.

—ಮೇನೇಜರ್.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೨೦-೧೦-೫೫	ಸಂಚಿಕೆ ೮

"ಎರಡು ಕರ್ನಾಟಕ"

ರೋಮಾಂಚಕವಾದ ಕರ್ನಾಟಕ ಏಕೀಕರಣದ ಕತೆಯು ಕೊನೆಯ ಘಟ್ಟವನ್ನು ಸಮೀಪಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಎಂದೂ ಇಲ್ಲದಷ್ಟು ಮತಭೇದವನ್ನು ಕನ್ನಡಿಗರು ವ್ಯಕ್ತಪಡಿಸುತ್ತಿರುವುದು ಶೋಚನೀಯವಾಗಿದೆ. ಮುಖ್ಯವಾಗಿ ಮೈಸೂರಿನಲ್ಲಿ ಸಂಯುಕ್ತ ಕರ್ನಾಟಕ ರಾಜ್ಯದ ಕುರಿತು ಪ್ರಕಟವಾಗುತ್ತಿರುವ ವಿರೋಧವು ಖೇದದಾಯಕವಾಗಿದೆ. ತಮ್ಮ ಮಂತ್ರಿ ಮಂಡಳದಲ್ಲಿಯೇ ಭಿನ್ನಾಭಿಪ್ರಾಯವಿರುವ ದೆಸೆಯಿಂದ ಶ್ರೀ. ಹನುಮಂತಯ್ಯನವರು ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಮೈಸೂರಿನ ಸರಕಾರದ ಪರವಾಗಿ ಏನು ಹೇಳಬಲ್ಲರೋ? ಏಕೀಕರಣದ ಸಮರ್ಥನೆಯನ್ನು ಅವರು ಮಾಡದಿದ್ದರೆ, ಅದರ ಪರಿಣಾಮ ಘಾತಕವಾದೀತೆಂಬುದರಲ್ಲೇನೂ ಅನುಮಾನವಿಲ್ಲ; ಮೈಸೂರಿನವರೀಗ ಗಟ್ಟಿ ಸಂಸ್ಥೆ ಮಾಡಬೇಕೆಂದು ಕನ್ನಡಿಗರಲ್ಲಿ ಬಹು ಸಂಖ್ಯಾಕರು ಹಾರೈಸುತ್ತಿದ್ದಾರೆ; ಆದರೆ ಈ ರೀತಿಯ ಸಂಸ್ಥೋಭಾವ ಮೂಡಿಬಂದಿರುವಂತೇನು ಕಾಣಿಸುತ್ತಿಲ್ಲ. ಕನ್ನಡ ಪ್ರದೇಶಗಳನ್ನೆಲ್ಲ ಒಂದೇ ರಾಜ್ಯದ ಅಧಿಪತ್ಯದಲ್ಲಿ ತರಲೆಂದು ಸಲ್ವತ್ತಕ್ಕಿಂತಲೂ ಹೆಚ್ಚು ವರ್ಷಗಳ ವರೆಗೆ ನಡೆಸಿದ ಹೋರಾಟವು ಫಲವನ್ನು ಕೊಡುವ ಸಲ್ಲಕ್ಷಣಗಳು ಸ್ಪಷ್ಟವಾಗಿರುವಾಗ ಮೈಸೂರಿನಲ್ಲಿ ಎರಡು ಕರ್ನಾಟಕವಾಗಲಿ ಎಂಬ ಪಲ್ಲವಿಯನ್ನು ಹಾಡಲಾಗುತ್ತಿದೆ; ರಾಜಸತ್ತೆಯು ನಶಿಸಿ ಪ್ರಜಾಸತ್ತೆಯು ಕಳೆ ಎತ್ತಿರುವ ಈ ಯುಗದಲ್ಲಿ ಸಹ ನಮ್ಮ ರಾಜಪ್ರಮುಖರನ್ನೇನು ಉಚ್ಚಾಟನೆಗೊಳಿಸುವುದು ಬೇಡ ಎಂದು ಮೈಸೂರಿನಲ್ಲಿ ಹೇಳಲಾಗುತ್ತಿದೆ. ಇದರಷ್ಟು ಅಭಿಮಾನ ಹೀನವಾದ ವಿಷಯ ಬೇರೇನು ಇದ್ದೀತು? ಮೈಸೂರು ಶಬ್ದದ ಮೇಲೆ ಅವರು ತೋರಪಡಿಸುವ ಮೋಹವೂ ಕುಲ್ಲಕವಾದುದಾಗಿದೆ. ಮೈಸೂರನ್ನೊಳಗೊಂಡ ಎಲ್ಲ ಕನ್ನಡ ಪ್ರದೇಶಗಳಿಗೆ "ಕರ್ನಾಟಕ" ಎಂಬ ಹೆಸರನ್ನು ಕೊಡುವುದು ಈ ವರ್ಗಗಳಿಗೆ ಸಮ್ಮತ ವಿಲ್ಲದಿರುವಾಗ, ಕೊಡಗು, ಕೊಳ್ಳೆಗಾಲ ಮತ್ತು ದಕ್ಷಿಣ ಕನ್ನಡಗಳಿಂದಲೂ ಈಗಿನ ಮೈಸೂರಿನಿಂದಲೂ ಕೂಡಿರಬೇಕೆನ್ನುವ ಒಂದು ಕರ್ನಾಟಕ ರಾಜ್ಯಕ್ಕೆ ಮೈಸೂರು ಎಂಬ ಹೆಸರನ್ನಿಡಲು ಮೈಸೂರೇತರ ಪ್ರದೇಶಗಳವರು ಒಪ್ಪುವರೆನು ಈ ಮಹಾನುಭಾವರಿಗೆ ಹೇಳಿದವರಾರು? ಕೊಡಗು ಹಿರಿಯಣ್ಣ ಮೈಸೂರಿನ ಆದರ್ಶವನ್ನನುಸರಿಸಿ ಪ್ರತ್ಯೇಕ ರಾಜ್ಯವಾಗಿಯೇ ಉಳಿಯಲು ಮೊದಲಿಂದಲೂ ಆತುರವನ್ನು ತೋರಿಸುತ್ತಾ ಬಂದಿದೆ; ಅಲ್ಲಿಯ ಸರಕಾರದ ಅಭಿಪ್ರಾಯ ಕರ್ನಾಟಕ ಏಕೀಕರಣಕ್ಕೆ ಅನುಕೂಲವಾಗಿಲ್ಲವೆಂದು ಜನಜನಿತವಾಗಿದೆ. ದಕ್ಷಿಣ ಕನ್ನಡಿಗರಲ್ಲಿ ಸಹ ಮೈಸೂರಿನೊಡನೆ ಸೇರಿಕೊಳ್ಳಬೇಕೆಂಬ ಲವಲವಿಕೆ ಸಾರ್ವತ್ರಿಕವಾಗಿದೆ ಎಂದು ಹೇಳುವಂತಿಲ್ಲ. ಎಲ್ಲ ಕನ್ನಡ ಪ್ರದೇಶಗಳೂ ಮೈಸೂರು, ಮತ್ತು ಕೊಡಗುಗಳೂ ಸೇರಿ ಕರ್ನಾಟಕದ ಏಕೀಕರಣದ ಧ್ಯೇಯ ಸಾಧಿಸಲ್ಪಡುವುದಾದರೆ, ಆಗ ಸಾಂಸ್ಕೃತಿಕ ಬಾಂಧವ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ರಾಜ್ಯದಲ್ಲಿ ಅಂತರ್ಗತವಾಗಲು ದಕ್ಷಿಣ ಕನ್ನಡದ ಜನತೆ, ಅಕ್ಷೇಪಿಸುವುದಿಲ್ಲ. ಹಾಗೇನೂ ಇರದೆ, ಮೈಸೂರಿಗೆ ನೂರು ಮೈಲುಗಳಷ್ಟು ಉದ್ದದ ಕರಾವಳಿಯನ್ನು ದೊರಕಿಸಿ ಕೊಡುವುದಕ್ಕಾಗಿ ಮಾತ್ರ ಎಂಬಂತೆ ಆ ರಾಜ್ಯದೊಡನೆ ಸೇರಿಕೊಂಡು, ಉಳಿದ ಕನ್ನಡ ಬಾಂಧವರನ್ನು ಬೇರೆಯೇ ರಾಜ್ಯವೊಂದರಲ್ಲಿ ನೂಕಲು ದಕ್ಷಿಣ ಕನ್ನಡಿಗರು ಸಿದ್ಧರಿಲ್ಲ. ಏಕೀಕರಣದ ಕನಸನ್ನು ದಕ್ಷಿಣ ಕನ್ನಡಿಗರು ಕಂಡ ಮೊದಲಿನ ದಿನಗಳಲ್ಲಿ ಬ್ರಿಟಿಷರ ವಶದಲ್ಲಿದ್ದ ಕನ್ನಡ ಪ್ರದೇಶಗಳ ಏಕೀಕರಣ ಎಂಬ ಗುರಿ ಇತ್ತೆಂಬುದನ್ನು ಇಲ್ಲಿ ಸ್ಮರಣೆಗೆ ತಂದುಕೊಳ್ಳಬೇಕಾಗಿದೆ. ಆದರೆ ಮೈಸೂರಿನ ಕೇಂದ್ರದಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್ತೇ ಮುಂತಾದವುಗಳು ಮೈಸೂರಿಗೆ ಸಹ ಏಕೀಕರಣದ ಆಶೆ ಇದೆ ಎಂದು ಪ್ರತಿಪಾದಿಸಿಸುತ್ತಾ ಬಂದಿದೆಂಬುದನ್ನೂ ಇಲ್ಲಿ ನೆನೆಯಬೇಕಾಗಿದೆ. ದಕ್ಷಿಣ ಕನ್ನಡಕ್ಕೆ ಮೈಸೂರಿನೊಂದಿಗೆ ಸೇರಿ ಸಿಗುವ ಸುಖವಾದರೂ ಏನು? ಹೆಚ್ಚೆಂದರೆ ಜಿಲ್ಲೆಯಲ್ಲೊಂದು ಪ್ರಬುದ್ಧ ಬಂದರದ ರಚನೆಯಾದೀತು ಈ ಕೆಲಸ ಕೇಂದ್ರ ಸರಕಾರದ ಪರಿಶೀಲನೆಯಲ್ಲಿ ಈಗಾಗಲೇ ಇರುವುದರಿಂದ ಮೈಸೂರಿನ ಅನುಗ್ರಹವಿಲ್ಲದಿದ್ದರೂ ದಕ್ಷಿಣ ಕನ್ನಡಿಗರು ಶಂಕಿತರಾಗಬೇಕಾದ ಪ್ರಸಂಗವಿಲ್ಲ. ಆಡಳಿತದ ಯಾವುದೇ ಕ್ಷೇತ್ರದಲ್ಲಿಯಾಗಲೀ ಮೈಸೂರಿಗಿಂತ ದಕ್ಷಿಣ ಕನ್ನಡವು ಒಂದು ಹೆಜ್ಜೆ ಮುಂದೆಯೇ ಇದೆ; ಕನಿಷ್ಟಪಕ್ಷಕ್ಕೆ ಸಮಾನತೆಯನ್ನಾದರೂ ಕಾಯ್ದುಕೊಂಡಿದೆ—ಮೈಸೂರಿನ ಅಪೂರ್ವ ಮಾದರಿಯನ್ನು ನೋಡಿ ಕಲಿಯುವುದಾಗಲೀ ಪ್ರಯೋಜನ ಹೊಂದುವುದಾಗಲೀ ಏನೂ ಉಳಿದಂತಿಲ್ಲ. ಆದುದರಿಂದ ದಕ್ಷಿಣ ಕನ್ನಡಿಗರಿಗೆ ಎರಡು ಕರ್ನಾಟಕ ರಾಜ್ಯದ ಪಲ್ಲವಿಯು ಎಷ್ಟೂ ಆಕರ್ಷಕವಾಗಿಲ್ಲ. ಮೈಸೂರಿನ ಪ್ರಭೃತಿಗಳು ಕೆಲವರು ಎರಡು ಕರ್ನಾಟಕ ರಾಜ್ಯಗಳ ರಚನೆಯ ಮಾತನ್ನಾಡುವಾಗ ಇದನ್ನು ಮರೆಯಬಾರದು—ನಕ್ಷೆಯಲ್ಲಿ ಒಮ್ಮಟ್ಟಿನ ಪ್ರದೇಶವೆಂದು ಮೈಸೂರು ಮತ್ತು ದಕ್ಷಿಣ ಕನ್ನಡಗಳು ಕಂಡರೂ ಭೌಗೋಲಿಕವಾಗಿ ಮೈಸೂರು ಪೀಠ ಭೂಮಿ ಮತ್ತು ದಕ್ಷಿಣ ಕನ್ನಡವು ಕರಾವಳಿಯಾಗಿದೆ ಎಂಬುದನ್ನೂ ಈ ಪ್ರದೇಶಗಳಲ್ಲಿ ಸಂಪರ್ಕವು ಸುಲಭ ಸಾಧ್ಯವಾಗಿಲ್ಲವೆಂಬುದನ್ನೂ ಗಮನಿಸದಿರಬಾರದು. ಆದುದರಿಂದ ದಕ್ಷಿಣ ಕನ್ನಡದವರು ಮೈಸೂರಿನೊಡನೆ ತಾವು ಮಾತ್ರ ಸೇರಿಕೊಂಡು, ಮುಂಬಯಿ ಮತ್ತು ಹೈದರಾಬಾದುಗಳ ಕನ್ನಡ ಪ್ರದೇಶಗಳವರನ್ನು ಅನಾಥರನ್ನಾಗಿ ಬಿಟ್ಟು ಬಿಡಲು ಒಪ್ಪುವುದು ದೂರದ ಮಾತು. ಈಗಿನಂತೆ ಎರಡು ಕರ್ನಾಟಕಗಳ ಪಲ್ಲವಿಯನ್ನು ಮೈಸೂರಿನವರು ಹಾಡುತ್ತಾ ಕುಳಿತರೆ, ದಕ್ಷಿಣ ಕನ್ನಡವು ಅವರಿಗೆ ಸಿಗದೆ ಹೋದೀತು; ಕೊಡಗು ಸಹ ಪ್ರತ್ಯೇಕತೆಗೆ ಪಟ್ಟು ಹಿಡಿದು ಕುಳಿತೀತು—ಹೀಗೆಲ್ಲ ಆಗದೆ, ಏಕೀಕರಣ ಮರಳಿ ಕನಸಾಗುತ್ತದೆ! ಮೈಸೂರು ಮೈಸೂರಾಗಿಯೇ ಉಳಿದು, ಬೇರೆ ಕನ್ನಡ ಪ್ರದೇಶಗಳೇ ಒಂದು ರಾಜ್ಯವಾಗಿ ಉಳಿಯುವ ಪ್ರಸಂಗವೇ ಬಂದೀತು! ಇದನ್ನೆಲ್ಲ ಮೈಸೂರಿಗರು ಜಾಣ್ಮೆಗಿ ಆಲೋಚಿಸಬೇಕು. ಆ ದೇಶದ ವೈಶಿಷ್ಟ್ಯ ರಕ್ಷಕರು ಬಳ್ಳಾರಿಯನ್ನು ಪುನಃ ವಿಭಜಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ನೆನೆದರೆ, ಬಳ್ಳಾರಿಯನ್ನು ಉಳಿಸಿಕೊಳ್ಳುವುದಕ್ಕಾಗಿಯೂ ಎರಡು ಕರ್ನಾಟಕಗಳ ಪಲ್ಲವಿಯನ್ನು ಕೈಬಿಡಬೇಕೆಂದು ಹೇಳಬೇಕಾಗುತ್ತದೆ. ಏಕೆಂದರೆ, ಸಂಯುಕ್ತ ಕರ್ನಾಟಕ ರಾಜ್ಯ ರಚನೆಯಾದರೆ, ಆಗ ಕನ್ನಡಿಗರ ಪಾಲಿಗೆ ತುಂಗಭದ್ರೆಯ ಆಣೆಕಟ್ಟಿನಿಂದ ಮೂರರಲ್ಲಿ ಎರಡಂಶ ಪ್ರಯೋಜನವೂ ಆಂಧ್ರರಿಗೆ ಒಂದಂಶ ಲಾಭವೂ ಹೋಗುತ್ತದೆ ಇದನ್ನು ಕೇಂದ್ರ ಸರಕಾರಕ್ಕೆ ಮಂದಿಟ್ಟುಪಡಿಸಿ, ಆಂಧ್ರರ ಬಾಯಿಗೆ ಬಿದ್ದಿರುವ ಬಳ್ಳಾರಿಯನ್ನು ಪುನಃ ಪಡೆಯ ಬಹುದು, ಮೈಸೂರು ಸ್ವಲ್ಪ ಗಟ್ಟಿ ಮನಸ್ಸು ಮಾಡಿದರೆ ಆಂಧ್ರರಿಗೆ ಈಗಾಗಲೇ ದಾನವಾಗಿರುವ ಬಳ್ಳಾರಿ ಜಿಲ್ಲೆಯ ಉಳಿದ ಮೂರು ತಾಲೂಕುಗಳನ್ನೂ ಆಣೆಕಟ್ಟಿನಿಂದ ಪ್ರಯೋಜನ ಹೊಂದುತ್ತಿರುವ ಪ್ರದೇಶಗಳೆಂಬ ಸಮರ್ಥ ಕಾರಣದಿಂದ ಮರಳಿ ಪಡೆಯಬಹುದು. ಎಲ್ಲ ಕರ್ನಾಟಕಗಳ ಮಾತನ್ನಾಡುತ್ತಿದ್ದರೆ, ಕನ್ನಡ ಪ್ರದೇಶಗಳು ಮೈಸೂರಿನಲ್ಲಿರುವ ಬಳ್ಳಾರಿ, ಕರ್ನಾಟಕದ ರಾಯಚೂರು ಮತ್ತು ಆಂಧ್ರದಲ್ಲಿ ಹಂಚಿ ಹೋಗಿ, ಆಂಧ್ರದ ವಾದವೇ ಎತ್ತಿ ಹಿಡಿಯಲ್ಪಡುವುದು ನಿಶ್ಚಯ. ಇದನ್ನೆಲ್ಲ ಗಣನೆಗೆ ತಂದುಕೊಳ್ಳದೆ ಎರಡು ಕರ್ನಾಟಕವೆಂದು ಒದರುವುದು ಭೂಷಣಪ್ರಾಯವಾದ ವಿಷಯಲ್ಲ; ದೇವರು ಕೊಟ್ಟರೂ ಪೂಜಾರಿ ಬಿಡನೆಂಬ ಗಾದೆಯ ಮಾತನ್ನು ಕನ್ನಡಿಗರು ನಿತ್ಯವೂ ನೆನೆಯುತ್ತಿರಬೇಕಾಗಿ ಬರುವ ದಿನಗಳನ್ನು ಮೈಸೂರಿನ ಧುರೀಣರು ಕನ್ನಡಿಗರ ಪಾಲಿಗೆ ದಯಮಾಡಿ ತಂದು ಕೊಡಬಾರದು; ಜನತೆಯ ಶಾಪಕ್ಕೆ ಗುರಿಯಾಗಕೂಡದು ಒಪ್ಪು ವಿವೇಕ ಧುರೀಣರಲ್ಲಿದೆ – ಎಂದು ನಾವು ನಂಬುತ್ತೇವೆ.

ಅಭಿವೃದ್ಧಿ ಪ್ರಯತ್ನಗಳ ಭವಿಷ್ಯ

ಆಯೋಗದ ವರದಿಯಿಂದ ಆತಂಕವೆ?

ರಾಜ್ಯಗಳ ಪುನರ್ಘಟನೆಯ ಸಮಸ್ಯೆಯು ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಆತಂಕವನ್ನು ಮೂಡದಿರದೆಂದು ಮದ್ರಾಸಿನ ಆರೋಗ್ಯ ಮಂತ್ರಿ ಮಾನ್ಯ ಶ್ರೀ. ಎ. ಬಿ. ಶೆಟ್ಟಿ, ಪ್ರಸಿದ್ಧ ಔದ್ಯಮಿಕ ತಜ್ಞರು ಎಂ. ವಿಶ್ವೇಶ್ವರಯ್ಯ ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ರಾಷ್ಟ್ರಕ್ಕೆ ರಾಜ್ಯಗಳ ಪುನರ್ಘಟನೆಗಿಂತಲೂ ಮಹತ್ವದ ಪ್ರಶ್ನೆಗಳನ್ನು ಬಿಡಿಸುವ ಅವಶ್ಯಕತೆ ಇಂದಿದೆ ಎಂದಿವರ ಸಾಮಾನ್ಯ ನಿಲುಮೆಯಾಗಿದೆ.

ಪರದೇಶಗಳ ಅಭಿಮತ

ವಿದೇಶಗಳಲ್ಲಿ ಸಹ ಆಯೋಗದ ವರದಿಯು ಸಾಕಷ್ಟು ಕುತೂಹಲವನ್ನು ಹುಟ್ಟಿಸಿದೆ. ಭಾರತದ ಸಾರ್ವಜನಿಕ ಆಡಳಿತದ ಇತಿಹಾಸದಲ್ಲಿ ಆಯೋಗದ ವರದಿಯು ಹೊಸ ಅಧ್ಯಾಯವನ್ನು ಶೆರೆಯುವುದೆಂದೂ ಅದು ಸಿದ್ಧತ್ವೂರ್ಣವಾದ ಪ್ರಬಂಧವೆಂದೂ ಬ್ರಿಟನಿನಲ್ಲಿ ಅಭಿಪ್ರಾಯಪಡಲಾಗಿದೆ. ಅಮೇರಿಕದಲ್ಲಿ ಜನತೆಯು ಬಹುದಿನಗಳ ಅಭಿಲಾಷೆಯನ್ನು ನೆರವೇರಿಸಲು ನೆಹರುಗಳೀಗ ನೋಡಬೇಕಾಗಿ ಬಂದಿದೆ ಎನ್ನಲಾಗಿದೆ. ಆಗ್ನಿ ಪರೀಕ್ಷೆ ಎಂದು ನೆಹರುಗಳೇ ಕರೆದಿರುವ ಈ ಸಮಸ್ಯೆ ಶಾಂತವಾಗಿ, ಮತ್ತು ತೃಪ್ತಿಕರವಾಗಿ ಬಗೆಹರಿದರೆ ದೇಶದೊಳಗೆ ಹಾಗೂ ಹೊರಗೆ ಸಮಾಧಾನವುಂಟಾಗುವುದಲ್ಲದೆ, ನೆಹರುಗಳ ದಕ್ಷತೆ ಮತ್ತು ಮುನ್ನೋಟದ ಕುರಿತಾದ ತಿಳಿವಳಿಕೆಯೂ ಹೆಚ್ಚುವುದೆಂದು ಒಪ್ಪಲಾಗುತ್ತದೆ.

ಕನ್ನಡಿಗರ ಸಮಸ್ಯೆ

ತೃಪ್ತಿ ಮತ್ತು ಸಮಾಧಾನಗಳು ಎಷ್ಟರ ಮಟ್ಟಿಗೆ ನೆಲೆಗೊಳ್ಳಬಹುದು ಎಂಬುದೇ ಮುಖ್ಯವಾದ ವಿಷಯ—ಕನ್ನಡಿಗರಲ್ಲೆಲ್ಲ ತಳಮಳ ಹುಟ್ಟಿದೆ; ಬಳ್ಳಾರಿಯನ್ನು ಉಳಿಸಿಕೊಳ್ಳಬಹುದೆಂದು ಹೇಳಲಾಗುತ್ತಿದ್ದರೂ ಕಾಸರಗೋಡನ್ನು ರಕ್ಷಿಸಬಲ್ಲೆವೆಂದು ಧೈರ್ಯ ಹೇಳುವವರು ಒಬ್ಬರೂ ಇಲ್ಲ! "ಸಮರ್ಥ ವಾದ"ವನ್ನು ಮುಂದಿಡಿರಿ ಎಂದು ಶ್ರೀ. ಬಿ. ಶಿವರಾಯರಂಥವರು ಹೇಳುತ್ತಿದ್ದರೂ ಕಾಂಗ್ರೆಸಿನ ಶಿಸ್ತು ಮತ್ತು ಎಚ್ಚರಿಕೆಯ ಮಾತುಗಳು ಪ್ರಕಟವಾಗಿ ಜನತೆಯ ಪರವಾಗಿ ವಾದಿಸುವುದಕ್ಕೆ ತಡೆಯೊಡ್ಡಿವೆ. ಹೀಗಿರುವಾಗ ನಿಜವಾಗಿಯೂ ಕನ್ನಡ ನಾಡಿನಲ್ಲಿ ಸೇರಬೇಕಾದ ಹೈದರಾಬಾದಿನ ಬೀದರ, ಅನಂತಪುರದ ಮಡಕಶಿರ, ಶೋಲಾಪುರದ ಅಕ್ಕಲ ಕೋಟೆ ಇತ್ಯಾದಿಗಳ ಸುದ್ದಿಯನ್ನು ಎತ್ತುವವರಾದರೂ ಯಾರು?

ಬಲವಾದ ವಿರೋಧ

ಸಮಗ್ರ ದೃಷ್ಟಿಕೋಣವನ್ನಿಟ್ಟು ಕೊಂಡು ಆಯೋಗದ ವರದಿಯನ್ನು ಪರಿಶೀಲಿಸಬೇಕೆಂದುಧುರೀಣರೆಷ್ಟುಹೇಳಿಕೊಂಡರೂ ಜನತೆಗೆ ಇದರಿಂದೇನೂ ಸಮಾಧಾನವಾಗಿಲ್ಲ. ಆಯೋಗದ ಸೂಚನೆಗಳಲ್ಲಿ ತರ್ಕಬದ್ಧವಾದ ಅಂಶವೇನೂ ಇಲ್ಲ ಎಂದೇ ಅಭಿಪ್ರಾಯಪಡಲಾಗಿದೆ ಭಾಷಾನುಗುಣ ಘಟಕಗಳಿಗೆ ಮಹತ್ವ ಕೊಡುವುದು ತಪ್ಪು ಎಂದ ಆಯೋಗವು ೧೬ರಲ್ಲಿ ೧೪ ರಾಜ್ಯಗಳನ್ನು ಭಾಷೆಯ ತಳಹದಿಯ ಮೇಲೆಯೇ ರೂಪಿಸಿದೆ ಎನ್ನಲಾಗುತ್ತದೆ ತಮ್ಮದೆಂಬ ಭಾಷಾ ಘಟಕವಿಲ್ಲದುದಕ್ಕೆ ಗುಜರಾತಿಗಳೂ ಪಂಜಾಬಿನ ಸೀಖರೂ ತುಂಬ ನೊಂದಿದ್ದಾರೆ. ಗುಜರಾತಿನಲ್ಲಿ ಪಕ್ಷಾತೀತ ಸಭೆಗಳನ್ನು ನೆರೆಯಿಸಿ, ಮ

ಹಾ ಗುಜರಾತನ್ನು ರಚಿಸುವ ಬೇಡಿಕೆ ಮುಂದೊತ್ತಲ್ಪಡುತ್ತಿದ್ದರೆ, ಪಂಜಾಬಿನ ಅಕಾಲಿ ದಳದ ನಾಯಕರು ಪಂಜಾಬಿ ಭಾಷೆಯ ರಾಜ್ಯಕ್ಕಾಗಿ ಆಗ್ರಹ ಪಡುತ್ತಿದ್ದಾರೆ.

ಮರಾಠರ ಛಲ

ಮುಂಬಯಿ ಯ ಮಹಾರಾಷ್ಟ್ರೀಯರು ಅಯೋಗದ ವರದಿಯಿಂದ ರೊಚ್ಚಿಗೆದ್ದಿದ್ದಾರೆ— ವಿದರ್ಭವೆಂಬ ಸಣ್ಣ ಮಹಾರಾಷ್ಟ್ರ ರಾಜ್ಯವನ್ನು ಆಯೋಗ ರಚಿಸಿರುವುದಾದರೂ ಸಂಯುಕ್ತ ಮಹಾರಾಷ್ಟ್ರದ ರಚನೆಗೆ ಅದು ಸಮ್ಮತಿಯನ್ನು ವ್ಯಕ್ತಪಡಿಸಿಲ್ಲ. ಮುಂಬಯಿಯ ಮರಾಠಿ ಪ್ರದೇಶಗಳನ್ನೂ ಹೈದರಾಬಾದಿನ ಮರಾಠಿ ವಲಯವನ್ನೂ ಗುಜರಾತಿಗಳೊಡನೆ ಸೆಣಸಾಡಬೇಕಾಗಿ ಬರುವ ದ್ವಿಭಾಷಾ ರಾಜ್ಯವಾದ ನೂತನ ಮುಂಬಯಿಯಲ್ಲಿ ಆಯೋಗ ಸೇರಿಸಿದೆ. ತೆಲಂಗಾಣದ ಜನತೆಗೆ ೧೯೬೧ನೇ ಇಸವಿಯ ಬಳಿಕ ಆಂಧ್ರರೊಡನೆ ಸೇರಿಕೊಳ್ಳುವ ನಿರ್ಣಯಕ್ಕೆಗೊಳ್ಳಲು ಅಧಿಕಾರವನ್ನು ಆಯೋಗ ನೀಡಿದ್ದರೂ ವಿದರ್ಭದೊಡನೆ ಸೇರಿಕೊಳ್ಳಲು ಹೊರಗಿನ ಮಹಾರಾಷ್ಟ್ರ ಪ್ರದೇಶಗಳವರಿಗೆ ಅವಕಾಶವನ್ನು ಅದು ಒದಗಿಸಿಲ್ಲ. ಈ ಪ್ರಕಾರದ ಅನ್ಯಾಯವು ಯಾವ ನಿಷ್ಪಕ್ಷಪಾತ ನಿರೀಕ್ಷಕನ ದೃಷ್ಟಿಗೂ ಬೀಳದಿರುವಂತಿಲ್ಲ. ಸತ್ಯ ಹೀಗಿರುವಾಗ ಭಾಷಾಭಿಮಾನಿಗಳಾದ ಮರಾಠ ಮುಖಂಡರು ದೊಡ್ಡ ಚಳವಳಿ ನಡೆಸಲು ಮುಂದಾಗಿದ್ದಾರೆ. ಮುಂಬಯಿಯು ಕೇಂದ್ರವಾಗುಳ್ಳ ಸಂಯುಕ್ತ ಮಹಾ ರಾಷ್ಟ್ರದ ನಿರ್ಮಾಣವೇ ಇವರ ಧ್ಯೇಯವಾಗಿದೆ.

ಚಿಕ್ಕ ರಾಜ್ಯಗಳಿಗೆ ಒತ್ತಾಯ

ಉತ್ತರ ಪ್ರದೇಶವನ್ನು ವಿಭಜಿಸಬೇಕೆಂಬ ಸರದಾರ ಪಣಿಕ್ಕರರ ಸೂಚನೆಗೆ ಸಾಕಷ್ಟು ಅನುಮೋದನೆ ದೊರೆತಿಲ್ಲ; ಆದರೆ ಈಗಿನ ಮಧ್ಯಪ್ರದೇಶದೊಡನೆ ಭೋಪಾಲ ಸಂಸ್ಥಾನವಲ್ಲದೆ ಮಧ್ಯ ಭಾರತವನ್ನು ಸಹ ಸೇರಿಸಿರುವುದು ಯಾರಿಗೂ ತೃಪ್ತಿಯನ್ನು ತಂದಿಲ್ಲ. ಆ ರಾಜ್ಯದ ವಿಸ್ತಾರ ಇದರಿಂದ ಬಹಳ ಹೆಚ್ಚಿಕೊಳ್ಳುವುದೆಂದು ನೆಹರುಗಳ ಅಭಿಪ್ರಾಯವಿದೆಯಾಗಿಯೂ ಆಡಳಿತದ ತೊಂದರೆಗೆ ಇದು ಕಾರಣವಾದೀತೆಂದು ಅವರು ಹೇಳಿರುವುದಾಗಿಯೂ ತಿಳಿದುಬರುತ್ತದೆ. ತಮಗೆ ಮಹಾ ಕೋಸಲ ವಷ್ಟೆ ಬೇಕಾಗಿದ್ದಾಗ, ಅದಕ್ಕೂ ಹೆಚ್ಚಿನದನ್ನು ಆಯೋಗ ಕೊಡಮಾಡಿರುವುದಕ್ಕೆ ಪಕಾಡತ ರವಿಶಂಕರ ಶುಕ್ಲರಿಗೂ ಆಶ್ಚರ್ಯವಾಗಿದೆ. ಆಯೋಗದ ಅಧ್ಯಕ್ಷರಾದ ಫಜಲ ಅಲಿಯವರು ಹಿಮಾಚಲ ಪ್ರದೇಶವನ್ನು ಪ್ರತ್ಯೇಕವಾಗಿಡಬೇಕೆಂದು ಸೂಚಿಸಿದ್ದುದರಿಂದ ಪಂಜಾಬಿ ಮಾತನಾಡುವ ರಾಜ್ಯದ ಬೇಡಿಕೆಗೆ ಇನ್ನಷ್ಟು ಬಲ ಬಂದಿದೆ. ಇವೆಲ್ಲವುಗಳನ್ನು ಇತ್ಯರ್ಥಮಾಡಬೇಕಾಗಿ ಬರುವಾಗ, "ದೊಡ್ಡ ರಾಜ್ಯಗಳ ರಚನೆಯೇ ಯೋಗ್ಯ" ಎಂದು ಆಯೋಗದವರು ಪಟ್ಟ ಅಭಿಪ್ರಾಯವನ್ನು ಮೂಲೆಗೆ ತಳ್ಳಿ ಚಿಕ್ಕ ರಾಜ್ಯಗಳ ಉದಯಕ್ಕೆಯೇ ಅವಕಾಶ ನೀಡಬೇಕಾದೀತೋ ಎಂಬ ಸಂಶಯ ಮೇಳುತ್ತದೆ.

ಗೋವೆ ಹಾಗು ಅಮೇರಿಕ

ಘೋಷಣೆಯ ವಿವರಣೆ

ಅಮೇರಿಕದ ರಾಯಭಾರಿ ಶ್ರೀ ಕೂಪರರು ಗೋವೆಗೆ ತಮ್ಮ ದೇಶವು ಸೈನ್ಯ ಸಹಾಯವನ್ನು ನೀಡುತ್ತಿಲ್ಲವೆಂದೂ ಶಸ್ತ್ರಾಸ್ತ್ರಗಳನ್ನು ಸಹ ಪೂರೈಸುತ್ತಿಲ್ಲವೆಂದೂ ಆ ಉದ್ದೇಶವೇ ತಮ್ಮ ದೇಶಕ್ಕಿಲ್ಲವೆಂದೂ ಸ್ಪಷ್ಟ ಪಡಿಸಿದ್ದಾರೆ.

ತಮ್ಮಿಂದ ಸಹಾಯ ಪಡೆದ ಪಾಕಿಸ್ತಾನದಂಥ ಯಾವುದೇ ರಾಷ್ಟ್ರವಾದರೂ ಗೋವೆಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ಸಂದರ್ಭದಲ್ಲಿ ಅಂಥ ಸಹಾಯವನ್ನು ಕೂಡಲೇ ನಿಲ್ಲಿಸಿ ಬಿಡುವುದಕ್ಕೆ ತಮ್ಮ ಸರಕಾರ ಘೋಷಿಸುವುದೆಂದೂ ಅವರು ತಿಳಿಸಿದ್ದಾರೆ.

ಗೋವೆಯಲ್ಲಿ ಅಮೇರಿಕದ ಶಸ್ತ್ರಾಸ್ತ್ರಗಳಿವೆ ಎಂಬ ವರದಿಯು ಸಂಪೂರ್ಣ ನಿರಾಧಾರವಾಗಿದೆ ಎಂದವರು ಸಾರಿದರು. ವಸಾಹತು ವಾದವನ್ನು ಗೋವೆಯಲ್ಲಿ ಎತ್ತಿ ಹಿಡಿಯಲು ತಮ್ಮ ಸರಕಾರ ಉದ್ದೇಶಿಸಿಲ್ಲವೆಂದು ಅವರು ಘೋಷಿಸಿದರು. ಯಾವುದೇ ನೈತಿಕ ಅಥವಾ ರಾಜಕೀಯ ಬೆಂಬಲವನ್ನು ಈ ವಿಷಯದಲ್ಲಿ ಪೋರ್ಚುಗಾಲಿಗೆ ಅಮೇರಿಕ ನೀಡಿಲ್ಲ ಎಂದವರು ಹೇಳಿದರು.

ಗೋವೆಯಲ್ಲಿ ಸುಪ್ರವರ್ದಿ

"ಪಾಕಿಸ್ತಾನದ ಕೈವಾಡವಿಲ್ಲ"

ಈಚೆಗೆ ಅವಾಮಿ ಲೀಗಿನ ಧುರೀಣರಾದ ಸುಹ್ರವರ್ದಿಯವರು ಗೋವೆಗೆಹೋಗಿ, ಅಲ್ಲಿ ಸರಕಾರದ ಅತಿಥಿಗಳಾಗಿದ್ದು, ಗೋಮಾಂತಕರಿಗೆ ಪಾಕಿಸ್ತಾನವು ಆಹಾರ ಸರಕುಗಳನ್ನು ಧಾರಾಳವಾಗಿ ಪೂರೈಸುವುದೆಂದೂ ರಾಜಕೀಯ ಆಂದೋಲನದ ದೆಸೆಯಿಂದ ಗೋಮಾಂತಕರು ಬೆದರಬೇಕಾಗಿಲ್ಲವೆಂದೂ ಅವಶ್ಯಬಿದ್ದರೆ ಪಾಕಿಸ್ತಾನದಿಂದ ಸತ್ಯಾಗ್ರಹವನ್ನೆದುರಿಸಲು ಸಹಾಯಮಾಡಿಗುವುದೆಂದೂ ಹೇಳಿದ್ದರು.

ಪಾಕಿಸ್ತಾನದ ವಿದೇಶ ಮಂತ್ರಿಗಳು ಇದಕ್ಕೆ ಸಂಬಂಧಿಸಿ ಹೇಳಿಕೆ ಕೊಡುತ್ತಾ ಪ್ರತಿಪಕ್ಷದ ನಾಯಕನ ಈ ವ್ಯವಹಾರದಲ್ಲಿ ಸರಕಾರದ ಕೈವಾಡವಿಲ್ಲ ಎಂದು ತಿಳಿಸಿದ್ದಾರೆ. ಪೋರ್ಚುಗಾಲಿನೊಡನೆ ಸರಕಾರದೊಡನಿರುವಂತೆಯೇ ಪಾಕಿಸ್ತಾನ ಕೈ ನೇಕವಿದೆ. ಪೋರ್ಚುಗಾಲಿನ ಅಧಿಕಾರದಲ್ಲಿರುವ ಗೋವೆಯ ಕುರಿತು ನಮ್ಮ ಅಭಿಪ್ರಾಯ ಪ್ರಕಟಿಸಬೇಕಾದ ಅಗತ್ಯವೇನೂ ಈಗ ಬಂದಿಲ್ಲ ನಾವು ಸ್ನೇಹಪರವಾಗಿಯೇ ಮುಂದುವರಿಯುತ್ತೇವೆ—ಎಂದು ಪಾಕಿಸ್ತಾನ ಸರಕಾರದ ವಕ್ತಾರರು ಇದಕ್ಕೆ ಟಿಪ್ಪಣಿ ಜೋಡಿಸಿದ್ದಾರೆ.

ವಿಜಯ ಬ್ಯಾಂಕಿನ ಪ್ರಧಾನ ಕಚೇರಿಯ ಹೊಸಕಟ್ಟಡದ ಪ್ರವೇಶ ಸಮಾರಂಭವು ಮದ್ರಾಸಿನ ಆರೋಗ್ಯ ಸಚಿವ ಶ್ರೀ ಎ. ಬಿ. ಶೆಟ್ಟಿರಿಂದಲೂ, ಸೇಫ್ ಡಿಪೋಸಿಟ್ ಫೋಲ್ಡಿನ ಪ್ರಾರಂಭೋತ್ಸವವು ಕೊಡಗಿನ ಕಾನೂನು ಮಂತ್ರಿ ಶ್ರೀ ಕೆ. ಮಲ್ಲಪ್ಪನವರಿಂದಲೂ ಇದೇ ತಾ. ೨೦ನೇ ಸಂಜೆ 5 ಗಂಟೆಗೆ ಮಂಗಳೂರು ಲೈಟ್ ಹೌಸ್ ಹಿಲ್‌ನಲ್ಲಿ ಜರಗಲಿದೆ.

ಕ್ಷಯ ರೋಗದ ಕುರಿತು ನೀವು ತಿಳಿಯತಕ್ಕ ಸತ್ಯಾಂಶಗಳು

ಕ್ಷಯ ರೋಗದಿಂದ ವರ್ಷಂಪ್ರತಿಯೂ 5,00,000ಕ್ಕೂ ಹೆಚ್ಚಿದ ಮರಣಗಳುಂಟಾಗುತ್ತವೆ; ಅಂದರೆ ದಿನಕ್ಕೆ 1,500 ಮರಣಗಳು ಅರ್ಥಾತ್ ನಿಮಿಷಕ್ಕೊಂದು ಮರಣ ಸಂಭವಿಸುತ್ತದೆ!

25,00,000 ಜನರಲ್ಲಿ ಪ್ರಬಲ ಕ್ಷಯ ರೋಗಗಳಿವೆ!

ಕ್ಷಯ ರೋಗದ ಚಿಕಿತ್ಸೆಯು ವಿಶೇಷ ಖರ್ಚಿನದಾದುದರಿಂದ ಹೆಚ್ಚಿನ ರೋಗಿಗಳು ಅದಕ್ಕೆ ಹಣ ಖರ್ಚು ಮಾಡಿ ಚಿಕಿತ್ಸೆ ಒದಗಿಸಿಕೊಳ್ಳಲಾರರು.

ಇತರ ಎಲ್ಲಾ ಸಾಂಕ್ರಾಮಿಕ ರೋಗಗಳಿಗಿಂತಲೂ, ಕ್ಷಯ ರೋಗವು ಹೆಚ್ಚಿನ ಜನರ ಪ್ರಾಣವನ್ನು ತೆಗೆದು ಬಿಡುತ್ತದೆ.

ಎಲ್ಲ ಪ್ರಾಯದ ಜನರನ್ನೂ ಮುಖ್ಯವಾಗಿ 15ರಿಂದ 35 ವರ್ಷದೊಳಗಿನವರನ್ನು ಕ್ಷಯ ರೋಗವು ಹೆಚ್ಚಾಗಿ ಆಹುತಿ ತೆಗೆದುಕೊಳ್ಳುತ್ತದೆ.

ಕ್ಷಯ ರೋಗವನ್ನು ತಡೆಗಟ್ಟಲು ವರ್ಷಂಪ್ರತಿಯೂ ಟಿ. ಬಿ. ಮುದ್ರೆಗಳ ಮಾರಾಟ ಚಳವಳಿಯನ್ನು ನಡೆಸಲಾಗುತ್ತದೆ.

ಹೆಚ್ಚಿನ ಪ್ರಮಾಣದಲ್ಲಿ ಟಿ. ಬಿ. ಮುದ್ರೆಗಳನ್ನು

ಕೊಂಡು ಕೊಂಡು, ಉಪಯೋಗಿಸಿರಿ.

ಒಂದು ಮುದ್ರೆಯ ಬೆಲೆ ಕೇವಲ ಒಂದಾಣೆ.

ಮುದ್ರೆಗಳು ಸಿಗುವ ಸ್ಥಳಗಳು:— ಒನೆರರಿ ಸೆಕ್ರೆಟರಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಮದ್ರಾಸ್, ಛೀಫ್ ಹೆಲ್ತ್ ಆಫೀಸರ್, ರಿಪನ್ ಬಿಲ್ಡಿಂಗ್ಸ್, ಮದ್ರಾಸು-3; ಶ್ರೀ ಡಿ. ಮೋಹನ್ ರಾವ್, ಬಿ. ಎ., ಬಿ. ಎಲ್., ಒನೆರರಿ ಸೆಕ್ರೆಟರಿ, ಟಿ. ಬಿ. ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪಲ್ ರೋಡ್, ಮಂಗಳೂರು-1 ಮತ್ತು ಸ್ಟೇಟಿನ ಇತರ ಏಜನ್ಸಿಗಳು.

ಇಂಡಿಯಾದಲ್ಲಿ ಆರನೆ ಟಿ. ಬಿ. ಮುದ್ರೆ ಮಾರಾಟ ಚಳವಳಿ

(ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಒಫ್ ಇಂಡಿಯಾದವರಿಂದ ನಡೆಸಲ್ಪಡುವಂಥಾದ್ದು.)

ಜಾಹೀರಾತು ಸ್ಥಳವನ್ನು ದಾನವಿತ್ತವರು:

ನೇಶನಲ್ ಕಾರ್ಬನ್ ಕಂಪೆನಿ (ಇಂಡಿಯಾ) ಲಿಮಿಟೆಡ್, ಕಲ್ಕತ್ತ.

ನಮ್ಮ ಜಿಲ್ಲೆಯ ಒಳನಾಡಿನ ನೀರು ದಾರಿಯ ಯೋಜನೆ

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ| ಮಾಧವ ಪೈ ಅವರು ನಮ್ಮ ಜಿಲ್ಲೆಗೊಂದು ಒಳನಾಡಿನ ನೀರು ದಾರಿ (Inland water way) ಯ ಯೋಜನೆಯನ್ನು ಒದಗಿಸುವ ಸಲುವಾಗಿ ದಿನಾಂಕ 13—10—1955 ರಂದು ಮುಳುಂದ ನಿವಾಸದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಕರೆದಿದ್ದರು. ಟಿ. ಎ. ಪೈ ಎಂ. ಎಲ್. ಎ ಅವರು ಅಧ್ಯಕ್ಷತೆ ವಹಿಸಿದ್ದರು. ರೆವಿನ್ಯೂ ಅಧಿಕಾರಿಗಳೂ ಇತರ ಸಾರ್ವಜನಿಕರೂ ಹಾಜರಿದ್ದ ಸಭೆಯಲ್ಲಿ ನೀರು ದಾರಿಯ ಕುರಿತು ವಿಚಾರ ವಿನಿಮಯವು ನಡೆಯಿತು.

ವಿಷಯವನ್ನು ಪ್ರಸ್ತಾಪಿಸುತ್ತಾ ಡಾಕ್ಟರ್ ಮಾಧವ ಪೈ ಅವರು ಗಂಗೊಳ್ಳಿಯಿಂದ ಮಂಗಳೂರಿನ ವರೆಗೆ ಇರುವ ನದಿಗಳನ್ನೆಲ್ಲಾ ಜೋಡಿಸುವಂತೆ ಒಂದು ನೀರು ದಾರಿಯನ್ನು ರಚಿಸುವುದರಿಂದ ಜಿಲ್ಲೆಯ ಸಾರಿಗೆಯ ಪ್ರಶ್ನೆಯು ಸುಲಭದಲ್ಲಿ ಪರಿಹಾರವಾಗುವುದೆಂದು ಸೂಚಿಸಿದರು. "ನೀರು ದಾರಿ ಯಾವಾಗ ಜನತೆಗೆ ಅಗ್ಗವಾಗಿ ದೊರೆಯುವ ಸಾಕರ್ಯ. ನೀರು ದಾರಿಯ ಅನುವಾಸಿನ ಜನರಿಗೆ ಇದರಿಂದ ಕೆಲಸವು ದೊರೆತು ನಿರುದ್ಯೋಗದ ಪ್ರಶ್ನೆಯನ್ನು ಬಗೆಹರಿಸಿದಂತಾಗುವುದು. ನೀರು ದಾರಿಯ ಇಕ್ಕೆಡೆಗಳಲ್ಲಿ 200—300 ಅಡಿ ಜಾಗವನ್ನು ಸರಕಾರದವರು ತಮ್ಮ ವಶಪಡಿಸಿಕೊಂಡು ಉದ್ಯಮಗಳನ್ನು ನಿರ್ಮಾಣಮಾಡುವವರಿಗೆ ಗೇಣಿಗೆ ಕೊಟ್ಟರೆ, ಅಥವಾ ಮಾರಿದರೆ ನೀರುದಾರಿಯು ಉದ್ದಕ್ಕೂ ಉದ್ಯಮಗಳು ಬೆಳೆಯಲು ಅನುಕೂಲವಾಗುತ್ತದೆ. ಜಿಲ್ಲೆಯ ರಸ್ತೆಗಳಿಗೂ ಕಾಲುವೆಗೂ ಕೇವಲ ಒಂದು ಒಂದೂವರೆ ಮೈಲು ಮಾತ್ರ ಬಿಟ್ಟಿರುತಾಗುವುದು. ಒಟ್ಟು ನೀರುದಾರಿಯ ಉದ್ದ 60 ಮೈಲುಗಳಾಗಬಹುದಾದರೂ ಇದರಲ್ಲಿ ನಾವು ಕಡಿಯಬೇಕಾದ ಉದ್ದ ಕೇವಲ 25 ಮೈಲು; ಉಳಿದಂತೆ ನಮ್ಮ ಹೊಳೆಗಳೂ ಅವುಗಳ ಕೈಗಳೂ 35 ಮೈಲಿನಷ್ಟು ಉದ್ದಕ್ಕೆ ಬಾಚಿಕೊಂಡಿವೆ. ನಾವು ಕಡಿಯಬೇಕಾದ ಅಂಶ 30 ಮೈಲು ಎಂದಿಟ್ಟುಕೊಂಡರೂ ಅದರ ವೆಚ್ಚವು ಸ್ಥಳಕ್ಕೆ ಕೊಡಬೇಕಾದ ಪರಿಹಾರ ಧನವನ್ನು ಸೇರಿಸಿ 50 ಲಕ್ಷ ರೂಪಾಯಿಗೆ ಮೀರಲಾರದು. ಜನತೆಗೆ ಈ ನೀರುದಾರಿಯ ಮುಖಾಂತರ ಅಗ್ಗವಾಗಿ ಪ್ರಯಾಣಿಸುವ ಸಾಕರ್ಯವಷ್ಟೇ ಅಲ್ಲದೆ ಒಳನಾಡಿನ ಮೀನುಗಾರಿಕೆಗೂ ಇದರಿಂದ ಅನುಕೂಲವಾಗುತ್ತದೆಂದು ನನಗೆ ವಿಶ್ವಾಸವಿದೆ" ಎಂದು ಹೇಳಿ ಜಿಲ್ಲಾ ಕಲೆಕ್ಟರರಿಂದ ಬಂದ ಪತ್ರವನ್ನೂ, ಇತರ ಪತ್ರಗಳನ್ನೂ ಓದಿಹೇಳಿದರು. ಆಮೇಲೆ ಸ್ವಲ್ಪಹೊತ್ತು ವಿಚಾರವಿನಿಮಯವು ನಡೆದು ಶ್ರೀಗಳಾದ ಜಿ. ಶ್ರೀನಿವಾಸರಾವ್, ಶ್ರೀಪತಿ ಆಚಾರ್ಯ, ಬಿ. ರಘುನಾಥ ಶೆಟ್ಟಿ, ನರಸರಿ ರಾವ್, ಕೆ. ಕೆ. ಪೈ, ರಾಮರಾವ್ ಮೊದಲಾದವರು ಮಾತನಾಡಿದರು. ಡಾ. ಪೈ ಅವರು ಶಂಕೆಗಳಿಗೆ ತಕ್ಕ ಸಮಾಧಾನ ಹೇಳಿದರು

ಅಧ್ಯಕ್ಷರಾದ ಟಿ. ಎ. ಪೈ ಅವರು ತಮ್ಮ ಭಾಷಣದಲ್ಲಿ "ನಮ್ಮ ಜಿಲ್ಲೆಯ ಸಮಸ್ಯೆ ಮುಖ್ಯವಾಗಿ ಸಾರಿಗೆಯ ಸಮಸ್ಯೆ. ರೈಲುದಾರಿ, ಮೋಟಾರು ದಾರಿ, ನೀರುದಾರಿ ಯಾವುದನ್ನೂ ನಾವು ಬಿಡುವಂತಿಲ್ಲ. ಜಿಲ್ಲಾ ಕಲೆಕ್ಟರರು ಸಂದೇಶ ಪಟ್ಟಂತೆ ಇವು ಒಂದಕ್ಕೊಂದು ಸ್ಪರ್ಧೆಗೆ ನಿಲ್ಲುವುದೆಂದು ನನಗನಿಸುವುದಿಲ್ಲ. ಮಂಗಳೂರಿನ್ನು ಮುಂಬೈಗೆ ಜೋಡಿಸುವ ರೈಲು ಮಾರ್ಗದ ಪ್ರಶ್ನೆಯಾಗಲೀ, ರಾಷ್ಟ್ರೀಯ ಹೈವೇಯ ಯೋಜನೆಯಾಗಲಿ ನಮ್ಮ ನೀರುದಾರಿಗೆ ಪೂರಕಗಳೇ ಹೊರತು ಪ್ರತಿಸ್ಪರ್ಧಿಗಳಲ್ಲವೆಂದು ನನ್ನ ನಂಬಿಕೆ. ಮದ್ರಾಸು ಸರಕಾರಕ್ಕೆ ನಮ್ಮ ನೀರುದಾರಿಗಳ ವಿಷಯ ಸಾಕಷ್ಟು ಅಸ್ಥೆ ಇದೆ. ಸುಲಭಾರಿನಲ್ಲಿ ಅವರು 25 ಸೈಲು ನೀರುದಾರಿ ತೋಡುವ ಯೋಜನೆಯಲ್ಲಿದ್ದಾರೆ. ನಮ್ಮ ಉದ್ಯಮಗಳು ಬೆಳೆಯಬೇಕಾದರೆ ಯುಕ್ತವಾದ ಮೂಲ ಸಾಮಗ್ರಿಯೊಂದರ ಸಾರಿಗೆ ಸಂಪರ್ಕಗಳು. ಸಡಿ ಕರಾಳಿಯ ಮಹಾ ಬಂದರು ಸಮಿತಿಯವರು ನಮ್ಮ ಸಮಸ್ಯೆಗಳ ಕುರಿತು ಕೇಳಿದಾಗಿ ಈ ನೀರುದಾರಿಯ ಯೋಜನೆಯನ್ನೂ ನಾವು ಮುಂದಿಟ್ಟಿದ್ದೆವು. ಆ ಮೇಲೆ ಪ್ರತಿಸಲವೂ ನಮ್ಮ ಜಿಲ್ಲೆಯ ಯೋಜನೆಯಲ್ಲಿ ನಾವು ಇದನ್ನೆ ಪ್ರಸ್ತಾಪಿಸುತ್ತಿದ್ದೇವೆ. ನಾನು ದಿಲ್ಲಿಯಲ್ಲಿದ್ದಾಗ ನಮ್ಮ ಪಾರ್ಲಿಮೆಂಟ್ ಪ್ರತಿನಿಧಿ ಶ್ರೀ ಮಲ್ಯರು ಇದರ ವಿಷಯ ವಿಶೇಷ ಮಾಹಿತಿಗಳನ್ನು ಕೇಳಿದ್ದಾರೆ. ಈ ನೀರುದಾರಿಯ ಯೋಜನೆಯಲ್ಲಿ ಹೊಳೆಯ ಉಪ್ಪುನೀರು ಪಕ್ಕದ ಹೊಲಗಳಿಗೆ ಮಾಡುವ ಹಾನಿಯನ್ನು ತಡೆಗಟ್ಟುವ ಉಪಾಯಗಳನ್ನೂ ಆಳವಡಿಸಿದಲ್ಲಿ ಇದು ಒಂದು ವಿನಿಯೋಗದ್ದೇಶದ ಯೋಜನೆಯಾಗಿ ಮಾರ್ಪಡುವುದು. ನಮ್ಮ ದೇಶದಲ್ಲಿ ಮೂಲ ಸಾಮಗ್ರಿಗಳ ಕೊರತೆಯಿರುವುದರಿಂದ ಯೋಜನೆಗಳು ಹಲವು ಕೆಲಸಮಾಡುವಂತೆ ಏರ್ಪಾಟ ಮಾಡುವುದು ಮುಖ್ಯ, ನೀರುದಾರಿಯ ಸೌಕರ್ಯಗಳ ವಿಷಯ ತಮಗೆಲ್ಲಾ ಗೊತ್ತಿದೆ.

ಮಲ್ಪೆಯಲ್ಲಿ ಒಂದು ಹಡಗಕಟ್ಟುವ ಕೇಂದ್ರವನ್ನು ಸ್ಥಾಪಿಸುವ ವಿಷಯವನ್ನು ಈ ಸಂದರ್ಭದಲ್ಲೇ ಪ್ರಸ್ತಾವಿಸಬೇಕೆಂದು ನನ್ನ ಕೋರಿಕೆ. ಸಮಿತಿಯವರು ಈ ಶಿಫಾರಸನ್ನು ಮಾಡಿದ್ದಾರೆ. ಆದರೆ ಮತ್ತೆ ಮತ್ತೆ ದೊಡ್ಡ ನಗರಗಳಿಗೇ ಈ ಕೇಂದ್ರಗಳು ಹೋಗುವುದೆನ್ನಿ ನೋಡಿದರೆ ಆಶ್ಚರ್ಯವಾಗುತ್ತದೆ—ಈ ದೊಡ್ಡ ದೇಶದಲ್ಲಿ ಉದ್ಯಮಗಳನ್ನು ವಿಕೇಂದ್ರೀಕರಿಸಿ ದಷ್ಟು ಒಳ್ಳೆಯದಲ್ಲವೆ? ಮುಂದಿನ ಕರ್ನಾಟಕದಲ್ಲಿ ನಮ್ಮ ಎರಡು ಜಿಲ್ಲೆಗಳ ಕರಾವಳಿ ಪ್ರದೇಶಗಳು ಈಗಿನಂತೆ ಹಿಂದುಳಿಯಲು ಶಕ್ಯವೇ ಇಲ್ಲವೆಂದು ನನಗೆ ತೋರುತ್ತದೆ. ಹಾಗೆಯೇ ಮೀನುಗಾರಿಕೆಯ ಅಖಿಲಭಾರತ ಸಂಸ್ಥೆಯ ಸ್ಥಾಪನೆಗೂ ಮಲ್ಪೆ ಪ್ರಶಸ್ತವಾಗಿದೆ. ಕಾಳೀನದೀ ಶರಾವತಿ ಯೋಜನೆಗಳಿಂದ ವಿದ್ಯುತ್ತೂ ಬಂದರೆ ಕರ್ನಾಟಕದ ಸಂಪತ್ತು ಭವ್ಯವಾಗುವುದರಲ್ಲಿ ಸಂದೇಹವೇನು?'

ಪುತ್ತೂರು — ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 8ರಲ್ಲು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಪ್ರಾಧ್ಯಾಪಕರುಗಳಾದ ಶ್ರೀ. ಕು ಶಿ. ಹರಿದಾಸ ಭಟ್ಟರ ಭಾಷಣವೂ, ಎಚ್. ಕೆ ರಾಮಚಂದ್ರ ಮೂರ್ತಿಯವರ ಕಾವ್ಯ ವಾಚನವೂ ಜರಗಿತು. ಶ್ರೀ. ಶಿವರಾಮ ಕಾರಂತರು ಅತಿಥಿಗಳ ಪರಿಚಯ ಮಾಡಿದರು.

ನಿಂಜೂರು— ಸ್ಥಳೀಯ ಶ್ರೀ ವಿವೇಕಾನಂದ ಸೇವಾ ಸಂಘದ ಭವನ ನಿರ್ಮಾಣದ ಬಗ್ಗೆ ಹುಬ್ಬಳ್ಳಿ, ಪೂನಾ ಮತ್ತು ಬೊಂಬಾಯಿಯಲ್ಲಿಯ ಊರ ಮಹನೀಯರನ್ನು ಶ್ರೀಗಳಾದ ರಾಜು ಶೆಟ್ಟಿ, ಮತ್ತು ಹಿರಿಯಣ್ಣ ಶೆಟ್ಟಿಯವರು ಭೇಟಿಯಾಗಿ ರೂ 3187—8—0 ನ್ನು ಸಂಗ್ರಹಿಸಿರುವರು. ಸಂಘದ ಕಾರ್ಯಕಾರೀ ಸಭೆಯು ತಾ. 16ರಲ್ಲಿ ಜರಗಿ ಧನಸಹಾಯ ವಿತ್ತವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಿತು. ಈ ಸಂಘದ ಆಶ್ರಯದಲ್ಲಿ ಇದೇ ತಾ. 21 ಮತ್ತು 22ರಲ್ಲಿ ನವರಾತ್ರಿ ಮಹೋತ್ಸವ ಮತ್ತು ಭಜನೆ, ಯಕ್ಷಗಾನಾದಿ ಕಾರ್ಯಕ್ರಮಗಳಿಂದ ಜರಗಿಸಲಿರುವುದೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಡ. ಕ. ಲೇಖಕರಿಗೆ ಪಾರಿತೋಷ: ಮದ್ರಾಸು ವಿಶ್ವವಿದ್ಯಾನಿಲಯದವರು ಭಾರತೀಯ ಭಾಷೆಗಳಲ್ಲಿ ಬರೆದ ಗ್ರಂಥಗಳಿಗೆ ಬಹುಮಾನ ಕೊಡುವ ಯೋಜನೆಯಂತೆ 1954ರ ಪಾರಿತೋಷವಾದ ರೂಪಾಯಿ 750-/ನ್ನು ಸುತ್ತಲ್ ವಿದ್ಯಾದಾಯಿನಿ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎಮ್. ವಾಸುದೇವ ರಾವ್, ಅವರು ಬರೆದ "ಭಾರತದ ಹೊಸ ಭೂವಿವರಣೆ" ಎಂಬ ಕನ್ನಡ ಕೃತಿಗೆ ಕೊಟ್ಟಿರುವರೆಂದು ತಿಳಿಯಬರುತ್ತದೆ.

ನೀಲಾವರ— ಸೋಮವಾರದಿನ ಹಾ. ಎ. ಶಾಲೆಯಲ್ಲಿ ಇದೇ 21ನೇ ತಾರೀಕು ಸಂಜೆ 3ಗಂಟೆಗೆ ಚೆತ್ತವರ ಕೂಟವನ್ನೊಳಗೊಂಡ ಶಾರದಾ ಪೂಜಾ ಸಮಾರಂಭ ಜರಗಲಿದ್ದು ಶ್ರೀ ಎನ್. ಅಣ್ಣಪ್ಪ ಭಟ್ಟರು ಸರ್ವರಿಗೂ ಸ್ವಾಗತಬಯಸುತ್ತಾರೆ.

ಮದ್ರಾಸಿನ ಮಂತ್ರಿ ಮಾನ್ಯ ಭಕ್ತವತ್ಸಲಮರ ಆಗಮನ

ಮದ್ರಾಸು ಪ್ರಾಂತದ ಕೃಷಿಮಂತ್ರಿ ಮಾನ್ಯ ಶ್ರೀ. ಎಸ್. ಭಕ್ತವತ್ಸಲಂ ರವರು ಇದೇ ತಾ. 17ರಂದು ರಾತ್ರಿ ರೈಲಿನಲ್ಲಿ ಮಂಗಳೂರಿಗೆ ಬಂದರು. ರೈಲ್ವೆ ನಿಲ್ದಾಣದಲ್ಲಿ ಸಲವು ಪ್ರಮುಖರು ಸ್ವಾಗತಿಸಿದರು. ತಾ. 18ರಂದು ಬೆಳಿಗ್ಗೆ ಮಾನ್ಯ ಮಂತ್ರಿಗಳು ಉಡುಪಿ, ಆಲಿವೂರು ಕೇಂದ್ರಕ್ಕೆ ಹೋಗಿ ಅಲ್ಲಿಯ ಪ್ರಸೂತಿಕಾ ಗೃಹವನ್ನು ಉದ್ಘಾಟನೆ ಮಾಡಿದರು ಸಮಾರಂಭದ ಅಧ್ಯಕ್ಷತೆಯನ್ನು ಡಾ| ಟಿ. ಎಸ್. ಎ. ಪೈಗಳು ವಹಿಸಿದ್ದರು. ಕಟ್ಟಡ ಸಮಿತಿ ಅಧ್ಯಕ್ಷ ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಅವರು ಸ್ವಾಗತ ಭಾಷಣ ಮಾಡಿದರು. ಮಂತ್ರಿಗಳು ಉದ್ಘಾಟನಾ ಭಾಷಣದಲ್ಲಿ ಗ್ರಾಮಸ್ಥರ ಮುಖ್ಯ ಕಟ್ಟಡನಿರ್ಮಾಣದ ಖರ್ಚಿನಲ್ಲಿ ಅರ್ಧಾಂಶವನ್ನು ಕೊಟ್ಟ ಶ್ರೀ ಶ್ಯಾಮರಾಯರ ಔದಾರ್ಯವನ್ನು ಪ್ರಶಂಸಿದರು. ಶ್ರೀ. ಎ. ಜೆ. ಅಲ್ಬುಯ ವರು ಮಂತ್ರಿಗಳ ಭಾಷಣವನ್ನು ಕನ್ನಡಿಸಿದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ರಂಗಣ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಪುತ್ತೂರು ಹರಿಜನ ಕೊಲನಿಯ ಕಡೆಯಿಂದ ಮನವಿಯನ್ನು ಸ್ವೀಕರಿಸಿ ಪುತ್ತೂರು ದೇವಸ್ಥಾನದಲ್ಲಿ ವಿದ್ಯುದ್ದೀಪಗಳನ್ನು ಉದ್ಘಾಟಿಸಿದರು. ಶ್ರೀ ಟಿ. ಎ. ಪೈಗಳು ಸ್ವಾಗತಮಾತುಗಳನ್ನಾಡಿದರು, ಶ್ರೀ ಅಮ್ಮುಂಜೆ ಮಾಧವ ನಾಯ್ಕರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಕಾರ್ಕಳ ಬೆಟ್ಟಗೆ ಹೋಗಿ ಅಲ್ಲಿಯ ವಿಕೋಪಾದ್ಯಾಯ ಶಾಲಾ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಶ್ರೀ ಮೋನಪ್ಪ ಶೆಟ್ಟರು ಪುಷ್ಪ ಹಾರಾರ್ಪಣಮಾಡಿದ್ದರು. ಶ್ರೀ ಟಿ. ಎ. ಪೈಗಳು ಅಧ್ಯಕ್ಷತೆವಹಿಸಿದ್ದರು. ಶಾಲಾ ಹೆಡ್ಮಾಸ್ಟರರು ಧನ್ಯವಾದಗಳನ್ನಿತ್ತರು.

ಮಾನ್ಯ ಮಂತ್ರಿಗಳು ಕೆಮ್ಮಣ್ಣಿಗೆ ಆಗಮಿಸಿದಾಗ ಆವರಿಗೆ ಬೇಂಡ್ ಪಾಮ್ಯದ ಸ್ವಾಗತ ದೊರೆಯಿತು. ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಾನ್ಯ ಮಂತ್ರಿಗಳು ವಿದ್ಯುದ್ದೀಪಗಳನ್ನು ಉದ್ಘಾಟಿಸಿದರು. ಪಂಚಾಯತ ಬೋರ್ಡಿನ ಅಧ್ಯಕ್ಷರು ಮಾನಪತ್ರ ಅರ್ಪಿಸಿದರು. ಹೆಳ್ಳಿಗರ ಜೀವನ ಮಟ್ಟವನ್ನು ಉನ್ನತ ಗೊಳಿಸಲು ಬೇಕಾದ ಕಾರ್ಯಕ್ರಮವನ್ನು ಸರಕಾರವು ಕೈಕೊಂಡಿರುವುದಾಗಿ ಮಂತ್ರಿಗಳು ಹೇಳಿದರು. ಮಧ್ಯಾಹ್ನ ವಂಡಸಾಲಕ್ಕೆ ಬಂದು ಅಲ್ಲಿಯ ಕುಟುಂಬಯೋಜನೆ ಕೇಂದ್ರದರ್ಶನ ಸ್ಥಾಪನೆಮಾಡಿಸಿ, ಲೋಕಲ್ ವರ್ಕ್ಸ್ ಯೋಜನೆಯಂತೆ ಕಟ್ಟಿಸಲ್ಪಟ್ಟ ಎಲಿಮೆಂಟರಿ ಶಾಲೆ, ಹರಿಜನ ಹಾಸ್ಟೆಲುಗಳನ್ನು ಸಂದರ್ಶಿಸಿ, ಭೋಜನ ತೀರಿಸಿ ಮಂಗಳೂರಿಗೆ ಪ್ರಯಾಣ ಮಾಡಿದರು.

ಮಂಗಳೂರಲ್ಲಿ ಜಿಲ್ಲಾ ಬೋರ್ಡಿನ ಮನವಿ ಸ್ವೀಕಾರ, ಕೋಲ್ಡ್ ಸ್ಟೋರೇಜ್ ಮತ್ತು ಕ್ವಿಕ್ ಫ್ರೀಜಿಂಗ್ ಪ್ಲಾಂಟಿನ ಉದ್ಘಾಟನೆ ಮತ್ತು ಕರ್ನಾಟಕ ಪೊಲಿಟೆಕ್ನಿಕ್ ಹೈಸ್ಕೂಲಿನ ಉದ್ಘಾಟನೆ ಮೊದಲಾದ ಕಾರ್ಯಕ್ರಮಗಳನ್ನು ಸಾಂಗಗೊಳಿಸಿದರು.

ಪ್ರಕಟಣೆ

ಉಡುಪಿ ತಾಲೂಕ ಮಂದಾರ್ತಿ ಶ್ರೀದುರ್ಗಾದೇವೇಶ್ವರೀ ಅಮ್ಮನವರ ಸನ್ನಿಧಿಯ ದಶಾವತಾರ ದೇವಾಳವನ್ನು 1955—56 ರಲ್ಲಿ ತಿರುಗಾಡಿಸುವ ಹಕ್ಕನ್ನು ಮದ್ರಾಸು ಎಂಡೋಮೆಂಟ್ ಕಮೀಶನರವರ ಹುಕುಂಗೆ ವಳಪಟ್ಟು ಸ್ಥಿರಪಡಿಸುವರೆ ತಾರೀಕು 30—10—55ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 11ಕ್ಕೆ ಸೀಲು ಹಾಕಿದ ಟೆಂಡರುಗಳನ್ನು ಆಫೀಸಿನಿಂದ ನಿರ್ಣಯಿಸಿದ ಶರ್ತಗಳಿಗನುಸಾರವಾಗಿ ಸ್ವೀಕರಿಸಲಾಗುವದು. ಕಾಯುಸುಳ್ಳವರು ಶರ್ತಗಳನ್ನು ಟೆಂಡರು ದಿನದಿಂದ ಮುಂಚಿತವಾಗಿಯೇ ದೇವಸ್ಥಾನದ ಆಫೀಸಿನಲ್ಲಿ ಪರಿತೀಲಿಸಿ ಟೆಂಡರು ಕೊಡತಕ್ಕದ್ದು.

(Sd) B. Umesha Rao.
Executive officer
ಮಂದಾರ್ತಿ ದೇವಸ್ಥಾನ ತಾ. 3-10-55

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

Tel: "MENONCO."
Phone: No. 671.
T. N. MENON & COMPANY
Wholesale & retail merchants in:- Sole-crepe, Plastic-Sheets, All kinds of Leathers, Leather goods, Leather-cloth, Wax, Thread, Twine, Patel Pins, Paper, Straw-board, Students' Note-Book, Zip Fasteners, Batterics, Photo-Frames, Tarpaulin, Ply-wood, Wire Mesh & All items of Fittings & Making materials for Foot-wears, Suit-cases, Hand bags, Money-purses, Steel-Trunks, Etc. Etc.
POST BAG No. 1, BEACH ROAD, QUILON.

७० वर्षों से जगप्रसिद्ध और बिक्री की होनेवाला
प्रत्येक स्टोर में और सब स्थानों पर बिकता है।
बाटलीवाला एग्यूमिक्चर
मौर गोलियां
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डी. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्टुगीझ चर्च स्ट्रीट,
Tele. Add. "CAWASHABAD" दादर, बम्बई २८.

ಕೇಂದ್ರದ ಕೃಷಿ ಮಂತ್ರಿ ಡಾ| ಸಂಜೀವ್ ರಾವ್ ದೇಶಮುಖರು ತಾ. 15ರಲ್ಲು ಬೆಳಗ್ಗೆ ಬೊಂಬಾಯಿಯಿಂದ ವಿಮಾನಮೂಲಕ ಬಜ್ಪೆಗೆ ಬಂದಿಳಿದಾಗ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆ, ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಕೆ. ಸಂಜೀವ ಶೆಟ್ಟಿ, ಎಮ್. ಎಲ್. ಎ. ಗಳಾದ ಶ್ರೀಯುತರು ಬಿ. ವಿ. ಜಾಗಿಗ ಮತ್ತು ಟಿ. ಎ. ಪೈ ಎಮ್. ಎಲ್ ಸಿ ಗಳಾದ ಶ್ರೀ ಎಸ್. ನರಸಪ್ಪಯ್ಯ, ಶ್ರೀಗಳಾದ ಎಮ್. ಶಿವರಾಮ್, ಬಿ. ಬಿ. ಶೆಟ್ಟಿ, ಕೆ ಬಿ. ಜನರಾಜ ಹೆಗ್ಡೆ, ವಾಸು. ಎನ್. ರಾಜನ್, ಕುದ್ರಿ ವಾಸುದೇವ ಶೆಟ್ಟಿ, ಬೈಂದೂರು ಪ್ರಭಾಕರ ರಾವ್ ಮೊದಲಾದವರು ಸುಸ್ವಾಗತ ಮಿತ್ತರು.

ಮುಲ್ಪೆಯಲ್ಲಿ

ಮಾನ್ಯ ಮಂತ್ರಿಗಳು ಬಜ್ಪೆಯಿಂದ ಕಾರ್ಕಳ ಮಾರ್ಗವಾಗಿ ಉಡುಪಿಗೆ ಬಂದು ಸೀದಾ ಮುಲ್ಪೆಯ ಮೀನು ಒಣಗಿಸುವ ಕೇಂದ್ರಕ್ಕೆ ಆಗಮಿಸಿದಾಗ ಚೇಂಡು ವಾದ್ಯದಿಂದ ಸ್ವಾಗತೀಕರಿಸಲ್ಪಟ್ಟರು. ಶ್ರೀ ಟಿ. ಎ. ಪೈ, ಎಮ್ ಎಲ್. ಎ. ಅವರು ಮೊಗವೀರ ಬಂಧುಗಳ ಪರವಾಗಿ ಮನವಿಯೊಂದನ್ನು ಅರ್ಪಿಸಿದರು. ಅದರಲ್ಲಿ ಮುಲ್ಪೆಯಲ್ಲೊಂದು ಅಖಿಲಭಾರತ ಮೀನುಗಾರಿಕೆ ವಿಜ್ಞಾನ ಮತ್ತು ಸಮುದ್ರ ವಿಜ್ಞಾನದ ತಂಬೇತಿ ಸಂಸ್ಥೆ ಸ್ಥಾಪಿಸಬೇಕು. ಮುಲ್ಪೆಯನ್ನು ಅಳಸಮುದ್ರದ ಮೀನುಗಾರಿಕೆ ಮತ್ತು ಮೀನುಗಾರಿಕೆಯ ಬಂದರವಾಗಿ ಅಭಿವೃದ್ಧಿಪಡಿಸಬೇಕು. ಮೀನು ಹಾಳಾಗದಂತೆ ಇಡುವ ಮತ್ತು ಡಬ್ಬಿಯಲ್ಲಿ ಮೀನು ಹಾಕುವ ಕಾರ್ಖಾನೆಯನ್ನು ಸ್ಥಾಪಿಸಬೇಕು. ಮೀನು ಗೊಬ್ಬರ ತಯಾರಿ ಕಾರ್ಖಾನೆ ಸ್ಥಾಪಿಸಬೇಕು. ಹಸಿ ಮೀನಿಗೆ ಸರಿಯಾದ ಮಾರಾಟ ವ್ಯವಸ್ಥೆ ಒದಗಿಸಬೇಕು. ಮೀನುಗಾರರ ವಸತಿ ಯೋಜನೆಗೆ ಸಹಾಯಧನ ಒದಗಿಸಬೇಕು.

ಕೇಂದ್ರದ ಕೃಷಿ ಮಂ[illegible]

ಉಡುಪಿ—ಮಂಗಳೂರ ಗ[illegible]

[illegible] ಕೆ ಕಂದಾಯ ವಸೂಲಿ ವ್ಯವಸ್ಥೆ [illegible] ಮಗಳಲ್ಲಿ ಮಿ[illegible] ವ್ಯವಹಾರಾ[illegible] ಪ್ರತ್ಯೇಕ ಸಮಾಜಕಾಸ ಯೊ[illegible] ಸೂಚಿಸಲಾಗಿತ್ತು

[illegible] ಮಂತ್ರಿಗಳು [illegible] ಮುಲ್ಪೆ[illegible] ಕೆಲವೊಂದು ಪ್ರ[illegible] ಜನಗಳು [illegible] ದೊರೆಯ[illegible] ಮೊಳ[illegible] ಸರ್ಕಾರಿ ತಳವದಿಯ[illegible] ಮೀನುಗಾರಿಕೆ [illegible] ದುಗಳನ್ನು ಸುಧಾ[illegible] ಹೆಸರೊರೆಯ[illegible] ಉದ್ಧಾರವು ನೆ[illegible] ರಾಷ್ಟ್ರದ ಸ್ವಗ[illegible] ಸ್ವಾಮಿಯ ನಾಯ[illegible] ಸವಿಡತಕ್ಕ ಜ[illegible] ಹೇಳಿದರು [illegible] ಜರು ವಂದನೆಗಳನ[illegible] ಬಂದರ ಪ[illegible] ಸ್ಥಳಗಳನ್ನ[illegible] ಸಿದರು.

[illegible] ಸದಲ್ಲಿ ಸ್ಥಳಿ[illegible] ಯಿಂದ ಸಮ[illegible] ದಲ್ಲಿ ಭಾಗವಹಿ[illegible]

ಆರಂಭದಲ್ಲಿ ಬಂ[illegible] ಜೀರ ಸರ್ಕಾರಿ ಸಂಘಗಳ ಪ್ರತಿನಿಧಿಗಳು [illegible] ಸ್ವಸ್ಥಿಪಿಸಿದರು [illegible] ಯನ್ನಿನ ಅ[illegible] ಗಳು ಮಾನಪತ್ರ[illegible] ಪತ್ರಿಕೆಗಳಲ್ಲಿ ಸ್ಥಳೀಯ[illegible] ಮತ್ತು ಸರ್ಕಾರಿ [illegible] ಸೇಕಾರ ಸಂ[illegible] ಮಣಿಪಾಲದ [illegible] ಕಾತೇಚಿಗೂ ಧನ[illegible] ಮಂತ್ರಿಗ[illegible] ಸ್ಥಾಪಿಸಿದರು [illegible] ಮೊದಲಾದ[illegible] ಜಿಲ್ಲೆ ಜಿಲ್ಲೆಗಳೊಳಗಿನ [illegible] ಸಹಕಾರೀ ಇಳವ[illegible] ಸಲಹೆಯನ್ನಿತ್ತರು

ಮುಲ್ಪೆಯಲ್ಲಿ ಡಿ ಮುನ್ಸಿಫ್ ಕೋರ್ಟಿನಲ್ಲಿ

C. S. No. 271/55.

ಸಂಕಮ್ಮ ಶೆಡ್ತಿ... ವಾದಿಳು

ಮತ್ತು

1 ಮುತ್ತಕ್ಕ ಶೆಡ್ತಿ. 2 ಅಂತಂಮ ಶೆಡ್ತಿ 3 ಹಿರಿಯಣ್ಣ ಶೆಟ್ಟಿ. 4 ಜಗನ್ನಾತ ಶೆಟ್ಟಿ— ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ 3ನೇ ಪ್ರತಿವಾದಿ ಹಿರಿಯಣ್ಣ ಶೆಟ್ಟಿಗೆ ಅಗತಕ್ಕ ವ್ಯಾಜ್ಯದ ನೋಟೀಸು ತಾರೀಕು 2—11—55ಕ್ಕೆ ಇಟ್ಟರುವುದರಿಂದ ಸದ್ರಿ ಪ್ರತಿವಾದಿಗು ಅಕ್ಟೋಬರ್ ಹೇಳುವದನ್ನು, ಆ ದಿನ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು—

P. Padmanabha Rao,
Vakil for Plaintiff.

Udipi, Dated 15—10—55.

ಶ್ರೀಪಾದ ಕೃಷ್ಣಮೂರ್ತಿ ಎಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸಂಹೋಗುವ ಒ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) **ಸುದರ್ಶನ ಆಯುರ್ವೇದ** ವೈದ್ಯಶಾಲ—ಬೆಂಗಳೂರು 2.
(2) **ಷಾ ಕಂಪೆನಿ**—ಮಂಗಳೂರು-1
(3) **ಅಂಬಿಕಾ ಮೆಡಿಕಲ್ ಸ್ಟೋರ್ಸ್**—ಚಿಂತಾಮಣಿ